॥ ಶ್ರೀಹರಿಃ ॥

ಶ್ರೀಮದ್ಭಾಗವತದ ವಿಷಯಾನುಕ್ರಮಣಿಕೆ

ದ್ವಿತೀಯ ಖಂಡ

ಅಧ್ಯಾಯ	ವಿಷಯ	ಪುಟ

ನವಮ ಸ್ಕಂಧ

೧.	ವೈವಸ್ವತ ಮನುವಿನ ಪುತ್ರ ಸುದ್ಯುಮ್ನರಾಜನ ಕಥೆ	1
೨.	ಪೃಷಧ್ರ ಮುಂತಾದ ಮನುವಿನ ಐವರು ಪುತ್ರರ ವಂಶ	5
೩.	ಮಹರ್ಷಿ ಚ್ಯವನ ಮತ್ತು ಸುಕನ್ಯೆಯ ಚರಿತ್ರೆ, ಶರ್ಯಾತಿರಾಜನ ವಂಶವರ್ಣನೆ	8
೪.	ನಾಭಾಗ ಮತ್ತು ಅಂಬರೀಷರ ಕಥೆ	11
೫.	ದುರ್ವಾಸರು ದುಃಖದಿಂದ ಪಾರಾದುದು	19
೬.	ಇಕ್ಷ್ವಾಕುವಂಶದ ವರ್ಣನೆ, ಮಾಂಧಾತಾ ಮತ್ತು ಸೌಭರೀ ಋಷಿಯ ಕಥೆ	22
೭.	ತ್ರಿಶಂಕುರಾಜನ ಮತ್ತು ಹರಿಶ್ಚಂದ್ರನ ಕಥೆ	27
೮.	ಸಗರನ ಚರಿತ್ರೆ	30
೯.	ಭಗೀರಥನ ಚರಿತ್ರೆ ಮತ್ತು ಗಂಗಾವತರಣ	34
೧೦.	ಭಗವಾನ್ ಶ್ರೀರಾಮನ ಲೀಲಾವರ್ಣನೆಗಳು	39
೧೧.	ಭಗವಾನ್ ಶ್ರೀರಾಮನ ಉಳಿದ ಲೀಲೆಗಳ ವರ್ಣನೆ	47
೧೨.	ಉಳಿದ ಇಕ್ಷ್ವಾಕು ವಂಶದ ಅರಸರ ವರ್ಣನೆ	51
೧೩.	ನಿಮಿರಾಜನ ವಂಶದ ವರ್ಣನೆ	52
೧೪.	ಚಂದ್ರವಂಶದ ವರ್ಣನೆ	55
೧೫.	ಋಚೀಕ – ಜಮದಗ್ನಿ ಮತ್ತು ಪರಶುರಾಮರ ಚರಿತ್ರೆ	60
೧೬.	ಪರಶುರಾಮನಿಂದ ಸಮಸ್ತ ಕ್ಷತ್ರಿಯರ ಸಂಹಾರ ವಿಶ್ವಾಮಿತ್ರನ ವಂಶದ ಕಥೆ	65
೧೭.	ಕ್ಷತ್ರವೃದ್ಧ, ರಜಿ ಮೊದಲಾದ ರಾಜರ ವಂಶದ ವರ್ಣನೆ	69
೧೮.	ಯಯಾತಿಯ ಚರಿತ್ರೆ	70
೧೯.	ಯಯಾತಿಯ ಗೃಹತ್ಯಾಗ	76
೨೦.	ಪುರುವಿನ ವಂಶ, ರಾಜಾ ದುಷ್ಮಂತ ಮತ್ತು ಭರತನ ಚರಿತ್ರವರ್ಣನೆ	79
೨೧.	ಭರತವಂಶದ ವರ್ಣನೆ – ರಂತಿದೇವನ ಕಥೆ	83
೨೨.	ಪಾಂಚಾಲ, ಕೌರವ ಮತ್ತು ಮಗಧದೇಶದ ರಾಜರ ವಂಶವರ್ಣನೆ	87
೨೩.	ಪಾಂಚಾಲ, ಕೌರವ ಮತ್ತು ಮಗಧದೇಶದ ರಾಜರ ವಂಶವರ್ಣನೆ	92
೨೪.	ವಿದರ್ಭವಂಶದ ವರ್ಣನೆ	95

ಅಧ್ಯಾಯ	ವಿಷಯ	ಪುಟ

ದಶಮ ಸ್ಕಂಧ (ಪೂರ್ವಾರ್ಧ)

೧.	ಭಗವಂತನು ಭೂದೇವಿಯನ್ನು ಸಂತೈಸಿದುದು, ವಸುದೇವ ದೇವಕಿಯರ ವಿವಾಹ ಮತ್ತು ಕಂಸನು ದೇವಕಿಯ ಆರು ಪುತ್ರರನ್ನು ವಧಿಸಿದುದು	103
೨.	ಭಗವಂತನು ದೇವಕಿಯ ಗರ್ಭವನ್ನು ಪ್ರವೇಶಿಸಿದುದು, ದೇವತೆಗಳಿಂದ ಗರ್ಭಸ್ತುತಿ	111
೩.	ಭಗವಾನ್ ಶ್ರೀಕೃಷ್ಣನ ಪ್ರಾಕಟ್ಯ	117
೪.	ಕಂಸನ ಕೈಯಿಂದ ತಪ್ಪಿಸಿಕೊಂಡ ಯೋಗಮಾಯೆಯು ಆಕಾಶಕ್ಕೆ ಹಾರಿ ಭವಿಷ್ಯವನ್ನು ನುಡಿದುದು	124
೫.	ಗೋಕುಲದಲ್ಲಿ ಭಗವಂತನ ಜನ್ಮೋತ್ಸವ	129
೬.	ಪೂತನೆಯ ಉದ್ಧಾರ	133
೭.	ಶಕಟಾಸುರ ಭಂಜನ ಮತ್ತು ತೃಣಾವರ್ತನ ಉದ್ಧಾರ	138
೮.	ನಾಮಕರಣ ಸಂಸ್ಕಾರ ಮತ್ತು ಬಾಲಲೀಲೆಗಳು	143
೯.	ಶ್ರೀಕೃಷ್ಣನನ್ನು ಒರಳಿಗೆ ಕಟ್ಟಿಹಾಕಿದುದು	150
೧೦.	ಯಮಳಾರ್ಜುನರ ಉದ್ಧಾರ	153
೧೧.	ಗೋಕುಲದಿಂದ ವೃಂದಾವನಕ್ಕೆ ಹೋದುದು ಹಾಗೂ ವತ್ಸಾಸುರ ಮತ್ತು ಬಕಾಸುರರ ಉದ್ಧಾರ	159
೧೨.	ಅಘಾಸುರನ ಉದ್ಧಾರ	166
೧೩.	ಬ್ರಹ್ಮದೇವರ ಮೋಹ ಮತ್ತು ಅದರ ನಿರಸನ	172
೧೪.	ಬ್ರಹ್ಮದೇವರು ಮಾಡಿದ ಭಗವಂತನ ಸ್ತುತಿ	181
೧೫.	ಧೇನುಕಾಸುರ ಉದ್ಧಾರ, ಕಾಲಿಯನಾಗನ ವಿಷದಿಂದ ಗೋಪಬಾಲಕರನ್ನು ಬದುಕಿಸಿದುದು	191
೧೬.	ಕಾಲಿಯನ ಮೇಲೆ ಕೃಪೆದೋರಿದುದು	197
೧೭.	ಕಾಲಿಯನು ಯಮುನೆಯ ಮಡುವಿಗೆ ಬರಲು ಕಾರಣ, ದಾವಾನಲದಿಂದ ವ್ರಜವಾಸಿಗಳನ್ನು ಬದುಕಿಸಿದುದು	206
೧೮.	ಪ್ರಲಂಬಾಸುರ ಉದ್ಧಾರ	209
೧೯.	ಗೋವುಗಳನ್ನು-ಗೋಪಾಲಕರನ್ನು ಶ್ರೀಕೃಷ್ಣನು ಕಾಡುಗಿಚ್ಚಿನಿಂದ ಕಾಪಾಡಿದುದು	213
೨೦.	ವರ್ಷಾಋತು ಮತ್ತು ಶರದೃತುವಿನ ವರ್ಣನೆ	215
೨೧.	ವೇಣುಗೀತೆ	221
೨೨.	ಚೀರಹರಣ	226
೨೩.	ಯಜ್ಞಪತ್ನಿಯರ ಮೇಲೆ ಕೃಪೆ	230

ಅಧ್ಯಾಯ	ವಿಷಯ	ಪುಟ
೨೪.	ಇಂದ್ರನ ಯಜ್ಞ ನಿವಾರಣೆ	237
೨೫.	ಶ್ರೀಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿದುದು	241
೨೬.	ಶ್ರೀಕೃಷ್ಣನ ಪ್ರಭಾವದ ವಿಷಯವಾಗಿ ನಂದಗೋಪನೇ ಮೊದಲಾದವರ ಜಿಜ್ಞಾಸೆ	244
೨೭.	ಗೋವಿಂದ ಅಭಿಷೇಕ	248
೨೮.	ಶ್ರೀಕೃಷ್ಣನು ವರುಣಲೋಕದಿಂದ ನಂದಗೋಪನನ್ನು ಬಿಡಿಸಿ ತಂದುದು	251
೨೯.	ರಾಸಲೀಲೆಯ ಪ್ರಾರಂಭ	253
೩೦.	ಗೋಪಿಯರ ವಿರಹವೇದನೆ	261
೩೧.	ಗೋಪಿಕಾಗೀತೆ	267
೩೨.	ಭಗವಂತನು ಪ್ರಕಟನಾಗಿ ಗೋಪಿಯರನ್ನು ಸಂತೈಸಿದುದು	271
೩೩.	ಮಹಾರಾಸ ಕ್ರೀಡೆ	274
೩೪.	ಸುದರ್ಶನ ಮತ್ತು ಶಂಖಚೂಡರ ಉದ್ಧಾರ	280
೩೫.	ಯುಗಳ ಗೀತೆ	283
೩೬.	ಅರಿಷ್ಟಾಸುರನ ಉದ್ಧಾರ, ಕಂಸನು ಅಕ್ರೂರನನ್ನು ವ್ರಜಕ್ಕೆ ಕಳುಹಿಸಿಕೊಟ್ಟಿದ್ದು	288
೩೭.	ಕೇಶಿ-ವ್ಯೋಮಾಸುರರ ಉದ್ಧಾರ, ನಾರದರಿಂದ ಭಗವಂತನ ಸ್ತುತಿ	292
೩೮.	ಅಕ್ರೂರನ ವ್ರಜಯಾತ್ರೆ	296
೩೯.	ಶ್ರೀಕೃಷ್ಣ-ಬಲರಾಮರು ಮಥುರಾಗಮನ	303
೪೦.	ಅಕ್ರೂರನು ಮಾಡಿದ ಭಗವಾನ್ ಶ್ರೀಕೃಷ್ಣನ ಸ್ತುತಿ	310
೪೧.	ಮಥುರೆಗೆ ಶ್ರೀಕೃಷ್ಣನ ಪ್ರವೇಶ	313
೪೨.	ಕುಬ್ಜೆಯ ಮೇಲೆ ಕೃಪೆ, ಧನ್ರ್ಭಂಗ, ಕಂಸನ ತಳಮಳ	319
೪೩.	ಕುವಲಯಾಪೀಡ ಆನೆಯ ಉದ್ಧಾರ - ರಂಗಮಂಟಪ ಪ್ರವೇಶ	323
೪೪.	ಚಾಣೂರ, ಮುಷ್ಟಿಕ ಮುಂತಾದ ಮಲ್ಲರ ಹಾಗೂ ಕಂಸನ ವಧೆ	328
೪೫.	ಬಲರಾಮ-ಕೃಷ್ಣರ ಉಪನಯನ ಮತ್ತು ಗುರುಕುಲ ಪ್ರವೇಶ	334
೪೬.	ಉದ್ಧವನ ವ್ರಜಯಾತ್ರೆ	339
೪೭.	ಉದ್ಧವ-ಗೋಪಿಯರ ಮಾತುಕತೆ-ಭ್ರಮರಗೀತೆ	345
೪೮.	ಭಗವಂತನು ಕುಬ್ಜೆಯ ಮತ್ತು ಅಕ್ರೂರನ ಮನೆಗಳಿಗೆ ಹೋದುದು	356
೪೯.	ಹಸ್ತಿನಾಪುರಕ್ಕೆ ಅಕ್ರೂರನ ಪ್ರಯಾಣ	361

ದಶಮ ಸ್ಕಂಧ (ಉತ್ತರಾರ್ಧ)

ಅಧ್ಯಾಯ	ವಿಷಯ	ಪುಟ
೫೦.	ಜರಾಸಂಧನೊಡನೆ ಯುದ್ಧ - ದ್ವಾರಕಾಪಟ್ಟಣ ನಿರ್ಮಾಣ	365
೫೧.	ಕಾಲಯವನನು ಭಸ್ಮವಾದುದು - ಮುಚುಕುಂದನ ಕಥೆ	371
೫೨.	ದ್ವಾರಕಾಗಮನ - ಬಲರಾಮನ ವಿವಾಹ -ರುಕ್ಮಿಣಿಯ ಸಂದೇಶವನ್ನು ಹೊತ್ತು ತಂದ ಬ್ರಾಹ್ಮಣನ ಆಗಮನ	378
೫೩.	ರುಕ್ಮಿಣೀ ಕಲ್ಯಾಣ	383
೫೪.	ಶಿಶುಪಾಲನ ಅನುಯಾಯಿಗಳ ಮತ್ತು ರುಕ್ಮಿಯ ಪರಾಜಯ - ಶ್ರೀಕೃಷ್ಣ ರುಕ್ಮಿಣಿಯರ ವಿವಾಹ	389
೫೫.	ಪ್ರದ್ಯುಮ್ನನ ಜನ್ಮ - ಶಂಬರಾಸುರನ ವಧೆ	396
೫೬.	ಸ್ಯಮಂತಕಮಣಿಯ ಕಥೆ - ಜಾಂಬವತಿ ಮತ್ತು ಸತ್ಯ ಭಾಮೆಯರೊಡನೆ ಶ್ರೀಕೃಷ್ಣನ ವಿವಾಹ	400
೫೭.	ಶ್ಯಮಂತಕಮಣಿಯ ಹರಣ - ಶತಧನ್ವನ ವಧೆ - ಅಕ್ರೂರನನ್ನು ದ್ವಾರಕೆಗೆ ಕರೆಸಿಕೊಂಡುದು	405
೫೮.	ಶ್ರೀಕೃಷ್ಣನ ಇತರ ವಿವಾಹ ಮಹೋತ್ಸವಗಳು	409
೫೯.	ನರಕಾಸುರನ ಸಂಹಾರ - ಹದಿನಾರು ಸಾವಿರದ ನೂರುಮಂದಿ ರಾಜಕನ್ಯೆಯರೊಡನೆ ಶ್ರೀಕೃಷ್ಣನ ವಿವಾಹ	415
೬೦.	ಶ್ರೀಕೃಷ್ಣ-ರುಕ್ಮಿಣೀ-ಸಂವಾದ	422
೬೧.	ಭಗವಂತನ ಸಂತತಿಯ ವರ್ಣನೆ - ಅನಿರುದ್ಧನ ವಿವಾಹ ರುಕ್ಮಿಯ ವಧೆ	430
೬೨.	ಉಷಾ - ಅನಿರುದ್ಧರ ಮಿಲನ	435
೬೩.	ಭಗವಾನ್ ಶ್ರೀಕೃಷ್ಣನೊಂದಿಗೆ ಬಾಣಾಸುರನ ಯುದ್ಧ	439
೬೪.	ನೃಗರಾಜನ ಕಥೆ	445
೬೫.	ಬಲರಾಮನು ವ್ರಜಕ್ಕೆ ಆಗಮಿಸಿದುದು	449
೬೬.	ಪೌಂಡ್ರಕ ಮತ್ತು ಕಾಶಿರಾಜನ ಉದ್ಧಾರ	453
೬೭.	ಬಲರಾಮನಿಂದ ದ್ವಿವಿದನ ಸಂಹಾರ	458
೬೮.	ಕೌರವರ ಮೇಲೆ ಬಲರಾಮನ ಕೋಪ ಮತ್ತು ಸಾಂಬನ ವಿವಾಹ	460
೬೯.	ದೇವರ್ಷಿ ನಾರದರು ಭಗವಂತನ ಗೃಹಸ್ಥ ವ್ಯವಹಾರಗಳನ್ನು ನೋಡಿದುದು	466
೭೦.	ಶ್ರೀಕೃಷ್ಣನ ದಿನಚರ್ಯೆ ಮತ್ತು ಜರಾಸಂಧನ ಬಂದಿಗಳಾಗಿದ್ದ ರಾಜರ ದೂತನ ಆಗಮನ	471
೭೧.	ಶ್ರೀಕೃಷ್ಣನು ಇಂದ್ರಪ್ರಸ್ಥಕ್ಕೆ ದಯಮಾಡಿಸಿದುದು	478
೭೨.	ಪಾಂಡವರಿಂದ ರಾಜಸೂಯ ಯಜ್ಞದ ಉಪಕ್ರಮ ಮತ್ತು ಜರಾಸಂಧನ ಉದ್ಧಾರ	483
೭೩.	ಜರಾಸಂಧನ ಸೆರೆಮನೆಯಲ್ಲಿದ್ದ ರಾಜರ ಬೀಳ್ಕೊಡಿಗೆ, ಶ್ರೀಕೃಷ್ಣನು ಭೀಮಾರ್ಜುನರೊಡನೆ ಇಂದ್ರಪ್ರಸ್ಥಕ್ಕೆ ಹಿಂದಿರುಗಿದುದು	489
೭೪.	ಭಗವಂತನ ಅಗ್ರಪೂಜೆ - ಶಿಶುಪಾಲವಧೆ	493

ಅಧ್ಯಾಯ	ವಿಷಯ	ಪುಟ
೭೫.	ರಾಜಸೂಯ ಯಜ್ಞದ ಪರಿಸಮಾಪ್ತಿ – ದುರ್ಯೋಧನನಿಗಾದ ಅವಮಾನ	498
೭೬.	ಶಾಲ್ವನೊಡನೆ ಯಾದವರ ಯುದ್ಧ	503
೭೭.	ಶಾಲ್ವನ ಸಂಹಾರ	506
೭೮.	ದಂತವಕ್ತ್ರ-ವಿದೂರಥ ಸಂಹಾರ ತೀರ್ಥಯಾತ್ರೆಯಲ್ಲಿ ಬಲರಾಮನಿಂದ ಸೂತಪುರಾಣಿಕರ ವಧೆ	510
೭೯.	ಬಲರಾಮನಿಂದ ಬಲ್ವಲನ ಸಂಹಾರ – ತೀರ್ಥಯಾತ್ರೆ	515
೮೦.	ಶ್ರೀಕೃಷ್ಣನಿಂದ ಸುದಾಮನ ಸ್ವಾಗತ	518
೮೧.	ಸುದಾಮನಿಗೆ ಐಶ್ವರ್ಯದ ಪ್ರಾಪ್ತಿ	523
೮೨.	ಬಲರಾಮ ಕೃಷ್ಣರು ಗೋಪ-ಗೋಪಿಯರನ್ನು ಸಂಧಿಸಿದುದು	528
೮೩.	ಶ್ರೀಕೃಷ್ಣನ ಪಟ್ಟದರಸಿಯರೊಡನೆ ದ್ರೌಪದಿಯ ಮಾತುಕತೆ	534
೮೪.	ವಸುದೇವನ ಯಜ್ಞೋತ್ಸವವು	540
೮೫.	ಭಗವಂತನು ವಸುದೇವನಿಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿದುದು – ಗತಿಸಿಹೋದ ದೇವಕಿಯ ಆರು ಮಕ್ಕಳನ್ನು ಶ್ರೀಕೃಷ್ಣನು ಹಿಂದಕ್ಕೆ ತಂದುದು	548
೮೬.	ಸುಭದ್ರಾಹರಣ – ಭಗವಾನ್ ಶ್ರೀಕೃಷ್ಣನು ಮಿಥಿಲೆಯ ರಾಜನಾದ ಜನಕನ ಅರಮನೆಗೂ ಮತ್ತು ಶ್ರುತದೇವ ಬ್ರಾಹ್ಮಣನ ಮನೆಗೂ ಏಕಕಾಲದಲ್ಲಿ ಪ್ರವೇಶಿಸಿದುದು	555
೮೭.	ವೇದಸ್ತುತಿ	562
೮೮.	ವೃಕಾಸುರನ ಕಥೆ	576
೮೯.	ಭೃಗು ಮಹರ್ಷಿಯು ತ್ರಿಮೂರ್ತಿಗಳನ್ನು ಪರೀಕ್ಷಿಸಿದುದು – ಭಗವಂತನು ಸತ್ತು ಹೋಗಿದ್ದ ಬ್ರಾಹ್ಮಣ ಬಾಲಕರನ್ನು ಮರಳಿ ತಂದು ಕೊಟ್ಟದ್ದು	581
೯೦.	ಭಗವಾನ್ ಶ್ರೀಕೃಷ್ಣನ ಲೀಲಾವಿಹಾರ ವರ್ಣನೆ	588

ಏಕಾದಶ ಸ್ಕಂಧ

೧.	ಯದುವಂಶಕ್ಕೆ ಋಷಿಗಳ ಶಾಪ	597
೨.	ವಸುದೇವನ ಬಳಿಗೆ ನಾರದರು ಬರುವುದು, ಅವರಿಗೆ ರಾಜಾ ನಿಮಿ ಹಾಗೂ ಒಂಭತ್ತು ಯೋಗೀಶ್ವರರ ಸಂವಾದವನ್ನು ತಿಳಿಸಿದುದು	600
೩.	ಮಾಯೆ, ಮಾಯೆಯಿಂದ ಪಾರಾಗುವ ಉಪಾಯ ಬ್ರಹ್ಮ ಹಾಗೂ ಕರ್ಮಯೋಗದ ನಿರೂಪಣೆ	608
೪.	ಭಗವಂತನ ಅವತಾರಗಳ ವರ್ಣನೆ	616
೫.	ಭಕ್ತಿಹೀನ ಪುರುಷರ ಗತಿ ಮತ್ತು ಭಗವಂತನ ಪೂಜಾವಿಧಾನದ ವರ್ಣನೆ	620
೬.	ದೇವತೆಗಳು ಶ್ರೀಕೃಷ್ಣನನ್ನು ತನ್ನ ಪರಮಪದಕ್ಕೆ ಹಿಂದಿರುಗಲು ಪ್ರಾರ್ಥಿಸಿದುದು ; ಯಾದವರು ಪ್ರಭಾಸ ಕ್ಷೇತ್ರಕ್ಕೆ ಹೊರಡಲು ಸಿದ್ಧರಾಗುತ್ತಿರುವುದನ್ನು ನೋಡಿ, ಉದ್ಧವನು ಶ್ರೀಕೃಷ್ಣನ ಬಳಿಗೆ ಹೋದುದು	627
೭.	ಅವಧೂತೋಪಾಖ್ಯಾನ ಪೃಥ್ವಿಯಿಂದ ಪಾರಿವಾಳದ ತನಕ ಎಂಟು ಗುರುಗಳ ಕಥೆ	634
೮.	ಅವಧೂತೋಪಾಖ್ಯಾನ – ಹೆಬ್ಬಾವಿನಿಂದ ಪಿಂಗಳೆಯ ತನಕ ಒಂಭತ್ತು ಗುರುಗಳ ಕಥೆ	643
೯.	ಅವಧೂತೋಪಾಖ್ಯಾನ – ಕುರರಪಕ್ಷಿಯಿಂದ ಹಿಡಿದು ಭೃಂಗದವರೆಗಿನ ಏಳು ಗುರುಗಳ ಕಥೆ	649
೧೦.	ಅಸಾರವಾದ ಲೌಕಿಕ ಮತ್ತು ಪಾರಲೌಕಿಕವಾದ ಭೋಗಗಳ ನಿರೂಪಣೆ	654
೧೧.	ಬದ್ಧ, ಮುಕ್ತ ಮತ್ತು ಭಕ್ತಜನರ ಲಕ್ಷಣಗಳು	658
೧೨.	ಸತ್ಸಂಗದ ಮಹಿಮೆ ಮತ್ತು ಕರ್ಮ ಹಾಗೂ ಕರ್ಮತ್ಯಾಗದ ವಿಧಾನ	665
೧೩.	ಹಂಸರೂಪದಿಂದ ಸನಕಾದಿಗಳಿಗೆ ಮಾಡಿದ ಉಪದೇಶದ ವರ್ಣನೆ	669
೧೪.	ಭಕ್ತಿಯೋಗದ ಮಹಿಮೆ ಹಾಗೂ ಧ್ಯಾನವಿಧಿಯ ವರ್ಣನೆ	674
೧೫.	ಬೇರೆ-ಬೇರೆ ಸಿದ್ಧಿಗಳ ಹೆಸರುಗಳು ಮತ್ತು ಅವುಗಳ ಲಕ್ಷಣ	680
೧೬.	ಭಗವಂತನ ವಿಭೂತಿಗಳ ವರ್ಣನೆ	684
೧೭.	ವರ್ಣಾಶ್ರಮ ಧರ್ಮದ ನಿರೂಪಣೆ	689
೧೮.	ವಾನಪ್ರಸ್ಥ ಮತ್ತು ಸಂನ್ಯಾಸಿಯ ಧರ್ಮ	696
೧೯.	ಜ್ಞಾನ, ಭಕ್ತಿ , ಯಮ, ನಿಯಮ ಮುಂತಾದ ಸಾಧನೆಗಳ ವರ್ಣನೆ	701
೨೦.	ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ	706
೨೧.	ಗುಣ-ದೋಷ ವ್ಯವಸ್ಥೆಗಳ ಸ್ವರೂಪ ಮತ್ತು ಅವುಗಳ ರಹಸ್ಯ	710
೨೨.	ತತ್ತ್ವಗಳ ಸಂಖ್ಯೆ ಮತ್ತು ಪ್ರಕೃತಿ ಪುರುಷರ ವಿಶ್ಲೇಷಣೆ	717
೨೩.	ಒರ್ವ ತಿಕ್ಕು ಬ್ರಾಹ್ಮಣನ ಇತಿಹಾಸ (ಭಿಕ್ಷುಗೀತೆ)	725
೨೪.	ಸಾಂಖ್ಯಯೋಗ	733
೨೫.	ಮೂರೂ ಗುಣವೃತ್ತಿಗಳ ನಿರೂಪಣೆ	736
೨೬.	ಪುರೂರವನ ವೈರಾಗ್ಯೋಕ್ತಿ	740
೨೭.	ಭಗವಂತನ ಪೂಜಾ ವಿಧಾನ ವರ್ಣನೆ	745
೨೮.	ಪರಮಾರ್ಥ ನಿರೂಪಣೆ	751
೨೯.	ಭಾಗವತಧರ್ಮಗಳ ನಿರೂಪಣೆ ಮತ್ತು ಉದ್ಧವನು ಬದರಿಕಾಶ್ರಮಕ್ಕೆ ಹೋದುದು	758
೩೦.	ಯದುಕುಲದ ಸಂಹಾರ	764
೩೧.	ಶ್ರೀಭಗವಂತನ ಸ್ವಧಾಮಗಮನ	770

ಅಧ್ಯಾಯ	ವಿಷಯ	ಪುಟ

ದ್ವಾದಶ ಸ್ಕಂಧ

೧. ಕಲಿಯುಗದ ರಾಜವಂಶಗಳ ವರ್ಣನೆ.....775
೨. ಜ್ಞಾನ, ಭಕ್ತಿ , ಯಮ, ನಿಯಮ ಮುಂತಾದ ಸಾಧನೆಗಳ ವರ್ಣನೆ.....779
೩. ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ.....783
೪. ಗುಣ-ದೋಷ ವ್ಯವಸ್ಥೆಗಳ ಸ್ವರೂಪ ಮತ್ತು ಅವುಗಳ ರಹಸ್ಯ.....790
೫. ತತ್ತ್ವಗಳ ಸಂಖ್ಯೆ ಮತ್ತು ಪ್ರಕೃತಿ ಪುರುಷರ ವಿಶ್ಲೇಷಣೆ.....795
೬. ಓರ್ವ ತಿತಿಕ್ಷು ಬ್ರಾಹ್ಮಣನ ಇತಿಹಾಸ (ಭಿಕ್ಷುಗೀತೆ).....797
೭. ಸಾಂಖ್ಯಯೋಗ.....806
೮. ಮೂರೂ ಗುಣವೃತ್ತಿಗಳ ನಿರೂಪಣೆ.....809
೯. ಪುರೂರವನ ವೈರಾಗ್ಯೋಕ್ತಿ.....816
೧೦. ಭಗವಂತನ ಪೂಜಾ ವಿಧಾನ ವರ್ಣನೆ.....820
೧೧. ಪರಮಾರ್ಥ ನಿರೂಪಣೆ.....825
೧೨. ಭಾಗವತಧರ್ಮಗಳ ನಿರೂಪಣೆ ಮತ್ತು ಉದ್ಧವನು ಬದರಿಕಾಶ್ರಮಕ್ಕೆ ಹೋದುದು.....830
೧೩. ಯದುಕುಲದ ಸಂಹಾರ.....838

ಶ್ರೀಮದ್ಭಾಗವತ ಮಾಹಾತ್ಮ್ಯ

೧. ಪರೀಕ್ಷಿದ್ರಾಜ ಮತ್ತು ವಜ್ರನಾಭರ ಸಮಾಗಮ, ಶಾಂಡಿಲ್ಯ ಮುನಿಯು ಭಗವಂತನ ಲೀಲೆಯ ರಹಸ್ಯವನ್ನೂ ಮತ್ತು ವ್ರಜಭೂಮಿಯ ಮಹತ್ತ್ವವನ್ನೂ ವರ್ಣಿಸಿದುದು.....841
೨. ಯಮುನಾ ಮತ್ತು ಶ್ರೀಕೃಷ್ಣಪತ್ನಿಯರ ಸಂವಾದ, ಕೀರ್ತನೋತ್ಸವದಲ್ಲಿ ಉದ್ಧವನು ಪ್ರಕಟವಾದುದು.....846
೩. ಶ್ರೀಮದ್ಭಾಗವತದ ಪರಂಪರೆ, ಮಾಹಾತ್ಮ್ಯ– ಭಾಗವತಶ್ರವಣದಿಂದ ಭಗವದ್ಭಾವದ ಪ್ರಾಪ್ತಿ.....850
೪. ಶ್ರೀಮದ್ಭಾಗವತದ ಸ್ವರೂಪ, ಪ್ರಮಾಣ, ಶ್ರೋತೃಗಳ ಮತ್ತು ಪ್ರವಚನಕಾರರ ಲಕ್ಷಣ, ಶ್ರವಣವಿಧಿ ಮತ್ತು ಮಾಹಾತ್ಮ್ಯ.....857

ಶ್ರೀ ಶುಕಮಹಾಮುನಿಗಳಿಗೆ ನಮಸ್ಕಾರ

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ ದ್ವೈಪಾಯನೋ ವಿರಹಕಾತರ ಆಜುವಾಹ ।
ಪುತ್ರೇತಿ ತನ್ಮಯತಯಾ ತರವೋಽಭಿನೇದುಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥ (೧-೨-೨)

ಸಮಸ್ತ ಪ್ರಾಣಿಗಳ ಆತ್ಮ ಸ್ವರೂಪರಾದ ಶ್ರೀ ಶುಕಮಹಾಮುನಿಗಳಿಗೆ ನಮಸ್ಕಾರವು. ಸಂಸಾರ ಸಂಬಂಧವನ್ನು ಕೂಡಿಕೊಳ್ಳದೆ ಎಲ್ಲ ಕರ್ಮಗಳಿಂದಲೂ ಬಿಡುಗಡೆಹೊಂದಿ ಕೃತಕೃತ್ಯರಾಗಿದ್ದ, ಜ್ಞಾನ-ವೈರಾಗ್ಯನಿಧಿಗಳಾದ ಈ ಮಹಾತ್ಮರು ಸರ್ವಸಂಗ ಪರಿತ್ಯಾಗಮಾಡಿ ಒಬ್ಬಂಟಿಗರಾಗಿ ಮನೆಯಿಂದ ಹೊಟುಬಿಟ್ಟಾಗ ತಂದೆಯಾದ ವೇದವ್ಯಾಸರು ಪುತ್ರವಿಯೋಗದಿಂದ ತಲ್ಲಣಿಸುತ್ತಾ ಓ ಪುತ್ರಾ ! ಓ ಪುತ್ರಾ ! ಎಂದು ಕೂಗತೊಡಗಿದರು. ಆಗ ಅಲ್ಲಿದ್ದ ವೃಕ್ಷಗಳೇ ತನ್ಮಯತೆಯಿಂದ ಕೂಡಿ ಅವರ ಪರವಾಗಿ 'ಭೋಃ' ಎಂದು ಓಗುಟ್ಟವು. ಇಂತಹ ಎಲ್ಲರ ಹೃದಯದಲ್ಲಿ ವಿರಾಜಮಾನರಾಗಿ ಆತ್ಮರೂಪರಾಗಿರುವ ಗುರು ಶ್ರೀ ಶುಕಮಹಾಮುನಿಗಳಿಗೆ ನಾನು ವಂದಿಸುತ್ತೇನೆ.

ಯಃ ಸ್ವಾನುಭಾವಮಖಿಲಶ್ರುತಿಸಾರಮೇಕಮಧ್ಯಾತ್ಮದೀಪಮತಿತಿತೀರ್ಷತಾಂ ತಮೋಽಂಧಮ್ ।
ಸಂಸಾರಿಣಾಂ ಕರುಣಯಾಽಽಹ ಪುರಾಣಗುಹ್ಯಂ ತಂ ವ್ಯಾಸಸೂನುಮುಪಯಾಮಿ ಗುರುಂ ಮುನೀನಾಮ್ ॥ (೧-೨-೩)

ಈ ಶ್ರೀಮದ್ಭಾಗವತವು ಅತ್ಯಂತ ಗೋಪನೀಯ - ರಹಸ್ಯಾತ್ಮಕ ಪುರಾಣವಾಗಿದೆ. ಇದು ಭಗವತ್ ಸ್ವರೂಪದ ಅನುಭವ ಮಾಡಿಸುವಂತಹುದು ಹಾಗೂ ಸಮಸ್ತ ವೇದಗಳ ಸಾರವಾಗಿದೆ. ಸಂಸಾರ ಚಕ್ರದಲ್ಲಿ ಸಿಕ್ಕಿಕೊಂಡು ಘೋರ ಅಜ್ಞಾನಾಂಧಕಾರದಿಂದ ದಾಟಿ ಹೋಗಲು ಬಯಸುವ ಜನರಿಗಾಗಿ ಇದು ಆಧ್ಯಾತ್ಮಿಕ ತತ್ತ್ವಗಳನ್ನು ಪ್ರಕಾಶಿಸುವ ಒಂದು ಅದ್ವಿತೀಯ ದೀಪವಾಗಿದೆ. ನಿಜವಾಗಿ ಅಂತಹವರ ಮೇಲೆ ಕರುಣೆತೋರಿ ದೊಡ್ಡ ದೊಡ್ಡ ಮುನಿಗಳಿಗೂ, ಆಚಾರ್ಯರಾದ ಶ್ರೀಶುಕಮಹರ್ಷಿಗಳು ಇದನ್ನು ವರ್ಣಿಸಿರುವರು. ನಾನು ಅವರಿಗೆ ಶರಣು ಹೊಂದುತ್ತೇನೆ.

ಸ್ವಸುಖನಿಭೃತಚೇತಾಸ್ತದ್ವ್ಯುದಸ್ತಾನ್ಯಭಾವೋಽಪ್ಯಜಿತರುಚಿತಲೀಲಾಕೃಷ್ಣಸಾರಸ್ತದೀಯಮ್ ।
ವ್ಯತನುತ ಕೃಪಯಾ ಯಸ್ತತ್ತ್ವದೀಪಂ ಪುರಾಣಂ ತಮಖಿಲವೃಜಿನಘ್ನಂ ವ್ಯಾಸನೂನುಂ ನತೋಽಸ್ಮಿ ॥ (೧೨-೧೨-೬೮)

ಶ್ರೀಶುಕಮಹಾಮುನಿಗಳು ತಮ್ಮ ಆತ್ಮಾನಂದದಲ್ಲೇ ಮುಳುಗಿದ್ದರು. ಈ ಅಖಂಡ ಅದ್ವೈತ ಸ್ಥಿತಿಯಿಂದ ಅವರ ಭೇದ ದೃಷ್ಟಿಯು ಸರ್ವಥಾ ಹೊರಟುಹೋಗಿತ್ತು. ಹೀಗಿದ್ದರೂ ಮುರಳೀಮನೋಹರ ಶ್ಯಾಮಸುಂದರನ ಮಧುರ, ಮಂಗಲಮಯ ಮನೋಹಾರಿಣಿ ಲೀಲೆಗಳು ಅವರ ವೃತ್ತಿಗಳನ್ನು ತಮ್ಮ ಕಡೆಗೆ ಆಕರ್ಷಿಸಿಕೊಂಡಿದ್ದವು. ಅವರು ಜಗತ್ತಿನ ಪ್ರಾಣಿಗಳ ಮೇಲೆ ಕೃಪೆ ಮಾಡಿ ಭಗವತತ್ತ್ವವನ್ನು ಪ್ರಕಾಶಿತಗೊಳಿಸುವ ಈ ಮಹಾಪುರಾಣದ ವಿಸ್ತಾರ ಮಾಡಿದರು. ಅಂತಹ ಸರ್ವಪಾಪಹಾರೀ ವ್ಯಾಸನಂದ ಭಗವಾನ್ ಶ್ರೀಶುಕಮಹಾಮುನಿಗಳ ಚರಣಗಳಲ್ಲಿ ನಾನು ನಮಸ್ಕಾರ ಮಾಡುತ್ತೇನೆ.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತ ಮಾಹಾತ್ಮ್ಯ

(ಶ್ರೀಭಗವಂತನು ಬ್ರಹ್ಮದೇವರಿಗೆ ತನ್ನ ಮುಖಾರವಿಂದಿಂದಲೇ ಅನುಗ್ರಹಿಸಿದ್ದು)

ಶ್ರೀಮದ್ಭಾಗವತಂ ನಾಮ ಪುರಾಣಂ ಲೋಕವಿಶ್ರುತಮ್ ।
ಶೃಣುಯಾಚ್ಛ್ರದ್ಧಯಾ ಯುಕ್ತೋ ಮಮ ಸಂತೋಷ ಕಾರಣಮ್
॥ ೧ ॥

ನಿತ್ಯಂ ಭಾಗವಂತ ಯಸ್ತು ಪುರಾಣಂ ಪಠತೇ ನರಃ ।
ಪ್ರತ್ಯಕ್ಷರಂ ಭವೇತ್ತಸ್ಯ ಕಪಿಲಾದಾನಜಂ ಫಲಮ್
॥ ೨ ॥

ಶ್ಲೋಕಾರ್ಧಂ ಶ್ಲೋಕಪಾದಂ ವಾ ನಿತ್ಯಂ ಭಾಗವತೋದ್ಭವಮ್ ।
ಪಠತೇ ಶೃಣುಯಾದ್ಯಸ್ತು ಗೋಸಹಸ್ರಫಲಂ ಲಭೇತ್
॥ ೩ ॥

ಯಃ ಪಠೇತ್ ಪ್ರಯತೋ ನಿತ್ಯ ಶ್ಲೋಕಂ ಭಾಗವತಂ ಸುತ ।
ಅಷ್ಟಾದಶ ಪುರಾಣಾನಾಂ ಫಲಮಾಪ್ನೋತಿ ಮಾನವಃ
॥ ೪ ॥

ನಿತ್ಯಂ ಮಮ ಕಥಾ ಯತ್ರ ತತ್ರ ತಿಷ್ಠಂತಿ ವೈಷ್ಣವಾಃ ।
ಕಲಿಬಾಹ್ಯಾ ನರಾಸ್ತೇ ವೈ ಯೇಽರ್ಚಯಂತಿ ಸದಾ ಮಮ
॥ ೫ ॥

ವೈಷ್ಣವಾನಾಂ ತು ಶಾಸ್ತ್ರಾಣಿ ಯೇಽರ್ಚಯಂತಿ ಗೃಹೇ ನರಾಃ ।
ಸರ್ವಪಾಪವಿನಿರ್ಮುಕ್ತಾ ಭವಂತಿ ಸುರವಂದಿತಾಃ
॥ ೬ ॥

ಯೇಽರ್ಚಯಂತಿ ಗೃಹೇ ನಿತ್ಯಂ ಶಾಸ್ತ್ರಂ ಭಾಗವತಂ ಕಲೌ ।
ಆಸ್ಫೋಟಯಂತಿ ವಲ್ಗಂತಿ ತೇಷಾಂ ಪ್ರೀತೋ ಭವಾಮ್ಯಹಮ್
॥ ೭ ॥

ಯಾವದ್ದಿನಾನಿ ಹೇ ಪುತ್ರ ಶಾಸ್ತ್ರಂ ಭಾಗವತಂ ಗೃಹೇ ।
ತಾವತ್ ಪಿಬಂತಿ ಪಿತರಃ ಕ್ಷೀರಂ ಸರ್ಪಿರ್ಮಧೂದಕಮ್
॥ ೮ ॥

ಯಚ್ಛಂತಿ ವೈಷ್ಣವೇ ಭಕ್ತ್ಯಾ ಶಾಸ್ತ್ರಂ ಭಾಗವತಂ ಹಿ ಯೇ ।
ಕಲ್ಪಕೋಟಿಸಹಸ್ರಾಣಿ ಮಮ ಲೋಕೇ ವಸಂತಿ ತೇ
॥ ೯ ॥

ಯೇಽರ್ಚಯಂತಿ ಸದಾ ಗೇಹೇ ಶಾಸ್ತ್ರಂ ಭಾಗವತಂ ನರಾಃ ।
ಪ್ರೀಣಿತಾಸ್ತೈಶ್ಚ ವಿಬುಧಾ ಯಾವದಾಭೂತಸಂಪ್ಲವಮ್
॥ ೧೦ ॥

ಲೋಕವಿಖ್ಯಾತವಾಗಿರುವ ಶ್ರೀಮದ್ಭಾಗವತವೆಂಬ ಪುರಾಣ ರತ್ನವನ್ನು ಶ್ರದ್ಧೆಯಿಂದ ಶ್ರವಣ ಮಾಡಬೇಕು. ಇದು ನನಗೆ ಸಂತೋಷವನ್ನುಂಟುಮಾಡುತ್ತದೆ. ॥ ೧ ॥ ಪ್ರತಿದಿನವೂ ಶ್ರೀಮದ್ಭಾಗವತವನ್ನು ಪಾರಾಯಣ ಮಾಡುವವನಿಗೆ ಒಂದೊಂದು ಅಕ್ಷರದ ಪಠನಕ್ಕೂ ಒಂದೊಂದು ಕಪಿಲಾಗೋವನ್ನು ದಾನ ಮಾಡಿದ ಪುಣ್ಯ ಫಲ ದೊರೆಯುತ್ತದೆ. ॥೨ ॥ ಪ್ರತಿದಿನವೂ ಶ್ರೀಮದ್ಭಾಗವತದಿಂದ ಅರ್ಧ ಶ್ಲೋಕವನ್ನಾಗಲೀ ಒಂದು ಪಾದವನ್ನಾಗಲೀ ಓದುವವನು ಅಥವಾ ಕೇಳುವವನು ಸಾವಿರ ಗೋವುಗಳನ್ನು ದಾನ ಮಾಡಿದ ಪುಣ್ಯಕ್ಕೆ ಭಾಗಿಯಾಗುವನು. ॥ ೩. ॥

ಎಲೈ ಪುತ್ರನೇ ! ಪ್ರತಿದಿನವೂ ಸಂಯಮದಿಂದ ಕೂಡಿ ಶ್ರೀಮದ್ಭಾಗವತವನ್ನು ಯಾವನು ಪಾರಾಯಣ ಮಾಡುತ್ತಾನೆಯೋ ಅವನಿಗೆ ಹದಿನೆಂಟು ಪುರಾಣಗಳನ್ನೂ ಪಾರಾಯಣ ಮಾಡಿದ ಫಲ ಸಿಕ್ಕುವುದು. ॥ ೪ ॥ ನಿತ್ಯವೂ ನನ್ನ ಕಥೆಯು ನಡೆಯುವಲ್ಲಿ ಪ್ರಹ್ಲಾದನೇ ಮುಂತಾದ ನನ್ನ ಭಕ್ತ ಪಾರ್ಷದರು ಉಪಸ್ಥಿತರಾಗಿರುತ್ತಾರೆ. ಈ ಭಾಗವತವನ್ನು ಪೂಜೆ ಮಾಡುವ ಮನುಷ್ಯರು ಕಲಿಯ ಅಧಿಕಾರಕ್ಕೆ ಒಳಪಡುವುದಿಲ್ಲ. ॥ ೫ ॥ ಮಹಾ ವಿಷ್ಣುವನ್ನು ಕುರಿತ ಶಾಸ್ತ್ರಗಳನ್ನು ಮನೆಯಲ್ಲಿ ಪೂಜೆ ಮಾಡುವ ಮನುಷ್ಯರು ಸಮಸ್ತ ಪಾಪಗಳಿಂದಲೂ ಬಿಡುಗಡೆಹೊಂದಿ ದೇವತೆಗಳಿಂದಲೂ ವಂದಿತರಾಗುತ್ತಾರೆ. ॥ ೬ ॥ ಕಲಿಯುಗದಲ್ಲಿ ತಮ್ಮ ಮನೆಯಲ್ಲಿ ಶ್ರೀಮದ್ಭಾಗವತ ಶಾಸ್ತ್ರವನ್ನು ಪ್ರತಿನಿತ್ಯವೂ ಪೂಜೆ ಮಾಡುತ್ತಾ ಕಲಿ ಪುರುಷನಿಗೆ ಹೆದರದೇ ಚಪ್ಪಾಳೆತಟ್ಟಿ ಕುಣಿದು ಕುಪ್ಪಳಿಸುವವರ ವಿಷಯದಲ್ಲಿ ನಾನು ಪ್ರಸನ್ನನಾಗಿರುತ್ತೇನೆ. ॥ ೭ ॥ ಪುತ್ರ ! ಮನುಷ್ಯನು ಎಷ್ಟು ದಿನಗಳ ಕಾಲ ತನ್ನ ಗೃಹದಲ್ಲಿ ಶ್ರೀಮದ್ಭಾಗವತವನ್ನು ಇಟ್ಟುಕೊಂಡಿರುತ್ತಾನೋ ಅಲ್ಲಿಯವರೆಗೂ ಅವನ ಪಿತೃಗಳು ಹಾಲು, ತುಪ್ಪ ಜೇನು ಮತ್ತು ಸಿಹಿ ನೀರನ್ನು ಕುಡಿಯುತ್ತಿರುವರು॥ ೮ ॥ ವಿಷ್ಣುಭಕ್ತನಿಗೆ ಭಕ್ತಿ ಪೂರ್ವಕವಾಗಿ ಶ್ರೀಮದ್ಭಾಗವತವನ್ನು ಸಮರ್ಪಿಸುವ ಸುಕೃತಿಗಳು ಸಾವಿರಾರು ಕೋಟಿ ಕಲ್ಪ ಕಾಲದವರೆಗೆ ವೈಕುಂಠಧಾಮದಲ್ಲಿ ವಾಸ ಮಾಡುವರು. ॥ ೯ ॥ ಸದಾ ತಮ್ಮ ಮನೆಯಲ್ಲಿ ಶ್ರೀಮದ್ಭಾಗವತ ಶಾಸ್ತ್ರವನ್ನು ಪೂಜಿಸುವವರು ಕಲ್ಪ ಕಾಲದವರೆಗೆ ಸಮಸ್ತ ದೇವತೆಗಳನ್ನೂ ತೃಪ್ತಿಪಡಿಸಿದಂತೆಯೇ ಸರಿ. ॥ ೧೦ ॥ ಮನೆಯಲ್ಲಿ ನೂರಾರು ಸಾವಿರಾರು ಇತರ ಶಾಸ್ತ್ರ ಸಂಗ್ರಹವನ್ನು ಇಟ್ಟುಕೊಂಡು ಏನು ಫಲ ? ಶ್ರೀಮದ್ಭಾಗವತದ ಒಂದು ಶ್ಲೋಕದ ಅರ್ಧ ಭಾಗವನ್ನಾಗಲೀ

ಶ್ಲೋಕಾರ್ಧಂ ಶ್ಲೋಪಾದಂ ವಾ ವರಂ ಭಾಗವತಂ ಗೃಹೇ ।
ಶತಶೋಽಥ ಸಹಸ್ರೈಶ್ಚ ಕಿಮನ್ಯೈಃ ಶಾಸ್ತ್ರಸಂಗ್ರಹೈಃ
॥ ೧೧ ॥

ನ ಯಸ್ಯ ತಿಷ್ಠತೇ ಶಾಸ್ತ್ರಂ ಗೃಹೇ ಭಾಗವತಂ ಕಲೌ ।
ನ ತಸ್ಯ ಪುನರಾವೃತ್ತಿಃ ಯಾಮ್ಯಪಾಶಾತ್ಕದಾಚನ
॥ ೧೨ ॥

ಕಥಂ ಸ ವೈಷ್ಣವೋ ಜ್ಞೇಯಃ ಶಾಸ್ತ್ರಂ ಭಾಗವತಂ ಕಲೌ ।
ಗೃಹೇ ನ ತಿಷ್ಠತೇ ಯಸ್ಯ ಶ್ವಪಚಾದಧಿಕೋ ಹಿ ಸಃ
॥ ೧೩ ॥

ಸರ್ವಸ್ವೇನಾಪಿ ಲೋಕೇಶ ಕರ್ತವ್ಯಃ ಶಾಸ್ತ್ರಸಂಗ್ರಹಃ ।
ವೈಷ್ಣವಸ್ತು ಸದಾ ಭಕ್ಯಾ ತುಷ್ಟ್ಯರ್ಥಂ ಮಮ ಪುತ್ರಕ
॥ ೧೪ ॥

ಯತ್ರ ಯತ್ರ ಭವೇತ್ ಪುಣ್ಯಂ ಶಾಸ್ತ್ರಂ ಭಾಗವತಂ ಕಲೌ ।
ತತ್ರ ತತ್ರ ಸದೈವಾಹಂ ಭವಾಮಿ ತ್ರಿದಶೈಃ ಸಹ
॥ ೧೫ ॥

ತತ್ರ ಸರ್ವಾಣಿ ತೀರ್ಥಾನಿ ನದೀನದಸರಾಂಸಿ ಚ ।
ಯಜ್ಞಾಃ ಸಪ್ತಪುರೀ ನಿತ್ಯಂ ಪುಣ್ಯಾಃ ಸರ್ವೇ ಶಿಲೋಚ್ಚಯಾಃ
॥ ೧೬ ॥

ಶ್ರೋತವ್ಯಂ ಮಮ ಶಾಸ್ತ್ರಂ ಹಿ ಯಶೋಧರ್ಮಜಯಾರ್ಥಿನಾ ।
ಪಾಪಕ್ಷಯಾರ್ಥ ಲೋಕೇಶ ಮೋಕ್ಷಾರ್ಥಂ ಧರ್ಮಬುದ್ಧಿನಾ
॥ ೧೭ ॥

ಶ್ರೀಮದ್ಭಾಗವತಂ ಪುಣ್ಯಮಾಯುರಾರೋಗ್ಯವರ್ಧನಮ್ ।
ಪಠನಾತ್ ಶ್ರವಣಾದ್ವಾಪಿ ಸರ್ವಪಾಪೈಃ ಪ್ರಮುಚ್ಯತೇ
॥ ೧೮ ॥

ನ ಶೃಣ್ವಂತಿ ನ ಹೃಷ್ಯಂತಿ ಶ್ರೀಮದ್ಭಾಗವತಂ ಪರಮ್ ।
ಸತ್ಯಂ ಸತ್ಯಂ ಹಿ ಲೋಕೇಶ ತೇಷಾಂ ಸ್ವಾಮೀ ಸದಾ ಯಮಃ
॥ ೧೯ ॥

ನ ಗಚ್ಛತಿ ಯದಾ ಮರ್ತ್ಯಃ ಶ್ರೋತುಂ ಭಾಗವತಂ ಸುತ ।
ಏಕಾದಶ್ಯಾಂ ವಿಶೇಷೇಣ ನಾಸ್ತಿ ಪಾಪರತಸ್ತತಃ
॥ ೨೦ ॥

ಶ್ಲೋಕಂ ಭಾಗವತಂ ಚಾಪಿ ಶ್ಲೋಕಾರ್ಧಂ ಪಾದಮೇವ ವಾ ।
ಲಿಖಿತಂ ತಿಷ್ಠತೇ ಯಸ್ಯ ಗೃಹೇ ತಸ್ಯ ವಸಾಮ್ಯಹಮ್
॥ ೨೧ ॥

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಪಾವನಂ ನೃಣಾಂ ಶ್ರೀಮದ್ಭಾಗವತಂ ಯಥಾ
॥ ೨೨ ॥

ಅಥವಾ ಒಂದು ಪಾದವನ್ನಾಗಲೀ ಇಟ್ಟುಕೊಂಡರೂ ಅದಕ್ಕಿಂತಲೂ ಉತ್ತಮವೇ. ॥ ೧೧ ॥

ಕಲಿಯುಗದಲ್ಲಿ ಯಾವ ಮನುಷ್ಯನ ಮನೆಯಲ್ಲಿ ಭಾಗವತ ಶಾಸ್ತ್ರ ಇರುವುದಿಲ್ಲವೋ ಅವನು ಯಮನ ಪಾಶದಿಂದ ಬಿಡುಗಡೆಯಾಗುವುದಿಲ್ಲ. ॥ ೧೨ ॥ ಯಾವನ ಗೃಹದಲ್ಲಿ ಶ್ರೀಮದ್ಭಾಗವತ ಶಾಸ್ತ್ರವಿರುವುದಿಲ್ಲವೋ ಅವನನ್ನು ವಿಷ್ಣುಭಕ್ತನೆಂದು ಹೇಗೆ ಕರೆಯಲಾದೀತು ? ಅವನು ಶ್ವಪಚನಿಗಿಂತಲೂ ತುಂಬಾ ಕೆಳಮಟ್ಟದವನೇ॥ ೧೩. ॥ ನನ್ನಪ್ರಿಯಪುತ್ರನೇ! ಲೋಕೇಶ್ವರನಾದ ಬ್ರಹ್ಮನೇ ! ಮನುಷ್ಯನು ತನ್ನ ಸರ್ವಸ್ವವನ್ನಾದರೂ ಕೊಟ್ಟು ಭಕ್ತಿಪೂರ್ವಕವಾಗಿ ನನ್ನನ್ನು ಸಂತೋಷ ಪಡಿಸಲು ಈ ವಿಷ್ಣುಪರವಾದ ಶಾಸ್ತ್ರವನ್ನು ಸಂಗ್ರಹಿಸಿಟ್ಟುಕೊಳ್ಳಬೇಕು. ॥ ೧೪ ॥ ಕಲಿಯುಗದಲ್ಲಿ ಈ ಪವಿತ್ರವಾದ ಭಾಗವತ ಶಾಸ್ತ್ರ ಎಲ್ಲೆಲ್ಲಿ ಇರುವುದೋ ಅಲ್ಲೆಲ್ಲಾ ನಾನು ದೇವತೆಗಳ ಸಹಿತನಾಗಿ ಸದಾ ಇರುವೆನು॥೧೫ ॥ ಈ ಜಾಗದಲ್ಲಿನದ-ನದೀ ಮತ್ತು ಸರೋವರ ರೂಪವಾದ ಸಮಸ್ತ ತೀರ್ಥಗಳೂ ಮತ್ತು ಸಮಸ್ತ ಯಜ್ಞಗಳೂ, ಅಯೋಧ್ಯಾ, ಮಥುರಾ, ಮಾಯಾ, ಕಾಶೀ, ಕಂಚೀ, ಅವಂತಿ, ದ್ವಾರಾವತಿಗಳೆಂಬ ಸಪ್ತ ಮೋಕ್ಷಪ್ರದಪುರಿಗಳೂ ಮತ್ತು ಸಮಸ್ತ ಪವಿತ್ರ ಪರ್ವತಗಳೂ ಸದಾ ವಾಸವಾಗಿರುತ್ತವೆ॥೧೬ ॥

ಓ ಲೋಕೇಶ್ವರನೇ! ಯಶಸ್ಸು, ಧರ್ಮ ಮತ್ತು ವಿಜಯಗಳನ್ನು ಬಯಸುವವನು ಮತ್ತು ಧರ್ಮಬುದ್ಧಿಯುಳ್ಳವನು ಪಾಪಕ್ಷಯಕ್ಕಾಗಿ ಮತ್ತು ಮೋಕ್ಷಪ್ರಾಪ್ತಿಗಾಗಿ ಈ ನನ್ನ ಶಾಸ್ತ್ರವನ್ನು ಅವಶ್ಯವಾಗಿ ಕೇಳಬೇಕು. ॥ ೧೭ ॥ ಈ ಪವಿತ್ರವಾದ ಪುರಾಣವು ಆಯಸ್ಸು - ಆರೋಗ್ಯಗಳನ್ನು ವೃದ್ಧಿಪಡಿಸುವುದು. ಇದನ್ನು ಪಾರಾಯಣ ಮಾಡಿದರೆ ಅಥವಾ ಶ್ರವಣ ಮಾಡಿದರೂ ಸಾಕು ; ಸಮಸ್ತ ಪಾಪಗಳಿಂದಲೂ ಬಿಡುಗಡೆಯಾಗುತ್ತದೆ. ॥ ೧೮ ॥

ಓ ಲೋಕೇಶನೇ ! ಈ ಪರಮೋತ್ತಮವಾದ ಶ್ರೀಮದ್ಭಾಗವತವನ್ನು ಯಾರು ಕೇಳುವುದಿಲ್ಲವೋ, ಕೇಳಿ ಸಂತೋಷ ಪಡುವುದಿಲ್ಲವೋ - ಅವರು ಸದಾ ಯಮರಾಜನ ವಶದಲ್ಲೇ ಇರುವರು. ನಾನು ಹೇಳುತ್ತಿರುವ ಮಾತು ಸತ್ಯ, ಸತ್ಯವಾದುದು. ॥ ೧೯ ॥ ಪುತ್ರನೇ ! ಯಾವ ಮನುಷ್ಯನು ಎಲ್ಲ ದಿನಗಳಲ್ಲಿಯೂ ಮತ್ತು ವಿಶೇಷವಾಗಿ ಏಕಾದಶೀ ದಿನದಲ್ಲಿ ಶ್ರೀಮದ್ಭಾಗವತವನ್ನು ಶ್ರವಣ ಮಾಡಲು ಹೋಗುವುದಿಲ್ಲವೋ - ಅವನಿಗಿಂತಲೂ ದೊಡ್ಡ ಪಾಪಿಷ್ಠ ಬೇರಾವನೂ ಇಲ್ಲ. ॥ ೨೦ ॥ ಯಾವನ ಮನೆಯಲ್ಲಿ ಶ್ರೀಮದ್ಭಾಗವತದ ಒಂದೇ ಒಂದು ಶ್ಲೋಕವಾಗಲೀ, ಶ್ಲೋಕದ ಅರ್ಧಭಾಗವಾಗಲೀ, ಶ್ಲೋಕದ ಒಂದು ಪಾದವೇ ಆಗಲಿ ಬರೆಯಲ್ಪಟ್ಟಿರುತ್ತದೆಯೋ ಆತನ ಮನೆಯಲ್ಲಿ ನಾನು ಸದಾ ವಾಸ ಮಾಡುತ್ತೇನೆ. ॥ ೨೧ ॥ ಮನುಷ್ಯರಿಗೆ ಎಲ್ಲ ಪುಣ್ಯಾಶ್ರಮಗಳಿಗೆ ಯಾತ್ರೆ ಮಾಡುವುದಾಗಲೀ ಅಥವಾ ಸಮಸ್ತ ತೀರ್ಥಗಳಲ್ಲಿ ಸ್ನಾನ ಮಾಡುವುದಾಗಲೀ ಶ್ರೀಮದ್ಭಾಗವತದಷ್ಟು ಪವಿತ್ರಕರವಲ್ಲ ॥ ೨೨ ॥

ಯತ್ರ ಯತ್ರ ಚತುರ್ವಕ್ತ್ರ ಶ್ರೀಮದ್ಭಾಗವತಂ ಭವೇತ್ ।
ಗಚ್ಛಾಮಿ ತತ್ರ ತತ್ರಾಹಂ ಗೌರ್ಯಥಾ ಸುತವತ್ಸಲಾ
॥ ೨೩ ॥

ಚತುರ್ಮುಖನೇ ! ಕರುಣಿನಲ್ಲಿ ವಾತ್ಸಲ್ಯವುಳ್ಳ ಹಸುವು ಕರು ಹೋದಲ್ಲಿಗೆಲ್ಲ ಹೋಗುವುದಿಲ್ಲವೇ ? ಹಾಗೆಯೇ ನಾನು ಶ್ರೀಮದ್ಭಾಗವತ ಕಥೆಯು ಎಲ್ಲಿ ನಡೆಯುತ್ತದೆಯೋ ಅಲ್ಲಿಗೆಲ್ಲಾ ಹೋಗುವೆನು. ॥ ೨೩. ॥

ಮತ್ಕಥಾವಾಚಕಂ ನಿತ್ಯಂ ಮತ್ಕಥಾಶ್ರವಣೇ ರತಮ್ ।
ಮತ್ಕಥಾಪ್ರೀತಮನಸಂ ನಾಹಂ ತ್ಯಕ್ಷ್ಯಾಮಿ ತಂ ನರಮ್
॥ ೨೪ ॥

ನನ್ನ ಕಥೆಯನ್ನು ಹೇಳುವವನನ್ನು, ಅದನ್ನು ಕೇಳುವುದರಲ್ಲೇ ಸದಾ ನಿರತನಾಗಿರುವವನನ್ನು ಮತ್ತು ನನ್ನ ಕಥೆಯಿಂದ ಮನಸ್ಸಿನಲ್ಲಿ ಸಂತೋಷ ಪಟ್ಟುಕೊಳ್ಳುವವನನ್ನು ನಾನು ಎಂದಿಗೂ ತ್ಯಜಿಸುವುದಿಲ್ಲ. ॥ ೨೪ ॥ ಪ್ರಿಯಪುತ್ರನೇ ಪರಮ ಪುಣ್ಯಕರವಾದ ಶ್ರೀಮದ್ಭಾಗವತವನ್ನು ನೋಡಿದಾಗ ಯಾವನು ಭಕ್ತಿ-ಗೌರವ ಗಳಿಂದ ತನ್ನ ಆಸನದಿಂದ ಎದ್ದು ನಿಲ್ಲುವುದಿಲ್ಲವೋ-ಅವನು ಒಂದು ವರ್ಷ ಪೂರ್ತಿ ಮಾಡಿದ ಪುಣ್ಯಫಲಗಳನ್ನು ಕಳೆದುಕೊಳ್ಳು ವನು॥ ೨೫ ॥

ಶ್ರೀಮದ್ಭಾಗವತಂ ಪುಣ್ಯಂ ದೃಷ್ಟ್ವಾನೋತ್ತಿಷ್ಠತೇ ಹಿ ಯಃ ।
ಸಾಂವತ್ಸರಂ ತಸ್ಯ ಪುಣ್ಯಂ ವಿಲಯಂ ಯಾತಿ ಪುತ್ರಕ
॥ ೨೫ ॥

ಶ್ರೀಮದ್ಭಾಗವತಂ ದೃಷ್ಟ್ವಾ ಪ್ರತ್ಯುತ್ಥಾನಾಭಿವಾದನೈಃ ।
ಸಮ್ಮಾನಯೇತ ತಂ ದೃಷ್ಟ್ವಾ ಭವೇತ್ ಪ್ರೀತಿರ್ಮಮಾತುಲಾ
॥ ೨೬ ॥

ಶ್ರೀಮದ್ಭಾಗವತವನ್ನು ಕಂಡೊಡನೆಯೇ ಎದುರುಗೊಂಡು ಎದ್ದು ನಿಂತು ನಮಸ್ಕಾರಗಳಿಂದ ಅದನ್ನು ಗೌರವಿಸುವವರನ್ನು ಕಂಡರೆ ನನಗೆ ಎಣೆಯಿಲ್ಲದ ಪ್ರಸನ್ನತೆ ಉಂಟಾಗುತ್ತದೆ ॥ ೨೬ ॥

ದೃಷ್ಟ್ವಾಭಾಗವತಂ ದೂರಾತ್ ಪ್ರಕ್ರಮೇತ್ತನ್ಮುಖಂ ಹಿ ಯಃ ।
ಪದೇ ಪದೇऽಶ್ವಮೇಧಸ್ಯ ಫಲಂ ಪ್ರಾಪ್ನೋತ್ಯಸಂಶಯಮ್
॥ ೨೭ ॥

ಶ್ರೀಮದ್ಭಾಗವತವನ್ನು ದೂರ ದಿಂದ ಕಂಡೊಡನೆಯೇ ಯಾವನು ನಗುಮುಖದಿಂದ ಅದರ ಹತ್ತಿರ ಹೋಗುವನೋ - ಅವನಿಡುವ ಪ್ರತಿ ಹೆಜ್ಜೆಗೂ ಅಶ್ವಮೇಧ ಯಜ್ಞ ಮಾಡಿದ ಫಲವು ಲಭಿಸು ವುದು. ಇದು ನಿಶ್ಚಿತ ; ಸಂದೇಹವೇ ಬೇಡ. ಎದ್ದು ನಿಂತು ಶ್ರೀಮದ್ಭಾಗವತಕ್ಕೆ ನಮಸ್ಕಾರ ಮಾಡುವ ಮನುಷ್ಯನಿಗೆ ನಾನು ಹಣ-ಕಾಸು, ಮಡದಿ-ಮಕ್ಕಳನ್ನೂ ಮತ್ತು ಭಕ್ತಿಯನ್ನೂ ಅನು ಗ್ರಹಿಸುವೆನು. ॥ ೨೭-೨೮ ॥ ಎಲೈ ಪುತ್ರನೇ ! ಯಾವ ಮನುಷ್ಯರು ಮಹಾರಾಜನಿಗೆ ಉಚಿತವಾದ ಉಪಚಾರಗಳೊಡನೆ ಭಕ್ತಿಯಿಂದ ಕೂಡಿ ಶ್ರೀಮದ್ಭಾಗವತವನ್ನು ಕೇಳುತ್ತಾರೋ ಅವರಿಗೆ ನಾನು ವಶನಾಗಿ ಬಿಡುವೆನು. ॥ ೨೯ ॥

ಉತ್ಥಾಯ ಪ್ರಣಮೇದ್ ಯೋ ವೈ ಶ್ರೀಮದ್ಭಾಗವತಂ ನರಃ ।
ಧನಪುತ್ರಾಂಸ್ತಥಾ ದಾರಾನ್ ಭಕ್ತಿಂ ಚ ಪ್ರದದಾಮ್ಯಹಮ್
॥ ೨೮ ॥

ಮಹಾರಾಜೋಪಚಾರೈಸ್ತು ಶ್ರೀಮದ್ಭಾಗವತಂ ಸುತ ।
ಶೃಣ್ವಂತಿ ಯೇ ನರಾ ಭಕ್ತ್ಯಾ ತೇಷಾಂ ವಶ್ಯೋ ಭವಾಮ್ಯಹಮ್
॥ ೨೯ ॥

ಎಲೈ ಉತ್ತಮವ್ರತಿಯೇ ! ಯಾರು ನನ್ನ ಎಲ್ಲ ಉತ್ಸವಗಳಲ್ಲೂ ನನ್ನ ಪ್ರೀತಿಗೋಸ್ಕರ ವಸ್ತ್ರ ಅಲಂಕಾರ, ಪುಷ್ಪ , ಧೂಪ, ದೀಪ- ಇತ್ಯಾದಿ ಉಪಹಾರಗಳನ್ನು ಸಮರ್ಪಿಸುತ್ತಾ ಪರಮೋತ್ತಮವಾದ ಶ್ರೀಮದ್ಭಾಗವತವನ್ನು ಭಕ್ತಿರೂಪಕರ್ಮವಾಗಿ ಶ್ರವಣ ಮಾಡುತ್ತಾರೋ, ಅವರು ಸಾಧ್ವಿಯಾದ ಹೆಂಗಸು ತನ್ನ ಸಾಧುವಾದ ಪತಿಯನ್ನು ವಶಪಡಿಸಿಕೊಳ್ಳುವಂತೆ ನನ್ನನ್ನು ವಶಪಡಿಸಿ ಕೊಂಡು ಬಿಡುತ್ತಾರೆ. ॥ ೩೦ - ೩೧ ॥ *

ಮಮೋತ್ಸವೇಷು ಸರ್ವೇಷು ಶ್ರೀಮದ್ಭಾಗವತಂ ಪರಮ್ ।
ಶೃಣ್ವಂತಿ ಯೇ ನರಾ ಭಕ್ತ್ಯಾ ಮಮ ಪ್ರೀತ್ಯೈ ಚ ಸುವ್ರತ
॥ ೩೦ ॥

ವಸ್ತ್ರಾಲಂಕರಣೈಃ ಪುಷ್ಪೈಃ ಧೂಪದೀಪೋಪಹಾರಕೈಃ ।
ವಶೀಕೃತೋ ಹ್ಯಹಂ ತೈಶ್ಚ ಸತ್ಸ್ತ್ರಿಯಾ ಸತ್ಪತಿರ್ಯಥಾ
॥ ೩೧ ॥

* ಸ್ಕಂದಪುರಾಣ, ವಿಷ್ಣುಖಂಡ, ಮಾರ್ಗಶೀರ್ಷ ಮಾಹಾತ್ಮ್ಯ ಅ. ೧೬

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ನವಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ವೈವಸ್ವತ ಮನುವಿನ ಪುತ್ರ ಸುದ್ಯುಮ್ನರಾಜನ ಕಥೆ

ರಾಜೋವಾಚ

ಮನ್ವಂತರಾಣಿ ಸರ್ವಾಣಿ ತ್ವಯೋಕ್ತಾನಿ ಶ್ರುತಾನಿ ಮೇ ।
ವೀರ್ಯಾಣ್ಯನಂತವೀರ್ಯಸ್ಯ ಹರೇಸ್ತತ್ರ ಕೃತಾನಿ ಚ
॥ ೧ ॥

ಯೋಽಸೌ ಸತ್ಯವ್ರತೋ ನಾಮ ರಾಜರ್ಷಿರ್ದ್ರವಿಡೇಶ್ವರಃ ।
ಜ್ಞಾನಂ ಯೋಽತೀತಕಲ್ಪಾಂತೇ ಲೇಭೇ ಪುರುಷಸೇವಯಾ
॥ ೨ ॥

ಸ ವೈ ವಿವಸ್ವತಃ ಪುತ್ರೋ ಮನುರಾಸೀದಿತಿ ಶ್ರುತಮ್ ।
ತತ್ತಸ್ಯ ಸುತಾಶ್ಚೋಕ್ತಾ ಇಕ್ಷ್ವಾಕುಪ್ರಮುಖಾ ನೃಪಾಃ
॥ ೩ ॥

ತೇಷಾಂ ವಂಶಂ ಪೃಥಗ್ಬ್ರಹ್ಮನ್ವಂಶ್ಯಾನುಚರಿತಾನಿ ಚ ।
ಕೀರ್ತಯಸ್ವ ಮಹಾಭಾಗ ನಿತ್ಯಂ ಶುಶ್ರೂಷತಾಂ ಹಿ ನಃ
॥ ೪ ॥

ಯೇ ಭೂತಾ ಯೇ ಭವಿಷ್ಯಾಶ್ಚ ಭವಂತ್ಯದ್ಯತನಾಶ್ಚ ಯೇ ।
ತೇಷಾಂ ನಃ ಪುಣ್ಯಕೀರ್ತೀನಾಂ ಸರ್ವೇಷಾಂ ವದ ವಿಕ್ರಮಾನ್
॥ ೫ ॥

ಸೂತ ಉವಾಚ

ಏವಂ ಪರೀಕ್ಷಿತಾ ರಾಜ್ಞಾ ಸದಸಿ ಬ್ರಹ್ಮವಾದಿನಾಮ್ ।
ಪೃಷ್ಟಃ ಪ್ರೋವಾಚ ಭಗವಾನೃಷ್ಭಃ ಪರಮಧರ್ಮವಿತ್
॥ ೬ ॥

ಶ್ರೀಶುಕ ಉವಾಚ

ಶ್ರೂಯತಾಂ ಮಾನವೋ ವಂಶಃ ಪ್ರಾಚುರ್ಯೇಣ ಪರಂತಪ ।
ನ ಶಕ್ಯತೇ ವಿಸ್ತರತೋ ವಕ್ತುಂ ವರ್ಷಶತೈರಪಿ
॥ ೭ ॥

ಪರಾವರೇಷಾಂ ಭೂತಾನಾಮಾತ್ಮಾ ಯಃ ಪುರುಷಃ ಪರಃ ।
ಸ ಏವಾಸೀದಿದಂ ವಿಶ್ವಂ ಕಲ್ಪಾಂತೇಽನ್ಯನ್ನ ಕಿಂಚನ
॥ ೮ ॥

ತಸ್ಯ ನಾಭೇಃ ಸಮಭವತ್ಪದ್ಮಕೋಶೋ ಹಿರಣ್ಮಯಃ ।
ತಸ್ಮಿನ್ಬ್ರಹ್ಮೇಶ್ವರ ಮಹಾರಾಜ ಸ್ವಯಂಭೂಶ್ಚತುರಾನನಃ
॥ ೯ ॥

ಪರೀಕ್ಷಿತ ಮಹಾರಾಜನು ಕೇಳಿದನು – ಪೂಜ್ಯರೇ! ತಾವು ಇದುವರೆಗೆ ವರ್ಣಿಸಿದ ಎಲ್ಲ ಮನ್ವಂತರಗಳ ಮತ್ತು ಅವುಗಳಲ್ಲಿ ನಡೆದ ಅನಂತವೀರ್ಯನಾದ, ಅಪ್ರಮೇಯನಾದ ಶ್ರೀಹರಿಯ ಐಶ್ವರ್ಯಪೂರ್ಣ ಚರಿತ್ರೆಗಳನ್ನು ನಾನು ಶ್ರವಣಿಸಿ ಧನ್ಯನಾಗಿರುವೆನು. ॥ ೧ ॥ ಹಿಂದಿನ ಕಲ್ಪಾಂತ್ಯದಲ್ಲಿ ದ್ರವಿಡದೇಶದ ಅರಸನಾದ ರಾಜರ್ಷಿ ಸತ್ಯವ್ರತನು ಭಗವಂತನ ಸೇವೆಯಿಂದ ಜ್ಞಾನಪಡೆದು, ಅವನೇ ಈ ಮನ್ವಂತರದಲ್ಲಿ ವೈವಸ್ವತ ಮನುವಾದನು ಎಂದು ನೀವು ಹೇಳಿದಿರಿ. ಹಾಗೆಯೇ ಅವನ ಇಕ್ಷ್ವಾಕು ಮೊದಲಾದ ರಾಜಪುತ್ರರ ಪರಿಚಯವನ್ನು ವರ್ಣಿಸಿದಿರಿ. ॥ ೨-೩. ॥ ಬ್ರಾಹ್ಮಣತ್ರೇಷ್ಠರೇ! ಈಗ ದಯಮಾಡಿ ಅವರ ವಂಶ ಮತ್ತು ವಂಶದಲ್ಲಿ ನಡೆದ ಬೇರೆ-ಬೇರೆ ಚರಿತ್ರೆಗಳನ್ನೂ ತಾವು ವರ್ಣಿಸಿರಿ. ಮಹಾನುಭಾವರೇ! ನಮ್ಮ ಹೃದಯದಲ್ಲಿ ಸದಾಕಾಲವೂ ಕಥೆಯನ್ನು ಕೇಳುವ ಉತ್ಸುಕತೆ ಇದೆ. ॥ ೪ ॥ ವೈವಸ್ವತ ಮನುವಿನ ವಂಶದಲ್ಲಿ ಇದುವರೆಗೆ ಎಷ್ಟುಮಂದಿ ರಾಜರು ಆಗಿ ಹೋದರು? ಈಗ ಯಾವ ರಾಜರು ಆಳುತ್ತಿದ್ದಾರೆ? ಮುಂದೆ ಯಾರು-ಯಾರು ಆಗುವರು? ಆ ಎಲ್ಲ ಪುಣ್ಯಕೀರ್ತಿಗಳಾದ ಪುರುಷರ ಪರಾಕ್ರಮವನ್ನು ವರ್ಣಿಸಿರಿ. ॥ ೫ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಪರೀಕ್ಷಿದ್ರಾಜನು ಬ್ರಹ್ಮವಾದಿಗಳ ಸಭೆಯಲ್ಲಿ ಹೀಗೆ ಪ್ರಶ್ನಿಸಿದಾಗ ಧರ್ಮದ ಪರಮ ಮರ್ಮಜ್ಞರಾದ, ಮಹಾತ್ಮರಾದ ಶ್ರೀಶುಕಮಹಾಮುನಿಗಳು ಇಂತು ಹೇಳತೊಡಗಿದರು. ॥ ೬ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮನುವಂಶದ ವರ್ಣನೆಯನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. ವಿಸ್ತಾರವಾಗಿ ವರ್ಣಿಸಲು ನೂರಾರು ವರ್ಷಗಳೂ ಸಾಕಾಗಲಾರವು. ॥ ೭ ॥ ಪರಮಪುರುಷ ಪರಮಾತ್ಮನು ಸ್ಥೂಲ- ಸೂಕ್ಷ್ಮ ಪ್ರಾಣಿಗಳೆಲ್ಲರ ಆತ್ಮನಾಗಿರುವನು. ಪ್ರಳಯಕಾಲದಲ್ಲಿ ಕೇವಲ ಅವನೊಬ್ಬನೇ ಇದ್ದನು. ಈ ವಿಶ್ವವು ಹಾಗೂ ಬೇರೆ ಏನೂ ಇರಲಿಲ್ಲ. ॥ ೮ ॥ ಮಹಾರಾಜಾ! ಅಂತಹ ಪರಮಪುರುಷನ ನಾಭಿಯಲ್ಲಿ ಸುವರ್ಣಮಯವಾದ ಕಮಲವೊಂದು ಪ್ರಕಟವಾಯಿತು. ಅದರಲ್ಲೇ ಚತುರ್ಮುಖರಾದ ಬ್ರಹ್ಮದೇವರು ಆವಿರ್ಭವಿಸಿದರು. ॥ ೯ ॥

ಮರೀಚಿರ್ಮನಸಸ್ತಸ್ಯ ಜಜ್ಞೇ ತಸ್ಯಾಪಿ ಕಶ್ಯಪಃ।
ದಾಕ್ಷಾಯಣ್ಯಾಂ ತತೋಽದಿತ್ಯಾಂ ವಿವಸ್ವಾನಭವತ್ಸುತಃ
॥ ೧೦ ॥

ತತೋ ಮನುಃ ಶ್ರಾದ್ಧದೇವಃ ಸಂಜ್ಞಾಯಾಮಾಸ ಭಾರತ।
ಶ್ರದ್ಧಾಯಾಂ ಜನಯಾಮಾಸ ದಶ ಪುತ್ರಾನ್ಸ ಆತ್ಮವಾನ್
॥ ೧೧ ॥

ಇಕ್ಷ್ವಾಕುನೃಗಶರ್ಯಾತಿದಿಷ್ಟದೃಷ್ಟಕರೂಷಕಾನ್ ।
ನರಿಷ್ಯಂತಂ ಪೃಷಧ್ರಂ ಚ ನಭಗಂ ಚ ಕವಿಂ ವಿಭುಃ
॥ ೧೨ ॥

ಅಪ್ರಜಸ್ಯ ಮನೋಃ ಪೂರ್ವಂ ವಸಿಷ್ಠೋ ಭಗವಾನ್ಕಿಲ।
ಮಿತ್ರಾವರುಣಯೋರಿಷ್ಟಿಂ ಪ್ರಜಾರ್ಥಮಕರೋತ್ಪ್ರಭುಃ
॥ ೧೩ ॥

ತತ್ರ ಶ್ರದ್ಧಾ ಮನೋಃ ಪತ್ನೀ ಹೋತಾರಂ ಸಮಯಾಚತ।
ದುಹಿತ್ರರ್ಥಮುಪಾಗಮ್ಯ ಪ್ರಣಿಪತ್ಯ ಪಯೋವ್ರತಾ
॥ ೧೪ ॥

ಪ್ರೇಷಿತೋಽಧ್ವರ್ಯುಣಾ ಹೋತಾ ಧ್ಯಾಯಂಸ್ತತ್ಸುಸಮಾಹಿತಃ।
ಹವಿಷಿ ವ್ಯಚರತ್ತೇನ ವಷಟ್ಕಾರಂ ಗೃಣನ್ದ್ವಿಜಃ
॥ ೧೫ ॥

ಹೋತುಸ್ತದ್ವ್ಯಭಿಚಾರೇಣ ಕನ್ಯೇಲಾ ನಾಮ ಸಾಭವತ್ ।
ತಾಂ ವಿಲೋಕ್ಯ ಮನುಃ ಪ್ರಾಹ ನಾತಿಹೃಷ್ಟಮನಾ ಗುರುಮ್
॥ ೧೬ ॥

ಭಗವನ್ ಕಿಮಿದಂ ಜಾತಂ ಕರ್ಮ ವೋ ಬ್ರಹ್ಮವಾದಿನಾಮ್ ।
ವಿಪರ್ಯಯಮಹೋ ಕಷ್ಟಂ ಮೈವಂ ಸ್ಯಾದ್ಬ್ರಹ್ಮವಿಕ್ರಿಯಾ
॥ ೧೭ ॥

ಯೂಯಂ ಮಂತ್ರವಿದೋ ಯುಕ್ತಾಸ್ತಪಸಾ ದಗ್ಧಕಿಲ್ಬಿಷಾಃ।
ಕುತಃ ಸಂಕಲ್ಪ ವೈಷಮ್ಯಮನೃತಂ ವಿಬುಧೇಷ್ವಿವ
॥ ೧೮ ॥

ತನ್ನಿಶಮ್ಯ ವಚಸ್ತಸ್ಯ ಭಗವಾನ್ ಪ್ರಪಿತಾಮಹಃ।
ಹೋತುರ್ವ್ಯತಿಕ್ರಮಂ ಜ್ಞಾತ್ವಾಬಭಾಷೇ ರವಿನಂದನಮ್
॥ ೧೯ ॥

ಏತತ್ಸಂಕಲ್ಪವೈಷಮ್ಯಂ ಹೋತುಸ್ತೇ ವ್ಯಭಿಚಾರತಃ।
ತಥಾಪಿ ಸಾಧಯಿಷ್ಯೇ ತೇ ಸುಪ್ರಜಾಸ್ತ್ವಂ ಸ್ವತೇಜಸಾ
॥ ೨೦ ॥

ಬ್ರಹ್ಮದೇವರ ಮನಸ್ಸಿನಿಂದ ಮರೀಚಿ ಮತ್ತು ಮರೀಚಿಯ ಪುತ್ರ ಕಶ್ಯಪರು ಹುಟ್ಟಿದರು. ಅವರ ಧರ್ಮಪತ್ನೀ ದಕ್ಷಕುಮಾರೀ ಅದಿತಿಯಲ್ಲಿ ವಿವಸ್ವಂತನು (ಸೂರ್ಯನು) ಜನ್ಮತಾಳಿದನು. ॥ ೧೦ ॥ ವಿವಸ್ವಂತನ ಪತ್ನಿಯಾದ ಸಂಜ್ಞೆ ಎಂಬುವಳಲ್ಲಿ ಶ್ರಾದ್ಧದೇವ ಮನುವು ಹುಟ್ಟಿದನು. ಪರೀಕ್ಷಿತನೇ! ಆತ್ಮಜ್ಞಾನಿಯಾದ ಶ್ರಾದ್ಧದೇವನ ಪತ್ನಿಯಾದ ಶ್ರದ್ಧೆಯಲ್ಲಿ – ಇಕ್ಷ್ವಾಕು, ನೃಗ, ಶರ್ಯಾತಿ, ದಿಷ್ಟ, ಧೃಷ್ಟ, ಕರೂಷ, ನರಿಷ್ಯಂತ, ಪೃಷಧ್ರ, ನಭಗ ಮತ್ತು ಕವಿ ಎಂಬ ಹತ್ತು ಪುತ್ರರು ಉದಿಸಿದರು. ॥ ೧೧-೧೨ ॥

ವೈವಸ್ವತ ಮನುವಿಗೆ ಮೊದಲು ಮಕ್ಕಳಿರಲಿಲ್ಲ. ಆ ಸಮಯದಲ್ಲಿ ಸರ್ವಸಮರ್ಥರಾದ ಪೂಜ್ಯರಾದ ವಸಿಷ್ಠರು ಸಂತಾನಪ್ರಾಪ್ತಿಗಾಗಿ ವೈವಸ್ವತಮನುವಿನಿಂದ ಮೈತ್ರಾವರುಣೇಷ್ಟಿಯನ್ನು ಮಾಡಿಸಿದರು. ॥ ೧೩. ॥ ಯಜ್ಞಾನುಷ್ಠಾನದಲ್ಲಿ ಪಯೋವ್ರತಳಾಗಿದ್ದ (ಕೇವಲ ಹಾಲನ್ನು ಮಾತ್ರ ಕುಡಿಯುತ್ತಿದ್ದ) ವೈವಸ್ವತ ಮನುವಿನ ಧರ್ಮಪತ್ನಿಯಾದ ಶ್ರದ್ಧಾದೇವಿಯು ಹೋತೃವಿನ ಬಳಿಗೆ ಹೋಗಿ ವಿನಯಪೂರ್ವಕವಾಗಿ ನಮಸ್ಕರಿಸಿ, ತನಗೆ ಹೆಣ್ಣುಶಿಶುವು ಹುಟ್ಟುವಂತೆ ಬೇಡಿಕೊಂಡಳು. ॥ ೧೪ ॥ ಆಗ ಅಧ್ವರ್ಯುವಿನ ಪ್ರೇರಣೆಯಂತೆ ಯಜ್ಞಕುಂಡದಲ್ಲಿ ಆಹುತಿಯನ್ನು ಹಾಕಬೇಕಾದ ಸಮಯದಲ್ಲಿ ಶ್ರದ್ಧಾದೇವಿಯ ಪ್ರಾರ್ಥನೆಯನ್ನು ಸ್ಮರಿಸಿ ಹೆಣ್ಣುಶಿಶುವಾಗಬೇಕೆಂದು ಸಂಕಲ್ಪಿಸಿ ವಷಟ್ಕಾರವನ್ನು ಹೇಳುತ್ತಾ ಯಜ್ಞೇಶ್ವರನಲ್ಲಿ ಹವಿಸ್ಸನ್ನು ಹೋಮಮಾಡಿದನು. ॥ ೧೫ ॥ ಹೋತೃವು ಹೀಗೆ ವಿಪರೀತ ಕರ್ಮವಾಚರಿಸಿದಾಗ ಯಜ್ಞದ ಫಲವಾಗಿ ಪುತ್ರನ ಸ್ಥಾನದಲ್ಲಿ ಇಲಾ ಎಂಬ ಹೆಸರಿನ ಕನ್ಯೆಯು ಹುಟ್ಟಿದಳು. ಅದನ್ನು ನೋಡಿ ವೈವಸ್ವತ ಮನುವಿಗೆ ಅಷ್ಟೊಂದು ಸಂತೋಷವಾಗಲಿಲ್ಲ. ಅವನು ತಮ್ಮ ಗುರುಗಳಾದ ವಸಿಷ್ಠರಲ್ಲಿ ಹೇಳಿದನು – ॥ ೧೬ ॥ ಪೂಜ್ಯರೇ! ನೀವಾದರೋ ಬ್ರಹ್ಮವಾದಿಗಳಾಗಿದ್ದೀರಿ. ನಿಮ್ಮ ಕರ್ಮವು ಈ ಪ್ರಕಾರ ವಿಪರೀತ ಫಲ ಕೊಡುವಂತಹುದು ಹೇಗಾಯಿತು? ಕಷ್ಟ! ಕಷ್ಟ! ಇದು ಬಹಳ ದುಃಖದ ವಿಚಾರವಾಗಿದೆ. ವೈದಿಕ ಕರ್ಮದ ಫಲವಾದರೋ ಹೀಗೆ ವಿಪರೀತ ಎಂದಿಗೂ ಆಗಬಾರದು. ॥ ೧೭ ॥ ನಿಮ್ಮಗಳ ಮಂತ್ರಜ್ಞಾನವಾದರೋ ಪರಿಪೂರ್ಣವಾಗಿದೆ. ಇದಲ್ಲದೆ ತಾವು ಜಿತೇಂದ್ರಿಯರೂ ಆಗಿರುವಿರಿ. ತಪಸ್ಸಿನಿಂದಾಗಿ ನಿಷ್ಪಾಪರೂ ಆಗಿಬಿಟ್ಟಿದ್ದೀರಿ. ದೇವತೆಗಳಲ್ಲಿ ಸುಳ್ಳಿರುವಂತೆ (ದೇವತೆಗಳು ಕೊಟ್ಟ ವರವು ಸುಳ್ಳಾದಂತೆ) ನಿಮ್ಮ ಸಂಕಲ್ಪಕ್ಕೆ ವಿರುದ್ಧವಾದ ಫಲ ಹೇಗಾಯಿತು? ॥ ೧೮ ॥

ಪರೀಕ್ಷಿತನೇ! ನಮ್ಮ ಮುತ್ತಾತಂದಿರಾದ ಪೂಜ್ಯರಾದ ವಸಿಷ್ಠರು ರಾಜನ ಮಾತನ್ನು ಕೇಳಿ, ಹೋತೃವು ವಿಪರೀತ ಸಂಕಲ್ಪವನ್ನು ಮಾಡಿದ್ದನು ಎಂದು ತಿಳಿದುಕೊಂಡರು. ಇದರಿಂದ ಅವರು ವೈವಸ್ವತ ಮನುವಿಗೆ ಹೇಳಿದರು – ॥ ೧೯ ॥ ಮಹಾರಾಜನೇ! ನಿನ್ನ ಹೋತೃವಿನ ವಿಪರೀತ ಸಂಕಲ್ಪದಿಂದಾಗಿ ನಮ್ಮ ಸಂಕಲ್ಪವು ಸರಿಯಾಗಿ ನೆರವೇರಲಿಲ್ಲ. ಹೀಗಿದ್ದರೂ ನನ್ನ ತಪಃಪ್ರಭಾವದಿಂದ ನಾನು ನಿನಗೆ ಶ್ರೇಷ್ಠಪುತ್ರನನ್ನು ಕರುಣಿಸುತ್ತೇನೆ. ॥ ೨೦ ॥

ಏವಂ ವ್ಯವಸಿತೋ ರಾಜನ್ ಭಗವಾನ್ಸ ಮಹಾಯಶಾಃ ।
ಅಸ್ತೌಷೀದಾದಿಪುರುಷಮಿಲಾಯಾಃ ಪುಂಸ್ತ್ವಕಾಮ್ಯಯಾ
॥ ೨೦ ॥

ತಸ್ಮೈ ಕಾಮವರಂ ತುಷ್ಟೋ ಭಗವಾನ್ಹರಿರೀಶ್ವರಃ ।
ದದಾವಿಲಾಭವತ್ತೇನ ಸುದ್ಯುಮ್ನಃ ಪುರುಷರ್ಷಭಃ
॥ ೨೨ ॥

ಸ ಏಕದಾ ಮಹಾರಾಜ ವಿಚರನ್ಮೃಗಯಾಂ ವನೇ ।
ವೃತಃ ಕತಿಪಯಾಮಾತ್ಯೈರಶ್ವಮಾರುಹ್ಯ ಸೈಂಧವಮ್
॥ ೨೩ ॥

ಪ್ರಗೃಹ್ಯ ರುಚಿರಂ ಚಾಪಂ ಶರಾಂಶ್ಚ ಪರಮಾದ್ಭುತಾನ್ ।
ದಂಶಿತೋಽನುಮೃಗಂ ವೀರೋ ಜಗಾಮ ದಿಶಮುತ್ತರಾಮ್
॥ ೨೪ ॥

ಸ ಕುಮಾರೋ ವನಂ ಮೇರೋರಧಸ್ತಾತ್ಪ್ರವಿವೇಶ ಹ ।
ಯತ್ರಾಸ್ತೇ ಭಗವಾಞ್ಶರ್ವೋ ರಮಮಾಣಃ ಸಹೋಮಯಾ
॥ ೨೫ ॥

ತಸ್ಮಿನ್ಪ್ರವಿಷ್ಟ ಏವಾಸೌ ಸುದ್ಯುಮ್ನಃ ಪರವೀರಹಾ ।
ಅಪಶ್ಯತ್ ಸ್ತ್ರಿಯಮಾತ್ಮಾನಮಶ್ವಂ ಚ ವಡವಾಂ ನೃಪ
॥ ೨೬ ॥

ತಥಾ ತದನುಗಾಃ ಸರ್ವೇ ಆತ್ಮಲಿಂಗವಿಪರ್ಯಯಮ್ ।
ದೃಷ್ಟ್ವಾ ವಿಮನಸೋಽಭೂವನ್ವೀಕ್ಷಮಾಣಾಃ ಪರಸ್ಪರಮ್
॥ ೨೭ ॥

ರಾಜೋವಾಚ

ಕಥಮೇವಂಗುಣೋ ದೇಶಃ ಕೇನ ವಾ ಭಗವನ್ಕೃತಃ ।
ಪ್ರಶ್ನಮೇನಂ ಸಮಾಚಕ್ಷ್ವ ಪರಂ ಕೌತೂಹಲಂ ಹಿ ನಃ
॥ ೨೮ ॥

ಶ್ರೀಶುಕ ಉವಾಚ

ಏಕದಾ ಗಿರಿಶಂ ದ್ರಷ್ಟುಮೃಷಯಸ್ತತ್ರ ಸುವ್ರತಾಃ ।
ದಿಶೋ ವಿತಿಮಿರಾಭಾಸಾಃ ಕುರ್ವಂತಃ ಸಮುಪಾಗಮನ್
॥ ೨೯ ॥

ತಾನ್ವಿಲೋಕ್ಯಾಂಬಿಕಾ ದೇವೀ ವಿವಾಸಾ ವ್ರೀಡಿತಾ ಭೃಶಮ್ ।
ಭರ್ತುರಂಕಾತ್ಸಮುತ್ಥಾಯ ನೀವೀಮಾಶ್ವಥ ಪರ್ಯಧಾತ್
॥ ೩೦ ॥

ಋಷಯೋಽಪಿ ತಯೋರ್ವೀಕ್ಷ್ಯ ಪ್ರಸಂಗಂ ರಮಮಾಣಯೋಃ ।
ನಿವೃತ್ತಾಃ ಪ್ರಯಯುಸ್ತಸ್ಮಾನ್ನರನಾರಾಯಣಾಶ್ರಮಮ್
॥ ೩೧ ॥

ತದಿದಂ ಭಗವಾನಾಹ ಪ್ರಿಯಾಯಾಃ ಪ್ರಿಯಕಾಮ್ಯಯಾ ।
ಸ್ಥಾನಂ ಯಃ ಪ್ರವಿಶೇದೇತತ್ಸ ವೈ ಯೋಷಿದ್ಭವೇದಿತಿ
॥ ೩೨ ॥

ಪರೀಕ್ಷಿದ್ರಾಜನೇ! ಪರಮ ಯಶಸ್ವಿಗಳಾದ ಮಹಾತ್ಮಾ ವಸಿಷ್ಠರು ಮನುವಿಗೆ ಹೀಗೆ ಆಶ್ವಾಸನೆಯನ್ನಿತ್ತು ಇಲಾ ಎಂಬ ಕನ್ಯೆಯನ್ನು ಪುರುಷನನ್ನಾಗಿಸಲು ಪುರುಷೋತ್ತಮನಾದ ಭಗವಾನ್ ಶ್ರೀಹರಿಯನ್ನು ಸ್ತುತಿಮಾಡಿದನು. ॥ ೨೦ ॥ ಸರ್ವ ಶಕ್ತಿವಂತನಾದ ಭಗವಾನ್ ಶ್ರೀಹರಿಯು ಸಂತುಷ್ಟನಾಗಿ ಅವರಿಗೆ ಬೇಡಿದ ವರವನ್ನು ದಯಪಾಲಿಸಿದನು. ವರಪ್ರಭಾವದಿಂದ ಆ ಇಲಾ ಕನ್ಯೆಯೇ ಪುರುಷತ್ವವನ್ನು ಪಡೆದು ಸುದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧನಾದನು. ॥ ೨೨ ॥

ರಾಜೇಂದ್ರಾ! ಒಮ್ಮೆ ಸುದ್ಯುಮ್ನರಾಜನು ಸಿಂಧುದೇಶದ ಕುದುರೆಯನ್ನೇರಿ ಕೆಲವು ಮಂತ್ರಿಗಳೊಂದಿಗೆ ಬೇಟೆಯಾಡಲು ಕಾಡಿಗೆ ಹೋದನು. ॥ ೨೩ ॥ ಸುಂದರವಾದ ಧನುಸ್ಸನ್ನೂ, ಪರಮಾದ್ಭುತವಾದ ಬಾಣಗಳನ್ನೂ ಹಿಡಿದುಕೊಂಡು, ಕವಚವನ್ನೂ ಧರಿಸಿದ್ದ ವೀರನಾದ ಸುದ್ಯುಮ್ನನು ಜಿಂಕೆಯೊಂದನ್ನು ಹಿಂಬಾಲಿಸುತ್ತಾ ಉತ್ತರದಿಕ್ಕಿನ ಕಡೆಗೆ ಬಹುದೂರ ಹೋದನು. ॥ ೨೪ ॥ ಕೊನೆಗೆ ಸುದ್ಯುಮ್ನನು ಮೇರುಪರ್ವತದ ತಪ್ಪಲಿನ ಒಂದು ವನವನ್ನು ಪ್ರವೇಶಿಸಿದನು. ಆ ವನದಲ್ಲಿ ಭಗವಂತನಾದ ಶಂಕರನು ಪಾರ್ವತಿಯೊಂದಿಗೆ ವಿಹರಿಸುತ್ತಿದ್ದನು. ॥ ೨೫ ॥ ಆ ವನವನ್ನು ಪ್ರವೇಶಿಸುತ್ತಲೇ ಪರಮವೀರನಾದ ಸುದ್ಯುಮ್ನನು ತಾನು ಹೆಣ್ಣಾಗಿರುವುದನ್ನು ಕಂಡುಕೊಂಡನು. ಅವನ ಕುದುರೆಯೂ ಹೆಣ್ಣುಕುದುರೆಯಾಗಿ ಹೋಗಿತ್ತು. ॥ ೨೬ ॥ ಪರೀಕ್ಷಿತನೇ! ಜೊತೆಗೆ ಅವನ ಅನುಚರರೆಲ್ಲರೂ ತಾವು ಹೆಣ್ಣಾಗಿ ಹೋಗಿರುವುದನ್ನು ಕಂಡರು. ಅವರೆಲ್ಲರೂ ಪರಸ್ಪರ ಮುಖಗಳನ್ನೂ ನೋಡಿಕೊಳ್ಳುತ್ತಾ ಅವರೆಲ್ಲರ ಮನಸ್ಸಿಗೆ ಬೇಸರವಾಯಿತು. ॥ ೨೭ ॥

ಪರೀಕ್ಷಿದ್ರಾಜನು ಕೇಳಿದನು – ಮಹಾತ್ಮರೇ! ಆ ಭೂ ಖಂಡದಲ್ಲಿ ಇಂತಹ ವಿಚಿತ್ರ ಗುಣ ಹೇಗೆ ಬಂತು? ಯಾರು ಅದನ್ನು ಹಾಗಾಗಿಸಿದರು? ತಾವು ದಯಮಾಡಿ ನಮ್ಮ ಈ ಪ್ರಶ್ನೆಗಳಿಗೆ ಉತ್ತರಿಸಿರಿ. ಏಕೆಂದರೆ ನಮಗೆ ಬಹಳ ಕುತೂಹಲ ಉಂಟಾಗಿದೆ ॥೨೮॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಒಮ್ಮೆ ವ್ರತನಿಷ್ಠರಾದ ಮಹರ್ಷಿಗಳು ತಮ್ಮ ದಿವ್ಯವಾದ ತೇಜಸ್ಸಿನಿಂದ ಎಲ್ಲ ದಿಕ್ಕುಗಳನ್ನು ಬೆಳಗಿಸುತ್ತಾ ಭಗವಾನ್ ಶಂಕರನನ್ನು ಸಂದರ್ಶಿಸಲು ಆ ವನಕ್ಕೆ ಆಗಮಿಸಿದರು. ॥ ೨೯ ॥ ಆ ಸಮಯದಲ್ಲಿ ಶಂಕರನೊಡನೆ ಕ್ರೀಡಿಸುತ್ತಿದ್ದ ಪಾರ್ವತಿಯ ಉಡುಗೆ ಸಡಿಲಿಸಿದ್ದರಿಂದ ಋಷಿಗಳು ಬಂದುದನ್ನು ನೋಡಿ ಬಹಳವಾಗಿ ನಾಚಿಕೊಂಡು ಒಡನೆಯೇ ಶಿವನ ತೊಡೆಯಿಂದ ಮೇಲೆದ್ದು ಸೀರೆಯನ್ನು ಸರಿಪಡಿಸಿಕೊಂಡಳು. ॥ ೩೦ ॥

ಮಹರ್ಷಿಗಳೂ ಕೂಡ ಶ್ರೀಶಂಕರನು ಗೌರಿಯೊಡನೆ ವಿಹರಿಸುತ್ತಿರುವನೆಂದು ನೋಡಿ ಒಡನೆಯೇ ಅಲ್ಲಿಂದ ಹಿಂದಿರುಗಿ ನರ-ನಾರಾಯಣಾಶ್ರಮವನ್ನು ಸೇರಿದರು. ॥ ೩೧ ॥ ಆ ಸಮಯದಲ್ಲಿ ಭಗವಾನ್ ಶಂಕರನು ಪಾರ್ವತಿಯನ್ನು ಸಂತೋಷಗೊಳಿಸಲು – 'ನಾನಲ್ಲದೆ ಯಾರೇ ಪುರುಷನೂ ಈ ಪ್ರದೇಶವನ್ನು ಪ್ರವೇಶಿಸುವವನು ಹೆಣ್ಣಾಗಲಿ' ಎಂದು ಹೇಳಿದನು. ॥ ೩೨ ॥

ತತ ಊರ್ಧ್ವಂ ವನಂ ತದ್ವೈ ಪುರುಷಾ ವರ್ಜಯಂತಿ ಹಿ ।
ಸಾ ಚಾನುಚರಸಂಯುಕ್ತಾ ವಿಚಚಾರ ವನಾದ್ವನಮ್
॥ ೩೩ ॥

ಅಥ ತಾಮಾಶ್ರಮಾಭ್ಯಾಶೇ ಚರಂತೀಂ ಪ್ರಮದೋತ್ತಮಾಮ್ ।
ಸ್ತ್ರೀಭಿಃ ಪರಿವೃತಾಂ ವೀಕ್ಷ್ಯ ಚಕಮೇ ಭಗವಾನ್ಬುಧಃ
॥ ೩೪ ॥

ಸಾಪಿ ತಂ ಚಕಮೇ ಸುಭ್ರೂಃ ಸೋಮರಾಜಸುತಂ ಪತಿಮ್ ।
ಸ ತಸ್ಯಾಂ ಜನಯಾಮಾಸ ಪುರೂರವಸಮಾತ್ಮಜಮ್
॥ ೩೫ ॥

ಏವಂ ಸ್ತ್ರೀತ್ವಮನುಪ್ರಾಪ್ತಃ ಸುದ್ಯುಮ್ನೋ ಮಾನವೋ ನೃಪಃ ।
ಸಸ್ಮಾರ ಸ್ವಕುಲಾಚಾರ್ಯಂ ವಸಿಷ್ಠಮಿತಿ ಶುಶ್ರುಮ
॥ ೩೬ ॥

ಸ ತಸ್ಯ ತಾಂ ದಶಾಂ ದೃಷ್ಟ್ವಾ ಕೃಪಯಾ ಭೃಶಪೀಡಿತಃ ।
ಸುದ್ಯುಮ್ನಸ್ಯಾಶಯನ್ ಪುಂಸ್ತ್ವಮುಪಾಧಾವತ ಶಂಕರಮ್
॥ ೩೭ ॥

ತುಷ್ಟಸ್ತಸ್ಮೈ ಸ ಭಗವಾನ್ ಋಷಯೇ ಪ್ರಿಯಮಾವಹನ್ ।
ಸ್ವಾಂ ಚ ವಾಚಮೃತಾಂ ಕುರ್ವನ್ನಿದಮಾಹ ವಿಶಾಂಪತೇ
॥ ೩೮ ॥

ಮಾಸಂ ಪುಮಾನ್ಸ ಭವಿತಾ ಮಾಸಂ ಸ್ತ್ರೀ ತವ ಗೋತ್ರಜಃ ।
ಇತ್ಥಂ ವ್ಯವಸ್ಥಯಾ ಕಾಮಂ ಸುದ್ಯುಮ್ನೋऽವತು ಮೇದಿನೀಮ್
॥ ೩೯ ॥

ಆಚಾರ್ಯಾನುಗ್ರಹಾತ್ಕಾಮಂ ಲಬ್ಧ್ವಾ ಪುಂಸ್ತ್ವಂ ವ್ಯವಸ್ಥಯಾ ।
ಪಾಲಯಾಮಾಸ ಜಗತೀಂ ನಾಭ್ಯನಂದನ್ ಸ್ಮೃತಂ ಪ್ರಜಾಃ
॥ ೪೦ ॥

ತಸ್ಯೋತ್ಕಲೋ ಗಯೋ ರಾಜನ್ವಿಮಲಶ್ಚ ಸುತಾಸ್ತ್ರಯಃ ।
ದಕ್ಷಿಣಾಪಥರಾಜಾನೋ ಬಭೂವುರ್ಧರ್ಮವತ್ಸಲಾಃ
॥ ೪೧ ॥

ತತಃ ಪರಿಣತೇ ಕಾಲೇ ಪ್ರತಿಷ್ಠಾನಪತೀಃ ಪ್ರಭುಃ ।
ಪುರೂರವಸ ಉತ್ಸೃಜ್ಯ ಗಾಂ ಪುತ್ರಾಯ ಗತೋ ವನಮ್
॥ ೪೨ ॥

ಪರೀಕ್ಷಿತನೇ ! ಅಂದಿನಿಂದ ಪುರುಷರಾರೂ ಆ ಸ್ಥಾನವನ್ನು ಪ್ರವೇಶಿಸುವುದಿಲ್ಲ. ಈಗ ಸುದ್ಯುಮ್ನನು ಸ್ತ್ರೀಯಾಗಿದ್ದನಲ್ಲ. ಆದ ಕ್ಕಾಗಿ ಅವನು ಹೆಣ್ಣುಗಳಾಗಿದ್ದ ತನ್ನ ಅನುಚರರೊಂದಿಗೆ ಒಂದು ವನದಿಂದ ಇನ್ನೊಂದು ವನಕ್ಕೆ ಹೀಗೆ ಸಂಚರಿಸುತ್ತಿದ್ದನು. ॥ ೩೩ ॥

ಆದೇ ಸಮಯದಲ್ಲಿ ಶಕ್ತಿವಂತನಾದ ಬುಧನು – ತನ್ನ ಆಶ್ರಮದ ಬಳಿಯಲ್ಲೇ ಅನೇಕ ಸ್ತ್ರೀಯರಿಂದ ಪರಿವೃತಳಾಗಿ ಸಂಚರಿಸುತ್ತಿದ್ದ ಸ್ತ್ರೀರತ್ನವನ್ನು ನೋಡಿದನು. ಅವಳ ಸೌಂದರ್ಯಕ್ಕೆ ಆಕರ್ಷಿತನಾಗಿ ಅವಳನ್ನು ತನ್ನವಳನ್ನಾಗಿಸಿಕೊಳ್ಳಬೇಕೆಂದು ಬಯಸಿ ದನು. ॥ ೩೪ ॥ ಆ ಸುಂದರಿಯೂ ಚಂದ್ರಕುಮಾರ ಬುಧನನ್ನು ಪತಿಯನ್ನಾಗಿ ವರಿಸಿದಳು. ಇದಾದ ಬಳಿಕ ಬುಧನು ಅವಳ ಗರ್ಭ ದಿಂದ ಪುರೂರವ ಎಂಬ ಪುತ್ರನನ್ನು ಪಡೆದನು. ॥ ೩೫ ॥ ಹೀಗೆ ಮನುಪುತ್ರನಾದ ಸುದ್ಯುಮ್ನನು ಸ್ತ್ರೀಯಾಗಿದ್ದ ಆ ಸ್ಥಿತಿಯಲ್ಲಿ ತನ್ನ ಕುಲಪುರೋಹಿತರಾದ ವಸಿಷ್ಠರನ್ನು ಸ್ಮರಿಸಿದನೆಂದು ಕೇಳಿದ್ದೇವೆ. ॥ ೩೬ ॥

ಸುದ್ಯುಮ್ನನ ಈ ಸ್ಥಿತಿಯನ್ನು ನೋಡಿ ವಸಿಷ್ಠರಿಗೆ ತುಂಬಾ ಕನಿಕರ ಉಂಟಾಯಿತು. ಅವರು ಸುದ್ಯುಮ್ನನನ್ನು ಪುನಃ ಪುರುಷನ ನ್ನಾಗಿಸಲು ಭಗವಾನ್ ಶಂಕರನನ್ನು ಆರಾಧಿಸಿದರು. ॥ ೩೭ ॥ ಪರೀಕ್ಷಿತನೇ ! ಭಗವಾನ್ ಶಂಕರನು ವಸಿಷ್ಠರಲ್ಲಿ ಪ್ರಸನ್ನರಾಗಿ ಅವರ ಅಭಿಲಾಷೆಯನ್ನು ಪೂರ್ಣಗೊಳಿಸಲಿಕ್ಕಾಗಿ ತನ್ನ ಮಾತೂ ಸುಳ್ಳಾ ಗದ ರೀತಿಯಲ್ಲಿ ಹೀಗೆಂದನು – ॥ ೩೮ ॥

ವಸಿಷ್ಠರೇ ! ನಿಮ್ಮ ಈ ಯಜಮಾನನು (ಯಜಮಾನನು ಪುರೋಹಿತರ ಗೋತ್ರದವನೆಂದೇ ಪರಿಗಣಿಸಲ್ಪಡುತ್ತಾನೆ) ಒಂದು ತಿಂಗಳು ಪುರುಷನಾಗಿರುವನು ಮತ್ತೊಂದು ತಿಂಗಳಲ್ಲಿ ಹೆಣ್ಣಾಗಿರು ವನು. ಈ ವ್ಯವಸ್ಥೆಯಿಂದ ಸುದ್ಯುಮ್ನನು ಇಚ್ಛಾನುಸಾರವಾಗಿ ಭೂಮಂಡಲವನ್ನು ಪಾಲಿಸಲಿ. ॥ ೩೯ ॥ ಹೀಗೆ ವಸಿಷ್ಠರ ಅನು ಗ್ರಹದಿಂದ ವ್ಯವಸ್ಥಾಪೂರ್ವಕ ಬಯಸಿದ ಪುರುಷತ್ವವನ್ನು ಪಡೆದು ಸುದ್ಯುಮ್ನನು ಪೃಥಿವಿಯನ್ನು ಪಾಲಿಸತೊಡಗಿದನು. ಆದರೂ ಪ್ರಜೆ ಅವನನ್ನು ಅಭಿನಂದಿಸುತ್ತಿರಲಿಲ್ಲ. ॥ ೪೦ ॥ ಅವನಿಗೆ ಉತ್ಕಲ, ಗಯ ಮತ್ತು ವಿಮಲ ಎಂಬ ಮೂವರು ಪುತ್ರರು ಹುಟ್ಟಿದರು. ರಾಜೇಂದ್ರಾ ! ಅವರೆಲ್ಲರೂ ದಕ್ಷಿಣಾಪಥದ ರಾಜರಾದರು. ॥ ೪೧ ॥ ಅನೇಕ ದಿನಗಳ ಬಳಿಕ ಪ್ರತಿಷ್ಠಾನ ನಗರದ ಅಧಿಪತಿಯಾದ ಸುದ್ಯುಮ್ನನು ವೃದ್ಧನಾದಾಗ ತನ್ನ ಪುತ್ರ ಪುರೂರವನಿಗೆ ರಾಜ್ಯವನ್ನು ಒಪ್ಪಿಸಿ, ತಾನು ತಪಸ್ಸಿಗಾಗಿ ಕಾಡಿಗೆ ತೆರಳಿದನು. ॥ ೪೨ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಇಲೋಪಾಖ್ಯಾನೇ ಪ್ರಥಮೋऽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಪೃಷಧ್ರ ಮುಂತಾದ ಮನುವಿನ ಐವರು ಪುತ್ರರ ವಂಶ

ಶ್ರೀಶುಕ ಉವಾಚ

ಏವಂ ಗತೇऽಥ ಸುದ್ಯುಮ್ನೇ ಮನುರ್ವೈವಸ್ವತಃ ಸುತೇ ।
ಪುತ್ರಕಾಮಸ್ತಪಸ್ತೇಪೇ ಯುಮುನಾಯಾಂ ಶತಂ ಸಮಾಃ
॥ ೧ ॥

ತತೋऽಯಜನ್ಮನುರ್ದೇವಮಪತ್ಯಾರ್ಥಂ ಹರಿಂ ಪ್ರಭುಮ್ ।
ಇಕ್ಷ್ವಾಕುಪೂರ್ವಜಾನುತ್ರಾಲ್ಲೇಭೇ ಸ್ವಸದೃಶಾನ್ ದಶ
॥ ೨ ॥

ಪೃಷಧ್ರಸ್ತು ಮನೋಃ ಪುತ್ರೋ ಗೋಪಾಲೋ ಗುರುಣಾ ಕೃತಃ ।
ಪಾಲಯಾಮಾಸ ಗಾ ಯತ್ತೋ ರಾತ್ರ್ಯಾಂ ವೀರಾಸನವ್ರತಃ
॥ ೩ ॥

ಏಕದಾ ಪ್ರಾವಿಶದ್ಗೋಷ್ಠಂ ಶಾರ್ದೂಲೋ ನಿಶಿ ವರ್ಷತಿ ।
ಶಯಾನಾ ಗಾವ ಉತ್ಥಾಯ ಭೀತಾಸ್ತಾ ಬಭ್ರಮುರ್ವ್ರಜೇ
॥ ೪ ॥

ಏಕಾಂ ಜಗ್ರಾಹ ಬಲವಾನ್ ಸಾ ಚುಕ್ರೋಶ ಭಯಾತುರಾ ।
ತಸ್ಯಾಸ್ತತ್ಕ್ರಂದಿತಂ ಶ್ರುತ್ವಾ ಪೃಷಧ್ರೋऽಭಿಸಸಾರ ಹ
॥ ೫ ॥

ಖಡ್ಗಮಾದಾಯ ತರಸಾ ಪ್ರಲೀನೋಡುಗಣೇ ನಿಶಿ ।
ಅಜಾನನ್ನಹನದ್ಬಭ್ರೋಃ ಶಿರಃ ಶಾರ್ದೂಲಶಂಕಯಾ
॥ ೬ ॥

ವ್ಯಾಘ್ರೋऽಪಿ ವೃಕ್ಣಶ್ರವಣೋ ನಿಸ್ತ್ರಿಂಶಾಗ್ರಾಹತಸ್ತತಃ ।
ನಿಶ್ಚಕ್ರಾಮ ಭೃಶಂ ಭೀತೋ ರಕ್ತಂ ಪಥಿ ಸಮುತ್ಸೃಜನ್
॥ ೭ ॥

ಮನ್ಯಮಾನೋ ಹತಂ ವ್ಯಾಘ್ರಂ ಪೃಷಧ್ರಃ ಪರವೀರಹಾ ।
ಅದ್ರಾಕ್ಷೀತ್ ಸ್ವಹತಾಂ ಬಭ್ರುಂ ವ್ಯುಷ್ಟಾಯಾಂ ನಿಶಿ ದುಃಖಿತಃ
॥ ೮ ॥

ತಂ ಶಶಾಪ ಕುಲಾಚಾರ್ಯಃ ಕೃತಾಗಸಮಕಾಮತಃ ।
ನ ಕ್ಷತ್ರಬಂಧುಃ ಶೂದ್ರಸ್ತ್ವಂ ಕರ್ಮಣಾ ಭವಿತಾಮುನಾ
॥ ೯ ॥

ಏವಂ ಶಪ್ತಸ್ತು ಗುರುಣಾ ಪ್ರತ್ಯಗೃಹ್ಣಾತ್ಕೃತಾಂಜಲಿಃ ।
ಅಧಾರಯದ್ವ್ರತಂ ವೀರ ಊರ್ಧ್ವರೇತಾ ಮುನಿಪ್ರಿಯಮ್
॥ ೧೦ ॥

ವಾಸುದೇವೇ ಭಗವತಿ ಸರ್ವಾತ್ಮನಿ ಪರೇऽಮಲೇ ।
ಏಕಾಂತಿತ್ವಂ ಗತೋ ಭಕ್ತ್ಯಾ ಸರ್ವಭೂತಸುಹೃತ್ಸಮಃ
॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ಸುದ್ಯುಮ್ನನು ತಪಸ್ಸಿಗಾಗಿ ಕಾಡಿಗೆ ಹೊರಟುಹೋದ ಬಳಿಕ ವೈವಸ್ವತಮನುವು ಪುತ್ರಕಾಮನಾಗಿ ಯಮುನಾನದಿಯ ತೀರದಲ್ಲಿ ನೂರು ವರ್ಷಗಳ ಕಾಲ ತಪಸ್ಸು ಮಾಡಿದನು. ॥ ೧ ॥ ಇದಾದ ಬಳಿಕ ಅವನು ಸಂತಾನವನ್ನು ಪಡೆಯಲು ಸರ್ವಶಕ್ತನಾದ ಭಗವಾನ್ ಶ್ರೀಹರಿಯನ್ನು ಆರಾಧಿಸಿದನು ಹಾಗೂ ತನಗೆ ಸಮಾನರಾದ ಇಕ್ಷ್ವಾಕುವೇ ಮೊದಲಾದ ಹತ್ತು ಪುತ್ರರನ್ನು ಪಡೆದನು.॥ ೨ ॥

ಮನುವಿನ ಹತ್ತುಪುತ್ರರಲ್ಲಿ ಒಬ್ಬನ ಹೆಸರು ಪೃಷಧ್ರ ಎಂದಿತ್ತು. ಗುರುಗಳಾದ ವಸಿಷ್ಠರು ಅವನನ್ನು ಗೋವುಗಳ ರಕ್ಷಣೆಗಾಗಿ ನೇಮಿಸಿದರು. ಆದ್ದರಿಂದ ಅವನು ರಾತ್ರಿಯಲ್ಲಿ ತುಂಬಾ ಎಚ್ಚರಿಕೆಯಿಂದ ವೀರಾಸನದಲ್ಲಿ ಕುಳಿತುಕೊಂಡು ಹಸುಗಳನ್ನು ಕಾಯುತ್ತಿದ್ದನು. ॥ ೩ ॥ ಒಂದು ರಾತ್ರಿಯಲ್ಲಿ ಮಳೆ ಬೀಳುತ್ತಿತ್ತು. ಆಗ ಆ ಹಸುಗಳ ಮಂದೆಯಲ್ಲಿ ಒಂದು ಹುಲಿಯು ನುಗ್ಗಿತು. ಇದರಿಂದ ಹೆದರಿದ ಹಸುಗಳು ಎದ್ದು ಗೋಶಾಲೆಯಲ್ಲಿ ಅತ್ತ-ಇತ್ತ ಓಡಲು ತೊಡಗಿದವು. ॥ ೪ ॥ ಬಲಶಾಲಿಯಾಗಿದ್ದ ಆ ಹುಲಿಯು ಒಂದು ಹಸುವನ್ನು ಹಿಡಿದುಕೊಂಡಿತು. ಅದು ಅತ್ಯಂತ ಭಯಗೊಂಡು 'ಅಂಬಾ' ಎಂದು ಕೂಗತೊಡಗಿತು. ಅದರ ಆ ಕರುಣಾಕ್ರಂದನವನ್ನು ಕೇಳಿದ ಪೃಷಧ್ರನು ಹಸುವಿನ ಬಳಿಗೆ ಓಡಿ ಬಂದನು. ॥ ೫ ॥ ಒಂದುಕಡೆ ರಾತ್ರಿಯ ಘೋರ ಅಂಧಕಾರ, ಮತ್ತೊಂದೆಡೆ ದಟ್ಟವಾದ ಮೋಡಗಳು ಕವಿದುದರಿಂದ ನಕ್ಷತ್ರಗಳೂ ಕಾಣುತ್ತಿರಲಿಲ್ಲ. ಅವನು ಕೈಯಲ್ಲಿ ಖಡ್ಗವನ್ನೆತ್ತಿಕೊಂಡು ಬಂದವನೇ ಹುಲಿಯನ್ನು ಕೊಲ್ಲಬೇಕೆಂದು ಖಡ್ಗಬೀಸಿದಾಗ ಹಸುವಿನ ಕತ್ತು ಕತ್ತರಿಸಿ ಹೋಯಿತು. ॥ ೬ ॥ ಹಸುವಿನ ತಲೆಯ ಜೊತೆಯಲ್ಲೇ ಖಡ್ಗದ ತುದಿಯಿಂದ ಹುಲಿಯ ಕಿವಿಯು ಕತ್ತರಿಸಿಹೋಯಿತು. ಅದು ಹೆದರಿ ದಾರಿಯಲ್ಲಿ ರಕ್ತವನ್ನು ಸುರಿಸುತ್ತಾ ಅಲ್ಲಿಂದ ಓಡಿ ಹೋಯಿತು. ॥ ೭ ॥ ಹುಲಿಯನ್ನೇ ಕೊಂದೆನೆಂದು ಶತ್ರುದಮನ ಪೃಷಧ್ರನು ತಿಳಿದನು. ಆದರೆ ರಾತ್ರಿಯು ಕಳೆಯುತ್ತಲೇ ನಾನು ಹಸುವನ್ನೇ ಕೊಂದಿದ್ದೇನೆ ಎಂದು ನೋಡಿದನು. ಇದರಿಂದ ಅವನಿಗೆ ಬಹಳ ದುಃಖವಾಯಿತು. ॥ ೮ ॥ ಪೃಷಧ್ರನು ತಿಳಿದು-ತಿಳಿದು ತಪ್ಪುಮಾಡದಿದ್ದರೂ ಕುಲಪುರೋಹಿತರಾದ ವಸಿಷ್ಠರು – 'ನೀನು ಈ ಗೋವಧೆಯಿಂದ ಕ್ಷತ್ರಿಯನಾಗಿ ಉಳಿಯಲಾರೆ ; ಶೂದ್ರನಾಗಿ ಹೋಗು' ಎಂದು ಶಾಪವನ್ನಿತ್ತರು. ॥ ೯ ॥ ಪೃಷಧ್ರನು ಗುರುಗಳ ಶಾಪವನ್ನು ಅಂಜಲಿಬದ್ಧನಾಗಿ ಸ್ವೀಕರಿಸಿದನು. ಬಳಿಕ ಅವನು ಎಂದೆಂದಿಗೂ ಮುನಿಗಳಿಗೆ ಪ್ರಿಯವಾದ ನೈಷ್ಠಿಕ ಬ್ರಹ್ಮಚರ್ಯವನ್ನು ಕೈಗೊಂಡನು. ॥ ೧೦ ॥ ಅವನು ಸಮಸ್ತ ಪ್ರಾಣಿಗಳ ಅಹೈತುಕ ಹಿತೈಷಿಯಾಗಿ, ಎಲ್ಲರ ಕುರಿತು ಸಮಭಾವದಿಂದ ಕೂಡಿಕೊಂಡು ಭಕ್ತಿಯ ಮೂಲಕ ಪರಮ ವಿಶುದ್ಧನೂ, ಸರ್ವಾತ್ಮನೂ ಆದ ಭಗವಾನ್ ವಾಸುದೇವನ ಅನನ್ಯ ಪ್ರೇಮಿಯಾದನು. ॥ ೧೧ ॥

ವಿಮುಕ್ತಸಂಗಃ ಶಾಂತಾತ್ಮಾ ಸಂಯತಾಕ್ಷೋಽಪರಿಗ್ರಹಃ ।
ಯದೃಚ್ಛಯೋಪಪನ್ನೇನ ಕಲ್ಪಯನ್ ವೃತ್ತಿಮಾತ್ಮನಃ
॥ ೧೨ ॥

ಆತ್ಮನ್ಯಾತ್ಮಾನಮಾಧಾಯ ಜ್ಞಾನತೃಪ್ತಃ ಸಮಾಹಿತಃ ।
ವಿಚಚಾರ ಮಹೀಮೇತಾಂ ಜಡಾಂಧಬಧಿರಾಕೃತಿಃ
॥ ೧೩ ॥

ಏವಂವೃತ್ತೋ ವನಂ ಗತ್ವಾ ದೃಷ್ಟ್ವಾ ದಾವಾಗ್ನಿಮುತ್ಥಿತಮ್ ।
ತೇನೋಪಯುಕ್ತ ಕರಣೋ ಬ್ರಹ್ಮ ಪ್ರಾಪ ಪರಂ ಮುನಿಃ
॥ ೧೪ ॥

ಕವಿಃ ಕನೀಯಾನ್ವಿಷಯೇಷು ನಿಃಸ್ಪೃಹೋ
ವಿಸೃಜ್ಯ ರಾಜ್ಯಂ ಸಹ ಬಂಧುಭಿರ್ವನಮ್ ।
ನಿವೇಶ್ಯ ಚಿತ್ತೇ ಪುರುಷಂ ಸ್ವರೋಚಿಷಂ
ವಿವೇಶ ಕೈಶೋರವಯಾಃ ಪರಂ ಗತಃ ॥ ೧೫ ॥

ಕರೂಷಾನ್ಮಾನವಾದಾಸನ್ ಕಾರೂಷಾಃ ಕ್ಷತ್ರಜಾತಯಃ ।
ಉತ್ತರಾಪಥಗೋಪ್ತಾರೋ ಬ್ರಹ್ಮಣ್ಯಾ ಧರ್ಮವತ್ಸಲಾಃ
॥ ೧೬ ॥

ಧೃಷ್ಟಾದ್ಧಾರ್ಷ್ಟಮಭೂತ್ ಕ್ಷತ್ರಂ ಬ್ರಹ್ಮಭೂಯಂ ಗತಂ ಕ್ಷಿತೌ ।
ನೃಗಸ್ಯ ವಂಶಃ ಸುಮತಿರ್ಭೂತಜ್ಯೋತಿಸ್ತತೋ ವಸುಃ
॥ ೧೭ ॥

ವಸೋಃ ಪ್ರತೀಕಸ್ತತ್ಪುತ್ರ ಓಘವಾನೋಘವತ್ಪಿತಾ ।
ಕನ್ಯಾ ಚೌಘವತೀ ನಾಮ ಸುದರ್ಶನ ಉವಾಹ ತಾಮ್
॥ ೧೮ ॥

ಚಿತ್ರಸೇನೋ ನರಿಷ್ಯಂತಾದೃಕ್ಷಸ್ತಸ್ಯ ಸುತೋಽಭವತ್ ।
ತಸ್ಯ ಮೀಢ್ವಾಂಸ್ತತಃ ಕೂರ್ಚ ಇಂದ್ರಸೇನಸ್ತು ತತ್ಸುತಃ
॥ ೧೯ ॥

ವೀತಿಹೋತ್ರಸ್ತ್ವಿಂದ್ರಸೇನಾತ್ತಸ್ಯ ಸತ್ಯಶ್ರವಾ ಅಭೂತ್ ।
ಉರುಶ್ರವಾಃ ಸುತಸ್ತಸ್ಯ ದೇವದತ್ತಸ್ತತೋಽಭವತ್
॥ ೨೦ ॥

ತತೋಽಗ್ನಿವೇಶ್ಯೋ ಭಗವಾನಗ್ನಿಃ ಸ್ವಯಮಭೂತ್ಸುತಃ ।
ಕಾನೀನ ಇತಿ ವಿಖ್ಯಾತೋ ಜಾತೂಕರ್ಣ್ಯೋ ಮಹಾನೃಷಿಃ
॥ ೨೧ ॥

ತತೋ ಬ್ರಹ್ಮಕುಲಂ ಜಾತಮಾಗ್ನಿವೇಶ್ಯಾಯನಂ ನೃಪ ।
ನರಿಷ್ಯಂತಾನ್ವಯಃ ಪ್ರೋಕ್ತೋ ದಿಷ್ಟವಂಶಮತಃ ಶೃಣು
॥ ೨೨ ॥

ನಾಭಾಗೋ ದಿಷ್ಟಪುತ್ರೋಽನ್ಯಃ ಕರ್ಮಣಾ ವೈಶ್ಯತಾಂ ಗತಃ ।
ಭಲಂದನಃ ಸುತಸ್ತಸ್ಯ ವತ್ಸಪ್ರೀತಿರ್ಭಲಂದನಾತ್
॥ ೨೩ ॥

ಅವನ ಎಲ್ಲ ಆಸಕ್ತಿಗಳು ಇಂಗಿಹೋದುವು. ವೃತ್ತಿಗಳು ಶಾಂತವಾದುವು. ಇಂದ್ರಿಯಗಳು ವಶವಾದುವು. ಅವನು ಎಂದೂ ಯಾವುದೇ ಸಂಗ್ರಹ-ಪರಿಗ್ರಹವನ್ನು ಇರಿಸಿಕೊಳ್ಳುತ್ತಿರಲಿಲ್ಲ. ದೈವ ವಶದಿಂದ ದೊರೆತುದರಲ್ಲೇ ತನ್ನ ಜೀವನ ನಿರ್ವಾಹ ನಡೆಸುತ್ತಿದ್ದನು. ॥ ೧೨ ॥ ಅವನು ಆತ್ಮಜ್ಞಾನದಿಂದ ತೃಪ್ತನಾಗಿ ತನ್ನ ಚಿತ್ತವನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ ಸಾಧಾರಣವಾಗಿ ಸಮಾಧಿ ಸ್ಥಿತಿಯಲ್ಲೇ ಇರುತ್ತಿದ್ದನು. ಕೆಲವೊಮ್ಮೆ ಜಡನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ ಇದ್ದು ಜಗತ್ತಿನಲ್ಲಿ ಸಂಚರಿಸುತ್ತಿದ್ದನು. ॥ ೧೩ ॥ ಹೀಗೆ ಜೀವನ ನಡೆಸುತ್ತಾ ಅವನು ಒಂದುದಿನ ಕಾಡಿಗೆ ಹೋದನು. ಅಲ್ಲಿ ಕಾಡ್ಗಿಚ್ಚು ಧಗ-ಧಗನೆ ಉರಿಯುತ್ತಿರುವುದನ್ನು ಕಂಡು, ಮನನಶೀಲನಾದ ಪೃಷಧ್ರನು ತನ್ನ ಶರೀರವನ್ನು ಅದೇ ಅಗ್ನಿಯಲ್ಲಿ ಭಸ್ಮಗೈಯ್ದು ಪರಬ್ರಹ್ಮ ಪರಮಾತ್ಮನನ್ನು ಹೊಂದಿದನು. ॥ ೧೪ ॥

ಮನುವಿನ ಎಲ್ಲಕ್ಕಿಂತ ಕಿರಿಯ ಮಗನಾದ ಕವಿಯು ವಿಷಯಗಳಿಂದ ಅತ್ಯಂತ ನಿಸ್ಪೃಹನಾಗಿದ್ದನು. ಅವನು ರಾಜ್ಯವನ್ನು ತ್ಯಜಿಸಿ ತನ್ನ ಬಂಧುಗಳೊಡನೆ ಕಾಡಿಗೆ ಹೊರಟುಹೋದನು ಮತ್ತು ಹೃದಯದಲ್ಲಿ ಸ್ವಯಂ ಪ್ರಕಾಶನಾದ ಪರಮಾತ್ಮನನ್ನು ಧ್ಯಾನದ ಮೂಲಕ ಕಂಡುಕೊಂಡು ಬಾಲ್ಯದಲ್ಲೇ ಪರಮಪದವನ್ನು ಪಡೆದನು. ॥ ೧೫ ॥

ಮನುವಿನ ಮತ್ತೊಬ್ಬ ಪುತ್ರ ಕರೂಷನಿಂದ ಕಾರೂಷರೆಂಬ ಕ್ಷತ್ರಿಯರು ಉತ್ಪನ್ನರಾದರು. ಅವರೆಲ್ಲರೂ ಬ್ರಾಹ್ಮಣಭಕ್ತರೂ, ಧರ್ಮಪ್ರೇಮಿಗಳೂ ಆಗಿದ್ದು, ಉತ್ತರ ದಿಕ್ಕಿನ ರಕ್ಷಕರಾದರು. ॥ ೧೬ ॥ ಮತ್ತೊಬ್ಬ ಮಗನಾದ ಧೃಷ್ಟನಿಂದ ಧಾರ್ಷ್ಟರೆಂಬ ಕ್ಷತ್ರಿಯರಾದರು. ಕೊನೆಗೆ ಅವನು ಈ ಶರೀರದಿಂದಲೇ (ಕ್ಷತ್ರಿಯ ಶರೀರದಿಂದಲೇ) ಬ್ರಾಹ್ಮಣರಾದರು. ನೃಗನಿಗೆ ಸುಮತಿ ಎಂಬ ಪುತ್ರನಾದನು. ಅವನ ಪುತ್ರ ಭೂತಜ್ಯೋತಿ ಮತು ಭೂತಜ್ಯೋತಿಯ ಪುತ್ರ ವಸು ಎಂಬುವನಿದ್ದನು. ॥ ೧೭ ॥ ವಸುವಿನ ಪುತ್ರ ಪ್ರತೀಕ ಹಾಗೂ ಪ್ರತೀಕನ ಮಗ ಓಘವಾನ್. ಓಘವಂತನ ಮಗನ ಹೆಸರೂ ಓಘವಂತ ಎಂದೇ ಇತ್ತು. ಅವನಿಗೆ ಓಘವತಿ ಎಂಬ ಒರ್ವ ಕನ್ಯೆಯೂ ಇದ್ದಳು. ಅವಳ ವಿವಾಹವು ಸುದರ್ಶನನೊಂದಿಗೆಆಯಿತು. ॥ ೧೮ ॥ ಮನು ಪುತ್ರ ನರಿಷ್ಯಂತನಿಂದ ಚಿತ್ರಸೇನ, ಅವನಿಂದ ಋಕ್ಷ, ಋಕ್ಷನಿಂದ ಮೀಢವಾನ್, ಮೀಢ್ವಂತನಿಂದ ಕೂರ್ಚ ಮತ್ತು ಅವನಿಂದ ಇಂದ್ರಸೇನ ಉತ್ಪತ್ತಿಯಾದರು. ॥ ೧೯ ॥ ಇಂದ್ರಸೇನನಿಂದ ವೀತಿಹೋತ್ರ, ಅವನಿಂದ ಸತ್ಯಶ್ರವಾ, ಸತ್ಯಶ್ರವಸ್ಸಿನಿಂದ ಉರುಶ್ರವಾ ಮತ್ತು ಅವನಿಂದ ದೇವದತ್ತನ ಉತ್ಪತ್ತಿಯಾಯಿತು. ॥ ೨೦ ॥

ದೇವದತ್ತನಿಗೆ ಅಗ್ನಿವೇಶ್ಯನೆಂಬ ಪುತ್ರನು ಜನಿಸಿದನು. ಅವನು ಸಾಕ್ಷಾತ್ ಅಗ್ನಿದೇವನೇ ಆಗಿದ್ದನು. ಮುಂದೆ ಅವನೇ ಕಾನೀನ ಮತ್ತು ಮಹರ್ಷಿ ಜಾತೂಕರ್ಣ್ಯ ಎಂಬ ಹೆಸರಿನಿಂದ ವಿಖ್ಯಾತನಾದನು. ॥ ೨೧ ॥ ಪರೀಕ್ಷಿತನೇ ! ಬ್ರಾಹ್ಮಣರ 'ಅಗ್ನಿವೇಶ್ಯಾಯನ' ಎಂಬ ಗೋತ್ರ ಇವನಿಂದಲೇ ಪ್ರವರ್ತಿತವಾಯಿತು. ಹೀಗೆ ನರಿಷ್ಯಂತನ ವಂಶವನ್ನು ನಾನು ವರ್ಣಿಸಿದೆ. ಈಗ ದಿಷ್ಟಿಯ ವಂಶವನ್ನು ಕೇಳು. ॥ ೨೨ ॥

ದಿಷ್ಟಿಯ ಮಗನ ಹೆಸರು ನಾಭಾಗ ಎಂದಿತ್ತು. ನಾನು ಮುಂದೆ ವರ್ಣಿಸುವ ನಾಭಾಗನಿಂದ ಇವನು ಬೇರೆಯಾಗಿದ್ದನು. ಅವನು ತನ್ನ ಕರ್ಮದ ಕಾರಣದಿಂದಾಗಿ ವೈಶ್ಯನಾದನು. ಅವನ ಪುತ್ರ ಭಲಂದನ ಮತ್ತು ಅವನಿಗೆ ವತ್ಸಪ್ರೀತಿ ಹುಟ್ಟಿದನು. ॥ ೨೩ ॥

ವತ್ಸಪ್ರೀತೇಃ ಸುತಃ ಪ್ರಾಂಶುಸ್ತತ್ಸುತಂ ಪ್ರಮತಿಂ ವಿದುಃ ।
ಖನಿತ್ರಃ ಪ್ರಮತೇಸ್ತಸ್ಮಾಚ್ಚಾಕ್ಷುಷೋಽಥ ವಿವಿಂಶತಿಃ
॥ ೨೪ ॥

ವಿವಿಂಶತಿಸುತೋ ರಂಭಃ ಖನಿನೇತ್ರೋಽಸ್ಯ ಧಾರ್ಮಿಕಃ ।
ಕರಂಧಮೋ ಮಹಾರಾಜ ತಸ್ಯಾಸೀದಾತ್ಮಜೋ ನೃಪ
॥ ೨೫ ॥

ತಸ್ಯಾವೀಕ್ಷಿತ್ಸುತೋ ಯಸ್ಯ ಮರುತ್ತಶ್ಚಕ್ರವರ್ತ್ಯಭೂತ್ ।
ಸಂವರ್ತೋಽಯಾಜಯದ್ ಯಂ ವೈ ಮಹಾಯೋಗ್ಯಂಗಿರಃಸುತಃ
॥ ೨೬ ॥

ಮರುತ್ತಸ್ಯ ಯಥಾ ಯಜ್ಞೋ ನ ತಥಾನ್ಯಸ್ಯ ಕಶ್ಚನ ।
ಸರ್ವಂ ಹಿರಣ್ಮಯಂ ತ್ವಾಸೀದ್ಯತ್ಕಿಂಚಿಚ್ಚಾಸ್ಯ ಶೋಭನಮ್
॥ ೨೭ ॥

ಅಮೀದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ।
ಮರುತಃ ಪರಿವೇಷ್ಟಾರೋ ವಿಶ್ವೇದೇವಾಃ ಸಭಾಸದಃ
॥ ೨೮ ॥

ಮರುತ್ತಸ್ಯ ದಮಃ ಪುತ್ರಸ್ತಸ್ಯಾಸೀದ್ರಾಜ್ಯವರ್ಧನಃ ।
ಸುಧೃತಿಸ್ತತ್ಸುತೋ ಜಜ್ಞೇ ಸೌಧೃತೇಯೋ ನರಃ ಸುತಃ
॥ ೨೯ ॥

ತತ್ಸುತಃ ಕೇವಲಸ್ತಸ್ಯಾದ್ಬಂಧುಮಾನ್ವೇಗವಾಂಸ್ತತಃ ।
ಬಂಧುಸ್ತಸ್ಯಾಭವದ್ಯಸ್ಯ ತೃಣಬಿಂದುರ್ಮಹೀಪತಿಃ
॥ ೩೦ ॥

ತಂ ಭೇಜೇಽಲಂಬುಷಾ ದೇವೀ ಭಜನೀಯಗುಣಾಲಯಮ್ ।
ವರಾಪ್ಸರಾ ಯತಃ ಪುತ್ರ್ಯಃ ಕನ್ಯಾ ಚೇಡವಿಡಾಭವತ್
॥ ೩೧ ॥

ತಸ್ಯಾಮುತ್ಪಾದಯಾಮಾಸ ವಿಶ್ರವಾ ಧನದಂ ಸುತಮ್ ।
ಪ್ರಾದಾಯ ವಿದ್ಯಾಂ ಪರಮಾಮೃಷಿರ್ಯೋಗೇಶ್ವರಾತ್ಪಿತುಃ
॥ ೩೨ ॥

ವಿಶಾಲಃ ಶೂನ್ಯಬಂಧುಶ್ಚ ಧೂಮ್ರಕೇತುಶ್ಚ ತತ್ಸುತಾಃ ।
ವಿಶಾಲೋ ವಂಶಕೃದ್ರಾಜಾ ವೈಶಾಲೀಂ ನಿರ್ಮಮೇ ಪುರೀಮ್
॥ ೩೩ ॥

ಹೇಮಚಂದ್ರಃ ಸುತಸ್ತಸ್ಯ ಧೂಮ್ರಾಕ್ಷಸ್ತಸ್ಯ ಚಾತ್ಮಜಃ ।
ತತ್ಪುತ್ರಾತ್ಸಂಯಮಾದಾಸೀತ್ಕೃಶಾಶ್ವಃ ಸಹದೇವಜಃ
॥ ೩೪ ॥

ಕೃಶಾಶ್ವಾತ್ಸೋಮದತ್ತೋಽಭೂದ್ಯೋಽಶ್ವಮೇಧೈರಿಡಸ್ಪತಿಮ್ ।
ಇಷ್ಟ್ವಾ ಪುರುಷಮಾಪಾಗ್ರ್ಯಂ ಗತಿಂ ಯೋಗೇಶ್ವರಾಶ್ರಿತಃ
॥ ೩೫ ॥

ಸೌಮದತ್ತಿಸ್ತು ಸುಮತಿಸ್ತತ್ಸುತೋ ಜನಮೇಜಯಃ ।
ಏತೇ ವೈಶಾಲಭೂಪಾಲಾಸ್ತೃಣಬಿಂದೋರ್ಯಶೋಧರಾಃ
॥ ೩೬ ॥

ವತ್ಸಪ್ರೀತಿಯ ಪ್ರಾಂಶು, ಪ್ರಾಂಶುವಿನ ಪುತ್ರ ಪ್ರಮತಿಯಾದನು. ಪ್ರಮತಿಯಿಂದ ಖನಿತ್ರ, ಖನಿತ್ರನಿಂದ ಚಾಕ್ಷುಷ, ಅವನಿಗೆ ವಿವಿಂಶತಿ ಪುತ್ರನಾದನು. ॥ ೨೪ ॥ ವಿವಿಂಶತಿಯ ಪುತ್ರರಂಭ, ರಂಭನ ಪುತ್ರ ಖನಿನೇತ್ರ. ಇವರಿಬ್ಬರೂ ಪರಮ ಧಾರ್ಮಿಕರಾಗಿದ್ದರು. ಅವನ ಪುತ್ರ ಕರಂಧಮ, ಕರಂಧಮನ ಮಗ ಅವೀಕ್ಷಿತ್, ಪರೀಕ್ಷಿದ್ರಾಜನೇ ! ಅವೀಕ್ಷಿವಂತನ ಪುತ್ರ ಮರುತ್ತಮ ಚಕ್ರವರ್ತಿರಾಜನಾದನು. ಅವನಿಂದ ಅಂಗಿರಸ್ಸುವಿನ ಪುತ್ರ ಮಹಾಯೋಗಿ ಸಂವರ್ತಕ ಋಷಿಯು ಯಜ್ಞವನ್ನು ಮಾಡಿಸಿದ್ದನು. ॥ ೨೫-೨೬ ॥ ಮರುತ್ತ ಚಕ್ರವರ್ತಿಯ ಯಜ್ಞದಂತೆ ಬೇರೆಯಾವ ಯಜ್ಞವೂ ಆಗಲಿಲ್ಲ, ಆ ಯಜ್ಞದಲ್ಲಿ ಉಪಯೋಗಿಸುತ್ತಿದ್ದ ಸಮಸ್ತ ಪಾತ್ರೆಗಳು ಸುಂದರವಾಗಿಯೂ, ಸುವರ್ಣಮಯವಾಗಿಯೂ ಆಗಿದ್ದವು. ॥ ೨೭ ॥ ಆ ಯಜ್ಞದಲ್ಲಿ ಸೋಮಪಾನ ಮಾಡಿದ ಇಂದ್ರನು ಮತ್ತನಾಗಿದ್ದನು. ದಕ್ಷಿಣೆಗಳಿಂದ ಬ್ರಾಹ್ಮಣರು ತೃಪ್ತರಾಗಿದ್ದರು. ಅಲ್ಲಿ ಬಡಿಸುವವರು ಮರುದ್ಗಣರಾಗಿದ್ದು ಸಭಾಸದರು ವಿಶ್ವೇದೇವತೆಗಳಾಗಿದ್ದರು. ॥ ೨೮ ॥

ಮರುತ್ತನಿಗೆ ದಮನೆಂಬ ಪುತ್ರನಿದ್ದನು. ದಮನಿಂದ ರಾಜವರ್ಧನ, ಅವನಿಂದ ಸುಧೃತಿ ಮತ್ತು ಸುಧೃತಿಯಿಂದ ನರನೆಂಬ ಪುತ್ರನು ಹುಟ್ಟಿದನು. ॥ ೨೯ ॥ ನರನಿಂದ ಕೇವಲ, ಕೇವಲನಿಂದ ಬಂಧುಮಾನ್, ಬಂಧುಮಂತನಿಂದ ವೇಗವಾನ್, ವೇಗವಂತನಿಂದ ಬಂಧು ಹಾಗೂ ಬಂಧುವಿನಿಂದ ತೃಣಬಿಂದು ರಾಜನ ಜನ್ಮವಾಯಿತು. ॥ ೩೦ ॥ ತೃಣಬಿಂದುವು ಆದರ್ಶ ಗುಣಗಳ ಭಂಡಾರನಾಗಿದ್ದನು. ಅಪ್ಸರೆಯರಲ್ಲಿ ಶ್ರೇಷ್ಠಳಾದ ಅಲಂಬುಷಾದೇವಿಯು ಇವನನ್ನು ವರಿಸಿದಳು. ಅವಳಿಂದ ಅವನಿಗೆ ಕೆಲವು ಪುತ್ರರೂ ಮತ್ತು ಇಡವಿಡಾ ಎಂಬ ಒಂದು ಕನ್ಯೆಯೂ ಹುಟ್ಟಿದಳು. ॥ ೩೧ ॥ ಮುನಿಶ್ರೇಷ್ಠರಾದ ವಿಶ್ರವಸುವು ತನ್ನ ಯೋಗೇಶ್ವರ ತಂದೆಯಾದ ಪುಲಸ್ತ್ಯರಿಂದ ಉತ್ತಮ ವಿದ್ಯೆಯನ್ನು ಪಡೆದು, ಇಡವಿಡಾ ಗರ್ಭದಿಂದ ಲೋಕಪಾಲ ಕುಬೇರನನ್ನು ಪುತ್ರನನ್ನಾಗಿ ಪಡೆದನು. ॥ ೩೨ ॥ ತೃಣಬಿಂದು ಮಹಾರಾಜನು ತನ್ನ ಧರ್ಮಪತ್ನಿಯಿಂದ ವಿಶಾಲ, ಶೂನ್ಯಬಂಧು ಮತ್ತು ಧೂಮ್ರಕೇತು ಎಂಬ ಮೂವರು ಪುತ್ರರನ್ನು ಪಡೆದನು. ಅವರಲ್ಲಿ ವಿಶಾಲರಾಜನು ವಂಶಧರನಾದನು. ಅವನು ವೈಶಾಲಿ ಎಂಬ ನಗರವನ್ನು ಸ್ಥಾಪಿಸಿದನು. ॥ ೩೩ ॥ ವಿಶಾಲನಿಂದ ಹೇಮಚಂದ್ರ, ಹೇಮಚಂದ್ರನಿಂದ ಧೂಮ್ರಾಕ್ಷ, ಧೂಮ್ರಾಕ್ಷನಿಂದ ಸಂಯಮ ಮತ್ತು ಸಂಯಮನಿಂದ ಕೃಶಾಶ್ವ ಮತ್ತು ದೇವಜರೆಂಬ ಈರ್ವರು ಪುತ್ರರು ಉದಿಸಿದರು. ॥ ೩೪ ॥ ಕೃಶಾಶ್ವನಿಗೆ ಸೋಮದತ್ತನೆಂಬ ಪುತ್ರನಿದ್ದನು. ಅವನು ಅಶ್ವಮೇಧದ ಮೂಲಕ ಯಜ್ಞಪತಿ ಭಗವಂತನನ್ನು ಆರಾಧಿಸಿ, ಯೋಗೇಶ್ವರ ಮಹಾತ್ಮರ ಆಶ್ರಯ ಪಡೆದು ಉತ್ತಮಗತಿಯನ್ನು ಪಡೆದುಕೊಂಡನು. ॥ ೩೫ ॥ ಸೋಮದತ್ತನ ಮಗ ಸುಮತಿಯಾದನು ಮತ್ತು ಸುಮತಿಯಿಂದ ಜನಮೇಜಯನಾದನು. ಇವರೆಲ್ಲರೂ ತೃಣಬಿಂದುವಿನ ಕೀರ್ತಿಯನ್ನು ಬೆಳೆಸುವ ವಿಶಾಲ ವಂಶದ ರಾಜರಾಗಿದ್ದರು. ॥ ೩೬ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಮಹರ್ಷಿ ಚ್ಯವನ ಮತ್ತು ಸುಕನ್ಯೆಯ ಚರಿತ್ರೆ, ಶರ್ಯಾತಿರಾಜನ ವಂಶವರ್ಣನೆ

ಶ್ರೀಶುಕ ಉವಾಚ

ಶರ್ಯಾತಿರ್ಮಾನವೋ ರಾಜಾ ಬ್ರಹ್ಮಿಷ್ಠಃ ಸ ಬಭೂವ ಹ ।
ಯೋ ವಾ ಅಂಗಿರಸಾಂ ಸತ್ರೇ ದ್ವಿತೀಯಮಹ ಊಚಿವಾನ್
॥ ೧ ॥

ಸುಕನ್ಯಾ ನಾಮ ತಸ್ಯಾಸೀತ್ಕನ್ಯಾ ಕಮಲಲೋಚನಾ ।
ತಯಾ ಸಾರ್ಧಂ ವನಗತೋ ಹ್ಯಗಮಚ್ಛ್ಯವನಾಶ್ರಮಮ್
॥ ೨ ॥

ಸಾ ಸಖೀಭಿಃ ಪರಿವೃತಾ ವಿಚಿನ್ವತ್ಯಂಘ್ರಿಪಾನ್ವನೇ ।
ವಲ್ಮೀಕರಂಧ್ರೇ ದದೃಶೇ ಖದ್ಯೋತೇ ಇವ ಜ್ಯೋತಿಷೀ
॥ ೩ ॥

ತೇ ದೈವಚೋದಿತಾ ಬಾಲಾ ಜ್ಯೋತಿಷೀ ಕಂಟಕೇನ ವೈ ।
ಅವಿಧ್ಯನ್ಮುಗ್ಧಭಾವೇನ ಸುಸ್ರಾವಾಸೃಕ್ ತತೋ ಬಹು
॥ ೪ ॥

ಶಕೃನ್ಮೂತ್ರನಿರೋಧೋಽಭೂತ್ ಸೈನಿಕಾನಾಂ ಚ ತತ್ಕ್ಷಣಾತ್ ।
ರಾಜರ್ಷಿಸ್ತಮುಪಾಲಕ್ಷ್ಯ ಪುರುಷಾನ್ನಿಷ್ಠಿತೋಽಬ್ರವೀತ್
॥ ೫ ॥

ಅಪ್ಯಭದ್ರಂ ನ ಯುಷ್ಮಾಭಿರ್ಭಾರ್ಗವಸ್ಯ ವಿಚೇಷ್ಟಿತಮ್ ।
ವ್ಯಕ್ತಂ ಕೇನಾಪಿ ನಸ್ತಸ್ಯ ಕೃತಮಾಶ್ರಮದೂಷಣಮ್
॥ ೬ ॥

ಸುಕನ್ಯಾ ಪ್ರಾಹ ಪಿತರಂ ಭೀತಾ ಕಿಂಚಿತ್ಕೃತಂ ಮಯಾ ।
ದ್ವೇ ಜ್ಯೋತಿಷೀ ಅಜಾನಂತ್ಯಾ ನಿರ್ಭಿನ್ನೇ ಕಂಟಕೇನ ವೈ
॥ ೭ ॥

ದುಹಿತುಸ್ತದ್ಬಚಃ ಶ್ರುತ್ವಾ ಶರ್ಯಾತಿರ್ಜಾತಸಾಧ್ವಸಃ ।
ಮುನಿಂ ಪ್ರಸಾದಯಾಮಾಸ ವಲ್ಮೀಕಾಂತರ್ಹಿತಂ ಶನೈಃ
॥ ೮ ॥

ತದಭಿಪ್ರಾಯಮಾಜ್ಞಾಯ ಪ್ರಾದಾದ್ದುಹಿತರಂ ಮುನೇಃ ।
ಕೃಚ್ಛ್ರಾನ್ಮುಕ್ತಸ್ತಮಾಮಂತ್ರ್ಯ ಪುರಂ ಪ್ರಾಯಾತ್ಸಮಾಹಿತಃ
॥ ೯ ॥

ಸುಕನ್ಯಾ ಚ್ಯವನಂ ಪ್ರಾಪ್ಯ ಪತಿಂ ಪರಮಕೋಪನಮ್ ।
ಪ್ರೀಣಯಾಮಾಸ ಚಿತ್ತಜ್ಞಾ ಅಪ್ರಮತ್ತಾನುವೃತ್ತಿಭಿಃ
॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಮನುಪುತ್ರನಾದ ಶರ್ಯಾತಿರಾಜನು ವೇದಗಳ ನಿಷ್ಣಾತ ವಿದ್ವಾಂಸನಾಗಿದ್ದನು. ಆವನು ಅಂಗಿರಾ ಗೋತ್ರದ ಋಷಿಗಳ ಯಜ್ಞದಲ್ಲಿ ಎರಡನೆಯ ದಿನದ ಕರ್ಮವನ್ನು ತಿಳಿಸಿದ್ದನು. ॥ ೧ ॥ ಆವನಿಗೆ ಕಮಲಲೋಚನೆಯಾದ ಸುಕನ್ಯೆ ಎಂಬ ಓರ್ವ ಮಗಳಿದ್ದಳು. ಒಂದು ದಿನ ಶರ್ಯಾತಿರಾಜನು ತನ್ನ ಕನ್ಯೆಯೊಂದಿಗೆ ವನದಲ್ಲಿ ಸುತ್ತಾಡುತ್ತಾ ಚ್ಯವನಋಷಿಯ ಆಶ್ರಮಕ್ಕೆ ಬಂದು ತಲುಪಿದನು. ॥ ೨ ॥ ಸುಕನ್ಯೆಯು ತನ್ನ ಸಖಿಯರೊಂದಿಗೆ ವನದಲ್ಲಿ ಅಲೆದಾಡುತ್ತಾ ವೃಕ್ಷಗಳ ಸೌಂದರ್ಯವನ್ನು ನೋಡುತ್ತಿದ್ದಳು. ವೃಕ್ಷದ ಬುಡದಲ್ಲಿದ್ದ ಒಂದು ಹುತ್ತದಲ್ಲಿ ಸುಕನ್ಯೆಯು ಮಿಣುಕುಹುಳುಗಳಂತೆ ಮಿನುಗುತ್ತಿದ್ದ ಎರಡು ಜ್ಯೋತಿಗಳನ್ನು (ಅವು ಚ್ಯವನ ಮಹರ್ಷಿಯ ಎರಡುಕಣ್ಣುಗಳಾಗಿದ್ದವು.) ನೋಡಿದಳು. ॥ ೩ ॥ ದೈವಪ್ರೇರಣೆಯಿಂದಾಗಿ ಅರಿವಿಲ್ಲದ ಆ ಬಾಲೆಯು ಹುಡುಗಾಟಕ್ಕಾಗಿ ಮಿನುಗುತ್ತಿದ್ದ ಆ ಬೆಳಕುಗಳನ್ನು ಮುಳ್ಳಿನಿಂದ ಚುಚ್ಚಿದಳು. ಇದರಿಂದ ಬೆಳಕಿದ್ದ ಸ್ಥಳದಿಂದ ರಕ್ತವು ಹರಿಯತೊಡಗಿತು. ॥ ೪ ॥ ಅದೇ ಸಮಯದಲ್ಲಿ ರಾಜಾ ಶರ್ಯಾತಿಯ ಸೈನಿಕರ ಮಲ-ಮೂತ್ರಗಳು ಅವರೋಧವಾದುವು. ರಾಜರ್ಷಿ ಶರ್ಯಾತಿಗೆ ಇದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಆವನು ಸೈನಿಕರಲ್ಲಿ ಕೇಳಿದನು – ॥ ೫ ॥ ಸೈನಿಕರೇ ! ನೀವೇನಾದರೂ ಚ್ಯವನಮಹರ್ಷಿಯ ವಿಷಯದಲ್ಲಿ ಅನುಚಿತವಾಗಿ ವ್ಯವಹರಿಸಿದಿರಾ ? ನಮ್ಮಲ್ಲಿ ಯಾರಾದರೂ ಅವರ ಆಶ್ರಮದಲ್ಲಿ ದುಷ್ಕಾರ್ಯವನ್ನು ಮಾಡಿರಬಹುದೆಂದು ನನಗೆ ಸ್ಪಷ್ಟವಾಗಿ ಕಾಣುತ್ತಿದೆ. ॥ ೬ ॥ ಆಗ ಸುಕನ್ಯೆಯು ತಂದೆಯ ಬಳಿಯಲ್ಲಿ ಹೆದರುತ್ತಲೇ ಹೇಳಿದಳು – ಅಪ್ಪಾ ! ನಾನೇ ಅಪರಾಧವನ್ನು ಮಾಡಿಬಿಟ್ಟಿದ್ದೇನೆ. ನಾನು ಅರಿವಿಲ್ಲದೆ ಹುತ್ತದಲ್ಲಿ ಫಳ-ಫಳಿಸುತ್ತಿದ್ದ ಎರಡು ಜ್ಯೋತಿಗಳನ್ನು ಮುಳ್ಳಿನಿಂದ ತಿವಿದುಬಿಟ್ಟಿರುವೆನು. ॥ ೭ ॥ ಮಗಳ ಈ ಮಾತನ್ನು ಕೇಳಿ ಶರ್ಯಾತಿಗೆ ಬಹಳ ಭಯವಾಯಿತು. ಆವನು ಹುತ್ತದಲ್ಲಿದ್ದ (ಕಣ್ಣುಗಳನ್ನು ಕಳಕೊಂಡ) ಚ್ಯವನಮಹರ್ಷಿಯನ್ನು ಸ್ತೋತ್ರಮಾಡುತ್ತಾ ಸ್ವಲ್ಪ-ಸ್ವಲ್ಪವಾಗಿ ಆವನನ್ನು ಸಮಾಧಾನಗೊಳಿಸಿದನು. ॥ ೮ ॥ ಆನಂತರ ಚ್ಯವನಮುನಿಯ ಅಭಿಪ್ರಾಯವನ್ನು ಅರಿತು ಆವನು ತನ್ನ ಮಗಳನ್ನು ವಿವಾಹಮಾಡಿಕೊಟ್ಟನು. ಚ್ಯವನನ ಅನುಗ್ರಹದಿಂದ ಈ ಸಂಕಟದಿಂದ ಬಿಡುಗಡೆಹೊಂದಿ, ಸಮಾಧಾನಗೊಂಡ ಶರ್ಯಾತಿಯು ಅವರ ಅನುಮತಿಯನ್ನು ಪಡೆದು ತನ್ನ ರಾಜಧಾನಿಗೆ ಮರಳಿದನು. ॥ ೯ ॥

ಇತ್ತ ಸುಕನ್ಯೆಯು ಪರಮಕ್ರೋಧಿಯಾದ ಚ್ಯವನಋಷಿಯನ್ನು ತನ್ನ ಪತಿಯನ್ನಾಗಿ ಪಡೆದುಕೊಂಡು ಬಹಳ ಎಚ್ಚರಿಕೆಯಿಂದ ಅವರ ಸೇವೆಮಾಡುತ್ತಾ ಅವರನ್ನು ಸಂತೋಷಪಡಿಸುತ್ತಿದ್ದಳು. ಅವಳು ಅವರ ಮನೋವೃತ್ತಿಯನ್ನು ಅರಿತುಕೊಂಡು ಅದಕ್ಕನುಸಾರವಾಗಿಯೇ ವರ್ತಿಸುತ್ತಿದ್ದಳು. ॥ ೧೦ ॥

ಕಸ್ಯಚಿತ್ತ್ವಥ ಕಾಲಸ್ಯ ನಾಸತ್ಯಾವಾಶ್ರಮಾಗತೌ ।
ತೌ ಪೂಜಯಿತ್ವಾ ಪ್ರೋವಾಚ ವಯೋ ಮೇ ದತ್ತಮೀಶ್ವರೌ
॥ ೧೧ ॥

ಗ್ರಹಂ ಗ್ರಹೀಷ್ಯೇ ಸೋಮಸ್ಯ
ಯಜ್ಞೇ ವಾಮಪ್ಯಸೋಮಪೌಃ ।
ಕ್ರಿಯತಾಂ ಮೇ ವಯೋ ರೂಪಂ
ಪ್ರಮದಾನಾಂ ಯದೀಪ್ಸಿತಮ್ ॥ ೧೨ ॥

ಬಾಢಮಿತ್ಯೂಚತುರ್ವಿಪ್ರಮಭಿನಂದ್ಯ ಭಿಷಕ್ತಮೌ ।
ನಿಮಜ್ಜತಾಂ ಭವಾನಸ್ಮಿನ್ ಹ್ರದೇ ಸಿದ್ಧವಿನಿರ್ಮಿತೇ
॥ ೧೩ ॥

ಇತ್ಯುಕ್ತ್ವಾ ಜರಯಾ ಗ್ರಸ್ತದೇಹೋ ಧಮನಿಸಂತತಃ ।
ಹ್ರದಂ ಪ್ರವೇಶಿತೋಽಶ್ವಿಭ್ಯಾಂ ವಲೀಪಲಿತವಿಪ್ರಿಯಃ
॥ ೧೪ ॥

ಪುರುಷಾಸ್ತ್ರಯ ಉತ್ತಸ್ಥುರಪೀಚ್ಯಾ ವನಿತಾಪ್ರಿಯಾಃ ।
ಪದ್ಮಸ್ರಜಃ ಕುಂಡಲಿನಸ್ತುಲ್ಯರೂಪಾಃ ಸುವಾಸಸಃ
॥ ೧೫ ॥

ತಾನ್ನಿರೀಕ್ಷ್ಯ ವರಾರೋಹಾ ಸರೂಪಾನ್ಸೂರ್ಯವರ್ಚಸಃ ।
ಅಜಾನತೀ ಪತಿಂ ಸಾಧ್ವೀ ಅಶ್ವಿನೌ ಶರಣಂ ಯಯೌ
॥ ೧೬ ॥

ದರ್ಶಯಿತ್ವಾ ಪತಿಂ ತಸ್ಯೈ ಪಾತಿವ್ರತ್ಯೇನ ತೋಷಿತೌ ।
ಋಷಿಮಾಮಂತ್ರ್ಯ ಯಯತುರ್ವಿಮಾನೇನ ತ್ರಿವಿಷ್ಟಪಮ್
॥ ೧೭ ॥

ಯಕ್ಷ್ಯಮಾಣೋಽಥ ಶರ್ಯಾತಿಶ್ಚ್ಯವನಸ್ಯಾಶ್ರಮಂ ಗತಃ ।
ದದರ್ಶ ದುಹಿತುಃ ಪಾರ್ಶ್ವೇ ಪುರುಷಂ ಸೂರ್ಯವರ್ಚಸಮ್
॥ ೧೮ ॥

ರಾಜಾ ದುಹಿತರಂ ಪ್ರಾಹ ಕೃತಪಾದಾಭಿವಂದನಾಮ್ ।
ಆಶಿಷಶ್ಚಾಪ್ರಯುಂಜಾನೋ ನಾತಿಪ್ರೀತಮನಾ ಇವ
॥ ೧೯ ॥

ಚಿಕೀರ್ಷಿತಂ ತೇ ಕಿಮಿದಂ ಪತಿಸ್ತ್ಯಯಾ
ಪ್ರಲಂಭಿತೋ ಲೋಕನಮಸ್ಕೃತೋ ಮುನಿಃ ।
ಯತ್ತ್ವಂ ಜರಾಗ್ರಸ್ತಮಸತ್ಯಸಮ್ಮತಂ
ವಿಹಾಯ ಜಾರಂ ಭಜಸೇಽಮುಮಧ್ವಗಮ್ ॥ ೨೦ ॥

ಕೆಲವು ಕಾಲ ಕಳೆದ ಬಳಿಕ ಒಮ್ಮೆ ಚ್ಯವನರ ಆಶ್ರಮಕ್ಕೆ ಅಶ್ವಿನೀ ಕುಮಾರರಿಬ್ಬರೂ ಆಗಮಿಸಿದರು. ಚ್ಯವನರು ಅವರಿಗೆ ಯಥೋಚಿತವಾಗಿ ಸತ್ಕಾರಗೈದು ಹೇಳಿದರು – ನೀವಿಬ್ಬರೂ ಸಮರ್ಥರಾಗಿದ್ದೀರಿ. ಆದ್ದರಿಂದ ನನ್ನನ್ನು ಯುವಕನನ್ನಾಗಿಸಿರಿ. ನನ್ನ ರೂಪ ಹಾಗೂ ವಯಸ್ಸು ಯುವತಿಸ್ತ್ರೀಯರೂ ಬಯಸುವಂತೆ ಸುಂದರವಾಗಿಸಿರಿ. ನಿಮಗೆ ಸೋಮಪಾನದ ಅಧಿಕಾರವಿಲ್ಲ ಎಂಬುದನ್ನೂ ನಾನು ಬಲ್ಲೆನು. ಹೀಗಿದ್ದರೂ ನಾನು ನಿಮಗೆ ಸೋಮರಸದ ಪಾಲನ್ನು ಕೊಡುವೆನು. ॥ ೧೧-೧೨ ॥ ವೈದ್ಯಶಿರೋಮಣಿಗಳಾದ ಅಶ್ವಿನೀಕುಮಾರರು ಚ್ಯವನಮಹರ್ಷಿಯನ್ನು ಅಭಿನಂದಿಸುತ್ತಾ 'ಹಾಗೇ ಆಗಲಿ' ಎಂದು ಹೇಳಿದರು. ಅನಂತರ 'ಇದು ಸಿದ್ಧರ ಮೂಲಕ ನಿರ್ಮಾಣಗೊಂಡ ಒಂದು ಕುಂಡವಾಗಿದೆ. ಇದರಲ್ಲಿ ನೀವು ಸ್ನಾನಮಾಡಿರಿ' ಎಂದು ಹೇಳಿದರು. ॥ ೧೩. ॥ ಚ್ಯವನ ಮುನಿಯ ಶರೀರದಲ್ಲಿ ಮುದಿತನವು ಆವರಿಸಿತ್ತು. ಮೂಳೆ-ನರಗಳು ಎದ್ದು ಕಾಣುತ್ತಿದ್ದವು. ಚರ್ಮ ಸುಕ್ಕುಗಟ್ಟಿತ್ತು. ಕೂದಲು ಹಣ್ಣಾದ್ದರಿಂದ ಕುರೂಪಿಗಳಂತೆ ಕಾಣುತ್ತಿದ್ದರು. ಅಶ್ವಿನೀ ಕುಮಾರರು ಅವರನ್ನು ತನ್ನ ಜೊತೆಗೆ ಕರೆದುಕೊಂಡು ಹೋಗಿ ಕುಂಡದಲ್ಲಿ ಪ್ರವೇಶಿಸಿದರು. ॥ ೧೪ ॥ ಆ ಸಮಯದಲ್ಲಿ ಕುಂಡದಿಂದ ಮೂವರು ಪುರುಷರು ಹೊರಬಂದರು. ಅವರು ಮೂವರೂ ಕಮಲಗಳ ಮಾಲೆಯನ್ನೂ ಕುಂಡಲ ಮತ್ತು ಸುಂದರವಾದ ವಸ್ತ್ರಗಳನ್ನು ಧರಿಸಿದ್ದು, ಒಂದೇ ರೀತಿಯಾಗಿ ಕಂಡು ಬರುತ್ತಿದ್ದರು. ಅವರು ಅತೀವ ಸುಂದರರಾಗಿದ್ದು ಸ್ತ್ರೀಯರಿಗೆ ಪ್ರಿಯದರ್ಶನರಾಗಿದ್ದರು. ॥ ೧೫ ॥ ಪರಮಸಾಧ್ವಿಯಾದ ಸುಂದರಿಯಾದ ಸುಕನ್ಯೆಯು – ಈ ಮೂವರೂ ಒಂದೇ ರೂಪವುಳ್ಳವರಾಗಿದ್ದು, ಸೂರ್ಯನಂತೆ ತೇಜಸ್ವಿಗಳಾಗಿರುವುದನ್ನು ನೋಡಿದಾಗ ತನ್ನ ಪತಿಯನ್ನು ಗುರುತಿಸಲಾರದೆ ಅವಳು ಅಶ್ವಿನೀಕುಮಾರರನ್ನೇ ಶರಣು ಹೊಂದಿದಳು. ॥ ೧೬ ॥ ಅವಳ ಪಾತಿವ್ರತ್ಯದಿಂದ ಅಶ್ವಿನೀಕುಮಾರರು ಪರಮಸಂತುಷ್ಟರಾದರು. ಅವರು ಅವಳ ಪತಿಯನ್ನು ತೋರಿಸಿಕೊಟ್ಟು, ಮತ್ತೆ ಚ್ಯವನರಿಂದ ಅನುಮತಿಯನ್ನು ಪಡೆದು ವಿಮಾನದ ಮೂಲಕ ಅವರು ಸ್ವರ್ಗಕ್ಕೆ ಹೊರಟು ಹೋದರು. ॥ ೧೭ ॥

ಕೆಲಕಾಲದ ನಂತರ ಯಜ್ಞಮಾಡುವ ಇಚ್ಛೆಯಿಂದ ಶರ್ಯಾತಿ ರಾಜನು ಚ್ಯವನಮುನಿಯ ಆಶ್ರಮಕ್ಕೆ ಬಂದನು. ಅಲ್ಲಿ ತನ್ನ ಮಗಳು ಸುಕನ್ಯೆಯ ಬಳಿಯಲ್ಲಿ ಸೂರ್ಯನಂತೆ ತೇಜಸ್ವಿ ಪುರುಷನೊಬ್ಬನು ಕುಳಿತಿರುವುದನ್ನು ಕಂಡನು. ॥ ೧೮ ॥ ಸುಕನ್ಯೆಯು ತಂದೆಯ ಚರಣಗಳಿಗೆ ವಂದಿಸಿಕೊಂಡಳು. ಶರ್ಯಾತಿಯು ಅವಳಿಗೆ ಆಶೀರ್ವದಿಸದೆ ಸ್ವಲ್ಪ ಅಸಂತೋಷವನ್ನು ವ್ಯಕ್ತಪಡಿಸುತ್ತಾ ಹೇಳಿದನು – ॥ ೧೯ ॥ ಎಲೈ ದುಷ್ಟಳೇ ! ನೀನು ಇದೇನು ಮಾಡಿಬಿಟ್ಟೆ ? ಲೋಕನಮಸ್ಕೃತನಾದ ಚ್ಯವನಮುನಿಯನ್ನು ವಂಚಿಸಿಬಿಟ್ಟೆಯಾ ? ನೀನು ಖಂಡಿತವಾಗಿ ಇವನು ಮುದುಕನೂ, ನಿಷ್ಪ್ರಯೋಜಕನೂ ಎಂದು ತಿಳಿದು ತ್ಯಜಿಸಿ, ಈ ದಾರಿಹೋಕ ಜಾರ ಪುರುಷನನ್ನು ಸೇವಿಸುತ್ತಿರುವೆಯಲ್ಲ ? ॥ ೨೦ ॥

ಕಥಂ ಮತಿಸ್ತೇಽವಗತಾನ್ಯಥಾ ಸತಾಂ
ಕುಲಪ್ರಸೂತೇ ಕುಲದೂಷಣಂ ತ್ವಿದಮ್ ।
ಬಿಭರ್ಷಿ ಜಾರಂ ಯದಪತ್ರಪಾ ಕುಲಂ
ಪಿತುಶ್ಚ ಭರ್ತುಶ್ಚ ನಯಸ್ಯಧಸ್ತಮಃ ॥ ೨೧ ॥

ಏವಂ ಬ್ರುವಾಣಂ ಪಿತರಂ ಸ್ಮಯಮಾನಾ ಶುಚಿಸ್ಮಿತಾ ।
ಉವಾಚ ತಾತ ಜಾಮಾತಾ ತವೈಷ ಭೃಗುನಂದನಃ
॥ ೨೨ ॥

ಶಶಂಸ ಪಿತ್ರೇ ತತ್ಸರ್ವಂ ವಯೋರೂಪಾಭಿಲಂಭನಮ್ ।
ವಿಸ್ಮಿತಃ ಪರಮಪ್ರೀತಸ್ತನಯಾಂ ಪರಿಷಸ್ವಜೇ
॥ ೨೩ ॥

ಸೋಮೇನ ಯಾಜಯನ್ವೀರಂ ಗ್ರಹಂ ಸೋಮಸ್ಯ ಚಾಗ್ರಹೀತ್ ।
ಅಸೋಮಪೌರಪ್ಯಶ್ವಿನೋಶ್ಚ್ಯವನಃ ಸ್ವೇನ ತೇಜಸಾ
॥ ೨೪ ॥

ಹಂತುಂ ತಮಾದದೇ ವಜ್ರಂ ಸದ್ಯೋಮನ್ಯುರಮರ್ಷಿತಃ ।
ಸವಜ್ರಂ ಸ್ತಂಭಯಾಮಾಸ ಭುಜಮಿಂದ್ರಸ್ಯ ಭಾರ್ಗವಃ
॥ ೨೫ ॥

ಅನ್ವಜಾನಂಸ್ತತಃ ಸರ್ವೇ ಗ್ರಹಂ ಸೋಮಸ್ಯ ಚಾಶ್ವಿನೋಃ ।
ಭಿಷಜಾವಿತಿ ಯತ್ಪೂರ್ವಂ ಸೋಮಾಹುತ್ಯಾ ಬಹಿಷ್ಕೃತೌ
॥ ೨೬ ॥

ಉತ್ತಾನಬರ್ಹಿರಾನರ್ತೋ ಭೂರಿಷೇಣ ಇತಿ ತ್ರಯಃ ।
ಶರ್ಯಾತೇರಭವನ್ಪುತ್ರಾ ಆನರ್ತಾದ್ ರೇವತೋಽಭವತ್
॥ ೨೭ ॥

ಸೋಽಂತಃಸಮುದ್ರೇ ನಗರೀಂ ವಿನಿರ್ಮಾಯ ಕುಶಸ್ಥಲೀಮ್ ।
ಆಸ್ಥಿತೋಽಭುಂಕ್ತ ವಿಷಯಾನಾನರ್ತಾದೀನರಿಂದಮ
॥ ೨೮ ॥

ತಸ್ಯ ಪುತ್ರಶತಂ ಜಜ್ಞೇ ಕಕುದ್ಮಿಜ್ಯೇಷ್ಠಮುತ್ತಮಮ್ ।
ಕಕುದ್ಮೀ ರೇವತೀಂ ಕನ್ಯಾಂ ಸ್ವಾಮಾದಾಯ ವಿಭುಂ ಗತಃ
॥ ೨೯ ॥

ಕನ್ಯಾವರಂ ಪರಿಪ್ರಷ್ಟುಂ ಬ್ರಹ್ಮಲೋಕಮಪಾವೃತಮ್ ।
ಅವರ್ತಮಾನೇ ಗಾಂಧರ್ವೇ ಸ್ಥಿತೋಽಲಬ್ಧಕ್ಷಣಃ ಕ್ಷಣಮ್
॥ ೩೦ ॥

ತದಂತ ಆದ್ಯಮಾನಮ್ಯ ಸ್ವಾಭಿಪ್ರಾಯಂ ನ್ಯವೇದಯತ್ ।
ತಚ್ಛ್ರುತ್ವಾ ಭಗವಾನ್ಬ್ರಹ್ಮಾ ಪ್ರಹಸ್ಯ ತಮುವಾಚ ಹ
॥ ೩೧ ॥

ಅಹೋ ರಾಜನ್ನಿರುದ್ಧಾಸ್ತೇ ಕಾಲೇನ ಹೃದಿ ಯೇ ಕೃತಾಃ ।
ತತ್ಪುತ್ರಪೌತ್ರನಪ್ತೃಕಾಂ ಗೋತ್ರಾಣಿ ಚ ನ ಶೃಣ್ಮಹೇ
॥ ೩೨ ॥

ನೀನು ಶ್ರೇಷ್ಠ ಕುಲದಲ್ಲಿ ಹುಟ್ಟಿದವಳು. ಇಂತಹ ವಿಪರೀತ ಬುದ್ಧಿಯು ನಿನಗೆ ಹೇಗೆ ಉಂಟಾಯಿತು ? ನಿನ್ನ ಈ ವ್ಯವಹಾರವಾದರೋ ಕುಲಕಲಂಕಿತವಾಗಿದೆ. ಅಯ್ಯೋ ! ಶಿವ ! ಶಿವಾ !! ನೀನು ನಿರ್ಲಜ್ಜಳಾಗಿ ಜಾರಪುರುಷನ ಸೇವೆ ಮಾಡುತ್ತಿರುವೆ. ಹೀಗೆ ತಂದೆಯ ಮತ್ತು ಪತಿಯ ಎರಡೂ ವಂಶಗಳನ್ನೂ ಘೋರ ನರಕಕ್ಕೆ ತಳ್ಳಿ ಬಿಟ್ಟಿರುವೆಯಲ್ಲ! ॥ ೨೧ ॥ ಶುಚಿಸ್ಮಿತೆಯಾದ ಸುಕನ್ಯೆಯು ಮುಗುಳ್ನಗುತ್ತಾ ತನ್ನನ್ನು ನಿಂದಿಸುತ್ತಿದ್ದ ತಂದೆ ಶರ್ಯಾತಿಗೆ ಹೇಳಿದಳು – ಅಪ್ಪಾ! ಇವರು ನಿಮ್ಮ ಅಳಿಯ ಭೃಗುನಂದನ ಚ್ಯವನ ಮಹರ್ಷಿಗಳೇ ಆಗಿದ್ದಾರೆ. ॥ ೨೨ ॥ ಅನಂತರ ಅವಳು ಮಹರ್ಷಿ ಚ್ಯವನರ ಯೌವನ ಮತ್ತು ಸೌಂದರ್ಯವು ದೊರೆತ ಎಲ್ಲ ವೃತ್ತಾಂತವನ್ನು ತಂದೆಯ ಬಳಿಯಲ್ಲಿ ಹೇಳಿದಳು. ಅದೆಲ್ಲವನ್ನೂ ಕೇಳಿ ಶರ್ಯಾತಿರಾಜನಿಗೆ ಅತ್ಯಂತ ವಿಸ್ಮಯವಾಯಿತು. ಅವನು ತುಂಬಾ ಪ್ರೇಮದಿಂದ ತನ್ನ ಮಗಳನ್ನು ಅಪ್ಪಿಕೊಂಡನು.॥ ೨೩. ॥

ಮಹರ್ಷಿ ಚ್ಯವನರು ವೀರಶರ್ಯಾತಿಯಿಂದ ಸೋಮಯಜ್ಞದ ಅನುಷ್ಠಾನವನ್ನು ಮಾಡಿಸಿ, ಸೋಮರಸದ ಅಧಿಕಾರಿಗಳಲ್ಲದಿದ್ದರೂ ಅಶ್ವಿನೀಕುಮಾರರಿಗೆ ತನ್ನ ಪ್ರಭಾವದಿಂದ ಸೋಮಪಾನ ಮಾಡಿಸಿದರು. ॥ ೨೪ ॥ ಇದನ್ನು ಸಹಿಸಿಕೊಳ್ಳಲಾರದೆ ಇಂದ್ರನು ಪರಮಕ್ರುದ್ಧನಾದನು. ಶರ್ಯಾತಿಯನ್ನು ಕೊಲ್ಲಲಿಕ್ಕಾಗಿ ವಜ್ರಾಯುಧವನ್ನೇ ಮೇಲೆತ್ತಿಕೊಂಡನು. ಮಹರ್ಷಿಚ್ಯವನರು ವಜ್ರದೊಂದಿಗೆ ಅವನ ಕೈಯನ್ನು ಹಾಗೆಯೇ ಸ್ತಂಭಿಸಿಬಿಟ್ಟರು. ॥ ೨೫ ॥ ಆಗ ಎಲ್ಲ ದೇವತೆಗಳು ಅಶ್ವಿನೀಕುಮಾರರಿಗೆ ಸೋಮಪಾನದ ಪಾಲನ್ನು ಕೊಡಲು ಒಪ್ಪಿಕೊಂಡರು. ವೈದ್ಯರಾಗಿದ್ದ ಕಾರಣ ಮೊದಲು ಅವರು ಸೋಮಪಾನದಿಂದ ಬಹಿಷ್ಕೃತರಾಗಿದ್ದರು. ॥ ೨೬ ॥

ಪರೀಕ್ಷಿತನೇ ! ಶರ್ಯಾತಿಗೆ ಉತ್ತಾನಬರ್ಹಿ, ಆನರ್ತ ಮತ್ತು ಭೂರಿಷೇಣರೆಂಬ ಮೂವರು ಪುತ್ರರಿದ್ದರು. ಆನರ್ತನಿಗೆ ರೇವತನೆಂಬ ಮಗನಿದ್ದನು. ॥ ೨೭ ॥ ರಾಜೇಂದ್ರ ! ರೇವತನು ಸಮುದ್ರದ ಮಧ್ಯದಲ್ಲಿ ಕುಶಸ್ಥಳೀ ಎಂಬ ಹೆಸರಿನ ಒಂದು ನಗರವನ್ನು ನಿರ್ಮಿಸಿದನು. ಅದರಲ್ಲೇ ವಾಸಿಸುತ್ತಾ ಆನರ್ತ ಮುಂತಾದ ದೇಶಗಳನ್ನು ಆಳುತ್ತಿದ್ದನು. ॥ ೨೮ ॥ ರೇವತನಿಗೆ ನೂರು ಮಂದಿ ಶ್ರೇಷ್ಠ ಮಕ್ಕಳು ಇದ್ದರು. ಅವರಲ್ಲಿ ಹಿರಿಯವನು ಕಕುದ್ಮಿಯಾಗಿದ್ದನು. ಕಕುದ್ಮಿಯು ತನ್ನ ಮಗಳಾದ ರೇವತಿಯನ್ನು ಕರೆದುಕೊಂಡು ಅವಳಿಗೆ ಯೋಗ್ಯನಾದ ವರನ ಕುರಿತು ವಿಚಾರಿಸಲು ಬ್ರಹ್ಮದೇವರ ಬಳಿಗೆ ಹೋದನು. ಆಗಿನ ಕಾಲದಲ್ಲಿ ಬ್ರಹ್ಮಲೋಕದ ರಹ ದಾರಿಯು ಇಂತಹವರಿಗೆ ಮುಕ್ತವಾಗಿತ್ತು. ಬ್ರಹ್ಮಲೋಕದಲ್ಲಿ ಆಗ ಸಂಗೀತ ಉತ್ಸವವು ನಡೆಯುತ್ತಿತ್ತು. ಅದರಿಂದ ಬ್ರಹ್ಮನೊಡನೆ ಮಾತನಾಡಲು ಅವಕಾಶ ಸಿಗಲಿಲ್ಲ; ಸ್ವಲ್ಪಹೊತ್ತು ಅಲ್ಲೇ ಕಾಯಬೇಕಾಯಿತು. ॥ ೨೯-೩೦ ॥ ಸಂಗೀತೋತ್ಸವದ ಕೊನೆಯಲ್ಲಿ ಬ್ರಹ್ಮದೇವರಿಗೆ ನಮಸ್ಕರಿಸಿ ಕಕುದ್ಮಿಯು ತನ್ನ ಅಭಿಪ್ರಾಯವನ್ನು ನಿವೇದಿಸಿಕೊಂಡನು. ಅವನ ಮಾತನ್ನು ಕೇಳಿ ಬ್ರಹ್ಮನು ನಕ್ಕು ಅವನಲ್ಲಿ ಹೇಳಿದರು –॥ ೩೧ ॥ 'ಮಹಾರಾಜನೇ ! ನೀನು ಮನಸ್ಸಿನಲ್ಲಿ ಯಾವ ರಾಜಕುಮಾರರ ಕುರಿತು ಯೋಚಿಸಿದ್ದಿಯೋ ಅವರೆಲ್ಲರೂ ಕಾಲವಶರಾಗಿರುವರು. ಈಗ ಅವರ ಮಕ್ಕಳು, ಮೊಮ್ಮಕ್ಕಳು ಅಥವಾ ಸಂಬಂಧಿಗಳೇ ಏನು, ಆ ಗೋತ್ರದ ಹೆಸರೂ ಕೂಡ ಈಗ ಕೇಳುವಂತಿಲ್ಲ ॥ ೩೨ ॥

ಕಾಲೋಽಭಿಯಾತಸ್ತ್ರಿಂಶಚ್ಚತುರ್ಯುಗವಿಕಲ್ಪಿತಃ ।
ತದ್ಗಚ್ಛ ದೇವದೇವಾಂಶೋ ಬಲದೇವೋ ಮಹಾಬಲಃ
॥ ೩೩ ॥

ಕನ್ಯಾರತ್ನಮಿದಂ ರಾಜನ್ ನರರತ್ನಾಯ ದೇಹಿ ಭೋಃ ।
ಭುವೋ ಭಾರಾವತಾರಾಯ ಭಗವಾನ್ಭೂತಭಾವನಃ
॥ ೩೪ ॥

ಅವತೀರ್ಣೋ ನಿಜಾಂಶೇನ ಪುಣ್ಯಶ್ರವಣಕೀರ್ತನಃ ।
ಇತ್ಯಾದಿಷ್ಟೋಽಭಿವಂದ್ಯಾಜಂ ನೃಪಃ ಸ್ವಪುರಮಾಗತಃ ।
ತ್ಯಕ್ತಂ ಪುಣ್ಯಜನತ್ರಾಸಾದ್ ಭ್ರಾತೃಭಿರ್ದಿಕ್ಷ್ವವಸ್ಥಿತೈಃ
॥ ೩೫ ॥

ಸುತಾಂ ದತ್ತ್ವಾನವದ್ಯಾಂಗೀಂ ಬಲಾಯ ಬಲಶಾಲಿನೇ ।
ಬದರ್ಯಾಖ್ಯಂ ಗತೋ ರಾಜಾ ತಪ್ತುಂ ನಾರಾಯಣಾಶ್ರಮಮ್
॥ ೩೬ ॥

ಇಷ್ಟರೊಳಗೆ ಇಪ್ಪತ್ತೇಳು ಚತುರ್ಯುಗಗಳ ಸಮಯವು ಕಳೆದುಹೋಗಿದೆ. ಆದಕ್ಕಾಗಿ ನೀನು ಭೂಲೋಕಕ್ಕೆ ಹೋಗು. ಈಗ ಭಗವಾನ್ ನಾರಾಯಣನ ಅಂಶಾವತಾರ ಮಹಾಬಲಾಢ್ಯನಾದ ಬಲರಾಮದೇವನು ಆಳುತ್ತಿದ್ದಾನೆ. ॥ ೩೩ ॥ ರಾಜನೇ! ಈ ಕನ್ಯಾರತ್ನವನ್ನು ಆ ನರಶ್ರೇಷ್ಠನಾದ ಬಲರಾಮನಿಗೆ ಸಮರ್ಪಿಸಿ ಬಿಡು. ಅವನ ನಾಮ, ಲೀಲಾದಿಗಳು, ಶ್ರವಣ-ಕೀರ್ತನಗಳು ಬಹಳ ಪವಿತ್ರವಾದವುಗಳು. ಪ್ರಾಣಿಗಳ ಜೀವನ ಸರ್ವಸ್ವನಾದ ಆ ಭಗವಂತನೇ ಭೂಭಾರವನ್ನು ಇಳುಹಲೋಸುಗ ತನ್ನ ಅಂಶದಿಂದ ಅವತರಿಸಿರುವನು.' ಕಕುದ್ಮಿ ಮಹಾರಾಜನು ಬ್ರಹ್ಮದೇವರ ಆಪ್ತಣೆಯನ್ನು ಪಡೆದು, ಅವನ ಚರಣಗಳಿಗೆ ವಂದಿಸಿ ತನ್ನ ಊರಿಗೆ ಮರಳಿದನು. ಅವನ ವಂಶಜರು ಯಕ್ಷರ ಭಯದಿಂದ ಆ ನಗರವನ್ನು ಬಿಟ್ಟು ಅಲ್ಲಲ್ಲಿ ವಾಸಮಾಡುತ್ತಿದ್ದಾರೆ. ॥ ೩೪-೩೫ ॥ ರಾಜಾ ಕಕುದ್ಮಿಯು ಸರ್ವಾಂಗಸುಂದರಿಯಾದ ತನ್ನ ಮಗಳನ್ನು ಮಹಾ ಬಲಶಾಲಿಯಾದ ಬಲರಾಮದೇವನಿಗೆ ವಿವಾಹಮಾಡಿ ಕೊಟ್ಟು, ತಾನು ತಪಸ್ಸಿಗಾಗಿ ಭಗವಾನ್ ನರ-ನಾರಾಯಣರ ಬದರಿಕಾಶ್ರಮಕ್ಕೆ ತೆರಳಿದನು. ॥ ೩೬ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ನಾಭಾಗ ಮತ್ತು ಅಂಬರೀಷರ ಕಥೆ

ಶ್ರೀಶುಕ ಉವಾಚ

ನಾಭಾಗೋ ನಭಗಾಪತ್ಯಂ ಯಂ ತತಂ ಭ್ರಾತರಃ ಕವಿಮ್ ।
ಯವಿಷ್ಠಂ ವ್ಯಭಜನ್ ದಾಯಂ ಬ್ರಹ್ಮಚಾರಿಣಮಾಗತಮ್
॥ ೧ ॥

ಭ್ರಾತರೋಽಭಾಂಕ್ತ ಕಿಂ ಮಹ್ಯಂ ಭಜಾಮ ಪಿತರಂ ತವ ।
ತ್ವಾಂ ಮಮಾರ್ಯಾಸುತಾಭಾಂಕ್ಷುರ್ಮಾ ಪುತ್ರಕ ತದಾದೃಥಾಃ
॥ ೨ ॥

ಇಮೇ ಅಂಗಿರಸಃ ಸತ್ರಮಾಸತೇಽದ್ಯ ಸುಮೇಧಸಃ ।
ಷಷ್ಠಂ ಷಷ್ಠಮುಪೇತ್ಯಾಹಃ ಕವೇ ಮುಹ್ಯಂತಿ ಕರ್ಮಣಿ
॥ ೩ ॥

ತಾಂಸ್ತ್ವಂ ಶಂಸಯ ಸೂಕ್ತೇ ದ್ವೇ ವೈಶ್ವದೇವೇ ಮಹಾತ್ಮನಃ ।
ತೇ ಸ್ವರ್ಯಂತೋ ಧನಂ ಸತ್ರಪರಿಶೇಷಿತಮಾತ್ಮನಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮನುಪುತ್ರನಾದ ನಭಗನಿಗೆ ನಾಭಾಗನೆಂಬ ಕಿರಿಯ ಮಗನಿದ್ದನು. ಅವನು ಬಹಳ ಕಾಲದವರೆಗೆ ಬ್ರಹ್ಮಚರ್ಯವ್ರತದಲ್ಲಿದ್ದು ಮಹಾ ವಿದ್ವಾಂಸನಾಗಿ ಮನೆಗೆ ಮರಳಿದನು. ॥ ೧ ॥ ಆಗ ಅವನು ಕೇಳಿದನು – ಸೋದರರೇ! ನೀವು ನನ್ನ ಪಾಲನ್ನು ಏನು ಕೊಟ್ಟಿರುವಿರಿ? ಆಗ ಅವರು ನಿನಗೆ ನಿನ್ನ ಪಾಲಾಗಿ ತಂದೆಯವರನ್ನೇ ಕೊಟ್ಟಿರುವೆವು ಎಂದು ಹೇಳಿದರು. ಅವನು ತಂದೆಯ ಬಳಿಗೆ ಹೋಗಿ ವಿಚಾರಿಸಿದನು – ಅಪ್ಪಾ! ನನ್ನ ಅಣ್ಣಂದಿರು ನನ್ನ ಪಾಲಿನಲ್ಲಿ ನಿಮ್ಮನ್ನೇ ಕೊಟ್ಟಿರುವರು. ತಂದೆ ಹೇಳಿದನು – 'ಮಗೂ! ನೀನು ಇವರ ಮಾತನ್ನು ಕೇಳಬೇಡ. ॥ ೨ ॥ ನಿನ್ನ ಜೀವನೋಪಾಯಕ್ಕೊಂದು ಮಾರ್ಗವನ್ನು ಸೂಚಿಸುವೆನು. ಒಳ್ಳೆಯ ಮೇಧಾವಂತರಾದ ಅಂಗಿರಸರು ಈಗ ಒಂದು ದೊಡ್ಡ ಯಜ್ಞವನ್ನು ಮಾಡುತ್ತಿದ್ದಾರೆ. ಅವರು ಬುದ್ಧಿವಂತರೆಂಬುದೂ ಸತ್ಯ. ಆದರೆ ಅವರು ಆರನೆಯ ದಿನ ತಮ್ಮ ಕರ್ಮಗಳನ್ನು ಮರೆತು ಕಿಂಕರ್ತವ್ಯಮೂಢರಾಗುವರು. ॥ ೩ ॥ ಮಗೂ! ನೀನು ಆ ಮಹಾತ್ಮರ ಬಳಿಗೆ ಹೋಗಿ ಅವರಿಗೆ ವೈಶ್ವದೇವ ಸಂಬಂಧಿ ಎರಡು ಸೂಕ್ತಗಳನ್ನು ಉಪದೇಶಿಸು. ಅದರಿಂದ ಅವರು ಸ್ವರ್ಗಕ್ಕೆ ಹೋಗುವಾಗ ಯಜ್ಞದಲ್ಲಿ ಉಳಿದಿರುವ ತಮ್ಮ ಸಕಲ ಧನವನ್ನೂ ನಿನಗೆ ಕೊಡುವರು.

ದಾಸ್ಯಂತಿ ತೇऽಥ ತಾನ್ ಗಚ್ಛ ತಥಾ ಸ ಕೃತವಾನ್ಯಥಾ ।
ತಸ್ಮೈ ದತ್ತ್ವಾ ಯಯುಃ ಸ್ವರ್ಗಂ ತೇ ಸತ್ರಪರಿಶೇಷಿತಮ್
॥ ೫ ॥

ಅದಕ್ಕಾಗಿ ನೀನು ಈಗಲೇ ಅವರ ಬಳಿಗೆ ಹೋಗು.' ತಂದೆಯ ಆದೇಶದಂತೆ ನಾಭಾಗನು ಹಾಗೆ ಮಾಡಿದನು. ಆ ಆಂಗೀರಸರೂ ಕೂಡ ಯಜ್ಞಶಿಷ್ಟಭಾಗವನ್ನು ಅವನಿಗೆ ಕೊಟ್ಟು ಸ್ವರ್ಗಕ್ಕೆ ಹೊರಟುಹೋದರು. ॥ ೪-೫ ॥

ತಂ ಕಶ್ಚಿತ್ ಸ್ವೀಕರಿಷ್ಯಂತಂ ಪುರುಷಃ ಕೃಷ್ಣದರ್ಶನಃ ।
ಉವಾಚೋತ್ತರತೋऽಭ್ಯೇತ್ಯ ಮಮೇದಂ ವಾಸ್ತುಕಂ ವಸು
॥ ೬ ॥

ನಾಭಾಗನು ಆ ಧನವನ್ನು ತೆಗೆದುಕೊಳ್ಳತೊಡಗಿದಾಗ ಉತ್ತರದ ಕಡೆಯಿಂದ ಓರ್ವ ಕಪ್ಪಾದ ಪುರುಷನು ಬಂದನು. ಅವನು ಹೇಳಿದನು – 'ಈ ಯಜ್ಞಭೂಮಿಯಲ್ಲಿ ಉಳಿದೆಲ್ಲ ಧನಭಾಗವೂ ನನ್ನದಾಗಿದೆ.' ॥ ೬ ॥

ಮಮೇದಮೃಷಿಭಿರ್ದತ್ತಮಿತಿ ತರ್ಹಿ ಸ್ಮ ಮಾನವಃ ।
ಸ್ಯಾನ್ನೌ ತೇ ಪಿತರಿ ಪ್ರಶ್ನಃ ಪೃಷ್ಟವಾನ್ ಪಿತರಂ ತಥಾ
॥ ೭ ॥

ನಾಭಾಗನು ಹೇಳಿದನು – 'ಋಷಿಗಳು ಈ ಧನವನ್ನು ನನಗೆ ಕೊಟ್ಟಿರುವರು, ಅದಕ್ಕಾಗಿ ನನ್ನದಾಗಿದೆ.' ಆಗ ಆ ಪುರುಷನು ಹೇಳಿದನು – ನಮ್ಮ ಈ ವಿವಾದವು ನಿನ್ನ ತಂದೆಯಮುಂದೆ ಇಡಲ್ಪಡಲಿ. ನಾಭಾಗನು ಅದರಂತೆ ತಂದೆಯ ಬಳಿಗೆ ಹೋಗಿ ಕೇಳಿದನು – ॥ ೭ ॥ ತಂದೆಯು ಹೇಳಿದನು – 'ಒಮ್ಮೆ ದಕ್ಷ ಪ್ರಜಾಪತಿಯ ಯಜ್ಞದಲ್ಲಿ – 'ಯಜ್ಞಭೂಮಿಯಲ್ಲಿ ಉಳಿದೆಲ್ಲವೂ ರುದ್ರದೇವರ ಪಾಲು ಆಗಿದೆ' ಎಂದು ನಿಶ್ಚಯಿಸಿಬಿಟ್ಟಿರುವರು. ಅದಕ್ಕಾಗಿ ಈ ಧನವಾದರೋ ಮಹಾದೇವನಿಗೇ ಸಿಗಬೇಕು.'

ಯಜ್ಞವಾಸ್ತುಗತಂ ಸರ್ವಮುಚ್ಛಿಷ್ಟಮೃಷಯಃ ಕ್ವಚಿತ್ ।
ಚಕ್ರುರ್ವಿಭಾಗಂ ರುದ್ರಾಯ ಸ ದೇವಃ ಸರ್ವಮರ್ಹತಿ
॥ ೮ ॥

॥ ೮ ॥ ನಾಭಾಗನು ಹೋಗಿ ಆ ಕಪ್ಪಾದ ಪುರುಷನಾದ ಭಗವಾನ್ ರುದ್ರದೇವರಿಗೆ ನಮಸ್ಕಾರಮಾಡಿ ಹೇಳಿದನು – ಸ್ವಾಮಿ ! ಯಜ್ಞಭೂಮಿಯ ಎಲ್ಲ ವಸ್ತುಗಳೂ ತಮ್ಮದೇ ಆಗಿವೆ ಎಂದು ನನ್ನ ತಂದೆಯವರು ಹೇಳಿರುವರು. ಭಗವಂತಾ ! ನನ್ನಿಂದ ಅಪರಾಧವಾಯಿತು. ನಾನು ತಲೆಬಾಗಿ ತಮ್ಮಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ. ॥ ೯ ॥

ನಾಭಾಗಸ್ತಂ ಪ್ರಣಮ್ಯಾಹ ತವೇಶ ಕಿಲ ವಾಸ್ತುಕಮ್ ।
ಇತ್ಯಾಹ ಮೇ ಪಿತಾ ಬ್ರಹ್ಮಂಛಿರಸಾ ತ್ವಾಂ ಪ್ರಸಾದಯೇ
॥ ೯ ॥

ಆಗ ಭಗವಾನ್ ರುದ್ರದೇವರು ಹೇಳಿದರು – 'ನಿನ್ನ ತಂದೆಯು ಧರ್ಮಕ್ಕೆ ಅನುಕೂಲವಾದ ನಿರ್ಣಯವನ್ನೇ ಕೊಟ್ಟಿರುವನು. ನೀನೂ ಕೂಡ ನನ್ನಲ್ಲಿ ಸತ್ಯವನ್ನೇ ನುಡಿದಿರುವೆ. ನೀನು ವೇದಗಳ ಅರ್ಥವನ್ನಾದರೋ ಮೊದಲಿನಿಂದಲೇ ತಿಳಿದಿರುವೆ. ಈಗ ನಾನು ನಿನಗೆ ಸನಾತನ ಬ್ರಹ್ಮತತ್ತ್ವದ ಜ್ಞಾನವನ್ನು ಉಪದೇಶಿಸುವೆನು.

ಯತ್ತೇ ಪಿತಾವದದ್ಧರ್ಮಂ ತ್ವಂ ಚ ಸತ್ಯಂ ಪ್ರಭಾಷಸೇ ।
ದದಾಮಿ ತೇ ಮಂತ್ರದೃಶೇ ಜ್ಞಾನಂ ಬ್ರಹ್ಮ ಸನಾತನಮ್
॥ ೧೦ ॥

॥ ೧೦ ॥ ಇಲ್ಲಿ ಯಜ್ಞದಲ್ಲಿ ಉಳಿದಿರುವ ನನ್ನ ಅಂಶವಾದ ಈ ಧನವನ್ನೂ ನಿನಗೇ ಕೊಡುತ್ತಿದ್ದೇನೆ. ನೀನು ಇದನ್ನು ಸ್ವೀಕರಿಸು.' ಇಷ್ಟು ಹೇಳಿ ಸತ್ಯಪ್ರಿಯ ಭಗವಾನ್ ರುದ್ರದೇವನು ಅಂತರ್ಧಾನನಾದನು. ॥ ೧೧ ॥ ಪ್ರಾತಃಕಾಲ-ಸಾಯಂಕಾಲಗಳಲ್ಲಿ ಏಕಾಗ್ರಚಿತ್ತದಿಂದ ಈ ಆಖ್ಯಾನವನ್ನು ಸ್ಮರಿಸುವ ಮನುಷ್ಯನು ಪ್ರತಿಭಾಶಾಲಿಯಾಗಿ, ವೇದಜ್ಞನಾಗುವನು ; ಜೊತೆಗೆ ತನ್ನ ಸ್ವಸ್ವರೂಪವನ್ನೂ ಅರಿತುಕೊಳ್ಳುವನು. ॥ ೧೨ ॥ ನಾಭಾಗನಿಗೆ ಅಂಬರೀಷನೆಂಬ ಪುತ್ರನಾದನು. ಅವನು ಭಗವತ್ಪ್ರೇಮಿಯೂ, ಧರ್ಮಾತ್ಮನೂ, ಭಾಗವತೋತ್ತಮನೂ ಆಗಿದ್ದನು. ಎಂದಿಗೂ ತಡೆಯಲು ಅಶಕ್ಯವಾದ ಬ್ರಹ್ಮಶಾಪವೂ ಕೂಡ ಅಂಬರೀಷನನ್ನು ಸ್ಪರ್ಶಿಸಲಾರದೆ ಹೋಯಿತು. ॥ ೧೩ ॥

ಗೃಹಾಣ ದ್ರವಿಣಂ ದತ್ತಂ ಮತ್ಸತ್ರೇ ಪರಿಶೇಷಿತಮ್ ।
ಇತ್ಯುಕ್ತ್ವಾಂತರ್ಹಿತೋ ರುದ್ರೋ ಭಗವಾನ್ ಸತ್ಯವತ್ಸಲಃ
॥ ೧೧ ॥

ಯ ಏತತ್ಸಂಸ್ಮರೇತ್ ಪ್ರಾತಃ ಸಾಯಂ ಚ ಸುಸಮಾಹಿತಃ ।
ಕವಿರ್ಭವತಿ ಮಂತ್ರಜ್ಞೋ ಗತಿಂ ಚೈವ ತಥಾऽऽತ್ಮನಃ
॥ ೧೨ ॥

ನಾಭಾಗಾದಂಬರೀಷೋऽಭೂನ್ಮಹಾಭಾಗವತಃ ಕೃತೀ ।
ನಾಸ್ಪೃಶದ್ ಬ್ರಹ್ಮಶಾಪೋऽಪಿ ಯಂ ನ ಪ್ರತಿಹತಃ ಕ್ವಚಿತ್
॥ ೧೩ ॥

ಪರೀಕ್ಷಿದ್ರಾಜನು ಕೇಳಿದನು – ಮಹಾಮುನಿಗಳೇ ! ಪರಮ ಜ್ಞಾನಿಯಾದ ರಾಜರ್ಷಿ ಅಂಬರೀಷನ ಚರಿತ್ರವನ್ನು ನಾನು ಕೇಳಲು ಬಯಸುತ್ತಿರುವೆನು. ಬ್ರಾಹ್ಮಣನು ಕ್ರೋಧಗೊಂಡು ಯಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ಬ್ರಹ್ಮದಂಡವನ್ನು ವಿಧಿಸಿದರೂ ಅಂಬರೀಷನ ಕೂದಲೂ ಕೊಂಕಿಸಲಾಗಲಿಲ್ಲ, ಇಂತಹವನ ಚರಿತ್ರೆಯನ್ನು ಹೇಳಿರಿ. ॥ ೧೪ ॥

ರಾಜೋವಾಚ

ಭಗವನ್ ಶ್ರೋತುಮಿಚ್ಛಾಮಿ ರಾಜರ್ಷೇಸ್ತಸ್ಯ ಧೀಮತಃ ।
ನ ಪ್ರಾಭೂದ್ಯತ್ರ ನಿರ್ಮುಕ್ತೋ ಬ್ರಹ್ಮದಂಡೋ ದುರತ್ಯಯಃ
॥ ೧೪ ॥

ಶ್ರೀಶುಕ ಉವಾಚ

ಅಂಬರೀಷೋ ಮಹಾಭಾಗಃ ಸಪ್ತದ್ವೀಪವತೀಂ ಮಹೀಮ್ ।
ಅವ್ಯಯಾಂ ಚ ಶ್ರಿಯಂ ಲಬ್ಧ್ವಾವಿಭವಂ ಚಾತುಲಂ ಭುವಿ
॥ ೧೫ ॥

ಮೇನೇಽತಿದುರ್ಲಭಂ ಪುಂಸಾಂ ಸರ್ವಂ ತತ್ಸ್ವಪ್ನಸಂಸ್ತುತಮ್ ।
ವಿದ್ವಾನ್ವಿಭವನಿರ್ವಾಣಂ ತಮೋ ವಿಶತಿ ಯತ್ಪುಮಾನ್
॥ ೧೬ ॥

ವಾಸುದೇವೇ ಭಗವತಿ ತದ್ಭಕ್ತೇಷು ಚ ಸಾಧುಷು ।
ಪ್ರಾಪ್ತೋ ಭಾವಂ ಪರಂ ವಿಶ್ವಂ ಯೇನೇದಂ ಲೋಷ್ಟವತ್ ಸ್ಮೃತಮ್
॥ ೧೭ ॥

ಸ ವೈ ಮನಃ ಕೃಷ್ಣಪದಾರವಿಂದಯೋ-
ರ್ವಚಾಂಸಿ ವೈಕುಂಠ ಗುಣಾನುವರ್ಣನೇ ।
ಕರೌ ಹರೇರ್ಮಂದಿರಮಾರ್ಜನಾದಿಷು
ಶ್ರುತಿಂ ಚಕಾರಾಚ್ಯುತಸತ್ಕಥೋದಯೇ ॥ ೧೮ ॥

ಮುಕುಂದಲಿಂಗಾಲಯದರ್ಶನೇ ದೃಶೌ
ತದ್ಭೃತ್ಯಗಾತ್ರಸ್ಪರ್ಶೇಽಙ್ಗ ಸಂಗಮಮ್ ।
ಘ್ರಾಣಂ ಚ ತತ್ಪಾದಸರೋಜಸೌರಭೇ
ಶ್ರೀಮತ್ತುಲಸ್ಯಾ ರಸನಾಂ ತದರ್ಪಿತೇ ॥ ೧೯ ॥

ಪಾದೌ ಹರೇಃ ಕ್ಷೇತ್ರಪದಾನುಸರ್ಪಣೇ
ಶಿರೋ ಹೃಷೀಕೇಶಪದಾಭಿವಂದನೇ ।
ಕಾಮಂ ಚ ದಾಸ್ಯೇ ನ ತು ಕಾಮಕಾಮ್ಯಯಾ
ಯಥೋತ್ತಮಶ್ಲೋಕಜನಾಶ್ರಯಾ ರತಿಃ ॥ ೨೦ ॥

ಏವಂ ಸದಾ ಕರ್ಮಕಲಾಪಮಾತ್ಮನಃ
ಪರೇಽಧಿಯಜ್ಞೇ ಭಗವತ್ಯಧೋಕ್ಷಜೇ ।
ಸರ್ವಾತ್ಮಭಾವಂ ವಿದಧನ್ಮಹೀಮಿಮಾಂ
ತನ್ನಿಷ್ಠವಿಪ್ರಾಭಿಹಿತಃ ಶಶಾಸ ಹ ॥ ೨೧ ॥

ಈಜೇಽಶ್ವಮೇಧೈರಧಿಯಜ್ಞಮೀಶ್ವರಂ
ಮಹಾವಿಭೂತ್ಯೋಪಬೃಂಹಿತಾಂಗ ದಕ್ಷಿಣೈಃ ।
ತತ್ತೈರ್ವಸಿಷ್ಠಾಸಿತಗೌತಮಾದಿಭಿ-
ರ್ಧನ್ವನ್ಯಭಿಸ್ರೋತಮಸೌ ಸರಸ್ವತೀಮ್ ॥ ೨೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿದ್ರಾಜನೇ ! ಅಂಬರೀಷನು ಮಹಾಭಾಗ್ಯಶಾಲಿಯಾಗಿದ್ದನು. ಸಪ್ತದ್ವೀಪಗಳಿಂದೊಡಗೊಂಡ ಅಖಿಂಡ ಭೂಮಂಡಲಕ್ಕೆ ಒಡೆಯನಾಗಿ ಅಚಲ ಸಂಪತ್ತು ಮತ್ತು ಅತುಲ ಐಶ್ವರ್ಯವು ಅವನಿಗೆ ಪ್ರಾಪ್ತವಾಗಿತ್ತು. ಇವೆಲ್ಲವೂ ಸಾಮಾನ್ಯ ಮನುಷ್ಯರಿಗೆ ಅತ್ಯಂತ ದುರ್ಲಭವಾಗಿದ್ದರೂ ಅವನು ಇವನ್ನು ಸ್ವಪ್ನದಂತೆ ಕ್ಷಣಿಕವೆಂದೇ ತಿಳಿಯುತ್ತಿದ್ದನು. ಏಕೆಂದರೆ, ಯಾವ ವೈಭವ-ಸಂಪತ್ತಿನ ಲೋಭದಿಂದ ಮನುಷ್ಯನು ತಮೋ ಗುಣದಲ್ಲಿ ಮುಳುಗಿ ನರಕಕ್ಕೆ ಹೋಗುತ್ತಾನೋ, ಅಂತಹ ವೈಭವ ಗಳೆಲ್ಲವೂ ಒಂದುದಿನ ನಾಶವಾಗುವುದೆಂಬುದನ್ನು ಅಂಬರೀಷನು ಅರಿತಿದ್ದನು. ॥ ೧೫-೧೬ ॥ ಭಗವಾನ್ ವಾಸುದೇವನಲ್ಲಿ ಹಾಗೂ ಅವನ ಏಕಾಂತ ಭಕ್ತರಲ್ಲಿ ಅಂಬರೀಷನಿಗೆ ಪರಮ ಪ್ರೀತಿ-ಭಕ್ತಿ ಯಿತ್ತು. ಅಂತಹ ಭಕ್ತಿಯು ಪ್ರಾಪ್ತವಾದ ಮೇಲಂತೂ ಈ ಇಡೀ ವಿಶ್ವ ಮತ್ತು ಸಮಸ್ತ ಸಂಪತ್ತು ಮಣ್ಣಿನಹೆಂಟೆಯಂತೆ ಕಂಡು ಬರುತ್ತಿತ್ತು. ॥ ೧೭ ॥ ಪರಮಭಾಗವತನಾದ ಅಂಬರೀಷನು ಮನಸ್ಸನ್ನು ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಲೀನ ಗೊಳಿಸಿದ್ದನು. ವಾಣಿಯನ್ನು ಭಗವದ್ಗುಣ ಕೀರ್ತನೆಯಲ್ಲಿ, ಕೈಗಳನ್ನು ಶ್ರೀಹರಿಮಂದಿರವನ್ನು ಗುಡಿಸುವುದು, ಸಾರಿಸುವುದ ರಲ್ಲಿ, ತನ್ನ ಕಿವಿಗಳನ್ನು ಭಗವಾನ್ ಅಚ್ಯುತನ ಮಂಗಲಮಯ ಕಥಾಶ್ರವಣದಲ್ಲಿ ತೊಡಗಿಸಿದ್ದನು. ॥ ೧೮ ॥ ಅವನು ತನ್ನ ಕಣ್ಣು ಗಳನ್ನು ಮುಕುಂದನ ಮೂರ್ತಿಯನ್ನೂ, ಮಂದಿರಗಳನ್ನೂ ದರ್ಶಿ ಸಲು, ಅಂಗ-ಸಂಗವನ್ನು ಭಗವದ್ಭಕ್ತರ ಶರೀರಸ್ಪರ್ಶದಲ್ಲಿಯೂ, ಮೂಗನ್ನು ಭಗವಂತನ ಚರಣಕಮಲಗಳಲ್ಲಿ ಅರ್ಪಿಸಿದ ತುಲಸಿಯ ದಿವ್ಯ ಪರಿಮಳವನ್ನು ಆಘ್ರಾಣಿಸಲು, ನಾಲಿಗೆಯನ್ನು ಪರಮಾತ್ಮನಿಗೆ ಅರ್ಪಿಸಿದ ನೈವೇದ್ಯ-ಪ್ರಸಾದ ಸೇವಿಸಲು ಮೀಸ ಲಾಗಿಟ್ಟಿದ್ದನು. ॥ ೧೯ ॥ ಅಂಬರೀಷನು ತನ್ನ ಕಾಲುಗಳನ್ನು ಭಗವಂತನ ದಿವ್ಯ ತೀರ್ಥಕ್ಷೇತ್ರಯಾತ್ರೆ ಮಾಡುವುದಕ್ಕೂ ತೊಡಗಿಸಿದ್ದನು. ಅವನು ಸದಾಕಾಲ ತಲೆಯಿಂದ ಭಗವಾನ್ ಶ್ರೀಕೃಷ್ಣನ ಚರಣ ಕಮಲಗಳ ವಂದನೆಯನ್ನು ಮಾಡುತ್ತಿದ್ದನು. ಭಗವಂತನ ದಾಸ್ಯ ಮಾಡಬೇಕೆಂಬುದೇ ಅವನ ಮುಖ್ಯ ಕಾಮನೆಯಾಗಿತ್ತು. ಆ ದಾಸ್ಯವೂ ನಿಷ್ಕಾಮದಾಸ್ಯವಾಗಿದ್ದು ಹರಿಪ್ರೀತ್ಯರ್ಥವಾಗಿಯೇ ಇತ್ತು. ಉತ್ತಮ ಕೀರ್ತಿಯುಳ್ಳ ಭಗವದ್ಭಕ್ತರನ್ನು ಅವನ ಪ್ರೀತಿಯು ಆಶ್ರಯಿಸಿತ್ತು. ಶ್ರೀಕೃಷ್ಣನ ಭಕ್ತರಲ್ಲಿ ಅಂಬರೀಷನಿಗೆ ಅಪಾರವಾದ ಭಕ್ತಿಯಿತ್ತು. ॥ ೨೦ ॥ ಹೀಗೆ ಅವನು ತನ್ನ ಸಮಸ್ತ ಕರ್ಮಗಳನ್ನು – ಯಜ್ಞಪುರುಷ, ಇಂದ್ರಿಯಾತೀತ ಭಗವಂತನನ್ನು ಸರ್ವಾತ್ಮ ಸರ್ವಸ್ವರೂಪನೆಂದು ತಿಳಿದು ಅರ್ಪಿಸಿಬಿಟ್ಟಿದ್ದನು. ಭಗವದ್ಭಕ್ತ ಬ್ರಾಹ್ಮಣರ ಅನುಶಾಸನದಂತೆ ಅವನು ರಾಜ್ಯವನ್ನಾಳುತ್ತಿದ್ದನು. ॥ ೨೧ ॥ ಅವನು 'ಧನ್ವ' ಎಂಬ ಮರುಭೂಮಿಯಲ್ಲಿ ಸರಸ್ವತಿಯ ನದಿಯ ಪ್ರವಾಹಕ್ಕೆ ಎದುರಾಗಿ ವಸಿಷ್ಠ ಅಸಿತ, ಗೌತಮ ಮೊದ ಲಾದ ಮಹಾ ಆಚಾರ್ಯರ ಮೂಲಕ ಬಹು ದಕ್ಷಿಣೆಗಳುಳ್ಳ, ಸರ್ವಾಂಗ ಪರಿಪೂರ್ಣವಾದ ಹಲವಾರು ಅಶ್ವಮೇಧ ಯಜ್ಞ ಗಳನ್ನು ಮಾಡಿ ಯಜ್ಞಪತಿಯಾದ ಭಗವಂತನನ್ನು ಆರಾಧಿ ಸಿದ್ದನು. ॥ ೨೨ ॥

ಯಸ್ಯ ಕ್ರತುಷು ಗೀರ್ವಾಣೈಃ ಸದಸ್ಯಾ ಋತ್ವಿಜೋ ಜನಾಃ ।
ತುಲ್ಯರೂಪಾಶ್ಚಾನಿಮಿಷಾ ವ್ಯದೃಶ್ಯಂತ ಸುವಾಸಸಃ
॥ ೨೩ ॥

ಸ್ವರ್ಗೋ ನ ಪ್ರಾರ್ಥಿತೋ ಯಸ್ಯ ಮನುಜೈರಮರಪ್ರಿಯಃ ।
ಶೃಣ್ವದ್ಭಿರುಪಗಾಯದ್ಭಿರುತ್ತಮಶ್ಲೋಕಚೇಷ್ಟಿತಮ್
॥ ೨೪ ॥

ಸಮರ್ದ್ಧಯಂತಿ ತಾನ್ಕಾಮಾಃ ಸ್ವಾರಾಜ್ಯಪರಿಭಾವಿತಾಃ ।
ದುರ್ಲಭಾ ನಾಪಿ ಸಿದ್ಧಾನಾಂ ಮುಕುಂದಂ ಹೃದಿ ಪಶ್ಯತಃ
॥ ೨೫ ॥

ಸ ಇತ್ಥಂ ಭಕ್ತಿಯೋಗೇನ ತಪೋಯುಕ್ತೇನ ಪಾರ್ಥಿವಃ ।
ಸ್ವಧರ್ಮೇಣ ಹರಿಂ ಪ್ರೀಣನ್ ಸಂಗಾನ್ ಸರ್ವಾನ್ತನ್ಯೈರ್ಜಹೌ
॥ ೨೬ ॥

ಗೃಹೇಷು ದಾರೇಷು ಸುತೇಷು ಬಂಧುಷು
ದ್ವಿಪೋತ್ತಮಸ್ಯಂದ ನವಾಜಿಪತ್ತಿಷು ।
ಅಕ್ಷಯ್ಯರತ್ನಾಭರಣಾಯುಧಾದಿ-
ಷ್ವನಂತಕೋಶೇಷ್ವಕರೋದಸನ್ಮತಿಮ್ ॥ ೨೭ ॥

ತಸ್ಮಾ ಅದಾದ್ಧರಿಶ್ಚಕ್ರಂ ಪ್ರತ್ಯನೀಕಭಯಾವಹಮ್ ।
ಏಕಾಂತಭಕ್ತಿಭಾವೇನ ಪ್ರೀತೋ ಭೃತ್ಯಾಭಿರಕ್ಷಣಮ್
॥ ೨೮ ॥

ಆರಿರಾಧಯಿಷುಃ ಕೃಷ್ಣಂ ಮಹಿಷ್ಯಾ ತುಲ್ಯಶೀಲಯಾ ।
ಯುಕ್ತಃ ಸಾಂವತ್ಸರಂ ವೀರೋ ದಧಾರ ದ್ವಾದಶೀವ್ರತಮ್
॥ ೨೯ ॥

ವ್ರತಾಂತೇ ಕಾರ್ತಿಕೇ ಮಾಸಿ ತ್ರಿರಾತ್ರಂ ಸಮುಪೋಷಿತಃ ।
ಸ್ನಾತಃ ಕದಾಚಿತ್ಕಾಲಿಂದ್ಯಾಂ ಹರಿಂ ಮಧುವನೇऽರ್ಚಯತ್
॥ ೩೦ ॥

ಮಹಾಭಿಷೇಕವಿಧಿನಾ ಸರ್ವೋಪಸ್ಕರಸಂಪದಾ ।
ಅಭಿಷಿಚ್ಯಾಂಬರಾಕಲ್ಪೈರ್ಗಂಧಮಾಲ್ಯಾರ್ಹಣಾದಿಭಿಃ
॥ ೩೧ ॥

ತದ್ಗತಾಂತರಭಾವೇನ ಪೂಜಯಾಮಾಸ ಕೇಶವಮ್ ।
ಬ್ರಾಹ್ಮಣಾಂಶ್ಚ ಮಹಾಭಾಗಾನ್ ಸಿದ್ಧಾರ್ಥಾನಪಿ ಭಕ್ತಿತಃ
॥ ೩೨ ॥

ಅವನ ಯಜ್ಞದಲ್ಲಿ ದೇವತೆಗಳೊಂದಿಗೆ ಸದಸ್ಯರು ಮತ್ತು ಋತ್ವಿಜರು ಕುಳಿತಿದ್ದಾಗ ಅವನು ತನ್ನ ಸುಂದರ ವಸ್ತ್ರ ಮತ್ತು ದಿವ್ಯರೂಪದಿಂದ ರೆಪ್ಪೆ ಮಿಟುಕಿಸದೆ ದೇವತೆಗಳಂತೆ ಕಾಣುತ್ತಿದ್ದನು. ॥ ೨೩ ॥ ಅವನ ಪ್ರಜೆಗಳು ಕೆಲವೊಮ್ಮೆ ಮಹಾತ್ಮರಿಂದ ಹಾಡಲ್ಪಟ್ಟ ಭಗವಂತನ ಉತ್ತಮ ಚರಿತ್ರೆಗಳನ್ನು ಭಕ್ತಿಯಿಂದ ಶ್ರವಣಿಸುತ್ತಿದ್ದರೆ, ಕೆಲವೊಮ್ಮೆ ಭಗವದ್ಗುಣಗಳನ್ನು ಕೀರ್ತಿಸುತ್ತಿದ್ದರು. ಈ ವಿಧವಾಗಿ ಅವನ ರಾಜ್ಯದ ಪ್ರಜೆಗಳು ದೇವತೆಗಳ ಅತ್ಯಂತ ಪ್ರಿಯವಾದ ಸ್ವರ್ಗವನ್ನೂ ಕೂಡ ಬಯಸುತ್ತಿರಲಿಲ್ಲ. ॥ ೨೪ ॥ ಅಂಬರೀಷನ ಪ್ರಜೆಗಳು ನಿತ್ಯ-ನಿರಂತರವಾಗಿ ತಮ್ಮ ಹೃದಯಮಂದಿರದಲ್ಲಿ ಶ್ರೀಕೃಷ್ಣನನ್ನು ಕಾಣುತ್ತಿದ್ದರು. ಅದರಿಂದಲೇ ಅವರಿಗೆ ಸಿದ್ಧರಿಗೂ ದುರ್ಲಭವಾದ ಅಣಿಮಾದಿ ಅಷ್ಟೈಶ್ವರ್ಯಗಳೂ ಹರ್ಷವನ್ನುಂಟು ಮಾಡುತ್ತಿರಲಿಲ್ಲ. ಆತ್ಮಾನಂದದ ಮುಂದೆ ಇವೆಲ್ಲ ವಸ್ತುಗಳೂ ಅವರಿಗೆ ತುಚ್ಛವಾಗಿ ಕಾಣುತ್ತಿದ್ದವು, ತಿರಸ್ಕೃತವಾಗಿದ್ದವು. ॥ ೨೫ ॥ ಹೀಗೆ ಅಂಬರೀಷಮಹಾರಾಜನು ತಪಸ್ಸಿನಿಂದ ಕೂಡಿದ ಭಕ್ತಿಯೋಗದಿಂದಲೂ, ಪ್ರಜಾಪಾಲನರೂಪವಾದ ಸ್ವಧರ್ಮದ ಮೂಲಕವಾಗಿ ಭಗವಂತನನ್ನು ಪ್ರಸನ್ನಗೊಳಿಸಿ, ನಿಧಾನವಾಗಿ ಅವನು ಎಲ್ಲ ವಿಧದ ಆಸಕ್ತಿಗಳನ್ನು ಪರಿತ್ಯಾಗ ಮಾಡಿದನು. ॥ ೨೬ ॥ ಅರಮನೆ, ಪತ್ನೀ, ಪುತ್ರರು, ಬಂಧು-ಬಾಂಧವರು, ಶ್ರೇಷ್ಠವಾದ ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗ ಸೈನ್ಯ, ಅಕ್ಷಯವಾದ ಭಂಡಾರ -- ಇವೆಲ್ಲವೂ ಅನಿತ್ಯವಾದುವುಗಳೆಂದು ಭಾವಿಸಿ ಇವೆಲ್ಲವುಗಳಿಂದ ವಿರಕ್ತನಾದನು. ॥ ೨೭ ॥ ಅವನ ಅನನ್ಯ ಪ್ರೇಮಮಯವಾದ ಭಕ್ತಿಯಿಂದ ಸುಪ್ರೀತನಾದ ಶ್ರೀಹರಿಯು ಅವನ ರಕ್ಷಣೆಗಾಗಿ ವಿರೋಧಿಗಳಿಗೆ ಭಯವನ್ನುಂಟು ಮಾಡುವ, ಭಗವದ್ಭಕ್ತರಿಗೆ ರಕ್ಷಕವಾಗಿದ್ದ ಸುದರ್ಶನ ಚಕ್ರವನ್ನು ನಿಯಮಿಸಿದ್ದನು. ॥ ೨೮ ॥

ಅಂಬರೀಷರಾಜನ ಪತ್ನಿಯೂ ಅವನಂತೆಯೇ ಧರ್ಮಶೀಲಳೂ, ಸಂಸಾರದಿಂದ ವಿರಕ್ತಳೂ, ಭಕ್ತಿಪರಾಯಣಳೂ ಆಗಿದ್ದಳು. ಒಮ್ಮೆ ಅವನು ಪತ್ನಿಯೊಡನೆ ಭಗವಾನ್ ಶ್ರೀಕೃಷ್ಣನನ್ನು ಆರಾಧಿಸಲಿಕ್ಕಾಗಿ ಒಂದು ವರ್ಷದ ದ್ವಾದಶೀ ಪ್ರಧಾನವಾದ ಏಕಾದಶೀ ವ್ರತವನ್ನು ಕೈಗೊಂಡನು. ॥ ೨೯ ॥ ವ್ರತದ ಸಮಾಪ್ತಿಯಾದಾಗ ಕಾರ್ತೀಕ ಮಾಸದಲ್ಲಿ ರಾಜನು ಮೂರು ರಾತ್ರಿಗಳು ಉಪವಾಸವಿದ್ದು ಯಮುನಾನದಿಯಲ್ಲಿ ಸ್ನಾನಮಾಡಿ ಮಧುವನದಲ್ಲಿ ಭಗವಾನ್ ಶ್ರೀಹರಿಯನ್ನು ಪೂಜಿಸಿದನು. ॥ ೩೦ ॥ ರಾಜನು ಮಹಾಭಿಷೇಕವಿಧಿಯಿಂದಲೂ ಸಮಸ್ತ ಪರಿಕರಗಳೊಂದಿಗೆ ಹಾಗೂ ಸಂಪತ್ತಿನ ಮೂಲಕ ಭಗವಂತನಿಗೆ ಅಭಿಷೇಕಮಾಡಿ, ತನ್ಮಯವಾದ ಮನಸ್ಸಿನಿಂದ ವಸ್ತ್ರ, ಭೂಷಣ, ಚಂದನ, ಹೂಮಾಲೆಗಳಿಂದಲೂ, ಅರ್ಘ್ಯ-ಪಾದ್ಯಾದಿಗಳಿಂದಲೂ ಹರಿಯನ್ನು ಪೂಜಿಸಿದನು. ಅಂತೆಯೇ ಮಹಾಭಾಗ್ಯಶಾಲಿಗಳಾದ ಸಿದ್ಧಾರ್ಥರಾದ ಬ್ರಾಹ್ಮಣ ಶ್ರೇಷ್ಠರನ್ನೂ ಭಕ್ತಿಪೂರ್ವಕವಾಗಿ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿದನು. ಬಳಿಕ ರಾಜನು ಬ್ರಾಹ್ಮಣರಿಗೆ ರುಚಿಕರವಾದ ಮತ್ತು ಗುಣವತ್ತರವಾದ ಭೋಜನವನ್ನು ಮಾಡಿಸಿ, ಸಮಲಂಕೃತವಾದ ಅರವತ್ತು ಕೋಟಿ ಗೋವುಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಆ ಗೋವುಗಳ ಕೊಂಬುಗಳು ಸುವರ್ಣದಿಂದಲೂ,

ಗವಾಂ ರುಕ್ಮವಿಷಾಣೀನಾಂ ರೂಪ್ಯಾಂಘ್ರೀಣಾಂ ಸುವಾಸಸಾಮ್ ।
ಪಯಃಶೀಲವಯೋರೂಪವತ್ಸೋಪಸ್ಕರಸಂಪದಾಮ್
॥ ೩.೩ ॥

ಪ್ರಾಹಿಣೋತ್ಸಾಧುವಿಪ್ರೇಭ್ಯೋ ಗೃಹೇಷು ನ್ಯರ್ಬುದಾನಿ ಷಟ್ ।
ಭೋಜಯಿತ್ವಾ ದ್ವಿಜಾನಗ್ರೇ ಸ್ವಾದ್ವನ್ನಂ ಗುಣವತ್ತಮಮ್
॥ ೩.೪ ॥

ಲಬ್ಧಕಾಮೈರನುಜ್ಞಾತಃ ಪಾರಣಾಯೋಪಚಕ್ರಮೇ ।
ತಸ್ಯ ತರ್ಹ್ಯತಿಥಿಃ ಸಾಕ್ಷಾದ್ದುರ್ವಾಸಾ ಭಗವಾನಭೂತ್
॥ ೩.೫ ॥

ತಮಾನರ್ಚಾತಿಥಿಂ ಭೂಪಃ ಪ್ರತ್ಯುತ್ಥಾನಾಸನಾರ್ಹಣೈಃ ।
ಯಯಾಚೇಽಭ್ಯವಹಾರಾಯ ಪಾದಮೂಲಮುಪಾಗತಃ
॥ ೩.೬ ॥

ಪ್ರತಿನಂದ್ಯ ಸ ತದ್ಯಾಚ್ಞಾಂ ಕರ್ತುಮಾವಶ್ಯಕಂ ಗತಃ ।
ನಿಮಮಜ್ಜ ಬೃಹದ್ಧ್ಯಾಯನ್ ಕಾಲಿಂದೀಸಲಿಲೇ ಶುಭೇ
॥ ೩.೭ ॥

ಮುಹೂರ್ತಾರ್ಧಾವಶಿಷ್ಟಾಯಾಂ ದ್ವಾದಶ್ಯಾಂ ಪಾರಣಂ ಪ್ರತಿ ।
ಚಿಂತಯಾಮಾಸ ಧರ್ಮಜ್ಞೋ ದ್ವಿಜೈಸ್ತದ್ಧರ್ಮಸಂಕಟೇ
॥ ೩.೮ ॥

ಬ್ರಾಹ್ಮಣಾತಿಕ್ರಮೇ ದೋಷೋ
ದ್ವಾದಶ್ಯಾಂ ಯದಪಾರಣೇ ।
ಯತ್ಕೃತ್ವಾ ಸಾಧು ಮೇ ಭೂಯಾದ-
ಧರ್ಮೋ ವಾ ನ ಮಾಂ ಸ್ಪೃಶೇತ್ ॥ ೩.೯ ॥

ಅಂಭಸಾ ಕೇವಲೇನಾಥ ಕರಿಷ್ಯೇ ವ್ರತಪಾರಣಮ್ ।
ಪ್ರಾಹುರಬ್ಭಕ್ಷಣಂ ವಿಪ್ರಾ ಹ್ಯಶಿತಂ ನಾಶಿತಂ ಚ ತತ್
॥ ೪೦ ॥

ಇತ್ಯಪಃ ಪ್ರಾಶ್ಯ ರಾಜರ್ಷಿಶ್ಚಿಂತಯನ್ಮನಸಾಚ್ಯುತಮ್ ।
ಪ್ರತ್ಯಚಷ್ಟ ಕುರುಶ್ರೇಷ್ಠ ದ್ವಿಜಾಗಮನಮೇವ ಸಃ
॥ ೪೧ ॥

ದುರ್ವಾಸಾ ಯಮುನಾಕೂಲಾತ್ಕೃತಾವಶ್ಯಕ ಆಗತಃ ।
ರಾಜ್ಞಾಭಿನಂದಿತಸ್ತಸ್ಯ ಬುಬುಧೇ ಚೇಷ್ಟಿತಂ ಧಿಯಾ
॥ ೪೨ ॥

ಮನ್ಯುನಾ ಪ್ರಚಲದ್ಗಾತ್ರೋ ಭ್ರುಕುಟೀಕುಟಿಲಾನನಃ ।
ಬುಭುಕ್ಷಿತಶ್ಚ ಸುತರಾಂ ಕೃತಾಂಜಲಿಮಭಾಷತ
॥ ೪೩ ॥

ಕಾಲುಗಳು ಬೆಳ್ಳಿಯಿಂದಲೂ ಅಲಂಕೃತವಾಗಿತ್ತು. ಅವುಗಳಿಗೆ ಸುಂದರವಾದ ವಸ್ತ್ರಗಳನ್ನು ಹೊದಿಸಿದ್ದರು. ಅವೆಲ್ಲವೂ ಹೇರಳವಾಗಿ ಹಾಲುಕೊಡುತ್ತಿದ್ದವು. ಒಳ್ಳೆಯ ಸ್ವಭಾವದವುಗಳಾಗಿದ್ದು ಪಡ್ಡೆ ಹಸುಗಳಾಗಿದ್ದವು. ನೋಡಲು ಸುಂದರವಾಗಿದ್ದವು. ಕರುಗಳ ಸಮೇತವಾಗಿದ್ದವು. ಜೊತೆಗೆ ಹಾಲುಕರೆಯುವ ಪಾತ್ರೆಗಳನ್ನೂ ರಾಜನು ಬ್ರಾಹ್ಮಣರಿಗೆ ದಾನವಾಗಿಕೊಟ್ಟನು. ॥ ೩.೧-೩.೪ ॥ ಗೋವುಗಳನ್ನು ಪಡೆದು ಕಾಮನೆಗಳನ್ನು ಪೂರೈಸಿಕೊಂಡ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ರಾಜನು ವ್ರತಪಾರಣೆಗಾಗಿ ಸಿದ್ಧನಾಗುತ್ತಿದ್ದನು. ಆದೇ ಸಮಯದಲ್ಲಿ ಶಾಪಾನುಗ್ರಹ ಸಮರ್ಥರಾದ ದುರ್ವಾಸರು ಅವನಲ್ಲಿಗೆ ಅತಿಥಿಗಳಾಗಿ ಆಗಮಿಸಿದರು. ॥ ೩.೫ ॥

ಅಂಬರೀಷ ಮಹಾರಾಜನು ಅವರನ್ನೂ ನೋಡುತ್ತಲೇ ಎದ್ದು ನಿಂತು, ಆದರದಿಂದ ಆಸನವನ್ನಿತ್ತು ಕುಳ್ಳಿರಿಸಿ ಅತಿಥಿಯಾಗಿ ಬಂದಿರುವ ದುರ್ವಾಸರನ್ನು ವಿಧ-ವಿಧವಾಗಿ ಪೂಜಿಸಿದನು. ಅವರ ಚರಣಗಳಲ್ಲಿ ನಮಸ್ಕಾರಮಾಡಿ ರಾಜನು ಭೋಜನಕ್ಕಾಗಿ ಪ್ರಾರ್ಥಿಸಿಕೊಂಡನು. ॥ ೩.೬ ॥ ದುರ್ವಾಸರು ಅಂಬರೀಷನ ಪ್ರಾರ್ಥನೆಯನ್ನು ಸ್ವೀಕರಿಸಿ ಆವಶ್ಯಕ ಕರ್ಮಗಳನ್ನು ಪೂರೈಸಲಿಕ್ಕಾಗಿ ನದೀತೀರಕ್ಕೆ ಹೋದರು. ಅವರು ಬ್ರಹ್ಮವಸ್ತುವನ್ನು ಧ್ಯಾನಿಸುತ್ತಾ ಯಮುನೆಯ ಪವಿತ್ರತೀರ್ಥದಲ್ಲಿ ಸ್ನಾನ ಮಾಡತೊಡಗಿದರು. ॥ ೩.೭ ॥ ಇತ್ತ ದ್ವಾದಶಿಯು ಕೇವಲ ಒಂದುಗಳಿಗೆ ಮಾತ್ರ ಉಳಿದಿತ್ತು. ಧರ್ಮಜ್ಞನಾದ ಅಂಬರೀಷನು ಧರ್ಮ-ಸಂಕಟ ಕ್ಕೊಳಗಾಗಿ ಬ್ರಾಹ್ಮಣರೊಂದಿಗೆ ವಿಚಾರ ವಿಮರ್ಶೆ ಮಾಡಿದನು. ॥ ೩.೮ ॥ ರಾಜನೆಂದನು – ಬ್ರಾಹ್ಮಣೋತ್ತಮರೇ! ಅತಿಥಿಯಾದ ಬ್ರಾಹ್ಮಣನಿಗೆ ಭೋಜನಮಾಡಿಸದೆ ಭೋಜನ ಮಾಡುವುದು ಮತ್ತು ದ್ವಾದಶಿ ಕಳೆದಮೇಲೆ ಪಾರಣೆಮಾಡುವುದು ಎರಡೂ ದೋಷವಾಗಿದೆ. ಆದಕ್ಕಾಗಿ ಇಂತಹ ಸಮಯದಲ್ಲಿ ನನಗೆ ಪಾಪವು ತಟ್ಟದೆ ಶ್ರೇಯಸ್ಸಾಗುವಂತಹ ಯಾವ ಕಾರ್ಯವನ್ನು ಮಾಡಬೇಕು? ॥ ೩.೯ ॥ ಆಗ ಬ್ರಾಹ್ಮಣರೊಂದಿಗೆ ವಿಚಾರ ವಿಮರ್ಶಿಸಿ ಅವನೆಂದನು – ಬ್ರಾಹ್ಮಣಶ್ರೇಷ್ಠರೇ! ಕೇವಲ ನೀರು ಕುಡಿಯುವುದರಿಂದ ಭೋಜನ ಮಾಡಿದಂತೆಯೂ, ಮಾಡದಂತೆಯೂ ಇದೆ ಎಂದು ಶ್ರುತಿಗಳಲ್ಲಿ ಹೇಳಿದೆ. ಆದಕ್ಕಾಗಿ ಈ ಸಮಯದಲ್ಲಿ ಕೇವಲ ನೀರು ಕುಡಿದು ಪಾರಣೆ ಮಾಡುತ್ತೇನೆ ಎಂದು ಹೇಳಿಕೊಂಡನು. ॥ ೪೦ ॥ ಹೀಗೆ ನಿಶ್ಚಯಿಸಿ ಮನಸ್ಸಿನಲ್ಲೇ ಭಗವಂತನನ್ನು ಚಿಂತಿಸುತ್ತಾ ರಾಜರ್ಷಿ ಅಂಬರೀಷನು ಜಲಪ್ರಾಶನ ಮಾಡಿದನು ಹಾಗೂ ಪರೀಕ್ಷಿತನೇ! ದುರ್ವಾಸರ ಆಗಮನವನ್ನೇ ಎದುರು ನೋಡುತ್ತಿದ್ದನು. ॥ ೪೧ ॥ ದುರ್ವಾಸರು ಆವಶ್ಯಕ ಕರ್ಮಗಳಿಂದ ನಿವೃತ್ತರಾಗಿ ಯಮುನಾ ನದಿಯಿಂದ ಮರಳಿದರು. ರಾಜನು ಮುಂದೆ ಹೋಗಿ ಅವರಿಗೆ ಅಭಿನಂದಿಸಿದಾಗ ಅವರು – ರಾಜನು ಪಾರಣೆಮಾಡಿರುವನೆಂದು ಅನುಮಾನದಿಂದಲೇ ತಿಳಿದುಕೊಂಡರು. ॥ ೪೨ ॥ ಆ ಸಮಯದಲ್ಲಿ ದುರ್ವಾಸರು ಬಹಳ ಹಸಿದಿದ್ದರು. ಇದರಿಂದ ರಾಜನು ಪಾರಣೆ ಮಾಡಿರುವನೆಂದು ತಿಳಿದು ಅವರ ಶರೀರವೆಲ್ಲವೂ ಕೋಪದಿಂದ ಥರ-ಥರನೆ ನಡುಗುತ್ತಿತ್ತು. ಹುಬ್ಬುಗಂಟಿಕ್ಕಿದ್ದರಿಂದ ಮುಖವು ವಿಕಟವಾಗಿತ್ತು. ಕೈಜೋಡಿಸಿ ನಿಂತುಕೊಂಡಿದ್ದ ಅಂಬರೀಷನನ್ನು ಗದರಿಸುತ್ತಾ ಅವರು ಹೇಳಿದರು – ॥ ೪೩ ॥

ಅಹೋ ಅಸ್ಯ ನೃಶಂಸಸ್ಯ ಶ್ರೀಯೋನ್ಮತ್ತಸ್ಯ ಪಶ್ಯತ।
ಧರ್ಮವ್ಯತಿಕ್ರಮಂ ವಿಷ್ಣೋರಭಕ್ತಸ್ಯೇಶಮಾನಿನಃ
॥ ೪೪ ॥

ಯೋ ಮಾಮತಿಥಿಮಾಯಾತಮಾತಿಥ್ಯೇನ ನಿಮಂತ್ರ್ಯ ಚ।
ಅದತ್ತ್ವಾ ಭುಕ್ತವಾಂಸ್ತಸ್ಯ ಸದ್ಯಸ್ತೇ ದರ್ಶಯೇ ಫಲಮ್
॥ ೪೫ ॥

ಏವಂ ಬ್ರುವಾಣ ಉತ್ಕೃತ್ಯ ಜಟಾಂ ರೋಷವಿದೀಪಿತಃ।
ತಯಾ ಸ ನಿರ್ಮಮೇ ತಸ್ಮೈ ಕೃತ್ಯಾಂ ಕಾಲಾನಲೋಪಮಾಮ್
॥ ೪೬ ॥

ತಾಮಾಪತಂತೀಂ ಜ್ವಲತೀಮಸಿಹಸ್ತಾಂ ಪದಾ ಭುವಮ್।
ವೇಪಯಂತೀಂ ಸಮುದ್ವೀಕ್ಷ್ಯ ನ ಚಚಾಲ ಪದಾನ್ನೃಪಃ
॥ ೪೭ ॥

ಪ್ರಾಗ್ದಿಷ್ಟಂ ಭೃತ್ಯರಕ್ಷಾಯಾಂ ಪುರುಷೇಣ ಮಹಾತ್ಮನಾ।
ದದಾಹ ಕೃತ್ಯಾಂ ತಾಂ ಚಕ್ರಂ ಕ್ರುದ್ಧಾಹಿಮಿವ ಪಾವಕಃ
॥ ೪೮ ॥

ತದಭಿದ್ರವದುದ್ವೀಕ್ಷ್ಯ ಸ್ವಪ್ರಯಾಸಂ ಚ ನಿಷ್ಫಲಮ್।
ದುರ್ವಾಸಾ ದುದ್ರುವೇ ಭೀತೋ ದಿಕ್ಷು ಪ್ರಾಣಪರೀಪ್ಸಯಾ
॥ ೪೯ ॥

ತಮನ್ವಧಾವದ್ಭಗವದ್ರಥಾಙ್ಗಂ
ದಾವಾಗ್ನಿರುದ್ಧೂತಶಿಖೋ ಯಥಾಹಿಮ್ ।
ತಥಾನುಷಕ್ತಂ ಮುನಿರೀಕ್ಷಮಾಣೋ
ಗುಹಾಂ ವಿವಿಕ್ಷುಃ ಪ್ರಸಸಾರ ಮೇರೋಃ ॥ ೫೦ ॥

ದಿಶೋ ನಭಃ ಕ್ಷ್ಮಾಂ ವಿವರಾನ್ ಸಮುದ್ರಾನ್
ಲೋಕಾನ್ಸಪಾಲಾಂಸ್ತ್ರಿದಿವಂ ಗತಃ ಸಃ ।
ಯತೋ ಯತೋ ಧಾವತಿ ತತ್ರ ತತ್ರ
ಸುದರ್ಶನಂ ದುಷ್ಪ್ರಸಹಂ ದದರ್ಶ ॥ ೫೧ ॥

ಅಲಬ್ಧನಾಥಃ ಸ ಯದಾ ಕುತಶ್ಚಿತ್
ಸಂತ್ರಸ್ತಚಿತ್ತೋಽರಣಮೇಷಮಾಣಃ ।
ದೇವಂ ವಿರಿಂಚಿಂ ಸಮಗಾದ್ವಿಧಾತಃ
ತ್ರಾಹ್ಯಾತ್ಮಯೋನೇಽಜಿತತೇಜಸೋ ಮಾಮ್ ॥ ೫೨ ॥

ಬ್ರಹ್ಮೋವಾಚ

ಸ್ಥಾನಂ ಮದೀಯಂ ಸಹವಿಶ್ವಮೇತತ್
ಕ್ರೀಡಾವಸಾನೇ ದ್ವಿಪರಾರ್ಧಸಂಜ್ಞೇ ।
ಭ್ರೂಭಂಗಮಾತ್ರೇಣ ಹಿ ಸಂದಿಧಕ್ಷೋಃ
ಕಾಲಾತ್ಮನೋ ಯಸ್ಯ ತಿರೋಭವಿಷ್ಯತಿ ॥ ೫೩ ॥

ಏನನ್ಯಾಯ! ಕ್ರೂರಿಯಾದ, ಸಂಪತ್ತಿನಿಂದ ಮದಿಸಿರುವ, ವಿಷ್ಣುವಿನ ಭಕ್ತನಲ್ಲದ, ತಾನೇ ಸರ್ವೇಶ್ವರನೆಂದು ಭಾವಿಸಿ ಕೊಂಡಿರುವ ಈ ರಾಜನ ಧರ್ಮೋಲ್ಲಂಘನೆಯನ್ನು ಎಲ್ಲರೂ ನೋಡಿರಿ. ॥ ೪೪ ॥ ನಾನು ಅತಿಥಿಯಾಗಿ ಇವನಲ್ಲಿಗೆ ಬಂದಿರುವೆನು. ಅತಿಥಿ ಸತ್ಕಾರಮಾಡಲು ರಾಜನು ನನಗೆ ಆಮಂತ್ರಣವನ್ನೂ ಕೊಟ್ಟನು. ಹೀಗಿದ್ದರೂ ನನಗೆ ಊಟಮಾಡಿಸದೆಯೇ ಇವನು ಭೋಜನ ಮಾಡಿರುವನು. ಇಂತಹ ಧರ್ಮವ್ಯತಿಕ್ರಮಕ್ಕೆ ಸಿಗುವ ಫಲ ವೇನೆಂಬುದನ್ನು ನಾನೀಗಲೇ ತೋರಿಸಿಕೊಡುತ್ತೇನೆ. ॥ ೪೫ ॥ ಹೀಗೆ ಹೇಳುತ್ತಾ- ಹೇಳುತ್ತಾ ಅವರು ಸಿಟ್ಟಿನಿಂದ ಉರಿದೆದ್ದರು. ಅವರು ತಮ್ಮ ಒಂದು ಜಟೆಯನ್ನು ಕಿತ್ತು ಅದರಿಂದ ಅಂಬರೀಷನನ್ನು ಕೊಂದುಬಿಡಲು ಒಂದು ಕೃತ್ಯೆಯನ್ನು ನಿರ್ಮಿಸಿದರು. ಅದು ಪ್ರಳಯಾಗ್ನಿಯಂತೆ ಧಗ-ಧಗಿಸುತ್ತಿತ್ತು. ॥ ೪೬ ॥ ಅದು ಬೆಂಕಿ ಯಂತೆ ಉರಿಯುತ್ತಾ ಕೈಯಲ್ಲಿ ಖಡ್ಗವನ್ನು ಝಳಪಿಸುತ್ತಾ, ಪಾದ ಘಟ್ಟನೆಯಿಂದ ಭೂಮಿಯನ್ನು ನಡುಗಿಸುತ್ತಾ ಅಂಬರೀಷನ ಮೇಲೆ ಆಕ್ರಮಿಸಿತು. ಆದರೆ ಅಂಬರೀಷ ರಾಜನು ಅದನ್ನು ನೋಡಿ ನಿಂತ ಜಾಗದಿಂದ ಕದಲದೆ ಹಾಗೆಯೇ ನಿಂತಿದ್ದನು. ॥ ೪೭ ॥ ಪರಮ ಪುರುಷ ಪರಮಾತ್ಮನು ತನ್ನ ಸೇವಕನ ರಕ್ಷಣೆಗಾಗಿ ಮೊದಲೇ ಸುದರ್ಶನ ಚಕ್ರವನ್ನು ನಿಯುಕ್ತಗೊಳಿಸಿದ್ದನು. ಕೋಪಗೊಂಡಿರುವ ಘಟಸರ್ಪವನ್ನು ದಾವಾಗ್ನಿಯು ಕ್ಷಣಮಾತ್ರದಲ್ಲಿ ಭಸ್ಮಮಾಡಿ ಬಿಡುವಂತೆ ಸುದರ್ಶನಚಕ್ರವು ದುರ್ವಾಸನ ಕೃತ್ಯೆಯನ್ನು ಸುಟ್ಟು ಬೂದಿ ಮಾಡಿಬಿಟ್ಟಿತು. ॥ ೪೮ ॥ ತಾನು ಸೃಷ್ಟಿಸಿದ ಕೃತ್ಯೆಯು ಭಸ್ಮವಾದುದನ್ನು ಮತ್ತು ಚಕ್ರವು ತನ್ನೆಡೆಗೆ ಬರುತ್ತಿರುವುದನ್ನು ಕಂಡು ದುರ್ವಾಸರು ಭಯಗೊಂಡು ತನ್ನ ಪ್ರಾಣಗಳನ್ನು ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿಹೋದರು. ॥ ೪೯ ॥ ಎತ್ತರವಾದ ಜ್ವಾಲೆ ಗಳಿಂದ ಕೂಡಿದ್ದ ಕಾಡ್ಗಿಚ್ಚು ಸರ್ಪವನ್ನು ಹಿಂಬಾಲಿಸಿ ಹೋಗುವಂತೆ ಭಗವಂತನ ಸುದರ್ಶನಚಕ್ರವು ಅವರನ್ನು ಅಟ್ಟಿಸಿಕೊಂಡು ಹೋಯಿತು. ಆಗ ದುರ್ವಾಸರು ಸುಮೇರು ಪರ್ವತದ ಗುಹೆ ಯನ್ನು ಪ್ರವೇಶಿಸಲು ಅತ್ತಕಡೆಗೆ ಓಡಿದರು. ॥ ೫೦ ॥ ದುರ್ವಾ ಸರು – ದಶದಿಕ್ಕುಗಳಲ್ಲಿ, ಆಕಾಶ, ಪೃಥಿವಿ, ಅತಲ-ವಿತಲ ಮುಂತಾದ ಕೆಳಗಿನ ಲೋಕಗಳಲ್ಲಿ, ಸಮುದ್ರ, ಲೋಕಪಾಲರಿಂದ ರಕ್ಷಿತವಾದ ಲೋಕಗಳಲ್ಲಿ, ಸ್ವರ್ಗದಲ್ಲಿ ಹೀಗೆ ಎಲ್ಲೆಡೆಗಳಲ್ಲಿ ಓಡಾಡಿದರು. ಆದರೆ ಅವರು ಹೋದಲ್ಲೆಲ್ಲ ಸಹಿಸಲಸಾಧ್ಯವಾದ ತೇಜಸ್ಸಿನಿಂದ ಕೂಡಿದ ಸುದರ್ಶನವು ತನ್ನನ್ನು ಹಿಂಬಾಲಿಸುವುದನ್ನು ಕಂಡರು. ॥ ೫೧ ॥ ಎಲ್ಲಿಯೂ ಯಾರೂ ರಕ್ಷಕರು ದೊರಯ ದಿದ್ದಾಗ ಅವರು ಇನ್ನೂ ಭಯಗೊಂಡರು. ತನಗಾಗಿ ಬದುಕುಳಿ ಯಲು ಸ್ಥಳವನ್ನು ಹುಡುಕುತ್ತಾ ಅವರು ಬ್ರಹ್ಮದೇವರ ಬಳಿಗೆ ಹೋಗಿ ಬೇಡಿಕೊಂಡರು – 'ಓ ವಿರಿಂಚಿಯೇ! ನೀವು ಸ್ವಯಂಭೂ ಆಗಿರುವಿರಿ. ಭಗವಂತನ ಈ ತೇಜೋಮಯ ಚಕ್ರದಿಂದ ನನ್ನನ್ನು ಕಾಪಾಡಿರಿ.' ॥ ೫೨ ॥

ಬ್ರಹ್ಮದೇವರು ಹೇಳಿದರು – ಮಹರ್ಷಿಯೇ! ನನ್ನ ಎರಡು ಪರಾರ್ಧಗಳ ಆಯುಷ್ಯವು ಮುಗಿದಾಗ ಕಾಲಸ್ವರೂಪನಾದ ಭಗವಂತನು ತನ್ನ ಈ ಸೃಷ್ಟಿಲೀಲೆಯನ್ನು ಸಮಾಪ್ತಗೊಳಿಸಲು ಬಯಸಿ ಈ ಜಗತ್ತನ್ನು ಸುಡಲು ಬಯಸಿದಾಗ ಅವನ ಭ್ರೂಭಂಗ ಮಾತ್ರದಿಂದ ಈ ಇಡೀ ಪ್ರಪಂಚ ಮತ್ತು ನನ್ನ ಈ ಲೋಕವೂ ಕೂಡ ಲೀನವಾಗಿ ಹೋದೀತು. ॥ ೫೩. ॥

ಅಹಂ ಭವೋದಕ್ಷಭೃಗುಪ್ರಧಾನಾಃ
ಪ್ರಜೇಶಭೂತೇಶಸುರೇಶಮುಖ್ಯಾಃ ।
ಸರ್ವೇ ವಯಂ ಯನ್ನಿಯಮಂ ಪ್ರಪನ್ನಾ
ಮೂರ್ಧ್ನಾರ್ಪಿತಂ ಲೋಕಹಿತಂ ವಹಾಮಃ ॥ ೫೪ ॥

ಪ್ರತ್ಯಾಖ್ಯಾತೋ ವಿರಿಂಚೇನ ವಿಷ್ಣುಚಕ್ರೋಪತಾಪಿತಃ ।
ದುರ್ವಾಸಾಃ ಶರಣಂ ಯಾತಃ ಶರ್ವಂ ಕೈಲಾಸವಾಸಿನಮ್
॥ ೫೫ ॥

ಶ್ರೀರುದ್ರ ಉವಾಚ

ವಯಂ ನ ತಾತ ಪ್ರಭವಾಮ ಭೂಮ್ನಿ
ಯಸ್ಮಿನ್ಪರೇಽನ್ಯೇಽಪ್ಯಜಜೀವಕೋಶಾಃ ।
ಭವಂತಿ ಕಾಲೇ ನ ಭವಂತಿ ಹೀದೃಶಾಃ
ಸಹಸ್ರಶೋ ಯತ್ರ ವಯಂ ಭ್ರಮಾಮಃ ॥ ೫೬ ॥

ಅಹಂ ಸನತ್ಕುಮಾರಶ್ಚ ನಾರದೋ ಭಗವಾನಜಃ ।
ಕಪಿಲೋಽಪಾಂತರತಮೋ ದೇವಲೋ ಧರ್ಮ ಆಸುರಿಃ
॥ ೫೭ ॥

ಮರೀಚಿಪ್ರಮುಖಾಶ್ಚಾನ್ಯೇ ಸಿದ್ಧೇಶಾಃ ಪಾರದರ್ಶನಾಃ ।
ವಿದಾಮ ನ ವಯಂ ಸರ್ವೇ ಯನ್ಮಾಯಾಂ ಮಾಯಯಾಽಽವೃತಾಃ
॥ ೫೮ ॥

ತಸ್ಯ ವಿಶ್ವೇಶ್ವರಸ್ಯೇದಂ ಶಸ್ತ್ರಂ ದುರ್ವಿಷಹಂ ಹಿ ನಃ ।
ತಮೇವ ಶರಣಂ ಯಾಹಿ ಹರಿಸ್ತೇ ಶಂ ವಿಧಾಸ್ಯತಿ
॥ ೫೯ ॥

ತತೋ ನಿರಾಶೋ ದುರ್ವಾಸಾಃ ಪದಂ ಭಗವತೋ ಯಯೌ ।
ವೈಕುಂಠಾಖ್ಯಂ ಯದಧ್ಯಾಸ್ತೇ ಶ್ರೀನಿವಾಸಃ ಶ್ರಿಯಾ ಸಹ
॥ ೬೦ ॥

ಸಂದಹ್ಯಮಾನೋಽಜಿತಶಸ್ತ್ರವಹ್ನಿನಾ
ತತ್ಪಾದಮೂಲೇ ಪತಿತಃ ಸವೇಪಥುಃ ।
ಆಹಾಚ್ಯುತಾನಂತ ಸದೀಪ್ಸಿತ ಪ್ರಭೋ
ಕೃತಾಗಸಂ ಮಾವ ಹಿ ವಿಶ್ವಭಾವನ ॥ ೬೧ ॥

ಅಜಾನತಾ ತೇ ಪರಮಾನುಭಾವಂ
ಕೃತಂ ಮಯಾಘಂ ಭವತಃ ಪ್ರಿಯಾಣಾಮ್ ।
ವಿಧೇಹಿ ತಸ್ಯಾಪಚಿತಿಂ ವಿಧಾತ-
ರ್ಮುಚ್ಯೇತ ಯನ್ನಾಮ್ನ್ಯುದಿತೇ ನಾರಕೋಽಪಿ ॥ ೬೨ ॥

ಶ್ರೀಭಗವಾನುವಾಚ

ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವ ದ್ವಿಜ ।
ಸಾಧುಭಿರ್ಗ್ರಸ್ತಹೃದಯೋ ಭಕ್ತೈರ್ಭಕ್ತಜನಪ್ರಿಯಃ
॥ ೬೩ ॥

ನಾನು, ಶಂಕರನು, ದಕ್ಷ ಭೃಗು ಮೊದಲಾದ ಪ್ರಜಾಪತಿಗಳು, ಭೂತೇಶರು, ಸುರೇಶಮುಖ್ಯರು, ಇವರೆಲ್ಲರೂ ಯಾರು ನಿರ್ಮಿಸಿದ ನಿಯಮಗಳಲ್ಲಿ ಬಂಧಿತರಾಗಿರುವೆವೋ, ಅವನ ಆಜ್ಞೆಯನ್ನು ಶಿರಸಾವಹಿಸಿ ನಾವೆಲ್ಲರೂ ಪ್ರಪಂಚದ ಹಿತವನ್ನು ಮಾಡುತ್ತೇವೆ. ಅಂತಹ ಮಹಾಮಹಿಮನಾದ ವಿಷ್ಣುವಿನ ಭಕ್ತನಿಗೆ ದ್ರೋಹ ಬೆಸಗಿರುವ ನಿನಗೆ ರಕ್ಷಣೆ ಯನ್ನೀಯಲು ನಾವು ಸಮರ್ಥರಲ್ಲ ॥ ೫೪ ॥ ಬ್ರಹ್ಮದೇವರು ಹೀಗೆ ದುರ್ವಾಸರನ್ನು ನಿರಾಶಗೊಳಿಸಿದಾಗ ಭಗವಂತನ ಚಕ್ರದ ಬೇಗೆಯಿಂದ ಬೇಯುತ್ತಿದ್ದ ಅವರು ಕೈಲಾಸವಾಸೀ ಭಗವಾನ್ ಶಂಕರನಲ್ಲಿ ಶರಣುಹೊಕ್ಕರು. ಓ ಪರಮೇಶ್ವರಾ ! ನನ್ನನ್ನು ಈ ವಿಷ್ಣು ಚಕ್ರದಿಂದ ಕಾಪಾಡು ಎಂದು ಬೇಡಿದಾಗ ಶಿವನೆಂದನು – ॥ ೫೫ ॥

ಶ್ರೀಮಹಾದೇವನು ಹೇಳಿದನು – ದುರ್ವಾಸನೇ ! ಯಾವ ಅಪಾರಮಹಿಮನಾದ ಪರಮಾತ್ಮನಲ್ಲಿ ಕೇವಲ ಈ ಬ್ರಹ್ಮ, ಈ ಜೀವರು ಮಾತ್ರವಲ್ಲದೆ ಅನೇಕ ಬ್ರಹ್ಮರು, ಅನೇಕ ಬ್ರಹ್ಮಾಂಡಗಳು ಹುಟ್ಟುತ್ತಿರುತ್ತವೆಯೋ ಮತ್ತು ಲೀನವಾಗುತ್ತಿರುತ್ತವೆಯೋ–ಅಂತಹ ಅನೇಕ ಕೋಟಿ ಬ್ರಹ್ಮಾಂಡಗಳಲ್ಲಿ ನಾವೂ ಕೂಡ ಸಾವಿರಾರು ಬಾರಿ ಹುಟ್ಟಿ ಅವನಲ್ಲೇ ಲೀನವಾಗಿರುತ್ತೇವೆಯೋ ಅಂತಹ ಪ್ರಭುವಿನ ಸಂಬಂಧದಲ್ಲಿ ನಾವು ಏನನ್ನೂ ಮಾಡಲು ಸಮರ್ಥರಲ್ಲ ॥ ೫೬ ॥ ನಾನಾಗಲೀ, ಸನತ್ಕುಮಾರ, ನಾರದ, ಬ್ರಹ್ಮದೇವರು, ಕಪಿಲರು, ಅಪಾಂತರತಮ-ದೇವಲರಾಗಲೀ, ಧರ್ಮ-ಆಸುರೀ-ಮರೀಚಿಯೇ ಮೊದಲಾದ ಸರ್ವಜ್ಞರಾದ ಸಿದ್ಧೇಶ್ವರರಾಗಲೀ ಭಗವಂತನ ಮಾಯೆಯನ್ನು ಅರಿಯೆವು. ಏಕೆಂದರೆ, ನಾವೆಲ್ಲರೂ ಆದೇ ಮಾಯೆಯಿಂದಲೇ ಆವೃತರಾಗಿದ್ದೇವೆ. ॥ ೫೭-೫೮ ॥ ಈ ಚಕ್ರವು ಆ ವಿಶ್ವೇಶ್ವರನಾದ ಮಹಾವಿಷ್ಣುವಿನ ಶಸ್ತ್ರವಾಗಿದೆ. ಇದರ ಉಜ್ವಲವಾದ ಪ್ರಭೆಯನ್ನು ನಾವೂ ಸಹಿಸಲಾರೆವು. ನೀನು ಆ ಶ್ರೀಹರಿಗೆ ಶರಣುಹೋಗು. ಅವನೇ ನಿನಗೆ ಮಂಗಳವನ್ನು ಉಂಟುಮಾಡುತ್ತಾನೆ. ॥ ೫೯ ॥ ಅಲ್ಲಿಯೂ ಕೂಡ ನಿರಾಶರಾದ ದುರ್ವಾಸರು ಲಕ್ಷ್ಮೀಪತಿಯಾದ ಭಗವಂತನು ರಮೆಯೊಂದಿಗೆ ವಾಸಿಸುವ ಪರಮಧಾಮವಾದ ವೈಕುಂಠಕ್ಕೆ ಹೋದರು. ॥ ೬೦ ॥ ದುರ್ವಾಸರು ಭಗವಂತನ ಸುದರ್ಶನದಿಂದ ಬೇಯುತ್ತಿದ್ದರು. ಅವರು ನಡುಗುತ್ತಾ ಭಗವಂತನ ಚರಣಗಳಲ್ಲಿ ಅಡ್ಡಬಿದ್ದರು. ಓ ಅಚ್ಯುತಾ ! ಅನಂತಾ ! ಸತ್ಪುರುಷರಿಗೆ ಬೇಕಾದವನೇ ! ಪ್ರಭುವೇ ! ಲೋಕರಕ್ಷಕನೇ ! ಅಪರಾಧಿಯಾದ ನನ್ನನ್ನು ರಕ್ಷಿಸು ; ಕಾಪಾಡು ಎಂದು ಅಂಗಲಾಚಿದರು. ॥ ೬೧ ॥ ನಿನ್ನ ಪರಮಾದ್ಭುತವಾದ ಪ್ರಭಾವವನ್ನು ಅರಿಯದೆ ನಾನು ನಿನ್ನ ಪ್ರಿಯಭಕ್ತನಿಗೆ ಅಪರಾಧ ಮಾಡಿಬಿಟ್ಟೆ ಪ್ರಭುವೇ ! ನನ್ನನ್ನು ಈ ಸುದರ್ಶನದಿಂದ ಪಾರುಮಾಡು. ನಿನ್ನ ನಾಮೋಚ್ಚಾರಣ ಮಾತ್ರದಿಂದಲೇ ನರಕದಲ್ಲಿರುವ ಜೀವರು ಮುಕ್ತರಾಗಿ ಹೋಗುತ್ತಾರೆ. ॥ ೬೨ ॥

ಶ್ರೀಭಗವಂತನು ಹೇಳಿದನು – ದುರ್ವಾಸರೇ ! ನಾನು ಸರ್ವಥಾ ಭಕ್ತರಿಗೆ ಅಧೀನನಾಗಿ ಬಿಟ್ಟಿರುವೆನು. ನಾನು ಅಸ್ವತಂತ್ರನು, ನನಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಸಾಧುಗಳಾದ ನನ್ನ ಭಕ್ತರು ನನ್ನ ಹೃದಯವನ್ನು ಕೈವಶಮಾಡಿಕೊಂಡಿದ್ದಾರೆ. ಭಕ್ತರು ನನ್ನನ್ನು ಪ್ರೀತಿಸುವಂತೆ ನಾನೂ ಅವರನ್ನು ಪ್ರೀತಿಸುತ್ತೇನೆ. ॥ ೬೩. ॥

ನಾಹಮಾತ್ಮಾನಮಾಶಾಸೇ ಮದ್ಭಕ್ತೈಃ ಸಾಧುಭಿರ್ವಿನಾ ।
ಶ್ರಿಯಂ ಚಾತ್ಯಂತಿಕೀಂ ಬ್ರಹ್ಮನ್ ಯೇಷಾಂ ಗತಿರಹಂ ಪರಾ
॥ ೬೪ ॥

ಯೇ ದಾರಾಗಾರಪುತ್ರಾಪ್ತಾನ್ ಪ್ರಾಣಾನ್ವಿತ್ತಮಿಮಂ ಪರಮ್ ।
ಹಿತ್ವಾಮಾಂ ಶರಣಂ ಯಾತಾಃ ಕಥಂ ತಾಂಸ್ತ್ಯಕ್ತುಮುತ್ಸಹೇ
॥ ೬೫ ॥

ಮಯಿ ನಿರ್ಬದ್ಧಹೃದಯಾಃ ಸಾಧವಃ ಸಮದರ್ಶನಾಃ ।
ವಶೀಕುರ್ವಂತಿ ಮಾಂ ಭಕ್ತ್ಯಾ ಸತ್ಸ್ತ್ರಿಯಃ ಸತ್ಪತಿಂ ಯಥಾ
॥ ೬೬ ॥

ಮತ್ಸೇವಯಾ ಪ್ರತೀತಂ ಚ ಸಾಲೋಕ್ಯಾದಿಚತುಷ್ಟಯಮ್ ।
ನೇಚ್ಛಂತಿ ಸೇವಯಾ ಪೂರ್ಣಾಃ ಕುತೋಽನ್ಯತ್ಕಾಲವಿದ್ರುತಮ್
॥ ೬೭ ॥

ಸಾಧವೋ ಹೃದಯಂ ಮಹ್ಯಂ ಸಾಧೂನಾಂ ಹೃದಯಂ ತ್ವಹಮ್ ।
ಮದನ್ಯತ್ತೇ ನ ಜಾನಂತಿ ನಾಹಂ ತೇಭ್ಯೋ ಮನಾಗಪಿ
॥ ೬೮ ॥

ಉಪಾಯಂ ಕಥಯಿಷ್ಯಾಮಿ ತವ ವಿಪ್ರ ಶೃಣುಷ್ವ ತತ್ ।
ಅಯಂ ಹ್ಯಾತ್ಮಾಭಿಚಾರಸ್ತೇ ಯತಸ್ತಂ ಯಾತು ವೈ ಭವಾನ್ ।
ಸಾಧುಷು ಪ್ರಹಿತಂ ತೇಜಃ ಪ್ರಹರ್ತುಃ ಕುರುತೇಽಶಿವಮ್
॥ ೬೯ ॥

ತಪೋ ವಿದ್ಯಾ ಚ ವಿಪ್ರಾಣಾಂ ನಿಃಶ್ರೇಯಸಕರೇ ಉಭೇ ।
ತೇ ಏವ ದುರ್ವಿನೀತಸ್ಯ ಕಲ್ಪೇತೇ ಕರ್ತುರನ್ಯಥಾ
॥ ೭೦ ॥

ಬ್ರಹ್ಮಂಸ್ತದ್ಗಚ್ಛ ಭದ್ರಂ ತೇ ನಾಭಾಗತನಯಂ ನೃಪಮ್ ।
ಕ್ಷಮಾಪಯ ಮಹಾಭಾಗಂ ತತಃ ಶಾಂತಿರ್ಭವಿಷ್ಯತಿ
॥ ೭೧ ॥

ಬ್ರಾಹ್ಮಣೋತ್ತಮನೇ ! ನನ್ನ ಭಕ್ತರ ಏಕಮಾತ್ರ ಆಶ್ರಯ ನಾನೇ ಆಗಿರುವೆನು. ಅದರಿಂದ ಸಾಧುಸ್ವಭಾವವುಳ್ಳ ನನ್ನ ಭಕ್ತರನ್ನು ಬಿಟ್ಟು ನಾನು ಸ್ವತಃ ನನ್ನನ್ನಾಗಲೀ, ವಿನಾಶರಹಿತಳಾದ ನನ್ನ ಅರ್ಧಾಂಗಿನಿಯಾದ ಲಕ್ಷ್ಮಿಯನ್ನೂ ಬಯಸುವುದಿಲ್ಲ. ॥ ೬೪ ॥ ಯಾವ ಭಕ್ತನು ಪತ್ನೀ, ಪುತ್ರ, ಗೃಹ, ಗುರುಜನರು, ಪ್ರಾಣ, ಧನ, ಇಹಲೋಕ, ಪರಲೋಕ – ಎಲ್ಲವನ್ನೂ ಬಿಟ್ಟು ಕೇವಲ ನನಗೇ ಶರಣುಬಂದಿರುವನೋ, ಅಂತಹವನನ್ನು ನಾನು ಹೇಗೆ ತಾನೇ ತ್ಯಜಿಸಬಲ್ಲೆನು ? ॥ ೬೫ ॥ ಸಾಧ್ವಿಯಾದ ಸ್ತ್ರೀಯು ತನ್ನ ಪಾತಿವ್ರತ್ಯದಿಂದ ಸದಾಚಾರಿಯಾದ ಪತಿಯನ್ನು ವಶಪಡಿಸಿಕೊಳ್ಳುವಂತೆಯೇ ನನ್ನೊಂದಿಗೆ ತಮ್ಮ ಹೃದಯವನ್ನು ಪ್ರೇಮಬಂಧನದಿಂದ ಬಂಧಿಸಿರುವ ಸಮದರ್ಶಿಗಳಾದ ಸಾಧುಗಳು ಭಕ್ತಿಯ ಮೂಲಕ ನನ್ನನ್ನು ವಶಪಡಿಸಿಕೊಂಡು ಬಿಡುತ್ತಾರೆ. ॥ ೬೬ ॥ ನನ್ನ ಅನನ್ಯಪ್ರೇಮಿ ಭಕ್ತರು ನನ್ನ ಸೇವೆಯಿಂದಲೇ ತಮ್ಮನ್ನು ಪರಿಪೂರ್ಣ-ಕೃತಕೃತ್ಯರೆಂದು ತಿಳಿಯುತ್ತಾರೆ. ನನ್ನ ಸೇವೆಯ ಫಲಸ್ವರೂಪವಾಗಿ ಅವರಿಗೆ ಸಾಲೋಕ್ಯ-ಸಾರೂಪ್ಯಾದಿ ಮುಕ್ತಿಗಳು ದೊರಕಿದರೂ ಅವರು ಅದನ್ನೂ ಸ್ವೀಕರಿಸಲು ಬಯಸುವುದಿಲ್ಲ. ಮತ್ತೆ ಕಾಲವಶವಾದ ವಸ್ತುಗಳ ಬಗೆಗೆ ಹೇಳುವುದೇನಿದೆ ? ॥ ೬೭ ॥ ದುರ್ವಾಸರೇ ! ಹೆಚ್ಚೇನು ಹೇಳಲಿ ? ಸಾಧುಗಳೇ ನನ್ನ ಹೃದಯಸ್ವರೂಪರಾಗಿದ್ದಾರೆ. ಸಾಧುಗಳಿಗೆ ನಾನು ಹೃದಯಸ್ವರೂಪನಾಗಿರುವೆನು. ಅವರು ನನ್ನನ್ನು ಬಿಟ್ಟು ಬೇರೆ ಏನನ್ನೂ ತಿಳಿಯರು ಹಾಗೂ ನಾನು ಅವರಲ್ಲದೆ ಬೇರೆ ಯಾರನ್ನೂ ಅರಿಯೆ. ॥ ೬೮ ॥ ವಿಪ್ರರೇ ! ನಾನೊಂದು ಉಪಾಯವನ್ನು ಹೇಳುತ್ತೇನೆ ; ಕೇಳಿರಿ. ಯಾರ ಅನಿಷ್ಟ ಮಾಡಿರುವುದರಿಂದ ನಿಮಗೆ ಈ ವಿಪತ್ತು ಸಂಭವಿಸಿತೋ, ನೀವು ಅವರ ಬಳಿಯೇ ಹೋಗಿರಿ. ನಿರಪರಾಧಿಗಳಾದ ಸಾಧುಗಳಿಗೆ ಮಾಡಿದ ಅನಿಷ್ಟದಿಂದಾಗಿ ಮಾಡಿದವರಿಗೇ ಅಮಂಗಳ ಉಂಟಾಗುತ್ತದೆ. ॥ ೬೯ ॥

ಬ್ರಾಹ್ಮಣರಿಗೆ ತಪಸ್ಸು ಮತ್ತು ವಿದ್ಯೆಯೇ ಪರಮ ಶ್ರೇಯಸ್ಕರ ಸಾಧನೆಯಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಬ್ರಾಹ್ಮಣನು ಉದ್ದತನಾಗಿ, ಅನ್ಯಾಯಿಯಾದರೆ ಅವೆರಡೂ ವಿಪರೀತ ಫಲವನ್ನು ಕೊಡುತ್ತವೆ. ॥ ೭೦ ॥ ದುರ್ವಾಸರೇ ! ನಿಮಗೆ ಮಂಗಳವಾಗಲಿ. ನೀವು ನಾಭಾಗನಂದನ ಪರಮಭಾಗ್ಯಶಾಲಿ ಅಂಬರೀಷರಾಜನ ಬಳಿಗೆ ಹೋಗಿರಿ. ಅವನಲ್ಲಿ ಕ್ಷಮೆಯಾಚಿಸಿರಿ. ಆಗ ನಿಮಗೆ ಶಾಂತಿಯು ಲಭಿಸುವುದು. ॥ ೭೧ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಅಂಬರೀಷಚರಿತೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ದುರ್ವಾಸರು ದುಃಖದಿಂದ ಪಾರಾದುದು

ಶ್ರೀಶುಕ ಉವಾಚ

ಏವಂ ಭಗವತಾऽऽದಿಷ್ಟೋ ದುರ್ವಾಸಾಶ್ಚಕ್ರತಾಪಿತಃ ।
ಅಂಬರೀಷಮುಪಾವೃತ್ಯ ತತ್ಪಾದೌ ದುಃಖಿತೋऽಗ್ರಹೀತ್ ॥ ೧ ॥

ತಸ್ಯ ಸೋದ್ಯಮನಂ ವೀಕ್ಷ್ಯ ಪಾದಸ್ಪರ್ಶವಿಲಜ್ಜಿತಃ ।
ಅಸ್ತಾವೀತ್ತದ್ಧರೇರಸ್ತ್ರಂ ಕೃಪಯಾ ಪೀಡಿತೋ ಭೃಶಮ್ ॥ ೨ ॥

ಅಂಬರೀಷ ಉವಾಚ

ತ್ವಮಗ್ನಿರ್ಭಗವಾನ್ಸೂರ್ಯಸ್ತ್ವಂ ಸೋಮೋ ಜ್ಯೋತಿಷಾಂ ಪತಿಃ ।
ತ್ವಮಾಪಸ್ತ್ವಂ ಕ್ಷಿತಿರ್ಬ್ಯೋಮ ವಾಯುರ್ಮಾತ್ರೇಂದ್ರಿಯಾಣಿ ಚ ॥ ೩ ॥

ಸುದರ್ಶನ ನಮಸ್ತುಭ್ಯಂ ಸಹಸ್ರಾರಾಚ್ಯುತಪ್ರಿಯ ।
ಸರ್ವಾಸ್ತ್ರಘಾತಿನ್ ವಿಪ್ರಾಯ ಸ್ವಸ್ತಿ ಭೂಯಾ ಇಡಸ್ಪತೇ ॥ ೪ ॥

ತ್ವಂ ಧರ್ಮಸ್ತ್ವಂ ಋತಂ ಸತ್ಯಂ ತ್ವಂ ಯಜ್ಞೋऽಖಿಲಯಜ್ಞಭುಕ್ ।
ತ್ವಂ ಲೋಕಪಾಲಃ ಸರ್ವಾತ್ಮಾ ತ್ವಂ ತೇಜಃ ಪೌರುಷಂ ಪರಮ್ ॥ ೫ ॥

ನಮಃ ಸುನಾಭಾಖಿಲಧರ್ಮಸೇತವೇ
ಹ್ಯಧರ್ಮಶೀಲಾಸುರಧೂಮಕೇತವೇ ।
ತ್ರೈಲೋಕ್ಯಗೋಪಾಯ ವಿಶುದ್ಧವರ್ಚಸೇ
ಮನೋಜವಾಯಾದ್ಭುತಕರ್ಮಣೇ ಗೃಣೇ ॥ ೬ ॥

ತ್ತೇಜಸಾ ಧರ್ಮಮಯೇನ ಸಂಹೃತಂ
ತಮಃ ಪ್ರಕಾಶಶ್ಚ ಧೃತೋ ಮಹಾತ್ಮನಾಮ್ ।
ದುರತ್ಯಯಸ್ತೇ ಮಹಿಮಾ ಗಿರಾಂ ಪತೇ
ತ್ವದ್ರೂಪಮೇತತ್ಸದಸತ್ಪರಾವರಮ್ ॥ ೭ ॥

ಯದಾ ವಿಸೃಷ್ಟಸ್ತ್ವಮನಂಜನೇನ ವೈ
ಬಲಂ ಪ್ರವಿಷ್ಟೋऽಜಿತ ದೈತ್ಯದಾನವಮ್ ।
ಬಾಹೂದರೋರ್ವಂಘ್ರಿಶಿರೋಧರಾಣಿ
ಪ್ಕನ್ನಜಸ್ರಂ ಪ್ರಧನೇ ವಿರಾಜಸೇ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಭಗವಂತನು ಹೀಗೆ ಆಜ್ಞೆ ಕೊಡಿಸಿದಾಗ ಸುದರ್ಶನಚಕ್ರದ ಜ್ವಾಲೆಯಿಂದ ಬೇಯುತ್ತಿದ್ದ ದುರ್ವಾಸರು ಮರಳಿ ಅಂಬರೀಷ ರಾಜನ ಬಳಿಗೆ ಹೋಗಿ ಅತ್ಯಂತ ದುಃಖಿತರಾಗಿ ಅವನ ಎರಡೂ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ॥ ೧ ॥ ದುರ್ವಾಸರ ಈ ಕಾರ್ಯವನ್ನು ನೋಡಿ ಮತ್ತು ತನ್ನ ಪಾದಗಳನ್ನು ಹಿಡಿದು ಕೊಂಡಿದ್ದರಿಂದ ಅಂಬರೀಷನು ಕಡು ನಾಚಿಕೊಂಡು ಅವನ ಹೃದಯ ದಯೆಯಿಂದ ಕರಗಿಹೋಗಿ ಭಗವಂತನ ಸುದರ್ಶನ ಚಕ್ರವನ್ನು ಸ್ತುತಿಸತೊಡಗಿದನು. ॥ ೨ ॥

ಅಂಬರೀಷನು ಹೇಳುತ್ತಾನೆ – ಓ ಸುದರ್ಶನಚಕ್ರವೇ ! ನೀನೇ ಅಗ್ನಿಯಾಗಿರುವೆ. ಸರ್ವಸಮರ್ಥನಾದ ಸೂರ್ಯನೂ ನೀನೇ. ಸಮಸ್ತ ನಕ್ಷತ್ರಮಂಡಲದ ಅಧಿಪತಿ ಚಂದ್ರನೂ ನೀನೇ. ಜಲ, ಪೃಥಿವಿ, ಆಕಾಶ, ವಾಯು ಪಂಚತನ್ಮಾತ್ರೆಗಳೂ ಮತ್ತು ಎಲ್ಲ ಇಂದ್ರಿಯಗಳ ರೂಪದಲ್ಲಿಯೂ ನೀನೇ ಆಗಿರುವೆ. ॥ ೩ ॥ ಓ ಸುದರ್ಶನಚಕ್ರಾಧಿ ದೇವತೆಯೇ ! ನಿನಗೆ ನಮಸ್ಕರಿಸುತ್ತೇನೆ. ಸಾವಿರ ಅರಕಾಲುಗಳಿಂದ ಕೂಡಿರುವವನೇ ! ಅಚ್ಯುತಪ್ರಿಯನೇ ! ಸಮಸ್ತ ಅಸ್ತ್ರ-ಶಸ್ತ್ರಗಳನ್ನು ನಾಶಗೊಳಿಸುವ ಭೂಮಂಡಲಕ್ಕೆ ಒಡೆಯ ನಾದವನೇ ! ನೀನು ಈ ಬ್ರಾಹ್ಮಣನನ್ನು ರಕ್ಷಿಸು. ॥ ೪ ॥ ನೀನೇ ಧರ್ಮಸ್ವರೂಪನಾಗಿರುವೆ. ಅಮೃತಸ್ವರೂಪನಾಗಿರುವೆ. ಸತ್ಯ ಸ್ವರೂಪನಾಗಿರುವೆ. ಸಮಸ್ತಯಜ್ಞಗಳೂ ನೀನೇ ; ಯಜ್ಞ ಭೋಕ್ತೃವೂ ನೀನೇ. ಸಮಸ್ತ ಲೋಕಗಳ ರಕ್ಷಕನೂ, ಸರ್ವಲೋಕ ಸ್ವರೂಪನೂ ನೀನೆ. ನೀನು ಪರಮಪುರುಷ ಪರಮಾತ್ಮನ ಶ್ರೇಷ್ಠ ವಾದ ತೇಜಸ್ಸು ಮತ್ತು ಪೌರುಷವೂ ಆಗಿರುವೆ. ॥ ೫ ॥ ಓ ಸುಂದರವಾದ ಸುದರ್ಶನ ಚಕ್ರವೇ ! ನೀನು ಸಮಸ್ತ ಧರ್ಮ ಗಳ ಮರ್ಯಾದೆಗಳನ್ನು ರಕ್ಷಿಸುವವನೇ ! ಅಧರ್ಮವನ್ನು ಆಚರಿ ಸುವ ಅಸುರರನ್ನು ಭಸ್ಮಮಾಡುವ ಸಾಕ್ಷಾತ್ ಅಗ್ನಿಸ್ವರೂಪನು ನೀನೇ ಆಗಿರುವೆ. ನೀನೇ ಮೂರು ಲೋಕಗಳ ರಕ್ಷಕನೂ, ವಿಶುದ್ಧ ತೇಜೋಮಯನಾಗಿರುವೆ. ನಿನ್ನ ಗತಿಯು ಮನೋವೇಗದಂತೆ ಇದ್ದು ನಿನ್ನ ಕರ್ಮಗಳು ಅದ್ಭುತವಾಗಿವೆ. ನಿನಗೆ ನಮಸ್ಕಾರ ಮಾಡುತ್ತಾ, ಸ್ತೋತ್ರಮಾಡುತ್ತೇನೆ. ॥ ೬ ॥ ವೇದವಾಣಿಗಳಿಗೆ ಅಧೀಶ್ವರನೇ ! ನಿನ್ನ ಧರ್ಮಮಯ ತೇಜಸ್ಸಿನಿಂದ ಅಂಧಕಾರವು ನಾಶವಾಗುತ್ತದೆ. ನಿನ್ನಿಂದಲೇ ಮಹಾಪುರುಷರ ಪ್ರಕಾಶದ ರಕ್ಷಣೆ ಯಾಗುತ್ತದೆ. ನಿನ್ನ ಮಹಿಮೆಯ ಪಾರವನ್ನು ತಿಳಿಯಲು ಯಾರಿಗೂ ಶಕ್ಯವಿಲ್ಲ. ಸದಸದ್ರೂಪನಾದ ಉಚ್ಚ-ನೀಚ ಭಾವನೆಗಳಿಂದ ಕೂಡಿ ರುವ ಸಮಸ್ತ ಕಾರ್ಯಕಾರಣಾತ್ಮಕವಾದ ಪ್ರಪಂಚವು ನಿನ್ನ ಸ್ವರೂ ಪವೇ ಆಗಿದೆ. ॥ ೭ ॥ ಸುದರ್ಶನಚಕ್ರವೇ ! ದೇವತೆಯೇ ! ನಿನ್ನನ್ನು ಯಾರೂ ಗೆಲ್ಲಲಾರರು. ನಿರಂಜನ ಭಗವಂತನು ನಿನ್ನನ್ನು ಪ್ರಯೋ ಗಿಸಿದಾಕ್ಷಣ ನೀನು ದೈತ್ಯ-ದಾನವರ ಸೇನೆಯನ್ನು ಪ್ರವೇಶಿಸಿದಾಗ, ಯುದ್ಧಭೂಮಿಯಲ್ಲಿ ಅವರ ಭುಜಗಳನ್ನು, ಉದರವನ್ನು, ತೊಡೆ ಕಾಲುಗಳನ್ನು, ಕತ್ತನ್ನು ನಿರಂತರವಾಗಿ ಕತ್ತರಿಸುತ್ತಿರುವ ನೀನು ಅತ್ಯಂತ ಶೋಭೆಯಿಂದ ಬೆಳಗುತ್ತಿರುವೆ. ॥ ೮ ॥

ಸ ತ್ವಂ ಜಗತ್ತ್ರಾಣ ಖಿಲಪ್ರಹಾಣಯೇ
ನಿರೂಪಿತಃ ಸರ್ವಸಹೋ ಗದಾಭೃತಾ ।
ವಿಪ್ರಸ್ಯ ಚಾಸ್ಮತ್ಕುಲದೈವಹೇತವೇ
ವಿಧೇಹಿ ಭದ್ರಂ ತದನುಗ್ರಹೋ ಹಿ ನಃ ॥ ೯ ॥

ಯದ್ಯಸ್ತಿ ದತ್ತಮಿಷ್ಟಂ ವಾ ಸ್ವಧರ್ಮೋ ವಾ ಸ್ವನುಷ್ಠಿತಃ ।
ಕುಲಂ ನೋ ವಿಪ್ರದೈವಂ ಚೇದ್ದ್ವಿಜೋ ಭವತು ವಿಜ್ವರಃ
॥ ೧೦ ॥

ಯದಿ ನೋ ಭಗವಾನ್ ಪ್ರೀತ ಏಕಃ ಸರ್ವಗುಣಾಶ್ರಯಃ ।
ಸರ್ವಭೂತಾತ್ಮಭಾವೇನ ದ್ವಿಜೋ ಭವತು ವಿಜ್ವರಃ
॥ ೧೧ ॥

ಶ್ರೀಶುಕ ಉವಾಚ

ಇತಿ ಸಂಸ್ತುವತೋ ರಾಜ್ಞೋ ವಿಷ್ಣುಚಕ್ರಂ ಸುದರ್ಶನಮ್ ।
ಅಶಾಮ್ಯತ್ಸರ್ವತೋ ವಿಪ್ರಂ ಪ್ರದಹದ್ರಾಜಯಾಂಚಯಾ
॥ ೧೨ ॥

ಸ ಮುಕ್ತೋಽಸ್ತ್ರಾಗ್ನಿತಾಪೇನ ದುರ್ವಾಸಾಃ ಸ್ವಸ್ತಿಮಾಂಸ್ತತಃ ।
ಪ್ರಶಶಂಸ ತಮುರ್ವೀಶಂ ಯುಂಜಾನಃ ಪರಮಾಶಿಷಃ
॥ ೧೩ ॥

ದುರ್ವಾಸಾ ಉವಾಚ

ಅಹೋ ಅನಂತದಾಸಾನಾಂ ಮಹತ್ತ್ವಂ ದೃಷ್ಟಮದ್ಯ ಮೇ ।
ಕೃತಾಗಸೋಽಪಿ ಯದ್ರಾಜನ್ಮಂಗಲಾನಿ ಸಮೀಹಸೇ
॥ ೧೪ ॥

ದುಷ್ಕರಃ ಕೋ ನು ಸಾಧೂನಾಂ
ದುಸ್ತ್ಯಜೋ ವಾ ಮಹಾತ್ಮನಾಮ್ ।
ಯೈಃ ಸಂಗೃಹೀತೋ ಭಗವಾನ್
ಸಾತ್ವತಾಮೃಷಭೋ ಹರಿಃ ॥ ೧೫ ॥

ಯನ್ನಾಮಶ್ರುತಿಮಾತ್ರೇಣ ಪುಮಾನ್ ಭವತಿ ನಿರ್ಮಲಃ ।
ತಸ್ಯ ತೀರ್ಥಪದಃ ಕಿಂ ವಾ ದಾಸಾನಾಮವಶಿಷ್ಯತೇ
॥ ೧೬ ॥

ರಾಜನ್ನನುಗೃಹೀತೋಽಹಂ ತ್ವಯಾತಿಕರುಣಾತ್ಮನಾ ।
ಮದಘಂ ಪೃಷ್ಠತಃ ಕೃತ್ವಾ ಪ್ರಾಣಾ ಯನ್ಮೇಽಭಿರಕ್ಷಿತಾಃ
॥ ೧೭ ॥

ರಾಜಾ ತಮಕೃತಾಹಾರಃ ಪ್ರತ್ಯಾಗಮನಕಾಂಕ್ಷಯಾ ।
ಚರಣಾವುಪಸಂಗೃಹ್ಯ ಪ್ರಸಾದ್ಯ ಸಮಭೋಜಯತ್
॥ ೧೮ ॥

ಓ ವಿಶ್ವರಕ್ಷಕನೇ ! ನೀನು ರಣಾಂಗಣದಲ್ಲಿ ಎಲ್ಲ ಪ್ರಹಾರಗಳನ್ನು ಸಹಿಸುವ ಸಾಮರ್ಥ್ಯವುಳ್ಳವನು. ನಿನ್ನನ್ನು ಯಾರೂ ಘಾತಿಸಲಾರರು. ಗದಾಧರನಾದ ಭಗವಂತನು ದುಷ್ಟರ ಸಂಹಾರಕ್ಕಾಗಿ ನಿನ್ನನ್ನು ನಿಯಮಿಸಿರುವನು. ದಯಮಾಡಿ ನೀನು ನಮ್ಮ ಕುಲದ ಭಾಗ್ಯೋದಯಕ್ಕಾಗಿ ದುರ್ವಾಸರಿಗೆ ಮಂಗಳವನ್ನುಂಟುಮಾಡು. ಇದೇ ನಮಗೆ ಪರಮಾನುಗ್ರಹವಾಗಿದೆ. ॥ ೯ ॥ ನನ್ನಲ್ಲಿ ಅಲ್ಪ-ಸ್ವಲ್ಪ ದಾನ, ಯಜ್ಞಮಾಡಿದ ಫಲವೇನಾದರೂ ಇದ್ದರೆ, ಅಥವಾ ಸ್ವಧರ್ಮವನ್ನು ಪಾಲಿಸಿದ್ದರೆ, ನಮ್ಮ ವಂಶದವರು ಬ್ರಾಹ್ಮಣರನ್ನೇ ಪರಮಾರಾಧ್ಯವೆಂದು ತಿಳಿಯುತ್ತಿದ್ದರೆ, ದುರ್ವಾಸರ ಉರಿಯನ್ನು ಶಾಂತಗೊಳಿಸು. ॥ ೧೦ ॥ ಭಗವಂತನು ಸಮಸ್ತ ಗುಣಗಳ ಏಕ ಮಾತ್ರ ಆಶ್ರಯನಾಗಿದ್ದಾನೆ. ನಾನು ಸಮಸ್ತ ಪ್ರಾಣಿಗಳ ಆತ್ಮರೂಪದಲ್ಲಿ ಅವನನ್ನು ದರ್ಶಿಸುತ್ತಿದ್ದರೆ ಹಾಗೂ ಅವನು ನನ್ನ ಮೇಲೆ ಪ್ರಸನ್ನನಾಗಿದ್ದರೆ ದುರ್ವಾಸರ ಹೃದಯದ ತಾಪವನ್ನು (ಉರಿಯನ್ನು) ಇಲ್ಲವಾಗಿಸು. ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ದುರ್ವಾಸಮುನಿಯನ್ನು ಎಲ್ಲ ಕಡೆಯಿಂದ ಸುಡುತ್ತಿರುವ ಭಗವಂತನ ಸುದರ್ಶನಚಕ್ರವನ್ನು ರಾಜಾ ಅಂಬರೀಷನು ಈ ವಿಧವಾಗಿ ಸ್ತುತಿಸಿದಾಗ ಅವನ ಪ್ರಾರ್ಥನೆಯಂತೆ ಸುದರ್ಶನವು ಶಾಂತವಾಯಿತು. ॥ ೧೨ ॥ ದುರ್ವಾಸರು ಚಕ್ರದ ಉರಿಯಿಂದ ವಿಮುಕ್ತರಾಗಿ, ಸ್ವಸ್ಥಚಿತ್ತರಾದಾಗ ಅವರು ಅಂಬರೀಷನಿಗೆ ಅನೇಕಾನೇಕ ಶುಭಾಶೀರ್ವಾದಗಳನ್ನು ಕೊಡುತ್ತಾ, ಅವನನ್ನು ಪ್ರಶಂಸಿಸಿದರು. ॥೧೩॥

ದುರ್ವಾಸರು ಹೇಳಿದರು – ಮಹಾರಾಜಾ ! ನೀನು ಧನ್ಯನಾಗಿರುವೆ. ಭಗವಂತನ ಪ್ರೇಮಿ ಭಕ್ತರ ಮಹತ್ವವನ್ನು ಇಂದು ನಾನು ಕಂಡೆ, ನಿನ್ನ ಕುರಿತು ಅಪರಾಧ ಮಾಡಿದೆ. ಹೀಗಿದ್ದರೂ ನೀನು ನನಗಾಗಿ ಮಂಗಲವನ್ನೇ ಬಯಸುತ್ತಿರುವೆ. ॥ ೧೪ ॥ ಭಕ್ತವತ್ಸಲ ಭಗವಾನ್ ಶ್ರೀಹರಿಯ ಚರಣಕಮಲಗಳನ್ನು ಭಕ್ತಿಭಾವದಿಂದ ದೃಢವಾಗಿ ಹಿಡಿದಿರುವ ಸಾಧು-ಸತ್ಪುರುಷರಿಗೆ ಕಠಿಣವಾದ ಕಾರ್ಯವು ಯಾವುದಿದೆ ? ಉದಾರ ಹೃದಯವುಳ್ಳ ಮಹಾತ್ಮರು ಯಾವ ವಸ್ತುವನ್ನು ತಾನೇ ಪರಿತ್ಯಾಗ ಮಾಡಲಾರರು ? ॥ ೧೫ ॥ ಯಾರ ಮಂಗಲಮಯ ನಾಮಗಳ ಶ್ರವಣ ಮಾತ್ರದಿಂದಲೇ ಜೀವಿಯು ನಿರ್ಮಲರಾಗಿ ಹೋಗುವರೋ, ಅಂತಹ ತೀರ್ಥಪಾದನಾದ ಶ್ರೀಭಗವಂತನ ಚರಣಕಮಲಗಳ ದಾಸರಾದ ಭಕ್ತರಿಗೆ ಯಾವ ಕರ್ತವ್ಯವು ತಾನೇ ಶೇಷವಾಗಿ ಉಳಿದಿರುತ್ತದೆ ? ॥ ೧೬ ॥ ಅಂಬರೀಷ ಮಹರಾಜಾ ! ನಿನ್ನ ಹೃದಯವು ಕರುಣಾಭಾವದಿಂದ ಪರಿಪೂರ್ಣವಾಗಿದೆ. ನೀನು ನನ್ನ ಮೇಲೆ ಮಹಾನ್ ಅನುಗ್ರಹವನ್ನು ಮಾಡಿರುವೆ. ಅಯ್ಯಾ ! ನೀನು ನನ್ನ ಅಪರಾಧಗಳನ್ನು ಮರೆತು ನನ್ನ ಪ್ರಾಣಗಳನ್ನು ರಕ್ಷಿಸಿರುವೆ. ॥ ೧೭ ॥

ಪರೀಕ್ಷಿತನೇ ! ದುರ್ವಾಸರು ಓಡಿಹೋದಂದಿನಿಂದ ಇಂದಿನವರೆಗೆ ಅಂಬರೀಷರಾಜನು ಭೋಜನವನ್ನು ಮಾಡಿರಲಿಲ್ಲ. ಅವನು ಅವರು ಮರಳಿ ಬರುವ ದಾರಿ ಕಾಯುತ್ತಿದ್ದನು. ಈಗ ಅವನು ದುರ್ವಾಸರ ಕಾಲಿಗೆ ಬಿದ್ದು, ಅವರನ್ನೂ ಸಂತೋಷಪಡಿಸಿ, ವಿಧಿವತ್ತಾಗಿ ಭೋಜನವನ್ನು ಮಾಡಿಸಿದನು. ॥ ೧೮ ॥

ಸೋಽಶಿತ್ವಾऽऽದೃತಮಾನೀತಮಾತಿಥ್ಯಂ ಸಾರ್ವಕಾಮಿಕಮ್ ।
ತೃಪ್ತಾತ್ಮಾ ನೃಪತಿಂ ಪ್ರಾಹ ಭುಜ್ಯತಾಮಿತಿ ಸಾದರಮ್
॥ ೧೯ ॥

ಪ್ರೀತೋಽಸ್ಮ್ಯನುಗೃಹೀತೋಽಸ್ಮಿ ತವ ಭಾಗವತಸ್ಯ ವೈ ।
ದರ್ಶನಸ್ಪರ್ಶನಾಲಾಪೈರಾತಿಥ್ಯೇನಾತ್ಮಮೇಧಸಾ
॥ ೨೦ ॥

ಕರ್ಮಾವದಾತಮೇತತ್ತೇ ಗಾಯಂತಿ ಸ್ವಃಸ್ತ್ರಿಯೋ ಮುಹುಃ ।
ಕೀರ್ತಿಂ ಪರಮಪುಣ್ಯಾಂ ಚ ಕೀರ್ತಯಿಷ್ಯತಿ ಭೂರಿಯಮ್
॥ ೨೧ ॥

ಶ್ರೀಶುಕ ಉವಾಚ

ಏವಂ ಸಂಕೀರ್ತ್ಯ ರಾಜಾನಂ ದುರ್ವಾಸಾಃ ಪರಿತೋಷಿತಃ ।
ಯಯೌ ವಿಹಾಯಸಾऽऽಮಂತ್ರ್ಯ ಬ್ರಹ್ಮಲೋಕಮಹೈತುಕಮ್
॥ ೨೨ ॥

ಸಂವತ್ಸರೋऽತ್ಯಗಾತ್ತಾವದ್ ಯಾವತಾ ನಾಗತೋ ಗತಃ ।
ಮುನಿಸ್ತದ್ದರ್ಶನಾಕಾಂಕ್ಷೋ ರಾಜಾऽಭ್ಯಕ್ಷೋ ಬಭೂವ ಹ
॥ ೨೩ ॥

ಗತೇ ಚ ದುರ್ವಾಸಸಿ ಸೋಽಂಬರೀಷೋ
ದ್ವಿಜೋಪಯೋಗಾತಿಪವಿತ್ರಮಾಹರತ್ ।
ಋಷೇರ್ವಿಮೋಕ್ಷಂ ವ್ಯಸನಂ ಚ ಬುದ್ಧ್ವಾ
ಮೇನೇ ಸ್ವವೀರ್ಯಂ ಚ ಪರಾನುಭಾವಮ್ ॥ ೨೪ ॥

ಏವಂವಿಧಾನೇಕಗುಣಃ ಸ ರಾಜಾ
ಪರಾತ್ಮನಿ ಬ್ರಹ್ಮಣಿ ವಾಸುದೇವೇ ।
ಕ್ರಿಯಾಕಲಾಪೈಃ ಸಮುವಾಹ ಭಕ್ತಿಂ
ಯಯಾऽऽವಿರಿಂಚ್ಯಾನ್ನಿರಯಾಂಶ್ಚಕಾರ ॥ ೨೫ ॥

ಅಥಾಂಬರೀಷಸ್ತನಯೇಷು ರಾಜ್ಯಂ
ಸಮಾನಶೀಲೇಷು ವಿಸೃಜ್ಯ ಧೀರಃ ।
ವನಂ ವಿವೇಶಾತ್ಮನಿ ವಾಸುದೇವೇ
ಮನೋ ದಧದ್ಧ್ವಸ್ತಗುಣಪ್ರವಾಹಃ ॥ ೨೬ ॥

ಇತ್ಯೇತತ್ಪುಣ್ಯಮಾಖ್ಯಾನಮಂಬರೀಷಸ್ಯ ಭೂಪತೇಃ ।
ಸಂಕೀರ್ತಯನ್ನನುಧ್ಯಾಯನ್ ಭಕ್ತೋ ಭಗವತೋ ಭವೇತ್
॥ ೨೭ ॥

ಅಂಬರೀಷನು ಅತಿ ಆದರದಿಂದ ಅತಿಥಿಗೆ ಯೋಗ್ಯವಾದ ಎಲ್ಲ ವಿಧದ ಭೋಜನ ಸಾಮಗ್ರಿಯನ್ನು ತರಿಸಿದನು. ದುರ್ವಾಸರು ಭೋಜನಮಾಡಿ ತೃಪ್ತರಾದರು. ಆಗ ಅವರು ಆದರದಿಂದ ರಾಜನೇ ! ಇನ್ನು ನೀನೂ ಭೋಜನವನ್ನು ಮಾಡು ಎಂದು ನುಡಿದರು. ॥ ೧೯ ॥ ಅಂಬರೀಷನೇ ! ನೀನು ಭಗವಂತನಿಗೆ ಪರಮ ಪ್ರಿಯಭಕ್ತನಾಗಿರುವೆ. ನಿನ್ನ ದರ್ಶನ, ಸ್ಪರ್ಶ, ಸಂಭಾಷಣ ಮತ್ತು ಮನಸ್ಸನ್ನು ಭಗವಂತನ ಕಡೆಗೆ ಪ್ರವೃತ್ತಗೊಳಿಸುವಂತಹ ಆತಿಥ್ಯದಿಂದ ನಾನು ಅತ್ಯಂತ ಸಂತೋಷಗೊಂಡಿರುವೆನು; ಅನುಗ್ರಹಿತನಾಗಿರುವೆನು. ॥ ೨೦ ॥ ಸ್ವರ್ಗದ ದೇವಾಂಗನೆಯರು ಪದೇ-ಪದೇ ನಿನ್ನ ಈ ಉಜ್ವಲ ಚರಿತ್ರೆಯನ್ನು ಕೊಂಡಾಡುವರು. ಈ ಭೂಮಂಡಲದಲ್ಲಿರುವ ಜನರೂ ಕೂಡ ಪರಮ ಪುಣ್ಯಮಯವಾದ ನಿನ್ನ ಕೀರ್ತಿಯನ್ನು ಸಂಕೀರ್ತನೆ ಮಾಡುತ್ತಾ ಇರುವರು.॥ ೨೧॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ದುರ್ವಾಸರು ಬಹಳ ಸಂತುಷ್ಟರಾಗಿ ಅಂಬರೀಷರಾಜನ ಸದ್ಗುಣಗಳನ್ನು ಪ್ರಶಂಸಿಸುತ್ತಾ , ಅವನಿಂದ ಬೀಳ್ಕೊಂಡು, ಕೇವಲ ನಿಷ್ಕಾಮ ಕರ್ಮದಿಂದಲೇ ದೊರೆಯಬಹುದಾದ ಬ್ರಹ್ಮಲೋಕಕ್ಕಾಗಿ ಆಕಾಶ ಮಾರ್ಗದಿಂದ ಪ್ರಯಾಣಮಾಡಿದರು. ॥ ೨೨ ॥ ರಾಜನೇ ! ಸುದರ್ಶನಚಕ್ರದಿಂದ ಭಯಗೊಂಡು ದುರ್ವಾಸರು ಓಡಿಹೋದ ಅಂದಿನಿಂದ, ಅವರು ಮರಳಿ ಬರುವ ವೇಳೆಗೆ ಒಂದು ವರ್ಷ ಕಳೆದುಹೋಗಿತ್ತು. ಇಷ್ಟು ದಿನಗಳವರೆಗೂ ಅಂಬರೀಷರಾಜನು ಅವರ ದರ್ಶನದ ಆಕಾಂಕ್ಷೆಯಿಂದ ಕೇವಲ ನೀರು ಕುಡಿದು ಕೊಂಡೇ ಇದ್ದನು. ॥ ೨೩ ॥

ದುರ್ವಾಸರು ಹೊರಟುಹೋದ ಬಳಿಕ ಅವರು ಭೋಜನ ಮಾಡಿದ ಮೇಲೆ ಮಿಕ್ಕಿ ಉಳಿದಿರುವ ಅತ್ಯಂತ ಪವಿತ್ರವಾದ ಅನ್ನವನ್ನು ಅಂಬರೀಷನು ಊಟಮಾಡಿದನು. ತನ್ನ ಕಾರಣದಿಂದಲೇ ದುರ್ವಾಸರಿಗೆ ಉಂಟಾದ ದುಃಖ ಹಾಗೂ ತನ್ನ ಪ್ರಾರ್ಥನೆಯಿಂದಲೇ ಅದರ ನಿವೃತ್ತಿ ಎರಡೂ ತನ್ನಿಂದಲೇ ನಡೆದಿದ್ದರೂ, ಇದನ್ನು ಭಗವಂತನ ಮಹಿಮೆ ಎಂದೇ ಅಂಬರೀಷನು ತಿಳಿದನು. ॥ ೨೪ ॥ ಅಂಬರೀಷ ಮಹಾರಾಜನಲ್ಲಿ ಇಂತಹ ಅನೇಕ ಗುಣಗಳಿದ್ದವು. ತನ್ನ ಕರ್ಮಗಳ ಮೂಲಕ ಅವನು ಪರಬ್ರಹ್ಮ ಪರಮಾತ್ಮಾ ಶ್ರೀಭಗವಂತನಲ್ಲಿ ಭಕ್ತಿಭಾವವನ್ನು ಅಭಿವೃದ್ಧಿಪಡಿಸುತ್ತಲೇ ಇದ್ದನು. ಆ ಭಕ್ತಿಯ ಪ್ರಭಾವದಿಂದ ಅವನು ಬ್ರಹ್ಮಲೋಕದವರೆಗಿನ ಸಮಸ್ತ ಭೋಗಗಳನ್ನು ನರಕದಂತೆ ತಿಳಿಯುತ್ತಿದ್ದನು. ॥ ೨೫ ॥

ಆನಂತರ ಅಂಬರೀಷ ರಾಜನು ತನ್ನಂತೆಯೇ ಇದ್ದ ಭಕ್ತರಾದ ಪುತ್ರರಿಗೆ ರಾಜ್ಯವನ್ನು ಒಪ್ಪಿಸಿ, ಸ್ವತಃ ತಪಸ್ವಿಗಾಗಿ ಕಾಡಿಗೆ ತೆರಳಿದನು. ಅಲ್ಲಿ ಧೀರನಾದ ಅವನು ಅತ್ಯಸ್ವರೂಪನಾದ ವಾಸುದೇವನಲ್ಲಿ ತನ್ನ ಮನಸ್ಸನ್ನು ಲೀನಗೊಳಿಸಿ ಗುಣಗಳ ಪ್ರವಾಹರೂಪವಾದ ಪ್ರಪಂಚದಿಂದ ಮುಕ್ತನಾಗಿ ಹೋದನು. ॥ ೨೬ ॥ ಪರೀಕ್ಷಿತನೇ ! ಮಹಾರಾಜಾ ಅಂಬರೀಷನ ಈ ಆಖ್ಯಾನವು ಪರಮ ಪವಿತ್ರವಾಗಿದೆ. ಇದನ್ನು ಸಂಕೀರ್ತನೆ, ಸ್ಮರಣೆ ಮಾಡುವವನು ಅಂಬರೀಷನಂತೆ ಭಗವಂತನ ಭಕ್ತನಾಗಿ ಹೋಗುತ್ತಾನೆ. ॥ ೨೭ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಅಂಬರೀಷಚರಿತಂ ನಾಮ ಪಂಚಮೋऽಧ್ಯಾಯಃ॥ ೫ ॥

ಆರನೆಯ ಅಧ್ಯಾಯ

ಇಕ್ಷ್ವಾಕುವಂಶದ ವರ್ಣನೆ, ಮಾಂಧಾತಾ ಮತ್ತು ಸೌಭರೀ ಋಷಿಯ ಕಥೆ

ಶ್ರೀಶುಕ ಉವಾಚ

ವಿರೂಪಃ ಕೇತುಮಾಞ್ಛಂಭುರಂಬರೀಷಸುತಾಸ್ತ್ರಯಃ ।
ವಿರೂಪಾತ್ ಪೃಷದಶ್ವೋऽಭೂತ್ತತ್ಪುತ್ರಸ್ತು ರಥೀತರಃ
॥ ೧ ॥

ರಥೀತರಸ್ಯಾಪ್ರಜಸ್ಯ ಭಾರ್ಯಾಯಾಂ ತಂತವೇऽರ್ಥಿತಃ ।
ಅಂಗಿರಾ ಜನಯಾಮಾಸ ಬ್ರಹ್ಮವರ್ಚಸ್ವಿನಃ ಸುತಾನ್
॥ ೨ ॥

ಏತೇ ಕ್ಷೇತ್ರೇ ಪ್ರಸೂತಾ ವೈ ಪುನಸ್ತ್ವಾಂಗಿರಸಾಃ ಸ್ಮೃತಾಃ ।
ರಥೀತರಾಣಾಂ ಪ್ರವರಾಃ ಕ್ಷತ್ರೋಪೇತಾ ದ್ವಿಜಾತಯಃ
॥ ೩ ॥

ಕ್ಷುವತಸ್ತು ಮನೋರ್ಜಜ್ಞೇ ಇಕ್ಷ್ವಾಕುಶ್ಛಾರ್ಣಾತಃ ಸುತಃ ।
ತಸ್ಯ ಪುತ್ರಶತಜ್ಯೇಷ್ಠಾ ವಿಕುಕ್ಷಿನಿಮಿದಂಡಕಾಃ
॥ ೪ ॥

ತೇಷಾಂ ಪುರಸ್ತಾದಭವನ್ನಾರ್ಯಾವರ್ತೇ ನೃಪಾ ನೃಪ ।
ಪಂಚವಿಂಶತಿಃ ಪಶ್ಚಾಚ್ಚ ತ್ರಯೋ ಮಧ್ಯೇ ಪರೇऽನ್ಯತಃ
॥ ೫ ॥

ಸ ಏಕದಾಷ್ಟಕಾಶ್ರಾದ್ಧೇ ಇಕ್ಷ್ವಾಕುಃ ಸುತಮಾದಿಶತ್ ।
ಮಾಂಸಮಾನೀಯತಾಂ ಮೇಧ್ಯಂ ವಿಕುಕ್ಷೇ ಗಚ್ಛ ಮಾಚಿರಮ್
॥ ೬ ॥

ತಥೇತಿ ಸ ವನಂ ಗತ್ವಾ ಮೃಗಾನ್ಹತ್ವಾ ಕ್ರಿಯಾರ್ಹಣಾನ್ ।
ಶ್ರಾಂತೋ ಬುಭುಕ್ಷಿತೋ ವೀರಃ ಶಶಂ ಚಾದದಪಸ್ಮೃತಿಃ
॥ ೭ ॥

ಶೇಷಂ ನಿವೇದಯಾಮಾಸ ಪಿತ್ರೇ ತೇನ ಚ ತದ್ಗುರುಃ ।
ಚೋದಿತಃ ಪ್ರೋಕ್ಷಣಾಯಾಹ ದುಷ್ಟಮೇತದಕರ್ಮಕಮ್
॥ ೮ ॥

ಜ್ಞಾತ್ವಾ ಪುತ್ರಸ್ಯ ತತ್ಕರ್ಮ ಗುರುಣಾಭಿಹಿತಂ ನೃಪಃ ।
ದೇಶಾನ್ನಿಃಸಾರಯಾಮಾಸ ಸುತಂ ತ್ಯಕ್ತವಿಧಿಂ ರುಷಾ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಅಂಬರೀಷನಿಗೆ ವಿರೂಪ, ಕೇತುಮಾನ್ ಮತ್ತು ಶಂಭು ಎಂಬ ಮೂವರು ಪುತ್ರರಿದ್ದರು. ವಿರೂಪನ ಮಗ ಪೃಷದಶ್ವ ಹಾಗೂ ಪೃಷದಶ್ವನ ಪುತ್ರ ರಥೀತರನಾಗಿದ್ದನು. ॥ ೧ ॥ ರಥೀತರನು ಸಂತಾನ ಹೀನನಾಗಿದ್ದನು. ವಂಶಪರಂಪರೆಯ ರಕ್ಷಣೆಗಾಗಿ ಅವನು ಅಂಗೀರಸ ಮಹರ್ಷಿಯನ್ನು ಪ್ರಾರ್ಥಿಸಿದನು. ಅವನ ಪ್ರಾರ್ಥನೆಯಂತೆ ಅಂಗೀರಸನು ರಥೀತರನ ಕ್ಷೇತ್ರದಲ್ಲಿ ಬ್ರಹ್ಮವರ್ಚಸ್ವಿಗಳಾದ ಹಲವಾರು ಪುತ್ರರನ್ನು ಪಡೆದನು. ॥ ೨ ॥ ಇವರೆಲ್ಲರೂ ರಥೀತರನ ಕ್ಷೇತ್ರಜರಾದ್ದರಿಂದ ಇವರ ಗೋತ್ರವು ಅದೇ ಆಗ ಬೇಕಾಗಿತ್ತು. ಹೀಗಿದ್ದರೂ ಅವರು ಆಂಗೀರಸರೆಂದೇ ಕರೆಯಲ್ಪಟ್ಟರು. ಇವರೇ ರಥೀತರ ವಂಶದವರ ಪ್ರವರ (ಕುಲದಲ್ಲಿ ಸರ್ವ ಶ್ರೇಷ್ಠ ಪುರುಷ) ಪ್ರವರ್ತಕರಾದರು. ಏಕೆಂದರೆ, ಇವರು ಕ್ಷತ್ರೋಪೇತ ಬ್ರಾಹ್ಮಣರಾಗಿದ್ದರು. ಕ್ಷತ್ರಿಯರು ಮತ್ತು ಬ್ರಾಹ್ಮಣರು ಎರಡೂ ಗೋತ್ರಗಳೊಂದಿಗೆ ಇವರ ಸಂಬಂಧವಿತ್ತು. ॥ ೩ ॥

ಪರೀಕ್ಷಿತನೇ ! ಒಮ್ಮೆ ಮನುವು ಸೀನಿದಾಗ ಅವನ ಮೂಗಿನಿಂದ ಇಕ್ಷ್ವಾಕು ಎಂಬ ಮಗನು ಹುಟ್ಟಿದನು. ಇಕ್ಷ್ವಾಕುವಿಗೆ ನೂರುಮಂದಿ ಮಕ್ಕಳಿದ್ದರು. ಅವರಲ್ಲಿ ವಿಕುಕ್ಷಿ ನಿಮಿ ಮತ್ತು ದಂಡಕರೆಂಬ ಮೂವರು ಹಿರಿಯರಾಗಿದ್ದರು. ॥ ೪ ॥ ರಾಜೇಂದ್ರನೇ ! ಅವರಿಂದ ಕಿರಿಯವರಾದ ಇಪ್ಪತ್ತೈದು ಪುತ್ರರು ಆರ್ಯಾವರ್ತದ ಪೂರ್ವಭಾಗವನ್ನು ಮತ್ತು ಇಪ್ಪತ್ತೈದು ಮಂದಿ ಪಶ್ಚಿಮಭಾಗವನ್ನು ಆಳುತ್ತಿದ್ದರು. ವಿಕುಕ್ಷಿ ಮೊದಲಾದ ಮೂವರು ಮಧ್ಯಭಾಗಕ್ಕೆ ಅಧಿಪತಿಗಳಾದರು. ಉಳಿದ ನಲವತ್ತೇಳು ಮಂದಿ ದಕ್ಷಿಣೋತ್ತರ ಪ್ರಾಂತಕ್ಕೆ ಅಧಿಪತಿಗಳಾದರು. ॥ ೫ ॥ ಒಮ್ಮೆ ಇಕ್ಷ್ವಾಕುವು ಅಷ್ಟಕಾ ಶ್ರಾದ್ಧದ ಸಮಯದಲ್ಲಿ ತನ್ನ ಹಿರಿಯ ಮಗನಿಗೆ – 'ಎಲೈ ವಿಕುಕ್ಷಿಯೇ ! ಬೇಗನೇ ಹೋಗಿ ಶ್ರಾದ್ಧಕ್ಕೆ ಯೋಗ್ಯವಾದ ಮಾಂಸವನ್ನು ತೆಗೆದುಕೊಂಡು ಬಾ' ಎಂದು ಆಜ್ಞಾಪಿಸಿದನು. ॥ ೬ ॥ ವೀರ ವಿಕುಕ್ಷಿಯು 'ಹಾಗೆಯೇ ಆಗಲಿ' ಎಂದು ಹೇಳಿ ವನಕ್ಕೆ ಹೋದನು. ಅಲ್ಲಿ ಅವನು ಶ್ರಾದ್ಧಕ್ಕೆ ಯೋಗ್ಯವಾದ ಬಹಳಷ್ಟು ಪಶುಗಳನ್ನು ಬೇಟೆಯಾಡಿದನು. ಅವನು ತುಂಬಾ ಬಳಲಿದ್ದನು. ಹಸಿವೆಯೂ ಆಗಿತ್ತು. ಆದರಿಂದ ಶ್ರಾದ್ಧಕ್ಕಾಗಿ ಕೊಂದಿರುವ ಪಶುಗಳನ್ನು ಸ್ವತಃ ತಿನ್ನಬಾರದೆಂಬುದನ್ನು ಮರೆತು, ಅವನು ಒಂದು ಮೊಲದ ಮಾಂಸವನ್ನು ತಿಂದುಬಿಟ್ಟನು. ॥ ೭ ॥ ವಿಕುಕ್ಷಿಯು ಉಳಿದಿರುವ ಮಾಂಸವನ್ನು ತಂದು ತಂದೆಗೆ ಕೊಟ್ಟನು. ಇಕ್ಷ್ವಾಕುವು ಗುರುಗಳಿಗೆ ಅದನ್ನು ಪ್ರೋಕ್ಷಿಸಲು ಹೇಳಿದಾಗ, ಗುರುಗಳು ಹೇಳಿದರು – ಈ ಮಾಂಸವು ದೂಷಿತವಾಗಿದೆ ಹಾಗೂ ಶ್ರಾದ್ಧಕ್ಕೆ ಅಯೋಗ್ಯವಾಗಿದೆ. ॥ ೮ ॥ ಪರೀಕ್ಷಿತನೇ ! ಗುರುಗಳು ಹೇಳಿದಾಗ ಇಕ್ಷ್ವಾಕು ರಾಜನು ತನ್ನ ಮಗನನ್ನು ವಿಚಾರಿಸಿ, ಅವನ ಕೃತ್ಯವನ್ನು ತಿಳಿದುಕೊಂಡನು. ಶಾಸ್ತ್ರವಿಧಿಯನ್ನು ಉಲ್ಲಂಘಿಸಿದ ಪುತ್ರನನ್ನು ಕ್ರೋಧಗೊಂಡು ತನ್ನ ದೇಶದಿಂದಲೇ ಓಡಿಸಿಬಿಟ್ಟನು. ॥ ೯ ॥

ಸ ತು ವಿಪ್ರೇಣ ಸಂವಾದಂ ಜಾಪಕೇನ ಸಮಾಚರನ್ ।
ತ್ಯಕ್ತ್ವಾ ಕಲೇವರಂ ಯೋಗೀ ಸ ತೇನಾವಾಪ ಯತ್ಪರಮ್
॥ ೧೦ ॥

ಪಿತರ್ಯುಪರತೇಽಭ್ಯೇತ್ಯ ವಿಕುಕ್ಷಿಃ ಪೃಥಿವೀಮಿಮಾಮ್ ।
ಶಾಸದೀಜೇ ಹರಿಂ ಯಜ್ಞೈಃ ಶಶಾದ ಇತಿ ವಿಶ್ರುತಃ
॥ ೧೧ ॥

ಪುರಂಜಯಸ್ತಸ್ಯ ಸುತ ಇಂದ್ರವಾಹ ಇತೀರಿತಃ ।
ಕಕುತ್ಸ್ಥ ಇತಿ ಚಾಪ್ಯುಕ್ತಃ ಶೃಣು ನಾಮಾನಿ ಕರ್ಮಭಿಃ
॥ ೧೨ ॥

ಕೃತಾಂತ ಆಸೀತ್ಸಮರೋ ದೇವಾನಾಂ ಸಹ ದಾನವೈಃ ।
ಪಾರ್ಷ್ಣಿಗ್ರಾಹೋ ವೃತೋ ವೀರೋ ದೇವೈರ್ದೈತ್ಯಪರಾಜಿತೈಃ
॥ ೧೩ ॥

ವಚನಾದ್ದೇವದೇವಸ್ಯ ವಿಷ್ಣೋರ್ವಿಶ್ವಾತ್ಮನಃ ಪ್ರಭೋಃ ।
ವಾಹನತ್ವೇ ವೃತಸ್ತಸ್ಯ ಬಭೂವೇಂದ್ರೋ ಮಹಾವೃಷಃ
॥ ೧೪ ॥

ಸ ಸಂನದ್ಧೋ ಧನುರ್ದಿವ್ಯಮಾದಾಯ ವಿತಿಮಾಂಛಿತಾನ್ ।
ಸ್ತೂಯಮಾನಃ ಸಮಾರುಹ್ಯ ಯುಯುತ್ಸುಃ ಕಕುದಿ ಸ್ಥಿತಃ
॥ ೧೫ ॥

ತೇಜಸಾಽಽಪ್ಯಾಯಿತೋ ವಿಷ್ಣೋಃ ಪುರುಷಸ್ಯ ಪರಾತ್ಮನಃ ।
ಪ್ರತೀಚ್ಯಾಂ ದಿಶಿ ದೈತ್ಯಾನಾಂ ನ್ಯರುಣತ್ತ್ರಿದಶೈಃ ಪುರಮ್
॥ ೧೬ ॥

ತೈಸ್ತಸ್ಯ ಚಾಭೂತ್ಪ್ರಧನಂ ತುಮುಲಂ ಲೋಮಹರ್ಷಣಮ್ ।
ಯಮಾಯ ಭಲ್ಲೈರನಯದ್ಪ್ರೇತ್ಯಾನ್ಯೇಽಭಿಯಯುರ್ಮೃಧೇ
॥ ೧೭ ॥

ತೇಷೇಪುಪಾತಾಭಿಮುಖಂ ಯುಗಾಂತಾಗ್ನಿಮಿವೋಲ್ಬಣಮ್ ।
ವಿಸೃಜ್ಯ ದುದ್ರುವುರ್ದೈತ್ಯಾ ಹನ್ಯಮಾನಾಃ ಸ್ವಮಾಲಯಮ್
॥ ೧೮ ॥

ಜಿತ್ವಾ ಪುರಂ ಧನಂ ಸರ್ವಂ ಸಸ್ತ್ರೀಕಂ ವಜ್ರಪಾಣಯೇ ।
ಪ್ರತ್ಯಯಚ್ಛತ್ಸ ರಾಜರ್ಷಿರಿತಿ ನಾಮಭಿರಾಹೃತಃ
॥ ೧೯ ॥

ಪುರಂಜಯಸ್ಯ ಪುತ್ರೋಽಭೂದನೇನಾಸ್ತತ್ಸುತಃ ಪೃಥುಃ ।
ವಿಶ್ವರಂಧಿಸ್ತತಶ್ಚಂದ್ರೋ ಯುವನಾಶ್ವಶ್ಚ ತತ್ಸುತಃ
॥ ೨೦ ॥

ಆನಂತರ ರಾಜಾ ಇಕ್ಷ್ವಾಕುವು ತನ್ನ ಗುರುಗಳಾದ ವಸಿಷ್ಠರೊಡನೆ ಜ್ಞಾನದ ವಿಷಯವಾಗಿ ಚರ್ಚಿಸಿ ಜ್ಞಾನಿಯಾಗಿ ಯೋಗದ ಮೂಲಕ ಶರೀರವನ್ನು ಪರಿತ್ಯಜಿಸಿ ಅವನು ಪರಮಪದವನ್ನು ಪಡೆದು ಕೊಂಡನು. ॥ ೧೦ ॥ ತಂದೆಯ ದೇಹಾಂತವಾದಾಗ ವಿಕುಕ್ಷಿಯು ತನ್ನ ರಾಜಧಾನಿಗೆ ಮರಳಿ ಈ ಪೃಥಿವಿಯ ಶಾಸನವನ್ನು ಮಾಡತೊಡಗಿದನು. ಅವನು ಹಲವಾರು ಯಜ್ಞಗಳಿಂದ ಭಗವಂತನನ್ನು ಆರಾಸಿದನು. ಜಗತ್ತಿನಲ್ಲಿ ಅವನು ಶಶಾದ ಎಂಬ ಹೆಸರಿನಿಂದ ಪ್ರಸಿದ್ಧನಾದನು. ॥ ೧೧ ॥ ವಿಕುಕ್ಷಿಯ ಪುತ್ರನ ಹೆಸರು ಪುರಂಜಯನೆಂದಿತ್ತು. ಅವನನ್ನೇ ಕೆಲವರು 'ಇಂದ್ರವಾಹ' ಮತ್ತು ಕೆಲವರು 'ಕಕುಸ್ಥ' ಎಂದು ಹೇಳುತ್ತಿದ್ದರು. ಯಾವ ಕರ್ಮಗಳಿಂದ ಇವನಿಗೆ ಈ ಹೆಸರುಗಳು ಬಂತೆಂಬುದನ್ನು ಕೇಳು. ॥ ೧೨ ॥

ಸತ್ಯಯುಗದ ಕೊನೆಯಲ್ಲಿ ದೇವ-ದಾನವರ ಘನಘೋರ ಸಂಗ್ರಾಮವಾಗಿತ್ತು. ಅದರಲ್ಲಿ ಎಲ್ಲ ದೇವತೆಗಳು ದೈತ್ಯರಿಂದ ಪರಾಭವಗೊಂಡರು. ಆಗ ದೇವತೆಗಳು ವೀರ ಪುರಂಜಯನನ್ನು ಸಹಾಯಕ್ಕಾಗಿ ತಮ್ಮ ಮಿತ್ರನನ್ನಾಗಿಸಿಕೊಂಡರು. ॥ ೧೩.॥ ಪುರಂಜಯನು ಹೇಳಿದನು – 'ದೇವೇಂದ್ರನು ನನಗೆ ವಾಹನನಾದರೆ ನಾನು ಯುದ್ಧವನ್ನು ಮಾಡಬಲ್ಲೆನು.' ಮೊದಲಿಗೆ ದೇವೇಂದ್ರನು ನಿರಾಕರಿಸಿದನು. ಆದರೆ ದೇವತೆಗಳ ಆರಾಧ್ಯದೇವನಾದ ಸರ್ವಶಕ್ತಿ ವಂತನಾದ ವಿಶ್ವಾತ್ಮಾ ಭಗವಂತನ ಮಾತನ್ನು ಮನ್ನಿಸಿ ಇಂದ್ರನು ಒಂದು ದೊಡ್ಡ ಎತ್ತಾಗಿ ಪರಿವರ್ತನೆಗೊಂಡನು. ॥ ೧೪ ॥ ಸರ್ವಾಂತರ್ಯಾಮಿಯಾದ ಭಗವಾನ್ ವಿಷ್ಣುವು ಪುರಂಜಯನಲ್ಲಿ ತನ್ನ ಶಕ್ತಿಯನ್ನು ತುಂಬಿದನು. ಅವನು ಕವಚವನ್ನು ಧರಿಸಿ ಕೊಂಡು ದಿವ್ಯ ಧನುಸ್ಸು ಮತ್ತು ಹರಿತವಾದ ಬಾಣಗಳನ್ನೆತ್ತಿ ಕೊಂಡನು. ಆನಂತರ ಆ ಎತ್ತನ್ನು ಏರಿ ಅವನು ಅದರ ಹಿಳಿಲಿನ (ಕಕುದ್) ಹತ್ತಿರ ಕುಳಿತನು. ಹೀಗೆ ಅವನು ಯುದ್ಧಕ್ಕಾಗಿ ಸಿದ್ಧನಾದಾಗ ದೇವತೆಗಳು ಅವನನ್ನು ಸ್ತುತಿಸತೊಡಗಿದರು. ದೇವತೆಗಳನ್ನು ಜೊತೆಯಾಗಿಸಿಕೊಂಡು ಅವನು ಪಶ್ಚಿಮ ದಿಕ್ಕಿನಿಂದ ದೈತ್ಯರ ನಗರವನ್ನು ಆಕ್ರಮಿಸಿದನು. ॥ ೧೫-೧೬ ॥ ವೀರ ಪುರಂಜನಯನಿಗೂ ದೈತ್ಯರಿಗೂ ಅತ್ಯಂತ ಘೋರ ರೋಮಾಂಚಕಾರಿ ಸಂಗ್ರಾಮ ನಡೆಯಿತು. ಯುದ್ಧದಲ್ಲಿ ತನ್ನೆದುರಿಗೆ ಬಂದ ದೈತ್ಯರೆಲ್ಲರನ್ನು ಪುರಂಜಯನು ಬಾಣಗಳಿಂದ ಯಮಸದನಕ್ಕೆ ಅಟ್ಟಿದನು. ॥೧೭॥ ಪ್ರಳಯಕಾಲದಲ್ಲಾಗುವ ಭಯಂಕರ ಅಗ್ನಿವರ್ಷದಂತೆ ಅವನು ಬಾಣಗಳ ಮಳೆಗರೆದನು. ಅವನೆದುರಿಗೆ ಬಂದ ದೈತ್ಯರು ಛಿನ್ನ-ಭಿನ್ನರಾಗುತ್ತಿದ್ದರು. ದೈತ್ಯರ ಪರಾಕ್ರಮ ತಗ್ಗಿಹೋಯಿತು. ಅವರು ರಣಾಂಗಣ ಬಿಟ್ಟು ಓಡಿಹೋಗಿ ತಮ್ಮ-ತಮ್ಮ ಮನೆಗಳಲ್ಲಿ ಅವಿತುಕೊಂಡರು. ॥ ೧೮ ॥ ಪುರಂಜಯನು ಅವರ ನಗರ, ಧನ, ಐಶ್ವರ್ಯ ಎಲ್ಲವನ್ನು ಗೆದ್ದು ಇಂದ್ರನಿಗೆ ಕೊಡಿಸಿದನು. ಇದರಿಂದ ಆ ರಾಜರ್ಷಿಗೆ ಪುರವನ್ನು ಗೆದ್ದಿರುವುದರಿಂದ 'ಪುರಂಜಯ' ನೆಂದೂ, ಇಂದ್ರನನ್ನು ವಾಹನನನ್ನಾಗಿಸಿದ್ದರಿಂದ 'ಇಂದ್ರವಾಹ' ನೆಂದೂ, ಎತ್ತಿನ ಭುಜದ ಮೇಲೆ ಕುಳಿತಿದ್ದರಿಂದ 'ಕಕುಸ್ಥ' ಎಂದೂ ಹೇಳಲಾಗುತ್ತದೆ. ॥ ೧೯ ॥

ಪುರಂಜಯನಿಗೆ ಅನೇನಸನೆಂಬ ಪುತ್ರನಿದ್ದನು. ಆವನ ಪುತ್ರ ಪೃಥು ಆದನು. ಪೃಥುವಿಗೆ ವಿಶ್ವರಂಧಿ, ಆವನಿಂದ ಚಂದ್ರ, ಚಂದ್ರನಿಂದ ಯುವನಾಶ್ವನಾದನು. ॥ ೨೦ ॥

ಶಾಬಸ್ತಸ್ತತ್ಸುತೋ ಯೇನ ಶಾಬಸ್ತೀ ನಿರ್ಮಮೇ ಪುರೀ ।
ಬೃಹದಶ್ವಸ್ತು ಶಾಬಸ್ತಿಸ್ತತಃ ಕುವಲಯಾಶ್ವಕಃ
॥ ೨೧ ॥

ಯಃ ಪ್ರಿಯಾರ್ಥಮುತಂಕಸ್ಯ ಧುಂಧುನಾಮಾಸುರಂ ಬಲೀ ।
ಸುತಾನಾಮೇಕವಿಂಶತ್ಯಾ ಸಹಸ್ರೈರಹನದ್ವೃತಃ
॥ ೨೨ ॥

ಧುಂಧುಮಾರ ಇತಿ ಖ್ಯಾತಸ್ತತ್ಸುತಾಸ್ತೇ ಚ ಜಜ್ವಲುಃ ।
ಧುಂಧೋರ್ಮುಖಾಗ್ನಿನಾ ಸರ್ವೇ ತ್ರಯ ಏವಾವಶೇಷಿತಾಃ
॥ ೨೩ ॥

ದೃಢಾಶ್ವಃ ಕಪಿಲಾಶ್ವಶ್ಚ ಭದ್ರಾಶ್ವ ಇತಿ ಭಾರತ ।
ದೃಢಾಶ್ವಪುತ್ರೋ ಹರ್ಯಶ್ವೋ ನಿಕುಂಭಸ್ತತ್ಸುತಃ ಸ್ಮೃತಃ
॥ ೨೪ ॥

ಬರ್ಹಣಾಶ್ವೋ ನಿಕುಂಭಸ್ಯ ಕೃಶಾಶ್ವೋಽಥಾಸ್ಯ ಸೇನಜಿತ್ ।
ಯುವನಾಶ್ವೋಽಭವತ್ತಸ್ಯ ಸೋಽನಪತ್ಯೋ ವನಂ ಗತಃ
॥ ೨೫ ॥

ಭಾರ್ಯಾಶತೇನ ನಿರ್ವಿಣ್ಣ ಋಷಯೋಽಸ್ಯ ಕೃಪಾಲವಃ ।
ಇಷ್ಟಿಂ ಸ್ಮ ವರ್ತಯಾಂಚಕ್ರುರೈಂದ್ರೀಂ ತೇ ಸುಸಮಾಹಿತಾಃ
॥ ೨೬ ॥

ರಾಜಾ ತದ್ಯಜ್ಞಸದನಂ ಪ್ರವಿಷ್ಟೋ ನಿಶಿ ತರ್ಷಿತಃ ।
ದೃಷ್ಟ್ವಾಶಯಾನಾನ್ವಿಪ್ರಾಂಸ್ತಾನ್ಪಪೌ ಮಂತ್ರಜಲಂ ಸ್ವಯಮ್
॥ ೨೭ ॥

ಉತ್ಥಿತಾಸ್ತೇ ನಿಶಾಮ್ಯಾಥ ವ್ಯುದಕಂ ಕಲಶಂ ಪ್ರಭೋ ।
ಪಪ್ರಚ್ಛುಃ ಕಸ್ಯ ಕರ್ಮೇದಂ ಪೀತಂ ಪುಂಸವನಂ ಜಲಮ್
॥ ೨೮ ॥

ರಾಜ್ಞಾ ಪೀತಂ ವಿದಿತ್ವಾಥ ಈಶ್ವರಪ್ರಹಿತೇನ ತೇ ।
ಈಶ್ವರಾಯ ನಮಶ್ಚಕ್ರುರಹೋ ದೈವಬಲಂ ಬಲಮ್
॥ ೨೯ ॥

ತತಃ ಕಾಲ ಉಪಾವೃತ್ತೇ ಕುಕ್ಷಿಂ ನಿರ್ಭಿದ್ಯ ದಕ್ಷಿಣಮ್ ।
ಯುವನಾಶ್ವಸ್ಯ ತನಯಶ್ಚಕ್ರವರ್ತೀ ಜಜಾನ ಹ
॥ ೩೦ ॥

ಕಂ ಧಾಸ್ಯತಿ ಕುಮಾರೋಽಯಂ
ಸ್ತನ್ಯಂ ರೋರೂಯತೇ ಭೃಶಮ್ ।
ಮಾಂ ಧಾತಾ ವತ್ಸ ಮಾ ರೋದೀ-
ರಿತೀಂದ್ರೋ ದೇಶಿನೀಮದಾತ್ ॥ ೩೧ ॥

ನ ಮಮಾರ ಪಿತಾ ತಸ್ಯ ವಿಪ್ರದೇವಪ್ರಸಾದತಃ ।
ಯುವನಾಶ್ವೋಽಥ ತತ್ಸೈವ ತಪಸಾ ಸಿದ್ಧಿಮನ್ವಗಾತ್
॥ ೩೨ ॥

ಯುವನಾಶ್ವನ ಪುತ್ರ ಶಾಬಸ್ತನಾದನು. ಅವನು ಶಾಬಸ್ತಿ ಎಂಬ ಪಟ್ಟಣವನ್ನು ನಿರ್ಮಿಸಿದನು. ಶಾಬಸ್ತನಿಗೆ ಬೃಹದಶ್ವ ಹುಟ್ಟಿದನು. ಅವನಿಗೆ ಕುವಲಯಾಶ್ವನಾದನು. ॥ ೨೧ ॥ ಇವನು ಮಹಾ ಬಲಾಢ್ಯನಾಗಿದ್ದನು. ಇವನು ಉತಂಕ ಋಷಿಯನ್ನು ಸಂತೋಷ ಪಡಿಸಲು ತನ್ನ ಇಪ್ಪತ್ತೊಂದುಸಾವಿರ ಪುತ್ರರೊಂದಿಗೆ ಧುಂಧು ಎಂಬ ದೈತ್ಯನನ್ನು ವಧಿಸಿದನು. ॥ ೨೨ ॥ ಇದರಿಂದ ಆವನ ಹೆಸರು ಧುಂಧುಮಾರ ಎಂದಾಯಿತು. ಧುಂಧುದೈತ್ಯನ ಮುಖಾಗ್ನಿ ಯಿಂದ ಅವನ ಎಲ್ಲ ಪುತ್ರರು ಸುಟ್ಟುಹೋಗಿ ಕೇವಲ ಮೂವರು ಮಾತ್ರ ಉಳಿದರು. ॥ ೨೩ ॥ ಪರೀಕ್ಷಿತನೇ! ದೃಢಾಶ್ವ, ಕಪಿಲಾಶ್ವ ಮತ್ತು ಭದ್ರಾಶ್ವ ಇವರೇ ಆ ಉಳಿದ ಮೂವರು ಪುತ್ರರು. ದೃಢಾಶ್ವ ನಿಂದ ಹರ್ಯಶ್ವ ಹಾಗೂ ಅವನಿಂದ ನಿಕುಂಭನ ಜನ್ಮ ವಾಯಿತು. ॥ ೨೪ ॥ ನಿಕುಂಭನ ಮಗ ಬರ್ಹಣಾಶ್ವ, ಬರ್ಹಣಾಶ್ವನ ಮಗ ಕೃಶಾಶ್ವ, ಕೃಶಾಶ್ವನಿಂದ ಸೇನಜಿತ್, ಸೇನಜಿತ್ತುವಿನಿಂದ ಯುವನಾಶ್ವನಾದನು. ಯುವನಾಶ್ವನು ಸಂತಾನಹೀನನಾದ್ದರಿಂದ ಬಹಳ ದುಃಖಿತನಾಗಿ ತನ್ನ ನೂರು ಪತ್ನಿಯರೊಂದಿಗೆ ಕಾಡಿಗೆ ಹೊರಟು ಹೋದನು. ಅಲ್ಲಿ ಋಷಿಗಳು ಇವನ ಮೇಲೆ ಕೃಪೆಗೈದು ಯುವನಾಶ್ವನಿಂದ ಪುತ್ರಪ್ರಾಪ್ತಿಗಾಗಿ ಇಂದ್ರದೇವತಾತ್ಮಕವಾದ ಯಜ್ಞವನ್ನು ಮಾಡಿಸಿದರು. ॥ ೨೫-೨೬ ॥ ಒಂದು ದಿನ ಯುವನಾಶ್ವನಿಗೆ ರಾತ್ರಿಯಲ್ಲಿ ತುಂಬಾ ಬಾಯಾರಿಕೆ ಉಂಟಾಯಿತು. ಅವನು ಯಜ್ಞಶಾಲೆಗೆ ಹೋಗಿ ನೋಡಲು ಋಷಿಗಳೆಲ್ಲರೂ ಮಲಗಿದ್ದರು. ನೀರು ಎಲ್ಲಿಯೂ ಸಿಗದೆ ಕೊನೆಗೆ ಋಷಿಗಳು ಅಭಿಮಂತ್ರಿಸಿ ಇಟ್ಟಿದ್ದ ನೀರನ್ನು ಕುಡಿದುಬಿಟ್ಟನು. ॥ ೨೭ ॥ ಪರೀಕ್ಷಿತನೇ! ಪ್ರಾತಃಕಾಲದಲ್ಲಿ ಎದ್ದು ಋಷಿಗಳು ನೋಡಿದಾಗ ಕಲಶದಲ್ಲಿ ಮಂತ್ರಪೂತವಾದ ನೀರು ಇರಲಿಲ್ಲ, ಪುತ್ರೋತ್ಪತ್ತಿಕರವಾದ ನೀರನ್ನು ಕುಡಿದು ಬಿಟ್ಟಿದ್ದಾರೆ! ಇದು ಯಾರ ಕೆಲಸ ? ಎಂದು ಕೇಳಿದರು. ॥ ೨೮ ॥ ಭಗವಂತನ ಪ್ರೇರಣೆಯಿಂದ ರಾಜ ಯುವನಾಶ್ವನೇ ಆ ನೀರನ್ನು ಕುಡಿದಿರು ವನು ಎಂದು ಕಡೆಗೆ ತಿಳಿದಾಗ ಆ ಋಷಿಗಳು ಭಗವಂತನ ಚರಣಗಳಿಗೆ ನಮಸ್ಕಾರಮಾಡಿ, 'ಆಹಾ ! ಇದು ಭಗವಂತನ ಇಚ್ಛೆಯೇ ಎಂದು ತಿಳಿದರು. ॥ ೨೯ ॥ ಇದಾದ ಬಳಿಕ ಪ್ರಸವದ ಸಮಯ ಬಂದಾಗ ಯುವನಾಶ್ವನ ಹೊಟ್ಟೆಯ ಬಲಭಾಗವನ್ನು ಭೇದಿಸಿಕೊಂಡು ಚಕ್ರವರ್ತಿಯಾಗಲಿದ್ದ ಒಂದು ಗಂಡು ಶಿಶುವು ಹೊರಬಂದಿತು. ॥ ೩೦ ॥ ಅದು ಅಳುತ್ತಿರುವುದನ್ನು ಕಂಡು ಋಷಿಗಳು – 'ಈ ಮಗು ಹಾಲಿಗಾಗಿ ಅಳುತ್ತಿದೆ. ಇದಕ್ಕೆ ಯಾರು ಹಾಲು ಕುಡಿಸುವರು ?' ಎಂದು ವಿಚಾರಿಸಿದಾಗ ಇಂದ್ರನು ಹೇಳಿದನು – ನನ್ನ ಹಾಲನ್ನು (ಅಮೃತವನ್ನೇ) ಕುಡಿಯುವನು' (ಮಾಂ ಧಾಶಾ) ಮಗೂ ! ಅಳಬೇಡ ! ಹೀಗೆ ಹೇಳಿ ಇಂದ್ರನು ತನ್ನ ಅಮೃತಮಯವಾದ ತೋರುಬೆರಳನ್ನು ಮಗುವಿನ ಬಾಯಿಗೆ ಇಟ್ಟನು. ॥ ೩೧ ॥ ಬ್ರಾಹ್ಮಣರ ಮತ್ತು ದೇವತೆಗಳ ವರಪ್ರಸಾದ ದಿಂದ ಹೊಟ್ಟೆಯು ಸೀಳಿ ಹೋಗಿದ್ದರೂ ಯುವನಾಶ್ವನು ಸಾಯಲಿಲ್ಲ, ಅವನು ಅಲ್ಲೇ ತಪಸ್ಸು ಮಾಡಿ ಮುಕ್ತನಾಗಿ ಹೋದನು. ॥ ೩೨ ॥

ತ್ರಸದ್ದಸ್ಯುರಿತೀಂದ್ರೋಽಂಗ ವಿದಧೇ ನಾಮ ತಸ್ಯ ವೈ।
ಯಸ್ಮಾತ್ತ್ರಸಂತಿ ಹ್ಯುದ್ವಿಗ್ನಾ ದಸ್ಯವೋ ರಾವಣಾದಯಃ
॥ ೩.೩ ॥

ಯೌವನಾಶ್ವೋಽಥ ಮಾಂಧಾತಾ ಚಕ್ರವರ್ತ್ಯವನೀಂ ಪ್ರಭುಃ।
ಸಪ್ತದ್ವೀಪವತೀಮೇಕಃ ಶಶಾಸಾಚ್ಯುತತೇಜಸಾ
॥ ೩.೪ ॥

ಈಜೇ ಚ ಯಜ್ಞಂ ಕ್ರತುಭಿರಾತ್ಮವಿದ್ಭೂರಿದಕ್ಷಿಣೈಃ।
ಸರ್ವದೇವಮಯಂ ದೇವಂ ಸರ್ವಾತ್ಮಕಮತೀಂದ್ರಿಯಮ್
॥ ೩.೫ ॥

ದ್ರವ್ಯಂ ಮಂತ್ರೋ ವಿಧಿರ್ಯಜ್ಞೋ ಯಜಮಾನಸ್ತಥರ್ತ್ವಿಜಃ।
ಧರ್ಮೋ ದೇಶಶ್ಚ ಕಾಲಶ್ಚ ಸರ್ವಮೇತದ್ಯದಾತ್ಮಕಮ್
॥ ೩.೬ ॥

ಯಾವತ್ಸೂರ್ಯ ಉದೇತಿ ಸ್ಮ ಯಾವಚ್ಚ ಪ್ರತಿತಿಷ್ಠತಿ।
ಸರ್ವಂ ತದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ
॥ ೩.೭ ॥

ಶಶಬಿಂದೋರ್ದುಹಿತರಿ ಬಿಂದುಮತ್ಯಾಮಧಾನ್ನೃಪಃ।
ಪುರುಕುತ್ಸಮಂಬರೀಷಂ ಮುಚುಕುಂದಂ ಚ ಯೋಗಿನಮ್।
ತೇಷಾಂ ಸ್ವಸಾರಃ ಪಂಚಾಶತ್ಸೌಭರಿಂ ವವ್ರಿರೇ ಪತಿಮ್
॥ ೩.೮ ॥

ಯಮುನಾಂತರ್ಜಲೇ ಮಗ್ನಸ್ತಪ್ಯಮಾನಃ ಪರಂತಪಃ।
ನಿರ್ಯಂತಂ ಮೀನರಾಜಸ್ಯ ವೀಕ್ಷ್ಯ ಮೈಥುನಧರ್ಮಿಣಃ
॥ ೩.೯ ॥

ಜಾತಸ್ಪೃಹೋ ನೃಪಂ ವಿಪ್ರಃ ಕನ್ಯಾಮೇಕಾಮಯಾಚತ।
ಸೋಽಪ್ಯಾಹ ಗೃಹ್ಯತಾಂ ಬ್ರಹ್ಮನ್ನಾಮಂ ಕನ್ಯಾ ಸ್ವಯಂವರೇ
॥ ೪೦ ॥

ಸ ವಿಚಿಂತ್ಯಾಪ್ರಿಯಂ ಸ್ತ್ರೀಣಾಂ ಜರತೋಽಯಮಸಂಮತಃ।
ವಲೀಪಲಿತ ಏಜತ್ಕ ಇತ್ಯಹಂ ಪ್ರತ್ಯುದಾಹೃತಃ
॥ ೪೧ ॥

ಸಾಧಯಿಷ್ಯೇ ತಥಾಽಽತ್ಮಾನಂ ಸುರಸ್ತ್ರೀಣಾಮಪೀಪ್ಸಿತಮ್।
ಕಿಂ ಪುನರ್ಮನುಜೇಂದ್ರಾಣಾಮಿತಿ ವ್ಯವಸಿತಃ ಪ್ರಭುಃ
॥ ೪೨ ॥

ಪರೀಕ್ಷಿತನೇ! ಇಂದ್ರನು ಆ ಬಾಲಕನ ಹೆಸರನ್ನು 'ತ್ರಸದಸ್ಯು' ಎಂದಿಟ್ಟನು. ಏಕೆಂದರೆ, ರಾವಣನೇ ಮೊದಲಾದ ದುಷ್ಟರು ಅವನಿಂದ ಉದ್ವಿಗ್ನರಾಗಿ ಭಯಪಡುತ್ತಿದ್ದರು. ॥ ೩.೩ ॥ ಯುವನಾಶ್ವನ ಪುತ್ರ ಮಾಂಧಾತನು (ತ್ರಸದಸ್ಯು) ಚಕ್ರವರ್ತಿ ರಾಜನಾದನು. ಭಗವಂತನ ತೇಜಸ್ಸಿನಿಂದ ಸಂಪನ್ನನಾಗಿದ್ದ ಅವನು ಸಪ್ತದ್ವೀಪದಿಂದ ಒಡಗೂಡಿದ ಇಡೀ ಪೃಥಿವಿಯನ್ನು ಆಳಿದನು. ॥ ೩.೪ ॥ ಅವನು ಆತ್ಮಜ್ಞಾನಿಯಾಗಿದ್ದನು. ಅವನಿಗೆ ಕರ್ಮ ಕಾಂಡದ ಯಾವುದೇ ಆವಶ್ಯಕತೆ ಇಲ್ಲದಿದ್ದರೂ ಅವನು ಬಹು ದಕ್ಷಿಣೆಗಳುಳ್ಳ ಯಜ್ಞಗಳಿಂದ ಸ್ವಯಂಪ್ರಕಾಶನೂ, ಸರ್ವದೇವ ಸ್ವರೂಪನೂ, ಸರ್ವಾತ್ಮನೂ, ಇಂದ್ರಿಯಾತೀತನೂ ಆದ ಯಜ್ಞ ಸ್ವರೂಪೀ ಪ್ರಭುವನ್ನು ಆರಾಧಿಸಿದನು. ॥ ೩.೫ ॥ ಭಗವಂತನಿಂದ ಬೇರೆಯಾದುದು ಪ್ರಪಂಚದಲ್ಲಿ ಇನ್ನೇನಿದೆ? ಯಜ್ಞದ ಸಾಮಗ್ರಿ, ಮಂತ್ರ, ವಿಧಿ – ವಿಧಾನ, ಯಜ್ಞ, ಯಜಮಾನ, ಋತ್ವಿಜರು, ಧರ್ಮ, ದೇಶ – ಕಾಲ – ಇವೆಲ್ಲವೂ ಭಗವಂತನ ಸ್ವರೂಪವೇ ಆಗಿದೆಯಲ್ಲ! ॥ ೩.೬ ॥ ಪರೀಕ್ಷಿತನೇ! ಸೂರ್ಯನು ಉದಯಿಸುವ ಮತ್ತು ಅಸ್ತವಾಗುವ ಸಮಸ್ತ ಭೂಭಾಗವೂ ಯುವನಾಶ್ವಪುತ್ರ ಮಾಂಧಾತನ ಆಳ್ವಿಕೆಯಲ್ಲಿತ್ತು. ॥ ೩.೭ ॥

ಚಕ್ರವರ್ತಿ ಮಾಂಧಾತನಿಗೆ ಶಶಬಿಂದುವಿನ ಪುತ್ರಿ 'ಬಿಂದುಮತಿ' ಎಂಬುವಳು ಪತ್ನಿಯಾಗಿದ್ದಳು. ಅವಳಿಂದ ಪುರುಕುತ್ಸ ಅಂಬರೀಷ (ಇವನು ಇನ್ನೊಬ್ಬ ಅಂಬರೀಷ) ಮತ್ತು ಯೋಗೀ ಮುಚುಕುಂದ ಎಂಬ ಮೂವರು ಪುತ್ರರು ಹುಟ್ಟಿದರು. ಅವರಿಗೆ ಐವತ್ತು ಮಂದಿ ತಂಗಿಯರಿದ್ದರು. ಆ ಐವತ್ತು ಮಂದಿಯೂ ಒಬ್ಬನೇ ಸೌಭರಿ ಋಷಿಯನ್ನು ಪತಿಯನ್ನಾಗಿ ವರಿಸಿದರು. ॥ ೩.೮ ॥ ಪರಮ ತಪಸ್ವಿಯಾದ ಸೌಭರಿಋಷಿಯು ಒಮ್ಮೆ ಯಮುನೆಯಲ್ಲಿ ಮುಳುಗಿ ತಪಸ್ಸು ಮಾಡುತ್ತಿದ್ದನು. ಒಂದು ದಿನ ಗಂಡುಮೀನೊಂದು ಹೆಣ್ಣು ಮೀನುಗಳೊಡನೆ ಸರಸವಾಡುತ್ತಿರುವುದನ್ನು ಅವನು ನೋಡಿದನು. ಅದರ ಈ ಸರಸವಿಲಾಸವನ್ನು ಕಂಡು ಸೌಭರಿಯ ಮನಸ್ಸಿನಲ್ಲಿಯೂ ತಾನು ವಿವಾಹ ಮಾಡಿಕೊಳ್ಳಬೇಕೆಂಬ ಇಚ್ಛೆಯು ಜಾಗ್ರತವಾಯಿತು. ಅವನು ಮಾಂಧಾತರಾಜನಲ್ಲಿಗೆ ಹೋಗಿ ಐವತ್ತು ಕನ್ಯೆಯರಲ್ಲಿ ಒಂದು ಕನ್ಯೆಯನ್ನು ಯಾಚಿಸಿದನು. ರಾಜನೆಂದ – ಬ್ರಾಹ್ಮಣೋತ್ತಮರೇ! ಕನ್ಯೆಯು ಸ್ವಯಂವರದಲ್ಲಿ ನಿಮ್ಮನ್ನು ವರಿಸಿದರೆ ತಾವು ಅವಳನ್ನು ಕೊಂಡುಹೋಗಿರಿ. ॥ ೪೦ ॥ ಸೌಭರಿಋಷಿಯು ಮಾಂಧಾತನ ಅಭಿಪ್ರಾಯವನ್ನು ಅರಿತು ಕೊಂಡನು. ಈಗ ನಾನು ಮುದುಕನಾಗಿದ್ದೇನೆ. ಶರೀರದಲ್ಲಿ ನೆರಿಗೆಗಳು ಬಿದ್ದಿವೆ. ಕೂದಲು ಹಣ್ಣಾಗಿವೆ. ತಲೆ ನಡುಗುತ್ತಿದೆ. ಆಗ ಯಾವ ಸ್ತ್ರೀಯೂ ನನ್ನನ್ನು ಪ್ರೇಮಿಸಲಾರಳು ಎಂದು ರಾಜನು ತಿಳಿದುದರಿಂದ ಹೀಗೆ ಹಾರಿಕೆಯ ಉತ್ತರ ನೀಡಿರುವನು ಎಂದು ಯೋಚಿಸಿದರು. ॥ ೪೧ ॥ ಇರಲಿ! ರಾಜಕನ್ಯೆಯರೇನು ದೇವಾಂಗನೆಯರೂ ಕೂಡ ನನ್ನನ್ನು ನೋಡಿ ಮೋಹಗೊಳ್ಳುವಂತಹ ಸುಂದರ ಶರೀರವನ್ನು ಧರಿಸುವೆನು ಎಂಬುದಾಗಿ ಅಂದುಕೊಂಡು ಹಾಗೆಯೇ ಮಾಡಿದನು. ॥ ೪೨ ॥

ಮುನಿಃ ಪ್ರವೇಶಿತಃ ಕ್ಷತ್ತ್ರಾ ಕನ್ಯಾಂತಃಪುರಮೃದ್ಧಿಮತ್ ।
ವೃತಶ್ಚ ರಾಜಕನ್ಯಾಭಿರೇಕಃ ಪಂಚಾಶತಾ ವರಃ
॥ ೪೩ ॥

ತಾಸಾಂ ಕಲಿರಭೂದ್ಭೂಯಾಂ-
ಸ್ತದರ್ಥೇಽಪೋಹ್ಯ ಸೌಹೃದಮ್ ।
ಮಮಾನುರೂಪೋ ನಾಯಂ ವ
ಇತಿ ತದ್ಗತಚೇತಸಾಮ್ ॥ ೪೪ ॥

ಸ ಬಹ್ವೃಚಸ್ತಾಭಿರಪಾರಣೀಯ-
ತಪಃ ಶ್ರಿಯಾನರ್ಘ್ಯಪರಿಚ್ಛದೇಷು ।
ಗೃಹೇಷು ನಾನೋಪವನಾಮಲಾಂಭಃ-
ಸರಸ್ಸು ಸೌಗಂಧಿಕಕಾನನೇಷು ॥ ೪೫ ॥

ಮಹಾರ್ಹಶಯ್ಯಾಸನವಸ್ತ್ರಭೂಷಣ-
ಸ್ನಾನಾನುಲೇಪಾಭ್ಯವಹಾರಮಾಲ್ಯಕೈಃ ।
ಸ್ವಲಂಕೃತಸ್ತ್ರೀಪುರುಷೇಷು ನಿತ್ಯದಾ
ರೇಮೇಽನುಗಾಯದ್ದ್ವಿಜಭೃಂಗವಂದಿಷು ॥ ೪೬ ॥

ಯದ್ಗಾರ್ಹಸ್ಥ್ಯಂ ತು ಸಂವೀಕ್ಷ್ಯ ಸಪ್ತದ್ವೀಪವತೀಪತಿಃ ।
ವಿಸ್ಮಿತಃ ಸ್ತಂಭಮಜಹಾತ್ಸಾರ್ವಭೌಮಶ್ರಿಯಾನ್ವಿತಮ್
॥ ೪೭ ॥

ಏವಂ ಗೃಹೇಷ್ವಭಿರತೋ ವಿಷಯಾನ್ವಿವಿಧೈಃ ಸುಖೈಃ ।
ಸೇವಮಾನೋ ನ ಚಾತುಷ್ಯದಾಜ್ಯಸ್ತೋಕೈರಿವಾನಲಃ
॥ ೪೮ ॥

ಸ ಕದಾಚಿದುಪಾಸೀನ ಆತ್ಮಾಪಹ್ನವಮಾತ್ಮನಃ ।
ದದರ್ಶ ಬಹ್ವೃಚಾಚಾರ್ಯೋ ಮೀನಸಂಗಸಮುತ್ಥಿತಮ್
॥ ೪೯ ॥

ಅಹೋ ಇಮಂ ಪಶ್ಯತ ಮೇ ವಿನಾಶಂ
ತಪಸ್ವಿನಃ ಸಚ್ಚರಿತವ್ರತಸ್ಯ ।
ಅಂತರ್ಜಲೇ ವಾರಿಚರಪ್ರಸಂಗಾತ್
ಪ್ರಚ್ಯಾವಿತಂ ಬ್ರಹ್ಮ ಚಿರಂ ಧೃತಂ ಯತ್ ॥ ೫೦ ॥

ಇನ್ನೇನು ? ಅಂತಃಪುರದ ರಕ್ಷಕರು – ಚಂದನ ಮಾಲೆಗಳಿಂದ ಅಲಂಕೃತನಾದ ಸೌಭರಿ ಮುನಿಯನ್ನು ಶೃಂಗರಿಸಲ್ಪಟ್ಟ ಕನ್ಯಾಂತಃಪುರಕ್ಕೆ ಕೊಂಡುಹೋದರು. ಹಾಗಿರುವಾಗ ಆ ಐವತ್ತು ಕನ್ಯೆಯರೂ ಓರ್ವ ಸೌಭರಿಯನ್ನೇ ತಮ್ಮ ಪತಿಯನ್ನಾಗಿ ವರಿಸಿದರು. ॥ ೪೩ ॥ ಆ ಕನ್ಯೆಯರೆಲ್ಲರ ಮನಸ್ಸು ಸೌಭರಿಯಲ್ಲಿ ಅತ್ಯಂತ ಪ್ರೇಮಾಸಕ್ತವಾಯಿತು. ಇದರಿಂದ ಪರಸ್ಪರ ಅವರಲ್ಲೇ ವೈಶಮ್ಯವುಂಟಾಗಿ ಅಸೂಯೆಪಡತೊಡಗಿದರು. 'ಇವರು ನಿನಗೆ ಯೋಗ್ಯರಲ್ಲ, ನನಗೆ ಯೋಗ್ಯರಾಗಿದ್ದಾರೆ' ಎಂದು ಜಗಳ ಕಾಯುತ್ತಿದ್ದರು. ॥ ೪೪ ॥ ಋಗ್ವೇದಿಯಾದ ಸೌಭರಿಯು ಆ ಎಲ್ಲ ಕನ್ಯೆಯರ ಪಾಣಿಗ್ರಹಣ ಮಾಡಿದನು. ಅವನು ತನ್ನ ಅಪಾರ ತಪಸ್ಸಿನ ಪ್ರಭಾವದಿಂದ ಅನೇಕ ಉಪವನಗಳಿಂದಲೂ, ನಿರ್ಮಲ ಜಲದಿಂದ ತುಂಬಿದ ಸರೋವರಗಳಿಂದಲೂ, ಸೌಗಂಧಿಕ ಮುಂತಾದ ಪುಷ್ಪೋದ್ಯಾನಗಳಿಂದ ಕೂಡಿದ ಅಮೂಲ್ಯ ಸಾಮಗ್ರಿಗಳಿಂದ ಸುಸಜ್ಜಿತವಾದ ಅರಮನೆಯಲ್ಲಿ ಬಹುಮೂಲ್ಯ ಶಯ್ಯೆಗಳು, ಆಸನ, ವಸ್ತ್ರ, ಆಭೂಷಣ, ಸ್ನಾನ, ಅನುಲೇಪನ, ಸ್ವಾದಿಷ್ಟಭೋಜನ, ಪುಷ್ಪಮಾಲೆ ಇವುಗಳ ಮೂಲಕ ತನ್ನ ಪತ್ನಿಯರೊಂದಿಗೆ ವಿಹರಿಸತೊಡಗಿದನು. ಸುಂದರವಾದ ವಸ್ತ್ರಾಭರಣಗಳನ್ನು ಧರಿಸಿದ ಅನೇಕ ಸ್ತ್ರೀ-ಪುರುಷ ಸೇವಕರು ಅವರ ಸೇವೆಯಲ್ಲಿ ಸಿದ್ಧರಿದ್ದರು. ಕೆಲವೆಡೆ ಪಕ್ಷಿಗಳ ಕೂಜನವಿದ್ದರೆ, ಕೆಲವೆಡೆ ದುಂಬಿಗಳು ಝೇಂಕರಿಸುತ್ತಿದ್ದವು. ಕೆಲವೆಡೆ ವಂದಿ-ಮಾಗಧರು ಅವರ ಬಿರುದಾವಳಿಯನ್ನು ಹೊಗಳುತ್ತಿದ್ದರು. ॥ ೪೫-೪೬ ॥ ಸಪ್ತದ್ವೀಪದಿಂದೊಡಗೊಂಡ ಪೃಥಿವಿಯ ಪಾಲಕನಾದ ಮಾಂಧಾತನು ಸೌಭರಿಯ ಗಾರ್ಹಸ್ಥ್ಯಸುಖವನ್ನು ಕಂಡು ಆಶ್ಚರ್ಯಚಕಿತನಾದನು. ಸಾರ್ವಭೌಮ ಸಂಪತ್ತಿನಿಂದ ಸಂಪನ್ನನಾಗಿರುವೆನೆಂಬ ಮಾಂಧಾತನ ಗರ್ವವು ಉಡುಗಿ ಹೋಯಿತು. ॥ ೪೭ ॥ ಹೀಗೆ ಸೌಭರಿಯು ಗಾರ್ಹಸ್ಥ್ಯ ಜೀವನದಲ್ಲಿ ರಮಮಾಣನಾದನು. ತನ್ನ ನಿರೋಗಿಯಾದ ಇಂದ್ರಿಯಗಳಿಂದ ಅನೇಕ ವಿಷಯಗಳನ್ನು ಸೇವಿಸುತ್ತಿದ್ದರೂ ತುಪ್ಪದ ಧಾರೆಯಿಂದ ಅಗ್ನಿಯು ತೃಪ್ತ (ಶಾಂತ) ವಾಗದಿರುವಂತೆಯೇ ಸೌಭರಿಗೂ ವಿಷಯಗಳಿಂದ ಸಂತೋಷವಾಗಲಿಲ್ಲ. ॥ ೪೮ ॥

ಋಗ್ವೇದಾಚಾರ್ಯ ಸೌಭರಿಯು ಒಂದು ದಿನ ಶಾಂತಚಿತ್ತದಿಂದ ಕುಳಿತಿದ್ದನು. ಹಿಂದಿನ ಘಟನೆಯನ್ನು ನೆನೆಯುತ್ತಾ ಯಮುನಾನದಿಯಲ್ಲಿ ಮತ್ಸ್ಯದ ಕ್ಷಣಿಕ ಸಂಗದಿಂದ ನಾನು ಹೇಗೆ ನನ್ನ ತಪಸ್ಸನ್ನು ಅದರ ಫಲವನ್ನೂ ಕಳಕೊಂಡು ಬಿಟ್ಟೆನಲ್ಲ! ॥ ೪೯ ॥ ಆವರು ಉದ್ಗರಿಸಿದರು – ಅಯ್ಯೋ! ನನ್ನ ಬವಣೆಯೇ! ನಾನು ದೊಡ್ಡ ತಪಸ್ವಿಯಾಗಿದ್ದೆ. ನಾನು ಚೆನ್ನಾಗಿ ವ್ರತಾನುಷ್ಠಾನಗಳನ್ನು ಮಾಡಿದ್ದೆ. ಈಗ ನೋಡಿರಿ! ನನ್ನ ಅಧಃಪತನವಾಗಿದೆ. ನಾನು ಬಹಳ ಕಾಲದಿಂದ ಬ್ರಹ್ಮತೇಜಸ್ಸನ್ನು ಕಾಪಾಡಿಕೊಂಡು ಬಂದಿದ್ದೆ. ಆದರೆ ನೀರಿನಲ್ಲಿ ವಿಹರಿಸುತ್ತಿದ್ದ ಮತ್ಸ್ಯದಂಪತಿಗಳ ಸಂಸರ್ಗದಿಂದಾಗಿ ನನ್ನ ಬ್ರಹ್ಮತೇಜಸ್ಸೆಲ್ಲವೂ ನಷ್ಟವಾಗಿ ಹೋಯಿತಲ್ಲ! ॥ ೫೦ ॥

ಸಂಗಂ ತ್ಯಜೇತ ಮಿಥುನವ್ರತಿನಾಂ ಮುಮುಕ್ಷುಃ
ಸರ್ವಾತ್ಮನಾ ನ ವಿಸೃಜೇದ್ಬಹಿರಿಂದ್ರಿಯಾಣಿ ।
ಏಕಶ್ಚರನ್ರಹಸಿ ಚಿತ್ತಮನಂತ ಈಶೇ
ಯುಂಜೀತ ತದ್ವ್ರತಿಷು ಸಾಧುಷು ಚೇತ್ಸಸಂಗಃ ॥ ೫೧ ॥

ಏಕಸ್ತಪಸ್ಯಹಮಥಾಂಭಸಿ ಮತ್ಸ್ಯಸಂಗಾತ್
ಪಂಚಾಶದಾಸಮುತ ಪಂಚಸಹಸ್ರಸರ್ಗಃ ।
ನಾಂತಂ ವ್ರಜಾಮ್ಯುಭಯಕೃತ್ಯಮನೋರಥಾನಾಂ
ಮಾಯಾಗುಣೈರ್ಹೃತಮತಿರ್ವಿಷಯೇಽರ್ಥಭಾವಃ ॥ ೫೨ ॥

ಏವಂ ವಸನ್ಗೃಹೇ ಕಾಲಂ ವಿರಕ್ತೋ ನ್ಯಾಸಮಾಸ್ಥಿತಃ ।
ವನಂ ಜಗಾಮಾನುಯಯುಸ್ತತ್ಪತ್ನ್ಯಃ ಪತಿದೇವತಾಃ
॥ ೫೩ ॥

ತತ್ರ ತಪ್ತ್ವಾ ತಪಸ್ತೀಕ್ಷ್ಣಮಾತ್ಮಕರ್ಶನಮಾತ್ಮವಾನ್ ।
ಸ ಹ್ಯೇವಾಗ್ನಿಭಿರಾತ್ಮಾನಂ ಯುಯೋಜ ಪರಮಾತ್ಮನಿ
॥ ೫೪ ॥

ತಾಃ ಸ್ವಪತ್ಯುರ್ಮಹಾರಾಜ ನಿರೀಕ್ಷ್ಯಾಧ್ಯಾತ್ಮಿಕೀಂ ಗತಿಮ್ ।
ಅನ್ವೀಯುಸ್ತತ್ಪ್ರಭಾವೇಣ ಅಗ್ನಿಂ ಶಾಂತಮಿವಾರ್ಚಿಷಃ
॥ ೫೫ ॥

ಆದ್ದರಿಂದ ಮೋಕ್ಷದ ಇಚ್ಛೆಯುಳ್ಳವನು ಭೋಗಿಗಳಾದ ಪ್ರಾಣಿಗಳ ಸಂಗವನ್ನು ಪೂರ್ಣವಾಗಿ ಬಿಡಬೇಕು. ಒಂದು ಕ್ಷಣಕ್ಕಾದರೂ ತನ್ನ ಇಂದ್ರಿಯಗಳನ್ನು ಬಹಿರ್ಮುಖವಾಗಲು ಬಿಡಬಾರದು. ಏಕಾಂತದಲ್ಲಿ ಒಬ್ಬಂಟಿಗನಾಗಿದ್ದು ಸರ್ವಶಕ್ತನಾದ ಭಗವಂತನಲ್ಲಿ ಚಿತ್ತವನ್ನು ತೊಡಗಿಸಬೇಕು. ಸಂಗಮಾಡುವ ಆವಶ್ಯಕತೆ ಬಿದ್ದರೆ ಭಗವಂತನ ಅನನ್ಯಭಕ್ತರಾದ ನಿಷ್ಠೆಯುಳ್ಳ ಮಹಾತ್ಮರ ಸಂಗವನ್ನು ಮಾತ್ರ ಮಾಡಬೇಕು. ॥ ೫೧ ॥ ನಾನು ಮೊದಲು ಏಕಾಂತದಲ್ಲಿ ಒಬ್ಬನೇ ತಪಸ್ಸಿನಲ್ಲಿ ತೊಡಗಿದ್ದೆ. ಹಾಗಿರುವಾಗ ನೀರಿನಲ್ಲಿ ಮೀನಿನ ಸಂಗದಿಂದಾಗಿ ವಿವಾಹವಾಗಿ ಐವತ್ತೊಂದಾಗಿ ಮತ್ತೆ ಸಂತಾನದ ರೂಪದಲ್ಲಿ ಐದುಸಾವಿರನಾದೆ. ವಿಷಯಗಳಲ್ಲಿ ಸತ್ಯತ್ವದ ಬುದ್ಧಿಯುಂಟಾಗಿ ಮಾಯೆಯ ಗುಣಗಳು ನನ್ನ ಬುದ್ಧಿಯನ್ನು ಅಪಹರಿಸಿದವು. ಈಗಲಾದರೋ ಇಹ-ಪರಲೋಕಗಳ ಸಂಬಂಧದಲ್ಲಿ ಯಾವ ರೀತಿಯಿಂದಲೂ ದಾಟಲಾರದಷ್ಟು ನನ್ನ ಮನಸ್ಸು ಲಾಲಸೆಗಳಿಂದ ತುಂಬಿಹೋಗಿದೆ. ॥ ೫೨ ॥ ಹೀಗೆ ವಿಚಾರ ಮಾಡುತ್ತಾ ಅವರು ಕೆಲವು ದಿನಗಳು ಮನೆಯಲ್ಲೇ ಉಳಿದರು. ಮತ್ತೆ ವಿರಕ್ತರಾಗಿ ಅವರು ಸಂನ್ಯಾಸವನ್ನು ಸ್ವೀಕರಿಸಿ, ಕಾಡಿಗೆ ಹೊರಟುಹೋದರು. ತನ್ನ ಪತಿಯನ್ನೇ ಸರ್ವಸ್ವವೆಂದು ತಿಳಿಯುತ್ತಿದ್ದ ಅವನ ಪತ್ನಿಯರೂ ಅವರೊಂದಿಗೇ ಕಾಡಿಗೆ ತೆರಳಿದರು. ॥ ೫೩ ॥ ಅಲ್ಲಿಗೆ ಹೋಗಿ ಪರಮ ಸಂಯಮಿಯಾದ ಸೌಭರಿಯು ಘೋರವಾದ ತಪಸ್ಸನ್ನಾಚರಿಸಿದರು. ಶರೀರವನ್ನು ಶೋಷಿಸಿಬಿಟ್ಟರು. ಆಹವನೀಯಾದಿ ಅಗ್ನಿಗಳೊಂದಿಗೆ ತನ್ನನ್ನು ಪರಮಾತ್ಮನಲ್ಲಿ ಲೀನವಾಗಿಸಿಕೊಂಡನು. ॥ ೫೪ ॥ ಪರೀಕ್ಷಿತನೇ! ಅವರ ಪತ್ನಿಯರೂ ಕೂಡ ಸೌಭರಿಮುನಿಯ ಆಧ್ಯಾತ್ಮಿಕ ಗತಿಯನ್ನು ನೋಡಿದಾಗ, ಶಾಂತವಾದ ಅಗ್ನಿಯಲ್ಲಿ ಜ್ವಾಲೆಗಳು ಲೀನವಾಗುವಂತೆ ಅವರೆಲ್ಲರೂ ಮುನಿಯ ಪ್ರಭಾವದಿಂದ ಸಪಗಮನದಿಂದ ಅವರಲ್ಲೇ ಲೀನವಾಗಿ, ಅವರ ಗತಿಯನ್ನೇ ಪಡೆದುಕೊಂಡರು. ॥ ೫೫ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಸೌಭರ್ಯಾಖ್ಯಾನೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ತ್ರಿಶಂಕುರಾಜನ ಮತ್ತು ಹರಿಶ್ಚಂದ್ರನ ಕಥೆ

ಶ್ರೀಶುಕ ಉವಾಚ

ಮಾಂಧಾತುಃ ಪುತ್ರಪ್ರವರೋ ಯೋಽಂಬರೀಷಃ ಪ್ರಕೀರ್ತಿತಃ ।
ಪಿತಾಮಹೇನ ಪ್ರವೃತೋ ಯೌವನಾಶ್ವಶ್ಚ ತತ್ಸುತಃ ।
ಹಾರೀತಸ್ತಸ್ಯ ಪುತ್ರೋಽಭೂನ್ಮಾಂಧಾತೃಪ್ರವರಾ ಇಮೇ
॥ ೧ ॥

ನರ್ಮದಾ ಭ್ರಾತೃಭಿರ್ದತ್ತಾ ಪುರುಕುತ್ಸಾಯ ಯೋರಗೈಃ ।
ತಯಾ ರಸಾತಲಂ ನೀತೋ ಭುಜಗೇಂದ್ರಪ್ರಯುಕ್ತಯಾ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಮಾಂಧಾತನ ಪುತ್ರರಲ್ಲಿ ಅಂಬರೀಷನು ಎಲ್ಲರಿಂದ ಶ್ರೇಷ್ಠನಾಗಿದ್ದನು ಎಂಬುದನ್ನು ನಾನು ವರ್ಣಿಸಿರುವೆನು. ಅವನ ಅಜ್ಜನಾದ ಯುವನಾಶ್ವನು ಅವನನ್ನು ಪುತ್ರರೂಪದಿಂದ ಸ್ವೀಕರಿಸಿದ್ದನು. ಅವನಿಗೆ ಯೌವನಾಶ್ವನೆಂಬ ಮಗ ಹುಟ್ಟಿದನು. ಯೌವನಾಶ್ವನಿಂದ ಹಾರೀತನಾದನು. ಮಾಂಧಾತನ ವಂಶದಲ್ಲಿ ಈ ಮೂವರೂ ಅವಾಂತರ ಗೋತ್ರದ ಪ್ರವರ್ತಕರಾದರು. ॥ ೧ ॥ ಮಾಂಧಾತನ ಹಿರಿಯ ಮಗ ಪುರುಕುತ್ಸನಿಗೆ ರಸಾತಲವಾಸಿಗಳಾದ ನಾಗರು ತಮ್ಮ ಸಹೋದರಿ ನರ್ಮದೆಯನ್ನು ವಿವಾಹಮಾಡಿ ಕೊಟ್ಟಿದ್ದರು. ನಾಗರಾಜ ವಾಸುಕಿಯ ಅಜ್ಞೆಯಂತೆ ನರ್ಮದೆಯು ತನ್ನ ಪತಿಯನ್ನು ರಸಾತಲಕ್ಕೆ ಕೊಂಡುಹೋದಳು. ॥ ೨ ॥

ಗಂಧರ್ವಾನವಧೀತ್ತತ್ರ ವಧ್ಯಾನ್ವೈ ವಿಷ್ಣುಶಕ್ತಿಧೃಕ್ ।
ನಾಗಾಲ್ಲಬ್ಧವರಃ ಸರ್ಪಾದಭಯಂ ಸ್ಮರತಾಮಿದಮ್
॥ ೩ ॥

ತ್ರಸದ್ದಸ್ಯುಃ ಪೌರುಕುತ್ಸೋ ಯೋಽನರಣ್ಯಸ್ಯ ದೇಹಕೃತ್ ।
ಹರ್ಯಶ್ವಸ್ತತ್ಸುತಸ್ತಸ್ಮಾದರುಣೋಽಥ ತ್ರಿಬಂಧನಃ
॥ ೪ ॥

ತಸ್ಯ ಸತ್ಯವ್ರತಃ ಪುತ್ರಸ್ತ್ರಿಶಂಕುರಿತಿ ವಿಶ್ರುತಃ ।
ಪ್ರಾಪ್ತಶ್ಚಾಂಡಾಲತಾಂ ಶಾಪಾದ್ಗುರೋಃ ಕೌಶಿಕತೇಜಸಾ
॥ ೫ ॥

ಸಶರೀರೋ ಗತಃ ಸ್ವರ್ಗಮದ್ಯಾಪಿ ದಿವಿ ದೃಶ್ಯತೇ ।
ಪಾತಿತೋಽವಾಕ್ಶಿರಾ ದೇವೈಸ್ತೇನೈವಸ್ತಂಭಿತೋ ಬಲಾತ್
॥ ೬ ॥

ತ್ರೈಶಂಕವೋ ಹರಿಶ್ಚಂದ್ರೋ ವಿಶ್ವಾಮಿತ್ರವಸಿಷ್ಠಯೋಃ ।
ಯನ್ನಿಮಿತ್ತಮಭೂದ್ಯುದ್ಧಂ ಪಕ್ಷಿಣೋರ್ಬಹುವಾರ್ಷಿಕಮ್
॥ ೭ ॥

ಸೋಽನಪತ್ಯೋ ವಿಷಣ್ಣಾತ್ಮಾ ನಾರದಸ್ಯೋಪದೇಶತಃ ।
ವರುಣಂ ಶರಣಂ ಯಾತಃ ಪುತ್ರೋ ಮೇ ಜಾಯತಾಂ ಪ್ರಭೋ
॥ ೮ ॥

ಯದಿ ವೀರೋ ಮಹಾರಾಜ ತೇನೈವ ತ್ವಾಂ ಯಜೇ ಇತಿ ।
ತಥೇತಿ ವರುಣೇನಾಸ್ಯ ಪುತ್ರೋ ಜಾತಸ್ತು ರೋಹಿತಃ
॥ ೯ ॥

ಜಾತಃ ಸುತೋ ಹ್ಯನೇನಾಂಗ ಮಾಂ ಯಜಸ್ವೇತಿ ಸೋಽಬ್ರವೀತ್ ।
ಯದಾ ಪಶುರ್ನಿರ್ದಶಃ ಸ್ಯಾದಥ ಮೇಧ್ಯೋ ಭವೇದಿತಿ
॥ ೧೦ ॥

ನಿರ್ದಶೇ ಚ ಸ ಆಗತ್ಯ ಯಜಸ್ವೇತ್ಯಾಹ ಸೋಽಬ್ರವೀತ್ ।
ದಂತಾಃ ಪಶೋರ್ಯಜ್ಜಾಯೇರನ್ನಥ ಮೇಧ್ಯೋ ಭವೇದಿತಿ
॥ ೧೧ ॥

ಜಾತಾ ದಂತಾ ಯಜಸ್ವೇತಿ ಸ ಪ್ರತ್ಯಾಹಾಥ ಸೋಽಬ್ರವೀತ್ ।
ಯದಾ ಪತಂತ್ಯಸ್ಯ ದಂತಾ ಅಥ ಮೇಧ್ಯೋ ಭವೇದಿತಿ
॥ ೧೨ ॥

ಪಶೋರ್ನಿಪತಿತಾ ದಂತಾ ಯಜಸ್ವೇತ್ಯಾಹ ಸೋಽಬ್ರವೀತ್ ।
ಯದಾ ಪಶೋಃ ಪುನರ್ದಂತಾ ಜಾಯಂತೇಽಥ ಪಶುಃ ಶುಚಿಃ
॥ ೧೩ ॥

ಅಲ್ಲಿ ಭಗವಂತನ ಶಕ್ತಿಯಿಂದ ಸಂಪನ್ನನಾಗಿ ಪುರುಕುತ್ಸನು ವಧಾರ್ಹರಾದ ಗಂಧರ್ವರನ್ನು ಸಂಹರಿಸಿಬಿಟ್ಟನು. ಇದರಿಂದ ಸಂತೋಷಗೊಂಡ ನಾಗರಾಜನು ಪುರುಕುತ್ಸನಿಗೆ – 'ಈ ಪ್ರಸಂಗವನ್ನು ಸ್ಮರಿಸುವವನು ಸರ್ಪಗಳಿಂದ ನಿರ್ಭಯನಾಗುವನು' ಎಂಬ ವರವನ್ನು ಕೊಟ್ಟನು. ॥ ೩.॥ ರಾಜಾ ಪುರುಕುತ್ಸನಿಗೆ ತ್ರಸದ್ದಸ್ಯು ಎಂಬ ಪುತ್ರನಿದ್ದನು. ಅವನಿಗೆ ಅನರಣ್ಯನೆಂಬ ಪುತ್ರನಾದನು. ಅನರಣ್ಯನಿಂದ ಹರ್ಯಶ್ವ, ಅವನಿಂದ ಅರುಣ, ಅರುಣನ ಪುತ್ರ ತ್ರಿಬಂಧನನಾದನು. ॥ ೪ ॥ ತ್ರಿಬಂಧನನ ಪುತ್ರ ಸತ್ಯವ್ರತನಾದನು. ಈ ಸತ್ಯವ್ರತನೇ ತ್ರಿಶಂಕು ಎಂಬ ಹೆಸರಿನಿಂದ ವಿಖ್ಯಾತನಾದನು. ತ್ರಿಶಂಕುವು ತಂದೆ ಮತ್ತು ಗುರುವಿನ ಶಾಪದಿಂದ ಚಾಂಡಾಲನಾಗಿದ್ದನು. ಆದರೂ ವಿಶ್ವಾಮಿತ್ರನ ಪ್ರಭಾವದಿಂದಲೇ ಸಶರೀರಿಯಾಗಿ ಸ್ವರ್ಗಕ್ಕೆ ಹೋದನು. ದೇವತೆಗಳು ಅವನನ್ನು ಅಲ್ಲಿಂದ ತಳ್ಳಿಬಿಟ್ಟರು. ಅವನು ತಲೆಕೆಳಗಾಗಿ ಬೀಳುತ್ತಿದ್ದಾಗ ವಿಶ್ವಾಮಿತ್ರನು ತನ್ನ ತಪೋಬಲದಿಂದ ಅವನನ್ನು ಆಕಾಶದಲ್ಲೇ ಸ್ಥಿರಗೊಳಿಸಿದನು. ಅವನು ಈಗಲೂ ಆಕಾಶದಲ್ಲೇ ನೇತಾಡುತ್ತಿದ್ದಾನೆ. ॥ ೫-೬ ॥

ತ್ರಿಶಂಕುವಿನ ಪುತ್ರನು ಹರಿಶ್ಚಂದ್ರನಾಗಿದ್ದನು. ಅವನಿಗಾಗಿ ವಿಶ್ವಾಮಿತ್ರರು ಮತ್ತು ವಸಿಷ್ಠರು ಪರಸ್ಪರ ಶಾಪಕೊಟ್ಟುಕೊಂಡು ಪಕ್ಷಿಗಳಾಗಿ ಅನೇಕ ವರ್ಷಗಳವರೆಗೆ ಕಾದಾಡುತ್ತಲೇ ಇದ್ದರು. ॥ ೭ ॥ ಹರಿಶ್ಚಂದ್ರನಿಗೆ ಸಂತಾನವಿರಲಿಲ್ಲ. ಇದರಿಂದ ಅವನು ಬಹಳ ದುಃಖಿತನಾಗಿದ್ದನು. ನಾರದರ ಉಪದೇಶದಂತೆ ಅವನು ವರುಣದೇವರಿಗೆ ಶರಣಾಗಿ ಪ್ರಾರ್ಥಿಸಿದನು – ಪ್ರಭೋ! ನನಗೆ ಪುತ್ರಸಂತಾನ ಪ್ರಾಪ್ತವಾಗಲೀ. ॥ ೮ ॥ ನಿನ್ನ ಅನುಗ್ರಹದಿಂದ ನನಗೆ ವೀರಪುತ್ರನು ಹುಟ್ಟಿದರೆ, ಅವನನ್ನೇ ಯಜ್ಞಪಶುವನ್ನಾಗಿ ನಿನ್ನ ಪ್ರೀತ್ಯರ್ಥವಾಗಿ ಯಜ್ಞಮಾಡುವೆನು. ವರುಣನೆಂದನು – 'ಹಾಗೆಯೇ ಆಗಲಿ.' ಆಗ ವರುಣನ ಕೃಪೆಯಿಂದ ಹರಿಶ್ಚಂದ್ರನಿಗೆ ರೋಹಿತನೆಂಬ ಮಗನು ಹುಟ್ಟಿದನು. ॥ ೯ ॥ ಪುತ್ರನು ಹುಟ್ಟುತ್ತಲೇ ವರುಣನು ಬಂದು ಹೇಳಿದನು – ಹರಿಶ್ಚಂದ್ರಾ! ನಿನಗೆ ಪುತ್ರ ಸಂತಾನವಾಗಿದೆ. ಈಗ ಇವನ ಮೂಲಕ ಯಜ್ಞವನ್ನು ಮಾಡು. ಹರಿಶ್ಚಂದ್ರನೆಂದನು – ಈಗ ನಿನ್ನ ಈ ಯಜ್ಞಪಶುವು (ರೋಹಿತನು) ಹತ್ತುದಿವಸಗಳು ತುಂಬಿದಾಗ ಇವನು ಯಜ್ಞಕ್ಕೆ ಯೋಗ್ಯನಾಗುತ್ತಾನೆ. ॥ ೧೦ ॥ ಹತ್ತು ದಿವಸಗಳು ಕಳೆದಾಗ ವರುಣನು ಪುನಃ ಬಂದು – 'ಈಗ ನನ್ನ ಯಜ್ಞವನ್ನು ಮಾಡು' ಎಂದು ಹೇಳಿದನು. ಆಗ ಹರಿಶ್ಚಂದ್ರನು – ನಿನ್ನ ಯಜ್ಞಪಶುವಿಗೆ ಹಲ್ಲುಗಳು ಹುಟ್ಟಿದಾಗ ಅವನು ಯಜ್ಞಕ್ಕೆ ಯೋಗ್ಯನಾಗುತ್ತಾನೆ' ಎಂದನು. ॥ ೧೧ ॥ ರೋಹಿತನಿಗೆ ಹಲ್ಲುಹುಟ್ಟಿದಾಗ ವರುಣನೆಂದನು – ರಾಜಾ! ಈಗ ಇವನಿಗೆ ಹಲ್ಲುಗಳು ಹುಟ್ಟಿರುವುವು. ಈಗ ಯಜ್ಞಮಾಡು. ಹರಿಶ್ಚಂದ್ರನೆಂದ – ಇವನ ಹಾಲುಹಲ್ಲುಗಳು ಬಿದ್ದುಹೋದಾಗ ಇವನು ಯಜ್ಞಕ್ಕೆ ಯೋಗ್ಯನಾಗುವನು. ॥ ೧೨ ॥ ಹಾಲುಹಲ್ಲುಗಳು ಬಿದ್ದುಹೋದಾಗ ವರುಣನು ಬಂದು – ಈಗ ಹಾಲುಹಲ್ಲುಗಳು ಬಿದ್ದುಹೋಗಿವೆ, ನನ್ನ ಯಜ್ಞವನ್ನು ಮಾಡು ಎಂದು ಹೇಳಿದನು. ಹರಿಶ್ಚಂದ್ರನೆಂದ – ಇವನಿಗೆ ಎರಡನೆಯ ಬಾರಿ ಹಲ್ಲುಗಳು ಬಂದಾಗ ಈ ಪಶುವು ಯಜ್ಞಕ್ಕೆ ಯೋಗ್ಯನಾದಾನು. ॥ ೧೩. ॥

ಪುನರ್ಜಾತಾ ಯಜಸ್ವೇತಿ ಸ ಪ್ರತ್ಯಾಹಾಥ ಸೋಬ್ರವೀತ್ ।
ಸಾನ್ನಾಹಿಕೋ ಯದಾ ರಾಜನ್ರಾಜನ್ಯೋಽಥ ಪಶುಃ ಶುಚಿಃ
॥ ೧೪ ॥

ಇತಿ ಪುತ್ರಾನುರಾಗೇಣ ಸ್ನೇಹಯಂತ್ರಿತಚೇತಸಾ ।
ಕಾಲಂ ವಂಚಯತಾ ತಂ ತಮುಕ್ತೋ ದೇವಸ್ತಮೈಕ್ಷತ
॥ ೧೫ ॥

ರೋಹಿತಸ್ತದಭಿಜ್ಞಾಯ ಪಿತುಃ ಕರ್ಮ ಚಿಕೀರ್ಷಿತಮ್ ।
ಪ್ರಾಣಪ್ರೇಪ್ಸುರ್ಧನುಷ್ಪಾಣೇರರಣ್ಯಂ ಪ್ರತ್ಯಪದ್ಯತ
॥ ೧೬ ॥

ಪಿತರಂ ವರುಣಗ್ರಸ್ತಂ ಶ್ರುತ್ವಾ ಜಾತಮಹೋದರಮ್ ।
ರೋಹಿತೋ ಗ್ರಾಮಮೇಯಾಯ ತಮಿಂದ್ರಃ ಪ್ರತ್ಯಷೇಧತ
॥ ೧೭ ॥

ಭೂಮೇಃ ಪರ್ಯಟನಂ ಪುಣ್ಯಂ ತೀರ್ಥಕ್ಷೇತ್ರನಿಷೇವಣೈಃ ।
ರೋಹಿತಾಯಾದಿಶಚ್ಛಕ್ರಃ ಸೋಽಷ್ಟರಣ್ಯೇಽವಸತ್ಸಮಾಮ್
॥ ೧೮ ॥

ಏವಂ ದ್ವಿತೀಯೇ ತೃತೀಯೇ ಚತುರ್ಥೇ ಪಂಚಮೇ ತಥಾ ।
ಅಭ್ಯೇತ್ಯಾಭ್ಯೇತ್ಯ ಸ್ಥವಿರೋ ವಿಪ್ರೋ ಭೂತ್ವಾಽಽಹ ವೃತ್ರಹಾ
॥ ೧೯ ॥

ಷಷ್ಠಂ ಸಂವತ್ಸರಂ ತತ್ರ ಚರಿತ್ವಾ ರೋಹಿತಃ ಪುರೀಮ್ ।
ಉಪವ್ರಜನ್ನಜೀಗರ್ತಾದಕ್ರೀಣಾನ್ಮಧ್ಯಮಂ ಸುತಮ್
॥ ೨೦ ॥

ಪುನಃಶೇಪಂ ಪಶುಂ ಪಿತ್ರೇ ಪ್ರದಾಯ ಸಮವಂದತ ।
ತತಃ ಪುರುಷಮೇಧೇನ ಹರಿಶ್ಚಂದ್ರೋ ಮಹಾಯಶಾಃ
॥ ೨೧ ॥

ಸುಕ್ತೋದರೋಽಯಜದ್ದೇವಾನ್ವರುಣಾದೀನ್ಮಹತ್ಕಥಃ ।
ವಿಶ್ವಾಮಿತ್ರೋಽಭವತ್ತಸ್ಮಿನ್ಹೋತಾ ಚಾಧ್ವರ್ಯುರಾತ್ಮವಾನ್
॥ ೨೨ ॥

ಜಮದಗ್ನಿರಭೂದ್ಬ್ರಹ್ಮಾ ವಸಿಷ್ಠೋಽಯಾಸ್ಯಸಾಮಗಃ ।
ತಸ್ಮೈ ತುಷ್ಟೋ ದದಾವಿಂದ್ರಃ ಶಾತಕೌಂಭಮಯಂ ರಥಮ್
॥ ೨೩ ॥

ಪುನಃಶೇಪಸ್ಯ ಮಾಹಾತ್ಮ್ಯಮುಪರಿಷ್ಟಾತ್ಪ್ರಚಕ್ಷ್ಯತೇ ।
ಸತ್ಯಸಾರಾಂ ಧೃತಿಂ ದೃಷ್ಟ್ವಾ ಸಭಾರ್ಯಸ್ಯ ಚ ಭೂಪತೇಃ
॥ ೨೪ ॥

ಎರಡನೆಯ ಸಲ ಹಲ್ಲುಗಳು ಹುಟ್ಟಿದಾಗ ವರುಣನು ಬಂದು – 'ಈಗ ನನ್ನ ಯಜ್ಞವನ್ನು ಮಾಡು' ಎಂದು ಹೇಳಿದನು. ಹರಿಶ್ಚಂದ್ರನು – ವರುಣದೇವನೇ! ಕ್ಷತ್ರಿಯಪಶುವು ಕವಚ ಧರಿಸಲು ಯೋಗ್ಯನಾದಾಗ ಯಜ್ಞಕ್ಕೆ ಯೋಗ್ಯನಾಗುತ್ತಾನಲ್ಲ! ॥ ೧೪ ॥ ಪರೀಕ್ಷಿತನೇ! ಹೀಗೆ ಹರಿಶ್ಚಂದ್ರರಾಜನು ಪುತ್ರ ವ್ಯಾಮೋಹದಿಂದಾಗಿ ಅನಿಯಂತ್ರಿತವಾದ ಬುದ್ಧಿಯಿಂದ ಇಲ್ಲ ಸಲ್ಲದ ಕುಂಟುನೆಪಗಳನ್ನು ಹೇಳುತ್ತಾ ಕಾಲವನ್ನು ಕಳೆಯುತ್ತಿದ್ದನು. ವರುಣನೂ ಅವನು ಹೇಳಿದಂತೆ ಕಾಲವನ್ನು ಎದುರು ನೋಡುತ್ತಿದ್ದನು. ॥ ೧೫ ॥ ತಂದೆಯವರು ನನ್ನನ್ನು ಯಜ್ಞಪಶುವನ್ನಾಗಿಸಿ ಯಜ್ಞಮಾಡಲು ಬಯಸುವರೆಂಬುದನ್ನು ತಿಳಿದ ರೋಹಿತನು ಆತ್ಮರಕ್ಷಣೆಗಾಗಿ ಕೈಯಲ್ಲಿ ಧನುರ್ಬಾಣಗಳನ್ನು ಧರಿಸಿಕೊಂಡು ಅರಣ್ಯಕ್ಕೆ ಹೊರಟುಹೋದನು. ॥ ೧೬ ॥ ಕೆಲವು ದಿನಗಳ ಬಳಿಕ – ವರುಣದೇವನು ಕುಪಿತನಾಗಿ ನನ್ನ ತಂದೆಯನ್ನು ಆಕ್ರಮಿಸಿರುವನು. ಅದರಿಂದ ಪಿತನು ಜಲೋದರ ರೋಗದಿಂದ ಪೀಡಿತನಾಗಿದ್ದಾನೆ ಎಂದು ತಿಳಿದ ರೋಹಿತನು ತನ್ನ ನಗರಕ್ಕೆ ಹೊರಟನು. ಆದರೆ ಇಂದ್ರನು ಬಂದು ಅವನನ್ನು ತಡೆದುಬಿಟ್ಟನು. ॥ ೧೭ ॥ ಇಂದ್ರನು ಹೇಳಿದನು – ಮಗೂ ರೋಹಿತ! ಯಜ್ಞಪಶುವಾಗಿ ಸಾಯುವು ದಕ್ಕಿಂತ ಪವಿತ್ರ ತೀರ್ಥ-ಕ್ಷೇತ್ರಗಳನ್ನು ಸೇವಿಸುತ್ತಾ ಪೃಥಿವಿಯಲ್ಲಿ ಸಂಚರಿಸುವುದು ಶ್ರೇಷ್ಠವಾಗಿದೆ. ಇಂದ್ರನ ಮಾತನ್ನು ಮನ್ನಿಸಿ ಅದನ್ನು ಒಂದು ವರ್ಷಕಾಲ ಮತ್ತೆ ವನದಲ್ಲೇ ಇದ್ದನು. ॥ ೧೮ ॥ ಹೀಗೆಯೇ ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ ವರ್ಷಗಳಲ್ಲಿಯೂ ರೋಹಿತನು ತಂದೆಯ ಬಳಿಗೆ ಹೋಗುವ ವಿಚಾರ ಮಾಡಿದನು. ಆದರೆ ಪ್ರತಿಸಲವೂ ವೃದ್ಧಬ್ರಾಹ್ಮಣನಾಗಿ ಇಂದ್ರನು ಬಂದು ಅವನನ್ನು ತಡೆಯುತ್ತಿದ್ದನು. ॥ ೧೯ ॥ ಹೀಗೆ ಆರು ವರ್ಷಗಳ ಕಾಲ ರೋಹಿತನು ಕಾಡಿನಲ್ಲೇ ಇದ್ದನು. ಏಳನೆಯ ವರ್ಷದಲ್ಲಿ ಅವನು ತನ್ನ ನಗರಕ್ಕೆ ಹೊರಟಾಗ ಅಜೀಗರ್ತನಿಂದ ಅವನ ನಡುವಣ ಪುತ್ರ ಶುನಃಶೇಪನನ್ನು ಹಣಕೊಟ್ಟು ಪಡೆದು ಅವನನ್ನು ಯಜ್ಞಪಶುವನ್ನಾಗಿಸಲು ತನ್ನ ತಂದೆಗೆ ಒಪ್ಪಿಸಿ, ಅವನ ಚರಣಗಳಿಗೆ ವಂದಿಸಿಕೊಂಡನು. ಪರಮ ಯಶೋವಂತನೂ, ಶ್ರೇಷ್ಠ ಚರಿತ್ರವುಳ್ಳವನೂ ಆದ ಹರಿಶ್ಚಂದ್ರನು ಮಹೋದರ ರೋಗದಿಂದ ಬಿಡುಗಡೆಹೊಂದಲು ಪುರುಷಮೇಧದ ಮೂಲಕ ವರುಣನೇ ಮೊದಲಾದ ದೇವತೆಗಳ ಯಜ್ಞವನ್ನು ಮಾಡಿದನು. ಆ ಯಜ್ಞದಲ್ಲಿ ವಿಶ್ವಾಮಿತ್ರರು ಹೋತೃಗಳಾಗಿದ್ದರು. ಪರಮ ಸಂಯಮಿ ಜಮದಗ್ನಿಯು ಅಧ್ವರ್ಯು ಆಗಿದ್ದನು. ವಸಿಷ್ಠರು ಬ್ರಹ್ಮನ ಕೆಲಸ ನಿರ್ವಹಿಸಿದರು. ಅಯಾಸ್ಯ ಮುನಿಯು ಸಾಮಗಾನ ಮಾಡುವ ಉದ್ಗಾತೃವಾದನು. ಆ ಸಮಯದಲ್ಲಿ ಇಂದ್ರನು ಪ್ರಸನ್ನನಾಗಿ ಹರಿಶ್ಚಂದ್ರನಿಗೆ ಒಂದು ಚಿನ್ನದ ರಥವನ್ನು ಕೊಟ್ಟಿದ್ದನು. ॥ ೨೦-೨೩. ॥

ಪರೀಕ್ಷಿತನೇ! ಮುಂದೆ ನಾನು ನಿನಗೆ ಶುನಃಶೇಪನ ಮಹಾತ್ಮೆಯನ್ನು ವರ್ಣಿಸುವೆನು. ಹರಿಶ್ಚಂದ್ರನು ತನ್ನ ಪತ್ನಿಯೊಡನೆ ಸತ್ಯನಿಷ್ಠೆಯಲ್ಲಿ ದೃಢವಾಗಿ ಇರುವುದನ್ನು ಕಂಡು ವಿಶ್ವಾಮಿತ್ರರು ಬಹಳ ಸಂತೋಷಗೊಂಡು ಅವನಿಗೆ ಎಂದೂ ನಾಶವಾಗದಿರುವ ಜ್ಞಾನವನ್ನು ಉಪದೇಶಿಸಿದರು. ಆ ಜ್ಞಾನದಿಂದಾಗಿ ಹರಿಶ್ಚಂದ್ರನು ತನ್ನ

ವಿಶ್ವಾಮಿತ್ರೋ ಭೃಶಂ ಪ್ರೀತೋ ದದಾವವಿಹತಾಂ ಗತಿಮ್ ।
ಮನಃ ಪೃಥಿವ್ಯಾಂ ತಾಮದ್ಭಿಸ್ತೇಜಸಾಪೋಽನಿಲೇನ ತತ್
॥ ೨೫ ॥

ಖೇ ವಾಯುಂ ಧಾರಯಂಸ್ತಚ್ಚ ಭೂತಾದೌ ತಂ ಮಹಾತ್ಮನಿ ।
ತಸ್ಮಿನ್ಜ್ಞಾನಕಲಾಂ ಧ್ಯಾತ್ವಾ ತಯಾಜ್ಞಾನಂ ವಿನಿರ್ದಹನ್
॥ ೨೬ ॥

ಹಿತ್ವಾ ತಾಂ ಸ್ವೇನ ಭಾವೇನ ನಿರ್ವಾಣಸುಖಸಂವಿದಾ ।
ಅನಿರ್ದೇಶ್ಯಾಪ್ರತರ್ಕ್ಯೇಣ ತಸ್ಥೌ ವಿಧ್ವಸ್ತ ಬಂಧನಃ
॥ ೨೭ ॥

ಮನವನ್ನು ಪೃಥಿವಿಯಲ್ಲೂ, ಪೃಥಿವಿಯನ್ನು ಜಲದಲ್ಲೂ, ಜಲವನ್ನು ತೇಜದಲ್ಲೂ, ತೇಜವನ್ನು ವಾಯುವಿನಲ್ಲೂ, ವಾಯುವನ್ನು ಆಕಾಶದಲ್ಲಿಯೂ ನೆಲೆಗೊಳಿಸಿ, ಆಕಾಶವನ್ನು ಅಹಂಕಾರದಲ್ಲಿ ಲೀನಗೊಳಿಸಿದನು. ಮತ್ತೆ ಅಹಂಕಾರವನ್ನು ಮಹತ್ತತ್ತ್ವದಲ್ಲಿ ಲೀನಗೊಳಿಸಿ ಅದರಲ್ಲಿ ಜ್ಞಾನ-ಕಲೆಯ ಧ್ಯಾನಮಾಡುತ್ತಾ ಅದರಿಂದ ಅಜ್ಞಾನವನ್ನು ಭಸ್ಮವಾಗಿಸಿ ಬಿಟ್ಟನು. ॥ ೨೪-೨೬ ॥ ಇದಾದ ಬಳಿಕ ನಿರ್ವಾಣ-ಸುಖದ ಅನುಭೂತಿಯಿಂದ ಆ ಜ್ಞಾನ-ಕಲೆಯನ್ನೂ ಪರಿತ್ಯಾಗಮಾಡಿ, ಸಮಸ್ತ ಬಂಧನಗಳಿಂದ ಮುಕ್ತನಾಗಿ ಅವನು – ನಿರ್ದೇಶಿಸುವುದಕ್ಕಾಗಲೀ, ಊಹಿಸುವುದಕ್ಕಾಗಲೀ ಸಾಧ್ಯವಾಗದ ಪರಮಾನಂದ ಮಯವಾದ ಸ್ವಸ್ವರೂಪದಲ್ಲಿ ನೆಲೆಗೊಂಡನು. ॥ ೨೭ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಹರಿಶ್ಚಂದ್ರೋಪಾಖ್ಯಾನಂ ನಾಮ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಸಗರನ ಚರಿತ್ರೆ

ಶ್ರೀಶುಕ ಉವಾಚ

ಹರಿತೋ ರೋಹಿತಸುತಶ್ಚಂಪಸ್ತಸ್ಮಾದ್ವಿನಿರ್ಮಿತಾ ।
ಚಂಪಾಪುರೀ ಸುದೇವೋಽತೋ ವಿಜಯೋ ಯಸ್ಯ ಚಾತ್ಮಜಃ
॥ ೧ ॥

ಭರುಕಸ್ತತ್ಸುತಸ್ತಸ್ಮಾದ್ವೃಕಸ್ತಸ್ಯಾಪಿ ಬಾಹುಕಃ ।
ಸೋಽರಿಭಿರ್ಹೃತಭೂ ರಾಜಾ ಸಭಾರ್ಯೋ ವನಮಾವಿಶತ್
॥ ೨ ॥

ವೃದ್ಧಂ ತಂ ಪಂಚತಾಂ ಪ್ರಾಪ್ತಂ ಮಹಿಷ್ಯನು ಮರಿಷ್ಯತೀ ।
ಔರ್ವೇಣ ಜಾನತಾಽತ್ಮಾನಂ ಪ್ರಜಾವಂತಂ ನಿವಾರಿತಾ
॥ ೩ ॥

ಅಜ್ಞಾಯಾಸ್ಯೈ ಸಪತ್ನೀಭಿರ್ಗರೋ ದತ್ತೋಽಂಧಸಾ ಸಹ ।
ಸಹ ತೇನೈವ ಸಂಜಾತಃ ಸಗರಾಖ್ಯೋ ಮಹಾಯಶಾಃ
॥ ೪ ॥

ಸಗರಃ ಚಕ್ರವರ್ತ್ಯಾಸೀತ್ಸಾಗರೋ ಯತ್ಸುತೈಃ ಕೃತಃ ।
ಯಸ್ತಾಲಜಂಘಾನ್ಯವನಾಂಛಕಾನ್ ಹೈಹಯಬರ್ಬರಾನ್
॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹರಿಶ್ಚಂದ್ರನ ಮಗ ರೋಹಿತನಿಗೆ ಹರಿತನೆಂಬ ಮಗನಿದ್ದನು. ಹರಿತನ ಮಗ ಚಂಪ. ಇವನೇ ಚಂಪಾಪುರಿಯನ್ನು ನಿರ್ಮಿಸಿದನು. ಚಂಪನಿಂದ ಸುದೇವ, ಅವನ ಪುತ್ರ ವಿಜಯನಾದನು. ॥ ೧ ॥ ವಿಜಯನ ಮಗ ಭರುಕ, ಭರುಕನಿಂದ ವೃಕ, ವೃಕನಿಂದ ಬಾಹುಕನು ಹುಟ್ಟಿದನು. ಶತ್ರುಗಳು ಬಾಹುಕನಿಂದ ರಾಜ್ಯವನ್ನು ವಶಪಡಿಸಿಕೊಂಡಾಗ ಅವನು ತನ್ನ ಪತ್ನಿಯೊಂದಿಗೆ ಕಾಡಿಗೆ ಹೊರಟು ಹೋದನು. ॥ ೨ ॥ ಕಾಡಿಗೆ ಹೋಗಿ ವೃದ್ಧಾಪ್ಯದಿಂದಾಗಿ ಬಾಹುಕನ ಮೃತ್ಯುವಾದಾಗ ಅವನ ಪತ್ನಿಯೂ ಅವನೊಂದಿಗೆ ಸಹಗಮನಕ್ಕೆ ಸಿದ್ಧಳಾದಳು. ಆದರೆ ಇವಳು ಗರ್ಭಿಣಿ ಎಂದು ಮಹರ್ಷಿ ಔರ್ವನಿಗೆ ತಿಳಿದಿತ್ತು. ಆದರಿಂದಾಗಿ ಅವನು ಆಕೆಯನ್ನು ಸಹಗಮನದಿಂದ ತಡೆದನು. ॥ ೩ ॥ ಅವಳ ಸವತಿಯರಿಗೆ ಈ ಮಾತು ತಿಳಿದಾಗ ಅವರು ಅವಳಿಗೆ ಊಟದೊಂದಿಗೆ ಗರ (ವಿಷ)ವನ್ನು ತಿನ್ನಿಸಿದರು. ಆದರೆ ಆ ವಿಷವು ಗರ್ಭದ ಮೇಲೆ ಯಾವ ಪ್ರಭಾವವೂ ಬೀಳದೆ ಆ ವಿಷದೊಂದಿಗೆ ಬಾಲಕನ ಜನ್ಮವಾಯಿತು. ಗರ(ವಿಷ)ದೊಂದಿಗೆ ಹುಟ್ಟಿದ ಕಾರಣದಿಂದ ಅವನು 'ಸಗರ' ನೆಂದು ವಿಖ್ಯಾತನಾದನು. ಸಗರನು ಮಹಾಯಶೋವಂತ ರಾಜನಾದನು. ॥ ೪ ॥

ಸಗರನು ಚಕ್ರವರ್ತಿ, ಸಾಮ್ರಾಟನಾಗಿದ್ದನು. ಅವನ ಪುತ್ರರೇ ನೆಲವನ್ನು ಅಗೆದು ಸಮುದ್ರವನ್ನು ನಿರ್ಮಿಸಿದ್ದರು. ಸಗರನು ತನ್ನ ಗುರುವಾದ ಔರ್ವನ ಆಜ್ಞೆಯನ್ನು ಗೌರವಿಸಿ, ತಾಲಜಂಘ, ಯವನ, ಶಕ, ಹೈಹಯ, ಬರ್ಬರ ಮುಂತಾದ ಜಾತಿಯವರನ್ನು

ನಾವಧೀದ್ಗುರುವಾಕ್ಯೇನ ಚಕ್ರೇ ವಿಕೃತವೇಷಿಣಃ ।
ಮುಂಡಾಂಶ್ಮಶ್ರುಧರಾನ್ಕಾಂಶ್ಚಿನ್ಮುಕ್ತಕೇಶಾರ್ಧಮುಂಡಿತಾನ್
॥ ೬ ॥

ಅನಂತರ್ವಾಸಸಃ ಕಾಂಶ್ಚಿದಬಹಿರ್ವಾಸೋಽಪರಾನ್ ।
ಸೋಽಶ್ವಮೇಧೈರಯಜತ ಸರ್ವವೇದಸುರಾತ್ಮಕಮ್
॥ ೭ ॥

ಔರ್ವೋಪದಿಷ್ಟಯೋಗೇನ ಹರಿಮಾತ್ಮಾನಮೀಶ್ವರಮ್ ।
ತಸ್ಯೋತ್ಸೃಷ್ಟಂ ಪಶುಂ ಯಜ್ಞೇ ಜಹಾರಾಶ್ವಂ ಪುರಂದರಃ
॥ ೮ ॥

ಸುಮತ್ಯಾಸ್ತನಯಾ ದೃಪ್ತಾಃ ಪಿತುರಾದೇಶಕಾರಿಣಃ ।
ಹಯಮನ್ವೇಷಮಾಣಾಸ್ತೇ ಸಮಂತಾನ್ನ್ಯಖನನ್ಮಹೀಮ್
॥ ೯ ॥

ಪ್ರಾಗುದೀಚ್ಯಾಂ ದಿಶಿ ಹಯಂ ದದೃಶುಃ ಕಪಿಲಾಂತಿಕೇ ।
ಏಷ ವಾಜಿಹರಶ್ಚೌರ ಆಸ್ತೇ ಮೀಲಿತಲೋಚನಃ
॥ ೧೦ ॥

ಹನ್ಯತಾಂ ಹನ್ಯತಾಂ ಪಾಪ ಇತಿ ಷಷ್ಟಿಸಹಸ್ರಿಣಃ ।
ಉದಾಯುಧಾ ಅಭಿಯಯುರುನ್ಮಿಮೇಷ ತದಾ ಮುನಿಃ
॥ ೧೧ ॥

ಸ್ವಶರೀರಾಗ್ನಿನಾ ತಾವನ್ಮಹೇಂದ್ರಹೃತಚೇತಸಃ ।
ಮಹದ್ವ್ಯತಿಕ್ರಮಹತಾ ಭಸ್ಮಸಾದಭವನ್ ಕ್ಷಣಾತ್
॥ ೧೨ ॥

ಕ ಸಾಧುವಾದೋ ಮುನಿಕೋಪಭರ್ಜಿತಾ
ನೃಪೇಂದ್ರಪುತ್ರಾ ಇತಿ ಸತ್ತ್ವಧಾಮನಿ ।
ಕಥಂ ತಮೋ ರೋಷಮಯಂ ವಿಭಾವ್ಯತೇ
ಜಗತ್ಪವಿತ್ರಾತ್ಮನಿ ಖೇ ರಜೋ ಭುವಃ ॥ ೧೩ ॥

ಯಸ್ಯೇಹಿತಾ ಸಾಂಖ್ಯಮಯೀ ದೃಢೇಹ ನೌ-
ರ್ಯಯಾ ಮುಮುಕ್ಷುಸ್ತರತೇ ದುರತ್ಯಯಮ್ ।
ಭವಾರ್ಣವಂ ಮೃತ್ಯುಪಥಂ ವಿಪಶ್ಚಿತಃ
ಪರಾತ್ಮಭೂತಸ್ಯ ಕಥಂ ಪೃಥಗ್ಮತಿಃ ॥ ೧೪ ॥

ವಧಿಸಲಿಲ್ಲ ಅವರ ರೂಪವನ್ನು ವಿರೂಪಗೊಳಿಸಿದನು. ಅವರಲ್ಲಿ ಕೆಲವರು ತಲೆಯನ್ನು ಬೋಳಿಸಿದರು. ಕೆಲವರು ತಲೆ ಬೋಳಿಸಿ, ಗಡ್ಡ-ಮೀಸೆ ಹಾಗೆ ಬಿಟ್ಟರು. ಕೆಲವರು ಕೂದಲನ್ನು ಹಾಗೇ ಬಿಟ್ಟರು. ಕೆಲವರು ಅರ್ಧತಲೆ ಬೋಳಿಸಿದ್ದರು. ॥ ೫-೬ ॥ ಕೆಲವು ಜನರಿಗೆ ಸಗರನು ಬಟ್ಟೆಯನ್ನು ಉಡದೇ ಕೇವಲ ಹೊದೆಯಲು ಅನುಮತಿ ನೀಡಿದನು. ಕೆಲವರಿಗೆ ಬಟ್ಟೆಯನ್ನು ಹೊದೆದುಕೊಳ್ಳದೆ ಕೇವಲ ಕೌಪೀನ ಮಾತ್ರ ಉಡಲು ಹೇಳಿದನು. ಇದಾದ ಬಳಿಕ ಸಗರ ಚಕ್ರವರ್ತಿಯು ಔರ್ವ ಋಷಿಯ ಉಪದೇಶದಂತೆ ಅಶ್ವಮೇಧ ಯಜ್ಞದ ಮೂಲಕ ಸಂಪೂರ್ಣ ವೇದ ಹಾಗೂ ದೇವತಾಮಯ, ಆತ್ಮಸ್ವರೂಪ, ಸರ್ವಶಕ್ತಿವಂತ ಭಗವಂತನನ್ನು ಆರಾಧಿಸಿದನು. ಅವನ ಯಜ್ಞದಲ್ಲಿ ಬಿಟ್ಟಿದ್ದ ಕುದುರೆಯನ್ನು ಇಂದ್ರನು ಕದ್ದೊಯ್ದನು. ॥ ೭-೮ ॥ ಆ ಸಮಯದಲ್ಲಿ ಮಹಾರಾಣಿ ಸುಮತಿಯ ಗರ್ಭದಿಂದ ಹುಟ್ಟಿದ ಸಗರಪುತ್ರರು ತಮ್ಮ ತಂದೆಯ ಆಜ್ಞೆಯಂತೆ ಕುದುರೆಗಾಗಿ ಇಡೀ ಪೃಥಿವಿಯನ್ನು ಜಾಲಾಡಿದರು. ಅವರಿಗೆ ಕುದುರೆಯು ಎಲ್ಲಿಯೂ ಸಿಗದಿದ್ದಾಗ ಗರ್ವಿಷ್ಠರಾಗಿದ್ದ ಅವರು ಎಲ್ಲ ಕಡೆಯಲ್ಲಿ ಭೂಮಿಯನ್ನು ಅಗೆದುಹಾಕಿದರು. ॥ ೯ ॥ ಅಗೆಯುತ್ತಾ-ಅಗೆಯುತ್ತಾ ಅವರಿಗೆ ಈಶಾನ್ಯದಿಕ್ಕಿನಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲರ ಬಳಿಯಲ್ಲಿ ತಮ್ಮ ಯಜ್ಞಾಶ್ವವು ಕಂಡುಬಂತು. ಕುದುರೆಯನ್ನು ನೋಡುತ್ತಲೇ ಅರವತ್ತುಸಾವಿರ ರಾಜಕುಮಾರರು ಶಸ್ತ್ರಗಳನ್ನೆತ್ತಿಕೊಂಡು ಇವನೇ ನಮ್ಮ ಕುದುರೆಯನ್ನು ಕದ್ದಿರುವ ಕಳ್ಳನೆಂದು ಹೇಳುತ್ತಾ ಅವರತ್ತ ಓಡಿದರು. ನೋಡಿರಲ್ಲ ಇವನು ಕಣ್ಣುಮುಚ್ಚಿಕೊಂಡಿರುವನು. ಇವನು ಪಾಪಿಯಾಗಿದ್ದಾನೆ. ಇವನನ್ನು ಕೊಂದುಬಿಡಿ, ಕೊಂದು ಬಿಡಿ ಎಂದು ಕೂಗಿಕೊಂಡರು. ಆಗಲೇ ಕಪಿಲಮುನಿಯು ಕಣ್ಣು ಬಿಟ್ಟನು. ॥ ೧೦-೧೧ ॥ ಇಂದ್ರನು ರಾಜಕುಮಾರರ ಬುದ್ಧಿಯನ್ನು ಅಪಹರಿಸಿದ್ದನು. ಇದರಿಂದ ಅವರು ಕಪಿಲಮುನಿಯಂತಹ ಮಹಾ ಪುರುಷರನ್ನು ತಿರಸ್ಕರಿಸಿದ್ದರು. ಈ ತಿರಸ್ಕಾರದಿಂದಾಗಿ ಅವರ ಶರೀರಗಳಲ್ಲಿ ಬೆಂಕಿ ಉರಿಯತೊಡಗಿ ಕ್ಷಣಾರ್ಧದಲ್ಲಿ ಅವರೆಲ್ಲರೂ ಸುಟ್ಟು ಬೂದಿಯಾಗಿ ಬಿಟ್ಟರು. ॥ ೧೨ ॥ ಪರೀಕ್ಷಿತನೇ! ಸಗರ ಪುತ್ರರು ಕಪಿಲಮುನಿಯ ಕ್ರೋಧಾಗ್ನಿಯಿಂದ ಸುಟ್ಟುಹೋದರು ಎಂದು ಹೇಳುವುದು ಉಚಿತವಾಗಲಾರದು. ಕಪಿಲರಾದರೋ ಶುದ್ಧ ಸತ್ತ್ವಗುಣಕ್ಕೆ ಪರಮಾಶ್ರಯರಾಗಿದ್ದರು. ಅವರ ಶರೀರವು ಪ್ರಪಂಚವನ್ನೇ ಪವಿತ್ರಗೊಳಿಸುವಂತಹುದು. ಅಂತಹವರಲ್ಲಿ ತಮೋಭೂತವಾದ ಕ್ರೋಧವಿರುವುದೆಂದು ಭಾವಿಸಲು ಹೇಗೆ ತಾನೇ ಸಾಧ್ಯವಾಗುತ್ತದೆ? ಭೂಮಿಯಲ್ಲಿರುವ ಧೂಳಿನೊಡನೆ ಆಕಾಶದ ಸಂಬಂಧವೇನಾದರೂ ಇರುತ್ತದೆಯೇ? ॥ ೧೩ ॥ ಈ ಸಂಸಾರ ಸಾಗರವು ಮೃತ್ಯುವಿನ ಮಾರ್ಗವಾಗಿದೆ. ಇದನ್ನು ದಾಟಿಹೋಗುವುದು ಅತ್ಯಂತ ಕಷ್ಟವಾಗಿದೆ. ಆದರೆ ಕಪಿಲಮುನಿಗಳು ಈ ಜಗತ್ತಿನಲ್ಲಿ ಸಾಂಖ್ಯಶಾಸ್ತ್ರದ ಒಂದು ದೃಢವಾದ ನೌಕೆಯನ್ನು ಸಿದ್ಧ ಮಾಡಿಕೊಟ್ಟಿರುವರು. ಮುಕ್ತಿಯ ಇಚ್ಛೆಯುಳ್ಳವರು ಯಾರೇ ಆಗಲಿ ಅದರ ಮೂಲಕ ಈ ಸಂಸಾರ ಸಮುದ್ರದಿಂದ ದಾಟಿ ಹೋಗಬಲ್ಲರು. ಅವರು ಕೇವಲ ಪರಮಜ್ಞಾನಿಗಳು ಮಾತ್ರವಾಗಿರದೆ ಸ್ವಯಂ ಪರಮಾತ್ಮನಾಗಿರುವನು. ಅವರಲ್ಲಿ ಈ ಶತ್ರು-ಮಿತ್ರವೆಂಬ ಭೇದಬುದ್ಧಿಯು ಹೇಗೆ ತಾನೇ ಇರಬಲ್ಲದು? ॥ ೧೪ ॥

ಯೋಽಸಮಂಜಸ ಇತ್ಯುಕ್ತಃ ಸ ಕೇಶಿನ್ಯಾ ನೃಪಾತ್ಮಜಃ ।
ತಸ್ಯ ಪುತ್ರೋಂಽಶುಮಾನ್ನಾಮ ಪಿತಾಮಹಹಿತೇ ರತಃ
॥ ೧೫ ॥

ಅಸಮಂಜಸ ಆತ್ಮಾನಂ ದರ್ಶಯನ್ನಸಮಂಜಸಮ್ ।
ಜಾತಿಸ್ಮರಃ ಪುರಾ ಸಂಗಾದ್ಯೋಗೀ ಯೋಗಾದ್ವಿಚಾಲಿತಃ
॥ ೧೬ ॥

ಆಚರನ್ಗರ್ಹಿತಂ ಲೋಕೇ ಜಾತ್ಯಪೀನಾಂ ಕರ್ಮ ವಿಪ್ರಿಯಮ್ ।
ಸರಯ್ವಾಂ ಕ್ರೀಡತೋ ಬಾಲಾನ್ಪ್ರಾಸ್ಯದುದ್ವೇಜಯಂಜನಮ್
॥ ೧೭ ॥

ಏವಂವೃತ್ತಃ ಪರಿತ್ಯಕ್ತಃ ಪಿತ್ರಾ ಸ್ನೇಹಮಪೋಹ್ಯ ವೈ ।
ಯೋಗೈಶ್ವರ್ಯೇಣ ಬಾಲಾನ್ಸ್ತಾಂದರ್ಶಯಿತ್ವಾತತೋ ಯಯೌ
॥ ೧೮ ॥

ಅಯೋಧ್ಯಾವಾಸಿನಃ ಸರ್ವೇ ಬಾಲಕಾನ್ಪುನರಾಗತಾನ್ ।
ದೃಷ್ಟ್ವಾ ವಿಸಿಸ್ಮಿರೇ ರಾಜನ್ ರಾಜಾ ಚಾಪ್ಯನ್ವತಪ್ಯತ
॥ ೧೯ ॥

ಅಂಶುಮಾಂಶ್ಚೋದಿತೋ ರಾಜ್ಞಾ ತುರಂಗಾನ್ವೇಷಣೇ ಯಯೌ ।
ಪಿತೃವ್ಯಖಾತಾನುಪಥಂ ಭಸ್ಮಾಂತಿ ದದೃಶೇ ಹಯಮ್
॥ ೨೦ ॥

ತತ್ರಾಸೀನಂ ಮುನಿಂ ವೀಕ್ಷ್ಯ ಕಪಿಲಾಖ್ಯಮಧೋಕ್ಷಜಮ್ ।
ಅಸ್ತೌತ್ಸಮಾಹಿತಮನಾಃ ಪ್ರಾಂಜಲಿಃ ಪ್ರಣತೋ ಮಹಾನ್
॥ ೨೧ ॥

ಅಂಶುಮಾನುವಾಚ

ನ ಪಶ್ಯತಿ ತ್ವಾಂ ಪರಮಾತ್ಮನೋಽಜನೋ
ನ ಬುಧ್ಯತೇಽದ್ಯಾಪಿ ಸಮಾಧಿಯುಕ್ತಿಭಿಃ ।
ಕುತೋಽಪರೇ ತಸ್ಯ ಮನಃಶರೀರಧೀ-
ವಿಸರ್ಗಸೃಷ್ಟಾ ವಯಮಪ್ರಕಾಶಾಃ ॥ ೨೨ ॥

ಯೇ ದೇಹಭಾಜಸ್ತ್ರಿಗುಣಪ್ರಧಾನಾ
ಗುಣಾನ್ವಿಪಶ್ಯಂತ್ಯುತ ವಾ ತಮಶ್ಚ ।
ಯನ್ಮಾಯಯಾ ಮೋಹಿತಚೇತಸಸ್ತೇ
ವಿದುಃ ಸ್ವಸಂಸ್ಥಂ ನ ಬಹಿಃಪ್ರಕಾಶಾಃ ॥ ೨೩ ॥

ಸಗರನಿಗೆ ಕೇಶಿನೀ ಎಂಬ ಇನ್ನೋರ್ವ ಪತ್ನಿಯಿದ್ದಳು. ಅವಳ ಗರ್ಭದಲ್ಲಿ ಅಸಮಂಜಸನೆಂಬ ಪುತ್ರನು ಹುಟ್ಟಿದ್ದನು. ಅಸಮಂಜಸನ ಪುತ್ರನ ಹೆಸರು ಅಂಶುಮಾನ್ ಎಂದಿತ್ತು. ಅವನು ತನ್ನ ಅಜ್ಜನಾದ ಸಗರನ ಆದೇಶಗಳನ್ನು ಪಾಲಿಸುತ್ತಾ, ಅವನ ಸೇವೆಯಲ್ಲೇ ತೊಡಗಿರುತ್ತಿದ್ದನು. ॥ ೧೫ ॥ ಅಸಮಂಜಸನು ಹಿಂದಿನ ಜನ್ಮದಲ್ಲಿ ಯೋಗಿಯಾಗಿದ್ದನು. ಸಂಗದಿಂದಾಗಿ ಅವನು ಯೋಗದಿಂದ ವಿಚಲಿತನಾಗಿದ್ದನು. ಆದರೆ ಈಗಲೂ ಅವನಿಗೆ ಪೂರ್ವಜನ್ಮದ ಸ್ಮರಣೆ ಹಾಗೆಯೇ ಇತ್ತು. ಆದಕ್ಕಾಗಿ ಅವನು ಬಂಧು-ಬಾಂಧವರಿಗೆ ಮೆಚ್ಚಿಗೆಯಾಗದ ಕೆಲಸಗಳನ್ನೇ ಮಾಡುತ್ತಿದ್ದನು. ಅವನು ಕೆಲವೊಮ್ಮೆ ಅತ್ಯಂತ ನಿಂದಿತ ಕರ್ಮಗಳನ್ನು ಮಾಡಿಬಿಡುತ್ತಿದ್ದನು ಮತ್ತು ತನ್ನನ್ನು ಹುಚ್ಚನಂತೆ ತೋರಿಸಿಕೊಳ್ಳುತ್ತಿದ್ದನು. ಆಡುತ್ತಿದ್ದ ಬಾಲಕರನ್ನು ಎತ್ತಿಕೊಂಡು ಸರಯೂನದಿಗೆ ಎಸೆದುಬಿಡುತ್ತಿದ್ದನು. ಇದರಿಂದ ಪ್ರಜೆಗಳು ಬಹಳವಾಗಿ ಉದ್ವೇಗಗೊಂಡರು. ॥ ೧೬-೧೭ ॥ ಕೊನೆಗೆ ಅವನ ಉಪಟಳವನ್ನು ಸಹಿಸಲಾರದ ಅವನ ತಂದೆಯು ಪುತ್ರಸ್ನೇಹವನ್ನು ತೊರೆದು ಅವನನ್ನು ಕಾಡಿಗಟ್ಟಿಬಿಟ್ಟನು. ಬಳಿಕ ಅಸಮಂಜಸನು ತನ್ನ ಯೋಗಬಲದಿಂದ ಸರಯೂನದಿಗೆ ಎಸೆದ ಎಲ್ಲ ಬಾಲಕರನ್ನೂ ಜೀವಂತಗೊಳಿಸಿ ತಂದೆಗೆ ತೋರಿಸಿದನು. ಮತ್ತೆ ಕಾಡಿಗೆ ಹೊರಟುಹೋದನು. ॥ ೧೮ ॥ ಅಯೋಧ್ಯೆಯ ನಾಗರಿಕರಿಗೆ – ತಮ್ಮ ಮಕ್ಕಳು ಜೀವಂತರಾಗಿ ಪುನಃ ಬಂದಿರುವುದನ್ನು ಕಂಡು ಪರಮಾಶ್ಚರ್ಯವಾಯಿತು. ಅಂತಹ ಯೋಗಿಯಾದ ಮಗನನ್ನು ಕಳೆದುಕೊಂಡುದಕ್ಕಾಗಿ ಸಗರನಿಗೂ ಪಶ್ಚಾತ್ತಾಪ ಉಂಟಾಯಿತು. ॥ ೧೯ ॥ ಇದಾದ ಬಳಿಕ ಸಗರನ ಆಜ್ಞೆಯಂತೆ ಅಂಶುಮಂತನು ಕುದುರೆಯನ್ನು ಹುಡುಕಲು ಹೊರಟನು. ಅವನು ತನ್ನ ಚಿಕ್ಕಪ್ಪಂದಿರು ಭೂಮಿಯನ್ನು ಅಗೆದು ನಿರ್ಮಿಸಿದ ಸಾಗರದ ತಟದಲ್ಲೇ ಮುಂದರಿಯುತ್ತಾ ಚಿಕ್ಕಪ್ಪಂದಿರ ಭಸ್ಮರಾಶಿಯನ್ನೂ, ಯಜ್ಞದ ಕುದುರೆಯನ್ನೂ ನೋಡಿದನು. ॥ ೨೦ ॥ ಅಲ್ಲೇ ಭಗವಂತನ ಅವತಾರನಾದ ಕಪಿಲಮುನಿಯು ಕುಳಿತಿದ್ದನು. ಅವರನ್ನು ನೋಡಿ ಉದಾರಹೃದಯಿಯಾದ ಅಂಶುಮಂತನು ಅವನ ಚರಣಗಳಲ್ಲಿ ವಂದಿಸಿ, ಕೈಜೋಡಿಸಿಕೊಂಡು ಏಕಾಗ್ರತೆಯಿಂದ ಸ್ತುತಿಸತೊಡಗಿದನು. ॥ ೨೧ ॥

ಅಂಶುಮಂತನು ಹೇಳಿದನು – ಭಗವಾನ್ ಕಪಿಲನೇ ! ನೀನು ಅಜನ್ಮನಾದ ಬ್ರಹ್ಮನಿಗಿಂತಲೂ ಶ್ರೇಷ್ಠನಾಗಿರುವೆ. ಆದಕ್ಕಾಗಿಯೇ ಅವರು ನಿನ್ನನ್ನು ಪ್ರತ್ಯಕ್ಷವಾಗಿ ಕಾಣಲಾರರು. ಪ್ರತ್ಯಕ್ಷವಾಗಿ ನೋಡುವುದಿರಲಿ, ಸಮಾಧಿಯೋಗದಿಂದಲೂ, ಯೋಗವೇ ಮುಂತಾದ ಉಪಾಯಗಳಿಂದಲೂ ನಿನ್ನನ್ನು ಇಂದಿನವರೆಗೆ ತಿಳಿಯಲೂ ಆಗಲಿಲ್ಲ. ನಾವಾದರೋ ಅವರ ಮನ, ಶರೀರ, ಬುದ್ಧಿಯಿಂದ ಉಂಟಾಗುವ ಸೃಷ್ಟಿಯ ಮೂಲಕ ಹುಟ್ಟಿದ ಅಜ್ಞಾನೀ ಜೀವರಾಗಿದ್ದೇವೆ. ನಾವು ಹೇಗೆ ತಾನೇ ನಿನ್ನ ಸ್ವರೂಪವನ್ನು ತಿಳಿಯಬಲ್ಲೆವು ? ॥ ೨೨ ॥ ಈ ಪ್ರಪಂಚದಲ್ಲಿರುವ ಶರೀರಧಾರಿಗಳೆಲ್ಲರೂ ಸತ್ತ್ವ ಗುಣ, ರಜೋಗುಣ ಅಥವಾ ತಮೋಗುಣ ಪ್ರಧಾನರಾಗಿದ್ದಾರೆ. ಅವರು ಜಾಗೃತ್ ಮತ್ತು ಸ್ವಪ್ನಾವಸ್ಥೆಯಲ್ಲಿ ಕೇವಲ ಗುಣಮಯ ಪದಾರ್ಥಗಳನ್ನು, ವಿಷಯಗಳನ್ನು ಹಾಗೂ ಸುಷುಪ್ತಿಯಲ್ಲಿ ತಮೋಮಯ ಅಜ್ಞಾನವನ್ನೇ ನೋಡುತ್ತಾರೆ. ನಿನ್ನ ಮಾಯೆಯಿಂದ

ತಂ ತ್ವಾಮಹಂ ಜ್ಞಾನಘನಂ ಸ್ವಭಾವ-
ಪ್ರಧ್ವಸ್ತಮಾಯಾಗುಣಭೇದಮೋಹೈಃ ।
ಸನಂದನಾದ್ಯೈರ್ಮುನಿಭಿರ್ವಿಭಾವ್ಯಂ
ಕಥಂ ಹಿ ಮೂಢಃ ಪರಿಭಾವಯಾಮಿ ॥ ೨೪ ॥

ಪ್ರಶಾಂತಮಾಯಾಗುಣಕರ್ಮಲಿಂಗ-
ಮನಾಮರೂಪಂ ಸದಸದ್ವಿಮುಕ್ತಮ್ ।
ಜ್ಞಾನೋಪದೇಶಾಯ ಗೃಹೀತದೇಹಂ
ನಮಾಮಹೇ ತ್ವಾಂ ಪುರುಷಂ ಪುರಾಣಮ್ ॥ ೨೫ ॥

ತ್ವನ್ಮಾಯಾರಚಿತೇ ಲೋಕೇ ವಸ್ತುಬುದ್ಧ್ಯಾ ಗೃಹಾದಿಷು ।
ಭ್ರಮಂತಿ ಕಾಮಲೋಭೇರ್ಷ್ಯಾಮೋಹವಿಭ್ರಾಂತಚೇತಸಃ
॥ ೨೬ ॥

ಅದ್ಯ ನಃ ಸರ್ವಭೂತಾತ್ಮನ್ಕಾಮಕರ್ಮೇಂದ್ರಿಯಾಶಯಃ ।
ಮೋಹಪಾಶೋ ದೃಢಶ್ಚಿನ್ನೋ ಭಗವಂಸ್ತವ ದರ್ಶನಾತ್
॥ ೨೭ ॥

ಶ್ರೀಶುಕ ಉವಾಚ

ಇತ್ಥಂ ಗೀತಾನುಭಾವಸ್ತಂ ಭಗವಾನ್ಕಪಿಲೋ ಮುನಿಃ ।
ಅಂಶುಮಂತಮುವಾಚೇದಮನುಗೃಹ್ಯ ಧಿಯಾ ನೃಪ
॥ ೨೮ ॥

ಶ್ರೀಭಗವಾನುವಾಚ

ಅಶ್ವೋಽಯಂ ನೀಯತಾಂ ವತ್ಸ ಪಿತಾಮಹಪಶುಸ್ತವ ।
ಇಮೇ ಚ ಪಿತರೋ ದಗ್ಧಾ ಗಂಗಾಂಭೋಽರ್ಹಂತಿ ನೇತರತ್
॥ ೨೯ ॥

ತಂ ಪರಿಕ್ರಮ್ಯ ಶಿರಸಾ ಪ್ರಸಾದ್ಯ ಹಯಮಾನಯತ್ ।
ಸಗರಸ್ತೇನ ಪಶುನಾ ಕ್ರತುಶೇಷಂ ಸಮಾಪಯತ್
॥ ೩೦ ॥

ರಾಜ್ಯಮಂಶುಮತಿ ನ್ಯಸ್ಯ ನಿಃಸ್ಪೃಹೋ ಮುಕ್ತಬಂಧನಃ ।
ಔರ್ವೋಪದಿಷ್ಟಮಾರ್ಗೇಣ ಲೇಭೇ ಗತಿಮನುತ್ತಮಾಮ್
॥ ೩೧ ॥

ಮೋಹಿತರಾಗಿರುವುದೇ ಇದಕ್ಕೆ ಕಾರಣವಾಗಿದೆ. ಅವರು ಬಹಿರ್ಮುಖರಾದ್ದರಿಂದ ಹೊರಗಿನ ವಸ್ತುಗಳನ್ನು ಮಾತ್ರ ನೋಡುತ್ತಾರೆ ; ಆದರೆ ತಮ್ಮ ಹೃದಯದಲ್ಲಿ ನೆಲೆಸಿರುವ ನಿನ್ನನ್ನು ನೋಡಲಾರರು. ॥ ೨೩॥ ನೀನು ಜ್ಞಾನಘನನೂ, ಏಕರಸನೂ ಆಗಿರುವೆ. ಮಾಯೆಯಿಂದ ಉಂಟಾಗುವ ಭೇದಭಾವವನ್ನೂ ಮತ್ತು ಅದರಿಂದ ಉಂಟಾಗುವ ಅಜ್ಞಾನವನ್ನೂ ನಾಶಪಡಿಸಿಕೊಂಡಿರುವ ಮುನಿಗಳು ಆತ್ಮಸ್ವರೂಪದ ಅನುಭವದಿಂದ ನಿನ್ನನ್ನು ನಿರಂತರವಾಗಿ ಧ್ಯಾನಿಸುತ್ತಿರುವರು. ಮಾಯೆಯ ಗುಣಗಳಿಗೆ ವಶನಾಗಿ ಮೂಢನಾದ ನಾನು ನಿನ್ನನ್ನು ಹೇಗೆ ತಾನೇ ಧ್ಯಾನಿಸಬಲ್ಲೆನು ? ॥ ೨೪ ॥ ಮಾಯೆಯ ಗುಣಗಳು, ಗುಣಗಳಿಂದಾಗುವ ಕರ್ಮ ಹಾಗೂ ಕರ್ಮಗಳ ಸಂಸ್ಕಾರಗಳು ಇವುಗಳಿಂದುಂಟಾದ ಲಿಂಗ ಶರೀರವು ನಿನ್ನಲ್ಲಿ ಇಲ್ಲವೇ ಇಲ್ಲ. ನಿನಗೆ ನಾಮವಾಗಲೀ, ರೂಪವಾಗಲೀ ಇಲ್ಲ. ನಿನ್ನಲ್ಲಿ ಕಾರ್ಯವಾಗಲೀ, ಕಾರಣವಾಗಲೀ ಇಲ್ಲ. ನೀನು ಸನಾತನ ಆತ್ಮನಾಗಿರುವೆ. ಜ್ಞಾನೋಪದೇಶಕ್ಕಾಗಿಯೇ ನೀನು ಈ ಶರೀರವನ್ನು ಧರಿಸಿಕೊಂಡಿರುವೆ. ಅಂತಹ ಪುರಾಣಪುರುಷನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೫ ॥ ಪ್ರಭೋ ! ನಿನ್ನ ಮಾಯೆಯಿಂದ ರಚಿತವಾದ ಈ ಲೋಕದಲ್ಲಿ ಕಾಮ, ಕ್ರೋಧ, ಲೋಭ, ಈರ್ಷೆ, ಮೋಹಾದಿಗಳಿಂದ ಬುದ್ಧಿಗೆಟ್ಟಿರುವ ಜನರು ಮಡದಿ, ಮಕ್ಕಳು, ಮನೆ-ಮಠ ಇವುಗಳನ್ನು ಶಾಶ್ವತವೆಂದು ಭ್ರಮಿಸಿ ಸಂಸಾರದಲ್ಲಿ ಅಲೆಯುತ್ತಾ ಇರುತ್ತಾರೆ. ॥ ೨೬ ॥ ಸಮಸ್ತ ಪ್ರಾಣಿಗಳಿಗೆ ಆತ್ಮನಾಗಿರುವ ಪ್ರಭೋ ! ಇಂದು ನಿನ್ನ ದಿವ್ಯದರ್ಶನದಿಂದ ನನ್ನಲ್ಲಿದ್ದ ಕಾಮ-ಕರ್ಮೇಂದ್ರಿಯಗಳಿಗೆ ಆಶ್ರಯಭೂತನಾಗಿರುವ ದೃಢವಾದ ಮೋಹಪಾಶವು ಕತ್ತರಿಸಲ್ಪಟ್ಟಿತು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಕಪಿಲಮುನಿಯನ್ನು ಅಂಶುಮಂತನು ಹೀಗೆ ಕೀರ್ತಿಸಿದಾಗ ಅವನು ಮನಸ್ಸಿನಲ್ಲೇ ಅಂಶುಮಂತನನ್ನು ಆಗ್ರಹಿಸುತ್ತಾ ಇಂತೆಂದನು. ॥ ೨೮ ॥

ಶ್ರೀಭಗವಂತನು ಹೇಳಿದನು – ವತ್ಸ ! ಈ ಕುದುರೆಯು ನಿನ್ನ ತಾತನ ಯಜ್ಞಪಶುವಾಗಿದೆ. ಇದನ್ನು ನೀನು ತೆಗೆದುಕೊಂಡು ಹೋಗು. ಸುಟ್ಟುಹೋಗಿರುವ ನಿನ್ನ ಚಿಕ್ಕಪ್ಪಂದಿರ ಉದ್ಧಾರವು ಕೇವಲ ಗಂಗಾಜಲದಿಂದ ಆದೀತು. ಇದಲ್ಲದೆ ಬೇರೆ ಯಾವ ಉಪಾಯವೂ ಇಲ್ಲ. ॥ ೨೯ ॥ ಇದನ್ನು ಕೇಳಿ ಅಂಶುಮಂತನು ಪ್ರದಕ್ಷಿಣೆಮಾಡಿ ಮುನಿಯನ್ನು ನಮಸ್ಕರಿಸಿ, ಅವನನ್ನು ಪ್ರಸನ್ನಗೊಳಿಸಿ ಕುದುರೆಯನ್ನು ರಾಜಧಾನಿಗೆ ತಂದನು. ಸಗರನು ಆ ಯಜ್ಞಪಶುವಿನಿಂದ ಉಳಿದ ಯಜ್ಞಕ್ರಿಯೆಗಳನ್ನು ಮುಗಿಸಿದನು. ॥ ೩೦ ॥ ಬಳಿಕ ಸಗರರಾಜನು ಅಂಶುಮಂತನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ತಾನು ವಿಷಯಗಳಿಂದ ನಿಃಸ್ಪೃಹನಾಗಿ, ಬಂಧನಮುಕ್ತನಾದನು. ಅವನು ಮಹರ್ಷಿ ಔರ್ವರು ಆರುಹಿದ ಮಾರ್ಗದಂತೆ ಪರಮಪದವನ್ನು ಪಡೆದುಕೊಂಡನು. ॥ ೩೧ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಸಗರೋಪಾಖ್ಯಾನೇಽಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಭಗೀರಥನ ಚರಿತ್ರೆ ಮತ್ತು ಗಂಗಾವತರಣ

ಶ್ರೀಶುಕ ಉವಾಚ

ಅಂಶುಮಾಂಶ್ಚ ತಪಸ್ತೇಪೇ ಗಂಗಾನಯನಕಾಮ್ಯಯಾ ।
ಕಾಲಂ ಮಹಾಂತಂ ನಾಶಕ್ನೋತ್ತತಃ ಕಾಲೇನ ಸಂಸ್ಥಿತಃ
॥ ೧ ॥

ದಿಲೀಪಸ್ತತ್ಸುತಸ್ತದ್ವದಶಕ್ತಃ ಕಾಲಮೇಯಿವಾನ್ ।
ಭಗೀರಥಸ್ತಸ್ಯ ಪುತ್ರಸ್ತೇಪೇ ಸ ಸುಮಹತ್ತಪಃ
॥ ೨ ॥

ದರ್ಶಯಾಮಾಸ ತಂ ದೇವೀ ಪ್ರಸನ್ನಾ ವರದಾಸ್ಮಿ ತೇ ।
ಇತ್ಯುಕ್ತಃ ಸ್ವಮಭಿಪ್ರಾಯಂ ಶಶಂಸಾವನತೋ ನೃಪಃ
॥ ೩ ॥

ಕೋಽಪಿ ಧಾರಯಿತಾ ವೇಗಂ ಪತಂತ್ಯಾ ಮೇ ಮಹೀತಲೇ ।
ಅನ್ಯಥಾ ಭೂತಲಂ ಭಿತ್ತ್ವಾ ನೃಪ ಯಾಸ್ಯೇ ರಸಾತಲಮ್
॥ ೪ ॥

ಕಿಂ ಚಾಹಂ ನ ಭುವಂ ಯಾಸ್ಯೇ ನರಾ ಮಯ್ಯಾಮೃಜಂತ್ಯಘಮ್ ।
ಮೃಜಾಮಿ ತದಘಂ ಕುತ್ರ ರಾಜಂಸ್ತತ್ರ ವಿಚಿಂತ್ಯತಾಮ್
॥ ೫ ॥

ಭಗೀರಥ ಉವಾಚ

ಸಾಧವೋ ನ್ಯಾಸಿನಃ ಶಾಂತಾ ಬ್ರಹ್ಮಿಷ್ಠಾ ಲೋಕಪಾವನಾಃ ।
ಹರಂತ್ಯಘಂ ತೇಽಙ್ಗಸಂಗಾತ್ತೇಷ್ವಾಸ್ತೇ ಹ್ಯಘಭಿದ್ಹರಿಃ
॥ ೬ ॥

ಧಾರಯಿಷ್ಯತಿ ತೇ ವೇಗಂ ರುದ್ರಸ್ತ್ವತ್ಕೃತ್ಕೃ ಶರೀರಿಣಾಮ್ ।
ಯಸ್ಮಿನ್ನೋತಮಿದಂ ಪ್ರೋತಂ ವಿಶ್ವಂ ಶಾಟೀವ ತಂತುಷು
॥ ೭ ॥

ಇತ್ಯುಕ್ತ್ವಾ ಸ ನೃಪೋ ದೇವಂ ತಪಸಾತೋಷಯಚ್ಛಿವಮ್ ।
ಕಾಲೇನಾಲ್ಪೀಯಸಾ ರಾಜಂಸ್ತಸ್ಯೇಶಃ ಸಮತುಷ್ಯತ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಅಂಶುಮಂತನು ಗಂಗೆಯನ್ನು ಕರೆತರುವ ಆಶಯದಿಂದ ಅನೇಕ ವರ್ಷಗಳವರೆಗೆ ಘೋರ ತಪಸ್ಸನ್ನಾಚರಿಸಿದನು. ಆದರೆ ಅವನಿಗೆ ಸಫಲತೆ ದೊರೆಯಲಿಲ್ಲ. ಕಾಲವು ಸನ್ನಿಹಿತವಾಗಲು ಅವನು ಕಾಲವಶನಾದನು. ॥ ೧ ॥ ಅಂಶುಮಂತನ ಪುತ್ರ ದಿಲೀಪನೂ ತಂದೆಯಂತೆಯೇ ತಪಸ್ಸನ್ನು ಮಾಡಿದನು. ಆದರೆ ಅವನೂ ಅಸಫಲನೇ ಆದನು. ಕಾಲಧರ್ಮದಿಂದ ಅವನೂ ಮೃತ್ಯುವನ್ನೈದಿದನು. ದಿಲೀಪನ ಪುತ್ರ ಭಗೀರಥನೂ ಮಹಾತಪಸ್ಸನ್ನು ಆಚರಿಸಿದನು. ॥ ೨ ॥ ಅವನ ತಪಸ್ಸಿನಿಂದ ಪ್ರಸನ್ನಳಾದ ಭಗವತಿ ಗಂಗಾದೇವಿಯು ಅವನಿಗೆ ದರ್ಶನವಿತ್ತು – 'ರಾಜನೇ ! ನಿನಗೆ ವರವನ್ನು ಕೊಡಲು ಬಂದಿರುವೆನು' ಎಂದು ಹೇಳಿದಳು. ಆಗ ರಾಜಾ ಭಗೀರಥನು ವಿನಮ್ರನಾಗಿ 'ತಾಯೇ ! ನೀನು ಭೂಲೋಕಕ್ಕೆ ಆಗಮಿಸು' ಎಂದು ತನ್ನ ಮನೋರಥವನ್ನು ಪ್ರಕಟಪಡಿಸಿದನು. ॥ ೩ ॥

ಗಂಗಾದೇವಿಯು ಹೇಳಿದಳು – ವತ್ಸ ಭಗೀರಥ ! ರಭಸದಿಂದ ನಾನು ಸ್ವರ್ಗದಿಂದ ಭೂಮಿಗೆ ಧುಮುಕುವಾಗ ನನ್ನ ವೇಗವನ್ನು ಧರಿಸುವವರು ಯಾರಾದರೂ ಇರಬೇಕು. ಇಲ್ಲದಿದ್ದರೆ ನಾನು ಪೃಥಿವಿಯನ್ನು ಭೇದಿಸಿಕೊಂಡು ರಸಾತಳಕ್ಕೆ ಸೇರಿ ಹೋಗುವೆನು. ॥ ೪ ॥ ಇದಲ್ಲದೆ ಜನರು ನನ್ನಲ್ಲಿ ತಮ್ಮ ಪಾಪಗಳನ್ನು ತೊಳೆದುಕೊಳ್ಳುವರು. ಮತ್ತೆ ನಾನು ಆ ಪಾಪಗಳನ್ನು ಎಲ್ಲಿ ತೊಳೆದುಕೊಳ್ಳಲೀ ? ಈ ಕಾರಣದಿಂದಲೂ ನಾನು ಭೂಮಿಗೆ ಬರಲಾರೆನು. ಭಗೀರಥನೇ ! ಈ ವಿಷಯದಲ್ಲಿ ನೀನೂ ವಿಚಾರ ಮಾಡು. ॥ ೫ ॥

ಭಗೀರಥನು ಹೇಳಿದನು – ತಾಯೇ ! ಲೋಕ- ಪರಲೋಕಗಳನ್ನೂ, ಮಡದಿ-ಮಕ್ಕಳನ್ನೂ, ಮನೆ-ಮಠಗಳನ್ನೂ, ಐಶ್ವರ್ಯವನ್ನೂ, ಸುಖೋಪಭೋಗಗಳನ್ನೂ, ಕಾಮ - ಕ್ರೋಧಾದಿಗಳನ್ನೂ, ಪರಿತ್ಯಜಿಸಿರುವ ಶಾಂತರಾದ, ಬ್ರಹ್ಮನಿಷ್ಠರಾದ, ಲೋಕ ಪಾವನರಾದ ಸಾಧುಗಳು ತಮ್ಮ ಅಂಗಸ್ಪರ್ಶದಿಂದ ನಿನ್ನ ಪಾಪಗಳನ್ನು ತೊಳೆದುಬಿಡುವರು. ಏಕೆಂದರೆ, ಅವರ ಹೃದಯಕಮಲದಲ್ಲಿ ಅಘ ರೂಪನಾದ ಅಘಾಸುರನ ಹಂತಕನಾದ, ಪಾಪನಾಶಕನಾದ ಶ್ರೀಹರಿಯು ಸರ್ವದಾ ನೆಲೆಸಿರುತ್ತಾನೆ. ॥ ೬ ॥ ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪನಾದ ರುದ್ರದೇವರು ನಿನ್ನ ವೇಗವನ್ನು ಧರಿಸುತ್ತಾನೆ. ಬಟ್ಟೆಯಲ್ಲಿ ದಾರವು ವ್ಯಾಪಿಸಿರುವಂತೆ ಸಮಸ್ತ ಜಗತ್ತು ರುದ್ರದೇವರಲ್ಲಿ ಹಾಸುಹೊಕ್ಕಾಗಿದೆ. ॥ ೭ ॥ ಪರೀಕ್ಷಿತನೇ ! ಗಂಗಾಮಾತೆಗೆ ಹೀಗೆ ಹೇಳಿ ಭಗೀರಥನು ತಪಸ್ಸಿನ ಮೂಲಕ ಭಗವಾನ್ ಶಂಕರನನ್ನು ಒಲಿಸಿದನು. ಆಶುತೋಷನಾದ ಪರಶಿವನು ಅತ್ಯಲ್ಪಕಾಲದಲ್ಲೇ ಪ್ರಸನ್ನನಾದನು. ॥ ೮ ॥

ತಥೇತಿ ರಾಜ್ಞಾಭಿಹಿತಂ ಸರ್ವಲೋಕಹಿತಃ ಶಿವಃ ।
ದಧಾರಾವಹಿತೋ ಗಂಗಾಂ ಪಾದಪೂತಜಲಾಂ ಹರೇಃ
॥ ೯ ॥

ಭಗೀರಥಃ ಸ ರಾಜರ್ಷಿರ್ನಿನ್ಯೇ ಭುವನಪಾವನೀಮ್ ।
ಯತ್ರ ಸ್ವಪಿತೄಣಾಂ ದೇಹಾ ಭಸ್ಮೀಭೂತಾಃ ಸ್ಮ ಶೇರತೇ
॥ ೧೦ ॥

ರಥೇನ ವಾಯುವೇಗೇನ ಪ್ರಯಾಂತಮನುಧಾವತೀ ।
ದೇಶಾನ್ಪುನಂತೀ ನಿರ್ದಗ್ಧಾನಾಸಿಂಚತ್ಸಗರಾತ್ಮಜಾನ್
॥ ೧೧ ॥

ಯಜ್ಜಲಸ್ಪರ್ಶಮಾತ್ರೇಣ ಬ್ರಹ್ಮದಂಡಹತಾ ಅಪಿ ।
ಸಗರಾತ್ಮಜಾ ದಿವಂ ಜಗ್ಮುಃ ಕೇವಲಂ ದೇಹಭಸ್ಮಭಿಃ
॥ ೧೨ ॥

ಭಸ್ಮೀಭೂತಾಂಗಸಂಗೇನ ಸ್ವರ್ಯಾತಾಃ ಸಗರಾತ್ಮಜಾಃ ।
ಕಿಂ ಪುನಃ ಶ್ರದ್ಧಯಾ ದೇವೀಂ ಯೇ ಸೇವಂತೇ ಧೃತವ್ರತಾಃ
॥ ೧೩ ॥

ನ ಹ್ಯೇತತ್ಪರಮಾಶ್ಚರ್ಯಂ ಸ್ವರ್ಧುನ್ಯಾ ಯದಿಹೋದಿತಮ್ ।
ಅನಂತಚರಣಾಂಭೋಜಪ್ರಸೂತಾಯಾ ಭವಚ್ಛಿದಃ
॥ ೧೪ ॥

ಸಂನಿವೇಶ್ಯ ಮನೋ ಯಸ್ಮಿಞ್ಛ್ರದ್ಧಯಾ ಮುನಯೋಽಮಲಾಃ ।
ತ್ರೈಗುಣ್ಯಂ ದುಸ್ತ್ಯಜಂ ಹಿತ್ವಾ ಸದ್ಯೋ ಯಾತ್ತಾ ಸದಾತ್ಮತಾಮ್
॥ ೧೫ ॥

ಶ್ರುತೋ ಭಗೀರಥಾಜ್ಜಜ್ಞೇ ತಸ್ಯ ನಾಭೋಽಪರೋಽಭವತ್ ।
ಸಿಂಧುದ್ವೀಪಸ್ತತಸ್ತಸ್ಮಾದಯುತಾಯುಸ್ತತೋಽಭವತ್
॥ ೧೬ ॥

ಋತುಪರ್ಣೋ ನಲಸಖೋ ಯೋಽಶ್ವವಿದ್ಯಾಮಯಾನ್ನಲಾತ್ ।
ದತ್ತ್ವಾಕ್ಷಹೃದಯಂ ಚಾಸ್ಮೈ ಸರ್ವಕಾಮಸ್ತು ತತ್ಸುತಃ
॥ ೧೭ ॥

ತತಃ ಸುದಾಸಸ್ತತ್ಪುತ್ರೋ ಮದಯಂತೀಪತಿರ್ನೃಪ ।
ಆಹುರ್ಮಿತ್ರಸಹಂ ಯಂ ವೈ ಕಲ್ಮಾಷಾಂಘ್ರಿಮುತ ಕ್ವಚಿತ್ ।
ವಸಿಷ್ಠಶಾಪಾದ್ರಕ್ಷೋಽಭೂದನಪತ್ಯಃ ಸ್ವಕರ್ಮಣಾ
॥ ೧೮ ॥

ಭಗವಾನ್ ಪರಶಿವನಾದರೋ ಸಮಸ್ತ ವಿಶ್ವದ ಹಿತೈಷಿಯಾಗಿದ್ದಾನೆ. ರಾಜನ ಮಾತಿಗೆ 'ತಥಾಸ್ತು' ಎಂದು ಹೇಳಿ ಅಂಗೀಕರಿಸಿ, ಆಕಾಶದ ಕಡೆಯಿಂದ ಭೋರ್ಗರೆಯುತ್ತಾ ಬಂದ, ವಿಷ್ಣು ವಿನ ಪಾದಸ್ಪರ್ಶದಿಂದ ಪಾವನವಾದ ಜಲ ಪ್ರವಾಹದಿಂದ ಕೂಡಿದ್ದ ಗಂಗಾದೇವಿಯನ್ನು ಅವನು ಜಾಗರೂಕನಾಗಿ ತನ್ನ ಶಿರಸ್ಸಿನಲ್ಲಿ ಧರಿಸಿದನು. ॥ ೯ ॥ ಇದಾದ ಬಳಿಕ ರಾಜರ್ಷಿಯಾದ ಭಗೀರಥನು ಶಿವನ ಜಟಾಜೂಟದಿಂದ ಹರಿದುಬಂದ ಆ ಗಂಗಾನದಿಯನ್ನು ತನ್ನ ಪಿತೃಗಳ ಭಸ್ಮೀ ಭೂತವಾದ ಶರೀರಗಳಿದ್ದ ಸ್ಥಳಕ್ಕೆ ಕರೆದುಕೊಂಡು ಹೋದನು. ॥ ೧೦ ॥ ವಾಯುವೇಗಕ್ಕೆ ಸಮಾನವಾದ ವೇಗವುಳ್ಳ ರಥದಲ್ಲಿ ಕುಳಿತು ಭಗೀರಥನು ಮುಂದೆ ಹೋಗುತ್ತಿದ್ದನು. ಹಲವಾರು ದೇಶಗಳನ್ನು ತನ್ನ ಶುಭ ಜಲಪ್ರವಾಹದಿಂದ ಪಾವನಗೊಳಿಸುತ್ತಾ ಗಂಗಾದೇವಿಯೂ ಭಗೀರಥನ ಹಿಂದೆಯೇ ಹೋಗುತ್ತಿದ್ದಳು. ಹೀಗೆ ಗಂಗಾ-ಸಾಗರ ಸಂಗಮಕ್ಕೆ ತಲುಪಿದ ಗಂಗೆಯು ಸುಟ್ಟು ಹೋಗಿದ್ದ ಸಗರನ ಅರವತ್ತುಸಾವಿರ ಮಕ್ಕಳನ್ನು ತನ್ನ ಪುಣ್ಯಜಲದಲ್ಲಿ ಮುಳುಗಿಸಿಬಿಟ್ಟಳು. ॥ ೧೧ ॥ ಸಗರನ ಪುತ್ರರು ಬ್ರಾಹ್ಮಣನ ತಿರಸ್ಕಾರದಿಂದ ಭಸ್ಮವಾಗಿ ಹೋಗಿದ್ದರಿಂದ ಅವರ ಉದ್ಧಾರಕ್ಕೆ ಇತರ ಯಾವುದೇ ಉಪಾಯವಿಲ್ಲದಿದ್ದರೂ ಕೇವಲ ಶರೀರದ ಬೂದಿಯೊಂದಿಗೆ ಗಂಗಾಜಲದ ಸ್ಪರ್ಶವಾದ್ದರಿಂದ ಅವರೆಲ್ಲರೂ ಸ್ವರ್ಗಲೋಕಕ್ಕೆ ಹೋದರು. ॥ ೧೨ ॥ ಪರೀಕ್ಷಿತನೇ ! ಪವಿತ್ರವಾದ ಗಂಗಾಜಲವು ಸಗರನ ಮಕ್ಕಳ ಶರೀರದ ಭಸ್ಮವನ್ನು ಸ್ಪರ್ಶಿಸಿದ್ದರಿಂದಲೇ ಅವರೆಲ್ಲರೂ ಸ್ವರ್ಗಕ್ಕೆ ಹೋದರೆಂದ ಮೇಲೆ ಶ್ರದ್ಧೆಯಿಂದ ವ್ರತಾನುಷ್ಠಾನಮಾಡುತ್ತಾ ಶ್ರೀಗಂಗಾದೇವಿಯನ್ನು ಸೇವಿಸುವವರ ವಿಷಯದಲ್ಲಿ ಹೇಳುವುದೇನಿದೆ ? ॥ ೧೩. ॥ ಗಂಗಾ ದೇವಿಯ ಮಹಿಮೆಯ ಸಂಬಂಧದಲ್ಲಿ ನಾನು ಹೇಳಿದುದರಲ್ಲಿ ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ, ಗಂಗೆಯು ಭಗವಂತನ ಚರಣ ಕಮಲಗಳಿಂದ ಹೊರಟಿರುವವಳು. ಆ ಚರಣಗಳನ್ನು ಶ್ರದ್ಧೆಯಿಂದ ಚಿಂತಿಸುತ್ತಾ ಮಹಾಮುನಿಗಳೆಲ್ಲರೂ ನಿರ್ಮಲರಾಗಿ ಹೋಗುತ್ತಾರೆ. ತ್ರಿಗುಣಗಳ ಕಷ್ಟತರ ಬಂಧನವನ್ನು ಕತ್ತರಿಸಿ ಒಡನೆಯೇ ಭಗವತ್ ಸ್ವರೂಪರಾಗಿ ಹೋಗುತ್ತಾರೆ. ಹಾಗಿರುವಾಗ ಗಂಗೆಯು ಸಂಸಾರ ಬಂಧನವನ್ನು ಕತ್ತರಿಸುವುದರಲ್ಲಿ ಆಶ್ಚರ್ಯವೇನಿದೆ ? ॥ ೧೪-೧೫ ॥

ಭಗೀರಥನಿಗೆ ಶ್ರುತನೆಂಬ ಪುತ್ರನಿದ್ದನು. ಶ್ರುತನಿಗೆ ನಾಭ. ಇವನು ಹಿಂದಿನ ನಾಭನಿಗಿಂತ ಬೇರೆಯಾದವನು. ನಾಭನಿಗೆ ಸಿಂಧುದ್ವೀಪನೆಂಬ ಪುತ್ರನು. ಅವನಲ್ಲಿ ಅಯುತಾಯು ಜನಿಸಿದನು. ಅಯುತಾಯುವಿಗೆ ಋತುಪರ್ಣ ಮಗನಾದನು. ಅವನು ನಳನ ಮಿತ್ರನಾಗಿದ್ದನು. ಋತುಪರ್ಣನು ನಳನಿಂದ ಅಶ್ವವಿದ್ಯೆಯನ್ನು ಕಲಿತು, ಬದಲಿಗೆ ನಳನಿಗೆ ಅಕ್ಷಹೃದಯ (ಪಗಡೆಯಾಟ)ವನ್ನು ಹೇಳಿಕೊಟ್ಟನು. ಋತುಪರ್ಣನಿಗೆ ಸರ್ವಕಾಮನೆಂಬ ಪುತ್ರನಾದನು. ॥ ೧೬-೧೭ ॥ ಪರೀಕ್ಷಿತನೇ ! ಸರ್ವಕಾಮನಿಗೆ ಸುದಾಸನೆಂಬ ಮಗನಿದ್ದನು. ಸುದಾಸನ ಪುತ್ರ ಸೌದಾಸನು. ಸೌದಾಸನಿಗೆ ಮದಯಂತಿ ಎಂಬ ಪತ್ನಿಯಿದ್ದಳು. ಸೌದಾಸನನ್ನೇ ಕೆಲವರು ಮಿತ್ರ ಸಹನೆಂದು ಹೇಳುತ್ತಿದ್ದರು. ಇನ್ನೂ ಕೆಲವರು ಕಲ್ಮಾಷಪಾದ ಎಂದೂ ಕರೆಯುತ್ತಿದ್ದರು. ಅವನು ವಸಿಷ್ಠರ ಶಾಪದಿಂದ ರಾಕ್ಷಸನಾಗಿದ್ದನು. ಮತ್ತೆ ತನ್ನ ಕರ್ಮಗಳಿಂದಾಗಿ ಸಂತಾನಹೀನನಾದನು. ॥ ೧೮ ॥

ರಾಜೋವಾಚ

ಕಿಂ ನಿಮಿತ್ತೋ ಗುರೋಃ ಶಾಪಃ ಸೌದಾಸಸ್ಯ ಮಹಾತ್ಮನಃ ।
ಏತದ್ವೇದಿತುಮಿಚ್ಛಾಮಃ ಕಥ್ಯತಾಂ ನ ರಹೋ ಯದಿ
॥ ೧೯ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಮಹಾತ್ಮನಾದ ಸೌದಾಸನಿಗೆ ಗುರು ವಸಿಷ್ಠರು ಏಕೆ ಶಪಿಸಿದರು? ಇದನ್ನು ತಿಳಿಯಲು ನಾವೆಲ್ಲರೂ ಬಯಸುತ್ತಿದ್ದೇವೆ. ಯಾವುದೇ ರಹಸ್ಯವಿಲ್ಲದಿದ್ದರೆ ದಯಮಾಡಿ ಹೇಳಿರಿ. ॥ ೧೯ ॥

ಶ್ರೀಶುಕ ಉವಾಚ

ಸೌದಾಸೋ ಮೃಗಯಾಂ ಕಿಂಚಿಚ್ಚರನ್ರಕ್ಷೋ ಜಘಾನ ಹ ।
ಮುಮೋಚ ಭ್ರಾತರಂ ಸೋಽಥ ಗತಃ ಪ್ರತಿಚಿಕೀರ್ಷಯಾ
॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಒಮ್ಮೆ ರಾಜಾ ಸೌದಾಸನು ಬೇಟೆಯಾಡಲು ಕಾಡಿಗೆ ಹೋಗಿದ್ದನು. ಅವನು ಓರ್ವ ರಾಕ್ಷಸನನ್ನು ಕೊಂದುಹಾಕಿದನು ಹಾಗೂ ಅವನ ತಮ್ಮನನ್ನು ಬಿಟ್ಟುಬಿಟ್ಟನು. ಅವನು ರಾಜನ ಈ ಕೆಲಸವನ್ನು ಅನ್ಯಾಯವೆಂದು ತಿಳಿದು, ಅಣ್ಣನ ಸಾವಿನ ಸೇಡು ತೀರಿಸಿಕೊಳ್ಳಲು ಅವನು ಅಡಿಗೆಯವನಾಗಿ ರಾಜನ ಅರಮನೆ ಸೇರಿದನು. ಒಂದು ದಿನ ಗುರು ವಸಿಷ್ಠರು ಸೌದಾಸನಲ್ಲಿಗೆ ಊಟಕ್ಕೆ ಬಂದಾಗ ಅಡಿಗೆಯವನು ನರಮಾಂಸವನ್ನು ಬೇಯಿಸಿ ಬಡಿಸಿದನು. ॥ ೨೦-೨೧ ॥

ಸ ಚಿಂತಯನ್ನಘಂ ರಾಜ್ಞಃ ಸೂದರೂಪಧರೋ ಗೃಹೇ ।
ಗುರವೇ ಭೋಕ್ತುಕಾಮಾಯ ಪಕ್ತ್ವಾನಿನ್ಯೇ ನರಾಮಿಷಮ್
॥ ೨೧ ॥

ಪರಿವೇಕ್ಷ್ಯಮಾಣಂ ಭಗವಾನ್ವಿಲೋಕ್ಯಾಭಕ್ಷ್ಯಮಂಜಸಾ ।
ರಾಜಾನಮಶಪತ್ಕ್ರುದ್ಧೋ ರಕ್ಷೋ ಹ್ಯೇವಂ ಭವಿಷ್ಯಸಿ
॥ ೨೨ ॥

ಬಡಿಸಿದ ವಸ್ತುವು ಸರ್ವಥಾ ಅಭಕ್ಷ್ಯವಾದುದು ಎಂದು ತಿಳಿದಾಗ ಸರ್ವಸಮರ್ಥರಾದ ವಸಿಷ್ಠರು ಕ್ರೋಧಗೊಂಡು ರಾಜನಿಗೆ – 'ಈ ಕೃತ್ಯದಿಂದಾಗಿ ನೀನು ರಾಕ್ಷಸನಾಗಿ ಹೋಗು' ಎಂದು ಶಾಪವನ್ನು ಕೊಟ್ಟರು. ॥ ೨೨ ॥ ಆದರೆ ಈ ಕೆಲಸವು ರಾಜನದ್ದಲ್ಲ, ರಾಕ್ಷಸನದು ಎಂದು ತಿಳಿದಾಗ ಅವರು ಆ ಶಾಪವನ್ನು ಕೇವಲ ಹನ್ನೆರಡು ವರ್ಷಗಳಿಗೆ ಸೀಮಿತಗೊಳಿಸಿದರು. ಆ ಸಮಯದಲ್ಲಿ ಸೌದಾಸನೂ ತನ್ನ ಬೊಗಸೆಯಲ್ಲಿ ನೀರನ್ನೆತ್ತಿಕೊಂಡು ಗುರು ವಸಿಷ್ಠರಿಗೆ ಶಾಪ ವನ್ನೀಯಲು ಸಿದ್ಧನಾದನು. ॥ ೨೩. ॥ ಆದರೆ ರಾಜನ ಪತ್ನಿ ಮದಯಂತಿಯು ಹೀಗೆ ಮಾಡಬಾರದೆಂದು ತಡೆದಳು. ಆಗ ಸೌದಾಸನು ಯೋಚಿಸಿದನು – ದಿಕ್ಕುಗಳು, ಆಕಾಶ ಮತ್ತು ಪೃಥಿವಿ ಎಲ್ಲವೂ ಜೀವಮಯವೇ ಆಗಿರುವುವು. ಎಲ್ಲಿಯೇ ಆಗಲಿ, ಈ ತೀಕ್ಷ್ಣಜಲವನ್ನು ಚೆಲ್ಲಿದರೂ ಪ್ರಾಣಿಗಳ ವಿನಾಶವಾಗಬಹುದು ಎಂದು ಭಾವಿಸಿ ಕೊನೆಗೆ ಅವನು ಆದನ್ನು ತನ್ನ ಕಾಲುಗಳ ಮೇಲೆಯೇ ಹಾಕಿಕೊಂಡನು. ಇದರಿಂದ ಸೌದಾಸನಿಗೆ ಮಿತ್ರಸಹನೆಂಬ ಹೆಸರಾಯಿತು. ॥ ೨೪ ॥ ಆ ಜಲದಿಂದ ಅವನ ಕಾಲುಗಳು ಕಪ್ಪಾದುವು. ಆದರಿಂದ ಅವನಿಗೆ ಕಲ್ಮಾಷಪಾದ ಎಂದೂ ಹೆಸರಾಯಿತು. ಈಗ ಅವನು ರಾಕ್ಷಸನಾಗಿದ್ದನು. ಒಂದು ದಿನ ರಾಕ್ಷಸನಾಗಿದ್ದ ಕಲ್ಮಾಷಪಾದ ರಾಜನು ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಬ್ರಾಹ್ಮಣ ದಂಪತಿಗಳು ರತಿಸುಖದಲ್ಲಿರುವುದನ್ನು ನೋಡಿದನು. ॥ ೨೫ ॥ ಕಲ್ಮಾಷಪಾದನು ಹಸಿದಿದ್ದನು. ಅವನು ಬ್ರಾಹ್ಮಣನನ್ನು ಹಿಡಿದುಕೊಂಡನು. ಆಗ ಬ್ರಾಹ್ಮಣ ಪತ್ನಿಯ ಕಾಮನೆಯು ಪೂರ್ಣಗೊಂಡಿರಲಿಲ್ಲ, ಆವಳೆಂದಳು – ಮಹಾರಾಜ! ನೀನು ನಿಶ್ಚಯವಾಗಿ ರಾಕ್ಷಸನಲ್ಲ, ನೀನು ಇಕ್ಷ್ವಾಕುವಂಶದ ವೀರ ಮಹಾರಥಿ ಮಹಾರಾಣಿ ಮದಯಂತಿಯ ಪತಿಯಾಗಿರುವೆ. ನೀನು ಇಂತಹ ಅಧರ್ಮವನ್ನು ಮಾಡುವುದು ಉಚಿತವಲ್ಲ, ನಾನು ಸಂತಾನದ ಕಾಮನೆಯಿಂದ ನನ್ನ ಪತಿಯೊಡನೆ ಸೇರಿದ್ದೆ, ನನ್ನ ಪತಿಯೂ ಪೂರ್ಣಕಾಮನಾಗಲಿಲ್ಲ, ಆದುದರಿಂದ ದಯಮಾಡಿ ನನ್ನ ಪತಿಯನ್ನು ಬಿಟ್ಟುಬಿಡು. ॥ ೨೬-೨೭ ॥

ಪರಿವೇಕ್ಷ್ಯಮಾಣಂ ಭಗವಾನ್ವಿಲೋಕ್ಯಾಭಕ್ಷ್ಯಮಂಜಸಾ ।
ರಾಜಾನಮಶಪತ್ಕ್ರುದ್ಧೋ ರಕ್ಷೋ ಹ್ಯೇವಂ ಭವಿಷ್ಯಸಿ
॥ ೨೨ ॥

ರಕ್ಷಃಕೃತಂ ತದ್ವಿದಿತ್ವಾ ಚಕ್ರೇ ದ್ವಾದಶವಾರ್ಷಿಕಮ್ ।
ಸೋಽಪ್ಯಪೋಽಂಜಲಿನಾಽಽದಾಯ ಗುರುಂ ಶಪ್ತುಂ ಸಮುದ್ಯತಃ
॥ ೨೩. ॥

ವಾರಿತೋ ಮದಯಂತ್ಯಾಪೋ ರುಷತೀಃ ಪಾದಯೋರ್ಜಹೌ ।
ದಿಶಃ ಖಮವನೀಂ ಸರ್ವಂ ಪಶ್ಯಂಜೀವಮಯಂ ನೃಪಃ
॥ ೨೪ ॥

ರಾಕ್ಷಸಂ ಭಾವಮಾಪನ್ನಃ ಪಾದೇ ಕಲ್ಮಾಷತಾಂ ಗತಃ ।
ವ್ಯವಾಯಕಾಲೇ ದದೃಶೇ ವನೌಕೋದಂಪತೀ ದ್ವಿಜೌ
॥ ೨೫ ॥

ಕ್ಷುಧಾರ್ತೋ ಜಗೃಹೇ ವಿಪ್ರಂ ತತ್ಪತ್ನ್ಯಾಹಾಕೃತಾರ್ಥವತ್ ।
ನ ಭವಾನ್ರಾಕ್ಷಸಃ ಸಾಕ್ಷಾದಿಕ್ಷ್ವಾಕೂಣಾಂ ಮಹಾರಥಃ
॥ ೨೬ ॥

ಮದಯಂತ್ಯಾಃ ಪತಿರ್ವೀರ ನಾಧರ್ಮಂ ಕರ್ತುಮರ್ಹಸಿ ।
ದೇಹಿ ಮೇಽಪತ್ಯಕಾಮಾಯಾ ಅಕೃತಾರ್ಥಂ ಪತಿಂ ದ್ವಿಜಮ್
॥ ೨೭ ॥

ದೇಹೋಽಯಂ ಮಾನುಷೋ ರಾಜನ್ಪುರುಷಸ್ಯಾಖಿಲಾರ್ಥದಃ ।
ತಸ್ಮಾದಸ್ಯ ವಧೋ ವೀರ ಸರ್ವಾರ್ಥವಧ ಉಚ್ಯತೇ
॥ ೨೮ ॥

ರಾಜನೇ ! ಈ ಮನುಷ್ಯ ಶರೀರವು ಜೀವನಿಗೆ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕುವಿಧವಾದ ಪುರುಷಾರ್ಥಗಳನ್ನು ಸಾಧಿಸಿ ಕೊಡುವಂತಹುದು. ಅದಕ್ಕಾಗಿ ವೀರನೇ ! ಈ ಶರೀರವನ್ನು ನಾಶಗೊಳಿಸುವುದು ಎಲ್ಲ ಪುರುಷಾರ್ಥಗಳನ್ನು ಹತ್ಯೆಮಾಡಿದಂತೆ ಎಂದು ಹೇಳಲಾಗಿದೆ. ॥ ೨೮ ॥

ಏಷ ಹಿ ಬ್ರಾಹ್ಮಣೋ ವಿದ್ವಾಂಸ್ತಪಃಶೀಲಗುಣಾನ್ವಿತಃ ।
ಆರಿರಾಧಯಿಷುರ್ಬ್ರಹ್ಮ ಮಹಾಪುರುಷಸಂಜ್ಞಿತಮ್ ।
ಸರ್ವಭೂತಾತ್ಮಭಾವೇನ ಭೂತೇಷ್ವನ್ತರ್ಹಿತಂ ಗುಣೈಃ
॥ ೨೯ ॥

ಈ ಬ್ರಾಹ್ಮಣನಾದರೋ ವಿದ್ವಾಂಸನಾಗಿದ್ದಾನೆ. ತಪಸ್ಸು ಸೌಶೀಲ್ಯ ಮತ್ತು ಉತ್ತಮ ಗುಣಗಳಿಂದ ಸಂಪನ್ನನಾಗಿರುವನು. ಯಾರು ಸಮಸ್ತ ಪದಾರ್ಥಗಳಲ್ಲಿ ಇದ್ದರೂ ಅವುಗಳ ಬೇರೆ-ಬೇರೆ ಗುಣಗಳಿಂದ ಅಡಗಿರುವನೋ, ಅಂತಹ ಪರಬ್ರಹ್ಮ ಪುರುಷೋತ್ತಮ ನನ್ನು ಸಮಸ್ತ ಪ್ರಾಣಿಗಳ ಆತ್ಮರೂಪನೆಂದು ಅರಿತು ಇವನು ಆರಾಧಿಸುತ್ತಿರುವನು. ॥ ೨೯ ॥

ಸೋಽಯಂ ಬ್ರಹ್ಮರ್ಷಿವರ್ಯಸ್ತೇ ರಾಜರ್ಷಿಪ್ರವರಾದ್ವಿಭೋ ।
ಕಥಮರ್ಹತಿ ಧರ್ಮಜ್ಞ ವಧಂ ಪಿತುರಿವಾತ್ಮಜಃ
॥ ೩೦ ॥

ಮಹಾರಾಜನೇ ! ನೀನು ಶಕ್ತಿಶಾಲಿಯಾಗಿರುವೆ ಧರ್ಮದ ಮರ್ಮವನ್ನು ಚೆನ್ನಾಗಿ ಅರಿತುಕೊಂಡಿರುವೆ. ತಂದೆಯ ಕೈಯಿಂದ ಮಗನ ಹತ್ಯೆಯು ಉಚಿತವಲ್ಲವೋ ಅಂತೆಯೇ ನಿನ್ನಂತಹ ಶ್ರೇಷ್ಠ ರಾಜರ್ಷಿಯ ಕೈಯಿಂದ ನನ್ನ ಪತಿಯಾದ ಈ ಶ್ರೇಷ್ಠಬ್ರಹ್ಮರ್ಷಿಯನ್ನು ವಧಿಸುವುದು ಯಾವರೀತಿಯಿಂದಲೂ ಉಚಿತವಲ್ಲ. ॥ ೩೦ ॥

ತಸ್ಯ ಸಾಧೋರಪಾಪಸ್ಯ ಭೂಣಸ್ಯ ಬ್ರಹ್ಮವಾದಿನಃ ।
ಕಥಂ ವಧಂ ಯಥಾ ಬಭ್ರೋರ್ಮನ್ಯತೇ ಸನ್ಮತೋ ಭವಾನ್
॥ ೩೧ ॥

ನೀನು ಸಾಧುಸಮ್ಮತನಾಗಿರುವೆ. ನನ್ನ ಪತಿಯು ನಿಷ್ಪಾಪನೂ, ಪರಮ ಸಾಧುವೂ, ಬ್ರಹ್ಮವಾದಿಯೂ, ಶ್ರೋತ್ರಿಯನೂ ಆಗಿರುವನು. ಗೋಹತ್ಯೆಗೆ ಸಮಾನವಾದ ನನ್ನ ಪತಿಯ ವಧೆಯನ್ನು ನೀನು ಸಮುಚಿತವಾದುದೆಂದು ಹೇಗೆ ಭಾವಿಸುವೆ ? ॥ ೩೧ ॥

ಯದ್ಯಯಂ ಕ್ರಿಯತೇ ಭಕ್ಷ್ಯಸ್ತರ್ಹಿ ಮಾಂ ಖಾದ ಪೂರ್ವತಃ ।
ನ ಜೀವಿಷ್ಯೇ ವಿನಾ ಯೇನ ಕ್ಷಣಂ ಚ ಮೃತಕಂ ಯಥಾ
॥ ೩೨ ॥

ಹೀಗಿದ್ದರೂ ನೀನು ಇವರನ್ನು ತಿಂದು ಬಿಡುವುದಾದರೆ ಮೊದಲಿಗೆ ನನ್ನನ್ನು ತಿಂದುಬಿಡು. ಏಕೆಂದರೆ, ಪತಿಯ ಹೊರತು ನಾನು ಹೆಣದಂತಾಗುವೆನು. ಒಂದು ಕ್ಷಣವೂ ಜೀವಿಸಿರಲಾರೆನು. ॥ ೩೨ ॥

ಏವಂ ಕರುಣಭಾಷಿಣ್ಯಾ ವಿಲಪಂತ್ಯಾ ಅನಾಥವತ್ ।
ವ್ಯಾಘ್ರಃ ಪಶುಮಿವಾಖಾದತ್ಸೌದಾಸಃ ಶಾಪಮೋಹಿತಃ
॥ ೩೩ ॥

ಬ್ರಾಹ್ಮಣಪತ್ನಿಯು ಕರುಣಾಪೂರ್ಣವಾದ ಮಾತುಗಳಿಂದ ಹೀಗೆ ಹೇಳಿ ಅನಾಥಳಂತೆ ಅಳತೊಡಗಿದಳು. ಆದರೆ ಸೌದಾಸನು ಶಾಪದಿಂದ ಮೋಹಿತನಾದ್ದರಿಂದ ಅವಳ ಪ್ರಾರ್ಥನೆಯ ಕಡೆಗೆ ಸ್ವಲ್ಪವೂ ಗಮನ ಕೊಡಲಿಲ್ಲ. ಅವನು ಹುಲಿಯು ಪಶುವನ್ನು ತಿಂದುಬಿಡುವಂತೆ ಆ ಬ್ರಾಹ್ಮಣನನ್ನೂ ತಿಂದು ಬಿಟ್ಟನು. ॥ ೩೩ ॥

ಬ್ರಾಹ್ಮಣೀ ವೀಕ್ಷ್ಯ ದಿಧಿಷುಂ ಪುರುಷಾದೇನ ಭಕ್ಷಿತಮ್ ।
ಶೋಚಂತ್ಯಾತ್ಮಾನಮುರ್ವೀಶಮಶಪತ್ಕುಪಿತಾ ಸತೀ
॥ ೩೪ ॥

ಗರ್ಭಾಧಾನಮಾಡಲಿದ್ದ ಪತಿಯನ್ನು ರಾಕ್ಷಸರೂಪದಲ್ಲಿದ್ದ ರಾಜನು ತನ್ನ ಸಮಕ್ಷದಲ್ಲಿಯೇ ಭಕ್ಷಿಸಿದ್ದಕ್ಕಾಗಿ ಬ್ರಾಹ್ಮಣಿಗೆ ಅತೀವ ದುಃಖವಾಯಿತು. ಮರುಕ್ಷಣದಲ್ಲೇ ಆ ಸಾಧ್ವಿಬ್ರಾಹ್ಮಣಿಯು ಕ್ರೋಧಗೊಂಡು ರಾಜನಿಗೆ ಶಾಪವನ್ನಿತ್ತಳು. ॥ ೩೪ ॥

ಯಸ್ಮಾನ್ಮೇ ಭಕ್ಷಿತಃ ಪಾಪ ಕಾಮಾರ್ತಾಯಾಃ ಪತಿಸ್ತ್ವಯಾ ।
ತವಾಪಿ ಮೃತ್ಯುರಾಧಾನಾದಕೃತಪ್ರಜ್ಞ ದರ್ಶಿತಃ
॥ ೩೫ ॥

'ಎಲವೋ ಪಾಪಿಯೇ ! ಮೂರ್ಖನೇ ! ಕಾಮಪೀಡಿತಳಾಗಿದ್ದ ನನ್ನ ಮನೋರಥವು ಪೂರೈಸುವುದರೊಳಗಾಗಿ ನೀನು ನನ್ನ ಪತಿಯನ್ನು ಭಕ್ಷಿಸಿದೆಯಾದ ಕಾರಣ ನೀನು ಗರ್ಭಾಧಾನಕ್ಕಾಗಿ ಪತ್ನಿಯನ್ನು ಸೇರಿದೊಡನೆ ನಿನಗೆ ಮೃತ್ಯುದೇವತೆಯು ಕಾಣಿಸಿಕೊಳ್ಳುತ್ತದೆ.' ॥ ೩೫ ॥

ಏವಂ ಮಿತ್ರಸಹಂ ಶಪ್ತ್ವಾ ಪತಿಲೋಕಪರಾಯಣಾ ।
ತದಸ್ಥೀನಿ ಸಮಿದ್ಧೇಽಗ್ನೌ ಪ್ರಾಸ್ಯ ಭರ್ತುರ್ಗತಿಂ ಗತಾ
॥ ೩೬ ॥

ಹೀಗೆ ಪತಿಲೋಕಪರಾಯಣೆಯಾದ ಬ್ರಾಹ್ಮಣಿಯು ಮಿತ್ರಸಹನಿಗೆ ಶಾಪವನ್ನಿತ್ತು, ಪತಿಯ ಅಸ್ಥಿಗಳನ್ನು ಸಂಗ್ರಹಿಸಿ ಚಿತೆಯನ್ನು ರಚಿಸಿ ಅದರ ಮೇಲಿಟ್ಟು ಧಗ-ಧಗಿಸುವ ಅಗ್ನಿಯಲ್ಲಿ ತಾನೂ ಧುಮುಕಿ ಪತಿಯೊಡನೆ ಸಹಗಮನ ಮಾಡಿ ಪತಿಯು ಪಡೆದ ಸದ್ಗತಿಯನ್ನೇ ತಾನೂ ಪಡೆದುಕೊಂಡಳು. ॥ ೩೬ ॥

ವಿಶಾಪೋ ದ್ವಾದಶಾಬ್ದಾಂತೇ ಮೈಥುನಾಯ ಸಮುದ್ಯತಃ ।
ವಿಜ್ಞಾಯ ಬ್ರಾಹ್ಮಣೀಶಾಪಂ ಮಹಿಷ್ಯಾ ಸ ನಿವಾರಿತಃ
॥ ೩೭ ॥

ಹನ್ನೆರಡು ವರ್ಷಗಳು ಕಳೆದ ಬಳಿಕ ಸೌದಾಸನು ಶಾಪಮುಕ್ತನಾದನು. ಸಂತೋಷಭರಿತನಾಗಿದ್ದ ರಾಜನು ಪತ್ನಿಯೊಡನೆ ಸಮಾಗಮಕ್ಕೆ ಹೋದಾಗ ಮದಯಂತಿಯು ಆತನನ್ನು ತಡೆದಳು. ಏಕೆಂದರೆ, ಅವಳಿಗೆ ಬ್ರಾಹ್ಮಣಿಯ ಶಾಪವೃತ್ತಾಂತವು ತಿಳಿದಿತ್ತು. ॥ ೩೭ ॥

ತತ ಊರ್ಧ್ವಂ ಸ ತತ್ಯಾಜ ಸ್ತ್ರೀಸುಖಂ ಕರ್ಮಣಾ ಪ್ರಜಾಃ ।
ವಸಿಷ್ಠಸ್ತದನುಜ್ಞಾತ್ಹೋ ಮದಯಂತ್ಯಾಂ ಪ್ರಜಾಮಧಾತ್
॥ ೩೮ ॥

ಅನಂತರ ರಾಜನು ಸ್ತ್ರೀಸುಖವನ್ನು ಪೂರ್ಣವಾಗಿ ಪರಿತ್ಯಜಿಸಿದನು. ಹೀಗೆ ಅವನು ತನ್ನ ಕರ್ಮಫಲದಿಂದಾಗಿ ಸಂತಾನಹೀನನಾದನು. ರಾಜನ ಅನುಮತಿಯನ್ನು ಪಡೆದು ವಸಿಷ್ಠರು ಮದಯಂತಿಗೆ ಗರ್ಭಾಧಾನಮಾಡಿದರು. ॥ ೩೮ ॥ ಮದಯಂತಿಯು ಏಳು ವರ್ಷಗಳವರೆಗೆ ಗರ್ಭಧಾರಣೆ ಮಾಡಿದಳು. ಆದರೆ ಅವಳಿಗೆ ಮಗು ಹುಟ್ಟಲಿಲ್ಲ. ಆಗ ವಸಿಷ್ಠರು ಅವಳ ಹೊಟ್ಟೆಯನ್ನು ಕಲ್ಲಿನಿಂದ ಕುಟ್ಟಿದಾಗ ಶಿಶುವಿನ ಜನನವಾಯಿತು. ಕಲ್ಲಿನ ಏಟಿನಿಂದ ಹುಟ್ಟಿದ್ದರಿಂದ ಆ ಮಗುವಿನ ಹೆಸರು ಅಶ್ಮಕವೆಂದಾಯಿತು. ॥ ೩೯ ॥ ಅಶ್ಮಕನಿಗೆ 'ಮೂಲಕ'ನೆಂಬುವನು ಪುತ್ರನಾದನು. ಪರಶುರಾಮನು ಪೃಥಿವಿಯನ್ನು ಕ್ಷತ್ರಿಯರಹಿತನನ್ನಾಗಿಸುತ್ತಿದ್ದಾಗ ಸ್ತ್ರೀಯರು ಮೂಲಕನನ್ನು ಅಡಗಿಸಿಟ್ಟಿದ್ದರು. ಇದರಿಂದ ಇವನಿಗೆ 'ನಾರೀಕವಚ' ಎಂದೂ ಹೆಸರಾಯಿತು. ಅವನು ಪೃಥಿವಿಯು ಕ್ಷತ್ರಿಯಹೀನನಾದಾಗ ಆ ವಂಶದ ಮೂಲ(ಪ್ರವರ್ತಕ)ನಾದ್ದರಿಂದ ಅವನನ್ನೂ 'ಮೂಲಕ'ನೆಂದು ಕರೆಯುತ್ತಿದ್ದರು. ॥ ೪೦ ॥ ಮೂಲಕನಿಗೆ ದಶರಥನು ಹುಟ್ಟಿದನು. ದಶರಥನಿಗೆ ಎಡವಿಡನಾದನು. ಎಡವಿಡನಿಗೆ ವಿಶ್ವಸಹ ರಾಜನಾದನು. ವಿಶ್ವಸಹನ ಪುತ್ರನೇ ಚಕ್ರವರ್ತಿ ಖಟ್ವಾಂಗರಾಜನಾದನು. ॥ ೪೧ ॥ ಯುದ್ಧದಲ್ಲಿ ಅವನು ಅಜೇಯನಾಗಿದ್ದನು. ದೇವತೆಗಳ ಪ್ರಾರ್ಥನೆಯಂತೆ ಅವನು ರಾಕ್ಷಸರನ್ನು ವಧಿಸಿದ್ದನು. ದೇವತೆಗಳಿಂದ ಅವನಿಗೆ ತನ್ನ ಆಯುಸ್ಸು, ಕೇವಲ ಎರಡೇ ಗಳಿಗೆಗಳು ಮಾತ್ರ ಉಳಿದಿದೆ ಎಂದು ತಿಳಿದಾಗ ಖಟ್ವಾಂಗನು ರಾಜಧಾನಿಗೆ ಮರಳಿ ತನ್ನ ಮನಸ್ಸನ್ನು ಭಗವಂತನಲ್ಲಿ ತೊಡಗಿಸಿದನು. ॥ ೪೨ ॥ ಅವನು ಮನಸ್ಸಿನಲ್ಲೇ ಅಂದುಕೊಂಡನು – 'ನನ್ನ ಕುಲದ ಇಷ್ಟದೇವರು ಬ್ರಾಹ್ಮಣರಾಗಿದ್ದಾರೆ. ಅವರಿಂದ ಹೊರತಾಗಿ ನನಗೆ ನನ್ನ ಪ್ರಾಣಗಳೂ ಪ್ರಿಯವಾಗಿಲ್ಲ. ಪತ್ನೀ, ಪುತ್ರರು, ಸಂಪತ್ತು , ರಾಜ್ಯ, ಪೃಥಿವಿಯೂ ಕೂಡ ನನಗೆ ಬ್ರಾಹ್ಮಣರಷ್ಟು ಪ್ರಿಯರಲ್ಲ. ॥ ೪೩ ॥ ಬಾಲ್ಯದಿಂದಲೂ ನನ್ನ ಮನಸ್ಸು ಎಂದಿಗೂ ಅಧರ್ಮದ ಕಡೆಗೆ ಹೋಗಲಿಲ್ಲ. ನಾನು ಪುಣ್ಯಶ್ಲೋಕನಾದ ಭಗವಂತನನ್ನು ಬಿಟ್ಟು ಬೇರೇನನ್ನೂ ಕಂಡಿಲ್ಲ. ॥ ೪೪ ॥ ಮೂರುಲೋಕಗಳ ಒಡೆಯರಾದ ದೇವತೆಗಳು ನನಗೆ ಬಯಸಿದ ವರವನ್ನು ಕೇಳಲು ಹೇಳಿದಾಗಲೂ, ನಾನು ಭೋಗಲಾಲಸೆಯಿಂದ ಆ ವರವನ್ನು ಪಡೆದುಕೊಳ್ಳಲಿಲ್ಲ. ಏಕೆಂದರೆ, ಸಮಸ್ತ ಪ್ರಾಣಿಗಳ ಜೀವನಪ್ರದನಾದ ಶ್ರೀಹರಿಯ ಧ್ಯಾನದಲ್ಲಿಯೇ ನನ್ನ ಮನಸ್ಸು ಲೀನವಾಗಿಬಿಟ್ಟಿತ್ತು. ॥ ೪೫ ॥ ದೇವತೆಗಳ ಇಂದ್ರಿಯಗಳು, ಮನಸ್ಸು ವಿಷಯಾದಿಗಳಲ್ಲಿ ರಮಿಸುವುದರಿಂದ, ಸತ್ತ್ವಗುಣ ಪ್ರಧಾನರಾಗಿದ್ದರೂ ತಮ್ಮ ಹೃದಯದಲ್ಲಿ ವಿರಾಜಮಾನನಾಗಿರುವ, ಸದಾಕಾಲ ಪ್ರಿಯತಮನರೂಪದಲ್ಲಿರುವ ಆತ್ಮಸ್ವರೂಪೀ ಭಗವಂತನನ್ನು ಅರಿಯರು. ಹಾಗಿರುವಾಗ ರಜೋಗುಣೀ ಮತ್ತು ತಮೋಗುಣಿಗಳಾದವರು ಹೇಗೆ ತಾನೆ ತಿಳಿಯಬಲ್ಲರು ? ॥ ೪೬ ॥

ಅಶ್ಮಕಾನ್ಮೂಲಕೋ ಜಜ್ಞೇ ಯಃ ಸ್ತ್ರೀಭಿಃ ಪರಿರಕ್ಷಿತಃ ।
ನಾರೀಕವಚ ಇತ್ಯುಕ್ತೋ ನಿಃಕ್ಷತ್ರೇ ಮೂಲಕೋಽಭವತ್
॥ ೪೦ ॥

ತತೋ ದಶರಥಸ್ತಸ್ಮಾತ್ಪುತ್ರ ಐಡವಿಡಸ್ತತಃ ।
ರಾಜಾ ವಿಶ್ವಸಹೋ ಯಸ್ಯ ಖಿಟ್ವಾಂಗಶ್ಚಕ್ರವರ್ತ್ಯಭೂತ್
॥ ೪೧ ॥

ಯೋ ದೇವೈರರ್ಥಿತೋ ದೈತ್ಯಾನವಧೀದ್ಯುಧಿ ದುರ್ಜಯಃ ।
ಮುಹೂರ್ತಮಾಯುರ್ಜ್ಞಾತ್ವೈತ್ಯ ಸ್ವಪುರಂ ಸಂದದೇ ಮನಃ
॥ ೪೨ ॥

ನ ಮೇ ಬ್ರಹ್ಮಕುಲಾತ್ಪ್ರಾಣಾಃ ಕುಲದೈವಾನ್ನ ಚಾತ್ಮಜಾಃ ।
ನ ಶ್ರಿಯೋ ನ ಮಹೀ ರಾಜ್ಯಂ ನ ದಾರಾಶ್ಚಾತಿವಲ್ಲಭಾಃ
॥ ೪೩ ॥

ನ ಬಾಲ್ಯೇಽಪಿ ಮತಿರ್ಮಹ್ಯಮಧರ್ಮೇ ರಮತೇ ಕ್ವಚಿತ್ ।
ನಾಪಶ್ಯಮುತ್ತಮಶ್ಲೋಕಾದನ್ಯತ್ಕಿಂಚನ ವಸ್ತ್ವಹಮ್
॥ ೪೪ ॥

ದೇವೈಃ ಕಾಮವರೋ ದತ್ತೋ ಮಹ್ಯಂ ತ್ರಿಭುವನೇಶ್ವರೈಃ ।
ನ ವೃತೇ ತಮಹಂ ಕಾಮಂ ಭೂತಭಾವನಭಾವನಃ
॥ ೪೫ ॥

ಯೇ ವಿಕ್ಷಿಪ್ತೇಂದ್ರಿಯಧಿಯೋ ದೇವಾಸ್ತೇ ಸ್ವಹೃದಿ ಸ್ಥಿತಮ್ ।
ನ ವಿಂದಂತಿ ಪ್ರಿಯಂ ಶಶ್ವದಾತ್ಮಾನಂ ಕಿಮುತಾಪರೇ
॥ ೪೬ ॥

ಅಥೇಶಮಾಯಾರಚಿತೇಷು ಸಂಗಂ
ಗುಣೇಷು ಗಂಧರ್ವಪುರೋಪಮೇಷು ।
ರೂಢಂ ಪ್ರಕೃತ್ಯಾऽऽತ್ಮನಿ ವಿಶ್ವಕರ್ತು-
ರ್ಭಾವೇನ ಹಿತ್ವಾ ತಮಹಂ ಪ್ರಪದ್ಯೇ ॥ ೪೭ ॥

ಅದಕ್ಕಾಗಿ ನಾನು ಈಗ ಈ ವಿಷಯಗಳಲ್ಲಿ ರಮಿಸುವುದಿಲ್ಲ. ಇದಾದರೋ ಮಾಯೆಯ ಆಟವಾಗಿದೆ. ಆಕಾಶದಲ್ಲಿ ಕಂಡು ಬರುವ ಮಿಥ್ಯೆಯಾದ ಗಂಧರ್ವನಗರಕ್ಕಿಂತ ಹೆಚ್ಚಿನ ಅಸ್ತಿತ್ವ ಇವುಗಳಿಗಿಲ್ಲ. ಇವುಗಳಾದರೋ ಅಜ್ಞಾನವಶದಿಂದಲೇ ಚಿತ್ತದಲ್ಲಿ ನೆಲೆಸಿವೆ. ಪ್ರಪಂಚದ ನಿಜವಾದ ಕರ್ತೃವಾದ ಭಗವಂತನ ಧ್ಯಾನದಲ್ಲಿ ಲೀನನಾಗಿ, ವಿಷಯಗಳನ್ನು ಬಿಟ್ಟು ಕೇವಲ ಅವನನ್ನೇ ಶರಣು ಹೊಂದುತ್ತೇನೆ. ॥ ೪೭ ॥ ಪರೀಕ್ಷಿತನೇ ! ಭಗವಂತನು ಖಟ್ವಾಂಗನ ಬುದ್ಧಿಯನ್ನು ಮೊದಲಿಂದಲೇ ತನ್ನತ್ತ ಸೆಳೆದು ಕೊಂಡಿದ್ದನು. ಇದರಿಂದ ಅವನು ಅಂತ್ಯಸಮಯದಲ್ಲಿ ಇಂತಹ ನಿಶ್ಚಯ ಮಾಡಲು ಸಾಧ್ಯವಾಯಿತು. ಈಗ ಅವನು ಶರೀರಾದಿ ಅನಾತ್ಮ ಪದಾರ್ಥಗಳಲ್ಲಿದ್ದ ಅಜ್ಞಾನ ಮೂಲವಾದ ಆತ್ಮ ಭಾವವನ್ನು ಪರಿತ್ಯಜಿಸಿ ತನ್ನ ವಾಸ್ತವಿಕ ಆತ್ಮ ಸ್ವರೂಪದಲ್ಲಿ ಸ್ಥಿತನಾದನು. ॥ ೪೮ ॥ ಆ ಸ್ವರೂಪವು ಸಾಕ್ಷಾತ್ ಪರಬ್ರಹ್ಮವಾಗಿದೆ. ಅದು ಸೂಕ್ಷ್ಮಕ್ಕೂ ಸೂಕ್ಷ್ಮವಾಗಿದ್ದು ಶೂನ್ಯದಂತೆ ಇದೆ. ಆದರೆ ಅದು ಶೂನ್ಯವಲ್ಲ ಪೂರ್ಣ, ಪರಮಸತ್ಯವಾಗಿದೆ. ಪರಮ ಭಕ್ತರು ಅದನ್ನೇ 'ಭಗವಾನ್ ವಾಸುದೇವ' ಎಂಬ ಹೆಸರಿನಿಂದ ವರ್ಣಿಸುತ್ತಾ ಇರುವರು. ॥ ೪೯ ॥

ಇತಿ ವ್ಯವಸಿತೋ ಬುದ್ಧ್ಯಾ ನಾರಾಯಣಗೃಹೀತಯಾ ।
ಹಿತ್ವಾನ್ಯಭಾವಮಜ್ಞಾನಂ ತತಃ ಸ್ವಂ ಭಾವಮಾಶ್ರಿತಃ
॥ ೪೮ ॥

ಯತ್ತದ್ಬ್ರಹ್ಮ ಪರಂ ಸೂಕ್ಷ್ಮಮಶೂನ್ಯಂ ಶೂನ್ಯಕಲ್ಪಿತಮ್ ।
ಭಗವಾನ್ವಾಸುದೇವೇತಿ ಯಂ ಗೃಣಂತಿ ಹಿ ಸಾತ್ವತಾಃ
॥ ೪೯ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಸೂರ್ಯವಂಶಾನುವರ್ಣನೇ ನವಮೋऽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಭಗವಾನ್ ಶ್ರೀರಾಮನ ಲೀಲಾವರ್ಣನೆಗಳು

ಶ್ರೀಶುಕ ಉವಾಚ

ಖಟ್ವಾಂಗಾದ್ದೀರ್ಘಬಾಹುಶ್ಚ ರಘುಸ್ತಸ್ಮಾತ್ ಪೃಥುಶ್ರವಾಃ ।
ಅಜಸ್ತತೋ ಮಹಾರಾಜಸ್ತಸ್ಮಾದ್ ದಶರಥೋऽಭವತ್
॥ ೧ ॥

ತಸ್ಯಾಪಿ ಭಗವಾನೇಷ ಸಾಕ್ಷಾದ್ಬ್ರಹ್ಮಮಯೋ ಹರಿಃ ।
ಅಂಶಾಂಶೇನ ಚತುರ್ಧಾಗಾತ್ಪುತ್ರತ್ವಂ ಪ್ರಾರ್ಥಿತಃ ಸುರೈಃ ।
ರಾಮಲಕ್ಷ್ಮಣಭರತಶತ್ರುಘ್ನಾ ಇತಿ ಸಂಜ್ಞಯಾ
॥ ೨ ॥

ತಸ್ಯಾನುಚರಿತಂ ರಾಜನ್ನೃಷಿಭಿಸ್ತತ್ತ್ವದರ್ಶಿಭಿಃ ।
ಪ್ರಥಿತಂ ಹಿ ವರ್ಣಿತಂ ಭೂರಿ ತ್ವಯಾ ಸೀತಾಪತೇರ್ಮುಹುಃ
॥ ೩ ॥

ಗುರ್ವರ್ಥೇ ತ್ಯಕ್ತರಾಜ್ಯೋ ವ್ಯಚರದನುವನಂ
ಪದ್ಮಪದ್ಭ್ಯಾಂ ಪ್ರಿಯಾಯಾಃ
ಪಾಣಿಸ್ಪರ್ಶಾಕ್ಷಮಾಭ್ಯಾಂ ಮೃಜಿತಪಥರುಜೋ-
ಯೋ ಹರೀಂದ್ರಾನುಜಾಭ್ಯಾಮ್ ।

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಖಟ್ವಾಂಗನಿಗೆ ದೀರ್ಘಬಾಹು ಎಂಬ ಪುತ್ರನಿದ್ದನು. ಅವನಿಂದ ಪರಮಯಶಸ್ವೀ ರಘು ಜನಿಸಿದನು. ರಘುವಿನಿಂದ ಅಜನೂ, ಅಜನಿಂದ ದಶರಥ ಮಹಾರಾಜನು ಜನಿಸಿದನು. ॥ ೧ ॥ ದೇವತೆಗಳ ಪ್ರಾರ್ಥನೆಯಂತೆ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನಾದ ಭಗವಾನ್ ಶ್ರೀಹರಿಯು ತನ್ನ ಅಂಶಾಂಶಗಳಿಂದ ನಾಲ್ಕು ರೂಪಗಳನ್ನು ಧರಿಸಿ ದಶರಥಮಹಾರಾಜನಿಗೆ ಪುತ್ರರೂಪನಾದನು. ಅವರ ಹೆಸರು – ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನ ಎಂಬುದಾಗಿದ್ದವು. ॥ ೨ ॥ ಪರೀಕ್ಷಿತನೇ ! ಸೀತಾಪತಿ ಭಗವಾನ್ ಶ್ರೀರಾಮನ ಚರಿತ್ರೆಯಾದರೋ ತತ್ತ್ವದರ್ಶಿಗಳಾದ ಋಷಿಗಳು ಬಹಳವಾಗಿ ವರ್ಣಿಸಿರುವರು. ನೀನು ಅದನ್ನು ಅನೇಕಬಾರಿ ಕೇಳಿಯೂ ಇರುವೆ. ॥ ೩ ॥

ಭಗವಂತನಾದ ಶ್ರೀರಾಮನು ತನ್ನ ತಂದೆ ದಶರಥನ ವಾಕ್ಯವನ್ನು ಸತ್ಯವಾಗಿಸಲು ರಾಜ್ಯಸಿಂಹಾಸನವನ್ನು ಪರಿತ್ಯಜಿಸಿ ಕಾಡಾಡಿಯಾಗಿ ಸಂಚರಿಸಿದನು. ಪರಮ ಸುಕುಮಾರಿಯಾದ ಜಾನಕಿಯ ಕರಸ್ಪರ್ಶವನ್ನೂ ಸಹಿಸದಷ್ಟು ಸುಕೋಮಲವಾಗಿದ್ದವು ಶ್ರೀರಾಮಚಂದ್ರನ ಚರಣಗಳು. ಅಂತಹ ಚರಣಕಮಲಗಳು ವನದಲ್ಲಿ ಸಂಚರಿಸು

ವೈರೂಪ್ಯಾಚ್ಛೂರ್ಪಣಖ್ಯಾಃ ಪ್ರಿಯವಿರಹರುಷಾऽऽ-
ರೋಪಿತಭ್ರೂವಿಜೃಂಭ-
ತ್ರಸ್ತಾಬ್ಧಿರ್ಬದ್ಧಸೇತುಃ ಖಲದವದಹನಃ
ಕೋಸಲೇಂದ್ರೋऽವತಾನ್ನಃ ॥ ೪ ॥

ವಿಶ್ವಾಮಿತ್ರಾಧ್ವರೇ ಯೇನ ಮಾರೀಚಾದ್ಯಾ ನಿಶಾಚರಾಃ ।
ಪಶ್ಯತೋ ಲಕ್ಷ್ಮಣಸ್ಯೈವ ಹತಾ ನೈರ್ಋತಪುಂಗವಾಃ
॥ ೫ ॥

ಯೋ ಲೋಕವೀರಸಮಿತೌ ಧನುರೈಶಮುಗ್ರಂ
ಸೀತಾಸ್ವಯಂವರಗೃಹೇ ತ್ರಿಶತೋಪನೀತಮ್ ।
ಆದಾಯ ಬಾಲಗಜಲೀಲ ಇವೇಕ್ಷುಯಷ್ಟಿಂ
ಸಜ್ಜೀಕೃತಂ ನೃಪ ವಿಕೃಷ್ಯ ಬಭಂಜ ಮಧ್ಯೇ ॥ ೬ ॥

ಜಿತ್ವಾನುರೂಪಗುಣಶೀಲವಯೋऽಂಗರೂಪಾಂ
ಸೀತಾಭಿಧಾಂ ಶ್ರಿಯಮುರಸ್ಯಖಿಲಬ್ಧಮಾನಾಮ್ ।
ಮಾರ್ಗೇ ವ್ರಜನ್ ಭೃಗುಪತೇರ್ವ್ಯನಯತ್ಪ್ರರೂಢಂ
ದರ್ಪಂ ಮಹೀಮಕೃತ ಯಸ್ತ್ರಿರರಾಜಬೀಜಾಮ್ ॥ ೭ ॥

ಯಃ ಸತ್ಯಪಾಶಪರಿವೀತಪಿತುರ್ನಿದೇಶಂ
ಸ್ತ್ರೈಣಸ್ಯ ಚಾಪಿ ಶಿರಸಾ ಜಗೃಹೇ ಸಭಾರ್ಯಃ ।
ರಾಜ್ಯಂ ಶ್ರಿಯಂ ಪ್ರಣಯಿನಃ ಸುಹೃದೋ ನಿವಾಸಂ
ತ್ಯಕ್ತ್ವಾಯಯೌ ವನಮಸೂನಿವ ಮುಕ್ತಸಂಗಃ ॥ ೮ ॥

ರಕ್ಷಃಸ್ವಸುರ್ವ್ಯಕೃತ ರೂಪಮಶುದ್ಧಬುದ್ಧೇ-
ಸ್ತಸ್ಯಾಃ ಖರತ್ರಿಶಿರದೂಷಣಮುಖ್ಯಬಂಧೂನ್ ।
ಜಘ್ನೇ ಚತುರ್ದಶ ಸಹಸ್ರಮಪಾರಣೀಯ-
ಕೋದಂಡಪಾಣಿರಟಮಾನ ಉವಾಸ ಕೃಚ್ಛ್ರಮ್ ॥ ೯ ॥

ವಾಗ, ದಣಿದಾಗ ಹನುಮಂತ ಮತ್ತು ಲಕ್ಷ್ಮಣರು ಅವನ್ನು ಒತ್ತುತ್ತಾ ದಣಿವಾರಿಸುತ್ತಿದ್ದರು. ಶೂರ್ಪಣಖಿಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದುದರಿಂದ ಪ್ರಿಯತಮೆಯಾದ ಸೀತೆಯ ವಿಯೋಗದುಃಖವನ್ನು ಶ್ರೀರಾಮನು ಸಹಿಸಬೇಕಾಯಿತು. ಈ ವಿಯೋಗದಿಂದ ಕ್ರುದ್ಧನಾದ ಶ್ರೀರಾಮನ ಹುಬ್ಬುಗಳು ಗಂಟಿಕ್ಕಿದುವು. ಇದನ್ನು ನೋಡಿದ ಸಮುದ್ರರಾಜನೂ ಭಯಗೊಂಡನು. ಇದಾದ ಬಳಿಕ ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ, ಲಂಕೆಗೆ ಹೋಗಿ ದುಷ್ಟರಾದ ರಾಕ್ಷಸರನ್ನು ಕಾಡ್ಗಿಚ್ಚು ಕಾಡನ್ನು ಸುಟ್ಟುಬಿಡುವಂತೆ ಭಸ್ಮಮಾಡಿಬಿಟ್ಟನು. ಅಂತಹ ಕೋಸಲೇಂದ್ರನಾದ ಶ್ರೀರಾಮನು ನಮ್ಮನ್ನು ರಕ್ಷಿಸಲಿ. ॥ ೪ ॥

ಭಗವಾನ್ ಶ್ರೀರಾಮನು ವಿಶ್ವಾಮಿತ್ರನ ಯಜ್ಞರಕ್ಷಣೆಯಲ್ಲಿ ಲಕ್ಷ್ಮಣನ ಸಮಕ್ಷಮದಲ್ಲಿ ಮಾರೀಚನೇ ಮೊದಲಾದ ಮಹಾ ರಾಕ್ಷಸರನ್ನು ಸಂಹರಿಸಿದನು. ॥ ೫ ॥ ಪರೀಕ್ಷಿತನೇ! ಜನಕಪುರಿಯಲ್ಲಿ ಸೀತಾಸ್ವಯಂವರದ ಸಿದ್ಧತೆಗಳಾಗುತ್ತಿದ್ದವು. ಜಗತ್ತಿನಲ್ಲಿ ವೀರರೆನಿಸಿಕೊಂಡಿರುವರೆಲ್ಲರೂ ಅಲ್ಲಿಗೆ ಆಗಮಿಸಿದ್ದರು. ಆ ಎಲ್ಲ ವೀರರ ಮಧ್ಯದಲ್ಲಿ ಭಯಂಕರವಾದ ಭಗವಾನ್ ಶಿವನ ಧನುಸ್ಸನ್ನು ಇರಿಸಲಾಗಿತ್ತು. ಅದು ಎಷ್ಟು ಭಾರವಾಗಿತ್ತೆಂದರೆ – ಮೂರುನೂರು ವೀರಭಟರಿಂದ ಬಹು ಪ್ರಯಾಸದಿಂದ ಅದನ್ನು ಸ್ವಯಂವರ ಮಂಟಪಕ್ಕೆ ತರಲಾಗಿತ್ತು. ಅಂತಹ ಧನುಸ್ಸನ್ನು ಮೇಲಕ್ಕೆತ್ತಿ ಅದನ್ನು ಹೆದೆಯೇರಿಸಿ ನಾಣನ್ನು ಸೆಳೆದೊಡನೆಯೇ ಆ ಧನುಸ್ಸು ಮಧ್ಯದಲ್ಲಿ ಮುರಿದು ಎರಡು ತುಂಡಾಗಿ ಕೆಳಕ್ಕೆ ಬಿತ್ತು. ॥ ೬ ॥ ಭಗವಂತನು ತನ್ನ ವಕ್ಷಃಸ್ಥಳದಲ್ಲಿ ಧರಿಸಿಕೊಂಡು ಸಮ್ಮಾನಿತಳಾದ ಶ್ರೀಲಕ್ಷ್ಮೀದೇವಿಯೇ ಸೀತೆಯಾಗಿ ಜನಕನ ಪಟ್ಟಣದಲ್ಲಿ ಅವತರಿಸಿದ್ದಳು. ಅವಳು ಗುಣ, ಶೀಲ, ವಯಸ್ಸು, ಆಕೃತಿ ಮತ್ತು ರೂಪಗಳಲ್ಲಿ ಶ್ರೀರಾಮನಿಗೆ ಅನುರೂಪಳಾಗಿದ್ದಳು. ಭಗವಂತನು ಧನುಸ್ಸನ್ನು ಭಂಜಿಸಿ ಸೀತೆಯನ್ನು ಗೆದ್ದುಕೊಂಡಿದ್ದನು. ಅಲ್ಲಿಂದ ಅಯೋಧ್ಯೆಗೆ ಮರಳಿ ಬರುವಾಗ ದಾರಿಯಲ್ಲಿ ಇಪ್ಪತ್ತೊಂದು ಬಾರಿ ಭೂಮಂಡಲದ ಕ್ಷತ್ರಿಯರನ್ನೆಲ್ಲ ಸಂಹರಿಸಿದ ಪರಶುರಾಮರು ಭೆಟ್ಟಿಯಾದರು. ಭಗವಾನ್ ಶ್ರೀರಾಮನು ಪರಶುರಾಮರ ಬೆಳೆದಿರುವ ಗರ್ವವನ್ನೂ ಅಡಗಿಸಿದನು. ॥ ೭ ॥ ಇದಾದ ಬಳಿಕ ತಂದೆಯ ಮಾತನ್ನು ಸತ್ಯವಾಗಿಸಲು ಶ್ರೀರಾಮನು ವನವಾಸವನ್ನು ಕೈಗೊಂಡನು. ಮಹಾರಾಜಾ ದಶರಥನು ತನ್ನ ಪತ್ನಿಗೆ ಅಧೀನನಾಗಿಯೇ ಅವಳಿಗೆ ಅಂತಹ ಮಾತನ್ನು ಕೊಟ್ಟಿದ್ದನು. ಏಕೆಂದರೆ, ಅವನು ಸತ್ಯವೆಂಬ ಬಂಧನದಿಂದ ಕಟ್ಟಲ್ಪಟ್ಟಿದ್ದನು. ಅದಕ್ಕಾಗಿ ಭಗವಂತನು ತನ್ನ ತಂದೆಯ ಆಜ್ಞೆಯನ್ನು ಶಿರಸಾವಹಿಸಿಕೊಂಡು ಅನಾಸಕ್ತ ಪುರುಷನು ತನ್ನ ಪ್ರಾಣಗಳನ್ನು ತ್ಯಜಿಸುವಂತೆ – ರಾಜ್ಯವನ್ನೂ ಐಶ್ವರ್ಯವನ್ನೂ, ಪ್ರಿಯರನ್ನೂ ಹಿತೈಷಿಗಳನ್ನೂ, ಮಿತ್ರರನ್ನೂ, ಅರಮನೆಯನ್ನೂ ಬಿಟ್ಟು ತನ್ನ ಪತ್ನಿಯೊಂದಿಗೆ ಅರಣ್ಯಕ್ಕೆ ಹೊರಟನು. ಏಕೆಂದರೆ, ಅವನಿಗೆ ಯಾರ ಕುರಿತು ಯಾವುದೇ ಆಸಕ್ತಿ ಇರಲಿಲ್ಲ. ॥ ೮ ॥ ಕಾಡಿಗೆ ತೆರಳಿ ಭಗವಂತನು ಅಲ್ಲಿ ರಾಕ್ಷಸರಾಜನಾದ ರಾವಣನ ತಂಗಿಯಾದ ಶೂರ್ಪಣಖಿಯನ್ನು ವಿರೂಪ ಗೊಳಿಸಿದನು. ಏಕೆಂದರೆ, ಅವಳ ಬುದ್ಧಿಯು ಬಹಳ ಕಲುಷಿತ, ಕಾಮವಾಸನೆಯಿಂದ ಅಶುದ್ಧವಾಗಿತ್ತು. ಅವಳ ಮುಖ್ಯ ಬಂಧುಗಳಾದ

ಸೀತಾಕಥಾಶ್ರವಣದೀಪಿತಹೃಚ್ಛಯೇನ
ಸೃಷ್ಟಂ ವಿಲೋಕ್ಯ ನೃಪತೇ ದಶಕಂಧರೇಣ ।
ಜಘ್ನೇऽದ್ಭುತೇನ ವಪುಷಾऽऽಶ್ರಮತೋऽಪಕೃಷ್ಟೇ
ಮಾರೀಚಮಾಶು ವಿಶಿಖೇನ ಯಥಾ ಕಮುಗ್ರಃ ॥ ೧೦ ॥

ಪರೀಕ್ಷಿತನೇ ! ಸೀತಾದೇವಿಯ ರೂಪ ಲಾವಣ್ಯಗಳನ್ನು ಶೂರ್ಪಣಖಿಯಿಂದ ಕೇಳಿದ ರಾವಣನು ಕಾಮಾತುರನಾದನು. ಅವನು ಮಾರೀಚನನ್ನು ಅದ್ಭುತವಾದ ಜಿಂಕೆಯ ವೇಷದಲ್ಲಿ ಶ್ರೀರಾಮನ ಪರ್ಣಕುಟಿಯ ಬಳಿಗೆ ಕಳಿಸಿದನು. ಮಾರೀಚನು ನಿಧಾನವಾಗಿ ಭಗವಂತನನ್ನು ದೂರಕ್ಕೆ ಕೊಂಡೊಯ್ದನು. ಕೊನೆಗೆ ಶ್ರೀರಾಮನು ತನ್ನ ಬಾಣದಿಂದ ಅವನನ್ನು ದಕ್ಷಪ್ರಜಾಪತಿಯನ್ನು ವೀರಭದ್ರನು ಸಂಹರಿಸಿದಂತೆ ಕ್ಷಣಮಾತ್ರದಲ್ಲಿ ಸಂಹರಿಸಿಬಿಟ್ಟನು. ॥ ೧೦ ॥

ರಕ್ಷೋऽಧಮೇನ ವೃಕವದ್ವಿಪಿನೇऽಸಮಕ್ಷಂ
ವೈದೇಹರಾಜದುಹಿತರ್ಯಪಯಾಪಿತಾಯಾಮ್ ।
ಧ್ಯಾತ್ವಾ ವನೇ ಕೃಪಣವತ್ಪ್ರಿಯಯಾ ವಿಯುಕ್ತಃ
ಸ್ತ್ರೀಸಂಗಿನಾಂ ಗತಿಮಿತಿ ಪ್ರಥಯಂಶ್ಚಚಾರ ॥ ೧೧ ॥

ಭಗವಾನ್ ಶ್ರೀರಾಮನು ಆಶ್ರಮದಿಂದ ಬಹಳ ದೂರ ಹೋಗಿರಲಾಗಿ, ಲಕ್ಷ್ಮಣನೂ ಆಶ್ರಮದಲ್ಲಿರದಿದ್ದಾಗ ನೀಚನಾದ ರಾಕ್ಷಸ ರಾವಣನು ತೋಳವು ಕುರಿಮರಿಯನ್ನು ಅಪಹರಿಸುವಂತೆ ವಿದೇಹನಂದಿನಿಯಾದ, ಸುಕುಮಾರಿಯಾದ ಶ್ರೀಸೀತಾದೇವಿಯನ್ನು ಅಪಹರಿಸಿ ಕೊಂಡುಹೋದನು. ಹೀಗೆ ಪ್ರಾಣಪ್ರಿಯಳಾದ ಸೀತೆಯಿಂದ ಅಗಲಿದ ಶ್ರೀರಾಮನು ಲಕ್ಷ್ಮಣನೊಡನೆ ಕಾಡಿನಲ್ಲಿ ದೀನನಂತೆ ಅಲೆದಾಡುತ್ತಿದ್ದನು. ತನ್ನ ದುರವಸ್ಥೆಯಿಂದಾಗಿ ರಾಮನು ಸ್ತ್ರೀಸಂಗಿಗಳಾದ ಸಂಸಾರಿಗಳಿಗೆ ಇದೇ ವಿಧವಾದ ಪರಿಸ್ಥಿತಿಯುಂಟಾಗುವುದೆಂಬುದನ್ನು ಪ್ರಸಿದ್ಧಪಡಿಸುತ್ತಾ ಸಂಚರಿಸುತ್ತಿದ್ದನು. ॥ ೧೧ ॥

ದಗ್ಧ್ವೈವ ತತ್ಕೃತ್ಯಹತಕೃತ್ಯಮಹನ್ ಕಬಂಧಂ
ಸಖ್ಯಂ ವಿಧಾಯ ಕಪಿಭಿರ್ದಯಿತಾಗತಿಂ ತೈಃ ।
ಬುದ್ಧ್ವಾಥವಾಲಿನಿ ಹತೇ ಪ್ಲವಗೇಂದ್ರಸೈನ್ಯೈ-
ರ್ವೇಲಾಮಗಾತ್ಸಮನುಜೋऽಜಭವಾರ್ಚಿತಾಂಘ್ರಿಃ ॥ ೧೨ ॥

ಬಳಿಕ ಶ್ರೀರಾಮನು ಭಗವತ್ಸೇವಾರೂಪವಾದ ಕರ್ಮದಿಂದ ಮೊದಲೇ ಕರ್ಮಬಂಧನದಿಂದ ಮುಕ್ತನಾದ ಜಟಾಯುವಿಗೆ ದಾಹಸಂಸ್ಕಾರ ಮಾಡಿದನು. ಮತ್ತೆ ಕಬಂಧನನ್ನು ಸಂಹರಿಸಿದನು. ಆನಂತರ ಸುಗ್ರೀವಾದಿ ವಾನರರೊಂದಿಗೆ ಸ್ನೇಹವನ್ನು ಬೆಳೆಸಿ ವಾಲಿಯನ್ನು ವಧಿಸಿ, ವಾನರರ ಮೂಲಕ ತನ್ನ ಪ್ರಾಣಪ್ರಿಯೆಯು ಎಲ್ಲಿರುವಳೆಂದು ತಿಳಿದುಕೊಂಡನು. ಬ್ರಹ್ಮ ರುದ್ರರಿಂದ ಅರ್ಚಿಸಲ್ಪಡುವ ಪಾದಪದ್ಮಗಳುಳ್ಳ, ಮನುಷ್ಯರಂತೆ ಲೀಲೆಯಾಡುತ್ತಿರುವ ಭಗವಾನ್ ಶ್ರೀರಾಮನು ಕಪಿಗಳ ಸೈನ್ಯದೊಂದಿಗೆ ಸಮುದ್ರತೀರಕ್ಕೆ ತಲುಪಿದನು. ॥ ೧೨ ॥

ಯದ್ರೋಷವಿಭ್ರಮವಿವೃತ್ತಕಟಾಕ್ಷಪಾತ-
ಸಂಭ್ರಾಂತನಕ್ರಮಕರೋ ಭಯಗೀರ್ಣಘೋಷಃ ।
ಸಿಂಧುಃ ಶಿರಸ್ಯರ್ಹಣಂ ಪರಿಗೃಹ್ಯ ರೂಪೀ
ಪಾದಾರವಿಂದಮುಪಗಮ್ಯ ಬಭಾಷ ಏತತ್ ॥ ೧೩ ॥

ಅಲ್ಲಿ ಉಪವಾಸವ್ರತದಿಂದಾಗಲೀ, ಪ್ರಾರ್ಥನೆಯಿಂದಾಗಲೀ ಸಮುದ್ರರಾಜನ ಮೇಲೆ ಯಾವುದೇ ಪ್ರಭಾವ ಬೀಳದಿದ್ದಾಗ ಭಗವಂತನು ಕ್ರೋಧದ ಲೀಲೆಯನ್ನು ತೋರುತ್ತಾ ತನ್ನ ಉಗ್ರವಾದ ಒರೆನೋಟದಿಂದ ಸಮುದ್ರರಾಜನನ್ನು ನೋಡಿದನು. ಆಗಲೇ ಸಮುದ್ರದ ದೊಡ್ಡ ದೊಡ್ಡ ಮೀನು, ಮೊಸಳೆಗಳು ಭ್ರಾಂತವಾದವು. ಭಯದಿಂದಾಗಿ ಸಮುದ್ರದ ಗರ್ಜನೆ ಉಡುಗಿಹೋಯಿತು. ಆಗ ಸಮುದ್ರನು ಸಶರೀರಿಯಾಗಿ ತನ್ನ ತಲೆಯಲ್ಲಿ ಅನರ್ಘ್ಯವಾದ ಉಪಹಾರಗಳನ್ನು ಹೊತ್ತುಕೊಂಡು ಬಂದು ಭಗವಂತನ ಚರಣಕಮಲಗಳಲ್ಲಿ ಶರಣಾಗಿ ಇಂತೆಂದನು. ॥ ೧೩ ॥

ನ ತ್ವಾಂ ವಯಂ ಜಡಧಿಯೋ ನು ವಿದಾಮ ಭೂಮನ್
ಕೂಟಸ್ಥಮಾದಿಪುರುಷಂ ಜಗತಾಮಧೀಶಮ್ ।
ಯತ್ಸತ್ತ್ವತಃ ಸುರಗಣಾ ರಜಸಃ ಪ್ರಜೇಶಾ
ಮನ್ಯೋಶ್ಚ ಭೂತಪತಯಃ ಸ ಭವಾನ್ಗುಣೇಶಃ ॥ ೧೪ ॥

ಓ ಅನಂತನೇ ! ನಾವು ಮೂರ್ಖರಾಗಿರುವುದರಿಂದ ನಿನ್ನ ನಿಜವಾದ ಸ್ವರೂಪವನ್ನು ತಿಳಿಯೆವು. ನೀನು ಸಮಸ್ತ ಜಗತ್ತಿನ ಏಕಮಾತ್ರ ಸ್ವಾಮಿಯೂ, ಆದಿಕಾರಣನೂ, ಜಗತ್ತಿನ ಪರಿವರ್ತನೆಗಳಲ್ಲಿ ಏಕರಸನೂ ಆಗಿರುವೆ. ನೀನು ಸಮಸ್ತ ಗುಣಗಳ

ಕಾಮಂ ಪ್ರಯಾಹಿ ಜಹಿ ವಿಶ್ರವಸೋಽವಮೇಹಂ
ತ್ರೈಲೋಕ್ಯರಾವಣಮವಾಪ್ನುಹಿ ವೀರ ಪತ್ನೀಮ್ ।
ಬಧ್ನೀಹಿ ಸೇತುಮಿಹ ತೇ ಯಶಸೋ ವಿತತ್ಯೈ
ಗಾಯಂತಿ ದಿಗ್ವಿಜಯಿನೋ ಯಮುಪೇತ್ಯ ಭೂಪಾಃ ॥ ೧೫ ॥

ಸ್ವಾಮಿ ಯಾಗಿರುವೆ. ಇದರಿಂದ ನೀನು ಸತ್ತ್ವಗುಣವನ್ನು ಸ್ವೀಕರಿಸಿದಾಗ ದೇವತೆಗಳ, ರಜೋಗುಣವನ್ನು ಸ್ವೀಕರಿಸಿದಾಗ ಪ್ರಜಾಪತಿಗಳ, ತಮೋಗುಣ ವನ್ನು ಸ್ವೀಕರಿಸಿದಾಗ ನಿನ್ನ ಕ್ರೋಧದಿಂದ ರುದ್ರಗಣಗಳ ಉತ್ಪತ್ತಿಯಾಗುತ್ತದೆ. ॥ ೧೪ ॥

ವೀರಶಿರೋಮಣಿಯೇ ! ನೀನು ನಿನ್ನ ಇಚ್ಛಾನುಸಾರವಾಗಿ ನನ್ನನ್ನು (ಸಮುದ್ರವನ್ನು) ದಾಟಿಕೊಂಡು ಹೋಗಬಹುದು. ಮೂರು ಲೋಕಗಳನ್ನು ಗೋಳಾಡಿಸುತ್ತಿರುವ ವಿಶ್ರವಸನ ಕುಪುತ್ರನಾದ ರಾವಣನನ್ನು ಸಂಹರಿಸಿ ನಿನ್ನ ಪತ್ನಿಯನ್ನು ಶೀಘ್ರವಾಗಿ ಪಡೆದುಕೋ. ಆದರೆ ನನ್ನದೊಂದು ಪ್ರಾರ್ಥನೆಯಿದೆ. ನೀನು ಇಲ್ಲಿ ನನ್ನಮೇಲೆ ಒಂದು ಸೇತುವೆಯನ್ನು ನಿರ್ಮಿಸು. ಇದರಿಂದ ನಿನ್ನ ಕೀರ್ತಿಯ ವಿಸ್ತಾರವಾಗುವುದು ಹಾಗೂ ಮುಂದೆ ಮಹಾ-ಮಹಾ ನರಪತಿಗಳು ದಿಗ್ವಿಜಯಮಾಡುತ್ತಾ ಇಲ್ಲಿಗೆ ಬಂದಾಗ ಅವರು ನಿನ್ನ ಕೀರ್ತಿಯ ಗುಣಗಾನಮಾಡುವರು.॥ ೧೫ ॥

ಬದ್ಧ್ವೋದಧೌ ರಘುಪತಿರ್ವಿಧಾದ್ರಿಕೂಟೈಃ
ಸೇತುಂ ಕಪೀಂದ್ರಕರಕಂಪಿತಭೂರುಹಾಂಗೈಃ ।
ಸುಗ್ರೀವನೀಲಹನುಮತ್ಪ್ರಮುಖೈರನೀಕೈಃ
ಲಂಕಾಂ ವಿಭೀಷಣದೃಶಾऽऽವಿಶದಗ್ರದಗ್ದಾಮ್ ॥ ೧೬ ॥

ಭಗವಾನ್ ಶ್ರೀರಾಮನು ಅನೇಕಾನೇಕ ಪರ್ವತ ಶಿಖರಗಳಿಂದ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿಸಿದನು. ದೊಡ್ಡ-ದೊಡ್ಡ ವಾನರರು ತಮ್ಮ ಕೈಗಳಿಂದ ಪರ್ವತಗಳನ್ನು ಎತ್ತಿ ತರುತ್ತಿದ್ದಾಗ ಅವುಗಳ ವೃಕ್ಷಗಳು, ದೊಡ್ಡ-ದೊಡ್ಡ ಬಂಡೆಗಳು ಗಡ-ಗಡನೆ ನಡುಗುತ್ತಿದ್ದವು. ಇದಾದ ಬಳಿಕ ವಿಭೀಷಣನ ಸಲಹೆಯಂತೆ ಭಗವಂತನು ಸುಗ್ರೀವ, ನೀಲ, ಹನುಮಂತ ಮುಂತಾದ ಪ್ರಮುಖ ವೀರರೊಂದಿಗೆ ಮತ್ತು ಅತುಲ ವಾನರ ಸೇನೆಯೊಂದಿಗೆ ಲಂಕೆಯನ್ನು ಪ್ರವೇಶಿಸಿದನು. ಅದಾದರೋ ಶ್ರೀಹನುಮಂತನಿಂದ ಮೊದಲೇ ಸುಡಲ್ಪಟ್ಟಿತ್ತು. ॥ ೧೬ ॥ ಆ ಸಮಯದಲ್ಲಿ ವಾನರ ರಾಜನ ಸೈನ್ಯವು ಲಂಕೆಯಲ್ಲಿ ಅಡ್ಡಾಡುತ್ತಾ ವಿಹಾರಸ್ಥಾನಗಳನ್ನೂ, ಧಾನ್ಯದ ಕಣಜಗಳನ್ನೂ ಬಾಗಿಲುಗಳನ್ನೂ, ಮಹಾದ್ವಾರಗಳನ್ನೂ, ಸಭಾಭವನಗಳನ್ನೂ, ಮೊಗಸಾಲೆಗಳನ್ನೂ ಮತ್ತು ಪಕ್ಷಿಗಳು ವಾಸಿಸುವ ಸ್ಥಳಗಳನ್ನೂ ಆಕ್ರಮಿಸಿತು. ಅವರು ಅಲ್ಲಿಯ ವೇದಿಗಳನ್ನು, ಧ್ವಜಗಳನ್ನೂ, ಚಿನ್ನದ ಕಲಶಗಳನ್ನೂ, ಚೌಕಗಳನ್ನೂ ಒಡೆದು ಹಾಕಿದರು. ಆಗ ಲಂಕೆಯು ಆನೆಗಳ ಹಿಂಡು ನದಿಯನ್ನು ಕದಡಿ ಹಾಕಿದಂತೆ ಕಂಡುಬರುತ್ತಿತ್ತು. ॥ ೧೭ ॥ ಇದನ್ನು ನೋಡಿದ ರಾಕ್ಷಸ ರಾಜ ರಾವಣನು ನಿಕುಂಭ, ಕುಂಭ, ಧೂಮ್ರಾಕ್ಷ, ದುರ್ಮುಖಿ, ಸುರಾಂತಕ, ನರಾಂತಕ, ಪ್ರಹಸ್ತ, ಅತಿಕಾಯ, ವಿಕಂಪನ ಮುಂತಾದ ತನ್ನ ಎಲ್ಲ ಅನುಚರರನ್ನು, ಪುತ್ರನಾದ ಮೇಘನಾದನನ್ನು, ಕೊನೆಗೆ ತಮ್ಮನಾದ ಕುಂಭಕರ್ಣನನ್ನೂ ಯುದ್ಧಮಾಡಲು ಕೊಟ್ಟು ಕಳಿಸಿದನು. ॥ ೧೮ ॥ ರಾಕ್ಷಸರ ಆ ವಿಶಾಲವಾದ ಸೈನ್ಯವು ಖಡ್ಗ, ತ್ರಿಶೂಲ, ಧನುಸ್ಸು, ಪ್ರಾಸ, ಋಷ್ಟಿ, ಶಕ್ತಿ, ಬಾಣ, ಶೂಲ ಮುಂತಾದ ಅಸ್ತ್ರ-ಶಸ್ತ್ರಗಳಿಂದ ಸುರಕ್ಷಿತ ಮತ್ತು ಅತ್ಯಂತ ದುರ್ಗಮವಾಗಿತ್ತು. ಭಗವಾನ್ ಶ್ರೀರಾಮನು ಸುಗ್ರೀವ, ಲಕ್ಷ್ಮಣ, ಹನುಮಂತ, ಗಂಧಮಾದನ, ನೀಲ, ಅಂಗದ, ಜಾಂಬವಂತ, ಪನಸ ಮೊದಲಾದ ವೀರರನ್ನು ಜೊತೆಗೂಡಿ ರಾಕ್ಷಸರ ಸೈನ್ಯವನ್ನು ಎದುರಿಸಿದನು. ॥ ೧೯ ॥ ರಘುವಂಶ ಶಿರೋಮಣಿಯಾದ ಭಗವಾನ್ ಶ್ರೀರಾಮನ ಅಂಗದಾದಿ ಎಲ್ಲ ಸೇನಾಪತಿಗಳು ರಾಕ್ಷಸರ ರಥ-ಗಜಾಶ್ವ-ಪದಾತಿ ಸೈನ್ಯವನ್ನು ದ್ವಂದ್ವಯುದ್ಧದ ಮೂಲಕವಾಗಿ ಎದುರಿಸಿದರು ಮತ್ತು ರಾಕ್ಷಸರನ್ನು ವೃಕ್ಷಗಳಿಂದ, ಪರ್ವತ ಶಿಖರ

ಸಾ ವಾನರೇಂದ್ರಬಲರುದ್ಧವಿಹಾರಕೋಷ್ಠ-
ಶ್ರೀದ್ವಾರಗೋಪುರಸದೋವಲಭೀವಿಟಂಕಾ ।
ನಿರ್ಭಜ್ಯಮಾನಧಿಷಣಧ್ವಜಹೇಮಕುಂಭ-
ಶೃಂಗಾಟಕಾ ಗಜಕುಲೈರ್ಹ್ರದಿನೀವ ಘೂರ್ಣಾ ॥ ೧೭ ॥

ರಕ್ಷಃಪತಿಸ್ತದವಲೋಕ್ಯ ನಿಕುಂಭಕುಂಭ-
ಧೂಮ್ರಾಕ್ಷದುರ್ಮುಖಿಸುರಾಂತನರಾಂತಕಾದೀನ್ ।
ಪುತ್ರಂ ಪ್ರಹಸ್ತಮತಿಕಾಯವಿಕಂಪನಾದೀನ್
ಸರ್ವಾನುಗಾನ್ಸಮಹಿನೋದಥ ಕುಂಭಕರ್ಣಮ್ ॥ ೧೮ ॥

ತಾಂ ಯಾತುಧಾನಪೃತನಾಮಸಿಶೂಲಚಾಪ-
ಪ್ರಾಸರ್ಷ್ಟಿಶಕ್ತಿಶರತೋಮರಖಡ್ಗದುರ್ಗಾಮ್ ।
ಸುಗ್ರೀವಲಕ್ಷ್ಮಣಮರುತ್ಸುತಗಂಧಮಾದ-
ನೀಲಾಂಗದರ್ಕ್ಷಪನಸಾದಿಭಿರನ್ವಿತೋಽಗಾತ್ ॥ ೧೯ ॥

ಮರಗಳಿಂದ ಹೊಡೆದು ಸಂಹರಿಸಿದರು. ಹೀಗೆ ಭಗವಾನ್ ಶ್ರೀರಾಮನು ಲಂಕೆಯಲ್ಲಿ ಪ್ರವೇಶಿಸಿ ಅಲ್ಲಿ ಯುದ್ಧಮಾಡಿ ಅಲ್ಲಿಯ ಸಮಸ್ತ ರಾಕ್ಷಸರನ್ನು ಸಂಹರಿಸಿದನು. ॥ ೨೦ ॥

ತೇಽನೀಕಪಾ ರಘುಪತೇರಭಿಪತ್ಯ ಸರ್ವೇ
ದ್ವಂದ್ವಂ ವರೂಥಮಿಭಪತ್ತಿರಥಾಶ್ವಯೋಧ್ಯೈಃ ।
ಜಘ್ನುರ್ಮೃಧೇ ರಿಗದೇಷುಭಿರಂಗದಾದ್ಯಾಃ
ಸೀತಾಭಿಮರ್ಶಹತಮಂಗಲರಾವಣೇಶಾನ್ ॥ ೨೦ ॥

ರಕ್ಷಃಪತಿಃ ಸ್ವಬಲನಷ್ಟಿಮವೇಕ್ಷ್ಯ ರುಷ್ಟ
ಆರುಹ್ಯ ಯಾನಕಮಥಾಭಿಸಸಾರ ರಾಮಮ್ ।
ಸ್ವಸ್ಯಂದನೇ ದ್ಯುಮತಿ ಮಾತಲಿನೋಪನೀತೇ
ವಿಭ್ರಾಜಮಾನಮಹನನ್ನಿಶಿತೈಃ ಕ್ಷುರಪ್ರೈಃ ॥ ೨೧ ॥

ರಾಮಸ್ತಮಾಹ ಪುರುಷಾದಪುರೀಷ ಯನ್ನಃ
ಕಾಂತಾಸಮಕ್ಷಮಸತಾಪಹೃತಾ ಶ್ವವತ್ತೇ ।
ತ್ಯಕ್ತತ್ರಪಸ್ಯ ಫಲಮದ್ಯ ಜುಗುಪ್ಸಿತಸ್ಯ
ಯಚ್ಛಾಮಿ ಕಾಲ ಇವ ಕರ್ತುರಲಂಘ್ಯವೀರ್ಯಃ ॥ ೨೨ ॥

ಏವಂ ಕ್ಷಿಪನ್ ಧನುಷಿ ಸಂಧಿತಮುತ್ಸಸರ್ಜ
ಬಾಣಂ ಸ ವಜ್ರಮಿವ ತದ್ಧೃದಯಂ ಬಿಭೇದ ।
ಸೋಽಸೃಗ್ವಮನ್ ದಶಮುಖೈರ್ನ್ಯಪತತ್ ವಿಮಾನಾ-
ದ್ಧಾಹೇತಿ ಜಲ್ಪತಿ ಜನೇ ಸುಕೃತೀವ ರಿಕ್ತಃ ॥ ೨೩ ॥

ತತೋ ನಿಷ್ಕ್ರಮ್ಯ ಲಂಕಾಯಾ ಯಾತುಧಾನ್ಯಃ ಸಹಸ್ರಶಃ ।
ಮಂದೋದರ್ಯಾ ಸಮಂ ತಸ್ಮಿನ್ ಪ್ರರುದತ್ಯ ಉಪಾದ್ರವನ್
॥ ೨೪ ॥

ಸ್ವಾಸ್ ಸ್ವಾಸ್ ಬಂಧೂನ್ವಿಷೃಜ್ಯ ಲಕ್ಷ್ಮಣೇಷುಭಿರರ್ದಿತಾನ್ ।
ರುರುದುಃ ಸುಸ್ವರಂ ದೀನಾ ಘ್ನಂತ್ಯ ಆತ್ಮಾನಮಾತ್ಮನಾ
॥ ೨೫ ॥

ಹಾ ಹತಾಃ ಸ್ಮ ವಯಂ ನಾಥ ಲೋಕರಾವಣ ರಾವಣ ।
ಕಂ ಯಾಯಾಚ್ಛರಣಂ ಲಂಕಾ ತ್ವದ್ವಿಹೀನಾ ಪರಾರ್ದಿತಾ
॥ ೨೬ ॥

ನೈವಂ ವೇದ ಮಹಾಭಾಗ ಭವಾನ್ಕಾಮವಶಂ ಗತಃ ।
ತೇಜೋಽನುಭಾವಂ ಸೀತಾಯಾ ಯೇನ ನೀತೋ ದಶಾಮಿಮಾಮ್
॥ ೨೭ ॥

ಗಳಿಂದ ಗದೆ, ಬಾಣಗಳಿಂದಲೂ ಪ್ರಹರಿಸಿದರು. ಮಂಗಳಮಯಿಯಾದ ಸೀತಾದೇವಿಯನ್ನು ಸ್ಪರ್ಶಿಸಿದ ಕಾರಣದಿಂದಾಗಿ ಅಮಂಗಳನಾಗಿದ್ದ ರಾವಣನನ್ನು ಒಡೆಯನನ್ನಾಗಿ ಹೊಂದಿದ್ದ ರಾಕ್ಷಸರಿಗೆ ವಿನಾಶವೆಂಬುದು ಮೊದಲೇ ಸಿದ್ಧವಾಗಿ ಹೋಗಿದ್ದಿತು. ॥ ೨೦ ॥

ರಾಕ್ಷಸರಾಜನಾದ ರಾವಣೇಶ್ವರನು ತನ್ನ ಸೈನ್ಯವು ದಿನ-ದಿನಕ್ಕೂ ನಾಶವಾಗುವುದನ್ನು ಕಂಡು ಅತ್ಯಂತ ಕ್ರುದ್ಧನಾಗಿ ಪುಷ್ಪಕ ವಿಮಾನವನ್ನೇರಿ ಬಂದು ಶ್ರೀರಾಮನಿಗೆ ಎದುರಾಗಿ ನಿಂತನು. ಆ ಸಮಯಕ್ಕೆ ಸರಿಯಾಗಿ ಇಂದ್ರನ ಸಾರಥಿಯಾದ ಮಾತಲಿಯು ತೇಜೋಮಯವಾದ ದಿವ್ಯರಥವನ್ನು ನಡೆಸಿಕೊಂಡು ಶ್ರೀರಾಮನ ಬಳಿಗೆ ಬಂದನು. ಮಂಗಳಮೂರ್ತಿಯಾದ ಶ್ರೀರಾಮನು ಆ ದಿವ್ಯ ರಥವನ್ನು ಹತ್ತಿಕುಳಿತನು. ಒಡನೆಯೇ ರಾವಣನು ತನ್ನ ತೀಕ್ಷ್ಣವಾದ ಬಾಣಗಳಿಂದ ಶ್ರೀರಾಮನನ್ನು ಪ್ರಹರಿಸತೊಡಗಿದನು. ॥ ೨೧ ॥ ಆಗ ಭಗವಾನ್ ಶ್ರೀರಾಮನು ರಾವಣನಿಗೆ ಹೇಳಿದನು – ಎಲೈ ನೀಚರಾಕ್ಷಸನೇ! ಹವಿಸ್ಸನ್ನು ಕದಿಯುವ ನಾಯಿಯಂತೆ ನೀನು ನಾನು ಇಲ್ಲದಿರುವಾಗ ನನ್ನ ಪ್ರಾಣಪ್ರಿಯಳಾದ ಪತ್ನಿಯನ್ನು ಅಪಹರಿಸಿ ತಂದಿರುವೆ. ನಿನ್ನಂತಹ ನಿಂದ್ಯನೂ, ನಾಚಿಕೆಗೆಟ್ಟವನೂ ಬೇರೆ ಯಾವನಿದ್ದಾನೆ? ಮೀರಿ ನಡೆಯಲು ಅಸಾಧ್ಯನಾದ ಕಾಲ ಪುರುಷನು ಅವುಗಳ ಕರ್ಮಾನುಸಾರವಾಗಿ ಪ್ರಾಣಿಗಳನ್ನು ಶಿಕ್ಷಿಸುವಂತೆ ನಿನ್ನ ಜುಗುಪ್ಸಿತವಾದ ಕಾರ್ಯಕ್ಕೆ ತಕ್ಕ ಫಲವನ್ನು ನಾನೀಗಲೇ ಕೊಡುತ್ತೇನೆ. ॥ ೨೨ ॥ ಹೀಗೆ ದುಷ್ಟನಾದ ರಾವಣನನ್ನು ನಿಂದಿಸುತ್ತಾ ಭಗವಾನ್ ಶ್ರೀರಾಮನು ಧನುಸ್ಸಿಗೆ ಹೂಡಿದ್ದ ಬಾಣವನ್ನು ಅವನ ಮೇಲೆ ಪ್ರಯೋಗಿಸಿದನು. ಆ ಬಾಣವು ವಜ್ರದಂತಿರುವ ಅವನ ಹೃದಯವನ್ನು ಭೇದಿಸಿಬಿಟ್ಟಿತು. ಅವನು ತನ್ನ ಹತ್ತು ಮುಖಗಳಿಂದಲೂ ರಕ್ತವನ್ನು ಕಾರುತ್ತಾ ಪುಣ್ಯಾತ್ಮರು ಭೋಗ ಮುಗಿದಾಗ ಸ್ವರ್ಗದಿಂದ ಕೆಳಗೆ ಬೀಳುವಂತೆಯೇ ವಿಮಾನದಿಂದ ಉರುಳಿ ಬಿದ್ದನು. ಆ ಸಮಯದಲ್ಲಿ ಅವನ ಪುರಜನರೂ, ಪರಿಜನರೂ ಅಯ್ಯೋ! ಅಯ್ಯೋ! ಎಂದು ಕೂಗಿಕೊಂಡರು. ॥ ೨೩. ॥

ಅನಂತರ ಸಾವಿರಾರು ರಾಕ್ಷಸಿಯರು ಮಂದೋದರಿಯೊಂದಿಗೆ ಅಳುತ್ತಾ ಲಂಕೆಯಿಂದ ಹೊರಬಿದ್ದು ರಣಭೂಮಿಗೆ ಬಂದರು. ॥ ೨೪ ॥ ಅವರ ಸ್ವಜನ-ಸಂಬಂಧಿಗಳು ಲಕ್ಷ್ಮಣನ ಬಾಣಗಳಿಂದ ಛಿನ್ನ-ಭಿನ್ನರಾಗಿ ಬಿದ್ದಿರುವುದನ್ನು ನೋಡಿದರು. ಅವರು ತಮ್ಮ ಕೈಯಿಂದ ಎದೆಯನ್ನು ಬಡಿದುಕೊಂಡು ತಮ್ಮ ಸಂಬಂಧಿಗಳನ್ನು ಅಪ್ಪಿಕೊಳ್ಳುತ್ತಾ ಗಟ್ಟಿಯಾಗಿ ವಿಲಾಪಿಸ ತೊಡಗಿದರು. ॥ ೨೫ ॥ ಅಯ್ಯೋ! ಮೂರು ಲೋಕಗಳನ್ನೂ ಭಯದಿಂದ ತಲ್ಲಣಗೊಳಿಸುತ್ತಿದ್ದ ರಾವಣೇಶ್ವರನೇ! ನಾಥನೇ! ಇಂದು ನಾವೆಲ್ಲರೂ ಹಾಳಾಗಿ ಹೋದೆವು. ನೀನಿಲ್ಲದ ಕಾರಣದಿಂದಾಗಿ ಶತ್ರುಗಳಿಂದ ಈ ಲಂಕೆಯು ಧ್ವಂಸವಾಗಿಬಿಟ್ಟಿದೆ. ಈಗ ಲಂಕೆಯು ಯಾರ ಅಧೀನದಲ್ಲಿರುವುದೆಂಬುದೇ ಒಂದು ಪ್ರಶ್ನೆಯಾಗಿದೆ. ॥ ೨೬ ॥ ಪ್ರಭುವೇ! ನೀನು ಎಲ್ಲ ರೀತಿಯಿಂದಲೂ ಸಂಪನ್ನನಾಗಿದ್ದೆ. ಯಾವುದೇ ಕೊರತೆ ಇರಲಿಲ್ಲ. ಆದರೆ ನೀನು ಕಾಮವಶನಾಗಿ ಸೀತೆಯು ಎಷ್ಟು ತೇಜಸ್ವಿನಿಯಾಗಿದ್ದಾಳೆ, ಅವಳ ಪ್ರಭಾವವೆಷ್ಟೆಂಬುದನ್ನು ತಿಳಿಯದೇ ಹೋದೆ. ನಿನ್ನ ಈ ತಪ್ಪೇ ಇಂತಹ ದುರ್ದಶೆಗೆ ಕಾರಣವಾಯಿತಲ್ಲ! ॥ ೨೭ ॥

ಕೃತೈಷಾ ವಿಧವಾ ಲಂಕಾ ವಯಂ ಚ ಕುಲನಂದನ।
ದೇಹಃ ಕೃತೋಽನ್ನಂ ಗೃಧ್ರಾಣಾಮಾತ್ಮಾ ನರಕಹೇತವೇ
॥ ೨೮ ॥

ಅಂದು ನಿನ್ನ ಕಾರ್ಯಗಳಿಂದ ನಾವೆಲ್ಲರೂ ಮತ್ತು ಸಮಸ್ತ ರಾಕ್ಷಸವಂಶವು ಆನಂದಿತರಾಗಿದ್ದೆವು. ಇಂದು ನಾವೆಲ್ಲರೂ ಹಾಗೂ ಇಡೀ ಲಂಕಾ ನಗರಿಯು ವಿಧವೆಯಾಯಿತು. ನಿನ್ನ ದೇಹವು ರಣ ಹದ್ದು ಮೊದಲಾದ ಪಕ್ಷಿಗಳಿಗೆ ಆಹಾರವಾಗಿ ಪರಿಣಮಿಸಿತು. ನಿನ್ನ ಆತ್ಮನು ನರಕಭಾಜನವಾಗಿದೆ. ಇದೆಲ್ಲವೂ ನಿನ್ನ ಮೂರ್ಖತೆಯ ಮತ್ತು ಕಾಮುಕತೆಯ ಫಲವಾಗಿದೆ. ॥ ೨೮ ॥

ಶ್ರೀಶುಕ ಉವಾಚ

ಸ್ವಾನಾಂ ವಿಭೀಷಣಶ್ಚಕ್ರೇ ಕೋಸಲೇಂದ್ರಾನುಮೋದಿತಃ।
ಪಿತೃಮೇಧವಿಧಾನೇನ ಯದುಕ್ತಂ ಸಾಂಪರಾಯಿಕಮ್
॥ ೨೯ ॥

ಶ್ರೀಶುಕಮಹಾ ಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕೋಸಲೇಶ್ವರನಾದ ಭಗವಾನ್ ಶ್ರೀರಾಮಚಂದ್ರನ ಆಣತಿಯಂತೆ ವಿಭೀಷಣನು ತನ್ನ ಸ್ವಜನ-ಸಂಬಂಧಿಗಳಿಗೆ ಪಿತೃಮೇಧವಿಧಿಯನ್ನನುಸರಿಸಿ ಅಂತ್ಯೇಷ್ಟಿಗಳನ್ನು ಮಾಡಿದನು. ॥ ೨೯ ॥ ಇದಾದ ಬಳಿಕ ಭಗವಾನ್ ಶ್ರೀರಾಮನು ಅಶೋಕವನದ ಆಶ್ರಮದಲ್ಲಿ ಅಶೋಕ ವೃಕ್ಷದ ಬುಡದಲ್ಲಿ ಕುಳಿತಿದ್ದ ಸೀತಾದೇವಿಯನ್ನು ನೋಡಿದನು. ಅವಳು ಅವನ ವಿರಹವ್ಯಥೆಯಿಂದ ಪೀಡಿತಳಾಗಿದ್ದು ಅತ್ಯಂತ ದುರ್ಬಲಳಾಗಿದ್ದಳು. ॥ ೩೦ ॥ ಅತ್ಯಂತ ದೈನ್ಯಾವಸ್ಥೆಯಲ್ಲಿದ್ದ ಪ್ರಿಯತಮೆಯಾದ ಅರ್ಧಾಂಗಿನಿಯನ್ನು ನೋಡಿ ಶ್ರೀರಾಮನ ಹೃದಯವು ಪ್ರೀತಿ ಮತ್ತು ಕೃಪೆಯಿಂದ ತುಂಬಿಬಂತು. ಇತ್ತ ಭಗವಂತನ ದರ್ಶನವನ್ನು ಪಡೆದ ಸೀತೆಯ ಹೃದಯವೂ ಪ್ರೇಮಾನಂದದಿಂದ ಪರಿಪೂರ್ಣವಾಯಿತು. ಆಕೆಯ ಮುಖಕಮಲವು ಅರಳಿಕೊಂಡಿತು. ॥ ೩೧ ॥ ಭಗವಂತನು ವಿಭೀಷಣನಿಗೆ ರಾಕ್ಷಸರ ಒಡೆತನ, ಲಂಕೆಯ ರಾಜ್ಯ ಮತ್ತು ಒಂದು ಕಲ್ಪದ ಆಯುಸ್ಸನ್ನೂ ದಯಪಾಲಿಸಿದನು. ಇದಾದ ಬಳಿಕ ಮೊದಲಿಗೆ ಸೀತೆಯನ್ನು ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿ ತನ್ನ ಈರ್ವರೂ ತಮ್ಮಂದಿರಾದ ಲಕ್ಷ್ಮಣ, ಸುಗ್ರೀವರನ್ನೂ ಹಾಗೂ ಸೇವಕನಾದ ಹನುಮಂತನೊಂದಿಗೆ ಸ್ವಯಂ ಪುಷ್ಪಕವಿಮಾನವನ್ನೇರಿದನು. ಹೀಗೆ ಹದಿನಾಲ್ಕು ವರ್ಷಗಳ ವ್ರತವು ಪೂರ್ಣವಾದಾಗ ಅವನು ತನ್ನ ನಗರಕ್ಕೆ ಹೊರಟನು. ಆಗ ಮಾರ್ಗದಲ್ಲಿ ಬ್ರಹ್ಮಾದಿ ಲೋಕಪಾಲರೂ, ದೇವತೆಗಳೂ ತುಂಬು ಪ್ರೇಮದಿಂದ ಹೂವುಗಳ ಮಳೆಯನ್ನು ಕರೆಯುತ್ತಿದ್ದರು. ॥ ೩೨-೩೩ ॥

ತತೋ ದದರ್ಶ ಭಗವಾನಶೋಕವನಿಕಾಶ್ರಮೇ।
ಕ್ಷಾಮಾಂ ಸ್ವವಿರಹವ್ಯಾಧಿಂ ಶಿಂಶಪಾಮೂಲಮಾಶ್ರಿತಾಮ್
॥ ೩೦ ॥

ರಾಮಃ ಪ್ರಿಯತಮಾಂ ಭಾರ್ಯಾಂ ದೀನಾಂ ವೀಕ್ಷ್ಯಾನ್ವಕಂಪತ।
ಆತ್ಮಸಂದರ್ಶನಾಹ್ಲಾದವಿಕಸನ್ಮುಖಿಪಂಕಜಾಮ್
॥ ೩೧ ॥

ಆರೋಪ್ಯಾರುರುಹೇ ಯಾನಂ ಭ್ರಾತೃಭ್ಯಾಂ ಹನುಮದ್ಯುತಃ।
ವಿಭೀಷಣಾಯ ಭಗವಾನ್ ದತ್ತ್ವಾರಕ್ಷೋಗಣೇಶತಾಮ್
॥ ೩೨ ॥

ಲಂಕಾಮಾಯುಶ್ಚ ಕಲ್ಪಾಂತಂ ಯಯೌ ಚೀರ್ಣವ್ರತಃ ಪುರೀಮ್।
ಅವಕೀರ್ಯಮಾಣಃ ಕುಸುಮೈರ್ಲೋಕಪಾಲಾರ್ಪಿತೈಃ ಪಥಿ
॥ ೩೩ ॥

ಇತ್ತ ಬ್ರಹ್ಮಾದಿ ದೇವತೆಗಳು ಆನಂದಭರಿತರಾಗಿ ಭಗವಂತನ ಲೀಲಾಪ್ರಸಂಗಗಳನ್ನು ಗಾನಮಾಡುತ್ತಿದ್ದರು. ಅತ್ತಲಾಗಿ ಶ್ರೀರಾಮನ ಆಗಮನದ ನಿರೀಕ್ಷಣೆಯಲ್ಲಿಯೇ ಕಾತರನಾಗಿದ್ದ ಭರತನು ಕೇವಲ ಗೋಮೂತ್ರದಲ್ಲಿ ಬೇಯಿಸಿದ ಜವೆಯ ಗಂಜಿಯನ್ನು ಮಾತ್ರವೇ ಸೇವಿಸುತ್ತಿದ್ದನು. ಅಣ್ಣನಂತೆಯೇ ನಾರುಮಡಿಯನ್ನೇ ಉಡುತ್ತಿದ್ದನು. ಜಟಾಧಾರಿಯಾಗಿದ್ದನು. ನೆಲದ ಮೇಲೆ ದರ್ಭೆಗಳನ್ನು ಹಾಸಿಕೊಂಡು ಮಲಗುತ್ತಿದ್ದನು. ಈ ಸಮಾಚಾರವನ್ನು ಕೇಳಿದ ಪರಮ ಕಾರುಣಿಕನಾದ ಶ್ರೀರಾಮನು ಕಳವಳಗೊಂಡನು. ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಶ್ರೀರಾಮನು ಅಯೋಧ್ಯೆಯ ಕಡೆಗೆ ಬರುತ್ತಿರುವನೆಂದು ತಿಳಿದೊಡನೆಯೇ ಆನಂದಭರಿತನಾದ ಭರತನು ಪುರವಾಸಿಗಳನ್ನು, ಮಂತ್ರಿ, ಪುರೋಹಿತರನ್ನು ಜೊತೆಗೆ ಕರೆದುಕೊಂಡು ಭಗವಂತನ ಚರಣಪಾದುಕೆಗಳನ್ನು ಶಿರದಮೇಲೆ ಹೊತ್ತುಕೊಂಡು ರಾಮನ ಸ್ವಾಗತಕ್ಕಾಗಿ ಹೊರಟನು. ನಂದಿಗ್ರಾಮದಲ್ಲಿದ್ದ ತನ್ನ ಶಿಬಿರದಿಂದ ಭರತನು ಹೊರಟಾಗ ಪುರಜನರು ಅವನೊಂದಿಗೆ ಮಂಗಳಗೀತೆಗಳನ್ನು ಹಾಡುತ್ತಾ, ವಾದ್ಯಘೋಷ

ಮಹಾಕಾರುಣಿಕೋಽತಪ್ಯಜ್ಜಟಿಲಂ ಸ್ಥಂಡಿಲೇಶಯಮ್।
ಭರತಃ ಪ್ರಾಪ್ತಮಾಕರ್ಣ್ಯ ಪೌರಾಮಾತ್ಯಪುರೋಹಿತೈಃ
॥ ೩೪ ॥

ಪಾದುಕೇ ಶಿರಸಿ ನ್ಯಸ್ಯ ರಾಮಂ ಪ್ರತ್ಯುದ್ಯತೋಽಗ್ರಜಮ್।
ನಂದಿಗ್ರಾಮಾತ್ ಸ್ವಶಿಬಿರಾದ್ ಗೀತವಾದಿತ್ರನಿಃಸ್ವನೈಃ
॥ ೩೬ ॥

ಬ್ರಹ್ಮಘೋಷೇಣ ಚ ಮುಹುಃ ಪಠದ್ಭಿರ್ಬ್ರಹ್ಮವಾದಿಭಿಃ ।
ಸ್ವರ್ಣಕಕ್ಷಪತಾಕಾಭಿರ್ಯೆಮೈಶ್ಚಿತ್ರಧ್ವಜೈ ರಥೈಃ
॥ ೩೭ ॥

ಸದಶ್ವೈ ರುಕ್ಮಸನ್ನಾಹೈರ್ಭಟೈಃ ಪುರಟವರ್ಮಭಿಃ ।
ಶ್ರೇಣೀಭಿರ್ವಾರಮುಖ್ಯಾಭಿರ್ವೃತ್ಯೈಶ್ಚೈವ ಪದಾನುಗೈಃ
॥ ೩೮ ॥

ಪಾರಮೇಷ್ಠ್ಯಾನ್ಯುಪಾದಾಯ ಪಣ್ಯಾನ್ಯುಚ್ಚಾವಚಾನಿ ಚ ।
ಪಾದಯೋರ್ನ್ಯಪತತ್ಪ್ರೇಮ್ಣಾ ಪ್ರಕ್ಲಿನ್ನಹೃದಯೇಕ್ಷಣಃ
॥ ೩೯ ॥

ಪಾದುಕೇ ನ್ಯಸ್ಯ ಪುರತಃ ಪ್ರಾಂಜಲಿರ್ಬಾಷ್ಪಲೋಚನಃ ।
ತಮಾಶ್ಲಿಷ್ಯ ಚಿರಂ ದೋರ್ಭ್ಯಾಂ ಸ್ನಾಪಯನ್ನೇತ್ರಜೈರ್ಜಲೈಃ
॥ ೪೦ ॥

ರಾಮೋ ಲಕ್ಷ್ಮಣಸೀತಾಭ್ಯಾಂ ವಿಪ್ರೇಭ್ಯೋ ಯೇಽರ್ಹಸತ್ತಮಾಃ ।
ತೇಭ್ಯಃ ಸ್ವಯಂ ನಮಶ್ಚಕ್ರೇ ಪ್ರಜಾಭಿಶ್ಚ ನಮಸ್ಕೃತಃ
॥ ೪೧ ॥

ಧುನ್ವಂತ ಉತ್ತರಾಸಂಗಾನ್ಪತಿಂ ವೀಕ್ಷ್ಯ ಚಿರಾಗತಮ್ ।
ಉತ್ತರಾಃ ಕೋಸಲಾ ಮಾಲ್ಯೈಃ ಕಿರಂತೋ ನನೃತುರ್ಮುದಾ
॥ ೪೨ ॥

ಪಾದುಕೇ ಭರತೋಽಗೃಹ್ಣಾಚ್ಚಾಮರವ್ಯಜನೋತ್ತಮೇ ।
ವಿಭೀಷಣಃ ಸಸುಗ್ರೀವಃ ಶ್ವೇತಚ್ಛತ್ರಂ ಮರುತ್ಸುತಃ
॥ ೪೩ ॥

ಧನುರ್ನಿಷಂಗಾಞ್ಛತ್ರುಘ್ನಃ ಸೀತಾ ತೀರ್ಥಕಮಂಡಲುಮ್ ।
ಅಬಿಭ್ರದಂಗದಃ ಖಡ್ಗಂ ಹೈಮಂ ಚರ್ಮಾರ್ಕ್ಷರಾಡ್ನೃಪ
॥ ೪೪ ॥

ಪುಷ್ಪಕಸ್ಥೋಽನ್ವಿತಃ ಸ್ತ್ರೀಭಿಃ ಸ್ತೂಯಮಾನಶ್ಚ ವಂದಿಭಿಃ ।
ವಿರೇಜೇ ಭಗವಾನ್ರಾಜನ್ ಗ್ರಹೈಶ್ಚಂದ್ರ ಇವೋದಿತಃ
॥ ೪೫ ॥

ಭ್ರಾತೃಭಿರ್ನಂದಿತಃ ಸೋಽಪಿ ಸೋತ್ಸವಾಂ ಪ್ರಾವಿಶತ್ಪುರೀಮ್ ।
ಪ್ರವಿಶ್ಯ ರಾಜಭವನಂ ಗುರುಪತ್ನೀಃ ಸ್ವಮಾತರಮ್
॥ ೪೬ ॥

ಗಳೊಡನೆ ಹೊರಟರು. ವೇದವಿದರಾದ ಬ್ರಾಹ್ಮಣರು ಸ್ವಸ್ತಿವಾಚನ ಮಾಡುತ್ತಿದ್ದರು. ಅವರ ಧ್ವನಿಯು ಎಲ್ಲೆಡೆ ಪ್ರತಿಧ್ವನಿಸಿತು. ಸುವರ್ಣಮಯವಾದ ಪತಾಕೆಗಳು ಎಲ್ಲೆಡೆ ಹಾರಾಡುತ್ತಿದ್ದವು. ಚಿತ್ರವಿಚಿತ್ರವಾದ ಧ್ವಜಗಳಿಂದ ಕೂಡಿದ ಸುವರ್ಣಮಯವಾದ ರಥಗಳೂ, ಸುವರ್ಣಮಯವಾದ ಜೀನುಗಳಿಂದ ಸಮಲಂಕೃತವಾದ ಕುದುರೆಗಳೂ, ಸುವರ್ಣಮಯವಾದ ಕವಚಗಳನ್ನೂ ಧರಿಸಿದ್ದ ಸೈನಿಕರು ಭರತನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಶ್ರೀಮಂತ ಶ್ರೇಷ್ಠಿವರ್ಗ, ಶ್ರೇಷ್ಠ ವಾರಾಂಗನೆಯರೂ, ಕಾಲಾಳುಗಳು ಮಹಾರಾಜರಿಗೆ ಯೋಗ್ಯವಾದ ಸಕಲ ವಸ್ತುಗಳನ್ನು ಎತ್ತಿಕೊಂಡು ಭರತನೊಂದಿಗೆ ನಡೆಯುತ್ತಿದ್ದರು. ಭಗವಂತನನ್ನು ನೋಡುತ್ತಲೇ ಪ್ರೇಮೋದ್ರೇಕದಿಂದ ಭರತನ ಹೃದಯವು ಕರಗಿ, ಕಣ್ಣುಗಳಲ್ಲಿ ಆನಂದಾಶ್ರುಗಳು ಚಿಮ್ಮಿದುವು. ಅವನು ಭಗವಂತನ ಶ್ರೀಚರಣಗಳಲ್ಲಿ ಬಿದ್ದು ಹೊರಳಾಡಿದನು. ॥ ೩೪-೩೯ ॥ ಭರತನು ಪ್ರಭುವಿನ ಮುಂದೆ ಆವನ ಪಾದುಕೆಗಳನ್ನು ಇರಿಸಿದನು ಮತ್ತು ಕೈ ಜೋಡಿಸಿಕೊಂಡು ನಿಂತುಕೊಂಡನು. ಕಣ್ಣುಗಳಿಂದ ಅಶ್ರುಗಳು ಹರಿಯುತ್ತಿದ್ದವು. ಭಗವಂತನು ತನ್ನ ಎರಡೂ ಕೈಗಳಿಂದ ಬರಸೆಳೆದುಕೊಂಡು ದೀರ್ಘವಾಗಿ ಭರತನನ್ನು ಆಲಿಂಗಿಸಿ ಕೊಂಡನು. ಭಗವಂತನ ಕಣ್ಣುಗಳಿಂದ ಹರಿದ ಅಶ್ರುಜಲದಿಂದ ಭರತನ ಮೈ ನೆನೆದುಹೋಯಿತು. ॥ ೪೦ ॥ ಅನಂತರ ಸೀತಾ ಲಕ್ಷ್ಮಣರೊಂದಿಗೆ ಭಗವಾನ್ ಶ್ರೀರಾಮನು ಬ್ರಾಹ್ಮಣರಿಗೆ, ಪೂಜ್ಯ ಗುರುಗಳಿಗೆ, ಹಿರಿಯರಿಗೆ ನಮಸ್ಕರಿಸಿದನು. ಸಮಸ್ತ ಪ್ರಜಾಜನರು ಭಕ್ತಿಯಿಂದ ತಲೆಬಾಗಿ ಭಗವಂತನ ಚರಣಗಳಲ್ಲಿ ವಂದಿಸಿಕೊಂಡರು. ॥ ೪೧॥ ಆ ಸಮಯದಲ್ಲಿ ಉತ್ತರ ಕೋಸಲದೇಶದಲ್ಲಿ ವಾಸಿಸುವ ಸಮಸ್ತ ಪ್ರಜೆಯು ತನ್ನ ಸ್ವಾಮಿಯಾದ ಭಗವಂತನನ್ನು ಬಹಳ ದಿನಗಳ ಬಳಿಕ ಬಂದಿರುವುದನ್ನು ಕಂಡು ತಮ್ಮ ಉತ್ತರೀಯವನ್ನು ಹಾರಿಸುತ್ತಾ ಶ್ರೀರಾಮನ ಮೇಲೆ ಹೂವುಗಳ ಮಳೆಗರೆಯುತ್ತಾ ಆನಂದದಿಂದ ಕುಣಿದಾಡಿದರು. ॥ ೪೨ ॥ ಭರತನು ಭಗವಂತನ ಪಾದುಕೆಗಳನ್ನು ಎತ್ತಿಕೊಂಡನು, ವಿಭೀಷಣನು ಚಾಮರವನ್ನೂ, ಸುಗ್ರೀವನು ಬೀಸಣಿಗೆಯನ್ನೂ, ಹನುಮಂತನು ಬಿಳಿಯ ಕೊಡೆಯನ್ನೂ ಹಿಡಿದುಕೊಂಡರು. ॥ ೪೩. ॥ ಪರೀಕ್ಷಿತನೇ ! ಶತ್ರುಘ್ನನು ಶ್ರೀರಾಮನ ಧನುಸ್ಸನ್ನೂ, ಬತ್ತಳಿಕೆಯನ್ನೂ, ಸೀತೆಯು ತೀರ್ಥಗಳಿಂದ ತುಂಬಿದ ಕಮಂಡಲುವನ್ನೂ, ಅಂಗದನು ಚಿನ್ನದ ಖಡ್ಗವನ್ನೂ, ಜಾಂಬವಂತರು ಗುರಾಣಿಯನ್ನು ಹಿಡಿದು ಕೊಂಡರು. ॥ ೪೪ ॥ ಇವರೊಂದಿಗೆ ಭಗವಂತನು ಪುಷ್ಪಕವಿಮಾನದಲ್ಲಿ ವಿರಾಜಮಾನನಾದನು. ಸುತ್ತಲೂ ಶುಭಾಂಗಿಯರು ಯಥಾಸ್ಥಾನದಲ್ಲಿ ಕುಳಿತರು. ವಂದಿ-ಮಾಗಧರು ಸ್ತುತಿಸತೊಡಗಿದರು. ಗ್ರಹಗಳೊಡನೆ ಚಂದ್ರನೇ ಉದಯಿಸಿರುವನೋ ಎಂಬಂತೆ ಶ್ರೀರಾಮಚಂದ್ರನು ಪುಷ್ಪಕವಿಮಾನದಲ್ಲಿ ಶೋಭಿಸಿದನು. ॥ ೪೫ ॥

ಭಗವಂತನು ಹೀಗೆ ಸಹೋದರರಿಂದ ಅಭಿನಂದನೆಯನ್ನು ಸ್ವೀಕರಿಸಿ, ಅವರೊಂದಿಗೆ ಅಯೋಧ್ಯಾಪುರವನ್ನು ಪ್ರವೇಶಿಸಿದನು. ಆಗ ಆ ಪುರವು ಆನಂದೋತ್ಸವದಿಂದ ಪರಿಪೂರ್ಣವಾಗಿ ಹೋಗಿತ್ತು. ಅರಮನೆಯನ್ನು ಪ್ರವೇಶಿಸಿ ಶ್ರೀರಾಮನು ತಾಯಿ ಕೌಸಲ್ಯೆಗೂ,

ಗುರೂನ್ವಯಸ್ಯಾವರಜಾನ್ ಪೂಜಿತಃ ಪ್ರತ್ಯಪೂಜಯತ್ ।
ವೈದೇಹೀ ಲಕ್ಷ್ಮಣಶ್ಚೈವ ಯಥಾವತ್ ಸಮುಪೇಯತುಃ
॥ ೪೭ ॥

ಪುತ್ರಾನ್ ಸ್ವಮಾತರಸ್ತಾಸ್ತು ಪ್ರಾಣಾಂಸ್ತನ್ವ ಇವೋತ್ಥಿತಾಃ ।
ಆರೋಪ್ಯಾಂಕೇऽಭಿಷಿಂಚಂತ್ಯೋ ಬಾಷ್ಪೌಘೈರ್ವಿಜಹುಃ ಶುಚಃ
॥ ೪೮ ॥

ಜಟಾ ನಿರ್ಮುಚ್ಯ ವಿಧಿವತ್ ಕುಲವೃದ್ಧೈಃ ಸಮಂ ಗುರುಃ ।
ಅಭ್ಯಷಿಂಚದ್ಯಥೈವೇಂದ್ರಂ ಚತುಃಸಿಂಧುಜಲಾದಿಭಿಃ
॥ ೪೯ ॥

ಏವಂ ಕೃತಶಿರಃಸ್ನಾನಃ ಸುವಾಸಾಃ ಸ್ರಗ್ವ್ಯಲಂಕೃತಃ ।
ಸ್ವಲಂಕೃತೈಃ ಸುವಾಸೋಭಿರ್ಭ್ರಾತೃಭಿರ್ಭಾರ್ಯಯಾ ಬಭೌ
॥ ೫೦ ॥

ಅಗ್ರಹೀದಾಸನಂ ಭ್ರಾತ್ರಾ ಪ್ರಣಿಪತ್ಯ ಪ್ರಸಾದಿತಃ ।
ಪ್ರಜಾಃ ಸ್ವಧರ್ಮನಿರತಾ ವರ್ಣಾಶ್ರಮಗುಣಾನ್ವಿತಾಃ ।
ಜುಗೋಪ ಪಿತೃವದ್ರಾಮೋ ಮೇನಿರೇ ಪಿತರಂ ಚ ತಮ್
॥ ೫೧ ॥

ತ್ರೇತಾಯಾಂ ವರ್ತಮಾನಾಯಾಂ ಕಾಲಃ ಕೃತಸಮೋऽಭವತ್ ।
ರಾಮೇ ರಾಜನಿ ಧರ್ಮಜ್ಞೇ ಸರ್ವಭೂತಸುಖಾವಹೇ
॥ ೫೨ ॥

ವನಾನಿ ನದ್ಯೋ ಗಿರಯೋ ವರ್ಷಾಣಿ ದ್ವೀಪಸಿಂಧವಃ ।
ಸರ್ವೇ ಕಾಮದುಘಾ ಆಸನ್ಪ್ರಜಾನಾಂ ಭರತರ್ಷಭ
॥ ೫೩ ॥

ನಾಧಿವ್ಯಾಧಿಜರಾಗ್ಲಾನಿದುಃಖಶೋಕಭಯಕ್ಲಮಾಃ ।
ಮೃತ್ಯುಶ್ಚಾನಿಚ್ಛತಾಂ ನಾಸೀದ್ರಾಮೇ ರಾಜನ್ಯಧೋಕ್ಷಜೇ
॥ ೫೪ ॥

ಏಕಪತ್ನೀವ್ರತಧರೋ ರಾಜರ್ಷಿಚರಿತಃ ಶುಚಿಃ ।
ಸ್ವಧರ್ಮಂ ಗೃಹಮೇಧೀಯಂ ಶಿಕ್ಷಯನ್ ಸ್ವಯಮಾಚರತ್
॥ ೫೫ ॥

ಇತರ ತಾಯಂದಿರಿಗೂ, ಗುರುಹಿರಿಯರಿಗೂ ವಂದಿಸಿದನು. ಸಮಾನರಾದ ಮಿತ್ರರನ್ನು, ಚಿಕ್ಕವರನ್ನು ಯಥಾಯೋಗ್ಯವಾಗಿ ಸಮ್ಮಾನಿಸಿದನು ಹಾಗೂ ಅವರಿಂದ ಸಮ್ಮಾನವನ್ನು ಸ್ವೀಕರಿಸಿದನು. ಶ್ರೀಸೀತಾದೇವಿಯೂ, ಲಕ್ಷ್ಮಣನೂ ಭಗವಂತನೊಂದಿಗೆ ಎಲ್ಲರೊಡನೆ ಯಥಾಯೋಗ್ಯವಾಗಿ ವ್ಯವಹರಿಸಿದರು. ॥ ೪೬-೪೭ ॥ ಆಗ ಮೃತದೇಹದಲ್ಲಿ ಪ್ರಾಣಸಂಚಾರವಾದಂತೆ ತಾಯಂದಿರು ಪುತ್ರರ ಆಗಮನದಿಂದ ಹರ್ಷಿತರಾದರು. ಅವರನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಅವರನ್ನು ತಮ್ಮ ಕಣ್ಣೀರಿನಿಂದ ಅಭಿಷೇಕ ಮಾಡಿದರು. ಆ ಸಮಯದಲ್ಲಿ ಅವರ ಶೋಕವೆಲ್ಲ ಅಳಿದುಹೋಯಿತು. ॥ ೪೮ ॥ ಇದಾದ ಬಳಿಕ ಗುರು ವಸಿಷ್ಠರು ಇತರ ಹಿರಿಯರೊಂದಿಗೆ ವಿಧಿವತ್ತಾಗಿ ಶ್ರೀರಾಮನ ಜಟೆಯನ್ನು ತೆಗೆಸಿ – ಬೃಹಸ್ಪತಿಯು ದೇವೇಂದ್ರನಿಗೆ ಪಟ್ಟಾಭಿಷೇಕ ಮಾಡಿದಂತೆಯೇ ನಾಲ್ಕು ಸಮುದ್ರಗಳಿಂದ ಪುಣ್ಯೋದಕವನ್ನು ತರಿಸಿ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಿದರು. ॥ ೪೯ ॥ ಹೀಗೆ ಮಂಗಳಮಯವಾದ, ಮಂತ್ರಪೂತವಾದ ಶುದ್ಧೋದಕದಿಂದ ತಲೆಗೆ ಸ್ನಾನಮಾಡಿದ ಶ್ರೀರಾಮನು ಸುಂದರವಾದ ವಸ್ತ್ರಾಭರಣಗಳಿಂದಲೂ, ಗಂಧಮಾಲ್ಯಾದಿಗಳಿಂದಲೂ, ಸಮಲಂಕೃತನಾದನು. ಎಲ್ಲ ಸಹೋದರರೂ ಮತ್ತು ಜಾನಕೀದೇವಿಯೂ ಸುಂದರ ವಸ್ತ್ರಾಲಂಕಾರಗಳನ್ನೂ ಧರಿಸಿದರು. ಅವರೊಂದಿಗೆ ಶ್ರೀರಾಮಚಂದ್ರನು ಅತ್ಯಂತ ಶೋಭಾಯಮಾನವಾಗಿ ವಿರಾಜಿಸಿದನು. ॥ ೫೦ ॥ ಭರತನು ಅವನ ಚರಣಗಳಲ್ಲಿ ವಂದಿಸಿ ಅವನ್ನು ಪ್ರಸನ್ನ ಗೊಳಿಸಿದನು ಮತ್ತು ಅವನ ಆಗ್ರಹದಿಂದ ಭಗವಾನ್ ಶ್ರೀರಾಮನು ರಾಜ್ಯಸಿಂಹಾಸನವನ್ನು ಸ್ವೀಕರಿಸಿದನು. ಬಳಿಕ ಅವನು ತಮ್ಮ-ತಮ್ಮ ಧರ್ಮಗಳಲ್ಲಿ ತತ್ಪರರಾದ ಹಾಗೂ ವರ್ಣಾಶ್ರಮದ ಆಚಾರಗಳನ್ನು ಪಾಲಿಸುವ ಪ್ರಜೆಯನ್ನು ತಂದೆಯಂತೆ ಪಾಲಿಸತೊಡಗಿದನು. ಅವನ ಪ್ರಜೆಯೂ ಅತನನ್ನು ತಂದೆಯಂತೆ ಭಾವಿಸುತ್ತಿದ್ದರು. ॥ ೫೧ ॥ ಪರೀಕ್ಷಿತನೇ! ಸಮಸ್ತ ಪ್ರಾಣಿಗಳಿಗೆ ಸುಖವನ್ನು ನೀಡುವ ಪರಮ ಧರ್ಮಜ್ಞನಾದ ಭಗವಾನ್ ಶ್ರೀರಾಮನು ರಾಜನಾದಾಗ ತ್ರೇತಾಯುಗವಿದ್ದರೂ ಕೃತಯುಗದಂತೆ ಭಾಸವಾಗುತ್ತಿತ್ತು. ॥ ೫೨ ॥ ಭರತರ್ಷಭ! ಆ ಸಮಯದಲ್ಲಿ ವನ, ಪರ್ವತಗಳು, ವರ್ಷ, ದ್ವೀಪ, ನದಿ, ಸಮುದ್ರ ಇವೆಲ್ಲವೂ ಪ್ರಜೆಗಳಿಗೆ ಕಾಮಧೇನುವಿನಂತೆ ಸಮಸ್ತ ಕಾಮನೆಗಳನ್ನೂ ಪೂರ್ಣಗೊಳಿಸುತ್ತಿದ್ದವು. ॥ ೫೩ ॥ ಇಂದ್ರಿಯಾತೀತ ಭಗವಾನ್ ಶ್ರೀರಾಮನು ರಾಜ್ಯವಾಳುತ್ತಿರುವಾಗ ಯಾರಿಗೂ ಮಾನಸಿಕ ಚಿಂತೆಯಾಗಲೀ, ಶಾರೀರಿಕ ರೋಗವಾಗಲೀ ಇರಲಿಲ್ಲ. ವೃದ್ಧಾಪ್ಯ, ದೌರ್ಬಲ್ಯ, ದುಃಖ, ಶೋಕ, ಭಯ ಹಾಗೂ ಬಳಲಿಕೆ ಹೆಸರಿಗೆ ಮಾತ್ರವೂ ಇರಲಿಲ್ಲ. ಸಾಯಲು ಬಯಸದವರ ಮೃತ್ಯುವೂ ಕೂಡ ಆಗುತ್ತಿರಲಿಲ್ಲ. ॥ ೫೪ ॥ ಭಗವಾನ್ ಶ್ರೀರಾಮನು ಏಕಪತ್ನೀವ್ರತವನ್ನು ಕೈಗೊಂಡಿದ್ದನು. ಅವನ ಚರಿತ್ರವು ಅತ್ಯಂತ ಪವಿತ್ರವಾಗಿದ್ದು ರಾಜರ್ಷಿಗಳಂತೆಯೇ ಇತ್ತು. ಗೃಹಸ್ಥೋಚಿತ ಸ್ವಧರ್ಮದ ಶಿಕ್ಷಣಕ್ಕಾಗಿ ಅವನು ಸ್ವತಃ ಆ ಧರ್ಮವನ್ನು ಆಚರಿಸುತ್ತಿದ್ದನು. ॥ ೫೫ ॥

ಪ್ರೇಮ್ಣಾನುವೃತ್ತ್ಯಾ ಶೀಲೇನ ಪ್ರಶ್ರಯಾವನತಾ ಸತೀ ।
ಧಿಯಾ ಹ್ರಿಯಾ ಚ ಭಾವಜ್ಞಾ ಭರ್ತುಃ ಸೀತಾಹರನ್ಮನಃ
॥ ೫೬ ॥

ಸತೀಶಿರೋಮಣಿಯಾದ ಸೀತಾದೇವಿಯು ತನ್ನ ಪತಿಯ ಹೃದ್ಗತವನ್ನು ಅರಿತಿದ್ದಳು. ಅವಳು ಪ್ರೇಮದಿಂದ, ಸೇವೆಯಿಂದ, ಸಚ್ಛೀಲದಿಂದ, ಅತ್ಯಂತ ವಿನಯದಿಂದ ಹಾಗೂ ತನ್ನ ಬುದ್ಧಿ ಲಜ್ಜೆ ಮುಂತಾದ ಗುಣಗಳಿಂದ ತನ್ನ ಪತಿ ಭಗವಾನ್ ಶ್ರೀರಾಮನ ಮನಸ್ಸನ್ನು ಗೆದ್ದಿದ್ದಳು. ॥ ೫೬ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ರಾಮಚರಿತೇ ದಶಮೋऽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಭಗವಾನ್ ಶ್ರೀರಾಮನ ಉಳಿದ ಲೀಲೆಗಳ ವರ್ಣನೆ

ಶ್ರೀಶುಕ ಉವಾಚ

ಭಗವಾನಾತ್ಮನಾತ್ಮಾऽऽನಂ ರಾಮ ಉತ್ತಮಕಲ್ಪಕೈಃ ।
ಸರ್ವದೇವಮಯಂ ದೇವಮೀಜ ಆಚಾರ್ಯವಾನ್ಮಖೈಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀರಾಮನು ಗುರುವಸಿಷ್ಠರನ್ನು ಆಚಾರ್ಯನನ್ನಾಗಿ ಇಟ್ಟುಕೊಂಡು ಶ್ರೇಷ್ಠತಮವಾದ ಸಾಮಗ್ರಿಗಳಿಂದ ಕೂಡಿದ ಯಜ್ಞದ ಮೂಲಕ ಸರ್ವದೇವ ಸ್ವರೂಪನಾದ, ಸ್ವಯಂ ಪ್ರಕಾಶನಾದ ಪರಮಾತ್ಮನನ್ನು ಆರಾಧಿಸಿದನು. ॥ ೧ ॥

ಹೋತ್ರೇऽದದಾದ್ದಿಶಂ ಪ್ರಾಚೀಂ ಬ್ರಹ್ಮಣೇ ದಕ್ಷಿಣಾಂ ಪ್ರಭುಃ ।
ಅಧ್ವರ್ಯವೇ ಪ್ರತೀಚೀಂ ಚ ಉದೀಚೀಂ ಸಾಮಗಾಯ ಸಃ
॥ ೨ ॥

ಯಜ್ಞಾಂತ್ಯದಲ್ಲಿ ಶ್ರೀರಾಮನು ಹೋತೃವಿಗೆ ಪೂರ್ವದಿಕ್ಕನ್ನೂ, ಬ್ರಹ್ಮನಿಗೆ ದಕ್ಷಿಣದಿಕ್ಕನ್ನೂ, ಅಧ್ವರ್ಯುವಿಗೆ ಪಶ್ಚಿಮದಿಕ್ಕನ್ನೂ, ಉದ್ಗಾತೃವಿಗೆ ಉತ್ತರದಿಕ್ಕನ್ನೂ (ಈ ದಿಕ್ಕುಗಳಿದ್ದ ರಾಜ್ಯಗಳನ್ನು) ದಕ್ಷಿಣೆಯ ರೂಪದಲ್ಲಿ ಕೊಟ್ಟನು. ॥ ೨ ॥ ಇವುಗಳ ಮಧ್ಯ ಭಾಗದಲ್ಲಿದ್ದ ಭೂಭಾಗವೆಲ್ಲವನ್ನು ಆಚಾರ್ಯರಾಗಿದ್ದ ವಸಿಷ್ಠರಿಗೆ ದಕ್ಷಿಣೆಯಾಗಿ ನೀಡಿದನು. ಅಖಿಂಡ ಭೂಮಂಡಲಕ್ಕೂ ನಿಃಸ್ಪೃಹರಾದ ಬ್ರಾಹ್ಮಣರೇ ಏಕಮಾತ್ರ ಅಧಿಕಾರಿಗಳಾಗಿದ್ದಾರೆ ಎಂಬುದು ಶ್ರೀರಾಮನ ನಿಶ್ಚಯವಾಗಿತ್ತು. ॥ ೩ ॥ ಹೀಗೆ ಅಖಿಂಡ ಭೂಮಂಡಲವನ್ನು ದಾನಮಾಡಿದ ನಂತರ ಅವನ ಬಳಿಯಲ್ಲಿ ಉಟ್ಟವಸ್ತ್ರ, ತೊಟ್ಟ ಅಲಂಕಾರಾದಿಗಳು ಮಾತ್ರ ಉಳಿದಿದ್ದುವು. ಅಂತೆಯೇ ಪಟ್ಟಮಹಿಷಿಯಾದ ಸೀತಾದೇವಿಯಲ್ಲಿಯೂ ಮಾಂಗಲ್ಯ ಸೂಚಕ ವಸ್ತ್ರಾಭರಣಗಳು ಮಾತ್ರವೇ ಉಳಿದಿದ್ದುವು. ॥ ೪ ॥

ಆಚಾರ್ಯಾಯ ದದೌ ಶೇಷಾಂ ಯಾವತೀ ಭೂಸ್ತದಂತರಾ ।
ಮನ್ಯಮಾನ ಇದಂ ಕೃತ್ಸ್ನಂ ಬ್ರಾಹ್ಮಣೋऽರ್ಹತಿ ನಿಃಸ್ಪೃಹಃ
॥ ೩ ॥

ಇತ್ಯಯಂ ತದಲಂಕಾರವಾಸೋಭ್ಯಾಮವಶೇಷಿತಃ ।
ತಥಾ ರಾಜ್ಞ್ಯಪಿ ವೈದೇಹೀ ಸೌಮಂಗಲ್ಯಾವಶೇಷಿತಾ
॥ ೪ ॥

ಭಗವಾನ್ ಶ್ರೀರಾಮನಾದರೋ ಬ್ರಾಹ್ಮಣರನ್ನೇ ತನ್ನ ಇಷ್ಟದೇವರಾಗಿ ಭಾವಿಸಿದ್ದಾನೆ, ಅವನ ಹೃದಯದಲ್ಲಿ ಬ್ರಾಹ್ಮಣರ ಕುರಿತು ಅನಂತ ಪ್ರೀತಿಯಿದೆ ಎಂಬುದನ್ನು ಅರಿತ ಆಚಾರ್ಯಾದಿ ಬ್ರಾಹ್ಮಣರ ಹೃದಯವು ಪ್ರೇಮದಿಂದ ದ್ರವಿತವಾಯಿತು. ಅವರು ಸಂತುಷ್ಟರಾಗಿ ಇಡೀ ಪೃಥಿವಿಯನ್ನು ಭಗವಂತನಿಗೆ ಮರಳಿ ಒಪ್ಪಿಸಿ ವಿಜ್ಞಾಪಿಸಿಕೊಂಡರು. ॥ ೫ ॥ ಪ್ರಭುವೇ ! ನೀನು ಸರ್ವಲೋಕಗಳ ಏಕಮಾತ್ರ ಸ್ವಾಮಿಯಾಗಿರುವೆ. ನೀನಾದರೋ ನಮ್ಮ ಹೃದಯದೊಳಗಿದ್ದು ನಿನ್ನ ತೇಜಸ್ಸಿನಿಂದ ಅಜ್ಞಾನಾಂಧಕಾರವನ್ನು ನಾಶಪಡಿಸುತ್ತಿರುವೆ. ಹೀಗಿರುವಾಗ ನೀನು ನಮಗೆ ಕೊಡದಿರುವ ವಸ್ತುವು ಯಾವುದು ತಾನೇ ಇದೆ ? (ಅತ್ಯವಸ್ತುವನ್ನೇ ನಮಗೆ ದರ್ಶನಮಾಡಿಸಿರುವಾಗ ಬೇರಾವುದನ್ನು ನಮಗೆ ಕೊಡಬೇಕಾಗಿದೆ ?) ॥ ೬ ॥

ತೇ ತು ಬ್ರಹ್ಮಣ್ಯದೇವಸ್ಯ ವಾತ್ಸಲ್ಯಂ ವೀಕ್ಷ್ಯ ಸಂಸ್ತುತಮ್ ।
ಪ್ರೀತಾಃ ಕ್ಲಿನ್ನಧಿಯಸ್ತಸ್ಮೈ ಪ್ರತ್ಯರ್ಪ್ಯೇದಂ ಬಭಾಷಿರೇ
॥ ೫ ॥

ಅಪ್ರತ್ತಂ ನಸ್ತ್ವಯಾ ಕಿಂ ನು ಭಗವನ್ಬುವನೇಶ್ವರ ।
ಯನ್ನೋऽಂತರ್ಹೃದಯಂ ವಿಶ್ಯ ತಮೋ ಹಂಸಿ ಸ್ವರೋಚಿಷಾ
॥ ೬ ॥

ನಮೋ ಬ್ರಹ್ಮಣ್ಯದೇವಾಯ ರಾಮಾಯಾಕುಂಠ ಮೇಧಸೇ ।
ಉತ್ತಮಶ್ಲೋಕಧುರ್ಯಾಯ ನ್ಯಸ್ತದಂಡಾರ್ಪಿತಾಂಘ್ರಯೇ
॥ ೭ ॥

ಕದಾಚಿಲ್ಲೋಕಜಿಜ್ಞಾಸುರ್ಗೂಢೋ ರಾತ್ರ್ಯಾಮಲಕ್ಷಿತಃ ।
ಚರನ್ವಾಚೋಽಶೃಣೋದ್ರಾಮೋ ಭಾರ್ಯಾಮುದ್ದಿಶ್ಯ ಕಸ್ಯಚಿತ್
॥ ೮ ॥

ನಾಹಂ ಬಿಭರ್ಮಿ ತ್ವಾಂ ದುಷ್ಟಾಮಸತೀಂ ಪರವೇಶ್ಮಗಾಮ್ ।
ಸ್ತ್ರೀಲೋಭೀ ಬಿಭೃಯಾತ್ಸೀತಾಂ ರಾಮೋ ನಾಹಂ ಭಜೇ ಪುನಃ
॥ ೯ ॥

ಇತಿ ಲೋಕಾದ್ಬಹುಮುಖಾದ್ದುರಾರಾಧ್ಯಾದಸಂವಿದಃ ।
ಪತ್ಯಾ ಭೀತೇನ ಸಾ ತ್ಯಕ್ತಾ ಪ್ರಾಪ್ತಾ ಪ್ರಾಚೇತಸಾಶ್ರಮಮ್
॥ ೧೦ ॥

ಅಂತರ್ವತ್ನ್ಯಾಗತೇ ಕಾಲೇ ಯಮೌ ಸಾ ಸುಷುವೇ ಸುತೌ ।
ಕುಶೋ ಲವ ಇತಿ ಖ್ಯಾತೌ ತಯೋಶ್ಚಕ್ರೇ ಕ್ರಿಯಾ ಮುನಿಃ
॥ ೧೧ ॥

ಅಂಗದಶ್ಚಿತ್ರಕೇತುಶ್ಚ ಲಕ್ಷ್ಮಣಸ್ಯಾತ್ಮಜೌ ಸ್ಮೃತೌ ।
ತಕ್ಷಃ ಪುಷ್ಕಲ ಇತ್ಯಾಸ್ತಾಂ ಭರತಸ್ಯ ಮಹೀಪತೇ
॥ ೧೨ ॥

ಸುಬಾಹುಃ ಶ್ರುತಸೇನಶ್ಚ ಶತ್ರುಘ್ನಸ್ಯ ಬಭೂವತುಃ ।
ಗಂಧರ್ವಾನ್ಕೋಟಿಶೋ ಜಘ್ನೇ ಭರತೋ ವಿಜಯೇ ದಿಶಾಮ್
॥ ೧೩ ॥

ತದೀಯಂ ಧನಮಾನೀಯ ಸರ್ವಂ ರಾಜ್ಞೇ ನ್ಯವೇದಯತ್ ।
ಶತ್ರುಘ್ನಶ್ಚ ಮಧೋಃ ಪುತ್ರಂ ಲವಣಂ ನಾಮ ರಾಕ್ಷಸಮ್ ।
ಹತ್ವಾ ಮಧುವನೇ ಚಕ್ರೇ ಮಥುರಾಂ ನಾಮ ವೈ ಪುರೀಮ್
॥ ೧೪ ॥

ಮುನೌ ನಿಕ್ಷಿಪ್ಯ ತನಯೌ ಸೀತಾ ಭರ್ತ್ರಾ ವಿವಾಸಿತಾ ।
ಧ್ಯಾಯಂತೀ ರಾಮಚರಣೌ ವಿವರಂ ಪ್ರವಿವೇಶ ಹ
॥ ೧೫ ॥

ತಚ್ಛ್ರುತ್ವಾ ಭಗವಾನ್ರಾಮೋ ರುಂಧನ್ನಪಿ ಧಿಯಾ ಶುಚಃ ।
ಸ್ಮರಂಸ್ತಸ್ಯಾ ಗುಣಾಂಸ್ತಾನ್ಸ್ತಾನ್ ನಾಶಕ್ನೋದ್ರೋದ್ಧುಮೀಶ್ವರಃ
॥ ೧೬ ॥

ಪ್ರಭೋ! ನಿನ್ನ ಜ್ಞಾನವು ಅನಂತವಾಗಿದೆ. ಪುಣ್ಯಶ್ಲೋಕರಲ್ಲಿ ನೀನು ಅಗ್ರಗಣ್ಯನಾಗಿರುವೆ. ಯಾರನ್ನು ಯಾವ ಕಾರಣದಿಂದಲೂ ಪೀಡಿಸದಿರುವ ಮಹಾತ್ಮರಿಗೆ ನೀನು ತನ್ನ ಚರಣಕಮಲಗಳನ್ನು ಕರುಣಿಸಿರುವೆ. ಹೀಗಿದ್ದರೂ ನೀನು ಬ್ರಾಹ್ಮಣರನ್ನು ನಿನ್ನ ಇಷ್ಟ ದೇವರೆಂದು ಭಾವಿಸುತ್ತಿರುವೆ. ಭಗವಂತಾ! ನಿನ್ನ ಈ ರಾಮ ರೂಪವನ್ನು ನಾವು ನಮಸ್ಕರಿಸುತ್ತೇವೆ. ॥ ೭ ॥

ಪರೀಕ್ಷಿತನೇ! ಒಮ್ಮೆ ಶ್ರೀರಾಮನು ತನ್ನ ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿಯಲು ವೇಷವನ್ನು ಮರೆಸಿಕೊಂಡು, ಯಾರಿಗೂ ತಿಳಿಯದಂತೆ ಪಟ್ಟಣದಲ್ಲಿ ಅಡ್ಡಾಡುತ್ತಿದ್ದನು. ಆಗ ಓರ್ವವ್ಯಕ್ತಿಯು ತನ್ನ ಭಾರ್ಯೆಯನ್ನು ಉದ್ದೇಶಿಸಿ ಆಡುತ್ತಿದ್ದ ಮಾತುಗಳನ್ನು ರಾಮನು ಕೇಳಿಸಿಕೊಂಡನು. ॥ ೮ ॥ 'ಎಲೆಗೇ! ನೀನು ದುಷ್ಟಳೂ, ಕುಲಟೆಯೂ ಆಗಿರುವೆ. ಅನ್ಯರ ಮನೆಯಲ್ಲಿದ್ದು ಬಂದಿರುವೆ. ಸ್ತ್ರೀಲೋಭಿಯಾದ ರಾಮನು ಲಂಕೆಯಲ್ಲಿದ್ದು ಬಂದಿರುವ ಸೀತೆಯನ್ನು ಇಟ್ಟುಕೊಂಡಿರ ಬಹುದು. ಆದರೆ ನಾನು ನಿನ್ನನ್ನು ಪುನಃ ಮನೆ ಸೇರಿಸಲಾರೆ. ॥ ೯ ॥ ಎಲ್ಲ ಜನರನ್ನು ಸಂತೋಷ ಪಡಿಸುವುದು ನಿಜವಾಗಿಯೂ ಬಹು ಕಷ್ಟತರವಾಗಿದೆ. ಏಕೆಂದರೆ, ಮೂರ್ಖರಿಗೆ ಕೊರತೆಯಿಲ್ಲ ತಾನೇ! ಭಗವಾನ್ ಶ್ರೀರಾಮನು ಬಹುಜನರ ಬಾಯಿಂದ ಕೇಳಿದ ಇಂತಹ ಮಾತಿನಿಂದ ಲೋಕಾಪವಾದಕ್ಕೆ ಹೆದರಿ ಸತೀ-ಸಾಧ್ವಿಯಾದ ಸೀತಾ ದೇವಿಯನ್ನು ತ್ಯಜಿಸಿಯೇ ಬಿಟ್ಟನು. ಸೀತೆಯು ವಾಲ್ಮೀಕಿಗಳ ಆಶ್ರಮದಲ್ಲಿ ಇರತೊಡಗಿದಳು. ॥ ೧೦ ॥ ಸೀತಾದೇವಿಯು ಆಗ ಗರ್ಭಿಣಿಯಾಗಿದ್ದಳು. ದಿನಗಳು ತುಂಬುತ್ತಲೇ ಆಕೆಯು ಅವಳಿ-ಜವಳಿ ಮಕ್ಕಳಿಗೆ ಜನ್ಮವನ್ನಿತ್ತಳು. ಕುಶ-ಲವರೆಂಬ ಶುಭ ನಾಮಗಳಿಂದ ಅವರು ಪ್ರಸಿದ್ಧರಾದರು. ವಾಲ್ಮೀಕಿಗಳು ಅವರ ಜಾತಕರ್ಮಾದಿ ಸಂಸ್ಕಾರಗಳನ್ನು ನೆರವೇರಿಸಿದರು. ॥ ೧೧ ॥ ಲಕ್ಷ್ಮಣನಿಗೆ ಅಂಗದ ಮತ್ತು ಚಿತ್ರಕೇತು ಎಂಬ ಈರ್ವರು ಪುತ್ರರಾದರು. ಪರೀಕ್ಷಿತನೇ! ಹೀಗೆಯೇ ಭರತನಿಗೂ ತಕ್ಷ ಹಾಗೂ ಪುಷ್ಕಲ ಎಂಬ ಇಬ್ಬರು ಪುತ್ರರಿದ್ದರು. ॥ ೧೨ ॥ ಶತ್ರುಘ್ನನಿಗೆ ಸುಬಾಹು ಮತ್ತು ಶ್ರುತಸೇನರೆಂಬ ಇಬ್ಬರು ಪುತ್ರರಾದರು. ಭರತನು ದಿಗ್ವಿಜಯವನ್ನು ಮಾಡಿ ಕೋಟಿ-ಕೋಟಿ ಗಂಧರ್ವರನ್ನು ಸಂಹರಿಸಿದನು. ॥ ೧೩ ॥ ಅವನು ಅವರ ಸರ್ವಸಂಪತ್ತನ್ನು ತಂದು ಅಣ್ಣನಾದ ಭಗವಾನ್ ಶ್ರೀರಾಮನ ಸೇವೆಯಲ್ಲಿ ಅರ್ಪಿಸಿದನು. ಶತ್ರುಘ್ನನು ಮಧುವನದಲ್ಲಿದ್ದ ಮಧು ಎಂಬ ದಾನವನ ಪುತ್ರನಾದ ಲವಣಾಸುರನನ್ನು ಕೊಂದು ಅಲ್ಲಿ ಮಥುರಾಪುರಿಯನ್ನು ನಿರ್ಮಿಸಿದನು. ॥ ೧೪ ॥ ಭಗವಾನ್ ಶ್ರೀರಾಮನಿಂದ ಪರಿತ್ಯಕ್ತಳಾದ ಸೀತಾದೇವಿಯು ಲವ-ಕುಶರನ್ನು ವಾಲ್ಮೀಕಿಯವರಿಗೆ ಒಪ್ಪಿಸಿ ಶ್ರೀರಾಮಚಂದ್ರನ ಚರಣ ಕಮಲಗಳನ್ನು ಧ್ಯಾನಿಸುತ್ತಾ ಪೃಥಿವಿ ದೇವಿಯ ಲೋಕವನ್ನು ಸೇರಿದಳು. ॥ ೧೫ ॥ ಈ ವಾರ್ತೆಯನ್ನು ಕೇಳಿದ ಸಮರ್ಥನಾದ ಭಗವಾನ್ ಶ್ರೀರಾಮನು ತನ್ನ ಶೋಕಾವೇಶವನ್ನು ಬುದ್ಧಿಯ ಮೂಲಕವಾಗಿ ತಡೆಯಲು ಪ್ರಯತ್ನಿಸಿದರೂ ಸಾಧ್ವಿಯಾದ ಸೀತಾ ದೇವಿಯ ಅನುಪಮವಾದ, ಪವಿತ್ರವಾದ ಗುಣಗಳನ್ನು ಮತ್ತೆ-ಮತ್ತೆ ಸ್ಮರಿಸುತ್ತಲೇ ಇದ್ದನು. ॥ ೧೬ ॥

ಸ್ತ್ರೀಪುಂಪ್ರಸಂಗ ಏತಾದೃಕ್ಸರ್ವತ್ರ ತ್ರಾಸಮಾವಹಃ ।
ಅಪೀಶ್ವರಾಣಾಂ ಕಿಮುತ ಗ್ರಾಮ್ಯಸ್ಯ ಗೃಹಚೇತಸಃ
॥ ೧೭ ॥

ಪರೀಕ್ಷಿತನೇ ! ಪತಿ-ಪತ್ನಿಯ ಈ ಸಂಬಂಧವು ಎಲ್ಲೆಡೆ ಹೀಗೆಯೇ ದುಃಖಕ್ಕೆ ಕಾರಣವಾಗಿದೆ. ಈ ಮಾತು ಮಹಾಸಮರ್ಥ ಜನರ ವಿಷಯದಲ್ಲಿಯೂ ಹೀಗೆಯೇ ಇರುವಾಗ ಗೃಹಾಸಕ್ತ ವಿಷಯಿಗಳ ಕುರಿತಾದರೋ ಹೇಳುವುದು ಏನಿದೆ ? ॥ ೧೭ ॥

ತತ ಊರ್ಧ್ವಂ ಬ್ರಹ್ಮಚರ್ಯಂ ಧಾರಯನ್ನಜುಹೋತ್ಪ್ರಭುಃ ।
ತ್ರಯೋದಶಾಬ್ದಸಾಹಸ್ರಮಗ್ನಿಹೋತ್ರಮಖಂಡಿತಮ್
॥ ೧೮ ॥

ಇದಾದ ಬಳಿಕ ಭಗವಾನ್ ಶ್ರೀರಾಮನು ಬ್ರಹ್ಮಚರ್ಯ ವ್ರತವನ್ನು ಕೈಗೊಂಡು ಹದಿಮೂರುಸಾವಿರ ವರ್ಷಗಳ ಕಾಲ ಅಖಂಡವಾಗಿ ಅಗ್ನಿಹೋತ್ರವನ್ನು ಮಾಡಿದನು. ॥ ೧೮ ॥ ಅನಂತರ ಶ್ರೀರಾಮನು ದಂಡಕಾರಣ್ಯದಲ್ಲಿ ಮುಳ್ಳುಗಳಿಂದ ಚುಚ್ಚಲ್ಪಟ್ಟಿದ್ದ, ಚಿಗುರಿನಂತೆ ಸುಕೋಮಲವಾದ ತನ್ನ ಪಾದಪಂಕಜಗಳನ್ನು ತನ್ನನ್ನು ಸ್ಮರಿಸುವ ಭಕ್ತರ ಹೃದಯದಲ್ಲಿ ನೆಲೆಗೊಳಿಸಿ ಆತ್ಮಜ್ಯೋತಿಯಲ್ಲಿ ಸೇರಿಹೋದನು. ॥ ೧೯ ॥

ಸ್ಮರತಾಂ ಹೃದಿ ವಿನ್ಯಸ್ಯ ವಿದ್ಧಂ ದಂಡಕಕಂಟಕೈಃ ।
ಸ್ವಪಾದಪಲ್ಲವಂ ರಾಮ ಆತ್ಮಜ್ಯೋತಿರಗಾತ್ತತಃ
॥ ೧೯ ॥

ನೇದಂ ಯಶೋ ರಘುಪತೇಃ ಸುರಯಾಚ್ಞಯಾऽऽತ್ತ-
ಲೀಲಾತನೋರಧಿಕಸಾಮ್ಯವಿಮುಕ್ತಧಾಮ್ನಃ ।
ರಕ್ಷೋವಧೋಜಲಧಿಬಂಧನಮಸ್ತ್ರಪೂಗೈಃ
ಕಿಂ ತಸ್ಯ ಶತ್ರುಹನನೇ ಕಪಯಃ ಸಹಾಯಾಃ ॥ ೨೦ ॥

ಪರೀಕ್ಷಿತನೇ ! ಭಗವಂತನಂತಹ ಪ್ರತಾಪಶಾಲಿಯು ಬೇರೆ ಯಾರೂ ಇಲ್ಲದಿರುವಾಗ ಅವನಿಗಿಂತ ಮಿಗಿಲಾದವರು ಹೇಗೆ ಇರಬಲ್ಲರು ? ಅವನು ದೇವತೆಗಳ ಪ್ರಾರ್ಥನೆಯಿಂದಲೇ ಈ ಲೀಲಾವಿಗ್ರಹವನ್ನು ಧರಿಸಿದ್ದನು. ಇಂತಹ ಸ್ಥಿತಿಯಲ್ಲಿ ರಘುವಂಶ ಶಿರೋಮಣಿ ಭಗವಾನ್ ಶ್ರೀರಾಮನಿಗೆ – ಅಸ್ತ್ರ-ಶಸ್ತ್ರಗಳಿಂದ ರಾಕ್ಷಸರನ್ನು ಸಂಹರಿಸಿದುದು, ಸಮುದ್ರಕ್ಕೆ ಸೇತುವೆ ಕಟ್ಟಿದುದು ಇದೇನೋ ದೊಡ್ಡ ಗೌರವದ ಮಾತಲ್ಲ, ಅವನಿಗೆ ಶತ್ರುಗಳನ್ನು ಕೊಲ್ಲಲಿಕ್ಕಾಗಿ ಕಪಿಗಳ ಸಹಾಯದ ಅವಶ್ಯಕತೆಯಾದರೂ ಏನಿತ್ತು ? ಇದೆಲ್ಲವೂ ಅವನ ಲೀಲೆ ಮಾತ್ರವಾಗಿದೆ. ॥ ೨೦ ॥

ಯಸ್ಯಾಮಲಂ ನೃಪಸದಸ್ಸು ಯಶೋऽಧುನಾಪಿ
ಗಾಯಂತ್ಯಘಘ್ನಮೃಷಯೋ ದಿಗಿಭೇಂದ್ರಪಟ್ಟಮ್ ।
ತಂ ನಾಕಪಾಲವಸುಪಾಲಕಿರೀಟಜುಷ್ಟ-
ಪಾದಾಂಬುಜಂ ರಘುಪತಿಂ ಶರಣಂ ಪ್ರಪದ್ಯೇ ॥ ೨೧ ॥

ಭಗವಾನ್ ಶ್ರೀರಾಮಚಂದ್ರನ ನಿರ್ಮಲವಾದ ಯಶಸ್ಸು ಸಮಸ್ತ ಪಾಪಗಳನ್ನು ಪರಿಹರಿಸುವಂತಹುದು. ಅದು ದಿಗ್ಗಜಗಳಿಗೆ ಪಟ್ಟವಸ್ತ್ರದಂತಿರುವ ಶ್ರೀರಾಮಚಂದ್ರನ ಯಶಸ್ಸು ದಿಗಂತದ ವರೆಗೂ ಹರಡಿದೆ. ಇಂದೂ ಕೂಡ ಮಹಾ-ಮಹಾ ಋಷಿ-ಮಹರ್ಷಿಗಳು ರಾಜರುಗಳ ಸಭೆಗಳಲ್ಲಿ ಗಾನಮಾಡುತ್ತಿದ್ದಾರೆ. ಸ್ವರ್ಗದ ದೇವತೆಗಳು ಮತ್ತು ಪೃಥಿವಿಯ ನರಪತಿಗಳು ತಮ್ಮ ಸುಂದರ ಕಿರೀಟಗಳಿಂದ ಅವನ ಚರಣಕಮಲಗಳ ಸೇವೆಯನ್ನು ಮಾಡುತ್ತಿದ್ದಾರೆ. ನಾನೂ ಕೂಡ ಅಂತಹ ರಘುವಂಶ ಶಿರೋಮಣಿ ಭಗವಾನ್ ಶ್ರೀರಾಮಚಂದ್ರನನ್ನು ಶರಣು ಹೊಂದುತ್ತೇನೆ. ॥ ೨೧ ॥ ಯಾರು ಭಗವಾನ್ ಶ್ರೀರಾಮನ ದರ್ಶನ ಪಡೆದಿದ್ದರೋ, ಸ್ಪರ್ಶಿಸಿದ್ದರೋ, ಅವನ ಸಹವಾಸದಲ್ಲಿದ್ದರೋ, ಅವನನ್ನು ಅನುಸರಿಸಿದ್ದರೋ ಅವರೆಲ್ಲರೂ ಹಾಗೂ ಕೋಸಲ ದೇಶದ ನಿವಾಸಿಗಳೂ ಕೂಡ ಮಹಾಯೋಗಿಗಳು ಯೋಗಸಾಧನೆಯಿಂದ ಪಡೆದುಕೊಳ್ಳುವ ದಿವ್ಯ ಲೋಕವನ್ನು ಸೇರಿರುವರು. ॥ ೨೨ ॥ ಯಾವ ಪುರುಷರು ತಮ್ಮ ಕಿವಿಯಾರೆ ಭಗವಾನ್ ಶ್ರೀರಾಮನ ಚರಿತ್ರೆಯನ್ನು ಕೇಳಿರುವರೋ, ಅವರಿಗೆ ಸರಳತೆ, ಕೋಮಲತೆ ಮುಂತಾದ ಸದ್ಗುಣಗಳ ಪ್ರಾಪ್ತಿಯಾಗುತ್ತದೆ. ಪರೀಕ್ಷಿತನೇ ! ಕೇವಲ ಇಷ್ಟೇ ಅಲ್ಲ, ಅವನು ಸಮಸ್ತ ಕರ್ಮ ಬಂಧನದಿಂದ ಮುಕ್ತನಾಗುವನು. ॥ ೨೩ ॥

ಸ ಯ್ಯೈಃಸ್ಪೃಷ್ಟೋऽಭಿದೃಷ್ಟೋ ವಾ ಸಂವಿಷ್ಟೋऽನುಗತೋऽಪಿ ವಾ ।
ಕೋಸಲಾಸ್ತೇ ಯಯುಃ ಸ್ಥಾನಂ ಯತ್ರ ಗಚ್ಛಂತಿ ಯೋಗಿನಃ
॥ ೨೨ ॥

ಪುರುಷೋ ರಾಮಚರಿತಂ ಶ್ರವಣೈರುಪಧಾರಯನ್ ।
ಆನೃಶಂಸ್ಯಪರೋ ರಾಜನ್ಕರ್ಮಬಂಧೈರ್ವಿಮುಚ್ಯತೇ
॥ ೨೩ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ ! ಭಗವಾನ್ ಶ್ರೀರಾಮನು ತನ್ನ ಸಹೋದರರೊಡನೆ ಹೇಗೆ ವರ್ತಿಸುತ್ತಿದ್ದನು ? ಭರತನೇ ಮೊದಲಾದ ಅವನ ಅನುಜರೂ, ಪ್ರಜೆಗಳೂ, ಅಯೋಧ್ಯಾ ನಿವಾಸಿಗಳೂ ಶ್ರೀರಾಮನ ಕುರಿತು ಹೇಗೆ ವ್ಯವಹರಿಸುತ್ತಿದ್ದರು ? ॥ ೨೪ ॥

ರಾಜೋವಾಚ

ಕಥಂ ಸ ಭಗವಾನ್ರಾಮೋ ಭ್ರಾತೄನ್ವಾ ಸ್ವಯಮಾತ್ಮನಃ ।
ತಸ್ಮಿನ್ವಾ ತೇऽನ್ವವರ್ತಂತ ಪ್ರಜಾಃ ಪೌರಾಶ್ಚ ಈಶ್ವರೇ
॥ ೨೪ ॥

ಶ್ರೀಶುಕ ಉವಾಚ

ಅಥಾದಿಶದ್ದಿಗ್ವಿಜಯೇ ಭ್ರಾತೄಂಸ್ತ್ರಿಭುವನೇಶ್ವರಃ ।
ಆತ್ಮಾನಂ ದರ್ಶಯನ್ ಸ್ವಾನಾಂ ಪುರೀಮೈಕ್ಷತ ಸಾನುಗಃ
॥ ೨೫ ॥

ಆಸಿಕ್ತಮಾರ್ಗಾಂ ಗಂಧೋದೈಃ ಕರಿಣಾಂ ಮದಶೀಕರೈಃ ।
ಸ್ವಾಮಿನಂ ಪ್ರಾಪ್ತಮಾಲೋಕ್ಯ ಮತ್ತಾಂ ವಾ ಸುತರಾಮಿವ
॥ ೨೬ ॥

ಪ್ರಾಸಾದಗೋಪುರಸಭಾಚೈತ್ಯದೇವಗೃಹಾದಿಷು ।
ವಿನ್ಯಸ್ತಹೇಮಕಲಶೈಃ ಪತಾಕಾಭಿಶ್ಚ ಮಂಡಿತಾಮ್
॥ ೨೭ ॥

ಪೂಗೈಃ ಸವೃಂತೈರಂಭಾಭಿಃ ಪಟ್ಟಿಕಾಭಿಃ ಸುವಾಸಸಾಮ್ ।
ಆದರ್ಶೈರಂಶುಕೈಃ ಸ್ರಗ್ಭಿಃ ಕೃತಕೌತುಕತೋರಣಾಮ್
॥ ೨೮ ॥

ತಮುಪೇಯುಸ್ತತ್ರ ತತ್ರ
ಪೌರಾ ಅರ್ಹಣಪಾಣಯಃ ।
ಆಶಿಷೋ ಯುಯುಜುರ್ದೇವ
ಪಾಹೀಮಾಂ ಪ್ರಾಕ್ತ್ವಯೋದ್ಧೃತಾಮ್ ॥ ೨೯ ॥

ತತಃ ಪ್ರಜಾ ವೀಕ್ಷ್ಯ ಪತಿಂ ಚಿರಾಗತಂ
ದಿದೃಕ್ಷಯೋತ್ಸೃಷ್ಟಗೃಹಾಃ ಸ್ತ್ರಿಯೋ ನರಾಃ ।
ಆರುಹ್ಯ ಹರ್ಮ್ಯಾಣ್ಯರವಿಂದಲೋಚನ-
ಮತೃಪ್ತನೇತ್ರಾಃ ಕುಸುಮೈರವಾಕಿರನ್ ॥ ೩೦ ॥

ಅಥ ಪ್ರವಿಷ್ಟಃ ಸ್ವಗೃಹಂ ಜುಷ್ಟಂ ಸ್ವೈಃ ಪೂರ್ವರಾಜಭಿಃ ।
ಅನಂತಾಖಿಲಕೋಶಾಢ್ಯಮನರ್ಘ್ಯೋರುಪರಿಚ್ಛದಮ್
॥ ೩೧ ॥

ವಿದ್ರುಮೋದುಂಬರದ್ವಾರೈರ್ವೈದೂರ್ಯಸ್ತಂಭಪಂಕ್ತಿಭಿಃ ।
ಸ್ಫಟಿಕೈರ್ಮಾರಕತೈಃ ಸ್ವಚ್ಛೈರ್ಭಾತಸ್ಫಟಿಕಭಿತ್ತಿಭಿಃ
॥ ೩೨ ॥

ಚಿತ್ರಸ್ರಗ್ಭಿಃ ಪಟ್ಟಿಕಾಭಿರ್ವಾಸೋಮಣಿಗಣಾಂಶುಕೈಃ ।
ಮುಕ್ತಾಫಲೈಶ್ಚಿದುಲ್ಲಾಸ್ಯೈಃ ಕಾಂತಕಾಮೋಪಪತ್ತಿಭಿಃ
॥ ೩೩ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ತ್ರಿಭುವನೇಶ್ವರ ಮಹಾರಾಜನಾದ ಶ್ರೀರಾಮನು ರಾಜ್ಯಸಿಂಹಾಸನವನ್ನು ಸ್ವೀಕರಿಸಿದ ಬಳಿಕ ತನ್ನ ಅನುಜರಿಗೆ ದಿಗ್ವಿಜಯಮಾಡಿಕೊಂಡು ಬರಲು ಆಜ್ಞಾಪಿಸಿದನು. ತಾನು ತನ್ನ ಪರಿಜನ-ಪುರಜನರಿಗೆ ದರ್ಶನವನ್ನೀಯುತ್ತಾ ತನ್ನ ಅನುಚರರೊಂದಿಗೆ ಅಯೋಧ್ಯಾಪಟ್ಟಣದ ಸೊಬಗನ್ನು ನೋಡಲು ಹೊರಟನು. ॥ ೨೫ ॥ ಆ ಸಮಯದಲ್ಲಿ ಅಯೋಧ್ಯಾನಗರದ ಮಾರ್ಗಗಳು ಸುಗಂಧಜಲದಿಂದ ಮತ್ತು ಆನೆಗಳ ಮದೋದಕದಿಂದ ನೆನೆದಿದ್ದವು. ಈ ನಗರಿಯು ಸ್ವಾಮಿಯಾದ ಭಗವಾನ್ ಶ್ರೀರಾಮನನ್ನು ನೋಡಿ ಅತ್ಯಂತ ಆನಂದ ಭರಿತವಾಗಿದೆಯೋ ಎಂಬಂತೆ ಕಾಣುತ್ತಿತ್ತು. ॥ ೨೬ ॥ ಶ್ರೀರಾಮನು ನಗರದರ್ಶನ ಮಾಡಿಕೊಂಡು ಬರುತ್ತಿರುವಾಗ ಸುವರ್ಣಕಲಶಗಳಿಂದ ಯುಕ್ತವಾಗಿದ್ದ ಪ್ರಾಸಾದಗಳನ್ನೂ, ಗೋಪುರಗಳನ್ನೂ, ಸಭಾಭವನಗಳನ್ನೂ, ವಿಹಾರಸ್ಥಳಗಳನ್ನೂ, ದೇವಾಲಯಗಳನ್ನೂ ನೋಡಿದನು. ಅಲ್ಲಲ್ಲಿ ಪತಾಕೆಗಳು ಹಾರಾಡುತ್ತಿದ್ದವು. ॥ ೨೭ ॥ ಹೊಂಬಾಳೆಗಳಿಂದ ಕೂಡಿದ ಅಡಿಕೆಮರಗಳಿಂದಲೂ, ಬಾಳೆಯ ಕಂಭದಿಂದಲೂ, ಸುಂದರವಾದ ಪಟ್ಟವಸ್ತ್ರಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಕನ್ನಡಿಗಳಿಂದಲೂ, ವಸ್ತ್ರ-ಪುಷ್ಪಮಾಲೆಗಳಿಂದಲೂ, ಮಾಂಗಲಿಕ ಚಿಹ್ನೆಗಳಿಂದ ಚಿತ್ರಿತವಾಗಿದ್ದ ಕೌತುಕವನ್ನುಂಟುಮಾಡುವ ತೋರಣಗಳಿಂದಲೂ ಇಡೀ ನಗರವು ಝಗ-ಝಗಿಸುತ್ತಿತ್ತು. ॥ ೨೮ ॥ ನಗರವಾಸಿಗಳು ತಮ್ಮ ಕೈಗಳಲ್ಲಿ ನಾನಾರೀತಿಯ ಕಪ್ಪ-ಕಾಣಿಕೆಗಳನ್ನು ಹಿಡಿದುಕೊಂಡು ಭಗವಂತನ ಬಳಿಗೆ ಬಂದು, ಅವನನ್ನು ಪ್ರಾರ್ಥಿಸುತ್ತಾರೆ – ದೇವದೇವನೇ! ನೀನು ನಿನ್ನ ಹಿಂದಿನ ವರಾಹಾವತಾರದಲ್ಲಿ ಈ ಭೂಮಿಯನ್ನು ಉದ್ಧರಿಸಿದ್ದೆ. ಈಗ ಇದರ ಪಾಲನೆಯನ್ನೂ ಮಾಡು. ॥ ೨೯ ॥ ಪರೀಕ್ಷಿತನೇ! ಆ ಸಮಯದಲ್ಲಿ ಬಹಳ ದಿನಗಳ ಬಳಿಕ ಭಗವಾನ್ ಶ್ರೀರಾಮನು ಇತ್ತ ಆಗಮಿಸುತ್ತಿದ್ದಾನೆ ಎಂದು ತಿಳಿದಾಗ ಎಲ್ಲ ಪ್ರಜಾಜನರು, ಸ್ತ್ರೀ-ಪುರುಷರಾದಿಯಾಗಿ ಅವನ ದರ್ಶನದ ಉತ್ಕಂಠತೆಯಿಂದ ಮನೆಗಳ ಬಾಗಿಲುಗಳನ್ನು ಹಾರುಹೊಡೆದು ಅವನ ಕಡೆಗೆ ಓಡುತ್ತಿದ್ದರು. ಅವರು ಎತ್ತರವಾದ ಮಹಡಿಗಳಲ್ಲಿ ಹತ್ತಿಕೊಂಡು ತೃಪ್ತಿಹೊಂದದ ಕಣ್ಣುಗಳಿಂದ ಕಮಲನಯನ ಭಗವಂತನನ್ನು ನೋಡುತ್ತಾ ಅವನ ಮೇಲೆ ಹೂವುಗಳ ಮಳೆಗರೆಯುತ್ತಿದ್ದರು. ॥ ೩೦ ॥

ಹೀಗೆ ಪ್ರಜಾಜನರ ನಿರೀಕ್ಷಣಮಾಡಿ ಭಗವಂತನು ಮರಳಿ ಅರಮನೆಗೆ ಬರುತ್ತಿದ್ದನು. ಆ ಅರಮನೆಯು ಹಿಂದಿನ ರಾಜರಿಂದ ಸೇವಿಸಲ್ಪಟ್ಟಿತ್ತು. ಅದರಲ್ಲಿ ಎಂದೂ ಬರಿದಾಗದ ದೊಡ್ಡ-ದೊಡ್ಡ ರತ್ನಭಂಡಾರಗಳಿದ್ದವು. ಬಹುಮೂಲ್ಯವಾದ ಅನೇಕ ಸಾಮಗ್ರಿಗಳಿಂದ ಸುಸಜ್ಜಿತವಾಗಿತ್ತು. ॥ ೩೧ ॥ ಆ ಅರಮನೆಯ ದ್ವಾರ ಬಂಧಗಳು, ದ್ವಾರಗಳು ಹವಳಗಳಿಂದಲೇ ನಿರ್ಮಿತವಾಗಿದ್ದವು. ಅದರಲ್ಲಿರುವ ಎಲ್ಲ ಕಂಭಗಳು ವೈಡೂರ್ಯಮಣಿಗಳದ್ದಾಗಿದ್ದವು. ಮರಕತಮಣಿಯಿಂದ ರಚಿಸಿದ ಸುಂದರ ನೆಲವಿತ್ತು. ಸ್ಫಟಿಕದ ಗೋಡೆಗಳು ಹೊಳೆಯುತ್ತಿದ್ದವು. ॥ ೩೨ ॥ ಬಣ್ಣ-ಬಣ್ಣದ ಮಾಲೆಗಳಿಂದಲೂ, ಪತಾಕೆಗಳಿಂದಲೂ, ಮಣಿಗಳ ಹೊಳಪಿನಿಂದಲೂ, ಶುದ್ಧಚೇತನದಂತೆ ಉಜ್ವಲ ಮುತ್ತುಗಳಿಂದಲೂ, ಸುಂದರವಾದ ಭೋಗಸಾಮಗ್ರಿಗಳಿಂದಲೂ, ಸುಗಂಧಿತ ಧೂಪ-ದೀಪ

ಧೂಪದೀಪೈಃ ಸುರಭಿಭಿರ್ಮಂಡಿತಂ ಪುಷ್ಪಮಂಡನೈಃ ।
ಸ್ತ್ರೀಪುಂಭಿಃ ಸುರಸಂಕಾಶೈರ್ಜುಷ್ಟಂ ಭೂಷಣಭೂಷಣೈಃ
॥ ೩೪ ॥

ತಸ್ಮಿನ್ಸ ಭಗವಾನ್ರಾಮಃ ಸ್ನಿಗ್ಧಯಾ ಪ್ರಿಯಯೇಷ್ಟಯಾ ।
ರೇಮೇ ಸ್ವಾರಾಮಧೀರಾಣಾಮೃಷಭಃ ಸೀತಯಾ ಕಿಲ
॥ ೩೫ ॥

ಬುಭುಜೇ ಚ ಯಥಾಕಾಲಂ ಕಾಮಾನ್ ಧರ್ಮಮಪೀಡಯನ್ ।
ವರ್ಷಪೂಗಾನ್ಬಹೂನ್ ನೃಣಾಮಭಿಧ್ಯಾತಾಂಘ್ರಿಪಲ್ಲವಃ
॥ ೩೬ ॥

ಗಳಿಂದಲೂ, ಪುಷ್ಪಗಳಿಂದಲೂ, ಒಡವೆಗಳಿಂದಲೂ ಆ ಅರಮನೆಯನ್ನು ತುಂಬಾ ಶೃಂಗರಿಸಿದ್ದರು. ಅಂತಹ ದಿವ್ಯವಾದ ಅರಮನೆಯನ್ನು ಶ್ರೀರಾಮನು ಪ್ರವೇಶಿಸುತ್ತಲೇ ಆಭೂಷಣಗಳಿಗೂ ಅಲಂಕಾರಪ್ರಾಯರಾದ ದೇವೋಪಮ ಸ್ತ್ರೀ-ಪುರುಷರು ಅವನ ಸೇವೆಯಲ್ಲಿ ಸರ್ವದಾ ನಿರತರಾಗಿರುತ್ತಿದ್ದರು. ॥ ೩೩-೩೪ ॥ ಪರೀಕ್ಷಿತನೇ! ಭಗವಾನ್ ಶ್ರೀರಾಮನು ಆತ್ಮಾರಾಮರಾದ ಜಿತೇಂದ್ರಿಯರಾದ ಪುರುಷರೆಲ್ಲರಿಗೂ ಶ್ರೇಷ್ಠನಾಗಿದ್ದನು. ಆ ದಿವ್ಯವಾದ ಅರಮನೆಯಲ್ಲಿ ಅವನು ತನ್ನ ಪ್ರಾಣಪ್ರಿಯಳಾದ ಪ್ರೇಮಮಯಿಯಾದ ಪತ್ನೀ ಶ್ರೀಸೀತಾದೇವಿಯೊಡನೆ ವಿಹರಿಸುತ್ತಿದ್ದನು. ॥ ೩೫ ॥ ಸಮಸ್ತ ಸ್ತ್ರೀ-ಪುರುಷರು ಯಾರ ಚರಣಕಮಲಗಳನ್ನು ಧ್ಯಾನಮಾಡುತ್ತಾ ಇರುವರೋ ಅಂತಹ ಭಗವಾನ್ ಶ್ರೀರಾಮನು ಬಹಳ ವರ್ಷಗಳವರೆಗೆ ಧರ್ಮ-ಮರ್ಯಾದೆಗಳನ್ನು ಪಾಲಿಸುತ್ತಾ ಕಾಲೋಚಿತವಾಗಿ ಸುಖೋಪಭೋಗಗಳನ್ನು ಸೇವಿಸುತ್ತಾ ರಾಜ್ಯ ಭಾರ ಮಾಡುತ್ತಿದ್ದನು. ॥ ೩೬ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಶ್ರೀರಾಮೋಪಾಖ್ಯಾನೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಉಳಿದ ಇಕ್ಷ್ವಾಕು ವಂಶದ ಅರಸರ ವರ್ಣನೆ

ಶ್ರೀಶುಕ ಉವಾಚ

ಕುಶಸ್ಯ ಚಾತಿಥಿಸ್ತಸ್ಮಾನ್ನಿಷಧಸ್ತತ್ಸುತೋ ನಭಃ ।
ಪುಂಡರೀಕೋಽಥ ತತ್ಪುತ್ರಃ ಕ್ಷೇಮಧನ್ವಾ ಭವತ್ತತಃ
॥ ೧ ॥

ದೇವಾನೀಕಸ್ತತೋಽನೀಹಃ ಪಾರಿಯಾತ್ರೋಽಥ ತತ್ಸುತಃ ।
ತತೋ ಬಲಸ್ಥಲಸ್ತಸ್ಮಾದ್ವಜ್ರನಾಭೋಽರ್ಕಸಂಭವಃ
॥ ೨ ॥

ಖಗಣಸ್ತತ್ಸುತಸ್ತಸ್ಮಾದ್ವಿಧೃತಿಶ್ಚಾಭವತ್ ಸುತಃ ।
ತತೋ ಹಿರಣ್ಯನಾಭೋಽಭೂದ್ಯೋಗಾಚಾರ್ಯಸ್ತು ಜೈಮಿನೇಃ
॥ ೩ ॥

ಶಿಷ್ಯಃ ಕೌಸಲ್ಯ ಆಧ್ಯಾತ್ಮಂ ಯಾಜ್ಞವಲ್ಕ್ಯೋಽಧ್ಯಗಾದ್ಯತಃ ।
ಯೋಗಂ ಮಹೋದಯಮೃಷಿರ್ಹೃದಯಗ್ರಂಥಿಭೇದಕಮ್
॥ ೪ ॥

ಪುಷ್ಯೋ ಹಿರಣ್ಯನಾಭಸ್ಯ ಧ್ರುವಸಂಧಿಸ್ತತೋಽಭವತ್ ।
ಸುದರ್ಶನೋಽಥಾಗ್ನಿವರ್ಣಃ ಶೀಘ್ರಸ್ತಸ್ಯ ಮರುಃ ಸುತಃ
॥ ೫ ॥

ಯೋಽಸಾವಾಸ್ತೇ ಯೋಗಸಿದ್ಧಃ ಕಲಾಪಗ್ರಾಮಮಾಶ್ರಿತಃ ।
ಕಲೇರಂತೇ ಸೂರ್ಯವಂಶಂ ನಷ್ಟಂ ಭಾವಯಿತಾ ಪುನಃ
॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲ್ಲೈ ಪರೀಕ್ಷಿತನೇ! ಶ್ರೀರಾಮನಿಗೆ ಕುಶ-ಲವರೆಂಬ ಯಮಳರು ಹುಟ್ಟಿದ್ದರೆಂದು ಹೇಳಿದ್ದೆನಲ್ಲವೇ? ಮುಂದೆ ಕುಶನ ಸಂತಾನವು ಬೆಳೆಯಿತು. ಕುಶನ ಮಗ ಅತಿಥಿ, ಅವನಿಗೆ ನಿಷಧ, ನಿಷಧನಿಂದ ನಭ, ನಭನಿಗೆ ಪುಂಡರೀಕ, ಪುಂಡರೀಕನಿಗೆ ಕ್ಷೇಮಧನ್ವಾ ಹುಟ್ಟಿದನು. ॥ ೧ ॥ ಕ್ಷೇಮಧನ್ವನಿಗೆ ದೇವಾನೀಕ ಪುತ್ರನಾದನು. ದೇವಾನೀಕನಿಂದ ಅನೀಹ, ಅನೀಹನಿಂದ ಪಾರಿಯಾತ್ರ, ಪಾರಿಯಾತ್ರನಿಂದ ಬಲಸ್ಥಲ, ಬಲಸ್ಥಲನಿಗೆ ವಜ್ರನಾಭನೆಂಬ ಪುತ್ರನಾದನು. ಇವನು ಸೂರ್ಯನ ಅಂಶನಾಗಿದ್ದನು. ॥ ೨ ॥ ವಜ್ರನಾಭನಿಂದ ಖಗಣ, ಖಗಣನಿಂದ ವಿಧೃತಿ, ವಿಧೃತಿಯಿಂದ ಹಿರಣ್ಯನಾಭನ ಉತ್ಪತ್ತಿಯಾಯಿತು. ಅವನು ಜೈಮಿನಿಯ ಶಿಷ್ಯನಾಗಿದ್ದು ಯೋಗಾಚಾರ್ಯನಾಗಿದ್ದನು. ॥ ೩ ॥ ಕೋಸಲದೇಶನಿವಾಸಿ ಯಾಜ್ಞವಲ್ಕ್ಯ ಋಷಿಯು ಅವನ ಶಿಷ್ಯನಾಗಿ ಅವನಿಂದ ಅಧ್ಯಾತ್ಮಯೋಗದ ಶಿಕ್ಷಣವನ್ನು ಪಡೆದಿದ್ದನು. ಆ ಯೋಗವು ಹೃದಯಗ್ರಂಥಿಯನ್ನು ಕತ್ತರಿಸುವಂತಹುದು ಮತ್ತು ಪರಮ ಸಿದ್ಧಿಪ್ರದವಾಗಿದೆ. ॥ ೪ ॥ ಹಿರಣ್ಯನಾಭನಿಗೆ ಪುಷ್ಯ, ಪುಷ್ಯನಿಗೆ ಧ್ರುವಸಂಧಿ, ಧ್ರುವಸಂಧಿಗೆ ಸುದರ್ಶನ, ಸುದರ್ಶನನಿಗೆ ಅಗ್ನಿವರ್ಣ, ಅಗ್ನಿವರ್ಣನಿಗೆ ಶೀಘ್ರ, ಶೀಘ್ರನಿಗೆ ಮರು ಎಂಬ ಪುತ್ರ ಹುಟ್ಟಿದನು. ॥ ೫ ॥ ಮರುವು ಯೋಗಸಾಧನೆಯಿಂದ ಸಿದ್ಧಿಯನ್ನು ಪಡೆದುಕೊಂಡು ಅವನು ಈಗಲೂ ಕಲಾಪಗ್ರಾಮದಲ್ಲಿ ಇರುತ್ತಿರುವನು. ಕಲಿಯುಗದ ಅಂತ್ಯದಲ್ಲಿ ಸೂರ್ಯವಂಶವು ನಾಶವಾದಾಗ ಅವನು ಅದನ್ನು ಪುನಃ ಮುಂದುವರೆಸುವನು. ॥ ೬ ॥

ತಸ್ಮಾತ್ಸುಶ್ರುತಸ್ತಸ್ಯ ಸಂಧಿಸ್ತಸ್ಮಾತ್ಸಮರ್ಷಣಃ ।
ಮಹಸ್ವಾಂಸ್ತತ್ಸುತಸ್ತಸ್ಮಾದ್ವಿಶ್ವಸಾಹ್ವೋಽನ್ವಜಾಯತ
॥ ೭ ॥

ತತಃ ಪ್ರಸೇನಜಿತ್ತಸ್ಮಾತ್ತಕ್ಷಕೋ ಭವಿತಾ ಪುನಃ ।
ತತೋ ಬೃಹದ್ಬಲೋ ಯಸ್ತು ಪಿತ್ರಾ ತೇ ಸಮರೇ ಹತಃ
॥ ೮ ॥

ಏತೇ ಹ್ಯೀಕ್ಷ್ವಾಕುಭೂಪಾಲಾ ಅತೀತಾಃ ಶೃಣ್ವನಾಗತಾನ್ ।
ಬೃಹದ್ಬಲಸ್ಯ ಭವಿತಾ ಪುತ್ರೋ ನಾಮ ಬೃಹದ್ರಣಃ
॥ ೯ ॥

ಉರುಕ್ರಿಯಸ್ತತಸ್ತಸ್ಯ ವತ್ಸವೃದ್ಧೋ ಭವಿಷ್ಯತಿ ।
ಪ್ರತಿವ್ಯೋಮಸ್ತತೋ ಭಾನುರ್ದಿವಾಕೋ ವಾಹಿನೀಪತಿಃ
॥ ೧೦ ॥

ಸಹದೇವಸ್ತತೋ ವೀರೋ ಬೃಹದಶ್ವೋಽಥ ಭಾನುಮಾನ್ ।
ಪ್ರತೀಕಾಶ್ವೋ ಭಾನುಮತಃ ಸುಪ್ರತೀಕೋಽಥ ತತ್ಸುತಃ
॥ ೧೧ ॥

ಭವಿತಾ ಮರುದೇವೋಽಥ ಸುನಕ್ಷತ್ರೋಽಥ ಪುಷ್ಕರಃ ।
ತಸ್ಯಾಂತರಿಕ್ಷಸ್ತತ್ಪುತ್ರಃ ಸುತಪಾಸ್ತದಮಿತ್ರಜಿತ್
॥ ೧೨ ॥

ಬೃಹದ್ರಾಜಸ್ತು ತಸ್ಯಾಪಿ ಬರ್ಹಿಸ್ತಸ್ಮಾತ್ಕೃತಂಜಯಃ ।
ರಣಂಜಯಸ್ತಸ್ಯ ಸುತಃ ಸಂಜಯೋ ಭವಿತಾ ತತಃ
॥ ೧೩ ॥

ತಸ್ಮಾಚ್ಛಾಕ್ಯೋಽಥ ಶುದ್ಧೋದೋ ಲಾಂಗಲಸ್ತತ್ಸುತಃ ಸ್ಮೃತಃ ।
ತತಃ ಪ್ರಸೇನಜಿತ್ತಸ್ಮಾತ್ ಕ್ಷುದ್ರಕೋ ಭವಿತಾ ತತಃ
॥ ೧೪ ॥

ರಣಕೋ ಭವಿತಾ ತಸ್ಮಾತ್ಸುರಥಸ್ತನಯಸ್ತತಃ ।
ಸುಮಿತ್ರೋ ನಾಮ ನಿಷ್ಠಾಂತ ಏತೇ ಬಾರ್ಹದ್ಬಲಾನ್ವಯಾಃ
॥ ೧೫ ॥

ಇಕ್ಷ್ವಾಕೂಣಾಮಯಂ ವಂಶಃ ಸುಮಿತ್ರಾಂತೋ ಭವಿಷ್ಯತಿ ।
ಯತಸ್ತಂ ಪ್ರಾಪ್ಯ ರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ
॥ ೧೬ ॥

ಮರುವಿನಿಂದ ಪ್ರಸುಶ್ರುತ, ಅವನಿಂದ ಸಂಧಿ, ಸಂಧಿಯಿಂದ ಅಮರ್ಷಣನು ಹುಟ್ಟಿದನು. ಅಮರ್ಷಣನಿಂದ ಮಹಸ್ವಂತ, ಮಹಸ್ವಂತನಿಂದ ವಿಶ್ವಸಾಹ್ವ ನಾದನು. ॥ ೭ ॥ ವಿಶ್ವಸಾಹ್ವನ ಪುತ್ರ ಪ್ರಸೇನಜಿತ್, ಪ್ರಸೇನಜಿತ್ತುವಿನಿಂದ ತಕ್ಷಕ, ತಕ್ಷಕಪುತ್ರ ಬೃಹದ್ಬಲ ನಾದನು. ಪರೀಕ್ಷಿತನೇ! ಇದೇ ಬೃಹದ್ಬಲನನ್ನು ನಿನ್ನ ತಂದೆ ಅಭಿಮನ್ಯುವು ಯುದ್ಧದಲ್ಲಿ ಕೊಂದಿದ್ದನು. ॥ ೮ ॥

ಪರೀಕ್ಷಿದ್ರಾಜೇಂದ್ರನೇ! ಇಕ್ಷ್ವಾಕುವಂಶದಲ್ಲಿ ಇಂದಿನವರೆಗೆ ಇಷ್ಟು ಭೂಪಾಲರು ಆಗಿಹೋಗಿದ್ದಾರೆ. ಈಗ ಮುಂದೆ ಆಗುವವರ ವಿಷಯವನ್ನು ಕೇಳು. ಬೃಹದ್ಬಲನಿಗೆ ಬೃಹದ್ರಣ ಪುತ್ರನಾಗುವನು. ॥ ೯ ॥ ಬೃಹದ್ರಣನಿಗೆ ಉರುಕ್ರಿಯ, ಅವನಿಗೆ ವತ್ಸವೃದ್ಧ ವತ್ಸವೃದ್ಧನಿಗೆ ಪ್ರತಿವ್ಯೋಮ, ಪ್ರತಿವ್ಯೋಮನಿಗೆ ಭಾನು, ಭಾನುವಿಗೆ ಸೇನಾಪತಿ ದಿವಾಕನೆಂಬ ಪುತ್ರನಾಗುವನು. ॥ ೧೦ ॥ ದಿವಾಕನಿಗೆ ವೀರಸಹದೇವ, ಸಹದೇವನಿಗೆ ಬೃಹದಶ್ವ, ಬೃಹದಶ್ವನಿಗೆ ಭಾನುಮಾನ್, ಭಾನುಮಂತನಿಗೆ ಪ್ರತೀಕಾಶ್ವ, ಪ್ರತೀಕಾಶ್ವನಿಗೆ ಸುಪ್ರತೀಕ ಪುತ್ರನಾಗುವನು. ॥ ೧೧ ॥ ಸುಪ್ರತೀಕನಿಗೆ ಮರುದೇವ, ಮರುದೇವನಿಗೆ ಸುನಕ್ಷತ್ರ, ಸುನಕ್ಷತ್ರನಿಗೆ ಪುಷ್ಕರ, ಪುಷ್ಕರನಿಗೆ ಅಂತರಿಕ್ಷ, ಅಂತರಿಕ್ಷನಿಗೆ ಸುತಪಾ, ಅವನಿಗೆ ಅಮಿತ್ರಜಿತ್ ಎಂಬ ಪುತ್ರನಾಗುವನು. ॥ ೧೨ ॥ ಅಮಿತ್ರಜಿತ್ತುವಿಗೆ ಬೃಹದ್ರಾಜ, ಬೃಹದ್ರಾಜನಿಗೆ ಬರ್ಹಿ, ಬರ್ಹಿಗೆ ಕೃತಂಜಯ, ಕೃತಂಜಯನಿಗೆ ರಣಂಜಯ, ಅವನಿಗೆ ಸಂಜಯನೆಂಬ ಪುತ್ರನಾಗುವನು. ॥ ೧೩ ॥ ಸಂಜಯನಿಗೆ ಶಾಕ್ಯ, ಅವನಿಗೆ ಶುದ್ಧೋದ, ಶುದ್ಧೋದನಿಗೆ ಲಾಂಗಲ, ಲಾಂಗಲನಿಗೆ ಪ್ರಸೇನಜಿತ್, ಪ್ರಸೇನಜಿತ್ತುವಿಗೆ ಕ್ಷುದ್ರಕನೆಂಬ ಪುತ್ರನಾಗುವನು. ॥ ೧೪ ॥ ಕ್ಷುದ್ರಕನಿಗೆ ರಣಕ, ರಣಕನಿಗೆ ಸುರಥ, ಸುರಥನಿಗೆ ಈ ವಂಶದ ಕೊನೆಯ ರಾಜನಾದ ಸುಮಿತ್ರನು ಹುಟ್ಟುವನು. ಇವರೆಲ್ಲರೂ ಬೃಹದ್ಬಲನ ವಂಶಧರರಾಗುವರು. ॥ ೧೫ ॥ ಇಕ್ಷ್ವಾಕುವಿನ ಈ ವಂಶವು ಸುಮಿತ್ರನವರೆಗೆ ಉಳಿದೀತು. ಏಕೆಂದರೆ ಸುಮಿತ್ರನು ರಾಜನಾದಾಗ ಕಲಿಯುಗದಲ್ಲಿ ಈ ವಂಶವು ಮುಗಿದುಹೋದೀತು. ॥ ೧೬ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಇಕ್ಷ್ವಾಕುವಂಶವರ್ಣನಂ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ನಿಮಿರಾಜನ ವಂಶದ ವರ್ಣನೆ

ಶ್ರೀಶುಕ ಉವಾಚ

ನಿಮಿರಿಕ್ಷ್ವಾಕುತನಯೋ ವಸಿಷ್ಠಮವೃತರ್ತ್ವಿಜಮ್ ।
ಆರಭ್ಯ ಸತ್ರಂ ಸೋಽಪ್ಯಾಹ ಶಕ್ರೇಣ ಪ್ರಾಗ್ವೃತೋಽಸ್ಮಿ ಭೋಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಇಕ್ಷ್ವಾಕುವಿಗೆ ನಿಮಿ ಎಂಬ ಪುತ್ರನಿದ್ದನು. ಅವನು ಯಜ್ಞವನ್ನು ಪ್ರಾರಂಭಿಸಿ ಮಹರ್ಷಿ ವಸಿಷ್ಠರನ್ನು ಋತ್ವಿಜರನ್ನಾಗಿ ವರಣ ಮಾಡಿದನು. ವಸಿಷ್ಠರು ಹೇಳಿದರು – ರಾಜನೇ! ಇಂದ್ರನು ತನ್ನ ಯಜ್ಞಕ್ಕಾಗಿ ನನ್ನನ್ನು ಮೊದಲೇ ವರಣಮಾಡಿರುವನು. ॥ ೧ ॥



राजा भगीरथकी प्रार्थनापर भगवान् शिवका गङ्गाको अपने सिरपर धारण करना

Entreated by Bhagīratha Lord Śiva holds Gaṅgā on his head




मर्यादापुरुषोत्तम भगवान् श्रीराम

Lord Rāma the Maryādāpuruṣottama



भगवान् श्रीकृष्णके बालचरित्र (क)

Childly pranks of Lord Śrī Kṛṣṇa (A)




भगवान् श्रीकृष्णके बालचरित्र (ख)

Childly pranks of Lord Śrī Kṛṣṇa (B)



जरासन्धके कारागारसे राजाओंकी मुक्ति

The release of kings from the prison of Jarāsandha



शाल्व-संग्राम

Battle with Śālva




दन्तवक्त्र और विदूरथका उद्धार

Liberation of Dantavaktra and Vidūratha




माता देवकीके मृत पुत्रोंको वापस लाना

Restoration of dead sons of Devakī



यदुकुलके विनाशका शाप

Curse for the annihilation of Yadu dynasty



परमधाम-गमनके पूर्वकी झाँकी

The glimpse of final departure of Lord

ತಂ ನಿರ್ವರ್ತ್ಯಾಗಮಿಷ್ಯಾಮಿ ತಾವನ್ಮಾಂ ಪ್ರತಿಪಾಲಯ ।
ತೂಷ್ಣೀಮಾಸೀದ್ಗೃಹಪತಿಃ ಸೋಽಪೀಂದ್ರಸ್ಯಾಕರೋನ್ಮಖಮ್
॥ ೨ ॥

ನಿಮಿಶ್ಚಲಮಿದಂ ವಿದ್ವಾನ್ತತ್ರಮಾರಭತಾತ್ಮವಾನ್ ।
ಋತ್ವಿಗ್ಭಿರಪರೈಸ್ತಾವನ್ನಾಗಮದ್ಯಾವತಾ ಗುರುಃ
॥ ೩ ॥

ಶಿಷ್ಯವ್ಯತಿಕ್ರಮಂ ವೀಕ್ಷ್ಯ ನಿರ್ವರ್ತ್ಯ ಗುರುರಾಗತಃ ।
ಅಶಪತ್ಪತತಾದ್ದೇಹೋ ನಿಮೇಃ ಪಂಡಿತಮಾನಿನಃ
॥ ೪ ॥

ನಿಮಿಃ ಪ್ರತಿದದೌ ಶಾಪಂ ಗುರವೇಽಧರ್ಮವರ್ತಿನೇ ।
ತವಾಪಿ ಪತತಾದ್ದೇಹೋ ಲೋಭಾದ್ಧರ್ಮಮಜಾನತಃ
॥ ೫ ॥

ಇತ್ಯುತ್ಸಸರ್ಜ ಸ್ವಂ ದೇಹಂ ನಿಮಿರಧ್ಯಾತ್ಮಕೋವಿದಃ ।
ಮಿತ್ರಾವರುಣಯೋರ್ಯಜ್ಞೇ ಉರ್ವಶ್ಯಾಂ ಪ್ರಪಿತಾಮಹಃ
॥ ೬ ॥

ಗಂಧವಸ್ತುಷು ತದ್ದೇಹಂ ನಿಧಾಯ ಮುನಿಸತ್ತಮಾಃ ।
ಸಮಾಪ್ತೇ ಸತ್ರಯಾಗೇಽಥ ದೇವಾನೂಚುಃ ಸಮಾಗತಾನ್
॥ ೭ ॥

ರಾಜ್ಞೋ ಜೀವತು ದೇಹೋಽಯಂ ಪ್ರಸನ್ನಾಃ ಪ್ರಭವೋ ಯದಿ ।
ತಥೇತ್ಯೂಚೇ ನಿಮಿಃ ಪ್ರಾಹ ಮಾ ಭೂನ್ಮೇ ದೇಹಬಂಧನಮ್
॥ ೮ ॥

ಯಸ್ಯ ಯೋಗಂ ನ ವಾಂಛಂತಿ ವಿಯೋಗಭಯಕಾತರಾಃ ।
ಭಜಂತಿ ಚರಣಾಂಭೋಜಂ ಮುನಯೋ ಹರಿಮೇಧಸಃ
॥ ೯ ॥

ದೇಹಂ ನಾವರುರುತ್ಸೇಽಹಂ ದುಃಖಶೋಕಭಯಾವಹಮ್ ।
ಸರ್ವತ್ರಾಸ್ಯ ಯತೋ ಮೃತ್ಯುರ್ಮತ್ಸ್ಯಾನಾಮುದಕೇ ಯಥಾ
॥ ೧೦ ॥

ದೇವಾ ಊಚುಃ

ವಿದೇಹ ಉಷ್ಯತಾಂ ಕಾಮಂ ಲೋಚನೇಷು ಶರೀರಿಣಾಮ್ ।
ಉನ್ಮೇಷಣನಿಮೇಷಾಭ್ಯಾಂ ಲಕ್ಷಿತೋಽಧ್ಯಾತ್ಮಸಂಸ್ಥಿತಃ
॥ ೧೧ ॥

ಅವನ ಯಜ್ಞವನ್ನು ಪೂರೈಸಿ ನಾನು ನಿನ್ನ ಬಳಿಗೆ ಬರುವೆನು. ಅಲ್ಲಿಯವರೆಗೆ ನನ್ನ ಪ್ರತೀಕ್ಷೆ ಮಾಡು. ಈ ಮಾತನ್ನು ಕೇಳಿ ನಿಮಿ ರಾಜನು ಮೌನವಾಗಿದ್ದನು. ವಸಿಷ್ಠರು ಇಂದ್ರನಿಂದ ಯಜ್ಞವನ್ನು ಮಾಡಿಸಲು ಹೊರಟುಹೋದರು. ॥ ೨ ॥ ಜೀವನವು ಕ್ಷಣ ಭಂಗುರವಾದುದರಿಂದ ವಸಿಷ್ಠರಿಗಾಗಿ ಕಾಯುವುದು ಉಚಿತ ವಲ್ಲವೆಂದು ಭಾವಿಸಿದ ನಿಮಿಯು ವಸಿಷ್ಠರು ಬರುವ ಮೊದಲೇ ಬೇರೆ ಋತ್ವಿಜರನ್ನು ಆಹ್ವಾನಿಸಿ ಯಜ್ಞವನ್ನು ಪ್ರಾರಂಭಿಸಿದನು. ॥ ೩ ॥ ಗುರು ವಸಿಷ್ಠರು ಇಂದ್ರನ ಯಜ್ಞವನ್ನು ಮುಗಿಸಿ ಮರಳಿ ದಾಗ ತನ್ನ ಶಿಷ್ಯನಾದ ನಿಮಿಯು ನನ್ನ ಮಾತನ್ನು ಮನ್ನಿಸದೆ ಯಜ್ಞವನ್ನು ಪ್ರಾರಂಭಿಸಿರುವುದನ್ನು ನೋಡಿದರು. ಆದರಿಂದ ಅವರು ಕೋಪಗೊಂಡು – 'ತನ್ನನ್ನೇ ಮಹಾಪಂಡಿತನೆಂದು ಭಾವಿಸಿಕೊಂಡಿರುವ ನಿನ್ನ ಶರೀರವು ಬಿದ್ದುಹೋಗಲಿ' ಎಂದು ಶಾಪವನ್ನಿತ್ತರು. ॥ ೪ ॥ ನಿಮಿಯ ದೃಷ್ಟಿಯಿಂದ ವಸಿಷ್ಠರಿತ್ತ ಶಾಪವು ಧರ್ಮಕ್ಕೆ ವಿರೋಧವಾಗಿತ್ತು. ಈ ಕಾರಣದಿಂದ ಅವನೂ ವಸಿಷ್ಠರಿಗೆ ಶಾಪವನ್ನಿತ್ತನು – 'ಲೋಭಪರವಶನಾಗಿ ಧರ್ಮವನ್ನು ಆದರಿಸದೇ ಇರುವುದರಿಂದ ನಿನ್ನ ಶರೀರವೂ ಬಿದ್ದುಹೋಗಲಿ.' ॥ ೫ ॥ ಹೀಗೆ ಶಾಪವನ್ನಿತ್ತು ಆತ್ಮವಿದ್ಯಾನಿಪುಣನಾದ ನಿಮಿಯು ದೇಹತ್ಯಾಗಮಾಡಿದನು. ಪರೀಕ್ಷಿತನೇ! ಇತ್ತ ನನ್ನ ವೃದ್ಧ ಪ್ರಪಿತಾಮಹರಾದ ವಸಿಷ್ಠರೂ ಕೂಡ ತನ್ನ ಶರೀರವನ್ನು ತ್ಯಜಿಸಿ, ಮಿತ್ರಾವರುಣರ ಪುತ್ರರಾಗಿ ಊರ್ವಶಿಯ ಗರ್ಭದಲ್ಲಿ ಜನ್ಮ ತಾಳಿದರು. ॥ ೬ ॥ ನಿಮಿರಾಜನ ಯಜ್ಞಕ್ಕೆ ಬಂದಿರುವ ಶ್ರೇಷ್ಠ ಮುನಿಗಳು ರಾಜನ ಶರೀರವನ್ನು ಸುಗಂಧಿತ ವಸ್ತುಗಳಲ್ಲಿ ಇರಿಸಿದರು. ಸತ್ರಯಾಗವು ಮುಗಿದು ದೇವತೆಗಳು ಆಗಮಿಸಿದಾಗ ಋತ್ವಿಜರೆಲ್ಲರೂ ಸೇರಿ ದೇವತೆಗಳನ್ನು ಪ್ರಾರ್ಥಿಸಿದರು. ॥ ೭ ॥ ಮಹಾನುಭಾವರೇ! ನೀವೆಲ್ಲ ಸಮರ್ಥರಾಗಿದ್ದೀರಿ. ನೀವು ಈ ಯಾಗದಿಂದ ಪ್ರಸನ್ನರಾಗಿರುವಿರಾದರೆ ನಿಮಿರಾಜನ ಶರೀರವು ಪುನಃ ಜೀವಿತವಾಗಲಿ. 'ಹಾಗೆಯೇ ಆಗಲಿ' ಎಂದು ದೇವತೆಗಳು ಹೇಳಿದಾಗ ನಿಮಿಯು ಹೇಳಿದನು – 'ನನಗೆ ಪುನಃ ದೇಹದ ಬಂಧನಬೇಕಾಗಿಲ್ಲ. ॥ ೮॥ ವಿಚಾರಶೀಲರಾದ ಮುನಿಗಳು ತಮ್ಮ ಬುದ್ಧಿಯನ್ನು ಪೂರ್ಣವಾಗಿ ಭಗವಂತನಲ್ಲೇ ತೊಡಗಿಸುವರು. ಅವನ ಚರಣಕಮಲಗಳನ್ನೇ ಭಜಿಸುತ್ತಾರೆ. ಒಂದಲ್ಲ ಒಂದುದಿನ ಈ ಶರೀರವು ಖಂಡಿತವಾಗಿ ಬಿದ್ದುಹೋಗುವುದು. ಈ ಭಯ ದಿಂದಾಗಿ ಅವರು ಈ ಶರೀರದ ಸಂಯೋಗವನ್ನು ಎಂದಿಗೂ ಬಯಸುವುದಿಲ್ಲ. ಅವರಾದರೋ ಮುಕ್ತರಾಗಲು ಬಯಸುತ್ತಿರುವರು. ॥ ೯ ॥ ಆದ್ದರಿಂದ ನಾನು ಈಗ ದುಃಖ, ಶೋಕ, ಭಯಕ್ಕೆ ಮೂಲಕಾರಣವಾದ ಈ ಶರೀರವನ್ನು ಧರಿಸಲು ಬಯಸುವುದಿಲ್ಲ. ನೀರಿನಲ್ಲಿರುವ ಮೀನಿಗೆ ಎಲ್ಲೆಡೆ ಮೃತ್ಯುಭಯವೇ ಇರುವಂತೆ ಈ ಶರೀರಕ್ಕೂ ಎಲ್ಲೆಡೆ ಮೃತ್ಯುವೇ ಮೃತ್ಯುವಿದೆ.' ॥ ೧೦ ॥

ದೇವತೆಗಳು ಹೇಳಿದರು – ಮುನಿಗಳೇ! ನಿಮಿರಾಜನು ತನ್ನ ಇಚ್ಛೆಯಂತೆ ಶರೀರರಹಿತನಾಗಿ ಪ್ರಾಣಿಗಳ ಕಣ್ಣುಗಳಲ್ಲಿ ನೆಲಸಲಿ. ಅವನು ಅಲ್ಲಿದ್ದುಕೊಂಡು ಸೂಕ್ಷ್ಮಶರೀರದಿಂದ ಭಗವಂತನನ್ನು ಧ್ಯಾನಮಾಡಲಿ. ರೆಪ್ಪೆಗಳು ಮುಚ್ಚಿ ತೆರೆಯುವುದರಿಂದ ಅವನ ಅಸ್ತಿತ್ವದ ಅರಿವು ಉಂಟಾಗುವುದು. ॥ ೧೧ ॥

ಅರಾಜಕಭಯಂ ನೃಣಾಂ ಮನ್ಯಮಾನಾ ಮಹರ್ಷಯಃ।
ದೇಹಂ ಮಮಂಥುಃ ಸ್ಮ ನಿಮೇಃ ಕುಮಾರಃ ಸಮಜಾಯತ
॥ ೧೨ ॥

ಜನ್ಮನಾ ಜನಕಃ ಸೋಽಭೂದ್ವೈದೇಹಸ್ತು ವಿದೇಹಜಃ।
ಮಿಥಿಲೋ ಮಥನಾಜ್ಜಾತೋ ಮಿಥಿಲಾ ಯೇನ ನಿರ್ಮಿತಾ
॥ ೧೩ ॥

ತಸ್ಮಾದುದಾವಸುಸ್ತಸ್ಯ ಪುತ್ರೋಽಭೂನ್ನಂದಿವರ್ಧನಃ।
ತತಃ ಸುಕೇತುಸ್ತಸ್ಯಾಪಿ ದೇವರಾತೋ ಮಹೀಪತೇ
॥ ೧೪ ॥

ತಸ್ಮಾದ್ಬೃಹದ್ರಥಸ್ತಸ್ಯ ಮಹಾವೀರ್ಯಃ ಸುಧೃತ್ತಿತಾ।
ಸುಧೃತೇರ್ಧೃಷ್ಟಕೇತುರ್ವೈ ಹರ್ಯತ್ವೋಽಥ ಮರುಸ್ತತಃ
॥ ೧೫ ॥

ಮರೋಃ ಪ್ರತೀಪಕಸ್ತಸ್ಮಾಜ್ಜಾತಃ ಕೃತಿರಥೋ ಯತಃ।
ದೇವಮೀಢಸ್ತಸ್ಯ ಸುತೋ ವಿಶ್ರುತೋಽಥ ಮಹಾಧೃತಿಃ
॥ ೧೬ ॥

ಕೃತಿರಾತಸ್ತತಸ್ತಸ್ಮಾನ್ಮಹಾರೋಮಾಥ ತತ್ಸುತಃ।
ಸ್ವರ್ಣರೋಮಾ ಸುತಸ್ತಸ್ಯ ಹ್ರಸ್ವರೋಮಾ ವ್ಯಜಾಯತ
॥ ೧೭ ॥

ತತಃ ಸೀರಧ್ವಜೋ ಜಜ್ಞೇ ಯಜ್ಞಾರ್ಥಂ ಕರ್ಷತೋ ಮಹೀಮ್।
ಸೀತಾ ಸೀರಾಗ್ರತೋ ಜಾತಾ ತಸ್ಮಾತ್ಸೀರಧ್ವಜಃ ಸ್ಮೃತಃ
॥ ೧೮ ॥

ಕುಶಧ್ವಜಸ್ತಸ್ಯ ಪುತ್ರಸ್ತತೋ ಧರ್ಮಧ್ವಜೋ ನೃಪಃ।
ಧರ್ಮಧ್ವಜಸ್ಯ ದ್ವೌ ಪುತ್ರೌ ಕೃತಧ್ವಜಮಿತಧ್ವಜೌ
॥ ೧೯ ॥

ಕೃತಧ್ವಜಾತ್ಕೇಶಿಧ್ವಜಃ ಖಾಂಡಿಕ್ಯಸ್ತು ಮಿತಧ್ವಜಾತ್।
ಕೃತಧ್ವಜಸುತೋ ರಾಜನ್ನಾತ್ಮವಿದ್ಯಾವಿಶಾರದಃ
॥ ೨೦ ॥

ಖಾಂಡಿಕ್ಯಃ ಕರ್ಮತತ್ತ್ವಜ್ಞೋ ಭೀತಃ ಕೇಶಿಧ್ವಜಾದ್ಯತಃ।
ಭಾನುಮಾಂಸ್ತಸ್ಯ ಪುತ್ರೋಽಭೂಚ್ಛತದ್ಯುಮ್ನಸ್ತು ತತ್ಸುತಃ
॥ ೨೧ ॥

ಶುಚಿಸ್ತತ್ತನಯಸ್ತಸ್ಮಾತ್ಸನದ್ವಾಜಸ್ತತೋಽಭವತ್।
ಊರ್ಧ್ವಕೇತುಃ ಸನದ್ವಾಜಾದಜೋಽಥ ಪುರುಜಿತ್ಸುತಃ
॥ ೨೨ ॥

ಅರಿಷ್ಟನೇಮಿಸ್ತಸ್ಯಾಪಿ ಶ್ರುತಾಯುಸ್ತತ್ಸುಪಾರ್ಶ್ವಕಃ।
ತತಶ್ಚಿತ್ರರಥೋ ಯಸ್ಯ ಕ್ಷೇಮಧಿರ್ಮಿಥಿಲಾಧಿಪಃ
॥ ೨೩ ॥

ತಸ್ಮಾತ್ಸಮರಥಸ್ತಸ್ಯ ಸುತಃ ಸತ್ಯರಥಸ್ತತಃ।
ಆಸೀದುಪಗುರುಸ್ತಸ್ಮಾದುಪಗುಪ್ತೋಽಗ್ನಿಸಂಭವಃ
॥ ೨೪ ॥

ವಸ್ವನಂತೋಽಥ ತತ್ಪುತ್ರೋ ಯುಯುಧೋ ಯತ್ಸುಭಾಷಣಃ।
ಶ್ರುತಸ್ತತೋ ಜಯಸ್ತಸ್ಮಾದ್ವಿಜಯೋಽಸ್ಮಾದೃತಃ ಸುತಃ
॥ ೨೫ ॥

ಇದಾದ ಬಳಿಕ ರಾಜನು ಇಲ್ಲದಿದ್ದಾಗ ಜನರಲ್ಲಿ ಅರಾಜಕತೆ ಹರಡಿಕೊಂಡೀತು ಎಂದು ಯೋಚಿಸಿದ ಮಹರ್ಷಿಗಳು ನಿಮಿ ರಾಜನ ಶರೀರವನ್ನು ಕಡೆದರು. ಅದರಿಂದ ಓರ್ವ ಕುಮಾರನು ಹುಟ್ಟಿದನು. ॥ ೧೨ ॥ ಅಸಾಧಾರಣವಾದ ರೀತಿಯಲ್ಲಿ ಹುಟ್ಟಿದ ಕಾರಣ ಜನಕನೆಂದೂ, ಪ್ರಾಣವಿಲ್ಲದ ದೇಹದಿಂದ ಹುಟ್ಟಿದ್ದರಿಂದ ವಿದೇಹನೆಂದೂ, ಶರೀರ ಮಂಥನದಿಂದ ಹುಟ್ಟಿದನಾದ್ದರಿಂದ ಮಿಥಿಲನೆಂದೂ ಆ ಕುಮಾರನನ್ನು ಜನರು ಕರೆದರು. ಇವನೇ ಮಿಥಿಲಾಪುರಿಯನ್ನು ನಿರ್ಮಿಸಿದನು. ॥ ೧೩. ॥

ಪರೀಕ್ಷಿತನೇ! ಜನಕನಿಗೆ ಉದಾವಸುವೆಂಬ ಪುತ್ರನು ಹುಟ್ಟಿದನು. ಅವನಿಗೆ ನಂದಿವರ್ಧನನು ಹುಟ್ಟಿದನು. ನಂದಿವರ್ಧನನಿಂದ ಸುಕೇತು, ಅವನಿಗೆ ದೇವರಾತ, ದೇವರಾತನಿಗೆ ಬೃಹದ್ರಥ, ಬೃಹದ್ರಥನಿಗೆ ಮಹಾವೀರ್ಯ, ಮಹಾವೀರ್ಯನಿಗೆ ಸುಧೃತಿ, ಸುಧೃತಿಯಿಂದ ಧೃಷ್ಟಕೇತು, ಧೃಷ್ಟಕೇತುವಿನಿಂದ ಹರ್ಯಶ್ವ, ಅವನಿಗೆ ಮರು ಎಂಬ ಪುತ್ರನು ಹುಟ್ಟಿದನು. ॥ ೧೪-೧೫ ॥ ಮರುವಿನಿಂದ ಪ್ರತೀಪಕ, ಪ್ರತೀಪಕನಿಂದ ಕೃತಿರಥ, ಕೃತಿರಥನಿಂದ ದೇವಮೀಢ, ದೇವಮೀಢನಿಂದ ವಿಶ್ರುತ, ವಿಶ್ರುತನಿಂದ ಮಹಾಧೃತಿಯ ಜನ್ಮವಾಯಿತು. ॥ ೧೬ ॥ ಮಹಾಧೃತಿಗೆ ಕೃತಿರಾತ, ಕೃತಿರಾತನಿಗೆ ಮಹಾರೋಮಾ, ಮಹಾರೋಮನಿಗೆ ಸ್ವರ್ಣರೋಮಾ, ಸ್ವರ್ಣರೋಮನಿಗೆ ಹ್ರಸ್ವರೋಮನು ಮಗನಾದನು. ॥ ೧೭ ॥ ಇದೇ ಹ್ರಸ್ವರೋಮನ ಪುತ್ರ ಸೀರಧ್ವಜ ಮಹಾರಾಜನಾಗಿದ್ದನು. ಅವನು ಯಜ್ಞಕ್ಕಾಗಿ ನೆಲವನ್ನು ಊಳುತ್ತಿರುವಾಗ ನೇಗಿಲಿನ ತುದಿಯಿಂದಾಗಿ ಭೂಮಿಯಿಂದ ಸೀತೆಯು ಜನ್ಮ ತಾಳಿದಳು. ಇದರಿಂದ ಇವನ ಹೆಸರು ಸೀರಧ್ವಜನೆಂದಾಯಿತು. ॥ ೧೮ ॥ ಸೀರಧ್ವಜನಿಗೆ ಕುಶಧ್ವಜ, ಕುಶಧ್ವಜನಿಗೆ ಧರ್ಮಧ್ವಜ, ಧರ್ಮಧ್ವಜನಿಗೆ ಕೃತಧ್ವಜ ಮತ್ತು ಮಿತಧ್ವಜರೆಂಬ ಇಬ್ಬರು ಪುತ್ರರಾದರು. ॥ ೧೯ ॥ ಕೃತಧ್ವಜನಿಗೆ ಕೇಶಿಧ್ವಜ ಮತ್ತು ಮಿತಧ್ವಜನಿಗೆ ಖಾಂಡಿಕ್ಯ ಹುಟ್ಟಿದ್ದನು. ಕೇಶಿಧ್ವಜನು ಆತ್ಮವಿದ್ಯೆಯಲ್ಲಿ ಮಹಾಪ್ರವೀಣನಾಗಿದ್ದನು. ॥ ೨೦ ॥ ಖಾಂಡಿಕ್ಯನು ಕರ್ಮಕಾಂಡದ ಮರ್ಮಜ್ಞನಾಗಿದ್ದನು. ಅವನು ಕೇಶಿಧ್ವಜನಿಂದ ಭಯಗೊಂಡು ಓಡಿಹೋದನು. ಕೇಶಿಧ್ವಜನ ಪುತ್ರ ಭಾನುಮಾನ್, ಭಾನುಮಂತನಿಗೆ ಶತದ್ಯುಮ್ನ ಮಗ ಹುಟ್ಟಿದನು. ॥ ೨೧ ॥ ಶತದ್ಯುಮ್ನನಿಂದ ಶುಚಿ, ಶುಚಿಯಿಂದ ಸನದ್ವಾಜ, ಸನದ್ವಾಜನಿಂದ ಊರ್ಧ್ವಕೇತು, ಊರ್ಧ್ವಕೇತುವಿನಿಂದ ಅಜ, ಅಜನಿಂದ ಪುರುಜಿತ್, ಪುರುಜಿತ್ತುವಿನಿಂದ ಅರಿಷ್ಟನೇಮಿ, ಅರಿಷ್ಟನೇಮಿಯಿಂದ ಶ್ರುತಾಯು, ಶ್ರುತಾಯುವಿನಿಂದ ಸುಪಾರ್ಶ್ವಕ, ಸುಪಾರ್ಶ್ವಕನಿಂದ ಚಿತ್ರರಥ, ಚಿತ್ರರಥನಿಂದ ಮಿಥಿಲಾಪತಿ ಕ್ಷೇಮಧಿಯ ಜನ್ಮವಾಯಿತು. ॥ ೨೨-೨೩. ॥ ಕ್ಷೇಮಧಿಯಿಂದ ಸಮರಥ, ಸಮರಥನಿಂದ ಸತ್ಯರಥ, ಸತ್ಯರಥನಿಂದ ಉಪಗುರು, ಉಪಗುರುವಿನಿಂದ ಉಪಗುಪ್ತನೆಂಬ ಪುತ್ರನಾದನು. ಇವನು ಅಗ್ನಿಯ ಅಂಶನಾಗಿದ್ದನು. ॥ ೨೪ ॥ ಉಪಗುಪ್ತನಿಂದ ವಸ್ವನಂತ, ವಸ್ವನಂತನಿಂದ ಯುಯುಧ, ಯುಯುಧನಿಂದ ಸುಭಾಷಣ, ಸುಭಾಷಣನಿಂದ ಶ್ರುತ, ಶ್ರುತನಿಂದ ಜಯ, ಜಯನಿಂದ ವಿಜಯ, ವಿಜಯನಿಂದ ಋತನೆಂಬ ಪುತ್ರನು ಹುಟ್ಟಿದನು. ॥ ೨೫ ॥

ಶುನಕಸ್ತತ್ಸುತೋ ಜಜ್ಞೇ ವೀತಹವ್ಯೋ ಧೃತಿಸ್ತತಃ ।
ಬಹುಲಾಶ್ವೋ ಧೃತೇಸ್ತಸ್ಯ ಕೃತಿರಸ್ಯ ಮಹಾವಶೀ
॥ ೨೬ ॥

ಏತೇ ವೈ ಮೈಥಿಲಾ ರಾಜನ್ನಾತ್ಮವಿದ್ಯಾವಿಶಾರದಾಃ ।
ಯೋಗೇಶ್ವರಪ್ರಸಾದೇನ ದ್ವಂದ್ವೈರ್ಮುಕ್ತಾ ಗೃಹೇಷ್ವಪಿ
॥ ೨೭ ॥

ಋತನಿಗೆ ಶುನಕ, ಶುನಕನಿಗೆ ವೀತಹವ್ಯ, ವೀತಹವ್ಯನಿಂದ ಧೃತಿ, ಧೃತಿಯಿಂದ ಬಹುಲಾಶ್ವ, ಬಹುಲಾಶ್ವನಿಂದ ಕೃತಿ, ಕೃತಿಗೆ ಮಹಾವಶೀ ಎಂಬ ಪುತ್ರನು ಜನಿಸಿದನು. ॥ ೨೬ ॥ ಪರೀಕ್ಷಿತನೇ ! ಇವರೆಲ್ಲರೂ ಮಿಥಿಲನ ವಂಶದಲ್ಲಿ ಹುಟ್ಟಿದ್ದರಿಂದ ಮೈಥಿಲರೆಂದು ಕರೆಸಿಕೊಂಡರು. ಇವರೆಲ್ಲರೂ ಆತ್ಮಜ್ಞಾನದಿಂದ ಸಂಪನ್ನರಾಗಿದ್ದು ಗೃಹಸ್ಥಾಶ್ರಮದಲ್ಲೇ ಇದ್ದು ಸುಖ-ದುಃಖಾದಿ ದ್ವಂದ್ವಗಳಿಂದ ಮುಕ್ತರಾಗಿದ್ದರು. ಯಾಜ್ಞವಲ್ಕ್ಯಾದಿ ಮಹಾ-ಮಹಾ ಯೋಗೇಶ್ವರರ ಮಹಾನ್ ಕೃಪೆಯು ಇವರ ಮೇಲೆ ಇತ್ತು. ॥ ೨೭ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ನಿಮಿವಂಶಾನುವರ್ಣನಂ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಚಂದ್ರವಂಶದ ವರ್ಣನೆ

ಶ್ರೀಶುಕ ಉವಾಚ

ಅಥಾತಃ ಶ್ರೂಯತಾಂ ರಾಜನ್ವಂಶಃ ಸೋಮಸ್ಯ ಪಾವನಃ ।
ಯಸ್ಮಿನ್ನೈಲಾದಯೋ ಭೂಪಾಃ ಕೀರ್ತ್ಯಂತೇ ಪುಣ್ಯಕೀರ್ತಯಃ
॥ ೧ ॥

ಸಹಸ್ರಶಿರಸಃ ಪುಂಸೋ ನಾಭಿಹ್ರದಸರೋರುಹಾತ್ ।
ಜಾತಸ್ಯಾಸೀತ್ಸುತೋ ಧಾತುರತ್ರಿಃ ಪಿತೃಸಮೋ ಗುಣೈಃ
॥ ೨ ॥

ತಸ್ಯ ದೃಗ್ಭ್ಯೋಽಭವತ್ಪುತ್ರಃ ಸೋಮೋಽಮೃತಮಯಃ ಕಿಲ ।
ವಿಪ್ರೌಷಧ್ಯುಡುಗಣಾನಾಂ ಬ್ರಹ್ಮಣಾ ಕಲ್ಪಿತಃ ಪತಿಃ
॥ ೩ ॥

ಸೋಽಯಜದ್ರಾಜಸೂಯೇನ ವಿಜಿತ್ಯ ಭುವನತ್ರಯಮ್ ।
ಪತ್ನೀಂ ಬೃಹಸ್ಪತೇರ್ದರ್ಪಾತ್ತಾರಾಂ ನಾಮಾಹರದ್ಬಲಾತ್
॥ ೪ ॥

ಯದಾ ಸ ದೇವಗುರುಣಾ ಯಾಚಿತೋಽಭೀಕ್ಷ್ಣಶೋ ಮದಾತ್ ।
ನಾತ್ಯಜತ್ತತ್ಕೃತೇ ಜಜ್ಞೇ ಸುರದಾನವವಿಗ್ರಹಃ
॥ ೫ ॥

ಶುಕ್ರೋ ಬೃಹಸ್ಪತೇರ್ದ್ವೇಷಾದಗ್ರಹೀತ್ಸಾಸುರೋಡುಪಮ್ ।
ಹರೋ ಗುರುಸುತಂ ಸ್ನೇಹಾತ್ಸರ್ವಭೂತಗಣಾವೃತಃ
॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಈಗ ನಾನು ನಿನಗೆ ಪರಮ ಪವಿತ್ರವಾದ ಚಂದ್ರವಂಶದ ಚರಿತ್ರೆಯನ್ನು ಹೇಳುತ್ತೇನೆ. ಈ ವಂಶದಲ್ಲಿ ಪುರೂರವನೇ ಮೊದಲಾದ ದೊಡ್ಡ-ದೊಡ್ಡ ರಾಜರ ಪವಿತ್ರವಾದ ಕೀರ್ತಿಯ ಸಂಕೀರ್ತನವಿದೆ. ॥ ೧ ॥ ಸಹಸ್ರಶೀರ್ಷನಾದ ವಿರಾಟ್ಪುರುಷನಾದ ಶ್ರೀಮನ್ನಾರಾಯಣನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಆವಿರ್ಭವಿಸಿದನು. ಬ್ರಹ್ಮನಿಗೆ ಅತ್ರಿಯು ಮಗನಾದನು. ಅವನು ತನ್ನ ಸದ್ಗುಣಗಳಿಂದ ಬ್ರಹ್ಮನಿಗೆ ಸಮಾನನೇ ಆಗಿದ್ದನು. ॥ ೨ ॥ ಆ ಅತ್ರಿಮಹರ್ಷಿಯ ಕಣ್ಣುಗಳಿಂದ ಅಮೃತಮಯ ಚಂದ್ರನ ಜನ್ಮವಾಯಿತು. ಬ್ರಹ್ಮದೇವರು ಚಂದ್ರನನ್ನು ಬ್ರಾಹ್ಮಣರಿಗೂ, ಔಷಧಿಗಳಿಗೂ, ನಕ್ಷತ್ರಗಳಿಗೂ ಅಧಿಪತಿಯನ್ನಾಗಿಸಿದನು. ॥ ೩ ॥ ಚಂದ್ರನು ಮೂರು ಲೋಕಗಳನ್ನೂ ಜಯಿಸಿ ರಾಜಸೂಯ ಯಜ್ಞವನ್ನು ಮಾಡಿದನು. ಇದರಿಂದ ಕೊಬ್ಬಿದ ಚಂದ್ರನು ಬೃಹಸ್ಪತಿಯ ಪತ್ನಿಯಾದ ತಾರಾದೇವಿಯನ್ನು ಬಲಾತ್ಕಾರಪೂರ್ವಕವಾಗಿ ಅಪಹರಿಸಿದನು. ॥ ೪ ॥ ದೇವಗುರು ಬೃಹಸ್ಪತಿಯು ತನ್ನ ಪತ್ನಿಯನ್ನು ಕಳುಹಿಸಿಕೊಡಲು ಹಲವುಬಾರಿ ಚಂದ್ರನಿಗೆ ಹೇಳಿದನು. ಆದರೆ ಮದದಿಂದ ಕೊಬ್ಬಿಹೋಗಿದ್ದ ಚಂದ್ರನು ಆಕೆಯನ್ನು ಹಿಂದಕ್ಕೆ ಕಳಿಸಲೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಇದೇ ಕಾರಣದಿಂದ ದೇವತೆಗಳಿಗೂ, ದಾನವರಿಗೂ ಘೋರಸಂಗ್ರಾಮವೇರ್ಪಟ್ಟಿತು. ॥ ೫ ॥ ಶುಕ್ರಾಚಾರ್ಯರು ಬೃಹಸ್ಪತ್ಯಾಚಾರ್ಯರ ಮೇಲಿನ ದ್ವೇಷದಿಂದ ಅಸುರರೊಡನೆ ಚಂದ್ರನ ಪಕ್ಷವನ್ನು ವಹಿಸಿದರು. ಮಹಾದೇವನು ಸ್ನೇಹವಶನಾಗಿ ಸಮಸ್ತ ಭೂತಗಣಗಳೊಂದಿಗೆ ತನ್ನ ವಿದ್ಯಾಗುರು ಅಂಗಿರಸ್ಸುವಿನ ಪುತ್ರ ಬೃಹಸ್ಪತಿಯ ಪಕ್ಷವನ್ನು ಸೇರಿದನು. ॥ ೬ ॥

ಸರ್ವದೇವಗಣೋಪೇತೋ ಮಹೇಂದ್ರೋ ಗುರುಮನ್ವಯಾತ್ ।
ಸುರಾಸುರವಿನಾಶೋಽಭೂತ್ ಸಮರಸ್ತಾರಕಾಮಯಃ
॥ ೭ ॥

ನಿವೇದಿತೋಽಥಾಂಗಿರಸಾ ಸೋಮಂ ನಿರ್ಭರ್ತ್ಸ್ಯ ವಿಶ್ವಕೃತ್ ।
ತಾರಾಂ ಸ್ವಭರ್ತ್ರೇ ಪ್ರಾಯಚ್ಛದಂತರ್ವತ್ನೀಮವೈತ್ಪತಿಃ
॥ ೮ ॥

ತ್ಯಜ ತ್ಯಜಾಶು ದುಷ್ಪ್ರಜ್ಞೇ ಮತ್ಕ್ಷೇತ್ರಾದಾಹಿತಂ ಪರೈಃ ।
ನಾಹಂ ತ್ವಾಂ ಭಸ್ಮಸಾತ್ಕುರ್ಯಾಂ ಸ್ತ್ರಿಯಂ ಸಾಂತಾನಿಕಃ ಸತಿ
॥ ೯ ॥

ತತ್ಯಾಜ ವ್ರೀಡಿತಾ ತಾರಾ ಕುಮಾರಂ ಕನಕಪ್ರಭಮ್ ।
ಸ್ಪೃಹಾಮಾಂಗಿರಸಶ್ಚಕ್ರೇ ಕುಮಾರೇ ಸೋಮ ಏವ ಚ
॥ ೧೦ ॥

ಮಮಾಯಂ ನ ತವೇತ್ಯುಚ್ಚೈಸ್ತಸ್ಮಿನ್ವಿವದಮಾನಯೋಃ ।
ಪಪ್ರಚ್ಛುರ್ಋಷಯೋ ದೇವಾ ನೈವೋಚೇ ವ್ರೀಡಿತಾ ತು ಸಾ
॥ ೧೧ ॥

ಕುಮಾರೋ ಮಾತರಂ ಪ್ರಾಹ ಕುಪಿತೋಽಲೀಕಲಜ್ಜಯಾ ।
ಕಿಂ ನ ವೋಚಸ್ಯಸದ್ವೃತ್ತೇ ಆತ್ಮಾವದ್ಯಂ ವದಾಶು ಮೇ
॥ ೧೨ ॥

ಬ್ರಹ್ಮಾ ತಾಂ ರಹ ಆಹೂಯ ಸಮಪ್ರಾಕ್ಷೀಚ್ಚ ಸಾಂತ್ವಯನ್ ।
ಸೋಮಸ್ಯೇತ್ಯಾಹ ಶನಕೈಃ ಸೋಮಸ್ತಂ ತಾವದಗ್ರಹೀತ್
॥ ೧೩ ॥

ತಸ್ಯಾತ್ಮಯೋನಿರಕೃತ ಬುಧ ಇತ್ಯಭಿಧಾಂ ನೃಪ ।
ಬುಧ್ಯಾ ಗಂಭೀರಯಾ ಯೇನ ಪುತ್ರೇಣಾಪೋಡುರಾಣ್ಮುದಮ್
॥ ೧೪ ॥

ತತಃ ಪುರೂರವಾ ಜಜ್ಞೇ ಇಲಾಯಾಂ ಯ ಉದಾಹೃತಃ ।
ತಸ್ಯ ರೂಪಗುಣೌದಾರ್ಯಶೀಲದ್ರವಿಣವಿಕ್ರಮಾನ್
॥ ೧೫ ॥

ದೇವೇಂದ್ರನೂ ಕೂಡ ಸಮಸ್ತ ದೇವತೆಗಳೊಂದಿಗೆ ತನ್ನ ಗುರುವಾದ ಬೃಹಸ್ಪತಿಯ ಪಕ್ಷವನ್ನೇ ವಹಿಸಿದನು. ಈ ಪ್ರಕಾರ ತಾರೆಯ ನಿಮಿತ್ತದಿಂದ ದೇವಾಸುರರಲ್ಲಿ ಸಂಹಾರಕ್ಕೆ ಕಾರಣವಾದ ಘೋರ ಸಂಗ್ರಾಮವು ಪ್ರಾರಂಭವಾಯಿತು. ॥ ೭ ॥

ಬಳಿಕ ಅಂಗೀರಸ ಮಹರ್ಷಿಯು ಬ್ರಹ್ಮದೇವರ ಬಳಿಗೆ ಬಂದು ಸರ್ವವಿನಾಶಕರವಾದ ಈ ಯುದ್ಧವನ್ನು ನಿಲ್ಲಿಸುವಂತೆ ಪ್ರಾರ್ಥಿಸಿಕೊಂಡನು. ವಿಶ್ವಕರ್ತೃವಾದ ಬ್ರಹ್ಮನು ಚಂದ್ರನನ್ನು ಗದರಿಸಿ ತಾರಾದೇವಿಯನ್ನು ಆಕೆಯ ಪತಿಯಾದ ಬೃಹಸ್ಪತಿಗೆ ಒಪ್ಪಿಸುವಂತೆ ಮಾಡಿದನು. ತಾರೆಯು ಗರ್ಭವತಿಯಾಗಿರುವಳೆಂಬುದನ್ನು ಅರಿತಾಗ ಬೃಹಸ್ಪತಿಯು ತನ್ನ ಪತ್ನಿಗೆ ಹೇಳಿದನು – ॥ ೮ ॥ 'ಎಲೈ ದುಷ್ಟಳೇ! ನನ್ನ ಕ್ಷೇತ್ರದಲ್ಲಿ ಬೇರೆಯವರ ಗರ್ಭವಿದೆ. ಅದನ್ನು ನೀನೀಗಲೇ ಪರಿತ್ಯಜಿಸು. ನಿನ್ನಲ್ಲಿ ಕ್ಷಣಮಾತ್ರವೂ ಅದು ಇರಬಾರದು. ಭಯಪಡಬೇಡ, ನಾನು ನಿನ್ನನ್ನು ದಹಿಸಹೋಗುವುದಿಲ್ಲ. ಏಕೆಂದರೆ, ನೀನು ಸ್ತ್ರೀಯಾಗಿರುವೆ. ಮೇಲಾಗಿ ನಿನ್ನಲ್ಲಿ ಸಂತಾನ ಪಡೆಯುವ ಆಶಯವೂ ನನಗಿದೆ. ದೇವಿಯಾದ್ದರಿಂದ ನೀನು ನಿರ್ದೋಷಳೂ ಆಗಿರುವೆ. ॥ ೯ ॥ ಪತಿಯ ಮಾತನ್ನು ಕೇಳಿ ತಾರೆಯು ಅತ್ಯಂತ ನಾಚಿಕೊಂಡಳು. ಆಕೆಯು ಚಿನ್ನದ ಕಾಂತಿಯಿಂದ ಕೂಡಿದ ಶಿಶುವನ್ನು ಒಡನೆಯೇ ವಿಸರ್ಜಿಸಿದಳು. ಶಿಶುವಿನ ದಿವ್ಯಕಾಂತಿಯನ್ನು ನೋಡಿ ಬೃಹಸ್ಪತಿ ಮತ್ತು ಚಂದ್ರ ಇಬ್ಬರೂ ಮೋಹಿತರಾಗಿ ಈ ಶಿಶುವು ತನಗೆ ಸೇರಬೇಕೆಂದು ಆಶಿಸಿದರು. ॥ ೧೦ ॥ ಆಶಿಸಿದ್ದು ಮಾತ್ರವಲ್ಲ 'ಇದು ನನ್ನ ಮಗು, ನಿನ್ನದಲ್ಲ' ಎಂದು ಗಟ್ಟಿಯಾಗಿ ಜಗಳಾಡಿದರು. ಈ ವಿವಾದವನ್ನು ಬಗೆಹರಿಸಲು ದೇವತೆಗಳು, ಋಷಿಗಳು ತಾರೆಯ ಬಳಿಯಲ್ಲಿ ಕೇಳಿದರು – 'ಈ ಮಗು ಯಾರಿಗೆ ಸೇರಿದುದು' ಆದರೆ ತಾರೆಯು ನಾಚಿಕೆಯಿಂದಾಗಿ ಏನೂ ಹೇಳಲಿಲ್ಲ ॥ ೧೧ ॥ ತನ್ನ ತಾಯಿಯ ತೋರಿಕೆಯ ಲಜ್ಜೆಯಿಂದ ಕುಪಿತನಾದ ಆ ಬಾಲಕನು ತಾಯಿಗೆ ಹೇಳಿದನು – 'ಎಲೈ ದುಷ್ಟಳೇ! ನೀನೇಕೆ ಮಾತಾಡುತ್ತಿಲ್ಲ? ಕುತ್ಸಿತವಾದ ನಿನ್ನ ನಡವಳಿಕೆಯನ್ನು ಬೇಗನೇ ನನಗೆ ಹೇಳು. ಯಾರ ಮಗನೆಂದು ನಾನಾದರೂ ತಿಳಿಯಬೇಡವೇ? ॥ ೧೨ ॥ ಅದೇ ಸಮಯದಲ್ಲಿ ಬ್ರಹ್ಮದೇವರು ತಾರೆಯನ್ನು ಏಕಾಂತಸ್ಥಳಕ್ಕೆ ಕೊಂಡೊಯ್ದು ಆಕೆಯನ್ನು ಸಾಂತ್ವನಗೊಳಿಸಿ ಕೇಳಿದರು. ಆಗ ತಾರೆಯು ಮೆಲ್ಲನೆ 'ಇದು ಚಂದ್ರನಿಗೆ ಸೇರಿದುದು' ಎಂದು ಹೇಳಿದಳು. ಇದರಿಂದಾಗಿ ಚಂದ್ರನು ಆ ಬಾಲಕನನ್ನು ಕರೆದುಕೊಂಡು ಹೊರಟನು. ॥ ೧೩. ॥ ಪರೀಕ್ಷಿತನೇ! ಬ್ರಹ್ಮದೇವರು ಆ ಬಾಲಕನಿಗೆ ಬುಧನೆಂದು ಹೆಸರಿಟ್ಟರು. ಏಕೆಂದರೆ, ಅವನ ಬುದ್ಧಿಯು ಬಹಳ ಗಂಭೀರವಾಗಿದ್ದಿತು. ಇಂತಹ ಪುತ್ರನನ್ನು ಪಡೆದು ಚಂದ್ರನಿಗೆ ಬಹಳ ಆನಂದವಾಯಿತು. ॥ ೧೪ ॥

ಪರೀಕ್ಷಿದ್ರಾಜನೇ! ಬುಧನಿಗೆ ಇಲೆಯ ಗರ್ಭದಿಂದ ಪುರೂರವನು ಹುಟ್ಟಿದನು ಎಂಬುದನ್ನೂ ನಾನು ಹಿಂದೆಯೇ ಹೇಳಿಬಿಟ್ಟಿರುವೆನು. ಒಂದು ದಿನ ದೇವೇಂದ್ರನ ಸಭೆಯಲ್ಲಿ ದೇವಋಷಿಗಳಾದ ನಾರದರು ಬುಧನ ಪುತ್ರನಾದ ಪುರೂರವನ ರೂಪ, ಗುಣ, ಉದಾರತೆ, ಶೀಲ–ಸ್ವಭಾವ, ಧನ–ಸಂಪತ್ತು, ಪರಾಕ್ರಮ ಇವುಗಳನ್ನು

ಶ್ರುತ್ವೋರ್ವಶೀಂದ್ರಭವನೇ ಗೀಯಮಾನಾನುರರ್ಷಿಣಾ ।
ತದಂತಿಕಮುಪೇಯಾಯ ದೇವೀ ಸ್ಮರಶರಾರ್ದಿತಾ
॥ ೧೬ ॥

ಮಿತ್ರಾವರುಣಯೋಃ ಶಾಪಾದಾಪನ್ನಾನರಲೋಕತಾಮ್ ।
ನಿಶಮ್ಯ ಪುರುಷಶ್ರೇಷ್ಠಂ ಕಂದರ್ಪಮಿವ ರೂಪಿಣಮ್ ।
ಧೃತಿಂ ವಿಷ್ಟಭ್ಯ ಲಲನಾ ಉಪತಸ್ಥೇ ತದಂತಿಕೇ
॥ ೧೭ ॥

ಸ ತಾಂ ವಿಲೋಕ್ಯ ನೃಪತಿರ್ಹರ್ಷೇಣೋತ್ಫುಲ್ಲಲೋಚನಃ ।
ಉವಾಚ ಶ್ಲಕ್ಷ್ಣಯಾ ವಾಚಾ ದೇವೀಂ ಹೃಷ್ಟತನೂರುಹಃ
॥ ೧೮ ॥

ರಾಜೋವಾಚ

ಸ್ವಾಗತಂ ತೇ ವರಾರೋಹೇ ಆಸ್ಯತಾಂ ಕರವಾಮ ಕಿಮ್ ।
ಸಂರಮಸ್ವ ಮಯಾ ಸಾಕಂ ರತಿರ್ನೌ ಶಾಶ್ವತೀಃ ಸಮಾಃ
॥ ೧೯ ॥

ಊರ್ವಶ್ಯುವಾಚ

ಕಸ್ಯಾಸ್ತ್ವಯಿ ನ ಸಜ್ಜೇತ ಮನೋ ದೃಷ್ಟಿಶ್ಚ ಸುಂದರ ।
ಯದಂಗಾಂತರಮಾಸಾದ್ಯ ಚ್ಯವತೇ ಹ ರಿರಂಸಯಾ
॥ ೨೦ ॥

ಏತಾವುರಣಕೌ ರಾಜನ್ ನ್ಯಾಸೌ ರಕ್ಷಸ್ವ ಮಾನದ ।
ಸಂರಂಸ್ಯೇ ಭವತಾ ಸಾಕಂ ಶ್ಲಾಘ್ಯಃ ಸ್ತ್ರೀಣಾಂ ವರಃ ಸ್ಮೃತಃ
॥ ೨೧ ॥

ಘೃತಂ ಮೇ ವೀರ ಭಕ್ಷ್ಯಂ ಸ್ಯಾನ್ನೇಕ್ಷೇ ತ್ವಾನ್ಯತ್ರ ಮೈಥುನಾತ್ ।
ವಿವಾಸಸಂ ತತ್ತಥೇತಿ ಪ್ರತಿಪೇದೇ ಮಹಾಮನಾಃ
॥ ೨೨ ॥

ಅಹೋ ರೂಪಮಹೋ ಭಾವೋ ನರಲೋಕ ವಿಮೋಹನಮ್ ।
ಕೋ ನ ಸೇವೇತ ಮನುಜೋ ದೇವೀಂ ತ್ವಾಂ ಸ್ವಯಮಾಗತಾಮ್
॥ ೨೩ ॥

ತಯಾ ಸ ಪುರುಷಶ್ರೇಷ್ಠೋ ರಮಯಂತ್ಯಾ ಯಥಾರ್ಹತಃ ।
ರೇಮೇ ಸುರವಿಹಾರೇಷು ಕಾಮಂ ಚೈತ್ರರಥಾದಿಷು
॥ ೨೪ ॥

ಕೊಂಡಾಡಿದರು. ಇದನ್ನು ಕೇಳಿದ ಊರ್ವಶಿಯ ಮನಸ್ಸಿನಲ್ಲಿ ಕಾಮಭಾವವು ಉದಯಿಸಿತು. ಆದರಿಂದ ಪೀಡಿತಳಾಗಿ ಆ ದೇವಾಂಗನೆಯು ಪುರೂರವನ ಬಳಿಗೆ ಬಂದುಬಿಟ್ಟಳು. ॥ ೧೫-೧೬ ॥ ಮಿತ್ರಾವರುಣರು ಊರ್ವಶಿಗೆ ಕೊಟ್ಟಿದ್ದ ಶಾಪವೂ ಕೂಡ ಅವಳು ಭೂಲೋಕಕ್ಕೆ ಬರಲು ಒಂದು ಕಾರಣವಾಗಿದ್ದರೂ, ಪುರುಷಶಿರೋಮಣಿ ಪುರೂರವನು ಮೂರ್ತಿಮಂತ ಮನ್ಮಥನೇ ಆಗಿರುವನೆಂದು ಕೇಳಿ ಸುರಸುಂದರಿಯಾದ ಊರ್ವಶಿಯು ಧೈರ್ಯ ವಹಿಸಿ ತಾನಾಗಿಯೇ ಪುರೂರವನ ಬಳಿಗೆ ಆಗಮಿಸಿದಳು. ॥ ೧೭ ॥ ದೇವಾಂಗನೆಯಾದ ಊರ್ವಶಿಯನ್ನು ಕಂಡು ಪುರೂರವರಾಜನ ಕಣ್ಣುಗಳು ಅರಳಿದವು. ಶರೀರವು ರೋಮಾಂಚನವಾಯಿತು. ಅವನು ಸವಿಮಾತುಗಳಿಂದ ಇಂತೆಂದನು – ॥ ೧೮ ॥

ರಾಜಾ ಪುರೂರವನು ಕೇಳಿದನು – ಎಲೈ ಸುಂದರಿಯೇ! ನಿನ್ನನ್ನು ನಾನು ಸ್ವಾಗತಿಸುತ್ತೇನೆ. ಇಲ್ಲಿಯೇ ನನ್ನ ಬಳಿಯಲ್ಲಿ ಕುಳಿತುಕೋ. ನಾನು ನಿನಗೇನು ಸೇವೆ ಮಾಡಲಿ? ಒಲಿದು ಬಂದಿರುವ ಅರಗಿಣಿಯೇ! ನನ್ನೊಡನೆ ವಿಹರಿಸು. ನಮ್ಮಿಬ್ಬರ ಈ ವಿಹಾರವು ಅನಂತಕಾಲದವರೆಗೂ ನಡೆಯುತ್ತಲೇ ಇರಲಿ. ॥ ೧೯ ॥

ಊರ್ವಶಿಯು ಹೇಳಿದಳು – ಸುಂದರಾಂಗನೇ! ನೀನು ಸೌಂದರ್ಯದ ಮೂರ್ತಸ್ವರೂಪನಾಗಿರುವೆ. ದೃಷ್ಟಿ ಮತ್ತು ಮನಸ್ಸುಗಳನ್ನು ನಿನ್ನಂತಹ ಕಡುಚೆಲುವನಲ್ಲಿ ಲೀನಗೊಳಿಸದೆ ಇರುವ ಕಾಮಿನಿಯರು ಯಾರಿದ್ದಾರೆ? ನಿನ್ನ ಸಮೀಪಕ್ಕೆ ಬಂದಿರುವ ನನ್ನ ಮನಸ್ಸು ನಿನ್ನೊಡನೆ ಕ್ರೀಡಿಸಲು ತವಕಪಡುತ್ತಿದೆ. ॥ ೨೦ ॥ ರಾಜನೇ! ಯಾವ ಪುರುಷನು ರೂಪದಿಂದಲೂ, ಗುಣದಿಂದಲೂ, ಪ್ರಶಂಸನೀಯನಾಗಿರುವನೋ ಅಂತಹವನೇ ಸ್ತ್ರೀಯರಿಗೆ ಅಭೀಷ್ಟನಾಗಿರುತ್ತಾನೆ. ಆದುದರಿಂದ ನಾನು ಅವಶ್ಯವಾಗಿ ನಿನ್ನ ಅಭೀಷ್ಟವನ್ನು ಈಡೇರಿಸಿಕೊಡುತ್ತೇನೆ. ಆದರೆ ಪ್ರಿಯತಮನೇ! ನನ್ನದೊಂದು ಸಣ್ಣ ನಿಬಂಧನೆಯಿದೆ. ನಾನು ನಿನ್ನಲ್ಲಿ ಅಡವಾಗಿ ಎರಡು ಮೇಕೆಗಳನ್ನು ಒಪ್ಪಿಸುತ್ತೇನೆ. ನೀನು ಅವನ್ನು ರಕ್ಷಿಸಬೇಕು. ॥ ೨೧ ॥ ವೀರಶಿರೋಮಣಿಯೇ! ನಾನು ಕೇವಲ ತುಪ್ಪವನ್ನು ಮಾತ್ರ ತಿನ್ನುವೆನು. ಮೈಥುನದ ಸಮಯವಲ್ಲದೆ ಬೇರೆ ಯಾವ ಸಮಯದಲ್ಲೂ ನಿನ್ನನ್ನು ವಿವಸ್ತ್ರನಾಗಿ ನೋಡಲು ಅವಕಾಶವಿರಬಾರದು. ಪುರೂರವನು 'ಹಾಗೆಯೇ ಆಗಲಿ' ಎಂದು ಹೇಳಿ ಅವಳ ನಿಬಂಧನೆಯನ್ನು ಸ್ವೀಕರಿಸಿದನು. ॥ ೨೨ ॥ ಮತ್ತೆ ಊರ್ವಶಿಯ ಬಳಿ ಹೇಳಿದನು – ಆಹಾ! ಎಂತಹ ರೂಪ! ಎಂತಹ ಭಾವ! ಎಂತಹ ಪ್ರೀತಿ! ಎಂತಹ ವಿಶ್ವಾಸ! ಇವೆಲ್ಲವು ಮನುಷ್ಯಲೋಕವನ್ನೇ ಮೋಹಿತಗೊಳಿಸುವಂತಹುದು. ದೇವೀ! ಕೃಪೆಮಾಡಿ ನೀನಾಗಿ ಇಲ್ಲಿಗೆ ಬಂದಿರುವೆ. ಹಾಗಿರುವಾಗ ನಿನ್ನನ್ನು ಸೇವಿಸದ ಮನುಷ್ಯನು ಯಾರು ತಾನೇ ಇರಬಲ್ಲನು? ॥ ೨೩ ॥

ಪರೀಕ್ಷಿತನೇ! ಆಗ ಊರ್ವಶಿಯು ಕಾಮಶಾಸ್ತ್ರಾನುಸಾರವಾಗಿ ಪುರುಷಶ್ರೇಷ್ಠ ಪುರೂರವನೊಂದಿಗೆ ವಿಹರಿಸತೊಡಗಿದಳು. ಅವನೂ ಕೂಡ ದೇವತೆಗಳ ವಿಹಾರಸ್ಥಳವಾದ ಚೈತ್ರರಥ, ನಂದನವನ ಮೊದಲಾದ ಉಪವನಗಳಲ್ಲಿ ಅವಳೊಂದಿಗೆ ಸ್ವಚ್ಛಂದವಾಗಿ ವಿಹರಿಸಿದನು. ॥ ೨೪ ॥

ರಮಮಾಣಸ್ತಯಾ ದೇವ್ಯಾ ಪದ್ಮಕಿಂಜಲ್ಕಗಂಧಯಾ ।
ತನ್ಮುಖಾಮೋದಮುಷಿತೋ ಮುಮುದೇऽಹರ್ಗಣಾನ್ಬಹೂನ್
॥ ೨೫ ॥

ಅಪಶ್ಯನ್ನೂರ್ವಶೀಮಿಂದ್ರೋ ಗಂಧರ್ವಾನ್ಸಮಚೋದಯತ್ ।
ಉರ್ವಶೀರಹಿತಂ ಮಹ್ಯಮಾಸ್ಥಾನಂ ನಾತಿಶೋಭತೇ
॥ ೨೬ ॥

ತೇ ಉಪೇತ್ಯ ಮಹಾರಾತ್ರೇ ತಮಸಿ ಪ್ರತ್ಯುಪಸ್ಥಿತೇ ।
ಉರ್ವಶ್ಯಾ ಉರಣೌ ಜಹ್ರುರ್ನ್ಯಸ್ತೌ ರಾಜನಿ ಜಾಯಯಾ
॥ ೨೭ ॥

ನಿಶಮ್ಯಾಕ್ರಂದಿತಂ ದೇವೀ ಪುತ್ರಯೋರ್ನೀಯಮಾನಯೋಃ ।
ಹತಾಸ್ಮ್ಯಹಂ ಕುನಾಥೇನ ನಪುಂಸಾ ವೀರಮಾನಿನಾ
॥ ೨೮ ॥

ಯದ್ವಿಶ್ರಂಭಾದಹಂ ನಷ್ಟಾ ಹೃತಾಪತ್ಯಾ ಚ ದಸ್ಯುಭಿಃ ।
ಯಃ ಶೇತೇ ನಿಶಿ ಸಂತ್ರಸ್ತೋ ಯಥಾ ನಾರೀ ದಿವಾ ಪುಮಾನ್
॥ ೨೯ ॥

ಇತಿ ವಾಕ್ಸಾಯಕೈರ್ವಿದ್ಧಃ ಪ್ರತೋತ್ತ್ರೈರಿವ ಕುಂಜರಃ ।
ನಿಶಿ ನಿಸ್ತ್ರಿಂಶಮಾದಾಯ ವಿವಸ್ತ್ರೋऽಭ್ಯದ್ರವದ್ರುಷಾ
॥ ೩೦ ॥

ತೇ ವಿಸೃಜ್ಯೋರಣೌ ತತ್ರ ವ್ಯದ್ಯೋತಂತ ಸ್ಮ ವಿದ್ಯುತಃ ।
ಆದಾಯ ಮೇಷಾವಾಯಾಂತಂ ನಗ್ನಮೈಕ್ಷತ ಸಾ ಪತಿಮ್
॥ ೩೧ ॥

ಐಲೋऽಪಿ ಶಯನೇ ಜಾಯಾಮಪಶ್ಯನ್ವಿಮನಾ ಇವ ।
ತಚ್ಚಿತ್ತೋ ವಿಹ್ವಲಃ ಶೋಚನ್ಬಭ್ರಾಮೋನ್ಮತ್ತವನ್ಮಹೀಮ್
॥ ೩೨ ॥

ಸ ತಾಂ ವೀಕ್ಷ್ಯ ಕುರುಕ್ಷೇತ್ರೇ ಸರಸ್ವತ್ಯಾಂ ಚ ತತ್ಸಖೀಃ ।
ಪಂಚ ಪ್ರಹೃಷ್ಟವದನಾಃ ಪ್ರಾಹ ಸೂಕ್ತಂ ಪುರೂರವಾಃ
॥ ೩೩ ॥

ಅಹೋ ಜಾಯೇ ತಿಷ್ಠ ತಿಷ್ಠ ಘೋರೇ ನ ತ್ಯಕ್ತುಮರ್ಹಸಿ ।
ಮಾಂ ತ್ವಮದ್ಯಾಪ್ಯನಿರ್ವೃತ್ಯ ವಚಾಂಸಿ ಕೃಣವಾವಹೈ
॥ ೩೪ ॥

ದೇವಿ ಊರ್ವಶಿಯ ಶರೀರದಿಂದ ಕಮಲಕೇಸರದಂತಹ ಸುಗಂಧವು ಸೂಸುತ್ತಿತ್ತು. ಅವಳೊಡನೆ ಪುರೂರವನು ಅನೇಕ ವರ್ಷಗಳ ಕಾಲ ಆನಂದವಾಗಿ ವಿಹರಿಸಿದನು. ಅವನು ಆಕೆಯ ಮುಖಸುರಭಿಯಿಂದ ಮರುಳಾಗಿ ಬಿಟ್ಟಿದ್ದನು. ॥ ೨೫ ॥ ಇತ್ತ ಸ್ವರ್ಗದಲ್ಲಿ ಊರ್ವಶಿಯು ಇಲ್ಲದಿರುವುದನ್ನು ನೋಡಿದ ಇಂದ್ರನು ಗಂಧರ್ವರಿಗೆ – 'ಊರ್ವಶಿಯು ಎಲ್ಲಿಯೇ ಇರಲಿ ಅವಳನ್ನು ಕರೆತನ್ನಿರಿ, ಅವಳಿಲ್ಲದೆ ಈ ಸ್ವರ್ಗವು ಶೋಭಿಸುವುದಿಲ್ಲ' ಎಂದು ಹೇಳಿ ಅವರನ್ನೂ ಕಳಿಸಿದನು. ॥ ೨೬ ॥ ಆ ಗಂಧರ್ವರು ಅರ್ಧ ರಾತ್ರಿಯ ಅಂಧಕಾರದಲ್ಲಿ – ಊರ್ವಶಿಯು ರಾಜನಲ್ಲಿ ಅಡವಾಗಿ ಇಟ್ಟಿದ್ದ ಎರಡೂ ಮೇಕೆಗಳನ್ನು ಕದ್ದುಕೊಂಡುಹೋದರು. ॥ ೨೭ ॥ ತನ್ನ ಪುತ್ರರಂತೆ ಇದ್ದ ಪ್ರಿಯ ಮೇಕೆಗಳ ಬೇ-ಬೇ ಧ್ವನಿಯನ್ನು ಕೇಳಿ, ಗಂಧರ್ವರು ಅವನ್ನು ಕದ್ದುಕೊಂಡು ಹೋಗುವುದನ್ನು ನೋಡಿ, ಎದ್ದು ಅಯ್ಯೋ ! ಈ ಹೇಡಿಯನ್ನು ನಾನು ಪತಿಯನ್ನಾಗಿಸಿಕೊಂಡು ಸತ್ತೆ ! ನಾನು ಕೆಟ್ಟೆ! ಇವನಿಂದ ನನ್ನ ಮೇಕೆಗಳನ್ನೂ ರಕ್ಷಿಸ ಲಾಗಲಿಲ್ಲವಲ್ಲ! ಎಂದು ಮರುಗಿದಳು.॥ ೨೮ ॥ ಇವನ ಮೇಲೆ ವಿಶ್ವಾಸವಿಟ್ಟಿದ್ದರಿಂದ ಕಳ್ಳರು ನನ್ನ ಮರಿಗಳನ್ನು ಕದ್ದುಕೊಂಡು ಹೋಗುತ್ತಿದ್ದಾರೆ. ನಾನಾದರೋ ಹಾಳಾದೆ. ನೋಡಿರಲ್ಲ! ಇವನು ಹಗಲಲ್ಲಿ ಗಂಡಸಾಗಿದ್ದು ರಾತ್ರಿಯಲ್ಲಿ ಸ್ತ್ರೀಯರಂತೆ ಹೆದರಿ ಮಲಗಿರುತ್ತಾನೆ. ॥ ೨೯ ॥ ಪರೀಕ್ಷಿತನೇ ! ಆನೆಯನ್ನು ಅಂಕುಶದಿಂದ ತಿವಿಯುವಂತೆ ಊರ್ವಶಿಯು ತನ್ನ ವಾಗ್ಬಾಣಗಳಿಂದ ರಾಜನನ್ನು ಘಾಸಿಗೊಳಿಸಿದಳು. ರಾಜಾ ಪುರೂರವನಿಗೆ ಭಾರೀ ಕೋಪ ಬಂತು ಹಾಗೂ ಕೈಯಲ್ಲಿ ಖಡ್ಗವನ್ನೆತ್ತಿಕೊಂಡು ವಿವಸ್ತ್ರನಾಗಿಯೇ ಗಂಧರ್ವರತ್ತ ಓಡಿದನು. ॥ ೩೦ ॥ ಪುರೂರವನು ಅಟ್ಟಿಸಿಕೊಂಡು ಬರುವುದನ್ನು ನೋಡಿ ಮೇಕೆಗಳನ್ನು ಅಲ್ಲೇ ಬಿಟ್ಟು ಗಂಧರ್ವರು ಮಿಂಚಿನಂತೆ ಪ್ರಕಾಶಿಸಿದರು. ರಾಜನು ಮೇಕೆಗಳನ್ನು ತಂದು ಮರಳಿಸಿದಾಗ, ಊರ್ವಶಿಯು ಆ ಪ್ರಕಾಶದಲ್ಲಿ ಅವನನ್ನು ವಿವಸ್ತ್ರನಾಗಿರುವುದನ್ನು ನೋಡಿದಳು. ಸರಿ ! ಆ ಕ್ಷಣದಲ್ಲೇ ಆಕೆಯು ಪುರೂರವನನ್ನು ಬಿಟ್ಟು ಹೊರಟುಹೋದಳು. ॥ ೩೧ ॥

ಪರೀಕ್ಷಿತನೇ ! ಪುರೂರವನು ಶಯನಾಗಾರದಲ್ಲಿ ತನ್ನ ಪ್ರಿಯ ತಮೆಯಾದ ಊರ್ವಶಿಯನ್ನು ಕಾಣದಿದ್ದಾಗ ಅವನಿಗೆ ದುಃಖ ವುಂಟಾಯಿತು. ಅವನ ಮನಸ್ಸು ಊರ್ವಶಿಯಲ್ಲೇ ನೆಟ್ಟಿತ್ತು. ಅವನು ಅವಳಿಗಾಗಿ ಶೋಕದಿಂದ ವಿಹ್ವಲನಾಗಿ ಹುಚ್ಚನಂತೆ ಭೂಮಂಡಲದಲ್ಲೆಲ್ಲ ಅಲೆದಾಡತೊಡಗಿದನು. ॥ ೩೨ ॥

ಹೀಗೆ ಅಲೆಯುತ್ತಿರುವಾಗ ಒಂದು ದಿನ ಕುರುಕ್ಷೇತ್ರದಲ್ಲಿ ಸರಸ್ವತೀ ನದೀತೀರದಲ್ಲಿ ಅವನು ಊರ್ವಶಿಯನ್ನೂ ಮತ್ತು ಪ್ರಸನ್ನ ಮುಖಿಯರಾದ ಆಕೆಯ ಐವರು ಸಖಿಯರನ್ನೂ ನೋಡಿದನು. ಆಗ ಆನಂದತುಂದಿಲನಾಗಿ ಅವನು ಸವಿಮಾತುಗಳಿಂದ ನುಡಿದನು. ॥ ೩೩ ॥ ಪ್ರಿಯೇ ! ಸ್ವಲ್ಪಹೊತ್ತು ನಿಲ್ಲು! ಒಮ್ಮೆ ನನ್ನ ಮಾತನ್ನೂ ಆಲಿಸು. ಕಠೋರವಾದ ಮನಸ್ಸನ್ನು ಹೊಂದಿರುವವಳೇ ! ಇಂದು ನೀನು ನನ್ನನ್ನು ಸುಖಿಯನ್ನಾಗಿ ಮಾಡದೆ ಖಂಡಿತವಾಗಿ ಹೋಗಬಾರದು. ಕ್ಷಣಕಾಲವಾದರೂ ನಿಲ್ಲು. ನಾವಿಬ್ಬರು ಕಲೆತು ಸ್ವಲ್ಪ ಹೊತ್ತಾದರೂ ಮಾತಾಡೋಣ ॥ ೩೪ ॥

ಸುದೇಹೋಽಯಂ ಪತತ್ಯತ್ರ ದೇವಿ ದೂರಂ ಹೃತಸ್ತ್ವಯಾ ।
ಖಾದಂತ್ಯೇನಂ ವೃಕಾ ಗೃಧ್ರಾಸ್ತವ ಪ್ರಸಾದಸ್ಯ ನಾಸ್ಪದಮ್
॥ ೩೫ ॥

ಊರ್ವಶ್ಯುವಾಚ

ಮಾ ಮೃಥಾಃ ಪುರುಷೋಽಸಿ ತ್ವಂ ಮಾ ಸ್ಮ ತ್ವಾದ್ಯುರ್ವೃಕಾ ಇಮೇ ।
ಕ್ವಾಪಿ ಸಖ್ಯಂ ನ ವೈ ಸ್ತ್ರೀಣಾಂ ವೃಕಾಣಾಂ ಹೃದಯಂ ಯಥಾ
॥ ೩೬ ॥

ಸ್ತ್ರಿಯೋ ಹ್ಯಕರುಣಾಃ ಕ್ರೂರಾ ದುರ್ಮರ್ಷಾಃ ಪ್ರಿಯಸಾಹಸಾಃ ।
ಘ್ನಂತ್ಯಲ್ಪಾರ್ಥೇಽಪಿ ವಿಶ್ರಬ್ಧಂ ಪತಿಂ ಭ್ರಾತರಮಪ್ಯುತ
॥ ೩೭ ॥

ವಿಧಾಯಾಲೀಕವಿಶ್ರಂಭಮಜ್ಞೇಷು ತ್ಯಕ್ತಸೌಹೃದಾಃ ।
ನವಂ ನವಮಭೀಪ್ಸಂತ್ಯಃ ಪುಂಶ್ಚಲ್ಯಃ ಸ್ವೈರವೃತ್ತಯಃ
॥ ೩೮ ॥

ಸಂವತ್ಸರಾಂತೇ ಹಿ ಭವಾನೇಕರಾತ್ರಂ ಮಯೇಶ್ವರ ।
ವತ್ಸ್ಯತ್ಯಪತ್ಯಾನಿ ಚ ತೇ ಭವಿಷ್ಯಂತ್ಯಪರಾಣಿ ಭೋಃ
॥ ೩೯ ॥

ಆಂತರ್ವತ್ನೀಮುಪಾಲಕ್ಷ್ಯ ದೇವೀಂ ಸ ಪ್ರಯಯೌ ಪುರಮ್ ।
ಪುನಸ್ತತ್ರ ಗತೋಽಬ್ದಾಂತೇ ಉರ್ವಶೀಂ ವೀರಮಾತರಮ್
॥ ೪೦ ॥

ಉಪಲಭ್ಯ ಮುದಾ ಯುಕ್ತಃ ಸಮುವಾಸ ತಯಾ ನಿಶಾಮ್ ।
ಅಥೈನಮುರ್ವಶೀ ಪ್ರಾಹ ಕೃಪಣಂ ವಿರಹಾತುರಮ್
॥ ೪೧ ॥

ಗಂಧರ್ವಾನುಪಧಾವೇಮಾಂಸ್ತುಭ್ಯಂ ದಾಸ್ಯಂತಿ ಮಾಮಿತಿ ।
ತಸ್ಯ ಸಂಸ್ತುವತಸ್ತುಷ್ಟಾ ಅಗ್ನಿಸ್ಥಾಲೀಂ ದದುರ್ನೃಪ ।
ಉರ್ವಶೀಂ ಮನ್ಯಮಾನಸ್ತಾಂ ಸೋಽಬುಧ್ಯತ ಚರನ್ವನೇ
॥ ೪೨ ॥

ಸ್ಥಾಲೀಂ ನ್ಯಸ್ಯ ವನೇ ಗತ್ವಾ ಗೃಹಾನಾಧ್ಯಾಯತೋ ನಿಶಿ ।
ತ್ರೇತಾಯಾಂ ಸಂಪ್ರವೃತ್ತಾಯಾಂ ಮನಸಿ ತ್ರಯ್ಯವರ್ತತ
॥ ೪೩ ॥

ದೇವೀ ! ಈಗ ಈ ಶರೀರದ ಮೇಲೆ ನಿನ್ನ ಕೃಪಾಪ್ರಸಾದವು ಉಳಿಯಲಿಲ್ಲ. ಇದರಿಂದ ನೀನು ಇದನ್ನು ದೂರಕ್ಕೆಸೆದು ಬಿಟ್ಟೆ. ಆದ್ದರಿಂದ ನನ್ನ ಈ ಸುಂದರ ಶರೀರವು ಈಗಲೇ ಬಿದ್ದು ಹೋಗುವುದು. ನೀನು ನೋಡು- ನೋಡುತ್ತಿರುವಾಗಲೇ ಇದನ್ನು ತೋಳಗಳು, ಹದ್ದುಗಳು ತಿಂದುಬಿಡುವುವು. ॥ ೩೫ ॥

ಊರ್ವಶಿಯು ಹೇಳಿದಳು – ರಾಜನೇ ! ನೀನು ಪುರುಷನಾಗಿರುವೆ. ಈ ಪ್ರಕಾರವಾಗಿ ಸಾಯಬೇಡ. ಸತ್ತನಂತರ ತೋಳಗಳು ನಿನ್ನನ್ನು ತಿನ್ನುವುದು ಬೇಡ. ಸ್ತ್ರೀಯರಲ್ಲಿ ಯಾರೊಂದಿಗೂ ನಿಜವಾದ ಮೈತ್ರಿ ಇರುವುದಿಲ್ಲ. ಸ್ತ್ರೀಯರ ಹೃದಯ ಮತ್ತು ತೋಳಗಳ ಹೃದಯ ಒಂದೇ ರೀತಿಯದಾಗಿರುತ್ತದೆ. ॥ ೩೬ ॥ ಸ್ತ್ರೀಯರು ದಯಾಹೀನರಾಗಿರುತ್ತಾರೆ. ಕ್ರೌರ್ಯವು ಅವರ ಸ್ವಾಭಾವಿಕ ಗುಣವೇ ಆಗಿದೆ. ತಾಳ್ಮೆಯಿಲ್ಲದವರು ಪ್ರಿಯವಾದುದನ್ನು ಪಡೆಯಲಿಕ್ಕಾಗಿ ಅಸಾಧ್ಯವಾದ ಕಾರ್ಯವನ್ನು ಮಾಡಿಬಿಡುತ್ತಾರೆ. ವಿಶ್ವಾಸವನ್ನಿಟ್ಟಿರುವ ಪತಿಯನ್ನಾಗಲೀ, ಸಹೋದರನನ್ನಾಗಲೀ ಅತ್ಯಲ್ಪಪ್ರಯೋಜನಕ್ಕಾಗಿ ಕೊಂದೇ ಹಾಕುತ್ತಾರೆ. ॥ ೩೭॥ ಇವರ ಹೃದಯದಲ್ಲಿ ಸೌಹಾರ್ದ್ರವೆಂಬುದು ಎಳ್ಳಷ್ಟಾದರೂ ಇರುವುದಿಲ್ಲ. ಕುಲಟೆಯರಾದ ಈ ಸ್ತ್ರೀಯರು ಆರಿಯದವರಿಗೆ ತೋರಿಕೆಯ ವಿಶ್ವಾಸವನ್ನು ತೋರಿಸುತ್ತಾ ಸ್ವಲ್ಪವಾದರೂ ಮರುಕವಿಲ್ಲದೆ ಹೊಸ-ಹೊಸ ಗಂಡಸರನ್ನು ಹುಡುಕುತ್ತಾ ಸ್ವೇಚ್ಛಾಚಾರಿಣಿಯರಾಗಿರುತ್ತಾರೆ. ॥ ೩೮ ॥ ಮಹರಾಜಾ ! ಧೈರ್ಯತಾಳು. ನೀನು ರಾಜರಾಜೇಶ್ವರನಾಗಿರುವೆ. ವರ್ಷಕ್ಕೊಮ್ಮೆ ಒಂದು ರಾತ್ರಿ ನೀನು ನನ್ನೊಡನೆ ಇರಬಹುದಾಗಿದೆ. ಆಗ ನಿನಗೆ ಇನ್ನೂ ಸಂತಾನಗಳು ಆಗಬಹುದು. ॥ ೩೯ ॥

ಊರ್ವಶಿಯು ಗರ್ಭವತಿಯಾಗಿರುವುದನ್ನು ಅರಿತು ಪುರೂರವನು ಸಂತುಷ್ಟನಾಗಿ ತನ್ನ ರಾಜಧಾನಿಗೆ ಮರಳಿದನು. ಒಂದು ವರ್ಷ ಕಳೆದಾಗ ಪುನಃ ಅವಳು ಹೇಳಿದ್ದ ಸ್ಥಳಕ್ಕೆ ಹೋದನು. ಆಗ ಊರ್ವಶಿಯು ಓರ್ವ ವೀರಪುತ್ರನ ತಾಯಿಯಾಗಿದ್ದಳು. ॥೪೦॥ ಊರ್ವಶಿಯ ಸಮಾಗಮದಿಂದ ರಾಜನಿಗೆ ಮಹದಾನಂದವಾಯಿತು. ಒಂದು ರಾತ್ರಿಯನ್ನು ಅವನು ಅವಳೊಂದಿಗೆ ಕಳೆದನು. ಬೆಳಗ್ಗೆ ಆಗುತ್ತಲೇ ಅಗಲಬೇಕಾದ ಸಮಯಬಂದಾಗ ವಿರಹ ದುಃಖದಿಂದ ಅವನು ದೀನನಾದನು. ಆಗ ಊರ್ವಶಿಯು ಹೇಳಿದಳು.॥೪೧॥ 'ಮಹರಾಜ ! ನೀನು ಈ ಗಂಧರ್ವರನ್ನು ಸ್ತೋತ್ರ ಮಾಡು. ಅವರು ಬಯಸಿದರೆ ನಿನಗೆ ನನ್ನನ್ನು ಕೊಡಬಹುದು.' ಆಗ ಪುರೂರವನು ಗಂಧರ್ವರನ್ನು ಸ್ತುತಿಸಿದನು. ಪರೀಕ್ಷಿತನೇ ! ಪುರೂರವನ ಸ್ತೋತ್ರದಿಂದ ಸಂತುಷ್ಟರಾದ ಗಂಧರ್ವರು ಅವನಿಗೆ ಒಂದು ಅಗ್ನಿಸ್ಥಾಲಿಯನ್ನು ಕೊಟ್ಟರು. ರಾಜನು ಆ ಅಗ್ನಿಸ್ಥಾಲಿಯನ್ನೇ ಊರ್ವಶಿಯೆಂದು ಭಾವಿಸಿ ಅದನ್ನು ತಬ್ಬಿಕೊಂಡು ವನಗಳಲ್ಲಿ ಅಲೆಯುತ್ತಿದ್ದನು. ॥ ೪೨ ॥ ಅವನಿಗೆ ಅರಿವು ಮೂಡಿದಾಗ ಅವನು ಆ ಅಗ್ನಿಸ್ಥಾಲಿಯನ್ನು ಅಲ್ಲೇ ಕಾಡಿನಲ್ಲಿ ಬಿಟ್ಟು ತನ್ನ ಆರಮನೆಗೆ ಮರಳಿದನು. ರಾತ್ರಿಯಲ್ಲಿ ರಾಜನು ಸದಾ ಊರ್ವಶಿಯನ್ನೇ ಧ್ಯಾನಿಸುತ್ತಿದ್ದನು. ಹೀಗಿರಲು ಕೃತಯುಗವು ಕಳೆದು ತ್ರೇತಾಯುಗವು ಪ್ರಾರಂಭವಾಯಿತು. ಆಗ ಅವನ ಹೃದಯದಲ್ಲಿ ಋಗ್ಯಜುಸ್ಸಾಮ ವೇದಗಳು ಪ್ರಕಟಗೊಂಡವು. ॥ ೪೩. ॥

ಸ್ಥಾಲೀಸ್ಥಾನಂ ಗತೋಽಶ್ವತ್ಥಂ ಶಮೀಗರ್ಭಂ ವಿಲಕ್ಷ್ಯ ಸಃ ।
ತೇನ ದ್ವೇ ಅರಣೀ ಕೃತ್ವಾ ಊರ್ವಶೀಲೋಕಕಾಮ್ಯಯಾ
॥ ೪೪ ॥

ಊರ್ವಶೀಂ ಮಂತ್ರತೋ ಧ್ಯಾಯನ್ನಧರಾರಣಿಮುತ್ತರಾಮ್ ।
ಆತ್ಮಾನಮುಭಯೋರ್ಮಧ್ಯೇ ಯತ್ತತ್ಪ್ರಜನನಂ ಪ್ರಭುಃ
॥ ೪೫ ॥

ತಸ್ಯ ನಿರ್ಮಂಥನಾಜ್ಜಾತೋ ಜಾತವೇದಾ ವಿಭಾವಸುಃ ।
ತ್ರಯ್ಯಾ ಸ ವಿದ್ಯಯಾ ರಾಜ್ಞಾ ಪುತ್ರತ್ವೇ ಕಲ್ಪಿತಸ್ತ್ರಿವೃತ್
॥ ೪೬ ॥

ತೇನಾಯಜತ ಯಜ್ಞೇಶಂ ಭಗವಂತಮಧೋಕ್ಷಜಮ್ ।
ಊರ್ವಶೀಲೋಕಮನ್ವಿಚ್ಛನ್ಸರ್ವದೇವಮಯಂ ಹರಿಮ್
॥ ೪೭ ॥

ಏಕ ಏವ ಪುರಾ ವೇದಃ ಪ್ರಣವಃ ಸರ್ವವಾಙ್ಮಯಃ ।
ದೇವೋ ನಾರಾಯಣೋ ನಾನ್ಯ ಏಕೋಽಗ್ನಿರ್ವರ್ಣ ಏವ ಚ
॥ ೪೮ ॥

ಪುರೂರವಸ ಏವಾಸೀತ್ತ್ರಯೀ ತ್ರೇತಾಮುಖೇ ನೃಪ ।
ಅಗ್ನಿನಾ ಪ್ರಜಯಾ ರಾಜಾ ಲೋಕಂ ಗಾಂಧರ್ವಮೇಯಿವಾನ್
॥ ೪೯ ॥

ಮೂರು ವೇದಗಳನ್ನು ಹೃದಯದಲ್ಲಿ ಕಂಡುಕೊಂಡ ರಾಜನು ಅಗ್ನಿಸ್ಥಾಲಿಯನ್ನು ಬಿಟ್ಟು ಅರಣ್ಯಕ್ಕೆ ಧಾವಿಸಿದನು. ಅಲ್ಲಿ ಬನ್ನಿಮರದ ಗರ್ಭದಲ್ಲಿ ಒಂದು ಅರಳೀಮರವು ಹುಟ್ಟಿಕೊಂಡಿತ್ತು. ಅದನ್ನು ಕಂಡು ರಾಜನು ಅವುಗಳಿಂದ ಅಗ್ನಿಯನ್ನು ಕಡೆಯುವ ಎರಡು ಅರಣಿ (ಅಗ್ನಿಮಂಥನದ ಮರ)ಗಳನ್ನು ಸಿದ್ಧಪಡಿಸಿದನು. ಮತ್ತೆ ಊರ್ವಶಿಯ ಲೋಕದ ಕಾಮನೆಯಿಂದ ಪುರೂರವನು ಕೆಳಗಿನ ಅರಣಿಯನ್ನು ಊರ್ವಶಿಯನ್ನಾಗಿಯೂ, ಮೇಲಿನ ಅರಣಿಯನ್ನು ಪುರೂರವನನ್ನಾಗಿ, ಮಧ್ಯದ ಮರವನ್ನು ಪುತ್ರರೂಪದಿಂದ ಭಾವಿಸಿಕೊಂಡು ಅಗ್ನಿಯನ್ನು ಪ್ರಜ್ವಲಿಸುವ ಮಂತ್ರಗಳಿಂದ ಅವುಗಳನ್ನು ಕಡೆದನು. ॥ ೪೪-೪೫ ॥ ಹೀಗೆ ಮಂಥನ ಮಾಡುವಾಗ ಜಾತವೇದಸನೆಂಬ ಅಗ್ನಿಯು ಪ್ರಾದುರ್ಭವಿಸಿದನು. ರಾಜಾ ಪುರೂರವನು ಆ ಅಗ್ನಿಯನ್ನು ತ್ರಯೀವಿದ್ಯೆಯ ಮೂಲಕ ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿಗಳೆಂಬ ಮೂರು ವಿಭಾಗಗಳನ್ನು ಮಾಡಿ ಅವನ್ನು ರಾಜನು ಪುತ್ರರೂಪದಿಂದ ಸ್ವೀಕರಿಸಿದನು. ॥ ೪೬ ॥ ಮತ್ತೆ ಊರ್ವಶಿಯ ಲೋಕದ ಬಯಕೆಯಿಂದ ಪುರೂರವನು ಆ ಮೂರು ಅಗ್ನಿಗಳ ಮೂಲಕ ಸರ್ವದೇವ ಸ್ವರೂಪನೂ, ಇಂದ್ರಿಯಾತೀತನೂ ಆದ ಯಜ್ಞಪತಿ ಭಗವಾನ್ ಶ್ರೀಹರಿಯನ್ನು ಆರಾಧಿಸಿದನು. ॥ ೪೭ ॥

ಪರೀಕ್ಷಿತನೇ! ತ್ರೇತಾಯುಗಕ್ಕೆ ಮೊದಲು ಕೃತಯುಗದಲ್ಲಿ ಏಕಮಾತ್ರ ಪ್ರಣವ (ಓಂಕಾರ) ಮಾತ್ರ ವೇದವಾಗಿತ್ತು. ಎಲ್ಲ ವೇದ-ಶಾಸ್ತ್ರಗಳು ಅದರ ಅಂತರ್ಭೂತವಾಗಿದ್ದವು. ನಾರಾಯಣ ನೊಬ್ಬನಲ್ಲದೆ ಇತರ ಯಾವ ದೇವತೆಗಳೂ ಇರಲಿಲ್ಲ, ಅಗ್ನಿಗಳೂ ಮೂರಾಗಿರದೆ ಒಂದೇ ಅಗಿದ್ದಿತು. ಹಂಸವೆಂಬ ಒಂದೇ ವರ್ಣವಿದ್ದಿತು. ॥ ೪೮ ॥ ರಾಜೇಂದ್ರಾ! ತ್ರೇತಾಯುಗದ ಪ್ರಾರಂಭದಲ್ಲಿ ಪುರೂರವನಿಂದಲೇ ವೇದತ್ರಯೀ ಮತ್ತು ಅಗ್ನಿತ್ರಯೀ ಇವುಗಳ ಆವಿರ್ಭಾವವಾಯಿತು. ಪುರೂರವರಾಜನು ಅಗ್ನಿಯನ್ನು ಸಂತಾನ ರೂಪದಿಂದ ಸ್ವೀಕರಿಸಿ ಗಂಧರ್ವಲೋಕವನ್ನು ಹೊಂದಿದನು. ॥ ೪೯ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಐಲೋಪಾಖ್ಯಾನೇ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಋಚೀಕ - ಜಮದಗ್ನಿ ಮತ್ತು ಪರಶುರಾಮರ ಚರಿತ್ರೆ

ಶ್ರೀಶುಕ ಉವಾಚ

ಐಲಸ್ಯ ಚೋರ್ವಶೀಗರ್ಭಾತ್ ಷಡಾಸನ್ನಾತ್ಮಜಾ ನೃಪ ।
ಆಯುಃ ಶ್ರುತಾಯುಃ ಸತ್ಯಾಯೂ ರಯೋಽಥ ವಿಜಯೋ ಜಯಃ
॥ ೧ ॥

ಶ್ರುತಾಯೋರ್ವಸುಮಾನ್ಪುತ್ರಃ ಸತ್ಯಾಯೋಶ್ಚ ಶ್ರುತಂಜಯಃ ।
ರಯಸ್ಯ ಸುತ ಏಕಶ್ಚ ಜಯಸ್ಯ ತನಯೋಽಮಿತಃ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಊರ್ವಶಿಯ ಗರ್ಭದಿಂದ ಪುರೂರವನಿಗೆ ಆಯು, ಶ್ರುತಾಯು, ಸತ್ಯಾಯು, ರಯ, ವಿಜಯ ಮತ್ತು ಜಯ ಎಂಬ ಆರು ಪುತ್ರರು ಹುಟ್ಟಿದರು. ॥ ೧ ॥ ಶ್ರುತಾಯುವಿಗೆ ವಸುಮಂತನೆಂಬ ಪುತ್ರನು ಹುಟ್ಟಿದನು. ಸತ್ಯಾಯುವಿಗೆ ಶ್ರುತಂಜಯನು, ರಯನಿಗೆ ಏಕನೂ, ಜಯನಿಗೆ ಅಮಿತರೆಂಬ ಪುತ್ರರಾದರು. ॥ ೨ ॥

ಭೀಮಸ್ತು ವಿಜಯಸ್ಯಾಥ ಕಾಂಚನೋ ಹೋತ್ರಕಸ್ತತಃ ।
ತಸ್ಯ ಜಹ್ನುಃ ಸುತೋ ಗಂಗಾಂ ಗಂಡೂಷೀಕೃತ್ಯ ಯೋಽಪಿಬತ್ ।
ಜಹ್ನೋಸ್ತು ಪೂರುಸ್ತತ್ಪುತ್ರೋ ಬಲಾಕಶ್ಚಾತ್ಮಜೋಽಜಕಃ
॥ ೩ ॥

ವಿಜಯನಿಗೆ ಭೀಮ, ಭೀಮನಿಗೆ ಕಾಂಚನ, ಕಾಂಚನನಿಗೆ ಹೋತ್ರ, ಹೋತ್ರವಿಗೆ ಜಹ್ನು ಹುಟ್ಟಿದನು. ಗಂಗೆಯನ್ನು ಬೊಗಸೆಯಿಂದ ಕುಡಿದ ಮಹಾ ಮಹಿಮನಾದ ಜಹ್ನುವು ಇವನೇ ಆಗಿದ್ದನು. ಜಹ್ನುವಿಗೆ ಪುರೂ, ಪುರೂವಿಗೆ ಬಲಾಕ, ಬಲಾಕನಿಗೆ ಅಜಕನೆಂಬುವನು ಹುಟ್ಟಿದನು. ॥ ೩ ॥ ಅಜನ ಪುತ್ರ ಕುಶನಾಗಿ ಇದ್ದನು. ಕುಶನಿಗೆ – ಕುಶಾಂಬು, ತನಯ, ವಸು, ಕುಶನಾಭ ಎಂಬ ನಾಲ್ಕು ಪುತ್ರರಾದರು. ಇವರಲ್ಲಿ ಕುಶಾಂಬುವಿನ ಪುತ್ರ ಗಾಧಿಯಾದನು. ॥ ೪ ॥

ತತಃ ಕುಶಃ ಕುಶಸ್ಯಾಪಿ ಕುಶಾಂಬುಸ್ತನಯೋ ವಸುಃ ।
ಕುಶನಾಭಶ್ಚ ಚತ್ವಾರೋ ಗಾಧಿರಾಸೀತ್ಕುಶಾಂಬುಜಃ
॥ ೪ ॥

ತಸ್ಯ ಸತ್ಯವತೀಂ ಕನ್ಯಾಮೃಚೀಕೋಽಯಾಚತ ದ್ವಿಜಃ ।
ವರಂ ವಿಸದೃಶಂ ಮತ್ವಾ ಗಾಧಿರ್ಭಾರ್ಗವಮಬ್ರವೀತ್
॥ ೫ ॥

ಏಕತಃ ಶ್ಯಾಮಕರ್ಣಾನಾಂ ಹಯಾನಾಂ ಚಂದ್ರವರ್ಚಸಾಮ್ ।
ಸಹಸ್ರಂ ದೀಯತಾಂ ಶುಲ್ಕಂ ಕನ್ಯಾಯಾಃ ಕುಶಿಕಾ ವಯಮ್
॥ ೬ ॥

ಪರೀಕ್ಷಿತನೇ ! ಗಾಧಿಗೆ ಸತ್ಯವತಿಯೆಂಬ ಕನ್ಯೆಯಿದ್ದಳು. ಋಚೀಕ ಋಷಿಯು ಗಾಧಿಯ ಬಳಿ ಸತ್ಯವತಿಯನ್ನು ಯಾಚಿಸಿದನು. ಇವನು ತನ್ನ ಕನ್ಯೆಗೆ ಯೋಗ್ಯವರನಲ್ಲವೆಂದು ಯೋಚಿಸಿ ಋಚೀಕನಲ್ಲಿ ಹೇಳಿದನು – ॥ ೫ ॥ ಮುನಿವರ್ಯರೇ ! ಕುಶಿಕ ವಂಶದವರು ನಾವು. ನಮ್ಮ ಕನ್ಯೆ ಸಿಗುವುದು ಕಷ್ಟವೇ. ಅದಕ್ಕಾಗಿ ನೀವು – ಶರೀರವು ಬೆಳ್ಳಗಿದ್ದು ಒಂದು ಕಿವಿಯು ಕಪ್ಪಾಗಿರುವ ಒಂದುಸಾವಿರ ಕುದುರೆಗಳನ್ನು ಕನ್ಯಾಶುಲ್ಕವಾಗಿ ತಂದು ನನಗೆ ಕೊಡಬೇಕು. ಆಗ ಮದುವೆಯಾಗಬಹುದು. ॥ ೬ ॥ ಗಾಧಿಯು ಈ ಮಾತನ್ನು ಹೇಳಿದಾಗ ಅವನ ಮನದಾಶಯವನ್ನು ತಿಳಿದ ಋಚೀಕ ಮುನಿಯು ವರುಣನಲ್ಲಿಗೆ ಹೋಗಿ ಅಂತಹ ಕುದುರೆಗಳನ್ನು ತಂದನು ಹಾಗೂ ಅವನು ನೋಡಿದ ಗಾಧಿಯು ಸತ್ಯವತಿಯನ್ನು ಮದುವೆ ಮಾಡಿ ಕೊಟ್ಟನು. ॥ ೭ ॥

ಇತ್ಯುಕ್ತಸ್ತನ್ಮತಂ ಜ್ಞಾತ್ವಾ ಗತಃ ಸ ವರುಣಾಂತಿಕಮ್ ।
ಆನೀಯ ದತ್ತ್ವಾ ತಾನಶ್ವಾನುಪಯೇಮೇ ವರಾನನಾಮ್
॥ ೭ ॥

ಸ ಋಷಿಃ ಪ್ರಾರ್ಥಿತಃ ಪತ್ನ್ಯಾ ಶ್ವಶ್ರ್ವಾ ಚಾಪತ್ಯಕಾಮ್ಯಯಾ ।
ಶ್ರಪಯಿತ್ವೋಭಯೈರ್ಮಂತ್ರೈಶ್ಚರುಂ ಸ್ನಾತುಂ ಗತೋ ಮುನಿಃ
॥ ೮ ॥

ಒಮ್ಮೆ ಸತ್ಯವತಿ ಮತ್ತು ಅವಳ ತಾಯಿ ಇಬ್ಬರೂ ಸಂತಾನಾರ್ಥವಾಗಿ ಋಚೀಕನಲ್ಲಿ ಪ್ರಾರ್ಥಿಸಿದರು. ಋಚೀಕ ಮಹರ್ಷಿಗಳು ಪತ್ನಿಯ ಹಾಗೂ ಅತ್ತೆಯ ಪ್ರಾರ್ಥನೆಯನ್ನು ಅಂಗೀಕರಿಸಿ ಇಬ್ಬರಿಗೂ ಬೇರೆ-ಬೇರೆಯಾಗಿ ಎರಡು ಮಂತ್ರಗಳಿಂದ ಚರುವನ್ನು ಬೇಯಿಸಿಟ್ಟು ಸ್ನಾನಕ್ಕಾಗಿ ಹೊರಟುಹೋದರು. ॥ ೮ ॥ ಋಷಿಯು ತನ್ನ ಪತ್ನಿಗಾಗಿ ಶ್ರೇಷ್ಠಚರುವನ್ನು ಸಿದ್ಧಗೊಳಿಸಿರಬಹುದು ಎಂದು ಸತ್ಯವತಿಯ ತಾಯಿಯು ತಿಳಿದು, ಸತ್ಯವತಿಗಾಗಿ ಅಭಿಮಂತ್ರಿಸಿದ ಚರುವನ್ನು ಮಗಳಲ್ಲಿ ಬೇಡಿಕೊಂಡು ತಾನು ತಿಂದಳು. ಸತ್ಯವತಿಯು ತಾಯಿಗಾಗಿ ಸಿದ್ಧಗೊಳಿಸಿದ ಚರುವನ್ನು ತಿಂದುಬಿಟ್ಟಳು. ॥ ೯ ॥ ಋಚೀಕ ಮುನಿಗಳಿಗೆ ಈ ವಿಷಯ ತಿಳಿದಾಗ ಅವರು ತನ್ನ ಪತ್ನಿಯಾದ ಸತ್ಯವತಿಯಲ್ಲಿ ಹೇಳಿದರು – 'ನೀನು ದೊಡ್ಡ ಅನರ್ಥವನ್ನೆಸಗಿದೆ. ಚರುವಿನ ವಿನಿಮಯದಿಂದಾಗಿ ನಿನ್ನ ಗರ್ಭದಲ್ಲಿ ಘೋರ ಪ್ರಕೃತಿಯುಳ್ಳ ದಂಡಧರನಾದ ಕ್ಷಾತ್ರಸ್ವಭಾವವುಳ್ಳ ಮಗನು ಹುಟ್ಟುವನು. ನಿನ್ನ ತಮ್ಮನು ಶ್ರೇಷ್ಠ ಬ್ರಹ್ಮವಿತ್ತಮನಾಗುವನು. ॥ ೧೦ ॥ ಸತ್ಯವತಿಯು ಋಚೀಕನನ್ನು ಬಹಳವಾಗಿ ಪ್ರಸನ್ನಗೊಳಿಸಿ – 'ಸ್ವಾಮಿ ! ಹೀಗಾಗಬಾರದು' ಎಂದು ಪ್ರಾರ್ಥಿಸಿದಳು. ಆಗ ಋಚೀಕನೆಂದ– ಸರಿ. ಒಳ್ಳೆಯದು. ಮಗನ ಬದಲಿಗೆ ಮೊಮ್ಮಗನು ಅಂತಹ ಘೋರ ಪ್ರಕೃತಿಯವನಾಗುವನು. ಸಕಾಲದಲ್ಲಿ ಸತ್ಯವತಿಯ ಗರ್ಭದಿಂದ ಜಮದಗ್ನಿಯ ಜನ್ಮವಾಯಿತು. ॥ ೧೧ ॥ ಸತ್ಯವತಿಯು ಸಮಸ್ತ ಲೋಕಗಳನ್ನು ಪವಿತ್ರಗೊಳಿಸುವಂತಹ ಪುಣ್ಯವತಿಯಾದ 'ಕೌಶಿಕೀ' ನದಿಯಾದಳು. ರೇಣು ಎಂಬ ಋಷಿಯ ಕನ್ಯೆಯಾದ ರೇಣುಕೆಯನ್ನು ಜಮದಗ್ನಿಯು ವಿವಾಹವಾದನು. ॥ ೧೨ ॥

ತದ್ವಿಜ್ಞಾಯ ಮುನಿಃ ಪ್ರಾಹ ಪತ್ನೀಂ ಕಷ್ಟಮಕಾರಷೀಃ ।
ಘೋರೋ ದಂಡಧರಃ ಪುತ್ರೋ ಭ್ರಾತಾ ತೇ ಬ್ರಹ್ಮವಿತ್ತ ಮಃ
॥ ೧೦ ॥

ಪ್ರಸಾದಿತಃ ಸತ್ಯವತ್ಯಾ ಮೈವಂ ಭೂದಿತಿ ಭಾರ್ಗವಃ ।
ಅಥ ತರ್ಹಿ ಭವೇತ್ಪೌತ್ರೋ ಜಮದಗ್ನಿಸ್ತತೋಽಭವತ್
॥ ೧೧ ॥

ಸಾ ಚಾಭೂತ್ಸುಮಹಾಪುಣ್ಯಾ ಕೌಶಿಕೀ ಲೋಕಪಾವನೀ ।
ರೇಣೋಃ ಸುತಾಂ ರೇಣುಕಾಂ ವೈ ಜಮದಗ್ನಿರುವಾಹ ಯಾಮ್
॥ ೧೨ ॥

ತಸ್ಯಾಂ ವೈ ಭಾರ್ಗವಋಷೇಃ ಸುತಾ ವಸುಮದಾದಯಃ ।
ಯವೀಯಾಂಜಜ್ಞ ಏತೇಷಾಂ ರಾಮ ಇತ್ಯಭಿವಿಶ್ರುತಃ
॥ ೧೩ ॥

ರೇಣುಕೆಯ ಗರ್ಭದಿಂದ ಜಮದಗ್ನಿಗಳು ವಸುಮಂತ ಮೊದಲಾದ ಅನೇಕ ಪುತ್ರರನ್ನು ಪಡೆದರು. ಅವರಲ್ಲಿ ಕಿರಿಯವನು ಸುಪ್ರಸಿದ್ಧನಾದ ಪರಶುರಾಮನಾಗಿದ್ದನು. ॥ ೧೩ ॥

ಯಮಾಹುರ್ವಾಸುದೇವಾಂಶಂ ಹೈಹಯಾನಾಂ ಕುಲಾಂತಕಮ್ ।
ತ್ರಿಃ ಸಪ್ತಕೃತ್ವೋ ಯ ಇಮಾಂ ಚಕ್ರೇ ನಿಃಕ್ಷತ್ರಿಯಾಂ ಮಹೀಮ್
॥ ೧೪ ॥

ಹೈಹಯವಂಶವನ್ನು ಅಂತ್ಯಗೊಳಿಸಲೆಂದೇ ಸ್ವಯಂ ಭಗವಂತನೇ ಪರಶುರಾಮ ರೂಪದಲ್ಲಿ ಅಂಶಾವತಾರ ಮಾಡಿದ್ದನು ಎಂದು ಹೇಳುತ್ತಾರೆ. ಪರಶುರಾಮನು ಈ ಭೂಮಂಡಲವನ್ನು ಇಪ್ಪತ್ತೊಂದು ಬಾರಿ ನಿಃಕ್ಷತ್ರಿಯವಾಗಿ ಮಾಡಿಬಿಟ್ಟನು. ॥ ೧೪ ॥

ದುಷ್ಟಂ ಕ್ಷತ್ರಂ ಭುವೋ ಭಾರಮಬ್ರಹ್ಮಣ್ಯಮನೀನಶತ್ ।
ರಜಸ್ತಮೋವೃತಮಹನ್ಪ್ರಜ್ಞಾಯೈಷ ಕೃತೇಂಽಹಸಿ
॥ ೧೫ ॥

ಕ್ಷತ್ರಿಯರು ಪರಶುರಾಮನ ಕುರಿತು ಮಾಡಿದ ಅಪರಾಧವು ಅಲ್ಪವಾಗಿದ್ದರೂ ಅವರು ಭಾರೀ ದುಷ್ಟರೂ, ಬ್ರಾಹ್ಮಣ ದ್ವೇಷಿಗಳೂ, ರಜೋ ಗುಣಿಗಳೂ ಆಗಿದ್ದು ವಿಶೇಷವಾಗಿ ತಮೋ ಗುಣಿಗಳೇ ಆಗಿದ್ದರು. ಇದೇ ಕಾರಣದಿಂದ ಅವರು ಭೂಭಾರಕರಾಗಿದ್ದರು. ಇದರ ಫಲವಾಗಿ ಭಗವಾನ್ ಪರಶುರಾಮನು ದುಷ್ಟ ಕ್ಷತ್ರಿಯರನ್ನು ಇಪ್ಪತ್ತೊಂದು ಬಾರಿ ತರಿದು ಭೂಭಾರವನ್ನಿಳಿಸಿದನು. ॥ ೧೫ ॥

ರಾಜೋವಾಚ

ಕಿಂ ತದಂಹೋ ಭಗವತೋ ರಾಜನ್ಯೈರಜಿತಾತ್ಮಭಿಃ ।
ಕೃತಂ ಯೇನ ಕುಲಂ ನಷ್ಟಂ ಕ್ಷತ್ರಿಯಾಣಾಮಭೀಕ್ಷ್ಣಶಃ
॥ ೧೬ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ ! ನೀವು ಹೇಳಿದಂತೆ ಆ ಸಮಯದಲ್ಲಿ ಕ್ಷತ್ರಿಯರು ವಿಷಯಲೋಲುಪರೂ ದುಷ್ಟರೂ ಅವಶ್ಯರಾಗಿದ್ದರು. ಆದರೆ ಅವರು ಪರಶುರಾಮನಿಗೆ ಅಂತಹ ಯಾವ ಅಪರಾಧವನ್ನು ಮಾಡಿದ್ದಕ್ಕಾಗಿ ಅವನು ಪದೇ-ಪದೇ ಕ್ಷತ್ರಿಯರ ವಂಶವನ್ನೇ ಸಂಹಾರಮಾಡಿದನು ? ॥ ೧೬ ॥

ಶ್ರೀಶುಕ ಉವಾಚ

ಹೈಹಯಾನಾಮಧಿಪತಿರರ್ಜುನಃ ಕ್ಷತ್ರಿಯರ್ಷಭಃ ।
ದತ್ತಂ ನಾರಾಯಣಸ್ಯಾಂಶಮಾರಾಧ್ಯ ಪರಿಕರ್ಮಭಿಃ
॥ ೧೭ ॥

ಬಾಹೂನ್ ದಶಶತಂ ಲೇಭೇ ದುರ್ಧರ್ಷತ್ವಮರಾತಿಷು ।
ಅವ್ಯಾಹತೇಂದ್ರಿಯೌಜಃಶ್ರಿತೇಜೋವೀರ್ಯಯಶೋಬಲಮ್
॥ ೧೮ ॥

ಯೋಗೇಶ್ವರತ್ವಮೈಶ್ವರ್ಯಂ ಗುಣಾ ಯತ್ರಾಣಿಮಾದಯಃ ।
ಚಚಾರಾವ್ಯಾಹತಗತಿರ್ಲೋಕೇಷು ಪವನೋ ಯಥಾ
॥ ೧೯ ॥

ಸ್ತ್ರೀರತ್ನೈರಾವೃತಃ ಕ್ರೀಡನ್ ರೇವಾಂಭಸಿ ಮದೋತ್ಕಟಃ ।
ವೈಜಯಂತೀಂ ಸ್ರಜಂ ಬಿಭ್ರದ್ಬುರೋಧ ಸರಿತಂ ಭುಜೈಃ
॥ ೨೦ ॥

ವಿಪ್ಲಾವಿತಂ ಸ್ವಶಿಬಿರಂ ಪ್ರತಿಸ್ರೋತಃಸರಿಜ್ಜಲೈಃ ।
ನಾಮೃಷ್ಯತ್ತಸ್ಯ ತದ್ವೀರ್ಯಂ ವೀರಮಾನೀ ದಶಾನನಃ
॥ ೨೧ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ ! ಆ ಸಮಯದಲ್ಲಿ ಕ್ಷತ್ರಿಯಶ್ರೇಷ್ಠನಾದ ಅರ್ಜುನನು ಹೈಹಯರಿಗೆ ಅಧಿಪತಿಯಾಗಿದ್ದನು. ಅವನು ಅನೇಕ ವಿಧವಾದ ಸೇವಾ-ಶುಶ್ರೂಷೆಗಳಿಂದ ಭಗವನ್ನಾರಾಯಣನ ಅಂಶಾವತಾರನಾದ ದತ್ತಾತ್ರೇಯನನ್ನು ಒಲಿಸಿಕೊಂಡು – ಒಂದು ಸಾವಿರ ಬಾಹುಗಳನ್ನು ಹಾಗೂ ಯಾವನೇ ಶತ್ರುವು ಯುದ್ಧದಲ್ಲಿ ಪರಾಜಿತಗೊಳಿಸದಂತಹ ವರವನ್ನು ಪಡೆದಿದ್ದನು. ಜೊತೆಗೆ ಅಬಾಧಿತವಾದ ಇಂದ್ರಿಯಗಳ ಬಲವನ್ನೂ ಅತುಲಸಂಪತ್ತನ್ನೂ ತೇಜಸ್ಸನ್ನೂ, ಪರಾಕ್ರಮವನ್ನೂ, ಕೀರ್ತಿಯನ್ನೂ, ಶಾರೀರಿಕ ಬಲವನ್ನೂ ಅವನು ದತ್ತಾತ್ರೇಯನ ಕೃಪೆಯಿಂದ ಪಡೆದುಕೊಂಡಿದ್ದನು. ॥ ೧೭-೧೮ ॥ ಅವನು ಯೋಗೇಶ್ವರನಾಗಿದ್ದನು. ಅವನಿಗೆ ಅತಿಸೂಕ್ಷ್ಮ ಮತ್ತು ಅತಿಸ್ಥೂಲ ರೂಪವನ್ನು ಧರಿಸುವಂತಹ ಎಲ್ಲ ಐಶ್ವರ್ಯಸಿದ್ಧಿಗಳು ಪ್ರಾಪ್ತವಾಗಿದ್ದವು. ಅವನು ಪ್ರಪಂಚದಲ್ಲೆಲ್ಲ ವಾಯುವಿನಂತೆ ಯಾವುದೇ ಅಡೆ-ತಡೆಗಳಿಲ್ಲದೆ ಸಂಚರಿಸುತ್ತಿದ್ದನು. ॥ ೧೯ ॥ ಒಮ್ಮೆ ಕತ್ತಿನಲ್ಲಿ ವೈಜಯಂತಿಯನ್ನು ಧರಿಸಿಕೊಂಡ ಸಹಸ್ರಾರ್ಜುನನು ಅನೇಕ ಸುಂದರಿಯರೊಂದಿಗೆ ನರ್ಮದಾ ನದಿಯಲ್ಲಿ ಜಲವಿಹಾರ ಮಾಡುತ್ತಿದ್ದನು. ಆಗ ಮದೋನ್ಮತ್ತನಾದ ಸಹಸ್ರಬಾಹುವು ತನ್ನ ಕೈಗಳಿಂದ ನದಿಯ ಪ್ರವಾಹವನ್ನೂ ತಡೆದು ಬಿಟ್ಟನು. ॥ ೨೦ ॥ ದಶಕಂಠ ರಾವಣನು ಅಲ್ಲೇ ಸಮೀಪದಲ್ಲೇ ಬೀಡುಬಿಟ್ಟಿದ್ದನು. ನದಿಯ ನೀರು ಉಕ್ಕಿ ಅವನ ಶಿಬಿರವು ಮುಳುಗ ತೊಡಗಿತು. ರಾವಣನಾದರೋ ತನ್ನನ್ನು ಮಹಾಪರಾಕ್ರಮಿ ವೀರನೆಂದು ತಿಳಿದಿದ್ದನು. ಆದಕ್ಕಾಗಿ ಸಹಸ್ರಾರ್ಜುನನ ಈ ಪರಾಕ್ರಮವು ಅವನಿಂದ ಸಹಿಸಲಾಗಲಿಲ್ಲ. ॥ ೨೧ ॥

ಗೃಹೀತೋ ಲೀಲಯಾ ಸ್ತ್ರೀಣಾಂ ಸಮಕ್ಷಂ ಕೃತಕಿಲ್ಬಿಷಃ ।
ಮಾಹಿಷ್ಮತ್ಯಾಂ ಸಂನಿರುದ್ಧೋ ಮುಕ್ತೋ ಯೇನ ಕಪಿರ್ಯಥಾ
॥ ೨೨ ॥

ಸ ಏಕದಾ ತು ಮೃಗಯಾಂ ವಿಚರನ್ವಿಪಿನೇ ವನೇ ।
ಯದೃಚ್ಛಯಾऽऽಶ್ರಮಪದಂ ಜಮದಗ್ನೇರುಪಾವಿಶತ್
॥ ೨೩ ॥

ತಸ್ಮೈ ಸ ನರದೇವಾಯ ಮುನಿರರ್ಹಣಮಾಹರತ್ ।
ಸಸೈನ್ಯಾಮಾತ್ಯವಾಹಾಯ ಹವಿಷ್ಮತ್ಯಾ ತಪೋಧನಃ
॥ ೨೪ ॥

ಸ ವೀರಸ್ತತ್ರ ತದ್ದೃಷ್ಟ್ವಾ ಆತ್ಮೈಶ್ವರ್ಯಾತಿಶಾಯನಮ್ ।
ತನ್ನಾದ್ರಿಯತಾಗ್ನಿಹೋತ್ರ್ಯಂ ಸಾಭಿಲಾಷಃ ಸ ಹೈಹಯಃ
॥ ೨೫ ॥

ಹವಿರ್ಧಾನೀಮೃಷೇರ್ದರ್ಪಾನ್ನರಾನ್ಹರ್ತುಮಚೋದಯತ್ ।
ತೇ ಚ ಮಾಹಿಷ್ಮತೀಂ ನಿನ್ಯುಃ ಸವತ್ಸಾಂ ಕ್ರಂದತೀಂ ಬಲಾತ್
॥ ೨೬ ॥

ಅಥ ರಾಜನಿ ನಿರ್ಯಾತೇ ರಾಮ ಆಶ್ರಮ ಆಗತಃ ।
ಶ್ರುತ್ವಾ ತತ್ತಸ್ಯ ದೌರಾತ್ಮ್ಯಂ ಚುಕ್ರೋಧಾಹಿರಿವಾಹತಃ
॥ ೨೭ ॥

ಘೋರಮಾದಾಯ ಪರಶುಂ ಸತೂಣಂ ಚರ್ಮ ಕಾರ್ಮುಕಮ್ ।
ಅನ್ವಧಾವತ ದುರ್ಧರ್ಷೋ ಮೃಗೇಂದ್ರ ಇವ ಯೂಥಪಮ್
॥ ೨೮ ॥

ತಮಾಪತಂತಂ ಭೃಗುವರ್ಯಮೋಜಸಾ
ಧನುರ್ಧರಂ ಬಾಣಪರಶ್ವಧಾಯುಧಮ್ ।
ಜಟಾಕಲಾಪಾಂಬರಮರ್ಕಧಾಮಭಿ-
ರ್ಯುತಂ ಜಟಾಭಿರ್ದದೃಶೇ ಪುರೀಂ ವಿಶನ್ ॥ ೨೯ ॥

ಅಚೋದಯದ್ಧಸ್ತಿರಥಾಶ್ವಪತ್ತಿಭಿ-
ರ್ಗದಾಸಿಬಾಣರ್ಷ್ಟಿಶತಘ್ನಿಶಕ್ತಿಭಿಃ ।
ಅಕ್ಷೌಹಿಣೀಃ ಸಪ್ತದಶಾತಿಭೀಷಣಾ
ಸ್ತಾ ರಾಮ ಏಕೋ ಭಗವಾನಸೂದಯತ್ ॥ ೩೦ ॥

ರಾವಣನು ಸಹಸ್ರಾರ್ಜುನನ ಬಳಿಗೆ ಹೋಗಿ ಅವನನ್ನು ನಿಂದಿಸತೊಡಗಿದಾಗ ಅವನು ನಾರಿಯರ ಇದುರಿನಲ್ಲೇ ಲೀಲಾ ಜಾಲವಾಗಿ ಸೆರೆಹಿಡಿದುಕೊಂಡು ತನ್ನ ರಾಜಧಾನಿ ಮಾಹಿಷ್ಮತಿಗೆ ತಂದು ಕಪಿಯನ್ನು ಬೋನಿನಲ್ಲಿಡುವಂತೆ ರಾವಣನನ್ನು ಸೆರೆಯಲ್ಲಿಟ್ಟನು. ಬಳಿಕ ಪುಲಸ್ತ್ಯ ಮಹರ್ಷಿಗಳು ಹೇಳಿದಾಗ ಸಹಸ್ರಾರ್ಜುನನು ಅವನನ್ನು ಬಿಡುಗಡೆ ಗೊಳಿಸಿದನು. ॥ ೨೨ ॥

ಇಂತಹ ಅತುಲ ಪರಾಕ್ರಮಿಯಾದ ಸಹಸ್ರಾರ್ಜುನನು ಒಮ್ಮೆ ಬೇಟೆಯಾಡಲು ಗೊಂಡಾರಣ್ಯವನ್ನು ಪ್ರವೇಶಿಸಿದನು. ದೈವವಶದಿಂದ ಅವನು ಜಮದಗ್ನಿ ಮುನಿಯ ಆಶ್ರಮವನ್ನು ತಲುಪಿದನು. ॥ ೨೩ ॥ ಪರಮ ತಪಸ್ವಿಗಳಾದ ಜಮದಗ್ನಿ ಮುನಿಯ ಆಶ್ರಮದಲ್ಲಿ ಕಾಮಧೇನುವಿದ್ದಿತು. ಅದರ ಪ್ರಭಾವ ದಿಂದ ಮುನಿಗಳು ಆಶ್ರಮಕ್ಕೆ ಬಂದ ಹೈಹಯಾಪತಿಯನ್ನು, ಮಂತ್ರಿ, ಸೈನ್ಯ, ವಾಹನಗಳೊಂದಿಗೆ ತುಂಬಾ ಸ್ವಾಗತ-ಸತ್ಕಾರ ಮಾಡಿದರು. ॥ ೨೪ ॥ ವೀರ ಸಹಸ್ರಾರ್ಜುನನು ನೋಡಿದನು – ಈ ಮುನಿಯ ಐಶ್ವರ್ಯವಾದರೋ ನನಗಿಂತಲೂ ಮಿಗಿಲಾಗಿದೆ. ಅದಕ್ಕಾಗಿ ಅವನು ಅವರ ಸ್ವಾಗತ-ಸತ್ಕಾರವನ್ನು ಏನನ್ನೂ ಆದರಿಸದೆ ಕಾಮಧೇನುವನ್ನೇ ಕೊಂಡುಹೋಗಲು ಬಯಸಿದನು. ॥ ೨೫ ॥ ದುರಭಿಮಾನಿಯಾದ ಅವನು ಜಮದಗ್ನಿಯಲ್ಲಿ ಕೇಳಿಕೊಳ್ಳದೆ 'ಕಾಮಧೇನುವನ್ನು ಎಳೆದುಕೊಂಡು ಹೋಗಿರಿ' ಎಂದು ತನ್ನ ಸೇವಕರಿಗೆ ಆಜ್ಞೆಯನ್ನು ಇತ್ತನು. ಅವನ ಅಪ್ಪಣೆಯಂತೆ ಸೇವಕರು ಕರುವಿನೊಂದಿಗೆ ಅಂಬಾ! ಅಂಬಾ! ಎಂದು ಅರಚಿಕೊಳ್ಳುತ್ತಿದ್ದ ಕಾಮಧೇನುವನ್ನು ಬಲವಂತವಾಗಿ ಮಾಹಿಷ್ಮತಿಗೆಕೊಂಡು ಹೋದರು. ॥ ೨೬ ॥ ಇವೆಲ್ಲವೂ ನಡೆದಾಗ ಪರಶುರಾಮನು ಆಶ್ರಮಕ್ಕೆ ಬಂದನು. ರಾಜನ ದುಷ್ಕೃತ್ಯದ ವೃತ್ತಾಂತವನ್ನು ಕೇಳಿ ಏಟುತಿಂದ ಸರ್ಪದಂತೆ ಕೋಪದಿಂದ ಕಿಡಿ-ಕಿಡಿಯಾದನು. ॥ ೨೭ ॥ ಅವನು ತನ್ನ ಭಯಂಕರವಾದ ಗಂಡುಕೊಡಲಿಯನ್ನೂ ಧನುಸ್ಸನ್ನೂ ಬತ್ತಳಿಕೆಯನ್ನೂ ಗುರಾಣಿಯನ್ನೂ ಎತ್ತಿಕೊಂಡು ಯಾರಿಂದಲೂ ತಡೆಯಲಾರದ ಸಿಂಹವು ಆನೆಯ ಮೇಲೆ ಎರಗು ವಂತೆ ಅತಿವೇಗವಾಗಿ ಅವನನ್ನು ಹಿಂಬಾಲಿಸಿದನು. ॥ ೨೮ ॥

ಸಹಸ್ರಾರ್ಜುನನು ಇನ್ನೇನು ತನ್ನ ನಗರವನ್ನು ಪ್ರವೇಶಿಸು ವಾಗಲೇ ಭಗವಾನ್ ಪರಶುರಾಮನು ಅತಿವೇಗದಿಂದ ತನ್ನತ್ತ ಬರುತ್ತಿರುವುದನ್ನು ನೋಡಿದನು. ಅವನ ರೂಪವು ಅತ್ಯಂತ ವಿಲಕ್ಷಣವಾಗಿತ್ತು. ಅವನು ಕೈಯಲ್ಲಿ ಧನುರ್ಬಾಣಗಳನ್ನೂ, ಗಂಡುಕೊಡಲಿಯನ್ನೂ ಧರಿಸಿದ್ದನು. ಶರೀರದ ಮೇಲೆ ಕೃಷ್ಣಮೃಗ ಚರ್ಮವನ್ನು ಧರಿಸಿದ್ದು ಅವನ ಜಟೆಗಳು ಸೂರ್ಯಕಿರಣಗಳಂತೆ ಹೊಳೆಯುತ್ತಿದ್ದವು. ॥ ೨೯ ॥ ಅವನನ್ನು ನೋಡುತ್ತಲೇ ಅರ್ಜುನನು ಗದೆ, ಖಡ್ಗ, ಬಾಣ, ಋಷ್ಟಿ, ಶತಘ್ನಿ, ಶಕ್ತಿ ಮುಂತಾದ ಆಯುಧ ಗಳಿಂದ ಸುಸಜ್ಜಿತವಾದ ಅತ್ಯಂತ ಭಯಂಕರವಾದ ಹದಿನೇಳು ಅಕ್ಷೌಹಿಣಿ ಚತುರಂಗಿಣಿ ಸೇನೆಯನ್ನು ಪರಶುರಾಮನೊಂದಿಗೆ ಯುದ್ಧಕ್ಕೆ ಕಳಿಸಿದನು. ಆಪ್ಪೊಂದು ಅಪಾರವಾದ ಸೈನ್ಯವನ್ನು ಭಗವಾನ್ ಪರಶುರಾಮನೊಬ್ಬನೇ ಕ್ಷಣಮಾತ್ರದಲ್ಲಿ ಧ್ವಂಸಮಾಡಿ ಬಿಟ್ಟನು. ॥ ೩೦ ॥

ಯತೋ ಯತೋಽಸೌ ಪ್ರಹರತ್ಪರಶ್ವಧೋ
ಮನೋಽನಿಲೌಜಾಃ ಪರಚಕ್ರಸೂದನಃ ।
ತತಸ್ತತಶ್ಛಿನ್ನಭುಜೋರುಕಂಧರಾ
ನಿಪೇತುರುರ್ವ್ಯಾಂ ಹತಸೂತವಾಹನಾಃ ॥ ೩.೧ ॥

ದೃಷ್ಟ್ವಾ ಸ್ವಸೈನ್ಯಂ ರುಧಿರೌಘಕರ್ದಮೇ
ರಣಾಜಿರೇ ರಾಮಕುಠಾರಸಾಯಕೈಃ ।
ವಿವೃಕ್ಣಚರ್ಮಧ್ವಜಚಾಪವಿಗ್ರಹಂ
ನಿಪಾತಿತಂ ಹೈಹಯ ಆಪತದ್ಮುಷಾ ॥ ೩.೨ ॥

ಅಥಾರ್ಜುನಃ ಪಂಚಶತೇಷು ಬಾಹುಭಿ-
ರ್ಧನುಃಷು ಬಾಣಾನ್ಯುಗಪತ್ಸ ಸಂದಧೇ ।
ರಾಮಾಯ ರಾಮೋಽಸ್ತ್ರಭೃತಾಂ ಸಮಗ್ರಣೀಃ
ತಾನ್ಯೇಕ ಧನ್ವೇಷುಭಿರಾಚ್ಛಿನತ್ಸಮಮ್ ॥ ೩.೩ ॥

ಪುನಃ ಸ್ವಪಸ್ಯೈರಚಲಾನ್ಯುಧೇಽಂಘ್ರಿಪಾ-
ನುತ್ಕ್ಷಿಪ್ಯ ವೇಗಾದಭಿಧಾವತೋ ಯುಧಿ ।
ಭುಜಾನ್ಕುಠಾರೇಣ ಕಠೋರನೇಮಿನಾ
ಚಿಚ್ಛೇದ ರಾಮಃ ಪ್ರಸಭಂ ತ್ವಹೇರಿವ ॥ ೩.೪ ॥

ಕೃತ್ತಬಾಹೋಃ ಶಿರಸ್ತಸ್ಯ ಗಿರೇಃ ಶೃಂಗಮಿವಾಹರತ್ ।
ಹತೇ ಪಿತರಿ ತತ್ಪುತ್ರಾ ಆಯುತಂ ದುದ್ರುವುರ್ಭಯಾತ್
॥ ೩.೫ ॥

ಅಗ್ನಿಹೋತ್ರೀಮುಪಾವರ್ತ್ಯ ಸವತ್ಸಾಂ ಪರವೀರಹಾ ।
ಸಮುಪೇತ್ಯಾಶ್ರಮಂ ಪಿತ್ರೇ ಪರಿಕ್ಲಿಷ್ಟಾಂ ಸಮರ್ಪಯತ್
॥ ೩.೬ ॥

ಸ್ವಕರ್ಮ ತತ್ಕೃತಂ ರಾಮಃ ಪಿತ್ರೇ ಭ್ರಾತೃಭ್ಯ ಏವ ಚ ।
ವರ್ಣಯಾಮಾಸ ತಚ್ಛ್ರುತ್ವಾ ಜಮದಗ್ನಿರಭಾಷತ
॥ ೩.೭ ॥

ರಾಮ ರಾಮ ಮಹಾಬಾಹೋ ಭವಾನ್ಪಾಪಮಕಾರಷೀತ್ ।
ಅವಧೀನ್ನರದೇವಂ ಯತ್ಸರ್ವದೇವಮಯಂ ವೃಥಾ
॥ ೩.೮ ॥

ವಯಂ ಹಿ ಬ್ರಾಹ್ಮಣಾಸ್ತಾತ ಕ್ಷಮಯಾರ್ಹಣತಾಂ ಗತಾಃ ।
ಯಯಾ ಲೋಕ ಗುರುರ್ದೇವಃ ಪಾರಮೇಷ್ಠ್ಯಮಗಾತ್ಪದಮ್
॥ ೩.೯ ॥

ಕ್ಷಮಯಾ ರೋಚತೇ ಲಕ್ಷ್ಮೀರ್ಬ್ರಾಹ್ಮೀ ಸೌರೀ ಯಥಾ ಪ್ರಭಾ ।
ಕ್ಷಮಿಣಾಮಾಶು ಭಗವಾಂಸ್ತುಷ್ಯತೇ ಹರಿರೀಶ್ವರಃ
॥ ೪೦ ॥

ಭಗವಾನ್ ಪರಶುರಾಮನ ಗತಿಯು ವಾಯು-ಮನೋವೇಗ ದಂತಿತ್ತು. ಅವನು ಶತ್ರುಗಳ ಸೈನ್ಯವನ್ನು ಕೊಚ್ಚುತ್ತಲೇ ನಡೆಯುತ್ತಿದ್ದನು. ಅವನು ಗಂಡುಕೊಡಲಿಯಿಂದ ಪ್ರಹರಿಸಿದಲ್ಲೆಲ್ಲ ಸಾರಥಿಗಳು ವಾಹನದೊಂದಿಗೆ ನುಚ್ಚು ನೂರಾಗುತ್ತಿದ್ದವು. ಮಹಾ ಮಹಾ ವೀರರ ತೋಳು, ತೊಡೆ, ಹೆಗಲು ತುಂಡು-ತುಂಡಾಗಿ ನೆಲಕ್ಕೆ ಬೀಳುತ್ತಿದ್ದವು. ॥ ೩.೧ ॥ ಹೈಹಯಾಪತಿಯ ಸೇನೇಯ ಸೈನಿಕರು, ಅವರ ಧನುಸ್ಸುಗಳು, ಧ್ವಜಗಳು, ಗುರಾಣಿಗಳು ಭಗವಾನ್ ಪರಶುರಾಮನ ಕೊಡಲಿಯಿಂದ ಮತ್ತು ಬಾಣಗಳಿಂದ ತುಂಡು ತುಂಡಾಗಿ ರಣರಂಗದ ರಕ್ತದ ಮಡುವಿನಲ್ಲಿ ಬಿದ್ದಿರುವರು. ದಾರುಣವಾದ ಈ ಸಂಹಾರ ಕಾರ್ಯವನ್ನು ನೋಡಿದ ಅರ್ಜುನನಿಗೆ ಕೋಪವನ್ನು ತಡೆಯಲು ಸಾಧ್ಯವಾಗದೆ, ಧನುಷ್ಪಾಣಿಯಾಗಿ ಸ್ವತಃ ಯುದ್ಧಕ್ಕಾಗಿ ಬಂದನು. ॥ ೩.೨ ॥ ಅವನು ಒಮ್ಮೆಗೆ ತನ್ನ ಸಾವಿರ ಭುಜಗಳಿಂದ ಐದುನೂರು ಧನುಷ್ಯಗಳಲ್ಲಿ ಬಾಣಗಳನ್ನು ಹೂಡಿ ಪರಶುರಾಮನ ಮೇಲೆ ಪ್ರಯೋಗಿಸಿದನು. ಸಮಸ್ತ ಶಸ್ತ್ರಧಾರಿಗಳಲ್ಲಿ ಶಿರೋಮಣಿಯಾದ ಪರಶುರಾಮನು ಒಂದೇ ಧನುಸ್ಸಿನ ಮೂಲಕ ಪ್ರಯೋಗಿಸಿದ ಒಂದೇ ಬಾಣದಿಂದ ಆ ಐದುನೂರು ಬಾಣಗಳನ್ನೂ ತುಂಡರಿಸಿ ಬಿಟ್ಟನು. ॥ ೩.೩ ॥ ಈಗ ಅರ್ಜುನನು ತನ್ನ ಕೈಗಳಲ್ಲಿ ಪರ್ವತಗಳನ್ನೂ, ವೃಕ್ಷಗಳನ್ನೂ ಎತ್ತಿಕೊಂಡು ಪರಶುರಾಮನ ಮೇಲೆ ಎರಗಿದನು. ಆದರೆ ಪರಶುರಾಮನು ತನ್ನ ತೀಕ್ಷ್ಣವಾದ ಗಂಡುಕೊಡಲಿಯಿಂದ ಕ್ಷಣಮಾತ್ರದಲ್ಲಿ ಅರ್ಜುನನ ಸರ್ಪಗಳ ಹೆಡೆಗಳಂತಿದ್ದ ಸಾವಿರ ತೋಳುಗಳನ್ನು ಕತ್ತರಿಸಿ ಹಾಕಿದನು. ॥ ೩.೪ ॥ ಬಾಹುಗಳು ಕತ್ತರಿಸಿದ ಬಳಿಕ ಪರ್ವತದ ಶಿಖರವನ್ನು ಕತ್ತರಿಸುವಂತೆ ಪರಶುರಾಮನು ಅವನ ಶಿರಸ್ಸನ್ನು ತುಂಡರಿಸಿದನು. ತಂದೆಯು ಸತ್ತದ್ದನ್ನು ನೋಡಿದ ಅವನ ಹತ್ತುಸಾವಿರ ಮಕ್ಕಳು ಹೆದರಿ ಓಡಿಹೋದರು. ॥ ೩.೫ ॥

ಪರೀಕ್ಷಿತನೇ! ಶತ್ರುವೀರಹಂತಕನಾದ ಪರಶುರಾಮನು ಅತೀವ ದುಃಖಿತೆಯಾಗಿದ್ದ ಕಾಮಧೇನುವನ್ನು ಕರುವಿನೊಂದಿಗೆ ಮರಳಿ ತಂದು ತನ್ನ ಆಶ್ರಮದಲ್ಲಿದ್ದ ತಂದೆಗೆ ಒಪ್ಪಿಸಿದನು. ॥ ೩.೬ ॥ ಮಾಹಿಷ್ಮತಿ ಪಟ್ಟಣದಲ್ಲಿ ತಾನು ಮಾಡಿದ ವಿಧ್ವಂಸನಕಾರ್ಯವನ್ನು ತಂದೆಗೂ, ಸಹೋದರರಿಗೂ ವಿವರಿಸಿ ಹೇಳಿದನು. ಮಹಾ ಪರಾಕ್ರಮಿಯಾದ ಸಹಸ್ರಾರ್ಜುನನನ್ನು ಸಂಹರಿಸಿದ ವಿಷಯವನ್ನೂ ತಿಳಿಸಿದನು. ಇದೆಲ್ಲವನ್ನು ಕೇಳಿ ಜಮದಗ್ನಿ ಮುನಿಗಳು ಹೇಳಿದರು – ॥ ೩.೭ ॥ "ರಾಮಾ! ಪರಶುರಾಮಾ! ನೀನು ತುಂಬಾ ಪಾಪವನ್ನು ಮಾಡಿಬಿಟ್ಟೆ ಮಹಾಬಾಹುವೇ! ನೀನು ಮಹಾವೀರನೇ ಹೌದು. ಆದರೂ ಸರ್ವದೇವಮಯನಾದ ರಾಜನನ್ನು ವೃಥಾ ಸಂಹರಿಸಿದೆ. ॥ ೩.೮ ॥ ಮಗು! ನಾವು ಬ್ರಾಹ್ಮಣರಾಗಿದ್ದೇವೆ. ನಮ್ಮಲ್ಲಿ ಕ್ಷಮಾಗುಣವಿರುವುದರಿಂದಲೇ ನಾವು ಲೋಕದಲ್ಲಿ ಪೂಜ್ಯರಾಗಿದ್ದೇವೆ. ಹೆಚ್ಚೇನು, ಲೋಕಗುರುವಾದ ದೇವನಾದ ಚತುರ್ಮುಖನೂ ಕೂಡ ಕ್ಷಮೆಯಿಂದಲೇ ಪರಮಪದವನ್ನು ಅಲಂಕರಿಸಿರುವನು. ॥ ೩.೯ ॥ ಕ್ಷಮೆಯಿಂದಲೇ ಬ್ರಾಹ್ಮಣರ ಶೋಭೆಯು ಸೂರ್ಯನಂತೆ ಬೆಳಗುತ್ತಿದೆ. ಸರ್ವಶಕ್ತನಾದ ಭಗವಾನ್ ಶ್ರೀಹರಿಯೂ ಕೂಡ ಕ್ಷಮೆಯುಳ್ಳವರ ಮೇಲೆ ಬೇಗನೇ ಪ್ರಸನ್ನನಾಗುತ್ತಾನೆ. ॥ ೪೦ ॥

ರಾಜ್ಞೋ ಮೂರ್ಧಾಭಿಷಿಕ್ತಸ್ಯ ವಧೋ ಬ್ರಹ್ಮವಧಾದ್ಗುರುಃ ।
ತೀರ್ಥಸಂಸೇವಯಾ ಚಾಂಹೋ ಜಹ್ಯಂಗಾಚ್ಯುತಚೇತನಃ
॥ ೪೧ ॥

ಮಗು ! ಸಾರ್ವಭೌಮ ನಾದ ರಾಜನ ವಧೆಯು ಬ್ರಾಹ್ಮಣನ ಹತ್ಯೆಗಿಂತಲೂ ಮಿಗಿಲಾದುದು. ಹೋಗು, ಭಗವಂತನನ್ನು ಸ್ಮರಿಸುತ್ತಾ ಪುಣ್ಯತೀರ್ಥಗಳ ಸೇವನೆಗೈದು ನಿನ್ನ ಪಾಪಗಳನ್ನು ತೊಳೆದುಕೋ.'' ॥ ೪೧ ॥

ಹದಿನೈದನೇ ಅಧ್ಯಾಯವು ಮುಗಿಯಿತು ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಪರಶುರಾಮನಿಂದ ಸಮಸ್ತ ಕ್ಷತ್ರಿಯರ ಸಂಹಾರ– ವಿಶ್ವಾಮಿತ್ರನ ವಂಶದ ಕಥೆ

ಶ್ರೀಶುಕ ಉವಾಚ

ಪಿತ್ರೋಪಶಿಕ್ಷಿತೋ ರಾಮಸ್ತಥೇತಿ ಕುರುನಂದನ ।
ಸಂವತ್ಸರಂ ತೀರ್ಥಯಾತ್ರಾಂ ಚರಿತ್ವಾಽಽಶ್ರಮಮಾವ್ರಜತ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ತಂದೆಯಿಂದ ಆಜ್ಞಪ್ತನಾದ ಪರಶುರಾಮನು 'ಹಾಗೆಯೇ ಆಗಲಿ' ಎಂದು ಹೇಳಿ ಒಡನೆಯೇ ಹೊರಟು ಒಂದು ವರ್ಷಕಾಲ ತೀರ್ಥಯಾತ್ರೆಯನ್ನು ಮಾಡಿ ಆಶ್ರಮಕ್ಕೆ ಮರಳಿದನು. ॥ ೧ ॥

ಕದಾಚಿದ್ರೇಣುಕಾ ಯಾತಾ ಗಂಗಾಯಾಂ ಪದ್ಮಮಾಲಿನಮ್ ।
ಗಂಧರ್ವರಾಜಂ ಕ್ರೀಡಂತಮಪ್ಸರೋಭಿರಪಶ್ಯತ
॥ ೨ ॥

ವಿಲೋಕಯಂತೀ ಕ್ರೀಡಂತಮುದಕಾರ್ಥಂ ನದೀಂ ಗತಾ ।
ಹೋಮವೇಲಾಂ ನ ಸಸ್ಮಾರ ಕಿಂಚಿಚ್ಚಿತ್ರರಥಸ್ಪೃಹಾ
॥ ೩ ॥

ಒಮ್ಮೆ ಪರಶುರಾಮನ ತಾಯಿಯಾದ ರೇಣುಕೆಯು ಗಂಗಾತೀರಕ್ಕೆ ಹೋಗಿದ್ದಳು. ಅಲ್ಲಿ ಗಂಧರ್ವರಾಜನಾದ ಚಿತ್ರರಥನು ಕಮಲಗಳ ಮಾಲೆಗಳನ್ನು ಧರಿಸಿದ ಅಪ್ಸರೆಯರೊಂದಿಗೆ ವಿಹರಿಸುತ್ತಿದ್ದನು. ॥ ೨ ॥ ರೇಣುಕೆಯು ನೀರು ತರಲು ನದಿಗೆ ಹೋಗಿದ್ದಳು. ಆದರೆ ಅಲ್ಲಿ ಜಲಕ್ರೀಡೆಯಾಡುತ್ತಿರುವ ಗಂಧರ್ವನನ್ನು ನೋಡತೊಡಗಿದಳು ಹಾಗೂ ಪತಿದೇವರ ಹವನದ ಸಮಯವಾಗಿದೆ ಎಂಬುದನ್ನೂ ಮರೆತುಬಿಟ್ಟಳು. ಆಕೆಯ ಮನಸ್ಸು ಸ್ವಲ್ಪಕಾಲ ಚಿತ್ರರಥನ ಕಡೆಗೆ ಸೆಳೆಯಲ್ಪಟ್ಟಿತ್ತು. ॥ ೩ ॥ ಹವನದ ಸಮಯವು ಮೀರಿ ಹೋಗಿದೆ ಎಂಬುದನ್ನರಿತ ಆಕೆಯು ಭಯಗೊಂಡು ಲಗುಬಗೆಯಿಂದ ಆಶ್ರಮಕ್ಕೆ ಬಂದು ನೀರಿನ ಗಡಿಗೆಯನ್ನು ಮಹರ್ಷಿಗಳ ಮುಂದಿರಿಸಿ ಕೈಜೋಡಿಸಿಕೊಂಡು ನಿಂತುಬಿಟ್ಟಳು. ॥ ೪ ॥ ಜಮದಗ್ನಿ ಮುನಿಯು ತನ್ನ ಪತ್ನಿಯ ಮಾನಸಿಕ ವ್ಯಭಿಚಾರವನ್ನು ತಿಳಿದುಕೊಂಡು ಕ್ರೋಧಗೊಂಡು ಹೇಳಿದರು – 'ನನ್ನ ಮಕ್ಕಳಿರಾ ! ಪಾಪಿನಿಯಾದ ಈಕೆಯನ್ನು ಕೊಂದುಬಿಡಿರಿ.' ಆದರೆ ಅವನ ಯಾವ ಪುತ್ರನೂ ಆ ಅಜ್ಞೆಯಂತೆ ತಾಯಿಯನ್ನು ಕೊಲ್ಲಲು ಮುಂದಾಗಲಿಲ್ಲ. ॥ ೫ ॥ ಬಳಿಕ ತಂದೆಯ ಆಜ್ಞೆಯಂತೆ ಕಿರಿಯವನಾದ ಪರಶುರಾಮನು ತಾಯಿಯೊಂದಿಗೆ ಎಲ್ಲ ಸಹೋದರರನ್ನೂ ಕೊಂದುಹಾಕಿದನು. ಅವನು ತನ್ನ ತಂದೆಯ ಯೋಗ ಮತ್ತು ತಪಸ್ಸಿನ ಮಹಿಮೆಯನ್ನು ಚೆನ್ನಾಗಿ ತಿಳಿದಿದ್ದುದೇ ಇದಕ್ಕೆ ಕಾರಣವಾಗಿದೆ. ॥ ೬ ॥ ಪರಶುರಾಮನ ಈ ಕಾರ್ಯದಿಂದ ಸತ್ಯವತೀನಂದನ ಮಹರ್ಷಿ ಜಮದಗ್ನಿಯು ತುಂಬಾ ಪ್ರಸನ್ನರಾಗಿ 'ಮಗು ! ನಿನಗೆ ಇಚ್ಛೆಯುಳ್ಳ ವರವನ್ನು ಬೇಡು' ಎಂದು ಹೇಳಿದರು. ಪರಶುರಾಮನು ಅಪ್ಪಾ ! ನನ್ನ ತಾಯಿ ಮತ್ತು ಎಲ್ಲ ಸಹೋದರರು ಜೀವಂತರಾಗಲಿ ಮತ್ತು ನಾನು ಸಂಪರಿಸಿದ ಸ್ಮರಣೆಯು ಅವರಿಗೆ ಇರಬಾರದು' ಎಂಬ ವರವನ್ನು ಬೇಡಿದನು. ॥ ೭ ॥

ವಿಲೋಕ್ಯ ಕಲಶಂ ತಸ್ಥೌ ಪುರೋಧಾಯ ಕೃತಾಂಜಲಿಃ
॥ ೪ ॥

ವ್ಯಭಿಚಾರಂ ಮುನಿರ್ಜ್ಞಾತ್ವಾ ಪತ್ನ್ಯಾಃ ಪ್ರಕುಪಿತೋಽಬ್ರವೀತ್ ।
ಘ್ನತೈನಾಂ ಪುತ್ರಕಾಃ ಪಾಪಾಮಿತ್ಯುಕ್ತಾಸ್ತೇ ನ ಚಕ್ರಿರೇ
॥ ೫ ॥

ರಾಮಃ ಸಞ್ಜ್ಞೋದಿತಃ ಪಿತ್ರಾ ಭ್ರಾತೄನ್ಮಾತ್ರಾ ಸಹಾವಧೀತ್ ।
ಪ್ರಭಾವಜ್ಞೋ ಮುನೇಃ ಸಮ್ಯಕ್ಸಮಾಧೇಸ್ತಪಸಶ್ಚ ಸಃ
॥ ೬ ॥

ವರೇಣಚ್ಛಂದಯಾಮಾಸ ಪ್ರೀತಃ ಸತ್ಯವತೀಸುತಃ ।
ವವ್ರೇ ಹತಾನಾಂ ರಾಮೋಽಪಿ ಜೀವಿತಂ ಚಾಸ್ಮೃತಿಂ ವಧೇ
॥ ೭ ॥

ಉತ್ತಸ್ಥುಸ್ತೇ ಕುಶಲಿನೋ ನಿದ್ರಾಪಾಯ ಇವಾಂಜಸಾ ।
ಪಿತುರ್ವಿದ್ವಾಂಸ್ತಪೋವೀರ್ಯಂ ರಾಮಶ್ಚಕ್ರೇ ಸುಹೃದ್ವಧಮ್
॥ ೮ ॥

ಯೇऽರ್ಜುನಸ್ಯ ಸುತಾ ರಾಜನ್ಪ್ರಾಯಶಃ ಸ್ವಪಿತುರ್ವಧಮ್ ।
ರಾಮವೀರ್ಯಪರಾಭೂತಾ ನೇಭಿರೇ ಶರ್ಮ ನ ಕ್ವಚಿತ್
॥ ೯ ॥

ಏಕದಾऽऽಶ್ರಮತೋ ರಾಮೇ ಸಭ್ರಾತರಿ ವನಂ ಗತೇ ।
ವೈರಂ ಸಿಸಾಧಯಿಷವೋ ಲಬ್ಧಚ್ಛಿದ್ರಾ ಉಪಾಗಮನ್
॥ ೧೦ ॥

ದೃಷ್ಟ್ವಾಗ್ನ್ಯಗಾರ ಆಸೀನಮಾವೇಶಿತಧಿಯಂ ಮುನಿಮ್ ।
ಭಗವತ್ಯುತ್ತಮಶ್ಲೋಕೇ ಜಘ್ನುಸ್ತೇ ಪಾಪನಿಶ್ಚಯಾಃ
॥ ೧೧ ॥

ಯಾಚ್ಯಮಾನಾಃ ಕೃಪಣಯಾ ರಾಮಮಾತ್ರಾತಿದಾರುಣಾಃ ।
ಪ್ರಸಹ್ಯ ಶಿರ ಉತ್ಕೃತ್ಯ ನಿನ್ಯುಸ್ತೇ ಕ್ಷತ್ರಬಂಧವಃ
॥ ೧೨ ॥

ರೇಣುಕಾ ದುಃಖಶೋಕಾರ್ತಾ ನಿಘ್ನಂತ್ಯಾತ್ಮಾನಮಾತ್ಮನಾ ।
ರಾಮ ರಾಮೇತಿ ತಾತೇತಿ ವಿಚುಕ್ರೋಶೋಚ್ಚಕೈಃ ಸತೀ
॥ ೧೩ ॥

ತದುಪಶ್ರುತ್ಯ ದೂರಸ್ಥೋ ಹಾ ರಾಮೇತ್ಯಾರ್ತವತ್ಸ್ವನಮ್ ।
ತ್ವರಯಾऽऽಶ್ರಮಮಾಸಾದ್ಯ ದದೃಶೇ ಪಿತರಂ ಹತಮ್
॥ ೧೪ ॥

ತದ್ದುಃಖರೋಷಾಮರ್ಷಾರ್ತಿಶೋಕವೇಗವಿಮೋಹಿತಃ ।
ಹಾ ತಾತ ಸಾಧೋ ಧರ್ಮಿಷ್ಠ ತ್ಯಕ್ತ್ವಾಸ್ಮಾನ್ಸ್ವರ್ಗತೋ ಭವಾನ್
॥ ೧೫ ॥

ವಿಲಪ್ಯೈವಂ ಪಿತುರ್ದೇಹಂ ನಿಧಾಯ ಭ್ರಾತೃಷು ಸ್ವಯಮ್ ।
ಪ್ರಗೃಹ್ಯ ಪರಶುಂ ರಾಮಃ ಕ್ಷತ್ರಾಂತಾಯ ಮನೋ ದಧೇ
॥ ೧೬ ॥

ಗತ್ವಾ ಮಾಹಿಷ್ಮತೀಂ ರಾಮೋ ಬ್ರಹ್ಮಘ್ನವಿಹತಶ್ರಿಯಮ್ ।
ತೇಷಾಂ ಸ ಶೀರ್ಷಭೀ ರಾಜನ್ಪೃಥ್ವೇ ಚಕ್ರೇ ಮಹಾಗಿರಿಮ್
॥ ೧೭ ॥

ಪರಶುರಾಮನು ಹೀಗೆ ಹೇಳುತ್ತಲೇ ನಿದ್ದೆಯಿಂದ ಎದ್ದವರಂತೆ ಎಲ್ಲರೂ ಅನಾಯಾಸವಾಗಿ ಕುಶಲರಾಗಿ ಎದ್ದು ಕುಳಿತರು. ಪರಶುರಾಮನು ತನ್ನ ತಂದೆಯ ತಪೋಬಲವನ್ನು ತಿಳಿದೇ ತನ್ನ ಸುಹೃದರನ್ನು ವಧಿಸಿದ್ದನು. ॥ ೮ ॥

ಪರೀಕ್ಷಿತನೇ! ಪರಶುರಾಮನೊಡನೆ ಮಾಡಿದ ಯುದ್ಧದಲ್ಲಿ ಪರಾಜಿತರಾಗಿ ಓಡಿಹೋಗಿದ್ದ ಸಹಸ್ರಾರ್ಜುನನ ಮಕ್ಕಳು ತಮ್ಮ ತಂದೆಯು ಪರಶುರಾಮನಿಂದ ಹತನಾದುದನ್ನು ಸ್ಮರಿಸುತ್ತಲೇ ಇದ್ದರು. ಹೀಗೆ ಸ್ಮರಿಸುತ್ತಿದ್ದುದರಿಂದ ಅವರ ಮನಸ್ಸು ಅಶಾಂತವಾಗಿತ್ತು. ॥ ೯ ॥ ಒಂದುದಿನ ಪರಶುರಾಮನು ತನ್ನ ಸಹೋದರರೊಂದಿಗೆ ದರ್ಭೆ-ಸಮಿತ್ತು ತರಲು ಆಶ್ರಮದಿಂದ ಹೊರಗೆ ಅರಣ್ಯಕ್ಕೆ ಹೋಗಿದ್ದನು. ವೈರವನ್ನು ಸಾಧಿಸಲು ಇದೇ ಸುಸಂದರ್ಭವೆಂದು ತಿಳಿದು ಸಹಸ್ರಾರ್ಜುನನ ಮಕ್ಕಳು ಅಲ್ಲಿಗೆ ಬಂದರು. ॥ ೧೦ ॥ ಆಗ ಜಮದಗ್ನಿ ಮಹರ್ಷಿಗಳು ಯಜ್ಞಶಾಲೆಯಲ್ಲಿ ಕುಳಿತಿದ್ದರು. ತನ್ನ ಸಮಸ್ತ ವೃತ್ತಿಗಳನ್ನು ಪುಣ್ಯಕೀರ್ತಿ ಭಗವಂತನ ಧ್ಯಾನದಲ್ಲೇ ತೊಡಗಿಸಿದ್ದರು. ಅವರಿಗೆ ಬಾಹ್ಯ ಪ್ರಪಂಚದ ಜ್ಞಾನವೇ ಇರಲಿಲ್ಲ. ಅದೇ ಸಮಯದಲ್ಲಿ ಆ ಪಾಪಿಗಳು ಜಮದಗ್ನಿಯನ್ನು ಕೊಂದು ಹಾಕಿದರು. ಅವರು ಮೊದಲಿನಿಂದಲೇ ಇಂತಹ ಪಾಪಪೂರ್ಣ ನಿಶ್ಚಯ ಮಾಡಿಕೊಂಡಿದ್ದರು. ॥ ೧೧ ॥ ಪರಶುರಾಮನ ತಾಯಿ ರೇಣುಕೆಯು ಅತಿದೀನಳಾಗಿ ಅವರಲ್ಲಿ ಪ್ರಾರ್ಥಿಸುತ್ತಿದ್ದಳು. ಆದರೆ ಅವರೆಲ್ಲರೂ ಆಕೆಯ ಒಂದು ಮಾತೂ ಕೇಳದೆ ಬಲವಂತವಾಗಿ ಮಹರ್ಷಿ ಜಮದಗ್ನಿಯ ಶಿರವನ್ನು ಕತ್ತರಿಸಿಕೊಂಡುಹೋದರು. ಪರೀಕ್ಷಿತನೇ! ನಿಜವಾಗಿ ಅವರು ನೀಚ ಕ್ಷತ್ರಿಯರಾಗಿದ್ದು ಅತ್ಯಂತ ಕ್ರೂರಿಯಾಗಿದ್ದರು. ॥ ೧೨ ॥ ದುಃಖ-ಶೋಕ ಪೀಡಿತಳಾಗಿದ್ದ ರೇಣುಕೆಯು ತನ್ನ ಕೈಗಳಿಂದ ತಲೆಯನ್ನೂ, ಎದೆಯನ್ನೂ ಬಡಿದುಕೊಂಡು ಗಟ್ಟಿಯಾಗಿ ಗೋಳಾಡುತ್ತಾ 'ಮಗು! ಪರಶುರಾಮಾ! ಬೇಗನೇ ಓಡಿ ಬಾ!' ಎಂದು ಗಟ್ಟಿಯಾಗಿ ಕರೆಯುತ್ತಿದ್ದಳು. ॥ ೧೩ ॥ ಪರಶುರಾಮನು ಬಹಳ ದೂರದಿಂದಲೇ 'ಹಾ ರಾಮಾ!' ಎಂಬ ಕರುಣಕ್ರಂದನ ಕೇಳಿದನು. ಅವನು ಅತಿಶೀಘ್ರವಾಗಿ ಆಶ್ರಮಕ್ಕೆ ಬಂದು ನೋಡುತ್ತಾನೆ – ತನ್ನ ತಂದೆಯು ಕೊಲ್ಲಲ್ಪಟ್ಟಿದ್ದನು. ॥ ೧೪ ॥ ಪರೀಕ್ಷಿತನೇ! ಆಗ ಪರಶುರಾಮನಿಗೆ ಅತ್ಯಂತ ದುಃಖವಾಯಿತು. ಜೊತೆಗೆ ಕ್ರೋಧ, ಅಸಹಿಷ್ಣುತೆ, ಮಾನಸಿಕ ಪೀಡೆ ಮತ್ತು ಶೋಕದ ಆವೇಗದಿಂದ ಅತ್ಯಂತ ವಿಮೋಹವು ಉಂಟಾಯಿತು. ಅಯ್ಯೋ! ತಂದೆಯೇ! ನೀನಾದರೋ ಮಹಾತ್ಮನಾಗಿದ್ದೆ, ಧರ್ಮಾತ್ಮನಾಗಿದ್ದೆ, ನಮ್ಮೆಲ್ಲರನ್ನೂ ಬಿಟ್ಟು ನೀನು ಸ್ವರ್ಗಕ್ಕೆ ಹೊರಟು ಹೋದೆಯಲ್ಲ! ॥ ೧೫ ॥ ಹೀಗೆ ವಿಲಾಪಗೈದು ಅವನು ತಂದೆಯ ಶರೀರವನ್ನು ಸಹೋದರರಿಗೆ ಒಪ್ಪಿಸಿ, ಸ್ವಯಂ ಕೈಯಲ್ಲಿ ಗಂಡು ಕೊಡಲಿಯನ್ನು ಎತ್ತಿಕೊಂಡು ದುಷ್ಟ ಕ್ಷತ್ರಿಯರ ಸಂಹಾರ ಮಾಡಿಬಿಡುವ ನಿಶ್ಚಯವನ್ನು ಮಾಡಿದನು. ॥ ೧೬ ॥

ಪರೀಕ್ಷಿದ್ರಾಜೇಂದ್ರ! ಪರಶುರಾಮನು ಮಾಹಿಷ್ಮತಿ ನಗರಕ್ಕೆ ಹೋಗಿ ಸಹಸ್ರಬಾಹು ಅರ್ಜುನನ ಮಕ್ಕಳ ತಲೆಗಳನ್ನು ಚೆಂಡಾಡಿ ನಗರ ಮಧ್ಯಭಾಗದಲ್ಲಿ ಗುಡ್ಡೆಹಾಕಿದನು. ಆ ನಗರದ ಶೋಭೆಯಾದರೋ ಆ ಬ್ರಾಹ್ಮಣಘಾತಿಗಳಾದ ಕ್ಷತ್ರಿಯರ ಕಾರಣದಿಂದ ನಾಶವಾಗಿ ಹೋಗಿತ್ತು. ॥ ೧೭ ॥

ತದ್ರಕ್ತೇನ ನದೀಂ ಘೋರಾಮಬ್ರಹ್ಮಣ್ಯ ಭಯಾವಹಾಮ್ ।
ಹೇತುಂ ಕೃತ್ವಾ ಪಿತೃವಧಂ ಕ್ಷತ್ರೇಽಮಂಗಲಕಾರಿಣಿ
॥ ೧೮ ॥

ತ್ರಿಃಸಪ್ತಕೃತ್ವಃ ಪೃಥಿವೀಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ ।
ಸಮಂತಪಂಚಕೇ ಚಕ್ರೇ ಶೋಣಿತೋದಾನ್ ಹ್ರದಾನ್ನವ
॥ ೧೯ ॥

ಪಿತುಃ ಕಾಯೇನ ಸಂಧಾಯ ಶಿರ ಆದಾಯ ಬರ್ಹಿಷಿ ।
ಸರ್ವದೇವಮಯಂ ದೇವಮಾತ್ಮಾನಮಯಜನ್ಮಖೈಃ
॥ ೨೦ ॥

ದದೌ ಪ್ರಾಚೀಂ ದಿಶಂ ಹೋತ್ರೇ ಬ್ರಹ್ಮಣೇ ದಕ್ಷಿಣಾಂ ದಿಶಮ್ ।
ಅಧ್ವರ್ಯವೇ ಪ್ರತೀಚೀಂ ವೈ ಉದಾತ್ರೇ ಉತ್ತರಾಂ ದಿಶಮ್
॥ ೨೧ ॥

ಅನ್ಯೇಭ್ಯೋಽವಾಂತರದಿಶಃ ಕಶ್ಯಪಾಯ ಚ ಮಧ್ಯತಃ ।
ಆರ್ಯಾವರ್ತಮುಪದ್ರಷ್ಟ್ರೇ ಸದಸ್ಯೇಭ್ಯಸ್ತತಃ ಪರಮ್
॥ ೨೨ ॥

ತತಶ್ಚಾವಭೃಥಸ್ನಾನವಿಧೂತಾಶೇಷಕಿಲ್ಬಿಷಃ ।
ಸರಸ್ವತ್ಯಾಂ ಬ್ರಹ್ಮನದ್ಯಾಂ ರೇಜೇ ವ್ಯಭ್ರ ಇವಾಂಶುಮಾನ್
॥ ೨೩ ॥

ಸ್ವದೇಹಂ ಜಮದಗ್ನಿಸ್ತು ಲಬ್ಧ್ವಾ ಸಂಜ್ಞಾನಲಕ್ಷಣಮ್ ।
ಋಷೀಣಾಂ ಮಂಡಲೇ ಸೋಽಭೂತ್ಸಪ್ತಮೋ ರಾಮಪೂಜಿತಃ
॥ ೨೪ ॥

ರಾಮದಗ್ಧ್ವೋಽಪಿ ಭಗವಾನ್ರಾಮಃ ಕಮಲಲೋಚನಃ ।
ಆಗಾಮಿನ್ಯಂತರೇ ರಾಜನ್ಭರ್ತಯಿಷ್ಯತಿ ವೈ ಬೃಹತ್
॥ ೨೫ ॥

ಆಸ್ತೇಽದ್ಯಾಪಿ ಮಹೇಂದ್ರಾದ್ರೌ ನ್ಯಸ್ತದಂಡಃ ಪ್ರಶಾಂತಧೀಃ ।
ಉಪಗೀಯಮಾನಚರಿತಃ ಸಿದ್ಧಗಂಧರ್ವಚಾರಣೈಃ
॥ ೨೬ ॥

ಏವಂ ಭೃಗುಷು ವಿಶ್ವಾತ್ಮಾ ಭಗವಾನ್ ಹರಿರೀಶ್ವರಃ ।
ಅವತೀರ್ಯ ಪರಂ ಭಾರಂ ಭುವೋಽಹನ್ಬಹುಶೋ ನೃಪಾನ್
॥ ೨೭ ॥

ಗಾಧೇರಭೂನ್ಮಹಾತೇಜಾಃ ಸಮಿದ್ಧ ಇವ ಪಾವಕಃ ।
ತಪಸಾ ಕ್ಷತ್ರಮುತ್ಸೃಜ್ಯ ಯೋ ಲೇಭೇ ಬ್ರಹ್ಮವರ್ಚಸಮ್
॥ ೨೮ ॥

ವಿಶ್ವಾಮಿತ್ರಸ್ಯ ಚೈವಾಸನ್ಪುತ್ರಾ ಏಕಶತಂ ನೃಪ ।
ಮಧ್ಯಮಸ್ತು ಮಧುಚ್ಛಂದಾ ಮಧುಚ್ಛಂದ ಸ ಏವ ತೇ
॥ ೨೯ ॥

ಅವರ ರಕ್ತದ ಒಂದು ದೊಡ್ಡ ಭಯಂಕರ ನದಿಯೇ ಹರಿಯಿತು. ಇದನ್ನು ನೋಡಿ ಬ್ರಾಹ್ಮಣ ದ್ರೋಹಿಗಳ ಹೃದಯಗಳು ಭಯದಿಂದ ನಡುಗಿಹೋದುವು. ಎಲ್ಲ ಕ್ಷತ್ರಿಯರು ಅತ್ಯಾಚಾರಿಗಳಾಗಿದ್ದಾರೆ ಎಂದು ಭಗವಾನ್ ಪರಶುರಾಮನು ಭಾವಿಸಿದನು. ಅದಕ್ಕಾಗಿ ರಾಜನೇ! ಅವನು ತನ್ನ ತಂದೆಯ ವಧೆಯ ನೆಪವನ್ನು ಮಾಡಿಕೊಂಡು ಪೃಥಿವಿಯನ್ನು ಇಪ್ಪತ್ತೊಂದು ಬಾರಿ ನಿಃಕ್ಷತ್ರಿಯ ವನ್ನಾಗಿಸಿದನು. ಕೊನೆಗೆ ಕುರುಕ್ಷೇತ್ರದ ಸಮಂತ ಪಂಚಕದಲ್ಲಿ ರಕ್ತದಿಂದ ತುಂಬಿದ ಒಂಭತ್ತು ಮಡುಗಳನ್ನು ನಿರ್ಮಿಸಿದ್ದನು. ॥ ೧೮-೧೯ ॥ ಪರಶುರಾಮನು ತನ್ನ ತಂದೆಯ ಶಿರವನ್ನು ತಂದು ಮುಂಡದೊಡನೆ ಜೋಡಿಸಿ ಯಜ್ಞಗಳ ಮೂಲಕ ಸರ್ವದೇವಮಯನಾದ, ಆತ್ಮಸ್ವರೂಪನಾದ ಭಗವಂತನನ್ನು ಆರಾಧಿಸಿದನು. ॥ ೨೦ ॥ ಹಾಗೆ ಮಾಡಿದ ಯಜ್ಞದಲ್ಲವನು ಪೂರ್ವದಿಕ್ಕನ್ನು ಹೋತೃವಿಗೂ, ದಕ್ಷಿಣದಿಕ್ಕನ್ನು ಬ್ರಹ್ಮನಿಗೂ, ಪಶ್ಚಿಮದಿಕ್ಕನ್ನು ಅಧ್ವರ್ಯುವಿಗೂ, ಉತ್ತರದಿಕ್ಕನ್ನು ಸಾಮಗಾನ ಮಾಡುವ ಉದ್ಗಾತೃವಿಗೂ ದಕ್ಷಿಣೆಯಾಗಿ ನೀಡಿದನು. ॥ ೨೧ ॥ ಹೀಗೆಯೇ ಆಗ್ನೇಯಾದಿ ವಿದಿಶೆಗಳನ್ನು ಋತ್ವಿಜರಿಗೆ ಕೊಟ್ಟನು. ಮಧ್ಯದ ಭೂಮಿಯನ್ನು ಕಶ್ಯಪರಿಗೆ ಕೊಟ್ಟನು. ಉಪದ್ರಷ್ಟಾನಿಗೆ ಆರ್ಯಾವರ್ತವನ್ನು ಕೊಟ್ಟು ಇತರ ಸದಸ್ಯರಿಗೆ ಬೇರೆ-ಬೇರೆ ದಿಕ್ಕುಗಳನ್ನು ದಾನಮಾಡಿದನು. ॥ ೨೨ ॥ ಅನಂತರ ಯಜ್ಞಾಂತ ಅವಭೃತಸ್ನಾನಮಾಡಿ ಅವನು ಸಮಸ್ತ ಪಾಪಗಳಿಂದ ಮುಕ್ತನಾದನು ಹಾಗೂ ಬ್ರಹ್ಮನದಿಯಾದ ಸರಸ್ವತಿಯ ತೀರದಲ್ಲಿ ಮೋಡಗಳಿಲ್ಲದ ಸೂರ್ಯನಂತೆ ಪ್ರಕಾಶಿಸಿದನು. ॥ ೨೩ ॥ ಮಹರ್ಷಿ ಜಮದಗ್ನಿಯವರಿಗೆ ಸ್ಮೃತಿರೂಪ ಸಂಕಲ್ಪಮಯ ಶರೀರವು ಪ್ರಾಪ್ತವಾಯಿತು. ಪರಶುರಾಮನಿಂದ ಸಮ್ಮಾನಿತರಾಗಿ ಅವರು ಸಪ್ತರ್ಷಿಗಳ ಮಂಡಲದಲ್ಲಿ ಏಳನೆಯ ಋಷಿಗಳಾದರು. ॥ ೨೪ ॥ ಪರೀಕ್ಷಿತನೇ! ಜಮದಗ್ನಿನಂದನ ಕಮಲಲೋಚನ ಭಗವಾನ್ ಪರಶುರಾಮನು ಮುಂದಿನ ಮನ್ವಂತರದಲ್ಲಿ ಸಪ್ತರ್ಷಿಗಳ ಮಂಡಲದಲ್ಲಿದ್ದು ವೇದಗಳನ್ನು ವಿಸ್ತಾರಮಾಡುವನು. ॥ ೨೫ ॥ ಅವನು ಇಂದೂ ಕೂಡ ಯಾರಿಗೂ ಯಾವರೀತಿಯಿಂದಲೂ ದಂಡಿಸದೆ ಶಾಂತಚಿತ್ತನಾಗಿ ಮಹೇಂದ್ರ ಪರ್ವತದಲ್ಲಿ ವಾಸವಾಗಿದ್ದಾನೆ. ಅಲ್ಲಿ ಸಿದ್ಧರೂ, ಗಂಧರ್ವರೂ, ಚಾರಣರೂ ಪರಶುರಾಮನ ಚರಿತ್ರೆಯನ್ನು ಮಧುರವಾಗಿ ಹಾಡುತ್ತಾ ಇರುವರು. ॥ ೨೬ ॥ ಸರ್ವಶಕ್ತನಾದ ವಿಶ್ವಾತ್ಮಾ ಭಗವಾನ್ ಶ್ರೀಹರಿಯು ಈ ಪ್ರಕಾರ ಭೃಗುವಂಶದಲ್ಲಿ ಅವತಾರವನ್ನೆತ್ತಿ ಭೂಭಾರಕರಾದ ರಾಜರನ್ನು ಅನೇಕಬಾರಿ ವಧಿಸಿದ್ದನು. ॥ ೨೭ ॥

ಗಾಧಿ ಮಹಾರಾಜನಿಗೆ ಪ್ರಜ್ವಲಿತ ಅಗ್ನಿಯಂತೆ ಪರಮ ತೇಜಸ್ವೀ ವಿಶ್ವಾಮಿತ್ರನು ಪುತ್ರನಾದನು. ಇವನು ತನ್ನ ತಪೋಬಲದಿಂದ ಕ್ಷತ್ರಿಯತ್ವವನ್ನು ತ್ಯಜಿಸಿ ಬ್ರಹ್ಮತೇಜವನ್ನು ಪಡೆದಿದ್ದನು. ॥ ೨೮ ॥ ಪರೀಕ್ಷಿತನೇ! ವಿಶ್ವಾಮಿತ್ರನಿಗೆ ನೂರು ಪುತ್ರರಿದ್ದರು. ಅವರಲ್ಲಿ ಮಧ್ಯಮನು ಮಧುಚ್ಛಂದನು. ಅದಕ್ಕಾಗಿ ಎಲ್ಲ ಪುತ್ರರೂ ಮಧುಚ್ಛಂದನ ಹೆಸರಿನಿಂದಲೇ ವಿಖ್ಯಾತರಾದರು. ॥ ೨೯ ॥

ಪುತ್ರಂ ಕೃತ್ವಾ ಶುನಃಶೇಪಂ ದೇವರಾತಂ ಚ ಭಾರ್ಗವಮ್ ।
ಅಜೀಗರ್ತಂ ಸುತಾನಾಹ ಜ್ಯೇಷ್ಠ ಏಷ ಪ್ರಕಲ್ಪ್ಯತಾಮ್
॥ ೩೦ ॥

ಯೋ ವೈ ಹರಿಶ್ಚಂದ್ರಮಖೇ ವಿಕ್ರೀತಃ ಪುರುಷಃ ಪಶುಃ ।
ಸ್ತುತ್ವಾ ದೇವಾನ್ ಪ್ರಜೇಶಾದೀನ್ಮುಮುಚೇ ಪಾಶಬಂಧನಾತ್
॥ ೩೧ ॥

ಯೋ ರಾತೋ ದೇವಯಜನೇ ದೇವೈರ್ಗಾಧಿಷು ತಾಪಸಃ ।
ದೇವರಾತ ಇತಿ ಖ್ಯಾತಃ ಶುನಃಶೇಪಃ ಸ ಭಾರ್ಗವಃ
॥ ೩೨ ॥

ಯೇ ಮಧುಚ್ಛಂದಸೋ ಜ್ಯೇಷ್ಠಾಃ ಕುಶಲಂ ಮೇನಿರೇ ನ ತತ್ ।
ಅಶಪತ್ತಾನ್ಮುನಿಃ ಕ್ರುದ್ಧೋ ಮ್ಲೇಚ್ಛಾ ಭವತ ದುರ್ಜನಾಃ
॥ ೩೩ ॥

ಸ ಹೋವಾಚ ಮಧುಚ್ಛಂದಾಃ ಸಾರ್ಧಂ ಪಂಚಾಶತಾ ತತಃ ।
ಯನ್ನೋ ಭವಾನ್ಸಂಜಾನೀತೇ ತಸ್ಮಿಂಸ್ತಿಷ್ಠಾಮಹೇ ವಯಮ್
॥ ೩೪ ॥

ಜ್ಯೇಷ್ಠಂ ಮಂತ್ರದೃಶಂ ಚಕ್ರುಸ್ತ್ವಾಮನ್ವಂಚೋ ವಯಂ ಸ್ಮ ಹಿ ।
ವಿಶ್ವಾಮಿತ್ರಃ ಸುತಾನಾಹ ವೀರವಂತೋ ಭವಿಷ್ಯಥ ।
ಯೇ ಮಾನಂ ಮೇಽನುಗೃಹ್ಣಂತೋ ವೀರವಂತಮಕರ್ತ ಮಾಮ್
॥ ೩೫ ॥

ಏಷ ವಃ ಕುಶಿಕಾ ವೀರೋ ದೇವರಾತಸ್ತಮನ್ವಿತ ।
ಅನ್ಯೇ ಚಾಷ್ಟಕಹಾರೀತಜಯಕ್ರತುಮದಾದಯಃ
॥ ೩೬ ॥

ಏವಂ ಕೌಶಿಕಗೋತ್ರಂ ತು ವಿಶ್ವಾಮಿತ್ರೈಃ ಪೃಥಗ್ವಿಧಮ್ ।
ಪ್ರವರಾಂತರಮಾಪನ್ನಂ ತದ್ವಿ ಚೈವಂ ಪ್ರಕಲ್ಪಿತಮ್
॥ ೩೭ ॥

ವಿಶ್ವಾಮಿತ್ರನು ಭೃಗುವಂಶೀಯ ಅಜಿಗರ್ತನಪುತ್ರನೂ ತನ್ನ ಅಳಿಯನೂ ಆದ ಶುನಃಶೇಪನನ್ನು ಪುತ್ರರೂಪದಿಂದ ಸ್ವೀಕರಿಸಿದನು. ಇವನಿಗೆ ದೇವರಾತನೆಂದೂ ಇನ್ನೊಂದು ಹೆಸರಿತ್ತು. ಈ ಶುನಃಶೇಪನನ್ನು ನಿಮ್ಮ ಹಿರಿಯಣ್ಣನೆಂದು ಭಾವಿಸಿರಿ ಎಂದು ತಮ್ಮ ಪುತ್ರರಿಗೆ ತಿಳಿಸಿದನು. ॥ ೩೦ ॥ ಇವನು – ಹರಿಶ್ಚಂದ್ರನ ಯಜ್ಞದಲ್ಲಿ ಯಜ್ಞಪಶುವಾಗಿ ಕೊಂಡುತಂದ ಪ್ರಸಿದ್ಧ ಭೃಗುವಂಶೀಯ ಶುನಃಶೇಪನಾಗಿದ್ದನು. ವಿಶ್ವಾಮಿತ್ರರು ಪ್ರಜಾಪತಿ, ವರುಣ ಮೊದಲಾದ ದೇವತೆಗಳನ್ನು ಸ್ತುತಿಸಿ ಅವನನ್ನು ಪಾಶಮುಕ್ತನಾಗಿ ಗೊಳಿಸಿದ್ದರು. ದೇವತೆಗಳ ಯಜ್ಞದಲ್ಲಿ ಈ ಶುನಃಶೇಪನೇ ದೇವತೆಗಳ ಮೂಲಕ ವಿಶ್ವಾಮಿತ್ರರಿಗೆ ಕೊಡಲ್ಪಟ್ಟಿದ್ದನು. ಆದ್ದರಿಂದ 'ದೇವೈಃ ರಾತಃ' ಈ ವ್ಯುತ್ಪತ್ತಿಗನುಸಾರ ಗಾಧಿವಂಶದಲ್ಲಿ ಇವನು ದೇವರಾತನೆಂಬ ಹೆಸರಿನಿಂದ ವಿಖ್ಯಾತನಾದನು. ॥ ೩೧-೩೨ ॥ ವಿಶ್ವಾಮಿತ್ರರ ಪುತ್ರರಲ್ಲಿ ಹಿರಿಯರಾಗಿದ್ದವರಿಗೆ ಶುನಃಶೇಪನನ್ನು ಹಿರಿಯಣ್ಣನೆಂದು ತಿಳಿಯುವ ಮಾತು ರುಚಿಸಲಿಲ್ಲ. ಇದರಿಂದ ವಿಶ್ವಾಮಿತ್ರರು ಕ್ರೋಧಗೊಂಡು – 'ಎಲೈ ದುಷ್ಟರಿರಾ ! ನೀವೆಲ್ಲರೂ ಮ್ಲೇಚ್ಛರಾಗಿರಿ' ಎಂದು ಶಾಪಕೊಟ್ಟರು. ॥ ೩೩ ॥ ಹೀಗೆ ನಲವತ್ತೊಂಭತ್ತು ಸಹೋದರರು ಮ್ಲೇಚ್ಛರಾದಾಗ ವಿಶ್ವಾಮಿತ್ರರ ಮಧ್ಯಮ ಮಗನಾದ ಮಧುಚ್ಛಂದನು ತನ್ನಿಂದ ಕಿರಿಯವರಾದ ಐವತ್ತು ಮಂದಿ ತಮ್ಮಂದಿರೊಡನೆ – 'ಅಪ್ಪಾ ! ನೀವು ನಮಗೆ ಹೇಗೆ ಅಪ್ಪಣೆ ಕೊಡಿಸುವಿರೋ ಹಾಗೆಯೇ ನಾವು ನಡೆಯಲು ಸಿದ್ಧರಿದ್ದೇವೆ ' ಎಂದು ಹೇಳಿದನು. ॥ ೩೪ ॥ ಹೀಗೆ ಹೇಳಿ ಮಧುಚ್ಛಂದನು ಮಂತ್ರದ್ರಷ್ಟಾ ಶುನಃಶೇಪನನ್ನು ಹಿರಿಯಣ್ಣನೆಂದು ಸ್ವೀಕರಿಸಿ ಹೇಳಿದನು – ನಾವೆಲ್ಲರೂ ನಿನ್ನ ಅನುಯಾಯಿಗಳಾದ ಸಣ್ಣ ತಮ್ಮಂದಿರಾಗಿದ್ದೇವೆ. ಆಗ ವಿಶ್ವಾಮಿತ್ರರು ತಮ್ಮ ಆಜ್ಞಾಕಾರಿಯಾದ ಪುತ್ರರಲ್ಲಿ ಹೇಳಿದನು – 'ನೀವೆಲ್ಲರೂ ನನ್ನ ಮಾತನ್ನು ಮನ್ನಿಸಿ ನನ್ನ ಸಮ್ಮಾನವನ್ನು ರಕ್ಷಿಸಿದಿರಿ. ಆದರಿಂದ ನಿಮ್ಮಂತಹ ಸತ್ಪುತ್ರರನ್ನು ಪಡೆದ ನಾನು ಧನ್ಯನಾದೆನು. 'ನಿಮಗೂ ಸತ್ಪುತ್ರರಾಗಲಿ' ಎಂದು ನಾನು ನಿಮ್ಮನ್ನು ಆಶೀರ್ವದಿಸುತ್ತೇನೆ. ॥ ೩೫ ॥ ನನ್ನ ಪ್ರೀತಿಯ ಮಕ್ಕಳಿರಾ ! ಈ ದೇವರಾತ ಶುನಃಶೇಪನೂ ನಿಮ್ಮ ಗೋತ್ರದವನೇ ಆಗಿರುವನು. ನೀವೆಲ್ಲರೂ ಇವನ ಆಜ್ಞೆಯಂತೆ ನಡೆಯಿರಿ. ಪರೀಕ್ಷಿತನೇ ! ವಿಶ್ವಾಮಿತ್ರರಿಗೆ ಅಷ್ಟಕ, ಹಾರಿತ, ಜಯ, ಕ್ರತುಮಾನ್ ಮೊದಲಾದ ಇನ್ನೂ ಅನೇಕ ಪುತ್ರರಿದ್ದರು. ॥ ೩೬ ॥ ಈ ಪ್ರಕಾರ ವಿಶ್ವಾಮಿತ್ರರ ಸಂತಾನದಿಂದ ಕೌಶಿಕಗೋತ್ರದಲ್ಲಿ ಅನೇಕ ಭೇದಗಳಾದವು ಮತ್ತು ದೇವರಾತನನ್ನು ಹಿರಿಯಣ್ಣನೆಂದು ಭಾವಿಸಿದ್ದರಿಂದ ಅವನ ಪ್ರವರವೂ ಬೇರೆಯಾಯಿತು. ॥ ೩೭ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಕ್ಷತ್ರವೃದ್ಧ, ರಜಿ ಮೊದಲಾದ ರಾಜರ ವಂಶದ ವರ್ಣನೆ

ಶ್ರೀಶುಕ ಉವಾಚ

ಯಃ ಪುರೂರವಸಃ ಪುತ್ರ ಆಯುಸ್ತಸ್ಯಾಭವನ್ಸುತಾಃ ।
ನಹುಷಃ ಕ್ಷತ್ರವೃದ್ಧಶ್ಚ ರಜೀ ರಂಭಶ್ಚ ವೀರ್ಯವಾನ್ ॥ ೧ ॥

ಅನೇನಾ ಇತಿ ರಾಜೇಂದ್ರ ಶೃಣು ಕ್ಷತ್ರವೃಧೋಽನ್ವಯಮ್ ।
ಕ್ಷತ್ರವೃದ್ಧಸುತಸ್ಯಾಸನ್ಸುಹೋತ್ರಸ್ಯಾತ್ಮಜಾಸ್ತ್ರಯಃ ॥ ೨ ॥

ಕಾಶ್ಯಃ ಕುಶೋ ಗೃತ್ಸಮದ ಇತಿ ಗೃತ್ಸಮದಾದಭೂತ್ ।
ಶುನಕಃ ಶೌನಕೋ ಯಸ್ಯ ಬಹ್ವೃಚಪ್ರವರೋ ಮುನಿಃ ॥ ೩ ॥

ಕಾಶ್ಯಸ್ಯ ಕಾಶಿಸ್ತತ್ಪುತ್ರೋ ರಾಷ್ಟ್ರೋ ದೀರ್ಘತಮಃಪಿತಾ ।
ಧನ್ವಂತರಿರ್ದೀರ್ಘತಮ ಆಯುರ್ವೇದಪ್ರವರ್ತಕಃ ॥ ೪ ॥

ಯಜ್ಞಭುಗ್ವಾಸುದೇವಾಂಶಃ ಸ್ಮೃತಮಾತ್ರಾರ್ತಿನಾಶನಃ ।
ತತ್ಪುತ್ರಃ ಕೇತುಮಾನಸ್ಯ ಜಜ್ಞೇ ಭೀಮರಥಸ್ತತಃ ॥ ೫ ॥

ದಿವೋದಾಸೋ ದ್ಯುಮಾಂಸ್ತಸ್ಮಾತ್ಪ್ರತರ್ದನ ಇತಿ ಸ್ಮೃತಃ ।
ಸ ಏವ ಶತ್ರುಜಿದ್ವತ್ಸ ಋತಧ್ವಜ ಇತೀರಿತಃ ।
ತಥಾ ಕುವಲಯಾಶ್ವೇತಿ ಪ್ರೋಕ್ತೋಽಲರ್ಕಾದಯಸ್ತತಃ ॥ ೬ ॥

ಷಷ್ಟಿವರ್ಷಸಹಸ್ರಾಣಿ ಷಷ್ಟಿವರ್ಷಶತಾನಿ ಚ ।
ನಾಲರ್ಕಾದಪರೋ ರಾಜನ್ಯೇದಿನೀಂ ಬುಭುಜೇ ಯುವಾ ॥ ೭ ॥

ಅಲರ್ಕಾತ್ಸಂತತಿಸ್ತಸ್ಮಾತ್ಸುನೀತೋಽಥ ಸುಕೇತನಃ ।
ಧರ್ಮಕೇತುಃ ಸುತಸ್ತಸ್ಮಾತ್ ಸತ್ಯಕೇತುರಜಾಯತ ॥ ೮ ॥

ಧೃಷ್ಟಕೇತುಃ ಸುತಸ್ತಸ್ಮಾತ್ಸುಕುಮಾರಃ ಕ್ಷಿತೀಶ್ವರಃ ।
ವೀತಿಹೋತ್ರಸ್ಯ ಭರ್ಗೋಽತೋ ಭಾರ್ಗಭೂಮಿರಭೂನ್ನೃಪಃ ॥ ೯ ॥

ಇತೀಮೇ ಕಾಶಯೋ ಭೂಪಾಃ ಕ್ಷತ್ರವೃದ್ಧಾನ್ವಯಾಯಿನಃ ।
ರಂಭಸ್ಯ ರಭಸಃ ಪುತ್ರೋ ಗಂಭೀರಶ್ಚಾಕ್ರಿಯಸ್ತತಃ ॥ ೧೦ ॥

ತಸ್ಯ ಕ್ಷೇತ್ರೇ ಬ್ರಹ್ಮ ಜಜ್ಞೇ ಶೃಣು ವಂಶಮನೇನಸಃ ।
ಶುದ್ಧಸ್ತತಃ ಶುಚಿಸ್ತಸ್ಮಾತ್ತ್ರಿಕಕುದ್ಧರ್ಮಸಾರಥಿಃ ॥ ೧೧ ॥

ತತಃ ಶಾಂತರಯೋ ಜಜ್ಞೇ ಕೃತಕೃತ್ಯಃ ಸ ಆತ್ಮವಾನ್ ।
ರಜೇಃ ಪಂಚಶತಾನ್ಯಾಸನ್ಪುತ್ರಾಣಾಮಮಿತೌಜಸಾಮ್ ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಪುರೂರವನಿಗೆ ಆಯುವೆಂಬ ಓರ್ವ ಮಗನಿದ್ದನು. ಅವನಿಗೆ ನಹುಷ, ಕ್ಷತ್ರವೃದ್ಧ ರಜಿ, ಶಕ್ತಿಶಾಲಿರಂಭ ಮತ್ತು ಅನೇನಾ ಎಂಬ ಐದು ಮಕ್ಕಳಿದ್ದರು. ಈಗ ಕ್ಷತ್ರವೃದ್ಧನ ವಂಶವನ್ನು ವಿವರಿಸುತ್ತೇನೆ, ಕೇಳು. ಕ್ಷತ್ರವೃದ್ಧನಿಗೆ ಸುಹೋತ್ರನೆಂಬ ಪುತ್ರನಿದ್ದನು. ಸುಹೋತ್ರನಿಗೆ – ಕಾಶ್ಯ, ಕುಶ, ಗೃತ್ಸಮದರೆಂಬ ಮೂವರು ಪುತ್ರರಾದರು. ಗೃತ್ಸಮದನಿಗೆ ಶುನಕ ಹುಟ್ಟಿದನು. ಈ ಶುನಕನ ಪುತ್ರನೇ ಋಗ್ವೇದಿಗಳಲ್ಲಿ ಶ್ರೇಷ್ಠಮುನಿವರ ಶೌನಕನು. ॥ ೧-೩ ॥ ಕಾಶ್ಯನ ಪುತ್ರ ಕಾಶಿ, ಕಾಶಿಗೆ ರಾಷ್ಟ್ರ, ರಾಷ್ಟ್ರನಿಗೆ ದೀರ್ಘತಮಾ ಮತ್ತು ದೀರ್ಘತಮನಿಗೆ ಧನ್ವಂತರಿ ಎಂಬ ಪುತ್ರ ಹುಟ್ಟಿದನು. ಇವನೇ ಆಯುರ್ವೇದದ ಪ್ರವರ್ತಕನಾಗಿದ್ದಾನೆ. ॥ ೪ ॥ ಇವನು ಯಜ್ಞಭಾಗದ ಭೋಕ್ತೃವೂ ಭಗವಾನ್ ವಾಸುದೇವನ ಅಂಶನಾಗಿರುವನು. ಇವನ ಸ್ಮರಣ ಮಾತ್ರದಿಂದಲೇ ಎಲ್ಲ ಪ್ರಕಾರದ ರೋಗಗಳು ದೂರವಾಗುತ್ತದೆ. ಧನ್ವಂತರಿಗೆ ಕೇತುಮಂತ ಪುತ್ರನಾದನು. ಕೇತುಮಂತನಿಗೆ ಭೀಮರಥನು ಪುತ್ರನಾದನು. ॥ ೫ ॥ ಭೀಮರಥನಿಗೆ ದಿವೋದಾಸನು, ದಿವೋದಾಸನಿಗೆ ದ್ಯುಮಾನ್ ಆದನು. ಇವನಿಗೆ ಪ್ರತರ್ದನ ಎಂಬ ಇನ್ನೊಂದು ಹೆಸರೂ ಇದೆ. ಈ ದ್ಯುಮಂತನೇ ಶತ್ರುಜಿತ್, ವತ್ಸ, ಋತಧ್ವಜ ಮತ್ತು ಕುವಲಯಾಶ್ವ ಎಂಬ ಹೆಸರುಗಳಿಂದಲೂ ಪ್ರಸಿದ್ಧನಾಗಿದ್ದಾನೆ. ದ್ಯುಮಂತನಿಗೆ ಅಲರ್ಕನೇ ಮೊದಲಾದ ಪುತ್ರರಾದರು. ॥ ೬ ॥ ಪರೀಕ್ಷಿತನೇ ! ಅಲರ್ಕನಲ್ಲದೆ ಬೇರೆ ಯಾವ ರಾಜನೂ ಅರವತ್ತಾರು ಸಾವಿರ ವರ್ಷಗಳವರೆಗೆ ಯುವಕನಾಗಿದ್ದು ರಾಜ್ಯವನ್ನು ಆಳಲಿಲ್ಲ ॥ ೭ ॥ ಅಲರ್ಕನ ಪುತ್ರನು ಸಂತತಿ. ಸಂತತಿಗೆ ಸುನೀಥ, ಸುನೀಥನಿಗೆ ಸುಕೇತನ, ಸುಕೇತನನಿಗೆ ಧರ್ಮಕೇತು, ಧರ್ಮಕೇತುವಿಗೆ ಸತ್ಯಕೇತು ಹುಟ್ಟಿದನು. ॥ ೮ ॥ ಸತ್ಯಕೇತುವಿಗೆ ಧೃಷ್ಟಕೇತು, ಧೃಷ್ಟಕೇತುವಿನಿಂದ ರಾಜಾಸುಕುಮಾರನು, ಸುಕುಮಾರನಿಂದ ವೀತಿಹೋತ್ರ, ವೀತಿಹೋತ್ರನಿಂದ ಭರ್ಗ ಮತ್ತು ಭರ್ಗನಿಂದ ರಾಜಾ ಭಾರ್ಗಭೂಮಿಯ ಜನ್ಮವಾಯಿತು. ॥ ೯ ॥

ಇವರೆಲ್ಲರೂ ಕ್ಷತ್ರವೃದ್ಧನ ವಂಶದಲ್ಲಿ ಕಾಶಿಯಿಂದ ಉತ್ಪನ್ನರಾದ ರಾಜರು. ರಂಭನಿಗೆ ರಭಸನೆಂಬ ಪುತ್ರನಿದ್ದನು. ಅವನಿಂದ ಗಂಭೀರ, ಗಂಭೀರನಿಂದ ಅಕ್ರಿಯನ ಜನ್ಮವಾಯಿತು. ॥ ೧೦ ॥ ಅಕ್ರಿಯನ ಪತ್ನಿಯಿಂದ ಬ್ರಾಹ್ಮಣವಂಶವು ನಡೆಯಿತು. ಈಗ ಅನೇನಾ ಇವನ ವಂಶವನ್ನು ಕೇಳು. ಅನೇನನಿಗೆ ಶುದ್ಧನೆಂಬ ಪುತ್ರನಿದ್ದನು. ಶುದ್ಧನಿಗೆ ಶುಚಿ, ಶುಚಿಗೆ ತ್ರಿಕಕುದ್, ತ್ರಿಕಕುದನಿಗೆ ಧರ್ಮಸಾರಥಿ ಹುಟ್ಟಿದನು. ॥ ೧೧ ॥ ಧರ್ಮಸಾರಥಿಗೆ ಶಾಂತರಯನೆಂಬ ಪುತ್ರನಿದ್ದನು. ಅವನು ಆತ್ಮಜ್ಞಾನಿಯಾದ್ದರಿಂದ ಕೃತಕೃತ್ಯನಾಗಿದ್ದನು. ಆದ್ದರಿಂದ ಅವನಿಗೆ ಸಂತಾನದ ಇಚ್ಛೆಯಿರಲಿಲ್ಲ. ಪರೀಕ್ಷಿತನೇ ! ಆಯುವಿನ ಪುತ್ರ ರಜಿಗೆ ಅತ್ಯಂತ ತೇಜಸ್ವೀ ಐದು ನೂರು ಪುತ್ರರಿದ್ದರು. ॥ ೧೨ ॥

ದೇವೈರಭ್ಯರ್ಥಿತೋ ದೈತ್ಯಾನ್ಹತ್ವೇಂದ್ರಾಯಾದದಾದ್ದಿವಮ್ ।
ಇಂದ್ರಸ್ತಸ್ಮೈ ಪುನರ್ದತ್ತ್ವಾ ಗೃಹೀತ್ವಾ ಚರಣೌ ರಜೇಃ
॥ ೧೫ ॥

ಆತ್ಮಾನಮರ್ಪಯಾಮಾಸ ಪ್ರಹ್ಲಾದಾದ್ಯರಿಶಂಕಿತಃ ।
ಪಿತರ್ಯುಪರತೇ ಪುತ್ರಾ ಯಾಚಮಾನಾಯ ನೋ ದದುಃ
॥ ೧೪ ॥

ತ್ರಿವಿಷ್ಟಪಂ ಮಹೇಂದ್ರಾಯ ಯಜ್ಞಭಾಗಾನ್ಸಮಾದದುಃ ।
ಗುರುಣಾ ಹೂಯಮಾನೇऽಗ್ನೌ ಬಲಭಿತ್ತನಯಾನ್ರಜೇಃ
॥ ೧೫ ॥

ಅವಧೀದ್ಭ್ರಂಶಿತಾನ್ಮಾರ್ಗಾನ್ನ ಕಶ್ಚಿದವಶೇಷಿತಃ ।
ಕುಶಾತ್ಪ್ರತಿಃ ಕ್ಷತ್ರವೃದ್ಧಾತ್ಸಂಜಯಸ್ತತ್ಸುತೋ ಜಯಃ
॥ ೧೬ ॥

ತತಃ ಕೃತಃ ಕೃತಸ್ಯಾಪಿ ಜಜ್ಞೇ ಹರ್ಯವನೋ ನೃಪಃ ।
ಸಹದೇವಸ್ತತೋ ಹೀನೋ ಜಯಸೇನಸ್ತು ತತ್ಸುತಃ
॥ ೧೭ ॥

ಸಂಕೃತಿಸ್ತಸ್ಯ ಚ ಜಯಃ ಕ್ಷತ್ರಧರ್ಮಾ ಮಹಾರಥಃ ।
ಕ್ಷತ್ರವೃದ್ಧಾನ್ವಯಾ ಭೂಪಾಃ ಶೃಣು ವಂಶಂ ಚ ನಾಹುಷಾತ್
॥ ೧೮ ॥

ದೇವತೆಗಳ ಪ್ರಾರ್ಥನೆಯಿಂದ ರಜಿಯು ದೈತ್ಯರನ್ನು ವಧಿಸಿ ಇಂದ್ರನಿಗೆ ಸ್ವರ್ಗರಾಜ್ಯವನ್ನು ಕೊಟ್ಟನು. ಆದರೆ ಅವನು ಪ್ರಹ್ಲಾದಾದಿ ತನ್ನ ಶತ್ರುಗಳಿಂದ ಭಯ ಗೊಂಡಿದ್ದನು. ಅದಕ್ಕಾಗಿ ಅವನು ಸ್ವರ್ಗವನ್ನು ಪುನಃ ರಜಿಗೇ ಮರಳಿಸಿದನು. ಅವನ ಕಾಲುಹಿಡಿದು ಅವನಿಗೆ ತನ್ನ ರಕ್ಷಣೆಯ ಹೊಣೆಯನ್ನು ಒಪ್ಪಿಸಿದನು. ರಜಿಯ ಮೃತ್ಯುವಾದಾಗ ಇಂದ್ರನು ಬೇಡಿದರೂ ರಜಿಯ ಪುತ್ರರು ಸ್ವರ್ಗವನ್ನು ಮರಳಿಕೊಡಲಿಲ್ಲ. ಅವರು ಸ್ವತಃ ಯಜ್ಞಗಳ ಭಾಗವನ್ನೂ ಪಡೆಯುತ್ತಿದ್ದರು. ಆಗ ಗುರುಗಳಾದ ಬೃಹಸ್ಪತ್ಯಾಚಾರ್ಯರು ಇಂದ್ರನ ಪ್ರಾರ್ಥನೆಯಂತೆ ಅಭಿಚಾರಿಕ ವಿಧಿಯಿಂದ ಹೋಮವನ್ನು ಮಾಡಿದರು. ಇದರಿಂದ ಅವರು ಧರ್ಮಭ್ರಷ್ಟರಾಗಿ ಹೋದರು. ಆಗ ಇಂದ್ರನು ಅನಾಯಾಸವಾಗಿ ಆ ಎಲ್ಲ ರಜಿಯ ಪುತ್ರರನ್ನು ಕೊಂದುಹಾಕಿದನು. ಅವರಲ್ಲಿ ಯಾರೂ ಉಳಿಯಲಿಲ್ಲ. ಕ್ಷತ್ರವೃದ್ಧನ ಮೊಮ್ಮಗ ಕುಶನಿಂದ ಪ್ರತಿ, ಪ್ರತಿಯಿಂದ ಸಂಜಯ, ಸಂಜಯನಿಂದ ಜಯ ಎಂಬ ಮಗನು ಹುಟ್ಟಿದನು. ॥ ೧೩-೧೬ ॥ ಜಯನಿಂದ ಕೃತ, ಕೃತನಿಂದ ಹರ್ಯವನ, ಹರ್ಯವನನಿಂದ ಸಹದೇಹ, ಸಹದೇವ ನಿಂದ ಹೀನ, ಹೀನನಿಂದ ಜಯಸೇನನೆಂಬ ಪುತ್ರನು ಹುಟ್ಟಿದನು. ॥ ೧೭ ॥ ಜಯಸೇನನಿಂದ ಸಂಕೃತಿ, ಸಂಕೃತಿಗೆ ಮಹಾರಥಿ ವೀರ ಶಿರೋಮಣಿ ಜಯನೆಂಬ ಪುತ್ರನಾದನು. ಕ್ಷತ್ರವೃದ್ಧನ ವಂಶ ಪರಂಪರೆಯಲ್ಲಿ ಇಷ್ಟೇ ರಾಜರಾದರು. ಈಗ ನಹುಷನ ವಂಶದ ವರ್ಣನೆಯನ್ನು ಕೇಳು. ॥ ೧೮ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಚಂದ್ರವಂಶಾನುವರ್ಣನೇ ಸಪ್ತದಶೋऽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಯಯಾತಿಯ ಚರಿತ್ರೆ

ಶ್ರೀಶುಕ ಉವಾಚ

ಯತಿರ್ಯಯಾತಿಃ ಸಂಯಾತಿರಾಯತಿರ್ವಿಯತಿಃ ಕೃತಿಃ ।
ಷಡಿಮೇ ನಹುಷಸ್ಯಾಸನ್ನಿಂದ್ರಿಯಾಣೀವ ದೇಹಿನಃ
॥ ೧ ॥

ರಾಜ್ಯಂ ನೈಚ್ಛದ್ಯತಿಃ ಪಿತ್ರಾ ದತ್ತಂ ತತ್ಪರಿಣಾಮವಿತ್ ।
ಯತ್ರ ಪ್ರವಿಷ್ಟಃ ಪುರುಷ ಆತ್ಮಾನಂ ನಾವಬುಧ್ಯತೇ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇಹಧಾರಿಗಳಿಗೆ ಆರು ಇಂದ್ರಿಯಗಳು ಇರುವಂತೆ ನಹುಷನಿಗೆ ಯತಿ, ಯಯಾತಿ, ಸಂಯಾತಿ, ಆಯತಿ, ವಿಯತಿ ಮತ್ತು ಕೃತಿ ಗಳೆಂಬ ಆರುಮಂದಿ ಮಕ್ಕಳಿದ್ದರು. ॥ ೧ ॥ ನಹುಷನು ತನ್ನ ಹಿರಿಯಮಗನಾದ ಯತಿಗೆ ರಾಜ್ಯವನ್ನು ಕೊಡಬೇಕೆಂದು ಬಯಸು ತ್ತಿದ್ದನು. ಆದರೆ ಅವನು ಅದನ್ನು ಸ್ವೀಕರಿಸಲಿಲ್ಲ. ಏಕೆಂದರೆ, ಯತಿಯು ರಾಜ್ಯಭಾರವನ್ನು ವಹಿಸಿಕೊಂಡರೆ ಅದರಿಂದ ಉಂಟಾಗುವ ಪರಿಣಾಮವನ್ನು ಚೆನ್ನಾಗಿ ಅರಿತಿದ್ದನು. ರಾಜ್ಯಭಾರ ದಲ್ಲಿ ತೊಡಗಿದ ಮನುಷ್ಯನು ತನ್ನ ಆತ್ಮಸ್ವರೂಪವನ್ನು ಅರಿತುಕೊಳ್ಳ ಲಾರನು. ॥ ೨ ॥

ಪಿತರಿ ಭ್ರಂಶಿತೇ ಸ್ಥಾನಾದಿಂದ್ರಾಣ್ಯಾ ಧರ್ಷಣಾದ್ವಿಜೈಃ ।
ಪ್ರಾಪಿತೇಽಜಗರತ್ವಂ ವೈ ಯಯಾತಿರಭವನ್ನೃಪಃ
॥ ೩ ॥

ಚತಸೃಷ್ವಾದಿಶದ್ದಿಕ್ಷು ಭ್ರಾತ್ಸ್ಯಾನ್ಭ್ರಾತಾ ಯವೀಯಸಃ ।
ಕೃತದಾರೋ ಜುಗೋಪೋರ್ವೀಂ ಕಾವ್ಯಸ್ಯ ವೃಷಪರ್ವಣಃ
॥ ೪ ॥

ರಾಜೋವಾಚ

ಬ್ರಹ್ಮರ್ಷಿರ್ಭಗವಾನ್ಕಾವ್ಯಃ ಕ್ಷತ್ರಬಂಧುಶ್ಚ ನಾಹುಷಃ ।
ರಾಜನ್ಯವಿಪ್ರಯೋಃ ಕಸ್ಮಾದ್ವಿವಾಹಃ ಪ್ರತಿಲೋಮಕಃ
॥ ೫ ॥

ಶ್ರೀಶುಕ ಉವಾಚ

ಏಕದಾ ದಾನವೇಂದ್ರಸ್ಯ ಶರ್ಮಿಷ್ಠಾ ನಾಮ ಕನ್ಯಕಾ ।
ಸಖೀಸಹಸ್ರಸಂಯುಕ್ತಾ ಗುರುಪುತ್ರ್ಯಾ ಚ ಭಾಮಿನೀ
॥ ೬ ॥

ದೇವಯಾನ್ಯಾ ಪುರೋದ್ಯಾನೇ ಪುಷ್ಪಿತದ್ರುಮಸಂಕುಲೇ ।
ವ್ಯಚರತ್ಕಲಗೀತಾಲಿನಲಿನೀಪುಲಿನೇಽಬಲಾ
॥ ೭ ॥

ತಾ ಜಲಾಶಯಮಾಸಾದ್ಯ ಕನ್ಯಾಃ ಕಮಲಲೋಚನಾಃ ।
ತೀರೇ ನ್ಯಸ್ಯ ದುಕೂಲಾನಿ ವಿಜಹ್ರುಃ ಸಿಂಚತೀರ್ಮಿಥಃ
॥ ೮ ॥

ವೀಕ್ಷ್ಯ ವ್ರಜಂತಂ ಗಿರಿಶಂ ಸಹ ದೇವ್ಯಾ ವೃಷಸ್ಥಿತಮ್ ।
ಸಪತ್ನೋತ್ತೀರ್ಯ ವಾಸಾಂಸಿ ಪರ್ಯಧುರ್ವ್ರೀಡಿತಾಃ ಸ್ತ್ರಿಯಃ
॥ ೯ ॥

ಶರ್ಮಿಷ್ಠಾಜಾನತೀ ವಾಸೋ ಗುರುಪುತ್ರ್ಯಾಃ ಸಮವ್ಯಯತ್ ।
ಸ್ವೀಯಂ ಮತ್ವಾಪ್ರಕುಪಿತಾ ದೇವಯಾನೀದಮಬ್ರವೀತ್
॥ ೧೦ ॥

ಅಹೋ ನಿರೀಕ್ಷ್ಯತಾಮಸ್ಯಾ ದಾಸ್ಯಾಃ ಕರ್ಮ ಹ್ಯಸಾಮ್ಪ್ರತಮ್ ।
ಅಸ್ಮದ್ಧಾರ್ಯಂ ಧೃತವತೀ ಶುನೀವ ಹವಿರಧ್ವರೇ
॥ ೧೧ ॥

ಯೈರಿದಂ ತಪಸಾ ಸೃಷ್ಟಂ ಮುಖಂ ಪುಂಸಃ ಪರಸ್ಯ ಯೇ ।
ಧಾರ್ಯತೇ ಯೈರಿಹ ಜ್ಯೋತಿಃ ಶಿವಃ ಪಂಥಾಶ್ಚ ದರ್ಶಿತಃ
॥ ೧೨ ॥

ಇಂದ್ರನ ಪತ್ನಿಯಾದ ಶಚೀದೇವಿಯನ್ನು ಬಯಸಿದ ನಹುಷನನ್ನು ಬ್ರಾಹ್ಮಣರು ಇಂದ್ರಪದವಿಯಿಂದ ತಳ್ಳಿಬಿಟ್ಟರು ಮತ್ತು ಶಾಪವಿತ್ತು ಅಜಗರನನ್ನಾಗಿಸಿದರು. ಆಗ ಯಯಾತಿಯು ರಾಜ್ಯಸಿಂಹಾಸನವನ್ನು ಏರಿದನು. ॥ ೩ ॥ ಯಯಾತಿಯು ತನ್ನ ನಾಲ್ಕು ಸೋದರರನ್ನು ನಾಲ್ಕು ದಿಕ್ಕುಗಳಲ್ಲಿ ಅಧಿಪತಿಗಳನ್ನಾಗಿ ಮಾಡಿದನು. ತಾನು ಸ್ವತಃ ಶುಕ್ರಾಚಾರ್ಯರ ಪುತ್ರಿಯಾದ ದೇವಯಾನಿಯನ್ನೂ ಮತ್ತು ದೈತ್ಯರಾಜನಾದ ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನೂ ಪತ್ನಿಯರಾಗಿ ಪರಿಗ್ರಹಿಸಿ ಭೂಮಂಡಲವನ್ನು ಆಳುತ್ತಿದ್ದನು. ॥ ೪ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಮಹಾತ್ಮರಾದ ಶುಕ್ರಾಚಾರ್ಯರು ಬ್ರಾಹ್ಮಣರಾಗಿದ್ದರು. ಯಯಾತಿಯು ಕ್ಷತ್ರಿಯ. ಹೀಗಿದ್ದರೂ ಬ್ರಾಹ್ಮಣಕನ್ಯೆಗೂ ಕ್ಷತ್ರಿಯವರನಿಗೂ ಪ್ರತಿಲೋಮದ ವಿವಾಹವು ಹೇಗೆ ನಡೆಯಿತು ? ॥ ೫ ॥

ಶ್ರೀಶುಕಮುನಿಗಳು ಹೇಳಿದರು – ಪರೀಕ್ಷಿತನೇ! ದಾನವ ರಾಜನಾದ ವೃಷಪರ್ವನಿಗೆ ಮಾನಿಷ್ಯೆಯಾದ ಶರ್ಮಿಷ್ಠೆ ಎಂಬ ಮಗಳಿದ್ದಳು. ಅವಳು ಒಂದುದಿನ ಶುಕ್ರಾಚಾರ್ಯರ ಪುತ್ರಿಯಾದ ದೇವಯಾನಿ ಮತ್ತು ಸಾವಿರಾರು ಸಖಿಯರೊಂದಿಗೆ ತನ್ನ ರಾಜಧಾನಿಯ ಶ್ರೇಷ್ಠ ಉದ್ಯಾನವನದಲ್ಲಿ ಅಡ್ಡಾಡುತ್ತಿದ್ದಳು. ಆ ಪುಷ್ಪೋದ್ಯಾನವನದಲ್ಲಿ ಸುಂದರವಾದ ಪುಷ್ಪಗಳಿಂದ ಕೂಡಿದ ಅನೇಕ ವೃಕ್ಷಗಳಿದ್ದವು. ಅಲ್ಲಿ ಒಂದು ಅಂದವಾದ ಸರೋವರವು ಇದ್ದು ಅದರಲ್ಲಿ ಕಮಲಗಳು ಅರಳಿದ್ದವು. ಆ ಕಮಲಗಳಲ್ಲಿ ದುಂಬಿಗಳು ಕುಳಿತು ಸುಮಧುರವಾಗಿ ಗುಂಜಾರವ ಮಾಡುತ್ತಿದ್ದವು. ಅವುಗಳ ಇಂಚರದಿಂದ ಸರೋವರದ ದಡಗಳು ಪ್ರತಿಧ್ವನಿಸುತ್ತಿದ್ದವು. ॥ ೬-೭ ॥ ಸರೋವರದ ಸಮೀಪಕ್ಕೆ ಸಾರಿದ ಆ ಸುಂದರಿಯರು ತಮ್ಮ-ತಮ್ಮ ವಸ್ತ್ರಗಳನ್ನು ಸರೋವರದ ದಡದಲ್ಲಿ ಬಿಚ್ಚಿಟ್ಟು ನೀರಿಗಿಳಿದು ಒಬ್ಬರು ಮತ್ತೊಬ್ಬರ ಮೇಲೆ ನೀರನ್ನೆರಚುತ್ತಾ ಜಲಕ್ರೀಡೆಯಾಡುತ್ತಿದ್ದರು. ॥ ೮ ॥ ಅದೇ ಸಮಯದಲ್ಲಿ ಅತ್ತಕಡೆಯಿಂದ ಪಾರ್ವತಿದೇವಿಯೊಂದಿಗೆ ನಂದಿಯನ್ನೇರಿ ಬರುತ್ತಿದ್ದ ಭಗವಾನ್ ಶಂಕರನನ್ನು ಆ ಕನ್ಯೆಯರು ನೋಡಿದರು. ಪರಶಿವನನ್ನು ನೋಡುತ್ತಲೇ ನಾಚಿಕೆಯಿಂದ ಮುದುಡಿಹೋದ ಲಲನೆಯರು ಮೇಲೆ ಬಂದು ಲಗುಬಗೆಯಿಂದ ವಸ್ತ್ರಗಳನ್ನು ಉಟ್ಟುಕೊಂಡರು. ॥ ೯ ॥ ಅವಸರದ ಪರಿಸ್ಥಿತಿಯಲ್ಲಿ ಶರ್ಮಿಷ್ಠೆಯು ಅರಿಯದೆ ದೇವಯಾನಿಯ ವಸ್ತ್ರವನ್ನು ತೊಟ್ಟುಕೊಂಡಳು. ಇದರಿಂದ ದೇವಯಾನಿಯು ಕ್ರೋಧದಿಂದ ಕಿಡಿ-ಕಿಡಿಯಾಗಿ ಶರ್ಮಿಷ್ಠೆಯನ್ನು ಮೂದಲಿಸುತ್ತಾ ಹೇಳಿದಳು – ॥ ೧೦ ॥ ಸಖಿಯರೇ! ಈ ದಾಸಿಯು ಎಂತಹ ಅನುಚಿತವಾದ ಕಾರ್ಯವನ್ನು ಮಾಡಿರುವಳೆಂಬುದನ್ನು ನೋಡಿರಲ್ಲ! ಅಯ್ಯೋ! ನಾಯಿಯು ಯಜ್ಞದ ಹವಿಸ್ಸನ್ನು ತಿಂದುಹಾಕುವಂತೆ ನಾವು ಧರಿಸಬೇಕಾದ ವಸ್ತ್ರವನ್ನು ಈಕೆ ಧರಿಸಿದ್ದಾಳಲ್ಲ! ॥ ೧೧ ॥ ಯಾವ ಬ್ರಾಹ್ಮಣರು ತಮ್ಮ ತಪೋಬಲದಿಂದ ಈ ಪ್ರಪಂಚವನ್ನು ಸೃಷ್ಟಿಸಿರುವರೋ, ಯಾರು ಪರಮ ಪುರುಷ ಪರಮಾತ್ಮನ ಮುಖರೂಪರಾಗಿದ್ದಾರೋ, ಯಾರು ತಮ್ಮ ಹೃದಯದಲ್ಲಿ ನಿರಂತರವಾಗಿ ಜ್ಯೋತಿರ್ಮಯ ಪರಮಾತ್ಮನನ್ನು

ಯಾನ್ವಂದನ್ತ್ಯುಪತಿಷ್ಠಂತೇ ಲೋಕನಾಥಾಃ ಸುರೇಶ್ವರಾಃ ।
ಭಗವಾನಪಿ ವಿಶ್ವಾತ್ಮಾ ಪಾವನಃ ಶ್ರೀನಿಕೇತನಃ
॥ ೧೩ ॥

ವಯಂ ತತ್ರಾಪಿ ಭೃಗವಃ ಶಿಷ್ಯೋಽಸ್ಯಾ ನಃ ಪಿತಾಸುರಃ ।
ಅಸ್ಮದ್ದಾರ್ಯಂ ಧೃತವತೀ ಶೂದ್ರೋ ವೇದಮಿವಾಸತೀ
॥ ೧೪ ॥

ಏವಂ ಶಪಂತೀಂ ಶರ್ಮಿಷ್ಠಾ ಗುರುಪುತ್ರೀಮಭಾಷತ ।
ರುಷಾ ಶ್ವಸಂತ್ಯುರಂಗೀವ ಧರ್ಷಿತಾ ದಷ್ಟದಚ್ಛದಾ
॥ ೧೫ ॥

ಆತ್ಮವೃತ್ತಮವಿಜ್ಞಾಯ ಕತ್ಥಸೇ ಬಹು ಭಿಕ್ಷುಕಿ ।
ಕಿಂ ನ ಪ್ರತೀಕ್ಷಸೇಽಸ್ಮಾಕಂ ಗೃಹಾನ್ಬಲಿಭುಜೋ ಯಥಾ
॥ ೧೬ ॥

ಏವಂವಿಧೈಃ ಸುಪರುಷೈಃ ಕ್ಷಿಪ್ತ್ವಾऽऽಚಾರ್ಯಸುತಾಂ ಸತೀಮ್ ।
ಶರ್ಮಿಷ್ಠಾ ಪ್ರಾಕ್ಷಿಪತ್ಕೂಪೇ ವಾಸ ಆದಾಯ ಮನ್ಯುನಾ
॥ ೧೭ ॥

ತಸ್ಯಾಂ ಗತಾಯಾಂ ಸ್ವಗೃಹಂ ಯಯಾತಿರ್ಮೃಗಯಾಂ ಚರನ್ ।
ಪ್ರಾಪ್ತೋ ಯದೃಚ್ಛಯಾ ಕೂಪೇ ಜಲಾರ್ಥೀ ತಾಂ ದದರ್ಶ ಹ
॥ ೧೮ ॥

ದತ್ತ್ವಾ ಸ್ವಮುತ್ತರಂ ವಾಸಸ್ತಸ್ಯೈ ರಾಜಾ ವಿವಾಸಸೇ ।
ಗೃಹೀತ್ವಾ ಪಾಣಿನಾ ಪಾಣಿಮುಜ್ಜಹಾರ ದಯಾಪರಃ
॥ ೧೯ ॥

ತಂ ವೀರಮಾಹೌಶನಸೀ ಪ್ರೇಮನಿರ್ಭರಯಾ ಗಿರಾ ।
ರಾಜಂಸ್ತ್ವಯಾ ಗೃಹೀತೋ ಮೇ ಪಾಣಿಃ ಪರಪುರಂಜಯ
॥ ೨೦ ॥

ಹಸ್ತಗ್ರಾಹೋऽಪರೋ ಮಾ ಭೂದ್ಗೃಹೀತಾಯಾಸ್ತ್ವಯಾ ಹಿ ಮೇ ।
ಏಷ ಈಶಕೃತೋ ವೀರ ಸಂಬಂಧೋ ನೌ ನ ಪೌರುಷಃ ।
ಯದಿದಂ ಕೂಪಲಗ್ನಾಯಾ ಭವತೋ ದರ್ಶನಂ ಮಮ
॥ ೨೧ ॥

ಧರಿಸಿಕೊಂಡಿರುವರೋ, ಯಾರು ಸಮಸ್ತ ಪ್ರಾಣಿಗಳಿಗಾಗಿ ಶ್ರೇಯಸ್ಸಿಗಾಗಿ ವೈದಿಕಮಾರ್ಗವನ್ನು ನಿರ್ದೇಶಿಸಿರುವರೋ, ಯಾರ ಪಾದಕಮಲಗಳಿಗೆ ಸಮಸ್ತ ಲೋಕಪಾಲರೂ, ಬ್ರಹ್ಮೇಂದ್ರಾದಿಗಳೂ ವಂದಿಸುತ್ತಾ ಅವರ ಸೇವೆಯಲ್ಲಿ ನಿರತರಾಗಿರುವರೋ, ಲಕ್ಷ್ಮೀ ದೇವಿಗೆ ಏಕಮಾತ್ರ ಆಶ್ರಯನಾದ ಪರಮ ಪಾವನ ವಿಶ್ವಾತ್ಮಾ ಭಗವಂತನೂ ಕೂಡ ವಂದಿಸಿ, ಸ್ತುತಿಸುತ್ತಿರುವನೋ, ಅಂತಹ ಬ್ರಾಹ್ಮಣರಲ್ಲಿ ನಾವು ಸರ್ವಶ್ರೇಷ್ಠ ಭೃಗುವಂಶೀಯರಾಗಿದ್ದೇವೆ. ಇವಳ ತಂದೆಯಾದರೋ ಅಸುರನಾಗಿದ್ದು ನಮ್ಮ ಶಿಷ್ಯನಾಗಿದ್ದಾನೆ. ಹೀಗಿದ್ದರೂ ಈ ದುಷ್ಟೆಯು ಶೂದ್ರನು ವೇದವನ್ನು ಓದುವಂತೆ ನಮ್ಮ ಬಟ್ಟೆಗಳನ್ನು ಉಟ್ಟುಕೊಂಡಿರುವಳಲ್ಲ. ॥ ೧೨-೧೪ ॥ ದೇವಯಾನಿಯು ಹೀಗೆ ಬಯ್ಯತೊಡಗಿದಾಗ ಶರ್ಮಿಷ್ಠೆಯು ಕ್ರೋಧದಿಂದ ಕಿಡಿ-ಕಿಡಿಯಾಗಿ, ಏಟುತಿಂದ ಸರ್ಪಿಣಿಯು ಬುಸುಗುಟ್ಟುವಂತೆ ನಿಟ್ಟುಸಿರು ಬಿಡುತ್ತಿದ್ದಳು. ತುಟಿಯನ್ನು ಕಡಿಯುತ್ತಾ ಇಂತೆಂದಳು – ॥ ೧೫ ॥ ಎಲೆಗೆ ಭಿಕ್ಷುಕಿಯೇ ! ಮೊದಲು ನಿನ್ನ ಯೋಗ್ಯತೆಯೇನೆಂಬುದನ್ನು ಅರಿತುಕೊಳ್ಳದೆ ಬಡ ಬಡಿಸುತ್ತಿರುವೆಯಲ್ಲ ? ಕಾಗೆಗಳೂ, ನಾಯಿಗಳೂ ರೊಟ್ಟಿಯ ಚೂರಿಗಾಗಿ ನಮ್ಮ ಅರಮನೆಯ ಬಾಗಿಲಲ್ಲಿ ಕಾಯುವಂತೆ ನೀವೂ ಕೂಡ ನಮ್ಮ ಅರಮನೆಯ ಬಾಗಿಲಿಗೆ ಬಂದು ಕಾಯುತ್ತಿರಲಿಲ್ಲವೇ ? ॥ ೧೬ ॥ ಶರ್ಮಿಷ್ಠೆಯು ಇಂತಹ ಕಟುನುಡಿಗಳಿಂದ ಆಚಾರ್ಯಪುತ್ರಿಯಾದ ದೇವಯಾನಿಯನ್ನು ತಿರಸ್ಕರಿಸಿ, ನಿಂದಿಸುತ್ತಾ, ಕೋಪಾವಿಷ್ಟಳಾಗಿ ದೇವಯಾನಿಯ ವಸ್ತ್ರಗಳನ್ನು ಕಿತ್ತು ಕೊಂಡು ಅವಳನ್ನು ಬಾವಿಯಲ್ಲಿ ತಳ್ಳಿಬಿಟ್ಟಳು. ॥ ೧೭ ॥

ಶರ್ಮಿಷ್ಠೆಯು ಹೊರಟುಹೋದ ಬಳಿಕ ಕಾಲ-ಕರ್ಮ ಸಂಯೋಗದಿಂದ ಅದೇ ಸ್ಥಳಕ್ಕೆ, ಯಯಾತಿಯು ಬೇಟೆಯಾಡಲು ಬಂದನು. ನೀರನ್ನು ಅಪೇಕ್ಷಿಸಿದ್ದ ರಾಜನು ನೀರಿಗಾಗಿ ಬಾವಿಯಲ್ಲಿ ಇಣಿಕಿ ನೋಡಿದಾಗ ಅಲ್ಲಿ ವಿವಸ್ತ್ರಳಾಗಿದ್ದ ದೇವಯಾನಿಯನ್ನು ನೋಡಿದನು. ॥ ೧೮ ॥ ಆಗ ಅವಳು ವಸ್ತ್ರಹೀನೆಯಾದ್ದರಿಂದ ತನ್ನ ಉತ್ತರೀಯವನ್ನೇ ಆಕೆಗೆ ಇತ್ತು ದಯೆಯಿಂದ ತನ್ನ ಕೈಯಿಂದ ಆಕೆಯ ಕೈಹಿಡಿದು ಆಕೆಯನ್ನು ಮೇಲಕ್ಕೆ ಎತ್ತಿಕೊಂಡನು. ॥ ೧೯ ॥ ಅದರಿಂದ ದೇವಯಾನಿಯ ಮನಸ್ಸಿನಲ್ಲಿ ಆತನಲ್ಲಿ ಪ್ರೇಮ ವಂಕುರಿಸಿತು. ಪ್ರೇಮಪೂರ್ಣವಾದ ಸುಮಧುರವಾದ ಮಾತಿನಿಂದ ವೀರ ಯಯಾತಿಯಲ್ಲಿ ಹೀಗೆಂದಳು – ವೀರಶಿರೋಮಣಿಯಾದ ರಾಜನೇ ! ನೀನಿಂದು ನನ್ನ ಕೈಯನ್ನು ಹಿಡಿದುಕೊಂಡೆ. ನೀನು ಪಾಣಿಗ್ರಹಣಮಾಡಿದ ಈ ಕೈಯನ್ನು ಬೇರೆ ಯಾರೂ ಹಿಡಿಯದಿರಲಿ. ವೀರಶ್ರೇಷ್ಠನೇ ! ಬಾವಿಗೆ ಬಿದ್ದದ್ದರಿಂದ ನನಗೆ ಆಚಾನಕವಾಗಿ ನಿಮ್ಮ ದರ್ಶನವಾಯಿತು. ಇದು ಭಗವಂತನೇ ಮಾಡಿದ ಸಂಬಂಧವೆಂದು ತಿಳಿಯಬೇಕು. ಇದರಲ್ಲಿ ದೈವವಲ್ಲದೆ ನಮ್ಮ ದಾಗಲೀ ಅಥವಾ ಬೇರೆಯಾರದ್ದಾಗಲೀ ಯಾವುದೇ ಪ್ರಯತ್ನವು ಇಲ್ಲ. ॥ ೨೦-೨೧ ॥

ನ ಬ್ರಾಹ್ಮಣೋ ಮೇ ಭವಿತಾ ಹಸ್ತಗ್ರಾಹೋ ಮಹಾಭುಜ ।
ಕಚಸ್ಯ ಬಾರ್ಹಸ್ಪತ್ಯಸ್ಯ ಶಾಪಾದ್ಯಮಶಪಂ ಪುರಾ
॥ ೨೨ ॥

ವೀರಶ್ರೇಷ್ಠನೇ ! ಮೊದಲು ನಾನು ಬೃಹಸ್ಪತಿಯ ಪುತ್ರನಾದ ಕಚನಿಗೆ ಶಾಪವಿತ್ತಿದ್ದೆ. ಅದರಿಂದ ಅವನೂ ನನ್ನನ್ನು ಶಪಿಸಿದ್ದನು. ಈ ಕಾರಣದಿಂದಲೇ ಯಾವ ಬ್ರಾಹ್ಮಣನು ನನ್ನ ಪಾಣಿಗ್ರಹಣ ಮಾಡ ಲಾರನು.* ॥ ೨೨ ॥ ಪ್ರತಿಲೋಮ ವಿವಾಹವು ಶಾಸ್ತ್ರಕ್ಕೆ ವಿರುದ್ಧ ವಾದುದರಿಂದ ಯಯಾತಿಗೆ ಈ ಸಂಬಂಧವು ಇಷ್ಟವಿರಲಿಲ್ಲ. ಆದರೆ ಪ್ರಾರಬ್ಧವೇ ನನಗೆ ಈ ಸಂಬಂಧವನ್ನು ಒದಗಿಸಿಕೊಟ್ಟಿದೆ. ಮೇಲಾಗಿ ನನ್ನ ಮನಸ್ಸೂ ಇವಳಲ್ಲಿ ಅನುರಕ್ತವಾಗಿದೆ ಎಂದು ಯೋಚಿಸಿ ಆಕೆಯ ಮಾತನ್ನು ಒಪ್ಪಿ ಕೊಂಡನು. ॥ ೨೩. ॥

ಯಯಾತಿರನಭಿಪ್ರೇತಂ ದೈವೋಪಹೃತಮಾತ್ಮನಃ ।
ಮನಸ್ತು ತದ್ಗತಂ ಬುದ್ಧ್ವಾ ಪ್ರತಿಜಗ್ರಾಹ ತದ್ವಚಃ
॥ ೨೩. ॥

ವೀರ ಯಯಾತಿಯು ಹೊರಟುಹೋದಾಗ ದೇವಯಾನಿಯು ಅಳುತ್ತಾ-ಕರೆಯುತ್ತಾ ತನ್ನ ತಂದೆಯಾದ ಶುಕ್ರಾಚಾರ್ಯರ ಬಳಿಗೆ ಬಂದು ಶರ್ಮಿಷ್ಠೆಯು ಮಾಡಿದುದೆಲ್ಲವನ್ನು ಹೇಳಿದಳು. ॥ ೨೪ ॥ ಶರ್ಮಿಷ್ಠೆಯ ವ್ಯವಹಾರದಿಂದ ಭಗವಾನ್ ಶುಕ್ರಾಚಾರ್ಯರ ಮನಸ್ಸಿಗೂ ಬೇಸರ ಉಂಟಾಯಿತು. ಅವರು ಪೌರೋಹಿತ್ಯ ವೃತ್ತಿಯನ್ನೇ ನಿಂದಿಸತೊಡಗಿದರು. ಕಾಪೋತವೃತ್ತಿಯನ್ನೇ ಶ್ಲಾಘಿ ಸುತ್ತಾ ಮಗಳೊಡನೆ ನಗರವನ್ನು ಬಿಟ್ಟು ಹೊರಟುಬಿಟ್ಟರು. ॥ ೨೫ ॥ ವೃಷಪರ್ವನಿಗೆ ಇದು ಗೊತ್ತಾಗುತ್ತಲೇ ಅವನ ಮನಸ್ಸಿನಲ್ಲಿ ಗುರುಗಳು ಎಲ್ಲಾದರೂ ಶತ್ರುಗಳ ವಿಜಯವನ್ನು ಮಾಡಿಸು ವರೋ, ಅಥವಾ ನನಗೆ ಶಾಪಕೊಡಬಹುದೇ ಎಂದು ಶಂಕಿಸಿ ಅವರನ್ನು ಒಲಿಸಿಕೊಳ್ಳಲು ಅವರ ಹಿಂದೆಯೇ ಹೋಗಿ ದಾರಿ ಯಲ್ಲೇ ಚರಣಗಳಲ್ಲಿ ಶಿರವನ್ನಿಟ್ಟು ವಂದಿಸಿದನು. ॥ ೨೬ ॥ ಭಗವಾನ್ ಶುಕ್ರಾಚಾರ್ಯರ ಕ್ರೋಧವಾದರೋ ಕ್ಷಣ ಮಾತ್ರವಿತ್ತು. ಅವರು ವೃಷಪರ್ವನಿಗೆ ಹೇಳಿದರು – ರಾಜನೇ ! ನಾನು ನನ್ನ ಪುತ್ರಿ ದೇವಯಾನಿಯನ್ನು ಬಿಟ್ಟಿರಲಾರೆನು. ಆದಕ್ಕಾಗಿ ಆಕೆಯ ಇಚ್ಛೆ ಯನ್ನು ನೀನು ಪೂರ್ಣಗೊಳಿಸು. ಹಾಗಾದರೆ ನನಗೆ ಮರಳಿ ಬರುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ॥ ೨೭ ॥ ವೃಷಪರ್ವನು 'ಹಾಗೆಯೇ ಆಗಲಿ' ಎಂದು ಹೇಳಿ ಅವರ ಆಜ್ಞೆಯನ್ನು ಸ್ವೀಕರಿಸಿ ದಾಗ ದೇವಯಾನಿಯು ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಿದಳು – 'ತಂದೆಯೇ ! ನನ್ನನ್ನು ಯಾರಿಗೆ ಮದುವೆಮಾಡಿ ಕೊಡುವೆಯೋ ಹಾಗೂ ನಾನು ಎಲ್ಲಿಗೆ ಹೋಗುವೆನೋ, ಶರ್ಮಿಷ್ಠೆಯೂ ತನ್ನ ಸಖಿಯರೊಂದಿಗೆ ನನ್ನ ಸೇವೆಗಾಗಿ ಅಲ್ಲಿಗೆ ಬರಬೇಕು.'' ॥ ೨೮ ॥

ಗತೇ ರಾಜನಿ ಸಾ ವೀರೇ ತತ್ರ ಸ್ಮ ರುದತೀ ಪಿತುಃ ।
ನ್ಯವೇದಯತ್ತತಃ ಸರ್ವಮುಕ್ತಂ ಶರ್ಮಿಷ್ಠಯಾ ಕೃತಮ್
॥ ೨೪ ॥

ಶರ್ಮಿಷ್ಠೆಯು ತನ್ನ ಪರಿವಾರದವರ ಸಂಕಟವನ್ನೂ, ಅವರ ಕಾರ್ಯಗೌರವವನ್ನೂ ಕಂಡು ದೇವಯಾನಿಯ ಮಾತನ್ನು ಸ್ವೀಕರಿಸಿದಳು. ಆಕೆಯು ಒಂದು ಸಾವಿರ ಸಖಿಯರೊಂದಿಗೆ ದಾಸಿ ಯಂತೆ ದೇವಯಾನಿಯ ಸೇವೆಯಲ್ಲಿ ಇರತೊಡಗಿದಳು. ॥ ೨೯ ॥ ಶುಕ್ರಾಚಾರ್ಯರು ದೇವಯಾನಿಯ ವಿವಾಹವನ್ನು ಯಯಾತಿ ಯೊಂದಿಗೆ ನಡೆಸಿದರು ಮತ್ತು ಶರ್ಮಿಷ್ಠೆಯನ್ನು ದಾಸಿಯ ರೂಪ ದಲ್ಲಿ ಒಪ್ಪಿಸಿ ಹೇಳಿದರು – ರಾಜನೇ ! ಈ ಶರ್ಮಿಷ್ಠೆಯನ್ನು ನಿನ್ನ ಹಾಸಿಗೆಗೆ ಎಂದೂ ಬರಲು ಬಿಡಬಾರದು. ॥ ೩೦ ॥

ದುರ್ಮನಾ ಭಗವಾನ್ಕಾವ್ಯಃ ಪೌರೋಹಿತ್ಯಂ ವಿಗರ್ಹಯನ್ ।
ಸ್ತುವನ್ವೃತ್ತಿಂ ಚ ಕಾಪೋತೀಂ ದುಹಿತ್ರಾ ಸ ಯಯೌ ಪುರಾತ್
॥ ೨೫ ॥

ವೃಷಪರ್ವಾ ತಮಾಜ್ಞಾಯ ಪ್ರತ್ಯನೀಕವಿವಕ್ಷಿತಮ್ ।
ಗುರುಂ ಪ್ರಸಾದಯನ್ಮೂರ್ಧ್ನಾ ಪಾದಯೋಃ ಪತಿತಃ ಪಥಿ
॥ ೨೬ ॥

ಕ್ಷಣಾರ್ಧಮನ್ಯುರ್ಭಗವಾನ್ ಶಿಷ್ಯಂ ವ್ಯಾಚಷ್ಟ ಭಾರ್ಗವಃ ।
ಕಾಮೋಽಸ್ಯಾಃ ಕ್ರಿಯತಾಂ ರಾಜನ್ಕೃಷ್ಣಾಂ ತ್ಯಕ್ತುಮಿಹೋತ್ಸಹೇ
॥ ೨೭ ॥

ತಥೇತ್ಯವಸ್ಥಿತೇ ಪ್ರಾಹ ದೇವಯಾನೀ ಮನೋಗತಮ್ ।
ಪಿತ್ರಾ ದತ್ತಾ ಯತೋ ಯಾಸ್ಯೇ ಸಾನುಗಾ ಯಾತು ಮಾಮನು
॥ ೨೮ ॥

ಸ್ವಾನಾಂ ತತ್ಸಂಕಟಂ ವೀಕ್ಷ್ಯ ತದರ್ಥಸ್ಯ ಚ ಗೌರವಮ್ ।
ದೇವಯಾನೀಂ ಪರ್ಯಚರತ್ ಸ್ತ್ರೀಸಹಸ್ರೇಣ ದಾಸವತ್
॥ ೨೯ ॥

ನಾಹುಷಾಯ ಸುತಾಂ ದತ್ತ್ವಾ ಸಹ ಶರ್ಮಿಷ್ಠಯೋಶನಾಃ ।
ತಮಾಹ ರಾಜನ್ ಶರ್ಮಿಷ್ಠಾಮಾಧಾಸ್ತಲ್ಪೇ ನ ಕರ್ಹಿಚಿತ್
॥ ೩೦ ॥

---

* ಬೃಹಸ್ಪತಿಯ ಪುತ್ರ ಕಚನು ಶುಕ್ರಾಚಾರ್ಯರ ಬಳಿ ಮೃತಸಂಜೀವನೀ ವಿದ್ಯೆಯನ್ನು ಕಲಿಯುತ್ತಿದ್ದನು. ಅಧ್ಯಯನ ಮುಗಿಸಿ ಅವನು ಮನೆಗೆ ಹೊರಟಾಗ ದೇವಯಾನಿಯು ಅವನನ್ನು ವರಿಸಲು ಬಯಸಿದಳು. ಆದರೆ ಗುರುಪುತ್ರಿಯಾದ್ದರಿಂದ ಕಚನು ಆಕೆಯ ಇಂಗಿತವನ್ನು ಸ್ವೀಕರಿಸಲಿಲ್ಲ. ಅದರಿಂದ ಬೇಸರಗೊಂಡ ದೇವಯಾನಿಯು – 'ನೀನು ಕಲಿತ ವಿದ್ಯೆಯು ನಿಷ್ಫಲವಾಗಲಿ' ಎಂದು ಶಾಪವನ್ನು ಕೊಟ್ಟಳು. ಕಚನೂ ಕೂಡ ಆಕೆಯನ್ನು ಶಪಿಸಿದನು – 'ಯಾವ ಬ್ರಾಹ್ಮಣನೂ ನಿನ್ನನ್ನು ಪತ್ನಿಯಾಗಿ ಸ್ವೀಕರಿಸದೆ ಹೋಗಲಿ.' ಇದರಿಂದ ದೇವಯಾನಿಗೆ ಬ್ರಾಹ್ಮಣಪತಿಯು ದೊರಕುವುದು ಶಕ್ಯವಾಗಿರಲಿಲ್ಲ.

ವಿಲೋಕ್ಯೌಶನಸೀಂ ರಾಜನ್ ಶರ್ಮಿಷ್ಠಾ ಸಪ್ರಜಾಂ ಕ್ವಚಿತ್ ।
ತಮೇವ ವವ್ರೇ ರಹಸಿ ಸಖ್ಯಃ ಪತಿಮೃತೌ ಸತೀ
॥ ೩.೧ ॥

ರಾಜಪುತ್ರ್ಯಾರ್ಥಿತೋಽಪತ್ಯೇ ಧರ್ಮಂ ಚಾವೇಕ್ಷ್ಯ ಧರ್ಮವಿತ್ ।
ಸ್ಮರಞ್ಛುಕ್ರವಚಃ ಕಾಲೇ ದಿಷ್ಟಮೇವಾಭ್ಯಪದ್ಯತ
॥ ೩.೨ ॥

ಯದುಂ ಚ ತುರ್ವಸುಂ ಚೈವ ದೇವಯಾನೀ ವ್ಯಜಾಯತ ।
ದ್ರುಹ್ಯಂ ಚಾನುಂ ಚ ಪೂರುಂ ಚ ಶರ್ಮಿಷ್ಠಾ ವಾರ್ಷಪರ್ವಣೀ
॥ ೩.೩ ॥

ಗರ್ಭಸಂಭವಮಾಸುರ್ಯಾ ಭರ್ತುರ್ವಿಜ್ಞಾಯ ಮಾನಿನೀ ।
ದೇವಯಾನೀ ಪಿತುರ್ಗೇಹಂ ಯಯೌ ಕ್ರೋಧವಿಮೂರ್ಛಿತಾ
॥ ೩.೪ ॥

ಪ್ರಿಯಾಮನುಗತಃ ಕಾಮೀ ವಚೋಭಿರುಪಮಂತ್ರಯನ್ ।
ನ ಪ್ರಸಾದಯಿತುಂ ಶೇಕೇ ಪಾದಸಂವಾಹನಾದಿಭಿಃ
॥ ೩.೫ ॥

ಶುಕ್ರಸ್ತಮಾಹ ಕುಪಿತಃ ಸ್ತ್ರೀಕಾಮಾನೃತಪೂರುಷ ।
ತ್ವಾಂ ಜರಾ ವಿಶತಾಂ ಮಂದ ವಿರೂಪಕರಣೀ ನೃಣಾಮ್
॥ ೩.೬ ॥

ಯಯಾತಿರುವಾಚ

ಅತೃಪ್ತೋಽಸ್ಮ್ಯದ್ಯ ಕಾಮಾನಾಂ ಬ್ರಹ್ಮನ್ದುಹಿತರಿ ಸ್ಮ ತೇ ।
ವ್ಯತ್ಯಸ್ಯತಾಂ ಯಥಾಕಾಮಂ ವಯಸಾ ಯೋಽಭಿಧಾಸ್ಯತಿ
॥ ೩.೭ ॥

ಇತಿ ಲಬ್ಧವ್ಯವಸ್ಥಾನಃ ಪುತ್ರಂ ಜ್ಯೇಷ್ಠ ಮವೋಚತ ।
ಯದೋ ತಾತ ಪ್ರತೀಚ್ಛೇಮಾಂ ಜರಾಂ ದೇಹಿ ನಿಜಂ ವಯಃ
॥ ೩.೮ ॥

ಮಾತಾಮಹಕೃತಾಂ ವತ್ಸ ನ ತೃಪ್ತೋ ವಿಷಯೇಷ್ವಹಮ್ ।
ವಯಸಾ ಭವದೀಯೇನ ರಂಸ್ಯೇ ಕತಿಪಯಾಃ ಸಮಾಃ
॥ ೩.೯ ॥

ಯದುರುವಾಚ

ನೋತ್ಸಹೇ ಜರಸಾ ಸ್ಥಾತುಮಂತರಾ ಪ್ರಾಪ್ತಯಾ ತವ ।
ಅವಿದಿತ್ವಾ ಸುಖಂ ಗ್ರಾಮ್ಯಂ ವೈತೃಷ್ಣ್ಯಂ ನೈತಿ ಪೂರುಷಃ
॥ ೪೦ ॥

ಪರೀಕ್ಷಿತನೇ ! ಕೆಲದಿವಸಗಳು ಕಳೆದನಂತರ ದೇವಯಾನಿಯು ಪುತ್ರವತಿಯಾದಳು. ಅವಳು ಪುತ್ರವತಿಯಾದುದನ್ನು ನೋಡಿ ಶರ್ಮಿಷ್ಠೆಯು ತನ್ನ ಋತುಕಾಲದಲ್ಲಿ ದೇವಯಾನಿಯ ಪತಿಯೊಡನೆ ಏಕಾಂತದಲ್ಲಿ ಸಮಾಗಮವನ್ನು ಯಾಚಿಸಿದಳು. ॥ ೩.೧ ॥ ಶರ್ಮಿಷ್ಠೆಯ ಪುತ್ರಪ್ರಾಪ್ತಿಯ ಪ್ರಾರ್ಥನೆಯು ಧರ್ಮಸಂಗತವಾಗಿದೆ ಎಂದು ತಿಳಿದು ಧರ್ಮಜ್ಞನಾದ ಯಯಾತಿಯು ಶುಕ್ರಾಚಾರ್ಯರ ಮಾತು ನೆನಪಿನಲ್ಲಿದ್ದರೂ ಸಕಾಲದಲ್ಲಿ ಪ್ರಾರಬ್ಧಕ್ಕನುಸಾರ ಏನಾಗಬೇಕೋ ಅದು ಆಗಿಯೇ ತೀರುವುದು ಎಂದು ನಿಶ್ಚಯಿಸಿದನು. ॥ ೩.೨ ॥ ದೇವಯಾನಿಗೆ ಯದು ಮತ್ತು ತುರ್ವಸು ಎಂಬ ಎರಡು ಮಕ್ಕಳಾದರು. ಹಾಗೆಯೇ ವೃಷಪರ್ವನ ಮಗಳಾದ ಶರ್ಮಿಷ್ಠೆಗೆ ದ್ರಹ್ಯು, ಅನು, ಪುರು ಎಂಬ ಮೂವರು ಪುತ್ರರಾದರು. ॥ ೩.೩ ॥ ಮಾನಿಷ್ಠೆಯಾದ ದೇವಯಾನಿಗೆ ತನ್ನಂತೆಯೇ ಶರ್ಮಿಷ್ಠೆಗೂ ತನ್ನ ಪತಿಯಿಂದಲೇ ಮಕ್ಕಳಾಗುತ್ತಿವೆ ಎಂಬುದನ್ನು ಅರಿತಾಗ ಅವಳು ಕ್ರೋಧಗೊಂಡು ತನ್ನ ತಂದೆಯ ಮನೆಗೆ ಹೊರಟುಹೋದಳು. ॥ ೩.೪ ॥

ಕಾಮಿಯಾದ ಯಯಾತಿಯು ದೇವಯಾನಿಯನ್ನು ಒಲಿಸಿಕೊಳ್ಳಲು ಸುಮಧುರ ಮಾತುಗಳಿಂದ, ನಯವಿನಯದಿಂದ ಪ್ರಯತ್ನಿಸಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಅವಳ ಕಾಲುಗಳನ್ನೊತ್ತಿ ಸೇವೆ ಮಾಡಿದರೂ, ಅವಳ ಹಿಂದೆ-ಹಿಂದೆಯೇ ಹೋದರೂ ಪ್ರಯೋಜನವಾಗಲಿಲ್ಲ.॥ ೩.೫॥ ಶುಕ್ರಾಚಾರ್ಯರೂ ಕೂಡ ಕೋಪಗೊಂಡು ಯಯಾತಿಗೆ ಹೇಳಿದರು – 'ನೀನು ಅತ್ಯಂತ ಸ್ತ್ರೀಲಂಪಟನಾಗಿರುವೆ. ಮಂದಬುದ್ಧಿಯವನೂ, ಸುಳ್ಳುಗಾರನೂ ಆಗಿರುವೆ. ಮನುಷ್ಯರನ್ನು ಕುರೂಪಗೊಳಿಸುವಂತಹ ಮುದಿತನವು ನಿನಗೆ ಉಂಟಾಗಲಿ ನಡೆ ಇಲ್ಲಿಂದ' ಎಂದು ಶಪಿಸಿದರು. ॥೩.೬॥

ಯಯಾತಿಯು ಹೇಳಿದನು – ಬ್ರಾಹ್ಮಣಶ್ರೇಷ್ಠರೇ ! ನಿಮ್ಮ ಮಗಳೊಡನೆ ವಿಷಯಭೋಗಗಳನ್ನು ಅನುಭವಿಸುತ್ತಿರುವ ನನಗೆ ಇನ್ನೂ ತೃಪ್ತಿಯೇ ಆಗಲಿಲ್ಲ. ಈ ಶಾಪದಿಂದಲಾದರೋ ನಿಮ್ಮ ಮಗಳಿಗೂ ಅನಿಷ್ಟವೇ ಪರಿಣಮಿಸುತ್ತದೆ. ಆಗ ಶುಕ್ರಾಚಾರ್ಯರಿಗೂ ಯಯಾತಿಯ ಮಾತು ಸರಿ ಎನಿಸಿತು. ಶಾಪದಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ ಹೇಳಿದರು – ಸರಿ ಹೋಗು. ಸಂತೋಷದಿಂದ ನಿನಗೆ ತನ್ನ ತಾರುಣ್ಯವನ್ನು ಯಾರಾದರೂ ಕೊಟ್ಟರೆ ಅದನ್ನು ಪಡೆದು ಈ ವೃದ್ಧಾಪ್ಯವನ್ನು ಅವನಿಗೆ ಕೊಡಬಹುದು. ॥ ೩.೭ ॥ ಶುಕ್ರಾಚಾರ್ಯರು ಇಂತಹ ವ್ಯವಸ್ಥೆ ಮಾಡಿದಾಗ ಯಯಾತಿಯು ತನ್ನ ರಾಜಧಾನಿಗೆ ಬಂದು ತನ್ನ ಹಿರಿಯಪುತ್ರನಾದ ಯದುವಿನಲ್ಲಿ – ಮಗೂ ! ನೀನು ನಿನ್ನ ಯೌವನವನ್ನು ನನಗೆ ಕೊಟ್ಟು, ನಿನ್ನ ಅಜ್ಜನು ಕೊಟ್ಟಿರುವ ಈ ವೃದ್ಧಾಪ್ಯವನ್ನು ನೀನು ಪಡೆ. ಏಕೆಂದರೆ, ಪ್ರಿಯ ಪುತ್ರನೇ ! ನಾನು ಇನ್ನೂ ವಿಷಯಗಳಿಂದ ತೃಪ್ತನಾಗಲಿಲ್ಲ. ಅದಕ್ಕಾಗಿ ನಿನ್ನ ಯೌವನವನ್ನು ಪಡೆದು ನಾನು ಕೆಲವು ವರ್ಷಗಳವರೆಗೆ ಇನ್ನೂ ಆನಂದವನ್ನು ಅನುಭವಿಸುವೆನು. ॥ ೩.೮-೩.೯॥

ಯದುವು ಹೇಳಿದನು – ತಂದೆಯೇ ! ಅಕಾಲದಲ್ಲಿ ಪ್ರಾಪ್ತವಾದ ನಿನ್ನ ಮುದಿತನವನ್ನು ಪಡೆದು ನಾನು ಬದುಕಲು ಬಯಸುವುದಿಲ್ಲ. ಏಕೆಂದರೆ, ವಿಷಯಸುಖಗಳನ್ನು ಅನುಭವಿಸದೆ ಯಾವ ಮನುಷ್ಯನೂ ವೈರಾಗ್ಯವನ್ನು ಹೊಂದಲಾರನು. ॥ ೪೦ ॥

ತುರ್ವಸುಶ್ಚೋದಿತಃ ಪಿತ್ರಾ ದ್ರುಹ್ಯುಶ್ಚಾನುಶ್ಚ ಭಾರತ ।
ಪ್ರತ್ಯಾಚಖ್ಯುರಧರ್ಮಜ್ಞಾ ಹ್ಯನಿತ್ಯೇ ನಿತ್ಯಬುದ್ಧಯಃ
॥ ೪೧ ॥

ಅಪೃಚ್ಛತ್ತನಯಂ ಪೂರುಂ ವಯಸೋನಂ ಗುಣಾಧಿಕಮ್ ।
ನ ತ್ವಮಗ್ರಜವದ್ವತ್ಸ ಮಾಂ ಪ್ರತ್ಯಾಖ್ಯಾತುಮರ್ಹಸಿ
॥ ೪೨ ॥

ಪೂರುರುವಾಚ

ಕೋ ನು ಲೋಕೇ ಮನುಷ್ಯೇಂದ್ರ ಪಿತುರಾತ್ಮಕೃತಃ ಪುಮಾನ್ ।
ಪ್ರತಿಕರ್ತುಂ ಕ್ಷಮೋ ಯಸ್ಯ ಪ್ರಸಾದಾದ್ವಿಂದತೇ ಪರಮ್
॥ ೪೩ ॥

ಉತ್ತಮಶ್ಚಿಂತಿತಂ ಕುರ್ಯಾತ್ಪ್ರೋಕ್ತಕಾರೀ ತು ಮಧ್ಯಮಃ ।
ಅಧಮೋಽಶ್ರದ್ಧಯಾ ಕುರ್ಯಾದಕರ್ತೋಚ್ಚರಿತಂ ಪಿತುಃ
॥ ೪೪ ॥

ಇತಿ ಪ್ರಮುದಿತಃ ಪೂರುಃ ಪ್ರತ್ಯಗೃಹ್ಣಾಜ್ಜರಾಂ ಪಿತುಃ ।
ಸೋಽಪಿ ತದ್ವಯಸಾ ಕಾಮಾನ್ಯಥಾವದ್ಜುಜುಷೇ ನೃಪ
॥ ೪೫ ॥

ಸಪ್ತದ್ವೀಪಪತಿಃ ಸಮ್ಯಕ್ಪಿತೃವತ್ಪಾಲಯನ್ ಪ್ರಜಾಃ ।
ಯಥೋಪಜೋಷಂ ವಿಷಯಾನ್ಜುಜುಷೇಽವ್ಯಾಹತೇಂದ್ರಿಯಃ
॥ ೪೬ ॥

ದೇವಯಾನ್ಯಪ್ಯನುದಿನಂ ಮನೋವಾಗ್ದೇಹವಸ್ತುಭಿಃ ।
ಪ್ರೇಯಸಃ ಪರಮಾಂ ಪ್ರೀತಿಮುವಾಹ ಪ್ರೇಯಸೀ ರಹಃ
॥ ೪೭ ॥

ಅಯಜದ್ಯಜ್ಞಪುರುಷಂ ಕ್ರತುಭಿರ್ಭೂರಿದಕ್ಷಿಣೈಃ ।
ಸರ್ವದೇವಮಯಂ ದೇವಂ ಸರ್ವವೇದಮಯಂ ಹರಿಮ್
॥ ೪೮ ॥

ಯಸ್ಮಿನ್ನಿದಂ ವಿರಚಿತಂ ವ್ಯೋಮ್ನೀವ ಜಲದಾವಲಿಃ ।
ನಾನೇವ ಭಾತಿ ನಾಭಾತಿ ಸ್ವಪ್ನಮಾಯಾಮನೋರಥಃ
॥ ೪೯ ॥

ಪರೀಕ್ಷಿತನೇ ! ಹೀಗೆಯೇ ತುರ್ವಸು, ದ್ರಹ್ಯು ಮತ್ತು ಅನು ಇವರೂ ತಂದೆಯ ಆಜ್ಞೆಯನ್ನು ತಿರಸ್ಕರಿಸಿದರು. ಅವರೆಲ್ಲರೂ ಧರ್ಮವನ್ನು ತಿಳಿದವರಾಗಿರಲಿಲ್ಲ ಮತ್ತು ಅನಿತ್ಯವಾದ ಶರೀರವನ್ನೇ ಶಾಶ್ವತವೆಂದು ತಿಳಿದಿದ್ದರು. ॥ ೪೧ ॥ ಈಗ ಯಯಾತಿಯು ವಯಸ್ಸಿನಲ್ಲಿ ಅತಿ ಸಣ್ಣವನಾಗಿದ್ದರೂ ಗುಣಗಳಲ್ಲಿ ದೊಡ್ಡವನಾಗಿದ್ದ ತನ್ನ ಪುತ್ರ ಪುರುವನ್ನು ಕರೆದು ಕೇಳಿದನು – ಮಗು ! ನೀನು ನಿನ್ನ ಅಣ್ಣಂದಿರಂತೆ ನನ್ನ ಮಾತನ್ನು ತಿರಸ್ಕರಿಸಬೇಡ.ನನ್ನ ಮುದಿತನವನ್ನು ಸ್ವಲ್ಪ ಕಾಲದವರೆಗೆ ಪಡೆದು ನಿನ್ನ ಯೌವನವನ್ನು ನನಗೆ ಕೊಡು. ॥ ೪೨ ॥

ಪುರುವು ಹೇಳಿದನು – ತಂದೆಯೇ ! ಪಿತೃವಿನ ಕೃಪೆಯಿಂದಲೇ ಮನುಷ್ಯನಿಗೆ ಪರಮಪದವು ಲಭಿಸುವುದು. ವಾಸ್ತವದಲ್ಲಿ ಪುತ್ರನ ಶರೀರವು ತಂದೆಯೇ ಕೊಟ್ಟಿದ್ದಾಗಿದೆ. ಇಂತಹ ಸ್ಥಿತಿಯಲ್ಲಿ ಪ್ರಪಂಚದಲ್ಲಿ ತಂದೆಯ ಉಪಕಾರವನ್ನು ತೀರಿಸಬಲ್ಲವನು ಯಾವನು ತಾನೇ ಇರುವನು ? ॥ ೪೩ ॥ ತಂದೆಯ ಮನಸ್ಸಿನ ಮಾತನ್ನು ಹೇಳದೆಯೇ ನಡೆಸುವವನೇ ಉತ್ತಮ ಪುತ್ರನಾಗಿರುವನು. ಹೇಳಿದ ಮೇಲೆ ಶ್ರದ್ಧೆಯಿಂದ ಆಜ್ಞೆಯನ್ನು ಪಾಲಿಸುವವನು ಮಧ್ಯಮನು. ಆಜ್ಞೆ ಪಡೆದರೂ ಅಶ್ರದ್ಧೆಯಿಂದ ಅದನ್ನು ಪಾಲಿಸುವ ಪುತ್ರನು ಅಧಮನು. ಯಾವ ರೀತಿಯಿಂದಲೂ ತಂದೆಯ ಆಜ್ಞೆಯನ್ನು ಪಾಲಿಸದಿರುವವನನ್ನು ಪುತ್ರನೆಂದು ಹೇಳುವುದೂ ತಪ್ಪೇ. ಅವನಾದರೋ ತಂದೆಯ ಮಲದಂತೆ ಆಗಿರುವನು. ॥ ೪೪ ॥ ಪರೀಕ್ಷಿತನೇ ! ಹೀಗೆ ಹೇಳಿ ಪುರುವು ಬಹಳ ಆನಂದದಿಂದ ತಂದೆಯ ಮುದಿತನವನ್ನು ಸ್ವೀಕರಿಸಿದನು. ಯಯಾತಿಯೂ ಮಗನ ಯೌವನವನ್ನು ಪಡೆದು ಹಿಂದಿನಂತೆ ವಿಷಯಸೇವನೆಯಲ್ಲಿ ತೊಡಗಿದನು. ॥ ೪೫ ॥ ಯಯಾತಿಯು ಏಳು ದ್ವೀಪಗಳಿಗೂ ಸಾಮ್ರಾಟನಾಗಿದ್ದನು. ತಂದೆಯಂತೆಯೇ ಪ್ರಜಾಪಾಲನೆಯನ್ನು ಚೆನ್ನಾಗಿಯೇ ಮಾಡಿದ್ದನು. ಅವನ ಇಂದ್ರಿಯಗಳಲ್ಲಿ ಪರಿಪೂರ್ಣವಾದ ಶಕ್ತಿ ತುಂಬಿತ್ತು. ಅವನು ಯಥಾವಕಾಶವಲ್ಲಿ ಮೊರೆತ ವಿಷಯಗಳನ್ನು ಯಥೇಚ್ಛವಾಗಿ ಅನುಭವಿಸುತ್ತಿದ್ದನು. ॥ ೪೬ ॥ ಅವನ ಪ್ರಿಯತಮೆಯಾದ ದೇವಯಾನಿಯೂ ತನ್ನ ಪ್ರಿಯತಮನಾದ ಯಯಾತಿಯನ್ನು ಮನ, ವಚನ, ಶರೀರದಿಂದ ಮತ್ತು ವಸ್ತುಗಳಿಂದ ಪ್ರತಿದಿನವೂ ಸಂತೋಷಪಡಿಸುತ್ತಾ ಏಕಾಂತದಲ್ಲಿಯೂ ಸುಖವನ್ನು ನೀಡುತ್ತಿದ್ದಳು. ॥ ೪೭ ॥ ಸಾಮ್ರಾಟ ಯಯಾತಿಯು ವೇದಪ್ರತಿಪಾದ್ಯನಾದ ಸರ್ವದೇವಸ್ವರೂಪನಾದ ಯಜ್ಞಪುರುಷ ಭಗವಾನ್ ಶ್ರೀಹರಿಯನ್ನು ಅನೇಕ ಮಹಾ-ಮಹಾ ದಕ್ಷಿಣೆಗಳುಳ್ಳ ಯಜ್ಞಗಳ ಮೂಲಕ ಆರಾಧಿಸಿದನು. ॥ ೪೮ ॥ ಕೆಲವೊಮ್ಮೆ ಆಕಾಶದಲ್ಲಿ ದಟ್ಟವಾದ ಮೋಡಗಳು ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ ಕಾಣದೆ ನಿರ್ಮಲವಾಗಿರುವಂತೆಯೇ ಪರಮಾತ್ಮನ ಸ್ವರೂಪದಲ್ಲಿ ಈ ಜಗತ್ತು ಸ್ವಪ್ನ, ಮಾಯೆ ಮತ್ತು ಮನೋರಾಜ್ಯದಂತೆ ಕಲ್ಪಿತವಾಗಿದೆ. ಇದು ಕೆಲವೊಮ್ಮೆ ನಾಮ-ರೂಪಗಳಿಂದ ಕಾಣಿಸಿಕೊಳ್ಳುತ್ತದೆ, ಕೆಲವೊಮ್ಮೆ ಕಾಣಿಸುವುದೂ ಇಲ್ಲ. ॥ ೪೯ ॥

ತಮೇವ ಹೃದಿ ವಿನ್ಯಸ್ಯ ವಾಸುದೇವಂ ಗುಹಾಶಯಮ್ ।
ನಾರಾಯಣಮಣೀಯಾಂಸಂ ನಿರಾಶೀರಯಜತ್ಪ್ರಭುಮ್
॥ ೫೦ ॥

ಆ ಪರಮಾತ್ಮನು ಎಲ್ಲರ ಹೃದಯದಲ್ಲಿ ವಿರಾಜಮಾನನಾಗಿದ್ದಾನೆ. ಅವನ ಸ್ವರೂಪವು ಸೂಕ್ಷ್ಮಕ್ಕೂ ಸೂಕ್ಷ್ಮವಾಗಿದೆ. ಅಂತಹ ಸರ್ವಶಕ್ತನಾದ ಸರ್ವವ್ಯಾಪೀ ಭಗವಾನ್ನಾರಾಯಣನನ್ನೇ ತನ್ನ ಹೃದಯದಲ್ಲಿ ನೆಲೆಗೊಳಿಸಿ ಯಯಾತಿಯು ನಿಷ್ಕಾಮ ಭಾವದಿಂದ ಅವನನ್ನು ಆರಾಧಿಸಿದನು. ॥ ೫೦ ॥

ಏವಂ ವರ್ಷಸಹಸ್ರಾಣಿ ಮನಃಷಷ್ಠ್ಯೈರ್ಮನಃಸುಖಿಮ್ ।
ವಿದಧಾನೋಽಪಿ ನಾತೃಪ್ಯತ್ಸಾರ್ವಭೌಮಃ ಕದಿಂದ್ರಿಯೈಃ
॥ ೫೧ ॥

ಈ ಪ್ರಕಾರವಾಗಿ ಅವನು ಒಂದುಸಾವಿರ ವರ್ಷಗಳವರೆಗೆ ತನ್ನ ಉಚ್ಚೈಃಖಿಲ ಇಂದ್ರಿಯಗಳೊಂದಿಗೆ ಮನಸ್ಸನ್ನು ಜೋಡಿಸಿ ಅದಕ್ಕೆ ಪ್ರಿಯವಾದ ವಿಷಯಗಳನ್ನು ಅನುಭವಿಸಿದನು. ಇಷ್ಟಾದರೂ ಚಕ್ರವರ್ತಿ ಯಯಾತಿಗೆ ಭೋಗಗಳಿಂದ ತೃಪ್ತಿಯಾಗಲೇ ಇಲ್ಲ. ॥ ೫೧ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಅಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಯಯಾತಿಯ ಗೃಹತ್ಯಾಗ

ಶ್ರೀಶುಕ ಉವಾಚ

ಸ ಇತ್ಥಮಾಚರನ್ ಕಾಮಾನ್ ಸ್ತ್ರೈಣೋಽಪಹ್ನವಮಾತ್ಮನಃ ।
ಬುದ್ಧ್ವಾಪ್ರಿಯಾಯೈ ನಿರ್ವಿಣ್ಣೋ ಗಾಥಾಮೇತಾಮಗಾಯತ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ಯಯಾತಿಯು ಸ್ತ್ರೀವಶನಾಗಿ ವಿಷಯಗಳನ್ನು ಉಪಭೋಗಿಸುತ್ತಿದ್ದನು. ಒಂದು ದಿನ ಇದ್ದಕ್ಕಿದ್ದಂತೆ ತನ್ನ ಅಧಃಪತನದತ್ತ ದೃಷ್ಟಿಯು ಹರಿದಾಗ ಅವನಿಗೆ ವೈರಾಗ್ಯವುಂಟಾಗಿ ತನ್ನ ಪ್ರಿಯಪತ್ನಿಯಾದ ದೇವಯಾನಿಯಲ್ಲಿ ಈ ಕಥೆಯನ್ನು ಹೇಳಿದನು – ॥ ೧ ॥

ಶೃಣು ಭಾರ್ಗವ್ಯಮೂಂ ಗಾಥಾಂ ಮದ್ವಿಧಾಚರಿತಾಂ ಭುವಿ ।
ಧೀರಾ ಯಸ್ಯಾನುಶೋಚಂತಿ ವನೇ ಗ್ರಾಮನಿವಾಸಿನಃ
॥ ೨ ॥

ಭೃಗುನಂದಿನೀ ! ಈ ಕಥೆಯನ್ನು ಕೇಳು. ಭೂಮಿಯಲ್ಲಿ ನನ್ನಂತೆಯೇ ಇರುವ ವಿಷಯಾಪೇಕ್ಷಿಯ ಸತ್ಯ ಇತಿಹಾಸ ಇದಾಗಿದೆ. ಹೀಗೆಯೇ ಗ್ರಾಮವಾಸಿಗಳಾದ ವಿಷಯೀ ಪುರುಷರ ಸಂಬಂಧವಾಗಿ ವನವಾಸೀ ಜಿತೇಂದ್ರಿಯ ಪುರುಷರು ಇವರ ಶ್ರೇಯಸ್ಸು ಹೇಗಾದೀತೆಂದು ದುಃಖದಿಂದ ಯೋಚಿಸುತ್ತಾರೆ. ॥ ೨ ॥ ಪ್ರಿಯೆ ! ಕಾಡಿನಲ್ಲಿ ಒಂದು ಹೋತವು ತನಗೆ ಪ್ರಿಯವಾದುದನ್ನು ಹುಡುಕುತ್ತಾ ಸಂಚರಿಸುತ್ತಿತ್ತು. ಒಮ್ಮೆ ತನ್ನ ಕರ್ಮಫಲದಿಂದಲೇ ಒಂದು ಮೇಕೆಯು ಬಾವಿಯಲ್ಲಿ ಬಿದ್ದಿರುವುದನ್ನು ನೋಡಿತು. ॥ ೩ ॥ ಆ ಹೋತವು ಬಹಳ ಕಾಮಿಯಾಗಿತ್ತು. ಈ ಮೇಕೆಯನ್ನು ಬಾವಿಯಿಂದ ಹೇಗೆ ಮೇಲೆತ್ತಬಹುದೆಂದು ಯೋಚಿಸಿ ಅದು ತನ್ನ ಕೋಡುಗಳಿಂದ ಬಾವಿಯ ದಂಡೆಗಳನ್ನು ಅಗೆದು ದಾರಿಮಾಡಿತು. ॥ ೪ ॥ ಹೋತನ ಸಹಾಯದಿಂದ ಮೇಲಕ್ಕೆ ಬಂದ ಮೇಕೆಯು ಆ ಹೋತನನ್ನೇ ಮೋಹಿಸಿತು. ಆ ಹೋತವು ಗಡ್ಡ-ಮೀಸೆಗಳನ್ನು ಹೊಂದಿ, ಹೃಷ್ಟಪುಷ್ಟ ತರುಣವಾಗಿದ್ದು, ಮೇಕೆಗಳಿಗೆ ಸುಖ ವನ್ನಿಡುವುದರಲ್ಲಿ ವಿಹಾರ ಕುಶಲವಾಗಿದ್ದಿತು. ಬಾವಿಯಲ್ಲಿ ಬಿದ್ದ ಮೇಕೆಯು ಆ ಹೋತವನ್ನು ತನ್ನ ಪ್ರಿಯಕರನಾಗಿ ಆರಿಸಿಕೊಂಡಿರುವುದನ್ನು ನೋಡಿದ ಇತರ ಮೇಕೆಗಳೂ ಅದನ್ನೇ ತಮ್ಮ ಪತಿಯನ್ನಾಗಿಸಿ ಕೊಂಡವು. ಅವುಗಳಾದರೋ ಮೊದಲಿನಿಂದಲೂ

ಬಸ್ತ ಏಕೋ ವನೇ ಕಶ್ಚಿದ್ವಿಚಿನ್ವನ್ ಪ್ರಿಯಮಾತ್ಮನಃ ।
ದದರ್ಶ ಕೂಪೇ ಪತಿತಾಂ ಸ್ವಕರ್ಮವಶಗಾಮಜಾಮ್
॥ ೩ ॥

ತಸ್ಯಾ ಉದ್ಧರಣೋಪಾಯಂ ಬಸ್ತಃ ಕಾಮೀ ವಿಚಿಂತಯನ್ ।
ವ್ಯಧತ್ತ ತೀರ್ಥಮುದ್ವೃತ್ಯ ವಿಷಾಣಾಗ್ರೇಣ ರೋಧಸಿ
॥ ೪ ॥

ಸೋತ್ತೀರ್ಯ ಕೂಪಾತ್ಸ ಶ್ರೋಣೇ ತಮೇವ ಚಕಮೇ ಕಿಲ ।
ತಯಾ ವೃತಂ ಸಮುದ್ವೀಕ್ಷ್ಯ ಬಹ್ವ್ಯೋಽಜಾಃ ಕಾಂತಕಾಮಿನೀಃ
॥ ೫ ॥

ಪೀವಾನಂ ಶ್ಮಶ್ರುಲಂ ಪ್ರೇಷ್ಮಂ ಮೀಢ್ವಾಂಸಂ ಯಾಭಕೋವಿದಮ್ ।
ಸ ಏಕೋಽಜವೃಷಸ್ತಾಸಾಂ ಬಹ್ವೀನಾಂ ರತಿವರ್ಧನಃ ।
ರೇಮೇ ಕಾಮಗ್ರಹಗ್ರಸ್ತ ಆತ್ಮಾನಂ ನಾವಬುಧ್ಯತ
॥ ೬ ॥

ತಮೇವ ಪ್ರೇಷ್ಠ ತಮಯಾ ರಮಮಾಣಮಜಾನ್ಯಯಾ ।
ವಿಲೋಕ್ಯ ಕೂಪಸಂವಿಗ್ನಾ ನಾಮೃಷ್ಯದ್ ಬುಸ್ತಕರ್ಮ ತತ್
॥ ೭ ॥

ತಂ ದುರ್ಹೃದಂ ಸುಹೃದ್ರೂಪಂ ಕಾಮಿನಂ ಕೃಣಸೌಹೃದಮ್ ।
ಇಂದ್ರಿಯಾರಾಮಮುತ್ಸೃಜ್ಯ ಸ್ವಾಮಿನಂ ದುಃಖಿತಾ ಯಯೌ
॥ ೮ ॥

ಸೋಽಪಿ ಚಾನುಗತಃ ಸ್ತ್ರೈಣಃ ಕೃಪಣಸ್ತಾಂ ಪ್ರಸಾದಿತುಮ್ ।
ಕುರ್ವನ್ನಿಡವಿಡಾಕಾರಂ ನಾಶಕ್ನೋತ್ಪಥಿ ಸಂಧಿತುಮ್
॥ ೯ ॥

ತಸ್ಯಾಸ್ತತ್ರ ದ್ವಿಜಃ ಕಶ್ಚಿದಜಾಸ್ವಾಮ್ಯಚ್ಛಿನದ್ರುಷಾ ।
ಲಂಬತಂ ವೃಷಣಂ ಭೂಯಃ ಸಂದಧೇಽರ್ಥಾಯ ಯೋಗವಿತ್
॥ ೧೦ ॥

ಸಂಬದ್ಧವೃಷಣಃ ಸೋಽಪಿ ಹ್ಯಜಯಾ ಕೂಪಲಬ್ಧಯಾ ।
ಕಾಲಂ ಬಹುತಿಥಂ ಭದ್ರೇ ಕಾಮೈರ್ನಾದ್ಯಾಪಿ ತುಷ್ಯತಿ
॥ ೧೧ ॥

ತಥಾಹಂ ಕೃಪಣಃ ಸುಭ್ರು ಭವತ್ಯಾಃ ಪ್ರೇಮಯಂತ್ರಿತಃ ।
ಆತ್ಮಾನಂ ನಾಭಿಜಾನಾಮಿ ಮೋಹಿತಸ್ತವ ಮಾಯಯಾ
॥ ೧೨ ॥

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನ ದುಹ್ಯಂತಿ ಮನಃಪ್ರೀತಿಂ ಪುಂಸಃ ಕಾಮಹತಸ್ಯ ತೇ
॥ ೧೩ ॥

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ
॥ ೧೪ ॥

ಯದಾ ನ ಕುರುತೇ ಭಾವಂ ಸರ್ವಭೂತೇಷ್ವಮಂಗಲಮ್ ।
ಸಮದೃಷ್ಟೇಸ್ತದಾ ಪುಂಸಃ ಸರ್ವಾಃ ಸುಖಮಯಾ ದಿಶಃ
॥ ೧೫ ॥

ಮಾಮಸ್ಯಜಾ ದುರ್ಮತಿಭಿರ್ಭೀರ್ಯತೋ ಯಾನಜೀರ್ಯತೇ ।
ತಾಂ ತೃಷ್ಣಾಂ ದುಃಖನಿವಹಾಂ ಶರ್ಮಕಾಮೋ ದ್ರುತಂ ತ್ಯಜೇತ್
॥ ೧೬ ॥

ಪತಿಯ ಅನ್ವೇಷಣೆಯಲ್ಲಿದ್ದವು. ಆ ಒಂದೇ ಹೋತವು ಹಲವಾರು ಮೇಕೆಗಳೊಡನೆ ಮದನಪಿಶಾಚಗ್ರಸ್ತವಾಗಿ ವಿಹರಿಸುತ್ತಾ ತನ್ನನ್ನೇ ತಾನು ಮರೆತುಬಿಟ್ಟಿತ್ತು. ॥ ೫-೬ ॥ ಬಾವಿಯಿಂದ ಮೇಲೆ ಬಂದಿದ್ದ ಮೇಕೆಗೆ ತನ್ನ ಪತಿಯಾದರೋ ಇತರ ಮೇಕೆಗಳೊಡನೆ ವಿಹರಿಸುತ್ತಿದೆ ಎಂದು ತಿಳಿದಾಗ, ಅದಕ್ಕೆ ಆ ಹೋತನ ನಡೆವಳಿಕೆ ಸಹಿಸಲಾಗಲಿಲ್ಲ. ॥ ೭ ॥ ಈ ಹೋತವು ಬಹಳ ಕಾಮಿಯೆಂದೂ, ಇವನ ಯಾವ ಭರವಸೆಯೂ ಇಲ್ಲವೆಂದೂ, ಇದು ಮಿತ್ರರೂಪ ದಿಂದ ಶತ್ರುವಿನ ಕೆಲಸಮಾಡುತ್ತಿದೆ ಎಂದೂ ತಿಳಿದು ಆ ಮೇಕೆಯು ಈ ಇಂದ್ರಿಯಲೋಲುಪ ಹೋತನನ್ನು ಬಿಟ್ಟು ಭಾರೀ ದುಃಖಿದಿಂದ ತನ್ನನ್ನು ಸಾಕುವವನ ಬಳಿಗೆ ಹೊರಟುಹೋಯಿತು. ॥ ೮ ॥ ಆ ದಿನವೂ, ಕಾಮಿಯೂ ಆದ ಹೋತವು ಅದನ್ನು ಒಲಿಸಿಕೊಳ್ಳಲು ಮ್ಯಾ ಮ್ಯಾ ಎಂದುಕೊಂಡು ಅದರ ಹಿಂದೆಯೇ ಹೋಯಿತು. ಆದರೆ ಆ ಮೇಕೆಯನ್ನು ದಾರಿಯಲ್ಲಿ ಒಲಿಸಿಕೊಳ್ಳಲಾಗಲಿಲ್ಲ. ॥ ೯ ॥ ಆ ಮೇಕೆಯ ಒಡೆಯನು ಓರ್ವ ಬ್ರಾಹ್ಮಣನಾಗಿದ್ದನು. ಅವನು ಸಿಟ್ಟುಗೊಂಡು ಹೋತನ ಜೋಲಾಡುತ್ತಿದ್ದ ವೃಷಣಗಳನ್ನು ಕತ್ತರಿಸಿ ಹಾಕಿದನು. ಆದರೆ ಮತ್ತೆ ಮೇಕೆಯ ಒಳತನ್ನು ಯೋಚಿಸಿ ಪುನಃ ಅವನ್ನು ಜೋಡಿಸಿಬಿಟ್ಟನು. ಅವನಿಗೆ ಇಂತಹ ಅನೇಕ ಉಪಾಯಗಳು ತಿಳಿದಿದ್ದುವು. ॥ ೧೦ ॥

ಪ್ರಿಯೇ ! ಹೀಗೆ ವೃಷಣಗಳು ಜೋಡಿಸಿದಾಗ ಆ ಹೋತವು ಪುನಃ ಬಾವಿಯಲ್ಲಿ ಸಿಕ್ಕಿದ ಮೇಕೆಯೊಂದಿಗೆ ಅನೇಕ ದಿನಗಳವರೆಗೆ ವಿಷಯ ಭೋಗಗಳನ್ನು ಅನುಭವಿಸುತ್ತಾ ಇದ್ದರೂ ಇಂದಿನವರೆಗೆ ಅದಕ್ಕೆ ಸಂತೋಷವಾಗಲಿಲ್ಲ. ॥ ೧೧ ॥ ಸುಂದರೀ ! ನನ್ನ ಸ್ಥಿತಿಯೂ ಇದೇ ಆಗಿದೆ. ನಿನ್ನ ಪ್ರೇಮ ಪಾಶದಲ್ಲಿ ಬಂಧಿತನಾದ ನಾನೂ ಅತ್ಯಂತ ದೀನನಾಗಿ ಹೋದೆನು. ನಿನ್ನ ಮಾಯೆಯಿಂದ ಮೋಹಿತನಾದ ನಾನು ನನ್ನನ್ನೇ ಮರೆತುಬಿಟ್ಟಿರುವೆನು. ॥ ೧೨ ॥

ಪ್ರಿಯೇ ! ಭೂಮಂಡಲದಲ್ಲಿ ಎಷ್ಟು ಧಾನ್ಯಗಳಿವೆಯೋ, ಸುವರ್ಣರಾಶಿಗಳಿವೆಯೋ, ಪಶುಗಳಿವೆಯೋ, ಸ್ತ್ರೀಯರಿರುವರೋ, ಇವೆಲ್ಲವೂ ಜೊತೆಗೂಡಿ ಬಂದರೂ ಕಾಮಹತನಾದ ಮನುಷ್ಯನ ಮನಸ್ಸನ್ನು ಸಂತುಷ್ಟಗೊಳಿಸಲಾರವು. ॥ ೧೩ ॥ ವಿಷಯಗಳನ್ನು ಭೋಗಿಸುವುದರಿಂದ ಭೋಗವಾಸನೆಯು ಎಂದೂ ಶಾಂತವಾಗಲಾರದು. ಬದಲಿಗೆ ತುಪ್ಪದ ಆಹುತಿ ಹಾಕಿದಾಗ ಯಜ್ಞೇಶ್ವರನು ಮತ್ತೆ ವೃದ್ಧಿ ಹೊಂದುತ್ತಿರುವಂತೆ ಭೋಗವಾಸನೆಗಳು ಕಾಮೋಪಭೋಗಗಳಿಂದ ಮತ್ತೂ ಪ್ರಬಲವಾಗುತ್ತವೆ. ॥ ೧೪ ॥ ಮನುಷ್ಯನು ಯಾವುದೇ ಪ್ರಾಣಿ ಮತ್ತು ಯಾವುದೇ ವಸ್ತುವಿನೊಡನೆ ರಾಗ-ದ್ವೇಷಗಳ ಭಾವವಿಡದಿದ್ದಾಗ, ಅವನು ಸಮದರ್ಶಿಯಾಗುತ್ತಾನೆ. ಸಮಸ್ತ ದಿಕ್ಕುಗಳೂ ಅಂತಹವನಿಗೆ ಸುಖಿಮಯವಾಗುತ್ತವೆ. ॥ ೧೫ ॥ ವಿಷಯಗಳ ತೃಷ್ಣೆಯೇ ದುಃಖಗಳ ಉಗಮಸ್ಥಾನವಾಗಿದೆ. ಮಂದಬುದ್ಧಿಯವರಾದ ಜನರು ಅಂತಹ ತೃಷ್ಣೆಯನ್ನು ಬಹಳ ಕಷ್ಟದಿಂದಲೂ ತ್ಯಾಗ ಮಾಡಲಾರರು. ಮುದಿತನವು ಬಂದರೂ ತೃಷ್ಣೆಯು ನಿತ್ಯ ನೂತನವಾಗಿಯೇ ಇರುತ್ತದೆ. ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಶೀಘ್ರಾತಿಶೀಘ್ರವಾಗಿ ಈ ತೃಷ್ಣೆಯನ್ನು ಪರಿತ್ಯಜಿಸಬೇಕು. ॥ ೧೬ ॥

ಮಾತ್ರಾ ಸ್ವಸ್ರಾ ದುಹಿತ್ರಾ ವಾ ನಾವಿವಿಕ್ತಾಸನೋ ಭವೇತ್ ।
ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ
॥ ೧೭ ॥

ಪೂರ್ಣಂ ವರ್ಷಸಹಸ್ರಂ ಮೇ ವಿಷಯಾನ್ಸೇವತೋಽಸಕೃತ್ ।
ತಥಾಪಿ ಚಾನುಸವನಂ ತೃಷ್ಣಾ ತೇಷೂಪಜಾಯತೇ
॥ ೧೮ ॥

ತಸ್ಮಾದೇತಾಮಹಂ ತ್ಯಕ್ತ್ವಾ ಬ್ರಹ್ಮಣ್ಯಾಧಾಯ ಮಾನಸಮ್ ।
ನಿರ್ದ್ವಂದ್ವೋ ನಿರಹಂಕಾರಶ್ಚರಿಷ್ಯಾಮಿ ಮೃಗೈಃ ಸಹ
॥ ೧೯ ॥

ದೃಷ್ಟಂ ಶ್ರುತಮಸದ್ಬುದ್ಧ್ಯಾ ನಾನುಧ್ಯಾಯೇನ್ನ ಸಂವಿಶೇತ್ ।
ಸಂಸೃತಿಂ ಚಾತ್ಮನಾಶಂ ಚ ತತ್ರ ವಿದ್ವಾನ್ಸ ಆತ್ಮದೃಕ್
॥ ೨೦ ॥

ಇತ್ಯುಕ್ತ್ವಾನಾಹುಷೋ ಜಾಯಾಂ ತದೀಯಂ ಪೂರವೇ ವಯಃ ।
ದತ್ತ್ವಾ ಸ್ವಾಂ ಜರಸಂ ತಸ್ಮಾದಾದದೇ ವಿಗತಸ್ಪೃಹಃ
॥ ೨೧ ॥

ದಿಶಿ ದಕ್ಷಿಣಪೂರ್ವಸ್ಯಾಂ ದ್ರುಹ್ಯಂ ದಕ್ಷಿಣತೋ ಯದುಮ್ ।
ಪ್ರತೀಚ್ಯಾಂ ತುರ್ವಸುಂ ಚಕ್ರ ಉದೀಚ್ಯಾಮನುಮೀಶ್ವರಮ್
॥ ೨೨ ॥

ಭೂಮಂಡಲಸ್ಯ ಸರ್ವಸ್ಯ ಪೂರುಮರ್ಹತ್ತಮಂ ವಿಭಾಮ್ ।
ಅಭಿಷಿಚ್ಯಾಗ್ರಜಾಂಸ್ತಸ್ಯ ವಶೇ ಸ್ಥಾಪ್ಯ ವನಂ ಯಯೌ
॥ ೨೩ ॥

ಆಸೇವಿತಂ ವರ್ಷಪೂಗಾನ್ಷಡ್ವರ್ಗಂ ವಿಷಯೇಷು ಸಃ ।
ಕ್ಷಣೇನ ಮುಮುಚೇ ನೀಡಂ ಜಾತಪಕ್ಷ ಇವ ದ್ವಿಜಃ
॥ ೨೪ ॥

ಸ ತತ್ರ ನಿರ್ಮುಕ್ತ ಸಮಸ್ತಸಂಗ
ಆತ್ಮಾನುಭೂತ್ಯಾ ವಿಧುತತ್ರಿಲಿಂಗಃ ।
ಪರೇಽಮಲೇ ಬ್ರಹ್ಮಣಿ ವಾಸುದೇವೇ
ಲೇಭೇ ಗತಿಂ ಭಾಗವತೀಂ ಪ್ರತೀತಃ ॥ ೨೫ ॥

ಶ್ರುತ್ವಾಗಾಥಾಂ ದೇವಯಾನೀ ಮೇನೇ ಪ್ರಸ್ತೋಭಮಾತ್ಮನಃ ।
ಸ್ತ್ರೀಪುಂಸೋಃ ಸ್ನೇಹವೈಕ್ಲವ್ಯಾತ್ಪರಿಹಾಸಮಿವೇರಿತಮ್
॥ ೨೬ ॥

ತನ್ನ ತಾಯಿಯೇ ಇರಲಿ, ಮಗಳೇ ಇರಲಿ, ತಂಗಿಯಾಗಿರಲಿ, ಏಕಾಂತದಲ್ಲಿ ಒಂದೇ ಆಸನದಲ್ಲಿ ಸೆಟೆದು ಕುಳಿತುಕೊಳ್ಳಬಾರದು. ಏಕೆಂದರೆ, ಇಂದ್ರಿಯಗಳು ಅತಿಬಲಿಷ್ಠವಾದುವುಗಳು. ಮಹಾ ಮಹಾ ವಿದ್ವಾಂಸರನ್ನೂ ಕೂಡ ಅವುಗಳು ವಿಚಲಿತನನ್ನಾಗಿಸಿ ಬಿಡುತ್ತವೆ. ॥ ೧೭ ॥ ವಿಷಯಗಳನ್ನು ಪುನಃ ಪುನಃ ಸೇವಿಸುತ್ತಾ ನಾನು ಒಂದು ಸಾವಿರವರ್ಷಗಳನ್ನು ಕಳೆದೆನು. ಹೀಗಿದ್ದರೂ ಪ್ರತಿಕ್ಷಣವೂ ಆ ಭೋಗಗಳ ಲಾಲಸೆಯು ಬೆಳೆಯುತ್ತಲೇ ಇದೆ. ॥ ೧೮ ॥ ಅದಕ್ಕಾಗಿ ನಾನೀಗ ಈ ಭೋಗಗಳ ತೃಷ್ಣೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಮನಸ್ಸನ್ನು ಪರಬ್ರಹ್ಮ ಪರಮಾತ್ಮನಲ್ಲಿ ಲೀನಗೊಳಿಸಿ, ಶೀತೋಷ್ಣ ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿ, ಅಹಂಕಾರದಿಂದಲೂ ಮುಕ್ತನಾಗಿ, ಜಿಂಕೆಗಳೊಡನೆ ಅರಣ್ಯದಲ್ಲಿ ಸಂಚರಿಸುವೆನು. ॥ ೧೯ ॥ ಇಹ-ಪರ ಲೋಕಗಳೆರಡರ ಭೋಗಗಳು ಅಸತ್ತಾಗಿವೆ ಎಂದು ಭಾವಿಸಿ, ಅವನ್ನು ಚಿಂತಿಸದೆ, ಭೋಗಿಸದೇ ಇರಬೇಕು, ಅವುಗಳ ಚಿಂತನದಿಂದಲೇ ಜನ್ಮ-ಮೃತ್ಯುರೂಪವಾದ ಸಂಸಾರವು ಪ್ರಾಪ್ತವಾಗುವುದೆಂಬುದನ್ನು ತಿಳಿಯಬೇಕು. ಅವುಗಳ ಭೋಗದಿಂದಲಾದರೋ ಆತ್ಮನಾಶವಾಗುವುದೆಂಬ ರಹಸ್ಯವನ್ನು ತಿಳಿದು ಅವುಗಳಿಂದ ದೂರವುಳಿಯುವವನೇ ಆತ್ಮಜ್ಞಾನಿಯು. ॥ ೨೦ ॥

ಪರೀಕ್ಷಿತನೇ ! ಯಯಾತಿಯು ತನ್ನ ಪತ್ನಿಗೆ ಹೀಗೆ ಹೇಳಿ ಪುರುವಿನ ಯೌವನವನ್ನು ಅವನಿಗೆ ಮರಳಿಸಿ, ತನ್ನ ಮುದಿತನವನ್ನು ಅವನಿಂದ ಮರಳಿ ಸ್ವೀಕರಿಸಿ ನಿಃಸ್ಪೃಹನಾದನು. ಅವನಿಗೆ ವಿಷಯ ಸುಖಗಳಲ್ಲಿ ಆಸಕ್ತಿಯು ತೊಲಗಿಹೋಯಿತು. ॥ ೨೧ ॥ ಬಳಿಕ ಅವನು ಆಗ್ನೇಯ ದಿಕ್ಕಿನ ರಾಜ್ಯಗಳಿಗೆ ದ್ರುಹ್ಯುವನ್ನೂ, ದಕ್ಷಿಣದ ರಾಜ್ಯಗಳಿಗೆ ಯದುವನ್ನೂ ಪಶ್ಚಿಮದಲ್ಲಿ ತುರ್ವಸುವನ್ನೂ, ಉತ್ತರದ ರಾಜ್ಯಗಳನ್ನು ಅನು ಎಂಬುವನಿಗೆ ಹಂಚಿದನು. ॥ ೨೨ ॥ ಭೂಮಂಡಲದಲ್ಲಿರುವ ಸಮಸ್ತವಾದ ಸಂಪತ್ತನ್ನೂ ಹೊಂದಲು ಯೋಗ್ಯನಾದ ಪುರುವನ್ನು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ರಾಜ್ಯಾಭಿಷೇಕವನ್ನು ಮಾಡಿ ಪುರುವಿನ ಅಗ್ರಜರೆಲ್ಲರನ್ನು ಅವನ ವಶಕ್ಕೆ ಒಪ್ಪಿಸಿ ಯಯಾತಿಯು ಕಾಡಿಗೆ ಹೊರಟು ಹೋದನು. ॥ ೨೩ ॥ ರಾಜಾ ಯಯಾತಿಯು ಬಹಳ ವರ್ಷಗಳವರೆಗೆ ಇಂದ್ರಿಯಗಳಿಂದ ವಿಷಯಸುಖಗಳನ್ನು ಭೋಗಿಸಿದ್ದರೂ ರೆಕ್ಕೆ ಮೂಡಿದ ಹಕ್ಕಿಯು ಗೂಡನ್ನು ಬಿಟ್ಟುಹಾರಿಹೋಗುವಂತೆ ಅವನು ಕ್ಷಣಮಾತ್ರದಲ್ಲಿ ಸರ್ವಸ್ವವನ್ನು ಪರಿತ್ಯಜಿಸಿಬಿಟ್ಟನು. ॥ ೨೪ ॥ ವನಕ್ಕೆ ತೆರಳಿದ ರಾಜನಾದ ಯಯಾತಿಯು ಸಮಸ್ತ ಆಸಕ್ತಿಗಳಿಂದ ಮುಕ್ತನಾಗಿಬಿಟ್ಟನು. ಆತ್ಮಸಾಕ್ಷಾತ್ಕಾರದ ಮೂಲಕ ಅವನ ತ್ರಿಗುಣಮಯ ಲಿಂಗಶರೀರವು ನಾಶವಾಯಿತು. ಅವನು ಮಾಯಾಮಲದಿಂದ ರಹಿತನಾದ ಪರಬ್ರಹ್ಮ ಪರಮಾತ್ಮ ವಾಸುದೇವನಲ್ಲಿ ಒಂದಾಗಿ ಭಗವತ್ಪ್ರೇಮಿಗಳಾದ ಸಂತರಿಗೆ ಲಭ್ಯವಾಗುವ ಭಾಗವತೀ ಗತಿಯನ್ನು ಸೇರಿದನು. ॥ ೨೫ ॥

ದೇವಯಾನಿಯು ಯಯಾತಿಯು ಹೇಳಿದ ಕಥೆಯನ್ನು ಕೇಳಿದಾಗ, ಇವರು ನನ್ನನ್ನು ನಿವೃತ್ತಿಮಾರ್ಗಕ್ಕಾಗಿ ಪ್ರೋತ್ಸಾಹಿಸುತ್ತಿದ್ದಾರೆ ಎಂದು ತಿಳಿದುಕೊಂಡಳು. ಏಕೆಂದರೆ, ಸ್ತ್ರೀ-ಪುರುಷರಲ್ಲಿ ಪರಸ್ಪರ ಪ್ರೇಮದಿಂದಾಗಿ ವಿರಹವು ಇದಿರಾದಾಗ ವಿಕಲತೆ

ಸಾ ಸನ್ನಿವಾಸಂ ಸುಹೃದಾಂ ಪ್ರಪಾಯಾಮಿವ ಗಚ್ಛತಾಮ್ ।
ವಿಜ್ಞಾಯೇಶ್ವರತಂತ್ರಾಣಾಂ ಮಾಯಾವಿರಚಿತಂ ಪ್ರಭೋಃ
॥ ೨೭ ॥

ಸರ್ವತ್ರ ಸಂಗಮುತ್ಸೃಜ್ಯ ಸ್ವಪ್ನೌಪಮ್ಯೇನ ಭಾರ್ಗವೀ ।
ಕೃಷ್ಣೇ ಮನಃ ಸಮಾವೇಶ್ಯ ವ್ಯಧುನೋಲ್ಲಿಂಗಮಾತ್ಮನಃ
॥ ೨೮ ॥

ನಮಸ್ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।
ಸರ್ವಭೂತಾಧಿವಾಸಾಯ ಶಾಂತಾಯ ಬೃಹತೇ ನಮಃ
॥ ೨೯ ॥

ಉಂಟಾಗುತ್ತದೆ. ಇದನ್ನು ಯೋಚಿಸಿಯೇ ಇವರು ಪರಿಹಾಸ ಮಾಡುವಂತೆ ಈ ಕಥೆಯನ್ನು ಹೇಳಿರುವರೆಂದು ಭಾವಿಸಿದಳು. ॥ ೨೬ ॥ ಈಶ್ವರನಿಗೆ ಅಧೀನರಾಗಿರುವ ಬಂಧುಗಳು – ಅರವಟ್ಟಿಗೆಯಲ್ಲಿ ದಾರಿಹೋಕರು ಸೇರುವಂತೆ ಒಂದೆಡೆಯಲ್ಲಿ ಸೇರಿರುವರು. ಇದೆಲ್ಲವೂ ಭಗವಂತನ ಮಾಯೆಯ ಆಟವಾಗಿದ್ದು, ಸ್ವಪ್ನದಂತೆಯೇ ಇದೆ. ಹೀಗೆ ತಿಳಿದು ದೇವಯಾನಿಯೂ ಎಲ್ಲ ಪದಾರ್ಥಗಳ ಆಸಕ್ತಿಯನ್ನು ತ್ಯಜಿಸಿ ತನ್ನ ಮನಸ್ಸನ್ನು ಭಗವಾನ್ ಶ್ರೀಕೃಷ್ಣನಲ್ಲಿ ತನ್ಮಯಗೊಳಿಸಿದಳು. ಬಂಧನಕ್ಕೆ ಕಾರಣವಾದ ಲಿಂಗ ಶರೀರವನ್ನು ಪರಿತ್ಯಜಿಸಿ ಆಕೆಯು ಭಗವಂತನನ್ನು ಹೊಂದಿದಳು. ॥ ೨೭-೨೮ ॥ ದೇವಯಾನಿಯು ಭಗವಂತನನ್ನು ನಮಸ್ಕರಿಸುತ್ತಾ ಪ್ರಾರ್ಥಿಸಿದಳು – ಸಮಸ್ತ ಜಗತ್ತಿನ ರಚಯಿತನೂ, ಸರ್ವಾಂತರ್ಯಾಮಿಯೂ, ಎಲ್ಲರ ಆಶ್ರಯಸ್ವರೂಪನೂ, ಸರ್ವಶಕ್ತನೂ ಆದ ಭಗವಾನ್ ವಾಸುದೇವನಿಗೆ ವಂದಿಸುತ್ತೇನೆ. ಪರಮ ಶಾಂತ ಮತ್ತು ಅನಂತ ತತ್ತ್ವವಾದ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೨೯ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಪುರುವಿನ ವಂಶ, ರಾಜಾ ದುಷ್ಯಂತ ಮತ್ತು ಭರತನ ಚರಿತ್ರವರ್ಣನೆ

ಶ್ರೀಶುಕ ಉವಾಚ

ಪೂರೋರ್ವಂಶಂ ಪ್ರವಕ್ಷ್ಯಾಮಿ ಯತ್ರ ಜಾತೋಽಸಿ ಭಾರತ ।
ಯತ್ರ ರಾಜರ್ಷಯೋ ವಂಶ್ಯಾ ಬ್ರಹ್ಮವಂಶ್ಯಾಶ್ಚ ಜಜ್ಞಿರೇ
॥ ೧ ॥

ಜನಮೇಜಯೋ ಹ್ಯಭೂತ್ಪೂರೋಃ ಪ್ರಚಿನ್ವಾಂಸ್ತತ್ಸುತಸ್ತತಃ ।
ಪ್ರವೀರೋಽಥ ನಮಸ್ಯುರ್ವೈ ತಸ್ಮಾಚ್ಚಾರುಪದೋಽಭವತ್
॥ ೨ ॥

ತಸ್ಯ ಸುದ್ಯುರಭೂತ್ಪುತ್ರಸ್ತಸ್ಮಾದ್ಬಹುಗವಸ್ತತಃ ।
ಸಂಯಾತಿಸ್ತಸ್ಯಾಹಂಯಾತೀ ರೌದ್ರಾಶ್ವಸ್ತತ್ಸುತಃ ಸ್ಮೃತಃ
॥ ೩ ॥

ಋತೇಯುಸ್ತಸ್ಯ ಕುಕ್ಷೇಯುಃ ಸ್ಥಂಡಿಲೇಯುಃ ಕೃತೇಯುಕಃ ।
ಜಲೇಯುಃ ಸಂತತೇಯುಶ್ಚ ಧರ್ಮಸತ್ಯವ್ರತೇಯವಃ
॥ ೪ ॥

ತೈತೇಽಪ್ಸರಸಃ ಪುತ್ರಾ ವನೇಯುಶ್ಚಾವಮಃ ಸ್ಮೃತಃ ।
ಕೃತಾಚ್ಯಾಮಿಂದ್ರಿಯಾಣೀವ ಮುಖ್ಯಸ್ಯ ಜಗದಾತ್ಮನಃ
॥ ೫ ॥

ಋತೇಯೋಃ ರಂತಿಭಾರೋಽಭೂತ್ತ್ರಯಸ್ತಸ್ಯಾತ್ಮಜಾ ನೃಪ ।
ಸುಮತಿರ್ಧ್ರುವೋಽಪ್ರತಿರಥಃ ಕಣ್ವೋಽಪ್ರತಿರಥಾತ್ಮಜಃ
॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಈಗ ನಾನು ಪುರುರಾಜನ ವಂಶವನ್ನು ವರ್ಣಿಸುವೆನು. ಇದೇ ವಂಶದಲ್ಲಿ ನೀನು ಜನ್ಮ ತಾಳಿರುವೆ. ಈ ವಂಶದಲ್ಲಿಯೇ ಹಲವಾರು ರಾಜರ್ಷಿಗಳೂ, ಬ್ರಹ್ಮರ್ಷಿಗಳೂ ಆಗಿಹೋಗಿದ್ದಾರೆ. ॥ ೧ ॥ ಪುರುವಿಗೆ ಜನಮೇಜಯ ಪುತ್ರನು ಹುಟ್ಟಿದನು. ಜನಮೇಜಯನಿಗೆ ಪ್ರಚಿನ್ವಾನ್, ಪ್ರಚಿನ್ವಂತನಿಗೆ ಪ್ರವೀರ, ಪ್ರವೀರನಿಗೆ ನಮಸ್ಯು, ನಮಸ್ಯುವಿಗೆ ಚಾರುಪದ ಪುತ್ರನಾದನು. ॥ ೨ ॥ ಚಾರುಪದನಿಂದ ಸುದ್ಯು, ಸುದ್ಯುವಿನಿಂದ ಬಹುಗವ, ಬಹುಗವನಿಂದ ಸಂಯಾತಿ, ಸಂಯಾತಿಯಿಂದ ಅಹಂಯಾತಿ, ಅಹಂಯಾತಿಯಿಂದ ರೌದ್ರಾಶ್ವ ಹುಟ್ಟಿದನು. ॥ ೩ ॥ ಪರೀಕ್ಷಿತನೇ ! ವಿಶ್ವಾತ್ಮಾ ಪ್ರಧಾನ ಪ್ರಾಣದಿಂದ ಹತ್ತು ಇಂದ್ರಿಯಗಳು ಆಗುವಂತೆಯೇ ಘೃತಾಚಿ ಅಪ್ಸರೆಯ ಗರ್ಭದಿಂದ ರೌದ್ರಾಶ್ವನು – ಋತೇಯು, ಕುಕ್ಷೇಯು, ಸ್ಥಂಡಿಲೇಯು, ಕೃತೇಯು, ಜಲೇಯು, ಸಂತತೇಯು, ಧರ್ಮೇಯು, ಸತ್ಯೇಯು, ವ್ರತೇಯು ಮತ್ತು ವನೇಯು ಎಂಬ ಹತ್ತು ಪುತ್ರರನ್ನು ಪಡೆದನು. ॥ ೪-೫ ॥ ರಾಜೇಂದ್ರ ! ಅವರಲ್ಲಿ ಋತೇಯುವಿನ ಪುತ್ರ ರಂತಿಭಾರ ಹುಟ್ಟಿದನು. ರಂತಿಭಾರನಿಗೆ – ಸುಮತಿ, ಧ್ರುವ, ಅಪ್ರತಿರಥರೆಂಬ ಮೂವರು ಪುತ್ರರಾದರು. ಅಪ್ರತಿರಥನಿಗೆ ಕಣ್ವ ನೆಂಬ ಪುತ್ರನಾದನು. ॥ ೬ ॥

ತಸ್ಯ ಮೇಧಾತಿಥಿಸ್ತಸ್ಮಾತ್ತಸ್ಯ ಕಣ್ವಾದ್ಯಾ ದ್ವಿಜಾತಯಃ ।
ಪುತ್ರೋಽಭೂತ್ಸುಮತೇ ರೈಭ್ಯೋ ದುಷ್ಮಂತಸ್ತತ್ಸುತೋ ಮತಃ
॥ ೭ ॥

ದುಷ್ಮಂತೋ ಮೃಗಯಾಂ ಯಾತಃ ಕಣ್ವಾಶ್ರಮಪದಂ ಗತಃ ।
ತತ್ರಾಸೀನಾಂ ಸ್ವಪ್ರಭಯಾ ಮಂಡಯಂತೀಂ ರಮಾಮಿವ
॥ ೮ ॥

ವಿಲೋಕ್ಯ ಸದ್ಯೋ ಮುಮುಹೇ ದೇವಮಾಯಾಮಿವ ಸ್ತ್ರಿಯಮ್ ।
ಬಭಾಷೇ ತಾಂ ವರಾರೋಹಾಂ ಭಟೈಃ ಕತಿಪಯೈರ್ವೃತಃ
॥ ೯ ॥

ತದ್ದರ್ಶನಪ್ರಮುದಿತಃ ಸಂನಿವೃತ್ತ ಪರಿಶ್ರಮಃ ।
ಪಪ್ರಚ್ಛ ಕಾಮಸಂತಪ್ತಃ ಪ್ರಹಸನ್ ಶ್ಲಕ್ಷ್ಣಯಾ ಗಿರಾ
॥ ೧೦ ॥

ಕಾ ತ್ವಂ ಕಮಲಪತ್ರಾಕ್ಷಿ ಕಸ್ಯಾಸಿ ಹೃದಯಂಗಮೇ ।
ಕಿಂ ವಾ ಚಿಕೀರ್ಷಿತಂ ತತ್ತ್ವ ಭವತ್ಯಾ ನಿರ್ಜನೇ ವನೇ
॥ ೧೧ ॥

ವ್ಯಕ್ತಂ ರಾಜನ್ಯತನಯಾಂ ವೇದ್ಮ್ಯಹಂ ತ್ವಾಂ ಸುಮಧ್ಯಮೇ ।
ನ ಹಿ ಚೇತಃ ಪೌರವಾಣಾಮಧರ್ಮೇ ರಮತೇ ಕ್ವಚಿತ್
॥ ೧೨ ॥

ಶಕುಂತಲೋವಾಚ

ವಿಶ್ವಾಮಿತ್ರಾತ್ಮಜೈವಾಹಂ ತ್ಯಕ್ತಾ ಮೇನಕಯಾ ವನೇ ।
ವೇದೈತದ್ಭಗವಾನ್ ಕಣ್ವೋ ವೀರ ಕಿಂ ಕರವಾಮ ತೇ
॥ ೧೩ ॥

ಆಸ್ಯತಾಂ ಹ್ಯರವಿಂದಾಕ್ಷ ಗೃಹ್ಯತಾಮರ್ಹಣಂ ಚ ನಃ ।
ಭುಜ್ಯತಾಂ ಸಂತಿ ನೀವಾರಾ ಉಷ್ಯತಾಂ ಯದಿ ರೋಚತೇ
॥ ೧೪ ॥

ದುಷ್ಮಂತ ಉವಾಚ

ಉಪಪನ್ನಮಿದಂ ಸುಭ್ರು ಜಾತಾಯಾಃ ಕುಶಿಕಾನ್ವಯೇ ।
ಸ್ವಯಂ ಹಿ ವೃಣತೇ ರಾಜ್ಞಾಂ ಕನ್ಯಕಾಃ ಸದೃಶಂ ವರಮ್
॥ ೧೫ ॥

ಓಮಿತ್ಯುಕ್ತೇ ಯಥಾಧರ್ಮಮುಪಯೇಮೇ ಶಕುಂತಲಾಮ್ ।
ಗಾಂಧರ್ವವಿಧಿನಾ ರಾಜಾ ದೇಶಕಾಲವಿಧಾನವಿತ್
॥ ೧೬ ॥

ಅಮೋಘವೀರ್ಯೋ ರಾಜರ್ಷಿರ್ಮಹಿಷ್ಯಾಂ ವೀರ್ಯಮಾದಧೇ ।
ಶ್ವೋಭೂತೇ ಸ್ವಪುರಂ ಯಾತಃ ಕಾಲೇನಾಸೂತ ಸಾ ಸುತಮ್
॥ ೧೭ ॥

ಕಣ್ವನಿಗೆ ಪುತ್ರನಾದನು ಮೇಧಾತಿಥಿ. ಮೇಧಾತಿಥಿಯಿಂದ ಪ್ರಸ್ಕಣ್ವ ಮೊದಲಾದ ಬ್ರಾಹ್ಮಣರು ಉತ್ಪನ್ನರಾದರು. ಸುಮತಿಗೆ ರೈಭ್ಯನೆಂಬ ಪುತ್ರನಾದನು. ಈ ರೈಭ್ಯನ ಪುತ್ರನೇ ದುಷ್ಮಂತ. ॥ ೭ ॥

ಒಮ್ಮೆ ದುಷ್ಮಂತನು ತನ್ನ ಕೆಲವು ಸೈನಿಕರೊಂದಿಗೆ ಬೇಟೆಯಾಡಲು ವನಕ್ಕೆ ಹೋದನು. ಬೇಟೆಯಾಡುತ್ತಾ ಅವನು ಕಣ್ವ ಮುನಿಯ ಆಶ್ರಮಕ್ಕೆ ಹೋದನು. ಆ ಆಶ್ರಮದಲ್ಲಿ ದೇವಮಾಯೆಯಂತಿರುವ ಮನೋಹರವಾದ ಓರ್ವ ಯುವತಿಯು ಕುಳಿತಿದ್ದಳು. ಲಕ್ಷ್ಮಿಗೆ ಸಮಾನವಾದ ಆಕೆಯ ಅಂಗಕಾಂತಿಯಿಂದ ಆ ಆಶ್ರಮವು ಬೆಳಗುತ್ತಿತ್ತು. ಅಂತಹ ಸುಂದರಿಯನ್ನು ನೋಡುತ್ತಲೇ ದುಷ್ಮಂತನು ವಿಮೋಹಿತನಾಗಿ ಅವಳೊಂದಿಗೆ ಮಾತನಾಡತೊಡಗಿದನು. ॥ ೮-೯ ॥ ಅವಳನ್ನು ನೋಡಿದೊಡನೆಯೇ ಅವನಿಗೆ ಪರಮಾನಂದವಾಯಿತು. ಅವನ ಮನಸ್ಸಿನಲ್ಲಿ ಕಾಮವಾಸನೆ ಜಾಗ್ರತವಾಯಿತು. ಬಳಲಿಕೆಯೆಲ್ಲವೂ ಪರಿಹಾರವಾಯಿತು. ಅವನು ಮುಗುಳ್ನಗುತ್ತಾ ಮಧುರವಾದ ಮಾತುಗಳಿಂದ ಅವಳಲ್ಲಿ ಕೇಳಿದನು – ॥ ೧೦ ॥ ಎಲೈ ಕಮಲಾಕ್ಷಿಯೇ! ನೀನು ಯಾರು ? ಯಾರ ಮಗಳು ? ನನ್ನ ಹೃದಯವನ್ನು ನಿನ್ನತ್ತ ಆಕರ್ಷಿಸಿದ ಸುಂದರಿಯೇ! ನೀನು ಈ ನಿರ್ಜನ ವನದಲ್ಲಿ ಇದ್ದುಕೊಂಡು ಏನು ಮಾಡಬೇಕೆಂದಿರುವೆ ? ॥ ೧೧ ॥ ಸುಂದರಿಯೇ! ನೀನು ಯಾರೋ ಕ್ಷತ್ರಿಯನ ಮಗಳಾಗಿರಬೇಕೆಂದು ನಾನು ಸ್ಪಷ್ಟವಾಗಿ ತಿಳಿಯುತ್ತಿದ್ದೇನೆ. ಏಕೆಂದರೆ, ಪುರುವಂಶೀಯರ ಚಿತ್ತವು ಎಂದೂ ಅಧರ್ಮದ ಕಡೆಗೆ ವಾಲುವುದಿಲ್ಲ ॥ ೧೨ ॥

ಶಕುಂತಲೆಯು ಹೇಳಿದಳು – ಮಹರಾಜ! ನೀವು ಹೇಳಿದುದು ನಿಜವಾಗಿದೆ. ನಾನು ವಿಶ್ವಾಮಿತ್ರರ ಮಗಳು. ಮೇನಕೆಯೆಂಬ ಅಪ್ಸರೆಯು ನನ್ನನ್ನು ವನದಲ್ಲಿ ಬಿಟ್ಟುಹೋಗಿದ್ದಳು. ಈ ಮಾತಿಗೆ ನನ್ನನ್ನು ಪಾಲಿಸಿ ಪೋಷಿಸಿದ ಮಹರ್ಷಿ ಕಣ್ವರೇ ಸಾಕ್ಷಿಯಾಗಿದ್ದಾರೆ. ವೀರಶಿರೋಮಣಿಯೇ! ನಾನು ನಿಮಗೆ ಏನು ಸೇವೆ ಮಾಡಲಿ ? ॥ ೧೩ ॥ ಕಮಲಾಕ್ಷನೇ! ಇಲ್ಲಿಯೇ ಕುಳಿತುಕೋ. ನಾವು ಮಾಡಲಿರುವ ಯತ್ಕಿಂಚಿತ್ ಸತ್ಕಾರವನ್ನು ಸ್ವೀಕರಿಸು. ಆಶ್ರಮದಲ್ಲಿ ಶಾಲ್ಯಾನ್ನವಿದೆ. ನೀನು ಬಯಸುವಿರಾದರೆ ಊಟಮಾಡು. ಉಚಿತವೆನಿಸಿದರೆ ಇಲ್ಲೇ ಉಳಿದುಕೊಳ್ಳಬಹುದು. ॥ ೧೪ ॥

ದುಷ್ಮಂತನು ಹೇಳಿದನು – ಸುಂದರಿಯೇ! ನೀನು ಕುಶಿಕ ವಂಶದಲ್ಲಿ ಹುಟ್ಟಿರುವೆ. ಅದಕ್ಕಾಗಿ ಈ ಪ್ರಕಾರದ ಆತಿಥ್ಯ-ಸತ್ಕಾರ ಮಾಡುವುದು ನಿನಗೆ ಯೋಗ್ಯವೇ ಆಗಿದೆ. ಏಕೆಂದರೆ ರಾಜಕನ್ಯೆಯರು ಸ್ವತಃ ತಮ್ಮ ಪತಿಯನ್ನು ವರಣಮಾಡಿಕೊಳ್ಳುವರು. ॥ ೧೫ ॥ ಶಕುಂತಲೆಯ ಸ್ವೀಕೃತಿ ದೊರೆತಾಗ ದೇಶ, ಕಾಲ ಮತ್ತು ಶಾಸ್ತ್ರದ ವಿಧಿ-ವಿಧಾನಗಳನ್ನೂ ಬಲ್ಲ ದುಷ್ಮಂತನು ಗಾಂಧರ್ವವಿಧಿಯಿಂದ ಆಕೆಯನ್ನು ವಿವಾಹವಾದನು. ॥ ೧೬ ॥ ಅಮೋಘ ವೀರ್ಯನಾದ ದುಷ್ಮಂತನು ಅಂದು ರಾತ್ರಿ ಅಲ್ಲಿಯೇ ಇದ್ದು ಗರ್ಭಾಧಾನ ಸಂಸ್ಕಾರವನ್ನು ಮುಗಿಸಿ ಬೆಳಗಾಗುತ್ತಲೇ ತನ್ನ ರಾಜಧಾನಿಗೆ ತೆರಳಿದನು. ನವಮಾಸಗಳು ತುಂಬುತ್ತಲೇ ಶಕುಂತಲೆಯು ಗಂಡುಮಗುವನ್ನು ಹಡೆದಳು. ॥ ೧೭ ॥

ಕಣ್ವಃ ಕುಮಾರಸ್ಯ ವನೇ ಚಕ್ರೇ ಸಮುಚಿತಾಃ ಕ್ರಿಯಾಃ ।
ಬದ್ಧಾ ಮೃಗೇಂದ್ರಾಂಸ್ತರಸಾ ಕ್ರೀಡತಿ ಸ್ಮ ಸ ಬಾಲಕಃ
॥ ೧೮ ॥

ತಂ ದುರತ್ಯಯವಿಕ್ರಾಂತಮಾದಾಯ ಪ್ರಮದೋತ್ತಮಾ ।
ಹರೇರಂಶಾಂಶಸಂಭೂತಂ ಭರ್ತುರಂತಿಕಮಾಗಮತ್
॥ ೧೯ ॥

ಯದಾ ನ ಜಗೃಹೇ ರಾಜಾ ಭಾರ್ಯಾಪುತ್ರಾವನಿಂದಿತೌ ।
ಶೃಣ್ವತಾಂ ಸರ್ವಭೂತಾನಾಂ ಖೇ ವಾಗಾಹಾಶರೀರಿಣೀ
॥ ೨೦ ॥

ಮಾತಾ ಭಸ್ತ್ರಾಪಿತುಃ ಪುತ್ರೋ ಯೇನ ಜಾತಃ ಸ ಏವ ಸಃ ।
ಭರಸ್ವ ಪುತ್ರಂ ದುಷ್ಯಂತ ಮಾವಮಂಸ್ಥಾಃ ಶಕುಂತಲಾಮ್
॥ ೨೧ ॥

ರೇತೋಧಾಃ ಪುತ್ರೋ ನಯತಿ ನರದೇವ ಯಮಕ್ಷಯಾತ್ ।
ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ
॥ ೨೨ ॥

ಪಿತರ್ಯುಪರತೇ ಸೋಽಪಿ ಚಕ್ರವರ್ತೀ ಮಹಾಯಶಾಃ ।
ಮಹಿಮಾ ಗೀಯತೇ ತಸ್ಯ ಹರೇರಂಶಭುವೋ ಭುವಿ
॥ ೨೩ ॥

ಚಕ್ರಂ ದಕ್ಷಿಣಹಸ್ತೇಽಸ್ಯ ಪದ್ಮಕೋಶೋಽಸ್ಯ ಪಾದಯೋಃ ।
ಈಜೇ ಮಹಾಭಿಷೇಕೇಣ ಸೋಽಭಿಷಿಕ್ತೋಽಧಿರಾಡ್ವಿಭುಃ
॥ ೨೪ ॥

ಪಂಚಪಂಚಾಶತಾ ಮೇಧ್ಯೈರ್ಗಂಗಾಯಾಮನು ವಾಜಿಭಿಃ ।
ಮಾಮತೇಯಂ ಪುರೋಧಾಯ ಯಮುನಾಯಾಮನು ಪ್ರಭುಃ
॥ ೨೫ ॥

ಅಷ್ಟಸಪ್ತತಿಮೇಧ್ಯಾಶ್ವಾನ್ ಬಬಂಧ ಪ್ರದದದ್ವಸು ।
ಭರತಸ್ಯ ಹಿ ದೌಷ್ಮಂತೇರಗ್ನಿಃ ಸಾಚೀಗುಣೇ ಚಿತಃ ।
ಸಹಸ್ರಂ ಬದ್ಧಶೋ ಯಸ್ಮಿನ್ ಬ್ರಾಹ್ಮಣಾ ಗಾ ವಿಭೇಜಿರೇ
॥ ೨೬ ॥

ಮಹರ್ಷಿ ಕಣ್ವರು ಕಾಡಿನಲ್ಲೇ ಆ ರಾಜಕುಮಾರನ ಜಾತಕರ್ಮಾದಿ ಸಂಸ್ಕಾರಗಳನ್ನು ವಿಧಿವತ್ತಾಗಿ ನೆರವೇರಿಸಿದರು. ಆ ಬಾಲಕನು ಬಾಲ್ಯದಲ್ಲೇ ದೊಡ್ಡ- ದೊಡ್ಡ ಸಿಂಹಗಳನ್ನು ಹಿಡಿದು ಕಟ್ಟಿ ಹಾಕಿ ಅವುಗಳೊಂದಿಗೆ ಆಡುತ್ತಿದ್ದನು. ॥ ೧೮ ॥

ಆ ಬಾಲಕನು ಭಗವಂತನ ಅಂಶಾಂಶಾವತಾರನಾಗಿದ್ದನು. ಅವನ ಬಲ ಪರಾಕ್ರಮಗಳು ಅಪರಿಮಿತವಾಗಿದ್ದುವು. ಪ್ರಮದೆಯರಲ್ಲಿ ಶ್ರೇಷ್ಠಳಾದ ಶಕುಂತಲೆಯು ಅವನನ್ನು ಜೊತೆಗೆ ಕರೆದುಕೊಂಡು ತನ್ನ ಪತಿಯಬಳಿಗೆ ಹೋದಳು. ॥ ೧೯ ॥ ನಿರ್ದೋಷಿಗಳಾದ ಭಾರ್ಯಾ-ಪುತ್ರರನ್ನು ರಾಜನು ಸ್ವೀಕರಿಸಲಿಲ್ಲ. ಅವರ ವಿಷಯವಾಗಿ ತಾನು ಏನನ್ನೂ ಅರಿಯೆನೆಂದು ಹೇಳಿಬಿಟ್ಟನು. ಈ ಸಮಯದಲ್ಲಿ ಸಮಸ್ತ ಪ್ರಾಣಿಗಳು ಕೇಳಿಸುವಂತೆ ಆಕಾಶದಲ್ಲಿ ಅಶರೀರವಾಣಿಯೊಂದು ನುಡಿಯಿತು -॥ ೨೦ ॥ "ಪುತ್ರನ ಉತ್ಪತ್ತಿಯಲ್ಲಿ ತಾಯಿಯು ಕೇವಲ ಚರ್ಮದ ಚೀಲಕ್ಕೆ ಸಮಾನಳಾಗಿರುತ್ತಾಳೆ. ವಾಸ್ತವವಾಗಿ ಪುತ್ರನು ಪಿತನಿಗೇ ಸೇರಿದವನು. ಏಕೆಂದರೆ, ತಂದೆಯೇ ಸಾಕ್ಷಾತ್ತಾಗಿ ಪುತ್ರನ ರೂಪದಲ್ಲಿ ಜನಿಸುತ್ತಾನೆ. ಎಲ್ಲೆ ದುಷ್ಯಂತನೇ! ನೀನು ಶಕುಂತಲೆಯನ್ನು ತಿರಸ್ಕರಿಸಬೇಡ. ನಿನ್ನ ಪುತ್ರನ ಭರಣ-ಪೋಷಣೆ ಮಾಡು. ॥ ೨೧ ॥ ರಾಜನೇ! ವಂಶದ ವೃದ್ಧಿಯನ್ನು ಮಾಡುವ ಪುತ್ರನು ತನ್ನ ತಂದೆಯನ್ನು ನರಕದಿಂದ ಉದ್ಧರಿಸುವನು. ಆದುದರಿಂದ ನಿನ್ನ ಮಗನನ್ನು ತಿರಸ್ಕರಿಸಬೇಡ. ಶಕುಂತಲೆಯಲ್ಲಿ ಗರ್ಭವನ್ನು ಇಟ್ಟವನು ನೀನೇ ಆಗಿರುವೆ. ಅವಳು ಹೇಳುವುದು ಸತ್ಯವಾಗಿದೆ." ॥ ೨೨ ॥

ಆಕಾಶವಾಣಿಯಂತೆ ದುಷ್ಯಂತನು ಶಕುಂತಲೆಯನ್ನೂ, ತನ್ನ ಪುತ್ರನನ್ನು ಯಥಾಯೋಗ್ಯವಾಗಿ ಸ್ವೀಕರಿಸಿ, ಆ ಬಾಲಕನಿಗೆ ಭರತನೆಂದು ನಾಮಕರಣಮಾಡಿದನು. ಪರೀಕ್ಷಿತನೇ! ತಂದೆಯಾದ ದುಷ್ಯಂತನ ಮೃತ್ಯುವಾದ ಬಳಿಕ ಪರಮ ಯಶಸ್ವಿಯೂ, ಭಗವಂತನ ಅಂಶಸಂಭೂತನಾಗಿದ್ದ ಭರತನು ಚಕ್ರವರ್ತಿಯಾದನು. ಇಂದೂ ಕೂಡ ಅವನ ಮಹಿಮೆಯನ್ನು ಭೂಮಂಡಲದಲ್ಲಿ ಹಾಡಲಾಗುತ್ತದೆ. ॥ ೨೩ ॥ ಅವನ ಬಲದ ಕೈಯಲ್ಲಿ ಚಕ್ರದ ಚಿಹ್ನೆಯಿದ್ದಿತು. ಪಾದಗಳಲ್ಲಿ ಕಮಲಕೋಶದ ಚಿಹ್ನೆಗಳಿದ್ದವು. ಮಹಾಭಿಷೇಕದ ವಿಧಿಯಿಂದ ಪುರೋಹಿತರು ಭರತನನ್ನು ರಾಜಾಧಿರಾಜನಾದ ಚಕ್ರವರ್ತಿಯ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ಅವನು ಮಹಾಶಕ್ತಿಶಾಲಿಯಾದ ರಾಜನಾಗಿದ್ದನು. ॥ ೨೪ ॥ ಭರತ ಚಕ್ರವರ್ತಿಯು ಮಮತಾ ಎಂಬುವಳ ಪುತ್ರ ದೀರ್ಘತಮಸ ಮುನಿಯನ್ನು ಪುರೋಹಿತನನ್ನಾಗಿಸಿಕೊಂಡು ಗಂಗೋತ್ರಿಯಿಂದ ಹಿಡಿದು ಗಂಗಾಸಾಗರಸಂಗಮದವರೆಗಿನ ಗಂಗಾತಟದಲ್ಲಿ ಐವತ್ತೈದು ಅಶ್ವಮೇಧಗಳನ್ನು ಮಾಡಿದನು. ಹೀಗೆಯೇ ಯಮುನೋತ್ರಿಯಿಂದ ಪ್ರಯಾಗದವರೆಗಿನ ಯಮುನಾತೀರದಲ್ಲಿ ಎಪ್ಪತ್ತೆಂಟು ಅಶ್ವಮೇಧಗಳನ್ನು ಮಾಡಿದನು. ಈ ಎಲ್ಲ ಯಜ್ಞಗಳಲ್ಲಿಯೂ ಭರತನು ಅಪಾರವಾದ ಧನರಾಶಿಯನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ಅವನು ಪ್ರಕೃಷ್ಟವಾದ ಗುಣಗಳಿಂದ ಕೂಡಿದ ಪ್ರದೇಶದಲ್ಲಿ ಅಗ್ನಿಚಯನ ಮಾಡಿ, ಆ ಪ್ರದೇಶದಲ್ಲಿ ಒಂದು ಸಾವಿರ ಬ್ರಾಹ್ಮಣರು ಭರತನಿಂದ ದಕ್ಷಿಣೆಯಾಗಿ ಕೊಡಲ್ಪಟ್ಟ ಗೋವುಗಳನ್ನು ಬದ್ಧ-ಬದ್ಧ ಸಂಖ್ಯೆಯಲ್ಲಿ (ಒಂದು ಬದ್ಧವೆಂದರೆ ೧೩,೦೮೪) ಹಂಚಿಕೊಂಡರು. ॥ ೨೫-೨೬ ॥

ತ್ರಯಸ್ತ್ರಿಂಶಚ್ಛತಂ ಹ್ಯಶ್ವಾನ್ಬದ್ಧ್ವಾ ವಿಸ್ಮಾಪಯನ್ನೃಪಾನ್ ।
ದೌಷ್ಮಂತಿರತ್ಯಗಾನ್ಮಾಯಾಂ ದೇವಾನಾಂ ಗುರುಮಾಯಯಾ
॥ ೨೭ ॥

ಮೃಗಾನ್ ಶುಕ್ಲದತಃ ಕೃಷ್ಣಾನ್ ಹಿರಣ್ಯೇನ ಪರೀವೃತಾನ್ ।
ಅದಾತ್ಕರ್ಮಣಿ ಮಷ್ಣಾರೇ ನಿಯುತಾನಿ ಚತುರ್ದಶ
॥ ೨೮ ॥

ಭರತಸ್ಯ ಮಹತ್ಕರ್ಮ ನ ಪೂರ್ವೇ ನಾಪರೇ ನೃಪಾಃ ।
ನೈವಾಪುರ್ನೈವ ಪ್ರಾಪ್ಸ್ಯಂತಿ ಬಾಹುಭ್ಯಾಂ ತ್ರಿದಿವಂ ಯಥಾ
॥ ೨೯ ॥

ಕಿರಾತಹೂಣಾನ್ಯವನಾನಂಧ್ರಾನ್ಕಂಕಾನ್ಖಶಾಂಧ್ರಕಾನ್ ।
ಅಬ್ರಹ್ಮಣ್ಯಾನ್ನೃಪಾಂಶ್ಚಾಹನ್ ಮ್ಲೇಚ್ಛಾನ್ದಿಗ್ವಿಜಯೇಽಖಿಲಾನ್
॥ ೩೦ ॥

ಜಿತ್ವಾ ಪುರಾಸುರಾದೇವಾನ್ಯೇ ರಸೌಕಾಂಸಿ ಭೇಜಿರೇ ।
ದೇವಸ್ತ್ರಿಯೋ ರಸಾಂ ನೀತಾಃ ಪ್ರಾಣೇಭ್ಯಃ ಪುನರಾಹರತ್
॥ ೩೧ ॥

ಸರ್ವಕಾಮಾನ್ ದುದುಹತುಃ ಪ್ರಜಾನಾಂ ತಸ್ಯ ರೋದಸೀ ।
ಸಮಾಸ್ತ್ರಿಣವಸಾಹಸ್ರೀರ್ದಿಕ್ಷು ಚಕ್ರಮವರ್ತಯತ್
॥ ೩೨ ॥

ಸ ಸಮ್ರಾಡ್ಲೋಕಪಾಲಾಖ್ಯಮೈಶ್ವರ್ಯಮಧಿರಾಟ್ ಶ್ರಿಯಮ್ ।
ಚಕ್ರಂ ಚಾಸ್ಖಲಿತಂ ಪ್ರಾಣಾನ್ಪ್ರಣೇತ್ಯುಪರರಾಮ ಹ
॥ ೩೩ ॥

ತಸ್ಯಾಸನ್ಪತ್ನಯಃ ಪಂಚ ವೈದರ್ಭ್ಯಃ ಪತ್ಯುರ್ವಿಸ್ರಯಃ ಸುಸಮ್ಮತಾಃ ।
ಜಘ್ನುಷ್ಯಾಗಭಯಾತ್ಪುತ್ರಾನ್ನಾನುರೂಪಾ ಇತೀರಿತೇ
॥ ೩೪ ॥

ತಸ್ಯೈವಂ ವಿತಥೇ ವಂಶೇ ತದರ್ಥಂ ಯಜತಃ ಸುತಮ್ ।
ಮರುತ್ಸ್ತೋಮೇನ ಮರುತೋ ಭರದ್ವಾಜಮುಪಾದದುಃ
॥ ೩೫ ॥

ಅಂತರ್ವತ್ನ್ಯಾಂ ಭ್ರಾತೃಪತ್ನ್ಯಾಂ ಮೈಥುನಾಯ ಬೃಹಸ್ಪತಿಃ ।
ಪ್ರವೃತ್ತೋ ವಾರಿತೋ ಗರ್ಭಂ ಶಪ್ತ್ವಾ ವೀರ್ಯಮವಾಸೃಜತ್
॥ ೩೬ ॥

ಹೀಗೆ ಭರತ ಚಕ್ರವರ್ತಿಯು ಆ ಯಜ್ಞಗಳಲ್ಲಿ ಒಂದು ನೂರಮೂವತ್ತಮೂರು ಕುದುರೆಗಳನ್ನು ಯೂಪಗಳಿಗೆ ಕಟ್ಟಿ ನೂರ ಮೂವತ್ತಮೂರು ಯಜ್ಞಗಳನ್ನು ಮಾಡಿ ಸಮಸ್ತ ರಾಜರನ್ನು ಆಶ್ಚರ್ಯಗೊಳಿಸಿದನು. ಈ ಯಜ್ಞಗಳ ಮೂಲಕ ಈ ಲೋಕದಲ್ಲಿ ಭರತನಿಗೆ ಪರಮ ಯಶಸ್ಸು ಲಭಿಸಿತು. ಕೊನೆಗೆ ಅವನು ಮಾಯೆಯನ್ನು ಜಯಿಸಿ, ದೇವತೆಗಳ ಪರಮಗುರುವಾದ ಭಗವಾನ್ ಶ್ರೀಹರಿಯನ್ನು ಪಡೆದುಕೊಂಡನು. ॥ ೨೭ ॥ ಯಜ್ಞದಲ್ಲಿ 'ಮಷ್ಣಾರ' ಎಂಬ ಒಂದು ಕರ್ಮವಿರುತ್ತದೆ. ಅದರಲ್ಲಿ ಭರತನು ಸುವರ್ಣವಿಭೂಷಿತವಾದ ಬಿಳಿಯ ದಂತಗಳಿಂದ ಕೂಡಿದ್ದ, ಕಪ್ಪುಬಣ್ಣದ ಹದಿನಾಲ್ಕು ಲಕ್ಷ ಆನೆಗಳನ್ನು ದಾನಮಾಡಿದನು. ॥ ೨೮ ॥ ಭರತನು ಮಾಡಿದಂತಹ ಮಹಾಕಾರ್ಯವನ್ನು ಹಿಂದೆ ಯಾರೂ ಮಾಡಿರಲಿಲ್ಲ, ಮುಂದೆ ಯಾರೂ ಮಾಡಲಾರರು. ಯಾರಾದರೂ ಕೈಯಿಂದ ಸ್ವರ್ಗವನ್ನು ಮುಟ್ಟಬಲ್ಲನೇ ? ॥ ೨೯ ॥ ಭರತ ಚಕ್ರವರ್ತಿಯು ದಿಗ್ವಿಜಯದ ಸಮಯದಲ್ಲಿ ಕಿರಾತ, ಹೂಣ, ಯವನ, ಅಂಧ್ರ, ಕಂಕ, ಖಸ, ಶಕ, ಮ್ಲೇಚ್ಛ ಮೊದಲಾದ ಸಮಸ್ತ ಬ್ರಾಹ್ಮಣದ್ರೋಹಿಗಳನ್ನು ಕೊಂದುಹಾಕಿದನು. ॥ ೩೦ ॥ ಬಲಿಷ್ಠರಾದ ಅಸುರರು ದೇವತೆಗಳನ್ನು ಗೆದ್ದು, ದೇವಸ್ತ್ರೀಯರನ್ನು ಅಪಹರಿಸಿಕೊಂಡು ರಸಾತಳಕ್ಕೆ ಹೋಗಿ ವಾಸಮಾಡುತ್ತಿದ್ದರು. ದೇವತೆಗಳ ಪ್ರಾರ್ಥನೆಯಂತೆ ಭರತಚಕ್ರವರ್ತಿಯು ಆ ದೇವತಾಸ್ತ್ರೀಯರನ್ನು ಬಿಡಿಸಿ ತಂದು ದೇವತೆಗಳಿಗೆ ಒಪ್ಪಿಸಿದನು. ॥ ೩೧ ॥ ಭರತನ ರಾಜ್ಯದಲ್ಲಿ ಭೂಮ್ಯಂತರಿಕ್ಷಗಳು ಪ್ರಜೆಗಳ ಸಕಲ ಆವಶ್ಯಕತೆಗಳನ್ನು ಪೂರ್ಣಗೊಳಿಸುತ್ತಿದ್ದವು. ಅವನು ಇಪ್ಪತ್ತೇಳುಸಾವಿರ ವರ್ಷಗಳವರೆಗೆ ಅಖಂಡ ಭೂಮಂಡಲದ ಏಕಚ್ಛತ್ರ ರಾಜ್ಯವಾಳಿದನು. ॥ ೩೨ ॥ ಕೊನೆಗೆ ಭರತ ಚಕ್ರವರ್ತಿಯು – ಲೋಕಪಾಲರನ್ನೂ ಚಕಿತಗೊಳಿಸುವಂತಹ ಐಶ್ವರ್ಯ, ಸಾರ್ವಭೌಮ ಸಂಪತ್ತು, ಅಖಂಡ ಶಾಸನ ಮತ್ತು ಈ ಜೀವನವೂ ಕೂಡ ಮಿಥ್ಯೆಯೇ ಆಗಿದೆ ಎಂದು ನಿಶ್ಚಯಿಸಿ ಸಂಸಾರದಿಂದ ವಿರಕ್ತನಾದನು. ॥ ೩೩ ॥

ಪರೀಕ್ಷಿತನೇ ! ವಿದರ್ಭರಾಜನ ಮೂವರು ಕನ್ಯೆಯರು ಭರತ ಚಕ್ರವರ್ತಿಯ ಪತ್ನಿಯರಾಗಿದ್ದರು. ಅವರು ಪತಿಯನ್ನು ಬಹಳವಾಗಿ ಆದರಿಸುತ್ತಿದ್ದರು. ಆದರೆ ಭರತನು ಅವರಲ್ಲಿ – ನಿಮ್ಮಲ್ಲಿ ಹುಟ್ಟಿದ ಮಕ್ಕಳು ನನಗೆ ಅನುರೂಪರಾಗಿಲ್ಲವೆಂದು ಹೇಳಿದಾಗ ಅವರೆಲ್ಲರೂ ಹೆದರಿ – ಸಾಮ್ರಾಟನು ನಮ್ಮನ್ನು ತ್ಯಜಿಸದಿರಲಿ ಎಂದು ತಮ್ಮ ಮಕ್ಕಳನ್ನು ಕೊಂದುಹಾಕಿದರು. ॥ ೩೪ ॥ ಹೀಗೆ ಭರತಚಕ್ರವರ್ತಿಯ ವಂಶವು ವಿಚ್ಛಿನ್ನವಾಯಿತು. ಆಗ ಅವನು ಸಂತಾನದ ಪ್ರಾಪ್ತಿಗಾಗಿ 'ಮರುತ್ಸ್ತೋಮ'ವೆಂಬ ಯಜ್ಞವನ್ನು ಮಾಡಿದನು. ಇದರಿಂದ ಮರುದ್ಗಣರು ಸುಪ್ರೀತರಾಗಿ ಭರತನಿಗೆ ಭರದ್ವಾಜನೆಂಬ ಪುತ್ರನನ್ನು ದಯಪಾಲಿಸಿದರು. ॥ ೩೫ ॥ ಭರದ್ವಾಜರ ಉತ್ಪತ್ತಿಯ ಪ್ರಸಂಗ ಇಂತಿದೆ – ಒಮ್ಮೆ ಬೃಹಸ್ಪತಿಯು ತನ್ನ ತಮ್ಮನಾದ ಉತಥ್ಯನ ಗರ್ಭವತಿಯಾದ ಪತ್ನಿಯೊಡನೆ ಸಮಾಗಮವನ್ನು ಬಯಸಿದರು. ಆ ಸಮಯದಲ್ಲಿ ಗರ್ಭದಲ್ಲಿ ಬಾಲಕ (ದೀರ್ಘತಮಾ)ನು ಅವನನ್ನು ತಡೆದನು. ಆದರೆ ಬೃಹಸ್ಪತಿಯು ಅದರ ಮಾತಿಗೆ ಕಿವಿಗೊಡದೆ ಅದಕ್ಕೆ 'ನೀನು ಕುರುಡನಾಗು' ಎಂದು ಶಪಿಸಿ ಗರ್ಭಾಧಾನವನ್ನು ಮಾಡಿಬಿಟ್ಟನು. ॥ ೩೬ ॥

ತಂ ತ್ಯಕ್ತುಕಾಮಾಂ ಮಮತಾಂ ಭರ್ತೃತ್ಯಾಗವಿಶಂಕಿತಾಮ್ ।
ನಾಮನಿರ್ವಚನಂ ತಸ್ಯ ಶ್ಲೋಕಮೇನಂ ಸುರಾ ಜಗುಃ
॥ ೩೭ ॥

ಮೂಢೇ ಭರ ದ್ವಾಜಮಿಮಂ ಭರ ದ್ವಾಜಂ ಬೃಹಸ್ಪತೇ ।
ಯಾತೌ ಯದುಕ್ತ್ವಾ ಪಿತರೌ ಭರದ್ವಾಜಸ್ತತಸ್ತ್ವಯಮ್
॥ ೩೮ ॥

ಚೋದ್ಯಮಾನಾ ಸುರೈರೇವಂ ಮತ್ವಾ ವಿತಥಮಾತ್ಮಜಮ್ ।
ವ್ಯಸೃಜನ್ಮರುತೋಽಬಿಭ್ರನ್ದತ್ತೋಽಯಂ ವಿತಥೇಽನ್ವಯೇ
॥ ೩೯ ॥

ಉತಥ್ಯನ ಪತ್ನೀ ಮಮತೆಯು – ತನ್ನ ಪತಿಯು ತನ್ನನ್ನು ತ್ಯಜಿಸಿ ಬಿಡುವನೆಂದು ಹೆದರಿದಳು. ಅದಕ್ಕಾಗಿ ಬೃಹಸ್ಪತಿಯ ಮೂಲಕ ಹುಟ್ಟಲಿರುವ ಶಿಶುವನ್ನು ತ್ಯಜಿಸಲು ಬಯಸಿದಳು. ಆ ಸಮಯದಲ್ಲಿ ದೇವತೆಗಳು ಗರ್ಭಸ್ಥವಾದ ಶಿಶುವಿನ ನಾಮನಿರ್ವಚನ ಮಾಡುತ್ತಾ ಈ ಶ್ಲೋಕವನ್ನು ಹೇಳಿದರು. ॥ ೩೭ ॥ ಮೂಢಳೇ! ನಿನ್ನ ಪತಿಗೂ ಮತ್ತು ಬೃಹಸ್ಪತಿಗೂ ಮಗನಾಗಿರುವ ಈ ದ್ವಾಜನನ್ನು ನೀನೇ ಭರಿಸು. ಹೆದರಬೇಡ ಎಂದು ಹೇಳಿದಾಗ ಮಮತೆಯು ಒಲ್ಲೆನೆಂದಳು. ಆಗ ಬೃಹಸ್ಪತಿಯೇ! ನಿನಗೂ ನಿನ್ನ ತಮ್ಮನಿಗೂ ಪುತ್ರರೂಪದಲ್ಲಿರುವ ಈ ದ್ವಾಜನನ್ನು ನೀನೇ ಭರಿಸು. ದೇವತೆಗಳ ಮಾತಿಗೆ ಬೃಹಸ್ಪತಿಯು ಒಲ್ಲೆನೆಂದನು. ಇದರಿಂದಾಗಿ ಈ ಮಗುವಿಗೆ ಭರದ್ವಾಜನೆಂದು ಹೆಸರಾಯಿತು. ॥ ೩೮ ॥ ದೇವತೆಗಳ ಮೂಲಕ ಹೀಗೆ ನಾಮನಿರ್ವಚನವಾದರೂ ಮಮತೆಯೂ ನನ್ನ ಈ ಪುತ್ರನು ಅನ್ಯಾಯದಿಂದ ಹುಟ್ಟಿರುವನು ಎಂದು ತಿಳಿದು ಆಕೆಯು ಆ ಶಿಶುವನ್ನು ಬಿಟ್ಟುಬಿಟ್ಟಳು. ಆಗ ಮರುದ್ಗಣರೇ ಅದನ್ನು ಸಾಕಿದರು. ಭರತನ ವಂಶವು ನಿಂತುಹೋಗುವಾಗ, ಅವನನ್ನು ತಂದು ಭರತನಿಗೆ ಇತ್ತರು. ಈ ವಿತಥನೇ (ಭರದ್ವಾಜ) ಭರತನಿಗೆ ದತ್ತಪುತ್ರನಾದನು. ॥ ೩೯ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಭರತವಂಶದ ವರ್ಣನೆ – ರಂತಿದೇವನ ಕಥೆ

ಶ್ರೀಶುಕ ಉವಾಚ

ವಿತಥಸ್ಯ ಸುತೋ ಮನ್ಯುರ್ಬೃಹತ್ಕ್ಷತ್ರೋ ಜಯಸ್ತತಃ ।
ಮಹಾವೀರ್ಯೋ ನರೋ ಗರ್ಗಃ ಸಂಕೃತಿಸ್ತು ನರಾತ್ಮಜಃ
॥ ೧ ॥

ಗುರುಶ್ಚ ರಂತಿದೇವಶ್ಚ ಸಂಕೃತೇಃ ಪಾಂಡುನಂದನ ।
ರಂತಿದೇವಸ್ಯ ಹಿ ಯಶ ಇಹಾಮುತ್ರ ಚ ಗೀಯತೇ
॥ ೨ ॥

ವಿಯದ್ವಿತ್ತಸ್ಯ ದದತೋ ಲಬ್ಧಂ ಲಬ್ಧಂ ಬುಭುಕ್ಷತಃ ।
ವಿಸ್ಮಿಂಚತಸ್ಯ ಧೀರಸ್ಯ ಸಕುಟುಂಬಸ್ಯ ಸೀದತಃ
॥ ೩ ॥

ಸ್ಮತೀಯುರಷ್ಟಚತ್ವಾರಿಂಶದಹಾನ್ಯಪಿಬತಃ ಕಿಲ ।
ಘೃತಪಾಯಸಸಂಯಾವಂ ತೋಯಂ ಪ್ರಾತರುಪಸ್ಥಿತಮ್
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ವಿತಥ ಅಥವಾ ಭರದ್ವಾಜನ ಮಗ ಮನ್ಯು ಎಂಬುವನು. ಮನ್ಯುವಿಗೆ – ಬೃಹತ್‌ಕ್ಷತ್ರ, ಜಯ, ಮಹಾವೀರ್ಯ, ನರ, ಗರ್ಗರೆಂಬ ಐವರು ಪುತ್ರರಾದರು. ನರನಿಗೆ ಸಂಕೃತಿ ಎಂಬ ಮಗನಿದ್ದನು. ॥ ೧ ॥ ಸಂಕೃತಿಗೆ ಗುರು ಮತ್ತು ರಂತಿದೇವರೆಂಬ ಇಬ್ಬರು ಮಕ್ಕಳಾದರು. ಪರೀಕ್ಷಿತನೇ! ರಂತಿದೇವನ ನಿರ್ಮಲವಾದ ಕೀರ್ತಿಯು ಇಹಪರಲೋಕಗಳಲ್ಲಿ ಎಲ್ಲೆಡೆ ಕೊಂಡಾಡಲ್ಪಡುತ್ತದೆ. ॥ ೨ ॥ ರಂತಿದೇವನು ಆಕಾಶದಂತೆ ಪ್ರಯತ್ನವಿಲ್ಲದೆ ದೈವವಶದಿಂದ ಪ್ರಾಪ್ತವಾದ ವಸ್ತುಗಳನ್ನು ಉಪಭೋಗಿಸುತ್ತಿರುವಾಗ ದಿನಗಳೆದಂತೆ ಆವನ ಸಂಪತ್ತು ಕರಗಿಹೋಯಿತು. ಏನಾದರೂ ದೊರಕಿದರೆ ಅದನ್ನು ಇತರರಿಗೆ ಕೊಟ್ಟು ತಾನು ಹಸಿದುಕೊಂಡೇ ಇರುತ್ತಿದ್ದನು. ಅವನು ಸಂಗ್ರಹ-ಪರಿಗ್ರಹ, ಮಮತೆಯಿಂದ ರಹಿತನಾಗಿ ಧೈರ್ಯಶಾಲಿಯಾಗಿದ್ದನು ಮತ್ತು ತನ್ನ ಕುಟುಂಬದೊಡನೆ ದುಃಖವನ್ನು ಅನುಭವಿಸುತ್ತಾ ಇದ್ದನು. ॥ ೩ ॥ ಒಮ್ಮೆ ಸತತವಾಗಿ ನಲವತ್ತೆಂಟು ದಿನಗಳವರೆಗೆ ಅವನಿಗೆ ನೀರೂ ಕೂಡ ಸಿಗದೆ ಕಳೆದು ಹೋದುವು. ನಲವತ್ತೊಂಭತ್ತನೆಯ ದಿನ ಬೆಳಿಗ್ಗೆಯೇ ಅವನಿಗೆ ಸ್ವಲ್ಪ ತುಪ್ಪ, ಪಾಯಸ, ಗೋದಿಯ ಅನ್ನ ಮತ್ತು ನೀರು ದೊರೆತವು. ॥ ೪ ॥

ಕೃಚ್ಛ್ರಪ್ರಾಪ್ತಕುಟುಂಬಸ್ಯ ಕ್ಷುತ್ತೃಡ್ಭ್ಯಾಂ ಜಾತವೇಪಥೋಃ ।
ಅತಿಥಿರ್ಬ್ರಾಹ್ಮಣಃ ಕಾಲೇ ಭೋಕ್ತುಕಾಮಸ್ಯ ಚಾಗಮತ್
॥ ೫ ॥

ತಸ್ಮೈ ಸಂವ್ಯಭಜತ್ಸೋಽನ್ನಮಾದೃತ್ಯ ಶ್ರದ್ಧಯಾನ್ವಿತಃ ।
ಹರಿಂ ಸರ್ವತ್ರ ಸಂಪಶ್ಯನ್ಸ ಭುಕ್ತ್ವಾ ಪ್ರಯಯೌ ದ್ವಿಜಃ
॥ ೬ ॥

ಅಥಾನ್ಯೋ ಭೋಕ್ಷ್ಯಮಾಣಸ್ಯ ವಿಭಕ್ತಸ್ಯ ಮಹೀಪತೇ ।
ವಿಭಕ್ತಂ ವ್ಯಭಜತ್ತಸ್ಮೈ ವೃಷಲಾಯ ಹರಿಂ ಸ್ಮರನ್
॥ ೭ ॥

ಯಾತೇ ಶೂದ್ರೇ ತಮನ್ಯೋಽಗಾದತಿಥಿಃ ಶ್ವಭಿರಾವೃತಃ ।
ರಾಜನ್ಮೇ ದೀಯತಾಮನ್ನಂ ಸಗಣಾಯ ಬುಭುಕ್ಷತೇ
॥ ೮ ॥

ಸ ಆದೃತ್ಯಾವಶಿಷ್ಟಂ ಯದ್ಬಹುಮಾನಪುರಸ್ಕೃತಮ್ ।
ತಚ್ಚ ದತ್ತ್ವಾ ನಮಶ್ಚಕ್ರೇ ಶ್ವಭ್ಯಃ ಶ್ವಪತಯೇ ವಿಭುಃ
॥ ೯ ॥

ಪಾನೀಯಮಾತ್ರಮುಚ್ಛೇಷಂ ತಚ್ಚೈಕಪರಿತರ್ಪಣಮ್ ।
ಪಾಸ್ಯತಃ ಪುಲ್ಕಸೋಽಭ್ಯಾಗಾದಪೋ ದೇಹ್ಯಶುಭಸ್ಯ ಮೇ
॥ ೧೦ ॥

ತಸ್ಯ ತಾಂ ಕರುಣಾಂ ವಾಚಂ ನಿಶಮ್ಯ ವಿಪುಲಶ್ರಮಾಮ್ ।
ಕೃಪಯಾ ಭೃಶಸಂತಪ್ತ ಇದಮಾಹಾಮೃತಂ ವಚಃ
॥ ೧೧ ॥

ನ ಕಾಮಯೇಽಹಂ ಗತಿಮೀಶ್ವರಾತ್ಪರಾ-
ಮಷ್ಟರ್ದ್ಧಿಯುಕ್ತಾಮಪುನರ್ಭವಂ ವಾ ।
ಆರ್ತಿಂ ಪ್ರಪದ್ಯೇಽಖಿಲದೇಹಭಾಜಾ-
ಮಂತಃ ಸ್ಥಿತೋ ಯೇನ ಭವಂತ್ಯದುಃಖಾಃ ॥ ೧೨ ॥

ಕ್ಷುತ್ತೃಟ್ಶ್ರಮೋ ಗಾತ್ರಪರಿಶ್ರಮಶ್ಚ
ದೈನ್ಯಂ ಕ್ಲಮಃ ಶೋಕವಿಷಾದಮೋಹಾಃ ।
ಸರ್ವೇ ನಿವೃತ್ತಾಃ ಕೃಪಣಸ್ಯ ಜಂತೋ-
ರ್ಜೀವೋಽಮುಷ್ಮಾದ್ಜಲದಾರ್ಪಣಾನ್ಮೇ ॥ ೧೩ ॥

ಅವನ ಪರಿವಾರವು ಹಸಿವು-ಬಾಯಾರಿಕೆಯಿಂದ ಬಹಳ ಸಂಕಟಪಡುತ್ತಾ ಗಡ-ಗಡನೆ ನಡುಗುತ್ತಿತ್ತು. ಆದರೆ ಅವರೆಲ್ಲರೂ ಇನ್ನೇನು ಭೋಜನ ಮಾಡಬೇಕೆಂದಿರುವಾಗ ಓರ್ವ ಬ್ರಾಹ್ಮಣನು ಅತಿಥಿಯಾಗಿ ಬಂದನು. ॥ ೫ ॥ ರಂತಿದೇವನು ಎಲ್ಲರಲ್ಲಿ ಶ್ರೀಭಗವಂತನನ್ನೇ ದರ್ಶಿಸುತ್ತಿದ್ದನು. ಆದುದರಿಂದ ಅವನು ಅತ್ಯಂತ ಶ್ರದ್ಧಾದರಗಳಿಂದ ದೊರಕಿದ ಅದೇ ಅನ್ನದಿಂದ ಬ್ರಾಹ್ಮಣನಿಗೆ ಭೋಜನ ಮಾಡಿಸಿದನು. ಬ್ರಾಹ್ಮಣನು ಭೋಜನಮಾಡಿ ಹೊರಟುಹೋದನು. ॥ ೬ ॥

ಪರೀಕ್ಷಿತನೇ! ಈಗ ಉಳಿದಿರುವ ಅನ್ನವನ್ನು ಪರಸ್ಪರ ಹಂಚಿಕೊಂಡು ಊಟಮಾಡಲು ರಂತಿದೇವನು ಬಯಸಿದನು. ಅದೇ ಸಮಯಕ್ಕೆ ಇನ್ನೋರ್ವ ಶೂದ್ರನು ಅತಿಥಿಯಾಗಿ ಬಂದನು. ರಂತಿದೇವನು ಭಗವಂತನನ್ನು ಸ್ಮರಿಸುತ್ತಾ ಆ ಉಳಿದ ಅನ್ನದಲ್ಲಿಯೂ ಸ್ವಲ್ಪ ಭಾಗವನ್ನು ಶೂದ್ರನ ರೂಪದಲ್ಲಿ ಬಂದ ಅತಿಥಿಗೆ ಊಟ ಮಾಡಿಸಿದನು. ॥ ೭ ॥ ಶೂದ್ರನು ತಿಂದುಂಡು ಹೊರಟುಹೋದಾಗ ನಾಯಿಗಳೊಂದಿಗೆ ಮತ್ತೋರ್ವ ಅತಿಥಿಯು ಬಂದನು. ಅವನೆಂದನು – ರಾಜನೇ! ನಾನು ಮತ್ತು ನನ್ನ ನಾಯಿಗಳು ಹಸಿದಿದ್ದೇವೆ. ತಿನ್ನಲು ಏನಾದರೂ ಕೊಡು. ॥ ೮ ॥ ರಂತಿದೇವನು ಅತ್ಯಂತ ಆದರಭಾವದಿಂದ ಬಂದ ಅತಿಥಿಗೆ ಉಳಿದ ಅನ್ನವನ್ನು ಕೊಟ್ಟನು ಮತ್ತು ಭಗವನ್ಮಯನಾಗಿ ನಾಯಿಯ ಒಡೆಯನ ರೂಪದಲ್ಲಿ ಬಂದ ಭಗವಂತನನ್ನು ನಮಸ್ಕರಿಸಿದನು. ॥ ೯ ॥ ಈಗ ಕೇವಲ ನೀರು ಮಾತ್ರ ಉಳಿದಿತ್ತು. ಅದೂ ಕೂಡ ಒಬ್ಬನಿಗೆ ಕುಡಿಯಲು ಸಾಕಾಗುವಷ್ಟೇ ಇತ್ತು. ಅದನ್ನು ತಮ್ಮಲ್ಲಿ ಹಂಚಿಕೊಂಡು ಕುಡಿಯಬೇಕೆಂದಿರುವಾಗ ಓರ್ವ ಚಾಂಡಾಲನು ಬಂದುಬಿಟ್ಟನು – 'ಸ್ವಾಮಿ! ನಾನು ಅತ್ಯಂತ ನೀಚನಾಗಿರುವೆನು. ನನಗೆ ನೀರನ್ನು ಕುಡಿಸು' ಎಂದು ಹೇಳಿದನು. ॥ ೧೦ ॥ ಹೀಗೆ ಹೇಳಲೂ ಕೂಡ ಬಹಳ ಬಳಲಿ ಕಷ್ಟಪಡುತ್ತಿದ್ದ ಆ ಚಾಂಡಾಲನ ಕರುಣಾಪೂರ್ಣವಾದ ಮಾತನ್ನು ಕೇಳಿ, ಕರುಣಾಶಾಲಿಯಾದ ರಂತಿದೇವನು ದಯೆಯಿಂದ ಅತ್ಯಂತ ಸಂಕಟಪಡುತ್ತಾ ಅಮೃತಮಯ ಈ ಮಾತನ್ನು ಹೇಳಿದನು. ॥ ೧೧ ॥ ನಾನು ಭಗವಂತನಲ್ಲಿ ಅಣಿಮಾದಿ ಅಷ್ಟಸಿದ್ಧಿಗಳಿಂದ ಕೂಡಿದ ಪರಮಗತಿಯನ್ನು ಬಯಸುವುದಿಲ್ಲ, ಹೆಚ್ಚೇನು ಮೋಕ್ಷವನ್ನೂ ಕೂಡ ಬೇಕೆಂದು ಕೇಳುವುದಿಲ್ಲ. ನಾನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೆಲೆಸಿ ಅವರ ಎಲ್ಲ ದುಃಖಗಳನ್ನು ನಾನೇ ಸಹಿಸುವಂತಾಗಲಿ. ಹೀಗೆ ಮಾಡುವುದರಿಂದ ಯಾವ ಪ್ರಾಣಿಗೂ ದುಃಖವಾಗದಿರಲೆಂದು ಮಾತ್ರ ನನ್ನ ಅಪೇಕ್ಷೆಯಾಗಿದೆ. ॥ ೧೨ ॥ ಈ ದೀನ ಪ್ರಾಣಿಯು ನೀರು ಕುಡಿದಾದರೂ ಬದುಕಲು ಬಯಸುತ್ತಿದೆ. ನೀರನ್ನು ಕೊಟ್ಟರೆ ಇವನ ಜೀವನದ ರಕ್ಷಣೆಯಾಗುವುದು. ಇದರಿಂದಾಗಿ ನನ್ನ ಹಸಿವು-ಬಾಯಾರಿಕೆಯ ಪೀಡೆ, ಶರೀರದ ಶಿಥಿಲತೆ, ದೀನತೆ, ಗ್ಲಾನಿ, ಶೋಕ, ವಿಷಾದ, ಮೋಹ ಇವೆಲ್ಲವೂ ಹೊರಟುಹೋಗುತ್ತವೆ. ನಿಶ್ಚಯವಾಗಿ ಈಗ ನಾನೇ ಸುಖಿಯು ॥ ೧೩. ॥

ಇತಿ ಪ್ರಭಾಷ್ಯ ಪಾನೀಯಂ ಮ್ರಿಯಮಾಣಃ ಪಿಪಾಸಯಾ ।
ಪುಲ್ಕಸಾಯಾದದಾದ್ಧೀರೋ ನಿಸರ್ಗಕರುಣೋ ನೃಪಃ
॥ ೧೪ ॥

ತಸ್ಯ ತ್ರಿಭುವನಾಧೀಶಾಃ ಫಲದಾಃ ಫಲಮಿಚ್ಛತಾಮ್ ।
ಆತ್ಮಾನಂ ದರ್ಶಯಾಞ್ಚಕ್ರುರ್ಮಾಯಾ ವಿಷ್ಣುವಿನಿರ್ಮಿತಾಃ
॥ ೧೫ ॥

ಸ ವೈ ತೇಭ್ಯೋ ನಮಸ್ಕೃತ್ಯ ನಿಃಸಂಗೋ ವಿಗತಸ್ಪೃಹಃ ।
ವಾಸುದೇವೇ ಭಗವತಿ ಭಕ್ತ್ಯಾ ಚಕ್ರೇ ಮನಃ ಪರಮ್
॥ ೧೬ ॥

ಈಶ್ವರಾಲಂಬನಂ ಚಿತ್ತಂ ಕುರ್ವತೋಽನನ್ಯರಾಧಸಃ ।
ಮಾಯಾ ಗುಣಮಯೀ ರಾಜನ್ಸ್ವಪ್ನವತ್ಪ್ಯತ್ಯಲೀಯತ
॥ ೧೭ ॥

ತತ್ಪ್ರಸಂಗಾನುಭಾವೇನ ರಂತಿದೇವಾನುವರ್ತಿನಃ ।
ಅಭವನ್ಯೋಗಿನಃ ಸರ್ವೇ ನಾರಾಯಣಪರಾಯಣಾಃ
॥ ೧೮ ॥

ಗರ್ಗಾಚ್ಛಿನಿಸ್ತತೋ ಗಾರ್ಗ್ಯಃ ಕ್ಷತ್ರಾದ್ಬ್ರಹ್ಮ ಹ್ಯವರ್ತತ ।
ದುರಿತಕ್ಷಯೋ ಮಹಾವೀರ್ಯಾತ್ತಸ್ಯ ತ್ರಯ್ಯಾರುಣಿಃ ಕವಿಃ
॥ ೧೯ ॥

ಪುಷ್ಕರಾರುಣೆರಿತ್ಯತ್ರ ಯೇ ಬ್ರಾಹ್ಮಣಗತಿಂ ಗತಾಃ ।
ಬೃಹತ್ಕ್ಷತ್ರಸ್ಯ ಪುತ್ರೋಽಭೂದ್ಧಸ್ತೀ ಯದ್ಧಸ್ತಿನಾಪುರಮ್
॥ ೨೦ ॥

ಅಜಮೀಢೋ ದ್ವಿಮೀಢಶ್ಚ ಪುರುಮೀಢಶ್ಚ ಹಸ್ತಿನಃ ।
ಅಜಮೀಢಸ್ಯ ವಂಶ್ಯಾಃ ಸ್ಯುಃ ಪ್ರಿಯಮೇಧಾದಯೋ ದ್ವಿಜಾಃ
॥ ೨೧ ॥

ಅಜಮೀಢಾದ್ಬೃಹದಿಷುಸ್ತಸ್ಯ ಪುತ್ರೋ ಬೃಹದ್ಧನುಃ ।
ಬೃಹತ್ಕಾಯಸ್ತತಸ್ತಸ್ಯ ಪುತ್ರ ಆಸೀಜ್ಜಯದ್ರಥಃ
॥ ೨೨ ॥

ತತ್ಸುತೋ ವಿಶದಸ್ತಸ್ಯ ಸೇನಜಿತ್ಸಮಜಾಯತ ।
ರುಚಿರಾಶ್ವೋ ದೃಢಹನುಃ ಕಾಶ್ಯೋ ವತ್ಸಶ್ಚ ತತ್ಸುತಾಃ
॥ ೨೩ ॥

ರುಚಿರಾಶ್ವಸುತಃ ಪಾರಃ ಪೃಥುಸೇನಸ್ತದಾತ್ಮಜಃ ।
ಪಾರಸ್ಯ ತನಯೋ ನೀಪಸ್ತಸ್ಯ ಪುತ್ರಶತಂ ತ್ವಭೂತ್
॥ ೨೪ ॥

ಹೀಗೆ ಹೇಳಿ ರಂತಿದೇವನು ಆ ಉಳಿದಿರುವ ನೀರನ್ನೂ ಕೂಡ ಆ ಚಾಂಡಾಲನಿಗೆ ಕೊಟ್ಟನು. ನೀರಿಲ್ಲದೆ ಅವನು ಸ್ವತಃ ಸಾಯುತ್ತಿದ್ದರೂ ಸ್ವಾಭಾವಿಕವಾಗಿಯೇ ಅವನ ಹೃದಯವು ಕರುಣಾಪೂರ್ಣವಾಗಿತ್ತು. ಅದರಿಂದ ಜೀವನಾಧಾರವಾದ ನೀರನ್ನೂ ಇಟ್ಟುಕೊಳ್ಳಲು ಕೂಡ ಅವನಿಗೆ ಸಾಧ್ಯವಾಗಲಿಲ್ಲ. ಅವನ ಧೈರ್ಯಕ್ಕೆ ಏನಾದರೂ ಸೀಮೆ ಇದೆಯೇ? ॥ ೧೪ ॥ ಪರೀಕ್ಷಿತನೇ! ಈ ಅತಿಥಿಗಳು ವಾಸ್ತವವಾಗಿ ಭಗವಂತನಿಂದ ರಚಿತವಾದ ಮಾಯೆಯ ವಿಭಿನ್ನರೂಪಗಳಾಗಿದ್ದವು. ಪರೀಕ್ಷೆಯು ಪೂರ್ಣಗೊಂಡಾಗ ತನ್ನ ಭಕ್ತರ ಅಭಿಲಾಷೆಯನ್ನು ಪೂರ್ಣಗೊಳಿಸುವಂತಹ ತ್ರಿಭುವನಕ್ಕೆ ಒಡೆಯರಾದ ಬ್ರಹ್ಮಾ ವಿಷ್ಣು ಮಹೇಶ್ವರ ಮೂವರು ಅವನೆದುರಿಗೆ ಪ್ರತ್ಯಕ್ಷರಾದರು. ॥ ೧೫ ॥ ರಂತಿದೇವನು ಅವರ ಚರಣಗಳಲ್ಲಿ ನಮಸ್ಕರಿಸಿದನು. ಭಗವಂತನ ಕೃಪೆಯಿಂದ ಅವನು ನಿಸ್ಸಂಗನೂ, (ನಿರಾಸಕ್ತನೂ) ನಿಸ್ಪೃಹನೂ ಆಗಿದ್ದನು. ಪರಮ ಪ್ರೇಮಮಯ ಭಕ್ತಿಭಾವದಿಂದ ತನ್ನ ಮನಸ್ಸನ್ನು ಭಗವಾನ್ ವಾಸುದೇವನಲ್ಲಿ ತನ್ಮಯಗೊಳಿಸಿ, ಅವರಲ್ಲಿ ಏನನ್ನೂ ಬೇಡಲಿಲ್ಲ. ॥ ೧೬ ॥ ಪರೀಕ್ಷಿತನೇ! ಅವನಿಗೆ ಭಗವಂತನಲ್ಲದೆ ಯಾವ ವಸ್ತುವಿನ ಇಚ್ಛೆಯೂ ಇರಲಿಲ್ಲ. ಅವನು ತನ್ನ ಮನಸ್ಸನ್ನು ಪೂರ್ಣವಾಗಿ ಭಗವಂತನಲ್ಲಿ ತೊಡಗಿಸಿದನು. ಅದರಿಂದ ಎಚ್ಚರವಾದಾಗ ಸ್ವಪ್ನ ದೃಶ್ಯವು ಇಲ್ಲವಾಗುವಂತೆ ತ್ರಿಗುಣಮಯವಾದ ಮಾಯೆಯು ನಾಶವಾಗಿಹೋಯಿತು. ॥ ೧೭ ॥ ರಂತಿದೇವನ ಅನುಯಾಯಿಗಳೂ ಕೂಡ ಅವನ ಸಂಗದಿಂದ ಯೋಗಿಗಳಾಗಿ, ಎಲ್ಲರೂ ನಾರಾಯಣ ಪರಾಯಣರಾದರು. ॥ ೧೮ ॥

ಮನ್ಯುಪುತ್ರನಾದ ಗರ್ಗನಿಂದ ಶಿನಿ ಮತ್ತು ಶಿನಿಯಿಂದ ಗಾರ್ಗ್ಯನ ಜನ್ಮವಾಯಿತು. ಗಾರ್ಗ್ಯನು ಕ್ಷತ್ರಿಯನಾಗಿದ್ದರೂ ಅವನಿಂದ ತ್ರ್ಯಯಾರುಣ, ಕವಿ, ಪುಷ್ಕರಾರುಣಿ ಎಂಬ ಮೂವರು ಪುತ್ರರಾದರು. ಈ ಮೂವರೂ ಬ್ರಾಹ್ಮಣರಾದರು. ಬೃಹತ್‌ಕ್ಷತ್ರನ ಪುತ್ರ ಹಸ್ತಿ ಎಂಬುವನು. ಅವನೇ ಹಸ್ತಿನಾಪುರವನ್ನು ನೆಲೆಗೊಳಿಸಿದನು. ॥ ೧೯-೨೦ ॥ ಹಸ್ತಿಗೆ-ಅಜಮೀಢ, ದ್ವಿಮೀಢ ಮತ್ತು ಪುರುಮೀಢರೆಂಬ ಮೂವರು ಪುತ್ರರಿದ್ದರು. ಅಜಮೀಢನ ಪುತ್ರರಲ್ಲಿ ಪ್ರಿಯಮೇಧ ಮೊದಲಾದವರು ಬ್ರಾಹ್ಮಣರಾದರು. ॥ ೨೧ ॥ ಇದೇ ಅಜಮೀಢನ ಓರ್ವ ಪುತ್ರನ ಹೆಸರು ಬೃಹದಿಷು ಎಂದಿತ್ತು. ಬೃಹದಿಷುವಿಗೆ ಬೃಹದ್ಧನು ಪುತ್ರನಾದನು. ಬೃಹದ್ಧನುವಿಗೆ ಬೃಹತ್ಕಾಯ, ಬೃಹತ್ಕಾಯನಿಗೆ ಜಯದ್ರಥನು ಹುಟ್ಟಿದನು. ॥ ೨೨ ॥ ಜಯದ್ರಥನ ಪುತ್ರ ವಿಶದನಾದನು. ವಿಶದನಿಗೆ ಸೇನಜಿತ್ ಹುಟ್ಟಿದನು. ಸೇನಜಿತ್ತುವಿಗೆ ರುಚಿರಾಶ್ವ, ದೃಢಹನು, ಕಾಶ್ಯ ಮತ್ತು ವತ್ಸ ಎಂಬ ನಾಲ್ವರು ಪುತ್ರರಾದರು. ॥ ೨೩ ॥ ರುಚಿರಾಶ್ವನಿಗೆ ಪಾರನೆಂಬ ಪುತ್ರನಿದ್ದನು. ಪಾರನಿಗೆ ಪೃಥುಸೇನ ಜನಿಸಿದನು. ಪಾರನ ಇನ್ನೊಬ್ಬ ಪುತ್ರನ ಹೆಸರು ನೀಪ ಎಂದಿತ್ತು. ಅವನಿಗೆ ನೂರು ಮಕ್ಕಳಾದರು. ॥ ೨೪ ॥ ಇದೇ ನೀಪನು ಘಾಯಾ*ಶುಕನ ಕನ್ಯೆಯಾದ ಕೃತ್ವಿಯೊಂದಿಗೆ ವಿವಾಹನಾಗಿದ್ದನು. ಅವನಿಂದ ಬ್ರಹ್ಮದತ್ತನೆಂಬ ಪುತ್ರನು ಜನಿಸಿದನು. ಬ್ರಹ್ಮದತ್ತನು

* ಶುಕಮುನಿಯು ಯಾವಾಗಲೂ ಅಸಂಗನೇ ಆಗಿದ್ದನು. ಆದರೆ ಅವನು ವಿರಾಗಿಯಾಗಿ ವನಕ್ಕೆ ಹೋಗುವ ಸಮಯದಲ್ಲಿ ಓರ್ವ ಘಾಯಾ ಶುಕನನ್ನು ದಾಪಿ ಬಿಟ್ಟುಹೋಗಿದ್ದನು. ಆ ಘಾಯಾ ಶುಕನೇ ಗೃಹಸ್ಥೋಚಿತವಾದ ವ್ಯವಹಾರಗಳನ್ನು ನಡೆಸಿದ್ದನು.

ಸ ಕೃತ್ಸ್ನಂ ಶುಕನ್ಯಾಯಾಂ ಬ್ರಹ್ಮದತ್ತಮಜೀಜನತ್ ।
ಸ ಯೋಗೀ ಗವಿ ಭಾರ್ಯಾಯಾಂ ವಿಷ್ವಕ್ಸೇನಮಧಾತ್ತುತಮ್
॥ ೨೫ ॥

ಜೈಗೀಷವ್ಯೋಪದೇಶೇನ ಯೋಗತಂತ್ರಂ ಚಕಾರ ಹ ।
ಉದಕ್ಸ್ವನಸ್ತತಸ್ತಸ್ಮಾದ್ಭಲ್ಲಾದೋ ಬಾರ್ಹದೀಷವಾಃ
॥ ೨೬ ॥

ಯವೀನರೋ ದ್ವಿಮೀಢಸ್ಯ ಕೃತಿಮಾಂಸ್ತತ್ಸುತಃ ಸ್ಮೃತಃ ।
ನಾಮ್ನಾ ಸತ್ಯಧೃತಿರ್ಯಸ್ಯ ದೃಢನೇಮಿಃ ಸುಪಾರ್ಶ್ವಕೃತ್
॥ ೨೭ ॥

ಸುಪಾರ್ಶ್ವಾತ್ಸುಮತಿಸ್ತಸ್ಯ ಪುತ್ರಃ ಸನ್ನತಿಮಾಂಸ್ತತಃ ।
ಕೃತಿರ್ಹಿರಣ್ಯನಾಭಾದ್ಯೋ ಯೋಗಂ ಪ್ರಾಪ್ಯ ಜಗೌ ಸ್ಮಷಟ್
॥ ೨೮ ॥

ಸಂಹಿತಾಃ ಪ್ರಾಚ್ಯಸಾಮ್ನಾಂ ವೈ ನೀಪೋ ಹ್ಯುಗ್ರಾಯುಧಸ್ತತಃ ।
ತಸ್ಯ ಕ್ಷೇಮ್ಯಃ ಸುವೀರೋಽಥ ಸುವೀರಸ್ಯ ರಿಪುಂಜಯಃ
॥ ೨೯ ॥

ತತೋ ಬಹುರಥೋ ನಾಮ ಪುರುಮೀಢೋಽಪ್ರಜೋಽಭವತ್ ।
ನಲಿನ್ಯಾಮಜಮೀಢಸ್ಯನೀಲಃ ಶಾಂತಿಃ ಸುತಸ್ತತಃ
॥ ೩೦ ॥

ಶಾಂತೇಃ ಸುಶಾಂತಿಸ್ತತ್ಪುತ್ರಃ ಪುರುಜೋಽರ್ಕಸ್ತತೋಽಭವತ್ ।
ಭರ್ಮ್ಯಾಶ್ವಸ್ತನಯಸ್ತಸ್ಯ ಪಂಚಾಸನ್ಮುದ್ಗಲಾದಯಃ
॥ ೩೧ ॥

ಯವೀನರೋ ಬೃಹದಿಷುಃ ಕಾಂಪಿಲ್ಯಃ ಸಂಜಯಃ ಸುತಾಃ ।
ಭರ್ಮ್ಯಾಶ್ವಃ ಪ್ರಾಹ ಪುತ್ರಾ ಮೇ ಪಂಚಾನಾಂ ರಕ್ಷಣಾಯ ಹಿ
॥ ೩೨ ॥

ವಿಷಯಾಣಾಮಲಮಿಮೇ ಇತಿ ಪಂಚಾಲಸಂಜ್ಞಿತಾಃ ।
ಮುದ್ಗಲಾದ್ಬ್ರಹ್ಮನಿರ್ವೃತ್ತಂ ಗೋತ್ರಂ ಮೌದ್ಗಲ್ಯಸಂಜ್ಞಿತಮ್
॥ ೩೩ ॥

ಮಿಥುನಂ ಮುದ್ಗಲಾದ್ಭಾರ್ಮ್ಯಾದ್ದಿವೋದಾಸಃ ಪುಮಾನಭೂತ್ ।
ಅಹಲ್ಯಾ ಕನ್ಯಕಾ ಯಸ್ಯಾಂ ಶತಾನಂದಸ್ತು ಗೌತಮಾತ್
॥ ೩೪ ॥

ತಸ್ಯ ಸತ್ಯಧೃತಿಃ ಪುತ್ರೋ ಧನುರ್ವೇದವಿಶಾರದಃ ।
ಶರದ್ವಾಂಸ್ತತ್ಸುತೋ ಯಸ್ಮಾದುರ್ವಶೀದರ್ಶನಾತ್ಕಿಲ
॥ ೩೫ ॥

ಶರಸ್ತಂಬೇಽಪತದ್ರೇತೋ ಮಿಥುನಂ ತದಭೂಚ್ಛುಭಮ್ ।
ತದ್ದೃಷ್ಟ್ವಾ ಕೃಪಯಾಗೃಹ್ಣಾಚ್ಛಂತನುರ್ಮೃಗಯಾಂ ಚರನ್ ।
ಕೃಪಃ ಕುಮಾರಃ ಕನ್ಯಾ ಚ ದ್ರೋಣಪತ್ನ್ಯಭವತ್ಕೃಪೀ
॥ ೩೬ ॥

ಮಹಾಯೋಗಿಯಾಗಿದ್ದನು. ಆವನು ತನ್ನ ಪತ್ನೀ ಸರಸ್ವತಿಯ ಗರ್ಭದಿಂದ ವಿಷ್ವಕ್ಸೇನನೆಂಬ ಪುತ್ರನನ್ನು ಪಡೆದನು. ॥ ೨೫ ॥ ಈ ವಿಷ್ವಕ್ಸೇನನೇ ಜೈಗೀಷವ್ಯರ ಉಪದೇಶದಿಂದ ಯೋಗ ಶಾಸ್ತ್ರವನ್ನು ರಚಿಸಿದನು. ವಿಷ್ವಕ್ಸೇನನ ಪುತ್ರನು ಉದಕ್ಸ್ವನ ಮತ್ತು ಉದಕ್ ಸ್ವನಿಗೆ ಭಲ್ಲಾದನೆಂಬ ಪುತ್ರನಾದನು. ಇವರೆಲ್ಲರೂ ಬೃಹದಿಷುವಿನ ವಂಶಜರಾದರು. ॥ ೨೬ ॥

ದ್ವಿಮೀಢನಿಗೆ ಯವೀನರನೆಂಬ ಪುತ್ರನಿದ್ದನು. ಯವೀನರನಿಂದ ಕೃತಿಮಾನ್, ಕೃತಿಮಂತನಿಂದ ಸತ್ಯಧೃತಿ, ಸತ್ಯಧೃತಿಯಿಂದ ದೃಢನೇಮಿ, ಮತ್ತು ದೃಢನೇಮಿಗೆ ಸುಪಾರ್ಶ್ವನೆಂಬ ಪುತ್ರನಾದನು. ॥ ೨೭ ॥ ಸುಪಾರ್ಶ್ವನಿಂದ ಸುಮತಿ, ಸುಮತಿಯಿಂದ ಸನ್ನತಿಮಾನ್, ಸನ್ನತಿಮಂತನಿಂದ ಕೃತಿಯು ಹುಟ್ಟಿದನು. ಅವನು ಹಿರಣ್ಯನಾಭನಿಂದ ಯೋಗವಿದ್ಯೆಯನ್ನು ಪಡೆದಿದ್ದನು ಮತ್ತು 'ಪ್ರಾಚ್ಯಸಾಮ' ಎಂಬ ಋಚೆಗಳ ಆರು ಸಂಹಿತೆಗಳನ್ನು ಹೇಳಿದ್ದನು. ಕೃತಿಯ ಪುತ್ರ ನೀಪನೆಂಬುವನಿದ್ದನು. ನೀಪನಿಗೆ ಉಗ್ರಾಯುಧ, ಉಗ್ರಾಯುಧನಿಗೆ ಕ್ಷೇಮ್ಯ, ಕ್ಷೇಮ್ಯನಿಗೆ ಸುವೀರ, ಸುವೀರನಿಗೆ ರಿಪುಂಜಯನೆಂಬ ಪುತ್ರನಿದ್ದನು. ॥ ೨೮-೨೯ ॥ ರಿಪುಂಜಯನಿಗೆ ಬಹುರಥನೆಂಬ ಪುತ್ರ ನಿದ್ದನು. ದ್ವಿಮೀಢನ ತಮ್ಮ ಪುರುಮೀಢನಿಗೆ ಯಾವುದೇ ಸಂತಾನ ವಿರಲಿಲ್ಲ. ಅಜಮೀಢನ ಇನ್ನೋರ್ವ ಪತ್ನಿಯ ಹೆಸರು ನಲಿನಿ ಎಂದಿತ್ತು. ಆವಳ ಗರ್ಭದಿಂದ ನೀಲನ ಜನ್ಮವಾಯಿತು. ನೀಲನಿಂದ ಶಾಂತಿ, ಶಾಂತಿಗೆ ಸುಶಾಂತಿ, ಸುಶಾಂತಿಗೆ ಪುರುಜ, ಪುರುಜನಿಗೆ ಅರ್ಕ, ಅರ್ಕನಿಗೆ ಭರ್ಮ್ಯಾಶ್ವ, ಭರ್ಮ್ಯಾಶ್ವನಿಗೆ – ಮುದ್ಗಲ, ಯವೀನರ, ಬೃಹದಿಷು, ಕಾಂಪಿಲ್ಯ ಮತ್ತು ಸಂಜಯ ಎಂಬ ಐದು ಮಂದಿ ಮಕ್ಕಳಾದರು. ಭರ್ಮ್ಯಾಶ್ವನು ಹೇಳಿದನು – ಈ ನನ್ನ ಐವರು ಪುತ್ರರು (ಪಂಚ) ದೇಶಗಳಿಗೆ ಶಾಸನ ಮಾಡುವುದರಲ್ಲಿ ಸಮರ್ಥ ರಾಗಿರುವರು (ಪಂಚ ಅಲಮ್). ಇದರಿಂದ ಇವರು 'ಪಾಂಚಾಲ' ರೆಂದು ಪ್ರಸಿದ್ಧರಾದರು. ಇವರಲ್ಲಿ ಮುದ್ಗಲ ನಿಂದ 'ಮೌದ್ಗಲ್ಯ'ವೆಂಬ ಬ್ರಾಹ್ಮಣಗೋತ್ರವು ಪ್ರವೃತ್ತವಾಯಿತು. ॥ ೩೦-೩೧ ॥

ಭರ್ಮ್ಯಾಶ್ವನ ಪುತ್ರ ಮುದ್ಗಲನಿಗೆ ಅವಳೀ ಮಕ್ಕಳು ಹುಟ್ಟಿದರು. ಆವರಲ್ಲಿ ಪುತ್ರನ ಹೆಸರು ದಿವೋದಾಸ ಮತ್ತು ಪುತ್ರಿಯ ಹೆಸರು ಅಹಲ್ಯೆ ಎಂದಿತ್ತು. ಅಹಲ್ಯೆಯ ವಿವಾಹವು ಮಹರ್ಷಿ ಗೌತಮ ರೊಂದಿಗೆ ನಡೆಯಿತು. ಗೌತಮನಿಗೆ ಶತಾನಂದನೆಂಬ ಮಗನು ಹುಟ್ಟಿದನು. ॥ ೩೪ ॥ ಶತಾನಂದನ ಪುತ್ರ ಸತ್ಯಧೃತಿಯಾಗಿದ್ದನು. ಆವನು ಧನುರ್ವಿದ್ಯೆಯಲ್ಲಿ ಅತ್ಯಂತ ನಿಪುಣನಾಗಿದ್ದನು. ಸತ್ಯ ಧೃತಿಯ ಪುತ್ರನ ಹೆಸರು ಶರದ್ವಾನ್. ಒಂದು ದಿನ ಊರ್ವಶಿಯನ್ನು ಕಂಡು ಶರದ್ವಂತನ ವೀರ್ಯವು ಸ್ಖಲನವಾಗಿ ನೂಜೆಹುಲ್ಲಿನ ಮೇಲೆ ಬಿತ್ತು. ಆದರಿಂದ ಶುಭಲಕ್ಷಣಗಳುಳ್ಳ ಓರ್ವ ಪುತ್ರ ಮತ್ತು ಒಂದು ಪುತ್ರಿಯ ಜನ್ಮವಾಯಿತು. ಶಂತನು ಮಹಾರಾಜನು ಬೇಟೆ ಯಾಡಲು ಆ ಕಡೆ ಹೋದಾಗ ಆವರನ್ನು ನೋಡಿದನು. ದಯಾಪರ ನಾದ ಶಂತನು ಇಬ್ಬರನ್ನೂ ಎತ್ತಿತಂದನು. ಆವರಲ್ಲಿನ ಪುತ್ರನ ಹೆಸರು ಕೃಪಾಚಾರ್ಯನೆಂದಿತ್ತು ಮತ್ತು ಕನ್ಯೆಯ ಹೆಸರು ಕೃಪಿ ಯೆಂದಿತ್ತು. ಇವಳು ದ್ರೋಣಾಚಾರ್ಯರ ಪತ್ನಿಯಾದಳು. ॥ ೩೫-೩೬ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಏಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಪಾಂಚಾಲ, ಕೌರವ ಮತ್ತು ಮಗಧದೇಶದ ರಾಜರ ವಂಶವರ್ಣನೆ

ಶ್ರೀಶುಕ ಉವಾಚ

ಮಿತ್ರೇಯುಶ್ಚ ದಿವೋದಾಸಾಚ್ಚ್ಯವನಸ್ತತ್ಸುತೋ ನೃಪ ।
ಸುದಾಸಃ ಸಹದೇವೋಽಥ ಸೋಮಕೋ ಜಂತುಜನ್ಮಕೃತ್
॥ ೧ ॥

ತಸ್ಯ ಪುತ್ರಶತಂ ತೇಷಾಂ ಯವೀಯಾನ್ಪೃಶತಃ ಸುತಃ ।
ದ್ರುಪದೋ ದ್ರೌಪದೀ ತಸ್ಯ ಧೃಷ್ಟದ್ಯುಮ್ನಾದಯಃ ಸುತಾಃ
॥ ೨ ॥

ಧೃಷ್ಟದ್ಯುಮ್ನಾದ್ಧೃಷ್ಟಕೇತುರ್ಭಾರ್ಮ್ಯಾಃ ಪಂಚಾಲಕಾ ಇಮೇ ।
ಯೋಽಜಮೀಢಸುತೋ ಹ್ಯನ್ಯ ಋಕ್ಷಃ ಸಂವರಣಸ್ತತಃ
॥ ೩ ॥

ತಪತ್ಯಾಂ ಸೂರ್ಯಕನ್ಯಾಯಾಂ ಕುರುಕ್ಷೇತ್ರಪತಿಃ ಕುರುಃ ।
ಪರೀಕ್ಷಿತ್ಸುಧನುರ್ಜಹ್ನುರ್ನಿಷಧಾಶ್ಚ ಕುರೋಃ ಸುತಾಃ
॥ ೪ ॥

ಸುಹೋತ್ರೋಽಭೂತ್ಸುಧನುಷಶ್ಚ್ಯವನೋಽಥ ತತಃ ಕೃತೀ ।
ವಸುಸ್ತಸ್ಯೋಪರಿಚರೋ ಬೃಹದ್ರಥಮುಖಾಸ್ತತಃ
॥ ೫ ॥

ಕುಶಾಂಬಮತ್ಸ್ಯಪ್ರತ್ಯಗ್ರಚೇದಿಪಾದ್ಯಾಶ್ಚ ಚೇದಿಪಾಃ ।
ಬೃಹದ್ರಥಾತ್ಕುಶಾಗ್ರೋಽಭೂದೃಷಭಸ್ತಸ್ಯ ತತ್ಸುತಃ
॥ ೬ ॥

ಜಜ್ಞೇ ಸತ್ಯಹಿತೋಽಪತ್ಯಂ ಪುಷ್ಪವಾಂಸ್ತತ್ಸುತೋ ಜಹುಃ ।
ಅನ್ಯಸ್ಯಾಂ ಚಾಪಿ ಭಾರ್ಯಾಯಾಂ ಶಕಲೇ ದ್ವೇ ಬೃಹದ್ರಥಾತ್
॥ ೭ ॥

ತೇ ಮಾತ್ರಾ ಬಹಿರುತ್ಸೃಷ್ಟೇ ಜರಯಾ ಚಾಭಿಸಂಧಿತೇ ।
ಜೀವ ಜೀವೇತಿ ಕ್ರೀಡಂತ್ಯಾ ಜರಾಸಂಧೋಽಭವತ್ಸುತಃ
॥ ೮ ॥

ತತಶ್ಚ ಸಹದೇವೋಽಭೂತ್ಸೋಮಾಪಿರ್ಯಚ್ಛ್ರುತಶ್ರವಾಃ ।
ಪರೀಕ್ಷಿದನಪತ್ಯೋಽಭೂತ್ಸುರಥೋ ನಾಮ ಜಾಹ್ನವಃ
॥ ೯ ॥

ತತೋ ವಿದೂರಥಸ್ತಸ್ಮಾತ್ ಸಾರ್ವಭೌಮಸ್ತತೋಽಭವತ್ ।
ಜಯಸೇನಸ್ತತಸ್ಮಾದ್ರಾಧಿಕೋಽತೋಽಯುತೋ ಹ್ಯಭೂತ್
॥ ೧೦ ॥

ತತಶ್ಚ ಕ್ರೋಧನಸ್ತಸ್ಮಾದ್ದೇವಾತಿಥಿರಮುಷ್ಯ ಚ ।
ಋಷ್ಯಸ್ತಸ್ಯ ದಿಲೀಪೋಽಭೂತ್ಪ್ರತೀಪಸ್ತಸ್ಯ ಚಾತ್ಮಜಃ
॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ದಿವೋದಾಸನಿಗೆ ಮಿತ್ರೇಯು ಎಂಬ ಪುತ್ರನಿದ್ದನು. ಮಿತ್ರೇಯುವಿಗೆ – ಚ್ಯವನ, ಸುದಾಸ, ಸಹದೇವ ಮತ್ತು ಸೋಮಕರೆಂಬ ನಾಲ್ಕು ಪುತ್ರರಾದರು. ಸೋಮಕನಿಗೆ ನೂರು ಮಕ್ಕಳಿದ್ದರು. ಅವರಲ್ಲಿ ಹಿರಿಯವನು ಜಂತು ಮತ್ತು ಕಿರಿಯವನು ಪೃಷತನಾಗಿದ್ದನು. ಪೃಷತನಿಗೆ ದ್ರುಪದನೆಂಬ ಪುತ್ರನಿದ್ದನು. ದ್ರುಪದನಿಗೆ ದ್ರೌಪದಿ ಎಂಬ ಕನ್ಯೆಯೂ, ಧೃಷ್ಟದ್ಯುಮ್ನನೇ ಮೊದಲಾದ ಪುತ್ರರಿದ್ದರು. ॥ ೧-೨ ॥ ಧೃಷ್ಟದ್ಯುಮ್ನನಿಗೆ ಧೃಷ್ಟಕೇತು ಎಂಬ ಪುತ್ರನಿದ್ದನು. ಭರ್ಮ್ಯಾಶ್ವನ ವಂಶದಲ್ಲಿ ಹುಟ್ಟಿದ ಈ ರಾಜರೆಲ್ಲರೂ ಪಾಂಚಾಲರೆಂದು ಖ್ಯಾತರಾದರು. ಅಜಮೀಢನಿಗೆ ಋಕ್ಷನೆಂಬ ಇನ್ನೋರ್ವ ಪುತ್ರನಿದ್ದನು. ಅವನಿಂದ ಸಂವರಣನು ಹುಟ್ಟಿದನು. ॥ ೩ ॥ ಸಂವರಣನ ವಿವಾಹವು ಸೂರ್ಯನ ಮಗಳಾದ ತಪತಿಯೊಂದಿಗೆ ನಡೆಯಿತು. ಅವಳ ಗರ್ಭದಿಂದ ಕುರುಕ್ಷೇತ್ರದ ಒಡೆಯ ಕುರುವಿನ ಜನ್ಮವಾಯಿತು. ಕುರುವಿಗೆ – ಪರೀಕ್ಷಿತ, ಸುಧನ್ವಾ, ಜಹ್ನು ಮತ್ತು ನಿಷಧಾಶ್ವ ಎಂಬ ನಾಲ್ಕು ಪುತ್ರರು ಹುಟ್ಟಿದರು. ॥ ೪ ॥ ಸುಧನ್ವನಿಂದ ಸುಹೋತ್ರ, ಸುಹೋತ್ರನಿಂದ ಚ್ಯವನ, ಚ್ಯವನನಿಂದ ಕೃತಿ, ಕೃತಿಯಿಂದ ಉಪರಿಚರವಸು ಮತ್ತು ಉಪರಿಚರವಸುವಿನಿಂದ ಬೃಹದ್ರಥರೇ ಮೊದಲಾದ ಅನೇಕ ಪುತ್ರರು ಹುಟ್ಟಿದರು. ॥ ೫ ॥ ಅವರಲ್ಲಿ ಬೃಹದ್ರಥ, ಕುಶಾಂಬ, ಮತ್ಸ್ಯ, ಪ್ರತ್ಯಗ್ರ ಮತ್ತು ಚೇದಿಪ ಮೊದಲಾದವರು ಚೇದಿರಾಜ್ಯದ ರಾಜರಾದರು. ಬೃಹದ್ರಥನಿಗೆ ಕುಶಾಗ್ರನೆಂಬ ಪುತ್ರನಿದ್ದನು. ಕುಶಾಗ್ರನಿಂದ ಋಷಭ, ಋಷಭನಿಂದ ಸತ್ಯಹಿತ, ಸತ್ಯಹಿತನಿಂದ ಪುಷ್ಪವಾನ್, ಪುಷ್ಪವಂತನಿಂದ ಜಹುನೆಂಬವ ಪುತ್ರನಾದನು. ಬೃಹದ್ರಥನ ಇನ್ನೋರ್ವ ಪತ್ನಿಯ ಗರ್ಭದಿಂದ ಒಂದು ಶರೀರದ ಎರಡು ಸೀಳುಗಳು ಹುಟ್ಟಿದವು. ॥ ೬-೭ ॥ ಅವನ್ನು ತಾಯಿಯು ಹೊರಗೆ ಎಸೆದುಬಿಟ್ಟಳು. ಆಗ 'ಜರಾ' ಎಂಬ ರಾಕ್ಷಸಿಯು 'ಬದುಕು-ಬದುಕು' ಎಂದು ಹೇಳಿ ಲೀಲಾಜಾಲವಾಗಿ ಅವೆರಡೂ ತುಂಡುಗಳನ್ನು ಜೋಡಿಸಿದಳು. ಆ ಜೋಡಿಸಿದ ಬಾಲಕನೇ ಜರಾಸಂಧನಾದನು. ॥ ೮ ॥ ಜರಾಸಂಧನಿಗೆ ಸಹದೇವ, ಸಹದೇವನಿಗೆ ಸೋಮಾಪಿ, ಸೋಮಾಪಿಗೆ ಶ್ರುತಶ್ರವಾ ಪುತ್ರನಾದನು. ಕುರುವಿನ ಜ್ಯೇಷ್ಠಪುತ್ರ ಪರೀಕ್ಷಿತನಿಗೆ ಯಾವ ಸಂತಾನವೂ ಆಗಲಿಲ್ಲ. ಜಹ್ನುವಿಗೆ ಸುರಥನೆಂಬ ಪುತ್ರನಿದ್ದನು. ॥ ೯ ॥ ಸುರಥನಿಗೆ ವಿದೂರಥ, ವಿದೂರಥನಿಗೆ ಸೌರ್ವಭೌಮ, ಸಾರ್ವಭೌಮನಿಗೆ ಜಯಸೇನ, ಜಯಸೇನನಿಗೆ ರಾಧಿಕ, ರಾಧಿಕನಿಗೆ ಅಯುತನೆಂಬ ಪುತ್ರನಾದನು. ॥ ೧೦ ॥ ಅಯುತನಿಗೆ ಕ್ರೋಧನ, ಕ್ರೋಧನನಿಗೆ ದೇವಾತಿಥಿ, ದೇವಾತಿಥಿಗೆ ಋಷ್ಯ, ಋಷ್ಯನಿಗೆ ದಿಲೀಪ, ದಿಲೀಪನಿಗೆ ಪ್ರತೀಪನೆಂಬ ಮಗನಾದನು. ॥ ೧೧ ॥

ದೇವಾಪಿಃ ಶಂತನುಸ್ತಸ್ಯ ಬಾಹ್ಲೀಕ ಇತಿ ಚಾತ್ಮಜಾಃ ।
ಪಿತೃರಾಜ್ಯಂ ಪರಿತ್ಯಜ್ಯ ದೇವಾಪಿಸ್ತು ವನಂ ಗತಃ
॥ ೧೨ ॥

ಅಭವಚ್ಛಂತನೂ ರಾಜಾ ಪ್ರಾಙ್ಮಹಾಭಿಷಸಂಜ್ಞಿತಃ ।
ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಯೌವನಮೇತಿ ಸಃ
॥ ೧೩ ॥

ಶಾಂತಿಮಾಪ್ನೋತಿ ಚೈವಾಗ್ರ್ಯಾಂ ಕರ್ಮಣಾ ತೇನ ಶಂತನುಃ ।
ಸಮಾ ದ್ವಾದಶ ತದ್ರಾಜ್ಯೇ ನ ವವರ್ಷ ಯದಾ ವಿಭುಃ
॥ ೧೪ ॥

ಶಂತನುರ್ಬ್ರಾಹ್ಮಣೈರುಕ್ತಃ ಪರಿವೇತ್ತಾಯಮಗ್ರಭುಕ್ ।
ರಾಜ್ಯಂ ದೇಹ್ಯಗ್ರಜಾಯಾಶು ಪುರರಾಷ್ಟ್ರವಿವೃದ್ಧಯೇ
॥ ೧೫ ॥

ಏವಮುಕ್ತೋ ದ್ವಿಜೈರ್ಜ್ಯೇಷ್ಠಂ ಛಂದಯಾಮಾಸ ಸೋಽಬ್ರವೀತ್ ।
ತನ್ಮಂತ್ರಿಪ್ರಹಿತೈರ್ವಿಪ್ರೈರ್ವೇದಾದ್ ವಿಭ್ರಂಶಿತೋ ಗಿರಾ
॥ ೧೬ ॥

ವೇದವಾದಾತಿವಾದಾನ್ವೈ ತದಾ ದೇವೋ ವವರ್ಷ ಹ ।
ದೇವಾಪಿರ್ಯೋಗಮಾಸ್ಥಾಯ ಕಲಾಪಗ್ರಾಮಮಾಶ್ರಿತಃ
॥ ೧೭ ॥

ಸೋಮವಂಶೇ ಕಲೌ ನಷ್ಟೇ ಕೃತಾದೌ ಸ್ಥಾಪಯಿಷ್ಯತಿ ।
ಬಾಹ್ಲೀಕಾತ್ಸೋಮದತ್ತೋಽಭೂದ್ಭೂರಿರ್ಭೂರಿಶ್ರವಾಸ್ತತಃ
॥ ೧೮ ॥

ಶಲಶ್ಚ ಶಂತನೋರಾಸೀದ್ಗಂಗಾಯಾಂ ಭೀಷ್ಮ ಆತ್ಮವಾನ್ ।
ಸರ್ವಧರ್ಮವಿದಾಂ ಶ್ರೇಷ್ಠೋ ಮಹಾಭಾಗವತಃ ಕವಿಃ
॥ ೧೯ ॥

ಪ್ರತೀಪನಿಗೆ – ದೇವಾಪಿ, ಶಂತನು, ಬಾಹ್ಲೀಕ ಎಂಬ ಮೂವರು ಪುತ್ರರಿದ್ದರು. ದೇವಾಪಿಯು ಪಿತ್ರಾರ್ಜಿತ ರಾಜ್ಯವನ್ನು ಬಿಟ್ಟು ವನಕ್ಕೆ ಹೊರಟು ಹೋದನು. ॥ ೧೨ ॥ ಆದಕ್ಕಾಗಿ ಅವನ ತಮ್ಮನಾದ ಶಂತನು ರಾಜನಾದನು. ಹಿಂದಿನ ಜನ್ಮದಲ್ಲಿ ಶಂತನುವಿನ ಹೆಸರು ಮಹಾಭಿಷನೆಂದಿತ್ತು. ಈ ಜನ್ಮದಲ್ಲಿಯೂ ಅವನು ತನ್ನ ಕೈಯಿಂದ ಸ್ಪರ್ಶಿಸಿದವರು ಮುದುಕರಾಗಿದ್ದವರು ತರುಣರಾಗುತ್ತಿದ್ದರು. ॥ ೧೩ ॥ ಅವನಿಗೆ ಪರಮ ಶಾಂತಿಯು ಲಭಿಸಿತ್ತು. ಈ ಅದ್ಭುತ ಶಕ್ತಿಯಿಂದಲೇ ಅವನು 'ಶಂತನು' ಎಂದು ಖ್ಯಾತನಾದನು. ಒಮ್ಮೆ ಹನ್ನೆರಡು ವರ್ಷಗಳಕಾಲ ಶಂತನುವಿನ ರಾಜ್ಯದಲ್ಲಿ ಇಂದ್ರನು ಮಳೆಗರೆಯಲೇ ಇಲ್ಲ. ಇದರ ಕಾರಣವನ್ನು ಬ್ರಾಹ್ಮಣರನ್ನು ಕರೆದು ಕೇಳಿದನು ; ಬ್ರಾಹ್ಮಣರೆಂದರು – ರಾಜನೇ ! ನೀನು ನಿನ್ನಣ್ಣನಾದ ದೇವಾಪಿಯು ವಿವಾಹವಾಗುವುದಕ್ಕೆ ಮೊದಲೇ ವಿವಾಹವಾದೆ. ಅಗ್ನಿಹೋತ್ರ ಮತ್ತು ರಾಜ್ಯಪದವಿಯನ್ನೂ ಸ್ವೀಕರಿಸಿದೆ. ಆದ್ದರಿಂದ ನೀನು ಪರಿವೇತ್ತಾ* ಆಗಿರುವೆ. ಇದರಿಂದ ನಿನ್ನ ರಾಜ್ಯದಲ್ಲಿ ಮಳೆಯಾಗಲಿಲ್ಲ. ಈಗ ನೀನು ನಿನ್ನ ರಾಜ್ಯದ, ರಾಷ್ಟ್ರದ ಉನ್ನತಿಯನ್ನು ಬಯಸುವೆಯಾದರೆ ಶೀಘ್ರಾತಿಶೀಘ್ರವಾಗಿ ನಿನ್ನಣ್ಣನಿಗೆ ರಾಜ್ಯವನ್ನು ಮರಳಿಸಿಬಿಡು. ॥ ೧೪-೧೫ ॥ ಬ್ರಾಹ್ಮಣರು ಶಂತನುವಿನ ಬಳಿ ಹೀಗೆ ಹೇಳಿದಾಗ ಅವನು ವನಕ್ಕೆ ಹೋಗಿ ತನ್ನಣ್ಣನಲ್ಲಿ ರಾಜ್ಯವನ್ನು ಸ್ವೀಕರಿಸುವಂತೆ ಪ್ರಾರ್ಥಿಸಿದನು. ಆದರೆ ಶಂತನುವಿನ ಮಂತ್ರಿಯಾದ ಆಶ್ಮರಾತನು ಮೊದಲೇ ದೇವಾಪಿಯ ಬಳಿಗೆ ಕೆಲವು ಬ್ರಾಹ್ಮಣರನ್ನು ಕಳಿಸಿ, ವೇದಗಳನ್ನು ದೂಷಿತಗೊಳಿಸುವಂತಹ ವಚನಗಳಿಂದ ದೇವಾಪಿಯನ್ನು ವೇದಮಾರ್ಗದಿಂದ ವಿಚಲಿತಗೊಳಿಸಿದ್ದನು. ಇದರ ಫಲವಾಗಿ ದೇವಾಪಿಯು ವೇದಮಾರ್ಗಕ್ಕನುಸಾರ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಬದಲು ಅದನ್ನು ನಿಂದಿಸತೊಡಗಿದನು. ಇದರಿಂದ ಅವನು ರಾಜ್ಯಾಧಿಕಾರದಿಂದ ವಂಚಿತನಾದನು. ಆಗ ಶಂತನುವಿನ ರಾಜ್ಯದಲ್ಲಿ ಮಳೆಯಾಯಿತು. ದೇವಾಪಿಯು ಈಗಲೂ ಯೋಗಸಾಧನೆಯನ್ನು ಮಾಡುತ್ತಾ ಯೋಗಿಗಳ ಪ್ರಸಿದ್ಧ ನಿವಾಸಸ್ಥಾನವಾದ ಕಲಾಪಗ್ರಾಮದಲ್ಲಿ ಇರುವನು. ॥ ೧೬-೧೭ ॥ ಕಲಿಯುಗದಲ್ಲಿ ಚಂದ್ರವಂಶವು ಅಂತ್ಯವಾದಾಗ ಕೃತಯುಗದ ಪ್ರಾರಂಭದಲ್ಲಿ ಅವನು ಪುನಃ ಚಂದ್ರವಂಶವನ್ನು ಸ್ಥಾಪಿಸುವನು. ಶಂತನುವಿನ ತಮ್ಮ ಬಾಹ್ಲೀಕನಿಗೆ ಸೋಮದತ್ತನೆಂಬ ಪುತ್ರನಾದನು. ಸೋಮದತ್ತನಿಗೆ ಭೂರಿ, ಭೂರಿಶ್ರವಾ ಮತ್ತು ಶಲ ಎಂಬ ಮೂವರು ಪುತ್ರರಾದರು. ಶಂತನುವಿನಿಂದ ಗಂಗಾದೇವಿಯ ಗರ್ಭದಿಂದ ನೈಷ್ಠಿಕ ಬ್ರಹ್ಮಚಾರೀ ಭೀಷ್ಮನ ಜನ್ಮವಾಯಿತು. ಅವನು ಸಮಸ್ತ ಧರ್ಮಜ್ಞರ ಶಿರೋಮಣಿಯಾಗಿದ್ದನು. ಭಗವಂತನ ಪರಮಪ್ರೇಮೀ ಭಕ್ತನು ಮತ್ತು ಪರಮ ಜ್ಞಾನಿಯಾಗಿದ್ದನು. ॥ ೧೮-೧೯ ॥

* ದಾರಾಗ್ನಿಹೋತ್ರಸಂಯೋಗಂ ಕುರುತೇ ಯೋಽಗ್ರಜೇ ಸ್ಥಿತೇ । ಪರಿವೇತ್ತಾ ಸ ವಿಜ್ಞೇಯಃ ಪರಿವಿತ್ತಿಸ್ತು ಪೂರ್ವಜಃ ॥
ಅಣ್ಣನಿಗಿಂತಲೂ ಮೊದಲು ಮದುವೆಯಾಗಿ ಅಗ್ನಿಹೋತ್ರವನ್ನು ನಡೆಸುವ ತಮ್ಮನು ಪರಿವೇತ್ತನೆಂದೂ ಅವನ ಅಣ್ಣನು 'ಪರಿವಿತ್ತಿ' ಎಂದು ಕರೆಯಲ್ಪಡುತ್ತಾರೆ.

ವೀರಯೂಥಾಗ್ರಣೀರ್ಯೇನ ರಾಮೋಽಪಿ ಯುಧಿ ತೋಷಿತಃ ।
ಶಂತನೋರ್ದಾಶಕನ್ಯಾಯಾಂ ಜಜ್ಞೇ ಚಿತ್ರಾಂಗದಃ ಸುತಃ
॥ ೨೦ ॥

ವಿಚಿತ್ರ ವೀರ್ಯಶ್ಚಾವರಜೋ ನಾಮ್ನಾ ಚಿತ್ರಾಂಗದೋ ಹತಃ ।
ಯಸ್ಯಾಂ ಪರಾಶರಾತ್ಸಾಕ್ಷಾದವತೀರ್ಣೋ ಹರೇಃ ಕಲಾ
॥ ೨೧ ॥

ವೇದಗುಪ್ತೋ ಮುನಿಃ ಕೃಷ್ಣೋ ಯತೋಽಹಮಿದಮಧ್ಯಗಾಮ್ ।
ಹಿತ್ವಾ ಸ್ವಶಿಷ್ಯಾನ್ಪೈಲಾದೀನ್ಭಗವಾನ್ಬಾದರಾಯಣಃ
॥ ೨೨ ॥

ಮಹ್ಯಂ ಪುತ್ರಾಯ ಶಾಂತಾಯ ಪರಂ ಗುಹ್ಯಮಿದಂ ಜಗೌ ।
ವಿಚಿತ್ರವೀರ್ಯೋಽಥೋವಾಹ ಕಾಶಿರಾಜಸುತೇ ಬಲಾತ್
॥ ೨೩ ॥

ಸ್ವಯಂವರಾದುಪಾನೀತೇ ಅಂಬಿಕಾಂಬಾಲಿಕೇ ಉಭೇ ।
ತಯೋರಾಸಕ್ತಹೃದಯೋ ಗೃಹೀತೋ ಯಕ್ಷ್ಮಣಾ ಮೃತಃ
॥ ೨೪ ॥

ಕ್ಷೇತ್ರೇಽಪ್ರಜಸ್ಯ ವೈ ಭ್ರಾತುರ್ಮಾತ್ರೋಕ್ತೋ ಬಾದರಾಯಣಃ ।
ಧೃತರಾಷ್ಟ್ರಂ ಚ ಪಾಂಡುಂ ಚ ವಿದುರಂ ಚಾಪ್ಯಜೀಜನತ್
॥ ೨೫ ॥

ಗಾಂಧಾರ್ಯಾಂ ಧೃತರಾಷ್ಟ್ರಸ್ಯ ಜಜ್ಞೇ ಪುತ್ರಶತಂ ನೃಪ ।
ತತ್ರ ದುರ್ಯೋಧನೋ ಜ್ಯೇಷ್ಠೋ ದುಃಶಲಾ ಚಾಪಿ ಕನ್ಯಕಾ
॥ ೨೬ ॥

ಶಾಪಾನ್ನೈಷ್ಫಲ್ಯಮುದ್ದಿಶ್ಯ ಪಾಂಡೋಃ ಕುಂತ್ಯಾಂ ಮಹಾರಥಾಃ ।
ಜಾತಾ ಧರ್ಮಾನಿಲೇಂದ್ರೇಭ್ಯೋ ಯುಧಿಷ್ಠಿರಮುಖಾಸ್ತ್ರಯಃ
॥ ೨೭ ॥

ಅವನು ಜಗತ್ತಿನ ಸಮಸ್ತ ವೀರರಲ್ಲಿ ಅಗ್ರಗಣ್ಯನಾಗಿದ್ದನು. ಬೇರೆಯ ಮಾತೇನು? ಅವನು ತನ್ನ ಗುರುಗಳಾದ ಭಗವಾನ್ ಪರಶುರಾಮನನ್ನೂ ಕೂಡ ಯುದ್ಧದಲ್ಲಿ ಸಂತುಷ್ಟಿಗೊಳಿಸಿದ್ದನು. ಶಂತನುವು ದಾಶರಾಜನ ಮಗಳ* ಗರ್ಭದಿಂದ ಚಿತ್ರಾಂಗದ ಮತ್ತು ವಿಚಿತ್ರವೀರ್ಯರೆಂಬ ಈರ್ವರು ಪುತ್ರರನ್ನು ಪಡೆದನು. ಚಿತ್ರಾಂಗದನನ್ನು ಚಿತ್ರಾಂಗದನೆಂಬ ಗಂಧರ್ವನು ಕೊಂದು ಹಾಕಿದನು. ಇದೇ ದಾಶರಾಜನ ಕನ್ಯೆಯಾದ ಸತ್ಯವತಿಯಿಂದ ಪರಾಶರರ ಮೂಲಕ ನನ್ನ ತಂದೆಯಾದ ಭಗವಂತನ ಕಲಾವತಾರವಾಗಿದ್ದ ಸ್ವಯಂ ಭಗವಂತನು ಶ್ರೀಕೃಷ್ಣದ್ವೈಪಾಯನರಾದ ವೇದವ್ಯಾಸರು ಅವತರಿಸಿದರು. ಅವರು ವೇದಗಳನ್ನು ವಿಭಾಗಮಾಡಿ ರಕ್ಷಿಸಿದರು. ಪರೀಕ್ಷಿತನೇ! ನಾನು ಅವರಿಂದಲೇ ಈ ಶ್ರೀಮದ್ಭಾಗವತ ಮಹಾಪುರಾಣವನ್ನು ಅಧ್ಯಯನ ಮಾಡಿದೆನು. ಈ ಪುರಾಣವು ಪರಮ ಗೋಪ್ಯವೂ, ಅತ್ಯಂತ ರಹಸ್ಯಮಯವೂ ಆಗಿದೆ. ಇದರಿಂದ ನನ್ನ ತಂದೆಯಾದ ಭಗವಾನ್ ವ್ಯಾಸರು ತಮ್ಮ ಪೈಲರೇ ಮೊದಲಾದ ಶಿಷ್ಯರಿಗೆ ಉಪದೇಶಿಸಲಿಲ್ಲ. ನನ್ನನ್ನೇ ಯೋಗ್ಯ ಅಧಿಕಾರಿಯೆಂದರಿತು ನನಗೆ ಉಪದೇಶಿಸಿದರು. ನಾನು ಅವರ ಪುತ್ರನೇ ಆಗಿದ್ದೆನಲ್ಲ! ಅಲ್ಲದೆ ಶಾಂತಿ ಮುಂತಾದ ಸದ್ಗುಣಗಳು ನನ್ನಲ್ಲಿ ವಿಶೇಷವಾಗಿದ್ದುವು. ಶಂತನುವಿನ ಎರಡನೇ ಮಗನಾದ ವಿಚಿತ್ರವೀರ್ಯನು ಕಾಶಿರಾಜನ ಕನ್ಯೆಯರಾದ ಅಂಬಿಕಾ ಮತ್ತು ಅಂಬಾಲಿಕೆಯನ್ನು ವಿವಾಹವಾದನು. ಅವರಿಬ್ಬರನ್ನೂ ಸ್ವಯಂವರದಲ್ಲಿ ಭೀಷ್ಮರು ಬಲವಂತವಾಗಿ ಗೆದ್ದು ತಂದಿದ್ದರು. ವಿಚಿತ್ರವೀರ್ಯನು ತನ್ನ ಇಬ್ಬರೂ ಪತ್ನಿಯರಲ್ಲಿ ಅತೀವ ಆಸಕ್ತನಾದನು. ಇದರಿಂದ ಅವನು ರಾಜಯಕ್ಷ್ಮಾ (ಕ್ಷಯರೋಗ) ರೋಗಕ್ಕೆ ತುತ್ತಾಗಿ ಅದರಿಂದಲೇ ಮೃತಿಯನ್ನೈದಿದನು. ॥ ೨೦-೨೪ ॥ ತಾಯಿಯಾದ ಸತ್ಯವತಿಯ ನಿರ್ದೇಶನದಂತೆ ಭಗವಾನ್ ವ್ಯಾಸರು ಸಂತಾನಹೀನೆಯರಾಗಿದ್ದ ತನ್ನ ತಮ್ಮನ ಭಾರ್ಯೆಯರಿಗೆ ಧೃತರಾಷ್ಟ್ರ ಮತ್ತು ಪಾಂಡು ಎಂಬ ಇಬ್ಬರು ಪುತ್ರರನ್ನು ಅನುಗ್ರಹಿಸಿದರು. ಅವರ ದಾಸಿಯವರಲ್ಲಿ ವೇದವ್ಯಾಸರ ಅನುಗ್ರಹದಿಂದ ವಿದುರನು ಜನಿಸಿದನು. ॥ ೨೫ ॥

ಪರೀಕ್ಷಿತನೇ! ಧೃತರಾಷ್ಟ್ರನಿಗೆ ಗಾಂಧಾರಿ ಎಂಬ ಪತ್ನಿಯಲ್ಲಿ ನೂರು ಮಕ್ಕಳಾದರು. ಅವರಲ್ಲಿ ಹಿರಿಯವನೇ ದುರ್ಯೋಧನ. ದುಃಶಲಾ ಎಂದ ಕಿರಿಯ ಕನ್ಯೆಯೂ ಇದ್ದಳು. ॥ ೨೬ ॥ ಪಾಂಡುವಿಗೆ ಕುಂತಿ ಎಂಬ ಪತ್ನಿಯಿದ್ದಳು. ಶಾಪವಶದಿಂದಾಗಿ ಪಾಂಡುವು ಸ್ತ್ರೀಸಹವಾಸವನ್ನು ಮಾಡಲಾಗಲಿಲ್ಲ. ಅದರಿಂದ ಅವನ ಪತ್ನೀ ಕುಂತಿಯ ಗರ್ಭದಿಂದ ಧರ್ಮ, ವಾಯು, ಇಂದ್ರ ಇವರ ಮೂಲಕ ಕ್ರಮವಾಗಿ ಯುಧಿಷ್ಠಿರ, ಭೀಮ, ಅರ್ಜುನ ಎಂಬ ಮೂವರು ಪುತ್ರರು ಉದಿಸಿದರು. ಇವರು ಮೂವರೂ ಮಹಾರಥಿಗಳಾಗಿದ್ದರು. ॥ ೨೭ ॥

* ಈ ಕನ್ಯೆಯು ನಿಜವಾಗಿ ಉಪಚರವಸುವಿನ ವೀರ್ಯದಿಂದ ಮೀನಿನ ಹೊಟ್ಟೆಯಲ್ಲಿ ಹುಟ್ಟಿದವಳು. ಆದರೆ ದಾಶ (ಬೆಸ್ತ)ರಿಂದ ಸಾಕಲ್ಪಟ್ಟಿದ್ದರಿಂದ ಅವಳು ದಾಶರಾಜಕನ್ಯೆಯೆನಿಸಿದಳು.

ನಕುಲಃ ಸಹದೇವಶ್ಚ ಮಾದ್ರ್ಯಾಂ ನಾಸತ್ಯದಸ್ರಯೋಃ ।
ದ್ರೌಪದ್ಯಾಂ ಪಂಚ ಪಂಚಭ್ಯಃ ಪುತ್ರಾಸ್ತೇ ಪಿತರೋಽಭವನ್
॥ ೨೮ ॥

ಯುಧಿಷ್ಠಿರಾತ್ಪ್ರತಿವಿಂಧ್ಯಃ ಶ್ರುತಸೇನೋ ವೃಕೋದರಾತ್ ।
ಅರ್ಜುನಾಚ್ಛ್ರುತಕೀರ್ತಿಸ್ತು ಶತಾನೀಕಸ್ತು ನಾಕುಲಿಃ
॥ ೨೯ ॥

ಸಹದೇವಸುತೋ ರಾಜನ್ ಶ್ರುತಕರ್ಮಾ ತಥಾಪರೇ ।
ಯುಧಿಷ್ಠಿರಾತ್ತು ಪೌರವ್ಯಾಂ ದೇವಕೋಽಥ ಘಟೋತ್ಕಚಃ
॥ ೩೦ ॥

ಭೀಮಸೇನಾದ್ಧಿಡಿಂಬಾಯಾಂ ಕಾಲ್ಯಾಂ ಸರ್ವಗತಸ್ತತಃ ।
ಸಹದೇವಾತ್ಸುಹೋತ್ರಂ ತು ವಿಜಯಾಸೂತ ಪಾರ್ವತೀ
॥ ೩೧ ॥

ಕರೇಣುಮತ್ಯಾಂ ನಕುಲೋ ನಿರಮಿತ್ರಂ ತಥಾರ್ಜುನಃ ।
ಇರಾವಂತಮುಲೂಪ್ಯಾಂ ವೈ ಸುತಾಯಾಂ ಬಭ್ರುವಾಹನಮ್ ।
ಮಣಿಪೂರಪತೇಃ ಸೋಽಪಿ ತತ್ಪುತ್ರಃ ಪುತ್ರಿಕಾಸುತಃ
॥ ೩೨ ॥

ತವ ತಾತಃ ಸುಭದ್ರಾಯಾಮಭಿಮನ್ಯುರಜಾಯತ ।
ಸರ್ವಾತಿರಥಜಿದ್ವೀರ ಉತ್ತರಾಯಾಂ ತತೋ ಭವಾನ್
॥ ೩೩ ॥

ಪರಿಕ್ಷೀಣೇಷು ಕುರುಷು ದ್ರೌಣೇರ್ಬ್ರಹ್ಮಾಸ್ತ್ರ ತೇಜಸಾ ।
ತ್ವಂ ಚ ಕೃಷ್ಣಾನುಭಾವೇನ ಸಜೀವೋ ಮೋಚಿತೋಽಂತಕಾತ್
॥ ೩೪ ॥

ತವೇಮೇ ತನಯಾಸ್ತಾತ ಜನಮೇಜಯಪೂರ್ವಕಾಃ ।
ಶ್ರುತಸೇನೋ ಭೀಮಸೇನ ಉಗ್ರಸೇನಶ್ಚ ವೀರ್ಯವಾನ್
॥ ೩೫ ॥

ಜನಮೇಜಯಸ್ತ್ವಾಜ್ಞಾಯ ವಿದಿತ್ವಾ ತಕ್ಷಕಾನ್ನಿಧನಂ ಗತಮ್ ।
ಸರ್ಪಾನ್ಸೈ ಸರ್ಪಯಾಗಾಗ್ನೌ ಸ ಹೋಷ್ಯತಿ ರುಷಾನ್ವಿತಃ
॥ ೩೬ ॥

ಕಾವಷೇಯಂ ಪುರೋಧಾಯ ತುರಂ ತುರಗಮೇಧಯಾಟ್ ।
ಸಮಂತಾತ್ಪೃಥಿವೀಂ ಸರ್ವಾಂ ಜಿತ್ವಾ ಯಕ್ಷ್ಯತಿ ಚಾಧ್ವರೈಃ
॥ ೩೭ ॥

ತಸ್ಯ ಪುತ್ರಃ ಶತಾನೀಕೋ ಯಾಜ್ಞವಲ್ಕ್ಯಾತ್ತ್ರಯೀಂ ಪಠನ್ ।
ಅಸ್ತ್ರಜ್ಞಾನಂ ಕ್ರಿಯಾಜ್ಞಾನಂ ಶೌನಕಾತ್ಪರಮೇಷ್ಯತಿ
॥ ೩೮ ॥

ಪಾಂಡುವಿನ ಇನ್ನೋರ್ವ ಪತ್ನಿಯ ಹೆಸರು ಮಾದ್ರಿಯೆಂದಿತ್ತು. ಅವಳಲ್ಲಿ ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ-ಸಹದೇವರೆಂಬ ಯಮಳರು ಹುಟ್ಟಿದರು. ಪರೀಕ್ಷಿತನೇ! ಈ ಪಂಚಪಾಂಡವರ ಪತ್ನಿಯಾದ ದ್ರೌಪದಿಯಲ್ಲಿ ನಿನ್ನ ಐವರು ಚಿಕ್ಕಪ್ಪಂದಿರು ಜನಿಸಿದರು. ॥ ೨೮ ॥ ಇವರಲ್ಲಿ ಯುಧಿಷ್ಠಿರನಿಂದ ಪ್ರತಿವಿಂಧ್ಯ, ಭೀಮಸೇನನಿಂದ ಶ್ರುತಸೇನ, ಅರ್ಜುನನಿಂದ ಶ್ರುತಕೀರ್ತಿ, ನಕುಲನಿಂದ ಶತಾನೀಕ, ಸಹದೇವನಿಂದ ಶ್ರುತಕರ್ಮಾ ಎಂಬುವರು ಹುಟ್ಟಿದರು. ಇವರುಗಳಲ್ಲದೆ ಯುಧಿಷ್ಠಿರನ ಪೌರವೀ ಎಂಬ ಪತ್ನಿಯಿಂದ ದೇವಕನೂ, ಭೀಮಸೇನನ ಪತ್ನಿ ಹಿಡಿಂಬೆಯಿಂದ ಘಟೋತ್ಕಚ ಮತ್ತು ಕಾಲಿ ಎಂಬುವಳಲ್ಲಿ ಸರ್ವಗತನೆಂಬ ಮಗನೂ ಹುಟ್ಟಿದರು. ಸಹದೇವನ ಪರ್ವತಕುಮಾರಿ ವಿಜಯಾಳಿಂದ ಸುಹೋತ್ರನೂ, ನಕುಲನ ಕರೇಣುಮತಿಯಿಂದ ನರಮಿತ್ರರೆಂಬ ಪುತ್ರರಾದರು. ಅರ್ಜುನನಿಂದ ನಾಗಕನ್ಯೆ ಊಲೂಪಿಯ ಗರ್ಭದಲ್ಲಿ ಇರಾವಂತ ಮತ್ತು ಮಣಿಪುರದ ರಾಜನ ಮಗಳಾದ ಚಿತ್ರಾಂಗದೆಯಿಂದ ಬಭ್ರುವಾಹನನು ಹುಟ್ಟಿದನು. ಆದರೆ ಹಿಂದೆ ಮಾಡಿಕೊಂಡಿದ್ದ ಒಪ್ಪಂದದಂತೆ ಬಭ್ರುವಾಹನನು ಪುತ್ರಿಕಾ ಸುತನಾಗಿ ಅವನ ಅಜ್ಜನಿಗೇ ಮಗನಾದನು. ॥ ೨೯-೩೨ ॥ ಅರ್ಜುನನಿಗೆ ಸುಭದ್ರೆ ಎಂಬ ಪತ್ನಿಯಲ್ಲಿ ನಿನ್ನ ತಂದೆಯಾದ ಅಭಿಮನ್ಯುವಿನ ಜನ್ಮವಾಯಿತು. ವೀರಅಭಿಮನ್ಯುವು ಎಲ್ಲ ಅತಿರಥಿಯರನ್ನೂ ಗೆದ್ದುಕೊಂಡಿದ್ದನು. ಅಭಿಮನ್ಯುವಿನ ಮೂಲಕ ಉತ್ತರೆಯ ಗರ್ಭದಲ್ಲಿ ನಿನ್ನ ಜನ್ಮವಾಗಿದೆ. ॥ ೩೩ ॥ ಪರೀಕ್ಷಿತನೇ! ಆ ಸಮಯದಲ್ಲಿ ಕುರುವಂಶವು ನಾಶವಾಗಿಹೋಗಿತ್ತು. ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ನೀನು ಸುಟ್ಟುಹೋಗಿದ್ದೆ, ಆದರೆ ಭಗವಾನ್ ಶ್ರೀಕೃಷ್ಣನು ತನ್ನ ಪ್ರಭಾವದಿಂದ ನಿನ್ನನ್ನು ಆ ಮೃತ್ಯುವಿನಿಂದ ಕಾಪಾಡಿ ಬದುಕಿಸಿದನು. ॥ ೩೪ ॥

ಪರೀಕ್ಷಿತನೇ! ನಿನ್ನ ಪುತ್ರರಾದ ಜನಮೇಜಯ, ಶ್ರುತಸೇನ, ಭೀಮಸೇನ ಮತ್ತು ಉಗ್ರಸೇನರು ನಿನ್ನ ಮುಂದೆಯೇ ಕುಳಿತಿದ್ದಾರೆ. ಇವರೆಲ್ಲರೂ ಮಹಾ ಪರಾಕ್ರಮಿಗಳಾಗಿದ್ದಾರೆಂಬುದು ನಿನಗೆ ತಿಳಿದೇ ಇದೆ. ॥ ೩೫ ॥ ತಕ್ಷಕನು ಕಚ್ಚಿದೊಡನೆ ನಿನ್ನ ಮೃತ್ಯುವಾದಾಗ ಇದನ್ನು ತಿಳಿದ ಜನಮೇಜಯನು ಬಹಳ ಸಿಟ್ಟುಗೊಂಡು, ಸರ್ಪಯಾಗದಿಂದ ಎಲ್ಲ ಸರ್ಪಗಳನ್ನು ಯಜ್ಞೇಶ್ವರನಿಗೆ ಆಹುತಿಯಾಗಿಸುವನು. ॥ ೩೬ ॥ ಕಾವಷೇಯನ ಪುತ್ರನಾದ ತುರನೆಂಬುವನನ್ನು ಪುರೋಹಿತನನ್ನಾಗಿಸಿಕೊಂಡು ಜನಮೇಜಯನು ಅಶ್ವಮೇಧ ಯಜ್ಞವನ್ನು ಮಾಡುವನು ಮತ್ತು ಎಲ್ಲ ದಿಕ್ಕುಗಳಲ್ಲಿ ಪೃಥಿವಿಯನ್ನು ಜಯಿಸಿ ಯಜ್ಞಗಳ ಮೂಲಕ ಭಗವಂತನನ್ನು ಆರಾಧಿಸುವನು. ॥ ೩೭ ॥ ಜನಮೇಜಯನಿಗೆ ಶತಾನೀಕನೆಂಬ ಪುತ್ರನು ಹುಟ್ಟುವನು. ಅವನು ಯಾಜ್ಞವಲ್ಕ್ಯರಿಂದ ಮೂರು ವೇದಗಳನ್ನು ಮತ್ತು ಕರ್ಮಕಾಂಡವನ್ನು ಕಲಿತು, ಕೃಪಾಚಾರ್ಯರಿಂದ ಅಸ್ತ್ರವಿದ್ಯೆಯನ್ನು ಪಡೆದುಕೊಳ್ಳುವನು. ಶೌನಕರಿಂದ ಆತ್ಮಜ್ಞಾನವನ್ನು ಸಂಪಾದಿಸಿ ಪರಮಾತ್ಮನನ್ನು ಹೊಂದುವನು. ॥ ೩೮ ॥

ಸಹಸ್ರಾನೀಕಸ್ತತ್ಪುತ್ರಸ್ತತಶ್ಚೈವಾಶ್ವಮೇಧಜಃ ।
ಅಸೀಮಕೃಷ್ಣಸ್ತಸ್ಯಾಪಿ ನೇಮಿಚಕ್ರಸ್ತು ತತ್ಸುತಃ
॥ ೩೯ ॥

ಗಜಾಹ್ವಯೇ ಹೃತೇ ನದ್ಯಾ ಕೌಶಾಂಬ್ಯಾಂ ಸಾಧು ವತ್ಸ್ಯತಿ ।
ಉಕ್ತಸ್ತತಶ್ಚಿತ್ರರಥಸ್ತಸ್ಮಾತ್ಕವಿರಥಃ ಸುತಃ
॥ ೪೦ ॥

ತಸ್ಮಾಚ್ಚ ವೃಷ್ಟಿಮಾಂಸ್ತಸ್ಯ ಸುಷೇಣೋಽಥ ಮಹೀಪತಿಃ ।
ಸುನೀಥಸ್ತಸ್ಯ ಭವಿತಾ ನೃಚಕ್ಷುರ್ಯತ್ಸುಖೀನಲಃ
॥ ೪೧ ॥

ಪರಿಪ್ಲವಃ ಸುತಸ್ತಸ್ಮಾನ್ಮೇಧಾವೀ ಸುನಯಾತ್ಮಜಃ ।
ನೃಪಞ್ಜಯಸ್ತತೋ ದೂರ್ವಸ್ತಿಮಿಸ್ತಸ್ಮಾಜ್ಜನಿಷ್ಯತಿ
॥ ೪೨ ॥

ತಿಮೇರ್ಬೃಹದ್ರಥಸ್ತಸ್ಮಾಚ್ಛತಾನೀಕಃ ಸುದಾಸಜಃ ।
ಶತಾನೀಕಾದ್ದುರ್ದಮನಸ್ತಸ್ಯಾಪತ್ಯಂ ವಹೀನರಃ
॥ ೪೩ ॥

ದಂಡಪಾಣಿರ್ನಿಮಿಸ್ತಸ್ಯ ಕ್ಷೇಮಕೋ ಭವಿತಾ ನೃಪಃ ।
ಬ್ರಹ್ಮಕ್ಷತ್ರಸ್ಯ ವೈ ಪ್ರೋಕ್ತೋ ವಂಶೋ ದೇವರ್ಷಿಸತ್ಕೃತಃ
॥ ೪೪ ॥

ಕ್ಷೇಮಕಂ ಪ್ರಾಪ್ಯ ರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ ।
ಅಥ ಮಾಗಧರಾಜಾನೋ ಭವಿತಾರೋ ವದಾಮಿ ತೇ
॥ ೪೫ ॥

ಭವಿತಾ ಸಹದೇವಸ್ಯ ಮಾರ್ಜಾರಿರ್ಯಚ್ಛ್ರುತಶ್ರವಾಃ ।
ತತೋಽಯುತಾಯುಸ್ತಸ್ಯಾಪಿ ನಿರಮಿತ್ರೋಽಥ ತತ್ಸುತಃ
॥ ೪೬ ॥

ಸುನಕ್ಷತ್ರಃ ಸುನಕ್ಷತ್ರಾದ್ಬೃಹತ್ಸೇನೋಽಥ ಕರ್ಮಜಿತ್ ।
ತತಃ ಸೃತಞ್ಜಯಾದ್ವಿಪ್ರಃ ಶುಚಿಸ್ತಸ್ಯ ಭವಿಷ್ಯತಿ
॥ ೪೭ ॥

ಕ್ಷೇಮೋಽಥ ಸುವ್ರತಸ್ತಸ್ಮಾದ್ಧರ್ಮಸೂತ್ರಃ ಶಮಸ್ತತಃ ।
ದ್ಯುಮತ್ಸೇನೋಽಥ ಸುಮತಿಃ ಸುಬಲೋ ಜನಿತಾ ತತಃ
॥ ೪೮ ॥

ಸುನೀಥಃ ಸತ್ಯಜಿದಥ ವಿಶ್ವಜಿದ್ ಯದ್ ರಿಪುಂಜಯಃ ।
ಬಾರ್ಹದ್ರಥಾಶ್ಚ ಭೂಪಾಲಾ ಭಾವ್ಯಾಃ ಸಾಹಸ್ರಮತ್ಸರಮ್
॥ ೪೯ ॥

ಶತಾನೀಕನಿಗೆ ಸಹಸ್ರಾನೀಕ, ಸಹಸ್ರಾನೀಕನಿಗೆ ಅಶ್ವಮೇಧಜ, ಅಶ್ವಮೇಧಜನಿಗೆ ಅಸೀಮಕೃಷ್ಣ ಮತ್ತು ಅಸೀಮಕೃಷ್ಣನಿಗೆ ನೇಮಿಚಕ್ರ ಪುತ್ರನು ಹುಟುವನು. ॥ ೩೯ ॥ ಹಸ್ತಿನಾಪುರವು ಗಂಗೆಯಲ್ಲಿ ಕೊಚ್ಚಿಕೊಂಡು ಹೋದಾಗ ನೇಮಿಯು ಕೌಶಾಂಬಿ ಪುರದಲ್ಲಿ ಸುಖವಾಗಿ ನೆಲೆಸುವನು. ನೇಮಿಗೆ ಚಿತ್ರರಥ ಪುತ್ರನಾಗುವನು. ಚಿತ್ರರಥನಿಗೆ ಕವಿರಥ, ಕವಿರಥನಿಗೆ ವೃಷ್ಟಿಮಾನ್, ವೃಷ್ಟಿಮಂತನಿಗೆ ಸುಷೇಣ, ಸುಷೇಣನಿಗೆ ಸುನೀಥ, ಸುನೀಥನಿಗೆ ನೃಚಕ್ಷು, ನೃಚಕ್ಷುವಿಗೆ ಸುಖೀನಲ, ಸುಖೀನಲನಿಗೆ ಪರಿಪ್ಲವ, ಪರೀಪ್ಲವನಿಗೆ ಸುನಯ, ಸುನಯನಿಗೆ ಮೇಧಾವೀ, ಮೇಧಾವಿಗೆ ನೃಪಂಜಯ, ನೃಪಂಜಯನಿಗೆ ದೂರ್ವ, ದೂರ್ವನಿಗೆ ತಿಮಿ ಎಂಬ ಪುತ್ರನು ಉದಿಸುವನು. ॥ ೪೦-೪೨ ॥ ತಿಮಿಯಿಂದ ಬೃಹದ್ರಥನು, ಬೃಹದ್ರಥನಿಗೆ ಸುದಾಸ, ಸುದಾಸನಿಗೆ ಶತಾನೀಕ, ಶತಾನೀಕನಿಗೆ ದುರ್ದಮನ, ದುರ್ದಮನನಿಗೆ ವಹೀನರ, ವಹೀನರನಿಗೆ ದಂಡಪಾಣಿ, ದಂಡಪಾಣಿಗೆ ನಿಮಿ ಮತ್ತು ನಿಮಿಗೆ ರಾಜಾಕ್ಷೇಮಕನ ಜನ್ಮವಾಗುವುದು. ಹೀಗೆ ನಾನು ನಿನಗೆ ಬ್ರಾಹ್ಮಣರು ಮತ್ತು ಕ್ಷತ್ರಿಯರ ಉತ್ಪತ್ತಿಸ್ಥಾನವಾದ ಚಂದ್ರವಂಶವನ್ನು ವರ್ಣಿಸಿ ಹೇಳಿರುವೆನು. ಮಹಾ-ಮಹಾ ದೇವತೆಗಳೂ, ಋಷಿಗಳೂ ಈ ವಂಶವನ್ನು ಸತ್ಕರಿಸುವರು. ॥ ೪೩-೪೪ ॥ ಈ ವಂಶವು ಕಲಿಯುಗದಲ್ಲಿ ಕ್ಷೇಮಕನೊಂದಿಗೆ ಸಮಾಪ್ತವಾಗುವುದು. ಈಗ ನಾನು ಭವಿಷ್ಯದಲ್ಲಾಗುವ ಮಗಧ ದೇಶದ ರಾಜರನ್ನು ವರ್ಣಿಸುವೆನು ಕೇಳು. ॥ ೪೫ ॥

ಜರಾಸಂಧನಮಗನಾದ ಸಹದೇವನಿಗೆ ಮಾರ್ಜಾರಿ, ಮಾರ್ಜಾರಿಯಿಂದ ಶ್ರುತಶ್ರವಾ, ಶ್ರುತಶ್ರವಸನಿಂದ ಅಯುತಾಯು,ಅಯುತಾಯುವಿನಿಂದ ನಿರಮಿತ್ರನೆಂಬ ಪುತ್ರನಾಗುವನು. ॥ ೪೬॥ ನಿರಮಿತ್ರನಿಂದ ಸುನಕ್ಷತ್ರ, ಸುನಕ್ಷತ್ರನಿಂದ ಬೃಹತ್ಸೇನ, ಬೃಹತ್ಸೇನನಿಂದ ಕರ್ಮಜಿತ್, ಕರ್ಮಜಿತ್ತುವಿನಿಂದ ಸೃತಂಜಯ, ಸೃತಂಜಯನಿಂದ ವಿಪ್ರ, ವಿಪ್ರನಿಂದ ಶುಚಿ ಎಂಬ ಪುತ್ರನಾಗುವನು. ॥ ೪೭ ॥ ಶುಚಿಗೆ ಕ್ಷೇಮ, ಕ್ಷೇಮನಿಗೆ ಸುವ್ರತ, ಸುವ್ರತನಿಗೆ ಧರ್ಮಸೂತ್ರ, ಧರ್ಮ ಸೂತ್ರನಿಗೆ ಶಮ, ಶಮನಿಗೆ ದ್ಯುಮತ್ಸೇನ, ದ್ಯುಮತ್ಸೇನನಿಗೆ ಸುಮತಿ, ಸುಮತಿಗೆ ಸುಬಲನು ಹುಟ್ಟುವನು. ॥ ೪೮ ॥ ಸುಬಲನಿಗೆ ಸುನೀಥ, ಸುನೀಥನಿಗೆ ಸತ್ಯಜಿತ್, ಸತ್ಯಜಿತ್ತುವಿಗೆ ವಿಶ್ವಜಿತ್, ವಿಶ್ವ ಜಿತ್ತುವಿಗೆ ರಿಪುಂಜಯ ಪುತ್ರನು ಹುಟ್ಟುವನು. ಇವರೆಲ್ಲರೂ ಬೃಹದ್ರಥವಂಶದ ರಾಜರಾಗುವರು. ಇವರ ಶಾಸನಕಾಲವು ಒಂದು ಸಾವಿರವರ್ಷಗಳು ಮಾತ್ರ ಇರುವುದು. ॥ ೪೯ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಅನು, ದ್ರುಹ್ಯು, ತುರ್ವಸು ಮತ್ತು ಯದು ಇವರ ವಂಶದ ವರ್ಣನೆ

ಶ್ರೀಶುಕ ಉವಾಚ

ಅನೋಃ ಸಭಾನರಶ್ಚಕ್ಷುಃ ಪರೋಕ್ಷಶ್ಚ ತ್ರಯಃ ಸುತಾಃ ।
ಸಭಾನರಾತ್ಕಾಲನರಃ ಸೃಞ್ಜಯಸ್ತತ್ಸುತಸ್ತತಃ ॥ ೧ ॥

ಜನಮೇಜಯಸ್ತಸ್ಯ ಪುತ್ರೋ ಮಹಾಶೀಲೋ ಮಹಾಮನಾಃ ।
ಉಶೀನರಸ್ತಿತಿಕ್ಷುಶ್ಚ ಮಹಾಮನಸ ಆತ್ಮಜೌ ॥ ೨ ॥

ಶಿಬಿರ್ವನಃ ಶಮಿರ್ದಕ್ಷಶ್ಚತ್ವಾರೋಶೀನರಾತ್ಮಜಾಃ ।
ವೃಷಾದರ್ಭಃ ಸುವೀರಶ್ಚ ಮದ್ರಃ ಕೈಕೇಯ ಆತ್ಮಜಾಃ ॥ ೩ ॥

ಶಿಬೇಶ್ಚತ್ವಾರ ಏವಾಸಂಸ್ತಿತಿಕ್ಷೋಶ್ಚ ರುಷದ್ರಥಃ ।
ತತೋ ಹೇಮೋಽಥ ಸುತಪಾ ಬಲಿಃ ಸುತಪಸೋಽಭವತ್ ॥ ೪ ॥

ಅಂಗವಂಗಕಲಿಂಗಾದ್ಯಾಃ ಸುಹ್ಮಪುಂಡ್ರಾಂಧ್ರಸಂಜ್ಞಿತಾಃ ।
ಜಜ್ಞಿರೇ ದೀರ್ಘತಮಸೋ ಬಲೇಃ ಕ್ಷೇತ್ರೇ ಮಹೀಕ್ಷಿತಃ ॥ ೫ ॥

ಚಕ್ರುಃ ಸ್ವನಾಮ್ನಾ ವಿಷಯಾನ್ಷಡಿಮಾನ್ಪ್ರಾಚ್ಯಕಾಂಶ್ಚ ತೇ ।
ಖನಪಾನೋಽಂಗತೋ ಜಜ್ಞೇ ತಸ್ಮಾದ್ದಿವಿರಥಸ್ತತಃ ॥ ೬ ॥

ಸುತೋ ಧರ್ಮರಥೋ ಯಸ್ಯ ಜಜ್ಞೇ ಚಿತ್ರರಥೋಽಪ್ರಜಾಃ ।
ರೋಮಪಾದ ಇತಿ ಖ್ಯಾತಸ್ತಸ್ಮೈ ದಶರಥಃ ಸಖಾ ॥ ೭ ॥

ಶಾಂತಾಂ ಸ್ವಕನ್ಯಾಂ ಪ್ರಾಯಚ್ಛದ್ಋಷ್ಯಶೃಂಗ ಉವಾಹ ತಾಮ್ ।
ದೇವೇಽವರ್ಷತಿ ಯಂ ರಾಮಾ ಆನಿನ್ಯುರ್ಹರಿಣೀಸುತಮ್ ॥ ೮ ॥

ನಾಟ್ಯಸಂಗೀತವಾದಿತ್ರೈರ್ವಿಭ್ರಮಾಲಿಂಗನಾರ್ಹಣೈಃ ।
ಸ ತು ರಾಜ್ಞೋಽನಪತ್ಯಸ್ಯ ನಿರೂಪ್ಯೇಷ್ಟಿಂ ಮರುತ್ವತಃ ॥ ೯ ॥

ಪ್ರಜಾಮದಾದ್ದಶರಥೋ ಯೇನ ಲೇಭೇಽಪ್ರಜಾಃ ಪ್ರಜಾಃ ।
ಚತುರಂಗೋ ರೋಮಪಾದಾತ್ಪೃಥುಲಾಕ್ಷಸ್ತು ತತ್ಸುತಃ ॥ ೧೦ ॥

ಬೃಹದ್ರಥೋ ಬೃಹತ್ಕರ್ಮಾ ಬೃಹದ್ಭಾನುಶ್ಚ ತತ್ಸುತಾಃ ।
ಆದ್ಯಾದ್ಬೃಹನ್ಮನಾಸ್ತಸ್ಮಾಜ್ಜಯದ್ರಥ ಉದಾಹೃತಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಯಯಾತಿಯ ಮತ್ತೊಬ್ಬ ಮಗನಾದ ಅನು ಎಂಬುವನಿಗೆ ಸಭಾನರ, ಚಕ್ಷು, ಪರೋಕ್ಷ ಎಂಬ ಮೂವರು ಪುತ್ರರಿದ್ದರು. ಸಭಾನರನಿಗೆ ಕಾಲನರ, ಕಾಲನರನಿಗೆ ಸೃಂಜಯ, ಸೃಂಜಯನಿಗೆ ಜನಮೇಜಯ, ಜನಮೇಜಯನಿಗೆ ಮಹಾಶೀಲ, ಮಹಾಶೀಲನಿಗೆ ಮಹಾಮನಾ ಎಂಬ ಪುತ್ರನಾದನು. ಮಹಾಮನನಿಗೆ ಉಶೀನರ ಮತ್ತು ತಿತಿಕ್ಷು ಎಂಬ ಇಬ್ಬರು ಪುತ್ರರಾದರು. ॥ ೧-೨ ॥ ಉಶೀನರನಿಗೆ ಶಿಬಿ, ವನ, ಶಮೀ, ದಕ್ಷ ಎಂಬ ನಾಲ್ಕು ಮಕ್ಕಳಿದ್ದರು. ಶಿಬಿಗೆ – ವೃಷಾದರ್ಭ, ಸುವೀರ, ಮದ್ರ, ಕೈಕೇಯ ಎಂಬ ನಾಲ್ಕು ಪುತ್ರರಾದರು. ಉಶೀನರನ ತಮ್ಮ ತಿತಿಕ್ಷುವಿಗೆ ರುಶದ್ರಥ, ರುಶದ್ರಥನಿಗೆ ಹೇಮ, ಹೇಮನಿಗೆ ಸುತಪಾ, ಸುತಪನಿಗೆ ಬಲಿ ಎಂಬ ಪುತ್ರನಾದನು. ॥ ೩-೪ ॥ ರಾಜಾ ಬಲಿಯ ಪತ್ನಿಯ ಗರ್ಭದಿಂದ ದೀರ್ಘತಮಾ ಋಷಿಯು – ಅಂಗ, ವಂಗ, ಕಲಿಂಗ, ಸುಹ್ಮ, ಪುಂಡ್ರ ಮತ್ತು ಅಂಧ್ರ ಎಂಬ ಆರು ಮಂದಿ ಪುತ್ರರನ್ನು ಪಡೆದನು. ॥ ೫ ॥ ಇವರು ತಮ್ಮ-ತಮ್ಮ ಹೆಸರುಗಳಿಂದ ಪೂರ್ವ ದಿಕ್ಕಿನಲ್ಲಿ ಆರು ದೇಶಗಳನ್ನು ಸ್ಥಾಪಿಸಿದರು. ಅಂಗನಿಗೆ ಖನಪಾನನೆಂಬ ಪುತ್ರನಾದನು. ಖನಪಾನನಿಗೆ ದಿವಿರಥ, ದಿವಿರಥನಿಗೆ ಧರ್ಮರಥ, ಧರ್ಮರಥನಿಗೆ ಚಿತ್ರರಥನಾದನು. ಈ ಚಿತ್ರರಥನೇ ರೋಮಪಾದನೆಂದು ಪ್ರಸಿದ್ಧನಾಗಿದ್ದನು. ಅಯೋಧ್ಯಾಪತಿ ದಶರಥನು ಇವನಿಗೆ ಮಿತ್ರನಾಗಿದ್ದನು. ರೋಮಪಾದನಿಗೆ ಸಂತಾನ ವಿರಲಿಲ್ಲ. ಅದಕ್ಕಾಗಿ ದಶರಥನು ತನ್ನ ಮಗಳಾದ ಶಾಂತಾ ಎಂಬುವಳನ್ನೂ ದತ್ತಕವಾಗಿ ಕೊಟ್ಟನು. ಶಾಂತಾಳ ವಿವಾಹವು ಋಷ್ಯಶೃಂಗ ಮುನಿಯೊಂದಿಗೆ ಜರುಗಿತು. ಋಷ್ಯಶೃಂಗನು ವಿಭಾಂಡಕ ಋಷಿಯಿಂದ ಜಿಂಕೆಯ ಹೊಟ್ಟೆಯಲ್ಲಿ ಹುಟ್ಟಿದ್ದನು. ಒಮ್ಮೆ ರೋಮಪಾದರಾಜನ ರಾಜ್ಯದಲ್ಲಿ ಬಹಳ ದಿನಗಳವರೆಗೆ ಮಳೆಯಾಗಲಿಲ್ಲ. ಆಗ ಗಣಿಕೆಯರು ತಮ್ಮ ನೃತ್ಯ, ಸಂಗೀತ, ವಾದ್ಯ, ಹಾವ-ಭಾವ, ಆಲಿಂಗನ ಮತ್ತು ವಿಧ-ವಿಧವಾದ ಉಪಹಾರಗಳಿಂದ ಋಷ್ಯಶೃಂಗನನ್ನು ಮೋಹಿತನನ್ನಾಗಿಸಿ ರಾಜ್ಯಕ್ಕೆ ಕರೆತಂದರು. ಅವನು ಬರುತ್ತಲೇ ಮಳೆ ಸುರಿಯಿತು. ಅವನೇ ರೋಮಪಾದನಿಂದ ಇಂದ್ರ ದೇವತೆಯ ಯಜ್ಞವನ್ನು ಮಾಡಿಸಿದಾಗ ಸಂತಾನಹೀನನಾದ ಅವನಿಗೆ ಪುತ್ರನಾದನು. ಪುತ್ರಹೀನನಾದ ದಶರಥನೂ ಕೂಡ ಅವರ ಪ್ರಯತ್ನದಿಂದಲೇ ನಾಲ್ಕು ಮಕ್ಕಳನ್ನು ಪಡೆದನು. ರೋಮಪಾದನ ಪುತ್ರ ಚತುರಂಗನಾದನು. ಚತುರಂಗನಿಗೆ ಪೃಥುಲಾಶ್ವನೆಂಬುವನು ಹುಟ್ಟಿದನು. ॥ ೬-೧೦ ॥ ಪೃಥುಲಾಶ್ವನಿಗೆ ಬೃಹದ್ರಥ, ಬೃಹತ್ಕರ್ಮಾ ಮತ್ತು ಬೃಹದ್ಭಾನು ಎಂಬ ಮೂವರು ಪುತ್ರರಾದರು. ಬೃಹದ್ರಥನಿಗೆ ಬೃಹನ್ಮನಾ, ಬೃಹನ್ಮನನಿಗೆ ಜಯದ್ರಥನು ಹುಟ್ಟಿದನು. ॥ ೧೧ ॥

ವಿಜಯಸ್ತಸ್ಯ ಸಂಭೂತ್ಯಾಂ ತತೋ ಧೃತಿರಜಾಯತ।
ತತೋ ಧೃತವ್ರತಸ್ತಸ್ಯ ಸತ್ಕರ್ಮಾಧಿರಥಸ್ತತಃ
॥ ೧೨ ॥

ಯೋಽಸೌ ಗಂಗಾತಟೇ ಕ್ರೀಡನ್ ಮಂಜೂಷಾಂತರ್ಗತಂ ಶಿಶುಮ್ ।
ಕುಂತ್ಯಾಪವಿದ್ಧಂ ಕಾನೀನಮನಪತ್ಯೋಽಕರೋತ್ಸುತಮ್
॥ ೧೩ ॥

ವೃಷಸೇನಃ ಸುತಸ್ತಸ್ಯ ಕರ್ಣಸ್ಯ ಜಗತೀಪತೇಃ।
ದ್ರುಹ್ಯೋಶ್ಚ ತನಯೋ ಬಭ್ರುಃ ಸೇತುಸ್ತಸ್ಯಾತ್ಮಜಸ್ತತಃ
॥ ೧೪ ॥

ಆರಬ್ಧಸ್ಯ ಗಾಂಧಾರಸ್ತಸ್ಯ ಧರ್ಮಸ್ತತೋ ಧೃತಃ।
ಧೃತಸ್ಯ ದುರ್ಮನಾಸ್ತಸ್ಮಾತ್ಪ್ರಚೇತಾಃ ಪ್ರಾಚೇತಸಂ ಶತಮ್
॥ ೧೫ ॥

ಮ್ಲೇಚ್ಛಾಧಿಪತಯೋಽಭೂವನ್ನುದೀಚೀಂ ದಿಶಮಾಶ್ರಿತಾಃ।
ತುರ್ವಸೋಶ್ಚ ಸುತೋ ವಹ್ನಿರ್ವಹ್ನೇರ್ಭರ್ಗೋಽಥ ಭಾನುಮಾನ್
॥ ೧೬ ॥

ತ್ರಿಭಾನುಸ್ತತ್ಸುತೋಽಸ್ಯಾಪಿ ಕರಂಧಮ ಉದಾರಧೀಃ।
ಮರುತಸ್ತತ್ಸುತೋಽಪುತ್ರಃ ಪುತ್ರಂ ಪೌರವಮನ್ವಭೂತ್
॥ ೧೭ ॥

ದುಷ್ಮಂತಃ ಸ ಪುನರ್ಭೇಜೇ ಸ್ವಂ ವಂಶಂ ರಾಜ್ಯಕಾಮುಕಃ।
ಯಯಾತೇರ್ಜ್ಯೇಷ್ಠಪುತ್ರಸ್ಯ ಯದೋರ್ವಂಶಂ ನರರ್ಷಭ
॥ ೧೮ ॥

ವರ್ಣಯಾಮಿ ಮಹಾಪುಣ್ಯಂ ಸರ್ವಪಾಪಹರಂ ನೃಣಾಮ್ ।
ಯದೋರ್ವಂಶಂ ನರಃ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ
॥ ೧೯ ॥

ಯತ್ರಾವತೀರ್ಣೋ ಭಗವಾನ್ಪರಮಾತ್ಮಾ ನರಾಕೃತಿಃ।
ಯದೋಃ ಸಹಸ್ರಜಿತ್ಕ್ರೋಷ್ಟಾ ನಲೋ ರಿಪುರಿತಿ ಶ್ರುತಾಃ
॥ ೨೦ ॥

ಶತಾರ್ವರಃ ಸೂನವಸ್ತತ್ರ ಶತಜಿತ್ಪ್ರಥಮಾತ್ಮಜಃ।
ಮಹಾಹಯೋ ವೇಣುಹಯೋ ಹೈಹಯಶ್ಚೇತಿ ತತ್ಸುತಾಃ
॥ ೨೧ ॥

ಧರ್ಮಸ್ತು ಹೈಹಯಸುತೋ ನೇತ್ರಃ ಕುಂತೇಃ ಪಿತಾ ತತಃ।
ಸೋಽಪಂಜಿರಭವತ್ಕುಂತೇರ್ಮಹಿಷ್ಮಾನ್ಭದ್ರಸೇನಕಃ
॥ ೨೨ ॥

ದುರ್ಮದೋ ಭದ್ರಸೇನಸ್ಯ ಧನಕಃ ಕೃತವೀರ್ಯಸೂಃ।
ಕೃತಾಗ್ನಿಃ ಕೃತವರ್ಮಾ ಚ ಕೃತೌಜಾ ಧನಕಾತ್ಮಜಾಃ
॥ ೨೩ ॥

ಅರ್ಜುನಃ ಕೃತವೀರ್ಯಸ್ಯ ಸಪ್ತದ್ವೀಪೇಶ್ವರೋಽಭವತ್ ।
ದತ್ತಾತ್ತ್ರೇಯಾದ್ಧರೇರಂಶಾತ್ ಪ್ರಾಪ್ತಯೋಗಮಹಾಗುಣಃ
॥ ೨೪ ॥

ಜಯದ್ರಥನಿಗೆ ಸಂಭೂತಿ ಎಂಬ ಪತ್ನಿಯಿದ್ದಳು. ಅವಳ ಗರ್ಭದಿಂದ ವಿಜಯನ ಜನ್ಮವಾಯಿತು. ವಿಜಯನಿಗೆ ಧೃತಿ, ಧೃತಿಗೆ ಧೃತವ್ರತ, ಧೃತವ್ರತನಿಗೆ ಸತ್ಕರ್ಮಾ, ಸತ್ಕರ್ಮನಿಗೆ ಅಧಿರಥನೆಂಬ ಪುತ್ರನಾದನು. ॥ ೧೨ ॥ ಅಧಿರಥನಿಗೆ ಸಂತಾನವಿರಲಿಲ್ಲ. ಒಂದುದಿನ ಅವನು ಗಂಗಾತೀರದಲ್ಲಿ ಕ್ರೀಡಿಸುತ್ತಿದ್ದಾಗ ಗಂಗಾನದಿಯಲ್ಲಿ ತೇಲಿಬರುತ್ತಿದ್ದ ಪೆಟ್ಟಿಗೆಯಲ್ಲಿ ಒಂದು ಹಸುಳೆಯನ್ನು ನೋಡಿದನು. ಕುಂತಿಯು ಅವನನ್ನು ಕನ್ಯಾವಸ್ಥೆಯಲ್ಲೇ ಸೂರ್ಯನ ಅನುಗ್ರಹದಿಂದ ಪಡೆದಿದ್ದಳು. ಲೋಕಾಪವಾದಕ್ಕೆ ಹೆದರಿ ಅವನನ್ನು ನದಿಯಲ್ಲಿ ತೇಲಿಬಿಟ್ಟಿದ್ದಳು. ಅಧಿರಥನು ಅವನನ್ನು ತನ್ನ ಪುತ್ರನನ್ನಾಗಿಸಿಕೊಂಡನು. ಅವನೇ ವಿಖ್ಯಾತನಾದ ಕರ್ಣನಾದನು. ॥ ೧೩. ॥ ಪರೀಕ್ಷಿತನೇ! ಕರ್ಣನಿಗೆ ವೃಷಸೇನನೆಂಬ ಮಗನಿದ್ದನು. ಯಯಾತಿಯ ಪುತ್ರನಾದ ದ್ರುಹ್ಯುವಿಗೆ ಬಭ್ರುವಿನ ಜನ್ಮವಾಯಿತು. ಬಭ್ರುವಿಗೆ ಸೇತು, ಸೇತುವಿಗೆ ಆರಬ್ಧ, ಆರಬ್ಧನಿಗೆ ಗಾಂಧಾರ, ಗಾಂಧಾರನಿಗೆ ಧರ್ಮ, ಧರ್ಮನಿಗೆ ಧೃತ, ಧೃತನಿಗೆ ದುರ್ಮನಾ, ದುರ್ಮನನಿಗೆ ಪ್ರಚೇತಾ ಎಂಬ ಪುತ್ರನಾದನು. ಪ್ರಚೇತಸನಿಗೆ ನೂರು ಮಕ್ಕಳಾದರು. ಇವರು ಉತ್ತರ ದಿಕ್ಕಿನಲ್ಲಿ ಮ್ಲೇಂಛರಿಗೆ ರಾಜರಾದರು. ಯಯಾತಿಯ ಪುತ್ರ ತುರ್ವಸುವಿಗೆ ವಹ್ನಿ, ವಹ್ನಿಗೆ ಭರ್ಗ, ಭರ್ಗನಿಗೆ ಭಾನುಮಾನ್, ಭಾನುಮಂತನಿಗೆ ತ್ರಿಭಾನು, ತ್ರಿಭಾನುವಿಗೆ ಉದಾರಬುದ್ಧಿಯ ಕರಂಧಮನು. ಕರಂಧಮನಿಗೆ ಮರುತನೆಂಬ ಪುತ್ರನಾದನು. ಮರುತನು ಸಂತಾನಹೀನನಾಗಿದ್ದನು. ಅದಕ್ಕಾಗಿ ಅವನು ಪೂರುವಂಶೀ ದುಷ್ಮಂತನನ್ನು ತನ್ನ ಪುತ್ರನನ್ನಾಗಿಸಿಕೊಂಡಿದ್ದನು. ॥ ೧೪- ೧೭ ॥ ಆದರೆ ದುಷ್ಮಂತನು ರಾಜ್ಯದ ಬಯಕೆಯಿಂದ ತನ್ನ ವಂಶಕ್ಕೆ ಮರಳಿದನು. ಪರೀಕ್ಷಿತನೇ! ಇನ್ನು ನಾನು ಯಯಾತಿಯ ಹಿರಿಯ ಮಗನಾದ ಯದುವಿನ ವಂಶವನ್ನು ವರ್ಣಿಸುವೆನು. ಆಲಿಸು. ॥ ೧೮ ॥

ಪರೀಕ್ಷಿತನೇ! ಯದು ಮಹಾರಾಜನ ವಂಶವು ಪರಮ ಪವಿತ್ರವಾದುದು ಹಾಗೂ ಮನುಷ್ಯರ ಸಮಸ್ತ ಪಾಪಗಳನ್ನೂ ಪರಿಹರಿಸುವಂತಹುದು. ಇದನ್ನು ಶ್ರವಣಿಸುವವನು ಸಮಸ್ತ ಪಾಪಗಳಿಂದ ಮುಕ್ತನಾಗುವನು. ॥ ೧೯ ॥

ಈ ವಂಶದಲ್ಲಿ ಸ್ವಯಂ ಭಗವಾನ್ ಪರಬ್ರಹ್ಮ ಶ್ರೀಕೃಷ್ಣನು ಮನುಷ್ಯರೂಪದಿಂದ ಅವತರಿಸಿದ್ದನು. ಯದುವಿಗೆ – ಸಹಸ್ರಜಿತ್, ಕ್ರೋಷ್ಟಾ, ನಲ ಮತ್ತು ರಿಪು ಎಂಬ ನಾಲ್ವರು ಪುತ್ರರಿದ್ದರು. ಸಹಸ್ರಜಿತ್ತುವಿಗೆ ಶತಜಿತ್ ನಾದನು. ಶತಜಿತ್ತುವಿಗೆ – ಮಹಾಹಯ, ವೇಣುಹಯ, ಮತ್ತು ಹೈಹಯ ಎಂಬ ಮೂವರು ಪುತ್ರರಾದರು. ॥ ೨೦-೨೧ ॥ ಹೈಹಯನಿಗೆ ಧರ್ಮ, ಧರ್ಮನಿಗೆ ನೇತ್ರ, ನೇತ್ರನಿಗೆ ಕುಂತಿ, ಕುಂತಿಗೆ ಸೋಹಂಜಿ, ಸೋಹಂಜಿಗೆ ಮಹಿಷ್ಮಾನ್, ಮಹಿಷ್ಮಂತನಿಗೆ ಭದ್ರಸೇನನೆಂಬ ಪುತ್ರನಾದನು. ॥ ೨೨ ॥ ಭದ್ರಸೇನನಿಗೆ ದುರ್ಮದ ಮತ್ತು ಧನಕರೆಂಬ ಇಬ್ಬರು ಪುತ್ರರಿದ್ದರು. ಧನಕನಿಗೆ – ಕೃತವೀರ್ಯ, ಕೃತಾಗ್ನಿ, ಕೃತವರ್ಮಾ, ಕೃತೌಜಾ ಎಂಬ ನಾಲ್ಕು ಮಕ್ಕಳಿದ್ದರು. ॥ ೨೩. ॥ ಕೃತವೀರ್ಯನಿಗೆ ಅರ್ಜುನನಾಗಿದ್ದನು. ಅವನು ಸಪ್ತದ್ವೀಪಗಳಿಗೆ ಏಕಚ್ಛತ್ರ ಸಾಮ್ರಾಟನಾಗಿದ್ದನು. ಅವನು ಭಗವಂತನ ಅಂಶಾವತಾರವಾದ ದತ್ತಾತ್ರೇಯನಿಂದ ಯೋಗವಿದ್ಯೆ ಮತ್ತು ಅಣಿಮಾ, ಲಘಿಮಾ ಮುಂತಾದ ಮಹಾಸಿದ್ಧಿಗಳನ್ನು ಪಡೆದಿದ್ದನು. ॥ ೨೪ ॥

ನ ನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯಂತಿ ಪಾರ್ಥಿವಾಃ ।
ಯಜ್ಞದಾನತಪೋಯೋಗಶ್ರುತವೀರ್ಯಜಯಾದಿಭಿಃ
॥ ೨೫ ॥

ಪಂಚಾಶೀತಿಸಹಸ್ರಾಣಿ ಹ್ಯವ್ಯಾಹತಬಲಃ ಸಮಾಃ ।
ಅನಷ್ಟವಿತ್ತಸ್ಮರಣೋ ಬುಭುಜೇಽಕ್ಷಯ್ಯಷಡ್ವಸು
॥ ೨೬ ॥

ತಸ್ಯ ಪುತ್ರಸಹಸ್ರೇಷು ಪಂಚೈವೋರ್ವರಿತಾ ಮೃಧೇ ।
ಜಯಧ್ವಜಃ ಶೂರಸೇನೋ ವೃಷಭೋ ಮಧುರೂರ್ಜಿತಃ
॥ ೨೭ ॥

ಜಯಧ್ವಜಾತ್ತಾಲಜಂಘಸ್ತಸ್ಯ ಪುತ್ರಶತಂ ತ್ವಭೂತ್ ।
ಕ್ಷತ್ರಂ ಯತ್ತಾಲಜಂಘಾಖ್ಯಮೌರ್ವತೇಜೋಪಸಂಹೃತಮ್
॥ ೨೮ ॥

ತೇಷಾಂ ಜ್ಯೇಷ್ಠೋ ವೀತಿಹೋತ್ರೋ
ವೃಷ್ಣಿಃ ಪುತ್ರೋ ಮಧೋಃ ಸ್ಮೃತಃ ।
ತಸ್ಯ ಪುತ್ರಶತಂ ತ್ವಾಸೀ-
ದ್ವೃಷ್ಣಿಜ್ಯೇಷ್ಠಂ ಯತಃಕುಲಮ್ ॥ ೨೯ ॥

ಮಾಧವಾ ವೃಷ್ಣಯೋ ರಾಜನ್ ಯಾದವಾಶ್ಚೇತಿ ಸಂಜ್ಞಿತಾಃ ।
ಯದುಪುತ್ರಸ್ಯ ಚ ಕ್ರೋಷ್ಟೋಃ ಪುತ್ರೋ ವೃಜಿನವಾಂಸ್ತತಃ
॥ ೩೦ ॥

ಶ್ವಾಹಿಸ್ತತೋ ರುಶೇಕುರ್ವೈ
ತಸ್ಯ ಚಿತ್ರರಥಸ್ತತಃ ।
ಶಶಬಿಂದುರ್ಮಹಾಯೋಗೀ
ಮಹಾಭೋಜೋ ಮಹಾನಭೂತ್ ॥ ೩೧ ॥

ಚತುರ್ದಶಮಹಾರತ್ನಶ್ಚಕ್ರವರ್ತ್ಯಪರಾಜಿತಃ ।
ತಸ್ಯ ಪತ್ನೀಸಹಸ್ರಾಣಾಂ ದಶಾನಾಂ ಸುಮಹಾಯಶಾಃ
॥ ೩೨ ॥

ದಶಲಕ್ಷಸಹಸ್ರಾಣಿ ಪುತ್ರಾಣಾಂ ತಾಸ್ವಜೀಜನತ್ ।
ತೇಷಾಂ ತು ಷಟ್ಪ್ರಧಾನಾನಾಂ ಪೃಥುಶ್ರವಸ ಆತ್ಮಜಃ
॥ ೩೩ ॥

ಪ್ರಪಂಚದಲ್ಲಿ ಯಾವ ಸಾಮ್ರಾಟನು ಯಜ್ಞ, ದಾನ, ತಪಸ್ಸು ಯೋಗ, ಶಾಸ್ತ್ರಜ್ಞಾನ, ಪರಾಕ್ರಮ, ವಿಜಯ ಮುಂತಾದ ಗುಣಗಳಿಂದ ಕೂಡಿದ ಕಾರ್ತವೀರ್ಯಾರ್ಜುನನಿಗೆ ಸರಿಸಮಾನನಾಗಲಾರನು. ಇದರಲ್ಲಿ ಸಂದೇಹವೇ ಇಲ್ಲ. ॥ ೨೫ ॥ ಸಹಸ್ರಾರ್ಜುನನು ಎಂಭತ್ತೈದುಸಾವಿರ ವರ್ಷಗಳವರೆಗೆ ಆರೂ ಇಂದ್ರಿಯಗಳಿಂದ ಅಕ್ಷಯ ವಿಷಯಗಳನ್ನು ಅನುಭವಿಸುತ್ತಾ ಇದ್ದನು. ಇದರ ನಡುವೆ ಅವನು ಶರೀರಬಲ ಕುಂದುವುದಾಗಲೀ, ಧನದ ನಾಶವಾಗುವುದಾಗಲೀ ಸ್ಮರಿಸಲೇ ಇಲ್ಲ. ಅವನ ಧನವು ನಾಶವಾಗುವುದಿರಲಿ, ಅವನ ಸ್ಮರಣೆಯಿಂದ ಕಳೆದುಹೋದ ಧನವು ಪುನಃ ದೊರಕುತ್ತಿತ್ತು.* ಅಂತಹ ಪ್ರಭಾವ ಅವನದಾಗಿತ್ತು. ॥ ೨೬ ॥ ಅವನ ಸಾವಿರ ಮಕ್ಕಳಲ್ಲಿ ಕೇವಲ ಐವರು ಮಾತ್ರ ಜೀವಂತರಾಗಿದ್ದರು. ಉಳಿದವರೆಲ್ಲರೂ ಪರಶುರಾಮನ ಕ್ರೋಧಾಗ್ನಿಯಲ್ಲಿ ಭಸ್ಮವಾಗಿ ಹೋಗಿದ್ದರು. ಉಳಿದ ಪುತ್ರರ ಹೆಸರುಗಳು – ಜಯಧ್ವಜ, ಶೂರಸೇನ, ವೃಷಭ, ಮಧು ಮತ್ತು ಊರ್ಜಿತ ಎಂದಿದ್ದವು. ॥ ೨೭ ॥

ಜಯಧ್ವಜನಿಗೆ ತಾಲಜಂಘನೆಂಬ ಪುತ್ರನಿದ್ದನು. ತಾಲಜಂಘನಿಗೆ ನೂರು ಪುತ್ರರಾದರು. ಅವರು 'ತಾಲಜಂಘ'ರೆಂಬ ಹೆಸರಿನಿಂದ ಆ ಕ್ಷತ್ರಿಯರು ಕರೆಸಿಕೊಂಡರು. ಮಹರ್ಷಿ ಔರ್ವರೆಂಬುವರ ಶಕ್ತಿಯಿಂದ ಸಗರರಾಜನು ಇವರನ್ನು ಸಂಹರಿಸಿಬಿಟ್ಟನು. ॥ ೨೮ ॥ ಆ ನೂರು ಪುತ್ರರಲ್ಲಿ ಹಿರಿಯವನು ವೀತಿಹೋತ್ರನಾಗಿದ್ದನು. ವೀತಿಹೋತ್ರನ ಮಗ ಮಧುವಾದನು. ಮಧುವಿಗೆ ನೂರು ಮಕ್ಕಳಿದ್ದರು. ಅವರಲ್ಲಿ ಎಲ್ಲರಿಗಿಂತ ಹಿರಿಯವನು ವೃಷ್ಣಿ ಎಂಬುವನಿದ್ದನು. ॥ ೨೯ ॥ ಪರೀಕ್ಷಿತನೇ! ಇವರೇ ಮಧು, ವೃಷ್ಣಿ ಮತ್ತು ಯದುವಿನ ಕಾರಣದಿಂದ ಈ ವಂಶವು ಮಾಧವ, ವಾರ್ಷ್ಣೇಯ ಮತ್ತು ಯಾದವ ಎಂಬ ಹೆಸರುಗಳಿಂದ ಪ್ರಸಿದ್ಧವಾಯಿತು. ಯದುನಂದನ ಕ್ರೋಷ್ಟುವಿಗೆ ವೃಜಿನವಾನ್‌ನೆಂಬ ಪುತ್ರನಿದ್ದನು. ॥ ೩೦ ॥ ವೃಜಿನಮಂತನಿಗೆ ಶ್ವಾಹಿ, ಶ್ವಾಹಿಗೆ ರುಶೇಕು, ರುಶೇಕುವಿಗೆ ಚಿತ್ರರಥ, ಚಿತ್ರರಥನಿಗೆ ಶತಬಿಂದು ಎಂಬ ಪುತ್ರನಿದ್ದನು. ಅವನು ಪರಮಯೋಗಿಯೂ, ಮಹಾಭೋಗ ಐಶ್ವರ್ಯಸಂಪನ್ನನೂ, ಅತ್ಯಂತ ಪರಾಕ್ರಮಿಯೂ ಆಗಿದ್ದನು. ॥ ೩೧ ॥ ಅವನು ಹದಿನಾಲ್ಕು ರತ್ನಗಳಿಗೂ ** ಒಡೆಯನೂ, ಚಕ್ರವರ್ತಿಯೂ, ಯುದ್ಧದಲ್ಲಿ ಅಜೇಯನೂ ಆಗಿದ್ದನು. ಪರಮ ಯಶಸ್ವೀ ಶತಬಿಂದುವಿಗೆ ಹತ್ತುಸಾವಿರ ಪತ್ನಿಯರಿದ್ದರು. ಅವರಲ್ಲಿ ಒಬ್ಬೊಬ್ಬರಿಗೂ ಲಕ್ಷ-ಲಕ್ಷ ಸಂತಾನಗಳಿದ್ದವು. ಹೀಗೆ ಅವನು ನೂರುಕೋಟಿ ಮಕ್ಕಳನ್ನು ಪಡೆದನು. ಅವರಲ್ಲಿ ಪೃಥುಶ್ರವಾ ಮುಂತಾದ ಆರು ಪುತ್ರರು ಪ್ರಧಾನರಾಗಿದ್ದರು. ಪೃಥು ಶ್ರವಸ್ಸುವಿಗೆ

---

* ಕಳೆದುಹೋದ ವಸ್ತುವನ್ನು ಪಡೆದುಕೊಳ್ಳಲು ಈಗಲೂ ಕೆಳಗಿನ ಈ ಕಾರ್ತವೀರ್ಯಾರ್ಜುನ ಮಂತ್ರವನ್ನು ಪಠಿಸುತ್ತಾರೆ.
೧) ಹೈಹಯಾನಾಂ ಮಹಾರಾಜಃ ಕಾರ್ತವೀರ್ಯೇತಿ ವಿಶ್ರುತಃ । ಯಸ್ಯ ಸ್ಮರಣ ಮಾತ್ರೇಣ ಹೃತಂ ನಷ್ಟಂ ಚ ಲಭ್ಯತೇ ॥
೨) ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹು ಸಹಸ್ರವಾನ್ । ಯಸ್ಯಸ್ಮರಣಮಾತ್ರೇಣ ಗತಂ ನಷ್ಟಂ ಚ ಲಭ್ಯತೇ ॥

** ಅನೆ, ಕುದುರೆ, ರಥ, ಸ್ತ್ರೀ, ಬಾಣ, ಭಂಡಾರ, ಮಾಲೆ, ಮತ್ಸ್ಯ, ವೃಕ್ಷ, ಶಕ್ತಿ , ಪಾಶ, ಮಣಿ, ಛತ್ರ ಮತ್ತು ವಿಮಾನ – ಇವು ಹದಿನಾಲ್ಕು ರತ್ನಗಳು.

ಧರ್ಮೋ ನಾಮೋಶನಾ ತಸ್ಯ ಹಯಮೇಧಶತಸ್ಯ ಯಾಟ್ ।
ತತ್ಸುತೋ ರುಚಕಸ್ತಸ್ಯ ಪಂಚಾಸನ್ನಾತ್ಮಜಾಃ ಶೃಣು
॥ ೩೪ ॥

ಪುರುಜಿದ್ರುಕ್ಮರುಕ್ಮೇಷು ಪೃಥುಜ್ಯಾಮಘಸಂಜ್ಞಿತಾಃ ।
ಜ್ಯಾಮಘಸ್ತ್ವಪ್ರಜೋಽಪ್ಯನ್ಯಾಂ ಭಾರ್ಯಾಂ ಶೈಬ್ಯಾಪತಿರ್ಭಯಾತ್
॥ ೩೫ ॥

ನಾವಿಂದಚ್ಛತ್ರುಭವನಾದ್ಭೋಜ್ಯಾಂ ಕನ್ಯಾಮಹಾರಷೀತ್ ।
ರಥಸ್ಥಾಂ ತಾಂ ನಿರೀಕ್ಷ್ಯಾಹ ಶೈಬ್ಯಾ ಪತಿಮಮರ್ಷಿತಾ
॥ ೩೬ ॥

ಕೇಯಂ ಕುಹಕ ಮತ್ಸ್ಥಾನಂ ರಥಮಾರೋಪಿತೇತಿ ವೈ ।
ಸ್ನುಷಾ ತವೇತ್ಯಭಿಹಿತೇ ಸ್ಮಯಂತೀ ಪತಿಮಬ್ರವೀತ್
॥ ೩೭ ॥

ಅಹಂ ವಂಧ್ಯಾಽಸಪತ್ನೀ ಚ ಸ್ನುಷಾ ಮೇ ಯುಜ್ಯತೇ ಕಥಮ್ ।
ಜನಯಿಷ್ಯಸಿ ಯಂ ರಾಜ್ಞೀ ತಸ್ಯೇಯಮುಪಯುಜ್ಯತೇ
॥ ೩೮ ॥

ಅನ್ವಮೋದಂತ ತದ್ವಿಶ್ವೇದೇವಾಃ ಪಿತರ ಏವ ಚ ।
ಶೈಬ್ಯಾ ಗರ್ಭಮಧಾತ್ಕಾಲೇ ಕುಮಾರಂ ಸುಷುವೇ ಶುಭಮ್ ।
ಸ ವಿದರ್ಭ ಇತಿ ಪ್ರೋಕ್ತ ಉಪಯೇಮೇ ಸ್ನುಷಾಂ ಸತೀಮ್
॥ ೩೯ ॥

ಧರ್ಮನೆಂಬ ಪುತ್ರನಿದ್ದನು. ಧರ್ಮನಿಗೆ ಉಶನಾ ಎಂಬ ಪುತ್ರನಾದನು. ಅವನು ನೂರು ಅಶ್ವಮೇಧಗಳನ್ನು ಮಾಡಿದ್ದನು. ಉಶನನಿಗೆ ರುಚಕನೆಂಬ ಪುತ್ರನಾದನು. ರುಚಕನಿಗೆ ಐವರು ಪುತ್ರರಾದರು. ಅವರ ಹೆಸರು ಇಂತಿದೆ. ॥ ೩೨-೩೪ ॥ ಪುರುಜಿತ್, ರುಕ್ಮ, ರುಕ್ಮೇಷು, ಪೃಥು ಮತ್ತು ಜ್ಯಾಮಘ. ಜ್ಯಾಮಘನ ಪತ್ನಿಯ ಹೆಸರು ಶೈಬ್ಯಾ ಎಂದಿತ್ತು. ಜ್ಯಾಮಘನಿಗೆ ಅನೇಕ ದಿನಗಳವರೆಗೆ ಸಂತಾನವಾಗಲಿಲ್ಲ, ಆದರೆ ಅವನು ತನ್ನ ಪತ್ನಿಯ ಭಯದಿಂದ ಇನ್ನೊಂದು ಮದುವೆ ಮಾಡಿಕೊಳ್ಳಲಿಲ್ಲ. ಒಮ್ಮೆ ಅವನು ತನ್ನ ಶತ್ರುವಿನ ಮನೆಯಿಂದ ಭೋಜ್ಯಾ ಎಂಬ ಕನ್ಯೆಯನ್ನು ಕದ್ದು ತಂದನು. ಶೈಬ್ಯಳು ಪತಿಯ ರಥದಲ್ಲಿ ಆ ಕನ್ಯೆಯನ್ನು ನೋಡಿದಾಗ ಅವಳು ಕೆರಳಿ ತನ್ನ ಪತಿಯಲ್ಲಿ ಕೇಳಿದಳು – 'ಕಪಟಿಯೇ ! ನಾನು ಕುಳಿತುಕೊಳ್ಳುವ ಸ್ಥಳದಲ್ಲಿ ಇಂದು ಯಾರನ್ನು ಕುಳ್ಳಿರಿಸಿ ತರುತ್ತಿರುವೆ ?' ಜ್ಯಾಮಘನು – 'ಇವಳಾದರೋ ನಿನ್ನ ಸೊಸೆಯಾಗಿದ್ದಾಳೆ' ಎಂದು ಹೇಳಿದನು. ಶೈಬ್ಯಳು ಮುಗುಳ್ನಕ್ಕು ಪತಿಯಲ್ಲಿ ಹೇಳಿದಳು – ॥ ೩೫-೩೭ ॥ 'ನಾನಾದರೋ ಜನ್ಮತಃ ಬಂಜೆಯಾಗಿರುವೆನು. ನನಗೆ ಸವತಿಯೂ ಯಾರೂ ಇಲ್ಲ, ಹಾಗಿರುವಾಗ ಇವಳು ಸೊಸೆ ಹೇಗಾಗಬಲ್ಲಳು ?' ಜ್ಯಾಮಘನು – 'ರಾಣೀ ! ನಿನಗೆ ಹುಟ್ಟಲಿರುವ ಮಗನ ಪತ್ನಿಯಾಗುವಳು ಇವಳು' ಎಂದು ಹೇಳಿದನು. ॥ ೩೮ ॥ ಜ್ಯಾಮಘರಾಜನ ಈ ಮಾತನ್ನು ವಿಶ್ವೇದೇವತೆಗಳು ಮತ್ತು ಪಿತೃಗಳು ಅನುಮೋದಿಸಿದರು. ಇವರಿಂದಾಗಿ ಸಕಾಲದಲ್ಲಿ ಶೈಬ್ಯಾಳು ಗರ್ಭವತಿಯಾಗಿ, ಅವಳು ಬಹಳ ಸುಂದರವಾದ ಬಾಲಕನಿಗೆ ಜನ್ಮ ನೀಡಿದಳು. ಅವನ ಹೆಸರು ವಿದರ್ಭವೆಂದಾಯ್ತು. ಅವನು ಶೈಬ್ಯಳ ಸಾಧ್ವಿಯಾದ ಸೊಸೆಯಾದ ಭೋಜ್ಯಾಳೊಂದಿಗೆ ವಿವಾಹ ವಾದನು. ॥ ೩೯ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಯದುವಂಶಾನುವರ್ಣನೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ವಿದರ್ಭವಂಶದ ವರ್ಣನೆ

ಶ್ರೀಶುಕ ಉವಾಚ

ತಸ್ಯಾಂ ವಿದರ್ಭೋಽಜನಯತ್ಪುತ್ರೌ ನಾಮ್ನಾ ಕುಶಕ್ರಥೌ ।
ತೃತೀಯಂ ರೋಮಪಾದಂ ಚ ವಿದರ್ಭಕುಲನಂದನಮ್
॥ ೧ ॥

ರೋಮಪಾದಸುತೋ ಬಭ್ರುರ್ಬಭ್ರೋಃ ಕೃತಿರಜಾಯತ ।
ಉಶಿಕಸ್ತತ್ಸುತಸ್ತಸ್ಮಾಚ್ಚೇದಿಶ್ಚೈದ್ಯಾದಯೋ ನೃಪ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ವಿದರ್ಭರಾಜನು ಪತ್ನಿಯಾದ ಭೋಜ್ಯಾಳಿಂದ ಕುಶ, ಕ್ರಥ ಮತ್ತು ರೋಮಪಾದರೆಂಬ ಮೂವರು ಪುತ್ರರನ್ನು ಪಡೆದನು. ರೋಮಪಾದನು ವಿದರ್ಭವಂಶದಲ್ಲಿ ಅತ್ಯಂತ ಶ್ರೇಷ್ಠರಾಜನಾಗಿದ್ದನು. ॥ ೧ ॥ ರೋಮಪಾದನಿಗೆ ಬಭ್ರು, ಬಭ್ರುವಿಗೆ ಕೃತಿ, ಕೃತಿಗೆ ಉಶಿಕ, ಉಶಿಕನಿಗೆ ಚೇದಿ ಎಂಬುವನಾದನು. ರಾಜನೇ ! ಈ ಚೇದಿಯ ವಂಶದಲ್ಲೇ ದಮಘೋಷ ಹಾಗೂ ಶಿಶುಪಾಲರೇ ಮುಂತಾದವರಾದರು. ॥ ೨ ॥

ಕ್ರಥಸ್ಯ ಕುಂತಿಃ ಪುತ್ರೋಽಭೂದ್ವೃಷ್ಟಿಸ್ತಸ್ಯಾಥ ನಿರ್ವೃತಿಃ ।
ತತೋ ದಶಾರ್ಹೋ ನಾಮ್ನಾಭೂತ್ತಸ್ಯ ವ್ಯೋಮಃ ಸುತಸ್ತತಃ
॥ ೩ ॥

ಜೀಮೂತೋ ವಿಕೃತಿಸ್ತಸ್ಯ ಯಸ್ಯ ಭೀಮರಥಃ ಸುತಃ ।
ತತೋ ನವರಥಃ ಪುತ್ರೋ ಜಾತೋ ದಶರಥಸ್ತತಃ
॥ ೪ ॥

ಕರಂಭಿಃ ಶಕುನೇಃ ಪುತ್ರೋ ದೇವರಾತಸ್ತದಾತ್ಮಜಃ ।
ದೇವಕ್ಷತ್ರಸ್ತತಸ್ತಸ್ಯ ಮಧುಃ ಕುರುವಶಾದನುಃ
॥ ೫ ॥

ಪುರುಹೋತ್ರಸ್ತ್ವನೋಃ ಪುತ್ರಸ್ತಸ್ಯಾಯುಃ ಸಾತ್ವತಸ್ತತಃ ।
ಭಜಮಾನೋ ಭಜಿರ್ದಿವ್ಯೋ ವೃಷ್ಣಿರ್ದೇವಾವೃಧೋಽಂಧಕಃ
॥ ೬ ॥

ಸಾತ್ವತಸ್ಯ ಸುತಾಃ ಸಪ್ತ ಮಹಾಭೋಜಶ್ಚ ಮಾರಿಷ ।
ಭಜಮಾನಸ್ಯ ನಿಮ್ಲೋಚಿಃ ಕಿಂಕಿಣೋ ಧೃಷ್ಟಿರೇವ ಚ
॥ ೭ ॥

ಏಕಸ್ಯಾಮಾತ್ಮಜಾಃ ಪತ್ನ್ಯಾಮನ್ಯಸ್ಯಾಂ ಚ ತ್ರಯಃ ಸುತಾಃ ।
ಶತಾಜಿಚ್ಚ ಸಹಸ್ರಾಜಿದಯುತಾಜಿದಿತಿ ಪ್ರಭೋ
॥ ೮ ॥

ಬಭ್ರುರ್ದೇವಾವೃಧಸುತಸ್ತಯೋಃ ಶ್ಲೋಕೌ ಪಠಂತ್ಯಮೂ ।
ಯಥೈವ ಶೃಣುಮೋ ದೂರಾತ್ಸಂಪಶ್ಯಾಮಸ್ತಥಾಂತಿಕಾತ್
॥ ೯ ॥

ಬಭ್ರುಃ ಶ್ರೇಷ್ಠೋ ಮನುಷ್ಯಾಣಾಂ ದೇವೈರ್ದೇವಾವೃಧಃ ಸಮಃ ।
ಪುರುಷಾಃ ಪಂಚಷಷ್ಟಿಶ್ಚ ಷಟ್ಸಹಸ್ರಾಣಿ ಚಾಷ್ಟ ಚ
॥ ೧೦ ॥

ಯೇಽಮೃತತ್ವಮನುಪ್ರಾಪ್ತಾ ಬಭ್ರೋರ್ದೇವಾವೃಧಾದಪಿ ।
ಮಹಾಭೋಜೋಽಪಿ ಧರ್ಮಾತ್ಮಾ ಭೋಜಾ ಆಸಂಸ್ತದನ್ವಯೇ
॥ ೧೧ ॥

ವೃಷ್ಣೇಃ ಸುಮಿತ್ರಃ ಪುತ್ರೋಽಭೂದ್ಯುಧಾಜಿಚ್ಚ ಪರಂತಪ ।
ಶಿನಿಸ್ತಸ್ಯಾನಮಿತ್ರಶ್ಚ ನಿಮ್ನೋಽಭೂದನಮಿತ್ರತಃ
॥ ೧೨ ॥

ಸತ್ರಾಜಿತಃ ಪ್ರಸೇನಶ್ಚ ನಿಮ್ನಸ್ಯಾಪ್ಯಾಸತುಃ ಸುತೌ ।
ಅನಮಿತ್ರಸುತೋ ಯೋಽನ್ಯಃ ಶಿನಿಸ್ತಸ್ಯಾಥ ಸತ್ಯಕಃ
॥ ೧೩ ॥

ಯುಯುಧಾನಃ ಸಾತ್ಯಕಿರ್ವೈ ಜಯಸ್ತಸ್ಯ ಕುಣಿಸ್ತತಃ ।
ಯುಗಂಧರೋಽನಮಿತ್ರಸ್ಯ ವೃಷ್ಣಿಃ ಪುತ್ರೋಽಪರಸ್ತತಃ
॥ ೧೪ ॥

ಕ್ರಥನಿಗೆ ಕುಂತಿ ಎಂಬ ಪುತ್ರನಾದನು. ಕುಂತಿಗೆ ವೃಷ್ಣಿ, ವೃಷ್ಣಿಗೆ ನಿರ್ವೃತಿ, ನಿರ್ವೃತಿಗೆ ದಶಾರ್ಹ, ದಶಾರ್ಹನಿಗೆ ವ್ಯೋಮ ನೆಂಬುವನು ಹುಟ್ಟಿದನು. ॥ ೩ ॥ ವ್ಯೋಮನಿಂದ ಜೀಮೂತ, ಜೀಮೂತನಿಗೆ ವಿಕೃತಿ, ವಿಕೃತಿಗೆ ಭೀಮರಥ, ಭೀಮರಥನಿಗೆ ನವರಥ, ನವರಥನಿಗೆ ದಶರಥನು ಹುಟ್ಟಿದನು. ॥ ೪ ॥ ದಶರಥ ನಿಂದ ಶಕುನಿ, ಶಕುನಿಯಿಂದ ಕರಂಭಿ, ಕರಂಭಿಯಿಂದ ದೇವರಾತ, ದೇವರಾತನಿಂದ ದೇವಕ್ಷತ್ರ, ದೇವಕ್ಷತ್ರನಿಂದ ಮಧು, ಮಧು ವಿನಿಂದ ಕುರುವಶ, ಕುರುವಶನಿಂದ ಅನು ಹುಟ್ಟಿದನು. ॥ ೫ ॥ ಅನುವಿನಿಂದ ಪುರುಹೋತ್ರ, ಪುರುಹೋತ್ರನಿಂದ ಆಯು ಮತ್ತು ಆಯುವಿನಿಂದ ಸಾತ್ವತನ ಜನ್ಮವಾಯಿತು. ಪರೀಕ್ಷಿತನೇ! ಸಾತ್ವತನಿಗೆ – ಭಜಮಾನ, ಭಜಿ, ದಿವ್ಯ, ವೃಷ್ಣಿ, ದೇವಾವೃಧ, ಅಂಧಕ ಮತ್ತು ಮಹಾಭೋಜರೆಂಬ ಏಳು ಪುತ್ರರು ಉದಿಸಿದರು. ಭಜಮಾನನಿಗೆ ಇಬ್ಬರು ಪತ್ನಿಯರಿದ್ದರು. ಒಬ್ಬಳಿಂದ – ನಿಮ್ಲೋಚಿ, ಕಿಂಕಿಣ ಮತ್ತು ಧೃಷ್ಟಿ ಎಂಬ ಮೂವರು ಪುತ್ರರಾದರು. ಇನ್ನೊಬ್ಬಳಿಂದ – ಶತಾಜಿತ್, ಸಹಸ್ರಾಜಿತ್ ಮತ್ತು ಅಯುತಾಜಿತ್ ಎಂಬ ಮೂವರು ಪುತ್ರರಾದರು. ॥ ೬-೮ ॥ ಸಾತ್ವತನ ಐದನೆಯ ಮಗನಾದ ದೇವಾವೃಧನಿಗೆ ಬಭ್ರು ಎಂಬ ಮಗನಿದ್ದನು. ದೇವಾವೃಧ ಮತ್ತು ಬಭ್ರುಗಳ ಸಂಬಂಧದಲ್ಲಿ ಈ ಗಾಥೆಯು ಹೇಳಲ್ಪಡುತ್ತದೆ – 'ನಾವು ದೂರದಲ್ಲಿ ಜನರ ಬಾಯಿಂದ ಕೇಳಿದ ಸದ್ಗುಣಗಳೇ ಇವರಲ್ಲಿ ಪ್ರತ್ಯಕ್ಷದಲ್ಲಿಯೂ ಕೂಡ ನೋಡುತ್ತಿದ್ದೇವೆ. ॥ ೯ ॥ ಬಭ್ರು ಮನುಷ್ಯರಲ್ಲಿ ಶ್ರೇಷ್ಠನಾಗಿದ್ದಾನೆ ಮತ್ತು ದೇವಾವೃಧನು ದೇವತೆಗಳಿಗೆ ಸಮಾನನಾಗಿದ್ದಾನೆ. ಇದರ ಕಾರಣ – ಬಭ್ರು ಮತ್ತು ದೇವಾವೃಧರಿಂದ ಉಪದೇಶಪಡೆದು ಹದಿನಾಲ್ಕು ಸಾವಿರದ ಅರವತ್ತೈದು ಮಂದಿಗಳು ಪರಮಪದವನ್ನು ಪಡೆದುಕೊಂಡಿರುವರು. ಸಾತ್ವತನ ಪುತ್ರರಲ್ಲಿ ಮಹಾಭೋಜನೂ ಕೂಡ ಮಹಾ ಧರ್ಮಾತ್ಮನಾಗಿದ್ದನು. ಅವನ ವಂಶದಲ್ಲೇ ಭೋಜ ವಂಶೀಯ ಯಾದವರಾದರು. ॥ ೧೦-೧೧ ॥

ಪರೀಕ್ಷಿತನೇ! ವೃಷ್ಣಿಗೆ – ಸುಮಿತ್ರ ಮತ್ತು ಯುಧಾಜಿತ್ತು ಎಂಬ ಇಬ್ಬರು ಪುತ್ರರಾದರು. ಯುಧಾಜಿತ್ತುವಿಗೆ ಶಿನಿ ಮತ್ತು ಅನಮಿತ್ರ ರೆಂಬ ಇಬ್ಬರು ಮಕ್ಕಳಿದ್ದರು. ಅನಮಿತ್ರನಿಂದ ನಿಮ್ನನ ಜನ್ಮವಾಯಿತು. ॥ ೧೨ ॥ ಸತ್ರಾಜಿತ್ ಹಾಗೂ ಪ್ರಸೇನರೆಂಬ ಪ್ರಸಿದ್ಧರಾದ ಯಾದವರು ನಿಮ್ನನ ಪುತ್ರರೇ ಆಗಿದ್ದರು. ಅನಮಿತ್ರನಿಗೆ ಇನ್ನೊಬ್ಬ ಶಿನಿ ಎಂಬ ಮಗನಿದ್ದನು. ಶಿನಿಯಿಂದ ಸತ್ಯಕನ ಜನ್ಮವಾಯಿತು. ॥ ೧೩ ॥ ಇದೇ ಸತ್ಯಕನ ಪುತ್ರನೇ ಯುಯುಧಾನನಾಗಿದ್ದನು. ಅವನು ಸಾತ್ಯಕಿ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿ ಇರುವನು. ಸಾತ್ಯಕಿಯ ಮಗ ಜಯ, ಜಯನಿಗೆ ಕುಣಿ ಮತ್ತು ಕುಣಿಗೆ ಯುಗಂಧರನೆಂಬ ಪುತ್ರನು ಹುಟ್ಟಿದನು. ಅನಮಿತ್ರನ ಮೂರನೆಯ ಮಗನ ಹೆಸರು ವೃಷ್ಣಿಯೆಂದಿತ್ತು. ವೃಷ್ಣಿಗೆ ಶ್ವಫಲ್ಕ ಮತ್ತು ಚಿತ್ರರಥರೆಂಬ ಇಬ್ಬರು ಪುತ್ರರಿದ್ದರು. ಶ್ವಫಲ್ಕನ ಪತ್ನಿಯ ಹೆಸರು ಗಾಂದಿನೀ ಎಂದಿತ್ತು. ಅವರಲ್ಲಿ ಅತ್ಯಂತ ಶ್ರೇಷ್ಠ ಅಕ್ರೂರನಲ್ಲದೆ – ಆಸಂಗ, ಸಾರಮೇಯ, ಮೃದುರ, ಮೃದುವಿದ್, ಗಿರಿ, ಧರ್ಮವೃದ್ಧ, ಸುಕರ್ಮಾ, ಕ್ಷೇತ್ರೋಪೇಕ್ಷ, ಅರಿಮರ್ದನ,

ಶ್ವಫಲ್ಕಶ್ಚಿತ್ರರಥಶ್ಚ ಗಾಂದಿನ್ಯಾಂ ಚ ಶ್ವಫಲ್ಕತಃ।
ಅಕ್ರೂರಪ್ರಮುಖಾ ಆಸನುತ್ರಾ ದ್ವಾದಶ ವಿಶ್ರುತಾಃ
॥ ೧೫ ॥

ಆಸಂಗಃ ಸಾರಮೇಯಶ್ಚ ಮೃದುರೋ ಮೃದುವಿದ್ಗಿರಿಃ।
ಧರ್ಮವೃದ್ಧಃ ಸುಕರ್ಮಾ ಚ ಕ್ಷೇತ್ರೋಪೇಕ್ಷೋಽರಿಮರ್ದನಃ
॥ ೧೬ ॥

ಶತ್ರುಘ್ನೋ ಗಂಧಮಾದಶ್ಚ ಪ್ರತಿಬಾಹುಶ್ಚ ದ್ವಾದಶ।
ತೇಷಾಂ ಸ್ವಸಾ ಸುಚೀರಾಖ್ಯಾ ದ್ವಾವಕ್ರೂರಸುತಾವಪಿ
॥ ೧೭ ॥

ದೇವವಾನುಪದೇವಶ್ಚ ತಥಾ ಚಿತ್ರರಥಾತ್ಮಜಾಃ।
ಪೃಥುರ್ವಿದೂರಥಾದ್ಯಾಶ್ಚ ಬಹವೋ ವೃಷ್ಣಿನಂದನಾಃ
॥ ೧೮ ॥

ಕುಕುರೋ ಭಜಮಾನಶ್ಚ ಶುಚಿಃ ಕಂಬಲಬರ್ಹಿಷಃ।
ಕುಕುರಸ್ಯ ಸುತೋ ವಹ್ನಿರ್ವಿಲೋಮಾ ತನಯಸ್ತತಃ
॥ ೧೯ ॥

ಕಪೋತರೋಮಾ ತಸ್ಯಾನುಃ ಸಖಾ ಯಸ್ಯ ಚ ತುಂಬುರುಃ।
ಅಂಧಕೋ ದುಂದುಭಿಸ್ತಸ್ಮಾದರಿದ್ಯೋತಃ ಪುನರ್ವಸುಃ
॥ ೨೦ ॥

ತಸ್ಯಾಹುಕಶ್ಚಾಹುಕೀ ಚ ಕನ್ಯಾ ಚೈವಾಹುಕಾತ್ಮಜೌ।
ದೇವಕಶ್ಚೋಗ್ರಸೇನಶ್ಚ ಚತ್ವಾರೋ ದೇವಕಾತ್ಮಜಾಃ
॥ ೨೧ ॥

ದೇವವಾನುಪದೇವಶ್ಚ ಸುದೇವೋ ದೇವವರ್ಧನಃ।
ತೇಷಾಂ ಸ್ವಸಾರಃ ಸಪ್ತಾಸನ್ ಧೃತದೇವಾದಯೋ ನೃಪ
॥ ೨೨ ॥

ಶಾಂತಿದೇವೋಪದೇವಾ ಚ ಶ್ರೀದೇವಾ ದೇವರಕ್ಷಿತಾ।
ಸಹದೇವಾ ದೇವಕೀ ಚ ವಸುದೇವ ಉವಾಹ ತಾಃ
॥ ೨೩ ॥

ಕಂಸಃ ಸುನಾಮಾ ನ್ಯಗ್ರೋಧಃ ಕಂಕಃ ಶಂಕುಃ ಸುಹೂಸ್ತಥಾ।
ರಾಷ್ಟ್ರಪಾಲೋಽಥ ಸೃಷ್ಟಿಶ್ಚ ತುಷ್ಟಿಮಾನೌಗ್ರಸೇನಯಃ
॥ ೨೪ ॥

ಕಂಸಾ ಕಂಸವತೀ ಕಂಕಾ ಶೂರಭೂ ರಾಷ್ಟ್ರಪಾಲಿಕಾ।
ಉಗ್ರಸೇನದುಹಿತರೋ ವಸುದೇವಾನುಜಸ್ತ್ರಿಯಃ
॥ ೨೫ ॥

ಶೂರೋ ವಿದೂರಥಾದಾಸೀದ್ಭಜಮಾನಃ ಸುತಸ್ತತಃ।
ಶಿನಿಸ್ತಸ್ಮಾತ್ಸ್ವಯಂಭೋಜೋ ಹೃದೀಕಸ್ತತ್ಸುತೋ ಮತಃ
॥ ೨೬ ॥

ದೇವಬಾಹುಃ ಶತಧನುಃ ಕೃತವರ್ಮೇತಿ ತತ್ಸುತಾಃ।
ದೇವಮೀಢಸ್ಯ ಶೂರಸ್ಯ ಮಾರಿಷಾ ನಾಮ ಪತ್ನ್ಯಭೂತ್
॥ ೨೭ ॥

ಶತ್ರುಘ್ನ, ಗಂಧಮಾದನ, ಪ್ರತಿಬಾಹು ಎಂಬ ಹನ್ನೆರಡು ಪುತ್ರರು ಹುಟ್ಟಿದರು. ಇವರಿಗೆ ಸುಚೀರಾ ಎಂಬ ಓರ್ವ ತಂಗಿಯೂ ಇದ್ದಳು. ಅಕ್ರೂರನಿಗೆ – ದೇವವಾನ್ ಮತ್ತು ಉಪದೇವರೆಂಬ ಇಬ್ಬರು ಪುತ್ರರಿದ್ದರು. ಶ್ವಫಲ್ಕನ ತಮ್ಮ ಚಿತ್ರರಥನಿಗೆ ಪೃಥು, ವಿದೂರಥ ಮೊದಲಾದ ಅನೇಕ ಪುತ್ರರಾದರು. ಆವರೆಲ್ಲರೂ ವೃಷ್ಣಿವಂಶಿಯರಲ್ಲಿ ಶ್ರೇಷ್ಠರೆಂದು ಪರಿಗಣಿಸಲ್ಪಟ್ಟಿರುವರು. ॥ ೧೪-೧೯ ॥ ಸಾತ್ವತನ ಪುತ್ರನಾದ ಅಂಧಕನಿಗೆ ಕುಕುರ, ಭಜಮಾನ, ಶುಚಿ, ಕಂಬಲಬರ್ಹಿ ಎಂಬ ನಾಲ್ವರು ಪುತ್ರರಾದರು. ಆವರಲ್ಲಿ ಕುಕುರನ ಪುತ್ರ ವಹ್ನಿ, ವಹ್ನಿಗೆ ವಿಲೋಮಾ, ವಿಲೋಮನಿಗೆ ಕಪೋತರೋಮಾ, ಕಪೋತರೋಮನಿಗೆ ಅನು ಎಂಬುವನು ಹುಟ್ಟಿದನು. ತುಂಬುರು ಗಂಧರ್ವನೊಂದಿಗೆ ಅವನಿಗೆ ಅತ್ಯಂತ ಮಿತ್ರತೆ ಇತ್ತು. ಅನುವಿನ ಪುತ್ರ ಅಂಧಕ, ಅಂಧಕನಿಗೆ ದುಂದುಭಿ, ದುಂದುಭಿಗೆ ಅರಿದ್ಯೋತ, ಅರಿದ್ಯೋತನಿಗೆ ಪುನರ್ವಸು, ಪುನರ್ವಸುವಿಗೆ ಆಹುಕನೆಂಬ ಓರ್ವ ಪುತ್ರನೂ, ಆಹುಕಿ ಎಂಬ ಓರ್ವ ಕನ್ಯೆಯು ಹುಟ್ಟಿದರು. ಆಹುಕನಿಗೆ ದೇವಕ ಮತ್ತು ಉಗ್ರಸೇನರೆಂಬ ಇಬ್ಬರು ಪುತ್ರರಾದರು. ದೇವಕನಿಗೆ ನಾಲ್ಕು ಮಕ್ಕಳಾದರು. ॥ ೧೯-೨೧ ॥ ದೇವವಾನ್, ಉಪದೇವ, ಸುದೇವ ಮತ್ತು ದೇವವರ್ಧನ ಇವರು ದೇವಕನ ಮಕ್ಕಳು. ಇವರಿಗೆ – ಧೃತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ, ದೇವರಕ್ಷಿತಾ, ಸಹದೇವಾ ಮತ್ತು ದೇವಕಿ ಎಂಬ ಏಳುಮಂದಿ ತಂಗಿಯರಿದ್ದರು. ವಸುದೇವನು ಇವರೆಲ್ಲರೊಂದಿಗೆ ವಿವಾಹವಾಗಿದ್ದನು. ॥ ೨೨-೨೩. ॥ ಉಗ್ರಸೇನನಿಗೆ – ಕಂಸ, ಸುನಾಮಾ, ನ್ಯಗ್ರೋಧ, ಕಂಕ, ಶಂಕು, ಸುಹೂ, ರಾಷ್ಟ್ರಪಾಲ, ಸೃಷ್ಟಿ ಮತ್ತು ತುಷ್ಟಿಮಾನ್ ಎಂಬ ಒಂಭತ್ತು ಮಕ್ಕಳಿದ್ದರು. ॥ ೨೪ ॥ ಉಗ್ರಸೇನನಿಗೆ – ಕಂಸಾ, ಕಂಸವತೀ, ಕಂಕಾ, ಶೂರಭೂ, ರಾಷ್ಟ್ರಪಾಲಿಕಾ ಎಂಬ ಐದು ಮಂದಿ ಕನ್ಯೆಯರೂ ಇದ್ದರು. ಇವರ ವಿವಾಹವು – ದೇವಭಾಗ ಮೊದಲಾದ ವಸುದೇವನ ತಮ್ಮಂದಿರೊಂದಿಗೆ ಆಗಿತ್ತು. ॥ ೨೫ ॥

ಚಿತ್ರರಥನ ಪುತ್ರನಾದ ವಿದೂರಥನಿಗೆ ಶೂರ, ಶೂರನಿಂದ ಭಜಮಾನ, ಭಜಮಾನನಿಂದ ಶಿನಿ, ಶಿನಿಯಿಂದ ಸ್ವಯಂಭೋಜ, ಸ್ವಯಂಭೋಜನಿಂದ ಹೃದೀಕ ಹುಟ್ಟಿದರು. ॥ ೨೬ ॥

ಹೃದೀಕನಿಗೆ – ದೇವಬಾಹು, ಶತಧನ್ವಾ, ಕೃತವರ್ಮಾ ಎಂಬ ಮೂರು ಮಕ್ಕಳಾದರು. ದೇವಮೀಢನ ಪುತ್ರನಾದ ಶೂರನ ಪತ್ನೀಯ ಹೆಸರು ಮಾರಿಷಾ ಎಂದಿತ್ತು. ॥ ೨೭ ॥ ಶೂರಸೇನನು ಮಾರಿಷಾಳಿಂದ ವಸುದೇವ, ದೇವಭಾಗ, ದೇವಶ್ರವಾ, ಆನಕ, ಸೃಂಜಯ, ಶ್ಯಾಮಕ, ಕಂಕ, ಶಮೀಕ, ವತ್ಸಕ ಮತ್ತು ವೃಕ ಎಂಬ ಪುಣ್ಯಾತ್ಮರಾದ ಹತ್ತು ಮಕ್ಕಳನ್ನು ಪಡೆದನು. ವಸುದೇವನು ಹುಟ್ಟುವಾಗ ದೇವದುಂದುಭಿಗಳು ತಾನಾಗಿಯೇ ಮೊಳಗಿದವು. ಆದ್ದರಿಂದ ಅವನನ್ನು, 'ಆನಕದುಂದುಭಿ' ಎಂದೂ ಕರೆಯುತ್ತಿದ್ದರು. ಅವನೇ ಭಗವಾನ್ ಶ್ರೀಕೃಷ್ಣನಿಗೆ ತಂದೆಯಾದನು. ವಸುದೇವನಿಗೆ ಪೃಥಾ, (ಕುಂತಿ) ಶ್ರುತದೇವಾ, ಶ್ರುತಕೀರ್ತಿ, ಶ್ರುತಶ್ರವಾ ಮತ್ತು ರಾಜಾಧಿದೇವಿ ಎಂಬ ಐದು ತಂಗಿಯರೂ ಇದ್ದರು. ವಸುದೇವನ

ತಸ್ಯಾಂ ಸ ಜನಯಾಮಾಸ ದಶ ಪುತ್ರಾನಕಲ್ಮಷಾನ್ ।
ವಸುದೇವಂ ದೇವಭಾಗಂ ದೇವಶ್ರವಸಮಾನಕಮ್
॥ ೨೮ ॥

ಸೃಂಜಯಂ ಶ್ಯಾಮಕಂ ಕಂಕಂ ಶಮೀಕಂ ವತ್ಸಕಂ ವೃಕಮ್ ।
ದೇವದುಂದುಭಯೋ ನೇದುರಾನಕಾ ಯಸ್ಯ ಜನ್ಮನಿ
॥ ೨೯ ॥

ವಸುದೇವಂ ಹರೇಃ ಸ್ಥಾನಂ ವದಂತ್ಯಾನಕದುಂದುಭಿಮ್ ।
ಪೃಥಾ ಚ ಶ್ರುತದೇವಾ ಚ ಶ್ರುತಕೀರ್ತಿಃ ಶ್ರುತಶ್ರವಾಃ
॥ ೩೦ ॥

ರಾಜಾಧಿದೇವೀ ಚೈತೇಷಾಂ ಭಗಿನ್ಯಃ ಪಂಚ ಕನ್ಯಕಾಃ ।
ಕುಂತೇಃ ಸಖ್ಯುಃ ಪಿತಾ ಶೂರೋ ಹ್ಯಪುತ್ರಸ್ಯ ಪೃಥಾಮದಾತ್
॥ ೩೧ ॥

ಸಾऽऽಹ ದುರ್ವಾಸಸೋ ವಿದ್ಯಾಂದೇವಹೂತೀಂ ಪ್ರತೋಷಿತಾತ್ ।
ತಸ್ಯಾ ವೀರ್ಯಪರೀಕ್ಷಾರ್ಥಮಾಜುಹಾವ ರವಿಂ ಶುಚಿಃ
॥ ೩೨ ॥

ತದೈವೋಪಾಗತಂ ದೇವಂ ವೀಕ್ಷ್ಯ ವಿಸ್ಮಿತಮಾನಸಾ ।
ಪ್ರತ್ಯಯಾರ್ಥಂ ಪ್ರಯುಕ್ತಾ ಮೇ ಯಾಹಿ ದೇವ ಕ್ಷಮಸ್ವ ಮೇ
॥ ೩೩ ॥

ಅಮೋಘಂ ದರ್ಶನಂ ದೇವಿ ಆಧಿತ್ಸೇ ತ್ವಯಿ ಚಾತ್ಮಜಮ್ ।
ಯೋನಿರ್ಯಥಾ ನ ದುಷ್ಯೇತ ಕರ್ತಾಹಂ ತೇ ಸುಮಧ್ಯಮೇ
॥ ೩೪ ॥

ಇತಿ ತಸ್ಯಾಂ ಸ ಆಧಾಯ ಗರ್ಭಂ ಸೂರ್ಯೋ ದಿವಂ ಗತಃ ।
ಸದ್ಯಃ ಕುಮಾರಃ ಸಂಜಜ್ಞೇ ದ್ವಿತೀಯ ಇವ ಭಾಸ್ಕರಃ
॥ ೩೫ ॥

ತಂ ಸಾತ್ಯಜನ್ನದೀತೋಯೇ ಕೃಚ್ಛ್ರಾಲ್ಲೋಕಸ್ಯ ಬಿಭ್ಯತೀ ।
ಪ್ರಪಿತಾಮಹಸ್ತಾಮುವಾಹ ಪಾಂಡುರ್ವೈ ಸತ್ಯವಿಕ್ರಮಃ
॥ ೩೬ ॥

ಶ್ರುತದೇವಾಂ ತು ಕಾರೂಷೋ ವೃದ್ಧಶರ್ಮಾ ಸಮಗ್ರಹೀತ್ ।
ಯಸ್ಯಾಮಭೂದ್ದಂತವಕ್ತ್ರ ಋಷಿಶಪ್ತೋ ದಿತೇಃ ಸುತಃ
॥ ೩೭ ॥

ಕೈಕೇಯೋ ಧೃಷ್ಟಕೇತುಶ್ಚ ಶ್ರುತಕೀರ್ತಿಮವಿಂದತ ।
ಸಂತರ್ದನಾದಯಸ್ತಸ್ಯ ಪಂಚಾಸನ್ಕೈಕಯಾಃ ಸುತಾಃ
॥ ೩೮ ॥

ರಾಜಾಧಿದೇವ್ಯಾಮಾವಂತ್ಯೌ ಜಯಸೇನೋऽಜನಿಷ್ಟ ಹ ।
ದಮಘೋಷಶ್ಚೇದಿರಾಜಃ ಶ್ರುತಶ್ರವಸಮಗ್ರಹೀತ್
॥ ೩೯ ॥

ಶಿಶುಪಾಲಃ ಸುತಸ್ತಸ್ಯಾಃ ಕಥಿತಸ್ತಸ್ಯ ಸಂಭವಃ ।
ದೇವಭಾಗಸ್ಯ ಕಂಸಾಯಾಂ ಚಿತ್ರಕೇತುಬೃಹದ್ಬಲೌ
॥ ೪೦ ॥

ತಂದೆ ಶೂರಸೇನನಿಗೆ ಕುಂತಿಭೋಜನೆಂಬ ಮಿತ್ರನಿದ್ದನು. ಕುಂತಿ ಭೋಜನಿಗೆ ಯಾವ ಸಂತಾನವೂ ಇರಲಿಲ್ಲ. ಅದಕ್ಕಾಗಿ ಶೂರ ಸೇನನು ಅವನಿಗೆ ತನ್ನ ಹಿರಿಯಳಾದ ಪೃಥಾಳನ್ನು ದತ್ತಕವಾಗಿ ಕೊಟ್ಟಿದ್ದನು. ॥ ೨೮-೩೧ ॥

ಪೃಥಾದೇವಿಯು ದುರ್ವಾಸರನ್ನು ತನ್ನ ಸೇವೆಯಿಂದ ಪ್ರಸನ್ನ ಗೊಳಿಸಿ ಅವರ ಅನುಗ್ರಹದಿಂದ ದೇವತೆಗಳನ್ನೂ ಸಮಾಗಮಕ್ಕಾಗಿ ಕರೆಯಬಹುದಾದ ವಿದ್ಯೆಯನ್ನು ಕಲಿತಳು. ಒಂದು ದಿನ ಆ ವಿದ್ಯೆಯನ್ನು ಪರೀಕ್ಷಿಸಲೋಸುಗ ಪೃಥೆಯು ಪರಮಪವಿತ್ರಳಾಗಿ ಭಗವಾನ್ ಸೂರ್ಯನನ್ನು ಆವಾಹನೆ ಮಾಡಿದಳು. ॥ ೩೨ ॥ ಮಂತ್ರಪಠಿಸಿ ಆಹ್ವಾನಿಸಿದೊಡನೆ ಸೂರ್ಯ ಭಗವಂತನು ಅವಳ ಬಳಿಗೆ ಬಂದೇಬಿಟ್ಟನು. ಸೂರ್ಯನನ್ನು ನೋಡಿ ಕುಂತಿಯು ಅಚ್ಚರಿಗೊಂಡು ಹೇಳಿದಳು – "ಸೂರ್ಯಭಗವಂತ! ನನ್ನನ್ನು ಕ್ಷಮಿಸಿಬಿಡು. ಮುನಿಗಳ ಮಾತನ್ನು ಪರೀಕ್ಷಿಸಲು ಈ ವಿದ್ಯೆಯನ್ನು ಪ್ರಯೋಗಿಸಿದೆನು. ಮಂತ್ರದ ಪ್ರಭಾವ ನನಗೀಗ ತಿಳಿದು ಹೋಯಿತು. ನೀನಿನ್ನು ಹೊರಡಬಹುದು. ॥ ೩೩॥ ಸೂರ್ಯ ದೇವನು ಹೇಳಿದನು – ದೇವೀ! ನನ್ನ ದರ್ಶನವು ನಿಷ್ಫಲವಾಗ ಬಾರದು. ಅದಕ್ಕಾಗಿ ನಾನೀಗಲೇ ನಿನಗೆ ಒಬ್ಬ ಪುತ್ರನನ್ನು ಅನುಗ್ರಹಿಸುತ್ತೇನೆ. ಇದರಿಂದ ನಿನ್ನ ಕ್ಷೇತ್ರವು ದೂಷಿತವಾಗು ವುದಿಲ್ಲ. ನೀನು ಕನ್ಯೆಯಾಗಿಯೇ ಉಳಿಯುವೆ. ॥ ೩೪ ॥ ಹೀಗೆ ಹೇಳಿ ಸೂರ್ಯದೇವನು ಆಕೆಗೆ ದಿವ್ಯವಾದ ಒಂದು ಗಂಡು ಮಗುವನ್ನು ಕರುಣಿಸಿ ಸ್ವರ್ಗಕ್ಕೆ ಹೊರಟುಹೋದನು. ಆ ಮಗುವು ಅತ್ಯಂತ ಸುಂದರವಾಗಿದ್ದು ಪ್ರತಿಸೂರ್ಯನಂತೆ ಕಂಗೊಳಿಸು ತ್ತಿತ್ತು. ॥ ೩೫ ॥ ಪೃಥೆಯು ಲೋಕನಿಂದೆಗೆ ಹೆದರಿ, ಅತೀವ ದುಃಖದಿಂದ ಆ ಮುದ್ದು ಬಾಲಕನನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಗಂಗೆಯಲ್ಲಿ ತೇಲಿಬಿಟ್ಟಳು. ಪರೀಕ್ಷಿತನೇ! ಆ ಪೃಥೆಯನ್ನೇ ನಿನ್ನ ಮುತ್ತಾತನಾದ ಪಾಂಡುವು ವಿವಾಹವಾದನು. ಅವನು ನಿಜವಾಗಿ ಮಹಾಪರಾಕ್ರಮಿ ಯಾಗಿದ್ದನು. ॥ ೩೬ ॥

ಪರೀಕ್ಷಿತನೇ! ಪೃಥೆಯ ತಂಗಿ ಶ್ರುತದೇವಾ ಎಂಬುವಳನ್ನು ಕರೂಷದೇಶದ ಅಧಿಪತಿ ವೃದ್ಧಶರ್ಮಾ ವಿವಾಹವಾದನು. ಆಕೆಯ ಗರ್ಭದಿಂದ ದಂತವಕ್ತ್ರನ ಜನ್ಮವಾಯಿತು. ಪೂರ್ವಜನ್ಮದಲ್ಲಿ ಸನಕಾದಿ ಋಷಿಗಳ ಶಾಪದಿಂದ ಹಿರಣ್ಯಾಕ್ಷನಾದವನೇ ಈ ದಂತವಕ್ತ್ರನಾಗಿದ್ದನು. ॥ ೩೭ ॥

ಕೇಕಯದೇಶದ ರಾಜಾ ಧೃಷ್ಟಕೇತುವು ಶ್ರುತಕೀರ್ತಿಯೊಂದಿಗೆ ವಿವಾಹವಾದನು. ಅವಳಲ್ಲಿ ಸಂತರ್ದನರೇ ಆದಿ ಐದು ಕೈಕಯ ರಾಜಕುಮಾರರು ಹುಟ್ಟಿದರು. ॥ ೩೮ ॥ ರಾಜಾಧಿದೇವಿಯ ವಿವಾಹವು ಜಯಸೇನ ನೊಂದಿಗೆ ನಡೆಯಿತು. ಅವಳಿಗೆ ವಿಂದ ಮತ್ತು ಅನುವಿಂದ ಎಂಬ ಇಬ್ಬರು ಪುತ್ರರಾದರು. ಇವರಿಬ್ಬರೂ ಅವಂತಿ ನರೇಶರಾದರು. ಚೇದಿರಾಜ ದಮಘೋಷನು ಶ್ರುತಶ್ರವಾ ಎಂಬುವಳನ್ನು ಪಾಣಿ ಗ್ರಹಣಮಾಡಿದನು. ॥ ೩೯ ॥ ಅವಳ ಪುತ್ರನೇ ಶಿಶುಪಾಲನು. ಇವನ ವಿಷಯವಾಗಿ ನಾನು ಮೊದಲೇ (ಏಳನೆಯ ಸ್ಕಂಧದಲ್ಲಿ) ವರ್ಣಿಸಿರುವೆನು. ವಸುದೇವನ ತಮ್ಮಂದಿರಲ್ಲಿ ದೇವಭಾಗನ ಪತ್ನಿಯಾದ ಕಂಸೆಯಿಂದ ಚಿತ್ರಕೇತು ಮತ್ತು ಬೃಹದ್ಬಲರೆಂಬ ಇಬ್ಬರು ಪುತ್ರರು ಹುಟ್ಟಿದರು. ॥ ೪೦ ॥

ಕಂಸವತ್ಯಾಂ ದೇವಶ್ರವಸಃ ಸುವೀರ ಇಷುಮಾಂಸ್ತಥಾ ।
ಕಂಕಾಯಾಮಾನಕಾಜ್ಜಾತಃ ಸತ್ಯಜಿತ್ಪುರುಜಿತ್ತಥಾ
॥ ೪೧ ॥

ಸೃಂಜಯೋ ರಾಷ್ಟ್ರಪಾಲ್ಯಾಂ ಚ ವೃಷದುರ್ಮರ್ಷಣಾದಿಕಾನ್ ।
ಹರಿಕೇಶಹಿರಣ್ಯಾಕ್ಷೌ ತೂರಭೂಮ್ಯಾಂ ಚ ತಾಮಕಃ
॥ ೪೨ ॥

ಮಿಶ್ರಕೇಶ್ಯಾಮಪ್ಸರಸಿ ವೃಕಾದೀನ್ವತ್ಸಕಸ್ತಥಾ ।
ತಕ್ಷಪುಷ್ಕರಶಾಲಾದೀಂದುರ್ವಾಕ್ಷ್ಯಾಂ ವೃಕ ಆದಧೇ
॥ ೪೩ ॥

ಸುಮಿತ್ರಾರ್ಜುನಪಾಲಾದೀನ್ ಶಮೀಕಾತ್ತು ಸುದಾಮಿನೀ ।
ಕಂಕಶ್ಚ ಕರ್ಣಿಕಾಯಾಂ ವೈ ಋತಧಾಮಜಯಾವಪಿ
॥ ೪೪ ॥

ಪೌರವೀ ರೋಹಿಣೀ ಭದ್ರಾ ಮದಿರಾ ರೋಚನಾ ಇಲಾ ।
ದೇವಕೀಪ್ರಮುಖಾ ಆಸನ್ಪತ್ನ್ಯ ಆನಕದುಂದುಭೇಃ
॥ ೪೫ ॥

ಬಲಂ ಗದಂ ಸಾರಣಂ ಚ ದುರ್ಮದಂ ವಿಪುಲಂ ಧ್ರುವಮ್ ।
ವಸುದೇವಸ್ತು ರೋಹಿಣ್ಯಾಂ ಕೃತಾದೀನುದಪಾದಯತ್
॥ ೪೬ ॥

ಸುಭದ್ರೋ ಭದ್ರವಾಹಶ್ಚ ದುರ್ಮದೋ ಭದ್ರ ಏವ ಚ ।
ಪೌರವ್ಯಾಸ್ತನಯಾ ಹ್ಯೇತೇ ಭೂತಾದ್ಯಾ ದ್ವಾದಶಾಭವನ್
॥ ೪೭ ॥

ನಂದೋಪನಂದಕೃತಕಶೂರಾದ್ಯಾ ಮದಿರಾತ್ಮಜಾಃ ।
ಕೌಸಲ್ಯಾ ಕೇಶಿನಂ ತ್ವೇಕಮಸೂತ ಕುಲನಂದನಮ್
॥ ೪೮ ॥

ರೋಚನಾಯಾಮತೋ ಜಾತಾ ಹಸ್ತಹೇಮಾಂಗದಾದಯಃ ।
ಇಲಾಯಾ ಮುರುವಲ್ಕಾದೀನ್ಯದುಮುಖ್ಯಾನಜೀಜನತ್
॥ ೪೯ ॥

ವಿಪೃಷ್ಠೋ ಧೃತದೇವಾಯಾಮೇಕ ಆನಕದುಂದುಭೇಃ ।
ಶಾಂತಿದೇವಾತ್ಮಜಾ ರಾಜನ್ ಶ್ರಮಪ್ರತಿಶ್ರುತಾದಯಃ
॥ ೫೦ ॥

ವಾಸಾನಃ ಕಲ್ಪವರ್ಷಾದ್ಯಾ ಉಪದೇವಾಸುತಾ ದಶ ।
ಹಂಸಸುವಂಶಾದ್ಯಾಃ ಶ್ರೀದೇವಾಯಾಸ್ತು ಷಟ್ಸುತಾಃ
॥ ೫೧ ॥

ದೇವರಕ್ಷಿತಯಾ ಲಬ್ಧಾ ನವ ಚಾತ್ರ ಗದಾದಯಃ ।
ವಸುದೇವಃ ಸುತಾನಷ್ಟಾವಾದಧೇ ಸಹದೇವಯಾ
॥ ೫೨ ॥

ಪುರುವಿಶ್ರುತಮುಖ್ಯಾಂಸ್ತು ಸಾಕ್ಷಾದ್ಧರ್ಮೋ ವಸೂನಿವ ।
ವಸುದೇವಸ್ತು ದೇವಕ್ಯಾಮಷ್ಟ ಪುತ್ರಾನಜೀಜನತ್
॥ ೫೩ ॥

ಕೀರ್ತಿಮಂತಂ ಸುಷೇಣಂ ಚ ಭದ್ರಸೇನಮುದಾರಧೀಃ ।
ಋಜುಂ ಸಮ್ಮರ್ದನಂ ಭದ್ರಂ ಸಂಕರ್ಷಣಮಹೀಶ್ವರಮ್
॥ ೫೪ ॥

ದೇವಶ್ರವಾನ ಪತ್ನಿಯಾದ ಕಂಸವತಿಯಿಂದ ಸುವೀರ ಹಾಗೂ ಇಷುಮಾನ್‌ರೆಂಬ ಇಬ್ಬರು ಪುತ್ರರಾದರು. ಆನಕನ ಪತ್ನಿಯಾದ ಕಂಕಾಳಿಂದ – ಶತ್ರುಜಿತ್ ಮತ್ತು ಪುರುಜಿತ್‌ರೆಂಬ ಇಬ್ಬರು ಪುತ್ರರು ಹುಟ್ಟಿದರು. ॥ ೪೧ ॥ ಸೃಂಜಯನು ತನ್ನ ಪತ್ನಿಯಾದ ರಾಷ್ಟ್ರಪಾಲಿಕೆಯಿಂದ ವೃಷ ಮತ್ತು ದುರ್ಮರ್ಷಣರೇ ಮೊದಲಾದ ಅನೇಕ ಪುತ್ರರನ್ನು ಪಡೆದನು. ಹೀಗೆಯೇ ಶ್ಯಾಮಕನು ತೂರಭೂಮಿ (ತೂರಭೂ) ಎಂಬ ಪತ್ನಿಯಿಂದ ಹರಿಕೇಶ ಮತ್ತು ಹಿರಣ್ಯಾಕ್ಷರೆಂಬ ಇಬ್ಬರು ಮಕ್ಕಳನ್ನು ಪಡೆದನು. ॥ ೪೨ ॥ ಮಿಶ್ರಕೇಶೀ ಅಪ್ಸರೆಯ ಗರ್ಭದಿಂದ ವತ್ಸಕನೂ ಕೂಡ ವೃಕ ಮೊದಲಾದ ಅನೇಕ ಪುತ್ರರನ್ನು ಹೊಂದಿದನು. ವೃಕನು ದುರ್ವಾಕ್ಷಿಯಿಂದ ತಕ್ಷ, ಪುಷ್ಕರ, ಶಾಲ ಮೊದಲಾದ ಹಲವು ಮಕ್ಕಳನ್ನು ಪಡೆದುಕೊಂಡನು. ॥ ೪೩ ॥ ಶಮೀಕನ ಪತ್ನಿಯಾದ ಸುದಾಮಿನಿಯು ಸುಮಿತ್ರ, ಅರ್ಜುನಪಾಲ ಮೊದಲಾದ ಅನೇಕ ಮಕ್ಕಳನ್ನು ಪಡೆದಳು. ಕಂಕನ ಪತ್ನಿ ಕರ್ಣಿಕೆಯಿಂದ ಋತುಧಾಮ ಮತ್ತು ಜಯರೆಂಬ ಇಬ್ಬರು ಮಕ್ಕಳು ಉಂಟಾದರು. ॥ ೪೪ ॥

ಆನಕದುಂದುಭಿಯಾದ ವಸುದೇವನಿಗೆ ಪೌರವೀ, ರೋಹಿಣೀ, ಭದ್ರಾ, ಮದಿರಾ, ರೋಚನಾ, ಇಲಾ ಮತ್ತು ದೇವಕಿ ಮುಂತಾದ ಅನೇಕ ಪತ್ನಿಯರಿದ್ದರು. ॥ ೪೫ ॥ ರೋಹಿಣಿಯ ಗರ್ಭದಿಂದ ವಸುದೇವನು ಬಲರಾಮ, ಗದ, ಸಾರಣ, ದುರ್ಮದ, ವಿಪುಲ, ಧ್ರುವ ಮತ್ತು ಕೃತ ಮುಂತಾದ ಪುತ್ರರನ್ನು ಪಡೆದನು. ॥ ೪೬ ॥ ಪೌರವಿಯ ಗರ್ಭದಿಂದ ಭೂತ ಸುಭದ್ರ, ಭದ್ರವಾಹ, ದುರ್ಮದ, ಭದ್ರ ಮೊದಲಾದ ಹನ್ನೆರಡು ಮಕ್ಕಳನ್ನು ಪಡೆದನು. ॥ ೪೭ ॥ ಮದಿರೆಯ ಗರ್ಭದಿಂದ ನಂದ, ಉಪನಂದ, ಕೃತಕ, ಶೂರ ಮುಂತಾದವರು ಹುಟ್ಟಿದರು. ಕೌಸಲ್ಯೆಯು ಕುಲಕ್ಕೆ ಆನಂದ ದಾಯಕನಾದ 'ಕೇಶೀ' ಎಂಬ ಓರ್ವನೇ ಪುತ್ರನನ್ನು ಹಡೆದಳು. ॥ ೪೮ ॥ ರೋಚನಾ ಎಂಬುವಳಲ್ಲಿ ಹಸ್ತ, ಹೇಮಾಂಗ ಮೊದ ಲಾದವರು, ಇಲೆಯಿಂದ ಉರುವಲ್ಕ ಮೊದಲಾದ ಯಾದವ ಮುಖ್ಯರಾದ ಪುತ್ರರನ್ನು ಪಡೆದನು. ॥ ೪೯ ॥ ಪರೀಕ್ಷಿತನೇ! ವಸುದೇವನ ಪತ್ನಿಯಾದ ಧೃತದೇವಾ ಎಂಬುವಳಲ್ಲಿ ವಿಪೃಷ್ಠ ಎಂಬ ಒಬ್ಬ ಮಗನಾದನು. ಶಾಂತಿದೇವಿಯಲ್ಲಿ ಶ್ರಮ ಮತ್ತು ಪ್ರತಿಶ್ರುತ ಮೊದಲಾದ ಅನೇಕ ಪುತ್ರರು ಹುಟ್ಟಿದರು. ॥ ೫೦ ॥

ಉಪದೇವಾ ಎಂಬುವಳಿಂದ ಕಲ್ಪವರ್ಷ ಮೊದಲಾದ ಹತ್ತು ರಾಜರನ್ನು ಪಡೆದನು. ಶ್ರೀದೇವಾಳಿಂದ ವಸು, ಹಂಸ, ಸುವಂಶ ಮೊದಲಾದ ಆರು ಪುತ್ರರಾದರು. ॥ ೫೧ ॥ ದೇವರಕ್ಷಿತೆಯಿಂದ ಗದ ಮೊದಲಾದ ಒಂಭತ್ತು ಪುತ್ರರಾದರು. ಧರ್ಮನು ಎಂಟು ವಸುಗಳನ್ನು ಪಡೆದುಕೊಂಡಂತೆ ವಸುದೇವನು ಸಹದೇವಾಳಿಂದ ಪುರುವಿಶ್ರುತ ಮೊದಲಾದ ಎಂಟು ಪುತ್ರರನ್ನು ಪಡೆದನು. ಪರಮಉದಾರ ವಸುದೇವನು ದೇವಕಿಯ ಗರ್ಭದಿಂದಲೂ ಎಂಟುಮಂದಿ ಪುತ್ರರನ್ನು ಪಡೆದನು – ಅವರಲ್ಲಿ ಏಳರ ಹೆಸರು – ಕೀರ್ತಿಮಾನ್, ಸುಷೇಣ, ಭದ್ರಸೇನ, ಋಜು, ಸಮ್ಮರ್ದನ, ಭದ್ರ ಮತ್ತು ಶೇಷಾವತಾರೀ ಶ್ರೀಬಲರಾಮ ಎಂದಿತ್ತು. ॥ ೫೨-೫೪ ॥

ಅಷ್ಟಮಸ್ತು ತಯೋರಾಸೀತ್ಪ್ರಿಯಮೇವ ಹರಿಃ ಕಿಲ ।
ಸುಭದ್ರಾ ಚ ಮಹಾಭಾಗಾ ತವ ರಾಜನ್ಪಿತಾಮಹೀ
॥ ೫೫ ॥

ಯದಾ ಯದೇಹ ಧರ್ಮಸ್ಯ ಕ್ಷಯೋ ವೃದ್ಧಿಶ್ಚ ಪಾಪ್ಮನಃ ।
ತದಾ ತು ಭಗವಾನೀಶ ಆತ್ಮಾನಂ ಸೃಜತೇ ಹರಿಃ
॥ ೫೬ ॥

ನ ಹ್ಯಸ್ಯ ಜನ್ಮನೋ ಹೇತುಃ ಕರ್ಮಣೋ ವಾ ಮಹೀಪತೇ ।
ಆತ್ಮಮಾಯಾಂ ವಿನೇಶಸ್ಯ ಪರಸ್ಯ ದ್ರಷ್ಟುರಾತ್ಮನಃ
॥ ೫೭ ॥

ಯನ್ಮಾಯಾಚೇಷ್ಟಿತಂ ಪುಂಸಃ ಸ್ಥಿತ್ಯುತ್ಪತ್ತ್ಯಪ್ಯಯಾಯ ಹಿ ।
ಅನುಗ್ರಹಸ್ತನ್ನಿವೃತ್ತೇರಾತ್ಮಲಾಭಾಯ ಚೇಷ್ಯತೇ
॥ ೫೮ ॥

ಅಕ್ಷೌಹಿಣೀನಾಂ ಪತಿಭಿರಸುರೈರ್ನೃಪಲಾಂಛನೈಃ ।
ಭುವ ಆಕ್ರಮ್ಯಮಾಣಾಯಾ ಅಭಾರಾಯ ಕೃತೋದ್ಯಮಃ
॥ ೫೯ ॥

ಕರ್ಮಾಣ್ಯಪರಿಮೇಯಾಣಿ ಮನಸಾಪಿ ಸುರೇಶ್ವರೈಃ ।
ಸಹಸಂಕರ್ಷಣಶ್ಚಕ್ರೇ ಭಗವಾನ್ಮಧುಸೂದನಃ
॥ ೬೦ ॥

ಕಲೌ ಜನಿಷ್ಯಮಾಣಾನಾಂ ದುಃಖಿಶೋಕತಮೋನುದಮ್ ।
ಅನುಗ್ರಹಾಯ ಭಕ್ತಾನಾಂ ಸುಪುಣ್ಯಂ ವ್ಯತನೋದ್ಯಶಃ
॥ ೬೧ ॥

ಯಸ್ಮಿನ್ನತ್ಕರ್ಣಪೀಯೂಷೇ ಯಶಸ್ತೀರ್ಥವರೇ ಸಕೃತ್ ।
ಶ್ರೋತ್ರಾಂಜಲಿರುಪಸ್ಪೃಶ್ಯ ಧುನುತೇ ಕರ್ಮವಾಸನಾಮ್
॥ ೬೨ ॥

ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕೈಃ ।
ಶ್ಲಾಘನೀಯೇಹಿತಃ ಶಶ್ವತ್ಕುರುಸೃಂಜಯಪಾಂಡುಭಿಃ
॥ ೬೩ ॥

ಸ್ನಿಗ್ಧಸ್ಮಿತೇಕ್ಷಿತೋದಾರೈರ್ವಾಕ್ಯೈರ್ವಿಕ್ರಮಲೀಲಯಾ ।
ನೃಲೋಕಂ ರಮಯಾಮಾಸ ಮೂರ್ತ್ಯಾ ಸರ್ವಾಂಗ ರಮ್ಯಯಾ
॥ ೬೪ ॥

ಯಸ್ಯಾನನಂ ಮಕರಕುಂಡಲಚಾರುಕರ್ಣ-
ಭ್ರಾಜತ್ಕಪೋಲಸುಭಗಂ ಸವಿಲಾಸಹಾಸಮ್ ।
ನಿತ್ಯೋತ್ಸವಂ ನ ತತೃಪುರ್ದೃಶಿಭಿಃ ಪಿಬಂತ್ಯೋ
ನಾರ್ಯೋ ನರಾಶ್ಚ ಮುದಿತಾಃ ಕುಪಿತಾ ನಿಮೇಶ್ಚ ॥ ೬೫ ॥

ಅವರಿಬ್ಬರಲ್ಲಿ ಎಂಟನೆಯನಾಗಿ ಸ್ವತಃ ಭಗವಂತನೇ ಆಗಿದ್ದನು. ಪರೀಕ್ಷಿತನೇ! ನಿನ್ನ ಪಿತಾಮಹಿ ಪರಮ ಸೌಭಾಗ್ಯವತಿಯಾದ ಸುಭದ್ರೆಯೂ ದೇವಕನ ಮಗಳಾಗಿದ್ದಳು. ॥ ೫೫ ॥

ಪ್ರಪಂಚದಲ್ಲಿ ಧರ್ಮದ ಹ್ರಾಸ ಮತ್ತು ಪಾಪದ ವೃದ್ಧಿಯಾದಾಗಲೆಲ್ಲ ಸರ್ವಶಕ್ತನಾದ ಭಗವಾನ್ ಶ್ರೀಹರಿಯು ಅವತರಿಸುವನು. ॥ ೫೬ ॥ ಪರೀಕ್ಷಿತನೇ! ಭಗವಂತನು ಎಲ್ಲರ ದ್ರಷ್ಟಾ ಮತ್ತು ವಾಸ್ತವವಾಗಿ ಅಸಂಗನಾದ ಆತ್ಮನೇ ಆಗಿರುವನು. ಅದಕ್ಕಾಗಿ ಅವನ ಜನ್ಮ ಮತ್ತು ಕರ್ಮಗಳಿಗೆ ಆತ್ಮಸ್ವರೂಪಿಣಿಯಾದ ಯೋಗಮಾಯೆಯಲ್ಲದೆ ಬೇರೆ ಯಾವ ಕಾರಣವೂ ಇಲ್ಲ ॥ ೫೭ ॥ ಅವನ ಮಾಯೆಯ ವಿಲಾಸವೇ ಜೀವಿಯ ಜನ್ಮ, ಜೀವನ, ಮರಣ ಇವುಗಳ ಕಾರಣವಾಗಿದೆ. ಅವನ ಅನುಗ್ರಹವೇ ಮಾಯೆಯನ್ನು ಕಳೆದು ಆತ್ಮಸ್ವರೂಪವನ್ನು ದೊರಕಿಸಿಕೊಡುವಂತಹುದಾಗಿದೆ. ॥ ೫೮ ॥ ಅಸುರರು ರಾಜರ ವೇಷವನ್ನು ತೊಟ್ಟು ಬಹಳಷ್ಟು ಅಕ್ಷೌಹಿಣೀ ಸೈನ್ಯವನ್ನು ಒಟ್ಟುಗೂಡಿಸಿ ಪೃಥ್ವಿಯನ್ನು ಆಕ್ರಮಿಸಿ ಭೂಭಾರವಾದಾಗ ಭಗವಾನ್ ಮಧುಸೂದನನು ಬಲರಾಮನೊಂದಿಗೆ ಅವತರಿಸಿದನು. ಸಂಕರ್ಷಣನೊಂದಿಗೆ ಆ ಭಗವಂತನು ದೇವತೆಗಳೂ ಕೂಡ ಮನಸ್ಸಿನಿಂದಲೂ ಎಣಿಸಲಾರದ ಪರಮಾದ್ಭುತವಾದ ಲೀಲೆಗಳನ್ನು ನಡೆಸಿದನು. ॥ ೫೯-೬೦ ॥ ಭೂಭಾರವನ್ನು ಇಳಿಸುವುದರ ಜೊತೆಗೆ ಕಲಿಯುಗದಲ್ಲಿ ಹುಟ್ಟಿದ, ಹುಟ್ಟಲಿರುವ ಭಕ್ತರ ಮೇಲೆ ಅನುಗ್ರಹ ಮಾಡಲಿಕ್ಕಾಗಿ ಭಗವಂತನು – ಕೇವಲ ಶ್ರವಣಮಾತ್ರ ದಿಂದಲೇ ಭಕ್ತರ ಶೋಕ-ದುಃಖಿಗಳನ್ನೂ, ಅಜ್ಞಾನವನ್ನೂ ತೊಲಗಿಸುವಂತಹ ಪರಮ ಪವಿತ್ರ, ಪುಣ್ಯಕರವಾದ ಯಶವನ್ನು ಹರಡಿದನು. ॥ ೬೧ ॥ ಅವನ ಪವಿತ್ರಕೀರ್ತಿಯು ಜನರನ್ನು ಪವಿತ್ರಗೊಳಿಸುವಂತಹ ಪುಣ್ಯತೀರ್ಥವಾಗಿದೆ. ಸಾಧು-ಸಂತರ ಕಿವಿಗಳಿಗೆ ಅದಾದರೋ ಪ್ರತ್ಯಕ್ಷ ಅಮೃತವೇ ಆಗಿದೆ. ಒಂದೇ ಬಾರಿ ಕಿವಿಗಳೆಂಬ ಅಂಜಲಿಯಿಂದ ಪಾನಮಾಡಿದರೆ ಕರ್ಮವಾಸನೆಗಳು ನಿರ್ಮೂಲವಾಗುವುವು. ॥ ೬೨ ॥

ಪರೀಕ್ಷಿತನೇ! ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ, ಕುರು, ಸೃಂಜಯ ಮತ್ತು ಪಾಂಡುವಂಶದ ವೀರರು ನಿರಂತರವಾಗಿ ಭಗವಂತನ ಲೀಲೆಗಳನ್ನು ಆದರದಿಂದ ಪ್ರಶಂಸಿಸುತ್ತಾರೆ. ॥ ೬೩. ॥ ಅವನ ಶ್ಯಾಮಲ ಶರೀರವು ಸರ್ವಾಂಗ ಸುಂದರವಾಗಿತ್ತು. ಅವನು ಆ ಮನೋಹರ ವಿಗ್ರಹದಿಂದ ಹಾಗೂ ತನ್ನ ಪ್ರೇಮತುಂಬಿದ ಮುಗುಳ್ನಗೆಯಿಂದ, ಮಧುರ ನೋಟದಿಂದ, ಪ್ರಾಸಾದಿಕ ವಚನಗಳಿಂದ ಮತ್ತು ಪರಾಕ್ರಮದಿಂದ ಕೂಡಿದ ಲೀಲೆಗಳಿಂದ ಇಡೀ ಮನುಷ್ಯಲೋಕವನ್ನು ಆನಂದ ಸಾಗರದಲ್ಲಿ ಮುಳುಗಿಸಿ ಬಿಟ್ಟನು. ॥ ೬೪ ॥ ಭಗವಂತನ ಮುಖ ಕಮಲದ ಶೋಭೆಯು ಅದ್ಭುತವಾಗಿತ್ತು. ಮಕರಾಕೃತಿಯ ಕುಂಡಲಗಳಿಂದ ಅವನ ಕಿವಿಗಳು ಕಮನೀಯವಾಗಿದ್ದವು. ಕುಂಡಲಗಳ ಕಾಂತಿಯಿಂದ ಕಪೋಲಗಳ ಕಾಂತಿಯು ಇನ್ನೂ ಝಗ-ಝಗಿಸುತ್ತಿತ್ತು. ಅವನು ಹುಸಿನಗೆಯಿಂದ ಕೂಡಿದ್ದ ಸರ್ವದಾ ಸಂತೋಷವನ್ನೇ ಉಂಟುಮಾಡುತ್ತಿದ್ದ ಶ್ರೀಕೃಷ್ಣನ ಮುಖಾರವಿಂದ ಮಾಧುರಿಯನ್ನು ಸ್ತ್ರೀ-ಪುರುಷರಾದಿಯಾಗಿ ಸಮಸ್ತ ಜನರು ಕಣ್ಣುಗಳೆಂಬ ಪಾತ್ರೆಯಿಂದ ಪಾನಮಾಡುತ್ತಿದ್ದರು. ಅವರಿಗೆ ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ. ಕಣ್ಣುಗಳನ್ನು ಮುಚ್ಚಿ ತೆರೆಯುವುದಕ್ಕೆ ನಿಯಾಮಕನಾದ ನಿಮಿಯನ್ನೇ ಅವರು ನಿಂದಿಸುತ್ತಿದ್ದರು. ॥ ೬೫ ॥

ಜಾತೋ ಗತಃ ಪಿತೃಗೃಹಾದ್ವ್ರಜಮೇಧಿತಾರ್ಥೋ
ಹತ್ವಾ ರಿಪೂನ್ಸುತಶತಾನಿ ಕೃತೋರುದಾರಃ ।
ಉತ್ಪಾದ್ಯ ತೇಷು ಪುರುಷಃ ಕ್ರತುಭಿಃ ಸಮೀಜೇ
ಆತ್ಮಾನಮಾತ್ಮನಿಗಮಂ ಪ್ರಥಯಂಜನೇಷು ॥ ೬೬ ॥

ಇಂತಹ ಜಗದಾನಂದಕರನಾದ ಭಗವಂತನು ಮಥುರೆಯ ವಸುದೇವನ ಮನೆಯಲ್ಲಿ ಅವತರಿಸಿದ್ದರೂ ಅವನು ಅಲ್ಲಿರದೆ ಗೋಕುಲದ ನಂದಮಹಾರಾಜನ ಮನೆಗೆ ಹೋದನು. ಅಲ್ಲಿ ಗೋಪರನ್ನೂ, ಗೋಪಿಯರನ್ನೂ, ಗೋವುಗಳನ್ನೂ ಸಂತೋಷ ಪಡಿಸಿ ಮಥುರೆಗೆ ಮರಳಿದನು. ವ್ರಜದಲ್ಲಿ, ಮಥುರೆಯಲ್ಲಿ, ದ್ವಾರಕೆಯಲ್ಲಿ ಇದ್ದು ಕೊಂಡು ಅನೇಕ ಶತ್ರುಗಳನ್ನು ಸಂಹರಿಸಿದನು. ಸಾವಿರಾರು ಕನ್ಯೆಯರನ್ನು ವಿವಾಹವಾದನು. ಅವರಲ್ಲಿ ಅಸಂಖ್ಯಾತ ಮಕ್ಕಳನ್ನು ಪಡೆದನು. ಜೊತೆಗೆ ಜನರಲ್ಲಿ ತನ್ನ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಸುವಂತಹ ಶ್ರುತಿಗಳ ಮರ್ಯಾದೆಯನ್ನು ಸ್ಥಾಪಿಸಲಿಕ್ಕಾಗಿ ಅನೇಕ ಯಜ್ಞಗಳ ಮೂಲಕ ಸ್ವಯಂ ತನ್ನನ್ನೇ ತಾನು ಆರಾಧಿಸಿಕೊಂಡನು. ॥ ೬೬ ॥ ಕೌರವ-ಪಾಂಡವರಲ್ಲಿ ಉಂಟಾದ ಪರಸ್ಪರ ಕಲಹದಿಂದ ಅವನು ಪೃಥಿವಿಯ ಬಹಳಷ್ಟು ಭಾರವನ್ನು ತಗ್ಗಿಸಿದನು. ಕುರುಕ್ಷೇತ್ರದ ಯುದ್ಧದಲ್ಲಿ ತನ್ನ ದೃಷ್ಟಿಮಾತ್ರದಿಂದ ರಾಜರ ಅನೇಕ ಅಕ್ಷೌಹಿಣಿಗಳನ್ನು ಧ್ವಂಸಮಾಡಿ ಜಗತ್ತಿನಲ್ಲಿ ಅರ್ಜುನನ ವಿಜಯದುಂದುಭಿಯನ್ನು ಮೊಳಗಿಸಿದನು. ಮತ್ತೆ ಉದ್ಧವನಿಗೆ ಆತ್ಮತತ್ತ್ವವನ್ನು ಉಪದೇಶಿಸಿ ಕೊನೆಗೆ ತನ್ನ ಪರಮ ಧಾಮಕ್ಕೆ ತೆರಳಿದನು. ॥ ೬೭ ॥

ಪೃಥ್ವ್ಯಾಃ ಸ ವೈ ಗುರುಭರಂ ಕ್ಷಪಯನ್ಕುರೂಣಾ-
ಮಂತಃ ಸಮುತ್ಥಕಲಿನಾ ಯುಧಿ ಭೂಪಚಮ್ವಃ ।
ದೃಷ್ಟ್ಯಾ ವಿಧೂಯ ವಿಜಯೇ ಜಯಮುದ್ವಿಘೋಷ್ಯ
ಪ್ರೋಚ್ಯೋದ್ಧವಾಯ ಚ ಪರಂ ಸಮಗಾತ್ಸ್ವಧಾಮ ॥ ೬೭ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಶ್ರೀಸೂರ್ಯಸೋಮವಂಶಾನುಕೀರ್ತನೇ ಯದುವಂಶಾನುಕೀರ್ತನಂ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಒಂಭತ್ತನೆಯ ಸ್ಕಂಧವು ಸಂಪೂರ್ಣವಾಯಿತು.

॥ ಶ್ರೀರಾಧಾಕೃಷ್ಣಾಭ್ಯಾಂ ನಮಃ ॥

ಶ್ರೀಮದ್ಭಾಗವತಮಹಾಪುರಾಣ

ದಶಮ ಸ್ಕಂಧ (ಪೂರ್ವಾರ್ಧ)



ದೇವಕ್ಯಾ ಪಾಲಿತೋ ಗರ್ಭೇ ಲಾಲಿತೋಽಂಕೇ ಯಶೋದಯಾ ।
ಯಶೋದಯಾಯುತೋ ಬಾಲೋ ಗೋಪಾಲೋ ರಮತಾಂ ಹೃದಿ ॥

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದಶಮಃ ಸ್ಕಂಧಃ (ಪೂರ್ವಾರ್ಧ)

ಮೊದಲನೆಯ ಅಧ್ಯಾಯ

ಭಗವಂತನು ಭೂದೇವಿಯನ್ನು ಸಂತೈಸಿದುದು, ವಸುದೇವ ದೇವಕಿಯರ ವಿವಾಹ ಮತ್ತು ಕಂಸನು ದೇವಕಿಯ ಆರು ಪುತ್ರರನ್ನು ವಧಿಸಿದುದು

ರಾಜೋವಾಚ

ಕಥಿತೋ ವಂಶವಿಸ್ತಾರೋ ಭವತಾ ಸೋಮಸೂರ್ಯಯೋಃ ।
ರಾಜ್ಞಾಂ ಚೋಭಯವಂಶ್ಯಾನಾಂ ಚರಿತಂ ಪರಮಾದ್ಭುತಮ್ ॥ ೧ ॥

ಯದೋಶ್ಚ ಧರ್ಮಶೀಲಸ್ಯ ನಿತರಾಂ ಮುನಿಸತ್ತಮ ।
ತತ್ರಾಂಶೇನಾವತೀರ್ಣಸ್ಯ ವಿಷ್ಣೋರ್ವೀರ್ಯಾಣಿ ಶಂಸ ನಃ ॥ ೨ ॥

ಅವತೀರ್ಯ ಯದೋರ್ವಂಶೇ ಭಗವಾನಾಶ್ವತಭಾವನಃ ।
ಕೃತವಾನ್ಯಾನಿ ವಿಶ್ವಾತ್ಮಾ ತಾನಿ ನೋ ವದ ವಿಸ್ತರಾತ್ ॥ ೩ ॥

ನಿವೃತ್ತತರ್ಷೈರುಪಗೀಯಮಾನಾದ್
ಭವೌಷಧಾಚ್ಛ್ರೋತ್ರಮನೋಭಿರಾಮಾತ್ ।
ಕ ಉತ್ತಮಶ್ಲೋಕಗುಣಾನುವಾದಾತ್
ಪುಮಾನ್ವಿರಜ್ಯೇತ ವಿನಾ ಪಶುಘ್ನಾತ್ ॥ ೪ ॥

ಪಿತಾಮಹಾ ಮೇ ಸಮರೇಽಮರಂಜಯೈ-
ರ್ದೇವವ್ರತಾದ್ಯಾತಿರಥೈಸ್ತಿಮಿಂಗಿಲೈಃ ।
ದುರತ್ಯಯಂ ಕೌರವಸೈನ್ಯಸಾಗರಂ
ಕೃತ್ವಾತರನ್ವತ್ಸಪದಂ ಸ್ಮ ಯತ್ಪ್ಲವಾಃ ॥ ೫ ॥

ದ್ರೌಣ್ಯಸ್ತ್ರವಿಪ್ಲುಷ್ಟಮಿದಂ ಮದಂಗಂ
ಸಂತಾನಬೀಜಂ ಕುರುಪಾಂಡವಾನಾಮ್ ।
ಜುಗೋಪ ಕುಕ್ಷಿಂಗತ ಆತ್ತಚಕ್ರೋ
ಮಾತುಶ್ಚ ಮೇ ಯಃ ಶರಣಂ ಗತಾಯಾಃ ॥ ೬ ॥

ಪರೀಕ್ಷಿದ್ರಾಜನು ಕೇಳಿದನು – ಎಲೈ ಮುನಿಶ್ರೇಷ್ಠರೇ! ತಾವು ಇಲ್ಲಿಯವರೆಗೆ ಚಂದ್ರವಂಶ ಮತ್ತು ಸೂರ್ಯವಂಶಗಳನ್ನು ವಿಸ್ತಾರವಾಗಿ ವರ್ಣಿಸಿದಿರಿ. ಎರಡೂ ವಂಶದ ರಾಜರುಗಳ ಅತ್ಯಂತ ಅದ್ಭುತವಾದ ಚರಿತ್ರೆಯನ್ನೂ ನಿರೂಪಿಸಿದಿರಿ. ಭಗವಂತನ ಪರಮ ಪ್ರೇಮಿಗಳಾದ ಮುನಿವರ್ಯರೇ! ತಾವು ಸ್ವಾಭಾವಿಕವಾದ ಧರ್ಮಶೀಲವಾದ ಯದುವಂಶವನ್ನೂ ವಿಶದವಾಗಿ ವರ್ಣಿಸಿದಿರಿ. ಈಗ ದಯಮಾಡಿ ಅದೇ ವಂಶದಲ್ಲಿ ತನ್ನ ಅಂಶವಾದ ಶ್ರೀಬಲರಾಮನೊಂದಿಗೆ ಅವತರಿಸಿದ ಭಗವಾನ್ ಶ್ರೀಕೃಷ್ಣನ ಪರಮ ಪವಿತ್ರ ಚರಿತ್ರೆಯನ್ನು ಹೇಳುವವರಾಗಿರಿ. ॥ ೧-೨ ॥ ಭಗವಾನ್ ಶ್ರೀಕೃಷ್ಣನು ಸಮಸ್ತ ಪ್ರಾಣಿಗಳ ಪ್ರಾಣಾಧಾರನೂ, ಸರ್ವಾತ್ಮಕನೂ ಆಗಿರುವನು. ಅವನು ಯದುವಂಶದಲ್ಲಿ ಅವತರಿಸಿ ಮಾಡಿದ ಎಲ್ಲ ಲೀಲೆಗಳನ್ನು ನಮಗೆ ವಿಸ್ತಾರವಾಗಿ ಶ್ರವಣ ಮಾಡಿಸಿರಿ. ॥ ೩ ॥ ಪುಣ್ಯಶ್ಲೋಕನಾದ ಆ ಪರಮಾತ್ಮನ ಕಲ್ಯಾಣ ಗುಣಗಳನ್ನು ಆಶಾಪಾಶಗಳನ್ನು ತೊರೆದ ನಿತ್ಯತೃಪ್ತರಾದ ಮಹಾತ್ಮರು ಎಷ್ಟು ಅನುಭವಿಸಿದರೂ ತೃಪ್ತಿಯಿಲ್ಲದೆ ಕೀರ್ತನೆ ಮಾಡುತ್ತಾ ಇರುತ್ತಾರೆ. ಅದು ಸಂಸಾರವ್ಯಾಧಿಗೆ ದಿವ್ಯೌಷಧವಾಗಿದೆ. ಕಿವಿಗಳಿಗೂ ಮನಸ್ಸಿಗೂ ಅಮೃತಪ್ರಾಯವಾಗಿದೆ. ಅದರ ಕುರಿತು ಯಾರಿಗೆ ತಾನೇ ಬೇಸರ ಉಂಟಾದೀತು? ಅದರಲ್ಲಿ ಬೇಸರ ಪಡಬೇಕಾದರೆ ಅವನು ಪಶುಘಾತಿಯಾದ ಕಟುಕನೇ ಆಗಿರಬೇಕು. ಅತನನ್ನು ಬಿಟ್ಟು ಬೇರೆ ಯಾರಿಗೂ ಅದರಲ್ಲಿ ವಿರಕ್ತಿ ಉಂಟಾಗುವುದಿಲ್ಲ ॥ ೪ ॥ ಶ್ರೀಕೃಷ್ಣನಾದರೋ ನನಗೆ ಕುಲದೈವನೇ ಆಗಿರುವನು. ಈ ಭಗವಾನ್ ಶ್ರೀಕೃಷ್ಣನ ಚರಣರೂಪಿ ನೌಕೆಯಿಂದಲೇ ನನ್ನ ತಾತಂದಿರಾದ ಪಾಂಡವರು ಮಹಾಭಾರತ ಯುದ್ಧದಲ್ಲಿ ದೇವತೆಗಳನ್ನು ಜಯಿಸಬಲ್ಲ ಭೀಷ್ಮ ಪಿತಾಮಹರೇ ಆದಿ ಅತಿರಥಯೋಧರೆಂಬ ತಿಮಿಂಗಿಲಗಳಿಂದ ಕೂಡಿದ ದಾಟಲು ಅಸಾಧ್ಯವಾದ ಕೌರವ ಸೈನ್ಯವೆಂಬ ಮಹಾಸಾಗರವನ್ನು ಕರುವಿನ ಹೆಜ್ಜೆಯಷ್ಟು ಹೊಂಡವನ್ನು ದಾಟುವಂತೆ ಲೀಲಾಜಾಲವಾಗಿ ದಾಟಿಬಿಟ್ಟರು. ॥ ೫ ॥ ತನ್ನನ್ನು ಮರೆಹೊಕ್ಕ ನನ್ನ ತಾಯಿಯ ಗರ್ಭವನ್ನು ಒಳಹೊಕ್ಕು ಚಕ್ರಾಯುಧವನ್ನು ಧರಿಸಿ, ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಸುಟ್ಟುಹೋಗುವುದರಲ್ಲಿದ್ದ ಕೌರವ-ಪಾಂಡವ ವಂಶಗಳೆರಡರ ಬೀಜವಾಗಿದ್ದ ನಿಮ್ಮ ಮುಂದೆ ಇರುವ ಈ ದೇಹವನ್ನು ಕಾಪಾಡಿದವನೂ ಅವನೇ. ॥ ೬ ॥

ವೀರ್ಯಾಣಿ ತಸ್ಯಾಖಿಲದೇಹಭಾಜಾ-
ಮಂತರ್ಬಹಿಃ ಪೂರುಷಕಾಲರೂಪೈಃ ।
ಪ್ರಯಚ್ಛತೋ ಮೃತ್ಯುಮುತಾಮೃತಂ ಚ
ಮಾಯಾಮನುಷ್ಯಸ್ಯ ವದಸ್ವ ವಿದ್ವನ್ ॥ ೭ ॥

ಕೇವಲ ನನ್ನ ಮಾತಲ್ಲ, ಅವನು ಸಮಸ್ತ ಶರೀರಧಾರಿಗಳ ಒಳಗೆ ಅಂತರ್ಯಾಮಿ ಆತ್ಮರೂಪದಿಂದ ಇದ್ದು ಅಮೃತತ್ತ್ವವನ್ನು ಕರುಣಿಸುತ್ತಿರುವನು ಮತ್ತು ಹೊರಗೆ ಕಾಲರೂಪದಿಂದ ಇದ್ದು ಮೃತ್ಯುವನ್ನೊಡ್ಡುವನು.*ಮನುಷ್ಯರೂಪದಲ್ಲಿ ಕಾಣಿಸಿಕೊಳ್ಳುವುದು ಅವನ ಒಂದು ಲೀಲೆಯೇ ಆಗಿದೆ. ಅಂತಹವನ ಐಶ್ವರ್ಯ-ಮಾಧುರ್ಯಗಳಿಂದ ಕೂಡಿದ ಲೀಲೆಗಳನ್ನು ತಾವು ವರ್ಣಿಸಿರಿ.॥ ೭ ॥

ರೋಹಿಣ್ಯಾಸ್ತನಯಃ ಪ್ರೋಕ್ತೋ ರಾಮಃ ಸಂಕರ್ಷಣಸ್ತ್ವಯಾ ।
ದೇವಕ್ಯಾ ಗರ್ಭಸಂಬಂಧಃ ಕುತೋ ದೇಹಾಂತರಂ ವಿನಾ
॥ ೮ ॥

ಪೂಜ್ಯರೇ ! ಸಂಕರ್ಷಣನೆಂದು ಪ್ರಸಿದ್ಧನಾದ ಬಲರಾಮನು ರೋಹಿಣೀದೇವಿಯ ಪುತ್ರನೆಂದು ನೀವೇ ಹೇಳಿದ್ದಿರಿ. ಬಳಿಕ ಇದೇ ಬಲರಾಮನನ್ನು ದೇವಕಿಯ ಪುತ್ರನೆಂದೂ ಹೇಳಿದಿರಿ. ಜನ್ಮಾಂತರ ವಿಲ್ಲದೆ ಒಂದೇ ಜನ್ಮದಲ್ಲಿ ಇಬ್ಬರು ತಾಯಂದಿರಿಗೆ ಮಗನಾಗಲು ಹೇಗೆ ಸಾಧ್ಯವಾಗುವುದು ? ॥ ೮ ॥

ಕಸ್ಮಾನ್ಮುಕುಂದೋ ಭಗವಾನ್ವಿಹಾಯೇಹಾದ್ವ್ರಜಂ ಗತಃ ।
ಕ್ವ ವಾಸಂ ಜ್ಞಾತಿಭಿಃ ಸಾರ್ಧಂ ಕೃತವಾನಾತ್ವತಾಂ ಪತಿಃ
॥ ೯ ॥

ಅಸುರರಿಗೆ ಮುಕ್ತಿಯನ್ನು ಕರುಣಿಸುವವನೂ, ಭಕ್ತರಿಗೆ ಪ್ರೇಮವನ್ನು ವಿತರಿಸುವವನೂ ಆದ ಭಗವಾನ್ ಶ್ರೀಕೃಷ್ಣನು ತನ್ನ ವಾತ್ಸಲ್ಯ-ಸ್ನೇಹದಿಂದ ತುಂಬಿದ ತಂದೆಯ ಮನೆಯನ್ನು ಬಿಟ್ಟು ವ್ರಜಕ್ಕೆ ಏಕೆ ಹೋದನು ? ಯದುವಂಶ ಶಿರೋಮಣಿ ಭಕ್ತವತ್ಸಲನಾದ ಪ್ರಭುವು ನಂದಾದಿ ಗೋಪ ಬಾಂಧವರೊಂದಿಗೆ ಎಲ್ಲೆಲ್ಲಿ ವಾಸಮಾಡಿದನು. ॥ ೯ ॥

ವ್ರಜೇ ವಸನ್ಕಿಮಕರೋನ್ಮಧುಪುರ್ಯಾಂ ಚ ಕೇಶವಃ ।
ಭ್ರಾತರಂ ಚಾವಧೀತ್ಕಂಸಂ ಮಾತುರದ್ಧಾತದರ್ಹಣಮ್
॥ ೧೦ ॥

ಬ್ರಹ್ಮ-ರುದ್ರಾದಿಗಳಿಗೆ ನಿಯಾಮಕನಾದ ಕೇಶವನು ವ್ರಜದಲ್ಲಿ, ಮಥುರೆಯಲ್ಲಿ ನೆಲೆಸಿ ಯಾವ-ಯಾವ ಲೀಲೆಗಳನ್ನು ಮಾಡಿದನು ? ಸ್ವಾಮಿ ! ಅವನು ತನಗೆ ಸೋದರಮಾವನಾದ ಕಂಸನನ್ನು ತನ್ನ ಕೈಯ್ಯಾರೆ ಏಕೆ ಕೊಂದನು ? ಏಕೆಂದರೆ, ಅವನು ತಾಯಿಗೆ ಸೋದರನಾಗಿದ್ದುದರಿಂದ ಶ್ರೀಕೃಷ್ಣನಿಂದ ವಧಿಸಲು ಅನರ್ಹನಾಗಿದ್ದನು.॥ ೧೦ ॥ ಸಚ್ಚಿದಾನಂದ ಪ್ರಭುವು ಮನುಷ್ಯಶರೀರವನ್ನು ಆಶ್ರಯಿಸಿ ವೃಷ್ಣಿವಂಶೀಯರೊಡನೆ ಎಷ್ಟು ವರ್ಷಗಳವರೆಗೆ ವಾಸಿಸಿದನು ? ಸರ್ವಶಕ್ತಿವಂತನಾದ ಶ್ರೀಕೃಷ್ಣನಿಗೆ ಎಷ್ಟು ಮಂದಿ ಪತ್ನಿಯರಿದ್ದರು ? ॥ ೧೧ ॥

ದೇಹಂ ಮಾನುಷಮಾಶ್ರಿತ್ಯ ಕತಿ ವರ್ಷಾಣಿ ವೃಷ್ಣಿಭಿಃ ।
ಯದುಪುರ್ಯಾಂ ಸಹಾವಾತ್ಸೀತ್ಪತ್ನ್ಯಃ ಕತ್ಯಭವನ್ಪ್ರಭೋಃ
॥ ೧೧ ॥

ಮುನಿಶ್ರೇಷ್ಠರೇ ! ನಾನು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ತಾವು ದಯಮಾಡಿ ಉತ್ತರಿಸಬೇಕು. ನಾನು ಪ್ರಶ್ನಿಸದೇ ಇರುವ ಶ್ರೀಕೃಷ್ಣನ ಲೀಲಾವಿನೋದಗಳನ್ನೂ ವಿಸ್ತಾರವಾಗಿ ತಾವು ಹೇಳಿರಿ. ಏಕೆಂದರೆ, ತಾವು ಎಲ್ಲವನ್ನೂ ಬಲ್ಲವರಾಗಿದ್ದೀರಿ. ನಾನು ಶ್ರದ್ಧೆಯಿಂದ ಅದನ್ನು ಕೇಳಲಿಚ್ಛಿಸುತ್ತೇನೆ. ॥ ೧೨ ॥

ಏತದನ್ಯಚ್ಚ ಸರ್ವಂ ಮೇ ಮುನೇ ಕೃಷ್ಣ ವಿಚೇಷ್ಟಿತಮ್ ।
ವಕ್ತುಮರ್ಹಸಿ ಸರ್ವಜ್ಞ ಶ್ರದ್ದಧಾನಾಯ ವಿಸ್ತೃತಮ್
॥ ೧೨ ॥

ಪೂಜ್ಯರೇ ! ಅನ್ನದ ಮಾತಿರಲಿ, ನಾನು ಜಲವನ್ನೂ ತ್ಯಜಿಸಿ ಬಿಟ್ಟಿರುವೆನು. ಹೀಗಿದ್ದರೂ ಸಹಿಸಲು ಅಶಕ್ಯವಾದ ಹಸಿವು-ಬಾಯಾರಿಕೆಗಳು (ಆ ಕಾರಣದಿಂದಲೇ ನಾನು ಮುನಿಯ ಕತ್ತಿನಲ್ಲಿ ಸತ್ತ ಸರ್ಪವನ್ನು ಹಾಕಿದ ಅನ್ಯಾಯವನ್ನು ಮಾಡಿದ್ದೆ.) ನನಗೆ ಬಾಧಿಸುವುದಿಲ್ಲ, ಏಕೆಂದರೆ, ತಮ್ಮ ಮುಖಾರವಿಂದದಿಂದ ಸ್ರವಿಸುತ್ತಿರುವ ಹರಿಕಥಾಮೃತವನ್ನು ಪಾನಮಾಡುತ್ತಿರುವೆನು. ॥ ೧೩. ॥

ನೈಷಾತಿದುಃಸಹಾ ಕ್ಷುನ್ಮಾಂ ತ್ಯಕ್ತೋದಮಪಿ ಬಾಧತೇ ।
ಪಿಬಂತಂ ತ್ವನ್ಮುಖಾನ್ಭೋಜಚ್ಯುತಂ ಹರಿಕಥಾಮೃತಮ್
॥ ೧೩. ॥

* ಸಮಸ್ತ ದೇಹಧಾರಿಗಳ ಅಂತಃಕರಣದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ಭಗವಂತನು ಅವರ ಜೀವನಕ್ಕೆ ಕಾರಣನಾಗಿರುವನು ಹಾಗೂ ಹೊರಗೆ ಕಾಲರೂಪದಿಂದಿದ್ದು ಅವನೇ ಅವರನ್ನು ನಾಶಮಾಡುತ್ತಾನೆ. ಆದ್ದರಿಂದ ಆತ್ಮಜ್ಞಾನಿಗಳಾದವರು ಅಂತರ್ದೃಷ್ಟಿಯಿಂದ ಆ ಅಂತರ್ಯಾಮಿಯನ್ನು ಉಪಾಸಿಸಿ ಮೋಕ್ಷವೆಂಬ ಅಮರ ಪದವನ್ನು ಹೊಂದುವರು. ವಿಷಯ ಪರಾಯಣ ಅಜ್ಞಾನಿಗಳು ಬಾಹ್ಯದೃಷ್ಟಿಯಿಂದ ವಿಷಯಚಿಂತನೆಯಲ್ಲೇ ತೊಡಗಿರುವವರು ಜನ್ಮ-ಮರಣರೂಪೀ ಮೃತ್ಯುವಿಗೆ ತುತ್ತಾಗುತ್ತಾರೆ.

ಸೂತ ಉವಾಚ

ಏವಂ ನಿಶಮ್ಯ ಭೃಗುನಂದನ ಸಾಧುವಾದಂ
ವೈಯಾಸಕಿಃ ಸ ಭಗವಾನಥ ವಿಷ್ಣುರಾತಮ್ ।
ಪ್ರತ್ಯರ್ಚ್ಯ ಕೃಷ್ಣಚರಿತಂ ಕಲಿಕಲ್ಮಷಘ್ನಂ
ವ್ಯಾಹರ್ತುಮಾರಭತ ಭಾಗವತಪ್ರಧಾನಃ ॥ ೧೪ ॥

ಶ್ರೀಶುಕ ಉವಾಚ

ಸಮ್ಯಗ್ವ್ಯವಸಿತಾ ಬುದ್ಧಿಸ್ತವ ರಾಜರ್ಷಿಸತ್ತಮ ।
ವಾಸುದೇವಕಥಾಯಾಂ ತೇ ಯಜ್ಜಾತಾ ನೈಷ್ಠಿಕೀ ರತಿಃ
॥ ೧೫ ॥

ವಾಸುದೇವಕಥಾಪ್ರಶ್ನಃ ಪುರುಷಾಂಸ್ತ್ರೀನ್ಪುನಾತಿ ಹಿ ।
ವಕ್ತಾರಂ ಪೃಚ್ಛಕಂ ಶ್ರೋತ್ಸ್ತಂಸ್ತತ್ಪಾದಸಲಿಲಂ ಯಥಾ
॥ ೧೬ ॥

ಭೂಮಿರ್ದೃಪ್ತನೃಪವ್ಯಾಜದೈತ್ಯಾನೀಕಶತಾಯುತೈಃ ।
ಆಕ್ರಾಂತಾ ಭೂರಿಭಾರೇಣ ಬ್ರಹ್ಮಾಣಂ ಶರಣಂ ಯಯೌ
॥ ೧೭ ॥

ಗೌರ್ಭೂತ್ವಾಶ್ರುಮುಖೀ ಖಿನ್ನಾ ಕ್ರಂದಂತೀ ಕರುಣಂ ವಿಭೋಃ ।
ಉಪಸ್ಥಿತಾಂತಿಕೇ ತಸ್ಮೈ ವ್ಯಸನಂ ಸ್ವಮವೋಚತ
॥ ೧೮ ॥

ಬ್ರಹ್ಮಾ ತದುಪಧಾರ್ಯಾಥ ಸಹ ದೇವೈಸ್ತಯಾ ಸಹ ।
ಜಗಾಮ ಸತ್ರಿನಯನಸ್ತೀರಂ ಕ್ಷೀರಪಯೋನಿಧೇಃ
॥ ೧೯ ॥

ತತ್ರ ಗತ್ವಾ ಜಗನ್ನಾಥಂ ದೇವದೇವಂ ವೃಷಾಕಪಿಮ್ ।
ಪುರುಷಂ ಪುರುಷಸೂಕ್ತೇನ ಉಪತಸ್ಥೇ ಸಮಾಹಿತಃ
॥ ೨೦ ॥

ತುಷ್ಟಾವ ದೇವಪುರುಷಂ ಪುರುಷೋತ್ತಮಂ ತಂ
ನಿಶಮ್ಯ ವೇಧಾಸ್ತ್ರಿದಶಾನುವಾಚ ಹ ।
ಸರ್ವೇ ಸುರಾಃ ಶ್ರೌಷ್ಟಮೀಂ ಮೇ ಶೃಣುತಾಮರಾಃ ಪುನ-
ರ್ವಿಧೀಯತಾಮಾಶು ತಥೈವ ಮಾ ಚಿರಮ್ ॥ ೨೧ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ ! ಭಗವಂತನ ಪ್ರೇಮಿಗಳಲ್ಲಿ ಅಗ್ರಗಣ್ಯರೂ, ಸರ್ವಜ್ಞರೂ ಆದ ಶ್ರೀಶುಕಮಹಾಮುನಿಗಳು ಪರೀಕ್ಷಿದ್ರಾಜನ ಇಂತಹ ಸಮೀಚೀನವಾದ ಪ್ರಶ್ನೆಯನ್ನು ಕೇಳಿ (ಸಂತರ ಸಭೆಯಲ್ಲಿ ಭಗವಂತನ ಲೀಲೆಗಳ ವರ್ಣನೆಯ ಉದ್ದೇಶವಿರುತ್ತದೆ.) ಅವನನ್ನು ಅಭಿನಂದಿಸಿ ಸಮಸ್ತ ಕಲಿಮಲದೋಷಗಳನ್ನು ಪೂರ್ಣವಾಗಿ ತೊಳೆದು ಹಾಕುವಂತಹ ಭಗವಾನ್ ಶ್ರೀಕೃಷ್ಣನ ಕರ್ಣಾನಂದಕರವಾದ ಲೀಲೆಗಳನ್ನು ವರ್ಣಿಸಲು ಪ್ರಾರಂಭಿಸಿದರು. ॥ ೧೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನ ಲೀಲಾಕಥೆಗಳ ರಸಿಕನಾದ ರಾಜರ್ಷಿ ಶ್ರೇಷ್ಠನೇ ! ನೀನು ಭಗವತ್ಕಥೆಯನ್ನು ಕೇಳಲು ಮಾಡಿರುವ ನಿಶ್ಚಯವು ಸುಂದರವೂ, ಆದರಣೀಯವೂ ಆಗಿದೆ. ಏಕೆಂದರೆ, ಎಲ್ಲರ ಹೃದಯದಲ್ಲಿ ಆರಾಧ್ಯ ಮೂರ್ತಿಯಾಗಿ ನೆಲೆಸಿರುವ ಶ್ರೀವಾಸುದೇವನ ಲೀಲೆಗಳ ಕಥಾಶ್ರವಣ ಮಾಡುವುದರಲ್ಲಿ ನಿನಗೆ ಸಹಜವಾದ ಸುದೃಢಪ್ರೀತಿ ಉಂಟಾಗಿದೆಯಲ್ಲ ! ॥ ೧೫ ॥ ವಿಷ್ಣುಪಾದೋದ್ಭವೆಯಾದ ಗಂಗಾದೇವಿಯ ಪವಿತ್ರತೀರ್ಥವು ಮೂರು ಲೋಕಗಳನ್ನು ಪಾವನಗೊಳಿಸುವಂತೆ ಶ್ರೀವಾಸುದೇವನ ಕಥೆಗಳ ಸಂಬಂಧವಾಗಿ ಕೇಳುವ ಪ್ರಶ್ನೆಯು ಪ್ರಶ್ನೆಮಾಡುವವನು, ಪ್ರವಚನಮಾಡುವವನು ಮತ್ತು ಕೇಳುವವನು ಹೀಗೆ ಮೂವರನ್ನೂ ಪವಿತ್ರಗೊಳಿಸುತ್ತದೆ. ॥ ೧೬ ॥

ಪರೀಕ್ಷಿತನೇ ! ಹಿಂದೊಮ್ಮೆ ರಾಜರ ರೂಪದಲ್ಲಿ ದರ್ಪಿಷ್ಠರಾಗಿದ್ದ, ಅಧರ್ಮನಿಷ್ಠರಾಗಿದ್ದ ಸಾವಿರಾರು ಲಕ್ಷ-ಲಕ್ಷ ದೈತ್ಯರು ಭೂಮಂಡಲವನ್ನು ಆಕ್ರಮಿಸಿಕೊಂಡುಬಿಟ್ಟಿದ್ದರು. ಭೂಭಾರದಿಂದ ತತ್ತರಿಸಿದ ಭೂದೇವಿಯು ರಕ್ಷಣೆಗಾಗಿ ಬ್ರಹ್ಮದೇವರನ್ನು ಮೊರೆ ಹೊಕ್ಕಳು. ॥ ೧೭ ॥ ಆಗ ಭೂದೇವಿಯು ಗೋವಿನ ರೂಪವನ್ನು ಧರಿಸಿ ಬ್ರಹ್ಮನ ಬಳಿಗೆ ಬಂದಿದ್ದಳು. ಕಣ್ಣೀರನ್ನು ಸುರಿಸುತ್ತಾ ಅದು ಮುಖದ ಮೇಲೆಲ್ಲ ಹರಿಯುತ್ತಿತ್ತು. ಶರೀರವು ಕೃಶವಾಗಿದ್ದು ಅವಳು ಅತ್ಯಂತ ಖಿನ್ನಳಾಗಿ ಕರುಣಾಜನಕ ರೀತಿಯಲ್ಲಿ ಹಂಬಲಿಸುತ್ತಿದ್ದಳು. ಬ್ರಹ್ಮನ ಬಳಿಗೆ ಬಂದು ಆಕೆಯು ತನ್ನೆಲ್ಲ ಕಷ್ಟ ಕಾರ್ಪಣ್ಯಗಳನ್ನು ಹೇಳಿಕೊಂಡಳು. ॥ ೧೮ ॥ ಬ್ರಹ್ಮದೇವರು ತುಂಬಾ ಸಹಾನುಭೂತಿಯಿಂದ ಆಕೆಯ ದುಃಖತುಂಬಿದ ಕಥೆಯನ್ನು ಕೇಳಿದರು. ಬಳಿಕ ಅವರು ಭಗವಾನ್ ಶಂಕರ, ಇಂದ್ರಾದಿದೇವತೆಗಳು, ಗೋರೂಪದಲ್ಲಿದ್ದ ಭೂದೇವಿ ಇವರನ್ನೆಲ್ಲ ಜೊತೆಗೆ ಸೇರಿಸಿಕೊಂಡು ಕ್ಷೀರಸಾಗರದ ತಡಿಗೆ ಹೋದರು.॥ ೧೯ ॥ ಚತುರ್ಮುಖ ಬ್ರಹ್ಮದೇವರು ದೇವತೆಗಳೊಡನೆ ಕ್ಷೀರಸಮುದ್ರದ ತೀರಕ್ಕೆ ಹೋಗಿ ಸಮಸ್ತ ಜಗತ್ತಿಗೆ ಸ್ವಾಮಿಯಾದ, ದೇವದೇವನಾದ, ವೃಷಾಕಪಿಯಾದ, ಪರಮಪುರುಷನಾದ ಶ್ರೀಮನ್ನಾರಾಯಣನನ್ನು ಏಕಾಗ್ರಚಿತ್ತನಾಗಿ ಪುರುಷಸೂಕ್ತ ಮಂತ್ರಗಳಿಂದ ಸ್ತೋತ್ರ ಮಾಡಿದರು. ಸ್ತುತಿಸುತ್ತಿರುವಂತೆಯೇ, ಬ್ರಹ್ಮದೇವರು ಸಮಾಧಿಸ್ಥರಾದರು. ॥ ೨೦ ॥ ಅವರು ಸಮಾಧಿಸ್ಥಿತಿಯಲ್ಲೇ ಆಕಾಶದಲ್ಲಿ ಸುಸ್ಪಷ್ಟವಾಗಿ ಕೇಳಿಬಂದ ದಿವ್ಯವಾಣಿಯನ್ನು ಆಲಿಸಿ, ದೇವತೆಗಳಿಗೆ ಇಂತೆಂದರು – ದೇವತೆಗಳಿರಾ ! ನಾನು ಭಗವಂತನ ವಾಣಿಯನ್ನು ಕೇಳಿದೆನು. ನೀವೆಲ್ಲರೂ ನನ್ನಿಂದ ಕೇಳಿ ಅದರಂತೆ ನಡೆಯಿರಿ. ವಿಳಂಬಮಾಡದೆ ಕಾರ್ಯಮಾಡಿರಿ. ॥ ೨೧ ॥

ಪುರೈವ ಪುಂಸಾವಧೃತೋ ಧರಾಜ್ವರೋ
ಭವದ್ಭಿರಂಶೈರ್ಯದುಷೂಪಜನ್ಯತಾಮ್ ।
ಸ ಯಾವದುರ್ವ್ಯಾ ಭರಮೀಶ್ವರೇಶ್ವರಃ
ಸ್ವಕಾಲಶಕ್ತ್ಯಾ ಕ್ಷಪಯಂಶ್ಚರೇದ್ಭುವಿ ॥ ೨೨ ॥

ವಸುದೇವಗೃಹೇ ಸಾಕ್ಷಾದ್ಭಗವಾನ್ಪುರುಷಃ ಪರಃ ।
ಜನಿಷ್ಯತೇ ತತ್ಪ್ರಿಯಾರ್ಥಂ ಸಂಭವಂತು ಸುರಸ್ತ್ರಿಯಃ
॥ ೨೩ ॥

ವಾಸುದೇವಕಲಾನಂತಃ ಸಹಸ್ರವದನಃ ಸ್ವರಾಟ್ ।
ಅಗ್ರತೋ ಭವಿತಾ ದೇವೋ ಹರೇಃ ಪ್ರಿಯಚಿಕೀರ್ಷಯಾ
॥ ೨೪ ॥

ವಿಷ್ಣೋರ್ಮಾಯಾ ಭಗವತೀ ಯಯಾ ಸಮ್ಮೋಹಿತಂ ಜಗತ್ ।
ಆದಿಷ್ಟಾ ಪ್ರಭುಣಾಂಶೇನ ಕಾರ್ಯಾರ್ಥೇ ಸಂಭವಿಷ್ಯತಿ
॥ ೨೫ ॥

ಶ್ರೀಶುಕ ಉವಾಚ

ಇತ್ಯಾದಿಶ್ಯಾಮರಗಣಾನ್ಪ್ರಜಾಪತಿಪತಿರ್ವಿಭುಃ ।
ಆಶ್ವಾಸ್ಯ ಚ ಮಹೀಂ ಗೀರ್ಭಿಃ ಸ್ವಧಾಮ ಪರಮಂ ಯಯೌ
॥ ೨೬ ॥

ಶೂರಸೇನೋ ಯದುಪತಿರ್ಮಥುರಾಮಾವಸನ್ಪುರೀಮ್ ।
ಮಾಥುರಾನ್ ಶೂರಸೇನಾಂಶ್ಚ ವಿಷಯಾನ್ಬುಭುಜೇ ಪುರಾ
॥ ೨೭ ॥

ರಾಜಧಾನೀ ತತಃ ಸಾಭೂತ್ಸರ್ವಯಾದವಭೂಭುಜಾಮ್ ।
ಮಥುರಾ ಭಗವಾನ್ಯತ್ರ ನಿತ್ಯಂ ಸಂನಿಹಿತೋ ಹರಿಃ
॥ ೨೮ ॥

ತಸ್ಯಾಂ ತು ಕರ್ಹಿಚಿಚ್ಛೌರಿರ್ವಸುದೇವಃ ಕೃತೋದ್ವಹಃ ।
ದೇವಕ್ಯಾ ಸೂರ್ಯಯಾ ಸಾರ್ಧಂ ಪ್ರಯಾಣೇ ರಥಮಾರುಹತ್
॥ ೨೯ ॥

ಉಗ್ರಸೇನಸುತಃ ಕಂಸಃ ಸ್ವಸುಃ ಪ್ರಿಯಚಿಕೀರ್ಷಯಾ ।
ರಶ್ಮೀನ್ಹಯಾನಾಂ ಜಗ್ರಾಹ ರೌಕ್ಮೈ ರಥಶತೈರ್ವೃತಃ
॥ ೩೦ ॥

ಚತುಃಶತಂ ಪಾರಿಬರ್ಹಂ ಗಜಾನಾಂ ಹೇಮಮಾಲಿನಾಮ್ ।
ಅಶ್ವಾನಾಮಯುತಂ ಸಾರ್ಧಂ ರಥಾನಾಂ ಚ ತ್ರಿಷಟ್ಶತಮ್
॥ ೩೧ ॥

ದಾಸೀನಾಂ ಸುಕುಮಾರೀಣಾಂ ದ್ವೇ ಶತೇ ಸಮಲಂಕೃತೇ ।
ದುಹಿತ್ರೇ ದೇವಕಃ ಪ್ರಾದಾದ್ಯಾನೇ ದುಹಿತೃವತ್ಸಲಃ
॥ ೩೨ ॥

ಶಂಖತೂರ್ಯಮೃದಂಗಾಶ್ಚ ನೇದುರ್ದುಂದುಭಯಃ ಸಮಮ್ ।
ಪ್ರಯಾಣಪ್ರಕ್ರಮೇ ತಾವದ್ವರವಧ್ವೋಃ ಸುಮಂಗಲಮ್
॥ ೩೩ ॥

ಭೂದೇವಿಗೆ ಒದಗಿದ ಕಷ್ಟವು ಈ ಹಿಂದೆಯೇ ಪರಮ ಪುರುಷನಿಗೆ ತಿಳಿದಿದೆ. ಅವನು ಈಶ್ವರರಿಗೂ ಈಶ್ವರನಾಗಿರುವನು. ತನ್ನ ಕಾಲಶಕ್ತಿಯ ಮೂಲಕ ಅವತರಿಸಿ ಭೂಭಾರವನ್ನು ಹರಿಸುತ್ತಾ ಪೃಥಿವಿಯಲ್ಲಿ ಲೀಲೆಗಳನ್ನು ನಡೆಸುವಾಗ ನೀವುಗಳೂ ಕೂಡ ತಮ್ಮ-ತಮ್ಮ ಅಂಶಗಳೊಡನೆ ಯದುಕುಲದಲ್ಲಿ ಹುಟ್ಟಿ ಅವನ ಲೀಲೆಯಲ್ಲಿ ಸಹಯೋಗಿಗಳಾಗಿರಿ. ॥ ೨೨ ॥ ವಸುದೇವನ ಮನೆಯಲ್ಲಿ ಸಾಕ್ಷಾತ್ ಪರಮಪುರುಷನಾದ ಶ್ರೀಹರಿಯು ಪ್ರಕಟಗೊಳ್ಳುವನು. ಅವನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ದೇವತಾಸ್ತ್ರೀಯರೂ ಯದುವಂಶದಲ್ಲಿ ಅವತರಿಸಲಿ. ॥ ೨೩ ॥ ಅನಂತನಾದ ವಾಸುದೇವನ ಕಲೆಯಿಂದ ಪ್ರಾದುರ್ಭೂತನಾಗಿ ಅನಂತನೇ ಆಗಿರುವ, ಸಹಸ್ರಮುಖಿನಾದ, ಸ್ವಯಂಪ್ರಕಾಶನಾದ ಶೇಷನು ಶ್ರೀಹರಿಗೆ ಪ್ರಿಯವನ್ನುಂಟುಮಾಡಲು ಯದುವಂಶದಲ್ಲಿ ಶ್ರೀಹರಿಯ ಅಗ್ರಜನಾಗಿ ಅವತರಿಸುವನು. ॥ ೨೪ ॥ ಜಗತ್ತನ್ನೇ ವಿಮೋಹಗೊಳಿಸುವ ಭಗವತಿ ವಿಷ್ಣುಮಾಯೆಯೂ ಪ್ರಭುವಿನಿಂದ ಆಜ್ಞಪ್ತಳಾಗಿ ಅವನ ಕಾರ್ಯಾರ್ಥವಾಗಿ ಅವನ ಅಂಶರೂಪದಿಂದಲೇ ಭುವಿಯಲ್ಲಿ ಅವತರಿಸುವಳು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಪ್ರಜಾಪತಿಗಳಿಗೆ ಸ್ವಾಮಿಯಾದ ಬ್ರಹ್ಮದೇವರು ದೇವತೆಗಳಿಗೆ ಹೀಗೆ ಆದೇಶವನ್ನು ನೀಡಿ, ಭೂದೇವಿಯನ್ನು ಸಾಂತ್ವನಗೊಳಿಸಿ ಶ್ರೇಷ್ಠವಾದ ತಮ್ಮ ಸತ್ಯಲೋಕಕ್ಕೆ ಹೊರಟುಹೋದರು. ॥ ೨೬ ॥ ಹಿಂದೆ ಯದುವಂಶದಲ್ಲಿ ಶೂರಸೇನನೆಂಬ ರಾಜನಿದ್ದನು. ಅವನು ಮಥುರಾಪಟ್ಟಣದಲ್ಲಿದ್ದು ಮಥುರಾಮಂಡಲವನ್ನೂ ಶೂರಸೇನ ಮಂಡಲವನ್ನೂ ಆಳುತ್ತಿದ್ದನು. ॥ ೨೭ ॥ ನಿತ್ಯನಿರಂತರ ಭಗವಾನ್ ಶ್ರೀಹರಿಯ ಸಾನ್ನಿಧ್ಯವನ್ನು ಹೊಂದಿದ್ದ ಆ ಮಥುರಾಪಟ್ಟಣವೇ ಸಮಸ್ತ ಯದುವಂಶೀಯ ರಾಜರಿಗೂ ರಾಜಧಾನಿಯಾಗಿತ್ತು. ॥ ೨೮ ॥ ಒಮ್ಮೆ ಮಥುರೆಯಲ್ಲಿ ಶೂರನ ಪುತ್ರನಾದ ವಸುದೇವನು ವಿವಾಹಮಾಡಿಕೊಂಡು ನೂತನ ವಧುವಾದ ದೇವಕಿಯೊಡನೆ ಮನೆಗೆ ಹೋಗಲು ರಥಾರೂಢನಾದನು. ॥ ೨೯ ॥ ಉಗ್ರಸೇನನ ಮಗನಾದ ಕಂಸನು ತನ್ನ ತಂಗಿಯಾದ ದೇವಕಿಗೆ ಸಂತೋಷವನ್ನುಂಟುಮಾಡಲು ಅವರ ರಥದ ವಾಘೆಯನ್ನು ತಾನೇ ಹಿಡಿದುಕೊಂಡು ರಥವನ್ನು ನಡೆಸತೊಡಗಿದನು. ಆ ದಿವ್ಯರಥವು ನೂರಾರು ಸುವರ್ಣಮಯವಾದ ರಥಗಳಿಂದ ಸಮಾವೃತವಾಗಿತ್ತು. ॥ ೩೦ ॥ ಮಗಳಲ್ಲಿ ವಿಶೇಷವಾದ ಅಕ್ಕರೆಯನ್ನು ಹೊಂದಿದ್ದ ದೇವಕನು ದೇವಕಿಗೆ ಒಳುವಳಿಯಾಗಿ ಚಿನ್ನದ ಹಾರಗಳಿಂದ ಅಲಂಕೃತವಾದ ನಾಲ್ಕುನೂರು ಆನೆಗಳೂ, ಹದಿನೈದುಸಾವಿರ ಕುದುರೆಗಳೂ, ಹದಿನೆಂಟುನೂರು ರಥಗಳೂ ಹಾಗೂ ಸುಂದರವಾದ ವಸ್ತ್ರಾಭೂಷಣಗಳಿಂದ ಅಲಂಕೃತರಾದ ಇನ್ನೂರು ಸುಂದರ ಸುಕುಮಾರಿ ದಾಸಿಯರನ್ನೂ ಕೊಟ್ಟನು. ॥ ೩೧-೩೨ ॥ ಆ ವಧೂವರರ ಪ್ರಯಾಣಕಾಲದಲ್ಲಿ ಮಂಗಳಾರ್ಥವಾಗಿ ಶಂಖ, ಭೇರಿ, ಮೃದಂಗ, ದುಂದುಭಿಗಳು ಏಕಕಾಲದಲ್ಲಿ ಮೊಳಗಿದವು. ॥ ೩೩ ॥

ಪಥಿ ಪ್ರಗ್ರಹಿಣಂ ಕಂಸಮಾಭಾಷ್ಯಾಹಾಶರೀರವಾಕ್ ।
ಅಸ್ಯಾಸ್ತ್ವಮಷ್ಟಮೋ ಗರ್ಭೋ ಹಂತಾ ಯಾಂ ವಹಸೇಽಬುಧ
॥ ೩೪ ॥

ಇತ್ಯುಕ್ತಃ ಸ ಖಲಃ ಪಾಪೋ ಭೋಜಾನಾಂ ಕುಲಪಾಂಸನಃ ।
ಭಗಿನೀಂ ಹಂತುಮಾರಬ್ಧಃ ಖಡ್ಗಪಾಣಿಃ ಕಚೇಽಗ್ರಹೀತ್
॥ ೩೫ ॥

ತಂ ಜುಗುಪ್ಸಿತಕರ್ಮಾಣಂ ನೃಶಂಸಂ ನಿರಪತ್ರಪಮ್ ।
ವಸುದೇವೋ ಮಹಾಭಾಗ ಉವಾಚ ಪರಿಸಾಂತ್ವಯನ್
॥ ೩೬ ॥

ವಸುದೇವ ಉವಾಚ

ಶ್ಲಾಘನೀಯಗುಣಃ ಶೂರೈರ್ಭವಾನ್ಭೋಜಯಶಸ್ಕರಃ ।
ಸ ಕಥಂ ಭಗಿನೀಂ ಹನ್ಯಾತ್ ಸ್ತ್ರಿಯಮುದ್ವಾಹಪರ್ವಣಿ
॥ ೩೭ ॥

ಮೃತ್ಯುರ್ಜನ್ಮವತಾಂ ವೀರ ದೇಹೇನ ಸಹ ಜಾಯತೇ ।
ಅದ್ಯ ವಾಬ್ದಶತಾಂತೇ ವಾ ಮೃತ್ಯುರ್ವೈ ಪ್ರಾಣಿನಾಂ ಧ್ರುವಃ
॥ ೩೮ ॥

ದೇಹೇ ಪಂಚತ್ವಮಾಪನ್ನೇ ದೇಹೀ ಕರ್ಮಾನುಗೋಽವಶಃ ।
ದೇಹಾಂತರಮನುಪ್ರಾಪ್ಯ ಪ್ರಾಕ್ತನಂ ತ್ಯಜತೇ ವಪುಃ
॥ ೩೯ ॥

ಪ್ರಪಂಚಿಷ್ಯನ್ಪದೈಕೇನ ಯಥೈವೈಕೇನ ಗಚ್ಛತಿ ।
ಯಥಾ ತೃಣಜಲೂಕೈವಂ ದೇಹೀ ಕರ್ಮಗತಿಂ ಗತಃ
॥ ೪೦ ॥

ಸ್ವಪ್ನೇ ಯಥಾ ಪಶ್ಯತಿ ದೇಹಮೀದೃಶಂ
ಮನೋರಥೇನಾಭಿನಿವಿಷ್ಟಚೇತನಃ ।
ದೃಷ್ಟಶ್ರುತಾಭ್ಯಾಂ ಮನಸಾನುಚಿಂತಯನ್
ಪ್ರಪದ್ಯತೇ ತತ್ಕಿಮಪಿ ಹ್ಯಪಸ್ಮೃತಿಃ ॥ ೪೧ ॥

ಹೀಗೆ ಬಾಜಾಬಜಂತ್ರಿಗಳೊಂದಿಗೆ ಸಂಭ್ರಮದಿಂದ ಕಂಸನು ರಥವನ್ನು ನಡೆಸುತ್ತಿರುವಾಗ ಅವನನ್ನು ಸಂಬೋಧಿಸಿ ಆಕಾಶವಾಣಿಯೊಂದು ಇಂತು ನುಡಿಯಿತು – "ಎಲೈ ಮೂರ್ಖನೇ! ಈಗ ನೀನು ಸಂಭ್ರಮದಿಂದ ಕರೆದೊಯ್ಯುತ್ತಿರುವ ನಿನ್ನ ಈ ತಂಗಿಯ ಎಂಟನೆಯ ಗರ್ಭದಲ್ಲಿ ಹುಟ್ಟುವ ಶಿಶುವು ನಿನಗೆ ಮೃತ್ಯುವಾಗಲಿದೆ." ॥ ೩೪ ॥ ಕಂಸನು ಮಹಾಪಾಪಿಯಾಗಿದ್ದನು. ಅವನ ದುಷ್ಟತನಕ್ಕೆ ಎಲ್ಲೆಯೇ ಇರಲಿಲ್ಲ. ಅವನು ಭೋಜವಂಶಕ್ಕೆ ಕಲಂಕ ಪ್ರಾಯನಾಗಿದ್ದನು. ಆಕಾಶವಾಣಿಯನ್ನೂ ಕೇಳುತ್ತಲೇ ಖಡ್ಗವನ್ನೆತ್ತಿ ಕೊಂಡು ತಂಗಿಯ ಮುಡಿಯನ್ನು ಹಿಡಿದು ಅವಳನ್ನು ಕೊಲ್ಲಲು ಸಿದ್ಧನಾದನು. ॥ ೩೫ ॥ ಅವನು ಅತ್ಯಂತ ಕ್ರೂರನಾಗಿದ್ದು ಪಾಪ ಕರ್ಮಗಳನ್ನು ಮಾಡಲು ನಿರ್ಲಜ್ಜನೂ ಆಗಿದ್ದನು. ಅವನ ಈ ಕೃತ್ಯವನ್ನು ನೋಡಿ ಮಹಾನುಭಾವನಾದ ವಸುದೇವನು ಅವನನ್ನು ಸಮಾಧಾನಗೊಳಿಸುತ್ತಾ ಇಂತೆಂದನು. ॥ ೩೬ ॥

ವಸುದೇವನು ಹೇಳಿದನು – ರಾಜಕುಮಾರ! ನಿನ್ನ ಗುಣಗಳನ್ನು ಶೂರರು ಹೊಗಳುತ್ತಾರೆ. ನೀನು ಭೋಜವಂಶಕ್ಕೆ ಯಶೋದಾಯಕನಾಗಿರುವೆ. ಅಂತಹ ನೀನು ಒಬ್ಬ ಸ್ತ್ರೀಯನ್ನು, ಅದರಲ್ಲಿಯೂ ಸಾಕ್ಷಾತ್ ತಂಗಿಯನ್ನು, ಇನ್ನು ಮದುವಣಗಿತ್ತಿಯನ್ನು ವಿವಾಹದ ಶುಭಸಮಯದಲ್ಲಿ ಹೇಗೆ ತಾನೇ ಕೊಲ್ಲಬಲ್ಲೆ? ॥ ೩೭ ॥ ವೀರನೇ! ಈ ಲೋಕದಲ್ಲಿ ಜನ್ಮವನ್ನು ತಾಳಿದವರ ಶರೀರದೊಡನೆಯೇ ಮೃತ್ಯುವು ಹುಟ್ಟಿಕೊಳ್ಳುತ್ತದೆ. ಮೃತ್ಯುವು ಇಂದು ಬರಬಹುದು, ಇಲ್ಲವೇ ನೂರುವರ್ಷದ ಮೇಲೆ ಬರಬಹುದು. ಆದರೆ ಹುಟ್ಟಿದ ಪ್ರಾಣಿಗಳಿಗೆ ಮರಣವೆಂಬುದು ಶತಃಸಿದ್ಧ. ॥ ೩೮ ॥ ದೇಹವು ಪಂಚಭೂತಗಳಲ್ಲಿ ಲೀನವಾಗಿ ಹೋದಾಗ (ಸತ್ತಾಗ) ಜೀವನು ಅಸ್ವತಂತ್ರನಾಗಿ ತನ್ನ ಕರ್ಮಕ್ಕೆ ಅನುಸಾರ ಬೇರೆ ಶರೀರವನ್ನು ಪಡೆದು ತನ್ನ ಮೊದಲ ಶರೀರವನ್ನು ಬಿಟ್ಟುಬಿಡುತ್ತಾನೆ. ॥ ೩೯ ॥ ಮನುಷ್ಯನು ನಡೆಯುವಾಗ ಒಂದು ಕಾಲನ್ನು ಊರಿ ಇನ್ನೊಂದನ್ನು ಮೇಲೆತ್ತುವನು ಹಾಗೂ ಜಿಗಣೆಯು ಮುಂದಿನ ಹುಲ್ಲುಕಡ್ಡಿಯನ್ನು ಹಿಡಿದ ನಂತರ ಹಿಂದಿನ ಹುಲ್ಲುಕಡ್ಡಿಯನ್ನು ಬಿಡುವಂತೆಯೇ ಜೀವನು ತನ್ನ ಕರ್ಮಕ್ಕನುಸಾರವಾಗಿ ಯಾವುದೋ ಶರೀರವನ್ನು ಪಡೆದ ನಂತರವೇ ಈ ಶರೀರವನ್ನು ಬಿಡುತ್ತಾನೆ. ॥ ೪೦ ॥ ಒಬ್ಬ ಮನುಷ್ಯನು ಜಾಗ್ರತಾವಸ್ಥೆಯಲ್ಲಿ ರಾಜನ ಐಶ್ವರ್ಯವನ್ನು ನೋಡಿ, ಇಂದ್ರಾದಿಗಳ ಐಶ್ವರ್ಯವನ್ನು ಕೇಳಿ, ಅದಕ್ಕೆ ಆಸೆಪಡುತ್ತಾ ಅದನ್ನೇ ಚಿಂತಿಸುತ್ತಾ-ಚಿಂತಿಸುತ್ತಾ, ಮೈಮರೆತುಬಿಡುತ್ತಾನೆ. ಸ್ವಪ್ನದಲ್ಲಿ ತನ್ನನ್ನು ರಾಜನೆಂದೋ, ಇಂದ್ರನೆಂದೋ ಅನುಭವ ಪಡೆಯುತ್ತಾನೆ. ಜೊತೆಗೆ ತನ್ನ ದಾರಿದ್ರ್ಯದ ಶರೀರವನ್ನು ಮರೆತುಬಿಡುತ್ತಾನೆ. ಕೆಲವೊಮ್ಮೆ ಎಚ್ಚರವಾಗಿರುವಾಗಲೇ ಮನೋರಾಜ್ಯವನ್ನು ಕಟ್ಟಿಕೊಂಡು ತನ್ಮಯನಾಗುತ್ತಾನೆ. ಅವನಿಗೆ ಸ್ಥೂಲಶರೀರದ ಎಚ್ಚರವೂ ಇರುವುದಿಲ್ಲ. ಹೀಗೆಯೇ ಜೀವನು ಕರ್ಮಕೃತ ಕಾಮನೆ ಮತ್ತು ಕಾಮನಾಕೃತ ಕರ್ಮಕ್ಕೆ ವಶನಾಗಿ ಇನ್ನೊಂದು ಶರೀರವನ್ನು ಹೊಂದುತ್ತಾನೆ ಹಾಗೂ ತನ್ನ ಮೊದಲಿನ ಶರೀರವನ್ನು ಮರೆತುಬಿಡುತ್ತಾನೆ. ॥ ೪೧ ॥

ಯತೋ ಯತೋ ಧಾವತಿ ದೈವಚೋದಿತಂ
ಮನೋ ವಿಕಾರಾತ್ಮಕಮಾಪ ಪಂಚಸು ।
ಗುಣೇಷು ಮಾಯಾರಚಿತೇಷು ದೇಹ್ಯಸೌ
ಪ್ರಪದ್ಯಮಾನಃ ಸಹ ತೇನ ಜಾಯತೇ ॥ ೪೨ ॥

ಜ್ಯೋತಿರ್ಯಥೈವೋದಕ ಪಾರ್ಥಿವೇಷ್ವದಃ
ಸಮೀರವೇಗಾನುಗತಂ ವಿಭಾವ್ಯತೇ ।
ಏವಂ ಸ್ವಮಾಯಾರಚಿತೇಷ್ವಸೌ ಪುಮಾನ್
ಗುಣೇಷು ರಾಗಾನುಗತೋ ವಿಮುಹ್ಯತಿ ॥ ೪೩ ॥

ತಸ್ಮಾನ್ನ ಕಸ್ಯಚಿದ್ದ್ರೋಹಮಾಚರೇತ್ಸ ತಥಾವಿಧಃ ।
ಆತ್ಮನಃ ಕ್ಷೇಮಮನ್ವಿಚ್ಛನ್ ದ್ರೋಗ್ಧುರ್ವೈ ಪರತೋ ಭಯಮ್
॥ ೪೪ ॥

ಏಷಾ ತವಾನುಜಾ ಬಾಲಾ ಕೃಪಣಾ ಪುತ್ರಿಕೋಪಮಾ ।
ಹಂತುಂ ನಾರ್ಹಸಿ ಕಲ್ಯಾಣೀಮಿಮಾಂ ತ್ವಂ ದೀನವತ್ಸಲಃ
॥ ೪೫ ॥

ಶ್ರೀಶುಕ ಉವಾಚ

ಏವಂ ಸ ಸಾಮಭಿರ್ಭೇದೈರ್ಗೋಧ್ಯಮಾನೋಽಪಿ ದಾರುಣಃ ।
ನ ನ್ಯವರ್ತತ ಕೌರವ್ಯ ಪುರುಷಾದಾನನುವ್ರತಃ
॥ ೪೬ ॥

ನಿರ್ಬಂಧಂ ತಸ್ಯ ತಂ ಜ್ಞಾತ್ವಾ ವಿಚಿಂತ್ಯಾನಕದುಂದುಭಿಃ ।
ಪ್ರಾಪ್ತಂ ಕಾಲಂ ಪ್ರತಿವ್ಯೋಢುಮಿದಂ ತತ್ರಾನ್ವಪದ್ಯತ
॥ ೪೭ ॥

ಮೃತ್ಯುರ್ಬುದ್ಧಿಮತಾಪೋಹ್ಯೋ ಯಾವದ್ಬುದ್ಧಿಬಲೋದಯಮ್ ।
ಯದ್ಯಸೌ ನ ನಿವರ್ತೇತ ನಾಪರಾಧ್ಯೋಽಸ್ತಿ ದೇಹಿನಃ
॥ ೪೮ ॥

ಪ್ರದಾಯ ಮೃತ್ಯವೇ ಪುತ್ರಾನ್ಮೋಚಯೇ ಕೃಪಣಾಮಿಮಾಮ್ ।
ಸುತಾ ಮೇ ಯದಿ ಜಾಯೇರನ್ಮೃತ್ಯುರ್ವಾ ನ ಮ್ರಿಯೇತ ಚೇತ್
॥ ೪೯ ॥

ವಿಪರ್ಯಯೋ ವಾ ಕಿಂ ನ ಸ್ಯಾದ್ಗತಿರ್ಧಾತುರ್ದುರತ್ಯಯಾ ।
ಉಪಸ್ಥಿತೋ ನಿವರ್ತೇತ ನಿವೃತ್ತಃ ಪುನರಾಪತೇತ್
॥ ೫೦ ॥

ಜೀವಿಯ ಮನಸ್ಸು ಅನೇಕ ವಿಕಾರಗಳ ಪುಂಜವಾಗಿದೆ. ದೇಹಾಂತ್ಯದ ಸಮಯದಲ್ಲಿ ಅವನು ಅನೇಕ ಜನ್ಮಗಳ ಸಂಚಿತ ಮತ್ತು ಪ್ರಾರಬ್ಧ ಕರ್ಮಗಳ ವಾಸನೆಗಳಿಗೆ ಅಧೀನನಾಗಿ, ಮಾಯೆಯಿಂದ ರಚಿತವಾದ ಅನೇಕ ಪಾಂಚಭೌತಿಕ ದೇಹಗಳಲ್ಲಿನ ಯಾವ ಶರೀರವನ್ನು ಚಿಂತಿಸುವನೋ, ನಾನು ಇದೇ ಆಗಿದ್ದೇನೆ ಎಂದು ತಿಳಿದುಕೊಳ್ಳುವನೋ, ಅದೇ ಶರೀರವನ್ನು ಪಡೆದು ಅವನು ಹುಟ್ಟಬೇಕಾಗುತ್ತದೆ. ॥ ೪೨ ॥ ಸೂರ್ಯ-ಚಂದ್ರರೇ ಮುಂತಾದ ಜ್ಯೋತಿಗಳು ಗಡಿಗೆಯಲ್ಲಿರುವ ನೀರಿನಲ್ಲಿ ಅಥವಾ ಎಣ್ಣೆಯಲ್ಲಿ ಪ್ರತಿಬಿಂಬಿಸುತ್ತವೆ. ಗಾಳಿಯಿಂದ ನೀರು-ಎಣ್ಣೆ ಅಲುಗಾಡಿದರೆ ಅವರೂ ಅಲುಗಾಡುವಂತೆ ಕಾಣುತ್ತಾರೆ. ಹಾಗೆಯೇ ಜೀವನು ತನ್ನ ಸ್ವರೂಪದ ಅಜ್ಞಾನದಿಂದ ರಚಿತವಾದ ಶರೀರಗಳಲ್ಲಿ ಅನುರಾಗವನ್ನು ಹೊಂದಿ ಅವನ್ನೇ ತಾನು ಎಂದು ತಿಳಿದುಬಿಡುತ್ತಾನೆ. ಮೋಹವಶದಿಂದ ಆವುಗಳ ಬಂದು-ಹೋಗುವಿಕೆಯನ್ನೇ ತನ್ನ ಆವಾಗಮನವೆಂದು ತಿಳಿಯತೊಡಗುತ್ತಾನೆ. ॥ ೪೩ ॥ ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಯಾರಿಗೂ ದ್ರೋಹವನ್ನೆಸಗಬಾರದು. ಏಕೆಂದರೆ, ಜೀವನು ಕರ್ಮಕ್ಕೆ ಅಧೀನನಾದವನು. ದ್ರೋಹಮೆಸಗಿದವನಿಗೆ ಈ ಲೋಕದಲ್ಲಿ ಶತ್ರುವಿನಿಂದಲೂ, ಪರಲೋಕದಲ್ಲಿ ಯಮಧರ್ಮನಿಂದಲೂ ಭಯಪಡಬೇಕಾಗುತ್ತದೆ. ॥ ೪೪ ॥ ಕಂಸನೇ ! ನಿನ್ನ ತಂಗಿಯಾದ ಇವಳು ಇನ್ನು ಬಾಲಕಿ, ದೀನಳಾಗಿರುವಳು. ನಿನ್ನ ಮಗಳಿಗೆ ಸಮಾನಳು. ವೈವಾಹಿಕ ಮಂಗಳ ಚಿಹ್ನೆಗಳು ಇನ್ನೂ ಇವಳ ಶರೀರದಲ್ಲಿ ಅಚ್ಚಳಿಯದಂತೆ ಇವೆ. ಇಂತಹ ಸ್ಥಿತಿಯಲ್ಲಿ ನಿನ್ನಂತಹ ದೀನವತ್ಸಲನು ಈ ಬಡಪಾಯಿಯನ್ನು ವಧಿಸುವುದು ಉಚಿತವಲ್ಲ. ॥ ೪೫ ॥

ಶ್ರೀಶುಕ ಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಹೀಗೆ ವಸುದೇವನು ಕಂಸನಿಗೆ ಸಾಮ-ದಾನ-ಭೇದೋಪಾಯಗಳಿಂದ ಹಿತವನ್ನು ಬೋಧಿಸಿದರೂ, ದಾರುಣನಾದ, ರಾಕ್ಷಸರ ಅನುಯಾಯಿಯಾದ ಆ ಕಂಸನು ತನ್ನ ನಿಶ್ಚಯದಿಂದ ಹಿಂದೆಗೆಯಲಿಲ್ಲ. ॥ ೪೬ ॥ ಆಗ ವಸುದೇವನು ಕಂಸನ ಹಟವನ್ನು ನೋಡಿ, ತತ್ಕಾಲದಲ್ಲಿ ಒದಗಿ ಬಂದಿರುವ ಆಪತ್ತನ್ನು ನಿವಾರಿಸಿಕೊಳ್ಳಲು ಹೀಗೆ ನಿಶ್ಚಯಿಸಿದನು. ॥ ೪೭ ॥ ಲೋಕದಲ್ಲಿ ಬುದ್ಧಿವಂತನಾದವನು ತನ್ನ ಬುದ್ಧಿಶಕ್ತಿ ಇರುವಷ್ಟನ್ನು ಉಪಯೋಗಿಸಿ ಮೃತ್ಯುವನ್ನು ಮುಂದೂಡಲು ಪ್ರಯತ್ನಿಸಬೇಕು. ಪ್ರಯತ್ನಿಸಿದರೂ ನಿವಾರಣೆಯಾಗದಿದ್ದರೆ ಮತ್ತೆ ಪ್ರಯತ್ನಿಸುವವನಲ್ಲಿ ದೋಷವಿರುವುದಿಲ್ಲ, ಕರ್ತವ್ಯಲೋಪವಾಗುವುದಿಲ್ಲ. ॥ ೪೮ ॥ ಆದಕ್ಕಾಗಿ ಈ ಮೃತ್ಯುರೂಪೀ ಕಂಸನಿಗೆ ಇವಳಲ್ಲಿ ಹುಟ್ಟುವ ಪುತ್ರರನ್ನು ಕೊಟ್ಟುಬಿಡುವ ಪ್ರತಿಜ್ಞೆಯನ್ನು ಮಾಡಿ ನಾನು ದೀನಳಾದ ದೇವಕಿಯನ್ನು ಉಳಿಸುವೆನು. ಈಕೆಯಲ್ಲಿ ನನಗೆ ಮಕ್ಕಳಾಗಿಯೂ ಈ ಕಂಸನು ಸಾಯದಿದ್ದರೆ ದೈವೇಚ್ಛೆಯಿದ್ದಂತಾಗಲೀ. ॥ ೪೯ ॥ ಈ ವಿಷಯದಲ್ಲಿ ವ್ಯತ್ಯಾಸವಾದರೂ ಏಕಾಗಬಾರದು ? ನನ್ನ ಮಗನೇ ಇವನನ್ನು ಕೊಂದುಹಾಕಲೂಬಹುದು. ಏಕೆಂದರೆ, ದೈವಗತಿಯು ದಾಟಲು ಅಸಾಧ್ಯವಾದುದು. ಅದನ್ನು ಮೀರಿ ನಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸನ್ನಿಹಿತವಾದ ಮೃತ್ಯುವೂ ತಪ್ಪಿಹೋಗಬಹುದು; ತಪ್ಪಿಹೋದ ಮೃತ್ಯುವೂ ಪುನಃ ಬಳಿಗೆ ಬರಬಹುದು. ॥ ೫೦ ॥

ಅಗ್ನೇರ್ಯಥಾ ದಾರುವಿಯೋಗಯೋಗಯೋ-
ರದೃಷ್ಟತೋಽನ್ಯನ್ನ ನಿಮಿತ್ತಮಸ್ತಿ ।
ಏವಂ ಹಿ ಜಂತೋರಪಿ ದುರ್ವಿಭಾವ್ಯಃ
ಶರೀರಸಂಯೋಗವಿಯೋಗ ಹೇತುಃ ॥ ೫೧ ॥

ಏವಂ ವಿಮೃಶ್ಯ ತಂ ಪಾಪಂ ಯಾವದಾತ್ಮನಿದರ್ಶನಮ್ ।
ಪೂಜಯಾಮಾಸ ವೈ ಶೌರಿರ್ಬಹುಮಾನಪುರಃಸರಮ್
॥ ೫೨ ॥

ಪ್ರಸನ್ನವದನಾಂಭೋಜೋ ನೃತಂಸಂ ನಿರಪತ್ರಪಮ್ ।
ಮನಸಾ ದೂಯಮಾನೇನ ವಿಹಸನ್ನಿದಮಬ್ರವೀತ್
॥ ೫೩ ॥

ವಸುದೇವ ಉವಾಚ

ನ ಹ್ಯಸ್ಯಾಸ್ತೇ ಭಯಂ ಸೌಮ್ಯ ಯದ್ವಾಗಾಹಾತರೀರಿಣೇ ।
ಪುತ್ರಾನ್ಸಮರ್ಪಯಿಷ್ಯೇಽಸ್ಯಾ ಯತಸ್ತೇ ಭಯಮುತ್ಥಿತಮ್
॥ ೫೪ ॥

ಶ್ರೀಶುಕ ಉವಾಚ

ಸ್ಫುರ್ವಧಾನ್ನಿವವೃತೇ ಕಂಸಸ್ತದಾಕ್ಯಸಾರವಿತ್ ।
ವಸುದೇವೋಽಪಿ ತಂ ಪ್ರೀತಃ ಪ್ರಶಸ್ಯ ಪ್ರಾವಿಶದ್ಗೃಹಮ್
॥ ೫೫ ॥

ಅಥ ಕಾಲ ಉಪಾವೃತ್ತೇ ದೇವಕೀ ಸರ್ವದೇವತಾ ।
ಪುತ್ರಾನ್ಪ್ರಸುಷುವೇ ಚಾಷ್ಟೌ ಕನ್ಯಾಂ ಚೈವಾನುವತ್ಸರಮ್
॥ ೫೬ ॥

ಕೀರ್ತಿಮಂತಂ ಪ್ರಥಮಜಂ ಕಂಸಾಯಾನಕದುಂದುಭಿಃ ।
ಅರ್ಪಯಾಮಾಸ ಕೃಚ್ಛ್ರೇಣ ಸೋಽನೃತಾದತಿವಿಹ್ವಲಃ
॥ ೫೭ ॥

ಕಿಂ ದುಃಸಹಂ ನು ಸಾಧೂನಾಂ ವಿದುಷಾಂ ಕಿಮಪೇಕ್ಷಿತಮ್ ।
ಕಿಮಕಾರ್ಯಂ ಕದರ್ಯಾಣಾಂ ದುಸ್ತ್ಯಜಂ ಕಿಂ ಧೃತಾತ್ಮನಾಮ್
॥ ೫೮ ॥

ದೃಷ್ಟ್ವಾ ಸಮತ್ವಂ ತಚ್ಚೌರೇಃ ಸತ್ಯೇ ಚೈವ ವ್ಯವಸ್ಥಿತಿಮ್ ।
ಕಂಸಸ್ತುಷ್ಟಮನಾ ರಾಜನ್ಪ್ರಹಸನ್ನಿದಮಬ್ರವೀತ್
॥ ೫೯ ॥

ಪ್ರತಿಯಾತು ಕುಮಾರೋಽಯಂ ನ ಹ್ಯಸ್ಮಾದಸ್ತಿ ಮೇ ಭಯಮ್ ।
ಅಷ್ಟಮಾದ್ಯುವಯೋರ್ಗರ್ಭಾನ್ಮೃತ್ಯುರ್ಮೇ ವಿಹಿತಃ ಕಿಲ
॥ ೬೦ ॥

ಕಾಡಿಗೆ ಬೆಂಕಿ ತಗುಲಿದಾಗ ಯಾವ ಕಟ್ಟಿಗೆ ಸುಟ್ಟೀತು, ಯಾವುದು ಸುಡದಿರಬಹುದು! ದೂರದಲ್ಲಿರುವುದು ಸುಟ್ಟು ಹೋಗಿ ಹತ್ತಿರದಲ್ಲಿರುವುದು ಸುಡಲಾರದು. ಇವೆಲ್ಲವೂ ಅದೃಷ್ಟವಲ್ಲದೆ ಬೇರೆ ಯಾವ ಕಾರಣವೂ ಇರುವುದಿಲ್ಲ. ಹಾಗೆಯೇ ಯಾವ ಜೀವಿಯ ಯಾವ ಶರೀರವು ಉಳಿಯುವುದು, ಯಾವ ಕಾರಣದಿಂದ ಯಾವ ಶರೀರ ನಾಶವಾದೀತು ಇದನ್ನು ತಿಳಿಯುವುದು ಬಹಳ ಕಷ್ಟವಾಗಿದೆ. ॥ ೫೧ ॥ ವಸುದೇವನು ತನ್ನ ಶ್ರೇಷ್ಠ ವಾದ ಬುದ್ಧಿಯಿಂದ ಹೀಗೆ ನಿಶ್ಚಯಿಸಿ ಬಹುಮಾನ ಪುರಸ್ಸರವಾಗಿ ಕ್ರೂರಿಯಾದ ಕಂಸನನ್ನು ಬಹಳ ಪ್ರಶಂಸೆ ಮಾಡಿದನು. ॥ ೫೨ ॥ ಪರೀಕ್ಷಿತನೇ! ಕಂಸನು ಮಹಾಕ್ರೂರಿಯೂ, ನಿರ್ಲಜ್ಜನೂ ಆಗಿದ್ದನು. ಆ ಕಾರಣದಿಂದ ವಸುದೇವನ ಮನಸ್ಸಿನಲ್ಲಿ ಅತೀವ ಪೀಡನೆಯಾಗುತ್ತಿದ್ದರೂ, ಹೊರಗೆ ತೋರಿಸಿಕೊಳ್ಳದೆ ಪ್ರಫುಲ್ಲಿತ ಮುಖ ಕಮಲದಿಂದ ನಗು-ನಗುತ್ತಾ ಕಂಸನಲ್ಲಿ ಇಂತೆಂದನು – ॥ ೫೩ ॥

ವಸುದೇವನು ಹೇಳಿದನು – ಸೌಮ್ಯನೇ! ಆಕಾಶವಾಣಿಯು ನುಡಿದಂತೆ ನಿನಗೆ ದೇವಕಿಯಿಂದ ಯಾವ ಭಯವೂ ಇಲ್ಲ. ಭಯವಿರುವುದು ಅವಳ ಪುತ್ರರಿಂದ. ಆದ್ದರಿಂದ ನಾನು ಆಣೆಯಿಟ್ಟು ಹೇಳುತ್ತೇನೆ – 'ಇವಳಲ್ಲಿ ಹುಟ್ಟುವ ಮಕ್ಕಳನ್ನು ನಿನಗೆ ಒಪ್ಪಿಸಿ ಬಿಡುತ್ತೇನೆ.' ॥ ೫೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನು ಸುಳ್ಳು ಹೇಳುತ್ತಿಲ್ಲವೆಂದೂ, ಅವನ ಮಾತು ಯುಕ್ತಿ-ಯುಕ್ತವಾಗಿದೆ ಎಂದು ಭಾವಿಸಿ ಕಂಸನು ತಂಗಿಯಾದ ದೇವಕಿಯನ್ನು ಕೊಲ್ಲದಿರಲು ನಿಶ್ಚಯಿಸಿದನು. ಇದರಿಂದ ಸಂತೋಷಗೊಂಡ ವಸುದೇವನು ಅವನನ್ನು ಹೊಗಳುತ್ತಾ ಪತ್ನಿಯೊಡನೆ ಮನೆಗೆ ಹೊರಟುಹೋದನು. ॥ ೫೫ ॥ ದೇವಕಿಯು ಸಾಧ್ವಿಶಿರೋಮಣಿಯಾಗಿದ್ದಳು. ಎಲ್ಲ ದೇವತೆಗಳು ಅವಳಲ್ಲಿ ವಾಸಿಸುತ್ತಿದ್ದರು. ಕಾಲವು ಕಳೆದಂತೆ ವರ್ಷಕ್ಕೊಂದರಂತೆ ದೇವಕಿಯ ಗರ್ಭದಿಂದ ಎಂಟು ಪುತ್ರರು ಓರ್ವ ಪುತ್ರಿಯೂ ಜನಿಸಿದರು. ॥ ೫೬ ॥ ಮೊದಲನೆಯ ಪುತ್ರನಾದ ಕೀರ್ತಿಮಂತನನ್ನು ವಸುದೇವನು ತಂದು ಕಂಸನಿಗೆ ಒಪ್ಪಿಸಿದನು. ವಸುದೇವನಿಗೆ ಮಗುವನ್ನು ಒಪ್ಪಿಸುವುದಕ್ಕಿಂತಲೂ, ಸುಳ್ಳುಗಾರನಾಗುವುದು ಅತಿ ಕಷ್ಟಕರವಾಗಿತ್ತು. ॥ ೫೭ ॥ ಪರೀಕ್ಷಿತನೇ! ಸತ್ಯ ಸಂಧರಾದ ಸತ್ಪುರುಷರು ದೊಡ್ಡ-ದೊಡ್ಡ ಕಷ್ಟಗಳನ್ನೂ ಸಹಿಸಿ ಕೊಳ್ಳುವರು. ಜ್ಞಾನಿಗಳಿಗಾದರೋ ಯಾವುದರ ಅಪೇಕ್ಷೆಯೂ ಇರುವುದಿಲ್ಲ. ನೀಚ-ಪುರುಷರು ನೀಚಾತಿನೀಚ ಕೆಲಸವನ್ನೂ ಮಾಡಿಬಿಡುತ್ತಾರೆ. ಜಿತೇಂದ್ರಿಯರಾದವರು ಭಗವಂತನನ್ನು ಹೃದಯದಲ್ಲಿ ಧರಿಸಿಕೊಂಡಿರುವರು. ಅವರು ಎಲ್ಲವನ್ನೂ ತ್ಯಾಗ ಮಾಡಬಲ್ಲರು. ॥ ೫೮ ॥ ವಸುದೇವನಿಗೆ ತನ್ನ ಪುತ್ರನ ಜೀವನ ಮೃತ್ಯುವಿನಲ್ಲಿ ಸಮಭಾವವಿದೆ ಹಾಗೂ ಅವನು ಸತ್ಯನಿಷ್ಠನಾಗಿದ್ದಾನೆ ಎಂಬುದನ್ನು ನೋಡಿ ಕಂಸನು ತುಂಬಾ ಸಂತೋಷಗೊಂಡು ನಗುತ್ತಾ ಶೌರಿಯಲ್ಲಿ ಹೇಳಿದನು – ॥ ೫೯ ॥

ವಸುದೇವನೇ! ನೀನು ಈ ಹಸುಳೆಯನ್ನು ತೆಗೆದುಕೊಂಡು ಹೋಗು. ಇದರಿಂದ ನನಗೇನೂ ಭಯವಿಲ್ಲ. ಏಕೆಂದರೆ, 'ಆಕಾಶವಾಣಿಯು ನುಡಿದುದು – ದೇವಕಿಯ ಎಂಟನೆಯ ಗರ್ಭದಿಂದ ಹುಟ್ಟಿದವನಿಂದ ನಿನ್ನ ಮೃತ್ಯುವಾದೀತು' ಎಂದಿದೆಯಲ್ಲ. ॥ ೬೦ ॥

ತಥೇತಿ ಸುತಮಾದಾಯ ಯಯಾವಾನಕದುಂದುಭಿಃ ।
ನಾಭ್ಯನಂದತ ತದ್ವಾಕ್ಯಮಸತೋಽವಿಜಿತಾತ್ಮನಃ
॥ ೬೧ ॥

ನಂದಾದ್ಯಾಯೇ ವ್ರಜೇ ಗೋಪಾ ಯಾಶ್ಚಾಮೀಷಾಂ ಚ ಯೋಷಿತಃ ।
ವೃಷ್ಣಯೋ ವಸುದೇವಾದ್ಯಾ ದೇವಕ್ಯಾದ್ಯಾ ಯದುಸ್ತ್ರಿಯಃ
॥ ೬೨ ॥

ಸರ್ವೇ ವೈ ದೇವತಾಪ್ರಾಯಾ ಉಭಯೋರಪಿ ಭಾರತ ।
ಜ್ಞಾತಯೋ ಬಂಧುಸುಹೃದೋ ಯೇ ಚ ಕಂಸಮನುವ್ರತಾಃ
॥ ೬೩ ॥

ಏತತ್ ಕಂಸಾಯ ಭಗವಾನ್
ಶಶಂಸಾಭ್ಯೇತ್ಯ ನಾರದಃ ।
ಭೂಮೇರ್ಭಾರಾಯಮಾಣಾನಾಂ
ದೈತ್ಯಾನಾಂ ಚ ವಧೋದ್ಯಮಮ್ ॥ ೬೪ ॥

ಋಷೇರ್ವಿನಿರ್ಗಮೇ ಕಂಸೋ ಯದೂನ್ಮತ್ವಾ ಸುರಾನಿತಿ ।
ದೇವಕ್ಯಾ ಗರ್ಭಸಂಭೂತಂ ವಿಷ್ಣುಂ ಚ ಸ್ವವಧಂ ಪ್ರತಿ
॥ ೬೫ ॥

ದೇವಕೀಂ ವಸುದೇವಂ ಚ ನಿಗೃಹ್ಯ ನಿಗಡೈರ್ಗೃಹೇ ।
ಜಾತಂ ಜಾತಮಹನ್ಪುತ್ರಂ ತಯೋರಜನಶಂಕಯಾ
॥ ೬೬ ॥

ಮಾತರಂ ಪಿತರಂ ಭ್ರಾತೃನ್ಸರ್ವಾಂಶ್ಚ ಸುಹೃದಸ್ತಥಾ ।
ಘ್ನಂತಿ ಹ್ಯಸುತೃಪೋ ಲುಬ್ಧಾ ರಾಜಾನಃ ಪ್ರಾಯಶೋ ಭುವಿ
॥ ೬೭ ॥

ಆತ್ಮಾನಮಿಹ ಸಂಜಾತಂ ಜಾನನ್ಪ್ರಾಗ್ವಿಷ್ಣುನಾ ಹತಮ್ ।
ಮಹಾಸುರಂ ಕಾಲನೇಮಿಂ ಯದುಭಿಃ ಸ ವ್ಯರುಧ್ಯತ
॥ ೬೮ ॥

ಉಗ್ರಸೇನಂ ಚ ಪಿತರಂ ಯದುಭೋಜಾಂಧಕಾಧಿಪಮ್ ।
ಸ್ವಯಂ ನಿಗೃಹ್ಯ ಬುಭುಜೇ ಶೂರಸೇನಾನ್ಮಹಾಬಲಃ
॥ ೬೯ ॥

ಕಂಸನ ಮಾತಿನಂತೆ ವಸುದೇವನು ಶಿಶುವನ್ನು ಎತ್ತಿಕೊಂಡು ಮನೆಗೆ ಮರಳಿದನು. ಆದರೆ ಕಂಸನು ಅತಿದುಷ್ಟನಾಗಿದ್ದು ಅವನ ಮನಸ್ಸು, ಅವನ ಹತೋಟಿಯಲ್ಲಿಲ್ಲ, ಮರುಕ್ಷಣದಲ್ಲೇ ಬದಲಾಗಬಹುದು ಎಂಬುದನ್ನು ವಸುದೇವನು ಬಲ್ಲನು. ಅದಕ್ಕಾಗಿ ಅವನಿಗೆ ಕಂಸನ ಮಾತಿನಲ್ಲಿ ವಿಶ್ವಾಸ ಉಂಟಾಗಲಿಲ್ಲ ॥ ೬೧ ॥

ಪರೀಕ್ಷಿತನೇ! ಇತ್ತ ದೇವಋಷಿಗಳಾದ ನಾರದರು ಕಂಸನ ಬಳಿಗೆ ಬಂದು ಕಂಸನಿಂದ ಸತ್ಕೃತರಾಗಿ ಅವನಿಗೆ ಇಂತೆಂದರು – 'ಎಲೈ ಕಂಸನೇ! ವ್ರಜದಲ್ಲಿ ವಾಸಿಸುವ ನಂದನೇ ಮೊದಲಾದ ಗೋಪರೂ, ಅವನ ಪತ್ನಿಯರೂ, ವಸುದೇವನೇ ಮೊದಲಾದ ವೃಷ್ಣಿವಂಶೀಯ ಯಾದವರೂ, ದೇವಕಿಯೇ ಮೊದಲಾದ ಸ್ತ್ರೀಯರೂ ಹೀಗೆ ನಂದ-ವಸುದೇವರ ಜ್ಞಾತಿಬಾಂಧವರೆಲ್ಲರೂ ದೈವಾಂಶಸಂಭೂತರು. ಈ ಸಮಯದಲ್ಲಿ ನಿನ್ನ ಸೇವೆಯಲ್ಲಿರುವ ವರೆಲ್ಲರೂ ದೇವತೆಗಳೇ ಆಗಿದ್ದಾರೆ. ದೈತ್ಯರ ಪ್ರಾಬಲ್ಯವು ಹೆಚ್ಚಾಗಿದ್ದು ವೃಥಿವಿಯ ಭಾರವು ಹೆಚ್ಚಾಗಿದೆ. ಅದಕ್ಕಾಗಿ ದೈತ್ಯರನ್ನು ವಧಿಸಲು ದೇವತೆಗಳೆಲ್ಲ ಸೇರಿ ಕಾರ್ಯಕ್ರಮವನ್ನು ರೂಪಿಸುತ್ತಿದ್ದಾರೆ. ಇರುವ ವಿಷಯ ನಿನಗೆ ಅರುಹಿದೆನು. ನೀನು ಜಾಗರೂಕನಾಗಿರು' ಎಂದು ಹೇಳಿದರು. ॥ ೬೨–೬೪ ॥ ದೇವಋಷಿ ನಾರದರು ಇಷ್ಟು ಹೇಳಿ ಹೊರಟುಹೋದ ಬಳಿಕ ಕಂಸನಿಗೆ – ಈ ಯದುವಂಶೀಯರೆಲ್ಲರು ದೇವತೆಗಳು ಹಾಗೂ ದೇವಕಿಯ ಗರ್ಭದಿಂದ ಭಗವಾನ್ ವಿಷ್ಣುವೇ ನನ್ನನ್ನು ಕೊಲ್ಲಲು ಹುಟ್ಟಲಿರುವನು ಎಂದು ನಿಶ್ಚಯಿಸಿದನು. ಅದಕ್ಕಾಗಿ ಅವನು ವಸುದೇವ ದೇವಕಿಯರಿಬ್ಬರನ್ನು ಸಂಕೋಲೆಗಳಿಂದ ಬಂಧಿಸಿ ಕಾರಾಗೃಹದಲ್ಲಿಟ್ಟನು. ಅವರಲ್ಲಿ ಹುಟ್ಟಿದ ಮಕ್ಕಳನ್ನು ಕೊಲ್ಲುತ್ತಾ ಹೋದನು. ಪ್ರತಿ ಬಾರಿಯೂ ಅವನಿಗೆ – 'ಎಲ್ಲಾದರೂ ವಿಷ್ಣುವೇ ಈ ಬಾಲಕನ ರೂಪದಲ್ಲಿ ಬಂದಿರಬಹುದೇ?' ಎಂಬ ಸಂಶಯವು ಯಾವಾಗಲೂ ಇರುತ್ತಿತ್ತು. ॥ ೬೫–೬೬ ॥ ಪರೀಕ್ಷಿತನೇ! ಪ್ರಾಯಶಃ ಈ ಲೋಕದಲ್ಲಿ ತಮ್ಮ ಪ್ರಾಣಗಳನ್ನು ಪೋಷಿಸುವ ಲೋಭಿಗಳಾದ ರಾಜರು ತಮ್ಮ ಸ್ವಾರ್ಥಕ್ಕಾಗಿ ತಂದೆ-ತಾಯಿ, ಬಂಧು-ಬಾಂಧವರು ಹಾಗೂ ತಮ್ಮ ಅತ್ಯಂತ ಹಿತೈಷಿಗಳಾದ ಇಷ್ಟ-ಮಿತ್ರರನ್ನು ಕೊಂದುಬಿಡುವುದನ್ನು ನಾವು ನೋಡುತ್ತೇವೆ. ॥ ೬೭ ॥ ನಾನು ಮೊದಲು ಕಾಲನೇಮಿಯೆಂಬ ಅಸುರನಾಗಿದ್ದು ವಿಷ್ಣುವು ನನ್ನನ್ನು ಕೊಂದುಬಿಟ್ಟಿರುವನೆಂದು ಕಂಸನಿಗೆ ತಿಳಿದಿತ್ತು. ಇದರಿಂದ ಅವನು ಯದುವಂಶೀಯರಲ್ಲಿ ಘೋರವಾದ ವಿರೋಧವನ್ನು ಕಟ್ಟಿಕೊಂಡನು. ॥ ೬೮ ॥ ಮಹಾಬಲಿಷ್ಠನಾದ ಕಂಸನು ಯದು, ಭೋಜ, ಅಂಧಕ ವಂಶಗಳಿಗೆ ಅಧಿನಾಯಕನಾಗಿದ್ದ ತನ್ನ ತಂದೆ ಉಗ್ರಸೇನನನ್ನೂ ಕಾರಾಗೃಹದಲ್ಲಿಟ್ಟು ಶೂರಸೇನ ರಾಜ್ಯವನ್ನು ತಾನೇ ಆಳತೊಡಗಿದನು. ॥ ೬೯ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಶ್ರೀಕೃಷ್ಣಾವತಾರೋಪಕ್ರಮೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಭಗವಂತನು ದೇವಕಿಯ ಗರ್ಭವನ್ನು ಪ್ರವೇಶಿಸಿದುದು, ದೇವತೆಗಳಿಂದ ಗರ್ಭಸ್ತುತಿ

ಶ್ರೀಶುಕ ಉವಾಚ

ಪ್ರಲಂಬಬಕಚಾಣೂರತೃಣಾವರ್ತಮಹಾಶನೈಃ ।
ಮುಷ್ಟಿಕಾರಿಷ್ಟದ್ವಿವಿದಪೂತನಾಕೇಶಿಧೇನುಕೈಃ
॥ ೧ ॥

ಅನ್ಯೈಶ್ಚಾಸುರಭೂಪಾಲೈರ್ಬಾಣಭೌಮಾದಿಭಿರ್ಯುತಃ ।
ಯದೂನಾಂ ಕದನಂ ಚಕ್ರೇ ಬಲೀ ಮಾಗಧಸಂಶ್ರಯಃ
॥ ೨ ॥

ತೇ ಪೀಡಿತಾ ನಿವಿವಿಶುಃ ಕುರುಪಂಚಾಲಕೇಕಯಾನ್ ।
ಶಾಲ್ವಾನ್ವಿದರ್ಭಾನ್ನಿಷಧಾನ್ವಿದೇಹಾನ್ಕೋಸಲಾನಪಿ
॥ ೩ ॥

ಏಕೇ ತಮನುರುಂಧಾನಾ ಜ್ಞಾತಯಃ ಪರ್ಯುಪಾಸತೇ ।
ಹತೇಷು ಷಟ್ಸು ಬಾಲೇಷು ದೇವಕ್ಯಾ ಔಗ್ರಸೇನಿನಾ
॥ ೪ ॥

ಸಪ್ತಮೋ ವೈಷ್ಣವಂ ಧಾಮ ಯಮನಂತಂ ಪ್ರಚಕ್ಷತೇ ।
ಗರ್ಭೋ ಬಭೂವ ದೇವಕ್ಯಾ ಹರ್ಷಶೋಕವಿವರ್ಧನಃ
॥ ೫ ॥

ಭಗವಾನಪಿ ವಿಶ್ವಾತ್ಮಾ ವಿದಿತ್ವಾ ಕಂಸಜಂ ಭಯಮ್ ।
ಯದೂನಾಂ ನಿಜನಾಥಾನಾಂ ಯೋಗಮಾಯಾಂ ಸಮಾದಿಶತ್
॥ ೬ ॥

ಗಚ್ಛ ದೇವಿ ವ್ರಜಂ ಭದ್ರೇ ಗೋಪಗೋಭಿರಲಂಕೃತಮ್ ।
ರೋಹಿಣೀ ವಸುದೇವಸ್ಯ ಭಾರ್ಯಾऽऽಸ್ತೇ ನಂದಗೋಕುಲೇ ।
ಅನ್ಯಾಶ್ಚ ಕಂಸಸಂವಿಗ್ನಾ ವಿವರೇಷು ವಸಂತಿ ಹಿ
॥ ೭ ॥

ದೇವಕ್ಯಾ ಜಠರೇ ಗರ್ಭಂ ಶೇಷಾಖ್ಯಂ ಧಾಮ ಮಾಮಕಮ್ ।
ತತ್ಸನ್ನಿಕೃಷ್ಯ ರೋಹಿಣ್ಯಾ ಉದರೇ ಸಂನಿವೇಶಯ
॥ ೮ ॥

ಅಥಾಹಮಂಶಭಾಗೇನ ದೇವಕ್ಯಾಃ ಪುತ್ರತಾಂ ಶುಭೇ ।
ಪ್ರಾಪ್ಸ್ಯಾಮಿ ತ್ವಂ ಯಶೋದಾಯಾಂ ನಂದಪತ್ನ್ಯಾಂ ಭವಿಷ್ಯಸಿ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಮಗಧಾಧಿಪತಿಯಾದ ಜರಾಸಂಧನ ಆಶ್ರಯವನ್ನು ಪಡೆದು ಕೊಂಡಿದ್ದ ಮಹಾಬಲಿಷ್ಠನಾಗಿದ್ದ ಕಂಸನಿಗೆ – ಪ್ರಲಂಬಾಸುರ, ಬಕಾಸುರ, ಚಾಣೂರ, ತೃಣಾವರ್ತ, ಅಘಾಸುರ, ಮುಷ್ಟಿಕ, ಅರಿಷ್ಟಾಸುರ, ದ್ವಿವಿದ, ಪೂತನಾ, ಕೇಶೀ ಮತ್ತು ಧೇನುಕ, ಬಾಣಾಸುರ, ಭೌಮಾಸುರ ಮೊದಲಾದ ಮಹಾಸುರರು ಸಹಾಯಕರಾಗಿದ್ದರು. ಇವರನ್ನು ಜೊತೆ ಸೇರಿಸಿಕೊಂಡು ಯದು ವಂಶೀಯರನ್ನು ನಾಶಗೊಳಿಸತೊಡಗಿದನು. ॥ ೧-೨ ॥ ಅವರೆಲ್ಲರೂ ಭಯಗೊಂಡು ಕುರು, ಪಾಂಚಾಲ, ಕೇಕಯ, ಶಾಲ್ವ, ವಿದರ್ಭ, ನಿಷಧ, ವಿದೇಹ, ಕೋಸಲ ಮುಂತಾದ ದೇಶಗಳಿಗೆ ವಲಸೆ ಹೋದರು. ॥ ೩ ॥ ವಲಸೆ ಹೋಗಲಾಗದ ಕೆಲವರು ಬಹಿರಂಗ ದಲ್ಲಿ ಕಂಸನಿಗೆ ನಿಷ್ಠರಾಗಿ ಅವನ ಸೇವೆಯಲ್ಲಿ ನಿರತರಾಗಿದ್ದರು. ಕಂಸನು ಒಂದಾದ ಮೇಲೊಂದರಂತೆ ದೇವಕಿಯ ಆರು ಮಂದಿ ಮಕ್ಕಳನ್ನು ಕೊಂದುಹಾಕಿದಾಗ, ದೇವಕಿಯ ಏಳನೆಯ ಗರ್ಭದಲ್ಲಿ ಭಗವಂತನ ಅಂಶರೂಪನಾದ ಅನಂತನೆಂದು ಕರೆಸಿಕೊಳ್ಳುವ ಶ್ರೀಶೇಷದೇವನು* ನೆಲೆಸಿದನು. ಆನಂದಸ್ವರೂಪನಾದ ಮಹಾ ಶೇಷನು ಗರ್ಭದಲ್ಲಿ ನೆಲೆಸಿದಾಗ ದೇವಕಿಗೆ ಸ್ವಾಭಾವಿಕವಾಗಿಯೇ ಹರ್ಷವುಂಟಾಯಿತು. ಆದರೆ ಕಂಸನು ಇವನನ್ನೂ ಕೊಂದುಬಿಡ ಬಹುದೆಂಬ ಭಯದಿಂದ ಶೋಕವು ಹೆಚ್ಚಿತು. ॥ ೪-೫ ॥

ತನ್ನನ್ನೇ ನಾಥನನ್ನಾಗಿ ಭಾವಿಸಿರುವ ಯದುವಂಶೀಯರಿಗೆ ಕಂಸನು ಉಪಟಳವನ್ನು ಕೊಡುತ್ತಿರುವನೆಂಬುದನ್ನೂ ತಿಳಿದ ವಿಶ್ವಾತ್ಮನಾದ ಭಗವಂತನು ತನ್ನ ಯೋಗಮಾಯೆಗೆ ಹೀಗೆ ಆದೇಶಿಸಿದನು. ॥ ೬ ॥ ದೇವೀ ! ಕಲ್ಯಾಣೀ ! ನೀನೀಗಲೇ ವ್ರಜ ಭೂಮಿಗೆ ಹೋಗು. ಅದು ಗೋಪಾಲಕರಿಂದಲೂ, ಗೋವು ಗಳಿಂದಲೂ ಸುಶೋಭಿತವಾಗಿದೆ. ನಂದನ ಆ ಗೋಕುಲದಲ್ಲಿ ವಸುದೇವನ ಪತ್ನಿಯಾದ ರೋಹಿಣಿಯು ವಾಸವಾಗಿದ್ದಾಳೆ. ಅವನ ಇತರ ಪತ್ನಿಯರು ಕಂಸನ ಭಯದಿಂದ ಗುಪ್ತಸ್ಥಳಗಳಲ್ಲಿ ಅಡಗಿ ಕೊಂಡಿದ್ದಾರೆ. ॥ ೭ ॥ ಈ ಸಮಯದಲ್ಲಿ ನನ್ನ ಅಂಶನಾದ ಮಹಾಶೇಷನು ದೇವಕಿಯ ಗರ್ಭದಲ್ಲಿ ನೆಲೆಸಿರುವನು. ಅವನನ್ನು ಅಲ್ಲಿಂದ ಸೆಳೆದುಕೊಂಡು ನೀನು ರೋಹಿಣಿಯ ಉದರ ದಲ್ಲಿರಿಸು. ॥ ೮ ॥ ಕಲ್ಯಾಣಿ ! ಈಗ ನಾನು ನನ್ನ ಸಮಸ್ತಜ್ಞಾನ, ಬಲ ಮುಂತಾದ ಅಂಶಗಳೊಂದಿಗೆ ದೇವಕಿಗೆ ಪುತ್ರನಾಗುವೆನು. ನೀನು ನಂದಮಹಾರಾಜನ ಪತ್ನಿಯಾದ ಯಶೋದೆಯ ಗರ್ಭದಲ್ಲಿ ಹುಟ್ಟುವೆ. ॥ ೯ ॥

---

* ರಾಮಾವತಾರದಲ್ಲಿ ಭಗವಂತನಿಗೆ ನಾನು ತಮ್ಮನಾಗಿದ್ದೆ ಇದರಿಂದ ಅಣ್ಣನ ಆಜ್ಞೆಯನ್ನು ಪಾಲಿಸಬೇಕಾಯಿತು. ಅವನು ಕಾಡಿಗೆ ಹೋಗುವಾಗ ಕಡೆಯಲಾಗಲಿಲ್ಲ. ಈಗ ಕೃಷ್ಣಾವತಾರದಲ್ಲಿ ಅಣ್ಣನಾಗಿ ಭಗವಂತನ ಸೇವೆಯನ್ನು ಚೆನ್ನಾಗಿ ಮಾಡುವೆನು ಎಂದು ವಿಚಾರಮಾಡಿದ ಶೇಷದೇವರು ಶ್ರೀಕೃಷ್ಣನಿಗಿಂತ ಮೊದಲೇ ಗರ್ಭವನ್ನು ಪ್ರವೇಶಿಸಿದರು.

ಅರ್ಚಿಷ್ಯಂತಿ ಮನುಷ್ಯಾಸ್ತ್ವಾಂ ಸರ್ವಕಾಮವರೇಶ್ವರೀಮ್ ।
ಧೂಪೋಪಹಾರಬಲಿಭಿಃ ಸರ್ವಕಾಮವರಪ್ರದಾಮ್
॥ ೧೦ ॥

ನಾಮಧೇಯಾನಿ ಕುರ್ವಂತಿ ಸ್ಥಾನಾನಿ ಚ ನರಾ ಭುವಿ ।
ದುರ್ಗೇತಿ ಭದ್ರಕಾಲೀತಿ ವಿಜಯಾ ವೈಷ್ಣವೀತಿ ಚ
॥ ೧೧ ॥

ಕುಮುದಾ ಚಂಡಿಕಾ ಕೃಷ್ಣಾ ಮಾಧವೀ ಕನ್ಯಕೇತಿ ಚ ।
ಮಾಯಾ ನಾರಾಯಣೀಶಾನಿ ಶಾರದೇತ್ಯಂಬಿಕೇತಿ ಚ
॥ ೧೨ ॥

ಗರ್ಭಸಂಕರ್ಷಣಾತ್ತಂ ವೈ ಪ್ರಾಹುಃ ಸಂಕರ್ಷಣಂ ಭುವಿ ।
ರಾಮೇತಿ ಲೋಕರಮಣಾದ್ಬಲಂ ಬಲವದುಚ್ಛ್ರಯಾತ್
॥ ೧೩ ॥

ಸಂದಿಷ್ಟೈವಂ ಭಗವತಾ ತಥೇತ್ಯೋಮಿತಿ ತದ್ವಚಃ ।
ಪ್ರತಿಗೃಹ್ಯ ಪರಿಕ್ರಮ್ಯ ಗಾಂ ಗತಾ ತತ್ತಥಾಕರೋತ್
॥ ೧೪ ॥

ಗರ್ಭೇ ಪ್ರಣೀತೇ ದೇವಕ್ಯಾ ರೋಹಿಣೀಂ ಯೋಗನಿದ್ರಯಾ ।
ಅಹೋ ವಿಸ್ರಂಸಿತೋ ಗರ್ಭ ಇತಿ ಪೌರಾ ವಿಚುಕ್ರುಶುಃ
॥ ೧೫ ॥

ಭಗವಾನಪಿ ವಿಶ್ವಾತ್ಮಾ ಭಕ್ತಾನಾಮಭಯಂಕರಃ ।
ಆವಿವೇಶಾಂಶಭಾಗೇನ ಮನ ಆನಕದುಂದುಭೇಃ
॥ ೧೬ ॥

ಸ ಬಿಭ್ರತ್ಪೌರುಷಂ ಧಾಮ ಭ್ರಾಜಮಾನೋ ಯಥಾ ರವಿಃ ।
ದುರಾಸದೋಽತಿದುರ್ಧರ್ಷೋ ಭೂತಾನಾಂ ಸಂಬಭೂವ ಹ
॥ ೧೭ ॥

ತತೋ ಜಗನ್ಮಂಗಲಮಚ್ಯುತಾಂಶಂ
ಸಮಾಹಿತಂ ಶೂರಸುತೇನ ದೇವೀ ।
ದಧಾರ ಸರ್ವಾತ್ಮಕಮಾತ್ಮಭೂತಂ
ಕಾಷ್ಠಾ ಯಥಾಽಽನಂದ ಕರಂ ಮನಸ್ತಃ ॥ ೧೮ ॥

ಸಾ ದೇವಕೀ ಸರ್ವಜಗನ್ನಿವಾಸ-
ನಿವಾಸಭೂತಾ ನಿತರಾಂ ನ ರೇಜೇ ।
ಭೋಜೇಂದ್ರಗೇಹೇಽಗ್ನಿಶಿಖೇವ ರುದ್ಧಾ
ಸರಸ್ವತೀ ಜ್ಞಾನಖಿಲೇ ಯಥಾ ಸತೀ ॥ ೧೯ ॥

ಜನರು ಬೇಡಿದ ವರಗಳನ್ನು ಕೊಡುವುದರಲ್ಲಿ ನೀನು ಸಮರ್ಥಳಾಗುವೆ. ಮನುಷ್ಯರು ತಮ್ಮ ಸಮಸ್ತ ಅಭಿಲಾಷೆಗಳನ್ನು ಪೂರೈಸುವವಳು ಎಂದು ತಿಳಿದು ನಿನ್ನನ್ನು ಧೂಪ-ದೀಪ ನೈವೇದ್ಯಾದಿ ಉಪಚಾರಗಳಿಂದ ಪೂಜಿಸುವರು. ॥ ೧೦ ॥ ಭೂಲೋಕದಲ್ಲಿ ನಿನ್ನನ್ನು ದುರ್ಗಾ, ಭದ್ರಕಾಲಿ, ವಿಜಯಾ, ವೈಷ್ಣವೀ, ಕುಮುದಾ, ಚಂಡಿಕಾ, ಕೃಷ್ಣಾ ಮಾಧವೀ, ಕನ್ಯಕಾ, ಮಹಾಮಾಯಾ, ನಾರಾಯಣೀ, ಈಶಾನೀ, ಶಾರದಾ, ಅಂಬಿಕಾ ಇವೇ ಮುಂತಾದ ಅನೇಕ ನಾಮಗಳಿಂದ ಕೊಂಡಾಡುವರು. ॥ ೧೧-೧೨ ॥ ದೇವಕಿಯ ಗರ್ಭದಿಂದ ಸಳೆಯಲ್ಪಟ್ಟ ಕಾರಣದಿಂದ ಮಹಾಶೇಷನನ್ನು ಪ್ರಪಂಚದಲ್ಲಿ ಜನರು 'ಸಂಕರ್ಷಣ' ನೆಂದು ಹೇಳುವರು. ಲೋಕರಂಜಕನಾದ್ದರಿಂದ 'ರಾಮ' ಎಂದೂ, ಬಲವಂತರಲ್ಲಿ ಶ್ರೇಷ್ಠನಾದ್ದರಿಂದ 'ಬಲಭದ್ರ' ಎಂದೂ ಹೇಳುವರು. ॥ ೧೩. ॥

ಭಗವಂತನು ಹೀಗೆ ಆಜ್ಞಾಪಿಸಿದಾಗ ಯೋಗಮಾಯೆಯು 'ಹಾಗೆಯೇ ಆಗಲಿ' ಎಂದು ಹೇಳಿ ಅವನ ಮಾತನ್ನು ಶಿರಸಾವಹಿಸಿ, ಅವನಿಗೆ ಪ್ರದಕ್ಷಿಣೆ ಮಾಡಿ ಭೂಲೋಕಕ್ಕೆ ಬಂದು ಭಗವಂತನು ಹೇಳಿದಂತೆಯೇ ಮಾಡಿದಳು. ॥ ೧೪ ॥ ಯೋಗಮಾಯೆಯು ದೇವಕಿಯ ಗರ್ಭವನ್ನು ಕೊಂಡುಹೋಗಿ ರೋಹಿಣಿಯ ಉದರದಲ್ಲಿ ಸ್ಥಾಪಿಸಿದಾಗ ಮಥುರಾಪುರವಾಸಿಗಳು ದುಃಖದಿಂದ ಆಯ್ಯೋ! ಬಡಪಾಯಿ ದೇವಕಿಯ ಈ ಗರ್ಭವು ನಾಶವಾಗಿ ಹೋಯಿತಲ್ಲ! ಎಂದು ಪರಸ್ಪರ ಅಡಿಕೊಳ್ಳತೊಡಗಿದರು. ॥ ೧೫ ॥

ಭಕ್ತರಿಗೆ ಅಭಯವನ್ನು ಕೊಡುವವನೂ, ಎಲ್ಲೆಡೆಗಳಲ್ಲಿ ಎಲ್ಲ ರೂಪಗಳಿಂದ ಇರುವವನೂ, ಬರುವಿಕೆ-ಹೋಗುವಿಕೆ ಎಂಬುದಿಲ್ಲದವನೂ ಆದ ಭಗವಂತನು ತನ್ನ ಸಮಸ್ತ ಕಲೆಗಳೊಂದಿಗೆ ವಸುದೇವನ ಮನಸ್ಸಿನಲ್ಲಿ ಪ್ರಕಟಗೊಂಡನು. ॥ ೧೬ ॥ ಮನಸ್ಸಿನಲ್ಲಿ ಮೊದಲಿನಿಂದಲೂ ಅವ್ಯಕ್ತನಾಗಿದ್ದವನು ವ್ಯಕ್ತನಾದನು. ಭಗವಂತನ ದಿವ್ಯತೇಜಸ್ಸನ್ನು ಧರಿಸಿದ ವಸುದೇವನು ಸೂರ್ಯನಂತೆ ದೇದೀಪ್ಯಮಾನನಾಗಿ ಕಂಗೊಳಿಸಿದನು. ಅವನನ್ನು ನೋಡಿದವರ ಕಣ್ಣುಗಳು ಕುಕ್ಕುತ್ತಿದ್ದವು. ಯಾರೂ ಅವನನ್ನು ಬಲದಿಂದಾಗಲೀ, ವಾಣಿಯಿಂದಾಗಲೀ, ಪ್ರಭಾವದಿಂದಾಗಲೀ ಎದುರಿಸಲಾಗುತ್ತಿರಲಿಲ್ಲ. ॥ ೧೭ ॥ ಜಗತ್ತಿಗೆ ಪರಮ ಮಂಗಳಕರವಾದ ಭಗವಂತನ ಆ ಜ್ಯೋತಿರ್ಮಯ ಅಂಶವು ವಸುದೇವನ ಮೂಲಕ ಆಧಾನ ಮಾಡಲ್ಪಟ್ಟಾಗ ಪೂರ್ವದಿಕ್ಕು ಚಂದ್ರನನ್ನು ಧರಿಸುವಂತೆಯೇ ಶುದ್ಧ ಸತ್ತ್ವಸಂಪನ್ನಳಾದ ದೇವಕೀದೇವಿಯು ವಿಶುದ್ಧ ಮನಸ್ಸಿನಿಂದ ಸರ್ವಾತ್ಮನೂ, ಆತ್ಮಸ್ವರೂಪನೂ ಆದ ಭಗವಂತನನ್ನು ಧರಿಸಿಕೊಂಡಳು. ॥ ೧೮ ॥ ಭಗವಂತನು ಇಡೀ ಜಗತ್ತಿಗೆ ನಿವಾಸಸ್ಥಾನನಾಗಿದ್ದಾನೆ. ದೇವಕಿಯು ಅವನಿಗೂ ನಿವಾಸಸ್ಥಾನಳಾದಳು. ಗಡಿಗೆಯಲ್ಲಿಟ್ಟ ದೀಪದ ಬೆಳಕು ಹೊರಗೆ ಹರಡದಂತೆ, ಜ್ಞಾನವಂತನ ವಿದ್ಯೆಯು ಪ್ರಕಾಶಕ್ಕೆ ಬರದಂತೆಯೇ ಕಂಸನ ಕಾರಾಗೃಹದಲ್ಲಿ ಬಂದಿಯಾಗಿದ್ದ ದೇವಕಿಯ ಪ್ರಭೆಯು ಪೂರ್ಣವಾಗಿ ಶೋಭಿಸಲಿಲ್ಲ. ॥ ೧೯ ॥

ತಾಂ ವೀಕ್ಷ್ಯ ಕಂಸಃ ಪ್ರಭಯಾ ಜಿತಾಂತರಾಂ
ವಿರೋಚಯಂತೀಂ ಭವನಂ ಶುಚಿಸ್ಮಿತಾಮ್ ।
ಅಹೈಷ ಮೇ ಪ್ರಾಣಹರೋ ಹರಿರ್ಗುಹಾಂ
ಧ್ರುವಂ ಶ್ರಿತೋ ಯನ್ನ ಪುರೇಯಮೀದೃಶೀ ॥ ೨೦ ॥

ಕಿಮದ್ಯ ತಸ್ಮಿನ್ಕರಣೀಯಮಾಶು ಮೇ
ಯದರ್ಥತಂತ್ರೋ ನ ವಿಹಂತಿ ವಿಕ್ರಮಮ್ ।
ಸ್ತ್ರಿಯಾಃ ಸ್ವಸುರ್ಗುರುಮತ್ಯಾ ವಧೋಽಯಂ
ಯಶಃ ಶ್ರಿಯಂ ಹಂತ್ಯನುಕಾಲಮಾಯುಃ ॥ ೨೧ ॥

ಸ ಏಷ ಜೀವನ್ ಖಲು ಸಂಪರೇತೋ
ವರ್ತೇತ ಯೋಽತ್ಯಂತನೃಶಂಸಿತೇನ ।
ದೇಹೇ ಮೃತೇ ತಂ ಮನುಜಾಃ ಶಪಂತಿ
ಗಂತಾ ತಮೋಽಂಧಂ ತನುಮಾನಿನೋ ಧ್ರುವಮ್ ॥ ೨೨ ॥

ಇತಿ ಘೋರತಮಾದ್ಭಾವಾತ್ಸಂನಿವೃತ್ತಃ ಸ್ವಯಂ ಪ್ರಭುಃ ।
ಆಸ್ತೇ ಪ್ರತೀಕ್ಷಂಸ್ತಜ್ಜನ್ಮ ಹರೇರ್ವೈರಾನುಬಂಧಕೃತ್
॥ ೨೩ ॥

ಆಸೀನಃ ಸಂವಿಶಂಸ್ತಿಷ್ಠನ್ಭುಂಜಾನಃ ಪರ್ಯಟನ್ಮಹೀಮ್ ।
ಚಿಂತಯಾನೋ ಹೃಷೀಕೇಶಮಪಶ್ಯತ್ತನ್ಮಯಂ ಜಗತ್
॥ ೨೪ ॥

ಬ್ರಹ್ಮಾ ಭವಶ್ಚ ತತ್ರೈತ್ಯ ಮುನಿಭಿರ್ನಾರದಾದಿಭಿಃ ।
ದೇವೈಃ ಸಾನುಚರೈಃ ಸಾಕಂ ಗೀರ್ಭಿರ್ವೃಷಣಮೈಡಯನ್
॥ ೨೫ ॥

ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ
ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।
ಸತ್ಯಸ್ಯ ಸತ್ಯಮೃತಸತ್ಯನೇತ್ರಂ
ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥ ೨೬ ॥

ಭಗವಂತನು ದೇವಕಿಯ ಗರ್ಭದಲ್ಲಿ ವಿರಾಜ ಮಾನನಾದಾಗ ಆಕೆಯ ಮುಖದಲ್ಲಿ ಪವಿತ್ರ ಮುಗುಳ್ನಗೆ ಇತ್ತು. ಆಕೆಯ ಶರೀರದ ಕಾಂತಿಯಿಂದ ಕಾರಾಗೃಹವು ಬೆಳಗಿ ಹೋಯಿತು. ಕಂಸನು ಬಂದುನೋಡಿದಾಗ ಅವನು ಮನಸ್ಸಿನಲ್ಲೇ ಈ ಬಾರಿ ನನ್ನ ಪ್ರಾಣಹರನಾದ ವಿಷ್ಣುವೇ ಇವಳ ಗರ್ಭದಲ್ಲಿ ಖಂಡಿತವಾಗಿ ಪ್ರವೇಶಿಸಿರುವನು. ಏಕೆಂದರೆ, ಇದಕ್ಕೆ ಮೊದಲು ದೇವಕಿಯು ಹೀಗೆ ಇರಲಿಲ್ಲವಲ್ಲ! ಎಂದು ತರ್ಕಿಸಿದನು. ॥ ೨೦ ॥ ಶತ್ರುವಿನ ನಿರಸನಕ್ಕಾಗಿ ನಾನು ಕೂಡಲೇ ಏನು ಮಾಡಲಿ ? ದೇವಕಿಯನ್ನು ಕೊಲ್ಲುವುದೂ ಸರಿಯಾಗಲಾರದು. ಏಕೆಂದರೆ, ವೀರನಾದವನು ಸ್ವಾರ್ಥವಶನಾಗಿ ತನ್ನ ಪರಾಕ್ರಮವನ್ನು ಕಲಂಕಿತವಾಗಿಸುವುದಿಲ್ಲ. ಮೊದಲನೆಯದಾಗಿ ಇವಳು ಸ್ತ್ರೀಯಾಗಿದ್ದಾಳೆ, ಇನ್ನೊಂದು ನನ್ನ ತಂಗಿಯಾಗಿದ್ದಾಳೆ, ಮೂರನೆಯದು ಗರ್ಭಿಣಿ ಬೇರೆ. ಇವಳನ್ನು ಕೊಂದುಬಿಟ್ಟರೆ ತತ್ಕಾಲವೇ ನನ್ನ ಕೀರ್ತಿ, ಲಕ್ಷ್ಮೀ ಮತ್ತು ಆಯುಸ್ಸು ನಾಶವಾಗಿ ಹೋದೀತು. ॥ ೨೧ ॥ ಅತ್ಯಂತ ಕ್ರೂರವಾಗಿ ವರ್ತಿಸುವವನು ಜೀವಿತನಾಗಿದ್ದರೂ ಸತ್ತಂತೆಯೇ. ಅವನು ಸತ್ತಮೇಲೆ ಜನರು ಅವನನ್ನು ಬೈಯ್ಯುವರು. ಇಷ್ಟೇ ಅಲ್ಲ, ಅವನು ದೇಹಾಭಿಮಾನಿಗಳಿಗೆ ಯೋಗ್ಯವಾದ ಘೋರ ನರಕಕ್ಕೆ ಅವಶ್ಯವಾಗಿ ಹೋಗುತ್ತಾನೆ. ॥ ೨೨ ॥ ಕಂಸನು ದೇವಕಿಯನ್ನು ಕೊಲ್ಲಬಲ್ಲವನಾಗಿದ್ದರೂ ಅವನು ಈ ಅತ್ಯಂತ ಕ್ರೂರವಾದ ವಿಚಾರ ದಿಂದ ನಿವೃತ್ತನಾದನು.* ಈಗ ಭಗವಂತನ ಕುರಿತು ದೃಢವಾದ ವೈರವನ್ನು ಕಟ್ಟಿಕೊಂಡು ಅವನ ಬರುವಿಕೆಯನ್ನು ಪ್ರತೀಕ್ಷೆ ಮಾಡುತ್ತಿದ್ದನು. ॥ ೨೩ ॥ ಈಗ ಅವನು ಕುಳಿತಾಗ-ನಿಂತಾಗ, ಉಂಬಾಗ ತಿಂಬಾಗ, ಮಲಗಿದ್ದಾಗ-ಎದ್ದಾಗ, ನಡೆದಾಡುವಾಗ ಎಲ್ಲ ಹೊತ್ತಿನಲ್ಲೂ ಶ್ರೀಕೃಷ್ಣನ ಚಿಂತನೆಯಲ್ಲೇ ಇರುತ್ತಿದ್ದನು. ಅವನು ಹೋದಲ್ಲಿ ಎಲ್ಲಾದರೂ ಎಡವಿದಲ್ಲಿ ಅವನಿಗೆ ಶ್ರೀಕೃಷ್ಣನೇ ಕಂಡು ಬರುತ್ತಿದ್ದನು. ಹೀಗೆ ಅವನಿಗೆ ಇಡೀ ಜಗತ್ತೇ ಶ್ರೀಕೃಷ್ಣಮಯವಾಗಿ ಕಾಣತೊಡಗಿತು. ॥ ೨೪ ॥

ಪರೀಕ್ಷಿತನೇ! ಆ ಸಮಯದಲ್ಲಿ ರುದ್ರದೇವರು ಮತ್ತು ಬ್ರಹ್ಮ ದೇವರು ತಮ್ಮ ಅನುಚರರೊಡನೆಯೂ, ನಾರದರೇ ಮೊದಲಾದ ಋಷಿಗಳೊಡನೆಯೂ ಕಂಸನ ಸೆರೆಮನೆಗೆ ಬಂದು ಸುಮಧುರವಾದ ಮಾತುಗಳಿಂದ ಎಲ್ಲರ ಅಭಿಲಾಷೆಗಳನ್ನು ಪೂರ್ಣಗೊಳಿಸುವಂತಹ ಶ್ರೀಹರಿಯನ್ನು ಹೀಗೆ ಸ್ತುತಿಸಲು ಪ್ರಾರಂಭಿಸಿದರು. ॥ ೨೫ ॥

ಪ್ರಭುವೇ! ನೀನು ಸತ್ಯಸಂಕಲ್ಪನಾಗಿರುವೆ. ಸತ್ಯವೇ ನಿನ್ನನ್ನು ಪಡೆಯುವ ಶ್ರೇಷ್ಠಸಾಧನವಾಗಿದೆ. ಸೃಷ್ಟಿಯ ಮೊದಲು, ಪ್ರಳಯದ ನಂತರ, ಪ್ರಪಂಚದ ಸ್ಥಿತಿಯ ಸಮಯದಲ್ಲಿ – ಈ ಮೂರೂ ಅವಸ್ಥೆಗಳಲ್ಲಿ ಸತ್ಯನಾದ ನೀನೇ ಇರುವವನು. ಪೃಥಿವಿ, ಜಲ, ತೇಜ, ವಾಯು, ಆಕಾಶ ಈ ಐದು ದೃಶ್ಯಮಾನ ಸತ್ಯಗಳ ಕಾರಣನು ನೀನೇ ಆಗಿರುವೆ ಹಾಗೂ ಅವುಗಳ ಅಂತರ್ಯಾಮಿ

* ವಿವಾಹದ ಮಾಂಗಲಿಕ ಚಿಹ್ನೆಗಳನ್ನು ಧರಿಸಿದ್ದ ದೇವಕಿಯನ್ನು ಕೊಲ್ಲಲು ಮುಂದಾದ ಆ ಕಂಸನೇ ಇಂದು ಇಷ್ಟು ಸದಸತ್ ವಿಚಾರವಂತನಾದನು. ಇದರ ಕಾರಣವೇನು ? ದೇವಕಿಯ ಅಂತರಂಗದಲ್ಲಿ – ಗರ್ಭದಲ್ಲಿ ಶ್ರೀಭಗವಂತನಿರುವನು. ಅಂತಹವಳನ್ನು ಇಂದು ಅವನು ನೋಡುತ್ತಿರುವನು. ಯಾರೊಳಗೆ ಭಗವಂತನಿರುವನೋ ಅವನ ದರ್ಶನದಿಂದ ಸದ್ಬುದ್ಧಿಯು ಉದಯಿಸುವುದು ಆಶ್ಚರ್ಯದ ಮಾತಲ್ಲವಲ್ಲ!

ಏಕಾಯನೋಽಸೌ ದ್ವಿಫಲಸ್ತ್ರಿಮೂಲ-
ಶ್ಚತೂರಸಃ ಪಂಚವಿಧಃ ಷಡಾತ್ಮಾ ।
ಸಪ್ತತ್ವಗಷ್ಟವಿಟಪೋ ನವಾಕ್ಷೋ
ದಶಚ್ಛದೀ ದ್ವಿಖಗೋ ಹ್ಯಾದಿವೃಕ್ಷಃ ॥ ೨೭ ॥

ಯಾಗಿ ವಿರಾಜಿಸುತ್ತಿರುವೆ. ನೀನೇ ಕಾಣುತ್ತಿರುವ ಈ ಜಗತ್ತಿಗೆ ಪರಮಾರ್ಥಸ್ವರೂಪನಾಗಿರುವೆ. ಸತ್ಯವಚನಕ್ಕೂ, ಸಮದೃಷ್ಟಿಗೂ ನೀನೇ ಪ್ರೇರಕನು. ಹೀಗೆ ಸಮಸ್ತ ವಿಷಯಗಳಲ್ಲಿ ಸತ್ಯಸ್ವರೂಪನೇ ಆಗಿರುವ, ಸತ್ಯನೇ ಆದ ನಿನ್ನನ್ನು ಶರಣುಹೊಂದುತ್ತೇವೆ. ॥ ೨೬ ॥

ಈ ಸಂಸಾರವೆಂಬುದು ಒಂದು ಸನಾತನ ವೃಕ್ಷವಾಗಿದೆ. ಈ ಸನಾತನ ವೃಕ್ಷಕ್ಕೆ ಮೂಲಪ್ರಕೃತಿಯೊಂದೇ ಆಶ್ರಯವು. ಸುಖ-ದುಃಖಗಳೇ ಇದರ ಎರಡು ಫಲಗಳು. ಸತ್ತ್ವ-ರಜ-ತಮಸ್ಸುಗಳೆಂಬುದೇ ಈ ವೃಕ್ಷದ ಬೇರುಗಳು. ಇದಕ್ಕೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ವಿಧವಾದ ರಸಗಳು. ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಈ ಐದು ಇವನ್ನು ತಿಳಿಯುವ ಕರಣಗಳು (ಬೀಳಲು). ಹುಟ್ಟುವುದು, ಇರುವುದು, ಬೆಳೆಯುವುದು, ಬದಲಾಗುವುದು, ಕುಗ್ಗುವುದು, ನಾಶವಾಗುವುದು – ಇವು ಆರು ಇದರ ಸ್ವಭಾವಗಳು. ರಸ, ರುಧಿರ, ಮಾಂಸ, ಮೇದಸ್ಸು, ಮೂಳೆ, ಮಜ್ಜೆ ಶುಕ್ರ ಇವು ಏಳು ಇದರ ತೊಗಟೆಗಳು. ಪಂಚ-ಮಹಾಭೂತಗಳು, ಮನಸ್ಸು ಬುದ್ಧಿ ಅಹಂಕಾರ ಈ ಎಂಟು ರೆಂಬೆಗಳು. ನವದ್ವಾರಗಳೇ ಇದರ ಒಂಭತ್ತು ಪೊಟರೆಗಳು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ – ಎಂಬ ಹತ್ತು ಪ್ರಾಣಗಳೇ ಇದರ ಎಲೆಗಳು. ಜೀವೇಶ್ವರರು ಈ ಸಂಸಾರವೃಕ್ಷದ ಎರಡು ಹಕ್ಕಿಗಳಂತಿದ್ದಾರೆ. ॥ ೨೭ ॥ ಈ ಸಂಸಾರರೂಪೀ ವೃಕ್ಷದ ಉತ್ಪತ್ತಿಯ ಆಧಾರನೂ ಏಕಮಾತ್ರ ನೀನೇ ಆಗಿರುವೆ. ನಿನ್ನಲ್ಲೇ ಇದರ ಪ್ರಳಯವಾಗುತ್ತದೆ. ನಿನ್ನ ಅನುಗ್ರಹದಿಂದಲೇ ಇದರ ರಕ್ಷಣೆಯೂ ಆಗುತ್ತದೆ. ಮಾಯೆಯಿಂದ ಆವೃತವಾದ ಚಿತ್ತವುಳ್ಳವರು ಈ ಸತ್ಯವನ್ನು ಅರಿಯದೆ ಇದರ ಉತ್ಪತ್ತಿ, ಸ್ಥಿತಿ, ಪ್ರಳಯ ಮಾಡುವಂತಹ ಅನೇಕ ಬ್ರಹ್ಮಾದಿ ದೇವತೆಗಳನ್ನು ನೋಡುತ್ತಾರೆ. ತತ್ತ್ವಜ್ಞಾನಿಗಳಾದವರು ಎಲ್ಲರ ರೂಪದಲ್ಲಿ ಕೇವಲ ನಿನ್ನನ್ನೇ ದರ್ಶಿಸುತ್ತಾರೆ. ॥ ೨೮ ॥ ನೀನು ಜ್ಞಾನಸ್ವರೂಪವಾದ ಆತ್ಮನಾಗಿರುವೆ. ಚರಾಚರ ಜಗತ್ತಿಗೆ ಕಲ್ಯಾಣವನ್ನುಂಟುಮಾಡುವ ಸಲುವಾಗಿ ಅನೇಕ ರೂಪಗಳನ್ನು ಧರಿಸುವೆ. ನಿನ್ನ ಆ ರೂಪಗಳು ಅಪ್ರಾಕೃತವೂ, ಶುದ್ಧ ಸತ್ತ್ವಮಯವೂ ಆಗಿವೆ. ಸತ್ಪುರುಷರಿಗೆ ಸುಖಕರಗಳಾಗಿವೆ. ಜೊತೆಗೆ ದುಷ್ಟರಿಗೆ ದುಷ್ಟತೆಯೇ ಶಿಕ್ಷೆಯನ್ನೂ ಕೊಡುತ್ತವೆ. ಅವರಿಗೆ ಅಮಂಗಳವೂ ಆಗಿರುತ್ತವೆ. ॥ ೨೯ ॥ ಓ ಕಮಲಾಕ್ಷನೇ! ಪ್ರಭುವೇ! ಕೆಲವೇ ಜನರು ಸಮಸ್ತ ಪದಾರ್ಥಗಳ, ಪ್ರಾಣಿಗಳ ಆಶ್ರಯಸ್ವರೂಪನಾದ ನಿನ್ನ ರೂಪದಲ್ಲಿ ಪೂರ್ಣ ಏಕಾಗ್ರತೆಯಿಂದ ತಮ್ಮ ಚಿತ್ತವನ್ನು ನೆಡಬಲ್ಲರು. ನಿನ್ನ ಚರಣಕಮಲರೂಪವಾದ ನೌಕೆಯನ್ನು ಆಶ್ರಯಿಸಿ ಈ ಸಂಸಾರಸಾಗರವನ್ನು ಕರುವಿನ ಗೊರಸಿನಷ್ಟು ಹಳ್ಳವನ್ನು ದಾಟುವಂತೆ ಅಯಾಸವಿಲ್ಲದೆ ದಾಟಿಹೋಗುತ್ತಾರೆ. ಏಕೆಂದರೆ, ಇಂದಿನವರೆಗಿನ ಸಂತರು ಈ ನೌಕೆಯಿಂದಲೇ ಸಂಸಾರಸಾಗರವನ್ನು ದಾಟಿಹೋಗಿದ್ದಾರಲ್ಲ! ॥ ೩೦ ॥ ಪರಮ ಪ್ರಕಾಶಸ್ವರೂಪನಾದ ಪರಮಾತ್ಮನೇ! ನಿನ್ನ ಭಕ್ತಜನರು ಸಮಸ್ತ ಜಗತ್ತಿಗೂ ನಿಷ್ಕಪಟ ಪ್ರೇಮಿಗಳೂ, ಹಿತೈಷಿಗಳೂ ಆಗಿರುತ್ತಾರೆ. ಅವರೇನೋ ಸ್ವತಃ ಈ ದುಷ್ಕರವಾದ ಭಯಂಕರ ಸಂಸಾರಸಾಗರವನ್ನು ದಾಟಿಯೇ ಹೋಗುತ್ತಾರೆ.

ತ್ವಮೇಕ ಏವಾಸ್ಯ ಸತಃ ಪ್ರಸೂತಿಃ
ತ್ವಂ ಸಂನಿಧಾನಂ ತ್ವಮನುಗ್ರಹಶ್ಚ ।
ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ
ಪಶ್ಯಂತಿ ನಾನಾ ನ ವಿಪಶ್ಚಿತೋ ಯೇ ॥ ೨೮ ॥

ಬಿಭರ್ಷಿ ರೂಪಾಣ್ಯವಿವೇಕ ಆತ್ಮಾ
ಕ್ಷೇಮಾಯ ಲೋಕಸ್ಯ ಚರಾಚರಸ್ಯ ।
ಸತ್ತ್ವೋಪಪನ್ನಾನಿ ಸುಖಾವಹಾನಿ
ಸತಾಮಭದ್ರಾಣಿ ಮುಹುಃ ಖಲಾನಾಮ್ ॥ ೨೯ ॥

ತ್ವಯ್ಯಂಬುಜಾಕ್ಷಾಖಿಲಸತ್ತ್ವಧಾಮ್ನಿ
ಸಮಾಧಿನಾऽऽವೇಶಿತಚೇತಸೈಕೇ ।
ತ್ವತ್ಪಾದಪೋತೇನ ಮಹತ್ಕೃತೇನ
ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥ ೩೦ ॥

ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮ-
ನ್ಭವಾರ್ಣವಂ ಭೀಮಮದಭ್ರಸೌಹೃದಾಃ ।
ಭವತ್ಪದಾಂಭೋರುಹನಾವಮತ್ರ ತೇ
ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥ ೩.೧ ॥

ಆದರೆ ಬೇರೆಯವರ ಕಲ್ಯಾಣಕ್ಕಾಗಿಯೇ ಅವರು ಇಲ್ಲಿ ನಿನ್ನ ಚರಣ ಕಮಲಗಳ ನೌಕೆಯನ್ನು ಸ್ಥಾಪಿಸಿ ಹೋಗುತ್ತಾರೆ. ನಿಜವಾಗಿ ಸತ್ಪುರುಷರ ಮೇಲೆ ನಿನ್ನ ಮಹತ್ಕೃಪೆ ಇದೆ. ಅವರಿಗಾಗಿ ನೀನು ಅನುಗ್ರಹಸ್ವರೂಪನೇ ಆಗಿರುವೆ. ॥ ೩.೧ ॥

ಯೇಽನ್ಯೇಽರವಿಂದಾಕ್ಷ ವಿಮುಕ್ತಮಾನಿನ-
ಸ್ತ್ವಯ್ಯಸ್ತಭಾವಾದವಿಶುದ್ಧಬುದ್ಧಯಃ ।
ಆರುಹ್ಯ ಕೃಚ್ಛ್ರೇಣ ಪರಂ ಪದಂ ತತಃ
ಪತಂತ್ಯಧೋಽನಾದೃತಯುಷ್ಮದಂಘ್ರಯಃ ॥ ೩.೨ ॥

ಕಮಲನಯನನೇ ! ಜ್ಞಾನಮಾರ್ಗವನ್ನು ಹಿಡಿದಿರುವ ಕೆಲವರು ತಾವು ಮುಕ್ತರೆಂದು ಭಾವಿಸುತ್ತಾರೆ. ಅಂತಹವರಿಗೆ ನಿನ್ನಲ್ಲಿ ಅನನ್ಯ ಭಕ್ತಿಯಿಲ್ಲದ ಕಾರಣ ಅವರ ಬುದ್ಧಿಯು ಶುದ್ಧವಾಗಿ ಇರುವುದಿಲ್ಲ. ಅತಿ ಕಷ್ಟಕರ ಸಾಧನೆಯಿಂದ ಅಂತಹವರು ಪರಮಪದದ ಮಾರ್ಗದಲ್ಲಿ ನಡೆಯುತ್ತಿದ್ದರೂ ನಿನ್ನ ಪಾದಾರವಿಂದಗಳಲ್ಲಿ ಪ್ರೇಮ ಇಲ್ಲದಿರುವುದರಿಂದ ಸ್ವಲ್ಪಕಾಲದಲ್ಲೇ ಸಂಸಾರದಲ್ಲಿ ಬಿದ್ದು ಪತನರಾಗುವರು. ॥ ೩.೨ ॥ ಮಾಧವನೇ ! ಪ್ರಭುವೇ ! ಆದರೆ ನಿನ್ನ ಚರಣಗಳಲ್ಲಿ ನಿಜವಾದ ಪ್ರೀತಿಯುಳ್ಳ ನಿನ್ನ ನಿಜಭಕ್ತರು ಎಂದಿಗೂ ಈ ಜ್ಞಾನಾಭಿಮಾನಿಗಳಂತೆ ತಮ್ಮ ಸಾಧನೆಯಿಂದ ಭ್ರಷ್ಟರಾಗುವುದಿಲ್ಲ. ನಿನ್ನಿಂದ ರಕ್ಷಿಸಲ್ಪಟ್ಟವರಾಗಿ ನಿನ್ನ ಅನುಗ್ರಹದಿಂದ ವಿಘ್ನದೇವತೆಗಳ ತಲೆಯನ್ನು ಮೆಟ್ಟಿ ನಿರ್ಭಯವಾಗಿ ಸಂಚರಿಸುತ್ತಾರೆ. ॥ ೩.೩. ॥ ನೀನು ಪ್ರಪಂಚದ ಸ್ಥಿತಿಗಾಗಿ ಸಮಸ್ತದೇಹಧಾರಿಗಳಿಗೆ ಪರಮ ಶ್ರೇಯಸ್ಸನ್ನು ಪ್ರದಾನ ಮಾಡುವ ವಿಶುದ್ಧ ಸತ್ತ್ವಮಯ ಸಚ್ಚಿದಾನಂದಮಯ, ಪರಮ ದಿವ್ಯ ಮಂಗಳವಿಗ್ರಹನಾಗಿ ಪ್ರಕಟಗೊಳ್ಳುವೆ. ಆ ರೂಪದಲ್ಲಿ ಪ್ರಕಟವಾಗುವುದರಿಂದಲೇ ನಿನ್ನ ಭಕ್ತರು ವೇದ, ಕರ್ಮಕಾಂಡ, ಅಷ್ಟಾಂಗಯೋಗ, ತಪಸ್ಸು ಸಮಾಧಿ ಇವುಗಳ ಮೂಲಕ ನಿನ್ನನ್ನು ಆರಾಧಿಸುತ್ತಾರೆ. ಯಾವುದೇ ಆಶ್ರಯವಿಲ್ಲದೆ ಯಾರ ಆರಾಧನೆ ಮಾಡಬಲ್ಲರು ? ॥ ೩.೪ ॥ ಪ್ರಭೋ ! ನೀನೇ ಎಲ್ಲರ ನಿಯಾಮಕನಾಗಿರುವೆ. ನಿನ್ನ ಈ ವಿಶುದ್ಧ ಸತ್ತ್ವಮಯ ನಿಜಸ್ವರೂಪವು ಇಲ್ಲದಿದ್ದರೆ ಅಜ್ಞಾನ ಮತ್ತು ಅದರಿಂದುಂಟಾಗುವ ಭೇದಭಾವವನ್ನು ನಾಶಗೊಳಿಸುವಂತಹ ಅಪರೋಕ್ಷಜ್ಞಾನ ಯಾರಿಗೂ ಆಗುತ್ತಿರಲಿಲ್ಲ. ಜಗತ್ತಿನಲ್ಲಿ ಕಂಡುಬರುವ ತ್ರಿಗುಣಗಳು ನಿನ್ನವೇ ಆಗಿವೆ ; ನಿನ್ನಿಂದಲೇ ಪ್ರಕಾಶಿತವಾಗುವುದೂ ಸತ್ಯವೇ ಆಗಿದೆ. ಆದರೆ ಈ ಗುಣಗಳ ಪ್ರಕಾಶಕ ವೃತ್ತಿಗಳಿಂದ ನಿನ್ನ ಸ್ವರೂಪದ ಕೇವಲ ಅನುಮಾನವೇ ಆಗುತ್ತದೆ, ವಾಸ್ತವಿಕ ಸ್ವರೂಪದ ಸಾಕ್ಷಾತ್ಕಾರವಾಗುವುದಿಲ್ಲ. (ನಿನ್ನ ಸ್ವರೂಪದ ಸಾಕ್ಷಾತ್ಕಾರವಾದರೋ ನಿನ್ನ ಈ ವಿಶುದ್ಧ ಸತ್ತ್ವಮಯ ಸ್ವರೂಪದ ಸೇವೆಮಾಡಿದಾಗಲೇ ನಿನ್ನ ಕೃಪೆಯಿಂದ ಆಗುತ್ತದೆ.) ॥ ೩.೫ ॥ ಭಗವಂತನೇ ! ಮನಸ್ಸು ಮತ್ತು ವೇದವಾಣಿಯಿಂದ ಕೇವಲ ನಿನ್ನ ಸ್ವರೂಪದ ಅನುಮಾನ ಮಾತ್ರವಾಗುತ್ತದೆ. ಏಕೆಂದರೆ, ನೀನು ಅವುಗಳ ಮೂಲಕ ದೃಶ್ಯನಲ್ಲ ; ಅವುಗಳ ಸಾಕ್ಷಿಯಾಗಿರುವೆ. ಅದಕ್ಕಾಗಿ ನಿನ್ನ ಗುಣ, ಜನ್ಮ ಮತ್ತು ಕರ್ಮವೇ ಮೊದಲಾದವುಗಳ ಮೂಲಕ ನಿನ್ನ ನಾಮ-ರೂಪಗಳ ನಿರೂಪಣೆ ಮಾಡಲಾಗುವುದಿಲ್ಲ. ಹೀಗಿದ್ದರೂ ಪ್ರಭುವೇ ! ನಿನ್ನ ಭಕ್ತಜನರು ಉಪಾಸನಾದಿ ಕ್ರಿಯಾಯೋಗಗಳ ಮೂಲಕ ನಿನ್ನ ಸಾಕ್ಷಾತ್ಕಾರವನ್ನಾದರೋ ಪಡೆದುಕೊಳ್ಳುವರು. ॥ ೩.೬ ॥

ತಥಾ ನ ತೇ ಮಾಧವ ತಾವಕಾಃ ಕ್ವಚಿದ್
ಭ್ರಶ್ಯಂತಿ ಮಾರ್ಗಾತ್ತ್ವಯಿ ಬದ್ಧಸೌಹೃದಾಃ ।
ತ್ವಯಾಭಿಗುಪ್ತಾ ವಿಚರಂತಿ ನಿರ್ಭಯಾ
ವಿನಾಯಕಾನೀಕಪಮೂರ್ಧಸು ಪ್ರಭೋ ॥ ೩.೩ ॥

ಸ್ತ್ವಂ ವಿಶುದ್ಧಂ ಶ್ರಯತೇ ಭವಾನ್ ಸ್ಥಿತೌ
ಶರೀರಿಣಾಂ ಶ್ರೇಯ ಉಪಾಯನಂ ವಪುಃ ।
ವೇದಕ್ರಿಯಾಯೋಗತಪಃಸಮಾಧಿಭಿಃ
ತವಾರ್ಹಣಂ ಯೇನ ಜನಃ ಸಮೀಹತೇ ॥ ೩.೪ ॥

ಸ್ತ್ವಂ ನ ಚೇದ್ಧಾತರಿದಂ ನಿಜಂ ಭವೇ-
ದ್ವಿಜ್ಞಾನಮಜ್ಞಾನಭಿದಾಪಮಾರ್ಜನಮ್ ।
ಗುಣಪ್ರಕಾಶೈರನುಮೀಯತೇ ಭವಾನ್
ಪ್ರಕಾಶತೇ ಯಸ್ಯ ಚ ಯೇನ ವಾ ಗುಣಃ ॥ ೩.೫ ॥

ನ ನಾಮರೂಪೇ ಗುಣಜನ್ಮಕರ್ಮಭಿ-
ರ್ನಿರೂಪಿತವ್ಯೇ ತವ ತಸ್ಯ ಸಾಕ್ಷಿಣಃ ।
ಮನೋವಚೋಭ್ಯಾಮನುಮೇಯವರ್ತ್ಮನೋ
ದೇವ ಕ್ರಿಯಾಯಾಂ ಪ್ರತಿಯಂತ್ಯಥಾಪಿ ಹಿ ॥ ೩.೬ ॥

ಶೃಣ್ವನ್ಗೃಣನ್ಸಂಸ್ಮರಯಂಶ್ಚ ಚಿಂತಯನ್
ನಾಮಾನಿ ರೂಪಾಣಿ ಚ ಮಂಗಲಾನಿ ತೇ ।
ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋ-
ರಾವಿಷ್ಟಚೇತಾ ನ ಭವಾಯ ಕಲ್ಪತೇ ॥ ೩೭ ॥

ದಿಷ್ಟ್ಯಾ ಹರೇಽಸ್ಯಾ ಭವತಃ ಪದೋ ಭುವೋ
ಭಾರೋಽಪನೀತಸ್ತವ ಜನ್ಮನೇಶಿತುಃ ।
ದಿಷ್ಟ್ಯಾಂಕಿತಾಂ ತತ್ಪದಕೈಃ ಸುಶೋಭನೈ-
ರ್ದ್ರಕ್ಷ್ಯಾಮ ಗಾಂ ದ್ಯಾಂ ಚ ತವಾನುಕಂಪಿತಾಮ್ ॥ ೩೮ ॥

ನ ತೇಽಭವಸ್ಯೇಶ ಭವಸ್ಯ ಕಾರಣಂ
ವಿನಾ ವಿನೋದಂ ಬತ ತರ್ಕಯಾಮಹೇ ।
ಭವೋ ನಿರೋಧಃ ಸ್ಥಿತಿರಪ್ಯವಿದ್ಯಯಾ
ಕೃತಾ ಯತಸ್ತ್ವಯ್ಯಭಯಾಶ್ರಯಾತ್ಮನಿ ॥ ೩೯ ॥

ಮತ್ಸ್ಯಾಶ್ವಕಚ್ಛಪನೃಸಿಂಹವರಾಹಹಂಸ-
ರಾಜನ್ಯವಿಪ್ರವಿಬುಧೇಷು ಕೃತಾವತಾರಃ ।
ತ್ವಂ ಪಾಸಿ ನಸ್ತ್ರಿಭುವನಂ ಚ ಯಥಾಧುನೇಶ
ಭಾರಂ ಭುವೋ ಹರ ಯದೂತ್ತಮ ವಂದನಂ ತೇ ॥ ೪೦ ॥

ದಿಷ್ಟ್ಯಾಂಬ ತೇ ಕುಕ್ಷಿಗತಃ ಪರಃ ಪುಮಾನ್
ಅಂಶೇನ ಸಾಕ್ಷಾದ್ಭಗವಾನ್ಭವಾಯ ನಃ ।
ಮಾ ಭೂದ್ಭಯಂ ಭೋಜಪತೇರ್ಮುಮೂರ್ಷೋ-
ರ್ಗೋಪ್ತಾ ಯದೂನಾಂ ಭವಿತಾ ತವಾತ್ಮಜಃ ॥ ೪೧ ॥

ಶ್ರೀಶುಕ ಉವಾಚ

ಇತ್ಯಭಿಷ್ಟೂಯ ಪುರುಷಂ ಯದ್ರೂಪಮನಿದಂ ಯಥಾ ।
ಬ್ರಹ್ಮೇಶಾಸೌ ಪುರೋಧಾಯ ದೇವಾಃ ಪ್ರತಿಯಯುರ್ದಿವಮ್
॥ ೪೨ ॥

ನಿನ್ನ ಮಂಗಳಮಯ ನಾಮಗಳನ್ನು ಮತ್ತು ರೂಪಗಳನ್ನು ಶ್ರವಣಿಸುತ್ತಾ, ಕೀರ್ತಿಸುತ್ತಾ, ಸ್ಮರಿಸುತ್ತಾ, ಧ್ಯಾನಿಸುತ್ತಾ ನಿನ್ನ ಚರಣ ಕಮಲಗಳ ಸೇವೆಯಲ್ಲೇ ಮನಸ್ಸನ್ನು ತೊಡಗಿಸಿದವನಿಗೆ ಮತ್ತೆ ಜನ್ಮ ಮೃತ್ಯುರೂಪವಾದ ಸಂಸಾರಚಕ್ರದಲ್ಲಿ ಸಿಕ್ಕಿಕೊಳ್ಳಬೇಕಾಗುವುದಿಲ್ಲ. ॥ ೩೭ ॥ ಸಮಸ್ತ ದುಃಖಿಗಳನ್ನು ದೂರಮಾಡುವ ದಯಾಮಯನಾದ ಭಗವಂತನೇ! ನೀನು ಸರ್ವೇಶ್ವರನು. ಈ ಪೃಥಿವಿಯಾದರೋ ನಿನ್ನ ಚರಣಕಮಲವೇ ಆಗಿದೆ. ನಿನ್ನ ಅವತಾರದಿಂದ ಇದರ ಭಾರ ದೂರವಾಗುವುದು. ಪ್ರಭೋ! ನಿನ್ನ ಸುಂದರವಾದ ಚರಣ ಚಿಹ್ನೆಗಳಿರುವ ಚರಣಕಮಲಗಳಿಂದ ಭೂಷಿತವಾದ ಈ ಭೂಮಿಯನ್ನು ನೋಡುವ ನಾವೇ ಭಾಗ್ಯಶಾಲಿಗಳು ಮತ್ತು ಸ್ವರ್ಗಲೋಕವನ್ನೂ ನಿನ್ನ ಕೃಪಾವಿಶೇಷದಿಂದ ಕೃತಾರ್ಥವಾಗಿರುವುದನ್ನು ನೋಡುವೆವು. ॥ ೩೮ ॥ ಪ್ರಭುವೇ! ನೀನು ಹುಟ್ಟು ಸಾವುಗಳಿಲ್ಲದವನು. ಆದರೆ ಈಗ ಮನುಷ್ಯರೂಪದಿಂದ ಹುಟ್ಟುತ್ತಿರುವೆ. ಇದರ ಕಾರಣವನ್ನು ನಾವು ಊಹಿಸುವುದಾದರೆ – ನೀನು ಭೂಮಿಯಲ್ಲಿ ಹುಟ್ಟುವುದು, ಬೆಳೆಯುವುದು ನಿನ್ನ ಲೀಲಾವಿನೋದವೆಂದೇ ಹೇಳಬೇಕಾಗಿದೆ. ಹೀಗೆ ಹೇಳುವ ಕಾರಣವು – ನೀನಾದರೋ ದ್ವೈತದ ಲವಲೇಶದಿಂದ ರಹಿತನಾದ, ಸರ್ವಾಧಿಷ್ಠಾನ ಸ್ವರೂಪನಾಗಿರುವೆ. ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯ ಇವುಗಳನ್ನು ನಿನ್ನಲ್ಲಿ ಅಜ್ಞಾನದಿಂದಲೇ ಆರೋಪಿಸಲಾಗುತ್ತದೆ. ॥ ೩೯ ॥ ಪ್ರಭುವೇ! ನೀನು ಅನೇಕಬಾರಿ ಮತ್ಸ್ಯ, ಹಯಗ್ರೀವ, ಕಚ್ಛಪ, ನರಸಿಂಹ, ವರಾಹ, ಹಂಸ, ರಾಮ, ಪರಶುರಾಮ, ವಾಮನ ಮೊದಲಾದ ಅನೇಕ ಅವತಾರಗಳನ್ನೆತ್ತಿ ನಮ್ಮನ್ನು ಮತ್ತು ಮೂರು ಲೋಕಗಳನ್ನು ರಕ್ಷಿಸಿದಂತೆಯೇ, ನೀನು ಈ ಸಲವೂ ಭೂಭಾರವನ್ನು ಹರಿಸು. ಯದುನಂದನ! ನಾವು ನಿನ್ನ ಚರಣಗಳಲ್ಲಿ ವಂದಿಸುತ್ತೇವೆ. ॥ ೪೦ ॥ (ಅನಂತರ ದೇವಕಿಯನ್ನು ಸಂಬೋಧಿಸುತ್ತಾ –) ತಾಯೇ! ಸೌಭಾಗ್ಯವಶದಿಂದ ನಮ್ಮೆಲ್ಲರಿಗೂ ಕಲ್ಯಾಣವನ್ನುಂಟುಮಾಡುವುದಕ್ಕಾಗಿ ಭಗವಾನ್ ಪುರುಷೋತ್ತಮನು ತನ್ನ ಜ್ಞಾನ, ಬಲವೇ ಮೊದಲಾದ ಅಂಶಗಳೊಡನೆ (ಪೂರ್ಣಸ್ವರೂಪನಾಗಿ) ನಿನ್ನ ಗರ್ಭದಲ್ಲಿದ್ದಾನೆ. ಸಾಯಲು ಸಿದ್ಧನಾಗಿ ನಿಂತಿರುವ ಭೋಜಪತಿ ಯಾದ ಕಂಸನಿಂದ ಇನ್ನು ನಿನಗೆ ಯಾವ ಭಯವೂ ಬೇಡ. ನಿನ್ನ ಪುತ್ರನು ಯದುವಂಶವನ್ನು ರಕ್ಷಿಸುವನು. ॥ ೪೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಯಾವನ ರೂಪವನ್ನು ಇಂತಹುದೇ ಎಂದು ನಿಶ್ಚಯಮಾಡಲು ಸಾಧ್ಯವಿಲ್ಲವೋ, ಅಂತಹ ಪರಮಪುರುಷನನ್ನು ಹೀಗೆ ಸ್ತೋತ್ರ ಮಾಡಿದ ಬಳಿಕ ಬ್ರಹ್ಮ-ರುದ್ರರನ್ನು ಮುಂದೆಮಾಡಿಕೊಂಡು ದೇವತೆಗಳು ಸ್ವರ್ಗಕ್ಕೆ ತೆರಳಿದರು. ॥ ೪೨ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಗರ್ಭಗತವಿಷ್ಣೋರ್ಬ್ರಹ್ಮಾದಿಕೃತಸ್ತುತಿರ್ನಾಮ ದ್ವಿತೀಯೋಽಧ್ಯಾಯಃ॥ ೨ ॥

ಮೂರನೆಯ ಅಧ್ಯಾಯ

ಭಗವಾನ್ ಶ್ರೀಕೃಷ್ಣನ ಪ್ರಾಕಟ್ಯ

ಶ್ರೀಶುಕ ಉವಾಚ

ಅಥ ಸರ್ವಗುಣೋಪೇತಃ ಕಾಲಃ ಪರಮಶೋಭನಃ ।
ಯರ್ಹ್ಯೇವಾಜನಜನ್ಮರ್ಕ್ಷಂ ಶಾಂತರ್ಕ್ಷಗ್ರಹತಾರಕಮ್
॥ ೧ ॥

ದಿಶಃ ಪ್ರಸೇದುರ್ಗಗನಂ ನಿರ್ಮಲೋಡುಗಣೋದಯಮ್ ।
ಮಹೀ ಮಂಗಲಭೂಯಿಷ್ಠಪುರಗ್ರಾಮವ್ರಜಾಕರಾ
॥ ೨ ॥

ನದ್ಯಃ ಪ್ರಸನ್ನಸಲಿಲಾ ಹ್ರದಾ ಜಲರುಹಶ್ರಿಯಃ ।
ದ್ವಿಜಾಲಿಕುಲಸಂನಾದಸ್ತಬಕಾ ವನರಾಜಯಃ
॥ ೩ ॥

ಪವೌ ವಾಯುಃ ಸುಖಿಸ್ಪರ್ಶಃ ಪುಣ್ಯಗಂಧವಹಃ ಶುಚಿಃ ।
ಅಗ್ನಯಶ್ಚ ದ್ವಿಜಾತೀನಾಂ ಶಾಂತಾಸ್ತತ್ರ ಸಮಿಂಧತ
॥ ೪ ॥

ಮನಾಂಸ್ಯಾಸನ್ಪ್ರಸನ್ನಾನಿ ಸಾಧೂನಾಮಸುರದ್ರುಹಾಮ್ ।
ಜಾಯಮಾನೇಽಜನೇ ತಸ್ಮಿನ್ನೇದುರ್ದುಂದುಭಯೋ ದಿವಿ
॥ ೫ ॥

ಜಗುಃ ಕಿನ್ನರಗಂಧರ್ವಾಸ್ತುಷ್ಟುವುಃ ಸಿದ್ಧಚಾರಣಾಃ ।
ವಿದ್ಯಾಧರ್ಯಶ್ಚ ನನೃತುರಪ್ಸರೋಭಿಃ ಸಮಂ ತದಾ
॥ ೬ ॥

ಮುಮುಚುರ್ಮುನಯೋ ದೇವಾಃ ಸುಮನಾಂಸಿ ಮುದಾನ್ವಿತಾಃ ।
ಮಂದಂ ಮಂದಂ ಜಲಧರಾ ಜಗರ್ಜುರನುಸಾಗರಮ್
॥ ೭ ॥

ನಿಶೀಥೇ ತಮಉದ್ಭೂತೇ ಜಾಯಮಾನೇ ಜನಾರ್ದನೇ ।
ದೇವಕ್ಯಾಂ ದೇವರೂಪಿಣ್ಯಾಂ ವಿಷ್ಣುಃ ಸರ್ವಗುಹಾಶಯಃ ।
ಆವಿರಾಸೀದ್ಯಥಾ ಪ್ರಾಚ್ಯಾಂ ದಿಶೀಂದುರಿವ ಪುಷ್ಕಲಃ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಅನಂತರ ಸಮಸ್ತ ಗುಣಗಳಿಂದ ಸಂಪನ್ನವಾದ ಅತ್ಯಂತ ಶೋಭಾಯಮಾನವಾದ ಶುಭಸಮಯವು ಸನ್ನಿಹಿತವಾಯಿತು. ಅಂದು ಬ್ರಹ್ಮದೇವತಾತ್ಮಕವಾದ ರೋಹಿಣೀ ನಕ್ಷತ್ರವಿತ್ತು. ಆಕಾಶದಲ್ಲಿ ಸಮಸ್ತ ಗ್ರಹ, ನಕ್ಷತ್ರ, ತಾರೆಗಳೂ ಶಾಂತವಾಗಿದ್ದವು. ॥ ೧ ॥ ದಿಕ್ಕುಗಳು ಸ್ವಚ್ಛವಾಗಿದ್ದು ಪ್ರಸನ್ನವಾಗಿದ್ದವು. ನಿರ್ಮಲಾಕಾಶದಲ್ಲಿ ತಾರೆಗಳು ಜಗ-ಜಗಿಸುತ್ತಿದ್ದವು. ಭೂಮಂಡಲದ ದೊಡ್ಡ-ದೊಡ್ಡ ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ, ಗೋಪಾಲಕರ ದೊಡ್ಡಿಗಳಲ್ಲಿಯೂ ಮಂಗಳಕರವಾದ ವಾತಾವರಣವಿತ್ತು. ॥ ೨ ॥ ನದಿಗಳು ತಿಳಿಯಾದ ನೀರಿನಿಂದ ತುಂಬಿ ಹರಿಯುತ್ತಿದ್ದವು. ರಾತ್ರಿಯಲ್ಲಿಯೂ ಕೂಡ ಸರೋವರಗಳಲ್ಲಿ ಕಮಲ-ಕನ್ನೈದಿಲೆಗಳು ಅರಳಿದ್ದವು. ವನಗಳಲ್ಲಿ ವೃಕ್ಷಗಳ ಸಾಲುಗಳು ಫಲ-ಪುಷ್ಪಗಳ ಗೊಂಚಲುಗಳಿಂದ ರಾರಾಜಿಸುತ್ತಿದ್ದವು. ಪಕ್ಷಿಗಳು ಅವುಗಳ ಮೇಲೆ ಕುಳಿತು ಚಿಲಿಪಿಲಿಗುಟ್ಟುತ್ತಿದ್ದವು. ದುಂಬಿಗಳು ಝೇಂಕರಿಸುತ್ತಿದ್ದವು. ॥ ೩ ॥ ಆ ಸಮಯದಲ್ಲಿ ಪರಮ ಪವಿತ್ರ ಹಾಗೂ ಶೀತಲ-ಮಂದ-ಸುಗಂಧಿತ ವಾಯುವು ತನ್ನ ಸ್ಪರ್ಶದಿಂದ ಜನರಿಗೆ ಸುಖದಾಯಕವಾಗಿ ಬೀಸುತ್ತಿತ್ತು. ಎಂದೂ ಆರದಿರುವ ಬ್ರಾಹ್ಮಣರ ಅಗ್ನಿಹೋತ್ರದ ಅಗ್ನಿಗಳು ಕಂಸನ ಅತ್ಯಾಚಾರದಿಂದ ನಂದಿಹೋಗಿದ್ದವು. ಅವು ಪುನಃ ತನ್ನಿಂದ ತಾನೇ ಉರಿಯತೊಡಗಿದವು. ॥ ೪ ॥ ಭಗವಂತನು ಆವಿರ್ಭವಿಸುವ ಸಮಯವು ಸನ್ನಿಹಿತವಾದಾಗ ಸತ್ಪುರುಷರ ಮತ್ತು ದೈತ್ಯದ್ರೋಹಿಗಳಾದ ದೇವತೆಗಳ ಮನಸ್ಸು ಪ್ರಸನ್ನತೆಯಿಂದ ತುಂಬಿ ಹೋಯಿತು. ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗತೊಡಗಿದವು. ॥ ೫ ॥ ಗಂಧರ್ವ-ಕಿನ್ನರರು ಮಧುರವಾಗಿ ಹಾಡತೊಡಗಿದರು. ಸಿದ್ಧ-ಚಾರಣರು ಭಗವಂತನ ಮಂಗಲಮಯ ಗುಣಗಳನ್ನು ಸ್ತುತಿಸತೊಡಗಿದರು. ವಿದ್ಯಾಧರ ಸ್ತ್ರೀಯರು ಅಪ್ಸರೆಯರೊಂದಿಗೆ ನಾಟ್ಯವಾಡತೊಡಗಿದರು. ॥ ೬ ॥ ನಾರದರೇ ಮೊದಲಾದ ಮುನಿಗಳು, ಇಂದ್ರಾದಿದೇವತೆಗಳು ಆನಂದ ತುಂದಿಲರಾಗಿ ಹೂಮಳೆಗರೆದರು. ನೀರುತುಂಬಿದ ಮೋಡಗಳು ಕಡಲಿನ ಬಳಿಗೆ ಹೋಗಿ ಗಂಭೀರವಾಗಿ ಗುಡುಗುಟ್ಟುತ್ತಿದ್ದವು. ॥ ೭ ॥ ಹುಟ್ಟು-ಸಾವುಗಳೆಂಬ ಚಕ್ರದಿಂದ ಬಿಡುಗಡೆಗೊಳಿಸುವಂತಹ ಜನಾರ್ದನನ ಅವತಾರದ ಸಮಯ ಮಧ್ಯರಾತ್ರಿಯಾಗಿತ್ತು. ಎಲ್ಲೆಡೆ ಅಂಧಕಾರವೇ ತುಂಬಿತ್ತು. ಅದೇ ಸಮಯದಲ್ಲಿ ಎಲ್ಲರ ಹೃದಯದಲ್ಲಿಯೂ ವಿರಾಜಿಸುವ ಭಗವಾನ್ ಮಹಾವಿಷ್ಣುವು ದೇವರೂಪಿಣಿಯಾದ ದೇವಕಿಯ ಗರ್ಭದಿಂದ ಮೂಡುದಿಕ್ಕಿನಲ್ಲಿ ಷೋಡಶ ಕಲೆಗಳಿಂದ ಕೂಡಿದ ಉಡುಪತಿಯು ಉದಯಿಸುವಂತೆ ಯದುಪತಿಯು ಪ್ರಕಟನಾದನು. ॥ ೮ ॥

ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಿಗದಾರ್ಯುದಾಯುಧಮ್ ।
ಶ್ರೀವತ್ಸಲಕ್ಷ್ಮಂ ಗಲಶೋಭಿಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದಸೌಭಗಮ್ ॥ ೯ ॥

ಮಹಾರ್ಹವೈದೂರ್ಯಕಿರೀಟಕುಂಡಲ-
ತ್ವಿಷಾ ಪರಿಷ್ವಕ್ತ ಸಹಸ್ರಕುಂತಲಮ್ ।
ಉದ್ದಾಮಕಾಂಚ್ಯಂಗದಕಂಕಣಾದಿಭಿ-
ರ್ವಿರೋಚಮಾನಂ ವಸುದೇವ ಐಕ್ಷತ ॥ ೧೦ ॥

ಸ ವಿಸ್ಮಯೋತ್ಫುಲ್ಲವಿಲೋಚನೋ ಹರಿಂ
ಸುತಂ ವಿಲೋಕ್ಯಾನಕದುಂದುಭಿಸ್ತದಾ ।
ಕೃಷ್ಣಾವತಾರೋತ್ಸವಸಂಭ್ರಮೋಽಸ್ಪೃಶನ್
ಮುದಾ ದ್ವಿಜೇಭ್ಯೋಽಯುತಮಾಪ್ಲುತೋ ಗವಾಮ್ ॥ ೧೧ ॥

ಅಥೈನಮಸ್ತೌದವಧಾರ್ಯ ಪೂರುಷಂ
ಪರಂ ನತಾಂಗಃ ಕೃತಧೀಃ ಕೃತಾಂಜಲಿಃ ।
ಸ್ವರೋಚಿಷಾ ಭಾರತ ಸೂತಿಕಾಗೃಹಂ
ವಿರೋಚಯಂತಂ ಗತಭೀಃ ಪ್ರಭಾವವಿತ್ ॥ ೧೨ ॥

ವಸುದೇವ ಉವಾಚ

ವಿದಿತೋಽಸಿ ಭವಾನ್ಸಾಕ್ಷಾತ್ಪುರುಷಃ ಪ್ರಕೃತೇಃ ಪರಃ ।
ಕೇವಲಾನುಭವಾನಂದಸ್ವರೂಪಃ ಸರ್ವಬುದ್ಧಿದೃಕ್
॥ ೧೩ ॥

ಸ ಏವ ಸ್ವಪ್ರಕೃತ್ಯೇದಂ ಸೃಷ್ಟ್ವಾಗ್ರೇ ತ್ರಿಗುಣಾತ್ಮಕಮ್ ।
ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ
॥ ೧೪ ॥

ಯಥೇಮೇಽವಿಕೃತಾ ಭಾವಾಸ್ತಥಾ ತೇ ವಿಕೃತೈಃ ಸಹ ।
ನಾನಾವೀರ್ಯಾಃ ಪೃಥಗ್ಭೂತಾ ವಿರಾಜಂ ಜನಯಂತಿ ಹಿ
॥ ೧೫ ॥

ಸನ್ನಿಪತ್ಯ ಸಮುತ್ಪಾದ್ಯ ದೃಶ್ಯಂತೇಽನುಗತಾ ಇವ ।
ಪ್ರಾಗೇವ ವಿದ್ಯಮಾನತ್ವಾನ್ನ ತೇಷಾಮಿಹ ಸಂಭವಃ
॥ ೧೬ ॥

ತನ್ನ ಮುಂದೆ ಅದ್ಭುತ ಬಾಲಕರೂಪನಾದ ಭಗವಂತನನ್ನು ವಸುದೇವನು ನೋಡಿದನು. ಅವನ ಕಣ್ಣುಗಳು ಕಮಲದಂತೆ ವಿಶಾಲವೂ, ಸುಕೋಮಲವೂ ಆಗಿದ್ದವು. ಸುಂದರವಾದ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿದ್ದನು. ಅವನ ವಕ್ಷಸ್ಥಳದಲ್ಲಿ ಅತ್ಯಂತ ಸುಂದರವೂ, ಸುವರ್ಣಮಯವೂ ಆದ ಶ್ರೀವತ್ಸದ ಚಿಹ್ನೆಯು ಇದ್ದಿತು. ಕೊರಳಲ್ಲಿ ಕೌಸ್ತುಭಮಣಿಯು ಝಗ-ಝಗಿಸುತ್ತಿತ್ತು. ವರ್ಷಾಕಾಲದ ಮೇಘದಂತಿರುವ ಪರಮ ಸುಂದರ ಶ್ಯಾಮಲಶರೀರದ ಮೇಲೆ ಮನೋಹರ ಪೀತಾಂಬರವು ಶೋಭಿಸುತ್ತಿತ್ತು. ಬಹುಮೂಲ್ಯ ವೈಡೂರ್ಯಮಣಿಯ ಕಿರೀಟ ಕುಂಡಲಗಳ ಕಾಂತಿಯಿಂದ ಅಂದವಾದ ಗುಂಗುರಾದ ಕೂದಲುಗಳು ಸೂರ್ಯನ ಕಿರಣಗಳಂತೆ ಹೊಳೆಯುತ್ತಿದ್ದವು. ನಡುವಿನಲ್ಲಿ ಒಡ್ಯಾಣವೂ, ಬಾಹುಗಳಲ್ಲಿ ಕೇಯೂರಗಳೂ ಕರಗಳಲ್ಲಿ ಕಂಕಣಗಳೂ ಶೋಭಿಸುತ್ತಿದ್ದವು. ಇವೆಲ್ಲ ಆಭೂಷಣಗಳಿಂದ ಸುಶೋಭಿತನಾದ ಬಾಲಕನ ಸರ್ವಾಂಗದಿಂದ ಅಲೌಕಿಕವಾದ ಸೌಂದರ್ಯವು ಸೂಸುತ್ತಿತ್ತು. ॥ ೯-೧೦ ॥ ತನ್ನ ಪುತ್ರರೂಪದಲ್ಲಿ ಭಗವಂತನೇ ಬಂದಿರುವನೆಂದು ನೋಡಿದಾಗ ವಸುದೇವನಿಗೆ ಮೊದಲಿಗೆ ಅಸೀಮ ಆಶ್ಚರ್ಯವಾಯಿತು. ಆನಂದದಿಂದ ಕಣ್ಣುಗಳು ಅರಳಿದವು. ಆವನ ರೋಮ-ರೋಮಗಳು ಆನಂದದಲ್ಲಿ ಮುಳುಗಿಹೋದವು. ಶ್ರೀಕೃಷ್ಣನ ಜನ್ಮೋತ್ಸವದ ಸಂಭ್ರಮದಲ್ಲಿದ್ದ ಆವನು ಆಗಲೇ ಬ್ರಾಹ್ಮಣರಿಗೆ ಹತ್ತುಸಾವಿರ ಗೋವುಗಳನ್ನು ದಾನ ಮಾಡಲು ಮನಸ್ಸಿನಲ್ಲೇ ಸಂಕಲ್ಪಿಸಿದನು. ॥ ೧೧ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ತನ್ನ ಅಂಗಕಾಂತಿಯಿಂದ ಸೂತಿಕಾಗೃಹವನ್ನು ಬೆಳಗುತ್ತಿದ್ದನು. ಪರಮಪುರುಷ ಪರಮಾತ್ಮನೇ ತನಗೆ ಮಗನಾಗಿ ಬಂದಿರುವನೆಂದು ನಿಶ್ಚಯವಾದಾಗ ಭಗವಂತನ ಪ್ರಭಾವವನ್ನು ಪೂರ್ಣವಾಗಿ ಅರಿತಿದ್ದ ವಸುದೇವನ ಭಯವೆಲ್ಲವೂ ಹೊರಟು ಹೋಯಿತು. ತನ್ನ ಬುದ್ಧಿಯನ್ನು ಸ್ಥಿರಗೊಳಿಸಿ ಅವನು ಭಗವಂತನ ಚರಣಗಳಲ್ಲಿ ತಲೆಯನ್ನಿಟ್ಟು ಕೈಗಳನ್ನು ಜೋಡಿಸಿ ಕೊಂಡು ಅವನನ್ನು ಸ್ತುತಿಸತೊಡಗಿದನು. ॥ ೧೨ ॥

ವಸುದೇವನು ಹೇಳಿದನು – ನೀನು ಪ್ರಕೃತಿಗೆ ಅತೀತನಾದ ಸಾಕ್ಷಾತ್ ಪುರುಷೋತ್ತಮನಾಗಿರುವೆ ಎಂಬುದನ್ನು ನಾನು ತಿಳಿದಿದ್ದೇನೆ. ನಿನ್ನ ಸ್ವರೂಪವು ಕೇವಲ ಅನುಭವೈಕವೇದ್ಯವಾದುದು ಹಾಗೂ ಆನಂದಮಯವಾದುದು. ಸಮಸ್ತ ಬುದ್ಧಿಗಳಿಗೆ ನೀನೇ ಸಾಕ್ಷಿಯಾಗಿರುವೆ. ॥ ೧೩ ॥ ನೀನೇ ಸೃಷ್ಟಿಯ ಮೊದಲಲ್ಲಿ ನಿನ್ನ ಪ್ರಕೃತಿಯಿಂದ ಈ ತ್ರಿಗುಣಮಯವಾದ ಜಗತ್ತನ್ನು ಸೃಷ್ಟಿಸುವೆ. ಮತ್ತೆ ಅದರಲ್ಲಿ ಪ್ರವಿಷ್ಟನಾಗದಿದ್ದರೂ ನೀನು ಸೇರಿ ಕೊಂಡಿರುವಂತೆ ಕಂಡು ಬರುತ್ತೀಯೆ. ॥ ೧೪ ॥ ಮಹತ್ತತ್ತ್ವಾದಿ ಕಾರಣ-ತತ್ತ್ವಗಳು ಬೇರೆ ಬೇರೆಯಾಗಿರುವವರೆಗೂ ಅವುಗಳ ಶಕ್ತಿಯೂ ಬೇರೆ-ಬೇರೆಯಾಗಿಯೇ ಇರುತ್ತದೆ. ಅವು ಇಂದ್ರಿಯಾದಿ ಹದಿನಾರು ತತ್ತ್ವಗಳೊಂದಿಗೆ ಸೇರಿದಾಗ ಈ ಬ್ರಹ್ಮಾಂಡವನ್ನು ರಚಿಸುವುವು ಮತ್ತು ಇದನ್ನು ಸೃಷ್ಟಿಸಿ ಇದರಲ್ಲಿ ನೀನು ಅನುಪ್ರವಿಷ್ಟನಂತೆ ಕಂಡುಬರುತ್ತಿರುವೆ. ಆದರೆ ನಿಜವಾಗಿ ನೀನು ಯಾವುದೇ ಪದಾರ್ಥದಲ್ಲಿ ಪ್ರವೇಶಿಸುವುದಿಲ್ಲ, ಅವುಗಳಿಂದ ರಚಿಸಲ್ಪಟ್ಟ ವಸ್ತುಗಳಲ್ಲಿ ನೀನು ಮೊದಲಿನಿಂದಲೂ ಇದ್ದುದೇ ಹೀಗೆ ಕಂಡುಬರಲು ಕಾರಣವಾಗಿದೆ॥ ೧೫-೧೬ ॥

ಏವಂ ಭವಾನ್ಬುದ್ಧ್ಯನುಮೇಯಲಕ್ಷಣೈ-
ರ್ಗ್ರಾಹ್ಯೈರ್ಗುಣೈಃ ಸನ್ನಪಿ ತದ್ಗುಣಾಗ್ರಹಃ ।
ಅನಾವೃತತ್ವಾದ್ಬಹಿರಂತರಂ ನ ತೇ
ಸರ್ವಸ್ಯ ಸರ್ವಾತ್ಮನ ಆತ್ಮವಸ್ತುನಃ ॥ ೧೭ ॥

ಯ ಆತ್ಮನೋ ದೃಶ್ಯಗುಣೇಷು ಸನ್ನಿತಿ
ವ್ಯವಸ್ಯತೇ ಸ್ವವ್ಯತಿರೇಕತೋಽಬುಧಃ ।
ವಿನಾನುವಾದಂ ನ ಚ ತನ್ಮನೀಷಿತಂ
ಸಮ್ಯಗ್ಯತಸ್ತ್ಯಕ್ತಮುಪಾದದತ್ಪುಮಾನ್ ॥ ೧೮ ॥

ತ್ವತ್ತೋಽಸ್ಯ ಜನ್ಮಸ್ಥಿತಿಸಂಯಮಾನ್ವಿಭೋ
ವದಂತ್ಯನೀಹಾದಗುಣಾದವಿಕ್ರಿಯಾತ್ ।
ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ
ತ್ವದಾಶ್ರಯತ್ವಾದುಪಚರ್ಯತೇ ಗುಣೈಃ ॥ ೧೯ ॥

ಸ ತ್ವಂ ತ್ರಿಲೋಕಸ್ಥಿತಯೇ ಸ್ವಮಾಯಯಾ
ಬಿಭರ್ಷಿ ಶುಕ್ಲಂ ಖಲು ವರ್ಣಮಾತ್ಮನಃ ।
ಸರ್ಗಾಯ ರಕ್ತಂ ರಜಸೋಪಬೃಂಹಿತಂ
ಕೃಷ್ಣಂ ಚ ವರ್ಣಂ ತಮಸಾ ಜನಾತ್ಯಯೇ ॥ ೨೦ ॥

ತ್ವಮಸ್ಯ ಲೋಕಸ್ಯ ವಿಭೋ ರಿರಕ್ಷಿಷು-
ರ್ಗೃಹೇಽವತೀರ್ಣೋಽಸಿ ಮಮಾಖಿಲೇಶ್ವರ ।
ರಾಜನ್ಯಸಂಜ್ಞಾಸುರಕೋಟಿಯೂಥಪೈ-
ರ್ನಿರ್ವ್ಯೂಹ್ಯಮಾನಾ ನಿಹನಿಷ್ಯಸೇ ಚಮೂಃ ॥ ೨೧ ॥

ಅಯಂ ತ್ವದಭ್ಯಸ್ತವ ಜನ್ಮ ನೌ ಗೃಹೇ
ಶ್ರುತ್ವಾಗ್ರಜಾಂಸ್ತೇ ನ್ಯವಧೀತ್ಪುರೇಶ್ವರ ।
ಇತೀಶೇಽವತಾರಂ ಪುರುಷೈಃ ಸಮರ್ಪಿತಂ
ಶ್ರುತ್ವಾಧುನೈವಾಭಿಸರತ್ಯುದಾಯುಧಃ ॥ ೨೨ ॥

ಹಾಗೆಯೇ ಬುದ್ಧಿಯಮೂಲಕ ಕೇವಲ ಗುಣಗಳ ಲಕ್ಷಣಗಳೇ ಅನುಮಾನಿ ಸಲ್ಪಡುತ್ತವೆ. ಮತ್ತು ಇಂದ್ರಿಯಗಳ ಮೂಲಕ ಕೇವಲ ಗುಣಮಯ ವಿಷಯಗಳನ್ನೇ ಗ್ರಹಿಸಲಾಗುತ್ತದೆ. ನೀನು ಆದರಲ್ಲಿ ಇದ್ದರೂ ಆ ಗುಣಗಳ ಗ್ರಹಣದಿಂದ ನಿನ್ನನ್ನು ಗ್ರಹಿಸಿದಂತಾ ಗುವುದಿಲ್ಲ. ನೀನು ಎಲ್ಲವೂ ಆಗಿದ್ದು ಎಲ್ಲರ ಅಂತರ್ಯಾಮಿ ಯಾಗಿರುವೆ ಹಾಗೂ ಪರಮಾರ್ಥಸತ್ಯವಾದ ಆತ್ಮಸ್ವರೂಪನಾಗಿ ರುವುದೇ ಇದರ ಕಾರಣವಾಗಿದೆ. ಗುಣಗಳ ಆವರಣವು ನಿನ್ನನ್ನು ಮುಚ್ಚಿಡಲಾರದು. ಆದ್ದರಿಂದ ನಿನ್ನಲ್ಲಿ ಒಳಗೆ-ಹೊರಗೆ ಎಂಬು ದಿಲ್ಲ ಅನಾವೃತನಾಗಿರುವೆ. ಹಾಗಿರುವಾಗ ನೀನು ಯಾವುದರಲ್ಲಿ ಪ್ರವೇಶಿಸುವುದು ? (ಆದ್ದರಿಂದ ಪ್ರವೇಶಿಸದೆಯೇ ನೀನು ಪ್ರವೇ ಶಿಸಿದಂತೆ ಕಂಡು ಬರುತ್ತಿಯೆ.) ॥ ೧೭ ॥ ನಿನ್ನ ಈ ದೃಶ್ಯಗುಣಗಳು ನಿನ್ನಿಂದ ಬೇರೆ ಎಂದು ಅರಿತು ಸತ್ಯವಾದುವು ಎಂದು ತಿಳಿಯು ವವರು ಅಜ್ಞಾನಿಗಳು. ಏಕೆಂದರೆ, ವಿಚಾರಮಾಡಿದಾಗ ಈ ದೇಹ, ಗೇಹ ಮುಂತಾದ ಪದಾರ್ಥಗಳು ವಾಗ್ವಿಲಾಸವಲ್ಲದೆ ಬೇರೆ ವಿಸ್ತು ಇಲ್ಲ ಎಂಬುದು ಸಿದ್ಧವಾಗುತ್ತದೆ. ವಿಚಾರದ ಮೂಲಕ ಯಾವ ವಸ್ತುವಿನ ಅಸ್ತಿತ್ವವು ಸಿದ್ಧಿಯಾಗದೆ ನಿರಾಕರಣವಾಗುವ ಅದನ್ನು ಸತ್ಯವೆಂದು ಒಪ್ಪಿರುವ ಮನುಷ್ಯನು ಬುದ್ಧಿವಂತನು ಹೇಗಾಗ ಬಲ್ಲನು ? ॥೧೮॥ ಪ್ರಭೋ ! ನೀನು ಸ್ವಯಂ ಸಮಸ್ತ ಕ್ರಿಯೆ ಗಳಿಂದ, ಗುಣಗಳಿಂದ, ವಿಕಾರಗಳಿಂದ ರಹಿತನಾಗಿರುವೆ ಎಂದು ಹೇಳುತ್ತಾರೆ. ಹೀಗಿದ್ದರೂ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಇವುಗಳು ನಿನ್ನಿಂದಲೇ ಆಗುತ್ತವೆ. ಇಂತಹ ಮಾತು ಪರಮೈಶ್ವರ್ಯ ಶಾಲಿಯಾದ, ಪರಬ್ರಹ್ಮ ಪರಮಾತ್ಮನಾದ ನಿನಗೆ ಅಸಂಗತವಲ್ಲ. ಏಕೆಂದರೆ, ತ್ರಿಗುಣಗಳ ಆಶ್ರಯ ನೀನೇ ಆಗಿರುವೆ. ಇದರಿಂದ ಆ ಗುಣಗಳ ಕಾರ್ಯವೇ ಮುಂತಾದವುಗಳನ್ನು ನಿನ್ನಲ್ಲೇ ಆರೋಪಿಸ ಲಾಗುತ್ತದೆ. ॥ ೧೯ ॥ ನೀನೇ ಮೂರುಲೋಕಗಳನ್ನು ರಕ್ಷಿಸಲಿಕ್ಕಾಗಿ ನಿನ್ನ ಮಾಯೆಯಿಂದ ಸತ್ತ್ವಮಯ ಶುಕ್ಲವರ್ಣ (ಪೋಷಕನಾದ ವಿಷ್ಣುರೂಪ)ವನ್ನು ಹೊಂದುವೆ. ಉತ್ಪತ್ತಿಗಾಗಿ ರಜೋಗುಣಪ್ರಧಾನ ವಾದ ರಕ್ತವರ್ಣ (ಸೃಷ್ಟಿಕರ್ತ ಬ್ರಹ್ಮರೂಪ)ವನ್ನು ಮತ್ತು ಪ್ರಳಯ ಸಮಯ ತಮೋ ಗುಣಪ್ರಧಾನವಾದ ಕೃಷ್ಣವರ್ಣ (ಸಂಹಾರಕಾರಿ ರುದ್ರ ರೂಪ)ವನ್ನು ಸ್ವೀಕರಿಸುವೆ. ॥ ೨೦ ॥ ಪ್ರಭುವೇ ! ನೀನು ಸರ್ವ ಶಕ್ತನೂ, ಸರ್ವರಿಗೂ ಸ್ವಾಮಿಯಾಗಿರುವೆ. ಈ ಜಗತ್ತನ್ನು ರಕ್ಷಿಸ ಲೆಂದೇ ನೀನು ನನ್ನ ಮನೆಯಲ್ಲಿ ಅವತರಿಸಿರುವೆ. ಇಂದಿನ ದಿನ ಗಳಲ್ಲಿ ಕೋಟಿ-ಕೋಟಿ ಅಸುರ ಸೇನಾಪತಿಗಳು ತಾವೇ ರಾಜ ರೆಂದು ಹೇಳಿಕೊಂಡು ತಮ್ಮ ಅಧೀನದಲ್ಲಿ ದೊಡ್ಡ-ದೊಡ್ಡ ಸೈನ್ಯ ವನ್ನು ಶೇಖರಿಸಿರುವರು. ನೀನು ಅವರೆಲ್ಲರನ್ನೂ ಸಂಹರಿಸುವೆ. ॥ ೨೧ ॥ ದೇವತೆಗಳಿಗೂ ಆರಾಧ್ಯದೇವನಾದ ಪ್ರಭುವೇ ! ಅಸಭ್ಯ ನಾದ ಈ ದುಷ್ಟ ಕಂಸನಾದರೋ ನನ್ನ ಪತ್ನಿಯಲ್ಲಿ – ಅವನಿಗೆ ಮೃತ್ಯುಪ್ರಾಯನಾದ ನೀನು ಅವತರಿಸುವೆನೆಂಬ ವಿಷಯವು ತಿಳಿದಾಗ ನಿನ್ನ ಭಯದಿಂದ ನಿನ್ನಣ್ಣಂದಿರೆಲ್ಲರನ್ನು ಕೊಂದು ಹಾಕಿದನು. ಈಗಲೂ ನೀನು ನನ್ನ ಮನೆಯಲ್ಲಿ ಅವತರಿಸಿದೆ ಎಂಬ ಸಮಾಚಾರ ತಿಳಿದೊಡನೆ ಖಡ್ಗವನ್ನೆತ್ತಿಕೊಂಡು ಓಡಿ ಇಲ್ಲಿಗೆ ಬರುವನು. ॥ ೨೨ ॥

ಶ್ರೀಶುಕ ಉವಾಚ

ಅಥೈನಮಾತ್ಮಜಂ ವೀಕ್ಷ್ಯ ಮಹಾಪುರುಷಲಕ್ಷಣಮ್ ।
ದೇವಕೀ ತಮುಪಾಧಾವತ್ಕಂಸಾದ್ವಿತಾ ಶುಚಿಸ್ಮಿತಾ
॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವಕಿಯು ತನ್ನ ಪುತ್ರನಲ್ಲಾದರೋ ಪುರುಷೋತ್ತಮ ಭಗವಂತನ ಎಲ್ಲ ಲಕ್ಷಣಗಳನ್ನು ನೋಡಿ, ಮೊದಲಿಗೆ ಆವಳಿಗೆ ಕಂಸನಿಂದ ಸ್ವಲ್ಪ ಭಯವೇ ಆಯಿತು; ಆದರೆ ತತ್‌ಕ್ಷಣ ಭಗವಂತನ ಸನ್ನಿಧಿಯಿಂದಾಗಿ ನಿರ್ಭಯಳಾಗಿ ಮುಗುಳ್ನಗುತ್ತಾ ಸ್ತುತಿಸ ತೊಡಗಿದಳು. ॥ ೨೩. ॥

ದೇವಕ್ಯುವಾಚ

ರೂಪಂ ಯತ್ತತ್ಪ್ರಾಹುರವ್ಯಕ್ತಮಾದ್ಯಂ
ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್ ।
ಸತ್ತಾಮಾತ್ರಂ ನಿರ್ವಿಶೇಷಂ ನಿರೀಹಂ
ಸ ತ್ವಂ ಸಾಕ್ಷಾದ್ವಿಷ್ಣುರಧ್ಯಾತ್ಮದೀಪಃ ॥ ೨೪ ॥

ದೇವಕೀದೇವಿಯು ಹೇಳುತ್ತಾಳೆ – ಪ್ರಭುವೇ! ನಿನ್ನ ದಿವ್ಯ ರೂಪವನ್ನು ವೇದಗಳೂ, ಯೋಗಿಗಳೂ ಅವ್ಯಕ್ತವೆಂದೂ, ಆದಿ ಕಾರಣವೆಂದೂ, ಬ್ರಹ್ಮವಸ್ತುವೆಂದೂ, ಜ್ಯೋತಿಸ್ವರೂಪ ವೆಂದೂ, ನಿರ್ಗುಣ-ನಿರ್ವಿಕಾರವೆಂದೂ, ಸತ್ತಾಮಾತ್ರವೆಂದೂ, ನಿರ್ವಿಶೇಷ ವೆಂದೂ, ನಿಷ್ಕ್ರಿಯ ಹಾಗೂ ಕೇವಲನೆಂದೂ ಹೊಗಳುತ್ತಿ ರುವರು. ವರೋ ಅಂತಹ ನೀನು ಮನ-ಬುದ್ಧಿ-ಇಂದ್ರಿಯಗಳ ದೀಪ ಪ್ರಾಯನಾದ ಸಾಕ್ಷಾತ್ ವಿಷ್ಣುವೇ ಆಗಿರುವೆ. ॥ ೨೪ ॥ ಬ್ರಹ್ಮನ ಆಯುಷ್ಯದ ಎರಡು ಪರಾರ್ಧಗಳು ಮುಗಿದು ಹೋದಾಗ ಕಾಲಶಕ್ತಿಯ ಪ್ರಭಾವದಿಂದ ಎಲ್ಲ ಲೋಕಗಳು ವಿನಾಶವಾಗಿ ಹೋಗುತ್ತವೆ. ಪಂಚ-ಮಹಾಭೂತಗಳು ಅಹಂಕಾರದಲ್ಲಿ, ಅಹಂಕಾರವು ಮಹತ್ತತ್ತ್ವದಲ್ಲಿ, ಮಹತ್ತತ್ತ್ವವು ಪ್ರಕೃತಿಯಲ್ಲಿ, ಪ್ರಕೃತಿಯು ನಿನ್ನಲ್ಲಿ ಲೀನವಾಗಿ ಹೋದನಂತರ ಶೇಷವಾಗಿ ನೀನು ಮಾತ್ರ ಉಳಿಯುವೆ. ಆದುದರಿಂದಲೇ ನಿನ್ನನ್ನು 'ಶೇಷ' ಎಂದೂ ಕರೆಯುತ್ತಾರೆ. ॥ ೨೫ ॥ ಅವ್ಯಕ್ತವಾದ ಪ್ರಕೃತಿಗೆ ಬಂಧುವಾಗಿರ ತಕ್ಕವನೇ! ಪ್ರಭುವೇ! ನಿಮೇಷದಿಂದ ಹಿಡಿದು ಸಂವತ್ಸರ ಪರ್ಯಂತವಾಗಿ ಅಥವಾ ಪರಾರ್ಧಪರ್ಯಂತವಾಗಿ ಹಲವಾರು ವಿಭಾಗಗಳಿಂದ ಕೂಡಿರುವ ಕಾಲದ ಚೇಷ್ಟೆಯಿಂದಲೇ ಈ ಸಮಸ್ತ ವಿಶ್ವವು ಚೇಷ್ಟಿತವಾಗುತ್ತದೆ. ಅದಕ್ಕೆ ಯಾವುದೇ ಎಲ್ಲೆಯು ಇಲ್ಲದೆ ಅದು ನಿನ್ನ ಅಧೀನವಾಗಿದ್ದು ನಿನ್ನ ಲೀಲಾಮಾತ್ರವಾಗಿದೆ. ನೀನು ಸರ್ವಶಕ್ತನೂ ಪರಮಕಲ್ಯಾಣದ ಆಶ್ರಯನಾಗಿರುವೆ. ಅಂತಹ ನಿನಗೆ ನಾನು ಶರಣಾಗತಳಾಗಿದ್ದೇನೆ. ॥ ೨೬ ॥ ಪ್ರಭುವೇ! ಈ ಜೀವನು ಮೃತ್ಯುಗ್ರಸ್ತನಾಗಿದ್ದಾನೆ. ಮೃತ್ಯುವೆಂಬ ಕರಾಳಸರ್ಪಕ್ಕೆ ಹೆದರಿ ಅವನು ಲೋಕ-ಲೋಕಾಂತರದಲ್ಲಿ ಅಲೆಯುತ್ತಿದ್ದಾನೆ. ಆದರೆ ನಿರ್ಭಯವಾಗಿ ಇರಲು ಅವನಿಗೆ ಯಾವ ಸ್ಥಾನವೂ ದೊರೆಯಲಿಲ್ಲ. ಆದರೆ ಅವನಿಗೆ ಇಂದು ಸೌಭಾಗ್ಯವಶದಿಂದ ನಿನ್ನ ಚರಣಾರವಿಂದಗಳ ಶರಣಾಗತಿಯು ಸಿಕ್ಕಿದೆ. ಆದ್ದರಿಂದ ಇನ್ನು ಅವನು ಸ್ವಸ್ಥವಾಗಿ ಮಲಗಿದ್ದಾನೆ. ಮೃತ್ಯುವು ಅವನಿಗೆ ಹೆದರಿ ದೂರ ಸರಿದುಹೋಯಿತು. ॥ ೨೭ ॥ ಪ್ರಭುವೇ! ನೀನು ಭಕ್ತ ಭಯಾಪಹಾರಿಯು. ನಾವಾದರೋ ದುಷ್ಟನಾದ ಈ ಕಂಸನಿಂದ ಭಯಗೊಂಡಿರುವೆವು. ಅವನಿಂದ ನಮ್ಮನ್ನು ನೀನು ರಕ್ಷಿಸು. ನಾಲ್ಕು ಕೈಗಳಿಂದ ಕೂಡಿದ ನಿನ್ನ ಈ ದಿವ್ಯರೂಪವು ಧ್ಯಾನಮಾಡಲು ಯೋಗ್ಯವಾಗಿದೆ. ಇಂತಹ ದಿವ್ಯಸ್ವರೂಪವನ್ನು ಮಾಂಸ-ಮಜ್ಜೆ ಗಳಿಂದ ಕೂಡಿರುವ ಶರೀರಧಾರಿಗಳಾದ ಮನುಷ್ಯರ ಮುಂದೆ ಪ್ರಕಟಿಸಬೇಡ. ॥ ೨೮ ॥

ನಷ್ಟೇ ಲೋಕೇ ದ್ವಿಪರಾರ್ಧಾವಸಾನೇ
ಮಹಾಭೂತೇಷ್ವಾದಿಭೂತಂ ಗತೇಷು ।
ವ್ಯಕ್ತೇಽವ್ಯಕ್ತಂ ಕಾಲವೇಗೇನ ಯಾತೇ
ಭವಾನೇಕಃ ಶಿಷ್ಯತೇ ಶೇಷಸಂಜ್ಞಃ ॥ ೨೫ ॥

ಯೋಽಯಂ ಕಾಲಸ್ತಸ್ಯ ತೇಽವ್ಯಕ್ತಬಂಧೋ
ಚೇಷ್ಟಾಮಾಹುಶ್ಚೇಷ್ಟತೇ ಯೇನ ವಿಶ್ವಮ್ ।
ನಿಮೇಷಾದಿರ್ವತ್ಸರಾಂತೋ ಮಹೀಯಾಂ-
ಸ್ತಂ ತ್ವೇಶಾನಂ ಕ್ಷೇಮಧಾಮ ಪ್ರಪದ್ಯೇ ॥ ೨೬ ॥

ಮರ್ತ್ಯೋ ಮೃತ್ಯುವ್ಯಾಲಭೀತಃ ಪಲಾಯನ್
ಲೋಕಾನ್ಸರ್ವಾನ್ನಿರ್ಭಯಂ ನಾಧ್ಯಗಚ್ಛತ್ ।
ತ್ವತ್ಪಾದಾಬ್ಜಂ ಪ್ರಾಪ್ಯ ಯದೃಚ್ಛಯಾದ್ಯ
ಸ್ವಸ್ಥಃ ಶೇತೇ ಮೃತ್ಯುರಸ್ಮಾದಪೈತಿ ॥ ೨೭ ॥

ಸ ತ್ವಂ ಘೋರಾದುಗ್ರಸೇನಾತ್ಮಜಾನ್ನ-
ಸ್ತ್ರಾಹಿ ತ್ರಸ್ತಾನ್ಭೃತ್ಯವಿತ್ರಾಸಹಾಸಿ ।
ರೂಪಂ ಚೇದಂ ಪೌರುಷಂ ಧ್ಯಾನಧಿಷ್ಣ್ಯಂ
ಮಾ ಪ್ರತ್ಯಕ್ಷಂ ಮಾಂಸದೃಶಾಂ ಕೃಷೀಷ್ಠಾಃ ॥ ೨೮ ॥

ಜನ್ಮ ತೇ ಮಯ್ಯಸೌ ಪಾಪೋ ಮಾವಿದ್ಯಾನ್ಮಧುಸೂದನ ।
ಸಮುದ್ವಿಜೇ ಭವದ್ದೇತೋಃ ಕಂಸಾದಹಮಧೀರಧೀಃ
॥ ೨೯ ॥

ಉಪಸಂಹರ ವಿಶ್ವಾತ್ಮನ್ನದೋ ರೂಪಮಲೌಕಿಕಮ್ ।
ಶಂಖಚಕ್ರಗದಾಪದ್ಮಶ್ರಿಯಾ ಜುಷ್ಟಂ ಚತುರ್ಭುಜಮ್
॥ ೩೦ ॥

ವಿಶ್ವಂ ಯದೇತತ್ಸ್ವತನೌ ನಿಶಾಂತೇ
ಯಥಾವಕಾಶಂ ಪುರುಷಃ ಪರೋ ಭವಾನ್ ।
ಬಿಭರ್ತಿ ಸೋಽಯಂ ಮಮ ಗರ್ಭಗೋಽಭೂ-
ದಹೋ ನೃಲೋಕಸ್ಯ ವಿಡಂಬನಂ ಹಿ ತತ್ ॥ ೩೧ ॥

ಶ್ರೀಭಗವಾನುವಾಚ

ತ್ವಮೇವ ಪೂರ್ವಸರ್ಗೇಽಭೂಃ ಪ್ರಶ್ನಿಃ ಸ್ವಾಯಂಭುವೇ ಸತಿ ।
ತದಾಯಂ ಸುತಪಾ ನಾಮ ಪ್ರಜಾಪತಿರಕಲ್ಮಷಃ
॥ ೩೨ ॥

ಯುವಾಂ ವೈ ಬ್ರಹ್ಮಣಾऽऽದಿಷ್ಟೌ ಪ್ರಜಾಸರ್ಗೇ ಯದಾ ತತಃ ।
ಸನ್ನಿಯಮ್ಯೇಂದ್ರಿಯಗ್ರಾಮಂ ತೇಪಾಥೇ ಪರಮಂ ತಪಃ
॥ ೩೩ ॥

ವರ್ಷವಾತಾತಪಹಿಮಘರ್ಮಕಾಲಗುಣಾನನು ।
ಸಹಮಾನೌ ಶ್ವಸನೋದವಿನಿರ್ಧೂತಮನೋಮಲೌ
॥ ೩೪ ॥

ಶೀರ್ಣಪರ್ಣಾನಿಲಾಹಾರಾವುಪಶಾಂತೇನ ಚೇತಸಾ ।
ಮತ್ತಃ ಕಾಮಾನಭೀಪ್ಸಂತೌ ಮದಾರಾಧನಮೀಹತುಃ
॥ ೩೫ ॥

ಏವಂ ವಾಂ ತಪ್ಯತೋಸ್ತೀವ್ರಂ ತಪಃ ಪರಮದುಷ್ಕರಮ್ ।
ದಿವ್ಯವರ್ಷಸಹಸ್ರಾಣಿ ದ್ವಾದಶೇಯುರ್ಮದಾತ್ಮನೋಃ
॥ ೩೬ ॥

ತದಾ ವಾಂ ಪರಿತುಷ್ಟೋऽಹಮಮುನಾ ವಪುಷಾನಘೇ ।
ತಪಸಾ ಶ್ರದ್ಧಯಾ ನಿತ್ಯಂ ಭಕ್ತ್ಯಾ ಚ ಹೃದಿ ಭಾವಿತಃ
॥ ೩೭ ॥

ಪ್ರಾದುರಾಸಂ ವರದರಾಡ್ಯುವಯೋಃ ಕಾಮದಿತ್ಸಯಾ ।
ಪ್ರಿಯತಾಂ ವರ ಇತ್ಯುಕ್ತೇ ಮಾದೃಶೋ ವಾಂ ವೃತಃ ಸುತಃ
॥ ೩೮ ॥

ಅಮುಷ್ಯಾಮ್ಯವಿಷಯಾವನಪತ್ಯೌ ಚ ದಂಪತೀ ।
ನ ವವ್ರಾಥೇऽಪವರ್ಗಂ ಮೇ ಮೋಹಿತೌ ಮಮ ಮಾಯಯಾ
॥ ೩೯ ॥

ಮಧುಸೂದನನೇ! ನೀನು ನನ್ನ ಗರ್ಭದಲ್ಲಿ ಹುಟ್ಟಿರುವೆಯೆಂಬುದು ಈ ಕಂಸನಿಗೆ ತಿಳಿಯದಂತೆ ಮಾಡು. ನನ್ನ ಧೈರ್ಯವು ಕಳೆದುಹೋಗಿದೆ. ನಿನ್ನ ಸಲುವಾಗಿ ಕಂಸನಿಗೆ ನಾನು ಬಹಳ ಹೆದರುತ್ತಿರುವೆನು. ॥ ೨೯ ॥ ವಿಶ್ವಾತ್ಮನೇ! ನಿನ್ನ ಈ ದಿವ್ಯ ರೂಪವು ಅಲೌಕಿಕವಾದುದು. ಶಂಖ-ಚಕ್ರ, ಗದಾ, ಪದ್ಮಗಳ ಶೋಭೆಯಿಂದ ಬೆಳಗುತ್ತಿರುವ ಈ ಚತುರ್ಭುಜರೂಪವನ್ನು ಉಪಸಂಹರಿಸು. ॥ ೩೦ ॥ ಪ್ರಳಯದ ಸಮಯದಲ್ಲಿ ಅಖಿಂಡ ಬ್ರಹ್ಮಾಂಡವನ್ನು – ಮನುಷ್ಯನು ತನ್ನ ಶರೀರದಲ್ಲಿ ಇರುವ ಛಿದ್ರರಹಿತ ಆಕಾಶವನ್ನು ಸ್ವಾಭಾವಿಕವಾಗಿ ಧರಿಸುವಂತೆಯೇ ನೀನು ನಿನ್ನ ಶರೀರದಲ್ಲಿ ಧರಿಸಿಕೊಳ್ಳುವೆ. ಅಂತಹ ಪರಮಪುರುಷ ಪರಮಾತ್ಮನಾದ ನೀನು ನನ್ನ ಗರ್ಭದಲ್ಲಿ ಹುಟ್ಟಿದೆಯೆಂದರೆ ಇದು ನಿನ್ನ ಅದ್ಭುತವಾದ ಲೀಲೆಯಲ್ಲದೆ ಮತ್ತೇನು ? ॥ ೩೧ ॥

ಶ್ರೀಭಗವಂತನು ಹೇಳಿದನು – ದೇವೀ! ಸ್ವಾಯಂಭುವ ಮನ್ವಂತರದಲ್ಲಿ ನೀನು ಮೊದಲು ಹುಟ್ಟಿದಾಗ ನಿನ್ನ ಹೆಸರು ಪ್ರಶ್ನಿ ಎಂದಿತ್ತು. ಈ ವಸುದೇವನು ಸುತಪಾ ಎಂಬ ಹೆಸರಿನಿಂದ ಪ್ರಜಾಪತಿಯಾಗಿದ್ದನು. ನಿಮ್ಮಿಬ್ಬರ ಹೃದಯಗಳೂ ಬಹಳ ಶುದ್ಧವಾಗಿದ್ದವು. ॥ ೩೨ ॥ ಬ್ರಹ್ಮದೇವರು ಸಂತಾನವನ್ನು ಪಡೆದುಕೊಳ್ಳಲು ನಿಮಗೆ ಆಜ್ಞೆಯನ್ನು ಕೊಟ್ಟಾಗ ನೀವಿಬ್ಬರೂ ಇಂದ್ರಿಯಗಳನ್ನು ನಿಯಮನ ಮಾಡಿಕೊಂಡು ಶ್ರೇಷ್ಠವಾದ ತಪಸ್ಸನ್ನು ಮಾಡಿದಿರಿ. ॥ ೩೩ ॥ ನೀವಿಬ್ಬರೂ ಮಳೆ, ಗಾಳಿ, ಬಿಸಿಲು, ಚಳಿ-ಸೆಕೆ ಮುಂತಾದ ಕಾಲದ ವಿಭಿನ್ನ ಗುಣಗಳನ್ನು ಸಹಿಸಿಕೊಂಡು, ಪ್ರಾಣಾಯಾಮದ ಮೂಲಕವಾಗಿ ಮನಸ್ಸಿನ ಕಲ್ಮಷಗಳನ್ನು ಕಳೆದುಕೊಂಡಿರಿ. ॥ ೩೪ ॥ ನೀವುಗಳು ಕೆಲವೊಮ್ಮೆ ಒಣಗಿದ ತರಗೆಲೆಗಳನ್ನು ತಿನ್ನುತ್ತಾ , ಕೆಲವೊಮ್ಮೆ ಗಾಳಿಯನ್ನು ಮಾತ್ರ ಸೇವಿಸುತ್ತಾ ತಪಸ್ಸು ಮಾಡುತ್ತಿದ್ದಿರಿ. ನಿಮ್ಮ ಮನಸ್ಸು ಶಾಂತವಾಗಿತ್ತು. ಹೀಗೆ ನೀವುಗಳು ನನ್ನಿಂದ ಅಭೀಷ್ಟ ವಸ್ತುವನ್ನು ಪಡೆಯುವ ಬಯಕೆಯಿಂದ ನನ್ನನ್ನು ಆರಾಧಿಸಿದಿರಿ. ॥ ೩೫ ॥ ನನ್ನಲ್ಲಿಯೇ ಚಿತ್ತವನ್ನು ನೆಟ್ಟು ಪರಮ ದುಷ್ಕರವಾದ ಘೋರ ತಪಸ್ಸನ್ನು ಮಾಡುತ್ತಾ-ಮಾಡುತ್ತಾ ದೇವತೆಗಳ ಹನ್ನೆರಡು ಸಾವಿರ ವರ್ಷಗಳು ಕಳೆದುಹೋದುವು. ॥ ೩೬ ॥ ಪುಣ್ಯಮಯಿಯಾದ ದೇವಿಯೇ! ಆ ಸಮಯದಲ್ಲಿ ನಾನು ನಿಮ್ಮಿಬ್ಬರ ವಿಷಯದಲ್ಲಿಯೂ ಪ್ರಸನ್ನನಾದೆನು. ನೀವಿಬ್ಬರೂ ತಪಸ್ಸಿನಿಂದಲೂ, ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ನನ್ನನ್ನೇ ಯಾವಾಗಲೂ ಹೃದಯದಲ್ಲಿ ಭಾವಿಸಿಕೊಂಡಿರುವಿರಿ. ಆ ಸಮಯದಲ್ಲಿ ನಿಮ್ಮ ಅಭಿಲಾಷೆಗಳನ್ನು ಪೂರ್ಣಗೊಳಿಸಲು ವರದರಾಜನಾದ ನಾನು ಇದೇ ರೂಪದಿಂದ ನಿಮಗೆ ಪ್ರತ್ಯಕ್ಷನಾದೆನು. ಬೇಕಾದ ವರವನ್ನು ಕೇಳಿಕೊಳ್ಳಿರೆಂದು ನಾನು ಹೇಳಿದಾಗ ನೀವಿಬ್ಬರೂ ನನ್ನಂತಹ ಪುತ್ರನು ಬೇಕೆಂದು ಹೇಳಿದಿರಿ. ॥ ೩೭-೩೮ ॥ ಆ ಸಮಯದಲ್ಲಿ ನಿಮಗೆ ವಿಷಯಭೋಗಗಳ ಸಂಬಂಧವೇ ಇರಲಿಲ್ಲ, ಸಂತಾನವೂ ಇರಲಿಲ್ಲ, ಆದರೂ ನನ್ನ ಮಾಯೆಯಿಂದ ಮೋಹಿತರಾಗಿ ನೀವಿಬ್ಬರೂ ಮೋಕ್ಷವನ್ನು ಬೇಡಲಿಲ್ಲ. ॥ ೩೯ ॥

ಗತೇ ಮಯಿ ಯುವಾಂ ಲಬ್ಧ್ವಾವರಂ ಮತ್ಸದೃಶಂ ಸುತಮ್ ।
ಗ್ರಾಮ್ಯಾನ್ಭೋಗಾನಭುಂಜಾಥಾಂ ಯುವಾಂ ಪ್ರಾಪ್ತಮನೋರಥೌ
॥ ೪೦ ॥

ಅದೃಷ್ಟ್ವಾನ್ಯತಮಂ ಲೋಕೇಶೀಲೌದಾರ್ಯಗುಣೈಃ ಸಮಮ್ ।
ಅಹಂ ಸುತೋ ವಾಮಭವಂ ಪ್ರಶ್ನಿಗರ್ಭ ಇತಿ ಶ್ರುತಃ
॥ ೪೧ ॥

ತಯೋರ್ವಾಂ ಪುನರೇವಾಹಮದಿತ್ಯಾಮಾಸ ಕಶ್ಯಪಾತ್ ।
ಉಪೇಂದ್ರ ಇತಿ ವಿಖ್ಯಾತೋ ವಾಮನತ್ವಾಚ್ಚ ವಾಮನಃ
॥ ೪೨ ॥

ತೃತೀಯೇಽಸ್ಮಿನ್ಭವೇಽಹಂ ವೈ ತೇನೈವ ವಪುಷಾಥ ವಾಮ್ ।
ಜಾತೋ ಭೂಯಸ್ತಯೋರೇವ ಸತ್ಯಂ ಮೇ ವ್ಯಾಹೃತಂ ಸತಿ
॥ ೪೩ ॥

ಏತದ್ವಾಂ ದರ್ಶಿತಂ ರೂಪಂ ಪ್ರಾಗ್ಜನ್ಮಸ್ಮರಣಾಯ ಮೇ ।
ನಾನ್ಯಥಾ ಮದ್ಭವಂ ಜ್ಞಾನಂ ಮರ್ತ್ಯಲಿಂಗೇನ ಜಾಯತೇ
॥ ೪೪ ॥

ಯುವಾಂ ಮಾಂ ಪುತ್ರಭಾವೇನ ಬ್ರಹ್ಮಭಾವೇನ ಚಾಸಕೃತ್ ।
ಚಿಂತಯಂತೌ ಕೃತಸ್ನೇಹೌ ಯಾಸ್ಯೇಥೇ ಮದ್ಗತಿಂ ಪರಾಮ್
॥ ೪೫ ॥

(ಯದಿ ಕಂಸಾದ್ ಬಿಭೇಷಿತ್ಥ, ತರ್ಹಿ ಮಾಂ ಗೋಕುಲಂ ನಯ ।
ಮನ್ಮಾಯಾ ಮಾನಯಾಶುತ್ವಂ ಯಶೋದಾ ಗರ್ಭಸಂಭವಾಮ್ ॥)

ನನ್ನಂತಹ ಪುತ್ರನು ನಿಮಗೆ ದೊರೆಯಲಿ – ಎಂಬ ಅಮೋಘ ವಾದ ವರವನ್ನಿತ್ತು ನಾನು ಅದೃಶ್ಯನಾದೆನು. ಸಫಲ ಮನೋರಥರಾದ ನೀವಿಬ್ಬರೂ ಪುತ್ರಪ್ರಾಪ್ತಿಗಾಗಿ ವಿಷಯೋಪಭೋಗಗಳನ್ನು ಅನುಭವಿಸಲು ತೊಡಗಿದಿರಿ. ॥ ೪೦ ॥ ಪ್ರಪಂಚದಲ್ಲಿ ಶೀಲ ಸ್ವಭಾವ, ಉದಾರತೆ ಹಾಗೂ ಇತರ ಗುಣಗಳಿಂದ ಕೂಡಿದವನು ನಾನಲ್ಲದೆ ಬೇರೆ ಯಾರೂ ಇಲ್ಲವೆಂದು ತಿಳಿದು ನಾನೇ ನಿಮಗೆ ಪುತ್ರನಾದೆನು. ಆ ಸಮಯದಲ್ಲಿ ನಾನು 'ಪ್ರಶ್ನಿಗರ್ಭ' ಎಂಬ ಹೆಸರಿನಿಂದ ವಿಖ್ಯಾತನಾದೆನು. ॥ ೪೧ ॥ ಮತ್ತೆ ಎರಡನೇ ಜನ್ಮದಲ್ಲಿ ನೀನು ಅದಿತಿಯಾದೆ ಮತ್ತು ವಸುದೇವನು ಕಶ್ಯಪನಾದನು. ಆ ಸಮಯದಲ್ಲೂ ನಾನು ನಿಮಗೆ ಪುತ್ರನಾದೆನು. ಆಗ ನನ್ನ ಹೆಸರು 'ಉಪೇಂದ್ರ' ಎಂದಿತ್ತು. ಗಿಡ್ಡನಾದ್ದರಿಂದ ನನ್ನನ್ನು ವಾಮನನೆಂದೂ ಜನರು ಹೇಳುತ್ತಿದ್ದರು. ॥ ೪೨ ॥ ಸತಿದೇವೀ ದೇವಕಿಯೇ ! ನಿನ್ನ ಈ ಮೂರನೇ ಜನ್ಮದಲ್ಲಿಯೂ ನಾನು ಇದೇ ರೂಪದಿಂದ ನಿಮಗೆ ಪುತ್ರನಾಗಿರುವೆನು.* ನನ್ನ ವಾಣಿಯು ಸದಾಕಾಲ ಸತ್ಯವಾಗಿರುತ್ತದೆ. ॥ ೪೩ ॥ ನಿನಗೆ ನನ್ನ ಹಿಂದಿನ ಅವತಾರಗಳ ಸ್ಮರಣೆ ಉಂಟಾಗಲೆಂದೇ ನನ್ನ ರೂಪವನ್ನು ತೋರಿಸಿದ್ದೇನೆ. ನಾನು ಹೀಗೆ ಮಾಡದಿದ್ದರೆ ಕೇವಲ ಮನುಷ್ಯ ಶರೀರದಿಂದಲೇ ನನ್ನ ಅವತಾರದ ಪರಿಚಯವಾಗುತ್ತಿರಲಿಲ್ಲ. ॥ ೪೪ ॥ ನೀವಿಬ್ಬರೂ ನನ್ನ ಕುರಿತು ಪುತ್ರಭಾವ ಹಾಗೂ ನಿರಂತರ ಬ್ರಹ್ಮಭಾವವನ್ನು ತಾಳಿರಿ. ಹೀಗೆ ವಾತ್ಸಲ್ಯ-ಸ್ನೇಹ ಮತ್ತು ಚಿಂತನ ದಿಂದ ನೀವು ನನ್ನ ಪರಮಪದವಿಯನ್ನು ಸೇರುವಿರಿ. ॥ ೪೫ ॥

(ಎಲೈ ವಸುದೇವನೇ ! ನೀನು ಕಂಸನಿಂದ ಭಯಗೊಂಡಿರುವೆ ಯಾದರೆ ನನ್ನನ್ನು ಗೋಕುಲಕ್ಕೆ ಕೊಂಡುಹೋಗಿ ಅಲ್ಲಿಟ್ಟು ಅಲ್ಲಿ ಯಶೋದೆಯ ಗರ್ಭದಲ್ಲಿ ಉತ್ಪನ್ನಳಾದ ನನ್ನ ಯೋಗಮಾಯೆ ಯನ್ನು ಇಲ್ಲಿಗೆ ತೆಗೆದುಕೊಂಡು ಬಾ.)

ಶ್ರೀಶುಕ ಉವಾಚ

ಇತ್ಯುಕ್ತ್ವಾಽಽದಿಪುರುಷಸ್ತೂಷ್ಣೀಂ ಭಗವಾನಾತ್ಮಮಾಯಯಾ ।
ಪಿತ್ರೋಃ ಸಂಪಶ್ಯತೋಃ ಸದ್ಯೋ ಬಭೂವ ಪ್ರಾಕೃತಃ ಶಿಶುಃ
॥ ೪೬ ॥

ತತಶ್ಚ ಶೌರಿರ್ಭಗವತ್ಪ್ರಚೋದಿತಃ
ಸುತಂ ಸಮಾದಾಯ ಸ ಸೂತಿಕಾಗೃಹಾತ್ ।
ಯದಾ ಬಹಿರ್ಗಂತುಮಿಯೇಷ ತರ್ಹ್ಯಜಾ
ಯಾ ಯೋಗಮಾಯಾಜನಿ ನಂದಜಾಯಯಾ ॥ ೪೭ ॥

ತಯಾ ಹೃತಪ್ರತ್ಯಯಸರ್ವವೃತ್ತಿಷು
ದ್ವಾಃಸ್ಥೇಷು ಪೌರೇಷ್ವಪಿ ಶಾಯಿತೇಷ್ವಥ ।
ದ್ವಾರಸ್ತು ಸರ್ವಾಃ ಪಿಹಿತಾ ದುರತ್ಯಯಾ
ಬೃಹತ್ಕಪಾಟಾಯಸಕೀಲಶೃಂಖಲೈಃ ॥ ೪೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಂತನು ಹೀಗೆ ಹೇಳಿ ಸುಮ್ಮನಾದನು. ಆನಂತರ ಅವನು ತನ್ನ ಯೋಗಮಾಯೆಯಿಂದ ತಂದೆ-ತಾಯಿಗಳು ನೋಡುತ್ತಿರುವಂತೆ ಒಂದು ಸಾಧಾರಣ ಶಿಶುವಿನ ರೂಪವನ್ನು ಧರಿಸಿದನು. ॥ ೪೬ ॥ ಆಗ ವಸುದೇವನು ಭಗವಂತನ ಪ್ರೇರಣೆಯಿಂದ ತನ್ನ ಪುತ್ರನನ್ನು ಸೂತಿಕಾಗೃಹದಿಂದ ಹೊರಗೆ ಕೊಂಡುಹೋಗಲು ಇಚ್ಛಿಸಿದನು. ಇದೇ ಸಮಯದಲ್ಲಿ ಭಗವಂತನ ಶಕ್ತಿಯಾದ್ದರಿಂದ ಅವನಂತೆಯೇ ಜನ್ಮರಹಿತಳಾದ ಯೋಗಮಾಯೆಯು ನಂದಮಹಾರಾಜನ ಪತ್ನಿಯಾದ ಯಶೋದೆಯ ಗರ್ಭದಿಂದ ಹುಟ್ಟಿದ್ದಳು. ॥ ೪೭ ॥ ಈ ಯೋಗಮಾಯೆಯೇ ದ್ವಾರಪಾಲರ ಮತ್ತು ಸಮಸ್ತ ನಗರ ವಾಸಿಗಳ ಇಂದ್ರಿಯವೃತ್ತಿಗಳನ್ನು ಅಪಹರಿಸಿಬಿಟ್ಟಳು. ಇದರಿಂದಾಗಿ ಅವರೆಲ್ಲರೂ ನಿಶ್ಚೇಷ್ಟಿತರಾಗಿ ಮಲಗಿಬಿಟ್ಟರು. ಕಾರಾಗೃಹದ ಎಲ್ಲ ಬಾಗಿಲುಗಳು ಮುಚ್ಚಿದ್ದು ಭಾರೀ ಕಬ್ಬಿಣದ ಬಾಗಿಲುಗಳು

* 'ನನ್ನಂತಹ ಪುತ್ರನು ನಿಮಗಾಗುವನು' ಎಂದು ನಾನು ವರವನ್ನು ಕೊಟ್ಟಿದ್ದೆನು. ಆದರೆ ಇದನ್ನು ನಾನು ಪೂರ್ಣಗೊಳಿಸಲಾರದೆ ಹೋದೆನು. ಏಕೆಂದರೆ, ನನ್ನಂಥವನು ಬೇರೆ ಯಾರೂ ಇಲ್ಲ. ಯಾರಿಗಾದರೂ ಯಾವುದಾದರೂ ವಸ್ತುವನ್ನು ಕೊಡುತ್ತೇನೆ ಎಂದು ಪ್ರತಿಜ್ಞೆಮಾಡಿ ಅದನ್ನು ನಡೆಸಲಾಗದಿದ್ದರೆ ಅದಕ್ಕೆ ಮೂರುಪಟ್ಟು ವಸ್ತುವನ್ನು ಕೊಡಬೇಕು. ನನ್ನಂತಹ ಪದಾರ್ಥವೇ ಇಲ್ಲದ್ದರಿಂದ ನಾನೇ ಮೂರುಬಾರಿ ಇವರಿಗೆ ಪುತ್ರನಾಗುವೆನು ಎಂದು ಭಗವಾನ್ ಕೃಷ್ಣನು ಯೋಚಿಸಿದನು.

ತಾಃ ಕೃಷ್ಣವಾಹೇ ವಸುದೇವ ಆಗತೇ
ಸ್ವಯಂ ವ್ಯವರ್ಯಂತ ಯಥಾ ತಮೋ ರವೇಃ ।
ವವರ್ಷ ಪರ್ಜನ್ಯ ಉಪಾಂಶುಗರ್ಜಿತಃ
ಶೇಷೋಽನ್ವಗಾದ್ವಾರಿ ನಿವಾರಯನ್ಫಣೈಃ ॥ ೪೯ ॥

ಸರಪಳಿಗಳಿಂದ ಬಂಧಿಸಲ್ಪಟ್ಟು ಬೀಗಗಳು ಜಡಿಯಲ್ಪಟ್ಟಿದ್ದವು. ಅವುಗಳಿಂದ ಹೊರಗೆ ಹೋಗುವುದು ಬಹಳ ಕಷ್ಟವಾಗಿತ್ತು. ಆದರೆ ವಸುದೇವನು ಭಗವಾನ್ ಶ್ರೀಕೃಷ್ಣನನ್ನು ಎತ್ತಿಕೊಂಡಾಗ ಸೂರ್ಯೋದಯವಾಗುತ್ತಲೇ ಅಂಧಕಾರವು ದೂರವಾಗುವಂತೆ ವಸುದೇವನ ಕೈಕೋಳಗಳು ಮತ್ತು ಬಾಗಿಲುಗಳು ತಾನಾಗಿಯೇ ತೆರೆದುಕೊಂಡವು.* ವಸುದೇವನು ಬಾಲಮುಕುಂದನನ್ನು ಎತ್ತಿಕೊಂಡು ಹೊರಗೆ ಹೊರಟನು. ಅದೇ ಸಮಯದಲ್ಲಿ ಮೋಡಗಳು ಮೆಲ್ಲ-ಮೆಲ್ಲನೆ ಗುಡುಗುತ್ತಾ ಮಳೆಗರೆಯುತ್ತಿದ್ದವು. ಆದಿಶೇಷನು ತನ್ನ ಸಾವಿರ ಹೆಡೆಗಳಿಂದ ಭಗವಂತನ ಮೇಲೆ ನೀರು ಬೀಳದಂತೆ ಕೊಡೆಯಂತಾಗಿ ವಸುದೇವನ ಹಿಂದೆಯೇ ಹಿಂಬಾಲಿಸಿದನು. ॥ ೪೮-೪೯ ॥ ಸತತವಾಗಿ ಮಳೆಯು ಬೀಳುತ್ತಿದ್ದುದರಿಂದ ಯಮುನಾನದಿಯು ತುಂಬಿ ಹರಿಯುತ್ತಿದ್ದಿತು. ಆಳವಾದ ನೀರಿನ ಪ್ರವಾಹದ ವೇಗದಿಂದ ಅಲೆಗಳೆದ್ದು ನದಿಯಲ್ಲಿ ಅಗಾಧವಾದ ನೊರೆಯುಂಟಾಗಿತ್ತು. ನೂರಾರು ಸುಳಿಗಳಿಂದ ಕೂಡಿತ್ತು. ಸೀತಾಪತಿಯಾದ ಶ್ರೀರಾಮಚಂದ್ರನಿಗೆ ಸಮುದ್ರವು ದಾರಿಯನ್ನು ಕಲ್ಪಿಸಿಕೊಟ್ಟಂತೆಯೇ ಯಮುನೆಯು ಭಗವಂತನಿಗೆ ದಾರಿಮಾಡಿಕೊಟ್ಟಳು. ॥ ೫೦ ॥ ವಸುದೇವನು ನಂದರಾಜನ ಗೋಕುಲಕ್ಕೆ ಹೋದಾಗ ಎಲ್ಲಾ ಗೋಪರು ಗಾಢವಾಗಿ ಮಲಗಿರುವುದನ್ನು ನೋಡಿದನು. ಅವನು ತನ್ನ ಪುತ್ರನನ್ನು ಯಶೋದೆಯ ಪಕ್ಕದಲ್ಲಿ ಮಲಗಿಸಿ, ಅವಳ ನವಜಾತ ಹೆಣ್ಣುಮಗುವನ್ನು ತೆಗೆದುಕೊಂಡು ಕಾರಾಗೃಹಕ್ಕೆ ಮರಳಿದನು. ॥ ೫೧ ॥ ಕಾರಾಗೃಹಕ್ಕೆ ಬಂದ ವಸುದೇವನು ಆ ಹೆಣ್ಣು ಮಗುವನ್ನು ದೇವಕಿಯ ಬಳಿಯಲ್ಲಿ ಮಲಗಿಸಿದನು. ಆಗ ಅವನ ಕೈಕಾಲುಗಳಿಗೆ ಸಂಕೋಲೆಗಳು ಬಂಧಿಸಲ್ಪಟ್ಟು ಮೊದಲಿದ್ದಂತೆ ಬಂಧಿತನಾದನು. ॥ ೫೨ ॥ ಆತ್ತಲಾಗಿ ಗೋಕುಲದಲ್ಲಿ ನಂದಪತ್ನೀ ಯಶೋದೆಗೆ ತನಗೆ ಮಗು ಹುಟ್ಟಿದುದು ಹಾಗೂ ಅದು ಗಂಡೋ, ಹೆಣ್ಣೋ ಎಂಬುದು ಅರಿವಾಗಲೇ ಇಲ್ಲ. ಏಕೆಂದರೆ ಮೊದಲಿಗೆ ಅವಳು ಬಹಳ ಬಳಲಿದ್ದಳು, ಇನ್ನೊಂದು ಯೋಗಮಾಯೆಯು ಅವಳನ್ನು ಅಚೇತನಳನ್ನಾಗಿಸಿದ್ದಳು.** ॥ ೫೩ ॥

ಮಘೋನಿ ವರ್ಷತ್ಯಸಕೃದ್ಯಮಾನುಜಾ
ಗಂಭೀರತೋಯೌಘಜವೋರ್ಮಿಫೇನಿಲಾ ।
ಭಯಾನಕಾವರ್ತಶತಾಕುಲಾ ನದೀ
ಮಾರ್ಗಂ ದದೌ ಸಿಂಧುರಿವ ಶ್ರಿಯಃ ಪತೇಃ ॥ ೫೦ ॥

ನಂದವ್ರಜಂ ಶೌರಿರುಪೇತ್ಯ ತತ್ರ ತಾನ್
ಗೋಪಾನ್ಪಸುಪ್ತಾನುಪಲಭ್ಯ ನಿದ್ರಯಾ ।
ಸುತಂ ಯಶೋದಾಶಯನೇ ನಿಧಾಯ ತತ್
ಸುತಾಮುಪಾದಾಯ ಪುನರ್ಗೃಹಾನಗಾತ್ ॥ ೫೧ ॥

ದೇವಕ್ಯಾಃ ಶಯನೇ ನ್ಯಸ್ಯ ವಸುದೇವೋಽಥ ದಾರಿಕಾಮ್ ।
ಪ್ರತಿಮುಚ್ಯ ಪದೋರ್ಲೋಹಮಾಸ್ತೇ ಪೂರ್ವವದಾವೃತಃ
॥ ೫೨ ॥

ಯಶೋದಾ ನಂದಪತ್ನೀ ಚ ಜಾತಂ ಪರಮಬುಧ್ಯತ ।
ನ ತಲ್ಲಿಂಗಂ ಪರಿಶ್ರಾಂತಾ ನಿದ್ರಯಾಪಗತಸ್ಮೃತಿಃ
॥ ೫೩ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಕೃಷ್ಣಜನ್ಮನಿ ತೃತೀಯೋಽಧ್ಯಾಯಃ ॥ ೩ ॥

* ಮಾರ ನಾಮ-ಶ್ರವಣಮಾತ್ರದಿಂದಲೇ ಅಸಂಖ್ಯ ಜನ್ಮಾರ್ಜಿತ ಪ್ರಾರಬ್ಧ ಬಂಧನವು ಕಡಿದುಹೋಗುವುದೋ ಅಂತಹ ಪ್ರಭುವನ್ನೇ ಎತ್ತಿಕೊಂಡ ವಸುದೇವನ ಬೇಡಿಗಳು ಕಳಚಿಬೀಳುವುದರಲ್ಲಿ ಆಶ್ಚರ್ಯವೇನಿದೆ ?

** ಭಗವಾನ್ ಶ್ರೀಕೃಷ್ಣನು ಈ ಪ್ರಸಂಗದಲ್ಲಿ – ನನ್ನನ್ನು ಪ್ರೇಮಪೂರ್ವಕವಾಗಿ ಹೃದಯದಲ್ಲಿ ಧರಿಸುವವನ ಬಂಧನವು ಬಿಡುಗಡೆ ಹೊಂದುವುದು, ಕಾರಾಗೃಹದಿಂದ ಬಿಡುಗಡೆ ಹೊಂದುತ್ತಾನೆ, ದೊಡ್ಡ-ದೊಡ್ಡ ಬಾಗಿಲುಗಳು ತೆರೆಯುತ್ತವೆ, ಕಾವಲುಗಾರರಿಗೆ ಅರಿವಾಗುವುದೇ ಇಲ್ಲ, ಭವನದಿಯು ಒತ್ತಿಹೋಗುವುದು. ಗೋಕುಲದ (ಇಂದ್ರಿಯ ಸಮುದಾಯ) ವೃತ್ತಿಗಳು ಲುಪ್ತವಾಗುತ್ತವೆ. ಮಾಯೆಯು ಕೈವಶಳಾಗುತ್ತಾಳೆಂಬುದನ್ನು ತೋರಿಸಿಕೊಟ್ಟಿರುವನು.

ನಾಲ್ಕನೆಯ ಅಧ್ಯಾಯ

ಕಂಸನ ಕೈಯಿಂದ ತಪ್ಪಿಸಿಕೊಂಡ ಯೋಗಮಾಯೆಯು ಆಕಾಶಕ್ಕೆ ಹಾರಿ ಭವಿಷ್ಯವನ್ನು ನುಡಿದುದು

ಶ್ರೀಶುಕ ಉವಾಚ

ಬಹಿರಂತಃ ಪುರದ್ವಾರಃ ಸರ್ವಾಃ ಪೂರ್ವವದಾವೃತಾಃ।
ತತೋ ಬಾಲಧ್ವನಿಂ ಶ್ರುತ್ವಾ ಗೃಹಪಾಲಾಃ ಸಮುತ್ಥಿತಾಃ
॥ ೧ ॥

ತೇ ತು ತೂರ್ಣಮುಪವ್ರಜ್ಯ ದೇವಕ್ಯಾ ಗರ್ಭಜನ್ಮ ತತ್।
ಆಚಖ್ಯುರ್ಭೋಜರಾಜಾಯ ಯದುದ್ವಿಗ್ನಃ ಪ್ರತೀಕ್ಷತೇ
॥ ೨ ॥

ಸ ತಲ್ಪಾತ್ತೂರ್ಣಮುತ್ಥಾಯ ಕಾಲೋಽಯಮಿತಿ ವಿಹ್ವಲಃ।
ಸೂತೀಗೃಹಮಗಾತ್ತೂರ್ಣಂ ಪ್ರಸ್ಖಲನ್ಮುಕ್ತಮೂರ್ಧಜಃ
॥ ೩ ॥

ತಮಾಹ ಭ್ರಾತರಂ ದೇವೀ ಕೃಪಣಾ ಕರುಣಂ ಸತೀ।
ಸ್ನುಷೇಯಂ ತವ ಕಲ್ಯಾಣ ಸ್ತ್ರಿಯಂ ಮಾ ಹಂತುಮರ್ಹಸಿ
॥ ೪ ॥

ಬಹವೋ ಹಿಂಸಿತಾ ಭ್ರಾತಃ ಶಿಶವಃ ಪಾವಕೋಪಮಾಃ।
ತ್ವಯಾ ದೈವನಿಸೃಷ್ಟೇನ ಪುತ್ರಿಕೈಕಾ ಪ್ರದೀಯತಾಮ್
॥ ೫ ॥

ನನ್ವಹಂ ತೇ ಹ್ಯವರಜಾ ದೀನಾ ಹತಸುತಾ ಪ್ರಭೋ।
ದಾತುಮರ್ಹಸಿ ಮಂದಾಯಾ ಅಂಗೇಮಾಂ ಚರಮಾಂ ಪ್ರಜಾಮ್
॥ ೬ ॥

ಶ್ರೀಶುಕ ಉವಾಚ

ಉಪಗುಹ್ಯಾತ್ಮಜಾಮೇವಂ ರುದತ್ಯಾ ದೀನದೀನವತ್।
ಯಾಚಿತಸ್ತಾಂ ವಿನಿರ್ಭರ್ತ್ಸ್ಯ ಹಸ್ತಾದಾಚಿಚ್ಛಿದೇ ಖಿಲಃ
॥ ೭ ॥

ತಾಂ ಗೃಹೀತ್ವಾ ಚರಣಯೋರ್ಜಾತಮಾತ್ರಾಂ ಸ್ವಸುಃ ಸುತಾಮ್।
ಅಪೋಥಯಚ್ಛಿಲಾಪೃಷ್ಠೇ ಸ್ವಾರ್ಥೋನ್ಮೂಲಿತಸೌಹೃದಃ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನು ಸೆರೆಮನೆಗೆ ಹಿಂದಿರುಗಿದೊಡನೆಯೇ ಎಲ್ಲ ಹೊರಗಿನ ಮತ್ತು ಒಳಗಿನ ಬಾಗಿಲುಗಳು ಹಿಂದಿನಂತೆಯೇ ಮುಚ್ಚಲ್ಪಟ್ಟವು. ದೇವಕಿಯ ಪಕ್ಕದಲ್ಲಿದ್ದ ನವಜಾತ ಶಿಶುವು ಅಳತೊಡಗಿತು. ಆ ಧ್ವನಿಯನ್ನು ಕೇಳುತ್ತಲೇ ದ್ವಾರಪಾಲರು ಎಚ್ಚರಗೊಂಡರು. ॥ ೧ ॥ ಅವರು ಒಡನೆಯೇ ಭೋಜರಾಜನಾದ ಕಂಸನ ಬಳಿಗೆ ಹೋಗಿ ದೇವಕಿಗೆ ಎಂಟನೆಯ ಶಿಶುವು ಹುಟ್ಟಿರುವ ಸಮಾಚಾರವನ್ನು ತಿಳಿಸಿದರು. ಕಂಸನಾದರೋ ಮಾತನ್ನು ಹೇಳುತ್ತಲೇ ಝಗ್ಗನೆ ಮೇಲೆದ್ದು ಶೀಘ್ರಾತಿಶೀಘ್ರವಾಗಿ ಸೂತಿಕಾಗೃಹದ ಕಡೆಗೆ ಧಾವಿಸಿದನು. ಈ ಬಾರಿಯಲ್ಲಾದರೋ ನನ್ನ ಮೃತ್ಯುವೇ ಹುಟ್ಟಿರುವನು ಎಂದು ಯೋಚಿಸುತ್ತಾ ಕಳವಳಗೊಂಡಿದ್ದನು. ಇದರಿಂದಾಗಿ ತನ್ನ ತಲೆಗೂದಲು ಬಿಚ್ಚಿಕೊಂಡಿದ್ದರೂ ಅವನ ಗಮನಕ್ಕೆ ಬರಲೇ ಇಲ್ಲ. ದಾರಿಯಲ್ಲಿ ಕೆಲವೆಡೆ ಎಡವುತ್ತಾ ಓಡುತ್ತಿದ್ದನು. ॥ ೩ ॥ ಸೆರೆಮನೆಯನ್ನು ಪ್ರವೇಶಿಸುತ್ತಲೇ ಬಹಳ ದುಃಖದಿಂದಲೂ, ಕರುಣೆಯಿಂದಲೂ ದೇವಕೀದೇವಿಯು ಕಂಸನಲ್ಲಿ ಹೇಳಿದಳು – ನನ್ನ ಹಿತೈಷಿಯಾದ ಅಣ್ಣನೇ! ಈ ಹೆಣ್ಣಾದರೋ ನಿನಗೆ ಸೊಸೆಯಾಗಿದ್ದಾಳೆ. ಹೆಣ್ಣುಶಿಶುವು ಹುಟ್ಟಿದೆ. ಆದುದರಿಂದ ಸ್ತ್ರೀಯನ್ನು ಕೊಲ್ಲುವುದು ನಿನಗೆ ಯೋಗ್ಯವಾದುದಲ್ಲ. ॥ ೪ ॥ ಅಣ್ಣಾ! ನೀನು ದೈವವಶಾತ್ ಅಗ್ನಿಯಂತೆ ತೇಜಸ್ವಿಗಳಾದ ನನ್ನ ಹಲವಾರು ಬಾಲಕರನ್ನು ಕೊಂದಿರುವೆ. ಈಗ ಕೇವಲ ಈ ಒಂದು ಕನ್ಯೆಮಾತ್ರ ಉಳಿದಿರುವಳು. ಇದನ್ನಾದರೂ ಕೊಲ್ಲದೆ ನನಗೆ ಕೊಟ್ಟುಬಿಡು. ॥ ೫ ॥ ಅಣ್ಣಾ! ನಾನು ನಿನ್ನ ತಂಗಿಯಲ್ಲವೇ? ನನ್ನ ಅನೇಕ ಮಕ್ಕಳು ಸತ್ತು ಹೋಗಿರುವರು. ಅದಕ್ಕಾಗಿ ನಾನು ಅತ್ಯಂತ ದೀನಳಾಗಿರುವೆನು. ದೈನ್ಯದಿಂದ ಬೇಡಿಕೊಳ್ಳುವೆನು. ಮಂದಭಾಗ್ಯಳಾದ ನನಗೆ ಈ ಕಡೆಯ ಹೆಣ್ಣು ಶಿಶುವನ್ನಾದರೂ ದಯಪಾಲಿಸು. ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಹೆಣ್ಣುಮಗುವನ್ನು ತನ್ನ ಮಡಿಲಲ್ಲಿ ಅಡಗಿಸಿಕೊಂಡು ದೇವಕಿಯು ಅತ್ಯಂತ ದೈನ್ಯದಿಂದ ಅಳುತ್ತಾ ಬೇಡಿಕೊಂಡಳು. ಆದರೆ ಕಂಸನು ಬಹಳ ದುಷ್ಟನಾಗಿದ್ದನು. ಅವನು ದೇವಕಿಯನ್ನು ಗದರಿಸುತ್ತಾ ಅವಳ ಕೈಯಲ್ಲಿದ್ದ ಆ ಕನ್ಯೆಯನ್ನು ಕಸಿದುಕೊಂಡನು. ॥ ೭ ॥ ಕಂಸನು ಮಹಾಸ್ವಾರ್ಥಿಯಾಗಿದ್ದು ಅವನ ಮನಸ್ಸಿನಲ್ಲಿ ಸೌಹಾರ್ದ್ರವೆಂಬುದು ಲವಲೇಶವೂ ಇರಲಿಲ್ಲ. ಆಗತಾನೇ ಹುಟ್ಟಿದ ತನ್ನ ಸೊಸೆಯಾದ ಆ ಹೆಣ್ಣುಮಗುವಿನ ಕಾಲನ್ನು ಹಿಡಿದು ಒಂದು ಬಂಡೆಯ ಮೇಲೆ ಅಪ್ಪಳಿಸಿದನು. ॥ ೮ ॥

ಸಾ ತದ್ಬಾಹ್ವಾತ್ಸಮುತ್ಪತ್ಯ ಸದ್ಯೋ ದೇವ್ಯಂಬರಂ ಗತಾ ।
ಅದೃಶ್ಯತಾನುಜಾ ವಿಷ್ಣೋಃ ಸಾಯುಧಾಷ್ಟಮಹಾಭುಜಾ
॥ ೯ ॥

ದಿವ್ಯಸ್ರಗಂಬರಾಲೇಪರತ್ನಾಭರಣಭೂಷಿತಾ ।
ಧನುಃಶೂಲೇಷುಚರ್ಮಾಸಿಶಂಖಿಚಕ್ರಗದಾಧರಾ
॥ ೧೦ ॥

ಸಿದ್ಧಚಾರಣಗಂಧರ್ವೈರಪ್ಸರಃ ಕಿನ್ನರೋರಗೈಃ ।
ಉಪಾಹೃತೋರುಬಲಿಭಿಃ ಸ್ತೂಯಮಾನೇದಮಬ್ರವೀತ್
॥ ೧೧ ॥

ಕಿಂ ಮಯಾ ಹತಯಾ ಮಂದ ಜಾತಃ ಖಲು ತವಾಂತಕೃತ್ ।
ಯತ್ರ ಕ್ವಾ ಪೂರ್ವಶತ್ರುರ್ಮಾ ಹಿಂಸೀಃ ಕೃಪಣಾನ್ವೃಥಾ
॥ ೧೨ ॥

ಇತಿ ಪ್ರಭಾಷ್ಯ ತಂ ದೇವೀ ಮಾಯಾ ಭಗವತೀ ಭುವಿ ।
ಬಹುನಾಮನಿಕೇತೇಷು ಬಹುನಾಮಾ ಬಭೂವ ಹ
॥ ೧೩ ॥

ತಯಾಭಿಹಿತಮಾಕರ್ಣ್ಯ ಕಂಸಃ ಪರಮವಿಸ್ಮಿತಃ ।
ದೇವಕೀಂ ವಸುದೇವಂ ಚ ವಿಮುಚ್ಯ ಪ್ರಶ್ರಿತೋಽಬ್ರವೀತ್
॥ ೧೪ ॥

ಅಹೋ ಭಗಿನ್ಯಹೋ ಭಾಮ ಮಯಾ ವಾಂ ಬತ ಪಾಪ್ಮನಾ ।
ಪುರುಷಾದ ಇವಾಪತ್ಯಂ ಬಹವೋ ಹಿಂಸಿತಾಃ ಸುತಾಃ
॥ ೧೫ ॥

ಸ ತ್ವಹಂ ತ್ಯಕ್ತಕಾರುಣ್ಯಸ್ತ್ಯಕ್ತಜ್ಞಾತಿಸುಹೃತ್ಖಲಃ ।
ಕಾಂಲ್ಲೋಕಾನ್ವೈ ಗಮಿಷ್ಯಾಮಿ ಬ್ರಹ್ಮಹೇವ ಮೃತಃ ಶ್ವಸನ್
॥ ೧೬ ॥

ದೈವಮಪ್ಯನೃತಂ ವಕ್ತಿ ನ ಮರ್ತ್ಯಾ ಏವ ಕೇವಲಮ್ ।
ಯದ್ವಿಶ್ರಂಭಾದಹಂ ಪಾಪಃ ಸ್ವಸುರ್ನಿಹತವಾನ್ ಶಿಶೂನ್
॥ ೧೭ ॥

ಮಾ ಸೋಚತಂ ಮಹಾಭಾಗಾವಾತ್ಮಜಾನ್ಸ್ವಕೃತಂಭುಜಃ ।
ಜನೋಽಯೋ ನ ಸದೈಕತ್ರ ದೈವಾಧೀನಾಸ್ತದಾಸತೇ
॥ ೧೮ ॥

ಆದರೆ ಶ್ರೀಕೃಷ್ಣನ ತಂಗಿಯಾದ ಆ ಹೆಣ್ಣು ಸಾಮಾನ್ಯ ಮಗುವಾಗಿರದೆ ದೇವಿಯೇ ಆಗಿದ್ದಳು. ಅವನ ಕೈಯಿಂದ ಜಾರಿ ಒಡನೆಯೇ ಆಕಾಶಕ್ಕೆ ನೆಗೆದು ಅಷ್ಟಭುಜೆಯಾಗಿ ಎಂಟು ಕೈಗಳಲ್ಲಿಯೂ ಆಯುಧಗಳನ್ನು ಧರಿಸಿ ಆಗಸದಲ್ಲಿ ನಿಂತಿದ್ದಳು. ॥ ೯ ॥ ಆಕೆಯು ದಿವ್ಯ ಮಾಲೆಗಳಿಂದಲೂ, ವಸ್ತ್ರ, ಚಂದನ, ಮಣಿಮಯ ಆಭೂಷಣಗಳಿಂದ ವಿಭೂಷಿತಳಾಗಿದ್ದಳು. ಅವಳ ಕೈಗಳಲ್ಲಿ ಧನುಷ್ಯ, ತ್ರಿಶೂಲ, ಬಾಣ, ಗುರಾಣಿ, ಖಡ್ಗ, ಶಂಖ, ಚಕ್ರ, ಗದೆ ಇವೇ ಎಂಟು ಆಯುಧಗಳಿದ್ದವು. ॥ ೧೦ ॥ ಸಿದ್ಧರು, ಚಾರಣರು, ಗಂಧರ್ವರು, ಅಪ್ಸರೆಯರು, ಕಿನ್ನರರು, ನಾಗಗಳೂ ಅನೇಕ ಉಪಾಯನಗಳನ್ನು ಆ ದೇವಿಗೆ ಅರ್ಪಿಸಿ ಸ್ತೋತ್ರ ಮಾಡುತ್ತಿದ್ದರು. ಆ ಸಮಯದಲ್ಲಿ ವಿಷ್ಣುಮಾಯಾದೇವಿಯು ಕಂಸನಿಗೆ ಹೇಳಿದಳು – ॥ ೧೧ ॥ ಎಲವೋ ಮೂರ್ಖನೇ ! ನನ್ನನ್ನು ಕೊಲ್ಲುವುದರಿಂದ ನಿನಗೇನು ಸಿಕ್ಕೀತು ? ನಿನ್ನ ಪೂರ್ವಜನ್ಮ ಶತ್ರುವು ನಿನ್ನನ್ನು ಕೊಲ್ಲಲಿಕ್ಕಾಗಿ ಎಲ್ಲಿಯೋ ಒಂದೆಡೆ ಹುಟ್ಟಿ ಬೆಳೆಯುತ್ತಿದ್ದಾನೆ. ಈಗ ನೀನು ವ್ಯರ್ಥವಾಗಿ ನಿರ್ದೋಷಿಗಳಾದ ಹಸುಳೆಗಳನ್ನು ಕೊಲ್ಲಬೇಡ. ॥ ೧೨ ॥ ಕಂಸನಿಗೆ ಹೀಗೆ ಹೇಳಿ ಭಗವತಿ ಯೋಗಮಾಯೆಯು ಅಲ್ಲೇ ಅಂತರ್ಧಾನಗೊಂಡಳು ಹಾಗೂ ಭೂಮಂಡಲದಲ್ಲಿ ಅನೇಕ ಸ್ಥಾನಗಳಲ್ಲಿ ಬೇರೆ-ಬೇರೆ ಹೆಸರುಗಳಿಂದ ಪ್ರಸಿದ್ಧಳಾದಳು. ॥ ೧೩ ॥

ದೇವಿಯ ಈ ಮಾತನ್ನು ಕೇಳಿ ಕಂಸನಿಗೆ ಮಹದಾಶ್ಚರ್ಯವಾಯಿತು. ಆಗಲೇ ಅವನು ದೇವಕಿ ಮತ್ತು ವಸುದೇವ ಇವರನ್ನು ಸೆರೆಮನೆಯಿಂದ ಬಿಡುಗಡೆಮಾಡಿ ವಿನಯಪೂರ್ವಕವಾಗಿ ಹೀಗೆಂದನು – ॥ ೧೪ ॥ ನನ್ನ ಪ್ರಿಯತಂಗಿಯೇ ಮತ್ತು ಭಾವನೇ ! ಅಯ್ಯೋ ! ನಾನು ಮಹಾಪಾಪಿಯಾಗಿದ್ದೇನೆ. ರಾಕ್ಷಸನು ತನ್ನ ಮಕ್ಕಳನ್ನೇ ಕೊಲ್ಲುವಂತೆ ನಾನು ನಿನ್ನ ಅನೇಕ ಮಕ್ಕಳನ್ನು ಕೊಂದು ಹಾಕಿದೆನು. ಇದರಿಂದ ನನಗೆ ಬಹಳ ದುಃಖವಾಗಿದೆ.* ॥ ೧೫ ॥ ಕರುಣೆ ಎಂಬುದಕ್ಕೆ ನನ್ನ ಹೃದಯದಲ್ಲಿ ಸ್ಥಾನವೇ ಇಲ್ಲದಾಗಿತ್ತು. ನಾನು ನನ್ನ ಬಂಧು-ಬಾಂಧವರನ್ನು, ಹಿತೈಷಿಗಳನ್ನೂ ತ್ಯಜಿಸಿಬಿಟ್ಟೆ. ನನಗೆ ಯಾವ ನರಕವು ಕಾದಿದೆಯೋ ತಿಳಿಯದು. ನಿಜವಾಗಿಯಾದರೋ ನಾನು ಬ್ರಹ್ಮಘಾತಿಯಂತೆ ಜೀವಿಸಿದ್ದರೂ ಸತ್ತಂತೆಯೇ ಸರಿ. ॥ ೧೬ ॥ ಕೇವಲ ಮನುಷ್ಯನೇ ಸುಳ್ಳುಹೇಳುವುದಲ್ಲ, ವಿಧಾತನೂ ಸುಳ್ಳುಹೇಳುತ್ತಿರುವನಲ್ಲ! ಅದನ್ನು ನಂಬಿ ನಾನು ನನ್ನ ತಂಗಿಯ ಮಕ್ಕಳನ್ನು ಕೊಂದುಹಾಕಿದೆನಲ್ಲ! ಅಯ್ಯೋ ! ನಾನು ಎಂತಹ ಪಾಪಿಯಾಗಿರುವೆನು ! ॥ ೧೭ ॥ ನೀವಿಬ್ಬರೂ ಮಹಾತ್ಮರಾಗಿರುವಿರಿ. ನಿಮ್ಮ ಪುತ್ರರಿಗಾಗಿ ಶೋಕಿಸಬೇಡಿರಿ. ಅವರಿಗಾದರೋ ತಮ್ಮ ಕರ್ಮದ ಫಲವೇ ದೊರೆತಿದೆ. ಎಲ್ಲ ಪ್ರಾಣಿಗಳು ಪ್ರಾರಬ್ಧಕ್ಕೆ ಅಧೀನರು. ಅದರಿಂದ ಅವರು ಯಾವಾಗಲೂ ಜೊತೆಯಾಗಿ ಇರಲಾರರು. ॥ ೧೮ ॥

---

* ಪೂರ್ವ ಗರ್ಭದಲ್ಲಿ ಭಗವಂತನು ಪಾಪಿಸಿದನೋ, ಯಾರಿಗೆ ಭಗವದ್ದರ್ಶನವಾಗಿದೆಯೋ ಅಂತಹ ವಸುದೇವ-ದೇವಕಿಯರ ದರ್ಶನದ ಫಲವಾಗಿಯೇ ಕಂಸನ ಹೃದಯದಲ್ಲಿ ವಿನಯ, ವಿಚಾರ, ಉದಾರತೆ ಮುಂತಾದ ಸದ್ಗುಣಗಳ ಉದಯವಾಯಿತು. ಆದರೆ ಅವರ ಮುಂದಿರುವ ತನಕ ಈ ಸದ್ಗುಣಗಳು ಇದ್ದವು. ದುಷ್ಟಮಂತ್ರಿಗಳ ಮಧ್ಯದಲ್ಲಿ ಹೋಗುತ್ತಲೇ ಪುನಃ ಹೇಗಿದ್ದನೋ ಹಾಗೆಯೇ ಆದನು.

ಭುವಿ ಭೌಮಾನಿ ಭೂತಾನಿ ಯಥಾ ಯಾಂತ್ಯಪಯಾಂತಿ ಚ ।
ನಾಯಮಾತ್ಮಾ ತಥೈತೇಷು ವಿಪರ್ಯೇತಿ ಯಥೈವ ಭೂಃ
॥ ೧೯ ॥

ಮಣ್ಣಿನಿಂದ ಹಲವಾರು ಬಗೆಯ ಗಡಿಗೆಯೇ ಮುಂತಾದ ಪದಾರ್ಥಗಳು ಆಗುತ್ತವೆ, ನಾಶವಾಗುತ್ತವೆ. ಆದರೆ ಮಣ್ಣಿನಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಹಾಗೆಯೇ ಶರೀರಗಳು ಹುಟ್ಟುತ್ತವೆ, ಸಾಯುತ್ತವೆ. ಆದರೆ ಆತ್ಮನಲ್ಲಿ ಇದರ ಯಾವ ಪರಿಣಾಮವೂ ಉಂಟಾಗುವುದಿಲ್ಲ ॥ ೧೯ ॥ ಈ ತತ್ತ್ವವನ್ನು ತಿಳಿಯದ ಜನರು ಈ ಅನಾತ್ಮ ಶರೀರವನ್ನೇ ಆತ್ಮಾ ಎಂದು ತಿಳಿದು ಬಿಡುತ್ತಾರೆ. ಇದೇ ವಿಪರೀತ ಬುದ್ಧಿ ಅಥವಾ ಅಜ್ಞಾನವಾಗಿದೆ. ಇದರಿಂದಲೇ ಹುಟ್ಟು-ಸಾವುಗಳಾಗುತ್ತಾ ಇರುತ್ತವೆ. ಈ ಅಜ್ಞಾನವು ಅಳಿಯುವವರೆಗೆ ಸುಖ-ದುಃಖರೂಪವಾದ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ ॥ ೨೦ ॥ ನನ್ನ ಪ್ರಿಯ ಸೋದರೀ! ನಾನು ನಿನ್ನ ಪುತ್ರರನ್ನು ಕೊಂದುಹಾಕಿದ್ದರೂ ನೀನು ಅವರಿಗಾಗಿ ಶೋಕಿಸಬಾರದು. ಏಕೆಂದರೆ, ಎಲ್ಲ ಪ್ರಾಣಿಗಳೂ ಪರವಶರಾಗಿ ತಮ್ಮ ಕರ್ಮಗಳ ಫಲವನ್ನು ಭೋಗಿಸಬೇಕಾಗುತ್ತದೆ. ॥ ೨೧ ॥ ತನ್ನ ಸ್ವರೂಪವನ್ನು ತಿಳಿದುಕೊಳ್ಳದ ಕಾರಣ ಜೀವನು 'ನಾನು ಕೊಲ್ಲುವವನು ಮತ್ತು ಕೊಲ್ಲಲ್ಪಡುವವನು' ಎಂದು ತಿಳಿಯುತ್ತಿರುವವರೆಗೆ ಶರೀರದ ಹುಟ್ಟು-ಸಾವುಗಳ ಅಭಿಮಾನವನ್ನಿಟ್ಟುಕೊಂಡ ಅಜ್ಞಾನಿಯು ಬಾಧ್ಯ-ಬಾಧಕ ಭಾವವನ್ನು ಪಡೆಯುತ್ತಾನೆ. ಅರ್ಥಾತ್ – ಅವನು ಇತರರಿಗೆ ದುಃಖ ಕೊಡುತ್ತಾನೆ ಮತ್ತು ದುಃಖವನ್ನು ಅನುಭವಿಸುತ್ತಾನೆ. ॥ ೨೨ ॥ ನನ್ನ ಈ ದುಷ್ಟತೆಯನ್ನು ನೀವಿಬ್ಬರೂ ಕ್ಷಮಿಸಿಬಿಡಿರಿ. ಏಕೆಂದರೆ, ನೀವುಗಳು ಸಾಧುಸ್ವಭಾವದವರಾಗಿದ್ದು ದೀನರ ರಕ್ಷಕರಾಗಿದ್ದೀರಿ. ಹೀಗೆ ಹೇಳಿ ಕಂಸನು ತನ್ನ ತಂಗಿಯಾದ ದೇವಕಿಯ ಮತ್ತು ವಸುದೇವನ ಚರಣಗಳನ್ನು ಭದ್ರವಾಗಿ ಹಿಡಿದುಕೊಂಡು, ಕಣ್ಣೀರು ಸುರಿಸಿದನು. ॥ ೨೩. ॥ ಆನಂತರ ಅವನು ಯೋಗಮಾಯೆಯ ಮಾತಿನಮೇಲೆ ವಿಶ್ವಾಸವಿಟ್ಟು ವಸುದೇವ-ದೇವಕಿಯರನ್ನು ಬಂಧನಮುಕ್ತರಾಗಿಸಿ ಅನೇಕ ರೀತಿಯಿಂದ ಅವರ ಕುರಿತು ತನ್ನ ಪ್ರೀತಿಯನ್ನು ಪ್ರಕಟಪಡಿಸತೊಡಗಿದನು. ॥ ೨೪ ॥ ಅಣ್ಣನಾದ ಕಂಸನು ಪಶ್ಚಾತ್ತಾಪಪಡುತ್ತಿರುವುದನ್ನು ನೋಡಿದ ದೇವಕಿಯು ಅವನನ್ನು ಕ್ಷಮಿಸಿಬಿಟ್ಟಳು. ಆಕೆಯು ಅವನ ಮೊದಲಿನ ಅಪರಾಧಗಳನ್ನು ಮರೆತುಬಿಟ್ಟಳು. ವಸುದೇವನು ನಗುತ್ತಾ ಕಂಸನಲ್ಲಿ ಹೇಳಿದನು – ॥ ೨೫ ॥ ಮಹಾಭಾಗನಾದ ಕಂಸನೇ! ನೀನು ಹೇಳಿರುವುದು ಸರಿಯಾಗಿಯೇ ಇದೆ. ಜೀವನು ಅಜ್ಞಾನದಿಂದಲೇ ಶರೀರಾದಿಗಳನ್ನೂ 'ನಾನೆಂದು' ತಿಳಿದು ಕೊಂಡಿರುವನು. ಇದರಿಂದಲೇ ಸ್ವ-ಪರ ಭೇದಗಳುಂಟಾಗುತ್ತವೆ. ॥ ೨೬ ॥ ಈ ಭೇದ ದೃಷ್ಟಿ ಉಂಟಾದಾಗಲೇ ಜೀವರು ಶೋಕ, ಹರ್ಷ, ಭಯ, ದ್ವೇಷ, ಲೋಭ, ಮೋಹ, ಮದ ಇವುಗಳಿಂದ ಕುರುಡಾಗಿ ಹೋಗುತ್ತಾರೆ. ಹೀಗಾದಾಗ ಎಲ್ಲರ ಪ್ರೇರಕನಾದ ಭಗವಂತನೇ ಒಂದು ಭಾವದಿಂದ ಇನ್ನೊಂದನ್ನೂ, ಒಂದು ವಸ್ತುವಿನಿಂದ ಇನ್ನೊಂದು ವಸ್ತುವನ್ನು ನಾಶಮಾಡಿಸುತ್ತಾ ಇದ್ದಾನೆ ಎಂಬುದು ಅವರು ಅರಿಯುವುದೇ ಇಲ್ಲ ॥ ೨೭ ॥

ಯಥಾನೇವಂವಿದೋ ಭೇದೋ ಯತ ಆತ್ಮವಿಪರ್ಯಯಃ ।
ದೇಹಯೋಗವಿಯೋಗೌ ಚ ಸಂಸೃತಿರ್ನ ನಿವರ್ತತೇ
॥ ೨೦ ॥

ತಸ್ಮಾದ್ಭದ್ರೇ ಸ್ವತನಯಾನ್ಮಯಾ ವ್ಯಾಪಾದಿತಾನಪಿ ।
ಮಾನುಶೋಚ ಯತಃ ಸರ್ವಃ ಸ್ವಕೃತಂ ಭುಂಕ್ತೇ ಹರ್ವಶಃ
॥ ೨೧ ॥

ಯಾವದ್ಭತೋಽಸ್ಮಿ ಹಂತಾಸ್ಮೀತ್ಯಾತ್ಮಾನಂ ಮನ್ಯತೇಽಸ್ವದೃಕ್ ।
ತಾವತ್ತದಭಿಮಾನ್ಯಬ್ಧೋ ಬಾಧ್ಯಬಾಧಕತಾಮಿಯಾತ್
॥ ೨೨ ॥

ಕ್ಷಮಧ್ವಂ ಮಮ ದೌರಾತ್ಮ್ಯಂ ಸಾಧವೋ ದೀನವತ್ಸಲಾಃ ।
ಇತ್ಯುಕ್ತ್ವಾಶ್ರುಮುಖಃ ಪಾದೌ ಶ್ಯಾಲಃ ಸ್ವಸ್ರೋರಥಾಗ್ರಹೀತ್
॥ ೨೩ ॥

ಮೋಚಯಾಮಾಸ ನಿಗಡಾದ್ವಿಶ್ರಬ್ಧಃ ಕನ್ಯಕಾಗಿರಾ ।
ದೇವಕೀಂ ವಸುದೇವಂ ಚ ದರ್ಶಯನ್ನಾತ್ಮಸೌಹೃದಮ್
॥ ೨೪ ॥

ಭ್ರಾತುಃ ಸಮನುತಪ್ತಸ್ಯ ಕ್ಷಾಂತ್ವಾ ರೋಷಂ ಚ ದೇವಕೀ ।
ವ್ಯಸೃಜದ್ವಸುದೇವಶ್ಚ ಪ್ರಹಸ್ಯ ತಮುವಾಚ ಹ
॥ ೨೫ ॥

ಏವಮೇತನ್ಮಹಾಭಾಗ ಯಥಾ ವದಸಿ ದೇಹಿನಾಮ್ ।
ಅಜ್ಞಾನಪ್ರಭವಾಹಂಧೀಃ ಸ್ವಪರೇತಿ ಭಿದಾ ಯತಃ
॥ ೨೬ ॥

ಶೋಕಹರ್ಷಭಯದ್ವೇಷಲೋಭಮೋಹಮದಾನ್ವಿತಾಃ ।
ಮಿಥೋ ಘ್ನಂತಂ ನ ಪಶ್ಯಂತಿ ಭಾವೈರ್ಭಾವಂ ಪೃಥಗ್ದೃಶಃ
॥ ೨೭ ॥

ಶ್ರೀಶುಕ ಉವಾಚ

ಕಂಸ ಏವಂ ಪ್ರಸನ್ನಾಭ್ಯಾಂ ವಿಶುದ್ಧಂ ಪ್ರತಿಭಾಷಿತಃ ।
ದೇವಕೀವಸುದೇವಾಭ್ಯಾಮನುಜ್ಞಾಪ್ತೋಽವಿಶದ್ಗೃಹಮ್
॥ ೨೮ ॥

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ಕಂಸ ಆಹೂಯ ಮಂತ್ರಿಣಃ ।
ತೇಭ್ಯ ಆಚಷ್ಟ ತತ್ಸರ್ವಂ ಯದುಕ್ತಂ ಯೋಗಮಾಯಯಾ
॥ ೨೯ ॥

ಆಕರ್ಣ್ಯ ಭರ್ತುರ್ಗದಿತಂ ತಮೂಚುರ್ದೇವಶತ್ರವಃ ।
ದೇವಾನ್ಪ್ರತಿ ಕೃತಾಮರ್ಷಾ ದೈತೇಯಾ ನಾತಿಕೋವಿದಾಃ
॥ ೩೦ ॥

ಏವಂ ಚೇತ್ತರ್ಹಿ ಭೋಜೇಂದ್ರ ಪುರಗ್ರಾಮವ್ರಜಾದಿಷು ।
ಅನಿರ್ದಶಾನ್ನಿರ್ದಶಾಂಶ್ಚ ಹನಿಷ್ಯಾಮೋಽದ್ಯ ವೈ ಶಿಶೂನ್
॥ ೩೧ ॥

ಕಮುದ್ಯಮೈಃ ಕರಿಷ್ಯಂತಿ ದೇವಾಃ ಸಮರಭೀರವಃ ।
ನಿತ್ಯಮುದ್ವಿಗ್ನಮನಸೋ ಜ್ಯಾಘೋಷೈರ್ಧನುಷಸ್ತವ
॥ ೩೨ ॥

ಅಸ್ಯತಸ್ತೇ ಶರವ್ರಾತೈರ್ಹನ್ಯಮಾನಾಃ ಸಮಂತತಃ ।
ಜಿಜೀವಿಷವ ಉತ್ಸೃಜ್ಯ ಪಲಾಯನಪರಾ ಯಯುಃ
॥ ೩೩ ॥

ಕೇಚಿತ್ಪ್ರಾಂಜಲಯೋ ದೀನಾ ನ್ಯಸ್ತಶಸ್ತ್ರಾ ದಿವೌಕಸಃ ।
ಮುಕ್ತಕಚ್ಛಶಿಖಾಃ ಕೇಚಿದ್ಭೀತಾಃ ಸ್ಮ ಇತಿ ವಾದಿನಃ
॥ ೩೪ ॥

ನ ತ್ವಂ ವಿಸೃಷ್ಟಶಸ್ತ್ರಾಸ್ತ್ರಾನ್ವಿರಥಾನ್ಭಯಸಂವೃತಾನ್ ।
ಹಂಸ್ಯನ್ಯಾಸಕ್ತವಿಮುಖಾನ್ಭಗ್ನಚಾಪಾನಯುಧ್ಯತಃ
॥ ೩೫ ॥

ಕಿಂ ಕ್ಷೇಮಶೂರೈರ್ವಿಬುಧೈರಸಂಯುಗವಿಕತ್ಥನೈಃ ।
ವಾಚೋಽಜುಷಾ ಕಿಂ ಹರಿಣಾ ಶಂಭುನಾ ವಾ ವನೌಕಸಾ ।
ಕಿಮಿಂದ್ರೇಣಾಲ್ಪವೀರ್ಯೇಣ ಬ್ರಹ್ಮಣಾ ವಾ ತಪಸ್ಯತಾ
॥ ೩೬ ॥

ತಥಾಪಿ ದೇವಾಃ ಸಾಪತ್ನ್ಯಾನ್ನೋಪೇಕ್ಷ್ಯಾ ಇತಿ ಮನ್ಮಹೇ ।
ತತ್ತನ್ಮೂಲಖನನೇ ನಿಯುಂಕ್ಷ್ವಾಸ್ಮಾನನುವ್ರತಾನ್
॥ ೩೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ವಸುದೇವ-ದೇವಕಿಯರು ಹೀಗೆ ಪ್ರಸನ್ನರಾಗಿ ನಿಷ್ಕಪಟಭಾವದಿಂದ ಕಂಸನೊಂದಿಗೆ ಮಾತನಾಡಿ, ಅವನಿಂದ ಬೀಳ್ಕೊಂಡು ಅವರು ತಮ್ಮ ಆರಮನೆಗೆ ಹೊರಟುಹೋದರು. ॥ ೨೮ ॥ ಆ ರಾತ್ರಿಯು ಕಳೆಯುತ್ತಲೇ ಕಂಸನು ತನ್ನ ಮಂತ್ರಿಗಳನ್ನು ಕರೆಸಿ ಯೋಗಮಾಯೆಯು ಹೇಳಿದುದೆಲ್ಲವನ್ನು ಅವರಿಗೆ ತಿಳಿಸಿದನು. ॥ ೨೯ ॥ ಕಂಸನ ಮಂತ್ರಿಗಳು ಪೂರ್ಣವಾಗಿ ನೀತಿ ನಿಪುಣರಾಗಿರಲಿಲ್ಲ. ದೈತ್ಯರಾದ್ದರಿಂದ ಸ್ವಭಾವತಃ ಅವರು ದೇವತೆಗಳ ಕುರಿತು ಶತ್ರುಭಾವವನ್ನು ಇರಿಸಿಕೊಂಡಿದ್ದರು. ಒಡೆಯನಾದ ಕಂಸನ ಮಾತನ್ನು ಕೇಳಿ ಅವರು ದೇವತೆಗಳ ಬಗೆಗೆ ಇನ್ನೂ ರೊಚ್ಚಿಗೆದ್ದು ಕಂಸನಲ್ಲಿ ಹೇಳತೊಡಗಿದರು. ॥ ೩೦ ॥ ಭೋಜರಾಜನೇ ! ನಿನ್ನ ಶತ್ರುವು ಎಲ್ಲಿಯೋ ಹುಟ್ಟಿ ಬೆಳೆಯುತ್ತಿರುವನೆಂದಾದರೆ ನಾವು ಈಗಲೇ ದೊಡ್ಡ-ದೊಡ್ಡ ಪಟ್ಟಣಗಳಲ್ಲಿ ಸಣ್ಣ-ಪುಟ್ಟ ಗ್ರಾಮಗಳಲ್ಲಿ, ಗೊಲ್ಲರ ದೊಡ್ಡಿಗಳಲ್ಲಿ ಮತ್ತು ಇತರ ಸ್ಥಾನಗಳಲ್ಲಿ ಎಷ್ಟು ಮಕ್ಕಳು ಹುಟ್ಟಿರುವರೋ, ಅವು ಹತ್ತುದಿನಗಳಿಗಿಂತ ಹೆಚ್ಚಿನವರಿರಲಿ, ಕಡಿಮೆಯವರಾಗಿರಲಿ ಎಲ್ಲರನ್ನೂ ಇಂದೇ ಕೊಂದುಬಿಡುವೆವು. ॥ ೩೧ ॥ ಯುದ್ಧಭೀರುಗಳಾದ ದೇವತೆಗಳು ಯುದ್ಧೋದ್ಯೋಗವೈದು ಏನು ತಾನೇ ಮಾಡಿಯಾರು ? ಅವರಾದರೋ ನಿನ್ನ ಧನುಷ್ಟಂಕಾರ ಕೇಳಿಯೇ ಸದಾಕಾಲ ಹೆದರಿರುತ್ತಾರೆ. ॥ ೩೨ ॥ ರಣರಂಗದಲ್ಲಿ ನೀನು ಏಟಿನ ಮೇಲೆ ಏಟು ಕೊಡಲು ತೊಡಗಿದಾಗ, ಬಾಣಗಳ ಮಳೆಯಿಂದ ಗಾಯಗೊಂಡು ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಸಮರಾಂಗಣವನ್ನು ಬಿಟ್ಟು ದೇವತೆಗಳು ಪಲಾಯನ-ಪರಾಯಣರಾಗಿ ಕಂಡ-ಕಂಡಲ್ಲಿಗೆ ಓಡಿಹೋಗುತ್ತಾರೆ. ॥ ೩೩ ॥ ಕೆಲವು ದೇವತೆಗಳಾದರೋ ತಮ್ಮ ಅಸ್ತ್ರ-ಶಸ್ತ್ರಗಳನ್ನು ಚೆಲ್ಲಿ, ಕೈಜೋಡಿಸಿಕೊಂಡು ನಿನ್ನ ಮುಂದೆ ದೈನ್ಯವನ್ನು ಪ್ರಕಟಿಸುವರು. ಇನ್ನೂ ಕೆಲವರು ತಮ್ಮ ಜುಟ್ಟನ್ನೂ, ಕಚ್ಚೆಯನ್ನೂ ಬಿಚ್ಚಿಕೊಂಡು ನಿನಗೆ ಶರಣಾಗಿ 'ನಾವು ಭಯಗೊಂಡಿದ್ದೇವೆ, ನಮ್ಮನ್ನು ರಕ್ಷಿಸು' ಎಂದು ಹೇಳುತ್ತಾರೆ. ॥ ೩೪ ॥ ಅಸ್ತ್ರ-ಶಸ್ತ್ರಗಳನ್ನು ಮರೆತವರನ್ನು, ರಥ ಮುರಿದು ಹೋದವರನ್ನು, ಹೆದರಿದವರನ್ನು, ಯುದ್ಧವನ್ನು ಬಿಟ್ಟು ಅನ್ಯಮನಸ್ಕರಾದವರನ್ನು, ಧನುಸ್ಸು ತುಂಡಾದವರನ್ನು, ಯುದ್ಧದಿಂದ ಪರಾಙ್ಮುಖರಾದವರನ್ನು ಇಂತಹ ಶತ್ರುಗಳನ್ನು ಕೂಡ ನೀನು ಕೊಲ್ಲುವುದಿಲ್ಲ. ॥ ೩೫ ॥ ಯಾವುದೇ ಜಗಳ-ಕಾಳಗವಿಲ್ಲದ ಕಡೆಯಲ್ಲೇ ಆ ದೇವತೆಗಳು ವೀರರೆನಿಸಿಕೊಳ್ಳುವರು. ರಣಭೂಮಿಯಿಂದ ಹೊರಗೆ ನಾವೇ ವೀರರೆಂದು ಬಡಾಯಿ ಕೊಚ್ಚಿಕೊಳ್ಳುವರು. ಅವರಿಂದಾಗಲೀ, ಏಕಾಂತವಾಸೀ ವಿಷ್ಣುವಿನಿಂದಾಗಲೀ, ವನವಾಸೀ ಶಂಕರನಿಂದಾಗಲೀ, ಅಲ್ಪವೀರ್ಯನಾದ ಇಂದ್ರನಿಂದಾಗಲೀ, ತಪಸ್ವೀ ಬ್ರಹ್ಮನಿಂದಾಗಲೀ ನಮಗೆ ಯಾವ ಭಯವು ಇರಬಲ್ಲದು ? ॥ ೩೬ ॥ ಹೀಗಿದ್ದರೂ ದೇವತೆಗಳನ್ನು ಉಪೇಕ್ಷಿಸಬಾರದು ಎಂಬುದೇ ನಮ್ಮ ಅಭಿಪ್ರಾಯವು. ಏಕೆಂದರೆ, ಅವರು ಶತ್ರುಗಳೇ ಅಲ್ಲವೇ ? ಅದಕ್ಕಾಗಿ ಅವರ ಬೇರನ್ನೇ ಕಿತ್ತೆಸೆಯಲು ನಮ್ಮಂತಹ ವಿಶ್ವಾಸಪಾತ್ರ ಸೇವಕರನ್ನು ನಿಯುಕ್ತಗೊಳಿಸು. ॥ ೩೭ ॥

ಯಥಾऽऽಮಯೋऽಂಗೇ ಸಮುಪೇಕ್ಷಿತೋ ನೃಭಿ-
ರ್ನ ಶಕ್ಯತೇ ರೂಢಪದಶ್ಚಿಕಿತ್ಸಿತುಮ್ ।
ಯಥೇಂದ್ರಿಯಗ್ರಾಮ ಉಪೇಕ್ಷಿತಸ್ತಥಾ
ರಿಪುರ್ಮಹಾನ್ಬದ್ಧಬಲೋ ನ ಚಾಲ್ಯತೇ ॥ ೩೮ ॥

ಮನುಷ್ಯನ ಶರೀರದಲ್ಲಿ ರೋಗವು ಉಂಟಾದಾಗ, ಅದನ್ನು ಉಪೇಕ್ಷಮಾಡಿ ಔಷಧೋಪಚಾರವನ್ನು ಮಾಡದಿದ್ದಾಗ ರೋಗವು ಬೇರೂರುವುದು. ಮತ್ತೆ ಅದು ಗುಣಪಡಿಸಲು ಅಸಾಧ್ಯವಾಗುವಂತೆಯೇ ಅಥವಾ ಇಂದ್ರಿಯಗಳನ್ನು ಉಪೇಕ್ಷಿಸಿದಾಗ ಅವುಗಳ ದಮನ ಅಸಂಭವವಾಗುವಂತೆಯೇ, ಮೊದಲಿಗೆ ಶತ್ರುವನ್ನು ಉಪೇಕ್ಷಮಾಡಿ, ಅವನು ತಳವೂರಿದರೆ ಮತ್ತೆ ಅವನನ್ನು ಸೋಲಿಸುವುದು ಕಷ್ಟವಾಗುತ್ತದೆ. ॥ ೩೮ ॥

ಮೂಲಂ ಹಿ ವಿಷ್ಣುರ್ದೇವಾನಾಂ ಯತ್ರ ಧರ್ಮಃ ಸನಾತನಃ ।
ತಸ್ಯ ಚ ಬ್ರಹ್ಮ ಗೋವಿಪ್ರಾಸ್ತಪೋಯಜ್ಞಾಃ ಸದಕ್ಷಿಣಾಃ
॥ ೩೯ ॥

ದೇವತೆಗಳ ಮೂಲ (ಬೇರು)ವು ಮಹಾವಿಷ್ಣುವೇ ಆಗಿದ್ದು, ಅವನು ಸನಾತನಧರ್ಮವಿರುವಲ್ಲಿ ಇರುತ್ತಾನೆ. ಸನಾತನಧರ್ಮದ ಬೇರು-ವೇದಗಳು, ಗೋವುಗಳು, ಬ್ರಾಹ್ಮಣರು, ತಪಸ್ಸು ಮತ್ತು ದಕ್ಷಿಣೆಯಿಂದ ಕೂಡಿದ ಯಜ್ಞಗಳಾಗಿವೆ. ॥ ೩೯ ॥

ತಸ್ಮಾತ್ತ್ವರ್ಮಾತ್ಮನಾ ರಾಜನ್ ಬ್ರಹ್ಮಣ್ಯಾನ್ ಬ್ರಹ್ಮವಾದಿನಃ ।
ತಪಸ್ವಿನೋ ಯಜ್ಞಶೀಲಾನ್ಗಾಶ್ಚ ಹನ್ಮೋ ಹವಿರ್ಮಘಾಃ
॥ ೪೦ ॥

ಅದಕ್ಕಾಗಿ ಭೋಜರಾಜನೇ! ವೇದವಾದಿಗಳಾದ ಬ್ರಾಹ್ಮಣರನ್ನು, ತಪಸ್ವಿಗಳನ್ನು ಯಾಜ್ಞಿಕರನ್ನು ಮತ್ತು ಯಜ್ಞಕ್ಕಾಗಿ ಘೃತವೇ ಮುಂತಾದ ಹವಿಷ್ಯ ಪದಾರ್ಥಗಳನ್ನು ಕೊಡುವ ಗೋವುಗಳನ್ನು ನಾವುಗಳು ಸಮೂಲವಾಗಿ ನಾಶ ಮಾಡಿಬಿಡುತ್ತೇವೆ. ॥ ೪೦ ॥

ವಿಪ್ರಾ ಗಾವಶ್ಚ ವೇದಾಶ್ಚ ತಪಃ ಸತ್ಯಂ ದಮಃ ಶಮಃ ।
ಶ್ರದ್ಧಾ ದಯಾ ತಿತಿಕ್ಷಾ ಚ ಕ್ರತವಶ್ಚ ಹರೇಸ್ತನೂಃ
॥ ೪೧ ॥

ಬ್ರಾಹ್ಮಣರು, ಗೋವುಗಳು, ವೇದಗಳು, ತಪಸ್ಸು ಸತ್ಯ, ಇಂದ್ರಿಯದಮನ ಮನೋನಿಗ್ರಹ, ಶ್ರದ್ಧೆ ದಯೆ, ತಿತಿಕ್ಷೆ ಮತ್ತು ಯಜ್ಞಗಳು ಇವು ವಿಷ್ಣುವಿನ ಶರೀರವಾಗಿವೆ. ॥ ೪೧ ॥

ಸ ಹಿ ಸರ್ವಸುರಾಧ್ಯಕ್ಷೋ ಹ್ಯಸುರದ್ವಿಡ್ಗುಹಾಶಯಃ ।
ತನ್ಮೂಲಾ ದೇವತಾಃ ಸರ್ವಾಃ ಸೇಶ್ವರಾಃ ಸಚತುರ್ಮುಖಾಃ ।
ಅಯಂ ವೈ ತದ್ಬಧೋಪಾಯೋ ಯದೃಷೀಣಾಂ ವಿಹಿಂಸನಮ್
॥ ೪೨ ॥

ಅವನು ಅಸುರರ ಮುಖ್ಯ ದ್ವೇಷಿಯಾಗಿರುವನು. ಆದರೆ ಅವನು ಯಾವುದೋ ಗುಹೆಯಲ್ಲಿ ಅಡಗಿರುತ್ತಾನೆ. ಮಹಾದೇವನಿಗೆ, ಚತುರ್ಮುಖಬ್ರಹ್ಮನಿಗೆ, ಇಂದ್ರಾದಿ ಸಕಲದೇವತೆಗಳಿಗೆ ಅವನೇ ಮೂಲನಾಗಿರುವನು. ಋಷಿಗಳನ್ನು ಕೊಂದುಹಾಕುವುದೇ ಅವನನ್ನು ಕೊಲ್ಲುವ ಉಪಾಯವಾಗಿದೆ. ॥ ೪೨ ॥

ಶ್ರೀಶುಕ ಉವಾಚ

ಏವಂ ದುರ್ಮಂತ್ರಿಭಿಃ ಕಂಸಃ ಸಹ ಸಮ್ಮಂತ್ರ್ಯ ದುರ್ಮತಿಃ ।
ಬ್ರಹ್ಮಹಿಂಸಾಂ ಹಿತಂ ಮೇನೇ ಕಾಲಪಾಶಾವೃತೋऽಸುರಃ
॥ ೪೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮೊದಲಿಗೆ ಕಂಸನ ಬುದ್ಧಿಯು ಕೆಟ್ಟುಹೋಗಿತ್ತು. ಮತ್ತೆ ಅವನಿಂದಲೂ ದುಷ್ಟರಾದ ಮಂತ್ರಿಗಳು ಅವನಿಗೆ ದೊರಕಿದ್ದರು. ಈ ಪ್ರಕಾರವಾಗಿ ಅವರಿಂದ ಸಲಹೆ ಪಡೆದು ಕಾಲಪಾಶದಲ್ಲಿ ಸಿಕ್ಕಿಕೊಂಡಿರುವ ಅಸುರನಾದ ಕಂಸನು ಬ್ರಾಹ್ಮಣರನ್ನು ಕೊಲ್ಲುವುದೇ ಸರಿ ಎಂದು ತಿಳಿದನು. ॥ ೪೩ ॥

ಸಂದಿಶ್ಯ ಸಾಧುಲೋಕಸ್ಯ ಕದನೇ ಕದನಪ್ರಿಯಾನ್ ।
ಕಾಮರೂಪಧರಾಂದಿಕ್ಷು ದಾನವಾನ್ಗೃಹಮಾವಿಶತ್
॥ ೪೪ ॥

ಅವನು ಹಿಂಸಾಪ್ರಿಯರಾದ ರಾಕ್ಷಸರಿಗೆ ಸಂತ-ಸತ್ಪುರುಷರನ್ನು ಹಿಂಸಿಸಲು ಆದೇಶಿಸಿದನು. ಕಾಮರೂಪಿಗಳಾದ ಆ ಅಸುರರನ್ನು ಎಲ್ಲ ಕಡೆಗೆ ಕಳಿಸಿಕೊಟ್ಟು ಕಂಸನು ತನ್ನರಮನೆಯನ್ನು ಪ್ರವೇಶಿಸಿದನು. ॥ ೪೪ ॥

ತೇ ವೈ ರಜಃಪ್ರಕೃತಯಸ್ತಮಸಾ ಮೂಢಚೇತಸಃ ।
ಸತಾಂ ವಿದ್ವೇಷಮಾಚೇರುರಾರಾದಾಗತಮೃತ್ಯವಃ
॥ ೪೫ ॥

ರಜೋಗುಣ ಪ್ರಕೃತಿಯುಳ್ಳ ಆ ಅಸುರರು ತಮೋಗುಣದಿಂದ ಅವರ ಚಿತ್ತವು ಉಚಿತ-ಅನುಚಿತ ವಿವೇಕದಿಂದ ರಹಿತವಾಗಿತ್ತು. ಅವರ ತಲೆಯಮೇಲೆ ಮೃತ್ಯುವು ಕುಣಿಯುತ್ತಿತ್ತು. ಈ ಕಾರಣದಿಂದಲೇ ಅವರು ಸಂತರನ್ನು ದ್ವೇಷಿಸಿದರು. ॥ ೪೫ ॥

ಆಯುಃ ಶ್ರಿಯಂ ಯಶೋ ಧರ್ಮಂ ಲೋಕಾನಾಶಿಷ ಏವ ಚ ।
ಹಂತಿ ಶ್ರೇಯಾಂಸಿ ಸರ್ವಾಣಿ ಪುಂಸೋ ಮಹದತಿಕ್ರಮಃ
॥ ೪೬ ॥

ಪರೀಕ್ಷಿತನೇ! ಸಂತ-ಸತ್ಪುರುಷರನ್ನು ಅನಾದರ ಮಾಡುವವರ ಆ ಕುಕರ್ಮವೇ ಅವರ ಆಯುಸ್ಸು ಲಕ್ಷ್ಮೀ, ಕೀರ್ತಿ, ಧರ್ಮ, ಲೋಕ-ಪರಲೋಕ, ವಿಷಯಭೋಗ ಹಾಗೂ ಎಲ್ಲ ಕಲ್ಯಾಣ ಸಾಧನೆಗಳನ್ನು ನಾಶಮಾಡಿಬಿಡುತ್ತದೆ. ॥ ೪೬ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ ಚತುರ್ಥೋऽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಗೋಕುಲದಲ್ಲಿ ಭಗವಂತನ ಜನ್ಮೋತ್ಸವ

ಶ್ರೀಶುಕ ಉವಾಚ

ನಂದಸ್ತ್ವಾತ್ಮಜ ಉತ್ಪನ್ನೇ ಜಾತಾಹ್ಲಾದೋ ಮಹಾಮನಾಃ ।
ಆಹೂಯ ವಿಪ್ರಾನ್ವೇದಜ್ಞಾನ್ ಸ್ನಾತಃ ಶುಚಿರಲಂಕೃತಃ
॥ ೧ ॥

ವಾಚಯಿತ್ವಾ ಸ್ವಸ್ತ್ಯಯನಂ ಜಾತಕರ್ಮಾತ್ಮಜಸ್ಯ ವೈ ।
ಕಾರಯಾಮಾಸ ವಿಧಿವತ್ಪಿತೃದೇವಾರ್ಚನಂ ತಥಾ
॥ ೨ ॥

ಧೇನೂನಾಂ ನಿಯುತೇ ಪ್ರಾದಾದ್ವಿಪ್ರೇಭ್ಯಃ ಸಮಲಂಕೃತೇ ।
ತಿಲಾದ್ರೀನ್ಸಪ್ತ ರತ್ನೌಘಶಾತಕೌಂಭಾಂಬರಾವೃತಾನ್
॥ ೩ ॥

ಕಾಲೇನ ಸ್ನಾನಶೌಚಾಭ್ಯಾಂ ಸಂಸ್ಕಾರೈಸ್ತಪಸೇಜ್ಯಯಾ ।
ಶುದ್ಧ್ಯಂತಿ ದಾನೈಃ ಸಂತುಷ್ಟ್ಯಾ ದ್ರವ್ಯಾಣ್ಯಾತ್ಮಾऽऽತ್ಮವಿದ್ಯಯಾ
॥ ೪ ॥

ಸೌಮಂಗಲ್ಯಗಿರೋ ವಿಪ್ರಾಃ ಸೂತಮಾಗಧವಂದಿನಃ ।
ಗಾಯಕಾಶ್ಚಜಗುರ್ನೇದುರ್ಭೇರ್ಯೋ ದುಂದುಭಯೋ ಮುಹುಃ
॥ ೫ ॥

ವ್ರಜಃ ಸಮ್ಮೃಷ್ಟಸಂಸಿಕ್ತದ್ವಾರಾಜಿರಗೃಹಾಂತರಃ ।
ಚಿತ್ರಧ್ವಜಪತಾಕಾಸ್ತ್ರಕ್ಚೈಲಪಲ್ಲವತೋರಣೈಃ
॥ ೬ ॥

ಗಾವೋ ವೃಷಾ ವತ್ಸತರಾ ಹರಿದ್ರಾತೈಲರೂಷಿತಾಃ ।
ವಿಚಿತ್ರಧಾತುಬರ್ಹಸ್ರಗ್ವಸ್ತ್ರಕಾಂಚನಮಾಲಿನಃ
॥ ೭ ॥

ಮಹಾರ್ಹವಸ್ತ್ರಾಭರಣಕಂಚುಕೋಷ್ಣೀಷಭೂಷಿತಾಃ ।
ಗೋಪಾಃ ಸಮಾಯಯೂ ರಾಜನ್ನಾನೋಪಾಯನಪಾಣಯಃ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮಹಾನುಭಾವನಾದ ನಂದರಾಜನು ಬಹಳ ಉದಾರನಾಗಿದ್ದನು. ಪುತ್ರನ ಜನ್ಮವಾದಾಗ ಅವನ ಹೃದಯ ವಿಲಕ್ಷಣ ಆನಂದದಿಂದ ತುಂಬಿಹೋಯಿತು. ಅವನು ಸ್ನಾನಮಾಡಿ ಸುಂದರ ವಸ್ತ್ರಾಭೂಷಣಗಳನ್ನು ಧರಿಸಿದನು. ಮತ್ತೆ ವೇದಜ್ಞರಾದ ಬ್ರಾಹ್ಮಣರನ್ನು ಕರೆಸಿ ಸ್ವಸ್ತಿವಾಚನ ಮತ್ತು ಪುತ್ರನ ಜಾತಕರ್ಮ ಸಂಸ್ಕಾರವನ್ನು ನಡೆಸಿದನು. ಜೊತೆಗೆ ದೇವತೆಗಳನ್ನು ಮತ್ತು ಪಿತೃಗಳನ್ನು ವಿಧಿವತ್ತಾಗಿ ಪೂಜಿಸಿದನು. ॥ ೧-೨ ॥ ಅವನು ಬ್ರಾಹ್ಮಣರಿಗೆ ವಸ್ತ್ರಾಭೂಷಣಗಳಿಂದ ಸುಸಜ್ಜಿತವಾದ ಎರಡು ಲಕ್ಷ ಗೋವುಗಳನ್ನು ದಾನಮಾಡಿದನು. ರತ್ನಗಳಿಂದಲೂ, ಸುವರ್ಣಾನ್ನಾಗಳಿಂದಲೂ, ವಸ್ತ್ರಗಳಿಂದಲೂ ಸಮಲಂಕೃತವಾದ ಏಳು ಎಳ್ಳಿನ ಪರ್ವತಗಳನ್ನು ದಾನಮಾಡಿದನು. ॥ ೩ ॥ ಹೊಸನೀರು, ನೆಲ ಮುಂತಾದ ದ್ರವ್ಯಗಳು ಸಮಯಕಳೆದಾಗ ಶುದ್ಧವಾಗುತ್ತವೆ. ಶರೀರಾದಿಗಳು ಸ್ನಾನದಿಂದಲೂ, ವಸ್ತ್ರಾದಿಗಳು ತೊಳೆಯುವಿಕೆಯಿಂದಲೂ, ಸಂಸ್ಕಾರಗಳಿಂದ ಗರ್ಭವೂ, ಇಂದ್ರಿಯಾದಿಗಳು ತಪಸ್ಸಿನಿಂದಲೂ, ಬ್ರಾಹ್ಮಣರು ಯಜ್ಞಾದಿಗಳಿಂದಲೂ, ಧನ ಧಾನ್ಯಗಳು ದಾನದಿಂದಲೂ, ಮನಸ್ಸು ಸಂತೋಷದಿಂದಲೂ ಶುದ್ಧವಾಗುತ್ತವೆ. ಆದರೆ ಆತ್ಮಜ್ಞಾನದಿಂದಲೇ ಆತ್ಮನ ಶುದ್ಧಿಯಾಗುತ್ತದೆ. ॥ ೪ ॥ ಆ ಸಮಯದಲ್ಲಿ ಬ್ರಾಹ್ಮಣರು, ಸೂತರು, ಮಾಗಧರು, ವಂದಿಜನರು ಮಂಗಲಾಶೀರ್ವಾದ ಕೊಡುತ್ತಾ ಸ್ತುತಿಸತೊಡಗಿದರು. ಗಾಯಕರು ಹಾಡತೊಡಗಿದರು. ಭೇರಿ, ದುಂದುಭಿಗಳು ಮೊಳಗಿದವು. ॥ ೫ ॥ ವ್ರಜಮಂಡಲವಾಸಿಗಳೆಲ್ಲರೂ ತಮ್ಮ-ತಮ್ಮ ಮನೆಗಳ ಬಾಗಿಲುಗಳನ್ನೂ, ಅಂಗಳಗಳನ್ನೂ, ಜಗುಲಿಗಳನ್ನೂ ಗುಡಿಸಿ-ಸಾರಿಸಿ ಸುಗಂಧಮಯವಾದ ನೀರನ್ನು ಸಿಂಪಡಿಸಿ, ರಂಗವಲ್ಲಿಯನ್ನಿಟ್ಟು, ಚಿತ್ರ-ವಿಚಿತ್ರವಾದ ಧ್ವಜಪತಾಕೆಗಳಿಂದಲೂ, ಹೂವಿನ ಹಾರಗಳಿಂದಲೂ, ವಸ್ತ್ರಗಳಿಂದ ಕೂಡಿದ ತೋರಣಗಳಿಂದಲೂ, ತಳಿರುತೋರಣಗಳಿಂದಲೂ, ನಯನಾನಂದಕರವಾಗಿ ಸಿಂಗರಿಸಿದರು. ॥ ೬ ॥ ತಮ್ಮ ಮನೆಗಳನ್ನು ಸಿಂಗರಿಸಿದಂತೆ ಗೋಪರು ಗೋವುಗಳಿಗೂ, ಎತ್ತುಗಳಿಗೂ, ಕರುಗಳಿಗೂ ಅರಸಿನ ಎಣ್ಣೆಗಳನ್ನು ಮೈಗೆ ಹಚ್ಚಿದರು. ಮಣಿ, ಶಿಲೆ, ಸಿಂಧೂರ, ಬಣ್ಣ-ಬಣ್ಣದ ಧಾತುಗಳಿಂದ, ನವಿಲುಗರಿಗಳಿಂದ, ಹೂವಿನ ಹಾರಗಳಿಂದ, ನಾನಾರೀತಿಯ ಸುಂದರ ವಸ್ತ್ರಗಳಿಂದ, ಚಿನ್ನದ ಸರಪಳಿಗಳಿಂದ ಅಲಂಕರಿಸಿದರು. ॥ ೭ ॥ ಪರೀಕ್ಷಿತನೇ! ಬಳಿಕ ಸಮಸ್ತಗೋಪರು ಬಹುಮೂಲ್ಯ ವಸ್ತ್ರಗಳಿಂದ, ಒಡವೆಗಳಿಂದ, ವಲ್ಲಿಗಳಿಂದ ಸುಸಜ್ಜಿತರಾಗಿ ತಲೆಗೆ ಮುಂಡಾಸನ್ನು ಸುತ್ತಿಕೊಂಡು ನಾನಾವಿಧವಾದ ಪಾರಿತೋಷಕಗಳೊಡನೆ ನಂದ ಗೋಪನ ಮನೆಗೆ ಬಂದರು. ॥ ೮ ॥

ಗೋಪ್ಯಶ್ಚಾತಿಮುದಿತಾ ಯಶೋದಾಯಾಃ ಸುತೋದ್ಭವಮ್ ।
ಆತ್ಮಾನಂ ಭೂಷಯಾಂಚಕ್ರುರ್ವಸ್ತ್ರಾಕಲ್ಪಾಂಜನಾದಿಭಿಃ
॥ ೯ ॥

ಯಶೋದಾದೇವಿಗೆ ಗಂಡುಮಗು ಹುಟ್ಟಿದೆ ಎಂದು ಕೇಳಿದ ಗೋಪಿಯರಿಗೆ ಮಹದಾನಂದವಾಯಿತು. ಅವರೂ ಸುಂದರವಾದ ವಸ್ತ್ರಾಭೂಷಣಗಳಿಂದಲೂ, ಅಂಜನ-ಅಂಗರಾಗಗಳಿಂದಲೂ ಶೃಂಗರಿಸಿಕೊಂಡರು. ॥ ೯ ॥

ನವಕುಂಕುಮಕಿಂಜಲ್ಕಮುಖಿಪಂಕಜಭೂತಯಃ ।
ಬಲಿಭಿಸ್ತ್ವರಿತಂ ಜಗ್ಮುಃ ಪೃಥುಶ್ರೋಣ್ಯಶ್ಚಲತ್ಕುಚಾಃ
॥ ೧೦ ॥

ಗೋಪಿಯರ ಮುಖ ಕಮಲಗಳು ಬಹಳ ಸುಂದರವಾಗಿ ಕಾಣುತ್ತಿದ್ದವು. ಹಣೆಯಲ್ಲಿದ್ದ ಕುಂಕುಮವು ಕಮಲದ ಎಸಳಿನಂತೆ ಕಾಣುತ್ತಿತ್ತು. ಪುಷ್ಟವಾದ ನಿತಂಬಗಳನ್ನು ಹೊಂದಿದ್ದ ಅವರು ಉಪಹಾರ ಸಾಮಗ್ರಿಗಳನ್ನು ಎತ್ತಿಕೊಂಡು ಸಂಭ್ರಮದಿಂದ ಯಶೋದೆಯ ಬಳಿಗೆ ಹೋಗುತ್ತಿದ್ದಾಗ ಅವರ ಕುಚಗಳು ನಲಿದಾಡುತ್ತಿದ್ದವು. ॥ ೧೦ ॥

ಗೋಪ್ಯಃ ಸುಮೃಷ್ಟಮಣಿಕುಂಡಲನಿಷ್ಕಕಂಠ್ಯ-
ಶ್ಚಿತ್ರಾಂಬರಾಃ ಪಥಿ ಶಿಖಾಚ್ಯುತಮಾಲ್ಯವರ್ಹಾಃ ।
ನಂದಾಲಯಂ ಸವಲಯಾ ವ್ರಜತೀರ್ವಿರೇಜು-
ರ್ವ್ಯಾಲೋಲಕುಂಡಲಪಯೋಧರಹಾರಶೋಭಾಃ ॥ ೧೧ ॥

ಗೋಪಿಯರ ಕಿವಿಗಳಲ್ಲಿ ಹೊಳೆಯುತ್ತಿದ್ದ ಮಣಿಕುಂಡಲಗಳಿದ್ದುವು. ಕೊರಳಲ್ಲಿ ಸುವರ್ಣಮಯವಾದ ಸರಗಳನ್ನು ತೊಟ್ಟಿದ್ದರು. ಅವರು ಅತ್ಯಂತ ಸುಂದರವಾದ ಬಣ್ಣ-ಬಣ್ಣದ ಸೀರೆಗಳನ್ನು ಉಟ್ಟಿದ್ದರು. ದಾರಿಯಲ್ಲಿ ಅವರು ಮುಡಿದುಕೊಂಡಿದ್ದ ಹೂವುಗಳು ಉದುರುತ್ತಿದ್ದವು. ಕೈ ಕಡಗಗಳನ್ನು ಧರಿಸಿದ್ದ ಅವರು ನಂದ ಗೋಪನ ಮನೆಗೆ ಅವಸರ-ಅವಸರವಾಗಿ ಹೋಗುತ್ತಿದ್ದಾಗ ಅವರ ಕಿವಿಯಲ್ಲಿದ್ದ ಕುಂಡಲಗಳೂ, ಪಯೋಧರಗಳೂ, ಹಾರಗಳೂ ಕುಣಿದಾಡುತ್ತಿದ್ದು ಆ ಗೋಪಿಯರು ಬಹಳವಾಗಿ ಪ್ರಕಾಶಿಸಿದರು. ॥ ೧೧ ॥

ತಾ ಆಶಿಷಃ ಪ್ರಯುಂಜಾನಾಶ್ಚಿರಂ ಪಾಹೀತಿ ಬಾಲಕೇ ।
ಹರಿದ್ರಾಚೂರ್ಣತೈಲಾದ್ಭಿಃ ಸಿಂಚಂತ್ಯೋಽಜನಮುಜ್ಜಗುಃ
॥ ೧೨ ॥

ನಂದರಾಜನ ಮನೆಗೆ ಹೋಗಿ ಅವರು ನವಜಾತ ಶಿಶುವಿಗೆ – 'ಇವನು ಚಿರಂಜೀವಿಯಾಗಲೀ, ಭಗವಂತನು ಇವನನ್ನು ರಕ್ಷಿಸಲಿ' ಎಂದು ಆಶೀರ್ವಾದಗಳನ್ನು ಕೊಡುತ್ತಿದ್ದರು. ಕುಲಾಚಾರದಂತೆ ಅರಶಿನ-ಎಣ್ಣೆಮಿಶ್ರಿತವಾದ ನೀರನ್ನು (ಓಕುಳಿ) ಜನರಮೇಲೆ ಚಿಮುಕಿಸುತ್ತಾ, ಲಾಲಿ-ಶೋಭಾನೆ ಮುಂತಾದ ಮಂಗಳಗೀತೆಗಳನ್ನು ಗಟ್ಟಿಯಾಗಿ ಹಾಡುತ್ತಿದ್ದರು. ॥ ೧೨ ॥

ಅವಾದ್ಯಂತ ವಿಚಿತ್ರಾಣಿ ವಾದಿತ್ರಾಣಿ ಮಹೋತ್ಸವೇ ।
ಕೃಷ್ಣೇ ವಿಶ್ವೇಶ್ವರೇಽನಂತೇ ನಂದಸ್ಯ ವ್ರಜಮಾಗತೇ
॥ ೧೩ ॥

ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿಗೆ ಏಕಮಾತ್ರ ಸ್ವಾಮಿಯಾಗಿರುವನು. ಅವನ ಐಶ್ವರ್ಯ, ಮಾಧುರ್ಯ, ವಾತ್ಸಲ್ಯ ಎಲ್ಲವೂ ಅನಂತವೇ. ಅವನು ನಂದನ ವ್ರಜದಲ್ಲಿ ಪ್ರಕಟನಾದಾಗ ಅವನ ಜನ್ಮಮಹೋತ್ಸವವನ್ನು ಆಚರಿಸಲಾಯಿತು. ಆಗ ವಿಚಿತ್ರವಾದ ಮಂಗಳವಾದ್ಯಗಳು ಮೊಳಗಿದವು. ॥ ೧೩ ॥

ಗೋಪಾಃ ಪರಸ್ಪರಂ ಹೃಷ್ಟಾ ದಧಿಕ್ಷೀರಘೃತಾಂಬುಭಿಃ ।
ಆಸಿಂಚಂತೋ ವಿಲಿಂಪಂತೋ ನವನೀತೈಶ್ಚ ಚಿಕ್ಷಿಪುಃ
॥ ೧೪ ॥

ಆನಂದಭರಿತರಾದ ಗೋಪಾಲಕರು ಒಬ್ಬರು ಮತ್ತೊಬ್ಬರ ಮೇಲೆ ಹಾಲು, ಮೊಸರು, ತುಪ್ಪ, ನೀರು ಇವುಗಳನ್ನು ಎರಚಾಡಿದರು. ಒಬ್ಬರು ಮತ್ತೊಬ್ಬರ ಮುಖಕ್ಕೆ ಬೆಣ್ಣೆಯನ್ನು ಸವರುತ್ತಾ-ಎಸೆಯುತ್ತಾ ಕುಣಿ-ಕುಣಿದು ಹಾಡುತ್ತಾ ಆನಂದೋತ್ಸವವನ್ನು ಆಚರಿಸಿದರು. ॥ ೧೪ ॥

ನಂದೋ ಮಹಾಮನಾಸ್ತೇಭ್ಯೋ ವಾಸೋಽಲಂಕಾರಗೋಧನಮ್ ।
ಸೂತಮಾಗಧವಂದಿಭ್ಯೋ ಯೇಽನ್ಯೇ ವಿದ್ಯೋಪಜೀವಿನಃ
॥ ೧೫ ॥

ಮಹಾನುಭಾವನಾದ ನಂದಗೋಪನು ಪರಮ ಉದಾರಿಯಾಗಿದ್ದನು. ಅವನು ಗೋಪಾಲಕರೆಲ್ಲರಿಗೂ ವಸ್ತ್ರಾಭರಣಗಳನ್ನೂ, ಹಸುಗಳನ್ನೂ, ನೆನಪಿನ ಕಾಣಿಕೆಗಳನ್ನು ಕೊಟ್ಟನು. ಸೂತ, ಮಾಗಧ, ವಂದಿಗಳಿಗೂ,* ನೃತ್ಯ-ವಾದ್ಯ ಮುಂತಾದ ಲಲಿತಕಲೆಗಳಿಂದ ಜೀವನನಿರ್ವಹಿಸುವ ಕಲಾವಿದರಿಗೂ, ವಿದ್ವಾಂಸರಿಗೂ ಅವರವರ ಅಪೇಕ್ಷೆಯಂತೆ ಬಹುಮಾನಗಳನ್ನು ಕೊಟ್ಟು ಅವರೆಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿದನು. 'ತನ್ನ ಸತ್ಕಾರದಿಂದ

* ಸೂತಾಃ ಪೌರಾಣಿಕಾಃ ಪ್ರೋಕ್ತಾ ಮಾಗಧಾ ವಂಶಶಂಸಕಾಃ । ವಂದಿನಸ್ತ್ವಮಲಪ್ರಜ್ಞಾಃ ಪ್ರಸ್ತಾವಸದೃಶೋಕ್ತಯಃ ॥
ಪುರಾಣಗಳನ್ನು ಹೇಳುವವರಿಗೆ ಸೂತರೆಂದೂ, ವಂಶಾವಳಿಗಳನ್ನು ಹೊಗಳುವವರಿಗೆ ಮಾಗಧರೆಂದೂ, ತತ್ಕಾಲೋಚಿತವಾಗಿ ಮಾತಾಡುವವರಿಗೆ ವಂದಿಗಳೆಂದೂ ಹೆಸರು.

ತೈಸ್ತೈಃ ಕಾಮೈರದೀನಾತ್ಮಾ ಯಥೋಚಿತಮಪೂಜಯತ್ ।
ವಿಷ್ಣೋರಾರಾಧನಾರ್ಥಾಯ ಸ್ವಪುತ್ರಸ್ಯೋದಯಾಯ ಚ
॥ ೧೬ ॥

ರೋಹಿಣೀ ಚ ಮಹಾಭಾಗಾ ನಂದಗೋಪಾಭಿನಂದಿತಾ ।
ವ್ಯಚರದ್ದಿವ್ಯವಾಸಃಸ್ರಕ್ಕಂಠಾಭರಣಭೂಷಿತಾ
॥ ೧೭ ॥

ತತ ಆರಭ್ಯ ನಂದಸ್ಯ ವ್ರಜಃ ಸರ್ವಸಮೃದ್ಧಿಮಾನ್ ।
ಹರೇರ್ನಿವಾಸಾತ್ಮಗುಣೈ ರಮಾಕ್ರೀಡಮಭೂನ್ನೃಪ
॥ ೧೮ ॥

ಗೋಪಾನ್ಗೋಕುಲರಕ್ಷಾಯಾಂ ನಿರೂಪ್ಯ ಮಥುರಾಂ ಗತಃ ।
ನಂದಃ ಕಂಸಸ್ಯ ವಾರ್ಷಿಕ್ಯಂ ಕರಂ ದಾತುಂ ಕುರೂದ್ವಹ
॥ ೧೯ ॥

ವಸುದೇವ ಉಪಶ್ರುತ್ಯ ಭ್ರಾತರಂ ನಂದಮಾಗತಮ್ ।
ಜ್ಞಾತ್ವಾ ದತ್ತಕರಂ ರಾಜ್ಞೇ ಯಯೌ ತದವಮೋಚನಮ್
॥ ೨೦ ॥

ತಂ ದೃಷ್ಟ್ವಾ ಸಹಸೋತ್ಥಾಯ ದೇಹಃ ಪ್ರಾಣಮಿವಾಗತಮ್ ।
ಪ್ರೀತಃ ಪ್ರಿಯತಮಂ ದೋರ್ಭ್ಯಾಂ ಸಸ್ವಜೇ ಪ್ರೇಮವಿಹ್ವಲಃ
॥ ೨೧ ॥

ಪೂಜಿತಃ ಸುಖಮಾಸೀನಃ ಪೃಷ್ಟ್ವಾನಾಮಯಮಾದೃತಃ ।
ಪ್ರಸಕ್ತಧೀಃ ಸ್ವಾತ್ಮಜಯೋರಿದಮಾಹ ವಿಶಾಂಪತೇ
॥ ೨೨ ॥

ವಿಘ್ಯಾ ಭ್ರಾತಃ ಪ್ರವಯಸ ಇದಾನೀಮಪ್ರಜಸ್ಯ ತೇ ।
ಪ್ರಜಾಶಾಯಾ ನಿವೃತ್ತಸ್ಯ ಪ್ರಜಾ ಯತ್ಸಮಪದ್ಯತ
॥ ೨೩ ॥

ವಿಘ್ಯಾ ಸಂಸಾರಚಕ್ರೇಽಸ್ಮಿನ್ವರ್ತಮಾನಃ ಪುನರ್ಭವಃ ।
ಕಾಷಲಬ್ಧೋ ಭವಾನದ್ಯ ದುರ್ಲಭಂ ಪ್ರಿಯದರ್ಶನಮ್
॥ ೨೪ ॥

ಕ್ವೈಕತ್ರ ಪ್ರಿಯಸಂವಾಸಃ ಸುಹೃದಾಂ ಚಿತ್ರಕರ್ಮಣಾಮ್ ।
ಓಘೇನ ವ್ಯೂಹ್ಯಮಾನಾನಾಂ ಪ್ಲವಾನಾಂ ಸ್ರೋತಸೋ ಯಥಾ
॥ ೨೫ ॥

ಮಹಾವಿಷ್ಣುವು ಪ್ರಸನ್ನನಾಗಬೇಕು. ನವಜಾತ ಶಿಶುವಿನ ಅಭ್ಯುದಯವಾಗಬೇಕು' ಎಂಬುದೇ ನಂದಗೋಪನ ಮುಖ್ಯ ಉದ್ದೇಶವಾಗಿತ್ತು. ॥ ೧೫-೧೬ ॥ ನಂದಗೋಪನಿಂದ ಅಭಿನಂದಿಸಲ್ಪಟ್ಟ ಪರಮ ಸೌಭಾಗ್ಯವತಿಯಾದ ರೋಹಿಣೀದೇವಿಯೂ ದಿವ್ಯವಾದ ವಸ್ತ್ರಗಳಿಂದಲೂ, ಮಾಲೆಗಳಿಂದಲೂ, ಕಂಠಾಭರಣಗಳಿಂದಲೂ ಸಮಲಂಕೃತಳಾಗಿ ಮನೆಯೊಡತಿಯಂತೆ ಬಂದು-ಹೋಗುವ ಗೋಪಿಕಾಸ್ತ್ರೀಯರನ್ನು ಆದರದಿಂದ ಸತ್ಕರಿಸುತ್ತಾ ಓಡಾಡುತ್ತಿದ್ದಳು. ॥ ೧೭ ॥

ಪರೀಕ್ಷಿತನೇ! ಶ್ರೀಕೃಷ್ಣನ ಜನ್ಮೋತ್ಸವದಿಂದಲೇ ನಂದನ ವ್ರಜಭೂಮಿಯು ಸಮಸ್ತ ಸಂಪತ್ತುಗಳಿಂದ ಸಮೃದ್ಧವಾಯಿತು. ಭಗವಾನ್ ಶ್ರೀಕೃಷ್ಣನ ನಿವಾಸಸ್ಥಾನದಿಂದಲೂ, ತನ್ನ ಸ್ವಾಭಾವಿಕ ಗುಣಗಳ ಕಾರಣದಿಂದ ಅಲ್ಲಿ ಮಹಾಲಕ್ಷ್ಮಿಯು ಆಟವಾಡುತ್ತಿದ್ದಳು. ॥ ೧೮ ॥

ಪರೀಕ್ಷಿತನೇ! ಕೆಲವು ದಿವಸಗಳ ನಂತರ ನಂದಗೋಪನು ಗೋಕುಲದ ರಕ್ಷಣೆಯ ಭಾರವನ್ನು ಇತರ ಗೋಪಾಲಕರಿಗೆ ವಹಿಸಿಕೊಟ್ಟು, ಕಂಸನಿಗೆ ವಾರ್ಷಿಕ ಕಂದಾಯವನ್ನು ಒಪ್ಪಿಸುವ ಸಲುವಾಗಿ ಮಥುರೆಗೆ ಹೊರಟನು. ॥ ೧೯ ॥ ಮಥುರಾ ಪಟ್ಟಣದಲ್ಲೇ ಇದ್ದ ವಸುದೇವನಿಗೆ ತನ್ನ ಸೋದರನಂತಿದ್ದ ನಂದಗೋಪನು ಕಂಸನಿಗೆ ಕಂದಾಯವನ್ನು ಕೊಡಲು ಮಥುರೆಗೆ ಬಂದಿರುವನೆಂದು ತಿಳಿದು, ಅವನು ನಂದನು ಉಳಿದುಕೊಂಡಿದ್ದ ಬಿಡಾರಕ್ಕೆ ಹೋದನು. ॥ ೨೦ ॥ ವಸುದೇವನನ್ನು ನೋಡುತ್ತಲೇ ನಂದಗೋಪನು ಸತ್ತುಹೋದವನು ಬದುಕಿ ಮೇಲೆದ್ದು ನಿಲ್ಲುವಂತೆ ಎದ್ದು ನಿಂತನು. ಅವನು ಅತ್ಯಂತ ಪ್ರೀತಿಯಿಂದ ವಸುದೇವನನ್ನು ಬಾಚಿ ತಬ್ಬಿಕೊಂಡನು. ಆಗ ನಂದಗೋಪನು ಪ್ರೇಮವಿಹ್ವಲನಾಗಿದ್ದನು. ॥ ೨೧ ॥ ಪರೀಕ್ಷಿತನೇ! ನಂದಗೋಪನು ವಸುದೇವನನ್ನು ಬಹಳವಾಗಿ ಸ್ವಾಗತ-ಸತ್ಕಾರ ಮಾಡಿದನು. ಅವನು ಸುಖಾಸನದಲ್ಲಿ ಕುಳಿತು ಕುಶಲ ಪ್ರಶ್ನೆಗಳನ್ನು ಕೇಳತೊಡಗಿದನು. ॥ ೨೨ ॥

ಆ ಸಮಯದಲ್ಲಿ ವಸುದೇವನ ಮನಸ್ಸು ತನ್ನ ಇಬ್ಬರು ಮಕ್ಕಳ ವಿಷಯದಲ್ಲಿ ಆಸಕ್ತವಾಗಿತ್ತು. ಅಂತೆಯೇ ನಂದಗೋಪನಲ್ಲಿ ಹೇಳಿದನು – ಸಹೋದರಾ! ನಿನಗೆ ಇದುವರೆಗೆ ಯಾವುದೇ ಸಂತಾನವೂ ಇರಲಿಲ್ಲ. ವೃದ್ಧನಾದ ಕಾರಣ ಅದರ ಆಸೆಯೂ ಇರಲಿಲ್ಲ. ಸೌಭಾಗ್ಯವಶದಿಂದ ಈಗ ನಿನಗೆ ಸಂತಾನವಾಗಿದೆ. ॥ ೨೩ ॥ ಇದು ಅತ್ಯಂತ ಆನಂದದ ಮಾತಾಗಿದೆ. ಇಂದು ನಮ್ಮಗಳ ಭೇಟಿಯಾದುದು ಸಂತೋಷವೇ. ಪ್ರಿಯರಾದವರನ್ನು ಸಂದರ್ಶಿಸುವುದೂ ಈಗಿನ ಕಾಲದಲ್ಲಿ ದುರ್ಲಭವೇ ಆಗಿದೆ. ಈ ಸಂಸಾರಚಕ್ರವೇ ಹೀಗಿದೆ. ಇಂದು ನಿನ್ನನ್ನು ಸಂದರ್ಶಿಸಿದ್ದು ಪುನರ್ಜನ್ಮವನ್ನು ಪಡೆದಂತೆಯೇ ಆಗಿದೆ. ॥ ೨೪ ॥ ಪ್ರವಾಹಕ್ಕೆ ಸಿಕ್ಕಿದ ತೃಣ-ಕಾಷ್ಠಗಳು ಯಾವಾಗಲೂ ಒಂದೇಕಡೆ ಸೇರಿಕೊಂಡಿರುವುದಿಲ್ಲ. ಹಾಗೆಯೇ ನಿಜಬಂಧುಗಳೂ, ಸುಹೃದರೂ ಎಲ್ಲರಿಗೂ, ಪ್ರಿಯರಾಗಿದ್ದರೂ ಒಂದೆಡೆ ಇರುವುದು ಸಂಭವಿಸಲಾರದು. ಏಕೆಂದರೆ, ಎಲ್ಲರ ಪ್ರಾರಬ್ಧಕರ್ಮಗಳು ಬೇರೆ-ಬೇರೆಯಾಗಿರುತ್ತವೆ. ॥ ೨೫ ॥

ಕಚ್ಚಿತ್ತಶವ್ಯಂ ನಿರುಜಂ ಭೂರ್ಯಂಬುತೃಣವೀರುಧಮ್ ।
ಬೃಹದ್ವನಂ ತದಧುನಾ ಯತ್ರಾಸ್ಸೇ ತ್ವಂ ಸುಹೃದ್ವೃತಃ
॥ ೨೬ ॥

ಭ್ರಾತರ್ಮಮ ಸುತಃ ಕಚ್ಚಿನ್ಮಾತ್ರಾ ಸಹ ಭವದ್ವ್ರಜೇ ।
ತಾತಂ ಭವಂತಂ ಮನ್ವಾನೋ ಭವದ್ಭ್ಯಾಮುಪಲಾಲಿತಃ
॥ ೨೭ ॥

ಪುಂಸಸ್ತ್ರಿವರ್ಗೋ ವಿಹಿತಃ ಸುಹೃದೋ ಹ್ಯನುಭಾವಿತಃ ।
ನ ತೇಷು ಕ್ಲಿಶ್ಯಮಾನೇಷು ತ್ರಿವರ್ಗೋ ಽರ್ಥಾಯ ಕಲ್ಪತೇ
॥ ೨೮ ॥

ನಂದ ಉವಾಚ

ಅಹೋ ತೇ ದೇವಕೀಪುತ್ರಾಃ ಕಂಸೇನ ಬಹವೋ ಹತಾಃ ।
ಏಕಾವಶಿಷ್ಟಾವರಜಾ ಕನ್ಯಾ ಸಾಪಿ ದಿವಂ ಗತಾ
॥ ೨೯ ॥

ನೂನಂ ಹ್ಯದೃಷ್ಟನಿಷ್ಠೋ ಽಯಮದೃಷ್ಟ ಪರಮೋ ಜನಃ ।
ಅದೃಷ್ಟಮಾತ್ಮನಸ್ತತ್ತ್ವಂ ಯೋ ವೇದ ನ ಸ ಮುಹ್ಯತಿ
॥ ೩೦ ॥

ವಸುದೇವ ಉವಾಚ

ಕರೋ ವೈ ವಾರ್ಷಿಕೋ ದತ್ತೋ ರಾಜ್ಞೇ ದೃಷ್ಟಾವಯಂ ಚ ವಃ ।
ನೇಹ ಸ್ಥೇಯಂ ಬಹುತಿಥಂ ಸಂತ್ಯುತ್ಪಾತಾಶ್ಚ ಗೋಕುಲೇ
॥ ೩೧ ॥

ಶ್ರೀಶುಕ ಉವಾಚ

ಇತಿ ನಂದಾದಯೋ ಗೋಪಾಃ ಪ್ರೋಕ್ತಾಸ್ತೇ ಶೌರಿಣಾ ಯಯುಃ ।
ಅನೋಭಿರನಡುದ್ಯುಕ್ತೈಃ ಪ್ರಮನುಜ್ಞಾಪ್ಯ ಗೋಕುಲಮ್
॥ ೩೨ ॥

ಈಗ ನೀನು ನಿನ್ನ ಬಂಧುಗಳೊಡನೆಯೂ, ಸುಹೃದಯರೊಡನೆಯೂ ವಾಸಿಸುವ ಮಹಾವನದಲ್ಲಿ ಗಿಡ-ಮರ-ಬಳ್ಳಿ ನೀರು-ಹುಲ್ಲು ಇತ್ಯಾದಿಗಳು ಸಮೃದ್ಧವಾಗಿರುವೆಯೇ? ಹಸುಗಳನ್ನು ಸಾಕಲು ಅನುಕೂಲ ವಾಗಿದೆಯೇ? ಆ ಪ್ರದೇಶವು ರೋಗ-ರುಜಿನಗಳಿಂದ ರಹಿತವಾಗಿರುವುದೇ? ॥ ೨೬ ॥ ತಮ್ಮಾ! ನನ್ನ ಮಗನು ತನ್ನ ತಾಯಿ ರೋಹಿಣಿಯೊಡನೆ ನಿನ್ನ ವ್ರಜದಲ್ಲಿ ಇದ್ದಾನೆ. ಅವನ ಲಾಲನೆ-ಪಾಲನೆಗಳನ್ನು ನೀನು ಮತ್ತು ಯಶೋದೆ ಮಾಡುತ್ತಿರುವಿರಿ. ಅದರಿಂದ ಅವನು ನಿಮ್ಮನ್ನೇ ತಂದೆ-ತಾಯಿಯರೆಂದು ಭಾವಿಸಿಕೊಂಡಿರಬಹುದು? ಅವನು ಕ್ಷೇಮವೇ? ॥ ೨೭ ॥ ಸ್ವಜನರಿಗೆ ಸುಖವಿಸಿಗುವಂತಹ ಧರ್ಮ, ಅರ್ಥ, ಕಾಮಗಳೇ ಮನುಷ್ಯನಿಗೆ ಶಾಸ್ತ್ರವಿಹಿತವಾಗಿವೆ. ಈ ತ್ರಿವರ್ಗಗಳು ತನ್ನ ಸುಖಕ್ಕಾಗಿ ಮಾತ್ರವೇ ಆಗಿದ್ದು ಬಂಧುಗಳಿಗೆ ಕ್ಲೇಶದಾಯಕವಾಗಿದ್ದರೆ ಅವನ್ನು ಶಾಸ್ತ್ರವಿಹಿತವೆಂದು ಹೇಳಲಾಗುವುದಿಲ್ಲ ॥ ೨೮ ॥

ನಂದಗೋಪನು ಹೇಳಿದನು – ಅಣ್ಣ! ವಸುದೇವನೇ! ನಿನ್ನ ಮನಸ್ಸಿನ ಸಂಕಟವನ್ನು ನಾನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ದೇವಕಿಯ ಗರ್ಭದಲ್ಲಿ ಹುಟ್ಟಿದ ಆರು ಮಕ್ಕಳನ್ನೂ ಕಂಸನು ಕೊಂದುಹಾಕಿದನು. ಏಳನೆಯದಾದ ಕಡೆಯ ಹೆಣ್ಣುಶಿಶುವೂ ಸ್ವರ್ಗಕ್ಕೆ ಹೊರಟುಹೋಯಿತು. ॥ ೨೯ ॥ ಪ್ರಾಣಿಗಳ ಸುಖ ದುಃಖಿಗಳು ಅದೃಷ್ಟವನ್ನೇ ಅವಲಂಬಿಸಿವೆ. ಇದರಲ್ಲಿ ಸಂಶಯವೇ ಇಲ್ಲ. ಜೀವನದಲ್ಲಿನ ಸುಖ-ದುಃಖಿಗಳ ಕಾರಣವು ಅದೃಷ್ಟವೇ ಆಗಿದೆ ಎಂದು ತಿಳಿಯುವವನು ಅವು ಪ್ರಾಪ್ತವಾದಾಗಲೂ ಮೋಹಿತನಾಗುವುದಿಲ್ಲ ॥ ೩೦ ॥

ವಸುದೇವನು ಹೇಳಿದನು – ತಮ್ಮಾ! ಕಂಸನಿಗೆ ಕೊಡಬೇಕಾಗಿದ್ದ ವಾರ್ಷಿಕ ಕಂದಾಯವನ್ನು ನೀನು ತೀರಿಸಿಯಾಯಿತು. ನಾವಿಬ್ಬರೂ ಕಲೆತು ಕುಶಲಪ್ರಶ್ನೆಗಳ ವಿನಿಮಯವಾದವು. ಇನ್ನು ನೀನು ಹೆಚ್ಚುದಿನ ಇಲ್ಲಿರುವುದು ಉಚಿತವಾಗಿ ಕಾಣುವುದಿಲ್ಲ. ಏಕೆಂದರೆ, ಗೋಕುಲದಲ್ಲಿ ದೊಡ್ಡ-ದೊಡ್ಡ ಉತ್ಪಾತಗಳು ಕಾಣಿಸಿಕೊಳ್ಳುತ್ತಿವೆ. ॥ ೩೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನು ಹೀಗೆ ಹೇಳಿದಾಗ ನಂದನೇ ಮೊದಲಾದ ಗೋಪರು ವಸುದೇವನ ಅನುಮತಿಯನ್ನು ಪಡೆದು ಎತ್ತುಗಳು ಹೂಡಿದ ಚಕ್ಕಡಿಯಲ್ಲಿ ಕುಳಿತು ಗೋಕುಲದತ್ತ ಪ್ರಯಾಣ ಬೆಳೆಸಿದರು. ॥ ೩೨ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ನಂದವಸುದೇವಸಂಗಮೋ ನಾಮ ಪಂಚಮೋ ಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಪೂತನೆಯ ಉದ್ಧಾರ

ಶ್ರೀಶುಕ ಉವಾಚ

ನಂದಃ ಪಥಿ ವಚಃ ಶೌರೇರ್ನ ಮೃಷೇತಿ ವಿಚಿಂತಯನ್ ।
ಹರಿಂ ಜಗಾಮ ಶರಣಮುತ್ಪಾತಾಗಮಶಂಕಿತಃ
॥ ೧ ॥

ಕಂಸೇನ ಪ್ರಹಿತಾ ಘೋರಾ ಪೂತನಾ ಬಾಲಘಾತಿನೀ ।
ಶಿಶೂಂಶ್ಚಚಾರ ನಿಘ್ನಂತೀ ಪುರಗ್ರಾಮವ್ರಜಾದಿಷು
॥ ೨ ॥

ನ ಯತ್ರ ಶ್ರವಣಾದೀನಿ ರಕ್ಷೋಘ್ನಾನಿ ಸ್ವಕರ್ಮಸು ।
ಕುರ್ವಂತಿ ಸಾತ್ವತಾಂ ಭರ್ತುರ್ಯಾತುಧಾನ್ಯಶ್ಚ ತತ್ರ ಹಿ
॥ ೩ ॥

ಸಾ ಖೇಚರ್ಯೇಕದೋಪೇತ್ಯ ಪೂತನಾ ನಂದಗೋಕುಲಮ್ ।
ಯೋಷಿತ್ವಾ ಮಾಯಯಾऽऽತ್ಮಾನಂ ಪ್ರಾವಿಶತ್ಕಾಮಚಾರಿಣೀ
॥ ೪ ॥

ತಾಂ ಕೇಶಬಂಧವ್ಯತಿಷಕ್ತಮಲ್ಲಿಕಾಂ
ಬೃಹನ್ನಿತಂಬಸ್ತನಕೃಚ್ಛ್ರಮಧ್ಯಮಾಮ್ ।
ಸುವಾಸಸಂ ಕಲ್ಪಿತಕರ್ಣಭೂಷಣ-
ತ್ವಿಷೋಲ್ಲಸತ್ಕುಂತಲಮಂಡಿತಾನನಾಮ್ ॥ ೫ ॥

ವಲ್ಗುಸ್ಮಿತಾಪಾಂಗವಿಸರ್ಗವೀಕ್ಷಿತೈ-
ರ್ಮನೋ ಹರಂತೀಂ ವನಿತಾಂ ವ್ರಜೌಕಸಾಮ್ ।
ಅಮಂಸತಾಂಭೋಜಕರೇಣ ರೂಪಿಣೀಂ
ಗೋಪ್ಯಃ ಶ್ರಿಯಂ ದ್ರಷ್ಟುಮಿವಾಗತಾಂ ಪತಿಮ್ ॥ ೬ ॥

ಬಾಲಗ್ರಹಸ್ತತ್ರ ವಿಚಿನ್ವತೀ ಶಿಶೂ-
ನ್ಯದೃಚ್ಛಯಾ ನಂದಗೃಹೇऽಸದಂತಕಮ್ ।
ಬಾಲಂ ಪ್ರತಿಚ್ಛನ್ನನಿಜೋರುತೇಜಸಂ
ದದರ್ಶ ತಲ್ಪೇऽಗ್ನಿಮಿವಾಹಿತಂ ಭಸಿ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ನಂದಗೋಪನು ಪ್ರಯಾಣಮಾಡುತ್ತಿದ್ದಾಗ ದಾರಿಯಲ್ಲಿ – ವಸುದೇವನು ಹೇಳಿದುದನ್ನು ಪುನಃ ಪುನಃ ಸ್ಮರಿಸಿಕೊಂಡು, ಅವನು ಹೇಳಿದ ಮಾತು ಸುಳ್ಳಾಗುವುದಿಲ್ಲ ಎಂದು ಭಾವಿಸಿ ಆತನು ಉತ್ಪಾತಗಳ ನಿವಾರಣೆಗಾಗಿ ಶ್ರೀಹರಿಯನ್ನೇ ಏಕಾಗ್ರವಾದ ಮನಸ್ಸಿನಿಂದ ಶರಣಾದನು. ॥ ೧ ॥

ವರ್ಷದೊಳಗೆ ಹುಟ್ಟಿದ ಮಕ್ಕಳನ್ನು ಕೊಲ್ಲಲು ಕಂಸನಿಂದ ಕಳುಹಿಸಲ್ಪಟ್ಟವರಲ್ಲಿ 'ಪೂತನಾ' ಎಂಬ ಹೆಸರಿನ ಕ್ರೂರರಾಕ್ಷಸಿಯಿದ್ದಳು. ಘೋರರೂಪಿಯಾದ ಬಾಲಹಂತಕಳಾದ ಆ ಪೂತನೆಯು ಪುರ ಗ್ರಾಮ-ಹಳ್ಳಿಗಳಲ್ಲಿ ಸಿಕ್ಕಿದ ಬಾಲಕರೆಲ್ಲರನ್ನೂ ಹಿಡಿದು ಸಾಯಿಸುತ್ತಾ ಸಂಚರಿಸುತ್ತಿದ್ದಳು. ॥ ೨ ॥ ನಿತ್ಯಕರ್ಮಗಳಲ್ಲಿ ರಾಕ್ಷೋಘ್ನಮಂತ್ರಗಳನ್ನು ಜಪಿಸದವರ ಬಳಿಯಲ್ಲಿ ಮತ್ತು ಭಕ್ತವತ್ಸಲ ಭಗವಂತನ ನಾಮ-ಗುಣ-ಲೀಲೆಗಳನ್ನು ಶ್ರವಣ, ಕೀರ್ತನ, ಸ್ಮರಣೆ ಮಾಡದವರ ಬಳಿಯಲ್ಲಿ ಇಂತಹ ರಾಕ್ಷಸರ ಬಲವು ಹೆಚ್ಚಾಗಿರುತ್ತದೆ. ॥ ೩ ॥ ಆ ಪೂತನೆಯು ಆಕಾಶ ಮಾರ್ಗದಿಂದ ಸಂಚರಿಸುವ, ಬೇಕುಬೇಕಾದ ರೂಪಗಳನ್ನು ಧರಿಸುವ ಸಾಮರ್ಥ್ಯವನ್ನು ಹೊಂದಿದ್ದಳು. ಒಂದು ದಿನ ನಂದನ ಗೋಕುಲದ ಬಳಿಗೆ ಬಂದು ಆಕೆಯು ಮಾಯೆಯಿಂದ ತಾನು ಒಂದು ಸುಂದರ ಯುವತಿಯಾಗಿ ಗೋಕುಲವನ್ನು ಪ್ರವೇಶಿಸಿದಳು. ॥ ೪ ॥ ಆಕೆಯು ಮಾಯೆಯಿಂದ ಸುಂದರಸ್ತ್ರೀರೂಪವನ್ನು ಧರಿಸಿದ್ದಳು. ಘಮ-ಘಮಿಸುವ ಮಲ್ಲಿಗೆಯ ದಂಡೆಯನ್ನು ಮುಡಿದುಕೊಂಡಿದ್ದಳು. ಅಂದವಾದ ಸೀರೆಯನ್ನು ಉಟ್ಟಿದ್ದಳು. ಆಕೆಯ ಕರ್ಣಕುಂಡಲಗಳು ಅಲುಗಾಡಿದಾಗ ಆಕೆಯ ಹೊಳೆಯುವ ಮುಖದ ಕಡೆಗೆ ವಾಲಿದ ಮುಂಗುರುಳುಗಳು ಹೆಚ್ಚಿನ ಶೋಭೆಯನ್ನು ತಂದಿದ್ದವು. ಆಕೆಯ ನಿತಂಬಗಳು ಕುಚಕಲಶಗಳು ಉನ್ನತವಾಗಿದ್ದು ನಡುವು ಕಿರಿದಾಗಿತ್ತು. ॥ ೫ ॥ ಅವಳು ತನ್ನ ಮಧುರ ಮಂದಹಾಸದಿಂದ ಮತ್ತು ಕಡೆಗಣ್ಣಿನ ನೋಟದಿಂದ ವ್ರಜವಾಸಿಗಳ ಚಿತ್ತವನ್ನು ಅಪಹರಿಸುತ್ತಿದ್ದಳು. ಆ ರೂಪಸಂಪನ್ನೆಯಾದ ರಮಣಿಯು ಕೈಯಲ್ಲಿ ಕಮಲವನ್ನೆತ್ತಿಕೊಂಡು ಬರುತ್ತಿರುವುದನ್ನು ನೋಡಿದ ಗೋಪಿಯರು ಸ್ವಯಂ ಮಹಾಲಕ್ಷ್ಮಿಯೇ ಪತಿಯ ದರ್ಶನಕ್ಕಾಗಿ ಬಂದಿರುವಳೋ ಎಂದು ಭಾವಿಸಿದರು. ॥ ೬ ॥

ಪೂತನೆಯು ಬಾಲಕರಿಗೆ ಬಾಲಗ್ರಹದಂತಿದ್ದಳು. ಆಕೆಯು ಅಲ್ಲಲ್ಲಿ ಬಾಲಕರನ್ನು ಹುಡುಕುತ್ತಾ ಅನಾಯಾಸವಾಗಿ ನಂದ ಗೋಪನ ಮನೆಯಲ್ಲಿ ನುಗ್ಗಿದಳು. ಬಾಲಕನಾದ ಶ್ರೀಕೃಷ್ಣನು ಹಾಸಿಗೆಯ ಮೇಲೆ ಮಲಗಿದ್ದನು. ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ದುಷ್ಟರಿಗೆ ಕಾಲಸ್ವರೂಪನಾಗಿದ್ದನು. ಆದರೆ ಬೂದಿಯರಾಶಿಯಲ್ಲಿ ಬೆಂಕಿಯು ಅಡಗಿರುವಂತೆ ಆಗ ಅವನು ತನ್ನ ಪ್ರಚಂಡ ತೇಜಸ್ಸನ್ನು ಅಡಗಿಸಿಕೊಂಡಿದ್ದನು. ॥ ೭ ॥

ವಿಬುಧ್ಯ ತಾಂ ಬಾಲಕಮಾರಿಕಾಗ್ರಹಂ
ಚರಾಚರಾತ್ಮಾऽऽಸ ನಿಮೀಲಿತೇಕ್ಷಣಃ ।
ಅನಂತಮಾರೋಪಯದಂಕಮಂತಕಂ
ಯಥೋರಗಂ ಸುಪ್ತಮಬುದ್ಧಿರಜ್ಜುಧೀಃ ॥ ೮ ॥

ತಾಂ ತೀಕ್ಷ್ಣಚಿತ್ತಾಮತಿವಾಮಚೇಷ್ಟಿತಾಂ
ವೀಕ್ಷ್ಯಾಂತರಾ ಕೋಶಪರಿಚ್ಛದಾಸಿವತ್ ।
ವರಸ್ತ್ರಿಯಂ ತತ್ಪ್ರಭಯಾ ಚ ಧರ್ಷಿತೇ
ನಿರೀಕ್ಷಮಾಣೇ ಜನನೀ ಹ್ಯತಿಷ್ಠತಾಮ್ ॥ ೯ ॥

ತಸ್ಮಿನ್ ಸ್ತನಂ ದುರ್ಜರವೀರ್ಯಮುಲ್ಬಣಂ
ಘೋರಾಂಕಮಾದಾಯ ಶಿಶೋರ್ದದಾವಥ ।
ಗಾಢಂ ಕರಾಭ್ಯಾಂ ಭಗವಾನ್ಪಪೀಡ್ಯ ತತ್
ಪ್ರಾಣೈಃ ಸಮಂ ರೋಷಸಮನ್ವಿತೋऽಪಿಬತ್ ॥ ೧೦ ॥

ಸಾ ಮುಂಚ ಮುಂಚಾಲಮಿತಿ ಪ್ರಭಾಷಿಣೀ
ನಿಷ್ಪೀಡ್ಯಮಾನಾಖಿಲಜೀವಮರ್ಮಣಿ ।
ವಿವೃತ್ಯ ನೇತ್ರೇ ಚರಣೌ ಭುಜೌ ಮುಹುಃ
ಪ್ರಸ್ವಿನ್ನಗಾತ್ರಾ ಕ್ಷಿಪತೀ ರುರೋದ ಹ ॥ ೧೧ ॥

ತಸ್ಯಾಃ ಸ್ವನೇನಾತಿಗಭೀರರಂಹಸಾ
ಸಾದ್ರಿರ್ಮಹೀ ದ್ಯೌಶ್ಚ ಚಚಾಲ ಸಗ್ರಹಾ ।
ರಸಾ ದಿಶಶ್ಚ ಪ್ರತಿನೇದಿರೇ ಜನಾಃ
ಪೇತುಃ ಕ್ಷಿತೌ ವಜ್ರನಿಪಾತಶಂಕಯಾ ॥ ೧೨ ॥

ನಿಶಾಚರೀತ್ಥಂ ವ್ಯಥಿತಸ್ತನಾ ವ್ಯಸು-
ರ್ವ್ಯಾದಾಯ ಕೇಶಾಂಶ್ಚರಣೌ ಭುಜಾವಪಿ ।
ಪ್ರಸಾರ್ಯ ಗೋಷ್ಠೇ ನಿಜರೂಪಮಾಸ್ಥಿತಾ
ವಜ್ರಾಹತೋ ವೃತ್ರ ಇವಾಪತನ್ನೃಪ ॥ ೧೩ ॥

ಭಗವಾನ್ ಶ್ರೀಕೃಷ್ಣನು ಚರಾಚರ ಪ್ರಾಣಿಗಳೆಲ್ಲರ ಆತ್ಮನಾಗಿರುವನು. ಅದರಿಂದ ಬಳಿಗೆ ಬಂದಿರುವ ಇವಳು ಮಕ್ಕಳನ್ನು ಕೊಲ್ಲುವಂತಹ ಬಾಲಘಾತಿನಿ ಎಂಬುದನ್ನು ಕ್ಷಣಮಾತ್ರದಲ್ಲಿ ಅರಿತು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ಯಾರಾದರೂ ಭ್ರಮೆಯಿಂದ ಮಲಗಿದ ಸರ್ಪವನ್ನು ಹಗ್ಗವೆಂದು ಬಗೆದು ಎತ್ತಿಕೊಳ್ಳುವಂತೆಯೇ ತನ್ನ ಕಾಲಸ್ವರೂಪನಾದ ಭಗವಾನ್ ಶ್ರೀಕೃಷ್ಣನನ್ನು ಪೂತನೆಯು ಎತ್ತಿಕೊಂಡು ತನ್ನ ತೊಡೆಯಲ್ಲಿ ಇರಿಸಿಕೊಂಡಳು. ॥ ೮ ॥ ಒರೆಯಲ್ಲಿರುವ ತೀಕ್ಷ್ಣವಾದ ಅಲಗುಳ್ಳ ಕತ್ತಿಯಂತೆ ಪೂತನೆಯ ಹೃದಯವು ಅತ್ಯಂತ ಕಠೋರವೂ, ಕುಟಿಲವೂ ಆಗಿತ್ತು. ಆದರೆ ಬಹಿರಂಗದಲ್ಲಿ ಮಾತ್ರ ಅವಳು ಮಧುರವೂ, ಸುಂದರವೂ ಆದ ವ್ಯವಹಾರಗಳನ್ನು ಮಾಡುತ್ತಿದ್ದಳು. ನೋಡಲು ಆಕೆಯು ಓರ್ವ ಭದ್ರಮಹಿಳೆಯಂತೆ ಕಂಡುಬರುತ್ತಿದ್ದಳು. ಅದರಿಂದಾಗಿ ರೋಹಿಣಿಯಾಗಲೀ, ಯಶೋದೆಯಾಗಲೀ ಅವಳು ಮನೆಯೊಳಗೆ ಬಂದಾಗ ಆಕೆಯನ್ನು ತಡೆಯದೆ ಅವಳ ಸೌಂದರ್ಯ ಪ್ರಭೆಯಿಂದ ಬೆರಗಾಗಿ ಸುಮ್ಮನೆ ನಿಂತು ನೋಡುತ್ತಿದ್ದರು. ॥ ೯ ॥ ಇತ್ತ ಭಯಂಕರಳಾದ ರಾಕ್ಷಸಿ ಪೂತನೆಯು ಬಾಲಕ ಶ್ರೀಕೃಷ್ಣನನ್ನು ತನ್ನ ತೊಡೆಯಲ್ಲಿ ಮಲಗಿಸಿಕೊಂಡು ಅವನ ಬಾಯಿಯಲ್ಲಿ ತನ್ನ ಸ್ತನವನ್ನಿಟ್ಟಳು. ಅದರಲ್ಲಿ ಭಯಂಕರವಾದ ಮತ್ತು ಯಾವ ರೀತಿಯಿಂದಲೂ ಆರಗದೇ ಇರುವ ವಿಷವನ್ನು ಲೇಪಿಸಿಕೊಂಡಿದ್ದಳು. ಅವಳ ದುಷ್ಟತನವನ್ನು ನೋಡಿ ಅತ್ಯಂತ ರುಷ್ಟನಾದ ಶ್ರೀಕೃಷ್ಣನು ಅವಳ ಸ್ತನಗಳನ್ನು ತನ್ನ ಪುಟ್ಟದಾದ ಎರಡು ಕೈಗಳಿಂದಲೂ ಗಟ್ಟಿಯಾಗಿ ಹಿಡಿದು ಅವಳ ಪ್ರಾಣಗಳೊಡನೆಯೇ ಸ್ತನ್ಯಪಾನ ಮಾಡಿದನು. ॥ ೧೦ ॥ ಆಕೆಯ ಸ್ತನ್ಯದ ಜೊತೆಯಲ್ಲೇ ಪ್ರಾಣಗಳನ್ನೂ ಹೀರುತ್ತಿದ್ದಂತೆ ರಾಕ್ಷಸಿಯ ಮರ್ಮಸ್ಥಾನಗಳೆಲ್ಲ ಶಿಥಿಲಗೊಂಡವು. 'ಅಯ್ಯೋ! ಬಿಡು! ಬಿಟ್ಟುಬಿಡು! ನನ್ನ ಪ್ರಾಣಪಕ್ಷಿಯೇ ಹಾರಿಹೋಗುತ್ತಿದೆ, ಸಾಕುಮಾಡು! ಎಂದು ರಾಕ್ಷಸಿಯು ಗಟ್ಟಿಯಾಗಿ ಅರಚುತ್ತಿದ್ದಳು. ಕಣ್ಣುಗಳು ಅಗಲವಾಗಿ ಬಿಟ್ಟುಕೊಂಡು, ಬೆವರಿನಿಂದ ತೊಯ್ದುಹೋಗಿ, ಕೈ-ಕಾಲುಗಳನ್ನು ಬಡಿಯುತ್ತಾ ಇದ್ದಳು. ॥ ೧೧ ॥ ಆಕೆಯ ಭಯಂಕರವಾದ ಮತ್ತು ರಭಸದಿಂದ ಕೂಡಿದ ಕಿರುಚಾಟಕ್ಕೆ ಪರ್ವತಗಳಿಂದ ಕೂಡಿದ ಭೂಮಿಯೂ, ಗ್ರಹಗಳಿಂದ ಕೂಡಿದ ಅಂತರಿಕ್ಷವೂ ನಡುಗಿದವು. ಅವಳ ಘೋರವಾದ ಕೂಗಾಟವು ಹತ್ತು ದಿಕ್ಕುಗಳಲ್ಲಿಯೂ, ಏಳು ಪಾತಾಳಗಳಲ್ಲಿಯೂ ಪ್ರತಿಧ್ವನಿಸಿತು. ಅನೇಕ ಜನರು ಸಿಡಿಲು ಬಿದ್ದಿತೆಂಬ ಭಯದಿಂದ ಭೂಮಿಗುರುಳಿದರು. ॥ ೧೨ ॥ ಪರೀಕ್ಷಿತನೇ! ಈ ಪ್ರಕಾರ ನಿಶಾಚರಿಯಾದ ಪೂತನೆಯ ಸ್ತನಗಳಲ್ಲಿ ಉಂಟಾದ ಅತೀವ ನೋವಿನಿಂದ ತನ್ನನ್ನು ಮರೆಮಾಚಿಕೊಳ್ಳದೆ ರಾಕ್ಷಸಿಯಾಗಿ ಪ್ರಕಟಗೊಂಡಳು. ಆಕೆಯ ಶರೀರದಿಂದ ಪ್ರಾಣಗಳು ಹೊರಟುಹೋದುವು. ತೆರೆಯಲ್ಪಟ್ಟ ಬಾಯಿಯಿಂದ, ಕೆದರಿದ ಕೂದಲಿನಿಂದ, ಕೈಕಾಲುಗಳನ್ನು ಚಾಚಿಕೊಂಡು ವಜ್ರಾಹತನಾದ ವೃತ್ರಾಸುರನಂತೆ ಗೊಲ್ಲರಹಳ್ಳಿಯ ಪಕ್ಕದಲ್ಲಿ ಬಿದ್ದು ಬಿಟ್ಟಳು. ॥ ೧೩ ॥

ಪತಮಾನೋಽಪಿ ತದ್ದೇಹಸ್ತ್ರಿಗವ್ಯೂತ್ಯಂತರದ್ರುಮಾನ್ ।
ಚೂರ್ಣಯಾಮಾಸ ರಾಜೇಂದ್ರ ಮಹದಾಸೀತ್ತದದ್ಭುತಮ್
॥ ೧೪ ॥

ರಾಜೇಂದ್ರನೇ ! ಪೂತನೆಯ ರಾಕ್ಷಸೀ ಶರೀರವು ಬೀಳುತ್ತಿರುವಾಗ ಆರು ಗಾವುದದೊಳಗಿನ ಮರ-ಗಿಡ-ಬಳ್ಳಿಗಳು ನುಚ್ಚು ನೂರಾದವು. ಇದೊಂದು ಪರಮಾದ್ಭುತ ಘಟನೆಯಾಗಿ ಕಂಡಿತು. ॥ ೧೪ ॥

ಈಷಾಮಾತ್ರೋಗ್ರದಂಷ್ಟ್ರಾಸ್ಯಂ ಗಿರಿಕಂದರನಾಸಿಕಮ್ ।
ಗಂಡಶೈಲಸ್ತನಂ ರೌದ್ರಂ ಪ್ರಕೀರ್ಣಾರುಣಮೂರ್ಧಜಮ್
॥ ೧೫ ॥

ಪೂತನೆಯ ಶರೀರವು ಅತಿ ಭಯಂಕರವಾಗಿತ್ತು. ಆಕೆಯ ಮುಖದಲ್ಲಿ ನೇಗಿಲಿನಂತಹ ತೀಕ್ಷ್ಣವಾದ ಕೋರೆದಾಡೆಗಳಿದ್ದವು. ಮೂಗಿನ ಹೊಳ್ಳೆಗಳು ಪರ್ವತದ ಗುಹೆಯಂತೆ ವಿಶಾಲವೂ ಆಳವೂ ಆಗಿದ್ದವು. ಸ್ತನಗಳು ಪರ್ವತದಿಂದ ಉರುಳಿದ ದೊಡ್ಡ ಬಂಡೆಗಳಂತೆ ಸ್ಥೂಲವಾಗಿದ್ದವು. ಅವಳ ಕೆಂಪಾದ ತಲೆಗೂದಲು ಕೆದರಿಕೊಂಡಿತ್ತು. ॥ ೧೫ ॥

ಅಂಧಕೂಪಗಭೀರಾಕ್ಷಂ ಪುಲಿನಾರೋಹಭೀಷಣಮ್ ।
ಬದ್ಧಸೇತುಭುಜೋರ್ವಂಘ್ರಿ ಶೂನ್ಯತೋಯಹ್ರದೋದರಮ್
॥ ೧೬ ॥

ಅವಳ ಕಣ್ಣುಗಳು ಪಾಳುಬಾವಿಯಂತೆ ಗುಳಿಬಿದ್ದಿದ್ದವು. ನಿತಂಬಗಳು ನದಿಯಲ್ಲಿನ ಮರಳು ದಿನ್ನೆಯಂತೆ ಎತ್ತರವಾಗಿಯೂ, ಭಯಂಕರವಾಗಿಯೂ ಇದ್ದವು. ತೋಳು-ತೊಡೆಗಳು-ಕಾಲುಗಳು ನದಿಗೆ ಕಟ್ಟಿದ ಸೇತುವೆಯಂತಿದ್ದವು. ಹೊಟ್ಟೆಯು ಒಣಗಿದ ಸರೋವರದಂತೆ ಕಂಡುಬರುತ್ತಿತ್ತು. ॥ ೧೬ ॥

ಸಂತತ್ರಸುಃ ಸ್ಮ ತದ್ವೀಕ್ಷ್ಯ ಗೋಪಾ ಗೋಪ್ಯಃ ಕಲೇವರಮ್ ।
ಪೂರ್ವಂ ತು ತನ್ನಿಃಸ್ವನಿತಭಿನ್ನಹೃತ್ಕರ್ಣಮಸ್ತಕಾಃ
॥ ೧೭ ॥

ಪೂತನೆಯ ಘೋರ ಶರೀರವನ್ನು ನೋಡಿ ಎಲ್ಲ ಗೋಪಾಲಕರೂ, ಗೋಪಿಯರೂ ಭಯಗೊಂಡರು. ಆಕೆಯ ಭಯಂಕರ ಕೂಗಾಟವನ್ನು ಕೇಳಿದ ಅವರ ಹೃದಯ, ಕಿವಿಗಳು, ತಲೆಗಳೂ ಮೊದಲೇ ಒಡೆದಂತಾಗಿದ್ದವು. ॥ ೧೭ ॥

ಬಾಲಂ ಚ ತಸ್ಯಾ ಉರಸಿ ಕ್ರೀಡಂತಮಕುತೋಭಯಮ್ ।
ಗೋಪ್ಯಸ್ತೂರ್ಣಂ ಸಮಭ್ಯೇತ್ಯ ಜಗೃಹುರ್ಜಾತಸಂಭ್ರಮಾಃ
॥ ೧೮ ॥

ಅಂತಹ ಬೃಹದಾಕಾರವಾದ ಪೂತನೆಯ* ವಕ್ಷಸ್ಥಳದಲ್ಲಿ ಪುಟ್ಟ ಶ್ರೀಕೃಷ್ಣನು ನಿರ್ಭಯನಾಗಿ ಆಡುತ್ತಿರುವುದನ್ನು ನೋಡಿದ ಗೋಪಿಯರು ಗಾಬರಿಗೊಂಡು ಒಡನೆಯೇ ಅವಸರದಿಂದ ಮಗುವನ್ನೆತ್ತಿಕೊಂಡರು. ॥ ೧೮ ॥

ಯಶೋದಾರೋಹಿಣೀಭ್ಯಾಂ ತಾಃ ಸಮಂ ಬಾಲಸ್ಯ ಸರ್ವತಃ ।
ರಕ್ಷಾಂ ವಿದಧಿರೇ ಸಮ್ಯಗ್ಗೋಪುచ್ಛಭ್ರಮಣಾದಿಭಿಃ
॥ ೧೯ ॥

ಇದಾದ ಬಳಿಕ ಯಶೋದೆ ಮತ್ತು ರೋಹಿಣಿಯರೊಂದಿಗೆ ಗೋಪಿಯರು ಹಸುವಿನ ಬಾಲದಿಂದ ಬಾಲಕೃಷ್ಣನಿಗೆ ನಿವಾಳಿಸಿ, ಎಲ್ಲ ರೀತಿಯಿಂದ ರಕ್ಷೆಯನ್ನು ಮಾಡಿದರು. ॥ ೧೯ ॥

ಗೋಮೂತ್ರೇಣ ಸ್ನಾಪಯಿತ್ವಾ ಪುನರ್ಗೋರಜಸಾರ್ಭಕಮ್ ।
ರಕ್ಷಾಂ ಚಕ್ರುಶ್ಚ ಶಕೃತಾ ದ್ವಾದಶಾಂಗೇಷು ನಾಮಭಿಃ
॥ ೨೦ ॥

ಮೊದಲಿಗೆ ಬಾಲಕೃಷ್ಣನನ್ನು ಗೋಮೂತ್ರದಿಂದ ಸ್ನಾನಮಾಡಿಸಿದರು. ಮತ್ತೆ ಅವನ ಎಲ್ಲ ಅಂಗಾಂಗಗಳಿಗೆ ಗೋಧೂಳಿಯನ್ನು ಹಚ್ಚಿ ಹನ್ನೆರಡೂ ಅಂಗಗಳಿಗೆ ಸೆಗಣಿಯನ್ನು ಹಚ್ಚಿ, ಭಗವಂತನ ಕೇಶವಾದಿ ದ್ವಾದಶನಾಮಗಳಿಂದ ಅಭಿಮಂತ್ರಿಸಿ ರಕ್ಷೆಯನ್ನಿಟ್ಟರು.** ॥ ೨೦ ॥

ಗೋಪ್ಯಃ ಸಂಸ್ಪೃಷ್ಟಸಲಿಲಾ ಅಂಗೇಷು ಕರಯೋಃ ಪೃಥಕ್ ।
ನ್ಯಸ್ಯಾತ್ಮನ್ಯಥ ಬಾಲಸ್ಯ ಬೀಜನ್ಯಾಸಮಕುರ್ವತ
॥ ೨೧ ॥

ಆನಂತರ ಗೋಪಿಯರು ಆಚಮನಮಾಡಿ 'ಅಜಾದಿ ದ್ವಾದಶ ಬೀಜಮಂತ್ರಗಳಿಂದ ತಮ್ಮ ಶರೀರದಲ್ಲಿ ಬೇರೆ-ಬೇರೆಯಾಗಿ ಅಂಗನ್ಯಾಸ-ಕರನ್ಯಾಸವನ್ನು ಮಾಡಿಕೊಂಡು ಮತ್ತೆ ಬಾಲಕನ ಅಂಗಗಳಲ್ಲಿ ಬೀಜನ್ಯಾಸ ಮಾಡಿದರು. ॥ ೨೧ ॥

---

* ಬಲಿಚಕ್ರವರ್ತಿಗೆ ರತ್ನಮಾಲಾ ಎಂಬ ಕನ್ಯೆಯೊಬ್ಬಳಿದ್ದಳು. ಯಜ್ಞಶಾಲೆಯಲ್ಲಿ ವಾಮನ ಭಗವಂತನನ್ನು ನೋಡಿದ ಆಕೆಯ ಹೃದಯದಲ್ಲಿ ಪುತ್ರಸ್ನೇಹದ ಭಾವವು ಉದಯಿಸಿತು. ಇವನು ನನಗೆ ಸ್ತನ್ಯಪಾನಮಾಡುವಂತಹ ಬಾಲಕನಾದರೆ ನಾನು ಸಂತೋಷದಿಂದ ಇವನಿಗೆ ಸ್ತನ್ಯಪಾನಮಾಡಿಸುವೆ ಎಂದು ಮನಸ್ಸಿನಲ್ಲೇ ಅಂದುಕೊಂಡಳು. ವಾಮನ ಭಗವಂತನು ತನ್ನ ಭಕ್ತನಾದ ಬಲಿಯ ಪುತ್ರಿಯ ಈ ಮನೋರಥವನ್ನು ಮನಸ್ಸಿನಲ್ಲೇ ಅನುಮೋದಿಸಿದನು. ಆ ರತ್ನಮಾಲೆಯೇ ದ್ವಾಪರದಲ್ಲಿ ಪೂತನೆಯಾಗಿ ಹುಟ್ಟಿ, ಶ್ರೀಕೃಷ್ಣನ ಸ್ಪರ್ಶದಿಂದ ಅವಳ ಅಭಿಲಾಷೆ ಪೂರ್ಣಗೊಂಡಿತು.

** ಕೇಶವಾದಿ ಹನ್ನೆರಡು ನಾಮಗಳ ನ್ಯಾಸವು ಹೀಗಿದೆ :
ಲಲಾಟೇ ಕೇಶವಂ ಧ್ಯಾಯೇನ್ನಾರಾಯಣಮಥೋದರೇ । ವಕ್ಷಃಸ್ಥಲೇ ಮಾಧವಂ ತು ಗೋವಿಂದಂ ಕಂಠಕೂಬರೇ ॥
ವಿಷ್ಣುಂ ಚ ದಕ್ಷಿಣೇ ಕುಕ್ಷೌ ಬಾಹೌ ಚ ಮಧುಸೂದನಮ್ । ತ್ರಿವಿಕ್ರಮಂ ಕಂದರೇ ತು ವಾಮನಂ ವಾಮಪಾರ್ಶ್ವಕೇ ॥
ಶ್ರೀಧರಂ ವಾಮಬಾಹೌ ತು ಹೃಷೀಕೇಶಂ ತು ಕಂಧರೇ । ಪೃಷ್ಠೇ ತು ಪದ್ಮನಾಭಂ ಚ ಕಟ್ಯಾಂ ದಾಮೋದರಂ ನ್ಯಸೇತ್ ॥
ವಿಷ್ಣುಭಕ್ತರು ಪ್ರತಿದಿನವೂ ತಮ್ಮ ಹಣೆ, ಹೊಟ್ಟೆ, ಎದೆ, ಕಂಠದ ಮುಂಭಾಗ, ಬಲಹೊಟ್ಟೆ, ಬಲತೋಳು, ಕತ್ತಿನ ಹಿಂಭಾಗ, ಬಲಹೆಗಲು, ಎಡಪಕ್ಕ, ಎಡತೋಳು, ಎಡಹೆಗಲು, ಬೆನ್ನು, ನಡು – ಈ ಅಂಗಗಳಲ್ಲಿ ಅನುಕ್ರಮವಾಗಿ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ – ಎಂಬ ನಾಮಗಳಿಂದ ನ್ಯಾಸಮಾಡಬೇಕು.

ಅವ್ಯಾದಜೋಂಘ್ರಿಮಣಿಮಾಂಸ್ತವ ಜಾನ್ವಥೋರೂ
ಯಜ್ಞೋಽಚ್ಯುತಃ ಕಟಿತಟಂ ಜಠರಂ ಹಯಾಸ್ಯಃ ।
ಹೃತ್ಕೇಶವಸ್ತ್ವದುರ ಈಶ ಇನಸ್ತು ಕಂಠಂ
ವಿಷ್ಣುರ್ಭುಜಂ ಮುಖಮುರುಕ್ರಮ ಈಶ್ವರಃ ಕಮ್
॥ ೨೨ ॥

ಚಕ್ರ್ಯಗ್ರತಃ ಸಹಗದೋ ಹರಿರಸ್ತು ಪಶ್ಚಾ-
ತ್ತ್ವತ್ತಾರ್ಜ್ಜಯೋರ್ಧನುರಸೀ ಮಧುಹಾಜನಶ್ಚ ।
ಕೋಣೇಷು ಶಂಖ ಉರುಗಾಯ ಉಪರ್ಯುಪೇಂದ್ರ-
ಸ್ತಾರ್ಕ್ಷ್ಯಃ ಕ್ಷಿತೌ ಹಲಧರಃ ಪುರುಷಃ ಸಮಂತಾತ್ ॥ ೨೩ ॥

ಇಂದ್ರಿಯಾಣಿ ಹೃಷೀಕೇಶಃ ಪ್ರಾಣಾನ್ನಾರಾಯಣೋಽವತು ।
ಶ್ವೇತದ್ವೀಪಪತಿಶ್ಚಿತ್ತಂ ಮನೋ ಯೋಗೇಶ್ವರೋಽವತು
॥ ೨೪ ॥

ಪೃಶ್ನಿಗರ್ಭಸ್ತು ತೇ ಬುದ್ಧಿಮಾತ್ಮಾನಂ ಭಗವಾನ್ಪರಃ ।
ಕ್ರೀಡಂತಂ ಪಾತು ಗೋವಿಂದಃ ಶಯಾನಂ ಪಾತು ಮಾಧವಃ
॥ ೨೫ ॥

ವ್ರಜಂತಮವ್ಯಾದ್ವೈಕುಂಠ ಆಸೀನಂ ತ್ವಾಂ ಶ್ರಿಯಃ ಪತಿಃ ।
ಭುಂಜಾನಂ ಯಜ್ಞಭುಕ್ಪಾತು ಸರ್ವಗ್ರಹಭಯಂಕರಃ
॥ ೨೬ ॥

ಡಾಕಿನ್ಯೋ ಯಾತುಧಾನ್ಯಶ್ಚ ಕೂಷ್ಮಾಂಡಾ ಯೇಽರ್ಭಕಗ್ರಹಾಃ ।
ಭೂತಪ್ರೇತಪಿಶಾಚಾಶ್ಚ ಯಕ್ಷರಕ್ಷೋವಿನಾಯಕಾಃ
॥ ೨೭ ॥

ಕೋಟರಾ ರೇವತೀ ಜ್ಯೇಷ್ಠಾ ಪೂತನಾ ಮಾತೃಕಾದಯಃ ।
ಉನ್ಮಾದಾ ಯೇ ಹ್ಯಪಸ್ಮಾರಾ ದೇಹಪ್ರಾಣೇಂದ್ರಿಯದ್ರುಹಃ
॥ ೨೮ ॥

ಸ್ವಪ್ನದೃಷ್ಟಾ ಮಹೋತ್ಪಾತಾ ವೃದ್ಧಬಾಲಗ್ರಹಾಶ್ಚ ಯೇ ।
ಸರ್ವೇ ನಶ್ಯಂತು ತೇ ವಿಷ್ಣೋರ್ನಾಮಗ್ರಹಣಭೀರವಃ
॥ ೨೯ ॥

ಶ್ರೀಶುಕ ಉವಾಚ

ಇತಿ ಪ್ರಣಯಬದ್ಧಾಭಿರ್ಗೋಪೀಭಿಃ ಕೃತರಕ್ಷಣಮ್ ।
ಪಾಯಯಿತ್ವಾ ಸ್ತನಂ ಮಾತಾ ಸಂನ್ಯವೇಶಯದಾತ್ಮಜಮ್
॥ ೩೦ ॥

ತಾವನ್ನಂದಾದಯೋ ಗೋಪಾ ಮಥುರಾಯಾ ವ್ರಜಂ ಗತಾಃ ।
ವಿಲೋಕ್ಯ ಪೂತನಾದೇಹಂ ಬಭೂವುರತಿವಿಸ್ಮಿತಾಃ
॥ ೩೧ ॥

ನೂನಂ ಬತರ್ಷಿಃ ಸಂಜಾತೋ ಯೋಗೇಶೋ ವಾ ಸಮಾಸ ಸಃ ।
ಸ ಏವ ದೃಷ್ಟೋ ಹ್ಯುತ್ಪಾತೋ ಯದಾಹಾನಕದುಂದುಭಿಃ
॥ ೩೨ ॥

ಅಜನ್ಯನಾದ ಭಗವಂತನು ನಿನ್ನ ಕಾಲುಗಳನ್ನೂ ರಕ್ಷಿಸಲಿ. ಮಣಿಮಂತನು ನಿನ್ನ ಮೊಣಕಾಲುಗಳನ್ನು ರಕ್ಷಿಸಲಿ. ಯಜ್ಞಪುರುಷನು ತೊಡೆಗಳನ್ನೂ, ಅಚ್ಯುತನು ಸೊಂಟವನ್ನೂ ಹಯಗ್ರೀವನು ಹೊಟ್ಟೆಯನ್ನೂ, ಕೇಶವನು ಹೃದಯವನ್ನೂ ಈಶನು ವಕ್ಷಸ್ಥಳವನ್ನೂ, ಸೂರ್ಯನು ಕಂಠವನ್ನೂ ವಿಷ್ಣುವು ಬಾಹುಗಳನ್ನೂ ಉರುಕ್ರಮನು ಮುಖವನ್ನೂ, ಈಶ್ವರನು ಶಿರಸ್ಸನ್ನೂ ರಕ್ಷಿಸಲಿ. ॥ ೨೨ ॥ ಚಕ್ರಿಯು ನಿನ್ನ ಮುಂಭಾಗವನ್ನು ರಕ್ಷಿಸಲಿ. ಗದಾಧರನು ನಿನ್ನ ಹಿಂಭಾಗವನ್ನೂ, ಧನುಸ್ಸನ್ನೂ, ಖಡ್ಗವನ್ನೂ, ಧರಿಸಿದ ಭಗವಾನ್ ಮಧುಸೂದನನೂ, ಅಜನೂ ಎರಡೂ ಪಾರ್ಶ್ವಗಳನ್ನೂ, ಶಂಖಧರನಾದ ಉರುಗಾಯನು ನಾಲ್ಕು ಮೂಲೆಗಳನ್ನೂ ಉಪೇಂದ್ರನು ಮೇಲೆಯೂ, ಗರುಡನು ಪೃಥ್ವಿಯ ಮೇಲೆಯೂ, ಭಗವಾನ್ ಪರಮಪುರುಷನಾದ ಹಲಧರನು ಎಲ್ಲ ಕಡೆಯಿಂದಲೂ ರಕ್ಷಿಸಲಿ. ॥ ೨೩ ॥ ಹೃಷೀಕೇಶನು ನಿನ್ನ ಇಂದ್ರಿಯಗಳನ್ನೂ ರಕ್ಷಿಸಲಿ. ನಾರಾಯಣನು ಪ್ರಾಣಗಳನ್ನು ರಕ್ಷಿಸಲಿ. ಚಿತ್ತವನ್ನು ಶ್ವೇತದ್ವೀಪದ ಒಡೆಯನು ರಕ್ಷಿಸಲಿ. ಯಜ್ಞೇಶ್ವರನು ಮನಸ್ಸನ್ನು ರಕ್ಷಿಸಲಿ. ॥ ೨೪ ॥ ಪೃಶ್ನಿಗರ್ಭನು ನಿನ್ನ ಬುದ್ಧಿಯನ್ನೂ, ನಿನ್ನ ಅಹಂಕಾರವನ್ನು ಭಗವಂತ ನಾದ ಪರಮಾತ್ಮನು ರಕ್ಷಿಸಲಿ. ಆಟವಾಡುತ್ತಿರುವಾಗ ಗೋವಿಂದನು ರಕ್ಷಿಸಲಿ. ಮಲಗಿರುವಾಗ ಮಾಧವನು ರಕ್ಷಿಸಲಿ. ॥ ೨೫ ॥ ನಡೆಯುವಾಗ ಭಗವಾನ್ ವೈಕುಂಠನೂ, ಕುಳಿತಿರುವಾಗ ಭಗವಾನ್ ಶ್ರೀಪತಿಯು ನಿನ್ನನ್ನು ರಕ್ಷಿಸಲಿ. ಸಮಸ್ತ ದುಷ್ಟಗ್ರಹಗಳಿಗೆ ಭಯವನ್ನು ಉಂಟುಮಾಡುವ ಯಜ್ಞಭುಜನು ಊಟಮಾಡುವಾಗ ನಿನ್ನನ್ನು ರಕ್ಷಿಸಲಿ. ॥ ೨೬ ॥ ಡಾಕಿನೀ, ಯಾತು ಧಾನಾ, ಕೂಷ್ಮಾಂಡಾ ಮುಂತಾದ ಬಾಲಗ್ರಹರು ; ಭೂತ, ಪ್ರೇತ, ಪಿಶಾಚಿ, ಯಕ್ಷ ರಾಕ್ಷಸ, ವಿನಾಯಕ, ಕೋಟರಾ, ರೇವತೀ, ಜ್ಯೇಷ್ಠಾ ಪೂತನಾ, ಮಾತೃಕಾ ಇವೇ ಮೊದಲಾದವುಗಳು ಶರೀರ, ಪ್ರಾಣ, ಇಂದ್ರಿಯಗಳನ್ನು ನಾಶಪಡಿಸುವಂತಹ ಉನ್ಮಾದ (ಹುಚ್ಚುತನ), ಅಪಸ್ಮಾರ (ಮೂರ್ಛೆ) ಮುಂತಾದ ರೋಗಗಳೂ ; ಸ್ವಪ್ನದಲ್ಲಿ ಕಾಣಿಸಿಕೊಳ್ಳುವ ಮಹಾ ಉತ್ಪಾತಗಳೂ, ವೃದ್ಧಗ್ರಹ ಬಾಲಗ್ರಹ ಮುಂತಾದವುಗಳೆಲ್ಲ ಅನಿಷ್ಟಗಳು ಭಗವಾನ್ ವಿಷ್ಣುವಿನ ನಾಮೋಚ್ಚಾರಣೆಯಿಂದ ಭಯಗೊಂಡು ನಾಶವಾಗಿ ಹೋಗಲಿ.
॥ ೨೭-೨೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಈ ಪ್ರಕಾರವಾಗಿ ಗೋಪಿಯರು ಪ್ರೇಮಪಾಶಕ್ಕೆ ಬಂಧಿತರಾಗಿ ಭಗವಾನ್ ಶ್ರೀಕೃಷ್ಣನಿಗೆ ರಕ್ಷೆಯನ್ನಿಟ್ಟರು. ತಾಯಿ ಯಶೋದೆಯು ತನ್ನ ಮಗುವಿಗೆ ಹಾಲುಣಿಸಿ ತೊಟ್ಟಿಲಲ್ಲಿ ಮಲಗಿಸಿದಳು. ॥ ೩೦ ॥ ಇದೇ ಸಮಯಕ್ಕೆ ನಂದಗೋಪನೂ ಅವನ ಸಂಗಡಿಗರೂ ಮಥುರೆಯಿಂದ ಗೋಕುಲಕ್ಕೆ ಬಂದು ತಲುಪಿದರು. ಅವರು ಪೂತನೆಯ ಭಯಂಕರ ಶರೀರವನ್ನು ನೋಡಿ ಆಶ್ಚರ್ಯಚಕಿತರಾದರು.॥ ೩೧॥ ಇದು ನಿಶ್ಚಯವಾಗಿಯೂ ಆಶ್ಚರ್ಯದ ಸಂಗತಿಯಾಗಿದೆ. ಖಂಡಿತವಾಗಿಯೂ ವಸುದೇವನ ರೂಪದಲ್ಲಿ ಯಾರೋ ಋಷಿಯೇ ಹುಟ್ಟಿರಬೇಕು. ಅಥವಾ ವಸುದೇವನು ಹಿಂದಿನ ಜನ್ಮದಲ್ಲಿ ಯಾರೋ ಯೋಗೇಶ್ವರನಾಗಿರುವ ಸಂಭವವೂ ಇದೆ. ಏಕೆಂದರೆ, ಅವನು ಹೇಳಿದಂತೆಯೇ ಇಲ್ಲಿ ಉತ್ಪಾತವನ್ನು ನೋಡುತ್ತಿದ್ದೇವೆ. ॥ ೩೨ ॥

ಕಲೇವರಂ ಪರಶುಭಿಶ್ಚಿತ್ತ್ವಾ ತತ್ತೇ ವ್ರಜೌಕಸಃ ।
ದೂರೇ ಕ್ಷಿಪ್ತ್ವಾವಯವಶೋ ನ್ಯದಹನ್ಕಾಷ್ಠಧಿಷ್ಠಿತಮ್
॥ ೩೩ ॥

ದಹ್ಯಮಾನಸ್ಯ ದೇಹಸ್ಯ ಧೂಮಶ್ಚಾಗುರುಸೌರಭಃ ।
ಉತ್ಥಿತಃ ಕೃಷ್ಣನಿರ್ಭುಕ್ತಸಪದ್ಯಾಹತಪಾಪ್ಮನಃ
॥ ೩೪ ॥

ಪೂತನಾ ಲೋಕಬಾಲಘ್ನೀ ರಾಕ್ಷಸೀ ರುಧಿರಾಶನಾ ।
ಜಿಘಾಂಸಯಾಪಿ ಹರಯೇ ಸ್ತನಂ ದತ್ತ್ವಾಽಽಪ ಸದ್ಗತಿಮ್
॥ ೩೫ ॥

ಕಿಂ ಪುನಃ ಶ್ರದ್ಧಯಾ ಭಕ್ತ್ಯಾ ಕೃಷ್ಣಾಯ ಪರಮಾತ್ಮನೇ ।
ಯಚ್ಛನ್ತ್ಸ್ವಿಯತಮಂ ಕಿಂ ನು ರಕ್ತಾಸ್ತನ್ಮಾತರೋ ಯಥಾ
॥ ೩೬ ॥

ಪದ್ಭ್ಯಾಂ ಭಕ್ತಹೃದಿಸ್ಥಾಭ್ಯಾಂ ವಂದ್ಯಾಭ್ಯಾಂ ಲೋಕವಂದಿತೈಃ ।
ಅಂಗಂ ಯಸ್ಯಾಃ ಸಮಾಕ್ರಮ್ಯ ಭಗವಾನಪಿಬತ್ಸ್ತನಮ್
॥ ೩೭ ॥

ಯಾತುಧಾನ್ಯಪಿ ಸಾ ಸ್ವರ್ಗಮವಾಪ ಜನನೀಗತಿಮ್ ।
ಕೃಷ್ಣಭುಕ್ತಸ್ತನಕ್ಷೀರಾಃ ಕಿಮು ಗಾವೋ ನು ಮಾತರಃ
॥ ೩೮ ॥

ಪಯಾಂಸಿ ಯಾಸಾಮಪಿಬತ್ಪುತ್ರಸ್ನೇಹಸ್ನುತಾನ್ಯಲಮ್ ।
ಭಗವಾನ್ದೇವಕೀಪುತ್ರಃ ಕೈವಲ್ಯಾದ್ಯಖಿಲಪ್ರದಃ
॥ ೩೯ ॥

ತಾಸಾಮವಿರತಂ ಕೃಷ್ಣೇ ಕುರ್ವತೀನಾಂ ಸುತೇಕ್ಷಣಮ್ ।
ನ ಪುನಃ ಕಲ್ಪತೇ ರಾಜನ್ಸಂಸಾರೋಽಜ್ಞಾನಸಂಭವಃ
॥ ೪೦ ॥

ಕುಧೂಮಸ್ಯ ಸೌರಭ್ಯಮವಘ್ರಾಯ ವ್ರಜೌಕಸಃ ।
ಕಿಮಿದಂ ಕುತ ಏವೇತಿ ವದಂತೋ ವ್ರಜಮಾಯಯುಃ
॥ ೪೧ ॥

ಕೇ ತತ್ರ ವರ್ಣಿತಂ ಗೋಪೈಃ ಪೂತನಾಗಮನಾದಿಕಮ್ ।
ಕೃತ್ವಾ ತನ್ನಿಧನಂ ಸ್ವಸ್ತಿ ಶಿಶೋಶ್ಚಾಸನ್ಸುವಿಸ್ಮಿತಾಃ
॥ ೪೨ ॥

ಅಷ್ಟರಲ್ಲಿ ವ್ರಜವಾಸಿಗಳೆಲ್ಲ ಸೇರಿ ಕೊಡಲಿಯಿಂದ ಪೂತನೆಯ ಶರೀರವನ್ನು ತುಂಡು-ತುಂಡಾಗಿಸಿ, ಗೋಕುಲದಿಂದ ದೂರಕ್ಕೆ ಕೊಂಡುಹೋಗಿ ಕಟ್ಟಿಗೆಗಳ ಮೇಲಿರಿಸಿ ಸುಟ್ಟುಬಿಟ್ಟರು. ॥ ೩೩ ॥ ಆಕೆಯ ಶರೀರವು ಹೊತ್ತಿ ಉರಿಯತೊಡಗಿದಾಗ ಅದರಿಂದ ಅಗರುವಿನ ಸುವಾಸನೆಹೊಂದಿದ ಹೊಗೆಯು ಹೊರಹೊಮ್ಮಿತು. ಇದರಲ್ಲಿ ಆಶ್ಚರ್ಯವೇನಿದೆ ? ಭಗವಂತನೇ ಆವಳ ಸ್ತನ್ಯವನ್ನು ಕುಡಿದ ಕಾರಣ ಆವಳಲ್ಲಿದ್ದ ಪಾಪಗಳೆಲ್ಲವೂ ಕ್ಷಣಮಾತ್ರದಲ್ಲಿ ನಾಶವಾಗಿ ಹೋಗಿದ್ದವು. ॥ ೩೪ ॥ ಪೂತನೆಯು ಓರ್ವ ರಾಕ್ಷಸಿಯಾಗಿದ್ದಳು. ಜನರ ಮಕ್ಕಳನ್ನು ಕೊಲ್ಲುವುದು, ಅವರ ರಕ್ತ ಕುಡಿಯುವುದು ಇದೇ ಆವಳ ಕೆಲಸವಾಗಿತ್ತು. ಭಗವಂತನನ್ನೂ ಕೊಂದುಹಾಕಲೆಂದೇ ಆವಳು ಸ್ತನ್ಯವನ್ನು ಕುಡಿಸಿದ್ದಳು. ಹೀಗಿದ್ದರೂ ಆವಳಿಗೆ ಸತ್ಪುರುಷರಿಗೆ ಸಿಗುವ ಪರಮಗತಿಯು ದೊರೆಯಿತು.॥ ೩೫ ॥ ಇಂತಹ ಸ್ಥಿತಿಯಲ್ಲಿ ಪರಬ್ರಹ್ಮ ಪರಮಾತ್ಮ ಭಗವಾನ್ ಶ್ರೀಕೃಷ್ಣನನ್ನು ಶ್ರದ್ಧಾಭಕ್ತಿಯಿಂದ ತಾಯಿಯಂತೆ ಅನುರಾಗಪೂರ್ವಕ ತನಗೆ ಅತಿಪ್ರಿಯವಾದ ವಸ್ತುವನ್ನು ಹಾಗೂ ಆವನಿಗೆ ಪ್ರಿಯವಾಗುವ ವಸ್ತುವನ್ನು ಸಮರ್ಪಿಸುವವನ ಕುರಿತು ಹೇಳುವುದೇನಿದೆ ? ॥ ೩೬ ॥ ಎಲ್ಲರಿಗೆ ವಂದನೀಯರಾದ ಬ್ರಹ್ಮ ರುದ್ರರೇ ಆದಿ ದೇವತೆಗಳಿಂದ ವಂದಿತವಾದ ಭಗವಂತನ ಚರಣ ಕಮಲಗಳು ಭಕ್ತರ ಹೃದಯದ ಧನವಾಗಿದೆ. ಅಂತಹ ಚರಣ ಗಳಿಂದ ಭಗವಂತನು ಪೂತನೆಯ ಶರೀರವನ್ನು ಒತ್ತಿ ಆವಳ ಸ್ತನ್ಯವನ್ನು ಪಾನಮಾಡಿದ್ದನು. ॥ ೩೭ ॥ ಪೂತನೆಯು ರಾಕ್ಷಸಿಯೇ ಆಗಿದ್ದರೂ ಆಕೆಗೆ – ತಾಯಿಗೆ ಸಿಗಬೇಕಾದ ಉತ್ತಮೋತ್ತಮ ಗತಿಯು ಪ್ರಾಪ್ತವಾಯಿತು ಎಂದಾಗ ಯಾರ ಸ್ತನಗಳ ಹಾಲನ್ನು ಭಗವಂತನು ಅತಿ ಪ್ರೇಮದಿಂದ ಕುಡಿದನೋ, ಅಂತಹ ಗೋವುಗಳ ಮತ್ತು ಮಾತೆಯರ ಕುರಿತು ಹೇಳುವುದೇನಿದೆ ? ॥ ೩೮ ॥ ಪರೀಕ್ಷಿತನೇ ! ದೇವಕೀನಂದನ ಭಗವಂತನು ಕೈವಲ್ಯವೇ ಮುಂತಾದ ಎಲ್ಲ ರೀತಿಯ ಮುಕ್ತಿಯನ್ನು ಹಾಗೂ ಎಲ್ಲವನ್ನೂ ಕೊಡುವವನಾಗಿದ್ದಾನೆ. ಭಗವಂತನ ಕುರಿತು ಪುತ್ರಭಾವ ಇರುವುದರಿಂದ ವಾತ್ಸಲ್ಯ-ಸ್ನೇಹದ ಹೆಚ್ಚಳದಿಂದ ಸ್ವಯಂ ಸೋರುತ್ತಿರುವ ಗೋಪಿಯರ ಮತ್ತು ಗೋವುಗಳ ಹಾಲನ್ನು ಆ ಭಗವಂತನು ಹೊಟ್ಟೆತುಂಬಾ ಕುಡಿದನು. ॥ ೩೯ ॥ ಪರೀಕ್ಷಿದ್ರಾಜನೇ ! ಆ ಗೋವುಗಳು ಮತ್ತು ಗೋಪಿಯರು ನಿತ್ಯ-ನಿರಂತರವಾಗಿ ಭಗವಾನ್ ಶ್ರೀಕೃಷ್ಣನನ್ನು ತನ್ನ ಪುತ್ರನೆಂದೇ ತಿಳಿಯುತ್ತಿದ್ದರು. ಹಾಗಿರುವಾಗ ಆವರು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರದಲ್ಲಿ ಎಂದಿಗೂ ಬೀಳಲಾರರು. ಏಕೆಂದರೆ, ಈ ಸಂಸಾರವಾದರೋ ಅಜ್ಞಾನದಿಂದಲೇ ಇದೆ. ॥ ೪೦ ॥

ನಂದಗೋಪನ ಜೊತೆಯಲ್ಲಿ ಬಂದಿರುವ ವ್ರಜವಾಸಿಗಳು ಚಿತೆಯಿಂದ ಬರುತ್ತಿದ್ದ ಸುಗಂಧಮಯ ಹೊಗೆಯನ್ನು ಆಘ್ರಾಣಿಸುತ್ತಲೇ 'ಇದೇನಿದು ?' ಈ ಸುವಾಸನೆಯು ಎಲ್ಲಿಂದ ಬರುತ್ತದೆ ಎಂದು ಹೇಳುತ್ತಾ ವ್ರಜವನ್ನು ಪ್ರವೇಶಿಸಿದರು. ॥ ೪೧ ॥ ಅಲ್ಲಿ ಗೋಪರು ಆವರಿಗೆ ಪೂತನೆಯು ಬಂದಂದಿನಿಂದ ಸಾಯುವವರೆಗಿನ ಎಲ್ಲ ವೃತ್ತಾಂತವನ್ನು ಹೇಳಿದರು. ಆವರೆಲ್ಲರೂ ಪೂತನೆಯ ಮೃತ್ಯು ಮತ್ತು ಶ್ರೀಕೃಷ್ಣನು ಕುಶಲವಾಗಿ ಬದುಕಿರುವ ಮಾತನ್ನು ಕೇಳಿ ತುಂಬಾ ಆಶ್ಚರ್ಯಚಕಿತರಾದರು. ॥ ೪೨ ॥

ನಂದಃ ಸ್ವಪುತ್ರಮಾದಾಯ ಪ್ರೇತ್ಯಾಗತಮುದಾರಧೀಃ ।
ಮೂರ್ಧ್ನ್ಯುಪಾಘ್ರಾಯ ಪರಮಾಂ ಮುದಂ ಲೇಭೇ ಕುರೂದ್ವಹ
॥ ೪೩ ॥

ಯ ಏತತ್ಪೂತನಾಮೋಕ್ಷಂ ಕೃಷ್ಣಸ್ಯಾರ್ಭಕಮದ್ಭುತಮ್ ।
ಶೃಣುಯಾಚ್ಛ್ರದ್ಧಯಾ ಮರ್ತ್ಯೋ ಗೋವಿಂದೇ ಲಭತೇ ರತಿಮ್
॥ ೪೪ ॥

ಪರೀಕ್ಷಿತನೇ ! ಉದಾರಶಿರೋಮಣಿಯಾದ ನಂದಗೋಪನು ಮೃತ್ಯುಮುಖದಿಂದ ಬಿಡುಗಡೆಹೊಂದಿದ ತನ್ನ ಮುದ್ದು ಕಂದನನ್ನೂ ತೊಡೆಯಲ್ಲೆತ್ತಿಕೊಂಡು ಪದೇ-ಪದೇ ಮಗುವಿನ ನೆತ್ತಿಯನ್ನು ಆಘ್ರಾಣಿಸುತ್ತಾ ಮನಸ್ಸಿನಲ್ಲೇ ಬಹಳ ಆನಂದಿತನಾದನು. ॥ ೪೩ ॥ ಈ 'ಪೂತನಾಮೋಕ್ಷವು' ಭಗವಾನ್ ಶ್ರೀಕೃಷ್ಣನ ಅದ್ಭುತವಾದ ಬಾಲಲೀಲೆಯಾಗಿದೆ. ಇದನ್ನು ಶ್ರದ್ಧೆಯಿಂದ ಶ್ರವಣಿಸುವವನಿಗೆ ಭಗವಾನ್ ಶ್ರೀಕೃಷ್ಣನಲ್ಲಿ ಅನುರಾಗವು ಉಂಟಾಗುವುದು. ॥ ೪೪ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಶಕಟಾಸುರ ಭಂಜನ ಮತ್ತು ತೃಣಾವರ್ತನ ಉದ್ಧಾರ

ರಾಜೋವಾಚ

ಯೇನ ಯೇನಾವತಾರೇಣ ಭಗವಾನ್ ಹರಿರೀಶ್ವರಃ ।
ಕರೋತಿ ಕರ್ಣರಮ್ಯಾಣಿ ಮನೋಜ್ಞಾನಿ ಚ ನಃ ಪ್ರಭೋ
॥ ೧ ॥

ಪರೀಕ್ಷಿದ್ರಾಜನು ಕೇಳುತ್ತಾನೆ – ಪ್ರಭುವೇ ! ಸರ್ವಶಕ್ತಿಮಂತನಾದ ಭಗವಾನ್ ಶ್ರೀಹರಿಯು ಅನೇಕ ಅವತಾರಗಳನ್ನೆತ್ತಿ ಅತ್ಯಂತ ಸುಂದರವಾದ ಮತ್ತು ಕರ್ಣಾನಂದಕರವಾದ ಲೀಲೆಗಳನ್ನು ಮಾಡುತ್ತಾನೆ. ಅವೆಲ್ಲವೂ ನನ್ನ ಮನಸ್ಸಿಗೆ ಬಹಳ ಆಪ್ಯಾಯಮಾನವನ್ನುಂಟುಮಾಡುತ್ತವೆ. ॥ ೧ ॥ ಅವುಗಳ ಶ್ರವಣಮಾತ್ರದಿಂದ ಕಷ್ಟಗಳು ದೂರವಾಗುತ್ತವೆ ಮತ್ತು ವಿವಿಧ ವಿಷಯಗಳ ತೃಷ್ಣೆಯು ಹೊರಟುಹೋಗುತ್ತದೆ. ಮನುಷ್ಯನ ಅಂತಃಕರಣವು ಬಹು ಬೇಗನೇ ಶುದ್ಧವಾಗಿ ಹೋಗುತ್ತದೆ. ಭಗವಂತನ ಚರಣಗಳಲ್ಲಿ ಭಕ್ತಿಯೂ, ಅವನ ಭಕ್ತರಲ್ಲಿ ಪ್ರೀತಿಯೂ ಉಂಟಾಗುತ್ತದೆ. ತಾವು ನನ್ನನ್ನು ಅವುಗಳ ಶ್ರವಣಕ್ಕೆ ಅಧಿಕಾರಿಯೆಂದು ತಿಳಿಯುತ್ತಿದ್ದರೆ ಭಗವಂತನ ಆ ಮನೋಹರವಾದ ಲೀಲೆಗಳನ್ನು ವರ್ಣಿಸಿರಿ. ॥ ೨ ॥ ಭಗವಾನ್ ಶ್ರೀಕೃಷ್ಣನು ಮನುಷ್ಯಲೋಕದಲ್ಲಿ ಅವತರಿಸಿ ಮನುಷ್ಯರ ಸ್ವಭಾವಗುಣಗಳನ್ನು ಅನುಕರಿಸುತ್ತಾ ಮಾಡಿದ ಬಾಲಲೀಲೆಗಳು ಪರಮಾದ್ಭುತವಾದವುಗಳು. ಅದಕ್ಕಾಗಿ ಈಗ ಅವನ ಇತರ ಬಾಲಲೀಲೆಗಳನ್ನೂ ವರ್ಣಿಸಿರಿ. ॥ ೩ ॥

ಯಚ್ಚ್ರವಣಾತ್ಸೋಽಪೈತ್ಯರತಿರ್ವಿತೃಷ್ಣಾ
ಸತ್ತ್ವಂ ಚ ಶುದ್ಧ್ಯತ್ಯಚಿರೇಣ ಪುಂಸಃ ।
ಭಕ್ತಿರ್ಹರೌ ತತ್ಪುರುಷೇ ಚ ಸಖ್ಯಂ
ತದೇವ ಹಾರಂ ವದ ಮನ್ಯಸೇ ಚೇತ್ ॥ ೨ ॥

ಅಥಾನ್ಯದಪಿ ಕೃಷ್ಣಸ್ಯ ತೋಕಾಚರಿತಮದ್ಭುತಮ್ ।
ಮಾನುಷಂ ಲೋಕಮಾಸಾದ್ಯ ತಜ್ಜಾತಿಮನುರುಂಧತಃ
॥ ೩ ॥

ಶ್ರೀಶುಕ ಉವಾಚ

ಕದಾಚಿದೌತ್ಥಾನಿಕಕೌತುಕಾಪ್ಲವೇ
ಜನ್ಮರ್ಕ್ಷಯೋಗೇ ಸಮವೇತಯೋಷಿತಾಮ್ ।
ವಾದಿತ್ರಗೀತದ್ವಿಜಮಂತ್ರವಾಚಕೈ-
ರ್ಚಕಾರ ಸೂನೋರಭಿಷೇಚನಂ ಸತೀ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಮುದ್ದುಕೃಷ್ಣನು ಮೂರು ತಿಂಗಳಿಗೆ ಸರಿಯಾಗಿ ಬೋರಲುಬಿದ್ದನು. ಅಂದಿಗೆ ಸರಿಯಾಗಿ ಅವನ ಜನ್ಮನಕ್ಷತ್ರ ರೋಹಿಣಿ ನಕ್ಷತ್ರದ ಯೋಗವಿತ್ತು. ಮಗುವಿಗೆ ನೀರೆರೆದು ಹಬ್ಬವನ್ನಾಚರಿಸುವ ಸಂಭ್ರಮ. ಹಲವಾರು ಗೋಪಿಯರು ನಂದಗೋಪನ ಮನೆಗೆ ಬಂದರು. ಕೆಲವರು ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ಮಂಗಳವಾದ್ಯಗಳು ಮೊಳಗುತ್ತಿದ್ದುವು. ಗೋಪಿಯರ ಮಧ್ಯದಲ್ಲಿದ್ದ ಯಶೋದೆಯು ಮುದ್ದುಕೃಷ್ಣನಿಗೆ ನೀರೆರೆದಳು. ಬ್ರಾಹ್ಮಣರು ಮಂತ್ರಗಳನ್ನು ಹೇಳುತ್ತಾ ಆಶೀರ್ವದಿಸುತ್ತಿದ್ದರು. ॥ ೪ ॥

ನಂದಸ್ಯ ಪತ್ನೀ ಕೃತಮಜ್ಜನಾದಿಕಂ
ವಿಪ್ರೈಃ ಕೃತಸ್ವಸ್ತ್ಯಯನಂ ಸುಪೂಜಿತೈಃ ।
ಅನ್ನಾದ್ಯವಾಸಃಸ್ರಗಭೀಷ್ಟಧೇನುಭಿಃ
ಸಂಜಾತನಿದ್ರಾಕ್ಷಮಶೀಶಯಚ್ಚನೈಃ ॥ ೫ ॥

ಔತ್ಥಾನಿಕೌತ್ಸುಕ್ಯಮನಾ ಮನಸ್ವಿನೀ
ಸಮಾಗತಾನ್ಪೂಜಯತೀ ವ್ರಜೌಕಸಃ ।
ನೈವಾಶೃಣೋದ್ಯೆ ರುದಿತಂ ಸುತಸ್ಯ ಸಾ
ರುದನ್ ಸ್ತನಾರ್ಥೀ ಚರಣಾವುದಕ್ಷಿಪತ್ ॥ ೬ ॥

ಅಧಃ ಶಯಾನಸ್ಯ ಶಿಶೋರನೋಽಲ್ಪಕ-
ಪ್ರವಾಲಮೃದ್ವಂಘ್ರಿಹತಂ ವ್ಯವರ್ತತ ।
ವಿಧ್ವಸ್ತನಾನಾರಸಕುಪ್ಯಭಾಜನಂ
ವ್ಯತ್ಯಸ್ತಚಕ್ರಾಕ್ಷವಿಭಿನ್ನಕೂಬರಮ್ ॥ ೭ ॥

ದೃಷ್ಟ್ವಾ ಯಶೋದಾಪ್ರಮುಖಾ ವ್ರಜಸ್ತ್ರಿಯ
ಔತ್ಥಾನಿಕೇ ಕರ್ಮಣಿ ಯಾಃ ಸಮಾಗತಾಃ ।
ನಂದಾದಯಶ್ಚಾದ್ಭುತದರ್ಶನಾಕುಲಾಃ
ಕಥಂ ಸ್ವಯಂ ವೈ ಶಕಟಂ ವಿಪರ್ಯಗಾತ್ ॥ ೮ ॥

ಊಚುರವ್ಯವಸಿತಮತೀನ್ಗೋಪಾನ್ಗೋಪೀಶ್ಚ ಬಾಲಕಾಃ ।
ಪದತಾನೇನ ಪಾದೇನ ಕ್ಷಿಪ್ತಮೇತನ್ನ ಸಂಶಯಃ
॥ ೯ ॥

ನ ತೇ ಶ್ರದ್ಧಧಿರೇ ಗೋಪಾ ಬಾಲಭಾಷಿತಮಿತ್ಯುತ ।
ಅಪ್ರಮೇಯಂ ಬಲಂ ತಸ್ಯ ಬಾಲಕಸ್ಯ ನ ತೇ ವಿದುಃ
॥ ೧೦ ॥

ನಂದ ರಾಣಿಯಾದ ಯಶೋದಾ ದೇವಿಯು ಬ್ರಾಹ್ಮಣರನ್ನು ಪೂಜಿಸಿ ಸಮ್ಮಾನಿಸಿದಳು. ಅವರಿಗೆ ಅನ್ನ ವಸ್ತ್ರ, ಮಾಲೆ, ಗೋವುಗಳು ಮುಂತಾದ ಅವರ ಅಭೀಷ್ಟವಸ್ತುಗಳನ್ನು ದಾನಮಾಡಿದಳು. ಯಶೋದೆಯು ಆ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ ನೀರೆರೆಯುವುದನ್ನು ಮುಗಿಸಿದಾಗ ಮುದ್ದುಕೃಷ್ಣನಿಗೆ ಕಣ್ಣುಗಳಲ್ಲಿ ನಿದ್ದೆ ತುಂಬಿದೆ ಎಂದು ನೋಡಿ ನಿಧಾನವಾಗಿ ಶಯ್ಯೆಯಲ್ಲಿ ಮಗುವನ್ನು ಮಲಗಿಸಿದಳು. ॥ ೫ ॥ ಸ್ವಲ್ಪ ಸಮಯದಲ್ಲಿ ಶ್ಯಾಮ ಸುಂದರನು ಕಣ್ಣುತೆರೆದು ಸ್ತನ್ಯಪಾನಕ್ಕಾಗಿ ಅಳತೊಡಗಿದನು. ಆಗ ಮನಸ್ವಿನಿಯಾದ ಯಶೋದೆಯು ಉತ್ಸವಕ್ಕೆ ಬಂದಿರುವ ವ್ರಜವಾಸಿಗಳ ಸ್ವಾಗತ-ಸತ್ಕಾರದಲ್ಲಿ ತನ್ಮಯಳಾಗಿದ್ದಳು. ಇದರಿಂದ ಆಕೆಗೆ ಶ್ರೀಕೃಷ್ಣನ ಅಳುವು ಕೇಳಿಸಲಿಲ್ಲ. ಶ್ರೀಕೃಷ್ಣನು ಅಳುತ್ತಾ ಅಳುತ್ತಾ ಕಾಲುಗಳನ್ನು ಬಡಿಯತೊಡಗಿದನು. ॥ ೬ ॥ ಬಾಲ ಕೃಷ್ಣನು ಒಂದು ಬಂಡಿಯ ಕೆಳಗೆ ಮಲಗಿದ್ದನು. ಅವನ ಕಾಲುಗಳು ಎಳೆ ಚಿಗುರಿನಂತೆ ತುಂಬಾ ಕೋಮಲವಾಗಿದ್ದುವು ಮನೋಹರವಾಗಿದ್ದವು. ಆದರೆ ಆ ಎಳೆಯಕಾಲು ಆ ವಿಶಾಲವಾದ ಬಂಡಿಗೆ ತಗಲುತ್ತಲೇ ಅದು ತಲೆಕೆಳಗಾಯಿತು.* ಆ ಬಂಡಿಯಲ್ಲಿ ಹಾಲು-ಮೊಸರು ಮುಂತಾದ ಅನೇಕ ರಸಗಳಿಂದ ತುಂಬಿದ ಮಡಕೆಗಳನ್ನೂ, ಇತರ ಪಾತ್ರೆಗಳನ್ನೂ ಇಟ್ಟಿದ್ದರು. ಅವೆಲ್ಲವೂ ಬಿದ್ದು ಒಡೆದುಹೋದವು. ಗಾಡಿಯ ಗಾಲಿಗಳು, ಆಚ್ಚುಮರ, ನೊಗ ಇತ್ಯಾದಿಗಳೆಲ್ಲ ಮುರಿದು ನುಚ್ಚುನೂರಾದವು. ॥ ೭ ॥ ಮುದ್ದುಕೃಷ್ಣನು ಜೋಗುಳಿದ್ದ ಆ ಉತ್ಸವದಲ್ಲಿ ಭಾಗವಹಿಸಲು ಬಂದಿದ್ದ ಗೋಪಿಯರೂ, ಯಶೋದಾ ರೋಹಿಣೀ-ನಂದಗೋಪರೂ, ಗೋಪಾಲಕರೆಲ್ಲರೂ ಈ ವಿಚಿತ್ರ ಘಟನೆಯನ್ನು ನೋಡಿ ವ್ಯಾಕುಲಗೊಂಡರು. 'ಇದೇನಾಯಿತು ? ಈ ಗಾಡಿಯು ತಾನಾಗಿಯೇ ಹೇಗೆ ಮಗುಚಿಬಿತ್ತು ?' ಎಂದು ಪರಸ್ಪರ ಮಾತನಾಡತೊಡಗಿದರು. ॥ ೮ ॥ ಅವರು ಇದರ ಕಾರಣವನ್ನು ನಿಶ್ಚಯಿಸದಾದರು. ಅಲ್ಲೇ ಆಡುತ್ತಿದ್ದ ಗೋಪಬಾಲಕರು ಮತ್ತು ಗೋಪಿಯರು ಹೇಳಿದರು – 'ಈ ಮುದ್ದುಕೃಷ್ಣನೇ ಅಳುತ್ತಾ ಅಳುತ್ತಾ ತನ್ನ ಕಾಲಿನಿಂದ ಒದ್ದು ಗಾಡಿಯನ್ನು ತಲೆಕೆಳಗಾಗಿಸಿದನು.' ಇದರಲ್ಲಿ ಸಂದೇಹವೇ ಇಲ್ಲ. ॥ ೯ ॥ ಆದರೆ ಗೋಪಾಲಕರು ಅದನ್ನು 'ಹುಡುಗರ ಮಾತು' ಎಂದು ತಿಳಿದು ಅದರಲ್ಲಿ ವಿಶ್ವಾಸವಿಡಲಿಲ್ಲ. ಆ ಗೋಪರು ಈ ಬಾಲಕನ ಅನಂತಬಲವನ್ನು ತಿಳಿಯದಿರುವುದು ಸರಿಯೇ ಆಗಿದೆ. ॥ ೧೦ ॥

* ಶಕಟಾಸುರನ ಪೂರ್ವಕಥೆ : ಉತ್ಕಚನೆಂಬುವನು ಹಿರಣ್ಯಾಕ್ಷನ ಮಗನು. ಅವನು ಮಹಾಬಲಿಷ್ಠನೂ ಸ್ಥೂಲಕಾಯನೂ ಆಗಿದ್ದನು. ಅವನು ಪ್ರಪಂಚ ಪರ್ಯಟನ ಮಾಡುತ್ತಿದ್ದಾಗ ಒಮ್ಮೆ ಲೋಮಶಮಹರ್ಷಿಗಳ ಆಶ್ರಮಕ್ಕೂ ಬಂದನು. ಋಷಿ-ಮುನಿಗಳ ವಿಷಯದಲ್ಲಿ ಅವನಿಗೆ ತಿರಸ್ಕಾರ ಬುದ್ಧಿಯಿದ್ದಿತು. ರಾಕ್ಷಸಸಹಜವಾದ ಬುದ್ಧಿಯಿಂದ ಅವನು ಆಶ್ರಮದ ಪರಿಸರದಲ್ಲಿದ್ದ ವೃಕ್ಷಗಳೆಲ್ಲವನ್ನೂ ಕೀಳತೊಡಗಿದನು. ಲೋಮಶರು ಕುಪಿತರಾಗಿ ಶಪಿಸಿದರು. 'ದುಷ್ಟನೇ ! ನೀನು ದೇಹರಹಿತನಾಗು'. ಮರುಕ್ಷಣದಲ್ಲಿಯೇ ಉತ್ಕಚನು ಹಾವಿನ ಪೊರೆಯಂತೆ ಆಗಿಬಿಟ್ಟನು. ಭಯಗ್ರಸ್ತನಾದ ರಾಕ್ಷಸನು ಒಡನೆಯೇ ಲೋಮಶರ ಕಾಲುಗಳಿಗೆ ಬಿದ್ದು ಶಾಪದ ನಿರಸನಕ್ಕಾಗಿ ಬೇಡಿಕೊಂಡನು. ಲೋಮಶರು ಪ್ರಸನ್ನರಾದರು. ಮಹಾತ್ಮರ ಶಾಪವೂ ಕೆಲವು ವೇಳೆ ವರವಾಗಿ ಪರಿಣಮಿಸುತ್ತದೆ. ಪ್ರಸನ್ನರಾದ ಲೋಮಶರು ಹೇಳಿದರು : 'ವೈವಸ್ವತ ಮನ್ವಂತರದಲ್ಲಿ ಶ್ರೀಕೃಷ್ಣನ ಪಾದಸ್ಪರ್ಶದಿಂದ ನೀನು ಮುಕ್ತನಾಗುವೆ.' ಆದರಂತೆ ಶಕಟಾಸುರನಾಗಿ ಬಂದು ಮುದ್ದುಕೃಷ್ಣನ ಪಾದಸ್ಪರ್ಶದಿಂದ ಮುಕ್ತನಾದನು.

ರುದಂತಂ ಸುತಮಾದಾಯ ಯಶೋದಾ ಗ್ರಹಶಂಕಿತಾ ।
ಕೃತಸ್ವಸ್ತ್ಯಯನಂ ವಿಪ್ರೈಃ ಸೂಕ್ತೈಃ ಸ್ತನಮಪಾಯಯತ್
॥ ೧೧ ॥

ಪೂರ್ವವತ್ಸ್ಥಾಪಿತಂ ಗೋಪೈರ್ಬಲಿಭಿಃ ಸಪರಿಚ್ಛದಮ್ ।
ವಿಪ್ರಾ ಹುತ್ವಾರ್ಚಯಾಂಚಕ್ರುರ್ದಧ್ಯಕ್ಷತಕುಶಾಂಬುಭಿಃ
॥ ೧೨ ॥

ಯೇಽಸೂಯಾನೃತದಂಭೇರ್ಷ್ಯಾಹಿಂಸಾಮಾನವಿವರ್ಜಿತಾಃ ।
ನ ತೇಷಾಂ ಸತ್ಯಶೀಲಾನಾಮಾಶಿಷೋ ವಿಫಲಾಃ ಕೃತಾಃ
॥ ೧೩ ॥

ಇತಿ ಬಾಲಕಮಾದಾಯ ಸಾಮರ್ಗ್ಯಜುರುಪಾಕೃತೈಃ ।
ಜಲೈಃ ಪವಿತ್ರೌಷಧಿಭಿರಭಿಷಿಚ್ಯ ದ್ವಿಜೋತ್ತಮೈಃ
॥ ೧೪ ॥

ವಾಚಯಿತ್ವಾ ಸ್ವಸ್ತ್ಯಯನಂ ನಂದಗೋಪಃ ಸಮಾಹಿತಃ ।
ಹುತ್ವಾ ಚಾಗ್ನಿಂ ದ್ವಿಜಾತಿಭ್ಯಃ ಪ್ರಾದಾದನ್ನಂ ಮಹಾಗುಣಮ್
॥ ೧೫ ॥

ಗಾವಃ ಸರ್ವಗುಣೋಪೇತಾ ವಾಸಃಸ್ರಗ್ಭ್ಯಕ್ಮಮಾಲಿನೀಃ ।
ಆತ್ಮಜಾಭ್ಯುದಯಾರ್ಥಾಯ ಪ್ರಾದಾತ್ತೇ ಚಾನ್ವಯುಂಜತ
॥ ೧೬ ॥

ವಿಪ್ರಾ ಮಂತ್ರವಿದೋ ಯುಕ್ತಾಸ್ತೈರ್ಯಾಃ ಪ್ರೋಕ್ತಾಸ್ತಥಾऽऽಶಿಷಃ ।
ತಾ ನಿಷ್ಫಲಾ ಭವಿಷ್ಯಂತಿ ನ ಕದಾಚಿದಪಿ ಸ್ಫುಟಮ್
॥ ೧೭ ॥

ಏಕದಾऽऽರೋಹಮಾರೂಢಂ ಲಾಲಯಂತೀ ಸುತಂ ಸತೀ ।
ಗರಿಮಾಣಂ ಶಿಶೋರ್ವೋಢುಂ ನ ಸೇಹೇ ಗಿರಿಕೂಟವತ್
॥ ೧೮ ॥

ಭೂಮೌ ನಿಧಾಯ ತಂ ಗೋಪೀ ವಿಸ್ಮಿತಾ ಭಾರಪೀಡಿತಾ ।
ಮಹಾಪುರುಷಮಾದಧ್ಯೌ ಜಗತಾಮಾಸ ಕರ್ಮಸು
॥ ೧೯ ॥

ದೈತ್ಯೋ ನಾಮ್ನಾ ತೃಣಾವರ್ತಃ ಕಂಸಭೃತ್ಯಃ ಪ್ರಣೋದಿತಃ ।
ಚಕ್ರವಾತಸ್ವರೂಪೇಣ ಜಹಾರಾಸೀನಮರ್ಭಕಮ್
॥ ೨೦ ॥

ಯಶೋದೆಯು ಈ ಘಟನೆಯನ್ನು ಯಾವುದೋ ಗ್ರಹಚೇಷ್ಟೆಯಿರಬಹುದೆಂದು ಭಾವಿಸಿದಳು. ಆಕೆಯು ಅಳುತ್ತಿದ್ದ ಮುದ್ದು ಕೃಷ್ಣನನ್ನು ತೊಡೆಯಮೇಲೆ ಎತ್ತಿಕೊಂಡು ಸಮಾಧಾನ ಪಡಿಸುತ್ತಾ, ಬ್ರಾಹ್ಮಣರಿಂದ ಮಂತ್ರಪುರಸ್ಸರವಾಗಿ ಸ್ವಸ್ತಿವಾಚನ ಮಾಡಿಸಿ, ಹಾಲುಣಿಸಿದಳು. ॥ ೧೧ ॥ ಬಲಿಷ್ಠರಾದ ಗೋಪರು ಆ ಬಂಡಿಯನ್ನು ಸರಿಪಡಿಸಿದರು. ಮೊದಲಿದ್ದಂತೆ ಸಾಮಗ್ರಿಗಳನ್ನು ಗಾಡಿಯಲ್ಲಿಟ್ಟರು. ಬ್ರಾಹ್ಮಣರು ಅನಿಷ್ಟನಿವಾರಕಗಳಾದ ಹೋಮಗಳನ್ನು ಮಾಡಿ ಭಗವಂತನನ್ನು ಮತ್ತು ಆ ಗಾಡಿಯನ್ನು ಮೊಸರು, ಅಕ್ಷತೆ, ದರ್ಭೆ, ನೀರು ಇತ್ಯಾದಿಗಳಿಂದ ಪೂಜಿಸಿದರು. ॥ ೧೨ ॥

ಯಾರು ಇತರರಲ್ಲಿ ದೋಷಗಳನ್ನು ಹುಡುಕುವುದಿಲ್ಲವೋ, ಸುಳ್ಳುಹೇಳುವುದಿಲ್ಲವೋ, ದಂಭ, ಈರ್ಷೆ, ಹಿಂಸೆ ಇವುಗಳನ್ನು ಮಾಡುವುದಿಲ್ಲವೋ, ದುರಭಿಮಾನ ಶೂನ್ಯರಾಗಿರುವರೋ, ಅಂತಹ ಸತ್ಯಶೀಲ ಬ್ರಾಹ್ಮಣರ ಆಶೀರ್ವಾದವು ಎಂದೂ ನಿಷ್ಫಲವಾಗುವುದಿಲ್ಲ ॥ ೧೩ ॥ ಹೀಗೆ ಯೋಚಿಸಿದ ನಂದಗೋಪನು ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡು ಬ್ರಾಹ್ಮಣರಿಂದ ಋಗ್ಯಜುಸ್ಸಾಮ ಮಂತ್ರಗಳಿಂದ ಅಭಿಮಂತ್ರಿತವಾದ ಮತ್ತು ಔಷಧಿಗಳಿಂದ ಕೂಡಿದ ಪವಿತ್ರಜಲದಿಂದ ಮಗುವಿಗೆ ಅಭಿಷೇಕವನ್ನು ಮಾಡಿಸಿದನು. ॥ ೧೪ ॥ ನಂದಗೋಪನು ಏಕಾಗ್ರಚಿತ್ತನಾಗಿ ಸ್ವಸ್ತಿವಾಚನ ಮತ್ತು ಹವನಮಾಡಿಸಿ ಬ್ರಾಹ್ಮಣರಿಗೆ ಷಡ್ರಸೋಪೇತವಾದ ಭಕ್ಷ್ಯ-ಭೋಜ್ಯಾದಿಗಳಿಂದ ಭೋಜನ ಮಾಡಿಸಿದನು. ॥ ೧೫ ॥ ಅನಂತರ ನಂದಗೋಪನು ಪುತ್ರನ ಅಭ್ಯುದಯಾರ್ಥವಾಗಿ ವಸ್ತ್ರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ಚಿನ್ನದ ಹಾರಗಳಿಂದಲೂ ಸಮಲಂಕೃತವಾದ ಒಳ್ಳೆಯ ಗುಣಗಳಿಂದ ಕೂಡಿದ ಅನೇಕ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದನು. ಬ್ರಾಹ್ಮಣರೆಲ್ಲರೂ ಮುದ್ದುಕೃಷ್ಣನಿಗೂ, ನಂದಗೋಪನಿಗೂ ಆಶೀರ್ವದಿಸಿದರು. ॥ ೧೬ ॥ ಸದಾಚಾರವುಳ್ಳ ವೇದವಿದರಾದ ಬ್ರಾಹ್ಮಣರು ಮಾಡಿದ ಆಶೀರ್ವಾದಗಳು ಎಂದಿಗೂ ನಿಷ್ಫಲವಾಗುವುದಿಲ್ಲವೆಂಬುದು ಸ್ಪಷ್ಟವೇ ಆಗಿದೆ. ॥ ೧೭ ॥

ಮುಂದೆ ಒಂದು ದಿನ ಯಶೋದೆಯು ಮುದ್ದುಕೃಷ್ಣನನ್ನು ತೊಡೆಯಮೇಲೆ ಮಲಗಿಸಿಕೊಂಡು ಆಡಿಸುತ್ತಿದ್ದಳು. ಇದ್ದಕ್ಕಿದ್ದಂತೆ ಶ್ರೀಕೃಷ್ಣನು ಪರ್ವತದಂತೆ ಬಹಳ ಭಾರವಾಗಿಬಿಟ್ಟನು. ಯಶೋದೆಯು ಅವನ ಭಾರವನ್ನು ತಡೆಯದಾದಳು. ॥ ೧೮ ॥ ಆಕೆಯು ಭಾರಪೀಡಿತಳಾಗಿ ಶ್ರೀಕೃಷ್ಣನನ್ನು ನೆಲದ ಮೇಲೆ ಕುಳ್ಳಿರಿಸಿದಳು. ಇಂತಹ ಹೊಸ ಘಟನೆಯಿಂದ ಆಕೆಯು ಅತ್ಯಂತ ಚಕಿತಳಾಗಿದ್ದಳು. ಬಳಿಕ ಅವಳು ಕಂದನಿಗೆ ಯಾವುದೇ ಉಪದ್ರವವೂ ಆಗದಿರಲಿ ಎಂದು ಭಗವಂತನನ್ನು ಧ್ಯಾನಿಸಿ ಗೃಹಕೃತ್ಯದಲ್ಲಿ ತೊಡಗಿದಳು. ॥ ೧೯॥

ತೃಣಾವರ್ತನೆಂಬ ದೈತ್ಯನು ಕಂಸನ ಸೇವಕನಾಗಿದ್ದನು. ಕಂಸನ ಪ್ರೇರಣೆಯಿಂದ ಅವನು ಸುಂಟರಗಾಳಿಯ ರೂಪದಿಂದ ಗೋಕುಲಕ್ಕೆ ಬಂದನು ಹಾಗೂ ಕುಳಿತಿರುವ ಶ್ರೀಕೃಷ್ಣನನ್ನು ಹಾರಿಸಿಕೊಂಡು ಆಕಾಶಕ್ಕೆ ನೆಗೆದನು. ॥ ೨೦ ॥

ಗೋಕುಲಂ ಸರ್ವಮಾವೃಣ್ವನ್ಮುಷ್ಣಂಶ್ಚಕ್ಷೂಂಷಿ ರೇಣುಭಿಃ ।
ಈರಯನ್ಸುಮಹಾಘೋರಶಬ್ದೇನ ಪ್ರದಿಶೋ ದಿಶಃ
॥ ೨೧ ॥

ಮುಹೂರ್ತಮಭವದ್ಗೋಷ್ಠಂ ರಜಸಾ ತಮಸಾऽऽವೃತಮ್ ।
ಸುತಂ ಯಶೋದಾ ನಾಪಶ್ಯತ್ತಸ್ಮಿನ್ನ್ಯಸ್ತವತೀ ಯತಃ
॥ ೨೨ ॥

ನಾಪಶ್ಯತ್ಕಶ್ಚನಾತ್ಮಾನಂ ಪರಂ ಚಾಪಿ ವಿಮೋಹಿತಃ ।
ತೃಣಾವರ್ತನಿಸೃಷ್ಟಾಭಿಃ ಶರ್ಕರಾಭಿರುಪದ್ರುತಃ
॥ ೨೩ ॥

ಇತಿ ಖರಪವನಚಕ್ರಪಾಂಸುವರ್ಷೇ
ಸುತಪದವೀಮಬಲಾವಿಲಕ್ಷ್ಯ ಮಾತಾ ।
ಅತಿಕರುಣಮನುಸ್ಮರಂತ್ಯಶೋಚದ್
ಭುವಿ ಪತಿತಾ ಮೃತವತ್ಸಕಾ ಯಥಾ ಗೌಃ ॥ ೨೪ ॥

ರುದಿತಮನುನಿಶಮ್ಯ ತತ್ರ ಗೋಪ್ಯೋ
ಭೃಶಮನುತಪ್ತಧಿಯೋऽಶ್ರುಪೂರ್ಣಮುಖ್ಯಃ ।
ರುರುದುರನುಪಲಭ್ಯ ನಂದಸೂನುಂ
ಪವನ ಉಪಾರತಪಾಂಸುವರ್ಷವೇಗೇ ॥ ೨೫ ॥

ತೃಣಾವರ್ತಃ ಶಾಂತರಯೋ ವಾತ್ಯಾರೂಪಧರೋ ಹರನ್ ।
ಕೃಷ್ಣಂ ನಭೋಗತೋ ಗಂತುಂ ನಾಶಕ್ನೋದ್ಭೂರಿಭಾರಭೃತ್
॥ ೨೬ ॥

ತಮಶ್ಮಾನಂ ಮನ್ಯಮಾನ ಆತ್ಮನೋ ಗುರುಮತ್ತಯಾ ।
ಗಲೇ ಗೃಹೀತ ಉತ್ಕ್ರೋಷ್ಟುಂ ನಾಶಕ್ನೋದದ್ಭುತಾರ್ಭಕಮ್
॥ ೨೭ ॥

ಗಲಗ್ರಹಣನಿಶ್ಚೇಷ್ಟೋ ದೈತ್ಯೋ ನಿರ್ಗತಲೋಚನಃ ।
ಅವ್ಯಕ್ತರಾವೋ ನ್ಯಪತತ್ಸಹಬಾಲೋ ವ್ಯಸುರ್ವ್ರಜೇ
॥ ೨೮ ॥

ತಮಂತರಿಕ್ಷಾತ್ಪತಿತಂ ಶಿಲಾಯಾಂ
ವಿಶೀರ್ಣಸರ್ವಾವಯವಂ ಕರಾಲಮ್ ।
ಪುರಂ ಯಥಾ ರುದ್ರಶರೇಣ ವಿದ್ಧಂ
ಸ್ತ್ರಿಯೋ ರುದತ್ಯೋ ದದೃಶುಃ ಸಮೇತಾಃ ॥ ೨೯ ॥

ಅವನು ಗೋಕುಲದಲ್ಲೆಲ್ಲ ಧೂಳನ್ನು ಎಬ್ಬಿಸಿ ಎಲ್ಲರ ಕಣ್ಣುಗಳನ್ನು ಮುಚ್ಚಿಸಿದನು. ಅವನ (ಸುಂಟರಗಾಳಿಯ) ಅತಿಘೋರವಾದ ಕರ್ಕಶವಾದ ಶಬ್ದವು ಹತ್ತು ದಿಕ್ಕುಗಳಲ್ಲಿ ತುಂಬಿ ಹೋಯಿತು. ॥ ೨೧ ॥ ಮುಹೂರ್ತಕಾಲ ಗೋಕುಲವು ಧೂಳಿನಿಂದ ಮತ್ತು ಕತ್ತಲೆಯಿಂದ ಮುಚ್ಚಿಹೋಗಿತ್ತು. ಯಶೋದೆಯು ಶ್ರೀಕೃಷ್ಣನನ್ನು ಕುಳ್ಳಿರಿಸಿದಲ್ಲಿಗೆ ಬಂದುನೋಡಿದರೆ ಅಲ್ಲಿ ಅವನು ಇರಲಿಲ್ಲ ॥ ೨೨ ॥ ಆ ಸಮಯದಲ್ಲಿ ತೃಣಾವರ್ತನು ಸುಂಟರಗಾಳಿಯ ರೂಪದಿಂದ ಹಾರಿಸಿದ ಧೂಳು-ಮರಳಿನಿಂದಾಗಿ ಜನರೆಲ್ಲರೂ ಅತ್ಯಂತ ಉದ್ವಿಗ್ನರಾಗಿ, ಕಳವಳಗೊಂಡು, ಒಬ್ಬರು ಮತ್ತೊಬ್ಬರನ್ನು ನೋಡಲಾಗುತ್ತಿರಲಿಲ್ಲ ॥ ೨೩ ॥ ಜೋರಾಗಿ ಬೀಸುತ್ತಿದ್ದ ಸುಂಟರಗಾಳಿಯಿಂದ, ಧೂಳಿನ ಮಳೆಯಲ್ಲಿ ತನ್ನ ಪುತ್ರನನ್ನು ಕಾಣದೆ ಯಶೋದೆಯು ಅತ್ಯಂತ ಶೋಕಾಕುಲಳಾಗಿ ಪುತ್ರನನ್ನು ನೆನೆಯುತ್ತಾ ಕರುವನ್ನು ಕಳಕೊಂಡ ಹಸುವಿನಂತಾಗಿ ಅತೀವ ದುಃಖದಿಂದ ಅವಳು ನೆಲಕ್ಕುರುಳಿದಳು. ॥ ೨೪ ॥ ಸುಂಟರಗಾಳಿಯು ಶಾಂತವಾಗಿ ಧೂಳಿನ ಮಳೆಯು ಕಡಿಮೆಯಾದಾಗ ಯಶೋದೆಯ ಅಳುವಿನ ಶಬ್ದವನ್ನು ಕೇಳಿ ಗೋಪಿಯರೆಲ್ಲರೂ ಅಲ್ಲಿಗೆ ಧಾವಿಸಿಬಂದರು. ಯಶೋದೆಯ ಬಳಿ ನಂದನಂದನ ಶ್ರೀಕೃಷ್ಣನು ಇಲ್ಲದಿರುವುದನ್ನು ನೋಡಿ ಅವರೆಲ್ಲರೂ ಪರಿತಪಿಸತೊಡಗಿದರು. ಅವರ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಹರಿಯುತ್ತಿದ್ದು, ಅವರೆಲ್ಲರೂ ಬಿಕ್ಕಿ-ಬಿಕ್ಕಿಅಳುತ್ತಿದ್ದರು.॥೨೫॥

ತೃಣಾವರ್ತನು ಸುಂಟರಗಾಳಿಯ ರೂಪದಿಂದ ಭಗವಾನ್ ಶ್ರೀಕೃಷ್ಣನನ್ನು ಎತ್ತಿಕೊಂಡು ಆಕಾಶಕ್ಕೆ ಹೋದಾಗ ಕೃಷ್ಣನ ಭಾರವನ್ನು ಸಹಿಸಲಾರದೆ ಅವನ ವೇಗವು ಕಡಿಮೆಯಾಯಿತು. ಅವನನ್ನು ಮೇಲೆತ್ತಿಕೊಂಡು ಹೋಗಲು ಸಾಧ್ಯವಾಗಲಿಲ್ಲ ॥ ೨೬ ॥ ತೃಣಾವರ್ತನು ತನಗಿಂತಲೂ ಹೆಚ್ಚು ಭಾರವಾಗಿರುವ ಶ್ರೀಕೃಷ್ಣನನ್ನು ನೀಲಗಿರಿಯ ಬಂಡೆಯೆಂದೇ ಭಾವಿಸಿದನು. ಅವನನ್ನು ಬಿಟ್ಟುಬಿಡಲು ಸಾಧ್ಯವಾಗದಂತೆ ಶ್ರೀಕೃಷ್ಣನು ಅಸುರನ ಕತ್ತನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದನು. ॥ ೨೭ ॥ ಭಗವಂತನು ಬಿಗಿಯಾಗಿ ಅವನ ಕತ್ತನ್ನು ಹಿಡಿದಿದ್ದರಿಂದ ಅಸುರನ ಕಣ್ಣುಗುಡ್ಡೆಗಳು ಹೊರಚಾಚಿಕೊಂಡು ನಿಶ್ಚೇಷ್ಟಿತನಾದನು. ಮಾತು ನಿಂತುಹೋಯಿತು. ಪ್ರಾಣಪಕ್ಷಿಯು ಹಾರಿಹೋಗಿ ಬಾಲಕ ಶ್ರೀಕೃಷ್ಣನೊಂದಿಗೆ ಗೋಕುಲದಲ್ಲಿ ಬಿದ್ದುಬಿಟ್ಟನು.* ॥ ೨೮ ॥ ಮುದ್ದುಕೃಷ್ಣನನ್ನು ಕಾಣದೆ ರೋದಿಸುತ್ತಿದ್ದ ಗೋಪಿಯರೆಲ್ಲರೂ ರಾಕ್ಷಸನೊಬ್ಬನು ಆಕಾಶದಿಂದ ಬಿದ್ದುದನ್ನು ಕಂಡರು. ಅವನು ಆಕಾಶದಿಂದ ಒಂದು ದೊಡ್ಡ ಬಂಡೆಯ ಮೇಲೆ ಬಿದ್ದಿದ್ದನು. ಕರಾಳಸ್ವರೂಪನಾದ ಆ ದೈತ್ಯನು ಬಂಡೆಯ ಮೇಲೆ ಬಿದ್ದೊಡನೆಯೇ ಶಂಕರನ ಬಾಣಗಳಿಂದ ತ್ರಿಪುರಾಸುರರು ಛಿನ್ನ-ಭಿನ್ನವಾದಂತೆ ಅವನು ನುಚ್ಚುನೂರಾಗಿದ್ದನು. ॥ ೨೯ ॥

* ತೃಣಾವರ್ತನ ಪೂರ್ವಕಥೆ : ಪಾಂಡ್ಯದೇಶದಲ್ಲಿ ಸಹಸ್ರಾಕ್ಷನೆಂಬ ಹೆಸರಿನ ರಾಜನಿದ್ದನು. ಅವನು ನರ್ಮದಾನದಿಯ ತೀರದಲ್ಲಿ ತನ್ನ ರಾಣಿಯರೊಡನೆ ಜಲಕ್ರೀಡೆಯಾಡುತ್ತಿದ್ದನು. ಅಲ್ಲಿಗೆ ದುರ್ವಾಸ ಋಷಿಗಳು ಬಂದರು. ಮಹರ್ಷಿಗಳು ಆಗಮಿಸಿದರೂ ರಾಜನು ಅವರಿಗೆ ನಮಸ್ಕರಿಸಲಿಲ್ಲ. ದುರ್ವಾಸರು ಕೋಪಗೊಂಡು ರಾಕ್ಷಸನಾಗೆಂದು ಶಾಪಕೊಟ್ಟರು. ರಾಜನು ಮಹರ್ಷಿಗಳ ಕಾಲಿಗೆಬಿದ್ದು ಶಾಪವಿಮೋಚನೆಗೆ ಪ್ರಾರ್ಥಿಸಲಾಗಿ ದಯಾಮಯರಾದ ದುರ್ವಾಸರು ಹೇಳಿದರು – 'ಭಗವಾನ್ ಶ್ರೀಕೃಷ್ಣಮೂರ್ತಿಯ ಶ್ರೀವಿಗ್ರಹದ ಸ್ಪರ್ಶವಾದೊಡನೆಯೇ ನೀನು ಶಾಪದಿಂದ ವಿಮುಕ್ತನಾಗುವೆ.' ಅಂತೆಯೇ ತೃಣಾವರ್ತನೆಂಬ ರಾಕ್ಷಸನಾಗಿ ಹುಟ್ಟಿದ್ದ ರಾಜನು ಶ್ರೀಕೃಷ್ಣನ ಸ್ಪರ್ಶವಾದೊಡನೆಯೇ ಮುಕ್ತಿಯನ್ನು ಹೊಂದಿದನು.

ಪ್ರಾದಾಯ ಮಾತ್ರೇ ಪ್ರತಿಹೃತ್ಯ ವಿಸ್ಮಿತಾಃ
ಕೃಷ್ಣಂ ಚ ತಸ್ಯೋರಸಿ ಲಂಬಮಾನಮ್ ।
ತಂ ಸ್ವಸ್ತಿಮಂತಂ ಪುರುಷಾದನೀತಂ
ವಿಹಾಯಸಾ ಮೃತ್ಯುಮುಖಾತ್ಪ್ರಮುಕ್ತಮ್ ।
ಗೋಪ್ಯಶ್ಚ ಗೋಪಾಃ ಕಿಲ ನಂದಮುಖ್ಯಾ
ಲಬ್ಧ್ವಾ ಪುನಃ ಪ್ರಾಪುರತೀವ ಮೋದಮ್ ॥ ೩೦ ॥

ಭಗವಾನ್ ಶ್ರೀಕೃಷ್ಣನು ಅವನ ಎದೆಯಮೇಲೆ ಆಡುತ್ತಿದ್ದನು. ಇದನ್ನು ನೋಡಿ ಗೋಪಿಯರು ವಿಸ್ಮಿತರಾದರು. ಅವರು ಒಡನೆಯೇ ಅಲ್ಲಿಗೆ ಹೋಗಿ ಶ್ರೀಕೃಷ್ಣನನ್ನು ಎತ್ತಿಕೊಂಡುಬಂದು ಅಳುತ್ತಿದ್ದ ಯಶೋದೆಯ ಕೈಗೆ ಕೊಟ್ಟರು. ಬಾಲಕನು ಮೃತ್ಯು ಮುಖದಿಂದ ಸಕುಶಲನಾಗಿ ಮರಳಿದನು. ಅವನನ್ನು ರಾಕ್ಷಸನು ಆಕಾಶಕ್ಕೆ ಎತ್ತಿಕೊಂಡು ಹೋಗಿದ್ದರೂ ಅವನು ಬದುಕುಳಿದನು. ಹೀಗೆ ಬಾಲಕ ಶ್ರೀಕೃಷ್ಣನನ್ನು ಪುನಃ ಪಡೆದ ಯಶೋದೆಯೇ ಮೊದಲಾದ ಗೋಪಿಯರೂ ನಂದಾದಿಗೋಪರು ಅತ್ಯಂತ ಆನಂದಭರಿತರಾದರು. ॥ ೩೦ ॥ ಅವರೆಲ್ಲರೂ ಹೇಳತೊಡಗಿದರು ಆಹಾ! ಎಂತಹ ಆಶ್ಚರ್ಯವಿದು! ಈ ಬಾಲಕನು ರಾಕ್ಷಸನಿಂದ ಮೃತ್ಯುಮುಖದಲ್ಲಿ ಹಾಕಲ್ಪಟ್ಟಿದ್ದನು. ಆದರೂ ಮತ್ತೆ ಬದುಕಿ ಬಂದಿರುವನು. ಹಿಂಸಕನಾದ ಆ ದುಷ್ಟನ ಪಾಪಗಳೇ ಅವನನ್ನು ನುಂಗಿಬಿಟ್ಟಿತು. ನೋಡಿರಲ್ಲ! ಸಾಧು ಪುರುಷನು ತನ್ನ ಸಮತೆಯಿಂದಲೇ ಸಮಸ್ತ ಭಯದಿಂದ ಪಾರಾಗುತ್ತಾನೆ, ಇದು ನಿಜವಾಗಿದೆ. ॥ ೩೧ ॥ ಈ ಬಾಲಕನು ರಾಕ್ಷಸನ ವಶನಾಗಿ ಸತ್ತೇ ಹೋಗಿದ್ದವನು ತಮ್ಮ ಸ್ವಜನರಿಗೆ ಸುಖವನ್ನು ಕೊಡಲು ಮರಳಿ ಬಂದಿರುವುದನ್ನು ನೋಡಿದರೆ – ತಪಸ್ಸು ಭಗವಂತನ ಪೂಜೆ, ಅರವಟ್ಟಿಗೆ ಇಡುವುದು, ಕೆರೆ-ಬಾವಿಗಳನ್ನು ಕಟ್ಟಿಸುವುದು, ಉದ್ಯಾನಗಳನ್ನು ರಚಿಸುವುದು, ಯಜ್ಞ, ದಾನ ಅಥವಾ ಸಮಸ್ತ ಜನರಿಗೆ ಹಿತವನ್ನು ಮಾಡುವುದು ಇವುಗಳಲ್ಲಿ ಏನಾದರೂ ನಾವು ಮಾಡಿರಬೇಕು. ಖಂಡಿತವಾಗಿ ಇದೊಂದು ಸೌಭಾಗ್ಯದ ಮಾತೇ ಆಗಿದೆ. ॥ ೩೨ ॥ ತಾವು ವಾಸಿಸುವ ಮಹಾವನದಲ್ಲಿ ಅನೇಕ ಅದ್ಭುತವಾದ ಘಟನೆಗಳು ನಡೆಯುವುದನ್ನು ನೋಡಿದಾಗ ನಂದ ಗೋಪನು ಆಶ್ಚರ್ಯಚಕಿತನಾಗಿ ವಸುದೇವನು ಹೇಳಿದ್ದ ಮಾತನ್ನು ಸಮರ್ಥಿಸಿಕೊಂಡನು. ॥ ೩೩. ॥

ದೃಷ್ಟ್ವಾದ್ಭುತಾನಿ ಬಹುತೋ ನಂದಗೋಪೋ ಬೃಹದ್ವನೇ ।
ವಸುದೇವವಚೋ ಭೂಯೋ ಮಾನಯಾಮಾಸ ವಿಸ್ಮಿತಃ
॥ ೩೩ ॥

ಏಕದಾರ್ಭಕಮಾದಾಯ ಸ್ವಾಂಕಮಾರೋಪ್ಯ ಭಾಮಿನೀ ।
ಪ್ರಸ್ನುತಂ ಪಾಯಯಾಮಾಸ ಸ್ತನಂ ಸ್ನೇಹಪರಿಪ್ಲುತಾ
॥ ೩೪ ॥

ಒಂದು ದಿನ ಯಶೋದಾದೇವಿಯು ತಮ್ಮ ಮುದ್ದು ಕಂದಮ್ಮನನ್ನು ತೊಡೆಯಲ್ಲಿಟ್ಟಿಕೊಂಡು ಪ್ರೇಮದಿಂದ ಹಾಲನ್ನು ಉಣಿಸುತ್ತಿದ್ದಳು. ಅವಳು ವಾತ್ಸಲ್ಯ-ಸ್ನೇಹದಲ್ಲಿ ಮುಳುಗಿಹೋಗಿ, ಆಕೆಯ ಸ್ತನಗಳಿಂದ ತನ್ನಿಂದತಾನೇ ಹಾಲು ಹರಿಯುತ್ತಿತ್ತು. ॥ ೩೪ ॥

ಪೀತಪ್ರಾಯಸ್ಯ ಜನನೀ ಸಾ ತಸ್ಯ ರುಚಿರಸ್ಮಿತಮ್ ।
ಮುಖಂ ಲಾಲಯತೀ ರಾಜನ್ ಜೃಂಭತೋ ದದೃಶೇ ಇದಮ್
॥ ೩೫ ॥

ಬಾಲಮುಕುಂದನು ಹಾಲುಕುಡಿದಾಗಿತ್ತು. ತಾಯಿ ಯಶೋದೆಯು ಅವನು ಕಿಲಕಿಲನೆ ನಗುತ್ತಿರುವಾಗ ಮುಖವನ್ನು ಮುದ್ದಿಸಿದಳು. ಆಗಲೇ ಶ್ರೀಕೃಷ್ಣನಿಗೆ ಆಕಳಿಕೆ ಬಂತು. ತಾಯಿಯು ಅವನ ಬಾಯಲ್ಲಿ ನೋಡುತ್ತಾಳೆ – ॥ ೩೫ ॥ ಅದರಲ್ಲಿ ಆಕಾಶ, ಅಂತರಿಕ್ಷ, ಜ್ಯೋತಿರ್ಮಂಡಲ, ದಿಕ್ಕುಗಳು, ಸೂರ್ಯ, ಚಂದ್ರ, ಅಗ್ನಿ, ವಾಯು, ಸಮುದ್ರ, ದ್ವೀಪಗಳು, ಪರ್ವತ, ನದಿಗಳು, ವನಗಳು, ಸಮಸ್ತ ಚರಾಚರ ಪ್ರಾಣಿಗಳು ನೆಲೆಸಿರುವುದನ್ನು ಆಕೆಯು ನೋಡಿದಳು. ॥ ೩೬ ॥ ಪರೀಕ್ಷಿತನೇ! ತನ್ನ ಪುತ್ರನ ಬಾಯಲ್ಲಿ ಹೀಗೆ ಸಮಸ್ತ ಜಗತ್ತನ್ನೂ ನೋಡಿದ ಹರಿಣಾಕ್ಷಿಯಾದ ಯಶೋದೆಯ ಶರೀರ ನಡುಗಿತು. ಆಕೆಯು ತನ್ನ ವಿಶಾಲವಾದ ಕಣ್ಣುಗಳನ್ನು ಮುಚ್ಚಿಕೊಂಡಳು. ಅವಳು ಅತ್ಯಂತ ಆಶ್ಚರ್ಯ ಚಕಿತಳಾದಳು. ॥ ೩೭ ॥

ಖಂ ರೋದಸೀ ಜ್ಯೋತಿರನೀಕಮಾಶಾಃ
ಸೂರ್ಯೇಂದುವಹ್ನಿಶ್ವಸನಾಂಬುಧೀಂಶ್ಚ ।
ದ್ವೀಪಾನ್ ನಗಾಂಸ್ತದ್ದುಹಿತೃರ್ವನಾನಿ
ಭೂತಾನಿ ಯಾನಿ ಸ್ಥಿರಜಂಗಮಾನಿ ॥ ೩೬ ॥

ಸಾ ವೀಕ್ಷ್ಯ ವಿಶ್ವಂ ಸಹಸಾ ರಾಜನ್ಸಂಜಾತವೇಪಥುಃ ।
ಸಮ್ಮೀಲ್ಯ ಮೃಗಶಾವಾಕ್ಷೀ ನೇತ್ರೇ ಆಸೀತ್ಸುವಿಸ್ಮಿತಾ
॥ ೩೭ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ತೃಣಾವರ್ತಮೋಕ್ಷೋ ನಾಮ ಸಪ್ತಮೋಽಧ್ಯಾಯಃ॥ ೭ ॥

ಎಂಟನೆಯ ಅಧ್ಯಾಯ

ನಾಮಕರಣ ಸಂಸ್ಕಾರ ಮತ್ತು ಬಾಲಲೀಲೆಗಳು

ಶ್ರೀಶುಕ ಉವಾಚ

ಗರ್ಗಃ ಪುರೋಹಿತೋ ರಾಜನ್ ಯದೂನಾಂ ಸುಮಹಾತಪಾಃ ।
ವ್ರಜಂ ಜಗಾಮ ನಂದಸ್ಯ ವಸುದೇವಪ್ರಚೋದಿತಃ
॥ ೧ ॥

ತಂ ದೃಷ್ಟ್ವಾ ಪರಮಪ್ರೀತಃ ಪ್ರತ್ಯುತ್ಥಾಯ ಕೃತಾಂಜಲಿಃ ।
ಆನರ್ಚಾಧೋಕ್ಷಜಧಿಯಾ ಪ್ರಣಿಪಾತಪುರಃಸರಮ್
॥ ೨ ॥

ಸೂಪವಿಷ್ಟಂ ಕೃತಾತಿಥ್ಯಂ ಗಿರಾ ಸೂನೃತಯಾ ಮುನಿಮ್ ।
ನಂದಯಿತ್ವಾಬ್ರವೀದ್ಬ್ರಹ್ಮನ್ಪೂರ್ಣಸ್ಯ ಕರವಾಮ ಕಿಮ್
॥ ೩ ॥

ಮಹದ್ವಿಚಲನಂ ನೃಣಾಂ ಗೃಹಿಣಾಂ ದೀನಚೇತಸಾಮ್ ।
ನಿಃಶ್ರೇಯಸಾಯ ಭಗವನ್ಕಲ್ಪತೇ ನಾನ್ಯಥಾ ಕ್ವಚಿತ್
॥ ೪ ॥

ಜ್ಯೋತಿಷಾಮಯನಂ ಸಾಕ್ಷಾದ್ಯತ್ತಜ್ಜ್ಞಾನಮತೀಂದ್ರಿಯಮ್ ।
ಪ್ರಣೀತಂ ಭವತಾ ಯೇನ ಪುಮಾನ್ವೇದ ಪರಾವರಮ್
॥ ೫ ॥

ತ್ವಂ ಹಿ ಬ್ರಹ್ಮವಿದಾಂ ಶ್ರೇಷ್ಠಃ ಸಂಸ್ಕಾರಾನ್ಕರ್ತುಮರ್ಹಸಿ ।
ಬಾಲಯೋರನಯೋರ್ನೃಣಾಂ ಜನ್ಮನಾ ಬ್ರಾಹ್ಮಣೋ ಗುರುಃ
॥ ೬ ॥

ಗರ್ಗ ಉವಾಚ

ಯದೂನಾಮಹಮಾಚಾರ್ಯಃ ಖ್ಯಾತಶ್ಚ ಭುವಿ ಸರ್ವತಃ ।
ಸುತಂ ಮಯಾ ಸಂಸ್ಕೃತಂ ತೇ ಮನ್ಯತೇ ದೇವಕೀಸುತಮ್
॥ ೭ ॥

ಕಂಸಃ ಪಾಪಮತಿಃ ಸಖ್ಯಂ ತವ ಚಾನಕದುಂದುಭೇಃ ।
ದೇವಕ್ಯಾ ಅಷ್ಟಮೋ ಗರ್ಭೋ ನ ಸ್ತ್ರೀ ಭವಿತುಮರ್ಹತಿ
॥ ೮ ॥

ಇತಿ ಸಂಚಿಂತಯನ್ ಶ್ರುತ್ವಾ ದೇವಕ್ಯಾ ದಾರಿಕಾವಚಃ ।
ಅಪಿ ಹಂತಾಽಽಗತಾಶಂಕಸ್ತರ್ಹಿ ತನ್ನೋಽನಯೋ ಭವೇತ್
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಗರ್ಗರೆಂಬುವರು ಯದುವಂಶಕ್ಕೆ ಕುಲಪುರೋಹಿತರಾಗಿದ್ದರು. ಅವರು ಮಹಾತಪಸ್ವಿಗಳು. ವಸುದೇವನ ಪ್ರೇರಣೆಯಿಂದ ಅವರೊಮ್ಮೆ ನಂದಗೋಕುಲಕ್ಕೆ ಆಗಮಿಸಿದರು. ॥ ೧ ॥ ಅವರನ್ನು ನೋಡುತ್ತಲೇ ನಂದಗೋಪನಿಗೆ ಮಹದಾನಂದವಾಯಿತು. ಅವನು ಕೈಜೋಡಿಸಿಕೊಂಡು ಎದ್ದು ನಿಂತು ಅವರ ಚರಣಗಳಿಗೆ ನಮಸ್ಕರಿಸಿದನು. ಗರ್ಗರು ಸಾಕ್ಷಾತ್ ಭಗವತ್ಸ್ವರೂಪರೇ ಎಂದು ತಿಳಿದು ಅವರನ್ನು ಅರ್ಘ್ಯ-ಪಾದ್ಯಾದಿಗಳಿಂದ ಪೂಜಿಸಿ ಸತ್ಕರಿಸಿದನು. ॥ ೨ ॥ ಸತ್ಕಾರಗಳೆಲ್ಲ ಮುಗಿದನಂತರ ಗರ್ಗರು ಸುಖಾಸೀನರಾದಾಗ ನಂದಗೋಪನು ಕೈಮುಗಿದುಕೊಂಡು ಮಧುರವಾದ ಮಾತುಗಳಿಂದ ಬಿನ್ನವಿಸಿಕೊಂಡನು – ಬ್ರಾಹ್ಮಣೋತ್ತಮರೇ! ನೀವು ಪೂರ್ಣಕಾಮರಾಗಿರುವಿರಿ. ಹಾಗಿರುವಾಗ ನಾನೇನು ತಮ್ಮ ಸೇವೆಮಾಡಬಲ್ಲೆನು? ॥ ೩ ॥ ತಮ್ಮಂತಹ ಮಹಾತ್ಮರ ಆಗಮನವು ದೀನಮನಸ್ಕರಾದ, ಗೃಹಸ್ಥರಾದ ಮನುಷ್ಯರ ಶ್ರೇಯಸ್ಸಿಗಾಗಿಯೇ ಇರುತ್ತದೆ. ಬೇರೆ ಯಾವ ಕಾರಣದಿಂದಲೂ ಮಹಾತ್ಮರಾದವರು ನಮ್ಮಂತಹವರ ಮನೆಗೆ ಆಗಮಿಸುವುದಿಲ್ಲ. ॥ ೪ ॥ ಸ್ವಾಮಿ! ಯಾವುದು ಇಂದ್ರಿಯಗಳಿಗೆ ಅಗೋಚರವಾದ ವಿಷಯವನ್ನು ತಿಳಿಸುವುದೋ, ಅಥವಾ ಭೂತ ಭವಿಷ್ಯದ ಗರ್ಭದಲ್ಲಿ ಏನಿದೆಯೆಂಬುದನ್ನು ಪ್ರತ್ಯಕ್ಷವಾಗಿ ಯಾವ ಶಾಸ್ತ್ರದಿಂದ ತಿಳಿಯಲಾಗುತ್ತದೋ, ಅಂತಹ ಜ್ಯೋತಿಷ್ಯಶಾಸ್ತ್ರವನ್ನು ತಾವು ರಚಿಸಿರುವಿರಿ. ॥ ೫ ॥ ತಾವು ಬ್ರಹ್ಮಜ್ಞರಲ್ಲಿ ಶ್ರೇಷ್ಠರಾಗಿ ಇರುವಿರಿ. ಅದಕ್ಕಾಗಿ ನನ್ನ ಇಬ್ಬರೂ ಬಾಲಕರಿಗೂ ನೀವೇ ನಾಮಕರಣಾದಿ ಸಂಸ್ಕಾರಗಳನ್ನು ಮಾಡಿರಿ. ಏಕೆಂದರೆ, ಬ್ರಾಹ್ಮಣರು ಹುಟ್ಟಿನಿಂದಲೇ ಮನುಷ್ಯಮಾತ್ರರಿಗೆ ಗುರುವಾಗಿರುತ್ತಾರೆ. ॥ ೬ ॥

ಗರ್ಗಾಚಾರ್ಯರು ಹೇಳಿದರು – ನಂದಗೋಪನೇ! ಯದುವಂಶೀಯರಿಗೆ ಆಚಾರ್ಯನೆಂದು ನಾನು ಜಗತ್ತಿನಲ್ಲಿ ಪ್ರಸಿದ್ಧನಾಗಿರುವೆನು. ನಾನು ನಿನ್ನ ಪುತ್ರನ ನಾಮಕರಣಸಂಸ್ಕಾರ ಮಾಡಿದರೆ ಜನರು ಇವನು ದೇವಕಿಯ ಪುತ್ರನೆಂದೇ ತಿಳಿಯುವರು. ॥ ೭ ॥ ಪಾಪಬುದ್ಧಿಯವನಾದ ಕಂಸನು ನಿನಗೂ ಮತ್ತು ವಸುದೇವನಿಗೂ ಗಾಢವಾದ ಸ್ನೇಹವಿರುವುದನ್ನು ತಿಳಿದಿರುತ್ತಾನೆ. ದೇವಕಿಯ ಮಗಳಿಂದ 'ನಿನ್ನನ್ನು ಕೊಲ್ಲುವವನು ಬೇರೆಲ್ಲೋ ಬೆಳೆಯುತ್ತಿದ್ದಾನೆ' ಎಂಬ ಮಾತನ್ನು ಕೇಳಿದಂದಿನಿಂದ ಕಂಸನು ದೇವಕಿಯ ಎಂಟನೆಯ ಗರ್ಭದಲ್ಲಿ ಹೆಣ್ಣುಶಿಶುವು ಹುಟ್ಟಲಾರದೆಂದೇ ತರ್ಕಿಸುತ್ತಿದ್ದಾನೆ. ನಿನ್ನ ಪುತ್ರನಿಗೆ ನಾನು ಸಂಸ್ಕಾರವನ್ನು ಮಾಡಿದರೆ ಅವನು ಈ ಬಾಲಕನು ವಸುದೇವನ ಮಗನೆಂದೇ ಬಗೆದು ಕೊಲ್ಲಲೂಬಹುದು. ಹಾಗಾದರೆ ನಮ್ಮಿಂದ ಭಾರೀ ಅನ್ಯಾಯವೇ ಆದೀತು. ॥ ೮-೯ ॥

ನಂದ ಉವಾಚ

ಅಲಕ್ಷಿತೋಽಸ್ಮಿನ್ ರಹಸಿ ಮಾಮಕೈರಪಿ ಗೋವ್ರಜೇ ।
ಕುರು ದ್ವಿಜಾತಿಸಂಸ್ಕಾರಂ ಸ್ವಸ್ತಿವಾಚನಪೂರ್ವಕಮ್
॥ ೧೦ ॥

ಶ್ರೀಶುಕ ಉವಾಚ

ಏವಂ ಸಂಪ್ರಾರ್ಥಿತೋ ವಿಪ್ರಃ ಸ್ವಚಿಕೀರ್ಷಿತಮೇವ ತತ್ ।
ಚಕಾರ ನಾಮಕರಣಂ ಗೂಢೋ ರಹಸಿ ಬಾಲಯೋಃ
॥ ೧೧ ॥

ಗರ್ಗ ಉವಾಚ

ಅಯಂ ಹಿ ರೋಹಿಣೇ ಪುತ್ರೋ ರಮಯನ್ಸುಹೃದೋ ಗುಣೈಃ ।
ಆಖ್ಯಾಸ್ಯತೇ ರಾಮ ಇತಿ ಬಲಾಧಿಕ್ಯಾದ್ಬಲಂ ವಿದುಃ ।
ಯದೂನಾಮಪೃಥಗ್ಭಾವಾತ್ಸಂಕರ್ಷಣಮುಶಂತ್ಯುತ
॥ ೧೨ ॥

ಆಸನ್ವರ್ಣಾಸ್ತ್ರಯೋ ಹ್ಯಸ್ಯ ಗೃಹ್ಣತೋಽನುಯುಗಂ ತನೂಃ ।
ಶುಕ್ಲೋ ರಕ್ತಸ್ತಥಾ ಪೀತ ಇದಾನೀಂ ಕೃಷ್ಣತಾಂ ಗತಃ
॥ ೧೩ ॥

ಪ್ರಾಗಯಂ ವಸುದೇವಸ್ಯ ಕ್ವಚಿಜ್ಜಾತಸ್ತವಾತ್ಮಜಃ ।
ವಾಸುದೇವ ಇತಿ ಶ್ರೀಮಾನಭಿಜ್ಞಾಃ ಸಂಪ್ರಚಕ್ಷತೇ
॥ ೧೪ ॥

ಬಹೂನಿ ಸಂತಿ ನಾಮಾನಿ ರೂಪಾಣಿ ಚ ಸುತಸ್ಯ ತೇ ।
ಗುಣಕರ್ಮಾನುರೂಪಾಣಿ ತಾನ್ಯಹಂ ವೇದ ನೋ ಜನಾಃ
॥ ೧೫ ॥

ಏಷ ವಃ ಶ್ರೇಯ ಆಧಾಸ್ಯದ್ಗೋಪಗೋಕುಲನಂದನಃ ।
ಅನೇನ ಸರ್ವದುರ್ಗಾಣಿ ಯೂಯಮಂಜಸ್ತರಿಷ್ಯಥ
॥ ೧೬ ॥

ಪುರಾನೇನ ವ್ರಜಪತೇ ಸಾಧವೋ ದಸ್ಯುಪೀಡಿತಾಃ ।
ಅರಾಜಕೇ ರಕ್ಷ್ಯಮಾಣಾ ಜಿಗ್ಯುರ್ದಸ್ಯೂನ್ಸಮೇಧಿತಾಃ
॥ ೧೭ ॥

ನಂದಗೋಪನು ಹೇಳಿದನು – ಆಚಾರ್ಯರೇ ! ನೀವು ಏಕಾಂತದಲ್ಲಿ ಗೋಶಾಲೆಯಲ್ಲಿ ಸ್ವಸ್ತಿವಾಚನವನ್ನು ಮಾಡಿ ಈ ಬಾಲಕನಿಗೆ ದ್ವಿಜಾತಿಗೆ ಉಚಿತವಾದ ನಾಮಕರಣಾದಿ ಸಂಸ್ಕಾರ ಗಳನ್ನು ಮಾಡಿರಿ. ಬೇರೆಯವರಿಗಿರಲಿ, ನನ್ನ ಜ್ಞಾತಿಬಂಧುಗಳಿಗೂ ಈ ವಿಷಯ ತಿಳಿಯದಂತಿರಲಿ. ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಗರ್ಗಾಚಾರ್ಯರಾದರೋ ಸಂಸ್ಕಾರವನ್ನು ಮಾಡಲು ಬಯಸುತ್ತಲೇ ಇದ್ದರು. ನಂದಗೋಪನೂ ಒತ್ತಾಯಿಸಿ ಪ್ರಾರ್ಥಿಸಿದಾಗ ಅವರು ಏಕಾಂತದಲ್ಲಿ ಅಡಗಿಕೊಂಡೇ ಗುಪ್ತವಾಗಿ ಇಬ್ಬರು ಬಾಲಕರಿಗೂ ನಾಮಕರಣ ಸಂಸ್ಕಾರವನ್ನು ಮಾಡಿಬಿಟ್ಟರು. ॥ ೧೧ ॥

ಗರ್ಗಾಚಾರ್ಯರು ಹೇಳುತ್ತಾರೆ – ನಂದಗೋಪನೇ ! ಇವನು ರೋಹಿಣಿಯ ಮಗನು. ಆದುದರಿಂದ ಇವನ ಹೆಸರು ರೌಹಿಣೇಯ. ಇವನು ಬಂಧುಗಳಿಗೂ, ಸುಹೃದರಿಗೂ ತನ್ನ ಒಳ್ಳೆಯ ಗುಣಗಳಿಂದ ಆನಂದವನ್ನುಂಟುಮಾಡುವನು. ಆದ ರಿಂದ ಇವನ ಇನ್ನೊಂದು ಹೆಸರು 'ರಾಮ' ಎಂದಿರುತ್ತದೆ. ಅಸೀಮ ಬಲನಾಗಿರುವುದರಿಂದ ಇವನಿಗೆ 'ಬಲಭದ್ರ'ನೆಂದೂ ಒಂದು ಹೆಸರು ಇದೆ. ಯಾದವರಲ್ಲಿ ಮತ್ತು ನಿಮ್ಮಲ್ಲಿ ಜಗಳವುಂಟಾದಾಗ ಇವನು ಒಂದಾಗಿಸುವನು. ಆದ್ದರಿಂದ 'ಸಂಕರ್ಷಣ'ನೆಂದೂ ಇನ್ನೊಂದು ಹೆಸರಿನಿಂದ ಇವನನ್ನು ಕರೆಯುವರು. ॥ ೧೨ ॥ ಶ್ರೀಕೃಷ್ಣನ ಕಡೆಗೆ ಕೈತೋರಿಸುತ್ತಾ ಶ್ಯಾಮಲವರ್ಣನಾಗಿರುವ ಇವನು ಪ್ರತಿಯೊಂದು ಯುಗದಲ್ಲಿಯೂ ಒಂದೊಂದು ವರ್ಣದಿಂದ ಶರೀರವನ್ನು ಧರಿಸುವನು. ಕೃತಯುಗದಲ್ಲಿ ಶ್ವೇತವರ್ಣದವ ನಾಗಿಯೂ, ತ್ರೇತಾಯುಗದಲ್ಲಿ ರಕ್ತವರ್ಣದವನಾಗಿಯೂ, ದ್ವಾಪರಯುಗದಲ್ಲಿ ಪೀತವರ್ಣದವನಾಗಿಯೂ ಹುಟ್ಟಿದ್ದಾನೆ. ಈಗ ದ್ವಾಪರದ ಕಡೆಯಲ್ಲಿ ಕೃಷ್ಣವರ್ಣದವನಾಗಿಯೂ ಹುಟ್ಟಿ ದ್ದಾನೆ. ಆದುದರಿಂದ ಇವನಿಗೆ ಕೃಷ್ಣನೆಂದೇ ಹೆಸರು ಆಗುವುದು. ॥ ೧೩. ॥ ನಂದಗೋಪನೇ ! ಈ ನಿನ್ನ ಪುತ್ರನು ಹಿಂದೆ ವಸುದೇವನ ಮಗನಾಗಿಯೂ ಹುಟ್ಟಿದ್ದನು. ಆದುದರಿಂದಲೇ ಈ ರಹಸ್ಯವನ್ನು ತಿಳಿದಿರುವ ಜನರು ಇವನನ್ನು 'ಶ್ರೀಮಾನ್ ವಾಸುದೇವ' ಎಂದೂ ಕರೆಯುತ್ತಾರೆ. ॥ ೧೪ ॥ ನಿನ್ನ ಪುತ್ರನಿಗೆ ಇನ್ನೂ ಹಲವಾರು ನಾಮಧೇಯಗಳೂ ಇವೆ ಹಾಗೂ ರೂಪಗಳೂ ಅನೇಕವಾಗಿವೆ. ಇವನ ಎಲ್ಲ ಗುಣಗಳು ಮತ್ತು ಕರ್ಮಗಳಿಗೆ ಅನುಸಾರ ಬೇರೆ-ಬೇರೆ ನಾಮಧೇಯಗಳಾಗುತ್ತವೆ. ನಾನಾದರೋ ಅವೆಲ್ಲ ನಾಮಗಳನ್ನು ಅರಿತಿರುವೆನು. ಆದರೆ ಜಗತ್ತಿನ ಸಾಧಾರಣ ಜನರು ಅರಿಯಲಾರರು. ॥ ೧೫ ॥ ಇವನು ನಿಮ್ಮಗಳ ಪರಮ ಕಲ್ಯಾಣವನ್ನುಂಟುಮಾಡುವನು. ಸಮಸ್ತ ಗೋಪರಿಗೂ, ಗೋವು ಗಳಿಗೂ ಇವನು ಆನಂದಗೊಳಿಸುವನು. ಇವನ ಸಹಾಯದಿಂದ ನೀವುಗಳು ಮಹಾವಿಪತ್ತುಗಳಿಂದ ಸುಲಭವಾಗಿ ಪಾರಾಗುವಿರಿ.॥ ೧೬ ॥ ವ್ರಜರಾಜನೇ ! ಹಿಂದೊಮ್ಮೆ ಭೂಮಂಡಲವು ಅರಾಜಕವಾಗಿತ್ತು. ದರೋಡೆಕೋರರು ಸತ್ಪುರುಷರನ್ನು ಬಹಳ ಪೀಡಿಸುತ್ತಿದ್ದರು. ಆಗ ನಿನ್ನ ಇದೇ ಪುತ್ರನು ಸಜ್ಜನರನ್ನು ರಕ್ಷಿಸಿದನು. ಇವನಿಂದ ಬಲವನ್ನು ಪಡೆದು ಆ ಜನರು ದರೋಡೆಕೋರರನ್ನು ಜಯಿಸಿದ್ದರು. ॥ ೧೭ ॥

ಯ ಏತಸ್ಮಿನ್ಮಹಾಭಾಗಾಃ ಪ್ರೀತಿಂ ಕುರ್ವಂತಿ ಮಾನವಾಃ ।
ನಾರಯೋಽಭಿಭವಂತ್ಯೇತಾನ್ವಿಷ್ಣುಪಕ್ಷಾನಿವಾಸುರಾಃ
॥ ೧೮ ॥

ಯಾವ ಮನುಷ್ಯರು ನಿನ್ನ ಈ ಶ್ಯಾಮಲ ಶಿಶುವನ್ನು ಪ್ರೀತಿಸುವರೋ ಅವರು ಮಹಾ ಭಾಗ್ಯಶಾಲಿಗಳೇ ಸರಿ. ಭಗವಾನ್ ವಿಷ್ಣುವಿನ ಕರಕಮಲಗಳ ಛತ್ರಛಾಯೆಯಲ್ಲಿದ್ದ ದೇವತೆಗಳನ್ನು ಅಸುರರು ಜಯಿಸಲಾರರೋ ಹಾಗೆಯೇ ಇವನನ್ನು ಪ್ರೀತಿಸುವವರನ್ನು ಒಳಗಿನ ಅಥವಾ ಹೊರಗಿನ ಯಾವ ಶತ್ರುಗಳು ಜಯಿಸಲಾರರು. ॥ ೧೮ ॥ ನಂದಗೋಪನೇ! ಯಾರ ದೃಷ್ಟಿಯಿಂದ ನೋಡಿದರೂ ಗುಣಗಳಲ್ಲಿ, ಸಂಪತ್ತಿನಲ್ಲಿ, ಸೌಂದರ್ಯದಲ್ಲಿ, ಕೀರ್ತಿಯಲ್ಲಿ, ಮಹಿಮೆಯಲ್ಲಿ ನಿನ್ನ ಈ ಬಾಲಕನು ಸಾಕ್ಷಾತ್ ಭಗವಾನ್ ನಾರಾಯಣನಿಗೆ ಸಮಾನನಾಗಿರುವನು. ನೀನು ಬಹಳ ಎಚ್ಚರಿಕೆಯಿಂದ, ತತ್ಪರತೆಯಿಂದ ಇವನನ್ನು ರಕ್ಷಿಸುತ್ತಿರು. ॥ ೧೯ ॥

ತಸ್ಮಾನ್ನಂದಾತ್ಮಜೋಽಯಂ ತೇ ನಾರಾಯಣಸಮೋ ಗುಣೈಃ ।
ಶ್ರಿಯಾ ಕೀರ್ತ್ಯಾನುಭಾವೇನ ಗೋಪಾಯಸ್ವ ಸಮಾಹಿತಃ
॥ ೧೯ ॥

ಹೀಗೆ ನಂದಗೋಪನಿಗೆ ಗರ್ಗರು 'ಇವನೇ ಭಗವಂತ' ಎಂದು ಮಾತ್ರ ಹೇಳದೆ ಉಳಿದೆಲ್ಲ ವಿಷಯವನ್ನು ಹೇಳಿ, ಅವನ ಅನುಮತಿಯನ್ನು ಪಡೆದು ತಮ್ಮ ಆಶ್ರಮಕ್ಕೆ ತೆರಳಿದರು. ಗರ್ಗರ ಮಾತನ್ನು ಕೇಳಿ ನಂದಗೋಪನು ಆನಂದಭರಿತನಾದನು. ತನ್ನ ಆಸೆಗಳೆಲ್ಲವೂ ತೀರಿದುವೆಂದೂ, ಕೃತಕೃತ್ಯನಾದೆನೆಂದೂ ಆತನು ಭಾವಿಸಿಕೊಂಡನು. ॥ ೨೦ ॥

ಇತ್ಯಾತ್ಮಾನಂ ಸಮಾದಿಶ್ಯ ಗರ್ಗೇ ಚ ಸ್ವಗೃಹಂ ಗತೇ ।
ನಂದಃ ಪ್ರಮುದಿತೋ ಮೇನೇ ಆತ್ಮಾನಂ ಪೂರ್ಣಮಾಶಿಷಾಮ್
॥ ೨೦ ॥

ಪರೀಕ್ಷಿತನೇ! ಕೆಲವು ದಿವಸಗಳಲ್ಲಿಯೇ ರಾಮ ಮತ್ತು ಶ್ಯಾಮರು ಅಂಬೆಗಾಲಿಟ್ಟುಕೊಂಡು ಗೋಕುಲದಲ್ಲೆಲ್ಲ ಆಟವಾಡ ತೊಡಗಿದರು. ॥ ೨೧ ॥ ಇಬ್ಬರು ಸೋದರರೂ ತಮ್ಮ ಸುಕುಮಾರವಾದ ಕಾಲುಗಳನ್ನೆಳೆಯುತ್ತಾ ಗೋಕುಲದ ಧೂಳಿನಲ್ಲಿ ನಡೆಯುತ್ತಿದ್ದರು. ಆ ಸಮಯದಲ್ಲಿ ಕಾಲುಗಳಲ್ಲಿ ಮತ್ತು ಸೊಂಟದಲ್ಲಿ ಅಲಂಕೃತವಾದ ಗೆಜ್ಜೆಗಳು ಉಲಿಯುತ್ತಿದ್ದವು. ಆ ಮಂಜುಳ ಮಧುರ ಧ್ವನಿಯನ್ನು ಕೇಳಿ ಅವರಿಬ್ಬರೂ ಕಿಲ-ಕಿಲನೆ ನಗುತ್ತಿದ್ದರು. ಕೆಲವೊಮ್ಮೆ ಅವರು ದಾರಿಯಲ್ಲಿ ಯಾರೋ ಅಜ್ಞಾತವ್ಯಕ್ತಿಯ ಹಿಂದೆ-ಹಿಂದೆಯೇ ಸ್ವಲ್ಪದೂರ ಹೋಗುತ್ತಿದ್ದರು. ಮತ್ತೆ ಇವನು ಯಾರೋ ಬೇರೆ ಎಂದು ತಿಳಿದಾಗ ಮರುಕ್ಷಣದಲ್ಲೇ ಭಯಗೊಂಡವರಂತೆ ರೋಹಿಣೀ-ಯಶೋದೆಯರ ಬಳಿಗೆ ಬಂದು ಬಿಡುತ್ತಿದ್ದರು. ॥ ೨೨ ॥ ತಾಯಂದಿರು ಇದೆಲ್ಲವನ್ನು ನೋಡಿ ಸ್ನೇಹ ಪರವಶರಾಗುತ್ತಿದ್ದರು. ಅವರ ಸ್ತನಗಳಿಂದ ಹಾಲು ತಾನಾಗಿಯೇ ಒಸರುತ್ತಿತ್ತು. ಅವರ ಇಬ್ಬರೂ ಮುದ್ದುಕಂದಮ್ಮಗಳು ತಮ್ಮ ಶರೀರದಲ್ಲಿ ಧೂಳಿನ ಅಂಗರಾಗವನ್ನು ಹಚ್ಚಿಕೊಂಡು ಮರಳಿದಾಗ ಅವರ ಸೌಂದರ್ಯವು ಇನ್ನೂ ಹೆಚ್ಚುತ್ತಿತ್ತು. ಅವರು ಬರುತ್ತಲೇ ತಾಯಂದಿರು ಎರಡೂ ಕೈಗಳಿಂದ ಬಾಚಿತಬ್ಬಿಕೊಂಡು ತೊಡೆಗಳಲ್ಲಿ ಕುಳ್ಳಿರಿಸಿಕೊಂಡು ಸ್ತನ್ಯಪಾನಮಾಡಿಸುತ್ತಿದ್ದರು. ಅವರು ಹಾಲುಕುಡಿಯುತ್ತಿರುವಾಗ ನಡು-ನಡುವೆ ಮುಗುಳ್ನಗುತ್ತಾ ತಮ್ಮ ತಾಯಂದಿರ ಕಡೆಗೆ ನೋಡತೊಡಗಿದಾಗ ಅವರು ಬಾಲಕರ ಮಂದ-ಮಂದ ಮುಗುಳ್ನಗೆಯನ್ನು ಪುಟ್ಟದಾದ ಹಾಲುಹಲ್ಲುಗಳನ್ನೂ, ಮುದ್ದಾದ ಮುಖವನ್ನೂ ನೋಡಿ ಆನಂದಸಾಗರದಲ್ಲಿ ಮುಳುಗಿಹೋಗುತ್ತಿದ್ದರು. ॥ ೨೩. ॥ ರಾಮ ಮತ್ತು ಶ್ಯಾಮರಿಬ್ಬರೂ ಸ್ವಲ್ಪ ದೊಡ್ಡವರಾದಾಗ ವ್ರಜದ ಮನೆಯ ಹೊರಗೆ ಅವರು ನಡೆಸುತ್ತಿದ್ದ ಲೀಲೆಗಳನ್ನು ಗೋಪಿಯರು ನೋಡುತ್ತಾ ನಿಂತು ಬಿಡುತ್ತಿದ್ದರು. ಅವರು ಯಾವುದೋ ಮಲಗಿದ ಕರುವಿನ ಬಾಲ

ಕಾಲೇನ ವ್ರಜತಾಲ್ಪೇನ ಗೋಕುಲೇ ರಾಮಕೇಶವೌ ।
ಜಾನುಭ್ಯಾಂ ಸಹ ಪಾಣಿಭ್ಯಾಂ ರಿಂಗಮಾಣೌ ವಿಜಹ್ರತುಃ
॥ ೨೧ ॥

ತಾವಂಘ್ರಿಯುಗ್ಮಮನುಕೃಷ್ಯ ಸರೀಸೃಪಂತೌ
ಘೋಷಪ್ರಘೋಷರುಚಿರಂ ವ್ರಜಕರ್ದಮೇಷು ।
ತನ್ನಾದಹೃಷ್ಟಮನಸಾವನುಸೃತ್ಯ ಲೋಕಂ
ಮುಗ್ಧಪ್ರಭೀತವದುಪೇಯತುರಂತಿ ಮಾತ್ರೋಃ ॥ ೨೨ ॥

ತಾತೌ ನಿಜಸುತೌ ಘೃಣಯಾ ಸ್ನುವಂತ್ಯೌ
ಪಂಕಾಂಗರಾಗರುಚಿರಾವುಪಗುಹ್ಯ ದೋರ್ಭ್ಯಾಮ್ ।
ದತ್ತ್ವಾ ಸ್ತನಂ ಪ್ರಪಿಬತೋಃ ಸ್ಮ ಮುಖಂ ನಿರೀಕ್ಷ್ಯ
ಮುಗ್ಧಸ್ಮಿತಾಲ್ಪದಶನಂ ಯಯತುಃ ಪ್ರಮೋದಮ್ ॥ ೨೩ ॥

ಯರ್ಹ್ಯಂಗನಾದರ್ಶನೀಯಕುಮಾರಲೀಲಾ-
ವಂತರ್ವ್ರಜೇ ತದಬಲಾಃ ಪ್ರಗೃಹೀತಪುಚ್ಛೈಃ ।
ವತ್ಸೈರಿತಸ್ತತ ಉಭಾವನುಕೃಷ್ಯಮಾಣೌ
ಪ್ರೇಕ್ಷಂತ್ಯ ಉಜ್ಝಿತಗೃಹಾ ಜಹೃಷುರ್ಹಸಂತ್ಯಃ ॥ ೨೪ ॥

ಕೃಷ್ಣ-ಬಲರಾಮರಿಬ್ಬರೂ ಬಹಳ ಚಂಚಲರೂ, ತುಂಟರೂ ಆಗಿದ್ದರು. ಅವರು ಎಲ್ಲೋ ಜಿಂಕೆ, ಹಸು ಮುಂತಾದ ಕೋಡುಗಳುಳ್ಳ ಪಶುಗಳ ಬಳಿಗೆ ಧಾವಿಸಿದರೆ, ಕೆಲವೊಮ್ಮೆ ಉರಿಯುತ್ತಿರುವ ಬೆಂಕಿಯ ಬಳಿಗೆ ಆಡಲು ಓಡುತ್ತಿದ್ದರು. ಕೆಲವೊಮ್ಮೆ ಹಲ್ಲುಗಳಿಂದ ಕಡಿಯುವಂತಹ ನಾಯಿಗಳ ಬಳಿಗೆ ತಲುಪಿದರೆ, ಕೆಲವೊಮ್ಮೆ ಕಣ್ಣುತಪ್ಪಿಸಿ ಖಡ್ಗವನ್ನೆತ್ತಿಕೊಳ್ಳುತ್ತಿದ್ದರು. ಕೆಲವೊಮ್ಮೆ ಬಾವಿ-ಹಳ್ಳಗಳ ಬಳಿಗೆ ಹೋಗಿ ನೀರಿನಲ್ಲಿ ಬೀಳುವರೋ ಎಂದು ಅನಿಸುತ್ತಿತ್ತು. ಕೆಲವೊಮ್ಮೆ ನವಿಲು ಮುಂತಾದ ಪಕ್ಷಿಗಳ ಹತ್ತಿರ ಹೋದರೆ, ಕೆಲವೊಮ್ಮೆ ಮುಳ್ಳುಗಳಿರುವಲ್ಲಿಗೆ ಮುಂದರಿಯುತ್ತಿದ್ದರು. ತಾಯಂದಿರು ಅವರನ್ನು ಬಹಳವಾಗಿ ನಿವಾರಿಸುತ್ತಿದ್ದರು. ಆದರೆ ಅವರ ಮಾತು ಕೇಳುತ್ತಲೇ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ಅವರಿಂದ ಮನೆಯ ಕೆಲಸವನ್ನು ನಿರ್ವಹಿಸಲಾಗುತ್ತಿರಲಿಲ್ಲ. ಅವರ ಚಿತ್ತವು ಮಕ್ಕಳನ್ನು ಭಯದ ವಸ್ತುಗಳಿಂದ ಕಾಪಾಡುವ ಚಿಂತೆಯಲ್ಲೇ ಅತ್ಯಂತ ಚಂಚಲವಾಗಿರುತ್ತಿತ್ತು. ॥ ೨೫ ॥

ಶೃಂಗ್ಯಗ್ನಿದಂಷ್ಟ್ರ್ಯಸಿಜಲದ್ವಿಜಕಂಟಕೇಭ್ಯಃ
ಕ್ರೀಡಾಪರಾವತಿಚಲೌ ಸ್ವಸುತೌ ನಿಷೇದ್ಧುಮ್ ।
ಗೃಹ್ಯಾಮಿ ಕರ್ತುಮಪಿ ಯತ್ರ ನ ತಜ್ಜನನ್ಯೌ
ಶೇಕಾತ ಆಪತುರಲಂ ಮನಸೋಽನವಸ್ಥಾಮ್ ॥ ೨೫ ॥

ರಾಜರ್ಷಿಯೇ! ಕೆಲವೇ ದಿನಗಳಲ್ಲಿ ಯಶೋದೆ ಮತ್ತು ರೋಹಿಣಿಯರ ಮುದ್ದಿನ ಮಕ್ಕಳು ಅಂಬೆಗಾಲನ್ನಿಡುವುದನ್ನು ಬಿಟ್ಟು ಗೋಕುಲದಲ್ಲಿ ನಡೆದಾಡಲು ಪ್ರಾರಂಭಿಸಿದರು. ॥ ೨೬ ॥ ಕೃಷ್ಣನು ವ್ರಜವಾಸಿಯರಿಗೆ ಪ್ರತ್ಯಕ್ಷ ಭಗವಂತನೇ ಆಗಿದ್ದು, ಪರಮ ಸುಂದರ, ಪರಮಮಧುರವಾಗಿದ್ದಾನೆ. ಈಗ ಅವನು ಮತ್ತು ಬಲರಾಮರಿಬ್ಬರೂ ತಮ್ಮ ವಯಸ್ಸಿನ ಗೊಲ್ಲಬಾಲಕರೊಂದಿಗೆ ಜೊತೆ ಸೇರಿಸಿಕೊಂಡು ಆಟವಾಡಲು ಗೋಕುಲದಲ್ಲೆಲ್ಲ ಓಡಾಡುತ್ತಿದ್ದರು. ವ್ರಜದ ಭಾಗ್ಯವತಿಯರಾದ ಗೋಪಿಯರನ್ನು ಸಂತೋಷ ಪಡಿಸುತ್ತಾ ಅನೇಕ ರೀತಿಯ ಆಟಗಳನ್ನು ಆಡುತ್ತಾರೆ. ॥ ೨೭ ॥ ಶ್ರೀಕೃಷ್ಣನ ಕೌಮಾರ್ಯದ ಚಂಚಲತೆಯಿಂದ ಕೂಡಿದ ಆಟ ಪಾಟಗಳು ಅತ್ಯಂತ ಮನೋಹರವಾಗಿದ್ದುವು. ಗೋಪಿಯರಿಗಾದರೋ ಅವುಗಳು ಬಹಳ ಸುಂದರವಾಗಿ, ಮಧುರವಾಗಿ ಕಾಣುತ್ತಿದ್ದವು. ಒಂದು ದಿನ ಅವರೆಲ್ಲರೂ ಸೇರಿ ನಂದಗೋಪನ ಮನೆಗೆ ಬಂದು ತಾಯಿ ಯಶೋದೆಯನ್ನು ಸಂಬೋಧಿಸುತ್ತಾ ಕೃಷ್ಣನ ತುಂಟತನವನ್ನು ಹೇಳತೊಡಗಿದರು. ॥ ೨೮ ॥ ಅಮ್ಮಾ! ಯಶೋದೆಯೇ! ನಿನ್ನ ಮಗನು ಕೊಡುವ ಉಪಟಳವನ್ನು ಎಷ್ಟೆಂದು ವರ್ಣಿಸೋಣ! ನಿನ್ನ ಮಗನು ನಿಶ್ಚಯವಾಗಿ ಬಹಳ ತುಂಟನಾಗಿರುವನು. ಹಾಲು ಕರೆಯುವ ಸಮಯವಲ್ಲದಿದ್ದರೂ ಕರುಗಳನ್ನು ಬಿಟ್ಟುಬಿಡುತ್ತಾನೆ. ನಾವು ಗದರಿಸಿದರೆ ಅಣಕಿಸಿ ನಗುತ್ತಾನೆ. ಇವನು ಉಪಾಯಾಂತರಗಳಿಂದ ನಾವು ಬಚ್ಚಿಟ್ಟಿದ್ದ ರುಚಿಕರವಾದ ಹಾಲು-ಮೊಸರುಗಳನ್ನು ಕದ್ದು ತಿನ್ನುತ್ತಾನೆ. ಕೇವಲ

ಕಾಲೇನಾಲ್ಪೇನ ರಾಜರ್ಷೇ ರಾಮಃ ಕೃಷ್ಣಶ್ಚ ಗೋಕುಲೇ ।
ಅಘೃಷ್ಟಜಾನುಭಿಃ ಪದ್ಭಿರ್ವಿಚಕ್ರಮತುರಂಜಸಾ ॥ ೨೬ ॥

ತತಸ್ತು ಭಗವಾನ್ಕೃಷ್ಣೋ ವಯಸ್ಯೈರ್ವ್ರಜಬಾಲಕೈಃ ।
ಸಹರಾಮೋ ವ್ರಜಸ್ತ್ರೀಣಾಂ ಚಿಕ್ರೀಡೇ ಜನಯನ್ಮುದಮ್ ॥ ೨೭ ॥

ಕೃಷ್ಣಸ್ಯ ಗೋಪ್ಯೋ ರುಚಿರಂ ವೀಕ್ಷ್ಯ ಕೌಮಾರಚಾಪಲಮ್ ।
ಶೃಣ್ವತ್ಯಾಃ ಕಿಲ ತನ್ಮಾತುರಿತಿ ಹೋಚುಃ ಸಮಾಗತಾಃ ॥ ೨೮ ॥

ವತ್ಸಾನ್ಮುಂಚನ್ ಕ್ವಚಿದಸಮಯೇ ಕ್ರೋಶಸಂಜಾತಹಾಸಃ
ಸ್ತೇಯಂ ಸ್ವಾದ್ವತ್ತ್ಯಥ ದಧಿ ಪಯಃ ಕಲ್ಪಿತೈಃ ಸ್ತೇಯಯೋಗೈಃ ।
ಮರ್ಕಾನ್ಭೋಕ್ಷ್ಯನ್ವಿಭಜತಿ ಸ ಚೇನ್ನಾತ್ತಿ ಭಾಂಡಂ ಭಿನತ್ತಿ
ದ್ರವ್ಯಾಲಾಭೇ ಸ ಗೃಹಕುಪಿತೋ ಯಾತ್ಯುಪಕ್ರೋಶ್ಯ ತೋಕಾನ್
॥ ೨೯ ॥

ಹಸ್ತಾಗ್ರಾಹ್ಯೇ ರಚಯತಿ ವಿಧಿಂ ಪೀಠಕೋಲೂಖಲಾದ್ಯೈ-
ಶ್ಛಿದ್ರಂ ಹ್ಯಂತರ್ನಿಹಿತವಯುನಃ ಶಿಕ್ಯಭಾಂಡೇಷು ತದ್ವಿತ್ ।
ಧ್ವಾಂತಾಗಾರೇ ಧೃತಮಣಿಗಣಂ ಸ್ವಾಂಗಮರ್ಥಪ್ರದೀಪಂ
ಕಾಲೇ ಗೋಪ್ಯೋ ಯರ್ಹಿ ಗೃಹಕೃತ್ಯೇಷು ಸುವ್ಯಗ್ರಚಿತ್ತಾಃ
॥ ೩೦ ॥

ಏವಂ ಧಾಷ್ಟ್ರ್ಯಾನ್ಯುಶತಿ ಕುರುತೇ ಮೇಹನಾದೀನಿ ವಾಸ್ತೌ
ಸ್ತೇಯೋಪಾಯೈರ್ವಿರಚಿತಕೃತಿಃ ಸುಪ್ರತೀಕೋ ಯಥಾಽಽಸ್ತೇ ।
ಇತ್ಥಂ ಸ್ತ್ರೀಭಿಃ ಸಭಯನಯನಶ್ರೀಮುಖಾಲೋಕಿನೀಭಿ-
ರ್ವ್ಯಾಖ್ಯಾತಾರ್ಥಾ ಪ್ರಹಸಿತಮುಖೀ ನ ಹ್ಯುಪಾಲಬ್ಧುಮೈಚ್ಛತ್
॥ ೩೧ ॥

ಏವಂ ವಿಹಾ ಕ್ರೀಡಮಾನಾಸ್ತೇ ರಾಮಾದ್ಯಾ ಗೋಪದಾರಕಾಃ ।
ಕೃಷ್ಣೋ ಮೃದಂ ಭಕ್ಷಿತವಾನಿತಿ ಮಾತ್ರೇ ನ್ಯವೇದಯನ್
॥ ೩೨ ॥

ತಾನೇ ತಿಂದರೆ ತಿನ್ನಲಿ, ಪಾಪ. ಆದರೆ ಹಾಗೆಮಾಡದೆ ಇವನು ಎಲ್ಲ ಹಾಲು-ಮೊಸರುಗಳನ್ನು ಮಂಗಗಳಿಗೆ ಮತ್ತು ಜೊತೆಗಾರ ಬಾಲಕರಿಗೆ ಹಂಚಿಬಿಡುತ್ತಾನೆ. ಅವು ಕೂಡ ಹೊಟ್ಟೆತುಂಬಾ ತಿಂದು ಇನ್ನು ತಿನ್ನಲು ಆಗದಿದ್ದಾಗ ಇವನು ನಮ್ಮ ಹಾಲು-ಮೊಸರಿನ ಗಡಿಗೆಗಳನ್ನು ಒಡೆದು ಹಾಕುತ್ತಾನೆ. ಇವನಿಗೆ ಮನೆಯಲ್ಲಿ ಬೇಕಾದ ವಸ್ತುವು ಸಿಗದಿದ್ದರೆ ಮನೆಯವರ ಮೇಲೆ ರೇಗುತ್ತಾನೆ ಮತ್ತು ನಮ್ಮ ಮಕ್ಕಳನ್ನು ಕೀಟಲೆಮಾಡಿ ಅಳಿಸುತ್ತಾನೆ. ॥ ೨೯ ॥ ನಾವು ಹಾಲು ಮೊಸರುಗಳನ್ನು ನೆಲವುಗಳಲ್ಲಿ ಇಟ್ಟುಬಿಡುತ್ತೇವೆ. ಇವನ ಪುಟ್ಟ ಕೈ-ಕಾಲುಗಳು ಅಲ್ಲಿಗೆ ಎಟಕದಿದ್ದಾಗ ನಾನಾ ಉಪಾಯಗಳನ್ನು ಮಾಡುತ್ತಾನೆ. ಕೆಲವೊಮ್ಮೆ ನಾಲ್ಕಾರು ಮಣೆಗಳನ್ನು ಒಂದರ ಮೇಲೊಂದು ಇಟ್ಟುಬಿಡುತ್ತಾನೆ. ಕೆಲವೊಮ್ಮೆ ಒರಳಿನಮೇಲೆ ಹತ್ತಿಬಿಡುತ್ತಾನೆ. ಕೆಲವೊಮ್ಮೆ ಒರಳಿನ ಮೇಲೆ ಮಣೆಯನ್ನಿಡುತ್ತಾನೆ. ಕೆಲವೊಮ್ಮೆ ತನ್ನ ಜೊತೆಯ ಬಾಲಕನ ಹೆಗಲೇರಿ ಬಿಡುತ್ತಾನೆ. ಇಷ್ಟಾದರೂ ಕಾರ್ಯಸಫಲವಾಗದಿದ್ದರೆ ಇವನು ಕೆಳಗಿನಿಂದಲೇ ಕೋಲಿನಿಂದ ಪಾತ್ರೆಗೆ ತೂತು ಮಾಡಿಬಿಡುತ್ತಾನೆ. ಯಾವ-ಯಾವ ನೆಲುವಿನಲ್ಲಿ ಯಾವ ಪಾತ್ರೆಯಲ್ಲಿ ಏನೇನಿದೆ ಎಂಬುದು ಇವನಿಗೆ ಚೆನ್ನಾಗಿ ತಿಳಿದಿರುತ್ತದೆ. ಯಾರಿಗೂ ತಿಳಿಯದಂತೆ ಪಾತ್ರೆಗೆ ಛಿದ್ರ ಕೊರೆಯುವ ಕಲೆ ಇವನಿಗೆ ಚೆನ್ನಾಗಿ ತಿಳಿದಿದೆ. ನಾವು ನಮ್ಮ ವಸ್ತುಗಳನ್ನು ಗಾಢವಾದ ಕತ್ತಲಲ್ಲಿ ಅಡಗಿಸಿಟ್ಟರೂ ನಂದ ರಾಣಿಯೇ! ನೀನು ಇವನಿಗೆ ತೊಡಿಸಿದ ನವರತ್ನಮಯ ಆಭೂಷಣಗಳ ಪ್ರಭೆಯಿಂದ ಎಲ್ಲವನ್ನೂ ನೋಡಿಕೊಳ್ಳುವನು. ಎಲ್ಲವನ್ನೂ ಕಾಣಿಸುವಂತಹ ಒಂದು ಜ್ಯೋತಿಯೇ ಇವನ ಶರೀರದಲ್ಲಿದೆ. ಯಾವಾಗ ಯಾರು ಎಲ್ಲಿ ಇರುತ್ತಾರೆ ಎಂಬುದು ಇವನಿಗೆ ನಿಶ್ಚಿತವಾಗಿ ತಿಳಿಯುವಷ್ಟು ಇವನು ಜಾಣನಾಗಿದ್ದಾನೆ. ನಾವೆಲ್ಲರೂ ಮನೆಗೆಲಸದಲ್ಲಿ ನಿರತರಾದಾಗ ಇವನು ತನ್ನ ಕಾರ್ಯವನ್ನು ಮಾಡಿಬಿಡುತ್ತಾನೆ. ॥ ೩೦ ॥ ಇಷ್ಟು ಮಾಡಿಯೂ ದೊಡ್ಡಸ್ತಿಕೆಯ ಮಾತನಾಡುತ್ತಾ ನಮ್ಮನ್ನು ಕಳ್ಳೆಯರೆಂದು ದಬಾಯಿಸುತ್ತಾನೆ ಮತ್ತು ಮನೆಯ ಯಜಮಾನನಂತೆ ವರ್ತಿಸುತ್ತಾನೆ. ಇಷ್ಟೇ ಅಲ್ಲ ನಾವು ಗುಡಿಸಿ, ಸಾರಿಸಿ ಸ್ವಚ್ಛಗೊಳಿಸಿದ ಮನೆಯನ್ನು ಇವನು ಮೂತ್ರ-ಪುರೀಷೋತ್ಸರ್ಜನಗಳಿಂದ ಕೆಡಿಸಿಬಿಡುತ್ತಾನೆ. ಮನೆ-ಮನೆಯಲ್ಲಿಯೂ ಹೀಗೆ ತುಂಟತನ ಮಾಡುವ ಈ ಪೋರನು ನಿನ್ನ ಬಳಿಯಲ್ಲಿ ಏನೂ ಅರಿಯದವನಂತೆ ಹೆದರಿ ನಿಂತಿದ್ದಾನಲ್ಲ! ಎಂದು ದೂರುತ್ತಿದ್ದ ಗೋಪಿಯರ ಮಾತನ್ನು ಕೇಳಿದ ಯಶೋದೆಯು ಭಯಗೊಂಡವನಂತೆ ನಟಿಸುತ್ತಿದ್ದ ಮುದ್ದುಕೃಷ್ಣನ ಮುದ್ದುಮುಖವನ್ನು ನೋಡಿ ನಕ್ಕು ಬಿಟ್ಟಳು. ಮುದ್ದಿನ ಕಂದಮ್ಮನಾದ ಕೃಷ್ಣನಲ್ಲಿ ವಿಚಾರಿಸಲೂ ಆಗದಿರುವ ಆಕೆಯು ಗದರಿಸಲು ಸಾಧ್ಯವೇ ? ॥ ೩೧ ॥

ಒಂದು ದಿನ ಬಲರಾಮನೇ ಮೊದಲಾದ ಗೋಪಬಾಲಕರು ಶ್ರೀಕೃಷ್ಣನೊಡನೆ ಆಟವಾಡುತ್ತಿದ್ದರು. ಆಗ ಒಮ್ಮೆ ಶ್ರೀಕೃಷ್ಣನು ಆಟ ಆಡುತ್ತಿರುವಾಗ ಮಣ್ಣು ತಿಂದನು. ಗೋಪಾಲಕರು ಇದನ್ನು ನೋಡಿ ಬಂದು ಯಶೋದೆಗೆ ದೂರಿತ್ತರು. ॥ ೩೨ ॥

ಸಾ ಗೃಹೀತ್ವಾ ಕರೇ ಕೃಷ್ಣಮುಪಾಲಭ್ಯ ಹಿತೈಷಿಣೀ ।
ಯಶೋದಾ ಭಯಸಂಭ್ರಾಂತಪ್ರೇಕ್ಷಣಾಕ್ಷಮಭಾಷತ
॥ ೩.೩ ॥

ಕಸ್ಮಾನ್ಮೃದಮದಾಂತಾತ್ಮನ್ ಭವಾನ್ಭಕ್ಷಿತವಾನ್ರಹಃ ।
ವದಂತಿ ತಾವಕಾ ಹ್ಯೇತೇ ಕುಮಾರಾಸ್ತೇಗ್ರಜೋಽಪ್ಯಯಮ್
॥ ೩.೪ ॥

ಶ್ರೀಕೃಷ್ಣ ಉವಾಚ

ನಾಹಂ ಭಕ್ಷಿತವಾನಂಬ ಸರ್ವೇ ಮಿಥ್ಯಾಭಿಶಂಸಿನಃ ।
ಯದಿ ಸತ್ಯಗಿರಸ್ತರ್ಹಿ ಸಮಕ್ಷಂ ಪಶ್ಯ ಮೇ ಮುಖಮ್
॥ ೩.೫ ॥

ಯದ್ಯೇವಂ ತರ್ಹಿ ವ್ಯಾದೇಹೀತ್ಯುಕ್ತಃ ಸ ಭಗವಾನ್ಹರಿಃ ।
ವ್ಯಾದತ್ತಾವ್ಯಾಹತೈಶ್ವರ್ಯಃ ಕ್ರೀಡಾಮನುಜಬಾಲಕಃ
॥ ೩.೬ ॥

ಸಾ ತತ್ರ ದದೃಶೇ ವಿಶ್ವಂ ಜಗತ್ ಸ್ಥಾಷ್ಣು ಚ ಖಂ ದಿಶಃ ।
ಸಾದ್ರ್ದ್ವೀಪಾಬ್ಧಿಭೂಗೋಲಂ ಸವಾಯ್ವಗ್ನೀಂದು ತಾರಕಮ್
॥ ೩.೭ ॥

ಜ್ಯೋತಿಶ್ಚಕ್ರಂ ಜಲಂ ತೇಜೋ ನಭಸ್ವಾನ್ವಿಯದೇವ ಚ ।
ವೈಕಾರಿಕಾಣೀಂದ್ರಿಯಾಣಿ ಮನೋ ಮಾತ್ರಾ ಗುಣಾಸ್ತ್ರಯಃ
॥ ೩.೮ ॥

ಏತದ್ವಿಚಿತ್ರಂ ಸಹ ಜೀವಕಾಲ-
ಸ್ವಭಾವಕರ್ಮಾಶಯಲಿಂಗಭೇದಮ್ ।
ಸೂನೋಸ್ತನೌ ವೀಕ್ಷ್ಯ ವಿದಾರಿತಾಸ್ಯೇ
ವ್ರಜಂ ಸಹಾತ್ಮಾನಮವಾಪ ಶಂಕಾಮ್ ॥ ೩.೯ ॥

ಕಿಂ ಸ್ವಪ್ನ ಏತದುತ ದೇವಮಾಯಾ
ಕಿಂ ವಾ ಮದೀಯೋ ಬತ ಬುದ್ಧಿಮೋಹಃ ।
ಅಥೋ ಅಮುಷ್ಯೈವ ಮಮಾರ್ಭಕಸ್ಯ
ಯಃ ಕಶ್ಚನೌತ್ಪತ್ತಿಕ ಆತ್ಮಯೋಗಃ ॥ ೪೦ ॥

ಅಥೋ ಯಥಾವನ್ನ ವಿತರ್ಕಗೋಚರಂ
ಚೇತೋಮನಃ ಕರ್ಮವಚೋಭಿರಂಜಸಾ ।
ಯದಾಶ್ರಯಂ ಯೇನ ಯತಃ ಪ್ರತೀಯತೇ
ಸುದುರ್ವಿಭಾವ್ಯಂ ಪ್ರಣತಾಸ್ಮಿ ತತ್ಪದಮ್ ॥ ೪೧ ॥

ಮಗುವಿನ ಹಿತೈಷಿಣಿಯಾದ ಯಶೋದೆಯು ಒಡನೆಯೇ ಶ್ರೀಕೃಷ್ಣನ ಕೈಗಳನ್ನು ಹಿಡಿದುಕೊಂಡಳು. ಆ ಸಮಯದಲ್ಲಿ ಶ್ರೀಕೃಷ್ಣನು ಹೆದರಿದವನಂತೆ ನಟಿಸುತ್ತಿದ್ದ ಅವನ ಕಣ್ಣುಗಳು ಕೆಳ ಮುಖವಾಗಿತ್ತು. ಯಶೋದೆಯು ಗದರಿಸುತ್ತಾ ಕೇಳಿದಳು ॥೩.೩॥ ಏನೋ ತುಂಟ ! ನೀನು ಬಹಳ ಉದ್ಧಟನಾಗಿರುವೆ. ನೀನು ಅಡಗಿ ಕೊಂಡು ಮಣ್ಣನ್ನೇಕೆ ತಿಂದೆ ? ಹಾಗೆ ತಿಂದೆಯೆಂದು ನಿನ್ನ ಗೆಳೆಯರು ಹೇಳುತ್ತಿದ್ದಾರೆ. ನಿನ್ನಣ್ಣ ಬಲರಾಮನೂ ಹೇಳು ತ್ತಿರುವನು. ॥ ೩.೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಮ್ಮಾ! ನಾನು ಖಂಡಿತವಾಗಿ ಮಣ್ಣು ತಿಂದಿಲ್ಲ. ಇವರೆಲ್ಲರೂ ಸುಳ್ಳನ್ನೇ ಹೇಳುತ್ತಿ ರುವರು. ನೀನು ಇವರ ಮಾತು ನಿಜವೆಂದು ತಿಳಿಯುವೆಯಾದರೆ ನನ್ನ ಮುಖ ನಿನ್ನ ಇದಿರಿಗೆ ಇದೆಯಲ್ಲ, ನೀನೇ ಪ್ರತ್ಯಕ್ಷವಾಗಿ ಕಣ್ಣಿಂದ ನೋಡು. ಆಗ ನಾನು ಮಣ್ಣು ತಿಂದಿರುವೆನೊ, ಇಲ್ಲವೋ ಎಂಬುದು ಗೊತ್ತಾಗುತ್ತಲ್ಲ! ॥ ೩.೫ ॥ ಯಶೋದೆಯು ಹೇಳಿದಳು ಸರಿ, ಹಾಗಾದರೆ ಬಾಯ್ತೆರೆ, ನಾನೇ ನೋಡುತ್ತೇನೆ. ತಾಯಿಯು ಹೀಗೆ ಹೇಳಿದಾಗ ಭಗವಾನ್ ಶ್ರೀಕೃಷ್ಣನು ತನ್ನ ಬಾಯನ್ನು ತೆರೆದನು. ಪರೀಕ್ಷಿತನೇ ! ಶ್ರೀಕೃಷ್ಣನು ಅನಂತೈಶ್ವರ್ಯನು. ಅವನು ಕೇವಲ ಲೀಲೆಗಾಗಿಯೇ ಮನುಷ್ಯ ಬಾಲಕನಾಗಿದ್ದನು. ॥ ೩.೬ ॥ ಯಶೋದೆಯು ಬಗ್ಗಿ ನೋಡುತ್ತಾಳೆ – ಅವನ ಬಾಯಲ್ಲಿ ಚರಾಚರ ಸಮಸ್ತ ಜಗತ್ತು ಅಡಕವಾಗಿರುವುದನ್ನು ನೋಡಿದಳು. ಆಕಾಶ, ದಿಕ್ಕುಗಳು, ಪರ್ವತಗಳು, ದ್ವೀಪಗಳೂ ಮತ್ತು ಸಮುದ್ರ ಸಹಿತ ಇಡೀ ಭೂಮಂಡಲ, ಬೀಸುವ ಗಾಳಿ, ವಿದ್ಯುತ್, ಅಗ್ನಿ, ಚಂದ್ರ-ತಾರೆಗಳು, ಸಂಪೂರ್ಣವಾದ ಜ್ಯೋತಿರ್ಮಂಡಲ, ಜಲ, ತೇಜಸ್ಸು, ಪವನ, ವಿಯತ್ (ಪ್ರಾಣಿಗಳು ಓಡಾಡುವ ಆಕಾಶ), ರಸಾತಳವೇ ಮುಂತಾದ ಅಧೋಲೋಕಗಳು. ಅಧಿಷ್ಠಾನ ದೇವತೆಗಳಿಂದ ಕೂಡಿದ ಇಂದ್ರಿಯಗಳು, ಮನಸ್ಸು ಪಂಚತನ್ಮಾತ್ರೆಗಳು ಮತ್ತು ತ್ರಿಗುಣಗಳು ಶ್ರೀಕೃಷ್ಣನ ಬಾಯಲ್ಲಿ ಕಂಡು ಬಂದವು. ॥ ೩.೭-೩.೮ ॥ ಪರೀಕ್ಷಿತನೇ ! ಜೀವಾತ್ಮರು, ಕಾಲ, ಸ್ವಭಾವ, ಕರ್ಮ, ಅವರ ವಾಸನೆಗಳು, ಶರೀರಾದಿಗಳಿಂದ ಭಿನ್ನ-ಭಿನ್ನವಾಗಿ ತೋರುವ ಈ ಇಡೀ ವಿಚಿತ್ರ ಜಗತ್ತು, ಅದರಲ್ಲಿಯೇ ಇರುವ ಗೋಕುಲ ಮತ್ತು ಆ ಗೋಕುಲದಲ್ಲಿ ತಾನಿರುವುದನ್ನು ಯಶೋದೆಯು ಶ್ರಿಕೃಷ್ಣನ ಮುದ್ದಾದ ತೆರೆದ ಬಾಯಿಯಲ್ಲಿ ನೋಡಿ ಅವಳಿಗೆ ಶಂಕೆಯುಂಟಾಯಿತು. ॥ ೩.೯ ॥ ನಾನೀಗ ಎಲ್ಲಿದ್ದೇನೆ ? ಏನನ್ನು ನೋಡುತ್ತಿದ್ದೇನೆ ? ಇದೇನು ಸ್ವಪ್ನವೇ ? ಅಥವಾ ಭಗವಂತನ ಮಾಯೆಯೇ ? ನನ್ನ ಬುದ್ಧಿಯಲ್ಲಿ ಏನಾದರೂ ಭ್ರಮೆಯುಂಟಾಗಲಿಲ್ಲವಲ್ಲ! ನನ್ನ ಈ ಬಾಲಕನಲ್ಲೇ ಯಾವುದೋ ಜನ್ಮಜಾತ ಯೋಗಸಿದ್ಧಿಯಿರುವುದೂ ಸಂಭವವಿದೆ. ಅದನ್ನೇ ನನಗೆ ತೋರುತ್ತಿರುವನು. ॥ ೪೦ ॥ ಯಾವುದು ತರ್ಕಕ್ಕೆ ಗೋಚರವಾಗುವುದಿಲ್ಲವೋ, ಯಾವುದು ಬುದ್ಧಿ, ಮನಸ್ಸು, ಕರ್ಮ ಮತ್ತು ವಾಕ್ಕುಗಳಿಗೆ ನಿಲುಕದೋ, ಈ ಇಡೀ ವಿಶ್ವವು ಯಾವುದನ್ನು ಆಶ್ರಯಿಸಿದೆಯೋ, ಯಾವುದರಿಂದ ಈ ಜಗತ್ತು ವ್ಯಾವಹಾರಿಕವಾಗಿ ಇರುವಂತೆ ತೋರುವುದೋ, ಯಾರ ಸ್ವರೂಪವು ಸರ್ವಥಾ ಅಚಿಂತ್ಯವಾಗಿದೆಯೋ ಅಂತಹ ಪ್ರಭುವಿಗೆ ನಾನು ನಮಸ್ಕರಿಸುತ್ತೇನೆ. ॥ ೪೧ ॥

ಅಹಂ ಮಮಾಸೌ ಪತಿರೇಷ ಮೇ ಸುತೋ
ವ್ರಜೇಶ್ವರಸ್ಯಾಖಿಲವಿತ್ತಪಾ ಸತೀ ।
ಗೋಪ್ಯಶ್ಚ ಗೋಪಾಃ ಸಹಗೋಧನಾಶ್ಚ ಮೇ
ಯನ್ಮಾಯಯೇತ್ಥಂ ಕುಮತಿಃ ಸ ಮೇ ಗತಿಃ ॥ ೪೨ ॥

ಇತ್ಥಂ ವಿದಿತತತ್ತ್ವಾಯಾಂ ಗೋಪಿಕಾಯಾಂ ಸ ಈಶ್ವರಃ ।
ವೈಷ್ಣವೀಂ ವ್ಯತನೋನ್ಮಾಯಾಂ ಪುತ್ರಸ್ನೇಹಮಯೀಂ ವಿಭುಃ
॥ ೪೩ ॥

ಸದ್ಯೋನಷ್ಟಸ್ಮೃತಿರ್ಗೋಪೀ ಸಾऽऽರೋಪ್ಯಾರೋಹಮಾತ್ಮಜಮ್ ।
ಪ್ರವೃದ್ಧಸ್ನೇಹಕಲಿಲಹೃದಯಾऽऽಸೀದ್ಯಥಾ ಪುರಾ
॥ ೪೪ ॥

ತ್ರಯ್ಯಾ ಚೋಪನಿಷದ್ಭಿಶ್ಚ ಸಾಂಖ್ಯಯೋಗೈಶ್ಚ ಸಾತ್ವತೈಃ ।
ಉಪಗೀಯಮಾನಮಾಹಾತ್ಮ್ಯಂ ಹರಿಂ ಸಾಮನ್ಯತಾತ್ಮಜಮ್
॥ ೪೫ ॥

ರಾಜೋವಾಚ

ನಂದಃ ಕಮಕರೋದ್ ಬ್ರಹ್ಮನ್ ಶ್ರೇಯ ಏವಂ ಮಹೋದಯಮ್ ।
ಯಶೋದಾ ಚ ಮಹಾಭಾಗಾ ಪಪೌ ಯಸ್ಯಾಃ ಸ್ತನಂ ಹರಿಃ
॥ ೪೬ ॥

ಓತಪ್ರೋತೌ ನಾನ್ವಮೀಂದೇತಾಂ ಕೃಷ್ಣೋದಾರಾರ್ಭಕೇಹಿತಮ್ ।
ಗಾಯಂತ್ಯದ್ಯಾಪಿ ಕವಯೋ ಯಲ್ಲೋಕಶಮಲಾಪಹಮ್
॥ ೪೭ ॥

ಶ್ರೀಶುಕ ಉವಾಚ

ದ್ರೋಣೋ ವಸೂನಾಂ ಪ್ರವರೋ ಧರಯಾ ಸಹ ಭಾರ್ಯಯಾ ।
ಕರಿಷ್ಯಮಾಣ ಆದೇಶಾನ್ಬ್ರಹ್ಮಣಸ್ತಮುವಾಚ ಹ
॥ ೪೮ ॥

ಜಾತಯೋರ್ನೌ ಮಹಾದೇವೇ ಭುವಿ ವಿಶ್ವೇಶ್ವರೇ ಹರೌ ।
ಭಕ್ತಿಃ ಸ್ಯಾತ್ತರಮಾ ಲೋಕೇ ಯಯಾಂಜೋ ದುರ್ಗತಿಂ ತರೇತ್
॥ ೪೯ ॥

ಪರಮಾತ್ಮನ ಮಾಯೆಯಿಂದ ಬುದ್ಧಿಗೆಟ್ಟವಳಾಗಿ 'ನಾನು ನನ್ನದು' ಎಂಬ ಅಹಂಕಾರದಲ್ಲಿ ತುಂಬಿಹೋಗಿದ್ದೇನೆ. ಇವನು ನನ್ನ ಪತಿ, ಇವನು ನನ್ನ ಮಗ, ವ್ರಜೇಶ್ವರನಾದ ನಂದಗೋಪನ ಸಕಲ ಐಶ್ವರ್ಯಕ್ಕೂ ನಾನೇ ಯಜಮಾನಿ, ನಾನು ಮಹಾಪತಿವ್ರತೆ. ಈ ಗೋಪಿಯರು – ಗೋಪಾಲಕರೆಲ್ಲರೂ ನನ್ನ ಸೇವಕರು ಮುಂತಾಗಿ ಅಹಂಕಾರ ಪಡುತ್ತಿದ್ದೇನೆ. ಇದಕ್ಕೆ ಭಗವಂತನ ಮಾಯೇಯೇ ಕಾರಣ. ಹೀಗೆ ಮಾಯಾವರಣವನ್ನು ಹೊದ್ದಿಸಿ ನನ್ನನ್ನು ಕುಮತಿಯನ್ನಾಗಿಸಿದ ಆ ಪರಮಾತ್ಮನಲ್ಲಿ ನಾನು ಶರಣು ಹೊಂದುತ್ತೇನೆ. ॥ ೪೨ ॥ ಹೀಗೆ ತಾಯಿ ಯಶೋದೆಯು ಶ್ರೀಕೃಷ್ಣನ ತತ್ತ್ವವನ್ನು ತಿಳಿದುಕೊಂಡಾಗ ಸರ್ವಶಕ್ತನಾದ, ಸರ್ವವ್ಯಾಪಕನಾದ ಪ್ರಭುವು ತನ್ನ ಪುತ್ರಸ್ನೇಹವೆಂಬ ವೈಷ್ಣವೀ ಯೋಗಮಾಯೆಯನ್ನೂ ಅವಳ ಹೃದಯದಲ್ಲಿ ಪ್ರಕಾಶಗೊಳಿಸಿದನು. ॥ ೪೩ ॥ ಯಶೋದೆಗೆ ಒಡನೆಯೇ ಆ ಘಟನೆ ಮರೆತುಹೋಯಿತು. ಆಕೆಯು ತನ್ನ ಮುದ್ದುಕೃಷ್ಣನನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡಳು. ಮೊದಲು ಅವಳ ಹೃದಯದಲ್ಲಿ ಪ್ರೇಮಸಮುದ್ರವು ಉಕ್ಕುತ್ತಿರುವಂತೆಯೇ ಪುನಃ ಉಕ್ಕತೊಡಗಿತು. ॥ ೪೪ ॥ ಸಕಲ ವೇದಗಳೂ ಉಪನಿಷತ್ತುಗಳೂ, ಸಾಂಖ್ಯ-ಯೋಗಶಾಸ್ತ್ರಗಳೂ, ಭಕ್ತಜನರೂ ಯಾವ ಪರಮಪುರುಷನ ಮಾಹಾತ್ಮ್ಯೆಯನ್ನು ನಿರಂತರವಾಗಿ ಕೊಂಡಾಡುವರೋ ಅದೇ ಭಗವಂತನನ್ನು ಯಶೋದೆಯು ತನ್ನ ಪುತ್ರನೆಂದೇ ಭಾವಿಸುತ್ತಿದ್ದಳು. ॥ ೪೫ ॥

ಪರೀಕ್ಷಿದ್ರಾಜನು ಕೇಳಿದನು – ಬ್ರಾಹ್ಮಣಶ್ರೇಷ್ಠರೇ ! ಭಗವಂತನನ್ನು ಪುತ್ರನನ್ನಾಗಿ ಪಡೆಯಲು ನಂದಗೋಪನು ಎಂತಹ ಅದ್ಭುತವಾದ ಮಂಗಲಮಯವಾದ ಸಾಧನೆಯನ್ನು ಮಾಡಿದ್ದನು ? ಭಗವಂತನು ಅಕ್ಕರೆಯಿಂದ ಸ್ತನ್ಯವನ್ನು ಕುಡಿಯುತ್ತಿದ್ದ ಪರಮ ಭಾಗ್ಯವತಿಯಾದ ಯಶೋದಾದೇವಿಯು ಎಂತಹ ಮಹತ್ತಾದ ತಪಸ್ಸನ್ನು ಮಾಡಿದ್ದಳು ! ॥ ೪೬ ॥ ಸಕಲ ಪಾಪಗಳನ್ನು ಹೋಗಲಾಡಿಸುವ ಭಗವಂತನ ಪರಮಾದ್ಭುತವಾದ ಬಾಲಲೀಲೆಗಳನ್ನು ಈಗಲೂ ಜ್ಞಾನೀ ಪುರುಷರು ವರ್ಣಿಸುತ್ತಿರುತ್ತಾರೆ ಅಂತಹ ಲೀಲೆಗಳನ್ನು ನೋಡಿ ಆನಂದಿಸಲು ಹೆತ್ತ ತಂದೆ-ತಾಯಿಗಳಾದ ವಸುದೇವ-ದೇವಕಿಯರಿಗೂ ಲಭ್ಯವಾಗಲಿಲ್ಲವೋ, ಅವುಗಳನ್ನು ನೋಡಿ ಆನಂದಿಸಲು ನಂದ-ಯಶೋದೆಯರಿಗೆ ಹೇಗೆ ಸಾಧ್ಯವಾಯಿತು ? ಇದನ್ನು ದಯಮಾಡಿ ತಿಳಿಸಿರಿ. ॥ ೪೭ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ ! ನಂದಗೋಪನು ಹಿಂದಿನ ಜನ್ಮದಲ್ಲಿ ಒಬ್ಬ ಶ್ರೇಷ್ಠನಾದ ವಸುವಾಗಿದ್ದನು. 'ದ್ರೋಣ' ಎಂದು ಅವನಿಗೆ ಹೆಸರಿತ್ತು. ಅವನ ಪತ್ನಿಯ ಹೆಸರು 'ಧರಾದೇವಿ' ಎಂದಿತ್ತು. ಅವರು ಬ್ರಹ್ಮದೇವರ ಆದೇಶವನ್ನು ಪಾಲಿಸುವುದಕ್ಕಾಗಿ ಅವರಲ್ಲಿ ವಿಜ್ಞಾಪಿಸಿಕೊಂಡರು.॥ ೪೮ ॥ ಚತುರ್ಮುಖನೇ ! ನಿನ್ನ ಆಜ್ಞೆಯಂತೆ ನಾವು ಭೂಮಿಯಲ್ಲಿ ಹುಟ್ಟಿದಾಗ ಯಾವ ಅನನ್ಯ ಭಕ್ತಿಯ ಮೂಲಕ ಜಗತ್ತಿನ ಜನರು ಅನಾಯಾಸವಾಗಿಯೇ ದುರ್ಗತಿಗಳನ್ನು ದಾಟಿಹೋಗುವರೋ ಅಂತಹ ಅನನ್ಯವಾದ ಪ್ರೇಮಮಯವಾದ ಭಕ್ತಿಯು ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನಲ್ಲಿ ಉಂಟಾಗುವಂತೆ ಅನುಗ್ರಹಿಸು. ॥ ೪೯ ॥

ಅಸ್ತ್ವಿತ್ಯುಕ್ತಃ ಸ ಭಗವಾನ್ವ್ರಜೇ ದ್ರೋಣೋ ಮಹಾಯಶಾಃ ।
ಜಜ್ಞೇ ನಂದ ಇತಿ ಖ್ಯಾತೋ ಯಶೋದಾ ಸಾ ಧರಾಭವತ್
॥ ೫೦ ॥

ಬ್ರಹ್ಮದೇವರು–'ಹಾಗೆಯೇ ಆಗಲಿ' ಎಂದು ಅವರನ್ನು ಹರಸಿದರು. ಆ ಪರಮಯಶಸ್ವಿ ಭಗವನ್ಮಯ ದ್ರೋಣನೇ ವ್ರಜದಲ್ಲಿ ಹುಟ್ಟಿ ಅವರ ಹೆಸರು ನಂದಗೋಪನೆಂದಾಯಿತು ಮತ್ತು ಆ ಧರಾದೇವಿಯೇ ಈ ಜನ್ಮದಲ್ಲಿ ಯಶೋದಾ ಎಂಬ ಹೆಸರಿನಿಂದ ಅವನ ಪತ್ನಿಯಾದಳು. ॥ ೫೦ ॥ ಪರೀಕ್ಷಿತನೇ! ಈ ಜನ್ಮದಲ್ಲಿ ಜನ್ಮ-ಮೃತ್ಯುರೂಪವಾದ ಚಕ್ರದಿಂದ ಬಿಡುಗಡೆಗೊಳಿಸುವಂತಹ ಭಗವಂತನು ಇವರಿಗೆ ಪುತ್ರನಾದಾಗ ಸಮಸ್ತ ಗೋಪ-ಗೋಪಿಕೆಯರಿಗಿಂತ ಮಿಗಿಲಾಗಿ ಈ ದಂಪತಿಗಳಾದ ನಂದ-ಯಶೋದೆಯರಿಗೆ ಶ್ರೀಕೃಷ್ಣನ ಕುರಿತು ಅತ್ಯಂತ ಪ್ರೇಮ ಉಂಟಾಯಿತು. ॥ ೫೧ ॥ ಬ್ರಹ್ಮದೇವರ ಮಾತನ್ನು ಸತ್ಯವಾಗಿಸಲೆಂದೇ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ವ್ರಜದಲ್ಲಿದ್ದು ಸಮಸ್ತ ವ್ರಜವಾಸಿಗಳನ್ನೂ ತನ್ನ ಬಾಲಲೀಲೆಗಳಿಂದ ಆನಂದಗೊಳಿಸುತ್ತಿದ್ದನು. ॥ ೫೨ ॥

ತತೋ ಭಕ್ತಿರ್ಭಗವತಿ ಪುತ್ರೀಭೂತೇ ಜನಾರ್ದನೇ ।
ದಂಪತ್ಯೋರ್ನಿತರಾಮಾಸೀದ್ಗೋಪಗೋಪೀಷು ಭಾರತ
॥ ೫೧ ॥

ಕೃಷ್ಣೋ ಬ್ರಹ್ಮಣ ಆದೇಶಂ ಸತ್ಯಂ ಕರ್ತುಂ ವ್ರಜೇ ವಿಭುಃ ।
ಸಹರಾಮೋ ವಸಂಶ್ಚಕ್ರೇ ತೇಷಾಂ ಪ್ರೀತಿಂ ಸ್ವಲೀಲಯಾ
॥ ೫೨ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ವಿಶ್ವರೂಪದರ್ಶನೇऽಷ್ಟಮೋऽಧ್ಯಾಯಃ॥ ೮ ॥

ಒಂಭತ್ತನೆಯ ಅಧ್ಯಾಯ

ಶ್ರೀಕೃಷ್ಣನನ್ನು ಒರಳಿಗೆ ಕಟ್ಟಿಹಾಕಿದುದು

ಶ್ರೀಶುಕ ಉವಾಚ

ಏಕದಾ ಗೃಹದಾಸೀಷು ಯಶೋದಾ ನಂದಗೇಹಿನೀ ।
ಕರ್ಮಾಂತರನಿಯುಕ್ತಾಸು ನಿರ್ಮಮಂಥ ಸ್ವಯಂ ದಧಿ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಒಮ್ಮೆ ನಂದಪತ್ನಿಯಾದ ಯಶೋದೆಯು ಮನೆಗೆಲಸದ ದಾಸಿಯರನ್ನು ಬೇರೆ ಮನೆಗೆಲಸಕ್ಕೆ ನೇಮಿಸಿ, ಸ್ವತಃ ತನ್ನ ಕಂದಮ್ಮನಿಗೆ ಬೆಣ್ಣೆಯನ್ನು ತಿನ್ನಿಸುವ ಸಲುವಾಗಿ ಮೊಸರುಕಡೆಯಲು ಪ್ರಾರಂಭಿಸಿದಳು. ॥ ೧ ॥ ಮಹಾರಾಜಾ! ನಾನು ಇದುವರೆಗೆ ಭಗವಂತನ ಯಾವ ಬಾಲಲೀಲೆಗಳನ್ನು ನಿನಗೆ ವರ್ಣಿಸಿ ಹೇಳಿರುವೆನೋ ಅವೆಲ್ಲವನ್ನೂ ಸ್ಮರಿಸಿಕೊಳ್ಳುತ್ತಾ ಹೃದಯಂಗಮವಾಗಿ ಹಾಡುತ್ತಾ ಯಶೋದೆಯು ಮೊಸರು ಕಡೆಯುತ್ತಿದ್ದಳು. ॥ ೨ ॥ ಹೀಗೆ ಮೊಸರು ಕಡೆಯುತ್ತಿರುವಾಗ ಯಶೋದೆಯು ದಿವ್ಯವಾದ ರೇಶ್ಮೆಯ ಸೀರೆಯನ್ನು ಉಟ್ಟಿದ್ದಳು. ಆಕೆಯು ನಡುವಿನಲ್ಲಿ ಕಿರುಗೆಜ್ಜೆಗಳಿಂದ ಕೂಡಿದ ಸ್ವರ್ಣಮಯವಾದ ಸೊಂಟಪಟ್ಟಿಯನ್ನು ಧರಿಸಿದ್ದಳು. ಪುತ್ರಸ್ನೇಹದ ಆಧಿಕ್ಯದಿಂದ ಆಕೆಯ ಸ್ತನಗಳಿಂದ ಹಾಲು ಒಸರುತ್ತಿತ್ತು ಹಾಗೂ ಕಂಪಿಸುತ್ತಿದ್ದವು. ಕಡೆಗೋಲ ಹಗ್ಗವನ್ನು ಎಳೆಯುತ್ತಿರುವಾಗ ಆಕೆಗೆ ಬಳಲಿಕೆ ಉಂಟಾಗಿತ್ತು. ಕೈಗಳಿಂದ ಮೊಸರು ಕಡೆಯುವಾಗ ಕೈಯಲ್ಲಿ ಧರಿಸಿದ ರತ್ನಕಂಕಣಗಳೂ ಝಣ-ಝಣಿಸುತ್ತಿದ್ದವು. ಕರ್ಣಕುಂಡಲಗಳು ಮುಖ ಮಂಡಲದ ಮೇಲೆ ತಮ್ಮ ಕಾಂತಿಯನ್ನು ಎರಚುತ್ತಾ ಅಲುಗಾಡುತ್ತಿದ್ದವು. ಮುಖವು ಬೆವರಿತ್ತು. ಮುಡಿಯಲ್ಲಿ ಮುಡಿದ ಹೂವುಗಳು ಉದುರುತ್ತಿದ್ದವು. ಸುಂದರವಾದ ಹುಬ್ಬುಗಳಿಂದ ಕಂಗೊಳಿಸುತ್ತಿದ್ದ ಯಶೋದೆಯು ಹೀಗೆ ಮೊಸರು ಕಡೆಯುತ್ತಿದ್ದಳು. ॥ ೩ ॥

ಯಾನಿ ಯಾನೀಹ ಗೀತಾನಿ ತದ್ಬಾಲಚರಿತಾನಿ ಚ ।
ದಧಿನಿರ್ಮಂಥನೇ ಕಾಲೇ ಸ್ಮರಂತೀ ತಾನ್ಯಗಾಯತ
॥ ೨ ॥

ಕೌಷ್ಮಂ ವಾಸಃ ಪೃಥುಕಟಿತಟೇ ಬಿಭ್ರತೀ ಸೂತ್ರನದ್ಧಂ
ಪುತ್ರಸ್ನೇಹಸ್ನುತಕುಚಯುಗಂ ಜಾತಕಂಪಂ ಚ ಸುಭ್ರೂಃ ।
ರಜ್ಜ್ವಾಕರ್ಷಶ್ರಮಭುಜಚಲತ್ಕಂಕಣೌ ಕುಂಡಲೇ ಚ
ಸ್ವಿನ್ನಂ ವಕ್ತ್ರಂ ಕಬರವಿಗಲನ್ಮಾಲತೀ ನಿರ್ಮಮಂಥ
॥ ೩ ॥

ತಾಂ ಸ್ತನ್ಯಕಾಮ ಆಸಾದ್ಯ ಮಥ್ನಂತೀಂ ಜನನೀಂ ಹರಿಃ ।
ಗೃಹೀತ್ವಾ ದಧಿಮಂಥಾನಂ ನ್ಯಷೇಧತ್ಪ್ರೀತಿಮಾವಹನ್
॥ ೪ ॥

ತಮಂಕಮಾರೂಢಮಪಾಯಯತ್ಸ್ತನಂ
ಸ್ನೇಹಸ್ನುತಂ ಸಸ್ಮಿತಮೀಕ್ಷತೀ ಮುಖಮ್ ।
ಅತೃಪ್ತಮುತ್ಸೃಜ್ಯ ಜವೇನ ಸಾ ಯಯಾ-
ವುತ್ಸಿಚ್ಯಮಾನೇ ಪಯಸಿ ತ್ವಧಿಶ್ರಿತೇ ॥ ೫ ॥

ಸಂಜಾತಕೋಪಃ ಸ್ಫುರಿತಾರುಣಾಧರಂ
ಸಂದಶ್ಯ ದದ್ಭಿರ್ದಧಿಮಂಥಭಾಜನಮ್ ।
ಭಿತ್ತ್ವಾ ಮೃಷಾಶ್ರುರ್ದೃಷದಶ್ಮನಾ ರಹೋ
ಜಘಾಸ ಹೈಯಂಗವಮಂತರಂ ಗತಃ ॥ ೬ ॥

ಉತ್ತಾರ್ಯ ಗೋಪೀ ಸುಶೃತಂ ಪಯಃ ಪುನಃ
ಪ್ರವಿಶ್ಯ ಸಂದೃಶ್ಯ ಚ ದಧ್ಯಮತ್ರಕಮ್ ।
ಭಗ್ನಂ ವಿಲೋಕ್ಯ ಸ್ವಸುತಸ್ಯ ಕರ್ಮ ತತ್
ಜಹಾಸ ತಂ ಚಾಪಿ ನ ತತ್ರ ಪಶ್ಯತೀ ॥ ೭ ॥

ಉಲೂಖಲಾಂಘ್ರೇರುಪರಿ ವ್ಯವಸ್ಥಿತಂ
ಮರ್ಕಾಯ ಕಾಮಂ ದದತಂ ಶಿಚಿ ಸ್ಥಿತಮ್ ।
ಹೈಯಂಗವಂ ಚೌರ್ಯವಿಶಂಕಿತೇಕ್ಷಣಂ
ನಿರೀಕ್ಷ್ಯ ಪಶ್ಚಾತ್ಸುತಮಾಗಮಚ್ಛನೈಃ ॥ ೮ ॥

ತಾಮಾತ್ತಯಷ್ಟಿಂ ಪ್ರಸಮೀಕ್ಷ್ಯ ಸತ್ವರಃ
ತತೋಽವರುಹ್ಯಾಪಸಸಾರ ಭೀತವತ್ ।
ನೋಪ್ಯನ್ವಧಾವನ್ನ ಯಮಾಪ ಯೋಗಿನಾಂ
ಕ್ಷಮಂ ಪ್ರವೇಷ್ಟುಂ ತಪಸೇರಿತಂ ಮನಃ ॥ ೯ ॥

ಆ ವೇಳೆಗೆ ಮುದ್ದುಕೃಷ್ಣನು ಸ್ತನ್ಯಪಾನ ಮಾಡುವ ಸಲುವಾಗಿ ಮೊಸರು ಕಡೆಯುತ್ತಿದ್ದ ತಾಯಿಯ ಬಳಿಗೆ ಬಂದನು. ಅವನು ತನ್ನ ತಾಯಿಯ ಹೃದಯದಲ್ಲಿ ಪ್ರೇಮವನ್ನು ಮತ್ತು ಆನಂದವನ್ನು ಹೆಚ್ಚಿಸುತ್ತಾ ಕಡೆಗೋಲನ್ನು ತನ್ನ ಪುಟ್ಟಕೈಗಳಿಂದ ಹಿಡಿದುಕೊಂಡು ತಾಯಿಯನ್ನು ಮೊಸರು ಕಡೆಯಲು ತಡೆದನು. ॥ ೪ ॥ ಶ್ರೀಕೃಷ್ಣನು ತಾಯಿಯಾದ ಯಶೋದೆಯ ತೊಡೆಯೇರಿದನು. ವಾತ್ಸಲ್ಯ ಸ್ನೇಹದ ಆಧಿಕ್ಯದಿಂದ ಆಕೆಯ ಸ್ತನಗಳಿಂದ ಹಾಲು ತಾನಾಗಿಯೇ ಸುರಿಯುತ್ತಿತ್ತು. ಆವಳು ಕೃಷ್ಣನಿಗೆ ಹಾಲುಣಿಸತೊಡಗಿದಳು ಹಾಗೂ ಮಂದಮಧುರ ಮುಗುಳ್ನಗುತ್ತಿದ್ದ ಕೃಷ್ಣನ ಮುಖವನ್ನೇ ನೋಡುತ್ತಿದ್ದಳು. ಇಷ್ಟರಲ್ಲಿ ಒಲೆಯ ಮೇಲಿಟ್ಟ ಹಾಲುಕ್ಕಿ ಬಂತು. ಅದನ್ನು ನೋಡಿದ ಯಶೋದೆಯು ಅತೃಪ್ತನಾದ ಅವನನ್ನು ಅಲ್ಲೇ ಬಿಟ್ಟು ಲಗುಬಗೆಯಿಂದ ಹಾಲನ್ನಿಳಿಸಲು ಹೊರಟು ಹೋದಳು. ॥ ೫ ॥ ಇದರಿಂದ ಶ್ರೀಕೃಷ್ಣನಿಗೆ ಸ್ವಲ್ಪ ಸಿಟ್ಟು ಬಂತು. ಅವನ ಕೆಂದುಟಿಗಳು ಅದುರತೊಡಗಿದವು. ಅವನ್ನು ಹಲ್ಲುಗಳಿಂದ ಕಚ್ಚಿ ಶ್ರೀಕೃಷ್ಣನು ಬಳಿಯಲ್ಲೇ ಇದ್ದ ಗುಂಡುಕಲ್ಲಿನಿಂದ ಮೊಸರಿನ ಮಡಕೆಯನ್ನು ಒಡೆದುಹಾಕಿದನು. ಕಳ್ಳ ಅಳುವಿನಿಂದ ಕಣ್ಣಲ್ಲಿ ನೀರನ್ನು ತುಂಬಿಕೊಂಡು ಮೆಲ್ಲನೆ ಒಳಮನೆಗೆ ಹೋಗಿ ಅಲ್ಲಿಟ್ಟಿದ್ದ ಬೆಣ್ಣೆಯನ್ನು ತಿನ್ನತೊಡಗಿದನು. ॥ ೬ ॥

ಯಶೋದೆಯು ಕಾದಿರುವ ಹಾಲನ್ನು ಕೆಳಗಿಳಿಸಿ ಪುನಃ ಮೊಸರು ಕಡೆವಲ್ಲಿಗೆ ಬಂದಳು. ಅಲ್ಲಿ ಬಂದು ನೋಡಿದಳು – ಮೊಸರಿನ ಗಡಿಗೆಯು ಪುಡಿ-ಪುಡಿಯಾಗಿ ಮೊಸರೆಲ್ಲಾ ಚೆಲ್ಲಿ ಹೋಗಿತ್ತು. ಇದು ಶ್ರೀಕೃಷ್ಣನದೇ ಕೆಲಸವೆಂದು ತಿಳಿಯುವಲ್ಲಿ ತಡವಾಗಲಿಲ್ಲ. ಜೊತೆಗೆ ಅವನು ಅಲ್ಲಿ ಇಲ್ಲದಿರುವುದನ್ನು ನೋಡಿ ಯಶೋದೆಯು ನಗತೊಡಗಿದಳು. ॥ ೭ ॥ ಅಲ್ಲಿ-ಇಲ್ಲಿ ಹುಡುಕಿದಾಗ ಮತ್ತೊಂದು ಕೊಠಡಿಯಲ್ಲಿ ಶ್ರೀಕೃಷ್ಣನು ಒಂದು ಒರಳಿನ ಮೇಲೆ ನಿಂತು ನೆಲವಿನ ಮೇಲೆ ಇಟ್ಟ ಬೆಣ್ಣೆಯನ್ನು ತೆಗೆ-ತೆಗೆದು ಕೋತಿಗಳಿಗೆ ಮತ್ತು ಸಂಗಾತಿಗಳಿಗೆ ಯಥೇಚ್ಛವಾಗಿ ಹಿಸ್ಸುತ್ತಿದ್ದನು. ಎಲ್ಲಾದರೂ ತನ್ನ ಕಳ್ಳತನ ಬಯಲಾದೀತು ಎಂಬ ಹೆದರಿಕೆಯಿಂದ ಸುತ್ತಲೂ ನೋಡುತ್ತಾ ಇದ್ದನು. ಇದನ್ನು ನೋಡಿದ ಯಶೋದಾದೇವಿಯು ಹಿಂದಿನಿಂದ ನಿಧಾನವಾಗಿ ಅವನ ಬಳಿಗೆ ಬಂದಳು. ॥ ೮ ॥ ತಾಯಿಯು ಕೈಯಲ್ಲಿ ಕೋಲನ್ನು ಹಿಡಿದುಕೊಂಡು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದಾಗ ಶ್ರೀಕೃಷ್ಣನು ಒಡನೆಯೇ ಒರಳಿಂದ ಕೆಳಗೆ ಹಾರಿದನು ಮತ್ತು ಹೆದರಿದವನಂತೆ ನಟಿಸುತ್ತಾ ಓಡಿದನು. ಪರೀಕ್ಷಿತನೇ! ಮಹಾಯೋಗಿಗಳು ತಪಸ್ಸಿನಿಂದ ತಮ್ಮ ಮನಸ್ಸನ್ನು ವಿಕಾಗ್ರಗೊಳಿಸಿ ಶುದ್ಧವಾಗಿಸಿಕೊಂಡರೂ ಯಾವನಲ್ಲಿ ಮನಸ್ಸಿನಿಂದಲೂ ಪ್ರವೇಶಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಭಗವಂತನನ್ನು ಹಿಡಿಯಲು ಅವನ ಹಿಂದೆ-ಹಿಂದೆ ಯಶೋದೆಯು ಓಡುತ್ತಿರುವಳು. ॥ ೯ ॥ ಹೀಗೆ ತಾಯಿ ಯಶೋದೆಯು ಶ್ರೀಕೃಷ್ಣನ ಹಿಂದೆ ಓಡತೊಡಗಿದಾಗ ಸ್ಥೂಲವಾದ ನಿತಂಬಗಳ ಭಾರದಿಂದಲೂ ಅವುಗಳ ಕಂಪನದಿಂದಲೂ ಅವಳ ಓಟ ಮಂದವಾಯಿತು. ಆಕೆಯು ಮುಂದ ಮುಂದಕ್ಕೆ ಓಡುತ್ತಿರುವಾಗ ಅವಳ ಹೆರಳು ಬಿಚ್ಚಿಹೋಗಿ

ಅನ್ವಂಚಮಾನಾ ಜನನೀ ಬೃಹಚ್ಚಲತ್
ಶ್ರೋಣೀಭರಾಕ್ರಾಂತಗತಿಃ ಸುಮಧ್ಯಮಾ ।
ಜವೇನ ವಿಸ್ರಂಸಿತ ಕೇಶಬಂಧನ-
ಚ್ಯುತಪ್ರಸೂನಾನುಗತಿಃ ಪರಾಮೃಶತ್ ॥ ೧೦ ॥

ಕೃತಾಗಸಂ ತಂ ಪ್ರರುದಂತಮಕ್ಷಿಣೀ
ಕಷಂತಮಂಜನ್ಮಷಿಣೀ ಸ್ವಪಾಣಿನಾ ।
ಉದ್ವೀಕ್ಷಮಾಣಂ ಭಯವಿಹ್ವಲೇಕ್ಷಣಂ
ಹಸ್ತೇ ಗೃಹೀತ್ವಾ ಭಿಷಯಂತ್ಯವಾಗುರತ್ ॥ ೧೧ ॥

ತ್ಯಕ್ತ್ವಾ ಯಷ್ಟಿಂ ಸುತಂ ಭೀತಂ ವಿಜ್ಞಾಯಾರ್ಭಕವತ್ಸಲಾ ।
ಇಯೇಷ ಕಿಲ ತಂ ಬದ್ಧುಂ ದಾಮ್ನಾತದ್ವೀರ್ಯಕೋವಿದಾ
॥ ೧೨ ॥

ನ ಚಾಂತರ್ನ ಬಹಿರ್ಯಸ್ಯ ನ ಪೂರ್ವಂ ನಾಪಿ ಚಾಪರಮ್ ।
ಪೂರ್ವಾಪರಂ ಬಹಿಶ್ಚಾಂತರ್ಜಗತೋ ಯೋ ಜಗಚ್ಚ ಯಃ
॥ ೧೩ ॥

ತಂ ಮತ್ವಾऽऽತ್ಮಜಮವ್ಯಕ್ತಂ ಮರ್ತ್ಯಲಿಂಗ ಮಧೋಕ್ಷಜಮ್ ।
ಗೋಪಿಕೋಲೂಖಲೇ ದಾಮ್ನಾ ಬಬಂಧ ಪ್ರಾಕೃತಂ ಯಥಾ
॥ ೧೪ ॥

ತದ್ದಾಮ ಬಧ್ಯಮಾನಸ್ಯ ಸ್ವಾರ್ಭಕಸ್ಯ ಕೃತಾಗಸಃ ।
ದ್ವ್ಯಂಗುಲೋನಮಭೂತ್ತೇನ ಸಂದಧೇऽನ್ಯಚ್ಚ ಗೋಪಿಕಾ
॥ ೧೫ ॥

ಯದಾऽऽಸೀತ್ತದಪಿ ನ್ಯೂನಂ ತೇನಾನ್ಯದಪಿ ಸಂದಧೇ ।
ತದಪಿ ದ್ವ್ಯಂಗುಲಂ ನ್ಯೂನಂ ಯದ್ಯದಾದತ್ತ ಬಂಧನಮ್
॥ ೧೬ ॥

ಏವಂ ಸ್ವಗೇಹದಾಮಾನಿ ಯಶೋದಾ ಸಂದಧತ್ಯಪಿ ।
ಗೋಪೀನಾಂ ಸುಸ್ಮಯಂತೀನಾಂ ಸ್ಮಯಂತೀ ವಿಸ್ಮಿತಾಭವತ್
॥ ೧೭ ॥

ಸ್ವಮಾತುಃ ಸ್ವಿನ್ನಗಾತ್ರಾಯಾ ವಿಸ್ರಸ್ತಕಬರಸ್ರಜಃ ।
ದೃಷ್ಟ್ವಾ ಪರಿಶ್ರಮಂ ಕೃಷ್ಣಃ ಕೃಪಯಾऽऽಸೀತ್ಸ್ವಬಂಧನೇ
॥ ೧೮ ॥

ಆದರಲ್ಲಿದ್ದ ಹೂವುಗಳು ದಾರಿಯುದ್ದಕ್ಕೆ ಎರಚಿದಂತೆ ಬೀಳುತ್ತಿದ್ದವು. ಹೀಗೆ ಸುಂದರಿಯಾದ ಯಶೋದೆಯು ಹೇಗಾದರೂ ಅವನನ್ನು ಹಿಡಿದುಬಿಟ್ಟಳು. (ಅಥವಾ ತಾಯಿಯ ಕಷ್ಟವನ್ನು ನೋಡಲಾರದೆ ಕರುಣಾಳು ಕೃಷ್ಣನೇ ತನ್ನ ವೇಗವನ್ನು ಕಡಿಮೆಮಾಡಿ ತಾಯಿಯ ಕೈಗೆ ಸಿಕ್ಕಿಬಿದ್ದನೋ!) ॥ ೧೦ ॥ ಎಡಗೈಯಿಂದ ಮುದ್ದು ಕೃಷ್ಣನನ್ನು ಹಿಡಿದುಕೊಂಡು, ಬಲಗೈಯಲ್ಲಿದ್ದ ಕೋಲನ್ನು ತೋರಿಸುತ್ತಾ 'ಪೋರ! ಈಗ ಸಿಕ್ಕಿದೆಯಲ್ಲ! ನಾನೇನು ಮಾಡುವೆನು ಗೊತ್ತೇ?' ಎಂದು ಗದರಿಸಿದಳು. ಅಪರಾಧಿಯಾದ ಶ್ರೀಕೃಷ್ಣ ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ತಾಯಿ ಎಲ್ಲಿ ಹೊಡೆದುಬಿಡುವಳೋ ಎಂಬ ಭಯವನ್ನು ಕಣ್ಣುಗಳಿಂದಲೂ ಮುಖದಿಂದಲೂ ಸೂಚಿಸುತ್ತಿದ್ದನು. ಅಳುತ್ತಾ ಕೈಗಳಿಂದ ಕಣ್ಣುಗಳನ್ನು ಒರೆಸಿಕೊಳ್ಳುವಾಗ ಕಣ್ಣಿಗೆ ಹಚ್ಚಿದ ಕಾಡಿಗೆಯೆಲ್ಲವೂ ಮುಖಕ್ಕೆಲ್ಲ ಹರಡಿಕೊಂಡಿತು. ॥ ೧೧ ॥ ತನ್ನ ಕೈಯಲ್ಲಿರುವ ಕೋಲನ್ನು ನೋಡಿ ತನ್ನ ಮಗನು ಬಹಳ ಭಯಪಟ್ಟಿರುವನೆಂದು ವಾತ್ಸಲ್ಯಮಯಿಯಾದ ತಾಯಿಯು ಭಾವಿಸಿದಳು. ಕೈಯಲ್ಲಿದ್ದ ಕೋಲನ್ನು ಬಿಸಾಡಿದಳು. ಇವನೆಲ್ಲಾದರೂ ಓಡಿ ಹೋದಾನೆಂದು ಯೋಚಿಸಿ ಇವನನ್ನು ಹಗ್ಗದಿಂದ ಕಟ್ಟಿಹಾಕ ಬೇಕೆಂದು ನಿಶ್ಚಯಿಸಿದಳು. ಪರೀಕ್ಷಿತನೇ! ಪುತ್ರವತ್ಸಲೆಯಾದ ಅವಳಿಗೆ ತನ್ನ ಮಗನ ಐಶ್ವರ್ಯವೆಷ್ಟೆಂಬುದು ತಿಳಿದಿರಲಿಲ್ಲ. ॥ ೧೨ ॥ ಸರ್ವಾತ್ಮಕನಾದ ಇವನಿಗೆ ಒಳಗೆ-ಹೊರಗೆಂಬುದಿಲ್ಲ. ಆದಿ-ಅಂತ್ಯಗಳಿಲ್ಲ. ಇವನು ಜಗತ್ಸೃಷ್ಟಿಗೆ ಮೊದಲೂ ಇದ್ದನು. ಜಗತ್ಪ್ರಳಯವಾದ ಮೇಲೆಯೂ ಇರುವನು. ಈ ಜಗತ್ತಿನೊಳಗೆ ಇದ್ದೇ ಇದ್ದಾನೆ, ಹೊರಗಿನ ರೂಪಗಳಲ್ಲೂ ಇದ್ದಾನೆ; ಜಗತ್ಸ್ವರೂಪನೂ ಅವನೇ ಇದ್ದಾನೆ. ಇಷ್ಟೇ ಅಲ್ಲ, ಸಮಸ್ತ ಇಂದ್ರಿಯಗಳಿಂದ ಅತೀತನೂ ಅವ್ಯಕ್ತನೂ ಆದ ಭಗವಂತನು ಮನುಷ್ಯರಂತೆ ರೂಪವನ್ನು ಧರಿಸಿರುವುದರಿಂದ ಇವನು ತನ್ನ ಪುತ್ರನೆಂದೇ ತಿಳಿದ ಯಶೋದಾದೇವಿಯು ಯಾರಾದರೂ ಸಾಮಾನ್ಯ ಬಾಲಕನನ್ನು ಕಟ್ಟಿಹಾಕುವಂತೆ ಹಗ್ಗದಿಂದ ಒರಳಿಗೆ ಕಟ್ಟಿಹಾಕಿದಳು. ॥ ೧೩-೧೪ ॥ ತಾಯಿ ಯಶೋದೆಯು ತನ್ನ ತುಂಟನಾದ ಮಗನನ್ನು ಹಗ್ಗದಿಂದ ಕಟ್ಟತೊಡಗಿದಾಗ ಆ ಹಗ್ಗವು ಎರಡು ಅಂಗುಲಗಳಷ್ಟು ಕಡಿಮೆಯಾಯಿತು. ಆಗ ಆಕೆಯು ಇನ್ನೊಂದು ಹಗ್ಗವನ್ನು ತಂದು ಅದಕ್ಕೆ ಜೋಡಿಸಿದಳು. ॥ ೧೫ ॥ ಆ ಹಗ್ಗವೂ ಸಾಲದಾದಾಗ ಅದಕ್ಕೆ ಇನ್ನೊಂದನ್ನು ಜೋಡಿಸಿದಳು. ಹೀಗೆ ಎಷ್ಟೆಷ್ಟು ಹಗ್ಗಗಳನ್ನು ಜೋಡಿಸಿದರೂ ಕೊನೆಗೆ ಅದು ಎರಡು ಅಂಗುಲ ಕಡಿಮೆಯಾಗಿ ಕೃಷ್ಣನ ಸೊಂಟಕ್ಕೆ ಸಾಕಾಗಲಿಲ್ಲ. ॥ ೧೬ ॥ ಯಶೋದಾದೇವಿಯು ಮನೆಯಲ್ಲಿದ್ದ ಎಲ್ಲ ಹಗ್ಗಗಳನ್ನು ತಂದು ಜೋಡಿಸಿದರೂ ಭಗವಾನ್ ಶ್ರೀಕೃಷ್ಣನನ್ನು ಆಕೆಯಿಂದ ಕಟ್ಟಿಹಾಕಲಾಗಲಿಲ್ಲ. ಅವಳ ಆಸಫಲತೆಯನ್ನು ಕಂಡ ಗೋಪಿಯರು ಮುಗುಳ್ನಗತೊಡಗಿದರು. ಯಶೋದೆಯೂ ನಗುತ್ತಾ ಇದೇನು ಎಂದು ಆಶ್ಚರ್ಯ ಚಕಿತಳಾದಳು. ॥ ೧೭ ॥ ಭಗವಾನ್ ಶ್ರೀಕೃಷ್ಣನು ನೋಡುತ್ತಾನೆ – ತಾಯಿಯ ಶರೀರವೆಲ್ಲ ಬೆವರಿಹೋಗಿದೆ. ಮುಡಿ ಬಿಚ್ಚಿಹೋಗಿ ಮುಡಿದ ಹೂವುಗಳೆಲ್ಲ ಕೆಳಕ್ಕೆ ಬಿದ್ದಿವೆ. ಬಹಳ ಆಯಾಸ ಗೊಂಡಿರುವಳು. ಇದನ್ನು ತಿಳಿದ ಕರುಣಾಸಮುದ್ರನಾದ ಭಗವಂತನು ತಾನೇ ತಾಯಿಯ ಬಂಧನಕ್ಕೊಳಗಾದನು. ॥ ೧೮ ॥

ಏವಂ ಸಂದರ್ಶಿತಾ ಹ್ಯಂಗ ಹರಿಣಾ ಭೃತ್ಯವಶ್ಯತಾ ।
ಸ್ವವಶೇನಾಪಿ ಕೃಷ್ಣೇನ ಯಸ್ಯೇದಂ ಸೇಶ್ವರಂ ವಶೇ
॥ ೧೯ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಸರ್ವಸ್ವತಂತ್ರನು. ಬ್ರಹ್ಮಾದಿ ಸಮಸ್ತ ದೇವತೆಗಳೊಂದಿಗೆ ಈ ಸಂಪೂರ್ಣ ಜಗತ್ತು ಅವನ ವಶದಲ್ಲಿದೆ. ಹೀಗಿದ್ದರೂ ತಾಯಿಯಿಂದ ಬಂಧಿತನಾಗಿ ತಾನು ತನ್ನ ಪ್ರಿಯಭಕ್ತರ ವಶನಾಗಿರುವೆನೆಂದು ಜಗತ್ತಿಗೆ ತೋರಿಸಿ ಕೊಟ್ಟಿರುವನು. ॥ ೧೯ ॥ ಗೊಲ್ಲತಿಯಾದ ಯಶೋದಾದೇವಿಯು ಮುಕ್ತಿಪ್ರದನಾದ ಮುಕುಂದನಿಂದ ಪಡೆದುಕೊಂಡ ಅನಿರ್ವಚನೀಯ ಕೃಪಾಪ್ರಸಾದವನ್ನು ಬ್ರಹ್ಮದೇವರಾಗಲೀ, ದೇವದೇವ ಶಂಕರನೇ ಆಗಲೀ, ವಕ್ಷಸ್ಥಳದಲ್ಲೇ ವಾಸಿಸುವ ಅರ್ಧಾಂಗಿನಿಯಾದ ಲಕ್ಷ್ಮೀದೇವಿಯೇ ಆಗಲೀ ಪಡೆದುಕೊಳ್ಳಲು ಸಮರ್ಥರಾಗಲಿಲ್ಲ. ॥ ೨೦ ॥ ಈ ಗೋಪಿಕಾನಂದನನಾದ ಭಗವಾನ್ ಶ್ರೀಕೃಷ್ಣನು ಅನನ್ಯ ಪ್ರೇಮಿಗಳಾದ ಭಕ್ತರಿಗೆ ಸುಲಭನಾಗಿರುವಂತೆ, ದೇಹಾಭಿಮಾನಿಗಳಾದ ಕರ್ಮಕಾಂಡಿಗಳಿಗಾಗಲೀ, ತಪಸ್ವಿಗಳಿಗಾಗಲೀ, ತನ್ನ ಸ್ವರೂಪಭೂತ ಜ್ಞಾನಿಗಳಿಗಾಗಲೀ ಸುಲಭನಲ್ಲ. ॥ ೨೧ ॥

ನೇಮಂ ವಿರಿಂಚೋ ನ ಭವೋ ನ ಶ್ರೀರಪ್ಯಂಗಸಂಶ್ರಯಾ ।
ಪ್ರಸಾದಂ ಲೇಭಿರೇ ಗೋಪೀ ಯತ್ತತ್ಪ್ರಾಪ ವಿಮುಕ್ತಿದಾತ್
॥ ೨೦ ॥

ನಾಯಂ ಸುಖಾಪೋ ಭಗವಾನ್ ದೇಹಿನಾಂ ಗೋಪಿಕಾಸುತಃ ।
ಜ್ಞಾನಿನಾಂ ಚಾತ್ಮಭೂತಾನಾಂ ಯಥಾ ಭಕ್ತಿಮತಾಮಿಹ
॥ ೨೧ ॥

ಒರಳುಕಲ್ಲಿಗೆ ಕೃಷ್ಣನನ್ನು ಕಟ್ಟಿಹಾಕಿ ನಂದರಾಣೀ ಯಶೋದೆಯು ಗೃಹಕೃತ್ಯದಲ್ಲಿ ನಿರತಳಾದಳು. ಬಂಧಿತನಾದ ಭಗವಾನ್ ಶ್ಯಾಮಸುಂದರನು ತಾಯಿಗೆ ತನ್ನಕಡೆ ಗಮನವಿಲ್ಲವೆಂದರಿತು ಮೊದಲು ಯಕ್ಷರಾಜನಾದ ಕುಬೇರನ ಪುತ್ರರಾಗಿದ್ದು ಶಾಪದಿಂದ ಅರ್ಜುನ ವೃಕ್ಷಗಳಾಗಿದ್ದ ಇಬ್ಬರನ್ನು ಶಾಪವಿಮೋಚನೆ ಮಾಡಬೇಕೆಂದು ಯೋಚಿಸಿದನು. ॥ ೨೨ ॥ ನಳಕೂಬರ ಮತ್ತು ಮಣಿಗ್ರೀವರೆಂಬ ಇವರಿಬ್ಬರ ಬಳಿ ಧನ, ಸೌಂದರ್ಯ, ಐಶ್ವರ್ಯಗಳು ಪರಿಪೂರ್ಣವಾಗಿದ್ದವು. ಇದರಿಂದ ಉಂಟಾದ ಅಹಂಕಾರವನ್ನು ಕಂಡು ದೇವಋಷಿ ನಾರದರ ಶಾಪದಿಂದ ಅವರು ವೃಕ್ಷಗಳಾಗಿದ್ದರು. ॥ ೨೩ ॥

ಕೃಷ್ಣಸ್ತು ಗೃಹಕೃತ್ಯೇಷು ವ್ಯಗ್ರಾಯಾಂ ಮಾತರಿ ಪ್ರಭುಃ ।
ಅದ್ರಾಕ್ಷೀದರ್ಜುನೌ ಪೂರ್ವಂ ಗುಹ್ಯಕೌ ಧನದಾತ್ಮಜೌ
॥ ೨೨ ॥

ಪುರಾ ನಾರದಶಾಪೇನ ವೃಕ್ಷತಾಂ ಪ್ರಾಪಿತೌ ಮದಾತ್ ।
ನಲಕೂಬರಮಣಿಗ್ರೀವಾವಿತಿ ಖ್ಯಾತೌ ಶ್ರಿಯಾನ್ವಿತೌ
॥ ೨೩ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಗೋಪೀಪ್ರಸಾದೋ ನಾಮ ನವಮೋऽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಯಮಳಾರ್ಜುನರ ಉದ್ಧಾರ

ರಾಜೋವಾಚ

ಕಥ್ಯತಾಂ ಭಗವನ್ನೇತತ್ತಯೋಃ ಶಾಪಸ್ಯ ಕಾರಣಮ್ ।
ಯತ್ತದ್ವಿಗರ್ಹಿತಂ ಕರ್ಮ ಯೇನ ವಾ ದೇವರ್ಷೇಸ್ತಮಃ
॥ ೧ ॥

ಪರೀಕ್ಷಿದ್ರಾಜನು ಕೇಳುತ್ತಾನೆ – ಪೂಜ್ಯರೇ ! ಕುಬೇರನ ಮಕ್ಕಳಾದ ನಳಕೂಬರ – ಮಣಿಗ್ರೀವರಿಗೆ ಶಾಪ ಏಕೆ ಬಂತು ? ಪರಮ ಶಾಂತರಾದ ದೇವರ್ಷಿ ನಾರದರಿಗೂ ಕೋಪ ಬರುವಂತಹ ನಿಂದನೀಯ ಯಾವ ಕರ್ಮಮಾಡಿದ್ದರು ಅವರು ? ಇದನ್ನು ದಯಮಾಡಿ ತಿಳಿಸಬೇಕೆಂದು ಬೇಡಿಕೊಳ್ಳುತ್ತೇನೆ. ॥ ೧ ॥

ಶ್ರೀಶುಕ ಉವಾಚ

ರುದ್ರಸ್ಯಾನುಚರೌ ಭೂತ್ವಾ ಸುದೃಪ್ತೌ ಧನದಾತ್ಮಜೌ ।
ಕೈಲಾಸೋಪವನೇ ರಮ್ಯೇ ಮಂದಾಕಿನ್ಯಾಂ ಮದೋತ್ಕಟೌ
॥ ೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ರಾಜನೇ ! ನಳಕೂಬರ ಮತ್ತು ಮಣಿಗ್ರೀವರು ಕುಬೇರನ ಮಕ್ಕಳಾಗಿದ್ದರಲ್ಲದೆ, ಈಶ್ವರನ ಅನುಚರರೂ ಆಗಿದ್ದರು. ಇದರಿಂದ ಅತ್ಯಂತ ಅಹಂಕಾರಿಗಳಾಗಿದ್ದರು. ಒಂದು ದಿನ ಇವರಿಬ್ಬರೂ ಮಂದಾಕಿನಿಯ ತೀರದಲ್ಲಿ

ವಾರುಣೀಂ ಮದಿರಾಂ ಪೀತ್ವಾ ಮದಾಘೂರ್ಣಿತಲೋಚನೌ ।
ಸ್ತ್ರೀಜನೈರನುಗಾಯದ್ಭಿಶ್ಚೇರತುಃ ಪುಷ್ಪಿತೇ ವನೇ
॥ ೩ ॥

ಅಂತಃ ಪ್ರವಿಶ್ಯ ಗಂಗಾಯಾಮಂಭೋಜವನರಾಜಿನಿ ।
ಚಿಕ್ರೀಡತುರ್ಯುವತಿಭಿರ್ಗಜಾವಿವ ಕರೇಣುಭಿಃ
॥ ೪ ॥

ಯದೃಚ್ಛಯಾ ಚ ದೇವರ್ಷಿರ್ಭಗವಾಂಸ್ತತ್ರ ಕೌರವ ।
ಅಪಶ್ಯನ್ನಾರದೋ ದೇವೌ ಕ್ಷೀಬಾಣೌ ಸಮಬುಧ್ಯತ
॥ ೫ ॥

ತಂ ದೃಷ್ಟ್ವಾವ್ರೀಡಿತಾ ದೇವ್ಯೋ ವಿವಸ್ತ್ರಾಃ ಶಾಪಶಂಕಿತಾಃ ।
ವಾಸಾಂಸಿ ಪರ್ಯಧುಃ ಶೀಘ್ರಂ ವಿವಸ್ತ್ರೌನೈವ ಗುಹ್ಯಕೌ
॥ ೬ ॥

ತೌ ದೃಷ್ಟ್ವಾ ಮದಿರಾಮತ್ತೌ ಶ್ರೀಮದಾಂಧೌ ಸುರಾತ್ಮಜೌ ।
ತಯೋರನುಗ್ರಹಾರ್ಥಾಯ ಶಾಪಂ ದಾಸ್ಯನ್ನಿದಂ ಜಗೌ
॥ ೭ ॥

ನಾರದ ಉವಾಚ

ನ ಹ್ಯನ್ಯೋ ಜುಷತೋ ಜೋಷ್ಯಾನ್ಬುದ್ಧಿಭ್ರಂಶೋ ರಜೋಗುಣಃ ।
ಶ್ರೀಮದಾದಾಭಿಜಾತ್ಯಾದಿರ್ಯತ್ರ ಸ್ತ್ರೀ ದ್ಯೂತಮಾಸವಃ
॥ ೮ ॥

ಹನ್ಯಂತೇ ಪಶವೋ ಯತ್ರ ನಿರ್ದಯೈರಜಿತಾತ್ಮಭಿಃ ।
ಮನ್ಯಮಾನೈರಿಮಂ ದೇಹಮಜರಾಮೃತ್ಯು ನಶ್ವರಮ್
॥ ೯ ॥

ದೇವಸಂಜ್ಞಿತಮಪ್ಯಂತೇ ಕೃಮಿವಿಡ್ಭಸ್ಮಸಂಜ್ಞಿತಮ್ ।
ಭೂತಧ್ರುಕ್ತತ್ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ
॥ ೧೦ ॥

ಕೈಲಾಸದ ರಮಣೀಯವಾದ ಉಪವನದಲ್ಲಿ ವಾರುಣೀ ಎಂಬ ಮದ್ಯವನ್ನು ಕುಡಿದು ಮದೋನ್ಮತ್ತರಾಗಿದ್ದರು. ಮದಿರೆಯ ಅಮಲಿನಲ್ಲಿ ಅವರ ಕಣ್ಣುಗಳು ತಿರುಗುತ್ತಿದ್ದವು. ಬಹಳಷ್ಟು ನಾರಿಯರು ಹಾಡುತ್ತಾ-ಕುಣಿಯುತ್ತಾ ಪುಷ್ಪಭರಿತವಾದ ಆ ವನದಲ್ಲಿ ಅವರೊಂದಿಗೆ ವಿಹರಿಸುತ್ತಿದ್ದರು. ॥ ೨-೩ ॥ ಬಳಿಕ ಅವರು ಕೆಂದಾವರೆಗಳಿಂದ ಮಂಡಿತವಾದ ಗಂಗಾನದಿಯ ನೀರಿನಲ್ಲಿಳಿದು ಗಂಡಾನೆಗಳು ಹೆಣ್ಣಾನೆಗಳೊಂದಿಗೆ ರಮಿಸುವಂತೆ ಸ್ತ್ರೀಯರೊಂದಿಗೆ ಜಲಕ್ರೀಡೆಯಾಡುತ್ತಿದ್ದರು. ॥ ೪ ॥ ಪರೀಕ್ಷಿತನೇ ! ಕಾಲ ಕರ್ಮಸಂಯೋಗದಿಂದ ಅದೇ ಮಾರ್ಗವಾಗಿ ದೇವಋಷಿಗಳಾದ ನಾರದರು ಆಗಮಿಸಿದರು. ಸ್ತ್ರೀಯರೊಂದಿಗೆ ಜಲಕ್ರೀಡೆಯಾಡುತ್ತಿದ್ದ ಆ ಯುವಕರನ್ನು ನೋಡಿ, ಇವರು ಮದೋನ್ಮತ್ತರಾಗಿರುವರು ಎಂದು ಅವರು ತಿಳಿದುಕೊಂಡರು. ॥ ೫ ॥ ದೇವರ್ಷಿನಾರದರನ್ನು ಕಂಡೊಡನೆ ಅಪ್ಸರೆಯರು ನಾಚಿಕೊಂಡು, ಮಹರ್ಷಿಗಳು ಶಾಪಕೊಟ್ಟಾರೆಂಬ ಭಯದಿಂದ ಬೇಗ-ಬೇಗನೇ ತಮ್ಮ-ತಮ್ಮ ವಸ್ತ್ರಗಳನ್ನು ಉಟ್ಟುಕೊಂಡರು. ಆದರೆ ಈ ಯಕ್ಷ ಕುಮಾರರು ನಾರದರನ್ನು ನೋಡಿಯೂ ವಸ್ತ್ರಗಳನ್ನು ಧರಿಸದೆ ಇದ್ದರು. ॥ ೬ ॥ ಇವರು ದೇವತೆಗಳ ಪುತ್ರರಾಗಿದ್ದರೂ ಧನಮದದಿಂದ ಕುರುಡರಾಗಿ, ಮದಿರಾಪಾನದಿಂದ ಉನ್ಮತ್ತರಾಗಿರುವುದನ್ನು ನೋಡಿದ ದೇವರ್ಷಿನಾರದರೂ ಅವರ ಮೇಲೆ ಅನುಗ್ರಹವನ್ನು ತೋರಲೆಂದೇ ಶಾಪವನ್ನು ಕೊಡುತ್ತಾ ಹೀಗೆಂದರು - ॥ ೭ ॥

ನಾರದರು ಹೇಳಿದರು - ಇಂದ್ರಿಯಗಳಿಗೆ ಪ್ರಿಯವಾದ ವಿಷಯಗಳಲ್ಲಿ ಆಸಕ್ತನಾಗಿರುವ ಮನುಷ್ಯನ ಬುದ್ಧಿಯನ್ನು ಪೂರ್ಣವಾಗಿ ಹಾಳುಮಾಡುವುದು ವಿಶೇಷವಾಗಿ ಧನಮದವೇ ಆಗಿದೆ. ಹಿಂಸೆಯೇ ಮುಂತಾದ ರಜೋಗುಣೀ ಕರ್ಮಗಳಾಗಲೀ, ವಿದ್ಯಾಮದ, ಕುಲಮದ ಮೊದಲಾದವುಗಳಾಗಲೀ ಅಷ್ಟುಮಟ್ಟಿಗೆ ಬುದ್ಧಿಯನ್ನು ಹಾಳುಮಾಡುವುದಿಲ್ಲ, ಏಕೆಂದರೆ, ಧನಮದದ ಜೊತೆ-ಜೊತೆಗೆ ಸ್ತ್ರೀಸಂಗ, ಜೂಜು, ಮದ್ಯಪಾನ ಮುಂತಾದವುಗಳು ಸೇರಿಕೊಂಡೇ ಇರುತ್ತವೆ. ॥ ೮ ॥ ಐಶ್ವರ್ಯಮದ, ಧನಮದದಿಂದ ಕುರುಡರಾಗಿ ತಮ್ಮ ಇಂದ್ರಿಯಗಳ ವಶದಲ್ಲಿರುವ ಕ್ರೂರ ಮನುಷ್ಯರು ತನ್ನ ನಾಶವುಳ್ಳ ಶರೀರವನ್ನು ಅಮರವೆಂದೇ ತಿಳಿದಿರುತ್ತಾರೆ ಹಾಗೂ ತನ್ನಂತೆಯೇ ಶರೀರಧಾರೀ ಪಶುಗಳನ್ನು ಕೊಲ್ಲುತ್ತಾ ಇರುತ್ತಾರೆ. ॥ ೯ ॥ ಅಯ್ಯೋ ! ಯಾವ ಶರೀರವನ್ನು 'ಭೂದೇವ', 'ನರದೇವ', 'ದೇವ' ಮುಂತಾದ ಹೆಸರುಗಳಿಂದ ಕರೆಯುತ್ತಾರೋ, ಕೊನೆಗೆ ಅದರ ಗತಿ ಏನಾದೀತು ? ಪ್ರಾಣ ಪಕ್ಷಿಯೂ ಹಾರಿಹೋದಾಗ ಅದು ಹುಳುಗಳ ರಾಶಿ, ನರಿ ಕಾಗೆಗಳ ಆಹಾರ, ಇಲ್ಲವೇ ಬೂದಿಯ ರಾಶಿಯಷ್ಟೆ. ಇಂತಹ ಶರೀರಕ್ಕಾಗಿಯೇ ಪ್ರಾಣಿಗಳೊಂದಿಗೆ ದ್ರೋಹ ಮಾಡುವುದರಿಂದ ಮನುಷ್ಯನು ತನ್ನ ಯಾವ ಸ್ವಾರ್ಥವನ್ನು ತಿಳಿಯುವನೋ ? ಹೀಗೆ ಮಾಡುವುದರಿಂದ ಅವನಿಗೆ ನರಕವೇ ಪ್ರಾಪ್ತಿಯಾಗುವುದು. ॥ ೧೦ ॥ ನಶ್ವರವಾದ ಈ ಶರೀರವು ಯಾರದೆಂದು ನಿರ್ಧರಿಸಬಹುದೇ ? ಅನ್ನವಿಟ್ಟು ಪೋಷಿಸಿದವನದ್ದೇ ? ಗರ್ಭಾಧಾನ ಮಾಡಿದ ತಂದೆಗೆ ಸೇರಿದ್ದೇ ಅಥವಾ ಒಂಭತ್ತು ತಿಂಗಳು

ದೇಹಃ ಕಿಮನ್ನದಾತುಃ ಸ್ವಂ ನಿಷೇಕ್ತುರ್ಮಾತುರೇವ ಚ ।
ಮಾತುಃ ಪಿತುರ್ವಾ ಬಲಿನಃ ಕ್ರೇತುರಗ್ನೇಃ ಶುನೋऽಪಿ ವಾ
॥ ೧೧ ॥

ಹೊತ್ತು ಹೆತ್ತ ತಾಯಿಯದೇ ? ತಾಯಿಯ ಜನ್ಮಕ್ಕೆ ಕಾರಣನಾದ ತಾತನದೇ ? ಬಲವಂತವಾಗಿ ಜಿತಮಾಡಿಸಿಕೊಳ್ಳುವ ಧಣಿಯದೇ ? ಅಥವಾ ಗುಲಾಮನಂತೆ ಕ್ರಯಕೊಟ್ಟುಕೊಂಡು ಕೊಂಡವನದೇ ? ಧಗಧಗನೆ ಉರಿಯುವ ಚಿತೆಯಲ್ಲಿ ಸುಟ್ಟು ಹೋಗುವ ಈ ಶರೀರ ಅಗ್ನಿಯದೆ ? ಮೃತಶರೀರವನ್ನು ತಿನ್ನಲು ಕಾದುಕುಳಿತ ನರಿ-ನಾಯಿಗಳದ್ದೇ ? ॥ ೧೧ ॥ ನಿಶ್ಚಯವಾಗಿಯೂ ಈ ದೇಹವು ಸಾಧಾರಣವಾದ ಒಂದು ವಸ್ತುವಾಗಿದೆ. ಪ್ರಕೃತಿಯಿಂದ ಹುಟ್ಟುತ್ತದೆ ಹಾಗೂ ಅದರಲ್ಲೇ ಸೇರಿಹೋಗುತ್ತದೆ. ಯಾವ ವಿದ್ವಾಂಸನು ತಾನೇ ಇಂತಹ ನಶ್ವರವಾದ ದೇಹವನ್ನು ತನ್ನದೆಂಬುದಾಗಿ ಭಾವಿಸಿಕೊಂಡು ಅದರ ಪೋಷಣೆಗಾಗಿ ತನ್ನಂತೆಯೇ ಇರುವ ಇತರ ಪ್ರಾಣಿಗಳನ್ನು ವಧಿಸಬಲ್ಲನು ? ಅಸತ್ಪುರುಷರಲ್ಲದೆ ಬೇರಾರೂ ಹೀಗೆ ಮಾಡುವುದಿಲ್ಲ ॥ ೧೨ ॥

ಏವಂ ಸಾಧಾರಣಂ ದೇಹಮವ್ಯಕ್ತಪ್ರಭವಾಪ್ಯಯಮ್ ।
ಕೋ ವಿದ್ವಾನಾತ್ಮಸಾತ್ಕೃತ್ವಾ ಹಂತಿ ಜಂತೂನೃತೇऽಸತಃ
॥ ೧೨ ॥

ಧನಮದದಿಂದ ಕುರುಡಾಗಿ ಇದ್ದವನ ಕಣ್ಣು ತೆರೆಸಲು ದಾರಿದ್ರ್ಯವೆಂಬುದೇ ಶ್ರೇಷ್ಠವಾದ ಅಂಜನವಾಗಿದೆ. ಏಕೆಂದರೆ, ದರಿದ್ರನಾದವನು ಬೇರೆ ಪ್ರಾಣಿಗಳನ್ನು ತನ್ನಂತೆಯೇ ಭಾವಿಸಿಕೊಂಡಿರುತ್ತಾನೆ. ಆದುದರಿಂದ ಅವುಗಳನ್ನು ಹಿಂಸಿಸಲು ಹೋಗುವುದಿಲ್ಲ ॥ ೧೩ ॥

ಅಸತಃ ಶ್ರೀಮದಾಂಧಸ್ಯ ದಾರಿದ್ರ್ಯಂ ಪರಮಂಜನಮ್ ।
ಆತ್ಮೌಪಮ್ಯೇನ ಭೂತಾನಿ ದರಿದ್ರಃ ಪರಮೀಕ್ಷತೇ
॥ ೧೩ ॥

ಯಾವನ ಕಾಲಿಗೆ ಒಮ್ಮೆ ಮುಳ್ಳು ಚುಚ್ಚಿದೆಯೋ ಮತ್ತು ಅದರ ಯಾತನೆಯನ್ನು ಅನುಭವಿಸಿರುವನೋ, ಅಂತಹವನು ಇತರರ ಕಾಲಿಗೂ ಮುಳ್ಳು ಚುಚ್ಚಬಾರದೆಂದೇ ಅಪೇಕ್ಷಿಸುತ್ತಾನೆ. ಏಕೆಂದರೆ, ಮುಳ್ಳು ಚುಚ್ಚುವುದರಿಂದ ಆಗುವ ನೋವು-ಕಷ್ಟಗಳನ್ನು ಅವನು ಅನುಭವಿಸಿದ್ದಾನೆ. ಆದರೆ ಮುಳ್ಳು ಚುಚ್ಚದೇ ಇರುವವನಿಗೆ, ಅದರ ಯಾತನೆಯನ್ನು ಅನುಭವಿಸದವನಿಗೆ ಹಾಗೆ ಅನಿಸುವುದಿಲ್ಲ ॥ ೧೪ ॥

ಯಥಾ ಕಂಟಕವಿದ್ಧಾಂಗೋ ಜಂತೋರ್ನೇಚ್ಛತಿ ತಾಂ ವ್ಯಥಾಮ್ ।
ಜೀವಸಾಮ್ಯಂ ಗತೋ ಲಿಂಗೈರ್ನ ತಥಾವಿದ್ಧಕಂಟಕಃ
॥ ೧೪ ॥

ದರಿದ್ರನಲ್ಲಿ ಯಾವುದೇ ಅಹಂಕಾರ, ಮದ ಇರುವುದಿಲ್ಲ. ಅವನು ಎಲ್ಲ ವಿಧವಾದ ಮದಗಳಿಂದಲೂ ದೂರವುಳಿಯುತ್ತಾನೆ. ದೈವವಶಾತ್ ಅವನಿಗೆ ಕಷ್ಟಗಳು ಒದಗಿಬಂದಾಗ ಅವೆಲ್ಲವನ್ನು ಅವನು ಅನುಭವಿಸುತ್ತಲೇ ಇರುತ್ತಾನೆ. ಅದೇ ಅವನಿಗೆ ಒಂದು ತಪಸ್ಸು ಆಗಿದೆ. ॥ ೧೫ ॥

ದರಿದ್ರೋ ನಿರಹಂಸ್ತಂಭೋ ಮುಕ್ತಃ ಸರ್ವಮದೈರಿಹ ।
ಕೃಚ್ಛ್ರಂ ಯದೃಚ್ಛಯಾऽऽಪ್ನೋತಿ ತದ್ಧಿ ತಸ್ಯ ಪರಂ ತಪಃ
॥ ೧೫ ॥

ದರಿದ್ರನಾದವನು ಹೊಟ್ಟೆಪಾಡಿಗಾಗಿಯೇ ಒದ್ದಾಡುತ್ತಿರುತ್ತಾನೆ. ಹಸಿವಿನಿಂದ ಅವನ ಶರೀರವು ಕೃಶವಾಗಿ ಇರುತ್ತದೆ. ಕೃಶಹೊಂದಿದ ಅವನ ಇಂದ್ರಿಯಗಳು ವಿಷಯ ಸುಖಗಳನ್ನು ಬಯಸುವುದಿಲ್ಲ. ದರಿದ್ರನಾದವನು ನಾಲಿಗೆಯ ಚಾಪಲ್ಯಕ್ಕಾಗಿ ಇತರ ಪ್ರಾಣಿಗಳನ್ನು ಕೊಲ್ಲುವುದಿಲ್ಲ. ಹಿಂಸಿಸುವುದಿಲ್ಲ ॥ ೧೬ ॥

ನಿತ್ಯಂ ಕ್ಷುತ್ಕ್ಷಾಮದೇಹಸ್ಯ ದರಿದ್ರಸ್ಯಾನ್ನಕಾಂಕ್ಷಿಣಃ ।
ಇಂದ್ರಿಯಾಣ್ಯನುಶುಷ್ಯಂತಿ ಹಿಂಸಾಪಿ ವಿನಿವರ್ತತೇ
॥ ೧೬ ॥

ಸಾಧು-ಸತ್ಪುರುಷರು ಸಮದರ್ಶಿಗಳಾಗಿ ಇರುವರು. ಆದುದರಿಂದ ಅವರ ಸಮಾಗಮವು ದರಿದ್ರರಿಗೆ ಸುಲಭವಾಗಿ ದೊರೆಯುತ್ತದೆ. ಏಕೆಂದರೆ, ದರಿದ್ರರಾದವರಲ್ಲಿ ಭೋಗಾದಿಗಳು ಇರುವುದೇ ಇಲ್ಲ. ಆಸೆಯೆಂಬುದೊಂದಿರುತ್ತದೆ. ಸಾಧುಸಮಾಗಮದಿಂದ ಆ ತೃಷ್ಣೆಯೂ ಇಂಗಿಹೋಗಿ ಅವರ ಮನಸ್ಸು ಬಹಳ ಬೇಗ ಶುದ್ಧವಾಗುತ್ತದೆ.* ॥ ೧೭ ॥

ದರಿದ್ರಸ್ಯೈವ ಯುಜ್ಯಂತೇ ಸಾಧವಃ ಸಮದರ್ಶಿನಃ ।
ಸದ್ಭಿಃ ಕ್ಷಿಣೋತಿ ತಂ ತರ್ಷಂ ತತ ಆರಾದ್ವಿಶುದ್ಧ್ಯತಿ
॥ ೧೭ ॥

* ಶ್ರೀಮಂತರಲ್ಲಿ ಧನಮದ, ಧನದ ಮೇಲಿನ ಅಭಿಮಾನ ಮತ್ತು ಧನದ ತೃಷ್ಣೆ ಈ ಮೂರು ದೋಷಗಳು ಇರುತ್ತವೆ. ದರಿದ್ರರಲ್ಲಿ ಧನಮದವಾಗಲೀ, ಧನದ ಮೇಲಿನ ಅಭಿಮಾನವಾಗಲೀ ಇರುವುದಿಲ್ಲ; ಆದರೆ ಧನತೃಷ್ಣೆಯೆಂಬ ಒಂದು ದೋಷ ಇರುತ್ತದೆ. ಈ ದೋಷವೂ ಕೂಡ ಸತ್ಪುರುಷರ ಸಹವಾಸದಿಂದ ಹೊರಟುಹೋಗಿ ಬೇಗನೇ ಶ್ರೇಯಸ್ಸುಂಟಾಗುತ್ತದೆ.

ಸಾಧೂನಾಂ ಸಮಚಿತ್ತಾನಾಂ ಮುಕುಂದಚರಣೈಷಿಣಾಮ್ ।
ಉಪೇಕ್ಷ್ಯೈಃ ಕಿಂ ಧನಸ್ತಂಭೈರಸದ್ಭಿರಸದಾಶ್ರಯೈಃ
॥ ೧೮ ॥

ತದಹಂ ಮತ್ತಯೋರ್ಮಾಧ್ವ್ವಾ ವಾರುಣ್ಯಾ ಶ್ರೀಮದಾಂಧಯೋಃ ।
ತಮೋಮದಂ ಹರಿಷ್ಯಾಮಿ ಸ್ತ್ರೈಣಯೋರಜಿತಾತ್ಮನೋಃ
॥ ೧೯ ॥

ಯದಿಮೌ ಲೋಕಪಾಲಸ್ಯ ಪುತ್ರೌ ಭೂತ್ವಾತಮಃಪ್ಲುತೌ ।
ನ ವಿವಾಸಸಮಾತ್ಮಾನಂ ವಿಜಾನೀತಃ ಸುದುರ್ಮದೌ
॥ ೨೦ ॥

ಅತೋಽರ್ಹತಃ ಸ್ಥಾವರತಾಂ ಸ್ಯಾತಾಂ ನೈವಂ ಯಥಾ ಪುನಃ ।
ಸ್ಮೃತಿಃ ಸ್ಯಾನ್ನತ್ವಸಾದೇನ ತತ್ರಾಪಿ ಮದನುಗ್ರಹಾತ್
॥ ೨೧ ॥

ವಾಸುದೇವಸ್ಯ ಸಾನ್ನಿಧ್ಯಂ ಲಬ್ಧ್ವಾ ದಿವ್ಯಶರಚ್ಛತೇ ।
ವೃತ್ತೇ ಸ್ವರ್ಲೋಕತಾಂ ಭೂಯೋ ಲಬ್ಧಭಕ್ತೀ ಭವಿಷ್ಯತಃ
॥ ೨೨ ॥

ಶ್ರೀಶುಕ ಉವಾಚ

ಏವಮುಕ್ತ್ವಾ ಸ ದೇವರ್ಷಿರ್ಗತೋ ನಾರಾಯಣಾಶ್ರಮಮ್ ।
ನಲಕೂಬರಮಣಿಗ್ರೀವಾವಾಸತುರ್ಯಮಲಾರ್ಜುನೌ
॥ ೨೩ ॥

ಯುವಯೋರ್ಭಾಗವತಮುಖ್ಯಸ್ಯ ಸತ್ಯಂ ಕರ್ತುಂ ವಚೋ ಹರಿಃ ।
ಜಗಾಮ ಶನಕೈಸ್ತತ್ರ ಯತ್ರಾಸ್ತಾಂ ಯಮಲಾರ್ಜುನೌ
॥ ೨೪ ॥

ದೇವರ್ಷಿರ್ಮೇ ಪ್ರಿಯತಮೋ ಯದಿಮೌ ಧನದಾತ್ಮಜೌ ।
ತತ್ತಥಾ ಸಾಧಯಿಷ್ಯಾಮಿ ಯದ್ಗೀತಂ ತನ್ಮಹಾತ್ಮನಾ
॥ ೨೫ ॥

ಇತ್ಯಂತರೇಣಾರ್ಜುನಯೋಃ ಕೃಷ್ಣಸ್ತು ಯಮಯೋರ್ಯಯೌ ।
ಆತ್ಮನಿರ್ವೇಶಮಾತ್ರೇಣ ತಿರ್ಯಗ್ಗತಮುಲೂಖಿಲಮ್
॥ ೨೬ ॥

ಬಾಲೇನ ನಿಷ್ಕರ್ಷಯತಾನ್ವಗುಲೂಖಿಲಂ ತದ್
ದಾಮೋದರೇಣ ತರಸೋತ್ಕಲಿತಾಂಘ್ರಿಬಂಧೌ ।
ನಿಷ್ಪೇತತುಃ ಪರಮವಿಕ್ರಮಿತಾತಿವೇಪ-
ಸ್ಕಂಧಪ್ರವಾಲವಿಟಪೌ ಕೃತಚಂಡಶಬ್ದೌ ॥ ೨೭ ॥

ಯಾವ ಮಹಾತ್ಮರ ಚಿತ್ತದಲ್ಲಿ ಸರ್ವರ ಕುರಿತು ಸಮತ್ವವಿದೆಯೋ, ಶ್ರೀಮುಕುಂದನ ಪಾದಾರವಿಂದಗಳಲ್ಲಿ ಯಾರು ಶರಣು ಹೊಂದಿರುವರೋ, ಅವರಿಗೆ ದುರ್ಗುಣಗಳ ಭಂಡಾರದಂತಿರುವ ಅಥವಾ ದುರಾಚಾರಿಗಳಂತೆ ಜೀವನ ನಡೆಸುವ ಹಾಗೂ ಧನಮದದಿಂದ ಉನ್ಮತ್ತರಾದ ಇಂತಹ ದುಷ್ಟರಿಂದ ಏನಾಗಬೇಕಾಗಿದೆ? ಇವರಾದರೋ ಸತ್ಪುರುಷರ ಉಪೆಕ್ಷೆಗೆ ಪಾತ್ರರಾಗಿ ಇರುತ್ತಾರೆ. ॥ ೧೮ ॥ ಈ ಯಕ್ಷರಿಬ್ಬರೂ ವಾರುಣೀ ಮದ್ಯವನ್ನು ಕುಡಿದು ಉನ್ಮತ್ತರಾಗಿದ್ದು, ಧನಮದದಿಂದ ಕುರುಡರಾಗಿ ಇರುವರು. ತನ್ನ ಇಂದ್ರಿಯಗಳ ಅಧೀನದಲ್ಲಿರುವ ಈ ಸ್ತ್ರೀಲಂಪಟರಾದ ಯಕ್ಷರ ಅಜ್ಞಾನ ಜನಿತವಾದ ಮದವನ್ನು ನಾನು ನಾಶಮಾಡಿಬಿಡುತ್ತೇನೆ. ॥ ೧೯ ॥ ಇವರು ಲೋಕಪಾಲ ಕುಬೇರನ ಪುತ್ರರಾಗಿದ್ದರೂ ಮದೋನ್ಮತ್ತರಾಗಿ ಬುದ್ಧಿಗೆಟ್ಟಿರುವರು. ತಾವು ಮತ್ತೊಬ್ಬರ ಮುಂದೆ ನಗ್ನರಾಗಿದ್ದೇವೆಂಬ ಅರಿವೂ ಇವರಿಗಿಲ್ಲವಲ್ಲ! ॥ ೨೦ ॥ ಆದುದರಿಂದ ಇವರಿಬ್ಬರೂ ಈಗ ವೃಕ್ಷಯೋನಿಯನ್ನು ಹೊಂದಲು ಯೋಗ್ಯರಾಗಿದ್ದಾರೆ. ಹೀಗಾದರೆ ಇವರಿಗೆ ಇಂತಹ ಅಭಿಮಾನವು ಉಂಟಾಗಲಾರದು. ವೃಕ್ಷಯೋನಿಯಲ್ಲಿದ್ದರೂ ಇವರಿಗೆ ನನ್ನ ಅನುಗ್ರಹದಿಂದ ಭಗವಂತನ ಸ್ಮರಣೆಯಿರುತ್ತದೆ. ಮತ್ತೆ ನನ್ನ ಅನುಗ್ರಹದಿಂದ ದೇವತೆಗಳ ನೂರು ವರ್ಷಗಳು ಕಳೆದ ಬಳಿಕ ಇವರಿಗೆ ಭಗವಾನ್ ಶ್ರೀಕೃಷ್ಣನ ಸಾನ್ನಿಧ್ಯವು ಪ್ರಾಪ್ತವಾಗಿ, ಭಗವಂತನ ಚರಣಗಳಲ್ಲಿ ಪರಮಭಕ್ತಿಯುಳ್ಳವರಾಗಿ ಮತ್ತೆ ತಮ್ಮ ಲೋಕಗಳಿಗೆ ಹೊರಟು ಹೋಗುವರು. ॥ ೨೧-೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರನೇ! ದೇವರ್ಷಿ ನಾರದರು ಹೀಗೆ ಹೇಳಿ ಭಗವಾನ್ ನರ-ನಾರಾಯಣ ಆಶ್ರಮಕ್ಕೆ ಹೊರಟು ಹೋದರು. ನಾರದರು ಹೇಳಿದಂತೆ ನಳಕೂಬರ-ಮಣಿಗ್ರೀವ ಇವರಿಬ್ಬರೂ ಒಡನೆಯೇ ಅರ್ಜುನ ವೃಕ್ಷಗಳಾಗಿ ಯಮಳಾರ್ಜುನ ವೃಕ್ಷಗಳೆಂದು ಪ್ರಸಿದ್ಧರಾದರು. ॥ ೨೩ ॥ ಭಗವಾನ್ ಶ್ರೀಕೃಷ್ಣನು ಭಾಗವತೋತ್ತಮರಾದ ನಾರದಮುನಿಗಳ ಮಾತನ್ನು ಸತ್ಯವಾಗಿಸಲು ಆ ಒರಳುಕಲ್ಲನ್ನು ನಿಧಾನವಾಗಿ ಎಳೆದುಕೊಂಡೇ ಯಮಳಾರ್ಜುನ ವೃಕ್ಷಗಳ ಬಳಿಗೆ ಸಾರಿದನು. ॥ ೨೪ ॥ ಭಗವಂತನು ಯೋಚಿಸಿದನು – ದೇವರ್ಷಿಗಳಾದ ನಾರದರು ನನಗೆ ಅತ್ಯಂತ ಪ್ರಿಯರು. ಇವರಿಬ್ಬರೂ ಕೂಡ ನನ್ನ ಭಕ್ತನಾದ ಕುಬೇರನ ಮಕ್ಕಳಾಗಿದ್ದಾರೆ. ಆದುದರಿಂದ ಮಹಾತ್ಮರಾದ ನಾರದರು ಹೇಳಿರುವಂತೆಯೇ ಈ ಇಬ್ಬರನ್ನೂ ನಾನು ಉದ್ಧರಿಸುತ್ತೇನೆ. ॥ ೨೫ ॥ ಹೀಗೆ ಅಂದುಕೊಂಡು ಭಗವಾನ್ ಶ್ರೀಕೃಷ್ಣನು ಎರಡೂ ಮರಗಳ ನಡುವೆ ನುಗ್ಗಿದನು. ಅವನಾದರೋ ಆ ಕಡೆ ದಾಟಿದನು, ಆದರೆ ಒರಳುಕಲ್ಲು ಅಡ್ಡಲಾಗಿ ಸಿಕ್ಕಿಹಾಕಿ ಕೊಂಡಿತು. ॥ ೨೬ ॥ ದಾಮೋದರ ಭಗವಾನ್ ಶ್ರೀಕೃಷ್ಣನ ಸೊಂಟಕ್ಕೆ ಹಗ್ಗ ಕಟ್ಟಲ್ಪಟ್ಟಿತ್ತು. ಅವನು ತನ್ನ ಹಿಂದೆ ಉರುಳಿ ಬರುತ್ತಿದ್ದ ಒರಳಕಲ್ಲನ್ನು ಸ್ವಲ್ಪ ಜೋರಾಗಿ ಎಳೆದನು. ಆಗಲೇ ವೃಕ್ಷಗಳಲ್ಲಿದ್ದ ದೊಡ್ಡ-ದೊಡ್ಡ ರೆಂಬೆಗಳು, ಚಿಕ್ಕ ರೆಂಬೆಗಳೂ, ಎಲೆಗಳೂ, ಚಿಗುರುಗಳೂ ಕಂಪಿಸಿದವು ಮತ್ತು ಆ ಮಹಾವೃಕ್ಷಗಳು ಬುಡಸಮೇತವಾಗಿ ಸಿಡಿಲಿನಂತೆ ಶಬ್ದಮಾಡುತ್ತಾ ಕೆಳಕ್ಕೆ ಉರುಳಿದವು. ॥ ೨೭ ॥

ತತ್ರ ಶ್ರಿಯಾ ಪರಮಯಾ ಕಕುಭಃ ಸ್ಫುರಂತೌ
ಸಿದ್ಧಾವುಪೇತ್ಯ ಕುಜಯೋರಿವ ಜಾತವೇದಾಃ ।
ಕೃಷ್ಣಂ ಪ್ರಣಮ್ಯ ಶಿರಸಾಖಿಲಲೋಕನಾಥಂ
ಬದ್ಧಾಂಜಲೀ ವಿರಜಸಾವಿದಮೂಚತುಃ ಸ್ಮ ॥ ೨೮ ॥

ಕೃಷ್ಣ ಕೃಷ್ಣ ಮಹಾಯೋಗಿನ್‌ಸ್ತ್ವಮಾದ್ಯಃ ಪುರುಷಃ ಪರಃ ।
ವ್ಯಕ್ತಾವ್ಯಕ್ತಮಿದಂ ವಿಶ್ವಂ ರೂಪಂ ತೇ ಬ್ರಾಹ್ಮಣಾ ವಿದುಃ
॥ ೨೯ ॥

ತ್ವಮೇಕಃ ಸರ್ವಭೂತಾನಾಂ ದೇಹಾಸ್ವಾತ್ಮೇಂದ್ರಿಯೇಶ್ವರಃ ।
ತ್ವಮೇವ ಕಾಲೋ ಭಗವಾನ್ವಿಷ್ಣುರವ್ಯಯ ಈಶ್ವರಃ
॥ ೩೦ ॥

ತ್ವಂ ಮಹಾನ್ಪ್ರಕೃತಿಃ ಸೂಕ್ಷ್ಮಾ ರಜಃಸತ್ತ್ವತಮೋಮಯೀ ।
ತ್ವಮೇವ ಪುರುಷೋಽಧ್ಯಕ್ಷಃ ಸರ್ವಕ್ಷೇತ್ರ ವಿಕಾರವಿತ್
॥ ೩೧ ॥

ಗೃಹ್ಯಮಾಣೈಸ್ತ್ವಮಗ್ರಾಹ್ಯೋ ವಿಕಾರೈಃ ಪ್ರಾಕೃತೈರ್ಗುಣೈಃ ।
ಕೋ ನ್ವಿಹಾರ್ಹತಿ ವಿಜ್ಞಾತುಂ ಪ್ರಾಕ್ಸಿದ್ಧಂ ಗುಣಸಂವೃತಃ
॥ ೩೨ ॥

ತಸ್ಮೈ ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।
ಆತ್ಮದ್ಯೋತಗುಣೈಶ್ಚನ್ನಮಹಿಮ್ನೇ ಬ್ರಹ್ಮಣೇ ನಮಃ
॥ ೩೩ ॥

ಯಸ್ಯಾವತಾರಾ ಜ್ಞಾಯಂತೇ ಶರೀರೇಷ್ವಶರೀರಿಣಃ ।
ತೈಸ್ತೈರತುಲ್ಯಾತಿಶಯೈರ್ವೀರ್ಯೈರ್ದೇಹಿಷ್ವಸಂಗತೈಃ
॥ ೩೪ ॥

ಸ ಭವಾನ್ಸರ್ವಲೋಕಸ್ಯ ಭವಾಯ ವಿಭವಾಯ ಚ ।
ಅವತೀರ್ಣೋಽಂಶಭಾಗೇನ ಸಾಂಪ್ರತಂ ಪತಿರಾಶಿಷಾಮ್
॥ ೩೫ ॥

ನಮಃ ಪರಮಕಲ್ಯಾಣ ನಮಃ ಪರಮಮಂಗಲ ।
ವಾಸುದೇವಾಯ ಶಾಂತಾಯ ಯದೂನಾಂ ಪತಯೇ ನಮಃ
॥ ೩೬ ॥

ಅನುಜಾನೀಹಿ ನೌ ಭೂಮಂಸ್ತವಾನುಚರಕಿಂಕರೌ ।
ದರ್ಶನಂ ನೌ ಭಗವತ ಋಷೇರಾಸೀದನುಗ್ರಹಾತ್
॥ ೩೭ ॥

ಆ ಎರಡೂ ಅರ್ಜುನವೃಕ್ಷಗಳಿಂದ ಅಗ್ನಿಯಂತೆ ತೇಜಸ್ವಿಗಳಾದ ಇಬ್ಬರು ಸಿದ್ಧಪುರುಷರು ಹೊರಬಂದರು. ಅವರ ದಿವ್ಯ ಪ್ರಭೆಯಿಂದಾಗಿ ದಿಕ್ಕುಗಳು ಬೆಳಗಿದವು. ಅವರು ಅಖಿಲಲೋಕ ನಾಥನಾದ ಪರಾತ್ಪರನಾದ ಶ್ರೀಕೃಷ್ಣನ ಬಳಿಗೆ ಬಂದು ಅವನ ಚರಣಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಿ, ಕೈಗಳನ್ನು ಜೋಡಿಸಿ ಕೊಂಡು ಶುದ್ಧಹೃದಯದಿಂದ ಬಾಲಕೃಷ್ಣನನ್ನು ಸ್ತುತಿಸತೊಡಗಿದರು. ॥ ೨೮ ॥

ಓ ಸಚ್ಚಿದಾನಂದ ಸ್ವರೂಪಿಯೇ ! ಸಮಸ್ತರನ್ನು ತನ್ನತ್ತ ಆಕರ್ಷಿಸುವ ಯೋಗೇಶ್ವರನಾದ ಕೃಷ್ಣನೇ ! ನೀನು ಪ್ರಕೃತಿಗೆ ಅತೀತನಾಗಿ ಸ್ವಯಂ ಪುರುಷೋತ್ತಮನಾಗಿರುವೆ. ಈ ವ್ಯಕ್ತ ಮತ್ತು ಅವ್ಯಕ್ತ ಸಂಪೂರ್ಣ ಜಗತ್ತು ನಿನ್ನದೇ ಸ್ವರೂಪವಾಗಿದೆ ಎಂದು ವೇದಜ್ಞರಾದ ಬ್ರಾಹ್ಮಣರು ತಿಳಿದಿರುತ್ತಾರೆ. ॥ ೨೯ ॥ ನೀನೇ ಸಮಸ್ತ ಪ್ರಾಣಿಗಳ ಶರೀರ, ಪ್ರಾಣ, ಅಂತಃಕರಣ ಮತ್ತು ಇಂದ್ರಿಯಗಳ ಸ್ವಾಮಿಯಾಗಿರುವೆ. ನೀನೇ ಸರ್ವಶಕ್ತನಾದ ಕಾಲಸ್ವರೂಪನೂ, ಸರ್ವವ್ಯಾಪಕನೂ, ಅವಿನಾಶಿಯೂ, ಈಶ್ವರನೂ ಆಗಿರುವೆ. ॥ ೩೦ ॥ ನೀನೇ ಮಹತ್ತತ್ತ್ವವೂ, ಸತ್ತ್ವ-ರಜಸ್ತಮೋ ಗುಣಮಯವಾದ ಅತ್ಯಂತ ಸೂಕ್ಷ್ಮ ಪ್ರಕೃತಿಯೂ ಆಗಿರುವೆ. ನೀನೇ ಸಮಸ್ತ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಕರ್ಮ, ಭಾವ, ಧರ್ಮ ಮತ್ತು ಸತ್ತೆಯನ್ನು ತಿಳಿಯುವ ಎಲ್ಲರ ಸಾಕ್ಷಿಯಾದ ಪರಮಾತ್ಮನಾಗಿರುವೆ. ॥ ೩೧ ॥ ವೃತ್ತಿಗಳಿಂದ ಗ್ರಹಿಸಲ್ಪಡುವ ಪ್ರಕೃತಿಯ ಗುಣಗಳಿಂದ ಮತ್ತು ವಿಕಾರಗಳಿಂದ ನೀನು ಗ್ರಹಿಸಲ್ಪಡತಕ್ಕವನಲ್ಲ, ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಆವರಣಗಳಿಂದ ಮುಚ್ಚಲ್ಪಟ್ಟ ಯಾವನು ತಾನೇ ನಿನ್ನನ್ನು ತಿಳಿಯಬಲ್ಲನು ? ಏಕೆಂದರೆ, ನೀನಾದರೋ ಆ ಶರೀರಗಳು ಉಂಟಾಗುವ ಮೊದಲೇ ಸ್ವಪ್ರಕಾಶನಾಗಿ ಸಿದ್ಧನಾಗಿರುವೆ. ॥ ೩೨ ॥ ಸಮಸ್ತ ಪ್ರಪಂಚದ ಸೃಷ್ಟಿಕರ್ತನಾದ ಭಗವಾನ್ ವಾಸುದೇವನಿಗೆ ನಾವು ನಮಸ್ಕರಿಸುತ್ತೇವೆ. ಪ್ರಭೋ ! ನಿನ್ನ ಮೂಲಕ ಪ್ರಕಾಶಿತವಾಗುವ ಗುಣಗಳಿಂದಲೇ ನೀನು ನಿನ್ನ ಮಹಿಮೆಯನ್ನು ಅಡಗಿಸಿಟ್ಟಿರುವೆ. ಪರಬ್ರಹ್ಮ ಸ್ವರೂಪನಾದ ಶ್ರೀಕೃಷ್ಣನೇ! ನಾವು ನಿನಗೆ ನಮಸ್ಕರಿಸುತ್ತಿದ್ದೇವೆ. ॥ ೩೩ ॥ ನೀನು ಪ್ರಾಕೃತ ಶರೀರದಿಂದ ರಹಿತನಾಗಿರುವೆ. ಹೀಗಿದ್ದರೂ ನೀನು ಸಾಧಾರಣವಾಗಿ ಶರೀರಧಾರಿಗಳಿಗೆ ಶಕ್ಯವಲ್ಲದ ಪರಾಕ್ರಮಗಳನ್ನು ಪ್ರಕಟಪಡಿಸುವೆ. ಅದರಿಂದ ಹೆಚ್ಚೇನು ಅದಕ್ಕೆ ಸಮಾನವಾಗಿಯೂ ಯಾರೂ ಮಾಡಲಾಗದಿದ್ದಾಗ ಅವುಗಳ ಮೂಲಕ ಆ ಶರೀರಗಳಲ್ಲಿ ನಿನ್ನ ಅವತಾರಗಳ ಅರಿವು ಉಂಟಾಗುತ್ತದೆ. ॥ ೩೪ ॥ ಪ್ರಭೋ ! ನೀನೇ ಸಮಸ್ತ ಲೋಕಗಳ ಅಭ್ಯುದಯ ಮತ್ತು ನಿಃಶ್ರೇಯಸ್ಸಿಗಾಗಿ ಈಗ ನಿನ್ನ ಸಮಸ್ತ ಶಕ್ತಿಗಳಿಂದ ಅವತರಿಸಿರುವೆ. ನೀನು ಸಮಸ್ತ ಅಭಿಲಾಷೆಗಳನ್ನು ಪೂರ್ಣಗೊಳಿಸುವವನಾಗಿರುವೆ. ॥ ೩೫ ॥ ಪರಮ ಕಲ್ಯಾಣ ಸ್ವರೂಪನೇ ! ದಿವ್ಯ ಮಂಗಳ ವಿಗ್ರಹನೇ ! ಮಂಗಳ ಸ್ವರೂಪನೇ ! ನಿನಗೆ ನಮಸ್ಕರಿಸುತ್ತೇವೆ. ಶಾಂತಾತ್ಮನೇ ! ಯದು ಪತಿಯೇ ! ನಿನಗೆ ನಮಸ್ಕರಿಸುತ್ತೇವೆ. ॥ ೩೬ ॥ ಅನಂತನೇ ! ನಾವು ನಿನ್ನ ದಾಸಾನುದಾಸರಾಗಿದ್ದೇವೆ. ನೀನು ನಮ್ಮನ್ನು ಸ್ವೀಕರಿಸು. ಮಹರ್ಷಿಗಳಾದ ನಾರದಮುನಿಗಳ ಪರಮಾನುಗ್ರಹದಿಂದಲೇ ಅಪರಾಧಿಗಳಾಗಿದ್ದ ನಮಗೆ ನಿನ್ನ ದಿವ್ಯದರ್ಶನ ದೊರೆಯಿತು. ॥ ೩೭ ॥

ವಾಣೀ ಗುಣಾನುಕಥನೇ ಶ್ರವಣೌ ಕಥಾಯಾಂ
ಹಸ್ತೌ ಚ ಕರ್ಮಸು ಮನಸ್ತವ ಪಾದಯೋರ್ನಃ ।
ಸ್ಮೃತ್ಯಾಂ ಶಿರಸ್ತವ ನಿವಾಸಜಗತ್ಪ್ರಣಾಮೇ
ದೃಷ್ಟಿಃ ಸತಾಂ ದರ್ಶನೇಽಸ್ತು ಭವತ್ತನೂನಾಮ್ ॥ ೩೮ ॥

ಪ್ರಭೋ! ನಮ್ಮ ವಾಣಿಯು ನಿನ್ನ ಮಂಗಳ ಗುಣಗಳನ್ನು ವರ್ಣಿಸುತ್ತಿರಲಿ. ನಮ್ಮ ಕಿವಿಗಳು ನಿನ್ನ ರಸವತ್ತಾದ ಕಥಾ ಶ್ರವಣದಲ್ಲಿ ತೊಡಗಿರಲಿ. ನಮ್ಮ ಕೈಗಳು ನಿನ್ನ ಸೇವೆಯಲ್ಲಿ ಮತ್ತು ಮನಸ್ಸು ನಿನ್ನ ಚರಣಕಮಲಗಳ ಸ್ಮರಣೆಯಲ್ಲಿ ತೊಡಗಿರಲಿ. ಈ ಸಮಸ್ತ ಜಗತ್ತು ನಿನ್ನ ನಿವಾಸ ಸ್ಥಾನವಾಗಿದೆ. ಎಲ್ಲರೆದುರು ನಮ್ಮ ಶಿರಸ್ಸು ಬಾಗಿರಲಿ. ಸಂತರು ನಿನ್ನ ಪ್ರತ್ಯಕ್ಷ ಶರೀರವಾಗಿದ್ದಾರೆ. ನಮ್ಮ ಕಣ್ಣುಗಳು ಅವರನ್ನು ದರ್ಶಿಸುತ್ತಿರಲಿ. ॥ ೩೮ ॥

ಶ್ರೀಶುಕ ಉವಾಚ

ಇತ್ಥಂ ಸಂಕೀರ್ತಿತಸ್ತಾಭ್ಯಾಂ ಭಗವಾನ್ಗೋಕುಲೇಶ್ವರಃ ।
ದಾಮ್ನಾ ಚೋಲೂಖಲೇ ಬದ್ಧಃ ಪ್ರಹಸನ್ನಾಹ ಗುಹ್ಯಕೌ
॥ ೩೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ನಳಕೂಬರ-ಮಣಿಗ್ರೀವರು ಹೀಗೆ ಸ್ತೋತ್ರ ಮಾಡಲು, ಸೌಂದರ್ಯನಿಧಿಯೂ, ಮಾಧುರ್ಯನಿಧಿಯೂ, ಗೋಕುಲೇಶ್ವರನೂ ಆದ ಶ್ರೀಕೃಷ್ಣನು ಹಗ್ಗದಿಂದ ಒರಳಿಗೆ ಕಟ್ಟಿಹಾಕಲ್ಪಟ್ಟಂತೆ ನಸುನಗುತ್ತಾ ಅವರಲ್ಲಿ ಇಂತೆಂದನು. ॥ ೩೯ ॥

ಶ್ರೀಭಗವಾನುವಾಚ

ಜ್ಞಾತಂ ಮಮ ಪುರೈವೈತದ್ಋಷಿಣಾ ಕರುಣಾತ್ಮನಾ ।
ಯಚ್ಛ್ರೀಮದಾಂಧಯೋರ್ವಾಗ್ಭಿರ್ಭ್ರಂಶೋಽನುಗ್ರಹಃ ಕೃತಃ
॥ ೪೦ ॥

ಶ್ರೀಭಗವಂತನು ಹೇಳಿದನು – ಗುಹ್ಯಕರೇ! ನೀವು ಧನ ಮದದಿಂದ ಕುರುಡರಾಗಿ ಬಿಟ್ಟಿದ್ದಿರಿ. ಪರಮ ಕಾರುಣಿಕರಾದ ನಾರದಮಹರ್ಷಿಗಳು ನಿಮಗೆ ಶಾಪವನ್ನು ಕೊಟ್ಟು ನಿಮ್ಮ ಐಶ್ವರ್ಯವನ್ನು ವಿನಾಶಗೊಳಿಸಿದ್ದರು ಹಾಗೂ ನನ್ನ ಸಾನ್ನಿಧ್ಯವು ಸಿಕ್ಕಿ ಶಾಪ ಮುಕ್ತರಾಗುವಂತೆ ಅನುಗ್ರಹಿಸಿದ್ದರು ಎಂಬುದು ನಾನು ಮೊದಲಿನಿಂದಲೇ ತಿಳಿದಿದ್ದೆ. ॥ ೪೦ ॥ ಯಾರ ಬುದ್ಧಿಯು ಸಮದರ್ಶಿಯಾಗಿದೆಯೋ, ಯಾರ ಹೃದಯ ಪೂರ್ಣವಾಗಿ ನನಗೆ ಸಮರ್ಪಿತವಾಗಿದೆಯೋ ಅಂತಹ ಸತ್ಪುರುಷರ ದರ್ಶನ ಮಾತ್ರದಿಂದಲೇ – ಸೂರ್ಯನುದಯಿಸಿದೊಡನೆ ಮನುಷ್ಯರ ಕಣ್ಣುಗಳಿಂದ ಕತ್ತಲೆಯು ದೂರವಾಗುವಂತೆಯೇ – ಸಮಸ್ತವಾದ ಬಂಧನಗಳು ದೂರವಾಗುತ್ತವೆ. ॥ ೪೧ ॥ ಆದ್ದರಿಂದ ನಳಕೂಬರ-ಮಣಿಗ್ರೀವರೇ! ನೀವು ನನ್ನಲ್ಲಿ ಪರಾಯಣರಾಗಿ ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ. ನಿಮ್ಮಗಳಿಗೆ ಇಷ್ಟವಾದ ಸಂಸಾರ ಚಕ್ರದಿಂದ ಬಿಡುಗಡೆಗೊಳಿಸುವಂತಹ ಅನನ್ಯ ಭಕ್ತಿಭಾವವು ಪ್ರಾಪ್ತವಾಗಿದೆ. ॥ ೪೨ ॥

ಸಾಧೂನಾಂ ಸಮಚಿತ್ತಾನಾಂ ಸುತರಾಂ ಮಯ್ಯತಾತ್ಮನಾಮ್ ।
ದರ್ಶನಾನ್ನೋ ಭವೇದ್ಬಂಧಃ ಪುಂಸೋಽಕ್ಷ್ಣೋಃ ಸವಿತುರ್ಯಥಾ
॥ ೪೧ ॥

ತದ್ಗಚ್ಛತಂ ಮತ್ಪರಮೌ ನಲಕೂಬರಸಾದನಮ್ ।
ಸಂಜಾತೋ ಮಯಿ ಭಾವೋ ವಾಮೀಪ್ಸಿತಃ ಪರಮೋಽಭವಃ
॥ ೪೨ ॥

ಶ್ರೀಶುಕ ಉವಾಚ

ಇತ್ಯುಕ್ತೌ ತೌ ಪರಿಕ್ರಮ್ಯ ಪ್ರಣಮ್ಯ ಚ ಪುನಃ ಪುನಃ ।
ಬದ್ಧೋಲೂಖಲಮಾಮಂತ್ರ್ಯ ಜಗ್ಮತುರ್ದಿಶಮುತ್ತರಾಮ್
॥ ೪೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನು ಹೀಗೆ ಹೇಳಿದಾಗ ಅವರಿಬ್ಬರೂ ಕೃಷ್ಣನಿಗೆ ಪ್ರದಕ್ಷಿಣೆ ಬಂದು ಪದೇ-ಪದೇ ನಮಸ್ಕಾರ ಮಾಡಿದರು. ಇದಾದ ಬಳಿಕ ಕಟ್ಟಲ್ಪಟ್ಟ ಸರ್ವೇಶ್ವರನ ಅಪ್ಪಣೆಯನ್ನು ಪಡೆದು ಅವರು ಉತ್ತರ ದಿಕ್ಕಿನ ಕಡೆ ಪ್ರಯಾಣ ಮಾಡಿದರು. ॥ ೪೩ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ನಾರದಶಾಪೋ ನಾಮ ದಶಮೋಽಧ್ಯಾಯಃ॥ ೧೦ ॥

ಹನ್ನೊಂದನೆಯ ಅಧ್ಯಾಯ

ಗೋಕುಲದಿಂದ ವೃಂದಾವನಕ್ಕೆ ಹೋದುದು ಹಾಗೂ ವತ್ಸಾಸುರ ಮತ್ತು ಬಕಾಸುರರ ಉದ್ಧಾರ

ಶ್ರೀಶುಕ ಉವಾಚ

ಗೋಪಾ ನಂದಾದಯಃ ಶ್ರುತ್ವಾದ್ರುಮಯೋಃ ಪತತೋ ರವಮ್ ।
ತತ್ರಾಜಗ್ಮುಃ ಕುರುಶ್ರೇಷ್ಠ ನಿರ್ಘಾತಭಯಶಂಕಿತಾಃ
॥ ೧ ॥

ಭೂಮ್ಯಾಂ ನಿಪತಿತೌ ತತ್ರ ದದೃಶುರ್ಯಮಲಾರ್ಜುನೌ ।
ಬಭ್ರಮುಸ್ತದವಿಜ್ಞಾಯ ಲಕ್ಷ್ಯಂ ಪತನಕಾರಣಮ್
॥ ೨ ॥

ಉಲೂಖಲಂ ವಿಕರ್ಷಂತಂ ದಾಮ್ನಾ ಬದ್ಧಂ ಚ ಬಾಲಕಮ್ ।
ಕಸ್ಯೇದಂ ಕುತ ಆಶ್ಚರ್ಯಮುತ್ಪಾತ ಇತಿ ಕಾತರಾಃ
॥ ೩ ॥

ಬಾಲಾ ಊಚುರನೇನೇತಿ ತಿರ್ಯಗ್ಗತಮುಲೂಖಲಮ್ ।
ವಿಕರ್ಷತಾ ಮಧ್ಯಗೇನ ಪುರುಷಾವಪ್ಯಚಕ್ಷ್ಮಹಿ
॥ ೪ ॥

ನ ತೇ ತದುಕ್ತಂ ಜಗೃಹುರ್ನ ಘಟೇತೇತಿ ತಸ್ಯ ತತ್ ।
ಬಾಲಸ್ಯೋತ್ಪಾಟನಂ ತರ್ವೋಃ ಕೇಚಿತ್ಸಂದಿಗ್ಧಚೇತಸಃ
॥ ೫ ॥

ಕಾಲೂಖಲಂ ವಿಕರ್ಷಂತಂ ದಾಮ್ನಾ ಬದ್ಧಂ ಸ್ವಮಾತ್ಮಜಮ್ ।
ವಿಲೋಕ್ಯ ನಂದಃ ಪ್ರಹಸದ್ವದನೋ ವಿಮುಮೋಚ ಹ
॥ ೬ ॥

ಕೋಽಪಿಃ ಸ್ತೋಭಿತೋಽನೃತ್ಯದ್ಭಗವಾನ್ಬಾಲವತ್ಕ್ವಚಿತ್ ।
ಉದ್ಗಾಯತಿ ಕ್ವಚಿನ್ಮುಗ್ಧಸ್ತದ್ವಶೋ ದಾರುಯಂತ್ರವತ್
॥ ೭ ॥

ಕ್ವಚಿದಾಜ್ಞಪ್ತಃ ಪೀಠಕೋನ್ಮಾನಪಾದುಕಮ್ ।
ಪ್ರಕ್ಷೇಪಂ ಚ ಕುರುತೇ ಸ್ವಾನಾಂ ಚ ಪ್ರೀತಿಮಾವಹನ್
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕುರುಶ್ರೇಷ್ಠನೇ ! ಅರ್ಜುನ ವೃಕ್ಷಗಳು ಬಿದ್ದಾಗ ಉಂಟಾದ ಘೋರ ಶಬ್ದವನ್ನು ಗೋಕುಲದ ನಂದನೇ ಮೊದಲಾದ ಗೋಪಾಲಕರೂ ಕೇಳಿಸಿ ಕೊಂಡು, ಸಿಡಿಲೇನಾದರೂ ಬಡಿಯಿತೋ ಎಂಬ ಸಂದೇಹದಿಂದ ಅವರೆಲ್ಲರೂ ಆ ವೃಕ್ಷಗಳ ಬಳಿಗೆ ಬಂದರು. ॥ ೧ ॥ ಎರಡೂ ವೃಕ್ಷಗಳು ಬುಡಮೇಲಾಗಿ ಉರುಳಿ ಬಿದ್ದಿರುವುದನ್ನು ಅವರೆಲ್ಲರೂ ಕಂಡುರು. ಆ ವೃಕ್ಷಗಳ ಮಧ್ಯಭಾಗದಿಂದ ಸೊಂಟಕ್ಕೆ ಕಟ್ಟಿದ ಒರಳು ಕಲ್ಲನ್ನು ಕೃಷ್ಣನು ಎಳೆದುಕೊಂಡು ದಾಟಿ ಹೋಗಿರುವುದನ್ನು ನೋಡಿದರು. ಆದರೆ ವೃಕ್ಷಗಳು ಬಿದ್ದ ಕಾರಣವನ್ನು ಅವರು ತಿಳಿಯದೇ ಹೋದರು. ಈ ವೃಕ್ಷಗಳನ್ನು ಉರುಳಿಸಿದವರು ಯಾರು ? ಹೇಗೆ ಉರುಳಿದುವು ? ಇಂತಹ ಆಶ್ಚರ್ಯಕರವಾದ ಘಟನೆ ಹೇಗೆ ನಡೆಯಿತು ? ಎಂದು ಯೋಚಿಸಿ ಗಾಬರಿ ಗೊಂಡರು. ಅವರ ಬುದ್ಧಿಯು ಭ್ರಮಿಸಿತು. ॥ ೨-೩ ॥

ಅಲ್ಲಿಯೇ ಆಡುತ್ತಿದ್ದ ಕೆಲವು ಬಾಲಕರು ನಂದಾದಿಗಳಿಗೆ ಹೇಳಿದರು – ಅಯ್ಯಾ ! ಇದಾದರೋ ಇದೇ ಮುದ್ದು ಕೃಷ್ಣನ ಕೆಲಸವಾಗಿದೆ. ಇವನು ಎರಡೂ ವೃಕ್ಷಗಳ ನಡುವಿನಿಂದ ದಾಟಿ ಹೋಗುವಾಗ ಒರಳು ಅಡ್ಡಲಾಗಿ ಸಿಕ್ಕಿಹಾಕಿಕೊಂಡಿತು. ಇವನು ಅದನ್ನು ಸ್ವಲ್ಪ ಎಳೆದಾಗ ಈ ಮರಗಳು ಉರುಳಿ ಬಿದ್ದವು. ನಾವಾದರೋ ಇವುಗಳಿಂದ ಹೊರಟ ಇಬ್ಬರು ದಿವ್ಯ ಪುರುಷರನ್ನೂ ನೋಡಿದೆವು. ॥ ೪ ॥ ಆದರೆ ಗೋಪಾಲಕರು ಈ ಬಾಲಕರ ಮಾತುಗಳನ್ನು ಒಪ್ಪಿಕೊಳ್ಳಲಿಲ್ಲ. 'ಒಂದು ಪುಟ್ಟ ಬಾಲಕನು ಇಷ್ಟು ದೊಡ್ಡದಾದ ಮರಗಳನ್ನು ಕಿತ್ತು ಹಾಕುವುದು ಇಮ್ಮ ಎಂದಿಗೂ ಸಂಭವವಿಲ್ಲ' ಎಂದು ಆಡಿಕೊಂಡರು. ಕೆಲವರ ಮನಸ್ಸಿನಲ್ಲಿ ಶ್ರೀಕೃಷ್ಣನ ಮೊದಲಿನ ಲೀಲೆಗಳನ್ನು ನೆನೆದು ಇರಬಹುದೆಂದು ಸಂದೇಹಿಸಿದರು. ॥ ೫ ॥ ನಂದಗೋಪನು ನೋಡುತ್ತಾನೆ – ತನ್ನ ಪ್ರಾಣಪ್ರಿಯನಾದ ಕಂದಮ್ಮನು ಹಗ್ಗದಿಂದ ಕಟ್ಟಲ್ಪಟ್ಟು ಒರಳನ್ನು ಎಳೆದುಕೊಂಡು ಹೋಗುತ್ತಿರುವನು. ಅವನು ನಗುತ್ತಾ ಲಗುಬಗೆಯಿಂದ ಹೋಗಿ ಹಗ್ಗವನ್ನು ಬಿಡಿಸಿದನು. ॥ ೬ ॥

ಸರ್ವಶಕ್ತನಾದ ಭಗವಂತನು ಕೆಲವೊಮ್ಮೆ ಗೋಪಿಯರು ಪುಸಲಾಯಿಸಿದಾಗ ಸಾಧಾರಣ ಬಾಲಕರಂತೆ ಕುಣಿಯುತ್ತಿದ್ದನು. ಕೆಲವೊಮ್ಮೆ ಮುಗ್ಧಬಾಲಕನಂತೆ ಹಾಡತೊಡಗುವನು. ಅವನು ಅವರ ಕೈಗೊಂಬೆಯಾಗಿ ಪೂರ್ಣವಾಗಿ ಅವರಿಗೆ ಅಧೀನನಾಗಿ ಬಿಟ್ಟಿದ್ದನು. ॥ ೭ ॥ ಕೆಲವೊಮ್ಮೆ ಅವರ ಆಜ್ಞೆಯಂತೆ ಮಣೆಗಳನ್ನು, ಪಾತ್ರೆಗಳನ್ನೂ ಪಾದುಕೆಗಳನ್ನೂ ಹೊತ್ತು ತರುತ್ತಿದ್ದನು. ಕೆಲವೊಮ್ಮೆ ತನ್ನ ಪ್ರೇಮೀ ಭಕ್ತರಿಗೆ (ಗೋಪಿಯರನ್ನು) ಸಂತೋಷವನ್ನು ಉಂಟುಮಾಡಲಿಕ್ಕಾಗಿ ಪೈಲ್ವಾನರಂತೆ ಭುಜಗಳನ್ನು ತಟ್ಟಿಕೊಳ್ಳುತ್ತಾ ಮೇಲೆತ್ತಿ ಹಿಡಿಯುವನು. ॥ ೮ ॥

ದರ್ಶಯಂಸ್ತದ್ವಿದಾಂ ಲೋಕ ಆತ್ಮನೋ ಭೃತ್ಯವಶ್ಯತಾಮ್ ।
ವ್ರಜಸ್ಯೋವಾಹ ವೈ ಹರ್ಷಂ ಭಗವಾನ್ಬಾಲಚೇಷ್ಟಿತೈಃ
॥ ೯ ॥

ಹೀಗೆ ಸರ್ವಶಕ್ತಿಮಂತನಾದ ಭಗವಂತನು ತನ್ನ ಬಾಲಲೀಲೆಗಳಿಂದ ವ್ರಜವಾಸಿಗಳನ್ನು ಸಂತೋಷಪಡಿಸುತ್ತಾ, ಭಗವಂತನೆಂಬ ರಹಸ್ಯವನ್ನು ತಿಳಿದವರಿಗೆ ತಾನು ಭಕ್ತಪರಾಧೀನನೆಂಬುದನ್ನು ಪ್ರಕಟಪಡಿಸುತ್ತಿದ್ದನು. ॥ ೯ ॥

ಕ್ರೀಣೇಹಿ ಭೋಃ ಫಲಾನೀತಿ ಶ್ರುತ್ವಾ ಸತ್ವರಮಚ್ಯುತಃ ।
ಫಲಾರ್ಥೀ ಧಾನ್ಯಮಾದಾಯ ಯಯೌ ಸರ್ವಫಲಪ್ರದಃ
॥ ೧೦ ॥

ಒಂದು ದಿನ ಹಣ್ಣುಮಾರುವವಳೊಬ್ಬಳು ಬಂದು 'ಹಣ್ಣು ಬಂದಿದೆ! ಹಣ್ಣು ತೆಗೆದುಕೊಳ್ಳಿ' ಎಂದು ಕೂಗಿಕೊಂಡಳು. ಇದನ್ನು ಕೇಳುತ್ತಲೇ ಸಮಸ್ತ ಕರ್ಮ ಮತ್ತು ಉಪಾಸನೆಗಳ ಫಲವನ್ನು ನೀಡುವಂತಹ ಭಗವಂತನಾದ ಅಚ್ಯುತನು ಹಣ್ಣುಗಳನ್ನು ಕೊಂಡುಕೊಳ್ಳಲು ತನ್ನ ಪುಟ್ಟದಾದ ಬೊಗಸೆಯಲ್ಲಿ ಧಾನ್ಯವನ್ನು ಎತ್ತಿಕೊಂಡು ಓಡಿ ಬಂದನು. ॥ ೧೦ ॥ ಅವನ ಬೊಗಸೆಯಿಂದ ಧಾನ್ಯವಾದರೋ ದಾರಿಯಲ್ಲೇ ಚೆಲ್ಲಿ ಹೋಗಿತ್ತು. ಆದರೆ ಹಣ್ಣು ಮಾರುವವಳು ಅವನ ಎರಡೂ ಕೈತುಂಬಾ ಹಣ್ಣುಗಳನ್ನು ಕೊಟ್ಟಳು. ಇತ್ತ ಭಗವಂತನೂ ಕೂಡ ಆಕೆಯ ಹಣ್ಣುಗಳನ್ನು ತುಂಬುವ ಬುಟ್ಟಿಯನ್ನು ನವರತ್ನಗಳಿಂದ ತುಂಬಿಬಿಟ್ಟನು. ॥ ೧೧ ॥

ಫಲವಿಕ್ರಯಿಣೀ ತಸ್ಯ ಚ್ಯುತಧಾನ್ಯಂ ಕರದ್ವಯಮ್ ।
ಫಲೈರಪೂರಯದ್ರತ್ನೈಃ ಫಲಭಾಂಡಮಪೂರಿ ಚ
॥ ೧೧ ॥

ಸರಿತ್ತೀರಗತಂ ಕೃಷ್ಣಂ ಭಗ್ನಾರ್ಜುನಮಥಾಹ್ವಯತ್ ।
ರಾಮಂ ಚ ರೋಹಿಣೀ ದೇವೀ ಕ್ರೀಡಂತಂ ಬಾಲಕೈರ್ವೃತಮ್
॥ ೧೨ ॥

ಅನಂತರ ಒಂದು ದಿನ ಯಮಳಾರ್ಜುನ ವೃಕ್ಷವನ್ನು ಮುರಿದಿರುವ ಶ್ರೀಕೃಷ್ಣ ಮತ್ತು ಬಲರಾಮರು ಗೊಲ್ಲ ಬಾಲಕರೊಂದಿಗೆ ಆಡುತ್ತಾ-ಆಡುತ್ತಾ ಯಮುನಾ ನದಿಯ ತೀರಕ್ಕೆ ಹೋದರು ಹಾಗೂ ಆಟದಲ್ಲಿ ಮೈಮರೆತರು. ಆಗ ರೋಹಿಣಿದೇವಿಯು ಅವರಿಬ್ಬರನ್ನೂ ಕರೆಯುತ್ತಾ ಓ ಕೃಷ್ಣಾ! ಓ ಬಲರಾಮಾ! ಬೇಗನೇ ಬನ್ನಿ ಇನ್ನು ಆಟ ಸಾಕು. ॥ ೧೨ ॥

ನೋಪೇಯಾತಾಂ ಯದಾऽऽಹೂತೌ ಕ್ರೀಡಾಸಂಗೇನ ಪುತ್ರಕೌ ।
ಯಶೋದಾಂ ಪ್ರೇಷಯಾಮಾಸ ರೋಹಿಣೀ ಪುತ್ರವತ್ಸಲಾಮ್
॥ ೧೩ ॥

ಆದರೆ ರೋಹಿಣಿಯು ಎಷ್ಟು ಕರೆದರೂ ಬರಲಿಲ್ಲ, ಕಾರಣ ಅವರಿಬ್ಬರೂ ಆಟದಲ್ಲಿ ತನ್ಮಯರಾಗಿದ್ದರು. ನಾನಾ ರೀತಿಯಿಂದ ಕರೆದಾಗಲೂ ಬಾಲಕರು ಬಾರದಿದ್ದಾಗ ರೋಹಿಣಿಯು ಪುತ್ರವತ್ಸಲೆಯಾದ ಯಶೋದಾದೇವಿಯನ್ನು ಮಕ್ಕಳನ್ನು ಕರೆತರಲು ಕಳಿಸಿದಳು. ॥ ೧೩ ॥ ಶ್ರೀಕೃಷ್ಣ- ಬಲರಾಮರು ಗೋಪಾಲರೊಡನೆ ಎಷ್ಟೋ ಹೊತ್ತಿನಿಂದ ಆಟವಾಡುತ್ತಿದ್ದರು. ಯಶೋದೆಯು ಹೋಗಿ ಅವರನ್ನು ಕರೆದಳು. ಆಗ ಪುತ್ರನಲ್ಲಿದ್ದ ಅತಿಶಯವಾದ ಪ್ರೀತಿಯಿಂದಾಗಿ ಆಕೆಯ ಸ್ತನಗಳಿಂದ ಹಾಲು ಒಸರುತ್ತಿತ್ತು. ॥ ೧೪ ॥

ಕ್ರೀಡಂತಂ ಸಾ ಸುತಂ ಬಾಲೈರತಿವೇಲಂ ಸಹಾಗ್ರಜಮ್ ।
ಯಶೋದಾಜೋಹವೀತ್ಕೃಷ್ಣಂ ಪುತ್ರಸ್ನೇಹಸ್ನುತಸ್ತನೀ
॥ ೧೪ ॥

ಕೃಷ್ಣ ಕೃಷ್ಣಾರವಿಂದಾಕ್ಷ ತಾತ ಏಹಿ ಸ್ತನಂ ಪಿಬ ।
ಅಲಂ ವಿಹಾರೈಃ ಕ್ಷುತ್ಕ್ಷಾಮಃ ಕ್ರೀಡಾಶ್ರಾಂತೋऽಸಿ ಪುತ್ರಕ
॥ ೧೫ ॥

ಯಶೋದೆಯು ಕೃಷ್ಣನನ್ನು ಗಟ್ಟಿಯಾಗಿ ಕೂಗುತ್ತಾ – ಓ ಕೃಷ್ಣಾ! ನನ್ನ ಮುದ್ದು ಕಂದಮ್ಮ! ಮೋಹನಕೃಷ್ಣ! ಅರವಿಂದಾಕ್ಷನೇ! ಮಗು! ಚಿನ್ನ! ಬೇಗ ಬಾರೋ! ಸ್ತನ್ಯಪಾನ ಮಾಡು. ಇನ್ನಾದರೂ ನಿನ್ನ ಆಟಗಳನ್ನು ಸಾಕುಮಾಡು, ನೋಡಿಲ್ಲಿ! ಆಟವಾಡಿ ದಣಿದಿರಬಹುದು. ಬೇಗ ಬಾರೋ! ॥ ೧೫ ॥

ಹೇ ರಾಮಾಗಚ್ಛ ತಾತಾಶು ಸಾನುಜಃ ಕುಲನಂದನ ।
ಪ್ರಾತರೇವ ಕೃತಾಹಾರಸ್ತದ್ಭವಾನ್ಭೋಕ್ತುಮರ್ಹತಿ
॥ ೧೬ ॥

ಮುದ್ದುಕಂದ ರಾಮಾ! ನೀನೂ ಬೇಗ ಬಾ. ಯದುಕುಲಕ್ಕೆ ಆನಂದವನ್ನುಂಟು ಮಾಡುವವನೇ! ತಮ್ಮನನ್ನು ಕರೆದುಕೊಂಡು ಬೇಗನೇ ಬಂದು ಬಿಡು. ಇಂದು ನೀವು ಬೆಳಿಗ್ಗೆ ಬೇಗ ಊಟಮಾಡಿದ್ದೀರಿ. ಈಗ ನಿಮಗೆ ಹಸಿವಾಗಿರಬಹುದು. ಏನಾದರೂ ತಿಂದುಕೊಳ್ಳಿ.॥ ೧೬ ॥

ಪ್ರತೀಕ್ಷತೇ ತ್ವಾಂ ದಾಶಾರ್ಹ ಭೋಕ್ಷ್ಯಮಾಣೋ ವ್ರಜಾಧಿಪಃ ।
ಏಹ್ಯಾವಯೋಃ ಪ್ರಿಯಂ ಧೇಹಿ ಸ್ವಗೃಹಾನ್ಯಾತ ಬಾಲಕಾಃ
॥ ೧೭ ॥

ದಾಶಾರ್ಹಕುಲತಿಲಕನೇ! ವ್ರಜರಾಜರಾದ ನಂದಗೋಪರು ಊಟಮಾಡಲು ನಿಮಗಾಗಿ ಕಾಯುತ್ತಿದ್ದಾರೆ. ಬೇಗನೇ ಬಂದು ನಮ್ಮಿಬ್ಬರನ್ನೂ ಸಂತೋಷಪಡಿಸಿರಿ. ಗೋಪಬಾಲಕರೇ! ನೀವೂ ನಿಮ್ಮ-ನಿಮ್ಮ ಮನೆಗಳಿಗೆ ಹೋಗಿರಿ. ॥ ೧೭ ॥

ಧೂಲಿಧೂಸರಿತಾಂಗಸ್ತ್ವಂ ಪುತ್ರ ಮಜ್ಜನಮಾವಹ ।
ಜನ್ಮರ್ಕ್ಷಮದ್ಯ ಭವತೋ ವಿಪ್ರೇಭ್ಯೋ ದೇಹಿ ಗಾಃ ಶುಚಿಃ
॥ ೧೮ ॥

ಪಶ್ಯ ಪಶ್ಯ ವಯಸ್ಯಾಂಸ್ತೇ ಮಾತೃಮೃಷ್ಟಾನ್ಸ್ವಲಂಕೃತಾನ್ ।
ತ್ವಂ ಚ ಸ್ನಾತಃ ಕೃತಾಹಾರೋ ವಿಹರಸ್ವ ಸ್ವಲಂಕೃತಃ
॥ ೧೯ ॥

ಇತ್ಥಂ ಯಶೋದಾ ತಮಶೇಷಶೇಖರಂ
ಮತ್ವಾ ಸುತಂ ಸ್ನೇಹನಿಬದ್ಧಧೀರ್ನೃಪ ।
ಹಸ್ತೇ ಗೃಹೀತ್ವಾ ಸಹರಾಮಮಚ್ಯುತಂ
ನೀತ್ವಾ ಸ್ವವಾಟಂ ಕೃತವತ್ಯಘೋದಯಮ್ ॥ ೨೦ ॥

ಗೋಪವೃದ್ಧಾ ಮಹೋತ್ಪಾತಾನನುಭೂಯ ಬೃಹದ್ವನೇ ।
ನಂದಾದಯಃ ಸಮಾಗಮ್ಯ ವ್ರಜಕಾರ್ಯಮಮಂತ್ರಯನ್
॥ ೨೧ ॥

ತತ್ರೋಪನಂದನಾಮಾऽऽಹ ಗೋಪೋ ಜ್ಞಾನವಯೋಽಧಿಕಃ ।
ದೇಶಕಾಲಾರ್ಥತತ್ತ್ವಜ್ಞಃ ಪ್ರಿಯಕೃದ್ರಾಮಕೃಷ್ಣಯೋಃ
॥ ೨೨ ॥

ಉತ್ಪಾತವ್ಯಮಿತೋऽಸ್ಮಾಭಿರ್ಗೋಕುಲಸ್ಯ ಹಿತೈಷಿಭಿಃ ।
ಅಯಾಂತ್ಯತ್ರ ಮಹೋತ್ಪಾತಾ ಬಾಲಾನಾಂ ನಾಶಹೇತವಃ
॥ ೨೩ ॥

ಮುಕ್ತಃ ಕಥಂಚಿದ್ರಾಕ್ಷಸ್ಯಾ ಬಾಲಘ್ನ್ಯಾ ಬಾಲಕೋ ಹ್ಯಸೌ ।
ತದೇರನುಗ್ರಹಾನ್ನೂನಮನಶ್ಚೋಪರಿ ನಾಪತತ್
॥ ೨೪ ॥

ಚಕ್ರವಾತೇನ ನೀತೋऽಯಂ ದೈತ್ಯೇನ ವಿಪದಂ ವಿಯತ್ ।
ಶಿಲಾಯಾಂ ಪತಿತಸ್ತತ್ರ ಪರಿತ್ರಾತಃ ಸುರೇಶ್ವರೈಃ
॥ ೨೫ ॥

ಮಾಸ್ಮ ಮ್ರಿಯೇತ ದ್ರುಮಯೋರಂತರಂ ಪ್ರಾಪ್ಯ ಬಾಲಕಃ ।
ಕಾಲೇನ ಮೃತಮೋ ವಾಪಿ ತದಪ್ಯಚ್ಯುತರಕ್ಷಣಮ್
॥ ೨೬ ॥

ಮಗೂ ! ನೋಡಿರಲ್ಲ, ನಿನ್ನ ಮೈಗೆ ಧೂಳೆಲ್ಲ ಮೆತ್ತಿಕೊಂಡಿದೆ. ಬಾ, ಬೇಗನೇ ಸ್ನಾನಮಾಡಿಕೋ. ಇಂದು ನಿನ್ನ ಜನ್ಮ ನಕ್ಷತ್ರವಾಗಿದೆ. ಶುಚಿರ್ಭೂತನಾಗಿ ಬ್ರಾಹ್ಮಣರಿಗೆ ಗೋದಾನವನ್ನು ಮಾಡು. ॥ ೧೮ ॥ ಅದೋ ನಿನ್ನ ಜೊತೆಯವರನ್ನು ನೋಡು. ಅವರೆಲ್ಲರನ್ನು ಅವರ ತಾಯಂದಿರು ಸ್ನಾನಮಾಡಿಸಿ ಒಳ್ಳೆಯ ಆಂದವಾದ ಉಡಿಗೆ ತೊಡಿಗೆಗಳಿಂದ ಶೃಂಗರಿಸಿರುವರು. ಈಗ ನೀನೂ ಸ್ನಾನಮಾಡಿಸಿಕೊಂಡು, ಒಳ್ಳೆಯ ಬಟ್ಟೆಗಳನ್ನು ಧರಿಸಿಕೊಂಡು, ಉಂಡು-ತಿಂದು ಮತ್ತೆ ಆಡುವೆಯಂತೆ. ॥ ೧೯ ॥ ಪರೀಕ್ಷತನೇ ! ಯಶೋದೆಯ ಮನ-ಪ್ರಾಣಗಳು ಪುತ್ರಪ್ರೇಮದಿಂದ ಬಂಧಿಸಲ್ಪಟ್ಟಿದ್ದವು. ಅವಳು ಚರಾಚರ ಜಗತ್ತಿನ ಶಿರೋಮಣಿ ಭಗವಂತನನ್ನು ತನ್ನ ಪುತ್ರನೆಂದೇ ತಿಳಿಯುತ್ತಿದ್ದಳು. ಹೀಗೆ ಕರೆದು ಒಂದು ಕೈಯಿಂದ ಬಲರಾಮನನ್ನು ಇನ್ನೊಂದು ಕೈಯಿಂದ ಕೃಷ್ಣನನ್ನೂ ಹಿಡಿದುಕೊಂಡು ಮನೆಗೆ ನಡೆದಳು. ಬಳಿಕ ಅವರಿಗೆ ಸ್ನಾನಾದಿಗಳನ್ನು ಮಾಡಿಸಿ, ಜನ್ಮೋತ್ಸವಕ್ಕೆ ಸಂಬಂಧಪಟ್ಟ ಮಂಗಳ ಕಾರ್ಯಗಳನ್ನು ಅತ್ಯಂತ ಪ್ರೀತಿಯಿಂದ ನೆರವೇರಿಸಿದಳು. ॥ ೨೦ ॥

ಗೋಕುಲದಲ್ಲಿ ಒಂದಿಲ್ಲೊಂದು ಉತ್ಪಾತಗಳು ನಡೆಯುತ್ತಿರುವುದನ್ನು ನಂದಗೋಪನೇ ಮೊದಲಾದ ವೃದ್ಧರಾದಗೋಪರು ಗಮನಿಸಿದಾಗ, ಅವರೆಲ್ಲರೂ ಸೇರಿ - 'ಈಗ ವ್ರಜವಾಸಿಗಳು ಏನು ಮಾಡಬೇಕು ?' ಎಂದು ಈ ವಿಷಯದ ಕುರಿತು ಯೋಚಿಸ ತೊಡಗಿದರು. ॥ ೨೧ ॥ ಅವರಲ್ಲಿ ಉಪನಂದನೆಂಬ ವಯೋವೃದ್ಧನೂ, ಜ್ಞಾನವೃದ್ಧನೂ ಆದ ಓರ್ವ ಗೋಪನಿದ್ದನು. ಯಾವ ಸಮಯದಲ್ಲಿ ಯಾರೊಂದಿಗೆ ಹೇಗೆ ವ್ಯವಹರಿಸಬೇಕೆಂಬ ಅರಿವು ಅವನಿಗೆ ಚೆನ್ನಾಗಿತ್ತು. ಜೊತೆಗೆ - 'ಬಲರಾಮ-ಕೃಷ್ಣರು ಸುಖವಾಗಿ ಇರಬೇಕು, ಅವರಿಗೆ ಯಾವುದೇ ಆಪತ್ತು ಬರಬಾರದೆಂದು ಬಯಸುತ್ತಿದ್ದನು. ಅವನೆಂದನು - ॥ ೨೨ ॥ ಬಂಧುಗಳೆ ! ನಿಮಗೆ ತಿಳಿದಿರುವಂತೆ ಬಾಲಕರ ವಿನಾಶಕ್ಕೆ ಕಾರಣವಾದ ಉತ್ಪಾತಗಳು ಇಲ್ಲಿ ಆಗಿಂದಾಗ್ಗೆ ನಡೆಯುತ್ತಲೇ ಇವೆ. ಆದುದರಿಂದ ಗೋಕುಲಕ್ಕೂ, ಗೋಪಾಲರಿಗೂ ಹಿತವನ್ನು ಬಯಸುವೆಯಾದರೆ ನಾವು ಇಲ್ಲಿಂದ ಬೆರೆಲ್ಲಿಗಾದರೂ ಹೋಗಬೇಕು. ॥ ೨೩ ॥ ಈ ನಮ್ಮ ನಂದಗೋಪನ ಮಗನಾದ ಶ್ರೀಕೃಷ್ಣನು ಬಾಲಹಂತಕಳಾದ ಪೂತನಾ ರಾಕ್ಷಸಿಯಿಂದ ದೈವವಶಾತ್ ಉಳಿದುಕೊಂಡನು. ಹರಿಯ ಅನುಗ್ರಹದಿಂದಲೇ ಸಾಮಗ್ರಿಗಳು ತುಂಬಿದ್ದ ಗಾಡಿಯು ತಲೆಕೆಳಗಾಗಿ ಬಿದ್ದರೂ ಈ ಬಾಲಕೃಷ್ಣನ ಮೇಲೆ ಬೀಳಲಿಲ್ಲ.॥ ೨೪ ॥ ಸುಂಟರಗಾಳಿಯಾಗಿ ಬಂದ ತೃಣಾವರ್ತನು ಈ ಮುದ್ದು ಕಂದನನ್ನು ಅಂತರಿಕ್ಷಕ್ಕೆ ಹಾರಿಸಿಕೊಂಡು ಹೋಗಿ ಭಾರೀ ವಿಪತ್ತನ್ನೇ ತಂದೊಡ್ಡಿದನು. ಆದರೆ ಆಗಸದಿಂದ ದೈತ್ಯನೊಂದಿಗೆ ಬಂಡೆಯ ಮೇಲೆ ಬಿದ್ದಾಗಲೂ ಸುರೇಶ್ವರನ ಪರಮಾನುಗ್ರಹದಿಂದ ಬಾಲಕನು ಬದುಕುಳಿದನು. ॥ ೨೫ ॥ ಜೋಡೀ ಅತ್ತಿಮರಗಳು ಉರುಳಿದಾಗ ಅವುಗಳ ಮಧ್ಯದಲ್ಲಿಯೇ ಇದ್ದರೂ ಇವನು ಹಾಗೂ ಇತರ ಬಾಲಕರು ಸಾಯಲಿಲ್ಲ. ಆಗಲೂ ಭಗವಾನ್ ಅಚ್ಯುತನೇ ಇವನನ್ನು ರಕ್ಷಿಸಿದನೆಂದೇ ತಿಳಿಯಬೇಕು. ॥ ೨೬ ॥

ಯಾವದೌತ್ಪಾತಿಕೋಽರಿಷ್ಟೋ ವ್ರಜಂ ನಾಭಿಭವೇದಿತಃ ।
ತಾವದ್ಬಾಲಾನುಪಾದಾಯ ಯಾಸ್ಯಾಮೋಽನ್ಯತ್ರ ಸಾನುಗಾಃ
॥ ೨೭ ॥

ವನಂ ವೃಂದಾವನಂ ನಾಮ ಪಶವ್ಯಂ ನವಕಾನನಮ್ ।
ಗೋಪಗೋಪೀಗವಾಂ ಸೇವ್ಯಂ ಪುಣ್ಯಾದ್ರಿತೃಣವೀರುಧಮ್
॥ ೨೮ ॥

ತತ್ತತ್ರಾದ್ಯೈವ ಯಾಸ್ಯಾಮಃ ಶಕಟಾನ್ಯುಂಕ್ತ ಮಾ ಚಿರಮ್ ।
ಗೋಧನಾನ್ಯಗ್ರತೋ ಯಾಂತು ಭಮತಾಂ ಯದಿ ರೋಚತೇ
॥ ೨೯ ॥

ತಚ್ಚುತ್ವೈಕಧಿಯೋ ಗೋಪಾಃ ಸಾಧು ಸಾಧ್ವಿತಿ ವಾದಿನಃ ।
ವ್ರಜಾನ್ವ್ಯಾನ್ಸ್ವಾನ್ ಸಮಾಯುಜ್ಯ ಯಯೂ ರೂಢಪರಿಚ್ಛದಾಃ
॥ ೩೦ ॥

ವೃದ್ಧಾನ್ಬಾಲಾನ್ ಸ್ತ್ರಿಯೋ ರಾಜನ್ಸರ್ವೋಪಕರಣಾನಿ ಚ ।
ಅನಡ್ವಾಹೋಽಪ್ಯ ಗೋಪಾಲಾ ಯತ್ತಾ ಆತ್ತಶರಾಸನಾಃ
॥ ೩೧ ॥

ಗೋಧನಾನಿ ಪುರಸ್ಕೃತ್ಯ ಶೃಂಗಾಣ್ಯಾಪೂರ್ಯ ಸರ್ವತಃ ।
ತೂರ್ಯಘೋಷೇಣ ಮಹತಾ ಯಯುಃ ಸಹಪುರೋಹಿತಾಃ
॥ ೩೨ ॥

ಗೋಪ್ಯೋ ರೂಢರಥಾ ನೂತ್ನಕುಚಕುಂಕುಮಕಾಂತಯಃ ।
ಕೃಷ್ಣಲೀಲಾ ಜಗುಃ ಪ್ರೀತಾ ನಿಷ್ಕಕಂಠ್ಯಃ ಸುವಾಸಸಃ
॥ ೩೩ ॥

ತಥಾ ಯಶೋದಾರೋಹಿಣ್ಯಾವೇಕಂ ಶಕಟಮಾಸ್ಥಿತೇ ।
ರೇಜತುಃ ಕೃಷ್ಣರಾಮಾಭ್ಯಾಂ ತತ್ಕಥಾಶ್ರವಣೋತ್ಸುಕೇ
॥ ೩೪ ॥

ವೃಂದಾವನಂ ಸಂಪ್ರವಿಶ್ಯ ಸರ್ವಕಾಲಸುಖಾವಹಮ್ ।
ತತ್ರ ಚಕ್ರುರ್ವ್ರಜಾವಾಸಂ ಶಕಟೈರರ್ಧಚಂದ್ರವತ್
॥ ೩೫ ॥

ಅದಕ್ಕಾಗಿ ಯಾವುದೇ ದೊಡ್ಡ ಅನಿಷ್ಟವು ನಮಗೆ ಮತ್ತು ನಮ್ಮ ಈ ವ್ರಜಕ್ಕೆ ಸಂಭವಿಸಿ ನಾಶವಾಗುವ ಮೊದಲೇ ನಾವುಗಳು ನಮ್ಮ ಮಕ್ಕಳನ್ನು ಕರಕೊಂಡು, ಅನುಯಾಯಿಗಳೊಂದಿಗೆ ಬೇರೆಲ್ಲಿಗಾದರೂ ಹೊರಟು ಹೋಗಬೇಕು. ॥ ೨೭ ॥ ನನಗೆ ತಿಳಿದಿರುವಂತೆ ಇಲ್ಲಿ ಸಮೀಪವೇ ವೃಂದಾವನ ಎಂಬ ಹಚ್ಚ ಹಸಿರಾದ ಹುಲ್ಲಿನಿಂದಲೂ, ಲತಾ-ವೃಕ್ಷಗಳಿಂದಲೂ ಕೂಡಿದ ನಿರಂತರ ನಿತ್ಯ-ನೂತನವಾದ ಒಂದು ಕಾಡು ಇದೆ. ಅಲ್ಲೊಂದು ಪವಿತ್ರವಾದ, ದೊಡ್ಡ ಪರ್ವತವೊಂದೂ ಇರುವುದು. ನಮ್ಮ ಪಶುಗಳಿಗಂತೂ ಬಹಳ ಹಿತಕರವಾಗಿದೆ. ಗೋಪ-ಗೋಪಿಯರಿಗೆ ಮತ್ತು ಹಸುಗಳಿಗೆ ಅದು ಕೇವಲ ಅನುಕೂಲದಾಯಕವಷ್ಟೇ ಅಲ್ಲ ಸೇವಿಸಲು ಯೋಗ್ಯವಾದ ಸ್ಥಾನವಾಗಿದೆ. ॥ ೨೮ ॥ ನಾನು ಹೇಳಿದುದು ನಿಮ್ಮೆಲ್ಲರಿಗೆ ಸರಿಯೆಂದು ಕಂಡರೆ ಇಂದೇ ನಾವೆಲ್ಲ ಅಲ್ಲಿಗೆ ಹೊರಟುಬಿಡೋಣ. ತಡಮಾಡದೆ ನಮ್ಮ ಸಂಪತ್ತಾದ ಹಸುಗಳು ಮುಂದಾಗಿ ಹೋಗಲಿ. ಬಂಡಿಗಳನ್ನು ಹೂಡಿ ಬೇಗನೆ ಹೊರಡಿರಿ. ॥ ೨೯ ॥

ಪರೀಕ್ಷಿತನೇ ! ಉಪನಂದನ ಮಾತನ್ನು ಕೇಳುತ್ತಲೇ ಗೋಪಾಲಕರೆಲ್ಲರೂ ಒಂದೇ ಮನಸ್ಸಿನಿಂದ ಒಳ್ಳೆಯದು ತುಂಬಾ ಒಳ್ಳೆಯದು ನೀನು ಹೇಳಿರುವುದು ಸರಿಯಾಗಿದೆ ಎಂದು ದನಿಗೂಡಿಸಿದರು. ಈ ವಿಷಯದಲ್ಲಿ ಯಾರಿಗೂ ಮತಭೇದವಿರಲಿಲ್ಲ. ಎಲ್ಲರೂ ತಮ್ಮ-ತಮ್ಮ ಹಸುಗಳನ್ನು ಒಂದುಗೂಡಿಸಿ ಮುಂದಿಟ್ಟುಕೊಂಡು ಮನೆಯ ಸಾಮಗ್ರಿಗಳನ್ನು ಬಂಡಿಗಳ ಮೇಲೆ ಹೇರಿ ವೃಂದಾವನದ ಕಡೆಗೆ ಹೊರಟರು. ॥ ೩೦ ॥ ಪರೀಕ್ಷಿದ್ರಾಜನೇ ! ಗೋಪಾಲಕರು ಮುದುಕರನ್ನೂ, ಮಕ್ಕಳನ್ನೂ, ಹೆಂಗಸರನ್ನೂ ಗಾಡಿಗಳ ಮೇಲೆ ಕುಳ್ಳಿರಿಸಿಕೊಂಡು ಹಲವಾರು ಬಂಡಿಗಳಲ್ಲಿ ಸಾಮಗ್ರಿಗಳನ್ನು ತುಂಬಿಕೊಂಡು ಧನುರ್ಬಾಣಗಳನ್ನು ಧರಿಸಿಕೊಂಡು ಆ ಗಾಡಿಗಳ ಹಿಂದೆ-ಹಿಂದೆಯೇ ಜಾಗರೂಕತೆಯಿಂದ ಹೋಗುತ್ತಿದ್ದರು. ॥ ೩೧ ॥ ಅವರು ಹಸು-ಕರುಗಳನ್ನು ಮುಂದೆ ಬಿಟ್ಟುಕೊಂಡು ಹಿಂದಿನಿಂದ ಬಾರಿ-ಬಾರಿಗೂ ಕೊಂಬು-ಕಹಳೆಗಳನ್ನು ಜೋರಾಗಿ ಊದುತ್ತಾ, ಪುರೋಹಿತರೊಡನೆ ಗೋಪಾಲಕರು ನಡೆದುಕೊಂಡು ಹೋಗುತ್ತಿದ್ದರು. ॥ ೩೨ ॥ ಗೋಪಿಯರು ಸುಂದರವಾದ ವಸ್ತ್ರಗಳನ್ನು ವಿವಿಧವಾದ ಚಿನ್ನದ ಒಡವೆಗಳನ್ನು ಸಿಂಗರಿಸಿಕೊಂಡು ರಥಗಳಲ್ಲಿ ಕುಳಿತುಕೊಂಡು ಸಾಗುವಾಗ ಭಗವಾನ್ ಶ್ರೀಕೃಷ್ಣನ ಬಾಲ ಲೀಲೆಗಳನ್ನು ಆನಂದವಾಗಿ ಹಾಡುತ್ತಿದ್ದರು. ॥ ೩೩ ॥ ಯಶೋದಾದೇವಿಯೂ, ರೋಹಿಣೀ ಇವರೂ ಅಂದವಾಗಿ ಅಲಂಕರಿಸಿಕೊಂಡು ತಮ್ಮ-ತಮ್ಮ ಕಂದಮ್ಮಗಳಾದ ಬಲರಾಮ, ಶ್ರೀಕೃಷ್ಣರನ್ನು ಎತ್ತಿಕೊಂಡು ಒಂದೇ ಗಾಡಿಯಲ್ಲಿ ಕುಳಿತುಕೊಂಡು ಹೋಗುತ್ತಿದ್ದರು. ಗೊಲ್ಲತಿಯರು ಹಾಡುತ್ತಿದ್ದ ಶ್ರೀಕೃಷ್ಣನ ಪರವಾದ ಗೀತೆಗಳನ್ನು ವಿಶೇಷವಾದ ಉತ್ಸಾಹದಿಂದ ಕೇಳುತ್ತಿದ್ದರು. ॥ ೩೪ ॥ ವೃಂದಾವನವು ಅತ್ಯಂತ ಸುಂದರವಾದ ವನ. ಎಲ್ಲ ಋತುಗಳಲ್ಲೂ ಅಲ್ಲಿ ಸುಖವೇ ಸುಖವು ತುಂಬಿತ್ತು. ವೃಂದಾವನವನ್ನು ಪ್ರವೇಶಿಸಿ ಗೋಪಾಲಕರು ತಮ್ಮ ಚಕ್ಕಡಿಗಳನ್ನು ಅರ್ಧಚಂದ್ರಾಕಾರ ಮಂಡಲವಾಗಿಸಿ ನಿಲ್ಲಿಸಿಕೊಂಡು, ತಮ್ಮ ಹಸು-ಕರುಗಳಿಗೆ ಯೋಗ್ಯವಾದ ಸ್ಥಳವನ್ನು ಕಲ್ಪಿಸಿಕೊಂಡರು. ॥ ೩೫ ॥

ವೃಂದಾವನಂ ಗೋವರ್ಧನಂ ಯಮುನಾಪುಲಿನಾನಿ ಚ ।
ವೀಕ್ಷ್ಯಾಸೀದುತ್ತಮಾ ಪ್ರೀತೀ ರಾಮಮಾಧವಯೋರ್ನೃಪ
॥ ೩.೬ ॥

ಏವಂ ವ್ರಜೌಕಸಾಂ ಪ್ರೀತಿಂ ಯಚ್ಛಂತೌ ಬಾಲಚೇಷ್ಟಿತೈಃ ।
ಕಲವಾಕ್ಯೈಃ ಸ್ವಕಾಲೇನ ವತ್ಸಪಾಲೌ ಬಭೂವತುಃ
॥ ೩.೭ ॥

ಅವಿದೂರೇ ವ್ರಜಭುವಃ ಸಹ ಗೋಪಾಲದಾರಕೈಃ ।
ಚಾರಯಾಮಾಸತುರ್ವತ್ಸಾನ್ನಾನಾಕ್ರೀಡಾಪರಿಚ್ಛದೌ
॥ ೩.೮ ॥

ಕ್ವಚಿದ್ವಾದಯತೋ ವೇಣುಂ ಕ್ಷೇಪಣೈಃ ಕ್ಷಿಪತಃ ಕ್ವಚಿತ್ ।
ಕ್ವಚಿತ್ಕಾಪೈಃ ಕಿಂಕಿಣೀಭಿಃ ಕ್ವಚಿತ್ಕೃತ್ರಿಮಗೋವೃಷೈಃ
॥ ೩.೯ ॥

ವೃಷಾಯಮಾಣೌ ನರ್ದಂತೌ ಯುಯುಧಾತೇ ಪರಸ್ಪರಮ್ ।
ಅನುಕೃತ್ಯ ರುತೈರ್ಜಂತೂಂಶ್ಚೇರತುಃ ಪ್ರಾಕೃತೌ ಯಥಾ
॥ ೪೦ ॥

ಕದಾಚಿದ್ಯಮುನಾತೀರೇ ವತ್ಸಾಂಶ್ಚಾರಯತೋಃ ಸ್ವಕೈಃ ।
ವಯಸ್ಯೈಃ ಕೃಷ್ಣಬಲಯೋರ್ಜಿಘಾಂಸುರ್ದೈತ್ಯ ಆಗಮತ್
॥ ೪೧ ॥

ತಂ ವತ್ಸರೂಪಿಣಂ ವೀಕ್ಷ್ಯ ವತ್ಸಯೂಥಗತಂ ಹರಿಃ ।
ದರ್ಶಯನ್ಬಲದೇವಾಯ ಶನೈರ್ಮುಗ್ಧ ಇವಾಸದತ್
॥ ೪೨ ॥

ಗೃಹೀತ್ವಾ ಪರಪಾದಾಭ್ಯಾಂ ಸಹಲಾಂಗೂಲಮಚ್ಯುತಃ ।
ಭ್ರಾಮಯಿತ್ವಾ ಕಪಿತ್ಥಾಗ್ರೇ ಪ್ರಾಹಿಣೋದ್ಗತಜೀವಿತಮ್ ।
ಸ ಕಪಿತ್ಥೈರ್ಮಹಾಕಾಯಃ ಪಾತ್ಯಮಾನೈಃ ಪಪಾತ ಹ
॥ ೪೩ ॥

ತಂ ವೀಕ್ಷ್ಯ ವಿಸ್ಮಿತಾ ಬಾಲಾಃ ಶಶಂಸುಃ ಸಾಧು ಸಾಧ್ವಿತಿ ।
ದೇವಾಶ್ಚ ಪರಿಸಂತುಷ್ಟಾ ಬಭೂವುಃ ಪುಷ್ಪವರ್ಷಿಣಃ
॥ ೪೪ ॥

ಪರೀಕ್ಷಿತನೇ ! ವೃಂದಾವನದ ಹಚ್ಚ ಹಸಿರು ವನವನ್ನೂ, ಅತ್ಯಂತ ಮನೋಹರ ಗೋವರ್ಧನ ಪರ್ವತವನ್ನೂ, ಯಮುನಾ ನದಿಯ ತೀರದಲ್ಲಿರುವ ಸುಂದರವಾದ ಮರಳರಾಶಿಗಳನ್ನು ನೋಡಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ಆನಂದದಿಂದ ಉಬ್ಬಿಹೋದರು. ॥ ೩.೬॥

ರಾಮ-ಕೃಷ್ಣರಿಬ್ಬರೂ ತಮ್ಮ ತೊದಲು ಮಾತುಗಳಿಂದ ಹಾಗೂ ಅತ್ಯಂತ ಮಧುರ ಬಾಲಲೀಲೆಗಳಿಂದ ಗೋಕುಲದಂತೆ ವೃಂದಾವನದಲ್ಲಿಯೂ ಗೋಪ-ಗೋಪಿಯರಿಗೆ ಆನಂದವನ್ನು ಉಂಟುಮಾಡುತ್ತಿದ್ದರು. ಕೆಲವೇ ದಿನಗಳಲ್ಲಿ ಅವರೂ ಕರುಗಳನ್ನು ಮೇಯಿಸಲು ತೊಡಗಿದರು. ॥ ೩.೭ ॥ ಇತರ ಗೊಲ್ಲಬಾಲಕರೊಂದಿಗೆ ಆಟವಾಡಲು ಬಹಳಷ್ಟು ಸಾಮಗ್ರಿಗಳನ್ನು ಎತ್ತಿಕೊಂಡು ಹೊರಟು, ಹಸುಗಳ ಕೊಟ್ಟಿಗೆಗಳ ಬಳಿಯಲ್ಲೇ ತಮ್ಮ ಕರುಗಳನ್ನು ಮೇಯಿಸುತ್ತಾ ಆಟವಾಡುತ್ತಿದ್ದರು. ಕೆಲವು ವೇಳೆ ರಾಮ-ಕೃಷ್ಣರು ಕೊಳಲನ್ನು ನುಡಿಸುತ್ತಿದ್ದರೆ, ಕೆಲವು ವೇಳೆ ಕವಣೆಗಳಿಂದ ಕಲ್ಲುಗಳನ್ನು ಬೀರುತ್ತಿದ್ದರು. ಕೆಲವೊಮ್ಮೆ ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಕುಣಿಯುತ್ತಿದ್ದರೆ, ಕೆಲವೊಮ್ಮೆ ತಾವೇ ಹಸು ಎತ್ತುಗಳಾಗಿ ಆಟವಾಡುತ್ತಿದ್ದರು. ॥ ೩.೯ ॥ ಕೆಲವೊಮ್ಮೆ ಆಟದಲ್ಲಿ ಹೋರಿಗಳಂತೆ ಗುಟುರು ಹಾಕುತ್ತಾ ಪರಸ್ಪರ ಕಾದಾಡುತ್ತಿದ್ದರು. ಕೆಲವೊಮ್ಮೆ ನವಿಲು, ಕೋಗಿಲೆ, ಕೋತಿ, ನರಿ, ನಾಯಿ ಮುಂತಾದ ಪಶು-ಪಕ್ಷಿಗಳ ಧ್ವನಿಗಳನ್ನು ಅಣಕವಾಡುತ್ತಿದ್ದರು. ಹೀಗೆ ಸರ್ವಶಕ್ತನಾದ ಭಗವಂತನು ಸಾಧಾರಣ ಬಾಲಕರಂತೆ ಆಟವಾಡುತ್ತಿದ್ದನು. ॥ ೪೦ ॥

ಹೀಗೆ ಇರುತ್ತಿರಲಾಗಿ ಒಂದು ದಿನ ರಾಮ-ಕೃಷ್ಣರು ತಮ್ಮ ಪ್ರಿಯ ಗೆಳೆಯರೊಂದಿಗೆ ಯಮುನಾತೀರದಲ್ಲಿ ಕರುಗಳನ್ನು ಮೇಯಿಸುತ್ತಿದ್ದಾಗ ಇವರನ್ನು ಸಂಹರಿಸುವ ದುರುದ್ದೇಶದಿಂದ ವತ್ಸಾಸುರನೆಂಬ ದೈತ್ಯನೊಬ್ಬನು ಅಲ್ಲಿಗೆ ಬಂದನು. ॥ ೪೧ ॥ ಅವನು ಕರುವಿನ ರೂಪವನ್ನು ಧರಿಸಿ ಕರುಗಳ ಗುಂಪಿನಲ್ಲಿಯೇ ಸೇರಿಕೊಂಡಿರುವುದನ್ನು ಕಂಡ ಭಗವಂತನು ಕಣ್ಸನ್ನೆಯಿಂದ ಬಲರಾಮನಿಗೆ ತೋರಿಸುತ್ತಾ, ಮೆಲ್ಲ-ಮೆಲ್ಲನೆ ಆ ವತ್ಸಾಸುರನ ಬಳಿಗೆ ಹೋದನು. ಆಗ ದೈತ್ಯನನ್ನು ಗುರುತಿಸದೆ ಆ ಸುಂದರ ಕರುವಿನಲ್ಲಿ ಮುಗ್ಧನಾದವನಂತೆ ಕೃಷ್ಣನು ತೋರಿಸಿಕೊಂಡನು. ॥ ೪೨ ॥ ಭಗವಾನ್ ಶ್ರೀಕೃಷ್ಣನು ಕರುವಾಗಿದ್ದ ಆ ಅಸುರನನ್ನು ಬಾಲದೊಂದಿಗೆ ಹಿಂದಿನ ಕಾಲುಗಳನ್ನು ಹಿಡಿದುಕೊಂಡು ಗರಗರನೆ ತಿರುಗಿಸುತ್ತಾ ಬೇಲದ ಮರಕ್ಕೆ ಅಪ್ಪಳಿಸಿದನು. ಇದರಿಂದ ಆ ದೈತ್ಯನು ಗತಪ್ರಾಣನಾಗಿ ಅನೇಕ ಮರಗಳನ್ನು ಉರುಳಿಸುತ್ತಾ ನೆಲದ ಮೇಲೆ ಸತ್ತುಬಿದ್ದನು. ॥ ೪೩ ॥ ಇದನ್ನು ನೋಡಿದ ಗೊಲ್ಲ ಬಾಲಕರಿಗೆ ಆಶ್ಚರ್ಯದ ಸೀಮೆಯೇ ಉಳಿಯಲಿಲ್ಲ. ಅವರು ಕೃಷ್ಣ! ಭಲೇ-ಭಲೆ ಎಂದು ಕೂಗುತ್ತಾ ಪ್ರಿಯ ಕೃಷ್ಣನನ್ನು ಹೊಗಳ ತೊಡಗಿದರು. ದೇವತೆಗಳೂ ಕೂಡ ಅತೀವ ಆನಂದದಿಂದ ಹೂಮಳೆಗರೆದರು. ॥ ೪೪ ॥

ತೌ ವತ್ಸಪಾಲಕೌ ಭೂತ್ವಾ ಸರ್ವಲೋಕೈಕಪಾಲಕೌ ।
ಸಪ್ರಾತರಾಶೋ ಗೋವತ್ಸಾಂಶ್ಚಾರಯಂತೌ ವಿಚೇರತುಃ
॥ ೪೫ ॥

ಸ್ವಂ ಸ್ವಂ ವತ್ಸಕುಲಂ ಸರ್ವೇ ಪಾಯಯಿಷ್ಯಂತ ಏಕದಾ ।
ಗತ್ವಾಜಲಾಶಯಾಭ್ಯಾಶಂ ಪಾಯಯಿತ್ವಾಪಪುರ್ಜಲಮ್
॥ ೪೬ ॥

ತೇ ತತ್ರ ದದೃಶುರ್ಬಾಲಾ ಮಹಾಸತ್ತ್ವಮವಸ್ಥಿತಮ್ ।
ತತ್ರಸುರ್ವಜ್ರನಿರ್ಭಿನ್ನಂ ಗಿರೇಃ ಶೃಂಗಮಿವ ಚ್ಯುತಮ್
॥ ೪೭ ॥

ಸ ವೈ ಬಕೋ ನಾಮ ಮಹಾನಸುರೋ ಬಕರೂಪಧೃಕ್ ।
ಆಗತ್ಯ ಸಹಸಾ ಕೃಷ್ಣಂ ತೀಕ್ಷ್ಣತುಂಡೋಽಗ್ರಸದ್ಬಲೀ
॥ ೪೮ ॥

ಕೃಷ್ಣಂ ಮಹಾಬಕಗ್ರಸ್ತಂ ದೃಷ್ಟ್ವಾ ರಾಮಾದಯೋಽರ್ಭಕಾಃ ।
ಬಭೂವುರಿಂದ್ರಿಯಾಣೀವ ವಿನಾ ಪ್ರಾಣಂ ವಿಚೇತಸಃ
॥ ೪೯ ॥

ತಂ ತಾಲುಮೂಲಂ ಪ್ರದಹಂತಮಗ್ನಿವದ್
ಗೋಪಾಲಸೂನುಂ ಪಿತರಂ ಜಗದ್ಗುರೋಃ ।
ಚಚ್ಛರ್ದ ಸದ್ಯೋಽತಿರುಷಾಕ್ಷತಂ ಬಕ-
ಸ್ತುಂಡೇನ ಹಂತುಂ ಪುನರಭ್ಯಪದ್ಯತ ॥ ೫೦ ॥

ತಮಾಪತಂತಂ ಸ ನಿಗೃಹ್ಯ ತುಂಡಯೋ-
ರ್ದೋರ್ಭ್ಯಾಂ ಬಕಂ ಕಂಸಸಖಿಂ ಸತಾಂ ಪತಿಃ ।
ಪಶ್ಯತ್ಸು ಬಾಲೇಷು ದದಾರ ಲೀಲಯಾ
ಮುದಾವಹೋ ವೀರಣವದ್ ದಿವೌಕಸಾಮ್ ॥ ೫೧ ॥

ತದಾ ಬಕಾರಿಂ ಸುರಲೋಕವಾಸಿನಃ
ಸಮಾಕಿರನ್ನಂದನಮಲ್ಲಿಕಾದಿಭಿಃ ।
ಸಮೀಡಿರೇ ಚಾನಕಶಂಖಿಸಂಸ್ತವೈ-
ಸ್ತದ್ವೀಕ್ಷ್ಯ ಗೋಪಾಲಸುತಾ ವಿಸಿಸ್ಮಿರೇ ॥ ೫೨ ॥

ಪರೀಕ್ಷಿತನೇ! ಸಮಸ್ತ ಲೋಕಗಳಿಗೆ ರಕ್ಷಕರಾದ ರಾಮ-ಕೃಷ್ಣರು ವತ್ಸಪಾಲಕರಾಗಿ ಬೆಳಿಗ್ಗೆ ಬೇಗನೇ ಎದ್ದು ಊಟದ ಬುತ್ತಿಯನ್ನು ಕಟ್ಟಿಕೊಂಡು ಕರುಗಳನ್ನು ಮೇಯಿಸುತ್ತಾ ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಹೋಗುತ್ತಾ ಸಂಚರಿಸುತ್ತಿದ್ದರು. ॥ ೪೫ ॥ ಹೀಗಿರುತ್ತಾ ಒಂದು ದಿನ ಎಲ್ಲ ಗೊಲ್ಲ ಬಾಲಕರು ತಮ್ಮ ಕರುಗಳ ಗುಂಪುಗಳಿಗೆ ನೀರು ಕುಡಿಸಲು ಜಲಾಶಯದ ತಟಕ್ಕೆ ಕೊಂಡು ಹೋದರು. ಅವರು ಮೊದಲಿಗೆ ಕರುಗಳಿಗೆ ನೀರು ಕುಡಿಸಿ, ತಾವೂ ನೀರು ಕುಡಿದರು. ॥ ೪೬ ॥ ಅಲ್ಲೇ ಒಂದು ಭಾರೀ ದೊಡ್ಡ ಪ್ರಾಣಿಯು ಕುಳಿತಿರುವುದನ್ನು ಗೊಲ್ಲರು ನೋಡಿದರು. ಇಂದ್ರನ ವಜ್ರದಿಂದ ತುಂಡಾದ ಯಾವುದೋ ಬೆಟ್ಟವೇ ಇಲ್ಲಿ ಬಿದ್ದಿದೆಯೋ ಎಂದು ಅನಿಸುತ್ತಿತ್ತು. ॥ ೪೭ ॥ ಗೊಲ್ಲಬಾಲಕರು ಅದನ್ನು ನೋಡಿ ಹೆದರಿ ಹೋದರು. ಅವನು ಬಕನೆಂಬ ಓರ್ವ ಮಹಾ ಅಸುರ ನಾಗಿದ್ದನು. ಅವನು ಬಕಪಕ್ಷಿಯ ರೂಪವನ್ನು ಧರಿಸಿ ಅಲ್ಲಿಗೆ ಬಂದಿದ್ದನು. ಅದಕ್ಕೆ ಅತೀತೀಕ್ಷ್ಣವಾದ ಕೊಕ್ಕು ಇತ್ತು. ಶ್ರೀಕೃಷ್ಣನನ್ನು ಕಾಣುತ್ತಲೇ ಬಲಿಷ್ಠನಾಗಿದ್ದ ಆ ಅಸುರನು (ಬಕಪಕ್ಷಿಯು) ಚೂಪಾದ ಕೊಕ್ಕಿನಿಂದ ಕೃಷ್ಣನನ್ನು ನುಂಗಿಯೇ ಬಿಟ್ಟನು. ॥ ೪೮ ॥ ಆ ಮಹಾಬಕಪಕ್ಷಿಯು ಶ್ರೀಕೃಷ್ಣನನ್ನು ನುಂಗಿದುದನ್ನು ಕಂಡಾಗ ಬಲರಾಮನೇ ಮುಂತಾದ ಗೋಪಬಾಲಕರು ಪ್ರಾಣಗಳು ಹಾರಿ ಹೋದಾಗ ಉಂಟಾಗುವ ಇಂದ್ರಿಯಗಳ ಸ್ಥಿತಿಯಂತೆ ನಿಶ್ಚೇಷ್ಟಿತ ರಾದರು. ॥ ೪೯ ॥ ಪರೀಕ್ಷಿತನೇ! ಶ್ರೀಕೃಷ್ಣನು ಲೋಕಪಿತಾಮಹ ನಾದ ಬ್ರಹ್ಮನಿಗೂ ತಂದೆಯು. ಅವನು ಲೀಲೆಯಿಂದಲೇ ಗೋಪ ಬಾಲಕನಾಗಿದ್ದನು. ಅವನು ಆ ಬಕಾಸುರನ ದವಡೆಯನ್ನು ಸೇರಿದಾಗ ಒಳಗಿನಿಂದಲೇ ಬೆಂಕಿಯಂತೆ ಸುಡಲಾರಂಭಿಸಿದನು. ಆದ್ದರಿಂದ ಆ ದೈತ್ಯನು ಕೃಷ್ಣನಿಗೆ ಯಾವ ಏಟೂ ಕೊಡಲಾರದೆ ಕೂಡಲೇ ಅವನನ್ನು ಉಗುಳಬೇಕಾಯಿತು. ಮತ್ತೆ ಅತ್ಯಂತ ಕ್ರುದ್ಧನಾದ ಆ ದಾನವನು ತನ್ನ ಹರಿತವಾದ ಕೊಕ್ಕಿನಿಂದಲೇ ಕೃಷ್ಣನನ್ನು ಘಾತಿಸಲು ಮುನ್ನುಗ್ಗಿದನು. ॥ ೫೦ ॥ ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣನು ತನ್ನ ಮೇಲೆ ರಭಸದಿಂದ ಬೀಳುತ್ತಿದ್ದ ಕಂಸನ ಮಿತ್ರನಾದ ಬಕಾಸುರನ ಕೊಕ್ಕನ್ನು ಎರಡೂ ಕೈಗಳಿಂದ ಬಲವಾಗಿ ಹಿಡಿದುಕೊಂಡು, ಗೋಪಬಾಲಕರು ನೋಡುತ್ತಿರುವಂತೆ ನೊಜೆ ಹುಲ್ಲನ್ನು ಅತಿಸುಲಭವಾಗಿ ಸೀಳಿಹಾಕುವಂತೆ ಲೀಲಾಜಾಲವಾಗಿ ಆ ಅಸುರನನ್ನು ಸೀಳಿ ಹಾಕಿದನು. ಇದರಿಂದ ದೇವತೆಗಳಿಗೆ ಬಹಳ ಆನಂದವಾಯಿತು. ॥ ೫೧ ॥ ಸಮಸ್ತ ದೇವತೆಗಳು ಭಗವಾನ್ ಶ್ರೀಕೃಷ್ಣನ ಮೇಲೆ ನಂದನವನದಲ್ಲಿ ಸಿಕ್ಕುವ ಮಲ್ಲಿಗೆ, ಜಾಜಿ, ಪುನ್ನಾಗ, ಪಾರಿಜಾತ ಮುಂತಾದ ಹೂವುಗಳ ಮಳೆಗರೆದರು. ವಿಜಯಸೂಚಕವಾದ ಭೇರಿ-ಮೃದಂಗ, ಶಂಖಿ ಮೊದಲಾದ ವಾದ್ಯಗಳನ್ನು ಮೊಳಗಿಸಿ, ಸ್ತೋತ್ರಗಳ ಮೂಲಕ ಅವನನ್ನು ಕೊಂಡಾಡತೊಡಗಿದರು. ಇದೆಲ್ಲವನ್ನೂ ನೋಡಿದ ಗೊಲ್ಲಬಾಲಕ ರೆಲ್ಲರೂ ಆಶ್ಚರ್ಯಚಕಿತರಾದರು. ॥ ೫೨ ॥ ಶ್ರೀಕೃಷ್ಣನು ಬಕ ಪಕ್ಷಿಯ ಬಾಯಿಂದ ಹೊರಟು ತಮ್ಮ ಬಳಿಗೆ ಬಂದುದನ್ನು ನೋಡಿದಾಗ ಬಲರಾಮನೇ ಮುಂತಾದ ಗೋಪಬಾಲಕರು ಪ್ರಾಣಸಂಚಾರವಾದಾಗ ಇಂದ್ರಿಯಗಳು ಸಚೇತನವಾಗುವಂತೆ ಆನಂದತುಂದಿಲರಾದರು. ಎಲ್ಲರೂ ಭಗವಂತನನ್ನು ಪ್ರತ್ಯೇಕ

ಮುಕ್ತಂ ಬಕಾಸ್ಯಾದುಪಲಭ್ಯ ಬಾಲಕಾ
ರಾಮಾದಯಃ ಪ್ರಾಣಮಿವೇಂದ್ರಿಯೋ ಗಣಃ ।
ಸ್ಥಾನಾಗತಂ ತಂ ಪರಿರಭ್ಯ ನಿರ್ವೃತಾಃ
ಪ್ರಣೇಯ ವತ್ಸಾನ್ಪ್ರಜಮೇತ್ಯ ತಜ್ಜಗುಃ ॥ ೫೫ ॥

ಪರೀಕ್ಷಿತನೆ! ಬಕಾಸುರನ ವಧೆಯ ಘಟನೆಯನ್ನು ಕೇಳಿ ಎಲ್ಲ ಗೋಪ-ಗೋಪಿಯರು ಆಶ್ಚರ್ಯಚಕಿತರಾದರು. ಮುದ್ದುಕೃಷ್ಣನು ಸಾಕ್ಷಾತ್ ಮೃತ್ಯುವಿನ ಮುಖದಿಂದ ಬದುಕಿ ಬಂದಂತೆ ಅವರಿಗನ್ನಿಸಿತು. ಅವರೆಲ್ಲರೂ ಪ್ರೇಮಾದರಗಳಿಂದಲೂ, ಉತ್ಸುಕತೆಯಿಂದಲೂ ಶ್ರೀಕೃಷ್ಣನನ್ನು ನೋಡತೊಡಗಿದರು. ಅವರಿಗೆ ಆ ಸುಂದರಮೂರ್ತಿಯನ್ನು ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ. ॥ ೫೫ ॥ ಅವರು ತಮ್ಮ-ತಮ್ಮಲ್ಲಿ ಹೀಗೆ ಮಾತನಾಡಿಕೊಂಡರು ಅಬ್ಬಾ! ಎಂತಹ ಆಶ್ಚರ್ಯದ ಮಾತಿದು? ಈ ಮುದ್ದು ಬಾಲಕನು ಹಲವು ಬಾರಿ ಮೃತ್ಯುಮುಖನಾಗಿದ್ದನು. ಆದರೆ ಇವನಿಗೆ ಅನಿಷ್ಟವನ್ನು ಬಗೆದವರಿಗೇ ಕೇಡಾಯಿತು. ಏಕೆಂದರೆ, ಅವರು ಮೊದಲಿನಿಂದಲೇ ಇತರರಿಗೆ ಅನಿಷ್ಟವನ್ನು ಮಾಡಿದ್ದರು. ॥ ೫೫ ॥ ಇದೆಲ್ಲವೂ ನಡೆದರೂ ಕೂಡ ಆ ಭಯಂಕರ ಅಸುರರು ಇವನನ್ನು ಏನೂ ಮಾಡಲಾರದೆ ಹೋದರು. ಇವನನ್ನು ಕೊಲ್ಲಲೆಂದು ಬರುತ್ತಾರೆ, ಆದರೆ ಬೆಂಕಿಯಿಂದ ಆಕರ್ಷಿತವಾದ ಪತಂಗಗಳು ಬಂದು ಬೆಂಕಿಯಲ್ಲಿ ಬಿದ್ದು ಸಾಯುವಂತೆ ಎಲ್ಲರೂ ಸತ್ತುಹೋಗುತ್ತಾರೆ. ॥ ೫೬ ॥ ಬ್ರಹ್ಮವೇತ್ತರಾದ ಮಹಾತ್ಮರ ವಚನಗಳು ಎಂದೂ ಸುಳ್ಳಾಗುವುದಿಲ್ಲ ವೆಂಬುದು ದಿಟವೇ ಆಗಿದೆ. ನೋಡಿ! ಮಹಾತ್ಮರಾದ ಗರ್ಗಾಚಾರ್ಯರು ಹೇಳಿದ ಎಲ್ಲ ಮಾತುಗಳೂ ಹಾಗೆಯೇ ನಡೆಯುತ್ತಿವೆಯಲ್ಲ! ॥ ೫೭ ॥ ನಂದಗೋಪನು ಮತ್ತು ಇತರ ಗೋಪರು ಹೀಗೆ ಅತೀವ ಆನಂದದಿಂದ ರಾಮ-ಕೃಷ್ಣರ ವಿಷಯವಾಗಿ ಮಾತನಾಡಿಕೊಳ್ಳುವರು. ಅವರೆಲ್ಲರೂ ಸಂಸಾರದ ದುಃಖ-ಸಂಕಟಗಳು ಅರಿವಿಗೆ ಬಾರದಂತೆ ಭಗವದ್ವಿಷಯದಲ್ಲಿ ತನ್ಮಯರಾಗಿರುತ್ತಿದ್ದರು. ॥ ೫೮ ॥ ಹೀಗೆ ಕೃಷ್ಣ-ಬಲರಾಮರು ಗೊಲ್ಲಬಾಲಕರೊಂದಿಗೆ ಕೆಲವೊಮ್ಮೆ ಕಣ್ಣುಮುಚ್ಚಾಲೆಯಾಡುತ್ತಿದ್ದರೆ, ಕೆಲವೊಮ್ಮೆ ಮರಳಲ್ಲಿ ಸೇತುವೆ ಕಟ್ಟುತ್ತಿದ್ದರು. ಕೆಲವೊಮ್ಮೆ ಮರಕೋತಿ ಆಟವಾಡುತ್ತಿದ್ದರೆ, ಕೆಲವೊಮ್ಮೆ ವಿಚಿತ್ರವಾದ ಆಟಗಳನ್ನಾಡುತ್ತಿದ್ದರು. ಹೀಗೆ ಕುಣಿಯುತ್ತಾ, ಹಾಡುತ್ತಾ, ಆಡುತ್ತಾ ಅವರಿಬ್ಬರೂ ತಮ್ಮ ಬಾಲ್ಯವನ್ನು ವೃಂದಾವನದಲ್ಲಿ ಕಳೆದರು. ॥ ೫೯ ॥

ಶ್ರುತ್ವಾ ತದ್ವಿಸ್ಮಿತಾ ಗೋಪಾ ಗೋಪ್ಯಶ್ಚಾತಿಪ್ರಿಯಾದೃತಾಃ ।
ಪ್ರೇತ್ಯಾಗತಮಿವೌತ್ಸುಕ್ಯಾದ್ಯೈಕ್ಷಂತ ತೃಷಿತೇಕ್ಷಣಾಃ
॥ ೫೫ ॥

ಅಹೋ ಬತಾಸ್ಯ ಬಾಲಸ್ಯ ಬಹವೋ ಮೃತ್ಯವೋಭವನ್ ।
ಅಪ್ಯಾಸೀದ್ವಿಪ್ರಿಯಂ ತೇಷಾಂ ಕೃತಂ ಪೂರ್ವಂ ಯತೋ ಭಯಮ್
॥ ೫೫ ॥

ಅಥಾಪ್ಯಭಿಭವಂತ್ಯೇನಂ ನೈವ ತೇ ಘೋರದರ್ಶನಾಃ ।
ಜಿಘಾಂಸಯೈನಮಾಸಾದ್ಯ ನಶ್ಯಂತ್ಯಗ್ನೌ ಪತಂಗವತ್
॥ ೫೬ ॥

ಅಹೋ ಬ್ರಹ್ಮವಿದಾಂ ವಾಚೋ ನಾಸತ್ಯಾಃ ಸಂತಿ ಕರ್ಹಿಚಿತ್ ।
ಗರ್ಗೋ ಯದಾಹ ಭಗವಾನನ್ವಭಾವಿ ತಥೈವ ತತ್
॥ ೫೭ ॥

ಇತಿ ನಂದಾದಯೋ ಗೋಪಾಃ ಕೃಷ್ಣರಾಮಕಥಾಂ ಮುದಾ ।
ಕುರ್ವಂತೋ ರಮಮಾಣಾಶ್ಚ ನಾವಿಂದನ್ಭವವೇದನಾಮ್
॥ ೫೮ ॥

ಏವಂ ವಿಹಾರೈಃ ಕೌಮಾರೈಃ ಕೌಮಾರಂ ಜಹತುರ್ವ್ರಜೇ ।
ನಿಲಾಯನೈಃ ಸೇತುಬಂಧೈರ್ಮರ್ಕಟೋತ್ಪ್ಲವನಾದಿಭಿಃ
॥ ೫೯ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ವತ್ಸ-ಬಕವಧೋ ನಾಮೈಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಅಘಾಸುರನ ಉದ್ಧಾರ

ಶ್ರೀಶುಕ ಉವಾಚ

ಕಚ್ಚಿದ್ವಿನಾಶಾಯ ಮನೋ ದಧದ್ವ್ರಜಾತ್-
ಪ್ರಾತಃ ಸಮುತ್ಥಾಯ ವಯಸ್ಯವತ್ಸಪಾನ್ ।
ಪ್ರಬೋಧಯನ್ ಶೃಂಗರವೇಣ ಚಾರುಣಾ
ವಿನಿರ್ಗತೋ ವತ್ಸಪುರಃಸರೋ ಹರಿಃ ॥ ೧ ॥

ತೇನೈವ ಸಾಕಂ ಪೃಥುಕಾಃ ಸಹಸ್ರಶಃ
ಸ್ನಿಗ್ಧಾಃ ಸುಶಿಗ್ವೇತ್ರವಿಷಾಣವೇಣವಃ ।
ಸ್ವಾಸ್ವಾನ್ಯಹಸ್ರೋಪರಿಸಂಖ್ಯಯಾನ್ವಿತಾ-
ನ್ವತ್ಸಾನ್ಪುರಸ್ಕೃತ್ಯ ವಿನಿರ್ಯಯುರ್ಮುದಾ ॥ ೨ ॥

ಕೃಷ್ಣವತ್ಸೈರಸಂಖ್ಯಾತೈರ್ಯೂಥೀಕೃತ್ಯ ಸ್ವವತ್ಸಕಾನ್ ।
ಚಾರಯಂತೋಽರ್ಭಲೀಲಾಭಿರ್ವಿಜಹ್ರುಸ್ತತ್ರ ತತ್ರ ಹ ॥ ೩ ॥

ಫಲಪ್ರವಾಲಸ್ತಬಕಸುಮನಃಪಿಚ್ಛಧಾತುಭಿಃ ।
ಕಾಚಗುಂಜಾಮಣಿಸ್ವರ್ಣಭೂಷಿತಾ ಅಪ್ಯಭೂಷಯನ್ ॥ ೪ ॥

ಮುಷ್ಣಂತೋಽನ್ಯೋನ್ಯತಿಕ್ಯಾದೀನ್ ಜ್ಞಾತಾನಾರಾಚ್ಚಚಿಕ್ಷಿಪುಃ ।
ತತ್ರತ್ಯಾಶ್ಚ ಪುನರ್ದೂರಾದ್ಧಸಂತಶ್ಚ ಪುನರ್ದದುಃ ॥ ೫ ॥

ಯದಿ ದೂರಂ ಗತಃ ಕೃಷ್ಣೋ ವನಶೋಭೇಕ್ಷಣಾಯ ತಮ್ ।
ಅಹಂ ಪೂರ್ವಮಹಂ ಪೂರ್ವಮಿತಿ ಸಂಸ್ಪೃಶ್ಯ ರೇಮಿರೇ ॥ ೬ ॥

ಕೇಚಿದ್ವೇಣೂನ್ವಾದಯಂತೋ ಧ್ಮಾಂತಃ ಶೃಂಗಾಣಿ ಕೇಚನ ।
ಕೇಚಿದ್ಭೃಂಗೈಃ ಪ್ರಗಾಯಂತಃ ಕೂಜಂತಃ ಕೋಕಿಲೈಃ ಪರೇ ॥ ೭ ॥

ವಿಚ್ಛಾಯಾಭಿಃ ಪ್ರಧಾವಂತೋ ಗಚ್ಛಂತಃ ಸಾಧು ಹಂಸಕೈಃ ।
ಬಕೈರುಪವಿಶಂತಶ್ಚ ನೃತ್ಯಂತಶ್ಚ ಕಲಾಪಿಭಿಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಒಂದು ದಿನ ಶ್ರೀಹರಿಗೆ ವನಭೋಜನವನ್ನು ಮಾಡಲು ಮನಸ್ಸು ಆಯಿತು. ಅವನು ಬೆಳಗಾದೊಡನೆಯೇ ಎದ್ದು ಸುಮಧುರವಾಗಿ ಕೊಂಬನ್ನು ಊದಿ ಗೋಪಬಾಲಕರನ್ನೂ ಎಚ್ಚರಗೊಳಿಸಿ, ಕರುಗಳನ್ನು ಮುಂದೆ ಮಾಡಿಕೊಂಡು ಬಾಲಗೋಪಾಲನು ಗೊಲ್ಲರ ಹಳ್ಳಿಯಿಂದ ಹೊರಟನು. ॥ ೧ ॥ ಶ್ರೀಕೃಷ್ಣನೊಂದಿಗೆ ಅವನ ಸ್ನೇಹಪರರಾದ ಸಾವಿರಾರು ಗೊಲ್ಲಬಾಲಕರು ಕರುಗಳ ಮಂದೆಯನ್ನು ಮುಂದೆಮಾಡಿ ಕೊಂಡು ಆನಂದಭರಿತರಾಗಿ ಸುಂದರವಾದ ನೆಲವು, ಕೋಲು, ಕೊಂಬು, ಕೊಳಲು ಇವುಗಳನ್ನು ಎತ್ತಿಕೊಂಡು ತಮ್ಮ-ತಮ್ಮ ಮನೆಗಳಿಂದ ಹೊರಟರು. ॥ ೨ ॥ ಅವರು ಶ್ರೀಕೃಷ್ಣನ ಅಸಂಖ್ಯ ಕರುಗಳೊಂದಿಗೆ ತಮ್ಮ-ತಮ್ಮ ಕರುಗಳನ್ನು ಒಂದಾಗಿಸಿ ಬಿಟ್ಟರು. ಅಲ್ಲಲ್ಲಿಯೇ ನಿಂತು ಬಾಲಯೋಗ್ಯವಾದ ಆಟಗಳನ್ನಾಡುತ್ತಾ ಸಂಚರಿಸತೊಡಗಿದರು. ॥ ೩ ॥ ಗೋಪಬಾಲಕರೆಲ್ಲರೂ ಗಾಜಿನ ಮಣಿಗಳಿಂದಲೂ, ಚಿನ್ನದ ವಂಕಿಗಳಿಂದಲೂ, ಗುಲುಗುಂಜಿಯ ಸರಗಳಿಂದಲೂ ಸಿಂಗರಿಸಿಕೊಂಡಿದ್ದರೂ ಅವರು ವೃಂದಾವನದ ಕಾಡಿಗೆ ಬರುತ್ತಲೇ ಕೆಂಪು, ಹಳದಿ, ಹಸಿರು ಹಣ್ಣುಗಳಿಂದಲೂ, ಚಿಗುರುಗಳಿಂದಲೂ, ಹೂವುಗಳಿಂದಲೂ ನವಿಲು ಗರಿಗಳಿಂದಲೂ, ಗೈರಿಕಾದಿ ಧಾತುಗಳಿಂದಲೂ ಇನ್ನೂ ಹೆಚ್ಚಾಗಿ ಸಿಂಗರಿಸಿಕೊಂಡು ಕುಣಿದಾಡಿದರು. ॥ ೪ ॥ ಕೆಲವರು ಯಾರದೋ ಬುತ್ತಿಯನ್ನು ಹಾರಿಸಿದರೆ, ಇನ್ನೊಬ್ಬನು ಬೆತ್ತವನ್ನು ಕದಿಯುತ್ತಿದ್ದನು. ಮತ್ತೊಬ್ಬನು ಕೊಳಲನ್ನು, ಕಳಕೊಂಡವನಿಗೆ ಕದ್ದವನು ಯಾರೆಂದು ತಿಳಿದು ಪಡೆಯಲು ಬಂದಾಗ ಇನ್ನೊಬ್ಬನ ಬಳಿಗೆ ಎಸೆದುಬಿಡುತ್ತಿದ್ದರು. ಇನ್ನೊಬ್ಬನು ಮತ್ತೊಬ್ಬನ ಬಳಿಗೆ ಹೀಗೆ ಎಸೆಯುತ್ತಾ ಕೊನೆಗೆ ಅವನಿಗೆ ಮರಳಿಸಿ ಕೇಕೆ ಹಾಕಿ ನಗುತ್ತಿದ್ದರು. ॥ ೫ ॥ ಶ್ಯಾಮಸುಂದರ ಶ್ರೀಕೃಷ್ಣನು ವನದಶೋಭೆಯನ್ನು ನೋಡುತ್ತಾ ದೂರ ಹೋಗಿಬಿಟ್ಟರೆ, ನಾನು ಮೊದಲು ಹೋಗಿ ಮುಟ್ಟುವೆನು, ನಾನು ಮೊದಲು ಎಂಬ ಸ್ಪರ್ಧೆಯಿಂದ ಎಲ್ಲರೂ ಓಡಿ ಹೋಗಿ ಅವನನ್ನು ಮುಟ್ಟಿ-ಮುಟ್ಟಿ ಸಂತೋಷಪಡುತ್ತಿದ್ದರು. ॥ ೬ ॥ ಕೆಲವರು ಕೊಳಲನ್ನು ಊದುತ್ತಿದ್ದರೆ, ಕೆಲವರು ಕೊಂಬನ್ನು ಊದುತ್ತಿದ್ದರು. ಕೆಲ-ಕೆಲವರು ದುಂಬಿಗಳೊಡನೆ ತಾವೂ ಧ್ವನಿ ಮಾಡುತ್ತಿದ್ದರೆ, ಕೆಲವರು ಕೋಗಿಲೆಯ ಧ್ವನಿಯೊಂದಿಗೆ ತಮ್ಮ ಧ್ವನಿಯನ್ನು ಸೇರಿಸಿ ಅದರಂತೆ ಕೂಗುತ್ತಿದ್ದರು. ॥ ೭ ॥ ಒಂದು ಕಡೆ ಕೆಲವು ಗೊಲ್ಲಬಾಲಕರು ಆಕಾಶದಲ್ಲಿ ಹಾರುತ್ತಿದ್ದ ಪಕ್ಷಿಗಳ ನೆರಳಿನೊಂದಿಗೆ ಓಡತೊಡಗಿದರೆ, ಮತ್ತೊಂದೆಡೆಯಲ್ಲಿ ಕೆಲವರು ಹಂಸದ ನಡೆಯನ್ನು ಅಣಕವಾಡುತ್ತಿದ್ದರು. ಕೆಲವರು ಬಕಪಕ್ಷಿಗಳ ಬಳಿಯಲ್ಲಿ ಕುಳಿತು, ಅವುಗಳಂತೆ ಕಣ್ಣು ಮುಚ್ಚಿಕೊಳ್ಳುತ್ತಿದ್ದರು. ಕೆಲವರು ನವಿಲುಗಳ ಕುಣಿತನ್ನು ನೋಡಿ ತಾವೂ ಅವುಗಳಂತೆ ಕುಣಿಯುತ್ತಿದ್ದರು. ॥ ೮ ॥

ವಿಕರ್ಷಂತಃ ಕೇಶಬಾಲಾನಾರೋಹಂತಶ್ಚ ತೈರ್ದ್ರುಮಾನ್ ।
ವಿಕುರ್ವಂತಶ್ಚ ತೈಃ ಸಾಕಂ ಪ್ಲವಂತಶ್ಚ ಪಲಾಶಿಷು
॥ ೯ ॥

ಸಾಕಂ ಭೇಕೈರ್ವಿಲಂಘಂತಃ ಸರಿತ್ಸ್ರವಸಂಪ್ಲುತಾಃ ।
ವಿಹಸಂತಃ ಪ್ರತಿಚ್ಛಾಯಾಃ ಶಪಂತಶ್ಚ ಪ್ರತಿಸ್ವನಾನ್
॥ ೧೦ ॥

ಇತ್ಥಂ ಸತಾಂ ಬ್ರಹ್ಮಸುಖಾನುಭೂತ್ಯಾ
ದಾಸ್ಯಂ ಗತಾನಾಂ ಪರದೈವತೇನ ।
ಮಾಯಾಶ್ರಿತಾನಾಂ ನರದಾರಕೇಣ
ಸಾಕಂ ವಿಜಹ್ರುಃ ಕೃತಪುಣ್ಯಪುಂಜಾಃ ॥ ೧೧ ॥

ಯತ್ಪಾದಪಾಂಸುರ್ಬಹುಜನ್ಮಕೃಚ್ಛ್ರತೋ
ಧೃತಾತ್ಮಭಿರ್ಯೋಗಿಭಿರಪ್ಯಲಭ್ಯಃ ।
ಸ ಏವ ಯದ್ದೃಗ್ವಿಷಯಃ ಸ್ವಯಂ ಸ್ಥಿತಃ
ಕಿಂ ವರ್ಣ್ಯತೇ ದಿಷ್ಟಮತೋ ವ್ರಜೌಕಸಾಮ್ ॥ ೧೨ ॥

ಅಥಾಘನಾಮಾಭ್ಯಪತನ್ಮಹಾಸುರ-
ಸ್ತೇಷಾಂ ಸುಖಕ್ರೀಡನವೀಕ್ಷಣಾಕ್ಷಮಃ ।
ನಿತ್ಯಂ ಯದಂತರ್ನಿಜಜೀವಿತೇಪ್ಸುಭಿಃ
ಪೀತಾಮೃತೈರಪ್ಯಮರೈಃ ಪ್ರತೀಕ್ಷ್ಯತೇ ॥ ೧೩ ॥

ದೃಷ್ಟ್ವಾರ್ಭಕಾನ್ಕೃಷ್ಣಮುಖಾನಘಾಸುರಃ
ಕಂಸಾನುಶಿಷ್ಟಃ ಸ ಬಕೀಬಕಾನುಜಃ ।
ಅಮುಂ ತು ಮೇ ಸೋದರನಾಶಕೃತ್ತಯೋ-
ರ್ದ್ವಯೋರ್ಮಮೈನಂ ಸಬಲಂ ಹನಿಷ್ಯೇ ॥ ೧೪ ॥

ಏತೇ ಯದಾ ಮತ್ಸುಹೃದೋಸ್ತಿಲಾಪಃ
ಕೃತಾಸ್ತದಾ ನಷ್ಟಸಮಾ ವ್ರಜೌಕಸಃ ।
ಪ್ರಾಣೇ ಗತೇ ವರ್ಷ್ಮಸು ಕಾ ನು ಚಿಂತಾ
ಪ್ರಜಾಸವಃ ಪ್ರಾಣಭೃತೋ ಹಿ ಯೇ ತೇ ॥ ೧೫ ॥

ಕೆಲವರು ಕೋತಿಗಳ ಬಾಲಗಳನ್ನು ಹಿಡಿದು ಎಳೆಯುತ್ತಿದ್ದರೆ, ಇತರರು ಅವುಗಳೊಂದಿಗೆ ಈ ಮರದಿಂದ ಆ ಮರದ ಮೇಲೆ ಹತ್ತುತ್ತಿದ್ದರು. ಕೆಲವರು ಅವುಗಳ ಜೊತೆಯಲ್ಲೇ ಕುಳಿತು ಅವುಗಳಂತೇ ಚೇಷ್ಟೆ ಮಾಡುತ್ತಿದ್ದರೆ, ಕೆಲವರು ಅವುಗಳಂತೆ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ನೆಗೆಯುತ್ತಿದ್ದರು. ॥ ೯ ॥ ಕೆಲವರು ನದಿಯ ನೀರಿನಲ್ಲಿಳಿದು ತೊಳಚಾಡುತ್ತಾ ಆಟವಾಡುತ್ತಿದ್ದರು. ಕೆಲವರು ಕಪ್ಪೆಗಳೊಂದಿಗೆ ತಾವು ವಟಗುಟ್ಟುತ್ತಾ ಕುಪ್ಪಳಿಸುತ್ತಿದ್ದರು. ಕೆಲವರು ನೀರಿನಲ್ಲೇ ತಮ್ಮ ಪ್ರತಿಬಿಂಬವನ್ನು ನೋಡಿ ಹಾಸ್ಯವಾಡುತ್ತಿದ್ದರು. ಬೇರೆ ಕೆಲವರು ತಮ್ಮ ಪ್ರತಿಧ್ವನಿಯನ್ನೇ ಕೇಳಿಸಿಕೊಂಡು ನಾನಾ ರೀತಿಯಿಂದ ಮಾತನಾಡುತ್ತಾ ಆನಂದಿಸುತ್ತಿದ್ದರು. ॥ ೧೦ ॥

ಪರೀಕ್ಷಿತನೇ ! ಹೀಗೆ ಸತ್ಪುರುಷರಿಗೆ (ಜ್ಞಾನಿಗಳಿಗೆ) ಬ್ರಹ್ಮ ಆನಂದಾನುಭವರೂಪನಾಗಿದ್ದ, ದಾಸ್ಯಭಾವದಿಂದ ಆರಾಧಿಸುವ ಭಕ್ತರಿಗೆ ಪರದೇವತೆಯಾಗಿದ್ದ ಮಾಯಾಮೋಹಿತ ವಿಷಯಾಂಧರಿಗೆ ಸಾಧಾರಣ ಮಾನವ ಬಾಲಕನಾಗಿದ್ದ ಭಗವಾನ್ ಶ್ರೀಕೃಷ್ಣನೊಡನೆ ಅತ್ಯಂತ ಪುಣ್ಯಶಾಲಿಗಳಾದ ಗೊಲ್ಲ ಬಾಲಕರು ನಾನಾ ವಿಧವಾದ ಆಟ-ಪಾಟಗಳನ್ನು ಆಡುತ್ತಿದ್ದರು. ॥ ೧೧ ॥ ಭಗವಂತನಾದ ಶ್ರೀಕೃಷ್ಣನ ಪಾದಧೂಳಿಯು ಸಾಮಾನ್ಯವಾದುದಲ್ಲ, ಹಲವಾರು ಜನ್ಮಗಳು ಬಹಳ ಕಷ್ಟಪಟ್ಟು ತಪಸ್ಸು ಮಾಡಿದ ಜಿತೇಂದ್ರಿಯರಾದ ಮಹಾಯೋಗಿಗಳಿಗೂ ಅದು ಅಲಭ್ಯವಾದುದು. ಹೀಗಿರುವಾಗ ಅಂತಹ ಭಗವಂತನು ವ್ರಜವಾಸಿಗಳಾದ ಗೋಪಾಲಕರ ಸಮಕ್ಷಮದಲ್ಲಿ ಇದ್ದು ಅವರೊಡನೆ ಆಟವಾಡುತ್ತಿದ್ದನೆಂದರೆ ಅವರ ಪರಮ ಸೌಭಾಗ್ಯವನ್ನು ಏನೆಂದು ವರ್ಣಿಸೋಣ ! ॥ ೧೨ ॥

ಪರೀಕ್ಷಿತರಾಜನೇ ! ಆ ಸಮಯಕ್ಕೆ ಸರಿಯಾಗಿ ಅಘಾಸುರ ನೆಂಬ ರಾಕ್ಷಸನು ಅಲ್ಲಿಗೆ ಬಂದನು. ಗೋಪಬಾಲಕರು ಶ್ರೀಕೃಷ್ಣ ನೊಡನೆ ಆಟವಾಡುತ್ತಾ ಸಂತೋಷವಾಗಿರುವುದನ್ನು ಅವನಿಂದ ನೋಡಲಾಗಲಿಲ್ಲ, ಅವನು ಮಹಾಕ್ರೂರಿಯಾಗಿದ್ದನು. ಅಮೃತಪಾನ ಮಾಡಿ ಅಮರರಾದ ದೇವತೆಗಳೂ ಕೂಡ ಅವನ ಸಾವನ್ನು ಅನುದಿನವೂ ಪ್ರತೀಕ್ಷಿಸುತ್ತಲೇ ಇದ್ದರು. ॥ ೧೩. ॥ ಅಘಾಸುರನು ಪೂತನೆಯ ಮತ್ತು ಬಕಾಸುರನ ತಮ್ಮನಾಗಿದ್ದು, ಕಂಸನಿಂದ ಕಳುಹಲ್ಪಟ್ಟವನಾಗಿದ್ದನು. ಶ್ರೀಕೃಷ್ಣನನ್ನು ಗೋಪ ಬಾಲಕರ ಸಹಿತ ವಾಗಿ ಸಂಹರಿಸಿ, ಈ ಮೂಲಕ ಕಂಸರಾಜನ ಆಶಯವನ್ನು ಈಡೇರಿಸಿಕೊಡಲು ನಿಶ್ಚಯಿಸಿದನು. ॥ ೧೪ ॥ ಶ್ರೀಕೃಷ್ಣಪ್ರಮುಖರಾದ ಈ ಗೋಪಬಾಲಕರೆಲ್ಲರನ್ನು ಸಂಹರಿಸಿ ನನ್ನ ಅಕ್ಕನಿಗೂ, ಅಣ್ಣನಿಗೂ ಜಲತರ್ಪಣವನ್ನು ಕೊಡುತ್ತೇನೆ. ಕೃಷ್ಣಾದಿಗಳು ಅವಸಾನ ಹೊಂದಿದೊಡನೆ ವ್ರಜವಾಸಿಗಳೆಲ್ಲರೂ ತಮಗೆ ತಾವೇ ಸತ್ತು ಹೋಗುತ್ತಾರೆ. ಅವರನ್ನು ಸಂಹರಿಸುವ ಶ್ರಮವೇನೂ ಆಗಲಾರದು. ಏಕೆಂದರೆ, ಸಂತಾನವೆಂಬುದೇ ಪ್ರಾಣಿಗಳ ಪ್ರಾಣವಾಗಿದೆ. ಪ್ರಾಣಸ್ವರೂಪವಾದ ಸಂತಾನವೇ ವಿನಾಶ ಹೊಂದಿದ ಬಳಿಕ ಕೇವಲ ದೇಹವು ಹೇಗೆ ತಾನೇ ಉಳಿದೀತು ? ಆದುದರಿಂದ ಈ ಮಕ್ಕಳ ವಿನಾಶದಿಂದ ವ್ರಜವಾಸಿಗಳೆಲ್ಲರೂ ತಾನಾಗಿ ಸತ್ತು ಹೋಗುವರು. ॥ ೧೫ ॥

ಇತಿ ವ್ಯವಸ್ಯಾಜಗರಂ ಬೃಹದ್ವಪುಃ
ಸ ಯೋಜನಾಯಾಮಮಹಾದ್ರಿಪೀವರಮ್ ।
ಧೃತ್ವಾದ್ಭುತಂ ವ್ಯಾತ್ತಗುಹಾನನಂ ತದಾ
ಪಥಿ ವ್ಯಶೇತ ಗ್ರಸನಾಶಯಾ ಖಲಃ ॥ ೧೬ ॥

ಹೀಗೆ ನಿಶ್ಚಯಿಸಿ ಆ ದುಷ್ಟ ಅಘಾಸುರನು ಹೆಬ್ಬಾವಿನ ರೂಪವನ್ನು ಧರಿಸಿ ದಾರಿಯಲ್ಲಿ ಮಲಗಿದನು. ಆ ಹೆಬ್ಬಾವಿನ ಶರೀರವು ಒಂದು ಯೋಜನದಷ್ಟು ಉದ್ದವೂ, ಪರ್ವತದಷ್ಟು ಎತ್ತರವಾಗಿಯೂ ಮತ್ತು ದಪ್ಪವಾಗಿಯೂ ಅದ್ಭುತವಾಗಿಯೂ ಇತ್ತು. ಕೃಷ್ಣನ ಸಹಿತ ಗೋಪಬಾಲಕರೆಲ್ಲರನ್ನು ನುಂಗಿಹಾಕುವುದೇ ಅವನ ಆಶಯವಾಗಿತ್ತು. ಅದುದರಿಂದ ಅಘಾಸುರನು ತನ್ನ ಬಾಯನ್ನು ದೊಡ್ಡದಾದ ಗುಹೆಯಂತೆ ತೆರೆದುಕೊಂಡು ಬಿದ್ದಿದ್ದನು. ॥ ೧೬ ॥ ಅವನ ಕೆಳದುಟಿಯು ಭೂಮಿಗೆ ತಾಗಿದ್ದರೆ, ಮೇಲ್ದುಟಿಯು ಆಕಾಶಕ್ಕೆ ಮುಟ್ಟಿತ್ತು. ದವಡೆಗಳು ಗವಿಗಳಂತಿದ್ದು, ಕೊರೆದಾಡೆಗಳು ಪರ್ವತದ ಶಿಖರಗಳಂತಿದ್ದವು. ಬಾಯೊಳಗೆ ಗಾಢಾಂಧಕಾರವು ಕವಿದಿತ್ತು. ನೀಳವಾದ ನಾಲಿಗೆಯು ಒಂದು ಅಗಲವಾದ ಕೆಂಪಾದ ರಾಜಬೀದಿಯಂತೆ ಕಂಗೊಳಿಸುತ್ತಿತ್ತು. ಸುಂಟರಗಾಳಿಯಂತೆ ಅದರ ಶ್ವಾಸ-ನಿಃಶ್ವಾಸವಿತ್ತು. ಅದರ ಕಣ್ಣುಗಳು ದಾವಾಗ್ನಿಯಂತೆ ಪ್ರಜ್ವಲಿಸುತ್ತಿತ್ತು. ॥ ೧೭ ॥

ಧರಾಧರೋಷ್ಠೋ ಜಲದೋತ್ತರೋಷ್ಠೋ
ದರ್ಯಾನನಾಂತೋ ಗಿರಿಶೃಂಗದಂಷ್ಟ್ರಃ ।
ಧ್ವಾಂತಾಂತರಾಸ್ಯೋ ವಿತತಾಧ್ವಜಿಹ್ವಃ
ಪರುಷಾನಿಲಶ್ವಾಸದವೇಕ್ಷಣೋಷ್ಣಃ ॥ ೧೭ ॥

ಅಘಾಸುರನ ಇಂತಹ ಪರಮಾದ್ಭುತವಾದ ರೂಪವನ್ನು ನೋಡಿ ಇದೂ ಒಂದು ವೃಂದಾವನದ ಶೋಭೆಯನ್ನು ಹೆಚ್ಚಿಸುವ ವಸ್ತುವೆಂದು ಬಾಲಕರು ಭಾವಿಸಿದರು. ಅವರು ಅದನ್ನು ಕುತೂಹಲದಿಂದ ಆಟವಾಡುತ್ತಾ ಪರೀಕ್ಷಿಸತೊಡಗಿದರು. ಒಬ್ಬನು ಉತ್ಪ್ರೇಕ್ಷೆಮಾಡುತ್ತಾ ಹೇಳಿದನು - ಅಗಲವಾಗಿ ಬಾಯ್ತೆರೆದು ಕೊಂಡಿರುವ ಇದು ಹೆಬ್ಬಾವು ಇರಬಹುದು. ॥ ೧೮ ॥ ಮತ್ತೊಬ್ಬ ಹೇಳಿದನು - ಮಿತ್ರರೇ! ಇದೊಂದು ಮಹಾಪ್ರಾಣಿಯೇ ಆಗಿರ ಬಹುದು. ನಮ್ಮನ್ನೆಲ್ಲ ನುಂಗಿಹಾಕಲು ಹೆಬ್ಬಾವಿನಂತೆ ವೇಷಧರಿಸಿ ಬಾಯ್ತೆರೆದುಕೊಂಡು ಮಲಗಿದಂತಿದೆಯಲ್ಲ! ಎಚ್ಚರಿಕೆಯಿಂದ ಇರಿ. ॥ ೧೯ ॥ ಇನ್ನೊಬ್ಬ ಬಾಲಕನು ಹೇಳುತ್ತಾನೆ - ಮೇಲ್ಭಾಗದಲ್ಲಿ ನೋಡಿರಿ. ಸೂರ್ಯನ ಕಿರಣಗಳು ಬಿದ್ದು ಎಣ್ಣೆಗೆಂಪಾಗಿ ಕಾಣುತ್ತಿರುವ ಮೋಡಗಳೇ - ಹೌದು-ಹೌದು! ನೋಡಿರಲ್ಲ! ಈ ಮಹಾಪ್ರಾಣಿಯು ಮುಖದ ಎರಡು ಭಾಗಗಳೂ ಗವಿಯಂತೆ ಕಾಣುತ್ತಿವೆ. ಈ ಎತ್ತರವಾದ ಪರ್ವತ ಶಿಖರಗಳಾದರೋ ಅದರ ಕೋರೆದಾಡೆಗಳಂತೆ ಕಂಡುಬರುತ್ತಿವೆಯಲ್ಲ! ॥ ೨೦-೨೧ ॥ ಇನ್ನೊಬ್ಬ ಹೇಳಿದ-ಗೆಳೆಯರೇ! ನೋಡಿ-ನೋಡಿ! ನೀಳವಾಗಿಯೂ, ಅಗಲವಾಗಿಯೂ ಇರುವ ಈ ಹೆದ್ದಾರಿಯು ಹೆಬ್ಬಾವಿನ ನಾಲಿಗೆಯಂತೆ ಕಾಣುತ್ತಿದೆಯಲ್ಲ! ಗಿರಿಶೃಂಗಗಳ ನಡುವೆ ಇರುವ ಅಂಧಕಾರವು ಈ ಹೆಬ್ಬಾವಿನ ಬಾಯಲ್ಲಿರುವ ಕತ್ತಲೆಯೊಡನೆ ಸೆಣಸುತ್ತಿದೆ. ॥ ೨೨ ॥ ಯಾರೋ ಇನ್ನೊಬ್ಬ ಗೋಪಬಾಲಕನು ಹೇಳಿದ - ಮಿತ್ರರೇ! ಗಮನಿಸಿರಿ. ಇಲ್ಲೇ ಎಲ್ಲೋ ಕಾಡಿನಲ್ಲಿ ಬೆಂಕಿಬಿದ್ದಿರುವಂತೆ ಕಾಣುತ್ತದೆ. ಅದರಿಂದಲೇ ಈ ಬಿಸಿಯಾದ ಮತ್ತು ತೀಕ್ಷ್ಣವಾದ ಗಾಳಿ ಬರುತ್ತಿದೆ. ಆದರೆ ಹೆಬ್ಬಾವಿನ ನಿಃಶ್ವಾಸದೊಂದಿಗೆ ಇದು ಹೇಗೆ ಹೊಂದಿಕೊಂಡಿತು ? ಅದೇ ಬೆಂಕಿಯಲ್ಲಿ ಬೆಂದಿರುವ ಪ್ರಾಣಿಗಳ ದುರ್ಗಂಧದಂತೆ ಅಜಗರದ ಹೊಟ್ಟೆಯಲ್ಲಿ ಸತ್ತಿರುವ ಜೀವಿಗಳ ಮಾಂಸದ ದುರ್ಗಂಧವೇ ಆಗಿರಬೇಕು. ॥ ೨೩. ॥

ದೃಷ್ಟ್ವಾತ್ತಂ ತಾದೃಶಂ ಸರ್ವೇ ಮತ್ವಾ ವೃಂದಾವನಶ್ರಿಯಮ್ ।
ವ್ಯಾತ್ತಾಜಗರತುಂಡೇನ ಹ್ಯುತ್ಪ್ರೇಕ್ಷಂತೇ ಸ್ಮ ಲೀಲಯಾ
॥ ೧೮ ॥

ಅಹೋ ಮಿತ್ರಾಣಿ ಗದತ ಸತ್ತ್ವಕೂಟಂ ಪುರಃಸ್ಥಿತಮ್ ।
ಅಸ್ಮತ್ಸಂಗ್ರಸನವ್ಯಾತ್ತವ್ಯಾಲತುಂಡಾಯತೇ ನ ವಾ
॥ ೧೯ ॥

ಸತ್ಯಮರ್ಕಕರಾರಕ್ತಮುತ್ತರಾಹನುವದ್ಘನಮ್ ।
ಅಧರಾಹನುವದ್ಯೋಧ್ರಸತ್ಪತ್ತಿಚ್ಛಾಯಯಾರುಣಮ್
॥ ೨೦ ॥

ಪ್ರತಿಸ್ಪರ್ಧೇತೇ ಸೃಕ್ಕಿಭ್ಯಾಂ ಸವ್ಯಾಸವ್ಯೇ ನಗೋದರೇ ।
ತುಂಗಶೃಂಗಾಲಯೋಽಪ್ಯೇತಾಸ್ತದ್ದಂಷ್ಟ್ರಾಭಿಶ್ಚ ಪಶ್ಯತ
॥ ೨೧ ॥

ಅಸ್ತತಾಯಾಮಮಾರ್ಗೋಽಯಂ ರಸನಾಂ ಪ್ರತಿಗರ್ಜತಿ ।
ಏಷಾಮಂತರ್ಗತಂ ಧ್ವಾಂತಮೇತದಪ್ಯಂತರಾನನಮ್
॥ ೨೨ ॥

ದಾವೋಷ್ಣಖರವಾತೋಽಯಂ ಶ್ವಾಸವದ್ಭಾತಿ ಪಶ್ಯತ ।
ತದ್ದಗ್ಧಸತ್ತ್ವದುರ್ಗಂಧೋಽಪ್ಯಂತರಾಮಿಷಗಂಧವತ್
॥ ೨೩ ॥

ಅಸ್ಮಾನ್ನಿಮಿತ್ರ ಗ್ರಸಿತಾ ನಿವಿಷ್ಟಾ-
ನಯಂ ತಥಾ ಚೇದ್ಬಕವದ್ವಿನಂಕ್ಷ್ಯತಿ ।
ಕ್ಷಣಾದನೇನೇತಿ ಬಕಾರ್ಯುಶನ್ಮುಖಿಂ
ವೀಕ್ಷ್ಯೋದ್ಗತಂತಃ ಕರತಾಡನೈರ್ಯಯುಃ ॥ ೨೪ ॥

ಇತ್ಥಂ ಮಿಥೋಽತಥ್ಯಮತಜ್ಞಭಾಷಿತಂ
ಶ್ರುತ್ವಾ ವಿಚಿಂತ್ಯೇತ್ಯಮೃಷಾ ಮೃಷಾಯತೇ ।
ರಕ್ಷೋ ವಿದಿತ್ವಾಖಿಲಭೂತಹೃತ್ಸ್ಥಿತಃ
ಸ್ವಾನಾಂ ನಿರೋದ್ಧುಂ ಭಗವಾನ್ಮನೋ ದಧೇ ॥ ೨೫ ॥

ತಾವತ್ಪ್ರವಿಷ್ಟಾಸ್ತ್ವಸುರೋದರಾಂತರಂ
ಪರಂ ನ ಗೀರ್ಣಾಃ ಶಿಶವಃ ಸವತ್ಸಾಃ ।
ಪ್ರತೀಕ್ಷಮಾಣೇನ ಬಕಾರಿವೇಶನಂ
ಹತಸ್ವಕಾಂತಸ್ಮರಣೇನ ರಕ್ಷಸಾ ॥ ೨೬ ॥

ತಾನ್ವೀಕ್ಷ್ಯ ಕೃಷ್ಣಃ ಸಕಲಾಭಯಪ್ರದೋ
ಹ್ಯನನ್ಯನಾಥಾನ್ಸ್ವಕರಾದವಚ್ಯುತಾನ್ ।
ದೀನಾಂಶ್ಚಮೃತ್ಯೋರ್ಜಠರಾಗ್ನಿಘಾಸಾನ್-
ಘೃಣಾರ್ದಿತೋ ದಿಷ್ಟಕೃತೇನ ವಿಸ್ಮಿತಃ ॥ ೨೭ ॥

ಕೃತ್ಯಂ ಕಿಮತ್ಯಸ್ಯ ಖಿಲಸ್ಯ ಜೀವನಂ
ನ ವಾ ಅಮೀಷಾಂ ಚ ಸತಾಂ ವಿಹಿಂಸನಮ್ ।
ದ್ವಯಂ ಕಥಂ ಸ್ಯಾದಿತಿ ಸಂವಿಚಿಂತ್ಯ ತ-
ಜ್ಜ್ಞಾತ್ವಾವಿಶತ್ತುಂಡಮಶೇಷದೃಗ್ಘರಿಃ ॥ ೨೮ ॥

ತದಾ ಘನಚ್ಛದಾ ದೇವಾ ಭಯಾದ್ಧಾಹೇತಿ ಚುಕ್ರುಶುಃ ।
ಜಹೃಷುರ್ಯೇ ಚ ಕಂಸಾದ್ಯಾಃ ಕೌಣಪಾಸ್ತ್ವಘಬಾಂಧವಾಃ
॥ ೨೯ ॥

ಆಗ ಅವರಲ್ಲಿದ್ದ ಇನ್ನೊಬ್ಬನು ಹೇಳಿದನು – ನಾವುಗಳು ಇದರ ಬಾಯೊಳಗೆ ಪ್ರವೇಶಿಸಿದರೆ ಏನು ನಮ್ಮನ್ನು ನುಂಗಿಬಿಟ್ಟಿತೇ ? ಮತ್ತೊಬ್ಬ ಹೇಳಿದ – ಛೇ ! ಛೇ ! ಇದೇನು ನಮ್ಮನ್ನು ನುಂಗೀತು ? ಹಾಗೇನಾದರೂ ಸಾಹಸ ಮಾಡಿದರೆ ಕ್ಷಣಾರ್ಧದಲ್ಲಿ ಇವನೂ ಬಕಾಸುರನಂತೆ ನಾಶವಾಗಿ ಹೋದಾನು. ನಮ್ಮ ಮುದ್ದು ಕೃಷ್ಣನು ನಮ್ಮನ್ನು ನುಂಗಲು ಬಿಡುವನೇ ? ಹೀಗೆ ಹೇಳುತ್ತಾ ಆ ಗೊಲ್ಲಬಾಲಕರು ಕೃಷ್ಣನ ನಗುಮುಖವನ್ನು ದಿಟ್ಟಿಸಿ ನೋಡುತ್ತಾ, ಚಪ್ಪಾಳೆಗಳನ್ನು ತಟ್ಟುತ್ತಾ ನಗು-ನಗುತ್ತಾ ಹೆಬ್ಬಾವಿನ ಆ ಮುಖದಲ್ಲಿ ನುಗ್ಗಿದರು. ॥ ೨೪ ॥ ಅಜ್ಞರಾದ ಆ ಗೋಪಬಾಲಕರು ಪರಸ್ಪರ ವಾಗಿ ಮಾತನಾಡಿಕೊಳ್ಳುತ್ತಿದ್ದ ಉತ್ಪ್ರೇಕ್ಷೆಯ ಮಾತುಗಳನ್ನು ಶ್ರೀಕೃಷ್ಣನು ಕೇಳಿಸಿಕೊಂಡು, ಅಯ್ಯೋ ! ಇವರಿಗಾದರೋ ನಿಜವಾದ ಸರ್ಪವೂ ಕೂಡ ಸುಳ್ಳೆಂದು ಕಂಡು ಬರುತ್ತಿದೆಯಲ್ಲ ! ಎಂದು ಯೋಚಿಸಿದನು. ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಇವನು ರಾಕ್ಷಸನಾಗಿದ್ದಾನೆ ಎಂದು ತಿಳಿದುಕೊಂಡನು. ಅವನಿಂದ ಏನು ತಾನೇ ಅಡಗಿರಬಲ್ಲದು ? ಅವನು ಎಲ್ಲರ ಹೃದಯ ದಲ್ಲಿಯೂ ವಾಸವಾಗಿದ್ದಾನೆ. ತನ್ನ ಗೆಳೆಯರಾದ ಗೊಲ್ಲ ಬಾಲಕರನ್ನು ಅವನ ಬಾಯೊಳಗೆ ಹೋಗುವುದನ್ನು ತಡೆಯ ಬೇಕೆಂದು ನಿಶ್ಚಯಿಸಿದನು. ॥ ೨೫ ॥ ಭಗವಂತನು ಹೀಗೆ ಯೋಚಿಸುವಾಗಲೇ ಎಲ್ಲ ಗೋಪಾಲಬಾಲಕರು ಕರುಗಳೊಂದಿಗೆ ಅಸುರನ ಹೊಟ್ಟೆಯೊಳಗೆ ಪ್ರವೇಶಿಸಿಯೇ ಬಿಟ್ಟರು. ಆದರೆ ಅಘಾಸುರನು ಅವರನ್ನು ಇನ್ನೂ ನುಂಗಿರಲಿಲ್ಲ. ಇದರ ಕಾರಣ – ಅಘಾಸುರನು ತನ್ನ ಅಣ್ಣ ಬಕಾಸುರ ಮತ್ತು ಅಕ್ಕ ಪೂತನೆಯನ್ನು ವಧಿಸಿದುದನ್ನು ನೆನೆದು, ಅವರನ್ನು ವಧಿಸಿದ ಶ್ರೀಕೃಷ್ಣನು ಬಾಯೊಳಗೆ ಬಂದಾಗ ಎಲ್ಲರನ್ನು ಒಂದೇ ಬಾರಿಗೆ ನುಂಗಿ ಬಿಡುವೆನೆಂದು ದಾರಿಕಾಯುತ್ತಿದ್ದನು. ॥ ೨೬ ॥ ಸಕಲರಿಗೂ ಅಭಯಪ್ರದನಾದ ಶ್ರೀಕೃಷ್ಣನು ಗೊಲ್ಲಬಾಲಕರಿಗೂ ಇವನೇ ಏಕಮಾತ್ರರಕ್ಷಕನಾಗಿದ್ದನು. ಆದರೂ ಅವರು ಇವನ ಕೈತಪ್ಪಿ ಹೋಗಿದ್ದರು. ಹುಲ್ಲು ಕಡ್ಡಿಯು ಕೈತಪ್ಪಿ ಅಗ್ನಿಗೆ ಬಿದ್ದು ಹೋಗುವಂತೇ ಕರುಗಳೂ, ದೀನರಾದ ಗೋಪಾಲಕರೂ ಕೃಷ್ಣನ ಕೈ ತಪ್ಪಿ ಅಘಾಸುರನ ಜಠರಾಗ್ನಿಗೆ ಬಿದ್ದುಹೋಗಿದ್ದರು. ದಯಾರ್ದ್ರ ಹೃದಯನಾದ ಶ್ರೀಕೃಷ್ಣನು ದೈವದ ಈ ವಿಚಿತ್ರವಾದ ಗತಿಯನ್ನು ನೋಡಿ ಆಚ್ಚರಿಗೊಂಡನು. ॥ ೨೭ ॥ 'ಈಗ ನಾನೇನು ಮಾಡಲಿ?' ಎಂದು ತಾನು ಮಾಡಬೇಕಾದ ಕರ್ತವ್ಯದ ಕುರಿತಾಗಿ ಯೋಚಿಸಿದನು. ಸಂತಸ್ವಭಾವದ ನನ್ನ ಗೆಳೆಯರಾದ ಗೋಪಾಲರಿಗೂ, ಕರುಗಳಿಗೂ ಯಾವುದೇ ಹಿಂಸೆಯೂ ಆಗಬಾರದು. ಈ ಎರಡನ್ನು ಹೇಗೆ ಸಾಧಿಸಲಿ ? ಪರೀಕ್ಷಿತನೇ ! ಶ್ರೀಹರಿಯು ಭೂತ ಭವಿಷ್ಯದ್ವರ್ತಮಾನಗಳನ್ನು ತಿಳಿದವನಾಗಿದ್ದನು. ಅವನಿಗೆ ಈ ಉಪಾಯವನ್ನು ತಿಳಿಯುವುದರಲ್ಲಿ ಕಷ್ಟವಾಗಿರಲಿಲ್ಲ. ಅವನು ತನ್ನ ಕರ್ತವ್ಯವನ್ನು ನಿಶ್ಚಯಿಸಿಕೊಂಡು ಹೆಬ್ಬಾವಿನ ಮುಖದಲ್ಲಿ ಪ್ರವೇಶಿಸಿ ಬಿಟ್ಟನು. ॥ ೨೮ ॥ ಆ ಸಮಯದಲ್ಲಿ ಮೋಡಗಳಲ್ಲಿ ಅಡಗಿದ್ದ ದೇವತೆಗಳು ಭಯಗೊಂಡು ಅಯ್ಯೋ ! ಅಯ್ಯೋ ! ಸರ್ವನಾಶ ವಾಯಿತೆಂದು ಕೂಗಿಕೊಂಡರು. ಅಘಾಸುರನ ಹಿತೈಷಿಗಳಾದ ಕಂಸನೇ ಮೊದಲಾದ ರಾಕ್ಷಸರು ಹಿರಿ-ಹಿರಿ ಹಿಗ್ಗಿದರು. ॥ ೨೯ ॥

ತಚ್ಛ್ರುತ್ವಾ ಭಗವಾನ್ ಕೃಷ್ಣಸ್ತ್ವವ್ಯಯಃ ಸಾರ್ಭವತ್ಸಕಮ್ ।
ಚೂರ್ಣೀಚಿಕೀರ್ಷೋರಾತ್ಮಾನಂ ತರಸಾ ವವೃಧೇ ಗಲೇ
॥ ೩೦ ॥

ತತೋಽತಿಕಾಯಸ್ಯ ನಿರುದ್ಧಮಾರ್ಗಿಣೋ
ಹ್ಯುದ್ಗೀರ್ಣದೃಷ್ಟೇರ್ಭ್ರಮತಶ್ಚಿತಸ್ತತಃ ।
ಪ್ರಾಣೋಽಂತರಂಗೇ ಪವನೋ ನಿರುದ್ಧೋ
ಮೂರ್ಧನ್ವಿ ನಿಷ್ಪಾಟ್ಯ ವಿನಿರ್ಗತೋ ಬಹಿಃ ॥ ೩೧ ॥

ತೇನೈವ ಸರ್ವೇಷು ಬಹಿರ್ಗತೇಷು
ಪ್ರಾಣೇಷು ವತ್ಸಾನ್ಸುಹೃದಃ ಪರೇತಾನ್ ।
ದೃಷ್ಟ್ವಾ ಸ್ವಯೋತ್ಥಾಪ್ಯ ತದನ್ವಿತಃ ಪುನ-
ರ್ವಕ್ತ್ರಾನ್ಮುಕುಂದೋ ಭಗವಾನ್ವಿನಿರ್ಯಯೌ ॥ ೩೨ ॥

ಪೀನಾಹಿಭೋಗೋತ್ಥಿತಮದ್ಭುತಂ ಮಹ-
ಜ್ಜ್ಯೋತಿಃ ಸ್ವಧಾಮ್ನಾ ಜ್ವಲಯದ್ದಿಶೋ ದಶ ।
ಪ್ರತೀಕ್ಷ್ಯ ಖೇಽವಸ್ಥಿತಮೀಶನಿರ್ಗಮಂ
ವಿವೇಶ ತಸ್ಮಿನ್ನಿಷತಾಂ ದಿವೌಕಸಾಮ್ ॥ ೩೩ ॥

ತತೋಽತಿಹೃಷ್ಟಾಃ ಸ್ವಕೃತೋಽಕೃತಾರ್ಹಣಂ
ಪುಷ್ಪೈಃ ಸುರಾ ಅಪ್ಸರಸಶ್ಚ ನರ್ತನೈಃ ।
ಗೀತೈಃ ಸುಗಾ ವಾದ್ಯಧರಾಶ್ಚ ವಾದ್ಯಕೈಃ
ಸ್ತವೈಶ್ಚ ವಿಪ್ರಾ ಜಯನಿಃಸ್ವನೈರ್ಗಣಾಃ ॥ ೩೪ ॥

ತದದ್ಭುತಸ್ತೋತ್ರಸುವಾದ್ಯಗೀತಿಕಾ-
ಜಯಾದಿನೈಕೋತ್ಸವಮಂಗಲಸ್ವನಾನ್ ।
ಶ್ರುತ್ವಾ ಸ್ವಧಾಮ್ನೋಽಂತ್ಯಜ ಆಗತೋಽಚಿರಾದ್
ದೃಷ್ಟ್ವಾ ಮಹೀಶಸ್ಯ ಜಗಾಮ ವಿಸ್ಮಯಮ್ ॥ ೩೫ ॥

ರಾಜನ್ನಾಜಗರಂ ಚರ್ಮ ಶುಷ್ಕಂ ವೃಂದಾವನೇಽದ್ಭುತಮ್ ।
ವ್ರಜೌಕಸಾಂ ಬಹುತಿಥಂ ಬಭೂವಾಕ್ರೀಡಗಹ್ವರಮ್
॥ ೩೬ ॥

ಅಘಾಸುರನು ಕರುಗಳನ್ನು ಮತ್ತು ಗೊಲ್ಲಬಾಲಕರನ್ನು ಭಗವಾನ್ ಶ್ರೀಕೃಷ್ಣನೊಂದಿಗೆ ಕೋರೆಹಲ್ಲುಗಳಿಂದ ಜಗಿದು ನುಂಗಿ ಜೀರ್ಣ ಮಾಡಿಕೊಳ್ಳಲು ಹವಣಿಸುತ್ತಿದ್ದನು. ಆದರೆ ಆಗಲೇ ಅವಿನಾಶೀ ಶ್ರೀಕೃಷ್ಣನು ದೇವತೆಗಳ ಕರುಣಾಕ್ರಂದನವನ್ನು ಕೇಳಿ ಅಸುರನ ಗಂಟಲೊಳಗೆ ತನ್ನ ಶರೀರವನ್ನು ವೇಗವಾಗಿ ಹಿಗ್ಗಿಸ ತೊಡಗಿದನು. ॥ ೩೦ ॥ ಅವನು ಬೆಳೆಯುತ್ತಾ-ಬೆಳೆಯುತ್ತಾ ಅವನ ಗಂಟಲು ತುಂಬಿ ಉಸಿರು ಕಟ್ಟಿಹೋಯಿತು. ಕಣ್ಣುಗಳು ತಿರುಗಿದವು. ಅವನು ವ್ಯಾಕುಲನಾಗಿ ಬಹಳವಾಗಿ ಚಡಪಡಿಸಿದನು. ಶ್ವಾಸೋಶ್ವಾಸಗಳು ನಿಂತುಹೋಗಿ ವಾಯುವು ಇಡೀ ಶರೀರದಲ್ಲಿ ತುಂಬಿ ಹೋಯಿತು. ಕೊನೆಗೆ ಪ್ರಾಣವು ಬ್ರಹ್ಮರಂಧ್ರವನ್ನು ಭೇದಿಸಿ ಹೊರಟು ಹೋಯಿತು. ॥ ೩೧ ॥ ಅದೇ ಮಾರ್ಗದಿಂದ ಅವನ ಎಲ್ಲ ಇಂದ್ರಿಯಗಳು ಪ್ರಾಣದೊಂದಿಗೆ ಶರೀರದಿಂದ ಹೊರ ಬಿದ್ದವು. ಆಗಲೇ ಭಗವಾನ್ ಮುಕುಂದನು ತನ್ನ ಅಮೃತಮಯ ದೃಷ್ಟಿಯಿಂದ ಸತ್ತು ಹೋದ ಕರುಗಳನ್ನು ಮತ್ತು ಗೋಪಬಾಲಕರನ್ನು ಬದುಕಿಸಿದನು ಹಾಗೂ ಅವರೆಲ್ಲರನ್ನು ಜೊತೆಗೆ ಕರೆದುಕೊಂಡು ಅವನು ಅಘಾಸುರನ ಬಾಯಿಯಿಂದ ಹೊರಗೆ ಬಂದನು. ॥ ೩೨ ॥ ಆ ಹೆಬ್ಬಾವಿನ ಸ್ಥೂಲ ಶರೀರದಿಂದ ಅತ್ಯಂತ ಅದ್ಭುತ ಹಾಗೂ ಮಹಾಜ್ಯೋತಿಯೊಂದು ಹೊರಟಿತು. ಆಗ ಆ ಜ್ಯೋತಿಯ ಪ್ರಕಾಶದಿಂದ ಹತ್ತು ದಿಕ್ಕುಗಳೂ ಬೆಳಗಿದವು. ಅದು ಸ್ವಲ್ಪ ಹೊತ್ತು ಆಕಾಶದಲ್ಲಿ ನೆಲೆಸಿ ಭಗವಂತನು ಹೊರಬರುವುದನ್ನು ಪ್ರತೀಕ್ಷೆ ಮಾಡುತ್ತಿತ್ತು. ಅವನು ಹೊರಗೆ ಬರುತ್ತಲೇ ಅದು ಸಕಲ ದೇವತೆಗಳು ನೋಡು-ನೋಡುತ್ತಿರುವಂತೆ ಭಗವಂತನಲ್ಲಿ ಸೇರಿ ಹೋಯಿತು. ॥ ೩೩ ॥ ಆ ಸಮಯದಲ್ಲಿ ದೇವತೆಗಳು ಹೂಮಳೆಯನ್ನು ಸುರಿಸಿ, ಅಪ್ಸರೆಯರು ನರ್ತನ ಮಾಡುತ್ತಾ, ಗಂಧರ್ವರು ಹಾಡಿ, ವಿದ್ಯಾಧರರು ವಾದ್ಯಗಳನ್ನು ನುಡಿಸಿ, ಬ್ರಾಹ್ಮಣರು ಸ್ವಸ್ತಿವಾಚನ ಮಾಡುತ್ತಾ , ಪಾರ್ಷದರು ಶ್ರೀಕೃಷ್ಣನಿಗೆ ಜಯವಾಗಲಿ, ಯದುಕುಮಾರನಿಗೆ ಜಯವಾಗಲೀ ಎಂದು ಜಯಘೋಷ ಮಾಡುತ್ತಾ ಆನಂದದಿಂದ ಭಗವಂತನನ್ನು ಅಭಿನಂದಿಸಿದರು. ಏಕೆಂದರೆ, ಭಗವಾನ್ ಶ್ರೀಕೃಷ್ಣನು ಅಘಾಸುರನ್ನು ಕೊಂದು ಅವರೆಲ್ಲರ ದೊಡ್ಡ ಕೆಲಸವನ್ನು ಮಾಡಿದ್ದನು. ॥ ೩೪ ॥ ಆ ಅದ್ಭುತ ಸ್ತುತಿಗಳು, ಮಂಗಳವಾದ್ಯ-ಗೀತೆಗಳು, ಜಯಕಾರ ಧ್ವನಿಗಳೂ, ಆನಂದೋತ್ಸವದ ಮಂಗಳಧ್ವನಿಗಳು ಬ್ರಹ್ಮಲೋಕಕ್ಕೆ ಮುಟ್ಟಿದವು. ಬ್ರಹ್ಮದೇವರು ಆ ಧ್ವನಿಯನ್ನು ಕೇಳಿದಾಗ ಅವರು ಶೀಘ್ರವಾಗಿ ತನ್ನ ವಾಹನವನ್ನೇರಿ ಶ್ರೀಕೃಷ್ಣನಿರುವಲ್ಲಿಗೆ ಬಂದು ಅವನ ಮಹಿಮೆಯನ್ನು ನೋಡಿ ಆಶ್ಚರ್ಯಚಕಿತರಾದರು. ॥ ೩೫ ॥ ಪರೀಕ್ಷಿತನೇ ! ವೃಂದಾವನದಲ್ಲಿ ಆ ಹೆಬ್ಬಾವಿನ ಚರ್ಮವು ಒಣಗಿಹೋದಾಗ ಅದು ವ್ರಜವಾಸಿಗಳಿಗೆ ಅನೇಕ ದಿನಗಳವರೆಗೆ ಆಟವಾಡುವ ಒಂದು ಅದ್ಭುತ ಗುಹೆಯಂತಾಗಿತ್ತು. ॥ ೩೬ ॥ ಭಗವಂತನು ಗೊಲ್ಲಬಾಲಕರನ್ನು ಮೃತ್ಯುಮುಖದಿಂದ ಬದುಕಿಸಿದ್ದು ಮತ್ತು ಅಘಾಸುರನಿಗೆ ಮೋಕ್ಷವನ್ನು ಕರುಣಿಸಿದ ಆ ಲೀಲೆಯನ್ನು ತನ್ನ ಕೌಮಾರಾವಸ್ಥೆಯಲ್ಲಿ ಅಂದರೆ ಐದನೇ ವರ್ಷದಲ್ಲಿ ನಡೆಸಿದ್ದನು. ಗೊಲ್ಲಬಾಲಕರು ಅದನ್ನು ಆಗಲೇ ನೋಡಿಯೂ ಇದ್ದರು. ಆದರೆ

ಏತತ್ಕೌಮಾರಜಂ ಕರ್ಮ ಹರೇರಾತ್ಮಾಹಿಮೋಕ್ಷಣಮ್ ।
ಮೃತ್ಯೋಃ ಪೌಗಂಡಕೇ ಬಾಲಾ ದೃಷ್ಟ್ವೋಚುರ್ವಿಸ್ಮಿತಾ ವ್ರಜೇ
॥ ೩೭ ॥

ನೈತದ್ವಿಚಿತ್ರಂ ಮನುಜಾರ್ಭಮಾಯಿನಃ
ಪರಾವರಾಣಾಂ ಪರಮಸ್ಯ ವೇಧಸಃ ।
ಅಘೋಽಪಿ ಯತ್ಸ್ಪರ್ಶನಧೌತಪಾತಕಃ
ಪ್ರಾಪಾತ್ಮಸಾಮ್ಯಂ ತ್ವಸತಾಂ ಸುದುರ್ಲಭಮ್ ॥ ೩೮ ॥

ಸಕೃದ್ಯದಂಗಪ್ರತಿಮಾಂತರಾಹಿತಾ
ಮನೋಮಯೀಂ ಭಾಗವತೀಂ ದದೌ ಗತಿಮ್ ।
ಸ ಏವ ನಿತ್ಯಾತ್ಮ ಸುಖಾನುಭೂತ್ಯಭಿ-
ವ್ಯುದಸ್ತಮಾಯೋಽಂತರ್ಗತೋ ಹಿ ಕಿಂ ಪುನಃ ॥ ೩೯ ॥

ಸೂತ ಉವಾಚ

ಇತ್ಥಂ ದ್ವಿಜಾ ಯಾದವದೇವದತ್ತಃ
ಶ್ರುತ್ವಾ ಸ್ವರಾತುಶ್ಚರಿತಂ ವಿಚಿತ್ರಮ್ ।
ಪಪ್ರಚ್ಛ ಭೂಯೋಽಪಿ ತದೇವ ಪುಣ್ಯಂ
ವೈಯಾಸಕಿಂ ಯನ್ನಿಗೃಹೀತಚೇತಾಃ ॥ ೪೦ ॥

ರಾಜೋವಾಚ

ಬ್ರಹ್ಮನ್ಕಾಲಾಂತರಕೃತಂ ತತ್ಕಾಲೀನಂ ಕಥಂ ಭವೇತ್ ।
ಮತ್ಕೌಮಾರೇ ಹರಿಕೃತಂ ಜಗುಃ ಪೌಗಂಡಕೇಽರ್ಭಕಾಃ
॥ ೪೧ ॥

ತನ್ಮೋಹಿ ಮೇ ಮಹಾಯೋಗಿನ್ಪರಂ ಕೌತೂಹಲಂ ಗುರೋ ।
ನೂನಮೇತದ್ಧರೇರೇವ ಮಾಯಾ ಭವತಿ ನಾನ್ಯಥಾ
॥ ೪೨ ॥

ವಯಂ ಧನ್ಯತಮಾ ಲೋಕೇ ಗುರೋಽಪಿ ಕ್ಷತ್ರಬಂಧವಃ ।
ಯತ್ಪಿಬಾಮೋ ಮುಹುಸ್ತತ್ತ್ವಃ ಪುಣ್ಯಂ ಕೃಷ್ಣಕಥಾಮೃತಮ್
॥ ೪೩ ॥

ಪೌಗಂಡಾವಸ್ಥೆಯಲ್ಲಿ* ಅರ್ಥಾತ್ ಆರನೇ ವರ್ಷದಲ್ಲಿ ಅತ್ಯಂತ ಆಶ್ಚರ್ಯಚಕಿತರಾಗಿ ವ್ರಜದಲ್ಲಿ ಅದನ್ನು ವರ್ಣಿಸಿದರು. ॥ ೩೭॥ ಅಘಾಸುರನು ಮೂರ್ತಿವೆತ್ತ ಅಘ (ಪಾಪ)ವೇ ಆಗಿದ್ದನು. ಭಗವಂತನ ಸ್ಪರ್ಶಮಾತ್ರದಿಂದ ಅವನ ಪಾಪಗಳೆಲ್ಲವೂ ತೊಳೆದು ಹೋದುವು ಮತ್ತು ಪಾಪಿಗಳಿಗೆ ಎಂದೂ ಸಿಗಲಾರದ ಸಾರೂಪ್ಯ ಮುಕ್ತಿಯು ಅವನಿಗೆ ದೊರೆಯಿತು. ಆದರೆ ಇದೇನು ಆಶ್ಚರ್ಯದ ಮಾತಲ್ಲ. ಏಕೆಂದರೆ, ಮನುಷ್ಯಬಾಲಕನಂತೆ ಲೀಲೆಯನ್ನು ಮಾಡುವ ಅವನೇ ಪರಮಪುರುಷ ಪರಮಾತ್ಮನಾಗಿದ್ದಾನೆ. ಅವನು ವ್ಯಕ್ತ-ಅವ್ಯಕ್ತ ಮತ್ತು ಕಾರ್ಯ-ಕಾರಣರೂಪೀ ಸಮಸ್ತ ಜಗತ್ತಿನ ಏಕಮಾತ್ರ ನಿಯಾಮಕನಾಗಿದ್ದಾನೆ. ॥ ೩೮ ॥ ಭಗವಾನ್ ಶ್ರೀಕೃಷ್ಣನ ಯಾವುದೇ ಒಂದು ಅಂಗದ ಭಾವನಿರ್ಮಿತ ಪ್ರತಿಮೆಯನ್ನು ಧ್ಯಾನದ ಮೂಲಕ ಒಮ್ಮೆಯಾದರೂ ಹೃದಯದಲ್ಲಿ ನೆಲೆಸಿಕೊಂಡರೆ, ಅದು ಸಾಲೋಕ್ಯ, ಸಾಮೀಪ್ಯ ಮೊದಲಾದ ಗತಿಯನ್ನು ಕರುಣಿಸುತ್ತದೆ. ಅದು ಭಗವಂತನ ಅಂತರಂಗ ಭಕ್ತರಿಗೆ ಸದಾ ದೊರೆಯುತ್ತದೆ. ಭಗವಂತನು ಆತ್ಮಾನಂದದ ನಿತ್ಯ ಸಾಕ್ಷಾತ್ಕಾರ ಸ್ವರೂಪನಾಗಿದ್ದಾನೆ. ಮಾಯೆಯು ಅವನ ಬಳಿಯಲ್ಲಿ ಸುಳಿಯುವುದಿಲ್ಲ. ಅಂತಹ ಆ ಭಗವಂತನು ಅಘಾಸುರ ಶರೀರದಲ್ಲಿ ಪ್ರವೇಶಿಸಿದನೆಂದರೆ ಅವನಿಗೆ ಸದ್ಗತಿಯಾಗುವುದರಲ್ಲಿ ಸಂದೇಹ ವಿದೆಯೇ ? ॥ ೩೯ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ ! ಯದುವಂಶ ಶಿರೋಮಣಿಯಾದ ಶ್ರೀಕೃಷ್ಣನೇ ಪರೀಕ್ಷಿದ್ರಾಜನಿಗೆ ಜೀವನದಾನ ಮಾಡಿದ್ದನು. ಪರೀಕ್ಷಿತನು ಶಿಷ್ಯ ರಕ್ಷಕನೂ, ಜೀವದಾತನೂ ಆದ ಶ್ರೀಕೃಷ್ಣನ ಸುಮನೋಹರವಾದ ಲೀಲಾ ಪ್ರಸಂಗಗಳನ್ನು ಕೇಳಿದಾಗ ಅವನ ಚಿತ್ತವು ಆ ಅಮೃತಮಯ ಲೀಲೆಗಳಿಂದ ಮುಗ್ಧವಾಗಿ ಹೋಗಿತ್ತು. ಇನ್ನೂ ಕೇಳಬೇಕೆಂದು ಅನಿಸಿತು. ಜೀತೇಂದ್ರಿಯನಾದ ಆ ಪರೀಕ್ಷಿತನು ಶ್ರೀಶುಕಮಹಾ ಮುನಿಗಳಲ್ಲಿ ಶ್ರೀಕೃಷ್ಣನ ಪವಿತ್ರ ಲೀಲೆಗಳ ಕುರಿತು ಪುನಃ ಪ್ರಶ್ನಿಸಿದನು. ॥ ೪೦ ॥

ಪರೀಕ್ಷಿದ್ರಾಜನು ಕೇಳಿದನು – ಪರಮಪೂಜ್ಯರೇ ! ಭಗವಾನ್ ಶ್ರೀಕೃಷ್ಣನು ಐದನೆಯ ವರ್ಷದಲ್ಲಿ ನಡೆಸಿದ ಲೀಲೆಯನ್ನು ಅವನ ಆರನೆಯ ವರ್ಷದಲ್ಲಿ ಗೋಪಾಲಕರು ವ್ರಜದಲ್ಲಿ ಹೋಗಿ ಹೇಳಿದರೆಂದು ತಾವು ಅಪ್ಪಣೆ ಕೊಡಿಸಿದಿರಿ. ಗತಕಾಲದ ಲೀಲೆಯು ವರ್ತಮಾನದಲ್ಲಿ ನಡೆದಂತೆ ಹೇಳಲು ಹೇಗೆ ಸಾಧ್ಯವಾಯಿತು ? ॥ ೪೧ ॥ ಮಹಾಯೋಗಿಗಳೇ ! ಇದನ್ನು ಕೇಳಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ದಯಮಾಡಿ ಹೇಳಿರಿ. ನಿಶ್ಚಯವಾಗಿಯೂ ಇದು ಹರಿಯ ಮಾಯೆಯೇ ಹೊರತು ಬೇರೆ ಯಾವ ರೀತಿಯಿಂದಲೂ ಹೀಗಾಗಲು ಸಾಧ್ಯವಿಲ್ಲ ॥ ೪೨ ॥ ಗುರುಗಳೇ ! ನಾವು ಕ್ಷತ್ರಬಂಧುಗಳಾಗಿದ್ದರೂ (ಕರ್ತವ್ಯವನ್ನು ಪಾಲಿಸದೆ ನಾಮಮಾತ್ರಕ್ಕೆ ಕ್ಷತ್ರಿಯರಾಗಿದ್ದರೂ) ಧನ್ಯತಮರಾಗಿ ಇದ್ದೇವೆ. ತಮ್ಮ ಮುಖಾರವಿಂದದಿಂದ ಪುಣ್ಯತಮವಾದ ಶ್ರೀಕೃಷ್ಣ ಕಥಾಮೃತವನ್ನು ಸತತವಾಗಿ ಪಾನಮಾಡುತ್ತಿದ್ದೇವಲ್ಲವೇ ? ॥ ೪೩ ॥

* ಕೌಮಾರಃ – ಪೌಗಂಡಃ – **ಕೌಮಾರಂ ಪಂಚಮಾಬ್ದಾಂತಂ ಪೌಗಂಡಂ ದಶಮಾವಧಿ । ಕೈಶೋರಮಾಪಂಚಾದಶಾದ್ಯೌವನಂ ಚ ತತಃ ಪರಮ್ ॥**

ಸೂತ ಉವಾಚ

ಇತ್ಥಂ ಸ್ಮ ಪೃಷ್ಟಃ ಸ ತು ಬಾದರಾಯಣಿಃ
ತತ್ಸ್ಮಾರಿತಾನಂತಹೃತಾಖಿಲೇಂದ್ರಿಯಃ ।
ಕೃಚ್ಛ್ರಾತ್ಪುನರ್ಲಬ್ಧ ಬಹಿರ್ದೃಶಿಃ ಶನೈಃ
ಪ್ರತ್ಯಾಹ ತಂ ಭಾಗವತೋತ್ತಮೋತ್ತಮ ॥ ೪೪ ॥

ಸೂತ ಪುರಾಣಿಕರು ಹೇಳುತ್ತಾರೆ – ಪರಮಾತ್ಮನ ಪರಮ ಭಕ್ತರಲ್ಲಿ ಶ್ರೇಷ್ಠರಾದ ಶೌನಕಮುನಿವರ್ಯರೇ! ಪರೀಕ್ಷಿತನು ಹೀಗೆ ಪ್ರಶ್ನಿಸಿದಾಗ ಶ್ರೀ ಶುಕದೇವರಿಗೆ ಭಗವಂತನ ಲೀಲಾ ಪ್ರಸಂಗದ ಸ್ಮರಣೆಯುಂಟಾಗಿ ಇಂದ್ರಿಯಗಳೆಲ್ಲವೂ ಬಹಿರ್ವ್ಯಾಪಾರವನ್ನು ತೊರೆದು ಮನಸ್ಸಿನೊಡನೆ ಹೃತ್ಕಮಲದಲ್ಲಿ ಶ್ರೀಕೃಷ್ಣನ ಲೀಲಾ ಪ್ರಸಂಗದಲ್ಲಿ ಲೀನವಾಗಿಬಿಟ್ಟವು. ಹೀಗೆ ಆತ್ಮಾನಂದವನ್ನು ಅನುಭವಿಸುತ್ತಿದ್ದ ಶುಕಬ್ರಹ್ಮರು ಅತ್ಯಂತ ಕಠಿಣತೆಯಿಂದ ಬಹಿರ್ಮುಖರಾಗಿ ಪುನಃ ಭಗವಂತನ ದಿವ್ಯಲೀಲೆಗಳನ್ನು ವರ್ಣಿಸ ತೊಡಗಿದರು. ॥ ೪೪ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಬ್ರಹ್ಮದೇವರ ಮೋಹ ಮತ್ತು ಅದರ ನಿರಸನ

ಶ್ರೀಶುಕ ಉವಾಚ

ಸಾಧು ಪೃಷ್ಟಂ ಮಹಾಭಾಗ ತ್ವಯಾ ಭಾಗವತೋತ್ತಮ ।
ಯನ್ನೂತನಯಸೀಶಸ್ಯ ಶೃಣ್ವನ್ನಪಿ ಕಥಾಂ ಮುಹುಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮಹಾಭಾಗ್ಯಶಾಲಿಯೇ! ಭಗವದ್ಭಕ್ತರಲ್ಲಿ ಶ್ರೇಷ್ಠನಾದವನೇ! ನೀನು ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ಶ್ರೀಕೃಷ್ಣನ ಲೀಲಾಕಥೆಗಳನ್ನು ಬಾರಿ-ಬಾರಿಗೂ ಕೇಳುತ್ತಿದ್ದರೂ, ನೀನು ಕೇಳುತ್ತಿರುವ ಪ್ರಶ್ನೆಗಳ ಮೂಲಕ ಅವನ್ನು ಇನ್ನೂ ಸರಸವಾಗಿ-ನೂತನವಾಗಿ ಕೇಳಲು ಆಶಿಸುತ್ತಿರುವೆಯಲ್ಲ! ॥ ೧ ॥

ಸತಾಮಯಂ ಸಾರಭೃತಾಂ ನಿಸರ್ಗೋ
ಯದರ್ಥವಾಣೀಶ್ರುತಿಚೇತಸಾಮಪಿ ।
ಪ್ರತಿಕ್ಷಣಂ ನವ್ಯವದಚ್ಯುತಸ್ಯ ಯತ್
ಸ್ತ್ರಿಯಾ ವಿಟಾನಾಮಿವ ಸಾಧು ವಾರ್ತಾ ॥ ೨ ॥

ಕಾಮುಕರಾದ ವಿಟ ಪುರುಷರಿಗೆ ಸ್ತ್ರೀಯರ ವಿಷಯಕವಾದ ಚರ್ಚೆಯಲ್ಲಿ ಹೊಸ-ಹೊಸ ರಸವು ದೊರೆಯುವಂತೆ, ಸತ್ಪುರುಷರ ವಾಣಿ, ಕಿವಿ ಮತ್ತು ಹೃದಯಗಳು ಭಗವಂತನ ಲೀಲೆಗಳನ್ನೇ ಗಾನಮಾಡುವುದು, ಶ್ರವಣಿಸುವುದು ಚಿಂತಿಸುವುದರಲ್ಲೆ ತೊಡಗಿರುತ್ತವೆ. ಅವರು ಪ್ರತಿಕ್ಷಣವು ಭಗವಂತನ ಲೀಲೆಗಳನ್ನು ಅಪೂರ್ವ ರಸಮಯ ಹಾಗೂ ನಿತ್ಯನೂತನವಾಗಿ ಅನುಭವಿಸುತ್ತ ಇರುತ್ತಾರೆ. ಇದು ಅವರ ಸ್ವಭಾವವೇ ಆಗಿದೆ. ॥ ೨ ॥

ಶೃಣುಷ್ವಾವಹಿತೋ ರಾಜನ್ನಪಿ ಗುಹ್ಯಂ ವದಾಮಿ ತೇ ।
ಬ್ರೂಯುಃ ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯಮಪ್ಯುತ
॥ ೩ ॥

ಪರೀಕ್ಷಿತನೇ! ನೀನು ಏಕಾಗ್ರಚಿತ್ತನಾಗಿ ಕೇಳು. ಭಗವಂತನ ಈ ಲೀಲೆಯು ಅತ್ಯಂತ ರಹಸ್ಯಮಯವಾಗಿದ್ದರೂ ಕೂಡ ನಾನು ನಿನಗೆ ಹೇಳುತ್ತೇನೆ. ದಯಾಳುಗಳಾದ ಆಚಾರ್ಯರು ತಮ್ಮ ಪ್ರಿಯ ಶಿಷ್ಯನಿಗೆ ರಹಸ್ಯವಿಷಯವನ್ನಾದರೂ ಹೇಳುವಂತೆಯೇ ನಾನು ಎಲ್ಲವನ್ನು ಹೇಳುವೆನು. ॥ ೩ ॥

ತಥಾಘವದನಾನ್ಮೃತ್ಯೋ ರಕ್ಷಿತ್ವಾ ವತ್ಸಪಾಲಕಾನ್ ।
ಸರಿತ್ಪುಲಿನಮಾನೀಯ ಭಗವಾನಿದಮಬ್ರವೀತ್
॥ ೪ ॥

ಭಗವಾನ್ ಶ್ರೀಕೃಷ್ಣನು ತನ್ನ ಸಂಗಡಿಗರಾದ ಗೋಪಬಾಲಕರನ್ನು ಮೃತ್ಯುರೂಪೀ ಅಘಾಸುರನ ಮುಖದಿಂದ ರಕ್ಷಿಸಿದನೆಂಬುದನ್ನು ನಿನಗೆ ಹೇಳಿದ್ದನಲ್ಲವೇ! ಆನಂತರ ಶ್ರೀಕೃಷ್ಣನು ಅವರನ್ನು ಯಮುನಾ ನದಿಯ ತೀರದ ಮರಳದಿಣ್ಣೆಗೆ ಕರೆದುಕೊಂಡು ಬಂದು ತನ್ನ ಮಿತ್ರರಿಗೆ ಹೇಳಿದನು ॥ ೪ ॥

ಅಹೋಽತಿರಮ್ಯಂ ಪುಲಿನಂ ವಯಸ್ಯಾಃ
ಸ್ವಕೇಲಿಸಂಪನ್ಮೃದುಲಾಚ್ಛವಾಲುಕಮ್ ।
ಸ್ಫುಟತ್ಸರೋಗಂಧಹೃತಾಲಿಪತ್ರಿಕ-
ಧ್ವನಿ ಪ್ರತಿಧ್ವಾನಲಸದ್ದ್ರುಮಾಕುಲಮ್ ॥ ೫ ॥

ಪ್ರಿಯಮಿತ್ರರೇ! ಯಮುನೆಯ ಈ ಮರಳದಿಣ್ಣೆಯು ಅತ್ಯಂತ ರಮಣೀಯವಾಗಿದೆ. ನೋಡಿರಲ್ಲ! ಇಲ್ಲಿಯ ಮರಳು ಕೋಮಲವಾಗಿ, ಸ್ವಚ್ಛವಾಗಿದೆ. ನಮಗೆ ಆಟವಾಡಲು ಎಲ್ಲ ಆಟದ ಸಾಮಗ್ರಿಗಳು ಇಲ್ಲಿ ಸಿಗುತ್ತವೆ. ಅಲ್ಲಿ ನೋಡಿರಿ! ಒಂದು ಕಡೆ ಬಣ್ಣ-ಬಣ್ಣದ ಕಮಲಗಳು ಅರಳಿದ್ದು, ಅದರ ಸುಗಂಧಕ್ಕೆ ಆಕರ್ಷಿತವಾದ ದುಂಬಿಗಳು ಸುತ್ತಲೂ ಝೇಂಕರಿಸುತ್ತಿವೆ. ಇನ್ನೊಂದೆಡೆ ಸುಂದರವಾದ ಹಕ್ಕಿಗಳು ಮಧುರವಾಗಿ ಕಲ-ಕಲ ನಿನಾದ ಮಾಡುತ್ತಿವೆ. ಅವುಗಳ ಪ್ರತಿಧ್ವನಿಯಿಂದ ಸುಶೋಭಿತವಾದ ವೃಕ್ಷಗಳು ಈ ಸ್ಥಳದ ಶೋಭೆಯನ್ನು ಇನ್ನೂ ಹೆಚ್ಚಿಸಿವೆ. ॥ ೫ ॥

ಅತ್ರ ಭೋಕ್ತವ್ಯಮಸ್ಮಾಭಿರ್ದಿವಾ ರೂಢಂ ಕ್ಷುಧಾರ್ದಿತಾಃ ।
ವತ್ಸಾಃ ಸಮೀಪೇಽಪಃ ಪೀತ್ವಾ ಚರಂತು ಶನಕೈಸ್ತೃಣಮ್
॥ ೬ ॥

ರಮ್ಯವಾದ ಈ ಸ್ಥಳದಲ್ಲಿ ನಾವೆಲ್ಲರೂ ಊಟಮಾಡೋಣ. ಹೊತ್ತು ಮೀರಿದ್ದು ನಾವೆಲ್ಲರೂ ಬಹಳವಾಗಿ ಹಸಿದಿದ್ದೇವೆ. ಕರುಗಳು ನೀರು ಕುಡಿದು ಇಲ್ಲಿಯೆ ಸಮೀಪದಲ್ಲೇ ಗರಿಕೆ ಹುಲ್ಲನ್ನು ಸಾವಧಾನವಾಗಿ ಮೇಯುತ್ತಿರಲಿ. ॥ ೬ ॥

ತಥೇತಿ ಪಾಯಯಿತ್ವಾರ್ಭಾ ವತ್ಸಾನಾರುಧ್ಯ ಶಾದ್ವಲೇ ।
ಮುಕ್ತ್ವಾ ಶಿಕ್ಯಾನಿ ಬುಭುಜುಃ ಸಮಂ ಭಗವತಾ ಮುದಾ
॥ ೭ ॥

ಗೋಪಬಾಲಕರೆಲ್ಲರೂ 'ಹಾಗೆಯೇ ಆಗಲೀ' ಎಂದು ಏಕಕಂಠದಿಂದ ಹೇಳುತ್ತಾ, ಕರುಗಳಿಗೆ ನೀರು ಕುಡಿಸಿ ಹಚ್ಚ ಹಸಿರಾಗಿದ್ದ ಹುಲ್ಲಿರುವಲ್ಲಿ ಮೇಯಲು ಬಿಟ್ಟರು. ತಾವು ತಂದಿದ್ದ ಬುತ್ತಿಗಳೆಲ್ಲವನ್ನು ಬಿಚ್ಚಿ ಶ್ರೀಕೃಷ್ಣನೊಡನೆ ಪರಮಾನಂದದಿಂದ ಊಟಮಾಡಲು ಪ್ರಾರಂಭಿಸಿದರು. ॥ ೭ ॥ ಗೋಪಬಾಲಕರ ಮಧ್ಯದಲ್ಲಿ ಭಗವಾನ್ ಶ್ರೀಕೃಷ್ಣನು ಕುಳಿತಿದ್ದನು. ಗೋಪಬಾಲಕರು ಶ್ರೀಕೃಷ್ಣನ ಸುತ್ತಲೂ ಮಂಡಲಾಕಾರವಾಗಿ ಕುಳಿತಿದ್ದರು. ಎಲ್ಲರ ಮುಖಗಳೂ ಶ್ರೀಕೃಷ್ಣನ ಕಡೆಗೆ ಇದ್ದು, ಎಲ್ಲರ ಕಣ್ಣುಗಳು ಆನಂದದಿಂದ ವಿಕಸಿತವಾಗಿದ್ದವು. ವನ ಭೋಜನದ ಸಮಯ ಶ್ರೀಕೃಷ್ಣನೊಂದಿಗೆ ಕುಳಿತಿರುವ ಗೋಪಬಾಲಕರು ಕಮಲದ ಕರ್ಣಿಕೆಯ ಸುತ್ತಲು ಇರುವ ಎಸಳುಗಳಂತೆ ವಿರಾಜಿಸುತ್ತಿದ್ದರು. ॥ ೮ ॥

ಕೃಷ್ಣಸ್ಯ ವಿಶ್ವಕ್ಸುರುರಾಜಿಮಂಡಲೈ-
ರಭ್ಯಾನನಾಃ ಫುಲ್ಲದೃಶೋ ವ್ರಜಾರ್ಭಕಾಃ ।
ಸಹೋಪವಿಷ್ಟಾ ವಿಪಿನೇ ವಿರೇಜು-
ಶ್ಚದಾ ಯಥಾಂಭೋರುಹಕರ್ಣಿಕಾಯಾಃ ॥ ೮ ॥

ಕೆಲವರು ಭೋಜನ ಮಾಡಲು ಆಗಲವಾದ ಹೂವುಗಳಿಂದಲೆ ತಟ್ಟೆಯನ್ನು ಮಾಡಿಕೊಂಡರೆ, ಕೆಲವರು ಎಸಳುಗಳಿಂದಲೂ, ಕೆಲವರು ಎಲೆಗಳಿಂದಲೂ, ಚಿಗುರುಗಳಿಂದಲೂ, ಹಣ್ಣುಗಳಿಂದಲೂ, ಬುತ್ತಿಯ ನೆಲವುಗಳಿಂದಲೂ, ಭೂರ್ಜಪತ್ರದಿಂದಲೂ, ಭೋಜನ ಪಾತ್ರೆಗಳನ್ನು ಮಾಡಿಕೊಂಡರು. ಕೆಲವರು ಆಗಲವಾದ ಕಲ್ಲನ್ನೇ ಭೋಜನ ಪಾತ್ರೆಯಾಗಿಸಿಕೊಂಡು ಭೋಜನ ಮಾಡತೊಡಗಿದರು. ॥ ೯ ॥ ಭಗವಾನ್ ಶ್ರೀಕೃಷ್ಣನು ಮತ್ತು ಗೋಪ ಬಾಲಕರೆಲ್ಲರೂ ಪರಸ್ಪರ ತಮ್ಮ-ತಮ್ಮ ಬುತ್ತಿಯ ಬೇರೆ-ಬೇರೆ ರುಚಿಗಳನ್ನು ಪ್ರದರ್ಶಿಸುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ನಗಿಸಿದರೆ ಕೆಲವರು ಸ್ವತಃ ನಗುತ್ತಾ-ನಗಿಸುತ್ತಾ ಆನಂದತುಂದಿಲರಾಗಿ ಶ್ರೀಕೃಷ್ಣನೊಂದಿಗೆ ಭೋಜನ ಮಾಡುತ್ತಿದ್ದರು. ॥ ೧೦ ॥

ಕೇಚಿತ್ಪುಷ್ಪೈರ್ದಲೈಃ ಕೇಚಿತ್ಫಲ್ಲವೈರಂಕುರೈಃ ಫಲೈಃ ।
ತಿಸ್ಮಿಶ್ಚಿದ್ಭಿರ್ವಿಷದ್ಭಿಶ್ಚ ಬುಭುಜುಃ ಕೃತಭಾಜನಾಃ
॥ ೯ ॥

ಆ ಸಮಯದಲ್ಲಿ ಶ್ರೀಕೃಷ್ಣನ ಸ್ವರೂಪವು ಮನೋಹರವಾಗಿತ್ತು. ಅವನು ಮುರಳಿಯನ್ನು ಸೊಂಟದಲ್ಲಿ ಪೀತಾಂಬರಕ್ಕೆ ಸಿಕ್ಕಿಸಿದ್ದನು, ಕೊಂಬು ಮತ್ತು ಬೆತ್ತವನ್ನು ಎಡದ ಬಗಲಲ್ಲಿ ಒತ್ತಿಹಿಡಿದಿದ್ದನು. ಕೈಯಲ್ಲಿ ಕೆನೆ ಮೊಸರಿನ ಅನ್ನವಿತ್ತು. ಬೆರಳುಗಳಲ್ಲಿ ನಿಂಬೆ ಹಣ್ಣು-ಮಾವು ಮುಂತಾದ ಹಣ್ಣುಗಳ ಉಪ್ಪಿನಕಾಯಿಗಳನ್ನು ಜೋಡಿಸಿಕೊಂಡಿದ್ದನು. ಅವನ ಸುತ್ತಲೂ ಗೊಲ್ಲಬಾಲಕರಿದ್ದರು. ಅವರ ಮಧ್ಯದಲ್ಲಿ ಕುಳಿತ ಯಜ್ಞಭೋಕ್ತವಾದ ಶ್ರೀಕೃಷ್ಣನು

ಪ್ರಹಸನ್ ಮಿಥೋ ದರ್ಶಯಂತಃ ಸ್ವಪ್ಲಹೋಜ್ಯರುಚಿಂ ಪೃಥಕ್ ।
ಜಗುರ್ಹಸಂತೋ ಹಾಸಯಂತಶ್ಚಾಭ್ಯವಜಹ್ರುಃ ಸಹೇಶ್ವರಾಃ
॥ ೧೦ ॥

ಬಿಭ್ರದ್ವೇಣುಂ ಜಠರಪಟಯೋಃ ಶೃಂಗವೇತ್ರೇ ಚ ಕಕ್ಷೇ
ವಾಮೇ ಪಾಣೌ ಮಸೃಣಕವಲಂ ತತ್ಫಲಾನ್ಯಂಗುಲೀಷು ।
ತಿಷ್ಠನ್ಮಧ್ಯೇ ಸ್ವಪರಿಸುಹೃದೋ ಹಾಸಯನ್ನರ್ಮಭಿಃ ಸ್ವೈಃ
ಸ್ವರ್ಗೇ ಲೋಕೇ ಮಿಷತಿ ಬುಭುಜೇ ಯಜ್ಞಭುಗ್ಬಾಲಕೇಲಿಃ
॥ ೧೧ ॥

ಭಾರತೈವಂ ವತ್ಸಪೇಷು ಭುಂಜಾನೇಷ್ವಚ್ಯುತಾತ್ಮಸು ।
ವತ್ಸಾಸ್ತ್ವಂತರ್ವನೇ ದೂರಂ ವಿವಿಶುಸ್ತೃಣಲೋಭಿತಾಃ
॥ ೧೨ ॥

ತಾನ್‌ದೃಷ್ಟ್ವಾ ಭಯಸಂತ್ರಸ್ತಾನೂಚೇ ಕೃಷ್ಣೋಽಸ್ಯ ಭೀಭಯಮ್ ।
ಮಿತ್ಯಾಣ್ಯಾಶಾನ್ಯಾ ವಿರಮತೇಹಾನೇಷ್ಯೇ ವತ್ಸಕಾನಹಮ್
॥ ೧೩ ॥

ಇತ್ಯುಕ್ತ್ವಾದ್ರಿದರೀಕುಂಜಗಹ್ವರೇಷ್ವಾತ್ಮವತ್ಸಕಾನ್ ।
ವಿಚಿನ್ವಞ್ಶ್ರಗವಾನ್ಕೃಷ್ಣಃ ಸಪಾಣಿಕವಲೋ ಯಯೌ
॥ ೧೪ ॥

ಅಂಭೋಜನ್ಮಜನಿಸ್ತದಂತರಗತೋ ಮಾಯಾರ್ಭಕಸ್ಯೇಹಿತುಃ
ದ್ರಷ್ಟುಂ ಮಂಜು ಮಹಿತ್ವಮನ್ಯದಪಿ ತದ್ವತ್ಸಾನಿತೋ ವತ್ಸಪಾನ್ ।
ನೀತ್ವಾನ್ಯತ್ರ ಕುರೂದ್ವಹಾಂತರದಧಾತ್ಖೇಽವಸ್ಥಿತೋ ಯಃ ಪುರಾ
ದೃಷ್ಟ್ವಾಘಾಸುರಮೋಕ್ಷಣಂ ಪ್ರಭವತಃ ಪ್ರಾಪ್ತಃ ಪರಂ ವಿಸ್ಮಯಮ್
॥ ೧೫ ॥

ತತೋ ವತ್ಸಾನದೃಷ್ಟ್ವೈತ್ಯ ಪುಲಿನೇಽಪಿ ಚ ವತ್ಸಪಾನ್ ।
ಉಭಾವಪಿ ವನೇ ಕೃಷ್ಣೋ ವಿಚಿಕಾಯ ಸಮಂತತಃ
॥ ೧೬ ॥

ಕ್ವಾಪ್ಯದೃಷ್ಟ್ವಾಂತರ್ವಿಪಿನೇ ವತ್ಸಾನ್ಪಾಲಾಂಶ್ಚ ವಿಶ್ವವಿತ್ ।
ಸರ್ವಂ ವಿಧಿಕೃತಂ ಕೃಷ್ಣಃ ಸಹಸಾವಜಗಾಮ ಹ
॥ ೧೭ ॥

ವಿನೋದದ ಮಾತುಗಳನ್ನಾಡುತ್ತಾ ಅವರನ್ನು ನಗಿಸುತ್ತಾ, ತಾನೂ ನಗುತ್ತಾ ಅವರೊಡನೆ ಭೋಜನ ಮಾಡುತ್ತಿದ್ದನು. ಸ್ವರ್ಗಲೋಕದ ದೇವತೆಗಳು ಆಶ್ಚರ್ಯಚಕಿತರಾಗಿ ಭೋಜನದ ಲೀಲೆಯನ್ನು ವೀಕ್ಷಿಸುತ್ತಿದ್ದರು. ॥ ೧೧ ॥

ಭರತವಂಶ ಶಿರೋಮಣಿಯೇ ! ಹೀಗೆ ಶ್ರೀಕೃಷ್ಣನ ಲೀಲೆಗಳನ್ನು ನೋಡುತ್ತಾ ಭೋಜನಮಾಡುತ್ತಿದ್ದಾಗ ಗೋಪಬಾಲಕರು ಅವನಲ್ಲಿಯೇ ತನ್ಮಯರಾಗಿಬಿಟ್ಟರು. ಆ ವೇಳೆಗೆ ಮೇಯಲು ಬಿಟ್ಟಿದ್ದ ಕರುಗಳೆಲ್ಲವೂ ಹೊಸ-ಹೊಸ ಹಸಿರು ಹುಲ್ಲಿನ ಆಕರ್ಷಣೆಯಿಂದ ಬಹಳ ದೂರಕ್ಕೆ ಹೋಗಿಬಿಟ್ಟವು. ॥ ೧೨ ॥ ಬಾಲಕರ ಗಮನ ಕರುಗಳ ಕಡೆಗೆ ಹೋದಾಗ ಅವುಗಳನ್ನು ಕಾಣದೆ ಭಯಭ್ರಾಂತರಾದರು. ಆಗ ತನ್ನ ಭಕ್ತರ ಭಯವನ್ನು ಹೊಡೆದಟ್ಟುವ ಭಗವಾನ್ ಶ್ರೀಕೃಷ್ಣನು ಹೇಳಿದನು - 'ನನ್ನ ಪ್ರಿಯ ಮಿತ್ರರೇ ! ಹೆದರಬೇಡಿರಿ. ನೀವು ಭೋಜನ ಮಾಡುವುದನ್ನು ನಿಲ್ಲಿಸಬೇಡಿ. ನಾನು ಈಗಾಗಲೇ ಕರುಗಳನ್ನು ಹೊಡೆದುಕೊಂಡು ಬರುತ್ತೇನೆ'. ॥ ೧೩. ॥ ಗೊಲ್ಲಬಾಲಕರಲ್ಲಿ ಹೀಗೆ ಹೇಳಿ ಭಗವಾನ್ ಶ್ರೀಕೃಷ್ಣನು ಕೈಯಲ್ಲಿ ಮೊಸರನ್ನದ ತುತ್ತನ್ನು ಎತ್ತಿಕೊಂಡೇ ಬೆಟ್ಟ-ಗುಡ್ಡಗಳಲ್ಲಿಯೂ, ಗುಹೆಗಳಲ್ಲಿಯೂ, ಪೊದರುಗಳಲ್ಲಿಯೂ ತನ್ನ ಮತ್ತು ಸಂಗಡಿಗರ ಕರುಗಳನ್ನು ಹುಡುಕ ತೊಡಗಿದನು. ॥ ೧೪ ॥ ಪರೀಕ್ಷಿತನೇ ! ಬ್ರಹ್ಮದೇವರು ಮೊದಲಿನಿಂದಲೇ ಆಕಾಶದಲ್ಲಿ ಉಪಸ್ಥಿರಾಗಿದ್ದು, ಪ್ರಭುವಿನ ಪ್ರಭಾವದಿಂದ ಅಘಾಸುರನ ಮೋಕ್ಷವನ್ನು ನೋಡಿ ಅವರಿಗೆ ಬಹಳ ಆಶ್ಚರ್ಯವಾಗಿತ್ತು. ಲೀಲಾಮಾನುಷ ಬಾಲಕನಾದ ಭಗವಾನ್ ಶ್ರೀಕೃಷ್ಣನ ಇತರ ಮನೋಹರವಾದ ಮಹಿಮಾಯುಕ್ತ ಲೀಲೆಯನ್ನು ನೋಡಬೇಕೆಂದು ಅವರು ಯೋಚಿಸಿದರು, ಹೀಗೆ ಆಲೋಚಿಸಿ ಮೊದಲಿಗೆ ಕರುಗಳನ್ನೂ ಹಾಗೂ ಶ್ರೀಕೃಷ್ಣನು ಹೊರಟುಹೋದ ಬಳಿಕ ಗೊಲ್ಲಬಾಲಕರನ್ನು ಬೇರೆ ಕಡೆಗೆಕೊಂಡುಹೋಗಿ ಅಡಗಿಸಿಟ್ಟು ಸ್ವಯಂ ಅಂತರ್ಧಾನರಾದರು. ಎಷ್ಟಾದರೂ ಜಡವಾದ ಕಮಲಸಂಭವರಲ್ಲವೆ ? ॥ ೧೫ ॥

ಭಗವಾನ್ ಶ್ರೀಕೃಷ್ಣನು ಕಾಡು-ಮೇಡುಗಳಲ್ಲಿ, ಗುಹೆ-ಕಂದರಗಳಲ್ಲಿ ಹುಡುಕಿದರೂ ಕರುಗಳು ಸಿಗದಿರುವಾಗ, ಯಮುನಾ ತೀರದಲ್ಲಿದ್ದ ಗೋಪಬಾಲಕರ ಬಳಿಗೆ ಹಿಂದಿರುಗಿದನು. ಆದರೆ ಅಲ್ಲಿ ಗೋಪಬಾಲಕರೂ ಇರಲಿಲ್ಲ. ವಿಸ್ಮಿತನಾದ ಶ್ರೀಕೃಷ್ಣನು ಗೋಪ ಬಾಲಕರನ್ನೂ, ಕರುಗಳನ್ನೂ ಹುಡುಕಲು ಹೊರಟನು. ॥ ೧೬ ॥ ಆದರೆ ಗೊಲ್ಲಬಾಲಕರೂ, ಕರುಗಳೂ ಅವನಿಗೆ ಸಿಗದಿರುವಾಗ, ಅವನು ಇದೆಲ್ಲವೂ ಬ್ರಹ್ಮನದೇ ಕೆಲಸ. ಅವನೇ ಇವರನ್ನು ಬಚ್ಚಿಟ್ಟಿರುವೆನೆಂದು ಕೂಡಲೇ ತಿಳಿದುಕೊಂಡನು. ಅವನಾದರೋ ವಿಶ್ವದ ಏಕಮಾತ್ರ ಜ್ಞಾತೃವಾಗಿದ್ದನು, ವಿಶ್ವವಿದನಾಗಿದ್ದನು. ॥ ೧೭ ॥ ವಿಶ್ವವನ್ನೇ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದ ವಿಶ್ವಕರ್ತೃವಾದ ಶ್ರೀಕೃಷ್ಣನು ಗೋಪಬಾಲಕರ ತಾಯಂದಿರಿಗೂ, ಗೋವುಗಳಿಗೂ, ಬ್ರಹ್ಮನಿಗೂ ತನ್ನ ಲೀಲೆಯನ್ನು ತೋರಿಸಿ ಆನಂದಗೊಳಿಸಬೇಕೆಂಬ

ತತಃ ಕೃಷ್ಣೋ ಮುದಂ ಕರ್ತುಂ ತನ್ಮಾತೄಣಾಂ ಚ ಕಸ್ಯ ಚ ।
ಉಭಯಾಯಿತಮಾತ್ಮಾನಂ ಚಕ್ರೇ ವಿಶ್ವಕೃದೀಶ್ವರಃ ॥ ೧೮ ॥

ಆಶಯದಿಂದ, ಕ್ಷಣಮಾತ್ರದಲ್ಲಿ ಗೋಪಬಾಲಕರಾಗಿ, ಕರುಗಳಾಗಿ ತಾನೇ ಆಗಿಬಿಟ್ಟನು. * ॥ ೧೮ ॥ ಪರೀಕ್ಷಿತನೇ ! ಆ ಬಾಲಕರು ಮತ್ತು ಕರುಗಳು ಮೊದಲು ಎಷ್ಟು ಸಂಖ್ಯೆಯಲ್ಲಿದ್ದರೋ ಈಗಲೂ ಅಷ್ಟೇ ಸಂಖ್ಯೆಯಲ್ಲಿದ್ದರು. ಗೋಪಬಾಲಕರ ಮತ್ತು ಕರುಗಳ ಶರೀರಗಳು ಎಷ್ಟು ಗಾತ್ರದಲ್ಲಿದ್ದವೋ, ಯಾವ ಬಣ್ಣದಲ್ಲಿದ್ದವೋ ಈಗಲೂ ಅದೇ ಬಣ್ಣ, ಗಾತ್ರದಿಂದ ಕಂಗೊಳಿಸುತ್ತಿದ್ದವು. ಕೋಲು, ಕೊಂಬು, ಕೊಳಲು, ತಲೆಯಲ್ಲಿ ಸಿಂಗರಿಸಿಕೊಂಡಿದ್ದ ಚಿಗುರುಗಳು, ನವಿಲುಗರಿಗಳು, ಬುತ್ತಿ, ಉಡಿಗೆ-ತೊಡಿಗೆಗಳು, ನಡೆ-ನುಡಿಗಳು, ಗುಣಗಳು, ಹೆಸರುಗಳು, ಆಕಾರಗಳು, ವಯಸ್ಸು ಎಲ್ಲವೂ ಯಥಾವತ್ತಾಗಿಯೇ ಇದ್ದವು. ಹಿಂದೆ ಆಡುತ್ತಿದ್ದ ಆಟಗಳನ್ನೇ ಆಡುತ್ತಿದ್ದ, ಅಷ್ಟೇ ರೂಪಗಳಲ್ಲಿ ಸರ್ವಸ್ವರೂಪನಾದ ಭಗವಾನ್ ಶ್ರೀಕೃಷ್ಣನು ಪ್ರಕಟನಾದನು. **'ಸರ್ವಂ ವಿಷ್ಣುಮಯಂ ಜಗತ್'** ಎಂಬ ವೇದವಾಣಿಯು ಮೂರ್ತಿಭವಿಸಿತೋ ಎಂಬಂತೆ ಪ್ರಕಟವಾಗಿತ್ತು. ॥ ೧೯ ॥ ಸರ್ವಾತ್ಮನಾದ ಭಗವಂತನೇ ಸ್ವತಃ ಕರುಗಳಾದನು, ಸ್ವತಃ ಗೋಪಬಾಲಕರಾದನು. ತನ್ನ ಆತ್ಮ ಸ್ವರೂಪವಾದ ಕರುಗಳನ್ನೂ, ಆತ್ಮಸ್ವರೂಪರಾದ ಗೊಲ್ಲಬಾಲಕರನ್ನು ಸುತ್ತುವರೆದು ತನ್ನೊಡನೆ ಅನೇಕ ರೀತಿಯ ಆಟಗಳನ್ನಾಡುತ್ತಾ ಶ್ರೀಕೃಷ್ಣನು ಗೊಲ್ಲರಹಟ್ಟಿಯನ್ನು ಪ್ರವೇಶಿಸಿದನು. ॥ ೨೦ ॥ ಪರೀಕ್ಷಿತನೇ ! ಒಂದೊಂದು ಕರುವನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಆಯಾ ಮನೆಗಳಿಗೆ ಸೇರಿಸಿದನು. ಅಂತೆಯೇ ಆತ್ಮಸ್ವರೂಪರಾದ ಗೋಪಬಾಲಕರನ್ನು ಅವರವರ ಮನೆಗೆ ಸೇರುವಂತೆ ಮಾಡಿದನು. ಎಂದಿನಂತೆ ಕೃಷ್ಣಭೂತರಾದ ಗೋಪಬಾಲಕರು ಕೊಳಲನ್ನು ಊದಿಕೊಂಡೇ ಮನೆಗೆ ಬಂದರು. ॥ ೨೧ ॥

ಯಾವದ್ವತ್ಸಪವತ್ಸಕಾಲ್ಪಕವಪುರ್ಯಾವತ್ಕರಾಂಘ್ರ್ಯಾದಿಕಂ
ಯಾವದ್ಯಷ್ಟಿವಿಷಾಣವೇಣುದಲಶಿಗ್ಯಾವದ್ವಿಭೂಷಾಂಬರಮ್ ।
ಯಾವಚ್ಛೀಲಗುಣಾಭಿದಾಕೃತಿವಯೋ ಯಾವದ್ವಿಹಾರಾದಿಕಂ
ಸರ್ವಂ ವಿಷ್ಣುಮಯಂ ಗಿರೋಽಂಗವದಜಃ ಸರ್ವಸ್ವರೂಪ್ಪೋ ಬಭೌ
॥ ೧೯ ॥

ಕೊಳಲಿನ ಧ್ವನಿಯನ್ನು ಕೇಳುತ್ತಲೇ ಗೋಪಿಯರು ತಟ್ಟನೆ ಮೇಲೆದ್ದು ಪರಬ್ರಹ್ಮನಾದ ಶ್ರೀಕೃಷ್ಣನ ಸ್ವರೂಪಿಗಳಾಗಿದ್ದ ಗೋಪ ಬಾಲಕರನ್ನು ತಮ್ಮ ಮಕ್ಕಳೆಂದೇ ಭಾವಿಸಿ, ತೊಳುಗಳಿಂದ ಬಾಚಿತಬ್ಬಿಕೊಂಡು ಅಮೃತಕ್ಕಿಂತಲೂ ಮಧುರವಾಗಿದ್ದ, ಆಸವಕ್ಕಿಂತಲೂ ಹೆಚ್ಚು ಮದವನ್ನುಂಟುಮಾಡುವಂತಹ, ವಾತ್ಸಲ್ಯಪೂರ್ಣವಾದ ಸ್ತನ್ಯವನ್ನು ಅವರಿಗೆ ಉಣಿಸಿದರು. ॥ ೨೨ ॥ ಪರೀಕ್ಷಿತನೇ ! ಈ ಪ್ರಕಾರವಾಗಿ ಪ್ರತಿದಿನವೂ ಸಾಯಂಕಾಲ ಭಗವಾನ್ ಶ್ರೀಕೃಷ್ಣನು ಆ ಗೊಲ್ಲಬಾಲಕರ ರೂಪದಲ್ಲಿ ಕಾಡಿನಿಂದ ಮರಳಿ ಬಂದು ತನ್ನ ಬಾಲಸುಲಭವಾದ ಲೀಲೆಗಳಿಂದ ತಾಯಂದಿರನ್ನು ಆನಂದಗೊಳಿಸುತ್ತಿದ್ದನು. ಆ ತಾಯಂದಿರೂ ಕೂಡ ತಮ್ಮ ಆ ಮುದ್ದುಕಂದಮ್ಮರಿಗೆ ಸ್ನಾನಮಾಡಿಸುತ್ತಿದ್ದರು. ಅವರ ಪುಟ್ಟ ಕಾಲುಗಳನ್ನು ಒತ್ತುತ್ತಿದ್ದರು. ಅವರಿಗೆ ಗಂಧವನ್ನು ಪೂಸಿ, ಅಲಂಕರಿಸುತ್ತಿದ್ದರು. ತಿಲಕವಿಟ್ಟು ರಕ್ಷೆಯನ್ನಿಡುತ್ತಿದ್ದರು. ಭೋಜನ ಮಾಡಿಸುತ್ತಿದ್ದರು. ಇವೇ ಮುಂತಾದ ಉಪಚಾರಗಳಿಂದ ಸಾಕ್ಷಾತ್ ಶ್ರೀಕೃಷ್ಣನನ್ನೇ ಲಾಲಿಸುತ್ತಿದ್ದರು. ॥ ೨೩ ॥

ಸ್ವಯಮಾತ್ಮಾऽऽತ್ಮಗೋವತ್ಸಾನ್ಪ್ರತಿವಾರ್ಯಾತ್ಮವತ್ಸಪೈಃ ।
ಕ್ರೀಡನ್ನಾತ್ಮವಿಹಾರೈಶ್ಚ ಸರ್ವಾತ್ಮಾ ಪ್ರಾವಿಶದ್ವ್ರಜಮ್
॥ ೨೦ ॥

ತತ್ತದ್ಗೃಹಾನ್ಪ್ರಥಮ್ಯೇತ್ಯ ತತ್ತದ್ಗೋಷ್ಠೇ ನಿವೇಶ್ಯ ಸಃ ।
ತತ್ತದಾತ್ಮಾಭವದ್ರಾಜನ್ ತತ್ತತ್ಸದ್ಮ ಪ್ರವಿಷ್ಟವಾನ್
॥ ೨೧ ॥

ತಾ ಆತರೋ ವೇಣುರವತ್ವರೋತ್ಥಿತಾ
ಉತ್ಥಾಪ್ಯ ದೋರ್ಭಿಃ ಪರಿರಭ್ಯ ನಿರ್ಭರಮ್ ।
ಸ್ನೇಹಸ್ನುತಸ್ತನ್ಯಪಯಃಸುಧಾಸವಂ
ಮತ್ವಾ ಪರಂ ಬ್ರಹ್ಮ ಸುತಾನಪಾಯಯನ್ ॥ ೨೨ ॥

ತತೋ ನೃಪೋನ್ಮರ್ದನಮಜ್ಜಲೇಪನಾ-
ಲಂಕಾರರಕ್ಷಾತಿಲಕಾಶನಾದಿಭಿಃ ।
ಸಂಲಾಲಿತಃ ಸ್ವಾಚರಿತೈಃ ಪ್ರಹರ್ಷಯನ್
ಸಾಯಂ ಗತೋ ಯಾಮಯಮೇನ ಮಾಧವಃ ॥ ೨೩ ॥

* ಭಗವಂತನು ಸರ್ವಸಮರ್ಥನಾಗಿದ್ದಾನೆ. ಅವನು ಬ್ರಹ್ಮನು ಕದ್ದುಕೊಂಡುಹೋದ ಬಾಲಕರನ್ನು, ಕರುಗಳನ್ನು ತರಬಲ್ಲನಾಗಿದ್ದರೂ ಇದರಿಂದ ಬ್ರಹ್ಮನ ಮೋಹ ದೂರವಾಗುತ್ತಿರಲಿಲ್ಲ. ಅವನು ಭಗವಂತನ ಆ ದಿವ್ಯ ಮಾಯಾ ಐಶ್ವರ್ಯವನ್ನು ನೋಡದೇ ಅವನ ವಿಶ್ವಕರ್ತೃತ್ವವೆಂಬ ಅಭಿಮಾನವು ದೂರವಾಗುತ್ತಿರಲಿಲ್ಲ. ಆದಕ್ಕಾಗಿ ಭಗವಂತನು ಅದೇ ಗೊಲ್ಲಬಾಲಕರನ್ನೂ, ಕರುಗಳನ್ನೂ ತಾರದೆ ಸ್ವತಃ ಅವರಂತೆಯೇ ಅಷ್ಟೇ ಬಾಲಕರೂ, ಕರುಗಳೂ ಆಗಿಬಿಟ್ಟನು.

ಗಾವಸ್ತತೋ ಗೋಷ್ಠಮುಪೇತ್ಯ ಸತ್ವರಂ
ಹುಂಕಾರಘೋಷೈಃ ಪರಿಹೂತಸಂಗತಾನ್ ।
ಸ್ವಕಾನ್ಸ್ವಕಾನ್ವತ್ಸತರಾನಪಾಯಯನ್
ಮುಹುರ್ಲಿಹಂತ್ಯಃ ಸ್ರವದೌಧಸಂ ಪಯಃ ॥ ೨೪ ॥

ಗೋಪಿಯರಿಗೆ ತಾವು ಗೋಪಬಾಲಕನ ರೂಪದಲ್ಲಿರುವ ಶ್ರೀಕೃಷ್ಣನಿಗೆ ಮೊಲೆಯುಣಿಸುತ್ತಿದ್ದೇವೆಂಬುದು ತಿಳಿಯದಿದ್ದ ಮೇಲೆ ಹಸುಗಳಾದರೂ ಹೇಗೆ ತಿಳಿಯಬಲ್ಲವು? ಶ್ರೀಕೃಷ್ಣನೇ ಕರುಗಳಾಗಿ ಕೊಟ್ಟಿಗೆಗೆ ಬಂದಾಕ್ಷಣ ಆ ಹಸುಗಳು ವಾತ್ಸಲ್ಯದಿಂದ 'ಹಂಬಾ!' ಎಂದು ಕೂಗುವುವು. ಕರುಗಳು ತಾಯಂದಿರ ಬಳಿಗೆ ನಾಗಾಲೋಟದಿಂದ ಓಡಿಹೋಗುವುವು. ಹಾಗೇ ತಮ್ಮ ಬಳಿಗೆ ಓಡಿ ಬಂದಿರುವ ಕರುಗಳನ್ನು ಅಕ್ಕರೆಯಿಂದ ನೆಕ್ಕುತ್ತಾ, ಕೆಚ್ಚಲಿನಿಂದ ಒಸರುತ್ತಿರುವ ಅಮೃತೋಪಮವಾದ ಹಾಲನ್ನು ಅವುಗಳಿಗೆ ಉಣಿಸುತ್ತಿದ್ದವು. ॥ ೨೪ ॥ ಈ ಹಸುಗಳಲ್ಲಿ ಮತ್ತು ಗೋಪಿಯರಲ್ಲಿ ಮಾತೃಭಾವವೂ ಮೊದಲಿನಿಂದಲೇ ಎತುದ್ಭವಾಗಿತ್ತು, ಆದರೂ ಈಗ ತಮ್ಮ ಮಕ್ಕಳ, ಕರುಗಳ ಕುರಿತು ಅವರ ಸ್ನೇಹ ಖಂಡಿತವಾಗಿ ಹೆಚ್ಚಾಗಿತ್ತು. ಹೀಗೆಯೇ ಭಗವಂತನೂ ಮೊದಲಿನ ಮಕ್ಕಳಂತೆ ಪುತ್ರಭಾವವನ್ನು ತೋರುತ್ತಿದ್ದನು. ಆದರೆ ಭಗವಂತನಲ್ಲಿ ಆ ಬಾಲಕರಂತೆ 'ನಾನು ಇವರ ಮಗನಾಗಿದ್ದೇನೆ' ಎಂಬ ಮೋಹ ಭಾವವಿರಲಿಲ್ಲ. ॥ ೨೫ ॥

ಗೋಗೋಪೀನಾಂ ಮಾತೃತಾಸ್ಮಿನ್ಸರ್ವಾ ಸ್ನೇಹರ್ಧಿಕಾಂ ವಿನಾ ।
ಪುರೋವದಾಸ್ವಪಿ ಹರೇಸ್ತೋಕತಾ ಮಾಯಯಾ ವಿನಾ
॥ ೨೫ ॥

ತಮ್ಮ-ತಮ್ಮ ಬಾಲಕರ ಕುರಿತು ವ್ರಜವಾಸಿಗಳ ಸ್ನೇಹಲತೆಯು ಪ್ರತಿದಿನವೂ ಒಂದು ವರ್ಷದವರೆಗೆ ಬೆಳೆಯುತ್ತಲೇ ಇತ್ತು. ಮೊದಲಿಗೆ ಶ್ರೀಕೃಷ್ಣನಲ್ಲಿ ಅವರಿಗಿದ್ದ ಅಸೀಮ ಹಾಗೂ ಅಪೂರ್ವ ಪ್ರೇಮದಂತೆ ತಮ್ಮ ಈ ಬಾಲಕರ ವಿಷಯದಲ್ಲಿಯೂ ಉಂಟಾಯಿತು. ॥ ೨೬ ॥

ವ್ರಜೌಕಸಾಂ ಸ್ವತೋಕೇಷು ಸ್ನೇಹವಲ್ಲ್ಯಾಬ್ದಮನ್ವಹಮ್ ।
ಶನೈರ್ನಿಃಸೀಮ ವವೃಧೇ ಯಥಾ ಕೃಷ್ಣೇ ತ್ವಪೂರ್ವವತ್
॥ ೨೬ ॥

ಹೀಗೆ ಸರ್ವಾತ್ಮನಾದ ಶ್ರೀಕೃಷ್ಣನು ಕರುಗಳು ಮತ್ತು ಗೋಪಬಾಲಕರ ನೆಪದಿಂದ ಗೋಪಾಲನಾಗಿ ತನ್ನ ಬಾಲಕರೂಪದಿಂದ ಕರುಗಳನ್ನು ಪಾಲಿಸುತ್ತಾ ಒಂದು ವರ್ಷದವರೆಗೆ ವೃಂದಾವನದಲ್ಲಿ, ಹಟ್ಟಿಗಳಲ್ಲಿ ಕ್ರೀಡಿಸುತ್ತಿದ್ದನು. ॥ ೨೭ ॥

ಇತ್ಥಮಾತ್ಮಾತ್ಮನಾತ್ಮಾನಂ ವತ್ಸಪಾಲಮಿಷೇಣ ಸಃ ।
ಪಾಲಯನ್ವತ್ಸಪೋ ವರ್ಷಂ ಚಿಕ್ರೀಡೇ ವನಗೋಷ್ಠಯೋಃ
॥ ೨೭ ॥

ಒಂದು ವರ್ಷ ತುಂಬಲು ಇನ್ನೂ ಐದಾರು ದಿನಗಳಿರುವಾಗ ಒಂದು ದಿನ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ಕರುಗಳನ್ನು ಮೇಯಿಸುತ್ತಾ ಕಾಡಿಗೆ ಹೋದನು. ॥ ೨೮ ॥

ಏಕದಾ ಚಾರಯನ್ವತ್ಸಾನ್ಸರಾಮೋ ವನಮಾವಿಶತ್ ।
ಪಂಚಷಾಸು ತ್ರಿಯಾಮಾಸು ಹಾಯನಾಪೂರಣೇಷ್ವಜಃ
॥ ೨೮ ॥

ಆ ಸಮಯದಲ್ಲಿ ಹಸುಗಳು ಗೋವರ್ಧನದ ತಪ್ಪಲಿನಲ್ಲಿ ಹುಲ್ಲು ಮೇಯುತ್ತಿದ್ದವು. ಅವು ಅಲ್ಲಿಂದಲೇ ಬಹುದೂರದಲ್ಲಿ ಹಳ್ಳಿಯ ಸಮೀಪದಲ್ಲಿ ಕರುಗಳು ಹುಲ್ಲು ಮೇಯುತ್ತಿರುವುದನ್ನು ನೋಡಿದವು. ॥ ೨೯ ॥

ತತೋ ವಿದೂರಾಚ್ಚರತೋ ಗಾವೋ ವತ್ಸಾನುಪವ್ರಜಮ್ ।
ಗೋವರ್ಧನಾದ್ರಿಶಿರಸಿ ಚರಂತ್ಯೋ ದದೃಶುಸ್ತೃಣಮ್
॥ ೨೯ ॥

ಕರುಗಳನ್ನು ನೋಡುತ್ತಲೇ ಹಸುಗಳಿಗೆ ತಮ್ಮ ಕರುಗಳಲ್ಲಿದ್ದ ವಾತ್ಸಲ್ಯ-ಸ್ನೇಹವು ಉಕ್ಕಿ ಹರಿಯಿತು. ಅವುಗಳಿಗೆ ಮೈಮೇಲೆ ಪ್ರಜ್ಞೆಯೇ ಉಳಿಯಲಿಲ್ಲ. ಮೇಯುವುದನ್ನು ನಿಲ್ಲಿಸಿ ಗೋಪಾಲಕರು ತಡೆಯುತ್ತಿರುವುದನ್ನು ಲೆಕ್ಕಿಸದೆ, ಹಳ್ಳ-ಕೊಳ್ಳಗಳನ್ನು ಪರಿಗಣಿಸದೆ, ಗೋಪಾಲಕರೂ ಹೋಗಲಾಗದ ಮಾರ್ಗದಿಂದ, ಕೊರಳನ್ನೂ, ಮುಖ-ಬಾಲಗಳನ್ನು ಎತ್ತಿಕೊಂಡು ಎರಡು ಕಾಲಿನ ಪ್ರಾಣಿಗಳಂತೆ ಅತ್ಯಂತ ವೇಗವಾಗಿ ಹಾಲನ್ನು ಸುರಿಸುತ್ತಾ 'ಹಂಬಾ' ಎಂದು ಕೂಗಿಕೊಳ್ಳುತ್ತಾ ಕರುಗಳಿದ್ದೆಡೆಗೆ ಬಂದು ಸೇರಿದವು. ॥ ೩೦ ॥

ದೃಷ್ಟ್ವಾಥ ತತ್ಸ್ನೇಹವಶೋಽಸ್ಖಲತ್ಧೀಃ
ಸ ಗೋವ್ರಜೋಽತ್ಯಾತ್ಮದುರ್ಗಮಾರ್ಗಃ ।
ದ್ವಿಪಾತ್ಕುದ್ಗೀವ ಉದಾಸ್ಯಪುಚ್ಛೋ-
ಗಾದ್ಧುಂಕೃತೈರಾಸ್ರುಪಯಾ ಜವೇನ ॥ ೩೦ ॥

ಆ ಹಸುಗಳಿಗೆ ಕೆಲವು ದಿನಗಳ ಹಿಂದೆ ಹುಟ್ಟಿದ್ದ ಚಿಕ್ಕ ಕರುಗಳಿದ್ದರೂ, ಹಳ್ಳಿಯ ಸಮೀಪದಲ್ಲಿದ್ದ ದೊಡ್ಡ ಕರುಗಳನ್ನು ಅತ್ಯಂತ ವಾತ್ಸಲ್ಯದಿಂದ ನೆಕ್ಕುತ್ತಾ ಅವುಗಳಿಗೆ ಹಾಲುಣಿಸತೊಡಗಿದವು. ಅವುಗಳನ್ನು ನೆಕ್ಕುತ್ತಿರುವುದನ್ನು ನೋಡಿದರೆ ಪ್ರೀತಿಯಿಂದ ಅವನ್ನು ನುಂಗಿಬಿಡುತ್ತವೆಯೋ ಎಂಬಂತೆ ಕಾಣುತ್ತಿದ್ದುವು. ॥ ೩೧ ॥

ಸಮೇತ್ಯ ಗಾವೋಽಧೋ ವತ್ಸಾನ್ಸ್ವಪತ್ಯವತ್ಯೋಽಪ್ಯಪಾಯಯನ್ ।
ಗಿಲಂತ್ಯ ಇವ ಚಾಂಗಾನಿ ಲಿಹಂತ್ಯಃ ಸ್ನೌಧಸಂ ಪಯಃ
॥ ೩೧ ॥

ಗೋಪಾಸ್ತದ್ಯೋಧನಾಯಾಸಮೌಷ್ಯಲಜ್ಜೋರುಮನ್ಯುನಾ ।
ದುರ್ಗಾದ್ಗಚ್ಛತ್ತೋಽಭ್ಯೇತ್ಯ ಗೋವತ್ಸೈರ್ದದೃಶುಃ ಸುತಾನ್
॥ ೩.೨ ॥

ತದೀಕ್ಷಣೋತ್ಥೈಮರಸಾಪ್ಲುತಾಶಯಾ
ಜಾತಾನುರಾಗಾ ಗತಮನ್ಯವೋಽರ್ಭಕಾನ್ ।
ಉದುಹ್ಯ ದೋರ್ಭಿಃ ಪರಿರಭ್ಯ ಮೂರ್ಧನಿ
ಘ್ರಾಣೈರವಾಪುಃ ಪರಮಾಂ ಮುದಂ ತೇ ॥ ೩.೩ ॥

ತತಃ ಪ್ರವಯಸೋ ಗೋಪಾಸ್ತೋಕಾಶ್ಲೇಷಸುನಿರ್ವೃತಾಃ ।
ಕೃಚ್ಛ್ರಾಚ್ಛನ್ನೈರಪಗತಾಸ್ತದನುಸ್ಮೃತ್ಯುದಶ್ರವಃ
॥ ೩.೪ ॥

ವ್ರಜಸ್ಯ ರಾಮಃ ಪ್ರೇಮರ್ದ್ಧೇರ್ವೀಕ್ಷ್ಯೌತ್ಕಂಠ್ಯಮನುಕ್ಷಣಮ್ ।
ಮುಕ್ತಸ್ತನೇಷ್ವಪತ್ಯೇಷ್ವಪ್ಯಹೇತುವಿದಚಿಂತಯತ್
॥ ೩.೫ ॥

ಕಿಮೇತದದ್ಭುತಮಿವ ವಾಸುದೇವೇಽಖಿಲಾತ್ಮನಿ ।
ವ್ರಜಸ್ಯ ಸಾತ್ಮನಸ್ತೋಕೇಷ್ವಪೂರ್ವಂ ಪ್ರೇಮವರ್ಧತೇ
॥ ೩.೬ ॥

ಕೇಯಂ ವಾ ಕುತ ಆಯಾತಾ
ದೈವೀ ವಾ ನಾರ್ಯುತಾಸುರೀ ।
ಪ್ರಾಯೋ ಮಾಯಾಸ್ತು ಮೇ ಭರ್ತು
ರ್ನಾನ್ಯಾ ಮೇಽಪಿ ವಿಮೋಹಿನೀ ॥ ೩.೭ ॥

ಇತಿ ಸಂಚಿಂತ್ಯ ದಾಶಾರ್ಹೋ ವತ್ಸಾನ್ಸವಯಸಾನಪಿ ।
ಸರ್ವಾನಾಚಷ್ಟ ವೈಕುಂಠಂ ಚಕ್ಷುಷಾ ವಯುನೇನ ಸಃ
॥ ೩.೮ ॥

ಗೋಪಾಲಕರು ಅವನ್ನು ತಡೆಯಲು ಬಹಳ ಪ್ರಯತ್ನ ಮಾಡಿದರೂ, ಅವರ ಪ್ರಯತ್ನ ವ್ಯರ್ಥವೇ ಆಯಿತು. ಇದರಿಂದ ತಮ್ಮ ವಿಫಲತೆಯ ಕುರಿತು ಅವರಿಗೆ ನಾಚಿಕೆ ಉಂಟಾಗಿ, ಹಸುಗಳ ಮೇಲೆ ಸ್ವಲ್ಪ ಸಿಟ್ಟೂ ಬಂದಿತ್ತು. ಅವರೆಲ್ಲರೂ ಅತ್ಯಂತ ಕಷ್ಟಪಟ್ಟು ದುರ್ಗಮವಾದ ಮಾರ್ಗದಿಂದ ಹಸುಗಳಿದ್ದಲ್ಲಿಗೆ ಬಂದಾಗ ಅವರು ಕರುಗಳೊಂದಿಗೆ ತಮ್ಮ ಬಾಲಕರನ್ನು ಅಲ್ಲಿ ನೋಡಿದರು. ॥ ೩.೨ ॥ ತಮ್ಮ ಮಕ್ಕಳನ್ನು ನೋಡುತ್ತಲೇ ಅವರ ಹೃದಯ ಪ್ರೇಮರಸದಿಂದ ತುಂಬಿ ಹೋಯಿತು. ಬಾಲಕರ ಕುರಿತು ಅನುರಾಗದ ನೆರೆಯೇ ಉಕ್ಕಿಬಂತು. ಅವರಲ್ಲಿದ್ದ ಸಿಟ್ಟು ಎಲ್ಲಿಗೆ ಹೋಯಿತೋ ತಿಳಿಯದು. ಅವರೆಲ್ಲರೂ ತಮ್ಮ-ತಮ್ಮ ಮಕ್ಕಳನ್ನು ತೊಡೆಯಲ್ಲೆತ್ತಿಕೊಂಡು, ಎದೆಗೆ ಅವಚಿಕೊಂಡು, ಅವರ ನೆತ್ತಿಯನ್ನು ಮೂಸುತ್ತಾ ಅತ್ಯಂತ ಆನಂದಿತರಾದರು. ॥ ೩.೩ ॥ ಪುತ್ರಾಲಿಂಗನದಿಂದ ಆನಂದತುಂದಿಲರಾದ ವೃದ್ಧಗೋಪಾಲಕರಿಗೆ ಬಿಟ್ಟು ಹೋಗಲು ಸಾಧ್ಯವಾಗಲೇ ಇಲ್ಲ. ಬಹಳ ಕಷ್ಟಪಟ್ಟು ಅವರನ್ನು ಬಿಟ್ಟು ಅಗಲಿ ಹೊರಟರು. ಬಿಟ್ಟು ಹೋಗುವಾಗ ಮಕ್ಕಳನ್ನೂ, ಅವರ ಆಲಿಂಗನದ ಸೌಖ್ಯವನ್ನು ನೆನೆಯುತ್ತಾ ಕಣ್ಣುಗಳಿಂದ ಆನಂದಬಾಷ್ಪಗಳನ್ನು ಸುರಿಸಿದರು. ॥ ೩.೪ ॥

ಗೋಪಬಾಲಕರು ತಾಯಿಯ ಹಾಲು ಕುಡಿಯುವ ಹಸುಳೆಗಳಾಗಿರಲಿಲ್ಲ. ಆದರೂ ಗೋಪ-ಗೋಪಿಯರಿಗೆ ಅವರ ಮೇಲೆ ಪ್ರೀತಿಯು ಕ್ಷಣ-ಕ್ಷಣಕ್ಕೂ ಹೆಚ್ಚುತ್ತಲೇ ಇತ್ತು. ಗೋವುಗಳಿಗೆ ಬೆಳೆದ ಕರುಗಳ ಮೇಲೆ ಚಿಕ್ಕ ಕರುಗಳಂತೆ ವಾತ್ಸಲ್ಯವು ಹೆಚ್ಚುತ್ತಲೇ ಇತ್ತು. ಇದನ್ನು ನೋಡಿದ ಬಲರಾಮನು 'ಇದಕ್ಕೇನು ಕಾರಣ ವಿರಬಹುದು ?' ಎಂದು ಯೋಚಿಸತೊಡಗಿದನು. ॥ ೩.೫ ॥ ಇದೆಂತಹ ಅದ್ಭುತವು ಕಂಡುಬರುತ್ತಿದೆ ! 'ಸರ್ವಾತ್ಮನಾದ ಶ್ರೀಕೃಷ್ಣನಲ್ಲಿ ನನಗೂ, ಈ ವ್ರಜವಾಸಿಗಳಿಗೂ ಅಪೂರ್ವವಾದ, ಅನಿರ್ವಾಚ್ಯವಾದ ಪ್ರೇಮವಿರುವಂತೆಯೇ ಈ ಬಾಲಕರ ಮೇಲೆ ಮತ್ತು ಕರುಗಳ ಮೇಲೆಯೂ ಪ್ರೇಮವು ಹೆಚ್ಚುತ್ತಾ ಹೋಗುತ್ತಿದೆಯಲ್ಲ ! ॥ ೩.೬ ॥ ಇದೆಂತಹ ಮಾಯೆ ? ಎಲ್ಲಿಂದ ಬಂದಿದೆ ? ಇದು ಯಾವುದಾದರೂ ದೇವತೆಯದೋ, ಮನುಷ್ಯರದೋ, ಅಸುರರ ಮಾಯೆಯೋ ? ಇಲ್ಲ; ಇಲ್ಲ; ಇದು ಬೇರೆ ಯಾರ ಮಾಯೆಯೂ ಅಲ್ಲ. ನನ್ನನ್ನು ಕೂಡ ವಿಮೋಹಗೊಳಿಸುತ್ತಿರುವ ಈ ಮಹಾಮಾಯೆಯು ನನ್ನ ಒಡೆಯನಾದ ಶ್ರೀಕೃಷ್ಣನದೇ ಆಗಿರಬೇಕು. ॥ ೩.೭ ॥ ಬಲರಾಮನು ಹೀಗೆ ವಿಚಾರಮಾಡಿ, ಜ್ಞಾನದೃಷ್ಟಿಯಿಂದ ಗೋಪಬಾಲಕರನ್ನು, ಕರುಗಳನ್ನು ನೋಡಿದಾಗ- ಇವೆಲ್ಲ ಕರುಗಳ, ಗೋಪಬಾಲಕರ ರೂಪದಲ್ಲಿ ಕೇವಲ ಶ್ರೀಕೃಷ್ಣನೊರ್ವನೇ ಆಗಿರುವನೆಂದು ತಿಳಿದುಕೊಂಡನು. ॥ ೩.೮ ॥ ಹೀಗೆ ತಿಳಿದ ಬಳಿಕ ಬಲರಾಮನು ಶ್ರೀಕೃಷ್ಣನನ್ನೇ ನೇರವಾಗಿ ಕೇಳಿದನು- ಶ್ರೀಕೃಷ್ಣನೇ ! ಈ ಗೋಪಬಾಲಕರು ಮತ್ತು ಕರುಗಳು ದೇವತೆಗಳಲ್ಲ, ಋಷಿಗಳೂ ಅಲ್ಲ, ಇವೆಲ್ಲ ಬೇರೆ-ಬೇರೆ ರೂಪಗಳ ಆಶ್ರಯ ಪಡೆದರೂ ನೀನೊಬ್ಬನೇ ಇಷ್ಟು ರೂಪಗಳಲ್ಲಿ ಪ್ರಕಾಶಿಸುತ್ತಿರುವೆ. ನೀನು ಹೀಗೆ ಕರುಗಳ, ಬಾಲಕರ, ಕೊಂಬು, ಕೊಳಲು, ಹಗ್ಗ ಮುಂತಾದ ರೂಪಗಳಲ್ಲಿ ಬೇರೆ-ಬೇರೆಯಾಗಿ ಏಕೆ ಪ್ರಕಾಶಿಸು

ನೈತೇ ಸುರೇಶಾ ಋಷಯೋ ನ ಚೈತೇ
ತ್ವಮೇವ ಭಾಸೀಶ ಭಿದಾಶ್ರಯೇಽಪಿ ।
ಸರ್ವಂ ಪೃಥಕ್ತ್ವಂ ನಿಗಮಾತ್ಕಥಂ ವದೇ-
ತ್ಯುಕ್ತೇನ ವೃತ್ತಂ ಪ್ರಭುಣಾ ಬಲೋಽವೈತ್ ॥ ೩೯ ॥

ತಾವದೇತ್ಯಾತ್ಮಭೂರಾತ್ಮಮಾನೇನ ತ್ರುಟ್ಯನೇಹಸಾ ।
ಪುರೋವದಬ್ದಂ ಕ್ರೀಡಂತಂ ದದೃಶೇ ಸಕಲಂ ಹರಿಮ್
॥ ೪೦ ॥

ಯಾವಂತೋ ಗೋಕುಲೇ ಬಾಲಾಃ ಸವತ್ಸಾಃ ಸರ್ವ ಏವ ಹಿ ।
ಮಾಯಾಶಯೇ ಶಯಾನಾ ಮೇ ನಾದ್ಯಾಪಿ ಪುನರುತ್ಥಿತಾಃ
॥ ೪೧ ॥

ಇತ ಏತೇಽತ್ರ ಕುತ್ರತ್ಯಾ ಮನ್ಮಾಯಾಮೋಹಿತೇತರೇ ।
ತಾವಂತ ಏವ ತತ್ರಾಬ್ದಂ ಕ್ರೀಡಂತೋ ವಿಷ್ಣುನಾ ಸಮಮ್
॥ ೪೨ ॥

ಏವಮೇತೇಷು ಭೇದೇಷು ಚಿರಂ ಧ್ಯಾತ್ವಾ ಸ ಆತ್ಮಭೂಃ ।
ಸತ್ಯಾಃ ಕೇ ಕತರೇ ನೇತಿ ಜ್ಞಾತುಂ ನೇಷ್ಟೇ ಕಥಂಚನ
॥ ೪೩ ॥

ಏವಂ ಸಮ್ಮೋಹಯನ್ವಿಷ್ಣುಂ ವಿಮೋಹಂ ವಿಶ್ವಮೋಹನಮ್ ।
ಸ್ವಯೈವ ಮಾಯಯಾಜೋಽಪಿ ಸ್ವಯಮೇವ ವಿಮೋಹಿತಃ
॥ ೪೪ ॥

ತಮ್ಯಾಂ ತಮೋವನ್ನೈಹಾರಂ ಖದ್ಯೋತಾರ್ಚಿರಿವಾಹನಿ ।
ಮಹತೀತರಮಾಯೈಶ್ಯಂ ನಿಹಂತ್ಯಾತ್ಮನಿ ಯುಂಜತಃ
॥ ೪೫ ॥

ತಾವತ್ಸರ್ವೇ ವತ್ಸಪಾಲಾಃ ಪಶ್ಯತೋಽಜಸ್ಯ ತತ್ಕ್ಷಣಾತ್ ।
ವ್ಯದೃಶ್ಯಂತ ಘನಶ್ಯಾಮಾಃ ಪೀತಕೌಶೇಯವಾಸಸಃ
॥ ೪೬ ॥

ತ್ತಿರುವೆ ? ದಯವಿಟ್ಟು ಸ್ವಲ್ಪದರಲ್ಲೇ ಸ್ಪಷ್ಟಪಡಿಸಿ ತಿಳಿಸು. ಆಗ ಭಗವಂತನು ಬ್ರಹ್ಮದೇವರ ಕಾರ್ಯದಿಂದಾಗಿ ತಾನು ಹೀಗೆ ಆಗಬೇಕಾಯಿತೆಂದು ತಿಳಿಸಿದನು ಹಾಗೂ ಬಲರಾಮನು ಎಲ್ಲ ವನ್ನೂ ಅರಿತುಕೊಂಡನು. ॥ ೩೯ ॥

ಪರೀಕ್ಷಿತನೇ ! ಅದೇ ಹೊತ್ತಿಗೆ ಬ್ರಹ್ಮದೇವರು ತಮ್ಮ ಲೋಕ ದಿಂದ ವ್ರಜಕ್ಕೆ ಮರಳಿದರು. ಅವರ ಕಾಲಮಾನದಿಂದ ಆಷ್ಟರೊಳಗೆ ಕೇವಲ ಒಂದು ತ್ರುಟಿ (ಸೂಜಿಯಿಂದ ಕಮಲದ ಎಸಳನ್ನು ಚುಚ್ಚು ವಷ್ಟು ಕಾಲ) ಮಾತ್ರ ಸಮಯ ಕಳೆದಿತ್ತು. ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರು ಮತ್ತು ಕರುಗಳೊಂದಿಗೆ ಒಂದು ವರ್ಷದ ಹಿಂದಿ ನಂತೆಯೇ ಕ್ರೀಡಿಸುತ್ತಿರುವುದನ್ನು ಅವರು ನೋಡಿದರು. ॥ ೪೦॥ ಅವರು ಯೋಚಿಸತೊಡಗಿದರು – ಗೋಕುಲದಲ್ಲಿದ್ದ ಗೊಲ್ಲ ಬಾಲಕರೆಲ್ಲರೂ, ಕರುಗಳೆಲ್ಲವೂ ನನ್ನ ಮಾಯಾಹಾಸಿಗೆಯಲ್ಲಿ ಮಲಗಿದ್ದಾರೆ. ಅವರೆಲ್ಲರನ್ನು ನಾನು ಮಾಯೆಯಿಂದ ನಿಷ್ಚೇಷ್ಟಿತರ ನ್ನಾಗಿಸಿ ಬಿಟ್ಟಿರುವೆ ; ಅವರು ಆಗಿನಿಂದ ಎಚ್ಚರವಾಗಿಲ್ಲ ॥ ೪೧ ॥ ಹಾಗಿರುವಾಗ ನನ್ನ ಮಾಯೆಯಿಂದ ಮೋಹಿತರಲ್ಲದ ಒಂದು ವರ್ಷದಿಂದ ಭಗವಂತನೊಂದಿಗೆ ಆಡುತ್ತಿರುವ ಈ ಗೋಪ ಬಾಲಕರು ಮತ್ತು ಕರುಗಳು ಎಲ್ಲಿಂದ ಬಂದವು ? ॥ ೪೨ ॥ ಬ್ರಹ್ಮದೇವರು ಎರಡೂ ಕಡೆಗಳಲ್ಲಿ ಎರಡನ್ನೂ ನೋಡಿದರು ಮತ್ತು ಬಹಳ ಹೊತ್ತು ಧ್ಯಾನಮಾಡುತ್ತಾ ತಮ್ಮ ಜ್ಞಾನದೃಷ್ಟಿಯಿಂದ ಅದರ ರಹಸ್ಯವನ್ನು ತಿಳಿಯಲು ಬಯಸಿದರು, ಆದರೆ ಇವರಿಬ್ಬರಲ್ಲಿ ಮೊದಲಿನವರು ಯಾರು ಹಾಗೂ ಮತ್ತೆ ಸೃಷ್ಟಿಯಾದವರು ಯಾರು ? ಇವರಲ್ಲಿ ನಿಜವಾದವರು ಯಾರು, ಕೃತ್ರಿಮವಾದವರು ಯಾರು ಎಂಬುದು ತಿಳಿಯದೇ ಹೋಯಿತು. ॥ ೪೩. ॥ ಭಗವಾನ್ ಶ್ರೀಕೃಷ್ಣನ ಮಾಯೆಯಿಂದ ಎಲ್ಲರೂ ಮುಗ್ಧರಾಗು ತ್ತಿದ್ದಾರೆ. ಆದರೆ ಯಾವುದೇ ಮಾಯೆ-ಮೋಹ ಭಗವಂತನನ್ನು ಸ್ಪರ್ಶಿಸಲಾರದು. ಬ್ರಹ್ಮದೇವರು ಅದೇ ಭಗವಾನ್ ಶ್ರೀಕೃಷ್ಣನನ್ನು ತನ್ನ ಮಾಯೆಯಿಂದ ಮೋಹಿತಗೊಳಿಸಲು ಹೊರಟಿದ್ದರು. ಆದರೆ ಅವನನ್ನು ಮೋಹಿತಗೊಳಿಸುವುದು ದೂರವುಳಿಯಿತು, ಅವರು ಅಜನ್ಮಾ ಆಗಿದ್ದರೂ ತನ್ನ ಮಾಯೆಯಿಂದ ತಾನೇ ಮೋಹಿತ ರಾದರು. ॥ ೪೪ ॥ ರಾತ್ರಿಯ ಘೋರ ಅಂಧಕಾರದಲ್ಲಿ ಮಂಜಿನ ಕತ್ತಲೆ ಲಯವಾಗಿ ಹೋಗುವಂತೆ, ಮಿಂಚುಹುಳುವಿನ ಪ್ರಕಾಶವು ಹಗಲಿನಲ್ಲಿ ಲಯವಾಗುವಂತೆಯೇ, ಕ್ಷುದ್ರ ಮನುಷ್ಯನು ಮಹಾ ಪುರಷರ ಮೇಲೆ ತನ್ನ ಮಾಯೆಯನ್ನು ಪ್ರಯೋಗಿಸಿದಾಗ, ಅದು ಮಹಾಪುರುಷರಿಗೆ ಏನನ್ನೂ ಮಾಡದೆ ತಾನೇ-ತಾನಾಗಿ ಕುಗ್ಗಿ ಹೋಗಿ, ಪ್ರಯೋಗಿಸಿದವನ ಸಾಮರ್ಥ್ಯವೂ ಹೊರಟು ಹೋಗುತ್ತದೆ. ॥ ೪೫ ॥

ಬ್ರಹ್ಮದೇವರು ವಿಚಾರ ಮಾಡುತ್ತಾ ನೋಡುತ್ತಿದ್ದಾಗಲೇ ಎಲ್ಲ ಗೊಲ್ಲಬಾಲಕರು ಮತ್ತು ಕರುಗಳು ಶ್ರೀಕೃಷ್ಣನರೂಪದಲ್ಲಿ ಕಂಡು ಬರತೊಡಗಿದರು. ಎಲ್ಲರೂ ನೀರು ತುಂಬಿದ ಮೋಡಗಳಂತೆ ಶ್ಯಾಮಲವರ್ಣದವರಾಗಿದ್ದು, ಪೀತಾಂಬರವನ್ನು ಧರಿಸಿ ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಧರಿಸಿದ ಚತುರ್ಭುಜರಾಗಿದ್ದರು. ಎಲ್ಲರ ತಲೆಯ ಮೇಲೆ ಕಿರೀಟ, ಕಿವಿಯಲ್ಲಿ ಕುಂಡಲಗಳೂ,

ಚತುರ್ಭುಜಾಃ ಶಂಖಚಕ್ರಗದಾರಾಜೀವಪಾಣಯಃ ।
ಕಿರೀಟಿನಃ ಕುಂಡಲಿನೋ ಹಾರಿಣೋ ವನಮಾಲಿನಃ
॥ ೪೭ ॥

ಶ್ರೀವತ್ಸಾಂಗದದೋರತ್ನಕಂಬುಕಂಕಣಪಾಣಯಃ ।
ನೂಪುರೈಃ ಕಟಕೈರ್ಭಾತಾಃ ಕಟಿಸೂತ್ರಾಂಗುಲೀಯಕೈಃ
॥ ೪೮ ॥

ಆಂಘ್ರಿಮಸ್ತಕಮಾಪೂರ್ಣಾಸ್ತುಲಸೀನವದಾಮಭಿಃ ।
ಕೋಮಲೈಃ ಸರ್ವಗಾತ್ರೇಷು ಭೂರಿಪುಣ್ಯವದರ್ಪಿತೈಃ
॥ ೪೯ ॥

ಇಂದ್ರಿಕಾವಿಶದಸ್ಮೇರೈಃ ಸಾರುಣಾಪಾಂಗವೀಕ್ಷಿತೈಃ ।
ಸ್ವಕಾರ್ಥಾನಾಮಿವ ರಜಃಸತ್ತಾಭ್ಯಾಂ ಸ್ರಷ್ಟ್ಯಪಾಲಕಾಃ
॥ ೫೦ ॥

ಆತ್ಮಾದಿಸ್ತಂಭಪರ್ಯಂತೈರ್ಮೂರ್ತಿಮದ್ಭಿಶ್ಚರಾಚರೈಃ ।
ನೃತ್ತಗೀತಾದ್ಯನೇಕಾರ್ಹೈಃ ಪೃಥಕ್ಪೃಥಗುಪಾಸಿತಾಃ
॥ ೫೧ ॥

ಅಣಿಮಾದ್ಯೈರ್ಮಹಿಮಭಿರಜಾದ್ಯಾಭಿರ್ವಿಭೂತಿಭಿಃ ।
ಚತುರ್ವಿಂಶತಿಭಿಸ್ತತ್ತ್ವೈಃ ಪರೀತಾ ಮಹದಾದಿಭಿಃ
॥ ೫೨ ॥

ಕಾಲಸ್ವಭಾವಸಂಸ್ಕಾರಕಾಮಕರ್ಮಗುಣಾದಿಭಿಃ ।
ಸ್ವಮಹಿಧ್ವಸ್ತಮಹಿಭಿರ್ಮೂರ್ತಿಮದ್ಭಿರುಪಾಸಿತಾಃ
॥ ೫೩ ॥

ಸತ್ಯಜ್ಞಾನಾನಂತಾನಂದಮಾತ್ರೈಕರಸಮೂರ್ತಯಃ ।
ಅಸ್ಪೃಷ್ಟಭೂರಿಮಾಹಾತ್ಮ್ಯಾ ಅಪಿ ಹ್ಯುಪನಿಷದ್ದೃಶಾಮ್
॥ ೫೪ ॥

ಏವಂ ಸಕೃದ್ದದರ್ಶಾಜಃ ಪರಬ್ರಹ್ಮಾತ್ಮನೋಽಖಿಲಾನ್ ।
ಯತ್ಭಾಸಾ ಸರ್ವಮಿದಂ ವಿಭಾತಿ ಸಚರಾಚರಮ್
॥ ೫೫ ॥

ಕೊರಳಲ್ಲಿ ಸುಂದರ ಹಾರಗಳೂ ಹಾಗೂ ವನಮಾಲೆಗಳು ಶೋಭಿಸುತ್ತಿದ್ದುವು. ॥ ೪೬-೪೭ ॥ ಅವರ ವೃಕ್ಷಸ್ಥಳದಲ್ಲಿ ಶ್ರೀವತ್ಸ ಲಾಂಛನವಿದ್ದು, ಬಾಹುಗಳಲ್ಲಿ ಕನಕಾಂಗದ-ಕೇಯೂರಗಳೂ, ಮಣಿಕಟ್ಟುಗಳಲ್ಲಿ ಶಂಖಾಕಾರವಾದ ರತ್ನಗಳನ್ನು ಕೊರೆದ ಕಂಕಣಗಳನ್ನೂ, ಚರಣಗಳಲ್ಲಿ ನೂಪುರಗಳನ್ನೂ ಧರಿಸಿದ್ದರು. ಸುವರ್ಣಮಯವಾದ ಉಡಿದಾರಗಳನ್ನು ಧರಿಸಿದ್ದರು ಹಾಗೂ ಬೆರಳುಗಳಲ್ಲಿ ರತ್ನದುಂಗುರಗಳು ಹೊಳೆಯುತ್ತಿದ್ದವು. ॥ ೪೮ ॥ ನಖ ಶಿಖಾಂತವಾಗಿ ಸಮಸ್ತ ಅಂಗಗಳಲ್ಲಿಯೂ ಪುಣ್ಯವಂತರಾದ ಭಕ್ತರು ಅರ್ಪಿಸಿದ ಸುಕೋಮಲವಾದ, ನೂತನವಾದ ತುಳಸೀ ಮಾಲೆಗಳಿಂದ ಅಲಂಕೃತರಾಗಿದ್ದರು. ॥ ೪೯ ॥ ಅವರ ಕಿರುನಗೆಯು ಬೆಳದಿಂಗಳಿನಂತೆ ಉಜ್ವಲವಾಗಿತ್ತು. ಎಣ್ಣೆಗೆಂಪಿನಿಂದ ಕೂಡಿದ್ದ ಅವರ ಕಡೆಗಣ್ಣಿನ ನೋಟವು ಸುಮಧುರವಾಗಿತ್ತು. ಅವರು ಇವೆರಡರ ಮೂಲಕ ಸತ್ತ್ವಗುಣ ಮತ್ತು ರಜೋಗುಣಗಳನ್ನು ಸ್ವೀಕರಿಸಿ, ಭಕ್ತರ ಇಷ್ಟಾರ್ಥಗಳನ್ನು ನಡೆಸಿಕೊಡಲು ಅವತರಿಸಿದ ಲೋಕಪಾಲಕರಂತೆಯೇ ಕಾಣುತ್ತಿದ್ದರು. ॥ ೫೦ ॥ ತನ್ನನ್ನೂ ಮೊದಲ್ಗೊಂಡು ಹುಲ್ಲುಕಡ್ಡಿಯವರೆಗಿನ ಸಮಸ್ತ ಚರಾಚರ ಪ್ರಾಣಿಗಳೂ ಮೂರ್ತಿವತ್ತಾಗಿ ಬಂದು ಗೀತ-ನೃತ್ಯಗಳೇ ಮೊದಲಾದ ಹಲವಾರು ಪೂಜಾವಿಧಾನಗಳಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಆ ಎಲ್ಲ ಮೂರ್ತಿಗಳನ್ನು ಪೂಜಿಸುತ್ತಿದ್ದುದನ್ನೂ ಬ್ರಹ್ಮದೇವರು ನೋಡಿದರು. ॥ ೫೧ ॥ ಪ್ರತಿಯೊಂದು ಮೂರ್ತಿಯೂ ಅಣಿಮಾದಿ ಅಷ್ಟಸಿದ್ಧಿಗಳಿಂದಲೂ, ಮಾಯೆಯೇ ಮೊದಲಾದ ಜಗತ್ಕಾರಣ ಶಕ್ತಿಗಳಿಂದಲೂ, ಮಹತ್ತತ್ತ್ವವೇ ಮೊದಲಾದ ಇಪ್ಪತ್ತು ನಾಲ್ಕು ತತ್ತ್ವಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಿತು. ॥ ೫೨ ॥ ಪ್ರಕೃತಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾಲ, ಅದರ ಪರಿಣಾಮದ ಕಾರಣ ಸ್ವಭಾವ, ವಾಸನೆಗಳನ್ನು ಜಾಗ್ರತಗೊಳಿಸುವಂತಹ ಸಂಸ್ಕಾರಗಳು, ಕಾಮನೆಗಳು, ಕರ್ಮ, ವಿಷಯ ಮತ್ತು ಫಲ - ಇವೆಲ್ಲವೂ ಮೂರ್ತಿಮಂತರಾಗಿ ಭಗವಂತನ ಪ್ರತಿಯೊಂದು ರೂಪವನ್ನು ಉಪಾಸಿಸುತ್ತಿದ್ದವು. ಭಗವಂತನ ಸತ್ತೆ ಮತ್ತು ಮಹತ್ತುಗಳ ಎದುರು ಅವೆಲ್ಲವುಗಳ ಅಸ್ತಿತ್ವ ಹಾಗೂ ಮಹತ್ತುಗಳನ್ನು ಕಳಕೊಂಡು ಬಿಟ್ಟಿದ್ದವು. ॥ ೫೩ ॥ ಅವರೆಲ್ಲರೂ ಭೂತ, ಭವಿಷ್ಯತ್ ಮತ್ತು ವರ್ತಮಾನ ಕಾಲಗಳ ಮೂಲಕ ಸೀಮಿತರಾಗಿರದೆ ತ್ರಿಕಾಲಾಬಾಧಿತ ಸತ್ಯವಾಗಿದ್ದರು. ಅವರೆಲ್ಲರೂ ಸ್ವಯಂ ಪ್ರಕಾಶರೂ, ಕೇವಲ ಅನಂತ ಆನಂದ ಸ್ವರೂಪರೂ ಆಗಿದ್ದಾರೆ. ಅವರಲ್ಲಿ ಜಡತೆ ಮತ್ತು ಚೈತನ್ಯದ ಭೇದಭಾವವೇ ಇಲ್ಲ. ಅವರೆಲ್ಲರೂ ಏಕರಸರಾಗಿದ್ದಾರೆ. ಎಲ್ಲಿಯವರೆಗೆಂದರೆ, ಉಪನಿಷದ್ದರ್ಶಿ ತತ್ತ್ವಜ್ಞಾನಿಗಳ ದೃಷ್ಟಿಯೂ ಕೂಡ ಅವರ ಅನಂತ ಮಹಿಮೆಯನ್ನು ಸ್ಪರ್ಶಿಸಲಾರದೆ ಹೋಯಿತು. ॥ ೫೪ ॥ ಹೀಗೆ ಅವರೆಲ್ಲರೂ ಆ ಪರಬ್ರಹ್ಮ ಪರಮಾತ್ಮ ಶ್ರೀಕೃಷ್ಣನದೇ ಸ್ವರೂಪರಾಗಿದ್ದಾರೆ. ಅವರ ಪ್ರಕಾಶದಿಂದ ಈ ಇಡೀ ಚರಾಚರ ಜಗತ್ತು ಪ್ರಕಾಶಿಸುತ್ತಿರುವುದನ್ನು ಒಟ್ಟಿಗೆ ಬ್ರಹ್ಮದೇವರು ನೋಡಿದರು.॥ ೫೫ ॥

ಇಂತಹ ಅತ್ಯಂತ ಆಶ್ಚರ್ಯಮಯ ದೃಶ್ಯವನ್ನು ನೋಡಿ ಬ್ರಹ್ಮದೇವರು ಚಕಿತರಾದರು. ಅವರ ಹನ್ನೊಂದು ಇಂದ್ರಿಯಗಳು (ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ ಮತ್ತು ಒಂದು

ತತೋಽತಿಕುತುಕೋದ್ವೃತ್ತಸ್ತಿಮಿತೈಕಾದಶೇಂದ್ರಿಯಃ ।
ತದ್ಧಾಮ್ನಾಭೂದಜಸ್ತೂಷ್ಣೀಂ ಪೂರ್ದೇವ್ಯಂತೀವ ಪುತ್ರಿಕಾ
॥ ೫೬ ॥

ಮನಸ್ಸು) ಸ್ತಬ್ಧವಾದುವು. ಅವರು ಭಗವಂತನ ತೇಜದಿಂದ ನಿಸ್ತೇಜಿತರಾಗಿ ಮೌನರಾದರು. ಆಗ ಅವರು ಹೀಗೆ ಸ್ತಬ್ಧರಾಗಿ ನಿಂತಿರುವಾಗ ಗೋಕುಲದ ಅಧಿಷ್ಠಾತೃದೇವತೆಯ ಮುಂದೆ ನಿಂತಿರುವ ಒಂದು ಗೊಂಬೆಯಂತೆಯೇ ಕಾಣುತ್ತಿದ್ದರು. ॥ ೫೬ ॥

ಇತೀರೇಶೇಽತರ್ಕ್ಯೇ ನಿಜಮಹಿಮನಿ ಸ್ವಪ್ರಮಿತಿಕೇ
ಪರತ್ರಾಜಾತೋಽತನ್ನಿರಸನ ಮುಖಬ್ರಹ್ಮಕಮಿತೌ ।
ಅನೀಶೇಽಪೀ ದ್ರಷ್ಟುಂ ಕಿಮಿದಮಿತಿ ವಾ ಮುಹ್ಯತಿ ಸತಿ
ಛಲಾದಾಜ್ಞೋ ಜ್ಞಾತ್ವಾ ಸಪದಿ ಪರಮೋಽಜಾಜವನಿಕಾಮ್
॥ ೫೭ ॥

ಪರೀಕ್ಷಿತನೇ ! ಭಗವಂತನ ಸ್ವರೂಪವು ತರ್ಕಕ್ಕೆ ಅತೀತವಾದುದು. ಅವನ ಮಹಿಮೆ ಅಸಾಧಾರಣವಾದುದು. ಅವನು ಸ್ವಯಂ ಪ್ರಕಾಶನೂ, ಆನಂದಸ್ವರೂಪನೂ, ಮಾಯೆಯಿಂದ ಅತೀತನೂ ಆಗಿದ್ದಾನೆ. ವೇದಾಂತವೂ ಕೂಡ ಸಾಕ್ಷಾತ್ತಾಗಿ ಅವನನ್ನು ವರ್ಣಿಸಲು ಅಸಮರ್ಥವಾಗಿದೆ. ಅದಕ್ಕಾಗಿ ಅವನಿಂದ ಭಿನ್ನವಾದುದನ್ನು ನಿಷೇಧ ಮಾಡುತ್ತಾ ಆನಂದ ಸ್ವರೂಪೀ ಬ್ರಹ್ಮನನ್ನು ಹೇಗೋ, ಕೆಲವು ಸಂಕೇತ ಮಾಡುತ್ತದೆ. ಬ್ರಹ್ಮದೇವರು ಸಮಸ್ತ ವಿದ್ಯೆಗಳ ಅಧಿಪತಿಯಾಗಿದ್ದರೂ ಭಗವಂತನ ದಿವ್ಯಸ್ವರೂಪವನ್ನು ಇದು ಏನು ಎಂದು ಅವರು ಸ್ವಲ್ಪವೂ ತಿಳಿಯದೆ ಹೋದರು. ಅವರು ಭಗವಂತನ ಆ ಮಹಿಮೆಯುಳ್ಳ ರೂಪಗಳನ್ನು ನೋಡುವುದಕ್ಕೆ ಅಸಮರ್ಥರಾಗಿ ಕಣ್ಣು ಮುಚ್ಚಿಕೊಂಡರು. ಭಗವಾನ್ ಶ್ರೀಕೃಷ್ಣನು ಬ್ರಹ್ಮದೇವರ ಈ ಮೋಹ ಮತ್ತು ಅಸಮರ್ಥತೆಯನ್ನು ಮನಗಂಡು ಯಾವುದೇ ಪ್ರಯಾಸವಿಲ್ಲದೆ ಕೂಡಲೇ ತನ್ನ ಮಾಯೆಯ ತೆರೆಯನ್ನು ಸರಿಸಿಬಿಟ್ಟನು. ॥ ೫೭ ॥ ಇದರಿಂದ ಬ್ರಹ್ಮದೇವರಿಗೆ ಬಾಹ್ಯ ಜ್ಞಾನವುಂಟಾಯಿತು. ಸತ್ತವನು ಬದುಕಿ ಎದ್ದು ಕೂಡುವಂತೆ, ಸಚೇತನರಾಗಿ ಅವರು ಹೇಗೋ ಕಷ್ಟಪಟ್ಟು ತಮ್ಮ ಕಣ್ಣುಗಳನ್ನು ತೆರೆದರು. ಆಗ ಅವರಿಗೆ ತನ್ನ ಶರೀರ ಮತ್ತು ಈ ಜಗತ್ತು ಕಾಣತೊಡಗಿತು. ॥ ೫೮ ॥ ಬ್ರಹ್ಮದೇವರು ಸುತ್ತಲೂ ನೋಡತೊಡಗಿದಾಗ ಮೊದಲಿಗೆ ದಿಕ್ಕುಗಳು, ಆನಂತರ ಆಗಲೇ ಅವರ ಮುಂದೆ ವೃಂದಾವನ ಕಂಡುಬಂತು. ವೃಂದಾವನವು ಎಲ್ಲರಿಗಾಗಿ ಒಂದೇ ರೀತಿ ಪ್ರಿಯವಾಗಿದೆ. ನೋಡಿದಲ್ಲೆಲ್ಲ ಜೀವರಿಗೆ ಜೀವನವನ್ನು ಕೊಡುವಂತಹ ಫಲ-ಪುಷ್ಪಗಳಿಂದ ತುಂಬಿದ, ಹಚ್ಚ ಹಸಿರಾದ ಎಲೆಗಳಿಂದ ಕೂಡಿದ ಮರಗಳ ಸಾಲುಗಳು ಶೋಭಿಸುತ್ತಿದ್ದವು. ॥ ೫೯ ॥ ಭಗವಾನ್ ಶ್ರೀಕೃಷ್ಣನ ಲೀಲಾಭೂಮಿಯಾದ ವೃಂದಾವನ ಧಾಮದಲ್ಲಿ ಕ್ರೋಧ, ತೃಷ್ಣೆ ಮುಂತಾದ ದೋಷಗಳು ಪ್ರವೇಶಿಸಲಾರವು. ಅಲ್ಲಿ ಸ್ವಭಾವತಃ ಪರಸ್ಪರ ವೈರಿಗಳಾದ ಮನುಷ್ಯರು, ಪಶು-ಪಕ್ಷಿಗಳೂ ಕೂಡ ಪ್ರಿಯಮಿತ್ರರಂತೆ ಒಂದಾಗಿ ಸೇರಿ ವಾಸಿಸುತ್ತಿದ್ದರು. ॥ ೬೦॥ ಬ್ರಹ್ಮದೇವರು ವೃಂದಾವನವನ್ನು ದರ್ಶಿಸುವಾಗ ಅದ್ವಿತೀಯ ಪರಬ್ರಹ್ಮನು ಗೋಪ ಬಾಲಕನಂತೆ ನಾಟ್ಯವಾಡುತ್ತಿರುವುದನ್ನು ನೋಡಿದನು. ಒಬ್ಬನಾಗಿದ್ದರೂ ಅವನಿಗೆ ಮಿತ್ರರಿದ್ದಾರೆ, ಅನಂತನಾಗಿದ್ದರೂ ಅವನು ಅತ್ತ-ಇತ್ತ ತಿರುಗುತ್ತಿರುವನು. ಅವನ ಜ್ಞಾನವು ಅಗಾಧವಾಗಿದ್ದರೂ ಅವನು ತನ್ನ ಸ್ನೇಹಿತರಾದ ಗೋಪಬಾಲಕರನ್ನೂ, ಕರುಗಳನ್ನೂ ಹುಡುಕುತ್ತಿರುವನು. ಭಗವಂತನಾದ ಶ್ರೀಕೃಷ್ಣನು ಮೊದಲು ಕೈಯಲ್ಲಿ ಮೊಸರನ್ನದ ತುತ್ತನ್ನು ಎತ್ತಿಕೊಂಡು ಹುಡುಕುತ್ತಿದ್ದನೋ ಹಾಗೆಯೇ ಈಗಲೂ ಒಬ್ಬನಾಗಿಯೇ ಅವನ್ನು ಹುಡುಕುತ್ತಿರುವುದನ್ನೂ ಬ್ರಹ್ಮದೇವರು ನೋಡಿದರು. ॥ ೬೧ ॥

ತತೋಽರ್ವಾಕ್ ಪ್ರತಿಲಬ್ಧಾಕ್ಷಃ ಕಃ ಪರೇತವದುತ್ಥಿತಃ ।
ಕೃಚ್ಛ್ರಾದುನ್ಮೀಲ್ಯ ವೈ ದೃಷ್ಟೀರಾಚಷ್ಟೇದಂ ಸಹಾತ್ಮನಾ
॥ ೫೯ ॥

ಸಪದ್ಯೇವಾಭಿತಃ ಪಶ್ಯನ್ ದಿಶೋಽಪಶ್ಯತ್ಪುರಃಸ್ಥಿತಮ್ ।
ವೃಂದಾವನಂ ಜನಾಜೀವ್ಯದ್ರುಮಾಕೀರ್ಣಂ ಸಮಾಪ್ರಿಯಮ್
॥ ೫೯ ॥

ಯತ್ರ ನೈಸರ್ಗದುರ್ವೈರಾಃ ಸಹಾಸನ್ನೃಮೃಗಾದಯಃ ।
ಮಿತ್ರಾಣೀವಾಜಿತಾವಾಸದ್ರುತರುಟ್ತರ್ಷಕಾದಿಕಮ್
॥ ೬೦ ॥

ತತ್ರೋದ್ವಹತ್ಪಶುಪವಂಶಶಿಶುತ್ವನಾಟ್ಯಂ
ಬ್ರಹ್ಮಾದ್ವಯಂ ಪರಮನಂತಮಗಾಧಬೋಧಮ್ ।
ವತ್ಸಾನ್ಸಖೀನಿವ ಪುರಾ ಪರಿತೋ ವಿಚಿನ್ವ-
ದೇಕಂ ಸಪಾಣಿಕವಲಂ ಪರಮೇಷ್ಯಚಷ್ಟ ॥ ೬೧ ॥

ದೃಷ್ಟ್ವಾತ್ವರೇಣ ನಿಜಧೋರಣತೋಽವತೀರ್ಯ
ಪೃಥ್ವ್ಯಾಂ ವಪುಃ ಕನಕದಂಡಮಿವಾಭಿಪಾತ್ಯ ।
ಸ್ಪೃಷ್ಟ್ವಾಚತುರ್ಮುಕುಟಕೋಟಿಭಿರಂಘ್ರಿಯುಗ್ಮಂ
ನತ್ವಾ ಮುದಶ್ರುಸುಜಲೈರಕೃತಾಭಿಷೇಕಮ್ ॥ ೬೨ ॥

ಉತ್ಥಾಯೋತ್ಥಾಯ ಕೃಷ್ಣಸ್ಯ ಚಿರಸ್ಯ ಪಾದಯೋಃ ಪತನ್ ।
ಆಸ್ತೇ ಮಹಿತ್ವಂ ಪ್ರಾಗ್ದೃಷ್ಟಂ ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ
॥ ೬೩ ॥

ಶನೈರಥೋತ್ಥಾಯ ವಿಮೃಜ್ಯ ಲೋಚನೇ
ಮುಕುಂದಮುದ್ವೀಕ್ಷ್ಯ ವಿನಮ್ರಕಂಧರಃ ।
ಕೃತಾಂಜಲಿಃ ಪ್ರಶ್ರಯವಾನ್ಸಮಾಹಿತಃ
ಸವೇಪಥುರ್ಗದ್ಗದಯೈಲತೇಲಯಾ ॥ ೬೪ ॥

ಭಗವಂತನನ್ನು ಕಾಣುತ್ತಲೇ ಬ್ರಹ್ಮದೇವರು ತಮ್ಮ ವಾಹನವಾದ ಹಂಸದಿಂದ ಕೆಳಗಿಳಿದು, ಚಿನ್ನದಂತೆ ಹೊಳೆಯುತ್ತಿರುವ ತನ್ನ ಶರೀರದಿಂದ ಭೂಮಿಯಲ್ಲಿ ದಂಡವತ್ ಪ್ರಯಾಣ ಮಾಡಿದರು. ಅವರು ತಮ್ಮ ನಾಲ್ಕೂ ಕಿರೀಟಗಳ ಅಗ್ರಭಾಗದಿಂದ ಭಗವಂತನ ಚರಣಗಳನ್ನು ಸ್ಪರ್ಶಿಸುತ್ತಾ ನಮಸ್ಕರಿಸಿದರು ಹಾಗೂ ಆನಂದಾಶ್ರುಗಳಿಂದ ಆ ಪಾದಗಳನ್ನು ತೊಳೆದರು. ॥ ೬೨ ॥ ಅವರು ಭಗವಾನ್ ಶ್ರೀಕೃಷ್ಣನ ಮೊದಲು ನೋಡಿದ ಮಹಿಮೆಯನ್ನು ಪದೇ-ಪದೇ ಸ್ಮರಿಸುತ್ತಾ, ಅವನ ಕಾಲಿಗೆ ಬೀಳುತ್ತಾ, ಏಳುತ್ತಾ ಪುನಃ ಪುನಃ ನಮಸ್ಕರಿಸುತ್ತಾರೆ. ಹೀಗೆ ಬಹಳ ಹೊತ್ತಿನವರೆಗೆ ಅವರು ಭಗವಂತನ ಚರಣಗಳಲ್ಲಿ ಬಿದ್ದುಕೊಂಡೇ ಇದ್ದರು. ॥ ೬೩ ॥ ಮತ್ತೆ ನಿಧಾನವಾಗಿ ಎದ್ದು ತಮ್ಮ ಕಣ್ಣುಗಳನ್ನು ಒರೆಸಿಕೊಂಡರು. ಭಕ್ತಿ ಮತ್ತು ಮುಕ್ತಿಯ ಏಕಮಾತ್ರ ಉದ್ಗಮನಾದ ಭಗವಂತನನ್ನು ನೋಡಿ ಅವರ ಶಿರವು ಬಾಗಿತು. ನಡುಗುತ್ತಾ ಕೈಗಳನ್ನು ಜೋಡಿಸಿಕೊಂಡು ಅತ್ಯಂತ ವಿನಮ್ರರಾಗಿ, ಏಕಾಗ್ರತೆಯಿಂದ ಗದ್ಗದ ವಾಣಿಯಿಂದ ಬ್ರಹ್ಮದೇವರು ಭಗವಂತನನ್ನು ಸ್ತುತಿಸತೊಡಗಿದರು. ॥ ೬೪ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಬ್ರಹ್ಮದೇವರು ಮಾಡಿದ ಭಗವಂತನ ಸ್ತುತಿ

ಬ್ರಹ್ಮೋವಾಚ

ನೌಮೀಡ್ಯ ತೇಽಭ್ರವಪುಷೇ ತಡಿದಂಬರಾಯ
ಗುಂಜಾವತಂಸಪರಿಪಿಚ್ಛಲಸನ್ಮುಖಾಯ ।
ವನ್ಯಸ್ರಜೇ ಕವಲವೇತ್ರವಿಷಾಣವೇಣು-
ಲಕ್ಷ್ಮಶ್ರಿಯೇ ಮೃದುಪದೇ ಪಶುಪಾಂಗಜಾಯ ॥ ೧ ॥

ಅಸ್ಯಾಪಿ ದೇವ ವಪುಷೋ ಮದನುಗ್ರಹಸ್ಯ
ಸ್ವೇಚ್ಛಾಮಯಸ್ಯ ನ ತು ಭೂತಮಯಸ್ಯ ಕೋಽಪಿ ।
ಈಶೀತ ಮಹಿ ತ್ವವಸಿತುಂ ಮನಸಾಽಽಂತರೇಣ
ಸಾಕಾತ್ತವೈವ ಕಿಮುತಾತ್ಮ ಸುಖಾನುಭೂತೇಃ ॥ ೨ ॥

ಶ್ರೀಬ್ರಹ್ಮದೇವರು **ಸ್ತೋತ್ರಮಾಡುತ್ತಾರೆ** - ಸ್ತೋತ್ರಾರ್ಹನಾದ ಭಗವಂತನೇ! ನಾನು ನಿನ್ನ ಚರಣಕಮಲಗಳಲ್ಲಿ ನಮಸ್ಕರಿಸುತ್ತೇನೆ. ನೀಲಮೇಘ ಶ್ಯಾಮನೇ! ಮಿಂಚಿನಂತಹ ಪೀತಾಂಬರವನ್ನು ಧರಿಸಿರುವವನೇ! ಗುಲಗಂಜಿಗಳ ಮಾಲೆಗಳನ್ನು ಧರಿಸಿ, ಮಕರಾಕೃತಿಯ ಕರ್ಣಕುಂಡಲಗಳನ್ನು ಹೊಂದಿರುವವನೇ! ತಲೆಯಲ್ಲಿ ನವಿಲು ಗರಿಯ ಕಿರೀಟವನ್ನು ಧರಿಸಿ ಅದರಿಂದ ಪ್ರಕಾಶಮಾನವಾಗಿ ಕಾಣುವ ಮುಖವುಳ್ಳವನೇ! ವೃಕ್ಷಸ್ಥಳದಲ್ಲಿ ವನಮಾಲೆಯನ್ನು ಧರಿಸಿರುವವನೇ! ಕೈಯಲ್ಲಿ ಮೊಸರನ್ನದ ತುತ್ತನ್ನು ಹಿಡಿದುಕೊಂಡು, ಉಡಿಯಲ್ಲಿ ಕೊಳಲನ್ನು ಸಿಕ್ಕಿಸಿಕೊಂಡು, ಕಂಕುಳಿನಲ್ಲಿ ಕೊಂಬನ್ನು ಚಾವಟಿಯನ್ನು ಹಿಡಿದುಕೊಂಡು ಅನುಪಮವಾದ ಕಾಂತಿಯಿಂದ ಪ್ರಕಾಶಿಸುತ್ತಿರುವವನೇ! ಮೃದುವಾದ ಪಾದಗಳನ್ನು ಹೊಂದಿರುವವನೇ! ನಂದಗೋಪನ ಸುತನೇ! ನಿನಗೆ ನಮಸ್ಕರಿಸುತ್ತೇನೆ. ॥ ೧ ॥ ದೇವನೇ! ನಿನ್ನ ಶ್ರೀವಿಗ್ರಹವು ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸುವುದಾಗಿದೆ. ನನ್ನನ್ನು ಅನುಗ್ರಹಿಸುವುದಕ್ಕಾಗಿಯೇ ನೀನು ದಿವ್ಯ ರೂಪವನ್ನು ತಾಳಿರುವೆ. ನಿನ್ನ ಈ ಶ್ರೀವಿಗ್ರಹವನ್ನು ಪಂಚ ಭೂತಾತ್ಮಕವಾದುದೆಂದು ಯಾರು ತಾನೇ ಹೇಳಬಲ್ಲರು? ಖಂಡಿತವಾಗಿಯೂ ನಿನ್ನದು ಪಂಚಭೂತಾತ್ಮಕ ಶರೀರವಲ್ಲ

ಜ್ಞಾನೇ ಪ್ರಯಾಸಮುದಪಾಸ್ಯ ನಮಂತ ಏವ
ಜೀವಂತಿ ಸನ್ಮುಖರಿತಾಂ ಭವದೀಯವಾರ್ತಾಮ್ ।
ಸ್ಥಾನೇ ಸ್ಥಿತಾಃ ಶ್ರುತಿಗತಾಂ ತನುವಾಙ್ಮನೋಭಿ-
ರ್ಯೇ ಪ್ರಾಯಶೋಽಜಿತ ಜಿತೋಽಪ್ಯಸಿ ತೈಸ್ತ್ರಿಲೋಕ್ಯಾಮ್ ॥ ೩ ॥

ಶ್ರೇಯಃಸ್ರುತಿಂ ಭಕ್ತಿಮುದಸ್ಯ ತೇ ವಿಭೋ
ಕ್ಲಿಶ್ಯಂತಿ ಯೇ ಕೇವಲ ಬೋಧಲಬ್ಧಯೇ ।
ತೇಷಾಮಸೌ ಕ್ಲೇಶಲ ಏವ ಶಿಷ್ಯತೇ
ನಾನ್ಯದ್ಯಥಾ ಸ್ಥೂಲತುಷಾವಘಾತಿನಾಮ್ ॥ ೪ ॥

ಪುರೇಹ ಭೂಮನ್ಬಹವೋಽಪಿ ಯೋಗಿನ-
ಸ್ತ್ವದರ್ಪಿತೇಹಾ ನಿಜಕರ್ಮಲಬ್ಧಯಾ ।
ವಿಬುಧ್ಯ ಭಕ್ತ್ಯೈವ ಕಥೋಪನೀತಯಾ
ಪ್ರಪೇದಿರೇಽಂಜೋಽಚ್ಯುತ ತೇ ಗತಿಂ ಪರಾಮ್ ॥ ೫ ॥

ತಥಾಪಿ ಭೂಮನ್ಮಹಿಮಾಗುಣಸ್ಯ ತೇ
ವಿಬೋದ್ಧುಮರ್ಹತ್ಯಮಲಾಂತರಾತ್ಮಭಿಃ ।
ಅವಿಕ್ರಿಯಾತ್ಸ್ವಾನುಭವಾದರೂಪತೋ
ಹ್ಯನನ್ಯಬೋಧ್ಯಾತ್ಮತಯಾ ನ ಚಾನ್ಯಥಾ ॥ ೬ ॥

ಅಪ್ರಾಕೃತವಾದ ಶುದ್ಧಸತ್ತ್ವಮಯ ಶರೀರವಾಗಿದೆ. ನಾನೇ ಆಗಲೀ, ಇತರ ಯೋಗಿಗಳೇ ಆಗಲೀ ಸಮಾಧಿಸ್ಥರಾಗಿ ನಿನ್ನ ಈ ಸಚ್ಚಿದಾನಂದ ವಿಗ್ರಹದ ಸ್ವರೂಪವನ್ನೂ, ಮಹಿಮೆಯನ್ನೂ ತಿಳಿಯಲಾರೆವು. ಅತ್ಯಾನಂದಾನುಭವ ಸ್ವರೂಪನಾದ ನಿನ್ನ ಮಹಿಮೆಯನ್ನು ಏಕಾಗ್ರ ಮನಸ್ಸಿನಿಂದಲಾದರೂ ಯಾರಿಗೆ ತಾನೇ ತಿಳಿಯಲು ಸಾಧ್ಯವಾಗುತ್ತದೆ ? ॥ ೨ ॥ ಪ್ರಭುವೇ ! ಯಾರು ಜ್ಞಾನಪ್ರಾಪ್ತಿಗಾಗಿ ಪ್ರಯತ್ನಿಸದೆಯೇ ತಾವಿರುವ ಸ್ಥಳದಲ್ಲೇ ಇದ್ದು ಕೊಂಡು ಸತ್ಪುರುಷರ ಸಹವಾಸದಲ್ಲಿರುತ್ತಾ, ನಿನಗೆ ಪ್ರಿಯತಮರಾದ ಸಂತರು ಹೇಳುವ ನಿನ್ನ ಲೀಲಾಪ್ರಸಂಗಗಳನ್ನು ಶರೀರ, ಮಾತು, ಮನಸ್ಸುಗಳೆಂಬ ತ್ರಿಕರಣಗಳಿಂದಲೂ ಶ್ರದ್ಧೆಯಿಟ್ಟು ಕೇಳುತ್ತಾ, ಮತ್ತಾವ ಕಾರ್ಯಗಳನ್ನು ಮಾಡದೆ ಇರುತ್ತಾರೋ, ಅಂತಹವರು ತ್ರಿಲೋಕಗಳಲ್ಲಿಯೂ ಯಾರಿಂದಲೂ ಜಯಿಸಲ್ಪಡದಿರುವ ನಿನ್ನನ್ನು ಜಯಿಸುತ್ತಾರೆ. ಅನನ್ಯಭಕ್ತಿಯ ಮೂಲಕವಾಗಿ ನಿನ್ನನ್ನು ವಶಪಡಿಸಿ ಕೊಳ್ಳುತ್ತಾರೆ. ॥ ೩ ॥ ಭಗವಂತನೇ ! ನಿನ್ನ ಭಕ್ತಿಯು ಎಲ್ಲ ವಿಧದಿಂದ ಶ್ರೇಯಸ್ಸಿನ ಮೂಲಸ್ರೋತವಾಗಿದೆ. ಉದ್ಗಮವಾಗಿದೆ. ಯಾರು ಅದನ್ನು ಬಿಟ್ಟು ಕೇವಲ ಜ್ಞಾನಪ್ರಾಪ್ತಿಗಾಗಿ ಶ್ರಮಪಡುವರೋ ಅವರು ದುಃಖವನ್ನೇ ಭೋಗಿಸುವರು. ಅವರಿಗೆ ಕ್ಲೇಶ, ಶ್ರಮವೇ ಉಳಿದುಕೊಳ್ಳುತ್ತದೆ. ಹೊಟ್ಟನ್ನು ಕುಟ್ಟುವವನಿಗೆ ಅಕ್ಕಿಯು ಸಿಗದೆ ಕೇವಲ ಪರಿಶ್ರಮ ಮಾತ್ರ ಕೈಗೂಡುತ್ತದೆ. ಹಾಗೆಯೇ ಕೇವಲ ಜ್ಞಾನಕ್ಕಾಗಿ ಶ್ರಮಿಸುವವರಿಗೆ ಶ್ರಮವು ಮಾತ್ರ ಉಳಿದುಕೊಂಡಿರುತ್ತದೆ. ॥ ೪ ॥

ಓ ಅಚ್ಯುತನೇ ! ಓ ಅನಂತನೇ ! ಈ ಲೋಕದಲ್ಲಿ ಹಿಂದೆಯೂ ಹಲವಾರು ಯೋಗಿಗಳು ಆಗಿಹೋಗಿದ್ದಾರೆ. ಯೋಗವೇ ಮೊದಲಾದವುಗಳ ಮೂಲಕ ಅವರಿಗೆ ಪರಮಪದದ ಪ್ರಾಪ್ತಿಯಾಗದಿರಲು, ಅವರು ಮಾಡಿದ ತಮ್ಮ ವೈದಿಕ ಮತ್ತು ಲೌಕಿಕಕರ್ಮಗಳೆಲ್ಲವನ್ನು ನಿನಗೆ ಸಮರ್ಪಿಸಿದ್ದರಿಂದಲೂ, ನಿನ್ನ ಲೀಲಾ ಪ್ರಸಂಗಗಳನ್ನು ಕೇಳುವುದರಿಂದಲೂ ಅವರಿಗೆ ನಿನ್ನಲ್ಲಿ ಅಪಾರವಾದ ಭಕ್ತಿಯುಂಟಾಯಿತು. ಆ ಪರಾಭಕ್ತಿಯಿಂದಲೇ ಅವರು ನಿನ್ನ ಸ್ವರೂಪದ ಜ್ಞಾನವನ್ನು ತಿಳಿದವರಾಗಿ ಬಹಳ ಸುಲಭವಾಗಿ ನಿನ್ನ ಪರಮಪದವನ್ನು ಸೇರಿದರು. ॥ ೫ ॥ ಆದರೂ ಪರಬ್ರಹ್ಮಸ್ವರೂಪನಾದ ಪರಮೇಶ್ವರನೇ ! ನಿನ್ನ ನಿರ್ಗುಣ ಸ್ವರೂಪದ ಮಹಿಮೆಯೂ ಪರಿಶುದ್ಧವಾದ ಅಂತಃಕರಣವುಳ್ಳವರಿಗೆ ತಿಳಿಯಲು ಸಾಧ್ಯವಾಗಬಹುದು. ಆಗಲೂ ಅದು ನಿರ್ವಿಕಾರವೂ ನಿರ್ವಿಷಯವೂ ಆದ ಅಂತಃಕರಣಕ್ಕೆ ಸ್ವಯಂ ಪ್ರಕಾಶವಾಗಿ ಗೋಚರಿಸುತ್ತದೆಯೇ ಹೊರತು ಬೇರೆ ವಿಧದಿಂದ ಗೋಚರಿಸುವುದಿಲ್ಲ, ಯಾವ ವಿಧವಾದ ವಿಕಾರವೂ ಇಲ್ಲದೆ ಅದು ಕಾಣುತ್ತದೆ. ಅದಕ್ಕೆ ನಿರ್ದಿಷ್ಟವಾದ ರೂಪವಿಲ್ಲ, ಅದು ಹೀಗಿರುವುದೆಂದು ಇತರರಿಗೆ ಹೇಳಲು ಸಾಧ್ಯವಾಗುವುದಿಲ್ಲ, ಪ್ರಕಾಶಮಾನವಾದ ಆತ್ಮರೂಪದಲ್ಲಿ ಅದನ್ನು ಕಾಣಬಹುದು. ॥ ೬ ॥ ಭಗವಂತ ! ಸಮರ್ಥರಾದ ಪುರುಷರು ಹಲವಾರು ಜನ್ಮಗಳ ಪರಿಶ್ರಮದಿಂದ ಭೂಮಿಯಲ್ಲಿರುವ ಕಣಗಳನ್ನೂ ಆಕಾಶದಲ್ಲಿರುವ ಹಿಮದ ತುಂತುರುಗಳನ್ನು

ಗುಣಾತ್ಮನಸ್ತೇऽಪಿ ಗುಣಾನ್ವಿಮಾತುಂ
ಹಿತಾವತೀರ್ಣಸ್ಯ ಕ ಈಶಿರೇऽಸ್ಯ ।
ಕಾಲೇನ ಯೈರ್ವಾ ವಿಮಿತಾಃ ಸುಕಲ್ಪೈ-
ರ್ಭೂಪಾಂಸವಃ ಖೇ ಮಿಹಿಕಾ ದ್ಯುಭಾಸಃ ॥ ೭ ॥

ರುಗರುಗಿಸುವ ನಕ್ಷತ್ರ ತಾರೆಗಳನ್ನು ಎಣಿಸಿಯಾರು. ಆದರೆ ನಿನ್ನ ಸಗುಣ ಸ್ವರೂಪದ ಅನಂತಾನಂತ ಗುಣಗಳನ್ನು ಯಾರು ತಾನೇ ಎಣಿಸಬಲ್ಲರು ? ಮಹಾನುಭಾವನೇ ! ನೀನು ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಲೆಂದೇ ಅವತರಿಸಿರುವೆ. ನಿನ್ನ ಮಹಿಮೆಯನ್ನು ತಿಳಿಯುವುದು ಅತ್ಯಂತ ಕಠಿಣವೇ ಸರಿ. ॥ ೭ ॥

ತತ್ತೇऽನುಕಂಪಾಂ ಸುಸಮೀಕ್ಷಮಾಣೋ
ಭುಂಜಾನ ಏವಾತ್ಮಕೃತಂ ವಿಪಾಕಮ್ ।
ಹೃದ್ವಾಗ್ವಪುರ್ಭಿರ್ವಿದಧನ್ನಮಸ್ತೇ
ಜೀವೇತ ಯೋ ಮುಕ್ತಿಪದೇ ಸ ದಾಯಭಾಕ್ ॥ ೮ ॥

ಯಾವ ಪುರುಷನು ಹೆಚ್ಚಿನ ಉತ್ಸಾಹದಿಂದ ನಿನ್ನ ಕೃಪೆಯನ್ನು ಕ್ಷಣ-ಕ್ಷಣಕ್ಕೂ ಪ್ರತೀಕ್ಷಿಸುತ್ತಿರುವನೋ, ಪ್ರಾರಬ್ಧ ಕರ್ಮಗಳಿಗೆ ಅನುಸಾರವಾಗಿ ಒದಗಿಬರುವ ಸುಖ-ದುಃಖಗಳನ್ನು ನಿರ್ವಿಕಾರವಾದ ಮನೋಭಾವದಿಂದ ಉಪಭೋಗಿಸುವನೋ, ಪ್ರೇಮಪೂರ್ಣವಾದ ಹೃದಯದಿಂದ, ಗದ್ಗದವಾದ ಧ್ವನಿಯಿಂದ, ಪುಳಕಿತವಾದ ಶರೀರದಿಂದ ತನ್ನನ್ನೇ ತಾನು ನಿನಗೆ ಅರ್ಪಿಸಿಕೊಳ್ಳುವನೋ ಅಂತಹವನು ತಂದೆಯ ಸಂಪತ್ತಿಗೆ ಮಗನು ಸಹಜವಾಗಿಯೇ ಅಧಿಕಾರಿಯಾಗುವಂತೆ ನಿನ್ನ ಪರಮಪದವನ್ನು ಹೊಂದಲು ಅಧಿಕಾರಿಯಾಗುತ್ತಾನೆ. ॥ ೮ ॥

ಪಶ್ಯೇಶ ಮೇऽನಾರ್ಯಮನಂತ ಆದ್ಯೇ
ಪರಾತ್ಮನಿ ತ್ವಯ್ಯಪಿ ಮಾಯಿಮಾಯಿನಿ ।
ಮಾಯಾಂ ವಿತತ್ಯೇಕ್ಷಿತುಮಾತ್ಮವೈಭವಂ
ಹ್ಯಹಂ ಕಿಯಾನೈಚ್ಛಮಿವಾರ್ಚಿರಗ್ನೌ ॥ ೯ ॥

ಪ್ರಭುವೇ ! ನನ್ನ ಕುಟಿಲತೆಯನ್ನಾದರೂ ನೋಡು. ನೀನು ಅನಂತನೂ, ಆದಿ ಪುರುಷನೂ ಆದ ಪರಮಾತ್ಮನಾಗಿರುವೆ. ನನ್ನಂತಹ ದೊಡ್ಡ-ದೊಡ್ಡ ಮಾಯಾವಿಗಳೂ ಸಹ ನಿನ್ನ ಮಾಯಾ ಚಕ್ರಕ್ಕೆ ಸಿಲುಕಿರುತ್ತಾರೆ. ಆದರೂ ನನ್ನ ಮಾಯೆಯನ್ನು ನಿನ್ನ ಮೇಲೆ ಬೆಲ್ಲಿ ನಿನ್ನ ಮಹಿಮೆಯನ್ನು ನಾನು ನೋಡಬಯಸಿದೆನು. ಅದರಂತೆ ನಿನ್ನ ಮಾಯಾಚಕ್ರಕ್ಕೆ ಸಿಕ್ಕಕೊಂಡ ನಾನು ಬೆಂಕಿಯ ಮುಂದೆ ಕಿಡಿಯಂತೆ ನಿನ್ನ ಮುಂದೆ ನಗಣ್ಯನಾಗಿದ್ದೇನೆ. ॥ ೯ ॥

ಅತಃ ಕ್ಷಮಸ್ವಾಚ್ಯುತ ಮೇ ರಜೋಭುವೋ
ಹ್ಯಜಾನತಸ್ತ್ವತ್ಪೃಥಗೀಶಮಾನಿನಃ ।
ಅಜಾವಲೇಪಾಂಧತಮೋऽಂಧಚಕ್ಷುಷ
ಏಷೋऽನುಕಂಪ್ಯೋ ಮಯಿ ನಾಥವಾನಿತಿ ॥ ೧೦ ॥

ಓ ಭಗವಂತ ! ನಾನು ರಜೋಗುಣದಿಂದ ಉತ್ಪನ್ನನಾದವನು. ನಿನ್ನ ದಿವ್ಯ ಸ್ವರೂಪವನ್ನು ಮಹಿಮೆಯನ್ನೂ ನಾನು ಚೆನ್ನಾಗಿ ತಿಳಿದವನಾಗಿಲ್ಲ. ಈ ಕಾರಣದಿಂದಲೇ ಈ ಪ್ರಪಂಚಕ್ಕೆ ನಿನ್ನಂತೆಯೇ ನಾನೂ ಒಬ್ಬ ಈಶನೆಂದೇ ಭಾವಿಸಿಕೊಂಡುಬಿಟ್ಟೆನು. 'ನಾನು ಜನ್ಮ ರಹಿತನೂ, ಜಗತ್ಕರ್ತನೂ ಆಗಿದ್ದೇನೆ' ಎಂಬ ಮಾಯಾಕೃತವಾದ ಮೋಹವೆಂಬ ದಟ್ಟವಾದ ಅಂಧಕಾರದಲ್ಲಿ ಮುಳುಗಿ ಅಂಧನಾಗಿ ಬಿಟ್ಟಿದ್ದೇನೆ. ಆದುದರಿಂದ ಈ ವಿಷಯವನ್ನು ನೀನು ಮನಗಂಡು 'ಇವನು ನನ್ನ ಅಧೀನದಲ್ಲೇ ಇದ್ದಾನೆ, ನನ್ನ ಸೇವಕನೇ ಆಗಿದ್ದಾನೆ, ಇವನ ಮೇಲೆ ಕೃಪೆ ತೋರುವುದು ಅಗತ್ಯವಾಗಿದೆ' ನೀನೇ ನನ್ನ ಸ್ವಾಮಿಯಾಗಿದ್ದೀಯೇ ಇಂದು ನಾನು ಸನಾಥನಾದೆ. ಎಂದು ಭಾವಿಸಿ ನನ್ನ ಅಪರಾಧವನ್ನು ಕ್ಷಮಿಸಿ ಬಿಡು. ॥ ೧೦ ॥

ಕ್ವಾಹಂ ತಮೋಮಹದಹಂಖಚರಾಗ್ನಿವಾರ್ಭೂ-
ಸಂವೇಷ್ಟಿತಾಂಡಘಟಸಪ್ತವಿತಸ್ತಿಕಾಯಃ ।
ಕ್ವೇದೃಗ್ವಿಧಾವಿಗಣಿತಾಂಡಪರಾಣುಚರ್ಯಾ-
ವಾತಾಧ್ವರೋಮವಿವರಸ್ಯ ಚ ತೇ ಮಹಿತ್ವಮ್ ॥ ೧೧ ॥

ಸ್ವಾಮಿಯೇ ! ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ ಜಲ ಮತ್ತು ಪೃಥಿವಿರೂಪವಾದ ಆವರಣಗಳಿಂದ ಕೂಡಿರುವ ಈ ಬ್ರಹ್ಮಾಂಡವು ನನ್ನ ಶರೀರವಾಗಿರುವುದು. ಆದರೆ ನಿನ್ನ ರೋಮ-ರೋಮಗಳಲ್ಲಿ ಗವಾಕ್ಷಿಯಿಂದ ಬಂದಿರುವ ಸೂರ್ಯಕಿರಣದಲ್ಲಿ ಕಾಣುವ ಪರಮಾಣುಗಳಂತೆ ಅಗಣಿತವಾದ ಇಂತಹ ಬ್ರಹ್ಮಾಂಡಗಳಿವೆ. ಅಂತಹ ನಿನ್ನ ಅನಂತವಾದ ಮಹಿಮೆಯೆಲ್ಲಿ ? ಕೇವಲ ಏಳು ಗೇಣುದ್ದದ ಶರೀರವನ್ನು ಧರಿಸಿರುವ ನಾನೆಲ್ಲಿ ? ನಮ್ಮಿಬ್ಬರಿಗೂ ಪರ್ವತ ಪರಮಾಣುಗಳ ಅಂತರವೆಂದೇ ಹೇಳಬಹುದು. ॥ ೧೧ ॥

ಉತ್ಕ್ಷೇಪಣಂ ಗರ್ಭಗತಸ್ಯ ಪಾದಯೋಃ
ಕಿಂ ಕಲ್ಪತೇ ಮಾತುರಧೋಕ್ಷಜಾಗಸೇ ।
ಕಿಮಸ್ತಿನಾಸ್ತಿವ್ಯಪದೇಶಭೂಷಿತಂ
ತವಾಸ್ತಿ ಕುಕ್ಷೇಃ ಕಿಯದಪ್ಯನಂತಃ ॥ ೧೨ ॥

ಜಗತ್ತ್ರಯಾಂತೋದಧಿಸಂಪ್ಲವೋದೇ
ನಾರಾಯಣಸ್ಯೋದರನಾಭಿನಾಲಾತ್ ।
ವಿನಿರ್ಗತೋಽಜಸ್ತ್ವಿತಿ ವಾಙ್ಮ ವೈ ಮೃಷಾ
ಕಿಂ ತ್ವೀಶ್ವರ ತ್ವನ್ನ ವಿನಿರ್ಗತೋಽಸ್ಮಿ ॥ ೧೩ ॥

ನಾರಾಯಣಸ್ತ್ವಂ ನ ಹಿ ಸರ್ವದೇಹಿನಾ-
ಮಾತ್ಮಾಸ್ಯಧೀಶಾಖಿಲಲೋಕಸಾಕ್ಷೀ ।
ನಾರಾಯಣೋಽಂಗಂ ನರಭೂಜಲಾಯನಾ-
ತ್ತಚ್ಚಾಪಿ ಸತ್ಯಂ ನ ತವೈವ ಮಾಯಾ ॥ ೧೪ ॥

ತಚ್ಚೇಜ್ಜಲಸ್ಥಂ ತವ ಪದ್ಮಗರ್ಭರುಃ
ಕಿಂ ಮೇ ನ ದೃಷ್ಟಂ ಭಗವಂಸ್ತದೈವ ।
ಕಿಂ ವಾ ಸುದೃಷ್ಟಂ ಹೃದಿ ಮೇ ತದೈವ
ಕಿಂ ನೋ ಸಪದ್ಯೇವ ಪುನರ್ವ್ಯದರ್ಶಿ ॥ ೧೫ ॥

ಅತ್ರೈವ ಮಾಯಾಧಮನಾವತಾರೇ
ಹ್ಯಸ್ಯ ಪ್ರಪಂಚಸ್ಯ ಬಹಿಃ ಸ್ಫುಟಸ್ಯ ।
ಕೃತ್ಸ್ನಸ್ಯ ಚಾಂತರ್ಜಠರೇ ಜನನ್ಯಾ
ಮಾಯಾತ್ವಮೇವ ಪ್ರಕಟೀಕೃತಂ ತೇ ॥ ೧೬ ॥

ಯಸ್ಯ ಕುಕ್ಷಾವಿದಂ ಸರ್ವಂ ಸಾತ್ಮಂ ಭಾತಿ ಯಥಾ ತಥಾ ।
ತತ್ತ್ವಯ್ಯಪೀಹ ತತ್ಸರ್ವಂ ಕಿಮಿದಂ ಮಾಯಯಾ ವಿನಾ
॥ ೧೭ ॥

ಅದ್ಯೈವ ತ್ವದ್ಗತೇಽಸ್ಯ ಕಿಂ ಮಮ ನ ತೇ
ಮಾಯಾತ್ವಮಾದರ್ಶಿತ-
ಮೇಕೋಽಸಿ ಪ್ರಥಮಂ ತತೋ ವ್ರಜಸುಹೃದ್
ವತ್ಸಾಃ ಸಮಸ್ತಾ ಅಪಿ ।

ಅಧೋಕ್ಷಜನೇ ! ಮಗುವು ತಾಯಿಯ ಹೊಟ್ಟೆಯಲ್ಲಿರುವಾಗ ಕೈ-ಕಾಲುಗಳನ್ನು ಬಡಿಯುತ್ತದೆ. ಇದರಿಂದಾಗಿ ತಾಯಿಗೆ ಅಪರಾಧ ಮಾಡಿದಂತಾಗುತ್ತದೆಯೇ ? ತಾಯಿಯು ಇದನ್ನು ಅಪರಾಧವೆಂದು ಭಾವಿಸುವಳೇ ? ಅಸ್ತಿ-ನಾಸ್ತಿ ಎಂದು ಹೇಳಲ್ಪಡುವ ಯಾವುದೇ ವಸ್ತುಗಳಾದರೂ ನಿನ್ನ ಹೊಟ್ಟೆಯನ್ನು ಬಿಟ್ಟು ಬೇರೆಡೆಯಲ್ಲಿರುತ್ತವೆಯೇ ? ಆದುದರಿಂದ ನಾನು ನಿನ್ನ ಹೊಟ್ಟೆಯಲ್ಲೇ ಇದ್ದೇನೆ. ಅದರಿಂದಾಗಿ ನಾನು ಮಾಡಿದ ಅಪರಾಧವನ್ನು ನೀನು ಕ್ಷಮಿಸಿ ಬಿಡು. ॥ ೧೨ ॥

ಪ್ರಳಯಕಾಲದಲ್ಲಿ ಮೂರುಲೋಕಗಳೂ ನೀರಿನಲ್ಲಿ ಮುಳುಗಿ ಹೋಗಿದ್ದಾಗ ನಾರಾಯಣನೊಬ್ಬನೇ ಪವಡಿಸಿದ್ದನೆಂದೂ, ಅವನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನೆಂದೂ ಶ್ರುತಿಗಳು ಸಾರುತ್ತವೆ. ಈ ಶ್ರುತಿ ವಾಕ್ಯವು ಖಂಡಿತವಾಗಿ ಸುಳ್ಳಲ್ಲ. ಪ್ರಭೋ! ನೀನೇ ಹೇಳು. ನಿನ್ನ ನಾಭಿಕಮಲದಿಂದ ಹುಟ್ಟಿದ ನಾನು ನಿನ್ನ ಮಗನೇ ಅಲ್ಲವೇ ? ॥ ೧೩. ॥ ಸ್ವಾಮಿಯೇ ! ನಾರಾಯಣನಾಗಿರುವ ನೀನು ಸಮಸ್ತ ಶರೀರಿಗಳಿಗೂ ಆತ್ಮಸ್ವರೂಪನಾಗಿರುವೆಯಲ್ಲವೆ ? ಅಧೀಶನೂ ಆಗಿರುವೆಯಲ್ಲವೇ ? ಸಮಸ್ತ ಲೋಕಗಳಿಗೂ ಸಾಕ್ಷಿಯಾಗಿರುವೆಯಲ್ಲವೇ ? ಸಾಕ್ಷಾತ್ ನಾರಾಯಣನು ನೀನೇ ಆಗಿರುವೆ. ನರನಿಂದ ಉತ್ಪನ್ನವಾದ ಜಲವನ್ನು ನಿನ್ನ ಆಶ್ರಯವೆಂದು ಹೇಳಲಾಗುತ್ತದೆ. ಆದರೆ ಅದೂ ಸತ್ಯವಲ್ಲ. ಇದೆಲ್ಲವೂ ನಿನ್ನ ಮಾಯೆಯೇ ಆಗಿದೆ. ॥ ೧೪ ॥ ಭಗವಂತನೇ ! ನಿನ್ನ ವಿರಾಟ್ ಸ್ವರೂಪವು ಆ ಸಮಯದಲ್ಲಿ ಜಲದಲ್ಲೇ ಇದ್ದುದಾದರೆ ನಾನು ಕಮಲನಾಳದ ಮೂಲಕ ನೀರಿನ ಒಳಹೊಕ್ಕು ನೂರು ವರ್ಷಗಳವರೆಗೂ ಹುಡುಕಿದರೂ ಆ ನಿನ್ನ ಸ್ವರೂಪವನ್ನು ಏಕೆ ಕಾಣಲಿಲ್ಲ ? ಪುನಃ ನಾನು ತಪಸ್ಸು ಮಾಡಿದಾಗ ನನ್ನ ವಕ್ಷಸ್ಥಳದಲ್ಲಿ ಆ ದಿವ್ಯಸ್ವರೂಪವು ಹೇಗೆ ಕಾಣಿಸಿಕೊಂಡಿತು ? ಆ ದಿವ್ಯ ಸ್ವರೂಪವು ಹೃದಯ ಗುಹೆಯಲ್ಲಿ ಕ್ಷಣಮಾತ್ರವೇ ಕಂಡು ಪುನಃ ಮರೆಯಾದುದೇಕೆ ? ॥ ೧೫ ॥ ಮಾಯೆಯನ್ನು ಉಪಶಮನಗೊಳಿಸುವ ಮಾಯಾಧಮನೇ ! ಯುಗಾಂತರದಲ್ಲಿ ನಡೆದ ವಿಷಯವು ಹಾಗಿರಲಿ. ಇದೇ ನಿನ್ನ ಈ ಅವತಾರದಲ್ಲಿಯೇ ಹೊರಗೆ ಸ್ಪಷ್ಟವಾಗಿ ಕಾಣುತ್ತಿರುವ ಈ ಜಗತ್ತನ್ನು ನಿನ್ನ ಹೊಟ್ಟೆಯಲ್ಲಿ ತೋರಿಸಿ ತಾಯಿಯಾದ ಯಶೋದೆಯನ್ನು ತಬ್ಬಿಬ್ಬುಗೊಳಿಸಿಬಿಟ್ಟೆ. ಆದುದರಿಂದ ಈ ಸಮಸ್ತ ಜಗತ್ತು ನಿನ್ನ ಮಾಯಾಕಲ್ಪಿತವೆಂದೇ ಸಿದ್ಧಾಂತವಾಗುತ್ತದೆ. ॥ ೧೬ ॥ ದಯಾಳುವೆ ! ನಿನ್ನಿಂದ ಉಂಟಾದ ಈ ಅಖಿಂಡವಿಶ್ವವು ಹೊರಗೆ ಕಾಣುತ್ತಿರುವಂತೆಯೇ ನಿನ್ನ ಸಹಿತ ನಿನ್ನ ಉದರದಲ್ಲಿಯೂ ಕಂಡಿತು. ಇದು ನಿನ್ನ ಮಾಯೆಯಲ್ಲದೆ ಮತ್ತೇನು ? ಇದು ನಿನ್ನ ಲೀಲಾವಿನೋದವೇ ಆಗಿದೆ. ॥ ೧೭ ॥ ಅಂದು ನಿನ್ನ ತಾಯಿಗೆ ಉದರದಲ್ಲಿ ಬ್ರಹ್ಮಾಂಡವನ್ನು ತೋರಿಸಿದ್ದ ಮಾತಿರಲಿ ; ಇಂದು ನೀನು ತೋರಿಸಿದ ವಿಶ್ವರೂಪವಾದರೂ ಸಾಮಾನ್ಯವಾದ ಲೀಲೆಯೆ ? ಮೊದಲು ನೀನು ಒಬ್ಬನೇ ಇದ್ದೆ. ಅನಂತರ ಸಮಸ್ತ ಗೋಪಬಾಲಕರೂ, ಕರುಗಳೂ ನೀನೇ ಆಗಿಬಿಟ್ಟೆ. ಕೊಳಲು, ಕೊಂಬು, ಬೆತ್ತಗಳೂ ನಿನ್ನ ರೂಪಗಳೇ ಆದುವು. ಅನಂತರ ಗೋಪಬಾಲಕರಾದಿಯಾಗಿ ಸಮಸ್ತ ವಸ್ತುಗಳೂ

ತಾವಂತೋಽಸಿ ಚತುರ್ಭುಜಾಸ್ತದಖಿಲೈಃ
ಸಾಕಂ ಮಯೋಪಾಸಿತಾಃ
ತಾವಂತ್ಯೇವ ಜಗಂತ್ಯಭೂಸ್ತದಮಿತಂ
ಬ್ರಹ್ಮಾದ್ವಯಂ ಶಿಷ್ಯತೇ ॥ ೧೮ ॥

ಅಜಾನತಾಂ ತ್ವತ್ಪದವೀಮನಾತ್ಮ-
ನ್ಯಾತ್ಮಾಽಽತ್ಮನಾ ಭಾಸಿ ವಿತತ್ಯ ಮಾಯಾಮ್ ।
ಸೃಷ್ಟ್ವಾವಿವಾಹಂ ಜಗತೋ ವಿಧಾನ
ಇವ ತ್ವಮೇಷೋಽಂತ ಇವ ತ್ರಿನೇತ್ರಃ ॥ ೧೯ ॥

ಸುರೇಷ್ವೃಷಿಷ್ವೀಶ ತಥೈವ ನೃಷ್ವಪಿ
ತಿರ್ಯಕ್ಷು ಯಾದಸ್ಸ್ವಪಿ ತೇಽಜನಸ್ಯ ।
ಜನ್ಮಾಸತಾಂ ದುರ್ಮದನಿಗ್ರಹಾಯ
ಪ್ರಭೋ ವಿಧಾತಃ ಸದನುಗ್ರಹಾಯ ಚ ॥ ೨೦ ॥

ಕೋ ವೇತ್ತಿ ಭೂಮನ್ಭಗವನ್ಪರಾತ್ಮನ್
ಯೋಗೇಶ್ವರೋತೀರ್ಭವತಸ್ತ್ರಿಲೋಕ್ಯಾಮ್ ।
ಕ್ವ ವಾ ಕಥಂ ವಾ ಕತಿ ವಾ ಕದೇತಿ
ವಿಸ್ತಾರಯನ್ಕ್ರೀಡಸಿ ಯೋಗಮಾಯಾಮ್ ॥ ೨೧ ॥

ತಸ್ಯಾದಿದಂ ಜಗದಶೇಷಮಸತ್ಸ್ವರೂಪಂ
ಸ್ವಪ್ನಾಭಮಸ್ತಧಿಷಣಂ ಪುರುದುಃಖದುಃಖಿಮ್ ।
ತ್ವಯ್ಯೇವ ನಿತ್ಯಸುಖಬೋಧತನಾವನಂತೇ
ಮಾಯಾತ ಉದ್ಯದಪಿ ಯತ್ಸದಿವಾವಭಾತಿ ॥ ೨೨ ॥

ಏಕಸ್ತ್ವಮಾತ್ಮಾ ಪುರುಷಃ ಪುರಾಣಃ
ಸತ್ಯಃ ಸ್ವಯಂಜ್ಯೋತಿರನಂತ ಆದ್ಯಃ ।
ನಿತ್ಯೋಽಕ್ಷರೋಽಜಸ್ರಸುಖೋ ನಿರಂಜನಃ
ಪೂರ್ಣೋಽದ್ವಯೋ ಮುಕ್ತ ಉಪಾಧಿತೋಽಮೃತಃ ॥ ೨೩ ॥

ಏವಂವಿಧಂ ತ್ವಾಂ ಸಕಲಾತ್ಮನಾಮಪಿ
ಸ್ವಾತ್ಮಾನಮಾತ್ಮಾತ್ಮತಯಾ ವಿಚಕ್ಷತೇ ।
ಗುರ್ವರ್ಕಲಬ್ಧೋಪನಿಷತ್ಸುಚಕ್ಷುಷಾ
ಯೇ ತೇ ತರಂತೀವ ಭವಾನೃತಾಂಬುಧಿಮ್ ॥ ೨೪ ॥

ಚತುರ್ಭುಜರಾಗಿ ಪೀತಾಂಬರಗಳನ್ನು ಧರಿಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ನನ್ನಿಂದಲೂ, ಇಪ್ಪತ್ತು ನಾಲ್ಕು ತತ್ತ್ವಗಳಿಂದಲೂ ಸೇವಿಸಲ್ಪಡುತ್ತಿರುವಂತೆ ಕಾಣಿಸಿಕೊಂಡೆ. ಅನಂತರ ನೀನೇ ಸಕಲ ಬ್ರಹ್ಮಾಂಡಗಳಾಗಿಯೂ ತೋರಿಕೊಂಡೆ. ಆದರೆ ಈಗ ನೀನೇ ಅಪರಿಚ್ಛಿನ್ನವೂ, ಅದ್ವಿತೀಯವೂ ಆದ ಬ್ರಹ್ಮನಾಗಿ ಉಳಿದಿರುವೆ. ॥ ೧೮ ॥ ಅಜ್ಞಾನವಶರಾದ ಜನರು ನಿನ್ನ ಸ್ವರೂಪವನ್ನು ತಿಳಿಯಲಾರರು. ಅವರಿಗೆ ನೀನು ಪ್ರಕೃತಿಸ್ಥ ಜೀವಿಯ ರೂಪದಲ್ಲಿ ಕಂಡುಬರುವೆ. ಅವರ ಮೇಲೆ ನಿನ್ನ ಮಾಯೆಯ ಜಾಲವನ್ನು ಬೀಸಿ, ಸೃಷ್ಟಿಯ ಸಮಯದಲ್ಲಿ ನನ್ನ (ಬ್ರಹ್ಮ)ರೂಪದಿಂದ, ಪಾಲಿಸುವ ಸಮಯದಲ್ಲಿ ನಿನ್ನ (ವಿಷ್ಣು) ರೂಪದಿಂದ ಮತ್ತು ಸಂಹಾರದ ಸಮಯದಲ್ಲಿ ರುದ್ರರೂಪದಿಂದ ಕಂಡುಬರುವೆ. ॥ ೧೯ ॥ ಪ್ರಭುವೇ! ನೀನು ಸಮಸ್ತ ಪ್ರಪಂಚಕ್ಕೂ ಒಡೆಯನೂ, ನಿಯಾಮಕನೂ ಆಗಿರುವೆ. ನೀನು ಜನ್ಮರಹಿತನೇ ಆದರೂ ದೇವ ಋಷಿ-ಮನುಷ್ಯಾದಿಯೋನಿಗಳಲ್ಲಿಯೂ, ಪಶು-ಪಕ್ಷಿ-ಜಲಚರಾದಿ ಯೋನಿಗಳಲ್ಲಿಯೂ ಅವತರಿಸಿರುವೆ. ಈ ನಿನ್ನ ಅವತಾರಗಳು ದುಷ್ಟರ ನಿಗ್ರಹಕ್ಕಾಗಿ ಮತ್ತು ಸತ್ಪುರುಷರ ಅನುಗ್ರಹಕ್ಕಾಗಿಯೇ ಆಗುವುದು. ॥ ೨೦ ॥ ಭಗವಂತನೇ! ನೀನು ಅನಂತನೂ, ಪರಮಾತ್ಮನೂ, ಯೋಗೇಶ್ವರನೂ ಆಗಿರುವೆ. ನೀನು ನಿನ್ನ ಯೋಗಮಾಯೆಯನ್ನು ವಿಸ್ತರಿಸಿಕೊಂಡು ಯಾವಾಗ? ಎಲ್ಲಿ? ಹೇಗೆ? ಎಷ್ಟು ಕಾಲದವರೆಗೆ ಕ್ರೀಡೆಯಾಡುವೆಯೆಂಬ ವಿಷಯವು ಈ ಮೂರು ಲೋಕಗಳಲ್ಲಿ ಯಾರಿಗೆ ತಾನೇ ತಿಳಿದಿರುತ್ತದೆ? ನಿನ್ನ ಯೋಗಮಾಯೆಯು ನಿನ್ನಂತೆಯೇ ಅಚಿಂತ್ಯವೂ, ಅಪ್ರಮೇಯವೂ ಆಗಿದೆ. ॥ ೨೧ ॥ ಆದುದರಿಂದ ಈ ಸಮಸ್ತ ಜಗತ್ತು ಅಸತ್ಸ್ವರೂಪವಾದುದು. ಇದು ಸ್ವಪ್ನಸದೃಶವಾಗಿಯೂ, ಚೈತನ್ಯರಹಿತವಾಗಿಯೂ, ದುಃಖದ ಮೇಲೆ ದುಃಖ ಒದಗಿಬರುವ ಸ್ಥಾನವು ಆಗಿದೆ. ಆದರೂ ಸಚ್ಚಿದಾನಂದಾತ್ಮಕನಾದ ನಿನ್ನಲ್ಲಿ ಜಗತ್ತು ಎಂಬುದು ಮಾಯೆಯಿಂದ ಜನಿಸಿ ಸಚ್ಚಿದಾನಂದಾತ್ಮಕವಾದ ನಿನ್ನ ಅಧಿಷ್ಠಾನದ ಬಲದಿಂದ ಸತ್ಯವಾಗಿರುವಂತೆಯೂ, ಸುಖಿಸ್ವರೂಪವಾಗಿರುವಂತೆಯೂ, ಚೇತನಸ್ವರೂಪವಾಗಿರುವಂತೆಯೂ ಭಾಸವಾಗುತ್ತದೆ. ॥ ೨೨ ॥ ಪ್ರಭುವೇ! ನೀನು ಏಕಮಾತ್ರ ಸತ್ಯನು. ಹೇಗೆಂದರೆ ನೀನು ಸಮಸ್ತರಲ್ಲಿಯೂ ಆತ್ಮಸ್ವರೂಪನಾಗಿರುವೆ. ನೀನು ಪುರಾಣ ಪುರುಷನಾದುದರಿಂದ ಜನ್ಮಾದಿವಿಕಾರಗಳಿಂದ ರಹಿತನಾಗಿರುವೆ. ಸ್ವಯಂಜ್ಯೋತಿಯೂ, ಅನಂತನೂ, ಆದಿಪುರುಷನೂ ನೀನೇ ಆಗಿರುವೆ. ನಿತ್ಯನೂ, ಕ್ಷಯರಹಿತನೂ, ಅಖಂಡಾನಂದ ಸ್ವರೂಪನೂ ನೀನೇ ಆಗಿರುವೆ. ನಿರಂಜನನೂ, ಪೂರ್ಣನೂ, ಅದ್ವಿತೀಯನೂ ನೀನೇ ಆಗಿರುವೆ. ಸಮಸ್ತವಾದ ಉಪಾಧಿಗಳಿಂದಲೂ ಮುಕ್ತನಾಗಿರುವುದರಿಂದ ಅಮೃತಸ್ವರೂಪನೂ ನೀನೇ ಆಗಿರುವೆ. ॥ ೨೩ ॥ ನೀನು ಎಲ್ಲ ಜೀವಿಗಳಲ್ಲಿಯೂ, ಆತ್ಮಸ್ವರೂಪವಾಗಿ ಬೆಳಗುವೆ. ಗುರುರೂಪನಾದ ಸೂರ್ಯನಿಂದ ತತ್ತ್ವಜ್ಞಾನ ರೂಪವಾದ ದಿವ್ಯದೃಷ್ಟಿಯನ್ನು ಹೊಂದಿ ನಿನ್ನನ್ನು ತನ್ನಲ್ಲಿಯೇ ಸಾಕ್ಷಾತ್ಕರಿಸಿಕೊಂಡವರು ಈ ಮಿಥ್ಯಾಸಂಸಾರ ಸಾಗರವನ್ನು ದಾಟಿಹೋಗುತ್ತಾರೆ. ॥ ೨೪ ॥

ಆತ್ಮಾನಮೇವಾತ್ಮತಯಾವಿಜಾನತಾಂ
ತೇನೈವ ಜಾತಂ ನಿಖಿಲಂ ಪ್ರಪಂಚಿತಮ್ ।
ಜ್ಞಾನೇನ ಭೂಯೋಽಪಿ ಚ ತತ್ಪ್ರಲೀಯತೇ
ರಜ್ಜ್ವಾಮಹೇರ್ಭೋಗಭವಾಭವೌ ಯಥಾ ॥ ೨೫ ॥

ಅಜ್ಞಾನಸಂಜ್ಞೌ ಭವಬಂಧಮೋಕ್ಷೌ
ದ್ವೌ ನಾಮ ನಾನ್ಯೌ ಸ್ತ ಋತಜ್ಞಭಾವಾತ್ ।
ಅಜಸ್ರಚಿತ್ಯಾತ್ಮನಿ ಕೇವಲೇ ಪರೇ
ವಿಚಾರ್ಯಮಾಣೇ ತರಣಾವಿವಾಹನೀ ॥ ೨೬ ॥

ತ್ವಾಮಾತ್ಮಾನಂ ಪರಂ ಮತ್ವಾ ಪರಮಾತ್ಮಾನಮೇವ ಚ।
ಆತ್ಮಾ ಪುನರ್ಬಹಿರ್ಮೃಗ್ಯ ಅಹೋಽಜ್ಞಜನತಾಜ್ಞತಾ
॥ ೨೭ ॥

ಅಂತರ್ಭವೇಽನಂತ ಭವಂತಮೇವ
ಹ್ಯತತ್ತ್ಯಜಂತೋ ಮೃಗಯಂತಿ ಸಂತಃ ।
ಅಸಂತಮಪ್ಯಂತ್ಯಹಿಮಂತರೇಣ
ಸಂತಂ ಗುಣಂ ತಂ ಕಿಮು ಯಂತಿ ಸಂತಃ ॥ ೨೮ ॥

ಅಥಾಪಿ ತೇ ದೇವ ಪದಾಂಬುಜದ್ವಯ-
ಪ್ರಸಾದಲೇಶಾನುಗೃಹೀತ ಏವ ಹಿ ।
ಜಾನಾತಿ ತತ್ತ್ವಂ ಭಗವನ್ಮಹಿಮ್ನೋ
ನ ಚಾನ್ಯ ಏಕೋಽಪಿ ಚಿರಂ ವಿಚಿನ್ವನ್ ॥ ೨೯ ॥

ತದಸ್ತು ಮೇ ನಾಥ ಸ ಭೂರಿಭಾಗೋ
ಭವೇಽತ್ರ ವಾನ್ಯತ್ರ ತು ವಾ ತಿರಶ್ಚಾಮ್ ।
ಯೇನಾಹಮೇಕೋಽಪಿ ಭವಜ್ಜನಾನಾಂ
ಭೂತ್ವಾ ನಿಷೇವೇ ತವ ಪಾದಪಲ್ಲವಮ್ ॥ ೩೦ ॥

ಅಹೋಽತಿಧನ್ಯಾ ವ್ರಜಗೋರಮಣ್ಯಃ
ಸ್ತನ್ಯಾಮೃತಂ ಪೀತಮತೀವ ತೇ ಮುದಾ ।
ಯಾಸಾಂ ವಿಭೋ ವತ್ಸತರಾತ್ಮಜಾತ್ಮನಾ
ಯತ್ತೃಪ್ತಯೇಽದ್ಯಾಪಿ ನ ಚಾಲಮಧ್ವರಾಃ ॥ ೩೧ ॥

ಪರಮಾತ್ಮನನ್ನು ಆತ್ಮರೂಪವಾಗಿ ತಿಳಿಯದವರಿಗೆ ಆ ಅಜ್ಞಾನದ ಕಾರಣದಿಂದಲೇ ಈ ನಾಮ-ರೂಪಾತ್ಮಕವಾದ ಅಖಿಲ ಜಗತ್ತಿನ ಉತ್ಪತ್ತಿಯ ಭ್ರಮೆ ಉಂಟಾಗುತ್ತದೆ. ಆದರೆ ಹಗ್ಗದಲ್ಲಿ ಉಂಟಾದ ಸರ್ಪದ ಭ್ರಮೆಯು ನಿವೃತ್ತವಾಗುತ್ತಲೇ ಸರ್ಪದ ಭಯ ಹೊರಟು ಹೋಗುವಂತೆ ಜ್ಞಾನ ಉಂಟಾಗುತ್ತಲೇ ಇದರ ಆತ್ಯಂತಿಕ ಪ್ರಳಯವಾಗಿ ಹೋಗುತ್ತದೆ. ॥ ೨೫ ॥ ಸಂಸಾರ ಸಂಬಂಧವಾದ ಬಂಧನ ಮತ್ತು ಅದರಿಂದ ಮೋಕ್ಷ ಇವೆರಡೂ ಅಜ್ಞಾನ ಕಲ್ಪಿತವೇ ಆಗಿವೆ. ವಾಸ್ತವವಾಗಿ ಇವೆರಡೂ ಅಜ್ಞಾನದ್ದೇ ಹೆಸರಾಗಿದೆ. ಇವುಗಳಿಗೆ ಸತ್ಯನೂ, ಜ್ಞಾನಸ್ವರೂಪನೂ ಆದ ಪರಮಾತ್ಮನಿಂದ ಭಿನ್ನವಾದ ಅಸ್ತಿತ್ವವೇ ಇರುವುದಿಲ್ಲ. ಸೂರ್ಯನಲ್ಲಿ ಹಗಲು-ಕತ್ತಲೆ ಎಂಬ ಭೇದವೇ ಇಲ್ಲದಿರುವಂತೇ ವಿಚಾರ ಮಾಡಿದಾಗ ಅಖಂಡ ಚಿತ್ಸ್ವರೂಪ, ಕೇವಲ ಶುದ್ಧ ಆತ್ಮತತ್ತ್ವದಲ್ಲಿ ಬಂಧನವಾಗಲೀ, ಮೋಕ್ಷವಾಗಲೀ ಇಲ್ಲ. ॥ ೨೬ ॥ ನೀನು ತಮ್ಮ ಆತ್ಮನೇ ಆಗಿದ್ದರೂ ಜನರು ಅದನ್ನು ಬೇರೆಯೆಂದೇ ತಿಳಿಯುತ್ತಾರೆ. ಶರೀರಾದಿಗಳು ಬೇರೆಯಾಗಿದ್ದರೂ ಅವನ್ನು ತನ್ನ ಆತ್ಮನೆಂದೇ ತಿಳಿದಿರುತ್ತಾರೆ. ಮತ್ತೆ ನಿನ್ನನ್ನು ಎಲ್ಲೋ ಹುಡುಕತೊಡಗುತ್ತಾರೆ. ಇದೆಂತಹ ಆಶ್ಚರ್ಯದ ಮಾತಾಗಿದೆ ? ಅಜ್ಞಾನೀ ಜೀವಿಯ ಇದು ಅಜ್ಞಾನವೇ ಸರಿ. ॥ ೨೭ ॥ ಓ ಅನಂತನೇ ! ನೀನಾದರೋ ಎಲ್ಲರ ಅಂತಃಕರಣದಲ್ಲೇ ವಿರಾಜಮಾನನಾಗಿರುವೆ. ಅದಕ್ಕಾಗಿ ಸಂತರಾದ ಸತ್ಪುರುಷರು ನಿನ್ನನಲ್ಲದೆ ಕಂಡುಬರುವುದೆಲ್ಲವನ್ನೂ ಪರಿತ್ಯಾಗಮಾಡಿ, ತಮ್ಮ ಅಂತರಂಗದಲ್ಲೇ ನಿನ್ನನ್ನು ಹುಡುಕುತ್ತಾರೆ. ಏಕೆಂದರೆ, ಹಗ್ಗದಲ್ಲಿ ಸರ್ಪವಿಲ್ಲದಿದ್ದರೂ ಆ ಮಿಥ್ಯೆಯಾಗಿ ಕಂಡುಬರುವ ಸರ್ಪದ ಭ್ರಮೆಯು ಹೋಗದೆ ಯಾವ ಸತ್ಪುರುಷನು ನಿಜವಾದ ಹಗ್ಗವನ್ನು ತಿಳಿಯಬಲ್ಲನು ? ॥ ೨೮ ॥

ದೇವನೇ ! ಯಾವ ಮನುಷ್ಯರು ನಿನ್ನ ಚರಣಕಮಲಗಳ ಅತ್ಯಲ್ಪವಾದ ಅನುಗ್ರಹವನ್ನಾದರೂ ಪಡೆಯುವರೋ ಅವರು ನಿನ್ನ ಸ್ವರೂಪದ ಮಹಿಮೆಯ ತತ್ತ್ವವನ್ನು ಸುಲಭವಾಗಿ ಬಹಳ ಬೇಗನೇ ತಿಳಿದುಕೊಳ್ಳುತ್ತಾರೆ. ಬೇರೆಯವರು ಜ್ಞಾನ-ವೈರಾಗ್ಯಾದಿಗಳನ್ನು ಬಹಳ ಕಾಲದವರೆಗೂ ಅನುಸಂಧಾನ ಮಾಡಿದರೂ ನಿನ್ನ ಮಹಿಮೆಯನ್ನು ಯಥಾವತ್ತಾಗಿ ತಿಳಿಯಲಾರರು. ॥ ೨೯ ॥ ಆದುದರಿಂದ ಭಗವಂತನೇ! ನನ್ನ ಈ ಜನ್ಮದಲ್ಲಾಗಲೀ, ಬೇರೆ ಜನ್ಮದಲ್ಲಾಗಲೀ, ಪಶು-ಪಕ್ಷಿಗಳ ಜನ್ಮದಲ್ಲೇ ಆಗಲೀ; ನಿನ್ನ ಭಕ್ತ ಸಮೂಹದಲ್ಲಿ ಒಬ್ಬ ಭಕ್ತನಾಗಿದ್ದು ನಿನ್ನ ಚರಣಕಮಲಗಳ ಸೇವೆ ಮಾಡಲು ಸಾಧ್ಯವಾಗುವಂತಹ ಮಹಾಭಾಗ್ಯವು ಪ್ರಾಪ್ತವಾಗುವಂತೆ ಅನುಗ್ರಹಿಸು. ॥ ೩೦ ॥ ಸ್ವಾಮಿಯೇ ! ಜಗತ್ತು ಆರಂಭವಾದಾಗಿನಿಂದ ಇದುವರೆಗೂ ನಡೆದ ಹಲವಾರು ಯಜ್ಞಗಳಿಂದ ನಿನ್ನನ್ನು ಪೂರ್ಣವಾಗಿ ತೃಪ್ತಿ ಪಡಿಸಲಾಗಲಿಲ್ಲ. ಆದರೆ ನೀನು ವ್ರಜದ ಹಸುಗಳ ಮತ್ತು ಗೋಪಿಯರ ಕರುಗಳು ಹಾಗೂ ಗೋಪಬಾಲಕರು ಆಗಿ ಅವರ ಸ್ತನಗಳ ಅಮೃತದಂತಹ ಹಾಲನ್ನು ಪರಮಾನಂದದಿಂದ ಕುಡಿದು ತೃಪ್ತನಾದೆ. ಆದುದರಿಂದ ವ್ರಜದಲ್ಲಿರುವ ಗೋವುಗಳು ಹಾಗೂ ಗೋಪ ಸ್ತ್ರೀಯರೇ ಅತ್ಯಂತ ಧನ್ಯರು. ॥ ೩೧ ॥

ಅಹೋ ಭಾಗ್ಯಮಹೋ ಭಾಗ್ಯಂ ನಂದಗೋಪವ್ರಜೌಕಸಾಮ್ ।
ಯನ್ಮಿತ್ರಂ ಪರಮಾನಂದಂ ಪೂರ್ಣಂ ಬ್ರಹ್ಮ ಸನಾತನಮ್
॥ ೩೨ ॥

ಪರಮಾನಂದ ಸ್ವರೂಪನಾದ, ಸನಾತನನಾದ, ಪರಿಪೂರ್ಣನಾದ, ಪರಬ್ರಹ್ಮ ಸ್ವರೂಪನಾದ ನೀನು ಪರಮಮಿತ್ರನೂ, ಸುಹೃದನೂ ಆಗಿರುವ ನಂದನೇ ಮೊದಲಾದ ವ್ರಜದ ಗೋಪ ಗೋಪಬಾಲಕರ ಭಾಗ್ಯವೇ ಭಾಗ್ಯವು ! ॥ ೩೨ ॥ ಅಚ್ಯುತನೇ ! ಈ ವ್ರಜವಾಸಿಗಳ ಸೌಭಾಗ್ಯದ ಮಹಿಮೆಯು ಹಾಗಿರಲಿ. ಮನಸ್ಸೇ ಮೊದಲಾದ ಹನ್ನೊಂದು ಇಂದ್ರಿಯಗಳ ಅಧಿಷ್ಠಾತೃ ದೇವತೆಗಳಾಗಿರುವ ಮಹಾದೇವನೇ ಮೊದಲಾದ ನಾವುಗಳು ಮಹಾ ಭಾಗ್ಯಶಾಲಿಗಳಾಗಿದ್ದೇವೆ. ಏಕೆಂದರೆ, ಈ ವ್ರಜವಾಸಿಗಳ ಮನಸ್ಸೇ ಮೊದಲಾದ ಹನ್ನೊಂದು ಇಂದ್ರಿಯಗಳೆಂಬ ಪಾತ್ರೆಗಳನ್ನಾಗಿಸಿ ಕೊಂಡು ನಾವು ನಿನ್ನ ಚರಣಕಮಲಗಳ ಅಮೃತಕ್ಕಿಂತಲೂ ಮಧುರವಾದ ಮಕರಂದ ರಸವನ್ನು ಪಾನಮಾಡುತ್ತಾ ಇರುತ್ತೇವೆ. ಅವರ ಒಂದೊಂದು ಇಂದ್ರಿಯದಿಂದ ಪಾನಮಾಡಿ ನಾವು ಧನ್ಯರಾಗುತ್ತಿರುವಾಗ ಸಮಸ್ತ ಇಂದ್ರಿಯಗಳಿಂದ ಅದನ್ನು ಸೇವಿಸುತ್ತಿರುವ ವ್ರಜವಾಸಿಗಳ ಸೌಭಾಗ್ಯವು ಎಷ್ಟೆಂಬುದನ್ನು ಹೇಳಬೇಕಾಗಿಯೆ ಇಲ್ಲ ॥ ೩೩ ॥ ಪ್ರಭುವೇ ! ಈ ವ್ರಜಭೂಮಿಯ ಯಾವುದೇ ವನದಲ್ಲಿ ಮತ್ತು ವಿಶೇಷವಾಗಿ ಗೋಕುಲದಲ್ಲಿ ಯಾವುದೇ ಯೋನಿಯಲ್ಲಿ ಜನ್ಮವೆತ್ತುವುದೇ ನಮ್ಮ ಸೌಭಾಗ್ಯದ ಮಾತಾಗಿದೆ. ಏಕೆಂದರೆ, ಇಲ್ಲಿ ಹುಟ್ಟಿದ ಬಳಿಕ ನಿನ್ನ ಯಾರಾದರೂ ಪ್ರೇಮಿಯ (ಭಕ್ತನ) ಚರಣಧೂಳು ನಮ್ಮ ಮೇಲೆ ಬೀಳಬಹುದಲ್ಲ ! ಪ್ರಭುವೇ ! ನಿನ್ನ ಪ್ರೇಮಿ ವ್ರಜವಾಸಿಗಳ ಸಂಪೂರ್ಣ ಜೀವನವು ನಿನ್ನದೇ ಜೀವನವಾಗಿದೆ. ನೀನೇ ಅವರ ಜೀವನದ ಏಕಮಾತ್ರ ಸರ್ವಸ್ವನಾಗಿರುವೆ. ಅದಕ್ಕಾಗಿ ಅವರ ಚರಣಗಳ ಧೂಳಿ ಸಿಗುವುದೂ ನಿನ್ನ ಚರಣಧೂಳಿ ಸಿಗುವಂತೆ ಇದೆ. ನಿನ್ನ ಚರಣಧೂಳಿಯನ್ನಾದರೋ ಶ್ರುತಿಗಳೂ ಕೂಡ ಅನಾದಿ ಕಾಲದಿಂದ ಇಂದಿನವರೆಗೆ ಹುಡುಕುತ್ತಿರುವವು. ॥ ೩೪ ॥ ದೇವತೆಗಳಿಗೂ ಆರಾಧ್ಯನಾದ ಪ್ರಭುವೇ ! ಈ ವ್ರಜವಾಸಿಗಳು ಮಾಡುವ ಸೇವೆಯ ಬದಲಿಗೆ ನೀನು ಏನು ಫಲವನ್ನು ಕೊಡುವೆ ? ಸಮಸ್ತ ಫಲಗಳ ಫಲಸ್ವರೂಪನೇ ! ನಿನ್ನಿಂದ ಮಿಗಿಲಾದ ಬೇರೆ ಯಾವುದೇ ಫಲವು ಇಲ್ಲವೇ ಇಲ್ಲ, ಹೀಗೆಂದು ಯೋಚಿಸುತ್ತಾ ನನ್ನ ಚಿತ್ತವು ಮೋಹಿತಗೊಳ್ಳುತ್ತಿದೆ. ಅವರಿಗೆ ನೀನು ತನ್ನ ಸ್ವರೂಪವನ್ನೇ ಕೊಟ್ಟರೂ ಅವರ ಋಣದಿಂದ ಮುಕ್ತನಾಗಲಾರೆ. ಏಕೆಂದರೆ, ನಿನ್ನ ಸ್ವರೂಪವನ್ನೇನೋ ಆ ಪೂತನೆಯೂ ನಿನ್ನ ಸಂಬಂಧದಿಂದ ಅಘಾಸುರ, ಬಕಾಸುರ ಮುಂತಾದವ ರೊಡನೆ ಪಡೆದುಕೊಂಡಳು. ಅವಳ ವೇಷ ಕೇವಲ ಸಾಧ್ವಿಯಂತೆ ಇತ್ತು ಆದರೆ ಹೃದಯದಿಂದ ಕ್ರೂರಿಯಾಗಿದ್ದಳು. ಹೀಗಿರುವಾಗ ತನ್ನ ಮನೆ, ಧನ, ಸ್ವಜನರು, ಪ್ರಿಯರು, ಶರೀರ, ಪುತ್ರ, ಪ್ರಾಣ ಮತ್ತು ಮನಸ್ಸು ಹೀಗೆ ಎಲ್ಲವನ್ನು ನಿನ್ನ ಚರಣಗಳಲ್ಲಿ ಅರ್ಪಿಸಿರುವ, ಈ ವ್ರಜವಾಸಿಗಳಿಗೂ ಅದೇ ಫಲವನ್ನು ಕೊಟ್ಟು ನೀನು ಹೇಗೆ ಋಣಮುಕ್ತನಾಗುವೆ ? ॥ ೩೫ ॥ ಶ್ಯಾಮಸುಂದರನೇ ! ಜೀವರು ನಿನ್ನವ ರಾಗುವತನಕ, ಭಕ್ತರಾಗುವತನಕ ರಾಗದ್ವೇಷಾದಿ ದೋಷಗಳು ಕಳ್ಳರಂತೆ ಅವರ ಸರ್ವಸ್ವವನ್ನು ಅಪಹರಿಸಿ ಬಿಡುತ್ತವೆ ; ಮನೆಯು ಸೆರೆಮನೆಯಾಗಿರುತ್ತದೆ ; ಮೋಹವು ಕಾಲುಗಳಿಗೆ ಸಂಕೋಲೆಯಾಗಿ ಬಂಧನಕ್ಕೆ ಕಾರಣವಾಗುತ್ತದೆ. ॥ ೩೬ ॥

ಏಷಾಂ ತು ಭಾಗ್ಯಮಹಿಮಾಚ್ಯುತ ತಾವದಾಸ್ತಾ-
ಮೇಕಾದಶೈವ ಹಿ ವಯಂ ಬತ ಭೂರಿಭಾಗಾಃ ।
ಏತದ್ಧೃಷೀಕಚಷಕೈರಸಕೃತ್ಪಿಬಾಮಃ
ಶರ್ವಾದಯೋಽಂಘ್ರ್ಯುದಜಮಧ್ವಮೃತಾಸವಂ ತೇ ॥ ೩೩ ॥

ತದ್ಭೂರಿಭಾಗ್ಯಮಿಹ ಜನ್ಮ ಕಿಮಪ್ಯಟವ್ಯಾಂ
ಯದ್ಗೋಕುಲೇಽಪಿ ಕತಮಾಂಘ್ರಿರಜೋಽಭಿಷೇಕಮ್ ।
ಯಜ್ಜೀವಿತಂ ತು ನಿಖಿಲಂ ಭಗವಾನ್ಮುಕುಂದ-
ಸ್ತ್ವದ್ಯಾಪಿ ಯತ್ಪದರಜಃ ಶ್ರುತಿಮೃಗ್ಯಮೇವ ॥ ೩೪ ॥

ಏಷಾಂ ಘೋಷನಿವಾಸಿನಾಮುತ ಭವಾನ್ಕಿಂ ದೇವರಾತೇತಿ ನ-
ಶ್ಚೇತೋ ವಿಶ್ವಫಲಾತ್ಫಲಂ ತ್ವದಪರಂ ಕುತ್ರಾಪ್ಯಯನ್ಮುಹ್ಯತಿ ।
ಸ್ವಯಂ ವೇಷಾದಿವ ಪೂತನಾಪಿ ಸಕುಲಾ ತ್ವಾಮೇವ ದೇವಾಪಿತಾ
ಯದ್ಧಾಮಾರ್ಥಸುಹೃತ್ಪ್ರಿಯಾತ್ಮತನಯಪ್ರಾಣಾಶಯಾಸ್ತ್ವತ್ಕೃತೇ
॥ ೩೫ ॥

ತಾವದ್ರಾಗಾದಯಃ ಸ್ತೇನಾಸ್ತಾವತ್ಕಾರಾಗೃಹಂ ಗೃಹಮ್ ।
ತಾವನ್ಮೋಹೋಂಘ್ರಿನಿಗಡೋ ಯಾವತ್ ಕೃಷ್ಣ ನ ತೇ ಜನಾಃ
॥ ೩೬ ॥

ಪ್ರಪಂಚಂ ನಿಷ್ಪ್ರಪಂಚೋಽಪಿ ವಿಡಂಬಯಸಿ ಭೂತಲೇ ।
ಪ್ರಪನ್ನಜನತಾನಂದಸಂದೋಹಂ ಪ್ರಥಿತುಂ ಪ್ರಭೋ
॥ ೩೭ ॥

ಪ್ರಭುವೇ ! ನೀನು ಜಗದ್ವ್ಯಾಪಾರದಿಂದ ರಹಿತನಾಗಿದ್ದರೂ ಶರಣಾಗತರಾದ ಭಕ್ತರಿಗೆ ಅನಂತವಾದ ಆನಂದವನ್ನು ಹಂಚುವುದಕ್ಕಾಗಿ ಭೂಮಿಯಲ್ಲಿ ಅವತರಿಸಿ ಪ್ರಪಂಚದ ಜನರಂತೆ ನಟಿಸುತ್ತಿರುವೆ. ॥ ೩೭ ॥ ಹೆಚ್ಚು ಹೇಳುವುದರಿಂದ ಪ್ರಯೋಜನವೇನೂ ಇಲ್ಲ. ಲೋಕದಲ್ಲಿ ನಿನ್ನ ಮಹಿಮೆಯನ್ನು ತಿಳಿದಿರುವವರು ತಿಳಿಯುತ್ತಾ ಇರಲಿ. ನನ್ನ ಮನಸ್ಸು ಮಾತು, ಶರೀರಗಳಂತೂ ನಿನ್ನ ಮಹಿಮೆಯನ್ನು ತಿಳಿಯಲು ಸರ್ವಥಾ ಅಸಮರ್ಥವಾಗಿದೆ. ॥ ೩೮ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ ! ನೀನು ಸರ್ವ ಸಾಕ್ಷಿಯಾಗಿ ಎಲ್ಲವನ್ನೂ ತಿಳಿದವನಾಗಿರುವೆ. ಸಕಲ ಜಗತ್ತಿಗೂ ಒಡೆಯನಾಗಿರುವೆ. ಈ ಅಖಿಂಡ ಭೂಮಂಡಲವೂ ನಿನ್ನಲ್ಲಿಯೇ ನೆಲೆಗೊಂಡಿದೆ. ನಾನು ನಿನ್ನ ವಿಷಯದಲ್ಲಿ ಇನ್ನೇನು ಹೇಳಲಿ ? ನನ್ನನ್ನು ಭಕ್ತನನ್ನಾಗಿ ನೀನು ಸ್ವೀಕರಿಸು. ಸ್ವಾಮಿಯೇ ! ನಾನು ನನ್ನ ಲೋಕಕ್ಕೆ ಹೋಗಲು ಅನುಮತಿಯನ್ನು ನೀಡು. ॥ ೩೯ ॥ ಸಮಸ್ತರ ಮನಃಪ್ರಾಣಗಳನ್ನು ರೂಪಮಾಧುರ್ಯಗಳಿಂದ ಆಕರ್ಷಿಸುವ ಶ್ಯಾಮಸುಂದರನೇ ! ನೀನು ಯದುವಂಶರೂಪವಾದ ಕಮಲವನ್ನು ವಿಕಸಿತಗೊಳಿಸುವ ಸೂರ್ಯನಾಗಿರುವೆ. ಭೂ-ದೇವತಾ-ಬ್ರಾಹ್ಮಣ ಗೋವು ಮತ್ತು ಸಮುದ್ರವನ್ನು ಅಭಿವೃದ್ಧಿಗೊಳಿಸುವ ಚಂದ್ರನೂ ನೀನೇ ಆಗಿರುವೆ. ಪಾಷಂಡಧರ್ಮವೆಂಬ ರಾತ್ರಿಯ ಘೋರ ಅಂಧಕಾರವನ್ನು ನಾಶಗೊಳಿಸುವುದರಲ್ಲಿ ಚಂದ್ರ-ಸೂರ್ಯರಿಗೆ ಸಮಾನನಾಗಿರುವೆ. ಲೋಕದ್ರೋಹಿಗಳಾದ ಕಂಸನೇ ಮೊದಲಾದ ರಾಕ್ಷಸರಿಗೆ ನೀನು ದ್ರೋಹಿಯಾಗಿರುವೆ. ಭಗವಂತ ! ನಾನು ಜೀವವಿಡೀ, ಮಹಾ ಕಲ್ಪಾಂತ್ಯದವರೆಗೂ ನಿನಗೆ ನಮಸ್ಕರಿಸುತ್ತಲೇ ಇರುವೆನು. ॥ ೪೦ ॥

ಜಾನಂತ ಏವ ಜಾನಂತು ಕಿಂ ಬಹೂಕ್ತ್ಯಾ ನ ಮೇ ಪ್ರಭೋ ।
ಮನಸೋ ವಪುಷೋ ವಾಚೋ ವೈಭವಂ ತವ ಗೋಚರಃ
॥ ೩೮ ॥

ಅನುಜಾನೀಹಿ ಮಾಂ ಕೃಷ್ಣ ಸರ್ವಂ ತ್ವಂ ವೇತ್ಸಿ ಸರ್ವದೃಕ್ ।
ತವೈವ ಜಗತಾಂ ನಾಥೋ ಜಗದೇತತ್ತವಾರ್ಪಿತಮ್
॥ ೩೯ ॥

ಶ್ರೀಕೃಷ್ಣ ವೃಷ್ಣಿಕುಲಪುಷ್ಕರಕೋಷದಾಯಿನ್
ಕ್ಷ್ಮಾನಿರ್ಜರದ್ವಿಜಪಶೂದಧಿವೃದ್ಧಿಕಾರಿನ್ ।
ಉದ್ವರ್ಮತಾವರ್ತರಹರ ಕ್ಷಿತಿರಾಕ್ಷಸಘ್ನ-
ಗಾಕಲ್ಪಮಾರ್ಕಮಹರ್ಜನ್ಯಗವನ್ನಮಸ್ತೇ ॥ ೪೦ ॥

ಶ್ರೀಶುಕ ಉವಾಚ

ಇತ್ಯಭಿಷ್ಟೂಯ ಭೂಮಾನಂ ತ್ರಿಃ ಪರಿಕ್ರಮ್ಯ ಪಾದಯೋಃ ।
ನತ್ವಾಭೀಷ್ಟಂ ಜಗದ್ಧಾತಾ ಸ್ವಧಾಮ ಪ್ರತ್ಯಪದ್ಯತ
॥ ೪೧ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ ! ಸೃಷ್ಟಿಕರ್ತನಾದ ಬ್ರಹ್ಮನು ಈ ಪ್ರಕಾರವಾಗಿ ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸಿ, ಅವನಿಗೆ ಮೂರು ಪ್ರದಕ್ಷಿಣೆ ಬಂದು, ಅವನ ಚರಣಗಳಲ್ಲಿ ವಂದಿಸಿಕೊಂಡು ತನ್ನ ಸ್ಥಾನವಾದ ಸತ್ಯಲೋಕಕ್ಕೆ ತೆರಳಿದನು. ॥ ೪೧ ॥ ಬ್ರಹ್ಮದೇವನು ಈ ಮೊದಲೇ ಕರುಗಳನ್ನೂ, ಗೋಪ ಬಾಲಕರನ್ನೂ ಅವರು ಹಿಂದಿದ್ದ ಸ್ಥಳಕ್ಕೆ ಕಳುಹಿಸಿಬಿಟ್ಟಿದ್ದನು. ಶ್ರೀಕೃಷ್ಣನು ಬ್ರಹ್ಮದೇವರನ್ನು ಬೀಳ್ಕೊಟ್ಟು, ತನ್ನ ಸ್ನೇಹಿತರಾದ ಗೋಪಬಾಲಕರನ್ನು ಮತ್ತು ಕರುಗಳನ್ನು ಯಮುನಾ ತೀರಕ್ಕೆ ಹೊಡೆದುಕೊಂಡು ಬಂದನು. ॥ ೪೨ ॥ ಪರೀಕ್ಷಿತನೇ ! ತಮ್ಮ ಜೀವನ ಸರ್ವಸ್ವನಾದ, ಪ್ರಾಣವಲ್ಲಭನಾದ ಶ್ರೀಕೃಷ್ಣನನ್ನು ಅಗಲಿ ಗೋಪಬಾಲಕರಿಗೆ ಒಂದು ವರ್ಷವೇ ಕಳೆದು ಹೋಗಿತ್ತು. ಆದರೂ ಶ್ರೀಕೃಷ್ಣನ ಯೋಗಮಾಯೆಯಿಂದ ಮರುಳಾದ ಗೋಪಬಾಲಕರಿಗೆ ಆ ಸಮಯವು ಕ್ಷಣಾರ್ಧದಂತೆ ಅನಿಸಿತು. ॥ ೪೩ ॥ ಜಗತ್ತಿನ ಸಮಸ್ತ ಜೀವಿಗಳು ಆದೇ ಮಾಯೆಯಿಂದ ಮೋಹಿತರಾಗಿ ಶಾಸ್ತ್ರ ಮತ್ತು ಆಚಾರ್ಯರು ಪದೇ-ಪದೇ ತಿಳಿಸಿ ಹೇಳಿದರೂ ತನ್ನ ಅತ್ಮವನ್ನು ನಿರಂತರವಾಗಿ ಮರೆತಿರುತ್ತಾರೆ. ನಿಜವಾಗಿ ಆ ಮಾಯೆಯ ಶಕ್ತಿಯೇ ಇಂತಹುದು. ಆದರಿಂದ ಮೋಹಿತನಾದ ಜೀವನು ಇಲ್ಲಿ ಏನೇನೆಲ್ಲ ಮರೆಯುವುದಿಲ್ಲ ? ॥ ೪೪ ॥

ತತೋಽನುಜ್ಞಾಪ್ಯ ಭಗವಾನ್ಬ್ರಹ್ಮಾಣಂ ಪ್ರಾಗವಸ್ಥಿತಾನ್ ।
ವತ್ಸಾನ್ಪುಲಿನಮಾನಿನ್ಯೇ ಯಥಾಪೂರ್ವಸಖಿಂ ಸ್ವಕಮ್
॥ ೪೨ ॥

ಏಕಸ್ಮಿನ್ನಪಿ ಯಾತೇಽಬ್ದೇ ಪ್ರಾಣೇಶಂ ಚಾಂತರಾಽಽತ್ಮನಃ ।
ಕೃಷ್ಣಮಾಯಾಹತಾ ರಾಜನ್ ಕ್ಷಣಾರ್ಧಂ ಮೇನಿರೇಽರ್ಭಕಾಃ
॥ ೪೩ ॥

ಕಿಂ ಕಿಂ ನ ವಿಸ್ಮರಂತೀಹ ಮಾಯಾಮೋಹಿತಚೇತಸಃ ।
ಯನ್ಮೋಹಿತಂ ಜಗತ್ಸರ್ವಮಭೀಕ್ಷ್ಣಂ ವಿಸ್ಮೃತಾತ್ಮಕಮ್
॥ ೪೪ ॥

ಊಚುಶ್ಚ ಸುಹೃದಃ ಕೃಷ್ಣಂ ಸ್ವಾಗತಂ ತೇऽತಿರಂಹಸಾ ।
ನೈಕೋऽಪ್ಯಭೋಜಿ ಕವಲ ಏಹೀತಃ ಸಾಧು ಭುಜ್ಯತಾಮ್
॥ ೪೫ ॥

ತತೋ ಹಸನ್ ಹೃಷೀಕೇಶೋऽಭ್ಯವಹೃತ್ಯ ಸಹಾರ್ಭಕೈಃ ।
ದರ್ಶಯಂಶ್ಚರ್ಮಾಜಗರಂ ನ್ಯವರ್ತತ ವನಾದ್ವ್ರಜಮ್
॥ ೪೬ ॥

ಬರ್ಹಪ್ರಸೂನನವಧಾತು ವಿಚಿತ್ರಿತಾಂಗಃ
ಪ್ರೋದ್ದಾಮವೇಣುದಲಶೃಂಗರವೋತ್ಸವಾಢ್ಯಃ ।
ವತ್ಸಾನ್ಗೃಣನ್ನನುಗಗೀತಪವಿತ್ರಕೀರ್ತಿ-
ರ್ಗೋಪೀದೃಗುತ್ಸವದೃಶಿಃ ಪ್ರವಿವೇಶ ಗೋಷ್ಠಮ್ ॥ ೪೭ ॥

ಅದ್ಯಾನೇನ ಮಹಾವ್ಯಾಲೋ ಯಶೋದಾನಂದಸೂನುನಾ ।
ಹತೋऽವಿತಾ ವಯಂ ಚಾಸ್ಮಾದಿತಿ ಬಾಲಾ ವ್ರಜೇ ಜಗುಃ
॥ ೪೮ ॥

ರಾಜೋವಾಚ

ಬ್ರಹ್ಮನ್ಪರೋದ್ಭವೇ ಕೃಷ್ಣೇ ಇಯಾನ್ಪ್ರೇಮಾ ಕಥಂ ಭವೇತ್ ।
ಯೋऽಭೂತಪೂರ್ವಸ್ತೋಕೇಷು ಸ್ವೋದ್ಭವೇಷ್ವಪಿ ಕಥ್ಯತಾಮ್
॥ ೪೯ ॥

ಶ್ರೀಶುಕ ಉವಾಚ

ಸರ್ವೇಷಾಮಪಿ ಭೂತಾನಾಂ ನೃಪ ಸ್ವಾತ್ಮೈವ ವಲ್ಲಭಃ ।
ಇತರೇऽಪತ್ಯವಿತ್ತಾದ್ಯಾಸ್ತದ್ವಲ್ಲಭತಯೈವ ಹಿ
॥ ೫೦ ॥

ತದ್ರಾಜೇಂದ್ರ ಯಥಾ ಸ್ನೇಹಃ ಸ್ವಸ್ವಕಾತ್ಮನಿ ದೇಹಿನಾಮ್ ।
ನ ತಥಾ ಮಮತಾಲಂಬಿಪುತ್ರವಿತ್ತಗೃಹಾದಿಷು
॥ ೫೧ ॥

ದೇಹಾತ್ಮವಾದಿನಾಂ ಪುಂಸಾಮಪಿ ರಾಜನ್ಯಸತ್ತಮ ।
ಯಥಾ ದೇಹಃ ಪ್ರಿಯತಮಸ್ತಥಾ ನ ಹ್ಯನು ಯೇ ಚ ತಮ್
॥ ೫೨ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನನ್ನು ನೋಡುತ್ತಲೇ ಗೋಪ ಬಾಲಕರೆಲ್ಲರೂ ಅತ್ಯುತ್ಸಾಹದಿಂದ ಅವನಲ್ಲಿ ಹೇಳಿದರು "ಶ್ರೀಕೃಷ್ಣ ! ನೀನು ಬಂದುದು ಒಳ್ಳೆಯದಾಯಿತು. ನಿನಗೆ ಸ್ವಾಗತ ಬಯಸುತ್ತೇವೆ. ನೀನಿಲ್ಲದೆ ನಾವು ಒಂದು ತುತ್ತು ಅನ್ನವನ್ನು ತಿಂದಿರುವುದಿಲ್ಲ. ಇತ್ತ ಬಾ ; ಕುಳಿತುಕೋ. ಆನಂದವಾಗಿ ಭೋಜನ ಮಾಡು." ॥ ೪೫ ॥ ಆಗ ಶ್ರೀಕೃಷ್ಣನು ನಸುನಗುತ್ತಾ ಗೋಪಬಾಲಕರೊಂದಿಗೆ ಭೋಜನ ಮಾಡಿದನು. ಬಳಿಕ ಹೆಬ್ಬಾವಿನ ತೊಗಲನ್ನು ಗೋಪ ಬಾಲಕರಿಗೆ ತೋರಿಸುತ್ತಾ ವನದಿಂದ ವ್ರಜಕ್ಕೆ ಮರಳಿದನು. ॥ ೪೬ ॥ ಶ್ರೀಕೃಷ್ಣನ ತಲೆಯು ನವಿಲು ಗರಿಗಳಿಂದಲೂ, ಹೂವಿನ ದಂಡೆಯಿಂದಲೂ ಸಮಲಂಕೃತವಾಗಿತ್ತು. ಹೊಸ-ಹೊಸ ಬಣ್ಣದ ಧಾತುಗಳಿಂದ ಆತನ ಶ್ಯಾಮಲ ಶರೀರವು ಚಿತ್ರಿತವಾಗಿತ್ತು. ಅವನು ವ್ರಜದ ಕಡೆಗೆ ಹೋಗುತ್ತಿದ್ದಾಗ ಕೆಲವು ಬಾಲಕರು ಕೊಳಲನ್ನೂದುತ್ತಿದ್ದರು. ಕೆಲವರು ಕೊಂಬುಗಳನ್ನು ಊದುತ್ತಿದ್ದರೆ, ಕೆಲವರು ಎಲೆಗಳಿಂದ ಪೀಪಿಗಳನ್ನು ಮಾಡಿ ಊದುತ್ತಿದ್ದರು. ಇದೊಂದು ವಾದ್ಯೋತ್ಸವದಂತೆಯೇ ಕಾಣುತ್ತಿತ್ತು. ಹಿಂಭಾಗದಲ್ಲಿ ಕೆಲವು ಗೋಪಬಾಲಕರು ಶ್ರೀಕೃಷ್ಣನ ಲೋಕಪಾವನವಾದ ಕೀರ್ತನೆಗಳನ್ನು ಹಾಡುತ್ತಿದ್ದರು. ಕೆಲವರು ತಮ್ಮ ಕರುಗಳ ಹೆಸರುಗಳನ್ನು ಹಿಡಿದು ಕೂಗೂತ್ತಿದ್ದರು. ಕೆಲವರು ತಮ್ಮ ಕರುಗಳನ್ನು ಮುದ್ದಾಡುತ್ತಾ ಹೋಗುತ್ತಿದ್ದರು. ಎರಡೂ ಕಡೆಗಳಲ್ಲಿ ನಿಂತು ಉತ್ಸಾಹದಿಂದ ನೋಡುತ್ತಿದ್ದ ಗೋಪಿಯರ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಾ ಶ್ರೀಕೃಷ್ಣನು ವ್ರಜವನ್ನು ಪ್ರವೇಶಿಸಿದನು. ॥ ೪೭ ॥ ಪರೀಕ್ಷಿತನೇ ! ಅದೇ ದಿನ ಬಾಲಕರು ವ್ರಜಕ್ಕೆ ಬಂದು ಹೇಳಿದರು – 'ಇಂದು ಯಶೋದಾಮಾತೆಯ ಮುದ್ದುಕಂದನಾದ ಶ್ರೀಕೃಷ್ಣನು ವೃಂದಾವನದಲ್ಲಿ ಒಂದು ದೊಡ್ಡ ಹೆಬ್ಬಾವನ್ನು ಕೊಂದು ನಮ್ಮೆಲ್ಲರನ್ನು ರಕ್ಷಿಸಿದನು.' ॥ ೪೮ ॥

ಪರೀಕ್ಷಿದ್ರಾಜನು ಕೇಳಿದನು – 'ಬ್ರಾಹ್ಮಣ ಶ್ರೇಷ್ಠರೇ ! ವ್ರಜವಾಸಿಗಳಿಗೆ ಶ್ರೀಕೃಷ್ಣನು ತಮ್ಮ ಮಗನಾಗಿರದೆ, ಬೇರೆಯವರ ಮಗನಾಗಿದ್ದನು. ಹೀಗಿದ್ದರೂ ಆತನ ಮೇಲೆ ವ್ರಜವಾಸಿಗಳಿಗೆ ಇಷ್ಟೊಂದು ಪ್ರೇಮ ಹೇಗೆ ಉಂಟಾಯಿತು ? ಇಂತಹ ಪ್ರೀತಿಯಾದರೋ ಅವರಿಗೆ ತಮ್ಮ ನಿಜಮಕ್ಕಳಲ್ಲಿಯೂ ಇರಲಿಲ್ಲ. ಇದರ ಕಾರಣವನ್ನು ತಾವು ದಯಮಾಡಿ ತಿಳಿಸಿರಿ.' ॥ ೪೯ ॥

ಶ್ರೀಶುಕಮಹಾಮುನಿಗಳು ಹೇಳಿದರು – ಮಹಾರಾಜ ! ಜಗತ್ತಿನ ಸಕಲ ಪ್ರಾಣಿಗಳಿಗೆ ತಮ್ಮ ಆತ್ಮನಲ್ಲಿಯೇ ಹೆಚ್ಚಿನ ಪ್ರೀತಿ ಇರುತ್ತದೆ. ಪುತ್ರ-ಧನ ಮುಂತಾದವುಗಳ ಮೇಲಿನ ಪ್ರೇಮವೂ ಕೂಡ ತಮ್ಮ ಆತ್ಮನ ಮೇಲಿನ ಅಪಾರವಾದ ಪ್ರೇಮದಿಂದಲೇ ಉಂಟಾಗುತ್ತದೆ. ಆತ್ಮಪ್ರೀತಿಗಾಗಿಯೇ ಎಲ್ಲವೂ ಇರುವುದು.॥ ೫೦ ॥ ರಾಜೇಂದ್ರ ! ಎಲ್ಲ ಪ್ರಾಣಿಗಳಿಗೆ ತಮ್ಮ ಆತ್ಮನ ಕುರಿತು ಪ್ರೇಮವಿರುವಂತೆ, ತನ್ನದೆಂದು ಹೇಳಿಕೊಳ್ಳುವ ಪುತ್ರ-ಧನ-ಮನೆ ಮುಂತಾದವುಗಳಲ್ಲಿ ಪ್ರೇಮವಿರುವುದಿಲ್ಲ ॥ ೫೧ ॥ ನೃಪ ಶ್ರೇಷ್ಠನೇ ! ದೇಹವನ್ನೇ ಆತ್ಮನೆಂದು ತಿಳಿದವರೂ ಕೂಡ ತನ್ನ ಶರೀರದಲ್ಲಿ ಪ್ರೀತಿ ಇರುವಂತೆ, ಶರೀರ ಸಂಬಂಧಿ ಪುತ್ರ, ಮಿತ್ರ, ಕಳತ್ರರನ್ನು ಪ್ರೀತಿಸುವುದಿಲ್ಲ ॥ ೫೨ ॥

ದೇಹೋಽಪಿ ಮಮತಾಭಾಕ್ಕೇತ್ತರ್ಹ್ಯಸೌ ನಾತ್ಮವತ್ಪ್ರಿಯಃ।
ಯಜ್ಜೀರ್ಯತ್ಯಪಿ ದೇಹೇಽಸ್ಮಿನ್ ಜೀವಿತಾಶಾ ಬಲೀಯಸೀ
॥ ೫೩ ॥

ತಸ್ಮಾತ್ಪ್ರಿಯತಮಃ ಸ್ವಾತ್ಮಾ ಸರ್ವೇಷಾಮಪಿ ದೇಹಿನಾಮ್।
ತದರ್ಥಮೇವ ಸಕಲಂ ಜಗದೇತಚ್ಚರಾಚರಮ್
॥ ೫೪ ॥

ಕೃಷ್ಣಮೇನಮವೇಹಿ ತ್ವಮಾತ್ಮಾನಮಖಿಲಾತ್ಮನಾಮ್।
ಜಗದ್ಧಿತಾಯ ಸೋಽಪ್ಯತ್ರ ದೇಹೀವಾಭಾತಿ ಮಾಯಯಾ
॥ ೫೫ ॥

ವಸ್ತುತೋ ಜಾನತಾಮತ್ರ ಕೃಷ್ಣಂ ಸ್ಥಾಸ್ನು ಚರಿಷ್ಣು ಚ।
ಭಗವದ್ರೂಪಮಖಿಲಂ ನಾನ್ಯದ್ವಸ್ತ್ವಿಹ ಕಿಂಚನ
॥ ೫೬ ॥

ಸರ್ವೇಷಾಮಪಿ ವಸ್ತೂನಾಂ ಭಾವಾರ್ಥೋ ಭವತಿ ಸ್ಥಿತಃ।
ತಸ್ಯಾಪಿ ಭಗವಾನ್ಕೃಷ್ಣಃ ಕಿಮತದ್ವಸ್ತು ರೂಪ್ಯತಾಮ್
॥ ೫೭ ॥

ಸಮಾಶ್ರಿತಾ ಯೇ ಪದಪಲ್ಲವಪ್ಲವಂ
ಮಹತ್ಪದಂ ಪುಣ್ಯಯಶೋಮುರಾರೇಃ।
ಭವಾಂಬುಧಿರ್ವತ್ಸಪದಂ ಪರಂ ಪದಂ
ಪದಂ ಪದಂ ಯದ್ವಿಪದಾಂ ನ ತೇಷಾಮ್ ॥ ೫೮ ॥

ಏತತ್ತೇ ಸರ್ವಮಾಖ್ಯಾತಂ ಯತ್ಪೃಷ್ಟೋಽಹಮಿಹ ತ್ವಯಾ।
ಯತ್ಕೌಮಾರೇ ಹರಿಕೃತಂ ಪೌಗಂಡೇ ಪರಿಕೀರ್ತಿತಮ್
॥ ೫೯ ॥

ಏತತ್ಸುಹೃದ್ಚಿಶ್ಚರಿತಂ ಮುರಾರೇ-
ರಘಾರ್ದನಂ ಶಾದ್ವಲಜೇಮನಂ ಚ।
ವ್ಯಕ್ತೇತರದ್ರೂಪಮಜೋರ್ವಭಿಷ್ಟವಂ
ಶೃಣ್ವನ್ ಗೃಣನ್ನೇತಿ ನರೋಽಖಿಲಾರ್ಥಾನ್ ॥ ೬೦ ॥

ಏವಂ ವಿಹಾರೈಃ ಕೌಮಾರ್ಯೈಃ ಕೌಮಾರಂ ಜಹತುರ್ವ್ರಜೇ।
ನಿಲಾಯನೈಃ ಸೇತುಬಂಧೈರ್ಮರ್ಕಟೋತ್ಪ್ಲವನಾದಿಭಿಃ
॥ ೬೧ ॥

ವಿಚಾರದ ಮೂಲಕ 'ಈ ಶರೀರವು ನಾನಲ್ಲ, ಈ ಶರೀರವು ನನ್ನದಾಗಿದೆ' ಎಂಬುದು ತಿಳಿದಾಗ ಈ ಶರೀರದ ಮೇಲೆಯೂ ಕೂಡ ಆತ್ಮನಂತೆ ಪ್ರೀತಿ ಉಳಿಯುವುದಿಲ್ಲ. ಈ ದೇಹವು ಜೀರ್ಣ ಶೀರ್ಣವಾದರೂ ಕೂಡು ಬದುಕಿರುವ ಆಸೆಯು ಪ್ರಬಲವಾಗಿ ಇರುವುದು ಇದೇ ಕಾರಣವಾಗಿದೆ. ॥ ೫೩ ॥ ಎಲ್ಲ ಪ್ರಾಣಿಗಳು ತಮ್ಮ ಆತ್ಮನನ್ನೇ ಎಲ್ಲಕ್ಕಿಂತ ಹೆಚ್ಚು ಪ್ರೀತಿಸುತ್ತಾರೆ ಮತ್ತು ಅದಕ್ಕಾಗಿಯೇ ಚರಾಚರ ಜಗತ್ತೆಲ್ಲವನ್ನೂ ಪ್ರೀತಿಸುತ್ತಾರೆ ಎಂಬುದು ಇದರಿಂದ ಸಿದ್ಧವಾಗುತ್ತದೆ. ॥ ೫೪ ॥ ಶ್ರೀಕೃಷ್ಣನನ್ನೇ ನೀನು ಎಲ್ಲ ಆತ್ಮರ ಆತ್ಮ ನಾಗಿದ್ದಾನೆಂದು ತಿಳಿ. ಜಗತ್ತಿನ ಕಲ್ಯಾಣಕ್ಕಾಗಿಯೇ ಯೋಗಮಾಯೆಯನ್ನು ಆಶ್ರಯಿಸಿ ಅವನೇ ಇಲ್ಲಿ ದೇಹಧಾರಿಗಳಂತೆ ಕಂಡು ಬರುತ್ತಿರುವನು. ॥ ೫೫ ॥ ಭಗವಾನ್ ಶ್ರೀಕೃಷ್ಣನ ವಾಸ್ತವಿಕ ಸ್ವರೂಪವನ್ನು ತಿಳಿದವರಿಗಾದರೋ ಈ ಜಗತ್ತಿನಲ್ಲಿ ಇರುವ ಚರಾಚರ ಪದಾರ್ಥಗಳು ಅಥವಾ ಅದರಿಂದ ಅತೀತವಾದ ಪರಮಾತ್ಮ ಬ್ರಹ್ಮ ನಾರಾಯಣನೇ ಮೊದಲಾದ ಭಗವತ್ಸ್ವರೂಪಗಳೆಲ್ಲವೂ ಶ್ರೀಕೃಷ್ಣಸ್ವರೂಪವೇ ಆಗಿವೆ. ಶ್ರೀಕೃಷ್ಣನಲ್ಲದೆ ಬೇರೆ ಯಾವುದೇ ಪ್ರಾಕೃತ-ಅಪ್ರಾಕೃತ ವಸ್ತುವು ಇಲ್ಲವೇ ಇಲ್ಲ. ॥ ೫೬ ॥ ಎಲ್ಲ ವಸ್ತುಗಳ ಅಂತಿಮರೂಪವು ತನ್ನ ಕಾರಣದಲ್ಲೇ ನೆಲೆಸಿರುತ್ತದೆ. ಆ ಕಾರಣಕ್ಕೂ ಪರಮಕಾರಣ ಭಗವಾನ್ ಶ್ರೀಕೃಷ್ಣನಾಗಿದ್ದಾನೆ. ಹಾಗಿರುವಾಗ ಶ್ರೀಕೃಷ್ಣನಿಂದ ಭಿನ್ನವಾದ ವಸ್ತು ಯಾವುದು ತಾನೇ ಇದೆ? ಹೇಳು. ॥ ೫೭ ॥ ಸತ್ಪುರುಷರ ಸರ್ವಸ್ವನಾದ ಪುಣ್ಯಕೀರ್ತಿಯಾದ ಮುಕುಂದ, ಮುರಾರಿಯ ಪದ-ಪಲ್ಲವಗಳ ನೌಕೆಯನ್ನು ಆಶ್ರಯಿಸಿದವರಿಗೆ ಈ ಭವಸಾಗರವು ಕರುವಿನ ಗೊರಸಿನಷ್ಟಾಗಿ ಬಿಡುತ್ತದೆ. ॥ ೫೮ ॥

ಪರೀಕ್ಷಿತನೇ! ಭಗವಂತನ ಐದನೇ ವರ್ಷದ ಲೀಲೆಯನ್ನು ಆರನೇ ವರ್ಷದಲ್ಲಿ ಗೋಪಬಾಲಕರು ಈಗ ನಡೆದಂತೆ ಹೇಳಿದರು; ಇದು ಹೇಗೆ ಎಂದು ನೀನು ಕೇಳಿದ್ದೆಯಲ್ಲ, ಅದರ ಎಲ್ಲ ರಹಸ್ಯವನ್ನು ನಾನು ನಿನಗೆ ತಿಳಿಸಿರುವೆನು. ॥ ೫೯ ॥ ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರೊಂದಿಗೆ ನಡೆಸಿದ ವನಕ್ರೀಡೆ, ಅಘಾಸುರನ ಸಂಹಾರ, ಹಚ್ಚ-ಹಸುರಾದ ಹುಲ್ಲಿನ ಮೇಲೆ ಕುಳಿತು ಭೋಜನ ಮಾಡುವುದು, ಅಪ್ರಾಕೃತರೂಪಧಾರಿ ಕರುಗಳನ್ನು ಮತ್ತು ಗೋಪ ಬಾಲಕರನ್ನು ಪ್ರಕಟಿಸುವುದು, ಬ್ರಹ್ಮದೇವರು ಮಾಡಿದ ಈ ಶ್ರೇಷ್ಠ ಸ್ತುತಿ ಇವೆಲ್ಲವನ್ನು ಕೇಳುವ-ಹೇಳುವ ಮನುಷ್ಯನಿಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳ ಪ್ರಾಪ್ತಿಯುಂಟಾಗುವುದು. ॥ ೬೦ ॥ ಪರೀಕ್ಷಿತನೇ! ಹೀಗೆ ಶ್ರೀಕೃಷ್ಣ ಮತ್ತು ಬಲರಾಮರು ಕುಮಾರಾವಸ್ಥೆಗನುರೂಪವಾಗಿ ಕಣ್ಣುಮುಚ್ಚಾಲೆ, ಸೇತುಬಂಧ, ಮರಕೋತಿ ಆಟ ಮುಂತಾದ ಅನೇಕ ಲೀಲೆಗಳನ್ನು ಮಾಡುತ್ತಾ ತಮ್ಮ ಕುಮಾರಾವಸ್ಥೆಯನ್ನು ವ್ರಜಭೂಮಿಯಲ್ಲಿ ಕಳೆದರು. ॥ ೬೧ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಬ್ರಹ್ಮಸ್ತುತಿರ್ನಾಮ ಚತುರ್ದಶೋಽಧ್ಯಾಯಃ॥ ೧೪ ॥

ಹದಿನೈದನೆಯ ಅಧ್ಯಾಯ

ಧೇನುಕಾಸುರ ಉದ್ಧಾರ, ಕಾಲಿಯನಾಗನ ವಿಷದಿಂದ ಗೋಪಬಾಲಕರನ್ನು ಬದುಕಿಸಿದುದು

ಶ್ರೀಶುಕ ಉವಾಚ

ತತಶ್ಚ ಪೌಗಂಡವಯಃ ಶ್ರಿತೌ ವ್ರಜೇ
ಬಭೂವತುಸ್ತೌ ಪಶುಪಾಲಸಮ್ಮತೌ ।
ಗಾಶ್ಚಾರಯಂತೌ ಸಖಿಭಿಃ ಸಮಂ ಪದೈ-
ರ್ವೃಂದಾವನಂ ಪುಣ್ಯಮತೀವ ಚಕ್ರತುಃ ॥ ೧ ॥

ತನ್ಮಾಧವೋ ವೇಣುಮುದೀರಯನ್ವೃತೋ
ಗೋಪೈರ್ಗೃಣದ್ಭಿಃ ಸ್ವಯಶೋ ಬಲಾನ್ವಿತಃ ।
ಪಶೂನ್ಪುರಸ್ಕೃತ್ಯ ಪಶವ್ಯಮಾವಿಶದ್
ವಿಹರ್ತುಕಾಮಃ ಕುಸುಮಾಕರಂ ವನಮ್ ॥ ೨ ॥

ತನ್ಮಂಡುಫೋಷಾಲಿಮೃಗದ್ವಿಜಾಕುಲಂ
ಮಹನ್ಮನಃ ಪ್ರಖ್ಯಿಪಯಃ ಸರಸ್ವತಾ ।
ವಾತೇನ ಜುಷ್ಟಂ ಶತಪತ್ರಗಂಧಿನಾ
ನಿರೀಕ್ಷ್ಯ ರಂತುಂ ಭಗವಾನ್ಮನೋ ದಧೇ ॥ ೩ ॥

ಸ ತತ್ರ ತತ್ಕಾರುಣಪಲ್ಲವಶ್ರಿಯಾ
ಫಲಪ್ರಸೂನೋರುಭರೇಣ ಪಾದಯೋಃ ।
ಸ್ಪೃಶಚ್ಛಿಖಾನ್ವೀಕ್ಷ್ಯ ವನಸ್ಪತೀನ್ಮುದಾ
ಸ್ಮಯನ್ನಿವಾಹಾಗ್ರಜಮಾದಿಪೂರುಷಃ ॥ ೪ ॥

ಶ್ರೀಭಗವಾನುವಾಚ

ಅಹೋ ಅಮೀ ದೇವವರಾಮರಾರ್ಚಿತಂ
ಪಾದಾಂಬುಜಂ ತೇ ಸುಮನಃಫಲಾರ್ಹಣಮ್ ।
ನಮಂತ್ಯುಪಾದಾಯ ಶಿಖಾಭಿರಾತ್ಮನ-
ಸ್ತಮೋಽಪಹತ್ಯೈ ತರುಜನ್ಮ ಯತ್ಕೃತಮ್ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ– ಪರೀಕ್ಷಿದ್ರಾಜನೇ ! ಶ್ರೀಕೃಷ್ಣ ಬಲರಾಮರಿಗೆ ಈಗ ಪೌಂಗಡಾವಸ್ಥೆಯು ಪ್ರಾಪ್ತವಾಯಿತು. ಈಗ ಅವರಿಗೆ ಹಸುಗಳನ್ನು ಮೇಯಿಸಲು ಸ್ವೀಕೃತಿ ದೊರೆಯಿತು. ಅವರು ತಮ್ಮ ಸ್ನೇಹಿತರಾದ ಗೊಲ್ಲಬಾಲಕರೊಂದಿಗೆ ಹಸುಗಳನ್ನು ಮೇಯಿಸುತ್ತಾ ವೃಂದಾವನಕ್ಕೆ ಹೋಗಿ ತಮ್ಮ ಚರಣಗಳಿಂದ ವೃಂದಾವನವನ್ನು ಅತ್ಯಂತ ಪಾವನ ಗೊಳಿಸುತ್ತಿದ್ದರು. ॥ ೧ ॥ ಈ ವನವು ಹಸುಗಳಿಗೆ ಹಸುರಾದ ಎಳೆ ಹುಲ್ಲಿನಿಂದ ಕೂಡಿದ್ದು ಬಣ್ಣ-ಬಣ್ಣದ ಹೂವುಗಳ ಆಗರವೇ ಆಗಿತ್ತು. ಮುಂದೆ-ಮುಂದೆ ಹಸುಗಳು ಅವುಗಳ ಹಿಂದೆ-ಹಿಂದೆ ಕೊಳಲನ್ನು ಊದುತ್ತಾ ಶ್ಯಾಮಸುಂದರನು ಅವನ ಬೆನ್ನಿಗೆ ಬಲರಾಮನು ಹಾಗೂ ಶ್ರೀಕೃಷ್ಣನ ಕೀರ್ತಿಯನ್ನು ಹಾಡುತ್ತಿರುವ ಗೋಪಾಲಕರು ಅವರ ಹಿಂದೆ ಹೀಗೆ ವಿಹರಿಸುತ್ತಾ ಅವರು ಆ ವೃಂದಾವನವನ್ನು ಪ್ರವೇಶಿಸಿದರು. ॥ ೨ ॥ ಆ ವನದಲ್ಲಿ ಕೆಲವು ಕಡೆಗಳು ಭೃಂಗಗಳು ಗುಂಜಾರವ ಮಾಡುತ್ತಿದ್ದರೆ, ಕೆಲವು ಕಡೆ ಜಿಂಕೆಗಳು ಗುಂಪು ಗುಂಪಾಗಿ ಅತ್ತಂದಿತ್ತ ನೆಗೆಯುತ್ತಿದ್ದವು. ಕೆಲ ಅಂದವಾದ ಪಕ್ಷಿಗಳು ಸುಮಧುರವಾಗಿ ಧ್ವನಿ ಮಾಡುತ್ತಿದ್ದವು. ಅಲ್ಲಲ್ಲಿ ಅತ್ಯಂತ ಸುಂದರವಾದ ಸರೋವರಗಳಿದ್ದವು. ಅವುಗಳಲ್ಲಿ ಮಹಾತ್ಮರ ಹೃದಯದಂತೆ ಸ್ವಚ್ಛವಾದ ತಿಳಿನೀರು ತುಂಬಿತ್ತು. ಅವುಗಳಲ್ಲಿ ಅರಳಿದ ಕಮಲಗಳ ಸುಗಂಧದಿಂದ ಕೂಡಿದ ಶೀತಲ-ಮಂದ ಮಾರುತವು ಆ ವೃಂದಾವನವನ್ನು ಸೇವಿಸುತ್ತಿತ್ತು. ಆ ಮನೋಹರವಾದ ವನವನ್ನು ನೋಡಿ ಭಗವಂತನು ಅಲ್ಲಿ ವಿಹರಿಸಲು ಮನಸ್ಸಿನಲ್ಲೇ ನಿಶ್ಚಯಿಸಿದನು. ॥ ೩ ॥ ಎಣ್ಣೆಗೆಂಪಿನ ಚಿಗುರುಗಳ ಕಾಂತಿಯಿಂದ ಕೂಡಿ ಫಲ-ಪುಷ್ಪಗಳ ಭಾರದಿಂದ ಬಗ್ಗಿದ ರೆಂಬೆಗಳ ವೃಕ್ಷಗಳು ಶ್ರೀಕೃಷ್ಣನ ಪಾದಗಳಿಗೆ ನಮಸ್ಕರಿಸುತ್ತವೆಯೋ ಎಂಬಂತೆ ಕಾಣುತ್ತಿತ್ತು. ಅಂತಹ ನೇತ್ರಾನಂದಕರವಾದ ಅವನ್ನು ನೋಡಿ ಆದಿದೇವನಾದ ಶ್ರೀಕೃಷ್ಣಪರಮಾತ್ಮನು ಅಣ್ಣನಾದ ಬಲರಾಮನಲ್ಲಿ ಹೇಳಿದನು. ॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ದೇವಶಿರೋಮಣಿಯೇ ! ಶ್ರೇಷ್ಠರಾದ ದೇವತೆಗಳೇನೋ ನಿನ್ನ ಚರಣಕಮಲಗಳನ್ನು ಪೂಜಿಸುತ್ತಾರೆ. ಆದರೆ ಇಲ್ಲಿ ನೋಡು ! ಈ ವೃಕ್ಷಗಳೂ ಕೂಡ ತಮ್ಮ ರೆಂಬೆಗಳ ಮೂಲಕವಾಗಿ ಫಲ-ಪುಷ್ಪಗಳನ್ನು ಹೊತ್ತು ನಿನ್ನ ಚರಣಾರವಿಂದಗಳ ಸೇವೆ ಮಾಡಲು ಬಗ್ಗಿ ನಮಸ್ಕರಿಸುತ್ತವೆ. ಅವುಗಳು ಇಂತಹ ಸೌಭಾಗ್ಯವನ್ನು ಪಡೆಯುವುದಕ್ಕಾಗಿಯೇ ಹಾಗೂ ನಿನ್ನ ದರ್ಶನ, ನಿನ್ನ ಲೀಲಾ ಪ್ರಸಂಗಗಳನ್ನು ಶ್ರವಣ ಮಾಡಿದವರ ಅಜ್ಞಾನವನ್ನು ನಾಶಗೊಳಿಸುವ ಸಲುವಾಗಿ ಈ ಪುಣ್ಯಪ್ರದವಾದ ವೃಂದಾವನದಲ್ಲಿ ವೃಕ್ಷಗಳಾಗಿ ಹುಟ್ಟಿವೆ. ನಿಶ್ಚಯವಾಗಿಯೂ ಇವುಗಳ ಜೀವನವೇ ಧನ್ಯವಾದುದು. ॥ ೫ ॥

ಏತೇಽಲಿನಸ್ತವ ಯಶೋಽಖಿಲಲೋಕತೀರ್ಥಂ
ಗಾಯಂತ ಆದಿಪುರುಷಾನುಪದಂ ಭಜಂತೇ ।
ಪ್ರಾಯೋ ಅಮೀ ಮುನಿಗಣಾ ಭವದೀಯಮುಖ್ಯಾ
ಗೂಢಂ ವನೇಽಪಿ ನ ಜಹತ್ಯನಘಾತ್ಮದೈವಮ್ ॥ ೬ ॥

ಆದಿಪುರುಷನೇ ! ನೀನು ಈ ವೃಂದಾವನದಲ್ಲಿ ನಿನ್ನ ಐಶ್ವರ್ಯವನ್ನು ಮರೆಸಿ ಸಾಮಾನ್ಯ ಬಾಲಕರಂತೆ ಲೀಲೆ ಮಾಡುತ್ತಿದ್ದರೂ ನಿನ್ನ ಶ್ರೇಷ್ಠ ಭಕ್ತರಾದ ಮುನಿಗಳು ತಮ್ಮ ಇಷ್ಟ ದೈವವನ್ನು ಗುರುತಿಸಿಕೊಂಡು ಇಲ್ಲಿಯೂ ಪ್ರಾಯಶಃ ದುಂಬಿಗಳಾಗಿ ನಿನ್ನ ಭುವನ ಪಾವನ ಕೀರ್ತಿಯನ್ನು ನಿರಂತರವಾಗಿ ಹಾಡುತ್ತಾ ನಿನ್ನ ಭಜನೆಯಲ್ಲಿ ತೊಡಗಿರುತ್ತಾರೆ. ಅವರು ಒಂದು ಕ್ಷಣಕ್ಕಾದರೂ ನಿನ್ನನ್ನು ಬಿಡಲು ಬಯಸುವುದಿಲ್ಲ ॥ ೬ ॥ ಅಣ್ಣಾ ! ನಿಜವಾಗಿ ನೀನೇ ಸ್ತುತಿಸಲು ಯೋಗ್ಯನಾಗಿರುವೆ. ತಮ್ಮ ಮನೆಗೆ ಬಂದಿರುವ ನಿನ್ನನ್ನು ನೋಡಿದ ನವಿಲುಗಳು ನಿನ್ನ ದರ್ಶನದಿಂದ ಆನಂದಿತವಾಗಿ ಕುಣಿಯುತ್ತಾ ಇವೆ. ಜಿಂಕೆಗಳು ಮೃಗನಯನೀ ಗೋಪಿಯರಂತೆ ತಮ್ಮ ಪ್ರೇಮ ಪೂರ್ಣ ಓರೆನೋಟದಿಂದ ನಿನ್ನ ಕುರಿತು ಪ್ರೀತಿಯನ್ನು ಪ್ರಕಟಿಸುತ್ತಾ ನಿನ್ನನ್ನು ಸಂತೋಷಗೊಳಿಸುತ್ತಿರುವರು. ಈ ಕೋಗಿಲೆಗಳು ತಮ್ಮ ಮಧುರ ಪಂಚಮದ ಇಂಚರದಿಂದ ನಿನ್ನನ್ನು ಎಷ್ಟು ಸುಂದರವಾಗಿ ಸ್ವಾಗತಿಸುತ್ತವೆ. ಇವು ವನವಾಸಿಗಳಾಗಿದ್ದರೂ ಧನ್ಯರಾಗಿದ್ದಾರೆ. ಏಕೆಂದರೆ, ಸತ್ಪುರುಷರ ಸ್ವಭಾವವೇ ಹೀಗಿರುತ್ತದೆ. ಅವರು ಮನೆಗೆ ಬಂದಿರುವ ಅತಿಥಿಗೆ ತಮಗೆ ಪ್ರಿಯವಾದ ವಸ್ತುವನ್ನು ಅರ್ಪಿಸಿ ಬಿಡುತ್ತಾರೆ. ॥ ೭ ॥ ಇಂದು ಇಲ್ಲಿಯ ಭೂಮಿಯು ತನ್ನ ಹಚ್ಚ ಹಸಿರು ಹುಲ್ಲಿನೊಂದಿಗೆ ನಿನ್ನ ಚರಣಗಳನ್ನು ಸ್ಪರ್ಶಿಸುತ್ತಾ ಧನ್ಯವಾಗಿದೆ. ಇಲ್ಲಿಯ ಮರ-ಗಿಡ-ಬಳ್ಳಿಗಳು ನಿನ್ನ ಬೆರಳುಗಳ ಸ್ಪರ್ಶವನ್ನು ಪಡೆದು ತಮ್ಮ ಅಹೋಭಾಗ್ಯವೆಂದು ತಿಳಿಯುತ್ತಿವೆ. ನಿನ್ನ ಕರುಣಾಕಟಾಕ್ಷದಿಂದ ನದಿ, ಪರ್ವತ, ಪಶು-ಪಕ್ಷಿ ಎಲ್ಲವೂ ಕೃತಾರ್ಥರಾಗುತ್ತಿದ್ದಾರೆ. ವ್ರಜದಲ್ಲಿರುವ ಗೋಪಿಕೆಯರು ಸ್ವತಃ ಲಕ್ಷ್ಮೀದೇವಿಯೂ ಕೂಡ ಅಪೇಕ್ಷಿಸುತ್ತಿರುವ ನಿನ್ನ ವಕ್ಷಸ್ಥಲದ ಸ್ಪರ್ಶವನ್ನು ಪಡೆದುಕೊಂಡು ಧನ್ಯರಾಗುತ್ತಿದ್ದಾರೆ. ॥ ೮ ॥

ನೃತ್ಯಂತ್ಯಮೀ ಶಿಖಿನ ಈಡ್ಯ ಮುದಾ ಹರಿಣ್ಯಃ
ಕುರ್ವಂತಿ ಗೋಪ್ಯ ಇವ ತೇ ಪ್ರಿಯಮೀಕ್ಷಣೇನ ।
ಸೂಕ್ತೈಶ್ಚ ಕೋಕಿಲಗಣಾ ಗೃಹಮಾಗತಾಯ
ಧನ್ಯಾ ವನೌಕಸ ಇಯಾನ್ಹಿ ಸತಾಂ ನಿಸರ್ಗಃ ॥ ೭ ॥

ಧನ್ಯೇಯಮದ್ಯ ಧರಣೀ ತೃಣವೀರುಧಸ್ತ್ವತ್
ಪಾದಸ್ಪೃಶೋ ದ್ರುಮಲತಾಃ ಕರಜಾಭಿಮೃಷ್ಟಾಃ ।
ನದ್ಯೋಽದ್ರಯಃ ಖಗಮೃಗಾಃ ಸದಯಾವಲೋಕೈ-
ರ್ಗೋಪ್ಯೋಽಂತರೇಣ ಭುಜಯೋರಪಿ ಯತ್ಸ್ಪೃಹಾ ಶ್ರೀಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ಹೀಗೆ ಪರಮಸುಂದರ ವೃಂದಾವನವನ್ನು ನೋಡಿ ಭಗವಾನ್ ಶ್ರೀಕೃಷ್ಣನು ಬಹಳವಾಗಿ ಆನಂದಿತನಾದನು. ಅವನು ತನ್ನ ಮಿತ್ರರಾದ ಗೊಲ್ಲಬಾಲಕರೊಂದಿಗೆ ಗೋವರ್ಧನದ ತಪ್ಪಲುಗಳಲ್ಲಿ, ಯಮುನಾ ತೀರದಲ್ಲಿ ಹಸುಗಳನ್ನು ಮೇಯಿಸುತ್ತಾ ಅನೇಕ ರೀತಿಯ ಲೀಲೆಗಳನ್ನು ಮಾಡತೊಡಗಿದನು. ॥ ೯ ॥ ಒಂದೆಡೆ ಗೋಪಬಾಲಕರು ಭಗವಾನ್ ಶ್ರೀಕೃಷ್ಣನ ಚರಿತ್ರೆಗಳನ್ನು ಆಲಾಪಿಸುತ್ತಾ ಮಧುರವಾಗಿ ಹಾಡುತ್ತಿದ್ದಾರೆ, ಇನ್ನೊಂದೆಡೆ ಬಲರಾಮನೊಂದಿಗೆ ವನಮಾಲೆಯನ್ನು ಧರಿಸಿರುವ ಶ್ರೀಕೃಷ್ಣನು ಮತ್ತ ಭೃಂಗಗಳ ಸುಮಧುರ ಗುಂಜಾರವದೊಂದಿಗೆ ತನ್ನ ಸ್ವರವನ್ನೂ ಸೇರಿಸಿ ಆಲಾಪಿಸತೊಡಗಿದನು. ॥ ೧೦ ॥ ಕೆಲವೊಮ್ಮೆ ಶ್ರೀಕೃಷ್ಣನು ರಾಜಹಂಸಗಳು ಕೂಗಿದಾಗ ಅವುಗಳಂತೆಯೇ ಅವುಗಳ ಜೊತೆಯಲ್ಲೇ ಕೂಗುತ್ತಾ ಅವುಗಳನ್ನು ಅಣಕಿಸುತ್ತಿದ್ದನು. ಕೆಲವೊಮ್ಮೆ ನೃತ್ಯವಾಡುವ ನವಿಲುಗಳೊಡನೆ ತಕ-ತಕನೆ ತಾನೂ ಕುಣಿಯುತ್ತಾ ತನ್ನ ಮಿತ್ರರನ್ನು ಸಂತೋಷಗೊಳಿಸುವನು. ॥ ೧೧ ॥ ಕೆಲವೊಮ್ಮೆ ಬಹಳ ದೂರಕ್ಕೆ ಹೋದ ಹಸುಗಳನ್ನು ಅವುಗಳ ಹೆಸರು ಹಿಡಿದು ಮೇಘದಂತೆ ಗಂಭೀರ ಧ್ವನಿಯಿಂದ ಪ್ರೇಮದಿಂದ ಕರೆಯುವನು. ಅವನ ಈ ಮಧುರ ಧ್ವನಿಯನ್ನು ಕೇಳಿ ಗೋವುಗಳ ಮತ್ತು ಗೋಪಾಲಬಾಲಕರ ಮನಸ್ಸಿಗೆ ಉಲ್ಲಾಸವುಂಟಾಗುತ್ತಿತ್ತು. ॥ ೧೨ ॥

ಶ್ರೀಶುಕ ಉವಾಚ

ಏವಂ ವೃಂದಾವನಂ ಶ್ರೀಮತ್ಕೃಷ್ಣಃ ಪ್ರೀತಮನಾಃ ಪಶೂನ್ ।
ರೇಮೇ ಸಂಚಾರಯನ್ನದ್ರೇಃ ಸರಿದ್ಗೋಧಸ್ಸು ಸಾನುಗಃ
॥ ೯ ॥

ಕ್ವಚಿದ್ಗಾಯತಿ ಗಾಯತ್ಸು ಮದಾಂಧಾಲಿಷ್ವನುವ್ರತೈಃ ।
ಉಪಗೀಯಮಾನಚರಿತಃ ಸ್ರಗ್ವೀ ಸಂಕರ್ಷಣಾನ್ವಿತಃ
॥ ೧೦ ॥

ಕ್ವಚಿಚ್ಚ ಕಲಹಂಸಾನಾಮನುಕೂಜತಿ ಕೂಜಿತಮ್ ।
ಅಭಿನೃತ್ಯತಿ ನೃತ್ಯಂತಂ ಬರ್ಹಿಣಂ ಹಾಸಯನ್ಕ್ವಚಿತ್
॥ ೧೧ ॥

ಮೇಘಗಂಭೀರಯಾ ವಾಚಾ ನಾಮಭಿರ್ದೂರಗಾನ್ಪಶೂನ್ ।
ಕ್ವಚಿದಾಹ್ವಯತಿ ಪ್ರೀತ್ಯಾ ಗೋಗೋಪಾಲಮನೋಜ್ಞಯಾ
॥ ೧೨ ॥

ಚಕೋರಕ್ರೌಞ್ಚಚಕ್ರಾಹ್ವಭಾರದ್ವಾಜಾಂಶ್ಚ ಬರ್ಹಿಣಃ ।
ಅನುರೌತಿ ಸ್ಮ ಸತ್ತ್ವಾನಾಂ ಭೀತವದ್ವ್ಯಾಘ್ರಸಿಂಹಯೋಃ
॥ ೧೩ ॥

ಕ್ವಚಿತ್ಕ್ರೀಡಾಪರಿಶ್ರಾಂತಂ ಗೋಪೋತ್ಸಂಗೋಪಬರ್ಹಣಮ್ ।
ಸ್ವಯಂ ವಿಶ್ರಮಯತ್ಯಾರ್ಯಂ ಪಾದಸಂವಾಹನಾದಿಭಿಃ
॥ ೧೪ ॥

ನೃತ್ಯತೋ ಗಾಯತಃ ಕ್ವಾಪಿ ವಲ್ಗತೋ ಯುಧ್ಯತೋ ಮಿಥಃ ।
ಗೃಹೀತಹಸ್ತೌ ಗೋಪಾಲಾನ್ಹಸಂತೌ ಪ್ರಶಶಂಸತುಃ
॥ ೧೫ ॥

ಕ್ವಚಿತ್ಪಲ್ಲವತಲ್ಪೇಷು ನಿಯುದ್ಧಶ್ರಮಕರ್ಶಿತಃ ।
ವೃಕ್ಷಮೂಲಾಶ್ರಯಃ ಶೇತೇ ಗೋಪೋತ್ಸಂಗೋಪಬರ್ಹಣಃ
॥ ೧೬ ॥

ಪಾದಸಂವಾಹನಂ ಚಕ್ರುಃ ಕೇಚಿತ್ತಸ್ಯ ಮಹಾತ್ಮನಃ ।
ಅಪರೇ ಹತಪಾಪ್ಮಾನೋ ವ್ಯಜನೈಃ ಸಮವೀಜಯನ್
॥ ೧೭ ॥

ಅನ್ಯೇ ತದನುರೂಪಾಣಿ ಮನೋಜ್ಞಾನಿ ಮಹಾತ್ಮನಃ ।
ಗಾಯಂತಿ ಸ್ಮ ಮಹಾರಾಜ ಸ್ನೇಹಕ್ಲಿನ್ನಧಿಯಃ ಶನೈಃ
॥ ೧೮ ॥

ಏವಂ ನಿಗೂಢಾತ್ಮಗತಿಃ ಸ್ವಮಾಯಯಾ
ಗೋಪಾತ್ಮಜತ್ವಂ ಚರಿತೈರ್ವಿಡಂಬಯನ್ ।
ರೇಮೇ ರಮಾಲಾಲಿತಪಾದಪಲ್ಲವೋ
ಗ್ರಾಮ್ಯೈಃ ಸಮಂ ಗ್ರಾಮ್ಯವದೀಶಚೇಷ್ಟಿತಃ ॥ ೧೯ ॥

ಶ್ರೀದಾಮಾ ನಾಮ ಗೋಪಾಲೋ ರಾಮಕೇಶವಯೋಃ ಸಖಾ ।
ಸುಬಲಸ್ತೋಕಕೃಷ್ಣಾದ್ಯಾ ಗೋಪಾಃ ಪ್ರೇಮ್ಣೇದಮಬ್ರುವನ್
॥ ೨೦ ॥

ರಾಮ ರಾಮ ಮಹಾಬಾಹೋ ಕೃಷ್ಣ ದುಷ್ಟನಿಬರ್ಹಣ ।
ಇತೋಽವಿದೂರೇ ಸುಮಹದ್ವನಂ ತಾಲಾಲಿಸಂಕುಲಮ್
॥ ೨೧ ॥

ಫಲಾನಿ ತತ್ರ ಭೂರೀಣಿ ಪತಂತಿ ಪತಿತಾನಿ ಚ ।
ಸಂತ್ಯನ್ಯೈರುದ್ಧಾನಿ ಧೇನುಕೇನ ದುರಾತ್ಮನಾ
॥ ೨೨ ॥

ಕೆಲವೊಮ್ಮೆ ಚಕೋರ, ಕ್ರೌಂಚ, ಹಂಸ, ಚಕ್ರವಾಕ, ಭರದ್ವಾಜ, ನವಿಲು ಮುಂತಾದ ಪಕ್ಷಿಗಳ ಧ್ವನಿಯನ್ನು ಅನುಸರಿಸಿ ಕೂಗಿದರೆ, ಕೆಲವೊಮ್ಮೆ ಹುಲಿ, ಸಿಂಹಗಳಂತೆ ಗರ್ಜಿಸುವನು. ಆ ಗರ್ಜನೆಯಿಂದ ಹೆದರಿದ ಜೀವಿಗಳಂತೆ ತಾನೂ ಕೂಡ ಭಯಗೊಂಡವನಂತೆ ನಟಿಸುವನು. ॥ ೧೩. ॥ ಬಲರಾಮನು ಆಟವಾಡುತ್ತಾಡುತ್ತಾ ಬಳಲಿ ಗೋಪಬಾಲಕನ ತೊಡೆಯಲ್ಲಿ ತಲೆಯನ್ನಿಟ್ಟು ಮಲಗಿದಾಗ ಶ್ರೀಕೃಷ್ಣನು ಅವನ ಕಾಲನ್ನು ಒತ್ತುತ್ತಾ ಬೀಸಣಿಗೆಯಿಂದ ಗಾಳಿ ಬೀಸಿ ಅಣ್ಣನ ಆಯಾಸವನ್ನು ಪರಿಹರಿಸುತ್ತಿದ್ದನು. ॥ ೧೪ ॥ ಒಂದೆಡೆ ಗೊಲ್ಲಬಾಲಕರು ಕುಣಿಯುತ್ತಿದ್ದರು. ಮತ್ತೊಂದೆಡೆಯಲ್ಲಿ ಕುಳಿತು ಹಾಡುತ್ತಿದ್ದರು. ಇನ್ನೊಂದೆಡೆಯಲ್ಲಿ ಕುಸ್ತಿಗಳನ್ನಾಡುತ್ತಿದ್ದರು. ಅಂತಹ ಕಡೆಗಳಲ್ಲಿ ಬಲರಾಮ-ಕೃಷ್ಣರು ಕೈ ಕೈಹಿಡಿದುಕೊಂಡು ನಿಂತುಕೊಂಡು ನಗುತ್ತಾ ಭಲೇ, ಭಲೇ ಎಂದು ಪ್ರೋತ್ಸಾಹಿಸುತ್ತಿದ್ದರು. ॥ ೧೫ ॥ ಕೆಲವೊಮ್ಮೆ ಸ್ವಯಂ ಶ್ರೀಕೃಷ್ಣನು ಗೊಲ್ಲಬಾಲಕರೊಂದಿಗೆ ಕುಸ್ತಿಯಾಡುತ್ತಾ ಬಳಲಿದಾಗ ಒಂದು ಸುಂದರ ವೃಕ್ಷದ ಕೆಳಗೆ ಚಿಗುರುಗಳ ಹಾಸಿಗೆಯಲ್ಲಿ ಯಾರೋ ಗೋಪಬಾಲಕನ ತೊಡೆಯನ್ನೇ ದಿಂಬಾಗಿಸಿ ಪವಡಿಸುತ್ತಿದ್ದನು. ॥ ೧೬ ॥ ಪರೀಕ್ಷಿತನೇ ! ಆ ಸಮಯದಲ್ಲಿ ಪುಣ್ಯಾತ್ಮರಾದ ಗೋಪಬಾಲಕರು ಮಹಾತ್ಮನಾದ ಶ್ರೀಕೃಷ್ಣನ ಸುಂದರವಾದ ಕಾಲುಗಳನ್ನು ಒತ್ತುತ್ತಿದ್ದರು. ನಿಷ್ಪಾಪರಾದ ಬೇರೆ ಬಾಲಕರು ದೊಡ್ಡ ದೊಡ್ಡ ಎಲೆಗಳಿಂದ ಅಥವಾ ಆಂಗವಸ್ತ್ರದಿಂದ ಗಾಳಿ ಬೀಸುತ್ತಿದ್ದರು ॥ ೧೭ ॥ ಸ್ನೇಹ ಮಗ್ನವಾದ ಮನಸ್ಸಿನಿಂದ ಕೂಡಿದ ಕೆಲವು ಗೋಪಬಾಲಕರು ಶ್ರೀಕೃಷ್ಣನಲೀಲೆಗನುಗುಣವಾಗಿ ಮನೋಜ್ಞವಾಗಿ ಕಿವಿಗಿಂಪಾದ ಗೀತೆಗಳನ್ನು ಅವನ ಸುತ್ತಲೂ ಕುಳಿತುಕೊಂಡು ನಿಧಾನವಾಗಿ ಹಾಡುತ್ತಿದ್ದರು. ॥ ೧೮ ॥ ಭಗವಂತನು ಹೀಗೆ ತನ್ನ ಯೋಗ ಮಾಯೆಯಿಂದ ತನ್ನ ಐಶ್ವರ್ಯಮಯವಾದ ಸ್ವರೂಪವನ್ನು ಬಚ್ಚಿಟ್ಟುಕೊಂಡಿದ್ದನು. ಅವನು ಮಾಡುವ ಲೀಲೆಗಳು ನಿಜವಾದ ಗೋಪಬಾಲಕರು ಮಾಡುವಂತೆ ಇದ್ದವು. ಸಾಕ್ಷಾತ್ ಲಕ್ಷ್ಮೀ ದೇವಿಯು ಯಾರ ಚರಣಕಮಲಗಳ ಸೇವೆಯಲ್ಲಿ ನಿರತಳಾಗಿರುತ್ತಿದ್ದಳೋ ಅಂತಹ ಭಗವಂತನು ಈ ಗ್ರಾಮೀಣ ಬಾಲಕರೊಂದಿಗೆ ಅತ್ಯಂತ ಪ್ರೇಮದಿಂದ, ಆನಂದಿಂದ ಗ್ರಾಮ್ಯರೀತಿಯ ಆಟವಾಡುತ್ತಿದ್ದನು. ಪರೀಕ್ಷಿತನೇ ! ಹೀಗಿದ್ದರೂ ಕೂಡ ಕೆಲವೊಮ್ಮೆ ಅವನ ಐಶ್ವರ್ಯಮಯ ಲೀಲೆಗಳು ಪ್ರಕಟವಾಗುತ್ತಲೇ ಇದ್ದವು.॥ ೧೯ ॥

ಬಲರಾಮ ಮತ್ತು ಶ್ರೀಕೃಷ್ಣರ ಆಪ್ತಸ್ನೇಹಿತರಲ್ಲಿ ಶ್ರೀದಾಮನೆಂಬ ಒಬ್ಬ ಗೋಪಬಾಲಕನು ಪ್ರಧಾನನಾಗಿದ್ದನು. ಒಂದು ದಿನ ಶ್ರೀದಾಮ, ಸುಬಲ, ಸ್ತೋಕಕೃಷ್ಣ (ಚಿಕ್ಕಕೃಷ್ಣ) ಮೊದಲಾದ ಗೊಲ್ಲ ಬಾಲಕರು ಪ್ರೇಮಪೂರ್ವಕವಾಗಿ ಬಲರಾಮ-ಕೃಷ್ಣರಲ್ಲಿ ಹೀಗೆಂದರು. ॥ ೨೦ ॥ "ಮಹಾಬಾಹುವಾದ ! ಬಲರಾಮನೇ ! ದುಷ್ಟನಾಶಕನಾದ ಶ್ರೀಕೃಷ್ಣನೇ ! ಇಲ್ಲಿ ಸ್ವಲ್ಪ ದೂರದಲ್ಲಿಯೇ ಸಾಲು-ಸಾಲಾಗಿ ತಾಳೆಯ ಮರಗಳಿಂದ ತುಂಬಿದ ಒಂದು ದೊಡ್ಡ ವನವಿದೆ. ॥ ೨೧ ॥ ಅಲ್ಲಿ ಹಲವಾರು ಪಕ್ವವಾದ ತಾಳೆಯ ಹಣ್ಣುಗಳು ಮರದಿಂದ ಬಿದ್ದಿವೆ. ಇನ್ನು ಬೀಳುತ್ತಲೂ ಇವೆ. ಆದರೆ ಅಲ್ಲಿಯೇ ಇರುವ ದುರಾತ್ಮನಾದ ಧೇನುಕಾಸುರನೆಂಬ ದೈತ್ಯನು ಆ ಹಣ್ಣುಗಳನ್ನು ಬೇರೆ ಯಾರೂ ಮುಟ್ಟದಂತೆ ತಡೆದಿರುವನು.॥೨೨॥

ಸೋಽತಿವೀರ್ಯೋಽಸುರೋ ರಾಮ ಹೇ ಕೃಷ್ಣಖರರೂಪಧೃಕ್ ।
ಆತ್ಮತುಲ್ಯಬಲೈರನ್ಯೈರ್ಜ್ಞಾತಿಭಿರ್ಬಹುಭಿರ್ವೃತಃ
॥ ೨೩ ॥

ತಸ್ಯಾತ್ಯಶನರಾಹಾರಾದ್ದೈತ್ಯೈರ್ನಭರಮಿತ್ರಹನ್ ।
ನ ಸೇವ್ಯತೇ ಪಶುಗಣೈಃ ಪಕ್ಷಿಸಂಘೈರ್ವಿವರ್ಜಿತಮ್
॥ ೨೪ ॥

ವಿದ್ಯಂತೇಽಭುಕ್ತಪೂರ್ವಾಣಿ ಫಲಾನಿ ಸುರಭೀಣಿ ಚ ।
ಏಷ ವೈ ಸುರಭಿರ್ಗಂಧೋ ವಿಷೂಚೀನೋಽವಗೃಹ್ಯತೇ
॥ ೨೫ ॥

ಪ್ರಯಚ್ಛ ತಾನಿ ನಃ ಕೃಷ್ಣ ಗಂಧಲೋಭಿತಚೇತಸಾಮ್ ।
ವಾಂಛಾಸ್ತಿ ಮಹತೀ ರಾಮ ಗಮ್ಯತಾಂ ಯದಿ ರೋಚತೇ
॥ ೨೬ ॥

ಏವಂ ಸುಹೃದ್ವಚಃ ಶ್ರುತ್ವಾ ಸುಹೃತ್ಪ್ರಿಯಚಿಕೀರ್ಷಯಾ ।
ಪ್ರಹಸ್ಯ ಜಗ್ಮತುರ್ಗೋಪೈರ್ವೃತೌ ತಾಲವನಂ ಪ್ರಭೂ
॥ ೨೭ ॥

ಬಲಃ ಪ್ರವಿಶ್ಯ ಬಾಹುಭ್ಯಾಂ ತಾಲಾನ್ಸಂಪರಿಕಂಪಯನ್ ।
ಫಲಾನಿ ಪಾತಯಾಮಾಸ ಮತಂಗಜ ಇವೌಜಸಾ
॥ ೨೮ ॥

ಫಲಾನಾಂ ಪತತಾಂ ಶಬ್ದಂ ನಿಶಮ್ಯಾಸುರರಾಸಭಃ ।
ಅಭ್ಯಧಾವತ್ ಕ್ಷಿತಿತಲಂ ಸನಗಂ ಪರಿಕಂಪಯನ್
॥ ೨೯ ॥

ಸಮೇತ್ಯ ತರಸಾ ಪ್ರತ್ಯಗ್ಭ್ಯಾಂ ಪದ್ಭ್ಯಾಂ ಬಲಂ ಬಲೀ ।
ನಿಹತ್ಯೋರಸಿ ಕಾಶಬ್ದಂ ಮುಂಚನ್ವರ್ಯಸರತ್ಖಲಃ
॥ ೩೦ ॥

ಪುನರಾಸಾದ್ಯ ಸಂರಬ್ಧ ಉಪಕ್ರೋಷ್ಟಾ ಪರಾಕ್ ಸ್ಥಿತಃ ।
ಚರಣಾವಪರೌ ರಾಜನ್ಬಲಾಯ ಪ್ರಾಕ್ಷಿಪದ್ರುಷಾ
॥ ೩೧ ॥

ಸ ತಂ ಗೃಹೀತ್ವಾ ಪ್ರಪದೋರ್ಭ್ರಾಮಯಿತ್ವೈಕಪಾಣಿನಾ ।
ಚಿಕ್ಷೇಪ ತೃಣರಾಜಾಗ್ರೇ ಭ್ರಾಮಣತ್ಯಕ್ತ ಜೀವಿತಮ್
॥ ೩೨ ॥

ತೇನಾಹತೋ ಮಹಾತಾಲೋ ವೇಪಮಾನೋ ಬೃಹಚ್ಛಿರಾಃ ।
ಪಾರ್ಶ್ವಸ್ಥಂ ಕಂಪಯನ್ಪಕ್ವಃ ಸ ಚಾನ್ಯಂ ಸೋಽಪಿ ಚಾಪರಮ್
॥ ೩೩ ॥

ಬಲರಾಮ-ಕೃಷ್ಣರೇ ! ಆ ದೈತ್ಯನು ಕತ್ತೆಯ ರೂಪದಿಂದ ಅಲ್ಲಿ ಇರುವನು. ಅವನಾದರೋ ಮಹಾಬಲಶಾಲಿಯಾಗಿದ್ದು ಅವನೊಂದಿಗೆ ಇನ್ನೂ ಅನೇಕ ದೈತ್ಯರು ಬಲಶಾಲಿಯಾಗಿದ್ದು ಕತ್ತೆಗಳ ರೂಪದಿಂದಲೇ ಇದ್ದಾರೆ. ॥ ೨೩ ॥ ಓ ಶತ್ರುಸೂದನನೇ ! ಆ ದೈತ್ಯನು ಇಷ್ಟರವರೆಗೆ ಎಷ್ಟು ಜನರನ್ನು ತಿಂದು ಹಾಕಿರುವನೋ ತಿಳಿಯದು. ಈಗಂತೂ ಮರಣ ಭಯದಿಂದಾಗಿ ಯಾವ ಮನುಷ್ಯನೂ ಅಲ್ಲಿಗೆ ಹೋಗುವುದಿಲ್ಲ, ಮನುಷ್ಯರೇ ಅಲ್ಲ ಪಶು-ಪಕ್ಷಿಗಳೂ ಕೂಡ ಆ ಕಾಡಿನ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ ॥ ೨೪ ॥ ತಾಳೆಯ ಫಲಗಳಂತೂ ತುಂಬಾ ಸುಗಂಧಿತವಾಗಿವೆ. ಆದರೆ ನಾವು ಎಂದೂ ಅದನ್ನು ತಿಂದಿಲ್ಲ ನೋಡಿ, ಸುತ್ತಲೂ ಆ ಹಣ್ಣುಗಳ ಮಂದ-ಮಂದ ಪರಿಮಳವು ಪಸರಿಸಿದೆ. ಸ್ವಲ್ಪ ಮನಸ್ಸಿಟ್ಟು ಗಮನಿಸಿದರೆ ಅದರ ಮಾಧುರ್ಯವನ್ನು ಅರಿಯಬಹುದು. ॥ ೨೫ ॥ ಶ್ರೀಕೃಷ್ಣ ! ಅವುಗಳ ಸುಗಂಧದಿಂದ ನಮ್ಮ ಮನಸ್ಸು ಆಕರ್ಷಿತವಾಗಿದೆ ಹಾಗೂ ಅದನ್ನು ತಿನ್ನಬೇಕೆಂದು ಆಶಿಸುತ್ತಿದೆ. ನೀನು ಆ ಫಲಗಳನ್ನು ನಮಗೆ ತಿನ್ನಿಸು. ಬಲರಾಮ ! ನಮಗೆ ಆ ಫಲಗಳ ಕುರಿತು ಬಹಳ ಉತ್ಕಂಠತೆ ಇದೆ. ನಿಮಗೆ ಉಚಿತವೆನಿಸಿದರೆ ಖಂಡಿತವಾಗಿ ಅಲ್ಲಿಗೆ ಹೋಗೋಣ. ॥ ೨೬ ॥

ತಮ್ಮ ಸ್ನೇಹಿತರು ಆಡಿದ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಿಬ್ಬರೂ ನಗುತ್ತಾ ಅವರನ್ನು ಸಂತೋಷಗೊಳಿಸಲಿಕ್ಕಾಗಿ ಅವರೊಂದಿಗೆ ತಾಳವನಕ್ಕೆ ಹೊರಟರು. ॥ ೨೭ ॥ ಅಲ್ಲಿಗೆ ಹೋದ ಮೇಲೆ ಬಲರಾಮನು ತನ್ನ ತೋಳುಗಳಿಂದ ತಾಳೆಮರವನ್ನು ಬಿಗಿದಪ್ಪಿ ಆನೆ ಮರಿಯಂತೆ ತಾಳೆಮರವನ್ನು ಜೋರಾಗಿ ಅಲ್ಲಾಡಿಸಿದನು. ನೂರಾರು ಹಣ್ಣುಗಳು ತೊಪ ತೊಪನೆ ಕೆಳಕ್ಕೆ ಬಿದ್ದವು. ॥ ೨೮ ॥ ಕತ್ತೆಯ ರೂಪದಲ್ಲಿದ್ದ ದೈತ್ಯನು ಹಣ್ಣುಗಳು ಬಿದ್ದ ಶಬ್ದವನ್ನು ಕೇಳಿದಾಗ ಅವನು ಪರ್ವತಗಳಿಂದ ಕೂಡಿದ ಪೃಥ್ವಿಯನ್ನು ನಡುಗಿಸುತ್ತಾ ಅವರೆಡೆಗೆ ಧಾವಿಸಿ ಬಂದನು.॥ ೨೯ ॥ ಅವನು ಮಹಾಬಲಶಾಲಿಯಾಗಿದ್ದನು. ತಾಳೆಯ ಮರವನ್ನು ಅಲ್ಲಾಡಿಸುತ್ತಿದ್ದ ಬಲರಾಮನ ಮುಂದೆ ಹಿಮ್ಮುಖವಾಗಿ ನಿಂತು ಹಿಂಗಾಲುಗಳಿಂದ ಅವನ ಎದೆಗೆ ಒದ್ದನು. ಅನಂತರ ಆ ದುಷ್ಟನು ಜೋರಾಗಿ ಕಿರುಚುತ್ತಾ ಹಿಂದಕ್ಕೆ ಸರಿದು ನಿಂತನು. ॥ ೩೦ ॥ ರಾಜೇಂದ್ರ ! ಆ ಕತ್ತೆಯು ಅತ್ಯಂತ ಕ್ರುದ್ಧವಾಗಿ ಪುನಃ ಕಿರುಚಿತ್ತಾ ಮತ್ತೆ ಬಲರಾಮನ ಬಳಿಗೆ ಬಂದು ಅವನೆಡೆಗೆ ಬೆನ್ನುಮಾಡಿ ಪುನಃ ತನ್ನ ಹಿಂಗಾಲಿನಿಂದ ಬಲರಾಮನಿಗೆ ಒದೆದನು. ॥ ೩೧ ॥ ಬಲರಾಮನು ತನ್ನ ಒಂದೇ ಕೈಯಿಂದ ಅವನ ಎರಡೂ ಕಾಲುಗಳನ್ನು ಹಿಡಿದು ಗರ-ಗರನೆ ತಿರುಗಿಸಿ ತಾಳೆಯ ಮರದ ಮೇಲಕ್ಕೆ ಎಸೆದನು. ಹಾಗೆ ಗರ-ಗರನೆ ತಿರುಗಿಸುವಾಗಲೇ ರಾಕ್ಷಸನ ಪ್ರಾಣಪಕ್ಷಿ ಹಾರಿಹೋಗಿತ್ತು. ॥ ೩೨ ॥ ತಾಳೆಯ ಮರದ ಮೇಲ್ಭಾಗವು ಗರಿಗಳಿಂದ ಅಗಲವಾಗಿತ್ತು. ದೈತ್ಯನು ಮರದ ಮೇಲೆ ಬೀಳುತ್ತಲೇ ಆ ತಾಳೆಮರವು ಉರುಳಿಬಿತ್ತು. ಅದರ ಜೊತೆಗೆ ಅದಕ್ಕೆ ತಾಕಿನಿಂತ ಅನೇಕ ತಾಳೆಮರಗಳೂ ಉರುಳಿ ಬಿದ್ದವು.॥೩೩॥

ಬಲಸ್ಯ ಲೀಲಯೋತ್ಸೃಷ್ಟಖರದೇಹಹತಾಹತಾಃ ।
ತಾಲಾಶ್ಚ ಕಂಪಿರೇ ಸರ್ವೇ ಮಹಾವಾತೇರಿತಾ ಇವ
॥ ೩.೪ ॥

ನೈತಚ್ಚಿತ್ರಂ ಭಗವತಿ ಹ್ಯನಂತೇ ಜಗದೀಶ್ವರೇ ।
ಓತಪ್ರೋತಮಿದಂ ಯಸ್ಮಿಂಸ್ತಂತುಷ್ವಂಗ ಯಥಾ ಪಟಃ
॥ ೩.೫ ॥

ತತಃ ಕೃಷ್ಣಂ ಚ ರಾಮಂ ಚ ಜ್ಞಾತಯೋ ಧೇನುಕಸ್ಯ ಯೇ ।
ಕ್ರೋಷ್ಟಾರೋಽಭ್ಯದ್ರವನ್ಸರ್ವೇ ಸಂರಬ್ಧಾಹತಬಾಂಧವಾಃ
॥ ೩.೬ ॥

ತಾಂಸ್ತಾನಾಪತತಃ ಕೃಷ್ಣೋ ರಾಮಶ್ಚ ನೃಪ ಲೀಲಯಾ ।
ಗೃಹೀತಪಶ್ಚಾಚ್ಚರಣಾನ್ಪ್ರಾಹಿಣೋತ್ತೃಣರಾಜಸು
॥ ೩.೭ ॥

ಫಲಪ್ರಕರಸಂಕೀರ್ಣಂ ದೈತ್ಯದೇಹೈರ್ಗತಾಸುಭಿಃ ।
ರರಾಜ ಭೂಃ ಸತಾಲಾಗ್ರೈರ್ಘನೈರಿವ ನಭಸ್ತಲಮ್
॥ ೩.೮ ॥

ತಯೋಸ್ತತ್ಸುಮಹತ್ಕರ್ಮ ನಿಶಾಮ್ಯ ವಿಬುಧಾದಯಃ ।
ಮುಮುಚುಃ ಪುಷ್ಪವರ್ಷಾಣಿ ಚಕ್ರುರ್ವಾದ್ಯಾನಿ ತುಷ್ಟುವುಃ
॥ ೩.೯ ॥

ಅಥ ತಾಲಫಲಾನ್ಯಾದನ್ಮನುಷ್ಯಾ ಗತಸಾಧ್ವಸಾಃ ।
ತೃಣಂ ಚ ಪಶವಶ್ಚೇರುರ್ಹತಧೇನುಕಕಾನನೇ
॥ ೪೦ ॥

ಕೃಷ್ಣಃ ಕಮಲಪತ್ರಾಕ್ಷಃ ಪುಣ್ಯಶ್ರವಣಕೀರ್ತನಃ ।
ಸ್ತೂಯಮಾನೋಽನುಗೈರ್ಗೋಪೈಃ ಸಾಗ್ರಜೋ ವ್ರಜಮಾವ್ರಜತ್
॥ ೪೧ ॥

ತಂ ಗೋರಜಶ್ಚುರಿತಕುಂತಲಬದ್ಧಬರ್ಹ-
ವನ್ಯಪ್ರಸೂನರುಚಿರೇಕ್ಷಣಚಾರುಹಾಸಮ್ ।
ವೇಣುಂ ಕ್ವಣಂತಮನುಗೈರನುಗೀತಕೀರ್ತಿಂ
ಗೋಪ್ಯೋ ದಿದೃಕ್ಷಿತದೃಶೋಽಭ್ಯಗಮನ್ಸಮೇತಾಃ ॥ ೪೨ ॥

ಪೀತ್ವಾ ಮುಕುಂದಮುಖಸಾರಘಮಕ್ಷಿಭೃಂಗೈ-
ಸ್ತಾಪಂ ಜಹುರ್ವಿರಹಜಂ ವ್ರಜಯೋಷಿತೋಽಸ್ಯ ।
ತತ್ಸತ್ಕೃತಿಂ ಸಮಧಿಗಮ್ಯ ವಿವೇಶ ಗೋಷ್ಠಂ
ಸವ್ರೀಡಹಾಸವಿನಯಂ ಯದಪಾಂಗಮೋಕ್ಷಮ್ ॥ ೪೩ ॥

ಬಲರಾಮನಿಗೆ ಇದೊಂದು ಲೀಲೆಯೇ ಆಗಿತ್ತು. ಆದರೆ ಅವನಿಂದ ಎಸೆಯಲ್ಪಟ್ಟ ಕತ್ತೆಯ ಶರೀರದ ಏಟಿನಿಂದ ಅಲ್ಲಿಯ ಎಲ್ಲ ಮರಗಳೂ ಬಿರುಗಾಳಿಗೆ ಸಿಲುಕಿದಂತೆ ನಡುಗಿ ಹೋದುವು. ॥ ೩.೪ ॥ ಭಗವಾನ್ ಬಲರಾಮನು ಸಾಕ್ಷಾತ್ ಜಗದೀಶ್ವರನೇ ಆಗಿದ್ದಾನೆ. ಅವನಲ್ಲಿ ಈ ಜಗತ್ತು ಬಟ್ಟೆಯಲ್ಲಿ ದಾರವು ಹಾಸುಹೊಕ್ಕಾಗಿರುವಂತೆ ಹೆಣೆದುಕೊಂಡಿದೆ. ಹಾಗಿರುವಾಗ ಅವನ ಕುರಿತು ಇದರಲ್ಲಿ ಆಶ್ಚರ್ಯವೇನಿದೆ. ॥ ೩.೫ ॥ ಆ ಸಮಯದಲ್ಲಿ ಧೇನುಕಾಸುರನ ಜಾತಿ-ಬಾಂಧವರೆಲ್ಲರೂ ಅತ್ಯಂತ ಕುಪಿತರಾಗಿ ಗಟ್ಟಿಯಾಗಿ ಕಿರುಚಿಕೊಳ್ಳುತ್ತಾ ಬಲರಾಮ ಕೃಷ್ಣರನ್ನು ರಭಸದಿಂದ ಆಕ್ರಮಿಸಿದರು. ॥ ೩.೬ ॥ ರಾಜನೇ ! ತಮ್ಮ ಬಳಿಗೆ ಬಂದ ಕತ್ತೆಯ ರೂಪದ ರಾಕ್ಷಸರೆಲ್ಲರನ್ನೂ ರಾಮ-ಕೃಷ್ಣರು ಅವುಗಳ ಹಿಂಗಾಲುಗಳನ್ನು ಹಿಡಿದು ಒಬ್ಬೊಬ್ಬರನ್ನಾಗಿ ಗರ-ಗರನೆ ತಿರುಗಿಸುತ್ತಾ ಲೀಲಾಜಾಲವಾಗಿ ತಾಳೆಮರದ ಮೇಲಕ್ಕೆ ಎಸೆಯ ಗೊಡಗಿದರು. ॥ ೩.೭ ॥ ಆಗ ಅಲ್ಲಿಯ ಭೂಮಿಯು ತಾಳೆ ಹಣ್ಣುಗಳಿಂದ, ಮುರಿದು ಬಿದ್ದ ಮರಗಳಿಂದ ಹಾಗೂ ದೈತ್ಯರ ಪ್ರಾಣಹೀನ ಶರೀರಗಳಿಂದ-ಮೋಡಗಳಿಂದ ಆಕಾಶವು ತುಂಬಿ ಹೋಗಿರುವಂತೆ ಮುಚ್ಚಿ ಹೋಗಿ ಶೋಭಿಸುತ್ತಿತ್ತು. ॥ ೩.೮ ॥ ಬಲರಾಮ-ಶ್ರೀಕೃಷ್ಣರ ಈ ಮಂಗಲಮಯ ಲೀಲೆಯನ್ನು ನೋಡಿ ದೇವತೆಗಳು ಅವರ ಮೇಲೆ ಪುಷ್ಪವೃಷ್ಟಿಗರೆದರು. ವಾದ್ಯಗಳನ್ನು ನುಡಿಸುತ್ತಾ ಸ್ತುತಿಸತೊಡಗಿದರು. ॥ ೩.೯ ॥ ಧೇನುಕಾಸುರನು ಸತ್ತ ದಿನದಿಂದ ಜನರು ಧೈರ್ಯವಾಗಿ ಆ ವನಕ್ಕೆ ಹೋಗಿ ತಾಳೆ ಫಲಗಳನ್ನು ತಿನ್ನ ತೊಡಗಿದರು. ಪಶುಗಳೂ ಸ್ವಚ್ಛಂದವಾಗಿ ಅಲ್ಲಿ ಹುಲ್ಲು ಮೇಯತೊಡಗಿದವು. ॥ ೪೦ ॥

ಇದಾದ ಬಳಿಕ ಕಮಲದಳ ಲೋಚನನಾದ ಭಗವಾನ್ ಶ್ರೀಕೃಷ್ಣನು ಅಣ್ಣನಾದ ಬಲರಾಮನೊಂದಿಗೆ ವ್ರಜಕ್ಕೆ ಆಗಮಿಸಿದನು. ಆಗ ಅವನ ಸಂಗಡಿಗರಾದ ಗೋಪಬಾಲಕರು ಭಗವಂತನ ಲೀಲೆಗಳ ಶ್ರವಣ-ಕೀರ್ತನವೇ ಎಲ್ಲಕ್ಕೂ ಮಿಗಿಲಾದ ಪವಿತ್ರವಾಗಿ ಇರುವುದರಿಂದ ಆ ಕೀರ್ತನೆಗಳಿಂದ ಸ್ತುತಿಸುತ್ತಾ ಹಿಂದೆ-ಹಿಂದೆಯೇ ಬರುತ್ತಿದ್ದರು. ॥ ೪೧ ॥ ಆ ಸಮಯದಲ್ಲಿ ಶ್ರೀಕೃಷ್ಣನ ಗುಂಗುರು ಕೂದಲುಗಳಲ್ಲಿ ಹಸುಗಳ ಗೊರಸಿನಿಂದ ಎದ್ದ ಧೂಳು ತುಂಬಿತ್ತು. ತಲೆಯಲ್ಲಿ ನವಿಲುಗರಿಗಳ ಮುಕುಟವಿತ್ತು. ಕೂದಲುಗಳಲ್ಲಿ ಅಂದವಾದ ವನಪುಷ್ಪಗಳು ಮುಡಿದಿದ್ದುವು. ಅವನ ಕಡೆಗಣ್ಣ ನೋಟವೂ, ಹುಸಿನಗೆಯೂ ಸುಮಧುರವಾಗಿತ್ತು. ಅವನು ಕರ್ಣಾನಂದಕರವಾಗಿ ಮುರಳಿಯನ್ನು ನುಡಿಸುತ್ತಿದ್ದನು. ಜೊತೆಗೆ ಗೊಲ್ಲಬಾಲಕರು ಅವನ ಕೀರ್ತಿಯನ್ನು ಹಾಡುತ್ತಿದ್ದರು. ಕೊಳಲಿನ ಧ್ವನಿಯನ್ನು ಕೇಳಿದ ಅನೇಕ ಗೋಪಿಯರು ಒಟ್ಟಾಗಿ ಹಟ್ಟಿಯಿಂದ ಹೊರಬಂದು ಅವನನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವರ ಕಣ್ಣುಗಳು ಎಷ್ಟೋ ಹೊತ್ತಿನಿಂದ ಅವನ ದರ್ಶನಕ್ಕಾಗಿ ಕಾತರವಾಗಿ ಇದ್ದವು. ॥ ೪೨ ॥ ಗೋಪಿಯರು ತಮ್ಮ ಕಣ್ಣುಗಳೆಂಬ ಭ್ರಮರಗಳಿಂದ ಭಗವಂತನ ಮುಖಾರವಿಂದದ ಮಕರಂದ ರಸವನ್ನು ಪಾನಮಾಡಿ ಇಡೀ ದಿನದ ಅಗಲುವಿಕೆಯ ತಾಪವನ್ನು ತಣಿಸಿಕೊಂಡರು. ಭಗವಂತನೂ ಕೂಡ ಅವರ ಲಜ್ಜೆಯಿಂದ ಕೂಡಿದ ಮುಗುಳ್ನಗೆಯನ್ನು, ಪ್ರೇಮಪೂರ್ಣ ಓರೆನೋಟಗಳ ಸತ್ಕಾರವನ್ನು ಸ್ವೀಕರಿಸುತ್ತಾ ವ್ರಜವನ್ನು ಪ್ರವೇಶಿಸಿದನು. ॥ ೪೩. ॥

ತಯೋರ್ಯಶೋದಾರೋಹಿಣ್ಯೌ ಪುತ್ರಯೋಃ ಪುತ್ರವತ್ಸಲೇ ।
ಯಥಾಕಾಮಂ ಯಥಾಕಾಲಂ ವ್ಯಧತ್ತಾಂ ಪರಮಾಶಿಷಃ
॥ ೪೪ ॥

ಗತಾಧ್ವಾನಶ್ರಮೌ ತತ್ರ ಮಜ್ಜನೋನ್ಮರ್ದನಾದಿಭಿಃ ।
ನೀವೀಂ ವಸಿತ್ವಾ ರುಚಿರಾಂ ದಿವ್ಯಸ್ರಗ್ಗಂಧಮಂಡಿತೌ
॥ ೪೫ ॥

ಜನನ್ಯುಪಹೃತಂ ಪ್ರಾಶ್ಯ ಸ್ವಾದ್ವನ್ನಮುಪಲಾಲಿತೌ ।
ಸಂವಿತ್ಯ ವರಶಯ್ಯಾಯಾಂ ಸುಖಂ ಸುಷುಪತುರ್ವ್ರಜೇ
॥ ೪೬ ॥

ಏವಂ ಸ ಭಗವಾನ್ಕೃಷ್ಣೋ ವೃಂದಾವನಚರಃ ಕ್ವಚಿತ್ ।
ಯಯೌ ರಾಮಮೃತೇ ರಾಜನ್ಕಾಲಿಂದೀಂ ಸಖಿಭಿರ್ವೃತಃ
॥ ೪೭ ॥

ಅಥ ಗಾವಶ್ಚ ಗೋಪಾಶ್ಚ ನಿದಾಘಾತಪಪೀಡಿತಾಃ ।
ದುಷ್ಟಂ ಜಲಂ ಪಪುಸ್ತಸ್ಯಾಸ್ಪೃಷ್ಟಾರ್ತಾ ವಿಷದೂಷಿತಮ್
॥ ೪೮ ॥

ವಿಷಾಂಭಸ್ತದುಪಸ್ಪೃಶ್ಯ ದೈವೋಪಹತಚೇತಸಃ ।
ನಿಪೇತುರ್ವ್ಯಸವಃ ಸರ್ವೇ ಸಲಿಲಾಂತೇ ಕುರೂದ್ವಹ
॥ ೪೯ ॥

ವೀಕ್ಷ್ಯ ತಾನ್ವೈ ತಥಾಭೂತಾನ್ಕೃಷ್ಣೋ ಯೋಗೇಶ್ವರೇಶ್ವರಃ ।
ಈಕ್ಷಯಾಮೃತವರ್ಷಿಣ್ಯಾ ಸ್ವನಾಥಾನ್ಸಮಜೀವಯತ್
॥ ೫೦ ॥

ತೇ ಸಂಪ್ರತೀತಸ್ಮೃತಯಃ ಸಮುತ್ಥಾಯ ಜಲಾಂತಿಕಾತ್ ।
ಆಸನ್ನವಿಸ್ಮಿತಾಃ ಸರ್ವೇ ವೀಕ್ಷಮಾಣಾಃ ಪರಸ್ಪರಮ್
॥ ೫೧ ॥

ಅನ್ವಮಂಸತ ತದ್ರಾಜನ್ಗೋವಿಂದಾನುಗ್ರಹೇಕ್ಷಿತಮ್ ।
ಪೀತ್ವಾ ವಿಷಂ ಪರೇತಸ್ಯ ಪುನರುತ್ಥಾನಮಾತ್ಮನಃ
॥ ೫೨ ॥

ಅತ್ತ ತಾಯಿ ಯಶೋದೆಯ ಮತ್ತು ರೋಹಿಣಿಯ ಹೃದಯಗಳು ವಾತ್ಸಲ್ಯಭಾವದಿಂದ ಉಕ್ಕಿಹರಿಯುತ್ತಿತ್ತು. ಶ್ಯಾಮ ಮತ್ತು ರಾಮರು ಮನೆಗೆ ಬರುತ್ತಲೇ ಅವರು ಅವರ ಇಚ್ಛೆಗನುಸಾರ ಹಾಗೂ ಸಮಯಕ್ಕನುಸಾರ ಮೊದಲೇ ಸಿದ್ದಪಡಿಸಿದ್ದ ಭಕ್ಷ್ಯ ಭೋಜ್ಯಗಳನ್ನು ಮೃಷ್ಟಾನ್ನವನ್ನೂ ಅವರಿಗೆ ತಿನ್ನಿಸಿದರು. ॥ ೪೪ ॥ ತಾಯಂದಿರು ಅವರಿಗೆ ಎಣ್ಣೆಹಚ್ಚಿ ಸ್ನಾನಮಾಡಿಸಿದರು. ಅದರಿಂದ ಅವರ ಇಡೀ ದಿನದ ಬಳಲಿಕೆಯು ದೂರವಾಯಿತು. ಮತ್ತೆ ಅವರಿಗೆ ಸುಂದರವಾದ ವಸ್ತ್ರಗಳನ್ನು ತೊಡಿಸಿ ದಿವ್ಯ ಪುಷ್ಪಮಾಲಿಕೆಗಳಿಂದ ಸಿಂಗರಿಸಿ, ಚಂದನವನ್ನು ಪೂಸಿದರು. ॥ ೪೫ ॥ ಬಳಿಕ ಸೋದರರಿಬ್ಬರೂ ತಾಯಂದಿರು ಬಡಿಸಿದ ಸ್ವಾದಿಷ್ಟವಾದ ಭೋಜನವನ್ನು ಮಾಡಿದರು. ಅನಂತರ ಅವರನ್ನು ಮುದ್ದಿಸುತ್ತಾ ಯಶೋದೆ ಮತ್ತು ರೋಹಿಣಿಯರು ಸುಂದರವಾದ ಮೃದುವಾದ ಶಯ್ಯೆಯಲ್ಲಿ ಮಲಗಿಸಿದರು. ರಾಮ-ಕೃಷ್ಣರು ಸುಖವಾಗಿ ನಿದ್ರಿಸಿದರು. ॥ ೪೬ ॥

ಭಗವಾನ್ ಶ್ರೀಕೃಷ್ಣನು ಹೀಗೆ ವೃಂದಾವನದಲ್ಲಿ ಅನೇಕ ಲೀಲೆಗಳನ್ನು ನಡೆಸಿದನು. ಒಂದು ದಿನ ಅವನು ತನ್ನ ಸ್ನೇಹಿತರೊಂದಿಗೆ ಯಮುನಾತೀರಕ್ಕೆ ಹೋದನು. ರಾಜನೇ ! ಆ ದಿನ ಬಲರಾಮನು ಅವನೊಂದಿಗೆ ಹೋಗಿರಲಿಲ್ಲ. ॥ ೪೭ ॥ ಆ ಸಮಯದಲ್ಲಿ ಗೋ-ಗೋಪಾಲಕರು ಬೇಸಿಗೆಯ ಬಿಸಿಲಿನಿಂದ ಬಾಯಾರಿದ್ದು ಅವರ ಗಂಟಲು ಒಣಗಿ ಹೋಗಿತ್ತು. ಇದರಿಂದಾಗಿ ಅವರು ಯಮುನಾನದಿಯ ವಿಷಮಿಶ್ರಿತ ನೀರನ್ನು ಯಥೇಚ್ಛವಾಗಿ ಕುಡಿದರು. ॥ ೪೮ ॥ ಪರೀಕ್ಷಿತನೇ ! ದುರದೃಷ್ಟವಶಾತ್ ಈ ವಿಷಯವು ಅವರಿಗೆ ತಿಳಿದಿರಲಿಲ್ಲ. ಆ ವಿಷಮಿಶ್ರಿತ ನೀರನ್ನು ಕುಡಿಯುತ್ತಲೇ ಎಲ್ಲ ಗೋವುಗಳು, ಗೋಪಾಲಕರು ಗತಪ್ರಾಣರಾಗಿ ಯಮುನಾತೀರದಲ್ಲಿ ಬಿದ್ದುಬಿಟ್ಟರು. ॥ ೪೯ ॥ ಅವರ ಇಂತಹ ಸ್ಥಿತಿಯನ್ನು ನೋಡಿದ ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನು ತನ್ನ ಅಮೃತವನ್ನು ಸುರಿಸುವ ಕೃಪಾದೃಷ್ಟಿಯಿಂದ ಅವರನ್ನು ಬದುಕಿಸಿದನು. ಅವರಿಗೆ ಸ್ವಾಮಿಯೂ ಸರ್ವಸ್ವವೂ ಏಕಮಾತ್ರ ಶ್ರೀಕೃಷ್ಣನೇ ಆಗಿದ್ದನು. ॥ ೫೦ ॥ ಪರೀಕ್ಷಿತನೇ ! ಚೇತರಿಸಿಕೊಂಡು ಅವರೆಲ್ಲರೂ ಯಮುನಾತೀರದಲ್ಲಿ ಎದ್ದು ನಿಂತು ಆಶ್ಚರ್ಯಚಕಿತರಾಗಿ ಒಬ್ಬರು ಮತ್ತೊಬ್ಬರನ್ನು ನೋಡತೊಡಗಿದರು. ॥ ೫೧ ॥ ರಾಜೇಂದ್ರ ! ಕೊನೆಗೆ 'ನಾವೆಲ್ಲರೂ ವಿಷಯುಕ್ತ ನೀರನ್ನು ಕುಡಿದು ಸತ್ತುಹೋಗಿದ್ದೇವು. ಆದರೆ ನಮ್ಮ ಶ್ರೀಕೃಷ್ಣನೇ ತನ್ನ ಅನುಗ್ರಹ ತುಂಬಿದ ದೃಷ್ಟಿಯಿಂದ ನಮ್ಮನ್ನು ಪುನಃ ಬದುಕಿಸಿದನು' ಎಂದು ಅವರೆಲ್ಲರೂ ನಿಶ್ಚಯಿಸಿಕೊಂಡರು. ॥ ೫೨ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಧೇನುಕವಧೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಕಾಲಿಯನ ಮೇಲೆ ಕೃಪೆದೋರಿದುದು

ಶ್ರೀಶುಕ ಉವಾಚ

ವಿಲೋಕ್ಯ ದೂಷಿತಾಂ ಕೃಷ್ಣಾಂ ಕೃಷ್ಣಃ ಕೃಷ್ಣಾಹಿನಾ ವಿಭುಃ ।
ತಸ್ಯಾ ವಿಶುದ್ಧಿ ಮನ್ವಿಚ್ಛನ್ಸರ್ಪಂ ತಮುದವಾಸಯತ್
॥ ೧ ॥

ರಾಜೋವಾಚ

ಕಥಮಂತರ್ಜಲೇಽಗಾಧೇ ನ್ಯಗೃಹ್ಣಾದ್ಭಗವಾನಹಿಮ್ ।
ಸ ವೈ ಬಹುಯುಗಾವಾಸಂ ಯಥಾಸೀತ್ತದ್ವಿಪ್ರ ಕಥ್ಯತಾಮ್
॥ ೨ ॥

ಬ್ರಹ್ಮನ್ಭಗವತಸ್ತಸ್ಯ ಭೂಮ್ನಃ ಸ್ವೇಚ್ಛಾಂದವರ್ತಿನಃ ।
ಗೋಪಾಲೋದಾರಚರಿತಂ ಕಸ್ತೃಪ್ಯೇತಾಮೃತಂ ಜುಷನ್
॥ ೩ ॥

ಶ್ರೀಶುಕ ಉವಾಚ

ಕಾಲಿಂದ್ಯಾಂ ಕಾಲಿಯಸ್ಯಾಸೀದ್ಹ್ರದಃ ಕಶ್ಚಿದ್ವಿಷಾಗ್ನಿನಾ ।
ಶ್ವಪ್ಯಮಾಣಪಯಾ ಯಸ್ಮಿನ್ಪತಂತ್ಯುಪರಿಗಾಃ ಖಗಾಃ
॥ ೪ ॥

ವಿಪ್ರುಷ್ಮತಾ ವಿಷೋದೋರ್ಮಿಮಾರುತೇನಾಭಿಮರ್ಶಿತಾಃ ।
ಮ್ರಿಯಂತೇ ತೀರಗಾ ಯಸ್ಯ ಪ್ರಾಣಿನಃ ಸ್ಥಿರಜಂಗಮಾಃ
॥ ೫ ॥

ತಂ ಚಂಡವೇಗವಿಷವೀರ್ಯಮವೇಕ್ಷ್ಯ ತೇನ
ದುಷ್ಟಾಂ ನದೀಂ ಚ ಖಿಲಸಂಯಮನಾವತಾರಃ ।
ಕೃಷ್ಣಃ ಕದಂಬಮಧಿರುಹ್ಯ ತತೋಽತಿತುಂಗ-
ಮಾಸ್ಫೋಟ್ಯ ಗಾಢರಶನೋ ನ್ಯಪತದ್ವಿಷೋದೇ ॥ ೬ ॥

ಸರ್ಪಹ್ರದಃ ಪುರುಷಸಾರನಿಪಾತವೇಗ-
ಸಂಕ್ಷೋಭಿತೋರಗವಿಷೋಚ್ಛ್ವಸಿತಾಂಬುರಾಶಿಃ ।
ಪರ್ಯಕ್ಪ್ಲುತೋ ವಿಷಕಷಾಯವಿಘೂರ್ಣಿತೋರ್ಮಿ-
ರ್ಧಾವನ್ ಧನುಃಶತಮನಂತಬಲಸ್ಯ ಕಿಂ ತತ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಮಹಾವಿಷವುಳ್ಳ ಕಾಳಿಯನಾಗನು ಯಮುನೆಯ ನೀರನ್ನು ವಿಷ ಭರಿತವನ್ನಾಗಿ ಮಾಡಿಬಿಟ್ಟಿರುವನೆಂಬ ವಿಷಯವನ್ನು ತಿಳಿದ ಭಗವಾನ್ ಶ್ರೀಕೃಷ್ಣನು ಯಮುನೆಯ ನೀರನ್ನು ಶುದ್ಧಗೊಳಿಸ ಲೋಸುಗ ಆ ಸರ್ಪವನ್ನು ಅಲ್ಲಿಂದ ಓಡಿಸಿಬಿಟ್ಟನು. ॥ ೧ ॥

ಪರೀಕ್ಷಿತರಾಜನು ಕೇಳಿದನು – ವಿಪ್ರರ್ಷಿಯೇ ! ಭಗವಾನ್ ಶ್ರೀಕೃಷ್ಣನು ಯಮುನೆಯ ಅಗಾಧವಾದ ನೀರಿನಲ್ಲಿದ್ದ ಕಾಳಿಯ ನನ್ನು ಹೇಗೆ ದಮನ ಮಾಡಿದನು ? ಕಾಳಿಯ ಸರ್ಪವಾದರೋ ಜಲಚರಪ್ರಾಣಿಯಲ್ಲ, ಹಾಗಿದ್ದರೂ ಅದು ಅನೇಕ ಯುಗಗಳಿಂದ ಅಲ್ಲಿ ಹೇಗೆ ವಾಸವಾಗಿತ್ತು ? ಈ ವಿಷಯವನ್ನು ದಯವಿಟ್ಟು ತಿಳಿಸಿರಿ. ॥ ೨ ॥ ಬ್ರಾಹ್ಮಣಶ್ರೇಷ್ಠರೇ ! ಪರಬ್ರಹ್ಮ ಸ್ವರೂಪನೂ, ತನ್ನ ಇಷ್ಟಾನುಸಾರವಾಗಿ ವರ್ತಿಸುವವನೂ ಆದ ಶ್ರೀಕೃಷ್ಣನು ಗೋಪಾಲ ರೂಪದಿಂದ ನಡೆಸಿದ ಅದ್ಭುತ ಲೀಲಾಮೃತವನ್ನು ಎಷ್ಟು ಕುಡಿ ದರೂ ತೃಪ್ತಿಯುಂಟಾಗುವುದಿಲ್ಲ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಯಮುನಾನದಿಯಲ್ಲಿ ಕಾಲಿಯನಾಗಕ್ಕೆ ನೆಲೆಯಾದ ಒಂದು ಕುಂಡವಿತ್ತು. ಅದರ ನೀರು ವಿಷದಿಂದ ಕುದಿಯುತ್ತಿತ್ತು. ಆ ಕುಂಡದ ಮೇಲೆ ಹಾರಿ ಹೋಗುತ್ತಿದ್ದ ಪಕ್ಷಿಗಳು ವಿಷದ ವೇಗವನ್ನು ತಾಳಲಾರದೆ ಕುಂಡದಲ್ಲೇ ಸತ್ತು ಬೀಳುತ್ತಿದ್ದವು. ॥ ೪ ॥ ಅಲೆಗಳ ಮೂಲಕವಾಗಿ ಹೊರಬಂದ ತುಂತುರುಗಳಿಂದ ಕೂಡಿದ ವಿಷದ ಗಾಳಿಯು ತೀರಪ್ರದೇಶದಲ್ಲಿ ಬೀಸಿ ಅಲ್ಲಿದ್ದ ಮರ-ಬಳ್ಳಿಗಳು ಸುಟ್ಟುಹೋಗಿ, ಪಶು-ಪಕ್ಷಿಗಳು ಸತ್ತು ಹೋಗುತ್ತಿದ್ದವು. ॥ ೫ ॥ ಪರೀಕ್ಷಿತನೇ! ದುಷ್ಟರದಮನಕ್ಕಾಗಿಯೇ ಅವತರಿಸಿದ್ದ ಭಗವಂತನು ಸರ್ಪದ ವಿಷವು ಪ್ರಚಂಡವಾಗಿರುವುದನ್ನು, ಭಯಂಕರವಾದ ಆ ವಿಷವೇ ಕಾಳಿಯ ಸರ್ಪದ ಬಲವಾಗಿರುವುದೆಂಬುದನ್ನೂ, ಆ ಕಾರಣದಿಂದಲೇ ತಾನು ವಿಹರಿಸುವ ಯಮುನೆಯ ಜಲವೂ ವಿಷದಿಂದ ದೂಷಿತವಾಗಿರುವುದೆಂಬುದನ್ನು ತಿಳಿದುಕೊಂಡನು. ಆಗ ಭಗವಾನ್ ಶ್ರೀಕೃಷ್ಣನು ಸೊಂಟಕ್ಕೆ ದಟ್ಟಿಯನ್ನು ಬಿಗಿದು ಒಂದು ಎತ್ತರವಾದ ಕದಂಬ ವೃಕ್ಷದ ಮೇಲೇರಿ ಕೈಗಳಿಂದ ಎರಡೂ ಭುಜಗಳನ್ನು ತಟ್ಟಿಕೊಳ್ಳುತ್ತಾ ಮಡುವಿನೊಳಗೆ ಧುಮುಕಿದನು. ॥ ೬ ॥ ಯಮುನೆಯ ನೀರು ಸರ್ಪದ ವಿಷದಿಂದ ಮೊದಲೇ ಕುದಿದು ಉಕ್ಕುತ್ತಿತ್ತು. ಅದರ ತೆರೆಗಳು ಕೆಂಪು-ಹಳದಿಯಾಗಿದ್ದು ಅತ್ಯಂತ ಭಯಂಕರವಾಗಿ ಮೇಲೆಳುತ್ತಿದ್ದುವು. ಪುರುಷೋತ್ತಮ ನಾದ ಭಗವಾನ್ ಶ್ರೀಕೃಷ್ಣನು ಹಾರಿದ್ದರಿಂದ ಅದರ ನೀರು ಇನ್ನು ಹೆಚ್ಚು ಉಕ್ಕತೊಡಗಿತು. ಆಗಲಾದರೋ ಕಾಳಿಯ ಮಡುವಿನ ನೀರು ಅತ್ತ-ಇತ್ತ ಹಾರಿ ನೂರು ಗಜಗಳಷ್ಟು ಹರಡಿಕೊಂಡಿತು. ಅಚಿಂತ್ಯ ಅನಂತ ಬಲಶಾಲಿಯಾದ ಭಗವಾನ್ ಶ್ರೀಕೃಷ್ಣನಿಗಾಗಿ ಇದರಲ್ಲಿ ಯಾವುದೇ ಆಶ್ಚರ್ಯದ ವಿಷಯವಾಗಿರಲಿಲ್ಲ ॥ ೭ ॥

ತಸ್ಯ ಹ್ರದೇ ವಿಹರತೋ ಭುಜದಂಡಘೂರ್ಣ-
ವಾಘೋ೯ಷಮಂಗ ವರವಾರಣವಿಕ್ರಮಸ್ಯ ।
ಆಶ್ರುತ್ಯ ತತ್ಸ್ವಸದನಾಭಿಭವಂ ನಿರೀಕ್ಷ್ಯ
ಚಕ್ಷುಃಶ್ರವಾಃ ಸಮಸರತ್ತದಮೃಷ್ಯಮಾಣಃ ॥ ೮ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಕಾಲಿಯ ಮಡುವಿಗೆ ಹಾರಿ ಅತುಲ ಬಲಶಾಲಿಯಾದ ಮತ್ತಗಜದಂತೆ ನೀರನ್ನು ಬಡಿಯತೊಡಗಿದನು. ಹೀಗೆ ಜಲಕ್ರೀಡೆಯಾಡುತ್ತಾ ಅವನ ಭುಜಗಳ ಬಡಿತದಿಂದ ನೀರಿನಲ್ಲಿ ಜೋರಾದ ಶಬ್ದವಾಗತೊಡಗಿತು. ಕಣ್ಣಿಂದಲೇ ಕೇಳುವ ಕಾಳಿಯ ಸರ್ಪನಿಗೆ ಆ ಶಬ್ದವನ್ನು ಕೇಳಿ, ಯಾರೋ ನನ್ನ ನಿವಾಸಸ್ಥಾನವನ್ನು ತಿರಸ್ಕರಿಸುತ್ತಿದ್ದಾನೆಂದು ತಿಳಿಯಿತು. ಇದನ್ನು ಸಹಿಸಲಾಗದೆ ಕಾಳಿಯನು ಕುಪಿತನಾಗಿ ಶ್ರೀಕೃಷ್ಣನ ಮುಂದೆ ಬಂದನು. ॥ ೮ ॥ ಎದುರಿಗೆ ಶ್ಯಾಮಲವರ್ಣದ ಬಾಲಕನನ್ನು ನೋಡಿದನು. ವರ್ಷಾಕಾಲದ ಮೇಘದಂತೆ ಅತ್ಯಂತ ಸುಕುಮಾರ ಶರೀರವಿದ್ದು ಪುನಃ ಪುನಃ ನೋಡಬೇಕೆನ್ನುವಷ್ಟು ಸೌಂದರ್ಯವು ಅವನಲ್ಲಿತ್ತು. ಅವನ ವಕ್ಷಸ್ಥಳದಲ್ಲಿ ಸ್ವರ್ಣ ರೇಖೆಯಂತೆ ಶ್ರೀವತ್ಸದ ಚಿಹ್ನೆಯಿದ್ದು, ಪೀತಾಂಬರವನ್ನು ಧರಿಸಿದ್ದನು. ಅವನ ಸುಂದರವಾದ ಮುಖಾರವಿಂದದಿಂದ ಸುಮಧುರವಾದ ಮಂದಹಾಸವು ಹೊರಸೂಸುತ್ತಿತ್ತು. ಅವನ ಹೊಕ್ಕುಳು ಮತ್ತು ಪಾದಗಳು ಕಮಲ ಪುಷ್ಪದ ಕರ್ಣಿಕೆಯಂತೆ ಕೋಮಲ ಸುಮನೋಹರವಾಗಿದ್ದವು. ಯಾವ ವಿಧವಾದ ಭಯವು ಇಲ್ಲದೆ ಆ ಸುಂದರ ಬಾಲಕನು ನೀರಿನಲ್ಲಿ ತೊಳಲಾಡುತ್ತಿದ್ದನು. ಇಂತಹ ತಿರಸ್ಕಾರವನ್ನು ಕಂಡ ಸರ್ಪರಾಜನ ಕೋಪವು ನೆತ್ತಿಗೇರಿತು. ಅವನು ಶ್ರೀಕೃಷ್ಣನ ಮರ್ಮಸ್ಥಾನದಲ್ಲಿ ಬಲವಾಗಿ ಕಚ್ಚಿ ತನ್ನ ಶರೀರದಿಂದ ಅವನನ್ನು ಬಂಧಿಸಿದನು. ॥ ೯ ॥

ತಂ ಪ್ರೇಕ್ಷಣೀಯ ಸುಕುಮಾರಘನಾವದಾತಂ
ಶ್ರೀವತ್ಸಪೀತವಸನಂ ಸ್ಮಿತಸುಂದರಾಸ್ಯಮ್ ।
ಕ್ರೀಡಚ್ಛತಮಪ್ರತಿಭಯಂ ಕಮಲೋದರಾಂಘ್ರಿಂ
ಸಂದಶ್ಯ ಮರ್ಮಸು ರುಷಾ ಭುಜಯಾ ಚಖಾದ ॥ ೯ ॥

ಭಗವಾನ್ ಶ್ರೀಕೃಷ್ಣನು ನಾಗಪಾಶದಿಂದ ಬಂಧಿತನಾಗಿ ನಿಶ್ಚೇಷ್ಟಿತನಾದನು. ಇದನ್ನು ನೋಡಿದ ಅವನ ಪ್ರಾಣಪ್ರಿಯರಾದ ಗೋಪಬಾಲಕರು

ತಂ ನಾಗಭೋಗಪರಿವೀತಮದೃಷ್ಟಚೇಷ್ಟ-
ಮಾಲೋಕ್ಯ ತತ್ಪ್ರಿಯಸಖಾಃ ಪಶುಪಾ ಭೃಶಾರ್ತಾಃ ।
ಕೃಷ್ಣೇऽರ್ಪಿತಾತ್ಮಸುಹೃದರ್ಥಕಲತ್ರಕಾಮಾ
ದುಃಖಾನುಶೋಕಭಯಮೂಢಧಿಯೋ ನಿಪೇತುಃ ॥ ೧೦ ॥

ಬಹಳವಾಗಿ ಸಂಕಟಪಟ್ಟರು. ದುಃಖ-ಪಶ್ಚಾತ್ತಾಪ-ಭಯಗಳಿಂದ ಮೂರ್ಛಿತರಾಗಿ ಕೆಳಗೆ ಬಿದ್ದರು. ಏಕೆಂದರೆ, ಅವರು ತಮ್ಮ ಶರೀರ, ಬಂಧುಗಳು, ಮಿತ್ರರು, ಧನಸಂಪತ್ತು, ಪುತ್ರ, ಕಳತ್ರರು, ಭೋಗಗಳು ಮತ್ತು ಸಮಸ್ತ ಕಾಮನೆಗಳು - ಇವೆಲ್ಲವನ್ನು ಭಗವಾನ್ ಶ್ರೀಕೃಷ್ಣನಿಗೆ ಸಮರ್ಪಿಸಿ ಬಿಟ್ಟಿದ್ದರು. ॥ ೧೦ ॥ ಹಸುಗಳು, ಎತ್ತುಗಳು, ಕರುಗಳು, ಎಳೆಗರುಗಳು ಹೀಗೆ ಎಲ್ಲವೂ ಸರ್ಪಪಾಶದಿಂದ ಕಟ್ಟಲ್ಪಟ್ಟ ಬಾಲಕೃಷ್ಣನನ್ನು ದಿಟ್ಟಿಸಿ ನೋಡುತ್ತಾ ಅಪರಿಮಿತವಾದ ದುಃಖದಿಂದ ಕಿರುಚಿಕೊಳ್ಳುತ್ತಿದ್ದವು. ಭಯಗೊಂಡು ಅಳುತ್ತಿವೆಯೋ ಎಂಬಂತೆ ಸ್ವಲ್ಪವೂ ಕದಲದೆ ನಿಂತಿದ್ದವು. ॥ ೧೧ ॥

ಗಾವೋ ವೃಷಾ ವತ್ಸತರ್ಯಃ ಕ್ರಂದಮಾನಾಃ ಸುದುಃಖಿತಾಃ ।
ಕೃಷ್ಣೇ ನ್ಯಸ್ತೇಕ್ಷಣಾ ಭೀತಾ ರುದತ್ಯ ಇವ ತಸ್ಥಿರೇ ॥ ೧೧ ॥

ಅತ್ತ ಗೋಕುಲದಲ್ಲಿ ಭಯವು ಸನ್ನಿಹಿತವಾಗುವುದೆಂಬುದನ್ನು ಸೂಚಿಸುವ ಮೂರು ಬಗೆಯ ದಾರುಣವಾದ ಮಹೋತ್ಪಾತಗಳು ಕಾಣಿಸಿಕೊಂಡವು. ಭೂಮಿಯು ಕಂಪಿಸಿತು, ಅಂತರಿಕ್ಷದಿಂದ ಉಲ್ಕೆಗಳು ಬೀಳತೊಡಗಿದವು. ಪುರುಷರ ಎಡ ಅಂಗಗಳು, ಸ್ತ್ರೀಯರ ಬಲ ಅಂಗಗಳೂ ಅದರು ತೊಡಗಿದವು. ॥ ೧೨ ॥

ಅಥ ವ್ರಜೇ ಮಹೋತ್ಪಾತಾಸ್ತ್ರಿವಿಧಾ ಹ್ಯತಿದಾರುಣಾಃ ।
ಉತ್ಪೇತುರ್ಭುವಿ ದಿವ್ಯಾತ್ಮನ್ಯಾಸನ್ನಭಯಶಂಸಿನಃ ॥ ೧೨ ॥

ನಂದ ಗೋಪನೇ ಮೊದಲಾದವರು ಮಹೋತ್ಪಾತಗಳನ್ನು ನೋಡಿ ಭಯದಿಂದ ಉದ್ವಿಗ್ನರಾದರು. ಬಲರಾಮನನ್ನು ಬಿಟ್ಟು ಶ್ರೀಕೃಷ್ಣನೊಬ್ಬನೇ ಹಸುಗಳನ್ನು ಮೇಯಿಸಲು ಹೋಗಿರುವನೆಂದು ತಿಳಿದ ಬಳಿಕ ಅವರ ಭಯವು ಮತ್ತಷ್ಟು ಉಲ್ಬಣಿಸಿತು. ॥ ೧೩ ॥ ಅವರು ಭಗವಂತನ ಮಹಿಮೆಯನ್ನು ತಿಳಿಯುತ್ತಿರಲಿಲ್ಲ. ಅದಕ್ಕಾಗಿ ಆ ಅಪಶಕುನಗಳನ್ನು ನೋಡಿ - ಇಂದು ಶ್ರೀಕೃಷ್ಣನಿಗೆ ಮೃತ್ಯುವೇ

ತಾನಾಲಕ್ಷ್ಯ ಭಯೋದ್ವಿಗ್ನಾ ಗೋಪಾ ನಂದಪುರೋಗಮಾಃ ।
ವಿನಾ ರಾಮೇಣ ಗಾಃ ಕೃಷ್ಣಂ ಜ್ಞಾತ್ವಾಚಾರಯಿತುಂ ಗತಮ್ ॥ ೧೩ ॥

ತೈರ್ದುರ್ನಿಮಿತ್ತೈರ್ನಿಧನಂ ಮತ್ವಾ ಪ್ರಾಪ್ತಮತದ್ವಿದಃ ।
ತತ್ಪ್ರಾಣಾಸ್ತನ್ಮನಸ್ಕಾಸ್ತೇ ದುಃಖಶೋಕಭಯಾತುರಾಃ
॥ ೧೪ ॥

ಆಬಾಲವೃದ್ಧವನಿತಾಃ ಸರ್ವೇಽಂಗ ಪಶುವೃತ್ತಯಃ ।
ನಿರ್ಜಗ್ಮುರ್ಗೋಕುಲಾದ್ದೀನಾಃ ಕೃಷ್ಣದರ್ಶನಲಾಲಸಾಃ
॥ ೧೫ ॥

ತಾಂಸ್ತಥಾ ಕಾತರಾನ್ವೀಕ್ಷ್ಯ ಭಗವಾನ್ಮಾಧವೋ ಬಲಃ ।
ಪ್ರಹಸ್ಯ ಕಿಂಚಿನ್ನೋವಾಚ ಪ್ರಭಾವಜ್ಞೋಽನುಜಸ್ಯ ಸಃ
॥ ೧೬ ॥

ತೇಽನ್ವೇಷಮಾಣಾ ದಯಿತಂ ಕೃಷ್ಣಂ ಸೂಚಿತಯಾ ಪದೈಃ ।
ಭಗವಲ್ಲಕ್ಷಣೈರ್ಜಗ್ಮುಃ ಪದವ್ಯಾ ಯಮುನಾತಟಮ್
॥ ೧೭ ॥

ತೇ ತತ್ರ ತತ್ರಾಬ್ಜಯವಾಂಕುಶಾಶನಿ-
ಧ್ವಜೋಪಪನ್ನಾನಿ ಪದಾನಿ ವಿಶ್ವತೇಃ ।
ಮಾರ್ಗೇ ಗವಾಮನ್ಯಪದಾಂತರಾಂತರೇ
ನಿರೀಕ್ಷಮಾಣಾ ಯಯುರಂಗ ಸತ್ವರಾಃ ॥ ೧೮ ॥

ಅಂತರ್ಹೃದೇ ಭುಜಗಭೋಗಪರೀತಮಾರಾತ್
ಕೃಷ್ಣಂ ನಿರೀಹಮುಪಲಭ್ಯ ಜಲಾಶಯಾಂತೇ ।
ಗೋಪಾಂಶ್ಚಮೂಢಧಿಷಣಾನ್ಪರಿತಃ ಪಶೂಂಶ್ಚ
ಸಂಕ್ರಂದತಃ ಪರಮಕಶ್ಮಲಮಾಪುರಾರ್ತಾಃ ॥ ೧೯ ॥

ಸೋಽಪ್ಯೇಽನುರಕ್ತಮನಸೋ ಭಗವತ್ಯನಂತೇ
ತತ್ಸೌಹೃದಸ್ಮಿತವಿಲೋಕಗಿರಃ ಸ್ಮರಂತ್ಯಃ ।
ಗ್ರಸ್ತೇಽಹಿನಾ ಪ್ರಿಯತಮೇ ಭೃಶದುಃಖಿತಪ್ತಾಃ
ಶೂನ್ಯಂ ಪ್ರಿಯವ್ಯತಿಹೃತಂ ದದೃಶುಸ್ತ್ರಿಲೋಕಮ್ ॥ ೨೦ ॥

ಸಂಭವಿಸಬಹುದೆಂದು ಅವರ ಮನಸ್ಸಿಗೆ ಅನಿಸಿತು. ಅವರು ಆ ಕ್ಷಣವೇ ದುಃಖ, ಶೋಕ, ಭಯದಿಂದ ಆತುರರಾದರು. ಶ್ರೀಕೃಷ್ಣನೇ ಅವರಿಗೆ ಪಂಚಪ್ರಾಣವಾಗಿದ್ದನು. ಅವರ ಮನಸ್ಸು ಯಾವಾಗಲೂ ಅವನಲ್ಲೇ ಲೀನವಾಗಿ ಬಿಟ್ಟಿತ್ತು. ॥ ೧೪ ॥ ಪ್ರಿಯ ಪರೀಕ್ಷಿತನೇ ! ವ್ರಜದ ಬಾಲಕ, ವೃದ್ಧ ಸ್ತ್ರೀಯರ ಸ್ವಭಾವವೂ ಹಸುಗಳಂತೆ ವಾತ್ಸಲ್ಯಪೂರ್ಣವಾಗಿತ್ತು. ಮನಸ್ಸಿಗೆ ಹೀಗೆ ಅನಿಸುತ್ತಲೇ ಅವರು ಅತ್ಯಂತ ದುಃಖಿತರಾಗಿ ತಮ್ಮ ಪ್ರಿಯ ಮುದ್ದು ಕಂದಮ್ಮನನ್ನು ನೋಡಲು ಉತ್ಕಟ ಇಚ್ಛೆಯಿಂದ ಮನೆ-ಮಠ ಬಿಟ್ಟು ಹೊರಟೇ ಬಿಟ್ಟರು. ॥ ೧೫ ॥ ಬಲರಾಮನು ಸಾಕ್ಷಾತ್ ಭಗವಂತನ ಸ್ವರೂಪನೇ ಆಗಿದ್ದು ಸರ್ವಶಕ್ತನಾಗಿದ್ದನು. ವ್ರಜವಾಸಿಗಳು ಇಷ್ಟೊಂದು ಕಾತುರ ಮತ್ತು ಆತುರರಾಗಿರುವುದನ್ನು ನೋಡಿ ಅವನಿಗೆ ನಗುಬಂತು. ಆದರೆ ಅವನು ಏನೂ ಮಾತನಾಡದೆ ಸುಮ್ಮನೆ ಇದ್ದನು. ಏಕೆಂದರೆ, ಅವನು ತನ್ನ ತಮ್ಮನಾದ ಶ್ರೀಕೃಷ್ಣನ ಮಹಿಮೆಯನ್ನು ಚೆನ್ನಾಗಿ ತಿಳಿದಿದ್ದನು. ॥ ೧೬ ॥ ಅನಂತರ ವ್ರಜವಾಸಿಗಳು ತಮಗೆ ಅತ್ಯಂತ ಪ್ರಿಯನಾದ ಶ್ರೀಕೃಷ್ಣನನ್ನು ಹುಡುಕಲು ತೊಡಗಿದರು. ಹುಡುಕಲು ಅವರಿಗೆ ಅಷ್ಟೇನೂ ಕಷ್ಟವಾಗಲಿಲ್ಲ. ಭಗವಂತನಿಟ್ಟಿದ್ದ ಕಮಲ, ಅಂಕುಶಾದಿ ವಿಶೇಷ ಲಕ್ಷಣಗಳುಳ್ಳ ಹೆಜ್ಜೆಗಳನ್ನು ಅನುಸರಿಸಿ ಹೋದರು. ಹೀಗೆ ಅವು ಅವರನ್ನು ಯಮುನಾನದಿಯ ತೀರಕ್ಕೆ ಒಯ್ದುವು. ॥ ೧೭ ॥

ಪರೀಕ್ಷಿತನೇ ! ಮಾರ್ಗದಲ್ಲಿ ಹೋಗುತ್ತಿದ್ದಾಗ ಗೋವುಗಳ, ಕರುಗಳ, ಗೋಪಬಾಲಕರ ಹೆಜ್ಜೆಗಳ ನಡು-ನಡುವೆ ಭಗವಂತನ ಕಮಲ, ಯವ, ಅಂಕುಶ, ವಜ್ರಾಯುಧ, ಧ್ವಜಗಳ ಚಿಹ್ನೆಗಳಿಂದ ಕೂಡಿದ ಹೆಜ್ಜೆಗಳ ಗುರುತೂ ಸ್ಪಷ್ಟವಾಗಿ ಕಾಣಿಸುತ್ತಿದ್ದಿತು. ಅದನ್ನು ನೋಡಿಕೊಂಡು ಅದನ್ನೇ ಅನುಸರಿಸಿ ಗೋವಳರು ಅವಸರದಿಂದ ಯಮುನಾತೀರಕ್ಕೆ ಹೋದರು. ॥ ೧೮ ॥ ದೂರದಿಂದಲೇ ಅವರು ಶ್ರೀಕೃಷ್ಣನು ಕಾಳಿಯ ಸರ್ಪದಿಂದ ಬಂಧಿಸಲ್ಪಟ್ಟು ನಿಶ್ಚೇಷ್ಟನಾಗಿರುವುದನ್ನು ನೋಡಿದರು. ಮಡುವಿನ ಸಮೀಪದಲ್ಲಿ ಗೋಪ ಬಾಲಕರೂ, ಮೂರ್ಛಿತರಾಗಿ ಬಿದ್ದಿರುವುದನ್ನು, ಹಸುಗಳೂ ಎತ್ತುಗಳೂ-ಕರುಗಳೂ ಕುಂಡದ ಸುತ್ತಲೂ ನಿಂತು ಆರ್ತನಾದವನ್ನು ಮಾಡುತ್ತಿರುವುದನ್ನು ನೋಡಿದರು. ಇದೆಲ್ಲವನ್ನು ನೋಡಿದ ನಂದಗೋಪಾದಿಗಳು ಅತ್ಯಂತ ವ್ಯಾಕುಲರಾಗಿ ಕೊನೆಗೆ ಮೂರ್ಛಿತರಾಗಿ ಬಿದ್ದರು. ॥ ೧೯ ॥ ಗೋಪಿಯರ ಸಂಕಟವಂತೂ ವರ್ಣಿಸಲು ಅಸದಳವಾದದ್ದು. ಭಗವಂತನಾದ ಅನಂತನಲ್ಲಿಯೇ ಅವರ ಮನಸ್ಸು ಅನುರಕ್ತವಾಗಿದ್ದಿತು. ನಿತ್ಯ ನಿರಂತರವಾದ ಭಗವಂತನ ಸೌಹಾರ್ದ, ಅವನ ಸುಮಧುರ ಮಂದಹಾಸ, ಪ್ರೇಮಪೂರ್ಣವಾದ ಮನಸ್ಸನ್ನು ಸೆಳೆಯುವ ಕುಡಿನೋಟ, ಅವನ ಸುಮಧುರವಾದ ವಾಣಿ ಇವೆಲ್ಲವನ್ನೂ ಗೋಪಿಯರು ಒಂದೊಂದಾಗಿ ಸ್ಮರಿಸಿಕೊಂಡರು. ತಮ್ಮ ಪ್ರಿಯತಮನಾದ ಶ್ಯಾಮಸುಂದರನು ಸರ್ಪಪಾಶದಿಂದ ಬಂಧಿತನಾಗಿರುವುದನ್ನು ನೋಡಿ ದೊಡನೆಯೇ ಅಸಹನೀಯವಾದ ದುಃಖದಿಂದ ಪರಿತಪಿಸಿದರು. ಅವರ ಹೊಟ್ಟೆಗೆ ಬೆಂಕಿ ಬಿದ್ದಂತಾಯಿತು. ಪ್ರಿಯತಮನಾದ ಶ್ರೀಕೃಷ್ಣನಿಲ್ಲದ ಮೂರು ಲೋಕಗಳೂ ಅವರಿಗೆ ಶೂನ್ಯವಾಗಿ ಕಂಡಿತು. ॥ ೨೦ ॥

ತಾಃ ಕೃಷ್ಣಮಾತರಮಪತ್ಯಮನುಪ್ರವಿಷ್ಟಾಂ
ತುಲ್ಯವ್ಯಥಾಃ ಸಮನುಗೃಹ್ಯ ಶುಚಃ ಸ್ರವಂತ್ಯಃ ।
ತಾಸ್ತಾ ವ್ರಜಪ್ರಿಯಕಥಾಃ ಕಥಯಂತ್ಯ ಆಸನ್
ಕೃಷ್ಣಾನನೇಽರ್ಪಿತದೃಶೋ ಮೃತಕಪ್ರತೀಕಾಃ ॥ ೨೧ ॥

ತಾಯಿಯಾದ ಯಶೋದೆಯಂತೂ ತಾನು ಮಡುವಿಗೆ ಬಿದ್ದು ಬಿಡುವೆನೆಂದೇ ಧಾವಿಸಿದಳು. ಆದರೆ ಇತರ ಗೋಪಿಯರು ಆಕೆಯನ್ನು ತಡೆದರು. ಇತರ ಗೋಪಿಯರಿಗೂ ಕೃಷ್ಣನಿಲ್ಲದ ದುಃಖವು ಯಶೋದೆಯ ದುಃಖಕ್ಕಿಂತ ಕಡಿಮೆಯಾಗಿರಲಿಲ್ಲ. ಅವರ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಸುರಿಯುತ್ತಿತ್ತು. ಎಲ್ಲರ ಕಣ್ಣುಗಳೂ ಶ್ರೀಕೃಷ್ಣನಲ್ಲಿಯೇ ಕೇಂದ್ರಿಕೃತವಾಗಿದ್ದವು. ಕೆಲವು ಗೋಪಿಯರು ಪೂತನಾವಧೆ, ತೃಣಾವರ್ತಸಂಹಾರ, ಬಕಾಸುರಸಂಹಾರ, ಇವೇ ಮುಂತಾದ ಕಥೆಗಳನ್ನು ಹೇಳಿಕೊಂಡು ಯಶೋದೆಗೆ ಧೈರ್ಯ ತುಂಬುತ್ತಿದ್ದರು. ಆದರೆ ಹೆಚ್ಚು ಜನರು ಜೀವವಿಲ್ಲದ ಶವಗಳಂತೆಯೇ ಆಗಿಬಿಟ್ಟಿದ್ದರು. ॥ ೨೧ ॥ ಪರೀಕ್ಷಿತನೇ ! ಶ್ರೀಕೃಷ್ಣನೇ ತಮ್ಮ ಪಂಚಪ್ರಾಣವೆಂದು ಭಾವಿಸಿಕೊಂಡಿದ್ದ ನಂದನೇ ಮೊದಲಾದ ಗೋಪರು ಮೂರ್ಛೆಯು ತಿಳಿದೊಡನೆಯೇ ಶ್ರೀಕೃಷ್ಣನಿದ್ದ ಕುಂಡಕ್ಕೆ ಧುಮುಕಲು ಮುಂದಾದರು. ಆದರೆ ಬಲರಾಮನು ಶ್ರೀಕೃಷ್ಣನ ಮಹಿಮೆಯನ್ನು ಚೆನ್ನಾಗಿ ತಿಳಿದವನಾದ್ದರಿಂದ ಹಾಗೆ ಕುಂಡಕ್ಕೆ ಧುಮುಕದಂತೆ ಅವರೆಲ್ಲರನ್ನು ತಡೆದನು. ॥ ೨೨ ॥

ಕೃಷ್ಣಪ್ರಾಣಾನ್ನಿರ್ವಿಶತೋ ನಂದಾದೀನ್ವೀಕ್ಷ್ಯ ತಂ ಹ್ರದಮ್ ।
ಪ್ರತ್ಯಷೇಧತ್ಸ ಭಗವಾನ್ರಾಮಃ ಕೃಷ್ಣಾನುಭಾವವಿತ್
॥ ೨೨ ॥

ಇತ್ಥಂ ಸ್ವಗೋಕುಲಮನನ್ಯಗತಿಂ ನಿರೀಕ್ಷ್ಯ
ಸಸ್ತ್ರೀಕುಮಾರಮತಿದುಃಖಿತಮಾತ್ಮಹೇತೋಃ ।
ಆಜ್ಞಾಯ ಮರ್ತ್ಯಪದವೀಮನುವರ್ತಮಾನಃ
ಸ್ಥಿತ್ವಾಮುಹೂರ್ತಮುದತಿಷ್ಠದುರಂಗಬಂಧಾತ್ ॥ ೨೩ ॥

ಪರೀಕ್ಷಿತನೇ ! ಸರ್ಪದ ಬಂಧನಕ್ಕೆ ಒಳಪಟ್ಟಿದ್ದು ಶ್ರೀಕೃಷ್ಣನ ಒಂದು ಮಾನುಷ ಲೀಲೆಯೇ ಆಗಿತ್ತು. ವ್ರಜದ ಎಲ್ಲ ಜನರು ಸ್ತ್ರೀಯರೂ ಮಕ್ಕಳಾದಿಯಾಗಿ ನನಗಾಗಿ ಹೀಗೆ ಅತ್ಯಂತ ದುಃಖಿತರಾಗಿದ್ದಾರೆ, ಇವರಿಗೆ ನಿಜವಾಗಿಯೂ ನಾನಲ್ಲದೆ ಬೇರೆ ಯಾವುದೇ ಆಸರೆಯೂ ಇಲ್ಲವೆಂದು ತಿಳಿದಾಗ ಒಂದು ಮುಹೂರ್ತಕಾಲ ಸರ್ಪದ ಬಂಧನದಲ್ಲಿದ್ದು ಹೊರಕ್ಕೆ ಬಂದನು. ॥ ೨೩ ॥ ಭಗವಾನ್ ಶ್ರೀಕೃಷ್ಣನು ಆ ಸಮಯದಲ್ಲಿ ತನ್ನ ಶರೀರವನ್ನು ಹಿಗ್ಗಿಸಿ ಕೊಂಡನು. ಇದರಿಂದ ಸರ್ಪದ ಶರೀರವು ತುಂಡಾಗುವುದೋ ಎಂದೆನಿಸಿ ಅದು ಕೃಷ್ಣನನ್ನು ಬಿಟ್ಟು ದೂರಹೋಗಿ ನಿಂತಿತು. ಹೆಡೆಯನ್ನು ಬಿಚ್ಚಿಕೊಂಡು ಅತಿರೋಷದಿಂದ ವಿಷದ ಬಾಣಗಳಂತೆ ಮೂಗಿನ ಹೊಳ್ಳೆಗಳಿಂದ ನಿಟ್ಟುಸಿರನ್ನು ಬಿಡುತ್ತಾ ಸ್ವಲ್ಪವಾದರೂ ಅಲುಗಾಡದೆ ಉರಿಯುವ ಪಂಜಿನಂತಹ ಕಣ್ಣುಗಳಿಂದ ಶ್ರೀಕೃಷ್ಣನನ್ನು ದಿಟ್ಟಿಸಿ ನೋಡುತ್ತಾ ಸಟೆದು ನಿಂತನು. ॥ ೨೪ ॥ ಕಾಳಿಯನು ಅತ್ಯಂತ ಕಂಪಿತನಾಗಿ ತನ್ನ ಹೆಡೆಗಳಲ್ಲಿದ್ದ ಎರಡೆರಡು ನಾಲಿಗೆಗಳಿಂದ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿದ್ದನು. ಭಯಂಕರವಾದ ಕಣ್ಣುಗಳಿಂದ ವಿಷದ ಜ್ವಾಲೆಗಳನ್ನು ಕಾರುತ್ತಿದ್ದನು. ಆಕಾಶದಲ್ಲಿ ಹಾರಾಡುತ್ತಿರುವ ಗರುಡನು ಭೂಮಿಯ ಮೇಲಿರುವ ಹಾವನ್ನು ಹಿಡಿಯಲು ಹೊಂಚು ಹಾಕುವಂತೆ ಶ್ರೀಕೃಷ್ಣನು ಸರ್ಪವನ್ನು ಹಿಡಿಯಲು ಹೊಂಚುಹಾಕುತ್ತಾ ಅದರ ಸುತ್ತಲೂ ತಿರುಗುತ್ತಿದ್ದನು. ಅಂತೆಯೇ ಕಾಳಿಯನೂ ಶ್ರೀಕೃಷ್ಣನನ್ನು ಬಗ್ಗುಬಡಿಯಲು ಹೊಂಚುಹಾಕುತ್ತಾ ಸುತ್ತಲೂ ಸುತ್ತುತ್ತಿದ್ದನು. ॥ ೨೫ ॥ ಹೀಗೆ ಪರಸ್ಪರ ಒಬ್ಬರು ಮತ್ತೊಬ್ಬರನ್ನು ಹಿಡಿಯಲು ಸುತ್ತುತ್ತಿರುವಾಗ ಕಾಳಿಯನ ಬಲವು ಕ್ಷೀಣಿಸುತ್ತಾ ಬಂತು. ಇದೇ ಸಮಯವನ್ನು ಕಾಯುತ್ತಿದ್ದ ಶ್ರೀಕೃಷ್ಣನು ಸರ್ಪದ ದೊಡ್ಡ-ದೊಡ್ಡ ಹೆಡೆಗಳನ್ನು ಸ್ವಲ್ಪ ಬಗ್ಗಿಸಿ ಛಂಗನೆ ಅವುಗಳ ಮೇಲೆ ಹತ್ತಿದನು. ಕಾಳಿಯನ ಹೆಡೆಗಳಲ್ಲಿದ್ದ ಥಳಥಳಿಸುತ್ತಿದ್ದ ಕೆಂಪು ರತ್ನಗಳು ಶ್ರೀಕೃಷ್ಣನಪಾದಗಳನ್ನು ಬೆಳಗತೊಡಗಿದವು. ರತ್ನಗಳ ಕಾಂತಿಯಿಂದ ಶ್ರೀಕೃಷ್ಣನ ಪಾದಗಳು ಮತ್ತಷ್ಟು ಕೆಂಪಾಗಿ ಕಂಡವು. ಆ ರತ್ನಗಳ ಬೆಳಕಿನಲ್ಲಿ ಸಮಸ್ತ ಕಲೆಗಳಿಗೂ ಆದಿ ಪ್ರವರ್ತಕನಾದ ಶ್ರೀಕೃಷ್ಣನು ನಾನಾ ಭಂಗಿಗಳಲ್ಲಿ ನೃತ್ಯವಾಡತೊಡಗಿದನು. ॥ ೨೬ ॥

ತತ್ಪ್ರಥ್ಯಮಾನವಪುಷಾ ವ್ಯಥಿತಾತ್ಮಭೋಗ-
ಸ್ತ್ಯಕ್ತ್ವೋನ್ನಮಯ್ಯ ಕುಪಿತಃ ಸ್ವಫಣಾನ್ಭುಜಂಗಃ ।
ತಸ್ಥೌ ಶ್ವಸಞ್ಛ್ವಸನರಂಧ್ರವಿಷಾಂಬರೀಷ-
ಸ್ತಬ್ಧೇಕ್ಷಣೋಲ್ಮುಕಮುಖೋ ಹರಿಮೀಕ್ಷಮಾಣಃ ॥ ೨೪ ॥

ತಂ ಜಿಹ್ವಯಾ ದ್ವಿಶಿಖಯಾ ಪರಿಲೇಲಿಹಾನಂ
ದ್ವೇ ಸೃಕ್ವಣೇ ಹ್ಯತಿಕರಾಲವಿಷಾಗ್ನಿದೃಷ್ಟಿಮ್ ।
ಕ್ರೀಡನ್ನಮುಂ ಪರಿಸಸಾರ ಯಥಾ ಖಗೇಂದ್ರೋ
ಬಭ್ರಾಮ ಸೋಽಪ್ಯವಸರಂ ಪ್ರಸಮೀಕ್ಷಮಾಣಃ ॥ ೨೫ ॥

ಏವಂ ಪರಿಭ್ರಮಹತೌಜಸಮುನ್ನತಾಂಸ-
ಮಾನಮ್ಯ ತತ್ಪೃಥುತರಸ್ವಧಿರೂಢ ಆದ್ಯಃ ।
ತನ್ಮೂರ್ಧರತ್ನನಿಕರಸ್ಪರ್ಶಾತಿತಾಮ್ರ-
ಪಾದಾಂಬುಜೋಽಖಿಲಕಲಾದಿಗುರುರ್ನನರ್ತ ॥ ೨೬ ॥

ತಂ ನರ್ತುಮುದ್ಯತಮವೇಕ್ಷ್ಯ ತದಾ ತದೀಯ-
ಗಂಧರ್ವಸಿದ್ಧಸುರಚಾರಣದೇವವಧ್ವಃ ।
ಪ್ರೀತ್ಯಾ ಮೃದಂಗಪಣವಾನಕವಾದ್ಯಗೀತ-
ಪುಷ್ಪೋಪಹಾರನುತಿಭಿಃ ಸಹಸೋಪಸೇದುಃ ॥ ೨೭ ॥

ಭಗವಂತನು ನೃತ್ಯವಾಡುತ್ತಿರಲು ಅವನ ಪ್ರಿಯಭಕ್ತರಾದ ಗಂಧರ್ವ-ಸಿದ್ಧ-ಚಾರಣರೂ-ದೇವತೆಗಳೂ, ದೇವಾಂಗನೆಯರೂ ಅತ್ಯಂತ ಪ್ರೀತಿಯಿಂದ ತಾಳ-ಮೃದಂಗ-ನಗಾರಿ ಇವೇ ಮೊದಲಾದ ವಾದ್ಯಗಳಿಂದ ಕೂಡಿದವರಾಗಿ ಶ್ರೀಕೃಷ್ಣನ ಲೀಲೆಗಳನ್ನು ಗಾನ ಮಾಡುತ್ತಾ ಪುಷ್ಪೋಪಹಾರಗಳನ್ನು ತೆಗೆದುಕೊಂಡು ಶ್ರೀಕೃಷ್ಣನ ಬಳಿಗೆ ಆಗಮಿಸಿದರು. ॥ ೨೭ ॥ ಪರೀಕ್ಷಿತನೇ ! ಕಾಲಿಯನಾಗನಿಗೆ ಒಂದು ಸಾವಿರ ಹೆಡೆಗಳಿದ್ದವು. ಅವನು ತನ್ನ ಯಾವ ಹೆಡೆಯನ್ನು ಮೇಲೆತ್ತುವನೋ ಆದನ್ನು ಪ್ರಚಂಡ ದಂಡಧಾರಿಯಾದ ಭಗವಂತನು ತನ್ನ ಕಾಲಿನ ತುಳಿತದಿಂದ ಬಗ್ಗು ಬಡಿಯುತ್ತಿದ್ದನು. ಇದರಿಂದ ಕಾಳಿಯನ ಜೀವನ ಶಕ್ತಿಯು ಕ್ಷೀಣಿಸತೊಡಗಿತು. ಅವನ ಮೂಗಿನಿಂದ, ಬಾಯಿಂದ ರಕ್ತವು ಹರಿಯತೊಡಗಿತು. ಕೊನೆಗೆ ಅವನು ಯಾತನೆಯನ್ನು ತಡೆಯಲಾರದೆ ಮೂರ್ಛಿತನಾಗಿ ಬಿಟ್ಟನು. ॥ ೨೮ ॥

ಯದ್ಯಚ್ಛಿರೋ ನ ನಮತೇಽಂಗ ಶತೈಕಶೀರ್ಷ್ಣ-
ಸ್ತತ್ತನ್ಮಮರ್ದ ಖರದಂಡಧರೋಽಂಘ್ರಿಪಾತೈಃ ।
ಕ್ಷೀಣಾಯುಷೋ ಭ್ರಮತ ಉಲ್ಬಣಮಾಸ್ಯತೋಽಸೃಙ್
ನಸ್ತೋ ವಮನ್ಪರಮಕಶ್ಮಲಮಾಪ ನಾಗಃ ॥ ೨೮ ॥

ಅವನು ಸ್ವಲ್ಪ ಎಚ್ಚರಗೊಂಡೊಡನೆಯೇ ಕುಪಿತನಾಗಿ ಪುನಃ ಕಣ್ಣುಗಳಿಂದ ವಿಷವನ್ನು ಸುರಿಸುವನು. ಗಟ್ಟಿಯಾಗಿ ಬುಸುಗುಟ್ಟುವನು. ಹೀಗೆ ಬುಸುಗುಟ್ಟುತ್ತಾ ಯಾವುದಾದರೂ ತಲೆಯನ್ನು ಮೇಲೆತ್ತಿದನೆಂದರೆ ಶ್ರೀಕೃಷ್ಣನು ಒಡನೆಯೇ ಆ ಹೆಡೆಯ ಮೇಲೆ ಹಾರಿ ನಾಟ್ಯವಾಡುತ್ತಾ ಆ ಹೆಡೆಯನ್ನು ಬಗ್ಗಿಸಿಬಿಡುವನು. ಆ ಸಮಯದಲ್ಲಿ ಪುರಾಣ ಪುರುಷೋತ್ತಮ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಬಿದ್ದ ರಕ್ತದ ಬಿಂದುಗಳು-ಗಂಧರ್ವರು ರಕ್ತಪುಷ್ಪಗಳಿಂದ ಅವನ ಪಾದಗಳಿಗೆ ಪೂಜಿಸುತ್ತಿರುವರೋ ಎಂಬಂತೆ ಭಾಸವಾಗುತ್ತಿತ್ತು. ॥ ೨೯ ॥

ತಸ್ಯಾಕ್ಷಿಭಿರ್ಗರಲಮುದ್ವಮತಃ ಶಿರಸ್ಸು
ಯದ್ಯತ್ಸಮುನ್ನಮತಿ ನಿಃಶ್ವಸತೋ ರುಷೋಚ್ಚೈಃ ।
ನೃತ್ಯನ್ಪದಾನುನಮಯನ್ ದಮಯಾಂಬಭೂವ
ಪುಷ್ಪೈಃ ಪ್ರಪೂಜಿತ ಇವೇಹ ಪುಮಾನ್ಪುರಾಣಃ ॥ ೨೯ ॥

ಪರೀಕ್ಷಿತನೇ ! ಭಗವಂತನ ಆ ಅದ್ಭುತವಾದ ತಾಂಡವ ನೃತ್ಯದಿಂದಾಗಿ ಕಾಳಿಯನ ಛತ್ರರೂಪವಾಗಿದ್ದ ಹೆಡೆಗಳು ಛಿನ್ನ-ಭಿನ್ನವಾದುವು. ಅದರ ಪ್ರತಿಯೊಂದು ಅಂಗವೂ ನುಚ್ಚು ನೂರಾಯಿತು. ಬಾಯಿಂದ ರಕ್ತದ ಕೋಡಿಯೇ ಹರಿಯಿತು. ಆಗ ನಾಗನಿಗೆ ಚರಾಚರಾತ್ಮಕವಾದ ಜಗತ್ತಿಗೇ ಗುರುವಾಗಿದ್ದ ಪುರಾಣ ಪುರುಷ ಭಗವಾನ್ ನಾರಾಯಣನ ಸ್ಮರಣೆಯಾಯಿತು. ಕಾಳಿಯನು ಮನಸ್ಸಿನಿಂದಲೇ ಭಗವಂತನಿಗೆ ಶರಣಾದನು. ॥ ೩೦ ॥

ತಚ್ಚಿತ್ರತಾಂಡವವಿರುಗ್ಣಫಣಾತಪತ್ರೋ
ರಕ್ತಂ ಮುಖೈರುರು ವಮನ್ನೃಪ ಭಗ್ನಗಾತ್ರಃ ।
ಸ್ಮೃತ್ವಾ ಚರಾಚರಗುರುಂ ಪುರುಷಂ ಪುರಾಣಂ
ನಾರಾಯಣಂ ತಮರಣಂ ಮನಸಾ ಜಗಾಮ ॥ ೩೦ ॥

ಭಗವಾನ್ ಶ್ರೀಕೃಷ್ಣನ ಉದರದಲ್ಲಿ ಸಂಪೂರ್ಣ ವಿಶ್ವವು ಅಡಗಿದೆ. ಅದರಿಂದಾಗಿ ಅವನ ಅಪಾರವಾದ ಭಾರವನ್ನು ತಡೆಯಲಾರದೆ ಕುಸಿದುಬಿದ್ದ ಫಣೀಂದ್ರನ ಛತ್ರಿರೂಪವಾಗಿದ್ದ ಫಣಗಳು ಬಾಲಕೃಷ್ಣನ ಹಿಮ್ಮಡಿಗಳ ಏಟಿನಿಂದಾಗಿ ನುಚ್ಚುನೂರಾದವು. ತನ್ನ ಪತಿಯ ಈ ದುರ್ದಶೆಯನ್ನು ಕಂಡ ಅವನ ಪತ್ನಿಯರು ಭಗವಂತನಿಗೆ ಶರಣಾದರು. ಅವರೆಲ್ಲರೂ ಅತ್ಯಂತ ದುಃಖಿತರಾಗಿದ್ದರು. ಭಯಗ್ರಸ್ತರಾದ ಆ ನಾಗಪತ್ನಿಯರ ವಸ್ತ್ರಾಭರಣಗಳು ಅಸ್ತ-ವ್ಯಸ್ತವಾಗಿದ್ದು, ತಲೆಕೂದಲು ಕೆದರಿ ಹೋಗಿದ್ದವು. ॥ ೩೧ ॥

ಕೃಷ್ಣಸ್ಯ ಗರ್ಭಜಗತೋಽತಿಭರಾವಸನ್ನಂ
ಪಾರ್ಷ್ಣಿಪ್ರಹಾರಪರಿರುಗ್ಣಫಣಾತಪತ್ರಮ್ ।
ದೃಷ್ಟ್ವಾಽಽದೃಮಾದ್ಯಮುಪಸೇದುರಮುಷ್ಯ ಪತ್ನ್ಯಃ
ಆರ್ತಾಃ ಶ್ಲಥದ್ವಸನಭೂಷಣಕೇಶಬಂಧಾಃ ॥ ೩೧ ॥

ಆ ಸಮಯದಲ್ಲಿ ಸಾಧ್ವಿಯರಾದ ನಾಗಪತ್ನಿಯರು ಬಹಳವಾಗಿ ಗಾಬರಿಗೊಂಡಿದ್ದರು. ತಮ್ಮ ಮಕ್ಕಳನ್ನು ಮುಂದೆ ಮಾಡಿಕೊಂಡು, ತಲೆಯನ್ನು ಭೂಮಿಗೆ ಮುಟ್ಟಿಸಿ, ಪ್ರಾಣಮಾತ್ರರ ಏಕಮಾತ್ರ ಸ್ವಾಮಿಯಾದ ಭಗವಾನ್ ಶ್ರೀಕೃಷ್ಣನಿಗೆ ಪ್ರಣಾಮ ಮಾಡಿದರು. ಶ್ರೀಕೃಷ್ಣನನ್ನು ಶರಣಾಗತ ವತ್ಸಲನೆಂದು ಅರಿತು ಅಪರಾಧಿಯಾದ ತಮ್ಮ ಪತಿಯನ್ನು ಬಿಡಿಸಿಕೊಳ್ಳುವ ಇಚ್ಛೆಯಿಂದ ಅವರೆಲ್ಲರೂ ಶ್ರೀಕೃಷ್ಣನಿಗೆ ಶರಣಾಗಿ ಅವನನ್ನು ಪರಿಪರಿಯಾಗಿ ಸ್ತುತಿಸುತ್ತಾ ಇತೆಂದರು. ॥ ೩೨ ॥

ತಾಪ್ತಂ ಸುವಿಗ್ನಮನಸೋಽಥ ಪುರಸ್ಕೃತಾರ್ಭಾಃ
ಕಾಯಂ ನಿಧಾಯ ಭುವಿ ಭೂತಪತಿಂ ಪ್ರಣೇಮುಃ ।
ಸಾಧ್ವ್ಯಃ ಕೃತಾಂಜಲಿಪುಟಾಃ ತಮಲಸ್ಯ ಭರ್ತು-
ರ್ಮೋಕ್ಷೇಪ್ಸವಃ ಶರಣದಂ ಶರಣಂ ಪ್ರಪನ್ನಾಃ ॥ ೩೨ ॥

ನಾಗಪತ್ನ್ಯ ಊಚುಃ

ನ್ಯಾಯ್ಯೋ ಹಿ ದಂಡಃ ಕೃತಕಿಲ್ಬಿಷೇಽಸ್ಮಿಂ-
ಸ್ತವಾವತಾರಃ ಖಲನಿಗ್ರಹಾಯ ।
ರಿಪೋಃ ಸುತಾನಾಮಪಿ ತುಲ್ಯದೃಷ್ಟೇ-
ರ್ಧತ್ಸೇ ದಮಂ ಫಲಮೇವಾನುಶಂಸನ್ ॥ ೩.೫ ॥

ಅನುಗ್ರಹೋಽಯಂ ಭವತಃ ಕೃತೋ ಹಿ ನೋ
ದಂಡೋಽಸತಾಂ ತೇ ಖಲು ಕಲ್ಮಷಾಪಹಃ ।
ಯದ್ದಂದಶೂಕತ್ವಮಮುಷ್ಯ ದೇಹಿನಃ
ಕ್ರೋಧೋಽಪಿ ತೇಽನುಗ್ರಹ ಏವ ಸಮ್ಮತಃ ॥ ೩.೪ ॥

ತಪಃ ಸುತಪ್ತಂ ಕಿಮನೇನ ಪೂರ್ವಂ
ನಿರಸ್ತಮಾನೇನ ಚ ಮಾನದೇನ ।
ಧರ್ಮೋಽಥ ವಾ ಸರ್ವಜನಾನುಕಂಪಯಾ
ಯತೋ ಭವಾಂಸ್ತುಷ್ಯತಿ ಸರ್ವಜೀವಃ ॥ ೩.೫ ॥

ಕಸ್ಯಾನುಭಾವೋಽಸ್ಯ ನ ದೇವ ವಿದ್ಮಹೇ
ತವಾಂಘ್ರಿರೇಣುಸ್ಪರ್ಶಾಧಿಕಾರಃ ।
ಯದ್ವಾಂಛಯಾ ಶ್ರೀರ್ಲಲನಾಽಚರತ್ತಪೋ
ವಿಹಾಯ ಕಾಮಾನ್ಸುಚಿರಂ ಧೃತವ್ರತಾ ॥ ೩.೬ ॥

ನ ನಾಕಪೃಷ್ಠಂ ನ ಚ ಸಾರ್ವಭೌಮಂ
ನ ಪಾರಮೇಷ್ಠ್ಯಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ವಾಂಛಂತಿ ಯತ್ಪಾದರಜಃಪ್ರಪನ್ನಾಃ ॥ ೩.೭ ॥

ತದೇಷ ನಾಥಾಪ ದುರಾಪಮನ್ಯೈ-
ಸ್ತಮೋಜನಿಃ ಕ್ರೋಧವಶೋಽಪ್ಯಹೀಶಃ ।
ಸಂಸಾರಚಕ್ರೇ ಭ್ರಮತಃ ಶರೀರಿಣೋ
ಯದಿಚ್ಛತಃ ಸ್ಯಾದ್ವಿಭವಃ ಸಮಕ್ಷಃ ॥ ೩.೮ ॥

ನಾಗಪತ್ನಿಯರು ಹೇಳುತ್ತಾರೆ - ಪ್ರಭುವೇ! ನಿನ್ನ ಈ ಅವತಾರವು ದುಷ್ಟರನ್ನು ಶಿಕ್ಷಿಸುವುದಕ್ಕಾಗಿಯೇ ಆಗಿದೆ. ಅದಕ್ಕಾಗಿ ಈ ಕಾಳಿಯನನ್ನು ಶಿಕ್ಷಿಸುವುದು ಉಚಿತವೇ ಆಗಿದೆ. ನಿನ್ನ ದೃಷ್ಟಿಯಲ್ಲಿ ಶತ್ರು ಮತ್ತು ಪುತ್ರರಲ್ಲಿ ಯಾವ ಭೇದವೂ ಇಲ್ಲ ಅದರಿಂದ ನೀನು ಕೊಡುವ ಶಿಕ್ಷೆಯು ಅವರ ಪಾಪದ ಪ್ರಾಯಶ್ಚಿತ್ತಕ್ಕಾಗಿ ಮತ್ತು ಅವರ ಪರಮ ಕಲ್ಯಾಣಕ್ಕಾಗಿಯೇ ಇರುತ್ತದೆ. ॥ ೩.೩ ॥ ನೀನು ನಮ್ಮ ಮೇಲೆ ಮಹದನುಗ್ರಹವನ್ನೇ ಮಾಡಿರುವೆ. ಇದಾದರೋ ನಿನ್ನ ಕೃಪಾಪ್ರಸಾದವೇ ಆಗಿದೆ. ಏಕೆಂದರೆ, ದುಷ್ಟ ಜನರಿಗೆ ನೀನು ಕೊಡುವ ಶಿಕ್ಷೆಯಿಂದ ಅವರ ಎಲ್ಲ ಪಾಪಗಳೂ ನಾಶವಾಗಿ ಹೋಗುತ್ತವೆ. ಈ ಸರ್ಪವು ಅಪರಾಧಿಯಾಗಿರುವುದರಲ್ಲಿ ಯಾವ ಸಂದೇಹವೂ ಇಲ್ಲ ಅಪರಾಧಿಯಲ್ಲದಿದ್ದರೆ ಇವನಿಗೆ ಸರ್ಪಯೋನಿ ಏಕೆ ದೊರೆಯುತ್ತಿತ್ತು. ಅದಕ್ಕಾಗಿ ನಾವು ನಿಜವಾದ ಹೃದಯದಿಂದ ನಿನ್ನ ಈ ಕ್ರೋಧವನ್ನು ನಿನ್ನ ಅನುಗ್ರಹವೆಂದೇ ತಿಳಿಯುತ್ತೇವೆ. ॥ ೩.೪ ॥ ಇವನು ಹಿಂದಿನ ಜನ್ಮದಲ್ಲಿ ಖಂಡಿತವಾಗಿ ನಿರಹಂಕಾರಿಯಾಗಿ, ಬೇರೆಯವರನ್ನು ಸಮ್ಮಾನಿಸುತ್ತಾ ಯಾವುದೋ ದೊಡ್ಡ ತಪಸ್ಸು ಮಾಡಿರಬೇಕು. ಅಥವಾ ಎಲ್ಲ ಜೀವರ ಮೇಲೆ ದಯೆ ಮಾಡುತ್ತಾ ಇವನು ಯಾವುದೋ ದೊಡ್ಡ ಧರ್ಮಕಾರ್ಯವನ್ನು ಮಾಡಿರಬೇಕು. ಅದರಿಂದಲೇ ನೀನು ಇವನ ಮೇಲೆ ಸಂತುಷ್ಟನಾಗಿರುವೆ. ಏಕೆಂದರೆ, ಸರ್ವಜೀವರ ಸ್ವರೂಪನಾದ ನಿನ್ನ ಪ್ರಸನ್ನತೆಗಾಗಿ ಇದೇ ಉಪಾಯವಾಗಿದೆ. ॥೩.೫॥ ಭಗವಂತಾ! ನಿನ್ನ ಚರಣ ರಜದ ಸ್ಪರ್ಶವನ್ನು ಪಡೆಯುವ ಅಧಿಕಾರಿಯಾದುದು ಇದು ಇವನ ಯಾವ ಸಾಧನೆಯ ಫಲವೆಂದು ನಾವು ತಿಳಿಯುತ್ತಿಲ್ಲ ನಿನ್ನ ಚರಣಗಳ ರಜವು ಎಷ್ಟು ದುರ್ಲಭವಾದುದೆಂದರೆ, ಅದಕ್ಕಾಗಿ ಅರ್ಧಾಂಗಿನಿಯಾದ ಲಕ್ಷ್ಮೀದೇವಿಯೂ ಕೂಡ ಬಹಳ ದಿನಗಳವರೆಗೆ ಸಮಸ್ತ ಭೋಗಗಳನ್ನು ತ್ಯಜಿಸಿ ನಿಯಮಗಳನ್ನು ಪಾಲಿಸುತ್ತಾ ತಪಸ್ಸು ಮಾಡಬೇಕಾಯಿತು. ॥ ೩.೬ ॥ ಪ್ರಭೋ! ನಿನ್ನ ಚರಣಧೂಳಿಯನ್ನು ಶರಣು ಹೋಗುವ ಭಗವದ್ಭಕ್ತರು ಸ್ವರ್ಗವನ್ನಾಗಲೀ, ಸಾರ್ವಭೌಮತ್ವವನ್ನಾಗಲೀ, ರಸಾತಲದ ಆಧಿಪತ್ಯವನ್ನಾಗಲೀ, ಬ್ರಹ್ಮಪದವಿಯನ್ನಾಗಲೀ ಬಯಸುವುದಿಲ್ಲ ಅವರಿಗೆ ಅಣಿಮಾದಿ ಅಷ್ಟಸಿದ್ಧಿಗಳ ಇಚ್ಛೆಯೇ ಇರುವುದಿಲ್ಲ ಅವರು ಜನ್ಮ-ಮರಣವನ್ನು ತಪ್ಪಿಸುವ ಕೈವಲ್ಯ ಮೋಕ್ಷವನ್ನೂ ಅಪೇಕ್ಷಿಸುವುದಿಲ್ಲ ॥ ೩.೭॥ ಸ್ವಾಮಿ! ಈ ನಾಗರಾಜನು ತಮೋಗುಣಿಗಳ ಯೋನಿಯಲ್ಲಿ ಹುಟ್ಟಿದವನು. ಸ್ವಾಭಾವಿಕವಾಗಿಯೇ ಮಹಾಕೋಪಿಷ್ಠನೂ ಆಗಿರುವನು. ಹೀಗಿದ್ದರೂ ಇವನಿಗೆ ಬೇರೆಯವರಿಗೆ ದುರ್ಲಭವಾದ ನಿನ್ನ ಪರಮ ಪವಿತ್ರ ಚರಣರಜವು ಪ್ರಾಪ್ತವಾಗಿದೆ. ಅದನ್ನು ಪಡೆಯುವ ಇಚ್ಛಾಮಾತ್ರದಿಂದಲೇ ಸಂಸಾರಚಕ್ರದಲ್ಲಿ ಬಿದ್ದಿರುವ ಜೀವನಿಗೆ ವೈಭವ-ಸಂಪತ್ತುಗಳ ಮಾತೇನು ? ಮೋಕ್ಷವೂ ಪ್ರಾಪ್ತವಾಗುತ್ತದೆ. ॥ ೩.೮ ॥

ಪ್ರಭೋ! ಅಚಿಂತ್ಯವಾದ ಐಶ್ವರ್ಯವೂ ನಿತ್ಯನಿಧಿಯಾಗಿರತಕ್ಕವನೇ! ಸಮಸ್ತರ ಅಂತಃಕರಣದಲ್ಲಿಯೂ ವಿರಾಜಿಸುತ್ತಿರುವವನೇ! ಸಮಸ್ತ ಪ್ರಾಣಿಗಳಿಗೂ ಮತ್ತು ವಸ್ತುಗಳಿಗೂ ಆಶ್ರಯ

ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।
ಭೂತಾವಾಸಾಯ ಭೂತಾಯ ಪರಾಯ ಪರಮಾತ್ಮನೇ
॥ ೩೯ ॥

ನಾಗಿರತಕ್ಕವನೇ ! ಪ್ರಾಣಗಳ ಹಾಗೂ ಪದಾರ್ಥಗಳ ರೂಪದಲ್ಲಿ ಇರುವವನೇ ! ಪ್ರಕೃತಿಗೂ ಅತೀತನಾದ ಪರಮಾತ್ಮನೇ ! ನಿನಗೆ ನಮಸ್ಕಾರವು. ॥ ೩೯ ॥ ದೇವ ! ನೀನು ಸಮಸ್ತವಾದ ಜ್ಞಾನ ಗಳಿಗೂ ಮತ್ತು ಅನುಭವಗಳಿಗೂ ನಿಧಿಪ್ರಾಯನಾಗಿರುವೆ. ನಿನ್ನ ಮಹಿಮೆ ಮತ್ತು ಶಕ್ತಿಯು ಅನಂತವಾದುದು. ನಿನ್ನ ಸ್ವರೂಪವು ಅಪ್ರಾಕೃತವೂ, ದಿವ್ಯವೂ, ಚಿನ್ಮಯವೂ ಆಗಿದೆ. ನೀನು ನಿರ್ಗುಣ ನಿರಾಕಾರ- ನಿರ್ವಿಕಾರನು. ನೀನೇ ಪರಬ್ರಹ್ಮ ವಸ್ತುವು. ಅಂತಹ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೪೦ ॥ ನೀನು ಪ್ರಕೃತಿಯಲ್ಲಿ ಕ್ಷೋಭೆಯನ್ನುಂಟುಮಾಡುವ ಕಾಲಪುರುಷನಾಗಿದ್ದು, ಕಾಲಶಕ್ತಿಗೆ ಆಶ್ರಯನಾಗಿರುವೆ. ಕಾಲದ ಕ್ಷಣ-ಕಲ್ಪಾದಿ ಸಮಸ್ತ ಅವಯವ ಗಳಿಗೂ ಸಾಕ್ಷಿಯಾಗಿರುವೆ. ನೀನು ವಿಶ್ವರೂಪನಾಗಿದ್ದರೂ ಅದ ರಿಂದ ಬೇರೆಯಾಗಿದ್ದು ಆದರ ದ್ರಷ್ಟಾರನಾಗಿರುವೆ. ಜಗತ್ತಿಗೆ ಕಾರಣನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿ ಸುತ್ತೇವೆ. ॥ ೪೧ ॥ ಪ್ರಭೋ ! ಪಂಚಭೂತಗಳೂ ಮತ್ತು ಪಂಚತ ನ್ಮಾತ್ರೆಗಳೂ, ಇಂದ್ರಿಯಗಳೂ, ಪ್ರಾಣ, ಮನಸ್ಸು ಬುದ್ಧಿ ಮತ್ತು ಇವೆಲ್ಲಕ್ಕೆ ಆಶ್ರಯಸ್ಥಾನವಾದ ಚಿತ್ತ - ಇವೆಲ್ಲವೂ ನೀನೆ ಆಗಿರುವೆ. ನಿನ್ನ ಅಂಶಭೂತರಾದ ಜೀವಾತ್ಮರ ಶುದ್ಧಜ್ಞಾನವನ್ನು ತ್ರಿಗುಣಾತ್ಮಕ ವಾದ ಅಹಂಕಾರದಿಂದ ಮರೆ ಮಾಡಿರುವ ನಿನಗೆ ನಮ ಸ್ಕಾರವು. ॥ ೪೨ ॥ ನೀನು ಅನಂತನೂ, ಸೂಕ್ಷ್ಮನು, ವಿಕಾರವಿಲ್ಲದ ವನೂ, ಸರ್ವಜ್ಞನೂ ಆಗಿರುವೆ. ಇಂತಹ ನಿನಗೆ ನಮಸ್ಕಾರವು. 'ಪರಮಾತ್ಮನು ಇದ್ದಾನೆ, 'ಪರಮಾತ್ಮನು ಇಲ್ಲ, ಅವನು ಸರ್ವಜ್ಞನು, ಸರ್ವಜ್ಞನಲ್ಲ' - ಇವೇ ಮುಂತಾದ ವಾದ-ವಿವಾದಗಳಿಗೆ ವಿಷಯನಾಗಿಯೂ, ಶಬ್ದರೂಪನಾಗಿಯೂ, ಶಬ್ದಾರ್ಥರೂಪ ನಾಗಿಯೂ ಮತ್ತು ಅವೆರಡಕ್ಕೂ ಸಂಬಂಧವನ್ನು ಕಲ್ಪಿಸುವ ಶಕ್ತಿಯುಳ್ಳವನಾಗಿಯೂ ಇರುವ ನಿನಗೆ ನಮಸ್ಕಾರವು. ॥ ೪೩. ॥ ಪ್ರತ್ಯಕ್ಷ-ಅನುಮಾನ ಮುಂತಾದ ಪ್ರಮಾಣಗಳನ್ನು ಪ್ರಮಾಣೀ ಕರಿಸುವ ಮೂಲಪುರುಷನು ನೀನೇ ಆಗಿರುವೆ. ಸಮಸ್ತ ವೇದ ಶಾಸ್ತ್ರಗಳಿಗೂ ನೀನೇ ಉಗಮಸ್ಥಾನವಾಗಿರುವೆ. ನೀನು ಜ್ಞಾನ ಸ್ವರೂಪನಾಗಿರುವೆ. ಪ್ರವೃತ್ತಿ ಮಾರ್ಗಸ್ವರೂಪನೂ, ನಿವೃತ್ತಿಮಾರ್ಗ ಸ್ವರೂಪನೂ ನೀನೇ ಆಗಿರುವೆ. ಪ್ರವೃತ್ತಿ-ನಿವೃತ್ತಿ ಮಾರ್ಗಗಳ ವಿಧಾಯಕಗಳ ವೇದಸ್ವರೂಪನೂ ನೀನೇ. ಅಂತಹ ನಿನಗೆ ಪುನಃ ಪುನಃ ನಮಸ್ಕಾರಗಳು. ॥ ೪೪ ॥ ನೀನು ಶುದ್ಧ ಸತ್ತ್ವಮಯ ವಸುದೇವನ ಪುತ್ರನಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧನೂ ನೀನೇ ಆಗಿರುವೆ. ಹೀಗೆ ಚತುರ್ವ್ಯೂಹದ ರೂಪ ದಲ್ಲಿ ನೀನು ಭಕ್ತರಿಗೆ ಹಾಗೂ ಯಾದವರಿಗೆ ಒಡೆಯನಾಗಿರುವೆ. ಶ್ರೀಕೃಷ್ಣ ! ನಾವು ನಿನಗೆ ನಮಸ್ಕರಿಸುತ್ತೇವೆ. ॥ ೪೫ ॥ ನೀನು ಅಂತಃಕರಣ ಮತ್ತು ಅದರ ವೃತ್ತಿಗಳ ಪ್ರಕಾಶಕನಾಗಿರುವೆ. ಅವುಗಳ ಮೂಲಕವೇ ತಾನೇ-ತನ್ನನ್ನು ಮುಚ್ಚಿಟ್ಟುಕೊಂಡಿರುವೆ. ಆ ಅಂತಃ ಕರಣ ಮತ್ತು ವೃತ್ತಿಗಳಿಂದಲೇ ನಿನ್ನ ಸ್ವರೂಪದ ಅಲ್ಪ-ಸ್ವಲ್ಪ ಸಂಕೇತವೂ ದೊರೆಯುತ್ತದೆ. ನೀನು ಆ ಗುಣಗಳ ಹಾಗೂ ಅವುಗಳ ವೃತ್ತಿಗಳ ಸಾಕ್ಷಿ ಮತ್ತು ಸ್ವಯಂ ಪ್ರಕಾಶನಾಗಿರುವೆ. ಅಂತಹ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೪೬ ॥

ಜ್ಞಾನವಿಜ್ಞಾನನಿಧಯೇ ಬ್ರಹ್ಮಣೇಽನಂತಶಕ್ತಯೇ ।
ಅಗುಣಾಯಾವಿಕಾರಾಯ ನಮಸ್ತೇಽಪ್ರಾಕೃತಾಯ ಚ
॥ ೪೦ ॥

ಕಾಲಾಯ ಕಾಲನಾಭಾಯ ಕಾಲಾವಯವಸಾಕ್ಷಿಣೇ ।
ವಿಶ್ವಾಯ ತದುಪದ್ರಷ್ಟ್ರೇ ತತ್ಕರ್ತ್ರೇ ವಿಶ್ವಹೇತವೇ
॥ ೪೧ ॥

ಭೂತಮಾತ್ರೇಂದ್ರಿಯಪ್ರಾಣಮನೋಬುದ್ಧ್ಯಾಶಯಾತ್ಮನೇ ।
ತ್ರಿಗುಣೇನಾಭಿಮಾನೇನ ಗೂಢಸ್ವಾತ್ಮಾನುಭೂತಯೇ
॥ ೪೨ ॥

ನಮೋಽನಂತಾಯ ಸೂಕ್ಷ್ಮಾಯ ಕೂಟಸ್ಥಾಯ ವಿಪಶ್ಚಿತೇ ।
ನಾನಾವಾದಾನುರೋಧಾಯ ವಾಚ್ಯವಾಚಕಶಕ್ತಯೇ
॥ ೪೩. ॥

ನಮಃ ಪ್ರಮಾಣಮೂಲಾಯ ಕವಯೇ ಶಾಸ್ತ್ರಯೋನಯೇ ।
ಪ್ರವೃತ್ತಾಯ ನಿವೃತ್ತಾಯ ನಿಗಮಾಯ ನಮೋ ನಮಃ
॥ ೪೪ ॥

ನಮಃ ಕೃಷ್ಣಾಯ ರಾಮಾಯ ವಸುದೇವಸುತಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ
॥ ೪೫ ॥

ನಮೋ ಗುಣಪ್ರದೀಪಾಯ ಗುಣಾತ್ಮಚ್ಛಾದನಾಯ ಚ ।
ಗುಣವೃತ್ತ್ಯುಪಲಕ್ಷ್ಯಾಯ ಗುಣದ್ರಷ್ಟ್ರೇ ಸ್ವಸಂವಿದೇ
॥ ೪೬ ॥

ಅವ್ಯಾಕೃತವಿಹಾರಾಯ ಸರ್ವವ್ಯಾಕೃತಸಿದ್ಧಯೇ ।
ಹೃಷೀಕೇಶ ನಮಸ್ತೇಽಸ್ತು ಮುನಯೇ ಮೌನಶೀಲಿನೇ
॥ ೪೭ ॥

ನೀನು ಈ ಮೂಲ ಪ್ರಕೃತಿಯಲ್ಲಿ ನಿತ್ಯವೂ ವಿಹರಿಸುತ್ತಿರುವೆ. ಸಮಸ್ತವಾದ ಸ್ಥೂಲ, ಸೂಕ್ಷ್ಮ ಜಗತ್ತು ನಿನ್ನಿಂದಲೇ ಸಿದ್ಧವಾಗುತ್ತದೆ. ಹೃಷೀಕೇಶನೇ! ನೀನು ಮನನಶೀಲನಾದ ಆತ್ಮಾರಾಮನಾಗಿರುವೆ. ಮೌನವೇ ನಿನ್ನ ಸ್ವಭಾವವಾಗಿದೆ. ಅಂತಹ ನಿನಗೆ ನಮಸ್ಕರಿಸುತ್ತೇವೆ. ॥ ೪೭ ॥

ಪರಾವರಗತಿಜ್ಞಾಯ ಸರ್ವಾಧ್ಯಕ್ಷಾಯ ತೇ ನಮಃ ।
ಅವಿಶ್ವಾಯ ಚ ವಿಶ್ವಾಯ ತದ್ದ್ರಷ್ಟ್ರೇಽಸ್ಯ ಚ ಹೇತವೇ
॥ ೪೮ ॥

ನೀನು ಸ್ಥೂಲ, ಸೂಕ್ಷ್ಮ ಸಮಸ್ತ ಗತಿಗಳನ್ನು ತಿಳಿದವನೂ, ಎಲ್ಲರ ಸಾಕ್ಷಿಯೂ ಆಗಿರುವೆ. ನೀನು ವಿಶ್ವವಲ್ಲದಿದ್ದರೂ ವಿಶ್ವದ ಸ್ವರೂಪನಾಗಿರುವೆ. ಅಂತಹ ವಿಶ್ವಕ್ಕೆ ಸಾಕ್ಷಿಭೂತನೂ ಆಗಿರುವೆ ಮತ್ತು ಕಾರಣನೂ ಆಗಿರುವೆ. ಅಂತಹ ಸರ್ವೋತ್ಕೃಷ್ಟ ಮಹಿಮನಾಗಿರುವ ನಿನಗೆ ನಮಸ್ಕಾರ ಮಾಡುತ್ತೇವೆ. ॥ ೪೮ ॥

ತ್ವಂ ಹ್ಯಸ್ಯ ಜನ್ಮಸ್ಥಿತಿಸಂಯಮಾನ್ವಿಭೋ
ಗುಣೈರನೀಹೋಽಕೃತ ಕಾಲಶಕ್ತಿಧೃಕ್ ।
ತತ್ತತ್ಸ್ವಭಾವಾನ್ಮತಿಬೋಧಯನ್ಸತಃ
ಸಮೀಕ್ಷಯಾಮೋಘವಿಹಾರ ಈಹಸೇ ॥ ೪೯ ॥

ಪ್ರಭುವೇ! ಕರ್ತೃತ್ವವಿಲ್ಲದ ಕಾರಣ ನೀನು ಯಾವುದೇ ಕರ್ಮವನ್ನು ಮಾಡದೇ ನಿಷ್ಕ್ರಿಯನಾಗಿರುವೆ. ಹಾಗಿದ್ದರೂ ಅನಾದಿಯಾದ ಕಾಲಶಕ್ತಿಯನ್ನು ಸ್ವೀಕರಿಸಿ ಪ್ರಕೃತಿಯ ಗುಣಗಳ ಮೂಲಕ ನೀನೇ ಈ ವಿಶ್ವದ ಉತ್ಪತ್ತಿ, ಸ್ಥಿತಿ, ಪ್ರಳಯ ಎಂಬ ಲೀಲೆಯನ್ನು ಮಾಡುತ್ತಿರುವೆ. ಏಕೆಂದರೆ, ನಿನ್ನ ಲೀಲೆಗಳು ಅಮೋಘವಾಗಿವೆ. ನೀನು ಸತ್ಯ ಸಂಕಲ್ಪನಾಗಿರುವೆ. ಅದಕ್ಕಾಗಿ ಜೀವರ ಸಂಸ್ಕಾರರೂಪದಿಂದ ಅಡಗಿದ್ದು ಸ್ವಭಾವಗಳನ್ನು ನಿನ್ನ ದೃಷ್ಟಿಯಿಂದ ಜಾಗ್ರತಗೊಳಿಸುತ್ತಿರುವೆ. ॥ ೪೯ ॥ ಪ್ರಭುವೇ! ಮೂರು ಲೋಕಗಳಲ್ಲಿಯೂ ಸತ್ತ್ವಗುಣ ಪ್ರಧಾನವಾದ ಶಾಂತ, ರಜೋಗುಣ ಪ್ರಧಾನವಾದ ಅಶಾಂತ ಮತ್ತು ತಮೋಗುಣ ಪ್ರಧಾನ ಮೂಢ ಎಂಬ ಮೂರು ರೀತಿಯ ಯೋನಿಗಳಿವೆ. ಇವೆಲ್ಲವೂ ನಿನ್ನ ಲೀಲಾ ಮೂರ್ತಿಗಳೇ ಆಗಿವೆ. ಹೀಗಿದ್ದರೂ ಈ ಸಮಯದಲ್ಲಿ ಸತ್ತ್ವಗುಣ ಪ್ರಧಾನವಾದ ಶಾಂತ ಜನರೇ ನಿನ್ನ ವಿಶೇಷ ಪ್ರೀತಿಗೆ ಪಾತ್ರರಾಗಿದ್ದಾರೆ. ಏಕೆಂದರೆ, ನಿನ್ನ ಈ ಅವತಾರವು ಮತ್ತು ಈ ಲೀಲೆಗಳು ಸಾಧುಗಳ ರಕ್ಷಣೆಗಾಗಿಯೂ, ಧರ್ಮದ ರಕ್ಷಣೆ ಹಾಗೂ ವಿಸ್ತಾರಕ್ಕಾಗಿಯೇ ಇದೆ. ॥ ೫೦ ॥ ಶಾಂತಾತ್ಮನೇ! ರಾಜನಾದವನು ತನ್ನ ಪ್ರಜೆಗಳು ಮಾಡಿದ ಮೊದಲ ಅಪರಾಧವನ್ನು ಕ್ಷಮಿಸಬೇಕು. ಹಾಗೆಯೇ ನೀನು ಯಾರೆಂಬುದನ್ನು ತಿಳಿಯದೇ ಮಾಡಿರುವ ಈ ಮೂಢನ (ನಮ್ಮ ಪತಿ) ಈ ಅಪರಾಧವನ್ನು ಕ್ಷಮಿಸಬೇಕು. ॥ ೫೧ ॥ ಭಗವಂತನೇ! ದಯೆದೋರು. ಇಷ್ಟರಲ್ಲೇ ಈ ನಾಗರಾಜನು ಸಾಯುವುದರಲ್ಲಿದ್ದಾನೆ. ಸಾಧುಪುರುಷರು ಯಾವಾಗಲೂ ನಮ್ಮಂತಹ ಅಬಲೆಯರ ಮೇಲೆ ದಯೆತೋರುತ್ತಾರೆ. ಆದುದರಿಂದ ಪ್ರಾಣ ಸ್ವರೂಪನಾಗಿರುವ ನಮ್ಮ ಪತಿಯನ್ನು ನಮಗೆ ದಯಪಾಲಿಸು. ॥ ೫೨ ॥ ನಾವು ನಿನ್ನ ದಾಸಿಯರಾಗಿದ್ದೇವೆ. ನಾವು ನಿನಗೆ ಯಾವ ವಿಧವಾದ ಸೇವೆಯನ್ನು ಮಾಡಬೇಕೆಂಬುದರ ಕುರಿತು ನಮಗೆ ಆಜ್ಞಾಪಿಸು. ನಿನ್ನ ಆಜ್ಞೆಯನ್ನು ಪಾಲಿಸುತ್ತಾ, ಶ್ರದ್ಧೆಯಿಂದ ಸೇವೆಯನ್ನು ಮಾಡುವವರು ಸಮಸ್ತವಾದ ಭಯಗಳಿಂದಲೂ ಮುಕ್ತರಾಗುತ್ತಾರೆ. ॥ ೫೩. ॥

ತಸ್ಯೈವ ತೇಽಮೂಸ್ತನವಸ್ತ್ರಿಲೋಕ್ಯಾಂ
ಶಾಂತಾ ಅಶಾಂತಾ ಉತ ಮೂಢಯೋನಯಃ ।
ಶಾಂತಾಃ ಪ್ರಿಯಾಸ್ತೇ ಹ್ಯಧುನಾವಿತುಂ ಸತಾಂ
ಸ್ಥಾತುಶ್ಚ ತೇ ಧರ್ಮಪರೀಪ್ಸಯೇಹತಃ ॥ ೫೦ ॥

ಅಪರಾಧಃ ಸಕೃದ್ಭರ್ತ್ರಾ ಸೋಢವ್ಯಃ ಸ್ವಪ್ರಜಾಕೃತಃ ।
ಕ್ಷಂತುಮರ್ಹಸಿ ಶಾಂತಾತ್ಮನ್ಮೂಢಸ್ಯ ತ್ವಾಮಜಾನತಃ
॥ ೫೧ ॥

ಅನುಗೃಹ್ಣೀಷ್ವ ಭಗವನ್ನಾಗಾಂಸ್ಯಜತಿ ಪನ್ನಗಃ ।
ಸ್ತ್ರೀಣಾಂ ನಃ ಸಾಧುಶೋಚ್ಯಾನಾಂ ಪತಿಃ ಪ್ರಾಣಃ ಪ್ರದೀಯತಾಮ್
॥ ೫೨ ॥

ವಿಧೇಹಿ ತೇ ಕಿಂಕರೀಣಾಮನುಷ್ಠೇಯಂ ತವಾಜ್ಞಯಾ ।
ಯಚ್ಛ್ರದ್ಧಯಾನುತಿಷ್ಠನ್ವೈ ಮುಚ್ಯತೇ ಸರ್ವತೋಭಯಾತ್
॥ ೫೩. ॥

ಶ್ರೀಶುಕ ಉವಾಚ

ಇತ್ಥಂ ಸ ನಾಗಪತ್ನೀಭಿರ್ಭಗವಾನ್ಸಮಭಿಷ್ಟುತಃ ।
ಮೂರ್ಚ್ಛಿತಂ ಭಗ್ನಶಿರಸಂ ವಿಸಸರ್ಜಾಂಘ್ರಿಕುಟ್ಟನೈಃ
॥ ೫೪ ॥

ಪ್ರತಿಲಬ್ಧೇಂದ್ರಿಯಪ್ರಾಣಃ ಕಾಲಿಯಃ ಶನಕೈರ್ಹರಿಮ್ ।
ಕೃಚ್ಛ್ರಾತ್ಸಮುಚ್ಛ್ವಸನ್ದೀನಃ ಕೃಷ್ಣಂ ಪ್ರಾಹ ಕೃತಾಂಜಲಿಃ
॥ ೫೫ ॥

ಕಾಲಿಯ ಉವಾಚ

ವಯಂ ಖಲಾಃ ಸಹೋತ್ಪತ್ತ್ಯಾ ತಾಮಸಾ ದೀರ್ಘಮನ್ಯವಃ ।
ಸ್ವಭಾವೋ ದುಸ್ತ್ಯಜೋ ನಾಥ ಲೋಕಾನಾಂ ಯದಸದ್ಗ್ರಹಃ
॥ ೫೬ ॥

ತ್ವಯಾ ಸೃಷ್ಟಮಿದಂ ವಿಶ್ವಂ ಧಾತರ್ಗುಣವಿಸರ್ಜನಮ್ ।
ನಾನಾಸ್ವಭಾವವೀರ್ಯೌಜೋಯೋನಿಬೀಜಾಶಯಾಕೃತಿ
॥ ೫೭ ॥

ವಯಂ ಚ ತತ್ರ ಭಗವನ್ಸರ್ಪಾ ಜಾತ್ಯುರುಮನ್ಯವಃ ।
ಕಥಂ ತ್ಯಜಾಮಸ್ತ್ವನ್ಮಾಯಾಂ ದುಸ್ತ್ಯಜಾಂ ಮೋಹಿತಾಃ ಸ್ವಯಮ್
॥ ೫೮ ॥

ಭವಾನ್ಹಿ ಕಾರಣಂ ತತ್ರ ಸರ್ವಜ್ಞೋ ಜಗದೀಶ್ವರಃ ।
ಅನುಗ್ರಹಂ ನಿಗ್ರಹಂ ವಾ ಮನ್ಯಸೇ ತದ್ವಿಧೇಹಿ ನಃ
॥ ೫೯ ॥

ಶ್ರೀಶುಕ ಉವಾಚ

ಇತ್ಯಾಕರ್ಣ್ಯ ವಚಃ ಪ್ರಾಹ ಭಗವಾನ್ಕಾರ್ಯಮಾನುಷಃ ।
ನಾತ್ರ ಸ್ಥೇಯಂ ತ್ವಯಾ ಸರ್ಪ ಸಮುದ್ರಂ ಯಾಹಿ ಮಾ ಚಿರಮ್ ।
ಸ್ವಜ್ಞಾತ್ಯಪತ್ಯದಾರಾಢ್ಯೋ ಗೋನೃಭಿರ್ಭುಜ್ಯತಾಂ ನದೀ
॥ ೬೦ ॥

ಯ ಏತತ್ಸಂಸ್ಮರೇನ್ಮರ್ತ್ಯಸ್ತುಭ್ಯಂ ಮದನುಶಾಸನಮ್ ।
ಕೀರ್ತಯನ್ಸುಭಯೋಃ ಸಂಧ್ಯೋರ್ನ ಯುಷ್ಮದ್ಭಯಮಾಪ್ನುಯಾತ್
॥ ೬೧ ॥

ಯೋಽಸ್ಮಿನ್ನಾತ್ವಾ ಮದಾಕ್ರೀಡೇದೇವಾದೀನಭಿತರ್ಪಯೇಜ್ಜಲೈಃ ।
ಉಪೋಷ್ಯ ಮಾಂ ಸ್ಮರನ್ನರ್ಚೇತ್ಸರ್ವಪಾಪೈಃ ಪ್ರಮುಚ್ಯತೇ
॥ ೬೨ ॥

ದ್ವೀಪಂ ರಮಣಕಂ ಹಿತ್ವಾ ಹ್ರದಮೇತಮುಪಾಶ್ರಿತಃ ।
ಯದ್ದ್ರಮಾತ್ಸುಪರ್ಣಸ್ತ್ವಾಂ ನಾದ್ಯಾನ್ಮತ್ಪಾದಲಾಂಛಿತಮ್
॥ ೬೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಪಾದಗಳ ಪ್ರಹಾರದಿಂದ ಕಾಳಿಯ ನಾಗನ ಹೆಡೆಗಳು ಛಿನ್ನ-ಭಿನ್ನವಾಗಿದ್ದವು. ಅವನು ಎಚ್ಚರತಪ್ಪಿ ತಲೆ ತಗ್ಗಿಸಿದ್ದನು. ನಾಗಪತ್ನಿಯರು ಭಗವಂತನನ್ನು ಹೀಗೆ ಸ್ತುತಿಸಿದಾಗ ದಯಾಮಯನಾದ ಭಗವಂತನು ಕಾಳಿಯನನ್ನು ಬಿಟ್ಟುಬಿಟ್ಟನು. ॥ ೫೪ ॥ ನಿಧಾನವಾಗಿ ಕಾಳಿಯನ ಇಂದ್ರಿಯಗಳಲ್ಲಿ, ಪ್ರಾಣಗಳಲ್ಲಿ ಚೈತನ್ಯವುಂಟಾಯಿತು. ಅವನು ಕಷ್ಟಪಟ್ಟು ಉಸಿರಾಡತೊಡಗಿದನು. ಸ್ವಲ್ಪ ಹೊತ್ತಿನಲ್ಲಿ ಅತಿದೀನತೆಯಿಂದ ವಿನಮ್ರನಾಗಿ ಭಗವಾನ್ ಶ್ರೀಕೃಷ್ಣನಲ್ಲಿ ಹೀಗೆ ಪ್ರಾರ್ಥಿಸಿದನು. ॥ ೫೫ ॥

ಕಾಳಿಯನಾಗನು ಹೇಳುತ್ತಾನೆ – ನಾಥನೇ! ನಾವು ಜನ್ಮದಿಂದಲೇ ದುಷ್ಟರಾಗಿದ್ದೇವೆ. ತಮೋಗುಣಿಗಳಾಗಿದ್ದೇವೆ. ದೀರ್ಘಕೋಪಿಗಳಾಗಿದ್ದೇವೆ. ಪ್ರಾಣಿಗಳಿಗೆ ತಮ್ಮ ಸ್ವಭಾವವನ್ನು ಬಿಡುವುದು ಬಹಳ ಕಷ್ಟವೇ ಸರಿ. ಈ ಕಾರಣದಿಂದಲೇ ಪ್ರಪಂಚದ ಜನರು ನಾನಾ ಪ್ರಕಾರವಾದ ದುರಾಗ್ರಹಗಳಿಂದ ಕೂಡಿರುತ್ತಾರೆ. ॥ ೫೬ ॥ ವಿಶ್ವವಿಧಾತನೇ! ಸತ್ತ್ವ-ರಜಸ್ತಮೋ ಗುಣಗಳಿಂದ ನೀನೇ ಸೃಷ್ಟಿಸಿರುವ ಈ ಜಗತ್ತಿನಲ್ಲಿ ನಾನಾ ಪ್ರಕಾರವಾದ ಸ್ವಭಾವ, ವೀರ್ಯ, ಬಲ, ಯೋನಿ, ಬೀಜ, ಚಿತ್ತ ಮತ್ತು ಆಕೃತಿಗಳಿವೆ. ॥ ೫೭ ॥ ಭಗವಂತಾ! ನಿನ್ನದೇ ಆದ ಸೃಷ್ಟಿಯಲ್ಲೇ ಸರ್ಪಗಳಾದ ನಾವು ಇರುವುದು. ನಾವು ಹುಟ್ಟಿನಿಂದಲೇ ಅತಿಕ್ರೋಧಿಗಳಾಗಿದ್ದೇವೆ. ನಾವು ಈ ಮಾಯಾಜಾಲದಲ್ಲಿ ಮೋಹಿತರಾಗಿದ್ದೇವೆ. ಹಾಗಿರುವಾಗ ನಮ್ಮ ಪ್ರಯತ್ನದಿಂದ ಈ ದಾಟಲಶಕ್ಯವಾದ ಮಾಯೆಯನ್ನು ಹೇಗೆ ತ್ಯಜಿಸಬಲ್ಲೆವು? ॥ ೫೮ ॥ ನೀನು ಸರ್ವಜ್ಞನೂ, ಸಮಸ್ತ ಜಗತ್ತಿನ ಸ್ವಾಮಿಯೂ ಆಗಿರುವೆ. ನೀನೆ ನಮ್ಮ ಸ್ವಭಾವ ಮತ್ತು ಈ ಮಾಯೆಗೆ ಕಾರಣನಾಗಿರುವೆ. ಈಗ ನೀನು ನಿನ್ನ ಇಚ್ಛೆಯಂತೆ ನಿಗ್ರಹಿಸಬಹುದು, ಅನುಗ್ರಹಿಸಲೂ ಬಹುದು. ॥ ೫೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕಾಳಿಯನಾಗನ ಮಾತನ್ನು ಕೇಳಿದ ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣನು ಹೀಗೆ ಎಂದನು – ಎಲೈ ಸರ್ಪವೇ! ನೀನು ಇನ್ನು ಮುಂದೆ ಇಲ್ಲಿರಬಾರದು. ನೀನು ನಿನ್ನ ಪುತ್ರ, ಭ್ರಾತೃ, ಭಾರ್ಯೆ, ಬಂಧುಗಳೊಡನೆ ಸಮುದ್ರಕ್ಕೆ ಹೊರಟುಹೋಗು. ಇಲ್ಲಿರುವ ಗೋವುಗಳೂ, ಗೋಪಾಲಕರೂ ಯಮುನೆಯ ನೀರನ್ನು ಉಪಯೋಗಿಸುವಂತಾಗಲಿ. ॥ ೬೦ ॥ ಎರಡೂ ಸಂಧ್ಯೆಗಳಲ್ಲಿ ನಾನು ನಿನಗಿತ್ತಿರುವ ಆಜ್ಞೆಯನ್ನು ಸ್ಮರಿಸುವವನಿಗೆ, ಕೀರ್ತಿಸುವವನಿಗೆ ಸರ್ಪಗಳಿಂದ ಭಯವು ಎಂದೂ ಉಂಟಾಗದಿರಲಿ. ॥ ೬೧ ॥ ಈ ಕಾಳಿಯಮಡುವಿನಲ್ಲಿ ನಾನು ಕ್ರೀಡಿಸಿದ್ದರಿಂದ ಇದರಲ್ಲಿ ಸ್ನಾನಮಾಡಿ, ನೀರಿನಿಂದ ದೇವತೆಗಳಿಗೆ, ತರ್ಪಣ ಮಾಡುವ ಜನರು ಹಾಗೂ ಉಪವಾಸವಿದ್ದು ನನ್ನನ್ನು ಸ್ಮರಿಸುತ್ತಾ, ಪೂಜೆ ಮಾಡುವವರು ಎಲ್ಲ ಪಾಪಗಳಿಂದ ಮುಕ್ತರಾಗಿ ಹೋಗುವರು. ॥ ೬೨ ॥ ನೀನು ಗರುಡನ ಭಯದಿಂದ ರಮಣಕದ್ವೀಪವನ್ನು ಬಿಟ್ಟು ಈ ಮಡುವಿನಲ್ಲಿ ಬಂದು ನೆಲೆಸಿದ್ದೆ ಎಂಬುದನ್ನು ನಾನು ಬಲ್ಲೆ. ಈಗ ನಿನ್ನ ಶರೀರವು ನನ್ನ ಚರಣಚಿಹ್ನೆಯಿಂದ ಅಂಕಿತವಾದ್ದರಿಂದ ಇನ್ನು ಮುಂದೆ ಗರುಡನು ನಿನ್ನನ್ನು ತಿನ್ನಲಾರನು; ಹೋಗು. ॥ ೬೩ ॥

ಶ್ರೀಶುಕ ಉವಾಚ

ಏವಮುಕ್ತೋ ಭಗವತಾ ಕೃಷ್ಣೇನಾದ್ಭುತಕರ್ಮಣಾ ।
ತಂ ಪೂಜಯಾಮಾಸ ಮುದಾ ನಾಗಪತ್ನ್ಯಶ್ಚ ಸಾದರಮ್
॥ ೬೪ ॥

ದಿವ್ಯಾಂಬರಸ್ರಙ್ಮಣಿಭಿಃ ಪರಾರ್ಧ್ಯೈರಪಿ ಭೂಷಣೈಃ ।
ದಿವ್ಯಗಂಧಾನುಲೇಪೈಶ್ಚ ಮಹತ್ಯೋತ್ಪಲಮಾಲಯಾ
॥ ೬೫ ॥

ಪೂಜಯಿತ್ವಾ ಜಗನ್ನಾಥಂ ಪ್ರಸಾದ್ಯ ಗರುಡಧ್ವಜಮ್ ।
ತತಃ ಪ್ರೀತೋಽಭ್ಯನುಜ್ಞಾತಃ ಪರಿಕ್ರಮ್ಯಾಭಿವಂದ್ಯತಮ್
॥ ೬೬ ॥

ಸಕಲತ್ರಸುಹೃತ್ಪುತ್ರೋ ದ್ವೀಪಮಬ್ಧೇರ್ಜಗಾಮ ಹ ।
ತದೈವ ಸಾಮೃತಜಲಾ ಯಮುನಾ ನಿರ್ವಿಷಾಭವತ್ ।
ಅನುಗ್ರಹಾದ್ಭಗವತಃ ಕ್ರೀಡಾಮಾನುಷರೂಪಿಣಃ
॥ ೬೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಶ್ರೀಕೃಷ್ಣನ ಒಂದೊಂದು ಲೀಲೆಯೂ ಅದ್ಭುತವಾಗಿವೆ. ಅವನ ಆಜ್ಞೆಯನ್ನು ಪಡೆದು ಕಾಳಿಯ ನಾಗನು ಪತ್ನಿಯರೊಂದಿಗೆ ಆನಂದದಿಂದ ಬಹಳ ಆದರದಿಂದ ಶ್ರೀಕೃಷ್ಣನನ್ನು ಪೂಜಿಸಿದನು. ॥ ೬೪ ॥ ಅವನು ದಿವ್ಯವಸ್ತ್ರ, ಪುಷ್ಪಮಾಲೆ, ಮಣಿ, ಬಹುಮೂಲ್ಯ ಆಭೂಷಣ, ದಿವ್ಯಗಂಧ, ಚಂದನ ಮತ್ತು ಅತಿ ಉತ್ತಮ ಕಮಲಗಳ ಮಾಲೆಗಳಿಂದ ಜಗತ್ಸ್ವಾಮಿಯಾದ ಗರುಡಧ್ವಜ ಭಗವಾನ್ ಶ್ರೀಕೃಷ್ಣನನ್ನು ಪೂಜಿಸಿ ಸಂತೋಷಪಡಿಸಿದನು. ಇದಾದ ಬಳಿಕ ಪ್ರೇಮಾನಂದದಿಂದ ಅವನ ಪ್ರದಕ್ಷಿಣೆ ಮಾಡಿ, ವಂದಿಸಿ, ಆವನಿಂದ ಬೀಳ್ಕೊಂಡು, ತನ್ನ ಪತ್ನೀ, ಪುತ್ರರೊಂದಿಗೆ ಹಾಗೂ ಬಂಧು ಬಾಂಧವರೊಂದಿಗೆ ಸಮುದ್ರದಲ್ಲಿ ಸರ್ಪಗಳು ವಾಸವಾಗಿರುವ ರಮಣಕದ್ವೀಪಕ್ಕೆ ಪ್ರಯಾಣ ಮಾಡಿದನು. ಲೀಲಾಮಾನುಷನಾದ ಭಗವಾನ್ ಶ್ರೀಕೃಷ್ಣನ ಕೃಪೆಯಿಂದ ಯಮುನೆಯ ನೀರು ಕೇವಲ ವಿಷಹೀನವಾದುದಲ್ಲ, ಆಗಿನಿಂದಲೇ ಅಮೃತದಂತೆ ಮಧುರವೂ ಪವಿತ್ರವೂ ಆಯಿತು. ॥ ೬೫-೬೭ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಕಾಲಿಯಮೋಕ್ಷಣಂ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಕಾಲಿಯನು ಯಮುನೆಯ ಮಡುವಿಗೆ ಬರಲು ಕಾರಣ, ದಾವಾನಲದಿಂದ ವ್ರಜವಾಸಿಗಳನ್ನು ಬದುಕಿಸಿದುದು

ರಾಜೋವಾಚ

ನಾಗಾಲಯಂ ರಮಣಕಂ ಕಸ್ಮಾತ್ತ್ಯಾಜ ಕಾಲಿಯಃ ।
ಕೃತಂ ಕಿಂ ವಾ ಸುಪರ್ಣಸ್ಯ ತೇನೈಕೇನಾಸಮಂಜಸಮ್
॥ ೧ ॥

ಶ್ರೀಶುಕ ಉವಾಚ

ಉಪಹಾರ್ಯೈಃ ಸರ್ಪಜನೈರ್ಮಾಸಿ ಮಾಸೀಹ ಯೋ ಬಲಿಃ ।
ವಾನಸ್ಪತ್ಯೋ ಮಹಾಬಾಹೋ ನಾಗಾನಾಂ ಪ್ರಾಙ್ನಿರೂಪಿತಃ
॥ ೨ ॥

ಸ್ವಂ ಸ್ವಂ ಭಾಗಂ ಪ್ರಯಚ್ಛಂತಿ ನಾಗಾಃ ಪರ್ವಣಿ ಪರ್ವಣಿ ।
ಗೋಪೀಥಾಯಾತ್ಮನಃ ಸರ್ವೇ ಸುಪರ್ಣಾಯ ಮಹಾತ್ಮನೇ
॥ ೩ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಕಾಲಿಯ ನಾಗನು ನಾಗಗಳ ನಿವಾಸ ಸ್ಥಾನವಾದ ರಮಣಕ ದ್ವೀಪವನ್ನು ಏಕೆ ಬಿಟ್ಟು ಬಂದನು? ಅವನೊಬ್ಬನೇ ಗರುಡನ ಕುರಿತು ಯಾವ ಅಪರಾಧವನ್ನೆಸಗಿದ್ದನು? ॥ ೧ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ಹಿಂದಿನ ಕಾಲದಲ್ಲಿ ಗರುಡನೂ ಸರ್ಪಗಳೂ ಸೇರಿ ಗರುಡನ ಸರ್ಪಾಹಾರದ ವಿಷಯದಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದವು. ಆ ಒಪ್ಪಂದದಂತೆ ಪ್ರತಿ ತಿಂಗಳು ನಿರ್ದಿಷ್ಟವಾದ ಒಂದು ವೃಕ್ಷದಡಿಯಲ್ಲಿ ಗರುಡನ ಆಹಾರಕ್ಕಾಗಿ ಹಾವನ್ನು ಒಪ್ಪಿಸಬೇಕಾಗಿತ್ತು. ॥ ೨ ॥ ಈ ನಿಯಮಕ್ಕನುಸಾರವಾಗಿ ಪ್ರತಿ ಅಮಾವಾಸ್ಯೆ ದಿನ ಸಕಲ ಸರ್ಪಗಳು ತಮ್ಮ ರಕ್ಷಣೆಗಾಗಿ ಮಹಾತ್ಮ ಗರುಡನಿಗೆ ತಮ್ಮ-ತಮ್ಮ ಭಾಗವನ್ನು ಕೊಡುತ್ತಾ ಇದ್ದರು. * ॥ ೩ ॥

* ಇದಕ್ಕೆ ಸಂಬಂಧಪಟ್ಟ ಒಂದು ಕಥೆ ಹೀಗಿದೆ – ಗರುಡನ ತಾಯಿ ವಿನತಾ ಮತ್ತು ಸರ್ಪಗಳ ತಾಯಿ ಕದ್ರುವಿಗೆ ಪರಸ್ಪರ ವೈರವಿತ್ತು. ತಾಯಿಯ ವೈರವನ್ನು ನೆನೆದುಕೊಂಡು ಗರುಡನು ಸಿಕ್ಕಿದ ಸರ್ಪಗಳನ್ನು ತಿನ್ನುತ್ತಾ ಹೋದನು. ಇದರಿಂದ ದುಃಖಿತರಾಗಿ ಎಲ್ಲ ಸರ್ಪಗಳು ಬ್ರಹ್ಮದೇವರಿಗೆ ಶರಣಾದವು. ಆಗ ಬ್ರಹ್ಮದೇವರು – ಪ್ರತಿಯೊಂದು ಅಮಾವಾಸ್ಯೆಗೆ ಪ್ರತಿಯೊಂದು ಸರ್ಪಪರಿವಾರದವರು ಗರುಡನಿಗೆ ಒಂದು ಸರ್ಪವನ್ನು ಬಲಿಕೊಡುತ್ತಾ ಬರಬೇಕೆಂಬ ನಿಯಮವನ್ನು ಮಾಡಿದರು.

ವಿಷವೀರ್ಯಮದಾವಿಷ್ಟಃ ಕಾದ್ರವೇಯಸ್ತು ಕಾಲಿಯಃ ।
ಕದರ್ಥೀಕೃತ್ಯ ಗರುಡಂ ಸ್ವಯಂ ತಂ ಬುಭುಜೇ ಬಲಿಮ್
॥ ೪ ॥

ತಚ್ಛ್ರುತ್ವಾ ಕುಪಿತೋ ರಾಜನ್ಭಗವಾನ್ಭಗವತ್ಪ್ರಿಯಃ ।
ವಿಜಿಘಾಂಸುರ್ಮಹಾವೇಗಃ ಕಾಲಿಯಂ ಸಮುಪಾದ್ರವತ್
॥ ೫ ॥

ತಮಾಪತಂತಂ ತರಸಾ ವಿಷಾಯುಧಃ
ಪ್ರತ್ಯಭ್ಯಯಾದುಚ್ಛ್ರಿತನೈಕಮಸ್ತಕಃ ।
ದದ್ಭಿಃ ಸುಪರ್ಣಂ ವ್ಯದಶದ್ದದಾಯುಧಃ
ಕರಾಲಜಿಹ್ವೋಚ್ಛ್ವಸಿತೋಗ್ರಲೋಚನಃ ॥ ೬ ॥

ತಂ ತಾರ್ಕ್ಷ್ಯಪುತ್ರಃ ಸ ನಿರಸ್ಯ ಮನ್ಯುಮಾನ್
ಪ್ರಚಂಡವೇಗೋ ಮಧುಸೂದನಾಸನಃ ।
ಪಕ್ಷೇಣ ಸವ್ಯೇನ ಹಿರಣ್ಮಯೇನ ವೈ
ಜಘಾನ ಕದ್ರೂಸುತಮುಗ್ರವಿಕ್ರಮಃ ॥ ೭ ॥

ಸುಪರ್ಣಪಕ್ಷಾಭಿಹತಃ ಕಾಲಿಯೋಽತೀವ ವಿಹ್ವಲಃ ।
ಹ್ರದಂ ವಿವೇಶ ಕಾಲಿಂದ್ಯಾಸ್ತದಗಮ್ಯಂ ದುರಾಸದಮ್
॥ ೮ ॥

ತತ್ರೈಕದಾ ಜಲಚರಂ ಗರುಡೋ ಭಕ್ಷ್ಯಮೀಪ್ಸಿತಮ್ ।
ನಿವಾರಿತಃ ಸೌಭರಿಣಾ ಪ್ರಸಹ್ಯ ಕ್ಷುಧಿತೋಽಹರತ್
॥ ೯ ॥

ಮೀನಾನ್ಸದುಃಖಿತಾನ್ದೃಷ್ಟ್ವಾ ದೀನಾನ್ಮೀನಪತೌ ಹತೇ ।
ಕೃಪಯಾ ಸೌಭರಿಃ ಪ್ರಾಹ ತತ್ರತ್ಯಕ್ಷೇಮಮಾಚರನ್
॥ ೧೦ ॥

ಅತ್ರ ಪ್ರವಿಶ್ಯ ಗರುಡೋ ಯದಿ ಮತ್ಸ್ಯಾನ್ಸಖಾದತಿ ।
ಸದ್ಯಃ ಪ್ರಾಣೈರ್ವಿಯುಜ್ಯೇತ ಸತ್ಯಮೇತದ್ಬ್ರವೀಮ್ಯಹಮ್
॥ ೧೧ ॥

ಇಂ ಕಾಲಿಯಃ ಪರಂ ವೇದ ನಾನ್ಯಃ ಕಶ್ಚನ ಲೇಲಿಹಃ ।
ಅತ್ರಾತ್ಸೀದ್ಗರುಡಾದ್ಭೀತಃ ಕೃಷ್ಣೇನ ಚ ವಿವಾಸಿತಃ
॥ ೧೨ ॥

ಆ ಸರ್ಪಗಳಲ್ಲಿ ಕದ್ರುವಿನ ಪುತ್ರನಾದ ಕಾಲಿಯನಾಗನು ತನ್ನ ವಿಷಬಲದ ಗರ್ವದಿಂದ ಉನ್ಮತ್ತನಾಗಿದ್ದನು. ಅವನು ಗರುಡನನ್ನು ತಿರಸ್ಕರಿಸಿ ಸ್ವತಃ ಬಲಿಕೊಡುವುದಿರಲಿ, ಬೇರೆ ಸರ್ಪಗಳು ಗರುಡನಿಗಾಗಿ ಕೊಟ್ಟ ಬಲಿಯನ್ನು ತಿಂದುಬಿಡುತ್ತಿದ್ದನು. ॥ ೪ ॥ ಪರೀಕ್ಷಿತನೇ ! ಇದನ್ನು ತಿಳಿದ ಭಗವಂತನ ಪ್ರಿಯ ಪಾರ್ಷದನಾದ ಶಕ್ತಿಶಾಲಿ ಗರುಡನಿಗೆ ಭಾರೀ ಸಿಟ್ಟು ಬಂತು. ಆದಕ್ಕಾಗಿ ಅವನು ಕಾಲಿಯನಾಗವನ್ನು ಕೊಂದು ಹಾಕುವ ವಿಚಾರದಿಂದ ಅತಿವೇಗದಿಂದ ಅವನ ಮೇಲೆ ಆಕ್ರಮಣ ಮಾಡಿದನು. ॥ ೫ ॥ ವಿಷಧರನಾದ ಕಾಲಿಯನು-ಗರುಡನು ತನ್ನ ಮೇಲೆ ಆಕ್ರಮಿಸುತ್ತಿರುವುದನ್ನು ನೋಡಿದಾಗ ಅವನು ತನ್ನ ನೂರೊಂದು ಹೆಡೆಗಳಿಂದ ಕಚ್ಚಲು ಅವನ ಮೇಲೆ ಎರಗಿದನು. ವಿಷವಿರುವ ಹಲ್ಲುಗಳೇ ಕಾಲಿಯನ ಶಸ್ತ್ರವಾಗಿತ್ತು. ಆದಕ್ಕಾಗಿ ಆ ಹಲ್ಲುಗಳಿಂದಲೇ ಗರುಡನನ್ನು ಕಚ್ಚತೊಡಗಿದನು. ಆಗ ಅವನು ತನ್ನ ಭಯಂಕರವಾದ ನಾಲಿಗೆಗಳಿಂದ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿದ್ದನು. ದೀರ್ಘವಾಗಿ ನಿಟ್ಟಿಸುರುಬಿಡುತ್ತಾ ಭಯಂಕರವಾದ ಕಣ್ಣುಗಳಿಂದ ಗರುಡನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದನು. ॥ ೬ ॥ ತಾರ್ಕ್ಷ್ಯನಂದನ ಗರುಡನು ಭಗವಾನ್ ವಿಷ್ಣುವಿನ ವಾಹನನಾಗಿದ್ದು ಅವನ ವೇಗ ಪರಾಕ್ರಮಗಳು ಅತುಲನೀಯವಾಗಿತ್ತು. ಕಾಲಿಯನಾಗನ ಈ ಉದ್ಧಟತನವನ್ನು ಕಂಡು ಅತ್ಯಂತ ಕುಪಿತನಾಗಿ ಸುವರ್ಣಮಯವಾದ ತನ್ನ ಎಡರೆಕ್ಕೆಯಿಂದ ಜೋರಾಗಿ ನಾಗನನ್ನು ಅಪ್ಪಳಿದನು. ॥ ೭ ॥ ಅವನ ಪಕ್ಷಾಘಾತದಿಂದ ಕಾಳಿಯ ನಾಗನು ಗಾಯಗೊಂಡನು. ಅವನು ಗಾಬರಿಗೊಂಡು ಅಲ್ಲಿಂದ ಓಡಿಹೋಗಿ ಯಮುನೆಯ ಮಡುವಿಗೆ ಬಂದು ನೆಲೆಸಿದನು. ಯಮುನೆಯ ಈ ಕುಂಡವು ಗರುಡನಿಗೆ ಅಗಮ್ಯವಾಗಿತ್ತು. ಮೇಲಾಗಿ ಆ ಕುಂಡವು ಬೇರೆಯವರು ಪ್ರವೇಶಿಸಲಾಗದಷ್ಟು ಆಳವಾಗಿತ್ತು. ॥ ೮ ॥

ಪರೀಕ್ಷಿತನೇ ! ಇದೇ ಸ್ಥಳದಲ್ಲಿ ಒಂದು ದಿನ ಹಸಿದಿರುವ ಗರುಡನು ತಪಸ್ವೀ ಸೌಭರಿಋಷಿಗಳು ತಡೆದರೂ ತನಗೆ ಪ್ರಿಯ ಭಕ್ಷ್ಯವಾದ ಮೀನುಗಳನ್ನು ಬಲವಂತವಾಗಿ ಸೆಳೆದು ಹಿಡಿದು ತಿಂದುಬಿಟ್ಟನು. ॥ ೯ ॥ ತಮಗೆ ಮುಖಂಡನಾಗಿದ್ದ ಮಹಾ ಮತ್ಸ್ಯವು ಹೀಗೆ ವಿನಾಶವಾಗಲು ಅಲ್ಲಿದ್ದ ಮೀನುಗಳಿಗೆ ಬಹಳ ದುಃಖವುಂಟಾಯಿತು. ಬಹಳ ದೈನ್ಯಂದಿನ ದುಃಖಿಸುತ್ತಿದ್ದ ಆ ಮೀನುಗಳನ್ನು ನೋಡಿ ಪರಮದಯಾಳುವಾದ ಸೌಭರಿ ಮುನಿಯು ಅವುಗಳ ಒಳಿತಿಗಾಗಿ ಗರುಡನಿಗೆ ಶಾಪವಿತ್ತರು. ॥ ೧೦ ॥ ಮುಂದೆ ಗರುಡನೇನಾದರು ಈ ಮಡುವನ್ನು ಪ್ರವೇಶಿಸಿ ಮೀನುಗಳನ್ನು ತಿಂದನಾದರೆ ಅವನು ಒಡನೆಯೇ ಪ್ರಾಣಕಳೆದುಕೊಳ್ಳುತ್ತಾನೆ. ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ. ॥ ೧೧ ॥ ಪರೀಕ್ಷಿತನೇ ! ಮಹರ್ಷಿ ಸೌಭರಿಯ ಈ ಶಾಪ ವೃತ್ತಾಂತವು ಕಾಲಿಯನಾಗನಲ್ಲದೆ ಬೇರೆ ಯಾವ ಸರ್ಪವೂ ತಿಳಿದಿರಲಿಲ್ಲ. ಆದಕ್ಕಾಗಿ ಅವನು ಗರುಡನ ಭಯದಿಂದ ಅಲ್ಲಿ ನೆಲೆಸಿದ್ದನು. ಈಗ ಭಗವಾನ್ ಶ್ರೀಕೃಷ್ಣನು ಅವನನ್ನು ನಿರ್ಭಯನನ್ನಾಗಿಸಿ ಅಲ್ಲಿಂದ ರಮಣಕ ದ್ವೀಪಕ್ಕೆ ಕಳಿಸಿಬಿಟ್ಟನು. ॥ ೧೨ ॥

ಕೃಷ್ಣಂ ಹ್ರದಾದ್ವಿನಿಷ್ಕ್ರಾಂತಂ ದಿವ್ಯಸ್ರಗ್ಗಂಧವಾಸಸಮ್ ।
ಮಹಾಮಣಿಗಣಾಕೀರ್ಣಂ ಜಾಂಬೂನದಪರಿಷ್ಕೃತಮ್
॥ ೧೩ ॥

ಉಪಲಭ್ಯೋತ್ಥಿತಾಃ ಸರ್ವೇ ಲಬ್ಧಪ್ರಾಣಾ ಇವಾಸವಃ ।
ಪ್ರಮೋದನಿಭೃತಾತ್ಮಾನೋ ಗೋಪಾಃ ಪ್ರೀತ್ಯಾಭಿರೇಭಿರೇ
॥ ೧೪ ॥

ಯಶೋದಾ ರೋಹಿಣೀ ನಂದೋ ಗೋಪ್ಯೋ ಗೋಪಾಶ್ಚ ಕೌರವ ।
ಕೃಷ್ಣಂ ಸಮೇತ್ಯ ಲಬ್ಧೇಹಾ ಆಸಲ್ಲಬ್ಧಮನೋರಥಾಃ
॥ ೧೫ ॥

ರಾಮಶ್ಚಾಚ್ಯುತಮಾಲಿಂಗ್ಯ ಜಹಾಸಾಸ್ಯಾನುಭಾವವಿತ್ ।
ನಗಾ ಗಾವೋ ವೃಷಾ ವತ್ಸಾ ಲೇಭಿರೇ ಪರಮಾಂ ಮುದಮ್
॥ ೧೬ ॥

ನಂದಂ ವಿಪ್ರಾಃ ಸಮಾಗತ್ಯ ಗುರವಃ ಸಕಲತ್ರಕಾಃ ।
ಊಚುಸ್ತೇ ಕಾಲಿಯಗ್ರಸ್ತೋ ದಿಷ್ಟ್ಯಾ ಮುಕ್ತಸ್ತವಾತ್ಮಜಃ
॥ ೧೭ ॥

ದೇಹಿ ದಾನಂ ದ್ವಿಜಾತೀನಾಂ ಕೃಷ್ಣನಿರ್ಮುಕ್ತಿಹೇತವೇ ।
ನಂದಃ ಪ್ರೀತಮನಾ ರಾಜನ್ಗಾಃ ಸುವರ್ಣಂ ತದಾದಿಶತ್
॥ ೧೮ ॥

ಯಶೋದಾಪಿ ಮಹಾಭಾಗಾ ನಷ್ಟಲಬ್ಧಪ್ರಜಾ ಸತೀ ।
ಪರಿಷ್ವಜ್ಯಾಂಕಮಾರೋಪ್ಯ ಮುಮೋಚಾಶ್ರುಕಲಾಂ ಮುಹುಃ
॥ ೧೯ ॥

ತಾಂ ರಾತ್ರಿಂ ತತ್ರ ರಾಜೇಂದ್ರ ಕ್ಷುತ್ತೃಡ್ಭ್ಯಾಂ ಶ್ರಮಕರ್ಶಿತಾಃ ।
ಊಷುರ್ವ್ರಜೌಕಸೋ ಗಾವಃ ಕಾಲಿಂದ್ಯಾ ಉಪಕೂಲತಃ
॥ ೨೦ ॥

ತದಾ ಶುಚಿನವನೋದ್ಭೂತೋ ದಾವಾಗ್ನಿಃ ಸರ್ವತೋ ವ್ರಜಮ್ ।
ಸುಪ್ತಂ ನಿಶೀಥ ಆವೃತ್ಯ ಪ್ರದಗ್ಧುಮುಪಚಕ್ರಮೇ
॥ ೨೧ ॥

ತತ ಉತ್ಥಾಯ ಸಂಭ್ರಾಂತಾ ದಹ್ಯಮಾನಾ ವ್ರಜೌಕಸಃ ।
ಕೃಷ್ಣಂ ಯಯುಸ್ತೇ ಶರಣಂ ಮಾಯಾಮನುಜಮೀಶ್ವರಮ್
॥ ೨೨ ॥

ಕೃಷ್ಣ ಕೃಷ್ಣ ಮಹಾಭಾಗ ಹೇ ರಾಮಾಮಿತವಿಕ್ರಮ ।
ಏಷ ಘೋರತಮೋ ವಹ್ನಿಸ್ತಾವಕಾನ್ ಗ್ರಸತೇ ಹಿ ನಃ
॥ ೨೩ ॥

ಪರೀಕ್ಷಿತನೇ! ಇತ್ತಲಾಗಿ ಶ್ರೀಕೃಷ್ಣನು ನಾಗಪತ್ನಿಯರಿಂದ ಕೂಡಲ್ಪಟ್ಟ ದಿವ್ಯವಾದ ಮಾಲೆ-ಗಂಧ-ವಸ್ತ್ರ ಬಹುಮೂಲ್ಯವಾದ ಮಣಿಗಳು - ಸುವರ್ಣಮಯ ಆಭರಣಗಳು - ಇವುಗಳಿಂದ ಅಲಂಕೃತನಾಗಿ ಆ ಮಡುವಿನಿಂದ ಹೊರಕ್ಕೆ ಬಂದನು. ॥ ೧೩ ॥ ಅವನನ್ನು ನೋಡಿದೊಡನೆಯೇ - ಪ್ರಾಣಗಳನ್ನು ಪಡೆದ ಇಂದ್ರಿಯಗಳು ಚೇತನವಾಗುವಂತೆ ಎಲ್ಲ ವ್ರಜವಾಸಿಗಳು ಎದ್ದು ನಿಂತರು. ಸಮಸ್ತ ಗೋಪರ ಹೃದಯ ಆನಂದದಿಂದ ತುಂಬಿಹೋಯಿತು. ಅವರು ಅತ್ಯಂತ ಪ್ರೇಮ ಮತ್ತು ಆನಂದದಿಂದ ಬಾಲಕೃಷ್ಣನನ್ನು ಬಾಚಿ ತಬ್ಬಿಕೊಂಡರು. ॥ ೧೪ ॥ ಪರೀಕ್ಷಿತನೇ! ಯಶೋದೆ, ರೋಹಿಣಿ, ನಂದಗೋಪ, ಗೋಪ-ಗೋಪಿಯರು ಎಲ್ಲರೂ ಶ್ರೀಕೃಷ್ಣನನ್ನು ಪಡೆದುಕೊಂಡು ನವಚೈತನ್ಯವನ್ನು ಹೊಂದಿದರು. ಅವರ ಮನೋರಥ ಸಫಲವಾಯಿತು. ॥ ೧೫ ॥ ಬಲರಾಮ ನಿಗಾದರೋ ಭಗವಂತನ ಪ್ರಭಾವವು ತಿಳಿದೇ ಇತ್ತು. ಅವನು ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ನಗತೊಡಗಿದನು. ಶ್ರೀಕೃಷ್ಣನ ಪುನರಾಗಮನದಿಂದ ಪರ್ವತ, ವೃಕ್ಷಗಳು, ಹಸುಗಳು, ಎತ್ತುಗಳು, ಕರುಗಳು ಆನಂದಿಸಿದವು. ॥ ೧೬ ॥ ಗೋಪರ ಕುಲ ಗುರು ಬ್ರಾಹ್ಮಣರು ತಮ್ಮ ಪತ್ನಿಯರೊಂದಿಗೆ ನಂದಗೋಪನ ಬಳಿಗೆ ಬಂದು - ನಂದಮಹಾರಾಜ! ನಿನ್ನ ಬಾಲಕನನ್ನು ಕಾಳಿಯ ನಾಗನು ಹಿಡಿದಿದ್ದನು. ಅವನು ಸೌಭಾಗ್ಯ ವಶದಿಂದ ಬಿಡುಗಡೆ ಹೊಂದಿ ಬಂದನು. ॥ ೧೭ ॥ ಶ್ರೀಕೃಷ್ಣನು ಮೃತ್ಯುಮುಖದಿಂದ ಬದುಕಿ ಬಂದ ಕಾರಣ ನೀನು ಬ್ರಾಹ್ಮಣರಿಗೆ ಯಥೇಚ್ಛವಾಗಿ ದಾನ ಮಾಡು. ಪರೀಕ್ಷಿತನೇ! ಬ್ರಾಹ್ಮಣರ ಮಾತನ್ನು ಕೇಳಿ ನಂದ ಗೋಪನಿಗೆ ಪರಮಾನಂದವಾಯಿತು. ಅವನು ಬಹಳಷ್ಟು ಚಿನ್ನ ಹಸುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ॥ ೧೮ ॥ ಪರಮ ಸೌಭಾಗ್ಯವತಿಯಾದ ಯಶೋದಾದೇವಿಯು ಕಾಲನ ದವಡೆಯಿಂದ ಬದುಕಿಬಂದ ತನ್ನ ಮುದ್ದುಕಂದನಾದ ಕೃಷ್ಣನನ್ನು ತೊಡೆಯಲ್ಲಿತ್ತಿಕೊಂಡು, ಬಾಚಿ ತಬ್ಬಿಕೊಂಡಳು. ಆಕೆಯ ಕಣ್ಣುಗಳಿಂದ ಸುರಿದ ಆನಂದಾಶ್ರುಗಳು ಕೃಷ್ಣನನ್ನು ತೋಯಿಸಿದವು. ॥ ೧೯ ॥

ರಾಜೇಂದ್ರನೇ! ವ್ರಜವಾಸಿಗಳು ಮತ್ತು ಗೋವುಗಳು ಬಹಳ ಆಯಾಸಗೊಂಡಿದ್ದರು. ಮೇಲಾಗಿ ಹಸಿವು-ಬಾಯಾರಿಕೆಯಿಂದ ಬಳಲಿದ್ದರು. ಆದುದರಿಂದ ಅಂದಿನ ರಾತ್ರಿಯಲ್ಲಿ ಅವರು ವ್ರಜಕ್ಕೆ ಹೋಗದೆ, ಅಲ್ಲೇ ಯಮುನಾ ತೀರದಲ್ಲಿ ಮಲಗಿದ್ದರು. ॥ ೨೦ ॥ ಅದು ಬೇಸಿಗೆಯ ಕಾಲವಾಗಿತ್ತು. ಮರ-ಗಿಡಗಳೆಲ್ಲವೂ ಒಣಗಿ ಹೋಗಿದ್ದವು. ಅರ್ಧರಾತ್ರಿಯ ಸಮಯದಲ್ಲಿ ಅವಕ್ಕೆ ಬೆಂಕಿ ಹತ್ತಿಕೊಂಡಿತು. ಆ ಬೆಂಕಿಯು ಮಲಗಿರುವ ವ್ರಜವಾಸಿಗಳನ್ನು ಸುತ್ತುವರೆದು ಅವರನ್ನು ಸುಡತೊಡಗಿತು. ॥ ೨೧ ॥ ಬೆಂಕಿಯ ಶಾಖ ತಗಲುತ್ತಲೇ ವ್ರಜವಾಸಿಗಳು ಗಾಬರಿಯಿಂದ ಎದ್ದು ನಿಂತು ಲೀಲಾಮಾನುಷವಿಗ್ರಹನಾದ ಭಗವಾನ್ ಶ್ರೀಕೃಷ್ಣನಿಗೆ ಶರಣು ಹೋದರು. ॥ ೨೨ ॥ "ಕೃಷ್ಣ! ಮುಕುಂದ! ಮಹಾ ಭಾಗ್ಯ ಶಾಲಿಯೇ! ಅಮಿತ ವಿಕ್ರಮನಾದ ಬಲರಾಮನೇ! ನಿಮ್ಮಿಬ್ಬರ ಬಲಪರಾಕ್ರಮಗಳು ಅಮಿತವಾಗಿವೆ. ನೋಡಿ! ನೋಡಿ! ಈ ಭಯಂಕರ ಕಾಡ್ಗಿಚ್ಚು ನಿಮ್ಮ ಸ್ವಜನ ಸಂಬಂಧಿಗಳಾದ ನಮ್ಮನ್ನು ಸುಡಲು ಬಯಸುತ್ತಿದೆ. ॥ ೨೩ ॥

ಸುದುಸ್ತರಾನ್ನಃ ಸ್ವಾನ್ಪಾಹಿ ಕಾಲಾಗ್ನೇಃ ಸುಹೃದಃ ಪ್ರಭೋ ।
ನ ಶಕ್ನುಮಸ್ತ್ವಚ್ಚರಣಂ ಸಂತ್ಯಕ್ತುಮಕುತೋಭಯಮ್
॥ ೨೪ ॥

ನೀವು ಸರ್ವಸಮರ್ಥ ರಾಗಿರುವಿರಿ. ನಾವು ನಿಮ್ಮ ಸುಹೃದ ರಾಗಿದ್ದೇವೆ. ಆದರಿಂದ ಈ ಪ್ರಳಯಾಗ್ನಿಯಿಂದ ರಕ್ಷಿಸಿರಿ. ಪ್ರಭೋ ! ನಾವು ಮೃತ್ಯುವಿಗೆ ಹೆದರುವುದಿಲ್ಲ. ಆದರೆ ಅಪಾಯ ರಹಿತವಾದ ನಿನ್ನ ದಿವ್ಯ ಚರಣಕಮಲಗಳನ್ನು ಬಿಟ್ಟು ಹೋಗಲು ನಾವು ಸಮರ್ಥರಾಗಿಲ್ಲ.'' ॥ ೨೪ ॥ ಭಗವಂತನು ಅನಂತನಾಗಿ ದ್ದಾನೆ. ಅವನು ಅನಂತ ಶಕ್ತಿಗಳನ್ನು ಧರಿಸಿರುವನು. ಆ ಜಗದೀಶ್ವರ ಭಗವಾನ್ ಶ್ರೀಕೃಷ್ಣನು ತನ್ನ ಸ್ವಜನರು ಹೀಗೆ ದುಃಖಿತರಾಗಿರು ವುದನ್ನು ನೋಡಿದಾಗ ಅವನು ಆ ಭಯಂಕರ ಕಾಡುಗಿಚ್ಚನ್ನು ಕುಡಿದುಬಿಟ್ಟನು. ॥ ೨೫ ॥

ಇತ್ಥಂ ಸ್ವಜನವೈಕ್ಲವ್ಯಂ ನಿರೀಕ್ಷ್ಯ ಜಗದೀಶ್ವರಃ ।
ತಮಗ್ನಿಮಪಿಬತ್ತೀವ್ರಮನಂತೋಽನಂತ ಶಕ್ತಿಧೃಕ್
॥ ೨೫ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ದಾವಾಗ್ನಿಮೋಚನಂ ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಪ್ರಲಂಬಾಸುರ ಉದ್ಧಾರ

ಶ್ರೀಶುಕ ಉವಾಚ

ಅಥ ಕೃಷ್ಣಃ ಪರಿವೃತೋ ಜ್ಞಾತಿಭಿರ್ಮುದಿತಾತ್ಮಭಿಃ ।
ಅನುಗೀಯಮಾನೋ ನ್ಯವಿಶದ್ವ್ರಜಂ ಗೋಕುಲಮಂಡಿತಮ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಅನಂದತುಂದಿಲರಾದ ಜ್ಞಾತಿಬಾಂಧವರಿಂದ ಸುತ್ತುವರಿಯಲ್ಪಟ್ಟ ಶ್ರೀಕೃಷ್ಣನು ತನ್ನ ಅನುಯಾಯಿಗಳಿಂದ ಸ್ತುತಿಸಲ್ಪಡುತ್ತಾ ಗೋವುಗಳ ಸಮೂಹದಿಂದ ಸಮಲಂಕೃತವಾದ ಗೊಲ್ಲರಹಳ್ಳಿಯನ್ನು ಪ್ರವೇಶಿಸಿ ದನು. ॥ ೧ ॥ ಹೀಗೆ ತನ್ನ ಯೋಗಮಾಯೆಯಿಂದ ಗೋಪಾಲ ನಂತೆ ವೇಷವನ್ನು ತೊಟ್ಟು ರಾಮ-ಕೃಷ್ಣರು ವ್ರಜದಲ್ಲಿ ಕ್ರೀಡಿಸು ತ್ತಿದ್ದರು. ಆಗ ಗ್ರೀಷ್ಮ ಋತುವು ಬಂದಿತ್ತು. ಇದು ಶರೀರ ಧಾರಿಗಳಿಗೆ ಅಷ್ಟು ಪ್ರಿಯವಾಗಿರಲಿಲ್ಲ. ॥ ೨ ॥ ಆದರೆ ವೃಂದಾವನದ ಸ್ವಾಭಾವಿಕ ಗುಣಗಳಿಂದ ಅಲ್ಲಿ ವಸಂತ ಋತುವಿನದೇ ಲಕ್ಷಣ ಗಳಿದ್ದವು. ಭಗವಾನ್ ಶ್ಯಾಮಸುಂದರನೂ, ಬಲರಾಮನೂ ಅಲ್ಲಿ ವಾಸಿಸುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು. ॥ ೩ ॥ ಜೀರುಂಡೆಗಳ ಕರ್ಕಶ ಧ್ವನಿಯು ಅಲ್ಲಿ ಹರಿಯುತ್ತಿದ್ದ ನದಿಯ ಮಂಜುಳ ಧ್ವನಿಯಿಂದ ಅಡಗಿಹೋಗಿತ್ತು. ನದಿಗಳ ಪ್ರವಾಹದ ತುಂತುರು ಗಳಿಂದ ನೆನೆಸಲ್ಪಟ್ಟು ಹಸಿರಾದ ವೃಕ್ಷಗಳ ಗುಂಪಿನಿಂದ ವೃಂದಾ ವನವು ಸಮಲಂಕೃತವಾಗಿತ್ತು. ॥ ೪ ॥ ನೋಡಿದಲ್ಲೆಲ್ಲ ಹಚ್ಚ ಹಸಿ ರಾದ ಹುಲ್ಲಿನಿಂದಾಗಿ ಭೂಪ್ರದೇಶವೆಲ್ಲ ಹಸಿರು ಹಾಸಿಗೆ ಹಾಸಿದಂತಿತ್ತು. ಅಲ್ಲಿನ ತಂಗಾಳಿಯು ನದಿ, ಸರೋವರ, ಗಿರಿ ನದಿಗಳ ಅಲೆಗಳ ಮೂಲಕವಾಗಿ ಬೀಸುತ್ತಾ ಸೌಗಂಧಿಕ, ಕಮಲ, ಕನ್ನೈದಿಲೆಗಳ ಸುಗಂಧಮಯವಾದ ಧೂಳಿಯನ್ನು ಹೊತ್ತುತಂದು ವೃಂದಾವನವನ್ನೇ ಸುಗಂಧಮಯವಾಗಿಯೂ, ಶೀತಲವಾಗಿಯೂ ಮಾಡುತ್ತಿದ್ದಿತು. ಇಲ್ಲಿ ವಾಸಮಾಡುವವರಿಗೆ ಕಾಡ್ಗಿಚ್ಚಿನ ಬೇಗೆ ಯಾಗಲೀ, ಗ್ರೀಷ್ಮಸೂರ್ಯನ ತಾಪವಾಗಲೀ ಇರಲಿಲ್ಲ. ॥ ೫ ॥

ಪ್ರಜೇ ವಿಕ್ರೀಡತೋರೇವಂ ಗೋಪಾಲಚ್ಛದ್ಮಮಾಯಯಾ ।
ಗ್ರೀಷ್ಮೋ ನಾಮರ್ತುರಭವನ್ನಾತಿಪ್ರೇಯಾನ್ಶರೀರಿಣಾಮ್
॥ ೨ ॥

ಸ ಚ ವೃಂದಾವನಗುಣೈರ್ವಸಂತ ಇವ ಲಕ್ಷಿತಃ ।
ಯತ್ರಾಸ್ತೇ ಭಗವಾನ್ಸಾಕ್ಷಾದ್ರಾಮೇಣ ಸಹ ಕೇಶವಃ
॥ ೩ ॥

ಯತ್ರ ನಿರ್ಝರನಿಹ್ರಾದನಿವೃತ್ತಸ್ವನರಿಂಖಿಲ್ಲಿಕಮ್ ।
ಶಶ್ವತ್ಸಕರರ್ಜೀಷದ್ರುಮಮಂಡಲಮಂಡಿತಮ್
॥ ೪ ॥

ಸರಿತ್ಸರಃ ಪ್ರಸ್ರವಣೋರ್ಮಿವಾಯುನಾ
ಕಲ್ಹಾರಕಂಜೋತ್ಪಲರೇಣುಹಾರಿಣಾ ।
ನ ವಿದ್ಯತೇ ಯತ್ರ ವನೌಕಸಾಂ ದವೋ
ನಿದಾಘಹಾರ್ಕಾತಪತೋಽತಿಶಾದ್ವಲೇ
॥ ೫ ॥

ಅಗಾಧತೋಯಹ್ರದಿನೀತಟೋರ್ಮಿಭಿಃ
ದ್ರವತ್ಪುರೀಷ್ಯಾಃ ಪುಲಿನೈಃ ಸಮಂತತಃ ।
ನ ಯತ್ರ ಚಂಡಾಂಶುಕರಾ ವಿಷೋಲ್ಬಣಾ
ಭುವೋ ರಸಂ ಶಾದ್ವಲಿತಂ ಚ ಗೃಹ್ಣತೇ ॥ ೬ ॥

ನದಿಗಳಲ್ಲಿ ಆಳವಾದ ನೀರು ತುಂಬಿದ್ದು ಎತ್ತರವಾಗಿ ಎದ್ದು ಬರುತ್ತಿದ್ದ ಅಲೆಗಳು ದಡದಲ್ಲಿದ್ದ ಮರಳು ದಿಣ್ಣೆಗಳಿಗೆ ರಭಸದಿಂದ ಅಪ್ಪಳಿಸುತ್ತಿದ್ದು ಅವನ್ನು ಸ್ವಚ್ಛಗೊಳಿಸುತ್ತಿದ್ದವು. ಅದರಿಂದಾಗಿ ಸುತ್ತಲಿನ ಭೂಮಿಯು ಒದ್ದೆಯಾಗುತ್ತಿತ್ತು. ಸೂರ್ಯನ ಅತ್ಯಂತ ಉಗ್ರಕಿರಣಗಳೂ ಅವನ್ನು ಒಣಗಿಸಲಾಗದೆ ಹಚ್ಚ ಹಸುರಾಗಿಯೇ ಇರುತ್ತಿತ್ತು. ॥ ೬ ॥

ವನಂ ಕುಸುಮಿತಂ ಶ್ರೀಮನ್ನದಚ್ಚಿತ್ರಮೃಗದ್ವಿಜಮ್ ।
ಗಾಯನ್ಮಯೂರಭ್ರಮರಂ ಕೂಜತ್ಕೋಕಿಲಸಾರಸಮ್
॥ ೭ ॥

ಆ ವೃಂದಾವನದಲ್ಲಿ ವೃಕ್ಷಗಳ ಸಾಲು-ಸಾಲುಗಳು ಹೂವುಗಳಿಂದ ಸೊಂಪಾಗಿ ಸಂಪತ್ ಭರಿತವಾಗಿತ್ತು. ನೋಡಿದಲ್ಲೆಲ್ಲ ಸೌಂದರ್ಯವೇ ಮೂರ್ತಿಭವಿಸಿದಂತಿತ್ತು. ಕೆಲವೆಡೆ ಬಣ್ಣ-ಬಣ್ಣದ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದರೆ, ಕೆಲವೆಡೆ ಜಿಂಕೆಗಳು ನೆಗೆಯುತ್ತಾ ಓಡುತ್ತಿದ್ದವು. ಕೆಲವುಕಡೆ ನವಿಲುಗಳು ಜಾಗರವಾಡುತ್ತಿದ್ದರೆ, ದುಂಬಿಗಳು ಝೇಂಕರಿಸುತ್ತಿದ್ದವು. ಕೆಲವೆಡೆ ಕೋಗಿಲೆ ಸಾರಸಪಕ್ಷಿಗಳು ಸುಮಧುರವಾಗಿ ಕೂಗುತ್ತಿದ್ದವು. ॥ ೭ ॥ ಅಂತಹ ಸುಂದರ ವನವನ್ನು ನೋಡಿ ಶ್ಯಾಮಸುಂದರ ಶ್ರೀಕೃಷ್ಣನು ಮತ್ತು ಗೌರಸುಂದರ ಬಲರಾಮನು ಆ ವನದಲ್ಲಿ ವಿಹರಿಸಲು ಮನಮಾಡಿದರು. ಮುಂದೆ-ಮುಂದೆ ಹಸುಗಳು ಹೋಗುತ್ತಿದ್ದವು, ಹಿಂದೆ-ಹಿಂದೆ ಗೋಪಬಾಲಕರು ಮತ್ತು ನಡುವೆ ಅಣ್ಣನೊಡನೆ ಮರಲಿಯನ್ನು ನುಡಿಸುತ್ತಾ ಶ್ರೀಕೃಷ್ಣನು ಹೋಗುತ್ತಿದ್ದನು. ॥ ೮ ॥

ಕ್ರೀಡಿಷ್ಯಮಾಣಸ್ತತ್ಕೃಷ್ಣೋ ಭಗವಾನ್ಬಲಸಂಯುತಃ ।
ವೇಣುಂ ವಿರಣಯನ್ಗೋಪೈರ್ಗೋಧನೈಃ ಸಂವೃತೋಽವಿಶತ್
॥ ೮ ॥

ರಾಮ-ಶ್ಯಾಮರೂ ಮತ್ತು ಗೋಪಾಲ ಬಾಲಕರು ಹೊಚ್ಚ ಹೊಸದಾದ ಚಿಗುರುಗಳಿಂದಲೂ, ನವಿಲುಗರಿಗಳಿಂದಲೂ, ವಿಕಸಿತ ಸುಗಂಧ ಪುಷ್ಪಗಳಿಂದಲೂ, ಬಣ್ಣ-ಬಣ್ಣದ ಹರಿದಳ, ಮಣಶಿಲೆ, ಸಿಂಧೂರವೇ ಮೊದಲಾದ ಗೈರಿಕ ಧಾತುಗಳಿಂದಲೂ ತಮ್ಮ ಶರೀರಗಳನ್ನು ನಾನಾ ರೀತಿಯಿಂದ ಸಿಂಗರಿಸಿಕೊಂಡರು. ಅವರಲ್ಲಿ ಕೆಲವರು ಆನಂದ ಮಗ್ನರಾಗಿ ನರ್ತಿಸಲು ತೊಡಗಿದರು. ಕೆಲವರು ತೊಡೆಗಳನ್ನು ತಟ್ಟಿಕೊಂಡು ಕುಸ್ತಿಯಾಡತೊಡಗಿದರು. ಕೆಲವರು ಹಾಡಲು ಪ್ರಾರಂಭಿಸಿದರು. ॥ ೯ ॥ ಶ್ರೀಕೃಷ್ಣನು ನರ್ತಿಸುವಾಗ ಕೆಲವು ಗೊಲ್ಲರು ಹಾಡುವರು, ಕೆಲವರು ಕೊಳಲನ್ನು ನುಡಿಸುವರು, ಕೆಲವರು ಕೈಗಳಿಂದ ಚಪ್ಪಾಳೆತಟ್ಟಿ ತಾಳ ಹಾಕುತ್ತಿದ್ದರು. ಕೆಲವರು ಕೊಂಬುಗಳನ್ನೂದುವರು, ಉಳಿದವರು 'ಭಲೇ ಕೃಷ್ಣ!' ಎನ್ನುತ್ತಾ ನೃತ್ಯವನ್ನು ಪ್ರೋತ್ಸಾಹಿಸುವರು. ॥ ೧೦ ॥ ಪರೀಕ್ಷಿದ್ರಾಜನೇ! ಆ ಸಮಯದಲ್ಲಿ ನಟರು ತಮ್ಮ ನಾಯಕನನ್ನು ಪ್ರಶಂಸೆಮಾಡುವಂತೆ - ಗೋಪಾಲಕರ ವೇಷಗಳನ್ನು ಧರಿಸಿದ್ದ ದೇವತೆಗಳು ಗೊಲ್ಲರಜಾತಿಯಲ್ಲಿ ಜನ್ಮತಳೆದು ತಮ್ಮ ನಿಜ ಸ್ವರೂಪವನ್ನು ಮರೆಸಿಕೊಂಡಿದ್ದ ರಾಮ-ಶ್ಯಾಮರನ್ನು ಸ್ತೋತ್ರಮಾಡತೊಡಗಿದರು. ॥ ೧೧ ॥ ಕಾಕಪಕ್ಷಧರರಾದ* ರಾಮಕೃಷ್ಣರು ಒಮ್ಮೆ ಪರಸ್ಪರ ಕೈಗಳನ್ನು ಹಿಡಿದುಕೊಂಡು ಕುಂಬಾರನ ಚಕ್ರದಂತೆ ಗರಗರನೆ ಸುತ್ತುವರು. ಆಪ್ಪಾಲೆ ತಿಪ್ಪಾಲೆ ಆಟವನ್ನು ಆಡುವರು.

ಪ್ರವಾಲಬರ್ಹಸ್ತಬಕಸ್ರಗ್ಧಾತುಕೃತಭೂಷಣಾಃ ।
ರಾಮಕೃಷ್ಣಾದಯೋ ಗೋಪಾ ನನೃತುರ್ಯುಯುಧುರ್ಜಗುಃ
॥ ೯ ॥

ಕೃಷ್ಣಸ್ಯ ನೃತ್ಯತಃ ಕೇಚಿಜ್ಜಗುಃ ಕೇಚಿದವಾದಯನ್ ।
ವೇಣುಪಾಣಿತಲೈಃ ಶೃಂಗೈಃ ಪ್ರಶಶಂಸುರಥಾಪರೇ
॥ ೧೦ ॥

ಗೋಪಜಾತಿಪ್ರತಿಚ್ಛನ್ನೌ ದೇವಾ ಗೋಪಾಲರೂಪಿಣಃ ।
ಈಡಿರೇ ಕೃಷ್ಣರಾಮೌ ಚ ನಟಾ ಇವ ನಟಂ ನೃಪ
॥ ೧೧ ॥

* ಕಾಕ ಪಕ್ಷ - ಬಾಲಕರ ಕಿವಿಗಳ ಪಕ್ಕದ ಕೆನ್ನೆಗಳ ಮೇಲಿರುವ ಕೂದಲು; ತಲೆಯ ಪಕ್ಕದ ಕೂದಲು, ಕಾಕಪಕ್ಷಧರರೆಂದರೆ ಚಿಕ್ಕ ವಯಸ್ಸಿನವರೂ ಎಂದರ್ಥವಿದೆ.

ಭ್ರಾಮಣೈರ್ಲಂಘನೈಃ ಕ್ಷೇಪೈರಾಸ್ಫೋಟನವಿಕರ್ಷಣೈಃ ।
ಚಿಕ್ರೀಡತುರ್ನಿಯುದ್ಧೇನ ಕಾಕಪಕ್ಷಧರೌ ಕ್ವಚಿತ್
॥ ೧೨ ॥

ಕ್ವಚಿನ್ನೃತ್ಯತ್ಸು ಚಾನ್ಯೇಷು ಗಾಯಕೌ ವಾದಕೌ ಸ್ವಯಮ್ ।
ಶಶಂಸತುರ್ಮಹಾರಾಜ ಸಾಧು ಸಾಧ್ವಿತಿ ವಾದಿನೌ
॥ ೧೩ ॥

ಕ್ವಚಿದ್ಬಿಲ್ವೈಃ ಕ್ವಚಿತ್ಕುಂಭೈಃ ಕ್ವ ಚಾಮಲಕಮುಷ್ಟಿಭಿಃ ।
ಅಸ್ಪೃಶ್ಯನೇತ್ರಬಂಧಾದ್ಯೈಃ ಕ್ವಚಿನ್ಮೃಗಖಗೇಹಯಾ
॥ ೧೪ ॥

ಕ್ವಚಿಚ್ಚ ದರ್ದುರಪ್ಲಾವೈರ್ವಿವಿಧೈರುಪಹಾಸಕೈಃ ।
ಕದಾಚಿತ್ಸ್ಯಂದೋಲಿಕಯಾ ಕರ್ಹಿಚಿನ್ನೃಪಚೇಷ್ಟಯಾ
॥ ೧೫ ॥

ಏವಂ ತೌ ಲೋಕಸಿದ್ಧಾಭಿಃ ಕ್ರೀಡಾಭಿಶ್ಚೇರತುರ್ವನೇ ।
ನದ್ಯದ್ರಿದ್ರೋಣಿಕುಂಜೇಷು ಕಾನನೇಷು ಸರಸ್ಸು ಚ
॥ ೧೬ ॥

ಪೂಂಶ್ಚಾರಯತೋರ್ಗೋಪೈಸ್ತದ್ವನೇ ರಾಮಕೃಷ್ಣಯೋಃ ।
ಗೋಪರೂಪೀ ಪ್ರಲಂಬೋಽಗಾದಸುರಸ್ತಜ್ಜಿಹೀರ್ಷಯಾ
॥ ೧೭ ॥

ತಂ ವಿದ್ವಾನಪಿ ದಾಶಾರ್ಹೋ ಭಗವಾನ್ಸರ್ವದರ್ಶನಃ ।
ಅನ್ವಮೋದತ ತತ್ಸಖ್ಯಂ ವಧಂ ತಸ್ಯ ವಿಚಿಂತಯನ್
॥ ೧೮ ॥

ತಮ್ಪೋಪಾಹೂಯ ಗೋಪಾಲಾಕೃಷ್ಣ ಪ್ರಾಹ ವಿಹಾರವಿತ್ ।
ಹೇ ಗೋಪಾ ವಿಹರಿಷ್ಯಾಮೋ ದ್ವಂದ್ವೀಭೂಯ ಯಥಾಯಥಮ್
॥ ೧೯ ॥

ತತ್ರ ಚಕ್ರುಃ ಪರಿವೃಢೌ ಗೋಪಾ ರಾಮಜನಾರ್ದನೌ ।
ಕೃಷ್ಣಸಂಘಟ್ಟಿನಃ ಕೇಚಿದಾಸನ್ರಾಮಸ್ಯ ಚಾಪರೇ
॥ ೨೦ ॥

ಮತ್ತೊಮ್ಮೆ ಎತ್ತರಕ್ಕೂ ಮತ್ತು ದೂರಕ್ಕೂ ನೆಗೆಯುವರು. ಕೆಲವೊಮ್ಮೆ ವೃಕ್ಷಗಳಲ್ಲಿರುತ್ತಿದ್ದ ಹಣ್ಣುಗಳಿಗೆ ಕವಣೆ ಕಲ್ಲಿನಿಂದ ಹೊಡೆಯುವರು. ಪರಸ್ಪರ ಗುದ್ದಾಡುವರು. ಎರಡು ಗುಂಪಿನವರು ಹಗ್ಗವನ್ನು ಎಳೆದಾಡುತ್ತಾ ಹಗ್ಗಜಗ್ಗಾಟ ಆಟವಾಡುವರು. ಹೀಗೆ ಗೋಪ ಬಾಲಕರಿಂದ ಕೂಡಿದ ರಾಮ-ಶ್ಯಾಮರು ನಾನಾ ವಿಧವಾದ ಆಟಗಳನ್ನಾಡುತ್ತಿದ್ದರು. ॥ ೧೨ ॥ ಕೆಲವು ಸಮಯಗಳಲ್ಲಿ ಗೋಪ ಬಾಲಕರು ನೃತ್ಯವನ್ನಾಡುವಾಗ ರಾಮ-ಶ್ಯಾಮರು ಹಾಡುವರು, ಕೊಳಲನ್ನೂದುವರು, ಕೊಂಬು ಬಾರಿಸುವರು, ನಡು-ನಡುವೆ ಭಲೇ ! ಭಲೇ ! ಎಂದು ಪ್ರಶಂಸೆಯನ್ನು ಮಾಡುವರು. ॥ ೧೩. ॥ ಗೋಪಬಾಲಕರಿಂದ ಪರಿವೃತರಾದ ರಾಮ-ಕೃಷ್ಣರು ಕೆಲವು ವೇಳೆ ಬೇಲದಕಾಯಿಗಳಿಂದಲೂ ಬಿಲ್ವದ ಕಾಯಿಗಳಿಂದಲೂ, ನೆಲ್ಲಿ ಕಾಯಿಗಳಿಂದಲೂ ಚೆಂಡಿನ ಆಡಗಳನ್ನಾಡುವರು. ಕೆಲವೊಮ್ಮೆ ಗೋಪಬಾಲಕರ ಕಣ್ಣುಗಳಿಗೆ ಬಟ್ಟೆಕಟ್ಟಿ ಕಣ್ಣುಮುಚ್ಚಾಲೆ ಆಟವನ್ನು ಆಡುವರು. ಕೆಲವು ವೇಳೆ ಮೃಗಗಳಂತೆಯೂ, ಪಕ್ಷಿಗಳಂತೆಯೂ ಕೂಗುವರು. ॥ ೧೪ ॥ ಕೆಲವು ಸಲ ಕಪ್ಪೆಗಳಂತೆ ಕುಪ್ಪಳಿಸುವರು. ಕೆಲವು ವೇಳೆ ವಿದೂಷಕರಂತೆ ಮುಖಮಾಡಿಕೊಂಡು ನಾನಾ ವಿಧವಾದ ಆಂಗಚೇಷ್ಟೆಗಳಿಂದ ಎಲ್ಲರನ್ನು ನಗಿಸುವರು. ಕೆಲವು ವೇಳೆ ಮರಗಳ ಕೊಂಬೆಗಳಲ್ಲಿ ಜೋಕಾಲಿಕಟ್ಟಿ ಉಯ್ಯಾಲೆಯಾಡುವರು. ಕೆಲವು ವೇಳೆ ಒಬ್ಬರು ಮತ್ತೊಬ್ಬರನ್ನು ಹೆಗಲಮೇಲೆ ಹೊತ್ತುಕೊಂಡು 'ಕೂಸುಮರಿ' ಆಟವಾಡುವರು. ಕೆಲವೊಮ್ಮೆ ರಾಜಾ-ಮಂತ್ರಿಗಳ ಆಟವಾಡುವರು. ॥ ೧೫ ॥ ಹೀಗೆ ರಾಮ-ಶ್ಯಾಮರು ನದಿಗಳ ತೀರದಲ್ಲಿಯೂ, ಪರ್ವತ ತಪ್ಪಲುಗಳಲ್ಲೂ, ಪೊದರುಗಳಲ್ಲಿಯೂ, ವನ-ಸರೋವರಗಳಲ್ಲಿಯೂ ಸಾಧಾರಣ ಹುಡುಗರು ಆಟವಾಡುವಂತೆ ಆಟವಾಡುತ್ತಾ ಆನಂದದಿಂದ ಸಂಚರಿಸಿದರು. ॥ ೧೬ ॥

ಒಂದು ದಿನ ಬಲರಾಮ-ಕೃಷ್ಣರು ಗೋಪಬಾಲಕರೊಂದಿಗೆ ಆ ವನದಲ್ಲಿ ಹಸುಗಳನ್ನು ಮೇಯಿಸುತ್ತಿದ್ದಾಗ ಪ್ರಲಂಬನೆಂಬ ರಾಕ್ಷಸನು ಗೊಲ್ಲನ ವೇಷವನ್ನು ಧರಿಸಿ ಅಲ್ಲಿಗೆ ಬಂದನು. ರಾಮ-ಶ್ಯಾಮರನ್ನು ಅಪಹರಿಸಿಕೊಂಡು ಹೋಗುವುದೇ ಅವನ ಉದ್ದೇಶ ವಾಗಿತ್ತು. ॥ ೧೭ ॥ ಸರ್ವಜ್ಞನಾದ ಭಗವಾನ್ ಶ್ರೀಕೃಷ್ಣನು ಅವನನ್ನು ನೋಡುತ್ತಲೆ ಅವನಾರೆಂದು ತಿಳಿದುಕೊಂಡನು. ಹೀಗಿದ್ದರೂ ಅವನ ಮೈತ್ರಿಯ ಪ್ರಸ್ತಾಪವನ್ನು ಸ್ವೀಕರಿಸಿದರೂ, ಇವನನ್ನು ಯಾವಯುಕ್ತಿಯಿಂದ ವಧಿಸುವುದೆಂದು ಮನಸ್ಸಿನಲ್ಲೆ ಯೋಚಿಸುತ್ತಿದ್ದನು. ॥ ೧೮ ॥ ಶ್ರೀಕೃಷ್ಣನು ಬಾಲಕರಲ್ಲಿ ಬಹು ದೊಡ್ಡ ಆಟಗಾರನೂ, ಆಟಗಳ ಆಚಾರ್ಯನೂ ಆಗಿದ್ದನು. ಅವನು ಎಲ್ಲ ಗೋಪಬಾಲಕರನ್ನು ಕರೆದು – 'ಮಿತ್ರರೇ ! ಇಂದು ನಮ್ಮಲ್ಲಿ ಎರಡು ಗುಂಪುಗಳಾಗಿಸಿಕೊಂಡು ಯಥಾಯೋಗ್ಯವಾಗಿ ಆನಂದದಿಂದ ಆಟವಾಡೋಣ' ಎಂದು ಹೇಳಿದನು. ॥ ೧೯ ॥ ಎಲ್ಲ ಬಾಲಕರು ಇದಕ್ಕೆ ಒಪ್ಪಿ ಒಂದು ಪಂಗಡಕ್ಕೆ ಶ್ರೀಕೃಷ್ಣನನ್ನು, ಇನ್ನೊಂದು ಪಂಗಡಕ್ಕೆ ಬಲರಾಮನನ್ನು ನಾಯಕರನ್ನಾಗಿಸಿಕೊಂಡರು. ಕೆಲವರು ಕೃಷ್ಣನ ಪಂಗಡದಲ್ಲಿದ್ದರೆ ಮತ್ತೆ ಕೆಲವರು ಬಲರಾಮನ ಗುಂಪು ಸೇರಿದರು. ॥ ೨೦ ॥

ಆಚೇರುರ್ವಿವಿಧಾಃ ಕ್ರೀಡಾ ವಾಹ್ಯವಾಹಕಲಕ್ಷಣಾಃ ।
ಯತ್ರಾರೋಹಂತಿ ಜೇತಾರೋ ವಹಂತಿ ಚ ಪರಾಜಿತಾಃ
॥ ೨೧ ॥

ವಹಂತೋ ವಾಹ್ಯಮಾನಾಶ್ಚ ಚಾರಯಂತಶ್ಚ ಗೋಧನಮ್ ।
ಭಾಂಡೀರಕಂ ನಾಮ ವಟಂ ಜಗ್ಮುಃ ಕೃಷ್ಣಪುರೋಗಮಾಃ
॥ ೨೨ ॥

ರಾಮಸಂಘಟ್ಟಿನೋ ಯರ್ಹಿ ಶ್ರೀರಾಮವೃಷಭಾದಯಃ ।
ಕ್ರೀಡಾಯಾಂ ಜಯಿನಸ್ತಾಂಸ್ತಾನೂಹುಃ ಕೃಷ್ಣಾದಯೋ ನೃಪ
॥ ೨೩ ॥

ಉವಾಹ ಕೃಷ್ಣೋ ಭಗವಾನ್ ಶ್ರೀದಾಮಾನಂ ಪರಾಜಿತಃ ।
ವೃಷಭಂ ಭದ್ರಸೇನಸ್ತು ಪ್ರಲಂಬೋ ರೋಹಿಣೀಸುತಮ್
॥ ೨೪ ॥

ಅವಿಷಹ್ಯಂ ಮನ್ಯಮಾನಃ ಕೃಷ್ಣಂ ದಾನವಪುಂಗವಃ ।
ವಹನ್ ದ್ರುತತರಂ ಪ್ರಾಗಾದವರೋಹಣತಃ ಪರಮ್
॥ ೨೫ ॥

ತಮುದ್ವಹನ್ ಧರಣಿಧರೇಂದ್ರಗೌರವಂ
ಮಹಾಸುರೋ ವಿಗತರಯೋ ನಿಜಂ ವಪುಃ ।
ಸ ಆಸ್ಥಿತಃ ಪುರಟಪರಿಚ್ಛದೋ ಬಭೌ
ತಡಿದ್ವಾನುಡುಪತಿವಾಡಿವಾಂಬುದಃ ॥ ೨೬ ॥

ನಿರೀಕ್ಷ್ಯ ತದ್ವಪುರಲಮಂಬರೇ ಚರತ್
ಪ್ರದೀಪ್ತದೃಗ್ಭ್ರುಕುಟಿತಟೋಗ್ರದಂಷ್ಟ್ರಕಮ್ ।
ಜ್ವಲಚ್ಛಿಖಿಂ ಕಟಕಕಿರೀಟಕುಂಡಲ-
ತ್ವಿಷಾದ್ಭುತಂ ಹಲಧರ ಈಷದತ್ರಸತ್ ॥ ೨೭ ॥

ಅಥಾಗತಸ್ಮೃತಿರಭಯೋ ರಿಪುಂ ಬಲೋ
ವಿಹಾಯಸಾರ್ಥಮಿವ ಹರಂತಮಾತ್ಮನಃ ।
ರುಷಾಹನಚ್ಛಿರಸಿ ದೃಢೇನ ಮುಷ್ಟಿನಾ
ಸುರಾಧಿಪೋ ಗಿರಿಮಿವ ವಜ್ರರಂಹಸಾ ॥ ೨೮ ॥

ಸ ಆಹತಃ ಸಪದಿ ವಿಶೀರ್ಣಮಸ್ತಕೋ
ಮುಖಾದ್ವಮನ್ರುಧಿರಮಪಸ್ಮೃತೋಽಸುರಃ ।
ಮಹಾರವಂ ವ್ಯಸುರಪತತ್ಸಮೀರಯನ್
ಗಿರಿರ್ಯಥಾ ಮಘವತ ಆಯುಧಾಹತಃ ॥ ೨೯ ॥

ಒಂದು ಗುಂಪಿನವರು ಸೋತರೆ ಗೆದ್ದವರ ಗುಂಪಿನ ಬಾಲಕರನ್ನು ಹೊತ್ತುಕೊಂಡು ನಿರ್ದಿಷ್ಟ ಸ್ಥಾನಕ್ಕೆ ಕೊಂಡು ಹೋಗಬೇಕೆಂಬ ನಿಯಮದಿಂದ ನಾನಾ ವಿಧವಾಗಿ ಆಟವಾಡತೊಡಗಿದರು.॥೨೧॥ ಹೀಗೆ ಒಬ್ಬರು ಮತ್ತೊಬ್ಬರನ್ನು ಹೊತ್ತುಕೊಂಡು ಕೃಷ್ಣನೇ ಮೊದಲಾದ ಗೋಪಬಾಲಕರು ಹಸುಗಳನ್ನು ಮೇಯಿಸುತ್ತಾ ಭಾಂಡೀರವೆಂಬ ವಟವೃಕ್ಷದ ಬಳಿಗೆ ತಲುಪಿದರು. ॥ ೨೨ ॥

ಪರೀಕ್ಷಿತನೇ ! ಒಮ್ಮೆ ಬಲರಾಮನ ಗುಂಪಿನಲ್ಲಿದ್ದ ಶ್ರೀದಾಮಾ, ವೃಷಭ ಮುಂತಾದ ಗೋಪಬಾಲಕರು ಆಟದಲ್ಲಿ ಗೆದ್ದರು. ಆಗ ಶ್ರೀಕೃಷ್ಣನ ಗುಂಪಿನವರು ಗೆದ್ದವರನ್ನು ತನ್ನ ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಹೋಗುತ್ತಿದ್ದರು. ॥ ೨೩. ॥ ಸೋತ ಶ್ರೀಕೃಷ್ಣನು ಶ್ರೀದಾಮನನ್ನು ಹೊತ್ತುಕೊಂಡನು. ಭದ್ರಸೇನನು ವೃಷಭನನ್ನು ಮತ್ತು ಪ್ರಲಂಬನು ಬಲರಾಮನನ್ನು ಹೊತ್ತುಕೊಂಡರು. ॥ ೨೪ ॥ ದಾನವ ಪುಂಗವನಾದ ಪ್ರಲಂಬನು ಶ್ರೀಕೃಷ್ಣನಾದರೋ ಮಹಾ ಬಲಿಷ್ಠನಾಗಿ ಇರುವನು, ಅವನನ್ನು ಸೋಲಿಸಲಾರೆ ಎಂದು ತಿಳಿದು ಅವನು ಶ್ರೀಕೃಷ್ಣನ ಪಕ್ಷವನ್ನು ಸೇರಿದನು. ಬಲರಾಮನನ್ನು ಹೊತ್ತುಕೊಂಡು ಬಹಳ ವೇಗವಾಗಿ ಓಡುತ್ತಾ ಬೆನ್ನಿಂದ ಇಳಿಸಬೇಕಾದ ಸ್ಥಳವನ್ನು ಬಿಟ್ಟು ಮುಂದಕ್ಕೆ ಓಡಿ ಹೋದನು. ॥ ೨೫ ॥ ಆದರೆ ಬಲರಾಮನನ್ನು ಎತ್ತಿಕೊಂಡು ಬಹಳ ದೂರ ಹೋಗಲು ರಾಕ್ಷಸನಿಂದ ಸಾಧ್ಯವಾಗಲಿಲ್ಲ. ಬಲರಾಮನು ದೊಡ್ಡ ಪರ್ವತದಷ್ಟು ಭಾರವಾದನು. ಅದರಿಂದ ಮುಂದೆ ಹೋಗಲಾರದೆ ಅಲ್ಲೇ ನಿಂತುಬಿಟ್ಟನು. ಆಗ ಅವನು ತನ್ನ ಸ್ವಾಭಾವಿಕವಾದ ದೈತ್ಯರೂಪದಿಂದ ಪ್ರಕಟವಾದನು. ಅವನ ಕಪ್ಪಾದ ಶರೀರದಲ್ಲಿ ಸುವರ್ಣಾಭರಣಗಳು ಹೊಳೆಯುತ್ತಿದ್ದುವು. ಗೌರಾಂಗನಾದ ಬಲರಾಮನನ್ನು ಹೊತ್ತುಕೊಂಡಿದ್ದ ಅವನು ಮಿಂಚಿನಿಂದ ಕೂಡಿದ ಕಾರ್ಮುಗಿಲು ಚಂದ್ರನನ್ನು ಒಳಗೊಂಡಿರುವಂತೆ ಶೋಭಿಸಿದನು. ॥ ೨೬ ॥ ಅವನ ಕಣ್ಣುಗಳು ಬೆಂಕಿಯಂತೆ ಉರಿಯುತ್ತಿದ್ದವು. ಕೊರೆದಾಡೆಗಳು ಹುಬ್ಬಿನವರೆಗೆ ಚಾಚಿಕೊಂಡು ಭಯಂಕರವಾಗಿದ್ದವು. ಅವನ ಕೆಂಪಾದ ಕೆದರಿದ ಕೂದಲೂ ಬೆಂಕಿಯ ಜ್ವಾಲೆಯಂತೆ ಹರಡಿಕೊಂಡಿತ್ತು. ಕೈ-ಕಾಲುಗಳಲ್ಲಿ ಕಡಗಗಳೂ, ತಲೆಯಮೇಲೆ ಕಿರೀಟವಿದ್ದು, ಕಿವಿಯಲ್ಲಿ ಕರ್ಣಕುಂಡಲಗಳು ಹೊಳೆಯುತ್ತಿದ್ದವು. ಅವುಗಳ ಕಾಂತಿಯಿಂದ ಅವನು ಭಾರೀ ಅದ್ಭುತವಾಗಿ ಕಾಣುತ್ತಿದ್ದನು. ಆ ಭಯಾನಕ ದೈತ್ಯನು ಅತಿವೇಗದಿಂದ ಆಕಾಶದಲ್ಲಿ ಹೋಗುತ್ತಿರುವುದನ್ನು ಕಂಡು ಬಲರಾಮನು ಮೊದಲಿಗೆ ಹೆದರಿದವನಂತಾದನು.॥ ೨೭ ॥ ಆದರೆ ಮರುಕ್ಷಣವೇ ತನ್ನ ಸ್ವರೂಪದ ನೆನಪು ಆಗುತ್ತಲೇ ಅವನ ಭಯವು ಹೊರಟುಹೋಯಿತು. ಕಳ್ಳನು ಯಾರದೋ ಧನವನ್ನು ಕದ್ದುಕೊಂಡು ಹೋಗುವಂತೆ ಈ ಶತ್ರುವು ನನ್ನನ್ನು ಕದ್ದುಕೊಂಡು ಹೋಗುತ್ತಿರುವನೆಂದು ತಿಳಿದ ಬಲರಾಮನು, ಆ ಸಮಯದಲ್ಲಿ ಇಂದ್ರನು ಪರ್ವತಗಳನ್ನು ವಜ್ರದಿಂದ ಪ್ರಹರಿಸುವಂತೆ ಅತ್ಯಂತ ಕ್ರೋಧಗೊಂಡು ಅವನ ತಲೆಯ ಮೇಲೆ ಬಲವಾದ ಮುಷ್ಟಿ ಪ್ರಹಾರಮಾಡಿದನು. ॥ ೨೮ ॥ ಏಟು ಬೀಳುತ್ತಲೇ ಅವನ ತಲೆ ನುಚ್ಚುನೂರಾಯಿತು. ಬಾಯಿಂದ ರಕ್ತವನ್ನು ಉಗುಳುತ್ತಾ, ಚೈತನ್ಯವುಡಿಗಿ ಭಯಂಕರ ಶಬ್ದವನ್ನು ಮಾಡುತ್ತಾ ಇಂದ್ರನ ವಜ್ರದಿಂದ

ದೃಷ್ಟ್ವಾ ಪ್ರಲಂಬಂ ನಿಹತಂ ಬಲೇನ ಬಲಶಾಲಿನಾ ।
ಗೋಪಾಃ ಸುವಿಸ್ಮಿತಾ ಆಸನ್ನಾಧು ಸಾಧ್ವಿತಿ ವಾದಿನಃ
॥ ೩೦ ॥

ಅಶಿಷೋऽಭಿಗೃಣಂತಸ್ತಂ ಪ್ರಶಶಂಸುಸ್ತದರ್ಹಣಮ್ ।
ಪ್ರೇತ್ಯಾಗತಮಿವಾಲಿಂಗ್ಯ ಪ್ರೇಮವಿಹ್ವಲಚೇತಸಃ
॥ ೩೧ ॥

ಪಾಪೇ ಪ್ರಲಂಬೇ ನಿಹತೇ ದೇವಾಃ ಪರಮನಿರ್ವೃತಾಃ ।
ಅಭ್ಯವರ್ಷನ್ಪಲಂ ಮಾಲ್ಯೈಃ ಶಶಂಸುಃ ಸಾಧು ಸಾಧ್ವಿತಿ
॥ ೩೨ ॥

ಪ್ರಹರಿಸಲ್ಪಟ್ಟ ಪರ್ವತದಂತೆ ಆಗಲೇ ಗತಪ್ರಾಣನಾಗಿ ನೆಲಕ್ಕೆ ಉರುಳಿದನು. ॥ ೨೯ ॥

ಮಹಾಬಲಿಷ್ಠನಾದ ಬಲರಾಮನು ಪ್ರಲಂಬಾಸುರನನ್ನು ಸಂಹರಿಸಿದ್ದನ್ನು ನೋಡಿ ಗೋಪರೆಲ್ಲರಿಗೂ ಪರಮಾಶ್ಚರ್ಯವಾಯಿತು. ಅವರೆಲ್ಲರೂ ಭಲೇ! ಭಲೇ! ಎಂದು ಕೊಂಡಾಡಿದರು. ॥ ೩೦ ॥ ಗೊಲ್ಲಬಾಲಕರ ಚಿತ್ತವು ಪ್ರೇಮದಿಂದ ವಿಹ್ವಲವಾಗಿತ್ತು. ಅವರು ಅವನಿಗೆ ಶುಭವನ್ನು ಕೋರುತ್ತಾ ಸತ್ತು ಬದುಕಿ ಬಂದನೆಂದೇ ಭಾವಿಸಿ ಆನಂದಿತರಾದರು. ಪ್ರಶಂಸೆಗೆ ಅರ್ಹನಾದ ಬಲರಾಮನನ್ನು ಅವರೆಲ್ಲ ಆಲಿಂಗಿಸಿಕೊಂಡು, ಅವನ ಪರಾಕ್ರಮವನ್ನು ಪ್ರಶಂಸೆ ಮಾಡಿದರು. ॥ ೩೧ ॥ ಪಾಪಿಷ್ಠನಾದ ಪ್ರಲಂಬಾಸುರನು ಹತನಾದಾಗ ದೇವತೆಗಳೆಲ್ಲರೂ ಸುಖಿಗಳಾದರು. ಅವರು ಎಲ್ಲರೂ ಬಲರಾಮನ ಮೇಲೆ ಹೂಮಳೆಯನ್ನು ಸುರಿಸುತ್ತಾ ಬಲರಾಮ ಸಾಧು! ಎಂದು ಸಾಧುವಾದಗಳನ್ನು ಹೇಳುತ್ತಾ ಬಲಭದ್ರನನ್ನು ಬಹಳವಾಗಿ ಪ್ರಶಂಸಿಸಿದರು. ॥ ೩೨ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಪ್ರಲಂಬವಧೋ ನಾಮಾಷ್ಟಾದಶೋऽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಗೋವುಗಳನ್ನು-ಗೋಪಾಲಕರನ್ನು ಶ್ರೀಕೃಷ್ಣನು ಕಾಡುಗಿಚ್ಚಿನಿಂದ ಕಾಪಾಡಿದುದು

ಶ್ರೀಶುಕ ಉವಾಚ

ಕ್ರೀಡಾಸಕ್ತೇಷು ಗೋಪೇಷು ತದ್ಗಾವೋ ದೂರಚಾರಿಣೀಃ ।
ಸ್ವೈರಂ ಚರಂತ್ಯೋ ವಿವಿಶುಸ್ತೃಣಲೋಭೇನ ಗಹ್ವರಮ್
॥ ೧ ॥

ಅಜಾ ಗಾವೋ ಮಹಿಷ್ಯಶ್ಚ ನಿರ್ವಿಶಂತ್ಯೋ ವನಾದ್ವನಮ್ ।
ಇಷೀಕಾಟವೀಂ ನಿರ್ವಿವಿಶುಃ ಕ್ರಂದಂತ್ಯೋ ದಾವತರ್ಷಿತಾಃ
॥ ೨ ॥

ತೇऽಪಶ್ಯಂತಃ ಪಶೂನ್ಗೋಪಾಃ ಕೃಷ್ಣರಾಮಾದಯಸ್ತದಾ ।
ಜಾತಾನುತಾಪಾ ನ ವಿದುರ್ವಿಚಿನ್ವಂತೋ ಗವಾಂ ಗತಿಮ್
॥ ೩ ॥

ತೃಕ್ಪೈಸ್ತತ್ಖುರದಚ್ಛಿನ್ನೈರ್ಗೋಷ್ಪದೈರಂಕಿತೈರ್ಗವಾಮ್ ।
ಮಾರ್ಗಮನ್ವಗಮನ್ಸರ್ವೇ ನಷ್ಟಾಜೀವ್ಯಾ ವಿಚೇತಸಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಮ್ಮೆ ಗೋಪಬಾಲಕರೆಲ್ಲರೂ ಆಟದಲ್ಲಿ ಮಗ್ನರಾಗಿದ್ದಾಗ ಅವರ ಗೋವುಗಳು ತಡೆಯುವವರೇ ಇಲ್ಲದ ಕಾರಣ ಬಹಳ ದೂರಕ್ಕೆ ಹೋಗಿಬಿಟ್ಟವು. ಹಸಿರು ಹುಲ್ಲಿನ ಆಸೆಯಿಂದ ಒಂದು ಗಹನವಾದ ಕಾಡನ್ನು ಪ್ರವೇಶಿಸಿದುವು. ॥ ೧ ॥ ಅವರ ಕರುಹಾಕದಿರುವ ಹಸುಗಳು, ಹಾಲುಕೊಡುವ ಹಸುಗಳು, ಅನೇಕ ಕರುಗಳಿದ್ದ ಹಸುಗಳು ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಹೋಗುತ್ತಾ ಬಿಸಿಲಿನ ತಾಪದಿಂದ ಪರಿತಪಿಸತೊಡಗಿದವು. ಅವುಗಳು ದಿಕ್ಕು ಗಾಣದೆ ಕೂಗಿಕೊಳ್ಳುತ್ತಾ ಕೊನೆಗೆ ಮುಂಜಾರಣ್ಯ (ನೊಜೆಹುಲ್ಲಿನ ಕಾಡು)ವನ್ನು ಹೊಕ್ಕವು. ॥ ೨ ॥ ಶ್ರೀಕೃಷ್ಣ-ಬಲರಾಮರೇ ಮುಂತಾದ ಗೊಲ್ಲಬಾಲಕರು ತಮ್ಮ ಪಶುಗಳ ಸುಳಿವೇ ಇಲ್ಲದುದನ್ನು ನೋಡಿ ಅವರು ಆಟವನ್ನು ಬಿಟ್ಟು ಅದಕ್ಕಾಗಿ ಮರುಗುತ್ತಾ ಎಲ್ಲೆಡೆ ಹುಡುಕತೊಡಗಿದರು. ಆದರೂ ಅವರಿಗೆ ತಮ್ಮ ಹಸುಗಳು ಕಂಡು ಬರಲಿಲ್ಲ. ॥ ೩ ॥ ಗೋವುಗಳೇ ವ್ರಜವಾಸಿಗಳ ಜೀವನಾಧಾರವಾಗಿದ್ದವು. ಅವುಗಳು ಸಿಗದಿರುವಾಗ ಅವರೆಲ್ಲರೂ ಬುದ್ಧಿಗೆಟ್ಟಂತಾದರು. ಬಳಿಕ ಅವರು ಹಸುಗಳ ಗೊರಸಿನ ಗುರುತನ್ನು, ಹುಲ್ಲು ಮೇದುಕೊಂಡು ಹೋದ ಜಾಗಗಳಿಂದ ಅವನ್ನು ಹುಡುಕುತ್ತಾ ಮುಂದೆ ಸಾಗಿದರು. ॥ ೪ ॥

ಮುಂಜಾಟವ್ಯಾಂ ಭ್ರಷ್ಟಮಾರ್ಗಂ ಕ್ರಂದಮಾನಂ ಸ್ವಗೋಧನಮ್ ।
ಸಂಪ್ರಾಪ್ಯ ತೃಷಿತಾಃ ಶ್ರಾಂತಾಸ್ತತಸ್ತೇ ಸಂನ್ಯವರ್ತಯನ್
॥ ೫ ॥

ಕೊನೆಗೆ ಅವರು ತಮ್ಮ ಗೋವುಗಳು ಮುಂಜಾಟವಿಯಲ್ಲಿ ದಾರಿಗಾಣದೆ ಕೂಗಿಕೊಳ್ಳುತ್ತಿರುವುದನ್ನು ನೋಡಿ ಅವನ್ನು ಹಿಂದಿರುಗಿಸಲು ಪ್ರಯತ್ನಿಸತೊಡಗಿದನು. ಆಗ ಅವರೆಲ್ಲರೂ ಬಹಳವಾಗಿ ಆಯಾಸಗೊಂಡಿದ್ದು ಬಾಯಾರಿಕೆಯಿಂದ ಬಳಲಿದ್ದು ಅವರಿಗೆ ಮುಂದುವರಿಯಲೂ ಸಾಧ್ಯವಾಗಲಿಲ್ಲ. ॥ ೫ ॥

ತಾ ಆಹೂತಾ ಭಗವತಾ ಮೇಘಗಂಭೀರಯಾ ಗಿರಾ ।
ಸ್ವನಾಮ್ನಾಂ ನಿನದಂ ಶ್ರುತ್ವಾ ಪ್ರತಿನೇದುಃ ಪ್ರಹರ್ಷಿತಾಃ
॥ ೬ ॥

ಗೋವುಗಳ ಆ ಸ್ಥಿತಿಯನ್ನು ನೋಡಿದ ಪ್ರಣತಾರ್ತಿಹರನಾದ ಶ್ರೀಕೃಷ್ಣನು ಮೇಘಸದೃಶವಾದ ಗಂಭೀರ ಧ್ವನಿಯಿಂದ ಹಸುಗಳ ಹೆಸರಿಡಿದು ಕರೆಯತೊಡಗಿದನು. ತಮ್ಮ ಹೆಸರನ್ನು ಕೇಳಿದ ಗೋವುಗಳು ಬಹಳ ಹರ್ಷಿತರಾಗಿ ಪ್ರತ್ಯುತ್ತರವಾಗಿ ತಾವೂ 'ಅಂಬಾ' ಎಂದು ಶ್ರೀಕೃಷ್ಣನ ಕರೆಗೆ ಓಗೊಟ್ಟವು. ॥ ೬ ॥

ತತಃ ಸಮಂತಾದ್ವನಧೂಮಕೇತು-
ರ್ಯದೃಚ್ಛಯಾಭೂತ್ಕ್ಷಯಕೃದ್ದಾವೌಕಸಾಮ್ ।
ಸಮೀರಿತಃ ಸಾರಥಿನೋಲ್ಬಣೋಲ್ಮುಕೈಃ
ವಿಲೇಲಿಹಾನಃ ಸ್ಥಿರಜಂಗಮಾನ್ಮಹಾನ್ ॥ ೭ ॥

ಪರೀಕ್ಷಿತನೇ! ಹೀಗೆ ಭಗವಂತನು ಆ ಹಸುಗಳನ್ನು ಕರೆಯುತ್ತಿರುವಾಗಲೇ ಆ ವನದ ನಾಲ್ಕೂ ಕಡೆಗಳಲ್ಲಿ ಆಕಸ್ಮಾತ್ತಾಗಿ ವನವಾಸೀ ಜೀವಿಗಳ ಕಾಲಸ್ವರೂಪವಾದ ಕಾಡ್ಗಿಚ್ಚು ಹೊತ್ತಿಕೊಂಡಿತು. ಜೊತೆಗೆ ಜೋರಾಗಿ ಬಿರುಗಾಳಿಯು ಬಿಸುತ್ತಾ ಆ ಬೆಂಕಿಯ ಉರಿಯನ್ನು ಹೆಚ್ಚಿಸುವುದರಲ್ಲಿ ಸಹಾಯಕವಾಯಿತು. ಇದರಿಂದ ಎಲ್ಲಡೆ ಹರಡಿಕೊಂಡ ಆ ಪ್ರಚಂಡ ಅಗ್ನಿಯು ತನ್ನ ಭಯಂಕರ ಜ್ವಾಲೆಗಳಿಂದ ಸಮಸ್ತ ಚರಾಚರ ಜೀವಿಗಳನ್ನು ಭಸ್ಮಮಾಡತೊಡಗಿತು. ॥ ೭ ॥ ಕಾಡ್ಗಿಚ್ಚು ನಾಲ್ಕೂ ಕಡೆಗಳಿಂದ ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡ ಗೋವುಗಳೂ, ಗೋಪಾಲರೂ ಅತ್ಯಂತ ಭಯಭೀತರಾದರು. ಮರಣಭಯದಿಂದ ಹೆದರಿದ ಜೀವಿಯು ಭಗವಂತನಿಗೆ ಶರಣು ಹೋಗುವಂತೆ ಅವರು ಶ್ರೀಕೃಷ್ಣ ಮತ್ತು ಬಲರಾಮರಿಗೆ ಶರಣಾಗತರಾಗಿ, ಅವರನ್ನು ಕೂಗಿ ಕರೆಯುತ್ತಾ ಇಂತೆಂದರು. ॥ ೮ ॥ ಓ ಮಹಾವೀರನಾದ ಪ್ರಿಯ ಕೃಷ್ಣನೇ! ಪರಮ ಬಲಶಾಲಿಯಾದ ಬಲರಾಮನೇ! ನಾವು ನಿಮಗೆ ಶರಣಾಗಿದ್ದೇವೆ. ಈ ಸಮಯದಲ್ಲಿ ನಾವು ದಾವಾಗ್ನಿಯಿಂದ ಬೆಂದು ಹೋಗುತ್ತಿದ್ದೇವೆ, ನೋಡು! ನೀವಿಬ್ಬರೂ ನಮ್ಮನ್ನು ಸಂರಕ್ಷಿಸಿರಿ. ॥ ೯ ॥ ನಾವೆಲ್ಲರೂ ನಿಶ್ಚಯವಾಗಿಯೂ ನಿಮ್ಮ ಬಂಧುಗಳೇ ಆಗಿದ್ದೇವೆ. ಆಪದ್ಬಾಂಧವನ ಬಂಧುಗಳಾದ ನಾವು ಹೀಗೆ ವಿನಾಶಹೊಂದಬಾರದು. ಸಮಸ್ತವಾದ ಧರ್ಮಗಳನ್ನು ತಿಳಿದಿರತಕ್ಕವನೇ! ನೀನೇ ನಮಗೆ ಏಕಮಾತ್ರ ರಕ್ಷಕನೂ ಪರಮಾಶ್ರಯನೂ ಆಗಿರುವೆ. ನಿನ್ನದೇ ಭರವಸೆಯಿದ್ದ ನಮ್ಮನ್ನು ರಕ್ಷಿಸು. ॥ ೧೦ ॥

ತಮಾಪತಂತಂ ಪರಿತೋ ದವಾಗ್ನಿಂ
ಗೋಪಾಶ್ಚ ಗಾವಃ ಪ್ರಸಮೀಕ್ಷ್ಯ ಭೀತಾಃ ।
ಊಚುಶ್ಚ ಕೃಷ್ಣಂ ಸಬಲಂ ಪ್ರಪನ್ನಾ
ಯಥಾ ಹರಿಂ ಮೃತ್ಯುಭಯಾರ್ದಿತಾ ಜನಾಃ ॥ ೮ ॥

ಕೃಷ್ಣ ಕೃಷ್ಣ ಮಹಾವೀರ ಹೇ ರಾಮಾಮಿತವಿಕ್ರಮ ।
ದಾವಾಗ್ನಿನಾ ದಹ್ಯಮಾನಾನ್ಪ್ರಪನ್ನಾಂಸ್ತ್ರಾತುಮರ್ಹಥಃ
॥ ೯ ॥

ನೂನಂ ತ್ವದ್ಬಾಂಧವಾಃ ಕೃಷ್ಣ ನ ಚಾರ್ಹಂತ್ಯವಸೀದಿತುಮ್ ।
ವಯಂ ಹಿ ಸರ್ವಧರ್ಮಜ್ಞ ತವ್ಸಾಘಾಸ್ತ್ವತ್ಪರಾಯಣಾಃ
॥ ೧೦ ॥

ಶ್ರೀಶುಕ ಉವಾಚ

ವಚೋ ನಿಶಮ್ಯ ಕೃಪಣಂ ಬಂಧೂನಾಂ ಭಗವಾನ್ಹರಿಃ ।
ನಿಮೀಲಯತ ಮಾ ಭೈಷ್ಟ ಲೋಚನಾನೀತ್ಯಭಾಷತ
॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜ! ತನ್ನ ಬಂಧುಗಳಾದ ಗೊಲ್ಲಬಾಲಕರ ದೈನ್ಯದಿಂದ ಕೂಡಿದ ವಚನವನ್ನು ಕೇಳಿದ ಭಗವಾನ್ ಶ್ರೀಕೃಷ್ಣನು ಅಭಯವನ್ನೀಯುತ್ತಾ ಇಂತೆಂದನು – ಹೆದರಬೇಡಿರಿ. ನೀವು ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿ. ॥ ೧೧ ॥ ಭಗವಂತನ ಅಪ್ಪಣೆಯನ್ನು ಕೇಳಿದ ಗೋಪ ಬಾಲಕರು – ಸರಿ; ಹಾಗೆಯೇ ಆಗಲೆಂದು ಹೇಳಿ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಆಗ ಯೋಗೇಶ್ವರನಾದ ಭಗವಾನ್ ಶ್ರೀಕೃಷ್ಣನು ಭಯಂಕರವಾದ ಆ ಕಾಡ್ಗಿಚ್ಚನ್ನು ತನ್ನ ಬಾಯಿಂದ

ತಥೇತಿ ಮೀಲಿತಾಕ್ಷೇಷು ಭಗವಾನಗ್ನಿಮುಲ್ಬಣಮ್ ।
ಪೀತ್ವಾಮುಖೇನ ತಾನ್ಕೃಚ್ಛ್ರಾದ್ಯೋಗಾಧೀಶೋ ವ್ಯಮೋಚಯತ್
॥ ೧೨ ॥

ತತಶ್ಚ ತೇಽಕ್ಷೀಣ್ಯುನ್ಮೀಲ್ಯ ಪುನರ್ಭಾಂಡೀರಮಾಪಿತಾಃ ।
ನಿಶಾಮ್ಯ ವಿಸ್ಮಿತಾ ಆಸನ್ನಾತ್ಮಾನಂ ಗಾಶ್ಚ ಮೋಚಿತಾಃ
॥ ೧೩ ॥

ಕೃಷ್ಣಸ್ಯ ಯೋಗವೀರ್ಯಂ ತದ್ಯೋಗಮಾಯಾನುಭಾವಿತಮ್ ।
ದಾವಾಗ್ನೇರಾತ್ಮನಃ ಕ್ಷೇಮಂ ವೀಕ್ಷ್ಯ ತೇ ಮೇನಿರೇಽಮರಮ್
॥ ೧೪ ॥

ಗಾಃ ಸನ್ನಿವರ್ತ್ಯ ಸಾಯಾಹ್ನೇ ಸಹರಾಮೋ ಜನಾರ್ದನಃ ।
ವೇಣುಂ ವಿರಣಯನ್ಗೋಷ್ಠಮಗಾದ್ಗೋಪೈರಭಿಷ್ಟುತಃ
॥ ೧೫ ॥

ಗೋಪೀನಾಂ ಪರಮಾನಂದ ಆಸೀದ್ಗೋವಿಂದದರ್ಶನೇ ।
ಕ್ಷಣಂ ಯುಗಶತಮಿವ ಯಾಸಾಂ ಯೇನ ವಿನಾಭವತ್
॥ ೧೬ ॥

ಪಾನಮಾಡಿಬಿಟ್ಟನು. ಹೀಗೆ ಅವನು ಗೋಪಬಾಲಕರನ್ನು ಘೋರವಾದ ಸಂಕಟದಿಂದ ಪಾರುಮಾಡಿದನು. ॥ ೧೨ ॥ ಇದಾದ ಬಳಿಕ ಗೋಪಬಾಲಕರು ಕಣ್ಣುಬಿಟ್ಟು ನೋಡಿದಾಗ ತಾವು ಭಾಂಡೀರ ವಟವೃಕ್ಷದ ಬಳಿಯಲ್ಲಿರುವುದನ್ನು ನೋಡಿದರು. ಹೀಗೆ ತಮ್ಮನ್ನು ಮತ್ತು ಗೋವುಗಳನ್ನು ದಾವಾನಲದಿಂದ ಪಾರಾಗಿಸಿರುವುದನ್ನು ನೋಡಿ ಅತ್ಯಂತ ವಿಸ್ಮಿತರಾದರು. ॥ ೧೩. ॥ ಶ್ರೀಕೃಷ್ಣನ ಈ ಯೋಗಸಿದ್ಧಿಯನ್ನು ಹಾಗೂ ಯೋಗಮಾಯೆಯ ಪ್ರಭಾವವನ್ನು ಮತ್ತು ದಾವಾನಲದಿಂದ ಆದ ತಮ್ಮ ರಕ್ಷಣೆಯನ್ನು ನೋಡಿ ಅವರೆಲ್ಲರೂ ಶ್ರೀಕೃಷ್ಣನು ಸಾಕ್ಷಾತ್ ದೇವತೆಯೆಂದೇ ಭಾವಿಸಿದರು. ॥ ೧೪ ॥

ಪರೀಕ್ಷಿತನೇ! ಸಾಯಂಕಾಲವಾಗುತ್ತಲೇ ಬಲರಾಮನೊಂದಿಗೆ ಭಗವಾನ್ ಶ್ರೀಕೃಷ್ಣನು ಮುರಳಿಯನ್ನು ನುಡಿಸುತ್ತಾ ಹಸುಗಳನ್ನು ಓಟ್ಟಿಸಿಕೊಂಡು ವ್ರಜದ ಕಡೆಗೆ ಹೊರಟನು. ಗೊಲ್ಲಬಾಲಕರು ಅವನನ್ನು ಸ್ತುತಿಸುತ್ತಾ ಅವನ ಹಿಂದೆ-ಹಿಂದೆಯೇ ಬರುತ್ತಿದ್ದರು. ॥ ೧೫ ॥ ಇತ್ತ ವ್ರಜದಲ್ಲಿ ಗೋಪಿಕೆಯರಿಗೆ ಶ್ರೀಕೃಷ್ಣನಿಲ್ಲದ ಒಂದೊಂದು ಕ್ಷಣವೂ ನೂರು ಯುಗಗಳಂತೆ ಕಾಣುತ್ತಿತ್ತು. ಭಗವಾನ್ ಶ್ರೀಕೃಷ್ಣನು ಮರಳಿದಾಗ ಅವನ ದರ್ಶನವನ್ನು ಪಡೆದ ಅವರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿದರು. ॥ ೧೬ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ದಾವಾಗ್ನಿಪಾನಂ ನಾಮೈಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ವರ್ಷಾಋತು ಮತ್ತು ಶರದೃತುವಿನ ವರ್ಣನೆ

ಶ್ರೀಶುಕ ಉವಾಚ

ತಮೋಽಸ್ತದದ್ಭುತಂ ಕರ್ಮ ದಾವಾಗ್ನೇರ್ಮೋಕ್ಷಮಾತ್ಮನಃ ।
ಗೋಪಾಃ ಸ್ತ್ರೀಭ್ಯಃ ಸಮಾಚಖ್ಯುಃ ಪ್ರಲಂಬವಧಮೇವ ಚ
॥ ೧ ॥

ಗೋಪವೃದ್ಧಾಶ್ಚ ಗೋಪ್ಯಶ್ಚ ತದುಪಾಕರ್ಣ್ಯ ವಿಸ್ಮಿತಾಃ ।
ಮೇನಿರೇ ದೇವಪ್ರವರೌ ಕೃಷ್ಣರಾಮೌ ವ್ರಜಂ ಗತೌ
॥ ೨ ॥

ತತಃ ಪ್ರಾವರ್ತತ ಪ್ರಾವೃಟ್ ಸರ್ವಸತ್ತ್ವಸಮುದ್ಭವಾ ।
ವಿದ್ಯೋತಮಾನಪರಿಧಿರ್ವಿಸ್ಫೂರ್ಜಿತನಭಸ್ತಲಾ
॥ ೩ ॥

ಶ್ರೀಶುಕಮಹಾಮುನಿಗಳು **ಹೇಳುತ್ತಾರೆ** - ಪರೀಕ್ಷಿತನೇ! ಗೊಲ್ಲಬಾಲಕರು ತಮ್ಮ ಮನೆಗೆ ಹೋಗಿ ಮನೆಯಲ್ಲಿದ್ದ ತಾಯಿ ತಂಗಿ-ಹೆಂಡತಿ ಸ್ತ್ರೀಯರ ಬಳಿಯಲ್ಲಿ ಶ್ರೀಕೃಷ್ಣ-ಬಲರಾಮರು ದಾವಾಗ್ನಿಯಿಂದ ನಮ್ಮನ್ನು ರಕ್ಷಿಸಿದುದು ಮತ್ತು ಪ್ರಲಂಬಾಸುರನನ್ನು ವಧಿಸಿದುದು ಮುಂತಾದ ಅವರ ಅದ್ಭುತ ಕರ್ಮವನ್ನು ವರ್ಣಿಸಿದರು. ॥ ೧ ॥ ವ್ರಜದಲ್ಲಿದ್ದ ವೃದ್ಧರಾದ ಗೋಪಾಲಕರೂ, ಗೋಪಿಯರೂ ರಾಮ-ಕೃಷ್ಣರ ಅಲೌಕಿಕ ಲೀಲೆಗಳನ್ನು ಕೇಳಿ ವಿಸ್ಮಿತರಾದರು. 'ಶ್ರೀಕೃಷ್ಣ ಮತ್ತು ಬಲರಾಮನ ವೇಷದಲ್ಲಿ ಯಾರೋ ದೇವಶ್ರೇಷ್ಠರು ವ್ರಜದಲ್ಲಿ ಆಗಮಿಸಿರುವರು' ಎಂದು ಅವರೆಲ್ಲರೂ ಭಾವಿಸಿದರು. ॥ ೨ ॥

ಇದಾದ ಬಳಿಕ ವರ್ಷಾಋತುವಿನ ಶುಭಾಗಮನವಾಯಿತು. ಸಕಲ ಪ್ರಾಣಿಗಳಿಗೂ ಜೀವನವನ್ನಿತ್ತು ಸಲಹುವ ಕಾಲವದು. ಸೂರ್ಯ-ಚಂದ್ರರ ಸುತ್ತಲೂ ಪದೇ-ಪದೇ ಪ್ರಕಾಶಮಯ ವೃತ್ತವು ಕಾಣತೊಡಗಿತು. ಗುಡುಗು-ಸಿಡಿಲು-ಮಿಂಚು-ಗಾಳಿಗಳಿಂದ ಆಕಾಶವು ಕ್ಷೋಭೆಗೊಂಡಿತು. ॥ ೩ ॥

ಸಾಂದ್ರನೀಲಾಂಬುದೈರ್ವ್ಯೋಮ ಸವಿದ್ಯುತ್‌ಸ್ತನಯಿತ್ನುಭಿಃ ।
ಅಸ್ಪಷ್ಟಜ್ಯೋತಿರಾಚ್ಛನ್ನಂ ಬ್ರಹ್ಮೈವ ಸಗುಣಂ ಬಭೌ
॥ ೪ ॥

ಆಕಾಶದಲ್ಲಿ ದಟ್ಟವಾದ ಮತ್ತು ಕಪ್ಪಾದ ಮೇಘಗಳು ಆವರಿಸಿದುವು. ಗುಡುಗಿನ ಶಬ್ದದೊಡನೆ ಮಿಂಚು ಕಾಣಿಸಿಕೊಂಡಿತು. ಸೂರ್ಯ-ಚಂದ್ರ-ತಾರೆಗಳು ಮುಚ್ಚಿರುತ್ತಿದ್ದವು. ಬ್ರಹ್ಮಸ್ವರೂಪನಾಗಿದ್ದರೂ ಗುಣಗಳಿಂದ ಮುಚ್ಚಿಹೋದಾಗ ಜೀವನ ಸ್ಥಿತಿಯಂತೆ ಆಕಾಶವು ಶೋಭಿಸುತ್ತಿತ್ತು. ॥ ೪ ॥

ಅಷ್ಟೌ ಮಾಸಾನ್ ನಿಪೀತಂ ಯದ್ಭೂಮ್ಯಾಶ್ಚೋದಮಯಂ ವಸು ।
ಸ್ವಗೋಭಿರ್ಮೋಕ್ತುಮಾರೇಭೇ ಪರ್ಜನ್ಯಃ ಕಾಲ ಆಗತೇ
॥ ೫ ॥

ಸೂರ್ಯನು ರಾಜನಂತೆ ಪೃಥಿವಿರೂಪವಾದ ಪ್ರಜೆಯಿಂದ ಕಂದಾಯವಾಗಿ ಎಂಟು ತಿಂಗಳುಕಾಲ ಸಂಗ್ರಹಿಸಿದ ನೀರನ್ನು ಈಗ ಸಮಯಬಂದಾಗ ಅವನು ತನ್ನ ಕಿರಣಗಳೆಂಬ ಕೈಗಳಿಂದ ಪುನಃ ಅದಕ್ಕೆ ಹಂಚತೊಡಗಿದನು. ॥ ೫ ॥

ತಡಿತ್ವಂತೋ ಮಹಾಮೇಘಾಶ್ಚಂಡಶ್ವಸನವೇಪಿತಾಃ ।
ಪ್ರೀಣನಂ ಜೀವನಂ ಹ್ಯಸ್ಯ ಮುಮುಚುಃ ಕರುಣಾ ಇವ
॥ ೬ ॥

ದಯಾಳುಗಳಾದ ಮನುಷ್ಯರು ಪೀಡೆಗೊಳಗಾದವರನ್ನು ರಕ್ಷಿಸುವ ಸಲುವಾಗಿ ತಮ್ಮ ಪ್ರಾಣಗಳನ್ನಾದರೂ ಒತ್ತೆಯಿಡುವಂತೆಯೇ ಮೋಡಗಳು ಮಿಂಚೆಂಬ ಕಣ್ಣುಗಳ ಮೂಲಕವಾಗಿ ಪ್ರಪಂಚದ ಜನರ ಕಷ್ಟಗಳನ್ನು ನೋಡಿ ಗಾಳಿಯ ಪ್ರೇರಣೆಯಿಂದ ಜನರ ಶ್ರೇಯಸ್ಸಿಗಾಗಿ ಜೀವನರೂಪೀ ನೀರನ್ನು ಸುರಿಸತೊಡಗಿದವು. ॥ ೬ ॥

ತಪಃಕೃಶಾ ದೇವಮೀಢಾ ಆಸೀದ್ವರ್ಷೀಯಸೀ ಮಹೀ ।
ಯಥೈವ ಕಾಮ್ಯತಪಸಸ್ತನುಃ ಸಂಪ್ರಾಪ್ಯ ತತ್ಫಲಮ್
॥ ೭ ॥

ಸಕಾಮಭಾವದಿಂದ ತಪಸ್ಸು ಮಾಡುವಾಗ ಶರೀರವು ದುರ್ಬಲವಾಗಿ, ಅದರ ಫಲವು ದೊರೆತಾಗ ಅದು ಹೃಷ್ಟ-ಪುಷ್ಟವಾಗುವಂತೆ ಗ್ರೀಷ್ಮಋತುವಿನಲ್ಲಿ ಒಣಗಿಹೋಗಿದ್ದ ಭೂಮಿಯು ಈಗ ವರ್ಷಾಋತುವು ಬಂದೊಡನೆ ವೃದ್ಧಿಹೊಂದಿ ಹಚ್ಚ-ಹಸಿರಾಯಿತು. ॥ ೭ ॥

ನಿಶಾಮುಖೇಷು ಖದ್ಯೋತಾಸ್ತಮಸಾ ಭಾಂತಿ ನ ಗ್ರಹಾಃ ।
ಯಥಾ ಖಾಪೇನ ಪಾಖಂಡಾ ನ ಹಿ ವೇದಾಃ ಕಲೌ ಯುಗೇ
॥ ೮ ॥

ಕಲಿಯುಗದಲ್ಲಿ ಪಾಪವು ಪ್ರಬಲವಾದಾಗ ವೈದಿಕ ಸಂಪ್ರದಾಯವು ಮರೆಯಾಗಿ ಪಾಖಂಡ ಮತಗಳು ಪ್ರಚಾರವಾಗುವಂತೆಯೇ, ವರ್ಷಾಕಾಲದ ಸಾಯಂಕಾಲಗಳಲ್ಲಿ ಕಾರ್ಮುಗಿಲಿನಿಂದಾಗಿ ಕತ್ತಲೆ ಆವರಿಸಿ ಗ್ರಹ, ತಾರೆಗಳು ಕಂಡುಬರದೇ ಮಿಣುಕು ಹುಳುಗಳ ಪ್ರಕಾಶವು ಕಾಣಿಸುತ್ತದೆ. ॥ ೮॥

ಶ್ರುತ್ವಾ ಪರ್ಜನ್ಯನಿನದಂ ಮಂಡೂಕಾ ವ್ಯಸೃಜನ್ಗಿರಃ ।
ತೂಷ್ಣೀಂ ಶಯಾನಾಃ ಪ್ರಾಗ್ಯದ್ವದ್ ಬ್ರಾಹ್ಮಣಾ ನಿಯಮಾತ್ಯಯೇ
॥ ೯ ॥

ನಿತ್ಯಕರ್ಮಗಳು ಮುಗಿದನಂತರ ಗುರುಗಳ ಆದೇಶದಂತೆ ಬ್ರಹ್ಮಚಾರಿಗಳು ವೇದಗಳನ್ನು ಪಠಿಸುವಂತೆ, ಇಷ್ಟರವರೆಗೆ ಸುಮ್ಮನಿದ್ದ ಕಪ್ಪೆಗಳು ಮೇಘಗರ್ಜನೆಯನ್ನು ಕೇಳಿ ವಟಗುಟ್ಟಲು ಪ್ರಾರಂಭಿಸಿದವು. ॥ ೯ ॥

ಆಸನ್ನುತ್ಪಥವಾಹಿನ್ಯಃ ಕ್ಷುದ್ರನದ್ಯೋಽನುಶುಷ್ಯತೀಃ ।
ಪುಂಸೋ ಯಥಾಸ್ವತಂತ್ರಸ್ಯ ದೇಹದ್ರವಿಣಸಂಪದಃ
॥ ೧೦ ॥

ಜಿತೇಂದ್ರಿಯನಲ್ಲದ ಪುರುಷನ ಶರೀರ ಮತ್ತು ಧನ-ಸಂಪತ್ತುಗಳು ಅಪವ್ಯಯವಾಗುವಂತೆ, ಗ್ರೀಷ್ಮ ಋತುವಿನಲ್ಲಿ ಒಣಗಿಹೋಗಿದ್ದ ಸಣ್ಣ-ಪುಟ್ಟ ನದಿಗಳು ವರ್ಷಾಕಾಲದಲ್ಲಿ ಮೇರೆ ಮೀರಿ ಹರಿಯತೊಡಗಿದವು. ॥ ೧೦ ॥

ಹರಿತಾ ಹರಿಭಿಃ ಶಷ್ಪೈರಿಂದ್ರಗೋಪೈಶ್ಚ ಲೋಹಿತಾ ।
ಉಚ್ಛಿಲೀಂಧ್ರಕೃತಚ್ಛಾಯಾ ನೃಣಾಂ ಶ್ರೀರಿವ ಭೂರಭೂತ್
॥ ೧೧ ॥

ಕೆಲವು ಕಡೆಗಳಲ್ಲಿ ಭೂಮಿಯು ಹುಲ್ಲಿನಿಂದಾಗಿ ಹಚ್ಚ-ಹಸಿರಾಗಿಯೂ, ಕೆಲವೆಡೆಗಳಲ್ಲಿ ಚಂದ್ರಚೂಡಗಳೆಂಬ ಹುಳುಗಳಿಂದ ತುಂಬಿದ್ದು ಕೆಂಪಾಗಿಯೂ, ಮತ್ತೆ ಕೆಲವೆಡೆಗಳಲ್ಲಿ ನಾಯಿಕೊಡೆಗಳಿಂದ ತುಂಬಿದ್ದು ಬಿಳುಪಾಗಿಯೂ ಕಾಣಿಸುತ್ತಿದ್ದು ನಾನಾ ಬಣ್ಣದ ಉಡುಗೆ ತೊಡಿಗೆಗಳನ್ನು ಧರಿಸಿದ ರಾಜನ ಸೈನಿಕರಂತೆ ಕಾಣುತ್ತಿತ್ತು. ॥ ೧೧ ॥

ಕ್ಷೇತ್ರಾಣಿ ಸಸ್ಯಸಂಪದ್ಭಿಃ ಕರ್ಷಕಾಣಾಂ ಮುದಂ ದದುಃ ।
ಧನಿನಾಮುಪತಾಪಂ ಚ ದೈವಾಧೀನಮಜಾನತಾಮ್
॥ ೧೨ ॥

ಎಲ್ಲ ಹೊಲ-ಗದ್ದೆಗಳು ಸಸ್ಯ ಸಮೃದ್ಧಿಯಿಂದ ಕೂಡಿದ್ದು ರೈತರಿಗೆ ಆನಂದವನ್ನುಂಟು ಮಾಡುತ್ತವೆ. ಸರ್ವಸ್ವವೂ ದೈವಾಧೀನವೆಂಬ ರಹಸ್ಯವನ್ನು ತಿಳಿಯದಿದ್ದ ಧನಿಕರಿಗೆ ರೈತರ ಸಂಪತ್ತು ನೋಡಿ ಇವರೂ ನಮ್ಮಂತೆ ಧನಿಕರಾಗುವರಲ್ಲ ಎಂದು ಅನುತಾಪವುಂಟಾಗುತ್ತದೆ. ॥ ೧೨ ॥

ಜಲಸ್ಥಲೌಕಸಃ ಸರ್ವೇ ನವವಾರಿನಿಷೇವಯಾ ।
ಅಬಿಭ್ರದ್ರುಚಿರಂ ರೂಪಂ ಯಥಾ ಹರಿನಿಷೇವಯಾ
॥ ೧೩ ॥

ಸರಿದ್ಭಿಃ ಸಂಗತಃ ಸಿಂಧುಶ್ಚುಕ್ಷುಭೇ ಶ್ವಸನೋರ್ಮಿಮಾನ್ ।
ಅಪಕ್ವಯೋಗಿನಶ್ಚಿತ್ತಂ ಕಾಮಾಕ್ತಂ ಗುಣಯುಗ್ಯಥಾ
॥ ೧೪ ॥

ಗಿರಯೋ ವರ್ಷಧಾರಾಭಿರ್ಹನ್ಯಮಾನಾ ನ ವಿವ್ಯಥುಃ ।
ಅಭಿಭೂಯಮಾನಾ ವ್ಯಸನೈರ್ಯಥಾಧೋಕ್ಷಜಚೇತಸಃ
॥ ೧೫ ॥

ಮಾರ್ಗಾ ಬಭೂವುಃ ಸಂದಿಗ್ಧಾಸ್ತೃಣೈಶ್ಛನ್ನಾ ಹ್ಯಸಂಸ್ಕೃತಾಃ ।
ನಾಭ್ಯಸ್ಯಮಾನಾಃ ಶ್ರುತಯೋ ದ್ವಿಜೈಃ ಕಾಲಹತಾ ಇವ
॥ ೧೬ ॥

ಲೋಕಬಂಧುಷು ಮೇಘೇಷು ವಿದ್ಯುತಶ್ಚಲಸೌಹೃದಾಃ ।
ಸ್ಥೈರ್ಯಂ ನ ಚಕ್ರುಃ ಕಾಮಿನ್ಯಃ ಪುರುಷೇಷು ಗುಣೇಷ್ವಿವ
॥ ೧೭ ॥

ಧನುರ್ವಿಯತಿ ಮಾಹೇಂದ್ರಂ ನಿರ್ಗುಣಂ ಚ ಗುಣೈನ್ಯಭಾತ್ ।
ವ್ಯಕ್ತೇ ಗುಣವ್ಯತಿಕರೇಽಗುಣವಾನ್ಪುರುಷೋ ಯಥಾ
॥ ೧೮ ॥

ನ ರರಾಜೋಡುಪಶ್ಚನ್ನಃ ಸ್ವಜ್ಯೋತ್ಸ್ನಾರಾಜಿತೈರ್ಘನೈಃ ।
ಅಹಂಮತ್ಯಾ ಭಾಸಿತಯಾ ಸ್ವಭಾಸಾ ಪುರುಷೋ ಯಥಾ
॥ ೧೯ ॥

ಮೇಘಾಗಮೋತ್ಸವಾ ಹೃಷ್ಟಾಃ ಪ್ರತ್ಯನಂದನ್ಶಿಖಿಂಡಿನಃ ।
ಗೃಹೇಷು ತಪ್ತಾ ನಿರ್ವಿಣ್ಣಾ ಯಥಾಚ್ಯುತಜನಾಗಮೇ
॥ ೨೦ ॥

ಪೀತ್ವಾಪಃ ಪಾದಪಾಃ ಪದ್ಭಿರಾಪನ್ನಾನಾತ್ಮಮೂರ್ತಯಃ ।
ಪ್ರಾಕ್ಷ್ಮಾಸ್ತಪಸಾ ಶ್ರಾಂತಾ ಯಥಾ ಕಾಮಾನುಸೇವಯಾ
॥ ೨೧ ॥

ಸರಸ್ತ್ವಶಾಂತರೋಧಸ್ಸು ನ್ಯೂಷುರಂಗಾಪಿ ಸಾರಸಾಃ ।
ಗೃಹೇಷ್ವಶಾಂತಕೃತ್ಯೇಷು ಗ್ರಾಮ್ಯಾ ಇವ ದುರಾಶಯಾಃ
॥ ೨೨ ॥

ಹರಿಸೇವೆಯಿಂದ ಅಂತರ್ಬಾಹ್ಯ ಎರಡೂ ರೂಪಗಳೂ ಸುಂದರವಾಗುವಂತೆ ವರ್ಷಾಕಾಲದ ಹೊಸ ನೀರಿನ ಪಾನದಿಂದ ಜಲಚರ ಭೂಚರ ಪ್ರಾಣಿಗಳ ಸೌಂದರ್ಯಗಳು ಹೆಚ್ಚಿದವು. ॥ ೧೩ ॥ ವಾಸನಾಯುಕ್ತ ಯೋಗಿಯ ಚಿತ್ತವು ವಿಷಯಗಳ ಸಂಪರ್ಕದಿಂದ ಕಾಮನೆಗಳು ಉಕ್ಕುವಂತೆಯೇ, ವರ್ಷಾಋತುವಿನಲ್ಲಿ ಬಿರುಗಾಳಿಗೆ ಸಮುದ್ರವು ಮೊದಲೇ ಎತ್ತರವಾದ ತೆರೆಗಳಿಂದ ಕೂಡಿತ್ತು, ಈಗ ನದಿಗಳ ಸಂಯೋಗದಿಂದ ಅದು ಇನ್ನೂ ಕ್ಷುಬ್ಧವಾಯಿತು. ॥ ೧೪ ॥ ತಮ್ಮ ಚಿತ್ತವನ್ನು ಭಗವಂತನಲ್ಲಿ ಸಮರ್ಪಿಸಿದ ಪುರುಷರಿಗೆ ಎಷ್ಟೇ ದುಃಖಗಳ ಹೊರೆಗಳೂ ಕೂಡ ಯಾವುದೇ ವ್ಯಥೆಯನ್ನು ಉಂಟುಮಾಡದಂತೆ, ಮುಸಲಧಾರ ಮಳೆಯ ಆಘಾತ ಬೀಳುತ್ತಿದ್ದರೂ ಪರ್ವತಗಳಿಗೆ ಯಾವುದೇ ವ್ಯಥೆ ಉಂಟಾಗುವುದಿಲ್ಲ. ॥ ೧೫ ॥ ಸತತವಾಗಿ ಅಭ್ಯಾಸ ಮಾಡದಿರುವ ವೇದಗಳು ದ್ವಿಜರಿಗೆ ಕಾಲಾನುಕ್ರಮದಲ್ಲಿ ಮರೆತು ಹೋಗುವಂತೆ, ಶುದ್ಧಸಂಸ್ಕಾರ ಹೀನವಾದ ಮಾರ್ಗಗಳು ಹುಲ್ಲಿನಿಂದ ತುಂಬಿಕೊಂಡು ಅದನ್ನು ಗುರುತಿಸುವುದೇ ಕಷ್ಟವಾಯಿತು. ॥ ೧೬ ॥ ಚಂಚಲವಾದ ಅನುರಾಗವುಳ್ಳ ಕಾಮಿನಿಯು ಗುಣವಂತನಾದ ಪುರುಷನ ಬಳಿಯಲ್ಲೂ ಸ್ಥಿರಭಾವದಿಂದ ಇರುವುದಿಲ್ಲ, ಹಾಗೆಯೇ ಲೋಕೋಪಕಾರಿಗಳಾದ ಮೇಘಗಳಲ್ಲಿ ಮಿಂಚುಗಳು ಸ್ಥಿರವಾಗಿ ಇರುವುದಿಲ್ಲ. ॥ ೧೭ ॥ ತ್ರಿಗುಣಾತ್ಮಕವಾದ ಈ ಪ್ರಪಂಚದಲ್ಲಿ ನಿರ್ಗುಣನಾದ ಪರಬ್ರಹ್ಮನು ಬೆಳಗುವಂತೆ ಮೇಘಗಳ ಗುತ್ತುಗು ಸಿಡಿಲುಗಳಿಂದ ತುಂಬಿರುವ ಆಕಾಶದಲ್ಲಿ ನಿರ್ಗುಣವಾದ ನಾಣಿಲ್ಲದ ಇಂದ್ರಧನುಸ್ಸು (ಕಾಮನಬಿಲ್ಲು) ಮೂಡಿ ಬರುತ್ತದೆ. ॥ ೧೮ ॥ ಪುರುಷನಲ್ಲಿರುವ ದೇಹಾತ್ಮಭ್ರಾಂತಿಯಿಂದ ಕೂಡಿದ ಅಹಂಕಾರವು ಆತ್ಮವನ್ನು ಮುಚ್ಚಿಡುವಂತೆ, ಚಂದ್ರನ ಬೆಳದಿಂಗಳಿಂದಲೇ ಪ್ರಕಾಶಗೊಂಡ ಮೋಡಗಳ ಆವರಣದಿಂದ ಚಂದ್ರನು ಮರೆಯಾಗಿದ್ದಾನೆ. ॥ ೧೯ ॥ ತಾಪತ್ರಯಗಳಿಂದ ಬೆಂದು ಪರಿತಪಿಸುವ ಗೃಹಸ್ಥರಮನೆಗೆ ಪರಿವ್ರಾಜಕರು ಬಂದಾಗ ಅವರಿಗೆ ಆಗುವ ಆನಂದೋತ್ಸವದಂತೆ, ಮೇಘಗಳ ಶುಭಾಗಮನದಿಂದ ನವಿಲುಗಳು ಕೇಕೆಹಾಕಿಕೊಂಡು ನೃತ್ಯವಾಡುತ್ತಾ ಆನಂದೋತ್ಸವವನ್ನು ಆಚರಿಸುತ್ತಿರುವುವು. ॥ ೨೦ ॥ ಸಕಾಮ ಭಾವದಿಂದ ತಪಸ್ಸು ಮಾಡುವವರ ಶರೀರವು ಮೊದಲಿಗೆ ಕೃಶವಾಗಿದ್ದರೂ, ಕಾಮನಾಪೂರ್ತಿ ಯಾದಾಗ ಹೃಷ್ಟ-ಪುಷ್ಟರಾಗುವಂತೆ, ಗ್ರೀಷ್ಮದಲ್ಲಿ ಒಣಗಿ ಹೋಗಿದ್ದ ವೃಕ್ಷಗಳೂ ಈಗ ವರ್ಷಾಋತುವಿನಲ್ಲಿ ಬೇರುಗಳಿಂದ ನೀರನ್ನುಂಡು ಸೊಂಪಾಗಿ ಚಿಗುರಿಕೊಳ್ಳುತ್ತವೆ. ॥ ೨೧ ॥ ಮನಸ್ಸಿಗೆ ಅಹಿತವಾದ ಕಾರ್ಯಗಳು ಮನೆಯಲ್ಲಿ ನಡೆಯುತ್ತಿದ್ದರೂ ವಿಷಯೀ ಪುರುಷರು ಆ ಮನೆಯನ್ನು ತೊರೆದು ಹೋಗುವುದಿಲ್ಲವೋ ಹಾಗೆಯೇ, ಮಳೆ ಸುರಿಯುವಿಕೆಯಿಂದ ಸರೋವರಗಳು ಕೊಚ್ಚೆಯಾಗಿದ್ದರೂ ಸಾರಸಪಕ್ಷಿಗಳು ಅವನ್ನು ವರ್ಷಾಕಾಲದಲ್ಲಿ ಬಿಟ್ಟು ಹೋಗುವುದಿಲ್ಲ. ॥ ೨೨ ॥

ಜಲೌಘೈರ್ನಿರಭಿದ್ಯಂತ ಸೇತವೋ ವರ್ಷತೀಶ್ವರೇ ।
ಪಾಖಂಡಿನಾಮಸದ್ವಾದೈರ್ವೇದಮಾರ್ಗಾಃ ಕಲೌ ಯಥಾ
॥ ೨೩ ॥

ವ್ಯಮುಂಚನ್ವಾಯುಭಿರ್ನುನ್ನಾ ಭೂತೇಭ್ಯೋಽಥಾಮೃತಂ ಘನಾಃ ।
ಯಥಾಽಽತ್ಮಿಷೋ ವಿಶ್ವತಯಃ ಕಾಲೇ ಕಾಲೇ ದ್ವಿಜೇರಿತಾಃ
॥ ೨೪ ॥

ಏವಂ ವನಂ ತದ್ವರ್ಷಿಷ್ಠಂ ಪಕ್ವಖರ್ಜೂರಜಂಬುಮತ್ ।
ಗೋಗೋಪಾಲೈರ್ವೃತೋ ರಂತುಂ ಸಬಲಃ ಪ್ರಾವಿಶದ್ಧರಿಃ
॥ ೨೫ ॥

ಧೇನವೋ ಮಂದಗಾಮಿನ್ಯ ಉಧೋಭಾರೇಣ ಭೂಯಸಾ ।
ಯಯುರ್ಭಗವತಾಽಽಹೂತಾ ದ್ರುತಂ ಪ್ರೀತ್ಯಾ ಸುತಸ್ತನೀಃ
॥ ೨೬ ॥

ವನೌಕಸಃ ಪ್ರಮುದಿತಾ ವನರಾಜೀರ್ಮಧುಚ್ಯುತಃ ।
ಜಲಧಾರಾ ಗಿರೇರ್ನಾದಾನಾಸನ್ನಾ ದದೃಶೇ ಗುಹಾಃ
॥ ೨೭ ॥

ಕ್ವಚಿದ್ವನಸ್ಪತಿಕ್ರೋಡೇ ಗುಹಾಯಾಂ ಚಾಭಿವರ್ಷತಿ ।
ನಿರ್ವಿಶ್ಯ ಭಗವಾನ್ರೇಮೇ ಕಂದಮೂಲಫಲಾಶನಃ
॥ ೨೮ ॥

ದಧ್ಯೋದನಂ ಸಮಾನೀತಂ ಶಿಲಾಯಾಂ ಸಲಿಲಾಂತಿಕೇ ।
ಸಂಭೋಜನೀಯೈರ್ಬುಭುಜೇ ಗೋಪೈಃ ಸಂಕರ್ಷಣಾನ್ವಿತಃ
॥ ೨೯ ॥

ಶಾದ್ವಲೋಪರಿ ಸಂವಿಶ್ಯ ಚರ್ವತೋ ಮೀಲಿತೇಕ್ಷಣಾನ್ ।
ತೃಪ್ತಾನ್ವೃಷಾನ್ವತ್ಸತರಾನ್ ಗಾಶ್ಚ ಸ್ವೋಧೋಭರಶ್ರಮಾಃ
॥ ೩೦ ॥

ಪ್ರಾವೃಟ್ಶ್ರಿಯಂ ಚ ತಾಂ ವೀಕ್ಷ್ಯ ಸರ್ವಭೂತಮುದಾವಹಾಮ್ ।
ಭಗವಾನೂಜಯಾನ್ ಚಕ್ರೇ ಆತ್ಮಶಕ್ತ್ಯುಪಬೃಂಹಿತಾಮ್
॥ ೩೧ ॥

ಏವಂ ನಿವಸತೋಸ್ತಸ್ಮಿನ್ರಾಮಕೇಶವಯೋರ್ವ್ರಜೇ ।
ಶರತ್ಸಮಭವದ್ವ್ಯಭ್ರಾ ಸ್ವಚ್ಛಾಮ್ಬ್ವಪರುಷಾನಿಲಾ
॥ ೩೨ ॥

ಕಲಿಯುಗದಲ್ಲಿ ನಾಸ್ತಿಕರ ಮಿಥ್ಯಾವಾದಗಳಿಂದ ವೈದಿಕಮತವು ಎಲ್ಲೆ ಮೀರುವಂತೆ, ವರ್ಷಾಕಾಲದಲ್ಲಿ ದೇವೇಂದ್ರನು ಸುರಿಸುತ್ತಿರುವ ಮುಸಲಧಾರೆಯಂತಹ ಮಳೆಯ ನೀರಿನ ಪ್ರವಾಹದಿಂದ ಹಲವಾರು ಅಣೆಕಟ್ಟು ಸೇತುವೆಗಳೂ ಕೊಚ್ಚಿಕೊಂಡು ಹೋಗುತ್ತವೆ. ॥ ೨೩. ॥ ಬ್ರಾಹ್ಮಣರ ಪ್ರೇರಣೆಯಿಂದ ಧನಿಕರಾದವರು ಜನೋಪಯೋಗಿ ಕಲ್ಯಾಣ ಕಾರ್ಯಗಳನ್ನು ಮಾಡುವಂತೆ, ವರ್ಷಾಕಾಲದಲ್ಲಿ ವಾಯುವಿನ ಪ್ರೇರಣೆಯಿಂದ ದಟ್ಟವಾದ ಮೇಘಗಳು ಪ್ರಾಣಿಗಳ ಹಿತದ ಸಲುವಾಗಿ ಅಮೃತಮಯವಾದ ನೀರನ್ನು ಸುರಿಸುತ್ತವೆ. ॥ ೨೪ ॥

ವರ್ಷಾಋತುವಿನಲ್ಲಿ ವೃಂದಾವನವು ಹೀಗೆ ಶೋಭಾಯಮಾನವಾಗಿದ್ದು, ಪಕ್ವವಾದ ಖರ್ಜೂರದಿಂದಲೂ, ನೇರಳೆಹಣ್ಣುಗಳಿಂದಲೂ ಸಮೃದ್ಧವಾಗಿತ್ತು. ಅಂತಹ ಸುಂದರವಾದ ವನದಲ್ಲಿ ವಿಹರಿಸಲು ರಾಮ-ಶ್ಯಾಮರು ಗೊಲ್ಲಬಾಲಕರೊಡನೆ ಮತ್ತು ಗೋವುಗಳ ಜೊತೆಗೆ ಪ್ರವೇಶಿಸಿದರು. ॥ ೨೫ ॥ ಕೆಚ್ಚಲುಗಳಲ್ಲಿ ಹಾಲು ತುಂಬಿ ಭಾರವಾದ್ದರಿಂದ ಹಸುಗಳು ನಿಧಾನವಾಗಿ ನಡೆದು ಹೋಗುತ್ತಿದ್ದವು. ಭಗವಾನ್ ಶ್ರೀಕೃಷ್ಣನು ಅವುಗಳ ಹೆಸರಿಡಿದು ಕೂಗಿದಾಗ ಅವು ಪ್ರೇಮಪರವಶರಾಗಿ ಬೇಗ-ಬೇಗನೇ ಓಡ ತೊಡಗಿದವು. ಹೀಗೆ ಓಡುವಾಗ ಅವುಗಳ ಕೆಚ್ಚಲುಗಳಿಂದ ಹಾಲು ಧಾರಾಕಾರವಾಗಿ ಸುರಿಯುತ್ತಿತ್ತು. ॥ ೨೬ ॥ ಆ ವೃಂದಾವನದಲ್ಲಿ ಶ್ರೀಕೃಷ್ಣನು ಆನಂದತುಂದಿಲರಾದ ವನವಾಸಿಗಳನ್ನು, ಜೇನನ್ನು ಸುರಿಸುತ್ತಿರುವ ವೃಕ್ಷಗಳನ್ನು, ಮೈತುಂಬಿ ಭೋರ್ಗರೆಯುತ್ತಾ ಹರಿಯುತ್ತಿದ್ದ ಗಿರಿನದಿಗಳನ್ನು, ಅವುಗಳ ಸಮೀಪದಲ್ಲೇ ಇದ್ದ ಗುಹೆಗಳನ್ನು ನೋಡಿದನು. ॥ ೨೭ ॥ ಮಳೆಯು ಬಂದಾಗ ಶ್ರೀಕೃಷ್ಣನು ಕೆಲವೊಮ್ಮೆ ಮರದ ಪೊಟರೆಗಳಲ್ಲಿಯೂ, ಕೆಲವು ವೇಳೆ ಗುಹೆಗಳಲ್ಲಿಯೂ ಅಡಗಿಕೊಳ್ಳುತ್ತಿದ್ದನು. ಕೆಲವುವೇಳೆ ಗಡ್ಡೆ ಗೆಣಸು-ಹಣ್ಣುಗಳನ್ನು ತಿನ್ನುತ್ತಾ ಗೋಪಬಾಲಕರೊಂದಿಗೆ ಆಟ ವಾಡುತ್ತಿದ್ದನು. ॥ ೨೮ ॥ ಕೆಲವು ವೇಳೆ ಶ್ರೀಕೃಷ್ಣನು ನದಿಯ ತೀರದ ಬಂಡೆಯ ಮೇಲೆ ಬಲರಾಮನೊಡನೆಯೂ, ಗೋಪಬಾಲಕರೊಂದಿಗೂ ಕುಳಿತು ಮನೆಯಿಂದ ತಂದ ಮೊಸರನ್ನವನ್ನು ಮೆಲ್ಲುತ್ತಿದ್ದನು. ॥ ೨೯ ॥ ಆ ವರ್ಷಾಕಾಲದಲ್ಲಿ ಎತ್ತುಗಳು, ಕರುಗಳು, ಕೆಚ್ಚಲಿನ ಭಾರದಿಂದ ದಣಿದಿದ್ದ ಹಸುಗಳು ಕೆಲಹೊತ್ತಿನವರೆಗೆ ಹುಲ್ಲು ಮೇಯುತ್ತಿದ್ದು ಹೊಟ್ಟೆ ತುಂಬಿದ ಮೇಲೆ ಹುಲ್ಲಿನ ಮೇಲೆಯೇ ಮಲಗಿ ಕಣ್ಣು ಮುಚ್ಚಿಕೊಂಡು ಮೆಲಕುಹಾಕುತ್ತಿದ್ದವು. ಸಮಸ್ತ ಪ್ರಾಣಿಗಳಿಗೂ ಸುಖದಾಯಕವಾದ, ಆನಂದಪ್ರದವಾದ ಇಂತಹ ವರ್ಷಾಕಾಲದ ಸೊಬಗನ್ನು ತನ್ನ ಲೀಲಾವಿಲಾಸದಿಂದಲೇ ಪ್ರಾದುರ್ಭವಿಸಿದ್ದರೂ ಆ ಸನ್ನಿವೇಶವನ್ನು ನೋಡಿ ಶ್ರೀಕೃಷ್ಣನು ಅತ್ಯಂತ ಪ್ರಸನ್ನನಾದನು ಹಾಗೂ ಅವುಗಳನ್ನು ಬಹಳವಾಗಿ ಪ್ರಶಂಸೆ ಮಾಡಿದನು. ॥ ೩೦-೩೧ ॥

ಹೀಗೆ ರಾಮ-ಕೇಶವರಿಬ್ಬರೂ ಮಹದಾನಂದದಿಂದ ವ್ರಜದಲ್ಲಿ ನಿವಾಸಮಾಡುತ್ತಿರಲಾಗಿ, ವರ್ಷಾಋತುವು ಕಳೆದು ಶರದೃತುವಿನ ಆಗಮನವಾಯಿತು. ಆಕಾಶವು ಮೋಡಗಳಿಲ್ಲದೆ ನಿರ್ಮಲವಾಯಿತು. ವಾಯುವು ಮಂದ-ಮಂದವಾಗಿ ಬೀಸತೊಡಗಿತು. ॥೩೨॥

ಶರದಾ ನೀರಜೋತ್ಪತ್ತ್ಯಾ ನೀರಾಣಿ ಪ್ರಕೃತಿಂ ಯಯುಃ ।
ಭ್ರಷ್ಟಾನಾಮಿವ ಚೇತಾಂಸಿ ಪುನರ್ಯೋಗನಿಷೇವಯಾ
॥ ೩೩ ॥

ವ್ಯೋಮ್ನೋಽಬ್ದಂ ಭೂತಶಾಬಲ್ಯಂ ಭುವಃ ಪಂಕಮಪಾಂ ಮಲಮ್ ।
ಶರಜ್ಜಹಾರಾಶ್ರಮಿಣಾಂ ಕೃಷ್ಣೇ ಭಕ್ತಿರ್ಯಥಾಶುಭಮ್
॥ ೩೪ ॥

ಸರ್ವಸ್ವಂ ಜಲದಾ ಹಿತ್ವಾ ವಿರೇಜುಃ ಶುಭ್ರವರ್ಚಸಃ ।
ಯಥಾ ತ್ಯಕ್ತೈಷಣಾಃ ಶಾಂತಾ ಮುನಯೋ ಮುಕ್ತಕಿಲ್ಬಿಷಾಃ
॥ ೩೫ ॥

ಗಿರಯೋ ಮುಮುಚುಸ್ತೋಯಂ ಕ್ವಚಿನ್ನ ಮುಮುಚುಃ ಶಿವಮ್ ।
ಯಥಾ ಜ್ಞಾನಾಮೃತಂ ಕಾಲೇ ಜ್ಞಾನಿನೋ ದದತೇ ನ ವಾ
॥ ೩೬ ॥

ನೈವಾವಿದನ್ ಕ್ಷೀಯಮಾಣಂ ಜಲಂ ಗಾಧಜಲೇಚರಾಃ ।
ಯಥಾಽಽಯುರನ್ವಹಂ ಕ್ಷಯ್ಯಂ ನರಾ ಮೂಢಾಃ ಕುಟುಂಬಿನಃ
॥ ೩೭ ॥

ಗಾಧವಾರಿಚರಾಸ್ತಾಪಮವಿಂದನ್ ಘರದರ್ಕಜಮ್ ।
ಯಥಾ ದರಿದ್ರಃ ಕೃಪಣಃ ಕುಟುಂಬ್ಯವಿಜಿತೇಂದ್ರಿಯಃ
॥ ೩೮ ॥

ಶನೈಃ ಶನೈರ್ಜಹುಃ ಪಂಕಂ ಸ್ಥಲಾನ್ಯಾಮಂ ಚ ವೀರುಧಃ ।
ಯಥಾಹಂಮಮತಾಂ ಧೀರಾಃ ಶರೀರಾದಿಷ್ವನಾತ್ಮಸು
॥ ೩೯ ॥

ನಿಶ್ಚಲಾಂಬುರಭೂತ್ತೂಷ್ಣೀಂ ಸಮುದ್ರಃ ಶರದಾಗಮೇ ।
ಆತ್ಮನ್ಯುಪರತೇ ಸಮ್ಯಙ್ಮುನಿರ್ವ್ಯೂಪರತಾಗಮಃ
॥ ೪೦ ॥

ಕೇದಾರೇಭ್ಯಸ್ತ್ವಪೋಽಗೃಹ್ಣನ್ಕರ್ಷಕಾ ದೃಢಸೇತುಭಿಃ ।
ಯಥಾ ಪ್ರಾಣೈಃ ಸ್ರವಜ್ಜ್ಞಾನಂ ತನ್ನಿರೋಧೇನ ಯೋಗಿನಃ
॥ ೪೧ ॥

ಯೋಗಭ್ರಷ್ಟನಾದವನ ಚಿತ್ತವು ಪುನಃ ಯೋಗಾಭ್ಯಾಸಮಾಡುವುದರಿಂದ ನಿರ್ಮಲವಾಗುವಂತೆ, ಸರೋವರಗಳಲ್ಲಿ ಪುನಃ ಕಮಲಗಳು ಅರಳಿ, ಜಲಾಶಯಗಳ ನೀರು ತನ್ನ ಸಹಜವಾದ ಸ್ವಚ್ಛತೆಯನ್ನು ಪಡೆದುಕೊಂಡಿತು. ॥ ೩೩. ॥ ಭಗವಂತನ ಅನನ್ಯ ಭಕ್ತಿಯು ಬ್ರಹ್ಮಚಾರೀ, ಗೃಹಸ್ಥ ವಾನಪ್ರಸ್ಥ ಮತ್ತು ಸಂನ್ಯಾಸಿ ಇವರ ಎಲ್ಲರ ರೀತಿಯ ಕಷ್ಟ ಮತ್ತು ಅಶುಭಗಳನ್ನು ನಾಶಮಾಡಿಬಿಡುವಂತೆಯೇ, ಶರದೃತುವು ಆಕಾಶವನ್ನು ಮೋಡಗಳಿಂದಲೂ, ವರ್ಷಾಕಾಲದಲ್ಲಿ ಬೆಳೆದ ಜೀವ-ಜಂತುಗಳನ್ನು, ಭೂಮಿಯಲ್ಲಿ ಇರುವ ಕೆಸರನ್ನು ನೀರಿನ ಕೊಳೆಯನ್ನು ನಾಶಮಾಡಿ ಬಿಟ್ಟಿತು. ॥ ೩೪ ॥ ಪುತ್ರೇಷಣ, ವಿತ್ತೇಷಣ ಮತ್ತು ದಾರೇಷಣಗಳೆಂಬ ಈಷಣತ್ರಯಗಳನ್ನು ಪರಿತ್ಯಾಗ ಮಾಡಿ, ಕಾಮಕ್ರೋಧಾದಿಗಳನ್ನು ದೂರಿಕರಿಸಿ, ಪಾಪರಹಿತರಾಗಿ ಶುದ್ಧಾತ್ಮರಾದ ಬ್ರಹ್ಮಜ್ಞಾನಿಗಳಂತೆ, ಮೋಡಗಳು ತಮ್ಮಲ್ಲಿದ್ದ ನೀರೆಲ್ಲವನ್ನೂ ದಾನಮಾಡಿ ಪರಿಶುದ್ಧವಾದ ತೇಜಸ್ಸಿನಿಂದ ಕಂಗೊಳಿಸಿದವು. ॥ ೩೫ ॥ ಜ್ಞಾನಿಗಳಾದವರು ಜ್ಞಾನಾಮೃತವನ್ನು ಕೆಲವು ವೇಳೆ ಕೆಲವರಿಗೆ ಅನುಗ್ರಹಿಸುವಂತೆ ಮತ್ತೆ ಕೆಲವರಿಗೆ ಅನುಗ್ರಹಿಸದೆಯೂ ಇರುವಂತೆ, ವರ್ಷಾಕಾಲದಲ್ಲಿ ತುಂಬಿ ಹರಿಯುತ್ತಿದ್ದ ಗಿರಿನದಿಗಳು ಶರತ್ಕಾಲದಲ್ಲಿ ಅಮೃತಪ್ರಾಯವಾದ ನೀರಿನಿಂದ ಕೂಡಿ ಹರಿಯುತ್ತಿದ್ದರೆ, ಕೆಲವು ವೇಳೆ ಬತ್ತಿಹೋಗುತ್ತಿದ್ದವು. ॥ ೩೬ ॥ ಕುಟುಂಬ ಪೋಷಣೆಯಲ್ಲೇ ಮೈಮರೆತ ಮೂಢಜನರು ತಮ್ಮ ಆಯುಸ್ಸು ಕ್ಷಣೆ-ಕ್ಷಣೇ ಕ್ಷೀಣವಾಗುತ್ತಿರುವುದನ್ನು ತಿಳಿಯಲಾರರು. ಅಂತೆಯೇ ಆಳವಿಲ್ಲದ ಜಲಾಶಯದಲ್ಲಿ ವಾಸಮಾಡುವ ಜಲಚರಗಳು ಜಲಾಶಯದ ನೀರು ದಿನೇ-ದಿನೇ ಬತ್ತಿಹೋಗುತ್ತಿರುವುದನ್ನು ತಿಳಿಯುವುದಿಲ್ಲ ॥ ೩೭ ॥ ಇಂದ್ರಿಯಗಳಿಗೆ ವಶನಾದ ಕೃಪಣ, ದರಿದ್ರನು ಕುಟುಂಬದ ನಾನಾ ರೀತಿಯ ತಾಪಗಳಿಂದ ಪರಿತಪಿಸುವಂತೆ, ಆಳವಿಲ್ಲದ ನೀರಿನಲ್ಲಿ ವಾಸಿಸುವ ಜಲಚರಗಳು ಶರತ್ಕಾಲದ ಪ್ರಖರ ಸೂರ್ಯನ ತಾಪದಿಂದ ಪರಿತಪಿಸತೊಡಗಿದವು. ॥ ೩೮ ॥ ವಿವೇಕ ಸಂಪನ್ನರಾದ ಸಾಧಕನು ನಿಧಾನವಾಗಿ ಶರೀರವೇ ಮುಂತಾದ ಅನಾತ್ಮ ವಸ್ತುಗಳಲ್ಲಿದ್ದ 'ನಾನು', 'ನನ್ನದು' ಎಂಬ ಅಹಂತೆ, ಮಮತೆಗಳನ್ನು ಕೊರೆಯುವಂತೆ, ಶರತ್ಕಾಲದಲ್ಲಿ ಭೂಮಿಯು ಕೆಸರನ್ನೂ ಕೊರೆಯಿತು. ಔಷಧಿ ಲತೆಗಳು ಪರಿಪಕ್ವವಾಗುತ್ತವೆ. ॥ ೩೯ ॥ ಮನಸ್ಸು ನಿಃಸಂಕಲ್ಪವಾದಾಗ ಆತ್ಮಾರಾಮನಾದ ಪುರುಷನು ಕರ್ಮಕಾಂಡದ ಜಂಜಾಟದಿಂದ ದೂರವಾಗಿ ಶಾಂತನಾಗುವಂತೆ, ಶರತ್ಕಾಲದಲ್ಲಿ ಸಮುದ್ರವು ಯಾವುದೇ ಕ್ಷುಬ್ಧತೆಯೂ ಇಲ್ಲದೆ ಗಂಭೀರವಾಗಿಯೂ, ಶಾಂತವಾಗಿಯೂ, ಸ್ಥಿರವಾಯಿತು. ॥ ೪೦ ॥ ಯೋಗಿಗಳಾದವರು ಪ್ರತ್ಯಾಹಾರದ ಮೂಲಕ ಮನಸ್ಸು ಮತ್ತು ಇಂದ್ರಿಯಗಳನ್ನು ವಿಷಯಗಳಿಂದ ತಡೆದು ನಿಲ್ಲಿಸಿ, ಜ್ಞಾನವನ್ನು ರಕ್ಷಿಸಿಕೊಳ್ಳುವರೋ, ಹಾಗೆಯೇ ರೈತರು ಶರತ್ಕಾಲದಲ್ಲಿ ಗದ್ದೆಗಳಿಗೆ ಬಲವಾದ ಬದುಗಳನ್ನು ಕಟ್ಟಿ ಸೋರಿಹೋಗುವ ನೀರನ್ನು ತಡೆಯುತ್ತಿದ್ದರು. ॥ ೪೧ ॥

ಶರದರ್ಕಾಂಶುಜಾಂಸ್ತಾಪಾನ್ಭೂತಾ ನಾಮುಡುಪೋಽಹರತ್ ।
ದೇಹಾಭಿಮಾನಜಂ ಬೋಧೋ ಮುಕುಂದೋ ವ್ರಜಯೋಷಿತಾಮ್
॥ ೪೨ ॥

ಖಮಭೋಭತ ನಿರ್ಮೇಘಂ ಶರದ್ವಿಮಲತಾರಕಮ್ ।
ಸತ್ತ್ವಯುಕ್ತಂ ಯಥಾ ಚಿತ್ತಂ ಶಬ್ದಬ್ರಹ್ಮಾರ್ಥದರ್ಶನಮ್
॥ ೪೩ ॥

ಅಖಿಂಡಮಂಡಲೋ ವ್ಯೋಮ್ನಿ ರರಾಜೋಡುಗಣೈಃ ಶಶೀ ।
ಯಥಾ ಯದುಪತಿಃ ಕೃಷ್ಣೋ ವೃಷ್ಣಿಚಕ್ರಾವೃತೋ ಭುವಿ
॥ ೪೪ ॥

ಅಶ್ಲಿಷ್ಯ ಸಮಶೀತೋಷ್ಣಂ ಪ್ರಸೂನವನಮಾರುತಮ್ ।
ಜನಾಸ್ತಾಪಂ ಜಹುರ್ಗೋಪ್ಯೋ ನ ಕೃಷ್ಣಹೃತಚೇತಸಃ
॥ ೪೫ ॥

ಗಾವೋ ಮೃಗಾಃ ಖಿಗಾ ನಾರ್ಯಃ ಪುಷ್ಪಿಣ್ಯಃ ಶರದಾಭವನ್ ।
ಅನ್ವೀಯಮಾನಾಃ ಸ್ವವೃಷೈಃ ಫಲ್ಗೂರೀಶಕ್ರಿಯಾ ಇವ
॥ ೪೬ ॥

ಉದಹೃಷ್ಯನ್ವಾರಿಜಾನಿ ಸೂರ್ಯೋತ್ತ್ಥಾನೇ ಕುಮುದ್ವಿನಾ ।
ರಾಜ್ಞಾತು ನಿರ್ಭಯಾ ಲೋಕಾ ಯಥಾ ದಸ್ಯೂನ್ವಿನಾ ನೃಪ
॥ ೪೭ ॥

ಪುರಗ್ರಾಮೇಷ್ವಾಗ್ರಯಣೈರೈಂದ್ರಿಯೈಶ್ಚ ಮಹೋತ್ಸವೈಃ ।
ಬಭೌ ಭೂಃ ಪಕ್ವಶಸ್ಯಾಢ್ಯಾ ಕಲಾಭ್ಯಾಂ ನಿತರಾಂ ಹರೇಃ
॥ ೪೮ ॥

ವಣಿಜ್ಮುನಿನೃಪಸ್ನಾತಾ ನಿರ್ಗಮ್ಯಾರ್ಥಾನ್ಪ್ರಪೇದಿರೇ ।
ವರ್ಷರುದ್ಧಾ ಯಥಾ ಸಿದ್ಧಾಃ ಸ್ವಪಿಂಡಾನ್ಕಾಲ ಆಗತೇ
॥ ೪೯ ॥

ದೇಹಾಭಿಮಾನದಿಂದ ಉಂಟಾದ ಅಜ್ಞಾನವನ್ನು ಜ್ಞಾನವು ಹೋಗಲಾಡಿಸುವಂತೆಯೂ, ಗೋಪಿಯರ ವಿರಹತಾಪವನ್ನು ಶ್ರೀಕೃಷ್ಣನು ಹೋಗಲಾಡಿಸುವಂತೆಯೇ, ಶರತ್ಕಾಲದ ಸೂರ್ಯನ ಪ್ರಖರ ಕಿರಣಗಳಿಂದ ಪ್ರಾಣಿಗಳಿಗೆ ಉಂಟಾದ ತಾಪವನ್ನು ಶರಚ್ಚಂದ್ರನು ರಾತ್ರಿಯಲ್ಲಿ ಪರಿಹರಿಸುತ್ತಾನೆ. ॥ ೪೨ ॥ ವೇದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದಿರುವ ಸತ್ತ್ವಗುಣಿಯ ಚಿತ್ತವು ಅತ್ಯಂತ ಶೋಭಾಯಮಾನವಾಗಿರುವಂತೆ, ಶರದೃತುವಿನ ರಾತ್ರಿಯಲ್ಲಿ ಮೇಘರಹಿತವಾದ ನಿರ್ಮಲ ಆಕಾಶವು ತಾರೆಗಳ ಜ್ಯೋತಿಗಳಿಂದ ಬೆಳಗುತ್ತಿರುತ್ತದೆ. ॥ ೪೩ ॥ ಪರೀಕ್ಷಿತನೇ! ಭೂಮಂಡಲದಲ್ಲಿ ಯದುವಂಶೀಯರಲ್ಲಿ ಯದುಪತಿ ಭಗವಾನ್ ಶ್ರೀಕೃಷ್ಣನು ಶೋಭಿಸುತ್ತಿರುವಂತೆಯೇ, ಆಕಾಶದಲ್ಲಿ ತಾರೆಗಳಿಂದ ಕೂಡಿದ ಚಂದ್ರನು ಶೋಭಿಸತೊಡಗಿದನು. ॥ ೪೪ ॥ ವಿಕಸಿತವಾದ ವನ ಕುಸುಮಗಳನ್ನು ಆಲಂಗಿಸಿಕೊಂಡು ಮೆಲ್ಲ-ಮೆಲ್ಲನೇ ಮತ್ತು ಸಮಶೀತೋಷ್ಣವಾಗಿ ಬೀಸುತ್ತಿದ್ದ ಮಾರುತವು ಸಮಸ್ತ ಜನರ ತಾಪವನ್ನು ಪರಿಹರಿಸುತ್ತಿತ್ತು. ಗೋಪಿಯರ ವಿರಹತಾಪವನ್ನು ಮಾತ್ರ ಪರಿಹರಿಸಲು ಸಮರ್ಥವಾಗಲಿಲ್ಲ. ಅವರ ಮನಸ್ಸುಗಳನ್ನು ಶ್ರೀಕೃಷ್ಣನೇ ಅಪಹರಿಸಿ ಬಿಟ್ಟಿದ್ದನು. ॥ ೪೫ ॥ ಸಮರ್ಥರಾದ ವರಿಂದ ಮಾಡಲ್ಪಡುವ ಕ್ರಿಯೆಗಳನ್ನು ಫಲಗಳು ಅನುಸರಿಸುವಂತೆ, ಶರತ್ಕಾಲದಲ್ಲಿ ಹಸುಗಳೂ, ಜಿಂಕೆಗಳೂ, ಪಕ್ಷಿಗಳೂ, ಹೆಂಗಸರೂ, ಋತುಮತಿಯರೂ-ಸಂತಾನೋತ್ಪತ್ತಿಯ ಕಾಮನೆಯಿಂದ ಕೂಡಿ ಹೋರಿಗಳನ್ನು ಗಂಡುಪಕ್ಷಿಗಳನ್ನು, ಗಂಡಸರನ್ನೂ ಅನುಸರಿಸಿದವು. ॥ ೪೬ ॥ ಪರೀಕ್ಷಿತನೇ! ರಾಜನ ಶುಭಾಗಮನದಿಂದ ಕಳ್ಳರನ್ನು ಬಿಟ್ಟು ಉಳಿದವರೆಲ್ಲರೂ ನಿರ್ಭಯರಾಗುವಂತೆಯೇ, ಸೂರ್ಯೋದಯದಿಂದ ಕನ್ನೈದಿಲೆಗಳನ್ನು ಬಿಟ್ಟು ಉಳಿದ ಕಮಲವೇ ಮುಂತಾದ ಪುಷ್ಪಗಳು ವಿಕಸಿತವಾಗುತ್ತವೆ. ॥ ೪೭ ॥ ಶರತ್ಕಾಲದಲ್ಲಿ ದೊಡ್ಡ-ದೊಡ್ಡ ಪಟ್ಟಣಗಳಲ್ಲಿಯೂ, ಹಳ್ಳಿಗಳಲ್ಲಿಯೂ ಆಗ್ರಾಯಣವೂ (ನವಾನ್ನಪ್ರಾಶನ), ಇಂದ್ರನ ಸಂಬಂಧವಾದ ಉತ್ಸವಗಳು ನಡೆಯ ತೊಡಗಿದವು. ಮಾಗಿನಿಂತ ಬೆಳೆಗಳಿಂದ ಭೂಮಿಯು ಸಂಪನ್ನವಾಗಿತ್ತು ಮತ್ತು ಭಗವಾನ್ ಶ್ರೀಕೃಷ್ಣನ ಹಾಗೂ ಬಲರಾಮನ ಉಪಸ್ಥಿತಿಯಲ್ಲಿ ಭೂಮಂಡಲವು ಅತ್ಯಂತ ಶೋಭಿಸ ತೊಡಗಿತು. ॥ ೪೮ ॥ ಸಾಧಕರು ತಮ್ಮ ಯೋಗ ಸಾಧನೆಗಳಿಂದ ಕಾಲಾನುಕ್ರಮವಾಗಿ ದಿವ್ಯಶರೀರಗಳನ್ನು ಪಡೆದು ಕೊಳ್ಳುವಂತೆ, ವರ್ಷಾಕಾಲದಲ್ಲಿ ಒಂದೇ ಸ್ಥಳದಲ್ಲಿ ನೆಲೆಸಿದ್ದ ವೈಶ್ಯರು, ರಾಜರು, ಸಂನ್ಯಾಸಿಗಳು ಮತ್ತು ಸ್ನಾತಕರು ಶರತ್ಕಾಲವು ಪ್ರಾರಂಭ ವಾಗುತ್ತಲೇ ಸ್ವೇಚ್ಛೆಯಿಂದ ತಮ್ಮ-ತಮ್ಮ ಕಾರ್ಯಗಳಲ್ಲಿ ತೊಡಗಿದರು. ॥ ೪೯ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಪ್ರಾವೃಟ್‌ಶರದ್ವರ್ಣನಂ ನಾಮ ವಿಂಶೋಽಧ್ಯಾಯಃ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ವೇಣುಗೀತೆ

ಶ್ರೀಶುಕ ಉವಾಚ

ಇತ್ಥಂ ಶರತ್ಸ್ವಚ್ಛಜಲಂ ಪದ್ಮಾಕರಸುಗಂಧಿನಾ ।
ನ್ಯವಿಶದ್ವಾಯುನಾ ವಾತಂ ಸಗೋಗೋಪಾಲಕೋಽಚ್ಯುತಃ
॥ ೧ ॥

ಕುಸುಮಿತವನರಾಜಿಶುಷ್ಮಿಭೃಂಗ-
ದ್ವಿಜಕುಲಘುಷ್ಟಸರಃಸರಿನ್ಮಹೀಧ್ರಮ್ ।
ಮಧುಪತಿರವಗಾಹ್ಯ ಚಾರಯನ್ಗಾಃ
ಸಹಪಶುಪಾಲಬಲಶ್ಚುಕೂಜ ವೇಣುಮ್ ॥ ೨ ॥

ತದ್ವ್ರಜಸ್ತ್ರಿಯ ಆಶ್ರುತ್ಯ ವೇಣುಗೀತಂ ಸ್ಮರೋದಯಮ್ ।
ಕಾಶ್ಚಿತ್ಪರೋಕ್ಷಂ ಕೃಷ್ಣಸ್ಯ ಸ್ವಸಖೀಭ್ಯೋಽನ್ವವರ್ಣಯನ್
॥ ೩ ॥

ತದ್ವರ್ಣಯಿತುಮಾರಬ್ಧಾಃ ಸ್ಮರಂತ್ಯಃ ಕೃಷ್ಣಚೇಷ್ಟಿತಮ್ ।
ನಾಶಕನ್ಸ್ಮರವೇಗೇನ ವಿಕ್ಷಿಪ್ತಮನಸೋ ನೃಪ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಶರತ್ಕಾಲದಲ್ಲಿ ಆ ವೃಂದಾವನವು ಬಹಳ ಸುಂದರವಾಗಿ ಕಾಣುತ್ತಿತ್ತು. ನೀರು ನಿರ್ಮಲವಾಗಿತ್ತು ಹಾಗೂ ಜಲಾಶಯಗಳಲ್ಲಿ ಅರಳಿದ ಕಮಲಗಳ ಸುಗಂಧವನ್ನು ಹೊತ್ತು ಮಂದಾನಿಲವು ಬೀಸುತ್ತಿತ್ತು. ಭಗವಾನ್ ಶ್ರೀಕೃಷ್ಣನು ಗೋವುಗಳ ಮತ್ತು ಗೋಪಾಲ ಬಾಲಕರೊಂದಿಗೆ ಆ ವನವನ್ನು ಪ್ರವೇಶಿಸಿದನು. ॥ ೧ ॥ ಸುಂದರವಾದ ಮತ್ತು ಸುಗಂಧಯುಕ್ತವಾದ ಪುಷ್ಪಗಳಿಂದ ಸಮಲಂಕೃತವಾಗಿದ್ದ ವೃಕ್ಷಗಳ ಸಾಲುಗಳಲ್ಲಿ ದುಂಬಿಗಳು ಝೇಂಕರಿಸುತ್ತಾ ಮಧುಪಾನಮಾಡುತ್ತಿದ್ದುವು. ಸರೋವರಗಳಲ್ಲಿಯೂ, ನದಿಯ ತೀರಗಳಲ್ಲಿಯೂ, ಪರ್ವತದ ತಪ್ಪಲುಗಳಲ್ಲಿಯೂ ನಾನಾ ವಿಧವಾದ ಪಕ್ಷಿಗಳು ಕುಳಿತು ಕಲಕಲ ನಿನಾದ ಮಾಡುತ್ತಿದ್ದವು. ಮಧುಪತಿಯಾದ ಶ್ರೀಕೃಷ್ಣನು ಬಲರಾಮನೊಡನೆ ಮತ್ತು ಗೊಲ್ಲ ಬಾಲಕರೊಂದಿಗೆ ವೃಂದಾವನವನ್ನು ಪ್ರವೇಶಿಸಿ ಹಸುಗಳನ್ನು ಮೇಯಿಸುತ್ತಾ ತನ್ನ ಕೊಳಲನ್ನು ಕರ್ಣಾನಂದಕರವಾಗಿ ನುಡಿಸತೊಡಗಿದನು. ॥ ೨ ॥ ಶ್ರೀಕೃಷ್ಣನ ಆ ವೇಣುಗಾನವು ಭಗವಂತನ ವಿಷಯದಲ್ಲಿ ಭಕ್ತಿಭಾವವನ್ನು, ಅವನನ್ನು ಸೇರಬೇಕೆಂಬ ಆಕಾಂಕ್ಷೆಯನ್ನು ಹುಟ್ಟಿಸುವುದಾಗಿತ್ತು. (ಅದನ್ನು ಕೇಳಿ ಗೋಪಿಯರ ಹೃದಯಗಳು ಪ್ರೇಮದಿಂದ ತುಂಬಿ ಹೋದುವು). ಅವರು ಏಕಾಂತದಲ್ಲಿ ಕಲೆತು ಸಖಿಯರೊಂದಿಗೆ ಶ್ರೀಕೃಷ್ಣನ ರೂಪ, ಗುಣ ಮತ್ತು ವೇಣುಗೀತದ ಮಾಧುರ್ಯ, ಪ್ರಭಾವವನ್ನು ವರ್ಣಿಸತೊಡಗಿದರು. ॥ ೩ ॥ ವ್ರಜದ ಗೋಪಿಯರು ವೇಣುಗಾನದ ಮಾಧುರ್ಯವನ್ನು ವರ್ಣಿಸಲು ಪ್ರಾರಂಭಿಸುತ್ತಿರುವಂತೆಯೇ ಅವರಿಗೆ ಕೊಳಲನ್ನು ನುಡಿಸುತ್ತಿದ್ದ ಶ್ರೀಕೃಷ್ಣನ ಸ್ಮರಣೆಯುಂಟಾಗಿ, ಅವನ ಕೆಂದುಟಿ, ಕುಡಿನೋಟ, ಸುಂದರವಾದ ಹುಬ್ಬುಗಳು, ಅವನ ತಲೆಯ ಮೇಲೆ ಬೆಳಗುತ್ತಿದ್ದ ನವಿಲುಗರಿ-ಗುಂಗುರು ಕೂದಲು, ಮುಗುಳ್ನಗೆ - ಇವೆಲ್ಲವೂ ಅವರ ಸ್ಮೃತಿಪಥದಲ್ಲಿ ಸುಳಿದು ಜಗದಾನಂದಕಂದನನ್ನು ಸೇರಬೇಕೆಂಬ ಕಾತರವು ಹೆಚ್ಚಾಯಿತು. ಅವರ ಮನಸ್ಸೆಲ್ಲವೂ ಶ್ರೀಕೃಷ್ಣನಲ್ಲಿಯೇ ಸೇರಿ ಹೋಗಿದ್ದಿತು. ವೇಣುಗಾನ ಮಾಧುರ್ಯದ ವರ್ಣನೆಯಲ್ಲಿ ಅವರೆಲ್ಲರೂ ಅಸಮರ್ಥರಾದರು. ಕೃಷ್ಣ ಪ್ರೇಮಿಗಳಾದ ಗೋಪಿಯರು ವ್ರಜದಲ್ಲೇ ಇದ್ದುಕೊಂಡು ಶ್ರೀಕೃಷ್ಣನ ಚಿತ್ರವನ್ನು ತಮ್ಮ ಹೃದಯದಲ್ಲಿ ನೋಡತೊಡಗಿದರು. ॥ ೪ ॥ ಶ್ರೀಕೃಷ್ಣನು ಗೊಲ್ಲಬಾಲಕರೊಂದಿಗೆ ವೃಂದಾವನವನ್ನು ಪ್ರವೇಶಿಸುತ್ತಿದ್ದಾನೆ. ಅವನ ತಲೆಯ ಮೇಲೆ ಮಯೂರ ಪಿಚ್ಛಗಳಿವೆ. ಕಿವಿಗಳು ಕರ್ಣಿಕಾರ ಪುಷ್ಪಗಳಿಂದ ಅಲಂಕೃತವಾಗಿದ್ದವು, ಹೊಂಬಣ್ಣದ ಪೀತಾಂಬರವನ್ನು ಉಟ್ಟಿರುವನು. ಅವನ ಕುತ್ತಿಗೆಯಲ್ಲಿ ಐದು ಪ್ರಕಾರದ ಸುಗಂಧಿತ ಪುಷ್ಪಗಳಿಂದ ಪೋಣಿಸಿದ ವೈಜಯಂತೀ ಮಾಲೆಯಿದೆ. ಸುಂದರವಾದ ವಸ್ತ್ರಗಳನ್ನು ಧರಿಸಿ ನಾಟಕವಾಡಲು

ಬರ್ಹಾಪೀಡಂ ನಟವರವಪುಃ ಕರ್ಣಯೋಃ ಕರ್ಣಿಕಾರಂ
ಬಿಭ್ರದ್ವಾಸಃ ಕನಕಕಪಿಶಂ ವೈಜಯಂತೀಂ ಚ ಮಾಲಾಮ್ ।

ರಂಧ್ರಾನ್ವೇಣೋರಧರಸುಧಯಾ ಪೂರಯನ್ಗೋಪವೃಂದೈ-
ರ್ವೃಂದಾರಣ್ಯಂ ಸ್ವಪದರಮಣಂ ಪ್ರಾವಿಶದ್ಗೀತಕೀರ್ತಿಃ
॥ ೫ ॥

ಇತಿ ವೇಣುರವಂ ರಾಜನ್ಸರ್ವಭೂತಮನೋಹರಮ್ ।
ಶ್ರುತ್ವಾ ವ್ರಜಸ್ತ್ರಿಯಃ ಸರ್ವಾ ವರ್ಣಯಂತ್ಯೋಽಭಿರೇಭಿರೇ
॥ ೬ ॥

ಗೋಪ್ಯ ಊಚುಃ

ಅಕ್ಷಣ್ವತಾಂ ಫಲಮಿದಂ ನ ಪರಂ ವಿದಾಮಃ
ಸಖ್ಯಃ ಪಶೂನನು ವಿವೇಶಯತೋರ್ವಯಸ್ಯೈಃ ।

ವಕ್ತ್ರಂ ವ್ರಜೇಶ ಸುತಯೋರನುವೇಣು ಜುಷ್ಟಂ
ಯೈರ್ವಾ ನಿಪೀತಮನುರಕ್ತಕಟಾಕ್ಷಮೋಕ್ಷಮ್ ॥ ೭ ॥

ಚೂತಪ್ರವಾಲಬರ್ಹಸ್ತಬಕೋತ್ಪಲಾಬ್ಜ-
ಮಾಲಾನುಪೃಕ್ತಪರಿಧಾನವಿಚಿತ್ರವೇಷೌ ।

ಮಧ್ಯೇ ವಿರೇಜತುರಲಂ ಪಶುಪಾಲಗೋಷ್ಠ್ಯಾಂ
ರಂಗೇ ಯಥಾ ನಟವರೌ ಕ್ವಚ ಗಾಯಮಾನೌ ॥ ೮ ॥

ಗೋಪ್ಯಃ ಕಿಮಾಚರದಯಂ ಕುಶಲಂ ಸ್ಮ ವೇಣು-
ರ್ದಾಮೋದರಾಧರಸುಧಾಮಪಿ ಗೋಪಿಕಾನಾಮ್ ।

ಭುಂಕ್ತೇ ಸ್ವಯಂ ಯದವಶಿಷ್ಟರಸಂ ಹ್ರದಿನ್ಯೋ
ಹೃಷ್ಯತ್ತ್ವಚೋಽಶ್ರು ಮುಮುಚುಸ್ತರವೋ ಯಥಾಽಽರ್ಯಾಃ ॥ ೯ ॥

ಸಿದ್ಧನಾದ ನಟನಂತೆ ಕಾಣುತ್ತಿದ್ದಾನೆ. ಕೊಳಲಿನ ರಂಧ್ರಗಳಲ್ಲಿ ತನ್ನ ಅಧರಾಮೃತವನ್ನು ತುಂಬುತ್ತಿರುವನು. ಅವನ ಕೀರ್ತಿಯನ್ನು ಹಾಡುತ್ತಾ ಗೋಪಬಾಲಕರು ಹಿಂದೆ-ಹಿಂದೆ ನಡೆಯುತ್ತಿದ್ದಾರೆ. ಹೀಗೆ ವೈಕುಂಠಕ್ಕಿಂತಲೂ ಶ್ರೇಷ್ಠವಾದ ವೃಂದಾವನವನ್ನು ತನ್ನ ಚರಣಕಮಲಗಳ ಚಿಹ್ನೆಯಿಂದ ಮತ್ತಷ್ಟು ರಮಣೀಯವನ್ನಾಗಿಸುತ್ತಾ ಮುನ್ನಡೆಯುತ್ತಿದ್ದಾನೆ. ॥ ೫ ॥ ಪರೀಕ್ಷಿತನೆ ! ಈ ಮುರಲಿಯ ದನಿಯು ಜಡ-ಚೇತನ ಸಮಸ್ತ ಪ್ರಾಣಿಗಳ ಚಿತ್ತವನ್ನು ಅಪಹರಿಸುತ್ತಿತ್ತು. ಗೋಪಿಯರು ಅದನ್ನು ಕೇಳಿದರು ಹಾಗೂ ಕೇಳಿ ಅದನ್ನು ವರ್ಣಿಸತೊಡಗಿದರು. ವರ್ಣನೆ ಮಾಡುತ್ತಾ-ಮಾಡುತ್ತಾ ಅವರು ತನ್ಮಯ ಮನಸ್ಸಿನಲ್ಲೇ ಶ್ರೀಕೃಷ್ಣನ ಸಾನ್ನಿಧ್ಯದ ಅನುಭವವನ್ನು ಪಡೆದುಕೊಂಡು ಆಲಿಂಗಿಸಿಕೊಂಡರು. ॥ ೬ ॥

ಗೋಪಿಯರು ಪರಸ್ಪರ ಆಡಿಕೊಳ್ಳುವರು – ಓರ್ವ ಗೋಪಿಯು ಹೇಳುತ್ತಾಳೆ – ಸಖಿಯರೇ ! ಶ್ಯಾಮಸುಂದರ ಶ್ರೀಕೃಷ್ಣ ಮತ್ತು ಗೌರಸುಂದರ ಬಲರಾಮನು ಗೊಲ್ಲಬಾಲಕರೊಂದಿಗೆ ಹಸುಗಳನ್ನು ಆಟ್ಟಿಕೊಂಡು ವ್ರಜದಿಂದ ವೃಂದಾವನಕ್ಕೆ ಹೋಗುವಾಗ, ವ್ರಜಕ್ಕೆ ಬರುವಾಗ ಕೊಳಲಿನಿಂದ ಸಮಲಂಕೃತವಾದ ಅವರ ಮುದ್ದು ಮುಖದಿಂದ ಮತ್ತು ಪ್ರೇಮಪೂರ್ಣವಾದ ಒರೆನೋಟದಿಂದ ನಮ್ಮನ್ನು ನೋಡುತ್ತಿರುವಾಗ, ನಾವು ಅವರ ಆ ಮಧುರ ಮುಖಾರವಿಂದದ ಸವಿಯನ್ನು ಕಣ್ಣುಗಳಿಂದಲೇ ಪಾನಮಾಡುತ್ತೇವಲ್ಲ! ಕಣ್ಣುಗಳನ್ನು ಪಡೆದ ಜೀವರ, ಕಣ್ಣುಗಳ ಸಫಲತೆ ಇದೇಯಲ್ಲವೇ ? ಇದರಿಂದ ಬೇರೆಯಾದ ಪ್ರಯೋಜನ ಯಾವುದಿದೆ ? ॥ ೭ ॥ ಮತ್ತೊಬ್ಬಳು ಹೇಳಿದಳು – ಎಲೈ ಸಖಿಯೇ ! ಶ್ಯಾಮಸುಂದರನಾದ ಶ್ರೀಕೃಷ್ಣನು ಪೀತಾಂಬರವನ್ನು, ಗೌರಾಂಗನಾದ ಬಲರಾಮನು ನೀಲಾಂಬರವನ್ನು ಧರಿಸಿಕೊಂಡು, ವೃಂದಾವನದಲ್ಲಿ ಇವರು ಮಾವಿನ ಎಳೆಚಿಗುರು, ನವಿಲುಗರಿ, ಹೂವುಗಳ ಗೊಂಚಲು, ನೈದಿಲೆ-ತಾವರೆಗಳ ಹಾರಗಳು ಇವುಗಳಿಂದ ಸಿಂಗರಿಸಿಕೊಂಡು ವಿಚಿತ್ರವಾದ ವೇಷಗಳನ್ನು ಧರಿಸಿ ಗೋಪಾಲರ ನಡುವೆ ಹಾಡುಗಳನ್ನು ಹಾಡುತ್ತಾ ರಂಗಮಂಟಪದಲ್ಲಿ ನಟಿಸುವ ಶ್ರೇಷ್ಠರಾದ ನಟರಂತೆಯೇ ವಿರಾಜಿಸುತ್ತಾರೆ. ॥ ೮ ॥ ಇನ್ನೊಬ್ಬಳು ಹೇಳಿದಳು – ಎಲೈ ಗೋಪಿಯರೇ ! ಈ ಕೊಳಲಿನ ಭಾಗ್ಯವನ್ನಾದರೂ ನೋಡಿರಿ. ವೇಣುವು ಪುರುಷ ಜಾತಿಯದು. ಆದರೂ ಅದು ಹಿಂದಿನ ಜನ್ಮದಲ್ಲಿ ಎಂತಹ ಪುಣ್ಯ ಕಾರ್ಯಗಳನ್ನು, ತಪಸ್ಸನ್ನು ಆಚರಿಸಿದೆಯೋ ! ನಮಗೆ ಮಾತ್ರವೇ ಮೀಸಲೆಂದು ಭಾವಿಸಲಾಗಿದ್ದ ಮಾಧವನ ಅಧರಾಮೃತವನ್ನು ನಮಗೆ ಸ್ವಲ್ಪವೂ ಉಳಿಯದಂತೆ ಪಾನಮಾಡಿಬಿಡುತ್ತದಲ್ಲ! ಈ ವೇಣುವನ್ನು ಬೆಳೆಸಿ ಪೋಷಿಸಿದ ಸರೋವರಗಳು, ವಿಕಸಿತವಾದ ಕಮಲಗಳ ಮೂಲಕ ತಮಗಾದ ರೋಮಾಂಚನವನ್ನು ವ್ಯಕ್ತ ಪಡಿಸುತ್ತಿವೆ. ತಮ್ಮ ವಂಶದಲ್ಲಿ ಭಗವದ್ಭಕ್ತರು ಹುಟ್ಟಿದರೆ ಆನಂದಿಸುವಂತೆ ಬಿದಿರುಮೇಳೆಗಳು ತಮ್ಮ ವಂಶಕ್ಕೆ ಸೇರಿದ ವೇಣುವು ಶ್ರೀಕೃಷ್ಣನ ಅಧರಾಮೃತವನ್ನು ಪಾನಮಾಡುತ್ತಿರುವುದನ್ನು ನೋಡಿ ಹಿರಿ-ಹಿರಿ ಹಿಗ್ಗಿ ಆನಂದಾಶ್ರುಗಳನ್ನು ಸುರಿಸುತ್ತಿರುವವು. ॥ ೯ ॥

ವೃಂದಾವನಂ ಸಖಿ ಭುವೋ ವಿತನೋತಿ ಕೀರ್ತಿಂ
ಯದ್ದೇವಕೀಸುತಪದಾಂಬುಜಲಬ್ಧಲಕ್ಷ್ಮೀ ।

ಗೋವಿಂದ ವೇಣುಮನು ಮತ್ತಮಯೂರನೃತ್ಯಂ
ಪ್ರೇಕ್ಷ್ಯಾದ್ರಿಸಾನ್ವಪರತಾನ್ಯಸಮಸ್ತಸತ್ತ್ವಮ್ ॥ ೧೦ ॥

ಧನ್ಯಾಃ ಸ್ಮ ಮೂಢಮತಯೋಽಪಿ ಹರಿಣ್ಯ ಏತಾ
ಯಾ ನಂದನಂದನಮುಪಾತ್ತವಿಚಿತ್ರವೇಷಮ್ ।

ಆಕರ್ಣ್ಯ ವೇಣುರಣಿತಂ ಸಹಕೃಷ್ಣಸಾರಾಃ
ಪೂಜಾಂ ದಧುರ್ವಿರಚಿತಾಂ ಪ್ರಣಯಾವಲೋಕೈಃ ॥ ೧೧ ॥

ಕೃಷ್ಣಂ ನಿರೀಕ್ಷ್ಯ ವನಿತೋತ್ಸವರೂಪಶೀಲಂ
ಶ್ರುತ್ವಾ ಚ ತತ್ಕ್ವಣಿತವೇಣುವಿಚಿತ್ರಗೀತಮ್ ।

ದೇವ್ಯೋ ವಿಮಾನಗತಯಃ ಸ್ಮರನುನ್ನಸಾರಾ
ಭ್ರಶ್ಯತ್ಪ್ರಸೂನಕಬರಾ ಮುಮುಹುರ್ವಿನೀವ್ಯಃ ॥ ೧೨ ॥

ಗಾವಶ್ಚ ಕೃಷ್ಣಮುಖನಿರ್ಗತವೇಣುಗೀತ-
ಪೀಯೂಷಮುತ್ತಭಿತಕರ್ಣಪುಟೈಃ ಪಿಬಂತ್ಯಃ ।

ಶಾವಾಃ ಸ್ನುತಸ್ತನಪಯಃಕವಲಾಃ ಸ್ಮ ತಸ್ಥು-
ರ್ಗೋವಿಂದಮಾತ್ಮನಿ ದೃಶಾಶ್ರುಕಲಾಃ ಸ್ಪೃಶಂತ್ಯಃ ॥ ೧೩ ॥

ಮತ್ತೊಬ್ಬಳು ಹೇಳುವಳು – ಓ ಸಖಿಯರೇ ! ಈ ವೃಂದಾವನವು ಯಶೋದಾನಂದನ ಶ್ರೀಕೃಷ್ಣನ ಚರಣಕಮಲಗಳ ಚಿಹ್ನೆಯನ್ನು ಹೊಂದಿ ಈ ಭೂಲೋಕದ ಕೀರ್ತಿಯು ವೈಕುಂಠದವರೆಗೂ ಹರಡಿದೆ. ಸಖೀ ! ಶ್ರೀಕೃಷ್ಣನು ಮುನಿಜರನ್ನು ವಿಮೋಹಗೊಳಿಸುವ ಮುರಲಿಯನ್ನು ನುಡಿಸುವಾಗ ನವಿಲುಗಳು ಮದವೇರಿ ನರ್ತಿಸತೊಡಗುವವು. ಇದನ್ನು ನೋಡಿದೊಡನೆ ಪರ್ವತದ ತಪ್ಪಲುಗಳಲ್ಲಿ ಸಂಚರಿಸುವ ಪಶು-ಪಕ್ಷಿಗಳೆಲ್ಲವೂ ಮೇಯುವುದನ್ನು ಬಿಟ್ಟು ಶಾಂತವಾಗಿ ನಿಂತು ಬಿಡುವುವು. ಗೆಳತಿಯರೇ ! ಪ್ರಾಣವಲ್ಲಭನಾದ ಶ್ರೀಕೃಷ್ಣನು ವಿಚಿತ್ರವಾದ ವೇಷವನ್ನು ಧರಿಸಿಕೊಂಡು ಕೊಳಲನ್ನು ನುಡಿಸಲು ಪ್ರಾರಂಭಿಸುತ್ತಲೇ ಮಂದಮತಿಗಳಾಗಿದ್ದರೂ ಹೆಣ್ಣು ಜಿಂಕೆಗಳು ಮುರಳಿಯ ನಾದವನ್ನು ಕೇಳ ಪತಿಗಳಾದ ಕೃಷ್ಣಸಾರ ಮೃಗಗಳೊಂದಿಗೆ ನಂದನಂದನನ ಬಳಿಗೆ ಹೋಗಿ ಕಮಲದಂತೆ ವಿಶಾಲವಾದ ಮತ್ತು ಚಂಚಲವಾದ ಕಣ್ಣುಗಳ ಅವಲೋಕನದಿಂದಲೇ ಶ್ರೀಕೃಷ್ಣನನ್ನು ಪೂಜಿಸುತ್ತವೆ. ನಿಶ್ಚಯವಾಗಿಯೂ ಈ ಜಿಂಕೆಗಳ ಜೀವನವೇ ಧನ್ಯವಲ್ಲವೇ ! ॥ ೧೦-೧೧ ॥ ಇನ್ನೊಬ್ಬಳು ಹೇಳಿದಳು ಸಖಿಯರೇ ! ಜಿಂಕೆಗಳ ಮಾತಾದರೂ ಹಾಗಿರಲಿ. ಆತ್ತನೋಡಿ ! ವಿಮಾನದಲ್ಲಿ ಸಂಚರಿಸುವ ಅಪ್ಸರೆಯರು - ಕಾಮಿನಿಯರ ಕಣ್ಮನಗಳನ್ನು ಸೂರೆಗೊಳ್ಳುವ ಸೌಂದರ್ಯದಿಂದಲೂ, ಸೌಶೀಲ್ಯದಿಂದಲೂ ಕೂಡಿದ ಶ್ರೀಕೃಷ್ಣನನ್ನು ನೋಡಿ, ವೇಣುವಿನಿಂದ ಅವನು ನುಡಿಸುವ ಸುಮಧುರ ಸಂಗೀತವನ್ನು ಕೇಳಿ, ಕಾಮಾವೇಶದಿಂದ ಧೈರ್ಯಗುಂದಿ ತುರುಬುಗಳಿಂದ ಹೂವಿನ ಮಾಲೆಗಳು ಜಾರುತ್ತಿರುವುದನ್ನು ಉಟ್ಟಸೀರೆಗಳು ಸಡಿಲವಾಗುತ್ತಿರುವುದನ್ನು ಅರಿಯದೆ ವಿಮೋಹಿತರಾಗಿದ್ದಾರೆ. ॥ ೧೨ ॥ ಮಗದೊಬ್ಬಳು ಹೇಳಿದಳು - ಗೆಳತಿಯರೇ ! ಅಪ್ಸರೆಯರ ವಿಷಯವನ್ನು ಏನು ಹೇಳುವಿರಿ ? ಮಾತಿಲ್ಲದ ಗೋವುಗಳ ವರ್ತನೆಯನ್ನಾದರೂ ನೋಡಿರಲ್ಲ ! ಶ್ರೀಕೃಷ್ಣನ ಮುಖಾರವಿಂದದಿಂದ ಹೊರಟ ವೇಣು ಗಾನ ಸುಧೆಯನ್ನು ಕೇಳಿದೊಡನೆಯೇ ನಮ್ಮ ಗೋವುಗಳು ತಮ್ಮೆರಡು ಕಿವಿಗಳನ್ನು ನಿಮಿರಿಸಿಕೊಂಡು, ಕಿವಿಗಳನ್ನೇ ಬೊಗಸೆಗಳನ್ನಾಗಿಸಿ ಕೊಂಡು ಗಾನಾಮೃತ ಸುಧೆಯನ್ನು ಹೀರಿಕೊಳ್ಳುತ್ತವೆ. ತಮ್ಮ ಕಣ್ಣುಗಳ ಮೂಲಕವಾಗಿ ಶ್ಯಾಮಸುಂದರನನ್ನು ಹೃದಯದಲ್ಲಿರಿಸಿಕೊಂಡು ಆಲಿಂಗಿಸುತ್ತಾ ಆನಂದಬಾಷ್ಪಗಳನ್ನು ಸುರಿಸುತ್ತವೆ. ಹಸುಗಳ ಮೊಲೆಯುಣ್ಣುತ್ತಿರುವ ಎಳೆಗರುಗಳೂ ಕೂಡ ಶ್ರೀಕೃಷ್ಣನ ವೇಣು ಗಾನವನ್ನು ಕೇಳಿ ಬಾಯಲ್ಲಿರುವ ನೊರೆಹಾಲನ್ನು ಗುಟುಕಿಸದೆ ಸ್ತಬ್ಧವಾಗಿ ನಿಂತುಬಿಡುತ್ತವೆ. ಅವುಗಳ ಸೌಭಾಗ್ಯವು ಎಂತಹದು ! ॥ ೧೩. ॥ ಮತ್ತೊಬ್ಬಳು ಹೇಳಿದಳು – ಸಖಿಯರೇ ! ಹಸುಗಳು-ಕರುಗಳಾದರೋ ನಮ್ಮ ಮನೆಯವೇ ಆಗಿವೆ, ಅವರ ಮಾತನ್ನು ಬಿಟ್ಟು ಬಿಡಿ, ಆದರೆ ವೃಂದಾವನದಲ್ಲಿರುವ ಪಕ್ಷಿಗಳನ್ನು ನೋಡಿರಿ. ನಿಜಹೇಳಬೇಕಾದರೆ ಅವು ಪಕ್ಷಿಗಳಲ್ಲ, ಪಕ್ಷಿಗಳ ರೂಪದಲ್ಲಿ ಋಷಿ-ಮುನಿಗಳೇ ಆಲ್ಲಿದ್ದಾರೆ. ಸುಂದರವಾದ ಚಿಗುರೆಲೆಗಳಿಂದ ಕೂಡಿದ ವೃಕ್ಷಗಳ ರೆಂಬೆಗಳ ಮೇಲೆ ಕುಳಿತು - ವೃಂದಾವನದಲ್ಲಿ ಕೊಳಲನ್ನುನುಡಿಸಿಕೊಂಡು ಆಟವಾಡುವ ಸೌಂದರ್ಯದ ಖನಿಯಾದ ಶ್ರೀಕೃಷ್ಣನನ್ನೇ ಎವೆಯಿಕ್ಕದೆ

ಪ್ರಾಯೋ ಬತಾಂಬ ವಿಹಗಾ ಮುನಯೋ ವನೇಽಸ್ಮಿನ್
ಕೃಷ್ಣೇಕ್ಷಿತಂ ತದುದಿತಂ ಕಲವೇಣುಗೀತಮ್ ।
ಆರುಹ್ಯ ಯೇ ದ್ರುಮಭುಜಾನ್ರುಚಿರಪ್ರವಾಲಾನ್
ಶೃಣ್ವಂತ್ಯ ಮೀಲಿತದೃಶೋ ವಿಗತಾನ್ಯವಾಚಃ ॥ ೧೪ ॥

ನೋಡುತ್ತಿರುತ್ತವೆ. ಅವು ಮುನಿಗಳೇ ಆಗಿರುವುದರಿಂದ ಬೇರೆ ಯಾವುದೇ ವಿಧವಾದ ಶಬ್ದವನ್ನು ಕೇಳದೆ ಶ್ರೀಕೃಷ್ಣನ ಸುಮಧುರವಾದ ವಾಣಿಯನ್ನು, ತ್ರಿಭುವನ ಮೋಹಕವಾದ ವೇಣುಗಾನವನ್ನು ಮಾತ್ರವೇ ಕೇಳುತ್ತಿರುತ್ತವೆ. ಇಂತಹ ಪಕ್ಷಿಗಳಿಗಿಂತ ಧನ್ಯರಾದವರು ಬೇರೆ ಯಾರಿದ್ದಾರೆ ? ॥ ೧೪ ॥

ನದ್ಯಸ್ತದಾ ತದುಪಧಾರ್ಯ ಮುಕುಂದಗೀತ-
ಮಾವರ್ತಲಕ್ಷಿತಮನೋಭವಭಗ್ನವೇಗಾಃ ।
ಆಲಿಂಗನಸ್ಥಗಿತಮೂರ್ಮಿಭುಜೈರ್ಮುರಾರೇ-
ರ್ಗೃಹ್ಣಂತಿ ಪಾದಯುಗಲಂ ಕಮಲೋಪಹಾರಾಃ ॥ ೧೫ ॥

ಮತ್ತೊಬ್ಬಳು ಹೇಳುತ್ತಾರೆ – ಎಲೈ ಸಖಿಯರೇ ! ಇಷ್ಟರವರೆಗೆ ನೀವೆಲ್ಲ ಗೋವುಗಳು, ಪಕ್ಷಿಗಳು, ಇವರ ಕುರಿತು ಮಾತನಾಡುತ್ತಿರುವಿರಿ. ಅವುಗಳಾದರೋ ಚೇತನವಾಗಿವೆ. ಈ ಜಡವಾದ ನದಿಗಳನ್ನಾದರೋ ನೋಡಿರಿ. ಇವುಗಳಲ್ಲಿ ಕಂಡುಬರುವ ಸುಳಿಗಳ ನೆಪದಿಂದ ಶ್ರೀಕೃಷ್ಣನನ್ನು ಸೇರಬೇಕೆಂಬ ತೀವ್ರವಾದ ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತಿವೆ. ಆದರಿಂದಲೇ ಪ್ರವಾಹದ ವೇಗವೂ ಕಡಿಮೆಯಾಗಿದೆ. ಇವುಗಳೂ ಕೂಡ ಪ್ರೇಮಸ್ವರೂಪನಾದ ಶ್ರೀಕೃಷ್ಣನ ವೇಣುಗಾನವನ್ನು ಕೇಳುತ್ತಿರುವುವು. ನೋಡಿ ! ನೋಡಿ ! ಇವುಗಳು ತಮ್ಮ ತರಂಗಗಳೆಂಬ ಕೈಗಳಿಂದ ಶ್ರೀಕೃಷ್ಣನ ಪಾದಾರವಿಂದಗಳಿಗೆ ಕಮಲದ ಪುಷ್ಪಗಳನ್ನು ಸಮರ್ಪಿಸುತ್ತಾ ಆತನ ಚರಣಕಮಲಗಳನ್ನೇ ಆಲಿಂಗನಮಾಡಿಕೊಳ್ಳುತ್ತಿವೆ. ॥ ೧೫ ॥ ಮತ್ತೊಬ್ಬ ಗೋಪಿಕೆಯು ಹೇಳುತ್ತಾರೆ – ಸಖಿಯರೇ ! ಈ ನದಿಗಳು ನಮ್ಮದೇ ಭೂಮಿಯ, ನಮ್ಮ ವೃಂದಾವನದೇ ವಸ್ತುಗಳಾಗಿವೆ. ಅವರಿಗೆ ಶ್ರೀಕೃಷ್ಣನ ಮೇಲೆ ಪ್ರೇಮವಿರುವುದು ಸಹಜವೇ ; ಆದರೆ ಈ ಮೋಡಗಳನ್ನು ಸ್ವಲ್ಪ ನೋಡಿರಲ್ಲ! ಕೃಷ್ಣ-ಬಲರಾಮರುಗೋಪಾಲಕರೊಡನೆ ಬಿಸಿಲಿನಲ್ಲಿ ಹಸುಗಳನ್ನು ಮೇಯಿಸುತ್ತಿರುವುದನ್ನು ಕಂಡು, ಹೃದಯಾನಂದಕರವಾಗಿ ಕೊಳಲು ನುಡಿಸುತ್ತಿರುವುದನ್ನು ಕೇಳಿ, ಮೋಡಗಳ ಹೃದಯವು ಪ್ರೇಮರಸದಿಂದ ತುಂಬಿಹೋಗುತ್ತದೆ. ಶ್ರೀಕೃಷ್ಣನು ಮೇಘಶ್ಯಾಮನಾದುದರಿಂದ ತಮ್ಮ ಆಪ್ತಮಿತ್ರನೆಂದೇ ಭಾವಿಸಿರುವ ಮೇಘಗಳು ಶ್ರೀಕೃಷ್ಣನ ಮತ್ತು ಅವನ ಪರಿವಾರದ ಮೇಲೆ ಹರಡಿಕೊಂಡು ಅವರ ತಾಪವನ್ನು ನಿವಾರಿಸುತ್ತವೆ. ಹಾಗೆಯೇ ಶ್ರೀಕೃಷ್ಣನ ಮೇಲೆ ತುಂತುರುಗಳ ರೂಪವಾದ ಬಿಳಿಯ ಹೂವುಗಳನ್ನು ಸುರಿಸುತ್ತಾ ಶ್ರೀಕೃಷ್ಣನನ್ನು ಪೂಜಿಸುತ್ತಿವೆಯೇ ಎಂಬಂತಿದೆ. ॥ ೧೬ ॥

ದೃಷ್ಟ್ವಾತಪೇ ವ್ರಜಪಶೂನ್ಸಹ ರಾಮಗೋಪೈಃ
ಸಂಚಾರಯಂತಮನು ವೇಣುಮುದೀರಯಂತಮ್ ।
ಪ್ರೇಮಪ್ರವೃದ್ಧ ಉದಿತಃ ಕುಸುಮಾವಲೀಭಿಃ
ಸಖ್ಯುರ್ವ್ಯಧಾತ್ ಸ್ವಪುಷಾಂಬುದ ಆತಪತ್ರಮ್ ॥ ೧೬ ॥

ಮತ್ತೊಬ್ಬಳು ಹೇಳಿದಳು – ಗೆಳತಿಯರೇ ! ಈ ವೃಂದಾವನದಲ್ಲಿ ಸಂಚರಿಸುವ ಬೇಡತಿಯರೂ ಕೃತಕೃತ್ಯರಾಗಿರುವರೆಂದು ನಾನು ಭಾವಿಸುತ್ತೇನೆ. ನಮ್ಮ ಪ್ರಿಯತಮನಾದ ಶ್ರೀಕೃಷ್ಣನನ್ನು ನೋಡಿದಾಗ ಈ ಬೇಡತಿಯರಿಗೂ ಅವನೊಡನೆ ಸೇರಬೇಕೆಂಬ ಆಕಾಂಕ್ಷೆಯುಂಟಾಗುತ್ತದೆ. ಅವರು ಕಾಮಜ್ವರದಿಂದ ಪೀಡಿತರಾಗುತ್ತಾರೆ. ಅದರಿಂದ ಪಾರಾಗಲು ಅವರು ಕಂಡುಕೊಂಡ ಉಪಾಯವನ್ನು ಹೇಳುವೆನು, ಕೇಳಿರಿ. ನಮ್ಮ ಇನಿಯನ ಪ್ರೇಯಸಿಯರು ತಮ್ಮ ವೃಕ್ಷಸ್ಥಳಗಳನ್ನು ಶ್ರೀಕುಂಕುಮದಿಂದ ಅಲಂಕರಿಸಿಕೊಂಡಿರುತ್ತಾರೆ. ಕ್ರೀಡೆಗಳನ್ನಾಡುವಾಗ ವೃಕ್ಷಸ್ಥಳದ ಶ್ರೀಕುಂಕುಮವು ನಮ್ಮ ಇನಿಯನ ಚರಣಾರವಿಂದಗಳಿಗೆ ಅಂಟಿಕೊಳ್ಳುತ್ತದೆ. ಹಾಗೆ ಅಂಟಿಕೊಂಡ ಶ್ರೀಕುಂಕುಮವು ನಮ್ಮ ಕೃಷ್ಣನು ವೃಂದಾವನದಲ್ಲಿ ಸಂಚರಿಸುವಾಗ ಗರಿಕೆಹುಲ್ಲಿನ ಮೇಲೆ

ಪೂರ್ಣಾಃ ಪುಲಿಂದ್ಯ ಉರುಗಾಯಪದಾಬ್ಜರಾಗ-
ಶ್ರೀಕುಂಕುಮೇನ ದಯಿತಾಸ್ತನಮಂಡಿತೇನ ।
ತದ್ದರ್ಶನಸ್ಮರರುಜಸ್ತೃಣರೂಷಿತೇನ
ಲಿಂಪಂತ್ಯ ಆನನಕುಚೇಷು ಜಹುಸ್ತದಾಧಿಮ್ ॥ ೧೭ ॥

ಅಂಟಿಕೊಂಡಿರುತ್ತದೆ. ಅದನ್ನು ಅಲ್ಲಲ್ಲಿ ಹುಡುಕಿ ಈ ಬೇಡತಿಯರು ಪವಿತ್ರವಾದ ಆ ಶ್ರೀಕುಂಕುಮವನ್ನು ತಮ್ಮ ಹಣೆಗೂ ಮತ್ತು ಕುಚಗಳಿಗೂ ಹಚ್ಚಿಕೊಂಡು ಕಾಮಜ್ವರವನ್ನು ನಿವಾರಣೆ ಮಾಡಿಕೊಳ್ಳುತ್ತಾರೆ. ॥ ೧೭ ॥ ಇನ್ನೊಬ್ಬಳು ಹೇಳುವಳು – ಓ ಸಖಿಯರೇ! ಈ ಗೋವರ್ಧನ ಪರ್ವತವು ಎಲ್ಲರಿಗಿಂತಲೂ ಮಿಗಿಲಾಗಿ ಶ್ರೀಕೃಷ್ಣನ ಸೇವೆ ಮಾಡುತ್ತಿದೆ. ಈ ಪರ್ವತವು ಭಗವಂತನ ಭಕ್ತರಲ್ಲಿ ಶ್ರೇಷ್ಠನಾದ ಭಕ್ತನೆಂದೇ ನಾನು ಭಾವಿಸುತ್ತೇನೆ. ನಮ್ಮ ಪ್ರಾಣವಲ್ಲಭನಾದ ಶ್ರೀಕೃಷ್ಣನ ಮತ್ತು ನಯನಾಭಿರಾಮ ಬಲರಾಮನ ಪಾದಸ್ಪರ್ಶದಿಂದ ಇದು ಮಹದಾನಂದವನ್ನು ಅನುಭವಿಸುತ್ತಿದೆ. ಆನಂದದಿಂದ ಪುಳಕಿತವಾದ ಈ ಗಿರಿಯು ರಾಮ-ಕೃಷ್ಣರಿಗೂ, ಗೋ-ಗೋಪಾಲಕರಿಗೂ ಸದಾಕಾಲ ಸತ್ಕಾರ ಮಾಡುತ್ತದೆ. ಸ್ನಾನ-ಪಾನಾದಿಗಳಿಗೆ ಗಿರಿನದಿಗಳಿಂದ ನಿರ್ಮಲವಾದ ನೀರನ್ನು ಒದಗಿಸುತ್ತದೆ. ಹಸುಗಳಿಗೆ ಮೇಯಲು ಹಚ್ಚ-ಹಸಿರು ಹುಲ್ಲನ್ನು ನೀಡುತ್ತದೆ. ರಾಮ-ಕೃಷ್ಣರು ಮತ್ತು ಗೋಪಾಲಕರು ವಿಶ್ರಮಿಸಿಕೊಳ್ಳಲು ಸುಂದರವಾದ ಗುಹೆಗಳನ್ನು ಒದಗಿಸುತ್ತದೆ. ಆಹಾರಕ್ಕಾಗಿ ಕಂದ-ಮೂಲ-ಫಲಗಳನ್ನು ಯಥೇಚ್ಛವಾಗಿ ಅರ್ಪಿಸುತ್ತಿದೆ. ಈ ಗೋವರ್ಧನ ಪರ್ವತದಂತೆ ಶ್ರೀಹರಿಗೆ ನಿರಂತರ ಸತ್ಕಾರಮಾಡುವವರು ಬೇರೆಯಾರಿದ್ದಾರೆ? ನಿಶ್ಚಯವಾಗಿಯೂ ಈ ಗೋವರ್ಧನಗಿರಿಯೇ ಪರಮ ಧನ್ಯವಾದುದು. ॥ ೧೮ ॥ ಮತ್ತೊಬ್ಬಳು ಹೇಳಿದಳು – ಸಖಿಯರೇ! ನಾನು ಮತ್ತೊಂದು ವಿಚಿತ್ರವಾದ ಸಂಗತಿಯನ್ನು ಹೇಳುವೆನು, ಲಾಲಿಸಿರಿ. ರಾಮ-ಕೃಷ್ಣರು ತುಂಟ ಹಸುಗಳನ್ನು ಎತ್ತುಗಳನ್ನು ಕಟ್ಟಿಹಾಕುವುದಕ್ಕಾಗಿ ಹುರಿಹಗ್ಗಗಳ ಸಿಂಬೆಯನ್ನು ತಲೆಯ ಮೇಲೂ, ಹೆಗಲಮೇಲೂ ಹೊತ್ತುಕೊಂಡು ಗೊಲ್ಲರೊಡನೆ ಹಸುಗಳನ್ನು ಮೇಯಿಸುತ್ತಾ ಕೊಳಲು ನುಡಿಸುತ್ತಾ ಹೋಗುತ್ತಿರುತ್ತಾರೆ. ಇವರ ಕರ್ಣಾನಂದಕರವಾದ ವೇಣುಗಾನವನ್ನು ಕೇಳಿದೊಡನೆಯೇ ಜಂಗಮಗಳು (ಹಸುಗಳು) ಸ್ಥಾವರಗಳಾಗುತ್ತವೆ; ಸ್ತಬ್ಧವಾಗಿ ನಿಂತುಬಿಡುತ್ತವೆ. ಸ್ಥಾವರ ಜಂಗಮಗಳಾಗುತ್ತವೆ. ಸ್ಥಾವರಗಳಾದ ಗಿಡ-ಮರ-ಬಳ್ಳಿಗಳು ಪುಷ್ಪೋದ್ಗಮಾದಿಗಳ ರೂಪದಲ್ಲಿ ವೇಣುಗಾನದ ಆಸ್ವಾದನೆಯಿಂದ ಪುಳಕಿತವಾಗುವುದನ್ನು ವ್ಯಕ್ತಪಡಿಸುತ್ತವೆ. ॥ ೧೯ ॥

ಪರೀಕ್ಷಿತನೇ! ವೃಂದಾವನ ವಿಹಾರಿ ಶ್ರೀಕೃಷ್ಣನ ಇಂಥಹ ಒಂದಲ್ಲ ಅನೇಕ ಲೀಲೆಗಳಿವೆ. ಗೋಪಿಯರು ಪ್ರತಿದಿನವೂ ಪರಸ್ಪರ ಅವನ್ನು ವರ್ಣಿಸುತ್ತಾ ತನ್ಮಯರಾಗುತ್ತಾರೆ. ಭಗವಂತನ ಲೀಲೆಗಳು ಅವರ ಹೃದಯದಲ್ಲಿ ಸ್ಫುರಣೆಗೊಳ್ಳತೊಡಗುತ್ತವೆ. ॥ ೨೦ ॥

ಹಂತಾಯಮದ್ರಿರಬಲಾ ಹರಿದಾಸವರ್ಯೋ
ಯದ್ರಾಮಕೃಷ್ಣಚರಣಸ್ಪರ್ಶಪ್ರಮೋದಃ ।
ಮಾನಂ ತನೋತಿ ಸಹಗೋಗಣಯೋಸ್ತಯೋರ್ಯತ್
ಪಾನೀಯಸೂಯವಸಕಂದರಕಂದಮೂಲೈಃ ॥ ೧೮ ॥

ಗಾ ಗೋಪಕೈರನುವನಂ ನಯತೋರುದಾರ-
ವೇಣುಸ್ವನೈಃ ಕಲಪದೈಸ್ತನುಭೃತ್ಸು ಸಖ್ಯಃ ।
ಅಸ್ಪಂದನಂ ಗತಿಮತಾಂ ಪುಲಕಸ್ತರೂಣಾಂ
ನಿರ್ಯೋಗಪಾಶಕೃತಲಕ್ಷಣಯೋರ್ವಿಚಿತ್ರಮ್ ॥ ೧೯ ॥

ಏವಂವಿಧಾ ಭಗವತೋ ಯಾ
ವೃಂದಾವನಚಾರಿಣಃ ।
ವರ್ಣಯಂತ್ಯೋ ಮಿಥೋ ಗೋಪ್ಯಃ
ಕ್ರೀಡಾಸ್ತನ್ಮಯತಾಂ ಯಯುಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ವೇಣುಗೀತಂ ನಾಮೈಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಚೀರಹರಣ

ಶ್ರೀಶುಕ ಉವಾಚ

ಹೇಮಂತೇ ಪ್ರಥಮೇ ಮಾಸಿ ನಂದವ್ರಜಕುಮಾರಿಕಾಃ ।
ಚೇರುರ್ಹವಿಷ್ಯಂ ಭುಂಜಾನಾಃ ಕಾತ್ಯಾಯನ್ಯರ್ಚನವ್ರತಮ್
॥ ೧ ॥

ಆಪ್ಲುತ್ಯಾಂಭಸಿ ಕಾಲಿಂದ್ಯಾ ಜಲಾಂತೇ ಚೋದಿತೇಽರುಣೇ ।
ಕೃತ್ವಾ ಪ್ರತಿಕೃತಿಂ ದೇವೀಮಾನರ್ಚುರ್ನೃಪ ಸೈಕತೀಮ್
॥ ೨ ॥

ಗಂಧೈರ್ಮಾಲ್ಯೈಃ ಸುರಭಿಭಿರ್ಬಲಿಭಿರ್ಧೂಪದೀಪಕೈಃ ।
ಉಚ್ಚಾವಚೈಶ್ಚೋಪಹಾರೈಃ ಪ್ರವಾಲಫಲತಂಡುಲೈಃ
॥ ೩ ॥

ಕಾತ್ಯಾಯನಿ ಮಹಾಮಾಯೇ ಮಹಾಯೋಗಿನ್ಯಧೀಶ್ವರಿ ।
ನಂದಗೋಪಸುತಂ ದೇವಿ ಪತಿಂ ಮೇ ಕುರು ತೇ ನಮಃ ।
ಇತಿ ಮಂತ್ರಂ ಜಪನ್ತ್ಯಸ್ತಾಃ ಪೂಜಾಂ ಚಕ್ರುಃ ಕುಮಾರಿಕಾಃ
॥ ೪ ॥

ಏವಂ ಮಾಸಂ ವ್ರತಂ ಚೇರುಃ ಕುಮಾರ್ಯಃ ಕೃಷ್ಣಚೇತಸಃ ।
ಭದ್ರಕಾಲೀಂ ಸಮಾನರ್ಚುರ್ಭೂಯಾನ್ನಂದಸುತಃ ಪತಿಃ
॥ ೫ ॥

ಉಷಸ್ಯುತ್ thಾಯ ಗೋತ್ರೈಃ ಸ್ವೈರನ್ಯೋನ್ಯಾಬದ್ಧಬಾಹವಃ ।
ಕೃಷ್ಣಮುಚ್ಚೈರ್ಜಗುರ್ಯಾಂತ್ಯಃ ಕಾಲಿಂದ್ಯಾಂ ಸ್ನಾತುಮನ್ವಹಮ್
॥ ೬ ॥

ನದ್ಯಾಂ ಕದಾಚಿದಾಗತ್ಯ ತೀರೇ ನಿಕ್ಷಿಪ್ಯ ಪೂರ್ವವತ್ ।
ವಾಸಾಂಸಿ ಕೃಷ್ಣಂ ಗಾಯಂತ್ಯೋ ವಿಜಹ್ರುಃ ಸಲಿಲೇ ಮುದಾ
॥ ೭ ॥

ಭಗವಾಂಸ್ತದಭಿಪ್ರೇತ್ಯ ಕೃಷ್ಣೋ ಯೋಗೇಶ್ವರೇಶ್ವರಃ ।
ವಯಸ್ಯೈರಾವೃತಸ್ತತ್ರ ಗತಸ್ತತ್ಕರ್ಮಸಿದ್ಧಯೇ
॥ ೮ ॥

ತಾಸಾಂ ವಾಸಾಂಸ್ಯುಪಾದಾಯ ನೀಪಮಾರುಹ್ಯ ಸತ್ವರಃ ।
ಹಸದ್ಭಿಃ ಪ್ರಹಸನ್ಬಾಲೈಃ ಪರಿಹಾಸಮುವಾಚ ಹ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಈಗ ಹೇಮಂತ ಋತುವು ಪ್ರಾರಂಭವಾಯಿತು. ಇದರ ಮೊದಲ ತಿಂಗಳಲ್ಲಿ ಅಂದರೆ – ಮಾರ್ಗಶಿರ ಮಾಸದಲ್ಲಿ ನಂದಗೋಪನ ಹಳ್ಳಿಯಲ್ಲಿದ್ದ ಕುಮಾರಿಯರು ಕಾತ್ಯಾಯಿನೀದೇವಿಯ ಪೂಜೆಯನ್ನು ಮತ್ತು ವ್ರತವನ್ನು ಮಾಡತೊಡಗಿದರು. ವ್ರತದ ನಿಯಮದಂತೆ ಅವರು ಹವಿಷ್ಯಾನ್ನವನ್ನೇ ಊಟ ಮಾಡುತ್ತಿದ್ದರು. ॥ ೧ ॥ ಮಹಾರಾಜ! ಆ ಕನ್ಯೆಯರು ಅರುಣೋದಯವಾಗುತ್ತಲೇ ಯಮುನಾ ನದಿಯ ತೀರ್ಥದಲ್ಲಿ ಸ್ನಾನಮಾಡಿ, ತೀರದಲ್ಲಿರುವ ಮರಳಿನಿಂದಲೇ ಕಾತ್ಯಾಯಿನಿಯ ಮೂರ್ತಿಯನ್ನು ಕಲ್ಪಿಸಿಕೊಂಡು, ಸುಗಂಧಿತವಾದ ಗಂಧ, ಪುಷ್ಪಗಳಿಂದಲೂ, ಹಾರಗಳಿಂದಲೂ, ಬಗೆಬಗೆಯ ನೈವೇದ್ಯಗಳಿಂದಲೂ ಧೂಪ-ದೀಪ ಮುಂತಾದ ಸಣ್ಣ-ದೊಡ್ಡ ಪೂಜಾಸಾಮಗ್ರಿಗಳಿಂದಲೂ, ಚಿಗುರೆಲೆಗಳಿಂದಲೂ, ಅಕ್ಷತೆಗಳಿಂದಲೂ ದೇವಿಯ ಪೂಜೆಯನ್ನು ಮಾಡುತ್ತಿದ್ದರು. ॥ ೨-೩ ॥ "ಹೇ ಕಾತ್ಯಾಯಿನಿ ಮಹಾಮಾಯಾ ದೇವಿಯೇ! ಮಹಾಯೋಗಿನಿಯೇ! ಸಮಸ್ತರಿಗೂ ಏಕಮಾತ್ರ ಸ್ವಾಮಿನಿಯೇ! ನಂದಗೋಪನ ಮಗನಾದ ಶ್ರೀಕೃಷ್ಣನು ನಮಗೆ ಪತಿಯಾಗುವಂತೆ ಅನುಗ್ರಹಿಸು. ನಿನ್ನ ಪಾದಾರವಿಂದಗಳಲ್ಲಿ ನಮಸ್ಕರಿಸುತ್ತೇವೆ"- ಎಂಬ ಈ ಮಹಾಮಂತ್ರವನ್ನು ಎಲ್ಲ ಕುಮಾರಿಯರೂ ಜಪಿಸುತ್ತಾ ದೇವಿಯ ಆರಾಧನೆ ಮಾಡುತ್ತಿದ್ದರು. ॥ ೪ ॥ ಹೀಗೆ ಶ್ರೀಕೃಷ್ಣನಲ್ಲಿಯೇ ನೆಟ್ಟು ಹೋಗಿದ್ದ ಮನಸ್ಸುಳ್ಳ ಆ ಕುಮಾರಿಯರು ಒಂದು ತಿಂಗಳಕಾಲ ವ್ರತಾನುಷ್ಠಾನ ಮಾಡುತ್ತಾ ನಂದಗೋಪನ ಮಗನೇ ತಮಗೆ ಪತಿಯಾಗಬೇಕೆಂದು ಭದ್ರಕಾಳಿಯನ್ನು ಶ್ರದ್ಧೆಯಿಂದ ಪೂಜಿಸಿದರು. ॥ ೫ ॥ ಆ ಕನ್ನಿಕೆಯರು ಪ್ರತಿದಿನವೂ ಉಷಃಕಾಲದಲ್ಲೇ ಎದ್ದು ಒಬ್ಬರು ಮತ್ತೊಬ್ಬರ ಹೆಸರಿಡಿದು ಕೂಗಿಕೊಳ್ಳುತ್ತಾ ಪರಸ್ಪರ ಕೈ-ಕೈಹಿಡಿದುಕೊಂಡು ಗಟ್ಟಿಯಾಗಿ ಭಗವಾನ್ ಶ್ರೀಕೃಷ್ಣನ ಲೀಲೆಗಳನ್ನು, ಅವನ ನಾಮಗಳನ್ನು ಹಾಡುತ್ತಾ ಯಮುನಾ ಜಲದಲ್ಲಿ ಸ್ನಾನಮಾಡಲು ಹೋಗುತ್ತಿದ್ದರು. ॥ ೬ ॥

ಒಂದು ದಿನ ಕುಮಾರಿಯರೆಲ್ಲರೂ ಪ್ರತಿದಿನದಂತೆ ಯಮುನಾ ತೀರಕ್ಕೆ ಹೋಗಿ ತಮ್ಮ-ತಮ್ಮ ಬಟ್ಟೆಗಳನ್ನು ಬಿಚ್ಚಿಟ್ಟು ಭಗವಾನ್ ಶ್ರೀಕೃಷ್ಣನ ಗುಣಗಳನ್ನು ಹಾಡುತ್ತಾ ಆನಂದವಾಗಿ ಜಲಕ್ರೀಡೆಯಾಡತೊಡಗಿದರು. ॥ ೭ ॥ ಪರೀಕ್ಷಿತನೇ! ಯೋಗೇಶ್ವರರಿಗೂ ಈಶ್ವರನಾದ ಶ್ರೀಕೃಷ್ಣನಿಗೆ ಗೋಪಕನ್ಯೆಯರ ಆಶಯವು ತಿಳಿದು ಹೋಯಿತು. ಅವನು ಅವರ ಆಶಯವನ್ನು ಪೂರೈಸಿಕೊಡುವ ಸಲುವಾಗಿ ತನ್ನ ಗೆಳೆಯರಾದ ಗೋಪಬಾಲಕರೊಡನೆ ಸಮಾವೃತನಾಗಿ ಆ ಕುಮಾರಿಯರ ಸಾಧನೆಯನ್ನು ಸಫಲಗೊಳಿಸಲಿಕ್ಕಾಗಿ ಯಮುನಾನದಿಯ ತೀರಕ್ಕೆ ಆಗಮಿಸಿದನು. ॥ ೮ ॥ ಅವನು ಆ ಗೋಪಿಯರ ಎಲ್ಲ ವಸ್ತ್ರಗಳನ್ನು ಎತ್ತಿಕೊಂಡು ಲಗುಬಗೆಯಿಂದ ಒಂದು ಕದಂಬ ವೃಕ್ಷವನ್ನು ಹತ್ತಿ ಕುಳಿತನು. ಜೊತೆಗಿನ ಗೋಪಬಾಲಕರೆಲ್ಲರೂ ಕಿಲ-ಕಿಲನೆ ನಗತೊಡಗಿದರು. ಶ್ರೀಕೃಷ್ಣನು ಅವರೊಂದಿಗೆ ನಗುತ್ತಾ ಗೋಪಕುಮಾರಿಯರಿಗೆ ಹೇಳುತ್ತಾನೆ. ॥ ೯ ॥

ಅತ್ರಾಗತ್ಯಾಬಲಾಃ ಕಾಮಂ ಸ್ವಂ ಸ್ವಂ ವಾಸಃ ಪ್ರಗೃಹ್ಯತಾಮ್ ।
ಸತ್ಯಂ ಬ್ರವಾಣಿ ನೋ ನರ್ಮ ಯದ್ಗೋಯಂ ವ್ರತಕರ್ಶಿತಾಃ
॥ ೧೦ ॥

ನ ಮಯೋದಿತಪೂರ್ವಂ ವಾ ಅನೃತಂ ತದಿಮೇ ವಿದುಃ ।
ಏಕೈಕಶಃ ಪ್ರತೀಚ್ಛಧ್ವಂ ಸಹೈವೋತ ಸುಮಧ್ಯಮಾಃ
॥ ೧೧ ॥

ತಸ್ಯ ತತ್ ಕ್ಷ್ವೇಲಿತಂ ದೃಷ್ಟ್ವಾ ಗೋಪ್ಯಃ ಪ್ರೇಮಪರಿಪ್ಲುತಾಃ ।
ವ್ರೀಡಿತಾಃ ಪ್ರೇಕ್ಷ್ಯ ಚಾನ್ಯೋನ್ಯಂ ಜಾತಹಾಸಾ ನ ನಿರ್ಯಯುಃ
॥ ೧೨ ॥

ಏವಂ ಬ್ರುವತಿ ಗೋವಿಂದೇ ನರ್ಮಣಾऽऽಕ್ಷಿಪ್ತಚೇತಸಃ ।
ಆಕಂಠಮಗ್ನಾಃ ಶೀತೋದೇ ವೇಪಮಾನಾಸ್ತಮಬ್ರುವನ್
॥ ೧೩ ॥

ಮಾನಯಂ ಭೋಃ ಕೃಥಾಸ್ತ್ವಂ ತು
ನಂದಗೋಪಸುತಂ ಪ್ರಿಯಮ್ ।
ಜಾನೀಮೋऽಂಗ ವ್ರಜಶ್ಲಾಘ್ಯಂ
ದೇಹಿ ವಾಸಾಂಸಿ ವೇಪಿತಾಃ ॥ ೧೪ ॥

ಶ್ಯಾಮಸುಂದರ ತೇ ದಾಸ್ಯಃ ಕರವಾಮ ತವೋದಿತಮ್ ।
ದೇಹಿ ವಾಸಾಂಸಿ ಧರ್ಮಜ್ಞ ನೋ ಚೇದ್ರಾಜ್ಞೇ ಬ್ರುವಾಮಹೇ
॥ ೧೫ ॥

ಶ್ರೀಭಗವಾನುವಾಚ

ಭವತ್ಯೋ ಯದಿ ಮೇ ದಾಸ್ಯೋ ಮಯೋಕ್ತಂ ವಾ ಕರಿಷ್ಯಥ ।
ಆತ್ಮಾಗತ್ಯ ಸ್ವವಾಸಾಂಸಿ ಪ್ರತೀಚ್ಛಂತು ಶುಚಿಸ್ಮಿತಾಃ
॥ ೧೬ ॥

ತತೋ ಜಲಾಶಯಾತ್ಸರ್ವಾ ದಾರಿಕಾಃ ಶೀತವೇಪಿತಾಃ ।
ಪಾಣಿಭ್ಯಾಂ ಯೋನಿಮಾಚ್ಛಾದ್ಯ ಪ್ರೋತ್ತೇರುಃ ಶೀತಕರ್ಶಿತಾಃ
॥ ೧೭ ॥

ಭಗವಾನಾಹ ತಾ ವೀಕ್ಷ್ಯ ಶುದ್ಧಭಾವಪ್ರಸಾದಿತಃ ।
ಸ್ಕಂಧೇ ನಿಧಾಯ ವಾಸಾಂಸಿ ಪ್ರೀತಃ ಪ್ರೋವಾಚ ಸಸ್ಮಿತಮ್
॥ ೧೮ ॥

ಎಲೈ ಕುಮಾರಿಯರೇ! ನಿಮಗೆ ನಿಮ್ಮ ವಸ್ತ್ರಗಳು ಬೇಕಿದ್ದರೆ ಇಲ್ಲಿಗೆ ಬಂದು ತೆಗೆದುಕೊಂಡು ಹೋಗಿರಿ. ನಾನು ನಿಮ್ಮಲ್ಲಿ ನಿಜವನ್ನೇ ಹೇಳುತ್ತಿದ್ದೇನೆ. ಖಂಡಿತವಾಗಿ ಪರಿಹಾಸ್ಯಕ್ಕಾಗಿ ಅಲ್ಲ. ನೀವೆಲ್ಲರೂ ವ್ರತಾನುಷ್ಠಾನದಿಂದ ದುರ್ಬಲೆಯರಾಗಿರುವಿರಿ. ॥ ೧೦ ॥ ನಾನು ಎಂದೂ ಸುಳ್ಳು ಹೇಳಲಿಲ್ಲ – ಇದನ್ನು ನನ್ನ ಮಿತ್ರರಾದ ಈ ಗೋಪಬಾಲಕರು ಬಲ್ಲರು. ಸುಂದರಿಯರೇ! ನೀವು ಬಯಸುವಿರಾದರೆ ಬೇರೆ-ಬೇರೆಯಾಗಿ ಬಂದು ನಿಮ್ಮ-ನಿಮ್ಮ ವಸ್ತ್ರಗಳನ್ನು ಕೊಂಡುಹೋಗಿರಿ. ಇಲ್ಲವೇ ಒಟ್ಟಿಗೆ ಬಂದು ಕೊಂಡೊಯ್ಯಿರಿ. ನನಗೆ ಇದರಲ್ಲಿ ಯಾವ ಅಭ್ಯಂತರವೂ ಇಲ್ಲ. ॥ ೧೧ ॥ ಭಗವಂತನ ಈ ಪರಿಹಾಸ್ಯದ ಮಾತನ್ನು ಕೇಳಿ ಗೋಪಿಕೆಯರ ಹೃದಯ ಪ್ರೇಮದಿಂದ ತುಂಬಿಹೋಯಿತು. ಅವರು ಸ್ವಲ್ಪ ನಾಚಿಕೊಂಡು ಪರಸ್ಪರ ನೋಡಿಕೊಂಡು ಮುಗುಳ್ನಗುತ್ತಿದ್ದರು. ನೀರಿನಿಂದ ಹೊರಗೆ ಬರಲಿಲ್ಲ. ॥ ೧೨ ॥ ಭಗವಂತನು ಪರಿಹಾಸ್ಯದ ಮಾತುಗಳನ್ನಾಡಿದಾಗ ಅವನ ವಿನೋದದಿಂದ ಕುಮಾರಿಯರ ಚಿತ್ತವೂ ಇನ್ನೂ ಹೆಚ್ಚಾಗಿ ಅವನೆಡೆಗೆ ಸೆಳೆಯಲ್ಪಟ್ಟಿತು. ಅವರು ಕತ್ತಿನವರೆಗೆ ನೀರಿನಲ್ಲಿ ಮುಳುಗಿ ನಿಂತಿದ್ದರು. ಅವರ ಶರೀರಗಳು ಚಳಿಯಿಂದ ಗಡ-ಗಡನೆ ನಡುಗುತ್ತಿದ್ದವು. ಅವರು ಕೃಷ್ಣನಲ್ಲಿ ಹೇಳತೊಡಗಿದರು. ॥ ೧೩ ॥ ಸಮಸ್ತರಿಗೂ ಪ್ರಿಯನಾದ ಓ ಕೃಷ್ಣನೇ! ಇಂತಹ ಅನ್ಯಾಯವನ್ನು ನೀನು ಮಾಡಬಾರದು. ನೀನು ನಂದರಾಜನ ಮುದ್ದು ಮಗನೆಂಬುದನ್ನು ನಾವು ಬಲ್ಲೆವು. ಸಮಸ್ತ ವ್ರಜವಾಸಿಗಳಿಂದ ಶ್ಲಾಘಿಸಲ್ಪಡುವವನೆಂಬುದನ್ನೂ ನಾವು ಬಲ್ಲೆವು. ಆದುದರಿಂದ ನಮಗೂ ಪ್ರಿಯತಮನಾಗಿರುವೆ. ನೋಡು ನಾವು ಚಳಿಯಿಂದ ನಡುಗುತ್ತಿದ್ದೇವೆ. ನೀನು ನಮ್ಮ ವಸ್ತ್ರಗಳನ್ನು ಕೊಟ್ಟುಬಿಡು. ॥ ೧೪ ॥ ಪ್ರಿಯ ಶ್ಯಾಮಸುಂದರನೇ! ನಾವು ನಿನ್ನ ದಾಸಿಯರಾಗಿದ್ದೇವೆ. ನೀನು ಹೇಳಿದಂತೆ ಮಾಡಲು ಸಿದ್ಧರಾಗಿದ್ದೇವೆ. ನೀನಾದರೋ ಧರ್ಮದ ಮರ್ಮವನ್ನು ಚೆನ್ನಾಗಿ ತಿಳಿಯುತ್ತಿರುವೆ. ನಮಗೆ ಕಷ್ಟಕೊಡಬೇಡ. ನಮ್ಮ ಬಟ್ಟೆ ನಮಗೆ ಕೊಟ್ಟುಬಿಡು. ಇಲ್ಲದಿದ್ದರೆ ನಾವು ಹೋಗಿ ನಂದರಾಜನಿಗೆ ಹೇಳಿಬಿಡುತ್ತೇವೆ. ॥ ೧೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಶುಭ್ರವಾದ ಮಂದ ಹಾಸವುಳ್ಳ ಕುಮಾರಿಯರೇ! ನನಗೆ ದಾಸಿಯರಾಗಲು ನೀವು ಸಿದ್ಧರಿದ್ದರೆ ನಾನು ಹೇಳಿದಂತೆ ಮಾಡಿರಿ. ಇಲ್ಲಿಗೆ ಬಂದು ನಿಮ್ಮ-ನಿಮ್ಮ ವಸ್ತ್ರಗಳನ್ನು ತೆಗೆದುಕೊಂಡು ಹೋಗಿರಿ. ॥ ೧೬ ॥ ಪರೀಕ್ಷಿತನೇ! ಆ ಕುಮಾರಿಯರು ಚಳಿಯಿಂದ ನಡುಗುತ್ತಿದ್ದರು. ಭಗವಂತನ ಇಂತಹ ಮಾತನ್ನು ಕೇಳಿ ಅವರ ತಮ್ಮ ಎರಡೂ ಕೈಗಳಿಂದ ಗುಪ್ತಾಂಗಗಳನ್ನು ಮುಚ್ಚಿಕೊಂಡು ಯಮುನೆಯಿಂದ ಮೇಲಕ್ಕೆ ಬಂದರು. ಆಗ ಚಳಿಯು ಅವರೆಲ್ಲರನ್ನು ತುಂಬಾ ಬಾಧಿಸುತ್ತಿತ್ತು. ॥ ೧೭ ॥ ಅವರ ಈ ಶುದ್ಧಭಾವದಿಂದ ಭಗವಂತನು ಅತ್ಯಂತ ಪ್ರಸನ್ನನಾದನು. ತನ್ನ ಬಳಿಗೆ ಬಂದ ಅವರನ್ನು ನೋಡಿ ಅವನು ಗೋಪಿಯರ ಬಟ್ಟೆಗಳನ್ನು ತನ್ನ ಹೆಗಲಮೇಲಿಟ್ಟುಕೊಂಡು, ಮುಗುಳ್ನಗುತ್ತಾ ಹೇಳಿದನು. ॥ ೧೮ ॥

ಯೂಯಂ ವಿವಸ್ತ್ರಾ ಯದಪೋ ಧೃತವ್ರತಾ
ವ್ಯಗಾಹತೈತತ್ತದು ದೇವಹೇಲನಮ್ ।
ಬಧ್ನೀಧ್ವಮಂಜಲಿಂ ಮೂರ್ಧ್ನ್ಯಪನುತ್ತಯೇಂಽಹಸಃ
ಕೃತ್ವಾ ನಮೋಽಧೋ ವಸನಂ ಪ್ರಗೃಹ್ಯತಾಮ್ ॥ ೧೯ ॥

ಎಲೈ ಗೋಪಿಯರೇ! ನೀವು ಕೈಗೊಂಡ ವ್ರತವನ್ನು ಚೆನ್ನಾಗಿ ನೆರವೇರಿಸಿರುವಿರಿ, ಇದರಲ್ಲಿ ಸಂದೇಹವೇ ಇಲ್ಲ, ಆದರೆ ನೀವು ವಸ್ತ್ರಹೀನರಾಗಿ ನದಿಯಲ್ಲಿ ಸ್ನಾನಮಾಡಿದುದು ಜಲಾಧಿಷ್ಠಾತೃ ದೇವನಾದ ವರುಣನಿಗೂ ಮತ್ತು ಯಮುನಾದೇವಿಗೂ ಅಪರಾಧ ಮಾಡಿದಂತಾಗಿದೆ. ಈ ದೋಷದ ಶಾಂತಿಗಾಗಿ ನೀವು ನಿಮ್ಮೆರಡೂ ಕೈಗಳನ್ನು ಜೋಡಿಸಿ (ಬದ್ಧಾಂಜಲಿಯಾಗಿ) ತಲೆಯ ಮೇಲಿಟ್ಟು ಕೊಂಡು ಬಗ್ಗಿ ನಮಸ್ಕಾರ ಮಾಡಿರಿ. ಅನಂತರ ನಿಮ್ಮ-ನಿಮ್ಮ ವಸ್ತ್ರಗಳನ್ನು ಕೊಂಡುಹೋಗಿರಿ. ॥ ೧೯ ॥ ಭಗವಾನ್ ಶ್ರೀಕೃಷ್ಣನ ಮಾತನ್ನು ಕೇಳಿದ ಆ ವ್ರಜದ ಕುಮಾರಿಯರು – ನಿಜವಾಗಿ ನಾವು ವಸ್ತ್ರಹೀನರಾಗಿ ಸ್ನಾನಮಾಡಿದ್ದರಿಂದ ನಮ್ಮ ವ್ರತದಲ್ಲಿ ಕೊರತೆ ಉಂಟಾಯಿತೆಂದೇ ತಿಳಿದರು. ಆದ್ದರಿಂದ ಅದು ನಿರ್ವಿಘ್ನವಾಗಿ ನೆರವೇರಲು ಅವರು ಸಮಸ್ತ ಕರ್ಮಗಳ ಸಾಕ್ಷಿಯಾದ ಶ್ರೀಕೃಷ್ಣನಿಗೆ ನಮಸ್ಕರಿಸಿದರು. ಏಕೆಂದರೆ, ಅವನಿಗೆ ನಮಸ್ಕಾರ ಮಾಡುವುದರಿಂದ ಎಲ್ಲ ನ್ಯೂನಾತಿರಿಕ್ತಗಳು ಮತ್ತು ಅಪರಾಧಗಳು ತೊಳೆದು ಹೋಗುವುವು. ॥ ೨೦ ॥ ಯಶೋದಾನಂದನ ಭಗವಾನ್ ಶ್ರೀಕೃಷ್ಣನು – ಎಲ್ಲ ಕುಮಾರಿಯರು ನನ್ನ ಆಜ್ಞೆಗನುಸಾರವಾಗಿ ನಮಸ್ಕರಿಸುತ್ತಿದ್ದಾರೆ ಎಂದು ನೋಡಿ ಅತ್ಯಂತ ಪ್ರಸನ್ನನಾದನು. ಅವನ ಹೃದಯದಲ್ಲಿ ಕರುಣೆ ಉಕ್ಕಿಬಂತು ಹಾಗೂ ಅವನು ಅವರ ವಸ್ತ್ರಗಳನ್ನು ಕೊಟ್ಟುಬಿಟ್ಟನು. ॥ ೨೧ ॥

ಇತ್ಯಚ್ಯುತೇನಾಭಿಹಿತಾ ವ್ರಜಾಬಲಾ
ಮತ್ವಾ ವಿವಸ್ತ್ರಾಪ್ಲವನಂ ವ್ರತಚ್ಯುತಿಮ್ ।
ತತ್ಪೂರ್ತಿಕಾಮಾಸ್ತದಶೇಷಕರ್ಮಣಾಂ
ಸಾಕ್ಷಾತ್ಕೃತಂ ನೇಮುರವದ್ಯಮೃಗ್ಯತಃ ॥ ೨೦ ॥

ತಾಸ್ತಥಾವನತಾ ದೃಷ್ಟ್ವಾ ಭಗವಾನ್ ದೇವಕೀಸುತಃ।
ವಾಸಾಂಸಿ ತಾಭ್ಯಃ ಪ್ರಾಯಚ್ಛತ್ಕರುಣಸ್ತೇನ ತೋಷಿತಃ
॥ ೨೧ ॥

ಪರೀಕ್ಷಿತನೇ! ಶ್ರೀಕೃಷ್ಣನಿಂದ ಗೋಪಕುಮಾರಿಯರು ಲಜ್ಜೆ ಸಂಕೋಚಬಿಡಬೇಕಾಗಿ ಬಂದು, ಅಪಹಾಸ್ಯಕ್ಕೀಡಾದರು. ಆಟದ ಬೊಂಬೆಯಂತೆ ಶ್ರೀಕೃಷ್ಣನು ಗೋಪಕುಮಾರಿಯರನ್ನು ಮನ ಬಂದಂತೆ ಆಟವಾಡಿಸಿದನು. ಅವರ ವಸ್ತ್ರಗಳನ್ನು ಅಪಹರಿಸಿದನು. ಆದರೂ ಅವರು ಅವನ ಮೇಲೆ ಕೋಪಗೊಳ್ಳಲಿಲ್ಲ, ಅವನ ಕಾರ್ಯಗಳಲ್ಲಿ ದೋಷವೆಣಿಸಲಿಲ್ಲ, ಬದಲಿಗೆ ತಮ್ಮ ಪ್ರಿಯತಮನ ಪ್ರೀತಿಯಿಂದ ಅವರು ಇನ್ನೂ ಆನಂದಿಸಿದರು. ॥ ೨೨ ॥ ಪರೀಕ್ಷಿತನೇ! ಬಳಿಕ ಗೋಪಿಯರೆಲ್ಲರೂ ಶ್ರೀಕೃಷ್ಣನು ಇತ್ತ.ಪವಿತ್ರವಾದ ತಮ್ಮ-ತಮ್ಮ ವಸ್ತ್ರಗಳನ್ನು ಧರಿಸಿಕೊಂಡರು. ಆದರೆ ಅವರು ಒಂದು ಹೆಜ್ಜೆಯನ್ನೂ ಮುಂದಿಡಲಾರದಷ್ಟು ಅವರ ಮನಸ್ಸನ್ನು ಶ್ರೀಕೃಷ್ಣನು ಆಕರ್ಷಿಸಿಬಿಟ್ಟಿದ್ದನು. ತಮ್ಮ ಪ್ರಿಯತಮನ ಸಮಾಗಮನಕ್ಕಾಗಿ ಅವರು ಸಿಂಗರಿಸಿಕೊಂಡು, ನಾಚಿಕೆಯಿಂದ ಕುಡಿನೋಟದಿಂದ ಶ್ರೀಕೃಷ್ಣನನ್ನು ನೋಡುತ್ತಾ ಅಲ್ಲೇ ನಿಂತು ಬಿಟ್ಟರು. ॥ ೨೩. ॥

ದೃಢಂ ಪ್ರಲಬ್ಧಾಸ್ತ್ರಪಯಾ ಚ ಹಾಪಿತಾಃ
ಪ್ರಸ್ತೋಭಿತಾಃ ಕ್ರೀಡನವಚ್ಚ ಕಾರಿತಾಃ ।
ವಸ್ತ್ರಾಣಿ ಚೈವಾಪಹೃತಾನ್ಯಥಾಪ್ಯಮುಂ
ತಾ ನಾಭ್ಯಸೂಯನ್ ಪ್ರಿಯಸಂಗನಿರ್ವೃತಾಃ ॥ ೨೨ ॥

ಪರಿಧಾಯ ಸ್ವವಾಸಾಂಸಿ ಪ್ರೇಷ್ಠಸಂಗಮಸಜ್ಜಿತಾಃ।
ಗೃಹೀತಚಿತ್ತಾ ನೋ ಚೇಲುಸ್ತಸ್ಮಿಂಲ್ಲಜ್ಜಾಯಿತೇಕ್ಷಣಾಃ
॥ ೨೩. ॥

ಆ ಕುಮಾರಿಯರು ತನ್ನ ಚರಣಕಮಲಗಳನ್ನು ಸ್ಪರ್ಶಿಸುವ ಇಚ್ಛೆಯಿಂದ ಕಾತುರರಾಗಿಯೇ ವ್ರತವನ್ನು ಕೈಗೊಂಡಿದ್ದರು ಹಾಗೂ ಅವರ ಜೀವನದ ಇದೊಂದೇ ಸಂಕಲ್ಪವಿದ್ದುದನ್ನು ನೋಡಿದ ಭಗವಾನ್ ದಾಮೋದರನು ಅವರ ಪ್ರೇಮಕ್ಕೆ ಮನಸೋತು ಇಂತೆಂದನು. ॥ ೨೪ ॥ ಪ್ರೇಯಸಿಯರಾದ ಕುಮಾರಿಯರೇ! ಸಾಧ್ವಿಯರೇ! ನನ್ನ ಸೇವೆ ಮಾಡಬೇಕೆನ್ನುವ ನಿಮ್ಮ ಸಂಕಲ್ಪವನ್ನು ನಾನು ತಿಳಿದಿರುತ್ತೇನೆ. ನಿಮ್ಮ ಈ ಅಭಿಲಾಷೆಯನ್ನು ಅನುಮೋದಿಸುತ್ತೇನೆ. ನಿಮ್ಮ ಸಂಕಲ್ಪವು ಸತ್ಯವಾಗಿ ಪರಿಣಮಿಸುವುದು. ನೀವು ನನ್ನನ್ನು ಮನತುಂಬಿ ಪೂಜಿಸಿರುವಿರಿ. ॥ ೨೫ ॥

ತಾಸಾಂ ವಿಜ್ಞಾಯ ಭಗವಾನ್ ಸ್ವಪಾದಸ್ಪರ್ಶಕಾಮ್ಯಯಾ ।
ಧೃತವ್ರತಾನಾಂ ಸಂಕಲ್ಪಮಾಹ ದಾಮೋದರೋಽಬಲಾಃ
॥ ೨೪ ॥

ಸಂಕಲ್ಪೋ ವಿದಿತಃ ಸಾಧ್ವ್ಯೋ ಭವತೀನಾಂ ಮದರ್ಚನಮ್ ।
ಮಯಾನುಮೋದಿತಃ ಸೋಽಸೌ ಸತ್ಯೋ ಭವಿತುಮರ್ಹತಿ
॥ ೨೫ ॥

ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ ।
ಭರ್ಜಿತಾ ಕ್ವಥಿತಾ ಧಾನಾ ಪ್ರಾಯೋ ಬೀಜಾಯ ನೇಷ್ಯತೇ
॥ ೨೬ ॥

ಹುರಿದು ಬಿತ್ತಿದ ಬೀಜವು ಹೇಗೆ ಮೊಳೆಯುವುದಿಲ್ಲವೋ ಹಾಗೆಯೇ ತಮ್ಮ ಮನಸ್ಸು ಪ್ರಾಣಗಳನ್ನು ನನ್ನಲ್ಲಿ ಅರ್ಪಿಸುವವರ ಕಾಮನೆಗಳು ಸಾಂಸಾರಿಕ ಭೋಗಗಳ ಕಡೆಗೆ ಕೊಂಡುಹೋಗಲು ಸಮರ್ಥರಾಗುವುದಿಲ್ಲ. ಆ ಕಾಮನೆಗಳು ಕಾಮನೆಗಳೇ ಅಲ್ಲ. ॥ ೨೬॥

ಯಾತಾಬಲಾ ವ್ರಜಂ ಸಿದ್ಧಾ ಮಯೇಮಾ ರಂಸ್ಯಥ ಕ್ಷಪಾಃ ।
ಯದುದ್ದಿಶ್ಯ ವ್ರತಮಿದಂ ಚೇರುರಾರ್ಯಾರ್ಚನಂ ಸತೀಃ
॥ ೨೭ ॥

ಕುಮಾರಿಯರೇ! ಈಗ ನೀವು ನಿಮ್ಮ-ನಿಮ್ಮ ಮನೆಗಳಿಗೆ ಹೊರಟುಹೋಗಿರಿ. ನಿಮ್ಮ ಸಾಧನೆಯು ಸಿದ್ಧಿಸಿದೆ. ಮುಂದೆ ಬರಲಿರುವ ಶರದೃತುವಿನ ರಾತ್ರಿಯಲ್ಲಿ ನನ್ನೊಡನೆ ನೀವು ವಿಹರಿಸುವಿರಂತೆ. ಈ ಕಾರಣಕ್ಕಾಗಿಯೇ ಅಲ್ಲವೇ ನೀವು ವ್ರತನಿಷ್ಠರಾಗಿ ಕಾತ್ಯಾಯಿನೀ ದೇವಿಯನ್ನು ಪೂಜಿಸಿದ್ದು? ॥ ೨೭॥

ಶ್ರೀಶುಕ ಉವಾಚ

ಇತ್ಯಾದಿಷ್ಟಾ ಭಗವತಾ ಲಬ್ಧಕಾಮಾಃ ಕುಮಾರಿಕಾಃ ।
ಧ್ಯಾಯಂತ್ಯಸ್ತತ್ಪದಾಂಭೋಜಂ ಕೃಚ್ಛ್ರಾನ್ನಿರ್ವಿವಿಶುರ್ವ್ರಜಮ್
॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಈ ಅಪ್ಪಣೆಯನ್ನು ಪಡೆದು ಆ ಗೋಪಿಕೆಯರು ಭಗವಾನ್ ಶ್ರೀಕೃಷ್ಣನ ಚರಣಕಮಲಗಳನ್ನು ಧ್ಯಾನಿಸುತ್ತಾ, ಅವನನ್ನು ಬಿಟ್ಟುಹೋಗಲು ಮನಸ್ಸಿಲ್ಲದ ಮನಸ್ಸಿನಿಂದ ಬಹಳ ಕಷ್ಟದಿಂದ ವ್ರಜಕ್ಕೆ ಮರಳಿದರು. ಈಗ ಅವರ ಸಮಸ್ತ ಕಾಮನೆಗಳು ಪೂರ್ಣವಾಗಿ ಹೋಗಿದ್ದವು. ॥ ೨೮ ॥

ಅಥ ಗೋಪೈಃ ಪರಿವೃತೋ ಭಗವಾನ್ ದೇವಕೀಸುತಃ ।
ವೃಂದಾವನಾದ್ಗತೋ ದೂರಂ ಚಾರಯನ್ಗಾಃ ಸಹಾಗ್ರಜಃ
॥ ೨೯ ॥

ಪ್ರಿಯ ಪರೀಕ್ಷಿತನೇ! ಒಂದು ದಿನ ಭಗವಾನ್ ಶ್ರೀಕೃಷ್ಣನು ಬಲರಾಮ ಮತ್ತು ಗೋಪಬಾಲಕರೊಂದಿಗೆ ಗೋವುಗಳನ್ನು ಮೇಯಿಸುತ್ತಾ ವೃಂದಾವನದಿಂದ ಬಹಳದೂರ ಹೋಗಿ ಬಿಟ್ಟಿದ್ದನು. ॥ ೨೯ ॥ ಆದು ಗ್ರೀಷ್ಮಋತುವಾಗಿದ್ದು ಸೂರ್ಯನ ಕಿರಣಗಳು ತೀಕ್ಷ್ಣವಾಗಿದ್ದುವು. ಆದರೆ ದಟ್ಟವಾದ ವೃಕ್ಷಗಳು ಶ್ರೀಕೃಷ್ಣನಿಗೆ ಛತ್ರಿಯಂತೆ ನೆರಳನ್ನು ಕೊಡುತ್ತಿದ್ದವು. ಕೊಡೆಗಳಂತೆ ನೆರಳನ್ನು ನೀಡುತ್ತದ್ದ ವೃಕ್ಷಗಳನ್ನು ನೋಡಿ ಭಗವಂತನು ಸ್ತೋಕಕೃಷ್ಣ ಅಂಶು, ಶ್ರೀದಾಮ, ಸುಬಲ, ಅರ್ಜುನ, ವಿಶಾಲ, ಋಷಭ, ತೇಜಸ್ವೀ, ದೇವಪ್ರಸ್ಥ, ವರೂಥಪ ಮೊದಲಾದ ಗೋಪಬಾಲಕರನ್ನು ಸಂಬೋಧಿಸಿ ಇಂತೆಂದನು. ॥ ೩೦-೩೧ ॥ ನನ್ನ ಪ್ರಿಯ ಮಿತ್ರರೇ! ಇದೋ ನೋಡಿರಿ. ಈ ವೃಕ್ಷಗಳು ಎಷ್ಟು ಭಾಗ್ಯಶಾಲಿಗಳಾಗಿವೆ! ಇವುಗಳ ಜೀವನವು ಕೇವಲ ಬೇರೆಯವರ ಒಳಿತಿಗಾಗಿಯೇ ಇದೆ. ಇವುಗಳು ತಮ್ಮ ಮೇಲೆ ಬೀಳುವ ಬಿಸಿಲನ್ನೂ, ಮಳೆಯನ್ನೂ, ಹಿಮವನ್ನೂ, ಗಾಳಿಯನ್ನೂ ಸಹಿಸಿಕೊಂಡು ನಮ್ಮನ್ನು ಅವುಗಳಿಂದ ರಕ್ಷಿಸುತ್ತವೆ. ॥ ೩೨ ॥ ಇವುಗಳ ಜೀವನವೇ ಸರ್ವಶ್ರೇಷ್ಠವಾಗಿದೆ ಎಂದು ನಾನು ಹೇಳುತ್ತೇನೆ. ಏಕೆಂದರೆ, ಇವುಗಳ ಮೂಲಕ ಎಲ್ಲರಿಗೂ ಆಸರೆ ಸಿಗುತ್ತದೆ, ಅವರ ಜೀವನ ನಿರ್ವಾಹವೂ ಆಗುತ್ತದೆ. ಸಜ್ಜನರ ಮನೆಯಿಂದ ಯಾರೇ ಯಾಚಕನು ಬರಿಗೈಯಿಂದ ಮರಳುವುದಿಲ್ಲವೋ ಹಾಗೆಯೇ ಈ ವೃಕ್ಷಗಳಿಂದಲೂ ಕೂಡ ಎಲ್ಲರಿಗೆ ಏನಾದರೂ ಸಿಕ್ಕಿಯೇ ಸಿಗುತ್ತದೆ. ॥ ೩೩॥ ಇವುಗಳು ತನ್ನ ಎಲೆ, ಹೂವು, ಹಣ್ಣು, ನೆರಳು, ಬೇರು, ನಾರು, ಸಿಪ್ಪೆ, ಸೌದೆ, ಗಂಧ, ಹಾಲು, ಬೂದಿ, ಇದ್ದಲು, ಚಿಗುರು, ರೆಂಬೆಗಳು ಇವುಗಳಿಂದ ಜನರ ಕಾಮನೆಗಳನ್ನು ಪೂರ್ಣಗೊಳಿಸುತ್ತವೆ. ॥ ೩೪ ॥ ನನ್ನ ಪ್ರಿಯ ಗೆಳೆಯರೇ! ಜಗತ್ತಿನಲ್ಲಿ ಬಹಳಷ್ಟು ಪ್ರಾಣಿಗಳಿದ್ದಾರೆ. ಆದರೆ ಸಾಧ್ಯವಿದ್ದಷ್ಟು ತಮ್ಮ ಧನದಿಂದ, ವಿವೇಕದಿಂದ, ವಿಚಾರದಿಂದ, ಮಾತಿನಿಂದ ಮತ್ತು ಪ್ರಾಣಗಳಿಂದ ಬೇರೆಯವರ ಒಳಿತನ್ನು ಮಾಡಿದಾಗಲೇ ಅವರ ಜೀವನ ಸಫಲವಾಗುತ್ತದೆ. ॥ ೩೫ ॥

ಹೇ ಸ್ತೋಕಕೃಷ್ಣ ಹೇ ಅಂಶೋ ಶ್ರೀದಾಮನ್ಸುಬಲಾರ್ಜುನ ।
ವಿಶಾಲರ್ಷಭ ತೇಜಸ್ವಿನ್ ದೇವಪ್ರಸ್ಥ ವರೂಥಪ
॥ ೩೦ ॥

ಪಶ್ಯತೈತಾನ್ಮಹಾಭಾಗಾನ್ ಪರಾರ್ಥೈಕಾಂತಜೀವಿತಾನ್ ।
ವಾತವರ್ಷಾತಪಹಿಮಾನ್ ಸಹಂತೋ ವಾರಯಂತಿ ನಃ
॥ ೩೨ ॥

ಅಹೋ ಏಷಾಂ ವರಂ ಜನ್ಮ ಸರ್ವಪ್ರಾಣ್ಯುಪಜೀವನಮ್ ।
ಸುಜನಸ್ಯೇವ ಯೇಷಾಂ ವೈ ವಿಮುಖಾ ಯಾಂತಿ ನಾರ್ಥಿನಃ
॥ ೩೩ ॥

ಪತ್ರಪುಷ್ಪಫಲಚ್ಛಾಯಾಮೂಲವಲ್ಕಲದಾರುಭಿಃ ।
ಗಂಧನಿರ್ಯಾಸಭಸ್ಮಾಸ್ಥಿತೋಕ್ಮೈಃ ಕಾಮಾನ್ ವಿತನ್ವತೇ
॥ ೩೪ ॥

ಏತಾವಜ್ಜನ್ಮಸಾಫಲ್ಯಂ ದೇಹಿನಾಮಿಹ ದೇಹಿಷು ।
ಪ್ರಾಣೈರರ್ಥೈರ್ಧಿಯಾ ವಾಚಾ ಶ್ರೇಯ ಏವಾಚರೇತ್ ಸದಾ
॥ ೩೫ ॥

ಇತಿ ಪ್ರವಾಲಸ್ತಬಕಫಲಪುಷ್ಪದಲೋತ್ಕರೈಃ ।
ತರೂಣಾಂ ನಮ್ರಶಾಖಾನಾಂ ಮಧ್ಯೇನ ಯಮುನಾಂ ಗತಃ
॥ ೩೬ ॥

ತತ್ರ ಗಾಃ ಪಾಯಯಿತ್ವಾಪಃ ಸುಮೃಷ್ಟಾಃ ಶೀತಲಾಃ ಶಿವಾಃ ।
ತತೋ ನೃಪ ಸ್ವಯಂ ಗೋಪಾಃ ಕಾಮಂ ಸ್ವಾದು ಪಪುರ್ಜಲಮ್
॥ ೩೭ ॥

ತಸ್ಯಾ ಉಪವನೇ ಕಾಮಂ ಚಾರಯಂತಃ ಪಶೂನ್ನೃಪ ।
ಕೃಷ್ಣರಾಮಾವುಪಾಗಮ್ಯ ಕ್ಷುಧಾರ್ತಾ ಇದಮಬ್ರುವನ್
॥ ೩೮ ॥

ಪರೀಕ್ಷಿತನೇ! ಇಕ್ಕೆಲಗಳಲ್ಲಿಯೂ ವೃಕ್ಷಗಳು ನವಪಲ್ಲವಗಳಿಂದಲೂ, ಹೂ-ಹಣ್ಣುಗಳಿಂದ, ನಿಬಿಡವಾದ ಎಲೆಗಳಿಂದಲೂ, ರೆಂಬೆ-ಕೊಂಬೆಗಳಿಂದ ನಳನಳಿಸುತ್ತಿದ್ದವು. ಅವುಗಳ ಕೊಂಬೆಗಳು ಭೂಮಿಯವರೆಗೆ ಬಾಗಿದ್ದವು. ಭಗವಾನ್ ಶ್ರೀಕೃಷ್ಣನು ಹೀಗೆ ಮಾತನಾಡುತ್ತಾ ಅವುಗಳ ನಡುವಿನಿಂದ ಯಮುನಾ ತೀರಕ್ಕೆ ಬಂದನು. ॥ ೩೬ ॥ ರಾಜನೇ! ಯಮುನೆಯ ನೀರು ಅತ್ಯಂತ ಮಧುರವೂ, ಶೀತಲವೂ, ಸ್ವಚ್ಛವೂ ಆಗಿತ್ತು. ಅವರೆಲ್ಲರೂ ಮೊದಲು ಗೋವುಗಳಿಗೆ ನೀರನ್ನು ಕುಡಿಸಿ, ಅನಂತರ ತಾವು ಯಥೇಚ್ಛವಾಗಿ ನೀರನ್ನು ಕುಡಿದರು. ॥ ೩೭ ॥ ಪರೀಕ್ಷಿತನೇ! ಅವರೆಲ್ಲರೂ ಯಮುನಾನದಿಯ ತೀರದ ಹಚ್ಚ-ಹಸಿರಾದ ಉಪವನದಲ್ಲಿ ಸ್ವಚ್ಛಂದವಾಗಿ ತಮ್ಮ ಹಸುಗಳನ್ನು ಮೇಯಿಸುತ್ತಿರುವ ಸಮಯ ಕೆಲವು ಹಸಿದಿರುವ ಗೊಲ್ಲಬಾಲಕರು ಕೃಷ್ಣ-ಬಲರಾಮರ ಬಳಿಗೆ ಹೋಗಿ ಹೀಗೆಂದರು – ॥ ೩೮ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಗೋಪೀವಸ್ತ್ರಾಪಹಾರೋ ನಾಮ ದ್ವಾವಿಂಶೋಽಧ್ಯಾಯಃ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಯಜ್ಞಪತ್ನಿಯರ ಮೇಲೆ ಕೃಪೆ

ಗೋಪಾ ಊಚುಃ

ರಾಮ ರಾಮ ಮಹಾವೀರ್ಯ ಕೃಷ್ಣ ದುಷ್ಟನಿಬರ್ಹಣ ।
ಏಷಾ ವೈ ಬಾಧತೇ ಕ್ಷುನ್ನಸ್ತಚ್ಛಾಂತಿಂ ಕರ್ತುಮರ್ಹಥಃ
॥ ೧ ॥

ಶ್ರೀಶುಕ ಉವಾಚ

ಇತಿ ವಿಜ್ಞಾಪಿತೋ ಗೋಪೈರ್ಭಗವಾನ್ ದೇವಕೀಸುತಃ ।
ಭಕ್ತಾಯಾ ವಿಪ್ರಭಾರ್ಯಾಯಾಃ ಪ್ರಸೀದನ್ನಿದಮಬ್ರವೀತ್
॥ ೨ ॥

ಪ್ರಯಾತ ದೇವಯಜನಂ ಬ್ರಾಹ್ಮಣಾ ಬ್ರಹ್ಮವಾದಿನಃ ।
ಸತ್ರಮಾಂಗಿರಸಂ ನಾಮ ಹ್ಯಾಸತೇ ಸ್ವರ್ಗಕಾಮ್ಯಯಾ
॥ ೩ ॥

ತತ್ರ ಗತ್ವೌದನಂ ಗೋಪಾ ಯಾಚತಾಸ್ಮದ್ವಿಸರ್ಜಿತಾಃ ।
ಕೀರ್ತಯಂತೋ ಭಗವತ ಆರ್ಯಸ್ಯ ಮಮಚಾಭಿಧಾಮ್
॥ ೪ ॥

ಇತ್ಯಾದಿಷ್ಟಾ ಭಗವತಾ ಗತ್ವಾಯಾಚಂತ ತೇ ತಥಾ ।
ಕೃತಾಂಜಲಿಪುಟಾ ವಿಪ್ರಾನ್ ದಂಡವತ್ಪತಿತಾ ಭುವಿ
॥ ೫ ॥

ಗೋಪಾಲಕರು ಹೇಳುತ್ತಾರೆ – ನಯನಾಭಿರಾಮ ಬಲರಾಮನೇ! ನೀನು ಮಹಾಪರಾಕ್ರಮಿಯಾಗಿರುವೆ. ಚಿತ್ತ ಚೋರನಾದ ಶ್ಯಾಮಸುಂದರನೇ! ನೀನು ಹಲವಾರು ದುಷ್ಟರನ್ನು ಸಂಹರಿಸಿರುವೆ. ಈಗ ಈ ಹಸಿವೂ ಕೂಡ ನಮ್ಮನ್ನು ಕಾಡುತ್ತಿದೆ. ಆದ್ದರಿಂದ ನೀವಿಬ್ಬರೂ ಈ ಹಸಿವನ್ನು ಶಾಂತಗೊಳಿಸಲು ಏನಾದರೂ ಉಪಾಯಮಾಡಿರಿ. ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಓ ಪರೀಕ್ಷಿತನೇ! ದೇವಕೀನಂದನ ಶ್ರೀಕೃಷ್ಣನಲ್ಲಿ ಗೋಪಾಲಕರು ಹೀಗೆ ಪ್ರಾರ್ಥಿಸಿದಾಗ ಅವನು ಮಥುರೆಯ ತನ್ನ ಭಕ್ತರಾದ ಬ್ರಾಹ್ಮಣಪತ್ನಿಯರ ಮೇಲೆ ಅನುಗ್ರಹವನ್ನು ತೋರಲಿಕ್ಕಾಗಿ ಹೀಗೆಂದನು – ॥ ೨ ॥ ಪ್ರಿಯ ಮಿತ್ರರೇ! ಇಲ್ಲಿಂದ ಸ್ವಲ್ಪ ದೂರದಲ್ಲೇ ವೇದವಾದಿಗಳಾದ ಬ್ರಾಹ್ಮಣರು ಸ್ವರ್ಗದ ಕಾಮನೆಯಿಂದ ಆಂಗಿರಸವೆಂಬ ಯಜ್ಞವನ್ನು ಮಾಡುತ್ತಿದ್ದಾರೆ. ನೀವು ಅವರ ಯಜ್ಞಶಾಲೆಗೆ ಹೋಗಿರಿ. ॥ ೩ ॥ ಗೋಪಾಲಕರೇ! ನಾನು ಕಳಿಸಿದ್ದರಿಂದ ನೀವು ಅಲ್ಲಿಗೆ ಹೋಗಿ ನನ್ನ ಅಣ್ಣ ಬಲರಾಮನ ಮತ್ತು ನನ್ನ ಹೆಸರನ್ನು ಹೇಳಿ ಸ್ವಲ್ಪ ಅನ್ನ ಭೋಜನ ಸಾಮಗ್ರಿಗಳನ್ನು ಅವರಿಂದ ಕೇಳಿ ತನ್ನಿರಿ. ॥ ೪ ॥ ಭಗವಂತನು ಹೀಗೆ ಆಜ್ಞಾಪಿಸಿದಾಗ ಗೊಲ್ಲಬಾಲಕರು ಆ ಬ್ರಾಹ್ಮಣರ ಯಜ್ಞಶಾಲೆಗೆ ಹೋಗಿ ಅವರಲ್ಲಿ ಭಗವಂತನ ಆಜ್ಞೆಯಂತೆ ಅನ್ನವನ್ನು ಯಾಚಿಸಿದರು. ಮೊದಲಿಗೆ ಅವರು ಸಾಷ್ಟಾಂಗ ನಮಸ್ಕಾರಮಾಡಿ ಮತ್ತೆ ಕೈ ಜೋಡಿಸಿಕೊಂಡು ಅವರಲ್ಲಿ ಕೇಳಿಕೊಂಡರು. ॥ ೫ ॥

ಹೇ ಭೂಮಿದೇವಾಃ ಶೃಣುತ
ಕೃಷ್ಣಸ್ಯಾದೇಶಕಾರಿಣಃ ।
ಪ್ರಾಪ್ತಾನ್ ಜಾನೀತ ಭದ್ರಂ ವೋ
ಗೋಪಾನ್ನೋ ರಾಮಚೋದಿತಾನ್ ॥ ೬ ॥

ಭೂಸುರೋತ್ತಮರೇ! ನಿಮಗೆ ಮಂಗಳವಾಗಲಿ! ವ್ರಜದ ಗೊಲ್ಲರಾದ ನಾವು ನಿಮ್ಮಲ್ಲಿ ಬೇಡಿಕೊಳ್ಳುವೆವು. ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮರು ಇವರ ಆಜ್ಞೆಯಂತೆ ನಾವು ನಿಮ್ಮಲ್ಲಿಗೆ ಬಂದಿರುವೆವು. ತಾವು ನಮ್ಮ ಮಾತನ್ನು ಆಲಿಸಿರಿ. ॥ ೬ ॥

ಗಾಶ್ಚಾರಯಂತಾವವಿದೂರ ಓದನಂ
ರಾಮಾಚ್ಯುತೌ ವೋ ಲಷತೋ ಬುಭುಕ್ಷಿತೌ ।
ತಯೋರ್ದ್ವಿಜಾ ಓದನಮರ್ಥಿನೋರ್ಯದಿ
ಶ್ರದ್ಧಾ ಚ ವೋ ಯಚ್ಛಥ ಧರ್ಮವಿತ್ತಮಾಃ ॥ ೭ ॥

ಭಗವಾನ್ ಶ್ರೀಕೃಷ್ಣ ಬಲರಾಮರು ಹಸುಗಳನ್ನು ಮೇಯಿಸುತ್ತಾ ಇಲ್ಲಿಂದ ಸ್ವಲ್ಪವೇ ಅಂತರದಲ್ಲಿ ಬಂದಿರುವರು. ಅವರಿಗೆ ಹಸಿವಾಗಿದೆ ಹಾಗೂ ನೀವು ಅವರಿಗೆ ಸ್ವಲ್ಪ ಅನ್ನವನ್ನು ನೀಡಬೇಕೆಂದು ಅವರು ಬಯಸುತ್ತಿದ್ದಾರೆ. ವಿಪ್ರೋತ್ತಮರೇ! ನೀವು ಧರ್ಮದ ಮರ್ಮವನ್ನು ಬಲ್ಲವರಾಗಿರುವಿರಿ. ನಿಮಗೆ ಶ್ರದ್ಧೆ ಇದ್ದರೆ ಆ ಭೋಜನಾರ್ಥಿಗಳಿಗೆ ಸ್ವಲ್ಪ ಅನ್ನವನ್ನು ಕೊಡಿರಿ. ॥ ೭ ॥

ದೀಕ್ಷಾಯಾಃ ಪಶುಸಂಸ್ಥಾಯಾಃ ಸೌತ್ರಾಮಣ್ಯಾಶ್ಚ ಸತ್ತಮಾಃ ।
ಅನ್ಯತ್ರ ದೀಕ್ಷಿತಸ್ಯಾಪಿ ನಾನ್ನಮಶ್ನನ್ಹಿ ದುಷ್ಯತಿ ॥ ೮ ॥

ಸಜ್ಜನರೇ! ಪಶುಬಲಿ ಇರುವ ಯಜ್ಞದಲ್ಲಿ ಮತ್ತು ಸೌತ್ರಾಮಣಿ ಯಜ್ಞದಲ್ಲಿ ದೀಕ್ಷಿತನ ಅನ್ನವನ್ನು ತಿನ್ನಬಾರದು. ಇದಲ್ಲದ ಬೇರೆ ಯಾವುದೇ ಸಮಯದಲ್ಲಿಯೂ ಯಜ್ಞದ ದೀಕ್ಷಿತನ ಅನ್ನವನ್ನು ತಿನ್ನುವುದರಲ್ಲಿ ದೋಷವಿರುವುದಿಲ್ಲ. ॥ ೮ ॥

ಇತಿ ತೇ ಭಗವದ್ಯಾಚ್ಞಾಂ ಶೃಣ್ವಂತೋಽಪಿ ನ ಶುಶ್ರುವುಃ ।
ಕ್ಷುದ್ರಾಶಾ ಭೂರಿಕರ್ಮಾಣೋ ಬಾಲಿಶಾ ವೃದ್ಧಮಾನಿನಃ ॥ ೯ ॥

ಪರೀಕ್ಷಿತನೇ! ಹೀಗೆ ಭಗವಂತನು ಅನ್ನವನ್ನು ಕೇಳಿದ ಮಾತಿನ ಕಡೆಗೆ ಆ ಬ್ರಾಹ್ಮಣರು ಯಾವುದೇ ಗಮನಕೊಡಲಿಲ್ಲ. ಅವರು ಸ್ವರ್ಗದ ತುಚ್ಛ ಫಲವನ್ನೇ ಬಯಸುತ್ತಿದ್ದರು. ಅದಕ್ಕಾಗಿ ಶ್ರಮಸಾಧ್ಯವಾದ ಮಹಾಯಜ್ಞದಲ್ಲಿ ತೊಡಗಿದ್ದರು. ನಿಜ ಹೇಳಬೇಕೆಂದರೆ, ಆ ಬ್ರಾಹ್ಮಣರು ಜ್ಞಾನದ ದೃಷ್ಟಿಯಿಂದ ಬಾಲಕರೇ ಆಗಿದ್ದರೂ ತಮ್ಮನ್ನು ಜ್ಞಾನವೃದ್ಧರೆಂದೇ ತಿಳಿಯುತ್ತಿದ್ದರು. ॥ ೯ ॥

ದೇಶಃ ಕಾಲಃ ಪೃಥಗ್ದ್ರವ್ಯಂ ಮಂತ್ರತಂತ್ರರ್ತ್ವಿಜೋಽಗ್ನಯಃ ।
ದೇವತಾ ಯಜಮಾನಶ್ಚ ಕ್ರತುರ್ಧರ್ಮಶ್ಚ ಯನ್ಮಯಃ ॥ ೧೦ ॥

ಪರೀಕ್ಷಿತನೇ! ದೇಶ, ಕಾಲ, ಅನೇಕ ರೀತಿಯ ಸಾಮಗ್ರಿಗಳು, ಬೇರೆ-ಬೇರೆ ಕರ್ಮಗಳಲ್ಲಿ ವಿಧಿಯುಕ್ತ ಮಂತ್ರಗಳು, ಅನುಷ್ಠಾನ ಪದ್ಧತಿ, ಋತ್ವಿಜ, ಬ್ರಹ್ಮನೇ ಆದಿ ಯಜ್ಞಮಾಡುವವರು, ಅಗ್ನಿ, ದೇವತೆ, ಯಜಮಾನ, ಯಜ್ಞ ಮತ್ತು ಧರ್ಮ - ಇವೆಲ್ಲದರ ರೂಪದಲ್ಲಿ ಏಕಮಾತ್ರ ಭಗವಂತನೇ ಪ್ರಕಟನಾಗುತ್ತಿದ್ದಾನೆ. ॥ ೧೦ ॥

ತಂ ಬ್ರಹ್ಮ ಪರಮಂ ಸಾಕ್ಷಾದ್ಭಗವಂತಮಧೋಕ್ಷಜಮ್ ।
ಮನುಷ್ಯದೃಷ್ಟ್ಯಾ ದುಷ್ಪ್ರಜ್ಞಾ ಮರ್ತ್ಯಾತ್ಮಾನೋ ನ ಮೇನಿರೇ ॥ ೧೧ ॥

ಅಂತರ್ಯಾಮಿಯೇ ಇಂದ್ರಿಯಾತೀತ, ಪರಬ್ರಹ್ಮ ಸಾಕ್ಷಾತ್ ಭಗವಾನ್ ಶ್ರೀಕೃಷ್ಣನೇ ಗೋಪಾಲಕರ ಮೂಲಕ ಅನ್ನವನ್ನು ಬೇಡುತ್ತಿರುವನು. ಆದರೆ ತಮ್ಮನ್ನು ಶರೀರವೆಂದೇ ತಿಳಿದಿರುವ ಈ ಮೂರ್ಖರು ಭಗವಂತನನ್ನು ಸಾಮಾನ್ಯ ಮನುಷ್ಯನೆಂದೇ ತಿಳಿದು ಅವನನ್ನು ಸಮ್ಮಾನಿಸಲಿಲ್ಲ. ॥ ೧೧ ॥

ನ ತೇ ಯದೋಮಿತಿ ಪ್ರೋಚುರ್ನ ನೇತಿ ಚ ಪರಂತಪ ।
ಗೋಪಾ ನಿರಾಶಾಃ ಪ್ರತ್ಯೇತ್ಯ ತಥೋಚುಃ ಕೃಷ್ಣರಾಮಯೋಃ ॥ ೧೨ ॥

ಪರೀಕ್ಷಿತನೇ! ಆ ಬ್ರಾಹ್ಮಣರು ಆಗಲಿ ಅಥವಾ ಇಲ್ಲ ಎಂದು ಏನನ್ನೂ ಹೇಳದಿದ್ದಾಗ ಗೊಲ್ಲಬಾಲಕರಿಗೆ ನಿರಾಸೆ ಉಂಟಾಯಿತು. ಅವರು ಮರಳಿ ಬಂದು ಅಲ್ಲಿಯ ಎಲ್ಲ ವೃತ್ತಾಂತವನ್ನು ಬಲರಾಮ-ಕೃಷ್ಣರಿಗೆ ತಿಳಿಸಿದರು. ॥ ೧೨ ॥

ತದುಪಾಕರ್ಣ್ಯ ಭಗವಾನ್ ಪ್ರಹಸ್ಯ ಜಗದೀಶ್ವರಃ ।
ವ್ಯಾಜಹಾರ ಪುನರ್ಗೋಪಾನ್ ದರ್ಶಯನ್ ಲೌಕಿಕೀಂ ಗತಿಮ್ ॥ ೧೩ ॥

ಸಕಲ ಜಗತ್ತಿನ ಸ್ವಾಮಿ ಭಗವಾನ್ ಶ್ರೀಕೃಷ್ಣನು ಅವರ ಮಾತನ್ನು ಕೇಳಿ ನಗತೊಡಗಿದನು. ಜಗತ್ತಿನಲ್ಲಿ ಅಸಫಲತೆ ಪದೇ-ಪದೇ ಉಂಟಾಗುತ್ತದೆ, ಆದರೆ ಅದರಿಂದ ನಿರಾಶರಾಗಬಾರದು, ಪುನಃ ಪುನಃ ಪ್ರಯತ್ನ ಮಾಡುವುದರಿಂದ ಖಂಡಿತವಾಗಿ ಸಫಲತೆ ಉಂಟಾಗುತ್ತದೆ ಎಂದು ಗೋಪಾಲಕರ ಬಳಿ ಅವನು ಹೇಳಿ ಮತ್ತೆ ಇಂತೆಂದನು. ॥ ೧೩. ॥

ಮಾಂ ಜ್ಞಾಪಯತ ಪತ್ನೀಭ್ಯಃ ಸಸಂಕರ್ಷಣಮಾಗತಮ್ ।
ದಾಸ್ಯಂತಿ ಕಾಮಮನ್ನಂ ವಃ ಸ್ನಿಗ್ಧಾ ಮಯ್ಯುಷಿತಾ ಧಿಯಾ ॥ ೧೪ ॥

ಪ್ರಿಯರಾದ ಗೋಪಬಾಲಕರೇ! ಈ ಬಾರಿ ನೀವುಗಳು ಆ ಬ್ರಾಹ್ಮಣರ ಪತ್ನಿಯರ ಬಳಿಗೆ ಹೋಗಿ ಅವರಲ್ಲಿ ರಾಮ-ಶ್ಯಾಮರು ಇಲ್ಲಿಗೆ ಬಂದಿರುವರು ಎಂದು ಹೇಳಿರಿ. ನೀವು ಬಯಸಿದಷ್ಟು ಭೋಜನವನ್ನು ಅವರು ನಿಮಗೆ ಕೊಡುವರು. ಅವರು ನನ್ನನ್ನು ಬಹಳವಾಗಿ ಪ್ರೀತಿಸುತ್ತಾರೆ. ಅವರ ಮನಸ್ಸು ಸದಾಕಾಲ ನನ್ನಲ್ಲೇ ತೊಡಗಿರುತ್ತದೆ. ॥ ೧೪ ॥

ಗತ್ವಾಥ ಪತ್ನೀಶಾಲಾಯಾಂ ದೃಷ್ಟ್ವಾSSಸೀನಾಃ ಸ್ವಲಂಕೃತಾಃ ।
ನತ್ವಾ ದ್ವಿಜಸತೀರ್ಗೋಪಾಃ ಪ್ರಶ್ರಿತಾ ಇದಮಬ್ರುವನ್
॥ ೧೫ ॥

ನಮೋ ವೋ ವಿಪ್ರಪತ್ನೀಭ್ಯೋ ನಿಬೋಧತ ವಚಾಂಸಿ ನಃ ।
ಇತೋSವಿದೂರೇ ಚರತಾ ಕೃಷ್ಣೇನೇಹೇಷಿತಾ ವಯಮ್
॥ ೧೬ ॥

ಗಾಶ್ಚಾರಯನ್ಸ ಗೋಪಾಲೈಃ ಸರಾಮೋ ದೂರಮಾಗತಃ ।
ಬುಭುಕ್ಷಿತಸ್ಯ ತಸ್ಯಾನ್ನಂ ಸಾನುಗಸ್ಯ ಪ್ರದೀಯತಾಮ್
॥ ೧೭ ॥

ಶ್ರುತ್ವಾಚ್ಯುತಮುಪಾಯಾತಂ ನಿತ್ಯಂ ತದ್ದರ್ಶನೋತ್ಸುಕಾಃ ।
ತತ್ಕಥಾಕ್ಷಿಪ್ತಮನಸೋ ಬಭೂವುರ್ಜಾತಸಂಭ್ರಮಾಃ
॥ ೧೮ ॥

ಚತುರ್ವಿಧಂ ಬಹುಗುಣಮನ್ನಮಾದಾಯ ಭಾಜನೈಃ ।
ಅಭಿಸಸ್ರುಃ ಪ್ರಿಯಂ ಸರ್ವಾಃ ಸಮುದ್ರಮಿವ ನಿಮ್ನಗಾಃ
॥ ೧೯ ॥

ನಿಷಿಧ್ಯಮಾನಾಃ ಪತಿಭಿರ್ಭ್ರಾತೃಭಿರ್ಬಂಧುಭಿಃ ಸುತೈಃ ।
ಭಗವತ್ಯುತ್ತಮಶ್ಲೋಕೇ ದೀರ್ಘಶ್ರುತಧೃತಾಶಯಾಃ
॥ ೨೦ ॥

ಯಮುನೋಪವನೇSಶೋಕನವಪಲ್ಲವಮಂಡಿತೇ ।
ವಿಚರಂತಂ ವೃತಂ ಗೋಪೈಃ ಸಾಗ್ರಜಂ ದದೃಶುಃ ಸ್ತ್ರಿಯಃ
॥ ೨೧ ॥

ಶ್ಯಾಮಂ ಹಿರಣ್ಯಪರಿಧಿಂ ವನಮಾಲ್ಯಬರ್ಹ-
ಧಾತುಪ್ರವಾಲನಟವೇಷಮನುವ್ರತಾಂಸೇ ।
ವಿನ್ಯಸ್ತಹಸ್ತಮಿತರೇಣ ಧುನಾನಮಬ್ಜಂ
ಕರ್ಣೋತ್ಪಲಾಲಕಪೋಲಮುಖಾಬ್ಜಹಾಸಮ್ ॥ ೨೨ ॥

ಶ್ರೀಕೃಷ್ಣನ ಅಪ್ಪಣೆಯಂತೆ ಗೋಪಾಲಕರು ಪತ್ನೀಶಾಲೆಗೆ ಹೋದರು. ಅಲ್ಲಿ ಬ್ರಾಹ್ಮಣಪತ್ನಿಯರು ಸುಂದರವಾದ ವಸ್ತ್ರಗಳನ್ನುಟ್ಟು ಸರ್ವಾಲಂಕಾರಗಳಿಂದ ಭೂಷಿತೆಯರಾಗಿ ಕುಳಿತಿದ್ದರು. ಗೋಪಾಲಕರು ದ್ವಿಜಪತ್ನಿಯರಿಗೆ ನಮಸ್ಕರಿಸಿ ವಿನಿತರಾಗಿ ಹೀಗೆ ಹೇಳಿದರು. ॥ ೧೫ ॥ ವಿಪ್ರಪತ್ನಿಯರಾದ ನಿಮಗೆ ನಾವು ನಮಸ್ಕರಿಸುತ್ತಿದ್ದೇವೆ. ನೀವು ದಯಮಾಡಿ ನಮ್ಮ ಮಾತನ್ನು ಆಲಿಸಬೇಕು. ಭಗವಾನ್ ಶ್ರೀಕೃಷ್ಣನು ಇಲ್ಲಿಂದ ಸ್ವಲ್ಪ ದೂರದಲ್ಲೇ ಬಂದಿರುವನು ಹಾಗೂ ಅವನೇ ನಮ್ಮನ್ನು ನಿಮ್ಮಲ್ಲಿಗೆ ಕಳಿಸಿರುವನು. ॥ ೧೬ ॥ ಅವನು ಗೋಪಬಾಲಕರೊಂದಿಗೆ ಮತ್ತು ಬಲರಾಮನೊಂದಿಗೆ ಹಸುಗಳನ್ನು ಮೇಯಿಸುತ್ತಾ ಈ ಕಡೆ ಬಹಳ ದೂರಕ್ಕೆ ಬಂದಿರುವನು. ಈಗ ಅವನಿಗೆ ಮತ್ತು ಅವನ ಜೊತೆಯವರಿಗೆ ತುಂಬಾ ಹಸಿವಾಗಿದೆ. ನೀವು ಅವನಿಗಾಗಿ ಏನಾದರು ಭೋಜನವನ್ನು ನೀಡಿರಿ. ॥ ೧೭ ॥ ಪರೀಕ್ಷಿತನೇ! ಆ ಬ್ರಾಹ್ಮಣಪತ್ನಿಯರು ಅನೇಕ ದಿನಗಳಿಂದ ಭಗವಂತನ ಮನೋಹರವಾದ ಲೀಲೆಗಳನ್ನು ಕೇಳುತ್ತಾ ಇದ್ದರು. ಅವರ ಮನಸ್ಸು ಶ್ರೀಕೃಷ್ಣನಲ್ಲೇ ನೆಟ್ಟುಹೋಗಿತ್ತು. ಯಾವ ರೀತಿಯಿಂದಲಾದರೂ ಶ್ರೀಕೃಷ್ಣನ ದರ್ಶನವಾಗಬೇಕೆಂದು ಸದಾಕಾಲ ಉತ್ಸುಕರಾಗಿದ್ದರು. ಅಚ್ಯುತನು ನಮ್ಮ ಸಮೀಪಕ್ಕೆ ಬಂದಿರುವನೆಂದು ತಿಳಿದೊಡನೆಯೇ ಅವರಿಗೆ ಸಂಭ್ರಮವೋ ಸಂಭ್ರಮ. ॥ ೧೮ ॥ ಅವರು ಪರಿಶುದ್ಧವಾದ ಪಾತ್ರೆಗಳಲ್ಲಿ ರುಚಿಕರವಾದ, ಹಿತಕರವಾದ ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯಗಳೆಂಬ ನಾಲ್ಕುವಿಧವಾದ ಭೋಜನ ಪದಾರ್ಥಗಳನ್ನು ತೆಗೆದುಕೊಂಡು ಅಣ್ಣ-ತಮ್ಮಂದಿರು, ಪತಿ-ಪುತ್ರರು ತಡೆಯುತ್ತಿದ್ದರೂ ಅದನ್ನು ಲೆಕ್ಕಿಸದೆ ನದಿಗಳು ಸಮುದ್ರದ ಕಡೆಗೆ ಸರ-ಸರನೆ ಹರಿದು ಹೋಗುವಂತೆ ತಮ್ಮ ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನ ಬಳಿಗೆ ಹೋಗಲು ಹೊರಟರು. ಹಲವಾರು ದಿನಗಳಿಂದ ಶ್ರೀಕೃಷ್ಣನ ಲೀಲೆಗಳು, ಸೌಂದರ್ಯ, ಗುಣ, ಮಾಧುರ್ಯ - ಇವುಗಳನ್ನು ಕೇಳುತ್ತಲೇ ಇದ್ದ ದ್ವಿಜಪತ್ನಿಯರು ತಮ್ಮನ್ನು ಶ್ರೀಕೃಷ್ಣನಿಗೆ ಅರ್ಪಿಸಿಕೊಂಡು ಬಿಟ್ಟಿದ್ದರು. ॥ ೧೯-೨೦ ॥ ಯಮುನಾ ನದಿಯ ತೀರದಲ್ಲಿ ಚಿಗುರುಗಳಿಂದ ಸಮಲಂಕೃತವಾದ ವೃಕ್ಷರಾಜಿಯಿಂದ ಕೂಡಿದ್ದ ಅಶೋಕವನದಲ್ಲಿ ಗೋಪರಿಂದ ಸುತ್ತುವರಿಯಲ್ಪಟ್ಟು ಅಣ್ಣನಾದ ಬಲರಾಮನೊಂದಿಗೆ ಸಂಚರಿಸುತ್ತಿದ್ದ ಮನಮೋಹಕನಾದ ಶ್ರೀಕೃಷ್ಣನನ್ನು ದ್ವಿಜಪತ್ನಿಯರು ನೋಡಿದರು. ॥ ೨೧ ॥ ಅವನ ಶ್ಯಾಮಲ ಶರೀರದ ಮೇಲೆ ಬಂಗಾರದಂತಹ ಪೀತಾಂಬರವನ್ನು ಧರಿಸಿದ್ದನು. ಕೊರಳಲ್ಲಿ ವನಮಾಲೆಯು ವಿರಾಜಿಸುತ್ತಿತ್ತು. ತಲೆಯ ಮೇಲೆ ನವಿಲು ಗರಿಯ ಕಿರೀಟವಿತ್ತು. ಮಣಶಿಲೆಯೇ ಮೊದಲಾದ ಧಾತುಗಳಿಂದ ಶರೀರದಲ್ಲಿ ಚಿತ್ರಿಸಿಕೊಂಡು, ಚಿಗುರೆಲೆಯ ಗುಚ್ಛಗಳಿಂದ ಶರೀರವನ್ನು ಸಿಂಗರಿಸಿಕೊಂಡು ನಾಟಕದ ನಟನಂತೆ ಅವನು ಕಾಣುತ್ತಿದ್ದನು. ಒಂದು ಕೈಯನ್ನು ಗೋಪಬಾಲಕನ ಹೆಗಲಮೇಲಿಟ್ಟುಕೊಂಡು, ಇನ್ನೊಂದು ಕೈಯಲ್ಲಿ ಕಮಲದ ಪುಷ್ಪವನ್ನು ಹಿಡಿದುಕೊಂಡು ಕುಣಿಸುತ್ತಿದ್ದನು. ಕಿವಿಗಳಲ್ಲಿ ಕಮಲದ ಕುಂಡಲಗಳಿದ್ದು, ಕೆನ್ನೆಗಳ ಮೇಲೆ ಮುಂಗುರುಳುಗಳು ನಲಿದಾಡುತ್ತಿದ್ದವು. ಮುಖಕಮಲವು ಮಂದವಾದ ಮುಗುಳ್ನಗೆಯಿಂದ ಪ್ರಫುಲ್ಲಿತವಾಗಿತ್ತು. ॥ ೨೨ ॥

ಪ್ರಾಯಃ ಶ್ರುತಪ್ರಿಯತಮೋದಯಕರ್ಣಪೂರೈ-
ರ್ಯಸ್ಮಿನ್ನಿಮಗ್ನಮನಸಸ್ತಮಥಾಕ್ಷಿರಂಧ್ರೈಃ ।
ಅಂತಃ ಪ್ರವೇಶ್ಯ ಸುಚಿರಂ ಪರಿರಭ್ಯತಾಪಂ
ಪ್ರಾಜ್ಞಂ ಯಥಾಭಿಮತಯೋ ವಿಜಹುರ್ನರೇಂದ್ರ ॥ ೨೩ ॥

ಪರೀಕ್ಷಿತನೇ! ಈ ಮೊದಲು ಬ್ರಾಹ್ಮಣಪತ್ನಿಯರು ಶ್ಯಾಮ ಸುಂದರನ ಸುಮನೋಹರವಾದ ಲೀಲಾ ಪ್ರಸಂಗಗಳನ್ನು ಕಿವಿಗಳಿಂದ ಕೇಳಿ ತಮ್ಮ-ತಮ್ಮ ಮನಸ್ಸನ್ನು ಅವನಲ್ಲಿಯೇ ಮುಳುಗಿಸಿ ಬಿಟ್ಟಿದ್ದರು. ಈಗಲಾದರೋ ಅವರು ತಮ್ಮ ವಿಶಾಲವಾದ ಕಣ್ಣುಗಳೆಂಬ ಹೆಬ್ಬಾಗಿಲುಗಳ ಮೂಲಕ ಪ್ರೇಮಮೂರ್ತಿಯನ್ನು ಹೃತ್ಕಮಲದಲ್ಲಿ ನೆಲೆಸಿಕೊಂಡು ಮನಸ್ಸು ತಣಿಯುವವರೆಗೂ ಅವನನ್ನು ಗಾಢವಾಗಿ ಆಲಿಂಗಿಸಿಕೊಂಡು ತಮ್ಮ ಹೃದಯದ ವಿರಹತಾಪವನ್ನು ನೀಗಿಕೊಂಡರು. ಜಾಗ್ರತ್-ಸ್ವಪ್ನಗಳಲ್ಲಿ ಇರುವ 'ನಾನು-ನನ್ನದು' ಎಂಬ ಮನೋವೃತ್ತಿಗಳೆಲ್ಲವೂ ಸುಷುಪ್ತಿಗೆ ಸಾಕ್ಷಿಯಾದ ಪ್ರಾಜ್ಞನಲ್ಲಿ ಲಯವಾಗುವಂತೆಯೇ ಬ್ರಾಹ್ಮಣ ಪತ್ನಿಯರು ಶ್ರೀಕೃಷ್ಣನಲ್ಲಿಯೇ ಲೀನರಾಗಿ ಸಂಸಾರ ತಾಪವನ್ನು ಕಳೆದುಕೊಂಡರು. ॥ ೨೩ ॥

ತಾಸ್ತಥಾ ತ್ಯಕ್ತಸರ್ವಾಶಾಃ ಪ್ರಾಪ್ತಾ ಆತ್ಮದಿದೃಕ್ಷಯಾ ।
ವಿಜ್ಞಾಯಾಖಿಲದೃಗ್ದ್ರಷ್ಟಾ ಪ್ರಾಹ ಪ್ರಹಸಿತಾನನಃ ॥ ೨೪ ॥

ಪ್ರಿಯ ಪರೀಕ್ಷಿತನೇ! ಭಗವಂತನು ಸಮಸ್ತರ ಮನಸ್ಸಿನಲ್ಲಿ ಇರುವುದನ್ನು ತಿಳಿಯುವವನೂ, ಎಲ್ಲರ ಬುದ್ಧಿಗೆ ಸಾಕ್ಷಿಯೂ ಆಗಿರುವನು. ಬ್ರಾಹ್ಮಣ ಪತ್ನಿಯರು ತಮ್ಮ ಪತಿ-ಪುತ್ರರನ್ನು, ಸಹೋದರರನ್ನು, ಬಂಧುಗಳನ್ನು ತೊರೆದು ವಿಷಯಸುಖಗಳನ್ನು ಪರಿತ್ಯಜಿಸಿ, ಕೇವಲ ನನ್ನ ದರ್ಶನಕ್ಕಾಗಿ ಬಂದಿರುವರೆಂಬುದನ್ನು ತಿಳಿದು ಶ್ರೀಕೃಷ್ಣಪರಮಾತ್ಮನು ನಗುಮೊಗದಿಂದ ಬ್ರಾಹ್ಮಣಪತ್ನಿಯರಿಗೆ ಹೇಳಿದನು. ॥ ೨೪ ॥

ಶ್ರೀಭಗವಾನುವಾಚ

ಸ್ವಾಗತಂ ವೋ ಮಹಾಭಾಗಾ ಆಸ್ಯತಾಂ ಕರವಾಮ ಕಿಮ್ ।
ಯನ್ನೋ ದಿದೃಕ್ಷಯಾ ಪ್ರಾಪ್ತಾ ಉಪಪನ್ನಮಿದಂ ಹಿ ವಃ ॥ ೨೫ ॥

ಮಹಾಭಾಗ್ಯವತಿಯರೇ! ನಿಮಗೆ ಸ್ವಾಗತ ಬಯಸುತ್ತೇನೆ. ಇತ್ತ ಬನ್ನಿರಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿರಿ. ನಾನು ನಿಮಗೆ ಯಾವ ಕಾರ್ಯವನ್ನು ಮಾಡಲಿ? ನೀವೆಲ್ಲರೂ ನನ್ನ ದರ್ಶನದ ಇಚ್ಛೆಯಿಂದ ಇಲ್ಲಿಗೆ ಬಂದಿರುವಿರಿ. ಪ್ರೇಮಪೂರ್ಣವಾದ ಹೃದಯಿಗಳಾಗಿರುವ ನಿಮಗೆ ಇದು ಅನುರೂಪವೇ ಆಗಿದೆ. ॥ ೨೫ ॥

ನನ್ವದ್ಧಾ ಮಯಿ ಕುರ್ವಂತಿ ಕುಶಲಾಃ ಸ್ವಾರ್ಥದರ್ಶನಾಃ ।
ಅಹ್ಯೈತುಕ್ಯವ್ಯವಹಿತಾಂ ಭಕ್ತಿಮಾತ್ಮಪ್ರಿಯೇ ಯಥಾ ॥ ೨೬ ॥

ಜಗತ್ತಿನಲ್ಲಿ ತಮ್ಮ ಆತ್ಮೋನ್ನತಿಯನ್ನು ತಿಳಿದಿರುವ ಬುದ್ಧಿವಂತರಾದವರು ತಮ್ಮ ಪ್ರಿಯತಮನಂತೆ ನನ್ನಲ್ಲಿ ಪ್ರೇಮವನ್ನಿರಿಸುವರು. ಆ ಪ್ರೇಮದಲ್ಲಿ ಯಾವ ರೀತಿಯ ಕಾಮನೆಯೂ ಇರುವುದಿಲ್ಲ. ಅದರಲ್ಲಿ ಯಾವ ವಿಧವಾದ ವ್ಯವಧಾನ, ಸಂಕೋಚ, ಮರೆ, ಇದಾವುದೂ ದ್ವೈತ ಇರುವುದಿಲ್ಲ. ॥ ೨೬ ॥

ಪ್ರಾಣಬುದ್ಧಿಮನಃಸ್ವಾತ್ಮದಾರಾಪತ್ಯಧನಾದಯಃ ।
ಯತ್ಸಂಪರ್ಕಾತ್ ಪ್ರಿಯಾ ಆಸಂಸ್ತತಃ ಕೋ ನ್ವಪರಃ ಪ್ರಿಯಃ ॥ ೨೭ ॥

ಪ್ರಾಣ, ಬುದ್ಧಿ, ಮನಸ್ಸು, ಶರೀರ, ಸ್ವಜನ, ಸ್ತ್ರೀ, ಪುತ್ರ, ಧನ ಸಂಪತ್ತು - ಇವೆಲ್ಲವೂ ಯಾರ ಸಂಪರ್ಕದಿಂದ ಪ್ರಿಯವಾಗುವವೋ ಅಂತಹ ಆತ್ಮಕ್ಕಿಂತಲೂ, ಪರಮಾತ್ಮನಿಗಿಂತಲೂ, ಆತ್ಮ-ಪರಮಾತ್ಮ ಸ್ವರೂಪ ಕೃಷ್ಣನಾದ ನನಗಿಂತಲೂ ಪ್ರಿಯತಮರು ಬೇರೆಯಾರಿದ್ದಾರೆ? ॥ ೨೭ ॥

ತದ್ಯಾತ ದೇವಯಜನಂ ಪತಯೋ ವೋ ದ್ವಿಜಾತಯಃ ।
ಸತ್ರಂ ಪಾರಯಿಷ್ಯಂತಿ ಯುಷ್ಮಾಭಿರ್ಗೃಹಮೇಧಿನಃ ॥ ೨೮ ॥

ಆದುದರಿಂದ ನೀವು ಬಂದಿರುವುದು ಉಚಿತವೇ ಆಗಿದೆ. ನಾನು ನಿಮ್ಮ ಪ್ರೇಮವನ್ನು ಅಭಿನಂದಿಸುತ್ತೇನೆ. ನೀವು ನನ್ನನ್ನು ಮನಃಪೂರ್ವಕವಾಗಿ ಸಂದರ್ಶಿಸಿದಿರಿ. ಇನ್ನು ನೀವು ಯಜ್ಞಶಾಲೆಗೆ ಹೋಗಿರಿ. ನಿಮ್ಮ ಪತಿಗಳು ಗೃಹಸ್ಥರಾಗಿದ್ದಾರೆ. ಅವರು ನಿಮ್ಮನ್ನು ಬಿಟ್ಟು ಯಜ್ಞವನ್ನು ಪೂರ್ಣಗೊಳಿಸಲಾರರು. ॥ ೨೮ ॥

ಪತ್ನ್ಯ ಊಚುಃ

ಮೈವಂ ವಿಭೋऽರ್ಹತಿ ಭವಾನ್ಗದಿತುಂ ನೃಶಂಸಂ
ಸತ್ಯಂ ಕುರುಷ್ವ ನಿಗಮಂ ತವ ಪಾದಮೂಲಮ್ ।
ಪ್ರಾಪ್ತಾ ವಯಂ ತುಲಸಿದಾಮ ಪದಾವಸೃಷ್ಟಂ
ಕೇಶೈರ್ನಿವೋಢುಮತಿಲಂಘ್ಯ ಸಮಸ್ತಬಂಧೂನ್ ॥ ೨೯ ॥

ಗೃಹ್ಣಂತಿ ನೋ ನ ಪತಯಃ ಪಿತರೌ ಸುತಾ ವಾ
ನ ಭ್ರಾತೃಬಂಧುಸುಹೃದಃ ಕುತ ಏವ ಚಾನ್ಯೇ ।
ತಸ್ಮಾದ್ಭವತ್ಪ್ರಪದಯೋಃ ಪತಿತಾತ್ಮನಾಂ ನೋ
ನಾನ್ಯಾ ಭವೇದ್ಗತಿರರಿಂದಮ ತದ್ವಿಧೇಹಿ ॥ ೩೦ ॥

ಶ್ರೀಭಗವಾನುವಾಚ

ಪತಯೋ ನಾಭ್ಯಸೂಯೇರನ್ನಿತೃಭ್ರಾತೃಸುತಾದಯಃ ।
ಲೋಕಾಶ್ಚ ವೋ ಮಯೋಪೇತಾ ದೇವಾ ಅಪ್ಯನುಮನ್ವತೇ ॥ ೩೧ ॥

ನ ಪ್ರೀತಯೇऽನುರಾಗಾಯ ಹ್ಯಂಗಸಂಗೋ ನೃಣಾಮಿಹ ।
ತನ್ಮನೋ ಮಯಿ ಯುಂಜಾನಾ ಅಚಿರಾನ್ಮಾಮವಾಪ್ಸ್ಯಥ ॥ ೩೨ ॥

ಶ್ರೀಶುಕ ಉವಾಚ

ಇತ್ಯುಕ್ತಾ ದ್ವಿಜಪತ್ನ್ಯಸ್ತಾ ಯಜ್ಞವಾಟಂ ಪುನರ್ಗತಾಃ ।
ತೇ ಚಾನಸೂಯವಃ ಸ್ವಾಭಿಃ ಸ್ತ್ರೀಭಿಃ ಸತ್ರಮಪಾರಯನ್ ॥ ೩೩ ॥

ತತ್ರೈಕಾ ವಿಧೃತಾ ಭರ್ತ್ರಾ ಭಗವಂತಂ ಯಥಾಶ್ರುತಮ್ ।
ಹೃದೋಪಗುಹ್ಯ ವಿಜಹೌ ದೇಹಂ ಕರ್ಮಾನುಬಂಧನಮ್ ॥ ೩೪ ॥

ಭಗವಾನಪಿ ಗೋವಿಂದಸ್ತೇನೈವಾನ್ನೇನ ಗೋಪಕಾನ್ ।
ಚತುರ್ವಿಧೇನಾಶಯಿತ್ವಾ ಸ್ವಯಂ ಚ ಬುಭುಜೇ ಪ್ರಭುಃ ॥ ೩೫ ॥

ಬ್ರಾಹ್ಮಣ ಪತ್ನಿಯರು ಹೇಳಿದರು – ಶ್ಯಾಮಸುಂದರನೇ! ವಿಭುವೇ! ಇಷ್ಟು ನಿಷ್ಠುರವಾಗಿ ಮಾತಾಡುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ಒಮ್ಮೆ ಭಗವಂತನನ್ನು ಪಡೆದುಕೊಂಡವನು ಮತ್ತೆ ಸಂಸಾರಕ್ಕೆ ಮರಳುವುದಿಲ್ಲವೆಂದು ಶ್ರುತಿಗಳು ಹೇಳುತ್ತವೆ. ಆ ಶ್ರುತಿವಾಣಿಯನ್ನು ಸತ್ಯವನ್ನಾಗಿ ಮಾಡು. ನಾವು ನಮ್ಮ ಸಮಸ್ತ ಸಂಬಂಧಿಗಳ ಆಜ್ಞೆಯನ್ನು ಮೀರಿ – ನಿನ್ನ ಚರಣಗಳಿಂದ ಬಿದ್ದಿರುವ ತುಳಸಿಯ ಮಾಲೆಯನ್ನು ನಮ್ಮ ಮುಡಿಯಲ್ಲಿ ಧರಿಸಿಕೊಳ್ಳಬೇಕೆಂದು ಇಲ್ಲಿಗೆ ಬಂದಿರುವೆವು. ॥ ೨೯ ॥ ಸ್ವಾಮಿಯೇ! ಈಗ ನಮ್ಮ ಪತಿ-ಪುತ್ರರು, ತಂದೆ-ತಾಯಿ, ಅಣ್ಣ-ತಮ್ಮಂದಿರು, ಸ್ವಜನ-ಬಂಧುಗಳು ನಮ್ಮನ್ನು ಸ್ವೀಕರಿಸಲಾರರು. ಹಾಗಿರುವಾಗ ಬೇರೆಯವರ ವಿಷಯವಾಗಿ ಹೇಳುವುದೇನಿದೆ? ವೀರಶಿರೋಮಣಿಯೇ! ಈಗ ನಾವು ನಿನ್ನ ಚರಣಗಳನ್ನೇ ಪರಮಾಶ್ರಯವೆಂದು ತಿಳಿದಿರುವೆವು. ನಮಗೆ ಬೇರೆಯಾರ ಆಸರೆಯೂ ಇಲ್ಲ. ಆದಕ್ಕಾಗಿ ನಾವು ಬೇರೆಯವರಲ್ಲಿ ಶರಣಾಗದ ಹಾಗೇ ನೀನೇ ವ್ಯವಸ್ಥೆ ಮಾಡು. ॥ ೩೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ದೇವಿಯರೇ! ನಿಮ್ಮ ಪತಿ-ಪುತ್ರರಾಗಲೀ, ತಂದೆ-ತಾಯಿಯಾಗಲೀ, ಬಂಧು-ಬಾಂಧವರಾಗಲೀ ಯಾರೂ ನಿಮ್ಮನ್ನು ತಿರಸ್ಕರಿಸಲಾರರು. ಇವರುಗಳ ಮಾತೇನು, ಇಡೀ ಜಗತ್ತೆ ನಿಮ್ಮನ್ನು ಸಮ್ಮಾನಿಸುವುದು. ಇದಕ್ಕೆ ಕಾರಣವಿಷ್ಟೇ. ಈಗ ನೀವು ನನ್ನವರಾಗಿದ್ದೀರಿ. ದೇವತೆಗಳೂ ನನ್ನ ಈ ಮಾತನ್ನು ಅನುಮೋದಿಸುತ್ತಿದ್ದಾರೆ. ॥ ೩೧ ॥ ದೇವಿಯರೇ! ಈ ಪ್ರಪಂಚದ ಮನುಷ್ಯರಲ್ಲಿ ಪರಸ್ಪರವಾದ ಪ್ರೀತಿ-ಅನುರಾಗಗಳಿಗೆ ಕೇವಲ ಅಂಗಸಂಗವೇ ಕಾರಣವಾಗುವುದಿಲ್ಲ. ಆದುದರಿಂದ ನೀವು ಈಗಲೇ ಯಜ್ಞಶಾಲೆಗೆ ಹೋಗಿರಿ. ನಿಮ್ಮ ಮನಸ್ಸನ್ನು ನನ್ನಲ್ಲಿ ನೆಲೆಗೊಳಿಸಿರಿ. ನಿಮಗೆ ಬಹುಬೇಗನೇ ನನ್ನ ಪ್ರಾಪ್ತಿಯುಂಟಾಗುವುದು. ॥ ೩೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಹೀಗೆ ಹೇಳಲು ಭಗವದ್ಭಕ್ತರಾದ ಬ್ರಾಹ್ಮಣಪತ್ನಿಯರು ಯಜ್ಞಶಾಲೆಗೆ ಹಿಂದಿರುಗಿದರು. ಶ್ರೀಕೃಷ್ಣನು ಹೇಳಿದ್ದಂತೆ ಆ ಬ್ರಾಹ್ಮಣರು ತಮ್ಮ ಪತ್ನಿಯರಲ್ಲಿ ಯಾವ ವಿಧವಾದ ದೋಷವನ್ನು ಎಣಿಸಲಿಲ್ಲ. ಅವರೊಡನೆ ಸೇರಿಕೊಂಡು ತಮ್ಮ ಯಜ್ಞವನ್ನು ಪೂರ್ಣಗೊಳಿಸಿದರು. ॥ ೩೩ ॥ ಆ ಸ್ತ್ರೀಯರಲ್ಲಿ ಒರ್ವಳಿಗೆ ಹೊರಡುವಾಗಲೇ ಅವಳ ಪತಿಯು ಬಲವಂತವಾಗಿ ತಡೆದು ಬಿಟ್ಟಿದ್ದನು. ಆ ಬ್ರಾಹ್ಮಣಪತ್ನಿಯು ಅನೇಕ ದಿನಗಳಿಂದ ಕೇಳಿದ ಭಗವಂತನ ಸ್ವರೂಪವನ್ನು ಹೃದಯದಲ್ಲಿರಿಸಿಕೊಂಡು, ಅವನ ಧ್ಯಾನವನ್ನೇ ಮಾಡುತ್ತಾ, ಮನಸ್ಸಿನಲ್ಲೇ ಭಗವಂತನನ್ನು ಆಲಿಂಗಿಸಿಕೊಂಡು ಕರ್ಮದಿಂದ ಉಂಟಾದ ತನ್ನ ಶರೀರವನ್ನು ತ್ಯಜಿಸಿದಳು. ಶುದ್ಧ ಸತ್ತ್ವಮಯ ದಿವ್ಯ ದೇಹವನ್ನು ಧರಿಸಿ ಭಗವಂತನಲ್ಲಿ ಐಕ್ಯಳಾದಳು. ॥ ೩೪ ॥ ಇತ್ತ ಭಗವಾನ್ ಶ್ರೀಕೃಷ್ಣನು ಬ್ರಾಹ್ಮಣಪತ್ನಿಯರು ತಂದಿರುವ ನಾಲ್ಕು ವಿಧವಾದ ಅನ್ನವನ್ನು ಮೊದಲಿಗೆ ಗೋಪಬಾಲಕರಿಗೆ ಭೋಜನ ಮಾಡಿಸಿ ಮತ್ತೆ ಸ್ವತಃ ಭೋಜನ ಮಾಡಿದನು. ॥ ೩೫ ॥

ಏವಂ ಲೀಲಾನರವಪುರ್ನ್ಯಲೋಕಮನುಶೀಲಯನ್ ।
ರೇಮೇ ಗೋಗೋಪಗೋಪೀನಾಂ ರಮಯನ್ರೂಪವಾಕ್ಕೃತೈಃ
॥ ೩೬ ॥

ಪರೀಕ್ಷಿತನೇ ! ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣನು ಈ ವಿಧವಾಗಿ ಮನುಷ್ಯರಂತೆ ಲೀಲೆಯನ್ನಾಡುತ್ತಾ ತನ್ನ ಸೌಂದರ್ಯ, ಮಾಧುರ್ಯ, ವಾಣಿ ಮತ್ತು ಕರ್ಮಗಳಿಂದ ಗೋವುಗಳನ್ನು ಗೋಪಬಾಲಕರನ್ನು, ಗೋಪಿಯರನ್ನು ಆನಂದಗೊಳಿಸಿದನು ಹಾಗೂ ತಾನೂ ಕೂಡ ಅವರ ಅಲೌಕಿಕ ಪ್ರೇಮರಸವನ್ನು ಆಸ್ವಾದಿಸುತ್ತಾ ಆನಂದಿತನಾದನು. ॥ ೩೬ ॥

ಅಥಾನುಸ್ಮೃತ್ಯ ವಿಪ್ರಾಸ್ತೇ ಅನ್ವತಪ್ಯನ್ಕೃತಾಗಸಃ ।
ಯದ್ವಿಶ್ವೇಶ್ವರಯೋರ್ಯಾಚ್ಞಾಮಹನ್ಮ ನೃವಿಡಂಬಯೋಃ
॥ ೩೭ ॥

ಪರೀಕ್ಷಿತನೇ ! ಇತ್ತ ಬ್ರಾಹ್ಮಣರಿಗೆ ಶ್ರೀಕೃಷ್ಣನಾದರೋ ಸಾಕ್ಷಾತ್ ಭಗವಂತನಾಗಿರುವನು ಎಂದು ತಿಳಿದಾಗ ಅವರಿಗೆ ಬಹಳವಾಗಿ ಪಶ್ಚಾತ್ತಾಪವುಂಟಾಯಿತು. ಜಗದೀಶ್ವರರಾದ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರ ಆಜ್ಞೆಯನ್ನು ಉಲ್ಲಂಘಿಸಿ ನಾವು ಬಹು ದೊಡ್ಡ ಅಪರಾಧವನ್ನು ಮಾಡಿರುವೆವು ಎಂದು ಯೋಚಿಸಿದರು. ಅವರಾದರೋ ಮಾನವಲೀಲೆಗಳನ್ನು ಮಾಡುತ್ತಿದ್ದರೂ ಕೂಡ ಪರಮೇಶ್ವರರೇ ಆಗಿದ್ದಾರೆ. ॥ ೩೭ ॥ ನಮ್ಮ ಪತ್ನಿಯರ ಹೃದಯದಲ್ಲಿ ಭಗವಂತನ ಅಲೌಕಿಕವಾದ ಪ್ರೇಮವು ತುಂಬಿದೆ. ನಾವು ಅದರಿಂದ ಪೂರ್ಣವಾಗಿ ಬರಿದಾಗಿರುವೆವು ಎಂದು ತಿಳಿದಾಗ, ಅವರು ಪಶ್ಚಾತ್ತಾಪ ಪಟ್ಟು ತಮ್ಮನ್ನು ತಾವೇ ನಿಂದಿಸಿಕೊಂಡರು. ॥ ೩೮ ॥ ಅಧೋಕ್ಷಜನಿಂದ ವಿಮುಖರಾಗಿರುವ ನಮಗೆ ಧಿಕ್ಕಾರವಿರಲಿ, ಶ್ರೇಷ್ಠಕುಲದಲ್ಲಿ ನಾವು ಹುಟ್ಟಿದೆವು. ಗಾಯತ್ರಿಯನ್ನು ಗ್ರಹಣಮಾಡಿ ದ್ವಿಜರಾದೆವು. ವೇದಾಧ್ಯಯನ ಮಾಡಿ ನಾವು ದೊಡ್ಡ-ದೊಡ್ಡ ಯಜ್ಞಗಳನ್ನು ಮಾಡಿದೆವು. ಆದರೆ ಇವೆಲ್ಲವೂ ಉಪಯೋಗಕ್ಕೆ ಬಂದಿಲ್ಲವಲ್ಲ! ನಮಗೆ ಧಿಕ್ಕಾರವಿರಲಿ, ಧಿಕ್ಕಾರವಿರಲಿ. ನಮ್ಮ ವಿದ್ಯೆ, ವ್ರತಗಳು ವ್ಯರ್ಥವಾದುವು. ನಮ್ಮ ಈ ಬಹುಜ್ಞತೆಗೆ ಧಿಕ್ಕಾರವಿರಲಿ. ಶ್ರೇಷ್ಠವಂಶದಲ್ಲಿ ಹುಟ್ಟುವುದು, ಕರ್ಮಕಾಂಡದಲ್ಲಿ ನಿಪುಣರಾಗುವುದು ಏನು ಪ್ರಯೋಜನ ? ಇವುಗಳಿಗೆ ಧಿಕ್ಕಾರವಿರಲಿ. ॥ ೩೯ ॥ ನಿಶ್ಚಯವಾಗಿಯೂ ಭಗವಂತನ ಮಾಯೆಯು ಮಹಾ-ಮಹಾಯೋಗಿಗಳನ್ನೂ ಮೋಹಿತರಾಗಿಸುತ್ತದೆ. ಹಾಗಿರುವಾಗ ನಾವು ಮನುಷ್ಯರ ಗುರುಗಳು ಮತ್ತು ಬ್ರಾಹ್ಮಣರೆಂದು ಹೇಳಿಕೊಳ್ಳುವೆವು. ಆದರೆ ನಿಜವಾದ ಸ್ವಾರ್ಥ ಮತ್ತು ಪರಮಾರ್ಥದ ವಿಷಯದಲ್ಲಿ ನಾವು ಖಂಡಿತವಾಗಿ ಅಜ್ಞರಾಗಿದ್ದೇವೆ. ॥ ೪೦ ॥ ನೋಡಿರಲ್ಲ! ಇವರು ಸ್ತ್ರೀಯರಾಗಿದ್ದರೂ ಜಗದ್ಗುರು ಭಗವಾನ್ ಶ್ರೀಕೃಷ್ಣನಲ್ಲಿ ಇವರಿಗೆ ಎಷ್ಟೊಂದು ಅಗಾಧವಾದ ಪ್ರೇಮವಿದೆ, ಅವಿಂಡ ಅನುರಾಗವಿದೆ ! ಅದರಿಂದಲೇ ಇವರು – ಸಾವಿನೊಂದಿಗೂ ಕಡಿದು ಹೋಗದಿರುವ ಗೃಹವೆಂಬ ಹೆಸರುಳ್ಳ ಬಲಿಷ್ಠವಾದ ಪಾಶವನ್ನೂ ಕತ್ತರಿಸಿ ಬಿಟ್ಟಿರುವರು. ಇದೆಂತಹ ಆಶ್ಚರ್ಯ ! ॥ ೪೧ ॥ ಇವರಿಗೆ ದ್ವಿಜಾತಿಗಳ ಉಪನಯನಾದಿ ಸಂಸ್ಕಾರಗಳು ಆಗಲಿಲ್ಲ, ಇವರು ಗುರುಕುಲದಲ್ಲಿ ವಾಸಿಸಲಿಲ್ಲ, ಇವರು ತಪಸ್ಸು ಮಾಡಿಲ್ಲ, ಆತ್ಮನ ಸಂಬಂಧವಾಗಿ ವಿವೇಕ-ವಿಚಾರ ಮಾಡಲಿಲ್ಲ, ಇವುಗಳ ಮಾತಾದರೋ ದೂರವುಳಿಯಿತು, ಇವರಲ್ಲಿ ಪೂರ್ಣ ಪವಿತ್ರತೆಯೂ ಇಲ್ಲ, ಶುಭಕರ್ಮಗಳೂ ಇಲ್ಲ. ॥ ೪೨ ॥

ದೃಷ್ಟ್ವಾಪ ಸ್ತ್ರೀಣಾಂ ಭಗವತಿ ಕೃಷ್ಣೇ ಭಕ್ತಿಮಲೌಕಿಕೀಮ್ ।
ಆತ್ಮಾನಂ ಚ ತಯಾ ಹೀನಮನುತಪ್ತಾ ವ್ಯಗರ್ಹಯನ್
॥ ೩೯ ॥

ಧಿಗ್ಜನ್ಮನಸ್ತ್ರಿವೃದ್ವಿದ್ಯಾಂ ಧಿಗ್ವ್ರತಂ ಧಿಗ್ಬಹುಜ್ಞತಾಮ್ ।
ಧಿಕ್ಕುಲಂ ಧಿಕ್ಕ್ರಿಯಾದಾಕ್ಷ್ಯಂ ವಿಮುಖಾ ಯೇ ತ್ವಧೋಕ್ಷಜೇ
॥ ೪೦ ॥

ನೂನಂ ಭಗವತೋ ಮಾಯಾ
ಯೋಗಿನಾಮಪಿ ಮೋಹಿನೀ ।
ಯದ್ವಯಂ ಗುರವೋ ನೃಣಾಂ
ಸ್ವಾರ್ಥೇ ಮುಹ್ಯಾಮಹೇ ದ್ವಿಜಾಃ ॥ ೪೧ ॥

ಅಹೋ ಪಶ್ಯತ ನಾರೀಣಾಮಪಿ ಕೃಷ್ಣೇ ಜಗದ್ಗುರೌ ।
ದುರಂತಭಾವಂ ಯೋಽವಿಧ್ಯನ್ಮೃತ್ಯುಪಾಶಾನ್ಗೃಹಾಭಿಧಾನ್
॥ ೪೨ ॥

ನಾಸಾಂ ದ್ವಿಜಾತಿಸಂಸ್ಕಾರೋ ನ ನಿವಾಸೋ ಗುರಾವಪಿ ।
ನ ತಪೋ ನಾತ್ಮಮೀಮಾಂಸಾ ನ ಶೌಚಂ ನ ಕ್ರಿಯಾಃ ಶುಭಾಃ
॥ ೪೩ ॥

ಅಥಾಪಿ ಹ್ಯುತ್ತಮಶ್ಲೋಕೇ ಕೃಷ್ಣೇ ಯೋಗೇಶ್ವರೇಶ್ವರೇ ।
ಭಕ್ತಿರ್ದೃಢಾ ನ ಚಾಸ್ಮಾಕಂ ಸಂಸ್ಕಾರಾದಿಮತಾಮಪಿ
॥ ೪೩ ॥

ಹೀಗಿದ್ದರೂ ಸಮಸ್ತ ಯೋಗೇಶ್ವರರಿಗೂ ಈಶ್ವರನಾದ, ಪುಣ್ಯಶ್ಲೋಕನಾದ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಇವರಿಗೆ ದೃಢವಾದ ಭಕ್ತಿ ಉಂಟಾಗಿದೆ. ನಾವು ನಮ್ಮ ಸಂಸ್ಕಾರಗಳನ್ನು ಮಾಡಿಕೊಂಡಿರುವೆವು. ಗುರುಕುಲದಲ್ಲಿ ವಾಸಿಸಿದ್ದೇವೆ. ತಪಸ್ಸು ಮಾಡಿದ್ದೇವೆ. ಆತ್ಮಾನುಸಂಧಾನ ಮಾಡಿದ್ದೇವೆ. ಪವಿತ್ರತೆಯನ್ನು ಪಾಲಿಸಿದ್ದೇವೆ. ಉತ್ತಮೋತ್ತಮ ಕರ್ಮಗಳನ್ನು ಮಾಡಿದ್ದೇವೆ. ಆದರೂ ಭಗವಂತನ ಚರಣಗಳಲ್ಲಿ ನಮಗೆ ಭಕ್ತಿಯುಂಟಾಗಲಿಲ್ಲವಲ್ಲ! ॥ ೪೩ ॥

ನನು ಸ್ವಾರ್ಥವಿಮೂಢಾನಾಂ ಪ್ರಮತ್ತಾನಾಂ ಗೃಹೇಹಯಾ ।
ಅಹೋ ನಃ ಸ್ಮಾರಯಾಮಾಸ ಗೋಪವಾಕ್ಯೈಃ ಸತಾಂ ಗತಿಃ
॥ ೪೪ ॥

ನಾವುಗಳು ಗೃಹಕೃತ್ಯದಲ್ಲಿ ಉನ್ಮತ್ತರಾಗಿದ್ದೆವು, ನಮ್ಮ ಒಳಿತು-ಕೆಡುಕುಗಳನ್ನು ಪೂರ್ಣವಾಗಿ ಮರೆತು ಹೋಗಿದ್ದೆವು ಎಂಬುದು ನಿಜವಾದದು. ಆಹಾ ! ಭಗವಂತನ ಎಷ್ಟೊಂದು ದಯೆ ಇದೆ, ಭಕ್ತವತ್ಸಲ ಪ್ರಭುವು ಗೊಲ್ಲಬಾಲಕರನ್ನು ಕಳಿಸಿ ಅವರ ಮಾತಿನಿಂದ ನಮ್ಮನ್ನು ಎಚ್ಚರಿಸಿದನು. ತನ್ನ ನೆನಪನ್ನು ಮಾಡಿಸಿದನು. ॥ ೪೪ ॥

ಅನ್ಯಥಾ ಪೂರ್ಣಕಾಮಸ್ಯ ಕೈವಲ್ಯಾದ್ಯಾಶಿಷಾಂ ಪತೇಃ ।
ಈಶಿತವ್ಯೈಃ ಕಿಮಸ್ಮಾಭಿರೀಶಸ್ಯೈತದ್ವಿಡಂಬನಮ್
॥ ೪೫ ॥

ಭಗವಂತನು ಸ್ವತಃ ಪೂರ್ಣಕಾಮನಾಗಿರುವನು. ಕೈವಲ್ಯ ಮೋಕ್ಷದವರೆಗಿನ ಉಂಟಾಗುವ ಕಾಮನೆಗಳನ್ನು ಪೂರ್ಣ ಮಾಡುವವನು. ನಮ್ಮನ್ನು ಎಚ್ಚರಿಸುವುದೇ ಪ್ರಯೋಜನವಲ್ಲದಿದ್ದರೆ ನಮ್ಮಂತಹ ಕ್ಷುದ್ರ ಜೀವರಿಂದ ಅವನಿಗೇನು ಪ್ರಯೋಜನವಿತ್ತು? ಖಂಡಿತವಾಗಿಯೂ ಅವನು ಇದೇ ಉದ್ದೇಶದಿಂದ ಬೇಡುವ ನೆಪವನ್ನು ಮಾಡಿರುವನು. ಹಾಗಿಲ್ಲದಿದ್ದರೆ ಅವನಿಗೆ ಬೇಡುವ ಅವಶ್ಯಕತೆ ಏನಿತ್ತು? ॥ ೪೫ ॥

ಹಿತ್ವಾನ್ಯಾನ್ಭಜತೇ ಯಂ ಶ್ರೀಃ ಪಾದಸ್ಪರ್ಶಾಶಯಾऽಸಕೃತ್ ।
ಆತ್ಮದೋಷಾಪವರ್ಗೇಣ ತದ್ಯಾಚ್ಞಾ ಜನಮೋಹಿನೀ
॥ ೪೬ ॥

ಸಾಕ್ಷಾತ್ ಲಕ್ಷ್ಮೀದೇವಿಯೂ ಬೇರೆ ದೇವತೆಗಳೆಲ್ಲರನ್ನು ಬಿಟ್ಟು ತನ್ನ ಚಂಚಲತೆ, ಗರ್ವ ಮೊದಲಾದ ದೋಷಗಳನ್ನು ಪರಿತ್ಯಾಗ ಮಾಡಿ ನಿರಂತರವಾಗಿ ಅವನ ಚರಣಕಮಲಗಳನ್ನು ಸ್ಪರ್ಶಿಸಲಿಕ್ಕಾಗಿ ಸೇವೆ ಮಾಡುತ್ತಾ ಇರುವಳು. ಅಂತಹ ಪ್ರಭುವು ಇತರರಲ್ಲಿ ಭೋಜನವನ್ನು ಯಾಚಿಸುವುದು ಜನರನ್ನು ವಿಮೋಹಗಳಿಸಲಿಕ್ಕಾಗಿಯಲ್ಲದೆ ಬೇರೇನಿದೆ ? ॥ ೪೬ ॥

ದೇಶಃ ಕಾಲಃ ಪೃಥಗ್ದ್ರವ್ಯಂ ಮಂತ್ರತಂತ್ರರ್ತ್ವಿಜೋऽಗ್ನಯಃ ।
ದೇವತಾ ಯಜಮಾನಶ್ಚ ಕ್ರತುರ್ಧರ್ಮಶ್ಚಯನ್ಮಯಃ
॥ ೪೭ ॥

ದೇಶ, ಕಾಲ, ಬೇರೆ-ಬೇರೆ ಸಾಮಗ್ರಿಗಳು, ಆಯಾಯ ಕರ್ಮಗಳಲ್ಲಿ ವಿನಿಯೋಗಿಸುವ ಮಂತ್ರಗಳು, ಅನುಷ್ಠಾನ ಪದ್ಧತಿ, ಋತ್ವಿಜರು, ಅಗ್ನಿ, ದೇವತೆಗಳು, ಯಜಮಾನ, ಯಜ್ಞ ಮತ್ತು ಧರ್ಮ - ಇವೆಲ್ಲವೂ ಭಗವಂತನ ಸ್ವರೂಪವೇ ಆಗಿವೆ. ॥ ೪೭ ॥

ಸ ಏಷ ಭಗವಾನಾಸ್ಕಾದ್ವಿಷ್ಣುರ್ಯೋಗೇಶ್ವರೇಶ್ವರಃ ।
ಜಾತೋ ಯದುಷ್ವಿತ್ಯಶೃಣ್ಮ ಹ್ಯಪಿ ಮೂಢಾ ನ ವಿದ್ಮಹೇ
॥ ೪೮ ॥

ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ವಿಷ್ಣುವೇ ಸಾಕ್ಷಾತ್ ಶ್ರೀಕೃಷ್ಣರೂಪದಿಂದ ಯದುವಂಶದಲ್ಲಿ ಅವತರಿಸಿರುವನು. ಈ ಮಾತನ್ನು ನಾವು ಕೇಳಿದ್ದೆವು. ಆದರೆ ನಾವು ಅವನನ್ನು ಗುರುತಿಸಲಾರದಷ್ಟು ಮೂಢರಾಗಿದ್ದೇವೆ. ॥ ೪೮ ॥

ಅಹೋ ವಯಂ ಧನ್ಯತಮಾ ಯೇಷಾಂ ನಸ್ತಾದೃಶೀಃ ಸ್ತ್ರಿಯಃ ।
ಭಕ್ಷ್ಯಾ ಯಾಸಾಂ ಮತಿರ್ಜಾತಾ ಅಸ್ಮಾಕಂ ನಿಶ್ಚಲಾ ಹರೌ
॥ ೪೯ ॥

ಇಷ್ಟೆಲ್ಲ ಆಗಿದ್ದರೂ ಕೂಡ ನಾವು ಧನ್ಯಾತಿಧನ್ಯರಾಗಿದ್ದೇವೆ. ನಮ್ಮ ಸೌಭಾಗ್ಯವೇ ಸರಿ! ಅದರಿಂದಲೇ ಇಂತಹ ಪತ್ನಿಯರು ನಮಗೆ ದೊರಕಿರುವರು. ಅವರ ಭಕ್ತಿಯಿಂದಲೇ ನಮ್ಮ ಬುದ್ಧಿಯೂ ಶ್ರೀಹರಿಯಲ್ಲಿ ಅವಿಚಲವಾಗಿ ಸೇರಿಹೋಗಿದೆ. ॥ ೪೯ ॥

ನಮಸ್ತುಭ್ಯಂ ಭಗವತೇ ಕೃಷ್ಣಾಯಾಕುಂಠಮೇಧಸೇ ।
ಯನ್ಮಾಯಾಮೋಹಿತಧಿಯೋ ಭ್ರಮಾಮಃ ಕರ್ಮವರ್ತ್ಮಸು
॥ ೫೦ ॥

ಪ್ರಭೋ! ನೀನು ಅಚಿಂತ್ಯ ಮತ್ತು ಅನಂತ ಐಶ್ವರ್ಯಗಳ ಒಡೆಯನಾಗಿರುವೆ. ಶ್ರೀಕೃಷ್ಣನೇ! ನಿನ್ನ ಜ್ಞಾನವೂ ಅಬಾಧವಾಗಿದೆ. ನಿನ್ನ ಮಾಯೆಯಿಂದಲೇ ನಮ್ಮ ಬುದ್ಧಿಯು ಮೋಹಿತವಾಗಿದೆ ಹಾಗೂ ನಾವು ಕರ್ಮಗಳ ಜಂಜಾಟದಲ್ಲಿ ಅಲೆಯುತ್ತಿರುವೆವು. ನಾವು ನಿನಗೆ ನಮಸ್ಕರಿಸುತ್ತಿದ್ದೇವೆ. ॥ ೫೦ ॥

ಸ ವೈ ನ ಆದ್ಯಃ ಪುರುಷಃ ಸ್ವಮಾಯಾಮೋಹಿತಾತ್ಮನಾಮ್ ।
ಅವಿಜ್ಞಾತಾನುಭಾವಾನಾಂ ಕ್ಷಂತುಮರ್ಹತ್ಯತಿಕ್ರಮಮ್
॥ ೫೧ ॥

ಆದಿಪುರುಷನಾದ, ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣನು ನಮ್ಮ ಈ ಅಪರಾಧವನ್ನು ಕ್ಷಮಿಸಲಿ. ನಮ್ಮ ಬುದ್ಧಿಯು ಅವನ ಮಾಯೆಯಿಂದಲೇ ಮೋಹಿತವಾಗಿದೆ. ನಾವು ಅವನ ಅಪಾರವಾದ ಪ್ರಭಾವವನ್ನು ತಿಳಿಯದ ಅಜ್ಞಾನಿಗಳಾಗಿ ಇದ್ದೇವೆ. ॥ ೫೧ ॥

ಇತಿ ಸ್ವಾಘಮನುಸ್ಮೃತ್ಯ ಕೃಷ್ಣೇ ತೇ ಕೃತಹೇಲನಾಃ ।
ದಿದೃಕ್ಷವೋಽಪ್ಯಚ್ಯುತಯೋಃ ಕಂಸಾದ್ಭೀತಾ ನ ಚಾಚಲನ್
॥ ೫೨ ॥

ಪರೀಕ್ಷಿತನೇ ! ಆ ಬ್ರಾಹ್ಮಣರು ಶ್ರೀಕೃಷ್ಣನನ್ನು ತಿರಸ್ಕರಿಸಿದ್ದರು. ಆದ್ದರಿಂದ ಅವರಿಗೆ ತಮ್ಮ ಅಪರಾಧದ ಸ್ಮೃತಿಯಿಂದ ಬಹಳ ಪಶ್ಚಾತ್ತಾಪ ಉಂಟಾಯಿತು. ಅವರ ಹೃದಯದಲ್ಲಿ ಶ್ರೀಕೃಷ್ಣ ಬಲರಾಮರ ದರ್ಶನದ ತೀವ್ರ ಇಚ್ಛೆ ಉಂಟಾಯಿತು. ಆದರೆ ಕಂಸನ ಭಯದಿಂದ ಅವರು ದರ್ಶನಕ್ಕೆ ಹೋಗಲಿಲ್ಲ. ॥ ೫೨ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಯಜ್ಞಪತ್ನ್ಯುದ್ಧರಣಂ ನಾಮ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಇಂದ್ರನ ಯಜ್ಞ ನಿವಾರಣೆ

ಶ್ರೀಶುಕ ಉವಾಚ

ಭಗವಾನಪಿ ತತ್ರೈವ ಬಲದೇವೇನ ಸಂಯುತಃ ।
ಆಪಶ್ಯನ್ನಿವಸನ್ಗೋಪಾನಿಂದ್ರಯಾಗಕೃತೋದ್ಯಮಾನ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜನೇ ! ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ವೃಂದಾವನದಲ್ಲಿದ್ದು ಅನೇಕ ಪ್ರಕಾರವಾದ ಲೀಲೆಗಳನ್ನು ಪ್ರಕಟ ಪಡಿಸುತ್ತಿದ್ದನು. ಒಂದು ದಿನ ಅಲ್ಲಿಯ ಗೋಪರೆಲ್ಲರೂ ಇಂದ್ರ ಯಜ್ಞವನ್ನು ಮಾಡಲು ಸಿದ್ಧತೆ ಮಾಡುತ್ತಿರುವುದನ್ನು ನೋಡಿದನು. ॥ ೧ ॥ ಶ್ರೀಕೃಷ್ಣನು ಸರ್ವಾಂತರ್ಯಾಮಿಯೂ, ಸರ್ವಜ್ಞನೂ ಆಗಿದ್ದುದರಿಂದ ಎಲ್ಲವನ್ನೂ ಅವನು ತಿಳಿದಿರುತ್ತಿದ್ದನು. ಹೀಗಿದ್ದರೂ ವಿನಯದಿಂದ ಕೂಡಿ ನಂದನೇ ಮೊದಲಾದ ಹಿರಿಯ ಗೋಪರನ್ನು ಕೇಳಿದನು. ॥ ೨ ॥ ತಂದೆಯವರೇ ! ನಿಮ್ಮ ಮುಂದೆ ಎಂತಹ ಮಹಾಕಾರ್ಯವು ಇದಿರಾಗಿದೆ ? ಯಾವ ಉತ್ಸವವು ನಡೆಯಲಿದೆ ? ಇದರ ಫಲವು ಏನು ? ಯಾವ ಉದ್ದೇಶದಿಂದ ಯಾವ ಯಾವ ಸಾಮಗ್ರಿಗಳಿಂದ ಈ ಯಜ್ಞವನ್ನು ಮಾಡಲಾಗುತ್ತದೆ ? ಇದೆಲ್ಲವನ್ನು ನನಗೆ ತಿಳಿಸಿರಿ. ॥ ೩ ॥ ನೀವು ನನಗೆ ತಂದೆಯಾಗಿದ್ದು ನಾನು ನಿಮ್ಮ ಮಗನಲ್ಲವೇ ! ಅಪ್ಪಾ ! ಇದನ್ನು ತಿಳಿದುಕೊಳ್ಳಬೇಕೆಂಬ ಉತ್ಕಂಠತೆಯೂ ಇದೆ. ಲೋಕದಲ್ಲಿ ಸಮಸ್ತರನ್ನು ತಮ್ಮಂತೆಯೇ ಕಾಣುವ, 'ಇವರು ತಮ್ಮವರು, ಇವರು ಪರರು' ಎಂಬ ಭೇದ ಭಾವವೇ ಇಲ್ಲದಿರುವ ಸಾಧುಗಳಿಗೆ ಇತರರಿಂದ ಮುಚ್ಚಿಡಬೇಕಾದುದು ಯಾವುದೂ ಇರುವುದಿಲ್ಲ. ಇವರಿಗೆ ಮಿತ್ರ-ಶತ್ರು ಉದಾಸೀನ ಇವರಲ್ಲಿ ಯಾವ ಭೇದವೂ ಇರುವುದಿಲ್ಲ. ಆದರೆ ಇಂತಹ ಸ್ಥಿತಿಯಿಲ್ಲದಿದ್ದರೆ ರಹಸ್ಯದ ಮಾತನ್ನು ಶತ್ರು ವಿನಂತೆ ಉದಾಸೀನನಲ್ಲಿಯೂ ಹೇಳಬಾರದು. ಮಿತ್ರನಾದರೋ ತನ್ನಂತೆಯೇ ಎಂದು ಹೇಳಲಾಗಿದೆ. ಆದಕ್ಕಾಗಿ ಅವನಲ್ಲಿ ಯಾವ ಮಾತನ್ನು ಮರೆಮಾಚಲಾಗುವುದಿಲ್ಲ. ॥ ೪-೫ ॥

ತದಭಿಜ್ಞೋಽಪಿ ಭಗವಾನ್ ಸರ್ವಾತ್ಮಾ ಸರ್ವದರ್ಶನಃ ।
ಪ್ರಶ್ರಯಾವನತೋಽಪೃಚ್ಛದ್ವೃದ್ಧಾನ್ನಂದಪುರೋಗಮಾನ್
॥ ೨ ॥

ಕಥ್ಯತಾಂ ಮೇ ಪಿತಃ ಕೋಽಯಂ ಸಂಭ್ರಮೋ ವ ಉಪಾಗತಃ ।
ಕಿಂ ಫಲಂ ಕಸ್ಯಚೋದ್ದೇಶಃ ಕೇನ ವಾ ಸಾಧ್ಯತೇ ಮಖಿಃ
॥ ೩ ॥

ಏತದ್ಬ್ರೂಹಿ ಮಹಾನ್ಕಾಮೋ ಮಹ್ಯಂ ಶುಶ್ರೂಷವೇ ಪಿತಃ ।
ನ ಹಿ ಗೋಪ್ಯಂ ಹಿ ಸಾಧೂನಾಂ ಕೃತ್ಯಂ ಸರ್ವಾತ್ಮನಾಮಿಹ
॥ ೪ ॥

ಅಸ್ತ್ಯಸ್ವಪರದೃಷ್ಟೀನಾಮಮಿತ್ರೋದಾಸ್ತವಿದ್ವಿಷಾಮ್ ।
ಉದಾಸೀನೋಽರಿವದ್ವರ್ಜ್ಯ ಆತ್ಮವತ್ಸುಹೃದುಚ್ಯತೇ
॥ ೫ ॥

ಜ್ಞಾತ್ವಾಜ್ಞಾತ್ವಾ ಚ ಕರ್ಮಾಣಿ ಜನೋಽಯಮನುತಿಷ್ಠತಿ ।
ವಿದುಷಃ ಕರ್ಮಸಿದ್ಧಿಃ ಸ್ಯಾತ್ತಥಾ ನಾವಿದುಷೋ ಭವೇತ್
॥ ೬ ॥

ತತ್ರ ತಾವತ್ಕ್ರಿಯಾಯೋಗೋ ಭವತಾಂ ಕಿಂ ವಿಚಾರಿತಃ ।
ಅಥವಾ ಲೌಕಿಕಸ್ತನ್ಮೇ ಪೃಚ್ಛತಃ ಸಾಧು ಭಣ್ಯತಾಮ್
॥ ೭ ॥

ನಂದಗೋಪ ಉವಾಚ

ಪರ್ಜನ್ಯೋ ಭಗವಾನಿಂದ್ರೋ ಮೇಘಾಸ್ತತ್ಸ್ಯಾತ್ಮಮೂರ್ತಯಃ ।
ತೇಽಭಿವರ್ಷಂತಿ ಭೂತಾನಾಂ ಪ್ರೀಣನಂ ಜೀವನಂ ಪಯಃ
॥ ೮ ॥

ತಂ ತಾತ ವಯಮನ್ಯೇ ಚ ವಾರ್ಮುಚಾಂ ಪತಿಮೀಶ್ವರಮ್ ।
ದ್ರವ್ಯೈಸ್ತದ್ರೇತಸಾ ಸಿದ್ಧ್ಯೈರ್ಯಜಂತೇ ಕ್ರತುಭಿರ್ನರಾಃ
॥ ೯ ॥

ತಚ್ಛೇಷೇಣೋಪಜೀವಂತಿ ತ್ರಿವರ್ಗಫಲಹೇತವೇ ।
ಪುಂಸಾಂ ಪುರುಷಕಾರಾಣಾಂ ಪರ್ಜನ್ಯಃ ಫಲಭಾವನಃ
॥ ೧೦ ॥

ಯಂ ಏವಂ ವಿಸೃಜೇದ್ಧರ್ಮಂ ಪಾರಂಪರ್ಯಾಗತಂ ನರಃ ।
ಕಾಮಾಲ್ಲೋಭಾದ್ಭಯಾದ್ದ್ವೇಷಾತ್ತಸ್ಯೈ ನಾಪ್ನೋತಿ ಶೋಭನಮ್
॥ ೧೧ ॥

ಶ್ರೀಶುಕ ಉವಾಚ

ವಚೋ ನಿಶಮ್ಯ ನಂದಸ್ಯ ತಥಾನ್ಯೇಷಾಂ ವ್ರಜೌಕಸಾಮ್ ।
ಇಂದ್ರಾಯ ಮನ್ಯುಂ ಜನಯನ್ಪಿತರಂ ಪ್ರಾಹ ಕೇಶವಃ
॥ ೧೨ ॥

ಶ್ರೀಭಗವಾನುವಾಚ

ಕರ್ಮಣಾ ಜಾಯತೇ ಜಂತುಃ ಕರ್ಮಣೈವ ವಿಲೀಯತೇ ।
ಸುಖಂ ದುಃಖಂ ಭಯಂ ಕ್ಷೇಮಂ ಕರ್ಮಣೈವಾಭಿಪದ್ಯತೇ
॥ ೧೩ ॥

ಅಸ್ತಿ ಚೇದೀಶ್ವರಃ ಕಶ್ಚಿತ್ಫಲರೂಪ್ಯನ್ಯಕರ್ಮಣಾಮ್ ।
ಕರ್ತಾರಂ ಭಜತೇ ಸೋಽಪಿ ನ ಹ್ಯಕರ್ತುಃ ಪ್ರಭುರ್ಹಿ ಸಃ
॥ ೧೪ ॥

ಕಿಮಿಂದ್ರೇಣೇಹ ಭೂತಾನಾಂ ಸ್ವಸ್ವಕರ್ಮಾನುವರ್ತಿನಾಮ್ ।
ಅನೀಶೇನಾನ್ಯಥಾ ಕರ್ತುಂ ಸ್ವಭಾವವಿಹಿತಂ ನೃಣಾಮ್
॥ ೧೫ ॥

ಈ ಸಂಸಾರಿ ಮನುಷ್ಯನು ತಿಳಿದೊ-ತಿಳಿಯದೆಯೋ ಅನೇಕ ವಿಧದ ಕರ್ಮಗಳ ಅನುಷ್ಠಾನವನ್ನು ಮಾಡುತ್ತಾನೆ. ಅದರಲ್ಲಿ ತಿಳಿದು-ತಿಳಿದು ಮಾಡಿದ ಕರ್ಮಗಳು ಫಲಕೊಡುವಂತೆ ತಿಳಿಯದೇ ಮಾಡಿದ ಕರ್ಮಗಳ ಫಲದೊರೆಯುವುದಿಲ್ಲ ॥ ೬ ॥ ಆದ್ದರಿಂದ ಈಗ ನೀವೆಲ್ಲರೂ ಮಾಡಲು ಹೊರಟಿರುವ ಕ್ರಿಯಾಯೋಗವು ಸಹೃದಯರೊಂದಿಗೆ ವಿಚಾರ ವಿಮರ್ಶೆಮಾಡಿ, ಶಾಸ್ತ್ರಸಮ್ಮತವೂ ಅಥವಾ ಲೌಕಿಕವೇ ಇರಬಹುದು. ಇದೆಲ್ಲವನ್ನು ನಾನು ತಿಳಿಯಲು ಬಯಸುತ್ತೇನೆ. ದಯಮಾಡಿ ಸ್ಪಷ್ಟವಾಗಿ ಹೇಳುವವರಾಗಿರಿ. ॥ ೭ ॥

ನಂದಗೋಪನು ಹೇಳಿದನು – ಮಗು! ಭಗವಾನ್ ಇಂದ್ರನು ಮಳೆಗರೆಯುವ ಮೇಘಗಳ ಅಧಿಪತಿಯಾಗಿರುವನು. ಈ ಮೇಘಗಳು ಅವನದೇ ರೂಪಗಳಾಗಿವೆ. ಅವು ಸಮಸ್ತ ಪ್ರಾಣಿಗಳನ್ನು ತೃಪ್ತಿಪಡಿಸುವಂತಹ ಜೀವನ ದಾತ್ಯವಾದ ನೀರನ್ನು ಸುರಿಸುವುವು. ॥ ೮ ॥ ನನ್ನ ಮುದ್ದುಕಂದ! ನಾವು ಮತ್ತು ಇತರರು ಅದೇ ಮೇಘಪತಿಯಾದ ಭಗವಾನ್ ಇಂದ್ರನನ್ನು ಯಜ್ಞಗಳ ಮೂಲಕ ಪೂಜಿಸುತ್ತೇವೆ. ಯಜ್ಞಮಾಡುವ ಸಾಮಗ್ರಿಗಳೂ ಕೂಡ ಅವನು ಸುರಿಸಿದ ಶಕ್ತಿಯುತವಾದ ನೀರಿನಿಂದಲೇ ಉತ್ಪನ್ನವಾಗಿವೆ. ॥ ೯॥ ಅವನ ಯಜ್ಞವನ್ನು ಮಾಡಿದ ಬಳಿಕ ಉಳಿದಿರುವ ಅನ್ನದಿಂದಲೇ ನಾವೆಲ್ಲರೂ ಅರ್ಥ, ಧರ್ಮ ಮತ್ತು ಕಾಮರೂಪವಾದ ತ್ರಿವರ್ಗಗಳ ಸಿದ್ಧಿಗಾಗಿ ಜೀವನನಿರ್ವಾಹ ಮಾಡುತ್ತೇವೆ. ಮನುಷ್ಯರ ಬೇಸಾಯವೇ ಮುಂತಾದ ಪ್ರಯತ್ನಗಳಿಗೆ ಫಲವನ್ನು ಕೊಡುವವನು ಇಂದ್ರನೇ ಆಗಿರುವನು. ॥ ೧೦ ॥ ಈ ಧರ್ಮವು (ಸಂಪ್ರದಾಯ) ನಮ್ಮ ಕುಲಪರಂಪರೆಯಿಂದ ನಡೆದು ಬಂದಿದೆ. ಇಂತಹ ಪರಂಪರಾಗತ ಧರ್ಮವನ್ನು ಕಾಮ, ಲೋಭ, ಭಯ ಅಥವಾ ದ್ವೇಷದಿಂದ ಬಿಟ್ಟು ಬಿಡುವವನಿಗೆ ಎಂದಿಗೂ ಒಳ್ಳೆಯದಾಗುವುದಿಲ್ಲ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಕೇಶವನು ತಂದೆಯ ಮತ್ತು ಇತರ ವ್ರಜವಾಸಿಗಳ ಮಾತನ್ನು ಕೇಳಿ ಇಂದ್ರನಿಗೆ ಕೋಪವನ್ನುಂಟುಮಾಡುವ ಈ ಮಾತುಗಳನ್ನು ನಂದಗೋಪನ ಬಳಿ ಹೇಳಿದನು. ॥ ೧೨ ॥

ಶ್ರೀಭಗವಂತನು ಹೇಳಿದನು – ತಂದೆಯವರೇ! ಪ್ರಾಣಿಯು ತನ್ನ ಕರ್ಮಕ್ಕನುಸಾರವಾಗಿಯೇ ಹುಟ್ಟುತ್ತಾನೆ ಮತ್ತು ಕರ್ಮಾನುಸಾರವೇ ಸಾಯುತ್ತಾನೆ. ಅವನಿಗೆ ಅವನ ಕರ್ಮಕ್ಕೆ ಅನುಸಾರವೇ ಸುಖ-ದುಃಖ, ಭಯ ಕ್ಷೇಮಗಳು ಪ್ರಾಪ್ತವಾಗುತ್ತವೆ. ॥ ೧೩. ॥ ಜಡವಾದ ಕರ್ಮವೇ ಕರ್ಮ ಮಾಡಿದವನಿಗೆ ಫಲ ನೀಡದೆಂದೂ, ಫಲವನ್ನು ಕೊಡುವ ಬೇರೊಬ್ಬ ಈಶ್ವರನಿದ್ದಾನೆಂದು ಭಾವಿಸಿದರೂ, ಆ ಈಶ್ವರನೂ ಕೂಡ ಕರ್ಮಮಾಡಿದವನಿಗೇ ಫಲನೀಡಬಲ್ಲನೇ ಹೊರತು ಕರ್ಮಮಾಡದವನ ಮೇಲೆ ಅವನ ಪ್ರಭಾವವೇನೂ ನಡೆಯುವುದಿಲ್ಲ ॥ ೧೪ ॥ ಸಮಸ್ತ ಪ್ರಾಣಿಗಳೂ ತಮ್ಮ-ತಮ್ಮ ಕರ್ಮಗಳ ಫಲಗಳನ್ನೇ ಅನುಭವಿಸುತ್ತಿರುವಾಗ ನಮಗೆ ಇಂದ್ರನ ಆವಶ್ಯಕತೆ ಏನಿದೆ? ಅಪ್ಪಾಜೀ! ಪೂರ್ವಸಂಸ್ಕಾರಕ್ಕೆ ಅನುಸಾರ ಪ್ರಾಪ್ತವಾಗುವ ಮನುಷ್ಯರ ಕರ್ಮಗಳನ್ನು ಅವನು ಬದಲಿಸಲಾರನೆಂದಾಗ ಅವನಿಂದ ಏನು ಪ್ರಯೋಜನ? ॥ ೧೫ ॥

ಸ್ವಭಾವತಂತ್ರೋ ಹಿ ಜನಃ ಸ್ವಭಾವಮನುವರ್ತತೇ ।
ಸ್ವಭಾವಸ್ಥಮಿದಂ ಸರ್ವಂ ಸದೇವಾಸುರಮಾನುಷಮ್
॥ ೧೬ ॥

ದೇಹಾನುಚ್ಚಾವಚಾನ್ ಜಂತುಃ ಪ್ರಾಪ್ನೋತ್ಯುಜತಿ ಕರ್ಮಣಾ ।
ಶತ್ರುರ್ಮಿತ್ರಮುದಾಸೀನಃ ಕರ್ಮೈವ ಗುರುರೀಶ್ವರಃ
॥ ೧೭ ॥

ತಸ್ಮಾತ್ತಂ ಪೂಜಯೇತ್ಕರ್ಮ ಸ್ವಭಾವಸ್ಥಃ ಸ್ವಕರ್ಮಕೃತ್ ।
ಅಂಜಸಾ ಯೇನ ವರ್ತೇತ ತದೇವಾಸ್ಯ ಹಿ ದೈವತಮ್
॥ ೧೮ ॥

ಅಜೀವ್ಯೈಕತರಂ ಭಾವಂ ಯಸ್ತ್ವನ್ಯಮುಪಜೀವತಿ ।
ನ ತಸ್ಮಾದ್ವಿಂದತೇ ಕ್ಷೇಮಂ ಜಾರಂ ನಾರ್ಯಸತೀ ಯಥಾ
॥ ೧೯ ॥

ವರ್ತೇತ ಬ್ರಹ್ಮಣಾ ವಿಪ್ರೋ ರಾಜನ್ಯೋ ರಕ್ಷಯಾ ಭುವಃ ।
ವೈಶ್ಯಸ್ತು ವಾರ್ತಯಾ ಜೀವೇಚ್ಛೂದ್ರಸ್ತು ದ್ವಿಜಸೇವಯಾ
॥ ೨೦ ॥

ಕೃಷಿವಾಣಿಜ್ಯಗೋರಕ್ಷಾ ಕುಸೀದಂ ತುರ್ಯಮುಚ್ಯತೇ ।
ವಾರ್ತಾ ಚತುರ್ವಿಧಾ ತತ್ರ ವಯಂ ಗೋವೃತ್ತಯೋಽನಿಶಮ್
॥ ೨೧ ॥

ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯಂತಹೇತವಃ ।
ರಜಸೋತ್ಪದ್ಯತೇ ವಿಶ್ವಮನ್ಯೋನ್ಯಂ ವಿವಿಧಂ ಜಗತ್
॥ ೨೨ ॥

ರಜಸಾ ಚೋದಿತಾ ಮೇಘಾ ವರ್ಷಂತ್ಯಂಬೂನಿ ಸರ್ವತಃ ।
ಪ್ರಜಾಸ್ತೈರೇವ ಸಿದ್ಧ್ಯಂತಿ ಮಹೇಂದ್ರಃ ಕಿಂ ಕರಿಷ್ಯತಿ
॥ ೨೩ ॥

ನ ನಃ ಪುರೋ ಜನಪದಾ ನ ಗ್ರಾಮಾ ನ ಗೃಹಾ ವಯಮ್ ।
ನಿತ್ಯಂ ವನೌಕಸಸ್ತಾತ ವನಶೈಲನಿವಾಸಿನಃ
॥ ೨೪ ॥

ತಸ್ಮಾದ್ಗವಾಂ ಬ್ರಾಹ್ಮಣಾನಾಮದ್ರೇಶ್ಚಾರಭ್ಯತಾಂ ಮಖಿಃ ।
ಯ ಇಂದ್ರಯಾಗಸಂಭಾರಾಸ್ತೈರಯಂ ಸಾಧ್ಯತಾಂ ಮಖಿಃ
॥ ೨೫ ॥

ಪಚ್ಯಂತಾಂ ವಿವಿಧಾಃ ಪಾಕಾಃ ಸೂಪಾಂತಾಃ ಪಾಯಸಾದಯಃ ।
ಸಂಯಾವಾಪೂಪಶಷ್ಕುಲ್ಯಃ ಸರ್ವದೋಹಶ್ಚ ಗೃಹ್ಯತಾಮ್
॥ ೨೬ ॥

ಮನುಷ್ಯರೆಲ್ಲರೂ ತಮ್ಮ ಸ್ವಭಾವಕ್ಕೆ (ಹಿಂದಿನ ಸಂಸ್ಕಾರಕ್ಕೆ) ಅಧೀನರಾಗಿದ್ದಾರೆ. ಅವರು ಅದನ್ನೇ ಅನುಸರಿಸುತ್ತಾರೆ. ಇಷ್ಟೇ ಅಲ್ಲ ದೇವತೆಗಳು, ಅಸುರರು, ಮನುಷ್ಯರು -ಇವರಿಂದ ಕೂಡಿದ ಈ ಜಗತ್ತೆಲ್ಲವೂ ಸ್ವಭಾವದಲ್ಲೇ ನೆಲೆನಿಂತಿದೆ. ॥ ೧೬ ॥ ಜೀವನು ತನ್ನ ಕರ್ಮಕ್ಕೆ ಅನುಸಾರವೇ ಉತ್ತಮ ಅಥವಾ ಅಧಮ ಶರೀರಗಳನ್ನು ಪಡೆಯುತ್ತಾನೆ ಹಾಗೂ ತೊರೆಯುತ್ತಾರೆ. ತನ್ನ ಕರ್ಮಕ್ಕನುಸಾರವೇ ಇವನು ಶತ್ರು, ಇವನು ಮಿತ್ರ, ಇವನು ಉದಾಸೀನ ಎಂದು ವ್ಯವಹರಿಸುತ್ತಾನೆ. ಕರ್ಮವೇ ಗುರು, ಕರ್ಮವೇ ಈಶ್ವರನು. ॥ ೧೭ ॥ ಅದಕ್ಕಾಗಿ ತಂದೆಯವರೇ ! ಮನುಷ್ಯನು ತನ್ನ ಪೂರ್ವಸಂಸ್ಕಾರಕ್ಕನುಸಾರ ಬಂದಿರುವ ವರ್ಣ ಮತ್ತು ಆಶ್ರಮಕ್ಕೆ ಅನುಕೂಲವಾದ ಧರ್ಮಗಳನ್ನೇ ಪಾಲಿಸುತ್ತಾ ಕರ್ಮವನ್ನೇ ಆದರಿಸಬೇಕು. ಯಾವುದರಿಂದ ಮನುಷ್ಯನ ಜೀವನ ನಿರ್ವಾಹವು ಸುಗಮವಾಗಿ ನಡೆಯುವುದೋ ಅದೇ ಅವನಿಗೆ ಇಷ್ಟದೇವತೆಯಾಗಿರುತ್ತದೆ. ॥ ೧೮ ॥ ತನ್ನ ವಿವಾಹಿತ ಪತಿಯನ್ನು ತೊರೆದು ಜಾರನನ್ನು ಸೇವಿಸುವ ವ್ಯಭಿಚಾರಿಣಿ ಸ್ತ್ರೀಯು ಎಂದಿಗೂ ಶಾಂತಿಯನ್ನು ಪಡೆಯಲಾರಳು. ಹಾಗೆಯೇ ತನ್ನ ಜೀವನ ನಿರ್ವಾಹ ನಡೆಸುವ ಒಂದು ದೇವತೆಯನ್ನು ಬಿಟ್ಟು ಬೇರೆ ದೇವತೆಯನ್ನು ಉಪಾಸಿಸುವ ಮನುಷ್ಯನಿಗೆ ಎಂದಿಗೂ ಸುಖವಿಲ್ಲ ಸಿಗಲಾರದು. ॥ ೧೯ ॥ ಬ್ರಾಹ್ಮಣನು ಅಧ್ಯಯನ-ಅಧ್ಯಾಪನದಿಂದ, ಕ್ಷತ್ರಿಯನು ಪ್ರಜಾಪಾಲನೆಯಿಂದ, ವೈಶ್ಯನು ವಾರ್ತೆಯಿಂದ ಮತ್ತು ಶೂದ್ರನು ತ್ರಿವರ್ಣದವರ ಸೇವೆಯಿಂದ ಜೀವನವನ್ನು ನಿರ್ವಹಿಸಬೇಕು. ॥ ೨೦ ॥ ವೈಶ್ಯರ ವಾರ್ತೆಯು - ಕೃಷಿ, ವಾಣಿಜ್ಯ, ಗೋರಕ್ಷಣೆ ಮತ್ತು ಬಡ್ಡಿ ಪಡೆಯುವುದು ಎಂಬ ನಾಲ್ಕು ವಿಧವಾಗಿದೆ. ನಾವುಗಳು ಆ ನಾಲ್ಕರಲ್ಲಿ ಕೇವಲ ಗೋರಕ್ಷಣೆಯನ್ನೇ ಹಿಂದಿನಿಂದಲೂ ಮಾಡುತ್ತಾ ಬಂದಿರುವೆವು ॥ ೨೧ ॥ ಅಪ್ಪಾ ! ಈ ಪ್ರಪಂಚದ ಸ್ಥಿತಿ-ಉತ್ಪತ್ತಿ-ಲಯಗಳು ಕ್ರಮವಾಗಿ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳಿಂದ ಆಗುತ್ತವೆ. ವಿವಿಧ ರೀತಿಯ ಈ ಜಗತ್ತು ಸ್ತ್ರೀ-ಪುರುಷರ ಸಂಯೋಗದಿಂದ ರಜೋಗುಣದ ಮೂಲಕ ಹುಟ್ಟುತ್ತದೆ. ॥ ೨೨ ॥ ಅದೇ ರಜೋಗುಣದ ಪ್ರೇರಣೆಯಿಂದ ಮೇಘಗಳು ಎಲ್ಲೆಡೆ ನೀರು ಸುರಿಸುತ್ತವೆ. ಅದರಿಂದ ಅನ್ನವೂ ಮತ್ತು ಅನ್ನದಿಂದ ಸಮಸ್ತ ಜೀವರ ಜೀವನ ನಡೆಯುತ್ತದೆ. ಇದರಲ್ಲಿ ಇಂದ್ರನ ಸಂಬಂಧವೇನಿದೆ ? ಅವನೇನು ಮಾಡಬಲ್ಲನು ? ॥ ೨೩ ॥ ತಂದೆಯವರೇ ! ನಮ್ಮ ಅಧೀನದಲ್ಲಿ ಯಾವುದೇ ರಾಜ್ಯ ವಾಗಲೀ, ಪಟ್ಟಣವಾಗಲೀ, ಊರಾಗಲೀ, ಹಳ್ಳಿಯಾಗಲೀ ಇರುವುದಿಲ್ಲ. ನಮಗೆ ಮನೆ-ಮತಗಳೂ ಇಲ್ಲ. ನಾವಾದರೋ ವನವಾಸಿಗಳು. ವನ ಮತ್ತು ಪರ್ವತವೇ ನಮ್ಮ ಮನೆಯಾಗಿದೆ.॥ ೨೪ ॥ ಅದುದರಿಂದ ನಾವುಗಳು ಗೋವುಗಳ, ಬ್ರಾಹ್ಮಣರ ಮತ್ತು ಗಿರಿರಾಜನಾದ ಗೋವರ್ಧನದ ಕುರಿತು ಯಜ್ಞವನ್ನು ಪ್ರಾರಂಭಿಸೋಣ. ಇಂದ್ರಯಜ್ಞಕ್ಕಾಗಿ ಸಂಗ್ರಹಿಸಿದ ಸಾಮಗ್ರಿಗಳಿಂದಲೇ ಈ ಯಜ್ಞಾನುಷ್ಠಾನ ನಡೆಯಲಿ. ॥ ೨೫ ॥ ಈ ಯಜ್ಞಕ್ಕಾಗಿ ಅನೇಕ ಪ್ರಕಾರದ ಪಕ್ವಾನ್ನಗಳೂ, ಪಾಯಸ, ಕಜ್ಜಾಯಗಳೂ, ಚಕ್ಕುಲಿಗಳೂ ಮೊದಲ್ಗೊಂಡು ತೊವ್ವೆಯವರೆಗಿನ ಬಗೆ-ಬಗೆಯ ಅಡಿಗೆಗಳನ್ನು ಸಿದ್ಧಪಡಿಸಿರಿ. ಇಂದು ಕರೆದ ಹಸುಗಳ ಎಲ್ಲ ಹಾಲನ್ನು ಕೂಡಿಹಾಕಿರಿ. ॥ ೨೬ ॥

ಹೂಯಂತಾಮಗ್ನಯಃ ಸಮ್ಯಗ್ಬ್ರಾಹ್ಮಣೈರ್ಬ್ರಹ್ಮವಾದಿಭಿಃ ।
ಅನ್ನಂ ಬಹುವಿಧಂ ತೇಭ್ಯೋ ದೇಯಂ ವೋ ಧೇನುದಕ್ಷಿಣಾಃ
॥ ೨೭ ॥

ಅನ್ಯೇಭ್ಯಶ್ಚಾಶ್ವಚಾಂಡಾಲಪತಿತೇಭ್ಯೋ ಯಥಾರ್ಹತಃ ।
ಯವಸಂ ಚ ಗವಾಂ ದತ್ತ್ವಾ ಗಿರಯೇ ದೀಯತಾಂ ಬಲಿಃ
॥ ೨೮ ॥

ಸ್ವಲಂಕೃತಾ ಭುಕ್ತವಂತಃ ಸ್ವನುಲಿಪ್ತಾಃ ಸುವಾಸಸಃ ।
ಪ್ರದಕ್ಷಿಣಂ ಚ ಕುರುತ ಗೋವಿಪ್ರಾನಲಪರ್ವತಾನ್
॥ ೨೯ ॥

ಏತನ್ಮಮ ಮತಂ ತಾತ ಕ್ರಿಯತಾಂ ಯದಿ ರೋಚತೇ ।
ಅಯಂ ಗೋಬ್ರಾಹ್ಮಣಾದ್ರೀಣಾಂ ಮಹ್ಯಂ ಚ ದಯಿತೋ ಮಖಃ
॥ ೩೦ ॥

ಶ್ರೀಶುಕ ಉವಾಚ

ಕಾಲಾತ್ಮನಾ ಭಗವತಾ ಶಕ್ರದರ್ಪಂ ಜಿಘಾಂಸತಾ ।
ಪ್ರೋಕ್ತಂ ನಿಶಮ್ಯ ನಂದಾದ್ಯಾಃ ಸಾಧ್ವಗೃಹ್ಣಂತ ತದ್ಬಚಃ
॥ ೩೧ ॥

ತಥಾ ಚ ವ್ಯದಧುಃ ಸರ್ವಂ ಯಥಾऽऽಹ ಮಧುಸೂದನಃ ।
ವಾಚಯಿತ್ವಾ ಸ್ವಸ್ತ್ಯಯನಂ ತದ್ದ್ರವ್ಯೇಣ ಗಿರಿದ್ವಿಜಾನ್
॥ ೩೨ ॥

ಉಪಹೃತ್ಯ ಬಲೀನ್ ಸರ್ವಾನಾದೃತಾ ಯವಸಂ ಗವಾಮ್ ।
ಗೋಧನಾನಿ ಪುರಸ್ಕೃತ್ಯ ಗಿರಿಂ ಚಕ್ರುಃ ಪ್ರದಕ್ಷಿಣಮ್
॥ ೩೩ ॥

ಅನಾಂಸ್ಯನಡುದ್ಯುಕ್ತಾನಿ ತೇ ಚಾರುಹ್ಯ ಸ್ವಲಂಕೃತಾಃ ।
ಗೋಪ್ಯಶ್ಚ ಕೃಷ್ಣವೀರ್ಯಾಣಿ ಗಾಯಂತ್ಯಃ ಸದ್ವಿಜಾಶಿಷಃ
॥ ೩೪ ॥

ಕೃಷ್ಣಸ್ತ್ವನ್ಯತಮಂ ರೂಪಂ ಗೋಪವಿಶ್ರಂಭಣಂ ಗತಃ ।
ಶೈಲೋऽಸ್ಮೀತಿಬ್ರುವನ್ ಭೂರಿ ಬಲಿಮಾದದ್ಬೃಹದ್ವಪುಃ
॥ ೩೫ ॥

ತಸ್ಮೈ ನಮೋ ವ್ರಜಜನೈಃ ಸಹ ಚಕ್ರೇऽऽತ್ಮನಾऽऽತ್ಮನೇ ।
ಅಹೋ ಪಶ್ಯತ ಶೈಲೋऽಸೌ ರೂಪೀ ನೋऽನುಗ್ರಹಂ ವ್ಯಧಾತ್
॥ ೩೬ ॥

ಏಷೋऽವಜಾನತೋ ಮರ್ತ್ಯಾನ್ಕಾಮರೂಪೀ ವನೌಕಸಃ ।
ಹಂತಿ ಹ್ಯಸ್ಮೈ ನಮಸ್ಯಾಮಃ ಶರ್ಮಣೇ ಆತ್ಮನೋ ಗವಾಮ್
॥ ೩೭ ॥

ಬ್ರಹ್ಮವಾದಿಗಳಾದ ಬ್ರಾಹ್ಮಣರು ಅಗ್ನಿಯಲ್ಲಿ ಚೆನ್ನಾಗಿ ಹವನ ಮಾಡಲಿ. ಅವರಿಗೆ ಅನೇಕ ವಿಧದ ಭಕ್ಷ್ಯಗಳಿಂದ ಕೂಡಿದ ಊಟ ಮಾಡಿಸಿ, ಗೋವುಗಳನ್ನೂ ದಕ್ಷಿಣೆಯನ್ನೂ ದಾನ ಮಾಡಿರಿ.॥೨೭॥ ಬಳಿಕ ಇತರ ವರ್ಣದವರಿಗೂ, ಶುನಕ-ಚಾಂಡಾಲ ಪತಿತರಿಗೂ ಯಥಾಯೋಗ್ಯವಾಗಿ ಭೋಜನವನ್ನು ಮಾಡಿಸಿ, ಗೋವುಗಳಿಗೆ ಹುಲ್ಲು ತಿನ್ನಿಸಿ, ಗೋವರ್ಧನ ಗಿರಿಯನ್ನು ಪೂಜಿಸಿರಿ. ॥ ೨೮ ॥ ಬಳಿಕ ನೀವು ಭೋಜನವನ್ನು ಮಾಡಿ, ಹೊಸಬಟ್ಟೆಗಳನ್ನು ಧರಿಸಿ, ಗಂಧವನ್ನು ಪೂಸಿಕೊಂಡು ಅಲಂಕೃತರಾಗಿ ಅಗ್ನಿಗೆ, ಗೋವುಗಳಿಗೆ, ಬ್ರಾಹ್ಮಣರಿಗೆ, ಪರ್ವತರಾಜನಿಗೂ ಪ್ರದಕ್ಷಿಣೆ ಮಾಡಿರಿ. ॥ ೨೯ ॥ ಅಪ್ಪಾ! ಇದು ನಿಮಗೆಲ್ಲರಿಗೆ ಉಚಿತವೆನಿಸಿದಲ್ಲಿ ನಾನು ಹೇಳಿದಂತೆ ಮಾಡಬಹುದು. ಈ ಯಜ್ಞವು ಗೋ-ಬ್ರಾಹ್ಮಣ-ಗಿರಿರಾಜನಾದ ಗೋವರ್ಧನನಿಗೆ ಪ್ರಿಯವಾಗಿದೆ. ನನಗೂ ಈ ಯಜ್ಞವೇ ಅತ್ಯಂತ ಪ್ರಿಯವಾಗಿದೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕಾಲಾತ್ಮಕನಾದ ಭಗವಂತನಿಗೆ ಇಂದ್ರನ ಅಹಂಕಾರ ಮುರಿಯುವುದೇ ಆಶಯವಾಗಿತ್ತು. ನಂದಗೋಪನೇ ಮೊದಲಾದವರು, ಅವನ ಮಾತನ್ನು ಕೇಳಿ ಸಾಧು! ಸಾಧು! ಬಹಳ ಒಳ್ಳೆಯದೆಂದು ಹೇಳುತ್ತಾ ಸಂತೋಷದಿಂದ ಅಂಗೀಕರಿಸಿದರು. ॥ ೩೧ ॥ ಭಗವಾನ್ ಶ್ರೀಕೃಷ್ಣನು ಹೇಳಿದಂತೆಯೆ ಯಜ್ಞವನ್ನು ಪ್ರಾರಂಭಿಸಿದರು. ಮೊದಲಿಗೆ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ, ಅವರಿಂದ ಹೋಮ ಹವನಾದಿಗಳನ್ನು ಮಾಡಿಸಿ ಅವರಿಗೆ ಭೂರಿದಕ್ಷಿಣೆಯನ್ನಿತ್ತರು. ಗಿರಿರಾಜನನ್ನು ಅನೇಕ ವಿಧದಿಂದ ಪೂಜಿಸಿದರು. ಗೋವುಗಳಿಗೆ ಹುಲ್ಲನ್ನು ತಿನ್ನಿಸಿದ ಬಳಿದ ನಂದಗೋಪನೇ ಮೊದಲಾದ ಗೋಪರು ಗೋವುಗಳನ್ನು ಮುಂದಿಟ್ಟುಕೊಂಡು ಗಿರಿರಾಜನ ಪ್ರದಕ್ಷಿಣೆ ಮಾಡಿದರು. ॥ ೩೨-೩೩ ॥ ಬ್ರಾಹ್ಮಣರ ಆಶೀರ್ವಾದಗಳನ್ನು ಪಡೆದು ಗೋಪ-ಗೋಪಿಯರು ಚೆನ್ನಾಗಿ ಸಿಂಗರಿಸಿಕೊಂಡು ಎತ್ತುಗಳು ಹೂಡಿದ ಬಂಡಿಗಳಲ್ಲಿ ಕುಳಿತುಕೊಂಡು ಭಗವಾನ್ ಶ್ರೀಕೃಷ್ಣನ ಲೀಲೆಗಳನ್ನು ಹಾಡುತ್ತಾ ಗೋವರ್ಧನ ಗಿರಿಯ ಪ್ರದಕ್ಷಿಣೆ ಮಾಡತೊಡಗಿದರು. ॥ ೩೪ ॥ ಶ್ರೀಕೃಷ್ಣನು ಗೋಪಾಲಕರಿಗೆ ವಿಶ್ವಾಸವನ್ನುಂಟುಮಾಡಲಿಕ್ಕಾಗಿ ಗೋವರ್ಧನ ಗಿರಿಯಮೇಲೆ ಇನ್ನೊಂದು ವಿಶಾಲದೇಹವನ್ನು ಧರಿಸಿ ಪ್ರಕಟನಾದನು. 'ನಾನು ಗಿರಿರಾಜನಾಗಿರುವೆ' ಹೀಗೆ ಹೇಳುತ್ತಾ ಅವರು ಅರ್ಪಿಸಿದ ಪೂಜೆಯನ್ನು ಸ್ವೀಕರಿಸಿ, ಭಕ್ಷ್ಯ ಭೋಜ್ಯಗಳನ್ನು ಸಾಕ್ಷಾತ್ತಾಗಿ ಭುಂಜಿಸಿದನು. ॥ ೩೫ ॥ ಭಗವಾನ್ ಶ್ರೀಕೃಷ್ಣನು ತನ್ನದೇ ಆದ ಆ ಸ್ವರೂಪಕ್ಕೆ ಇತರ ವ್ರಜವಾಸಿಗಳೊಂದಿಗೆ ನಮಸ್ಕರಿಸಿದನು ಮತ್ತು ಹೇಳಿದನು – 'ನೋಡಿ, ನೋಡಿ! ಎಂತಹ ಆಚ್ಚರಿಯಾಗಿದೆ! ಗಿರಿರಾಜನೆ ಸಾಕ್ಷಾತ್ತಾಗಿ ಪ್ರಕಟನಾಗಿ ನಮ್ಮ ಮೇಲೆ ಕೃಪೆಯನ್ನು ತೋರಿರುವನು. ॥ ೩೬ ॥ ಬಂಧುಗಳೇ! ಈ ಪರ್ವತವು ಯಾವುದೇ ರೂಪವನ್ನು ಧರಿಸಬಲ್ಲದು. ಇದನ್ನು ತಿರಸ್ಕರಿಸುವ ವನವಾಸಿಗಳನ್ನು ಈ ಪರ್ವವು ಕೊಂದೇಬಿಡುತ್ತದೆ. ಬನ್ನಿರಿ, ನಮ್ಮ ಮತ್ತು ಗೋವುಗಳ ಕ್ಷೇಮಕ್ಕಾಗಿ ಈ ಗಿರಿರಾಜನಿಗೆ ನಮಸ್ಕರಿಸೋಣ.' ॥ ೩೭ ॥

ಇತ್ಯದ್ರಿಗೋದ್ವಿಜಮಖಂ ವಾಸುದೇವಪ್ರಣೋದಿತಾಃ ।
ಯಥಾ ವಿಧಾಯ ತೇ ಗೋಪಾಃ ಸಹಕೃಷ್ಣಾವ್ರಜಂ ಯಯುಃ
॥ ೩೮ ॥

ಹೀಗೆ ಭಗವಾನ್ ಶ್ರೀಕೃಷ್ಣನ ಪ್ರೇರಣೆಯಿಂದ ನಂದಗೋಪನೇ ಮೊದಲಾದ ಹಿರಿಯ-ಕಿರಿಯ ಗೋಪಾಲಕರು ಗಿರಿರಾಜನನ್ನು, ಗೋವುಗಳನ್ನು, ಬ್ರಾಹ್ಮಣರನ್ನು ವಿಧಿಮತ್ತಾಗಿ ಪೂಜಿಸಿ ಮತ್ತೆ ಶ್ರೀಕೃಷ್ಣನೊಂದಿಗೆ ಎಲ್ಲರೂ ವ್ರಜಕ್ಕೆ ಮರಳಿ ಬಂದರು. ॥ ೩೮ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಚತುರ್ವಿಂಶೋಽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ಶ್ರೀಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿದುದು

ಶ್ರೀಶುಕ ಉವಾಚ

ಇಂದ್ರಸ್ತದಾऽऽತ್ಮನಃ ಪೂಜಾಂ ವಿಜ್ಞಾಯ ವಿಹತಾಂ ನೃಪ ।
ಗೋಪೇಭ್ಯಃ ಕೃಷ್ಣನಾಥೇಭ್ಯೋ ನಂದಾದಿಭ್ಯಶ್ಚುಕೋಪ ಸಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಗೊಲ್ಲರು ತನ್ನ ಪೂಜೆಯನ್ನು ನಿಲ್ಲಿಸಿಬಿಟ್ಟರೆಂಬುದನ್ನು ತಿಳಿದ ಇಂದ್ರನು ಶ್ರೀಕೃಷ್ಣನನ್ನೇ ರಕ್ಷಕನನ್ನಾಗಿ ಹೊಂದಿದ್ದ ನಂದಗೋಪನೇ ಮೊದಲಾದ ಗೋಪಾಲಕರ ಮೇಲೆ ಅತ್ಯಂತ ಕ್ರೋಧಗೊಂಡನು. ॥ ೧ ॥ ತಾನು ಮೂರು ಲೋಕಗಳಿಗೂ ಒಡೆಯನಾಗಿ ಇರುವೆನೆಂಬ ಅಹಂಕಾರವು ಆತನಲ್ಲಿ ಬಹಳವಾಗಿತ್ತು. ಈ ಕಾರಣದಿಂದ ಅವನು ಸಿಟ್ಟಿನಿಂದ ಉರಿದೆದ್ದು ಪ್ರಳಯವನ್ನುಂಟುಮಾಡುವ ಸಂವರ್ತಕಗಳೆಂಬ ಮೇಘಗಳನ್ನು ಕರೆದು ವ್ರಜದ ಮೇಲೆ ಆಕ್ರಮಣ ಮಾಡಿರೆಂದು ಆಜ್ಞೆ ಕೊಡುತ್ತಾ, ಇಂತೆಂದನು - ॥ ೨ ॥ ಕಾಡು ಮನುಷ್ಯರಾದ ಈ ಗೊಲ್ಲರು ಧನಮದದಿಂದ ಎಷ್ಟೊಂದು ಉದ್ದಟರಾಗಿದ್ದಾರೆ. ಸಾಮಾನ್ಯ ಮನುಷ್ಯನಾದ ಶ್ರೀಕೃಷ್ಣನನ್ನು ಅವಲಂಬಿಸಿರುವ ಇವರು ದೇವರಾಜನಾದ ನನ್ನನ್ನೇ ಅವಮಾನಿಸುತ್ತಿದ್ದಾರಲ್ಲಾ! ॥ ೩ ॥ ಆಧ್ಯಾತ್ಮವಿದ್ಯೆಯನ್ನು ಬಿಟ್ಟಿರುವ ಅನೇಕ ಮಂದಬುದ್ಧಿಯ ಜನರು ಶಿಥಿಲವಾದ ಕರ್ಮಮಯವಾದ ನಾಮಮಾತ್ರಕ್ಕೆ ನಾವೆಗಳಂತೆ ತೋರುವ ಯಜ್ಞಗಳಿಂದ ಭವಸಾಗರವನ್ನು ದಾಟಲು ಇಚ್ಛಿಸುವಂತೆ, ಇವರು ಸರ್ವಸಂಪತ್ಸಮೃದ್ಧಿಯನ್ನು ಕೊಡುವ ಇಂದ್ರನ ಯಾಗವನ್ನು ಬಿಟ್ಟು ಗೋ-ಗೋವರ್ಧನಗಳ ಪೂಜೆಯನ್ನು ಆರಂಭಿಸಿದ್ದಾರಲ್ಲ! ॥ ೪ ॥ ಬಾಯಿಬಡಕನಾದ, ಮೂರ್ಖನಾದ, ಸ್ತಬ್ಧನಾದ, ಅಜ್ಞನಾದ ಮತ್ತು ತನ್ನನ್ನು ಮಹಾಪಂಡಿತನೆಂದು ಭಾವಿಸಿಕೊಂಡಿರುವ ಮನುಷ್ಯಮಾತ್ರನಾದ ಕೃಷ್ಣನನ್ನು ಆಶ್ರಯಿಸಿ ಈ ಮೂರ್ಖ ಗೋಪಾಲಕರು ನನಗೆ ಬಹಳ ಅಪ್ರಿಯವಾದ ಕಾರ್ಯವನ್ನು ಮಾಡಿಬಿಟ್ಟರು. ॥ ೫ ॥ ಮೊದಲೇ ಇವರು ಧನಮದದಿಂದ ಉನ್ಮತ್ತರಾಗಿದ್ದರು. ಈಗ ಕೃಷ್ಣನೂ ಇವರನ್ನು ಪ್ರೋತ್ಸಾಹಿಸಿದನು. ಈಗ ನೀವು ಹೋಗಿ ಇವರ ಧನಮದವನ್ನು, ಉದ್ಧಟತನವನ್ನು ವಿನಾಶಗೊಳಿಸಿರಿ. ಅವರ ಗೋಸಂಪತ್ತನ್ನು ಧ್ವಂಸಮಾಡಿಬಿಡಿ. ॥ ೬ ॥

ಗಣಂ ಸಾಂವರ್ತಕಂ ನಾಮ ಮೇಘಾನಾಂ ಚಾಂತಕಾರಿಣಾಮ್ ।
ಇಂದ್ರಃ ಪ್ರಾಚೋದಯತ್ಕ್ರುದ್ಧೋ ವಾಕ್ಯಂ ಚಾಹೇಶಮಾನ್ಯುತ
॥ ೨ ॥

ಅಹೋ ಶ್ರೀಮದಮಾಹಾತ್ಮ್ಯಂ ಗೋಪಾನಾಂ ಕಾನನೌಕಸಾಮ್ ।
ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಯೇ ಚಕ್ರುರ್ದೇವಹೇಲನಮ್
॥ ೩ ॥

ಯಥಾದೃಢೈಃ ಕರ್ಮಮಯೈಃ ಕ್ರತುಭಿರ್ನಾಮನೌನಿಭೈಃ ।
ವಿದ್ಯಾಮಾನ್ವೀಕ್ಷಿಕೀಂ ಹಿತ್ವಾತಿತೀರ್ಷಂತಿ ಭವಾರ್ಣವಮ್
॥ ೪ ॥

ವಾಚಾಲಂ ಬಾಲಿಶಂ ಸ್ತಬ್ಧಮಜ್ಞಂ ಪಂಡಿತಮಾನಿನಮ್ ।
ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಗೋಪಾ ಮೇ ಚಕ್ರುರಪ್ರಿಯಮ್
॥ ೫ ॥

ಏಷಾಂ ಶ್ರಿಯಾವಲಿಪ್ತಾನಾಂ ಕೃಷ್ಣೇನಾಧ್ಮಾಯಿತಾತ್ಮನಾಮ್ ।
ಧುನುತ ಶ್ರೀಮದಸ್ತಂಭಂ ಪಶೂನ್ನಯತ ಸಂಕ್ಷಯಮ್
॥ ೬ ॥

ಅಹಂ ಚೈರಾವತಂ ನಾಗಮಾರುಹ್ಯಾನುವ್ರಜೇ ವ್ರಜಮ್ ।
ಮರುದ್ಗಣೈರ್ಮಹಾವೀರ್ಯೈರ್ನಂದಗೋಷ್ಠಜಿಘಾಂಸಯಾ
॥ ೭ ॥

ಶ್ರೀಶುಕ ಉವಾಚ

ಇತ್ಥಂ ಮಘವತಾऽऽಜ್ಞಪ್ತಾ ಮೇಘಾ ನಿರ್ಮುಕ್ತಬಂಧನಾಃ ।
ನಂದಗೋಕುಲಮಾಸಾರೈಃ ಪೀಡಯಾಮಾಸುರೋಜಸಾ
॥ ೮ ॥

ವಿದ್ಯೋತಮಾನಾ ವಿದ್ಯುದ್ಭಿಃ ಸ್ತನಂತಃ ಸ್ತನಯಿತ್ನುಭಿಃ ।
ತೀವ್ರೈರ್ಮರುದ್ಗಣೈರ್ನುನ್ನಾ ವವೃಷುರ್ಜಲಶರ್ಕರಾಃ
॥ ೯ ॥

ಸ್ಥೂಣಾಸ್ಥೂಲಾ ವರ್ಷಧಾರಾ ಮುಂಚತ್ಸ್ವಭ್ರೇಷ್ವಭೀಕ್ಷ್ಣಶಃ ।
ಜಲೌಘೈಃ ಪ್ಲಾವ್ಯಮಾನಾ ಭೂರ್ನಾದೃಶ್ಯತ ನತೋನ್ನತಮ್
॥ ೧೦ ॥

ಅತ್ಯಾಸಾರಾತಿವಾತೇನ ಪಶವೋ ಜಾತವೇಪನಾಃ ।
ಗೋಪಾ ಗೋಪ್ಯಶ್ಚ ಶೀತಾರ್ತಾ ಗೋವಿಂದಂ ಶರಣಂ ಯಯುಃ
॥ ೧೧ ॥

ಶಿರಃ ಸುತಾಂಶ್ಚ ಕಾಯೇನ ಪ್ರಾಚ್ಛಾದ್ಯಾಸಾರಪೀಡಿತಾಃ ।
ವೇಪಮಾನಾ ಭಗವತಃ ಪಾದಮೂಲಮುಪಾಯಯುಃ
॥ ೧೨ ॥

ಕೃಷ್ಣ ಕೃಷ್ಣ ಮಹಾಭಾಗ ತ್ವನ್ನಾಥಂ ಗೋಕುಲಂ ಪ್ರಭೋ ।
ತ್ರಾತುಮರ್ಹಸಿ ದೇವಾನ್ನಃ ಕುಪಿತಾದ್ಭಕ್ತವತ್ಸಲ
॥ ೧೩ ॥

ಶಿಲಾವರ್ಷನಿಪಾತೇನ ಹನ್ಯಮಾನಮಚೇತನಮ್ ।
ನಿರೀಕ್ಷ್ಯ ಭಗವಾನ್ಮೇನೇ ಕುಪಿತೇಂದ್ರಕೃತಂ ಹರಿಃ
॥ ೧೪ ॥

ಅಪರ್ತ್ವತ್ಯುಲ್ಬಣಂ ವರ್ಷಮತಿವಾತಂ ಶಿಲಾಮಯಮ್ ।
ಸ್ವಯೋಗೇ ವಿಹತೇऽಸ್ಮಾಭಿರಿಂದ್ರೋ ನಾಶಾಯ ವರ್ಷತಿ
॥ ೧೫ ॥

ತತ್ರ ಪ್ರತಿವಿಧಿಂ ಸಮ್ಯಗಾತ್ಮಯೋಗೇನ ಸಾಧಯೇ ।
ಲೋಕೇಶಮಾನಿನಾಂ ಮೌಢ್ಯಾದ್ಧರಿಷ್ಯೇ ಶ್ರೀಮದಂ ತಮಃ
॥ ೧೬ ॥

ನ ಹಿ ಸದ್ಭಾವಯುಕ್ತಾನಾಂ ಸುರಾಣಾಮೀಶವಿಸ್ಮಯಃ ।
ಮತ್ತೋऽಸತಾಂ ಮಾನಭಂಗಃ ಪ್ರಶಮಾಯೋಪಕಲ್ಪತೇ
॥ ೧೭ ॥

ಸಾಂವರ್ತಕ ಮೇಘಗಳೇ! ನಾನೂ ಕೂಡ ನಿಮ್ಮ ಹಿಂದೆಯೆ ಐರಾವತನ್ನೇರಿ ನಂದನ ಹಳ್ಳಿಯನ್ನು ವಿನಾಶಗೊಳಿಸಲಿಕ್ಕಾಗಿ ಮಹಾಪರಾಕ್ರಮಿ ಮರುದ್ಗಣಗಳೊಂದಿಗೆ ಬರುತ್ತೇನೆ. ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಹೀಗೆ ಇಂದ್ರನು ಪ್ರಳಯಕಾಲದ ಮೇಘಗಳಿಗೆ ಆಜ್ಞೆಯನ್ನಿತ್ತು ಅವುಗಳ ಬಂಧನವನ್ನು ಬಿಚ್ಚಿ ಕಳಿಸಿದನು. ಅವುಗಳು ಅತ್ಯಂತ ವೇಗದಿಂದ ನಂದಗೋಕುಲಕ್ಕೆ ಧಾವಿಸಿ ಒನಕೆಯಷ್ಟು ದಪ್ಪವಾಗಿ ಮಳೆಗರೆದು ವ್ರಜವಾಸಿಗಳನ್ನು ಪೀಡಿಸತೊಡಗಿದವು. ॥ ೮ ॥ ನಾಲ್ಕೂ ದಿಕ್ಕುಗಳು ಮಿಂಚಿನಿಂದ ಪ್ರಕಾಶಿಸಿದುವು. ಮೇಘಗಳು ಪರಸ್ಪರ ಅಪ್ಪಳಿಸುತ್ತಾ ಗುಡುಗಿದವು. ಪ್ರಚಂಡವಾದ ಬಿರುಗಾಳಿಯು ಬೀಸತೊಡಗಿ ದೊಡ್ಡ-ದೊಡ್ಡ ಆಲಿಕಲ್ಲಿನ ಮಳೆ ಸುರಿಯತೊಡಗಿತು. ॥ ೯ ॥ ಹೀಗೆ ಮೇಘಗಳು ಕಂಬುಗಾತ್ರದ ಜಲಧಾರೆಗಳಿಂದ ಕ್ಷಣ-ಕ್ಷಣಕ್ಕೂ ಮಳೆಯನ್ನು ಸುರಿಸಲು ಅಗಾಧವಾದ ನೀರಿನ ಪ್ರವಾಹದಿಂದ ವ್ರಜಭೂಮಿಯ ಹಳ್ಳ-ತಿಟ್ಟುಗಳೆಲ್ಲ ಮುಳುಗಿ ಕಾಣದಂತಾದುವು. ॥ ೧೦ ॥ ಹೀಗೆ ನಿರಂತರವಾಗಿ ಸುರಿಯುತ್ತಿದ್ದ ಜಲಧಾರೆಗೆ ಸಿಕ್ಕಿ ಹಸು-ಕರುಗಳು ನಡುಗತೊಡಗಿದವು. ಗೋಪ-ಗೋಪಿಯರು ಮಳೆಯಿಂದ ತೊಯ್ದು ಹೋಗಿ ಶೀತದಿಂದ ಪೀಡಿತರಾಗಿ, ಅನನ್ಯಗತಿಕರಾದ ಅವರು ಗೋವಿಂದನನ್ನೇ ಶರಣು ಹೋದರು. ॥ ೧೧ ॥ ಅತಿವೃಷ್ಟಿಯಿಂದ ಪೀಡಿತರಾದ ಗೋಪ-ಗೋಪಿಯರು ತಮ್ಮ ತಲೆಗಳನ್ನು ಮತ್ತು ಶಿಶುಗಳನ್ನು ಬಗ್ಗಿ ತಮ್ಮ ಮಡಿಲಲ್ಲಿ ಅಡಗಿಸಿಕೊಂಡರು. ಕಡೆಗೆ ಅವರೆಲ್ಲರೂ ರಕ್ಷಣೆಗಾಗಿ ಶ್ರೀಕೃಷ್ಣನ ಪಾದಮೂಲವನ್ನೇ ಆಶ್ರಯಿಸಿದರು. ಮತ್ತು ಪ್ರಾರ್ಥಿಸುತ್ತಾರೆ- ॥ ೧೨ ॥ ಮಹಾಭಾಗ್ಯಶಾಲಿಯೇ! ಶ್ರೀಕೃಷ್ಣ! ಪ್ರಭುವೇ! ಗೋಕುಲಕ್ಕೆ ನೀನೇ ಒಡೆಯನು. ಗೊಲ್ಲರಿಗೆ ನೀನೆ ಪರಮಾಶ್ರಯನು. ಭಕ್ತವತ್ಸಲನೇ! ಕುಪಿತನಾಗಿರುವ ಇಂದ್ರದೇವನಿಂದ ನಮ್ಮನ್ನು ರಕ್ಷಿಸು. ॥ ೧೩ ॥ ಆಲಿಕಲ್ಲುಗಳಿಂದಲೂ ಮತ್ತು ಮಳೆಯಿಂದಲೂ ಹಿಂಸಿಸಲ್ಪಡುತ್ತಿದ್ದ ಗೋವುಗಳನ್ನು, ಗೋಪಾಲಕರನ್ನು ಶ್ರೀಕೃಷ್ಣನು ನೋಡಿದನು. ಕುಪಿತನಾದ ಇಂದ್ರನೇ ಈ ಕಾರ್ಯವನ್ನು ಮಾಡಿರುವನೆಂದು ಭಗವಂತನು ತಿಳಿದುಕೊಂಡನು. ॥ ೧೪ ॥ ಬಳಿಕ ಶ್ರೀಕೃಷ್ಣನು ಮನಸ್ಸಿನಲ್ಲೇ ಹೀಗೆಂದು ಯೋಚಿಸಿದನು – 'ನಾವು ಇಂದ್ರನ ಯಜ್ಞವನ್ನು ನಿಲ್ಲಿಸಿದ್ದರಿಂದ ಮಳೆಗಾಲವಲ್ಲದ ಕಾಲದಲ್ಲಿ ಪ್ರಚಂಡವಾದ ವಾಯುವಿನೊಂದಿಗೆ ಆಲಿಕಲ್ಲುಗಳಿಂದ ಕೂಡಿದ ಘನಘೋರ ಮಳೆಯನ್ನು ಸುರಿಸುತ್ತಿದ್ದಾನೆ. ॥ ೧೫ ॥ ಇರಲಿ, ನಾನು ನನ್ನ ಯೋಗಮಾಯೆಯಿಂದ ಇವನಿಗೆ ಸರಿಯಾಗಿ ಪಾಠಕಲಿಸುತ್ತೇನೆ. ಇವನು ಮೂರ್ಖತೆಯಿಂದ ತನ್ನನ್ನೇ ಲೋಕಪಾಲನೆಂದು ತಿಳಿದಿರುವನು. ಇವನ ಐಶ್ವರ್ಯದ ಮತ್ತು ಧನದ ಸೊಕ್ಕನ್ನೂ, ಅಜ್ಞಾನವನ್ನೂ ತೊಲಗಿಸುತ್ತೇನೆ. ॥ ೧೬ ॥ ದೇವತೆಗಳಾದರೋ ಸತ್ತ್ವಪ್ರಧಾನರಾಗಿರುತ್ತಾರೆ. ಇವರಲ್ಲಿ ತಮ್ಮ ಐಶ್ವರ್ಯ, ಪದವಿಗಳ ಅಹಂಕಾರ ವಿರಬಾರದು. ಆದುದರಿಂದ ಈ ಸತ್ತ್ವಗುಣದಿಂದ ಚ್ಯುತರಾದ ದುಷ್ಟ ದೇವತೆಗಳ ಮಾನಭಂಗ ಮಾಡುತ್ತೇನೆ. ಇದರಿಂದ ಕೊನೆಗೆ ಅವರಿಗೆ ಶಾಂತಿಯೇ ಸಿಗುತ್ತದೆ. ॥ ೧೭ ॥

ತಸ್ಮಾನ್ಮಚ್ಚರಣಂ ಗೋಷ್ಠಂ ಮನ್ನಾಥಂ ಮತ್ಪರಿಗ್ರಹಮ್ ।
ಗೋಪಾಯೇ ಸ್ವಾತ್ಮಯೋಗೇನ ಸೋಽಯಂ ಮೇ ವ್ರತ ಆಹಿತಃ
॥ ೧೮ ॥

ಇತ್ಯುಕ್ತ್ವೈಕೇನ ಹಸ್ತೇನ ಕೃತ್ವಾ ಗೋವರ್ಧನಾಚಲಮ್ ।
ದಧಾರ ಲೀಲಯಾ ಕೃಷ್ಣಶ್ಛತ್ರಾಕಮಿವ ಬಾಲಕಃ
॥ ೧೯ ॥

ಅಥಾಹ ಭಗವಾನ್ ಗೋಪಾನ್ ಹೇಽಂಬ ತಾತ ವ್ರಜೌಕಸಃ ।
ಯಥೋಪಜೋಷಂ ವಿಶತ ಗಿರಿಗರ್ತಂ ಸಗೋಧನಾಃ
॥ ೨೦ ॥

ನ ತ್ರಾಸ ಇಹ ವಃ ಕಾರ್ಯೋ ಮದ್ಧಸ್ತಾದ್ರಿನಿಪಾತನೇ ।
ವಾತವರ್ಷಭಯೇನಾಲಂ ತತ್ತ್ರಾಣಂ ವಿಹಿತಂ ಹಿ ವಃ
॥ ೨೧ ॥

ತಥಾ ನಿರ್ವಿವಿಶುರ್ಗರ್ತಂ ಕೃಷ್ಣಾಶ್ವಾಸಿತಮಾನಸಾಃ ।
ಯಥಾವಕಾಶಂ ಸಧನಾಃ ಸವ್ರಜಾಃ ಸೋಪಜೀವಿನಃ
॥ ೨೨ ॥

ಕುತ್ಸ್ಯೃಡ್ಭ್ಯಥಾಂ ಸುಖಾಪೇಕ್ಷಾಂ ಹಿತ್ವಾ ತೈರ್ವ್ರಜವಾಸಿಭಿಃ ।
ವೀಕ್ಷ್ಯಮಾಣೋ ದಧಾವದ್ರಿಂ ಸಪ್ತಾಹಂ ನಾಚಲತ್ಪದಾತ್
॥ ೨೩ ॥

ಕೃಷ್ಣಯೋಗಾನುಭಾವಂ ತಂ ನಿಶಾಮ್ಯೇಂದ್ರೋಽತಿವಿಸ್ಮಿತಃ ।
ನಿಷ್ತಂಭೋ ಭ್ರಷ್ಟಸಂಕಲ್ಪಃ ಸ್ವಾನ್ಮೇಘಾನ್ ಸಂನ್ಯವಾರಯತ್
॥ ೨೪ ॥

ಖಂ ವ್ಯಭ್ರಮುದಿತಾದಿತ್ಯಂ ವಾತವರ್ಷಂ ಚ ದಾರುಣಮ್ ।
ನಿಶಾಮ್ಯೋಪರತಂ ಗೋಪಾನ್ ಗೋವರ್ಧನಧರೋಽಬ್ರವೀತ್
॥ ೨೫ ॥

ನಿರ್ಯಾತ ತ್ಯಜತ ತ್ರಾಸಂ ಗೋಪಾಃ ಸಸ್ತ್ರೀಧನಾರ್ಭಕಾಃ ।
ಉಪಾರತಂ ವಾತವರ್ಷಂ ವ್ಯುದಪ್ರಾಯಾಶ್ಚ ನಿಮ್ನಗಾಃ
॥ ೨೬ ॥

ತತಸ್ತೇ ನಿರ್ಯಯುರ್ಗೋಪಾಃ ಸ್ವಂ ಸ್ವಮಾದಾಯ ಗೋಧನಮ್ ।
ಶಕಟೋಢೋಪಕರಣಂ ಸ್ತ್ರೀಬಾಲಸ್ಥವಿರಾಃ ತನೈಃ
॥ ೨೭ ॥

ಈ ಇಡೀ ವ್ರಜವೇ ನನಗೆ ಆಶ್ರಿತವಾಗಿದೆ. ನನ್ನನ್ನೇ ಏಕೈಕನಾಥ ನನ್ನಾಗಿ ಭಾವಿಸಿಕೊಂಡಿದ್ದಾರೆ. ನನ್ನಿಂದ ಸ್ವೀಕೃತರಾಗಿದ್ದಾರೆ. ಆದ್ದರಿಂದ ನಾನು ನನ್ನ ಯೋಗಮಾಯೆಯಿಂದ ಇವರನ್ನು ರಕ್ಷಿಸುವೆನು. ಶರಣಾಗತರನ್ನು ರಕ್ಷಿಸುವುದೇ ನನ್ನ ವ್ರತವಾಗಿದೆ. ಈಗ ಅದನ್ನು ಪಾಲಿಸುವ ಅವಕಾಶ ಸನ್ನಿಹಿತವಾಗಿದೆ. ॥ ೧೮ ॥

ಪರೀಕ್ಷಿತನೇ! ಶ್ರೀಕೃಷ್ಣನು ಹೀಗೆ ಭಾವಿಸಿ - ಹುಡುಗರು ನಾಯಿಕೊಡೆಯನ್ನೆತ್ತಿ ಹಿಡಿದುಕೊಳ್ಳುವಂತೆ ಲೀಲಾಜಾಲವಾಗಿ ಗೋವರ್ಧನ ಪರ್ವತವನ್ನು ಒಂದೇ ಕೈಯಿಂದ ಎತ್ತಿ ಹಿಡಿದು ಕೊಂಡನು. ॥ ೧೯ ॥ ಅನಂತರ ಭಗವಂತನು ಗೋಪರಲ್ಲಿ ಹೇಳಿದನು - ಅಪ್ಪ! ಅಮ್ಮ! ವ್ರಜವಾಸಿಗಳೇ! ನೀವೆಲ್ಲರೂ ನಿಮ್ಮ ಗೋವುಗಳೊಂದಿಗೆ ಹಾಗೂ ಸಮಸ್ತ ಸಾಮಗ್ರಿಗಳಿಂದ ಕೂಡಿ ಕೊಂಡು ಈ ಪರ್ವತದ ತಳಭಾಗದಲ್ಲಿ ಬಂದು ನಿಶ್ಚಿಂತರಾಗಿ ಕುಳಿತುಕೊಳ್ಳಿರಿ. ॥ ೨೦ ॥ ಈ ಪರ್ವತವು ನನ್ನ ಕೈಯಿಂದ ಜಾರಿ ಬೀಳಬಹುದೆಂದು ನೀವು ಶಂಕಿಸಬೇಡಿರಿ. ನೀವೆಲ್ಲರೂ ಸ್ವಲ್ಪವೂ ಹೆದರಿಕೊಳ್ಳಬೇಡಿ. ಈ ಬಿರುಗಾಳಿ, ಮಳೆಯ ಭಯದಿಂದ ನಿಮ್ಮನ್ನು ರಕ್ಷಿಸಲಿಕ್ಕಾಗಿಯೇ ನಾನು ಈ ಯುಕ್ತಿಯನ್ನು ಮಾಡಿರುವೆನು. ॥ ೨೧ ॥ ಭಗವಾನ್ ಶ್ರೀಕೃಷ್ಣನು ಹೀಗೆ ಎಲ್ಲರಿಗೆ ಆಶ್ವಾಸನೆಯನ್ನು ಕೊಟ್ಟು ಧೈರ್ಯತುಂಬಿದಾಗ ಗೊಲ್ಲರೆಲ್ಲರೂ ತಮ್ಮ ಗೋಸಂಪತ್ತನ್ನು, ಕರುಗಳನ್ನು, ಆಶ್ರಿತರನ್ನು, ಪುರೋಹಿತರನ್ನು, ಭೃತ್ಯರನ್ನು, ಮಕ್ಕಳು-ಮರಿಗಳೊಂದಿಗೆ ಜೊತೆಯಲ್ಲಿ ಕರೆದು ಕೊಂಡು ಗೋವರ್ಧನ ಪರ್ವತದ ಹಳ್ಳದಲ್ಲಿ ಸೇರಿಕೊಂಡರು. ॥ ೨೨ ॥ ಭಗವಾನ್ ಶ್ರೀಕೃಷ್ಣನನ್ನು ನೋಡುತ್ತಿರುವಂತೆಯೇ ವ್ರಜವಾಸಿಗಳು ಏಳು ದಿವಸಗಳ ಕಾಲ ಹಸಿವು ಬಾಯಾರಿಕೆಗಳನ್ನು, ಸುಖಾಪೇಕ್ಷೆಯನ್ನು ಮರೆತುಬಿಟ್ಟರು. ಶ್ರೀಕೃಷ್ಣನು ಒಂದು ಹೆಜ್ಜೆಯಷ್ಟಾದರೂ ಕದಲದೆ ಗೋವರ್ಧನ ಗಿರಿಯನ್ನೆತ್ತಿಕೊಂಡು ನಿಶ್ಚಲನಾಗಿ ನಿಂತಿದ್ದನು. ॥ ೨೩ ॥ ಶ್ರೀಕೃಷ್ಣನ ಇಂತಹ ಪರಮಾದ್ಭುತವಾದ ಯೋಗಮಾಯೆಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. ಅವನ ಗರ್ವವೂ ಕುಗ್ಗಿತು. ಉದ್ದೇಶವೂ ಈಡೇರಲಿಲ್ಲ. ಬಳಿಕ ಅವನು ತಾನಾಗಿಯೇ ಮೇಘಗಳನ್ನು ಹಿಂದಕ್ಕೆ ಕರೆಸಿಕೊಂಡು ಮಳೆಯನ್ನು ನಿಲ್ಲಿಸಿದನು. ॥ ೨೪ ॥ ಗೋವರ್ಧನ ಧಾರಿಯಾದ ಶ್ರೀಕೃಷ್ಣನು ನೋಡಿದನು - ಭಯಂಕರವಾದ ಬಿರುಗಾಳಿ ಮತ್ತು ಮಳೆಯು ನಿಂತು ಹೋಗಿ ಆಕಾಶವು ಸ್ವಚ್ಛವಾಗಿ ಸೂರ್ಯನು ಪ್ರಕಾಶಿಸುತ್ತಿರುವನು. ಆಗ ಅವನು ಗೋಪಾಲಕರಲ್ಲಿ ಹೇಳಿದನು. ॥ ೨೫ ॥ ಪ್ರಿಯರಾದ ಗೋಪಾಲಕರೇ! ಈಗ ನೀವು ಯಾವುದೇ ಭಯವಿಲ್ಲದೆ ನಿಮ್ಮ-ನಿಮ್ಮ ಗೋವುಗಳೊಡನೆ, ಹೆಂಡಿರು ಮಕ್ಕಳೊಡನೆ, ಹೊರಗೆ ಹೊರಟು ಬನ್ನಿರಿ. ಇದೋ ನೋಡಿರಿ - ಬಿರುಗಾಳಿ, ಮಳೆ ನಿಂತು ಹೋಗಿ ನದಿಗಳ ನೀರೂ ಕೂಡ ಇಳಿಮುಖವಾಗಿದೆ. ॥ ೨೬ ॥ ಭಗವಂತನ ಈ ಆಜ್ಞೆಯನ್ನು ಪಡೆದು ಗೋಪರು ತಮ್ಮ-ತಮ್ಮ ಗೋಧನ, ಪುತ್ರಿ-ಪುತ್ರರೊಂದಿಗೆ, ಮುದುಕರೊಂದಿಗೆ ಜೊತೆಗೆ ಕರಕೊಂಡು, ತಮ್ಮ ಸಾಮಗ್ರಿಯನ್ನು ಗಾಡಿಗಳಲ್ಲಿ ತುಂಬಿಕೊಂಡು ಎಲ್ಲ ಜನರೂ ಹೊರಗೆ ಬಂದರು. ॥ ೨೭ ॥

ಭಗವಾನಪಿ ತಂ ಶೈಲಂ ಸ್ವಸ್ಥಾನೇ ಪೂರ್ವವತ್ಪ್ರಭುಃ ।
ಪಶ್ಯತಾಂ ಸರ್ವಭೂತಾನಾಂ ಸ್ಥಾಪಯಾಮಾಸ ಲೀಲಯಾ
॥ ೨೮ ॥

ತಂ ಪ್ರೇಮವೇಗಾನ್ನಿಭೃತಾ ವ್ರಜೌಕಸೋ
ಯಥಾ ಸಮೀಯುಃ ಪರಿರಂಭಣಾದಿಭಿಃ ।
ಗೋಪ್ಯಶ್ಚ ಸಸ್ನೇಹಮಪೂಜಯನ್ಮುದಾ
ದಧ್ಯಕ್ಷತಾದ್ಬಿರ್ಯ್ಯಯುಜುಃ ಸದಾಶಿಷಃ ॥ ೨೯ ॥

ಯಶೋದಾ ರೋಹಿಣೀ ನಂದೋ ರಾಮಶ್ಚ ಬಲಿನಾಂ ವರಃ ।
ಕೃಷ್ಣಮಾಲಿಂಗ್ಯ ಯುಯುಜುರಾಶಿಷಃ ಸ್ನೇಹಕಾತರಾಃ
॥ ೩೦ ॥

ದಿವಿ ದೇವಗಣಾಃ ಸಾಧ್ಯಾಃ ಸಿದ್ಧಗಂಧರ್ವಚಾರಣಾಃ ।
ತುಷ್ಟುವುರ್ಮುಮುಚುಸ್ತುಷ್ಟಾಃ ಪುಷ್ಪವರ್ಷಾಣಿ ಪಾರ್ಥಿವ
॥ ೩೧ ॥

ಶಂಖದುಂದುಭಯೋ ನೇದುರ್ದಿವಿ ದೇವಪ್ರಣೋದಿತಾಃ ।
ಜಗುರ್ಗಂಧರ್ವಪತಯಸ್ತುಂಬುರುಪ್ರಮುಖಾ ನೃಪ
॥ ೩೨ ॥

ತತೋಽನುರಕ್ತೈಃ ಪಶುಪೈಃ ಪರಿಶ್ರಿತೋ
ರಾಜನ್ಸ ಗೋಷ್ಠಂ ಸಬಲೋಽವ್ರಜದ್ಧರಿಃ ।
ತಥಾವಿಧಾನ್ಯಸ್ಯ ಕೃತಾನಿ ಗೋಪಿಕಾ
ಗಾಯಂತ್ಯ ಈಯುರ್ಮುದಿತಾ ಹೃದಿಸ್ಪೃಶಃ ॥ ೩೩ ॥

ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನೂ ಕೂಡ ಎಲ್ಲರೂ ನೋಡುತ್ತಿರುವಂತೆ ಲೀಲಾಜಾಲವಾಗಿಯೇ ಗೋವರ್ಧನಗಿರಿಯನ್ನು ಹಿಂದಿನಂತೆಯೇ ಅದರ ಸ್ಥಾನದಲ್ಲಿ ಇರಿಸಿದನು. ॥ ೨೮ ॥ ಪರ್ವತವನ್ನು ಕೆಳಗೆ ಇರಿಸಿದಾಕ್ಷಣ-ವ್ರಜವಾಸಿಗಳ ಹೃದಯಗಳು ಪ್ರೇಮರಸದಿಂದ ತುಂಬಿ ಭಗವಾನ್ ಶ್ರೀಕೃಷ್ಣನ ಬಳಿಗೆ ಬಂದು ಕೆಲವರು ಅವನನ್ನು ಅಪ್ಪಿಕೊಂಡರೆ, ಕೆಲವರು ಮುತ್ತಿಟ್ಟರು. ಎಲ್ಲರೂ ಅವನನ್ನು ಸತ್ಕರಿಸಿದರು. ವೃದ್ಧೆಯರಾದ ಗೋಪಿಯರು ಮಹದಾನಂದದಿಂದ, ಸ್ನೇಹದಿಂದ ಶ್ರೀಕೃಷ್ಣನಿಗೆ ಮೊಸರು, ಅಕ್ಷತೆ, ನೀರು ಇವುಗಳಿಂದ ಮಂಗಲ ತಿಲಕವನ್ನಿಟ್ಟು, ತುಂಬು ಹೃದಯದಿಂದ ಆಶೀರ್ವದಿಸಿದರು. ॥ ೨೯ ॥ ಯಶೋದಾದೇವಿ, ರೋಹಿಣಿ, ನಂದಗೋಪ ಮತ್ತು ಬಲಿಷ್ಠರಲ್ಲಿ ಶ್ರೇಷ್ಠನಾದ ಬಲರಾಮ ಮುಂತಾದವರು ಸ್ನೇಹಪರವಶರಾಗಿ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ಆಶೀರ್ವದಿಸಿದರು. ॥ ೩೦ ॥ ಪರೀಕ್ಷಿತನೇ! ಆ ಸಮಯದಲ್ಲಿ ಆಕಾಶದಲ್ಲಿ ಸ್ಥಿತರಾದ ದೇವತೆಗಳು ಸಾಧ್ಯರು, ಸಿದ್ಧರು, ಗಂಧರ್ವರು, ಚಾರಣರು ಮೊದಲಾದವರು ಪರಮ ಸಂತುಷ್ಟರಾಗಿ ಭಗವಂತನನ್ನು ಸ್ತುತಿಸುತ್ತಾ ಅವನ ಮೇಲೆ ಹೂವಿನ ಮಳೆಗರೆಯತೊಡಗಿದರು. ॥ ೩೧ ॥ ರಾಜನೇ! ಸ್ವರ್ಗದಲ್ಲಿ ದೇವತೆಗಳು ಶಂಖ, ದುಂದುಭಿಗಳನ್ನು ನುಡಿಸತೊಡಗಿದರು. ತುಂಬುರು, ಗಂಧರ್ವರು ಭಗವಂತನ ಮಧುರ ಲೀಲೆಗಳನ್ನು ಹಾಡತೊಡಗಿದರು. ॥ ೩೨ ॥ ಇದಾದ ಬಳಿಕ ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರಿಂದರೊಡಗೂಡಿ ಬಲರಾಮನೊಂದಿಗೆ ವ್ರಜಕ್ಕೆ ಹೊರಟನು. ಅವನೊಂದಿಗೆ ಆನಂದಭರಿತರಾಗಿದ್ದ ಗೋಪಿಯರೂ ಶ್ರೀಕೃಷ್ಣನ ಚೇತೋಹಾರಿಗಳಾದ ಗೋವರ್ಧನೋದ್ಧರಣವೇ ಮುಂತಾದ ಲೀಲಾ ಪ್ರಸಂಗಗಳನ್ನು ಹೃದಯಂಗಮವಾಗಿ ಹಾಡುತ್ತಾ ವ್ರಜಕ್ಕೆ ತೆರಳಿದರು. ॥ ೩೩ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ಶ್ರೀಕೃಷ್ಣನ ಪ್ರಭಾವದ ವಿಷಯವಾಗಿ ನಂದಗೋಪನೇ ಮೊದಲಾದವರ ಜಿಜ್ಞಾಸೆ

ಶ್ರೀಶುಕ ಉವಾಚ

ಏವಂವಿಧಾನಿ ಕರ್ಮಾಣಿ ಗೋಪಾಃ ಕೃಷ್ಣಸ್ಯ ವೀಕ್ಷ್ಯ ತೇ ।
ಅತದ್ವೀರ್ಯವಿದಃ ಪ್ರೋಚುಃ ಸಮಭ್ಯೇತ್ಯ ಸುವಿಸ್ಮಿತಾಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವ್ರಜದ ಗೋಪಾಲಕರು ಭಗವಾನ್ ಶ್ರೀಕೃಷ್ಣನ ಗೋವರ್ಧನೋದ್ಧರಣದಂತಹ ಅಲೌಕಿಕ ಕರ್ಮಗಳನ್ನು ನೋಡಿ ಅತ್ಯಂತ ಆಶ್ಚರ್ಯಚಕಿತರಾದರು. ಅವರಿಗೆ ಭಗವಂತನ ಅನಂತ ಶಕ್ತಿಯ ಪರಿಚಯವೇ ಇರಲಿಲ್ಲ. ಅವರೆಲ್ಲರೂ ಒಂದೆಡೆ ಸೇರಿ ಪರಸ್ಪರವಾಗಿ ಹೀಗೆ ಮಾತನಾಡಿಕೊಂಡರು. ॥ ೧ ॥

ಬಾಲಕಸ್ಯ ಯದೇತಾನಿ ಕರ್ಮಾಣ್ಯತ್ಯದ್ಭುತಾನಿ ವೈ ।
ಕಥಮರ್ಹತ್ಯಸೌ ಜನ್ಮ ಗ್ರಾಮ್ಯೇಷ್ವಾತ್ಮಜುಗುಪ್ಸಿತಮ್
॥ ೨ ॥

ಯಃ ಸಪ್ತಹಾಯನೋ ಬಾಲಃ ಕರೇಣೈಕೇನ ಲೀಲಯಾ ।
ಕಥಂ ಬಿಭ್ರದ್ಗಿರಿವರಂ ಪುಷ್ಕರಂ ಗಜರಾಡಿವ
॥ ೩ ॥

ತೋಕೇನಾಮೀಲಿತಾಕ್ಷೇಣ ಪೂತನಾಯಾ ಮಹೌಜಸಃ ।
ಪೀತಃ ಸ್ತನಃ ಸಹ ಪ್ರಾಣೈಃ ಕಾಲೇನೇವ ವಯಸ್ತನೋಃ
॥ ೪ ॥

ಹಿನ್ವತೋಽಧಃ ಶಯಾನಸ್ಯ ಮಾಸ್ಯಸ್ಯ ಚರಣಾವುದಕ್ ।
ಅನೋಽಪತದ್ವಿಪರ್ಯಸ್ತಂ ರುದತಃ ಪ್ರಪದಾಹತಮ್
॥ ೫ ॥

ಏಕಹಾಯನ ಆಸೀನೋ ಹ್ರಿಯಮಾಣೋ ವಿಹಾಯಸಾ ।
ದೈತ್ಯೇನ ಯಸ್ಯೃಣಾವರ್ತಮಹನ್ಕಂಠಗ್ರಹಾತುರಮ್
॥ ೬ ॥

ಕ್ವಚಿದ್ ಹೈಯಂಗವಸ್ಯೈನ್ಯೇ ಮಾತ್ರಾ ಬದ್ಧಉಲೂಖಲೇ ।
ಗಚ್ಛನ್ನರ್ಜುನಯೋರ್ಮಧ್ಯೇ ಬಾಹುಭ್ಯಾಂ ತಾವಪಾತಯತ್
॥ ೭ ॥

ವನೇ ಸಂಚಾರಯನ್ ವತ್ಸಾನ್
ಸರಾಮೋ ಬಾಲಕೈರ್ವೃತಃ ।
ಹಂತುಕಾಮಂ ಬಕಂ ದೋರ್ಭ್ಯಾಂ
ಮುಖತೋಽರಿಮಪಾಟಯತ್
॥ ೮ ॥

ವತ್ಸೇಷು ವತ್ಸರೂಪೇಣ ಪ್ರವಿಶಂತಂ ಜಿಘಾಂಸಯಾ ।
ಹತ್ವಾ ನ್ಯಪಾತಯತ್ತೇನ ಕಪಿತ್ಥಾನಿ ಚ ಲೀಲಯಾ
॥ ೯ ॥

ಹತ್ವಾ ರಾಸಭದೈತೇಯಂ ತದ್ಬಂಧೂಂಶ್ಚ ಬಲಾನ್ವಿತಃ ।
ಚಕ್ರೇ ತಾಲವನಂ ಕ್ಷೇಮಂ ಪರಿಪಕ್ವಫಲಾನ್ವಿತಮ್
॥ ೧೦ ॥

ಈ ಬಾಲಕನ ಕರ್ಮಗಳೆಲ್ಲವೂ ಅತ್ಯದ್ಭುತವಾದವುಗಳು. ಇಂತಹ ಪರಮಾದ್ಭುತ ಬಾಲಕನು ನಮ್ಮಂತಹ ಹಳ್ಳಿಗರ ಮಧ್ಯದಲ್ಲಿ ಜನ್ಮತಾಳಿದ್ದು ಇವನಿಗಾದರೋ ನಿಂದನೀಯವಾದುದು. ಇದು ಹೇಗೆ ಉಚಿತವಾಗಬಲ್ಲದು ? ॥ ೨ ॥ ಗಜರಾಜನು ಸರೋವರದಲ್ಲಿರುವ ಕಮಲವನ್ನು ಕಿತ್ತು ಮೇಲೆತ್ತಿ ಹಿಡಿಯುವಂತೆ ಏಳು ವರ್ಷದ ಈ ಬಾಲಕನು ಗೋವರ್ಧನಗಿರಿಯನ್ನು ಏಳುದಿನಗಳವರೆಗೆ ನಿರಾಯಾಸವಾಗಿ ಒಂದೇ ಕೈಯಿಂದ ಮೇಲೆತ್ತಿ ಹಿಡಿದು ನಿಂತಿದ್ದನು. ಇದು ಇವನಿಂದ ಹೇಗೆ ಸಾಧ್ಯವಾಯಿತು ? ॥ ೩ ॥ ಇವನು ಹಸುಳೆಯಾಗಿದ್ದಾಗಲೇ ಭಯಂಕರಳಾದ ಪೂತನೆಯು ವಿಷದ ಹಾಲನ್ನುಣಿಸಲು ಬಂದಿದ್ದಳು. ಕಣ್ಣು ಮುಚ್ಚಿಕೊಂಡು ಸ್ತನ್ಯಪಾನ ಮಾಡಿದ ಇವನು ಸ್ತನ್ಯದೊಡನೆ - ಕಾಲನು ಶರೀರದಿಂದ ಆಯುಸ್ಸನ್ನು ಅಪಹರಿಸುವಂತೆ ಪೂತನೆಯ ಪ್ರಾಣಗಳನ್ನೇ ಅಪಹರಿಸಿ ಬಿಟ್ಟನು. ಎಂತಹ ಅದ್ಭುತವಿದು ? ॥ ೪ ॥ ಇವನೂ ಮೂರುತಿಂಗಳ ಮಗುವಿದ್ದಾಗ ಗಾಡಿಯ ಕೆಳಗೆ ಅಳುತ್ತಾ ಮಲಗಿದ್ದನು. ಅಳುತ್ತಳುತ್ತಾ ಕೈ-ಕಾಲುಗಳನ್ನು ಒದರುತ್ತಿದ್ದಾಗ ಒಮ್ಮೆ ಅವನ ಪುಟ್ಟ ಕಾಲುಗಾಡಿಗೆ ತಗುಲಿ ಸಾಮಗ್ರಿಗಳಿಂದ ಕೂಡಿದ ಆ ಗಾಡಿಯು ತಲೆಕೆಳಕಾಗಿ ಬಿಟ್ಟಿತು. ಇದು ಹೇಗಾಯಿತು ಎಂಬುದು ನಮ್ಮಿಂದ ಯೋಚಿಸಲೂ ಸಾಧ್ಯವಾಗುತ್ತಿಲ್ಲ. ॥ ೫ ॥ ಈ ನಮ್ಮ ಮುದ್ದು ಕೃಷ್ಣನಿಗೆ ಆಗ ಒಂದು ವರ್ಷ ತುಂಬಿತ್ತು. ತೃಣಾವರ್ತನೆಂಬ ದೈತ್ಯನು ಬಿರುಗಾಳಿಯ ರೂಪದಿಂದ ಬಂದು ಇವನನ್ನು ಆಕಾಶಕ್ಕೆ ಹಾರಿಸಿಕೊಂಡು ಹೋದನು. ಆದರೆ ಈ ಅದ್ಭುತಬಾಲಕನು ರಾಕ್ಷಸನ ಕುತ್ತಿಗೆಯನ್ನು ಬಲವಾಗಿ ಹಿಡಿದು ಸಂಹರಿಸಿಬಿಟ್ಟನು. ॥ ೬ ॥ ಈ ಕಳ್ಳ ಕೃಷ್ಣನು ಬೆಣ್ಣೆಯನ್ನು ಕದಿಯುತ್ತಿದ್ದಾಗ ಇವನ ತಾಯಿ ಯಶೋದೆಯು ಇವನನ್ನು ಒರಳಿಗೆ ಕಟ್ಟಿಹಾಕಿದಳು. ಇವನು ಅಂಬೆಗಾಲು ಹಾಕುತ್ತಾ ಒರಳನ್ನೊಡನೆಯೇ ಮತ್ತಿಮರಗಳ ಮಧ್ಯದಲ್ಲಿ ನುಸುಳಿ ಅದ್ಭುತವಾಗಿದ್ದ ಆ ವೃಕ್ಷಗಳನ್ನೇ ಬುಡಮೇಲಾಗಿಸಿದನು. ಇದೇನು ನಂಬಲು ಸಾಧ್ಯವಾದ ಪ್ರಸಂಗವೇ ? ॥ ೭ ॥ ಮತ್ತೊಂದು ಪ್ರಸಂಗದಲ್ಲಿ ಶ್ರೀಕೃಷ್ಣನು ಬಲರಾಮನೊಂದಿಗೂ, ಗೋಪಾಲ ಬಾಲಕರೊಂದಿಗೂ ಕರುಗಳನ್ನು ಮೇಯಿಸುತ್ತಿದ್ದಾಗ ಇವನನ್ನು ಕೊಲ್ಲುವ ಸಲುವಾಗಿಯೇ ದೈತ್ಯನೊಬ್ಬನು ಬಕಪಕ್ಷಿಯ ರೂಪದಲ್ಲಿ ಬಂದಿದ್ದನು. ಅದು ರಾಕ್ಷಸನೆಂದರಿತ ಇವನು ಅದರ ಕೊಕ್ಕನ್ನು ಹಿಡಿದು ಹುಲ್ಲಿನ ಕಡ್ಡಿಯನ್ನು ಸೀಳುವಂತೆ ಅವನನ್ನು ಸೀಳಿ ಹಾಕಿದನು. ॥ ೮ ॥ ಇನ್ನೊಮ್ಮೆ ಶ್ರೀಕೃಷ್ಣನನ್ನು ಸಂಹರಿಸುವ ಆಶಯದಿಂದ ಮತ್ತೊಬ್ಬ ದೈತ್ಯನು ಕರುವಿನ ವೇಷವನ್ನು ಧರಿಸಿ ಕರುಗಳ ನಡುವೆಯೇ ಸೇರಿಕೊಂಡನು. ಇದನ್ನರಿತ ಶ್ರೀಕೃಷ್ಣನು ಆ ವತ್ಸಾಸುರನನ್ನು ಆಡುತ್ತಾಡುತ್ತಲೇ ಕೊಂದು ಅವನನ್ನು ಬೇಲದ ಮರದ ಮೇಲಕ್ಕೆಸೆದು ನೂರಾರು ಹಣ್ಣುಗಳನ್ನು ಉದುರಿಸಿದನು. ॥ ೯ ॥ ಇವನು ಬಲರಾಮನೊಂದಿಗೆ ಸೇರಿ ಕತ್ತೆಯ ರೂಪದಲ್ಲಿ ಇದ್ದ ಧೇನುಕಾಸುರನನ್ನು ಹಾಗೂ ಅವರ ಸಹೋದರರೆಲ್ಲರನ್ನು ಕೊಂದು ಹಾಕಿದನು. ಪಕ್ವವಾದ ತಾಳೆಹಣ್ಣುಗಳಿಂದ ಕೂಡಿದ ತಾಲವನವನ್ನು ಎಲ್ಲರ ಉಪಯೋಗಕ್ಕಾಗಿ ಮಂಗಲಮಯವಾಗಿಸಿದನು. ॥ ೧೦ ॥

ಪ್ರಲಂಬಂ ಘಾತಯಿತ್ವೋಗ್ರಂ ಬಲೇನ ಬಲಶಾಲಿನಾ ।
ಅಮೋಚಯದ್ವ್ರಜಪಶೂನ್ಗೋಪಾಂಶ್ಚಾರಣ್ಯವಹ್ನಿತಃ
॥ ೧೧ ॥

ಆಶೀವಿಷತಮಾಹೀಂದ್ರಂ ದಮಿತ್ವಾವಿಮದಂ ಹ್ರದಾತ್ ।
ಪ್ರಸಹ್ಯೋದ್ವಾಸ್ಯ ಯಮುನಾಂ ಚಕ್ರೇಽಸೌ ನಿರ್ವಿಷೋದಕಾಮ್
॥ ೧೨ ॥

ದುಸ್ತ್ಯಜಶ್ಚಾನುರಾಗೋಽಸ್ಮಿನ್ಸರ್ವೇಷಾಂ ನೋ ವ್ರಜೌಕಸಾಮ್ ।
ನಂದ ತೇ ತನಯೇಽಸ್ಮಾಸು ತಸ್ಯಾಪ್ಯೌತ್ಪತ್ತಿಕಃ ಕಥಮ್
॥ ೧೩ ॥

ಕ್ವ ಸಪ್ತಹಾಯನೋ ಬಾಲಃ ಕ್ವ ಮಹಾದ್ರಿವಿಧಾರಣಮ್ ।
ತತೋ ನೋ ಜಾಯತೇ ಶಂಕಾ ವ್ರಜನಾಥ ತವಾತ್ಮಜೇ
॥ ೧೪ ॥

ನಂದ ಉವಾಚ

ಶ್ರೂಯತಾಂ ಮೇ ವಚೋ ಗೋಪಾ
ವ್ಯೇತು ಶಂಕಾ ಚ ವೋಽರ್ಭಕೇ ।
ಏನಂ ಕುಮಾರಮುದ್ದಿಶ್ಯ
ಗರ್ಗೋ ಮೇ ಯದುವಾಚ ಹ ॥ ೧೫ ॥

ವರ್ಣಾಸ್ತ್ರಯಃ ಕಿಲಾಸ್ಯಾಸನ್ಗೃಹ್ಣತೋಽನುಯುಗಂ ತನೂಃ ।
ಶುಕ್ಲೋ ರಕ್ತಸ್ತಥಾ ಪೀತ ಇದಾನೀಂ ಕೃಷ್ಣತಾಂ ಗತಃ
॥ ೧೬ ॥

ಪ್ರಾಗಯಂ ವಸುದೇವಸ್ಯ ಕ್ವಚಿಜ್ಜಾತಸ್ತವಾತ್ಮಜಃ ।
ವಾಸುದೇವ ಇತಿ ಶ್ರೀಮಾನಭಿಜ್ಞಾಃ ಸಂಪ್ರಚಕ್ಷತೇ
॥ ೧೭ ॥

ಬಹೂನಿ ಸಂತಿ ನಾಮಾನಿ ರೂಪಾಣಿ ಚ ಸುತಸ್ಯ ತೇ ।
ಗುಣಕರ್ಮಾನುರೂಪಾಣಿ ತಾನ್ಯಹಂ ವೇದ ನೋ ಜನಾಃ
॥ ೧೮ ॥

ಏಷ ವಃ ಶ್ರೇಯ ಆಧಾಸ್ಯದ್ಗೋಪಗೋಕುಲನಂದನಃ ।
ಅನೇನ ಸರ್ವದುರ್ಗಾಣಿ ಯೂಯಮಂಜಸ್ತರಿಷ್ಯಥ
॥ ೧೯ ॥

ಪುರಾನೇನ ವ್ರಜಪತೇ ಸಾಧವೋ ದಸ್ಯುಪೀಡಿತಾಃ ।
ಅರಾಜಕೇ ರಕ್ಷ್ಯಮಾಣಾ ಜಿಗ್ಯುರ್ದಸ್ಯೂನ್ ಸಮೇಧಿತಾಃ
॥ ೨೦ ॥

ಇನ್ನೊಂದು ಪ್ರಸಂಗದಲ್ಲಿ ಇವನು ಬಲಶಾಲಿಯಾದ ಬಲರಾಮನ ಮೂಲಕ ಕ್ರೂರನಾದ ಪ್ರಲಂಬಾಸುರನನ್ನು ಸಂಹಾರ ಮಾಡಿಸಿದನು. ಮತ್ತೊಮ್ಮೆ ಗೋವುಗಳನ್ನು ಗೋಪಾಲರನ್ನು ಕಾಡುಗಿಚ್ಚಿನಿಂದ ರಕ್ಷಿಸಿದನು. ॥ ೧೧ ॥ ಯಮುನಾ ನದಿಯಲ್ಲಿದ್ದ ವಿಷದ ಬಲ ಮದದಿಂದ ಉನ್ಮತ್ತನಾಗಿದ್ದ ಕಾಳಿಯನ ಗರ್ವವನ್ನು ಮುರಿದು ಬಲವಂತವಾಗಿ ಅವನನ್ನು ಮಡುವಿನಿಂದ ಹೊರದೂಡಿ ಯಮುನೆಯ ನೀರನ್ನು ವಿಷರಹಿತವನ್ನಾಗಿಸಿ, ಅಮೃತಮಯವಾಗಿಸಿದನು. ॥ ೧೨ ॥ ನಂದರಾಜನೇ! ಈ ವ್ರಜದಲ್ಲಿ ವಾಸಿಸುವ ನಮಗೆ ನಿನ್ನ ಮಗನಲ್ಲಿ ಅನಿರ್ವಾಚ್ಯವಾದ ಪ್ರೀತಿಯಿರುವುದು ನಿಶ್ಚಯ. ಈ ಬಾಲಕನಿಗೂ ನಮ್ಮ ಮೇಲೆ ಅಷ್ಟೇ ಸ್ವಾಭಾವಿಕವಾದ ಪ್ರೀತಿಯಿದೆ. ಇದರ ಕಾರಣವೇನಿರಬಹುದು? ನೀವು ಹೇಳಬಲ್ಲಿರಾ? ॥ ೧೩ ॥ ಏಳುವರ್ಷಗಳ ಬಾಲಕನೆಂದರೇನು? ಮಹಾಪರ್ವತವನ್ನು ಧರಿಸುವುದೆಂದರೇನು? ಇದು ನಡೆದದ್ದಂತೂ ನಿಜ. ವ್ರಜನಾಥನೇ! ನಿನ್ನ ಮಗನು ಯಾರಾಗಿರಬಹುದೆಂಬ ವಿಷಯದಲ್ಲಿ ನಮಗೆ ಸಂದೇಹವುಂಟಾಗಿದೆ. ॥ ೧೪ ॥

ನಂದಗೋಪನು ಹೇಳಿದನು – ಗೋಪಾಲಕರೇ! ನೀವು ನನ್ನ ಮಾತನ್ನು ಸಾವಧಾನವಾಗಿ ಕೇಳಿರಿ. ಇದರಿಂದ ನನ್ನ ಮಗನ ವಿಷಯದಲ್ಲಿದ್ದ ನಿಮ್ಮ ಸಂದೇಹವು ನಿವಾರಣೆಯಾದೀತು. ಮಹರ್ಷಿಗಳಾದ ಗರ್ಗರು ನಾಮಕರಣೋತ್ಸವದ ಸಂದರ್ಭದಲ್ಲಿ ಈ ಬಾಲಕನನ್ನು ನೋಡಿ ಇವನ ಕುರಿತು ಹೀಗೆ ಹೇಳಿದ್ದರು – ॥ ೧೫ ॥ "ನಂದಗೋಪನೇ! ನಿನ್ನ ಈ ಬಾಲಕನು ಪ್ರತಿಯೊಂದು ಯುಗದಲ್ಲಿಯೂ ಶರೀರವನ್ನು ಧರಿಸುವನು. ಬೇರೆ-ಬೇರೆ ಯುಗಗಳಲ್ಲಿ ಇವನಿಗೆ ಶ್ವೇತ, ರಕ್ತ, ಪೀತ ಮುಂತಾದ ಬೇರೆ-ಬೇರೆ ಬಣ್ಣಗಳನ್ನು ಇವನು ಸ್ವೀಕರಿಸಿದ್ದನು. ಈ ಸಲ ಇವನು ಕೃಷ್ಣವರ್ಣದವನಾಗಿರುವನು. ॥ ೧೬ ॥ ನಂದನೇ! ನಿನ್ನ ಪುತ್ರನಾದ ಇವನು ಮೊದಲು ಎಲ್ಲೊ ವಸುದೇವನ ಮನೆಯಲ್ಲಿ ಹುಟ್ಟಿದ್ದನು. ಆದಕ್ಕಾಗಿ ಈ ರಹಸ್ಯವನ್ನು ಅರಿತಿರುವವರು ಇವನ ಹೆಸರು 'ಶ್ರೀಮಾನ್ ವಾಸುದೇವ' ಎಂದು ಹೇಳುತ್ತಾರೆ. ॥ ೧೭ ॥ ನಿನ್ನ ಪುತ್ರನಿಗೆ ಗುಣ ಮತ್ತು ಕರ್ಮಗಳನುಸಾರವಾಗಿ ಬಹಳಷ್ಟು ಹೆಸರುಗಳಿವೆ ಹಾಗೂ ಅನೇಕ ರೂಪಗಳೂ ಇವೆ. ನಾನಾದರೋ ಆ ನಾಮಗಳನ್ನು ಬಲ್ಲೆನು, ಆದರೆ ಪ್ರಪಂಚದ ಸಾಮಾನ್ಯ ಜನರು ತಿಳಿಯಲಾರರು. ॥ ೧೮ ॥ ಸಮಸ್ತ ಗೋಪಾಲಕರಿಗೂ, ಗೋವುಗಳಿಗೂ ಆನಂದವನ್ನುಂಟುಮಾಡುವ ಈ ನಿನ್ನ ಮಗನು ನಿಮಗೆ ಪರಮಕಲ್ಯಾಣಕರನಾಗುತ್ತಾನೆ. ಇವನ ಸಹಾಯದಿಂದ ನೀವು ದೊಡ್ಡ-ದೊಡ್ಡ ವಿಪತ್ತುಗಳಿಂದ ಬಹಳ ಸುಲಭವಾಗಿ ಪಾರಾಗುವಿರಿ. ॥ ೧೯ ॥ ವ್ರಜರಾಜನೇ! ಹಿಂದೊಮ್ಮೆ ಭೂಮಂಡಲದಲ್ಲಿ ಯಾವ ರಾಜನು ಇರಲಿಲ್ಲ. ದರೋಡೆಕೋರರ ಉಪಟಳವು ಎಲ್ಲೆಡೆ ಹೆಚ್ಚಾಗಿತ್ತು. ಸತ್ಪುರುಷರನ್ನು ಬಹಳವಾಗಿ ಪೀಡಿಸುತ್ತಿದ್ದರು. ಆಗ ನಿನ್ನ ಈ ಪುತ್ರನೇ ಸಜ್ಜನರನ್ನು ಕಾಪಾಡಿದನು ಮತ್ತು ಅವನಿಂದ ಬಲವನ್ನು ಪಡೆದು ಜನರು ದರೋಡೆಕೋರರ ಮೇಲೆ ವಿಜಯವನ್ನು ಪಡೆದರು. ॥ ೨೦ ॥

ಯ ಏತಸ್ಮಿನ್ಮಹಾಭಾಗಾಃ ಪ್ರೀತಿಂ ಕುರ್ವಂತಿ ಮಾನವಾಃ।
ನಾರಯೋಽಭಿಭವಂತ್ಯೇತಾನ್ ವಿಷ್ಣುಪಕ್ಷಾನಿವಾಸುರಾಃ
॥ ೨೧ ॥

ನಂದರಾಜನೇ! ನಿನ್ನ ಈ ಶ್ಯಾಮಲ ಮುದ್ದುಮಗನನ್ನು ಪ್ರೇಮಿಸುವವರು ಮಹಾಭಾಗ್ಯಶಾಲಿಗಳೇ ಸರಿ. ಭಗವಾನ್ ಮಹಾವಿಷ್ಣುವಿನ ಕರಕಮಲಗಳ ಛತ್ರಛಾಯೆಯಲ್ಲಿರುವ ದೇವತೆಗಳನ್ನು ಅಸುರರು ಗೆಲ್ಲಲಾರದೆ ಹೋದರು. ಹಾಗೆಯೇ ಇವನನ್ನು ಪ್ರೇಮಿಸುವವರನ್ನು ಒಳಗಿನ-ಹೊರಗಿನ ಯಾವ ಶತ್ರುಗಳು ಗೆಲ್ಲಲಾರವು. ॥ ೨೧ ॥ ನಂದಗೋಪನೇ! ಯಾವುದೇ ದೃಷ್ಟಿಯಿಂದ ನೋಡಿದರೂ ನಿಮ್ಮ ಮಗನು ಗುಣಗಳಿಂದ, ಐಶ್ವರ್ಯದಿಂದ, ಸೌಂದರ್ಯದಿಂದ, ಕೀರ್ತಿ ಮತ್ತು ಪ್ರಭಾವದಿಂದ ಸಾಕ್ಷಾತ್ ನಾರಾಯಣನಿಗೇ ಸಮನಾಗಿದ್ದಾನೆ. ಆದ್ದರಿಂದ ಈ ಬಾಲಕನ ಅಲೌಕಿಕ ಕಾರ್ಯಗಳನ್ನು ನೋಡಿ ಆಶ್ಚರ್ಯ ಪಡಬಾರದು.'' ॥ ೨೨ ॥

ತಸ್ಮಾನ್ನಂದ ಕುಮಾರೋಽಯಂ ನಾರಾಯಣಸಮೋ ಗುಣೈಃ।
ಶ್ರಿಯಾ ಕೀರ್ತ್ಯಾನುಭಾವೇನ ತತ್ಕರ್ಮಸು ನ ವಿಸ್ಮಯಃ
॥ ೨೨ ॥

ಗೋಪಾಲಕರೇ! ಸ್ವತಃ ಗರ್ಗಾಚಾರ್ಯರೇ ನನಗೆ ಹೀಗೆ ಆದೇಶವನ್ನಿತ್ತು ಹೊರಟು ಹೋದರು. ಅಂದಿನಿಂದ ನಾನು ಅಲೌಕಿಕ ಮತ್ತು ಪರಮ ಸುಖಮಯ ಕರ್ಮಗಳನ್ನು ಮಾಡುವ ಈ ಬಾಲಕನನ್ನು ಭಗವಾನ್ ನಾರಾಯಣನ ಅಂಶವೆಂದೇ ಭಾವಿಸುತ್ತಿರುವೆನು. ॥ ೨೩ ॥ ವ್ರಜವಾಸಿಗಳು ನಂದಗೋಪನ ಬಾಯಿಂದ ಗರ್ಗಾಚಾರ್ಯರ ಮಾತನ್ನು ಕೇಳಿದಾಗ ಅವರ ವಿಸ್ಮಯವು ಉಳಿಯಲಿಲ್ಲ. ಏಕೆಂದರೆ, ಈಗ ಅವರು ಅಮಿತ ತೇಜಸ್ವಿಯಾದ ಶ್ರೀಕೃಷ್ಣನ ಪ್ರಭಾವವನ್ನು ನೋಡಿ, ಕೇಳಿಬಿಟ್ಟಿದ್ದರು. ಆನಂದ ತುಂದಿಲರಾಗಿ ಅವರು ನಂದಗೋಪನನ್ನು ಮತ್ತು ಶ್ರೀಕೃಷ್ಣನನ್ನು ಬಹಳವಾಗಿ ಪ್ರಶಂಸಿಸಿದರು. ॥ ೨೪ ॥

ಇತ್ಯದ್ಧಾ ಮಾಂ ಸಮಾದಿಶ್ಯ ಗರ್ಗೇ ಚ ಸ್ವಗೃಹಂ ಗತೇ।
ಮನ್ಯೇ ನಾರಾಯಣಸ್ಯಾಂಶಂ ಕೃಷ್ಣಮಕ್ಲಿಷ್ಟಕಾರಿಣಮ್
॥ ೨೩ ॥

ಇತಿ ನಂದವಚಃ ಶ್ರುತ್ವಾ ಗರ್ಗಗೀತಂ ವ್ರಜೌಕಸಃ।
ದೃಷ್ಟಶ್ರುತಾನುಭಾವಾಸ್ತೇ ಕೃಷ್ಣಸ್ಯಾಮಿತತೇಜಸಃ।
ಮುದಿತಾ ನಂದಮಾನರ್ಚುಃ ಕೃಷ್ಣಂ ಚ ಗತವಿಸ್ಮಯಾಃ
॥ ೨೪ ॥

ತನ್ನ ಸಲುವಾಗಿ ಮಾಡಬೇಕಾಗಿದ್ದ ಯಜ್ಞವು ಭಂಗವಾಯಿತು ಎಂದು ತಿಳಿದೊಡನೆಯೇ ಇಂದ್ರನು ಕೋಪದಿಂದ ಕಿಡಿ-ಕಿಡಿಯಾದನು. ಆ ಗೋವಳರಿಗೆ ಪ್ರತೀಕಾರವನ್ನು ಮಾಡಬೇಕೆಂದು ಒನಕೆ ಗಾತ್ರದ ಧಾರೆಯಿಂದ ಮಳೆಯನ್ನು ಸುರಿಸತೊಡಗಿದನು. ಜೊತೆಯಲ್ಲಿ ಬಿರುಗಾಳಿಯೂ, ಕಲ್ಲು ಮಳೆಯೂ, ಸಿಡಿಲು ಗುಡುಗುಗಳೂ ಬಂದು ವ್ರಜವಾಸಿಗಳನ್ನು ಪೀಡಿಸತೊಡಗಿದವು. ಆಗ ಶರಣಾಗತರಾಗಿ ಬಂದ ಗೋಪ-ಗೋಪಿಯರನ್ನು ನೋಡಿ ಶ್ರೀಕೃಷ್ಣನ ಹೃದಯವು ಕರುಣಾರಸದಿಂದ ತುಂಬಿಹೋಯಿತು. ಆತನು ನೂತನವಾದೊಂದು ಲೀಲೆಯನ್ನು ತೋರಿಸಲು ನಿಶ್ಚಯಿಸಿ ನಸುನಕ್ಕನು. ಬಲಹೀನನಾದ ಬಾಲಕನೊಬ್ಬನು ನಾಯಿಕೊಡೆಯನ್ನು ಎತ್ತಿಹಿಡಿಯುವಷ್ಟು ಸುಲಭವಾಗಿ ಭಗವಾನ್ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನೆತ್ತಿ ಹಿಡಿದು ಗೋಕುಲವನ್ನು ಕಾಪಾಡಿದನು. ಜೊತೆಯಲ್ಲೇ ಇಂದ್ರನ ಗರ್ವಭಂಗವೂ ಆಯಿತು. ಅಂತಹ ಪರಾತ್ಪರನಾದ, ಕರುಣಾಮಯನಾದ, ಗೋವಿಂದನು ಸುಪ್ರೀತನಾಗಲೀ. ॥ ೨೫ ॥

ದೇವೇ ವರ್ಷತಿ ಯಜ್ಞವಿಪ್ಲವರುಷಾ
ವಜ್ರಾಶ್ಮಪರ್ಷಾನಿಲೈಃ
ಸೀದತ್ಪಾಲಪಶುಸ್ತ್ರಿ ಆತ್ಮಶರಣಂ
ದೃಷ್ಟ್ವಾನುಕಂಪ್ಯುತ್ಸ್ಮಯನ್ ।
ಉತ್ಪಾಟ್ಯೈಕಕರೇಣ ಶೈಲಮಬಲೋ
ಲೀಲೋಚ್ಛಿಲೀಂಧ್ರಂ ಯಥಾ
ಬಿಭ್ರದ್ಗೋಷ್ಠಮಪಾನ್ಮಹೇಂದ್ರಮದಭಿತ್
ಪ್ರೀಯಾನ್ನ ಇಂದ್ರೋ ಗವಾಮ್ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಷಡ್ವಿಂಶೋಽಧ್ಯಾಯಃ ॥ ೨೬ ॥

ಇಪ್ಪತ್ತೇಳನೆಯ ಅಧ್ಯಾಯ

ಗೋವಿಂದ ಅಭಿಷೇಕ

ಶ್ರೀಶುಕ ಉವಾಚ

ಗೋವರ್ಧನೇ ಧೃತೇ ಶೈಲ ಆಸಾರಾದ್ರಕ್ಷಿತೇ ವ್ರಜೇ ।
ಗೋಲೋಕಾದಾವ್ರಜತ್ ಕೃಷ್ಣಂ ಸುರಭಿಃ ಶಕ್ರ ಏವ ಚ
॥ ೧ ॥

ವಿವಿಕ್ತ ಉಪಸಂಗಮ್ಯ ವ್ರೀಡಿತಃ ಕೃತಹೇಲನಃ ।
ಪಸ್ಪರ್ಶ ಪಾದಯೋರೇನಂ ಕಿರೀಟೇನಾರ್ಕವರ್ಚಸಾ
॥ ೨ ॥

ದೃಷ್ಟಶ್ರುತಾನುಭಾವೋ೭ಸ್ಯ ಕೃಷ್ಣಸ್ಯಾಮಿತತೇಜಸಃ ।
ನಷ್ಟತ್ರಿಲೋಕೇಶಮದ ಇಂದ್ರ ಆಹ ಕೃತಾಂಜಲಿಃ
॥ ೩ ॥

ಇಂದ್ರ ಉವಾಚ

ವಿಶುದ್ಧಸತ್ತ್ವಂ ತವ ಧಾಮ ಶಾಂತಂ
ತಪೋಮಯಂ ಧ್ವಸ್ತರಜಸ್ತಮಸ್ಕಮ್ ।
ಮಾಯಾಮಯೋ೭ಯಂ ಗುಣಸಂಪ್ರವಾಹೋ
ನ ವಿದ್ಯತೇ ತೇ೭ಗ್ರಹಣಾನುಬಂಧಃ ॥ ೪ ॥

ಕುತೋ ನು ತದ್ದೇತವ ಈಶ ತತ್ಕೃತಾ
ಲೋಭಾದಯೋ ಯೇ೭ಬುಧಲಿಂಗಭಾವಾಃ ।
ತಥಾಪಿ ದಂಡಂ ಭಗವಾನ್ ಬಿಭರ್ತಿ
ಧರ್ಮಸ್ಯ ಗುಪ್ತ್ಯೈ ಖಲನಿಗ್ರಹಾಯ ॥ ೫ ॥

ಪಿತಾ ಗುರುಸ್ತ್ವಂ ಜಗತಾಮಧೀಶೋ
ದುರತ್ಯಯಃ ಕಾಲ ಉಪಾತ್ತದಂಡಃ ।
ಹಿತಾಯ ಸ್ವೇಚ್ಛಾತನುಭಿಃ ಸಮೀಹಸೇ
ಮಾನಂ ವಿಧುನ್ವನ್ ಜಗದೀಶಮಾನಿನಾಮ್ ॥ ೬ ॥

ಯೇ ಮದ್ವಿಧಾಜ್ಞಾ ಜಗದೀಶಮಾನಿನಃ
ತ್ವಾಂ ವೀಕ್ಷ್ಯ ಕಾಲೇ೭ಭಯಮಾಶು ತನ್ಮದಮ್ ।
ಹಿತ್ವಾ೭೯ರ್ಯಮಾರ್ಗಂ ಪ್ರಭಜಂತ್ಯಪಸ್ಮಯಾ
ಈಹಾ ಖಲಾನಾಮಪಿ ತೇ೭ನುಶಾಸನಮ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಗಿರಿರಾಜ ಗೋವರ್ಧನವನ್ನು ಎತ್ತಿ ಹಿಡಿದು ಮುಸಲಧಾರಾವರ್ಷದಿಂದ ವ್ರಜವನ್ನು ಕಾಪಾಡಿದಾಗ ಗೋಲೋಕದಿಂದ ಕಾಮಧೇನವು ಅವನನ್ನು ಅಭಿನಂದಿಸಲಿಕ್ಕಾಗಿ ಮತ್ತು ಸ್ವರ್ಗಲೋಕದಿಂದ ದೇವೇಂದ್ರನು ಕ್ಷಮಾಪಣೆಯನ್ನು ಯಾಚಿಸಲು ಶ್ರೀಕೃಷ್ಣನ ಬಳಿಗೆ ಬಂದರು. ॥ ೧ ॥ ಭಗವಂತನನ್ನು ತಿರಸ್ಕರಿಸಿದ್ದರಿಂದ ಇಂದ್ರನು ಬಹಳ ಲಜ್ಜಿತನಾಗಿದ್ದನು. ಅದಕ್ಕಾಗಿ ಅವನು ಏಕಾಂತದಲ್ಲಿ ಭಗವಂತನ ಬಳಿಗೆ ಹೋಗಿ, ಸೂರ್ಯನಂತೆ ತೇಜಸ್ವಿಯಾದ ತನ್ನ ಮುಕುಟದಿಂದ ಅವನ ಚರಣಗಳನ್ನು ಸ್ಪರ್ಶಿಸಿದನು. ॥ ೨ ॥ ಪರಮ ತೇಜಸ್ವೀ ಭಗವಾನ್ ಶ್ರೀಕೃಷ್ಣನ ಪ್ರಭಾವವನ್ನು ನೋಡಿ-ಕೇಳಿ 'ತಾನು ಮೂರು ಲೋಕಗಳಿಗೆ ಒಡೆಯನಾಗಿದ್ದೇನೆ' ಎಂಬ ಇಂದ್ರನ ಗರ್ವವು ಉಡುಗಿ ಹೋಯಿತು. ಈಗ ಅವನು ಕೈಜೋಡಿಸಿಕೊಂಡು ಅವನನ್ನು ಸ್ತುತಿಸತೊಡಗಿದನು. ॥ ೩ ॥

ಇಂದ್ರನು ಹೇಳಿದನು – ''ಓ ಭಗವಂತಾ ! ನಿನ್ನ ಸ್ವರೂಪವು ಪರಮಶಾಂತವೂ, ಜ್ಞಾನಮಯವೂ, ರಜೋಗುಣ-ತಮೋಗುಣಗಳಿಂದ ರಹಿತವೂ, ವಿಶುದ್ಧವೂ, ಅಪ್ರಾಕೃತವೂ, ಸತ್ತ್ವಮಯವೂ ಆಗಿದೆ. ಗುಣಗಳ ಪ್ರವಾಹರೂಪವಾಗಿ ಕಂಡುಬರುವ ಈ ಪ್ರಪಂಚವು ಕೇವಲ ಮಾಯಾಮಯವಾಗಿದೆ. ಏಕೆಂದರೆ, ನಿನ್ನ ಸ್ವರೂಪವನ್ನು ತಿಳಿಯದ ಕಾರಣದಿಂದಲೇ ನಿನ್ನಲ್ಲಿ ಇದು ಕಂಡು ಬರುತ್ತಿದೆ. ॥ ೪ ॥ ಅವಿದ್ಯಾ ಪ್ರಚುರವಾದ ಮಾಯಾಮಯ ಸಂಸಾರವೇ ನಿನಗಿಲ್ಲವೆಂದ ಮೇಲೆ ದೇಹಸಂಬಂಧದಿಂದ ಉಂಟಾಗುವ ಜನ್ಮಾಂತರಗಳು ಹೇಗೆ ತಾನೇ ನಿನಗೆ ಉಂಟಾಗಬಲ್ಲವು ? ಹಾಗೆಯೇ ಅಜ್ಞಾನಿಗಳ ಲಕ್ಷಣವಾದ ಲೋಭ-ಮೋಹಗಳೂ ನಿನಗಿಲ್ಲ ಆದರೂ ಮಹಾಮಹಿಮನಾದ ನೀನು ಅವತಾರಗಳನ್ನು ಮಾಡಿ ಧರ್ಮದ ರಕ್ಷಣೆಗಾಗಿಯೂ, ದುಷ್ಟನಿಗ್ರಹಕ್ಕಾಗಿಯೂ ದಂಡವನ್ನು ಧರಿಸುವೆ. ॥ ೫ ॥ ನೀನು ಜಗತ್ತಿಗೆ ತಂದೆಯೂ, ಗುರುವೂ, ಒಡೆಯನೂ ಆಗಿರುವೆ. ನೀನು ಜಗತ್ತನ್ನು ನಿಯಂತ್ರಿಸಲು ದಂಡವನ್ನು ಧರಿಸಿದ ದುಸ್ತರವಾದ ಕಾಲರೂಪಿಯೂ ಆಗಿರುವೆ. ನೀನು ನಿನ್ನ ಭಕ್ತರ ಆಸೆಗಳನ್ನು ಈಡೇರಿಸಲು ಸ್ವೇಚ್ಛೆಯಿಂದ ಲೀಲಾ ಶರೀರವನ್ನು ಪ್ರಕಟಗೊಳಿಸುವೆ. ತ್ರೈಲೋಕ್ಯಾಧಿಪತಿಯೆಂಬ ಅಹಂಕಾರದಿಂದ ಕೂಡಿರುವ ನನ್ನಂಥವರ ಅಭಿಮಾನವನ್ನು ಮುರಿದು ನಮ್ಮಗಳಿಗೆ ಹಿತವನ್ನೇ ಉಂಟು ಮಾಡುವೆ. ॥ ೬ ॥ ನನ್ನಂತಹವರು ಮತ್ತು ತನ್ನನ್ನೇ ಜಗತ್ತಿನ ಸ್ವಾಮಿ ಯೆಂದು ಭಾವಿಸುವವರನ್ನು ನೋಡಿಯೂ, ಮಹಾಭಯದ ಅವಕಾಶದಲ್ಲಿಯೂ ನೀನು ನಿರ್ಭಯನಾಗಿರುವೆ. ಆಗ ಅವರು ಉದ್ಧಟತನವನ್ನು ಬಿಟ್ಟು ಗರ್ವರಹಿತರಾಗಿ ಸತ್ಪುರಷರಿಂದ ಸೇವಿಸಲ್ಪಟ್ಟ ಭಕ್ತಿಮಾರ್ಗವನ್ನು ಆಶ್ರಯಿಸಿ ನಿನ್ನನ್ನು ಭಜಿಸುತ್ತಾರೆ. ಪ್ರಭೋ ! ನಿನ್ನ ಒಂದೊಂದು ಚೇಷ್ಟೆಯೂ ದುಷ್ಟರ ದಂಡನೆಗಾಗಿಯೇ ಇದೆ. ॥ ೭ ॥

ಸ ತ್ವಂ ಮಮೈಶ್ವರ್ಯಮದಪ್ಲುತಸ್ಯ
ಕೃತಾಗಸಸ್ತೇऽವಿದುಷಃ ಪ್ರಭಾವಮ್ ।
ಕ್ಷಂತುಂ ಪ್ರಭೋऽಥಾರ್ಹಸಿ ಮೂಢಚೇತಸೋ
ಮೈವಂ ಪುನರ್ಭೂನ್ಮತಿರೀಶ ಮೇऽಸತೀ ॥ ೮ ॥

ತವಾವತಾರೋऽಯಮಧೋಕ್ಷಜೇಹ
ಸ್ವಯಂಭರಾಣಾಮುರುಭಾರಜನ್ಮನಾಮ್ ।
ಚಮೂಪತೀನಾಮಭವಾಯ ದೇವ
ಭವಾಯ ಯುಷ್ಮಚ್ಚರಣಾನುವರ್ತಿನಾಮ್ ॥ ೯ ॥

ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।
ವಾಸುದೇವಾಯ ಕೃಷ್ಣಾಯ ಸಾತ್ವತಾಂ ಪತಯೇ ನಮಃ
॥ ೧೦ ॥

ಸ್ವಚ್ಛಂದೋपಾತ್ತದೇಹಾಯ ವಿಶುದ್ಧಜ್ಞಾನಮೂರ್ತಯೇ ।
ಸರ್ವಸ್ಮೈ ಸರ್ವಬೀಜಾಯ ಸರ್ವಭೂತಾತ್ಮನೇ ನಮಃ
॥ ೧೧ ॥

ಮಯೇದಂ ಭಗವನ್ ಗೋಷ್ಠನಾಶಾಯಾಸಾರವಾಯುಭಿಃ ।
ಚೇಷ್ಟಿತಂ ವಿಹತೇ ಯಜ್ಞೇ ಮಾನಿನಾ ತೀವ್ರಮನ್ಯುನಾ
॥ ೧೨ ॥

ತ್ವಯೇಶಾನುಗೃಹೀತೋऽಸ್ಮಿ ಧ್ವಸ್ತಸ್ತಂಭೋ ವೃಥೋದ್ಯಮಃ ।
ಈಶ್ವರಂ ಗುರುಮಾತ್ಮಾನಂ ತ್ವಾಮಹಂ ಶರಣಂ ಗತಃ
॥ ೧೩ ॥

ಶ್ರೀಶುಕ ಉವಾಚ

ಏವಂ ಸಂಕೀರ್ತಿತಃ ಕೃಷ್ಣೋ ಮಘೋನಾ ಭಗವಾನಮುಮ್ ।
ಮೇಘಗಂಭೀರಯಾ ವಾಚಾ ಪ್ರಹಸನ್ನಿದಮಬ್ರವೀತ್
॥ ೧೪ ॥

ಶ್ರೀಭಗವಾನುವಾಚ

ಮಯಾ ತೇऽಕಾರಿ ಮಘವನ್ ಮಖಿಭಂಗೋऽನುಗೃಹ್ಣತಾ ।
ಮದನುಸ್ಮೃತಯೇ ನಿತ್ಯಂ ಮತ್ತಸ್ಯೇಂದ್ರಶ್ರಿಯಾ ಭೃಶಮ್
॥ ೧೫ ॥

ಸ್ವಾಮಿ ! ನಾನು ಐಶ್ವರ್ಯಮದದಿಂದ ಉನ್ಮತ್ತನಾಗಿ ನಿನಗೆ ಅಪರಾಧವನ್ನು ಎಸಗಿರುವೆನು. ಏಕೆಂದರೆ, ನಾನು ನಿನ್ನ ಶಕ್ತಿ ಮತ್ತು ಪ್ರಭಾವದ ಕುರಿತು ಪೂರ್ಣವಾಗಿ ಅಜ್ಞಾನಿಯಾಗಿದ್ದೆ. ಪರಮ ಈಶ್ವರನೇ ! ನೀನು ದಯಮಾಡಿ ಮೂರ್ಖನಾದ ನನ್ನ ಅಪರಾಧವನ್ನು ಕ್ಷಮಿಸಿ, ಮುಂದೆ ನಾನು ಎಂದೆಂದಿಗೂ ಅಜ್ಞಾನಕ್ಕೆ ವಶನಾಗದಂತೆ ಕೃಪೆ ಮಾಡು. ॥ ೮ ॥ ಸ್ವಯಂ ಪ್ರಕಾಶನಾದ ಇಂದ್ರಿಯಾತೀತ ಪರಮಾತ್ಮನೇ ! ಅಸುರರಾದ ಸೇನಾಪತಿಗಳು ಕೇವಲ ತಮ್ಮ ಹೊಟ್ಟೆಯನ್ನು ಹೊರೆಯುವುದರಲ್ಲೇ ಮಗ್ನರಾಗಿ ಇರುತ್ತಾರೆ. ಭೂ ಭಾರಕ್ಕೆ ಕಾರಣರಾದವರನ್ನು ವಧಿಸಿ ಅವರಿಗೆ ಮೋಕ್ಷವನ್ನು ದಯಪಾಲಿಸುವೆ. ನಿನ್ನ ಚರಣ ಸೇವಕರಾಗಿ ನಿನ್ನ ಆಜ್ಞೆಯನ್ನು ಪಾಲಿಸುವ ಭಕ್ತಜನರಿಗೆ ಅಭ್ಯುದಯವನ್ನು ಕರುಣಿಸಲು, ಅವರನ್ನು ರಕ್ಷಿಸಲಿಕ್ಕಾಗಿಯೇ ನಿನ್ನ ಈ ಅವತಾರವಾಗಿದೆ. ॥ ೯ ॥ ಭಗವಂತನೇ ! ನಾನು ನಿನಗೆ ನಮಸ್ಕರಿಸುತ್ತೇನೆ. ನೀನು ಸರ್ವಾಂತರ್ಯಾಮಿ ಪುರುಷೋತ್ತಮನೂ, ಸರ್ವಾತ್ಮಾ ವಾಸುದೇವನೂ ಆಗಿರುವೆ. ನೀನು ಯದುವಂಶಿಯರ ಏಕಮಾತ್ರ ಸ್ವಾಮಿಯಾಗಿರುವೆ. ಭಕ್ತವತ್ಸಲನೂ, ಸರ್ವರ ಚಿತ್ತಗಳನ್ನು ಆಕರ್ಷಿಸುವವನಾಗಿರುವೆ. ಅಂತಹ ನಿನಗೆ ನಾನು ಪದೇ ಪದೇ ವಂದಿಸುತ್ತೇನೆ. ॥ ೧೦ ॥ ಜೀವರಂತೆ ನೀನು ಕರ್ಮವಶನಲ್ಲದಿದ್ದರೂ ಭಕ್ತರ ಹಾಗೂ ನಿನ್ನ ಇಚ್ಛೆಯಿಂದ ಬೇಕು-ಬೇಕಾದ ಶರೀರಗಳನ್ನು ಧರಿಸುವೆ. ನಿನ್ನ ಈ ಶರೀರವು ವಿಶುದ್ಧ ಜ್ಞಾನಸ್ವರೂಪವಾಗಿದೆ. ಸರ್ವಸ್ವವೂ ನೀನೇ. ಸಮಸ್ತಕ್ಕೂ ಕಾರಣನೂ, ಎಲ್ಲರ ಆತ್ಮಸ್ವರೂಪನೂ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೧೧ ॥ ಭಗವಂತನೇ ! ನಾನು ಮಹಾಮಾನಿಷ್ಠನು, ಅತ್ಯಂತ ಕೋಪಿಷ್ಠನು. ನನ್ನ ಸಲುವಾಗಿ ಮಾಡುತ್ತಿದ್ದ ಯಜ್ಞವು ನಿಂತು ಹೋಯಿತೆಂದು ತಿಳಿದಾಗ ನಾನು ಮುಸಲಧಾರೆಯಿಂದ ಕೂಡಿದ ಮಳೆಯಿಂದಲೂ, ಬಿರುಗಾಳಿಯಿಂದಲೂ ವ್ರಜಭೂಮಿಯನ್ನೇ ಪೂರ್ಣವಾಗಿ ನಾಶಮಾಡಲು ಪ್ರಯತ್ನಿಸಿದೆ. ॥ ೧೨ ॥ ಸ್ವಾಮಿಯೇ ! ನೀನು ನನ್ನ ಮೇಲೆ ಪರಮಾನುಗ್ರಹವನ್ನು ತೋರಿಸಿರುವೆ. ನನ್ನ ಕಾರ್ಯವನ್ನು ವ್ಯರ್ಥಗೊಳಿಸಿ ನನ್ನ ಅಹಂಕಾರವನ್ನು ಮುರಿದಿರುವೆ. ನನ್ನ ಅಜ್ಞಾನವನ್ನು ಹೋಗಲಾಡಿಸಿರುವೆ. ಆದುದರಿಂದ ನೀನೇ ಸ್ವಾಮಿಯೂ, ಗುರುವೂ, ಆತ್ಮನೂ ಆಗಿರುವೆ. ನಿನಗೆ ನಾನು ಶರಣಾಗಿದ್ದೇನೆ.'' ॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ದೇವೇಂದ್ರನು ಭಗವಾನ್ ಶ್ರೀಕೃಷ್ಣನನ್ನು ಹೀಗೆ ಸ್ತುತಿಸಿದಾಗ ಅವನು ಮುಗುಳ್ನಕ್ಕು ಮೇಘ ಗಂಭೀರ ಧ್ವನಿಯಿಂದ ಇಂದ್ರನನ್ನು ಸಂಬೋಧಿಸಿ ಇಂತೆಂದನು – ॥ ೧೪ ॥

ಶ್ರೀಭಗವಂತನು ಹೇಳಿದನು – ಇಂದ್ರನೇ ! ನೀನು ಐಶ್ವರ್ಯ-ಧನಸಂಪತ್ತಿನ ಮದದಿಂದ ಉನ್ಮತ್ತನಾಗಿದ್ದೆ. ಅದಕ್ಕಾಗಿಯೇ ನಿನ್ನ ಮೇಲೆ ಅನುಗ್ರಹವನ್ನು ಮಾಡಲೆಂದೇ ನಿನ್ನ ಯಜ್ಞವನ್ನು ಭಂಗಗೊಳಿಸಿದೆ. ಏಕೆಂದರೆ, ಇನ್ನು ನೀನು ನನ್ನನ್ನು ನಿತ್ಯ ನಿರಂತರ ಸ್ಮರಿಸುವಂತಾಗಲಿ. ॥ ೧೫ ॥

ಮಾಮೈಶ್ವರ್ಯಶ್ರೀಮದಾಂಧೋ ದಂಡಪಾಣಿಂ ನ ಪಶ್ಯತಿ ।
ತಂ ಭ್ರಂಶಯಾಮಿ ಸಂಪದ್ಭ್ಯೋ ಯಸ್ಯ ಚೇಚ್ಛಾಮ್ಯನುಗ್ರಹಮ್
॥ ೧೬ ॥

ಗಮ್ಯತಾಂ ಶಕ್ರ ಭದ್ರಂ ವಃ ಕ್ರಿಯತಾಂ ಮೇऽನುಶಾಸನಮ್ ।
ಸ್ಥೀಯತಾಂ ಸ್ವಾಧಿಕಾರೇಷು ಯುಕ್ತೈರ್ವಃ ಸ್ತಂಭವರ್ಜಿತೈಃ
॥ ೧೭ ॥

ಅಥಾಹ ಸುರಭಿಃ ಕೃಷ್ಣಮಭಿವಂದ್ಯ ಮನಸ್ವಿನೀ ।
ಸ್ವಸಂತಾನೈರುಪಾಮಂತ್ರ್ಯ ಗೋಪರೂಪಿಣಮೀಶ್ವರಮ್
॥ ೧೮ ॥

ಸುರಭಿರುವಾಚ

ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಸಂಭವ ।
ಭವತಾ ಲೋಕನಾಥೇನ ಸನಾಥಾ ವಯಮಚ್ಯುತ
॥ ೧೯ ॥

ತ್ವಂ ನಃ ಪರಮಕಂ ದೈವಂ ತ್ವಂ ನ ಇಂದ್ರೋ ಜಗತ್ಪತೇ ।
ಭವಾಯ ಭವ ಗೋವಿಪ್ರದೇವಾನಾಂ ಯೇ ಚ ಸಾಧವಃ
॥ ೨೦ ॥

ಇಂದ್ರಂ ನಸ್ತ್ವಾಭಿಷೇಕ್ಷ್ಯಾಮೋ ಬ್ರಹ್ಮಣಾ ನೋದಿತಾ ವಯಮ್ ।
ಅವತೀರ್ಣೋऽಸಿ ವಿಶ್ವಾತ್ಮನ್ ಭೂಮೇರ್ಭಾರಾಪನುತ್ತಯೇ
॥ ೨೧ ॥

ಶ್ರೀಶುಕ ಉವಾಚ

ಏವಂ ಕೃಷ್ಣಮುಪಾಮಂತ್ರ್ಯ ಸುರಭಿಃ ಪಯಸಾऽऽತ್ಮನಃ ।
ಜಲೈರಾಕಾಶಗಂಗಾಯಾ ಐರಾವತಕರೋದ್ಧೃತೈಃ
॥ ೨೨ ॥

ಇಂದ್ರಃ ಸುರರ್ಷಿಭಿಃ ಸಾಕಂ ನೋದಿತೋ ದೇವಮಾತೃಭಿಃ ।
ಅಭ್ಯಷಿಂಚತ ದಾಶಾರ್ಹಂ ಗೋವಿಂದ ಇತಿ ಚಾಭ್ಯಧಾತ್
॥ ೨೩ ॥

ತತ್ರಾಗತಾಸ್ತುಂಬುರುನಾರದಾದಯೋ
ಗಂಧರ್ವವಿದ್ಯಾಧರಸಿದ್ಧಚಾರಣಾಃ ।
ಜಗುರ್ಯಶೋ ಲೋಕಮಲಾಪಹಂ ಹರೇಃ
ಸುರಾಂಗನಾಃ ಸಂನನೃತುರ್ಮುದಾನ್ವಿತಾಃ ॥ ೨೪ ॥

ಐಶ್ವರ್ಯ ಮತ್ತು ಧನ ಮದದಿಂದ ಕುರುಡಾದವನು – ಕಾಲ ರೂಪಿಯಾದ ಪರಮೇಶ್ವರನಾದ ನಾನು ಕೈಯಲ್ಲಿ ದಂಡವನ್ನು ಧರಿಸಿ ಅವನ ತಲೆಯ ಮೇಲೆ ಕುಳಿತಿರುವೆನೆಂಬುದನ್ನು ತಿಳಿಯುವುದಿಲ್ಲ. ನಾನು ಯಾರ ಮೇಲೆ ಅನುಗ್ರಹ ತೋರ ಬೇಕೆಂದು ಬಯಸುವೆನೋ ಅವನನ್ನು ಐಶ್ವರ್ಯ ಭ್ರಷ್ಟನನ್ನಾಗಿ ಮಾಡಿಬಿಡುತ್ತೇನೆ. ॥ ೧೬ ॥ ಇಂದ್ರನೇ ! ನಿನಗೆ ಮಂಗಳವಾಗಲಿ. ಇನ್ನು ನೀನು ನಿನ್ನರಾಜಧಾನಿ ಅಮರಾವತಿಗೆ ಹೋಗಿ ನನ್ನ ಆಜ್ಞೆಯನ್ನು ಪಾಲಿಸುತ್ತಾ ಇರು. ಮುಂದೆ ಎಂದೂ ಗರ್ವಪಡಬೇಡ. ನಿನ್ನ ಅಧಿಕಾರಕ್ಕೆ ಅನುಸಾರವಾಗಿ ಉಚಿತವಾದ ರೀತಿಯಲ್ಲಿ ಮರ್ಯಾದೆಯನ್ನು ಮೀರದೇ, ನನ್ನ ಸನ್ನಿಧಿಯನ್ನು, ನನ್ನ ಸಂಯೋಗವನ್ನು ಅನುಭವಿಸುತ್ತಾ ಮೂರು ಲೋಕಗಳನ್ನು ಪಾಲಿಸುತ್ತಾ ಇರು. ॥ ೧೭ ॥

ಪರೀಕ್ಷಿತನೇ ! ಭಗವಂತನು ಹೀಗೆ ಆಜ್ಞೆಕೊಡುತ್ತಿರುವಾಗಲೇ ಪ್ರಶಸ್ತವಾದ ಮನಸ್ಸುಳ್ಳ ಕಾಮಧೇನುವು ತನ್ನ ಸಂತಾನದೊಡನೆ ಗೋಪವೇಷಧಾರಿಯಾದ ಪರಮೇಶ್ವರ ಶ್ರೀಕೃಷ್ಣನ ಬಳಿಗೆ ಬಂದು ಅವನಿಗೆ ತಲೆಬಾಗಿ ನಮಸ್ಕರಿಸಿ ಹೇಳಿದಳು. ॥ ೧೮ ॥

ಕಾಮಧೇನುವು ಹೇಳಿತು – ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ ! ನೀನು ಮಹಾಯೋಗೇಶ್ವರನಾಗಿರುವೆ. ಸಾಕ್ಷಾತ್ ವಿಶ್ವವೇ ಆಗಿರುವೆ. ವಿಶ್ವದ ಪರಮ ಕಾರಣನೂ, ಅಚ್ಯುತನೂ ಆಗಿರುವೆ. ಸಮಸ್ತ ವಿಶ್ವಕ್ಕೆ ಸ್ವಾಮಿಯಾಗಿರುವ ನಿನ್ನನ್ನು ನಾಥನನ್ನಾಗಿ ಪಡೆದು ನಾವು ಸನಾಥರಾಗಿದ್ದೇವೆ. ॥ ೧೯ ॥ ನೀನು ಜಗತ್ತಿನ ಸ್ವಾಮಿಯಾಗಿರುವೆ. ಆದರೆ ನಮಗಾದರೋ ಪರಮಪೂಜ್ಯ ಆರಾಧ್ಯಸ್ವಾಮಿಯಾಗಿರುವೆ. ಪ್ರಭೋ ! ದೇವೇಂದ್ರನು ಮೂರು ಲೋಕಗಳಿಗೆ ಇಂದ್ರನಿರಬಹುದು, ಆದರೆ ನಮಗೆ ಇಂದ್ರನು ನೀನೇ ಆಗಿರುವೆ. ಆದ್ದರಿಂದ ನೀನೇ ಗೋವು, ಬ್ರಾಹ್ಮಣರು, ದೇವತೆಗಳು, ಸಾಧುಜನರು – ಇವರ ರಕ್ಷಣೆಗಾಗಿ ನಮ್ಮ ಇಂದ್ರನಾಗು. ॥ ೨೦ ॥ ಗೋವುಗಳಾದ ನಾವು ಬ್ರಹ್ಮದೇವರ ಪ್ರೇರಣೆಯಿಂದ ನಿನ್ನನ್ನು ನಮ್ಮ ಇಂದ್ರನೆಂದು ಭಾವಿಸಿ ಅಭಿಷೇಕ ಮಾಡುವೆವು. ವಿಶ್ವಾತ್ಮನೇ ! ನೀನು ಭೂ ಭಾರವನ್ನು ಇಳುಹಲೆಂದೇ ಅವತರಿಸಿರುವೆ. ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನಲ್ಲಿ ಹೀಗೆ ಹೇಳಿ ಕಾಮಧೇನುವು ತನ್ನ ಹಾಲಿನಿಂದಲೆ ಅವನಿಗೆ ಅಭಿಷೇಕ ಮಾಡಿತು. ದೇವತೆಗಳ ಪ್ರೇರಣೆಯಿಂದ ದೇವೇಂದ್ರನು ಐರಾವತವು ತನ್ನ ಸೊಂಡಿಲಿನಿಂದ ತಂದಿರುವ ಆಕಾಶಗಂಗೆಯ ಜಲದಿಂದ ದೇವರ್ಷಿಗಳೊಡನೆ ಯದುನಾಥನಾದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿ, ಅವನನ್ನು 'ಗೋವಿಂದ'ನೆಂದು ಸಂಬೋಧಿಸಿದನು. ॥ ೨೨-೨೩. ॥ ಆ ಸಮಯದಲ್ಲಿ ನಾರದ, ತುಂಬುರು ಮೊದಲಾದ ಗಂಧರ್ವರು, ವಿದ್ಯಾಧರರು, ಸಿದ್ಧರು, ಚಾರಣರು ಮೊದಲೇ ಅಲ್ಲಿಗೆ ಬಂದಿದ್ದರು. ಅವರೆಲ್ಲರೂ ಪ್ರಪಂಚದ ತಾಪ-ಪಾಪಗಳನ್ನು ಹೋಗಲಾಡಿಸುವ ಶ್ರೀಕೃಷ್ಣನ ಯಶಸ್ಸನ್ನು ಕೀರ್ತಿಸತೊಡಗಿದರು. ಅಪ್ಸರೆಯರು ಆನಂದತುಂಬಿ ನೃತ್ಯಮಾಡತೊಡಗಿದರು. ॥ ೨೪ ॥

ತಂ ತುಷ್ಟುವುರ್ದೇವನಿಕಾಯಕೇತವೋ
ವ್ಯವಾಕಿರಂಶ್ಚಾದ್ಭುತಪುಷ್ಪವೃಷ್ಟಿಭಿಃ ।
ಲೋಕಾಃ ಪರಾಂ ನಿರ್ವೃತಿಮಾಪ್ನುವಂಸ್ತ್ರಯೋ
ಗಾವಸ್ತದಾ ಗಾಮನಯನ್ ಪಯೋದ್ರುತಾಮ್ ॥ ೨೫ ॥

ನಾನಾರಸೌಘಾಃ ಸರಿತೋ ವೃಕ್ಷಾ ಆಸನ್ ಮಧುಸ್ರವಾಃ ।
ಅಕೃಷ್ಟಪಚ್ಯೌಷಧಯೋ ಗಿರಯೋಽಬಿಭ್ರದುನ್ಮಣೀನ್
॥ ೨೬ ॥

ಕೃಷ್ಣೇಽಭಿಷಿಕ್ತ ಏತಾನಿ ಸತ್ತ್ವಾನಿ ಕುರುನಂದನ ।
ನಿರ್ವೈರಾಣ್ಯಭವಂಸ್ತಾತ ಕ್ರೂರಾಣ್ಯಪಿ ನಿಸರ್ಗತಃ
॥ ೨೭ ॥

ಇತಿ ಗೋಗೋಕುಲಪತಿಂ ಗೋವಿಂದಮಭಿಷಿಚ್ಯ ಸಃ ।
ಅನುಜ್ಞಾತೋ ಯಯೌ ಶಕ್ರೋ ವೃತೋ ದೇವಾದಿಭಿರ್ದಿವಮ್
॥ ೨೮ ॥

ಪ್ರಧಾನ ದೇವತೆಗಳು ಭಗವಂತನನ್ನು ಸ್ತುತಿಸುತ್ತಾ ಅವನ ಮೇಲೆ ನಂದನವನದ ದಿವ್ಯ ಪುಷ್ಪಗಳ ಮಳೆಗರೆಯ ತೊಡಗಿದರು. ಮೂರು ಲೋಕಗಳೂ ಪರಮಾನಂದದಲ್ಲಿ ಮುಳುಗಿ ಹೋದುವು. ಗೋವುಗಳ ಕೆಚ್ಚಲುಗಳಿಂದ ತಾನಾಗಿಯೇ ಹಾಲು ಸುರಿದು ಪೃಥ್ವಿಯು ನೆನೆದು ಹೋಯಿತು. ॥ ೨೫ ॥ ನದಿಗಳು ನಾನಾ ವಿಧದ ರಸಗಳಿಂದ ತುಂಬಿ ಹರಿಯತೊಡಗಿದವು. ಮರ ಗಿಡ-ಬಳ್ಳಿಗಳಿಂದ, ಪುಷ್ಪಗಳಿಂದ ಮಧುವು ಸುರಿಯುತ್ತಿತ್ತು. ಊಳದೆಯೇ ಪೃಥ್ವಿಯು ಅನೇಕ ವಿಧವಾದ ಔಷಧಿಗಳನ್ನು, ಅನ್ನವನ್ನು ನೀಡುತ್ತಿತ್ತು. ಪರ್ವತಗಳಲ್ಲಿ ಅಡಗಿದ್ದ ನವರತ್ನಗಳು ತಾನಾಗಿ ಹೊರಗೆ ಕಾಣಿಸಿಕೊಂಡವು. ॥ ೨೬ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಅಭಿಷೇಕವಾದ ಮೇಲೆ ಸ್ವಭಾವತಃ ಕ್ರೂರವಾಗಿದ್ದ ಜೀವಿಗಳೂ ಕೂಡ ವೈರಹೀನವಾದುವು. ಅವುಗಳು ಪರಸ್ಪರ ಮೈತ್ರಿಯಿಂದ ಇರತೊಡಗಿದವು. ॥ ೨೭ ॥ ಇಂದ್ರನು ಈ ಪ್ರಕಾರವಾಗಿ ಗೋವುಗಳ ಮತ್ತು ಗೋಕುಲದ ಸ್ವಾಮಿಯಾದ ಗೋವಿಂದನಿಗೆ ಅಭಿಷೇಕ ಮಾಡಿ, ಅವನಿಂದ ಬೀಳ್ಕೊಂಡು ಗಂಧರ್ವರು, ದೇವತೆಗಳೊಂದಿಗೆ ಅಮರಾವತಿಗೆ ತೆರಳಿದನು. ॥ ೨೮ ॥

ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೨೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಇಂದ್ರಸ್ತುತಿರ್ನಾಮ ಸಪ್ತವಿಂಶೋಽಧ್ಯಾಯಃ ॥ ೨೭ ॥

ಇಪ್ಪತ್ತೆಂಟನೆಯ ಅಧ್ಯಾಯ

ಶ್ರೀಕೃಷ್ಣನು ವರುಣಲೋಕದಿಂದ ನಂದಗೋಪನನ್ನು ಬಿಡಿಸಿ ತಂದುದು

ಶ್ರೀಶುಕ ಉವಾಚ

ಏಕಾದಶ್ಯಾಂ ನಿರಾಹಾರಃ ಸಮಭ್ಯರ್ಚ್ಯ ಜನಾರ್ದನಮ್ ।
ಸ್ನಾತುಂ ನಂದಸ್ತು ಕಾಲಿಂದ್ಯಾ ದ್ವಾದಶ್ಯಾಂ ಜಲಮಾವಿಶತ್
॥ ೧ ॥

ತಂ ಗೃಹೀತ್ವಾನಯದ್ಭೃತ್ಯೋ ವರುಣಸ್ಯಾಸುರೋಽಂತಿಕಮ್ ।
ಅವಿಜ್ಞಾಯಾಸುರೀಂ ವೇಲಾಂ ಪ್ರವಿಷ್ಟಮುದಕಂ ನಿಶಿ
॥ ೨ ॥

ಚುಕ್ರುಶುಸ್ತಮಪಶ್ಯಂತಃ ಕೃಷ್ಣ ರಾಮೇತಿ ಗೋಪಕಾಃ ।
ಭಗವಾಂಸ್ತದುಪಶ್ರುತ್ಯ ಪಿತರಂ ವರುಣಾಹೃತಮ್ ।
ತದಂತಿಕಮ್ ಗತೋ ರಾಜನ್ ಸ್ವಾನಾಮಭಯದೋ ವಿಭುಃ
॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ನಂದಗೋಪನು ಕಾರ್ತೀಕ ಶುಕ್ಲ ಏಕಾದಶಿಯ ದಿನ ಉಪವಾಸ ಮಾಡಿ ಭಗವಂತನಾದ ಜನಾರ್ದನನನ್ನು ಪೂಜಿಸಿ, ರಾತ್ರಿಯಲ್ಲಿ ದ್ವಾದಶಿಯು ಪ್ರಾರಂಭವಾಗುತ್ತಲೇ ಸ್ನಾನಮಾಡಲು ಯಮುನಾ ನದಿಯಲ್ಲಿ ಪ್ರವೇಶಿಸಿದನು. ॥ ೧ ॥ ಇದು ಅಸುರರ ಕಾಲವೆಂದು ನಂದಗೋಪನಿಗೆ ತಿಳಿದಿರಲಿಲ್ಲ. ಅದಕ್ಕಾಗಿ ಅವನು ರಾತ್ರಿಯೇ ಯಮುನಾನದಿಗೆ ಇಳಿದಿದ್ದನು. ಆಗ ವರುಣನ ಸೇವಕನಾದ ಓರ್ವ ಅಸುರನು ನಂದಗೋಪನನ್ನು ಹಿಡಿದುಕೊಂಡು ತನ್ನ ಒಡೆಯನ ಬಳಿಗೆ ಒಯ್ದನು. ॥ ೨ ॥ ನಂದಗೋಪನನ್ನು ಕಾಣದೆ ಗೋಪಾಲರೆಲ್ಲರೂ ಗಟ್ಟಿಯಾಗಿ ಕೂಗಿಕೊಂಡರು. ಕೃಷ್ಣ! ಬಲರಾಮ! ನಮ್ಮ ರಾಜನಾದ ನಂದಗೋಪನೇ ಕಾಣೆಯಾಗಿದ್ದಾನೆ. ನೀವೇ ನಮಗೆ ಪರಮಾಶ್ರಯರು. ನಂದಗೋಪನನ್ನು ಬೇಗನೇ ಹುಡುಕಿ ತನ್ನಿರಿ, ಎಂದು ಗೋಳಾಡಿದರು. ಗೋಪಾಲಕರ ಮಾತನ್ನು ಕೇಳಿದ ಭಕ್ತಭಯಾಪಹನಾದ, ಸರ್ವಜ್ಞನಾದ ನಂದಕುಮಾರನು ತನ್ನ ತಂದೆಯನ್ನು ವರುಣನ ಸೇವಕನಾರೋ ಕರೆದೊಯ್ದಿರ ಬಹುದೆಂದು ತಿಳಿದು ಒಡಯನೇ ವರುಣ ಬಳಿಗೆ ಹೋದನು. ॥ ೩ ॥

ಪ್ರಾಪ್ತಂ ವೀಕ್ಷ್ಯ ಹೃಷೀಕೇಶಂ ಲೋಕಪಾಲಃ ಸಪರ್ಯಯಾ ।
ಮಹತ್ಯಾ ಪೂಜಯಿತ್ವಾಽಽಹ ತದ್ದರ್ಶನಮಹೋತ್ಸವಃ
॥ ೪ ॥

ವರುಣ ಉವಾಚ

ಅದ್ಯ ಮೇ ನಿಭೃತೋ ದೇಹೋಽದ್ಯೈವಾರ್ಥೋಽಧಿಗತಃ ಪ್ರಭೋ ।
ತ್ವತ್ಪಾದಭಾಜೋ ಭವತನ್ನವಾಪುಃ ಪಾರಮಧ್ವನಃ
॥ ೫ ॥

ನಮಸ್ತುಭ್ಯಂ ಭಗವತೇ ಬ್ರಹ್ಮಣೇ ಪರಮಾತ್ಮನೇ ।
ನ ಯತ್ರ ಶ್ರೂಯತೇ ಮಾಯಾ ಲೋಕಸೃಷ್ಟಿವಿಕಲ್ಪನಾ
॥ ೬ ॥

ಅಜಾನತಾ ಮಾಮಕೇನ ಮೂಢೇನಾಕಾರ್ಯವೇದಿನಾ ।
ಆನೀತೋಽಯಂ ತವ ಪಿತಾ ತದ್ಭವಾನ್ ಕ್ಷಂತುಮರ್ಹತಿ
॥ ೭ ॥

ಮಮಾಪ್ಯನುಗ್ರಹಂ ಕೃಷ್ಣ ಕರ್ತುಮರ್ಹಸ್ಯತೇಷದೃಕ್ ।
ಗೋವಿಂದ ನೀಯತಾಮೇಷ ಪಿತಾ ತೇ ಪಿತೃವತ್ಸಲ
॥ ೮ ॥

ಶ್ರೀಶುಕ ಉವಾಚ

ಏವಂ ಪ್ರಸಾದಿತಃ ಕೃಷ್ಣೋ ಭಗವಾನೀಶ್ವರೇಶ್ವರಃ ।
ಆದಾಯಾಗಾತ್ಸ್ವಪಿತರಂ ಬಂಧೂನಾಂ ಚಾವಹನ್ಮುದಮ್
॥ ೯ ॥

ನಂದಸ್ತ್ವತೀಂದ್ರಿಯಂ ದೃಷ್ಟ್ವಾ ಲೋಕಪಾಲಮಹೋದಯಮ್ ।
ಕೃಷ್ಣೇ ಚ ಸನ್ನತಿಂ ತೇಷಾಂ ಜ್ಞಾತಿಭ್ಯೋ ವಿಸ್ಮಿತೋಽಬ್ರವೀತ್
॥ ೧೦ ॥

ತೇ ತ್ವೌತ್ಸುಕ್ಯಧಿಯೋ ರಾಜನ್ಮತ್ವಾ ಗೋಪಾಸ್ತಮೀಶ್ವರಮ್ ।
ಅಪಿ ನಃ ಸ್ವಗತಿಂ ಸೂಕ್ಷ್ಮಾಮುಪಾಧಾಸ್ಯದಧೀಶ್ವರಃ
॥ ೧೧ ॥

ಇತಿ ಸ್ವಾನಾಂ ಸ ಭಗವಾನ್ವಿಜ್ಞಾಯಾಖಿಲದೃಕ್ ಸ್ವಯಮ್ ।
ಸಂಕಲ್ಪಸಿದ್ಧಯೇ ತೇಷಾಂ ಕೃಪಯೈತದಚಿಂತಯತ್
॥ ೧೨ ॥

ಅಂತರಿಂದ್ರಿಯ-ಬಹಿರಿಂದ್ರಿಯಗಳ ಪ್ರವರ್ತಕನಾದ ಭಗವಾನ್ ಶ್ರೀಕೃಷ್ಣನೇ ತನ್ನ ಲೋಕಕ್ಕೆ ಬಂದಿರುವನೆಂದು ನೋಡಿ ವರುಣನು ಶ್ರೀಕೃಷ್ಣನಿಗೆ ಮಹಾಪೂಜೆಯನ್ನು ಸಲ್ಲಿಸಿದನು. ಭಗವಂತನ ದರ್ಶನದಿಂದ ಆನಂದ ಭರಿತನಾಗಿ ಕೈಗಳನ್ನು ಜೋಡಿಸಿಕೊಂಡು ಭಗವಂತನಲ್ಲಿ ನಿವೇದಿಸಿಕೊಂಡನು. ॥ ೪ ॥

ವರುಣನು ಹೇಳಿದನು – ಪ್ರಭು! ನಿನ್ನ ದಿವ್ಯದರ್ಶನದಿಂದ ನನ್ನ ಜನ್ಮವು ಸಾರ್ಥಕವಾಯಿತು. ಪುರುಷಾರ್ಥವು ಈಡೇರಿತು. ಇಂದು ನನಗೆ ನಿನ್ನ ಚರಣಕಮಲಗಳ ಸೇವೆ ಮಾಡುವ ಶುಭಾವಕಾಶವು ದೊರೆಯಿತು. ನಿನ್ನ ಚರಣಕಮಲಗಳನ್ನು ಆಶ್ರಯಿಸಿದವರು ಭವಸಾಗರದಿಂದ ಪಾರಾಗಿಹೋಗುತ್ತಾರೆ. ॥ ೫ ॥ ನೀನು ಭಕ್ತರಿಗೆ ಭಗವಂತನೂ, ವೇದಾಂತಿಗಳ ಬ್ರಹ್ಮನೂ, ಯೋಗಿಗಳ ಪರಮಾತ್ಮನೂ ಆಗಿರುವೆ. ವಿಭಿನ್ನ ಲೋಕಗಳನ್ನು ಸೃಷ್ಟಿಸುವ ಮಾಯೆಯು ನಿನ್ನ ಸ್ವರೂಪದಲ್ಲಿ ಇಲ್ಲವೆಂದು ಶ್ರುತಿಗಳು ಹೇಳುತ್ತವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತಿದ್ದೇನೆ. ॥ ೬ ॥ ಸ್ವಾಮಿ! ನನ್ನ ಈ ಮೂರ್ಖನಾದ ಸೇವಕನು ತನ್ನ ಕರ್ತವ್ಯವೇನೆಂಬುದನ್ನು ಅರಿಯದೆ ನಿನ್ನ ತಂದೆಯನ್ನು ಇಲ್ಲಿಗೆ ಕರೆತಂದಿರುವನು. ಅವನ ಈ ಅಪರಾಧವನ್ನು ದಯಮಾಡಿ ಕ್ಷಮಿಸಿಬಿಡು. ॥ ೭ ॥ ಗೋವಿಂದ! ನೀನು ನಿನ್ನ ತಂದೆಯನ್ನು ಬಹಳವಾಗಿ ಪ್ರೀತಿಸುತ್ತಿರುವೆ ಎಂಬುದನ್ನು ನಾನು ಬಲ್ಲೆನು. ಇದೋ ನಿನ್ನ ತಂದೆಯು ಇಲ್ಲಿರುವನು. ಇವನನ್ನು ನೀನು ಕೊಂಡುಹೋಗು. ಭಗವಂತ! ನೀನು ಸರ್ವಾಂತರ್ಯಾಮಿಯೂ, ಸರ್ವಸಾಕ್ಷಿಯೂ ಆಗಿರುವೆ. ವಿಶ್ವಮೋಹನ ಕೃಷ್ಣಾ! ಆದಕ್ಕಾಗಿ ನೀನು ದಾಸನಾದ ನನ್ನ ಮೇಲೆ ಕೃಪೆದೋರು. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬ್ರಹ್ಮಾದಿಗಳಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನನ್ನು ಲೋಕಪಾಲ ವರುಣನು ಹೀಗೆ ಸ್ತುತಿಸಿ ಪ್ರಸನ್ನಗೊಳಿಸಿದನು. ಆನಂತರ ಭಗವಂತನು ತನ್ನ ತಂದೆಯಾದ ನಂದರಾಜನನ್ನು ಕರೆದುಕೊಂಡು ವ್ರಜಕ್ಕೆ ಬಂದು ಬಂಧುಗಳೆಲ್ಲರನ್ನು ಆನಂದಗೊಳಿಸಿದನು. ॥ ೯ ॥ ಲೋಕಪಾಲಕನಾದ ವರುಣನ ಇಂದ್ರಿಯಾತೀತವಾದ ಐಶ್ವರ್ಯವನ್ನೂ, ಸುಖಿಸಂಪತ್ತುಗಳನ್ನೂ, ತನ್ನ ಮಗನಾದ ಶ್ರೀಕೃಷ್ಣನಿಗೆ ಅಲ್ಲಿಯ ನಿವಾಸಿಗಳು ನಮಸ್ಕರಿಸಿದ್ದನ್ನೂ ಕಂಡ ನಂದಗೋಪನು ಆಶ್ಚರ್ಯಚಕಿತನಾಗಿ, ತನ್ನ ಬಂಧುಗಳಿಗೆ ತಾನು ಕಂಡದ್ದನ್ನು ವಿವರಿಸಿ ಹೇಳಿದನು. ॥ ೧೦ ॥ ಪರೀಕ್ಷಿತನೇ! ಇದನ್ನು ಕೇಳಿದ ಗೋಪರು ಶ್ರೀಕೃಷ್ಣನನ್ನು ಸರ್ವೇಶ್ವರನೆಂದೇ ನಿಶ್ಚಯಿಸಿದರು. ತಮಗೂ ಕೂಡ ಭಕ್ತಿಪ್ರೇಮಿಯಾದ, ಜಗದೀಶ್ವರನಾದ ಶ್ರೀಕೃಷ್ಣನು ಅವನ ಅನನ್ಯ ಭಕ್ತರಿಗೆ ಮಾತ್ರವೇ ಪ್ರವೇಶಿಸಲು ಸಾಧ್ಯವಾದ ಮಾಯಾತೀತವಾದ ತನ್ನ ಪರಮಧಾಮವನ್ನು ತೋರಿಸಿಯಾನೆಂಬ ಉತ್ಸುಕತೆ ಉಂಟಾಯಿತು. ॥ ೧೧ ॥ ಪರೀಕ್ಷಿತನೇ! ಸರ್ವದರ್ಶಿಯಾದ ಭಗವಾನ್ ಶ್ರೀಕೃಷ್ಣನಿಗೆ ಗೋಪಾಲಕರ ಆಶಯವು ತಿಳಿದು ಹೋಯಿತು. ದಯಾಮಯನಾದ ಶ್ರೀಕೃಷ್ಣನು ತನ್ನ ಪ್ರಿಯಭಕ್ತರ ಸಂಕಲ್ಪವನ್ನು ಹೇಗೆ ಈಡೇರಿಸುವುದೆಂದು ಯೋಚಿಸತೊಡಗಿದನು. ॥ ೧೨ ॥

ಜನೋ ವೈ ಲೋಕ ಏತಸ್ಮಿನ್ನವಿದ್ಯಾಕಾಮಕರ್ಮಭಿಃ ।
ಉಚ್ಚಾವಚಾಸು ಗತಿಷು ನ ವೇದ ಸ್ವಾಂ ಗತಿಂ ಭ್ರಮನ್
॥ ೧೩ ॥

ಈ ಪ್ರಪಂಚದಲ್ಲಿ ಜೀವರು ಅಜ್ಞಾನವಶದಿಂದ ದೇಹವನ್ನೇ ಆತ್ಮನೆಂದು ಭಾವಿಸಿಕೊಂಡು ಬಗೆ-ಬಗೆಯ ಕಾಮನೆಗಳನ್ನಿಟ್ಟು ಕೊಂಡು ಅವುಗಳ ಪ್ರಾಪ್ತಿಗಾಗಿ ನಾನಾ ವಿಧವಾದ ಕರ್ಮಗಳನ್ನು ಮಾಡುತ್ತಾ ಇರುತ್ತಾರೆ. ಆ ಕರ್ಮಗಳ ಫಲರೂಪವಾಗಿ ದೇವ ಮನುಷ್ಯ-ಪಶು-ಪಕ್ಷಿ ಮೊದಲಾದ ಉಚ್ಚ-ನೀಚ ಯೋನಿಗಳಲ್ಲಿ ಅಲೆಯುತ್ತಾ, ತಮ್ಮ ನಿಜನಾದ ಆತ್ಮಸ್ವರೂಪದ ಗತಿಯನ್ನು ತಿಳಿಯುವುದೇ ಇಲ್ಲ. ॥ ೧೩ ॥

ಇತಿ ಸಂಚಿಂತ್ಯ ಭಗವಾನ್ಮಹಾಕಾರುಣಿಕೋ ಹರಿಃ ।
ದರ್ಶಯಾಮಾಸ ಲೋಕಂ ಸ್ವಂ ಗೋಪಾನಾಂ ತಮಸಃ ಪರಮ್
॥ ೧೪ ॥

ಹೀಗೆ ಯೋಚಿಸಿದ ಪರಮ ಕಾರುಣಿಕನಾದ ಶ್ರೀಹರಿಯು ತನ್ನ ಪ್ರಿಯಭಕ್ತರಾದ ಗೋಪರಿಗೆ ಮಾಯಾಂಧಕಾರದಿಂದ ಅತೀತವಾದ ತನ್ನ ದಿವ್ಯ ಪರಂಧಾಮವನ್ನು ತೋರಿಸಿದನು. ॥ ೧೪ ॥

ಸತ್ಯಂ ಜ್ಞಾನಮನಂತಂ ಯದ್ಬ್ರಹ್ಮ ಜ್ಯೋತಿಃ ಸನಾತನಮ್ ।
ಯದ್ಧಿ ಪಶ್ಯಂತಿ ಮುನಯೋ ಗುಣಾಪಾಯೇ ಸಮಾಹಿತಾಃ
॥ ೧೫ ॥

ಭಗವಂತನು ಮೊಟ್ಟಮೊದಲಿಗೆ ಸಮಾಧಿನಿಷ್ಠರಾದ, ಗುಣಾತೀತರಾದ ಮಹಾಯೋಗಿಗಳು ತಮ್ಮ ಹೃತ್ಕಮಲದಲ್ಲಿ ಸತ್ಯಸ್ವರೂಪನೂ, ಜ್ಞಾನಸ್ವರೂಪನೂ, ಅನಂತನೂ, ಸನಾತನನೂ ಆದ ಪರಂಜ್ಯೋತಿಯನ್ನು ಕಂಡು ಕೊಳ್ಳುವರೋ, ಅಂತಹ ದಿವ್ಯ ಜ್ಯೋತಿಸ್ವರೂಪನಾದ ಬ್ರಹ್ಮನ ಸಾಕ್ಷಾತ್ಕಾರವನ್ನು ಗೋಪರಿಗೆ ಮಾಡಿಸಿದನು. ॥ ೧೫ ॥

ತೇ ತು ಬ್ರಹ್ಮಹ್ರದಂ ನೀತಾ ಮಗ್ನಾಃ ಕೃಷ್ಣೇನ ಚೋದ್ಧೃತಾಃ ।
ದದೃಶುರ್ಬ್ರಹ್ಮಣೋ ಲೋಕಂ ಯತ್ರಾಕ್ರೂರೋऽಧ್ಯಗಾತ್ಪರಾ
॥ ೧೬ ॥

ತಾನು ಮುಂದೆ ಅಕ್ರೂರನಿಗೆ ತನ್ನ ನಿಜರೂಪವನ್ನು ತೋರಿಸಲಿರುವ ಬ್ರಹ್ಮಹ್ರದವೆಂದ ದಿವ್ಯ ಜಲಾಶಯಕ್ಕೆ ಶ್ರೀಕೃಷ್ಣನು ಗೋಪರೆಲ್ಲರನ್ನು ಕರೆದೊಯ್ದು ಅವರೆಲ್ಲರನ್ನೂ ಅಲ್ಲಿ ಮುಳುಗಿಸಿ ಅವರೆಲ್ಲರೂ ಬ್ರಹ್ಮಾನಂದದಲ್ಲಿ ಮೈಮರೆತು ಹೋಗಲು, ಅವರನ್ನು ಹೊರಕ್ಕೆ ತಂದು ಎಚ್ಚರಿಸಿ ಭಗವಂತನು ತನ್ನ ಪರಮಧಾಮದ ದರ್ಶನವನ್ನು ಮಾಡಿಸಿದನು. ॥ ೧೬ ॥

ನಂದಾದಯಸ್ತು ತಂ ದೃಷ್ಟ್ವಾ ಪರಮಾನಂದನಿರ್ವೃತಾಃ ।
ಕೃಷ್ಣಂ ಚ ತತ್ರಚ್ಛಂದೋಭಿಃ ಸ್ತೂಯಮಾನಂ ಸುವಿಸ್ಮಿತಾಃ
॥ ೧೭ ॥

ಭಗವತ್ಸ್ವರೂಪ ಆ ದಿವ್ಯಲೋಕವನ್ನು ನೋಡಿ ನಂದಗೋಪನೇ ಮುಂತಾದ ಗೋಪರು ಪರಮಾನಂದ ಭರಿತರಾದರು. ಅಲ್ಲಿ ಸಕಲ ವೇದಗಳು ಮೂರ್ತಿಮಂತರಾಗಿ ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸುತ್ತಿರುವುದನ್ನು ನೋಡಿ ಅವರೆಲ್ಲರೂ ಪರಮವಿಸ್ಮಿತರಾದರು. ॥ ೧೭ ॥

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೨೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ
ಪೂರ್ವಾರ್ಧೇऽಷ್ಟಾವಿಂಶೋऽಧ್ಯಾಯಃ ॥ ೨೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ರಾಸಲೀಲೆಯ ಪ್ರಾರಂಭ

ಶ್ರೀಶುಕ ಉವಾಚ

ಭಗವಾನಪಿ ತಾ ರಾತ್ರೀಃ ಶರದೋತ್ಫುಲ್ಲಮಲ್ಲಿಕಾಃ ।
ವೀಕ್ಷ್ಯ ರಂತುಂ ಮನಶ್ಚಕ್ರೇ ಯೋಗಮಾಯಾಮುಪಾಶ್ರಿತಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಶ್ರೀಕೃಷ್ಣನು ಭಗವಂತನೇ ಆಗಿದ್ದರೂ ಅರಳಿದ ಮಲ್ಲಿಗೆಯ ಹೂವುಗಳಿಂದ ಘಮ-ಘಮಿಸುತ್ತಿದ್ದ ಶರತ್ಕಾಲದ ರಾತ್ರಿಯನ್ನು ಕಂಡು ಯೋಗಮಾಯೆಯನ್ನು ಆಶ್ರಯಿಸಿ ಗೋಪಿಕೆಯರೊಡನೆ ರಸಮಯ ರಾಸಕ್ರೀಡೆಯನ್ನಾಡಲು ಬಯಸಿದನು. ॥ ೧ ॥

ತದೋಡುರಾಜಃ ಕಕುಭಃ ಕರೈರ್ಮುಖಂ
ಪ್ರಾಚ್ಯಾ ವಿಲಿಂಪನ್ನರುಣೇನ ಶಂತಮೈಃ ।
ಸ ಚರ್ಷಣೀನಾಮುದಗಾಚ್ಛುಚೋ ಮೃಜನ್
ಪ್ರಿಯಃ ಪ್ರಿಯಾಯಾ ಇವ ದೀರ್ಘದರ್ಶನಃ ॥ ೨ ॥

ಬಹು ಕಾಲಾನಂತರ ಆಗಮಿಸಿದ ಪತಿಯು ತನ್ನ ಪತ್ನಿಯ ಸುಂದರವಾದ ಮುಖವನ್ನು ಕುಂಕುಮ ಕೇಸರಿಯಿಂದ ಅಲಂಕರಿಸುವಂತೆ – ಶ್ರೀಕೃಷ್ಣನು ರಾಸಕ್ರೀಡೆಯನ್ನು ಆಡಬೇಕೆಂದು ಸಂಕಲ್ಪಿಸಿದೊಡನೆಯೇ, ಚಂದ್ರನು ತನ್ನ ಸುಖಕರವಾದ ಕಿರಣಗಳ ರೂಪವಾದ ಕೈಗಳಿಂದ ಪೂರ್ವದಿಕ್ಕೆಂಬ ಪ್ರೇಯಸಿಯ ಮುಖ ಮಂಡಲವನ್ನು ಕೆಂಪುಬಣ್ಣವೆಂಬ ಕುಂಕುಮಕೇಸರಿಯಿಂದ ಲೇಪಿಸುತ್ತಾ ಹಗಲಿನ ಬಿಸಿಲಿನಿಂದ ಸೊರಗಿಹೋಗಿದ್ದ ಸಮಸ್ತ ಚರಾಚರ ಪ್ರಾಣಿಗಳ ಸಂತಾಪವನ್ನು ದೂರಗೊಳಿಸಿದನು. ॥ ೨ ॥

ದೃಷ್ಟ್ವಾ ಕುಮುದ್ವಂತಮಖಿಂಡಮಂಡಲಂ
ರಮಾನನಾಭಂ ನವಕುಂಕುಮಾರುಣಮ್ ।
ವನಂ ಚ ತತ್ಕೋಮಲಗೋಭಿರಂಜಿತಂ
ಜಗೌ ಕಲಂ ವಾಮದೃಶಾಂ ಮನೋಹರಮ್ ॥ ೩ ॥

ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಚಂದ್ರನು ಮೂಡಲ ದಿಕ್ಕಿನಲ್ಲಿ ಮೂಡಿಬಂದ ನಂತರ ಕುಂಕುಮ ಕೇಸರಿಯ ಲೇಪನ ದಿಂದ ಕೆಂಪಾದ ರಮಾದೇವಿಯ ಮುಖಿಮಂಡಲದಂತೆ ಎಣ್ಣೆಗೆಂಪಾಗಿದ್ದ ಚಂದ್ರಮಂಡಲವನ್ನೂ, ಆ ಶರಚ್ಚಂದ್ರನ ಕಿರಣ ಗಳಿಂದ ನಯನಾಭಿರಾಮನಾಗಿ ಬೆಳಗುತ್ತಿದ್ದ ವೃಂದಾವನವನ್ನು, ನೋಡಿದ ಶ್ರೀಕೃಷ್ಣನು ಗೋಪಿಯರ ಮನಸ್ಸನ್ನು ಅಪಹರಿಸುವ ಸುಮಧುರವಾದ ವೇಣುಗಾನವನ್ನು ನುಡಿಸಿದನು. ॥ ೩ ॥

ನಿಶಮ್ಯ ಗೀತಂ ತದನಂಗವರ್ಧನಂ
ವ್ರಜಸ್ತ್ರಿಯಃ ಕೃಷ್ಣಗೃಹೀತಮಾನಸಾಃ ।
ಆಜಗ್ಮುರನ್ಯೋನ್ಯಮಲಕ್ಷಿತೋದ್ಯಮಾಃ
ಸ ಯತ್ರ ಕಾಂತೋ ಜವಲೋಲಕುಂಡಲಾಃ ॥ ೪ ॥

ಭಗವಂತನ ಈ ವೇಣುಗಾನವು ಭಗವತ್ ಪ್ರೇಮವನ್ನು ಅವನನ್ನು ಸೇರುವ ಅಭಿಲಾಷೆಯನ್ನು ಅತ್ಯಂತ ಹೆಚ್ಚಿಸುವುದಾಗಿದೆ. ಶ್ಯಾಮ ಸುಂದರನು ಮೊದಲಿಂದಲೇ ಗೋಪಿಯರ ಮನಸ್ಸನ್ನು ತನ್ನ ವಶವಾಗಿಸಿಕೊಂಡಿದ್ದನು. ಈಗಲಾದರೋ ಅವರ ಮನಸ್ಸಿನ ಸಮಸ್ತ ವಸ್ತುಗಳನ್ನು – ಭಯ, ಸಂಕೋಚ, ಧೈರ್ಯ, ಮರ್ಯಾದೆ ಮುಂತಾದ ವೃತ್ತಿಗಳನ್ನು ಕಸಿದುಕೊಂಡಿದ್ದನು. ವೇಣುಗಾನವನ್ನು ಕೇಳುತ್ತಲೇ ಅವರ ಸ್ಥಿತಿ ವಿಚಿತ್ರವಾಗಿತ್ತು. ಶ್ರೀಕೃಷ್ಣನನ್ನು ಪತಿರೂಪ ದಿಂದ ಪಡೆಯಲು ಎಲ್ಲರೂ ಸೇರಿ ಸಾಧನೆ ಮಾಡಿದ್ದ ಗೋಪಿ ಯರು ಈಗ ಒಬ್ಬಳು ಮತ್ತೊಬ್ಬಳಿಗೆ ತಿಳಿಸದೆಯೇ, ಶ್ರೀಕೃಷ್ಣನ ಬಳಿಗೆ ಧಾವಿಸಿದರು. ಪರೀಕ್ಷಿತನೇ! ಅವರು ಲಗುಬಗೆಯಿಂದ ಹೋಗುವಾಗ ಅವರು ಧರಿಸಿದ್ದ ಕರ್ಣಕುಂಡಲಗಳು ತಕ-ತಕನೆ ಕುಣಿಯುತ್ತಿದ್ದವು. ॥ ೪ ॥

ದುಹಂತ್ಯೋಽಭಿಯಯುಃ ಕಾಶ್ಚಿದ್
ದೋಹಂ ಹಿತ್ವಾ ಸಮುತ್ಸುಕಾಃ ।
ಪಯೋಽಧಿಶ್ರಿತ್ಯ ಸಂಯಾವ-
ಮನುದ್ವಾಸ್ಯಾಪರಾ ಯಯುಃ ॥ ೫ ॥

ಶ್ರೀಕೃಷ್ಣನ ಮನೋಹರವಾದ ವಂಶೀಧ್ವನಿಯನ್ನು ಕೇಳಿದ ಗೋಪಿಯರು ತಮ್ಮನ್ನು ತಾವೇ ಮರೆತುಬಿಟ್ಟರು. ಹಾಲು ಕರೆಯುತ್ತಿ ದ್ದವಳು ಅದನ್ನು ಬಿಟ್ಟು ಉತ್ಸುಕತೆಯಿಂದ ಹೊರಟುಬಿಟ್ಟಳು. ಒಲೆಯಮೆಲೆ ಹಾಲು ಕಾಯಿಸುತ್ತಿದ್ದವಳು ಹಾಲು ಉಕ್ಕಿ ಬಂದರೂ ಹಾಗೆಯೇ ಬಿಟ್ಟು ಹೊರಟಳು. ಅನ್ನಮಾಡುತ್ತಿದ್ದವಳು ಅದನ್ನು ಒಲೆಯಿಂದ ಇಳಿಸದೆಯೇ ಕೃಷ್ಣನ ಬಳಿಗೆ ಓಡಿದಳು. ॥ ೫ ॥

ಪರಿವೇಷಯಂತ್ಯಸ್ತದ್ಧಿತ್ವಾ ಪಾಯಯಂತ್ಯಃ ಶಿಶೂನ್ಪಯಃ ।
ಶುಶ್ರೂಷಂತ್ಯಃ ಪತೀನ್ಕಾಶ್ಚಿದಶ್ನಂತ್ಯೋಽಪಾಸ್ಯ ಭೋಜನಮ್ ॥ ೬ ॥

ಊಟ ಬಡಿಸುತ್ತಿದ್ದವಳು ಅದನ್ನು ಅಲ್ಲೆ ಬಿಟ್ಟು ಹೊರಟಳು. ಮಗು ವಿಗೆ ಹಾಲು ಕುಡಿಸುತ್ತಿದ್ದವಳು ಮಗುವನ್ನು ಅಲ್ಲೇ ಬಿಟ್ಟು, ಪತಿ ಸೇವೆಯಲ್ಲಿ ತತ್ಪರಳಾಗಿದ್ದವಳು ಪತಿಯನ್ನು ಬಿಟ್ಟು, ಕೆಲವರು ಊಟಮಾಡುತ್ತಿದ್ದವರು ಊಟವನ್ನು ಬಿಟ್ಟು ಪ್ರಿಯತಮನಾದ ಶ್ರೀಕೃಷ್ಣನ ಬಳಿಗೆ ಧಾವಿಸಿದರು. ॥ ೬ ॥

ಲಿಂಪಂತ್ಯಃ ಪ್ರಮೃಜಂತ್ಯೋಽನ್ಯಾ ಅಂಜಂತ್ಯಃ ಕಾಶ್ಚ ಲೋಚನೇ ।
ವ್ಯತ್ಯಸ್ತವಸ್ತ್ರಾಭರಣಾಃ ಕಾಶ್ಚಿತ್ ಕೃಷ್ಣಾಂತಿಕಂ ಯಯುಃ ॥ ೭ ॥

ಕೆಲವರು ಅಂಗರಾಗವನ್ನು ಶರೀರಕ್ಕೆ ಪೂಸಿಕೊಳ್ಳುತ್ತಿದ್ದರು, ಕೆಲವರು ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳು ತ್ತಿದ್ದರು. ಕೆಲವರು ಅವಸರದಲ್ಲಿ ಸೀರೆಗಳನ್ನು, ಆಭರಣಗಳನ್ನು ತಲೆಕೆಳಕಾಗಿ ಧರಿಸಿಕೊಂಡು ಹಾಗೆಯೇ ಶ್ರೀಕೃಷ್ಣನ ಬಳಿಗೆ ಓಡಿದರು. ॥ ೭ ॥

ತಾ ವಾರ್ಯಮಾಣಾಃ ಪತಿಭಿಃ ಪಿತೃಭಿರ್ಭ್ರಾತೃಬಂಧುಭಿಃ ।
ಗೋವಿಂದಾಪಹೃತಾತ್ಮಾನೋ ನ ನ್ಯವರ್ತಂತ ಮೋಹಿತಾಃ
॥ ೮ ॥

ಹೀಗೆ ಮನೆಯಿಂದ ಹೊರಟ ಗೋಪಿಯರನ್ನು ತಂದೆಯಂದಿರು, ಪತಿಗಳು, ಮೈದುನರು, ಬಂಧುಗಳು ತಡೆದೂ ಪ್ರಯೋಜನವಾಗಲಿಲ್ಲ, ಅವರ ಮಂಗಲಮಯ ಪ್ರೇಮಯಾತ್ರೆಯಲ್ಲಿ, ವಿಘ್ನವನ್ನೊಡ್ಡಿದರೂ ಅವರು ಅದನ್ನು ಲೆಕ್ಕಿಸಲೇ ಇಲ್ಲ, ಏಕೆಂದರೆ, ವಿಶ್ವವಿಮೋಹನ ಶ್ರೀಕೃಷ್ಣನು ಅವರ ಮನಸ್ಸು, ಪ್ರಾಣ, ಆತ್ಮ ಎಲ್ಲವನ್ನು ಅಪಹರಿಸಿ ಬಿಟ್ಟಿದ್ದನು. ॥ ೮ ॥ ಪರೀಕ್ಷಿತನೇ ! ಆ ಸಮಯದಲ್ಲಿ ಕೆಲವು ಗೋಪಿಯರು ಮನೆಯೊಳಗೆ ಇದ್ದು, ಹೊರಗೆ ಹೋಗಲು ಸಾಧ್ಯವಾಗದವರು ತಮ್ಮ ಕಂಗಳನ್ನು ಮುಚ್ಚಿ ಅತ್ಯಂತ ತನ್ಮಯತೆಯಿಂದ ಶ್ರೀಕೃಷ್ಣನ ಸೌಂದರ್ಯ, ಮಾಧುರ್ಯ ಹಾಗೂ ಅವನ ಲೀಲೆಗಳನ್ನು ಚಿಂತಿಸುತ್ತಾ ಧ್ಯಾನಮಗ್ನರಾದರು. ॥ ೯ ॥ ದುಃಸಹವಾದ, ತೀವ್ರವಾದ ವಿರಹವೇದನೆಯ ಅನುಭವದಿಂದಾಗಿ ಆ ಗೋಪಿಕೆಯರಲ್ಲಿದ್ದ ಪಾಪವು ನಿರಸನವಾಯಿತು. ಅನವರತವಾದ ಧ್ಯಾನದಿಂದಾಗಿ ಹೃತ್ಕಮಲದಲ್ಲಿ ಕಾಣಿಸಿಕೊಂಡ ಮನೋಹರವಾದ ಶ್ರೀಕೃಷ್ಣನ ಗಾಢಾಲಿಂಗನದ ಸುಖದಿಂದಾಗಿ ಅವರಲ್ಲಿದ್ದ ಪುಣ್ಯವೂ ಕೂಡ ಕ್ಷೀಣಿಸಿತು. ॥ ೧೦ ॥ ಪರೀಕ್ಷಿತನೇ ! ಆ ಸಮಯದಲ್ಲಿ ಅವರಲ್ಲಿ ಜಾರಭಾವವಿದ್ದರೂ ಅವರು ದೇವ ದೇವನಾದ ನಿರ್ವಿಕಾರನಾದ ಪರಮಾತ್ಮನನ್ನೇ ಆಲಿಂಗಿಸಿಕೊಂಡ ಕಾರಣ, ಪಾಪ-ಪುಣ್ಯಗಳ ಪರಿಣಾಮದಿಂದ ಪ್ರಾಪ್ತವಾದ ಗುಣಮಯ ದೇಹವನ್ನು ತೊರೆದು ಅಪ್ರಾಕೃತವಾದ ಶರೀರಗಳನ್ನು ಪಡೆದುಕೊಂಡರು. ಅಥವಾ ಶ್ರೀಕೃಷ್ಣನಲ್ಲೇ ಸೇರಿ ಹೋದರು. ಭಗವಂತನ ದಿವ್ಯಾಲಿಂಗನವನ್ನು ಪಡೆದು ಕೊಂಡೊಡನೇ ಅವರ ಕರ್ಮಬಂಧನಗಳೆಲ್ಲವೂ ಕಳಚಿ ಬಿದ್ದು ಹೋಗಿದ್ದುವು. ॥ ೧೧ ॥

ಅಂತರ್ಗೃಹಗತಾಃ ಕಾಶ್ಚಿದ್ಗೋಪ್ಯೋಽಲಬ್ಧವಿನಿರ್ಗಮಾಃ ।
ಕೃಷ್ಣಂ ತದ್ಭಾವನಾಯುಕ್ತಾ ದಧ್ಯುರ್ಮೀಲಿತಲೋಚನಾಃ
॥ ೯ ॥

ದುಃಸಹಪ್ರೇಷ್ಠವಿರಹತೀವ್ರತಾಪಧುತಾಶುಭಾಃ ।
ಧ್ಯಾನಪ್ರಾಪ್ತಾಚ್ಯುತಾಶ್ಲೇಷನಿರ್ವೃತ್ಯಾ ಕ್ಷೀಣಮಂಗಲಾಃ
॥ ೧೦ ॥

ತಮೇವ ಪರಮಾತ್ಮಾನಂ ಜಾರಬುದ್ಧ್ಯಾಪಿ ಸಂಗತಾಃ ।
ಜಹುರ್ಗುಣಮಯಂ ದೇಹಂ ಸದ್ಯಃ ಪ್ರಕ್ಷೀಣಬಂಧನಾಃ
॥ ೧೧ ॥

ಪರೀಕ್ಷಿದ್ರಾಜನು ಕೇಳಿದನು – ಶುಕಮುನಿಗಳೇ ! ಗೋಪಿಕೆಯರಾದರೋ ಭಗವಾನ್ ಶ್ರೀಕೃಷ್ಣನನ್ನು ಕೇವಲ ತಮ್ಮ ಪರಮ ಪ್ರಿಯತಮನೆಂದೇ ಭಾವಿಸಿದ್ದರು. ಅವನಲ್ಲಿ ಅವರಿಗೆ ಬ್ರಹ್ಮಭಾವವೇನೋ ಇರಲಿಲ್ಲ, ಹೀಗೆ ಅವರ ದೃಷ್ಟಿಯು ಪ್ರಾಕೃತ ಗುಣಗಳಲ್ಲಿಯೇ ಆಸಕ್ತವಾದಂತೆ ಕಾಣುತ್ತಿತ್ತು. ಇಂತಹ ಸ್ಥಿತಿಯಲ್ಲಿ ಅವರಿಗೆ ಗುಣ ಪ್ರವಾಹರೂಪವಾದ ಈ ಸಂಸಾರದ ನಿವೃತ್ತಿ ಹೇಗೆ ಸಂಭವಿಸಿತು ? ॥ ೧೨ ॥

ರಾಜೋವಾಚ

ಕೃಷ್ಣಂ ವಿದುಃ ಪರಂ ಕಾಂತಂ ನ ತು ಬ್ರಹ್ಮತಯಾ ಮುನೇ ।
ಗುಣಪ್ರವಾಹೋಪರಮಸ್ತಾಸಾಂ ಗುಣಧಿಯಾಂ ಕಥಮ್
॥ ೧೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ ! ಚೇದಿರಾಜನಾದ ಶಿಶುಪಾಲನು ಹೃಷಿಕೇಶನನ್ನು ದ್ವೇಷಿಸುತ್ತಿದ್ದರೂ ದ್ವೇಷರೂಪವಾದ ಶ್ರೀಕೃಷ್ಣತಾದಾತ್ಮ್ಯದಿಂದ ಅವನು ಪ್ರಾಕೃತ ಶರೀರವನ್ನು ತೊರೆದು ಅಪ್ರಾಕೃತ ಶರೀರವನ್ನು ಪಡೆದು ಭಗವಂತನ ಪಾರ್ಷದನಾದನೆಂದು ನಾನು ಮೊದಲೇ ನಿನಗೆ ಹೇಳಿಬಿಟ್ಟಿದ್ದೇನೆ. ಹೀಗಿರುವಾಗ ನಿರಂತರವಾಗಿ ಅನಿರ್ದುಷ್ಟವಾದ ಪ್ರೇಮದಿಂದ ಶ್ರೀಕೃಷ್ಣನನ್ನು ಆರಾಧಿಸುತ್ತಿದ್ದ ಗೋಪಿಯರ ಕುರಿತು ಹೇಳುವುದೇನಿದೇ ? ॥ ೧೩ ॥ ವಾಸ್ತವವಾಗಿ ಭಗವಂತನು ವೃದ್ಧಿ-ವಿನಾಶ, ಪ್ರಮಾಣ-ಪ್ರಮೇಯ, ಗುಣ-ಗುಣಿ ಮುಂತಾದ ಪ್ರಕೃತಿ ಸಂಬಂಧೀ ಭಾವಗಳಿಂದ ರಹಿತನಾಗಿದ್ದಾನೆ. ಅವನು ಅಚಿಂತ್ಯನೂ, ಅನಂತನೂ, ಅಪ್ರಾಕೃತನೂ, ಪರಮಕಲ್ಯಾಣ ಸ್ವರೂಪನೂ, ತ್ರಿಗುಣಾತೀತನೂ ಆಗಿದ್ದು ಕಲ್ಯಾಣಗುಣಗಳಿಗೆ ಏಕಮಾತ್ರ ಆಶ್ರಯನಾಗಿದ್ದಾನೆ. ಭಗವಂತನ ಅವತಾರವೂ ಕೇವಲ ಮನುಷ್ಯರ ಕಲ್ಯಾಣ ಸಾಧನೆಗಾಗಿಯೇ ಆಗಿದೆ. ॥ ೧೪ ॥

ಶ್ರೀಶುಕ ಉವಾಚ

ಉಕ್ತಂ ಪುರಸ್ತಾದೇತತ್ತೇ ಚೈದ್ಯಃ ಸಿದ್ಧಿಂ ಯಥಾ ಗತಃ ।
ದ್ವಿಷನ್ನಪಿ ಹೃಷೀಕೇಶಂ ಕಿಮುತಾಧೋಕ್ಷಜಪ್ರಿಯಾಃ
॥ ೧೩ ॥

ನೃಣಾಂ ನಿಃಶ್ರೇಯಸಾರ್ಥಾಯ ವ್ಯಕ್ತಿರ್ಭಗವತೋ ನೃಪ ।
ಅವ್ಯಯಸ್ಯಾಪ್ರಮೇಯಸ್ಯ ನಿರ್ಗುಣಸ್ಯ ಗುಣಾತ್ಮನಃ
॥ ೧೪ ॥

ಕಾಮಂ ಕ್ರೋಧಂ ಭಯಂ ಸ್ನೇಹಮೈಕ್ಯಂ ಸೌಹೃದಮೇವ ಚ।
ನಿತ್ಯಂ ಹರೌ ವಿದಧತೋ ಯಾಂತಿ ತನ್ಮಯತಾಂ ಹಿ ತೇ
॥ ೧೫ ॥

ಅದಕ್ಕಾಗಿ ಭಗವಂತನೊಂದಿಗೆ ಕೇವಲ ಸಂಬಂಧ ಉಂಟಾಗ ಬೇಕು. ಆ ಸಂಬಂಧವು ಬೇಕಾದರೆ ಕಾಮದಿಂದಾಗಲೀ, ಕ್ರೋಧ ದಿಂದಾಗಲೀ, ಭಯದಿಂದಾಗಲೀ, ಸ್ನೇಹದಿಂದಾಗಲಿ, ಸೌಹಾರ್ದದ್ದಾಗಲಿ. ಬಯಸಿದ ಯಾವುದೇ ಭಾವದಿಂದ ಭಗವಂತನಲ್ಲಿ ನಿತ್ಯ-ನಿರಂತರ ತಮ್ಮ ವೃತ್ತಿಗಳನ್ನು ನೆಲೆಗೊಳಿಸಿದಾಗ ಅವರು ಭಗವಂತನಲ್ಲಿ ಒಂದಾಗುತ್ತಾರೆ. ಇದರಿಂದ ವೃತ್ತಿಗಳು ಭಗವನ್ಮಯವಾಗಿ ಹೋಗುತ್ತವೆ ಮತ್ತು ಆ ಜೀವನಿಗೆ ಭಗವಂತನು ದೊರೆಯುತ್ತಾನೆ. ॥ ೧೫ ॥ ಪರೀಕ್ಷಿತನೇ ! ಪರಮಭಾಗವತನಾದ, ಭಗವದ್ರಹಸ್ಯವನ್ನು ಸಂಪೂರ್ಣವಾಗಿ ತಿಳಿದಿರುವ ಭಕ್ತಶ್ರೇಷ್ಠನಾದ ನಿನ್ನಂತಹವನು ಶ್ರೀಕೃಷ್ಣನ ಸಂಬಂಧವಾಗಿ ಹೀಗೆ ಸಂದೇಹ ಪಡ ಬಾರದು. ಯೋಗೇಶ್ವರರಿಗೂ ಈಶ್ವರನಾದ, ಅಜನ್ಮಾ ಭಗವಂತ ನಿಗೆ ಇದು ಆಶ್ಚರ್ಯದ ಮಾತಾಗಿದೆಯೇ ? ಅಯ್ಯಾ! ಅವನ ಸಂಕಲ್ಪಮಾತ್ರದಿಂದ, ಇಡೀ ಜಗತ್ತಿನ ಪರಮಕಲ್ಯಾಣವಾಗ ಬಲ್ಲದು. ॥ ೧೬ ॥ ವ್ರಜದ ಅನುಪಮ ವಿಭೂತಿಗಳಾದ ಗೋಪಿ ಯರು ತನ್ನ ಬಳಿಗೆ ಬಂದಿರುವರೆಂದು ಶ್ರೀಕೃಷ್ಣನು ನೋಡಿದಾಗ, ಅವನು ವಿನೋದದಿಂದ ತುಂಬಿದ ವಾಕ್ಚಾತುರ್ಯದಿಂದ ಅವರನ್ನು ವಿಮೋಹಗೊಳಿಸುತ್ತಾ ಇಂತೆಂದನು. ॥ ೧೭ ॥

ನ ಚೈವಂ ವಿಸ್ಮಯಃ ಕಾರ್ಯೋ ಭವತಾ ಭಗವತ್ಯಜೇ।
ಯೋಗೇಶ್ವರೇಶ್ವರೇ ಕೃಷ್ಣೇ ಯತ ಏತದ್ವಿಮುಚ್ಯತೇ
॥ ೧೬ ॥

ತಾ ದೃಷ್ಟ್ವಾಂತಿಕಮಾಯಾತಾ ಭಗವಾನ್ ವ್ರಜಯೋಷಿತಃ।
ಅವದದ್ವದತಾಂ ಶ್ರೇಷ್ಠೋ ವಾಚಃ ಪೇಶೈರ್ವಿಮೋಹಯನ್
॥ ೧೭ ॥

ಶ್ರೀಭಗವಾನುವಾಚ

ಸ್ವಾಗತಂ ವೋ ಮಹಾಭಾಗಾಃ ಪ್ರಿಯಂ ಕಿಂ ಕರವಾಣಿ ವಃ।
ವ್ರಜಸ್ಯಾನಾಮಯಂ ಕಚ್ಚಿದ್ ಬ್ರೂತಾಗಮನಕಾರಣಮ್
॥ ೧೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಮಹಾ ಭಾಗ್ಯಶಾಲಿ ಯರಾದ ಗೋಪಿಯರೇ ! ನಿಮಗೆ ಸ್ವಾಗತ ಬಯಸುತ್ತೇನೆ. ನಿಮಗೆ ಪ್ರಿಯವಾದ ಯಾವ ಕೆಲಸವನ್ನು ಮಾಡಿಕೊಡಲಿ ? ವ್ರಜದಲ್ಲಿ ಎಲ್ಲರೂ ಕುಶಲಿಗಳಾಗಿದ್ದಾರಲ್ಲ? ನಿಮ್ಮ ಆಗಮನದ ಕಾರಣ ವೇನು ? ಹೇಳಿರಿ. ॥ ೧೮ ॥ ಸುಂದರಿಯರಾದ ಗೋಪಿಯರೇ! ಇದು ಭಯಾನಕ ರಾತ್ರಿಯಾಗಿದೆ. ಭಯಂಕರವಾದ ಪ್ರಾಣಿಗಳು ಈ ಅರಣ್ಯದಲ್ಲಿ ಸಂಚರಿಸುತ್ತವೆ. ಹೀಗಿರುವಾಗ ಹೆಂಗಸರಾದ ನೀವು ಇಲ್ಲಿರುವುದು ತರವಲ್ಲ. ನೀವೆಲ್ಲರೂ ಈಗಲೇ ವ್ರಜಕ್ಕೆ ಹಿಂದಿರುಗಿರಿ. ॥ ೧೯ ॥ ನಿಮ್ಮನ್ನು ಕಾಣದೆ ನಿಮ್ಮ ತಂದೆ-ತಾಯಿ ಯರು, ಸಹೋದರರು, ಪತಿಗಳು, ಪುತ್ರರು ಎಲ್ಲರೂ ನಿಮ್ಮನ್ನು ಹುಡುಕುತ್ತಿರಬಹುದು. ಅವರಿಗೆ ಭಯವುಂಟಾಗುವಂತೆ ವರ್ತಿಸ ಬೇಡಿ. ॥ ೨೦ ॥ ನೀವು ಇಲ್ಲಿಗೆ ಬಂದು ಚಂದ್ರನ ಬೆಳದಿಂಗಳಿಂದ ಪ್ರಕಾಶಮಾನವಾಗಿ ಕಾಣುತ್ತಿರುವ ವಿಕಸಿತವಾದ ಘಮ-ಘಮಿಸುವ ಪುಷ್ಪಗಳಿಂದ ಕೂಡಿದ ವೃಂದಾವನನ್ನು ನೋಡಿದಿರಿ. ಯಮುನೆಯ ಮೇಲಿನಿಂದ ಬೀಸಿ ಬರುವ ತಂಗಾಳಿಯಿಂದ ಅಲುಗಾಡುವ ವೃಕ್ಷ ಗಳ ತಳಿರುಗಳಿಂದ ಈ ವೃಂದಾವನದ ವನಸಿರಿಯನ್ನು ನೋಡಿ ಆನಂದಿಸಿದಿರಿ. ನಿಮ್ಮ ಆಗಮನವೇನೂ ವ್ಯರ್ಥವಾಗಲಿಲ್ಲ. ನೀವಿನ್ನು ಹೋಗಬಹುದು. ॥ ೨೧ ॥ ನೀವಿಗಲೇ ತಡಮಾಡದೆ ವ್ರಜಕ್ಕೆ ಹೊರಡಿರಿ. ಸತೀಧರ್ಮವನ್ನು ಅನುಸರಿಸಿ ನಿಮ್ಮ ಪತಿಗಳ ಸೇವೆ-ಶುಶ್ರೂಷೆ ಮಾಡಿರಿ. ಮನೆಯಲ್ಲಿ ಮಕ್ಕಳು ಹಾಲಿಗಾಗಿ ಅಳುತ್ತಿರುವರು. ಕರುಗಳೂ ಕೂಡ 'ಹಂಬಾ' ಎಂದು ಕೂಗಿ ಕೊಳ್ಳುತ್ತಿವೆ. ಕರುಗಳನ್ನು ಹಾಲುಣಲು ಬಿಟ್ಟು ಹಸುಗಳನ್ನು ಕರೆಯಿರಿ. ನಿಮ್ಮ ಮಕ್ಕಳಿಗೆ ಹಾಲುಣಿಸಿ ಮಲಗಿಸಿರಿ. ॥ ೨೨ ॥

ರಜನ್ಯೇಷಾ ಘೋರರೂಪಾ ಘೋರಸತ್ತ್ವನಿಷೇವಿತಾ।
ಪ್ರತಿಯಾತ ವ್ರಜಂ ನೇಹ ಸ್ಥೇಯಂ ಸ್ತ್ರೀಭಿಃ ಸುಮಧ್ಯಮಾಃ
॥ ೧೯ ॥

ಮಾತರಃ ಪಿತರಃ ಪುತ್ರಾ ಭ್ರಾತರಃ ಪತಯಶ್ಚ ವಃ।
ವಿಚಿನ್ವಂತಿ ಹ್ಯಪಶ್ಯಂತೋ ಮಾ ಕೃಧ್ವಂ ಬಂಧುಸಾಧ್ವಸಮ್
॥ ೨೦ ॥

ದೃಷ್ಟಂ ವನಂ ಕುಸುಮಿತಂ ರಾಕೇಶಕರರಂಜಿತಮ್।
ಯಮುನಾನಿಲಲೀಲೈಜತ್ತರುಪಲ್ಲವಶೋಭಿತಮ್
॥ ೨೧ ॥

ತದ್ಯಾತ ಮಾ ಚಿರಂ ಗೋಷ್ಠಂ ಶುಶ್ರೂಷಧ್ವಂ ಪತೀನ್ಸತೀಃ।
ಕ್ರಂದಂತಿ ವತ್ಸಾ ಬಾಲಾಶ್ಚ ತಾನ್ಪಾಯಯತ ದುಹ್ಯತ
॥ ೨೨ ॥

ಅಥವಾ ಮದಭಿಸ್ನೇಹಾದ್ಭವತ್ಯೋ ಯಂತ್ರಿತಾಶಯಾಃ ।
ಆಗತಾ ಹ್ಯುಪಪನ್ನಂ ವಃ ಪ್ರೀಯಂತೇ ಮಯಿ ಜಂತವಃ
॥ ೨೩ ॥

ಭರ್ತುಃ ಶುಶ್ರೂಷಣಂ ಸ್ತ್ರೀಣಾಂ
ಪರೋ ಧರ್ಮೋ ಹ್ಯಮಾಯಯಾ ।
ತದ್ಬಂಧೂನಾಂ ಚ ಕಲ್ಯಾಣ್ಯಃ
ಪ್ರಜಾನಾಂ ಚಾನುಪೋಷಣಮ್ ॥ ೨೪ ॥

ದುಃಶೀಲೋ ದುರ್ಭಗೋ ವೃದ್ಧೋ
ಜಡೋ ರೋಗ್ಯಧನೋಽಪಿ ವಾ ।
ಪತಿಃ ಸ್ತ್ರೀಭಿರ್ನ ಹಾತವ್ಯೋ
ಲೋಕೇಪ್ಸುಭಿರಪಾತಕೀ ॥ ೨೫ ॥

ಅಸ್ವರ್ಗ್ಯಮಯಶಸ್ಯಂ ಚ ಫಲ್ಗು ಕೃಚ್ಛ್ರಂ ಭಯಾವಹಮ್ ।
ಜುಗುಪ್ಸಿತಂ ಚ ಸರ್ವತ್ರ ಔಪಪತ್ಯಂ ಕುಲಸ್ತ್ರಿಯಾಃ
॥ ೨೬ ॥

ಶ್ರವಣಾದ್ದರ್ಶನಾದ್ಧ್ಯಾನಾನ್ಮಯಿ ಭಾವೋಽನುಕೀರ್ತನಾತ್ ।
ನ ತಥಾ ಸನ್ನಿಕರ್ಷೇಣ ಪ್ರತಿಯಾತ ತತೋ ಗೃಹಾನ್
॥ ೨೭ ॥

ಶ್ರೀಶುಕ ಉವಾಚ

ಇತಿ ವಿಪ್ರಿಯಮಾಕರ್ಣ್ಯ ಗೋಪ್ಯೋ ಗೋವಿಂದಭಾಷಿತಮ್ ।
ವಿಷಣ್ಣಾಭ್ಗ್ನಸಂಕಲ್ಪಾಶ್ಚಿಂತಾಮಾಪುರ್ದುರತ್ಯಯಾಮ್
॥ ೨೮ ॥

ಕೃತ್ವಾಮುಖಾನ್ಯವ ಶುಚಃ ಶ್ವಸನೇನ ಶುಷ್ಯದ್-
ಬಿಂಬಾಧರಾಣಿ ಚರಣೇನ ಭುವಂ ಲಿಖಂತ್ಯಃ ।
ಅಸ್ರೈರುಪಾತ್ತಮಸಿಭಿಃ ಕುಚಕುಂಕುಮಾನಿ
ತಸ್ಥುರ್ಮೃಜಂತ್ಯ ಉರುದುಃಖಭರಾಃ ಸ್ಮತೂಷ್ಣೀಮ್ ॥ ೨೯ ॥

ನನ್ನ ಮೇಲಿನ ಪ್ರೇಮದಿಂದ ಆಕರ್ಷಿಸಲ್ಪಟ್ಟವರಾಗಿ ನೀವೇನಾದರೂ ಇಲ್ಲಿಗೆ ಬಂದಿದ್ದರೆ ಅದೂ ಕೂಡ ಸಮಂಜಸವೇ ಆಗಿದೆ. ಏಕೆಂದರೆ, ಎಲ್ಲರಿಗೆ ಆತ್ಮಸ್ವರೂಪನಾದ ನನ್ನನ್ನು ಎಲ್ಲ ಪ್ರಾಣಿಗಳೂ ಸ್ವಾಭಾವಿಕವಾಗಿಯೇ ಪ್ರೀತಿಸುತ್ತವೆ. ನನ್ನನ್ನು ನೋಡಿ ಪ್ರಸನ್ನರಾಗುತ್ತವೆ. ॥ ೨೩. ॥ ಮಂಗಳಾಂಗಿಯರೇ ! ನಿರ್ವಂಚನೆಯಿಂದ ಪತಿಸೇವೆ ಮಾಡುವುದು, ಬಂಧುಗಳನ್ನು ಸಮಾದರಿಸುವುದು, ಸಂತಾನದ ಪಾಲನೆ-ಪೋಷಣೆ ಮಾಡುವುದು ಸ್ತ್ರೀಯರ ಪರಮ ಧರ್ಮವಾಗಿದೆ. ॥ ೨೪ ॥ ಉತ್ತಮ ಲೋಕವನ್ನು ಪಡೆಯುವ ಅಭಿಲಾಷೆಯುಳ್ಳ ಸಾಧ್ವಿಯು ಪಾತಕಿಯಾದವನನ್ನು ಬಿಟ್ಟು ಬೇರೆ ಯಾವುದೇ ರೀತಿಯ ಪತಿಯನ್ನು ಪರಿತ್ಯಾಗಮಾಡಬಾರದು. ಅವನು ಬೇಕಾದರೆ ಕೆಟ್ಟಸ್ವಭಾವದವನಾಗಿರಲೀ, ನಿರ್ಧನನಾಗಿರಲಿ, ಮುದುಕನಾಗಿರಲೀ, ಜಡವಾಗಿರಲೀ, ದರಿದ್ರನಾಗಿರಲಿ, ರೋಗಿಯಾಗಿರಲಿ ಅವನನ್ನು ತ್ಯಜಿಸಬಾರದು. ॥ ೨೫ ॥ ಕುಲೀನ ಸ್ತ್ರೀಯರಿಗೆ ಜಾರಪುರುಷನ ಸಮಾಗಮವು ಸರ್ವವಿಧದಿಂದಲೂ ನಿಂದನೀಯವಾಗಿದೆ. ಇದರಿಂದ ಅವರ ಪರಲೋಕವು ಕೆಡುವುದು, ಸ್ವರ್ಗವೂ ಸಿಗುವುದಿಲ್ಲ ಈ ಲೋಕದಲ್ಲಿಯೂ ಅಪಕೀರ್ತಿಯುಂಟಾಗುತ್ತದೆ. ಈ ಕೆಟ್ಟಕೆಲಸವಂತೂ ಅತ್ಯಂತ ತುಚ್ಛವೂ, ನಿಂದನೀಯವೂ ಆಗಿದೆ. ಇದರಿಂದ ವರ್ತಮಾನದಲ್ಲಿ ಕಷ್ಟಗಳೇ ಇದ್ದು, ಎಲ್ಲರಿಗೆ ಭಯಪಡಬೇಕಾಗುತ್ತದೆ. ಕುಲೀನ ಸ್ತ್ರೀಯರಿಗೆ ಇದು ಅತ್ಯಂತ ನೀಚಕಾರ್ಯವಾಗಿದೆ, ನರಕಕ್ಕೆ ಕಾರಣವಾಗಿದೆ. ॥ ೨೬ ॥ ಗೋಪಿಯರೇ ! ನನ್ನ ಲೀಲಾ-ಗುಣಗಳ ಶ್ರವಣದಿಂದ ಕೀರ್ತನದಿಂದ, ನನ್ನ ದರ್ಶನದಿಂದ ಮತ್ತು ನನ್ನ ಶ್ರೀವಿಗ್ರಹದ ಧ್ಯಾನದಿಂದ ಉಂಟಾಗುವ ಅನನ್ಯ ಪ್ರೇಮವು, ಬಳಿಯಲ್ಲಿ ಇರುವುದರಿಂದ ದೊರೆಯುವುದಿಲ್ಲ ಅದಕ್ಕಾಗಿ ನೀವೆಲ್ಲರೂ ಶೀಘ್ರವಾಗಿ ನಿಮ್ಮ-ನಿಮ್ಮ ಮನೆಗಳಿಗೆ ಮರಳಿ ಹೋಗಿರಿ. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಇಂತಹ ಅಪ್ರಿಯವಾದ ಮಾತನ್ನು ಕೇಳಿದ ಗೋಪಿಯರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಅವರ ಆಸೆ-ಆಕಾಂಕ್ಷೆಗಳೆಲ್ಲ ನುಚ್ಚು ನೂರಾದವು. ಕಷ್ಟ ದುಃಖಿತರಾದರು. ದಾಟಲಶಕ್ಯವಾದ ಚಿಂತಾಸಮುದ್ರದಲ್ಲಿ ಮುಳುಗಿಹೋದರು. ॥ ೨೮ ॥ ವಿರಹ ದುಃಖದಿಂದಾಗಿ ಗೋಪಿಯರು ತಲೆತಗ್ಗಿಸಿಕೊಂಡು ನಿಟ್ಟುಸಿರು ಬಿಡುತ್ತಿದ್ದರು. ಆ ನಿಟ್ಟುಸಿರಿನ ಬಿಸಿಯಿಂದಾಗಿ ತೊಂಡೆಯಂತೆ ಇದ್ದ ಅವರ ಕೆಂದುಟಿಗಳು ಒಣಗಿಹೋದುವು. ಮುಂದು ಗಾಣದೆ ಕಾಲುಗುರುಗಳಿಂದ ಭೂಮಿಯನ್ನು ಕೆರೆಯುತ್ತಿದ್ದರು. ಕಂಗಳಿಂದ ದುಃಖಾಶ್ರುಗಳು ಹರಿದು ಕಾಡಿಗೆಯೊಂದಿಗೆ ಕುಚ ಮಂಡಲದಲ್ಲಿ ಲೇಪಿತವಾಗಿದ್ದ ಕುಂಕುಮ ಕೇಸರಿಯು ತೊಳೆದು ಹಾಕಿತು. ದುಃಖ ಆವೇಗದಿಂದ ಗಂಟಲು ಕಟ್ಟಿ ಯಾವ ಮಾತನ್ನು ಆಡಲಾಗದೆ ಮೌನವಾಗಿ ನಿಂತುಬಿಟ್ಟರು. ॥ ೨೯ ॥ ಗೋಪಿಯರು ತಮ್ಮ ಪ್ರಿಯ ಶ್ಯಾಮಸುಂದರನಿಗಾಗಿ ಸಮಸ್ತ ಕಾಮನೆಗಳನ್ನು, ಭೋಗಗಳನ್ನು ಬಿಟ್ಟುಬಿಟ್ಟಿದ್ದರು. ಶ್ರೀಕೃಷ್ಣನಲ್ಲಿ ಅವರಿಗೆ ಅತ್ಯಂತ ಅನುರಾಗ, ಪರಮಪ್ರೇಮವಿತ್ತು. ತಮ್ಮ ಪ್ರಿಯತಮನಾದ

ಪ್ರೇಷ್ಠಂ ಪ್ರಿಯೇತರಮಿವ ಪ್ರತಿಭಾಷಮಾಣಂ
ಕೃಷ್ಣಂ ತದರ್ಥವಿನಿವರ್ತಿತಸರ್ವಕಾಮಾಃ ।
ನೇತ್ರೇ ವಿಮೃಜ್ಯ ರುದಿತೋಪಹತೇ ಸ್ಮ ಕಿಂಚಿತ್-
ಸಂರಂಭಗದ್ಗದಗಿರೋಽಬ್ರುವತಾನುರಕ್ತಾಃ ॥ ೩೦ ॥

ಶ್ರೀಕೃಷ್ಣನ ಇಂತಹ ನಿಷ್ಠುರವಾದ, ಅಪ್ರಿಯದಂತಿರುವ ಮಾತನ್ನು ಕೇಳಿದಾಗ ಅವರಿಗೆ ಅತ್ಯಂತ ದುಃಖವಾಯಿತು. ಅಳುತ್ತಾ-ಅಳುತ್ತಾ ಕಣ್ಣುಗಳು ಕೆಂಪಾದವು ನೀರು ತುಂಬಿ ಮಂಜಾದವು. ಕೊನೆಗೆ ಅವರು ಧೈರ್ಯತಂದುಕೊಂಡು ಕಣ್ಣೀರನ್ನು ಒರೆಸಿಕೊಂಡು, ಪ್ರಣಯಕೋಪದಿಂದ ಗದ್ಗದ ಧ್ವನಿಯಿಂದ ಹೇಳತೊಡಗಿದರು. ॥ ೩೦ ॥

ಗೋಪ್ಯ ಊಚುಃ

ಮೈವಂ ವಿಭೋಽರ್ಹತಿ ಭವಾನ್ಗದಿತುಂ ನೃಶಂಸಂ
ಸಂತ್ಯಜ್ಯ ಸರ್ವವಿಷಯಾಂಸ್ತವ ಪಾದಮೂಲಮ್ ।
ಭಕ್ತಾ ಭಜಸ್ವ ದುರವಗ್ರಹ ಮಾ ತ್ಯಜಾಸ್ಮಾನ್
ದೇವೋ ಯಥಾಽದಿಪುರುಷೋ ಭಜತೇ ಮುಮುಕ್ಷೂನ್ ॥ ೩೧ ॥

ಗೋಪಿಯರು ಹೇಳಿದರು – ಪ್ರಾಣವಲ್ಲಭನೇ! ಇಂತಹ ನಿಷ್ಠುರವಾದ ಮಾತುಗಳನ್ನಾಡುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ, ನಮ್ಮದೆಂದು ಭಾವಿಸುವ ಸರ್ವಸ್ವವನ್ನು ಪರಿತ್ಯಜಿಸಿ ನಿನ್ನ ಪಾದಮೂಲವನ್ನು ಸೇರಿದ್ದೇವೆ. ಸರ್ವತಂತ್ರ ಸ್ವತಂತ್ರನೇ! ನಮ್ಮನ್ನು ತ್ಯಜಿಸಬೇಡ. ಆದಿ ಪುರುಷನಾದ ನಾರಾಯಣನು ಮೋಕ್ಷಾಪೇಕ್ಷಿಗಳಾದ ಭಕ್ತರನ್ನು ಪರಿಪಾಲಿಸುವಂತೆ ಭಕ್ತರಾದ ನಮ್ಮನ್ನು ಪರಿಗ್ರಹಿಸಿ ಪಾಲಿಸು. ॥ ೩೧॥ ಪ್ರಾಣಪ್ರಿಯನೇ! ನೀನು ಸಮಸ್ತ ಧರ್ಮಗಳ ರಹಸ್ಯವನ್ನು ಬಲ್ಲವನಾಗಿರುವೆ. 'ತನ್ನ ಪತಿ-ಪುತ್ರ, ಬಂಧು-ಬಾಂಧವರ ಸೇವೆ ಮಾಡುವುದೇ ಸ್ತ್ರೀಯರ ಸ್ವಧರ್ಮವಾಗಿದೆ' ಎಂದು ನೀನು ಹೇಳಿರುವುದು ಅಕ್ಷರಶಃ ಸರಿಯಾಗಿದೆ. ಆದರೆ ಈ ಉಪದೇಶಕ್ಕೆ ಅನುಸಾರ ನಮಗೆ ನಿನ್ನ ಸೇವೆಮಾಡುವುದೇ ಸೂಕ್ತವಾಗಿದೆ. ಏಕೆಂದರೆ, ನೀನೇ ಎಲ್ಲ ಉಪದೇಶಗಳ ಪರಮ ಲಕ್ಷ್ಯವಾಗಿರುವೆ, ಸಾಕ್ಷಾತ್ ಭಗವಂತನೇ ಆಗಿರುವೆ. ನೀನೇ ಸಮಸ್ತ ಶರೀರಧಾರಿಗಳ ಸುಹೃದನೂ, ಆತ್ಮನೂ ಆಗಿರುವೆ ಮತ್ತು ಪರಮ ಪ್ರಿಯತಮನೂ ಆಗಿರುವೆ. ॥ ೩೨ ॥

ಯತ್ತ್ವತ್ಯಪತ್ಯಸುಹೃದಾಮನುವೃತ್ತಿರಂಗ
ಸ್ತ್ರೀಣಾಂ ಸ್ವಧರ್ಮ ಇತಿ ಧರ್ಮವಿದಾ ತ್ವಯೋಕ್ತಮ್ ।
ಅಸ್ತ್ವೇವಮೇತದುಪದೇಶಪದೇ ತ್ವಯೀಶೇ
ಪ್ರೇಷ್ಠೋ ಭವಾಂಸ್ತನುಭೃತಾಂ ಕಿಲ ಬಂಧುರಾತ್ಮಾ ॥ ೩೨ ॥

ಆತ್ಮಜ್ಞಾನದಲ್ಲಿ ನಿಪುಣರಾದ ಮಹಾಪುರುಷರು ನಿನ್ನನ್ನೇ ಪ್ರೇಮಿಸುತ್ತಿರುವರು. ಏಕೆಂದರೆ, ನೀನು ನಿತ್ಯ ಪ್ರಿಯನೂ, ತಮ್ಮ ಆತ್ಮನೇ ಆಗಿರುವೆ. ಅನಿತ್ಯರಾದ, ದುಃಖಿಕೊಡುವಂತಹ ಪತಿ-ಪುತ್ರರಿಂದ ಏನು ಪ್ರಯೋಜನ? ಪರಮೇಶ್ವರನೇ! ನಮ್ಮ ಮೇಲೆ ಪ್ರಸನ್ನನಾಗು, ಕೃಪೆ ದೋರು. ಕಮಲನಯನಾ! ಬಹಳ ಕಾಲದಿಂದಲೂ ನಿನ್ನಲ್ಲಿಟ್ಟಿರುವ ಸುಕೋಲವಾದ ಆಶಾಲತೆಯನ್ನು ಕತ್ತರಿಸಿ ಹಾಕಬೇಡ. ॥ ೨೩. ॥ ಮನಮೋಹನ! ಇದುವರೆಗೂ ನಮ್ಮ ಚಿತ್ತವು ಗೃಹಕೃತ್ಯದಲ್ಲೇ ತೊಡಗಿತ್ತು. ಅದರಿಂದ ನಮ್ಮ ಕೈಗಳು ಅದರಲ್ಲೇ ತೊಡಗಿತ್ತು. ಆದರೆ ನಾವು ನೋಡು-ನೋಡುತ್ತಾ ನಮ್ಮ ಚಿತ್ತವನ್ನು ಸುಖ ಸ್ವರೂಪನಾದ ನೀನು ಅಪಹರಿಸಿ ಬಿಟ್ಟಿರುವೆ. ಇದರಲ್ಲಿ ನಿನಗೆ ಯಾವುದೇ ಕಷ್ಟವಾಗಲಿಲ್ಲ, ಆದರೆ ಈಗಲಾದರೋ ನಮ್ಮ ಗತಿ-ಮತಿ ಬೇರೆಯೇ ಆಗಿಬಿಟ್ಟಿದೆ. ನಮ್ಮ ಈ ಕಾಲುಗಳು ನಿನ್ನ ಚರಣಕಮಲಗಳನ್ನು ಬಿಟ್ಟು ಒಂದು ಹೆಜ್ಜೆಯೂ ಮುಂದಿಡಲು ಸಿದ್ಧರಿಲ್ಲ, ಹಾಗಿರುವಾಗ ನಾವು ವ್ರಜಕ್ಕೆ ಹೋಗುವುದೆಂತು? ಅಲ್ಲಿಗೆ ಹೋಗಿ ಮಾಡುವುದಾದರೂ ಏನು? ॥ ೩೪ ॥

ಕುರ್ವಂತಿ ಹಿ ತ್ವಯಿ ರತಿಂ ಕುಶಲಾಃ ಸ್ವಆತ್ಮನ್
ನಿತ್ಯಪ್ರಿಯೇ ಪತಿಸುತಾದಿಭಿರಾರ್ತಿದೈಃ ಕಿಮ್ ।
ತನ್ನಃ ಪ್ರಸೀದ ಪರಮೇಶ್ವರ ಮಾ ಸ್ಮ ಛಿಂದ್ಯಾ
ಆಶಾಂ ಭೃತಾಂ ತ್ವಯಿ ಚಿರಾದರವಿಂದನೇತ್ರ ॥ ೩೩ ॥

ಚಿತ್ತಂ ಸುಖೇನ ಭವತಾಪಹೃತಂ ಗೃಹೇಷು
ಯನ್ನಿರ್ವಿಶತ್ಯುತ ಕರಾವಪಿ ಗೃಹ್ಯಕೃತ್ಯೇ ।
ಪಾದೌ ಪದಂ ನ ಚಲತಸ್ತವ ಪಾದಮೂಲಾದ್
ಯಾಮಃ ಕಥಂ ವ್ರಜಮಥೋ ಕರವಾಮ ಕಿಂ ವಾ ॥ ೩೪ ॥

ಪ್ರಾಣವಲ್ಲಭ, ಪ್ರಾಣಸಖನೇ! ನಿನ್ನ ಕಿರುನಗೆಯಿಂದಲೂ, ಕುಡಿನೋಟದಿಂದಲೂ, ಮನೋಹರವಾದ, ಮಧುರವಾದ ವೇಣುಗಾನದಿಂದಲೂ ನಮ್ಮ ಹೃದಯದಲ್ಲಿ ಉರಿಯುತ್ತಿರುವ ಪ್ರೇಮ ಮತ್ತು ಮಿಲನದ ಅಗ್ನಿಯನ್ನು ನಿನ್ನ ಅಧರಾಮೃತವನ್ನು ಕೆಂದುಟಿಗಳ ಮೂಲಕ ಸುರಿದು ಆರಿಸಿಬಿಡು. ನೀನೇನಾದರೂ ಹಾಗೆ

ಸಿಂಚಾಂಗ ನಸ್ತ್ವದಧರಾಮೃತಪೂರಕೇಣ
ಹಾಸಾವಲೋಕಕಲಗೀತಜಹೃಚ್ಛಯಾಗ್ನಿಮ್ ।
ನೋ ಚೇದ್ವಯಂ ವಿರಹಜಾಗ್ನ್ಯುಪಯುಕ್ತದೇಹಾ
ಧ್ಯಾನೇನ ಯಾಮ ಪದಯೋಃ ಪದವೀಂ ಸಖೇ ತೇ ॥ ೩.೫ ॥

ಮಾಡದಿದ್ದರೆ ವಿರಹಾಗ್ನಿಗೆ ನಮ್ಮ ಶರೀರವನ್ನು ಬಲಿಗೊಟ್ಟು ಧ್ಯಾನದ ಮೂಲಕ ನಿನ್ನ ಚರಣಕಮಲಗಳಲ್ಲಿ ಸೇರಿ ಬಿಡುವೆವು. ॥ ೩.೫ ॥

ಯರ್ಹ್ಯಂಬುಜಾಕ್ಷ ತವ ಪಾದತಲಂ ರಮಾಯಾ
ದತ್ತಕ್ಷಣಂ ಕ್ವಚಿದರಣ್ಯಜನಪ್ರಿಯಸ್ಯ ।
ಅಸ್ಪಾಕ್ಷ್ಮ ತತ್ಪ್ರಭೃತಿ ನಾನ್ಯಸಮಕ್ಷಮಂಗ
ಸ್ಥಾತುಂ ತ್ವಯಾಭಿರಮಿತಾ ಬತ ಪಾರಯಾಮಃ ॥ ೩.೬ ॥

ಕಮಲಾಕ್ಷನೇ ! ನೀನು ವನವಾಸಿಗಳನ್ನು ಪ್ರೀತಿಸುವೆ. ವನವಾಸಿಗಳಾದ ನಾವೂ ನಿನ್ನನ್ನು ಬಹಳವಾಗಿ ಪ್ರೀತಿಸುತ್ತೇವೆ. ಆದುದರಿಂದಲೇ ನೀನು ಅವರ ಮಧ್ಯದಲ್ಲಿ ವಾಸಿಸುತ್ತಿರುವೆ. ಯಾರ ಪಾದಸೇವೆಯು ಲಕ್ಷ್ಮೀದೇವಿಗೂ ಯಾವಾಗಲೊಮ್ಮೆ ಪ್ರಾಪ್ತವಾಗುವುದೋ, ಅಂತಹ ಪಾದತಲವನ್ನು ಸ್ಪರ್ಶಿಸುವ ಸೌಭಾಗ್ಯವು ನಮಗೂ ಸಿಕ್ಕಿತು. ಅಂದು ನೀನು ನಮ್ಮನ್ನು ದಾಸಿಯರನ್ನಾಗಿ ಸ್ವೀಕರಿಸಿ ಆನಂದವನ್ನುಂಟುಮಾಡಿದೆ. ಅಂದಿನಿಂದ ನಾವು ಬೇರೆಯವರ ಮುಂದೆ ಒಂದು ಕ್ಷಣವಾದರೂ ನಿಲ್ಲಲು ಅಸಮರ್ಥರಾಗಿದ್ದೇವೆ. ಹಾಗಿರುವಾಗ ಪತಿ-ಪುತ್ರರ ಸೇವೆಯಾದರೋ ದೂರವೇ ಉಳಿಯಿತು. ॥ ೩.೬ ॥ ನಮ್ಮ ಸ್ವಾಮಿಯೇ ! ಯಾವ ಮಹಾಲಕ್ಷ್ಮಿಯ ಕಡೆಗಣ್ಣ ನೋಟದ ಅನುಗ್ರಹಕ್ಕಾಗಿ ಇತರ ದೇವತೆಗಳು ತಪಸ್ಸಿನ ಮೂಲಕವಾಗಿ ಪ್ರಯಾಸಪಡುವರೋ ಅಂತಹ ಲಕ್ಷ್ಮೀದೇವಿಯೂ ನಿನ್ನ ಹೃತ್ಕಮಲದಲ್ಲಿ ನೆಲೆಸಿದ್ದರೂ ಅಲ್ಲಿರುವುದು ಅವಳಿಗೆ ತೃಪ್ತಿಯನ್ನುಂಟುಮಾಡಲಿಲ್ಲ, ನಿನ್ನ ಸೇವಕರಿಂದ ಸೇವಿಸಲ್ಪಟ್ಟ ನಿನ್ನ ಪಾದಧೂಳಿಯನ್ನು ತನ್ನ ಸವತಿಯಾದ ತುಳಸಿದೇವಿಯೊಂದಿಗೆ ಸೇವಿಸಬೇಕೆಂದು ಆಸೆಪಡುತ್ತಿರುವಳು. ಅವಳಂತೆ ನಾವೂ ಕೂಡ ನಿನ್ನ ಆ ಚರಣರಜಕ್ಕೆ ಶರಣು ಹೊಂದಿದ್ದೇವೆ. ॥ ೩.೭ ॥ ಪಾಪಹರನೇ ! ಪರಮೇಶ್ವರನೇ ! ನಿನ್ನ ಸೇವೆಮಾಡಬೇಕೆಂಬ ಆಸೆಯಿಂದ ನಾವು ಮನೆ-ಮಠಗಳನ್ನು, ಪತಿ-ಸುತರನ್ನು, ಬಂಧುಗಳನ್ನು, ಸಕಲ ಸರ್ವಸ್ವವನ್ನೂ ಪರಿತ್ಯಜಿಸಿ ನಿನ್ನ ದಿವ್ಯಪಾದಗಳ ಮೂಲಕ್ಕೆ ಬಂದು ಸೇರಿಕೊಂಡು ಬಿಟ್ಟಿದ್ದೇವೆ. ಪುರುಷಭೂಷಣನೇ ! ನಿನ್ನ ಅಂದವಾದ ಕಿರುನಗೆಯಿಂದಲೂ, ಚೇತೋಹಾರಿಯಾದ ಕಡೆಗಣ್ಣಿನ ನೋಟದಿಂದಲೂ ನಮ್ಮ ಹೃದಯದಲ್ಲಿ ಕಾಮಾಗ್ನಿಯು ಹೊತ್ತಿಕೊಂಡು ಉರಿಯುತ್ತಿದೆ. ಇದರಿಂದ ದಹಿಸುತ್ತಿರುವ ನಮಗೆ ನಿನ್ನ ದಾಸ್ಯವನ್ನು ಅನುಗ್ರಹಿಸಿ ಕಾಪಾಡು. ॥ ೩.೮ ॥ ಪ್ರಿಯತಮನೇ ! ನಿನ್ನ ಗುಂಗುರು ಕೂದಲುಗಳಿಂದ ಸಮಲಂಕೃತವಾದ ಮುಖಕಮಲವನ್ನೂ, ಫಳ-ಫಳಿಸುವ ಕುಂಡಲಗಳಿಂದ ಬೆಳಗುತ್ತಿರುವ ಕಪೋಲಗಳನ್ನು, ಅಮೃತಕ್ಕೆ ಸಮಾನವಾದ ಅಧರಾಮೃತವನ್ನು ಸುರಿಸುವ ಕೆಂದುಟಿಯನ್ನು, ನಯನಮನೋಹರವಾದ ಕಡೆಗಣ್ಣನ್ನೂ, ಚಿತ್ತಾಪಹಾರಕವಾದ ಕಿರುನಗೆಯನ್ನು, ಶರಣಾಗತರಿಗೆ ಅಭಯದಾನಮಾಡುವ ಎರಡು ದುಂಡಾದ ಭುಜಗಳನ್ನೂ, ಅನುಪಮವಾದ ಸೌಂದರ್ಯದಿಂದ ಬೆಳಗುತ್ತಾ ಲಕ್ಷ್ಮಿಗೆ ನಿರಂತರ ಕ್ರೀಡಾಸ್ಥಳವಾದ ನಿನ್ನ ವಕ್ಷಸ್ಥಳವನ್ನೂ ನೋಡಿ ನಾವು ದಾಸಿಯರಾಗಿಬಿಟ್ಟಿದ್ದೇವೆ. ॥ ೩.೯ ॥ ಪ್ರಿಯ ಶ್ಯಾಮಸುಂದರನೇ ! ಮೂರು ಲೋಕಗಳಲ್ಲಿಯೂ - ಮಧುರ ಮಧುರ ಪದ-ಸ್ವರಪ್ರಸ್ತಾರದ ವಿವಿಧ ರೀತಿಯ ಮೂರ್ಛನೆಗಳಿಂದ ಕೂಡಿದ ನಿನ್ನ ವಂಶೀಧ್ವನಿಯನ್ನು ಕೇಳಿ, ನಿನ್ನ ಒಂದು ಬಿಂದುವಿನ ಸೌಂದರ್ಯದಿಂದ ಮೂರು ಲೋಕಗಳಿಗೂ

ಶ್ರೀರ್ಯತ್ಪದಾಂಬುಜರಜಶ್ಚಕಮೇ ತುಲಸ್ಯಾ
ಲಬ್ಧ್ವಾಪಿ ವಕ್ಷಸಿ ಪದಂ ಕಿಲ ಭೃತ್ಯಜುಷ್ಟಮ್ ।
ಯಸ್ಯಾಃ ಸ್ವವೀಕ್ಷಣಕೃತೇಽನ್ಯಸುರಪ್ರಯಾಸ-
ಸ್ತದ್ವದ್ವಯಂ ಚ ತವ ಪಾದರಜಃ ಪ್ರಪನ್ನಾಃ ॥ ೩.೭ ॥

ತನ್ನಃ ಪ್ರಸೀದ ವೃಜಿನಾರ್ದನ ತೇಽಂಘ್ರಿಮೂಲಂ
ಪ್ರಾಪ್ತಾ ವಿಸೃಜ್ಯ ವಸತೀಸ್ತ್ವದುಪಾಸನಾಶಾಃ ।
ತ್ವತ್ಸುಂದರಸ್ಮಿತನಿರೀಕ್ಷಣತೀವ್ರಕಾಮ-
ತಪ್ತಾತ್ಮನಾಂ ಪುರುಷಭೂಷಣ ದೇಹಿ ದಾಸ್ಯಮ್ ॥ ೩.೮ ॥

ವೀಕ್ಷ್ಯಾಲಕಾವೃತಮುಖಂ ತವ ಕುಂಡಲಶ್ರೀ-
ಗಂಡಸ್ಥಲಾಧರಸುಧಂ ಹಸಿತಾವಲೋಕಮ್ ।
ದೋರ್ಭ್ಯಂ ಪರಸ್ಪರಿಹತಂ ಭವದಂಘ್ರಿಮೂಲ-
ಮಾಪ್ತಾ ವಯಂ ಕಿಲ ಭವೇಮ ಕೃತಾರ್ಥರೂಪಾಃ ॥ ೩.೯ ॥

ಸಿಂಚಾಂಗ ನಸ್ತ್ವದಧರಾಮೃತಪೂರಕೇಣ
ಹಾಸಾವಲೋಕಕಲಗೀತಜಹೃಚ್ಛಯಾಗ್ನಿಮ್ ।
ನೋ ಚೇದ್ವಯಂ ವಿರಹಜಾಗ್ನ್ಯುಪಯುಕ್ತದೇಹಾ
ಧ್ಯಾನೇನ ಯಾಮ ಪದಯೋಃ ಪದವೀಂ ಸಖೇ ತೇ ॥ ೩.೫ ॥

ಯರ್ಹ್ಯಂಬುಜಾಕ್ಷ ತವ ಪಾದತಲಂ ರಮಾಯಾ
ದತ್ತಕ್ಷಣಂ ಕ್ವಚಿದರಣ್ಯಜನಪ್ರಿಯಸ್ಯ ।
ಅಸ್ಪಾಕ್ಷ್ಮ ತತ್ಪ್ರಭೃತಿ ನಾನ್ಯಸಮಕ್ಷಮಂಗ
ಸ್ಥಾತುಂ ತ್ವಯಾಭಿರಮಿತಾ ಬತ ಪಾರಯಾಮಃ ॥ ೩.೬ ॥

ಶ್ರೀರ್ಯತ್ಪದಾಂಬುಜರಜಶ್ಚಕಮೇ ತುಲಸ್ಯಾ
ಲಬ್ಧ್ವಾಪಿ ವಕ್ಷಸಿ ಪದಂ ಕಿಲ ಭೃತ್ಯಜುಷ್ಟಮ್ ।
ಯಸ್ಯಾಃ ಸ್ವವೀಕ್ಷಣಕೃತೇಽನ್ಯಸುರಪ್ರಯಾಸ-
ಸ್ತದ್ವದ್ವಯಂ ಚ ತವ ಪಾದರಜಃ ಪ್ರಪನ್ನಾಃ ॥ ೩.೭ ॥

ತನ್ನಃ ಪ್ರಸೀದ ವೃಜಿನಾರ್ದನ ತೇಽಂಘ್ರಿಮೂಲಂ
ಪ್ರಾಪ್ತಾ ವಿಸೃಜ್ಯ ವಸತೀಸ್ತ್ವದುಪಾಸನಾಶಾಃ ।
ತ್ವತ್ಸುಂದರಸ್ಮಿತನಿರೀಕ್ಷಣತೀವ್ರಕಾಮ-
ತಪ್ತಾತ್ಮನಾಂ ಪುರುಷಭೂಷಣ ದೇಹಿ ದಾಸ್ಯಮ್ ॥ ೩.೮ ॥

ವೀಕ್ಷ್ಯಾಲಕಾವೃತಮುಖಂ ತವ ಕುಂಡಲಶ್ರೀ-
ಗಂಡಸ್ಥಲಾಧರಸುಧಂ ಹಸಿತಾವಲೋಕಮ್ ।
ದೋರ್ಭ್ಯಂ ಪರಸ್ಪರಿಹತಂ ಭವದಂಘ್ರಿಮೂಲ-
ಮಾಪ್ತಾ ವಯಂ ಕಿಲ ಭವೇಮ ಕೃತಾರ್ಥರೂಪಾಃ ॥ ೩.೯ ॥

ಕಾ ಸ್ತ್ರ್ಯಂಗ ತೇ ಕಲಪದಾಯತಮೂರ್ಚ್ಛಿತೇನ
ಸಮ್ಮೋಹಿತಾಏಽಽರ್ಯಚರಿತಾನ್ನಚಲೇತ್ತ್ರಿಲೋಕ್ಯಾಮ್ ।
ತ್ರೈಲೋಕ್ಯಸೌಭಗಮಿದಂ ಚ ನಿರೀಕ್ಷ್ಯ ರೂಪಂ
ಯದ್ಗೋದ್ವಿಜದ್ರುಮಮೃಗಾಃ ಪುಲಕಾನ್ಯಬಿಭ್ರನ್ ॥ ೪೦ ॥

ಸೌಂದರ್ಯವನ್ನು ದಾನಮಾಡುವ ನಿನ್ನ ಮನಮೋಹಕ ಸೌಂದರ್ಯದ ಗಣಿಯಾದ ಮೂರ್ತಿಯನ್ನು ನೋಡಿ ಗೋವು, ಪಕ್ಷಿಗಳು, ವೃಕ್ಷಗಳೂ ಹಾಗೂ ಜಿಂಕೆಗಳೂ ರೋಮಾಂಚಿತವಾಗುತ್ತವೋ, ಅಂತಹ ನಿನ್ನನ್ನು ನೋಡಿ, ಯಾವ ಸ್ತ್ರೀಯು ತಾನೆ ಲೋಕ ಲಜ್ಜೆಯನ್ನು ತ್ಯಜಿಸಿ ನಿನ್ನಲ್ಲಿ ಅನುರಕ್ತಳಾಗದೆ ಇರಬಲ್ಲಳು ? ॥೪೦॥

ವ್ಯಕ್ತಂ ಭವಾನ್ ವ್ರಜಭಯಾರ್ತಿಹರೋಽಭಿಜಾತೋ
ದೇವೋ ಯಥಾಽಽದಿಪುರುಷಃ ಸುರಲೋಕಗೋಪ್ತಾ ।
ತನ್ನೋ ನಿಧೇಹಿ ಕರಪಂಕಜಮಾರ್ತಬಂಧೋ
ತಪ್ತಸ್ತನೇಷು ಚ ಶಿರಸ್ಸು ಚ ಕಿಂಕರೀಣಾಮ್ ॥ ೪೧ ॥

ಭಗವಾನ್ ನಾರಾಯಣನು ದೇವತೆಗಳನ್ನು ರಕ್ಷಿಸುವಂತೆಯೇ ನೀನೇ ವ್ರಜಮಂಡಲದ ಭಯ, ದುಃಖಿಗಳನ್ನು ಇಲ್ಲವಾಗಿಸಲಿಕ್ಕಾಗಿಯೇ ಪ್ರಕಟನಾಗಿರುವೆ, ಎಂಬ ಮಾತು ನಮ್ಮಿಂದ ಮರೆಯಾಗಿಲ್ಲ. ದೀನ, ದುಃಖಿತರ ಮೇಲೆ ನಿನಗೆ ಬಹಳ ಪ್ರೇಮವಿದೆ, ಕೃಪೆಯಿದೆ ಎಂಬುದು ಸ್ಪಷ್ಟವೇ ಆಗಿದೆ. ಪ್ರಿಯತಮನೇ ! ನಾವೂ ಕೂಡ ಬಹಳ ದುಃಖಿತರಾಗಿದ್ದೇವೆ. ನಿನ್ನನ್ನು ಸೇರಬೇಕೆಂಬ ಆಕಾಂಕ್ಷೆಯ ಅಗ್ನಿಯು ನಮ್ಮ ವ್ಯಕ್ಷಸ್ಥಳವನ್ನು ಸುಡುತ್ತಿದೆ. ನೀನು ಈ ದಾಸಿಯರ ವಕ್ಷಸ್ಥಳ ಮತ್ತು ತಲೆಯ ಮೇಲೆ ನಿನ್ನ ಕೋಮಲವಾದ ಕರಕಮಲವನ್ನಿರಿಸಿ ಆ ಅಗ್ನಿಯನ್ನು ಆರಿಸಿಬಿಡು. ನಮ್ಮನ್ನು ತನ್ನವರಾಗಿಸಿಕೊಂಡು ನಮಗೆ ಜೀವನದಾನವನ್ನು ಕರುಣಿಸು ॥ ೪೧ ॥

ಶ್ರೀಶುಕ ಉವಾಚ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ !

ಇತಿ ವಿಕ್ಲವಿತಂ ತಾಸಾಂ ಶ್ರುತ್ವಾ ಯೋಗೇಶ್ವರೇಶ್ವರಃ ।
ಪ್ರಹಸ್ಯ ಸದಯಂ ಗೋಪೀರಾತ್ಮಾರಾಮೋಽಪ್ಯರೀರಮತ್
॥ ೪೨ ॥

ಭಗವಾನ್ ಶ್ರೀಕೃಷ್ಣನು ಸನಕಾದಿ ಯೋಗಿಗಳಿಗೂ, ಶಿವನೇ ಮೊದಲಾದ ಯೋಗೇಶ್ವರರಿಗೂ ಈಶ್ವರನು. ಗೋಪಿಕಾಸ್ತ್ರೀಯರ ದುಃಖಿದಿಂದ ಕೂಡಿದ ಮಾತುಗಳನ್ನು ಕೇಳುತ್ತಲೇ ಅವನ ಹೃದಯ ದಯಾರಸದಿಂದ ತುಂಬಿಹೋಯಿತು. ಅವನು ಆತ್ಮಾರಾಮನಾಗಿ ಇದ್ದರೂ, ಇತರರ ಅಪೇಕ್ಷೆಯಿಲ್ಲದೆ ಆನಂದಪಡುವವನಾಗಿದ್ದರೂ ನಸುನಗುತ್ತಾ ಗೋಪಿಕೆಯರೊಡನೆ ರಾಸಕ್ರೀಡೆಯಾಡಲು ಪ್ರಾರಂಭಿಸಿದನು. ॥ ೪೨ ॥

ತಾಭಿಃ ಸಮೇತಾಭಿರುದಾರಚೇಷ್ಟಿತಃ
ಪ್ರಿಯೇಕ್ಷಣೋತ್ಫುಲ್ಲಮುಖೀಭಿರಚ್ಯುತಃ ।
ಉದಾರಹಾಸದ್ವಿಜಕುಂದದೀಧಿತಿ-
ರ್ವ್ಯರೋಚತೈಣಾಂಕ ಇವೋಡುಭಿರ್ವೃತಃ ॥ ೪೩ ॥

ಭಗವಾನ್ ಶ್ರೀಕೃಷ್ಣನು ತನ್ನೊಡನಿದ್ದ ಗೋಪಿಯರೊಡನೆ ಉದಾರವಾಗಿ ವರ್ತಿಸಲು ತೊಡಗಿದನು. ಅವನು ಮಂದಹಾಸವನ್ನು ಬೀರಿದಾಗ ಮಲ್ಲಿಗೆಯ ಮೊಗ್ಗಿನಂತಹ ಶುಭ್ರವಾದ ಹಲ್ಲುಗಳು ಕಾಣುತ್ತಿದ್ದವು. ಅವನ ಕಟಾಕ್ಷವೀಕ್ಷಣದಿಂದ ಗೋಪಿಕೆಯರ ಮುಖಗಳು ನಿಕಸಿತವಾಗುತ್ತಿದ್ದವು. ನಕ್ಷತ್ರಗಳಿಂದ ಚಂದ್ರನು ಪರಿವೃತನಾಗಿರುವಂತೆ – ಹಿರಿ ಹಿರಿಹಿಗ್ಗುತ್ತಿದ್ದ ಗೋಪಿಕೆಯರಿಂದ ಪರಿವೃತನಾದ ಶ್ರೀಕೃಷ್ಣನು ವಿರಾಜಿಸುತ್ತಿದ್ದನು. ॥ ೪೩ ॥

ಉಪಗೀಯಮಾನ ಉದ್ಗಾಯನ್ನನಿತಾಶತಯೂಥಪಃ ।
ಮಾಲಾಂ ಬಿಭ್ರದ್ವೈಜಯಂತೀಂ ವ್ಯಚರನ್ಮಂಡಯನ್ವನಮ್
॥ ೪೪ ॥

ನೂರಾರು ಗೋಪಿಕೆಯರ ಗುಂಪಿಗೆ ಸ್ವಾಮಿಯಾದ ಶ್ರೀಕೃಷ್ಣನು ವೈಜಯಂತೀ ವನಮಾಲೆಯನ್ನು ಧರಿಸಿ ವೃಂದಾವನದ ಶೋಭೆಯನ್ನು ಹೆಚ್ಚಿಸುತ್ತಾ ಅಲ್ಲಿ ಗೋಪಿಯರೊಡನೆ ಸಂಚರಿಸುತ್ತಿದ್ದನು. ಕೆಲವು ವೇಳೆ ಗೋಪಿಯರು ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಹಾಡುತ್ತಿದ್ದರು. ಕೆಲವು ವೇಳೆ ಶ್ರೀಕೃಷ್ಣನು ಗೋಪಿಕೆಯರ ಪ್ರೇಮ-ಸೌಂದರ್ಯ ಗೀತೆಗಳನ್ನು ಹಾಡುತ್ತಿದ್ದನು. ॥ ೪೪ ॥

ನದ್ಯಾಃ ಪುಲಿನಮಾವಿಶ್ಯ ಗೋಪೀಭಿರ್ಹಿಮವಾಲುಕಮ್ ।
ರೇಮೇ ತತ್ತರಲಾನಂದ ಕುಮುದಾಮೋದವಾಯುನಾ
॥ ೪೫ ॥

ಇದಾದ ಬಳಿಕ ಭಗವಾನ್ ಶ್ರೀಕೃಷ್ಣನು ಗೋಪಿಕೆಯರೊಂದಿಗೆ ಸ್ಫಟಿಕದಂತೆ ಹೊಳೆಯುತ್ತಿದ್ದ ಯಮುನೆಯ ಪಾವನ ಮರಳಿನಲ್ಲಿ ಪದಾರ್ಪಣ ಮಾಡಿದನು. ಅದು ಯಮುನೆಯ ತಣ್ಣನೆಯ ತರಂಗಗಳ ಸ್ಪರ್ಶದಿಂದ ಅಲುಗಾಡುತ್ತಿದ್ದ ಕಮಲ-ಕನ್ನೈದಿಲೆಗಳ ಪರಮಳದ ಗಾಳಿಯಿಂದ ಕೂಡಿತ್ತು. ಅಂತಹ ಆನಂದಪ್ರದ ಮರಳಿನಲ್ಲಿ ಭಗವಂತನು ಗೋಪಿಯರೊಡನೆ ರಾಸಲೀಲೆಯನ್ನು ಮಾಡಿದನು. ॥ ೪೫ ॥

ಬಾಹುಪ್ರಸಾರಪರಿರಂಭಕರಾಲಕೋರು-
ನೀವೀಸ್ತನಾಲಭನನರ್ಮನಖಾಗ್ರಪಾತೈಃ ।
ಕ್ಷ್ವೇಲ್ಯಾವಲೋಕಹಸಿತೈರ್ವ್ರಜಸುಂದರೀಣಾ
ಮುತ್ತಂಭಯನ್ರತಿಪತಿಂ ರಮಯಾಂಚಕಾರ ॥ ೪೬ ॥

ತೋಳುಗಳನ್ನು ಅಗಲವಾಗಿ ಚಾಚಿ ಅಪ್ಪಿಕೊಳ್ಳುವುದರಿಂದಲೂ, ಕೈಗಳಿಂದ ಮುಂಗುರುಳನ್ನು ನೇವರಿಸುವುದರಿಂದಲೂ, ಗೋಪಿಕಾ ಸ್ತ್ರೀಯರ ದಿವ್ಯ ಪ್ರೇಮಭಾವವನ್ನು ಕೆರಳಿಸುತ್ತಾ ಶ್ರೀಕೃಷ್ಣನು ಅವರೊಡನೆ ಕ್ರೀಡೆಯಾಡುತ್ತಿದ್ದನು. ॥ ೪೬ ॥ ಉದಾರ ಶಿರೋಮಣಿ ಭಗವಾನ್ ಶ್ರೀಕೃಷ್ಣನು ಹೀಗೆ ಗೋಪಿಕೆಯರನ್ನು ಸಮ್ಮಾನಿಸಿದಾಗ ಗೋಪಿಕೆಯರ ಮನಸ್ಸಿನಲ್ಲಿ ಜಗತ್ತಿನ ಸಮಸ್ತ ಸ್ತ್ರೀಯರಲ್ಲಿ ನಾವೇ ಸರ್ವಶ್ರೇಷ್ಠರಾಗಿದ್ದೇವೆ, ನಮ್ಮಂತೆಯೆ ಬೇರೆ ಯಾರು ಇಲ್ಲವೆಂಬ ಭಾವ ಉದಿಸಿತು. ॥ ೪೭ ॥ ಆಗ ಶ್ರೀಕೃಷ್ಣನು ಗೋಪಿಯರ ಸೌಂದರ್ಯಮದವನ್ನೂ ಮತ್ತು ತಾವೇ ಅಧಿಕರೆಂದು ಭಾವಿಸಿ ಗರ್ವಪಡುತ್ತಿರುವುದನ್ನು ಗಮನಿಸಿ, ಅವರ ಮದವನ್ನೂ, ಗರ್ವವನ್ನೂ ಹೋಗಲಾಡಿಸಿ ಅವರನ್ನು ಅನುಗ್ರಹಿಸುವುದಕ್ಕಾಗಿ ಒಡನೆಯೇ ಅವರ ನಡುವಿನಿಂದ ಅಂತರ್ಧಾನನಾದನು. ॥ ೪೮ ॥

ಏವಂ ಭಗವತಃ ಕೃಷ್ಣಾಲ್ಲಬ್ಧಮಾನಾ ಮಹಾತ್ಮನಃ ।
ಆತ್ಮಾನಂ ಮೇನಿರೇ ಸ್ತ್ರೀಣಾಂ ಮಾನಿನ್ಯೋಽಭ್ಯಧಿಕಂ ಭುವಿ ॥ ೪೭ ॥

ತಾಸಾಂ ತತ್ಸೌಭಗಮದಂ ವೀಕ್ಷ್ಯ ಮಾನಂ ಚ ಕೇಶವಃ ।
ಪ್ರಶಮಾಯ ಪ್ರಸಾದಾಯ ತತ್ರೈವಾಂತರಧೀಯತ ॥ ೪೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ ಭಗವತೋ ರಾಸಕ್ರೀಡಾವರ್ಣನಂ ನಾಮೈಕೋನತ್ರಿಂಶೋಽಧ್ಯಾಯಃ ॥ ೨೯ ॥

ಮೂವತ್ತನೆಯ ಅಧ್ಯಾಯ

ಗೋಪಿಯರ ವಿರಹವೇದನೆ

ಶ್ರೀಶುಕ ಉವಾಚ

ಅಂತರ್ಹಿತೇ ಭಗವತಿ ಸಹಸೈವ ವ್ರಜಾಂಗನಾಃ ।
ಅತಪ್ಯಂಸ್ತಮಚಕ್ಷಾಣಾಃ ಕರಿಣ್ಯ ಇವ ಯೂಥಪಮ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ ! ಇದ್ದಕ್ಕಿದ್ದಂತೆ ಶ್ರೀಕೃಷ್ಣನು ಅಂತರ್ಧಾನನಾದನು. ಅವನನ್ನು ಕಾಣದೆ ವ್ರಜಯುವತಿಯರು ಸಲಗವನ್ನಗಲಿದ ಹೆಣ್ಣಾನೆಗಳಂತೆ ವಿರಹಯಾತನೆಯಿಂದ ಪರಿತಪಿಸತೊಡಗಿದರು. ॥ ೧ ॥ ರಮಾಪತಿಯಾದ ಶ್ರೀಕೃಷ್ಣನ ಮದೋನ್ಮತ್ತ ಗಜರಾಜನ ನಡಿಗೆಯಂತಹ ಗಂಭೀರವಾದ ನಡಿಗೆಯಿಂದಲೂ, ಪ್ರೇಮಪೂರಿತವಾದ ಕಿರುನಗೆಯಿಂದಲೂ, ಚೇತೋಹಾರಿಯಾದ ಕಡೆಗಣ್ಣಿನ ನೋಟದಿಂದಲೂ, ಮನೋಹರವಾದ ಸರಸ ಸಲ್ಲಾಪಗಳಿಂದಲೂ, ಭಿನ್ನ-ಭಿನ್ನವಾದ ಲೀಲಾವಿನೋದಗಳಿಂದಲೂ, ಶೃಂಗಾರ ರಸಭಾವ ಭಂಗಿಗಳಿಂದಲೂ ಆಕರ್ಷಿತರಾದ ಗೋಪಿಕಾಸ್ತ್ರೀಯರು ಅವನನ್ನೇ ನಿರಂತರವಾಗಿ ಚಿಂತಿಸುತ್ತಾ ತನ್ಮಯರಾಗಿ ಬಿಟ್ಟರು. ತಾವೇ ಕೃಷ್ಣನೆಂದು ಭಾವಿಸಿಕೊಂಡು ಕೃಷ್ಣನಾಡಿದಂತೆಯೇ ಕ್ರೀಡೆಗಳನ್ನಾಡ ತೊಗಿದರು. ॥ ೨ ॥ ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ನಡೆ-ನುಡಿ, ಹಾಸ್ಯ-ವಿನೋದ, ಕಿರುನಗೆ-ಮಂದಹಾಸ, ಭಾವ-ಭಂಗಿಗಳು, ಸರಸ-ಸಲ್ಲಾಪಗಳು, ಪ್ರೇಮಾಲಾಪಗಳು ಎಲ್ಲವೂ ಕೃಷ್ಣನ ಭಾವ-ಭಂಗಿಗಳಂತೆ ಗೋಪಿಯರು ಆಗಿಬಿಟ್ಟವು. ಅವರ ಶರೀರದಲ್ಲಿ ಅದೇ ಗತಿ-ಮತಿ ಸಾಕಾರಗೊಂಡಿತು. ಅವರು ತಮ್ಮನ್ನು ಪೂರ್ಣವಾಗಿ ಮರೆತು ಶ್ರೀಕೃಷ್ಣ ಸ್ವರೂಪರೇ ಆಗಿ, ಅವನ ಲೀಲಾ-ವಿಲಾಸವನ್ನು ಅನುಕರಣ ಮಾಡುತ್ತಾ 'ನಾನೇ ಕೃಷ್ಣ ನಾಗಿದ್ದೇನೆ' ಹೀಗೆ ಹೇಳತೊಡಗಿದರು. ॥ ೩ ॥

ಗತ್ಯಾನುರಾಗಸ್ಮಿತವಿಭ್ರಮೇಕ್ಷಿತೈ-
ರ್ಮನೋರಮಾಲಾಪವಿಹಾರವಿಭ್ರಮೈಃ ।
ಆಕ್ಷಿಪ್ತಚಿತ್ತಾಃ ಪ್ರಮದಾ ರಮಾಪತೇಃ
ತಾಸ್ತಾ ವಿಚೇಷ್ಟಾ ಜಗೃಹುಸ್ತದಾತ್ಮಿಕಾಃ ॥ ೨ ॥

ಗತಿಸ್ಮಿತಪ್ರೇಕ್ಷಣಭಾಷಣಾದಿಷು
ಪ್ರಿಯಾಃ ಪ್ರಿಯಸ್ಯ ಪ್ರತಿರೂಢಮೂರ್ತಯಃ ।
ಅಸಾವಹಂ ತ್ವಿತ್ಯಬಲಾಸ್ತದಾತ್ಮಿಕಾ
ನ್ಯವೇದಿಷುಃ ಕೃಷ್ಣವಿಹಾರವಿಭ್ರಮಾಃ ॥ ೩ ॥

ಗಾಯಂತ್ಯ ಉಚ್ಚೈರಮುಮೇವ ಸಂಹತಾ
ವಿಚಿಕ್ಯುರುನ್ಮತ್ತಕವದ್ ವನಾದ್ ವನಮ್ ।
ಪಪ್ರಚ್ಛುರಾಕಾಶವದಂತರಂ ಬಹಿ-
ರ್ಭೂತೇಷು ಸಂತಂ ಪುರುಷಂ ವನಸ್ಪತೀನ್ ॥ ೪ ॥

ಅವರೆಲ್ಲರೂ ಪರಸ್ಪರ ಸೇರಿ ಗಟ್ಟಿಯಾಗಿ ಶ್ರೀಕೃಷ್ಣನ ಗುಣಗಾನವನ್ನು ಮಾಡತೊಡಗಿದರು ಮತ್ತು ಉನ್ಮತ್ತರಾಗಿ ಒಂದು ವನದಿಂದ ಇನ್ನೊಂದು ವನಕ್ಕೆ ಹೋಗುತ್ತಾ ಶ್ರೀಕೃಷ್ಣನನ್ನು ಹುಡುಕಲಾರಂಭಿಸಿದರು. ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ದೂರವೆಲ್ಲಿಗೆ ಹೋಗಿದ್ದನು? ಅವನಾದರೋ ಸಮಸ್ತ ಜಡ-ಚೇತನ ಪದಾರ್ಥಗಳಲ್ಲಿ ಹಾಗೂ ಅವುಗಳ ಹೊರಗೂ ಆಕಾಶದಂತೆ ಏಕರಸನಾಗಿ ನೆಲೆಸಿಯೇ ಇದ್ದಾನೆ. ಅವನು ಅಲ್ಲೇ ಇದ್ದನು, ಅವರಲ್ಲೇ ಇದ್ದನು; ಆದರೆ ಅವನನ್ನು ನೋಡದೆ ಗೋಪಿಯರು ವನಸ್ಪತಿಗಳಲ್ಲಿ, ಗಿಡ-ಮರಗಳಲ್ಲಿ ಅವನೆಲ್ಲಿರುವನೆಂದು ಪ್ರಶ್ನಿಸತೊಡಗಿದರು. ॥ ೪॥

ದೃಷ್ಟೋ ವ ಃ ಕಚ್ಚಿದಶ್ವತ್ಥ ಪ್ಲಕ್ಷ ನ್ಯಗ್ರೋಧ ನೋ ಮನಃ ।
ನಂದಸೂನುರ್ಗತೋ ಹೃತ್ವಾ ಪ್ರೇಮಹಾಸಾವಲೋಕನೈಃ
॥ ೫ ॥

(ಗೋಪಿಯರು ಮೊದಲಿಗೆ ದೊಡ್ಡ-ದೊಡ್ಡ ಮರಗಳ ಬಳಿಗೆ ಹೋಗಿ ವಿಚಾರಿಸಿದರು.) ಎಲೈ ಅರಳೀ ಮರವೇ! ಬಸರಿ ಮರವೇ! ಆಲದ ಮರವೇ! ನಂದನಂದನ ಶ್ಯಾಮಸುಂದರನು ತನ್ನ ಪ್ರೇಮಪೂರ್ಣ ನಸುನಗೆಯಿಂದ ಮತ್ತು ಕಡೆಗಣ್ಣನೋಟದಿಂದ ನಮ್ಮ ಮನಸ್ಸನ್ನು ಅಪಹರಿಸಿರುವನು. ಅಂತಹ ಶ್ರೀಕೃಷ್ಣನನ್ನು ನೀವು ನೋಡಿರುವಿರಾ? ॥ ೫ ॥ ಕುರುವಕ ವೃಕ್ಷವೇ! ಅಶೋಕ ವೃಕ್ಷವೇ! ನಾಗ-ಪುನ್ನಾಗ ವೃಕ್ಷಗಳೇ! ಚಂಪಕ ವೃಕ್ಷಗಳೇ! ನೀವಾದರೂ ಹೇಳಿರಿ. ಕೇವಲ ಕಿರುನಗೆಯಿಂದಲೇ ಮಾನಿನಿಯರ ಸೊಕ್ಕನ್ನು ಮುರಿಯುವ ಬಲರಾಮನ ತಮ್ಮನಾದ ಶ್ರೀಕೃಷ್ಣನನ್ನು ನೀವೇನಾದರೂ ನೋಡಿರುವಿರಾ? ಅವನೆಲ್ಲಿಗೆ ಹೋದನು? ॥ ೬ ॥ (ಈಗ ಅವರು ಹೆಣ್ಣು ಜಾತಿಯ ಗಿಡಗಳ ಬಳಿಯಲ್ಲಿ ಕೇಳುತ್ತಾರೆ.) ತುಳಸೀದೇವಿ! ನಿನ್ನ ಹೃದಯವಾದರೋ ಬಹಳ ಕೋಮಲವಾಗಿದೆ. ನೀನು ಎಲ್ಲ ಜನರ ಮಂಗಲವನ್ನು ಉಂಟುಮಾಡುವೆ. ಭಗವಂತನ ಚರಣಗಳನ್ನು ನೀನು ಬಹಳವಾಗಿ ಪ್ರೀತಿಸುವೆ. ಈ ಕಾರಣದಿಂದಲೇ ದುಂಬಿಗಳು ಗುಂಪು-ಗುಂಪಾಗಿ ನಿನ್ನನ್ನು ಅನುಸರಿಸಿ ಬರುತ್ತಿದ್ದರೂ ನಮ್ಮ ಇನಿಯನು ನಿನ್ನನ್ನು ಧರಿಸಿಯೇ ಇರುತ್ತಾನೆ. ನಿನಗೆ ಅತಿಪ್ರಿಯನೆನಿಸಿದ ಶ್ರೀಕೃಷ್ಣನನ್ನು ನೀನೇನಾದರೂ ಕಂಡೆಯಾ? ॥ ೭ ॥ ಜಾಜಿಗಿಡವೇ! ಮಲ್ಲಿಗೆ ಗಿಡವೇ! ಜಾಜಿ ಸೇವಂತಿಗಳಿರಾ! ತನ್ನ ಕರಸ್ಪರ್ಶದಿಂದ ನಿಮಗೆ ಆನಂದವನ್ನುಂಟುಮಾಡುತ್ತಾ ಪ್ರಿಯತಮನಾದ ಮಾಧವನೇನಾದರೂ ಇತ್ತಕಡೆಯಿಂದ ಹೋದುದನ್ನು ನೀವೇನಾದರೂ ಕಂಡಿರಾ? ॥ ೮ ॥ ಪರೋಪಕ್ಕಾರಕ್ಕಾಗಿಯೇ ಯಮುನಾನದಿಯ ತೀರದಲ್ಲಿ ಹುಟ್ಟಿರುವ ಮಾವು, ಪ್ರಿಯಾಳು, ಹಲಸು, ಆಸನ, ಕೆಂಚಪಾಳ, ನೇರಳೆ, ಉಕ್ಕ, ಬಿಲ್ವ, ವಕುಳ, ಹುಳಿಮಾವು, ಕದಂಬ, ನೀರಂಜಿ - ಇದೇ ಮುಂತಾದ ವೃಕ್ಷಗಳ ಅಧಿದೇವತೆಗಳಿರಾ! ನಮ್ಮ ಪ್ರಿಯತಮನನ್ನು ಕಾಣದೆ ಬುದ್ಧಿಶೂನ್ಯರಾಗಿರುವ ನಮಗೆ ಅವನು ಹೋದ ಮಾರ್ಗವನ್ನು ದಯಮಾಡಿ ತಿಳಿಸಿರಿ. ॥ ೯ ॥ ಭಗವಂತನ ಪ್ರೇಯಸಿಯಾದ ಭೂದೇವಿಯೇ! ಶ್ರೀಕೃಷ್ಣ ಚರಣಕಮಲಗಳ ಸ್ಪರ್ಶವನ್ನು ಪಡೆದು ಆನಂದಭರಿತಳಾಗಿ, ತೃಣಲತಾದಿರೂಪದಲ್ಲಿ ತನಗುಂಟಾದ ರೋಮಾಂಚನವನ್ನು ಪ್ರಕಟಪಡಿಸುತ್ತಿರುವೆಯಲ್ಲ! ಇದಕ್ಕಾಗಿ ನೀನು ಎಂತಹ ತಪಸ್ಸನ್ನು ಆಚರಿಸಿದೆ? ನಿನ್ನ ಈ ಉಲ್ಲಾಸ-ವಿಲಾಸವು ಶ್ರೀಕೃಷ್ಣನ

ಕಚ್ಚಿದ್ಭವತಿ ಕಲ್ಯಾಣಿ ಗೋವಿಂದಚರಣಪ್ರಿಯೇ ।
ಸಹ ತ್ವಾಲಿಕುಲೈರ್ಬಿಭ್ರದ್ದೃಷ್ಟಸ್ತೇಽತಿಪ್ರಿಯೋಽಚ್ಯುತಃ
॥ ೭ ॥

ಮಾಲತ್ಯದರ್ಶಿ ವಃ ಕಚ್ಚಿನ್ಮಲ್ಲಿಕೇ ಜಾತಿ ಯೂಥಿಕೇ ।
ಪ್ರೀತಿಂ ವೋ ಜನಯನ್ ಯಾತಃ ಕರಸ್ಪರ್ಶೇನ ಮಾಧವಃ
॥ ೮ ॥

ಚೂತಪ್ರಿಯಾಲಪನಸಾಸನಕೋವಿದಾರ-
ಜಂಬ್ವರ್ಕಬಿಲ್ವಬಕುಲಾಮ್ರಕದಂಬನೀಪಾಃ ।
ಯೇಽನ್ಯೇ ಪರಾರ್ಥಭವಕಾ ಯಮುನೋಪಕೂಲಾಃ
ಶಂಸಂತು ಕೃಷ್ಣಪದವೀಂ ರಹಿತಾತ್ಮನಾಂ ನಃ ॥ ೯ ॥

ಕಿಂತೇ ಕೃತಂ ಕ್ಷಿತಿ ತಪೋ ಬತ ಕೇಶವಾಂಘ್ರಿ-
ಸ್ಪರ್ಶೋತ್ಸವೋತ್ಪುಲಕಿತಾಂಗರುಹೈರ್ವಿಭಾಸಿ ।
ಅಪ್ಯಂಘ್ರಿಸಂಭವ ಉರುಕ್ರಮವಿಕ್ರಮಾದ್ ವಾ
ಆಹೋ ವರಾಹವಪುಷಃ ಪರಿರಂಭಣೇನ ॥ ೧೦ ॥

ಚರಣಸ್ಪರ್ಶದಿಂದ ಉಂಟಾಯಿತೇ ? ಅಥವಾ ವಾಮನಾವತಾರದಲ್ಲಿ ವಿಶ್ವರೂಪವನ್ನು ಧರಿಸಿ ನಿನ್ನನ್ನು ಅಳೆದ ಕಾರಣದಿಂದಾಯಿತೇ ? ಅದಕ್ಕಿಂತಲೂ ಮೊದಲು ಭಗವಾನ್ ವರಾಹನ ಅಂಗ-ಸಂಗದ ಕಾರಣದಿಂದ ಈ ಸ್ಥಿತಿ ಉಂಟಾಯಿತೇ ? ದಯಮಾಡಿ ನಮ್ಮ ಇನಿಯನು ಎಲ್ಲಿರುವನೆಂದು ತಿಳಿಸಿ ನಮ್ಮನ್ನು ಕಾಪಾಡು. ॥ ೧೦ ॥ ಗೆಳತಿಯಾದ ಹುಲ್ಲೆಯೇ ! ನಮ್ಮ ಪ್ರಿಯತಮನು ತನ್ನ ಬೇರೆಯ ಪ್ರಿಯತಮೆಯೊಂದಿಗೆ ಕೂಡಿಕೊಂಡು ತನ್ನ ಸುಂದರವಾದ ಅಂಗಾಂಗಗಳಿಂದ ನಿಮ್ಮ ಕಣ್ಣುಗಳಿಗೆ ಹಬ್ಬವನ್ನು ಉಂಟುಮಾಡುತ್ತಾ ಇತ್ತಕಡೆ ಏನಾದರೂ ಬಂದನೇ ? ಸಂಭ್ರಮದ ಆಲಿಂಗನದಿಂದ ಪ್ರೇಯಸಿಯ ಕುಚಗಳಲ್ಲಿದ್ದ ಕುಂಕುಮಕೇಸರಿಯಿಂದ ಕೆಂಪೇರಿದ ಗೋಕುಲಪತಿಯಾದ ಶ್ರೀಕೃಷ್ಣನು ವಕ್ಷಸ್ಥಳದಲ್ಲಿ ಶೋಭಿಸುವ ಮಲ್ಲಿಗೆ ಮಾಲೆಯ ಸುಗಂಧವು ಸರ್ವತ್ರ ವ್ಯಾಪಿಸಿದೆ. ಇದರಿಂದ ನಮ್ಮ ಪ್ರಾಣಕಾಂತನು ಇಲ್ಲಿಯೇ ಎಲ್ಲೋ ಇರಬೇಕು. ಸಖಿಯೇ ! ಎಲ್ಲಿರುವನೆಂದು ಹೇಳು. ॥ ೧೧ ॥ ವೃಕ್ಷಾಧಿದೇವತೆಗಳಿರಾ ! ಬಲರಾಮನ ಸೋದರನಾದ ನಮ್ಮ ಪ್ರಿಯತಮನು ಧರಿಸಿದ ತುಳಸಿಮಾಲೆಯ ಸುಗಂಧದಿಂದ ಆಕರ್ಷಿತವಾದ ದುಂಬಿಗಳ ಗುಂಪು ಅವನನ್ನು ಅನುಸರಿಸಿಯೇ ಹೋಗುತ್ತಾ ಇರುತ್ತದೆ. ನಮ್ಮ ಪ್ರಾಣಕಾಂತನು ತನ್ನ ಒಂದು ತೋಳನ್ನು ಪ್ರೇಯಸಿಯ ಹೆಗಲಮೇಲಿಟ್ಟು ಮತ್ತೊಂದು ಕೈಯಿಂದ ಕಮಲಪುಷ್ಪವನ್ನು ತಿರುಗಿಸುತ್ತಾ ಇತ್ತಕಡೆ ಬಂದನೇ ? ಅವನಿಗೆ ಪ್ರಣಾಮಮಾಡಲೆಂದೇ ನೀವು ಬಗ್ಗಿರುವಂತೆ ತೋರುತ್ತದೆ. ಪ್ರೇಮಪೂರ್ವಕವಾದ ಕುಡಿನೋಟದಿಂದ ಅವನೂ ನಿಮ್ಮನ್ನು ಅಭಿನಂದಿಸಿರಬೇಕು. ॥ ೧೨ ॥ ಸಖಿಯರೇ ! ಈ ಲತೆಗಳಲ್ಲಿ ಕೇಳಿರಿ. ಇವುಗಳು ತಮ್ಮ ಪತಿಯಾದ ವೃಕ್ಷದ ರೆಂಬೆಗಳೆಂಬ ತೋಳುಗಳಿಂದ ಆಲಿಂಗಿಸಲ್ಪಟ್ಟರೂ ನಮ್ಮ ಪ್ರಿಯತಮನಾದ ಶ್ರೀಕೃಷ್ಣನ ನಖಿಕ್ಷತದಿಂದಲೆ ರೋಮಾಂಚಿತವಾಗಿವೆ. ಅಹಾ ! ಇವರ ಸೌಭಾಗ್ಯವೆಂತಹುದು ? ॥ ೧೩. ॥

ಅಪ್ಯೇಣಪತ್ನ್ಯುಪಗತಃ ಪ್ರಿಯಯೇಹ ಗಾತ್ರೈ-
ಸ್ತನ್ವನ್ ದೃಶಾಂ ಸಖಿ ಸುನಿರ್ವೃತಿಮಚ್ಯುತೋ ವಃ ।
ಕಾಂತಾಂಗಸಂಗಕುಚಕುಂಕುಮರಂಜಿತಾಯಾಃ
ಕುಂದಸ್ರಜಃ ಕುಲಪತೇರಿಹ ವಾತಿ ಗಂಧಃ ॥ ೧೧ ॥

ಬಾಹುಂ ಪ್ರಿಯಾಂಸ ಉಪಧಾಯ ಗೃಹೀತಪದ್ಮೋ
ರಾಮಾನುಜಸ್ತುಲಸಿಕಾಲಿಕುಲೈರ್ಮದಾಂಧೈಃ ।
ಅನ್ವೀಯಮಾನ ಇಹ ವಸ್ತರವಃ ಪ್ರಣಾಮಂ
ಕಿಂ ವಾಭಿನಂದತಿ ಚರನ್ಪ್ರಣಯಾವಲೋಕೈಃ ॥ ೧೨ ॥

ಪೃಚ್ಛತೇಮಾ ಲತಾ ಬಾಹೂನಪ್ಯಾಶ್ಲಿಷ್ಟಾ ವನಸ್ಪತೇಃ ।
ನೂನಂ ತತ್ಕರಜಸ್ಪೃಷ್ಟಾ ಬಿಭ್ರತ್ಯುತ್ಪುಲಕಾನ್ಯಹೋ
॥ ೧೩. ॥

ಪರೀಕ್ಷಿತನೇ ! ಹೀಗೆ ಉನ್ಮತ್ತರಾದ ಗೋಪಿಯರು ಪ್ರಲಾಪಿಸುತ್ತಾ ಭಗವಾನ್ ಶ್ರೀಕೃಷ್ಣನನ್ನು ಹುಡುಕುತ್ತಾ - ಹುಡುಕುತ್ತಾ ಕಾತರರಾಗಿದ್ದರು. ಹಾಗೇ ಹುಡುಕುತ್ತಿದ್ದ ಗೋಪಿಯರಿಗೆ ಪುನಃ ತನ್ಮಯತೆ ಉಂಟಾಯಿತು. ತಾವೇ ಕೃಷ್ಣನೆಂದು ಭಾವಿಸಿಕೊಂಡು ಭಗವಂತನ ಬೇರೆ-ಬೇರೆ ಲೀಲೆಗಳನ್ನು ಅನುಕರಣೆ ಮಾಡತೊಡಗಿದರು. ॥ ೧೪ ॥ ಒಬ್ಬಳು ಪೂತನೆಯಾದರೆ ಮತ್ತೊಬ್ಬಳು ಶ್ರೀಕೃಷ್ಣನಾಗಿ ಅವಳ ಸ್ತನ್ಯಪಾನ ಮಾಡತೊಡಗಿದಳು. ಒಬ್ಬಳು ಬಂಡಿಯಾದರೆ ಮತ್ತೊಬ್ಬಳು ಬಾಲಕೃಷ್ಣನಾಗಿ ಅಳುತ್ತಾ ಆಕೆಯನ್ನು ಕಾಲಿನಿಂದ ಒದ್ದುಬಿಟ್ಟಳು. ॥ ೧೫ ॥ ಓರ್ವಗೋಪಿಯು ಬಾಲಕೃಷ್ಣನ ಭಾವವನ್ನು ಹೊಂದಿ ಕುಳಿತ್ತಿದ್ದಾಗ ತೃಣಾವರ್ತನ ಭಾವವನ್ನು ಹೊಂದಿದ್ದ ಗೋಪಿಯು ಆಕೆಯನ್ನು ಅಪಹರಿಸಿಕೊಂಡು ಹೋಗುವಳು. ಕೆಲವು ಗೋಪಿಯರು ಬಾಲಮುಕುಂದನಂತೆ ಅಂಬೆಗಾಲಿಕ್ಕುತ್ತಾ ನಡೆಯತೊಡಗಿದ್ದಾಗ ಅವರ ಕಾಲಂದುಗೆಗಳು ಝಣ-ಝಣ ಶಬ್ದಮಾಡುತ್ತಿದ್ದವು. ॥ ೧೬ ॥

ಇತ್ಯುನ್ಮತ್ತವಚೋಗೋಪ್ಯಃ ಕೃಷ್ಣಾನ್ವೇಷಣಕಾತರಾಃ ।
ಲೀಲಾ ಭಗವತಸ್ತಾಸ್ತಾ ಹ್ಯನುಚಕ್ರುಸ್ತದಾತ್ಮಿಕಾಃ
॥ ೧೪ ॥

ಕಸ್ಯಾಶ್ಚಿತ್ಪೂತನಾಯಂತ್ಯಾಃ ಕೃಷ್ಣಾಯಂತ್ಯಪಿಬತ್ತನಮ್ ।
ತೋಕಾಯಿತ್ವಾರುದತ್ಯನ್ಯಾ ಪದಾಹಂಚಕಟಾಯತೀಮ್
॥ ೧೫ ॥

ಧೈತ್ಯಾಯಿತ್ವಾ ಜಹಾರಾನ್ಯಾಮೇಕಾ ಕೃಷ್ಣಾರ್ಭಭಾವನಾಮ್ ।
ತಿಂಗಯಾಮಾಸ ಕಾಪ್ಯಂಘ್ರೀ ಕರ್ಷಂತೀ ಘೋಷನಿಃಸ್ವನೈಃ
॥ ೧೬ ॥

ಕೃಷ್ಣರಾಮಾಯಿತೇ ದ್ವೇ ತು ಗೋಪಾಯಂತ್ಯಶ್ಚ ಕಾಶ್ಚನ ।
ವತ್ಸಾಯತೀಂ ಹಂತಿ ಚಾನ್ಯಾ ತತ್ಸೈಕಾ ತು ಬಕಾಯತೀಮ್
॥ ೧೭ ॥

ಒಬ್ಬಳು ಕೃಷ್ಣನಾದರೆ, ಇನ್ನೊಬ್ಬಳು ಬಲರಾಮಳಾದಳು. ಉಳಿದ ಗೋಪಿಯರು ಗೊಲ್ಲಬಾಲಕರಾದರು. ಒಬ್ಬಳು ವತ್ಸಾಸುರ ನಾದರೆ ಮತ್ತೊಬ್ಬಳು ಬಕಾಸುರಳಾದಳು. ಆಗ ಗೋಪಿಯರು ಬೇರೆ-ಬೇರೆಯಾಗಿ ಕೃಷ್ಣಭಾವವನ್ನು ಹೊಂದಿ ವತ್ಸಾಸುರ ಮತ್ತು ಬಕಾಸುರರಾದ ಗೋಪಿಯರನ್ನು ಕೊಲ್ಲುವ ಲೀಲೆಯನ್ನು ಮಾಡಿದರು. ॥ ೧೭ ॥ ಶ್ರೀಕೃಷ್ಣನು ಮನದಲ್ಲಿ ಕೊಳಲನ್ನೂದಿ ದೂರಕ್ಕೆ ಹೋದ ಹಸುಗಳನ್ನು ಕರೆಯುವಂತೆ ಓರ್ವಗೋಪಿಯು ನಟಿಸತೊಡಗಿದಳು. ಆಗ ಉಳಿದ ಗೋಪಿಯರು ಗೊಲ್ಲಬಾಲಕರಂತೆ ಭಲೇ! ಭಲೇ ಕೃಷ್ಣ! ಎಂದು ಪ್ರಶಂಸಿಸತೊಡಗಿದರು. ॥ ೧೮ ॥ ಓರ್ವ ಗೋಪಿಯು ತನ್ನನ್ನು ಕೃಷ್ಣನೆಂದೆ ಭಾವಿಸಿಕೊಂಡು ಇನ್ನೊಬ್ಬ ಸಖಿಯ ಹೆಗಲಮೇಲೆ ಕೈಯನ್ನಿಟ್ಟುನಡೆಯುತ್ತಾ ಉಳಿದ ಗೋಪಿಯರಿಗೆ ಹೇಳುತ್ತಾಳೆ - 'ಮಿತ್ರರೇ! ನಾನು ಕೃಷ್ಣನಾಗಿದ್ದೇನೆ. ನೀವೆಲ್ಲ ನನ್ನ ಮನೋಹರವಾದ ನಡಿಗೆಯನ್ನು ನೋಡಿರಿ'. ॥ ೧೯ ॥ ಯಾರೋ ಓರ್ವ ಗೋಪಿಯು ಶ್ರೀಕೃಷ್ಣನಾಗಿ 'ಎಲೈ ವ್ರಜವಾಸಿಗಳೇ! ನೀವೆಲ್ಲ ಬಿರುಗಾಳಿ - ನೀರಿನಿಂದ ಹೆದರಬೇಡಿರಿ. ಅದರಿಂದ ರಕ್ಷಿಸಿಕೊಳ್ಳುವ ಉಪಾಯವನ್ನು ನಾನು ಯೋಚಿಸಿದ್ದೇನೆ'. ಹೀಗೆ ಹೇಳುತ್ತಾ - ಗೋವರ್ಧನೋದ್ಧರಣವನ್ನು ಅನುಕರಣೆ ಮಾಡುತ್ತಾ ತನ್ನ ಮೇಲ್ಹೊದಿಕೆಯನ್ನೇ ಎತ್ತಿ ಹಿಡಿಯುವಳು. ॥ ೨೦ ॥ ಪರೀಕ್ಷಿತನೇ! ಒಬ್ಬಳು ಕಾಲಿಯನಾಗನಾದರೆ ಮತ್ತೊಬ್ಬಳು ಶ್ರೀಕೃಷ್ಣನಾಗಿ ಆಕೆಯ ತಲೆಯ ಮೇಲೆ ಕಾಲನ್ನಿಟ್ಟು ಹತ್ತಿಕೊಂಡು - 'ಎಲೈ ದುಷ್ಟ ಸರ್ಪವೇ! ನೀನು ಇಲ್ಲಿಂದ ಹೊರಟುಹೋಗು. ನಾನು ದುಷ್ಟರ ದಮನಕ್ಕಾಗಿ ಹುಟ್ಟಿರುವೆನು' ಎಂದು ಹೇಳತೊಡಗಿದಳು. ॥ ೨೧ ॥ ಇಷ್ಟರಲ್ಲೇ ಓರ್ವಗೋಪಿಯು ಹೇಳಿದಳು - ಎಲೈ ಗೋಪರೇ! ನೋಡಿ, ಕಾಡಿಗೆ ಭಯಂಕರವಾದ ಕಾಡ್ಗಿಚ್ಚು ಹತ್ತಿಕೊಂಡಿದೆ. ನೀವೆಲ್ಲ ಬೇಗ-ಬೇಗನೇ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿ. ನಾನು ನಿರಾಯಾಸವಾಗಿ ನಿಮ್ಮನ್ನು ರಕ್ಷಿಸುವೆನು. ॥ ೨೨ ॥ ಓರ್ವ ಗೋಪಿಯು ಯಶೋದೆಯಾದರೆ ಮತ್ತೊಬ್ಬಳು ಶ್ರೀಕೃಷ್ಣಳಾದಳು. ಯಶೋದೆಯಾದ ಗೋಪಿಯು ಹೂವಿನ ಹಾರದಿಂದ ಕೃಷ್ಣನನ್ನು ಒರಳಿಗೆ ಕಟ್ಟಿದ ಲೀಲೆಯನ್ನು ನಟಿಸಿದರೆ, ಶ್ರೀಕೃಷ್ಣನಾದ ಗೋಪಿಯು ಮುಖವನ್ನು ಮುಚ್ಚಿಕೊಂಡು ಭಯಗೊಂಡವಳಂತೆ ಅಣಕವಾಡಿದಳು. ॥ ೨೩ ॥

ಕಸ್ಯಾಂಚಿತ್ಸ್ವಭುಜಂ ನ್ಯಸ್ಯ ಚಲಂತ್ಯಾಹಾಪರಾ ನನು ।
ಕೃಷ್ಣೋಽಹಂ ಪಶ್ಯತ ಗತಿಂ ಲಲಿತಾಮಿತಿ ತನ್ಮನಾಃ
॥ ೧೯ ॥

ಮಾ ಭೈಷ್ಟ ವಾತವರ್ಷಾಭ್ಯಾಂ ತತ್ತ್ರಾಣಂ ವಿಹಿತಂ ಮಯಾ ।
ಇತ್ಯುಕ್ತ್ವೈಕೇನ ಹಸ್ತೇನ ಯತಂತ್ಯುನ್ನಿದಧೇಽಂಬರಮ್
॥ ೨೦ ॥

ಆರುಹ್ಯೈಕಾ ಪದಾಽಽಕ್ರಮ್ಯ ಶಿರಸ್ಯಾಹಾಪರಾಂ ನೃಪ ।
ದುಷ್ಟಾಹೇ ಗಚ್ಛ ಜಾತೋಽಹಂ ಖಲಾನಾಂ ನನು ದಂಡಧೃಕ್
॥ ೨೧ ॥

ತತ್ರೈಕೋವಾಚ ಹೇ ಗೋಪಾ ದಾವಾಗ್ನಿಂ ಪಶ್ಯತೋಲ್ಬಣಮ್ ।
ಚಕ್ಷೂಂಷ್ಯಾಶ್ವಪಿದಧ್ವಂ ವೋ ವಿಧಾಸ್ಯೇ ಕ್ಷೇಮಮಂಜಸಾ
॥ ೨೨ ॥

ಬದ್ಧಾನ್ಯಯಾ ಸ್ರಜಾ ಕಾಚಿತ್ತನ್ವೀ ತತ್ರ ಉಲೂಖಲೇ ।
ಭೀತಾ ಸುದೃಕ್ಚಿಧಾಯಾಸ್ಯಂ ಭೇಜೇ ಭೀತಿವಿಡಂಬನಮ್
॥ ೨೩ ॥

ಪರೀಕ್ಷಿತನೇ! ಹೀಗೆ ಗೋಪಿಯರು ನಾನಾ ಭಾವಗಳನ್ನು ಹೊಂದಿ ಶ್ರೀಕೃಷ್ಣನ ಲೀಲಾವಿನೋದಗಳನ್ನು ಅನುಕರಿಸಿದ ನಂತರ ಪುನಃ ಮರ - ಗಿಡ - ಬಳ್ಳಿಗಳಲ್ಲಿ - ಶ್ರೀಕೃಷ್ಣನೆಲ್ಲಿರುವನು ? ಪ್ರಿಯ ಕೃಷ್ಣನನ್ನು ಕಂಡಿರಾ ? ಎಂದು ಪ್ರಶ್ನಿಸತೊಡಗಿದರು. ಹೀಗೆ ಹುಡುಕುತ್ತಿರುವಾಗಲೇ ಒಂದೆಡೆಯಲ್ಲಿ ಭಗವಂತನ ಚರಣ ಚಿಹ್ನೆಯನ್ನು ಕಂಡರು. ॥ ೨೪ ॥ ಅವರೆಲ್ಲರೂ ಪರಸ್ಪರ ಮಾತನಾಡಿಕೊಂಡರು - ಸಖಿಯರೇ! ಈ ಚರಣ ಚಿಹ್ನೆಯು ಖಂಡಿತವಾಗಿ ಉದಾರತಿರೋಮಣಿ ನಂದನಂದನ ಶ್ಯಾಮಸುಂದರನದೇ ಆಗಿದೆ. ಏಕೆಂದರೆ, ಇದರಲ್ಲಿ ಧ್ವಜ, ಕಮಲ, ವಜ್ರ, ಅಂಕುಶ ಮತ್ತು ಯವಾದಿಗಳ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ॥ ೨೫ ॥

ಏವಂ ಕೃಷ್ಣಂ ಪೃಚ್ಛಮಾನಾ ವೃಂದಾವನಲತಾಸ್ತರೂನ್ ।
ವ್ಯಚಕ್ಷತ ವನೋದ್ದೇಶೇ ಪದಾನಿ ಪರಮಾತ್ಮನಃ
॥ ೨೪ ॥

ಪದಾನಿ ವ್ಯಕ್ತಮೇತಾನಿ ನಂದಸೂನೋರ್ಮಹಾತ್ಮನಃ ।
ಲಕ್ಷ್ಯಂತೇ ಹಿ ಧ್ವಜಾಂಭೋಜವಜ್ರಾಂಕುಶಯವಾದಿಭಿಃ
॥ ೨೫ ॥

ತೈಸ್ತೈಃ ಪದೈಸ್ತತ್ಪದವೀಮನ್ವಿಚ್ಛಂತ್ಯೋಽಗ್ರತೋಽಬಲಾಃ ।
ಬಧ್ವಾಃ ಪದೈಃ ಸುಪಕ್ತಾನಿ ವಿಲೋಕ್ಯಾರ್ತಾಃ ಸಮಬ್ರುವನ್
॥ ೨೬ ॥

ಕಸ್ಯಾಃ ಪದಾನಿ ಚೈತಾನಿ ಯಾತಾಯಾ ನಂದಸೂನುನಾ ।
ಅಂಸನ್ಯಸ್ತಪ್ರಕೋಷ್ಠಾಯಾಃ ಕರೇಣೋಃ ಕರಿಣಾ ಯಥಾ
॥ ೨೭ ॥

ಅನಯಾಽಽರಾಧಿತೋ ನೂನಂ ಭಗವಾನ್ ಹರಿರೀಶ್ವರಃ ।
ಯನ್ನೋ ವಿಹಾಯ ಗೋವಿಂದಃ ಪ್ರೀತೋ ಯಾಮನಯದ್ರಹಃ
॥ ೨೮ ॥

ಧನ್ಯಾ ಅಹೋ ಅಮೀ ಆಲ್ಯೋ ಗೋವಿಂದಾಂಘ್ರ್ಯಬ್ಜರೇಣವಃ ।
ಯಾನ್ಬ್ರಹ್ಮೇಶೋ ರಮಾ ದೇವೀ ದಧುರ್ಮೂರ್ಧ್ನ್ಯಘನುತ್ತಯೇ
॥ ೨೯ ॥

ತಸ್ಯಾ ಅಮೂನಿ ನಃ ಕ್ಷೋಭಂ ಕುರ್ವಂತ್ಯುಚ್ಚೈಃ ಪದಾನಿ ಯತ್ ।
ಯೈಕಾಪಹೃತ್ಯ ಗೋಪೀನಾಂ ರಹೋ ಭುಂಕ್ತೇಽಚ್ಯುತಾಧರಮ್
॥ ೩೦ ॥

ನ ಲಕ್ಷ್ಯಂತೇ ಪದಾನ್ಯತ್ರ ತಸ್ಯಾ ನೂನಂ ತೃಣಾಂಕುರೈಃ ।
ಖಿದ್ಯತ್ಸುಜಾತಾಂಘ್ರಿತಲಾಮುನ್ನಿನ್ಯೇ ಪ್ರೇಯಸೀಂ ಪ್ರಿಯಃ
॥ ೩೧ ॥

ಇಮಾನ್ಯಧಿಕಮಗ್ನಾನಿ ಪದಾನಿ ವಹತೋ ವಧೂಮ್ ।
ಗೋಪ್ಯಃ ಪಶ್ಯತ ಕೃಷ್ಣಸ್ಯ ಭಾರಾಕ್ರಾಂತಸ್ಯ ಕಾಮಿನಃ
॥ ೩೨ ॥

ಅತ್ರಾವರೋಪಿತಾ ಕಾಂತಾ ಪುಷ್ಪಹೇತೋರ್ಮಹಾತ್ಮನಾ ।
ಅತ್ರ ಪ್ರಸೂನಾವಚಯಃ ಪ್ರಿಯಾರ್ಥೇ ಪ್ರೇಯಸಾ ಕೃತಃ ।
ಪ್ರಪದಾಕ್ರಮಣೇ ಏತೇ ಪಶ್ಯತಾಸಕಲೇ ಪದೇ
॥ ೩೩ ॥

ಆ ಚರಣಚಿಹ್ನೆಗಳ ಜಾಡನ್ನೇ ಹಿಡಿದುಕೊಂಡು ಗೋಕುಲ ನಾಥ ಭಗವಂತನನ್ನು ಹುಡುಕುತ್ತಾ ಗೋಪಿಯರು ಮುಂದು ವರಿದರು. ಆಗ ಅವರಿಗೆ ಶ್ರೀಕೃಷ್ಣನ ಚರಣ ಚಿಹ್ನೆಯ ಜೊತೆಯಲ್ಲೇ ಯಾರೋ ಓರ್ವ ವ್ರಜಯುವತಿಯ ಹೆಜ್ಜೆಯ ಗುರುತೂ ಗೋಚರಿಸಿತು.* ಅದನ್ನು ನೋಡಿ ಅವರೆಲ್ಲರೂ ದುಃಖಿತರಾದರು ಹಾಗೂ ಪರಸ್ಪರ ಮಾತನಾಡಿಕೊಂಡರು. ॥ ೨೬ ॥ ಹೆಣ್ಣಾನೆಯು ಗಂಡಾನೆಯೊಂದಿಗೆ ಹೋಗುವಂತೆಯೇ ನಂದನಂದನ ಶ್ಯಾಮ ಸುಂದರನೊಡನೆ ಅವನ ಹೆಗಲಮೇಲೆ ಕೈಯನ್ನಿಟ್ಟು ನಡೆದು ಕೊಂಡು ಹೋದ ಯಾರೋ ಭಾಗ್ಯಶಾಲಿಯ ಚರಣಚಿಹ್ನೆಗಳೇ ಇದಾಗಿವೆಯಲ್ಲ! ॥ ೨೭ ॥ ಈಕೆಯು ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನ ಆರಾಧಿಕೆಯೇ ಆಗಿರಬೇಕು. ಅದಕ್ಕಾಗಿ ಇವಳ ಮೇಲೆ ಪ್ರಸನ್ನನಾದ ನಮ್ಮ ಪ್ರಾಣಪ್ರಿಯ ಶ್ಯಾಮಸುಂದರನು ನಮ್ಮನ್ನು ಅಗಲಿ ಈಕೆಯನ್ನು ಏಕಾಂತಕ್ಕೆ ಕರೆದುಕೊಂಡು ಹೋಗಿರು ವನು. ॥ ೨೮ ॥ ಪ್ರಿಯ ಸಖಿಯರೇ! ಭಗವಾನ್ ಶ್ರೀಕೃಷ್ಣನ ಚರಣಕಮಲಕ್ಕೆ ಸೋಂಕಿದ ರಜವು ಧನ್ಯವಾಗಿದೆ. ಅದರ ಸೌಭಾಗ್ಯ ಎಂತಹುದು! ಏಕೆಂದರೆ, ತಮ್ಮ ಅಮಂಗಳವನ್ನು ಕಳೆದುಕೊಳ್ಳಲು ಬ್ರಹ್ಮ ರುದ್ರರೇ ಆದಿಯಾಗಿ ಲಕ್ಷ್ಮೀದೇವಿಯೂ ಕೂಡ ಆ ರಜವನ್ನು ತಮ್ಮ ಶಿರದಲ್ಲಿ ಧರಿಸಿಕೊಳ್ಳುವರು. ॥ ೨೯ ॥ ಸಖೀಯರೇ! ಗೋಪಿಯರೆಲ್ಲರಿಗೂ ಸೇರಬೇಕಾಗಿದ್ದ ನಮ್ಮ ಇನಿಯನ ಅಧರಾ ಮೃತವನ್ನು ಅಪಹರಿಸಿ ಇವಳೊಬ್ಬಳೇ ಪಾನಮಾಡುತ್ತಿರುವಳಲ್ಲ! ಅಂತಹವಳ ಈ ಪದಚಿಹ್ನೆಗಳನ್ನು ನೋಡುತ್ತಲೇ ನಮ್ಮ ಮನಸ್ಸು ಬಹಳವಾಗಿ ತಳಮಳಿಸುತ್ತಿದೆ. ॥ ೩೦ ॥ ಸಂಗಾತಿಗಳೇ! ಇತ್ತ ನೋಡಿ, ಇಲ್ಲಿಂದ ಮುಂದಕ್ಕೆ ನಮ್ಮ ಇನಿಯನ ಪ್ರೇಯಸಿಯ ಹೆಜ್ಜೆಗಳು ಕಾಣುತ್ತಿಲ್ಲ. ಬಹುಶಃ ನಮ್ಮ ಪ್ರಾಣಕಾಂತನು ತನ್ನ ನೂತನ ಪ್ರೇಯಸಿಯ ಕೋಮಲವಾದ ಕಾಲುಗಳಿಗೆ ಹುಲ್ಲಿನ ಕೂಳೆಗಳಿಂದ ನೋವುಂಟಾದೀತೆಂದು ಭಾವಿಸಿ ಹೆಗಲಮೇಲೆ ಹೊತ್ತುಕೊಂಡೇ ಹೋಗಿರಬಹುದು! ॥ ೩೧ ॥ ಗೆಳತಿ! ನೀನು ಕೇಳಿದ್ದು ನಿಜ. ಇಲ್ಲಿ ನೋಡಿರಿ. ನಮ್ಮ ಪ್ರಾಣಕಾಂತನ ಹೆಜ್ಜೆಯ ಗುರುತುಗಳು ಇಲ್ಲಿ ಬಹಳವಾಗಿ ಊರಿರುವಂತೆ ಕಾಣುತ್ತಿವೆ. ಪ್ರೇಮಿಯಾದ ಶ್ರೀಕೃಷ್ಣನು ವಧುವಿನ ಭಾರದಿಂದ ಆಕ್ರಾಂತನಾಗಿ ಹೆಜ್ಜೆಯಿಡುತ್ತಿದ್ದುದರಿಂದಲೇ ಆ ಹೆಜ್ಜೆಗಳು ಆಳವಾಗಿ ನೆಲದಮೇಲೆ ಮೂಡಿವೆ. ॥ ೩೨ ॥ ಗೆಳತಿಯರೇ! ಇಲ್ಲಿ ನೋಡಿರಿ. ಇಲ್ಲಿಂದ ಮುಂದಕ್ಕೆ ನಮ್ಮ ಪ್ರಾಣಕಾಂತನ ದಟ್ಟವಾದ ಹೆಜ್ಜೆಯ ಗುರುತು ಕಾಣಿಸುತ್ತಿಲ್ಲ. ಆದುದರಿಂದ ಅವನು ತನ್ನ ಪ್ರೇಯಸಿಗೆ ಹೂವುಗಳನ್ನು ಬಿಡಿಸಿ ಕೊಡಲು ಇಲ್ಲಿ ಅವಳನ್ನು ಹೆಗಲಿನಿಂದ ಇಳಿಸಿರಬಹುದು. ನೋಡಿ, ಈ ಹೂಗಿಡದ ಬಳಿ ನೋಡಿರಿ. ಈ ಹೂಗಿಡದ ಕೆಳಗೆ ನಮ್ಮ ಪ್ರಾಣಕಾಂತನ ತುದಿಕಾಲುಗಳ ಚಿಹ್ನೆಗಳು ಮಾತ್ರ ಕಾಣಿಸುತ್ತಿವೆ. ಹಿಮ್ಮಡಿಗಳ ಗುರುತು ಕಾಣಿಸುವುದಿಲ್ಲವಲ್ಲ. ಬಹುಶಃ ಮೆಟ್ಟಂ ಗಾಲಿನ ಮೇಲೆ ನಿಂತು ಗಿಡದ ತುದಿಯಲ್ಲಿರುವ ಹೂವುಗಳನ್ನು ಬಿಡಿಸಿ ತನ್ನ ಇನಿಯಳಿಗೆ ಕೊಟ್ಟಿರಬಹುದು. ॥ ೩೩ ॥

* ಇವಳೇ ರಾಧಾದೇವಿಯೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಕೇಶಪ್ರಸಾಧನಂ ತತ್ರ ಕಾಮಿನ್ಯಾಃ ಕಾಮಿನಾ ಕೃತಮ್ ।
ತಾನಿ ಚೂಡಯತಾ ಕಾಂತಾಮುಪವಿಷ್ಟಮಿಹ ಧ್ರುವಮ್
॥ ೩೪ ॥

ರೇಮೇ ತಯಾ ಚಾತ್ಮರತ ಆತ್ಮಾರಾಮೋऽಪ್ಯಖಂಡಿತಃ ।
ಕಾಮಿನಾಂ ದರ್ಶಯನ್ ದೈನ್ಯಂ ಸ್ತ್ರೀಣಾಂ ಚೈವ ದುರಾತ್ಮತಾಮ್
॥ ೩೫ ॥

ಇತ್ಯೇವಂ ದರ್ಶಯಂತ್ಯಸ್ತಾಶ್ಚೇರುರ್ಗೋಪ್ಯೋ ವಿಚೇತಸಃ ।
ಯಾಂ ಗೋಪೀಮನಯತ್ಕೃಷ್ಣೋ ವಿಹಾಯಾನ್ಯಾಃ ಸ್ತ್ರಿಯೋ ವನೇ
॥ ೩೬ ॥

ಸಾ ಚ ಮೇನೇ ತದಾऽऽತ್ಮಾನಂ ವರಿಷ್ಠಂ ಸರ್ವಯೋಷಿತಾಮ್ ।
ಹಿತ್ವಾ ಗೋಪೀಃ ಕಾಮಯಾನಾ ಮಾಮಸೌ ಭಜತೇ ಪ್ರಿಯಃ
॥ ೩೭ ॥

ತತೋ ಗತ್ವಾ ವನೋದ್ದೇಶಂ ದೃಪ್ತಾ ಕೇಶವಮಬ್ರವೀತ್ ।
ನ ಪಾರಯೇऽಹಂ ಚಲಿತುಂ ನಯ ಮಾಂ ಯತ್ರ ತೇ ಮನಃ
॥ ೩೮ ॥

ಏವಮುಕ್ತಃ ಪ್ರಿಯಾಮಾಹ ಸ್ಕಂಧ ಆರುಹ್ಯತಾಮಿತಿ ।
ತತಶ್ಚಾಂತರ್ದಧೇ ಕೃಷ್ಣಃ ಸಾ ವಧೂರನ್ವತಪ್ಯತ
॥ ೩೯ ॥

ಹಾ ನಾಥ ರಮಣ ಪ್ರೇಷ್ಠ ಕ್ವಾಸಿ ಕ್ವಾಸಿ ಮಹಾಭುಜ ।
ದಾಸ್ಯಾಸ್ತೇ ಕೃಪಣಾಯಾ ಮೇ ಸಖೇ ದರ್ಶಯ ಸನ್ನಿಧಿಮ್
॥ ೪೦ ॥

ಅನ್ವಿಚ್ಛಂತ್ಯೋ ಭಗವತೋ ಮಾರ್ಗಂ ಗೋಪ್ಯೋऽವಿದೂರತಃ ।
ದದೃಶುಃ ಪ್ರಿಯವಿಶ್ಲೇಷಮೋಹಿತಾಂ ದುಃಖಿತಾಂ ಸಖೀಮ್
॥ ೪೧ ॥

ಗೆಳತಿಯರೇ ! ಇಲ್ಲಿ ನೋಡಿರಿ. ನಮ್ಮ ಪ್ರಾಣಕಾಂತನು ತನ್ನ ಪ್ರೇಯಸಿಯೊಡನೆ ಕುಳಿತಿರುವ ಗುರುತುಗಳು ಕಾಣುತ್ತಿವೆ. ಬಹುಶಃ ಕಾಮುಕನಾದ ಶ್ರೀಕೃಷ್ಣನು ಇಲ್ಲಿಯೇ ಕುಳಿತು ಪ್ರೇಮಿಯಾದ ತನ್ನ ಪ್ರೇಯಸಿಯ ತಲೆಯನ್ನು ಬಾಚಿ ಹೆರಳನ್ನು ಹಾಕಿ ಹೂವನ್ನು ಮುಡಿಸಿರಬೇಕು. ॥ ೩೪ ॥ ಪರೀಕ್ಷಿತ ಮಹಾರಾಜಾ ! ಆತ್ಮತೃಪ್ತನೂ, ಆತ್ಮಾರಾಮನೂ, ಅಖಂಡನೂ ಆದ ಭಗವಾನ್ ಶ್ರೀಕೃಷ್ಣನಲ್ಲಿ ಕಾಮದ ಕಲ್ಪನೆಯಾದರೂ ಹೇಗಿದ್ದೀತು ? ಆದರೂ ಸ್ತ್ರೀಯರಿಗೆ ವಶನೋ ಎಂಬಂತೆ ಶ್ರೀಕೃಷ್ಣನು ಆ ಗೋಪಿಯೊಡನೆ ಒಂದು ಲೀಲೆಯನ್ನು ರಚಿಸಿದ್ದನು. ॥ ೩೫ ॥

ಈ ಪ್ರಕಾರವಾಗಿ ಗೋಪಿಯರು ಉನ್ಮತ್ತರಂತಾಗಿ, ದೇಹ ಭಾವನ್ನು ಮರೆತು ಭಗವಂತನ ಚರಣ ಚಿಹ್ನೆಗಳನ್ನು ಒಬ್ಬರು ಮತ್ತೊಬ್ಬರಿಗೆ ತೋರಿಸುತ್ತಾ ಕಾಡಿಂದ-ಕಾಡಿಗೆ ಅಲೆಯುತ್ತಿದ್ದರು. ಇತ್ತ ಭಗವಾನ್ ಶ್ರೀಕೃಷ್ಣನು ಬೇರೆ ಗೋಪಿಯರನ್ನು ವನದಲ್ಲಿ ಬಿಟ್ಟು ಏಕಾಂತಕ್ಕೆ ಕೊಂಡುಹೋದ ಭಾಗ್ಯವತಿಯಾದ ಗೋಪಿಯು 'ನಾನೇ ಸಮಸ್ತ ಗೋಪಿಯರಲ್ಲಿ ಶ್ರೇಷ್ಠಳಾಗಿದ್ದೇನೆ. ಅದಕ್ಕಾಗಿಯೇ ನಮ್ಮ ಪ್ರಿಯ ಶ್ರೀಕೃಷ್ಣನು ನನ್ನನ್ನು ಬಯಸುತ್ತಿದ್ದು, ಇತರ ಗೋಪಿಯರನ್ನೆಲ್ಲ ಬಿಟ್ಟು, ಕೇವಲ ನನ್ನನ್ನೇ ಆದರಿಸುತ್ತಿದ್ದಾನೆ.॥೩೬-೩೭॥ ಆ ಗೋಪಿಯ ಅಹಂಕಾರವು ಭಾವನೆಗೆ ಮಾತ್ರವೇ ಸೀಮಿತವಾಗಿರದೆ ಬ್ರಹ್ಮ-ರುದ್ರಾದಿಗಳಿಗೂ ಶಾಸಕನಾದ ಭಗವಾನ್ ಶ್ರೀಕೃಷ್ಣನನ್ನೇ ಶಾಸನ ಮಾಡತೊಡಗಿತು. ಒಮ್ಮೆ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ತಾನೇ ಸರ್ವಶ್ರೇಷ್ಠಳೆಂಬ ಸೊಕ್ಕಿನಿಂದ ಮದಿಸಿದ ಗೋಪಿಯು ಕೇಶವನಿಗೆ ಹೇಳಿದಳು - ಪ್ರಿಯನೇ ! ನನಗೆ ಇನ್ನು ಮುಂದೆ ನಡೆಯಲು ಸಾಧ್ಯವೇ ಇಲ್ಲ. ಬಳಲಿರುವೆನು. ನಿನಗೆ ಬೇರೆಲ್ಲಿಗಾದರೂ ವಿಹರಿಸಲು ಹೋಗಬೇಕೆಂದಿದ್ದರೆ ನನ್ನನ್ನು ಎತ್ತಿಕೊಂಡೇ ಹೋಗಬೇಕು. ॥ ೩೮ ॥ ತನ್ನ ಪ್ರಿಯತಮೆಯ ಇಂತಹ ಮಾತನ್ನು ಕೇಳಿದ ಶ್ಯಾಮಸುಂದರನು ಹೇಳಿದನು - ಪ್ರಿಯೆ ! ಸರಿ, ಹಾಗಾದರೆ ಈಗ ನನ್ನ ಹೆಗಲೇರು. ಇದನ್ನು ಕೇಳಿದ ಗೋಪಿಯು ಶ್ರೀಕೃಷ್ಣನ ಹೆಗಲಮೇಲೆ ಏರತೊಡಗುತ್ತಲೇ ಅವನು ಅಂತರ್ಧಾನನಾದನು. ಗರ್ವಿಷ್ಠಳಾದ ಗೋಪಿಯು ಕುಸಿದು ಬಿದ್ದು ಪರಿತಪಿಸತೊಡಗಿದಳು. ॥ ೩೯ ॥ ಅಯ್ಯೋ ! ನಾಥನೇ ! ಎಲ್ಲಿರುವೆ ? ಪ್ರಾಣನಾಥನೇ ! ಮನೋರಮಣನೇ ! ಮಹಾಭುಜನೇ ! ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ ? ಗೆಳೆಯನೇ ! ನಾನು ನಿನ್ನ ದಾಸಿ. ದೀನಳಾಗಿದ್ದೇನೆ. ದರ್ಶನವನ್ನಿತ್ತು ನಿನ್ನ ಸಾನ್ನಿಧ್ಯವನ್ನು ದಯಮಾಡಿ ತೋರಿ ಕಾಪಾಡು. ॥ ೪೦ ॥ ಪರೀಕ್ಷಿತ ರಾಜನೇ ! ಭಗವಂತನ ಪಾದಕಮಲಗಳ ಗುರುತನ್ನೇ ಅನುಸರಿಸಿ ಅವನನ್ನು ಹುಡುಕುತ್ತಾ ಗೋಪಿಯರು ಸ್ವಲ್ಪ ದೂರದಲ್ಲಿಯೇ ತಮ್ಮ ಸಖಿಯೊಬ್ಬಳು ಪ್ರಿಯತಮನ ವಿಯೋಗದುಃಖದಿಂದ ವಿಮೋಹಿತಳಾಗಿ ಅಳುತ್ತಿರುವಳನ್ನು ನೋಡಿದರು. ॥ ೪೧ ॥ ಒಡನೆಯೇ ಗೋಪಿಯರೆಲ್ಲರೂ ಆಕೆಯ ಬಳಿಗೆ ಸಾರಿ ಆಕೆಯ ದುಃಖವನ್ನು ವಿಚಾರಿಸಿದರು. ಆಗ ಆಕೆಯು - ಮಾಧವನು ತನ್ನೊಬ್ಬಳನ್ನೇ ಪ್ರೀತಿಸಿ, ಗೌರವಿಸುತ್ತ ಇದ್ದುದರಿಂದ ತಾನು ಗರ್ವಿಷ್ಠಳಾಗಿ ಅವನನ್ನು ಅವಮಾನಿಸಿದ ಪ್ರಸಂಗವನ್ನೂ ಪ್ರಾಣಪ್ರಿಯನಾದ ಮಾಧವನು ತನ್ನನ್ನು ಪರಿತ್ಯಜಿಸಿ

ತಯಾ ಕಥಿತಮಾಕರ್ಣ್ಯ ಮಾನಪ್ರಾಪ್ತಿಂ ಚ ಮಾಧವಾತ್ ।
ಅವಮಾನಂ ಚ ದೌರಾತ್ಮ್ಯಾದ್ವಿಸ್ಮಯಂ ಪರಮಂ ಯಯುಃ
॥ ೪೨ ॥

ಮಾಯವಾದುದನ್ನು ವಿವರಿಸಿ ಹೇಳಿದಳು. ಆಕೆಯ ಮಾತನ್ನು ಕೇಳಿದ ಗೋಪಿಯರೆಲ್ಲರೂ ಪರಮಾಶ್ಚರ್ಯಚಕಿತರಾದರು.॥೪೨॥

ತತೋ೭ವಿಶನ್ವನಂ ಚಂದ್ರಜ್ಯೋತ್ಸ್ನಾ ಯಾವದ್ವಿಭಾವ್ಯತೇ ।
ತಮಃ ಪ್ರವಿಷ್ಟಮಾಲಕ್ಷ್ಯ ತತೋ ನಿವವೃತುಃ ಸ್ತ್ರಿಯಃ
॥ ೪೩ ॥

ಚಂದ್ರನ ಬೆಳದಿಂಗಳು ಇರುವವರೆಗೂ ಗೋಪಿಕೆಯರು ಕಾಡಿನಲ್ಲಿ ತಮ್ಮ ಪ್ರಿಯತಮನಾದ ಶ್ರೀಕೃಷ್ಣನನ್ನು ಹುಡುಕುತ್ತಲೇ ಇದ್ದರು. ಆದರೆ ಮುಂದೆ ದಟ್ಟವಾದ ವನದಲ್ಲಿ ಘೋರವಾದ ಅಂಧಕಾರವು ಕವಿದಿತ್ತು. ಮುಂದೆ ದಾರಿಗಾಣದೆ ಕೃಷ್ಣನೂ ಕತ್ತಲೆಯಲ್ಲಿ ಅವಿತುಕೊಳ್ಳಬಹುದೆಂದು ಎಣಿಸಿ ಅವರೆಲ್ಲರೂ ಹಿಂದಿರುಗಿದರು. ॥ ೪೩. ॥ ಪರೀಕ್ಷಿತನೇ! ಗೋಪಿಯರ ಮನಸ್ಸು ಶ್ರೀಕೃಷ್ಣಮಯವೇ ಆಗಿತ್ತು. ಅವರ ಬಾಯಿಂದ ಶ್ರೀಕೃಷ್ಣನ ಹೊರತಾದ ಯಾವ ಮಾತೂ ಹೊರಡುತ್ತಿರಲಿಲ್ಲ. ಅವರ ಶರೀರದಿಂದ ಕೇವಲ ಶ್ರೀಕೃಷ್ಣನಿಗಾಗಿ ಮತ್ತು ಕೇವಲ ಶ್ರೀಕೃಷ್ಣನ ಚೇಷ್ಟೆಗಳೇ ನಡೆಯುತ್ತಿದ್ದವು. ಅವರ ರೋಮ-ರೋಮ, ಅವರ ಆತ್ಮಾ ಶ್ರೀಕೃಷ್ಣಮಯವಾಗಿ ಹೋಗಿತ್ತು. ಅವರು ಕೇವಲ ಅವನ ಗುಣ-ಲೀಲೆಗಳನ್ನೇ ಹಾಡುತ್ತಿದ್ದರು. ಅದರಲ್ಲೇ ತನ್ಮಯರಾಗಿ ತಮ್ಮ ದೇಹ ಸ್ಮರಣೆಯೇ ಇಲ್ಲದಿರುವಾಗ ಮನೆಯ ನೆನಪು ಎಲ್ಲಿಂದ ಬರಬೇಕು ? ॥ ೪೪ ॥ ಗೋಪಿಯರ ಇಂದ್ರಿಯಗಳೆಲ್ಲವೂ ಶ್ರೀಕೃಷ್ಣನ ಶುಭಾಗಮನಕ್ಕಾಗಿಯೇ ತವಕಿಸುತ್ತಿದ್ದವು. ಕಾಡಿನಿಂದ ಹಿಂದಿರುಗಿದ ಶ್ರೀಕೃಷ್ಣನನ್ನೇ ಸದಾಕಾಲದಲ್ಲಿಯೂ ಚಿಂತಿಸುತ್ತಿದ್ದ ಗೋಪಿಯರು ಪುನಃ ಯಮುನಾನದಿಯ ಮರಳು ದಿಣ್ಣೆಯ ಬಳಿಗೆ ಬಂದು ಸಾಂಘಿಕವಾಗಿ ಶ್ರೀಕೃಷ್ಣನ ಗುಣಗಾನವನ್ನು ಮಾಡತೊಡಗಿದರು. ॥ ೪೫ ॥

ತನ್ಮನಸ್ಕಾಸ್ತದಾಲಾಪಾಸ್ತದ್ವಿಚೇಷ್ಟಾಸ್ತದಾತ್ಮಿಕಾಃ ।
ತದ್ಗುಣಾನೇವ ಗಾಯಂತ್ಯೋ ನಾತ್ಮಾಗಾರಾಣಿ ಸಸ್ಮರುಃ
॥ ೪೪ ॥

ತನ್ಮನಸ್ಕಾಸ್ತದಾಲಾಪಾಸ್ತದ್ವಿಚೇಷ್ಟಾಸ್ತದಾತ್ಮಿಕಾಃ ।
ತದ್ಗುಣಾನೇವ ಗಾಯಂತ್ಯೋ ನಾತ್ಮಾಗಾರಾಣಿ ಸಸ್ಮರುಃ
॥ ೪೪ ॥

ಪುನಃ ಪುಲಿನಮಾಗತ್ಯ ಕಾಲಿಂದ್ಯಾಃ ಕೃಷ್ಣಭಾವನಾಃ ।
ಸಮವೇತಾ ಜಗುಃ ಕೃಷ್ಣಂ ತದಾಗಮನಕಾಂಕ್ಷಿತಾಃ
॥ ೪೫ ॥

ಪುನಃ ಪುಲಿನಮಾಗತ್ಯ ಕಾಲಿಂದ್ಯಾಃ ಕೃಷ್ಣಭಾವನಾಃ ।
ಸಮವೇತಾ ಜಗುಃ ಕೃಷ್ಣಂ ತದಾಗಮನಕಾಂಕ್ಷಿತಾಃ
॥ ೪೫ ॥

ಮೂವತ್ತನೆಯ ಅಧ್ಯಾಯವು ಮುಗಿಯಿತು. ॥ ೩೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾಯಾಂ ಕೃಷ್ಣಾನ್ವೇಷಣಂ ನಾಮ ತ್ರಿಂಶೋ೭ಧ್ಯಾಯಃ ॥ ೩೦ ॥

ಮೂವತ್ತೊಂದನೆಯ ಅಧ್ಯಾಯ

ಗೋಪಿಕಾಗೀತೆ

ಗೋಪ್ಯ ಊಚುಃ

ಜಯತಿ ತೇ೭ಧಿಕಂ ಜನ್ಮನಾ ವ್ರಜಃ
ಶ್ರಯತ ಇಂದಿರಾ ಶಶ್ವದತ್ರ ಹಿ ।
ದಯಿತ ದೃಶ್ಯತಾಂ ದಿಕ್ಷು ತಾವಕಾ-
ಸ್ತ್ವಯಿ ಧೃತಾಸವಸ್ತ್ವಾಂ ವಿಚಿನ್ವತೇ ॥ ೧ ॥

ಗೋಪಿಯರು ವಿರಹದಿಂದ ಹಾಡುತ್ತಾರೆ – ಪ್ರಿಯಕರನೇ! ಕೃಷ್ಣ! ಮಾಧವ! ನೀನು ಇಲ್ಲಿ ಹುಟ್ಟಿದ ಕಾರಣದಿಂದಲೇ ವೈಕುಂಠಾದಿ ಉತ್ತಮ ಲೋಕಗಳಿಗಿಂತಲೂ ಈ ವ್ರಜದ ಮಹಿಮೆ ಹೆಚ್ಚಾಗಿದೆ. ಅದರಿಂದಲೇ ಸೌಂದರ್ಯದ ನಿಧಿಯಾದ ಸಂಪದ್ಭರಿತಳಾದ ಲಕ್ಷ್ಮೀದೇವಿಯು ವೈಕುಂಠವನ್ನು ಬಿಟ್ಟು ನಿತ್ಯ ನಿರಂತರವಾಗಿ ಇಲ್ಲಿ ವಾಸಮಾಡುತ್ತಿದ್ದಾಳೆ. ಪ್ರಿಯನೇ! ನಿನ್ನ ದಿವ್ಯ ಚರಣಾರವಿಂದಗಳಲ್ಲೇ ಪ್ರಾಣಾರ್ಪಣೆ ಮಾಡಿರುವ ಗೋಪಿಯರಾದ ನಾವು ನಿನ್ನನ್ನು ವನ-ವನಗಳಲ್ಲಿಯೂ ಹುಡುಕುತ್ತಿದ್ದೇವೆ. ದರ್ಶನವಿತ್ತು ಕಾಪಾಡು ಸ್ವಾಮಿ! ॥ ೧ ॥ ನಮ್ಮ ಪ್ರೇಮಪೂರ್ಣ ಹೃದಯದ ಸ್ವಾಮಿಯೇ! ನಾವು ನಿನ್ನ ನಿಃಶುಲ್ಕದಾಸಿಯರಾಗಿದ್ದೇವೆ. ಶರತ್ಕಾಲದಲ್ಲಿ ಸರೋವರಗಳಲ್ಲಿ ಸೊಂಪಾಗಿ ಬೆಳೆದಿರುವ ಕಮಲ ಪುಷ್ಪಗಳ ಕಾಂತಿಯನ್ನು ಅಪಹರಿಸುವ

ಶರದುದಾಶಯೇ ಸಾಧುಜಾತಸತ್-
ಸರಸಿಜೋದರಶ್ರೀಮುಷಾ ದೃಶಾ ।
ಸುರತನಾಥ ತೇ೭ಶುಲ್ಕದಾಸಿಕಾ
ವರದ ನಿಘ್ನತೋ ನೇಹ ಕಿಂ ವಧಃ ॥ ೨ ॥

ವಿಷಜಲಾಪ್ಯಯಾದ್ವ್ಯಾಲರಾಕ್ಷಸಾದ್
ವರ್ಷಮಾರುತಾದ್ವೈದ್ಯುತಾನಲಾತ್ ।
ವೃಷಮಯಾತ್ಮಜಾದ್ವಿಶ್ವತೋಭಯಾದ್
ಋಷಭ ತೇ ವಯಂ ರಕ್ಷಿತಾ ಮುಹುಃ ॥ ೩ ॥

ನ ಖಲು ಗೋಪಿಕಾನಂದನೋ ಭವಾ-
ನಖಿಲದೇಹಿನಾಮಂತರಾತ್ಮದೃಕ್ ।
ವಿಖನಸಾರ್ಥಿತೋ ವಿಶ್ವಗುಪ್ತಯೇ
ಸಖ ಉದೇಯಿವಾನ್ ಸಾತ್ವತಾಂ ಕುಲೇ ॥ ೪ ॥

ವಿರಚಿತಾಭಯಂ ವೃಷ್ಣಿಧುರ್ಯ ತೇ
ಚರಣಮೀಯುಷಾಂ ಸಂಸೃತೇರ್ಭಯಾತ್ ।
ಕರಸರೋರುಹಂ ಕಾಂತ ಕಾಮದಂ
ಶಿರಸಿ ಧೇಹಿ ನಃ ಶ್ರೀಕರಗ್ರಹಮ್ ॥ ೫ ॥

ವ್ರಜಜನಾರ್ತಿಹನ್ ವೀರ ಯೋಷಿತಾಂ
ನಿಜಜನಸ್ಮಯಧ್ವಂಸನಸ್ಮಿತ ।
ಭಜ ಸಖೇ ಭವತ್ಕಿಂಕರೀಃ ಸ್ಮ ನೋ
ಜಲರುಹಾನನಂ ಚಾರು ದರ್ಶಯ ॥ ೬ ॥

ಪ್ರಣತದೇಹಿನಾಂ ಪಾಪಕರ್ಶನಂ
ತೃಣಚರಾನುಗಂ ಶ್ರೀನಿಕೇತನಮ್ ।
ಫಣಿಫಣಾರ್ಪಿತಂ ತೇ ಪದಾಂಬುಜಂ
ಕೃಣು ಕುಚೇಷು ನಃ ಕೃಂಧಿ ಹೃಚ್ಛಯಮ್ ॥ ೭ ॥

ಮಧುರಯಾ ಗಿರಾ ವಲ್ಗುವಾಕ್ಯಯಾ
ಬುಧಮನೋಜ್ಞಯಾ ಪುಷ್ಕರೇಕ್ಷಣ ।
ವಿಧಿಕರೀರಿಮಾ ವೀರ ಮುಹ್ಯತೀ-
ರಧರಸೀಧುನಾಪ್ಯಾಯಯಸ್ವ ನಃ ॥ ೮ ॥

ತವ ಕಥಾಮೃತಂ ತಪ್ತಜೀವನಂ
ಕವಿಭಿರೀಡಿತಂ ಕಲ್ಮಷಾಪಹಮ್ ।

ಕಣ್ಣುಗಳಿಂದ ನೀನು ನಮ್ಮನ್ನು ಕೊಲ್ಲುತ್ತಿರುವೆ. ಓ ವರದನೇ! ನಿನ್ನ ನೋಟದಿಂದಲೇ ಕೊಲ್ಲುವುದು ವಧೆಯಲ್ಲವೇ? ಅಸ್ತ್ರಗಳಿಂದ ಕೊಲ್ಲುವುದು ಮಾತ್ರ ವಧೆಯೇ? ॥ ೨ ॥ ಪುರುಷ ಶ್ರೇಷ್ಠನೇ! ಯಮುನೆಯ ವಿಷಮಿಶ್ರಿತ ಜಲದಿಂದಾದ ಮೃತ್ಯು ವಿನಿಂದಲೂ, ಹೆಬ್ಬಾವಿನ ರೂಪದಿಂದ ಬಂದ ಅಘಾಸುರನಿಂದಲೂ, ಇಂದ್ರನು ಕಳುಹಿಸಿದ್ದ ಪ್ರಚಂಡವಾದ ಗಾಳಿ-ಮಳೆ ಸಿಡಿಲುಗಳಿಂದಲೂ, ದಾವಾನಲದಿಂದಲೂ, ವೃಷಭಾಸುರನಿಂದಲೂ, ಮಾಯಾಸುರನ ಮಗನಾದ ತೃಣಾವರ್ತನಿಂದಲೂ ನಮ್ಮನ್ನು ಪದೇ-ಪದೇ ರಕ್ಷಿಸುವ ನೀನು ನಮ್ಮ ಮೇಲೆ ಏಕೆ ದಯೆ ತೋರುತ್ತಿಲ್ಲ! ॥ ೩ ॥ ನೀನು ಕೇವಲ ಯಶೋದಾನಂದನನೇ ಅಲ್ಲ, ಸಮಸ್ತ ದೇಹಧಾರಿಗಳ ಹೃದಯದಲ್ಲಿ ನೆಲೆಸಿರುವ ಅಂತರ್ಯಾಮಿಯಾಗಿದ್ದು ಸಾಕ್ಷಿಯಾಗಿರುವೆ. ಓ ಸಖನೇ! ಬ್ರಹ್ಮದೇವರ ಪ್ರಾರ್ಥನೆಯಂತೆ ವಿಶ್ವವನ್ನು ರಕ್ಷಿಸಲಿಕ್ಕಾಗಿ ಸಾತ್ವತವಂಶದಲ್ಲಿ ಅವತರಿಸಿರುವೆ. ॥ ೪ ॥ ಪ್ರಾಣಕಾಂತನೇ! ವೃಷ್ಣಿ ಶ್ರೇಷ್ಠನೇ! ಜನನ-ಮರಣರೂಪವಾದ ಸಂಸಾರಭಯದಿಂದ ಪೀಡಿತರಾದವರು ಸಂಸಾರದಿಂದ ಮುಕ್ತರಾಗಲು ನಿನ್ನ ಚರಣ ಕಮಲಗಳನ್ನು ಆಶ್ರಯಿಸುತ್ತಾರೆ. ಅಂತಹವರಿಗೆ ನೀನು ಅಭಯ ಹಸ್ತವನ್ನು ನೀಡುವೆ. ಸಮಸ್ತ ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಿಕೊಡುವ ಲಕ್ಷ್ಮೀದೇವಿಯ ಪಾಣಿಗ್ರಹಣಮಾಡಿದ ಮತ್ತು ಭಕ್ತರ ವಿಷಯದಲ್ಲಿ ಅಭಯಮುದ್ರೆಯನ್ನು ತೋರುವ ನಿನ್ನ ದಿವ್ಯವಾದ ಕರಕಮಲವನ್ನು ನಮ್ಮ ತಲೆಯ ಮೇಲಿರಿಸು. ॥ ೫ ॥ ವ್ರಜವಾಸಿಗಳ ದುಃಖಗಳನ್ನು ದೂರಮಾಡುವ ವೀರ ಶಿರೋಮಣಿ ಶ್ಯಾಮಸುಂದರನೇ! ನಿನ್ನವರಾದ ಗೋಪಿಯರ ಗರ್ವವನ್ನು ಕ್ಷಣ ಮಾತ್ರದಲ್ಲಿ ಧ್ವಂಸಮಾಡುವ ಕಿರುನಗೆಯುಳ್ಳವನೇ! ಸೇವಕಿಯರಾದ ನಮ್ಮನ್ನು ಅಂಗೀಕರಿಸು. ದೂರೀಕರಿಸಬೇಡ. ಅಬಲೆಯರಾದ ನಮಗೆ ನಿನ್ನ ಮುಖಾರವಿಂದವನ್ನು ತೋರಿಸು. ॥ ೬ ॥ ಪ್ರಿಯಕರನೇ! ಶರಣಾಗತರಾದವರ ಪಾಪವನ್ನು ಹೋಗಲಾಡಿಸುವಂತಹ, ಹುಲ್ಲನ್ನು ಹಸುಗಳನ್ನು ಅನುಸರಿಸಿ ಹೋಗುವ, ಶ್ರೀಲಕ್ಷ್ಮೀದೇವಿಗೆ ನಿವಾಸಸ್ಥಾನವಾದ, ಸೌಂದರ್ಯ, ಮಾಧುರ್ಯಗಳಿಗೆ ಆವಾಸವಾಗಿರುವ, ಕಾಳಿಯನ ಹೆಡೆಗಳನ್ನು ಮೆಟ್ಟಿ ಅನುಗ್ರಹಿಸಿದ ದಿವ್ಯವಾದ ನಿನ್ನ ಪಾದಪಂಕಜಗಳನ್ನು ನಮ್ಮ ವಕ್ಷಃಸ್ಥಳದ ಮೇಲಿರಿಸಿ ನಮ್ಮ ಹೃದಯತಾಪವನ್ನು ಶಾಂತಗೊಳಿಸು.॥ ೭॥ ಕಮಲನಯನ! ನಿನ್ನ ಮಾತು ಅದೆಷ್ಟು ಮಧುರವಾಗಿದೆ. ಮಾತಿನಲ್ಲಿರುವ ಒಂದೊಂದು ಶಬ್ದವೂ, ಒಂದೊಂದು ಅಕ್ಷರವೂ, ಒಂದೊಂದು ವಾಕ್ಯವೂ ಮಧುರಾತಿ ಮಧುರವಾಗಿದೆ. ದೊಡ್ಡ ದೊಡ್ಡ ವಿದ್ವಾಂಸರಿಗೂ ಕೂಡ ಅವು ಮನೋಜ್ಞವಾಗಿವೆ. ಅಂತಹ ನಿನ್ನ ಸುಮಧುರವಾದ ಚೆನ್ನುಡಿಗಳ ರಸಾಸ್ವಾದನೆಯಿಂದ ಮೋಹಗೊಂಡ ನಿನ್ನ ಸೇವಕಿಯರಾದ ನಮಗೆ ನಿನ್ನ ಅಮೃತಕ್ಕಿಂತಲೂ ಮಧುರವಾದ ಅಧರಾಮೃತವನ್ನು ಪಾನಮಾಡಿಸಿ ನಮ್ಮನ್ನು ತೃಪ್ತಿಗೊಳಿಸು. ॥ ೮ ॥

ಪ್ರಭುವೇ! ನಿನ್ನ ಲೀಲೆಯ ಕಥಾಪ್ರಸಂಗಗಳೂ ಅಮೃತ ಸ್ವರೂಪವೇ ಆಗಿವೆ. ವಿರಹದಿಂದ ಪರಿತಪಿಸುತ್ತಿರುವವರಿಗೆ ಅವು ಜೀವನ ಸರ್ವಸ್ವವೇ ಆಗಿವೆ. ದೊಡ್ಡ-ದೊಡ್ಡ ಜ್ಞಾನಿಗಳೂ ಮಹಾ

ಶ್ರವಣಮಂಗಲಂ ಶ್ರೀಮದಾತತಂ
ಭುವಿ ಗೃಣಂತಿ ತೇ ಭೂರಿದಾ ಜನಾಃ ॥ ೯ ॥

ಪ್ರಹಸಿತಂ ಪ್ರಿಯ ಪ್ರೇಮವೀಕ್ಷಣಂ
ವಿಹರಣಂ ಚ ತೇ ಧ್ಯಾನಮಂಗಲಮ್ ।

ರಹಸಿ ಸಂವಿದೋ ಯಾ ಹೃದಿಸ್ಪೃಶಃ
ಕುಹಕ ನೋ ಮನಃ ಕ್ಷೋಭಯಂತಿ ಹಿ ॥ ೧೦ ॥

ಚಲಸಿ ಯದ್ವ್ರಜಾಚ್ಚಾರಯನ್ಪಶೂನ್
ನಲಿನಸುಂದರಂ ನಾಥ ತೇ ಪದಮ್ ।

ಶಿಲತೃಣಾಂಕುರೈಃ ಸೀದತೀತಿ ನಃ
ಕಲಿಲತಾಂ ಮನಃ ಕಾಂತ ಗಚ್ಛತಿ ॥ ೧೧ ॥

ದಿನಪರಿಕ್ಷಯೇ ನೀಲಕುಂತಲೈ-
ರ್ವನರುಹಾನನಂ ಬಿಭ್ರದಾವೃತಮ್ ।

ಘನರಜಸ್ವಲಂ ದರ್ಶಯನ್ಮುಹು-
ರ್ಮನಸಿ ನಃ ಸ್ಮರಂ ವೀರ ಯಚ್ಛಸಿ ॥ ೧೨ ॥

ಪ್ರಣತಕಾಮದಂ ಪದ್ಮಜಾರ್ಚಿತಂ
ಧರಣಿಮಂಡನಂ ಧ್ಯೇಯಮಾಪದಿ ।

ಚರಣಪಂಕಜಂ ಶಂತಮಂ ಚ ತೇ
ರಮಣ ನಃ ಸ್ತನೇಷ್ವರ್ಪಯಾಧಿಹನ್ ॥ ೧೩ ॥

ಸುರತವರ್ಧನಂ ಶೋಕನಾಶನಂ
ಸ್ವರಿತವೇಣುನಾ ಸುಷ್ಠು ಚುಂಬಿತಮ್ ।

ಇತರರಾಗವಿಸ್ಮಾರಣಂ ನೃಣಾಂ
ವಿತರ ವೀರ ನಸ್ತೇऽಧರಾಮೃತಮ್ ॥ ೧೪ ॥

ಭಕ್ತ ಕವಿಗಳು ನಿನ್ನ ಚರಿತಾಮೃತವನ್ನು ಹಾಡಿ ಹೊಗಳಿದ್ದಾರೆ. ಚರಿತಾಮೃತದ ಶ್ರವಣಮಾತ್ರದಿಂದಲೇ ಪಾಪವು ಪರಿಹಾರವಾಗುತ್ತದೆ. ಸುಖ-ಸಂಪತ್ತುಗಳು ಪ್ರಾಪ್ತವಾಗುತ್ತವೆ. ನಿನ್ನ ಕಥಾಮೃತವನ್ನು ಲೋಕದಲ್ಲಿ ಪಾನಮಾಡುವಂತಹವರು ಹಿಂದಿನ ಜನ್ಮದಲ್ಲಿ ಬಹಳ ದಾನಗಳನ್ನು ಮಾಡಿದವರಾಗಿರುತ್ತಾರೆ. ಆ ಪುಣ್ಯದಿಂದ ಅವರಿಗೆ ನಿನ್ನ ಕಥಾಮೃತವನ್ನು ಈಗ ಸವಿಯುವ ಯೋಗವುಂಟಾಗಿದೆ. ॥ ೯ ॥ ಮಾಯಾಪತಿಯೇ! ಪ್ರಾಣ ಪ್ರಿಯನೇ! ನಿನ್ನ ಪ್ರೇಮಪೂರ್ಣವಾದ ನಗು, ಪ್ರೇಮಪೂರ್ಣವಾದ ನೋಟ, ನಾನಾ ಬಗೆಯ ಕ್ರೀಡೆಗಳು – ಇವೆಲ್ಲವನ್ನು ಸ್ಮರಿಸಿಕೊಂಡು ನಾವು ಆನಂದಪಡುತ್ತಿದ್ದೆವು. ನಿನ್ನನ್ನು ಧ್ಯಾನಿಸುವುದೇ ಮಂಗಳದಾಯಕವಾದುದು. ಅದರ ಫಲವಾಗಿ ನೀನೇ ನಮ್ಮ ಬಳಿಗೆ ಬಂದೆ. ಏಕಾಂತದಲ್ಲಿ ನಮ್ಮೊಡನೆ ಹೃದಯಸ್ಪರ್ಶಿಯಾದ ವಿನೋದದ ಮಾತುಗಳನ್ನಾಡಿದೆ. ಅದೆಲ್ಲವನ್ನು ಈಗ ನೆನೆಸಿಕೊಂಡರೆ ನಮ್ಮ ಮನಸ್ಸು ಕ್ಷೋಭೆಗೊಳ್ಳುತ್ತದೆ. ॥ ೧೦ ॥

ಪ್ರಾಣನಾಥನೇ! ನಿನ್ನ ಚರಣಕಮಲಗಳು ಕಮಲಕ್ಕಿಂತಲೂ ಸುಂದರವಾಗಿಯೂ, ಸುಕೋಮಲವಾಗಿಯೂ ಇವೆ. ನೀನು ಹಸುಗಳನ್ನು ಹೊಡೆದುಕೊಂಡು ವ್ರಜದಿಂದ ಹೊರಟೊಡನೆಯೇ ನಮಗೆ ನಿನ್ನ ಮೃದುವಾದ ಕಾಲುಗಳದೇ ಯೋಚನೆ. ಹಾದಿಯಲ್ಲಿರುವ ನೊರಜುಕಲ್ಲುಗಳಿಂದಲೂ, ಹುಲ್ಲಿನ ಕೂಳೆಗಳಿಂದಲೂ ನಿನ್ನ ಮೃದುವಾದ ಕಾಲುಗಳಿಗೆ ಎಷ್ಟು ನೋವಾಗುವುದೋ ಎಂದು ನಾವು ಪರಿತಪಿಸುತ್ತೇವೆ. ನಮ್ಮ ಮನಸ್ಸು ಬಹಳವಾಗಿ ಕಳವಳಿಸುತ್ತದೆ. ॥ ೧೧ ॥ ವೀರಪ್ರಿಯತಮನೇ! ಸಾಯಂಕಾಲವಾಗುತ್ತಲೇ ನೀನು ಹಸುಗಳೊಡನೆ ವ್ರಜಕ್ಕೆ ಹಿಂದಿರುಗುವಾಗ ನಿನ್ನ ಸುಂದರವಾದ ಮುಖಕಮಲವು ಕಪ್ಪಾದ ಗುಂಗುರು ಕೂದಲುಗಳಿಂದಲೂ, ಗೋಧೂಳಿಯಿಂದಲೂ ವ್ಯಾಪ್ತವಾಗಿ ಅತ್ಯಂತ ಶೋಭಾಯಮಾನವಾಗಿ ಕಾಣುತ್ತದೆ. ಅಂತಹ ಸುಂದರವಾದ ಮುಖಾರವಿಂದವನ್ನು ತೋರುತ್ತಾ ನೀನು ನಮ್ಮ ಹೃದಯದಲ್ಲಿ – ನಿನ್ನನ್ನು ಸೇರಬೇಕೆಂಬ ಆಕಾಂಕ್ಷೆಯನ್ನು ಉಂಟು ಮಾಡುತ್ತಿರುವೆ. ॥ ೧೨ ॥

ಪ್ರಿಯತಮನೇ! ನೀನೊಬ್ಬನೇ ನಮ್ಮ ಸಮಸ್ತವಾದ ಪೀಡೆಗಳನ್ನೂ ಪರಿಹರಿಸಲು ಸಮರ್ಥನಾಗಿರುವೆ. ನಿನ್ನ ಚರಣಕಮಲಗಳು ಶರಣಾಗತ ಭಕ್ತರ ಸಮಸ್ತ ಅಭಿಲಾಷೆಗಳನ್ನು ಈಡೇರಿಸುವಂತಹವುಗಳು. ಸಾಕ್ಷಾತ್ ಲಕ್ಷ್ಮೀಯೇ ಅವುಗಳನ್ನು ಸೇವಿಸುತ್ತಾಳೆ ಮತ್ತು ಭೂಮಂಡಲಕ್ಕೆ ಅಲಂಕಾರ ಪ್ರಾಯವಾಗಿವೆ. ಆಪತ್ತಿನ ಸಮಯದಲ್ಲಿ ನಿನ್ನ ಪಾದಾರವಿಂದಗಳನ್ನು ಧ್ಯಾನಿಸಿದರೆ ಸಮಸ್ತವಾದ ಆಪತ್ತುಗಳೂ ದೂರವಾಗುತ್ತವೆ. ಇಂತಹ ಕಲ್ಯಾಣಸ್ವರೂಪವಾದ ನಿನ್ನ ಚರಣಕಮಲಗಳನ್ನು ನಮ್ಮ ವಕ್ಷಸ್ಥಳದಲ್ಲಿರಿಸಿ ಹೃದಯದ ವ್ಯಥೆಯನ್ನು ಶಾಂತಗೊಳಿಸು. ॥ ೧೩. ॥

ವೀರಶಿರೋಮಣಿಯೇ! ನಿನ್ನ ಅಧರಾಮೃತವು ನಿನ್ನನ್ನು ಸೇರುವ ಆಕಾಂಕ್ಷೆಯನ್ನು ಹೆಚ್ಚಿಸುವಂತಹುದು. ಅದು ವಿರಹಜನ್ಯ ಸಮಸ್ತ ಶೋಕ-ಸಂತಾಪಗಳನ್ನು ನಾಶಮಾಡಿಬಿಡುತ್ತದೆ. ಆ ಮುರಳಿಯು ಅದನ್ನು ಚೆನ್ನಾಗಿ ಪಾನಮಾಡುತ್ತಾ ಇರುತ್ತದೆ. ಒಮ್ಮೆ ಅದನ್ನು ಕುಡಿದ ಜನರಿಗೆ ಬೇರಾವ ಆಸಕ್ತಿಯೂ ನೆನಪೇ ಇರುವುದಿಲ್ಲ. ಅಂತಹ ನಿನ್ನ ಅಧರಾಮೃತವನ್ನು ನಮಗೆ ದಯಪಾಲಿಸು. ॥ ೧೪ ॥

ಅಟತಿ ಯದ್ಭವಾನಹ್ನಿ ಕಾನನಂ
ತ್ರುಟಿರ್ಯುಗಾಯತೇ ತ್ವಾಮಪಶ್ಯತಾಮ್ ।

ಕುಟಿಲಕುಂತಲಂ ಶ್ರೀಮುಖಂ ಚ ತೇ
ಜಡ ಉದೀಕ್ಷತಾಂ ಪಕ್ಷ್ಮಕೃದ್ದೃಶಾಮ್ ॥ ೧೫ ॥

ಪತಿಸುತಾನ್ವಯಭ್ರಾತೃಬಾಂಧವಾ-
ನತಿವಿಲಂಘ್ಯ ತೇಽಂತ್ಯಚ್ಯುತಾಗತಾಃ ।

ಗತಿವಿದಸ್ತವೋದ್ಗೀತಮೋಹಿತಾಃ
ಕಿತವ ಯೋಷಿತಃ ಕಸ್ತ್ಯಜೇನ್ನಿಶಿ ॥ ೧೬ ॥

ರಹಸಿ ಸಂವಿದಂ ಹೃಚ್ಛಯೋದಯಂ
ಪ್ರಹಸಿತಾನನಂ ಪ್ರೇಮವೀಕ್ಷಣಮ್ ।

ಬೃಹದುರಃ ಶ್ರಿಯೋ ವೀಕ್ಷ್ಯ ಧಾಮ ತೇ
ಮುಹುರತಿಸ್ಪೃಹಾ ಮುಹ್ಯತೇ ಮನಃ ॥ ೧೭ ॥

ವ್ರಜವನೌಕಸಾಂ ವ್ಯಕ್ತಿರಂಗ ತೇ
ವೃಜಿನಹಂತ್ಯಲಂ ವಿಶ್ವಮಂಗಲಮ್ ।

ತ್ಯಜ ಮನಾಕ್ಚ ನಸ್ತ್ವತ್ಸ್ಪೃಹಾತ್ಮನಾಂ
ಸ್ವಜನಹೃದ್ರುಜಾಂ ಯನ್ನಿಷೂದನಮ್ ॥ ೧೮ ॥

ಯತ್ತೇ ಸುಜಾತಚರಣಾಂಬುರುಹಂ ಸ್ತನೇಷು
ಭೀತಾಃ ಶನೈಃ ಪ್ರಿಯ ದಧೀಮಹಿ ಕರ್ಕಶೇಷು ।

ತೇನಾಟವೀಮಟಸಿ ತದ್ವ್ಯಥತೇ ನ ಕಿಂಸ್ವಿತ್
ಕೂರ್ಪಾದಿಭಿರ್ಭ್ರಮತಿ ಧೀರ್ಭವದಾಯುಷಾಂ ನಃ ॥ ೧೯ ॥

ಪ್ರಾಣಪ್ರಿಯನೆ! ಹಗಲಿನಲ್ಲಿ ನೀನು ಹಸುಗಳನ್ನು ಮೇಯಿಸಲು ವನಕ್ಕೆ ಹೋದಾಗ, ನಿನ್ನನ್ನು ನೋಡದೆ ನಮಗೆ ಒಂದೊಂದು ಕ್ಷಣವು ಯುಗದಂತೆ ಕಾಣುತ್ತದೆ. ಸಾಯಂಕಾಲ ವಾಗುತ್ತಲೇ ಮರಳಿದಾಗ, ಗುಂಗುರು ಕೂದಲುಗಳಿಂದ ಕೂಡಿದ ನಿನ್ನ ಪರಮ ಸುಂದರ ಮುಖಾರವಿಂದವನ್ನು ನೋಡುತ್ತಾ ಇರುವಾಗ ರೆಪ್ಪೆಗಳು ಮುಚ್ಚಿಕೊಳ್ಳುವುದು ನಮಗೆ ತುಂಬಾ ಮುಜುಗರವಾಗುತ್ತದೆ. ಈ ಕಣ್ಣುಗಳ ರೆಪ್ಪೆಗಳನ್ನು ನಿರ್ಮಿಸಿದ ಬ್ರಹ್ಮನು ಮೂರ್ಖನೇ ಆಗಿದ್ದಾನೆ ಎಂದೆನಿಸುತ್ತದೆ. ॥ ೧೫ ॥ ಕಪಟಿ ಯಾದ ಅಚ್ಯುತನೇ! ಕಪಟನಾಟಕ ಸೂತ್ರಧಾರಿಯೇ! ನಾವು ನಮ್ಮ ಪತಿ-ಪುತ್ರರನ್ನೂ ಸಹೋದರರನ್ನು ಬಂಧುಗಳನ್ನು ಕುಲ ಪರಿವಾರವನ್ನು ತ್ಯಜಿಸಿ, ಅವರ ಆಜ್ಞೆಯನ್ನು ಉಲ್ಲಂಘಿಸಿ ನಿನ್ನ ವೇಣುಗಾನದಿಂದ ಆಕರ್ಷಿಸಲ್ಪಟ್ಟವರಾಗಿ ಕೊಳಲಿನ ಧ್ವನಿ ಯಿಂದಲೇ ನೀನಿಲ್ಲಿರುವೆ ಎಂಬುದನ್ನು ತಿಳಿದುಕೊಂಡು ಆ ಧ್ವನಿ ಯನ್ನೇ ಅನುಸರಿಸಿ ನಿನ್ನ ಬಳಿಗೆ ಬಂದೆವು. ಹೀಗೆ ರಾತ್ರಿಯ ಸಮಯದಲ್ಲಿ ಬಂದಿರುವ ಯುವತಿಯರನ್ನು ನೀನಲ್ಲದೆ ಬೇರೆ ಯಾರು ತ್ಯಜಿಸಿಹೋಗುತ್ತಾರೆ? ॥ ೧೬ ॥ ಪ್ರಿಯಕರನೇ! ನೀನು ಏಕಾಂತದಲ್ಲಿ ನಮ್ಮೊಡನೆ ಆಡುತ್ತಿದ್ದ ಪ್ರೇಮಪ್ರಚೋದಕವಾದ ಸರಸ-ಸಲ್ಲಾಪದ ಮಾತುಗಳನ್ನು, ಪ್ರೇಮಪೂರ್ವಕವಾದ ನಿನ್ನ ವೀಕ್ಷಣವನ್ನು, ಮಂದಹಾಸದಿಂದ ಕೂಡಿದ ನಿನ್ನ ಸುಂದರ ವಾದ ಮುಖಾರವಿಂದವನ್ನು, ಲಕ್ಷ್ಮಿಗೆ ನಿವಾಸಸ್ಥಾನವಾದ ನಿನ್ನ ವಿಶಾಲ ವಾದ ವಕ್ಷಸ್ಥಳವನ್ನು ಸ್ಮರಿಸಿಕೊಂಡು ಮುಗ್ಧವಾದ ನಮ್ಮ ಮನಸ್ಸು ನಿನ್ನನ್ನು ಪುನಃ ಸೇರಲೇಬೇಕೆಂದು ಬಹಳವಾಗಿ ತವಕಿಸು ತ್ತಿದೆ. ॥ ೧೭ ॥ ಪ್ರಿಯಕರನೇ! ನಿನ್ನ ಈ ಅವತಾರವು ಗೋಕುಲ ವಾಸಿಗಳ ದುಃಖವನ್ನೂ, ತಾಪವನ್ನೂ ವಿನಾಶಗೊಳಿಸಲು ಮತ್ತು ವಿಶ್ವಕ್ಕೆ ಮಂಗಳವನ್ನುಂಟು ಮಾಡುವುದಕ್ಕಾಗಿಯೇ ಆಗಿದೆ. ನಮ್ಮ ಹೃದಯವು ನಿನ್ನ ಕುರಿತಾದ ಲಾಲಸೆಯಿಂದ ತುಂಬಿ ಹೋಗಿದೆ. ನಿನ್ನ ಸ್ವಜನರಾದ ನಮ್ಮಗಳ ಹೃದ್ರೋಗವನ್ನು ಪೂರ್ಣವಾಗಿ ನಾಶ ಮಾಡುವಂತಹ ಯಾವುದಾದರೂ ಔಷಧವನ್ನು ಕೊಟ್ಟು ಕಾಪಾಡು. ॥ ೧೮ ॥ ಪ್ರಾಣಕಾಂತನೇ! ನಿನ್ನ ಚರಣಗಳು ಕಮಲ ಕ್ಕಿಂತಲೂ ಕೋಮಲವಾದುದು. ಅವನ್ನು ನಮ್ಮ ಕಠೋರವಾದ ಸ್ತನಗಳ ಮೇಲಿರಿಸಿಕೊಳ್ಳುವಾಗಲೂ ಎಲ್ಲಿಯಾದರೂ ಅವಕ್ಕೆ ನೋವಾಗಬಹುದೆಂದು ಹೆದರಿಕೊಂಡೇ ಇಟ್ಟುಕೊಳ್ಳುವೆವು. ಅಂತಹ ಚರಣಗಳಿಂದ ನೀನು ರಾತ್ರಿಯಲ್ಲಿ ಘೋರವಾದ ಅರಣ್ಯದಲ್ಲಿ ಅಡಗಿಕೊಂಡೇ ಅಲೆಯುತ್ತಿರುವೆಯಲ್ಲ! ಕಲ್ಲು ಮುಳ್ಳುಗಳಿಂದ ನಿನ್ನ ಸುಕೋಮಲವಾದ ಪಾದಗಳಿಗೆ ನೋವಾಗುತ್ತಿಲ್ಲವೆ? ಇದನ್ನು ನೆನೆದಾಗಲೇ ನಿನ್ನಲ್ಲಿಯೇ ಪ್ರಾಣಗಳನ್ನಿಟ್ಟುಕೊಂಡಿರುವ ನಮಗೆ ಬುದ್ಧಿಭ್ರಮಣೆಯುಂಟಾಗುತ್ತದೆ. ಶ್ಯಾಮಸುಂದರ ಶ್ರೀಕೃಷ್ಣ! ನಮ್ಮ ಜೀವನವು ನಿನಗಾಗಿಯೇ ಮುಡುಪಾಗಿಟ್ಟಿದೆ. ನಿನ್ನ ಸೇವೆಗಾಗಿಯೇ ನಮ್ಮನ್ನು ಅರ್ಪಿಸಿಕೊಂಡುಬಿಟ್ಟಿದ್ದೇವೆ. ದರ್ಶನವಿತ್ತುಕಾಪಾಡು. ॥೧೯॥

ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾಯಾಂ ಗೋಪಿಕಾಗೀತಂ ನಾಮೈಕತ್ರಿಂಶೋಽಧ್ಯಾಯಃ॥ ೩೧ ॥

ಮೂವತ್ತೆರಡನೆಯ ಅಧ್ಯಾಯ

ಭಗವಂತನು ಪ್ರಕಟನಾಗಿ ಗೋಪಿಯರನ್ನು ಸಂತೈಸಿದುದು

ಶ್ರೀಶುಕ ಉವಾಚ

ಇತಿ ಗೋಪ್ಯಃ ಪ್ರಗಾಯಂತ್ಯಃ ಪ್ರಲಪಂತ್ಯಶ್ಚ ಚಿತ್ರಧಾ ।
ರುರುದುಃ ಸುಸ್ವರಂ ರಾಜನ್ ಕೃಷ್ಣದರ್ಶನಲಾಲಸಾಃ
॥ ೧ ॥

ತಾಸಾಮಾವಿರಭೂಚ್ಛೌರಿಃ ಸ್ಮಯಮಾನಮುಖಾಂಬುಜಃ ।
ಪೀತಾಂಬರಧರಃಸ್ರಗ್ವೀ ಸಾಕ್ಷಾನ್ಮನ್ಮಥಮನ್ಮಥಃ
॥ ೨ ॥

ತಂ ವಿಲೋಕ್ಯಾಗತಂ ಪ್ರೇಷ್ಠಂ ಪ್ರೀತ್ಯುತ್ಫುಲ್ಲದೃಶೋऽಬಲಾಃ ।
ಉತ್ತಸ್ಥುರ್ಯುಗಪತ್ ಸರ್ವಾಸ್ತನ್ವಃ ಪ್ರಾಣಮಿವಾಗತಮ್
॥ ೩ ॥

ಕಾಚಿತ್ ಕರಾಂಬುಜಂ ಶೌರೇರ್ಜಗೃಹೇऽಂಜಲಿನಾ ಮುದಾ ।
ಕಾಚಿದ್ದಧಾರ ತದ್ಬಾಹುಮಂಸೇ ಚಂದನರೂಷಿತಮ್
॥ ೪ ॥

ಕಾಚಿದಂಜಲಿನಾಗೃಹ್ಣಾತ್ತನ್ವೀ ತಾಂಬೂಲಚರ್ವಿತಮ್ ।
ಏಕಾ ತದಂಘ್ರಿಕಮಲಂ ಸಂತಪ್ತಾ ಸ್ತನಯೋರಧಾತ್
॥ ೫ ॥

ಏಕಾ ಭ್ರುಕುಟಿಮಾಬಧ್ಯ ಪ್ರೇಮಸಂರಂಭವಿಹ್ವಲಾ ।
ಘ್ನತೀವೈಕ್ಷತ್ ಕಟಾಕ್ಷೇಪೈಃ ಸಂದಷ್ಟದಶನಚ್ಛದಾ
॥ ೬ ॥

ಅಪರಾನಿಮಿಷದ್ದೃಗ್ಭ್ಯಾಂ ಜುಷಾಣಾ ತನ್ಮುಖಾಂಬುಜಮ್ ।
ಅಪೀತಮಪಿ ನಾತೃಪ್ಯತ್ಸಂತಸ್ತಚ್ಚರಣಂ ಯಥಾ
॥ ೭ ॥

ತಂ ಕಾಚಿನ್ನೇತ್ರರಂಧ್ರೇಣ ಹೃದಿಕೃತ್ಯ ನಿಮೀಲ್ಯ ಚ ।
ಪುಲಕಾಂಗ್ಯುಪಗುಹ್ಯಾಸ್ತೇ ಯೋಗೀವಾನಂದಸಂಪ್ಲುತಾ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ಶ್ರೀಕೃಷ್ಣನ ದರ್ಶನಾಕಾಂಕ್ಷಿಗಳಾದ ಗೋಪಿಯರು ಕೆಲವು ವೇಳೆ ಅವನ ಲೀಲಾಪ್ರಸಂಗಗಳನ್ನು ಹಾಡುತ್ತಾ ಪ್ರಲಾಪಿಸುತ್ತಿದ್ದರೆ, ಕೆಲವು ವೇಳೆ ವಿರಹವೇದನೆಯನ್ನು ತಾಳಲಾರದೆ ಕರುಣಾಜನಕವಾಗಿ ಸುಸ್ವರದಿಂದ ಬಗೆ-ಬಗೆಯಾಗಿ ವಿಲಪಿಸುತ್ತಿದ್ದರು. ॥ ೧ ॥ ಒಡನೆಯೇ ಅವರ ಮಧ್ಯದಲ್ಲೇ ಭಗವಾನ್ ಶ್ರೀಕೃಷ್ಣನು ಪ್ರಕಟನಾದನು. ಅವನ ಮುಖಾರವಿಂದವು ಮಂದಹಾಸದಿಂದ ಪ್ರಫುಲ್ಲವಾಗಿತ್ತು. ವನಮಾಲೆಯನ್ನು, ಪೀತಾಂಬರವನ್ನು ಧರಿಸಿದ್ದ ಶ್ರೀಹರಿಯು ಸಾಕ್ಷಾತ್ ಮನ್ಮಥನ ಮನಸ್ಸನ್ನು ಸೂರೆಗೊಳ್ಳುವಂತಹ ಸುಂದರ ರೂಪದಿಂದ ಬೆಳಗಿದನು. ॥ ೨ ॥ ಕೋಟಿ-ಕೋಟಿ ಮನ್ಮಥರಿಗಿಂತಲೂ ಪರಮಮನೋಹರನಾದ ಪ್ರಾಣಪ್ರಿಯ ಶ್ಯಾಮಸುಂದರನನ್ನು ನೋಡಿದ ಗೋಪಿಯರ ಕಣ್ಣುಗಳು ಕಮಲದಂತೆ ಅರಳಿದವು. ಗತಪ್ರಾಣವಾದ ಶರೀರದಲ್ಲಿ ಪುನಃ ದಿವ್ಯ ಪ್ರಾಣವು ಸಂಚಾರವಾದಾಗ ಇಂದ್ರಿಯಗಳೆಲ್ಲವೂ ಒಮ್ಮೆಗೆ ಕಾರ್ಯೋನ್ಮುಖವಾಗುವಂತೆ ಗೋಪಿಯರೆಲ್ಲರೂ ಒಮ್ಮೆಗೆ ಎದ್ದು ನಿಂತರು. ರೋಮಾಂಚಿತರಾಗಿ ನವಸ್ಫೂರ್ತಿಯಿಂದ ಒಡಗೊಂಡರು. ॥ ೩ ॥ ಒಬ್ಬ ಗೋಪಿಯು ಅತ್ಯಂತ ಪ್ರೇಮಾನಂದದಿಂದ ಶ್ರೀಕೃಷ್ಣನ ಕರಕಮಲವನ್ನು ತನ್ನೆರಡೂ ಕೈಗಳಿಂದ ಹಿಡಿದುಕೊಂಡಳು. ಮತ್ತೊಬ್ಬಳು ಚಂದನಲಿಪ್ತವಾದ ಅವನ ಬಾಹುವನ್ನು ತನ್ನ ಹೆಗಲಮೇಲೆ ಇರಿಸಿಕೊಂಡಳು. ॥ ೪ ॥ ಒಬ್ಬಳು ಶ್ರೀಕೃಷ್ಣನು ಅಗಿದಿದ್ದ ತಾಂಬೂಲವನ್ನು ಪ್ರಸಾದರೂಪವಾಗಿ ಬೊಗಸೆಯಲ್ಲಿ ಗ್ರಹಿಸಿದಳು. ಮದಗೊಬ್ಬ ಗೋಪಿಯು ಕುಳಿತುಕೊಂಡು ಶ್ರೀಕೃಷ್ಣನ ಪಾದಕಮಲವನ್ನು ವಿರಹವ್ಯಥೆಯಿಂದ ಉರಿಯುತ್ತಿದ್ದ ತನ್ನ ಎದೆಯ ಮೇಲೆ ಇರಿಸಿಕೊಂಡಳು. ॥ ೫ ॥ ಇನ್ನೊಬ್ಬ ಗೋಪಿಯು ಪ್ರಣಯಕೋಪದಿಂದ ವಿಹ್ವಲಳಾಗಿ ಹುಬ್ಬುಗಳನ್ನು ಗಂಟಕ್ಕಿ, ಹಲ್ಲುಗಳಿಂದ ತುಟಿಯನ್ನು ಕಚ್ಚುತ್ತಾ, ಕಟಾಕ್ಷಬಾಣಗಳಿಂದ ಶ್ರೀಕೃಷ್ಣನನ್ನು ಪ್ರಹರಿಸುವಳೋ ಎಂಬಂತೆ ದುರುಗುಟ್ಟಿಕೊಂಡು ನೋಡುತ್ತಿದ್ದಳು. ॥ ೬ ॥ ಒಬ್ಬಳು ಎವೆಯಿಕ್ಕದ ನೋಟದಿಂದ ಶ್ರೀಕೃಷ್ಣನ ಮುಖಾರವಿಂದದ ಮಧುವನ್ನು ಪಾನಮಾಡುತ್ತಲೇ ಇದ್ದಳು. ಸತ್ಪುರಷರು ಭಗವಂತನ ದಿವ್ಯ ಚರಣಾರವಿಂದಗಳನ್ನು ಎಷ್ಟು ನೋಡಿದರೂ ತೃಪ್ತರಾಗದಿರುವಂತೆ ಆ ಗೋಪಿಯು ನಿರಂತರವಾಗಿ ಮುಖಕಮಲದ ಮಧುವನ್ನು ಪಾನಮಾಡುತ್ತಿದ್ದರೂ ತೃಪ್ತಳಾಗಲೇ ಇಲ್ಲ. ॥ ೭॥ ಇನ್ನೋರ್ವ ಗೋಪಿಯು ಕಂಗಳೆಂಬ ಮಾರ್ಗದಿಂದ ಭಗವಂತನನ್ನು ಹೃದಯಕಮಲಕ್ಕೊಯ್ದು ದ್ವಾರರೂಪದಿಂದಿದ್ದ ರೆಪ್ಪೆಗಳನ್ನು ಮುಚ್ಚಿಕೊಂಡಳು. ಹೃದಯಗಹ್ವರದಲ್ಲಿ ಪ್ರಕಾಶಮಾನವಾದ ಶ್ರೀಕೃಷ್ಣನನ್ನು ಆಲಿಂಗಿಸಿಕೊಂಡು ರೋಮಾಂಚಿತಳಾಗಿ ಪರಮಾನಂದದಲ್ಲಿ ಮುಳುಗಿಹೋದಳು. ॥ ೮ ॥

ಸರ್ವಾಸ್ತಾಃ ಕೇಶವಾಲೋಕಪರಮೋತ್ಸವನಿರ್ವೃತಾಃ ।
ಜಹುರ್ವಿರಹಜಂ ತಾಪಂ ಪ್ರಾಜ್ಞಂ ಪ್ರಾಪ್ಯ ಯಥಾ ಜನಾಃ
॥ ೯ ॥

ಪರೀಕ್ಷಿತನೇ! ಮುಮುಕ್ಷುಗಳಾದ ಜನರು ಪ್ರಾಜ್ಞಪುರುಷನನ್ನು ಸಂದರ್ಶಿಸಿ ಸಂಸಾರದ ಜಂಜಾಟದಿಂದ ಮುಕ್ತರಾಗುವಂತೆಯೇ ಗೋಪಿಯರೆಲ್ಲರೂ ಭಗವಾನ್ ಶ್ರೀಕೃಷ್ಣನ ದರ್ಶನೋತ್ಸವದಿಂದ ಆನಂದಭರಿತರಾಗಿ ವಿರಹತಾಪದಿಂದ ಮುಕ್ತರಾದರು. ॥ ೯ ॥ ಭಗವಂತನಾದ ಅಚ್ಯುತನು ವಿರಹಶೋಕದಿಂದ ಮುಕ್ತರಾದ ಗೋಪಿಯರೊಡನೆ ಸುತ್ತುವರಿಯಲ್ಪಟ್ಟು ಜ್ಞಾನ, ಬಲ ಮೊದಲಾದ ಶಕ್ತಿಗಳಿಂದ ಪರಿಪೂರ್ಣನಾದ ಈಶ್ವರನಂತೆಯೇ ಅತ್ಯಂತ ಶೋಭಾಯಮಾನವಾಗಿ ಪ್ರಕಾಶಿಸಿದನು. ॥ ೧೦ ॥

ತಾಭಿರ್ವಿಧೂತಶೋಕಾಭಿರ್ಭಗವಾನಚ್ಯುತೋ ವೃತಃ ।
ವ್ಯರೋಚತಾಧಿಕಂ ತಾತ ಪುರುಷಃ ಶಕ್ತಿಭಿರ್ಯಥಾ
॥ ೧೦ ॥

ತಾಃ ಸಮಾದಾಯ ಕಾಲಿಂದ್ಯಾ ನಿರ್ವಿಶ್ಯ ಪುಲಿನಂ ವಿಭುಃ ।
ವಿಕಸತ್ಕುಂದಮಂದಾರಸುರಭ್ಯನಿಲಷಟ್ಪದಮ್
॥ ೧೧ ॥

ಬಳಿಕ ಭಗವಾನ್ ಶ್ರೀಕೃಷ್ಣನು ಆ ವ್ರಜದ ಗೋಪಿಯರನ್ನು ಕರೆದುಕೊಂಡು ಯಮುನಾನದಿಯ ಮರಳು ಗುಡ್ಡೆಗಳ ಬಳಿಗೆ ಹೋದನು. ಆ ಸಮಯದಲ್ಲಿ ಅರಳಿದ ಮಲ್ಲಿಗೆ, ಮಂದಾರ ಮುಂತಾದ ಪುಷ್ಪಗಳಿಂದ ಸುಗಂಧವನ್ನು ಹೊತ್ತು ಶೀತಲವಾದ ಮಂದಾನಿಲವು ಬೀಸುತ್ತಿತ್ತು. ಸುಗಂಧದಿಂದ ಆಕರ್ಷಿತವಾದ ಮತ್ತ ಭೃಂಗಗಳು ಅತ್ತಲಿತ್ತ ಹಾರಾಡುತ್ತಿದ್ದವು. ಶರತ್ಕಾಲದ ಹುಣ್ಣಿಮೆಯ ಚಂದ್ರನು ಕಿರಣಗಳಿಂದ ಮೂಡಿಬಂದ ಹೃದಯಾನಂದಕರವಾದ ಬೆಳದಿಂಗಳಿನಿಂದ ರಾತ್ರಿಯ ಕತ್ತಲೆಯು ತೊಲಗಿಹೋದದ್ದಲ್ಲದೆ ಗೋಪಿಯರಿಗೆ ಆ ರಾತ್ರಿಯು ಅತ್ಯಂತ ಮಂಗಳಕರವೂ ಆಯಿತು. ಯಮುನೆಯ ಚಂಚಲವಾದ ತೆರೆಗಳ ರೂಪವಾದ ಕೈಗಳಿಂದ ಎರಚಲ್ಪಟ್ಟ ಕೋಮಲ ಮರಳಿನಿಂದ ಭಗವಂತನ ಲೀಲೆಗಳಿಗಾಗಿ ದಿವ್ಯವೇದಿಕೆಯನ್ನೇ ನಿರ್ಮಿಸಿತ್ತು. ॥ ೧೨ ॥ ಶ್ರುತಿಗಳು ಕರ್ಮಕಾಂಡದ ಮೂಲಕ ಪಾಪವನ್ನು ಪರಿಹರಿಸಿ, ಜ್ಞಾನಕಾಂಡದ ಮೂಲಕ ಆತ್ಮಸಾಕ್ಷಾತ್ಕಾರದ ಮನೋರಥವನ್ನು ಈಡೇರಿಸಿಕೊಡುವಂತೆ ಶ್ರೀಕೃಷ್ಣನ ದರ್ಶನದಿಂದ ಗೋಪಿಯರು ತಮ್ಮ ಮನಸ್ಸಿನ ಆಧಿ-ವ್ಯಾಧಿಗಳನ್ನು ಕಳಕೊಂಡು ಆನಂದ ಸಾಗರದಲ್ಲಿ ಮುಳುಗಿ ಹೋದರು. ಮರಳದಿಣ್ಣೆಗೆ ಬಂದ ಗೋಪಿಯರು ವಕ್ಷಸ್ಥಳದಲ್ಲಿದ್ದ ಕುಂಕುಮ ಕೇಸರಿಯಿಂದ ಅಂಕಿತವಾಗಿದ್ದ ತಮ್ಮ ಉತ್ತರಿಗಳನ್ನು ಹಾಸಿ ಆತ್ಮಬಂಧುವಾದ ಶ್ರೀಕೃಷ್ಣನಿಗೆ ಆಸನವನ್ನು ಕಲ್ಪಿಸಿಕೊಟ್ಟರು. ॥ ೧೩ ॥ ಮಹಾ-ಮಹಾಯೋಗಿಗಳು ತಮ್ಮ-ತಮ್ಮ ಹೃನ್ಮಂದಿರಗಳಲ್ಲಿ ಕಲ್ಪಿಸಿಕೊಂಡ ಆಸನಗಳಲ್ಲಿ ಕುಳಿತು ವಿರಾಜಿಸುವ ಸರ್ವೇಶ್ವರನಾದ ಭಗವಂತನು ತನ್ನ ಪರಮಭಕ್ತೆಯರಾದ ಗೋಪಿಯರು ಕಲ್ಪಿಸಿಕೊಟ್ಟ ಚೀರಾಸನದಲ್ಲಿ ಕುಳಿತನು. ಮೂರು ಲೋಕಗಳ ಲಾವಣ್ಯಕ್ಕೂ ಸಾರಭೂತವಾದ, ಅತ್ಯಂತ ಸೌಂದರ್ಯದಿಂದ ಕೂಡಿದ ಶರೀರವನ್ನು ಧರಿಸಿದ ಶ್ರೀಕೃಷ್ಣನು ಗೋಪಿಕಾ ಸ್ತ್ರೀಯರ ಸಮೂಹದಿಂದ ಅರ್ಚಿಸಲ್ಪಡುತ್ತಾ ಪ್ರಕಾಶಿಸಿದನು. ॥ ೧೪ ॥ ಭಗವಾನ್ ಶ್ರೀಕೃಷ್ಣನು ತನ್ನ ಅಲೌಕಿಕವಾದ ಸೌಂದರ್ಯದಿಂದ ಗೋಪಿಯರ ಮನಸ್ಸನ್ನು ಕೆರಳಿಸುತ್ತಿದ್ದನು. ಅವನನ್ನು ಸೇರಬೇಕೆಂಬ, ಅವನೊಡನೆ ಕ್ರೀಡಿಸಬೇಕೆಂಬ ಆಕಾಂಕ್ಷೆಯು ಅವರಲ್ಲಿ ಕ್ಷಣ-ಕ್ಷಣಕ್ಕೂ ವರ್ಧಿಸುತ್ತಿತ್ತು. ಅವರು ಮಂದ ಹಾಸದ ಮೂಲಕವಾಗಿ, ಕಡೆಗಣ್ಣ ನೋಟಗಳ ಮೂಲಕವಾಗಿ, ಹುಬ್ಬು ಹಾರಿಸುವುದರ ಮೂಲಕವಾಗಿ ಅವನನ್ನು ಸೇವಿಸುತ್ತಿದ್ದರು. ಮತ್ತೆ ಕೆಲವರು ಅವನ ಪಾದಾರವಿಂದಗಳನ್ನು ತೊಡೆಯಲ್ಲಿಟ್ಟುಕೊಂಡು ಒತ್ತುತ್ತಿದ್ದರು. ಕೆಲವರು ಅವನ ದುಂಡಾದ ತೋಳುಗಳನ್ನು ಹಿಡಿದು

ಶರಚ್ಚಂದ್ರಾಂಶುಸಂದೋಹಧ್ವಸ್ತದೋಷಾತಮಃ ಶಿವಮ್ ।
ಕೃಷ್ಣಾಯಾ ಹಸ್ತತರಲಾಚಿತಕೋಮಲವಾಲುಕಮ್
॥ ೧೨ ॥

ತದ್ದರ್ಶನಾಹ್ಲಾದವಿಧೂತಹೃದ್ರುಜೋ
ಮನೋರಥಾಂತಂ ಶ್ರುತಯೋ ಯಥಾ ಯಯುಃ ।
ಸ್ವೈರುತ್ತರೀಯೈಃ ಕುಚಕುಂಕುಮಾಂಕಿತೈ-
ರಚೀಕ್ಲೃಪನ್ನಾಸನಮಾತ್ಮಬಂಧವೇ
॥ ೧೩ ॥

ತತ್ರೋಪವಿಷ್ಟೋ ಭಗವಾನ್ ಸ ಈಶ್ವರೋ
ಯೋಗೇಶ್ವರಾಂತರ್ಹೃದಿ ಕಲ್ಪಿತಾಸನಃ ।
ವ್ಯಾಸ ಗೋಪೀಪರಿಷದ್ಗತೋಽರ್ಚಿತ-
ಸ್ತ್ರೈಲೋಕ್ಯಲಕ್ಷ್ಮೈಕಪದಂ ವಪುರ್ದಧತ್ ॥ ೧೪ ॥

ಸಭಾಜಯಿತ್ವಾ ತಮನಂಗದೀಪನಂ
ಸಹಾಸಲೀಲೇಕ್ಷಣವಿಭ್ರಮಭ್ರುವಾ ।
ಸಂಸ್ಪರ್ಶನೇನಾಂಕಕೃತಾಂಘ್ರಿಹಸ್ತಯೋಃ
ಸಂಸ್ತುತ್ಯ ಈಷತ್ಕುಪಿತಾ ಬಭಾಷಿರೇ ॥ ೧೫ ॥

ಗೋಪ್ಯ ಊಚುಃ

ಭಜತೋಽನುಭಜಂತ್ಯೇಕ ಏಕ ಏತದ್ವಿಪರ್ಯಯಮ್ ।
ನೋಭಯಾಂಶ್ಚ ಭಜಂತ್ಯೇಕ ಏತನ್ನೋ ಬ್ರೂಹಿ ಸಾಧು ಭೋಃ
॥ ೧೬ ॥

ಶ್ರೀಭಗವಾನುವಾಚ

ಮಿಥೋ ಭಜಂತಿ ಯೇ ಸಖ್ಯಃ ಸ್ವಾರ್ಥೈಕಾಂತೋದ್ಯಮಾ ಹಿ ತೇ ।
ನ ತತ್ರ ಸೌಹೃದಂ ಧರ್ಮಃ ಸ್ವಾರ್ಥಾರ್ಥಂ ತದ್ಧಿ ನಾನ್ಯಥಾ
॥ ೧೭ ॥

ಭಜಂತ್ಯಭಜತೋ ಯೇ ವೈ ಕರುಣಾಃ ಪಿತರೋ ಯಥಾ ।
ಧರ್ಮೋ ನಿರಪವಾದೋಽತ್ರ ಸೌಹೃದಂ ಚ ಸುಮಧ್ಯಮಾಃ
॥ ೧೮ ॥

ಭಜತೋಽಪಿ ನ ವೈ ಕೇಚಿದ್ಭಜಂತ್ಯಭಜತಃ ಕುತಃ ।
ಆತ್ಮಾರಾಮಾ ಹ್ಯಾಪ್ತಕಾಮಾ ಅಕೃತಜ್ಞಾ ಗುರುದ್ರುಹಃ
॥ ೧೯ ॥

ನಾಹಂ ತು ಸಖ್ಯೋ ಭಜತೋಽಪಿ ಜಂತೂನ್
ಭಜಾಮ್ಯಮೀಷಾಮನುವೃತ್ತಿವೃತ್ತಯೇ ।
ಯಥಾಧನೋ ಲಬ್ಧಧನೇ ವಿನಷ್ಟೇ
ತಚ್ಚಿಂತಯಾನ್ಯನ್ನಿಭೃತೋ ನ ವೇದ ॥ ೨೦ ॥

ಏವಂ ಮದರ್ಥೋಜ್ಝಿತಲೋಕವೇದ-
ಸ್ವಾನಾಂ ಹಿ ವೋ ಮಯ್ಯನುವೃತ್ತಯೇಽಬಲಾಃ ।
ಮಯಾ ಪರೋಕ್ಷಂ ಭಜತಾ ತಿರೋಹಿತಂ
ಮಾಸೂಯಿತುಂ ಮಾರ್ಹಥ ತತ್ಪ್ರಿಯಂ ಪ್ರಿಯಾಃ ॥ ೨೧ ॥

ಒತ್ತುವರು. ಅವರ ಸೇವೆಗೆ ಅವನು ಪ್ರತಿಕ್ರಿಯೆಯನ್ನೇ ತೋರದಿರಲು ಸ್ವಲ್ಪ ಕೋಪಗೊಂಡು ಗೋಪಿಯರು ತಮ್ಮ ಪ್ರಿಯಕರನಿಗೆ ಹೇಳಿದರು. ॥ ೧೫ ॥

ಗೋಪಿಯರು ಹೇಳುತ್ತಾರೆ – ಪ್ರಾಣನಾಥನೇ ! ಲೋಕದಲ್ಲಿ ಕೆಲವರು ತಮ್ಮನ್ನು ಪ್ರೀತಿಸುವವರನ್ನು ಪ್ರೀತಿಸುವರು. ಮತ್ತೆ ಕೆಲವರು ತಮ್ಮನ್ನು ಪ್ರೀತಿಸದವರನ್ನೂ ಪ್ರೀತಿಸುತ್ತಾರೆ. ಮತ್ತೆ ಕೆಲವರು ಇಬ್ಬರನ್ನೂ ಪ್ರೀತಿಸುವುದಿಲ್ಲ. ಈ ಮೂವರಲ್ಲಿ ನಿನಗೆ ಯಾರು ಒಳ್ಳೆಯರಾಗಿ ಕಾಣುತ್ತಾರೆ ? ॥ ೧೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ನನ್ನ ಪ್ರಿಯ ಗೆಳತಿಯರೇ ! ತಮ್ಮನ್ನು ಪ್ರೀತಿಸಿದವರನ್ನು ಪ್ರೀತಿಸುವವರ ಉದ್ಯೋಗವು ಕೇವಲ ಸ್ವಾರ್ಥ ಸಾಧನೆಯಾಗಿದೆ. ಕೊಟ್ಟು-ಕೊಳ್ಳುವ ವ್ಯವಹಾರವಾಗಿದೆ. ಅದರಲ್ಲಿ ಸೌಹಾರ್ದವಾಗಲೀ, ಧರ್ಮವಾಗಲೀ ಇರುವುದಿಲ್ಲ. ಅವರ ಪ್ರೀತಿ ಕೇವಲ ಸ್ವಾರ್ಥಕ್ಕಾಗಿಯೇ ಇದೆ ; ಇದಲ್ಲದೆ ಬೇರೆ ಏನೂ ಇಲ್ಲ. ॥ ೧೭ ॥ ಸುಂದರಿಯರೇ ! ಪ್ರೀತಿಸದೆ ಇರುವವನ್ನು ಪ್ರೀತಿಸುವವರು ಕರುಣಾಳುಗಳು. ತಂದೆ-ತಾಯಿಗಳಂತಿರುವವರು. ಅವರ ಪ್ರೇಮವು ನಿರ್ದುಷ್ಟವೂ ನಿಷ್ಕಳಂಕವೂ ಆಗಿದೆ. ಅವರ ಪ್ರೇಮದಲ್ಲಿ ಪುಣ್ಯವೂ, ಧರ್ಮವೂ, ಸೌಹಾರ್ದವು ಇರುತ್ತದೆ. ॥ ೧೮ ॥ ಪ್ರೀತಿಸದವರನ್ನೇ ಪ್ರೀತಿಸುವುದಿಲ್ಲವೆಂದ ಮೇಲೆ ಪ್ರೀತಿಸದವರ ವಿಷಯದಲ್ಲಿ ಹೇಳಬೇಕಾಗಿಯೇ ಇಲ್ಲ. ಪ್ರೀತಿಸಿದವರನ್ನು ಪ್ರೀತಿಸಿದವರು ನಾಲ್ಕು ಬಗೆಯವರಾಗಿದ್ದಾರೆ. ೧) ಆತ್ಮಾರಾಮರು – ಬ್ರಹ್ಮಜ್ಞಾನಕ್ಕಾಗಿ ಧ್ಯಾನಾಸಕ್ತರಾದ ಯೋಗಿಗಳು ಅಥವಾ ಬ್ರಹ್ಮಭಾವದಿಂದ ಆನಂದಪಡುತ್ತಿರುವವರು. ೨) ಆಪ್ತಕಾಮರು – ಪ್ರಾಪಂಚಿಕ ಸೌಖ್ಯವನ್ನು ತ್ಯಜಿಸಿದ, ಪ್ರಪಂಚದ ಸಂಬಂಧವನ್ನು ಬಿಟ್ಟಿರುವ, ಇಷ್ಟಾರ್ಥಗಳನ್ನು ಪಡೆದ ಜೀವನ್ಮುಕ್ತರು. ೩) ಅಕೃತಜ್ಞಾಃ – ಮಾಡಿದ ಉಪಕಾರವನ್ನು ಸ್ಮರಿಸಿದ ಕೃತಘ್ನರು. ೪) ಗುರುದ್ರಹಃ – ಗುರು ಹಿರಿಯರಿಗೂ ದ್ರೋಹಮಾಡುವವರು. ಈ ನಾಲ್ಕು ಬಗೆಯ ಮನುಷ್ಯರು ಪ್ರೀತಿಸಿದವರನ್ನು ಪ್ರೀತಿಸುವುದಿಲ್ಲ. ॥ ೧೯ ॥ ಗೋಪಿಯರೇ ! ನಾನಾದರೋ ಪ್ರೇಮಿಸುವವರೊಂದಿಗೆ ಹೇಗೆ ವ್ಯವಹರಿಸಬೇಕೋ ಹಾಗೆ ಮಾಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಅವರ ಚಿತ್ತವೃತ್ತಿಯು ನಿರಂತರವಾಗಿ ನನ್ನಲ್ಲೇ ತೊಡಗಿರಬೇಕೆಂಬುದೇ ನನ್ನ ಇಷ್ಟವಾಗಿದೆ. ದರಿದ್ರನಾದವನಿಗೆ ಎಂದೋ ಬಹಳಷ್ಟು ಹಣ ದೊರೆಯಿತು. ಮತ್ತೆ ಕಳೆದು ಹೋದರೆ ಅವನು ಕಳೆದುಹೋದ ಧನವನ್ನೇ ಚಿಂತಿಸುತ್ತಾ ಇರುತ್ತಾನೆ. ಹಾಗೆಯೇ ನಾನು ಸಿಕ್ಕಿಯೂ ಸಿಕ್ಕದವನಂತೆ ಇರುತ್ತೇನೆ. ॥ ೨೦ ॥ ಗೋಪಿಯರೇ ! ನೀವೆಲ್ಲ ನನಗಾಗಿ ಲೋಕಮರ್ಯಾದೆಯನ್ನು, ಶಾಸ್ತ್ರಮರ್ಯಾದೆಯನ್ನು ಸ್ವಜನರನ್ನು ಪರಿತ್ಯಜಿಸಿ, ನನ್ನಲ್ಲೇ ಅನುರಕ್ತರಾಗಿ ನನ್ನ ಬಳಿಗೆ ಬಂದಿರಿ. ನಿಮಗೆ ನನ್ನಲ್ಲಿ ಇನ್ನೂ ಹೆಚ್ಚಿನ ಪ್ರೇಮವುಂಟಾಗಲು ಮತ್ತು ನನ್ನನ್ನೇ ಅನುವರ್ತಿಸುವಂತೆ ಮಾಡಲು ನಿಮಗೆ ಕಾಣದಂತೆ ಮರೆಯಾಗಿದ್ದುಕೊಂಡು ನಿಮ್ಮನ್ನೇ ಪರೋಕ್ಷವಾಗಿ ಧ್ಯಾನಿಸುತ್ತಿದ್ದೆ. ಆದುದರಿಂದ ಪ್ರಿಯತಮೆಯರಾದ ನೀವು ನನ್ನಲ್ಲಿ ದೋಷವೆಣಿಸಬೇಡಿರಿ. ನೀವೆಲ್ಲರೂ ನನಗೆ ಪ್ರಿಯರಾಗಿರುವಿರಿ ಮತ್ತು ನಾನು ನಿಮಗೆ ಪ್ರಿಯನಾಗಿದ್ದೇನೆ ॥ ೨೧ ॥

ನ ಪಾರಯೇಽಹಂ ನಿರವದ್ಯಸಂಯುಜಾಂ
ಸ್ವಸಾಧುಕೃತ್ಯಂ ವಿಬುಧಾಯುಷಾಪಿ ವಃ ।
ಯಾ ಮಾಭಜನ್ ದುರ್ಜರಗೇಹಶೃಂಖಲಾಃ
ಸಂವೃಶ್ಚ್ಯ ತದ್ವಃ ಪ್ರತಿಯಾತು ಸಾಧುನಾ ॥ ೨೨ ॥

ಪ್ರಿಯಗೋಪಿಯರೇ! ಋಷಿ-ಮುನಿಗಳಿಂದಲೂ ಪರಿತ್ಯಜಿಸಲು ಸಾಧ್ಯವಾಗದ ನಾನು-ನನ್ನದೆಂಬ ಸಂಸಾರದ ಸಂಕೋಲೆಗಳನ್ನು ಕಿತ್ತೊಗೆದು ನನ್ನ ಬಳಿಗೆ ಬಂದಿರುವಿರಿ. ನನ್ನೊಡನೆ ನಿರ್ದುಷ್ಟವಾದ ಭಕ್ತಿಯ ಸಂಬಂಧವನ್ನು ಹೊಂದಿರುವ ನಿಮಗೆ ಸರಿಯಾದ ಪ್ರತ್ಯುಪಕಾರವನ್ನು ಮಾಡಲು ದೇವತೆಗಳ ಆಯುರ್ಮಾನವನ್ನು ಹೊಂದಿದರೂ ನನ್ನಿಂದ ಸಾಧ್ಯವಾಗಲಾರದು. ಅರ್ಥಾತ್ ನಾನು ನಿಮಗೆ ಜನ್ಮ ಜನ್ಮಾಂತರದಲ್ಲಿ ಋಣಿಯಾಗಿರುವೆ. ಆದುದರಿಂದ ನೀವು ಮಾಡುವ ಸತ್ಕಾರವನ್ನು ಸ್ವೀಕರಿಸುವುದೇ ನಿಮಗೆ ನಾನು ಮಾಡುವ ಪ್ರತ್ಯುಪಕಾರವೆಂದು ಭಾವಿಸಿರಿ. ಇದರಿಂದ ನಿಮ್ಮ ಮನೋರಥವು ಈಡೇರಲಿ. ॥ ೨೨ ॥

ಮೂವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೩೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾಯಾಂ ಗೋಪೀಸಾಂತ್ವನಂ ನಾಮ ದ್ವಾತ್ರಿಂಶೋಽಧ್ಯಾಯಃ ॥ ೩೨ ॥

ಮೂವತ್ತಮೂರನೆಯ ಅಧ್ಯಾಯ

ಮಹಾರಾಸ ಕ್ರೀಡೆ

ಶ್ರೀಶುಕ ಉವಾಚ

ಇತ್ಥಂ ಭಗವತೋ ಗೋಪ್ಯಃ ಶ್ರುತ್ವಾ ವಾಚಃ ಸುಪೇಶಲಾಃ ।
ಜಹುರ್ವಿರಹಜಂ ತಾಪಂ ತದಂಗೋಪಚಿತಾಶಿಷಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ –ಪರೀಕ್ಷಿದ್ರಾಜನೇ ! ಗೋಪಿಯರು ಭಗವಂತನ ಪ್ರೇಮಪೂರ್ಣವಾದ, ಸುಮಧುರವಾದ ಈ ಮಾತನ್ನು ಕೇಳಿ ವಿರಹತಾಪದಿಂದ ಮುಕ್ತರಾದರು. ಸೌಂದರ್ಯನಿಧಿಯಾದ, ಪ್ರಾಣಪ್ರಿಯನಾದ ಶ್ರೀಕೃಷ್ಣನ ಅಂಗ ಸಂಗದಿಂದ ಸಫಲ ಮನೋರಥರಾದರು. ॥ ೧ ॥ ಆನಂದ ತುಂದಿಲರಾಗಿ ಪರಸ್ಪರ ತೋಳುಗಳನ್ನು ಹಿಡಿದುಕೊಂಡು ತನ್ನನ್ನು ಅನುಸರಿಸಿ ನಿಂತಿರುವ ಸ್ತ್ರೀರತ್ನಗಳೊಡನೆ ಯಮುನಾ ನದಿಯ ಮರಳುದಿಣ್ಣೆಯಲ್ಲಿ ಭಗವಾನ್ ಶ್ರೀಕೃಷ್ಣನು ರಾಸಕ್ರೀಡೆಯನ್ನು ಆಡಲು ಪ್ರಾರಂಭಿಸಿದನು. ॥ ೨ ॥ ಯೋಗೇಶ್ವರನಾದ ಶ್ರೀಕೃಷ್ಣನು ಇಬ್ಬಿಬ್ಬರು ಗೋಪಿಯರ ಮಧ್ಯದಲ್ಲಿ ಒಬ್ಬೊಬ್ಬ ಶ್ರೀಕೃಷ್ಣನಿರುವಂತೆ ಪ್ರಕಟನಾಗಿ ಆ ಇಬ್ಬರೂ ಗೋಪಿಯರ ಹೆಗಲಮೇಲೆ ತನ್ನ ತೋಳುಗಳನ್ನು ಹಾಕಿಕೊಂಡಿದ್ದನು. ಇದರಿಂದ ಪ್ರತಿಯೋರ್ವ ಗೋಪಿಯು ಶ್ರೀಕೃಷ್ಣನು ತನ್ನ ಪಕ್ಕದಲ್ಲೇ ಇರುವನೆಂದು ಭಾವಿಸಿಕೊಂಡರು. ॥ ೩ ॥ ಹೀಗೆ ಸಾವಿರ-ಸಾವಿರ ಗೋಪಿಯರಿಂದ ಶೋಭಾಯಮಾನನಾದ ಭಗವಾನ್ ಶ್ರೀಕೃಷ್ಣನ ದಿವ್ಯ ರಾಸೋತ್ಸವವು ಪ್ರಾರಂಭವಾಯಿತು. ಆ ಸಮಯದಲ್ಲಿ ಆಕಾಶದಲ್ಲಿ ನೂರಾರು ವಿಮಾನಗಳು ನೆರೆದವು. ರಾಸಕ್ರೀಡೆಯನ್ನು ನೋಡಬೇಕೆಂಬ ತವಕದಿಂದ ಸಕಲದೇವತೆಗಳೂ ತಮ್ಮ-ತಮ್ಮ ಪತ್ನಿಯರೊಡನೆ ವಿಮಾನಗಳಲ್ಲಿ ಆಗಮಿಸಿದ್ದರು. ॥ ೪ ॥ ಆಗ ದೇವದುಂದುಭಿಗಳು ಮೊಳಗಿದವು. ರಾಸಮಂಡಲದ ಮೇಲೆ ಪುಷ್ಪವೃಷ್ಟಿಗಳಾದವು. ಗಂಧರ್ವಶ್ರೇಷ್ಠರು ತಮ್ಮ-ತಮ್ಮ ಪತ್ನಿಯರೊಂದಿಗೆ ಭಗವಂತನ ನಿರ್ಮಲವಾದ ಯಶಸ್ಸನ್ನು ಗಾನಮಾಡಿದರು. ॥ ೫ ॥

ತತ್ರಾರಭತ ಗೋವಿಂದೋ ರಾಸಕ್ರೀಡಾಮನುವ್ರತೈಃ ।
ಸ್ತ್ರೀರತ್ನೈರನ್ವಿತಃ ಪ್ರೀತೈರನ್ಯೋನ್ಯಾಬದ್ಧಬಾಹುಭಿಃ ॥ ೨ ॥

ರಾಸೋತ್ಸವಃ ಸಂಪ್ರವೃತ್ತೋ ಗೋಪೀಮಂಡಲಮಂಡಿತಃ ।
ಯೋಗೇಶ್ವರೇಣ ಕೃಷ್ಣೇನ ತಾಸಾಂ ಮಧ್ಯೇ ದ್ವಯೋರ್ದ್ವಯೋಃ ।
ಪ್ರವಿಷ್ಟೇನ ಗೃಹೀತಾನಾಂ ಕಂಠೇ ಸ್ವನಿಕಟಂ ಸ್ತ್ರಿಯಃ ॥ ೩ ॥

ಯಂ ಮನ್ಯೇರನ್ನಭಸ್ತಾವದ್ವಿಮಾನಶತಸಂಕುಲಮ್ ।
ದಿವೌಕಸಾಂ ಸದಾರಾಣಾಮೌತ್ಸುಕ್ಯಾಪಹೃತಾತ್ಮನಾಮ್ ॥ ೪ ॥

ತತೋ ದುಂದುಭಯೋ ನೇದುರ್ನಿಪೇತುಃ ಪುಷ್ಪವೃಷ್ಟಯಃ ।
ಜಗುರ್ಗಂಧರ್ವಪತಯಃ ಸಸ್ತ್ರೀಕಾಸ್ತದ್ಯಶೋಽಮಲಮ್ ॥ ೫ ॥

ವಲಯಾನಾಂ ನೂಪುರಾಣಾಂ ಕಿಂಕಿಣೀನಾಂ ಚ ಯೋಷಿತಾಮ್ ।
ಸಪ್ರಿಯಾಣಾಮಭೂಚ್ಛಬ್ದಸ್ತುಮುಲೋ ರಾಸಮಂಡಲೇ
॥ ೬ ॥

ರಾಸಮಂಡಲದಲ್ಲಿದ್ದ ಸಮಸ್ತ ಗೋಪಿಯರು ತಮ್ಮ ಪ್ರಿಯತಮ ಶ್ಯಾಮಸುಂದರನೊಂದಿಗೆ ನೃತ್ಯವಾಡತೊಡಗಿದರು. ಅವರ ಕೈಗಡಗಗಳು, ಕಾಲಂದುಗೆಗಳು, ಓಡ್ಯಾಣದ ಕಿರುಗೆಜ್ಜೆಗಳು ಒಟ್ಟಿಗೆ ಉಲಿಯತೊಡಗಿದವು. ಅಸಂಖ್ಯಗೋಪಿಯರಿದ್ದ ಕಾರಣ ಆ ಮಧುರ ಧ್ವನಿಯು ಸರ್ವತ್ರ ಕೇಳಿ ಬರುತ್ತಿತ್ತು. ॥ ೬ ॥

ತತ್ರಾತಿಶುಶುಭೇ ತಾಭಿರ್ಭಗವಾನ್ ದೇವಕೀಸುತಃ ।
ಮಧ್ಯೇ ಮಣೀನಾಂ ಹೈಮಾನಾಂ ಮಹಾಮರಕತೋ ಯಥಾ
॥ ೭ ॥

ಸುವರ್ಣಮಯವಾದ ಮಣಿಗಳ ಮಧ್ಯದಲ್ಲಿ ಜ್ಯೋತಿರ್ಮಯ ಮಹಾಮರಕತಮಣಿಯು ವಿರಾಜಿಸುವಂತೆಯೇ ಕಡು ಬೆಲುವೆಯರಾದ ಗೋಪಿಯರ ನಡುವೆ ನೀಲಮೇಘಶ್ಯಾಮನಾದ ದೇವಕೀ ಕಂದನಾದ ಶ್ರೀಕೃಷ್ಣನು ರಾರಾಜಿಸಿದನು. ॥ ೭ ॥

ಪಾದನ್ಯಾಸೈರ್ಭುಜವಿಧುತಿಭಿಃ ಸಸ್ಮಿತೈರ್ಭ್ರೂವಿಲಾಸೈ-
ರ್ಭಜ್ಯನ್ಮಧ್ಯೈಶ್ಚಲಕುಚಪಟೈಃ ಕುಂಡಲೈರ್ಗಂಡಲೋಲೈಃ ।
ಸ್ವಿದ್ಯನ್ಮುಖ್ಯಃ ಕಬರರಶನಾಗ್ರಂಥಯಃ ಕೃಷ್ಣವಧ್ವೋ
ಗಾಯಂತ್ಯಸ್ತಂ ತಡಿತ ಇವ ತಾ ಮೇಘಚಕ್ರೇ ವಿರೇಜುಃ
॥ ೮ ॥

ರಾಸನೃತ್ಯವನ್ನು ಆಡುವಾಗ ಗೋಪಿಕೆಯರು ತಾಳಕ್ಕೆ ಸರಿಯಾಗಿ ಹೆಜ್ಜೆಗಳನ್ನು ಹಾಕುತ್ತಾ, ಪಾದವಿನ್ಯಾಸಕ್ಕೆ ಅನುಗುಣವಾಗಿ ಕೈಗಳಲ್ಲಿ ಮುದ್ರೆಗಳನ್ನು ತೋರಿಸುತ್ತಾ ಎರಡೂ ಕೈಗಳನ್ನು ಎಡ-ಬಲಕ್ಕೂ ಹಿಂದೆ-ಮುಂದೆಯೂ ಆಡಿಸುತ್ತಿದ್ದರು. ತಾಳಕ್ಕನುಸಾರವಾಗಿ ಕೆಲವು ವೇಳೆ ನಿಧಾನವಾಗಿಯೂ, ಕೆಲವು ವೇಳೆ ವೇಗವಾಗಿಯೂ ಹೆಜ್ಜೆಗಳನ್ನು ಹಾಕುತ್ತಾ ತಲೆಗಳನ್ನು, ಕಣ್ಣುಗಳನ್ನು ಆಡಿಸುವರು. ಕೆಲವು ವೇಳೆ ಭಾವಪೂರ್ಣವಾಗಿ ನಗುವರು, ಹುಬ್ಬಹಾರಿಸುವರು. ಕಡೆಗಣ್ಣಿನ ನೋಟದಿಂದ ನೋಡುವರು. ಕೆಲವೊಮ್ಮೆ ಕಿಲಕಿಲನೆ ನಗುವರು. ಸೊಂಟವನ್ನು ಬಳುಕಿಸುವರು. ನರ್ತನಮಾಡುತ್ತಾ ಕುಳಿತಾಗ, ಎದ್ದಾಗ, ಬಾಗಿದಾಗ ಅವರ ಸ್ತನಗಳು ಕುಲಕಾಡುತ್ತಿದ್ದವು. ಕುಂಡಲಗಳು ಕಪೋಲಗಳಲ್ಲಿ ಕುಣಿದಾಡುತ್ತಿದ್ದವು. ಮುಖವು ಬೆವರಿತ್ತು. ತುರುಬುಗಳು ಬಿಚ್ಚಿಹೋಗಿದ್ದವು. ಓಡ್ಯಾಣಗಳು ಸಡಿಲವಾಗಿದ್ದವು. ಹೀಗೆ ಶ್ರೀಕೃಷ್ಣನ ಪ್ರಿಯೆಯರಾದ ಗೋಪಿಕೆಯರು ಶ್ರೀಕೃಷ್ಣನಿಗೆ ಉಲ್ಲಾಸವಾಗುವಂತೆ ನಾನಾಭಂಗಿಗಳಲ್ಲಿ ನೃತ್ಯವಾಡುತ್ತಾ ಅವನ ಲೀಲಾಪ್ರಸಂಗಗಳನ್ನು ಕರ್ಣಾನಂದಕರವಾಗಿ ಹಾಡುತ್ತಾ ಮೇಘಗಳ ಮಧ್ಯದಲ್ಲಿ ಕಾಣಿಸಿಕೊಳ್ಳುವ ಮಿಂಚುಗಳಂತೆ ಪ್ರಕಾಶಿಸಿದರು. ॥ ೮ ॥

ಉಚ್ಚೈರ್ಜಗುರ್ನೃತ್ಯಮಾನಾ ರಕ್ತಕಂಠ್ಯೋ ರತಿಪ್ರಿಯಾಃ ।
ಕೃಷ್ಣಾಭಿಮರ್ಷಮುದಿತಾ ಯದ್ಗೀತೇನೇದಮಾವೃತಮ್
॥ ೯ ॥

ರಾಸಪ್ರಿಯರಾದ ಗೋಪಿಯರು ಶ್ರೀಕೃಷ್ಣನ ಸ್ಪರ್ಶಮಾತ್ರದಿಂದ ಆನಂದ ಸಾಗರದಲ್ಲಿ ಮುಳುಗಿ, ಅತನೊಡನೆ ರಾಸನೃತ್ಯವನ್ನು ಆಡುತ್ತಾ ತಮ್ಮ ಸುಮಧುರ ಕಂಠಮಾಧುರ್ಯದಿಂದ ವಿಶ್ವವನ್ನೇ ವ್ಯಾಪಿಸುವಷ್ಟು ಗಟ್ಟಿಯಾಗಿ ಹಾಡತೊಡಗಿದರು. ಅದು ವಿಶ್ವದಲ್ಲೆಲ್ಲ ಈಗಲೂ ಪ್ರತಿಧ್ವನಿಸುತ್ತಿದೆ. ॥ ೯ ॥

ಕಾಚಿತ್ಸಮಂ ಮುಕುಂದೇನ ಸ್ವರಜಾತೀರಮಿಶ್ರಿತಾಃ ।
ಉನ್ನಿನ್ಯೇ ಪೂಜಿತಾ ತೇನ ಪ್ರೀಯತಾ ಸಾಧು ಸಾಧ್ವಿತಿ ।
ತದೇವ ಧ್ರುವಮುನ್ನಿನ್ಯೇ ತಸ್ಯೈ ಮಾನಂ ಚ ಬಹ್ವದಾತ್
॥ ೧೦ ॥

ಒರ್ವ ಗೋಪಿಯು ಶ್ರೀಕೃಷ್ಣನೊಡನೆ ಧ್ವನಿಗೂಡಿಸಿ ಹಾಡುತ್ತಿದ್ದಳು. ಆಕೆಯ ಧ್ವನಿಯು ಶ್ರೀಕೃಷ್ಣನ ಸ್ವರಕ್ಕಿಂತ ತಾರಕದಲ್ಲಿತ್ತು. ಅದನ್ನೇ ಕೃಷ್ಣನು ಭಲೇ! ಭಲೇ! ಕರ್ಣಾನಂದಕರವಾಗಿದೆ ಎಂದು ಹೇಳುತ್ತಾ ಅವಳ ಹಾಡಿಗೆ ಅನುಗುಣವಾಗಿ ಧ್ರುವವೆಂಬ ತಾಳವನ್ನು ಹಾಕುತ್ತಾ ಆಕೆಯನ್ನು ಪ್ರೋತ್ಸಾಹಿಸಿದನು. ॥ ೧೦ ॥

ಕಾಚಿದ್ರಾಸಪರಿಶ್ರಾಂತಾ ಪಾರ್ಶ್ವಸ್ಥಸ್ಯ ಗದಾಭೃತಃ ।
ಜಗ್ರಾಹ ಬಾಹುನಾ ಸ್ಕಂಧಂ ಶ್ಲಥದ್ವಲಯಮಲ್ಲಿಕಾ
॥ ೧೧ ॥

ಒಬ್ಬ ಗೋಪಿಯು ರಾಸನೃತ್ಯದಿಂದ ಬಹಳವಾಗಿ ಬಳಲಿದಳು. ಮುಂಗೈಗಳಿಗೂ, ತೋಳುಗಳಿಗೂ ಕಟ್ಟಿಕೊಂಡ ಮಲ್ಲಿಗೆಯ ದಂಡೆಗಳು ಕಣಚಿಬೀಳುತ್ತಿದ್ದವು. ತತ್ತರಿಸಿ ಬೀಳುವುದರಲ್ಲಿದ್ದ ಆಕೆಯು ಪಕ್ಕದಲ್ಲಿದ್ದ ಶ್ರೀಕೃಷ್ಣನ ಭುಜವನ್ನು ಹಿಡಿದುಕೊಂಡು ಹಾಗೆಯೇ ನಿಂತುಕೊಂಡಳು. ॥ ೧೧ ॥

ತತ್ಕೈಕಾಂಸಗತಂ ಬಾಹುಂ ಕೃಷ್ಣಸ್ಯೋತ್ಪಲಸೌರಭಮ್ ।
ಚಂದನಾಲಿಪ್ತಮಾಘ್ರಾಯ ಹೃಷ್ಟರೋಮಾ ಚುಚುಂಬ ಹ
॥ ೧೨ ॥

ಭಗವಾನ್ ಶ್ರೀಕೃಷ್ಣನು ತನ್ನ ಒಂದು ತೋಳನ್ನು ಒಬ್ಬ ಗೋಪಿಯ ಹೆಗಲಮೇಲಿಟ್ಟಿದ್ದನು. ಸ್ವಾಭಾವಿಕವಾಗಿಯೇ ಶ್ರೀಕೃಷ್ಣನ ತೋಳು ಕಮಲದ ಸುಗಂಧದಿಂದ ಕೂಡಿತ್ತು. ಅದಕ್ಕೆ ಪರಿಮಳದ ಗಂಧವು ಲೇಪಿತವಾಗಿತ್ತು. ಅದನ್ನು ಮೂಸಿ ನೋಡಿದ ಆ ಗೋಪಿಯು ರೋಮಾಂಚಿತಳಾಗಿ ಆ ತೋಳನ್ನು ಮುತ್ತಿಟ್ಟಳು. ॥ ೧೨ ॥

ಕಸ್ಯಾಶ್ಚಿನ್ನಾಟ್ಯವಿಕ್ಷಿಪ್ತಕುಂಡಲತ್ವಿಷಮಂಡಿತಮ್ ।
ಗಂಡಂ ಗಂಡೇ ಸಂದಧತ್ಯಾ ಅದಾತ್ತಾಂಬೂಲಚರ್ವಿತಮ್
॥ ೧೩ ॥

ಮತ್ತೊಬ್ಬ ಗೋಪಿಯು ನಾಟ್ಯವಾಡುತ್ತಿರುವಾಗ ಕುಂಡಲದಿಂದ ಸಮಲಂಕೃತವಾಗಿದ್ದ ತನ್ನ ಕಪೋಲವನ್ನು ಶ್ರೀಕೃಷ್ಣನ ಕಪೋಲದ ಮೇಲಿಡಲು ಆಕೆಯ ಆಶಯವನ್ನು ತಿಳಿದ ಶ್ರೀಕೃಷ್ಣನು ಆಕೆಗೆ ತಾಂಬೂಲವನ್ನು ನೀಡಿದನು. ॥ ೧೩ ॥

ನೃತ್ಯಂತೀ ಗಾಯತೀ ಕಾಚಿತ್ಕೂಜನ್ನೂಪುರಮೇಖಿಲಾ ।
ಪಾರ್ಶ್ವಸ್ಥಾಚ್ಯುತಹಸ್ತಾಬ್ಜಂ ಶ್ರಾಂತಾಧಾತ್ಸ್ತನಯೋಃ ಶಿವಮ್
॥ ೧೪ ॥

ಶ್ರೀಕೃಷ್ಣನ ಪಕ್ಕದಲ್ಲಿದ್ದ ಮತ್ತೊಬ್ಬ ಗೋಪಿಯು ಕಾಲಂದುಗೆ-ಡಾಬುಗಳ ಶಬ್ದದೊಡನೆ ನರ್ತಿಸುತ್ತಾ, ಹಾಡುತ್ತಾ ಬಹಳವಾಗಿ ಬಳಲಿ ಪಕ್ಕದಲ್ಲಿದ್ದ ಶ್ರೀಕೃಷ್ಣನ ಮಂಗಳಕರವಾದ ಕರಕಮಲವನ್ನು ತನ್ನ ವಕ್ಷಸ್ಥಳದ ಮೇಲೆ ಇರಿಸಿಕೊಂಡಳು. ॥ ೧೪ ॥

ಗೋಪ್ಯೋ ಲಬ್ಧ್ವಾಚ್ಯುತಂ ಕಾಂತಂ ಶ್ರಿಯ ಏಕಾಂತವಲ್ಲಭಮ್ ।
ಗೃಹೀತಕಂಠ್ಯಸ್ತದ್ದೋರ್ಭ್ಯಾಂ ಗಾಯಂತ್ಯಸ್ತಂ ವಿಜಹ್ರಿರೇ
॥ ೧೫ ॥

ಪರೀಕ್ಷಿತನೇ! ಗೋಪಿಯರ ಸೌಭಾಗ್ಯವು ಲಕ್ಷ್ಮೀದೇವಿಯ ಸೌಭಾಗ್ಯಕ್ಕಿಂತಲೂ ಮಿಗಿಲಾದುದು. ಲಕ್ಷ್ಮೀದೇವಿಗೆ ಪರಮಪ್ರಿಯನಾದ, ಏಕಾಂತಭಕ್ತರಿಗೆ ಪ್ರಿಯನಾದ ಶ್ರೀಕೃಷ್ಣನನ್ನು ತಮ್ಮ ಪ್ರಿಯತಮನನ್ನಾಗಿಸಿಕೊಂಡು, ಅವನಿಂದ ಆಲಿಂಗಿಸಲ್ಪಟ್ಟವರಾಗಿ, ಅವನ ಲೀಲಾ ಪ್ರಸಂಗಗಳನ್ನು ಸುಮಧುರವಾಗಿ ಗಾನಮಾಡುತ್ತಾ ಆ ಗೋಪಿಯರು ರಾರಾಜಿಸಿದರು. ॥ ೧೫ ॥

ಕರ್ಣೋತ್ಪಲಾಲಕವಿಟಂಕಕಪೋಲಘರ್ಮ-
ವಕ್ತ್ರಶ್ರಿಯೋ ವಲಯನೂಪುರಘೋಷವಾದ್ಯೈಃ ।
ಗೋಪ್ಯಃ ಸಮಂ ಭಗವತಾ ನನೃತುಃ ಸ್ವಕೇಶ-
ಸ್ರಸ್ತಸ್ರಜೋ ಭ್ರಮರಗಾಯಕರಾಸಗೋಷ್ಠ್ಯಾಮ್ ॥ ೧೬ ॥

ಕಿವಿಗಳಲ್ಲಿ ಕಮಲದ ಕುಂಡಲಗಳು ಶೋಭಿಸುತ್ತಿದ್ದವು. ಗುಂಗುರು ಕೂದಲುಗಳು ಕೆನ್ನೆಗಳ ಮೇಲೆ ಹಾರಾಡುತ್ತಿದ್ದವು. ಮುತ್ತಿನಂತಹ ಬೆವರಿನ ಹನಿಗಳಿಂದ ಮುಖವು ಅಲಂಕೃತವಾಗಿತ್ತು. ಅವರು ರಾಸಮಂಡಲದಲ್ಲಿ ಶ್ರೀಕೃಷ್ಣನೊಡನೆ ನರ್ತನಮಾಡುವಾಗ ಅವರ ಕಡಗ, ಕಂಕಣಗಳು ಧ್ವನಿಮಾಡುತ್ತಿದ್ದವು. ಅವರ ಸ್ವರ-ತಾಳಕ್ಕೆ ಸರಿಯಾಗಿ ದುಂಬಿಗಳು ಝೇಂಕರಿಸುತ್ತಿದ್ದವು. ಅವರ ಮುಡಿಗಳಿಂದ ಹೂವುಗಳು ಉದುರುತ್ತಿದ್ದವು. ॥ ೧೬ ॥

ಏವಂ ಪರಿಷ್ವಂಗಕರಾಭಿಮರ್ಶ-
ಸ್ನಿಗ್ಧೇಕ್ಷಣೋದ್ದಾಮವಿಲಾಸಹಾಸ್ಯೈಃ ।
ರೇಮೇ ರಮೇಶೋ ವ್ರಜಸುಂದರೀಭಿ-
ರ್ಯಥಾರ್ಭಕಃ ಸ್ವಪ್ರತಿಬಿಂಬವಿಭ್ರಮಃ ॥ ೧೭ ॥

ಪರೀಕ್ಷಿತನೇ! ಬಾಲಕನು ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬದೊಡನೆ ನಿರ್ವಿಕಾರ ಭಾವದಿಂದ ಆಡುವಂತೆ ರಮಾರಮಣ ಭಗವಾನ್ ಶ್ರೀಕೃಷ್ಣನು ತನ್ನ ಪ್ರತಿಬಿಂಬರೂಪರಾದ ಗೋಪಿಯರೊಡನೆ ನಿರ್ವಿಕಾರಭಾವದಿಂದ ಆಲಿಂಗನ, ಹಸ್ತಸ್ಪರ್ಶ, ಪ್ರೇಮಾವಲೋಕನ, ಕಿರುನಗೆ, ಕುಡಿನೋಟ ಇತ್ಯಾದಿಗಳಿಂದ ಕ್ರೀಡಿಸುತ್ತಿದ್ದನು. ॥ ೧೭ ॥

ತದಂಗಸಂಗಪ್ರಮುದಾಕುಲೇಂದ್ರಿಯಾಃ
ಕೇಶಾನ್ದುಕೂಲಂ ಕುಚಪಟ್ಟಿಕಾಂ ವಾ ।
ನಾಂಜಃ ಪ್ರತಿವ್ಯೋಢುಮಲಂ ವ್ರಜಸ್ತ್ರಿಯೋ
ವಿಸ್ರಸ್ತಮಾಲಾಭರಣಾಃ ಕುರೂದ್ವಹ ॥ ೧೮ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಅಂಗಸ್ಪರ್ಶವನ್ನು ಪಡೆದ ಗೋಪಿಕೆಯರು ಪ್ರೇಮಾನಂದದಿಂದ ವಿಹ್ವಲರಾಗಿದ್ದರು. ಕೂದಲು ಕೆದರಿದ್ದವು, ಹೂವಿನ ಹಾರಗಳು ಹರಿದಿದ್ದವು. ಒಡವೆಗಳು ಅಸ್ತ-ವ್ಯಸ್ತವಾಗಿದ್ದವು. ಇವುಗಳನ್ನು ಸರಿಪಡಿಸಿಕೊಳ್ಳಲೂ ಕೂಡ ಅವರಿಂದ ಸಾಧ್ಯವಾಗಲಿಲ್ಲ. ॥ ೧೮ ॥

ಕೃಷ್ಣವಿಕ್ರೀಡಿತಂ ವೀಕ್ಷ್ಯ ಮುಮುಹುಃ ಖೇಚರಸ್ತ್ರಿಯಃ ।
ಕಾಮಾರ್ದಿತಾಃ ಶಶಾಂಕಶ್ಚ ಸಗಣೋ ವಿಸ್ಮಿತೋಽಭವತ್
॥ ೧೯ ॥

ಭಗವಾನ್ ಶ್ರೀಕೃಷ್ಣನ ಈ ರಾಸಕ್ರೀಡೆಯನ್ನು ನೋಡಿದ ದೇವತಾ ಸ್ತ್ರೀಯರೂ ಈ ಗೋಪಿಯರಂತೆ ಭಗವಂತನಲ್ಲಿ ಸೇರಬೇಕೆಂಬ ಆಕಾಂಕ್ಷೆಯಿಂದ ಮೋಹಿತರಾದರು. ಹಾಗೆಯೇ ಗ್ರಹ-ನಕ್ಷತ್ರ ತಾರೆಗಳಿಂದ ಕೂಡಿದ ಚಂದ್ರನೂ ಅಚ್ಚರಿಗೊಂಡನು. ॥ ೧೯ ॥

ಕೃತ್ವಾ ತಾವಂತಮಾತ್ಮಾನಂ ಯಾವತೀರ್ಗೋಪಯೋಷಿತಃ ।
ರೇಮೇ ಸ ಭಗವಾಂಸ್ತಾಭಿರಾತ್ಮಾರಾಮೋಽಪಿ ಲೀಲಯಾ
॥ ೨೦ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಆತ್ಮಾರಾಮನಾಗಿದ್ದರೂ ಅಲ್ಲಿ ಎಷ್ಟು ಮಂದಿ ಗೋಪಿಯರಿದ್ದರೋ ಅಷ್ಟೆ ಸಂಖ್ಯೆಯಲ್ಲಿ ತನ್ನ ಪ್ರತಿರೂಪಗಳನ್ನು ಸೃಷ್ಟಿಸಿ ಪ್ರತಿಯೊಬ್ಬಳೊಡನೆಯೂ ಲೀಲಾವಿನೋದದಿಂದ ವಿಹರಿಸಿದನು. ॥ ೨೦ ॥ ಬಹಳ ಹೊತ್ತಿನವರೆಗೆ ನೃತ್ಯ-ಗಾನ-ವಿಹಾರದಿಂದ ಬಳಲಿದ ಗೋಪಿಯರ ಮುಖ ಕಮಲಗಳನ್ನು ಕರುಣಾಮಯನಾದ ಭಗವಾನ್ ಶ್ರೀಕೃಷ್ಣನು ಅತ್ಯಂತ ಪ್ರೀತಿಯಿಂದ ತನ್ನ ಸುಖಕರ ಕರಕಮಲದಿಂದ ನೇವರಿಸಿದನು. ॥ ೨೧ ॥ ಪರೀಕ್ಷಿತನೇ ! ಭಗವಂತನ ಕರಸ್ಪರ್ಶದಿಂದ ಗೋಪಿಕೆಯರಿಗೆ ಪರಮಾನಂದವಾಯಿತು. ಅವರು ಸ್ವರ್ಣ ಕುಂಡಲಗಳಿಂದಲೂ, ಮುಂಗುರುಳುಗಳಿಂದಲೂ ಕೂಡಿದ ಕಪೋಲಗಳಿಂದಲೂ, ಮುಖಾರವಿಂದದಿಂದಲೂ ಕಡೆಗಣ್ಣ ನೋಟದಿಂದಲೂ, ಅಮೃತಪ್ರಾಯವಾದ ಮಂದಹಾಸದಿಂದಲೂ ಭಗವಾನ್ ಶ್ರೀಕೃಷ್ಣನಿಗೆ ಸೇವೆ ಸಲ್ಲಿಸಿ ಪರಮ ಪವಿತ್ರವಾದ ಅವನ ಲೀಲಾಪ್ರಸಂಗಗಳನ್ನು ಹಾಡತೊಡಗಿದರು. ॥ ೨೨ ॥ ಅನಂತರ ಆಯಾಸಗೊಂಡಿರುವ ಸಲಗವು ಹೆಣ್ಣಾನೆಗಳೊಡನೆ ಆಣೆಕಟ್ಟನ್ನು ಭೇದಿಸಿಕೊಂಡು ನೀರಿನೊಳಗೆ ನುಗ್ಗುವಂತೆ ಶ್ರೀಕೃಷ್ಣನು ರಾಸ ಕ್ರೀಡೆಯ ಆಯಾಸವನ್ನು ಪರಿಹರಿಸಿಕೊಳ್ಳುವ ಸಲುವಾಗಿ ಗೋಪಿಯರೊಡನೆ ಜಲಕ್ರೀಡೆಯಾಡಲು ಯಮುನೆಯ ನೀರನ್ನು ಪ್ರವೇಶಿದನು. ಆಗ ಶ್ರೀಕೃಷ್ಣನು ಧರಿಸಿದ್ದ ವನಮಾಲೆಯು ಗೋಪಿಯರ ಅಂಗಸಂಗದಿಂದ ಬಾಡಿಹೋಗಿದ್ದರೂ ಅವರ ವಕ್ಷ ಸ್ಥಳದಲ್ಲಿ ಲೇಪಿತವಾಗಿದ್ದ ಕುಂಕುಮ ಕೇಸರಿಯಿಂದ ರಂಜಿತವಾಗಿತ್ತು. ವನಮಾಲೆಯ ಸುಗಂಧದಿಂದ ಆಕರ್ಷಿತವಾದ ದುಂಬಿಗಳು ಝೇಂಕರಿಸುತ್ತಾ ಶ್ರೀಕೃಷ್ಣನನ್ನು ಅನುಸರಿಸಿ ಹೋಗುವುದನ್ನು ನೋಡಿದರೆ ಗಂಧರ್ವರಾಜನೇನಾದರೂ ಶ್ರೀಕೃಷ್ಣನ ಗುಣಗಾನ ಮಾಡುತ್ತಾ ಅವನ ಹಿಂದೆಯೇ ಹೋಗುತ್ತಿರುವನೋ ಎಂಬಂತೆ ಇತ್ತು. ॥ ೨೩.॥ ಪರೀಕ್ಷಿತನೇ ! ಯಮುನಾನದಿಯ ಶುಭಜಲದಲ್ಲಿ ಜಲಕ್ರೀಡೆಯನ್ನಾಡುವಾಗ ಗೋಪಿಯರು ಪ್ರೇಮಪೂರ್ಣ ನೋಟದಿಂದ ಶ್ರೀಕೃಷ್ಣನನ್ನು ನೋಡುತ್ತಾ, ನಗು-ನಗುತ್ತಾ ಅವನ ಮೇಲೆ ನೀರನ್ನೆರೆಚುತ್ತಿದ್ದರು. ಪ್ರತಿಯಾಗಿ ಅವನೂ ನೀರನ್ನೆರೆಚುತ್ತಿದ್ದನು. ಹೀಗೆ ಆನಂದಪರವಶರಾಗಿ ಜಲಕ್ರೀಡೆಯಾಡುವುದನ್ನು ನೋಡಿದ ದೇವತೆಗಳು ಅವರ ಮೆಲೆ ಪುಷ್ಪವೃಷ್ಟಿ ಮಾಡುತ್ತಾ ಕೃಷ್ಣನನ್ನು ಪರಿ-ಪರಿಯಾಗಿ ಸ್ತುತಿಸಿದರು. ಹೀಗೆ ಸಾಕ್ಷಾತ್ ಆತ್ಮಾರಾಮನಾದ ಶ್ರೀಕೃಷ್ಣನು ಗಜರಾಜನಂತೆ ಯಮುನೆಯಲ್ಲಿ ನೀರಾಟವನ್ನು ಆಡಿದನು. ॥ ೨೪ ॥ ಇದಾದ ಬಳಿಕ ಶ್ರೀಕೃಷ್ಣನು ಗೋಪಿಯರೊಡನೆ ಯಮುನೆಯ ತೀರದ ಉಪವನಕ್ಕೆ ಹೋದನು. ಆ ಉಪವನವು ರಮಣೀಯವಾಗಿದ್ದು ಎಲ್ಲೆಡೆಗಳಲ್ಲಿಯೂ ನೆಲ ಜಲಗಳಲ್ಲಿ ಅತ್ಯಂತ ಸುಂದರ-ಸುಗಂಧಿತ ಹೂವುಗಳು ಅರಳಿದ್ದವು. ಅದರ ಸುಗಂಧವನ್ನು ಹೊತ್ತುಕೊಂಡು ಮಂದ ಮಾರುತವು ಬೀಸುತ್ತಿತ್ತು. ಮತ್ತ ಗಜವು ಹೆಣ್ಣಾನೆಗಳೊಂದಿಗೆ ವಿಹರಿಸುವಂತೆ ಶ್ರೀಕೃಷ್ಣನು ದುಂಬಿಗಳಿಂದಲೂ ಪ್ರಮದೆ ಯರಿಂದಲೂ ಸಮಾವೃತನಾಗಿ ಆ ಉದ್ಯಾನದಲ್ಲಿ ವಿಹರಿಸುತ್ತಿದ್ದನು. ॥ ೨೫ ॥

ತಾಸಾಮತಿವಿಹಾರೇಣ ಶ್ರಾಂತಾನಾಂ ವದನಾನಿ ಸಃ ।
ಪ್ರಾಮೃಜತ್ಕರುಣಃ ಪ್ರೇಮ್ಣಾ ಶಂತಮೇನಾಂಗಪಾಣಿನಾ
॥ ೨೧ ॥

ಗೋಪ್ಯಃ ಸ್ಫುರತ್ಪುರಟಕುಂಡಲಕುಂತಲತ್ವಿಡ್
ಗಂಡಶ್ರಿಯಾ ಸುಧಿತಹಾಸನಿರೀಕ್ಷಣೇನ ।
ಮಾನಂ ದಧತ್ಯ ಋಷಭಸ್ಯ ಜಗುಃ ಕೃತಾನಿ
ಪುಣ್ಯಾನಿ ತತ್ಕರರುಹಸ್ಪರ್ಶಪ್ರಮೋದಾಃ ॥ ೨೨ ॥

ತಾಭಿರ್ಯುತಃ ಶ್ರಮಮಪೋಹಿತುಮಂಗಸಂಗ-
ಧ್ವಸ್ತಸ್ರಜಃ ಸ ಕುಚಕುಂಕುಮರಂಜಿತಾಯಾಃ ।
ಗಂಧರ್ವಪಾಲಿಭಿರನುದ್ರುತ ಆವಿಶದ್ಭಾಃ
ಶ್ರಾಂತೋ ಗಜೀಭಿರಿಭರಾಡಿವ ಭಿನ್ನಸೇತುಃ ॥ ೨೩ ॥

ಸೋಽಂಭಸ್ಯಲಂ ಯುವತಿಭಿಃ ಪರಿಷಿಚ್ಯಮಾನಃ
ಪ್ರೇಮ್ಣೇಕ್ಷಿತಃ ಪ್ರಹಸತೀಭಿರಿತಸ್ತತೋಽಂಗ ।
ವೈಮಾನಿಕೈಃ ಕುಸುಮವರ್ಷಿಭಿರೀಡ್ಯಮಾನೋ
ರೇಮೇ ಸ್ವಯಂ ಸ್ವರತಿರತ್ರ ಗಜೇಂದ್ರಲೀಲಃ ॥ ೨೪ ॥

ತತಶ್ಚ ಕೃಷ್ಣೋಪವನೇ ಜಲಸ್ಥಲ-
ಪ್ರಸೂನಗಂಧಾನಿಲಜುಷ್ಟದಿಕ್ತಟೇ ।
ಚಚಾರ ಭೃಂಗ ಪ್ರಮದಾಗಣಾವೃತೋ
ಯಥಾ ಮದಚ್ಯುದ್ದ್ವಿರದಃ ಕರೇಣುಭಿಃ ॥ ೨೫ ॥

ಏವಂ ಶಶಾಂಕಾಂಶುವಿರಾಜಿತಾ ನಿಶಾಃ
ಸ ಸತ್ಯಕಾಮೋಽನುರತಾ ಬಲಾಗಣಃ ।
ಸಿಷೇವ ಆತ್ಮನ್ಯವರುದ್ಧಸೌರತಃ
ಸರ್ವಾಃ ಶರತ್ಕಾವ್ಯಕಥಾರಸಾಶ್ರಯಾಃ ॥ ೨೬ ॥

ಪರೀಕ್ಷಿದ್ರಾಜನೇ! ಅನೇಕ ಶರದ್ರಾತ್ರಿಗಳು ಕೂಡಿಕೊಂಡಿವೆಯೋ ಎಂಬಂತೆ ಆ ರಾತ್ರಿಯು ಅತ್ಯಂತ ಶೋಭಾಯಮಾನವಾಗಿತ್ತು. ಎಲ್ಲೆಡೆಗಳಲ್ಲಿಯೂ ಚಂದ್ರನ ಬೆಳದಿಂಗಳು ಹಾಲು ಚೆಲ್ಲಿದಂತೆ ಪ್ರಕಾಶಮಾನವಾಗಿತ್ತು. ಕಾವ್ಯಗಳಲ್ಲಿ ಶರದ್ಋತುವಿನ ಎಷ್ಟು ಬಗೆಯಾದ ವರ್ಣನೆ ಇದೆಯೋ ಆ ಎಲ್ಲ ಲಕ್ಷಣಗಳಿಂದ ಅದು ಕೂಡಿಕೊಂಡಿತ್ತು. ಅಂತಹ ಮಂಗಳಮಯ ರಾತ್ರಿಯಲ್ಲಿ ಭಗವಾನ್ ಶ್ರೀಕೃಷ್ಣನು ತನ್ನ ಪ್ರೇಯಸಿಯರಾದ ಗೋಪಿಕೆಯರೊಡನೆ ಯಮುನೆಯ ಮಳಲದಿಣ್ಣೆಯಲ್ಲಿ, ಯಮುನೆಯಲ್ಲಿ ಹಾಗೂ ತೀರದ ಉಪವನಗಳಲ್ಲಿಯೂ ಯಥೇಚ್ಛವಾಗಿ ವಿಹರಿಸಿದನು. ಸತ್ಯಸಂಕಲ್ಪನಾದ ಭಗವಾನ್ ಶ್ರೀಕೃಷ್ಣನು ತೋರಿದ ಈ ಲೀಲೆಯು ಚಿನ್ಮಯವಾದುದು. ॥ ೨೬ ॥

ರಾಜೋವಾಚ

ಸಂಸ್ಥಾಪನಾಯ ಧರ್ಮಸ್ಯ ಪ್ರಶಮಾಯೇತರಸ್ಯ ಚ ।
ಅವತೀರ್ಣೋ ಹಿ ಭಗವಾನಂಶೇನ ಜಗದೀಶ್ವರಃ
॥ ೨೭ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿಗೆ ಏಕಮಾತ್ರ ಸ್ವಾಮಿಯು. ಅವನು ತನ್ನ ಅಂಶನಾದ ಬಲರಾಮನೊಂದಿಗೆ ಪೂರ್ಣರೂಪದಿಂದ ಅವತರಿಸಿದ್ದನು. ಅವನ ಅವತಾರದ ಉದ್ದೇಶವು ಧರ್ಮದ ಸ್ಥಾಪನೆ ಮತ್ತು ಅಧರ್ಮದನಾಶಕ್ಕಾಗಿಯೇ ಆಗಿತ್ತು. ॥ ೨೭ ॥

ಸ ಕಥಂ ಧರ್ಮಸೇತೂನಾಂ ವಕ್ತಾ ಕರ್ತಾಭಿರಕ್ಷಿತಾ ।
ಪ್ರತೀಪಮಾಚರದ್ಬ್ರಹ್ಮನ್ಪರದಾರಾಭಿಮರ್ಶನಮ್
॥ ೨೮ ॥

ಬ್ರಾಹ್ಮಣೋತ್ತಮರೇ! ಅವನು ಧರ್ಮದ ಮರ್ಯಾದೆಯನ್ನು ಉಪದೇಶಿಸುವವನೂ, ರಕ್ಷಿಸುವವನೂ, ಪಾಲಿಸುವವನೂ ಆಗಿದ್ದನು. ಹಾಗಿರುವಾಗ ಅವನು ಧರ್ಮಕ್ಕೆ ವಿರೋಧವಾದ ಪರಸ್ತ್ರೀಯರನ್ನು ಹೇಗೆ ಸ್ಪರ್ಶಿಸಿದನು? ॥ ೨೮ ॥

ಆಪ್ತಕಾಮೋ ಯದುಪತಿಃ ಕೃತವಾನ್ ವೈ ಜುಗುಪ್ಸಿತಮ್ ।
ಕಿಮಭಿಪ್ರಾಯ ಏತಂ ನಃ ಸಂಶಯಂ ಛಿಂದಿ ಸುವ್ರತ
॥ ೨೯ ॥

ಭಗವಾನ್ ಶ್ರೀಕೃಷ್ಣನು ಪೂರ್ಣಕಾಮನಾಗಿದ್ದು ಅವನಿಗೆ ಯಾವುದೇ ವಸ್ತುವಿನ ಕಾಮನೆ ಇರಲಿಲ್ಲವೆಂಬುದು ನಾನು ಬಲ್ಲೆನು. ಹೀಗಿರುವಾಗಲೂ ಅವನು ಯಾವ ಅಭಿಪ್ರಾಯದಿಂದ ಈ ನಿಂದನೀಯವಾದ ಕಾರ್ಯವನ್ನು ಮಾಡಿದನು? ಸುವ್ರತರೇ! ಈ ನನ್ನ ಸಂದೇಹವನ್ನು ದಯಮಾಡಿ ಪರಿಹರಿಸಿರಿ. ॥ ೨೯ ॥

ಶ್ರೀಶುಕ ಉವಾಚ

ಧರ್ಮವ್ಯತಿಕ್ರಮೋ ದೃಷ್ಟ ಈಶ್ವರಾಣಾಂ ಚ ಸಾಹಸಮ್ ।
ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ
॥ ೩೦ ॥

ಶ್ರೀಶುಕಮಹಾಮುನಿಗಳು ಹೇಳಿದರು – ಸೂರ್ಯ, ಅಗ್ನಿ ಮೊದಲಾದ ಮಹಾಪ್ರಭಾವವುಳ್ಳವರು ಕೆಲವೊಮ್ಮೆ ಧರ್ಮದ ಉಲ್ಲಂಘನೆ ಮತ್ತು ಸಾಹಸದ ಕಾರ್ಯವನ್ನು ಮಾಡುವುದನ್ನು ನೋಡುತ್ತೇವೆ. ಆದರೆ ಆ ಕರ್ಮಗಳಿಂದ ಅಂತಹ ತೇಜಸ್ವಿ ಪುರುಷರಿಗೆ ಯಾವುದೇ ದೋಷವೂ ಉಂಟಾಗುವುದಿಲ್ಲ. ಅಗ್ನಿಯು ಸರ್ವಭಕ್ಷಕನಾಗಿದ್ದರೂ ಆ ಪದಾರ್ಥಗಳ ದೋಷಗಳಿಂದ ಲಿಪ್ತನಾಗುವುದಿಲ್ಲ. ॥ ೩೦ ॥ ಇಂತಹ ಸಾಮರ್ಥ್ಯವಿಲ್ಲದವರು ಅಂತಹ ಧರ್ಮೋಲ್ಲಂಘನೆಯ ಮಾತನ್ನು ಮನಸ್ಸಿನಲ್ಲಿಯೂ ಯೋಚಿಸಬಾರದು; ಶರೀರದಿಂದ ಮಾಡುವುದು ದೂರವುಳಿಯಿತು. ಮೂರ್ಖತೆಯಿಂದ ಹಾಗೇನಾದರೂ ಮಾಡಿಬಿಟ್ಟರೆ ಅವರ ನಾಶವು ನಿಶ್ಚಯವು. ಭಗವಾನ್ ಶಂಕರನು ಹಾಲಾಹಲವನ್ನು ಕುಡಿದಿದ್ದನು. ಎಂದು ಬೇರೆಯಾರಾದರೂ ಕುಡಿದರೆ ಸುಟ್ಟು ಭಸ್ಮರಾಗಿ ಹೋದಾರು. ॥ ೩೧ ॥

ನೈತತ್ಸಮಾಚರೇಜ್ಜಾತು ಮನಸಾಪಿ ಹ್ಯನೀಶ್ವರಃ ।
ವಿನಶ್ಯತ್ಯಾಚರನ್ಮೌಢ್ಯಾದ್ಯಥಾರುದ್ರೋಽಬ್ಧಿಜಂ ವಿಷಮ್
॥ ೩೧ ॥

ಈಶ್ವರಾಣಾಂ ವಚಃ ಸತ್ಯಂ ತಥೈವಾಚರಿತಂ ಕ್ವಚಿತ್ ।
ತೇಷಾಂ ಯತ್ಸ್ವವಚೋಯುಕ್ತಂ ಬುದ್ಧಿಮಾಂಸ್ತತ್ಸಮಾಚರೇತ್
॥ ೩೨ ॥

ಅದಕ್ಕಾಗಿ ಶಂಕರರಂತಹ ಜಗದೀಶ್ವರರ ವಚನಗಳನ್ನು ಸತ್ಯ ವೆಂದು ತಿಳಿದು ಅದಕ್ಕನುಸಾರವಾಗಿ ಆಚರಿಸಬೇಕು. ಅವರ ಆಚರಣೆಗಳ ಅನುಕರಣೆಗಳನ್ನು ಕೆಲವೊಮ್ಮೆ ಮಾತ್ರ ಮಾಡಲಾ ಗುತ್ತದೆ. ಆದುದರಿಂದ ಬುದ್ಧಿವಂತರಾದವರು ಅವರ ಆಚ ರಣೆಯು ಅವರ ಉಪದೇಶಕ್ಕನುಕೂಲವಾಗಿದ್ದರೆ ಅದನ್ನು ಜೀವನ ದಲ್ಲಿ ಅನುಷ್ಠಾನಕ್ಕೆ ತರಬೇಕು. ॥ ೩೨ ॥

ಕುಶಲಾಚರಿತೇನೈಷಾಮಿಹ ಸ್ವಾರ್ಥೋ ನ ವಿದ್ಯತೇ ।
ವಿಪರ್ಯಯೇಣ ವಾನರ್ಥೋ ನಿರಹಂಕಾರಿಣಾಂ ಪ್ರಭೋ
॥ ೩೩ ॥

ಪರೀಕ್ಷಿತನೇ ! ಅಂತಹ ಸರ್ವಸಮರ್ಥ ಪುರುಷರು ಅಹಂಕಾರ ರಹಿತರಾಗಿರುತ್ತಾರೆ. ಶುಭಕರ್ಮಮಾಡುವುದರಲ್ಲಿ ಅವರಿಗೆ ಯಾವುದೇ ಪ್ರಾಪಂಚಿಕ ಸ್ವಾರ್ಥ ಇರುವುದಿಲ್ಲ ಹಾಗೂ ಅಶುಭ ಕರ್ಮಮಾಡುವುದರಲ್ಲಿ ಅನರ್ಥವುಂಟಾಗುವುದಿಲ್ಲ. ಅವರು ಸ್ವಾರ್ಥ ಮತ್ತು ಅನರ್ಥಗಳನ್ನು ಮೀರಿ ಇರುತ್ತಾರೆ. ॥ ೩೩ ॥

ಕಿಮುತಾಖಿಲಸತ್ತ್ವಾನಾಂ ತಿರ್ಯಙ್ಮರ್ತ್ಯದಿವೌಕಸಾಮ್ ।
ಈಶಿತುಶ್ಚೇಶಿತವ್ಯಾನಾಂ ಕುಶಲಾಕುಶಲಾನ್ವಯಃ
॥ ೩೪ ॥

ಇಂತಹವರ ಸಂಬಂಧದಲ್ಲೇ ಹೀಗಿದ್ದರೆ ಪಶು, ಪಕ್ಷಿ ಮನುಷ್ಯರು, ದೇವತೆಗಳು ಮುಂತಾದ ಸಮಸ್ತ ಚರಾಚರ ಜೀವರ ಏಕಮಾತ್ರ ಸ್ವಾಮಿಯಾದ ಸರ್ವೇಶ್ವರ ಭಗವಂತನ ವಿಷಯದಲ್ಲಿ ಮಾನವೀಯ ಶುಭ-ಅಶುಭಗಳ ಸಂಬಂಧವನ್ನು ಹೇಗೆ ಜೋಡಿಸ ಲಾಗುತ್ತದೆ ? ॥ ೩೪ ॥ ಭಕ್ತ ಜನರು ಪರಮಾತ್ಮನ ಪಾದಪಂಕಜ ಗಳ ಧೂಳಿನ ಸೇವನೆಯಿಂದ ತೃಪ್ತರಾಗುತ್ತಾರೆ. ಯೋಗಿಗಳು ಅವನನ್ನೇ ಧ್ಯಾನಿಸುತ್ತಾ ಯೋಗದ ಪ್ರಭಾವದಿಂದ ಸಮಸ್ತವಾದ ಕರ್ಮಬಂಧನಗಳಿಂದಲೂ ಮುಕ್ತರಾಗುತ್ತಾರೆ. ಜ್ಞಾನಿಗಳಾದ ಮುನಿಗಳೂ ಕೂಡ ಪರಬ್ರಹ್ಮತತ್ತ್ವವನ್ನೇ ವಿಹಾರಮಾಡುತ್ತಾ ತಾದಾತ್ಮ್ಯವನ್ನು ಹೊಂದಿ ಸಮಸ್ತ ಕರ್ಮ ಬಂಧನಗಳಿಂದಲೂ ಮುಕ್ತರಾಗಿ ಸ್ವೇಚ್ಛೆಯಿಂದ ಸಂಚರಿಸುತ್ತಾರೆ. ಅಂತಹ ಭಗವಂತನೇ ತನ್ನ ಭಕ್ತರ ಇಚ್ಛೆಯಿಂದ ತನ್ನ ಚಿನ್ಮಯ ಶ್ರೀವಿಗ್ರಹವನ್ನು ಪ್ರಕಟಿಸುವನು. ಅಂತಹ ಪರಬ್ರಹ್ಮ ಪರಮಾತ್ಮನಿಗೆ ಕರ್ಮ ಬಂಧನದ ಕಲ್ಪನೆಯಾದರೂ ಹೇಗಿದ್ದೀತು ? ॥ ೩೫ ॥

ಯತ್ಪಾದಪಂಕಜಪರಾಗನಿಷೇವತೃಪ್ತಾ
ಯೋಗಪ್ರಭಾವವಿಧುತಾಖಿಲಕರ್ಮಬಂಧಾಃ ।
ಸ್ವೈರಂ ಚರಂತಿ ಮುನಯೋಽಪಿ ನ ನಹ್ಯಮಾನಾ-
ಸ್ತಸ್ಯೇಚ್ಛಯಾಽಽತ್ತವಪುಷಃ ಕುತ ಏವ ಬಂಧಃ ॥ ೩೫ ॥

ಗೋಪೀನಾಂ ತತ್ಪತೀನಾಂ ಚ ಸರ್ವೇಷಾಮೇವ ದೇಹಿನಾಮ್ ।
ಯೋಽಂತಶ್ಚರತಿ ಸೋಽಧ್ಯಕ್ಷಃ ಕ್ರೀಡನೇನೇಹ ದೇಹಭಾಕ್
॥ ೩೬ ॥

ಗೋಪಿಯರ ಗಂಡಂದಿರಲ್ಲಿ ಮತ್ತು ಸಮಸ್ತ ಶರೀರಧಾರಿಗಳಲ್ಲಿಯೂ ಅಂತರ್ಯಾಮಿಯಾಗಿರುವ ಪರಮಾತ್ಮನೇ ಸರ್ವ ಸಾಕ್ಷಿಯೂ, ಪರಮಪತಿಯೂ ಆಗಿದ್ದಾನೆ. ಅವನೇ ಶ್ರೀಕೃಷ್ಣನ ರೂಪದಲ್ಲಿ ದಿವ್ಯ ಮಂಗಳರೂಪವನ್ನು ಧರಿಸಿ ತನ್ನ ದಿವ್ಯವಾದ ಲೀಲೆಗಳನ್ನು ತೋರಿಸುತ್ತಿದ್ದಾನೆ. ॥ ೩೬ ॥

ಅನುಗ್ರಹಾಯ ಭೂತಾನಾಂ ಮಾನುಷಂ ದೇಹಮಾಸ್ಥಿತಃ ।
ಭಜತೇ ತಾದೃಶೀಃ ಕ್ರೀಡಾ ಯಾಃ ಶ್ರುತ್ವಾ ತತ್ಪರೋ ಭವೇತ್
॥ ೩೭ ॥

ಭಗವಂತನು ಜೀವರ ಮೇಲೆ ಕೃಪೆ ದೋರಲೆಂದೇ ತಾನು ಮನುಷ್ಯರೂಪದಿಂದ ಪ್ರಕಟನಾಗಿ ಇಂತಹ ಲೀಲೆಗಳನ್ನು ನಡೆಸುತ್ತಾನೆ. ಇವುಗಳನ್ನು ಶ್ರವಣಿಸಿ ಮನುಷ್ಯನು ಭಗವತ್ಪಾರಾಯಣನಾಗಲೆಂದೇ ಲೀಲೆಗಳನ್ನು ತೋರುವನು. ॥ ೩೭ ॥

ನಾಸೂಯನ್ಖಲು ಕೃಷ್ಣಾಯ ಮೋಹಿತಾಸ್ತಸ್ಯ ಮಾಯಯಾ ।
ಮನ್ಯಮಾನಾಃ ಸ್ವಪಾರ್ಶ್ವಸ್ಥಾನ್ ಸ್ವಾನ್ ಸ್ವಾನ್ ದಾರಾನ್ ವ್ರಜೌಕಸಃ
॥ ೩೮ ॥

ವ್ರಜವಾಸಿಗಳಾದ ಗೋಪರು ಭಗವಾನ್ ಶ್ರೀಕೃಷ್ಣನಲ್ಲಿ ಸ್ವಲ್ಪವೂ ದೋಷಬುದ್ಧಿ ತಳೆದಿರಲಿಲ್ಲ. ಅವರೆಲ್ಲರೂ ಅವನ ಯೋಗಮಾಯೆ ಯಿಂದ ಮೋಹಿತರಾಗಿ ತಮ್ಮ ಪತ್ನಿಯರು ತಮ್ಮ ಬಳಿಯಲ್ಲೇ ಇದ್ದರೆಂದು ಭಾವಿಸಿಕೊಂಡಿದ್ದರು. ॥ ೩೮ ॥

ಬ್ರಹ್ಮರಾತ್ರ ಉಪಾವೃತ್ತೇ ವಾಸುದೇವಾನುಮೋದಿತಾಃ ।
ಅನಿಚ್ಛಂತ್ಯೋ ಯಯುರ್ಗೋಪ್ಯಃ ಸ್ವಗೃಹಾನ್ ಭಗವತ್ಪ್ರಿಯಾಃ
॥ ೩೯ ॥

ಹೀಗೆ ರಾಸಕ್ರೀಡೆ ಜಲಕ್ರೀಡೆಗಳಿಂದ ರಾತ್ರಿಯೆಲ್ಲವೂ ಕಳೆದು ಬ್ರಾಹ್ಮಮುಹೂರ್ತವು ಉದಯಿಸಿತು. ಗೋಪಿಯರಿಗೆ ತಮ್ಮ ಮನೆಗೆ ಮರಳಲು ಇಚ್ಛೆ ಇಲ್ಲದಿದ್ದರೂ ಭಗವಾನ್ ಶ್ರೀಕೃಷ್ಣನ ಆಜ್ಞೆಯಿಂದ ಅವರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಏಕೆಂದರೆ, ತಮ್ಮ ಪ್ರತಿಯೊಂದು ವರ್ತನೆಯಿಂದ ಸಂಕಲ್ಪದಿಂದ ಕೇವಲ ಭಗವಂತನನ್ನು ಸಂತೋಷ ಪಡಿಸುವುದನ್ನೇ ಬಯಸುತ್ತಿದ್ದರು. ॥ ೩೯ ॥

ಏತ್ಕೀಡಿತಂ ವ್ರಜವಧೂಭಿರಿದಂ ಚ ವಿಷ್ಣೋಃ
ಶ್ರದ್ಧಾನ್ವಿತೋಽನುಶೃಣುಯಾದಥ ವರ್ಣಯೇದ್ಯಃ ।

ಭಕ್ತಿಂ ಪರಾಂ ಭಗವತಿ ಪ್ರತಿಲಭ್ಯ ಕಾಮಂ
ಹೃದ್ರೋಗಮಾಶ್ವಪಹಿನೋತ್ಯಚಿರೇಣ ಧೀರಃ ॥ ೪೦ ॥

ಪರೀಕ್ಷಿತನೇ! ಯಾವ ಧೀರರು ವ್ರಜಯುವತಿಯರೊಂದಿಗೆ ಭಗವಾನ್ ಶ್ರೀಕೃಷ್ಣನು ನಡೆಸಿದ ಈ ಚಿನ್ಮಯ ರಾಸ-ವಿಲಾಸವನ್ನು ಶ್ರದ್ಧೆಯಿಂದ ಪದೇ-ಪದೇ ಕೇಳುವನೋ, ಕೀರ್ತಿಸುವನೋ ಅವರಿಗೆ ಭಗವಂತನ ಚರಣಗಳಲ್ಲಿ ಪರಾಭಕ್ತಿಯು ಉಂಟಾಗಿ, ಅವರು ಅತ್ಯಂತ ಶೀಘ್ರವಾಗಿ ತಮ್ಮ ಹೃದಯದ ರೋಗದಿಂದ, ಕಾಮವಿಕಾರದಿಂದ ಬಿಡುಗಡೆ ಹೊಂದುವರು. ॥ ೪೦ ॥

ಮೂವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೩೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾವರ್ಣನಂ ನಾಮ ತ್ರಯಸ್ತ್ರಿಂಶೋಽಧ್ಯಾಯಃ॥ ೩೩ ॥

ಮೂವತ್ತನಾಲ್ಕನೆಯ ಅಧ್ಯಾಯ

ಸುದರ್ಶನ ಮತ್ತು ಶಂಖಚೂಡರ ಉದ್ಧಾರ

ಶ್ರೀಶುಕ ಉವಾಚ

ಏಕದಾ ದೇವಯಾತ್ರಾಯಾಂ ಗೋಪಾಲಾ ಜಾತಕೌತುಕಾಃ ।
ಅನೋಭಿರನಡುದ್ಯುಕ್ತೈಃ ಪ್ರಯಯುಸ್ತೇಽಂಬಿಕಾವನಮ್
॥ ೧ ॥

ತತ್ರ ಸ್ನಾತ್ವಾ ಸರಸ್ವತ್ಯಾಂ ದೇವಂ ಪಶುಪತಿಂ ವಿಭುಮ್ ।
ಆನರ್ಚುರರ್ಹಣೈರ್ಭಕ್ತ್ಯಾ ದೇವೀಂ ಚ ನೃಪತೇಽಂಬಿಕಾಮ್
॥ ೨ ॥

ಗಾವೋ ಹಿರಣ್ಯಂ ವಾಸಾಂಸಿ ಮಧು ಮಧ್ವನ್ನಮಾದೃತಾಃ ।
ಬ್ರಾಹ್ಮಣೇಭ್ಯೋ ದದುಃ ಸರ್ವೇ ದೇವೋ ನಃ ಪ್ರೀಯತಾಮಿತಿ
॥ ೩ ॥

ಊಷುಃ ಸರಸ್ವತೀತೀರೇ ಜಲಂ ಪ್ರಾಶ್ಯ ಧೃತವ್ರತಾಃ ।
ರಜನೀಂ ತಾಂ ಮಹಾಭಾಗಾ ನಂದಸುನಂದಕಾದಯಃ
॥ ೪ ॥

ಕಶ್ಚಿನ್ಮಹಾನಹಿಸ್ತಸ್ಮಿನ್ ವಿಪಿನೇಽತಿಬುಭುಕ್ಷಿತಃ ।
ಯದೃಚ್ಛಯಾಽಽಗತೋ ನಂದಂ ಶಯಾನಮುರಗೋಽಗ್ರಸೀತ್
॥ ೫ ॥

ಸ ಚುಕ್ರೋಶಾಹಿನಾ ಗ್ರಸ್ತಃ ಕೃಷ್ಣ ಕೃಷ್ಣ ಮಹಾನಯಮ್ ।
ಸರ್ಪೋ ಮಾಂ ಗ್ರಸತೇ ತಾತ ಪ್ರಪನ್ನಂ ಪರಿಮೋಚಯ
॥ ೬ ॥

ತಸ್ಯ ಚಾಕ್ರಂದಿತಂ ಶ್ರುತ್ವಾ ಗೋಪಾಲಾಃ ಸಹಸೋತ್ಥಿತಾಃ ।
ಗ್ರಸ್ತಂ ಚ ದೃಷ್ಟ್ವಾ ವಿಭ್ರಾಂತಾಃ ಸರ್ಪಂ ವಿವ್ಯಧುರುಲ್ಮುಕೈಃ
॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಮ್ಮೆ ನಂದಗೋಪನೇ ಮೊದಲಾದ ಗೋಪಾಲಕರು ಶಿವರಾತ್ರಿಯ ಸಮಯದಲ್ಲಿ ಅತ್ಯುತ್ಸಾಹದಿಂದ, ಆನಂದಭರಿತರಾಗಿ ಎತ್ತಿನ ಗಾಡಿಗಳಲ್ಲಿ ಕುಳಿತು ಅಂಬಿಕಾವನಕ್ಕೆ ಯಾತ್ರೆಗೆ ಹೋದರು. ॥ ೧ ॥ ರಾಜನೇ! ಅಲ್ಲಿ ಅವರೆಲ್ಲರೂ ಸರಸ್ವತೀ ನದಿಯಲ್ಲಿ ಸ್ನಾನ ಮಾಡಿ ಪಶುಪತಿಯಾದ ಪರಮೇಶ್ವರನನ್ನೂ, ಭಗವತಿ ಅಂಬಿಕೆಯನ್ನು ಅನೇಕ ಪೂಜಾಸಾಮಗ್ರಿಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿದರು. ॥ ೨ ॥ ದೇವಾಧಿದೇವ ಭಗವಾನ್ ಶಂಕರನು ನಮ್ಮ ಮೇಲೆ ಸುಪ್ರೀತನಾಗಲೆಂದು ಅವರು ಬ್ರಾಹ್ಮಣರಿಗೆ ಗೋವುಗಳನ್ನು, ವಸ್ತ್ರಗಳನ್ನು, ಸುವರ್ಣವನ್ನು, ಜೇನು ತುಪ್ಪವನ್ನು ಆದರದಿಂದ ದಾನವಾಗಿ ಕೊಟ್ಟು ಮೃಷ್ಟಾನ್ನವನ್ನು ಭೋಜನ ಮಾಡಿಸಿದರು. ॥ ೩ ॥ ಅಂದು ಮಹಾಭಾಗ್ಯಶಾಲಿಗಳಾದ ನಂದ-ಸುನಂದರೇ ಮೊದಲಾದ ಗೋಪರು ಉಪವಾಸ ವ್ರತವನ್ನು ಕೈಗೊಂಡು ಕೇವಲ ಜಲಾಹಾರದಲ್ಲೇ ಇದ್ದು ಆ ರಾತ್ರಿಯಲ್ಲಿ ಸರಸ್ವತೀನದಿಯ ತೀರದಲ್ಲಿ ನಿಶ್ಚಿಂತರಾಗಿ ಮಲಗಿದರು. ॥ ೪ ॥

ಆ ಅಂಬಿಕಾವನದಲ್ಲಿ ದೊಡ್ಡದಾದೊಂದು ಹೆಬ್ಬಾವಿದ್ದಿತು. ಆ ಸಮಯದಲ್ಲಿ ಅದು ಬಹಳವಾಗಿ ಹಸಿದಿತ್ತು. ಸ್ವೇಚ್ಛೆಯಿಂದ ಸಂಚರಿಸುತ್ತಿದ್ದ ಆ ಸರ್ಪವು ಮಲಗಿದ್ದ ನಂದಗೋಪನನ್ನು ನುಂಗತೊಡಗಿತು. ॥ ೫ ॥ ಅಜಗರನಿಂದ ನುಂಗಲ್ಪಡುತ್ತಿರುವ ನಂದ ಗೋಪನು 'ಮಗು! -ಕೃಷ್ಣಾ! ಕೃಷ್ಣಾ! ಬೇಗ ಓಡಿ ಬಾ. ನೋಡು, ಈ ಹೆಬ್ಬಾವು ನನ್ನನ್ನು ನುಂಗುತ್ತಿದೆ. ಶರಣಾಗತನಾಗಿರುವ ನನ್ನನ್ನು ಈ ಸರ್ಪದಿಂದ ಬಿಡಿಸು' ಎಂದು ಗಟ್ಟಿಯಾಗಿ ಕೂಗಿಕೊಂಡನು. ॥ ೬ ॥ ನಂದಗೋಪನ ಕೂಗನ್ನು ಕೇಳಿ ಗೋಪರೆಲ್ಲರೂ ಗಡಿಬಿಡಿಯಿಂದ ಎದ್ದು ನೋಡುತ್ತಾರೆ - ನಂದರಾಜನು ಹೆಬ್ಬಾವಿನ ಬಾಯಿಗೆ ಸಿಲುಕಿಕೊಂಡಿರುವನು. ಇದರಿಂದ ಭ್ರಾಂತರಾದ ಅವರು ಕೊಳ್ಳಿಗಳಿಂದ ಆ ಸರ್ಪವನ್ನು ಹೊಡೆಯತೊಡಗಿದರು. ॥ ೭ ॥

ಅಲಾತೈರ್ದಹ್ಯಮಾನೋಽಪಿ ನಾಮುಂಚತ್ತಮುರಂಗಮಃ ।
ತಮಸ್ಪೃಶತ್ಪದಾಭ್ಯೇತ್ಯ ಭಗವಾನ್ ಸಾತ್ವತಾಂ ಪತಿಃ
॥ ೮ ॥

ಸ ವೈ ಭಗವತಃ ಶ್ರೀಮತ್ಪಾದಸ್ಪರ್ಶಹತಾಶುಭಃ ।
ಭೇಜೇ ಸರ್ಪವಪುರ್ಹಿತ್ವಾ ರೂಪಂ ವಿದ್ಯಾಧರಾರ್ಚಿತಮ್
॥ ೯ ॥

ತಮಪೃಚ್ಛದ್ಧೃಷೀಕೇಶಃ ಪ್ರಣತಂ ಸಮುಪಸ್ಥಿತಮ್ ।
ದೀಪ್ಯಮಾನೇನ ವಪುಷಾ ಪುರುಷಂ ಹೇಮಮಾಲಿನಮ್
॥ ೧೦ ॥

ಕೋ ಭವಾನ್ ಪರಯಾ ಲಕ್ಷ್ಮ್ಯಾ ರೋಚತೇಽದ್ಭುತದರ್ಶನಃ ।
ಕಥಂ ಜುಗುಪ್ಸಿತಾಮೇತಾಂ ಗತಿಂ ವಾ ಪ್ರಾಪಿತೋಽವಶಃ
॥ ೧೧ ॥

ಸರ್ಪ ಉವಾಚ

ಅಹಂ ವಿದ್ಯಾಧರಃ ಕಶ್ಚಿತ್ ಸುದರ್ಶನ ಇತಿ ಶ್ರುತಃ ।
ಶ್ರಿಯಾ ಸ್ವರೂಪಸಂಪತ್ತ್ಯಾ ವಿಮಾನೇನಾಚರಂ ದಿಶಃ
॥ ೧೨ ॥

ಋಷೀನ್ವಿರೂಪಾನಂಗಿರಸಃ ಪ್ರಾಹಸಂ ರೂಪದರ್ಪಿತಃ ।
ತೈರಿಮಾಂ ಪ್ರಾಪಿತೋ ಯೋನಿಂ ಪ್ರಲಬ್ಧೈಃ ಸ್ವೇನ ಪಾಪ್ಮನಾ
॥ ೧೩ ॥

ಶಾಪೋ ಮೇಽನುಗ್ರಹಾಯೈವ ಕೃತಸ್ತೈಃ ಕರುಣಾತ್ಮಭಿಃ ।
ಯದಹಂ ಲೋಕಗುರುಣಾ ಪದಾ ಸ್ಪೃಷ್ಟೋ ಹತಾಶುಭಃ
॥ ೧೪ ॥

ತಂ ತ್ವಾಹಂ ಭವಭೀತಾನಾಂ ಪ್ರಪನ್ನಾನಾಂ ಭಯಾಪಹಮ್ ।
ಆಪೃಚ್ಛೇ ಶಾಪನಿರ್ಮುಕ್ತಃ ಪಾದಸ್ಪರ್ಶಾದಮೀವಹನ್
॥ ೧೫ ॥

ಪ್ರಪನ್ನೋಽಸ್ಮಿ ಮಹಾಯೋಗಿನ್ ಮಹಾಪುರುಷ ಸತ್ಪತೇ ।
ಅನುಜಾನೀಹಿ ಮಾಂ ದೇವ ಸರ್ವಲೋಕೇಶ್ವರೇಶ್ವರ
॥ ೧೬ ॥

ಆದರೆ ಕೊಳ್ಳಿಗಳಿಂದ ಹೊಡೆಯುತ್ತಿದ್ದರೂ, ಬೆಂಕಿಯಿಂದ ಸುಡುತ್ತಿದ್ದರೂ ಆ ಅಜಗರವು ನಂದನನ್ನು ಬಿಡಲೇ ಇಲ್ಲ. ಆಗ ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣನು ಮುಂದೆ ಬಂದು ತನ್ನ ಕಾಲಿನಿಂದ ಅದನ್ನು ಸ್ಪರ್ಶಿಸಿದನು. ॥ ೮ ॥ ಭಗವಂತನ ಶ್ರೀ ಚರಣಸ್ಪರ್ಶ ವಾಗುತ್ತಲೇ ಸರ್ಪದ ಸಮಸ್ತ ಪಾಪಗಳು ಸುಟ್ಟು ಬೂದಿ ಯಾದುವು. ಆ ಕ್ಷಣದಲ್ಲೇ ಅದಕ್ಕೆ ಸರ್ಪರೂಪವು ಹೋಗಿ ವಿದ್ಯಾಧರರಿಂದ ಅರ್ಚಿಸಲ್ಪಡುವ ಸರ್ವಾಂಗಸುಂದರವಾದ ರೂಪವುಂಟಾಯಿತು. ॥ ೯ ॥ ಸುಂದರವಾದ ಶರೀರದಿಂದ ದೇದೀಪ್ಯನಾಗಿ ಕಾಣುತ್ತಿದ್ದ, ಸುವರ್ಣಮಯವಾದ ಹಾರಗಳನ್ನು ಧರಿಸಿದ್ದ ಆವನು ಶ್ರೀಕೃಷ್ಣನಿಗೆ ದೀರ್ಘದಂಡ ನಮಸ್ಕಾರ ಮಾಡಿ ಕೈಜೋಡಿಸಿಕೊಂಡು ನಿಂತನು. ಆ ದಿವ್ಯಪುರುಷನನ್ನು ಹೃಷೀಕೇಶನು ಪ್ರಶ್ನಿಸಿದನು. ॥ ೧೦ ॥ ದಿವ್ಯಪುರುಷನೇ ! ನೀನಾರು ? ಶ್ರೇಷ್ಠವಾದ ಕಾಂತಿಯಿಂದ ಅದ್ಭುತರೂಪನಾಗಿ ಕಾಣುತ್ತಿರುವೆ. ನಿನಗೆ ಈ ಅತ್ಯಂತ ನಿಂದನೀಯವಾದ ಅಜಗರಯೋನಿಯು ಹೇಗೆ ದೊರೆಯಿತು ? ಅನಿವಾರ್ಯವಾಗಿ ಈ ಜನ್ಮವನ್ನು ನೀನು ಹೊಂದಿರಬೇಕು. ॥ ೧೧ ॥

ಸರ್ಪಶರೀರದಿಂದ ಹೊರಬಂದ ದಿವ್ಯಪುರುಷನು ಹೇಳುತ್ತಾನೆ

ಭಗವಂತ ! ಹಿಂದೆ ನಾನು ಸುದರ್ಶನನೆಂಬ ವಿಖ್ಯಾತ ವಿದ್ಯಾಧರನಾಗಿದ್ದೆ. ನನ್ನಲ್ಲಿ ರೂಪಸಂಪತ್ತೂ, ಧನಸಂಪತ್ತೂ ಅಪಾರವಾಗಿತ್ತು. ಇದರಿಂದ ನಾನು ವಿಮಾನದಲ್ಲಿ ಕುಳಿತು ಎಲ್ಲಡೆಗಳಲ್ಲಿಯೂ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದೆ. ॥ ೧೨ ॥ ಹೀಗೆ ಸಂಚರಿಸುತ್ತಿದ್ದಾಗ ಒಮ್ಮೆ ನಾನು ಅಂಗಿರಸ ಗೋತ್ರದ ಅತ್ಯಂತ ಕುರೂಪಿಗಳಾದ ಋಷಿಗಳನ್ನು ನೋಡಿದೆನು. ಸೌಂದರ್ಯಮದದಿಂದ ನಾನು ಆ ಮಹರ್ಷಿಗಳನ್ನು ನೋಡಿ ಅಪಹಾಸ್ಯಮಾಡಿದೆ. ನನ್ನ ಈ ಅಪರಾಧದಿಂದ ಕುಪಿತರಾದ ಮಹರ್ಷಿಗಳು ಅಜಗರ ಸರ್ಪದ ಯೋನಿಯಲ್ಲಿ ಹುಟ್ಟುವಂತೆ ಶಪಿಸಿದರು. ಅದು ನನ್ನ ಪಾಪದ ಫಲವೇ ಆಗಿತ್ತು. ॥ ೧೩. ॥ ನಿಜವಾಗಿ ಹೇಳುವುದಾದರೆ ದಯಾಳುಗಳಾದ ಆ ಋಷಿಗಳು ನನ್ನನ್ನು ಅನುಗ್ರಹಿಸಲೆಂದೇ ಆ ಶಾಪ ವನ್ನಿತ್ತರು. ಅದರಿಂದ ಇಂದು ನಾನು ಲೋಕಗುರುವಾದ ನಿನ್ನ ದಿವ್ಯ ಪಾದಸ್ಪರ್ಶವನ್ನು ಪಡೆದು ಸಮಸ್ತ ಪಾಪಗಳಿಂದ ಮುಕ್ತನಾದೆನಲ್ಲ ! ॥ ೧೪ ॥ ಸಮಸ್ತ ಪಾಪಗಳನ್ನು ನಾಶಮಾಡುವಂತಹ ಸ್ವಾಮಿಯೇ! ಹುಟ್ಟು ಸಾವುಗಳ ರೂಪವಾದ ಸಂಸಾರಕ್ಕೆ ಭಯಗೊಂಡು ನಿನ್ನಲ್ಲಿ ಶರಣಾಗತರಾದರೆ ನೀನು ಎಲ್ಲ ಭಯಗಳಿಂದ ಪಾರುಮಾಡುವೆ. ಈಗ ನಾನು ನಿನ್ನ ಚರಣಸ್ಪರ್ಶದಿಂದಲೆ ಶಾಪಮುಕ್ತನಾಗಿರುವೆನು. ॥ ೧೫ ॥ ಭಕ್ತವತ್ಸಲನೇ ! ಮಹಾಯೋಗೇಶ್ವರ ಪುರುಷೋತ್ತಮನೇ ! ನಾನು ನಿನಗೆ ಶರಣಾಗಿದ್ದೇನೆ. ಇಂದ್ರಾದಿ ಸಮಸ್ತ ಲೋಕೇಶ್ವರರಿಗೂ ಪರಮೇಶ್ವರನಾದವನೇ ! ಸ್ವಯಂ ಪ್ರಕಾಶನಾದ ಪರಮಾತ್ಮನೇ ! ನನಗೆ ನನ್ನ ಲೋಕಕ್ಕೆ ಹೋಗಲು ಅನುಮತಿಯನ್ನು ದಯಪಾಲಿಸು. ॥ ೧೬ ॥ ಅಚ್ಯುತನೇ ! ನಿನ್ನ ದರ್ಶನ ಮಾತ್ರದಿಂದಲೇ ನಾನು ಬ್ರಾಹ್ಮಣರ ಶಾಪದಿಂದ ಮುಕ್ತನಾದೆನು. ಇದು ಆಶ್ಚರ್ಯದ ಸಂಗತಿಯೇನಲ್ಲ. ಏಕೆಂದರೆ, ನಿನ್ನ ನಾಮೋಚ್ಚಾರಗೈದವನು ತನ್ನನ್ನು ಮತ್ತು ಶ್ರೋತೃಗಳನ್ನು ಪವಿತ್ರರಾಗಿಸುತ್ತಾನೆ.

ಬ್ರಹ್ಮದಂಡಾದ್ವಿಮುಕ್ತೋಽಹಂ ಸದ್ಯಸ್ತೇಽಚ್ಯುತ ದರ್ಶನಾತ್ ।
ಯನ್ನಾಮ ಗೃಹ್ಣನ್ನಖಿಲಾನ್ ಶ್ರೋತೃನಾತ್ಮಾನಮೇವ ಚ ।
ಸದ್ಯಃ ಪುನಾತಿ ಕಿಂ ಭೂಯಸ್ತಸ್ಯ ಸ್ಪೃಷ್ಟಃ ಪದಾ ಹಿ ತೇ
॥ ೧೭ ॥

ಇತ್ಯನುಜ್ಞಾಪ್ಯ ದಾಶಾರ್ಹಂ ಪರಿಕ್ರಮ್ಯಾಭಿವಂದ್ಯ ಚ ।
ಸುದರ್ಶನೋ ದಿವಂ ಯಾತಃ ಕೃಚ್ಛ್ರಾನ್ನಂದಶ್ಚ ಮೋಚಿತಃ
॥ ೧೮ ॥

ನಿಶಾಮ್ಯ ಕೃಷ್ಣಸ್ಯ ತದಾತ್ಮವೈಭವಂ
ವ್ರಜೌಕಸೋ ವಿಸ್ಮಿತಚೇತಸಸ್ತತಃ ।
ಸಮಾಪ್ಯ ತಸ್ಮಿನ್ನಿಯಮಂ ಪುನರ್ವ್ರಜಂ
ನೃಪಾಯಯುಸ್ತತ್ಕಥಯಂತ ಆದೃತಾಃ ॥ ೧೯ ॥

ಕದಾಚಿದಥ ಗೋವಿಂದೋ ರಾಮಶ್ಚಾದ್ಭುತವಿಕ್ರಮಃ ।
ವಿಜಹ್ರತುರ್ವನೇ ರಾತ್ರ್ಯಾಂ ಮಧ್ಯಗೌ ವ್ರಜಯೋಷಿತಾಮ್
॥ ೨೦ ॥

ಉಪಗೀಯಮಾನೌ ಲಲಿತಂ ಸ್ತ್ರೀಜನೈರ್ಬದ್ಧಸೌಹೃದೈಃ ।
ಸ್ವಲಂಕೃತಾನುಲಿಪ್ತಾಂಗೌ ಸ್ರಗ್ವಿಣೌ ವಿರಜೋಽಂಬರೌ
॥ ೨೧ ॥

ನಿಶಾಮುಖಂ ಮಾನಯಂತಾವುದಿತೋಡುಪತಾರಕಮ್ ।
ಮಲ್ಲಿಕಾಗಂಧಮತ್ತಾಲಿಜುಷ್ಟಂ ಕುಮುದವಾಯುನಾ
॥ ೨೨ ॥

ಜಗತುಃ ಸರ್ವಭೂತಾನಾಂ ಮನಃಶ್ರವಣಮಂಗಲಮ್ ।
ತೌ ಕಲ್ಪಯಂತೌ ಯುಗಪತ್ ಸ್ವರಮಂಡಲಮೂರ್ಚ್ಛಿತಮ್
॥ ೨೩ ॥

ಗೋಪ್ಯಸ್ತದ್ಗೀತಮಾಕರ್ಣ್ಯ ಮೂರ್ಚ್ಛಿತಾ ನಾವಿದನ್ನೃಪ ।
ಸ್ರಂಸದ್ದುಕೂಲಮಾತ್ಮಾನಂ ಸ್ರಸ್ತಕೇಶಸ್ರಜಂ ತತಃ
॥ ೨೪ ॥

ಏವಂ ವಿಕ್ರೀಡತೋಃ ಸ್ವೈರಂ ಗಾಯತೋಃ ಸಂಪ್ರಮತ್ತವತ್ ।
ಶಂಖಚೂಡ ಇತಿ ಖ್ಯಾತೋ ಧನದಾನುಚರೋಽಭ್ಯಗಾತ್
॥ ೨೫ ॥

ಹಾಗಿರುವಾಗ ನನಗಾದರೋ ನೀನು ಸಾಕ್ಷಾತ್ ನಿನ್ನ ಚರಣ ಕಮಲಗಳಿಂದ ಸ್ಪರ್ಶಿಸಿರುವೆ. ಎಂದಾಗ ನನ್ನ ಮುಕ್ತಿಯಲ್ಲಿ ಸಂದೇಹವಿದೆಯೇ ? ॥ ೧೭ ॥ ಹೀಗೆ ಸುದರ್ಶನನು ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸುತ್ತಾ, ಪ್ರದಕ್ಷಿಣೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ಮತ್ತೆ ಅವನಿಂದ ಬೀಳ್ಕೊಂಡು ತನ್ನ ಲೋಕಕ್ಕೆ ಹೊರಟು ಹೋದನು. ಇತ್ತ ನಂದಗೋಪನೂ ದೊಡ್ಡದಾದ ಆಪತ್ತಿನಿಂದ ಪಾರಾದನು. ॥ ೧೮ ॥ ರಾಜೇಂದ್ರ ! ವ್ರಜವಾಸಿಗಳೆಲ್ಲರೂ ಭಗವಾನ್ ಶ್ರೀಕೃಷ್ಣನ ಇಂತಹ ಅದ್ಭುತ ಮಹಿಮೆಯನ್ನು ನೋಡಿದಾಗ ಅವರು ಭಾರೀ ವಿಸ್ಮಯಗೊಂಡರು. ಆ ಕ್ಷೇತ್ರದಲ್ಲಿ ಕೈಗೊಂಡ ವ್ರತ-ನಿಯಮವನ್ನು ಪೂರ್ಣಗೊಳಿಸಿ ಅವರೆಲ್ಲರೂ ಪ್ರೇಮಾದರಗಳಿಂದ ಶ್ರೀಕೃಷ್ಣನ ಆ ಲೀಲೆಯನ್ನು ಕೊಂಡಾಡುತ್ತಾ ಮತ್ತೆ ವ್ರಜಕ್ಕೆ ಮರಳಿದರು. ॥ ೧೯ ॥

ಪರೀಕ್ಷಿತ ಮಹಾರಾಜ ! ಒಂದು ದಿನ ಅದ್ಭುತ ವಿಕ್ರಮನಾದ ಭಗವಾನ್ ಶ್ರೀಕೃಷ್ಣನೂ, ಬಲರಾಮನೂ ಸೇರಿ ರಾತ್ರಿಯಲ್ಲಿ ಗೋಪಿಕೆಯರೊಂದಿಗೆ ವೃಂದಾವನದಲ್ಲಿ ವಿಹರಿಸುತ್ತಿದ್ದರು.॥೨೦॥ ಭಗವಾನ್ ಶ್ರೀಕೃಷ್ಣನು ನಿರ್ಮಲವಾದ ಪೀತಾಂಬರವನ್ನೂ, ಬಲರಾಮನು ನೀಲಾಂಬರವನ್ನು ಧರಿಸಿದ್ದರು. ಇಬ್ಬರ ಕೊರಳಲ್ಲಿಯೂ ಹೂವುಗಳ ಸುಂದರ ಮಾಲೆಗಳಿದ್ದು, ಶರೀರಕ್ಕೆ ಅಂಗರಾಗವನ್ನು ಸುಗಂಧಿತ ಚಂದನವನ್ನೂ ಹಚ್ಚಿಕೊಂಡು, ಅಂದವಾದ ಆಭರಣಗಳನ್ನು ತೊಟ್ಟಿದ್ದರು. ಗೋಪಿಯರು ಪ್ರೇಮಾನಂದದಿಂದ ಮಧುರವಾದ ಸ್ವರಗಳಿಂದ ಬಲರಾಮ-ಶ್ರೀಕೃಷ್ಣರ ಗುಣಗಳನ್ನು ಗಾನಮಾಡುತ್ತಿದ್ದರು. ॥ ೨೧ ॥ ಆಗತಾನೇ ಸಾಯಂಕಾಲವಾಗಿತ್ತು. ಆಕಾಶದಲ್ಲಿ ಚಂದ್ರ-ತಾರೆಗಳು ಪ್ರಕಾಶಿಸತೊಡಗಿದವು. ಮಲ್ಲಿಗೆಯ ಸುಗಂಧದಿಂದ ಮದಿಸಿದ ದುಂಬಿಗಳು ಝೇಂಕರಿಸುತ್ತಿದ್ದವು. ಜಲಾಶಯಗಳಲ್ಲಿದ್ದ ಕುಮುದಪುಷ್ಪಗಳ ಸುಗಂಧವನ್ನು ಹೊತ್ತುಕೊಂಡು ತಂಗಾಳಿಯು ಮಂದ ಮಂದವಾಗಿ ಬೀಸುತ್ತಾ ಇದೆ. ಅಂತಹ ವಾತಾವರಣವನ್ನು ಶ್ಲಾಘಿಸುತ್ತಾ ಶ್ರೀಕೃಷ್ಣ-ಬಲರಾಮರು ಜೊತೆಗೂಡಿ ಆರೋಹಣ ಅವರೋಹಣ ಕ್ರಮದಲ್ಲಿ ರಾಗಾಲಾಪನೆ ಮಾಡತೊಡಗಿದರು. ಅವರ ದೈವಗಾನವು ಜಗತ್ತಿನ ಸಮಸ್ತ ಪ್ರಜೆಗಳಿಗೂ ಆನಂದದಾಯಕವಾಗಿತ್ತು. ॥ ೨೨-೨೩. ॥ ಅವರ ದಿವ್ಯಗಾನವನ್ನು ಕೇಳಿ ಗೋಪಿಕೆಯರು ಮೈಮರೆತು ಹೋದರು. ಅವರಿಗೆ ಉಟ್ಟ ಸೀರೆಯು ಜಾರಿ ಹೋಗುತ್ತಿರುವುದರ ಕಡೆಗೆ, ಮುಡಿಯು ಬಿಚ್ಚಿಹೋಗಿ, ಪುಷ್ಪಮಾಲೆಗಳು ಹರಿದು ಬೀಳುವುದರ ಕಡೆಗೆ ಪರಿವೆಯೇ ಇರಲಿಲ್ಲ. ॥ ೨೪ ॥

ಹೀಗೆ ಬಲರಾಮ-ಶ್ರೀಕೃಷ್ಣರು ಸ್ವೇಚ್ಛೆಯಿಂದ ಉನ್ಮತ್ತರಂತೆ ಕರ್ಣಾನಂದಕರವಾಗಿ ಹಾಡುತ್ತಿದ್ದಾಗ ಶಂಖಚೂಡನೆಂಬ ಹೆಸರಿನ ಕುಬೇರನ ಅನುಚರನಾದ ಯಕ್ಷನೊಬ್ಬನು ಅಲ್ಲಿಗೆ ಬಂದನು.॥ ೨೫ ॥ ಪರೀಕ್ಷಿತನೇ ! ರಾಮ-ಕೃಷ್ಣರಿಬ್ಬರೂ ನೋಡುತ್ತಿರುವಂತೆಯೇ ಆ ಶಂಖಚೂಡ ಯಕ್ಷನು - ಶ್ರೀಕೃಷ್ಣನನ್ನೇ ಏಕಮಾತ್ರ ಸ್ವಾಮಿಯೆಂದು ಭಾವಿಸಿದ್ದ ಗೋಪಿಯರನ್ನು ಎತ್ತಿಕೊಂಡು ನಿಃಶಂಕನಾಗಿ ಉತ್ತರ

ತಯೋರ್ನಿರೀಕ್ಷತೋ ರಾಜಂಸ್ತನ್ನಾಥಂ ಪ್ರಮದಾಜನಮ್ ।
ಕ್ರೋಶಂತಂ ಕಾಲಯಾಮಾಸ ದಿಶ್ಯುದೀಚ್ಯಾಮಶಂಕಿತಃ
॥ ೨೬ ॥

ಕ್ರೋಶಂತಂ ಕೃಷ್ಣ ರಾಮೇತಿ ವಿಲೋಕ್ಯ ಸ್ವಪರಿಗ್ರಹಮ್ ।
ಯಥಾ ಗಾ ದಸ್ಯುನಾ ಗ್ರಸ್ತಾ ಭ್ರಾತರಾವನ್ವಧಾವತಾಮ್
॥ ೨೭ ॥

ಮಾ ಭೈಷ್ಟೇತ್ಯಭಯಾರಾವೌ ಶಾಲಹಸ್ತೌ ತರಸ್ವಿನೌ ।
ಆಸೇದತುಸ್ತಂ ತರಸಾ ತ್ವರಿತಂ ಗುಹ್ಯಕಾಧಮಮ್
॥ ೨೮ ॥

ಸ ವೀಕ್ಷ್ಯ ತಾವನುಪ್ರಾಪ್ತೌಕಾಲಮೃತ್ಯೂ ಇವೋದ್ವಿಜನ್ ।
ವಿಸೃಜ್ಯ ಸ್ತ್ರೀಜನಂ ಮೂಢಃ ಪ್ರಾದ್ರವಜ್ಜೀವಿತೇಚ್ಛಯಾ
॥ ೨೯ ॥

ತಮನ್ವಧಾವದ್ಗೋವಿಂದೋ ಯತ್ರ ಯತ್ರ ಸ ಧಾವತಿ ।
ಜಿಹೀರ್ಷುಸ್ತಚ್ಛಿರೋರತ್ನಂ ತಸ್ಥೌ ರಕ್ಷನ್ ಸ್ತ್ರಿಯೋ ಬಲಃ
॥ ೩೦ ॥

ಅವಿದೂರ ಇವಾಭ್ಯೇತ್ಯ ಶಿರಸ್ತಸ್ಯ ದುರಾತ್ಮನಃ ।
ಜಹಾರ ಮುಷ್ಟಿನೈವಾಂಗ ಸಹಚೂಡಾಮಣಿಂ ವಿಭುಃ
॥ ೩೧ ॥

ಶಂಖಚೂಡಂ ನಿಹತ್ಯೈವಂ ಮಣಿಮಾದಾಯ ಭಾಸ್ವರಮ್ ।
ಅಗ್ರಜಾಯಾದದಾತ್ ಪ್ರೀತ್ಯಾ ಪಶ್ಯಂತೀನಾಂ ಚ ಯೋಷಿತಾಮ್
॥ ೩೨ ॥

ದಿಕ್ಕಿನ ಕಡೆಗೆ ಓಡಿಹೋದನು. ಆ ಗೋಪಿಯರು ಅಳುತ್ತಾ ಕೂಗುತ್ತಿದ್ದರು. ॥ ೨೬ ॥ ಗೋವುಗಳನ್ನು ಕಳ್ಳರು ಅಪಹರಿಸಿ ಕೊಂಡು ಹೋಗುವಂತೆಯೇ ಆ ಯಕ್ಷನು ತಮ್ಮ ಪ್ರೇಯಸಿಯರನ್ನು ಕದ್ದುಕೊಂಡು ಹೋಗುತ್ತಿದ್ದಾನೆ ಮತ್ತು ಅವರು ಹಾ ಕೃಷ್ಣ! ಬಲರಾಮ! ರಕ್ಷಿಸು, ರಕ್ಷಿಸು ಎಂದು ಕೂಗುತ್ತಿರುವುದನ್ನು ನೋಡಿದ ಸಹೋದರರಿಬ್ಬರೂ ಅವನೆಡೆಗೆ ಓಡಿದರು. ॥ ೨೭ ॥ ಹೆದರ ಬೇಡಿರಿ, ಹೆದರ ಬೇಡಿರಿ ಎಂದು ಅಭಯ ಮಾತನ್ನು ಹೇಳುತ್ತಾ ಕೈಯಲ್ಲಿ ಸಾಲವೃಕ್ಷಗಳನ್ನೆತ್ತಿಕೊಂಡು ವೇಗವಾಗಿ ಕ್ಷಣಾರ್ಧದಲ್ಲಿ ಆ ನೀಚನಾದ ಯಕ್ಷನ ಬಳಿಗೆ ತಲುಪಿದರು. ॥ ೨೮ ॥ ರಾಮ-ಕೃಷ್ಣರಿಬ್ಬರೂ ಕಾಲ ಮತ್ತು ಮೃತ್ಯುವಿನಂತೆ ತನ್ನ ಬಳಿಗೆ ಬಂದಿರುವುದನ್ನು ನೋಡಿದ ಮೂಢನಾದ ಶಂಖಚೂಡನು ಭಯಗೊಂಡನು. ಅವನು ಗೋಪಿಯರನ್ನು ಅಲ್ಲೇ ಬಿಟ್ಟು ಪ್ರಾಣಗಳನ್ನು ಉಳಿಸಿಕೊಳ್ಳಲು ಅಲ್ಲಿಂದ ಓಡಿ ಹೋದನು. ॥ ೨೯ ॥ ಆಗ ಗೋಪಿಕಾಸ್ತ್ರೀಯರನ್ನು ರಕ್ಷಿಸಲಿಕ್ಕಾಗಿ ಬಲರಾಮನು ಅಲ್ಲೇ ನಿಂತನು. ಆದರೆ ಭಗವಾನ್ ಶ್ರೀಕೃಷ್ಣನು ಶಂಖಚೂಡನು ಓಡಿದಲ್ಲಿಗೆ ಓಡುತ್ತಾ ಹೋಗಿ ಅವನ ಶಿರದಲ್ಲಿದ್ದ ಚೂಡಾಮಣಿಯನ್ನು ಕಿತ್ತುಕೊಳ್ಳಲು ಬಯಸಿದನು. ॥ ೩೦ ॥ ಸ್ವಲ್ಪ ದೂರಹೋಗುತ್ತಲೇ ಭಗವಂತನು ಅವನನ್ನು ಹಿಡಿದುಕೊಂಡು ಆ ದುಷ್ಟನ ಶಿರದ ಮೇಲೆ ಬಲವಾಗಿ ಒಂದು ಗುದ್ದಿದನು ಮತ್ತು ಚೂಡಾಮಣಿಯೊಂದಿಗೆ ಅವನ ರುಂಡ-ಮುಂಡಗಳನ್ನು ಬೇರ್ಪಡಿಸಿದನು. ॥ ೩೧ ॥ ಹೀಗೆ ಭಗವಾನ್ ಶ್ರೀಕೃಷ್ಣನು ಶಂಖಚೂಡನನ್ನು ಕೊಂದು, ಆ ಹೊಳೆಯುವ ಚೂಡಾಮಣಿಯನ್ನು ಎತ್ತಿಕೊಂಡು ಮರಳಿದನು. ಎಲ್ಲ ಗೋಪಿಕೆಯರೂ ನೋಡುತ್ತಿರುವಂತೆಯೇ ಆ ಮಣಿಯನ್ನು ಅಣ್ಣನಾದ ಬಲರಾಮನಿಗೆ ಒಪ್ಪಿಸಿದನು. ॥ ೩೨ ॥

ಮೂವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೩೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಶಂಖಚೂಡವಧೋ ನಾಮ ಚತುಸ್ತ್ರಿಂಶೋऽಧ್ಯಾಯಃ ॥ ೩೪ ॥

ಮೂವತ್ತೈದನೆಯ ಅಧ್ಯಾಯ

ಯುಗಳ ಗೀತೆ

ಶ್ರೀಶುಕ ಉವಾಚ

ಗೋಪ್ಯಃ ಕೃಷ್ಣೇ ವನಂ ಯಾತೇ ತಮನುದ್ರುತಚೇತಸಃ ।
ಕೃಷ್ಣಲೀಲಾಃ ಪ್ರಗಾಯಂತ್ಯೋನಿನ್ಯುರ್ದುಃಖೇನ ವಾಸರಾನ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಅನುದಿನವೂ ಹಸುಗಳನ್ನು ಮೇಯಿಸಲು ಬೆಳಗಾದೊಡನೆಯೇ ವನಕ್ಕೆ ಹೊರಟು ಹೋಗುತ್ತಿದ್ದನು. ವ್ರಜದಲ್ಲಿದ್ದ ಗೋಪಿಯರ ಮನಸ್ಸೂ ಅವನೊಂದಿಗೇ ಹೊರಟು ಹೋಗುತ್ತಿತ್ತು. ಅವರ ಮನಸ್ಸು ಶ್ರೀಕೃಷ್ಣನನ್ನು ಚಿಂತಿಸುತ್ತಾ, ಅವನ ಲೀಲಾಪ್ರಸಂಗಗಳನ್ನು ಯಾವಾಗಲೂ ಹಾಡುತ್ತಾ ಇದ್ದರು. ಹೀಗೆ ಅವರು ಹಗಲನ್ನು ಬಹಳ ಕಷ್ಟದಿಂದ ಕಳೆಯುತ್ತಿದ್ದರು. ॥ ೧ ॥

ಗೋಪ್ಯ ಊಚುಃ

ವಾಮಬಾಹುಕೃತವಾಮಕಪೋಲೋ
ವಲ್ಗಿತಭ್ರುರಧರಾರ್ಪಿತವೇಣುಮ್ ।
ಕೋಮಲಾಂಗುಲಿಭಿರಾಶ್ರಿತಮಾರ್ಗಂ
ಗೋಪ್ಯ ಈರಯತಿ ಯತ್ರ ಮುಕುಂದಃ ॥ ೨ ॥

ವ್ಯೋಮಯಾನವನಿತಾಃ ಸಹ ಸಿದ್ಧೈ-
ರ್ವಿಸ್ಮಿತಾಸ್ತದುಪಧಾರ್ಯ ಸಲಜ್ಜಾಃ ।
ಕಾಮಮಾರ್ಗಣಸಮರ್ಪಿತಚಿತ್ತಾಃ
ಕಶ್ಮಲಂ ಯಯುರಪಸ್ಮೃತನೀವ್ಯಃ ॥ ೩ ॥

ಹಂತ ಚಿತ್ರಮಬಲಾಃ ಶೃಣುತೇದಂ
ಹಾರಹಾಸ ಉರಸಿ ಸ್ಥಿರವಿದ್ಯುತ್ ।
ನಂದಸೂನುರಯಮಾರ್ತಜನಾನಾಂ
ನರ್ಮದೋ ಯರ್ಹಿ ಕೂಜಿತವೇಣುಃ ॥ ೪ ॥

ವೃಂದಶೋ ವ್ರಜವೃಷಾ ಮೃಗಗಾವೋ
ವೇಣುವಾದ್ಯಹೃತಚೇತಸ ಆರಾತ್ ।
ದಂತದಷ್ಟಕವಲಾ ಧೃತಕರ್ಣಾ
ನಿದ್ರಿತಾ ಲಿಖಿತಚಿತ್ರಮಿವಾಸನ್ ॥ ೫ ॥

ಬರ್ಹಿಣಸ್ತಬಕಧಾತುಪಲಾಶೈ-
ರ್ಬದ್ಧಮಲ್ಲಪರಿಬರ್ಹವಿಡಂಬಃ ।
ಕರ್ಹಿಚಿತ್ ಸಬಲ ಆಲಿ ಸ ಗೋಪೈ-
ರ್ಗಾಃ ಸಮಾಹ್ವಯತಿ ಯತ್ರ ಮುಕುಂದಃ ॥ ೬ ॥

ತರ್ಹಿ ಭಗ್ನಗತಯಃ ಸರಿತೋ ವೈ
ತತ್ಪದಾಂಬುಜರಜೋऽನಿಲನೀತಮ್ ।
ಸ್ಪೃಹಯತೀರ್ವಯಮಿವಾಬಹುಪುಣ್ಯಾಃ
ಪ್ರೇಮವೇಪಿತಭುಜಾಃ ಸ್ತಿಮಿತಾಪಃ ॥ ೭ ॥

ಗೋಪಿಯರು ಪರಸ್ಪರ ಹೇಳುತ್ತಾರೆ - ಎಲೈ ಸಖಿಯೇ! ನಮ್ಮ ಮುಕುಂದನು ಕೊಳಲನ್ನು ಹಿಡಿದು, ಎಡತೋಳನ್ನು ಎಡಕೆನ್ನೆಗೆ ತಾಗಿಸಿ, ಕೊಳಲನ್ನು ತುಟಿಗೆ ತಗುಲಿಸಿ ಆರೋಹಣ ಅವರೋಹಣ ಮಾರ್ಗವನ್ನು ಅನುಸರಿಸಿ ಹುಬ್ಬನ್ನು ಹಾರಿಸುತ್ತಾ ಮೃದುವಾದ ಬೆರಳುಗಳ ಚಾಲನೆಯಿಂದ ಕೊಳಲನ್ನು ನುಡಿಸುವನು. ವಿಮಾನ ಸಂಚಾರಿಗಳಾದ ಸಿದ್ಧಸ್ತ್ರೀಯರು ತಮ್ಮ ಪತಿಗಳೊಡನೆ ಕರ್ಣಾನಂದಕರವಾದ ಆ ವೇಣುಗಾನವನ್ನು ಕೇಳಿ ಆಚ್ಚರಿಗೊಳ್ಳುವರು. ವೇಣುಗಾನವನ್ನು ಕೇಳಿ ಮನ್ಮಥನ ಬಾಣಗಳ ಲಕ್ಷ್ಯಕ್ಕೆ ಮನಸ್ಸೊಡ್ಡಿದ ಅವರು ಲಜ್ಜೆಗೊಳ್ಳುವರು. ವೇಣುಗಾನ ಶ್ರವಣದಿಂದ ಮೈಮರೆತ ಅವರಿಗೆ ಸೀರೆಯ ಉಡಿಗಂಟು ಬಿಚ್ಚಿ ಹೋಗಿರುವುದೂ ತಿಳಿಯುವುದಿಲ್ಲ. ಹೀಗೆ ನಮ್ಮ ಇನಿಯನ ವೇಣು ಗಾನವು ನಮ್ಮನ್ನು ಮಾತ್ರವೇ ಅಲ್ಲದೆ ಆಕಾಶಸಂಚಾರಿಗಳಾದ ದೇವತೆಗಳನ್ನೂ ವಿಮೋಹಗೊಳಿಸುವುದಾಗಿದೆ. ॥ ೨-೩. ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ - ಸಖಿಯರೇ! ನಾನು ಮತ್ತೊಂದು ಆಶ್ಚರ್ಯಕರವಾದ ವಿಚಾರವನ್ನು ಹೇಳುವೆನು, ಕೇಳಿರಿ. ಮುತ್ತಿನಹಾರದಂತೆ ಶುಭ್ರವಾದ ನಗೆಯುಳ್ಳ, ವಕ್ಷಸ್ಥಳ ದಲ್ಲಿ ಮಿಂಚಿನಂತೆ ಹೊಳೆಯುವ ಲಕ್ಷ್ಮೀದೇವಿಯನ್ನು ಹೊಂದಿ ರುವ, ಆರ್ತರಾದ ಭಕ್ತರಿಗೆ ಸುಖವನ್ನುಂಟುಮಾಡುವ, ನಂದ ಗೋಪನ ಮಗನಾದ ಶ್ರೀಕೃಷ್ಣನು ಕೊಳಲನ್ನು ನುಡಿಸಲು ಪ್ರಾರಂಭಿಸಿದರೆ, ಗುಂಪು-ಗುಂಪಾಗಿ ಮೇಯುತ್ತಿದ್ದ ವ್ರಜದ ಎತ್ತುಗಳು, ಮೃಗಗಳೂ, ಹಸುಗಳು ಆ ವೇಣುಗಾನದಿಂದ ಮೈಮರೆತು ಮೇಯುವುದನ್ನು ಹಾಗೆಯೇ ನಿಲ್ಲಿಸಿಬಿಡುತ್ತಿದ್ದವು. ಹಲ್ಲುಗಳಲ್ಲಿ ಕಚ್ಚಿಕೊಂಡ ಹುಲ್ಲನ್ನು ಅಗಿಯದೆ, ನುಂಗದೆ ಹಾಗೇ ನಿಂತಿರುತ್ತಿದ್ದವು. ಕಿವಿಗಳನ್ನು ನಿಮಿಸಿಕೊಂಡು ಗಾನಸುಧೆಯನ್ನು ಪಾನಮಾಡುತ್ತಿವೆಯೋ ಎಂಬಂತೆ ಚಿತ್ತಾರದಂತೆ ಸ್ಥಿರವಾಗಿ ನಿಲ್ಲುತ್ತವೆ. ಅವರ ಈ ಸ್ಥಿತಿಯು ಸ್ವಾಭಾವಿಕವೇ ಆಗಿದೆ. ಏಕೆಂದರೆ, ಈ ಮುರಲಿಗಾನವು ಅವರ ಚಿತ್ತವನ್ನು ಅಪಹರಿಸುತ್ತದೆ. ॥ ೪-೫ ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ - ಗೆಳತಿಯರೇ! ಕೆಲವೊಮ್ಮೆ ನಮ್ಮ ಮುದ್ದು ಇನಿಯನು ನವಿಲುಗರಿಗಳಿಂದಲೂ, ಹೂವಿನ ಗೊಂಚಲುಗಳಿಂದಲೂ, ಹರಿದಳವೇ ಮುಂತಾದ ಬಣ್ಣ ಗಳಿಂದಲೂ, ಚಿಗುರೆಲೆಗಳಿಂದಲೂ ಶರೀರವನ್ನು ಸಿಂಗರಿಸಿಕೊಂಡು ಜಟ್ಟಿಯಂತೆ ಕಾಣುತ್ತಾ, ಬಲರಾಮನೊಂದಿಗೆ ಕೊಳಲನ್ನೂದುತ್ತಾ ಗೋಪಾಲಕರೊಡನೆ ಆಕಳುಗಳನ್ನು ಅವರ ಹೆಸರೆತ್ತಿ ಕರೆಯುತ್ತಾನೆ. ಆ ಸಮಯದಲ್ಲಿ ವೇಣುಗಾನದ ಮಾಧುರ್ಯವನ್ನು ಕೇಳಿದ ನದಿಗಳು ಸ್ತಬ್ಧರಾಗುತ್ತವೆ. ಮುಂದಕ್ಕೆ ಹರಿಯುವುದೇ ಇಲ್ಲ. ವಾಯುವು ನಮ್ಮ ಇನಿಯನ ಪಾದಧೂಳಿಯನ್ನು ತಂದು ತಮ್ಮ ಮೇಲೆ ಹಾಕುವನೆಂದು ಭಾವಿಸಿ ಸ್ಥಿರವಾಗಿ ನಿಲ್ಲುತ್ತವೆ. ಆದರೆ ಆ ನದಿಗಳು ನಮ್ಮಂತೆಯೇ ಭಾಗ್ಯಹೀನರು. ತೆರೆಗಳೆಂಬ ತೋಳು ಗಳನ್ನು ನಾಲ್ಕಾರುಬಾರಿ ಚಾಚಿದರೂ ಅವುಗಳಿಗೆ ಭಗವಂತನ ಪಾದಧೂಳಿಯು ಸಿಗದೆ ಕೊನೆಗೆ ಪ್ರೇಮಾವೇಶದಿಂದ ತಟಸ್ಥರಾಗಿ ನಿಂತು ಬಿಡುತ್ತವೆ. ॥ ೬-೭ ॥

ಅನುಚರೈಃ ಸಮನುವರ್ಣಿತವೀರ್ಯ
ಆದಿಪೂರುಷ ಇವಾಚಲಭೂತಿಃ ।
ವನಚರೋ ಗಿರಿತಟೇಷು ಚರಂತೀ-
ರ್ವೇಣುನಾಽಽಹ್ವಯತಿ ಗಾಃ ಸ ಯದಾ ಹಿ ॥ ೮ ॥

ವನಲತಾಸ್ತರವ ಆತ್ಮನಿ ವಿಷ್ಣುಂ
ವ್ಯಂಜಯಂತ್ಯ ಇವ ಪುಷ್ಪ ಫಲಾಢ್ಯಾಃ ।
ಪ್ರಣತಭಾರವಿಟಪಾ ಮಧುಧಾರಾಃ
ಪ್ರೇಮಹೃಷ್ಟ ತನವಃ ಸಸೃಜುಃ ಸ್ಮ ॥ ೯ ॥

ದರ್ಶನೀಯತಿಲಕೋ ವನಮಾಲಾ-
ದಿವ್ಯಗಂಧತುಲಸೀಮಧುಮತ್ತೈಃ ।
ಅಲಿಕುಲೈರಲಘುಗೀತಮಭೀಷ್ಟ-
ಮಾದ್ರಿಯನ್ ಯರ್ಹಿ ಸಂಧಿತವೇಣುಃ ॥ ೧೦ ॥

ಸರಸಿ ಸಾರಸಹಂಸವಿಹಂಗಾ-
ಶ್ಚಾರುಗೀತಹೃತಚೇತಸ ಏತ್ಯ ।
ಹರಿಮುಪಾಸತ ತೇ ಯತಚಿತ್ತಾ
ಹಂತ ಮೀಲಿತದೃಶೋ ಧೃತಮೌನಾಃ ॥ ೧೧ ॥

ಸಹಬಲಃ ಸ್ಪಗವತಂಸವಿಲಾಸಃ
ಸಾನುಷು ಕ್ಷಿತಿಭೃತೋ ವ್ರಜದೇವ್ಯಃ ।
ಹರ್ಷಯನ್ ಯರ್ಹಿ ವೇಣುರವೇಣ
ಜಾತಹರ್ಷ ಉಪರಂಭತಿ ವಿಶ್ವಮ್ ॥ ೧೨ ॥

ಮಹದತಿಕ್ರಮಣಶಂಕಿತಚೇತಾ
ಮಂದಮಂದಮನುಗರ್ಜತಿ ಮೇಘಃ ।
ಸುಹೃದಮಭ್ಯವರ್ಷತ್ಸುಮನೋಭಿ-
ಶ್ಛಾಯಯಾ ಚ ವಿದಧತ್ ಪ್ರತಪತ್ರಮ್ ॥ ೧೩ ॥

ಇನ್ನೊಬ್ಬ ಗೋಪಿಯು ಹೇಳುತ್ತಾಳೆ - ಸಖಿಯೇ! ಅನಂತವಾದ ಮತ್ತು ಅಚಿಂತ್ಯವಾದ ಐಶ್ವರ್ಯಕ್ಕೆ ಸ್ವಾಮಿಯಾದ ಶ್ರೀಮನ್ನಾರಾಯಣನ ಅಪಾರಶಕ್ತಿಗಳನ್ನು ದೇವತೆಗಳು ಗಾನ ಮಾಡುತ್ತಾ ಇರುವಂತೆಯೇ ಗೊಲ್ಲಬಾಲಕರು ಕಡುಚೆಲುವನಾದ ಶ್ರೀಕೃಷ್ಣನಲೀಲಾ ಪ್ರಸಂಗಗಳನ್ನು ಗಾನಮಾಡುತ್ತಾ ಇರುತ್ತಾರೆ. ಅಂತಹ ಅಚಿಂತ್ಯ ಐಶ್ವರ್ಯಸಂಪನ್ನನಾದ ಶ್ರೀಕೃಷ್ಣನು ವೃಂದಾವನದಲ್ಲಿ ವಿಹರಿಸುವಾಗ, ಕೊಳಲನ್ನೂದುತ್ತಾ ಗೋವರ್ಧನದ ತಪ್ಪಲಲ್ಲಿ ಮೇಯುತ್ತಿದ್ದ ಹಸುಗಳ ಹೆಸರಿಡಿದು ಕರೆಯುತ್ತಿರುವನು. ಆ ವನದ ಮರ-ಗಿಡ-ಬಳ್ಳಿಗಳು ಹೂವು-ಹಣ್ಣುಗಳಿಂದ ಸಮೃದ್ಧವಾಗಿದ್ದು, ಅವುಗಳ ಕೊಂಬೆಗಳು ಫಲಭಾರದಿಂದ ನೆಲದವರೆಗೂ ಬಗ್ಗಿ ಶ್ರೀಕೃಷ್ಣನಿಗೆ ನಮಸ್ಕರಿಸುವಂತಿದೆ. ಆ ಲತಾ-ವೃಕ್ಷಗಳು ತನ್ನೊಳಗೆ ಭಗವಾನ್ ವಿಷ್ಣುವು ಇರುವೆನೆಂಬುದನ್ನು ಸೂಚಿಸುತ್ತವೋ ಎಂಬಂತೆ ಉಲ್ಲಸಿತವಾಗುತ್ತವೆ. ಆ ವೃಕ್ಷಗಳು ಪ್ರಹೃಷ್ಟವಾದ ಶರೀರವನ್ನು ಹೊಂದಿ ರೋಮಾಂಚನವಾದಂತೆ ಮಕರಂದದ ಧಾರೆಯನ್ನು ಸುರಿಸುತ್ತವೆ. ॥ ೮-೯ ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ - ಸಖಿಯರೇ! ನಮ್ಮ ಇನಿಯನ ಹಣೆಯಲ್ಲಿ ದರ್ಶನೀಯವಾದ ಕಸ್ತೂರಿ ತಿಲಕವಿದೆ. ಕಂಠದಲ್ಲಿ ತುಲಸೀದಳಗಳಿಂದ ಕೂಡಿದ ವನಮಾಲೆಯಿದೆ. ಇದರ ಸುಗಂಧವನ್ನು ಆಘ್ರಾಣಿಸಿದ ದುಂಬಿಗಳು ಮತ್ತರಾಗಿ ಝೇಂಕರಿಸುತ್ತಿವೆ. ಶ್ರೀಕೃಷ್ಣನು ದುಂಬಿಗಳ ಧ್ವನಿಯನ್ನು ಅನುಸರಿಸಿ ವೇಣುವನ್ನು ನುಡಿಸುತ್ತಾನೆ. ಆ ಮುನಿಜನ ಮೋಹನ ವೇಣುಗಾನವನ್ನು ಕೇಳಿದ ಸರೋವರದಲ್ಲಿದ್ದ ಹಂಸ, ಕಾರಂಡವ ಮೊದಲಾದ ಜಲಪಕ್ಷಿಗಳ ಮನಸ್ಸೂ ಕೂಡ ಪರವಶವಾಗುತ್ತದೆ. ಅವುಗಳು ವಿವಶರಾಗಿ ಪ್ರಿಯ ಶ್ಯಾಮಸುಂದರನ ಬಳಿಗೆ ಬಂದು ಮೌನವಾಗಿ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡು, ಏಕಾಗ್ರಚಿತ್ತದಿಂದ ಅವನನ್ನು ಆರಾಧಿಸುವವೋ ಎಂಬಂತಿರುತ್ತದೆ. ಎಂತಹ ಆಶ್ಚರ್ಯದ ಮಾತಾಗಿದೆ! ॥ ೧೦-೧೧ ॥

ಇನ್ನೊಬ್ಬ ಗೋಪಿಯು ಹೇಳಿದಳು - ಗೆಳತಿಯರೇ! ನಮ್ಮ ಶ್ಯಾಮಸುಂದರನು ಹೂಗಳ ಕರ್ಣಕುಂಡಲಗಳಿಂದ ಅಲಂಕರಿಸಿಕೊಂಡು ಬಲರಾಮನೊಂದಿಗೆ ಗೋವರ್ಧನದ ತಪ್ಪಲಿನಲ್ಲಿ ನಿಂತು ಸಮಸ್ತ ಜಗತ್ತನ್ನು ಹರ್ಷಗೊಳಿಸುತ್ತಾ ಕೊಳಲನ್ನು ನುಡಿಸುತ್ತಿರುತ್ತಾನೆ. ಕೇವಲ ನುಡಿಸುವುದು ಮಾತ್ರವಲ್ಲ, ಆನಂದತುಂದಿಲನಾಗಿ ವೇಣುಗಾನದ ಮೂಲಕ ವಿಶ್ವವನ್ನೇ ಆಲಿಂಗಿಸಿಕೊಳ್ಳುತ್ತಾನೆ. ಆ ಸಮಯದಲ್ಲಿ ಮೇಘವು ಕೊಳಲಿನ ಧ್ವನಿಯೊಂದಿಗೆ ಮೆಲ್ಲ ಮೆಲ್ಲನೆ ಗರ್ಜಿಸುತ್ತದೆ. ಶ್ರೀಕೃಷ್ಣನ ವೇಣುನಾದವು ಕೇಳದಂತೆ ನಾವು ಜೋರಾಗಿ ಗುಡುಗಿದರೆ ಶ್ರೀಕೃಷ್ಣನಿಗೆ ಅಪರಾಧವೆಸಗಿದಂತಾದೀತೆಂದು ಶಂಕಿಸಿ ಮೆಲ್ಲನೆ ಗುಡುಗುತ್ತವೆ. ಕೆಲವು ವೇಳೆ ನಮ್ಮ ಪ್ರಿಯಕರನ ಮೇಲೆ ಹೂಮಳೆಗರೆಯುತ್ತವೆ. ಕೆಲವು ಸಲ ಬಿಸಿಲಿನಿಂದ ಉಂಟಾದ ಬೇಗೆಯನ್ನು ಹೋಗಲಾಡಿಸಲು ಛತ್ರಿಯಂತೆ ಅವನ ಮೇಲೆ ಆವರಿಸಿ ಬಿಡುತ್ತವೆ. ॥ ೧೨-೧೩ ॥

ವಿವಿಧಗೋಪಚರಣೇಷು ವಿದಗ್ಧೋ
ವೇಣುವಾದ್ಯ ಉರುಧಾ ನಿಜಶಿಕ್ಷಾಃ ।
ತವ ಸುತಃ ಸತಿ ಯದಾಧರಬಿಂಬೇ
ದತ್ತವೇಣುರನಯತ್ಸ್ವರಜಾತೀಃ ॥ ೧೪ ॥

ಸವನಶಸ್ತದುಪಧಾರ್ಯ ಸುರೇಶಾಃ
ಶಕ್ರಶರ್ವಪರಮೇಷ್ಠಿ ಪುರೋಗಾಃ ।
ಕವಯ ಆನತಕಂಧರಚಿತ್ತಾಃ
ಕಶ್ಮಲಂ ಯಯುರನಿಶ್ಚಿತತತ್ತ್ವಾಃ ॥ ೧೫ ॥

ನಿಜಪದಾಬ್ಜದಲೈರ್ಧ್ವಜವಜ್ರ-
ನೀರಜಾಂಕುಶವಿಚಿತ್ರಲಲಾಮೈಃ ।
ವ್ರಜಭುವಃ ಶಮಯನ್ ಖುರತೋದಂ
ವರ್ಷ್ಮಧುರ್ಯಗತಿರೀಡಿತವೇಣುಃ ॥ ೧೬ ॥

ವ್ರಜತಿ ತೇನ ವಯಂ ಸವಿಲಾಸ-
ವೀಕ್ಷಣಾರ್ಪಿತಮನೋಭವವೇಗಾಃ ।
ಕುಜಗತಿಂ ಗಮಿತಾ ನ ವಿದಾಮಃ
ಕಶ್ಮಲೇನ ಕಬರಂ ವಸನಂ ವಾ ॥ ೧೭ ॥

ಮಣಿಧರಃ ಕ್ವಚಿದಾಗಣಯನ್ ಗಾ
ಮಾಲಯಾ ದಯಿತಗಂಧತುಲಸ್ಯಾಃ ।
ಪ್ರಣಯಿನೋಽನುಚರಸ್ಯ ಕದಾಂಸೇ
ಪ್ರಕ್ಷಿಪನ್ಭುಜಮಗಾಯತ ಯತ್ರ ॥ ೧೮ ॥

ಕ್ವಣಿತವೇಣುರವವಂಚಿತಚಿತ್ತಾಃ
ಕೃಷ್ಣಮನ್ವಸತ ಕೃಷ್ಣಗೃಹಿಣ್ಯಃ ।
ಗುಣಗಣಾರ್ಣಮನುಗತ್ಯ ಹರಿಣ್ಯೋ
ಗೋಪಿಕಾ ಇವ ವಿಮುಕ್ತಗೃಹಾಶಾಃ ॥ ೧೯ ॥

ಮತ್ತೊಬ್ಬ ಗೋಪಿಯು ಶ್ರೀಕೃಷ್ಣನ ಕೊಳಲಿನ ಮಹಿಮೆಯನ್ನು ಹೇಳುತ್ತಾಳೆ – ಯಶೋದಾಮಾತೆಯೇ ! ನಿನ್ನ ಮನಮೋಹಕನಾದ ಮಗನು ಗೋಪಬಾಲಕರೊಂದಿಗೆ ಆಟವಾಡುವುದರಲ್ಲಿ ಬಹಳ ನಿಪುಣನು. ಅವನು ಎಲ್ಲರ ಪ್ರೀತಿಗೆ ಪಾತ್ರನಾಗಿದ್ದು ಅತ್ಯಂತ ಚತುರನೂ ಆಗಿದ್ದಾನೆ. ಅವನು ಕೊಳಲನ್ನು ನುಡಿಸುವುದನ್ನು ಯಾರಿಂದಲೂ ಕಲಿಯಲಿಲ್ಲ. ಅವನು ತೊಂಡೆಹಣ್ಣಿನಂತಿರುವ ಸುಂದರವಾದ ತನ್ನ ತುಟಿಯ ಮೇಲೆ ಕೊಳಲನ್ನು ಇಡುತ್ತಲೇ ಹಲವಾರು ರಾಗ-ರಾಗಿಣಿಯರು ತಾವಾಗಿಯೇ ಪ್ರಕಟಗೊಳ್ಳುವುವು. ಕರ್ಣಾನಂದಕರವಾದ ಆ ವೇಣುಗಾನವನ್ನು ಕೇಳಿದ ಇಂದ್ರ-ರುದ್ರ-ಬ್ರಹ್ಮರೇ ಮೊದಲಾದ ದೇವತೆಗಳ ಮತ್ತು ವಿದ್ವಾಂಸರ ಕತ್ತೂ ಹಾಗೂ ಮನಸ್ಸು ಶ್ರೀಕೃಷ್ಣನ ಕಡೆಗೆ ವಾಲುತ್ತದೆ. ಅವರೆಷ್ಟೇ ಕೇಳಿದರೂ ಆನಂದಪಡುವುದು ಬಿಟ್ಟು ಶ್ರೀಕೃಷ್ಣನು ನುಡಿಸುತ್ತಿರುವ ರಾಗವಾಗಲೀ, ರಾಗದ ಭೇದವಾಗಲೀ ಅವರಿಗೆ ತಿಳಿಯುವುದಿಲ್ಲ, ವೇಣುಗಾನದ ರಹಸ್ಯವನ್ನು ತಿಳಿಯಲಾಗದೆ ಅವರು ವಿಮೋಹಿತರಾಗುತ್ತಾರೆ. ॥ ೧೪-೧೫ ॥

ಇನ್ನೋರ್ವಳು ಹೇಳುವಳು – ಸಖಿಯೇ ! ನಮ್ಮ ಪ್ರಾಣಸಖನಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಧ್ವಜ, ವಜ್ರ, ಕಮಲ, ಅಂಕುಶ ಇವೇ ಮೊದಲಾದ ವಿಚಿತ್ರವಾದ, ಸುಂದರವಾದ ಚಿಹ್ನೆಗಳಿವೆ. ವ್ರಜಭೂಮಿಯು ಗೋವುಗಳ ಗೊರಸುಗಳಿಂದ ಪೀಡಿಸಲ್ಪಟ್ಟಾಗ ಶ್ರೀಕೃಷ್ಣನು ಅದರ ನೋವನ್ನು ಹೋಗಲಾಡಿಸಲು ಮದಗಜದಂತೆ ನಿಧಾನವಾಗಿ ನಡೆಯುತ್ತಾ, ಕೊಳಲನ್ನು ನುಡಿಸುತ್ತಾ ಹೋಗುತ್ತಿರುತ್ತಾನೆ. ಅವರ ಚೇತೋಹಾರಿಯಾದ ವೇಣುಗಾನ, ಅವನ ನಡಿಗೆ ಮತ್ತು ಮಂದಹಾಸಗಳು ನಮ್ಮ ಹೃದಯದಲ್ಲಿ ಪ್ರೇಮವನ್ನು ಹಾಗೂ ಅವನನ್ನು ಸೇರಬೇಕೆಂಬ ಆಕಾಂಕ್ಷೆಯನ್ನು ಹೆಚ್ಚಿಸುತ್ತದೆ. ವಿಲಾಸದಿಂದ ಕೂಡಿದ ಅವನ ಕುಡಿನೋಟದಿಂದ ಪ್ರೇಮ ವಿಹ್ವಲರಾದ ನಾವು ವೃಕ್ಷಗಳಂತೆ ಜಡರಾಗಿಬಿಡುತ್ತೇವೆ. ಅವನಲ್ಲಿ ವಿಮೋಹಿತರಾದ ನಾವು ತುರುಬು ಬಿಚ್ಚಿಹೋಗುವುದೂ, ಸೀರೆ ಜಾರಿ ಹೋಗುವುದೂ ತಿಳಿಯದಷ್ಟು ತನ್ಮಯರಾಗುತ್ತೇವೆ. ॥ ೧೬-೧೭ ॥

ಇನ್ನೊಬ್ಬ ಗೋಪಿಯು ಹೇಳುತ್ತಾಳೆ – ಗೆಳತಿಯರೇ ! ಮಣಿಗಳ ಸರವು ನಮ್ಮ ಶ್ಯಾಮಸುಂದರನ ಕೊರಳಿನಲ್ಲಿ ಸದಾ ವಿರಾಜಿಸುತ್ತವೆ. ತುಳಸಿಯ ಪರಿಮಳವು ಅವನಿಗೆ ಅತಿಪ್ರಿಯವಾಗಿದೆ. ಆದುದರಿಂದ ಶ್ರೀಕೃಷ್ಣನು ತುಳಸೀಮಾಲೆಯನ್ನು ನಿರಂತರವಾಗಿ ಧರಿಸಿಯೇ ಇರುತ್ತಾನೆ. ಅವನು ಮಣಿಗಳ ಮಾಲೆಯಿಂದ ಹಸುಗಳನ್ನು ಎಣಿಸುತ್ತಾ, ಮತ್ತೊಂದು ತೋಳನ್ನು ತನ್ನ ಪ್ರಿಯಸಖನ ಹೆಗಲ ಮೇಲಿಟ್ಟು ಹಾಡುತ್ತಿರುತ್ತಾನೆ. ಕೆಲವು ವೇಳೆ ಕೊಳಲನ್ನು ನುಡಿಸುತ್ತಿರುತ್ತಾನೆ. ಆ ಕರ್ಣಾನಂದಕರವಾದ ವೇಣುಗಾನದಿಂದ ಆಕರ್ಷಿತರಾದ ಹೆಣ್ಣು ಜಿಂಕೆಗಳು ಗೋಪಿಕೆಯರಾದ ನಾವು ಮನೆ-ಮಠ, ಪತಿ-ಸುತರನ್ನೂ, ಬಂಧು-ಬಾಂಧವರನ್ನು ಪರಿತ್ಯಜಿಸಿ ಶ್ರೀಕೃಷ್ಣನನ್ನು ಹಿಂಬಾಲಿಸಿದಂತೆ – ಸಕಲವನ್ನು ತ್ಯಜಿಸಿ ಮೇಯುವುದನ್ನು ಬಿಟ್ಟು ಗುಣಗಳಿಗೆ ಸಮುದ್ರ ಪ್ರಾಯನಾದ ಶ್ರೀಕೃಷ್ಣನನ್ನು ಹಿಂಬಾಲಿಸಿ ಹೋಗುತ್ತವೆ. ॥ ೧೮-೧೯ ॥

ಕುಂದದಾಮಕೃತಕೌತುಕವೇಷೋ
ಗೋಪಗೋಧನವೃತೋ ಯಮುನಾಯಾಮ್ ।
ನಂದಸೂನುರನಘೇ ತವ ವತ್ಸೋ
ನರ್ಮದಃ ಪ್ರಣಯಿನಾಂ ವಿಜಹಾರ ॥ ೨೦ ॥

ಮಂದವಾಯುರುಪವಾತ್ಯನುಕೂಲಂ
ಮಾನಯನ್ ಮಲಯಜಸ್ಪರ್ಶೇನ ।
ವಂದಿನಸ್ತಮುಪದೇವಗಣಾ ಯೇ
ವಾದ್ಯಗೀತಬಲಿಭಿಃ ಪರಿವವ್ರುಃ ॥ ೨೧ ॥

ವತ್ಸಲೋ ವ್ರಜಗವಾಂ ಯದಗಧ್ರೋ
ವಂದ್ಯಮಾನಚರಣಃ ಪಥಿ ವೃದ್ಧೈಃ ।
ಕೃತ್ಸ್ನಗೋಧನಮುಪೋಹ್ಯ ದಿನಾಂತೇ
ಗೀತವೇಣುರನುಗೇಡಿತಕೀರ್ತಿಃ ॥ ೨೨ ॥

ಉತ್ಸವಂ ಶ್ರಮರುಚಾಪಿ ದೃಶೀನಾ-
ಮುನ್ನಯನ್ ಖಿರರಜಶ್ಚುರಿತಸ್ರಕ್ ।
ದಿತ್ಸಯೈತಿ ಸುಹೃದಾಶಿಷ ಏಷ
ದೇವಕೀಜಠರಭೂರುಡುರಾಜಃ ॥ ೨೩ ॥

ಮದವಿಘೂರ್ಣಿತಲೋಚನ ಈಷನ್-
ಮಾನದಃ ಸ್ವಸುಹೃದಾಂ ವನಮಾಲೀ ।
ಬದರಪಾಂಡುವದನೋ ಮೃದುಗಂಡಂ
ಮಂಡಯನ್ ಕನಕಕುಂಡಲಲಕ್ಷ್ಮ್ಯಾ ॥ ೨೪ ॥

ಮತ್ತೊಬ್ಬ ಗೋಪಿಕೆಯು ಹೇಳಿದಳು - ಯಶೋದಾರಾಣಿಯೇ! ಅಂತಹ ಜಗದಾನಂದಕಂದನನ್ನು ಮಗನನ್ನಾಗಿ ಪಡೆದಿರುವ ನೀನೇ ಪುಣ್ಯವತಿಯು. ಅವನ ಮನಸ್ಸು ಬಹಳ ಕೋಮಲವಾದುದು. ಅವನು ಬಗೆ-ಬಗೆಯ ಹಾಸ-ಪರಿಹಾಸಗಳ ಮೂಲಕವಾಗಿ ತನ್ನ ಗೆಳೆಯರಿಗೆ ಆನಂದವನ್ನುಂಟುಮಾಡುತ್ತಾ ಇರುತ್ತಾನೆ. ಗೋಪ-ಗೋಪಿಯರಿಗೆ ಕೌತುಕವನ್ನುಂಟುಮಾಡುವ ನಿನ್ನ ಮಗನು ವಿಚಿತ್ರವಾದ ವೇಷಗಳನ್ನು ಧರಿಸಿ, ಮಲ್ಲಿಗೆಯ ಹೂವಿನ ಹಾರವನ್ನು ಹಾಕಿಕೊಂಡು ಗೋ-ಗೋಪಾಲಕರೊಡನೆ ಯಮುನಾ ನದಿಯ ತೀರದಲ್ಲಿ ಆಟವಾಡುವಾಗ ಮಲಯಾಚಲ ಚಂದನದಂತೆ ಸುಗಂಧಿತವಾಯುವು ಮಂದ-ಮಂದವಾಗಿ ಅನುಕೂಲಕರವಾಗಿ ಬೀಸುತ್ತಾ ನಿನ್ನ ಮಗನ ಸೇವೆ ಮಾಡುತ್ತಾ ಇರುತ್ತದೆ. ಗಂಧರ್ವಾದಿ ಉಪದೇವತೆಗಳು ವಂದೀಜನರಂತೆ ಅವನ ಗುಣಗಾನವನ್ನು ಮಾಡುತ್ತಾ ಅವನನ್ನು ಸಂತೋಷ ಪಡಿಸುತ್ತಾ, ಅನೇಕ ಉಪಹಾರಾದಿಗಳನ್ನು ನೀಡಿ ಸುತ್ತಲೂ ನಿಂತು ಸೇವೆ ಮಾಡುತ್ತಾ ಇರುತ್ತಾರೆ. ॥ ೨೦-೨೧ ॥

ಇನ್ನೋರ್ವಳು ಹೇಳುತ್ತಾಳೆ - ಸಖಿಯರೇ! ನಮ್ಮ ಶ್ಯಾಮ ಸುಂದರನು ಗೋಕುಲದ ಗೋವುಗಳನ್ನು ಬಹಳವಾಗಿ ಪ್ರೀತಿಸುತ್ತಾನೆ. ಹಸುಗಳನ್ನು ರಕ್ಷಿಸುವುಕ್ಕಾಗಿಯೇ ಅವನು ಗೋವರ್ಧನವನ್ನು ಎತ್ತಿದುದು. ಈ ವೇಳೆಗಾಗಲೇ ನಮ್ಮ ಪ್ರೇಮಮೂರ್ತಿಯು ಗೋವುಗಳನ್ನು ಓಟ್ಟಿಕೊಂಡು ಗೋಕುಲದ ಕಡೆಗೆ ಬರುತ್ತಿರಬಹುದು. ಆದರೂ ಏಕಿಷ್ಟು ತಡವಾಗುತ್ತಿದೆ ? ವಯೋವೃದ್ಧರೂ, ಜ್ಞಾನವೃದ್ಧರೂ, ತಪೋವೃದ್ಧರೂ ಅವನ ಚರಣಗಳಿಗೆ ವಂದಿಸುತ್ತಿರಬಹುದು. ಈಗ ಅವನು ಕೊಳಲನ್ನೂದುತ್ತಾ ಗೋವುಗಳ ಹಿಂದೆ ಹಿಂದೆಯೇ ಬರುತ್ತಿರಬಹುದು. ಹಸುಗಳ ಗೊರಸುಗಳಿಂದ ಎದ್ದ ಧೂಳಿಯು ಶ್ರೀಕೃಷ್ಣನ ವನಮಾಲೆಯನ್ನು ಮುಚ್ಚಿಕೊಂಡಿದೆ. ಅವನು ದಿನವೆಲ್ಲ ತಿರುಗಿ-ತಿರುಗಿ ಬಹಳವಾಗಿ ದಣಿದಿದ್ದಾನೆ. ಆ ಬಳಲಿಕೆಯಿಂದ ಸೌಂದರ್ಯವೇ ಅಡಗಿದೆ. ಅವನ ಅಲೌಕಿಕವಾದ ಶೋಭೆಯಿಂದಲೇ - ನಮ್ಮ ಕಣ್ಮನಗಳಿಗೆ ಆನಂದವನ್ನುಂಟುಮಾಡುತ್ತಾನೆ. ಯಶೋದಾದೇವಿಯ ಗರ್ಭಾಂಬುಧಿಯಲ್ಲಿ ಹುಟ್ಟಿ ಸಮಸ್ತರಿಗೂ ಆಹ್ಲಾದವನ್ನು ಉಂಟುಮಾಡುವ ಶ್ರೀಕೃಷ್ಣಚಂದ್ರನು ಭಕ್ತಜನರಿಗೆ ಒಳ್ಳೆಯದನ್ನು ಮಾಡಲಿಕ್ಕಾಗಿ, ನಮ್ಮ ಆಸೆ-ಆಕಾಂಕ್ಷೆಗಳನ್ನು ಪೂರ್ಣಗೊಳಿಸಲಿಕ್ಕಾಗಿಯೇ ನಮ್ಮ ಬಳಿಗೆ ಈಗ ಬರುತ್ತಿದ್ದಾನೆ. ॥ ೨೨-೨೩ ॥

ಸಖಿಯರೇ! ಇನಿಯನ ಸೌಂದರ್ಯವೆಷ್ಟೆಂಬುದನ್ನು ನೋಡಿ. ಅವನ ಕಣ್ಣುಗಳು ಮದದಿಂದ ಸೊಕ್ಕಿರುವಂತೆ ಕಾಣುತ್ತಿವೆ. ಅವನು ಕೊರಳಲ್ಲಿ ಸುಂದರವಾದ ವನಮಾಲೆಯನ್ನು ಧರಿಸಿದ್ದಾನೆ. ಚಿನ್ನದ ಕರ್ಣಾಭರಣಗಳಿಂದ ಅವನ ಕೆನ್ನೆಗಳು ಅಲಂಕೃತವಾಗಿವೆ. ಸ್ವಲ್ಪ ಪಕ್ವವಾದ ಬೋರೆ ಹಣ್ಣಿನಂತೆ ಕಿರುಹಳದಿಯಾದ ಮುಖಾರವಿಂದದಿಂದ ರಾರಾಜಿಸುತ್ತಿದ್ದಾನೆ. ರೋಮ-ರೋಮಗಳಲ್ಲಿ ವಿಶೇಷವಾಗಿ ಮುಖಕಮಲದಲ್ಲಿ ಪ್ರಸನ್ನತೆಯು ಮೂಡಿದೆ. ಅದೋ ನೋಡು, ನೋಡು! ಈಗ ಅವನು ಸ್ನೇಹಿತರಾದ ಗೊಲ್ಲ ಬಾಲಕರನ್ನು ಸಂತೈಸಿ ಬೀಳ್ಕೊಳ್ಳುತ್ತಿರುವನು. ವ್ರಜವಿಭೂಷಣ ಶ್ರೀಕೃಷ್ಣನು ಮದಭರಿತ ಗಜರಾಜನ ನಡಿಗೆಯಂತೆ ನಡೆಯುತ್ತಾ ಈ

ಯದುಪತಿರ್ದ್ವಿರದರಾಜವಿಹಾರೋ
ಯಾಮಿನೀಪತಿರಿವೈಷ ದಿನಾಂತೇ ।
ಮುದಿತವಕ್ತ್ರ ಉಪಯಾತಿ ದುರಂತಂ
ಮೋಚಯನ್ ವ್ರಜಗವಾಂ ದಿನತಾಪಮ್ ॥ ೨೫ ॥

ಸಂಧ್ಯಾಕಾಲದಲ್ಲಿ ನಮ್ಮ ಬಳಿಗೆ ಬರುತ್ತಿರವನು. ವ್ರಜದಲ್ಲಿರುವ ಗೋವುಗಳ ಮತ್ತು ನಮ್ಮಗಳ ಹಗಲಿನ ಅಸಹನೀಯವಾದ ವಿರಹತಾಪವನ್ನು ಹೊಗಲಾಡಿಸಲು ಉದಯಿಸುವ ಚಂದ್ರನಂತೆ ಪ್ರಿಯ ಶ್ಯಾಮಸುಂದರನು ನಮ್ಮ ಬಳಿಗೆ ಬರುತ್ತಿದ್ದಾನೆ. ॥೨೪-೨೫॥

ಶ್ರೀಶುಕ ಉವಾಚ

ಏವಂ ವ್ರಜಸ್ತ್ರಿಯೋ ರಾಜನ್ ಕೃಷ್ಣಲೀಲಾ ನು ಗಾಯತೀಃ ।
ರೇಮಿರೇಽಹಸ್ಸು ತಚ್ಚಿತ್ತಾಸ್ತನ್ಮನಸ್ಕಾ ಮಹೋದಯಾಃ
॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಶ್ರೇಷ್ಠರಾದ ಗೋಪಿಯರ ಮನಸ್ಸು ಶ್ರೀಕೃಷ್ಣನಲ್ಲೇ ಲೀನವಾಗಿ ಹೋಗಿತ್ತು. ಅವರೆಲ್ಲರೂ ಕೃಷ್ಣಮಯರೇ ಆಗಿದ್ದರು. ಭಗವಾನ್ ಶ್ರೀಕೃಷ್ಣನು ಬೆಳಿಗ್ಗೆ ಗೋವುಗಳನ್ನು ಮೇಯಿಸಲು ವೃಂದಾವನಕ್ಕೆ ಹೊರಟು ಹೋದಾಗ, ಸಖಿಯರೆಲ್ಲರೂ ಸೇರಿ ಅವನನ್ನೇ ಚಿಂತಿಸುತ್ತಾ ಆವನ ಲೀಲೆಗಳನ್ನು ಹಾಡುತ್ತಾ ಅದರಲ್ಲೇ ರಮಿಸಿ ಹೋಗುತ್ತಾರೆ. ಹೀಗೆ ತಮ್ಮ ದಿನಗಳನ್ನು ಅವರು ಕಳೆಯುತ್ತಾರೆ. ॥ ೨೬ ॥

ಮೂವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೩೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ವೃಂದಾವನಕ್ರೀಡಾಯಾಂ ಗೋಪಿಕಾ ಯುಗಳಗೀತಂ ನಾಮ ಪಂಚತ್ರಿಂಶೋಽಧ್ಯಾಯಃ ॥ ೩೫ ॥

ಮೂವತ್ತಾರನೆಯ ಅಧ್ಯಾಯ

ಅರಿಷ್ಟಾಸುರನ ಉದ್ಧಾರ, ಕಂಸನು ಅಕ್ರೂರನನ್ನು ವ್ರಜಕ್ಕೆ ಕಳುಹಿಸಿಕೊಟ್ಟಿದ್ದು

ಶ್ರೀಶುಕ ಉವಾಚ

ಅಥ ತಹ್ಯಾಗತೋ ಗೋಷ್ಠಮರಿಷ್ಟೋ ವೃಷಭಾಸುರಃ ।
ಮಹೀಂ ಮಹಾಕಕುತ್ಕಾಯಃ ಕಂಪಯನ್ ಖುರವಿಕ್ಷತಾಮ್
॥ ೧ ॥

ರಂಭಮಾಣಃ ಖರತರಂ ಪದಾ ಚ ವಿಲಿಖನ್ಮಹೀಮ್ ।
ಉದ್ಯಮ್ಯ ಪುಚ್ಛಂ ವಪ್ರಾಣಿ ವಿಷಾಣಾಗ್ರೇಣ ಚೋದ್ಧರನ್
॥ ೨ ॥

ಕಿಂಚಿತ್ಕಿಂಚಚ್ಚಕ್ಷನ್ಮುಂಚನ್ ಮೂತ್ರಯನ್ ಸ್ತಬ್ಧಲೋಚನಃ ।
ಯಸ್ಯ ನಿರ್ಹ್ರಾದಿತೇನಾಂಗ ನಿಷ್ಠುರೇಣ ಗವಾಂ ನೃಣಾಮ್
॥ ೩ ॥

ಪತಂತ್ಯಕಾಲತೋ ಗರ್ಭಾಃ ಸ್ರವಂತಿ ಸ್ಮ ಭಯೇನ ವೈ ।
ನಿರ್ವಿಶಂತಿ ಘನಾ ಯಸ್ಯ ಕಕುದ್ಯಚಲಶಂಕಯಾ
॥ ೪ ॥

ತಂ ತೀಕ್ಷ್ಣಶೃಂಗಮುದ್ವೀಕ್ಷ್ಯ ಗೋಪ್ಯೋ ಗೋಪಾಶ್ಚ ತತ್ರಸುಃ ।
ಪಶವೋ ದುದ್ರುವುರ್ಭೀತಾ ರಾಜನ್ ಸಂತ್ಯಜ್ಯ ಗೋಕುಲಮ್
॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಗೋ-ಗೋಪಾಲಕರೊಂದಿಗೆ ವ್ರಜಕ್ಕೆ ಹಿಂದಿರುಗುತ್ತಿರುವಾಗ ಮಹಾಕಾಯನಾದ ಅರಿಷ್ಟಾಸುರನೆಂಬ ದೈತ್ಯನು ಎತ್ತರವಾದ ಹಿಳಲುಗಳುಳ್ಳ ಗೂಳಿಯ ರೂಪವನ್ನು ಧರಿಸಿ ತನ್ನ ಗೊರಸುಗಳಿಂದ ಭೂಮಿಯನ್ನು ಕೆದಕುತ್ತಾ, ನಡುಗಿಸುತ್ತಾ ಗೋಕುಲಕ್ಕೆ ನುಗ್ಗಿದನು. ॥ ೧ ॥ ಅವನು ಗಟ್ಟಿಯಾಗಿ ಗರ್ಜಿಸುತ್ತಾ, ಕಾಲುಗಳಿಂದ ಧೂಳನ್ನು ಹಾರಿಸುತ್ತಿದ್ದನು. ಬಾಲವನ್ನೆತ್ತಿಕೊಂಡು, ಕೋಡುಗಳಿಂದ ಹೊಲಗಳ ಬದುಗಳನ್ನು, ಆವಾರದ ಗೋಡೆಗಳನ್ನು ಕೆಡಹುತ್ತಾ ಹೋಗುತ್ತಿದ್ದನು. ॥ ೨ ॥ ಆ ಗೂಳಿಯ ರೂಪದ ರಾಕ್ಷಸನು ಬಾರಿ-ಬಾರಿಗೂ ಸ್ವಲ್ಪ-ಸ್ವಲ್ಪ ಪುರೀಷ-ಮೂತ್ರೋತ್ಸರ್ಜನೆ ಮಾಡುತ್ತಿದ್ದನು. ಎವೆಯಿಕ್ಕದೆ ಕಣ್ಣುಗಳಿಂದ ದುರುಗುಟ್ಟಿಕೊಂಡು ನೋಡುತ್ತಿದ್ದನು. ಅವನ ನಿಷ್ಠುರವಾದ ಗುಟುರಿನಿಂದ ಸ್ತ್ರೀಯರ ಮತ್ತು ಹಸುಗಳ ಗರ್ಭಗಳು ಅಕಾಲದಲ್ಲಿ ಕಳಚಿ ಬೀಳುತ್ತಿದ್ದವು. ಕೆಲವರಿಗೆ ಭಯದಿಂದಲೇ ಗರ್ಭಸ್ರಾವವಾಗುತ್ತಿತ್ತು. ಅರಿಷ್ಟಾಸುರನ ಹಿಳಲಿನ ಮೇಲೆ ಅದು ಪರ್ವತವಾಗಿರಬಹುದೆಂದು ಭ್ರಮಿಸಿ ಮೋಡಗಳು ಕುಳಿತುಕೊಳ್ಳುತ್ತಿದ್ದವು. ॥ ೩-೪ ॥ ಪರೀಕ್ಷಿತನೇ! ತೀಕ್ಷ್ಣವಾದ ಕೊಂಬುಗಳುಳ್ಳ ಆ ಗೂಳಿಯನ್ನು ನೋಡಿ ಗೋಪಿಯರು, ಗೋಪಾಲಕರೆಲ್ಲರೂ ಭಯಗೊಂಡರು. ಪಶುಗಳಾದರೋ ಆತ್ಯಂತ ಭಯದಿಂದ ಗೋಕುಲವನ್ನೇ ತೊರೆದು ಓಡಿಹೋದವು. ॥ ೫ ॥

ಕೃಷ್ಣ ಕೃಷ್ಣೇತಿ ತೇ ಸರ್ವೇ ಗೋವಿಂದಂ ಶರಣಂ ಯಯುಃ ।
ಭಗವಾನಪಿ ತದ್ವೀಕ್ಷ್ಯ ಗೋಕುಲಂ ಭಯವಿದ್ರುತಮ್
॥ ೬ ॥

ಮಾ ಭೈಷ್ಟೇತಿ ಗಿರಾऽऽಶ್ವಾಸ್ಯ ವೃಷಾಸುರಮುಪಾಹ್ವಯತ್ ।
ಗೋಪಾಲೈಃ ಪಶುಭಿರ್ಮಂದ ತ್ರಾಸಿತೈಃ ಕಿಮಸತ್ತಮ
॥ ೭ ॥

ಬಲದರ್ಪಹಾಹಂ ದುಷ್ಟಾನಾಂ ತ್ವದ್ವಿಧಾನಾಂ ದುರಾತ್ಮನಾಮ್ ।
ಇತ್ಯಾಸ್ಫೋಟ್ಯಾಚ್ಯುತೋऽರಿಷ್ಟಂ ತಲಶಬ್ದೇನ ಕೋಪಯನ್
॥ ೮ ॥

ಸಖ್ಯುರಂಸೇ ಭುಜಾಭೋಗಂ ಪ್ರಸಾರ್ಯಾವಸ್ಥಿತೋ ಹರಿಃ ।
ಸೋऽಪ್ಯೇವಂ ಕೋಪಿತೋऽರಿಷ್ಟಃ ಖುರೇಣಾವನಿಮುಲ್ಲಿಖನ್ ।
ಉದ್ಯತ್ಪುಚ್ಛಭ್ರಮನ್ಮೇಘಃ ಕ್ರುದ್ಧಃ ಕೃಷ್ಣಮುಪಾದ್ರವತ್
॥ ೯ ॥

ಅಗ್ರನ್ಯಸ್ತವಿಷಾಣಾಗ್ರಃ ಸ್ತಬ್ಧಾಸೃಗ್ಲೋಚನೋऽಚ್ಯುತಮ್ ।
ಕಟಾಕ್ಷಿಪ್ಯಾದ್ರವತ್ತೂರ್ಣಮಿಂದ್ರಮುಕ್ತೋऽಶನಿರ್ಯಥಾ
॥ ೧೦ ॥

ಗೃಹೀತ್ವಾ ಶೃಂಗಯೋಸ್ತಂ ವಾ ಅಷ್ಟಾದಶ ಪದಾನಿ ಸಃ ।
ಪ್ರತ್ಯಪೋವಾಹ ಭಗವಾನ್ ಗಜಃ ಪ್ರತಿಗಜಂ ಯಥಾ
॥ ೧೧ ॥

ಸೋऽಪವಿದ್ಧೋ ಭಗವತಾ ಪುನರುತ್ಥಾಯ ಸತ್ವರಃ ।
ಆಪತತ್ಸ್ವಿನ್ನಸರ್ವಾಂಗೋ ನಿಃಶ್ವಸನ್ ಕ್ರೋಧಮೂರ್ಚ್ಛಿತಃ
॥ ೧೨ ॥

ತಮಾಪಂತತಂ ಸ ನಿಗೃಹ್ಯ ಶೃಂಗಯೋಃ
ಪದಾ ಸಮಾಕ್ರಮ್ಯ ನಿಪಾತ್ಯ ಭೂತಲೇ ।
ನಿಷ್ಪೀಡಯಾಮಾಸ ಯಥಾऽऽರ್ದ್ರಮಂಬರಂ
ಕೃತ್ತ್ವಾ ವಿಷಾಣೇನ ಜಘಾನ ಸೋऽಪತತ್ ॥ ೧೩ ॥

ಅಸೃಗ್ ವಮನ್ಮೂತ್ರಶಕೃತ್ ಸಮುತ್ಸೃಜನ್
ಕ್ಷಿಪಂಶ್ಚ ಪಾದಾನನವಸ್ಥಿತೇಕ್ಷಣಃ ।
ಜಗಾಮ ಕೃಚ್ಛ್ರಂ ನಿರ್ಋತೇರಥ ಕ್ಷಯಂ
ಪುಷ್ಪೈಃ ಕಿರಂತೋ ಹರಿಮೀಡಿರೇ ಸುರಾಃ ॥ ೧೪ ॥

ಏವಂ ಕಕುದ್ಮಿನಂ ಹತ್ವಾ ಸ್ತೂಯಮಾನಃ ಸ್ವಜಾತಿಭಿಃ ।
ವಿವೇಶ ಗೋಷ್ಠಂ ಸಬಲೋ ಗೋಪೀನಾಂ ನಯನೋತ್ಸವಃ
॥ ೧೫ ॥

ಆ ಸಮಯದಲ್ಲಿ ವ್ರಜವಾಸಿಗಳೆಲ್ಲರೂ 'ಶ್ರೀಕೃಷ್ಣ! ಕೃಷ್ಣಾ! ನಮ್ಮನ್ನು ಕಾಪಾಡು, ಕಾಪಾಡು' ಎಂದು ಕೂಗುತ್ತಾ ಭಗವಾನ್ ಶ್ರೀಕೃಷ್ಣನಿಗೆ ಶರಣಾದರು. ಗೋಕುಲವು ಅತ್ಯಂತ ಭಯಾತುರವಾಗಿ ಇರುವುದನ್ನು ಭಗವಂತನು ನೋಡಿದನು. ॥ ೬ ॥ ಆಗ ಅವನು 'ಹೆದರ ಬೇಡಿರಿ, ಭಯಪಡಬೇಡಿ' ಎಂದು ಹೇಳುತ್ತಾ ಅವರಲ್ಲಿ ಧೈರ್ಯವನ್ನು ತುಂಬಿ, ಮತ್ತೆ ವೃಷಾಸುರನನ್ನು ಸಂಬೋಧಿಸುತ್ತಾ 'ಎಲೈ ಮೂರ್ಖನೇ! ಮಹಾದುಷ್ಟನೇ! ನೀನು ಈ ಗೋವುಗಳನ್ನು, ಗೋಪಾಲಕರನ್ನು ಏಕೆ ಹೆದರಿಸುತ್ತಿರುವೆ? ॥ ೭ ॥ ನೋಡು, ನಿನ್ನಂತಹ ದುರಾತ್ಮರಾದ ದುಷ್ಟರ ಬಲವನ್ನು ಮುರಿಯುವಂತಹ ಕಾಲನೇ ಆಗಿದ್ದೇನೆ ನಾನು.' ಈ ಪ್ರಕಾರವಾಗಿ ಕೆಣಕುತ್ತಾ ಅವನನ್ನು ಚಪ್ಪಾಳೆತಟ್ಟಿ ಕೋಪವನ್ನು ಕೆರಳಿಸುತ್ತಾ ಅವನು ಓರ್ವ ಸ್ನೇಹಿತನ ಹೆಗಲ ಮೇಲೆ ಕೈಯನ್ನಿಡುತ್ತಾ ನಿಂತುಕೊಂಡನು. ಭಗವಾನ್ ಶ್ರೀಕೃಷ್ಣನ ಈ ಮಾತಿನಿಂದ ಆ ದುಷ್ಟನು ಕ್ರೋಧಾವಿಷ್ಟನಾಗಿ ತನ್ನ ಗೊರಸುಗಳಿಂದ ಭೂಮಿಯನ್ನು ಕೆರೆಯುತ್ತಾ ಶ್ರೀಕೃಷ್ಣನ ಕಡೆಗೆ ನುಗ್ಗಿದನು. ಆಗ ಅವನು ಬಾಲದಿಂದ ಆಕಾಶದಲ್ಲಿನ ಮೋಡಗಳನ್ನು ಚದುರಿಸುತ್ತಿದ್ದನು. ॥ ೮-೯ ॥ ಅವನು ತೀಕ್ಷ್ಣವಾದ ಕೋಡುಗಳನ್ನು ಮುಂದೆ ಚಾಚಿಕೊಂಡು, ಕೆಂಡದಂತಹ ಕಣ್ಣುಗಳಿಂದ ಶ್ರೀಕೃಷ್ಣನನ್ನು ದುರುಗುಟ್ಟಿ ನೋಡುತ್ತಾ ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧದಂತೆ ಅತ್ಯಂತ ವೇಗವಾಗಿ ಅವನ ಮೇಲೆ ಎರಗಿದನು. ॥ ೧೦ ॥ ಭಗವಾನ್ ಶ್ರೀಕೃಷ್ಣನು ತನ್ನ ಕೈಗಳಿಂದ ಅವನ ಎರಡು ಕೋಡುಗಳನ್ನು ಹಿಡಿದು-ಆನೆಯು ಎದುರಾಳಿಯಾದ ಆನೆಯನ್ನು ಹಿಂದಕ್ಕೆ ತಳ್ಳುವಂತೆ ಅಸುರನನ್ನು ಹಿಂದಕ್ಕೆ ತಳ್ಳಿ ಬೀಳಿಸಿ ಬಿಟ್ಟನು. ॥ ೧೧ ॥ ಹೀಗೆ ಭಗವಂತನಿಂದ ತಳ್ಳಲ್ಪಟ್ಟು ಕೆಳಕ್ಕೆ ಬಿದ್ದರೂ ಅವನು ಶೀಘ್ರವಾಗಿ ಎದ್ದು ನಿಂತನು. ಅವನ ಶಿರವು ಬೆವರುತ್ತಿತ್ತು. ಅವನು ಬಿರುಸಾಗಿ ನಿಟ್ಟುಸಿರು ಬಿಡುತ್ತಾ, ಅತ್ಯಂತ ಕ್ರುದ್ಧನಾಗಿ ಪುನಃ ಶ್ರೀಕೃಷ್ಣನ ಮೇಲೆ ಎರಗಿದನು. ॥ ೧೨ ॥ ದೈತ್ಯನು ತನ್ನ ಮೇಲೆ ಪ್ರಹರಿಸುತ್ತಿರುವನೆಂದು ನೋಡಿದ ಶ್ರೀಕೃಷ್ಣನು ಅವನ ಕೊಂಬುಗಳನ್ನು ಹಿಡಿದು, ಕಾಲಿನಿಂದ ಒದ್ದು ನೆಲಕ್ಕೆ ಬೀಳಿಸಿದನು. ಕಾಲಿನಿಂದ ಒತ್ತಿಹಿಡಿದು ಬಟ್ಟೆಯನ್ನು ಹಿಂಡುವಂತೆ ಅದರ ಕೊಂಬುಗಳನ್ನು ಹಿಗ್ಗಾ-ಮುಗ್ಗಾ ತಿರುಗಿಸುತ್ತಾ, ಆ ಕೊಂಬುಗಳನ್ನು ಕಿತ್ತು ಅದರಿಂದಲೇ ಅರಿಷ್ಟಾಸುರನನ್ನು ಪ್ರಹರಿಸಿದನು. ॥ ೧೩ ॥ ಪರೀಕ್ಷಿತನೇ! ಹೀಗೆ ಆ ದೈತ್ಯನು ಬಾಯಿಂದ ರಕ್ತವನ್ನು ಕಾರುತ್ತಾ ಮೂತ್ರ-ಪುರೀಷಗಳನ್ನು ವಿಸರ್ಜಿಸುತ್ತಾ, ಕಾಲನ್ನು ಬಡಿಯುತ್ತಾ, ಕಣ್ಣುಗಳನ್ನು ತಿರುಗಿಸುತ್ತಾ ಬಹಳ ಕಷ್ಟದಿಂದ ಪ್ರಾಣಗಳನ್ನು ತ್ಯಜಿಸಿದನು. ಆಗ ದೇವತೆಗಳು ಭಗವಂತನ ಮೇಲೆ ಹೂವಿನ ಮಳೆ ಸುರಿಸುತ್ತಾ ಅವನನ್ನು ಸ್ತುತಿಸತೊಡಗಿದರು. ॥ ೧೪ ॥ ಭಗವಾನ್ ಶ್ರೀಕೃಷ್ಣನು ಹೀಗೆ ಗೂಳಿಯ ರೂಪದಲ್ಲಿ ಬಂದ ಅರಿಷ್ಟಾಸುರನನ್ನು ಕೊಂದು ಹಾಕಿದಾಗ ಎಲ್ಲ ಗೋಪಾಲಕರು ಅವನನ್ನು ಪ್ರಶಂಸಿಸಿದರು. ಅವನು ಬಲರಾಮನೊಂದಿಗೆ ಗೋಕುಲವನ್ನು ಪ್ರವೇಶಿಸಿದುದನ್ನು ನೋಡಿದ ಗೋಪಿಯರ ಕಣ್ಣುಗಳು ಆನಂದದಿಂದ ತುಂಬಿ ಬಂದುವು. ॥ ೧೫ ॥

ಅರಿಷ್ಟೇ ನಿಹತೇ ದೈತ್ಯೇ ಕೃಷ್ಣೇನಾದ್ಭುತಕರ್ಮಣಾ ।
ಕಂಸಾಯಾಥಾಹ ಭಗವಾನ್ ನಾರದೋ ದೇವದರ್ಶನಃ
॥ ೧೬ ॥

ಯಶೋದಾಯಾಃ ಸುತಾಂ ಕನ್ಯಾಂ ದೇವಕ್ಯಾಃ ಕೃಷ್ಣಮೇವ ಚ ।
ರಾಮಂ ಚ ರೋಹಿಣೀಪುತ್ರಂ ವಸುದೇವೇನ ಬಿಭ್ಯತಾ
॥ ೧೭ ॥

ನ್ಯಸ್ತೌ ಸ್ವಮಿತ್ರೇ ನಂದೇ ವೈ ಯಾಭ್ಯಾಂ ತೇ ಪುರುಷಾ ಹತಾಃ ।
ನಿಶಮ್ಯ ತದ್ಭೋಜಪತಿಃ ಕೋಪಾತ್ ಪ್ರಚಲಿತೇಂದ್ರಿಯಃ
॥ ೧೮ ॥

ನಿಶಾತಮಸಿಮಾದತ್ತ ವಸುದೇವಜಿಘಾಂಸಯಾ ।
ನಿವಾರಿತೋ ನಾರದೇನ ತತ್ಸುತೌ ಮೃತ್ಯುಮಾತ್ಮನಃ
॥ ೧೯ ॥

ಜ್ಞಾತ್ವಾಲೋಹಮಯೈಃ ಪಾಶೈರ್ಬಬಂಧ ಸಹ ಭಾರ್ಯಯಾ ।
ಪ್ರತಿಯಾತೇ ತು ದೇವರ್ಷೌ ಕಂಸ ಆಭಾಷ್ಯ ಕೇಶಿನಮ್
॥ ೨೦ ॥

ಪ್ರೇಷಯಾಮಾಸ ಹನ್ಯೇತಾಂ ಭವತಾ ರಾಮಕೇಶವೌ ।
ತತೋ ಮುಷ್ಟಿಕಚಾಣೂರಶಲತೋಶಲಕಾದಿಕಾನ್
॥ ೨೧ ॥

ಅಮಾತ್ಯಾನ್ ಹಸ್ತಿಪಾಂಶ್ಚೈವ ಸಮಾಹೂಯಾಹ ಭೋಜರಾಟ್ ।
ಭೋ ಭೋ ನಿಶಮ್ಯ ತಾಮೇತದ್ವೀರಚಾಣೂರಮುಷ್ಟಿಕೌ
॥ ೨೨ ॥

ನಂದವ್ರಜೇ ಕಿಲಾಸಾತೇ ಸುತಾವಾನಕದುಂದುಭೇಃ ।
ರಾಮಕೃಷ್ಣೌ ತತೋ ಮಹ್ಯಂ ಮೃತ್ಯುಃ ಕಿಲ ನಿದರ್ಶಿತಃ
॥ ೨೩ ॥

ಭವದ್ಭ್ಯಾಮಿಹ ಸಂಪ್ರಾಪ್ತೌ ಹನ್ಯೇತಾಂ ಮಲ್ಲಲೀಲಯಾ ।
ಮಂಚಾಃ ಕ್ರಿಯಂತಾಂ ವಿವಿಧಾ ಮಲ್ಲರಂಗ ಪರಿಶ್ರಿತಾಃ ।
ಪೌರಾ ಜಾನಪದಾಃ ಸರ್ವೇ ಪಶ್ಯಂತು ಸ್ವೈರಸಂಯುಗಮ್
॥ ೨೪ ॥

ಮಹಾಮಾತ್ರ ತ್ವಯಾ ಭದ್ರರಂಗದ್ವಾರ್ಯುಪನೀಯತಾಮ್ ।
ದ್ವಿಪಃ ಕುವಲಯಾಪೀಡೋ ಜಹಿ ತೇನ ಮಮಾಹಿತೌ
॥ ೨೫ ॥

ಆರಭ್ಯತಾಂ ಧನುರ್ಯಾಗಶ್ಚತುರ್ದಶ್ಯಾಂ ಯಥಾವಿಧಿ ।
ವಿಶಸಂತು ಪಶೂನ್ ಮೇಧ್ಯಾನ್ ಭೂತರಾಜಾಯ ಮೀಢುಷೇ
॥ ೨೬ ॥

ಪರೀಕ್ಷಿತ ಮಹಾರಾಜನೇ! ಭಗವಂತನ ಲೀಲೆಯು ಪರಮಾದ್ಭುತವಾದುದು. ಇತ್ತ ಅದ್ಭುತಕರ್ಮನಾದ ಶ್ರೀಕೃಷ್ಣನು ಅರಿಷ್ಟಾಸುರನನ್ನು ಶೀಘ್ರಾತಿಶೀಘ್ರವಾಗಿ ಸಂಹರಿಸಿದಾಗ, ಅತ್ತ ಮಥುರೆಯಲ್ಲಿ ಜನರಿಗೆ ಭಗವದ್ದರ್ಶನ ಮಾಡಿಸುವಂತಹ ಭಗವನ್ಮಯ ನಾರದರು ಕಂಸನ ಬಳಿಗೆ ಬಂದು ಇಂತೆಂದರು. ॥ ೧೬ ॥ ಎಲೈ ಕಂಸನೇ! ನಿನ್ನ ಕೈಯಿಂದ ತಪ್ಪಿಸಿಕೊಂಡು ಆಕಾಶಕ್ಕೆ ನೆಗೆದು ಹೋದ ಕನ್ಯೆಯು ಯಶೋದೆಯ ಪುತ್ರಿಯಾಗಿದ್ದಳು. ವ್ರಜದಲ್ಲಿರುವ ಶ್ರೀಕೃಷ್ಣನು ದೇವಕಿಯ ಪುತ್ರನಾಗಿದ್ದಾನೆ. ಬಲರಾಮನು ರೋಹಿಣಿ ಪುತ್ರನು. ವಸುದೇವನು ನಿನಗೆ ಹೆದರಿ ತನ್ನ ಮಿತ್ರನಾದ ನಂದಗೋಪನ ಬಳಿಯಲ್ಲಿ ಇವರಿಬ್ಬರನ್ನು ಇರಿಸಿರುವನು. ದೇವಕಿಯ ಪುತ್ರನಾದ ಶ್ರೀಕೃಷ್ಣನೇ ನಿನ್ನ ಅನುಚರರಾದ ದೈತ್ಯರನ್ನು ವಧಿಸಿದವನು. ನಾರದರ ಈ ಮಾತನ್ನು ಕೇಳಿದ ಕಂಸನ ಇಂದ್ರಿಯಗಳು ಕ್ರೋಧದಿಂದ ನಡುಗತೊಡಗಿದವು. ॥ ೧೭-೧೯ ॥ ಅವನು ವಸುದೇವನನ್ನು ಕೊಂದು ಹಾಕಲು ಖಡ್ಗವನ್ನು ಹಿರಿದನು. ಆದರೆ ನಾರದರು ಅವನನ್ನು ತಡೆದು ನಿಲ್ಲಿಸುತ್ತಾ, ಅವನ ಮಕ್ಕಳು ಮಾತ್ರವೇ ನಿನಗೆ ಮೃತ್ಯುರೂಪರಾಗಿರುವರು. ವಸುದೇವನಲ್ಲವಲ್ಲ. ಆಗ ಕಂಸನು ವಸುದೇವ-ದೇವಕಿಯರಿಬ್ಬರಿಗೂ ಕೈಗಳಿಗೆ ಕೋಳವನ್ನು ತೊಡಿಸಿ ಕಾರಾಗೃಹದಲ್ಲಿರಿಸಿದನು. ನಾರದ ಮಹರ್ಷಿಗಳು ಹೊರಟು ಹೋದ ಬಳಿಕ ಕಂಸನು ಕೇಶಿಯೆಂಬ ರಾಕ್ಷಸನನ್ನು ಕರೆದು ಹೇಳಿದನು - 'ನೀನು ಗೋಕುಲಕ್ಕೆ ಹೋಗಿ ಅಲ್ಲಿರುವ ಬಲರಾಮ-ಕೃಷ್ಣರನ್ನು ಕೊಂದುಬಿಡು. 'ಕೇಶಿಯು ಹಾಗೆಯೇ ಆಗಲೆಂದು ಹೇಳಿ ಹೊರಟುಹೋದನು. ಕೇಶಿಯು ಹೊರಟು ಹೋಗುತ್ತಲೇ ಕಂಸನು ಮುಷ್ಟಿಕ, ಚಾಣೂರ, ಶಲ, ತೋಶಲ ಮೊದಲಾದ ಜಟ್ಟಿಗಳನ್ನು ಮಂತ್ರಿಗಳನ್ನೂ ಮತ್ತು ಮಾವಟಿಗರನ್ನು ಕರೆಸಿ ಹೇಳಿದನು - ವೀರರಾದ ಚಾಣೂರ-ಮುಷ್ಟಿಕರೇ! ನೀವೆಲ್ಲರೂ ನನ್ನ ಮಾತನ್ನು ಗಮನವಿಟ್ಟು ಕೇಳಿರಿ. ॥ ೧೯-೨೨ ॥ ವಸುದೇವನ ಇಬ್ಬರು ಪುತ್ರರು ನಂದಗೋಪನ ವ್ರಜದಲ್ಲಿ ಇರುತ್ತಾರೆ. ಅವರ ಕೈಯಿಂದಲೇ ನನ್ನ ಮೃತ್ಯುವೆಂದು ಹಿಂದೆಯೇ ತಿಳಿಸಲಾಗಿದೆ. ॥ ೨೩ ॥ ಆದ್ದರಿಂದ ಅವರು ಇಲ್ಲಿಗೆ ಬಂದಾಗ ನೀವುಗಳು ಮಲ್ಲಯುದ್ಧದ ಮೂಲಕವಾಗಿ ನಾನಾ ಪ್ರಕಾರದ ವರಸೆಗಳನ್ನು ತೋರುತ್ತಾ ಅವರನ್ನು ಕೊಂದು ಹಾಕಿರಿ. ಮಲ್ಲಯುದ್ಧಕ್ಕಾಗಿ ರಂಗವನ್ನು ಕಲ್ಪಿಸಿರಿ. ರಂಗದ ಸುತ್ತಲೂ ಬಗೆ-ಬಗೆಯಾದ ಎತ್ತರದ ಆಸನಗಳನ್ನು ಕಲ್ಪಿಸಿರಿ. ಪಟ್ಟಣಿಗರೂ ದೇಶೀಯ ಜನರೂ ಸ್ವೇಚ್ಛೆಯಿಂದ ಮಲ್ಲಯುದ್ಧವನ್ನು ನೋಡಲಿ. ॥ ೨೪ ॥ ಮಾವಟಿಗನೇ! ನೀನು ತುಂಬಾ ಚತುರನಾಗಿರುವೆ. ನೋಡು, ನೀನು ರಂಗಸ್ಥಳದ ಮಹಾದ್ವಾರದಲ್ಲೇ ನಮ್ಮ ಕುವಲಯಾಪೀಡ ಸಲಗವನ್ನು ನಿಲ್ಲಿಸಿಕೊಂಡಿರಬೇಕು. ನನ್ನ ಶತ್ರುಗಳು ಆ ದಾರಿಯಿಂದ ಬರುತ್ತಲೇ ಆ ಆನೆಯಿಂದ ಅವರನ್ನು ಕೊಲ್ಲಿಸಿಬಿಡು. ॥ ೨೫ ॥ ಇದೇ ಚತುರ್ದಶಿಗೆ ವಿಧಿವತ್ತಾಗಿ ಧನುರ್ಯಜ್ಞವನ್ನು ಪ್ರಾರಂಭಿಸಿರಿ. ಅದರ ಸಫಲತೆಗಾಗಿ ವರದನಾದ ಭೂತಪತಿಯಾದ ರುದ್ರನ ಪ್ರೀತ್ಯರ್ಥವಾಗಿ ಪರಿಶುದ್ಧ ಪಶುಗಳನ್ನು ಬಲಿಕೊಡಿರಿ. ॥ ೨೬ ॥

ಇತ್ಯಾಜ್ಞಾಪ್ಯಾರ್ಥತಂತ್ರಜ್ಞ ಆಹೂಯ ಯದುಪುಂಗವಮ್ ।
ಗೃಹೀತ್ವಾ ಪಾಣಿನಾ ಪಾಣಿಂ ತತೋಽಕ್ರೂರಮುವಾಚ ಹ
॥ ೨೭ ॥

ಭೋ ಭೋದಾನಪತೇ ಮಹ್ಯಂ ಕ್ರಿಯತಾಂ ಮೈತ್ರಮಾದೃತಃ ।
ನಾನ್ಯಸ್ತ್ವತ್ತೋ ಹಿತತಮೋ ವಿದ್ಯತೇ ಭೋಜವೃಷ್ಣಿಷು
॥ ೨೮ ॥

ಅತಸ್ತ್ವಾಮಾಶ್ರಿತಃ ಸೌಮ್ಯ ಕಾರ್ಯಗೌರವಸಾಧನಮ್ ।
ಯಥೇಂದ್ರೋ ವಿಷ್ಣುಮಾಶ್ರಿತ್ಯ ಸ್ವಾರ್ಥಮಧ್ಯಗಮದ್ವಿಭುಃ
॥ ೨೯ ॥

ಗಚ್ಛ ನಂದವ್ರಜಂ ತತ್ರ ಸುತಾವಾನಕದುಂದುಭೇಃ ।
ಆಸಾತೇ ತಾವಿಹಾನೇಯ ರಥೇನಾನಯ ಮಾ ಚಿರಮ್
॥ ೩೦ ॥

ನಿಸೃಷ್ಟಃ ಕಿಲ ಮೇ ಮೃತ್ಯುರ್ದೇವೈರ್ವೈಕುಂಠಸಂಶ್ರಯೈಃ ।
ತಾವಾನಯ ಸಮಂ ಗೋಪೈರ್ನಂದಾದ್ಯೈಃ ಸಾಭ್ಯುಪಾಯನೈಃ
॥ ೩೧ ॥

ಘಾತಯಿಷ್ಯ ಇಹಾನೀತೌ ಕಾಲಕಲ್ಪೇನ ಹಸ್ತಿನಾ ।
ಯದಿ ಮುಕ್ತೌ ತತೋ ಮಲ್ಲೈರ್ಘಾತಯೇ ವೈದ್ಯುತೋಪಮೈಃ
॥ ೩೨ ॥

ತಯೋರ್ನಿಹತಯೋಸ್ತಪ್ತಾನ್ ವಸುದೇವಪುರೋಗಮಾನ್ ।
ತದ್ಬಂಧೂನ್ ನಿಹನಿಷ್ಯಾಮಿ ವೃಷ್ಣಿಭೋಜದಶಾರ್ಹಕಾನ್
॥ ೩೩ ॥

ಉಗ್ರಸೇನಂ ಚ ಪಿತರಂ ಸ್ಥವಿರಂ ರಾಜ್ಯಕಾಮುಕಮ್ ।
ತದ್ಭ್ರಾತರಂ ದೇವಕಂ ಚ ಯೇ ಚಾನ್ಯೇ ವಿದ್ವಿಷೋ ಮಮ
॥ ೩೪ ॥

ತತಶ್ಚೈಷಾ ಮಹೀ ಮಿತ್ರ ಭವಿತ್ರೀ ನಷ್ಟಕಂಟಕಾ ।
ಜರಾಸಂಧೋ ಮಮ ಗುರುರ್ದ್ವಿವಿದೋ ದಯಿತಃ ಸಖಾ
॥ ೩೫ ॥

ಶಂಬರೋ ನರಕೋ ಬಾಣೋ ಮಯ್ಯೇವ ಕೃತಸೌಹೃದಾಃ ।
ತೈರಹಂ ಸುರಪಕ್ಷೀಯಾನ್ ಹತ್ವಾ ಭೋಕ್ಷ್ಯೇ ಮಹೀಂ ನೃಪಾನ್
॥ ೩೬ ॥

ಪರೀಕ್ಷಿತನೇ ! ಹೀಗೆ ಮಂತ್ರಿಗಳಿಗೆ, ಜಟ್ಟಿಗಳಿಗೆ, ಮಾವಟಿಗನಿಗೆ ಆಜ್ಞಾಪಿಸಿ ತಂತ್ರಜ್ಞನಾದ ಆ ಕಂಸನು ಯದುಶ್ರೇಷ್ಠನಾದ ಅಕ್ರೂರನನ್ನು ಕರೆಸಿ, ಅವನ ಕೈಗಳನ್ನು ಹಿಡಿದುಕೊಂಡು ಅವನಿಗೆ ಹೇಳಿದನು. ॥ ೨೭ ॥ ಅಕ್ರೂರನೇ ! ನೀನು ಉದಾರವಾದ ಮಹಾದಾನಿಯಾಗಿರುವೆ. ಎಲ್ಲ ರೀತಿಯಿಂದಲೂ ನೀನು ನನಗೆ ಆದರಣೀಯನಾಗಿರುವೆ. ಇಂದು ನೀನು ನನಗೆ ಮಿತ್ರೋಚಿತವಾದ ಒಂದು ಕಾರ್ಯವನ್ನು ನಡೆಸಿಕೊಡಬೇಕಾಗಿದೆ. ಏಕೆಂದರೆ, ಭೋಜವಂಶೀಯರಲ್ಲಿ ವೃಷ್ಣಿವಂಶೀಯರಲ್ಲಿ ಯಾದವರಲ್ಲಿ ನಿನಗಿಂತ ಹೆಚ್ಚಾಗಿ ನನ್ನ ಒಳಿತನ್ನು ಮಾಡುವವರು ಬೇರೆ ಯಾರು ಇಲ್ಲ. ॥ ೨೮ ॥ ನಾನು ಹೇಳಲಿರುವ ಕಾರ್ಯವು ಅತ್ಯಂತ ಮಹತ್ವಪೂರ್ಣವಾಗಿದೆ. ದೇವೇಂದ್ರನು ಸ್ವತಃ ಸಮರ್ಥನಾಗಿದ್ದರೂ ಮಹಾವಿಷ್ಣುವನ್ನು ಆಶ್ರಯಿಸಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವಂತೆ ನಾನು ನಿನ್ನನ್ನು ಆಶ್ರಯಿಸಿದ್ದೇನೆ. ॥ ೨೯ ॥ ಅಕ್ರೂರನೇ ! ನೀನು ನಂದಗೋಪನ ವ್ರಜಕ್ಕೆ ಹೋಗಬೇಕು. ಅಲ್ಲಿ ವಸುದೇವನ ಇಬ್ಬರು ಪುತ್ರರಿದ್ದಾರೆ. ಅವರನ್ನು ಇದೇ ರಥದಲ್ಲಿ ಕುಳ್ಳಿರಿಸಿಕೊಂಡು ಇಲ್ಲಿಗೆ ಕರಕೊಂಡು ಬರಬೇಕು. ಇದನ್ನು ಇದರಲ್ಲಿ ತಡಮಾಡಬಾರದು. ॥ ೩೦ ॥ ವಿಷ್ಣುವಿನ ಮೇಲೆ ಭರವಸೆಯನ್ನಿಟ್ಟಿರುವ ದೇವತೆಗಳು ಇವರಿಬ್ಬರನ್ನು ನನ್ನ ಮೃತ್ಯುವಿಗೆ ಕಾರಣವೆಂದು ನಿಶ್ಚಯಿಸಿರುವರೆಂದು ಕೇಳಿದ್ದೇನೆ. ಆದಕ್ಕಾಗಿ ಅವರಿಬ್ಬರನ್ನು ಕರೆದುಕೊಂಡು ಬಾ. ಜೊತೆಗೆ ನಂದಗೋಪನೇ ಮೊದಲಾದ ಗೋಪಾಲಕರು ಅಪಾರವಾದ ಕಾಣಿಕೆಗಳೊಂದಿಗೆ ಇಲ್ಲಿಗೆ ಬರುವಂತೆ ಮಾಡು. ॥ ೩೧ ॥ ಇಲ್ಲಿಗೆ ಬರುತ್ತಲೇ ನಾನು ಅವರನ್ನು ಕಾಲಸದೃಶವಾದ ಕುವಲಯಾಪೀಡವೆಂಬ ಆನೆಯಿಂದ ಕೊಲ್ಲಿಸಿ ಬಿಡುವೆನು. ಒಂದು ವೇಳೆ ಆ ಆನೆಯಿಂದ ಅವರು ಬದುಕುಳಿದರೆ, ವಜ್ರದಂತಿರುವ ಮಹಾಬಲಿಷ್ಠರಾದ ಮುಷ್ಟಿಕ, ಚಾಣೂರರೆ ಮೊದಲಾದ ಮಲ್ಲರಿಂದ ಕೊಲ್ಲಿಸಿ ಬಿಡುವೆನು. ॥ ೩೨ ॥ ಬಲರಾಮ-ಕೃಷ್ಣರು ಸತ್ತುಹೋದ ಮೇಲೆ ವಸುದೇವನೇ ಮೊದಲಾದ ವೃಷ್ಣಿವಂಶೀಯರು, ಭೋಜ ಮತ್ತು ದಾಶಾರ್ಹ ವಂಶೀಯರಾದ ಅವರ ಬಂಧುಗಳು ಶೋಕಾಕುಲರಾಗುವರು. ಮತ್ತೆ ನಾನೇ ಅವರೆಲ್ಲರನ್ನೂ ನನ್ನ ಕೈಯ್ಯಾರೆ ಕೊಂದು ಬಿಡುವೆನು. ॥ ೩೩ ॥ ನನ್ನ ತಂದೆಯಾದರೋ ಮುದುಕನಾಗಿದ್ದಾನೆ. ಆದರೂ ಅವನಿಗೆ ರಾಜ್ಯಲೋಭ ಇನ್ನೂ ಇದೆ. ಇದೆಲ್ಲ ಮಾಡಿದ ಮೇಲೆ ಅವನನ್ನೂ, ಅವನ ತಮ್ಮನಾದ ದೇವಕನನ್ನು ಹಾಗೂ ನನ್ನನ್ನು ದ್ವೇಷಿಸುವವರೆಲ್ಲರನ್ನು ಖಡ್ಗದಿಂದ ನಾನೇ ಸಾಯಿಸಿ ಬಿಡುವೆನು. ॥ ೩೪ ॥ ಪ್ರಾಣಸಖನೇ ! ಅನಂತರವೇ ಈ ಭೂಮಂಡಲವು ನನಗೆ ಕಂಟಕರಹಿತವಾಗುತ್ತದೆ. ಜರಾಸಂಧನೇ ನನಗೆ ಪರಮಗುರು ಮತ್ತು ಮಾವನಾಗಿದ್ದಾನೆ. ವಾನರರಾಜ ದ್ವಿವಿದನೇ ನನ್ನ ಪ್ರಿಯಸಖನು. ॥ ೩೫ ॥ ಶಂಬರಾಸುರ, ನರಕಾಸುರ, ಬಾಣಾಸುರ ಇವರು ನನ್ನೊಡನೆ ಮೈತ್ರಿಯನ್ನು ಬೆಳೆಸಿದ್ದಾರೆ. ಇವರೆಲ್ಲರ ಸಹಾಯದಿಂದ ದೇವಪಕ್ಷಪಾತಿಯಾದ ರಾಜರೆಲ್ಲರನ್ನೂ ಕೊಂದು ಪೃಥ್ವಿಯ ನಿಷ್ಕಂಟಕವಾದ ರಾಜ್ಯವನ್ನು ನಾನು ಅನುಭವಿಸುತ್ತೇನೆ. ॥ ೩೬ ॥

ಏತಜ್ಜ್ಞಾತ್ವಾऽऽನಯ ಕ್ಷಿಪ್ರಂ ರಾಮಕೃಷ್ಣಾವಿಹಾರ್ಭಕೌ ।
ಧನುರ್ಮಖನಿರೀಕ್ಷಾರ್ಥಂ ದ್ರಷ್ಟುಂ ಯದುಪುರಶ್ರಿಯಮ್
॥ ೩೭ ॥

ಅಕ್ರೂರ! ಇದೆಲ್ಲ ರಹಸ್ಯದ ಮಾತುಗಳನ್ನು ನಾನು ನಿನಗೆ ಹೇಳಿರುವೆನು. ಈಗ ನೀನು ಅತಿಶೀಘ್ರವಾಗಿ ಬಲರಾಮ-ಕೃಷ್ಣರನ್ನು ಇಲ್ಲಿಗೆ ಕರೆದುಕೊಂಡು ಬಾ, ಅವರಿನ್ನೂ ಮಕ್ಕಳಾಗಿರುವುದರಿಂದ ಸುಲಭವಾಗಿ ಅವರನ್ನು ಮುಗಿಸಿಬಿಡಬಹುದು. ಧನುರ್ಯಜ್ಞವನ್ನು ಸಂದರ್ಶಿಸಲು ಮತ್ತು ರಾಜಧಾನಿಯಾದ ಮಥುರಾ ಪಟ್ಟಣದ ಸೊಬಗನ್ನು ವೀಕ್ಷಿಸಲು ಬರಬೇಕೆಂದು ಅವರಿಗೆ ತಿಳಿಸಬೇಕು. ॥ ೩೭ ॥

ಅಕ್ರೂರ ಉವಾಚ

ರಾಜನ್ಮನೀಷಿತಂ ಸಮ್ಯಕ್ ತವ ಸ್ವಾವದ್ಯಮಾರ್ಜನಮ್ ।
ಸಿದ್ಧ್ಯಸಿದ್ಧ್ಯೋಃ ಸಮಂ ಕುರ್ಯಾದ್ದೈವಂ ಹಿ ಫಲಸಾಧನಮ್
॥ ೩೮ ॥

ಮನೋರಥಾನ್ಕರೋತ್ಯುಚ್ಚೈರ್ಜನೋ ದೈವಹತಾನಪಿ ।
ಯುಜ್ಯತೇ ಹರ್ಷಶೋಕಾಭ್ಯಾಂ ತಥಾಪ್ಯಾಜ್ಞಾಂ ಕರೋಮಿ ತೇ
॥ ೩೯ ॥

ಅಕ್ರೂರನು ಹೇಳಿದನು – ಮಹಾರಾಜ! ನೀನು ನಿನ್ನ ಮೃತ್ಯುವನ್ನು ಅರಿಷ್ಟವನ್ನು ತೊಡೆದು ಹಾಕುವುದಕ್ಕಾಗಿ ಹೀಗೆ ಯೋಚಿಸುವುದು ಸಾಧುವೇ ಆಗಿದೆ. ಕಾರ್ಯವು ಸಿದ್ಧಿಸಲಿ, ಸಿದ್ಧಿಸದೆ ಹೋಗಲಿ ಎರಡರಲ್ಲಿಯೂ ಸಮಭಾವವನ್ನಿಟ್ಟುಕೊಂಡು ಕಾರ್ಯ ಮಾಡುವುದು ಯುಕ್ತವಾಗಿದೆ. ಮನುಷ್ಯನಿಗೆ ಫಲವಾದರೋ ಪ್ರಯತ್ನದಿಂದ ದೊರೆಯದೆ ದೈವಪ್ರೇರಣೆಯಿಂದ ದೊರೆಯುತ್ತದೆ. ॥ ೩೮ ॥ ಮನುಷ್ಯನು ದೊಡ್ಡ-ದೊಡ್ಡ ಮನೋರಥಗಳನ್ನು ಹೆಣೆಯುತ್ತಾನೆ. ಆದರೆ ಅವನ್ನು ದೈವವು, ಪ್ರಾರಬ್ಧವು ಮೊದಲೇ ನಾಶಮಾಡಿಬಿಟ್ಟಿದೆ ಎಂಬುದನ್ನು ಅತನು ತಿಳಿಯುವುದಿಲ್ಲ, ಇದೇ ಕಾರಣದಿಂದ ಕೆಲವೊಮ್ಮೆ ಪ್ರಾರಬ್ಧಕ್ಕನುಕೂಲವಾಗಿ ಪ್ರಯತ್ನವು ಸಫಲವಾದರೆ ಹರ್ಷದಿಂದ ಹಿಗ್ಗುವನು. ಪ್ರತಿಕೂಲವಾಗಿ ವಿಫಲವಾದರೆ ಶೋಕಗ್ರಸ್ತನಾಗುತ್ತಾನೆ. ಹೀಗಿದ್ದರೂ ನಾನು ನಿನ್ನ ಆಜ್ಞೆಯನ್ನು ಪಾಲಿಸಿಯೇ ತೀರುತ್ತೇನೆ. ॥ ೩೯ ॥

ಶ್ರೀಶುಕ ಉವಾಚ

ಏವಮಾದಿಶ್ಯ ಚಾಕ್ರೂರಂ ಮಂತ್ರಿಣಶ್ಚ ವಿಸೃಜ್ಯ ಸಃ ।
ಪ್ರವಿವೇಶ ಗೃಹಂ ಕಂಸಸ್ತಥಾಕ್ರೂರಃ ಸ್ವಮಾಲಯಮ್
॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕಂಸನು ಮಂತ್ರಿಗಳಿಗೆ ಮತ್ತು ಅಕ್ರೂರನಿಗೆ ಹೀಗೆ ಅಪ್ಪಣೆಯನ್ನು ಕೊಟ್ಟು ಎಲ್ಲರನ್ನು ಬೀಳ್ಕೊಟ್ಟನು. ಬಳಿಕ ಅವನು ತನ್ನರಮನೆಗೆ ಹೊರಟು ಹೋದನು. ಅಕ್ರೂರನು ತನ್ನ ಮನೆಗೆ ಮರಳಿದನು. ॥ ೪೦ ॥

ಮೂವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೩೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಅಕ್ರೂರ ಪ್ರೇಷಣಂ ನಾಮ ಷಟ್ತ್ರಿಂಶೋऽಧ್ಯಾಯಃ ॥ ೩೬ ॥

ಮೂವತ್ತೇಳನೆಯ ಅಧ್ಯಾಯ

ಕೇಶಿ-ವ್ಯೋಮಾಸುರರ ಉದ್ಧಾರ, ನಾರದರಿಂದ ಭಗವಂತನ ಸ್ತುತಿ

ಶ್ರೀಶುಕ ಉವಾಚ

ಕೇಶೀ ತು ಕಂಸಪ್ರಹಿತಃ ಖುರೈರ್ಮಹೀಂ
ಮಹಾಹಯೋ ನಿರ್ಜರಯನ್ಮನೋಜವಃ ।

ಸಟಾವಧೂತಾಭ್ರವಿಮಾನಸಂಕುಲಂ
ಕುರ್ವನ್ನಭೋ ಹೇಷಿತಭೀಷಿತಾಖಿಲಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಕಂಸನು ಕಳಿಸಿದ ಕೇಶಿಯೆಂಬ ದೈತ್ಯನು ಕುದುರೆಯ ರೂಪವನ್ನು ಧರಿಸಿ ದೊಡ್ಡದಾದ ಶರೀರವನ್ನು ಹೊಂದಿ, ಗೊರಸುಗಳಿಂದ ಭೂಮಿಯನ್ನು ಕೆದಕುತ್ತಾ ಮನೋವೇಗದಂತೆ ಓಡುತ್ತಾ ಗೋಕುಲಕ್ಕೆ ಬಂದನು. ಅವನ ಹೆಗಲಮೇಲಿನ ಕೂದಲುಗಳಿಂದ ಆಕಾಶದಲ್ಲಿ ಮೋಡಗಳು, ವಿಮಾನಗಳು ಚದುರಿ ಹೋದುವು. ಅವನ ಭಯಂಕರ ಕೆನೆತದಿಂದ ಸಮಸ್ತರೂ ಭಯಗೊಂಡರು. ಅವನಿಗೆ ದೊಡ್ಡದಾದ ಕಣ್ಣುಗಳಿದ್ದು ಬಾಯಿ ಯಾದರೋ

ವಿಶಾಲನೇತ್ರೋ ವಿಕಟಾಸ್ಯಕೋಟರೋ
ಬೃಹದ್ಗಲೋ ನೀಲಮಹಾಂಬುದೋಪಮಃ ।
ದುರಾಶಯಃ ಕಂಸಹಿತಂ ಚಿಕೀರ್ಷು-
ರ್ವ್ರಜಂ ಸ ನಂದಸ್ಯ ಜಗಾಮ ಕಂಪಯನ್ ॥ ೨ ॥

ತಂ ತ್ರಾಸಯಂತಂ ಭಗವಾನ್ ಸ್ವಗೋಕುಲಂ
ತದ್ಧ್ಯೇಷಿತೈರ್ವಾಲವಿಘೂರ್ಣಿತಾಂಬುದಮ್ ।
ಆತ್ಮಾನಮಾಜೌ ಮೃಗಯಂತಮಗ್ರಣೀ-
ರುಪಾಹ್ವಯತ್ಸ ವ್ಯನದನ್ಮೃಗೇಂದ್ರವತ್ ॥ ೩ ॥

ಸ ತಂ ನಿಶಾಮ್ಯಾಭಿಮುಖೋ ಮುಖೇನ ಖಂ
ಪಿಬನ್ನಿವಾಭ್ಯದ್ರವದತ್ಯಮರ್ಷಣಃ ।
ಜಘಾನ ಪದ್ಭ್ಯಾಮರವಿಂದಲೋಚನಂ
ದುರಾಸದಶ್ಚಂಡಜವೋ ದುರತ್ಯಯಃ ॥ ೪ ॥

ತದ್ವಂಚಯಿತ್ವಾ ತಮಧೋಕ್ಷಜೋ ರುಷಾ
ಪ್ರಗೃಹ್ಯ ದೋರ್ಭ್ಯಾಂ ಪರಿವಿಧ್ಯ ಪಾದಯೋಃ ।
ಸಾವಜ್ಞಮುತ್ಸೃಜ್ಯ ಧನುಃಶತಾಂತರೇ
ಯಥೋರಗಂ ತಾರ್ಕ್ಷ್ಯಸುತೋ ವ್ಯವಸ್ಥಿತಃ ॥ ೫ ॥

ಸ ಲಬ್ಧಸಂಜ್ಞಃ ಪುನರುತ್ಥಿತೋ ರುಷಾ
ವ್ಯಾದಾಯ ಕೇಶೀ ತರಸಾऽऽಪತದ್ಧರಿಮ್ ।
ಸೋऽಪ್ಯಸ್ಯ ವಕ್ತ್ರೇ ಭುಜಮುತ್ತರಂ ಸ್ಮಯನ್
ಪ್ರವೇಶಯಾಮಾಸ ಯಥೋರಗಂ ಬಿಲೇ ॥ ೬ ॥

ದಂತಾ ನಿಪೇತುರ್ಭಗವದ್ಭುಜಸ್ಪೃಶ-
ಸ್ತೇ ಕೇಶಿನಸ್ತಪ್ತಮಯಃಸ್ಪೃಶೋ ಯಥಾ ।
ಬಾಹುಶ್ಚ ತದ್ದೇಹಗತೋ ಮಹಾತ್ಮನೋ
ಯಥಾऽऽಮಯಃ ಸಂವವೃಧೇ ಉಪೇಕ್ಷಿತಃ ॥ ೭ ॥

ಸಮೇಧಮಾನೇನ ಸ ಕೃಷ್ಣಬಾಹುನಾ
ನಿರುದ್ಧವಾಯುಶ್ಚರಣಾಂಶ್ಚ ವಿಕ್ಷಿಪನ್ ।
ಪ್ರಸ್ವಿನ್ನಗಾತ್ರಃ ಪರಿವೃತ್ತಲೋಚನಃ
ಪಪಾತ ಲೇಂಡಂ ವಿಸೃಜನ್ ಕ್ಷಿತೌ ವ್ಯಸುಃ ॥ ೮ ॥

ತದ್ದೇಹತಃ ಕರ್ಕಟಿಕಾಫಲೋಪಮಾದ್
ವ್ಯಸೋರಪಾಕೃಷ್ಯ ಭುಜಂ ಮಹಾಭುಜಃ ।
ಅವಿಸ್ಮಿತೋऽಯತ್ನಹತಾರಿರುತ್ಸ್ಮಯೈಃ
ಪ್ರಸೂನವರ್ಷೈರ್ದಿವಿಷದ್ಭಿರೀಡಿತಃ ॥ ೯ ॥

ಮರದ ಪೊಟರೆಯಂತಿತ್ತು. ಅವನನ್ನು ನೋಡುತ್ತಲೇ ಭಯವುಂಟಾಗುತ್ತಿತ್ತು. ಅವನಿಗೆ ದಪ್ಪವಾದ ಕುತ್ತಿಗೆಯಿತ್ತು. ಕಪ್ಪುಬಣ್ಣದ ವಿಶಾಲವಾದ ಅವನ ದೇಹವು ನೀಲಾಚಲದಂತಿತ್ತು. ಕೃಷ್ಣನನ್ನು ಸಂಹರಿಸಿ ಕಂಸನಿಗೆ ಹಿತವನ್ನುಂಟು ಮಾಡುವುದೇ ಅವನ ಆಶಯವಾಗಿತ್ತು. ಅವನು ನಡೆದಾಗ ಭೂಕಂಪವೇ ಆಗುತ್ತಿತ್ತು. ॥ ೧-೨ ॥ ಕೆನೆತಗಳಿಂದ ತನ್ನ ಗೋಕುಲವನ್ನೇ ಭಯಪಡಿಸುತ್ತಿದ್ದ ಬಾಲದ ಕೂದಲುಗಳಿಂದ ಮೋಡಗಳನ್ನೇ ಚದುರಿಸುತ್ತಿದ್ದ ಯುದ್ಧಕ್ಕಾಗಿ ತನ್ನನ್ನು ಗೋಕುಲದಲ್ಲಿ ಹುಡುಕುತ್ತಿದ್ದ ಕೇಶಿಯನ್ನು ನೋಡಿ ವೀರಾಗ್ರಣಿಯಾದ ಶ್ರೀಕೃಷ್ಣನು ಸಿಂಹದಂತೆ ಗರ್ಜಿಸುತ್ತಾ ರಾಕ್ಷಸನನ್ನು ಯುದ್ಧಕ್ಕಾಗಿ ಆಹ್ವಾನಿಸಿದನು. ॥ ೩ ॥ ಬಳಿಕ ಕೇಶಿಯು ತನಗೆದುರಾಗಿ ಬಂದ ಶ್ರೀಕೃಷ್ಣನನ್ನು ನೋಡಿ ಆಕಾಶವನ್ನೇ ನುಂಗಿಬಿಡುವನೋ ಎಂಬಂತೆ ಬಾಯನ್ನು ಅಗಲಿಸಿಕೊಂಡು ಮುನ್ನುಗ್ಗಿ ಹೋದನು. ಅತ್ಯಂತ ಕ್ರದ್ಧನಾಗಿದ್ದ ದುರಾಸದನಾದ, ಭಯಂಕರವಾಗಿ ಶಬ್ದಮಾಡುತ್ತಿದ್ದ ಎದುರಿಸಲು ಅಸಾಧ್ಯನಾಗಿದ್ದ ಆ ರಾಕ್ಷಸನು ತನ್ನೆರಡು ಹಿಂದಿನ ಕಾಲುಗಳಿಂದ ಅರವಿಂದಾಕ್ಷನಾದ ಶ್ರೀಕೃಷ್ಣನನ್ನು ಒದೆದನು. ॥ ೪ ॥ ಆದರೆ ಭಗವಂತನು ಉಪಾಯದಿಂದ ಆ ಒದೆಯನ್ನು ತಪ್ಪಿಸಿಕೊಂಡು, ಅತ್ಯಂತ ಕ್ರುದ್ಧನಾಗಿ ಗರುಡನು ಸರ್ಪವನ್ನು ಹಿಡಿಯುವಂತೆ ಆದೇ ಕಾಲುಗಳನ್ನು ಹಿಡಿದು ಗರಗರನೆ ತಿರುಗಿಸುತ್ತಾ ಅನಾಯಾಸವಾಗಿ ನೂರು ಮಾರುಗಳ ದೂರಕ್ಕೆ ಬಿಸಾಡಿ ಸ್ವಸ್ಥವಾಗಿ ನಿಂತುಕೊಂಡನು. ॥ ೫ ॥ ಕೇಶಿಯು ಸ್ವಲ್ಪ ಹೊತ್ತಿನಲ್ಲೇ ಚೇತರಿಸಿಕೊಂಡು ಮೇಲೆದ್ದು ಕ್ರುದ್ಧವಾಗಿ ಬಾಯನ್ನು ಅಗಲವಾಗಿ ತೆರೆದುಕೊಂಡು ರಭಸದಿಂದ ಭಗವಂತನೆಡೆಗೆ ನುಗ್ಗಿದನು. ಶ್ರೀಕೃಷ್ಣನು ನಸುನಗುತ್ತಾ - ಸರ್ಪವು ತನ್ನ ಬಿಲದೊಳಗೆ ನುಸುಳಿಹೋಗುವಂತೆ ತನ್ನ ಎಡತೋಳನ್ನು ಕೇಶಿಯ ಅಗಲವಾಗಿದ್ದ ಬಾಯೊಳಗೆ ರಭಸದಿಂದ ತೂರಿಸಿದನು. ॥ ೬ ॥ ಪರೀಕ್ಷಿತನೇ! ಭಗವನಂತನ ಅತ್ಯಂತ ಕೋಮಲವಾದ ಬಾಹುವು ಆ ಸಮಯದಲ್ಲಿ ಕಾದ ಕಬ್ಬಿಣದಂತಾಗಿ ಅದರ ಸ್ಪರ್ಶಮಾತ್ರದಿಂದ ಕೇಶಿಯ ಹಲ್ಲುಗಳೆಲ್ಲವೂ ಉದುರಿಹೋದುವು. ಚಿಕಿತ್ಸೆಯನ್ನು ಹೊಂದದ ಮಹೋದರ ರೋಗವು ಉಲ್ಬಣಿಸುವಂತೆ ಶ್ರೀಕೃಷ್ಣನ ತೋಳು ಕ್ಷಣ-ಕ್ಷಣಕ್ಕೂ ಅಸುರನ ಬಾಯೊಳಗೆ ವರ್ಧಿಸುತ್ತಿತ್ತು. ॥ ೭ ॥ ಅಚಿಂತ್ಯ ಶಕ್ತಿ ಸಂಪನ್ನನಾದ ಭಗವಾನ್ ಶ್ರೀಕೃಷ್ಣನ ತೋಳು ಕ್ಷಣ-ಕ್ಷಣಕ್ಕೂ ದಪ್ಪವಾಗುತ್ತಾ ಕೇಶಿಯ ಕುತ್ತಿಗೆಗೆ ಹಾಕಿದ ಬಿರಟೆಯಂತಾಗಿ ರಾಕ್ಷಸನ ಉಸಿರುನಿಂತು ಹೋಯಿತು. ಕಾಲುಗಳು ಒದರ ತೊಡಗಿದವು. ಶರೀರವು ಬೆವರಿನಿಂದ ಒದ್ದೆಯಾಯಿತು. ಕಣ್ಣುಗುಡ್ಡೆಗಳು ಹೊರ ಬಂದುವು. ಕೇಶಿಯು ಮಲ-ಮೂತ್ರಗಳನ್ನು ಸುರಿಸುತ್ತಾ, ನೆಲದ ಮೇಲೆ ಬಿದ್ದು ಸ್ವಲ್ಪ ಹೊತ್ತಿನಲ್ಲೆ ಪ್ರಾಣಗಳನ್ನು ತೊರೆದನು. ॥ ೮ ॥ ಪಕ್ವವಾದ ಕೆಕ್ಕರಿಕೆ ಹಣ್ಣು ಬಿರಿಯುವಂತೆ ಬಿರಿದು ಹೋದ ರಾಕ್ಷಸನ ಬಾಯಿಂದ ಮಹಾಬಾಹುವಾದ ಶ್ರೀಕೃಷ್ಣನು ತನ್ನ ಎಡದ ಕೈಯನ್ನು ಸೆಳೆದುಕೊಂಡನು. ಇದರಿಂದ ಶ್ರೀಕೃಷ್ಣನಿಗೆ ಆಶ್ಚರ್ಯವುಂಟಾಗಲಿಲ್ಲ. ಹೆಚ್ಚಿನ ಪ್ರಯತ್ನವಿಲ್ಲದೆಯೇ ಶತ್ರುವಿನ ನಾಶವಾಯಿತು. ದೇವತೆಗಳಿಗೆ ಇದನ್ನು ಕಂಡು ಆಶ್ಚರ್ಯವಾಯಿತು. ಅವರೆಲ್ಲರೂ ಅತ್ಯಂತ ಪ್ರಸನ್ನರಾಗಿ ಭಗವಂತನ ಮೇಲೆ ಹೂಮಳೆಗರೆದು, ಅವನನ್ನು ನಾನಾ ರೀತಿಯಿಂದ ಸ್ತೋತ್ರಮಾಡಿದರು. ॥ ೯ ॥

ದೇವರ್ಷಿರುಪಸಂಗಮ್ಯ ಭಾಗವತಪ್ರವರೋ ನೃಪ ।
ಕೃಷ್ಣಮಕ್ಲಿಷ್ಟಕರ್ಮಾಣಂ ರಹಸ್ಯೇತದಭಾಷತ
॥ ೧೦ ॥

ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಯೋಗೇಶ ಜಗದೀಶ್ವರ ।
ವಾಸುದೇವಾಖಿಲಾವಾಸ ಸಾತ್ವತಾಂ ಪ್ರವರ ಪ್ರಭೋ
॥ ೧೧ ॥

ತ್ವಮಾತ್ಮಾ ಸರ್ವಭೂತಾನಾಮೇಕೋ ಜ್ಯೋತಿರಿವೈಧಸಾಮ್ ।
ಗೂಢೋ ಗುಹಾಶಯಃ ಸಾಕ್ಷೀ ಮಹಾಪುರುಷ ಈಶ್ವರಃ
॥ ೧೨ ॥

ಆತ್ಮನಾऽऽತ್ಮಾಶ್ರಯಃ ಪೂರ್ವಂ ಮಾಯಯಾ ಸಸೃಜೇ ಗುಣಾನ್ ।
ತೈರಿದಂ ಸತ್ಯಸಂಕಲ್ಪಃ ಸೃಜಸ್ಯತ್ಸ್ಯವಸೀಶ್ವರಃ
॥ ೧೩ ॥

ಸ ತ್ವಂ ಭೂಧರಭೂತಾನಾಂ ದೈತ್ಯಪ್ರಮಥರಕ್ಷಸಾಮ್ ।
ಅವತೀರ್ಣೋ ವಿನಾಶಾಯ ಸೇತೂನಾಂ ರಕ್ಷಣಾಯ ಚ
॥ ೧೪ ॥

ದಿಷ್ಟ್ಯಾ ತೇ ನಿಹತೋ ದೈತ್ಯೋ ಲೀಲಯಾಯಂ ಹಯಾಕೃತಿಃ ।
ಯಸ್ಯ ಹೇಷಿತಸಂತ್ರಸ್ತಾ ತ್ಯಜಂತ್ಯನಿಮಿಷಾ ದಿವಮ್
॥ ೧೫ ॥

ಚಾಣೂರಂ ಮುಷ್ಟಿಕಂ ಚೈವ ಮಲ್ಲಾನನ್ಯಾಂಶ್ಚ ಹಸ್ತಿನಮ್ ।
ಕಂಸಂ ಚ ನಿಹತಂ ದ್ರಕ್ಷ್ಯೇ ಪರಶ್ವೋऽಹನಿ ತೇ ವಿಭೋ
॥ ೧೬ ॥

ತಸ್ಯಾನುಶಂಖಯವನಮುರಾಣಾಂ ನರಕಸ್ಯ ಚ ।
ಪಾರಿಜಾತಾಪಹರಣಮಿಂದ್ರಸ್ಯ ಚ ಪರಾಜಯಮ್
॥ ೧೭ ॥

ಉದ್ವಾಹಂ ವೀರಕನ್ಯಾನಾಂ ವೀರ್ಯಶುಲ್ಕಾದಿಲಕ್ಷಣಮ್ ।
ನೃಗಸ್ಯ ಮೋಕ್ಷಣಂ ಶಾಪಾದ್ದ್ವಾರಕಾಯಾಂ ಜಗತ್ಪತೇ
॥ ೧೮ ॥

ಸ್ಯಮಂತಕಸ್ಯ ಚ ಮಣೇರಾದಾನಂ ಸಹ ಭಾರ್ಯಯಾ ।
ಮೃತಪುತ್ರಪ್ರದಾನಂ ಚ ಬ್ರಾಹ್ಮಣಸ್ಯ ಸ್ವಧಾಮತಃ
॥ ೧೯ ॥

ಪರೀಕ್ಷಿತನೇ ! ಭಾಗವತರಲ್ಲಿ ಶ್ರೇಷ್ಠರಾದ ನಾರದ ಮುನಿಗಳು ಕಂಸನಲ್ಲಿಂದ ಮರಳಿ ಅದ್ಭುತ ಕರ್ಮಿಯಾದ ಭಗವಾನ್ ಶ್ರೀಕೃಷ್ಣನಲ್ಲಿಗೆ ಬಂದು ಏಕಾಂತದಲ್ಲಿ ಅವನನ್ನು ಸಂಧಿಸಿ ಹೀಗೆ ಹೇಳತೊಡಗಿದರು. ॥ ೧೦ ॥ ಸಚ್ಚಿದಾನಂದ ಸ್ವರೂಪನಾದ ಕೃಷ್ಣನೇ ! ನಿನ್ನ ಸ್ವರೂಪವು ಮನ-ವಚನಗಳಿಗೆ ನಿಲುಕುವುದಿಲ್ಲ. ನೀನು ಯೋಗೇಶ್ವರನಾಗಿರುವೆ. ಜಗದೀಶ್ವರನೇ ! ವಾಸುದೇವನೇ ! ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಾಸಿಸುವವನೇ ! ಸಾತ್ವತ ಶ್ರೇಷ್ಠನೇ ! ಪ್ರಭುವೇ ! ನಿನಗೆ ನಮಸ್ಕಾರವು. ॥ ೧೧ ॥ ದೇವದೇವನೇ ! ಒಂದೇ ಅಗ್ನಿಯು ಎಲ್ಲ ಕಟ್ಟಿಗೆಗಳಲ್ಲಿಯೂ ವ್ಯಾಪಿಸಿರುವಂತೆ ನೀನೊಬ್ಬನೇ ಸಕಲ ಪ್ರಾಣಿಗಳ ಹೃದಯದಲ್ಲಿ ಆತ್ಮರೂಪದಿಂದ ವ್ಯಾಪಿಸಿಕೊಂಡಿರುವೆ. ಆತ್ಮರೂಪದಲ್ಲಿದ್ದರೂ ನೀನು ನಿಗೂಢನಾಗಿರುವೆ. ಪಂಚಕೋಶಾತ್ಮಕವಾದ ಗುಹೆಯಲ್ಲಿ ಅಡಗಿಕೊಂಡಿರುವೆ. ಈಶ್ವರನೂ, ಸರ್ವಸಾಕ್ಷಿಯೂ, ಪುರುಷೋತ್ತಮನೂ, ಸರ್ವನಿಯಾಮಕನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕಾರವು. ॥ ೧೨ ॥ ಪ್ರಭುವೇ ! ಆತ್ಮಸ್ವರೂಪನಾದ ನೀನು ಸರ್ವಕ್ಕೂ ಆಶ್ರಯನಾಗಿರುವೆ. ನೀನು ಯಾರನ್ನೂ ಆಶ್ರಯಿಸತಕ್ಕವನಲ್ಲ. ಸೃಷ್ಟಿಯ ಪ್ರಾರಂಭದಲ್ಲಿ ನಿನ್ನ ಮಾಯೆಯಿಂದ ಗುಣಗಳನ್ನು ಸೃಷ್ಟಿಸಿ, ಆ ಗುಣಗಳನ್ನೇ ಸ್ವೀಕರಿಸಿಕೊಂಡು ನೀನು ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ಮಾಡುತ್ತಿರುವೆ. ಸರ್ವಶಕ್ತಿಸಂಪನ್ನನೂ, ಸತ್ಯಸಂಕಲ್ಪನೂ ಆದ ನಿನಗೆ ವಂದಿಸುತ್ತೇನೆ. ॥ ೧೩ ॥ ಅಂತಹ ಸಚ್ಚಿದಾನಂದ ಸ್ವರೂಪನಾದ ನೀನು ಈ ಸಮಯದಲ್ಲಿ ರಾಜರಾಗಿ ಹುಟ್ಟಿರುವ ದೈತ್ಯ-ಪ್ರಮಥ-ರಾಕ್ಷಸರ ವಿನಾಶಕ್ಕಾಗಿ ಮತ್ತು ಧರ್ಮದ ಮರ್ಯಾದೆಯನ್ನು ರಕ್ಷಿಸಲಿಕ್ಕಾಗಿಯೇ ಯದುವಂಶದಲ್ಲಿ ಅವತರಿಸಿರುವೆ. ॥ ೧೪ ॥ ಮಹಾನುಭಾವನೇ ! ಕುದುರೆಯ ರೂಪದಲ್ಲಿದ್ದ ಕೇಶಿರಾಕ್ಷಸನನ್ನು ಲೀಲಾಜಾಲವಾಗಿ ಸಂಹರಿಸಿದೆ. ಇದು ಸಂತೋಷದ ಸಂಗತಿಯೇ ಆಗಿದೆ. ಆ ರಾಕ್ಷಸನ ಕೆನೆಯುವಿಕೆಯನ್ನು ಕೇಳುತ್ತಲೇ ದೇವತೆಗಳು ಸ್ವರ್ಗದಿಂದ ಓಡಿಹೋಗುತ್ತಿದ್ದರು. ॥ ೧೫ ॥

ಪ್ರಭುವೇ ! ಮುಂದಿನ ಎರಡು ದಿವಸಗಳಲ್ಲಿಯೇ ಚಾಣೂರ ಮುಷ್ಟಿಕರನ್ನೂ, ಕುವಲಯಾಪೀಡವೆಂಬ ಮತ್ತಗಜವನ್ನೂ ಇತರ ಹಲವಾರು ಜಟ್ಟಿಗಳನ್ನೂ, ಕಂಸನನ್ನೂ ನೀನು ಸಂಹರಿಸುವ ಅದ್ಭುತ ದೃಶ್ಯವನ್ನು ನಾನು ಕಾಣಲಿದ್ದೇನೆ. ॥ ೧೬ ॥ ಅನಂತರ ಶಂಖಾಸುರ, ಕಾಲಯವನ, ಮುರ, ನರಕಾಸುರರ ವಧೆಯನ್ನು ನೋಡುವೆ. ಇಂದ್ರನ ಪರಾಜಯವನ್ನು, ಸ್ವರ್ಗದಿಂದ ಪಾರಿಜಾತಾಪಹರಣವನ್ನು ನಾನು ಕಾಣಲಿರುವೆನು. ॥ ೧೭ ॥ ವೀರ್ಯಪರಾಕ್ರಮಗಳೇ ಕನ್ಯಾಶುಲ್ಕವಾಗಿ ಉಳ್ಳ ವೀರಕನ್ಯೆಯರೊಡನೆ ನಿನ್ನ ಶುಭವಿವಾಹಗಳಾಗುವುದನ್ನು ನಾನು ನೋಡುವೆನು. ಜಗತ್ಪತಿಯೇ ! ನೀನು ದ್ವಾರಕೆಯಲ್ಲಿಯೇ ಇರುತ್ತಾ ನೃಗರಾಜನನ್ನು ಶಾಪದಿಂದ ಮುಕ್ತಗೊಳಿಸುವೆ. ॥ ೧೮ ॥ ಸ್ಯಮಂತಕ ಮಣಿಯನ್ನು ಜಾಂಬವತಿಯನ್ನು ಜಾಂಬವಂತನಿಂದ ಪಡೆದು ಕೊಳ್ಳುವೆ. ಬ್ರಾಹ್ಮಣನ ಮೃತಪುತ್ರನನ್ನು ತನ್ನ ಧಾಮದಿಂದ ತಂದು ಕೊಡುವೆ. ॥ ೧೯ ॥

ಪೌಂಡ್ರಕಸ್ಯ ವಧಂ ಪಶ್ಚಾತ್ ಕಾಶೀಪುರ್ಯಾಶ್ಚ ದೀಪನಮ್ ।
ದಂತವಕ್ತ್ರಸ್ಯ ನಿಧನಂ ಚೈದ್ಯಸ್ಯ ಚ ಮಹಾಕ್ರತೌ
॥ ೨೦ ॥

ಇದಾದ ಬಳಿಕ ನೀನು ಪೌಂಡ್ರಕ ವಾಸುದೇವನನ್ನು ಸಂಹರಿಸುವೆ. ಕಾಶೀಪುರಿಯನ್ನು ಸುಟ್ಟುಹಾಕುವೆ. ಯುಧಿಷ್ಠಿರನ ರಾಜಸೂಯ ಯಾಗದಲ್ಲಿ ಚೇದಿರಾಜನಾದ ಶಿಶುಪಾಲನನ್ನು ಸಂಹರಿಸುವೆ. ಅಲ್ಲಿಂದ ಹಿಂದಿರುಗುವಾಗ ಅವನ ತಮ್ಮನಾದ ದಂತವಕ್ತ್ರನನ್ನೂ ನಾಶಮಾಡುವೆ. ॥ ೨೦ ॥

ಯಾನಿ ಚಾನ್ಯಾನಿ ವೀರ್ಯಾಣಿ ದ್ವಾರಕಾಮಾವಸನ್ ಭವಾನ್ ।
ಕರ್ತಾ ದ್ರಕ್ಷ್ಯಮ್ಯಹಂ ತಾನಿ ಗೇಯಾನಿ ಕವಿಭಿರ್ಭುವಿ
॥ ೨೧ ॥

ಪ್ರಭುವೇ! ದ್ವಾರಕೆಯಲ್ಲಿ ವಾಸಿಸುತ್ತಿರುವಾಗ ನೀನು ಪ್ರಕಟಿಸಲಿರುವ ಇನ್ನೂ ಹಲವಾರು ಪ್ರಸಂಗಗಳನ್ನು ಪ್ರಭಾವಶಾಲಿಗಳಾದ ಜ್ಞಾನೀ ಕವಿಗಳು ಭೂಲೋಕದಲ್ಲಿ ಹಾಡುವರು. ಇವೆಲ್ಲವನ್ನು ನಾನು ಪ್ರತ್ಯಕ್ಷವಾಗಿ ಕಾಣಲಿದ್ದೇನೆ. ॥ ೨೧ ॥

ಅಥ ತೇ ಕಾಲರೂಪಸ್ಯ ಕ್ಷಪಯಿಷ್ಣೋರಮುಷ್ಯ ವೈ ।
ಅಕ್ಷೌಹಿಣೀನಾಂ ನಿಧನಂ ದ್ರಕ್ಷ್ಯಾಮ್ಯರ್ಜುನಸಾರಥೇಃ
॥ ೨೨ ॥

ಅನಂತರ ಭೂಭಾರಹರಣಕ್ಕಾಗಿ ಕಾಲಸ್ವರೂಪನಾದ ನೀನು ಅರ್ಜುನನಿಗೆ ಸಾರಥಿಯಾಗಿ ಅನೇಕ ಅಕ್ಷೌಹಿಣೀ ಸೈನ್ಯವನ್ನು ಸಂಹರಿಸುವೆ.ಇವೆಲ್ಲವನ್ನೂ ನಾನು ಕಣ್ಣಾರೆ ಕಾಣಲಿದ್ದೇನೆ. ॥ ೨೨॥

ವಿಶುದ್ಧವಿಜ್ಞಾನಘನಂ ಸ್ವಸಂಸ್ಥಯಾ
ಸಮಾಪ್ತ ಸರ್ವಾರ್ಥಮಮೋಘವಾಂಛಿತಮ್ ।
ಸ್ವತೇಜಸಾ ನಿತ್ಯನಿವೃತ್ತಮಾಯಾ
ಗುಣಪ್ರವಾಹಂ ಭಗವಂತಮೀಮಹಿ ॥ ೨೩ ॥

ಸ್ವಾಮಿಯೇ! ನೀನು ವಿಶುದ್ಧವಿಜ್ಞಾನ ಘನಸ್ವರೂಪನು. ಕೇವಲ ಜ್ಞಾನಮೂರ್ತಿಯು. ಬ್ರಹ್ಮಾನಂದವೆಂಬ ನಿಜಸ್ವರೂಪ ಸ್ಥಿತಿಯಿಂದ ಸರ್ವಾರ್ಥಗಳನ್ನು ಪಡೆದುಕೊಂಡಿರುವವನು. ಆಪ್ತ ಕಾಮನು, ಸಫಲವಾದ ಇಷ್ಟಾರ್ಥವುಳ್ಳವನು. ಸತ್ಯಸಂಕಲ್ಪನು, ಚಿನ್ಮಯಶಕ್ತಿಯ ತೇಜಸ್ಸಿನಿಂದ ಸತ್ತ್ವಾದಿಮಾಯಾಗುಣಗಳ ಪ್ರವಾಹವನ್ನು ನಿತ್ಯನಿರಂತರವಾಗಿ ನಿರಾಕರಿಸತಕ್ಕವನು. ಅಂತಹ ಸರ್ವಶಕ್ತನಾದ ಭಗವಂತನನ್ನು ಶರಣು ಹೊಂದುತ್ತೇನೆ. ॥ ೨೩. ॥

ತ್ವಾಮೀಶ್ವರಂ ಸ್ವಾಶ್ರಯಮಾತ್ಮಮಾಯಯಾ
ವಿನಿರ್ಮಿತಾಶೇಷವಿಶೇಷಕಲ್ಪನಮ್ ।
ಕ್ರೀಡಾರ್ಥಮದ್ಯಾತ್ತಮನುಷ್ಯವಿಗ್ರಹಂ
ನತೋಽಸ್ಮಿ ಧುರ್ಯಂ ಯದುವೃಷ್ಣಿಸಾತ್ವತಾಮ್ ॥ ೨೪ ॥

ನೀನು ಸಮಸ್ತರ ಅಂತರ್ಯಾಮಿಯಾಗಿದ್ದು, ಎಲ್ಲರನ್ನೂ ನಿಯಂತ್ರಿಸುವೆ. ತಾನೇ-ತನ್ನಲ್ಲಿ ಸ್ಥಿತನಾದ ಪರಮ ಸ್ವತಂತ್ರನು. ಜಗತ್ತು ಮತ್ತು ಅದರ ಅಶೇಷ ವಿಶೇಷಗಳನ್ನು - ಭಾವ - ಅಭಾವ ರೂಪವಾದ ಎಲ್ಲ ಭೇದ ವಿಭೇದಗಳ ಕಲ್ಪನೆ ಕೇವಲ ನಿನ್ನ ಮಾಯೆಯಿಂದಲೇ ಉಂಟಾಗಿದೆ. ಈ ಸಮಯದಲ್ಲಿ ನೀನು ನಿನ್ನ ಲೀಲೆಗಳನ್ನು ಪ್ರಕಟಿಸಲಿಕ್ಕಾಗಿ ಮನುಷ್ಯನಂತೆ ಶ್ರೀವಿಗ್ರಹದಿಂದ ಪ್ರಕಟನಾಗಿರುವೆ. ನೀನು ಯದು, ವೃಷ್ಣಿ, ಸಾತ್ವತ ವಂಶೀಯರ ಶಿರೋಮಣಿಯಾಗಿರುವೆ. ಪ್ರಭೋ! ನಾನು ನಿನಗೆ ನಮಸ್ಕರಿಸುತ್ತಿದ್ದೇನೆ. ॥ ೨೪ ॥

ಶ್ರೀಶುಕ ಉವಾಚ

ಏವಂ ಯದುಪತಿಂ ಕೃಷ್ಣಂ ಭಾಗವತಪ್ರವರೋ ಮುನಿಃ ।
ಪ್ರಣಿಪತ್ಯಾಭ್ಯನುಜ್ಞಾತೋ ಯಯೌ ತದ್ದರ್ಶನೋತ್ಸವಃ
॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಭಾಗವತ ಶ್ರೇಷ್ಠರಾದ ನಾರದ ಮಹರ್ಷಿಗಳು ಹೀಗೆ ಭಗವಂತನನ್ನು ಸ್ತುತಿಸಿ, ನಮಸ್ಕರಿಸಿದರು. ಭಗವಂತನ ದರ್ಶನದಿಂದ ಉತ್ಸಾಹಗೊಂಡು ಶ್ರೀಕೃಷ್ಣನ ಅನುಮತಿಯನ್ನು ಪಡೆದು ಹೊರಟುಹೋದರು. ॥ ೨೫ ॥

ಭಗವಾನಪಿ ಗೋವಿಂದೋ ಹತ್ವಾ ಕೇಶಿನಮಾಹವೇ ।
ಪಶೂನಪಾಲಯತ್ಪಾಲೈಃ ಪ್ರೀತೈರ್ವ್ರಜಸುಖಾವಹಃ
॥ ೨೬ ॥

ಇತ್ತ ಭಗವಾನ್ ಶ್ರೀಕೃಷ್ಣನು ಯುದ್ಧದಲ್ಲಿ ಕೇಶಿಯನ್ನು ಕೊಂದು ಮತ್ತೆ ತನ್ನ ಪ್ರಿಯರಾದ ಮತ್ತು ಪ್ರಸನ್ನಚಿತ್ತರಾದ ಗೋಪಾಲಕರೊಡನೆ ಮೊದಲಿನಂತೆ ಪಶುಪಾಲನೆಯಲ್ಲಿ ತೊಡಗಿ ವ್ರಜವಾಸಿಗಳಿಗೆ ಪರಮಾನಂದವನ್ನು ಉಂಟುಮಾಡುತ್ತಿದ್ದನು. ॥ ೨೬ ॥

ಏಕದಾ ತೇ ಪಶೂನ್ ಪಾಲಾಶ್ಚಾರಯಂತೋಽದ್ರಿಸಾನುಷು ।
ಚಕ್ರುರ್ನಿಲಾಯನಕ್ರೀಡಾಶ್ಚೋರಪಾಲಾಪದೇಶತಃ
॥ ೨೭ ॥

ಒಮ್ಮೆ ಗೋಪಾಲಕರು ಪರ್ವತದ ತಪ್ಪಲಿನಲ್ಲಿ ಹಸುವೇ ಮೊದಲಾದ ಪಶುಗಳನ್ನು ಮೇಯಿಸುತ್ತಾ ಕೆಲವರು ಕಳ್ಳರೂ, ಕೆಲವರು ಕುರುಬರೂ, ಕೆಲವರು ಕುರಿಗಳೂ ಆಗಿ ಆಟವಾಡತೊಡಗಿದರು.॥೨೭॥

ತತ್ರಾಸನ್ಕತಿಚಿಚ್ಚೋರಾಃ ಪಾಲಾಶ್ಚ ಕತಿಚಿನ್ನೃಪ ।
ಮೇಷಾಯಿತಾಶ್ಚ ತತ್ರೈಕೇ ವಿಜಹ್ರುರಕುತೋಭಯಾಃ
॥ ೨೮ ॥

ರಾಜೇಂದ್ರ! ಅವರಲ್ಲಿ ಕೆಲವರು ಕಳ್ಳರು, ಕೆಲವರು ರಕ್ಷಕರು, ಕೆಲವರು ಕುರಿಗಳೂ ಆಗಿದ್ದರು. ಹೀಗೆ ನಿರ್ಭಯರಾಗಿ ಆಟದಲ್ಲಿ ತನ್ಮಯರಾದರು. ॥ ೨೮ ॥

ಮಯಪುತ್ರೋ ಮಹಾಮಾಯೋ
ವ್ಯೋಮೋ ಗೋಪಾಲವೇಷಧೃಕ್ ।
ಮೇಷಾಯಿತಾನಪೋವಾಹ
ಪ್ರಾಯಶ್ಚೋರಾಯಿತೋ ಬಹೂನ್ ॥ ೨೯ ॥

ಆದೇ ಸಮಯದಲ್ಲಿ ಗೊಲ್ಲನ ವೇಷವನ್ನು ಧರಿಸಿ ವ್ಯೋಮಾಸುರನೆಂಬ ರಕ್ಕಸನು ಅಲ್ಲಿಗೆ ಬಂದನು. ಅವನು ಮಾಯಾವಿಗಳ ಆಚಾರ್ಯ ಮಯಾಸುರನ ಪುತ್ರನಾಗಿದ್ದನು ಹಾಗೂ ಸ್ವತಃ ಮಹಾ ಮಾಯಾವಿಯಾಗಿದ್ದನು. ಅವನು ಆಟದಲ್ಲಿ ಕಳ್ಳನಾಗಿ ಕುರಿಗಳಾಗಿದ್ದ ಹುಡುಗರನ್ನು ಕದ್ದುಕೊಂಡು ಹೊಗಿ ಅಡಗಿಸುತ್ತಿದ್ದನು. ॥ ೨೯ ॥

ಗಿರಿದರ್ಯಾಂ ವಿನಿಕ್ಷಿಪ್ಯ ನೀತಂ ನೀತಂ ಮಹಾಸುರಃ ।
ಶಿಲಯಾ ಪಿದಧೇ ದ್ವಾರಂ ಚತುಃಪಂಚಾವಶೇಷಿತಾಃ
॥ ೩೦ ॥

ಆ ಮಹಾಸುರನು ಪದೇ-ಪದೇ ಹುಡುಗರನ್ನು ಎತ್ತಿಕೊಂಡು ಹೋಗಿ ಪರ್ವತದ ಗುಹೆಯೊಂದರಲ್ಲಿ ಇಟ್ಟು ಬಾಗಿಲಿಗೆ ಒಂದು ದೊಡ್ಡ ಬಂಡೆಯನ್ನು ಮುಚ್ಚಿಡುತ್ತಿದ್ದನು. ಹೀಗೆ ಆಡುತ್ತಿದ್ದ ಗೊಲ್ಲಬಾಲಕರಲ್ಲಿ ಕೇವಲ ನಾಲ್ಕೈದು ಬಾಲಕರು ಮಾತ್ರ ಉಳಿದರು. ॥ ೩೦ ॥

ತಸ್ಯ ತತ್ಕರ್ಮ ವಿಜ್ಞಾಯ ಕೃಷ್ಣಃ ಶರಣದಃ ಸತಾಮ್ ।
ಗೋಪಾನ್ ನಯಂತಂ ಜಗ್ರಾಹ ವೃಕಂ ಹರಿರಿವೌಜಸಾ
॥ ೩೧ ॥

ಭಕ್ತವತ್ಸಲನಾದ ಭಗವಂತನು ಆ ರಾಕ್ಷಸನ ದುಷ್ಟಕಾರ್ಯವನ್ನು ಅರಿತುಕೊಂಡು, ಅವನು ಬಾಲಕನನ್ನು ಎತ್ತಿಕೊಂಡು ಹೋಗುತ್ತಿರುವಾಗ ತೋಳವನ್ನು ಸಿಂಹವು ಹಿಡಿಯುವಂತೆ ಅವನನ್ನು ಹಿಡಿದುಕೊಂಡನು. ॥ ೩೧ ॥

ಸ ನಿಜಂ ರೂಪಮಾಸ್ಥಾಯ ಗಿರೀಂದ್ರಸದೃಶಂ ಬಲೀ ।
ಇಚ್ಛನ್ವಿಮೋಕ್ತುಮಾತ್ಮಾನಂ ನಾಶಕ್ನೋದ್ಗ್ರಹಣಾತುರಃ
॥ ೩೨ ॥

ಮಹಾ ಬಲಿಯಾದ ವ್ಯೋಮಾಸುರನು ಪರ್ವತದಂತಿರುವ ತನ್ನ ನಿಜರೂಪವನ್ನು ಪ್ರಕಟಿಸಿ ಶ್ರೀಕೃಷ್ಣನಿಂದ ತನ್ನನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಶ್ರೀಕೃಷ್ಣನ ಹಿಡಿತದಲ್ಲಿ ಸಿಲುಕಿದ ಅವನಿಂದ ಬಿಡಿಸಿಕೊಳ್ಳಲಾಗಲಿಲ್ಲ. ॥ ೩೨ ॥

ತಂ ನಿಗೃಹ್ಯಾಚ್ಯುತೋ ದೋರ್ಭ್ಯಾಂ ಪಾತಯಿತ್ವಾ ಮಹೀತಲೇ ।
ಪಶ್ಯತಾಂ ದಿವಿ ದೇವಾನಾಂ ಪಶುಮಾರಮಮಾರಯತ್
॥ ೩೩ ॥

ಆಗ ಭಗವಾನ್ ಶ್ರೀಕೃಷ್ಣನು ತನ್ನೆರಡೂ ಕೈಗಳಿಂದ ಅದುಮಿ ಹಿಡಿದು ಯಜ್ಞಪಶುವನ್ನು ಕೊಲ್ಲುವಂತೆ ಕತ್ತು ಹಿಸುಕಿ ಕೊಂದುಬಿಟ್ಟನು. ಆಗ ದೇವತೆಗಳು, ಗೊಲ್ಲಬಾಲಕರು ಭಗವಂತನನ್ನು ಸ್ತುತಿಸಿದರು. ಅನಂತರ ಪರಮದಯಾಳುವಾದ ಶ್ರೀಕೃಷ್ಣನು ಗುಹೆಯ ದ್ವಾರಕ್ಕೆ ಮುಚ್ಚಿದ ಬಂಡೆಯನ್ನು ಜರುಗಿಸಿ ಒಳಗೆ ಕೂಡಿಹಾಕಿದ್ದ ಗೊಲ್ಲ ಬಾಲಕರೊಂದಿಗೆ ವ್ರಜವನ್ನು ಪ್ರವೇಶಿಸಿದನು. ॥ ೩೩-೩೪ ॥

ಗುಹಾಪಿಧಾನಂ ನಿರ್ಭಿದ್ಯ ಗೋಪಾನ್ನಿಃಸಾರ್ಯ ಕೃಚ್ಛ್ರತಃ ।
ಸ್ತೂಯಮಾನಃ ಸುರೈರ್ಗೋಪೈಃ ಪ್ರವಿವೇಶ ಸ್ವಗೋಕುಲಮ್
॥ ೩೪ ॥

ಮೂವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೩೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ವ್ಯೋಮಾಸುರವಧೋ ನಾಮ ಸಪ್ತತ್ರಿಂಶೋಽಧ್ಯಾಯಃ ॥ ೩೭ ॥

ಮೂವತ್ತೆಂಟನೆಯ ಅಧ್ಯಾಯ

ಅಕ್ರೂರನ ವ್ರಜಯಾತ್ರೆ

ಶ್ರೀಶುಕ ಉವಾಚ

ಅಕ್ರೂರೋಽಪಿ ಚ ತಾಂ ರಾತ್ರಿಂ ಮಧುಪುರ್ಯಾಂ ಮಹಾಮತಿಃ ।
ಉಷಿತ್ವಾ ರಥಮಾಸ್ಥಾಯ ಪ್ರಯಯೌ ನಂದಗೋಕುಲಮ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಮಹಾಮತಿಯಾದ ಅಕ್ರೂರನು ಆ ರಾತ್ರಿಯನ್ನು ಮಥುರಾಪುರಿಯಲ್ಲೇ ಕಳೆದು ಪ್ರಾತಃಕಾಲವಾಗುತ್ತಲೇ ರಥವನ್ನು ಹತ್ತಿಕೊಂಡು ನಂದಗೋಪನ ಗೋಕುಲಕ್ಕೆ ಪ್ರಯಾಣ ಮಾಡಿದನು. ॥ ೧ ॥

ಗಚ್ಛನ್ಪಥಿ ಮಹಾಭಾಗೋ ಭಗವತ್ಯಂಬುಜೇಕ್ಷಣೇ ।
ಭಕ್ತಿಂ ಪರಾಮುಪಗತ ಏವಮೇತದಚಿಂತಯತ್
॥ ೨ ॥

ಪರಮ ಭಾಗ್ಯವಂತನಾದ ಅಕ್ರೂರನು ವ್ರಜದ ಯಾತ್ರೆಮಾಡುತ್ತಿದ್ದಾಗ ದಾರಿಯಲ್ಲಿ ಕಮಲನಯನ ಭಗವಾನ್ ಶ್ರೀಕೃಷ್ಣನ ಪರಮ ಪ್ರೇಮಮಯ ಭಕ್ತಿಯಿಂದ ಪರಿಪೂರ್ಣನಾಗಿ ಹೀಗೆ ಯೋಚಿಸುತ್ತಿದ್ದನು. ॥ ೨ ॥

ಕಿಂ ಮಯಾऽऽಚರಿತಂ ಭದ್ರಂ ಕಿಂ ತಪ್ತಂ ಪರಮಂ ತಪಃ ।
ಕಿಂ ವಾಥಾಪ್ಯರ್ಹತೇ ದತ್ತಂ ಯದ್ದ್ರಕ್ಷ್ಯಾಮ್ಯದ್ಯ ಕೇಶವಮ್
॥ ೩ ॥

ಮಮೈತದ್ದುರ್ಲಭಂ ಮನ್ಯ ಉತ್ತಮಶ್ಲೋಕದರ್ಶನಮ್ ।
ವಿಷಯಾತ್ಮನೋ ಯಥಾ ಬ್ರಹ್ಮಕೀರ್ತನಂ ಶೂದ್ರಜನ್ಮನಃ
॥ ೪ ॥

ಮೈವಂ ಮಮಾಧಮಸ್ಯಾಪಿ ಸ್ಯಾದೇವಾಚ್ಯುತದರ್ಶನಮ್ ।
ಹ್ರಿಯಮಾಣಃ ಕಾಲನದ್ಯಾ ಕ್ವಚಿತ್ತರತಿ ಕಶ್ಚನ
॥ ೫ ॥

ಮಮಾದ್ಯಾಮಂಗಲಂ ನಷ್ಟಂ ಫಲವಾಂಶ್ಚೈವ ಮೇ ಭವಃ ।
ಯನ್ನಮಸ್ಯೇ ಭಗವತೋ ಯೋಗಿಧ್ಯೇಯಾಂಘ್ರಿಪಂಕಜಮ್
॥ ೬ ॥

ಕಂಸೋ ಬತಾದ್ಯಾಕೃತ ಮೇऽತ್ಯನುಗ್ರಹಂ
ದ್ರಕ್ಷ್ಯೇऽಂಘ್ರಿಪದ್ಮಂ ಪ್ರಹಿತೋऽಮುನಾ ಹರೇಃ ।
ಕೃತಾವತಾರಸ್ಯ ದುರತ್ಯಯಂ ತಮಃ
ಪೂರ್ವೇऽತರನ್ ಯನ್ನಖಮಂಡಲತ್ವಿಷಾ ॥ ೭ ॥

ಯದರ್ಚಿತಂ ಬ್ರಹ್ಮಭವಾದಿಭಿಃ ಸುರೈಃ
ಶ್ರಿಯಾ ಚ ದೇವ್ಯಾ ಮುನಿಭಿಃ ಸಸಾತ್ವತೈಃ ।
ಗೋಚಾರಣಾಯಾನುಚರೈಶ್ಚರದ್ವನೇ
ಯದ್ಗೋಪಿಕಾನಾಂ ಕುಚಕುಂಕುಮಾಂಕಿತಮ್ ॥ ೮ ॥

ದ್ರಕ್ಷ್ಯಾಮಿ ನೂನಂ ಸುಕಪೋಲನಾಸಿಕಂ
ಸ್ಮಿತಾವಲೋಕಾರುಣಕಂಜಲೋಚನಮ್ ।
ಮುಖಂ ಮುಕುಂದಸ್ಯ ಗುಡಾಲಕಾವೃತಂ
ಪ್ರದಕ್ಷಿಣಂ ಮೇ ಪ್ರಚರಂತಿ ವೈ ಮೃಗಾಃ ॥ ೯ ॥

ಇಂದು ನಾನು ಭಗವಾನ್ ಶ್ರೀಕೃಷ್ಣನನ್ನು ದರ್ಶಿಸುತ್ತಿರುವೆನೆಲ್ಲ! ಇದಕ್ಕಾಗಿ ಹಿಂದೆ ನಾನು ಎಂತಹ ಶುಭಕರ್ಮಗಳನ್ನು, ಎಂತಹ ಶ್ರೇಷ್ಠವಾದ ತಪಸ್ಸನ್ನು ಮಾಡಿರುವೆನೋ! ಅಥವಾ ಯಾವ ಸತ್ಪಾತ್ರಕ್ಕೆ ಎಂತಹ ಮಹತ್ವಪೂರ್ಣವಾದ ದಾನ ಮಾಡಿರುವೆನೋ ? ॥ ೩ ॥ ಶೂದ್ರಜನ್ಮವನ್ನು ಪಡೆದವನಿಗೆ ವೇದಾಧ್ಯಯನದ ಅಧಿಕಾರ ವಿರದಂತೆ, ವಿಷಯಾಸಕ್ತನಾದ ನನಗೆ ಉತ್ತಮಶ್ಲೋಕನಾದ ಶ್ರೀಕೃಷ್ಣನ ದರ್ಶನವು ದುರ್ಲಭವೆಂದೇ ಭಾವಿಸುತ್ತೇನೆ. ॥ ೪ ॥ ಆದರೆ ಹಾಗೇನಿಲ್ಲ ಅಧಮನಾದ ನನಗೂ ಕೂಡ ಭಗವಾನ್ ಶ್ರೀಕೃಷ್ಣನ ದರ್ಶನವು ಖಂಡಿತವಾಗಿ ಆಗುವುದು. ಏಕೆಂದರೆ, ನದಿಯಲ್ಲಿ ಹರಿಯುತ್ತಿರುವ ಕಡ್ಡಿಗಳು ಕೆಲವೊಮ್ಮೆ ಈ ದಡದಿಂದ ಆ ದಡಮುಟ್ಟುವುದಿದೆ. ಹಾಗೆಯೇ ಸಮಯದ ಪ್ರವಾಹದಿಂದ ಎಲ್ಲಾದರೂ ಯಾರಾದರೂ ಸಂಸಾರ ಸಾಗರವನ್ನು ದಾಟಿ ಬಲ್ಲರು. ॥ ೫ ॥ ನಿಶ್ಚಯವಾಗಿಯೂ ಇಂದು ನನ್ನ ಸಮಸ್ತ ಅಶುಭಗಳು ನಾಶಹೊಂದಿದವು. ಇಂದು ನನ್ನ ಜನ್ಮವು ಸಫಲವಾಯಿತು. ಏಕೆಂದರೆ, ಇಂದು ನಾನು ಮಹಾಯೋಗಿ-ಯತಿಗಳಿಗೂ ಕೂಡ ಧ್ಯಾನಕ್ಕೆ ವಿಷಯವಾದ ಭಗವಂತನ ಚರಣಕಮಲಗಳನ್ನು ಸಾಕ್ಷಾತ್ತಾಗಿ ನೋಡಿ ನಮಸ್ಕರಿಸುವೆನು. ॥ ೬ ॥ ಆಹಾ ! ಕಂಸನು ಇಂದು ನನ್ನ ಮೇಲೆ ಮಹತ್ಕೃಪೆಯನ್ನೇ ಮಾಡಿರುವನು. ಅಂತಹ ಕಂಸನಿಂದ ಕಳುಹಲ್ಪಟ್ಟ ನಾನು ಈ ಭೂತಳದಲ್ಲಿ ಅವತರಿಸಿದ ಸಾಕ್ಷಾತ್ ಭಗವಂತನ ಚರಣಕಮಲಗಳ ದರ್ಶನವನ್ನು ಪಡೆಯುವೆನು. ಯಾರ ನಖಿಮಂಡಲದ ಕಾಂತಿಯನ್ನು ಧ್ಯಾನಿಸುತ್ತಾ ಹಿಂದಿನ ಯುಗದ ಋಷಿ-ಮಹರ್ಷಿಗಳು ಈ ಅಜ್ಞಾನರೂಪವಾದ ಅಪಾರ ತಮಸ್ಸನ್ನು ದಾಟಿಹೋಗಿರುವರೋ, ಅಂತಹ ಸಾಕ್ಷಾತ್ ಭಗವಂತನೇ ಮನುಷ್ಯನಾಗಿ ಈಗ ಅವತರಿಸಿರುವನು. ॥ ೭ ॥ ಬ್ರಹ್ಮರುದ್ರೇಂದ್ರಾದಿ ದೇವತೆಗಳು ಯಾವ ಚರಣಕಮಲಗಳನ್ನು ಉಪಾಸನೆ ಮಾಡುತ್ತಾ ಇರುತ್ತಾರೋ, ಸಾಕ್ಷಾತ್ ಲಕ್ಷ್ಮೀದೇವಿಯೂ ಒಂದು ಕ್ಷಣವಾದರೂ ಯಾರ ಸೇವೆಯನ್ನು ತೊರೆಯುವುದಿಲ್ಲವೋ, ಪ್ರೇಮೀ ಭಕ್ತರೊಡನೆ ಮಹಾಜ್ಞಾನಿಗಳೂ ಯಾರ ಆರಾಧನೆಯಲ್ಲಿ ಸಂಲಗ್ನವಾಗಿರುತ್ತಾರೋ, ಅಂತಹ ಭಗವಂತನ ಆ ಚರಣಕಮಲಗಳು ಹಸುಗಳನ್ನು ಮೇಯಿಸಲಿಕ್ಕಾಗಿ ಗೋಪ ಬಾಲಕರೊಂದಿಗೆ ವನದಲ್ಲಿ ಸಂಚರಿಸುತ್ತವೆ. ಸುರ-ಮುನಿ-ವಂದಿತ ಆ ಚರಣಗಳೇ ಗೋಪಿಯರ ವಕ್ಷಸ್ಥಳದಲ್ಲಿನ ಕುಂಕುಮ ಕೇಸರಿಯಿಂದ ಲೇಪಿತ ವಾಗಿರುತ್ತವೆ. ॥ ೮ ॥ ನಿಶ್ಚಯವಾಗಿಯೂ ನಾನು ಅವನ್ನು ದರ್ಶಿಸುವೆನು. ಇದೋ ಈ ಮೃಗಗಳು ನನ್ನನ್ನು ಬಲಕ್ಕೆ ಹಾಕಿ ಪ್ರದಕ್ಷಿಣಾಕಾರವಾಗಿ ಹೋಗುತ್ತಾ ಶುಭವನ್ನೇ ಸೂಚಿಸುತ್ತವೆ. ಆದುದರಿಂದ ನಾನಿಂದು ಮನೋಹರವಾದ ಕಪೋಲಗಳಿಂದಲೂ, ಸುಂದರವಾದ ಮೂಗಿನಿಂದಲೂ, ಕಿರುನಗೆಯಿಂದ ಕೂಡಿದ ನೋಟದಿಂದಲೂ, ಕೆಂದಾವರೆಯಂತಿರುವ ಕಣ್ಣುಗಳಿಂದಲೂ, ಗುಂಗುರು ಕೂದಲುಗಳಿಂದಲೂ ಸಮಲಂಕೃತವಾದ ಮುಖಕಮಲದಿಂದ ಶೋಭಿಸುವ ಮುಕುಂದನನ್ನು ನೋಡಿಯೇ ನೋಡುವೆನು. ॥ ೯ ॥

ಅಪ್ಯದ್ಯ ವಿಷ್ಣೋರ್ಮನುಜತ್ವಮೀಯುಷೋ
ಭಾರಾವತಾರಾಯ ಭುವೋ ನಿಜೇಚ್ಛಯಾ ।
ಲಾವಣ್ಯಧಾಮ್ನೋ ಭವಿತೋಪಲಂಭನಂ
ಮಹ್ಯಂ ನ ನ ಸ್ಯಾತ್ಫಲಮಂಜಸಾ ದೃಶಃ ॥ ೧೦ ॥

ಭಗವಾನ್ ವಿಷ್ಣುವು ಭೂಭಾರಹರಣಕ್ಕಾಗಿ ಸ್ವೆಚ್ಛೆಯಿಂದ ಮನುಷ್ಯನಾಗಿ ಅವತರಿಸಿದ್ದಾನೆ. ಅವನು ಸೌಂದರ್ಯಕ್ಕೆ ನೆಲೆಯಾಗಿದ್ದಾನೆ. ಸೌಂದರ್ಯದ ಮೂರ್ತಿಮಂತ ನಿಧಿಯಾಗಿದ್ದಾನೆ. ಇಂದು ನನಗೆ ಅವನ ದರ್ಶನವು ಆಗಿಯೇ ತೀರುತ್ತದೆ. ಇಂದು ನನ್ನ ಕಣ್ಣುಗಳು ಸಫಲವಾಗುವುವು. ॥ ೧೦ ॥

ಯ ಈಕ್ಷಿತಾಹಂರಹಿತೋಽಪ್ಯಸತ್ಸತೋಃ
ಸ್ವತೇಜಸಾಪಾಸ್ತತಮೋಭಿದಾಭ್ರಮಃ ।
ಸ್ವಮಾಯಯಾಽಽತ್ಮನ್ ರಚಿತೈಸ್ತದೀಕ್ಷಯಾ
ಪ್ರಾಣಾಕ್ಷಧೀಭಿಃ ಸದನೇಷ್ವಭೀಯತೇ ॥ ೧೧ ॥

ಭಗವಾನ್ ಅಹಂಕಾರ ರಹಿತನಾಗಿದ್ದಾನೆ. ಅಜ್ಞಾನದಿಂದ ಉಂಟಾದ ಭೇದ ಭ್ರಮೆಯು ಅವನ ಚಿನ್ಮಯಶಕ್ತಿಯಿಂದ ಅಜ್ಞಾನ ಸಹಿತವಾಗಿ ನಾಶವಾಗಿ ಹೋಗುತ್ತದೆ. ಅವನು ತನ್ನ ಯೋಗಮಾಯೆಯನ್ನು ಆಶ್ರಯಿಸಿ ಕೇವಲ ವೀಕ್ಷಣಮಾತ್ರದಿಂದ ಸ್ವಪ್ರಕೃತಿಯಿಂದಲೇ ನಿರ್ಮಿತವಾದ ಪ್ರಾಣೇಂದ್ರಿಯಗಳ ಬುದ್ಧಿಗಳಲ್ಲಿ ಪ್ರವೇಶಿಸಿ, ಗೋಪಿಯರ ಮನೆಗಳಲ್ಲಿಯೂ, ವೃಂದಾವನದಲ್ಲಿಯೂ ವ್ಯವಹರಿಸುವನೋ ಅಂತಹ ಪರಬ್ರಹ್ಮ ಪರಮಾತ್ಮ ಸ್ವರೂಪನಾದ ಶ್ರೀಕೃಷ್ಣನನ್ನು ನಾನಿಂದು ಸಂದರ್ಶಿಸುವೆನು. ॥ ೧೧ ॥

ಯಸ್ಯಾಖಿಲಾಮೀವಸಹಾಃ ಸುಮಂಗಲೈ-
ರ್ವಾಚೋ ವಿಮಿಶ್ರಾ ಗುಣಕರ್ಮಜನ್ಮಭಿಃ ।
ಪ್ರಾಣಂತಿ ಶುಂಭಂತಿ ಪುನಂತಿ ವೈ ಜಗದ್
ಯಾಸ್ತದ್ವಿರಕ್ತಾಃ ಶವಶೋಭನಾ ಮತಾಃ ॥ ೧೨ ॥

ಸಮಸ್ತ ಪಾಪಗಳನ್ನು ಹೋಗಲಾಡಿಸಿ ಮಂಗಳವನ್ನುಂಟುಮಾಡುವ ಶ್ರೀಕೃಷ್ಣನ ಭಕ್ತವಾತ್ಸಲ್ಯಾದಿ ಕಲ್ಯಾಣಗುಣಗಳಿಂದಲೂ, ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮೊದಲಾದ ಕರ್ಮಗಳಿಂದಲೂ ರಾಮ-ಕೃಷ್ಣಾದ್ಯವತಾರಗಳಿಂದಲೂ ಕೂಡಿದ ಮಾತುಗಳು (ಕೀರ್ತನೆಗಳು) ಪ್ರಪಂಚವನ್ನು ಉದ್ಧರಿಸುತ್ತವೆ; ಪಾವನಗೊಳಿಸುತ್ತವೆ. ಆದರೆ ಶ್ರೀಕೃಷ್ಣನ ಲೀಲಾಪ್ರಸಂಗಗಳಿಂದ ರಹಿತವಾದ ಮಾತುಗಳು ಹೆಣದಂತೆ ವ್ಯರ್ಥವಾಗಿದೆ. ॥ ೧೨ ॥

ಸ ಚಾವತೀರ್ಣಃ ಕಿಲ ಸಾತ್ವತಾನ್ವಯೇ
ಸ್ವಸೇತುಪಾಲಾಮರವರ್ಯಶರ್ಮಕೃತ್ ।
ಯಶೋ ವಿತನ್ವನ್ ವ್ರಜ ಆಸ್ತ ಈಶ್ವರೋ
ಗಾಯಂತಿ ದೇವಾ ಯದಶೇಷಮಂಗಲಮ್ ॥ ೧೩ ॥

ಯಾರ ಗುಣಗಾನಕ್ಕೆ ಇಂತಹ ಮಹಾತ್ಮ್ಯವಿರುವುದೋ ಅಂತಹ ಭಗವಂತನು ಸಾಕ್ಷಾತ್ತಾಗಿ ಯದುವಂಶದಲ್ಲಿ ಅವತರಿಸಿರುವನು. ತನ್ನಿಂದಲೇ ಕಲ್ಪಿತವಾದ ಲೋಕಮರ್ಯಾದೆಗಳನ್ನು ಪಾಲಿಸುತ್ತಿರುವ ಶ್ರೇಷ್ಠರಾದ ದೇವತೆಗಳ ಕಲ್ಯಾಣಕ್ಕೋಸ್ಕರವೇ ಅವನ ಅವತಾರವಾಗಿದೆ. ಐಶ್ವರ್ಯಶಾಲಿಯಾದ ಆ ಭಗವಂತನು ತನ್ನ ಮಂಗಳಮಯ ಯಶಸ್ಸನ್ನು ವಿಸ್ತಾರಗೊಳಿಸುತ್ತಾ ಗೋಕುಲದಲ್ಲಿ ವಾಸಿಸುತ್ತಿರುವನು. ದೇವತೆಗಳೂ ಕೂಡ ಅವನ ಮಂಗಳಮಯವಾದ ಯಶಸ್ಸನ್ನು ಯಾವಾಗಲೂ ಗಾನಮಾಡುತ್ತಿರುತ್ತಾರೆ. ॥ ೧೩ ॥

ತಂ ತ್ವದ್ಯ ನೂನಂ ಮಹತಾಂ ಗತಿಂ ಗುರುಂ
ತ್ರೈಲೋಕ್ಯಕಾಂತಂ ದೃಶಿಮನ್ಮಹೋತ್ಸವಮ್ ।
ರೂಪಂ ದಧಾನಂ ಶ್ರಿಯ ಈಪ್ಸಿತಾಸ್ಪದಂ
ದ್ರಕ್ಷ್ಯೇ ಮಮಾಸನ್ನುಷಸಃ ಸುದರ್ಶನಾಃ ॥ ೧೪ ॥

ಇಂದು ನಾನು ಖಂಡಿತವಾಗಿ ಅವನನ್ನು ನೋಡುವೆನು, ಇದರಲ್ಲಿ ಸಂದೇಹವೇ ಇಲ್ಲ. ಅವನು ದೊಡ್ಡ-ದೊಡ್ಡ ಸಂತರಿಗೂ, ಲೋಕಪಾಲರಿಗೂ ಏಕಮಾತ್ರ ಆಶ್ರಯನಾಗಿದ್ದಾನೆ. ಎಲ್ಲರಿಗೂ ಪರಮಗುರುವಾಗಿ ಇದ್ದಾನೆ. ಅವನ ರೂಪ-ಸೌಂದರ್ಯಗಳು ಮೂರು ಲೋಕಗಳನ್ನು ವಿಮೋಹಗೊಳಿಸುವಂತಹುದು. ಕಣ್ಣುಳ್ಳವರಿಗೆ ಅವನನ್ನು ನೋಡುವುದೇ ಹಬ್ಬವಾಗಿದೆ. ಇದರಿಂದ ಸೌಂದರ್ಯದ ಅಧೀಶ್ವರಿಯಾದ ಸಾಕ್ಷಾತ್ ಲಕ್ಷ್ಮೀದೇವಿಯೂ ಕೂಡ ಅವನನ್ನು ಪಡೆಯಲು ಕಾತರಳಾಗಿದ್ದಾಳೆ. ಅಂತಹ ಸುಂದರಮೂರ್ತಿಯನ್ನು ನಾನಿಂದು ನೋಡಿಯೇ ನೋಡುವೆನು. ಬೆಳಿಗಿನಿಂದಲೂ ನನಗೆ ಶುಭ ಶಕುನಗಳೇ ಕಾಣಿಸಿಕೊಳ್ಳುತ್ತವೆ. ॥ ೧೪ ॥

ಅಥಾವರೂಢಃ ಸಪದೀಶಯೋ ರಥಾತ್
ಪ್ರಧಾನಪುಂಸೋಶ್ಚರಣಂ ಸ್ಪಲಬ್ಧಯೇ ।
ಧಿಯಾ ಧೃತಂ ಯೋಗಿಭಿರಪ್ಯಹಂ ಧ್ರುವಂ
ನಮಸ್ಯ ಆಭ್ಯಾಂ ಚ ಸಖೀನ್‌ವನೌಕಸಃ ॥ ೧೫ ॥

ಸರ್ವಶ್ರೇಷ್ಠರಾದ ಬಲರಾಮ-ಕೃಷ್ಣರನ್ನು ನಾನು ನೋಡುತ್ತಲೇ ಅವರ ಚರಣಾರವಿಂದಗಳಲ್ಲಿ ನಮಸ್ಕರಿಸಲು ರಥದಿಂದ ಇಳಿಯುವೆನು. ಅವರ ಪಾದಪದ್ಮಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುವೆನು. ಅವರ ಚರಣಗಳು ಅತ್ಯಂತ ದುರ್ಲಭವಾದವುಗಳು. ಮಹಾ-ಮಹಾ ಯೋಗಿಗಳು ಆತ್ಮಸಾಕ್ಷಾತ್ಕಾರಕ್ಕಾಗಿ ಧ್ಯಾನದ ಮೂಲಕ ಭಗವಂತನ ಚರಣ-ಕಮಲಗಳನ್ನು ತಮ್ಮ ಹೃದಯದಲ್ಲಿರಿಸಿಕೊಳ್ಳುತ್ತಾರೆ. ನಾನಾದರೋ ಅಂತಹ ಪರಮ ಪವಿತ್ರವಾದ ಚರಣಕಮಲಗಳನ್ನು ಪ್ರತ್ಯಕ್ಷವಾಗಿ ನೋಡಿ ಅವುಗಳ ಮೇಲೆ ಹೊರಳಾಡುವೆನು. ಆವರಿಬ್ಬರೊಡನೆ ಅವರ ವನವಾಸಿ ಮಿತ್ರರಾದ ಗೋಪಾಲಕರ ಪಾದಗಳಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ವಂದಿಸುವೆನು. ॥ ೧೫ ॥ ಹಾಗೆ ಚರಣಾವಿಂದಗಳಿಗೆ ನಮಸ್ಕರಿಸಿದ ನನ್ನ ತಲೆಯ ಮೆಲೆ ತನ್ನ ಕರಕಮಲವನ್ನು ಭಗವಂತನು ಇಡುವನಲ್ಲವೇ! ನಿಶ್ಚಯವಾಗಿಯೂ ಅದು ನನ್ನ ಸೌಭಾಗ್ಯವೇ ಸರಿ. ಕಾಲರೂಪವಾದ ಸರ್ಪಕ್ಕೆ ಭಯಗೊಂಡು ಭಗವಂತನ ಚರಣಾರವಿಂದಗಳನ್ನು ಆಶ್ರಯಿಸುವವರಿಗೆ, ಶರಣಾಗತರಾದವರಿಗೆ ಅವನ ಕರಕಮಲವು ಅಭಯದಾನ ಕೊಟ್ಟಿದೆ. ॥ ೧೬ ॥ ಆ ಭಗವಂತನ ಕರಕಮಲಗಳಲ್ಲಿ ಪೂಜಾಂಗವಾದ ಅರ್ಘ್ಯಪ್ರದಾನ ಮಾಡಿದ ಮಾತ್ರದಿಂದಲೇ ಇಂದ್ರ ಮತ್ತು ಬಲಿ ಇವರು ತ್ರೈಲೋಕ್ಯಾಧಿಪತ್ಯವನ್ನು ಪಡೆದುಕೊಂಡರು. ಕಮಲದ ಪರಿಮಳವನ್ನು ಹೊಂದಿದ ಆ ದಿವ್ಯ ಕರಕಮಲಗಳ ಸ್ಪರ್ಶಮಾತ್ರದಿಂದಲೇ ರಾಸಲೀಲೆಯ ಸಮಯದಲ್ಲಿ ವ್ರಜಯುವತಿಯರ ಆಯಾಸವೆಲ್ಲವೂ ಪರಿಹಾರವಾಯಿತು. ॥ ೧೭ ॥ ನಾನು ಈಗ ಕಂಸನದೂತನಾಗಿ ಅವನು ಕಳುಹಿಸಿದ್ದರಿಂದಲೆ ಶ್ರೀಕೃಷ್ಣನ ಬಳಿಗೆ ಹೋಗುತ್ತಿದ್ದೇನೆ. ಇದರಿಂದ ಶ್ರೀಕೃಷ್ಣನೇನಾದರೂ ನನ್ನನ್ನು ಶತ್ರುವೆಂದು ಭಾವಿಸಿಯಾನೇ? ಇಲ್ಲ. ಆತನೆಂದಿಗೂ ಹೀಗೆ ತಿಳಿಯಲಾರನು. ಏಕೆಂದರೆ, ಅವನು ನಿರ್ವಿಕಾರನೂ, ಸರ್ವಸಮನೂ, ಅಚ್ಯುತನೂ ಆಗಿರುವನು. ಸಮಸ್ತ ವಿಶ್ವಕ್ಕೆ ಸಾಕ್ಷಿಯೂ, ಸರ್ವಜ್ಞನೂ, ಚಿತ್ತದ ಒಳಗೂ-ಹೊರಗೂ ಇರತಕ್ಕವನು. ಅವನು ಸಮಸ್ತ ಪ್ರಾಣಿಗಳಲ್ಲಿಯೂ ಕ್ಷೇತ್ರಜ್ಞರೂಪದಿಂದ ನೆಲೆಸಿ ಅಂತಃಕರಣದ ಪ್ರತಿಯೊಂದು ಚೇಷ್ಟೆಯನ್ನು ತನ್ನ ನಿರ್ಮಲ ಜ್ಞಾನದೃಷ್ಟಿಯಿಂದ ನೋಡುತ್ತಾ ಇರುತ್ತಾನೆ. ॥ ೧೮ ॥ ಹಾಗಿರುವಾಗ ನನ್ನ ಶಂಕೆಯು ವ್ಯರ್ಥವಾದುದು. ನಾನಾದರೋ ಅವನ ಚರಣಗಳಲ್ಲಿ ಕೈಜೋಡಿಸಿಕೊಂಡು ವಿನೀತನಾಗಿ ನಿಂತುಕೊಳ್ಳುವೆನು. ಅವನು ನಸುನಗುತ್ತಾ ದಯಾಪೂರ್ಣವಾದ ಸ್ನೇಹದೃಷ್ಟಿಯಿಂದ ನನ್ನ ಕಡೆಗೆ ನೋಡುವನು. ಆ ಸಮಯದಲ್ಲಿ ನನ್ನ ಜನ್ಮ-ಜನ್ಮಾಂತರಗಳ ಸಮಸ್ತ ಪಾಪಗಳು ನಾಶವಾಗಿ ಹೊಗುವುವು. ಆಗ ನಾನು ಯಾವ ಸಂದೇಹವೂ ಇಲ್ಲದೆ ನಿತ್ಯನಿರಂತರವಾಗಿ ಪರಮಾನಂದದಲ್ಲಿ ಮುಳುಗಿ ಹೋಗುವೆನು. ॥ ೧೯ ॥ ನಾನು ಅವನ ಕುಟುಂಬಿಯೇ ಅಲ್ಲವೇ! ಯಾವಾಗಲೂ ಅವನ ಹಿತವನ್ನೇ ಬಯಸುವವನು. ಅವನಲ್ಲದೆ ಬೇರೆ ಯಾರೂ ನನಗೆ ಆರಾಧ್ಯದೇವರಿಲ್ಲ. ಇಂತಹ ಸ್ಥಿತಿಯಲ್ಲಿ ಅವನು ತನ್ನ ದೀರ್ಘವಾದ ಬಾಹುಗಳಿಂದ ಬರಸೆಳೆದು ನನ್ನನ್ನು ನಿಶ್ಚಯವಾಗಿ ಆಲಿಂಗಿಸಿಕೊಳ್ಳುವನು. ಆಹಾ! ಆ ಸಮಯ

ಅಪ್ಯಂಘ್ರಿಮೂಲೇ ಪತಿತಸ್ಯ ಮೇ ವಿಭುಃ
ಶಿರಸ್ಯಧಾಸ್ಯನ್ನಿಜಹಸ್ತಪಂಕಜಮ್ ।
ದತ್ತಾಭಯಂ ಕಾಲಭುಜಂಗರಂಹಸಾ
ಪ್ರೋದ್ವೇಜಿತಾನಾಂ ಶರಣೈಷಿಣಾಂ ನೃಣಾಮ್ ॥ ೧೬ ॥

ಸಮರ್ಹಣಂ ಯತ್ರ ನಿಧಾಯ ಕೌಶಿಕ-
ಸ್ತಥಾ ಬಲಿಶ್ಚಾಪ ಜಗತ್ತ್ರಯೇಂದ್ರತಾಮ್ ।
ಯದ್ವಾವಿಹಾರೇ ವ್ರಜಯೋಷಿತಾಂ ಶ್ರಮಂ
ಸ್ಪರ್ಶೇನ ಸೌಗಂಧಿಕಗಂಧ್ಯಪಾನುದತ್ ॥ ೧೭ ॥

ನ ಮಯ್ಯುಪೈಷ್ಯತ್ಯರಿಬುದ್ಧಿಮಚ್ಯುತಃ
ಕಂಸಸ್ಯ ದೂತಃ ಪ್ರಹಿತೋಽಪಿ ವಿಶ್ವದೃಕ್ ।
ಯೋಽಂತರ್ಬಹಿಶ್ಚೇತಸ ಏತದೀಹಿತಂ
ಕ್ಷೇತ್ರಜ್ಞ ಈಕ್ಷ್ಯಮಲೇನ ಚಕ್ಷುಷಾ ॥ ೧೮ ॥

ಅಪ್ಯಂಘ್ರಿಮೂಲೇಽವಹಿತಂ ಕೃತಾಂಜಲಿಂ
ಮಾಮೀಕ್ಷಿತಾ ಸಸ್ಮಿತಮಾರ್ದ್ರಯಾ ದೃಶಾ ।
ಸಪದ್ಯಪಧ್ವಸ್ತಸಮಸ್ತಕಿಲ್ಬಿಷೋ
ವೋಢಾ ಮುದಂ ವೀತವಿಶಂಕ ಊರ್ಜಿತಾಮ್ ॥ ೧೯ ॥

ಸುಹೃತ್ತಮಂ ಜ್ಞಾತಿಮನನ್ಯದೈವತಂ
ದೋರ್ಭ್ಯಾಂಬೃಹದ್ಭ್ಯಾಂಪರಿರಪ್ಸ್ಯತೇಽಥಮಾಮ್ ।
ಆತ್ಮಾ ಹಿ ತೀರ್ಥೀಕ್ರಿಯತೇ ತದೈವ ಮೇ
ಬಂಧಶ್ಚ ಕರ್ಮಾತ್ಮಕ ಉಚ್ಛಿಷ್ಯತಃ ॥ ೨೦ ॥

ಲಬ್ಧಾಂಗಸಂಗಂ ಪ್ರಣತಂ ಕೃತಾಂಜಲಿಂ
ಮಾಂ ವಕ್ಷ್ಯತೇಽಕ್ರೂರ ತತೇಶ್ಯುರುಶ್ರವಾಃ ।
ತದಾ ವಯಂ ಜನ್ಮಭೃತೋ ಮಹೀಯಸಾ
ನೈವಾದೃತೋ ಯೋ ಧಿಗಮುಷ್ಯ ಜನ್ಮ ತತ್ ॥ ೨೧ ॥

ನ ತಸ್ಯ ಕಶ್ಚಿದ್ದಯಿತಃ ಸುಹೃತ್ತಮೋ
ನ ಚಾಪ್ರಿಯೋ ದ್ವೇಷ್ಯ ಉಪೇಕ್ಷ್ಯ ಏವ ವಾ ।
ತಥಾಪಿ ಭಕ್ತಾನ್ಭಜತೇ ಯಥಾ ತಥಾ
ಸುರದ್ರುಮೋ ಯದ್ವದುಪಾಶ್ರಿತೋಽರ್ಥದಃ ॥ ೨೨ ॥

ಕಿಂಚಾಗ್ರಜೋ ಮಾವನತಂ ಯದೂತ್ತಮಃ
ಸ್ಮಯನ್ಪರಿಷ್ವಜ್ಯ ಗೃಹೀತಮಂಜಲೌ ।
ಗೃಹಂ ಪ್ರವೇಶ್ಯಾಪ್ತಸಮಸ್ತಸತ್ಕೃತಂ
ಸಂಪ್ರಕ್ಷ್ಯತೇ ಕಂಸಕೃತಂ ಸ್ವಬಂಧುಷು ॥ ೨೩ ॥

ಶ್ರೀಶುಕ ಉವಾಚ

ಇತಿ ಸಂಚಿಂತಯನ್ ಕೃಷ್ಣಂ ಶ್ವಫಲ್ಕತನಯೋಽಧ್ವನಿ ।
ರಥೇನ ಗೋಕುಲಂ ಪ್ರಾಪ್ತಃ ಸೂರ್ಯಶ್ಚಾಸ್ತಗಿರಿಂ ನೃಪ ॥ ೨೪ ॥

ಪದಾನಿ ತಸ್ಯಾಖಿಲಲೋಕಪಾಲ-
ಕಿರೀಟಜುಷ್ಟಾಮಲಪಾದರೇಣೋಃ ।
ದದರ್ಶ ಗೋಷ್ಠೇ ಕ್ಷಿತಿಕೌತುಕಾನಿ
ವಿಲಕ್ಷಿತಾನ್ಯಬ್ಜಯವಾಂಕುಶಾದ್ಯೈಃ ॥ ೨೫ ॥

ತದ್ದರ್ಶನಾಹ್ಲಾದವಿವೃದ್ಧಸಂಭ್ರಮಃ
ಪ್ರೇಮ್ಣೋರ್ಧ್ವರೋಮಾಶ್ರುಕಲಾಕುಲೇಕ್ಷಣಃ ।
ರಥಾದವಸ್ಕಂದ್ಯ ಸ ತೇಷ್ವಚೇಷ್ಟತ
ಪ್ರಭೋರಮೂನ್ಯಂಘ್ರಿರಜಾಂಸ್ಯಹೋ ಇತಿ ॥ ೨೬ ॥

ದಲ್ಲಿ ನನ್ನ ದೇಹವು ಪವಿತ್ರವಾಗುವುದಲ್ಲದೆ ಬೇರೆಯವರನ್ನು ಪವಿತ್ರವಾಗಿಸುವಂತಹುದಾಗಬಹುದು. ಅವನ ಆಲಿಂಗನವು ದೊರೆತಾಕ್ಷಣವೇ ಅನಾದಿಕಾಲದಿಂದ ಅಲೆಯುತ್ತಿರಲು ಕಾರಣವಾದ ನನ್ನ ಕರ್ಮಬಂಧನಗಳು ಕಡಿದು ಹೋಗುವವು. ॥ ೨೦ ॥ ಶ್ರೀಕೃಷ್ಣನು ನನ್ನನ್ನು ಅಪ್ಪಿಕೊಂಡಾಗ ನಾನು ಕೈಜೊಡಿಸಿಕೊಂಡು ತಲೆಯನ್ನು ತಗ್ಗಿಸಿ ನಿಂತುಕೊಂಡಾಗ ಅವನು ನನ್ನನ್ನು – ಅಕ್ರೂರ ಚಿಕ್ಕಪ್ಪ! ಎಂದು ಸಂಬೋಧಿಸುವನು. ಪವಿತ್ರ ಹಾಗೂ ಮಧುರ ಕೀರ್ತಿಯನ್ನು ವಿಸ್ತಾರಮಾಡಲಿಕ್ಕಾಗಿಯೇ ಅವನು ಲೀಲೆಯನ್ನು ಮಾಡುತ್ತಿದ್ದಾನಲ್ಲ! ಆಗ ನನ್ನ ಜೀವನವು ಸಫಲವಾಗಿ ಹೋಗುವುದು. ಶ್ರೀಕೃಷ್ಣನು ತನ್ನವರನ್ನಾಗಿಸಿ ಕೊಳ್ಳದವರ ಜನ್ಮವು ವ್ಯರ್ಥ, ಅವರ ಜೀವನಕ್ಕೆ ಧಿಕ್ಕಾರವಿರಲಿ. ॥ ೨೧ ॥ ಆದರೆ ಭಗವಂತನಿಗೆ ಪ್ರಿಯರಾದವರಿರಲೀ, ಅಪ್ರಿಯರಾದವರಿರಲಿ ಯಾರೂ ಇಲ್ಲ, ಆತ್ಮೀಯ ಮಿತ್ರನೂ ಇಲ್ಲ, ಶತ್ರುವೂ ಇಲ್ಲ, ಅವನು ಯಾರನ್ನೂ ಉಪೇಕ್ಷಿಸುವುದೂ ಇಲ್ಲ, ಕಲ್ಪವೃಕ್ಷವು ತನ್ನನ್ನು ಆಶ್ರಯಿಸಿ ಬೇಡಿದವರಿಗೆ ಬೇಕಾದ ವಸ್ತುಗಳನ್ನು ನೀಡುವಂತೆಯೇ ಭಗವಾನ್ ಶ್ರೀಕೃಷ್ಣನೂ ಯಾರು ಅವನನ್ನು ಹೇಗೆ ಭಜಿಸುತ್ತಾನೋ ಹಾಗೆಯೇ ಅವನನ್ನು ಪ್ರೀತಿಸುತ್ತಾನೆ. ॥ ೨೨ ॥ ನಾನು ಅವರ ಮುಂದೆ ವಿನೀತಭಾವದಿಂದ ಕೈಜೋಡಿಸಿಕೊಂಡು ನಿಂತುಕೊಂಡಾಗ ಬಲರಾಮನು ನಸುನಗುತ್ತಾ ನನ್ನನ್ನು ಅಪ್ಪಿಕೊಳ್ಳುವನು ಹಾಗೂ ನನ್ನ ಎರಡೂ ಕೈಗಳನ್ನೂ ಹಿಡಿದುಕೊಂಡು ಮನೆಯೊಳಗೆ ಕರಕೊಂಡು ಹೋಗುವನು. ಅಲ್ಲಿ ಎಲ್ಲ ರೀತಿಯಿಂದ ನನ್ನ ಸತ್ಕಾರವಾಗುವುದು. ಆದಾದ ಬಳಿಕ 'ಅಕ್ರೂರ! ಕಂಸನು ನಮ್ಮ ಬಂಧುಗಳೊಡನೆ ಹೇಗೆ ವ್ಯವಹರಿಸುವನು?' ಎಂದು ಪ್ರಶ್ನಿಸುವನು. ॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಶ್ವಫಲ್ಕನಂದನ ಅಕ್ರೂರನು ದಾರಿಯಲ್ಲಿ ಹೀಗೆ ಯೋಚಿಸುತ್ತಾ ಇರುವಾಗಲೇ ಅವನ ರಥವು ನಂದಗೋಕುಲಕ್ಕೆ ತಲುಪಿತು. ಆಗ ಸೂರ್ಯನು ಅಸ್ತಾಚಾಲವನ್ನು ಸೇರಿದ್ದನು. ॥ ೨೪ ॥ ಯಾವ ಚರಣಕಮಲಗಳ ಧೂಳಿಯನ್ನು ಲೋಕಪಾಲರೆಲ್ಲರೂ ತಮ್ಮ ಕಿರೀಟಗಳಲ್ಲಿ ಧರಿಸಿಕೊಳ್ಳುವರೋ (ತಲೆಯಲ್ಲಿ ಧರಿಸುವರೋ) ಅಂತಹ ಭಗವಂತನ ಚರಣ ಚಿಹ್ನೆಗಳನ್ನು ಅಕ್ರೂರನು ಆ ವ್ರಜದಲ್ಲಿ ದರ್ಶಿಸಿದನು. ಕಮಲ, ಯವ, ಅಂಕುಶ ಮೊದಲಾದ ಅಸಾಧಾರಣ ಚಿಹ್ನೆಗಳಿಂದ ಭೂದೇವಿಯ ಶೋಭೆಯನ್ನು ಹೆಚ್ಚಿಸುತ್ತಿದ್ದ ಭಗವಂತನ ಪಾದ ಚಿಹ್ನೆಗಳೆಂದೇ ಅರಿವಾಗುತ್ತಿತ್ತು. ॥ ೨೫ ॥ ಆ ಚರಣಚಿಹ್ನೆಗಳನ್ನು ಕಂಡೊಡನೆಯೇ ಅಕ್ರೂರನ ಹೃದಯ ಆನಂದದಿಂದ ತುಂಬಿಹೋಯಿತು. ಶ್ರೀಕೃಷ್ಣನನ್ನು ನೋಡಿದಷ್ಟೇ ಸಂಭ್ರಮಗೊಂಡಿತು. ಪ್ರೇಮಾಧಿಕ್ಯದಿಂದ ರೋಮರಾಜಿಗಳು ನಿಮಿರಿ ನಿಂತವು, ಕಣ್ಣುಗಳಲ್ಲಿ ಆನಂದಾಶ್ರುಗಳು ತುಂಬಿ ಬಂದುವು. ಆವನು ರಥದಿಂದ ಧುಮ್ಮಿಕ್ಕಿ ಆ ಪ್ರಭುವಿನ ಪಾದ ಧೂಳಿನಲ್ಲಿ ಹೊರಳಾಡಿದನು. ನನ್ನ ಪ್ರಭುವಿನ ಪವಿತ್ರವಾದ ಚರಣಧೂಳಿಯು ಇದಾಗಿದೆ ಎಂದು ಉದ್ಗರಿಸಿದನು. ॥ ೨೬ ॥

ದೇಹಂಭೃತಾಮಿಯಾನರ್ಥೋ ಹಿತ್ವಾದಂಭಂ ಭಯಂ ಶುಚಮ್ ।
ಸಂದೇಶಾದ್ಯೋ ಹರೇರ್ಲಿಂಗದರ್ಶನಶ್ರವಣಾದಿಭಿಃ
॥ ೨೭ ॥

ದದರ್ಶ ಕೃಷ್ಣಂ ರಾಮಂ ಚ ವ್ರಜೇ ಗೋದೋಹನಂ ಗತೌ ।
ಪೀತನೀಲಾಂಬರಧರೌ ಶರದಂಬುರುಹೇಕ್ಷಣೌ
॥ ೨೮ ॥

ಕಿಶೋರೌ ಶ್ಯಾಮಲಶ್ವೇತೌ ಶ್ರೀನಿಕೇತೌ ಬೃಹದ್ಭುಜೌ ।
ಸುಮುಖೌ ಸುಂದರವರೌ ಬಾಲದ್ವಿರದವಿಕ್ರಮೌ
॥ ೨೯ ॥

ಧ್ವಜವಜ್ರಾಂಕುಶಾಂಭೋಜೈಶ್ಚಿಹ್ನೈರಂಘ್ರಿಭಿರ್ವ್ರಜಮ್ ।
ಶೋಭಯಂತೌ ಮಹಾತ್ಮಾನಾವನುಕ್ರೋಶಸ್ಮಿತೇಕ್ಷಣೌ
॥ ೩೦ ॥

ಉದಾರರುಚಿರಕ್ರೀಡೌ ಸ್ರಗ್ವಿಣೌ ವನಮಾಲಿನೌ ।
ಪುಣ್ಯಗಂಧಾನುಲಿಪ್ತಾಂಗೌ ಸ್ನಾತೌ ವಿರಜವಾಸಸೌ
॥ ೩೧ ॥

ಪ್ರಧಾನಪುರುಷಾವಾದ್ಯೌ ಜಗದ್ಹೇತೂ ಜಗತ್ಪತೀ ।
ಅವತೀರ್ಣೌ ಜಗತ್ಯರ್ಥೇ ಸ್ವಾಂಶೇನ ಬಲಕೇಶವೌ
॥ ೩೨ ॥

ದಿಶೋ ವಿತಿಮಿರಾ ರಾಜನ್ ಕುರ್ವಾಣೌ ಪ್ರಭಯಾ ಸ್ವಯಾ ।
ಯಥಾ ಮಾರಕತಃ ಶೈಲೋ ರೌಪ್ಯಶ್ಚ ಕನಕಾಚಿತೌ
॥ ೩೩ ॥

ರಥಾತ್ತೂರ್ಣಮವಪ್ಲುತ್ಯ ಸೋಽಕ್ರೂರಃ ಸ್ನೇಹವಿಹ್ವಲಃ ।
ಪಪಾತ ಚರಣೌಪಾಂತೇ ದಂಡವದ್ರಾಮಕೃಷ್ಣಯೋಃ
॥ ೩೪ ॥

ಭಗವದ್ದರ್ಶನಾಹ್ಲಾದಬಾಷ್ಪಪರ್ಯಾಕುಲೇಕ್ಷಣಃ ।
ಪುಲಕಾಚಿತಾಂಗ ಔತ್ಕಂಠ್ಯಾತ್ ಸ್ವಾಖ್ಯಾನೇ ನಾಶಕನ್ನೃಪ
॥ ೩೫ ॥

ಪರೀಕ್ಷಿತನೇ! ಕಂಸನ ಸಂದೇಶವನ್ನು ಹೊತ್ತು ತಂದ ಅಕ್ರೂರನ ಇಷ್ಟರವರೆಗಿನ ಭಾವ-ಸ್ಥಿತಿಯೇ ಜೀವಿಗಳು ದೇವಹವನ್ನು ಧರಿಸಿದುದಕ್ಕೆ ಪರಮ ಲಾಭವು. ಅದಕ್ಕಾಗಿ ದಂಭ, ಭಯ, ಶೋಕ ಇವುಗಳನ್ನು ತ್ಯಜಿಸಿ ಭಗವಂತನ ಮೂರ್ತಿ ಚಿಹ್ನೆ, ಲೀಲೆ, ಸ್ಥಾನ ಮತ್ತು ಗುಣಗಳನ್ನು ದರ್ಶನ-ಶ್ರವಣದ ಮೂಲಕ ಇಂತಹ ಭಾವವನ್ನು ಸಂಪಾದಿಸುವುದೇ ಜೀವಮಾತ್ರರ ಪರಮ ಕರ್ತವ್ಯವಾಗಿದೆ. ॥ ೨೭ ॥

ವ್ರಜದಲ್ಲಿ ತಲುಪುತ್ತಲೇ ಅಕ್ರೂರನು ಬಲರಾಮ-ಶ್ರೀಕೃಷ್ಣರಿಬ್ಬರೂ ಹಸುಗಳ ಹಾಲುಕರೆಯುವಲ್ಲಿ ವಿರಾಜಿಸುತ್ತಿರುವುದನ್ನು ನೋಡಿದನು. ಶ್ಯಾಮಸುಂದರ ಶ್ರೀಕೃಷ್ಣನು ಪೀತಾಂಬರವನ್ನು ಮತ್ತು ಗೌರಾಂಗನಾದ ಬಲರಾಮನು ನೀಲಾಂಬರವನ್ನು ಉಟ್ಟಿದ್ದರು. ಶರತ್ಕಾಲದ ಕಮಲದಂತೆ ಅವರ ಕಣ್ಣುಗಳು ಅರಳಿದ್ದವು. ॥ ೨೮ ॥ ಈಗ ತಾನೇ ಅವರು ಕಿಶೋರಾವಸ್ಥೆಯನ್ನು ಪ್ರವೇಶಿಸಿದ್ದರು. ಗೌರ ಶ್ಯಾಮಲ ವರ್ಣದಿಂದ ಶೋಭಿಸುತ್ತಿದ್ದ ಅವರಿಬ್ಬರೂ ಸೌಂದರ್ಯ ಗಣಿಗಳಂತಿದ್ದರು. ಆಜಾನು ಬಾಹುಗಳಾಗಿದ್ದರು. ಸುಂದರವಾದ ಮುಖಾರವಿಂದದಿಂದ ಕೂಡಿದ್ದು ಅತ್ಯಂತ ಮನೋಹರರಾಗಿ ಇದ್ದರು. ಮರಿಯಾನೆಯಂತೆ ಅವರ ನಡಿಗೆ ಗಂಭೀರವಾಗಿ ಇತ್ತು. ॥ ೨೯ ॥ ಅವರ ಚರಣಗಳಲ್ಲಿ ಧ್ವಜ, ವಜ್ರ, ಅಂಕುಶ, ಕಮಲ ಇವುಗಳ ಚಿಹ್ನೆಯಿದ್ದಿತು. ಅವರು ನಡೆವಾಗ ಪೃಥಿವಿಯು ಈ ಚಿಹ್ನೆಗಳಿಂದ ಅಂಕಿತವಾಗಿ ಶೋಭಾಯಮಾನವಾಗುತ್ತಿತ್ತು. ದಯಾರಸವೇ ಒಸರುತ್ತಿದೆಯೋ ಎಂಬಂತೆ ಅವರ ಮುಗುಳ್ನಗು ಇತ್ತು. ಅವರು ಉದಾರತೆಯ ಮೂರ್ತಿಮಂತ ಸ್ವರೂಪರೇ ಆಗಿದ್ದರು. ॥ ೩೦ ॥ ಅವರ ಒಂದೊಂದು ಲೀಲೆಯೂ ಉದಾರತೆಯಿಂದಲೂ, ಸುಂದರ ಕಲೆಯಿಂದಲೂ ಕೂಡಿತ್ತು. ಕೊರಳಿನಲ್ಲಿ ವನಮಾಲೆಯನ್ನು, ಮಣಿಮಾಲೆಗಳನ್ನು ಧರಿಸಿದ್ದರು. ಅವರು ಆಗತಾನೇ ಸ್ನಾನಮಾಡಿ ನಿರ್ಮಲವಾದ ವಸ್ತ್ರಗಳನ್ನುಟ್ಟಿದ್ದರು. ಶರೀರಕ್ಕೆ ಪವಿತ್ರವಾದ ಸುಗಂಧಿತ ಅಂಗರಾಗವನ್ನು, ಚಂದನವನ್ನು ಹಚ್ಚಿಕೊಂಡಿದ್ದರು. ॥ ೩೧ ॥ ಪರೀಕ್ಷಿತನೇ! ಜಗತ್ತಿನ ಆದಿ ಕಾರಣನೂ, ಜಗತ್ಪತಿಯೂ ಆದ ಪುರುಷೋತ್ತಮನೇ ಪ್ರಪಂಚದ ರಕ್ಷಣೆಗಾಗಿ ತನ್ನ ಪೂರ್ಣಾಂಶದಿಂದ ಬಲರಾಮ-ಶ್ರೀಕೃಷ್ಣರಾಗಿ ಅವತರಿಸಿ, ತಮ್ಮ ಅಂಗಕಾಂತಿಯಿಂದ ಹತ್ತು ದಿಕ್ಕುಗಳ ಅಂಧಕಾರವನ್ನೂ ತೊಡೆದು ಹಾಕುತ್ತಿರುವುದನ್ನು ಅಕ್ರೂರನು ನೋಡಿದನು. ಬಂಗಾರದ ಮೆರಗು ಕೊಟ್ಟ ಬೆಳ್ಳಿಯ ಮತ್ತು ಮರಕತ ಪರ್ವತಗಳಂತೆ ಕಂಗೊಳಿಸುತ್ತಿದ್ದರು. ॥ ೩೨-೩೩ ॥ ಅವರನ್ನು ನೋಡುತ್ತಲೇ ಅಕ್ರೂರನು ಪ್ರೇಮಾಧಿಕ್ಯದಿಂದ ವಿಹ್ವಲನಾಗಿ ರಥದಿಂದ ಕೆಳಗೆ ಧುಮುಕಿ ಭಗವಾನ್ ಶ್ರೀಕೃಷ್ಣ ಬಲರಾಮರ ಚರಣಗಳ ಬಳಿಸಾರಿ ಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೩೪ ॥ ಪರೀಕ್ಷಿತನೇ! ಭಗವಂತನ ದರ್ಶನದಿಂದ ಅವನ ಕಣ್ಣುಗಳಲ್ಲಿ ಆನಂದಬಾಷ್ಪಗಳು ತುಂಬಿಹೋದವು. ಶರೀರ ವೆಲ್ಲವೂ ಪುಳಕಗೊಂಡಿತು. ಉತ್ಕಂಠತೆಯಿಂದ ಕೊರಳು ಬಿಗಿದು ತನ್ನ ಹೆಸರನ್ನು ಉಚ್ಚರಿಸಲಾರದಷ್ಟು ಆಹ್ಲಾದಿತನಾದನು. ॥ ೩೫ ॥

ಭಗವಾಂಸ್ತಮಭಿಪ್ರೇತ್ಯ ರಥಾಂಗಾಂಕಿತಪಾಣಿನಾ ।
ಪರಿರೇಭೇಽಭ್ಯುಪಾಕೃಷ್ಯ ಪ್ರೀತಃ ಪ್ರಣತವತ್ಸಲಃ
॥ ೩೬ ॥

ಸಂಕರ್ಷಣಶ್ಚ ಪ್ರಣತಮುಪಗುಹ್ಯ ಮಹಾಮನಾಃ ।
ಗೃಹೀತ್ವಾಪಾಣಿನಾ ಪಾಣೇ ಅನಯತ್ಸಾನುಜೋ ಗೃಹಮ್
॥ ೩೭ ॥

ಪೃಷ್ಟ್ವಾಥ ಸ್ವಾಗತಂ ತಸ್ಮೈ ನಿವೇದ್ಯ ಚ ವರಾಸನಮ್ ।
ಪ್ರಕ್ಷಾಲ್ಯ ವಿಧಿವತ್ಪಾದೌ ಮಧುಪರ್ಕಾರ್ಹಣಮಾಹರತ್
॥ ೩೮ ॥

ನಿವೇದ್ಯ ಗಾಂ ಚಾತಿಥಯೇ ಸಂವಾಹ್ಯ ಶ್ರಾಂತಮಾದೃತಃ ।
ಅನ್ನಂ ಬಹುಗುಣಂ ಮೇಧ್ಯಂ ಶ್ರದ್ಧಯೋಪಾಹರದ್ವಿಭುಃ
॥ ೩೯ ॥

ತಸ್ಮೈ ಭುಕ್ತವತೇ ಪ್ರೀತ್ಯಾ ರಾಮಃ ಪರಮಧರ್ಮವಿತ್ ।
ಮುಖವಾಸೈರ್ಗಂಧಮಾಲ್ಯೈಃ ಪರಾಂ ಪ್ರೀತಿಂ ವ್ಯಧಾತ್ಪುನಃ
॥ ೪೦ ॥

ಪಪ್ರಚ್ಛ ಸತ್ಕೃತಂ ನಂದಃ ಕಥಂ ಸ್ಥ ನಿರನುಗ್ರಹೇ ।
ಕಂಸೇ ಜೀವತಿ ದಾಶಾರ್ಹ ಸೌನಪಾಲಾ ಇವಾವಯಃ
॥ ೪೧ ॥

ಯೋಽವಧೀತ್ಸ್ವಸುಸ್ತೋಕಾನ್ ಕ್ರೋಶಂತ್ಯಾ ಅಸುತೃಪ್ಪಲಃ ।
ಕಿಂ ನು ಸ್ವಿತ್ತತ್ಪ್ರಜಾನಾಂ ವಃ ಕುಶಲಂ ವಿಮೃಶಾಮಹೇ
॥ ೪೨ ॥

ಇತ್ಥಂ ಸೂನೃತಯಾ ವಾಚಾ ನಂದೇನ ಸುಸಭಾಜಿತಃ ।
ಅಕ್ರೂರಃ ಪರಿಪೃಷ್ಟೇನ ಜಹಾವಧ್ವಪರಿಶ್ರಮಮ್
॥ ೪೩ ॥

ಶರಣಾಗತವತ್ಸಲ ಶ್ರೀಕೃಷ್ಣನು ಅವನ ಮನಸ್ಸಿನ ಭಾವವನ್ನರಿತು ಅತ್ಯಂತ ಪ್ರಸನ್ನತೆಯಿಂದ ತನ್ನ ಚಕ್ರಾಂಕಿತ ಕೈಗಳಿಂದ ಅವನನ್ನು ಬರಸೆಳೆದು ಆಲಿಂಗಿಸಿಕೊಂಡನು. ॥ ೩೬ ॥ ಅನಂತರ ಕೈ ಜೋಡಿಸಿ ಕೊಂಡು ವಿನೀತನಾಗಿ ಮಹಾತ್ಮನಾದ ಬಲರಾಮನ ಮುಂದೆ ನಿಂತುಕೊಂಡಾಗ ಅವನೂ ಅಕ್ರೂರನನ್ನು ಅಪ್ಪಿಕೊಂಡನು. ಅವನ ಒಂದು ಕೈಯನ್ನು ಶ್ರೀಕೃಷ್ಣನೂ, ಮತ್ತೊಂದನ್ನು ಬಲರಾಮನು ಹಿಡಿದುಕೊಂಡು ಮನೆಯೊಳಗೆ ಕರೆದೊಯ್ದರು. ॥ ೩೭ ॥

ಮನೆಯೊಳಗೆ ಕರೆತಂದು ಭಗವಂತನು ಅಕ್ರೂರನ ಸ್ವಾಗತ ಸತ್ಕಾರವನ್ನು ಮಾಡಿ, ಕುಶಲ ಪ್ರಶ್ನೆಗಳಾದ ಬಳಿಕ, ಆಸನದಲ್ಲಿ ಕುಳ್ಳಿರಿಸಿ ವಿಧಿವತ್ತಾಗಿ ಅವನ ಕಾಲುಗಳನ್ನು ತೊಳೆದು ಮಧು ಪರ್ಕಾದಿ ಉಪಚಾರಗಳನ್ನು ಅರ್ಪಿಸಿದನು. ॥ ೩೮ ॥ ಆನಂತರ ಶ್ರೀಕೃಷ್ಣನು ಅತಿಥಿಯಾದ ಅಕ್ರೂರನಿಗೆ ಹಸುವೊಂದನ್ನು ಕೊಟ್ಟು ಅವನ ಕಾಲನ್ನೊತ್ತಿ ಮಾರ್ಗಾಯಾಸವನ್ನು ಪರಿಹರಿಸಿದನು. ಬಳಿಕ ಶ್ರದ್ಧಾದರಗಳಿಂದ ಅವನಿಗೆ ಪವಿತ್ರವೂ, ಅನೇಕಗುಣಗಳಿಂದ ಕೂಡಿದ ಮೃಷ್ಟಾನ್ನವನ್ನು ಭೋಜನ ಮಾಡಿಸಿದನು. ॥ ೩೯ ॥ ಅಕ್ರೂರನು ಭೋಜನವನ್ನು ಪೂರೈಸಿದ ಬಳಿಕ ಧರ್ಮದ ಮರ್ಮಜ್ಞನಾದ ಭಗವಾನ್ ಬಲರಾಮನೂ ಅತ್ಯಂತ ಪ್ರೇಮ ದಿಂದ ಸುವಾಸನೆಯನ್ನುಂಟುಮಾಡುವ ತಾಂಬೂಲವನ್ನೂ ಸುಗಂಧಿತ ಪುಷ್ಪಹಾರವನ್ನೂ ಕೊಟ್ಟು ಅಕ್ರೂರನನ್ನು ಆನಂದ ಗೊಳಿಸಿದನು. ॥ ೪೦ ॥ ಹೀಗೆ ಆತಿಥ್ಯ-ಸತ್ಕಾರಗಳಾದ ಬಳಿಕ ನಂದಗೋಪನು ಅಕ್ರೂರನ ಬಳಿಗೆ ಬಂದು ಕೇಳಿದನು – ಅಕ್ರೂರ ಮಹಾಶಯನೇ! ನಿರ್ದಯಿಯಾದ ಕಂಸನು ಬದುಕಿರುವಾಗ ಕಟುಕನ ಬಳಿಯಲ್ಲಿರುವ ಕುರಿಗಳಂತೆ ನೀವೆಲ್ಲರೂ ಹೇಗೆ ತಾನೇ ಜೀವಿಸಿರುವಿರಿ ? ॥ ೪೧ ॥ ಪ್ರಾಣಘಾತಕನಾದ, ನೀಚನಾದ ಕಂಸನು ಗೋಳಾಡುತ್ತಿದ್ದ ತನ್ನ ತಂಗಿಯ ಹಸುಕೂಸುಗಳನ್ನು ಕೊಂದು ಬಿಟ್ಟಿರುವನು. ಅಂತಹವನ ಆಡಳಿತಕ್ಕೆ ಒಳಪಟ್ಟಿರುವ ಪ್ರಜೆಗಳ ಕುಶಲವನ್ನು ವಿಚಾರಿಸುವುದರಲ್ಲಿ ಪ್ರಯೋಜನ ವೇನಿದೆ ? ॥ ೪೨ ॥ ಅಕ್ರೂರನೂ ನಂದಗೋಪನಲ್ಲಿ ಮೊದಲೇ ಕುಶಲವನ್ನು ಕೇಳಿದ್ದನು. ಈಗ ಹೀಗೆ ನಂದರಾಜನು ಮಧುರವಾಗಿ ಅಕ್ರೂರನಲ್ಲಿ ಕುಶಲವನ್ನು ಕೇಳಿ ಅವನನ್ನು ಸಮ್ಮಾನಿಸಿದಾಗ ಅವನ ಮಾರ್ಗಾಯಾಸವೆಲ್ಲ ದೂರವಾಯಿತು. ॥ ೪೩ ॥

ಮೂವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೩೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಅಕ್ರೂರಾಗಮನಂ ನಾಮ ಅಷ್ಟತ್ರಿಂಶೋಽಧ್ಯಾಯಃ ॥ ೩೮ ॥

ಮೂವತ್ತೊಂಭತ್ತನೆಯ ಅಧ್ಯಾಯ

ಶ್ರೀಕೃಷ್ಣ-ಬಲರಾಮರು ಮಥುರಾಗಮನ

ಶ್ರೀಶುಕ ಉವಾಚ

ಸುಖೋಪವಿಷ್ಟಃ ಪರ್ಯಂಕೇ ರಾಮಕೃಷ್ಣೋರುಮಾನಿತಃ ।
ಲೇಭೇ ಮನೋರಥಾನ್ಸರ್ವಾನ್ ಪಥಿ ಯಾನ್ಸ ಚಕಾರ ಹ
॥ ೧ ॥

ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ ।
ತಥಾಪಿ ತತ್ಪರಾ ರಾಜನ್ ನಹಿ ವಾಂಛಂತಿ ಕಿಂಚನ
॥ ೨ ॥

ಸಾಯಂತನಾಶನಂ ಕೃತ್ವಾ ಭಗವಾನ್ ದೇವಕೀಸುತಃ ।
ಸುಹೃತ್ಸು ವೃತ್ತಂ ಕಂಸಸ್ಯ ಪಪ್ರಚ್ಛಾನ್ಯಚ್ಚಿಕೀರ್ಷಿತಮ್
॥ ೩ ॥

ಶ್ರೀಭಗವಾನುವಾಚ

ತಾತ ಸೌಮ್ಯಾಗತಃ ಕಚ್ಚಿತ್ ಸ್ವಾಗತಂ ಭದ್ರಮಸ್ತು ವಃ ।
ಅಪಿ ಸ್ವಜ್ಞಾತಿಬಂಧೂನಾಮನಮೀವಮನಾಮಯಮ್
॥ ೪ ॥

ಕಿಂ ನು ನಃ ಕುಶಲಂ ಪೃಚ್ಛೇ ವಿಧಮಾನೇ ಕುಲಾಮಯೇ ।
ಕಂಸೇ ಮಾತುಲನಾಮ್ನ್ಯಂಗ ಸ್ವಾನಾಂ ನಸ್ತತ್ಪ್ರಜಾಸು ಚ
॥ ೫ ॥

ಅಹೋ ಅಸ್ಮದಭೂದ್ಭೂರಿ ಪಿತ್ರೋರ್ವ್ಯಜನಮಾರ್ಯಯೋಃ ।
ಯದ್ದೇತೋಃ ಪುತ್ರಮರಣಂ ಯದ್ದೇತೋರ್ಬಂಧನಂ ತಯೋಃ
॥ ೬ ॥

ದಿಷ್ಟ್ಯಾದ್ಯ ದರ್ಶನಂ ಸ್ವಾನಾಂ ಮಹ್ಯಂ ವಃ ಸೌಮ್ಯ ಕಾಂಕ್ಷಿತಮ್ ।
ಸಂಜಾತಂ ವರ್ಣ್ಯತಾಂ ತಾತ ತವಾಗಮನಕಾರಣಮ್
॥ ೭ ॥

ಶ್ರೀಶುಕ ಉವಾಚ

ಪೃಷ್ಟೋ ಭಗವತಾ ಸರ್ವಂ ವರ್ಣಯಾಮಾಸ ಮಾಧವಃ ।
ವೈರಾನುಬಂಧಂ ಯದುಷು ವಸುದೇವವಧೋದ್ಯಮಮ್
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಬಲರಾಮ-ಶ್ರೀಕೃಷ್ಣರಿಂದ ಚೆನ್ನಾಗಿ ಆದರಿಸಲ್ಪಟ್ಟ ಅಕ್ರೂರನು ಮಂಚದ ಮೇಲೆ ಸುಖವಾಗಿ ಕುಳಿತಿದ್ದನು. ಅವನು ಒರುವಾಗ ದಾರಿಯಲ್ಲಿ ಏನೇನನ್ನು ಬಯಸಿದ್ದನೋ ಅದೆಲ್ಲವನ್ನೂ ಪಡೆದು ಕೊಂಡನು. ಮನೋರಥಗಳೆಲ್ಲವೂ ಈಡೇರಿದವು. ॥ ೧ ॥ ರಾಜನೇ ! ಮಹಾಲಕ್ಷ್ಮಿಗೆ ನಿವಾಸಸ್ಥಾನವಾದ ಭಗವಾನ್ ಶ್ರೀಕೃಷ್ಣನೇ ಪ್ರಸನ್ನನಾದನೆಂದರೆ ಲಭಿಸದ ವಸ್ತುವು ಯಾವುದು ತಾನೇ ಇದ್ದೀತು ? ಹೀಗಿದ್ದರೂ ಭಗವಂತನಲ್ಲಿಯೇ ಪರಮಭಕ್ತಿಯುಳ್ಳ ಭಕ್ತೋತ್ತಮರು ಯಾವುದೇ ವಸ್ತುವನ್ನು ಬಯಸುವುದಿಲ್ಲ. ॥ ೨ ॥ ದೇವಕೀನಂದನ ಶ್ರೀಕೃಷ್ಣನು ಸಾಯಂಕಾಲದ ಭೋಜನಾನಂತರ ಅಕ್ರೂರನ ಬಳಿಗೆ ಬಂದು – ತನ್ನ ಸ್ವಜನ – ಸಂಬಂಧಿಗಳ ಜೊತೆಗೆ ಕಂಸನು ಹೇಗೆ ವ್ಯವಹರಿಸುವನು ಹಾಗೂ ಮುಂದಿನ ಕಾರ್ಯಕ್ರಮದ ಕುರಿತು ಕೇಳಿದನು. ॥ ೩ ॥

ಭಗವಾನ್ ಶ್ರೀಕೃಷ್ಣನು ಕೇಳಿದನು – ಸೌಮ್ಯನಾದ ಅಕ್ರೂರನೇ ! ಪ್ರಯಾಣದಲ್ಲಿ ಯಾವ ತೊಂದರೆಯೂ ಆಗಲಿಲ್ಲವಲ್ಲ ? ನಿನಗೆ ಸ್ವಾಗತ ಬಯಸುತ್ತೇನೆ. ನಿನಗೆ ಮಂಗಳವಾಗಲಿ. ಮಥುರೆಯಲ್ಲಿ ನಮ್ಮ ಆತ್ಮೀಯ ಬಂಧುಗಳೂ, ಸುಹೃದರೂ ಹಾಗೂ ಇತರ ಬಾಂಧವರೆಲ್ಲರೂ ಕುಶಲರಾಗಿದ್ದು ಸ್ವಸ್ಥರಾಗಿರುವರೇ ? ॥ ೪ ॥ ಹೆಸರಿಗೆ ಮಾತ್ರ ಮಾವನಾದ ಕಂಸನಾದರೋ ನಮ್ಮ ಕುಲಕ್ಕೆ ಒಂದು ಭಯಂಕರ ವ್ಯಾಧಿರೂಪನೇ ಆಗಿರುವನು. ಅವನು ವೃದ್ಧಿ ಹೊಂದುತ್ತಿರುವವರೆಗೆ ನಾವು ನಮ್ಮ ವಂಶಿಯರ, ಸಂತಾನದ ಮತ್ತು ಪ್ರಜೆಗಳ ಕುಶಲವನ್ನು ಕೇಳುವುದೇನಿದೆ ? ॥ ೫ ॥ ಸೌಮ್ಯನೇ ! ಇದೊಂದು ನಮಗೆ ಅತ್ಯಂತ ದುಃಖದ ಸಂಗತಿಯಾಗಿದೆ. ನನ್ನ ಸಲುವಾಗಿಯೇ ನಿರಪರಾಧಿಗಳಾದ, ಸದಾಚಾರ ಸಂಪನ್ನರಾದ ನನ್ನ ತಂದೆ-ತಾಯಿಗಳು ಪಡಬಾರದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ನನ್ನ ಕಾರಣದಿಂದಲೇ ಅವರ ಕಾಲುಗಳಿಗೆ ಸಂಕೋಲೆಗಳನ್ನು ತೊಡಿಸಿ ಸೆರೆಮನೆಯಲ್ಲಿಡಲಾಗಿದೆ. ನನ್ನ ಕಾರಣದಿಂದಲೇ ಅವರ ಮಕ್ಕಳೂ ಕೊಲ್ಲಲ್ಪಟ್ಟರು. ॥ ೬ ॥ ನಿಮ್ಮನ್ನೆಲ್ಲ ನೋಡಬೇಕೆಂದು ನಾನು ಬಹಳ ದಿನಗಳಿಂದ ಬಯಸುತ್ತಿದ್ದೆ, ನನ್ನ ಸೌಭಾಗ್ಯದಿಂದ ಆ ಅಭಿಲಾಷೆಯು ಇಂದು ಪೂರ್ಣವಾಯಿತು. ಸೌಮ್ಯಸ್ವಭಾವದ ಚಿಕ್ಕಪ್ಪನವರೇ ! ತಮ್ಮ ಶುಭಾಗಮನವು ಯಾವ ನಿಮಿತ್ತದಿಂದ ಆಯಿತು ಎಂಬುದನ್ನು ದಯವಿಟ್ಟು ತಿಳಿಸಿರಿ. ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಹೀಗೆ ಪ್ರಶ್ನಿಸಿದಾಗ ಅಕ್ರೂರನು ಹೇಳಿದನು ಕಂಸನಾದರೋ ಯದುವಂಶೀಯರೊಡನೆ ದ್ವೇಷವನ್ನು ಕಟ್ಟಿ ಕೊಂಡಿರುವನು. ಅವನು ವಸುದೇವನನ್ನು ಕೂಡ ವಧಿಸಲು ಪ್ರಯತ್ನಶೀಲನಾಗಿರುವನು. ॥ ೮ ॥

ಯತ್ಸಂದೇಶೋ ಯದರ್ಥಂ ವಾ ದೂತಃ ಸಂಪ್ರೇಷಿತಃ ಸ್ವಯಮ್ ।
ಯದುಕ್ತಂ ನಾರದೇನಾಸ್ಯ ಸ್ವಜನ್ಮಾನಕದುಂದುಭೇಃ
॥ ೯ ॥

ಶ್ರುತ್ವಾಕ್ರೂರವಚಃ ಕೃಷ್ಣೋ ಬಲಶ್ಚ ಪರವೀರಹಾ ।
ಪ್ರಹಸ್ಯ ನಂದಂ ಪಿತರಂ ರಾಜ್ಞಾऽऽದಿಷ್ಟಂ ವಿಜಜ್ಞತುಃ
॥ ೧೦ ॥

ಗೋಪಾನ್ ಸಮಾದಿಶತ್ಸೋऽಪಿ ಗೃಹ್ಯತಾಂ ಸರ್ವಗೋರಸಃ ।
ಉಪಾಯನಾನಿ ಗೃಹ್ಣೀಧ್ವಂ ಯುಜ್ಯಂತಾಂ ಶಕಟಾನಿ ಚ
॥ ೧೧ ॥

ಯಾಸ್ಯಾಮಃ ಶ್ವೋ ಮಧುಪುರೀಂ ದಾಸ್ಯಾಮೋ ನೃಪತೇ ರಸಾನ್ ।
ದ್ರಕ್ಷ್ಯಾಮಃ ಸುಮಹತ್ಪರ್ವ ಯಾಂತಿ ಜಾನಪದಾಃ ಕಿಲ ।
ಏವಮಾಘೋಷಯತ್ ಕ್ಷತ್ತಾ ನಂದಗೋಪಃ ಸ್ವಗೋಕುಲೇ
॥ ೧೨ ॥

ಗೋಪ್ಯಸ್ತಾತ್ತದುಪಶ್ರುತ್ಯ ಬಭೂವುರ್ವ್ಯಥಿತಾ ಭೃಶಮ್ ।
ರಾಮಕೃಷ್ಣೌ ಪುರೀಂ ನೇತುಮಕ್ರೂರಂ ವ್ರಜಮಾಗತಮ್
॥ ೧೩ ॥

ಕಾಶ್ಚಿತ್ತತ್ಕೃತಹೃತ್ತಾಪಶ್ವಾಸಮ್ಲಾನಮುಖಶ್ರಿಯಃ ।
ಸ್ರಂಸದ್ದುಕೂಲವಲಯಕೇಶಗ್ರಂಥ್ಯಶ್ಚ ಕಾಶ್ಚನ
॥ ೧೪ ॥

ಅನ್ಯಾಶ್ಚ ತದನುಧ್ಯಾನನಿವೃತ್ತಾಶೇಷವೃತ್ತಯಃ ।
ನಾಭ್ಯಜಾನನ್ನಿಮಂ ಲೋಕಮಾತ್ಮಲೋಕಂ ಗತಾ ಇವ
॥ ೧೫ ॥

ಸ್ಮರಂತ್ಯಶ್ಚಾಪರಾಃ ಶೌರೇರನುರಾಗಸ್ಮಿತೇರಿತಾಃ ।
ಹೃದಿಸ್ಪೃಶಶ್ಚಿತ್ರಪದಾ ಗಿರಃ ಸಂಮುಮುಹುಃ ಸ್ತ್ರಿಯಃ
॥ ೧೬ ॥

ಗತಿಂ ಸುಲಲಿತಾಂ ಚೇಷ್ಟಾಂ ಸ್ನಿಗ್ಧಹಾಸಾವಲೋಕನಮ್ ।
ಶೋಕಾಪಹಾನಿ ನರ್ಮಾಣಿ ಪ್ರೋದ್ದಾಮಚರಿತಾನಿ ಚ
॥ ೧೭ ॥

ಚಿಂತಯಂತ್ಯೋ ಮುಕುಂದಸ್ಯ ಭೀತಾ ವಿರಹಕಾತರಾಃ ।
ಸಮೇತಾಃ ಸಂಘಶಃ ಪ್ರೋಚುರಶ್ರುಮುಖ್ಯೋऽಚ್ಯುತಾಶಯಾಃ
॥ ೧೮ ॥

ಅಕ್ರೂರನು ಕಂಸನ ಸಂದೇಶವನ್ನೂ ಯಾವ ಉದ್ದೇಶದಿಂದ ತನ್ನನ್ನು ದೂತನಾಗಿ ಕಳಿಸಿರುವ ನೆಂಬುದನ್ನು ತಿಳಿಸಿದನು. ವಸುದೇವನ ಮನೆಯಲ್ಲಿ ಶ್ರೀಕೃಷ್ಣನು ಹುಟ್ಟಿರುವ ವೃತ್ತಾಂತವನ್ನು ನಾರದರು ಕಂಸನಿಗೆ ತಿಳಿಸಿದುದೆಲ್ಲವನ್ನು ಹೇಳಿದನು. ॥ ೯ ॥ ಅಕ್ರೂರನು ಹೇಳಿದುದೆಲ್ಲವನ್ನೂ ಕೇಳಿ ಶತ್ರುವಿನಾಶಕರಾದ ಶ್ರೀಕೃಷ್ಣ ಬಲರಾಮರು ನಗತೊಡಗಿದರು ಮತ್ತು ಶ್ರೀಕೃಷ್ಣನು ತಂದೆಯಾದ ನಂದಗೋಪನಿಗೆ ಕಂಸನ ಆದೇಶವನ್ನು ತಿಳಿಸಿದನು. ॥ ೧೦ ॥ ಕಂಸನ ಆಜ್ಞೆಯನ್ನು ಕೇಳುತ್ತಲೇ ನಂದಗೋಪನು ಗೋಪಾಲರಿಗೆ ಆಪ್ತಣೆ ಮಾಡಿದನು – ಗೋಪಾಲರೇ! ಹಾಲು-ಮೊಸರು ಮುಂತಾದ ಗೋರಸವನ್ನು ಸಂಗ್ರಹಿಸಿ ಸಿದ್ಧಪಡಿಸಿರಿ. ರಾಜನಿಗೆ ಕೊಡಬೇಕಾದ ಕಪ್ಪ-ಕಾಣಿಕೆಗಳನ್ನು ಎತ್ತಿಕೊಂಡು ಪ್ರಯಾಣಕ್ಕೆ ಎತ್ತಿನ ಗಾಡಿಗಳು ಸಿದ್ಧವಾಗಲಿ. ॥ ೧೧ ॥ ನಾಳೆ ಪ್ರಾತಃಕಾಲವೇ ನಾವು ಮಥುರಾಪಟ್ಟಣಕ್ಕೆ ಪ್ರಯಾಣ ಮಾಡಬೇಕಾಗಿದೆ. ಅಲ್ಲಿಗೆ ಹೋಗಿ ಕಂಸರಾಜನಿಗೆ ಗೋರಸವನ್ನು ಕೊಡುವೆವು. ಅಲ್ಲಿ ಒಂದು ಅದ್ಭುತವಾದ ಉತ್ಸವ ನಡೆಯುವುದು. ಅದನ್ನು ನೋಡಲು ದೇಶದ ಎಲ್ಲ ಪ್ರಜೆಗಳು ಆಗಮಿಸುವರು. ನಾವೂ ಅದನ್ನು ನೋಡುವಾ, ಹೀಗೆ ನಂದಗೋಪನು ತಳವಾರನ ಮೂಲಕವಾಗಿ ನಂದಗೋಕುಲದಲ್ಲೆಲ್ಲಾ ಡಂಗುರ ಸಾರಿದನು. ॥ ೧೨ ॥

ಪರೀಕ್ಷಿತನೇ! ರಾಮ-ಕೃಷ್ಣರನ್ನು ಮಥುರಾ ಪಟ್ಟಣಕ್ಕೆ ಕರೆದೊಯ್ಯಲು ಅಕ್ರೂರನು ವ್ರಜಕ್ಕೆ ಬಂದಿರುವನೆಂದು ಗೋಪಿಯರು ಕೇಳಿದಾಗ ಅವರು ಬಹಳ ದುಃಖಿತರಾಗಿ ವ್ಯಾಕುಲರಾದರು. ॥ ೧೩ ॥ ಭಗವಾನ್ ಶ್ರೀಕೃಷ್ಣನು ಮಥುರೆಗೆ ಹೋಗುವನೆಂಬ ಮಾತನ್ನು ಕೇಳುತ್ತಲೇ ಗೋಪಿಯರು ಪರಿತಾಪದಿಂದ ನಿಟ್ಟುಸಿರು ಬಿಟ್ಟರು. ಎಲ್ಲ ಗೋಪಿಯರ ಮುಖಕಮಲಗಳು ಬಾಡಿದವು. ಉಟ್ಟ ಸೀರೆಗಳು ಜಾರಿಹೋಗುತ್ತಿದ್ದರೂ, ಕೈಕಡಗಗಳು ಕಳಚಿ ಬೀಳುತ್ತಿದ್ದರೂ, ತುರುಬುಗಳು ಬಿಚ್ಚಿಹೋಗುತ್ತಿದ್ದರೂ ತಿಳಿಯದಷ್ಟು ಪರವಶರಾದರು. ॥ ೧೪ ॥ ಭಗವಂತನಲ್ಲೇ ನೆಟ್ಟ ಮನಸ್ಸುಳ್ಳವರಾಗಿ ಅವನ ಶ್ರೀವಿಗ್ರಹವನ್ನು ಧ್ಯಾನಿಸುತ್ತಾ ಕೆಲವು ಗೋಪಿಯರಿಗೆ ಚಿತ್ತವೃತ್ತಿಯೇ ನಿಂತು ಹೊಗಿ ಸಮಾಧಿಸ್ಥರಾದರು. ಆತ್ಮನಲ್ಲೇ ಸ್ಥಿತರಾದ ಅವರಿಗೆ ತಮ್ಮ ಶರೀರದ ಕುರಿತಾಗಲೀ, ಸಂಸಾರದ ಕುರಿತಾಗಲೀ ಎಚ್ಚರವೇ ಇರಲಿಲ್ಲ ॥ ೧೫ ॥ ಮತ್ತೆ ಕೆಲವು ಗೋಪಿಯರು ಶೌರಿಯ ಮಂದಹಾಸದಿಂದ ಕೂಡಿದ ಅನುರಾಗವನ್ನು ಸ್ಮರಿಸಿಕೊಂಡರು. ಕೆಲವರು ವಿಚಿತ್ರ ಪದಸಮೂಹದಿಂದ ಮನಮುಟ್ಟುವ ಶ್ರೀಕೃಷ್ಣನ ಸುಮಧುರವಾದ ಮಾತುಗಳನ್ನು ಸ್ಮರಿಸಿ ವಿಮೋಹಿತರಾದರು. ॥ ೧೬ ॥ ಗೋಪಿಯರು ಮನಸ್ಸಿನಲ್ಲೇ ಭಗವಂತನ ಮನಮೋಹಕವಾದ ನಡಿಗೆಯನ್ನು, ಭಾವ-ಭಂಗಿಗಳನ್ನು, ಪ್ರೇಮಪೂರ್ಣವಾದ ಕಿರುನಗೆಯನ್ನು, ಕುಡಿನೋಟವನ್ನು, ಸಕಲ ಶೋಕಗಳನ್ನು ಇಲ್ಲವಾಗಿಸುವ ವಿನೋದ ಮಾತುಗಳನ್ನು, ಲೀಲೆಗಳನ್ನು ಚಿಂತಿಸುತ್ತಾ ವಿರಹದ ಭಯದಿಂದ ಕಾತರರಾದರು. ಅವರ ಹೃದಯ-ಜೀವನ ಎಲ್ಲವೂ ಭಗವಂತನಲ್ಲಿ ಸಮರ್ಪಿತವಾಗಿತ್ತು. ಅವರ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತು. ಅವರೆಲ್ಲರೂ ಗುಂಪು-ಗುಂಪಾಗಿ ಒಟ್ಟಿಗೆ ಸೇರಿ ಹೀಗೆ ಮಾತನಾಡಿಕೊಂಡರು. ॥ ೧೭-೧೯ ॥

ಗೋಪ್ಯ ಊಚುಃ

ಅಹೋ ವಿಧಾತಸ್ತವ ನ ಕ್ವಚಿದ್ದಯಾ
ಸಂಯೋಜ್ಯ ಮೈತ್ರ್ಯಾ ಪ್ರಣಯೇನ ದೇಹಿನಃ ।
ತಾಂಶ್ಚಾಕೃತಾರ್ಥಾನ್ ವಿಯುನಂಕ್ಷ್ಯಪಾರ್ಥಕಂ
ವಿಕ್ರೀಡಿತಂ ತೇಽರ್ಭಕಚೇಷ್ಟಿತಂ ಯಥಾ ॥ ೧೯ ॥

ಯಸ್ತ್ವಂ ಪ್ರದರ್ಶ್ಯಾಸಿತಕುಂತಲಾವೃತಂ
ಮುಕುಂದವಕ್ತ್ರಂ ಸುಕಪೋಲಮುನ್ನಸಮ್ ।
ಶೋಕಾಪನೋದಸ್ಮಿತಲೇಶಸುಂದರಂ
ಕರೋಷಿ ಪಾರೋಕ್ಷ್ಯಮಸಾಧು ತೇ ಕೃತಮ್ ॥ ೨೦ ॥

ಕ್ರೂರಸ್ತ್ವಮಕ್ರೂರಸಮಾಖ್ಯಯಾ ಸ್ಮ ನ-
ಶ್ಚಕ್ಷುರ್ಹಿ ದತ್ತಂ ಹರಸೇ ಬತಾಜ್ಞವತ್ ।
ಯೇನೈಕದೇಶೇಽಖಿಲಸರ್ಗಸೌಷ್ಠವಂ
ತ್ವದೀಯಮದ್ರಾಕ್ಷ್ಮ ವಯಂ ಮಧುದ್ವಿಷಃ ॥ ೨೧ ॥

ನ ನಂದಸೂನುಃ ಕ್ಷಣಭಂಗಸೌಹೃದಃ
ಸಮೀಕ್ಷತೇ ನಃ ಸ್ವಕೃತಾತುರಾ ಬತ ।
ವಿಹಾಯ ಗೇಹಾನ್ ಸ್ವಜನಾನ್ ಸುತಾನ್ ಪತೀಂ-
ಸ್ತದ್ದಾಸ್ಯಮದ್ಧೋಪಗತಾ ನವಪ್ರಿಯಃ ॥ ೨೨ ॥

ಸುಖಂ ಪ್ರಭಾತಾ ರಜನೀಯಮಾಶಿಷಃ
ಸತ್ಯಾ ಬಭೂವುಃ ಪುರಯೋಷಿತಾಂ ಧ್ರುವಮ್ ।
ಯಾಃ ಸಂಪ್ರವಿಷ್ಟಸ್ಯ ಮುಖಂ ವ್ರಜಸ್ಪತೇಃ
ಪಾಸ್ಯಂತ್ಯಪಾಂಗೋತ್ಕಲಿತಸ್ಮಿತಾಸವಮ್ ॥ ೨೩ ॥

ಗೋಪಿಯರು ಹೇಳುತ್ತಾರೆ – ಓ ಬ್ರಹ್ಮದೇವನೇ! ನಿನ್ನ ಹೃದಯದಲ್ಲಿ ದಯೆಯೆಂಬುದು ಲೇಶಮಾತ್ರವೂ ಇಲ್ಲವಲ್ಲ! ಮೊದಲು ನೀನು ಸೌಹಾರ್ದದಿಂದಲೂ, ಪ್ರೇಮದಿಂದಲೂ ಪ್ರಪಂಚದಲ್ಲಿರುವ ಪ್ರಾಣಿಗಳನ್ನು ಪರಸ್ಪರವಾಗಿ ಸೇರಿಸುವೆ, ಆದರೆ ಅವರ ಆಶಯವು ಪೂರ್ಣವಾಗುವುದರೊಳಗಾಗಿಯೇ ಅವರು ಪೂರ್ಣತೃಪ್ತಿಯನ್ನು ಹೊಂದುವ ಮೊದಲೇ, ಅವರನ್ನು ಬೇರ್ಪಡಿಸುವೆ. ನಿಶ್ಚಯವಾಗಿಯೂ ಈ ನಿನ್ನ ಕಾರ್ಯವು ಮಕ್ಕಳ ಆಟಿಕೆಯಂತೆ ವ್ಯರ್ಥವಾದುದೇ ಸರಿ. ॥ ೧೯ ॥ ಓ ವಿಧಾತನೇ! ಇದೆಂತಹ ದುಃಖದ ವಿಷಯವಾಗಿದೆ ನೋಡು! ಮೊದಲು ನೀನು ಪ್ರೇಮವನ್ನು ಉಮ್ಮಡಿಸುವ ಶ್ಯಾಮಸುಂದರನ ದಿವ್ಯವಾದ ಮುಖ ಕಮಲವನ್ನು ನಮಗೆ ತೋರಿಸಿಕೊಟ್ಟೆ ಅದೆಷ್ಟು ಚೆಲುವಿನ ಮುಖ ಕಮಲ! ಕಪ್ಪಾದ ಮುಂಗುರುಳಿನಿಂದ ಅಲಂಕೃತವಾಗಿದೆ. ಸುಂದರವಾದ ಕಪೋಲಗಳಿಂದಲೂ, ನೀಳವಾದ ಮೂಗಿನಿಂದಲೂ ಕೂಡಿ ಬೆಳಗುತ್ತಿರುವುದು. ದುಃಖವನ್ನು ಕಳೆದು ಆನಂದವನ್ನುಂಟು ಮಾಡುವ ಚೇತೋಹಾರಿಯಾದ ಕಿರುನಗೆಯಿಂದ ಶೋಭಿಸುತ್ತಿರುವುದು. ಅಂತಹ ಕಡುಚೆಲುವಿನ ಮುಖಕಮಲವನ್ನು ನಮಗೆ ತೋರಿಸಿ ಈಗ ಅದನ್ನು ನಮ್ಮಿಂದ ಮರೆಮಾಡಲು ಹವಣಿಸುತ್ತಿರುವೆ. ಹೀಗೆ ಮಾಡುವುದು ಖಂಡಿತವಾಗಿಯೂ ನಿನಗೆ ಯೋಗ್ಯವೆನಿಸುವುದಿಲ್ಲ. ॥ ೨೦ ॥ ವಿಧಾತನೇ! ಅತ್ಯಂತ ಕ್ರೂರಿಯಾದ ನೀನು 'ಅಕ್ರೂರ'ನೆಂಬ ಹೆಸರಿನಿಂದ ಕರೆಯಲ್ಪಡುತ್ತಾ ನಮ್ಮ ಕಣ್ಣಿನಯನ್ನು ಮೂಢನಂತೆ ಅಪಹರಿಸುತ್ತಿರುವೆಯಲ್ಲ! ಮಧುಹಂತಕನಾದ ಶ್ರೀಕೃಷ್ಣನ ಒಂದೊಂದು ಅವಯವಗಳಲ್ಲಿಯೂ ನಿನ್ನ ಸೃಷ್ಟಿಯ ಚಾತುರ್ಯವನ್ನು ಯಾವ ಕಣ್ಣುಗಳಿಂದ ಕಂಡು ನಾವು ಬೆರಗಾಗಿ ನಿನ್ನನ್ನು ಕೊಂಡಾಡುತ್ತಿದ್ದೆವೋ ಅಂತಹ ನಮ್ಮ ಕಣ್ಣುಗಳನ್ನೇ ನೀನು ಅಪಹರಿಸುತ್ತಿರುವೆ. ನಮ್ಮ ಕಣ್ಣಿನಯನ್ನು ಕಾಣದ ನಾವು ಕಣ್ಣಿಲ್ಲದ ಕುರುಡರಂತೆಯೇ ಸರಿ ॥ ೨೧ ॥

ಅಯ್ಯೋ! ನಂದನಂದನ ಶ್ಯಾಮಸುಂದರನು ಹೊಸ-ಹೊಸ ಜನರಲ್ಲಿ ಸ್ನೇಹ ಮಾಡಲು ಆಶಿಸಿದ್ದಾನೆ. ಇವನ ಸ್ನೇಹವೆಂಬುದು ಕ್ಷಣಭಂಗುರವಾದುದು. ಅವನ ಕಿರುನಗೆ, ಸವಿಮಾತು, ಕುಡಿನೋಟ ಇವುಗಳಿಂದ ಆಕರ್ಷಿತರಾದ ನಾವು ಮನೆ-ಮಠಗಳನ್ನು, ಮಾತಾ-ಪಿತೃಗಳನ್ನು, ಪತಿ-ಸುತರನ್ನು, ಅಣ್ಣ-ತಮ್ಮಂದಿರನ್ನು ತೊರೆದು ಇವನಿಗೆ ದಾಸಿಯರಾದೆವು. ಇವನಿಗಾಗಿಯೇ ಇಂದು ನಮ್ಮ ಹೃದಯ ಶೋಕಾತುರವಾಗುತ್ತಿದೆ. ಆದರೆ ಇವನು ನಮ್ಮ ಕಡೆಗೆ ನೋಡುವುದೇ ಇಲ್ಲವಲ್ಲ! ॥ ೨೨ ॥ ಇಂದಿನ ರಾತ್ರಿಯು ಕಳೆದು ಆಗುವ ಸುಪ್ರಭಾತವು ಮಥುರೆಯ ಸ್ತ್ರೀಯರಿಗೆ ಮಂಗಳದಾಯಕವಾಗುತ್ತದೆ. ಅವರ ಅನೇಕ ದಿನಗಳ ಅಭಿಲಾಷೆಯು ನಿಶ್ಚಯವಾಗಿ ಪೂರ್ಣಗೊಳ್ಳುವುದು. ನಮ್ಮ ವ್ರಜರಾಜನಾದ ಶ್ಯಾಮಸುಂದರ ಓರೆನೋಟವನ್ನು ಬೀರುತ್ತಾ, ಮಂದ-ಮಂದವಾದ ಮುಗುಳ್ನಗೆಯಿಂದ ಕೂಡಿದ ಮುಖಾರವಿಂದದ ಮಾದಕತೆಯನ್ನು ಚೆಲ್ಲುತ್ತಾ ಮಥುರೆಯನ್ನು ಪ್ರವೇಶಿಸಿದಾಗ ಅವರು ಅದನ್ನು ಸವಿಯುತ್ತಾ ಧನ್ಯರಾಗಿ ಹೋಗುವರು. ॥ ೨೩ ॥

ತಾಸಾಂ ಮುಕುಂದೋ ಮಧುಮಂಜುಭಾಷಿತೈ-
ರ್ಗೃಹೀತಚಿತ್ತಃ ಪರವಾನ್ ಮನಸ್ವ್ಯಪಿ ।
ಕಥಂ ಪುನರ್ನಃ ಪ್ರತಿಯಾಸ್ಯತೇಽಬಲಾ
ಗ್ರಾಮ್ಯಾಃ ಸಲಜ್ಜಸ್ಮಿತವಿಭ್ರಮೈರ್ಭ್ರಮನ್ ॥ ೨೪ ॥

ನಮ್ಮ ಶ್ಯಾಮಸುಂದರನು ಧೈರ್ಯಶಾಲಿಯಾಗಿದ್ದರೂ ಜೊತೆಗೆ ನಂದಗೋಪನೇ ಮೊದಲಾದ ಹಿರಿಯರ ಆಜ್ಞಾನುಸಾರವೇ ಇರುತ್ತಾನೆ. ಆದರೂ ಮಥುರೆಯ ಯುವತಿಯರು ತಮ್ಮ ಮಧುವಿನಂತಿರುವ ಮಾತುಗಳಿಂದ ಇವನ ಚಿತ್ತವನ್ನು ತಮ್ಮತ್ತ ಸೆಳೆದುಕೊಳ್ಳುವರು. ಇವನು ಅವರ ನಾಚಿಕೆಯಿಂದ ಕೂಡಿ ಕಿರುನಗೆ ಹಾಗೂ ವಿಲಾಸಪೂರ್ಣವಾದ ಭಾವಭಂಗಿಗೆ ಮನಸೋತು ಅಲ್ಲೇ ಇರುವನು. ಮತ್ತೆ ಹಳ್ಳಿಗಾಡಿನ ಗೊಲ್ಲತಿಯರ ಬಳಿಗೆ ಇವನು ಮರಳಿ ಹೇಗೆ ತಾನೆ ಬರುವನು ? ॥ ೨೪ ॥

ಅದ್ಯ ಧ್ರುವಂ ತತ್ರ ದೃಶೋ ಭವಿಷ್ಯತೇ
ದಾಶಾರ್ಹಭೋಜಾಂಧಕವೃಷ್ಣಿಸಾತ್ವತಾಮ್ ।
ಮಹೋತ್ಸವಃ ಶ್ರೀರಮಣಂ ಗುಣಾಸ್ಪದಂ
ದ್ರಕ್ಷ್ಯಂತಿ ಯೇ ಚಾಧ್ವನಿ ದೇವಕೀಸುತಮ್ ॥ ೨೫ ॥

ನಿಶ್ಚಯವಾಗಿಯೂ ಇಂದು ಮಥುರಾಪಟ್ಟಣದಲ್ಲಿ ಶ್ಯಾಮಸುಂದರನನ್ನು ಸಂದರ್ಶಿಸಲಿರುವ ದಾಶಾರ್ಹ, ಭೋಜ, ಅಂಧಕ, ವೃಷ್ಣಿ, ಸಾತ್ವತ ವಂಶೀಯರಿಗೆ ನೇತ್ರಾನಂದೋತ್ಸವವೇ ಆಗುತ್ತದೆ. ಜೊತೆಗೆ ಮಾರ್ಗದಲ್ಲಿ ರಮಾರಮಣನಾದ, ಗುಣಸಾಗರನಾದ, ದೇವಕಿಯ ಮಗನಾದ ನಮ್ಮ ಪ್ರಿಯತಮನನ್ನು ನೋಡುವ ದಾರಿಹೋಕರ ಕಣ್ಣುಗಳಿಗೂ ದೊಡ್ಡ ಹಬ್ಬವೇ ಆಗುತ್ತದೆ. ॥ ೨೫ ॥

ಮೈತದ್ವಿಧಸ್ಯಾಕರುಣಸ್ಯ ನಾಮ ಭೂ-
ದಕ್ರೂರ ಇತ್ಯೇತದತೀವ ದಾರುಣಃ ।
ಯೋಽಸಾವನಾಶ್ವಾಸ್ಯ ಸುದುಃಖಿತಂ ಜನಂ
ಪ್ರಿಯಾತ್ಪ್ರಿಯಂ ನೇಷ್ಯತಿ ಪಾರಮಧ್ವನಃ ॥ ೨೬ ॥

ನೋಡಿ ಸಖಿಯರೇ ! ಈ ಅಕ್ರೂರನಾದರೋ ತನ್ನ ಹೆಸರಿಗೆ ವಿರುದ್ಧವಾಗಿ ಅತಿಕ್ರೂರನಾಗಿದ್ದಾನೆ. ಶ್ರೀಕೃಷ್ಣನ ವಿರಹದಿಂದ ಅತಿಯಾಗಿ ದುಃಖಿಸುತ್ತಿರುವ ನಮ್ಮನ್ನು ಸಿಹಿಮಾತುಗಳಿಂದ ಸಂತೈಸುತ್ತಲೂ ಇಲ್ಲ. ನಮಗೆ ಅತ್ಯಂತ ಪ್ರಿಯವಾದ ಏಕಮಾತ್ರ ಸ್ವಾಮಿಯಾದ ಶ್ರೀಕೃಷ್ಣನನ್ನು ದೂರ ಕರೆದುಕೊಂಡು ಹೋಗುತ್ತಿದ್ದಾನೆ. ಛೀ ! ಇಂತಹ ಕ್ರೂರಿಗೆ ಅಕ್ರೂರನೆಂಬ ಹೆಸರು ಖಂಡಿತವಾಗಿಯೂ ಇರಬಾರದು. ॥ ೨೬ ॥ ಸಖೀ ! ನಮ್ಮ ಈ ಶ್ಯಾಮಸುಂದರನೂ ಕಡಿಮೆ ನಿಷ್ಠುರನಲ್ಲ, ನೋಡು, ನೋಡು ! ಅವನು ರಥದಲ್ಲಿ ಕುಳಿತುಕೊಂಡನು. ಉತ್ಸಾಹಿಗಳಾದ ಗೋಪಾಲಕರೂ ಎತ್ತಿನ ಬಂಡಿಗಳಲ್ಲಿ ಅವನೊಂದಿಗೆ ಹೋಗಲು ಎಷ್ಟು ಅವಸರಪಡಿಸುತ್ತಿದ್ದಾರೆ. ನಿಜವಾಗಿ ಇವರು ಮೂರ್ಖರೇ ಆಗಿದ್ದಾರೆ. ಇನ್ನು ನಮ್ಮ ಹಿರಿಯ-ವೃದ್ಧರೂ ಇವರ ಅವಸರವನ್ನು ನೋಡಿ - 'ಹೋಗಿ ಮನಸ್ಸಿಗೆ ಬಂದ ಹಾಗೆ ಮಾಡಿರಿ' ಎಂದು ಉಪೇಕ್ಷಿಸಿ ಬಿಟ್ಟಿದ್ದಾರೆ. ಈಗ ನಾವೇನು ಮಾಡಬಹುದು ? ಇಂದು ವಿಧಿಯು ಪೂರ್ಣವಾಗಿ ನಮಗೆ ಪ್ರತಿಕೂಲವಾಗಿದೆ. ॥ ೨೭ ॥ ಸಖಿಯರೇ ! ನಾವೆಲ್ಲರೂ ಮುಂದೆ ಹೋಗಿ ನಮ್ಮ ಪ್ರಾಣಪ್ರಿಯನಾದ ಶ್ಯಾಮಸುಂದರನನ್ನು ತಡೆದು ಬಿಡುವಾ. ಕುಲದ ವೃದ್ಧರಾಗಲೀ, ನೆಂಟರಿಷ್ಟರಾಗಲೀ ನಮಗೇನು ಮಾಡಬಲ್ಲರು ? ನಮಗಂತೂ ಅರ್ಧನಿಮಿಷವಾದರೂ ಮುಕುಂದನನ್ನು ಬಿಟ್ಟಿರಲು ಸಾಧ್ಯವೇ ಇಲ್ಲ. ದೈವವಾದರೋ ನಮ್ಮ ಪ್ರಿಯತಮನೊಡನೆ ವಿರಹವನ್ನು ಕಲ್ಪಿಸಿ ಬಡಪಾಯಿಗಳಾದ ನಮ್ಮ ಬುದ್ಧಿಯನ್ನು ಹಾಳು ಮಾಡಿಬಿಟ್ಟಿದೆ. ॥ ೨೮ ॥ ಗೆಳತಿಯರೇ ! ನಾವು ನಮ್ಮ ಪ್ರಾಣ ಪ್ರಿಯನಾದ ಶ್ರೀಕೃಷ್ಣನ ಪ್ರೇಮಪೂರ್ಣವಾದ ಮತ್ತು ಚೇತೋಹಾರಿಯಾದ ಕಿರುನಗೆ, ರಹಸ್ಯದಲ್ಲಿ ಅವನಾಡುತ್ತಿದ್ದ ಪ್ರೇಮಾಲಾಪಗಳು, ವಿಲಾಸಪೂರ್ಣ ಕಡೆಗಣ್ಣು ನೋಟ, ಪ್ರೇಮಾಲಿಂಗನ ಇತ್ಯಾದಿಗಳಿಂದ ರಾಸಕ್ರೀಡೆಯಲ್ಲಿ ಸುದೀರ್ಘವಾದ ರಾತ್ರಿಯನ್ನು ಕ್ಷಣದಂತೆ ಕಳೆಯುತ್ತಿದ್ದೆವು. ಆದರೆ ಈಗ ಅವನಿಲ್ಲದ ದುರಂತರೂಪವಾದ ವಿರಹವೆಂಬ ಅಂಧಕಾರವನ್ನು ಹೇಗೆ ತಾನೇ ದಾಟಿಹೋಗುವುದು ? ॥ ೨೯ ॥

ಅನಾರ್ದ್ರಧೀರೇಷ ಸಮಾಸ್ಥಿತೋ ರಥಂ
ತಮನ್ವಮೀ ಚ ತ್ವರಯಂತಿ ದುರ್ಮದಾಃ ।
ಗೋಪಾ ಅನೋಭಿಃ ಸ್ಥವಿರೈರುಪೇಕ್ಷಿತಂ
ದೈವಂ ಚ ನೋಽದ್ಯ ಪ್ರತಿಕೂಲಮೀಹತೇ ॥ ೨೭ ॥

ನಿವಾರಯಾಮಃ ಸಮುಪೇತ್ಯ ಮಾಧವಂ
ಕಿಂ ನೋಽಕರಿಷ್ಯನ್ ಕುಲವೃದ್ಧಬಾಂಧವಾಃ ।
ಮುಕುಂದಸಂಗಾನ್ನಿಮಿಷಾರ್ಧದುಸ್ತ್ಯಜಾದ್
ದೈವೇನ ವಿಧ್ವಂಸಿತದೀನಚೇತಸಾಮ್ ॥ ೨೮ ॥

ಯಸ್ಯಾನುರಾಗಲಲಿತಸ್ಮಿತವಲ್ಗುಮಂತ್ರ-
ಲೀಲಾವಲೋಕಪರಿರಂಭಣರಾಸಗೋಷ್ಠ್ಯಾಮ್ ।
ನೀತಾಃ ಸ್ಮ ನಃ ಕ್ಷಣಮಿವ ಕ್ಷಣದಾ ವಿನಾ ತಂ
ಗೋಪ್ಯಃ ಕಥಂ ನ್ವತಿತರೇಮ ತಮೋ ದುರಂತಮ್ ॥ ೨೯ ॥

ಯೋಽಹ್ನಃ ಕ್ಷಯೇ ವ್ರಜಮನಂತಸಖಃ ಪರೀತೋ
ಗೋಪೈರ್ವಿಶನ್ ಖುರರಜಶ್ಛುರಿತಾಲಕಸ್ರಕ್ ।
ವೇಣುಂ ಕ್ವಣನ್ ಸ್ಮಿತಕಟಾಕ್ಷನಿರೀಕ್ಷಣೇನ
ಚಿತ್ತಂ ಕ್ಷಿಣೋತ್ಯಮುಮೃತೇ ನು ಕಥಂ ಭವೇಮ ॥ ೩೦ ॥

ಶ್ರೀಶುಕ ಉವಾಚ

ಏವಂ ಬ್ರುವಾಣಾ ವಿರಹಾತುರಾ ಭೃಶಂ
ವ್ರಜಸ್ತ್ರಿಯಃ ಕೃಷ್ಣವಿಷಕ್ತಮಾನಸಾಃ ।
ವಿಸೃಜ್ಯ ಲಜ್ಜಾಂ ರುರುದುಃ ಸ್ಮ ಸುಸ್ವರಂ
ಗೋವಿಂದ ದಾಮೋದರ ಮಾಧವೇತಿ ॥ ೩೧ ॥

ಸ್ತ್ರೀಣಾಮೇವಂ ರುದಂತೀನಾಮುದಿತೇ ಸವಿತರ್ಯಥ ।
ಅಕ್ರೂರಶ್ಚೋದಯಾಮಾಸ ಕೃತಮೈತ್ರ್ಯಾದಿಕೋ ರಥಮ್
॥ ೩೨ ॥

ಗೋಪಾಸ್ತಮನ್ವಸಜ್ಜಂತ ನಂದಾದ್ಯಾಃ ಶಕಟೈಸ್ತತಃ ।
ಆದಾಯೋಪಾಯನಂ ಭೂರಿ ಕುಂಭಾನ್ ಗೋರಸಸಂಭೃತಾನ್
॥ ೩೩ ॥

ಗೋಪ್ಯಶ್ಚ ದಯಿತಂ ಕೃಷ್ಣಮನುವ್ರಜ್ಯಾನುರಂಜಿತಾಃ ।
ಪ್ರತ್ಯಾದೇಶಂ ಭಗವತಃ ಕಾಂಕ್ಷಂತ್ಯಶ್ಚಾವತಸ್ಥಿರೇ
॥ ೩೪ ॥

ತಾಸ್ತಥಾ ತಪ್ಯತೀರ್ವೀಕ್ಷ್ಯ ಸ್ವಪ್ರಸ್ಥಾನೇ ಯದೂತ್ತಮಃ ।
ಸಾಂತ್ವಯಾಮಾಸ ಸಪ್ರೇಮೈರಾಯಾಸ್ಯ ಇತಿ ದೌತ್ಯಕೈಃ
॥ ೩೫ ॥

ಯಾವದಾಲಕ್ಷ್ಯತೇ ಕೇತುರ್ಯಾವದ್ರೇಣೂ ರಥಸ್ಯ ಚ ।
ಅನುಪ್ರಸ್ಥಾಪಿತಾತ್ಮಾನೋ ಲೇಖ್ಯಾನೀವೋಪಲಕ್ಷಿತಾಃ
॥ ೩೬ ॥

ತಾ ನಿರಾಶಾ ನಿವವೃತುರ್ಗೋವಿಂದವಿನಿವರ್ತನೇ ।
ವಿಶೋಕಾ ಅಹನೀ ನಿನ್ಯುರ್ಗಾಯಂತ್ಯಃ ಪ್ರಿಯಚೇಷ್ಟಿತಮ್
॥ ೩೭ ॥

ನಮ್ಮ ಪ್ರಿಯತಮನು ಅನುದಿನವೂ ಸಾಯಂಕಾಲವಾಗುತ್ತಲೇ ಬಲರಾಮನೊಡನೆ ಗೋಪಾಲಕರಿಂದ ಪರಿವೃತನಾಗಿ ಬರುತ್ತಿರುವಾಗ ಅವನ ಕಪ್ಪಾದ ಗುಂಗುರು ಕೂದಲು, ವನಮಾಲೆಯು ಹಸುಗಳ ಗೊರಸುಗಳಿಂದ ಎದ್ದ ಧೂಳಿನಿಂದ ಮುಚ್ಚಿಹೋಗುತ್ತಿತ್ತು. ಅವನು ಕೊಳಲನ್ನೂದುತ್ತಾ, ಮುಗುಳ್ನಗೆಯಿಂದಲೂ, ಕಡೆಗಣ್ಣ ನೋಟದಿಂದಲೂ ನಮ್ಮ ಮನಸ್ಸನ್ನೂ ಸೂರೆ ಮಾಡುತ್ತಿದ್ದನು. ಅಂತಹವನನ್ನು ಬಿಟ್ಟು ನಾವು ಬದುಕಿರುವುದಾದರೂ ಹೇಗೆ ? ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ವಿರಹಪೀಡಿತರಾಗಿ ಗೋಪಿಕೆಯರು ಬಾಯಿಂದ ಹೀಗೆ ಹೇಳುತ್ತಿದ್ದರೂ ಅವರ ಮನಸ್ಸುಗಳೆಲ್ಲವೂ ಪ್ರಿಯತಮನಾದ ಶ್ರೀಕೃಷ್ಣನ ಅಂಗಸ್ಪರ್ಶ, ಆಲಿಂಗನದಲ್ಲಿಯೇ ಲೀನವಾಗಿ ಬಿಟ್ಟಿತ್ತು. ಅವರೆಲ್ಲರೂ ಲಜ್ಜೆಯನ್ನು ಪರಿತ್ಯಜಿಸಿ 'ಗೋವಿಂದ ! ದಾಮೋದರ ! ಮಾಧವ ! ನಮ್ಮನ್ನು ಬಿಟ್ಟು ಹೋಗಬೇಡ. ನೀನಿಲ್ಲದೆ ನಾವು ಬದುಕಿರಲಾರೆವು ಎಂದು ಹೇಳುತ್ತಾ ಗಟ್ಟಿಯಾಗಿ ಸುಸ್ವರವಾಗಿ ಅಳತೊಡಗಿದರು. ॥ ೩೧ ॥ ಗೋಪಿಯರು ಹೀಗೆ ಅಳುತ್ತಾ ಇದ್ದರು. ಅಳುತ್ತಾ-ಅಳುತ್ತಾ ಬೆಳಕು ಹರಿಯಿತು. ಅಕ್ರೂರನು ಸಂಧ್ಯಾವಂದನೆ ಮುಂತಾದ ನಿತ್ಯಕರ್ಮಗಳನ್ನು ಪೂರೈಸಿ ಬಲರಾಮ-ಶ್ರೀಕೃಷ್ಣರೊಂದಿಗೆ ರಥವನ್ನು ಹತ್ತಿದನು ಹಾಗೂ ಅದನ್ನು ಮುನ್ನಡೆಸಿದನು. ॥ ೩೨ ॥ ನಂದಗೋಪನೇ ಮೊದಲಾದ ಗೋಪರು ಹಾಲು, ಮೊಸರು, ತುಪ್ಪ ಬೆಣ್ಣೆ ಮುಂತಾದವುಗಳು ತುಂಬಿದ ಗಡಿಗೆಗಳನ್ನು ಹಾಗೂ ಕಾಣಿಕೆಯಾಗಿ ಕೊಡಲು ಇತರ ವಸ್ತುಗಳನ್ನು ಎತ್ತಿಕೊಂಡು ಎತ್ತಿನ ಗಾಡಿಗಳಲ್ಲಿ ಕುಳಿತುಕೊಂಡು ಅವರ ಹಿಂದೆ-ಹಿಂದೆಯೇ ಹೊರಟರು. ॥ ೩೩ ॥ ಪ್ರಿಯತಮನಾದ ಶ್ರೀಕೃಷ್ಣನ ರಥವನ್ನೇ ಅನುಸರಿಸಿ ಹೋಗುತ್ತಿದ್ದ ಗೋಪಿಯರು ಶ್ರೀಕೃಷ್ಣನ ಮುಗುಳ್ನಗೆ, ಕುಡಿನೋಟ, ಇವುಗಳಿಂದ, ಪ್ರೇಮಪೂರ್ಣವಾದ ಭಾವ-ಭಂಗಿಗಳಿಂದ ಸಂತೋಷಗೊಂಡಿದ್ದರೂ ಭಗವಂತನ ಆದೇಶವನ್ನು ಪಡೆಯುವ ಇಚ್ಛೆಯಿಂದ ಅಲ್ಲೆ ನಿಂತಿಬಿಟ್ಟರು. ॥ ೩೪ ॥ ನಾನು ಮಥುರೆಗೆ ಹೋಗುವುದರಿಂದ ಈ ಗೋಪಿಯರ ಹೃದಯದಲ್ಲಿ ವಿರಹವೇದನೆ ಉಂಟಾಗಿದೆ ಎಂದು ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನು ನೋಡಿದನು. ಆಗ ದೂತನ ಮೂಲಕ - 'ನಾನು ಪುನಃ ಬರುತ್ತೇನೆ. ನಿಮ್ಮನ್ನು ಬಿಟ್ಟುಹೋಗುವುದಿಲ್ಲ' ಎಂಬ ಪ್ರೇಮಸಂದೇಶವನ್ನು ಕಳಿಸಿ ಧೈರ್ಯತುಂಬಿದನು. ॥ ೩೫ ॥ ರಥದ ಧ್ವಜ ಮತ್ತು ಗಾಲಿಗಳಿಂದೆದ್ದ ಧೂಳು ಕಾಣಿಸುವವರೆಗೆ ಆ ಗೋಪಿಯರು ಚಿತ್ತಾರದಂತೆ ಸ್ತಬ್ಧರಾಗಿ ನಿಂತಿದ್ದರು. ಆದರೆ ಅವರ ಚಿತ್ತವು ಪ್ರಾಣವಲ್ಲಭನಾದ ಶ್ರೀಕೃಷ್ಣನೊಂದಿಗೇ ಹೊರಟುಹೋಗಿತ್ತು. ॥ ೩೬ ॥ ಬಹುಶಃ ಶ್ರೀಕೃಷ್ಣನು ಸ್ವಲ್ಪದೂರ ಹೋಗಿ ಮರಳಿಬರುವನೆಂಬ ಆಸೆ ಅವರ ಮನಸ್ಸಿನಲ್ಲಿತ್ತು. ಆದರೆ ಅವನು ಹಿಂದಿರುಗಿ ಬಾರದಿದ್ದಾಗ ಅವರು ನಿರಾಶರಾಗಿ ತಮ್ಮ-ತಮ್ಮ ಮನೆಗಳಿಗೆ ಹಿಂದಿರುಗಿದರು. ಪರೀಕ್ಷಿತನೇ ! ಗೋಪಿಯರು ಹಗಲು-ರಾತ್ರಿಗಳೆನ್ನದೆ ತಮ್ಮ ಪ್ರಿಯಕರ ಶ್ಯಾಮಸುಂದರನ ಲೀಲೆಗಳನ್ನು ಹಾಡಿಕೊಳ್ಳುತ್ತಾ ತಮ್ಮ ವಿರಹತಾಪವನ್ನು ತಗ್ಗಿಸಿಕೊಳ್ಳುತ್ತಿದ್ದರು. ॥ ೩೭ ॥

ಭಗವಾನಪಿ ಸಂಪ್ರಾಪ್ತೋ ರಾಮಾಕ್ರೂರಯುತೋ ನೃಪ।
ರಥೇನ ವಾಯುವೇಗೇನ ಕಾಲಿಂದೀಮಘನಾಶಿನೀಮ್
॥ ೩೮ ॥

ತತ್ರೋಪಸ್ಪೃಶ್ಯ ಪಾನೀಯಂ ಪೀತ್ವಾಮೃಷ್ಟಂ ಮಣಿಪ್ರಭಮ್ ।
ವೃಕ್ಷಷಂಡಮುಪವ್ರಜ್ಯ ಸರಾಮೋ ರಥಮಾವಿಶತ್
॥ ೩೯ ॥

ಅಕ್ರೂರಸ್ತಾವುಪಾಮಂತ್ರ್ಯ ನಿವೇಶ್ಯ ಚ ರಥೋಪರಿ।
ಕಾಲಿಂದ್ಯಾ ಹ್ರದಮಾಗತ್ಯ ಸ್ನಾನಂ ವಿಧಿವದಾಚರತ್
॥ ೪೦ ॥

ನಿಮಜ್ಜ್ಯ ತಸ್ಮಿನ್ ಸಲಿಲೇ ಜಪನ್ ಬ್ರಹ್ಮ ಸನಾತನಮ್ ।
ತಾವೇವ ದದೃಶೇಽಕ್ರೂರೋ ರಾಮಕೃಷ್ಣೌ ಸಮನ್ವಿತೌ
॥ ೪೧ ॥

ತೌ ರಥಸ್ಥೌ ಕಥಮಿಹ ಸುತಾವಾನಕದುಂದುಭೇಃ।
ತರ್ಹಿ ಸ್ವಿತ್ ಸ್ಯಂದನೇ ನ ಸ್ತ ಇತ್ಯುನ್ಮಜ್ಜ್ಯ ವ್ಯಚಷ್ಟ ಸಃ
॥ ೪೨ ॥

ತತ್ರಾಪಿ ಚ ಯಥಾಪೂರ್ವಮಾಸೀನೌ ಪುನರೇವ ಸಃ।
ನ್ಯಮಜ್ಜದ್ದರ್ಶನಂ ಯನ್ಮೇ ಮೃಷಾ ಕಿಂ ಸಲಿಲೇ ತಯೋಃ
॥ ೪೩ ॥

ಭೂಯಸ್ತತ್ರಾಪಿ ಸೋಽದ್ರಾಕ್ಷೀತ್ ಸ್ತೂಯಮಾನಮಹೀಶ್ವರಮ್ ।
ಸಿದ್ಧಚಾರಣಗಂಧರ್ವೈರಸುರೈರ್ನತಕಂಧರೈಃ
॥ ೪೪ ॥

ಸಹಸ್ರಶಿರಸಂ ದೇವಂ ಸಹಸ್ರಫಣಮೌಲಿನಮ್ ।
ನೀಲಾಂಬರಂ ಬಿಸಶ್ವೇತಂ ಶೃಂಗೈಃ ಶ್ವೇತಮಿವ ಸ್ಥಿತಮ್
॥ ೪೫ ॥

ತಸ್ಯೋತ್ಸಂಗೇ ಘನಶ್ಯಾಮಂ ಪೀತಕೌಶೇಯವಾಸಸಮ್ ।
ಪುರುಷಂ ಚತುರ್ಭುಜಂ ಶಾಂತಂ ಪದ್ಮಪತ್ರಾರುಣೇಕ್ಷಣಮ್
॥ ೪೬ ॥

ಚಾರುಪ್ರಸನ್ನವದನಂ ಚಾರುಹಾಸನಿರೀಕ್ಷಣಮ್ ।
ಸುಭ್ರೂನ್ನಸಂ ಚಾರುಕರ್ಣಂ ಸುಕಪೋಲಾರುಣಾಧರಮ್
॥ ೪೭ ॥

ಪರೀಕ್ಷಿತನೇ ! ಇತ್ತ ಭಗವಾನ್ ಶ್ರೀಕೃಷ್ಣನು ಬಲರಾಮ ಮತ್ತು ಅಕ್ರೂರನೊಂದಿಗೆ ವಾಯುವೇಗಕ್ಕೆ ಸಮಾನವಾದ ರಥದಲ್ಲಿ ಕುಳಿತು ಪಾಪನಾಶಿನಿಯಾದ ಯಮುನಾನದಿಯ ತೀರವನ್ನು ತಲುಪಿದನು. ॥ ೩೮ ॥ ಅಲ್ಲಿ ಅವರು ಕೈ-ಕಾಲು-ಮುಖ ತೊಳೆದು ಮರಕತ ಮಣಿಯಂತಿರುವ ಹಾಗೂ ಅಮೃತದಂತೆ ಸಿಹಿಯಾದ ಯಮುನೆಯ ನೀರನ್ನು ಕುಡಿದರು. ಆನಂತರ ಬಲರಾಮನೊಂದಿಗೆ ಶ್ರೀಕೃಷ್ಣನು ವೃಕ್ಷಗಳ ನೆರಳಲ್ಲಿ ನಿಲ್ಲಿಸಿದ್ದ ರಥವನ್ನು ಏರಿದನು. ॥ ೩೯ ॥ ಅಕ್ರೂರನು ಸಹೋದರಿಬ್ಬರನ್ನು ರಥದಲ್ಲಿ ಕುಳ್ಳಿರಿಸಿ, ಅವರಿಂದ ಆಪ್ಪಣೆಯನ್ನು ಪಡೆದು, ಯಮುನೆಯ ಮಡುವಿಗೆ (ಅನಂತ ತೀರ್ಥ ಅಥವಾ ಬ್ರಹ್ಮಹ್ರದ) ಹೋಗಿ ವಿಧಿವತ್ತಾಗಿ ಸ್ನಾನಮಾಡತೊಡಗಿದನು. ॥ ೪೦ ॥ ಸನಾತನವಾದ ಬ್ರಹ್ಮಮಂತ್ರ (ಗಾಯತ್ರಿ)ವನ್ನು ಜಪಿಸುತ್ತಾ ಅಕ್ರೂರನು ನೀರಿನಲ್ಲಿ ಮುಳುಗಿದಾಗ ಅಲ್ಲಿಯೇ ಶ್ರೀಕೃಷ್ಣ-ಬಲರಾಮರು ಕುಳಿತಿರುವುದನ್ನು ನೋಡಿದನು. ॥ ೪೧ ॥ ವಸುದೇವನ ಪುತ್ರರಿಬ್ಬರನ್ನೂ ನಾನು ರಥದಲ್ಲಿ ಕುಳ್ಳಿರಿಸಿ ಬಂದಿದ್ದೇನೆ. ಈಗ ಅವರು ಇಲ್ಲಿಗೆ ಹೇಗೆ ಬಂದರು ? ಎಂಬ ಸಂದೇಹವು ಅಕ್ರೂರನ ಮನಸ್ಸಿಗೆ ಬಂತು. ಹಾಗಾದರೆ ಅವರು ರಥದಲ್ಲಿ ಇರಲಾರರು ಎಂದೆಣಿಸಿ ಅವನು ನೀರಿನಿಂದ ತಲೆಯನ್ನು ಮೇಲೆತ್ತಿ ನೋಡಿದನು. ॥ ೪೨ ॥ ಬಲರಾಮ-ಶ್ರೀಕೃಷ್ಣರಿಬ್ಬರೂ ಹಿಂದಿನಂತೆಯೇ ರಥದಲ್ಲಿ ಕುಳಿತಿರುವರು. ಹಾಗಾದರೆ ನಾನು ನೀರಿನಲ್ಲಿ ನೋಡಿದುದು ನನ್ನ ಭ್ರಮೆಯಾಗಿರಬಹುದು ಎಂದು ಯೋಚಿಸಿ ಪುನಃ ನೀರಿನಲ್ಲಿ ಮುಳುಗಿದನು. ॥ ೪೩ ॥ ಆದರೆ ಪುನಃ ಅಲ್ಲಿ ನೋಡುತ್ತಾನೆ – ಸಾಕ್ಷಾತ್ ಅನಂತನಾದ ಆದಿಶೇಷನು ವಿರಾಜಮಾನನಾಗಿದ್ದಾನೆ. ಸಿದ್ಧರು, ಚಾರಣರು, ಗಂಧರ್ವರು ಮತ್ತು ಅಸುರರು ತಮ್ಮ ತಲೆತಗ್ಗಿಸಿಕೊಂಡು ಅವನನ್ನು ಸ್ತುತಿಸುತ್ತಿದ್ದಾರೆ. ॥ ೪೪ ॥ ಆ ಆದಿಶೇಷನಿಗೆ ಸಾವಿರ ತಲೆ (ಹೆಡೆ)ಗಳಿದ್ದು ಪ್ರತಿಯೊಂದು ಹೆಡೆಯ ಮೇಲೆ ಕಿರೀಟಗಳು ಶೋಭಿಸುತ್ತವೆ. ಕಮಲ ನಾಳದಂತಿರುವ ಉಜ್ವಲವಾದ ಶರೀರದ ಮೇಲೆ ನೀಲಾಂಬರವನ್ನು ಧರಿಸಿರುವನು. ಸಾವಿರ ಶಿಖರಗಳಿಂದ ಕೂಡಿದ ಶ್ವೇತಪರ್ವತದಂತೆ ಶೋಭಾಯಮಾನನಾಗಿದ್ದಾನೆ. ॥ ೪೫ ॥ ಅಂತಹ ಆದಿಶೇಷನ ಮೇಲೆ ದಟ್ಟವಾದ ಮೇಘದಂತಿರುವ ಶ್ರೀಕೃಷ್ಣನು ವಿರಾಜಮಾನನಾಗಿದ್ದು ಅವನು ರೇಷ್ಮೆಯ ಪೀತಾಂಬರವನ್ನು ಧರಿಸಿದ್ದು, ಚತುರ್ಭುಜನಾಗಿದ್ದು, ಶಾಂತವಾದ ಮುಖಮುದ್ರೆಯನ್ನು ಹೊಂದಿದ್ದು ಕಮಲದ ಎಸಳಿನಂತೆ ನಸುಗೆಂಪಾದ ಕಣ್ಣುಗಳಿಂದ ಕೂಡಿದ ದಿವ್ಯಮೂರ್ತಿಯನ್ನು ಅಕ್ರೂರನು ನೋಡಿದನು. ॥ ೪೬ ॥ ಅವನ ವದನವು ಅತ್ಯಂತ ಮನೋಹರವಾಗಿದ್ದು ಪ್ರಸನ್ನವಾಗಿತ್ತು. ಅವನ ಮಧುರ ಹಾಸ್ಯ ಮತ್ತು ಕಟಾಕ್ಷವೀಕ್ಷಣವು ಮನಸ್ಸನ್ನು ಸೂರೆಗೊಳ್ಳುತ್ತಿದ್ದವು. ಅಂದವಾದ ಹುಬ್ಬು ನೀಳವಾದ ಮೂಗು, ಸುಂದರವಾದ ಕಿವಿಗಳು, ಹೊಳೆಯುವ ಕಪೋಲಗಳಿಂದ ಕೂಡಿದ್ದು ತೊಂಡೆ ಹಣ್ಣಿನಂತೆ ತುಟಿಗಳು ಕೆಂಪಾಗಿದ್ದವು. ॥ ೪೭ ॥

ಪ್ರಲಂಬಪೀವರಭುಜಂ ತುಂಗಾಂಸೋರಃಸ್ಥಲಶ್ರಿಯಮ್ ।
ಕಂಬುಕಂಠಂ ನಿಮ್ನನಾಭಿಂ ವಲಿಮತ್ಪಲ್ಲವೋದರಮ್
॥ ೪೮ ॥

ಬೃಹತ್ಕಟಿತಟಶ್ರೋಣಿಕರಭೋರುದ್ವಯಾನ್ವಿತಮ್ ।
ಚಾರುಜಾನುಯುಗಂ ಚಾರುಜಂಘಾಯುಗಲಸಂಯುತಮ್
॥ ೪೯ ॥

ತುಂಗಗುಲ್ಫಾರುಣನಖವ್ರಾತದೀಧಿತಿಭಿರ್ವೃತಮ್ ।
ನವಾಂಗುಲ್ಯಂಗುಷ್ಠದಲೈರ್ವಿಲಸತ್ಪಾದಪಂಕಜಮ್
॥ ೫೦ ॥

ಸುಮಹಾರ್ಹಮಣಿವ್ರಾತಕಿರೀಟಕಟಕಾಂಗದೈಃ ।
ಕಟಿಸೂತ್ರಬ್ರಹ್ಮಸೂತ್ರಹಾರನೂಪುರಕುಂಡಲೈಃ
॥ ೫೧ ॥

ಭ್ರಾಜಮಾನಂ ಪದ್ಮಕರಂ ಶಂಖಚಕ್ರಗದಾಧರಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಂ ವನಮಾಲಿನಮ್
॥ ೫೨ ॥

ಸುನಂದನಂದಪ್ರಮುಖೈಃ ಪಾರ್ಷದೈಃ ಸನಕಾದಿಭಿಃ ।
ಸುರೇಶೈರ್ಬ್ರಹ್ಮರುದ್ರಾದ್ಯೈರ್ನವಭಿಶ್ಚ ದ್ವಿಜೋತ್ತಮೈಃ
॥ ೫೩ ॥

ಪ್ರಹ್ಲಾದನಾರದವಸುಪ್ರಮುಖೈರ್ಭಾಗವತೋತ್ತಮೈಃ ।
ಸ್ತೂಯಮಾನಂ ಪೃಥಗ್ಭಾವೈರ್ವಚೋಭಿರಮಲಾತ್ಮಭಿಃ
॥ ೫೪ ॥

ಶ್ರಿಯಾ ಪುಷ್ಟ್ಯಾ ಗಿರಾ ಕಾಂತ್ಯಾ ಕೀರ್ತ್ಯಾ ತುಷ್ಟ್ಯೇಲಯೋರ್ಜಯಾ ।
ವಿದ್ಯಯಾವಿದ್ಯಯಾ ಶಕ್ತ್ಯಾ ಮಾಯಯಾ ಚ ನಿಷೇವಿತಮ್
॥ ೫೫ ॥

ವಿಲೋಕ್ಯ ಸುಭೃಶಂ ಪ್ರೀತೋ ಭಕ್ತ್ಯಾ ಪರಮಯಾ ಯುತಃ ।
ಹೃಷ್ಯತ್ತನೂರುಹೋ ಭಾವಪರಿಕ್ಲಿನ್ನಾತ್ಮಲೋಚನಃ
॥ ೫೬ ॥

ಗಿರಾ ಗದ್ಗದಯಾಸ್ತೌಷೀತ್ ಸತ್ತ್ವಮಾಲಂಬ್ಯ ಸಾತ್ವತಃ ।
ಪ್ರಣಮ್ಯ ಮೂರ್ಧ್ನಾವಹಿತಃ ಕೃತಾಂಜಲಿಪುಟಃ ಶನೈಃ
॥ ೫೭ ॥

ತೋಳುಗಳು ನೀಳವಾಗಿದ್ದು ದಪ್ಪವಾಗಿದ್ದವು. ಉಬ್ಬಿದ ವಕ್ಷಃಸ್ಥಳವಿದ್ದು ಅದು ಲಕ್ಷ್ಮೀದೇವಿಗೆ ನಿವಾಸಸ್ಥಾನವಾಗಿತ್ತು. ಕುತ್ತಿಗೆಯು ಸುಳಿಶಂಖದಂತೆ ಕಂಗೊಳಿಸುತ್ತಿತ್ತು. ಆಳವಾದ ನಾಭಿಕಮಲವಿದ್ದು, ತ್ರಿವಳಿಗಳಿಂದ ಕೂಡಿದ ಉದರವು ಅರಳಿಯ ಎಲೆಯಂತೆ ಶೋಭಿಸುತ್ತಿತ್ತು. ॥ ೪೮ ॥ ತೆಳುವಾದ ಸೊಂಟವಿದ್ದು ನಿತಂಬಗಳು ಸ್ಥೂಲವಾಗಿದ್ದವು. ಆನೆಯ ಸೊಂಡಿಲಿನಂತಿರುವ ತೊಡೆಗಳು, ಸುಂದರವಾದ ಕಣಕಾಲು-ಮೊಣಕಾಲುಗಳಿದ್ದವು. ಪಾದಗಳ ಹರಡುಗಳು ಎತ್ತರವಾಗಿದ್ದವು. ಕೆಂಪಾದ ಕಾಲುಗುರುಗಳಿಂದ ಜ್ಯೋತಿರ್ಮಯ ಕಿರಣಗಳು ಚಿಮ್ಮುತ್ತಿದ್ದವು. ಚರಣಕಮಲಗಳ ಹೆಬ್ಬೆರಳು ಮತ್ತು ಬೆರಳುಗಳು ಕಮಲದ ಹೊಚ್ಚ ಹೊಸ ಎಸಳುಗಳಂತೆ ಶೋಭಿತವಾಗಿದ್ದವು. ॥ ೪೯-೫೦ ॥ ಬಹುಮೂಲ್ಯವಾದ ರತ್ನಖಚಿತವಾದ ಕಿರೀಟವಿದ್ದಿತು. ಕಡಗ, ಕಂಕಣ, ತೊಳ್ಬಳೆಗಳೂ, ಸುವರ್ಣಮಯವಾದ ಉಡಿದಾರವಿತ್ತು, ಹಾರ, ನೂಪುರ, ಕುಂಡಲ ಹಾಗೂ ಯಜ್ಞೋಪವೀತದಿಂದ ಆ ದಿವ್ಯ ಮೂರ್ತಿಯು ಅಲಂಕೃತವಾಗಿದೆ. ಒಂದು ಕೈಯಲ್ಲಿ ಪದ್ಮವಿದ್ದು ಉಳಿದ ಮೂರು ಕೈಗಳಲ್ಲಿ ಶಂಖ, ಚಕ್ರ, ಗದೆ ಶೋಭಿಸುತ್ತಿದ್ದವು. ವಕ್ಷಸ್ಥಳದಲ್ಲಿ ಶ್ರೀವತ್ಸದ ಚಿಹ್ನೆ ಕೊರಳಲ್ಲಿ ಕೌಸ್ತುಭ ಮಣಿಯೂ, ವನಮಾಲೆಯು ಬೆಳಗುತ್ತಿದ್ದವು. ॥ ೫೧-೫೨ ॥ ನಂದ-ಸುನಂದರೇ ಮೊದಲಾ ಪಾರ್ಷದರು ತಮ್ಮ ಒಡೆಯನೆಂದೂ, ಸನಕಾದಿ ಮಹರ್ಷಿಗಳು ಪರಬ್ರಹ್ಮನೆಂದೂ, ಬ್ರಹ್ಮ-ರುದ್ರಾದಿ ದೇವತೆಗಳು ಸರ್ವೇಶ್ವರನೆಂದೂ, ಮರೀಚ್ಯಾದಿ ಒಂಭತ್ತು ಬ್ರಾಹ್ಮಣರು ಪ್ರಜಾಪತಿಯೆಂದೂ, ಪ್ರಹ್ಲಾದ-ನಾರದಾದಿ ಭಗವದ್ಭಕ್ತರು ಹಾಗೂ ಅಷ್ಟವಸುಗಳು ಪರಮಪ್ರಿಯತಮ ಭಗವಂತನೆಂದೂ ತಿಳಿದು ಭಿನ್ನ-ಭಿನ್ನ ಭಾವಗಳಿಂದ ನಿರ್ದೋಷವಾದ ವೇದವಾಣಿಗಳಿಂದ ಭಗವಂತನನ್ನು ಸ್ತುತಿಸುತ್ತಿದ್ದಾರೆ. ॥ ೫೩-೫೪ ॥ ಜೊತೆಗೇ ಲಕ್ಷ್ಮೀ, ಪುಷ್ಟಿ, ಸರಸ್ವತಿ, ಕಾಂತಿ, ಕೀರ್ತಿ, ತುಷ್ಟಿ (ಆರ್ಥಾತ್ - ಐಶ್ವರ್ಯ, ಬಲ, ಜ್ಞಾನ, ಶ್ರೀ, ಯಶ ಮತ್ತು ವೈರಾಗ್ಯ - ಈ ಷಡ್ಗೈಶ್ವರ್ಯ ಶಕ್ತಿಗಳು), ಇಳಾ, ಊರ್ಜಾ, ವಿದ್ಯಾ-ಅವಿದ್ಯಾ, ಹ್ಲಾದಿನೀ, ಸಂವಿತ್ ಮತ್ತು ಮಾಯೆ ಮೊದಲಾದ ಶಕ್ತಿಗಳು ಮೂರ್ತಿಮತ್ತಾಗಿ ನಿಂತು ಅವನ ಸೇವೆ ಮಾಡುತ್ತಿದ್ದರು. ॥ ೫೫ ॥

ಭಗವಂತನ ದಿವ್ಯವಾದ ಸ್ವರೂಪನ್ನು ನೋಡಿದ ಅಕ್ರೂರನಿಗೆ ಜಂಘಾಬಲವೇ ಉಡುಗಿಹೋಗಿತ್ತು. ಬಾಯಿಂದ ಮಾತೇ ಹೊರಡಲಿಲ್ಲ. ಶರೀರವೆಲ್ಲವೂ ಹರ್ಷಾತಿರೇಕದಿಂದ ಪುಳಕಗೊಂಡಿತು. ಪ್ರೇಮೋದ್ರೇಕದಿಂದ ಅವನ ಕಣ್ಣುಗಳು ಆನಂದ ಬಾಷ್ಪಗಳನ್ನು ಸುರಿಸಿದುವು. ॥ ೫೬ ॥ ಕೆಲವು ಕ್ಷಣಗಳು ಹೀಗೆಯೇ ಇದ್ದು ಮತ್ತೆ ಅವನು ಚೇತರಿಸಿಕೊಂಡು ಭಗವಂತನ ಚರಣಗಳಲ್ಲಿ ಶಿರಸ್ಸನ್ನಿಟ್ಟು ನಮಸ್ಕರಿಸಿದನು. ಅನಂತರ ಕೈಜೋಡಿಸಿಕೊಂಡು ಗದ್ಗದ ಧ್ವನಿಯಿಂದ ನಿಧಾನವಾಗಿ ಭಗವಂತನನ್ನು ಸ್ತುತಿಸತೊಡಗಿದನು. ॥ ೫೭ ॥

ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೩೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇಽಕ್ರೂರಪ್ರತಿಯಾನೇ
ಏಕೋನಚತ್ವಾರಿಂಶೋಽಧ್ಯಾಯಃ ॥ ೩೯ ॥

ನಲವತ್ತನೆಯ ಅಧ್ಯಾಯ

ಅಕ್ರೂರನು ಮಾಡಿದ ಭಗವಾನ್ ಶ್ರೀಕೃಷ್ಣನ ಸ್ತುತಿ

ಅಕ್ರೂರ ಉವಾಚ

ನತೋಽಸ್ಮ್ಯಹಂ ತ್ವಾಖಿಲಹೇತುಹೇತುಂ
ನಾರಾಯಣಂ ಪೂರುಷಮಾದ್ಯಮವ್ಯಯಮ್ ।
ಯನ್ನಾಭಿಜಾತಾದರವಿಂದ ಕೋಶಾದ್
ಬ್ರಹ್ಮಾऽऽವಿರಾಸೀದ್ಯತ ಏಷ ಲೋಕಃ ॥ ೧ ॥

ಭೂಸ್ತೋಯಮಗ್ನಿಃ ಪವನಃ ಖಮಾದಿ-
ರ್ಮಹಾನಜಾದಿರ್ಮನ ಇಂದ್ರಿಯಾಣಿ ।
ಸರ್ವೇಂದ್ರಿಯಾರ್ಥಾ ವಿಬುಧಾಶ್ಚ ಸರ್ವೇ
ಯೇ ಹೇತವಸ್ತೇ ಜಗತೋಽಂಗಭೂತಾಃ ॥ ೨ ॥

ನೈತೇ ಸ್ವರೂಪಂ ವಿದುರಾತ್ಮನಸ್ತೇ
ಹ್ಯಜಾದಯೋऽನಾತ್ಮತಯಾ ಗೃಹೀತಾಃ ।
ಅಜೋऽನುಬದ್ಧಃ ಸ ಗುಣೈರಜಾಯಾ
ಗುಣಾತ್ಪರಂ ವೇದ ನ ತೇ ಸ್ವರೂಪಮ್ ॥ ೩ ॥

ತ್ವಾಂ ಯೋಗಿನೋ ಯಜಂತ್ಯದ್ಧಾ ಮಹಾಪುರುಷಮೀಶ್ವರಮ್ ।
ಸಾಧ್ಯಾತ್ಮಂ ಸಾಧಿಭೂತಂ ಚ ಸಾಧಿದೈವಂ ಚ ಸಾಧವಃ
॥ ೪ ॥

ತ್ರಯ್ಯಾ ಚ ವಿದ್ಯಯಾ ಕೇಚಿತ್ ತ್ವಾಂ ವೈ ವೈತಾನಿಕಾ ದ್ವಿಜಾಃ ।
ಯಜಂತೇ ವಿತತೈರ್ಯಜ್ಞೈರ್ನಾನಾರೂಪಾಮರಾಖ್ಯಯಾ
॥ ೫ ॥

ಏಕೇ ತ್ವಾಖಿಲಕರ್ಮಾಣಿ ಸಂನ್ಯಸ್ಯೋಪಶಮಂ ಗತಾಃ ।
ಜ್ಞಾನಿನೋ ಜ್ಞಾನಯಜ್ಞೇನ ಯಜಂತಿ ಜ್ಞಾನವಿಗ್ರಹಮ್
॥ ೬ ॥

ಅನ್ಯೇ ಚ ಸಂಸ್ಕೃತಾತ್ಮಾನೋ ವಿಧಿನಾಭಿಹಿತೇನ ತೇ ।
ಯಜಂತಿ ತ್ವನ್ಮಯಾಸ್ತ್ವಾಂ ವೈ ಬಹುಮೂರ್ತ್ಯೇಕಮೂರ್ತಿಕಮ್
॥ ೭ ॥

ತ್ವಾಮೇವಾನ್ಯೇ ಶಿವೋಕ್ತೇನ ಮಾರ್ಗೇಣ ಶಿವರೂಪಿಣಮ್ ।
ಬಹ್ವಾಚಾರ್ಯವಿಭೇದೇನ ಭಗವನ್ ಸಮುಪಾಸತೇ
॥ ೮ ॥

ಅಕ್ರೂರನು ಹೇಳಿದನು – ಪ್ರಭುವೇ! ನೀನು ಪ್ರಕೃತಿಯೇ ಮೊದಲಾದ ಸಮಸ್ತ ಕಾರಣಗಳಿಗೆ ಪರಮಕಾರಣನಾಗಿರುವೆ. ನೀನೆ ಅವಿನಾಶಿಯಾದ ಪುರುಷೋತ್ತಮ ನಾರಾಯಣನಾಗಿರುವೆ. ನಿನ್ನ ನಾಭಿಕಮಲದಿಂದ ಈ ಚರಾಚರ ಜಗತ್ತನ್ನು ಸೃಷ್ಟಿಸಿದ ಆ ಬ್ರಹ್ಮದೇವರ ಆವಿರ್ಭಾವವಾಗಿರುವುದು. ಅಂತಹ ನಿನ್ನ ಚರಣಗಳಿಗೆ ನಾನು ವಂದಿಸುತ್ತೇನೆ. ॥ ೧ ॥ ಜಗದೀಶ್ವರನೇ! ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ತ್ವ, ಪ್ರಕೃತಿ, ಪುರುಷ, ಮನಸ್ಸು, ಇಂದ್ರಿಯಗಳು, ಇಂದ್ರಿಯಗಳ ವಿಷಯಗಳು, ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು, ಸಮಸ್ತವಾದ ಚರಾಚರಾಜಗತ್ತು, ಅದರಲ್ಲಿ ನಡೆಯುವ ವ್ಯವಹಾರಗಳು ಇವೆಲ್ಲವೂ ನಿನ್ನ ಅವಯವಗಳೇ ಆಗಿವೆ. ॥ ೨ ॥ ಇವೆಲ್ಲವೂ ನಿನ್ನ ಅವಯವಗಳೇ ಆಗಿದ್ದರೂ ನಿನ್ನ ಆತ್ಮಸ್ವರೂಪವನ್ನು ಅವು ತಿಳಿಯುವುದಿಲ್ಲ. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಒಳಗಾಗುವುದರಿಂದ ಪ್ರಕೃತಿ ಮತ್ತು ಪ್ರಕೃತಿಯಿಂದ ಉಂಟಾದ ಸಮಸ್ತ ಪದಾರ್ಥಗಳು ಅನಾತ್ಮವೇ ಆಗಿವೆ. ಬ್ರಹ್ಮದೇವರು ನಿನ್ನ ಸ್ವರೂಪವೇ ಆಗಿದ್ದರೂ ಪ್ರಕೃತಿಯ ಗುಣವಾದ ರಜಸ್ಸಿನಿಂದ ಆವಿರ್ಭೂತನಾಗಿದ್ದಾನೆ. ಆದರಿಂದಾಗಿ ಅವನೂ ಕೂಡ ಗುಣಾತೀತನಾದ ನಿನ್ನ ಆತ್ಮ ಸ್ವರೂಪವನ್ನು ತಿಳಿದವನಲ್ಲ. ॥ ೩ ॥ ಸಾಧುಸತ್ಪುರಷರೂ, ಯೋಗಿಗಳೂ ತಮ್ಮ ಅಂತಃಕರಣದಲ್ಲಿ ನೆಲೆಸಿದ ಅಂತರ್ಯಾಮಿಯ ರೂಪದಲ್ಲಿಯೂ, ಸಮಸ್ತ ಭೂತ-ಭೌತಿಕ ಪದಾರ್ಥಗಳಲ್ಲಿಯೂ ವ್ಯಾಪ್ತನಾದ ಪರಮಾತ್ಮನ ರೂಪದಲ್ಲಿಯೂ, ಸೂರ್ಯ, ಚಂದ್ರ, ಅಗ್ನಿ ಮೊದಲಾದ ದೇವತೆಗಳಲ್ಲಿ ಇಷ್ಟದೇವತೆಯ ರೂಪದಲ್ಲಿಯೂ, ಅವರ ಸಾಕ್ಷಿಯಾದ ಮಹಾಪುರುಷ ಹಾಗೂ ನಿಯಾಮಕ ಈಶ್ವರನ ರೂಪದಲ್ಲಿಯೂ ಸಾಕ್ಷಾತ್ತಾಗಿ ನಿನ್ನನ್ನೇ ಉಪಾಸನೆ ಮಾಡುತ್ತಾರೆ. ॥ ೪ ॥ ಯಾಜ್ಞಿಕರಾದ ಕೆಲವು ಬ್ರಾಹ್ಮಣರು ಕರ್ಮಕಾಂಡವನ್ನು ಪ್ರತಿಪಾದಿಸುವ ವೇದತ್ರಯಗಳ ಮೂಲಕವಾಗಿ ವಿಸ್ತಾರವಾದ ಯಜ್ಞಗಳಿಂದ ನಾನಾರೂಪಗಳುಳ್ಳ ದೇವತೆಗಳ ಹೆಸರಿನಿಂದ ನಿನ್ನನ್ನೇ ಪೂಜಿಸುತ್ತಾರೆ. ॥ ೫ ॥ ಅನೇಕ ಜ್ಞಾನಿಗಳು ತಮ್ಮ ಸಮಸ್ತ ಕರ್ಮಗಳನ್ನು ಸನ್ಯಸ್ತವಾಗಿಸಿ, ಶಾಂತ ಭಾವದಲ್ಲಿ ಸ್ಥಿತರಾಗುತ್ತಾರೆ. ಅವರು ಹೀಗೆ ಜ್ಞಾನಯಜ್ಞದ ಮೂಲಕವಾಗಿ ಜ್ಞಾನಸ್ವರೂಪನಾದ ನಿನ್ನನ್ನೇ ಆರಾಧಿಸುತ್ತಾರೆ.॥೬॥ ಇನ್ನೂ ಅನೇಕರು ಸಂಸ್ಕಾರಗಳಿಂದ ಶುದ್ಧಚಿತ್ತವುಳ್ಳ ವೈಷ್ಣವ ಭಕ್ತರು ನಿನ್ನಿಂದ ಉಪದಿಷ್ಟವಾದ ಪಾಂಚರಾತ್ರ ಮೊದಲಾದ ವಿಧಿಗಳಿಂದ ತನ್ಮಯರಾಗಿ ನಿನ್ನ ಚತುರ್ವ್ಯೂಹಾದಿ ಅನೇಕ ರೂಪಗಳನ್ನು ಮತ್ತು ನಾರಾಯಣ ಸ್ವರೂಪವಾದ ಒಂದೇ ಸ್ವರೂಪವನ್ನು ಪೂಜಿಸುತ್ತಾರೆ. ॥ ೭ ॥ ಭಗವಂತನೇ! ಮತ್ತೆ ಕೆಲವರು ಶಿವನಿಂದ ಹೇಳಲ್ಪಟ್ಟಿರುವ ಶೈವಾಗಮದ ವಿಧಾನದಿಂದ ಹಲವಾರು ಭೇದಗಳುಳ್ಳ ಶೈವ ಪಾಶುಪತಾದಿ ಶಿವಸ್ವರೂಪವಾದ ನಿನ್ನನ್ನೇ ಪೂಜಿಸುತ್ತಾರೆ. ॥ ೮ ॥

ಸರ್ವ ಏವ ಯಜಂತಿ ತ್ವಾಂ ಸರ್ವದೇವಮಯೇಶ್ವರಮ್ ।
ಯೇಽಪ್ಯನ್ಯದೇವತಾಭಕ್ತಾ ಯದ್ಯಪ್ಯನ್ಯಧಿಯಃ ಪ್ರಭೋ
॥ ೯ ॥

ಯಥಾದ್ರಿಪ್ರಭವಾ ನದ್ಯಃ ಪರ್ಜನ್ಯಾಪೂರಿತಾಃ ಪ್ರಭೋ ।
ವಿಶಂತಿ ಸರ್ವತಃ ಸಿಂಧುಂ ತದ್ವತ್ತ್ವಾಂ ಗತಯೋಽಂತತಃ
॥ ೧೦ ॥

ಸತ್ತ್ವಂ ರಜಸ್ತಮ ಇತಿ ಭವತಃ ಪ್ರಕೃತೇರ್ಗುಣಾಃ ।
ತೇಷು ಹಿ ಪ್ರಾಕೃತಾಃ ಪ್ರೋತಾ ಆಬ್ರಹ್ಮಸ್ಥಾವರಾದಯಃ
॥ ೧೧ ॥

ತುಭ್ಯಂ ನಮಸ್ತೇಽಸ್ತ್ವವಿಷಕ್ತದೃಷ್ಟಯೇ
ಸರ್ವಾತ್ಮನೇ ಸರ್ವಧಿಯಾಂ ಚ ಸಾಕ್ಷಿಣೇ ।
ಗುಣಪ್ರವಾಹೋಽಯಮವಿದ್ಯಯಾ ಕೃತಃ
ಪ್ರವರ್ತತೇ ದೇವನೃತಿರ್ಯಗಾತ್ಮಸು ॥ ೧೨ ॥

ಅಗ್ನಿರ್ಮುಖಂ ತೇಽವನಿರಂಘ್ರಿರೀಕ್ಷಣಂ
ಸೂರ್ಯೋ ನಭೋ ನಾಭಿರಥೋ ದಿಶಃ ಶ್ರುತಿಃ ।
ದ್ಯೌಃ ಕಂ ಸುರೇಂದ್ರಾಸ್ತವ ಬಾಹವೋಽರ್ಣವಾಃ
ಕುಕ್ಷಿರ್ಮರುತ್ ಪ್ರಾಣಬಲಂ ಪ್ರಕಲ್ಪಿತಮ್ ॥ ೧೩ ॥

ರೋಮಾಣಿ ವೃಕ್ಷೌಷಧಯಃ ಶಿರೋರುಹಾ
ಮೇಘಾಃಪರಸ್ಯಾಸ್ಥಿನಖಾನಿ ತೇಽದ್ರಯಃ ।
ನಿಮೇಷಣಂ ರಾತ್ರ್ಯಹನೀ ಪ್ರಜಾಪತಿ-
ರ್ಮೇಢ್ರಸ್ತು ವೃಷ್ಟಿಸ್ತವ ವೀರ್ಯಮಿಷ್ಯತೇ ॥ ೧೪ ॥

ತ್ವಯ್ಯವ್ಯಯಾತ್ಮನ್ ಪುರುಷೇ ಪ್ರಕಲ್ಪಿತಾ
ಲೋಕಾಃ ಸಪಾಲಾ ಬಹುಜೀವಸಂಕುಲಾಃ ।
ಯಥಾ ಜಲೇ ಸಂಜಿಹತೇ ಜಲೌಕಸೋಽ-
ಪ್ಯುದುಂಬರೇ ವಾ ಮಶಕಾ ಮನೋಮಯೇ ॥ ೧೫ ॥

ಯಾನಿ ಯಾನೀಹ ರೂಪಾಣಿ ಕ್ರೀಡನಾರ್ಥಂ ಬಿಭರ್ಷಿ ಹಿ ।
ತೈರಾಮೃಷ್ಟಶುಚೋ ಲೋಕಾ ಮುದಾ ಗಾಯಂತಿ ತೇ ಯಶಃ
॥ ೧೬ ॥

ನಮಃ ಕಾರಣಮತ್ಸ್ಯಾಯ ಪ್ರಲಯಾಬ್ಧಿಚರಾಯ ಚ ।
ಹಯಶೀರ್ಷ್ಣೇ ನಮಸ್ತುಭ್ಯಂ ಮಧುಕೈಟಭಮೃತ್ಯವೇ
॥ ೧೭ ॥

ಸ್ವಾಮಿ ! ನಿನ್ನಿಂದ ಭಿನ್ನರೆಂದು ಭಾವಿಸಿ ಹಲವಾರು ದೇವತೆಗಳನ್ನು ಪೂಜಿಸುವ ಅನ್ಯದೇವತಾ ಭಕ್ತರೂ ಕೂಡ ವಾಸ್ತವವಾಗಿ ನಿನ್ನನ್ನೇ ಆರಾಧಿಸುತ್ತಾರೆ. ಏಕೆಂದರೆ, ನೀನೇ ಸಮಸ್ತ ದೇವತೆಗಳ ರೂಪದಲ್ಲಿರುವ ಸರ್ವೇಶ್ವರನಾಗಿರುವೆ. ॥ ೯ ॥ ಪ್ರಭುವೇ ! ಪರ್ವತದಲ್ಲಿ ಹುಟ್ಟಿದ ನದಿಗಳು ಮಳೆಯ ನೀರಿನಿಂದ ತುಂಬಿ ಹರಿಯುತ್ತಾ ಕೊನೆಗೆ ಸಮುದ್ರವನ್ನೇ ಸೇರುವಂತೆಯೇ ಶ್ರುತಿ ಸ್ಮೃತಿ-ಪುರಾಣಗಳಲ್ಲಿ ಹೇಳಿರುವ ಎಲ್ಲ ಉಪಾಸನಾ ಮಾರ್ಗಗಳು ನಿನ್ನಲ್ಲಿಯೇ ಬಂದು ಸೇರುವುವು. ॥ ೧೦ ॥ ದೇವದೇವನೇ ! ಸತ್ತ್ವ-ರಜಸ್ತಮಗಳೆಂಬುವು ನಿನ್ನ ಪ್ರಕೃತಿಯ ಗುಣಗಳಾಗಿವೆ. ಬ್ರಹ್ಮನಿಂದ ಹಿಡಿದು ಸಕಲ ಚರಾಚರ ಪ್ರಾಣಿಗಳೂ ಕೂಡ ಬಟ್ಟೆಯಲ್ಲಿ ನೂಲು ಹಾಸುಹೊಕ್ಕಾಗಿರುವಂತೆ ತ್ರಿಗುಣಗಳಲ್ಲಿ ಓತಪ್ರೋತವಾಗಿವೆ. ॥ ೧೧ ॥ ನೀನು ಸರ್ವಸ್ವರೂಪನಾಗಿದ್ದರೂ ಅವುಗಳಲ್ಲಿ ಲಿಪ್ತನಾಗಿಲ್ಲ. ನೀನು ನಿರ್ಲಿಪ್ತನು. ನೀನು ಸಮಸ್ತರ ಬುದ್ಧಿಗಳಲ್ಲಿಯೂ ಸಾಕ್ಷಿ-ಸ್ವರೂಪನಾಗಿರುವೆ. ಗುಣಗಳ ಪ್ರವಾಹದಿಂದ ಉಂಟಾದ ಈ ಸೃಷ್ಟಿಯು ಅಜ್ಞಾನಮೂಲಕವೇ ಆಗಿದೆ ಮತ್ತು ದೇವ-ಮನುಷ್ಯ-ತಿರ್ಯಕ್ ಪ್ರಾಣಿಗಳಲ್ಲಿಯೂ ವ್ಯಾಪ್ತವಾಗಿದೆ. ಆದರೆ ನೀನು ಮಾತ್ರ ಇವೆಲ್ಲದರಿಂದ ಬೇರೆಯೆ ಆಗಿರುವೆ. ಗುಣಾತೀತನಾಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೧೨ ॥ ಅಗ್ನಿಯು ನಿನ್ನ ಮುಖವಾಗಿದೆ. ಪೃಥ್ವಿಯು ಚರಣವಾಗಿದೆ. ಸೂರ್ಯ-ಚಂದ್ರರು ಕಣ್ಣುಗಳಾಗಿವೆ. ಆಕಾಶವೇ ನಾಭಿಯಾಗಿದೆ. ದಿಕ್ಕುಗಳು ಕಿವಿಗಳಾಗಿವೆ. ಸ್ವರ್ಗವೇ ಶಿರವಾಗಿದೆ. ದೇವೇಂದ್ರ ಗಣಗಳು ನಿನ್ನ ಭುಜಗಳಾಗಿವೆ. ಸಮುದ್ರವು ಹೊಟ್ಟೆಯಾಗಿದೆ. ವಾಯುವು ನಿನ್ನ ಪ್ರಾಣಶಕ್ತಿಯ ರೂಪದಲ್ಲಿ ಉಪಾಸನೆಗಾಗಿ ಕಲ್ಪಿತವಾಗಿದೆ. ॥ ೧೩ ॥ ವೃಕ್ಷಗಳು ಮತ್ತು ಔಷಧಿಗಳು ನಿನ್ನ ರೋಮಗಳಾಗಿವೆ. ಮೇಘಗಳು ತಲೆಕೂದಲುಗಳಾಗಿವೆ. ಪರ್ವತಗಳು ನಿನ್ನ ಮೂಳೆಗಳೂ, ಉಗುರುಗಳೂ ಆಗಿವೆ. ಹಗಲು-ರಾತ್ರಿಗಳು ರಪ್ಪೆಗಳನ್ನು ಮುಚ್ಚಿ ತೆರೆಯುವುದಾಗಿದೆ. ಪ್ರಜಾಪತಿಯೆ ಜನನೇಂದ್ರಿಯವಾಗಿದ್ದು, ಮಳೆಯೇ ವೀರ್ಯವಾಗಿದೆ. ॥ ೧೪ ॥ ಅವಿನಾಶಿಯಾದ ಪರಮಾತ್ಮನೇ ! ನೀರಿನಲ್ಲಿ ಕೋಟಿ-ಕೋಟಿ ಜಲಚರಗಳಿರುವಂತೆ, ಅತ್ತಿಯ ಹಣ್ಣಿನಲ್ಲಿ ನೂರಾರು ಸಣ್ಣ ಸಣ್ಣ ಜೀವಿಗಳಿರುವಂತೆ ಉಪಾಸನೆಗಾಗಿ ಸ್ವೀಕರಿಸಿಕೊಂಡ ನಿನ್ನ ಮನೋಮಯ ಪುರುಷರೂಪದಲ್ಲಿ ಅನೇಕ ಪ್ರಕಾರದ ಜೀವ-ಜಂತುಗಳಿಂದ ತುಂಬಿದ ಲೋಕಗಳು ಮತ್ತು ಲೋಕಪಾಲಕರು ಕಲ್ಪಿತವಾಗಿವೆ. ॥ ೧೫ ॥ ನೀನು ಲೀಲೆಗಾಗಿ ಈ ಲೋಕದಲ್ಲಿ ಯಾವ ಯಾವ ರೂಪಗಳನ್ನು ಧರಿಸುವೆಯೋ, ಆ ಅವತಾರಗಳೆಲ್ಲ ಜನರ ಶೋಕ-ಮೋಹಗಳನ್ನು ನಾಶವಾಗಿಸುವುವು. ಅವರೆಲ್ಲರೂ ಅತಿ ಆನಂದದಿಂದ ನಿನ್ನ ನಿರ್ಮಲ ಕೀರ್ತಿಯನ್ನು ಕೊಂಡಾಡುವರು. ॥ ೧೬ ॥ ಪ್ರಭುವೇ ! ಪ್ರಳಯಕಾಲದಲ್ಲಿ ವಿಕಾರ್ಣವವಾಗಿದ್ದ ಸಮುದ್ರದಲ್ಲಿ ಓಡುತ್ತಿದ್ದ ಜಗತ್ಕಾರಣವಾದ ಮತ್ಸ್ಯ ಮೂರ್ತಿಗೆ ನಮಸ್ಕರಿಸುತ್ತೇನೆ. ಹಯಗ್ರೀವರೂಪಿಯಾಗಿ ಮಧು ಕೈಟಭರಿಗೆ ಮೃತ್ಯುವಾದ ನಿನಗೆ ನಮಸ್ಕರಿಸುತ್ತೇನೆ. ॥ ೧೭ ॥

ಅಕೂಪಾರಾಯ ಬೃಹತೇ ನಮೋ ಮಂದರಧಾರಿಣೇ ।
ಕ್ಷಿತ್ಯುದ್ಧಾರವಿಹಾರಾಯ ನಮಃ ಸೂಕರಮೂರ್ತಯೇ
॥ ೧೮ ॥

ನಮಸ್ತೇಽದ್ಭುತಸಿಂಹಾಯ ಸಾಧುಲೋಕಭಯಾಪಹ ।
ವಾಮನಾಯ ನಮಸ್ತುಭ್ಯಂ ಕ್ರಾಂತತ್ರಿಭುವನಾಯ ಚ
॥ ೧೯ ॥

ನಮೋ ಭೃಗೂಣಾಂ ಪತಯೇ ದೃಪ್ತಕ್ಷತ್ರವನಚ್ಛಿದೇ ।
ನಮಸ್ತೇ ರಘುವರ್ಯಾಯ ರಾವಣಾಂತಕರಾಯ ಚ
॥ ೨೦ ॥

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ
॥ ೨೧ ॥

ನಮೋ ಬುದ್ಧಾಯ ಶುದ್ಧಾಯ ದೈತ್ಯದಾನವಮೋಹಿನೇ ।
ಮ್ಲೇಚ್ಛಪ್ರಾಯಕ್ಷತ್ರಹಂತ್ರೇ ನಮಸ್ತೇ ಕಲ್ಕಿರೂಪಿಣೇ
॥ ೨೨ ॥

ಭಗವನ್ಜೀವಲೋಕೋಽಯಂ ಮೋಹಿತಸ್ತವ ಮಾಯಯಾ ।
ಅಹಂಮಮೇತ್ಯಸದ್ಗ್ರಾಹೋ ಭ್ರಾಮ್ಯತೇ ಕರ್ಮವರ್ತ್ಮಸು
॥ ೨೩ ॥

ಅಹಂ ಚಾತ್ಮಾತ್ಮಜಾಗಾರದಾರಾರ್ಥಸ್ವಜನಾದಿಷು ।
ಭ್ರಮಾಮಿ ಸ್ವಪ್ನಕಲ್ಪೇಷು ಮೂಢಃ ಸತ್ಯಧಿಯಾ ವಿಭೋ
॥ ೨೪ ॥

ಅನಿತ್ಯಾನಾತ್ಮದುಃಖೇಷು ವಿಪರ್ಯಯಮತಿರ್ಹ್ಯಹಮ್ ।
ದ್ವಂದ್ವಾರಾಮಸ್ತಮೋವಿಷ್ಟೋ ನ ಜಾನೇ ತ್ವಾಽಽತ್ಮನಃ ಪ್ರಿಯಮ್
॥ ೨೫ ॥

ಯಥಾಽಬುಧೋ ಜಲಂ ಹಿತ್ವಾ ಪ್ರತಿಚ್ಛನ್ನಂ ತದುದ್ಭವೈಃ ।
ಅಭ್ಯೇತಿ ಮೃಗತೃಷ್ಣಾಂ ವೈ ತದ್ವತ್ತ್ವಾಹಂ ಪರಾಙ್ಮುಖಃ
॥ ೨೬ ॥

ನೋತ್ಸಹೇಽಹಂ ಕೃಪಣಧೀಃ ಕಾಮಕರ್ಮಹತಂ ಮನಃ ।
ರೋದ್ಧುಂ ಪ್ರಮಾಥಿಭಿಶ್ಚಾಕ್ಷೈರ್ಹ್ರಿಯಮಾಣಮಿತಸ್ತತಃ
॥ ೨೭ ॥

ಭಗವಂತನೇ ! ನೀನೇ ವಿಶಾಲವಾದ ಕೂರ್ಮರೂಪವನ್ನು ಧರಿಸಿ ಮಂದರ ಪರ್ವತವನ್ನು ಬೆನ್ನ ಮೇಲೆ ಹೊತ್ತಿರುವ ನಿನಗೆ ನಮಸ್ಕರಿಸುತ್ತೇನೆ. ನೀನೇ ಭೂದೇವಿಯನ್ನು ಉದ್ಧರಿಸಲು ವರಾಹನಾಗಿ ಅವತರಿಸಿದ ನಿನಗೆ ನಮಸ್ಕರಿಸುತ್ತೇನೆ. ॥ ೧೮ ॥ ಸತ್ಪುರುಷರ ಭಯವನ್ನು ಹೋಗಲಾಡಿಸುವ ಪ್ರಭುವೇ ! ನಿನ್ನ ಆ ಅಲೌಕಿಕ ನರಸಿಂಹರೂಪಕ್ಕೆ ನಮೋ ನಮಃ. ವಾಮನರೂಪವನ್ನು ಧರಿಸಿ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಅಳೆದಂತಹ ನಿನಗೆ ನಮಸ್ಕಾರವು. ॥ ೧೯ ॥ ದುರಹಂಕಾರಿಗಳಾದ ಕ್ಷತ್ರಿಯರೆಂಬ ಅರಣ್ಯವನ್ನೇ ಕತ್ತರಿಸಿ ಹಾಕಿದ ಭೃಗುಶ್ರೇಷ್ಠನಾದ ಪರಶುರಾಮನಿಗೆ ನಮಸ್ಕರಿಸುತ್ತೇನೆ. ರಘುವಂಶದಲ್ಲಿ ಶ್ರೀರಾಮನಾಗಿ ಅವತರಿಸಿದ ನಿನಗೆ ನಮಸ್ಕರಿಸುತ್ತೇನೆ. ॥ ೨೦ ॥ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ಚತುರ್ವ್ಯೂಹ ಸ್ವರೂಪನಾಗಿರುವ ಹಾಗೂ ಯದುವಂಶೀಯರಿಗೆ ಒಡೆಯನಾದ ನಿನಗೆ ನಮಸ್ಕರಿಸುತ್ತೇನೆ. ॥ ೨೧ ॥ ದೈತ್ಯ-ದಾನವರನ್ನು ವಿಮೋಹಗೊಳಿಸಲು ನೀನು ಶುದ್ಧ ಅಹಿಂಸಾಮಾರ್ಗದ ಪ್ರವರ್ತಕನಾದ ಬುದ್ಧ ರೂಪವನ್ನು ಸ್ವೀಕರಿಸುವೆ. ಅಂತಹ ನಿನಗೆ ನಮಸ್ಕಾರವು. ಪೃಥ್ವಿಯಲ್ಲಿ ಕ್ಷತ್ರಿಯರು ಮ್ಲೇಚ್ಛಪ್ರಾಯರಾದಾಗ ಅವರನ್ನು ನಾಶಪಡಿಸಲು ನೀನೇ ಕಲ್ಕಿಯ ರೂಪದಿಂದ ಅವತರಿಸುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೨ ॥

ಭಗವಂತನೇ ! ಈ ಸಮಸ್ತ ಜೀವಿಗಳು ನಿನ್ನ ಮಾಯೆಯಿಂದ ಮೋಹಿತರಾಗಿದ್ದಾರೆ. ಈ ಮೋಹದಿಂದಲೇ ನಾನು-ನನ್ನದೆಂಬ ದುರಾಗ್ರಹಕ್ಕೆ ಒಳಗಾಗಿ ಕರ್ಮಮಾರ್ಗದಲ್ಲಿ ಅಲೆಯುತ್ತಿದ್ದಾರೆ. ॥ ೨೩. ॥ ವಿಭುವೇ ! ಸ್ವಪ್ನದಲ್ಲಿ ಕಾಣುವ ಪದಾರ್ಥಗಳಂತಿರುವ ದೇಹ-ಗೇಹ, ಪತ್ನೀ-ಪುತ್ರರು, ಧನ-ಸ್ವಜನ ಇವೆಲ್ಲವನ್ನು ಮೂಢನಾದ ನಾನೂ ಕೂಡ ಸತ್ಯವೆಂದೇ ತಿಳಿದು ಭ್ರಮಿಸಿ ವಿಮೋಹಿತನಾಗಿದ್ದೇನೆ. ॥ ೨೪ ॥ ನನ್ನ ಮೂರ್ಖತೆಯನ್ನಾದರೂ ನೋಡು. ಪ್ರಭುವೇ ! ಅನಿತ್ಯ ವಸ್ತುಗಳನ್ನು ನಿತ್ಯವೆಂದೂ, ಅನಾತ್ಮವನ್ನು ಆತ್ಮನೆಂದೂ, ದುಃಖಿವನ್ನು ಸುಖಿವೆಂದೂ ನಾನು ಭಾವಿಸಿದ್ದೇನೆ. ಅಜ್ಞಾನವಶದಿಂದ ಸಾಂಸಾರಿಕ ಸುಖ-ದುಃಖಿಗಳೇ ಮೊದಲಾದ ದ್ವಂದ್ವಗಳಲ್ಲಿ ಬಿದ್ದ ನಾನು ನಿಜವಾಗಿ ಪ್ರಿಯನಾಗಿರುವ ನಿನ್ನನ್ನೇ ಮರೆತಿದ್ದೇನೆ. ॥ ೨೫ ॥ ಅಜ್ಞಾನಿಯಾದವನೊಬ್ಬನು ಸರೋವರದಲ್ಲಿ ನೀರಿನಿಂದಲೇ ಹುಟ್ಟಿದ ಪಾಚಿಯಿಂದ ಮರೆಯಾದ ನೀರನ್ನು ಗುರುತಿಸಲಾರದೆ, ಬಿಸಿಲ್ಗುದುರೆಯಿಂದ ದೂರದಲ್ಲಿ ನೀರಿನಂತೆ ಕಾಣುವ ಮರೀಚಿಕೆಯನ್ನು ಅರಸಿ ಹೋಗುವಂತೆಯೇ, ನಾನು ನಿನ್ನ ಮಾಯೆಯಿಂದ ಆವೃತನಾಗಿ ಹತ್ತಿರದಲ್ಲಿರುವ ಆನಂದಕಂದನಾದ ನಿನ್ನನ್ನು ಗುರುತಿಸಲಾರದೆ ನಿನ್ನಿಂದ ಪರಾಙ್ಮುಖನಾಗಿದ್ದೇನೆ. ॥ ೨೬ ॥ ಅತ್ಯಂತ ದುರ್ಬಲವಾದ ಬುದ್ಧಿಯುಳ್ಳ ನಾನು ಅತ್ಯಂತ ಬಲವತ್ತರವಾದ ಇಂದ್ರಿಯಗಳಿಂದ ಯದ್ವಾ-ತದ್ವಾ ಸೆಳೆಯಲ್ಪಡುತ್ತಿರುವ, ಕಾಮ ಕರ್ಮಗಳಿಂದ ಕೆಡಿಸಲ್ಪಟ್ಟಿರುವ ಮನಸ್ಸನ್ನು ತಡೆಗಟ್ಟಲು ಅಸಮರ್ಥನಾಗಿದ್ದೇನೆ. ॥ ೨೭ ॥

ಸೋಽಹಂ ತವಾಂಘ್ರ್ಯುಪಗತೋಽಸ್ಮ್ಯಸತಾಂ ದುರಾಪಂ
ತಚ್ಚಾಪ್ಯಹಂ ಭವದನುಗ್ರಹ ಈಶ ಮನ್ಯೇ ।
ಪುಂಸೋ ಭವೇದ್ಯರ್ಹಿ ಸಂಸರಣಾಪವರ್ಗ-
ಸ್ತ್ವಯ್ಯಬ್ಜನಾಭ ಸದುಪಾಸನಯಾ ಮತಿಃ ಸ್ಯಾತ್ ॥ ೨೮ ॥

ಹೀಗೆ ಅಲೆಯುತ್ತಿರುವ ನಾನು - ದುಷ್ಟರಿಗೆ ದುರ್ಲಭವಾದ ನಿನ್ನ ಚರಣಕಮಲಗಳ ಛತ್ರಛಾಯೆಯನ್ನು ಪಡೆದಿದ್ದೇನೆ. ಸ್ವಾಮಿಯೇ! ಇದನ್ನು ನಿನ್ನ ಕೃಪಾಪ್ರಸಾದವೆಂದೇ ತಿಳಿಯುತ್ತೇನೆ. ಏಕೆಂದರೆ, ಪದ್ಮನಾಭನೇ! ಜೀವನಿಗೆ ಸಂಸಾರದಿಂದ ಮುಕ್ತನಾಗುವ ಸಮಯ ಒದಗಿದಾಗ ಸತ್ಪುರುಷರ ಉಪಾಸನೆಯಿಂದ ಚಿತ್ತವೃತ್ತಿಯು ನಿನ್ನಲ್ಲಿ ತೊಡಗುವುದು. ॥ ೨೮ ॥ ಪ್ರಭೋ! ನೀನು ಕೇವಲ ವಿಜ್ಞಾನ ಸ್ವರೂಪನೂ, ವಿಜ್ಞಾನಘನನೂ ಆಗಿರುವೆ. ಕಂಡು ಬರುವ ವೃತ್ತಿಗಳಿಗೆಲ್ಲ ನೀನೆ ಕಾರಣನೂ, ಅಧಿಷ್ಠಾನನೂ ಆಗಿರುವೆ. ಜೀವಿಯ ಸ್ವರೂಪದಲ್ಲಿ ಮತ್ತು ಜೀವಿಗಳ ಸುಖ-ದುಃಖಾದಿಗಳ ನಿಮಿತ್ತ, ಕಾಲ, ಕರ್ಮ, ಸ್ವಭಾವ ಹಾಗೂ ಪ್ರಕೃತಿಯ ರೂಪದಲ್ಲಿಯೂ ನೀನೇ ಇರುವೆ. ಅವುಗಳ ನಿಯಾಮಕನೂ ನೀನೇ ಆಗಿರುವೆ. ಅನಂತ ಶಕ್ತಿಯುಳ್ಳ ನೀನು ಸಾಕ್ಷಾತ್ ಬ್ರಹ್ಮವೇ ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೯ ॥ ಪ್ರಭೋ! ನೀನೇ ವಾಸುದೇವನು. ಸಮಸ್ತ ಜೀವರ ಆಶ್ರಯನಾದ ಸಂಕರ್ಷಣನು ನೀನೇ. ಬುದ್ಧಿ ಮತ್ತು ಮನಸ್ಸಿನ ಅಧಿಷ್ಠಾತೃ ದೇವತೆ ಹೃಷೀಕೇಶನೂ (ಪ್ರದ್ಯುಮ್ನ ಮತ್ತು ಅನಿರುದ್ಧ) ನೀನೇ. ನಾನು ಬಾರಿ-ಬಾರಿಗೂ ನಿನಗೆ ನಮಸ್ಕರಿಸುತ್ತೇನೆ. ಪ್ರಭುವೇ! ಶರಣಾಗತನಾದ ನನ್ನನ್ನು ರಕ್ಷಿಸು. ॥ ೩೦ ॥

ನಮೋ ವಿಜ್ಞಾನಮಾತ್ರಾಯ ಸರ್ವಪ್ರತ್ಯಯಹೇತವೇ ।
ಪುರುಷೇಶಪ್ರಧಾನಾಯ ಬ್ರಹ್ಮಣೇಽನಂತಶಕ್ತಯೇ
॥ ೨೯ ॥

ನಮಸ್ತೇ ವಾಸುದೇವಾಯ ಸರ್ವಭೂತಕ್ಷಯಾಯ ಚ ।
ಹೃಷೀಕೇಶ ನಮಸ್ತುಭ್ಯಂ ಪ್ರಪನ್ನಂ ಪಾಹಿ ಮಾಂ ಪ್ರಭೋ
॥ ೩೦ ॥

ನಲವತ್ತನೆಯ ಅಧ್ಯಾಯವು ಮುಗಿಯಿತು. ॥ ೪೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ
ಪೂರ್ವಾರ್ಧೇ ಅಕ್ರೂರಸ್ತುತಿರ್ನಾಮ ಚತ್ವಾರಿಂಶೋಽಧ್ಯಾಯಃ ॥ ೪೦ ॥

ನಲವತ್ತೊಂದನೆಯ ಅಧ್ಯಾಯ

ಮಥುರೆಗೆ ಶ್ರೀಕೃಷ್ಣನ ಪ್ರವೇಶ

ಶ್ರೀಶುಕ ಉವಾಚ

ಸ್ತುವತಸ್ತಸ್ಯ ಭಗವಾನ್ ದರ್ಶಯಿತ್ವಾ ಜಲೇ ವಪುಃ ।
ಭೂಯಃ ಸಮಾಹರತ್ ಕೃಷ್ಣೋ ನಟೋ ನಾಟ್ಯಮಿವಾತ್ಮನಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಅನನ್ಯ ಭಕ್ತಿಯಿಂದ ಸ್ತೋತ್ರಮಾಡುತ್ತಿದ್ದ ಅಕ್ರೂರನಿಗೆ ನೀರಿನಲ್ಲಿ ತನ್ನ ದಿವ್ಯವಾದ ಸ್ವರೂಪವನ್ನು ತೋರಿಸಿ, ಮರುಕ್ಷಣದಲ್ಲೇ ನಟನು ನಾಟಕವಾಡಿ ತೆರೆಯ ಹಿಂದೆ ಸರಿಯುವಂತೆ ಭಗವಂತನು ಪುನಃ ಶ್ರೀಕೃಷ್ಣನಾಗಿಯೇ ಅಕ್ರೂರನಿಗೆ ಕಾಣಿಸಿಕೊಂಡನು. ॥ ೧ ॥ ಭಗವಂತನ ಆ ದಿವ್ಯರೂಪವು ಅಂತರ್ಧಾನವಾದುದನ್ನು ಕಂಡ ಅಕ್ರೂರನು ನೀರಿನಿಂದ ಹೊರಬಂದು, ಆವಶ್ಯಕವೆನಿಸಿದ ನಿತ್ಯಕರ್ಮಗಳನ್ನು ಬೇಗ-ಬೇಗನೆ ಪೂರೈಸಿಕೊಂಡು ಶೀಘ್ರವಾಗಿ ರಥದಲ್ಲಿ ಬಂದು ಕುಳಿತನು. ಆಗ ಅವನು ಅತ್ಯಂತ ವಿಸ್ಮಿತನಾಗಿದ್ದನು. ॥ ೨ ॥ ಭಗವಾನ್ ಶ್ರೀಕೃಷ್ಣನು ಅವನಲ್ಲಿ ಕೇಳಿದನು - ಚಿಕ್ಕಪ್ಪ! ನೀನು ಭೂಮಿಯಲ್ಲಾಗಲೀ, ಆಕಾಶದಲ್ಲಾಗಲೀ, ನೀರಿನಲ್ಲಾಗಲೀ ಏನಾದರೂ ಅದ್ಭುತವಾದ ವಸ್ತುವನ್ನು ಕಂಡೆಯಾ? ಏಕೆಂದರೆ, ನಿನ್ನ ಮುಖಾವಲೋಕನದಿಂದ ಹಾಗೆ ತಿಳಿಯುತ್ತಾ ಇದೆ. ॥ ೩ ॥

ಸೋಽಪಿ ಚಾಂತರ್ಹಿತಂ ವೀಕ್ಷ್ಯ ಜಲಾದುನ್ಮಜ್ಯ ಸತ್ವರಃ ।
ಕೃತ್ವಾ ಚಾವಶ್ಯಕಂ ಸರ್ವಂ ವಿಸ್ಮಿತೋ ರಥಮಾಗಮತ್
॥ ೨ ॥

ತಮಪೃಚ್ಛದ್ಧೃಷೀಕೇಶಃ ಕಿಂ ತೇ ದೃಷ್ಟಮಿಹಾದ್ಭುತಮ್ ।
ಭೂಮೌ ವಿಯತಿ ತೋಯೇ ವಾ ತಥಾ ತ್ವಾಂ ಲಕ್ಷಯಾಮಹೇ
॥ ೩ ॥

ಅಕ್ರೂರ ಉವಾಚ

ಅದ್ಭುತಾನೀಹ ಯಾವಂತಿ ಭೂಮೌ ವಿಯತಿ ವಾ ಜಲೇ ।
ತ್ವಯಿ ವಿಶ್ವಾತ್ಮಕೇ ತಾನಿ ಕಿಂ ಮೇಽದೃಷ್ಟಂ ವಿಪಶ್ಯತಃ
॥ ೪ ॥

ಯತ್ರಾದ್ಭುತಾನಿ ಸರ್ವಾಣಿ ಭೂಮೌ ವಿಯತಿ ವಾ ಜಲೇ ।
ತಂ ತ್ವಾನುಪಶ್ಯತೋ ಬ್ರಹ್ಮನ್ ಕಿಂ ಮೇ ದೃಷ್ಟಮಿಹಾದ್ಭುತಮ್
॥ ೫ ॥

ಇತ್ಯುಕ್ತ್ವಾ ಚೋದಯಾಮಾಸ ಸ್ಯಂದನಂ ಗಾಂದಿನೀಸುತಃ ।
ಮಥುರಾಮನಯದ್ರಾಮಂ ಕೃಷ್ಣಂ ಚೈವ ದಿನಾತ್ಯಯೇ
॥ ೬ ॥

ಮಾರ್ಗೇ ಗ್ರಾಮಜನಾ ರಾಜನ್ಸ್ತತ್ರ ತತ್ರೋಪಸಂಗತಾಃ ।
ವಸುದೇವಸುತೌ ವೀಕ್ಷ್ಯ ಪ್ರೀತಾ ದೃಷ್ಟಿಂ ನ ಚಾದದುಃ
॥ ೭ ॥

ತಾವದ್ವ್ರಜೌಕಸಸ್ತತ್ರ ನಂದಗೋಪಾದಯೋಽಗ್ರತಃ ।
ಪುರೋಪವನಮಾಸಾದ್ಯ ಪ್ರತೀಕ್ಷಂತೋಽವತಸ್ಥಿರೇ
॥ ೮ ॥

ತಾನ್ ಸಮೇತ್ಯಾಹ ಭಗವಾನಕ್ರೂರಂ ಜಗದೀಶ್ವರಃ ।
ಗೃಹೀತ್ವಾ ಪಾಣಿನಾ ಪಾಣಿಂ ಪ್ರಶ್ರಿತಂ ಪ್ರಹಸನ್ನಿವ
॥ ೯ ॥

ಭವಾನ್ ಪ್ರವಿಶತಾಮಗ್ರೇ ಸಹಯಾನಃ ಪುರೀಂ ಗೃಹಮ್ ।
ವಯಂ ತ್ವಿಹಾವಮುಚ್ಯಾಥ ತತೋ ದ್ರಕ್ಷ್ಯಾಮಹೇ ಪುರೀಮ್
॥ ೧೦ ॥

ಅಕ್ರೂರ ಉವಾಚ

ನಾಹಂ ಭವದ್ಭ್ಯಾಂ ರಹಿತಃ ಪ್ರವೇಕ್ಷ್ಯೇ ಮಥುರಾಂ ಪ್ರಭೋ ।
ತ್ಯಕ್ತುಂ ನಾರ್ಹಸಿ ಮಾಂ ನಾಥ ಭಕ್ತಂ ತೇ ಭಕ್ತವತ್ಸಲ
॥ ೧೧ ॥

ಆಗಚ್ಛ್ಯಾಮ ಗೇಹಾನ್ನಃ ಸನಾಥಾನ್ ಕುರ್ವಧೋಕ್ಷಜ ।
ಸಹಾಗ್ರಜಃ ಸಗೋಪಾಲೈಃ ಸುಹೃದ್ಭಿಶ್ಚ ಸುಹೃತ್ತಮ
॥ ೧೨ ॥

ಪುನೀಹಿ ಪಾದರಜಸಾ ಗೃಹಾನ್ನೋ ಗೃಹಮೇಧಿನಾಮ್ ।
ಯಚ್ಛೌಚೇನಾನುತೃಪ್ಯಂತಿ ಪಿತರಃ ಸಾಗ್ನಯಃ ಸುರಾಃ
॥ ೧೩ ॥

ಅವನಿಜ್ಯಾಂಘ್ರಿಯುಗಲಮಾಪೀಚ್ಛ್ಲೋಕ್ಯೋ ಬಲಿರ್ಮಹಾನ್ ।
ಐಶ್ವರ್ಯಮತುಲಂ ಲೇಭೇ ಗತಿಂ ಚೈಕಾಂತಿನಾಂ ತು ಯಾ
॥ ೧೪ ॥

ಅಕ್ರೂರನು ಹೇಳಿದನು – ಸ್ವಾಮಿಯೇ! ಪೃಥಿವಿ, ಆಕಾಶ, ನೀರು ಇವುಗಳಲ್ಲಿ ಮತ್ತು ಇಡೀ ಜಗತ್ತಿಲ್ಲಿ ಇರುವ ಅದ್ಭುತ ವಸ್ತು ಗಳೆಲ್ಲವೂ ನಿನ್ನಲ್ಲಿಯೇ ಇದೆ. ಏಕೆಂದರೆ, ನೀನು ವಿಶ್ವರೂಪ ನಾಗಿರುವೆ. ನಾನು ನಿನ್ನನ್ನು ನೋಡುತ್ತಿರುವಾಗ ನಾನು ನೋಡದಿರುವ ಯಾವ ಅದ್ಭುತವಸ್ತು ತಾನೇ ಉಳಿದೀತು ? ॥ ೪ ॥ ಭಗವಂತಾ! ಪೃಥಿವಿಯಲ್ಲಾಗಲೀ, ನೀರಿನಲ್ಲಾಗಲೀ, ಆಕಾಶ ದಲ್ಲಾಗಲೀ ಇರುವ ಅದ್ಭುತ ವಸ್ತುಗಳೆಲ್ಲವೂ ನೆಲೆಸಿರುವ ನಿನ್ನನ್ನೇ ನಾನು ನೋಡುತ್ತಿದ್ದೆನೆ. ಹಾಗಿರುವಾಗ ನಾನು ಬೇರೆಯಾದ ಅದ್ಭುತವಸ್ತುವನ್ನು ನೋಡಬೇಕಾಗಿದೆಯೇ ? ॥ ೫ ॥ ಗಾಂದಿನೀ ನಂದನನಾದ ಅಕ್ರೂರನು ಹೀಗೆ ಕೇಳಿ ರಥವನ್ನು ನಡೆಸುತ್ತಾ ಭಗವಾನ್ ಶ್ರೀಕೃಷ್ಣನನ್ನು ಮತ್ತು ಬಲರಾಮರನನ್ನು ಕರೆದುಕೊಂಡು ಸಾಯಂಕಾಲವಾಗುತ್ತಿದ್ದಂತೆ ಮಥುರೆಗೆ ತಲುಪಿದನು. ॥ ೬ ॥ ಪರೀಕ್ಷಿತನೇ! ದಾರಿಯಲ್ಲಿ ಅಲ್ಲಲ್ಲಿ ಹಳ್ಳಿಯ ಜನರು ಭಗವಾನ್ ಶ್ರೀಕೃಷ್ಣ-ಬಲರಾಮರನ್ನು ನೋಡಲು ಗುಂಪು-ಗುಂಪಾಗಿ ಬಂದು ಅವನನ್ನು ನೋಡಿ ಆನಂದಿತರಾಗುತ್ತಿದ್ದರು. ಅವರು ನೆಟ್ಟ ನೋಟ ದಿಂದ ಅವರನ್ನೇ ನೋಡುತ್ತಾ ಧನ್ಯತೆಯನ್ನು ಪಡೆಯುತ್ತಿದ್ದರು. ಶ್ರೀಕೃಷ್ಣನನ್ನು ನೋಡುತ್ತಾ ಅವರು ತಮ್ಮ ದೃಷ್ಟಿಯನ್ನು ಬೇರೆಡೆಗೆ ಕದಲಿಸದೇ ಹೋದರು. ॥ ೭ ॥ ನಂದಗೋಪನೇ ಮೊದಲಾದ ವ್ರಜವಾಸಿಗಳು ಮೊದಲೇ ಮಥುರೆಗೆ ತಲುಪಿ ಊರಿನ ಹೊರಗಿನ ಉದ್ಯಾನದಲ್ಲಿ ಬೀಡುಬಿಟ್ಟು ರಾಮ-ಕೃಷ್ಣರ ಪ್ರತೀಕ್ಷೆ ಮಾಡು ತ್ತಿದ್ದರು. ॥ ೮ ॥ ಅವರ ಬಳಿಗೆ ತಲುಪುತ್ತಲೇ ಜಗದೀಶ್ವರನಾದ ಶ್ರೀಕೃಷ್ಣನು ರಥದಿಂದಿಳಿದು, ನಿಂತಿರುವ ಅಕ್ರೂರನ ಕೈಯನ್ನು ಹಿಡಿದುಕೊಂಡು ಮುಗುಳ್ನಗುತ್ತಾ ಇಂತೆಂದನು. ॥ ೯ ॥ ಚಿಕ್ಕಪ್ಪ ನವರೇ! ನೀವು ರಥದೊಂದಿಗೆ ಮುಂದಾಗಿ ಮಥುರೆಯನ್ನು ಪ್ರವೇಶಿಸಿ ತಮ್ಮ ಮನೆಗೆ ಹೋಗಿರಿ. ನಾವು ಮೊದಲಿಗೆ ಇಲ್ಲಿ ತಂಗಿ, ಮತ್ತೆ ನಗರವನ್ನು ನೋಡಲು ಬರುವೆವು. ॥ ೧೦ ॥

ಅಕ್ರೂರನು ಹೇಳಿದನು – ಪ್ರಭುವೇ! ನಿಮ್ಮಿಬ್ಬರನ್ನು ಬಿಟ್ಟು ನಾನು ಮಥುರೆಯನ್ನು ಪ್ರವೇಶಿಸಲಾರೆನು. ಸ್ವಾಮಿ! ನಾನು ನಿನ್ನ ಭಕ್ತನಾಗಿರುವೆನು. ಭಕ್ತವತ್ಸಲನಾದ ನೀನು ನನ್ನ ಕೈ ಬಿಡ ಬೇಡ. ॥ ೧೧ ॥ ಭಗವಂತ! ಅಧೋಕ್ಷಜನೇ! ಸುಹೃತ್ತಮನೇ! ನೀನು ನಿನ್ನಣ್ಣ ಬಲರಾಮನೊಡಗೊಂಡು, ನಂದಗೋಪನೇ ಮೊದ ಲಾದ ಗೋಪಾಲಕರೊಂದಿಗೆ ನಮ್ಮ ಮನೆಗೆ ಬನ್ನಿರಿ. ॥ ೧೨ ॥ ನಾವು ಗೃಹಸ್ಥರು. ನಿನ್ನ ಚರಣಕಮಲಗಳ ಧೂಳಿನಿಂದ ನಮ್ಮ ಮನೆಯನ್ನು ಪವಿತ್ರಗೊಳಿಸು. ನಿನ್ನ ದಿವ್ಯವಾದ ಚರಣಗಳನ್ನು ತೊಳೆಯುವುದರಿಂದ ಅಗ್ನಿಗಳೂ, ದೇವತೆಗಳೂ, ಪಿತೃಗಳೂ, ತೃಪ್ತ ರಾಗುತ್ತಾರೆ. ॥ ೧೩ ॥ ಪ್ರಭೋ! ಸತ್ಪುರುಷರು ಸದಾಕಾಲ ಕೊಂಡಾಡುತ್ತಿರುವ ನಿನ್ನ ಚರಣಯುಗಳಗಳನ್ನು ತೊಳೆಯುವುದ ರಿಂದ ಬಲಿಯು ಪುಣ್ಯಶ್ಲೋಕನೆಂಬ ಕೀರ್ತಿಯನ್ನು ಪಡೆದನು. ಕೀರ್ತಿಯೇ ಅಲ್ಲ - ಅನನ್ಯ ಪ್ರೇಮಿ ಭಕ್ತರಿಗೆ ದೊರೆಯುವಂತಹ ಅತುಲನೀಯ ಐಶ್ವರ್ಯವೂ, ಸದ್ಗತಿಯೂ ದೊರೆಯಿತು. ॥ ೧೪ ॥

ಆಪಸ್ತೇಽಂಘ್ರ್ಯವನೇಜನ್ಯಸ್ತ್ರೀನ್ ಲೋಕಾನ್ ಶುಚಯೋಽಪುನನ್ ।
ಶಿರಸಾಧತ್ತ ಯಾಃ ಶರ್ವಃ ಸ್ವರ್ಯಾತಾಃ ಸಗರಾತ್ಮಜಾಃ ॥ ೧೫ ॥

ದೇವದೇವ ಜಗನ್ನಾಥ ಪುಣ್ಯಶ್ರವಣಕೀರ್ತನ ।
ಯದೂತ್ತಮೋತ್ತಮಶ್ಲೋಕ ನಾರಾಯಣ ನಮೋಽಸ್ತು ತೇ ॥ ೧೬ ॥

ಶ್ರೀಭಗವಾನುವಾಚ

ಆಯಾಸ್ಯೇ ಭವತೋ ಗೇಹಮಹಮಾರ್ಯಸಮನ್ವಿತಃ ।
ಯದುಚಕ್ರದ್ರುಹಂ ಹತ್ವಾ ವಿತರಿಷ್ಯೇ ಸುಹೃತ್ಪ್ರಿಯಮ್ ॥ ೧೭ ॥

ಶ್ರೀಶುಕ ಉವಾಚ

ಏವಮುಕ್ತೋ ಭಗವತಾ ಸೋಽಕ್ರೂರೋ ವಿಮನಾ ಇವ ।
ಪುರೀಂ ಪ್ರವಿಷ್ಟಃ ಕಂಸಾಯ ಕರ್ಮಾವೇದ್ಯ ಗೃಹಂ ಯಯೌ ॥ ೧೮ ॥

ಅಥಾಪರಾಹ್ಣೇ ಭಗವಾನ್ ಕೃಷ್ಣಃ ಸಂಕರ್ಷಣಾನ್ವಿತಃ ।
ಮಥುರಾಂ ಪ್ರಾವಿಶದ್ಗೋಪೈರ್ದಿದೃಕ್ಷುಃ ಪರಿವಾರಿತಃ ॥ ೧೯ ॥

ದದರ್ಶ ತಾಂ ಸ್ಫಾಟಿಕತುಂಗಗೋಪುರ-
ದ್ವಾರಾಂ ಬೃಹದ್ಧೇಮಕಪಾಟತೋರಣಾಮ್ ।
ತಾಮ್ರಾರಕೋಷ್ಠಾಂ ಪರಿಖಾದುರಾಸದಾ-
ಮುದ್ಯಾನರಮ್ಯೋಪವನೋಪಶೋಭಿತಾಮ್ ॥ ೨೦ ॥

ಸೌವರ್ಣಶೃಂಗಾಟಕಹರ್ಮ್ಯನಿಷ್ಕುಟೈಃ
ಶ್ರೇಣೀಸಭಾಭಿರ್ಭವನೈರುಪಸ್ಕೃತಾಮ್ ।
ವೈದೂರ್ಯವಜ್ರಾಮಲನೀಲವಿದ್ರುಮೈ-
ರ್ಮುಕ್ತಾಹರಿದ್ಭಿರ್ವಲಭೀಷು ವೇದಿಷು ॥ ೨೧ ॥

ಜುಷ್ಟೇಷು ಜಾಲಾಮುಖರಂಧ್ರಕುಟ್ಟಿಮೇ-
ಷ್ವಾವಿಷ್ಟಪಾರಾವತಬರ್ಹಿನಾದಿತಾಮ್ ।
ಸಂಸಿಕ್ತರಥ್ಯಾಪಣಮಾರ್ಗಚತ್ವರಾಂ
ಪ್ರಕೀರ್ಣಮಾಲ್ಯಾಂಕುರಲಾಜತಂಡುಲಾಮ್ ॥ ೨೨ ॥

ನಿನ್ನ ಚರಣೋದಕವಾದ ಗಂಗೆಯು ಮೂರು ಲೋಕಗಳನ್ನೇ ಪವಿತ್ರಗೊಳಿಸಿರುವಳು. ನಿಜವಾಗಿಯೂ ಅದು ಪವಿತ್ರತೆಯ ಮೂರ್ತಿಮಂತ ಸ್ವರೂಪನೇ ಆಗಿದೆ. ಅದರ ಸ್ಪರ್ಶದಿಂದಲೆ ಸಗರನ ಪುತ್ರರಿಗೆ ಸದ್ಗತಿ ಪ್ರಾಪ್ತವಾಯಿತು. ಅದೇ ಜಲವನ್ನು ಸಾಕ್ಷಾತ್ ಶಂಕರನು ತನ್ನ ಶಿರದಲ್ಲಿ ಧರಿಸಿರುವನು. ॥ ೧೫ ॥ ಜಗನ್ನಾಥನೇ ! ದೇವದೇವನೇ ! ನಿನ್ನ ಗುಣ-ಲೀಲೆಗಳ ಶ್ರವಣ-ಕೀರ್ತನೆಯು ಪರಮ ಮಂಗಳಪ್ರದವಾಗಿದೆ. ಸ್ಪೋತ್ತಮರು ನಿನ್ನ ಗುಣಗಳನ್ನು ಕೀರ್ತಿಸುತ್ತಾ ಇರುತ್ತಾರೆ. ನಾರಾಯಣನೇ ! ನಾನು ನಿನಗೆ ನಮಸ್ಕರಿಸುತ್ತೇನೆ. ॥ ೧೬ ॥

ಶ್ರೀಭಗವಂತನು ಹೇಳಿದನು – ಅಕ್ರೂರನೇ ! ಮೊದಲಿಗೆ ಯದುವಂಶೀಯರಿಗೆ ದ್ರೋಹವೆಸಗಿರುವ ಕಂಸನನ್ನು ಸಂಹರಿಸಿ ಸುಹೃದ್-ಜನರೆಲ್ಲರಿಗೆ ಸಂತೋಷವನ್ನುಂಟುಮಾಡಿದ ಬಳಿಕ ಬಲರಾಮ, ನಂದರಾಜರೇ ಮೊದಲಾದವರೊಡನೆ ನಿನ್ನ ಮನೆಗೆ ಬರುತ್ತೇನೆ. ನೀನು ನಿರಾತಂಕವಾಗಿ ಮಥುರೆಯನ್ನು ಪ್ರವೇಶಿಸು. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಂತನು ಹೀಗೆ ಹೇಳಿದಾಗ ಅಕ್ರೂರನು ಮನಸ್ಸಿಲ್ಲದ ಮನಸ್ಸಿನಿಂದ ಮಥುರೆಯನ್ನು ಪ್ರವೇಶಿಸಿ, ಕಂಸನಲ್ಲಿ ಬಲರಾಮ-ಕೃಷ್ಣರು ಬಂದಿರುವ ಸಮಾಚಾರವನ್ನು ತಿಳಿಸಿ, ತನ್ನ ಮನೆಗೆ ತೆರಳಿದನು. ॥ ೧೮ ॥ ಮರುದಿನ ಅಪರಾಹ್ಣ ಸಮಯದಲ್ಲಿ ಶ್ರೀಕೃಷ್ಣನು ಬಲರಾಮ ಮತ್ತು ಗೋಪಬಾಲಕರೊಂದಿಗೆ ಮಥುರಾ ಪಟ್ಟಣವನ್ನು ನೋಡಲು ನಗರವನ್ನು ಪ್ರವೇಶಿಸಿದನು. ॥ ೧೯ ॥ ಭಗವಾನ್ ಶ್ರೀಕೃಷ್ಣನು ನೋಡುತ್ತಾನೆ-ಸ್ಫಟಿಕಶಿಲಾಮಯವಾದ ಹೆಬ್ಬಾಗಿಲಿನಿಂದಲೂ, ಎತ್ತರವಾದ ಗೋಪುರಗಳಿಂದಲೂ, ದೊಡ್ಡದಾದ ಬಾಗಿಲುಗಳಿಂದಲೂ ಕೂಡಿತ್ತು ಆ ನಗರವು. ಅಲ್ಲಿಯ ಕಿಡಕಿಗಳು ಚಿನ್ನದಿಂದ ಮಾಡಿದ್ದು, ಹೆಬ್ಬಾಗಿಲುಗಳಿಗೆ ಚಿನ್ನದ ತೋರಣಗಳಿದ್ದವು. ನಗರದ ಸುತ್ತಲೂ ತಾಮ್ರ ಮತ್ತು ಹಿತ್ತಾಳೆಯ ಪ್ರಾಕಾರಗಳಿದ್ದು, ಸುತ್ತಲಿದ್ದ ಕಂದಕಗಳಿಂದಾಗಿ ನಗರವನ್ನು ಸುಲಭವಾಗಿ ಪ್ರವೇಶಿಸಲಾಗುತ್ತಿರಲಿಲ್ಲ. ಅಲ್ಲಲ್ಲಿ ಸುಂದರವಾದ ಉದ್ಯಾನವನಗಳು, ರಮಣೀಯ ಉಪವನಗಳೂ ಶೋಭಿಸುತ್ತಿದ್ದವು. ॥ ೨೦ ॥ ಅಲ್ಲಿ ಸುವರ್ಣದಿಂದ ಅಲಂಕೃತವಾದ ಚೌಕಗಳಿದ್ದು, ಧನಿಕರ ಸೌಧಗಳು ಇದ್ದವು. ಜೊತೆಗೆ ಹೂದೋಟಗಳೂ, ಪ್ರಜಾವರ್ಗದ ಸಭಾಭವನಗಳೂ, ಸಾಮಾನ್ಯ ಜನರು ವಾಸಿಸುವ ಭವನಗಳಿಂದಲೂ ಸಮಲಂಕೃತವಾಗಿತ್ತು. ವಜ್ರ, ವೈಡೂರ್ಯ, ನೀಲ, ಹವಳ, ಪಚ್ಚೆ ಮುಂತಾದವುಗಳಿಂದ ಸಮಲಂಕೃತವಾದ ಚಾವಣಿಗಳೂ, ಜಗುಲಿಗಳೂ ಇದ್ದವು. ರತ್ನ ಖಚಿತವಾದ ಕಿಟಕಿಗಳಲ್ಲಿಯೂ ಜಗುಲಿಗಳಲ್ಲಿಯೂ ಕುಳಿತು ಕಪೋತ ಪಾರಿವಾಳ ಪಕ್ಷಿಗಳೂ, ನವಿಲುಗಳೂ ಧ್ವನಿಮಾಡುತ್ತಿದ್ದವು. ರಸ್ತೆಗಳನ್ನೂ, ಅಂಗಡಿ ಬೀದಿಗಳನ್ನು, ರಾಜಮಾರ್ಗಗಳನ್ನು, ಚೌಕಗಳನ್ನು ಚೆನ್ನಾಗಿ ಗುಡಿಸಿ ಸಾರಿಸಿದ್ದರು. ಅಲ್ಲಲ್ಲಿ ಹೂವಿನ ಹಾರಗಳಿಂದಲೂ ಮೊಳಕೆ ಧಾನ್ಯಗಳಿಂದಲೂ, ಅರಳು-ಅಕ್ಷತೆಗಳಿಂದಲೂ ಅಲಂಕರಿಸಿದ್ದರು. ॥ ೨೧-೨೨ ॥

ಆಪೂರ್ಣಕುಂಭೈರ್ದಧಿಚಂದನೋಕ್ಷಿತೈಃ
ಪ್ರಸೂನದೀಪಾವಲಿಭಿಃ ಸಪಲ್ಲವೈಃ ।
ಸವೃಂದರಂಭಾಕ್ರಮುಕೈಃ ಸಕೇತುಭಿಃ
ಸ್ವಲಂಕೃತದ್ವಾರಗೃಹಾಂ ಸಪಟ್ಟಿಕೈಃ ॥ ೨೩ ॥

ಮನೆಗಳ ಬಾಗಿಲಲ್ಲಿ ಮೊಸರು, ಚಂದನಾದಿಗಳಿಂದ ಅಲಂಕರಿಸಿದ ನೀರಿನ ಕಲಶಗಳನ್ನು ಇಟ್ಟಿದ್ದರು. ಅವನ್ನು ಹೂವುಗಳಿಂದ, ದೀಪ, ಚಿಗುರುಗಳಿಂದ, ಗೊನೆಸಹಿತ ಬಾಳೆಯ ಕಂಬಗಳಿಂದ, ಅಡಿಕೆ ಮರಗಳ ಹೊಂಬಾಳೆಗಳಿಂದಲೂ, ಗಿಡಗಳಿಂದಲೂ, ರೇಷ್ಮೆ ವಸ್ತ್ರಗಳಿಂದಲೂ ಚೆನ್ನಾಗಿ ಅಲಂಕರಿಸಿದ್ದರು. ॥ ೨೩ ॥

ತಾಂ ಸಂಪ್ರವಿಷ್ಟೌ ವಸುದೇವನಂದನೌ
ವೃತೌ ವಯಸ್ಯೈರ್ನರದೇವವರ್ತ್ಮನಾ ।
ದ್ರಷ್ಟುಂ ಸಮೀಯುಸ್ತ್ವರಿತಾಃ ಪುರಸ್ತ್ರಿಯೋ
ಹರ್ಮ್ಯಾಣಿ ಚೈವಾರುರುಹುರ್ನಪೋತ್ಸುಕಾಃ ॥ ೨೪ ॥

ಪರೀಕ್ಷಿತನೇ ! ವಸುದೇವನಂದನ ಭಗವಾನ್ ಶ್ರೀಕೃಷ್ಣನು ಬಲರಾಮ ಗೋಪಬಾಲಕರೊಂದಿಗೆ ಮಥುರೆಯ ರಾಜಬೀದಿಯ ಮೂಲಕ ನಗರವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ನಗರದ ನಾರಿಯರು ಅತ್ಯಂತ ಉತ್ಸುಕತೆಯಿಂದ ಅವಸರ-ಅವಸರವಾಗಿ ಮಹಡಿಯನ್ನೇರಿ ನೋಡುತ್ತಾ ನಿಂತರು. ॥ ೨೪ ॥ ಕೃಷ್ಣ-ಬಲರಾಮರನ್ನು ನೋಡಬೇಕೆಂದು ಧಾವಿಸಿ ಬಂದವರಲ್ಲಿ ಕೆಲವರು ಅವಸರದಿಂದಾಗಿ ವಸ್ತ್ರಗಳನ್ನು, ಆಭರಣಗಳನ್ನು ಹಿಂದು ಮುಂದಾಗಿ ಧರಿಸಿದ್ದರು. ಕೆಲವರು ಜೋಡಿಯಾಗಿ ತೊಡಬೇಕಾದ ಕಂಕಣ ಕುಂಡಲಗಳನ್ನು ಒಂಟಿಯಾಗಿಯೇ ತೊಟ್ಟಿದ್ದರು. ಯಾರೋ ಒಬ್ಬಳು ಕಿವಿಗೆ ಕರ್ಣಪುಷ್ಪವನ್ನು ಧರಿಸಿದರೆ, ಮತ್ತೊಬ್ಬಳು ಒಂದೇ ಕಾಲಿಗೆ ನೂಪುರವನ್ನು ಧರಿಸಿದ್ದಳು. ಕೆಲವರು ಒಂದೆ ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿದ್ದರೆ, ಮತ್ತೊಬ್ಬಳು ಕಾಡಿಗೆ ಹಚ್ಚಿಕೊಳ್ಳಲೇ ಇಲ್ಲ. ॥ ೨೫ ॥ ಕೆಲವು ಹೆಂಗಳೆಯರು ಊಟಮಾಡುತ್ತಿದ್ದರು. ಸುದ್ದಿ ತಿಳಿದಾಗ ಊಟವನ್ನು ಹಾಗೇ ಬಿಟ್ಟು ಕೈತೊಳೆಯದೆಯೇ ಓಡಿ ಬಂದಿದ್ದರು. ಎಲ್ಲರ ಮನಸ್ಸು ಆನಂದೋತ್ಸಾಹದಿಂದ ತುಂಬಿ ಹೋಗಿತ್ತು. ಕೆಲವರು ಅಂಗರಾಗವನ್ನು ಹಚ್ಚಿಕೊಳ್ಳುತ್ತಿದ್ದವರು ಸ್ನಾನ ಮಾಡದೇ ಹಾಗೇ ಬಂದಿದ್ದರು. ಮಲಗಿದ್ದ ಕೆಲವರು ಗದ್ದಲವನ್ನು ಕೇಳಿ ಹಾಗೆಯೇ ಬಂದಿದ್ದರು. ಮಕ್ಕಳಿಗೆ ಹಾಲು ಕುಡಿಸುತ್ತಿದ್ದ ಕೆಲವರು ಮಗುವನ್ನು ಅಲ್ಲೆ ಬಿಟ್ಟು ಶ್ರೀಕೃಷ್ಣನನ್ನು ನೋಡಲು ಆಗಮಿಸಿದ್ದರು. ॥ ೨೬॥ ಕಮಲನಯನ ಶ್ರೀಕೃಷ್ಣನು ಮತ್ತಗಜದಂತೆ ಠೀವಿಯಿಂದ ನಡೆದು ಬರುತ್ತಿದ್ದನು. ಮಹಾಲಕ್ಷ್ಮಿಗೂ ಆನಂದವನ್ನುಂಟು ಮಾಡುವ ತನ್ನ ವಿಗ್ರಹದಿಂದ ಮಥುರೆಯ ಸ್ತ್ರೀಯರ ಕಣ್ಣುಗಳಿಗೆ ಆನಂದೋತ್ಸವವನ್ನು ಉಂಟುಮಾಡುತ್ತಿದ್ದನು. ಪ್ರೌಢವಾದ ಹಾವ-ಭಾವಗಳಿಂದಲೂ, ಮುಗುಳ್ನಗೆಯಿಂದಲೂ, ಚೇತೋಹಾರಿಯಾದ ಕಡೆಗಣ್ಣ ನೋಟದಿಂದಲೂ ಅವರ ಮನಸ್ಸನ್ನು ಅಪಹರಿಸಿ ಬಿಟ್ಟಿದ್ದನು. ॥ ೨೭ ॥ ಮಥುರಾನಗರದ ಸ್ತ್ರೀಯರು ಅನೇಕ ದಿನಗಳಿಂದ ಭಗವಾನ್ ಶ್ರೀಕೃಷ್ಣನ ಅದ್ಭುತ ಲೀಲೆಗಳನ್ನು ಕೇಳುತ್ತಾ ಬಂದಿದ್ದರು. ಅವರ ಚಿತ್ತವು ಬಹಳ ಕಾಲದಿಂದ ಶ್ರೀಕೃಷ್ಣದರ್ಶನಕ್ಕಾಗಿ ಚಂಚಲವಾಗಿದ್ದು ವ್ಯಾಕುಲವಾಗಿತ್ತು. ಇಂದು ಅವನನ್ನು ನೋಡಿದರು. ಶ್ರೀಕೃಷ್ಣನೂ ಕೂಡ ತನ್ನ ಪ್ರೇಮಪೂರ್ಣ ಓರೆನೋಟದಿಂದ ನಸುನಗೆಯ ಅಮೃತ ಸಿಂಚನದಿಂದ ಅವರನ್ನು ಸಮ್ಮಾನಿಸಿದನು. ಪರೀಕ್ಷಿತನೇ ! ಆ ಸ್ತ್ರೀಯರು ಕಣ್ಣುಗಳ ಮೂಲಕ ಭಗವಂತನನ್ನು ತಮ್ಮ ಹೃದಯದಲ್ಲಿ ಇಟ್ಟುಕೊಂಡು ಆನಂದಮಯ ಸ್ವರೂಪವನ್ನು ಆಲಿಂಗಿಸಿಕೊಂಡರು. ಅವರೆಲ್ಲರ ಶರೀರ ಪುಳಕಗೊಂಡಿತು ಹಾಗೂ ಬಹಳ ದಿನಗಳಿಂದಿದ್ದ ವಿರಹ ವ್ಯಥೆಯು ಶಾಂತವಾಯಿತು. ॥ ೨೮ ॥

ಕಾಶ್ಚಿದ್ವಿಪರ್ಯಗ್ಧೃತವಸ್ತ್ರಭೂಷಣಾ
ವಿಸ್ಮೃತ್ಯ ಚೈಕಂ ಯುಗಲೇಷ್ವಥಾಪರಾಃ ।
ಕೃತೈಕಪತ್ರಶ್ರವಣೈಕನೂಪುರಾ
ನಾಂಕ್ತ್ವಾದ್ವಿತೀಯಂ ತ್ವಪರಾಶ್ಚ ಲೋಚನಮ್ ॥ ೨೫ ॥

ಅಶ್ನಂತ್ಯ ಏಕಾಸ್ತದಪಾಸ್ಯ ಸೋತ್ಸವಾ
ಅಭ್ಯಜ್ಯಮಾನಾ ಅಕೃತೋಪಮಜ್ಜನಾಃ ।
ಸ್ವಪಂತ್ಯ ಉತ್ಥಾಯ ನಿಶಮ್ಯ ನಿಃಸ್ವನಂ
ಪ್ರಪಾಯಯಂತ್ಯೋಽರ್ಭಮಪೋಹ್ಯ ಮಾತರಃ ॥ ೨೬ ॥

ಮನಾಂಸಿ ತಾಸಾಮರವಿಂದಲೋಚನಃ
ಪ್ರಗಲ್ಭಲೀಲಾಹಸಿತಾವಲೋಕನೈಃ ।
ಜಹಾರ ಮತ್ತದ್ವಿರದೇಂದ್ರವಿಕ್ರಮೋ
ದೃಶಾಂ ದದಚ್ಛ್ರೀರಮಣಾತ್ಮನೋತ್ಸವಮ್ ॥ ೨೭ ॥

ದೃಷ್ಟ್ವಾಮುಹುಃಶ್ರುತಮನುದ್ರುತಚೇತಸಸ್ತಂ
ತತ್ಪ್ರೇಕ್ಷಣೋತ್ಸ್ಮಿತಸುಧೋಕ್ಷಣಲಬ್ಧಮಾನಾಃ ।
ಆನಂದಮೂರ್ತಿಮುಪಗುಹ್ಯ ದೃಶಾಽತ್ಮಲಬ್ಧಂ
ಹೃಷ್ಯತ್ತ್ವಚೋ ಜಹುರನಂತಮರಿಂದಮಾಧಿಮ್ ॥ ೨೮ ॥

ಪ್ರಾಸಾದಶಿಖಿರಾರೂಢಾಃ ಪ್ರೀತ್ಯುತ್ಫುಲ್ಲಮುಖಾಂಬುಜಾಃ ।
ಅಭ್ಯವರ್ಷನ್ ಸೌಮನಸ್ಯೈಃ ಪ್ರಮದಾ ಬಲಕೇಶವೌ
॥ ೨೯ ॥

ದಧ್ಯಕ್ಷತೈಃ ಸೋದಪಾತ್ರೈಃ ಸ್ರಗ್ಗಂಧೈರಭ್ಯುಪಾಯನೈಃ ।
ತಾವಾನರ್ಚುಃ ಪ್ರಮುದಿತಾಸ್ತತ್ರ ತತ್ರ ದ್ವಿಜಾತಯಃ
॥ ೩೦ ॥

ಊಚುಃ ಪೌರಾ ಅಹೋ ಗೋಪ್ಯಸ್ತಪಃ ಕಿಮಚರನ್ ಮಹತ್ ।
ಯಾ ಹ್ಯೇತಾವನುಪಶ್ಯಂತಿ ನರಲೋಕಮಹೋತ್ಸವೌ
॥ ೩೧ ॥

ರಜಕಂ ಕಂಚಿದಾಯಾಂತಂ ರಂಗಕಾರಂ ಗದಾಗ್ರಜಃ ।
ದೃಷ್ಟ್ವಾಯಾಚತ ವಾಸಾಂಸಿ ಧೌತಾನ್ಯತ್ಯುತ್ತಮಾನಿ ಚ
॥ ೩೨ ॥

ದೇಹ್ಯಾವಯೋಃ ಸಮುಚಿತಾನ್ಯಂಗ ವಾಸಾಂಸಿ ಚಾರ್ಹತೋಃ ।
ಭವಿಷ್ಯತಿ ಪರಂ ಶ್ರೇಯೋ ದಾತುಸ್ತೇ ನಾತ್ರ ಸಂಶಯಃ
॥ ೩೩ ॥

ಸ ಯಾಚಿತೋ ಭಗವತಾ ಪರಿಪೂರ್ಣೇನ ಸರ್ವತಃ ।
ಸಾಕ್ಷೇಪಂ ರುಷಿತಃ ಪ್ರಾಹ ಭೃತ್ಯೋ ರಾಜ್ಞಃ ಸುದುರ್ಮದಃ
॥ ೩೪ ॥

ಈದೃಶಾನ್ಯೇವ ವಾಸಾಂಸಿ ನಿತ್ಯಂ ಗಿರಿವನೇಚರಾಃ ।
ಪರಿಧತ್ತ ಕಿಮುದ್ಧೃತ್ತಾ ರಾಜದ್ರವ್ಯಾಣ್ಯಭೀಪ್ಸಥ
॥ ೩೫ ॥

ಯಾತಾಶು ಬಾಲಿಶಾ ಮೈವಂ ಪ್ರಾರ್ಥ್ಯಂ ಯದಿ ಜಿಜೀವಿಷಾ ।
ಬಧ್ನಂತಿ ಘ್ನಂತಿ ಲುಂಪಂತಿ ದೃಪ್ತಂ ರಾಜಕುಲಾನಿ ವೈ
॥ ೩೬ ॥

ಏವಂ ವಿಕತ್ಥಮಾನಸ್ಯ ಕುಪಿತೋ ದೇವಕೀಸುತಃ ।
ರಜಕಸ್ಯ ಕರಾಗ್ರೇಣ ಶಿರಃ ಕಾಯಾದಪಾತಯತ್
॥ ೩೭ ॥

ತಸ್ಯಾನುಜೀವಿನಃ ಸರ್ವೇ ವಾಸಃ ಕೋಶಾನ್ ವಿಸೃಜ್ಯ ವೈ ।
ದುದ್ರುವುಃ ಸರ್ವತೋ ಮಾರ್ಗಂ ವಾಸಾಂಸಿ ಜಗೃಹೇऽಚ್ಯುತಃ
॥ ೩೮ ॥

ವಸಿತ್ವಾವಕಲ್ಪಿಯೇ ವಸ್ತ್ರೇ ಕೃಷ್ಣಃ ಸಂಕರ್ಷಣಸ್ತಥಾ ।
ಶೇಷಾಣ್ಯಾದತ್ತ ಗೋಪೇಭ್ಯೋ ವಿಸೃಜ್ಯ ಭುವಿ ಕಾನಿಚಿತ್
॥ ೩೯ ॥

ಮಥುರೆಯ ನಾರಿಯರು ತಮ್ಮ-ತಮ್ಮ ಮನೆಗಳ ಮಹಡಿಗಳನ್ನು ಹತ್ತಿ ಬಲರಾಮ-ಶ್ರೀಕೃಷ್ಣರ ಮೇಲೆ ಹೂವಿನ ಮಳೆಗರೆದರು. ಆಗ ಆ ಸ್ತ್ರೀಯರ ಮುಖಕಮಲಗಳು ಪ್ರೇಮಾವೇಗದಿಂದ ಅರಳಿದ್ದವು. ॥ ೨೯ ॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಲ್ಲರೂ ಅಲ್ಲಲ್ಲಿ ಮೊಸರು, ಅಕ್ಷತೆ, ನೀರುತುಂಬಿದ ಕಲಶಗಳಿಂದ ಪುಷ್ಪಹಾರಗಳಿಂದ, ಚಂದನಾದಿ ಕಾಣಿಕೆ ಸಾಮಗ್ರಿಗಳಿಂದ ಭಗವಾನ್ ಶ್ರೀಕೃಷ್ಣ ಬಲರಾಮರನ್ನು ಆನಂದಮಗ್ನರಾಗಿ ಪೂಜಿಸಿದರು.॥ ೩೦॥ ಭಗವಂತನನ್ನು ನೋಡಿದ ಪುರವಾಸಿಗಳೆಲ್ಲರೂ – 'ಧನ್ಯ ! ಧನ್ಯ !! ಸಕಲ ಮನುಷ್ಯರಿಗೆ ಪರಮಾನಂದವನ್ನೀಯುವ ಇವರಿಬ್ಬರನ್ನು ನೋಡುತ್ತಿದ್ದ ಗೋಪಿಯರು ಯಾವ ಮಹಾನ್ ತಪಸ್ಸು ಮಾಡಿದ್ದರೋ !' ಎಂದು ಪರಸ್ಪರ ಮಾತನಾಡಿಕೊಂಡರು. ॥ ೩೧ ॥

ಅದೇ ಸಮಯದಲ್ಲಿ ಬಟ್ಟೆಗಳಿಗೆ ಬಣ್ಣ ಹಾಕುವ ಕೆಲಸವನ್ನು ಮಾಡುತ್ತಿದ್ದ ಒಬ್ಬ ಅಗಸರವನು ತಮ್ಮ ಕಡೆಗೆ ಬರುತ್ತಿರುವುದನ್ನು ಭಗವಾನ್ ಶ್ರೀಕೃಷ್ಣನು ನೋಡಿದನು. ಕೃಷ್ಣನು ಅವನ ಬಳಿ ಮಡಿ ಮಾಡಿದ ಒಳ್ಳೆಯ ಬಟ್ಟೆಗಳನ್ನು ಉಡಲು ಕೇಳಿದನು. ॥ ೩೨ ॥ ಅಯ್ಯಾ ! ನಮ್ಮಿಬ್ಬರಿಗೂ ತೊಡಲು ಯೋಗ್ಯವಾದ ಬಟ್ಟೆಗಳನ್ನು ಕೊಡು. ರಾಜಯೋಗ್ಯವಾದ ಈ ಬಟ್ಟೆಗಳನ್ನು ತೊಟ್ಟುಕೊಳ್ಳಲು ನಾವು ಅರ್ಹರಾಗಿದ್ದೇವೆ. ನೀನು ನಮಗೆ ಈ ವಸ್ತ್ರಗಳನ್ನು ಕೊಟ್ಟರೆ ನಿನಗೆ ಬಹಳ ಶ್ರೇಯಸ್ಸು ಉಂಟಾದೀತು. ಇದರಲ್ಲಿ ಸಂಶಯವೇ ಇಲ್ಲ ॥ ೩೩ ॥ ಪರೀಕ್ಷಿತನೇ ! ಭಗವಂತನು ಸರ್ವತ್ರ ಪರಿಪೂರ್ಣನಾಗಿದ್ದಾನೆ. ಎಲ್ಲವೂ ಅವನದ್ದೇ ಆಗಿದೆ. ಹೀಗಿದ್ದರೂ ಅವನು ಹೀಗೆ ಯಾಚಿಸುವ ಲೀಲೆಯನ್ನು ತೋರಿದನು. ಆದರೆ ಅವನು ಮೂರ್ಖರಾಜನಾದ ಕಂಸನ ಸೇವಕನಾಗಿದ್ದು ಸೊಕ್ಕಿ ಹೋಗಿದ್ದನು. ಭಗವಂತನಿಗೆ ಕೊಡುವುದು ಹಾಗಿರಲಿ, ಅವನು ಒಟ್ಟಿನಿಂದ ಆಕ್ಷೇಪಿಸುತ್ತಾ ಹೇಳುತ್ತಾನೆ. ॥೩೪ ॥ ಕಾಡು-ಮೇಡುಗಳಲ್ಲಿ ಸದಾ ಸಂಚರಿಸುವ ನೀವುಗಳು ಪ್ರತಿದಿನವೂ ಇಂತಹ ಬಟ್ಟೆಗಳನ್ನು ಉಡುವಿರಾ ? ಉದ್ದಟರಾಗಿರುವ ನೀವು ಈ ರೀತಿ ಬಾಯಿಗೆ ಬಂದ ಹಾಗೆ ಗಳಹುತ್ತಿರುವಿ. ರಾಜನ ವಸ್ತ್ರಗಳನ್ನು ಅಪಹರಿಸುವ ಅಪೇಕ್ಷೆಯೇ ? ॥ ೩೫ ॥ ಎಲೈ ಮೂರ್ಖರೇ ! ಹೋಗಿ, ಓಡಿ ಹೋಗಿ ! ಕೆಲವು ದಿನ ಬದುಕುಳಿಯಬೇಕಿದ್ದರೆ ಹೀಗೆ ಕೇಳಬೇಡಿರಿ. ರಾಜಭಟರು ನಿಮ್ಮಂತಹ ಕೊಬ್ಬಿರುವವರನ್ನು ಬಂಧಿಸುತ್ತಾರೆ, ಕೊಂದು ಹಾಕುತ್ತಾರೆ. ಅವರಲ್ಲಿರುವ ಸರ್ವಸ್ವವನ್ನು ಕಿತ್ತುಕೊಳ್ಳುವರು. ॥ ೩೬ ॥ ಆ ಮಡಿವಾಳನ ಮಿತಿಮೀರಿದ ತಲೆಹರಟೆಯ ಮಾತನ್ನು ಕೇಳಿದಾಗ ಭಗವಾನ್ ಶ್ರೀಕೃಷ್ಣನು ಕೊಂಚ ಕುಪಿತನಾಗಿ ಕೈಯಿಂದ ಒಂದು ಏಟು ಹೊಡೆದು ತಲೆಯನ್ನು ದೇಹದಿಂದ ಬೇರ್ಪಡಿಸಿದನು. ॥ ೩೭ ॥ ಇದನ್ನು ನೋಡಿದ ಆ ಅಗಸನ ಅನುಯಾಯಿಗಳು ಬಟ್ಟೆಗಳ ಮೂಟೆಯನ್ನು ಅಲ್ಲೆಲ್ಲಿ ಬಿಸುಟು ದಿಕ್ಕಾಪಾಲಾಗಿ ಓಡಿಹೋದರು. ಭಗವಂತನು ಆ ವಸ್ತ್ರಗಳನ್ನು ಎತ್ತಿಕೊಂಡನು. ॥ ೩೮ ॥ ಶ್ರೀಕೃಷ್ಣ-ಬಲರಾಮರು ತಮಗೆ ಪ್ರಿಯವೆನಿಸಿದ ವಸ್ತ್ರಗಳನ್ನು ಉಟ್ಟುಕೊಂಡರು. ಉಳಿದ ಬಟ್ಟೆಗಳನ್ನು ಜೊತೆಯವರಾದ ಗೋಪಬಾಲಕರಿಗೆ ಹಂಚಿದರು ಹಾಗೂ ಉಳಿದವುಗಳನ್ನು ಅಲ್ಲೇ ಬಿಟ್ಟು ಮುಂದಕ್ಕೆ ನಡೆದರು. ॥ ೩೯ ॥

ತತಸ್ತು ವಾಯಕಃ ಪ್ರೀತಸ್ತಯೋರ್ವೇಷಮಕಲ್ಪಯತ್ ।
ವಿಚಿತ್ರವರ್ಣೈಶ್ಚೇಲೇಯೈರಾಕಲ್ಪೈರನುರೂಪತಃ
॥ ೪೦ ॥

ನಾನಾಲಕ್ಷಣವೇಷಾಭ್ಯಾಂ ಕೃಷ್ಣರಾಮೌ ವಿರೇಜತುಃ ।
ಸ್ವಲಂಕೃತೌ ಬಾಲಗಜೌ ಪರ್ವಣೀವ ಸಿತೇತರೌ
॥ ೪೧ ॥

ತಸ್ಯ ಪ್ರಸನ್ನೋ ಭಗವಾನ್ ಪ್ರಾದಾತ್ ಸಾರೂಪ್ಯಮಾತ್ಮನಃ ।
ಶ್ರಿಯಂ ಚ ಪರಮಾಂ ಲೋಕೇ ಬಲೈಶ್ವರ್ಯಸ್ಮೃತೀಂದ್ರಿಯಮ್
॥ ೪೨ ॥

ತತಃ ಸುದಾಮ್ನೋ ಭವನಂ ಮಾಲಾಕಾರಸ್ಯ ಜಗ್ಮತುಃ ।
ತೌ ದೃಷ್ಟ್ವಾ ಸ ಸಮುತ್ಥಾಯ ನನಾಮ ಶಿರಸಾ ಭುವಿ
॥ ೪೩ ॥

ತಯೋರಾಸನಮಾನೀಯ ಪಾದ್ಯಂ ಚಾರ್ಘ್ಯಾರ್ಹಣಾದಿಭಿಃ ।
ಪೂಜಾಂ ಸಾನುಗಯೋಶ್ಚಕ್ರೇ ಸ್ರಕ್ತಾಂಬೂಲಾನುಲೇಪನೈಃ
॥ ೪೪ ॥

ಪ್ರಾಹ ನಃ ಸಾರ್ಥಕಂ ಜನ್ಮ ಪಾವಿತಂ ಚ ಕುಲಂ ಪ್ರಭೋ ।
ಪಿತೃದೇವರ್ಷಯೋ ಮಹ್ಯಂ ತುಷ್ಟಾಹ್ಯಾಗಮನೇನ ವಾಮ್
॥ ೪೫ ॥

ಭವಂತೌ ಕಿಲ ವಿಶ್ವಸ್ಯ ಜಗತಃ ಕಾರಣಂ ಪರಮ್ ।
ಅವತೀರ್ಣಾವಿಹಾಂಶೇನ ಕ್ಷೇಮಾಯ ಚ ಭವಾಯ ಚ
॥ ೪೬ ॥

ನ ಹಿ ವಾಂ ವಿಷಮಾ ದೃಷ್ಟಿಃ ಸುಹೃದೋರ್ಜಗದಾತ್ಮನೋಃ ।
ಸಮಯೋಃ ಸರ್ವಭೂತೇಷು ಭಜಂತಂ ಭಜತೋರಪಿ
॥ ೪೭ ॥

ತಾವಾಜ್ಞಾಪಯತಂ ಭೃತ್ಯಂ ಕಿಮಹಂ ಕರವಾಣಿ ವಾಮ್ ।
ಪುಂಸೋಽತ್ಯನುಗ್ರಹೋ ಹ್ಯೇಷ ಭವದ್ಭಿರ್ಯನ್ನಿಯುಜ್ಯತೇ
॥ ೪೮ ॥

ಇತ್ಯಭಿಪ್ರೇತ್ಯ ರಾಜೇಂದ್ರ ಸುದಾಮಾ ಪ್ರೀತಮಾನಸಃ ।
ಶಸ್ಯೈಃ ಸುಗಂಧ್ಯೈಃ ಕುಸುಮೈರ್ಮಾಲಾ ವಿರಚಿತಾ ದದೌ
॥ ೪೯ ॥

ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮರು ರಾಜಬೀದಿಯಲ್ಲಿ ಸ್ವಲ್ಪ ದೂರ ಹೋಗುತ್ತಲೇ ಅವರಿಗೆ ಓರ್ವ ದರ್ಜಿ ಭೆಟ್ಟಿಯಾದನು. ಭಗವಂತನ ಅನುಪಮ ಸೌಂದರ್ಯವನ್ನು ನೋಡಿ ಅವನಿಗೆ ತುಂಬಾ ಸಂತೋಷವಾಯಿತು. ಅವನು ಆ ಬಣ್ಣ-ಬಣ್ಣದ ಸುಂದರ ವಸ್ತ್ರಗಳನ್ನು ಅವರವರ ಶರೀರಕ್ಕೆ ಹೊಂದುವಂತೆ ಸರಿಪಡಿಸಿ ಸಿಂಗರಿಸಿದನು. ॥ ೪೦ ॥ ವಿಧ-ವಿಧವಾದ ವಸ್ತ್ರಗಳಿಂದ ವಿಭೂಷಿತರಾದ ಸಹೋದರರಿಬ್ಬರೂ ಇನ್ನೂ ಹೆಚ್ಚು ಶೋಭಿಸತೊಡಗಿದರು. ಉತ್ಸವದ ಸಮಯದಲ್ಲಿ ಸಿಂಗರಿಸಲ್ಪಟ್ಟ ಕರಿಯ ಮತ್ತು ಬಿಳಿಯ ಆನೆಯ ಮರಿಗಳಂತೆ ಅವರು ಕಂಡುಬರುತ್ತಿದ್ದರು. ॥ ೪೧ ॥ ಭಗವಾನ್ ಶ್ರೀಕೃಷ್ಣನು ಆ ದರ್ಜಿಯ ಮೇಲೆ ಅತ್ಯಂತ ಪ್ರಸನ್ನನಾದನು. ಅವನು ಅವನಿಗೆ ಇಹದಲ್ಲಿ ಐಶ್ವರ್ಯವನ್ನು, ಬಲವನ್ನೂ, ಅಧಿಕಾರವನ್ನೂ, ಸ್ಮರಣ ಶಕ್ತಿಯನ್ನೂ, ಇಂದ್ರಿಯ ಪಟುತ್ವವನ್ನು ಅನುಗ್ರಹಿಸಿ, ಅವಸಾನಾನಂತರ ತನ್ನ ಸಾರೂಪ್ಯಮುಕ್ತಿಯನ್ನು ಕರುಣಿಸಿದನು. ॥ ೪೨ ॥

ಬಳಿಕ ಭಗವಾನ್ ಶ್ರೀಕೃಷ್ಣನು ಸುದಾಮನೆಂಬ ಹೂವಾಡಿಗನ ಮನೆಗೆ ಹೋದನು. ಜಗದಾನಂದಕರರಾದ ಸಹೋದರರಿಬ್ಬರನ್ನು ನೋಡುತ್ತಲೇ ಸುದಾಮನು ಎದ್ದನಿಂತು ತಲೆಬಾಗಿ ಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೪೩ ॥ ಮತ್ತೆ ಅವರನ್ನು ಆಸನದಲ್ಲಿ ಕುಳ್ಳಿರಿಸಿ ಅವರ ಕೈ-ಕಾಲು ತೊಳೆದು ಗೋಪಬಾಲಕರು ಸೇರಿ ಎಲ್ಲರನ್ನು ಹೂವಿನಹಾರ, ತಾಂಬೂಲ-ಚಂದನಾದಿಗಳಿಂದ ಯಥೋಚಿತವಾಗಿ ಪೂಜಿಸಿದನು. ॥ ೪೪ ॥ ಬಳಿಕ ಎರಡೂ ಕೈಗಳನ್ನು ಜೋಡಿಸಿಕೊಂಡು ಪ್ರಾರ್ಥಿಸಿದನು - ಸ್ವಾಮಿ! ನಿಮ್ಮಿಬ್ಬರ ಶುಭಾಗಮನದಿಂದ ನಮ್ಮ ಜನ್ಮ ಪಾವನವಾಯಿತು. ನಮ್ಮ ಕುಲಪವಿತ್ರವಾಯಿತು. ಇಂದು ನಾನು ದೇವ-ಋಷಿ-ಪಿತೃ ಇವರ ಋಣದಿಂದ ಮುಕ್ತನಾದೆನು. ಅವರು ನಮ್ಮ ಮೇಲೆ ಸಂತುಷ್ಟರಾದರು. ॥ ೪೫ ॥ ನೀವಿಬ್ಬರೂ ಜಗತ್ತಿನ ಪರಮಕಾರಣರಾಗಿದ್ದೀರಿ. ನೀವು ಪ್ರಪಂಚದ ಅಭ್ಯುದಯ (ಉನ್ನತಿ) ಮತ್ತು ನಿಶ್ರೇಯಸ (ಮೋಕ್ಷ)ಗಳಿಗೆ ಈ ಭೂಮಿಯಲ್ಲಿ ತಮ್ಮ ಜ್ಞಾನ, ಬಲ ಮೊದಲಾದ ಅಂಶಗಳಿಂದ ಅವತರಿಸಿರುವಿರಿ. ॥ ೪೬ ॥ ನೀವು ಪ್ರೇಮಿಸುವವರನ್ನು ಪ್ರೇಮಿಸುವವರೂ, ಭಜಿಸುವವರನ್ನು ಭಜಿಸುವವರೂ ಆಗಿದ್ದರೂ ನಿಮ್ಮ ದೃಷ್ಟಿಯಲ್ಲಿ ವಿಷಮತೆ ಇಲ್ಲ. ಏಕೆಂದರೆ, ನೀವು ಸಮಸ್ತ ಜಗತ್ತಿನ ಪರಮ ಸುಹೃದರೂ, ಆತ್ಮವೂ ಆಗಿರುವಿರಿ. ನೀವು ಸಮಸ್ತ ಪ್ರಾಣಿ-ಪದಾರ್ಥಗಳಲ್ಲಿ ಸಮರೂಪದಿಂದ ನೆಲೆಸಿರುವಿರಿ. ॥ ೪೭ ॥ ನಾನು ನಿಮ್ಮ ದಾಸನಾಗಿದ್ದೇನೆ. ನಾನು ನಿಮ್ಮಗಳ ಯಾವ ಸೇವೆಮಾಡಲಿ ಎಂಬುದನ್ನು ಆಜ್ಞಾಪಿಸಿರಿ. ಭಗವಂತ! ನೀನು ಜೀವಿಗಳಿಗೆ ಆಜ್ಞೆಯನ್ನಿತ್ತು, ಕಾರ್ಯದಲ್ಲಿ ತೊಡಗಿಸುವುದು ನಿನ್ನ ಮಹದನುಗ್ರಹವಾಗಿದೆ, ಪೂರ್ಣ ಕೃಪಾ ಪ್ರಸಾದವಾಗಿದೆ. ॥ ೪೮ ॥ ರಾಜೇಂದ್ರ! ಸುದಾಮ ಹೂವಾಡಿಗನು ಹೀಗೆ ಪ್ರಾರ್ಥನೆಗೈದು ಭಗವಂತನ ಅಭಿಪ್ರಾಯವನ್ನು ತಿಳಿದು, ಅತ್ಯಂತ ಪ್ರೇಮಾನಂದದಿಂದ ಸುಂದರವಾದ ಹಾಗೂ ಸುಗಂಧಿತವಾದ ಪುಷ್ಪಗಳ ಹಾರಗಳನ್ನು ಅವರಿಗೆ ತೊಡಿಸಿದನು. ॥ ೪೯ ॥

ತಾಭಿಃ ಸ್ವಲಂಕೃತೌ ಪ್ರೀತೌ ಕೃಷ್ಣರಾಮೌ ಸಹಾನುಗೌ ।
ಪ್ರಣತಾಯ ಪ್ರಪನ್ನಾಯ ದದತುರ್ವರದೌ ವರಾನ್
॥ ೫೦ ॥

ಸೋಽಪಿ ವವ್ರೇಽಚಲಾಂ ಭಕ್ತಿಂ ತಸ್ಮಿನ್ನೇವಾಖಿಲಾತ್ಮನಿ ।
ತದ್ಭಕ್ತೇಷು ಚ ಸೌಹಾರ್ದಂ ಭೂತೇಷು ಚ ದಯಾಂ ಪರಾಮ್
॥ ೫೧ ॥

ಇತಿ ತಸ್ಮೈ ವರಂ ದತ್ತ್ವಾ ಶ್ರಿಯಂ ಚಾನ್ವಯವರ್ಧಿನೀಮ್ ।
ಬಲಮಾಯುರ್ಯಶಃ ಕಾಂತಿಂ ನಿರ್ಜಗಾಮ ಸಹಾಗ್ರಜಃ
॥ ೫೨ ॥

ಗೋಪಾಲಬಾಲಕರು ಹಾಗೂ ಬಲರಾಮನೊಂದಿಗೆ ಭಗವಾನ್ ಶ್ರೀಕೃಷ್ಣನು ಆ ಸುಂದರವಾದ ಮಾಲೆಗಳಿಂದ ಅಲಂಕೃತನಾಗಿ, ವರದಾಯಕನಾದ ಪ್ರಭುವು ಪ್ರಸನ್ನನಾಗಿ ಶರಣಾಗತನೂ, ವಿನೀತನೂ ಆದ ಸುದಾಮನಿಗೆ ಶ್ರೇಷ್ಠವಾದ ವರವನ್ನು ಕರುಣಿಸಿದನು. ॥ ೫೦ ॥ ಸುದಾಮ ಹೂವಾಡಿಗನು 'ನನಗೆ ಅವಿಚಲ ಭಕ್ತಿಯುಂಟಾಗಲಿ. ನಿನ್ನ ಭಕ್ತರೊಂದಿಗೆ ನನಗೆ ಸೌಹಾರ್ದ್ರ ಮಿತ್ರತೆಯ ಸಂಬಂಧ ಉಂಟಾಗಲಿ ಮತ್ತು ಸಮಸ್ತ ಪ್ರಾಣಿಗಳ ಕುರಿತು ಅಹೈತುಕವಾದ ದಯಾಭಾವವು ಇರಲಿ' ಎಂಬ ವರವನ್ನು ಬೇಡಿದನು. ॥ ೫೧ ॥ ಭಗವಾನ್ ಶ್ರೀಕೃಷ್ಣನು ಸುದಾಮನು ಬೇಡಿದ ವರವನ್ನು ಕೊಡುವುದರ ಜೊತೆಗೆ ವಂಶ ಪಾರಂಪರ್ಯದೊಂದಿಗೆ ಹೆಚ್ಚುತ್ತಿರುವ ಅತುಲ ಸಂಪತ್ತನ್ನೂ ಹಾಗೂ ಬಲ, ಆಯುಸ್ಸು ಕೀರ್ತಿ, ಕಾಂತಿ ಇವುಗಳನ್ನು ಕರುಣಿಸಿದನು. ಬಳಿಕ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ಅಲ್ಲಿಂದ ಬೀಳ್ಕೊಂಡನು. ॥ ೫೨ ॥

ನಲವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೪೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ
ಪೂರ್ವಾರ್ಧೇ ಪುರಪ್ರವೇಶೋ ನಾಮ ಏಕಚತ್ವಾರಿಂಶೋಽಧ್ಯಾಯಃ ॥ ೪೧ ॥

ನಲವತ್ತೆರಡನೆಯ ಅಧ್ಯಾಯ

ಕುಬ್ಜೆಯ ಮೇಲೆ ಕೃಪೆ, ಧನುರ್ಭಂಗ, ಕಂಸನ ತಳಮಳ

ಶ್ರೀಶುಕ ಉವಾಚ

ಅಥ ವ್ರಜನ್ ರಾಜಪಥೇನ ಮಾಧವಃ
ಸ್ತ್ರಿಯಂ ಗೃಹೀತಾಂಗವಿಲೇಪಭಾಜನಾಮ್ ।
ವಿಲೋಕ್ಯ ಕುಬ್ಜಾಂ ಯುವತೀಂ ವರಾನನಾಂ
ಪಪ್ರಚ್ಛ ಯಾಂತೀಂ ಪ್ರಹಸನ್ ರಸಪ್ರದಃ ॥ ೧ ॥

ಕಾ ತ್ವಂ ವರೋರ್ವೇತದು ಹಾನುಲೇಪನಂ
ಕಸ್ಯಾಂಗನೇ ವಾ ಕಥಯಸ್ವ ಸಾಧು ನಃ ।
ದೇಹ್ಯಾವಯೋರಂಗವಿಲೇಪಮುತ್ತಮಂ
ಶ್ರೇಯಸ್ತತಸ್ತೇ ನಚಿರಾದ್ಭವಿಷ್ಯತಿ ॥ ೨ ॥

ಸೈರಂಧ್ರ್ಯುವಾಚ

ದಾಸ್ಯಸ್ಮ್ಯಹಂ ಸುಂದರ ಕಂಸಸಮ್ಮತಾ
ತ್ರಿವಕ್ರನಾಮಾ ಹ್ಯನುಲೇಪಕರ್ಮಣಿ ।
ಮದ್ಭಾವಿತಂ ಭೋಜಪತೇರತಿಪ್ರಿಯಂ
ವಿನಾ ಯುವಾಂ ಕೋಽನ್ಯತಮಸ್ತದರ್ಹತಿ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಅನಂತರ ಭಗವಾನ್ ಶ್ರೀಕೃಷ್ಣನು ತನ್ನ ಸಂಗಡಿಗರೊಂದಿಗೆ ರಾಜಬೀದಿಯಲ್ಲಿ ಬರುತ್ತಿರುವಾಗ ಓರ್ವ ಯುವತಿಯನ್ನು ನೋಡಿದನು. ಆಕೆಯ ಮುಖವು ಸುಂದರವಾಗಿದ್ದರೂ ಶರೀರದಿಂದ ಕುಳ್ಳಾಗಿದ್ದಳು. ಇದರಿಂದ ಅವಳನ್ನು ಕುಬ್ಜೆ ಎಂದೇ ಕರೆಯುತ್ತಿದ್ದರು. ಆಕೆಯು ಕೈಯಲ್ಲಿ ಗಂಧದ ಪಾತ್ರೆಯನ್ನು ಹಿಡಿದುಕೊಂಡಿದ್ದಳು. ಪ್ರೇಮರಸವನ್ನು ದಾನಮಾಡುವುದಕ್ಕಾಗಿ ಭಗವಾನ್ ಶ್ರೀಕೃಷ್ಣನು ಕುಬ್ಜೆಯ ಮೇಲೆ ಕೃಪೆ ತೋರಲು ನಗುತ್ತಾ ಆಕೆಯನ್ನು ಪ್ರಶ್ನಿಸಿದನು. ॥ ೧ ॥ ಎಲೈ ಸುಂದರಿಯೇ! ನೀನು ಯಾರು? ಈ ಗಂಧವನ್ನು ಯಾರಿಗಾಗಿ ಕೊಂಡುಹೋಗುತ್ತಿರುವೆ? ಕಲ್ಯಾಣಿ! ಎಲ್ಲವನ್ನು ಯಥಾವತ್ತಾಗಿ ಹೇಳು. ಈ ಉತ್ತಮವಾದ ಗಂಧವನ್ನೂ ಅಂಗರಾಗವನ್ನು ನಮಗೆ ಕೊಟ್ಟುಬಿಡು. ಇದರಿಂದ ಶೀಘ್ರವಾಗಿ ನಿನಗೆ ಪರಮ ಶ್ರೇಯಸ್ಸು ಉಂಟಾದೀತು. ॥ ೨ ॥

ಸೈರಂಧ್ರಿಯಾದ ಕುಬ್ಜೆಯು ಹೇಳಿದಳು – ಸುಂದರಾಂಗನೇ! ನಾನು ಕಂಸನಿಗೆ ಪ್ರಿಯಳಾದ ದಾಸಿಯು. ಮಹಾರಾಜನು ನನ್ನನ್ನು ಬಹಳವಾಗಿ ಸಮ್ಮಾನಿಸುತ್ತಾನೆ. ತ್ರಿವಕ್ರಾ (ಕುಬ್ಜೆ) ಎಂಬುದು ನನ್ನ ಹೆಸರು. ನಾನು ರಾಜನಲ್ಲಿ ಗಂಧ, ಅಂಗರಾಗವನ್ನು ಹಚ್ಚುವ ಕೆಲಸ ಮಾಡುತ್ತಿದ್ದೇನೆ. ನಾನು ತಯಾರಿಸಿದ ಗಂಧ ಮತ್ತು ಅಂಗರಾಗವು

ರೂಪಪೇಶಲಮಾಧುರ್ಯಹಸಿತಾಲಾಪವೀಕ್ಷಿತೈಃ ।
ಧರ್ಷಿತಾತ್ಮಾ ದದೌ ಸಾಂದ್ರಮುಭಯೋರನುಲೇಪನಮ್
॥ ೪ ॥

ತತಸ್ತಾವಂಗರಾಗೇಣ ಸ್ವವರ್ಣೇತರಶೋಭಿನಾ ।
ಸಂಪ್ರಾಪ್ತಪರಭಾಗೇನ ಶುಶುಭಾತೇऽನುರಂಜಿತೌ
॥ ೫ ॥

ಪ್ರಸನ್ನೋ ಭಗವಾನ್ ಕುಬ್ಜಾಂ ತ್ರಿವಕ್ರಾಂ ರುಚಿರಾನನಾಮ್ ।
ಋಜ್ವೀಂ ಕರ್ತುಂ ಮನಶ್ಚಕ್ರೇ ದರ್ಶಯನ್ ದರ್ಶನೇ ಫಲಮ್
॥ ೬ ॥

ಪದ್ಭ್ಯಾಮಾಕ್ರಮ್ಯ ಪ್ರಪದೇ ದ್ವ್ಯಂಗುಲ್ಯುತ್ತಾನಪಾಣಿನಾ ।
ಪ್ರಗೃಹ್ಯ ಚುಬುಕೇऽಧ್ಯಾತ್ಮಮುದನೀನಮದಚ್ಯುತಃ
॥ ೭ ॥

ಸಾ ತದರ್ಜುಸಮಾನಾಂಗೀ ಬೃಹಚ್ಛ್ರೋಣಿಪಯೋಧರಾ ।
ಮುಕುಂದಸ್ಪರ್ಶನಾತ್ಸದ್ಯೋ ಬಭೂವ ಪ್ರಮದೋತ್ತಮಾ
॥ ೮ ॥

ತತೋ ರೂಪಗುಣೌದಾರ್ಯಸಂಪನ್ನಾ ಪ್ರಾಹ ಕೇಶವಮ್ ।
ಉತ್ತರೀಯಾಂತಮಾಕೃಷ್ಯ ಸ್ಮಯಂತೀ ಜಾತಹೃಚ್ಛಯಾ
॥ ೯ ॥

ಏಹಿ ವೀರ ಗೃಹಂ ಯಾಮೋ ನ ತ್ವಾಂ ತ್ಯಕ್ತುಮಿಹೋತ್ಸಹೇ ।
ತ್ವಯೋನ್ಮಥಿತಚಿತ್ತಾಯಾಃ ಪ್ರಸೀದ ಪುರುಷರ್ಷಭ
॥ ೧೦ ॥

ಏವಂ ಸ್ತ್ರಿಯಾ ಯಾಚ್ಯಮಾನಃ ಕೃಷ್ಣೋ ರಾಮಸ್ಯ ಪಶ್ಯತಃ ।
ಮುಖಂ ವೀಕ್ಷ್ಯಾನುಗಾನಾಂ ಚ ಪ್ರಹಸಂಸ್ತಾಮುವಾಚ ಹ
॥ ೧೧ ॥

ಏಷ್ಯಾಮಿ ತೇ ಗೃಹಂ ಸುಭ್ರೂಃ ಪುಂಸಾಮಾಧಿವಿಕರ್ಶನಮ್ ।
ಸಾಧಿತಾರ್ಥೋऽಗೃಹಾಣಾಂ ನಃ ಪಾಂಥಾನಾಂ ತ್ವಂ ಪರಾಯಣಮ್
॥ ೧೨ ॥

ವಿಸೃಜ್ಯ ಮಾಧ್ವ್ಯಾ ವಾಣ್ಯಾ ತಾಂ ವ್ರಜನ್ ಮಾರ್ಗೇ ವಣಿಕ್ಪಥೈಃ ।
ನಾನೋಪಾಯನತಾಂಬೂಲಸ್ರಗ್ಗಂಧೈಃ ಸಾಗ್ರಜೋऽರ್ಚಿತಃ
॥ ೧೩ ॥

ಭೋಜರಾಜ ಕಂಸನಿಗೆ ಅತ್ಯಂತ ಪ್ರಿಯವಾಗಿರುತ್ತದೆ. ಆದರೆ ಇಂತಹ ಅಮೋಘವಾದ ಚಂದವನ್ನು ಲೇಪಿಸಿಕೊಳ್ಳಲು ಅರ್ಹರಾದವರು ನಿಮ್ಮಿಬ್ಬರನ್ನುಳಿದು ಬೇರೆ ಯಾರೂ ಇರುವುದಿಲ್ಲ. ॥ ೩ ॥ ಭಗವಂತನ ಸೌಂದರ್ಯ, ಸೌಕುಮಾರ್ಯ, ರಸಿಕತೆ, ಮಂದಹಾಸ, ಪ್ರೇಮಾಲಾಪ ಮತ್ತು ಕುಡಿನೋಟದಿಂದ ಕದಡಿಹೋದ ಮನಸ್ಸಿನಿಂದ ಕೂಡಿದ್ದ ಕುಬ್ಜೆಯು ರಾಮ-ಕೃಷ್ಣರಿಗೆ ತಾನು ರಾಜನಿಗಾಗಿ ಸಿದ್ಧಪಡಿಸಿದ ಘಮ-ಘಮಿಸುತ್ತಿದ್ದ ಅಂಗರಾಗವನ್ನು ಸಮರ್ಪಿಸಿದಳು. ॥ ೪ ॥ ಅದನ್ನು ಸ್ವೀಕರಿಸಿದ ಶ್ರೀಕೃಷ್ಣನು ತನ್ನ ಶ್ಯಾಮಲ ಶರೀರಕ್ಕೆ ಹಳದಿ ಬಣ್ಣದ ಮತ್ತು ಬಲರಾಮನು ಕೆಂಪು ಬಣ್ಣದ ಅಂಗರಾಗವನ್ನು ಹಚ್ಚಿಕೊಂಡರು. ಹೊಕ್ಕುಳಿನಿಂದ ಮೇಲ್ಭಾಗದ ಶರೀರವನ್ನು ಅಲಂಕರಿಸಿಕೊಂಡು ಅತ್ಯಂತ ಶೋಭಾಯಮಾನರಾಗಿ ರಾರಾಜಿಸಿದರು. ॥ ೫ ॥ ಭಗವಾನ್ ಶ್ರೀಕೃಷ್ಣನು ಆ ಕುಬ್ಜೆಯ ಮೇಲೆ ಪ್ರಸನ್ನನಾಗಿ ತನ್ನ ದರ್ಶನದ ಪ್ರತ್ಯಕ್ಷ ಫಲವನ್ನು ತೋರಿಸಲಿಕ್ಕಾಗಿ ಶರೀರದಲ್ಲಿ ಮೂರುಕಡೆ ಡೊಂಕಾದ ಸುಂದರ ಮುಖವುಳ್ಳ ಆಕೆಯನ್ನು ನೇರವಾಗಿಸಲು ಯೋಚಿಸಿದನು. ॥ ೬ ॥ ಭಗವಂತನು ತನ್ನ ಕಾಲುಗಳಿಂದ ಕುಬ್ಜೆಯ ಕಾಲುಗಳನ್ನು ಒತ್ತಿ ಹಿಡಿದು, ತನ್ನ ಬಲಗೈಯ್ಯ ಎರಡು ಬೆರಳುಗಳಿಂದ ಆಕೆಯ ಗಲ್ಲವನ್ನು ಹಿಡಿದು ಸ್ವಲ್ಪ ಮೇಲಕ್ಕೆ ಎತ್ತಿದನು. ॥ ೭ ॥ ಕ್ಷಣಮಾತ್ರದಲ್ಲಿ ಆಕೆಯ ಶರೀರವು ನೆಟ್ಟಗಾಗಿ ಬಿಟ್ಟಿತು. ಕುಬ್ಜೆಯಾಗಿದ್ದ ಆಕೆಯು ಭಗವಂತನ ಸ್ಪರ್ಶಮಾತ್ರದಿಂದಲೇ ವಿಶಾಲವಾದ ನಿತಂಬದಿಂದ ಕೂಡಿದವಳೂ, ಪುಷ್ಟನಿಯೂ ಆಗಿ ರೂಪಲಾವಣ್ಯಗಳಿಂದ ಕಂಗೊಳಿಸುವ ಪ್ರಮದೋತ್ತಮೆಯಾದಳು. ॥ ೮ ॥

ಆ ಕ್ಷಣದಿಂದಲೇ ಕುಬ್ಜೆಯು ರೂಪ, ಗುಣ, ಔದಾರ್ಯಗಳಿಂದ ಸಂಪನ್ನಳಾಗಿ ಆಕೆಯ ಮನಸ್ಸಿನಲ್ಲಿ ಭಗವಂತನನ್ನು ಸೇರುವ ಕಾಮನೆ ಉಂಟಾಯಿತು. ಆಕೆಯು ಶ್ರೀಕೃಷ್ಣನ ಉತ್ತರೀಯವನ್ನು ಹಿಡಿದುಕೊಂಡು ಮುಗುಳ್ನಗುತ್ತಾ ಇಂತೆಂದಳು. ॥ ೯ ॥ ವೀರ ಶಿರೋಮಣಿಯೇ! ಬಾ, ನಮ್ಮ ಮನೆಗೆ ಹೋಗೋಣ, ಈಗ ನಾನು ನಿನ್ನನ್ನು ಇಲ್ಲಿ ಬಿಟ್ಟಿರಲಾರೆ. ಏಕೆಂದರೆ, ನನ್ನ ಚಿತ್ತವನ್ನು ನೀನು ಕದಡಿಬಿಟ್ಟಿರುವೆ. ಪುರುಷೋತ್ತಮನೇ! ದಾಸಿಯಾದ ನನ್ನ ಮೆಲೆ ಪ್ರಸನ್ನನಾಗು ॥ ೧೦ ॥ ಬಲರಾಮನ ಎದುರಿಗೆ ಕುಬ್ಜೆಯು ಹೀಗೆ ಪ್ರಾರ್ಥಿಸಿದಾಗ ಭಗವಾನ್ ಶ್ರೀಕೃಷ್ಣನು ತನ್ನ ಸಂಗಡಿಗರಾದ ಗೋಪಬಾಲಕರ ಕಡೆಗೆ ನೋಡಿ ನಸುನಗುತ್ತಾ ಆಕೆಯಲ್ಲಿ ಹೀಗೆಂದನು. ॥ ೧೧ ॥ ಸುಂದರೀ! ನಿನ್ನ ಮನೆಯು ಸಂಸಾರೀ ಜನರಿಗೆ ತಮ್ಮ ಮಾನಸಿಕ ವ್ಯಾಧಿಯನ್ನು ಕಳೆದುಕೊಳ್ಳುವ ಸಾಧನೆಯಾಗಿದೆ. ನಾನು ನನ್ನ ಕಾರ್ಯವನ್ನು ಪೂರ್ಣಗೊಳಿಸಿದ ಬಳಿಕ ಅವಶ್ಯಕವಾಗಿ ನಿನ್ನಲ್ಲಿಗೆ ಬರುವೆನು. ಮನೆ-ಮಠಗಳಿಲ್ಲದ ನಮ್ಮಂತಹ ದಾರಿಹೋಕರಿಗೆ ನಿಮ್ಮಂತಹವರ ಮನೆಯೇ ಆಸರೆಯಾಗಿದೆ. ॥ ೧೨ ॥ ಹೀಗೆ ಸವಿಯಾದ ಮಾತುಗಳನ್ನಾಡಿ ಶ್ರೀಕೃಷ್ಣನು ಆಕೆಯನ್ನು ಬೀಳ್ಕೊಟ್ಟನು. ಬಳಿಕ ಅವರು ಸಂತೆ ಬೀದಿಯಲ್ಲಿ ಬರುತ್ತಿರುವಾಗ ಅಲ್ಲಿಯ ವ್ಯಾಪಾರಿಗಳೆಲ್ಲರೂ ಒಟ್ಟಾಗಿ ಬಂದು ಬಲರಾಮ-ಕೃಷ್ಣರನ್ನು ಹೂವಿನಹಾರ, ತಾಂಬೂಲ, ಚಂದನಾದಿಗಳಿಂದ ಪೂಜಿಸಿ, ಬಗೆ-ಬಗೆಯ ಕಾಣಿಕೆಗಳನ್ನು ಅರ್ಪಿಸಿದರು. ॥ ೧೩ ॥

ತದ್ದರ್ಶನಸ್ಮರಕ್ಷೋಭಾದಾತ್ಮಾನಂ ನಾವಿದನ್ ಸ್ತ್ರಿಯಃ ।
ವಿಸ್ರಸ್ತವಾಸಃಕಬರವಲಯಾಲೇಖ್ಯಮೂರ್ತಯಃ
॥ ೧೪ ॥

ತತಃ ಪೌರಾನ್ ಪೃಚ್ಛಮಾನೋ ಧನುಷಃ ಸ್ಥಾನಮಚ್ಯುತಃ ।
ತಸ್ಮಿನ್ ಪ್ರವಿಷ್ಟೋ ದದೃಶೇ ಧನುರೈಂದ್ರಮಿವಾದ್ಭುತಮ್
॥ ೧೫ ॥

ಪುರುಷೈರ್ಬಹುಭಿರ್ಗುಪ್ತಮರ್ಚಿತಂ ಪರಮರ್ದ್ಧಿಮತ್ ।
ವಾರ್ಯಮಾಣೋ ನೃಭಿಃ ಕೃಷ್ಣಃ ಪ್ರಸಹ್ಯ ಧನುರಾದದೇ
॥ ೧೬ ॥

ಕರೇಣ ವಾಮೇನ ಸಲೀಲಮುದ್ಧೃತಂ
ಸಜ್ಯಂ ಚ ಕೃತ್ವಾ ನಿಮಿಷೇಣ ಪಶ್ಯತಾಮ್ ।
ನೃಣಾಂ ವಿಕೃಷ್ಯ ಪ್ರಬಭಂಜ ಮಧ್ಯತೋ
ಯಥೇಕ್ಷುದಂಡಂ ಮದಕರ್ಯ್ಯರುಕ್ರಮಃ ॥ ೧೭ ॥

ಧನುಷೋ ಭಜ್ಯಮಾನಸ್ಯ ಶಬ್ದಃ ಖಂ ರೋದಸೀ ದಿಶಃ ।
ಪೂರಯಾಮಾಸ ಯಂ ಶ್ರುತ್ವಾ ಕಂಸಸ್ತ್ರಾಸಮುಪಾಗಮತ್
॥ ೧೮ ॥

ತದ್ರಕ್ಷಿಣಃ ಸಾನುಚರಾಃ ಕುಪಿತಾ ಆತತಾಯಿನಃ ।
ಗೃಹೀತುಕಾಮಾ ಆವವ್ರುರ್ಗ್ರಹ್ಯತಾಂ ಬಧ್ಯತಾಮಿತಿ
॥ ೧೯ ॥

ಅಥ ತಾನ್ ದುರಭಿಪ್ರಾಯಾನ್ ವಿಲೋಕ್ಯ ಬಲಕೇಶವೌ ।
ಕ್ರುದ್ಧೌ ಧನ್ವನ ಆದಾಯ ಶಕಲೇ ತಾಂಶ್ಚ ಜಘ್ನತುಃ
॥ ೨೦ ॥

ಬಲಂ ಚ ಕಂಸಪ್ರಹಿತಂ ಹತ್ವಾ ಶಾಲಾಮುಖಾತ್ತತಃ ।
ನಿಷ್ಕ್ರಮ್ಯ ಚೇರತುರ್ಹ್ಯಷ್ಟೌ ನಿರೀಕ್ಷ್ಯ ಪುರಸಂಪದಃ
॥ ೨೧ ॥

ತಯೋಸ್ತದದ್ಭುತಂ ವೀರ್ಯಂ ನಿಶಾಮ್ಯ ಪುರವಾಸಿನಃ ।
ತೇಜಃ ಪ್ರಾಗಲ್ಭ್ಯಂ ರೂಪಂ ಚ ಮೇನಿರೇ ವಿಬುಧೋತ್ತಮೌ
॥ ೨೨ ॥

ತಯೋರ್ವಿಚರತೋಃ ಸ್ವೈರಮಾದಿತ್ಯೋಽಸ್ತಮುಪೇಯಿವಾನ್ ।
ಕೃಷ್ಣರಾಮೌ ವೃತೌ ಗೋಪೈಃ ಪುರಾಚ್ಚಕಟಮೀಯತುಃ
॥ ೨೩ ॥

ಅವರಿಬ್ಬರ ದರ್ಶನದಿಂದ ಸ್ತ್ರೀಯರ ಹೃದಯದಲ್ಲಿ ಪ್ರೇಮಾವೇಗ ಮತ್ತು ಸೇರುವ ಬಯಕೆ ಜಾಗ್ರತವಾಗುತ್ತಿತ್ತು. ಇದರಿಂದ ಅವರಿಗೆ ಶರೀರದ ಜ್ಞಾನವೇ ಇರುತ್ತಿರಲಿಲ್ಲ. ಅವರಿಗೆ ಮಸ್ತ ಮುಡಿ, ಬಳೆ ಇವುಗಳು ಜಾರಿಹೋಗುತ್ತಿದ್ದರೂ ಅದರ ಪರಿವೆಯೇ ಇಲ್ಲದೆ ಚಿತ್ತಾರದಂತೆ ನಿಂತು ಬಿಡುತ್ತಿದ್ದರು. ॥ ೧೪ ॥

ಆನಂತರ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ಮುಂದೆ ಹೋಗುತ್ತಾ ಧನುರ್ಯಜ್ಞವು ನಡೆಯುವ ಸ್ಥಳವನ್ನು ಕೇಳುತ್ತಾ ರಂಗಶಾಲೆಗೆ ಬಂದು ತಲುಪಿದರು. ಅಲ್ಲಿ ಇಂದ್ರನ ಧನುಸ್ಸಿಗೆ ಸಮಾನವಾದ ಒಂದು ಅದ್ಭುತವಾದ ಬಿಲ್ಲನ್ನು ನೋಡಿದರು. ॥ ೧೫ ॥ ಪರಮ ವೈಭವದಿಂದ ಪ್ರತಿಷ್ಠಾಪಿತವಾದ ಅನುದಿನವೂ ಪೂಜಿಸಲ್ಪಟ್ಟು ಹಲವಾರು ಸೈನಿಕರಿಂದ ರಕ್ಷಿತವಾದ ಆ ಮಹಾಧನುಸ್ಸನ್ನೆತ್ತಿಕೊಳ್ಳಲು ಮುಂದಾದಾಗ ರಕ್ಷಕರು ತಡೆಯುತ್ತಿದ್ದರೂ ಶ್ರೀಕೃಷ್ಣನು ರಕ್ಷಕರನ್ನು ಹಿಂದಕ್ಕೆ ತಳ್ಳಿ ಆ ಬಿಲ್ಲನ್ನು ಬಲವಂತವಾಗಿ ಎತ್ತಿಕೊಂಡನು. ॥ ೧೬ ॥ ಎಲ್ಲರೂ ನೋಡುತ್ತಿರುವಂತೆಯೇ ಆ ಬಿಲ್ಲನ್ನು ಎಡಗೈಯಿಂದ ಮೇಲೆತ್ತಿ, ಅದಕ್ಕೆ ನಾಣನ್ನು ಬಿಗಿದು ಮದಿಸಿದ ಆನೆಯು ಕಬ್ಬಿನ ಜಲ್ಲೆಯನ್ನು ಮುರಿದು ಬಿಡುವಂತೆ ಕ್ಷಣಾರ್ಧದಲ್ಲಿ ಶ್ರೀಕೃಷ್ಣನು ಅದನ್ನು ಮಧ್ಯದಲ್ಲಿ ಮುರಿದು ಹಾಕಿದನು. ॥ ೧೭ ॥ ಧನುಸ್ಸು ಮುರಿದಾಗ ಅದರ ಶಬ್ದವು ಭೂಮ್ಯಾಕಾಶಗಳಲ್ಲಿಯೂ, ದಶದಿಕ್ಕುಗಳಲ್ಲಿಯೂ ತುಂಬಿ ಹೋಯಿತು. ಅದನ್ನು ಕೇಳಿದ ಕಂಸನು ಭಯದಿಂದ ನಡುಗಿ ಹೋದನು. ॥ ೧೮ ॥ ಧನುಸ್ಸನ್ನು ರಕ್ಷಿಸುತ್ತಿದ್ದ ಆತತಾಯಿಗಳಾದ ಅಸುರರು ಅತ್ಯಂತ ಕುಪಿತರಾದರು. ಶ್ರೀಕೃಷ್ಣನನ್ನು ಹಿಡಿಯುವ ಇಚ್ಛೆಯಿಂದ ಅವನ ಸುತ್ತಲೂ ನಿಂತು 'ಹಿಡಿಯಿರಿ, ಬಂಧಿಸಿರಿ, ತಪ್ಪಿಸಿಕೊಂಡು ಹೋಗಲು ಬಿಡಬೇಡಿರಿ' ಎಂದು ಕೂಗಾಡತೊಡಗಿದರು. ॥ ೧೯ ॥ ಆ ರಾಕ್ಷಸರ ದುರಭಿಪ್ರಾಯವನ್ನು ತಿಳಿದು ಬಲರಾಮ-ಶ್ರೀಕೃಷ್ಣರು ಕ್ರುದ್ಧರಾಗಿ ಮುರಿದು ಬಿದ್ದ ಧನುಸ್ಸಿನ ತುಂಡುಗಳನ್ನೆತ್ತಿಕೊಂಡು ಅದರಿಂದಲೇ ರಾಕ್ಷಸರೆಲ್ಲರನ್ನೂ ಧ್ವಂಸಮಾಡಿಬಿಟ್ಟರು. ॥ ೨೦ ॥ ಅವರ ಸಹಾಯಕ್ಕೆ ಬಂದ ಕಂಸನ ಸೈನಿಕರೆಲ್ಲರನ್ನೂ ಅದೇ ತುಂಡುಗಳಿಂದ ಕ್ಷಣಮಾತ್ರದಲ್ಲಿ ಸಂಹರಿಸಿಬಿಟ್ಟರು. ಬಳಿಕ ಅವರು ಯಜ್ಞಮಂಟಪದ ಮುಖ್ಯದ್ವಾರದಿಂದ ಹೊರಬಿದ್ದು ಮಥುರಾಪಟ್ಟಣದ ಸೊಬಗನ್ನು ವೀಕ್ಷಿಸುತ್ತಾ ಆನಂದವಾಗಿ ಸಂಚರಿಸುತ್ತಿದ್ದರು. ॥ ೨೧ ॥ ನಗರವಾಸಿಗಳು ರಾಮ-ಕೇಶವರ ಅದ್ಭುತವಾದ ವೀರ್ಯಪರಾಕ್ರಮಗಳನ್ನು, ಮಹಾ ತೇಜಸ್ಸನ್ನು, ಪ್ರೌಢಿಮೆಯನ್ನೂ ರೂಪವನ್ನೂ ನೋಡಿ ಇವರಿಬ್ಬರೂ ಶ್ರೇಷ್ಠವಾದ ದೇವತೆಗಳೇ ಇರಬಹುದೆಂದು ನಿಶ್ಚಯಿಸಿಕೊಂಡರು. ॥ ೨೨ ॥ ಹೀಗೆ ಭಗವಾನ್ ಶ್ರೀಕೃಷ್ಣ-ಬಲರಾಮರು ಮಥುರೆಯಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿರುವಾಗ ಸಾಯಂಕಾಲವಾಯಿತು. ಆಗ ಅವರಿಬ್ಬರೂ ತಮ್ಮ ಸಂಗಡಿಗರೊಡನೆ ನಗರದ ಹೊರಭಾಗದಲ್ಲಿ ಬಂಡಿಗಳನ್ನು ನಿಲ್ಲಿಸಿದ್ದ ತಮ್ಮ ಬಿಡದಿಗೆ ಮರಳಿದರು. ॥ ೨೩ ॥ ಗೋಕುಲದಲ್ಲಿದ್ದ ಗೋಪಿಕೆಯರು ಶ್ರೀಕೃಷ್ಣನ ಅಗಲುವಿಕೆಯ ಸಮಯದಲ್ಲಿ ವಿರಹವೇದನೆಯಿಂದ ಹೇಳಿದಂತೆಯೇ ಇಲ್ಲಿ ಮಥುರೆಯಲ್ಲಿ ಅಕ್ಷರಶಃ ಪರಿಣಮಿಸಿತು. ಗೋಪಿಯರಂತೆಯೇ ಮಥುರೆಯ ಸ್ತ್ರೀಯರೂ ಕೂಡ ಶ್ರೀಕೃಷ್ಣನ ಅತುಲ ಸೌಂದರ್ಯ

ಗೋಪ್ಯೋ ಮುಕುಂದವಿಗಮೇ ವಿರಹಾತುರಾ ಯಾ
ಆಶಾಸತಾಶಿಷ ಋತಾ ಮಧುಪುರ್ಯಭೂವನ್ ।
ಸಂಪಶ್ಯತಾಂ ಪುರುಷಭೂಷಣಗಾತ್ರಲಕ್ಷ್ಮೀಂ
ಹಿತ್ವೇತರಾನ್ ನು ಭಜತಶ್ಚಕಮೇಽಯನಂ ಶ್ರೀಃ ॥ ೨೪ ॥

ಅವನಿಕ್ತಾಂಘ್ರಿಯುಗಲೌ ಭುಕ್ತ್ವಾಕ್ಷೀರೋಪಸೇಚನಮ್ ।
ಊಷತುಸ್ತಾಂ ಸುಖಂ ರಾತ್ರಿಂ ಜ್ಞಾತ್ವಾಕಂಸಚಿಕೀರ್ಷಿತಮ್
॥ ೨೫ ॥

ಕಂಸಸ್ತು ಧನುಷೋ ಭಂಗಂ ರಕ್ಷಿಣಾಂ ಸ್ವಬಲಸ್ಯ ಚ ।
ವಧಂ ನಿಶಮ್ಯ ಗೋವಿಂದರಾಮವಿಕ್ರೀಡಿತಂ ಪರಮ್
॥ ೨೬ ॥

ದೀರ್ಘಪ್ರಜಾಗರೋ ಭೀತೋ ದುರ್ನಿಮಿತ್ತಾನಿ ದುರ್ಮತಿಃ ।
ಬಹೂನ್ಯಚಷ್ಟೋಭಯಥಾ ಮೃತ್ಯೋರ್ದೌತ್ಯಕರಾಣಿ ಚ
॥ ೨೭ ॥

ಅದರ್ಶನಂ ಸ್ವಶಿರಸಃ ಪ್ರತಿರೂಪೇ ಚ ಸತ್ಯಪಿ ।
ಅಸತ್ಯಪಿ ದ್ವಿತೀಯೇ ಚ ದ್ವೈರೂಪ್ಯಂ ಜ್ಯೋತಿಷಾಂ ತಥಾ
॥ ೨೮ ॥

ಛಿದ್ರಪ್ರತೀತಿಶ್ಛಾಯಾಯಾಂ ಪ್ರಾಣಘೋಷಾನುಪಶ್ರುತಿಃ ।
ಸ್ವರ್ಣಪ್ರತೀತಿರ್ವೃಕ್ಷೇಷು ಸ್ವಪದಾನಾಮದರ್ಶನಮ್
॥ ೨೯ ॥

ಸ್ವಪ್ನೇ ಪ್ರೇತಪರಿಷ್ವಂಗಃ ಖರಯಾನಂ ವಿಷಾದನಮ್ ।
ಯಾಯಾನ್ನಲದಮಾಲ್ಯೇಕಸ್ತೈಲಾಭ್ಯಕ್ತೋ ದಿಗಂಬರಃ
॥ ೩೦ ॥

ಅನ್ಯಾನಿ ಚೇತ್ಥಂಭೂತಾನಿ ಸ್ವಪ್ನಜಾಗರಿತಾನಿ ಚ ।
ಪಶ್ಯನ್ ಮರಣಸಂತ್ರಸ್ತೋ ನಿದ್ರಾಂ ಲೇಭೇ ನ ಚಿಂತಯಾ
॥ ೩೧ ॥

ವ್ಯುಷ್ಟಾಯಾಂ ನಿಶಿ ಕೌರವ್ಯ ಸೂರ್ಯೇ ಚಾದ್ಭ್ಯಃ ಸಮುತ್ಥಿತೇ ।
ಕಾರಯಾಮಾಸ ವೈ ಕಂಸೋ ಮಲ್ಲಕ್ರೀಡಾಮಹೋತ್ಸವಮ್
॥ ೩೨ ॥

ಆನರ್ಚುಃ ಪುರುಷಾ ರಂಗಂ ತೂರ್ಯಭೇರ್ಯಶ್ಚ ಜಘ್ನಿರೇ ।
ಮಂಚಾಶ್ಚಾಲಂಕೃತಾಃ ಸ್ರಗ್ಭಿಃ ಪತಾಕಾಚ್ಛೈಲತೋರಣೈಃ
॥ ೩೩ ॥

ವನ್ನು ನೋಡಿ ಮೈಮರೆತು ಹೋದರು. ಲಕ್ಷ್ಮಿಯನ್ನು ಅನೇಕರು ಬಯಸುತ್ತಾ ಅವಳನ್ನು ಪಡೆಯಲು ದೊಡ್ಡ-ದೊಡ್ಡ ದೇವತೆಗಳೂ ಕಾತರರಾಗಿದ್ದರು. ಆದರೆ ಆಕೆಯು ತನ್ನನ್ನು ಬಯಸದೇ ಇರುವ ಭಗವಂತನನ್ನು ವರಿಸಿಕೊಂಡು, ಅವನ ವಕ್ಷಸ್ಥಳವನ್ನೇ ತನ್ನ ನಿವಾಸ ಸ್ಥಾನವನ್ನಾಗಿಸಿಕೊಂಡಳು. ಅಂತಹ ಪರುಷೋತ್ತಮನ ಶರೀರದ ದಿವ್ಯ ಕಾಂತಿಯನ್ನು ನೋಡುತ್ತಾ ಮಥುರೆಯ ಸ್ತ್ರೀಯರು ಆನಂದ ತುಂದಿಲರಾದರು. ॥ ೨೪ ॥ ಬಲರಾಮ ಶ್ರೀಕೃಷ್ಣರು ತಮ್ಮ ಸಂಗಡಿಗ ರೊಂದಿಗೆ ಬಿಡದಿಗೆ ಬಂದು, ಕೈ-ಕಾಲು ತೊಳೆದು ಹಾಲಿನಿಂದ ಮಾಡಿದ ಪಾಯಸ ಮುಂತಾದ ಪದಾರ್ಥಗಳನ್ನು ಭುಂಜಿಸಿ, ಕಂಸನು ಮುಂದೆ ಏನು ಮಾಡಲಿರುವನು ಎಂಬುದನ್ನು ಅರಿತು ಕೊಂಡು ಆ ರಾತ್ರಿಯನ್ನು ಸುಖವಾಗಿ ಅಲ್ಲೇ ಕಳೆದರು. ॥ ೨೫ ॥

ಶ್ರೀಕೃಷ್ಣ-ಬಲರಾಮರು ಮಕ್ಕಳ ಆಟಿಕೆಯಂತೆ, ಯಾವ ಶ್ರಮವೂ ಇಲ್ಲದೆ ಧನುಸ್ಸನ್ನು ಮುರಿದುದನ್ನು ಕಾವಲುಗಾರರನ್ನೂ ಅವರ ಸಹಾಯಕ್ಕೆ ಕಳಿಸಿದ ಸೈನ್ಯವನ್ನು ಸಂಹರಿಸಿದುದನ್ನು ಕಂಸನು ಕೇಳಿದನು. ॥ ೨೬ ॥ ಇದನ್ನು ಕೇಳಿದಾಗ ಅವನು ಬಹಳವಾಗಿ ಗಾಬರಿಗೊಂಡನು. ಆ ದುರ್ಬುದ್ಧಿಗೆ ಬಹಳ ಹೊತ್ತು ನಿದ್ದೆಯೇ ಬರಲಿಲ್ಲ. ಜಾಗ್ರದವಸ್ಥೆಯಲ್ಲೂ, ಸ್ವಪ್ನದಲ್ಲಿಯೂ ಕಂಸನು ಮೃತ್ಯು ಸೂಚಕವಾದ ಅನೇಕ ದೃಶ್ಯಗಳನ್ನು ನೋಡಿದನು. ॥ ೨೭ ॥ ಜಾಗ್ರ ದವಸ್ಥೆಯಲ್ಲಿ ಅವನಿಗೆ ನೀರಿನಲ್ಲಿ ಕನ್ನಡಿಯಲ್ಲಿ ಶರೀರದ ಪ್ರತಿಬಿಂಬ ಕಂಡರೂ ತಲೆಯೇ ಕಾಣುತ್ತಿರಲಿಲ್ಲ, ಬೆರಳುಗಳೇ ಆದಿ ಕಣ್ಣಿಗೆ ಅಡ್ಡವಾಗದಿದ್ದರೂ ಸೂರ್ಯ-ನಕ್ಷತ್ರಗಳು, ದೀಪ ಹೀಗೆ ಎರಡೆರ ಡಾಗಿ ಕಂಡುಬರುತ್ತಿತ್ತು. ॥ ೨೮ ॥ ತನ್ನ ನೆರಳಿನಲ್ಲೇ ರಂಧ್ರಗಳಿರು ವಂತೆ ಕಾಣುತ್ತಿತ್ತು. ಕಿವಿಗಳನ್ನು ಮುಚ್ಚಿಕೊಂಡರೆ ಪ್ರಾಣಧ್ವನಿಯು ಕೇಳಿ ಬರುತ್ತಿರಲಿಲ್ಲ, ವೃಕ್ಷಗಳು ಸ್ವರ್ಣಮಯವಾಗಿ ಕಾಣುತ್ತಿದ್ದವು. ನಡೆಯುವಾಗ ಹೆಜ್ಜೆಗಳ ಗುರುತುಗಳು ಕಾಣುತ್ತಿರಲಿಲ್ಲ ॥ ೨೯ ॥ ಸ್ವಪ್ನಾವಸ್ಥೆಯಲ್ಲಿ ಕಂಸನು ಪ್ರೇತಗಳನ್ನು ತಬ್ಬಿಕೊಂಡಂತೆ ಕಂಡನು. ಕತ್ತೆಯನ್ನೇರಿ ಹೋಗುತ್ತಾ ವಿಷತಿಂದಂತೆ ಕಂಡನು. ಇಡೀ ಶರೀರಕ್ಕೆ ಎಣ್ಣೆಯನ್ನು ಮೆತ್ತಿಕೊಂಡು, ದಾಸವಾಳ ಹೂವಿನ ಮಾಲೆಯನ್ನು ಧರಿಸಿ ದಿಗಂಬರನಾಗಿ ಎಲ್ಲಿಗೋ ಹೋಗುತ್ತಿರುವಂತೆ ಕಂಡನು. ॥ ೩೦ ॥ ಸ್ವಪ್ನ ಮತ್ತು ಎಚ್ಚರದಲ್ಲಿ ಅವನು ಇಂತಹುದೇ ಅನೇಕ ಅಪಶಕುನಗಳನ್ನು ನೋಡುತ್ತಿದ್ದನು. ಇದರಿಂದ ಅತೀವ ಚಿಂತಿತ ನಾಗಿ, ಮೃತ್ಯುವು ಸಮೀಪಿಸಿದೆ ಎಂದು ಹೆದರಿ ಅವನಿಗೆ ನಿದ್ದೆಯೇ ಬರಲಿಲ್ಲ ॥ ೩೧ ॥

ಪರೀಕ್ಷಿತನೇ ! ರಾತ್ರಿಯು ಕಳೆದು ಸೂರ್ಯನಾರಾಯಣನು ಪೂರ್ವಸಮುದ್ರದಿಂದ ಮೇಲೆರಿದಾಗ ಕಂಸನು ಮಲ್ಲಕ್ರೀಡಾ ಮಹೋತ್ಸವವನ್ನು ಉದ್ಘಾಟಿಸಿದನು. ॥ ೩೨ ॥ ರಾಜಭಟರು ರಂಗಮಂಟಪವನ್ನು ಚೆನ್ನಾಗಿ ಅಲಂಕರಿಸಿದ್ದರು. ಭೇರಿ, ತುತ್ತೂರಿ, ಢಕ್ಕೆ -ಮೃದಂಗ ಮುಂತಾದ ವಾದ್ಯಗಳು ಮೊಳಗತೊಡಗಿದವು. ಪ್ರೇಕ್ಷಕರು ಕುಳಿತುಕೊಳ್ಳುವ ಮಂಚಗಳು, ಹೂವಿನ ಮಾಲೆ ಗಳಿಂದಲೂ, ಬಾವುಟಗಳಿಂದಲೂ, ಮೇಲ್ಕಟ್ಟುಗಳಿಂದಲೂ, ತೋರಣ ಗಳಿಂದಲೂ ಸಿಂಗರಿಸಲ್ಪಟ್ಟಿತ್ತು. ॥ ೩೩ ॥

ತೇಷು ಪೌರಾ ಜಾನಪದಾ ಬ್ರಹ್ಮಕ್ಷತ್ರಪುರೋಗಮಾಃ ।
ಯಥೋಪಜೋಷಂ ವಿವಿಶೂ ರಾಜಾನಶ್ಚ ಕೃತಾಸನಾಃ
॥ ೩.೪ ॥

ಕಂಸಃ ಪರಿವೃತೋಽಮಾತ್ಯೈ ರಾಜಮಂಚ ಉಪಾವಿಶತ್ ।
ಮಂಡಲೇಶ್ವರಮಧ್ಯಸ್ಥೋ ಹೃದಯೇನ ವಿದೂಯತಾ
॥ ೩.೫ ॥

ವಾದ್ಯಮಾನೇಷು ತೂರ್ಯೇಷು ಮಲ್ಲತಾಲೋತ್ತರೇಷು ಚ ।
ಮಲ್ಲಾಃ ಸ್ವಲಂಕೃತಾ ದೃಪ್ತಾಃ ಸೋಪಾಧ್ಯಾಯಾಃ ಸಮಾವಿಶನ್
॥ ೩.೬ ॥

ಚಾಣೂರೋ ಮುಷ್ಟಿಕಃ ಕೂಟಃ ಶಲಸ್ತೋಶಲ ಏವ ಚ ।
ತ ಆಸೇದುರುಪಸ್ಥಾನಂ ವಲ್ಗುವಾದ್ಯಪ್ರಹರ್ಷಿತಾಃ
॥ ೩.೭ ॥

ನಂದಗೋಪಾದಯೋ ಗೋಪಾ ಭೋಜರಾಜಸಮಾಹುತಾಃ ।
ನಿವೇದಿತೋಪಾಯನಾಸ್ತೇ ಏಕಸ್ಮಿನ್ ಮಂಚ ಆವಿಶನ್
॥ ೩.೮ ॥

ಆ ಮಂಚಗಳಲ್ಲಿ ಬ್ರಾಹ್ಮಣ, ಕ್ಷತ್ರಿಯರೇ, ಮೊದಲಾದ ನಾಗರೀಕರೂ, ಗ್ರಾಮವಾಸಿಗಳೂ, ಎಲ್ಲರೂ ಯಥಾಸ್ಥಾನದಲ್ಲಿ ಕುಳಿತು. ರಾಜ ಮಹಾರಾಜರೂ ತಮ-ತಮಗೆ ನಿಶ್ಚಿತವಾದ ಆಸನಗಳಲ್ಲಿ ಕುಳಿತಿದ್ದರು. ॥ ೩.೪ ॥ ಕಂಸರಾಜನು ಅಮಾತ್ಯರಿಂದ ಪರಿವೃತನಾಗಿ ಮಾಂಡಲಿಕರ ಮಧ್ಯಭಾಗದಲ್ಲಿ ಸರ್ವಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತನು. ಆದರೆ ಅವನ ಮನಸ್ಸು ಅಪಶಕುನಗಳಿಂದಾಗಿ ತಳಮಳಿಸುತ್ತಿತ್ತು. ॥ ೩.೫ ॥ ನಾನಾ ಬಗೆಯ ವಾದ್ಯಗಳು ಮೊಳಗುತ್ತಿರಲು, ಜಟ್ಟಿಗಳ ಕೈಚಪ್ಪಾಳೆಯ ಶಬ್ದಗಳೂ ಕೇಳಿ ಬರುತ್ತಿದ್ದವು. ಗರ್ವಿಷ್ಠರಾದ ಮಲ್ಲರು ಯಥೋಚಿತವಾಗಿ ಅಲಂಕರಿಸಿಕೊಂಡು ತಮ್ಮ ಗುರುಗಳೊಡನೆ ರಂಗಸ್ಥಳಕ್ಕೆ ಇಳಿದರು. ॥ ೩.೬ ॥ ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲ ಮುಂತಾದ ಮುಖ್ಯ-ಮುಖ್ಯ ಜಟ್ಟಿಗಳು ವಾದ್ಯಗಳ ಸಮಧುರವಾದ ಧ್ವನಿಯಿಂದ ಉತ್ಸಾಹಗೊಂಡು ರಂಗಮಂಟಪದಲ್ಲಿ ಬಂದು ಕುಳಿತರು. ॥ ೩.೭ ॥ ಆ ಸಮಯದಲ್ಲಿ ಭೋಜರಾಜನಿಂದ ಆಹ್ವಾನಿತರಾಗಿದ್ದ ನಂದಗೋಪನೇ ಮೊದಲಾದ ಗೋಪಾಲಕರು ತಾವು ತಂದಿದ್ದ ಕಪ್ಪ-ಕಾಣಿಕೆಗಳನ್ನು ಕಂಸನಿಗೆ ಅರ್ಪಿಸಿ, ಅವನ ಅನುಮತಿಯನ್ನು ಪಡೆದು ಒಂದು ಕಡೆ ಮಂಚವೊಂದರಲ್ಲಿ ಕುಳಿತುಕೊಂಡರು. ॥ ೩.೮ ॥

ನಲವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೪೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಮಲ್ಲರಂಗೋಪವರ್ಣನಂ ನಾಮ ದ್ವಿಚತ್ವಾರಿಂಶೋಽಧ್ಯಾಯಃ ॥ ೪೨ ॥

ನಲವತ್ತಮೂರನೆಯ ಅಧ್ಯಾಯ

ಕುವಲಯಾಪೀಡ ಆನೆಯ ಉದ್ಧಾರ - ರಂಗಮಂಟಪ ಪ್ರವೇಶ

ಶ್ರೀಶುಕ ಉವಾಚ

ಅಥ ಕೃಷ್ಣಶ್ಚ ರಾಮಶ್ಚ ಕೃತಶೌಚೌ ಪರಂತಪ ।
ಮಲ್ಲದುಂದುಭಿನಿರ್ಘೋಷಂ ಶ್ರುತ್ವಾದ್ರಷ್ಟುಮುಪೇಯತುಃ
॥ ೧ ॥

ರಂಗದ್ವಾರಂ ಸಮಾಸಾದ್ಯ ತಸ್ಮಿನ್ ನಾಗಮವಸ್ಥಿತಮ್ ।
ಅಪಶ್ಯತ್ಕುವಲಯಾಪೀಡಂ ಕೃಷ್ಣೋಽಂಬಷ್ಠ ಪ್ರಚೋದಿತಮ್
॥ ೨ ॥

ಬದ್ಧ್ವಾಪರಿಕರಂ ಶೌರಿಃ ಸಮುಹ್ಯ ಕುಟಿಲಾಲಕಾನ್ ।
ಉವಾಚ ಹಸ್ತಿಪಂ ವಾಚಾ ಮೇಘನಾದಗಭೀರಯಾ
॥ ೩ ॥

ಅಂಬಷ್ಠಾಂಬಷ್ಠ ಮಾರ್ಗಂ ನೌ ದೇಹ್ಯಪಕ್ರಾಮ ಮಾಚಿರಮ್ ।
ನೋ ಚೇತ್ ಸಕುಂಜರಂ ತ್ವಾದ್ಯ ನಯಾಮಿ ಯಮಸಾದನಮ್
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಶತ್ರುತಾಪಕನಾದ ಪರೀಕ್ಷಿತನೇ! ಬಳಿಕ ಶ್ರೀಕೃಷ್ಣ-ಬಲರಾಮರಿಬ್ಬರೂ ಸ್ನಾನಾದಿ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು, ಮಲ್ಲರು ಮಾಡಿದ ತೂರ್ಯ ದುಂದುಭಿಗಳ ಘೋಷವನ್ನು ಕೇಳಿ ರಂಗಭೂಮಿಯನ್ನು ನೋಡಲು ಹೊರಟರು. ॥ ೧ ॥ ಭಗವಾನ್ ಶ್ರೀಕೃಷ್ಣನು ರಂಗ ಭೂಮಿಯ ಮಹಾದ್ವಾರಕ್ಕೆ ಬಂದಾಗ ಅಲ್ಲಿ ಮಾವುತನ ಪ್ರೇರಣೆಯಂತೆ ಕುವಲಯಾಪೀಡ ಎಂಬ ಆನೆಯು ನಿಂತಿರುವುದನ್ನು ನೋಡಿದನು. ॥ ೨ ॥ ಆಗ ಭಗವಾನ್ ಶ್ರೀಕೃಷ್ಣನು ನಡುಕಟ್ಟನ್ನು ಸರಿಯಾಗಿ ಬಿಗಿದು, ಗುಂಗುರು ಗುಂಗುರಾದ ಕೂದಲುಗಳನ್ನು ಸರಿಪಡಿಸಿಕೊಂಡು ಮೇಘಗಂಭೀರ ಧ್ವನಿಯಿಂದ ಮಾವುತನಿಗೆ ಹೇಳಿದನು. ॥ ೩. ॥ ಎಲವೋ ಮಾವಟಿಗನೇ! ನಮ್ಮಿಬ್ಬರಿಗೂ ಹೋಗಲು ದಾರಿ ಬಿಡು. ದಾರಿಯನ್ನು ಬಿಟ್ಟು ಅತ್ತಕಡೆ ಹೊರಟು ಹೋಗು. ನೀನು ಆನೆಯನ್ನು ನಿಲ್ಲಿಸಿಕೊಂಡು ಹೀಗೆ ನಿಂತಿದ್ದರೆ ಆನೆಯೊಡನೆ ನಿನ್ನನ್ನೂ ಯಮಸದನಕ್ಕೆ ಅಟ್ಟಿಬಿಡುವೆನು. ॥ ೪ ॥

ಏವಂ ನಿರ್ಭರ್ತ್ಸಿತೋಽಂಬಷ್ಠಃ ಕುಪಿತಃ ಕೋಪಿತಂ ಗಜಮ್ ।
ಚೋದಯಾಮಾಸ ಕೃಷ್ಣಾಯ ಕಾಲಾಂತಕಯಮೋಪಮಮ್
॥ ೫ ॥

ಕರೀಂದ್ರಸ್ತಮಭಿದ್ರುತ್ಯ ಕರೇಣ ತರಸಾಗ್ರಹೀತ್ ।
ಕರಾದ್ವಿಗಲಿತಃ ಸೋಽಮುಂ ನಿಹತ್ಯಾಂಘ್ರಿಷ್ವಲೀಯತ
॥ ೬ ॥

ಸಂಕ್ರುದ್ಧಸ್ತಮಚಕ್ಷಾಣೋ ಘ್ರಾಣದೃಷ್ಟಿಃ ಸ ಕೇಶವಮ್ ।
ಪರಾಮೃಶತ್ಪುಷ್ಕರೇಣ ಸ ಪ್ರಸಹ್ಯ ನಿರ್ಗತಃ
॥ ೭ ॥

ಪುಚ್ಛೇ ಪ್ರಗೃಹ್ಯಾತಿಬಲಂ ಧನುಷಃ ಪಂಚವಿಂಶತಿಮ್ ।
ವಿಚಕರ್ಷ ಯಥಾ ನಾಗಂ ಸುಪರ್ಣ ಇವ ಲೀಲಯಾ
॥ ೮ ॥

ಸ ಪರ್ಯಾವರ್ತಮಾನೇನ ಸವ್ಯದಕ್ಷಿಣತೋಽಚ್ಯುತಃ ।
ಬಭ್ರಾಮ ಭ್ರಾಮ್ಯಮಾಣೇನ ಗೋವತ್ಸೇನೇವ ಬಾಲಕಃ
॥ ೯ ॥

ತತೋಽಭಿಮುಖಮಭ್ಯೇತ್ಯ ಪಾಣಿನಾಽಽಹತ್ಯ ವಾರಣಮ್ ।
ಪ್ರಾದ್ರವನ್ ಪಾತಯಾಮಾಸ ಸ್ಪೃಶ್ಯಮಾನಃ ಪದೇ ಪದೇ
॥ ೧೦ ॥

ಸ ಧಾವನ್ ಕ್ರೀಡಯಾ ಭೂಮೌ ಪತಿತ್ವಾ ಸಹಸೋತ್ಥಿತಃ ।
ತಂ ಮತ್ವಾ ಪತಿತಂ ಕ್ರುದ್ಧೋ ದಂತಾಭ್ಯಾಂ ಸೋಽಹನತ್ಕ್ಷಿತಿಮ್
॥ ೧೧ ॥

ಸ್ವವಿಕ್ರಮೇ ಪ್ರತಿಹತೇಕುಂಜರೇಂದ್ರೋಽತ್ಯಮರ್ಷಿತಃ ।
ಚೋದ್ಯಮಾನೋ ಮಹಾಮಾತ್ರೈಃ ಕೃಷ್ಣಮಭ್ಯದ್ರವದ್ರುಷಾ
॥ ೧೨ ॥

ತಮಾಪತಂತಮಾಸಾದ್ಯ ಭಗವಾನ್ ಮಧುಸೂದನಃ ।
ನಿಗೃಹ್ಯ ಪಾಣಿನಾ ಹಸ್ತಂ ಪಾತಯಾಮಾಸ ಭೂತಲೇ
॥ ೧೩ ॥

ಪತಿತಸ್ಯ ಪದಾಽಽಕ್ರಮ್ಯ ಮೃಗೇಂದ್ರ ಇವ ಲೀಲಯಾ ।
ದಂತಮುತ್ಪಾಟ್ಯ ತೇನೇಭಂ ಹಸ್ತಿಪಾಂಶ್ಚಾಹನದ್ಧರಿಃ
॥ ೧೪ ॥

ಭಗವಾನ್ ಶ್ರೀಕೃಷ್ಣನು ಮಾವಟಿಗನಿಗೆ ಹೀಗೆ ಗದರಿಸಿದಾಗ ಅವನು ಕೋಪದಿಂದ ಕಿಡಿ-ಕಿಡಿಯಾದನು. ಅವನು ಪ್ರಳಯ ಕಾಲದ ಯಮನಂತಿದ್ದ ಕುವಲಯಾಪೀಡ ಆನೆಯನ್ನು ಅಂಕುಶದಿಂದ ತಿವಿದು ಕೆರಳಿಸಿ ಶ್ರೀಕೃಷ್ಣನ ಕಡೆಗೆ ನುಗ್ಗಿಸಿದನು. ॥ ೫ ॥ ಕುವಲಯಾಪೀಡವು ನುಗ್ಗಿ ಹೋಗಿ ಶ್ರೀಕೃಷ್ಣನನ್ನು ಸೊಂಡಿಲಿನಿಂದ ಹಿಡಿದುಕೊಂಡಿತು. ಆದರೆ ಭಗವಂತನು ಸೊಂಡಿನಿಲಿಂದ ನುಣುಚಿಕೊಂಡು ಅದಕ್ಕೆ ಬಲವಾದ ಒಂದು ಏಟನ್ನು ಕೊಟ್ಟು ಅದರ ಕಾಲುಗಳ ನಡುವೆ ಸೇರಿಕೊಂಡನು. ॥ ೬ ॥ ಶ್ರೀಕೃಷ್ಣನನ್ನು ತನ್ನೆದುರಿಗೆ ಕಾಣದೆ ಕುವಲಯಾಪೀಡವು ಕೋಪಗೊಂಡು, ವಾಸನೆಯಿಂದಲೇ ಅರಿತು ತನ್ನ ಸೊಂಡಿಲಿನಿಂದ ಕೃಷ್ಣನನ್ನು ಪುನಃ ಹಿಡಿದುಕೊಂಡಿತು. ಆದರೆ ಭಗವಂತನು ತನ್ನನ್ನು ಬಿಡಿಸಿಕೊಂಡನು. ॥ ೭ ॥ ಬಳಿಕ ಭಗವಂತನು ಆ ಮಹಾ ಬಲಿಷ್ಠವಾದ ಆನೆಯ ಬಾಲವನ್ನು ಹಿಡಿದುಕೊಂಡು-ಗರುಡನು ಸರ್ಪವನ್ನು ಎಳೆದೊಯ್ಯುವಂತೆ ಇಪ್ಪತ್ತೈದು ಮಾರು ಲೀಲಾಜಾಲವಾಗಿ ಹಿಂದಕ್ಕೆ ಸರಸರನೆ ಸೆಳೆದುಕೊಂಡು ಹೋದನು. ॥ ೮ ॥ ಕರುವಿನ ಬಾಲಹಿಡಿದುಕೊಂಡು ಆಡುವ ಹುಡುಗನಂತೆ ಶ್ರೀಕೃಷ್ಣನು ಆದರ ಬಾಲವನ್ನು ಹಿಡಿದುಕೊಂಡು ಎಡಕ್ಕೂ ಬಲಕ್ಕೂ ಎಳೆದಾಡುತ್ತಾ, ತಿರುಗಿಸುತ್ತಾ ಆಟವಾಡತೊಡಗಿನು. ಅದು ಎಡಕ್ಕೆ ತಿರುಗಿ ಕೃಷ್ಣನನ್ನು ಹಿಡಿಯಲು ಮುಂದಾದಾಗ ಅವನು ಬಲಕ್ಕೆ ಹೋಗುತ್ತಾ, ಬಲಕ್ಕೆ ಹಿಡಿಯಲು ಹೋದಾಗ ಎಡಕ್ಕೂ ಹೋಗುತ್ತಿದ್ದನು. ॥ ೯ ॥ ಅನಂತರ ಶ್ರೀಕೃಷ್ಣನು ಆನೆಯ ಮುಂದೆ ಬಂದು ಅದಕ್ಕೆ ಒಂದು ಜೋರಾಗಿ ಗುದ್ದಿದನು ಮತ್ತು ಅದನ್ನು ಬೀಳಿಸಲಿಂದೇ ಅದು ಈಗಲೇ ಆಗಲೋ ಮುಟ್ಟಿಬಿಡುವುದೋ ಎಂಬಂತೆ ಓಡತೊಡಗಿದನು. ಒಮ್ಮೆ ಜೋರಾಗಿ ಓಡುತ್ತಾ ಗಕ್ಕನೆ ನಿಂತು ಬಿಡುವನು. ಆನೆಯು ಇನ್ನೇನೋ ಹಿಡಿದು ಬಿಡುವುದೋ ಎಂದಾಗ ದೂರಕ್ಕೆ ಓಡಿದನು. ॥ ೧೦ ॥ ಭಗವಾನ್ ಶ್ರೀಕೃಷ್ಣನು ಓಡುತ್ತಾ-ಓಡುತ್ತಾ ಒಮ್ಮೆ ಲೀಲೆಯಿಂದ ನೆಲದಲ್ಲಿ ಬಿದ್ದವನಂತೆ ನಟಿಸಿದನು ಹಾಗೂ ತಕ್ಷಣ ಎದ್ದು ಓಡುವನು. ಆಗ ಆ ಕುವಲಯಾಪೀಡವು ಸಿಟ್ಟಿನಿಂದ ಕೆರಳಿತ್ತು. ಕೃಷ್ಣನು ಬಿದ್ದಿರುವನೆಂದು ತಿಳಿದು ಜೋರಾಗಿ ತನ್ನ ದಂತಗಳಿಂದ ನೆಲಕ್ಕೆ ತಿವಿಯಿತು. ॥ ೧೧ ॥ ಆದರೆ ಆನೆಯ ಆಕ್ರಮಣವು ವ್ಯರ್ಥವಾಯಿತು. ಆಗ ಅದು ಇನ್ನೂ ಕೆರಳಿತು. ಮಾವಟಿಗನು ಅಂಕುಶದಿಂದ ತಿವಿಯುತ್ತಿರುವಾಗ ಕ್ರೋಧಗೊಂಡು ಶ್ರೀಕೃಷ್ಣನ ಮೇಲೆ ಮುಗಿದುಬಿತ್ತು. ॥ ೧೨ ॥ ಭಗವಾನ್ ಮಧುಸೂದನನು ಆನೆಯು ತನ್ನ ಕಡೆಗೆ ಮುನ್ನುಗ್ಗುತ್ತಿರುವುದನ್ನು ನೋಡಿ, ಅದರ ಬಳಿಗೆ ಹೋಗಿ ತನ್ನ ಒಂದೇ ಕೈಯಿಂದ ಅದರ ಸೊಂಡಿಲನ್ನು ಹಿಡಿದು ನೆಲದ ಮೇಲೆ ಕೆಡವಿದನು. ॥ ೧೩. ॥ ಅದು ನೆಲಕ್ಕೆ ಉರುಳಿದೊಡನೆಯೇ ಭಗವಂತನು ಲೀಲಾಜಾಲವಾಗಿ ಸಿಂಹದಂತೆ ಆನೆಯನ್ನು ಕಾಲಿನಿಂದ ತುಳಿದು ಅದರ ದಂತಗಳನ್ನು ಕಿತ್ತು ಆ ದಂತದಿಂದಲೇ ಆ ಆನೆಯನ್ನು ಮತ್ತು ಮಾವುತನನ್ನು ಸಂಹರಿಸಿದನು. ॥ ೧೪ ॥

ಮೃತಕಂ ದ್ವಿಪಮುತ್ಸೃಜ್ಯ ದಂತಪಾಣಿಃ ಸಮಾವಿಶತ್ ।
ಅಂಸನ್ಯಸ್ತವಿಷಾಣೋಽಸೃಙ್ಮದಬಿಂದುಭಿರಂಕಿತಃ ।
ವಿರೂಢಸ್ವೇದಕಣಿಕಾವದನಾಂಬುರುಹೋ ಬಭೌ
॥ ೧೫ ॥

ವೃತೌ ಗೋಪೈಃ ಕತಿಪಯೈರ್ಬಲದೇವಜನಾರ್ದನೌ ।
ರಂಗಂ ವಿವಿಶತೂ ರಾಜನ್ ಗಜದಂತವರಾಯುಧೌ
॥ ೧೬ ॥

ಮಲ್ಲಾನಾಮಶನಿರ್ನೃಣಾಂ ನರವರಃ
ಸ್ತ್ರೀಣಾಂ ಸ್ಮರೋ ಮೂರ್ತಿಮಾನ್
ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ
ಶಾಸ್ತಾ ಸ್ವಪಿತ್ರೋಃ ಶಿಶುಃ ।
ಮೃತ್ಯುರ್ಭೋಜಪತೇರ್ವಿರಾಡವಿದುಷಾಂ
ತತ್ತ್ವಂ ಪರಂ ಯೋಗಿನಾಂ
ವೃಷ್ಣೀನಾಂ ಪರದೇವತೇತಿ ವಿದಿತೋ
ರಂಗಂ ಗತಃ ಸಾಗ್ರಜಃ ॥ ೧೭ ॥

ಹತಂ ಕುವಲಯಾಪೀಡಂ ದೃಷ್ಟ್ವಾ ತಾವಪಿ ದುರ್ಜಯೌ ।
ಕಂಸೋ ಮನಸ್ಯಪಿ ತದಾ ಭೃಶಮುದ್ವಿವಿಜೇ ನೃಪ
॥ ೧೮ ॥

ತೌ ರೇಜತೂ ರಂಗಗತೌ ಮಹಾಭುಜೌ
ವಿಚಿತ್ರವೇಷಾಭರಣಸ್ರಗಂಬರೌ ।
ಯಥಾ ನಟಾವುತ್ತಮವೇಷಧಾರಿಣೌ
ಮನಃ ಕ್ಷಿಪಂತೌ ಪ್ರಭಯಾ ನಿರೀಕ್ಷತಾಮ್ ॥ ೧೯ ॥

ನಿರೀಕ್ಷ್ಯ ತಾವುತ್ತಮಪೂರುಷೌ ಜನಾ
ಮಂಚಸ್ಥಿತಾ ನಾಗರರಾಷ್ಟ್ರಕಾ ನೃಪ ।
ಪ್ರಹರ್ಷವೇಗೋತ್ಕಲಿತೇಕ್ಷಣಾನನಾಃ
ಪಪುರ್ನ ತೃಪ್ತಾ ನಯನೈಸ್ತದಾನನಮ್ ॥ ೨೦ ॥

ಪರೀಕ್ಷಿತನೇ ! ಬಳಿಕ ಭಗವಾನ್ ಶ್ರೀಕೃಷ್ಣನು ಸತ್ತುಹೋದ ಆನೆಯನ್ನು ಅಲ್ಲಿಯೇ ಬಿಟ್ಟು ಅದರ ದಂತವನ್ನು ಕೈಯಲ್ಲಿ ಹಿಡಿದುಕೊಂಡೇ ರಂಗಮಂಟಪವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಶ್ರೀಕೃಷ್ಣನು ಆನೆಯ ದಂತವನ್ನು ಹೆಗಲಮೇಲೆ ಇಟ್ಟುಕೊಂಡಿದ್ದನು. ಅವನ ಶರೀರವು ಮದೋದಕದ ಮತ್ತು ರಕ್ತದ ಬಿಂದುಗಳಿಂದ ಸುಶೋಭಿತವಾಗಿತ್ತು. ಶ್ರೀಕೃಷ್ಣನ ಮುಖಾರವಿಂದವು ಮತ್ತಿನಂತಹ ಬೆವರಿನ ಹನಿಗಳಿಂದ ಸಮಲಂಕೃತವಾಗಿತ್ತು. ॥ ೧೫ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಿಬ್ಬರ ಕೈಗಳಲ್ಲಿಯೂ ಕುವಲಯಾಪೀಡದ ದೊಡ್ಡ ದೊಡ್ಡದಾದ ದಂತಗಳು ಶಸ್ತ್ರಗಳಂತೆ ಸುಶೋಭಿತವಾಗಿದ್ದವು. ಜೊತೆಗೆ ಕೆಲವು ಗೋಪಬಾಲಕರು ಅವರೊಂದಿಗೆ ನಡೆದು ಬರುತ್ತಿದ್ದರು. ಹೀಗೆ ಅವರು ರಂಗಭೂಮಿಯನ್ನು ಪ್ರವೇಶಿದರು. ॥ ೧೬ ॥ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ರಂಗಸ್ಥಳವನ್ನು ಪ್ರವೇಶಿಸುವಾಗ ಅವರು – ಜಟ್ಟಿಗಳಿಗೆ ಸಿಡಿಲಿನ ಸ್ವರೂಪದಿಂದಲೂ, ಸಾಧಾರಣ ಮನುಷ್ಯರಿಗೆ ನರಶ್ರೇಷ್ಠನಂತೆಯೂ, ಸ್ತ್ರೀಯರಿಗೆ ಮೂರ್ತಿವೆತ್ತ ಮನ್ಮಥನಂತೆಯೂ, ಗೋಪಾಲಕರಿಗೆ ಸ್ವಜನನಂತೆಯೂ, ದುಷ್ಟರಾಜರಿಗೆ ಶಿಕ್ಷಕನಂತೆಯೂ, ತಂದೆ ತಾಯಿಯರಂತಿದ್ದವರಿಗೆ ಮಗನಂತೆಯೂ, ಕಂಸನಿಗೆ ಮೃತ್ಯುವಿನಂತೆಯೂ, ಅಜ್ಞಾನಿಗಳಿಗೆ ವಿರಾಟಪುರುಷನಾಗಿಯೂ, ಯೋಗಿಗಳಿಗೆ ಪರತತ್ತ್ವವಾಗಿಯೂ, ಭಕ್ತಶಿರೋಮಣಿಗಳಾದ ವೃಷ್ಣಿವಂಶೀಯರಿಗೆ ತಮ್ಮ ಇಷ್ಟ ದೇವರಂತೆಯೂ ಕಂಡುಬಂದರು. (ಎಲ್ಲರೂ ತಮ್ಮ-ತಮ್ಮ ಭಾವಕ್ಕನುಸಾರ ಕ್ರಮವಾಗಿ ರೌದ್ರ, ಅದ್ಭುತ, ಶೃಂಗಾರ, ಹಾಸ್ಯ, ವೀರ, ವಾತ್ಸಲ್ಯ, ಭಯಾನಕ, ಬೀಭತ್ಸ, ಶಾಂತ ಮತ್ತು ಪ್ರೇಮಭಕ್ತಿ ರಸಗಳನ್ನು ಅನುಭವಿಸಿದರು.) ॥ ೧೭ ॥ ರಾಜೇಂದ್ರ ! ಕಂಸನಾದರೋ ಅತ್ಯಂತ ವೀರನೂ, ಧೀರನೂ ಆಗಿದ್ದರೂ ಇವರಿಬ್ಬರೂ ಕುವಲಯಾಪೀಡವನ್ನು ಕೊಂದುದನ್ನು ನೋಡಿದಾಗ, ಇವರನ್ನು ಗೆಲ್ಲುವುದು ಬಹಳ ಕಷ್ಟಕರವಾಗಿದೆ ಎಂಬುದು ಮನಸ್ಸಿಗೆ ಅನಿಸಿತು. ಇದರಿಂದ ಅವನು ಬಹಳವಾಗಿ ಗಾಬರಿಗೊಂಡನು. ॥ ೧೮ ॥ ಶ್ರೀಕೃಷ್ಣ-ಬಲರಾಮರು ದೀರ್ಘ ಬಾಹುಗಳಾಗಿದ್ದರು. ಪುಷ್ಪಗಳ ಹಾರಗಳಿಂದ, ವಸ್ತ್ರ ಆಭೂಷಣಗಳಿಂದ ಅವರ ವೇಷವು ವಿಚಿತ್ರವಾಗಿತ್ತು. ಉತ್ತಮವಾದ ವೇಷವನ್ನು ಧರಿಸಿ ಇಬ್ಬರು ನಟರು ಅಭಿನಯಿಸಲು ಬಂದಿರುವರೋ ಎಂದೆನಿಸುತ್ತಿತ್ತು. ನೋಡುಗರ ಕಣ್ಣುಗಳು ಅವರಲ್ಲೇ ನೆಟ್ಟು ಬಿಡುತ್ತಿದ್ದವು. ಅವರೂ ಕೂಡ ತಮ್ಮ ಪ್ರಭೆಯಿಂದ ಅವರ ಮನಸ್ಸನ್ನು ಅಪಹರಿಸಿಬಿಡುತ್ತಿದ್ದರು. ಹೀಗೆ ಅವರಿಬ್ಬರೂ ರಂಗಸ್ಥಳದಲ್ಲಿ ಶೋಭಾಯಮಾನರಾದರು. ॥ ೧೯ ॥ ಪರೀಕ್ಷಿತನೇ ! ಮಂಚಗಳಲ್ಲಿ ಕುಳಿತಿದ್ದ ಮಥುರೆಯ ನಾಗರೀಕರೂ, ರಾಷ್ಟ್ರದ ಜನ ಸಮುದಾಯವೂ ಪುರುಷಶ್ರೇಷ್ಠರಾದ ಬಲರಾಮ-ಶ್ರೀಕೃಷ್ಣರನ್ನು ನೋಡಿ ಅತ್ಯಂತ ಪ್ರಸನ್ನರಾದರು. ಹರ್ಷೋತ್ಕರ್ಷದಿಂದಾಗಿ ಅವರ ಮುಖಿಗಳೂ, ಕಣ್ಣುಗಳೂ, ಕಮಲದಂತೆ ಅರಳಿದವು. ದುಂಬಿಗಳಂತಿದ್ದ ಕಣ್ಣುಗಳಿಂದ ರಾಮ-ಕೃಷ್ಣರ ಮುಖಿಮಧುವನ್ನು ಕುಡಿದಷ್ಟೂ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ॥ ೨೦ ॥

ಪ್ರಿಯಂ ರಾಜ್ಞಃ ಪ್ರಕುರ್ವಂತ್ಯಃ ಶ್ರೇಯೋ ವಿಂದಂತಿ ವೈ ಪ್ರಜಾಃ ।
ಮನಸಾ ಕರ್ಮಣಾ ವಾಚಾ ವಿಪರೀತಮತೋಽನ್ಯಥಾ
॥ ೩೩ ॥

ನೋಡಿರಪ್ಪಾ! ಮನ, ವಚನ, ಕರ್ಮದಿಂದ ರಾಜನಿಗೆ ಪ್ರಿಯವನ್ನುಂಟುಮಾಡುವ ಪ್ರಜೆಗಳು ಶ್ರೇಯಸ್ಸನ್ನು ಪಡೆಯುತ್ತಾರೆ. ರಾಜನ ಇಚ್ಛೆಗೆ ವಿರುದ್ಧವಾಗಿ ನಡೆಯುವರು ಶಿಕ್ಷೆಗೆ ಗುರಿಯಾಗುತ್ತಾರೆ. ॥ ೩೩ ॥

ನಿತ್ಯಂ ಪ್ರಮುದಿತಾ ಗೋಪಾ ವತ್ಸಪಾಲಾ ಯಥಾ ಸ್ಫುಟಮ್ ।
ವನೇಷು ಮಲ್ಲಯುದ್ಧೇನ ಕ್ರೀಡಂತಶ್ಚಾರಯಂತಿ ಗಾಃ
॥ ೩೪ ॥

ಹಸುಗಳನ್ನು ಮತ್ತು ಕರುಗಳನ್ನು ಮೇಯಿಸುವ ಗೊಲ್ಲರು ದಿನಾಲೂ ಆನಂದದಿಂದ ಕಾಡಿನಲ್ಲಿ ಕುಸ್ತಿಗಳನ್ನಾಡುತ್ತಾ ಹಸುಗಳನ್ನು ಮೇಯಿಸುತ್ತಾ ಇರುತ್ತಾರೆ ಎಂಬುದನ್ನು ಎಲ್ಲರೂ ಬಲ್ಲರು. ॥ ೩೪ ॥

ತಸ್ಮಾದ್ರಾಜ್ಞಃ ಪ್ರಿಯಂ ಯೂಯಂ ವಯಂ ಚ ಕರವಾಮ ಹೇ ।
ಭೂತಾನಿ ನಃ ಪ್ರಸೀದಂತಿ ಸರ್ವಭೂತಮಯೋ ನೃಪಃ
॥ ೩೫ ॥

ಆದಕ್ಕಾಗಿ ಬನ್ನಿರಿ, ನಾವು-ನೀವು ಸೇರಿ ಮಹಾರಾಜರನ್ನು ಸಂತೋಷಪಡಿಸಲಿಕ್ಕಾಗಿ ಕುಸ್ತಿಯನ್ನಾಡುವಾ. ಹೀಗೆ ಮಾಡುವುದರಿಂದ ಎಲ್ಲ ಪ್ರಾಣಿಗಳು ನಮ್ಮ ಮೇಲೆ ಪ್ರಸನ್ನರಾಗುವರು. ಏಕೆಂದರೆ, ರಾಜನು ಸಮಸ್ತ ಪ್ರಜೆಯ ಪ್ರತೀಕನಾಗಿದ್ದಾನೆ. ॥ ೩೫ ॥

ತನ್ನಿಶಮ್ಯಾಬ್ರವೀತ್ ಕೃಷ್ಣೋ ದೇಶಕಾಲೋಚಿತಂ ವಚಃ ।
ನಿಯುದ್ಧಮಾತ್ಥನೋಽಭೀಷ್ಟಂ ಮನ್ಯಮಾನೋಽಭಿನಂದ್ಯ ಚ
॥ ೩೬ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನಾದರೋ ಇವರೊಂದಿಗೆ ದ್ವಂದ್ವಯುದ್ಧವನ್ನೇ ಬಯಸುತ್ತಿದ್ದನು. ಆದಕ್ಕಾಗಿ ಅವನು ಚಾಣೂರನ ಮಾತನ್ನು ಕೇಳಿ ಅನುಮೋದಿಸುತ್ತಾ ದೇಶ-ಕಾಲಕ್ಕೆ ಅನುಸಾರವಾಗಿ ಇಂತೆಂದನು. ॥ ೩೬ ॥ ಎಲೈ ಚಾಣೂರನೇ! ನಾವೂ ಕೂಡ ಈ ಭೋಜರಾಜ ಕಂಸನ ವನವಾಸೀ ಪ್ರಜೆಗಳಾಗಿ ಇದ್ದೇವೆ. ನಾವು ಇವನನ್ನು ಸಂತೋಷ ಪಡಿಸಲು ಪ್ರಯತ್ನಿಸುವುದು ಆವಶ್ಯಕವಾಗಿದೆ. ಇದರಿಂದ ನಮಗೂ ಶ್ರೇಯಸ್ಸೂ ಇದೆ. ॥ ೩೭ ॥ ಆದರೆ ಚಾಣೂರನೇ! ನಾವುಗಳು ಇನ್ನೂ ಬಾಲಕರಾಗಿದ್ದೇವೆ. ಆದಕ್ಕಾಗಿ ನಾವು ನಮ್ಮ ಸಮಾನರಾದ ಬಲವುಳ್ಳ ಬಾಲಕರೊಂದಿಗೆ ಕುಸ್ತಿಯಾಡುವೆವು. ಕುಸ್ತಿಯು ಸಮಾನ ಬಲಿಷ್ಠರೊಂದಿಗೆ ನಡೆಯಬೇಕು. ಇದರಿಂದ ನೋಡುವ ಸಭಾಸದರಿಗೆ ಅನ್ಯಾಯವನ್ನು ಸಮರ್ಥಿಸುವ ಪಾಪವು ತಟ್ಟಲಾರದು. ॥ ೩೮ ॥

ಪ್ರಜಾ ಭೋಜಪತೇರಸ್ಯ ವಯಂ ಚಾಪಿ ವನೇಚರಾಃ ।
ಕರವಾಮ ಪ್ರಿಯಂ ನಿತ್ಯಂ ತನ್ನಃ ಪರಮನುಗ್ರಹಃ
॥ ೩೭ ॥

ಬಾಲಾ ವಯಂ ತುಲ್ಯಬಲೈಃ ಕ್ರೀಡಿಷ್ಯಾಮೋ ಯಥೋಚಿತಮ್ ।
ಭವೇನ್ನಿಯುದ್ಧಂ ಮಾಧರ್ಮಃ ಸ್ಪಶೇನ್ಮಲ್ಲ ಸಭಾಸದಃ
॥ ೩೮ ॥

ಚಾಣೂರನು ಹೇಳಿದನು – ಅಯ್ಯಾ! ನೀನು ಮತ್ತು ಈ ಬಲರಾಮನು ಬಾಲಕರೂ ಅಲ್ಲ ಕಿಶೋರರೂ ಅಲ್ಲ. ನೀವಿಬ್ಬರೂ ಬಲಿಷ್ಠರಲ್ಲಿ ಶ್ರೇಷ್ಠರಾಗಿರುವಿರಿ. ನೀವು ಇದೀಗಲೇ ಸಾವಿರ ಆನೆಗಳ ಬಲವುಳ್ಳ ಕುವಲಯಾಪೀಡವನ್ನು ಲೀಲಾಜಾಲವಾಗಿ ಕೊಂದು ಹಾಕಿರುವಿರಿ. ॥ ೩೯ ॥ ಆದಕ್ಕಾಗಿ ನೀವಿಬ್ಬರೂ ನಮ್ಮಂತಹ ಬಲಿಷ್ಠರೊಂದಿಗೆ ಕಾದಾಡಬೇಕು. ಇದರಲ್ಲಿ ಅನ್ಯಾಯದ ಯಾವ ಮಾತೂ ಇಲ್ಲ. ಆದುದರಿಂದ ಎಲೈ ಕೃಷ್ಣನೇ! ನೀನು ನನ್ನೊಂದಿಗೆ ನಿನ್ನ ಪರಾಕ್ರಮವನ್ನು ತೋರಬೇಕು. ಬಲರಾಮನು ಮುಷ್ಟಿಕನೊಂದಿಗೆ ಕಾದಾಡಲಿ. ॥ ೪೦ ॥

ಚಾಣೂರ ಉವಾಚ

ನ ಬಾಲೋ ನ ಕಿಶೋರಸ್ತ್ವಂ ಬಲಶ್ಚ ಬಲಿನಾಂ ವರಃ ।
ಲೀಲಯೇಭೋ ಹತೋ ಯೇನ ಸಹಸ್ರದ್ವಿಪಸತ್ತ್ವಭೃತ್
॥ ೩೯ ॥

ತಸ್ಮಾದ್ಭವದ್ಭ್ಯಾಂ ಬಲಿಭಿರ್ಯೋದ್ಧವ್ಯಂ ನಾನಯೋಽತ್ರ ವೈ ।
ಮಯಿ ವಿಕ್ರಮ ವಾರ್ಷ್ಣೇಯ ಬಲೇನ ಸಹ ಮುಷ್ಟಿಕಃ
॥ ೪೦ ॥

ನಲವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೪೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಕುವಲಯಾಪೀಡವಧೋ ನಾಮ ತ್ರಿಚತ್ವಾರಿಂಶೋಽಧ್ಯಾಯಃ ॥ ೪೩ ॥

ಪಿಬಂತ ಇವ ಚಕ್ಷುರ್ಭ್ಯಾಂ ಲಿಹಂತ ಇವ ಜಿಹ್ವಯಾ ।
ಜಿಘ್ರಂತ ಇವ ನಾಸಾಭ್ಯಾಂ ಶ್ಲಿಷ್ಯಂತ ಇವ ಬಾಹುಭಿಃ
॥ ೨೧ ॥

ಊಚುಃ ಪರಸ್ಪರಂ ತೇ ವೈ ಯಥಾದೃಷ್ಟಂ ಯಥಾಶ್ರುತಮ್ ।
ತದ್ರೂಪಗುಣಮಾಧುರ್ಯಪ್ರಾಗಲ್ಭ್ಯಸ್ಮಾರಿತಾ ಇವ
॥ ೨೨ ॥

ಏತೌ ಭಗವತಃ ಸಾಕ್ಷಾದ್ಭರೇರ್ನಾರಾಯಣಸ್ಯ ಹಿ ।
ಅವತೀರ್ಣಾವಿಹಾಂಶೇನ ವಸುದೇವಸ್ಯ ವೇಶ್ಮನಿ
॥ ೨೩ ॥

ಏಷ ವೈ ಕಿಲ ದೇವಕ್ಯಾಂ ಜಾತೋ ನೀತಶ್ಚ ಗೋಕುಲಮ್ ।
ಕಾಲಮೇತಂ ವಸನ್ ಗೂಢೋ ವವೃಧೇ ನಂದವೇಶ್ಮನಿ
॥ ೨೪ ॥

ಪೂತನಾನೇನ ನೀತಾಂತಂ ಚಕ್ರವಾತಶ್ಚ ದಾನವಃ ।
ಅರ್ಜುನೌ ಗುಹ್ಯಕಃ ಕೇಶೀ ಧೇನುಕೋಽನ್ಯೇ ಚ ತದ್ವಿಧಾಃ
॥ ೨೫ ॥

ಗಾವಃ ಸಪಾಲಾ ಏತೇನ ದಾವಾಗ್ನೇಃ ಪರಿಮೋಚಿತಾಃ ।
ಕಾಲಿಯೋ ದಮಿತಃ ಸರ್ಪ ಇಂದ್ರಶ್ಚ ವಿಮದಃ ಕೃತಃ
॥ ೨೬ ॥

ಸಪ್ತಾಹಮೇಕಹಸ್ತೇನ ಧೃತೋಽದ್ರಿಪ್ರವರೋಽಮುನಾ ।
ವರ್ಷವಾತಾಶನಿಭ್ಯಶ್ಚ ಪರಿತ್ರಾತಂ ಚ ಗೋಕುಲಮ್
॥ ೨೭ ॥

ಗೋಪ್ಯೋಽಸ್ಯ ನಿತ್ಯಮುದಿತಹಸಿತಪ್ರೇಕ್ಷಣಂ ಮುಖಿಮ್ ।
ಪಶ್ಯಂತ್ಯೋ ವಿವಿಧಾಂಸ್ತಾಪಾಂಸ್ತರಂತಿ ಸ್ಮಾಶ್ರಮಂ ಮುದಾ
॥ ೨೮ ॥

ವದಂತ್ಯನೇನ ವಂಶೋಽಯಂ ಯದೋಃ ಸುಬಹುವಿಶ್ರುತಃ ।
ಶ್ರಿಯಂ ಯಶೋ ಮಹತ್ತ್ವಂ ಚ ಲಪ್ಸ್ಯತೇ ಪರಿರಕ್ಷಿತಃ
॥ ೨೯ ॥

ಅಯಂ ಚಾಸ್ಯಾಗ್ರಜಃ ಶ್ರೀಮಾನ್ ರಾಮಃ ಕಮಲಲೋಚನಃ ।
ಪ್ರಲಂಬೋ ನಿಹತೋ ಯೇನ ವತ್ಸಕೋ ಯೇ ಬಕಾದಯಃ
॥ ೩೦ ॥

ಜನೇಷ್ವೇವಂ ಬ್ರುವಾಣೇಷು ತೂರ್ಯೇಷು ನಿನದತ್ಸು ಚ ।
ಕೃಷ್ಣರಾಮೌ ಸಮಾಭಾಷ್ಯ ಚಾಣೂರೋ ವಾಕ್ಯಮಬ್ರವೀತ್
॥ ೩೧ ॥

ಹೇ ನಂದಸೂನೋ ಹೇ ರಾಮ ಭವಂತೌ ವೀರಸಮ್ಮತೌ ।
ನಿಯುದ್ಧಕುಶಲೌ ಶ್ರುತ್ವಾ ರಾಜ್ಞಾಽಽಹೂತೌ ದಿದೃಕ್ಷುಣಾ
॥ ೩೨ ॥

ಅವರೆಲ್ಲರೂ ಇವರಿಬ್ಬರನ್ನೂ ಕಣ್ಣುಗಳಿಂದಲೇ ಕುಡಿದುಬಿಡುವರೋ, ನಾಲಿಗೆಯಿಂದ ನೆಕ್ಕುತ್ತಿರುವರೋ, ಮೂಗಿನಿಂದ ಮೂಸುತ್ತಿರುವರೋ, ಬಾಹುಗಳಿಂದ ಅಪ್ಪಿಕೊಳ್ಳುವರೋ ಎಂದೆನಿಸುತ್ತಿತ್ತು. ॥ ೨೧ ॥ ಅವರ ಸೌಂದರ್ಯ, ಗುಣ, ಮಾಧುರ್ಯ ಮತ್ತು ನಿರ್ಭಯತೆಯಿಂದ ದರ್ಶಕರಿಗೆ ಅವರ ಲೀಲೆಗಳು ಸ್ಮರಣೆಗೆ ಬಂದವು ಹಾಗೂ ಅವರೆಲ್ಲರೂ ಪರಸ್ಪರವಾಗಿ ಕೇಳಿದ-ನೋಡಿದ ಮಾತುಗಳನ್ನು ಆಡಿಕೊಳ್ಳತೊಡಗಿದರು. ॥ ೨೨ ॥ ಒಬ್ಬನು ಹೇಳಿದನು - ಗೆಳೆಯರೇ! ಇವರಿಬ್ಬರೂ ಸಾಕ್ಷಾತ್ ಭಗವಾನ್ ನಾರಾಯಣನ ಅಂಶರೇ ಆಗಿದ್ದಾರೆ. ಈ ಭೂಮಿಯಲ್ಲಿ ವಸುದೇವನ ಮನೆಯಲ್ಲಿ ಅವತರಿಸಿರುವರು. ॥ ೨೩ ॥ ಮತ್ತೊಬ್ಬನು ಬೆರಳಿಂದ ಅವರನ್ನು ತೋರುತ್ತಾ ಹೇಳುತ್ತಾನೆ - ಈ ಶ್ಯಾಮಸುಂದರ ದೇವಕಿದೇವಿಯ ಗರ್ಭದಿಂದ ಹುಟ್ಟಿದವನು. ಹುಟ್ಟಿದೊಡನೆಯೇ ವಸುದೇವನು ಇವನನ್ನು ನಂದಗೋಕುಲಕ್ಕೆ ತಲುಪಿಸಿದನು. ಇಷ್ಟು ದಿವಸಗಳವರೆಗೆ ಇವನು ಅಡಗಿದ್ದು ನಂದಗೋಪನ ಮನೆಯಲ್ಲಿ ಬೆಳೆದು ಇಷ್ಟು ದೊಡ್ಡವನಾಗಿರುವನು. ॥ ೨೪ ॥ ಪೂತನೆ, ತೃಣಾವರ್ತ, ಶಂಖಚೂಡ, ಕೇಶಿ ಮತ್ತು ಧೇನುಕ ಮುಂತಾದವರನ್ನು ಹಾಗೂ ಇತರ ದುಷ್ಟರಾಕ್ಷಸರನ್ನು ವಧಿಸಿದುದೂ, ಯಮಳಾರ್ಜುನರ ಉದ್ಧಾರವನ್ನು ಮಾಡಿದುದೂ ಇವನೇ. ॥ ೨೫ ॥ ಗೋವುಗಳನ್ನು ಮತ್ತು ಗೋಪಬಾಲಕರನ್ನು ದಾವಾನಲದ ಜ್ವಾಲೆಯಿಂದ ಇವನೇ ಕಾಪಾಡಿದ್ದನು. ಕಾಲಿಯ ಸರ್ಪವನ್ನು ದಮನ ಮಾಡಿ, ಇಂದ್ರನ ಗರ್ವವನ್ನು ಮುರಿದವನೂ ಇವನೇ. ॥ ೨೬ ॥ ಮತ್ತೊಬ್ಬನು ಹೇಳಿದನು - ಏಳು ದಿನಗಳವರೆಗೆ ಒಂದೇ ಕೈಯ್ಯಮೇಲೆ ಗಿರಿರಾಜ ಗೋವರ್ಧನವನ್ನು ಎತ್ತಿ ಹಿಡಿದು, ಬಿರುಗಾಳಿ, ಮಳೆ, ಸಿಡಿಲುಗಳಿಂದ ಗೋಕುಲದ ಜನರನ್ನು ಕಾಪಾಡಿದವನು ಇವನೇ. ॥ ೨೭ ॥ ವ್ರಜದ ಗೋಪಿಯರು ಇವನ ಮಂದ ಮಧುರ ಮುಗುಳ್ನಗೆಯಿಂದ, ಕುಡಿನೋಟದಿಂದ, ಸದಾಕಾಲ ಏಕರಸವಾಗಿರುವ ಪ್ರಸನ್ನ ಮುಖಾರವಿಂದದ ದರ್ಶನದಿಂದ ಆನಂದಿತರಾಗುತ್ತಿದ್ದರು ಮತ್ತು ಸುಲಭವಾಗಿ ಎಲ್ಲ ಬಗೆಯ ತಾಪಗಳಿಂದ ಮುಕ್ತರಾಗಿಬಿಡುತ್ತಿದ್ದರು. ॥ ೨೮ ॥ ಇವನು ಯದು ವಂಶವನ್ನು ರಕ್ಷಿಸುವನೆಂದು, ಈ ವಿಖ್ಯಾತವಾದ ವಂಶವು ಇವನಿಂದ ಸಂಪತ್ಸಮೃದ್ಧಿಯನ್ನು, ಯಶಸ್ಸನ್ನೂ, ಗೌರವವನ್ನು ಪಡೆದುಕೊಳ್ಳುವುದೆಂದೂ ವಿದ್ವಾಂಸರು ಹೇಳಿದ್ದಾರಂತೆ. ॥ ೨೯ ॥ ಇನ್ನೊಬ್ಬನು ಹೇಳಿದನು - ಈ ಶ್ಯಾಮಸುಂದರನ ಬಳಿಯಲ್ಲಿ ನಿಂತಿರುವವನು ಇವನಣ್ಣನಾದ ಕಮಲನಯನ ಬಲರಾಮದೇವನಾಗಿದ್ದಾನೆ. ಇವನೇ ಪ್ರಲಂಬಾಸುರ, ವತ್ಸಾಸುರ, ಬಕಾಸುರ ಮುಂತಾದವರನ್ನು ಕೊಂದಿರುವನೆಂದು ಯಾರದೋ ಬಾಯಿಂದ ಕೇಳಿದ್ದೇವೆ. ॥ ೩೦ ॥

ದರ್ಶಕರಲ್ಲಿ ಹೀಗೆ ಚರ್ಚೆ ನಡೆಯುತ್ತಿದ್ದಾಗ, ರಂಗಸ್ಥಳದಲ್ಲಿ ತುತ್ತೂರಿ, ಭೇರಿಗಳೂ ಮೊಳಗುತ್ತಿರುವಾಗ ಚಾಣೂರನು ಶ್ರೀಕೃಷ್ಣ ಬಲರಾಮರನ್ನು ಸಂಬೋಧಿಸುತ್ತಾ ಹೀಗೆ ಹೇಳಿದನು. ॥ ೩೧ ॥ ನಂದನಂದನರಾದ ಬಲರಾಮ-ಶ್ರೀಕೃಷ್ಣರೇ! ನೀವಿಬ್ಬರೂ ವೀರರಿಗೆ ಆದರಣೀಯರಾಗಿರುವಿರಿ. ನೀವುಗಳು ಕುಸ್ತಿಯಾಡುವುದರಲ್ಲಿ ಅತ್ಯಂತ ನಿಪುಣರಾಗಿರುವಿರೆಂದು ಕೇಳಿ ನಿಮ್ಮ ಮಲ್ಲಯುದ್ಧ ಕೌಶಲ್ಯವನ್ನು ನೋಡುವ ಸಲುವಾಗಿ ನಮ್ಮ ರಾಜನಾದ ಕಂಸನು ನಿಮ್ಮನ್ನು ಕರೆಸಿರುವನು. ॥ ೩೨ ॥

ನಲವತ್ತನಾಲ್ಕನೆಯ ಅಧ್ಯಾಯ

ಚಾಣೂರ, ಮುಷ್ಟಿಕ ಮುಂತಾದ ಮಲ್ಲರ ಹಾಗೂ ಕಂಸನ ವಧೆ

ಶ್ರೀಶುಕ ಉವಾಚ

ಏವಂ ಚರ್ಚಿತಸಂಕಲ್ಪೌ ಭಗವಾನ್ ಮಧುಸೂದನಃ ।
ಆಸಸಾದಾಥ ಚಾಣೂರಂ ಮುಷ್ಟಿಕಂ ರೋಹಿಣೀಸುತಃ
॥ ೧ ॥

ಹಸ್ತಾಭ್ಯಾಂ ಹಸ್ತಯೋರ್ಬದ್ಧ್ವಾ ಪದ್ಭ್ಯಾಮೇವ ಚ ಪಾದಯೋಃ ।
ವಿಚಕರ್ಷತುರನ್ಯೋನ್ಯಂ ಪ್ರಸಹ್ಯ ವಿಜಿಗೀಷಯಾ
॥ ೨ ॥

ಅರತ್ನೀ ದ್ವೇ ಅರತ್ನಿಭ್ಯಾಂ ಜಾನುಭ್ಯಾಂ ಚೈವ ಜಾನುನೀ ।
ಶಿರಃ ಶೀರ್ಷ್ಣೋರಸೋರಸ್ತಾವನ್ಯೋನ್ಯಮಭಿಜಘ್ನತುಃ
॥ ೩ ॥

ಪರಿಭ್ರಾಮಣವಿಕ್ಷೇಪಪರಿರಂಭಾವಪಾತನೈಃ ।
ಉತ್ಸರ್ಪಣಾಪಸರ್ಪಣೈಶ್ಚಾನ್ಯೋನ್ಯಂ ಪ್ರತ್ಯರುಂಧತಾಮ್
॥ ೪ ॥

ಉತ್ಥಾಪನೈರುನ್ನಯನೈಶ್ಚಾಲನೈಃ ಸ್ಥಾಪನೈರಪಿ ।
ಪರಸ್ಪರಂ ಜಿಗೀಷಂತಾವಪಚಕ್ರತುರಾತ್ಮನಃ
॥ ೫ ॥

ತದ್ಬಲಾಬಲವದ್ಯುದ್ಧಂ ಸಮೇತಾಃ ಸರ್ವಯೋಷಿತಃ ।
ಊಚುಃ ಪರಸ್ಪರಂ ರಾಜನ್ ಸಾನುಕಂಪಾ ವರೂಥಶಃ
॥ ೬ ॥

ಮಹಾನಯಂ ಬತಾಧರ್ಮ ಏಷಾಂ ರಾಜಸಭಾಸದಾಮ್ ।
ಯೇ ಬಲಾಬಲವದ್ಯುದ್ಧಂ ರಾಜ್ಞೋಽನ್ವಿಚ್ಛಂತಿ ಪಶ್ಯತಃ
॥ ೭ ॥

ಕ್ವ ವಜ್ರಸಾರಸರ್ವಾಂಗೌ ಮಲ್ಲೌ ಶೈಲೇಂದ್ರಸನ್ನಿಭೌ ।
ಕ್ವ ಚಾತಿಸುಕುಮಾರಾಂಗೌ ಕಿಶೋರೌ ನಾಪ್ತಯೌವನೌ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಚಾಣೂರನೇ ಮೊದಲಾದವರನ್ನು ಸಂಹರಿಸಲು ನಿಶ್ಚಿತವಾದ ಸಂಕಲ್ಪವನ್ನು ಮಾಡಿದನು. ಶ್ರೀಕೃಷ್ಣನು ಚಾಣೂರನೊಡನೆಯೂ ಬಲರಾಮನು ಮುಷ್ಟಿಕನೊಡನೆಯೂ ಮಲ್ಲಯುದ್ಧವನ್ನು ಪ್ರಾರಂಭಿಸಿದನು. ॥ ೧ ॥ ಒಬ್ಬರು ಮತ್ತೊಬ್ಬರನ್ನು ಗೆಲ್ಲಬೇಕೆಂಬ ಛಲದಿಂದ ಪರಸ್ಪರವಾಗಿ ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ತೊಡರುಗಾಲು ಕೊಟ್ಟುಕೊಂಡು ಅಲ್ಲಿಂದಿಲ್ಲಿಗೂ, ಇಲ್ಲಿಂದಲ್ಲಿಗೂ ಎಳೆದಾಡಿದರು. ॥ ೨ ॥ ಅವರು ಕೈಯಿಂದ ಕೈಯನ್ನೂ, ಮೊಣಕಾಲಿನಿಂದ ಮೊಣಕಾಲನ್ನೂ, ತಲೆಯಿಂದ ತಲೆಯನ್ನೂ, ಉಬ್ಬಿದ ಎದೆಯಿಂದ ಎದೆಯನ್ನು ಪರಸ್ಪರ ಪ್ರಹರಿಸುತ್ತಿದ್ದರು. ॥ ೩ ॥ ಹೀಗೆ ಅನೇಕ ಪಟ್ಟುಗಳನ್ನು ಪ್ರಯೋಗಿಸುತ್ತಾ ಎದುರಾಳಿಯನ್ನು ಹಿಡಿದು ಗರ-ಗರನೆ ತಿರುಗಿಸುತ್ತಾ ದೂರಕ್ಕೆ ತಳ್ಳಿಬಿಡುತ್ತಿದ್ದರು. ತೋಳಿನ ಸಂದಿಯಲ್ಲಿ ಅಮುಕುತ್ತಿದ್ದರು. ನೆಲದ ಮೇಲೆ ಬೀಳಿಸಿ ಉರುಳಿಸುತ್ತಿದ್ದರು. ವೇಗದಿಂದ ಮುನ್ನುಗ್ಗಿಬಂದು ಒಬ್ಬರು ಮತ್ತೊಬ್ಬರ ಮೇಲೆ ಬೀಳುತ್ತಿದ್ದರು. ಸಮಯವರಿತು ಹಿಂದಕ್ಕೂ ಸರಿಯುತ್ತಿದ್ದರು. ಕೆಳಕ್ಕೆ ಬಿದ್ದವನ ಕೈ-ಕಾಲುಗಳನ್ನು ಹಿಡಿದು ದರದರನೆ ಎಳೆದಾಡುತ್ತಿದ್ದರು. ಮುದುರಿ ಮಟ್ಟಿಗಟ್ಟಿ ಎತ್ತಿ ಹಾಕುವರು. ಹೆಕ್ಕತ್ತಿನ ಮೇಲೆ ತೊಳ ನಿಟ್ಟು ಬಗ್ಗಿಸುತ್ತಿದ್ದರು. ಎದುರಾಳಿಯು ಹಾಕಿದ ಪಟ್ಟುಗಳಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹೀಗೆ ವಿಜಯಾಕಾಂಕ್ಷಿಗಳಾದ ಅವರು ಸೆಣಸಾಡುತ್ತಿದ್ದರು. ॥ ೪-೫ ॥

ಪರೀಕ್ಷಿತನೇ ! ಆ ಮಲ್ಲಯುದ್ಧವನ್ನು ನೋಡಲು ಹಲವಾರು ಸ್ತ್ರೀಯರೂ ಬಂದಿದ್ದರು. ದೊಡ್ಡ-ದೊಡ್ಡ ಜಟ್ಟಿಗಳೊಡನೆ ಬಾಲಕರಾದ ರಾಮ-ಕೃಷ್ಣರು ಸೆಣಸಾಡುತ್ತಿರುವುದನ್ನು ಅವರು ನೋಡಿದರು. ಅವರ ಅನುಕಂಪವು ಸ್ವಾಭಾವಿಕವಾಗಿ ಶ್ರೀಕೃಷ್ಣ-ಬಲರಾಮರ ಮೇಲಿತ್ತು. ಗುಂಪು-ಗುಂಪಾಗಿ ಸೇರಿ ಹೀಗೆ ಮಾತನಾಡಿಕೊಂಡರು. ॥ ೬ ॥ ನೋಡಿ, ಇಲ್ಲಿ ಕಂಸರಾಜನ ಸಭಾಸದರು ದೊಡ್ಡ ಅನ್ಯಾಯವನ್ನು, ಅಧರ್ಮವನ್ನು ಮಾಡುತ್ತಿದ್ದಾರೆ. ರಾಜನ ಎದುರಿನಲ್ಲೇ ಬಲಿಷ್ಠರಾದ ಜಟ್ಟಿಗಳಿಗೂ, ನಿರ್ಬಲರಾದ ಬಾಲಕರಿಗೂ ಕಾಳಗವಾಗುವುದನ್ನು ಅನುಮೋದಿಸುತ್ತಿದ್ದಾರಲ್ಲ! ಇದು ಎಂತಹ ಖೇದದ ವಿಷಯವಾಗಿದೆ ? ॥ ೭ ॥ ಗೆಳತಿಯರೇ ! ಈ ಜಟ್ಟಿಗಳ ಪ್ರತಿಯೊಂದು ಅಂಗಾಂಗಗಳು ವಜ್ರದಂತೆ ಕಠೋರವಾಗಿವೆ. ನೋಡಲು ಇವರು ಪರ್ವತಗಳಂತೆಯೇ ಇದ್ದಾರೆ. ಆದರೆ ಶ್ರೀಕೃಷ್ಣ-ಬಲರಾಮರು ಇನ್ನೂ ಯೌವನಾವಸ್ಥೆಯನ್ನು ಹೊಂದಿರುವುದಿಲ್ಲ. ಕಿಶೋರಾವಸ್ಥೆಯಲ್ಲೇ ಇದ್ದಾರೆ. ಇವರ ಒಂದೊಂದು ಅಂಗಾಂಗಗಳು ಸುಕೋಮಲವಾಗಿವೆ. ಆ ಬಲಿಷ್ಠರೆಲ್ಲಿ? ಈ ಸುಕೋಮಲರಾದ ಬಾಲಕರೆಲ್ಲಿ ? ॥ ೮ ॥

ಧರ್ಮವ್ಯತಿಕ್ರಮೋ ಹ್ಯಸ್ಯ ಸಮಾಜಸ್ಯ ಧ್ರುವಂ ಭವೇತ್ ।
ಯತ್ರಾಧರ್ಮಃ ಸಮುತ್ತಿಷ್ಠೇನ್ನ ಸ್ಥೇಯಂ ತತ್ರ ಕರ್ಹಿಚಿತ್
॥ ೯ ॥

ಇಲ್ಲಿ ಸೇರಿದ ಎಲ್ಲರಿಗೂ, ನೋಡಿದವರೆಲ್ಲರಿಗೂ ಧರ್ಮೋಲ್ಲಂಘನೆಯ ಪಾಪ ತಟ್ಟುವುದು ಖಂಡಿತ. ಸಖಿಯರೇ! ಈಗ ನಾವು ಇಲ್ಲಿಂದ ಹೋಗುವುದೇ ಯುಕ್ತವಾಗಿದೆ. ಅಧರ್ಮದ ಪ್ರಧಾನತೆ ಇರುವಲ್ಲಿ ಎಂದೂ ಇರಬಾರದೆಂಬುದು ಶಾಸ್ತ್ರದ ನಿಯಮವಾಗಿದೆ. ॥ ೯ ॥ ನೋಡಿ, ಬುದ್ಧಿವಂತರಾದವರು ಸಭಾಸದರ ದೋಷಗಳನ್ನು ತಿಳಿದು-ತಿಳಿದು ಆ ಸಭೆಯಲ್ಲಿ ಹೋಗಿ ಕುಳಿತಿರಬಾರದು ಎಂದು ಶಾಸ್ತ್ರ ಹೇಳುತ್ತದೆ. ಏಕೆಂದರೆ,

ನ ಸಭಾಂ ಪ್ರವಿಶೇತ್ ಪ್ರಾಜ್ಞಃ ಸಭ್ಯದೋಷಾನನುಸ್ಮರನ್ ।
ಅಬ್ರುವನ್ವಿಬ್ರುವನ್ನಜ್ಞೋ ನರಃ ಕಿಲ್ಬಿಷಮಶ್ನುತೇ
॥ ೧೦ ॥

ಅಲ್ಲಿಗೆ ಹೋಗಿ ಆ ಅವಗುಣಗಳನ್ನು ಹೇಳುವುದು, ಸುಮ್ಮನೆ ಇರುವುದು, ಅಥವಾ ನಾನು ಬಲ್ಲವನಲ್ಲ ಎಂದು ಹೇಳುವುದು. ಈ ಮೂರು ವಿಷಯಗಳು ಮನುಷ್ಯನನ್ನು ದೋಷಭಾಗಿಯಾಗಿಸುತ್ತವೆ. ॥ ೧೦ ॥ ಸಖಿಯರೇ! ಶತ್ರುವಿನ ಸುತ್ತಲೂ ಸುತ್ತುತ್ತಿರುವ ಶ್ರೀಕೃಷ್ಣನ ಮುಖಕಮಲವನ್ನಾದರೂ ನೋಡಿರಿ. ಕಾಳಗದ ಆಯಾಸದಿಂದಾಗಿ ತಾವರೆಯ ಎಲೆಯ ಮೇಲಿನ ನೀರಿನ ಬಿಂದುಗಳಂತೆ ಬೆವರಿನ ಬಿಂದುಗಳು ಅವರ ಮುಖದ ಮೇಲೆ ಕಂಗೊಳಿಸುತ್ತಿವೆ. ॥ ೧೧ ॥ ಸಖಿಯರೇ! ಬಲರಾಮನ ಮುಖವನ್ನಾದರೂ ನೋಡುತ್ತಿರುವೆಯಲ್ಲ! ಮುಷ್ಟಿಕನ ಮೇಲಿನ ಕೋಪದಿಂದಾಗಿ ಅವನ ಕಣ್ಣುಗಳು ತಾಮ್ರದಂತೆ ಕೆಂಪಾಗಿವೆ. ಹೀಗಿದ್ದರೂ ಅವನ ಹುಸಿನಗೆಯಿಂದಾಗಿ ಅವನ ಮುಖವು ಅತ್ಯಂತ ಶೋಭಾಯಮಾನವಾಗಿ ಕಾಣುತ್ತದೆ. ॥ ೧೨ ॥ ಗೆಳತಿಯರೇ! ನಿಜವಾಗಿ ಹೇಳುವುದಾದರೆ ವ್ರಜಭೂಮಿಯು ಪರಮಪವಿತ್ರವೂ, ಧನ್ಯತಮವೂ ಆಗಿದೆ. ಏಕೆಂದರೆ, ಅಲ್ಲಿಯೇ ಈ ಪುರುಷೋತ್ತಮರು ಮನುಷ್ಯ ವೇಷದಲ್ಲಿ ಅಡಗಿಕೊಂಡಿರುವರು. ಸಾಕ್ಷಾತ್ ಭಗವಾನ್ ಶಂಕರ ಮತ್ತು ಲಕ್ಷ್ಮೀದೇವಿಯೂ ಯಾರ ಚರಣಗಳನ್ನು ಪೂಜಿಸುತ್ತಿರುವರೋ ಆ ಪ್ರಭುವೇ ಅಲ್ಲಿ ಚಿತ್ರವಿಚಿತ್ರವಾದ ಕಾಡು ಪುಷ್ಪಗಳ ಮಾಲೆಯನ್ನು ಧರಿಸಿಕೊಂಡು ಬಲರಾಮನೊಂದಿಗೆ ಕೊಳಲನ್ನೂದುತ್ತಾ ಹಸುಗಳನ್ನು ಮೇಯಿಸುತ್ತಾ ಬಗೆ-ಬಗೆಯ ಆಟಗಳನ್ನಾಡುತ್ತಾ ಆನಂದದಿಂದ ವಿಚರಿಸುತ್ತಿದ್ದಾನೆ. ॥ ೧೩. ॥ ಸಖೀಯರೇ! ಎರಡು ಕಣ್ಣುಗಳಿಂದಲೂ ನಿತ್ಯನಿರಂತರವಾಗಿ ಶ್ರೀಕೃಷ್ಣನ ರೂಪವೆಂಬ ಮಧುವನ್ನು ಪಾನಮಾಡುತ್ತಿರುವ ಆ ಗೋಪಿಯರು ಎಂತಹ ತಪಸ್ಸನ್ನು ಮಾಡಿದ್ದರೋ ತಿಳಿಯದು. ಅವನ ರೂಪವೆಂಬುದು ಲಾವಣ್ಯದ ಸಾರವಾಗಿದೆ. ಪ್ರಪಂಚದಲ್ಲಿ ಅಥವಾ ಇದರ ಹೊರಗೆ ಯಾರ ರೂಪವೂ ಇವನಿಗೆ ಸಮಾನವಾಗಲಾರದು. ಹೀಗಿರುವಾಗ ಹೆಚ್ಚಿಗೆ ಹೇಗಿದ್ದೀತು ? ಅವನ ದಿವ್ಯ ರೂಪವು ವಸ್ತ್ರಾಭರಣಗಳಿಂದಾಗಲೀ, ಅಂಗರಾಗಗಳಿಂದಾಗಲೀ ಸಿದ್ಧವಾದುದಲ್ಲ, ಸ್ವಯಂ ಸಿದ್ಧವಾದುದು. ಅಂತಹ ಚೇತೋಹಾರಿಯಾದ ರೂಪವನ್ನು ನೋಡುತ್ತಿದ್ದರೆ ಎಂದಿಗೂ ತೃಪ್ತಿಯೇ ಉಂಟಾಗುವುದಿಲ್ಲ. ಏಕೆಂದರೆ, ಇದು ಪ್ರತಿಕ್ಷಣವೂ ಹೊಸದಾಗಿಯೇ ಇರುತ್ತದೆ, ನಿತ್ಯ ನೂತನವಾಗಿದೆ. ಸಮಗ್ರ ಯಶ, ಸೌಂದರ್ಯ ಮತ್ತು ಐಶ್ವರ್ಯ ಇವುಗಳು ಇವನಲ್ಲೇ ಆಶ್ರಿತವಾಗಿರುತ್ತವೆ. ಆದರೆ ಇವನ ದರ್ಶನವಾದರೋ ಇತರರಿಗೆ ದುರ್ಲಭವೇ ಆಗಿದೆ. ಗೋಪಿಯರ ಭಾಗ್ಯದಿಂದಲೇ ಅವರಿಗೆ ಸರ್ವದಾ ಲಭ್ಯವಾಗಿದೆ. ॥ ೧೪ ॥

ವಲ್ಗತಃ ಶತ್ರುಮಭಿತಃ ಕೃಷ್ಣಸ್ಯ ವದನಾಂಬುಜಮ್ ।
ವೀಕ್ಷ್ಯತಾಂ ಶ್ರಮವಾರ್ಯುಪ್ತಂ ಪದ್ಮಕೋಶಮಿವಾಂಬುಭಿಃ
॥ ೧೧ ॥

ಕಿಂ ನ ಪಶ್ಯತ ರಾಮಸ್ಯ ಮುಖಮಾತಾಮ್ರಲೋಚನಮ್ ।
ಮುಷ್ಟಿಕಂ ಪ್ರತಿ ಸಾಮರ್ಷಂ ಹಾಸಸಂರಂಭಶೋಭಿತಮ್
॥ ೧೨ ॥

ಪುಣ್ಯಾ ಬತ ವ್ರಜಭುವೋ ಯದಯಂ ನೃಲಿಂಗ-
ಗೂಢಃ ಪುರಾಣಪುರುಷೋ ವನಚಿತ್ರಮಾಲ್ಯಃ ।
ಗಾಃ ಪಾಲಯನ್ ಸಹಬಲಃ ಕ್ವಣಯಂಶ್ಚ ವೇಣುಂ
ವಿಕ್ರೀಡಯಾಂಚತಿ ಗಿರಿತ್ರರಮಾರ್ಚಿತಾಂಘ್ರಿಃ ॥ ೧೩. ॥

ಗೋಪ್ಯಸ್ತಪಃ ಕಿಮಚರನ್ ಯದಮುಷ್ಯ ರೂಪಂ
ಲಾವಣ್ಯಸಾರಮಸಮೋರ್ಧ್ವಮನನ್ಯಸಿದ್ಧಮ್ ।
ದೃಗ್ಭಿಃ ಪಿಬಂತ್ಯನುಸವಾಭಿನವಂ ದುರಾಪ-
ಮೇಕಾಂತಧಾಮ ಯಶಸಃ ಶ್ರಿಯ ಐಶ್ವರಸ್ಯ ॥ ೧೪ ॥

ಯಾ ದೋಹನೇऽವಹನನೇ ಮಥನೋಪಲೇಪ-
ಪ್ರೇಂಖೇಂಖಿನಾರ್ಭರುದಿತೋಕ್ಷಣಮಾರ್ಜನಾದೌ ।
ಗಾಯಂತಿ ಚೈನಮನುರಕ್ತಧಿಯೋऽಶ್ರುಕಂಠ್ಯೋ
ಧನ್ಯಾ ವ್ರಜಸ್ತ್ರಿಯ ಉರುಕ್ರಮಚಿತ್ತಯಾನಾಃ ॥ ೧೫ ॥

ಪ್ರಾತರ್ವ್ರಜಾದ್ವ್ರಜತ ಆವಿಶತಶ್ಚ ಸಾಯಂ
ಗೋಭಿಃ ಸಮಂ ಕ್ವಣಯತೋऽಸ್ಯ ನಿಶಮ್ಯ ವೇಣುಮ್ ।
ನಿರ್ಗಮ್ಯ ತೂರ್ಣಮಬಲಾಃ ಪಥಿ ಭೂರಿಪುಣ್ಯಾಃ
ಪಶ್ಯಂತಿ ಸಸ್ಮಿತಮುಖಂ ಸದಯಾವಲೋಕಮ್ ॥ ೧೬ ॥

ಏವಂ ಪ್ರಭಾಷಮಾಣಾಸು ಸ್ತ್ರೀಷು ಯೋಗೇಶ್ವರೋ ಹರಿಃ ।
ಶತ್ರುಂ ಹಂತುಂ ಮನಶ್ಚಕ್ರೇ ಭಗವಾನ್ ಭರತರ್ಷಭ
॥ ೧೭ ॥

ಸಭಯಾಃ ಸ್ತ್ರೀಗಿರಃ ಶ್ರುತ್ವಾ ಪುತ್ರಸ್ನೇಹಶುಚಾऽऽತುರೌ ।
ಪಿತರಾವನ್ವತಪ್ಯೇತಾಂ ಪುತ್ರಯೋರಬುಧೌ ಬಲಮ್
॥ ೧೮ ॥

ತೈಸ್ತೈರ್ನಿಯುದ್ಧವಿಧಿಭಿರ್ವಿವಿಧೈರಚ್ಯುತೇತರೌ ।
ಯುಯುಧಾತೇ ಯಥಾನ್ಯೋನ್ಯಂ ತಥೈವ ಬಲಮುಷ್ಟಿಕೌ
॥ ೧೯ ॥

ಭಗವದ್ಗಾತ್ರನಿಷ್ಪಾತೈರ್ವಜ್ರನಿಷ್ಪೇಷನಿಷ್ಠುರೈಃ ।
ಚಾಣೂರೋ ಭಜ್ಯಮಾನಾಂಗೋ ಮುಹುರ್ಗ್ಲಾನಿಮವಾಪ ಹ
॥ ೨೦ ॥

ಸ ತ್ಯೇನವೇಗ ಉತ್ಪತ್ಯ ಮುಷ್ಟೀಕೃತ್ಯ ಕರಾವುಭೌ ।
ಭಗವಂತಂ ವಾಸುದೇವಂ ಕ್ರುದ್ಧೋ ವಕ್ಷಸ್ಯಬಾಧತ
॥ ೨೧ ॥

ಸಖಿಯರೇ ! ವ್ರಜದ ಗೋಪಿಯರು ಎಂತಹ ಧನ್ಯರು ! ನಿರಂತರವಾಗಿ ಶ್ರೀಕೃಷ್ಣನಲ್ಲಿಯೇ ಚಿತ್ತವು ನೆಟ್ಟುಹೋದ ಕಾರಣ – ಹಸುಗಳನ್ನು ಕರೆಯುವಾಗ ಭತ್ತವನ್ನು ಕುಟ್ಟುವಾಗ, ಮೊಸರು ಕಡೆಯುವಾಗ, ಮನೆಯನ್ನು ಸಾರಿಸುವಾಗ, ತೊಟ್ಟಿಲನ್ನು ತೂಗುವಾಗ, ಅಳುತ್ತಿರುವ ಮಕ್ಕಳನ್ನು ಸಮಾಧಾನಪಡಿಸುವಾಗ, ಮಕ್ಕಳಿಗೆ ನೀರೆರೆಯುವಾಗ, ನೀರನ್ನು ಚುಮುಕಿಸಿ ಗುಡಿಸುವಾಗ – ಹೀಗೆ ಯಾವುದೇ ಕೆಲಸ ಮಾಡುತ್ತಿದ್ದರೂ ಶ್ರೀಕೃಷ್ಣನನ್ನೇ ಹೃತ್ಕಮಲದಲ್ಲಿ ನೆಲೆಗೊಳಿಸಿಕೊಂಡು ಆನಂದಾಶ್ರುವನ್ನು ಸುರಿಸುತ್ತಾ ಅವನ ಲೀಲಾ ಗುಣಗಳನ್ನು ಗಾನ ಮಾಡುತ್ತಾ ಮೈಮರೆಯುವರು. ॥ ೧೫ ॥ ಸಖಿಯರೇ ! ಶ್ರೀಕೃಷ್ಣನು ಬೆಳಗಾಗುತ್ತಲೇ ಹಸುಗಳನ್ನು ಹೊಡೆದು ಕೊಂಡು ಕಾಡಿಗೆ ಹೋಗುವಾಗ, ಸಾಯಂಕಾಲ ವ್ರಜಕ್ಕೆ ಹಿಂದಿರು ಗುವಾಗ ಕೊಳಲನ್ನು ನುಡಿಸುತ್ತಾ ಇರುತ್ತಾನೆ. ಶ್ರೀಕೃಷ್ಣನ ಮುರಳಿಯ ಧ್ವನಿಯನ್ನು ಕೇಳುತ್ತಲೇ ಮೈಮರೆಯುವ ಗೋಪಿ ಯರು ಮಾಡುತ್ತಿದ್ದ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ, ಮುರಳೀಧರನ ಕಿರುನಗೆಯನ್ನೂ, ಕುಡಿನೋಟವನ್ನೂ ನೋಡುವುದಕ್ಕಾಗಿ ಬೀದಿಗೆ ಓಡುಬರುವರು. ಹಾದಿಯ ಇಕ್ಕೆಡೆಯಲ್ಲೂ ನಿಂತು ಜಗದಾನಂದ ಕಂದನ ಮುಖಾರವಿಂದವನ್ನು ನೋಡಿ ಆನಂದತುಂದಿಲರಾಗು ತ್ತಾರೆ. ನಿಶ್ಚಯವಾಗಿಯೂ ಗೋಪಿಯರು ಮಹಾಪುಣ್ಯವತಿಯರೇ ಆಗಿದ್ದಾರೆ. ॥ ೧೬ ॥

ಭರತವಂಶ ಶಿರೋಮಣಿಯೇ ! ಮಥುರಾಪಟ್ಟಣದ ಸ್ತ್ರೀಯರು ಗುಂಪು-ಗುಂಪಾಗಿ ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ಯೋಗೇಶ್ವರನಾದ ಭಗವಾನ್ ಶ್ರೀಕೃಷ್ಣನು ಶತ್ರುವನ್ನು ಸಂಹರಿಸಲು ಮನಮಾಡಿದನು. ॥ ೧೭ ॥ ಸ್ತ್ರೀಯರ ಭಯದಿಂದ ಕೂಡಿದ ಈ ಮಾತುಗಳನ್ನು ಪಕ್ಕದಲ್ಲಿಯೇ ಸೆರೆಮನೆಯಲ್ಲಿದ್ದ ದೇವಕಿ-ವಸುದೇವರೂ ಕೇಳಿಸಿಕೊಂಡರು. ಪುತ್ರಸ್ನೇಹದಿಂದ ಅವರು ಶೋಕದಿಂದ ವಿಹ್ವಲರಾದರು. ಅವರ ಹೃದಯದಲ್ಲಿ ಅತ್ಯಂತ ಪೀಡೆಯುಂಟಾಯಿತು. ಏಕೆಂದರೆ, ಅವರು ತಮ್ಮ ಮಕ್ಕಳಾದ ಬಲರಾಮ-ಶ್ರೀಕೃಷ್ಣರ ಬಲ ಪರಾಕ್ರಮವನ್ನು ತಿಳಿದವ ರಾಗಿರಲಿಲ್ಲ. ॥ ೧೮ ॥ ಭಗವಾನ್ ಶ್ರೀಕೃಷ್ಣ ಮತ್ತು ಚಾಣೂರ ರಿಬ್ಬರೂ ಯಾವ ರೀತಿಯಿಂದ ಮಲ್ಲಯುದ್ಧದ ನಿಯಮಗಳನ್ನು ಅನುಸರಿಸಿ ಕಾದಾಡುತ್ತಿದ್ದರೋ, ಹಾಗೆಯೇ ಬಲರಾಮ ಮುಷ್ಟಿಕರೂ ಕಾಳಗವಾಡುತ್ತಿದ್ದರು. ॥ ೧೯ ॥ ಶ್ರೀಕೃಷ್ಣನ ಅಂಗಾಂಗ ಗಳೆಲ್ಲವೂ ವಜ್ರಕ್ಕಿಂತಲೂ ಕಠಿಣವಾಗಿದ್ದವು. ಅವುಗಳ ಪ್ರಹಾರ ದಿಂದ ಚಾಣೂರನ ನರಗಳೆಲ್ಲ ಸಡಿಲವಾದುವು. ಯಾತನೆಯನ್ನು ಸಹಿಸಲಾರದೆ ಶರೀರದ ಸಂದುಗಳೆಲ್ಲ ಕಳಚಿ ಹೋಗುವಂತೆ ಅವನಿಗೆ ಅನಿಸಿತು. ಅವನು ಆಯಾಸಗೊಂಡಿದ್ದನು. ॥ ೨೦ ॥ ಆಗ ಅವನು ಅತ್ಯಂತ ಕ್ರುದ್ಧನಾಗಿ ಗಿಡುಗಪಕ್ಷಿಯಂತೆ ಎಗರಿ ಎರಡೂ ಮುಷ್ಟಿಗಳನ್ನು ಬಿಗಿದು ಭಗವಾನ್ ಶ್ರೀಕೃಷ್ಣನ ವಕ್ಷಸ್ಥಳದಲ್ಲಿ ಬಲವಾಗಿ ಪ್ರಹರಿಸಿದನು. ॥ ೨೧ ॥ ಆದರೆ ಆ ಪ್ರಹಾರದಿಂದ ಭಗವಂತನು ಸ್ವಲ್ಪವೂ ವಿಚಲಿತನಾಗಲಿಲ್ಲ. ಹೂವಿನ ಹಾರದಿಂದ ಆನೆಯನ್ನು ಹೊಡೆದಂತೆ ಆಯಿತು. ಅವನು ಚಾಣೂರನ ಎರಡೂ ಭುಜಗಳನ್ನು ಹಿಡಿದು, ಅವನನ್ನು ಅಂತರಿಕ್ಷದಲ್ಲಿ ವೇದವಾಗಿ

ನಾಚಲತ್ತತ್ಪ್ರಹಾರೇಣ ಮಾಲಾಹತ ಇವ ದ್ವಿಪಃ ।
ಬಾಹ್ವೋರ್ನಿಗೃಹ್ಯ ಚಾಣೂರಂ ಬಹುಶೋ ಭ್ರಾಮಯನ್ ಹರಿಃ
॥ ೨೨ ॥

ಭೂಪೃಷ್ಠೇ ಪೋಥಯಾಮಾಸ ತರಸಾ ಕ್ಷೀಣಜೀವಿತಮ್ ।
ವಿಸ್ರಸ್ತಾಕಲ್ಪಕೇಶಸ್ರಗಿಂದ್ರಧ್ವಜ ಇವಾಪತತ್
॥ ೨೩ ॥

ತಥೈವ ಮುಷ್ಟಿಕಃ ಪೂರ್ವಂ ಸ್ವಮುಷ್ಟ್ಯಾಭಿಹತೇನ ವೈ ।
ಬಲಭದ್ರೇಣ ಬಲಿನಾ ತಲೇನಾಭಿಹತೋ ಭೃಶಮ್
॥ ೨೪ ॥

ಪ್ರವೇಪಿತಃ ಸ ರುಧಿರಮುದ್ವಮನ್ ಮುಖತೋಽರ್ದಿತಃ ।
ವ್ಯಸುಃ ಪಪಾತೋರ್ವ್ಯುಪಸ್ಥೇ ವಾತಾಹತ ಇವಾಂಘ್ರಿಪಃ
॥ ೨೫ ॥

ತತಃ ಕೂಟಮನುಪ್ರಾಪ್ತಂ ರಾಮಃ ಪ್ರಹರತಾಂ ವರಃ ।
ಅವಧೀಲ್ಲೀಲಯಾ ರಾಜನ್ ಸಾವಜ್ಞಂ ವಾಮಮುಷ್ಟಿನಾ
॥ ೨೬ ॥

ತಾವ್ಯೇವ ಹಿ ಶಲಃ ಕೃಷ್ಣಪದಾಪಹತಶೀರ್ಷಕಃ ।
ದ್ವಿಧಾ ವಿದೀರ್ಣಸ್ತೋಶಲಕ ಉಭಾವಪಿ ನಿಪೇತತುಃ
॥ ೨೭ ॥

ಚಾಣೂರೇ ಮುಷ್ಟಿಕೇ ಕೂಟೇ ಶಲೇ ತೋಶಲಕೇ ಹತೇ ।
ಶೇಷಾಃ ಪ್ರದುದ್ರುವುರ್ಮಲ್ಲಾಃ ಸರ್ವೇ ಪ್ರಾಣಪರೀಪ್ಸವಃ
॥ ೨೮ ॥

ಗೋಪಾನ್ ವಯಸ್ಯಾನಾಕೃಷ್ಯ ತೈಃ ಸಂಸೃಜ್ಯ ವಿಜಹ್ರತುಃ ।
ವಾದ್ಯಮಾನೇಷು ತೂರ್ಯೇಷು ವಲ್ಗಂತೌ ರುತನೂಪುರೌ
॥ ೨೯ ॥

ಜನಾಃ ಪ್ರಜಹೃಷುಃ ಸರ್ವೇ ಕರ್ಮಣಾ ರಾಮಕೃಷ್ಣಯೋಃ ।
ಋತೇ ಕಂಸಂ ವಿಪ್ರಮುಖ್ಯಾಃ ಸಾಧವಃ ಸಾಧು ಸಾಧ್ವಿತಿ
॥ ೩೦ ॥

ಹತೇಷು ಮಲ್ಲವರ್ಯೇಷು ವಿದ್ರುತೇಷು ಚ ಭೋಜರಾಟ್ ।
ನ್ಯವಾರಯತ್ಸ್ವತೂರ್ಯಾಣಿ ವಾಕ್ಯಂ ಚೇದಮುವಾಚ ಹ
॥ ೩೧ ॥

ನಿಃಸಾರಯತ ದುರ್ವೃತ್ತೌ ವಸುದೇವಾತ್ಮಜೌ ಪುರಾತ್ ।
ಧನಂ ಹರತ ಗೋಪಾನಾಂ ನಂದಂ ಬಧ್ನೀತ ದುರ್ಮತಿಮ್
॥ ೩೨ ॥

ಗಿರಿ-ಗಿರನೆ ತಿರುಗಿಸಿ ನೆಲಕ್ಕೆ ಅಪ್ಪಳಿಸಿಬಿಟ್ಟನು. ಪರೀಕ್ಷಿತನೆ! ಚಾಣೂರನ ಪ್ರಾಣಗಳಾದರೋ ತಿರುಗಿಸುವಾಗಲೇ ಹೊರಟು ಹೋಗಿದ್ದವು. ಅವನ ವೇಷಭೂಷಣಗಳೆಲ್ಲ ಅಸ್ತವ್ಯಸ್ತವಾಗಿ, ಕೆದರಿದ ಕೂದಲುಗಳಿಂದ ಇಂದ್ರಧ್ವಜ (ಇಂದ್ರನ ಪೂಜೆಗಾಗಿ ನಿಲ್ಲಿಸಿದ್ದ ದೊಡ್ಡ ಬಾವುಟ)ದಂತೆ ಭೂಮಿಗೆ ಬಿದ್ದನು.॥೨೨-೨೩॥ ಹೀಗೆಯೇ ಮುಷ್ಟಿಕನೂ ಬಲರಾಮನಿಗೆ ಒಂದು ಗುದ್ದು ಗುದ್ದಿದನು. ಆಗ ಮಹಾಬಲಿಯಾದ ಬಲರಾಮನು ಅವನಿಗೆ ಜೋರಾಗಿ ಒಂದು ಏಟನ್ನು ಕೊಟ್ಟನು. ॥ ೨೪ ॥ ಆ ಏಟಿನಿಂದ ಮುಷ್ಟಿಕನು ನಡುಗುತ್ತಾ ಬಿರುಗಾಳಿಗೆ ಉರುಳುವ ಮರದಂತೆ ಅತ್ಯಂತ ಪೀಡಿತನಾಗಿ ರಕ್ತವನ್ನು ಕಾರುತ್ತಾ, ಪ್ರಾಣಹೀನನಾಗಿ ನೆಲಕ್ಕೆ ಕುಸಿದು ಬಿದ್ದನು. ॥ ೨೫ ॥ ಎಲೈ ರಾಜನೇ! ಆನಂತರ ಕೂಟನೆಂಬ ಜಟ್ಟಿಯು ಯೋಧರಲ್ಲಿ ಶ್ರೇಷ್ಠನಾದ ಭಗವಾನ್ ಬಲರಾಮನನ್ನು ಇದಿರಿಸಲೋಸುಗ ಬರುತ್ತಲೇ ಕೇವಲ ವಿನೋದದಿಂದಲೇ ಬಲರಾಮನು ನಿರ್ಲಕ್ಷಪೂರ್ವಕವಾಗಿ ಎಡಗೈಯ ಮುಷ್ಟಿಯಿಂದ ಅವನನ್ನು ಕೊಂದು ಹಾಕಿದನು. ॥ ೨೬ ॥ ಅದೇ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಕಾಲಿನ ಒದೆಯಿಂದಲೇ ಶಲನೆಂಬ ಜಟ್ಟಿಯ ರುಂಡ-ಮುಂಡಗಳನ್ನು ಬೇರ್ಪಡಿಸಿದನು. ತೋಶಲನೆಂಬ ಜಟ್ಟಿಯನ್ನು ಹುಲ್ಲನ್ನು ಸಿಗಿದು ಹಾಕುವಂತೆ ಸೀಳಿ ಎರಡು ತುಂಡುಗಳಾಗಿಸಿದನು. ಹೀಗೆ ಇಬ್ಬರೂ ಮಲ್ಲರೂ ಧರಾಶಾಯಿಯಾದರು. ॥ ೨೭ ॥ ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲ ಎಂಬ ಐದುಮಂದಿ ಜಟ್ಟಿಗಳು ಸತ್ತುಹೋದಾಗ ಉಳಿದ ಜಟ್ಟಿಗಳು ಪ್ರಾಣಗಳನ್ನು ಉಳಿಸಿಕೊಳ್ಳಲೋಸುಗ ಕಾಲಿಗೆ ಬುದ್ಧಿ ಹೇಳಿದರು. ॥ ೨೮ ॥ ಅವರೆಲ್ಲರೂ ಓಡಿಹೋದ ಬಳಿಕ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ತಮ್ಮ ಸಮವಯಸ್ಕ ಗೊಲ್ಲ ಬಾಲಕರನ್ನು ಎಳೆದೆಳದು ತಂದು ಅವರೊಂದಿಗೆ ಕುಸ್ತಿಯಾಡುತ್ತಾ, ಕುಣಿ-ಕುಣಿದು ಭೇರಿ-ನಗಾರಿಗಳ ಧ್ವನಿಯೊಂದಿಗೆ ನೂಪುರಗಳ ನಿನಾದವನ್ನು ಸೇರಿಸುತ್ತಾ ಮಲ್ಲ- ಕ್ರೀಡೆಯಾಡತೊಡಗಿದರು. ॥ ೨೯ ॥

ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರ ಈ ಅದ್ಭುತ ಲೀಲೆಯನ್ನು ನೋಡಿದ ಪ್ರೇಕ್ಷರಿಗೆಲ್ಲ ಅತ್ಯಂತ ಆನಂದವಾಯಿತು. ಶ್ರೇಷ್ಠ ಬ್ರಾಹ್ಮಣರೂ, ಸತ್ಪುರಷರೂ ಸಾಧು! ಸಾಧು! ಭಲೇ! ಎಂದು ಹೇಳುತ್ತಾ ಪ್ರಶಂಸಿಸತೊಡಗಿದರು. ಆದರೆ ಕಂಸನಿಗೆ ಮಾತ್ರ ಇದರಿಂದ ಅತೀವ ದುಃಖವಾಗಿ ಕೆರಳಿ ಹೋದನು. ॥ ೩೦॥ ಅವನ ಮುಖ್ಯ-ಮುಖ್ಯರಾದ ಮಲ್ಲರು ಸತ್ತುಹೋಗಿ, ಉಳಿದವರೆಲ್ಲರೂ ಓಡಿಹೋದಾಗ ಭೋಜರಾಜನಾದ ಕಂಸನು ವಾದ್ಯ ವಾದನಗಳನ್ನು ನಿಲ್ಲಿಸಿಬಿಟ್ಟನು. ಕೋಪೋದ್ರಿಕ್ತನಾಗಿ ತನ್ನ ಸೇವಕರಿಗೆ ಹೀಗೆ ಆಜ್ಞಾಪಿಸಿದನು. ॥ ೩೧ ॥ ಕೆಟ್ಟನಡತೆಯುಳ್ಳ ವಸುದೇವನ ಈ ಇಬ್ಬರೂ ಮಕ್ಕಳನ್ನು ನಗರದಿಂದ ಹೊರಗಟ್ಟಿರಿ. ಈ ಗೋಪರಲ್ಲಿ ಇರುವ ಹಣವೆಲ್ಲವನ್ನೂ ಕಸಿದುಕೊಳ್ಳಿರಿ. ದುರ್ಬುದ್ಧಿಯಾದ ನಂದನನ್ನು ಸೆರೆಹಿಡಿಯಿರಿ. ॥ ೩೨ ॥

ವಸುದೇವಸ್ತು ದುರ್ಮೇಧಾ ಹನ್ಯತಾಮಾಶ್ವಸತ್ತಮಃ ।
ಉಗ್ರಸೇನಃ ಪಿತಾ ಚಾಪಿ ಸಾನುಗಃ ಪರಪಕ್ಷಗಃ
॥ ೩೩ ॥

ಏವಂ ವಿಕತ್ಥಮಾನೇ ವೈ ಕಂಸೇ ಪ್ರಕುಪಿತೋಽವ್ಯಯಃ ।
ಲಘಿಮ್ನೋತ್ಪತ್ಯ ತರಸಾ ಮಂಚ ಮುತ್ತುಂಗಮಾರುಹತ್
॥ ೩೪ ॥

ತಮಾವಿಶಂತಮಾಲೋಕ್ಯ ಮೃತ್ಯುಮಾತ್ಮನ ಆಸನಾತ್ ।
ಮನಸ್ವೀ ಸಹಸೋತ್ಥಾಯ ಜಗೃಹೇ ಸೋಽಸಿಚರ್ಮಣೀ
॥ ೩೫ ॥

ತಂ ಖಡ್ಗಪಾಣಿಂ ವಿಚರಂತಮಾಶು
ಶ್ಯೇನಂ ಯಥಾ ದಕ್ಷಿಣಸವ್ಯಮಂಬರೇ ।
ಸಮಗ್ರಹೀದ್ದುರ್ವಿಷಹೋಗ್ರತೇಜಾ
ಯಥೋರಗಂ ತಾರ್ಕ್ಷ್ಯಸುತಃ ಪ್ರಸಹ್ಯ ॥ ೩೬ ॥

ಪ್ರಗೃಹ್ಯ ಕೇಶೇಷು ಚಲತ್ಕಿರೀಟಂ
ನಿಪಾತ್ಯ ರಂಗೋಪರಿ ತುಂಗಮಂಚಾತ್ ।
ತಸ್ಯೋಪರಿಷ್ಟಾತ್ ಸ್ವಯಮಬ್ಜನಾಭಃ
ಪಪಾತ ವಿಶ್ವಾಶ್ರಯ ಆತ್ಮತಂತ್ರಃ ॥ ೩೭ ॥

ತಂ ಸಂಪರೇತಂ ವಿಚಕರ್ಷ ಭೂಮೌ
ಹರಿರ್ಯಥೇಭಂ ಜಗತೋ ವಿಪಶ್ಯತಃ ।
ಹಾಹೇತಿ ಶಬ್ದಃ ಸುಮಹಾಂಸ್ತದಾಭೂ-
ದುದೀರಿತಃ ಸರ್ವಜನೈರ್ನರೇಂದ್ರ ॥ ೩೮ ॥

ಸ ನಿತ್ಯದೋದ್ವಿಗ್ನಧಿಯಾ ತಮೀಶ್ವರಂ
ಪಿಬನ್ ವದನ್ ವಾ ವಿಚರನ್ ಸ್ವಪನ್ ಶ್ವಸನ್ ।
ದದರ್ಶ ಚಕ್ರಾಯುಧಮಗ್ರತೋ ಯ-
ತ್ತದೇವ ರೂಪಂ ದುರವಾಪಮಾಪ ॥ ೩೯ ॥

ತಸ್ಯಾನುಜಾ ಭ್ರಾತರೋಽಷ್ಟೌ ಕಂಕನ್ಯಗ್ರೋಧಕಾದಯಃ ।
ಅಭ್ಯಧಾವನ್ನಭಿಕ್ರುದ್ಧಾ ಭ್ರಾತುರ್ನಿರ್ವೇಶಕಾರಿಣಃ
॥ ೪೦ ॥

ತಥಾತಿರಭಸಾಂಸ್ತಾಂಸ್ತು ಸಂಯತ್ತಾನ್ ರೋಹಿಣೀಸುತಃ ।
ಅಹನ್ ಪರಿಘಮುದ್ಯಮ್ಯ ಪಶೂನಿವ ಮೃಗಾಧಿಪಃ
॥ ೪೧ ॥

ಬಹಳ ಅಯೋಗ್ಯನಾದ ಕೆಟ್ಟಬುದ್ಧಿಯುಳ್ಳ ವಸುದೇವನನ್ನು ಈಗಲೇ ಶೀಘ್ರವಾಗಿ ಕೊಂದುಹಾಕಿರಿ. ನಮ್ಮ ತಂದೆಯಾದರೂ ಶತ್ರುಪಕ್ಷಕ್ಕೆ ಸೇರಿದವನಾದ್ದರಿಂದ ಅನುಯಾಯಿಗಳ ಸಹಿತ ಉಗ್ರಸೇನನನ್ನು ಮುಗಿಸಿಬಿಡಿರಿ. ॥ ೩೩ ॥ ಕಂಸನು ಹೀಗೆ ಬಡ-ಬಡಿಸುತ್ತಿರುವಾಗ ಅವಿನಾಶಿಯಾದ ಶ್ರೀಕೃಷ್ಣನು ಕುಪಿತನಾಗಿ ಅತ್ಯಂತ ವೇಗದಿಂದ ಛಂಗನೆ ಹಾರಿ ಕಂಸನು ಕುಳಿತಿದ್ದ ಎತ್ತರವಾದ ವೇದಿಕೆಯ ಮೇಲೆ ನಿಂತುಕೊಂಡನು. ॥ ೩೪ ॥ ತನ್ನ ಮೃತ್ಯುರೂಪನಾದ ಶ್ರೀಕೃಷ್ಣನು ತನ್ನ ಬಳಿಗೆ ಬಂದಿರುವುದನ್ನು ನೋಡಿದ ಮನಸ್ವೀಯಾದ ಕಂಸನು ಥಟ್ಟನೇ ಸಿಂಹಾಸನದಿಂದ ಎದ್ದು ಕತ್ತಿ ಗುರಾಣಿಗಳನ್ನು ಎತ್ತಿಕೊಂಡನು. ॥ ೩೫ ॥ ಕತ್ತಿಗುರಾಣಿಗಳನ್ನು ಹಿಡಿದಿದ್ದ ಕಂಸನು ಶ್ರೀಕೃಷ್ಣನನ್ನು ಪ್ರಹರಿಸಲು ವರಸೆಗಳಿಂದ ಖಡ್ಗವನ್ನು ಝಳಪಿಸುತ್ತಾ ಆಕಾಶದಲ್ಲಿ ಹಾರುವ ಗಿಡುಗನಂತೆ ಎಡಕ್ಕೂ ಬಲಕ್ಕೂ ನೆಗೆಯುತ್ತಿದ್ದನು. ಆದರೆ ಯಾರಿಂದಲೂ ಸಹಿಸಲ ಶಕ್ಯವಾದ ಭಯಂಕರವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಶ್ರೀಕೃಷ್ಣನು ಗರುಡನು ಹಾವನ್ನು ಹಿಡಿಯುವಂತೆ ಖಡ್ಗಪಾಣಿಯಾದ ಕಂಸನನ್ನು ಬಲಪೂರ್ವಕಾಗಿ ಹಿಡಿದುಕೊಂಡನು. ॥ ೩೬ ॥ ಹಿಡಿದಾಗಲೇ ಕಂಸನ ಕಿರೀಟವು ಬಿದ್ದುಹೋಯಿತು. ಶ್ರೀಕೃಷ್ಣನು ಅವನ ಮುಡಿಯನ್ನು ಹಿಡಿದೆಳೆದು ಎತ್ತರವಾದ ಮಂಚದಿಂದ ರಂಗಭೂಮಿಯ ಮೇಲೆ ಬೀಳಿಸಿದನು. ಮರುಕ್ಷಣದಲ್ಲೇ ವಿಶ್ವಕ್ಕೆ ಪರಮಾಶ್ರಯನಾದ, ಸರ್ವತಂತ್ರ ಸ್ವತಂತ್ರನಾದ ಭಗವಾನ್ ಶ್ರೀಕೃಷ್ಣನು ಅವನ ಮೇಲೆ ಛಂಗನೆ ಹಾರಿದನು. ॥ ೩೭ ॥ ಶ್ರೀಕೃಷ್ಣನು ಕಂಸನ ಮೇಲೆ ಬೀಳುತ್ತಲೇ ಅವನ ಪ್ರಾಣಪಕ್ಷಿಯು ಹಾರಿಹೋಯಿತು. ಸಿಂಹವು ಆನೆಯನ್ನು ಸೆಳೆದಾಡುವಂತೆ ಎಲ್ಲರೂ ನೋಡುತ್ತಿರುವಂತೆ ಶ್ರೀಕೃಷ್ಣನು ಕಂಸನ ಮೃತ ಶರೀರವನ್ನು ಸೆಳೆದಾಡಿದನು. ರಾಜೇಂದ್ರ! ಆ ಸಮಯದಲ್ಲಿ ಎಲ್ಲರ ಬಾಯಿಂದ ಅಯ್ಯೋ! ಅಯ್ಯೋ! ಎಂಬ ಗಟ್ಟಿಯಾದ ಧ್ವನಿಗಳು ಕೇಳಿಬರುತ್ತಿದ್ದವು. ॥ ೩೮ ॥ ಕಂಸನು ನಿರಂತರವಾಗಿ ಉದ್ವಿಗ್ನನಾಗಿ ಭಯದಿಂದ ಶ್ರೀಕೃಷ್ಣನನ್ನೇ ಚಿಂತಿಸುತ್ತಿದ್ದನು. ಅವನು ಉಂಬಾಗ ತಿಂಬಾಗ, ನಡೆದಾಡುವಾಗ, ಮಾತನಾಡುವಾಗ, ಉಸಿರಾಡುವಾಗಲೂ ತನ್ನೆದುರಿಗೆ ಚಕ್ರಧಾರಿಯಾದ ಶ್ರೀಕೃಷ್ಣನನ್ನೇ ನೋಡುತ್ತಿದ್ದನು. ಈ ನಿತ್ಯನಿರಂತರ ಚಿಂತನೆಯ ಫಲವಾಗಿ ದೊಡ್ಡ-ದೊಡ್ಡ ತಪಸ್ವಿಗಳಾದ ಯೋಗಿಗಳಿಗೂ ಕಠಿಣವಾದ ಭಗವಂತನ ಸಾರೂಪ್ಯ ಮುಕ್ತಿಯು ಅವನಿಗೆ ಲಭಿಸಿತು. ॥ ೩೯ ॥

ಕಂಸನು ಅಸುನೀಗುತ್ತಲೇ ಅವನ ತಮ್ಮಂದಿರಾದ ಕಂಕ, ನ್ಯಗ್ರೋಧ ಮೊದಲಾದ ಎಂಟು ಜನರು ತಮ್ಮ ಅಣ್ಣನನ್ನು ಕೊಂದ ಸೇಡು ತೀರಿಸಿಕೊಳ್ಳಲು ಕ್ರೋಧೋನ್ಮತ್ತರಾಗಿ ಶ್ರೀಕೃಷ್ಣ ಬಲರಾಮರ ಕಡೆಗೆ ನುಗ್ಗಿ ಬಂದರು. ॥ ೪೦ ॥ ಕಂಸನ ಸೋದರರು ಅತ್ಯಂತ ವೇಗವಾಗಿ ಯುದ್ಧಕ್ಕೆ ಸಿದ್ಧರಾಗಿ ಓಡಿ ಬರುತ್ತಿರುವುದನ್ನು ನೋಡಿದ ಬಲರಾಮನು ಪರಿಘವನ್ನೆತ್ತಿಕೊಂಡು ಸಿಂಹವು ಪಶುಗಳನ್ನು ಕೊಂದು ಹಾಕುವಂತೆ ಕ್ಷಣಮಾತ್ರದಲ್ಲಿ ಅವರನ್ನು ಸಂಹರಿಸಿ ಬಿಟ್ಟನು. ॥ ೪೧ ॥

ನೇದುರ್ದುಂದುಭಯೋ ವ್ಯೋಮ್ನಿ ಬ್ರಹ್ಮೇಶಾದ್ಯಾ ವಿಭೂತಯಃ।
ಪುಷ್ಪೈಃ ಕಿರಂತಸ್ತಂ ಪ್ರೀತಾಃ ಶಶಂಸುರ್ನನೃತುಃ ಸ್ತ್ರಿಯಃ
॥ ೪೨ ॥

ತೇಷಾಂ ಸ್ತ್ರಿಯೋ ಮಹಾರಾಜ ಸುಹೃನ್ಮರಣದುಃಖಿತಾಃ।
ತತ್ರಾಭೀಯುರ್ವಿನಿಘ್ನಂತ್ಯಃ ಶೀರ್ಷಾಣ್ಯಶ್ರುವಿಲೋಚನಾಃ
॥ ೪೩ ॥

ಶಯಾನಾನ್ ವೀರಶಯ್ಯಾಯಾಂ ಪತೀನಾಲಿಂಗ್ಯ ಶೋಚತೀಃ।
ವಿಲೇಪುಃ ಸುಸ್ವರಂ ನಾರ್ಯೋ ವಿಸೃಜಂತ್ಯೋ ಮುಹುಃ ಶುಚಃ
॥ ೪೪ ॥

ಹಾ ನಾಥ ಪ್ರಿಯ ಧರ್ಮಜ್ಞ ಕರುಣಾನಾಥವತ್ಸಲ।
ತ್ವಯಾ ಹತೇನ ನಿಹತಾ ವಯಂ ತೇ ಸಗೃಹಪ್ರಜಾಃ
॥ ೪೫ ॥

ತ್ವಯಾ ವಿರಹಿತಾ ಪತ್ಯಾ ಪುರೀಯಂ ಪುರುಷರ್ಷಭ।
ನ ಶೋಭತೇ ವಯಮಿವ ನಿವೃತ್ತೋತ್ಸವಮಂಗಲಾ
॥ ೪೬ ॥

ಅನಾಗಸಾಂ ತ್ವಂ ಭೂತಾನಾಂ
ಕೃತವಾನ್ ದ್ರೋಹಮುಲ್ಬಣಮ್ ।
ತೇನೇಮಾಂ ಭೋ ದಶಾಂ ನೀತೋ
ಭೂತಧ್ರುಕ್ ಕೋ ಲಭೇತ ಶಮ್ ॥ ೪೭ ॥

ಸರ್ವೇಷಾಮಿಹ ಭೂತಾನಾಮೇಷ ಹಿ ಪ್ರಭವಾಪ್ಯಯಃ।
ಗೋಪ್ತಾ ಚ ತದವಧ್ಯಾಯೀ ನ ಕ್ವಚಿತ್ ಸುಖಮೇಧತೇ
॥ ೪೮ ॥

ಶ್ರೀಶುಕ ಉವಾಚ

ರಾಜಯೋಷಿತ ಆಶ್ವಾಸ್ಯ ಭಗವಾನ್ ಲೋಕಭಾವನಃ।
ಯಾಮಾಹುರ್ಲೌಕಿಕೀಂ ಸಂಸ್ಥಾಂ ಹತಾನಾಂ ಸಮಕಾರಯತ್
॥ ೪೯ ॥

ಮಾತರಂ ಪಿತರಂ ಚೈವ ಮೋಚಯಿತ್ವಾಥ ಬಂಧನಾತ್ ।
ಕೃಷ್ಣರಾಮೌ ವವಂದಾತೇ ಶಿರಸಾSSಸ್ಪೃಶ್ಯ ಪಾದಯೋಃ
॥ ೫೦ ॥

ದೇವಕೀ ವಸುದೇವಶ್ಚ ವಿಜ್ಞಾಯ ಜಗದೀಶ್ವರೌ।
ಕೃತಸಂವಂದನೌ ಪುತ್ರೌ ಸಸ್ವಜಾತೇ ನ ಶಂಕಿತೌ
॥ ೫೧ ॥

ಆ ಸಮಯದಲ್ಲಿ ಆಕಾಶದಲ್ಲಿ ದುಂದುಭಿಗಳು ಮೊಳಗಿದವು. ಭಗವದ್ವಿಭೂತಿಗಳಾದ ಬ್ರಹ್ಮ ರುದ್ರರೇ ಮೊದಲಾದ ದೇವತೆಗಳು ಆನಂದತುಂದಿಲರಾಗಿ ರಾಮ-ಕೃಷ್ಣರ ಮೇಲೆ ಹೂಗಳ ಮಳೆಯನ್ನು ಗರೆಯುತ್ತಾ ಸ್ತುತಿಸತೊಡಗಿದರು. ಅಪ್ಸರೆಯರು ನೃತ್ಯವಾಡತೊಡಗಿದರು.॥ ೪೨ ॥

ಪರೀಕ್ಷಿತಮಹಾರಾಜ! ಕಂಸನ ಮತ್ತು ಅವನ ಸಹೋದರರ ಮಡದಿಯರು ಮತ್ತು ಅವರ ನಿಕಟ ಸಂಬಂಧಿಗಳು ಕಂಸನ ಹಾಗೂ ಆತನ ಸಹೋದರರ ಮೃತ್ಯುವಿನಿಂದಾಗಿ ಅತ್ಯಂತ ದುಃಖಿತರಾದರು. ಅವರೆಲ್ಲರೂ ತಲೆಗಳನ್ನು ಚಚ್ಚಿಕೊಂಡು, ಕಣ್ಣೀರು ಸುರಿಸುತ್ತಾ ಅಲ್ಲಿಗೆ ಬಂದರು. ॥ ೪೩. ॥ ವೀರಶಯ್ಯೆಯಲ್ಲಿ ಮಲಗಿದ್ದ ತಮ್ಮ ಪತಿಗಳನ್ನು ಅಪ್ಪಿಕೊಂಡು ಅವರು ಶೋಕಗ್ರಸ್ತರಾಗಿ ಪದೇ ಪದೇ ಕಣ್ಣೀರು ಸುರಿಸುತ್ತಾ, ಗಟ್ಟಿಯಾಗಿ ವಿಲಾಪಿಸ ತೊಡಗಿದರು. ॥ ೪೪ ॥ ಹೇ ನಾಥನೇ! ಪ್ರಿಯನೇ! ಧರ್ಮಜ್ಞನೇ! ಕರುಣಾಮಯನೇ! ಅನಾಥ ವತ್ಸಲನೇ! ನಿನ್ನ ಮೃತ್ಯುವಿನಿಂದಾಗಿ ನಾವೆಲ್ಲರೂ ಸತ್ತಂತೆಯೇ ಆದೆವು. ನಮ್ಮ ಮನೆಗಳು ಹಾಳಾಗಿ ಹೋದುವು. ನಮ್ಮ ಸಂತಾನಗಳು ಅನಾಥವಾದುವು. ॥ ೪೫ ॥ ಪುರುಷಶ್ರೇಷ್ಠನೇ! ಈ ಪಟ್ಟಣಕ್ಕೆ ನೀನೇ ಒಡೆಯನಾಗಿದ್ದೆ. ನಿನ್ನ ಅಗಲುವಿಕೆಯಿಂದ ನಮ್ಮಂತೆಯೇ ಈ ಪಟ್ಟಣವೂ ಶೋಭಿಸುತ್ತಿಲ್ಲ. ಇಲ್ಲಿ ಉತ್ಸವಗಳೂ, ಮಂಗಳಕಾರ್ಯಗಳೂ ನಿಂತು ಹೋಗಿವೆ ॥ ೪೬ ॥ ಸ್ವಾಮಿಯೇ! ನೀನು ನಿರಪರಾಧಿಯಾದ ಪ್ರಾಣಿಗಳಿಗೆ ಘೋರವಾದ ದ್ರೋಹವನ್ನೆಸಗಿದೆ. ಅದುದರಿಂದಲೆ ನಿನಗೆ ಇಂತಹ ದುರವಸ್ಥೆಯು ಪ್ರಾಪ್ತವಾಯಿತು. ಪ್ರಾಣಿಗಳಿಗೆ ದ್ರೋಹವೆಸಗಿದ ಯಾರು ತಾನೇ ಸುಖವನ್ನು ಹೊಂದುವರು ? ॥ ೪೭ ॥ ಈ ಭಗವಾನ್ ಶ್ರೀಕೃಷ್ಣನು ಜಗತ್ತಿನ ಸಮಸ್ತ ಪ್ರಾಣಿಗಳ ಉತ್ಪತ್ತಿ ಪ್ರಳಯಕ್ಕೆ ಆಧಾರನಾಗಿದ್ದಾನೆ. ರಕ್ಷಕನೂ ಆಗಿರುವನು. ಇವನಿಗೆ ಕೆಡುಕನ್ನು ಬಯಸುವವನು, ತಿರಸ್ಕರಿಸುವವನು ಎಂದಿಗೂ ಸುಖವಾಗಿರಲಾರನು. ॥ ೪೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಸಮಸ್ತ ಲೋಕಗಳಿಗೂ ಜೀವನದಾತನಾದ ಭಗವಂತನು ರಾಜಮಹಿಷಿಯರಿಗೆ ಧೈರ್ಯತುಂಬಿ, ಸಾಂತ್ವನ ನೀಡಿದನು. ಮತ್ತೆ ಲೋಕರೀತಿಯಂತೆ ಮರಣಹೊಂದಿದವರಿಗೆ ಮಾಡಬೇಕಾದ ಕ್ರಿಯಾ-ಕರ್ಮಗಳನ್ನು ಮಾಡಿಸಿದನು. ॥ ೪೯ ॥ ಅನಂತರ ಭಗವಾನ್ ಶ್ರೀಕೃಷ್ಣ-ಬಲರಾಮರು ಸೆರೆಮನೆಗೆ ಹೋಗಿ ತಮ್ಮ ತಂದೆ-ತಾಯಿಯರನ್ನು ಬಂಧನದಿಂದ ಬಿಡುಗಡೆ ಮಾಡಿದರು ಹಾಗೂ ಅವರ ಪಾದಗಳಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದರು. ॥ ೫೦ ॥ ಆದರೆ ತಮ್ಮ ಪುತ್ರರು ನಮಸ್ಕರಿಸಿದರೂ ವಸುದೇವ-ದೇವಕಿಯರು ಅವರನ್ನು ಜಗದೀಶ್ವರರೇ ಎಂದು ತಿಳಿದು ಅವರನ್ನು ಆಲಿಂಗಿಸಿಕೊಳ್ಳಲಿಲ್ಲ. ಈ ಜಗದೀಶ್ವರರನ್ನು ನಾವು ಪುತ್ರರೆಂದು ಹೇಗೆ ತಿಳಿಯಲಿ ಎಂಬ ಸಂದೇಹ ಉಂಟಾಯಿತು. ॥ ೫೧ ॥

ನಲವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಕಂಸವಧೋ ನಾಮ ಚತುಶ್ಚತ್ವಾರಿಂಶೋSಧ್ಯಾಯಃ॥ ೪೪ ॥

ನಲವತ್ತೈದನೆಯ ಅಧ್ಯಾಯ

ಬಲರಾಮ-ಕೃಷ್ಣರ ಉಪನಯನ ಮತ್ತು ಗುರುಕುಲ ಪ್ರವೇಶ

ಶ್ರೀಶುಕ ಉವಾಚ

ಪಿತರಾವುಪಲಬ್ಧಾರ್ಥೌ ವಿದಿತ್ವಾ ಪುರುಷೋತ್ತಮಃ ।
ಮಾ ಭೂದಿತಿ ನಿಜಾಂ ಮಾಯಾಂ ತತಾನ ಜನಮೋಹಿನೀಮ್
॥ ೧ ॥

ಉವಾಚ ಪಿತರಾವೇತ್ಯ ಸಾಗ್ರಜಃ ಸಾತ್ವತರ್ಷಭಃ ।
ಪ್ರಶ್ರಯಾವನತಃ ಪ್ರೀಣನ್ನಂಬ ತಾತೇತಿ ಸಾದರಮ್
॥ ೨ ॥

ನಾಸ್ಮತ್ತೋ ಯುವಯೋಸ್ತಾತ ನಿತ್ಯೋತ್ಕಂಠಿತಯೋರಪಿ ।
ಬಾಲ್ಯಪೌಗಂಡಕೈಶೋರಾಃ ಪುತ್ರಾಭ್ಯಾಮಭವನ್ ಕ್ವಚಿತ್
॥ ೩ ॥

ನ ಲಬ್ಧೋ ದೈವಹತಯೋರ್ವಾಸೋ ನೌ ಭವದಂತಿಕೇ ।
ಯಾಂ ಬಾಲಾಃ ಪಿತೃಗೇಹಸ್ಥಾ ವಿಂದಂತೇ ಲಾಲಿತಾ ಮುದಮ್
॥ ೪ ॥

ಸರ್ವಾರ್ಥಸಂಭವೋ ದೇಹೋ ಜನಿತಃ ಪೋಷಿತೋ ಯತಃ ।
ನ ತಯೋರ್ಯಾತಿ ನಿರ್ವೇಶಂ ಪಿತ್ರೋರ್ಮರ್ತ್ಯಃ ಶತಾಯುಷಾ
॥ ೫ ॥

ಯಸ್ತಯೋರಾತ್ಮಜಃ ಕಲ್ಪ ಆತ್ಮನಾ ಚ ಧನೇನ ಚ ।
ವೃತ್ತಿಂ ನ ದದ್ಯಾತ್ತಂ ಪ್ರೇತ್ಯ ಸ್ವಮಾಂಸಂ ಖಾದಯಂತಿ ಹಿ
॥ ೬ ॥

ಮಾತರಂ ಪಿತರಂ ವೃದ್ಧಂ ಭಾರ್ಯಾಂ ಸಾಧ್ವೀಂ ಸುತಂ ಶಿಶುಮ್ ।
ಗುರುಂ ವಿಪ್ರಂ ಪ್ರಪನ್ನಂ ಚ ಕಲ್ಪೋಽಬಿಭ್ರಚ್ಛ್ವಸನ್ ಮೃತಃ
॥ ೭ ॥

ತನ್ನಾವಕಲ್ಪಯೋಃ ಕಂಸಾನ್ನಿತ್ಯಮುದ್ವಿಗ್ನಚೇತಸೋಃ ।
ಮೋಘಮೇತೇ ವ್ಯತಿಕ್ರಾಂತಾ ದಿವಸಾ ವಾಮನರ್ಚತೋಃ
॥ ೮ ॥

ತತ್ ಕ್ಷಂತುಮರ್ಥಸ್ತಾತ
ಮಾತರ್ನೌ ಪರತಂತ್ರಯೋಃ ।
ಅಕುರ್ವತೋರ್ವಾಂ ಶುಶ್ರೂಷಾಂ
ಕ್ಲಿಷ್ಟಯೋರ್ದುರ್ಹೃದಾ ಭೃಶಮ್ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ತಂದೆ-ತಾಯಿಯರಿಗೆ ನನ್ನ ಐಶ್ವರ್ಯದ, ಭಗವದ್ಭಾವದ ಜ್ಞಾನವುಂಟಾಗಿದೆ ಎಂದು ತಿಳಿದ ಭಗವಾನ್ ಶ್ರೀಕೃಷ್ಣನು ಹೀಗಾಗಬಾರದು, ಇದರಿಂದ ಪುತ್ರ ಸ್ನೇಹವನ್ನು ಪಡೆಯಲಾರದೆಂದು ಯೋಚಿಸಿ ಜನರನ್ನು ವಿಮೋಹಗೊಳಿಸುವ ತನ್ನ ಮಾಯೆಯನ್ನು ಅವರ ಮೇಲೆ ಬೀಸಿದನು. ॥ ೧ ॥ ಸಾತ್ವತ ಶ್ರೇಷ್ಠನಾದ ಶ್ರೀಕೃಷ್ಣನು ಬಲರಾಮನೊಡನೆ ತನ್ನ ತಂದೆ-ತಾಯಿಗಳ ಬಳಿಗೆ ಹೋಗಿ ಆದರದಿಂದ ವಿನಯಪೂರ್ವಕವಾಗಿ ಅವರಿಗೆ ತಲೆಬಾಗಿ ಅಮ್ಮಾ! ಅಪ್ಪಾ! ಎಂದು ಕರೆಯುತ್ತಾ, ಅವರನ್ನು ಸಂತೋಷಪಡಿಸಿ ಹೀಗೆ ಹೇಳಗೊಡಗಿದನು. ॥ ೨ ॥ ಅಮ್ಮಾ! ಅಪ್ಪಾ! ನಾವಿಬ್ಬರೂ ನಿಮ್ಮ ಮಕ್ಕಳಾಗಿದ್ದೇವೆ. ನೀವು ನಮ್ಮನ್ನು ನೋಡಲು ಸದಾ ಉತ್ಸುಕರಾಗಿದ್ದರೂ ನಮ್ಮ ಬಾಲ್ಯ, ಪೌಗಂಡ, ಕಿಶೋರ ಅವಸ್ಥೆಗಳ ದರ್ಶನಸುಖವನ್ನು ನಾವು ನಿಮಗೆ ಕೊಡಲಾಗಲಿಲ್ಲ. ॥ ೩ ॥ ದುರ್ದೈವವಶದಿಂದ ನಿಮ್ಮ ಜೊತೆಯಲ್ಲಿರುವ ಸೌಭಾಗ್ಯವು ನಮಗೆ ದೊರೆಯಲಿಲ್ಲ. ಈ ಕಾರಣದಿಂದಾಗಿ ಬಾಲಕರು ತಂದೆ-ತಾಯಿಯರ ಬಳಿ ಇರುತ್ತಾ ಅನುಭವಿಸುವ ಲಾಲನೆ-ಪಾಲನೆಯ ಸುಖವು ನಮಗಿಲ್ಲವಾಯಿತು. ॥ ೪ ॥ ಧರ್ಮಾರ್ಥ-ಕಾಮ ಮೋಕ್ಷಗಳೆಂಬ ಸಕಲ ಪುರುಷಾರ್ಥಗಳಿಗೂ ಸಾಧನಭೂತವಾದ ಈ ದೇಹವು ಯಾರಿಂದ ಹುಟ್ಟಿತೋ ಹಾಗೂ ಪೋಷಿಸಲ್ಪಟ್ಟಿತೋ ಅಂತಹ ತಂದೆ-ತಾಯಿಗಳಿಬ್ಬರ ಋಣವನ್ನು ನೂರು ವರ್ಷಗಳ ಸೇವೆಯಿಂದಲೂ ಮನುಷ್ಯನಾದವನು ತೀರಿಸಲಾರನು. ॥ ೫ ॥ ಯಾವ ಪುತ್ರನು ಸಮರ್ಥನಾಗಿದ್ದರೂ ತನ್ನ ತಂದೆ-ತಾಯಿಗಳ ಸೇವೆಯನ್ನು ಶರೀರದಿಂದಾಗಲೀ, ಧನದಿಂದಾಗಲೀ ಮಾಡುವುದಿಲ್ಲವೋ ಅವನು ಸತ್ತಮೇಲೆ ಯಮದೂತರು ಅವನ ಶರೀರದ ಮಾಂಸವನ್ನೇ ಅವನಿಗೆ ತಿನ್ನಿಸುವರು. ॥ ೬ ॥ ಸಮರ್ಥನಾಗಿದ್ದರೂ ವೃದ್ಧರಾದ ತಂದೆ-ತಾಯಿಯರನ್ನು, ಸಾಧ್ವಿಯಾದ ಪತ್ನಿಯನ್ನು, ಬಾಲಕರನ್ನು, ಎಳೆ ಮಕ್ಕಳನ್ನು, ಗುರುಗಳನ್ನು, ಬ್ರಾಹ್ಮಣರು ಮತ್ತು ಶರಣಾಗತರನ್ನು ರಕ್ಷಿಸಿ-ಪೋಷಿಸದವನು ಬದುಕಿದ್ದರೂ ಸತ್ತಂತೆಯೇ ಸರಿ. ॥ ೭ ॥ ಅಪ್ಪಾ! ಕಂಸನ ಭಯದಿಂದ ಉದ್ವಿಗ್ನವಾದ ಮನಸ್ಸಿನಿಂದ ಕೂಡಿದ್ದ ನಾವು ನಿಮ್ಮ ಸೇವೆ ಮಾಡಲು ಸಮರ್ಥರಾಗಲಿಲ್ಲ. ಈ ಕಾರಣದಿಂದಲೇ ಇಷ್ಟು ದಿವಸಗಳೂ ತಮ್ಮ ಸೇವೆಮಾಡದೆ ವ್ಯರ್ಥವಾಗಿ ಕಳೆದುಹೋದುವು. ॥ ೮ ॥ ಜನನಿ-ಜನಕರೇ! ನೀವಿಬ್ಬರೂ ನಮ್ಮನ್ನು ಕ್ಷಮಿಸಿ ಬಿಡಿರಿ. ಅಯ್ಯೋ! ದುಷ್ಟನಾದ ಕಂಸನು ನಿಮಗೆ ಎಷ್ಟೊಂದು ಕಷ್ಟ ಕೊಟ್ಟನು. ಆದರೆ ಪರತಂತ್ರರಾಗಿದ್ದ ಕಾರಣ ತಮ್ಮ ಸೇವೆಯನ್ನು ನಮ್ಮಿಂದ ಮಾಡಲಾಗಲಿಲ್ಲ. ॥ ೯ ॥

ಶ್ರೀಶುಕ ಉವಾಚ

ಇತಿ ಮಾಯಾಮನುಷ್ಯಸ್ಯ ಹರೇರ್ವಿಶ್ವಾತ್ಮನೋ ಗಿರಾ ।
ಮೋಹಿತಾವಂಕಮಾರೋಪ್ಯ ಪರಿಷ್ವಜ್ಯಾಪತುರ್ಮುದಮ್
॥ ೧೦ ॥

ಸಿಂಚಂತಾವಶ್ರುಧಾರಾಭಿಃ ಸ್ನೇಹಪಾಶೇನ ಚಾವೃತೌ ।
ನ ಕಿಂಚಿದೂಚತೂ ರಾಜನ್ ಬಾಷ್ಪಕಂಠೌ ವಿಮೋಹಿತೌ
॥ ೧೧ ॥

ಏವಮಾಶ್ವಾಸ್ಯ ಪಿತರೌ ಭಗವಾನ್ ದೇವಕೀಸುತಃ ।
ಮಾತಾಮಹಂ ತೂಗ್ರಸೇನಂ ಯದೂನಾಮಕರೋನ್ನೃಪಮ್
॥ ೧೨ ॥

ಆಹ ಚಾಸ್ಮಾನ್ ಮಹಾರಾಜ ಪ್ರಜಾಶ್ಚಾಜ್ಞಪ್ತುಮರ್ಹಸಿ ।
ಯಯಾತಿಶಾಪಾದ್ಯದುಭಿರ್ನಾಸಿತವ್ಯಂ ನೃಪಾಸನೇ
॥ ೧೩ ॥

ಮಯಿ ಭೃತ್ಯ ಉಪಾಸೀನೇ ಭವತೋ ವಿಬುಧಾದಯಃ ।
ಬಲಿಂ ಹರಂತ್ಯವನತಾಃ ಕಿಮುತಾನ್ಯೇ ನರಾಧಿಪಾಃ
॥ ೧೪ ॥

ಸರ್ವಾನ್‌ಸ್ವಾನ್ ಜ್ಞಾತಿಸಂಬಂಧಾನ್
ದಿಗ್ಭ್ಯಃ ಕಂಸಭಯಾಕುಲಾಮ್ ।
ಯದುವೃಷ್ಣ್ಯಂಧಕಮಧು-
ದಾಶಾರ್ಹಕುಕುರಾದಿಕಾನ್
॥ ೧೫ ॥

ಸಭಾಜಿತಾನ್ ಸಮಾಶ್ವಾಸ್ಯ ವಿದೇಶಾವಾಸಕರ್ಶಿತಾನ್ ।
ನ್ಯವಾಸಯತ್ಸ್ವಗೇಹೇಷು ವಿತ್ತೈಃ ಸಂತರ್ಪ್ಯ ವಿಶ್ವಕೃತ್
॥ ೧೬ ॥

ಕೃಷ್ಣಸಂಕರ್ಷಣಭುಜೈರ್ಗುಪ್ತಾ ಲಬ್ಧಮನೋರಥಾಃ ।
ಗೃಹೇಷು ರೇಮಿರೇ ಸಿದ್ಧಾಃ ಕೃಷ್ಣರಾಮಗತಜ್ವರಾಃ
॥ ೧೭ ॥

ವೀಕ್ಷಂತೋಽಹರಹಃ ಪ್ರೀತಾ ಮುಕುಂದವದನಾಂಬುಜಮ್ ।
ನಿತ್ಯಂ ಪ್ರಮುದಿತಂ ಶ್ರೀಮತ್ಸದಯಸ್ಮಿತವೀಕ್ಷಣಮ್
॥ ೧೮ ॥

ತತ್ರ ಪ್ರವಯಸೋಽಪ್ಯಾಸನ್
ಯುವಾನೋಽತಿಬಲೌಜಸಃ ।
ಪಿಬಂತೋಽಕ್ಷೈರ್ಮುಕುಂದಸ್ಯ
ಮುಖಾಂಬುಜಸುಧಾಂ ಮುಹುಃ
॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ತನ್ನ ಲೀಲೆಯಿಂದ ಮನುಷ್ಯನಾಗಿದ್ದ ವಿಶ್ವಾತ್ಮಾ ಶ್ರೀಹರಿಯ ಈ ಮಾತುಗಳಿಂದ ಮೋಹಿತರಾದ ವಸುದೇವ-ದೇವಕಿಯರು ಅವರನ್ನು ತೊಡೆಯಲ್ಲಿತ್ತಿಕೊಂಡು ಗಾಢವಾಗಿ ಆಲಿಂಗಿಸಿ ಪರಮಾನಂದವನ್ನು ಪಡೆದರು. ॥ ೧೦ ॥ ರಾಜನೇ ! ಸ್ನೇಹಪಾಶದಲ್ಲಿ ಬಂಧಿತರಾದ ವಸುದೇವ-ದೇವಕಿಯರು ಮೋಹಿತರಾಗಿ ಆನಂದ ಬಾಷ್ಪಗಳಿಂದ ಅವರಿಗೆ ಅಭಿಷೇಕ ಮಾಡಿದರು. ಕಣ್ಣೀರು ಸುರಿಯುತ್ತಿದ್ದ ಕಂಠವು ಉಮ್ಮಳಿಸಿ ಬಂದು ಮಾತನಾಡಲು ಸಾಧ್ಯವಾಗಲಿಲ್ಲ. ॥ ೧೧ ॥

ದೇವಕೀನಂದನನಾದ ಭಗವಾನ್ ಶ್ರೀಕೃಷ್ಣನು ಹೀಗೆ ತಂದೆ ತಾಯಿಯರನ್ನು ಸಂತೈಸಿ, ತನ್ನ ತಾತನಾದ ಉಗ್ರಸೇನನನ್ನು ಯಾದವರಿಗೆ ರಾಜನನ್ನಾಗಿ ಮಾಡಿದನು. ॥ ೧೨ ॥ ಮತ್ತೆ ಹೇಳಿದನು – ಮಹಾರಾಜ ! ನಾವು ನಿಮ್ಮ ಪ್ರಜೆಯಾಗಿದ್ದೇವೆ. ನೀನು ನಮಗೆ ಯಾವ ಕಾರ್ಯಮಾಡಬೇಕೆಂಬುದನ್ನು ಆಜ್ಞಾಪಿಸು. ಯಯಾತಿಯ ಶಾಪದ ಕಾರಣದಿಂದ ಯದುವಂಶೀಯರು ರಾಜಸಿಂಹಾಸನದಲ್ಲಿ ಕುಳಿತುಕೊಳ್ಳಬಾರದು. (ಆದರೂ ನನ್ನ ಇಚ್ಛೆಯಂತೆ ನಿನ್ನನ್ನು ರಾಜನನ್ನಾಗಿಸಿದ್ದೇನೆ. ಇದರಿಂದ ನಿನಗೆ ಯಾವ ದೋಷವೂ ಉಂಟಾಗಲಾರದು). ॥ ೧೩ ॥ ನಾನು ಸೇವಕನಾಗಿ ನಿಮ್ಮ ಸೇವೆ ಮಾಡುತ್ತಿರುವವರೆಗೆ ದೊಡ್ಡ-ದೊಡ್ಡ ದೇವತೆಗಳೂ ತಲೆತಗ್ಗಿಸಿ ನಿಮಗೆ ಕಪ್ಪ-ಕಾಣಿಕೆಯನ್ನು ಕೊಡುವರು. ಹಾಗಿರುವಾಗ ಬೇರೆ ರಾಜರ ಬಗ್ಗೆ ಹೇಳುವುದೇನಿದೆ ? ॥ ೧೪ ॥ ಸಮಸ್ತ ವಿಶ್ವದ ವಿಧಾತನಾದ ಭಗವಾನ್ ಶ್ರೀಕೃಷ್ಣನು – ಕಂಸನ ಭಯದಿಂದ ವ್ಯಾಕುಲರಾಗಿ ಎಲ್ಲೆಲ್ಲೋ ಓಡಿಹೋಗಿದ್ದ ಯದು, ವೃಷ್ಣಿ, ಅಂಧಕ, ಮಧು, ದಾಶಾರ್ಹ ಮತ್ತು ಕುಕುರ ಮುಂತಾದ ವಂಶೀಯರಾದ ಸಮಸ್ತ ಸ್ವಜಾತೀಯ ಸಂಬಂಧಿಗಳನ್ನು ಹುಡುಕಿ-ಹುಡುಕಿ ಕರೆತಂದನು. ಭಗವಂತನು ಅವರೆಲ್ಲರನ್ನೂ ಸಾಂತ್ವನನೀಡಿ, ಸತ್ಕಾರಮಾಡಿ, ಅವರಿಗೆ ಹೇರಳ ಧನ-ಸಂಪತ್ತನ್ನು ಕೊಟ್ಟು ತೃಪ್ತಿಪಡಿಸಿ ತಮ್ಮ-ತಮ್ಮ ಮನೆಗಳಲ್ಲಿ ನೆಲೆಸುವಂತೆ ಮಾಡಿದನು. ॥ ೧೫-೧೬ ॥ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರ ಭುಜಬಲದಿಂದ ಸಮಸ್ತ ಯದುವಂಶೀಯರು ಸುರಕ್ಷಿತರಾಗಿದ್ದರು. ಅವನ ಕೃಪೆಯಿಂದ ಅವರಿಗೆ ಯಾವ್ದೇ ವಿಧದ ವ್ಯಥೆಯಿರಲಿಲ್ಲ, ದುಃಖವಿರಲಿಲ್ಲ. ಅವರೆಲ್ಲರೂ ಕೃತಾರ್ಥರಾಗಿ ತಮ್ಮ ಮನೆಗಳಲ್ಲಿ ಆನಂದದಿಂದ ಇರುತ್ತಿದ್ದರು. ॥ ೧೭ ॥ ಭಗವಾನ್ ಶ್ರೀಕೃಷ್ಣನ ವದನಾರವಿಂದವು ಆನಂದದ ಸದನವಾಗಿತ್ತು. ಅದು ನಿತ್ಯವೂ ಪ್ರಫುಲ್ಲಿತವಾಗಿದ್ದು ಎಂದೂ ಬಾಡದಿರುವ ಕಮಲವಾಗಿದೆ. ಅದರ ಸೌಂದರ್ಯವೇ ಆಹಾರವಾಗಿದೆ. ಮಂದಹಾಸ ಮತ್ತು ಕುಡಿನೋಟಗಳು ಮುಕುಂದನ ವದನದಲ್ಲಿ ಸದಾಕಾಲ ಕುಣಿಯುತ್ತಿದ್ದವು. ಯದುವಂಶೀಯರು ಪ್ರತಿದಿನವೂ ಅದರ ದರ್ಶನ ಮಾಡುತ್ತಾ ಆನಂದಮಗ್ನರಾಗಿ ಇರುತ್ತಿದ್ದರು. ॥ ೧೮ ॥ ಮಥುರೆಯ ವೃದ್ಧರೂ ಕೂಡ ಯುವಕರಂತೆ ಅತ್ಯಂತ ಬಲಿಷ್ಠರಾಗಿ ಉತ್ಸಾಹಿಗಳಾಗಿದ್ದರು. ಏಕೆಂದರೆ, ಅವರು ತಮ್ಮ ಕಣ್ಣುಗಳೆಂಬ ದೊನ್ನೆಗಳಿಂದ ಪದೇ-ಪದೇ ಭಗವಂತನ ಮುಖಾರವಿಂದದ ಅಮೃತಮಯ ಮಕರಂದವನ್ನು ಪಾನಮಾಡುತ್ತಾ ಇದ್ದರು. ॥ ೧೯ ॥

ಅಥ ನಂದಂ ಸಮಾಸಾದ್ಯ ಭಗವಾನ್ ದೇವಕೀಸುತಃ।
ಸಂಕರ್ಷಣಶ್ಚ ರಾಜೇಂದ್ರ ಪರಿಷ್ವಜ್ಯೇದಮೂಚತುಃ
॥ ೨೦ ॥

ಪಿತರ್ಯುವಾಭ್ಯಾಂ ಸ್ನಿಗ್ಧಾಭ್ಯಾಂ ಪೋಷಿತೌ ಲಾಲಿತೌ ಭೃಶಮ್ ।
ಪಿತ್ರೋರಭ್ಯಧಿಕಾ ಪ್ರೀತಿರಾತ್ಮಜೇಷ್ವಾತ್ಮನೋಽಪಿ ಹಿ
॥ ೨೧ ॥

ಸ ಪಿತಾ ಸಾ ಚ ಜನನೀ ಯೌ ಪುಷ್ಣೀತಾಂ ಸ್ವಪುತ್ರವತ್ ।
ಶಿಶೂನ್ ಬಂಧುಭಿರುತ್ಸೃಷ್ಟಾನಕಲ್ಪೈಃ ಪೋಷರಕ್ಷಣೇ
॥ ೨೨ ॥

ಯಾತ ಯೂಯಂ ವ್ರಜಂ ತಾತ
ವಯಂ ಚ ಸ್ನೇಹದುಃಖಿತಾನ್ ।
ಜ್ಞಾತೀನ್ ವೋ ದ್ರಷ್ಟುಮೇಷ್ಯಾಮೋ
ವಿಧಾಯ ಸುಹೃದಾಂ ಸುಖಮ್ ॥ ೨೩ ॥

ಏವಂ ಸಾಂತ್ವಯ್ಯ ಭಗವಾನ್ ನಂದಂ ಸವ್ರಜಮಚ್ಯುತಃ।
ವಾಸೋಽಲಂಕಾರಕುಪ್ಯಾದ್ಯೈರರ್ಹಯಾಮಾಸ ಸಾದರಮ್
॥ ೨೪ ॥

ಇತ್ಯುಕ್ತಸ್ತೌ ಪರಿಷ್ವಜ್ಯ ನಂದಃ ಪ್ರಣಯವಿಹ್ವಲಃ।
ಪೂರಯನ್ನಶ್ರುಭಿರ್ನೇತ್ರೇ ಸಹ ಗೋಪೈರ್ವ್ರಜಂ ಯಯೌ
॥ ೨೫ ॥

ಅಥ ಶೂರಸುತೋ ರಾಜನ್ ಪುತ್ರಯೋಃ ಸಮಕಾರಯತ್ ।
ಪುರೋಧಸಾ ಬ್ರಾಹ್ಮಣೈಶ್ಚ ಯಥಾವದ್ದ್ವಿಜಸಂಸ್ಕೃತಿಮ್
॥ ೨೬ ॥

ತೇಭ್ಯೋಽದಾದ್ದಕ್ಷಿಣಾ ಗಾವೋ ರುಕ್ಮಮಾಲಾಃ ಸ್ವಲಂಕೃತಾಃ ।
ಸ್ವಲಂಕೃತೇಭ್ಯಃ ಸಂಪೂಜ್ಯ ಸವತ್ಸಾಃ ಕೌಮಮಾಲಿನೀಃ
॥ ೨೭ ॥

ಯಾಃ ಕೃಷ್ಣರಾಮಜನ್ಮರ್ಕ್ಷೇ ಮನೋದತ್ತಾ ಮಹಾಮತಿಃ ।
ತಾಶ್ಚಾದದಾದನುಸ್ಮೃತ್ಯ ಕಂಸೇನಾಧರ್ಮತೋ ಹೃತಾಃ
॥ ೨೮ ॥

ತತಶ್ಚ ಲಬ್ಧಸಂಸ್ಕಾರೌ ದ್ವಿಜತ್ವಂ ಪ್ರಾಪ್ಯ ಸುವ್ರತೌ ।
ಗರ್ಗಾದ್ಯದುಕುಲಾಚಾರ್ಯಾದ್ಗಾಯತ್ರಂ ವ್ರತಮಾಸ್ಥಿತೌ
॥ ೨೯ ॥

ಪ್ರಭವೌ ಸರ್ವವಿದ್ಯಾನಾಂ ಸರ್ವಜ್ಞೌ ಜಗದೀಶ್ವರೌ ।
ನಾನ್ಯಸಿದ್ಧಾಮಲಜ್ಞಾನಂ ಗೂಹಮಾನೌ ನರೇಹಿತೈಃ
॥ ೩೦ ॥

ಪರೀಕ್ಷಿದ್ರಾಜನೇ! ದೇವಕೀನಂದನ ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮರಿಬ್ಬರೂ ನಂದರಾಜನ ಬಳಿಗೆ ಬಂದು ಅವರನ್ನು ಅಪ್ಪಿಕೊಂಡು ಅವರಲ್ಲಿ ಹೀಗೆಂದರು. ॥ ೨೦ ॥ ಮಾತಾ ಪಿತೃಗಳೇ! ಪ್ರೇಮಹೃದಯರಾದ ನೀವಿಬ್ಬರೂ ನಮ್ಮನ್ನು ಅಕ್ಕರೆಯಿಂದ ಲಾಲಿಸಿ ಪೋಷಿಸಿರುವಿರಿ. ತಂದೆ-ತಾಯಿಗಳಿಗೆ ತಮ್ಮ ಪ್ರಾಣಗಳಿಗಿಂತಲೂ ಅಧಿಕವಾಗಿ ತಮ್ಮ ಮಕ್ಕಳಲ್ಲಿ ಪ್ರೀತಿ ಇರುತ್ತದೆ. ॥ ೨೧ ॥ ಪಾಲನೆ ರಕ್ಷಣೆಗಳಲ್ಲಿ ಅಸಮರ್ಥರಾದ ಬಂಧುಗಳಿಂದ ಪರಿತ್ಯಜಿಸಲ್ಪಟ್ಟ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ಭಾವಿಸಿ ರಕ್ಷಿಸುವವರೇ ನಿಜವಾದ ತಾಯಿ-ತಂದೆಯರು. ॥ ೨೨ ॥ ಅಪ್ಪಾ! ಈಗ ನೀವೆಲ್ಲರೂ ಗೋಕುಲಕ್ಕೆ ಹೋಗಿರಿ. ನಾವಿಲ್ಲದೆ ವಾತ್ಸಲ್ಯದಿಂದಾಗಿ ನಿಮಗೆ ಬಹಳ ದುಃಖವಾಗುವುದರಲ್ಲಿ ಸಂದೇಹವೇ ಇಲ್ಲ. ಇಲ್ಲಿಯ ಸುಹೃದ್-ಸಂಬಂಧಿಗಳನ್ನು ಸುಖವಾಗಿರುವಂತೆ ಮಾಡಿ, ನಾವು ನಿಮ್ಮನ್ನು ಭೇಟ್ಟಿಯಾಗಲು ಆದಷ್ಟು ಬೇಗನೇ ಬರುವೆವು. ॥ ೨೩ ॥ ಭಗವಾನ್ ಶ್ರೀಕೃಷ್ಣನು ನಂದಗೋಪನೇ ಮೊದಲಾದ ವ್ರಜವಾಸಿಗಳನ್ನು ಹೀಗೆ ಸಾಂತ್ವನಗೊಳಿಸಿ, ಬಹಳ ಆದರದಿಂದ ವಸ್ತ್ರಾಭೂಷಣಗಳನ್ನು, ಅನೇಕ ಪಾತ್ರೆ-ಪಗಡಿಗಳನ್ನು ಕೊಟ್ಟು ಅವರನ್ನು ಸತ್ಕರಿಸಿದನು. ॥ ೨೪ ॥ ಭಗವಂತನ ಮಾತನ್ನು ಕೇಳಿ ನಂದರಾಜನು ಪ್ರೇಮದಿಂದ ವಿಹ್ವಲನಾಗಿ ಇಬ್ಬರೂ ಸಹೋದರರನ್ನು ಅಪ್ಪಿಕೊಂಡು, ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಗೋಪಾಲಕರೊಂದಿಗೆ ವ್ರಜಕ್ಕೆ ಪ್ರಯಾಣಮಾಡಿದನು. ॥ ೨೫ ॥

ಎಲೈ ರಾಜೇಂದ್ರನೇ! ಇದಾದ ಬಳಿಕ ವಸುದೇವನು ಕುಲ ಪುರೋಹಿತರಾದ ಗರ್ಗಾಚಾರ್ಯರಿಂದ ಹಾಗೂ ಇತರ ಬ್ರಾಹ್ಮಣರಿಂದ ಇಬ್ಬರೂ ಪುತ್ರರಿಗೆ ವಿಧಿವತ್ತಾಗಿ ದ್ವಿಜಾತಿಗೆ ಸಮುಚಿತವಾದ ಉಪನಯನ ಸಂಸ್ಕಾರವನ್ನು ಮಾಡಿಸಿದನು. ॥ ೨೬ ॥ ವಸುದೇವನು ವಿವಿಧ ಪ್ರಕಾರವಾಗಿ ವಸ್ತ್ರಾಭೂಷಣಗಳಿಂದ ಬ್ರಾಹ್ಮಣರನ್ನು ಸತ್ಕರಿಸಿ, ಅವರಿಗೆ ಬಹಳ ದಕ್ಷಿಣೆಯೊಂದಿಗೆ ಸುವರ್ಣ ಮಾಲೆಗಳಿಂದ ಸಮಲಂಕೃತವಾದ, ಅನೇಕ ಭೂಷಣಗಳಿಂದ ಮತ್ತು ರೇಷ್ಮೆವಸ್ತ್ರಗಳಿಂದ ಅಲಂಕರಿಸಿದ ಅನೇಕ ಸವತ್ಸಗೋವುಗಳನ್ನು ದಾನಮಾಡಿದನು. ॥ ೨೭ ॥ ಮಹಾಮತಿಯಾದ ವಸುದೇವನು ಭಗವಾನ್ ಶ್ರೀಕೃಷ್ಣ-ಬಲರಾಮರ ಜನ್ಮ ನಕ್ಷತ್ರದಂದು - ಮೊದಲು ಕಂಸನಿಂದ ಅನ್ಯಾಯದಿಂದ ಕಸಿದು ಕೊಳ್ಳಲ್ಪಟ್ಟ ಮೊದಲೇ ಮಾನಸಿಕವಾಗಿ ದಾನಮಾಡಿದ್ದ ಗೋವುಗಳನ್ನು ಈಗ ಬ್ರಾಹ್ಮಣರಿಗೆ ಪ್ರತ್ಯಕ್ಷವಾಗಿ ದಾನ ಮಾಡಿದನು. ॥ ೨೮ ॥ ಈ ಪ್ರಕಾರ ಯದುವಂಶದ ಪುರೋಹಿತರಾದ ಗರ್ಗಾಚಾರ್ಯರು ಸಂಸ್ಕಾರವನ್ನು ಮಾಡಿಸಿ ಬಲರಾಮ ಶ್ರೀಕೃಷ್ಣರು ದ್ವಿಜರಾದರು. ಅವರ ಬ್ರಹ್ಮಚರ್ಯವ್ರತವಾದರೋ ಅಖಂಡವಾಗಿಯೇ ಇತ್ತು. ಈಗ ಅವರು ಗಾಯತ್ರಿ ಪೂರ್ವಕ ಅಧ್ಯಯನ ಮಾಡಲು ಅದನ್ನು ನಿಯಮಿತವಾಗಿ ಸ್ವೀಕರಿಸಿದರು. ॥ ೨೯ ॥ ಜಗತ್ತಿನ ಏಕಮಾತ್ರ ಸ್ವಾಮಿಗಳೂ, ಸರ್ವಜ್ಞರೂ ಆದ ಶ್ರೀಕೃಷ್ಣ-ಬಲರಾಮರಿಂದಲೇ ಎಲ್ಲ ವಿದ್ಯೆಗಳು ಉದ್ಭವಿಸಿವೆ. ಅವರ ನಿರ್ಮಲಜ್ಞಾನವು ಸ್ವತಃಸಿದ್ಧವಾದುದು. ಹೀಗಿದ್ದರೂ ಅವರು ಮನುಷ್ಯರಂತೆ ಲೀಲೆಯನ್ನು ತೋರಿ ಅದನ್ನು ಅಡಗಿಸಿ ಇಟ್ಟಿದ್ದರು. ॥ ೩೦ ॥

ಅಥೋ ಗುರುಕುಲೇ ವಾಸಮಿಚ್ಛಂತಾವುಪಜಗ್ಮತುಃ ।
ಕಾಶ್ಯಂ ಸಾಂದೀಪನಿಂ ನಾಮ ಹ್ಯವಂತೀಪುರವಾಸಿನಮ್
॥ ೩೧ ॥

ಯಥೋಪಸಾದ್ಯ ತೌ ದಾಂತೌ ಗುರೌ ವೃತ್ತಿಮನಿಂದಿತಾಮ್ ।
ಗ್ರಾಹಯಂತಾವುಪೇತೌ ಸ್ಮ ಭಕ್ತ್ಯಾ ದೇವಮಿವಾದೃತೌ
॥ ೩೨ ॥

ತಯೋರ್ದ್ವಿಜವರಸ್ತುಷ್ಟಃ ಶುದ್ಧಭಾವಾನುವೃತ್ತಿಭಿಃ ।
ಪ್ರೋವಾಚ ವೇದಾನಖಿಲಾನ್ ಸಾಂಗೋಪನಿಷದೋ ಗುರುಃ
॥ ೩೩ ॥

ಸರಹಸ್ಯಂ ಧನುರ್ವೇದಂ ಧರ್ಮಾನ್ ನ್ಯಾಯಪಥಾಂಸ್ತಥಾ ।
ತಥಾ ಚಾನ್ವೀಕ್ಷಿಕೀಂ ವಿದ್ಯಾಂ ರಾಜನೀತಿಂ ಚ ಷಡ್ವಿಧಾಮ್
॥ ೩೪ ॥

ಸರ್ವಂ ನರವರಶ್ರೇಷ್ಠೌ ಸರ್ವವಿದ್ಯಾಪ್ರವರ್ತಕೌ ।
ಸಕೃನ್ನಿಗದಮಾತ್ರೇಣ ತೌ ಸಂಜಗೃಹತುರ್ನೃಪ
॥ ೩೫ ॥

ಅಹೋರಾತ್ರೈಶ್ಚತುಃಷಷ್ಟ್ಯಾ ಸಂಯತ್ತೌ ತಾವತೀಃ ಕಲಾಃ ।
ಗುರುದಕ್ಷಿಣಯಾऽऽಚಾರ್ಯಂ ಛಂದಯಾಮಾಸತುರ್ನೃಪ
॥ ೩೬ ॥

ದ್ವಿಜಸ್ತಯೋಸ್ತಂ ಮಹಿಮಾನಮದ್ಭುತಂ
ಸಂಲಕ್ಷ್ಯ ರಾಜನ್ನತಿಮಾನುಷೀಂ ಮತಿಮ್ ।
ಸಂಮಂತ್ರ್ಯ ಪತ್ನ್ಯಾ ಸಮಹಾರ್ಣವೇ ಮೃತಂ
ಬಾಲಂ ಪ್ರಭಾಸೇ ವರಯಾಂಬಭೂವ ಹ ॥ ೩೭ ॥

ತಥೇತ್ಯಥಾರುಹ್ಯ ಮಹಾರಥೌ ರಥಂ
ಪ್ರಭಾಸಮಾಸಾದ್ಯ ದುರಂತವಿಕ್ರಮೌ ।
ವೇಲಾಮುಪವ್ರಜ್ಯ ನಿಷೀದತುಃ ಕ್ಷಣಂ
ಸಿಂಧುರ್ವಿದಿತ್ವಾರ್ಹಣಮಾಹರತ್ತಯೋಃ ॥ ೩೮ ॥

ಈಗ ಅವರಿಬ್ಬರೂ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಬೇಕೆಂಬ ಇಚ್ಛೆಯಿಂದ ಅವಂತೀಪುರ (ಉಜ್ಜಯಿನಿ)ದಲ್ಲಿ ವಾಸಿಸುತ್ತಿದ್ದ ಕಾಶ್ಯಪಗೋತ್ರೀಯನಾದ ಸಾಂದೀಪನೀ ಮುನಿಯ ಬಳಿಗೆ ಹೋದರು. ॥ ೩೧ ॥ ಸೋದರರಿಬ್ಬರೂ ವಿಧಿಪೂರ್ವಕವಾಗಿ ಗುರುಗಳ ಬಳಿಯಲ್ಲಿ ವಾಸಿಸತೊಡಗಿದರು. ಆಗ ಅವರು ಬಹಿರಿಂದ್ರಿಯಗಳನ್ನು ನಿಗ್ರಹಿಸಿದ್ದರು. ಗುರುಗಳ ವಿಷಯದಲ್ಲಿ ನಿರ್ದುಷ್ಟವಾದ ವ್ಯವಹಾರವುಳ್ಳವರಾಗಿದ್ದರು. ಭಗವಾನ್ ಶ್ರೀಕೃಷ್ಣ ಬಲರಾಮರು ಗುರುಗಳ ಸೇವೆ ಹೇಗೆ ಮಾಡಬೇಕೆಂಬ ಆದರ್ಶವನ್ನು ಜನರ ಮುಂದಿಡುತ್ತಾ ಅತ್ಯಂತ ಭಕ್ತಿಯಿಂದ ಇಷ್ಟದೇವರಂತೆ ಗುರುಗಳ ಸೇವೆ ಮಾಡತೊಡಗಿದರು. ॥ ೩೨ ॥ ಶಿಷ್ಯರ ಶುದ್ಧ ಭಾವದಿಂದ ಕೂಡಿದ ಸೇವೆಯಿಂದ ಸಂತೃಪ್ತರಾದ ಬ್ರಾಹ್ಮಣ ಶ್ರೇಷ್ಠರಾದ ಸಾಂದೀಪನೀ ಗುರುಗಳು ಇಬ್ಬರೂ ಸೋದರರಿಗೆ ಶಿಕ್ಷಾ, ವ್ಯಾಕರಣಾದಿ ಆರು ಅಂಗಗಳೂ, ಉಪನಿಷತ್ತು ಸೇರಿ ನಾಲ್ಕೂ ವೇದಗಳನ್ನು ಉಪದೇಶಿಸಿದರು. ॥ ೩೩ ॥ ಇಷ್ಟು ಮಾತ್ರವಲ್ಲದೆ ಮಂತ್ರಗಳ ರಹಸ್ಯದಿಂದ ಕೂಡಿದ ಧನುರ್ವೇದವನ್ನೂ, ಮನುಸ್ಮೃತಿಯೇ ಮೊದಲಾದ ಧರ್ಮಶಾಸ್ತ್ರಗಳನ್ನೂ, ವೇದಾರ್ಥಗಳನ್ನು ನಿರೂಪಿಸುವ ಮೀಮಾಂಸವೇ ಮೊದಲಾದ ಶಾಸ್ತ್ರಗಳನ್ನು, ನ್ಯಾಯ (ತರ್ಕ) ಶಾಸ್ತ್ರವನ್ನು ಉಪದೇಶಿಸಿದರು. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ ಮತ್ತು ಆಶ್ರಯಗಳೆಂಬ ಆರು ವಿಧವಾದ ರಾಜನೀತಿಯನ್ನು ಕಲಿಸಿಕೊಟ್ಟರು. ॥ ೩೪ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣ-ಬಲರಾಮರೇ ಸಮಸ್ತ ವಿದ್ಯೆಗಳ ಪ್ರವರ್ತಕರು. ಆದ್ದರಿಂದ ಅವರು ಬೇರೆಯವರಿಂದ ಕಲಿಯಬೇಕಾದುದೇನೂ ಇರಲಿಲ್ಲ, ಆದರೂ ಮನುಷ್ಯರಂತೆ ವ್ಯವಹರಿಸುತ್ತಿದ್ದ ಅವರು ಏಕಸಂಧಿಗ್ರಾಹಿಗಳಾಗಿ ಸಮಸ್ತ ವಿದ್ಯೆಗಳನ್ನು ಕಲಿತುಕೊಂಡರು. ॥ ೩೫ ॥ ಪ್ರಯತ್ನಶೀಲರಾದ ರಾಮಕೃಷ್ಣರು ಅರವತ್ತುನಾಲ್ಕು ಕಲೆಗಳನ್ನು ಕೇವಲ ಅರವತ್ತನಾಲ್ಕು ದಿವಸಗಳಲ್ಲಿ ಕಲಿತುಕೊಂಡರು. ಹೀಗೆ ಅಧ್ಯಯನವು ಮುಗಿದಾಗ ಅವರು ಸಾಂದೀಪನೀ ಗುರುಗಳಲ್ಲಿ - 'ತಾವು ಇಚ್ಛಿಸುವ ಗುರುದಕ್ಷಿಣೆಯನ್ನು ನಮ್ಮಿಂದ ಪಡೆಯಿರಿ' ಎಂದು ಪ್ರಾರ್ಥಿಸಿಕೊಂಡರು. ॥ ೩೬ ॥

ಪರೀಕ್ಷಿತನೇ ! ಸಾಂದೀಪನೀ ಮುನಿಗಳು ಶ್ರೀಕೃಷ್ಣ-ಬಲರಾಮರ ಅದ್ಭುತ ಮಹಿಮೆಯನ್ನೂ, ಅಲೌಕಿಕ ಬುದ್ಧಿಮತ್ತೆಯನ್ನೂ ಆಗಲೇ ತಿಳಿದುಕೊಂಡಿದ್ದರು. ಅವರು ತಮ್ಮ ಪತ್ನಿಯಲ್ಲಿ ಸಮಾಲೋಚನೆಮಾಡಿ, ಶಿಷ್ಯರಲ್ಲಿ - 'ಪ್ರಭಾಸ ಕ್ಷೇತ್ರದಲ್ಲಿ ನಮ್ಮ ಏಕಮಾತ್ರ ಪುತ್ರನು ಸಮುದ್ರದಲ್ಲಿ ಮುಳುಗಿ ಸತ್ತುಹೋಗಿದ್ದನು. ಅವನನ್ನು ನೀವು ತಂದುಕೊಡಬೇಕು' ಅದೇ ಗುರುದಕ್ಷಿಣೆಯಾಗುವುದು ಎಂದು ನುಡಿದರು. ॥ ೩೭ ॥ ಅನಂತ ಪರಾಕ್ರಮಶಾಲಿಗಳು, ಮಹಾರಥಿಕರೂ ಆದ ಶ್ರೀಕೃಷ್ಣ-ಬಲರಾಮರು 'ಹಾಗೆಯೇ ಆಗಲಿ' ಎಂದು ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ರಥವನ್ನು ಹತ್ತಿ ಪ್ರಭಾಸಕ್ಷೇತ್ರಕ್ಕೆ ಹೋದರು. ಅವರು ಸಮುದ್ರ ತೀರಕ್ಕೆ ಹೋಗಿ ಕ್ಷಣಕಾಲ ಕುಳಿತುಕೊಂಡರು. ಇವರು ಸಾಕ್ಷಾತ್ ಪರಮೇಶ್ವರರಾಗಿದ್ದಾರೆ ಎಂದು ಅರಿತ ಸಮುದ್ರರಾಜನು ಅನೇಕ ವಿಧದ ಪೂಜಾಸಾಮಗ್ರಿಗಳನ್ನೆತ್ತಿಕೊಂಡು ಮನುಷ್ಯರೂಪದಿಂದ ಅವರ ಬಳಿಗೆ ಆಮಿಷಿದನು. ॥ ೩೮ ॥

ತಮಾಹ ಭಗವಾನಾಶು ಗುರುಪುತ್ರಃ ಪ್ರದೀಯತಾಮ್ ।
ಯೋಽಸಾವಿಹ ತ್ವಯಾ ಗ್ರಸ್ತೋ ಬಾಲಕೋ ಮಹತೋರ್ಮಿಣಾ
॥ ೩೯ ॥

ಸಮುದ್ರ ಉವಾಚ

ನೈವಾಹಾರ್ಷಮಹಂ ದೇವ ದೈತ್ಯಃ ಪಂಚಜನೋ ಮಹಾನ್ ।
ಅಂತರ್ಜಲಚರಃ ಕೃಷ್ಣ ಶಂಖರೂಪಧರೋಽಸುರಃ
॥ ೪೦ ॥

ಆಸ್ತೇ ತೇನಾಹೃತೋ ನೂನಂ ತಚ್ಛ್ರುತ್ವಾ ಸತ್ವರಂ ಪ್ರಭುಃ ।
ಜಲಮಾವಿಶ್ಯ ತಂ ಹತ್ವಾ ನಾಪಶ್ಯದುದರೇಽರ್ಭಕಮ್
॥ ೪೧ ॥

ತದಂಗಪ್ರಭವಂ ಶಂಖಮಾದಾಯ ರಥಮಾಗಮತ್ ।
ತತಃ ಸಂಯಮನೀಂ ನಾಮ ಯಮಸ್ಯ ದಯಿತಾಂ ಪುರೀಮ್
॥ ೪೨ ॥

ಗತ್ವಾ ಜನಾರ್ದನಃ ಶಂಖಂ ಪ್ರದಧ್ಮೌ ಸಹಲಾಯುಧಃ ।
ಶಂಖನಿರ್ಹ್ರಾದಮಾಕರ್ಣ್ಯ ಪ್ರಜಾಸಂಯಮನೋ ಯಮಃ
॥ ೪೩ ॥

ತಯೋಃ ಸಪರ್ಯಾಂ ಮಹತೀಂ ಚಕ್ರೇ ಭಕ್ತ್ಯುಪಬೃಂಹಿತಾಮ್ ।
ಉವಾಚಾವನತಃ ಕೃಷ್ಣಂ ಸರ್ವಭೂತಾಶಯಾಲಯಮ್ ।
ಲೀಲಾಮನುಷ್ಯ ಹೇ ವಿಷ್ಣೋ ಯುವಯೋಃ ಕರವಾಮ ಕಿಮ್
॥ ೪೪ ॥

ಶ್ರೀಭಗವಾನುವಾಚ

ಗುರುಪುತ್ರಮಿಹಾನೀತಂ ನಿಜಕರ್ಮನಿಬಂಧನಮ್ ।
ಆನಯಸ್ವ ಮಹಾರಾಜ ಮಚ್ಛಾಸನಪುರಸ್ಕೃತಃ
॥ ೪೫ ॥

ತಥೇತಿ ತೇನೋಪಾನೀತಂ ಗುರುಪುತ್ರಂ ಯದೂತ್ತಮೌ ।
ದತ್ತ್ವಾ ಸ್ವಗುರವೇ ಭೂಯೋ ವೃಣೀಷ್ವೇತಿ ತಮೂಚತುಃ
॥ ೪೬ ॥

ಗುರುರುವಾಚ

ಸಮ್ಯಕ್ ಸಂಪಾದಿತೋ ವತ್ಸ ಭವದ್ಭ್ಯಾಂ ಗುರುನಿಷ್ಕ್ರಯಃ ।
ಕೋ ನು ಯುಷ್ಮದ್ವಿಧಗುರೋಃ ಕಾಮಾನಾಮವಶಿಷ್ಯತೇ
॥ ೪೭ ॥

ಗಚ್ಛತಂ ಸ್ವಗೃಹಂ ವೀರೌ ಕೀರ್ತಿರ್ವಾಮಸ್ತು ಪಾವನೀ ।
ಛಂದಾಂಸ್ಯಯಾತಯಾಮಾನಿ ಭವಂತ್ವಿಹ ಪರತ್ರ ಚ
॥ ೪೮ ॥

ಭಗವಂತನು ಸಮುದ್ರದ ಬಳಿ ಇಂತೆಂದನು – ಓ ಸಮುದ್ರರಾಜನೇ! ಈ ಹಿಂದೆ ನೀನು ನಿನ್ನ ದೊಡ್ಡ-ದೊಡ್ಡ ತೆರೆಗಳ ಮೂಲಕ ನುಂಗಿಬಿಟ್ಟಿರುವ ನಮ್ಮ ಗುರುಪುತ್ರನನ್ನು ಶೀಘ್ರವಾಗಿ ತಂದೊಪ್ಪಿಸಿಬಿಡು. ॥ ೩೯ ॥

ಸಮುದ್ರರಾಜನು ಹೇಳುತ್ತಾನೆ – ದೇವಾಧಿದೇವನಾದ ಶ್ರೀಕೃಷ್ಣಸ್ವಾಮಿಯೇ! ನಾನು ಆ ಬಾಲಕನನ್ನು ಸೆಳೆದುಕೊಂಡು ಹೋಗಿಲ್ಲ. ನನ್ನ ಜಲದಲ್ಲಿ ಪಂಚಜನನೆಂಬ ಒಬ್ಬ ದೈತ್ಯಜಾತಿಯ ಮಹಾಸುರನು ಶಂಖರೂಪದಿಂದ ಇರುವನು. ಖಂಡಿತವಾಗಿ ಅವನೇ ಆ ಬಾಲಕನನ್ನು ಕದ್ದುಕೊಂಡು ಹೋಗಿರಬೇಕು. ॥ ೪೦ ॥ ಸಮುದ್ರರಾಜನ ಮಾತನ್ನು ಕೇಳುತ್ತಲೇ ಭಗವಂತನು ಸಮುದ್ರವನ್ನು ಹೊಕ್ಕು ಶಂಖಾಸುರನನ್ನು ಸಂಹರಿಸಿದನು. ಆದರೆ ಗುರುಪುತ್ರನು ಅವನ ಹೊಟ್ಟೆಯಲ್ಲಿ ಇರಲೇ ಇಲ್ಲ. ॥ ೪೧ ॥ ಆಗ ಅವನ ಶರೀರದಲ್ಲಿದ್ದ ಶಂಖವನ್ನು ಎತ್ತಿಕೊಂಡು ಬಂದು ಭಗವಂತನು ಬಲರಾಮನೊಡನೆ ಯಮರಾಜನ ಪರಮಪ್ರಿಯವಾದ ಸಂಯಮನೀಪುರಕ್ಕೆ ಹೋಗಿ ತನ್ನ ಶಂಖವನ್ನು ಊದಿದನು. ಶಂಖಧ್ವನಿಯನ್ನು ಕೇಳುತ್ತಲೇ ಸಮಸ್ತ ಪ್ರಜೆಗಳ ಶಾಸಕನಾದ ಯಮಧರ್ಮನು ಅವರನ್ನು ಆದರದಿಂದ ಸ್ವಾಗತಿಸಿ, ಭಕ್ತಿಭಾವದಿಂದ ವಿಧಿವತ್ತಾಗಿ ಅವರ ಮಹಾಪೂಜೆಯನ್ನು ಮಾಡಿದನು. ಅವನು ವಿನಮ್ರನಾಗಿ ತಲೆಯನ್ನು ತಗ್ಗಿಸಿ ಸಮಸ್ತ ಪ್ರಾಣಿಗಳ ಹೃದಯಗಳಲ್ಲಿ ವಿರಾಜಿಸುತ್ತಿರುವ ಸಚ್ಚಿದಾನಂದ ಸ್ವರೂಪನಾದ ಭಗವಾನ್ ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿಕೊಂಡನು – ಲೀಲಾಮಾನುಷ ವಿಗ್ರಹರಾದ ಸರ್ವವ್ಯಾಪಕ ಪರಮೇಶ್ವರರೇ! ನಾನು ನಿಮ್ಮಿಬ್ಬರ ಯಾವ ಸೇವೆಯನ್ನು ಮಾಡಲಿ? ॥ ೪೨-೪೪ ॥

ಶ್ರೀಭಗವಂತನು ಹೇಳಿದನು – ಯಮಧರ್ಮನೇ! ಅವನ ಕರ್ಮಬಂಧಕ್ಕೆ ಅನುಸಾರವಾಗಿ ನಮ್ಮ ಗುರುಪುತ್ರನು ಇಲ್ಲಿಗೆ ತರಲ್ಪಟ್ಟಿದ್ದಾನೆ. ಈಗ ನೀನು ಅವನ ಕರ್ಮದ ಕಡೆಗೆ ಲಕ್ಷ್ಯಕೊಡದೆ ನನ್ನ ಆಜ್ಞೆಯನ್ನು ಪುರಸ್ಕರಿಸಿ ಅವನನ್ನು ನನ್ನ ಬಳಿಗೆ ಕರೆದುಕೊಂಡು ಬಾ. ॥ ೪೫ ॥ ಯಮರಾಜನು 'ಹಾಗೆಯೇ ಆಗಲಿ' ಎಂದು ಹೇಳಿ ಭಗವಂತನ ಆದೇಶದಂತೆ ಅವನ ಗುರುಪುತ್ರನನ್ನು ತಂದು ಕೊಟ್ಟನು. ಆಗ ಯದುವಂಶ ಶಿರೋಮಣಿ ಶ್ರೀಕೃಷ್ಣನು ಮತ್ತು ಬಲರಾಮನು ಆ ಬಾಲಕನನ್ನು ಕರೆದುಕೊಂಡು ಉಜ್ಜಯಿನಿಗೆ ಹಿಂದಿರುಗಿ ತಮ್ಮ ಗುರುಗಳಿಗೆ ಅವನನ್ನು ಒಪ್ಪಿಸಿ – 'ಇನ್ನೇನಾದರೂ ತಾವು ಬಯಸುವಿರಾದರೆ ಕೇಳಿಕೊಳ್ಳಿರಿ' ಎಂದು ವಿನಂತಿಸಿಕೊಂಡರು. ॥ ೪೬ ॥

ಗುರುಗಳೆಂದರು – ವತ್ಸರಿರಾ! ನೀವಿಬ್ಬರೂ ಅನುಪಮವಾದ ಗುರುದಕ್ಷಿಣೆಯನ್ನೇ ಕೊಟ್ಟಿರುವಿರಿ. ಮತ್ತೇನನ್ನು ನಾನು ಕೇಳಲಿ? ನಿಮ್ಮಂತಹ ಪುರುಷೋತ್ತಮರನ್ನು ಶಿಷ್ಯರಾಗಿ ಹೊಂದಿರುವಾಗ ಈಡೇರಲಾಗದ ಮನೋರಥವು ಯಾವುದು ತಾನೇ ಉಳಿದೀತು? ॥ ೪೭ ॥ ವೀರರೇ! ಈಗ ನೀವಿಬ್ಬರೂ ಮನೆಗೆ ಹೋಗಿರಿ. ಲೋಕಗಳನ್ನೇ ಪಾವನಗೊಳಿಸುವ ಕೀರ್ತಿಯು ನಿಮಗುಂಟಾಗಲಿ. ನೀವು ಇಲ್ಲಿ ಕಲಿತಿರುವ ವಿದ್ಯೆಯು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ನಿತ್ಯನೂತನವಾಗಿದ್ದು ಎಂದಿಗೂ ವಿಸ್ಮೃತಿಯಾಗದಿರಲಿ. ॥ ೪೮ ॥

ಗುರುಣೈವಮನುಜ್ಞಾತೌ ರಥೇನಾನಿಲರಂಹಸಾ ।
ಆಯಾತೌ ಸ್ವಪುರಂ ತಾತ ಪರ್ಜನ್ಯನಿನದೇನ ವೈ
॥ ೪೯ ॥

ಸಮನಂದನ್ ಪ್ರಜಾಃ ಸರ್ವಾ ದೃಷ್ಟ್ವಾ ರಾಮಜನಾರ್ದನೌ ।
ಅಪಶ್ಯಂತ್ಯೋ ಬಹ್ವಹಾನಿ ನಷ್ಟಲಬ್ಧಧನಾ ಇವ
॥ ೫೦ ॥

ಪ್ರಿಯ ಪರೀಕ್ಷಿತ! ಮತ್ತೆ ಗುರುಗಳಿಂದ ಅನುಮತಿಯನ್ನು ಪಡೆದು, ವಾಯುವೇಗದಿಂದ ಚಲಿಸುವ, ಮೇಘದಂತಹ ಶಬ್ದವುಳ್ಳ ರಥದಲ್ಲಿ ಕುಳಿತುಕೊಂಡು ಸೋದರರಿಬ್ಬರೂ ಮಥುರೆಗೆ ಮರಳಿದರು. ॥ ೪೯॥ ಶ್ರೀಕೃಷ್ಣ-ಬಲರಾಮರನ್ನು ಅನೇಕ ದಿವಸಗಳಿಂದ ಕಾಣದೇ ಇರುವ ಮಥುರಾಪಟ್ಟಣದ ಪ್ರಜೆಗಳು ಅತ್ಯಂತ ದುಃಖಿತರಾಗಿದ್ದರು. ಬಲರಾಮ-ಶ್ರೀಕೃಷ್ಣರು ಬಂದಿರುವುದನ್ನು ನೋಡಿದ ಅವರೆಲ್ಲರೂ ಕಳೆದುಹೋದ ಧನವು ಮರಳಿ ದೊರಕಿದಂತೆ ಪರಮಾನಂದದಲ್ಲಿ ಮುಳುಗಿ ಹೋದರು. ॥ ೫೦ ॥

ನಲವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೪೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಗುರುಪುತ್ರಾನಯನಂ ನಾಮ ಪಂಚಚತ್ವಾರಿಂಶೋಽಧ್ಯಾಯಃ ॥ ೪೫ ॥

ನಲವತ್ತಾರನೆಯ ಅಧ್ಯಾಯ

ಉದ್ಧವನ ವ್ರಜಯಾತ್ರೆ

ಶ್ರೀಶುಕ ಉವಾಚ

ವೃಷ್ಣೀನಾಂ ಪ್ರವರೋ ಮಂತ್ರೀ ಕೃಷ್ಣಸ್ಯ ದಯಿತಃ ಸಖಾ ।
ಶಿಷ್ಯೋ ಬೃಹಸ್ಪತೇಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ
॥ ೧ ॥

ತಮಾಹ ಭಗವಾನ್ ಪ್ರೇಷ್ಠಂ ಭಕ್ತಮೇಕಾಂತಿನಂ ಕ್ವಚಿತ್ ।
ಗೃಹೀತ್ವಾ ಪಾಣಿನಾ ಪಾಣಿಂ ಪ್ರಪನ್ನಾರ್ತಿಹರೋ ಹರಿಃ
॥ ೨ ॥

ಗಚ್ಛೋದ್ಧವ ವ್ರಜಂ ಸೌಮ್ಯ ಪಿತ್ರೋರ್ನೌ ಪ್ರೀತಿಮಾವಹ ।
ಗೋಪೀನಾಂ ಮದ್ವಿಯೋಗಾಧಿಂ ಮತ್ಸಂದೇಶೈರ್ವಿಮೋಚಯ
॥ ೩ ॥

ತಾ ಮನ್ಮನಸ್ಕಾ ಮತ್ಪ್ರಾಣಾ ಮದರ್ಥೇ ತ್ಯಕ್ತದೈಹಿಕಾಃ ।
ಮಾಮೇವ ದಯಿತಂ ಪ್ರೇಷ್ಠಮಾತ್ಮಾನಂ ಮನಸಾ ಗತಾಃ ।
ಯೇ ತ್ಯಕ್ತಲೋಕಧರ್ಮಾಶ್ಚ ಮದರ್ಥೇ ತಾನ್ ಬಿಭರ್ಮ್ಯಹಮ್
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಉದ್ಧವನು ವೃಷ್ಣಿವಂಶೀಯರಲ್ಲಿ ಪ್ರಧಾನ ಪುರುಷನಾಗಿದ್ದನು. ಬೃಹಸ್ಪತಿಯ ಸಾಕ್ಷಾತ್ ಶಿಷ್ಯನಾಗಿದ್ದ ಅವನು ಪರಮ ಬುದ್ಧಿಶಾಲಿಯಾಗಿದ್ದನು. ಮಿಗಿಲಾಗಿ ಶ್ರೀಕೃಷ್ಣನ ಮಂತ್ರಿಯೂ ಪ್ರಿಯಸಖನೂ ಆಗಿದ್ದನು. ॥ ೧ ॥ ಒಂದು ದಿನ ಶರಣಾಗತರ ಸಮಸ್ತ ದುಃಖಿಗಳನ್ನು ಪರಿಹರಿಸುವ ಶ್ರೀಕೃಷ್ಣನು ತನ್ನ ಪ್ರಿಯಭಕ್ತನೂ, ಏಕಾಂತ ಪ್ರೇಮಿಯೂ ಆದ ಉದ್ಧವನ ಕೈಯನ್ನು ಹಿಡಿದುಕೊಂಡು ಈ ಮಾತನ್ನು ಹೇಳಿದನು. ॥ ೨ ॥ ಸೌಮ್ಯಸ್ವಭಾವದ ಉದ್ಧವನೇ! ನೀನೀಗಲೇ ಗೋಕುಲಕ್ಕೆ ಹೋಗು. ಅಲ್ಲಿರುವ ನನ್ನ ತಂದೆ-ತಾಯಿಗಳಾದ ನಂದ-ಯಶೋದೆಯರನ್ನು ನನ್ನ ಸಂಬಂಧವಾದ ಮಾತುಗಳಿಂದ ಆನಂದಗೊಳಿಸು. ಗೋಪಿಯರು ನನ್ನ ವಿರಹವ್ಯಾಧಿಯಿಂದ ದುಃಖಿತರಾಗಿರುವರು. ಅವರಿಗೆ ನನ್ನ ಸಂದೇಶವನ್ನು ಹೇಳಿ ಆ ವೇದನೆಯಿಂದ ಮುಕ್ತಗೊಳಿಸು. ॥ ೩ ॥ ಪ್ರಿಯ ಉದ್ಧವನೇ! ಗೋಪಿಕೆಯರ ಮನಸ್ಸು ನಿತ್ಯ-ನಿರಂತರವಾಗಿ ನನ್ನಲ್ಲೆ ತೊಡಗಿರುತ್ತದೆ. ಅವರ ಪ್ರಾಣ, ಜೀವನ, ಸರ್ವಸ್ವವೂ ನಾನೇ ಆಗಿರುವೆನು. ನನಗಾಗಿ ಅವರು ತಮ್ಮ ಪತಿ-ಪುತ್ರರೇ ಮೊದಲಾದ ಜ್ಞಾತಿ-ಬಂಧುಗಳನ್ನು ತೊರೆದು ಬಿಟ್ಟಿದ್ದಾರೆ. ನನ್ನನ್ನೇ ಅವರು ಪ್ರಿಯತಮನೆಂದೂ, ಸರ್ವಶ್ರೇಷ್ಠನಾದ ತಮ್ಮ ಆತ್ಮಸ್ವರೂಪನೆಂದೇ ತಮ್ಮ ಸಂಪೂರ್ಣ ಮನಸ್ಸಿನಿಂದ ಭಾವಿಸಿಕೊಂಡು ಬಿಟ್ಟಿದ್ದಾರೆ. ಯಾರು ನನ್ನ ಸಲುವಾಗಿ ಲೌಕಿಕ ಮತ್ತು ಪಾರಲೌಕಿಕ ಧರ್ಮವನ್ನು ಬಿಟ್ಟುಬಿಟ್ಟಿರುವರೋ ಅವರ ಭರಣ-ಪೋಷಣೆಗಳನ್ನು ನಾನೇ ಮಾಡುತ್ತೇನೆ. ಇದು ನನ್ನ ವ್ರತವಾಗಿದೆ. ॥ ೪ ॥

ಮಯಿ ತಾಃ ಪ್ರೇಯಸಾಂ ಪ್ರೇಷ್ಠೇ ದೂರಸ್ಥೇ ಗೋಕುಲಸ್ತ್ರಿಯಃ।
ಸ್ಮರಂತ್ಯೋಽಂಗ ವಿಮುಹ್ಯಂತಿ ವಿರಹೌತ್ಕಂಠ್ಯವಿಹ್ವಲಾಃ
॥ ೫ ॥

ಉದ್ಧವನೇ! ನಾನು ಆ ಗೋಪಿಯರ ಪರಮ ಪ್ರಿಯತಮ ನಾಗಿರುವೆನು. ನಾನು ಇಲ್ಲಿಗೆ ಬಂದನಂತರ ಅವರು ನನ್ನನ್ನು ಬಹಳ ದೂರದಲ್ಲಿರುವನೆಂದು ಭಾವಿಸಿ, ನನ್ನನ್ನು ಯಾವಾಗಲೂ ಸ್ಮರಿಸುತ್ತಾ ವಿಮೋಹಗೊಳ್ಳುತ್ತಾರೆ. ಕೆಲವೊಮ್ಮೆ ಮೂರ್ಛಿತರೂ ಆಗುತ್ತಾರೆ. ವಿರಹವೇದನೆಯಿಂದ ದುಃಖಿತೆಯರಾದ ಅವರು ತಮಗೆ ಇಷ್ಟನಾದ ನನ್ನನ್ನು ಹೊಂದಲು ತವಕಪಡುತ್ತಿರುವರು. ॥ ೫ ॥ ನನ್ನ ಪ್ರೇಯಸಿಯರಾದ ಗೋಪಿಯರು ಇದುವರೆಗೆ ಬಹಳ ಕಷ್ಟದಿಂದ ಮತ್ತು ಪ್ರಯತ್ನದಿಂದ ತಮ್ಮ ಪ್ರಾಣಗಳನ್ನು ಉಳಿಸಿಕೊಂಡಿರುವರು. 'ನಾನು ಪುನಃ ನಿಮ್ಮಲ್ಲಿಗೆ ಬರುವೆನು' ಎಂಬ ನನ್ನ ಇದೊಂದು ಸಂದೇಶವೇ ಅವರಿಗೆ ಜೀವನಾಧಾರ ವಾಗಿದೆ. ಉದ್ಧವನೇ! ಇನ್ನೇನು ಹೇಳಲಿ? ನಾನು. ನಾನೇ ಅವರ ಆತ್ಮನಾಗಿರುವೆನು. ಅವರು ನಿತ್ಯ-ನಿರಂತರ ನನ್ನಲ್ಲಿಯೆ ತನ್ಮಯ ರಾಗಿ ಇರುತ್ತಾರೆ. ॥ ೬ ॥

ಧಾರಯಂತ್ಯತಿಕೃಚ್ಛ್ರೇಣ ಪ್ರಾಯಃ ಪ್ರಾಣಾನ್ ಕಥಂಚನ।
ಪ್ರತ್ಯಾಗಮನಸಂದೇಶೈರ್ಬಲ್ಲವ್ಯೋ ಮೇ ಮದಾತ್ಮಿಕಾಃ
॥ ೬ ॥

ಶ್ರೀಶುಕ ಉವಾಚ

ಇತ್ಯುಕ್ತ ಉದ್ಧವೋ ರಾಜನ್ ಸಂದೇಶಂ ಭರ್ತುರಾದೃತಃ।
ಆದಾಯ ರಥಮಾರುಹ್ಯ ಪ್ರಯಯೌ ನಂದಗೋಕುಲಮ್
॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಈ ಮಾತನ್ನು ಕೇಳಿದಾಗ ಉದ್ಧವನು ಅತ್ಯಂತ ಆದರದಿಂದ ತನ್ನ ಸ್ವಾಮಿಯ ಸಂದೇಶವನ್ನು ಹೊತ್ತುಕೊಂಡು ರಥದಲ್ಲಿ ಕುಳಿತು ನಂದಗೋಕುಲದ ಕಡೆಗೆ ಹೊರಟನು. ॥ ೭ ॥ ಭಾಗ್ಯಶಾಲಿಯಾದ ಉದ್ಧವನು ಸೂರ್ಯಾಸ್ತಕ್ಕೆ ಸರಿಯಾಗಿ ನಂದ ಗೋಕುಲಕ್ಕೆ ತಲುಪಿದನು. ಆ ಸಮಯದಲ್ಲಿ ಹಸುಗಳು ಕಾಡಿನಿಂದ ಮರಳುತ್ತಿದ್ದವು. ಅವರ ಗೊರಸುಗಳಿಂದ ಎದ್ದ ಧೂಳಿಯು ಉದ್ಧವನ ರಥವನ್ನು ಮುಚ್ಚಿಬಿಟ್ಟಿತು. ॥ ೮ ॥ ಗೋವು ಗಳನ್ನು ಸಂಪರ್ಕಿಸಲು ಕೊಬ್ಬಿದ ಹೋರಿಗಳು ತಮ್ಮ-ತಮ್ಮಲ್ಲಿಯೇ ಸ್ಪರ್ಧಿಸುತ್ತಿದ್ದವು. ಅವುಗಳ ಗರ್ಜನೆಯು ವ್ರಜದಲ್ಲೆಲ್ಲ ಪ್ರತಿಧ್ವನಿಸುತ್ತಿತ್ತು. ಸ್ವಲ್ಪ ದಿವಸಗಳ ಹಿಂದೆ ಈಯ್ದ ಹಸುಗಳು ತಮ್ಮ ಕೆಚ್ಚಲುಗಳು ಭಾರವಾಗಿದ್ದರೂ ಲೆಕ್ಕಿಸದೆ ತಮ್ಮ-ತಮ್ಮ ಕರುಗಳ ಕಡೆಗೆ ನಾಗಲೋಟದಿಂದ ಓಡಿಹೋಗುತ್ತಿದ್ದವು. ॥ ೯ ॥ ಅತ್ತಲಿತ್ತ ನೆಗೆ-ನೆಗೆದುಕೊಂಡು ಓಡಾಡುತ್ತಿದ್ದ ಬಿಳಿಯ ಕರುಗಳಿಂದ ಗೋಕುಲವು ಸಮಲಂಕೃತವಾಗಿತ್ತು. ವೇಣುನಾದದೊಡನೆ ಹಸುಗಳು ಹಾಲನ್ನು ಕರೆಯುವ 'ಘರ್-ಘರ್' ಶಬ್ದವು ಕೇಳಿ ಬರುತ್ತಿದ್ದು ಕಿವಿಗಳಿಗೆ ಆಪ್ಯಾಯಮಾನವಾಗಿದ್ದಿತು. ॥ ೧೦ ॥ ವಸ್ತ್ರಾಭರಣಗಳಿಂದ ಸಮಲಂಕೃತರಾಗಿ ಬಲರಾಮ-ಶ್ರೀಕೃಷ್ಣರ ಮಂಗಲಮಯ ಚರಿತ್ರೆಗಳನ್ನು ಹಾಡುತ್ತಿದ್ದ ಗೋಪಿಯರಿಂದ ಮತ್ತು ಗೋಪಾಲಕರಿಂದಲೂ ಗೋಕುಲದ ಶೋಭೆಯು ಇನ್ನೂ ಹೆಚ್ಚಿತ್ತು. ॥ ೧೦ ॥ ಗೋಪಾಲರ ಮನೆಗಳಲ್ಲಿ ಅಗ್ನಿ, ಸೂರ್ಯ, ಅತಿಥಿ, ಗೋವು, ಬ್ರಾಹ್ಮಣ ಮತ್ತು ದೇವತೆ-ಪಿತೃಗಳ ಪೂಜೆಗಳು ಯಥಾವಿಧಿಯಾಗಿ ನಡೆದಿತ್ತು. ಧೂಪಗಳ ಸುವಾಸನೆಯು ಸರ್ವತ್ರ ಹರಡಿತ್ತು. ದೀಪಗಳು ಬೆಳಗುತ್ತಿದ್ದವು. ಅವರ ಮನೆಗಳನ್ನು ಪುಷ್ಪಗಳಿಂದ ಅಲಂಕರಿಸಿದ್ದರು. ಇಂತಹ ಮನೋಹರವಾದ ಮನೆಗಳಿಂದ ಇಡೀ ಗೋಕುಲವು ಇನ್ನೂ ಹೆಚ್ಚಾಗಿಯೇ ಶೋಭಿಸುತ್ತಿತ್ತು. ॥ ೧೨ ॥

ಪ್ರಾಪ್ತೋ ನಂದವ್ರಜಂ ಶ್ರೀಮಾನ್ ನಿಮ್ಲೋಚತಿ ವಿಭಾವಸೌ।
ಛನ್ನಯಾನಃ ಪ್ರವಿಶತಾಂ ಪಶೂನಾಂ ಖುರರೇಣುಭಿಃ
॥ ೮ ॥

ವಾಸಿತಾರ್ಥೇಽಭಿಯುಧ್ಯದ್ಭಿರ್ನಾದಿತಂ ಶುಷ್ಮಿಭಿರ್ವೃಷೈಃ।
ಧಾವಂತೀಭಿಶ್ಚ ವಾಸ್ರಾಭಿರೂಧೋಭಾರೈಃ ಸ್ವವತ್ಸಕಾನ್
॥ ೯ ॥

ಇತಸ್ತತೋ ವಿಲಂಘದ್ಭಿರ್ಗೋವತ್ಸೈರ್ಮಂಡಿತಂ ಸಿತೈಃ।
ಗೋದೋಹಶಬ್ದಾಭಿರವಂ ವೇಣೂನಾಂ ನಿಃಸ್ವನೇನ ಚ
॥ ೧೦ ॥

ಗಾಯಂತೀಭಿಶ್ಚ ಕರ್ಮಾಣಿ ಶುಭಾನಿ ಬಲಕೃಷ್ಣಯೋಃ।
ಸ್ವಲಂಕೃತಾಭಿರ್ಗೋಪೀಭಿರ್ಗೋಪೈಶ್ಚ ಸುವಿರಾಜಿತಮ್
॥ ೧೧ ॥

ಅಗ್ನ್ಯರ್ಕಾತಿಥಿಗೋವಿಪ್ರಪಿತೃದೇವಾರ್ಚನಾನ್ವಿತೈಃ
ಧೂಪದೀಪೈಶ್ಚ ಮಾಲ್ಯೈಶ್ಚ ಗೋಪಾವಾಸೈರ್ಮನೋರಮಮ್
॥ ೧೨ ॥

ಸರ್ವತಃ ಪುಷ್ಪಿತವನಂ ದ್ವಿಜಾಲಿಕುಲನಾದಿತಮ್ ।
ಹಂಸಕಾರಂಡವಾಕೀರ್ಣೈಃ ಪದ್ಮಷಂಡೈಶ್ಚ ಮಂಡಿತಮ್
॥ ೧೩ ॥

ಗೋಕುಲದ ನಾಲ್ಕು ಕಡೆಗಳಲ್ಲಿಯೂ ದುಂಬಿಗಳಿಂದ ಝೇಂಕರಿಸಲ್ಪಟ್ಟ ಹೂದೋಟಗಳಿದ್ದು ಅಲ್ಲಿ ಪಕ್ಷಿಗಳು ಚಿಲಿಪಿಲಿ ಗುಟ್ಟುತ್ತಿದ್ದವು. ಕಮಲದ ದಂಟುಗಳಿಂದ ಸಮಲಂಕೃತವಾದ ಹಾಗೂ ಹಂಸ-ಕಾರಂಡವ ಪಕ್ಷಿಗಳಿಂದ ವ್ಯಾಪ್ತವಾದ ಸುಂದರ ಸರೋವರಗಳಿಂದಲೂ ಕೂಡಿದ್ದು ಗೋಕುಲವು ಅತ್ಯಂತ ಶೋಭಾಯಮಾನವಾಗಿತ್ತು. ॥ ೧೩ ॥

ತಮಾಗತಂ ಸಮಾಗಮ್ಯ ಕೃಷ್ಣಸ್ಯಾನುಚರಂ ಪ್ರಿಯಮ್ ।
ನಂದಃ ಪ್ರೀತಃ ಪರಿಷ್ವಜ್ಯ ವಾಸುದೇವಧಿಯಾರ್ಚಯತ್
॥ ೧೪ ॥

ಶ್ರೀಕೃಷ್ಣನ ಅನುಚರನೂ, ಅವನಿಗೆ ಅತ್ಯಂತ ಪ್ರಿಯನೂ ಆದ ಉದ್ಧವನು ಗೋಕುಲಕ್ಕೆ ಬಂದೊಡನೆ ನಂದಗೋಪನು ಮುಂದಾಗಿ ಹೋಗಿ ಅವನನ್ನು ವಾಸುದೇವನೇ ಬಂದಿರುವನೆಂದು ಭಾವಿಸಿ ಅತ್ಯಂತ ಪ್ರೀತಿಯಿಂದ ಆಲಿಂಗಿಸಿಕೊಂಡು ಸುಮ್ಮಾನಿಸಿದನು. ॥ ೧೪ ॥

ಭೋಜಿತಂ ಪರಮಾನ್ನೇನ ಸಂವಿಷ್ಟಂ ಕಶಿಪೌ ಸುಖಮ್ ।
ಗತಶ್ರಮಂ ಪರ್ಯಪೃಚ್ಛತ್ ಪಾದಸಂವಾಹನಾದಿಭಿಃ
॥ ೧೫ ॥

ಪಾಯಸಾದಿಗಳಿಂದ ಕೂಡಿದ ಭೋಜನವನ್ನು ಮಾಡಿಸಿದನು. ಬಳಿಕ ಉದ್ಧವನು ಮೆತ್ತೆಯಮೇಲೆ ಕುಳಿತುಕೊಂಡಾಗ ಸೇವಕರು ಕೈಕಾಲುಗಳನ್ನು ಒತ್ತಿ, ಗಾಳಿಯನ್ನು ಬೀಸಿ ಆಯಾಸವನ್ನು ಪರಿಹರಿಸಿದರು. ॥ ೧೫ ॥ ಆಗ ನಂದಗೋಪನು ಅವನನ್ನು ಪ್ರಶ್ನಿಸಿದನು – ಪರಮಭಾಗ್ಯಶಾಲಿಯಾದ ಉದ್ಧವನೇ! ನನಗೆ ಗೆಳೆಯನಾದ ವಸುದೇವನು ಸೆರೆಮನೆಯಿಂದ ಬಿಡುಗಡೆ ಹೊಂದಿ, ತನ್ನ ಆತ್ಮೀಯರಾದ ಸ್ವಜನರಿಂದಲೂ ಭಾರ್ಯಾಪುತ್ರರಿಂದಲೂ ಕೂಡಿ ಕುಶಲಿಯಾಗಿರುವನಲ್ಲವೇ ? ॥ ೧೬ ॥ ಪಾಪಿಯಾದ ಕಂಸನು ತನ್ನ ಪಾಪದ ಫಲಸ್ವರೂಪವಾಗಿ ಅನುಯಾಯಿಗಳೊಂದಿಗೆ ಮರಣ ಹೊಂದಿದನು. ಇದು ಮಹಾಸೌಭಾಗ್ಯದ ವಿಷಯವೇ ಆಗಿದೆ. ಏಕೆಂದರೆ, ಸ್ವಭಾವದಿಂದಲೇ ಧಾರ್ಮಿಕರೂ ಸಾಧುಗಳೂ ಆದ ಯದುವಂಶಿಯರನ್ನು ಅವನು ಸದಾ ದ್ವೇಷಿಸುತ್ತಿದ್ದನು. ॥ ೧೭ ॥ ಆದಿರಲಿ, ಉದ್ಧವನೇ! ಶ್ರೀಕೃಷ್ಣನು ಎಂದಾದರೂ ನಮ್ಮಗಳನ್ನು ನೆನೆದುಕೊಳ್ಳುವನೇ ? ಇವಳು ಅವನ ತಾಯಿಯಾಗಿದ್ದಾಳೆ. ಇವರು ಸ್ವಜನ-ಸಂಬಂಧಿಗಳು. ಸ್ನೇಹಿತರಾದ ಗೋಪರಿದ್ದಾರೆ. ಅವನನ್ನೇ ತನ್ನ ಸ್ವಾಮಿಯೆಂದೂ, ಸರ್ವಸ್ವವೆಂದೂ ಭಾವಿಸುವ ಈ ವ್ರಜವಿದೆ. ಅವನು ಪ್ರೀತಿಸುತ್ತಿದ್ದ ಗೋವುಗಳಿವೆ. ಅವನು ವಿಹರಿಸಿದ ವೃಂದಾವನ ಮತ್ತು ಈ ಗೋವರ್ಧನವಿದೆ. ಇವುಗಳನ್ನು ಎಂದಾದರೂ ಸ್ಮರಿಸುತ್ತಿರುವನೇ ? ॥ ೧೮ ॥ ಉದ್ಧವಾ! ತನ್ನ ಸುಹೃದ್-ಬಂಧುಗಳನ್ನು ನೋಡಲು ನಮ್ಮ ಗೋವಿಂದನು ಒಮ್ಮೆಯಾದರೂ ಬರುವನೇ ? ಎಂಬುದನ್ನಾದರೂ ಹೇಳು. ಅವನು ಇಲ್ಲಿಗೆ ಬಂದರೆ ನಾವು ಅವನ ನೀಳವಾದ ಮೂಗು, ಮಧುರವಾದ ಹಾಸ್ಯ ಮತ್ತು ಕುಡಿನೋಟದಿಂದ ಕೂಡಿದ ಮುಖಕಮಲವನ್ನಾದರೂ ನೋಡುವೆವು. ॥ ೧೯ ॥ ಉದ್ಧವನೇ! ಶ್ರೀಕೃಷ್ಣನ ಹೃದಯ ಉದಾರವಾಗಿದೆ. ಅವನ ಶಕ್ತಿ ಅನಂತವಾಗಿದೆ. ಅವನು ದಾವಾಗ್ನಿಯಿಂದ, ಜಿರುಗಾಳಿ-ಮಳೆಯಿಂದ, ವೃಷಾಸುರ ಮತ್ತು ಅಜಗರಾದಿ ನಿವಾರಿಸಲು ಸಾಧ್ಯವಲ್ಲದ ಮೃತ್ಯುವಿನ ನಿಮಿತ್ತಗಳಿಂದ ನಮ್ಮನ್ನು ಒಮ್ಮೆಯಲ್ಲ, ಅನೇಕ ಬಾರಿ ರಕ್ಷಿಸಿರುವನು. ॥ ೨೦ ॥ ಉದ್ಧವಾ! ನಾವು ಶ್ರೀಕೃಷ್ಣನ ವಿಚಿತ್ರ ಚರಿತ್ರಗಳನ್ನು, ಅವನ ವಿಲಾಸಪೂರ್ಣವಾದ ಕುಡಿನೋಟವನ್ನು, ಉನ್ಮುಕ್ತವಾದ ನಗುವನ್ನು, ಮಧುರವಾದ ಮಾತುಗಳನ್ನು ಸ್ಮರಿಸುತ್ತಾ ಇರುತ್ತೇವೆ. ಈಗ ನಮ್ಮಿಂದ ಯಾವುದೇ ಕೆಲಸ ಕಾರ್ಯಗಳು ನಡೆಯದಷ್ಟು ಅವನ ಸ್ಮರಣೆಯಲ್ಲೇ ತನ್ಮಯರಾಗಿರುತ್ತೇವೆ. ॥ ೨೧ ॥

ಕಚ್ಚಿದಂಗ ಮಹಾಭಾಗ ಸಖಾ ನಃ ಶೂರನಂದನಃ ।
ಆಸ್ತೇ ಕುಶಲ್ಯಪತ್ಯಾದ್ಯೈರ್ಯುಕ್ತೋ ಮುಕ್ತಃ ಸುಹೃದ್ವೃತಃ
॥ ೧೬ ॥

ದಿಷ್ಟ್ಯಾ ಕಂಸೋ ಹತಃ ಪಾಪಃ ಸಾನುಗಃ ಸ್ವೇನ ಪಾಪ್ಮನಾ ।
ಸಾಧೂನಾಂ ಧರ್ಮಶೀಲಾನಾಂ ಯದೂನಾಂ ದ್ವೇಷ್ಟಿ ಯಃ ಸದಾ
॥ ೧೭ ॥

ಅಪಿ ಸ್ಮರತಿ ನಃ ಕೃಷ್ಣೋ ಮಾತರಂ ಸುಹೃದಃ ಸಖೀನ್ ।
ಗೋಪಾನ್ ವ್ರಜಂ ಚಾತ್ಮನಾಥಂ ಗಾವೋ ವೃಂದಾವನಂ ಗಿರಿಮ್
॥ ೧೮ ॥

ಅಪ್ಯಾಯಾಸ್ಯತಿ ಗೋವಿಂದಃ ಸ್ವಜನಾನ್ ಸಕೃದೀಕ್ಷಿತುಮ್ ।
ತರ್ಹಿ ದ್ರಕ್ಷ್ಯಾಮ ತದ್ವಕ್ತ್ರಂ ಸುನಸಂ ಸುಸ್ಮಿತೇಕ್ಷಣಮ್
॥ ೧೯ ॥

ದಾವಾಗ್ನೇರ್ವಾತವರ್ಷಾಚ್ಚ ವೃಷಸರ್ಪಾಚ್ಚ ರಕ್ಷಿತಾಃ ।
ದುರತ್ಯಯೇಭ್ಯೋ ಮೃತ್ಯುಭ್ಯಃ ಕೃಷ್ಣೇನ ಸುಮಹಾತ್ಮನಾ
॥ ೨೦ ॥

ಸ್ಮರತಾಂ ಕೃಷ್ಣವೀರ್ಯಾಣಿ ಲೀಲಾಪಾಂಗನಿರೀಕ್ಷಿತಮ್ ।
ಹಸಿತಂ ಭಾಷಿತಂ ಚಾಂಗ ಸರ್ವಾ ನಃ ಶಿಥಿಲಾಃ ಕ್ರಿಯಾಃ
॥ ೨೧ ॥

ಸರಿಚ್ಛೈಲವನೋದ್ದೇಶಾನ್ ಮುಕುಂದಪದಭೂಷಿತಾನ್ ।
ಆಕ್ರೀಡಾನೀಕ್ಷಮಾಣಾನಾಂ ಮನೋ ಯಾತಿ ತದಾತ್ಮತಾಮ್
॥ ೨೨ ॥

ಮನ್ಯೇ ಕೃಷ್ಣಂ ಚ ರಾಮಂ ಚ ಪ್ರಾಪ್ತಾವಿಹ ಸುರೋತ್ತಮೌ ।
ಸುರಾಣಾಂ ಮಹದರ್ಥಾಯ ಗರ್ಗಸ್ಯ ವಚನಂ ಯಥಾ
॥ ೨೩ ॥

ಕಂಸಂ ನಾಗಾಯುತಪ್ರಾಣಂ ಮಲ್ಲೌ ಗಜಪತಿಂ ತಥಾ ।
ಅವಧಿಷ್ಟಾಂ ಲೀಲಯೈವ ಪಶೂನಿವ ಮೃಗಾಧಿಪಃ
॥ ೨೪ ॥

ತಾಲತ್ರಯಂ ಮಹಾಸಾರಂ ಧನುರ್ಯಷ್ಟಿಮಿವೇಭರಾಟ್ ।
ಬಭಂಜೈಕೇನ ಹಸ್ತೇನ ಸಪ್ತಾಹಮದಧಾದ್ಗಿರಿಮ್
॥ ೨೫ ॥

ಪ್ರಲಂಬೋ ಧೇನುಕೋ೽ರಿಷ್ಟೋ ಕೇಶೀ ತೃಣಾವರ್ತೋ ಬಕಾದಯಃ ।
ದೈತ್ಯಾಃ ಸುರಾಸುರಜಿತೋ ಹತಾ ಯೇನೇಹ ಲೀಲಯಾ
॥ ೨೬ ॥

ಶ್ರೀಶುಕ ಉವಾಚ

ಇತಿ ಸಂಸ್ಮೃತ್ಯ ಸಂಸ್ಮೃತ್ಯ ನಂದಃ ಕೃಷ್ಣಾನುರಕ್ತಧೀಃ ।
ಅತ್ಯುತ್ಕಂಠೋ೽ಭವತ್ತೂಷ್ಣೀಂ ಪ್ರೇಮಪ್ರಸರವಿಹ್ವಲಃ
॥ ೨೭ ॥

ಯಶೋದಾ ವರ್ಣ್ಯಮಾನಾನಿ ಪುತ್ರಸ್ಯ ಚರಿತಾನಿ ಚ ।
ಶೃಣ್ವಂತ್ಯಶ್ರೂಣ್ಯವಾಸ್ರಾಕ್ಷೀತ್ಸ್ನೇಹಸ್ನುತಪಯೋಧರಾ
॥ ೨೮ ॥

ತಯೋರಿತ್ಥಂ ಭಗವತಿ ಕೃಷ್ಣೇ ನಂದಯಶೋದಯೋಃ ।
ವೀಕ್ಷ್ಯಾನುರಾಗಂ ಪರಮಂ ನಂದಮಾಹೋದ್ಧವೋ ಮುದಾ
॥ ೨೯ ॥

ಉದ್ಧವ ಉವಾಚ

ಯುವಾಂ ಶ್ಲಾಘ್ಯತಮೌ ನೂನಂ ದೇಹಿನಾಮಿಹ ಮಾನದ ।
ನಾರಾಯಣೇ೽ಖಿಲಗುರೌ ಯತ್ಕೃತಾ ಮತಿರೀದೃಶೀ
॥ ೩೦ ॥

ಶ್ರೀಕೃಷ್ಣನು ಜಲಕ್ರೀಡೆಯಾಡಿದ ಈ ನದಿಯನ್ನು ನೋಡುವಾಗ, ತನ್ನ ಒಂದೇ ಕೈಯಿಂದ ಎತ್ತಿದ ಗಿರಿರಾಜ ಗೋವರ್ಧನವನ್ನೂ, ಅವನು ಗೋವುಗಳನ್ನು ಮೇಯಿಸುತ್ತಾ, ಕೊಳಲನ್ನು ನುಡಿಸುತ್ತಾ ವಿಹರಿಸಿದ ಈ ವೃಂದಾವನವನ್ನು, ಅವನು ತನ್ನ ಸ್ನೇಹಿತರೊಂದಿಗೆ ಅನೇಕ ವಿಧದ ಆಟವಾಡುತ್ತಿದ್ದ ಸ್ಥಳಗಳನ್ನು ನೋಡುವಾಗ, ಇನ್ನೂ ಅಳಿಯದೇ ಇರುವ ಅವನ ಪದಚಿಹ್ನೆಯನ್ನು ನೋಡಿದಾಗ ನಮ್ಮ ಮನಸ್ಸು ಶ್ರೀಕೃಷ್ಣಮಯವಾಗಿ ಹೋಗುತ್ತದೆ. ॥ ೨೨ ॥ ದೇವಶ್ರೇಷ್ಠರಾದ ಶ್ರೀಕೃಷ್ಣ-ಬಲರಾಮರು ದೇವತೆಗಳ ಪ್ರಯೋಜನ ಸಿದ್ಧಿಗಾಗಿ ಇಲ್ಲಿ ಅವತರಿಸಿರುವರೆಂದು ನಾನು ಭಾವಿಸುತ್ತೇನೆ. ಗರ್ಗಾಚಾರ್ಯರೂ ಇದನ್ನು ನಮಗೆ ಹೀಗೆಯೇ ಹೇಳಿದ್ದರು. ॥ ೨೩ ॥ ಹತ್ತು ಸಾವಿರ ಆನೆಗಳ ಬಲವುಳ್ಳ ಕಂಸನನ್ನು, ಅಜೇಯರೆನಿಸಿದ್ದ ಮುಷ್ಟಿಕ-ಚಾಣೂರ ಮಲ್ಲರನ್ನು, ಕುವಲಯಾಪೀಡಗಜವನ್ನು ಇವರಿಬ್ಬರೂ ಸೇರಿ ಸಿಂಹವು ಕ್ಷುದ್ರಪಶುಗಳನ್ನು ಕೊಲ್ಲುವಂತೆ ಆಟವಾಡುತ್ತಲೇ ಸಂಹರಿಸಿದರು. ॥ ೨೪ ॥ ಮೂರು ತಾಳೆಮರಗಳಷ್ಟು ಉದ್ದವಾದ, ಅತ್ಯಂತ ದೃಢವಾಗಿದ್ದ ಮಹಾಧನುಸ್ಸನ್ನು ಗಜರಾಜನು ಕೋಲನ್ನು ಅಥವಾ ಕಬ್ಬಿನ ಜಲ್ಲೆಯನ್ನು ಮುರಿದು ಹಾಕುವಂತೆ ಶ್ರೀಕೃಷ್ಣನು ಮುರಿದು ಹಾಕಿದನು. ಒಂದೇ ಕೈಯಲ್ಲಿ ಗೋವರ್ಧನ ಪರ್ವತವನ್ನು ಏಳು ದಿವಸಗಳವರೆಗೆ ಹಿಡಿದೆತ್ತಿ ನಿಂತಿದ್ದನು.॥ ೨೫ ॥ ಸಮಸ್ತ ದೇವತೆಗಳನ್ನೂ, ಅಸುರರನ್ನೂ ಜಯಿಸಿದ ಪ್ರಲಂಬ, ಧೇನುಕ, ಅರಿಷ್ಟಾಸುರ, ತೃಣಾವರ್ತ, ಬಕ ಮುಂತಾದ ದೊಡ್ಡ ದೊಡ್ಡ ದೈತ್ಯರನ್ನು ನಮ್ಮೆಲ್ಲರ ಸಮಕ್ಷಮದಲ್ಲಿ ಆಡುತ್ತಾಡುತ್ತಲೇ ಶ್ರೀಕೃಷ್ಣನು ಸಂಹರಿಸಿಬಿಟ್ಟಿದ್ದನು. ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಶ್ರೀಕೃಷ್ಣನಲ್ಲಿಯೇ ಅನುರಕ್ತವಾದ ಮನಸ್ಸಿನಿಂದ ಕೂಡಿದ್ದ ನಂದ ಗೋಪನು ಹೀಗೆ ಶ್ರೀಕೃಷ್ಣನ ಬಾಲಲೀಲೆಗಳೆಲ್ಲವನ್ನು ಒಂದಾದ ಮೇಲೊಂದರಂತೆ ಸ್ಮರಿಸುತ್ತಾ ಪ್ರೇಮಾವೇಶದಿಂದ ಗದ್ಗದನಾಗಿ ಮುಂದೆ ಮಾತನಾಡಲಾಗದೆ ಸುಮ್ಮನಾದನು. ಅವನಿಗೆ ಶ್ರೀಕೃಷ್ಣನನ್ನು ನೋಡಬೇಕೆಂಬ ಕಾತುರವು ಹೆಚ್ಚಾಗಿ ಬಿಟ್ಟಿತು. ॥ ೨೭ ॥ ಯಶೋದಾದೇವಿಯೂ ನಂದನು ವರ್ಣಿಸುತ್ತಿದ್ದ ತನ್ನ ಬಾಲ ಮುಕುಂದನ ಚರಿತ್ರೆಗಳನ್ನು ಕೇಳುತ್ತಾ ಆನಂದಬಾಷ್ಪಗಳನ್ನು ಧಾರಾಕಾರವಾಗಿ ಸುರಿಸುತ್ತಿದ್ದಳು. ಪುತ್ರ ಸ್ನೇಹದ ಸ್ಮರಣೆಯಿಂದಾಗಿ ಅವಳ ಸ್ತನಗಳಿಂದ ಹಾಲು ಸ್ರವಿಸತೊಡಗಿತು.॥ ೨೮ ॥ ನಂದ-ಯಶೋದೆಯರ ಹೃದಯದಲ್ಲಿ ಶ್ರೀಕೃಷ್ಣನ ಕುರಿತಾದ ಇರುವ ಅಗಾಧ ಅನುರಾಗವನ್ನು ನೋಡಿ ಉದ್ಧವನು ಆನಂದ ಮಗ್ನನಾದನು ಹಾಗೂ ಅವರಲ್ಲಿ ಹೇಳತೊಡಗಿದನು. ॥ ೨೯ ॥

ಉದ್ಧವನು ಹೇಳುತ್ತಾನೆ – ಸನ್ಮಾನ್ಯ ನಂದಗೋಪನೇ! ನೀವಿಬ್ಬರೂ ದೇಹಧಾರಿಗಳಲ್ಲೆ ಅತ್ಯಂತ ಶ್ಲಾಘ್ಯತಮರಾಗಿರುವಿರಿ. ಅಖಿಲಲೋಕಗುರುವಾದ ಶ್ರೀಮನ್ನಾರಾಯಣನಲ್ಲಿ ನಿಮಗೆ ಈ ವಿಧವಾದ ಪುತ್ರವಾತ್ಸಲ್ಯವಿರುವುದಲ್ಲವೇ ? ॥ ೩೦ ॥

ಏತೌ ಹಿ ವಿಶ್ವಸ್ಯ ಚ ಬೀಜಯೋನೀ
ರಾಮೋ ಮುಕುಂದಃ ಪುರುಷಃ ಪ್ರಧಾನಮ್ ।
ಅನ್ವೀಯ ಭೂತೇಷು ವಿಲಕ್ಷಣಸ್ಯ
ಜ್ಞಾನಸ್ಯ ಚೇಶಾತ ಇಮೌ ಪುರಾಣೌ ॥ ೩೧ ॥

ಯಸ್ಮಿಂಜನಃ ಪ್ರಾಣವಿಯೋಗಕಾಲೇ
ಕ್ಷಣಂ ಸಮಾವೇಶ್ಯ ಮನೋವಿಶುದ್ಧಮ್ ।
ನಿರ್ಹೃತ್ಯ ಕರ್ಮಾಶಯಮಾಶು ಯಾತಿ
ಪರಾಂ ಗತಿಂ ಬ್ರಹ್ಮಮಯೋऽರ್ಕವರ್ಣಃ ॥ ೩೨ ॥

ತಸ್ಮಿನ್ ಭವಂತಾವಖಿಲಾತ್ಮಹೇತೌ
ನಾರಾಯಣೇ ಕಾರಣಮರ್ತ್ಯಮೂರ್ತೌ ।
ಭಾವಂ ವಿಧತ್ತಾಂ ನಿತರಾಂ ಮಹಾತ್ಮನ್
ಕಿಂ ವಾವಶಿಷ್ಟಂ ಯುವಯೋಃ ಸುಕೃತ್ಯಮ್ ॥ ೩೩ ॥

ಆಗಮಿಷ್ಯತ್ಯದೀರ್ಘೇಣ ಕಾಲೇನ ವ್ರಜಮಚ್ಯುತಃ ।
ಪ್ರಿಯಂ ವಿಧಾಸ್ಯತೇ ಪಿತ್ರೋರ್ಭಗವಾನ್ ಸಾತ್ವತಾಂ ಪತಿಃ
॥ ೩೪ ॥

ಹತ್ವಾ ಕಂಸಂ ರಂಗಮಧ್ಯೇ ಪ್ರತೀಪಂ ಸರ್ವಸಾತ್ವತಾಮ್ ।
ಯದಾಹ ವಃ ಸಮಾಗತ್ಯ ಕೃಷ್ಣಃ ಸತ್ಯಂ ಕರೋತಿ ತತ್
॥ ೩೫ ॥

ಮಾ ಖಿದ್ಯತಂ ಮಹಾಭಾಗೌ ದ್ರಕ್ಷ್ಯಥಃ ಕೃಷ್ಣಮಂತಿಕೇ ।
ಅಂತರ್ಹೃದಿ ಸ ಭೂತಾನಾಮಾಸ್ತೇ ಜ್ಯೋತಿರಿವೈಧಸಿ
॥ ೩೬ ॥

ನ ಹ್ಯಸ್ಯಾಸ್ತಿ ಪ್ರಿಯಃ ಕಶ್ಚಿನ್ನಾಪ್ರಿಯೋ ವಾಸ್ತ್ಯಮಾನಿನಃ ।
ನೋತ್ತಮೋ ನಾಧಮೋ ನಾಪಿ ಸಮಾನಸ್ಯಾಸಮೋऽಪಿ ವಾ
॥ ೩೭ ॥

ನ ಮಾತಾ ನ ಪಿತಾ ತಸ್ಯ ನ ಭಾರ್ಯಾ ನ ಸುತಾದಯಃ ।
ನಾತ್ಮೀಯೋ ನ ಪರಶ್ಚಾಪಿ ನ ದೇಹೋ ಜನ್ಮ ಏವ ಚ
॥ ೩೮ ॥

ನ ಚಾಸ್ಯ ಕರ್ಮ ವಾ ಲೋಕೇ ಸದಸನ್ಮಿಶ್ರಯೋನಿಷು ।
ಕ್ರೀಡಾರ್ಥಃ ಸೋऽಪಿ ಸಾಧೂನಾಂ ಪರಿತ್ರಾಣಾಯ ಕಲ್ಪತೇ
॥ ೩೯ ॥

ನಂದರಾಜಾ ! ನಿನ್ನ ಮಕ್ಕಳಾದ ಬಲರಾಮ-ಶ್ರೀಕೃಷ್ಣರು ಸಾಮಾನ್ಯರಲ್ಲ. ಪುರಾಣ ಪುರುಷರು. ಅವರು ಈ ಅಖಂಡ ವಿಶ್ವಕ್ಕೆ ಉಪಾದಾನ ಕಾರಣರೂ, ನಿಮಿತ್ತಕಾರಣರೂ ಆಗಿರುತ್ತಾರೆ. ಭಗವಾನ್ ಶ್ರೀಕೃಷ್ಣನು ಪುರುಷನಾದರೆ ಬಲರಾಮನು ಪ್ರಧಾನ (ಪ್ರಕೃತಿ)ನಾಗಿದ್ದಾನೆ. ಇವರಿಬ್ಬರೇ ಸಮಸ್ತ ಪ್ರಾಣಗಳಲ್ಲಿ ಪ್ರವೇಶಿಸಿ ಅವರಿಗೆ ಜೀವನದಾನವನ್ನು ಕೊಟ್ಟು ಅವರಲ್ಲಿರುವ ಅತ್ಯಂತ ವಿಲಕ್ಷಣವಾದ ಜ್ಞಾನಸ್ವರೂಪ ಜೀವನನ್ನು ನಿಯಂತ್ರಿಸುತ್ತಾರೆ.॥ ೩೧ ॥ ಮರಣಕಾಲದಲ್ಲಿ ತನ್ನ ಶುದ್ಧ ಮನಸ್ಸನ್ನು ಒಂದು ಕ್ಷಣವಾದರೂ ಭಗವಂತನಲ್ಲಿ ತೊಡಗಿಸುವ ಜೀವನು ಸಮಸ್ತ ಕರ್ಮವಾಸನೆಗಳನ್ನು ಕಳೆದುಕೊಂಡು ಸೂರ್ಯನಂತೆ ತೇಜಸ್ವಿಯಾಗಿ, ಬ್ರಹ್ಮಮಯನೂ ಆಗಿ ಪರಮಗತಿಯನ್ನು ಹೊಂದುತ್ತಾನೆ. ॥ ೩೨ ॥ ಭಗವಾನ್ ಶ್ರೀಕೃಷ್ಣನು ಎಲ್ಲರ ಆತ್ಮನೂ, ಪರಮ ಕಾರಣನೂ ಆಗಿದ್ದಾನೆ. ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಲಿಕ್ಕಾಗಿಯೂ, ಭೂಭಾರವನ್ನು ಇಳಿಸುವುದಕ್ಕಾಗಿಯೂ ಮನುಷ್ಯ ಶರೀರದಿಂದ ಅವತರಿಸಿರುವನು. ಮಹಾತ್ಮರಾದ ದಂಪತಿಗಳೇ! ಆ ಪರಮಾತ್ಮನಲ್ಲಿ ನೀವು ನಿರತಿಶಯವಾದ ಪುತ್ರವಾತ್ಸಲ್ಯವನ್ನು ಹೊಂದಿರುವಿರಿ. ಕೃತ-ಕೃತ್ಯರಾದ ನಿಮ್ಮಿಬ್ಬರಿಗೆ ಇದಲ್ಲದೆ ಬೇರೆಯಾದ ಶುಭಕರ್ಮವು ಯಾವುದು ಬಾಕಿ ಉಳಿದಿರುವುದು ? ॥ ೩೩ ॥ ಭಕ್ತವತ್ಸಲನಾದ ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನು ಕೆಲವೇ ದಿವಸಗಳಲ್ಲಿ ವ್ರಜಕ್ಕೆ ಬಂದು, ಮಾತಾ-ಪಿತೃಗಳಾದ ನಿಮ್ಮಿಬ್ಬರನ್ನು ಆನಂದಗೊಳಿಸುವನು. ॥ ೩೪ ॥ ಸಮಸ್ತ ಯದುವಂಶೀಯರ ದ್ರೋಹಿಯಾದ ಕಂಸನನ್ನು ರಂಗಸ್ಥಳದಲ್ಲಿ ಕೊಂದು ನಿಮ್ಮ ಬಳಿಗೆ ಬಂದು - 'ನಾನು ವ್ರಜಕ್ಕೆ ಬರುವೆನು' ಎಂದು ಹೇಳಿದುದನ್ನು ಶ್ರೀಕೃಷ್ಣನು ಸತ್ಯವಾಗಿಸುವನು. ॥ ೩೫ ॥ ಮಹಾಭಾಗ್ಯಶಾಲಿಗಳಾದ ನಂದ ಯಶೋದೆಯರೇ ! ದುಃಖಿಸಬೇಡಿರಿ. ಕಟ್ಟಿಗೆಯೊಳಗೆ ಬೆಂಕಿಯಿರುವಂತೆ ಸಮಸ್ತ ಪ್ರಾಣಗಳ ಹೃದಯದಲ್ಲಿಯೂ ಇರುವ ಜಗದಾನಂದಕರನಾದ ಶ್ರೀಕೃಷ್ಣನನ್ನು ನೀವು ನಿಮ್ಮ ಸಮೀಪದಲ್ಲಿಯೇ ಕಾಣುವಿರಿ. ॥ ೩೬ ॥ ಅಹಂಕಾರಾದಿ ಮಾಯಾಗುಣಗಳಿಲ್ಲದ ಅವನಿಗೆ ಈ ಲೋಕದಲ್ಲಿ ಪ್ರಿಯನಾದವನೂ, ಅಪ್ರಿಯನಾದವನೂ ಯಾರೂ ಇಲ್ಲ. ಸರ್ವರಲ್ಲಿ ಸಮದೃಷ್ಟಿಯುಳ್ಳ ಅವನಿಗೆ (ಅವನ ದೃಷ್ಟಿಯಲ್ಲಿ) ಉತ್ತಮನೆಂಬುವವನೂ ಇಲ್ಲ; ಅಧಮನೆಂಬುವವನೂ ಇಲ್ಲ; ಅಸಮಾನನೆಂಬುವವನೂ ಇಲ್ಲ. ॥ ೩೭ ॥ ಪರಮ ಪುರುಷನಾದ ಶ್ರೀಕೃಷ್ಣನಿಗೆ ತಂದೆ-ತಾಯಿಯಾಗಲೀ, ಪತ್ನೀ-ಪುತ್ರರಾಗಲೀ, ಆತ್ಮೀಯ-ಪರಕೀಯರಾಗಲೀ ಯಾರೂ ಇಲ್ಲ. ಅಷ್ಟೇ ಅಲ್ಲ ಅವನಿಗೆ ದೇಹವೂ ಇಲ್ಲ, ಜನ್ಮವೂ ಇಲ್ಲ. ॥ ೩೮ ॥ ಅವನಿಗೆ ಈ ಲೋಕದಲ್ಲಿ ಮಾಡಬೇಕಾದ ಯಾವುದೇ ಕರ್ಮವು ಇಲ್ಲ. ಹೀಗಿದ್ದರೂ ಅವನು ಸಾಧುಗಳ ರಕ್ಷಣೆಗಾಗಿಯೂ, ಲೀಲಾವಿನೋದಗಳನ್ನು ಭಕ್ತರಿಗೆ ತೋರಿಸುವ ಸಲುವಾಗಿಯೂ, ದೇವತೆಯೇ ಮೊದಲಾದ ಸಾತ್ವಿಕ, ಮತ್ಸ್ಯಾದಿ ತಾಮಸ, ಮನುಷ್ಯರೇ ಆದಿ ಮಿಶ್ರಯೋನಿಗಳಲ್ಲಿ ಅವತರಿಸುತ್ತಾನೆ. ॥ ೩೯ ॥

ಸತ್ತ್ವಂ ರಜಸ್ತಮ ಇತಿ ಭಜತೇ ನಿರ್ಗುಣೋ ಗುಣಾನ್ ।
ಕ್ರೀಡನ್ನತೀತೋಽಪಿ ಗುಣೈಃ ಸೃಜತ್ಯವತಿ ಹಂತ್ಯಜಃ
॥ ೪೦ ॥

ಯಥಾ ಭ್ರಮರಿಕಾದೃಷ್ಟ್ಯಾ ಭ್ರಾಮ್ಯತೀವ ಮಹೀಯತೇ ।
ಚಿತ್ತೇ ಕರ್ತರಿ ತತ್ರಾತ್ಮಾ ಕರ್ತೇವಾಹಂಧಿಯಾ ಸ್ಮೃತಃ
॥ ೪೧ ॥

ಯುವಯೋರೇವ ನೈವಾಯಮಾತ್ಮಜೋ ಭಗವಾನ್ ಹರಿಃ ।
ಸರ್ವೇಷಾಮಾತ್ಮಜೋ ಹ್ಯಾತ್ಮಾ ಪಿತಾ ಮಾತಾ ಸ ಈಶ್ವರಃ
॥ ೪೨ ॥

ದೃಷ್ಟಂ ಶ್ರುತಂ ಭೂತಭವದ್ಭವಿಷ್ಯತ್
ಸ್ಥಾಸ್ನುಶ್ಚರಿಷ್ಣುರ್ಮಹದಲ್ಪಕಂ ಚ ।
ವಿನಾಚ್ಯುತಾದ್ವಸ್ತು ತರಾಂ ನ ವಾಚ್ಯಂ
ಸ ಏವ ಸರ್ವಂ ಪರಮಾರ್ಥಭೂತಃ ॥ ೪೩ ॥

ಏವಂ ನಿಶಾ ಸಾ ಬ್ರುವತೋರ್ವ್ಯತೀತಾ
ನಂದಸ್ಯ ಕೃಷ್ಣಾನುಚರಸ್ಯ ರಾಜನ್ ।
ಗೋಪ್ಯಃ ಸಮುತ್ಥಾಯ ನಿರೂಪ್ಯ ದೀಪಾನ್
ವಾಸ್ತೂನ್ ಸಮಭ್ಯರ್ಚ್ಯ ದಧೀನ್ಯಮಂಥನ್ ॥ ೪೪ ॥

ತಾ ದೀಪದೀಪ್ತೈರ್ಮಣಿಭಿರ್ವಿರೇಜೂ
ರಜ್ಜೂರ್ವಿಕರ್ಷದ್ಭುಜಕಂಕಣಸ್ರಜಃ ।
ಚಲನ್ನಿತಂಬಸ್ತನಹಾರಕುಂಡಲ-
ತ್ವಿಷತ್ಕಪೋಲಾರುಣಕುಂಕುಮಾನನಾಃ ॥ ೪೫ ॥

ಉದ್ಗಾಯತೀನಾಮರವಿಂದಲೋಚನಂ
ವ್ರಜಾಂಗನಾನಾಂ ದಿವಮಸ್ಪೃಶದ್ಧ್ವನಿಃ ।
ದಧ್ನಶ್ಚ ನಿರ್ಮಂಥನಶಬ್ದಮಿಶ್ರಿತೋ
ನಿರಸ್ಯತೇ ಯೇ ನ ದಿಶಾಮಮಂಗಲಮ್ ॥ ೪೬ ॥

ಭಗವತ್ಯುದಿತೇ ಸೂರ್ಯೇ ನಂದದ್ವಾರಿ ವ್ರಜೌಕಸಃ ।
ದೃಷ್ಟ್ವಾ ರಥಂ ಶಾತಕೌಂಭಂ ಕಸ್ಯಾಯಮಿತಿ ಚಾಬ್ರುವನ್
॥ ೪೭ ॥

ನಂದರಾಜಾ ! ಭಗವಂತನು ಅಪ್ರಾಕೃತನು. ಅವನಲ್ಲಿ ಸತ್ವ, ರಜ, ತಮಗಳೆಂಬ ಪ್ರಾಕೃತ ಒಂದು ಗುಣವೂ ಇಲ್ಲ. ಹೀಗೆ ಪ್ರಾಕೃತಗುಣರಹಿತನಾಗಿದ್ದರೂ ಕೂಡ ಲೀಲೆಗಾಗಿ ಕ್ರೀಡೆಯನ್ನಾಡುತ್ತಾ, ಸತ್ವ, ರಜ, ತಮಗಳೆಂಬ ಮೂರು ಗುಣಗಳನ್ನು ಸ್ವೀಕರಿಸಿ ಈ ಜಗತ್ತಿನ ಸೃಷ್ಟಿ ಸ್ಥಿತಿ, ಲಯಗಳನ್ನು ಮಾಡುತ್ತಾ ಇರುತ್ತಾನೆ. ॥ ೪೦ ॥ ಹುಡುಗರು ಅಪ್ಪಾಲೆ-ತಿಪ್ಪಾಲೆಯಾಡುವಾಗ ಅವರ ಸುತ್ತಲೂ ಇರುವ ಪದಾರ್ಥಗಳು ತಿರುಗುತ್ತಿರುವಂತೆ ಕಂಡು ಬರುತ್ತದೆ. ಆದರೆ ಆ ವಸ್ತುಗಳು ತಿರುಗುತ್ತಿರುವುದಿಲ್ಲ, ಅಂತೆಯೇ ಚಿತ್ತವೇ ಎಲ್ಲವನ್ನೂ ಮಾಡುತ್ತಿರುತ್ತದೆ. ಆದರೆ ಆ ಶುದ್ಧ ಚೈತನ್ಯದಲ್ಲಿ ಅಹಂಬುದ್ಧಿಯು ಉಂಟಾದ ಕಾರಣ ಭ್ರಮೆಯಿಂದ ಆತ್ಮನು ಕರ್ತೃವಿನಂತೆ ತಿಳಿದುಕೊಳ್ಳುತ್ತಾನೆ. ॥ ೪೧ ॥ ನಂದ ! ಭಗವಾನ್ ಶ್ರೀಕೃಷ್ಣನು ಕೇವಲ ನಿಮ್ಮಬ್ಬರಿಗೆ ಮಾತ್ರವೇ ಪುತ್ರನಾಗಿಲ್ಲ, ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪನೂ, ಪುತ್ರನೂ, ತಂದೆ-ತಾಯಿ ಹೀಗೆ ಎಲ್ಲವೂ ಆಗಿದ್ದಾನೆ. ॥ ೪೨ ॥ ನಂದಗೋಪನೇ ! ಲೋಕದಲ್ಲಿ ನೋಡುವ, ಕೇಳುವ ವಸ್ತುಗಳಲ್ಲಿ ಭೂತ, ಭವಿಷ್ಯ, ವರ್ತಮಾನಕ್ಕೆ ಸಂಬಂಧಿಸಿರಲಿ, ಸ್ಥಾವರ-ಜಂಗಮವಾಗಿರಲಿ, ಅಲ್ಪವಾಗಿರಲೀ, ಮಹತ್ತಾಗಿರಲೀ, ಅದೆಲ್ಲ ವಸ್ತುಗಳು ಭಗವಾನ್ ಶ್ರೀಕೃಷ್ಣನಿಂದ ಬೇರೆಯಾಗಿವೆ ಎಂದು ಹೇಳಬಾರದು, ನಂದರಾಜ! ಎಲ್ಲ ವಸ್ತುಗಳಲ್ಲಿಯೂ ಅಚ್ಯುತನಿದ್ದಾನೆ. ಪರಮಾರ್ಥದಲ್ಲಿ ಸರ್ವಸ್ವವೂ ಅವನೇ ಆಗಿದ್ದಾನೆ. ॥ ೪೩ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಸಖನಾದ ಉದ್ಧವನೂ ನಂದಗೋಪನೂ ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಾ ರಾತ್ರಿಯೇ ಕಳೆದುಹೋಯಿತು. ರಾತ್ರಿಯು ಕಳೆದು ಹೋಗುತ್ತಿರುವಾಗಲೇ ಗೋಪಿಯರು ಎದ್ದು, ದೀಪವನ್ನು ಹಚ್ಚಿ ವಾಸ್ತುಪುರುಷನನ್ನು ಪೂಜಿಸಿ, ಮನೆಯನ್ನು ಗುಡಿಸಿ, ಸಾರಿಸಿ ಶುದ್ಧಗೊಳಿಸಿ ಮತ್ತೆ ಮೊಸರು ಕಡೆಯಲು ಪ್ರಾರಂಭಿಸಿದರು. ॥ ೪೪ ॥ ಗೋಪಿಕೆಯರು ಧರಿಸಿದ್ದ ಬಳೆಗಳು ಮೊಸರು ಕಡೆಯುವಾಗ ಮೇಲೆ-ಕೆಳಗೆ ಸರಿಯುತ್ತಾ ಸುಂದರವಾಗಿ ಕಾಣುತ್ತಿದ್ದವು. ಅವರ ನಿತಂಬ, ಸ್ತನಗಳು ಮತ್ತು ಕೊರಳಲ್ಲಿನ ಹಾರಗಳು ಕಂಪಿಸುತ್ತಿದ್ದವು. ಕಿವಿಗಳ ಕುಂಡಲಗಳು ಓಲಾಡುತ್ತಾ ಕುಂಕುಮಲೇಪಿತ ಕಪೋಲಗಳ ನಸುಗೆಂಪು ಹೆಚ್ಚಿಸಿದ್ದವು. ಅವರು ಧರಿಸಿದ್ದ ಆಭೂಷಣಗಳ ರತ್ನಗಳು ದೀಪದ ಬೆಳಕಿನಲ್ಲಿ ಹೊಳೆಯುತ್ತಿದ್ದವು. ಹೀಗೆ ಅತ್ಯಂತ ಶೋಭಿತರಾದ ಗೋಪಿಯರು ಮೊಸರನ್ನು ಕಡೆಯುತ್ತಿದ್ದರು. ॥ ೪೫ ॥ ಆ ಸಮಯದಲ್ಲಿ ಗೋಪಿಯರು ಕಮಲನಯನ ಶ್ರೀಕೃಷ್ಣನ ಮಂಗಲಮಯ ಚರಿತ್ರೆಗಳನ್ನು ಹಾಡುತ್ತಿದ್ದರು. ಅವರ ಆ ಸಂಗೀತವು ಕಡೆಯುವ ಘರ್-ಘರ್ ಶಬ್ದದೊಡನೆ ಬೆರೆತು ಇನ್ನೂ ಅದ್ಭುತವಾಗಿ ಸ್ವರ್ಗಲೋಕದವರೆಗೆ ಮುಟ್ಟಿತು. ಅವರ ಗಾಯನವು ದಶದಿಕ್ಕುಗಳಲ್ಲಿಯೂ ಹರಡಿಕೊಂಡು ಎಲ್ಲ ಅಮಂಗಳಗಳೂ ತೊಡೆದುಹಾಕುತ್ತಿತ್ತು. ॥ ೪೬ ॥

ಭಗವಾನ್ ಸೂರ್ಯನಾರಾಯಣನು ಉದಯಾಚಲಕ್ಕೆ ಬಂದಾಗ ಮನೆಯಿಂದ ಹೊರಗೆ ಬಂದ ವ್ರಜಾಂಗನೆಯರು ನಂದ ಗೋಪನ ಮನೆಯ ಬಾಗಿಲಲ್ಲಿ ನಿಂತಿದ್ದ ಒಂದು ಸ್ವರ್ಣರಥವನ್ನು ನೋಡಿದರು. 'ಇದು ಯಾರ ರಥವಾಗಿರಬಹುದು?' ಎಂದು ತಮ್ಮ-ತಮ್ಮಲ್ಲಿಯೇ ಪ್ರಶ್ನಿಸತೊಡಗಿದರು. ॥ ೪೭ ॥

ಅಕ್ರೂರ ಆಗತಃ ಕಿಂ ವಾ ಯಃ ಕಂಸಸ್ಯಾರ್ಥಸಾಧಕಃ ।
ಯೇನ ನೀತೋ ಮಧುಪುರೀಂ ಕೃಷ್ಣಃ ಕಮಲಲೋಚನಃ
॥ ೪೮ ॥

ಕಿಂ ಸಾಧಯಿಷ್ಯತ್ಯಸ್ಮಾಭಿರ್ಭರ್ತುಃ ಪ್ರೇತಸ್ಯ ನಿಷ್ಕೃತಿಮ್ ।
ಇತಿ ಸ್ತ್ರೀಣಾಂ ವದಂತೀನಾಮುದ್ಧವೋಽಗಾತ್ ಕೃತಾಹ್ನಿಕಃ
॥ ೪೯ ॥

ಒಬ್ಬಳು ಕೇಳಿದಳು – ಕಮಲಲೋಚನನಾದ ಶ್ಯಾಮಸುಂದರನನ್ನು ಮಧುರೆಗೆ ಕರೆದುಕೊಂಡು ಹೋಗಿದ್ದ ಕಂಸನ ಕಾರ್ಯಸಾಧಕನಾದ ಅಕ್ರೂರನೇನಾದರೂ ಪುನಃ ಬಂದಿರುವನೇ ! ॥೪೮॥ ಇನ್ನೊಬ್ಬಳು ಕೇಳಿದಳು – ತನ್ನ ಒಡೆಯನಾದ ಕಂಸನ ಪ್ರೇತಕ್ಕೆ ನಮ್ಮಿಂದ ಪಿಂಡಹಾಕಿಸಲೇನಾದರೂ ಬಂದಿರುವನೇ ? ಇದಲ್ಲದೆ ಬೇರೆ ಪ್ರಯೋಜನ ಏನಿದ್ದೀತು ? ಹೀಗೆ ವ್ರಜವಾಸಿಯರಾದ ಸ್ತ್ರೀಯರು ಮಾತನಾಡಿಕೊಂಡಿರುವಾಗ ಉದ್ಧವನು ತನ್ನ ನಿತ್ಯ ಕರ್ಮಗಳನ್ನು ಮುಗಿಸಿ ಅಲ್ಲಿಗೆ ಆಗಮಿಸಿದನು. ॥ ೪೯ ॥

ನಲವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೪೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ನಂದಶೋಕಾಪನಯನಂ ನಾಮ ಷಟ್‌ಚತ್ವಾರಿಂಶೋಽಧ್ಯಾಯಃ ॥ ೪೬ ॥

ನಲವತ್ತೇಳನೆಯ ಅಧ್ಯಾಯ

ಉದ್ಧವ-ಗೋಪಿಯರ ಮಾತುಕತೆ-ಭ್ರಮರಗೀತೆ

ಶ್ರೀಶುಕ ಉವಾಚ

ತಂ ವೀಕ್ಷ್ಯ ಕೃಷ್ಣಾನುಚರಂ ವ್ರಜಸ್ತ್ರಿಯಃ
ಪ್ರಲಂಬಬಾಹುಂ ನವಕಂಜಲೋಚನಮ್ ।
ಪೀತಾಂಬರಂ ಪುಷ್ಕರಮಾಲಿನಂ ಲಸ-
ನ್ಮುಖಾರವಿಂದಂ ಮಣಿಮೃಷ್ಟಕುಂಡಲಮ್ ॥ ೧ ॥

ಶುಚಿಸ್ಮಿತಾಃ ಕೋಽಯಮಪೀಚ್ಯದರ್ಶನಃ
ಕುತಶ್ಚ ಕಸ್ಯಾಚ್ಯುತವೇಷಭೂಷಣಃ ।
ಇತಿ ಸ್ಮ ಸರ್ವಾಃ ಪರಿವವ್ರುರುತ್ಸುಕಾ-
ಸ್ತಮುತ್ತಮಶ್ಲೋಕಪದಾಂಬುಜಾಶ್ರಯಮ್ ॥ ೨ ॥

ತಂ ಪ್ರಶ್ರಯೇಣಾವನತಾಃ ಸುಸತ್ಕೃತಂ
ಸವ್ರೀಡಹಾಸೇಕ್ಷಣಸೂನೃತಾದಿಭಿಃ ।
ರಹಸ್ಯಪೃಚ್ಛನ್ನುಪವಿಷ್ಟಮಾಸನೇ
ವಿಜ್ಞಾಯ ಸಂದೇಶಹರಂ ರಮಾಪತೇಃ ॥ ೩ ॥

ಜಾನೀಮಸ್ತ್ವಾಂ ಯದುಪತೇಃ ಪಾರ್ಷದಂ ಸಮುಪಾಗತಮ್ ।
ಭರ್ತ್ರೇಹ ಪ್ರೇಷಿತಃ ಪಿತ್ರೋರ್ಭವಾನ್ ಪ್ರಿಯಚಿಕೀರ್ಷಯಾ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲ್ಲೆ ಪರೀಕ್ಷಿತನೇ ! ಶ್ರೀಕೃಷ್ಣಾನುಚರನಾದ ಉದ್ಧವನ ಆಕೃತಿ, ವೇಷ-ಭೂಷಣಗಳಿಂದ ಶ್ರೀಕೃಷ್ಣನಂತೆಯೇ ಇರುವುದನ್ನು ಗೋಪಿಯರು ನೋಡಿದರು. ಅವನಿಗೆ ದೀರ್ಘಬಾಹುಗಳಿದ್ದವು. ನೂತನ ಕಮಲದ ಎಸಳಿನಂತೆ ಕೋಮಲ ನೇತ್ರಗಳಿದ್ದವು. ಶರೀರದಲ್ಲಿ ಪೀತಾಂಬರವನ್ನು ಧರಿಸಿದ್ದನು. ಕೊರಳಲ್ಲಿ ಕಮಲಪುಷ್ಪಗಳ ಮಾಲೆಯಿತ್ತು. ಕಿವಿಗಳಲ್ಲಿ ಮಣಿಮಯ ಕುಂಡಲಗಳಿದ್ದು ಮುಖಾರವಿಂದವು ಪ್ರಫುಲ್ಲಿತವಾಗಿತ್ತು. ॥ ೧ ॥ ಮುಗುಳ್ನಗೆಯುಳ್ಳ ಗೋಪಿಯರು ಪರಸ್ಪರ ಮಾತನಾಡಿಕೊಂಡರು. ಈ ಮಹಾನುಭಾವನು ನೋಡಲು ಸುಂದರವಾಗಿದ್ದಾನೆ. ಆದರೆ ಇವನಾರು ? ಎಲ್ಲಿಂದ ಬಂದಿರುವನು ? ಯಾರ ದೂತನಾಗಿರುವನು ? ಇವನು ಶ್ರೀಕೃಷ್ಣನಂತೆಯೇ ವೇಷ-ಭೂಷಣಗಳನ್ನು ಏಕೆ ಧರಿಸಿರುವನು ? ಗೋಪಿಯರೆಲ್ಲರೂ ಅವನ ಪರಿಚಯವನ್ನು ಪಡೆಯಲು ಅತ್ಯಂತ ಉತ್ಸುಕರಾಗಿದ್ದರು. ಉತ್ತಮ ಶ್ಲೋಕನಾದ ಶ್ರೀಕೃಷ್ಣನ ಚರಣಕಮಲಗಳನ್ನೇ ಪರಮಾಶ್ರಯವನ್ನಾಗಿ ಹೊಂದಿದ್ದ ಉದ್ಧವನನ್ನು ಸುತ್ತುವರಿದು ನಿಂತುಕೊಂಡರು. ॥ ೨ ॥ ಇವನು ರಮಾರಮಣ ಭಗವಾನ್ ಶ್ರೀಕೃಷ್ಣನ ಸಂದೇಶವನ್ನೆತ್ತಿಕೊಂಡು ಬಂದಿರುವನೆಂದು ತಿಳಿದಾಗ, ಅವರು ವಿನಯದಿಂದ ಬಾಗಿ ಲಜ್ಜೆಯಿಂದ ಕೂಡಿದ ಮಂದಹಾಸದಿಂದ, ಕುಡಿನೋಟದಿಂದ ಹಾಗೂ ಸುಮಧುರವಾದ ಮಾತುಗಳಿಂದ ಉದ್ಧವನನ್ನು ಸತ್ಕರಿಸಿ, ಸುಖಾಸನದಲ್ಲಿ ಕುಳ್ಳಿರಿಸಿ ಏಕಾಂತದಲ್ಲಿ ಅವನ ಬಳಿ ಕೇಳಿದರು. ॥ ೩ ॥ ಉದ್ಧವನೇ ! ನೀನು ಯದುನಾಥನ ಪಾರ್ಷದನೆಂದು ನಾವು ತಿಳಿಯುತ್ತೇವೆ. ಅವನ ಸಂದೇಶವನ್ನೇ ಹೊತ್ತು ನೀನು ಇಲ್ಲಿಗೆ ಆಗಮಿಸಿರುವೆ. ನಿನ್ನ ಸ್ವಾಮಿಯಾದ ಶ್ಯಾಮಸುಂದರನು ತನ್ನ ತಂದೆ-ತಾಯಿಯರನ್ನು ಸಂತೋಷಪಡಿಸಲೆಂದು ನಿಮ್ಮನ್ನು ಕಳಿಸಿರುವನಲ್ಲ ? ॥ ೪ ॥

ಅನ್ಯಥಾ ಗೋವ್ರಜೇ ತಸ್ಯ ಸ್ಮರಣೀಯಂ ನ ಚಕ್ಷ್ಮಹೇ ।
ಸ್ನೇಹಾನುಬಂಧೋ ಬಂಧೂನಾಂ ಮುನೇರಪಿ ಸುದುಸ್ತ್ಯಜಃ
॥ ೫ ॥

ಅನ್ಯೇಷ್ವರ್ಥಕೃತಾ ಮೈತ್ರೀ ಯಾವದರ್ಥವಿಡಂಬನಮ್ ।
ಪುಂಭಿಃ ಸ್ತ್ರೀಷು ಕೃತಾ ಯದ್ವತ್ಸುಮನಸ್ಸ್ವಿವ ಷಟ್ಪದೈಃ
॥ ೬ ॥

ನಿಸ್ವಂ ತ್ಯಜಂತಿ ಗಣಿಕಾ ಅಕಲ್ಪಂ ನೃಪತಿಂ ಪ್ರಜಾಃ ।
ಅಧೀತವಿದ್ಯಾ ಆಚಾರ್ಯಮೃತ್ವಿಜೋ ದತ್ತದಕ್ಷಿಣಮ್
॥ ೭ ॥

ಖಿಗಾ ವೀತಫಲಂ ವೃಕ್ಷಂ ಭುಕ್ತ್ವಾ ಚಾತಿಥಯೋ ಗೃಹಮ್ ।
ದಗ್ಧಂ ಮೃಗಾಸ್ತಥಾರಣ್ಯಂ ಜಾರೋ ಭುಕ್ತ್ವಾ ರತಾಂ ಸ್ತ್ರಿಯಮ್
॥ ೮ ॥

ಇತಿ ಗೋಪ್ಯೋ ಹಿ ಗೋವಿಂದೇ ಗತವಾಕ್ಕಾಯಮಾನಸಾಃ ।
ಕೃಷ್ಣದೂತೇ ವ್ರಜಂ ಯಾತೇ ಉದ್ಧವೇ ತ್ಯಕ್ತಲೌಕಿಕಾಃ
॥ ೯ ॥

ಗಾಯಂತ್ಯಃ ಪ್ರಿಯಕರ್ಮಾಣಿ ರುದತ್ಯಶ್ಚ ಗತಹ್ರಿಯಃ ।
ತಸ್ಯ ಸಂಸ್ಮೃತ್ಯ ಸಂಸ್ಮೃತ್ಯ ಯಾನಿ ಕೈಶೋರಬಾಲ್ಯಯೋಃ
॥ ೧೦ ॥

ಕಾಚಿನ್ಮಧುಕರಂ ದೃಷ್ಟ್ವಾ ಧ್ಯಾಯಂತೀ ಕೃಷ್ಣಸಂಗಮಮ್ ।
ಪ್ರಿಯಪ್ರಸ್ಥಾಪಿತಂ ದೂತಂ ಕಲ್ಪಯಿತ್ವೇದಮಬ್ರವೀತ್
॥ ೧೧ ॥

ಗೋಪ್ಯುವಾಚ

ಮಧುಪ ಕಿತವಬಂಧೋ ಮಾ ಸ್ಪೃಶಾಂಘ್ರಿಂ ಸಪತ್ನ್ಯಾಃ
ಕುಚವಿಲುಲಿತಮಾಲಾಕುಂಕುಮಶ್ಮಶ್ರುಭಿರ್ನಃ ।
ವಹತು ಮಧುಪತಿಸ್ತನ್ಮಾನಿನೀನಾಂ ಪ್ರಸಾದಂ
ಯದುಸದಸಿ ವಿಡಂಬ್ಯಂ ಯಸ್ಯ ದೂತಸ್ತ್ವಮೀದೃಕ್ ॥ ೧೨ ॥

ಅದರ ಹೊರತಾಗಿ ಈ ಗೊಲ್ಲರಹಳ್ಳಿಯಲ್ಲಿ ಅವನು ಸ್ಮರಿಸ ಬೇಕಾದ ಬೇರೆಯಾವ ವಸ್ತುವೂ ಕಾಣುವುದಿಲ್ಲ. ತಂದೆ-ತಾಯಿ ಯರ, ನೆಂಟರಿಷ್ಟರ ಸ್ನೇಹಸಂಬಂಧವನ್ನು ಕಡಿದು ಹಾಕುವುದು ಮಹಾ-ಮಹಾಮುನಿಗಳಿಗೂ ಬಹಳ ಕಷ್ಟವೇ ಸರಿ. ॥ ೫ ॥ ಇತರ ರೊಡನೆ ಮಾಡುವ ಪ್ರೇಮ-ಸಂಬಂಧದ ನಾಟಕವು ಯಾವು ದಾದರೂ ಸ್ವಾರ್ಥಕ್ಕಾಗಿಯೇ ಇರುತ್ತದೆ. ಹೂವುಗಳೊಡನೆ ಭ್ರಮರಗಳ ಮತ್ತು ಸ್ತ್ರೀಯರೊಡನೆ ಪುರುಷರ ಪ್ರೇಮ ಸಂಬಂಧವು ಸ್ವಾರ್ಥದಿಂದಲೇ ಇರುತ್ತದೆ. ॥ ೬ ॥ ತನ್ನ ಬಳಿಗೆ ಬರುವ ವಿಟಪುರುಷರಲ್ಲಿ ಹಣವಿಲ್ಲವೆಂದು ತಿಳಿದಾಗ ವೇಶ್ಯೆಯು ಅವರನ್ನು ತ್ಯಜಿಸಿಬಿಡುತ್ತಾಳೆ. ರಾಜನು ತಮ್ಮನ್ನು ರಕ್ಷಿಸಲಾರನೆಂದು ತಿಳಿದಾಗ - ಪ್ರಜೆಗಳು ಅವನನ್ನು ತ್ಯಜಿಸುತ್ತಾರೆ. ಅಧ್ಯಯನ ಮುಗಿದಾದ ಬಳಿಕ ಎಷ್ಟು ಜನ ಶಿಷ್ಯರು ಗುರುವಿನ ಸೇವೆ ಮಾಡುತ್ತಾರೆ? ಯಜ್ಞದ ದಕ್ಷಿಣೆ ದೊರೆತಾಕ್ಷಣ ಋತ್ವಿಜರು ಹೊರಟು ಹೋಗುತ್ತಾರೆ. ॥ ೭ ॥ ವೃಕ್ಷದಲ್ಲಿ ಫಲಗಳು ತೀರಿ ಹೋದಾಗ ಪಕ್ಷಿಗಳು ಹೇಳದೆ ಕೇಳದೆ ಹಾರಿಹೋಗುತ್ತವೆ. ಊಟ ಮಾಡಿದ ಬಳಿಕ ಅತಿಥಿಯು ಗೃಹಸ್ಥನ ಕಡೆಗೆ ನೋಡುತ್ತಾನೆಯೇ? ಕಾಡಿಗೆ ಬೆಂಕಿಬಿದ್ದಾಗ ಮೃಗಗಳು ಓಡಿ ಹೋಗುತ್ತವೆ. ನವಯುವತಿ ಯಲ್ಲಿ ಎಷ್ಟೇ ಅನುರಾಗವನ್ನು ಹೊಂದಿದ್ದರೂ ಜಾರಪುರುಷರು ಅವಳನ್ನು ಉಪಭೋಗಿಸಿದ ಬಳಿಕ ತಿರುಗಿಯೂ ಅವಳತ್ತ ನೋಡುವುದಿಲ್ಲ. ॥ ೮ ॥ ಪರೀಕ್ಷಿತನೇ! ಹೀಗೆ ಗೋಪಿಯರು ಕೃಷ್ಣದೂತನಾದ ಉದ್ಧವನು ವ್ರಜಕ್ಕೆ ಬಂದಾಗ, ಕೃಷ್ಣನು ತಮ್ಮನ್ನು ಸ್ಮರಿಸಲಿಲ್ಲವೆಂದೇ ಭಾವಿಸಿ ಹೀಗೆಲ್ಲ ಉದ್ಧವನಲ್ಲಿ ದೂರಿದರು. ಆ ಸಮಯದಲ್ಲಿ ಅವರ ಮಾತು, ಮನಸ್ಸು ಶರೀರಗಳು ಗೋವಿಂದನಲ್ಲೇ ಲೀನವಾಗಿಬಿಟ್ಟಿದ್ದವು. ಬಾಲಮುಕುಂದನ ಬಾಲ್ಯ ಕಿಶೋರಾವಸ್ಥೆಗಳನ್ನು ಅಡಿಗಡಿಗೆ ಸ್ಮರಿಸುತ್ತಾ, ಅವನ ಅತಿಪ್ರಿಯ ವಾದ ಲೀಲಾಪ್ರಸಂಗಗಳನ್ನು ಹಾಡುತ್ತಾ, ಯಾವ ವಿಧವಾದ ನಾಚಿಕೆಯೂ ಇಲ್ಲದೆ ಅವರೆಲ್ಲರೂ ಉದ್ಧವನ ಮುಂದೆ ಗಳ-ಗಳನೆ ಅತ್ತುಬಿಟ್ಟರು. ॥ ೯-೧೦ ॥ ಆ ಸಮಯದಲ್ಲಿ ಶ್ರೀಕೃಷ್ಣನೊಡನೆ ಸೇರುವಿಕೆಯನ್ನೇ ಬಹಳವಾಗಿ ಚಿಂತಿಸುತ್ತಿದ್ದ ಗೋಪಿಯೊಬ್ಬಳು ತನ್ನ ಬಳಿಗೆ ಹಾರಿಕೊಂಡು ಬಂದ ದುಂಬಿಯನ್ನೇ ಕೃಷ್ಣದೂತನೆಂದು ಭಾವಿಸಿಕೊಂಡು ಆ ದುಂಬಿಯೊಡನೆ ಹೇಳತೊಡಗಿದಳು.॥ ೧೧ ॥

ಗೋಪಿಯು ಹೇಳಿದಳು - ಎಲೈ ಮಧುಪನೇ! ನೀನು ಮಹಾ ಕಪಟಿಯಾದ ಮುಕುಂದನ ಸ್ನೇಹಿತನಾದ್ದರಿಂದ ನೀನೂ ಕಪಟಿಯೇ ಆಗಿರುವೆ. ನೀನು ನಮ್ಮ ಕಾಲುಗಳನ್ನು ಮುಟ್ಟಬೇಡ. ನಿನ್ನ ತೋರಿಕೆಯ ವಿನಯವನ್ನು ತೋರಬೇಡ. ನಮ್ಮ ಸವತಿಯರ ಕುಚಗಳ ಸ್ಪರ್ಶದಿಂದ ಕೆಂಪಾದ ನಮ್ಮ ಇನಿಯನ ವನಮಾಲೆ ಯಿಂದ ನಿನ್ನ ಮೀಸೆಗಳೂ ಕೆಂಪಾಗಿವೆ. ನೀನೂ ಕೂಡ ಯಾವುದೇ ಹೂವಿನೊಂದಿಗೆ ಪ್ರೇಮವಿರಿಸಿಕೊಳ್ಳುವುದಿಲ್ಲ, ಇಲ್ಲಿಂದ ಅಲ್ಲಿಗೆ ಹಾರಾಡುತ್ತಾ ಇರುವೆ. ನಿನ್ನ ಸ್ವಾಮಿಯಂತೆ ನೀನೂ ಆಗಿದ್ದಿಯೆ. ಯಾದವರ ಸಭೆಯಲ್ಲಿ ಪರಿಹಾಸ್ಯಕ್ಕೆ ಕಾರಣವಾಗುವ, ಮಥುರೆಯ ಮಾನಿನಿಯರ ಕುಂಕುಮಪ್ರಸಾದವನ್ನು ಅವನೇ ಇಟ್ಟುಕೊಳ್ಳಲಿ. ಅದು ನಮಗೆ ಬೇಡ. ನಿನ್ನ ಮೂಲಕವಾಗಿ ಆ ಪ್ರಸಾದವನ್ನು ನಮಗೆ ಕಳಿಸುವುದುಬೇಡ. ॥ ೧೨ ॥

ಸಕೃದಧರಸುಧಾಂ ಸ್ವಾಂ ಮೋಹಿನೀಂ ಪಾಯಯಿತ್ವಾ
ಸುಮನಸ ಇವ ಸದ್ಯಸ್ತತ್ಯಜೇಽಸ್ಮಾನ್ ಭವಾದೃಕ್ ।

ಪರಿಚರತಿ ಕಥಂ ತತ್ಪಾದಪದ್ಮಂ ತು ಪದ್ಮಾ
ಹ್ಯಪಿ ಬತ ಹೃತಚೇತಾ ಉತ್ತಮಶ್ಲೋಕಜಲ್ಪೈಃ ॥ ೧೩ ॥

ಭ್ರಮರವೇ! ನಿನ್ನಂತೆಯೇ ನಿನ್ನ ಆ ಪ್ರಭುವೂ ಶ್ಯಾಮಲ ವರ್ಣನು. ಪುಷ್ಪರಸವನ್ನು ಹೀರಿಕೊಂಡನಂತರ ನೀನು ಮತ್ತೊಂದು ಪುಷ್ಪಕ್ಕೆ ಹಾರಿ ಹೋಗುವಂತೆ ನಿನ್ನ ಸ್ವಾಮಿಯೂ ಮಾಡುತ್ತಾನೆ. ನಿನ್ನ ಆ ಸ್ವಾಮಿಯೂ ನಮಗೆ ಒಂದೇ ಒಂದು ಬಾರಿಗೆ, ನಿಜವಾಗಿ ಒಂದೇ ಒಂದು ಬಾರಿಗೆ ತನ್ನ ಮನಮೋಹಕವಾದ ಮತ್ತುಬರಿಸುವ ಅಧರಾಮೃತವನ್ನು ಕುಡಿಸಿ, ನಿನ್ನ ಹಾಗೆಯೇ ಹಳ್ಳಿಗರಾದ ನಮ್ಮನ್ನು ಪರಿತ್ಯಜಿಸಿ ಪಟ್ಟಣಕ್ಕೆ ಹೊರಟುಹೋದನು. ಇಂತಹವನ ಪಾದ ಕಮಲಗಳ ಸೇವೆಯನ್ನು ಆ ಲಕ್ಷ್ಮೀದೇವಿಯು ಹೇಗೆ ಮಾಡು ವಳೋ ತಿಳಿಯದಾಗಿದೆ. ಅವನ ಕೀರ್ತಿ, ಯಶಸ್ಸು ಚಾಟು ನುಡಿಗಳಿಗೆ ಮನಸೋತು ಅವಳು ಆ ಧೂರ್ತನ ಸೇವೆಯನ್ನು ಮಾಡುತ್ತಿರಬಹುದು. ॥ ೧೩ ॥

ಕಿಮಿಹ ಬಹು ಷಡಂಘ್ರೇ ಗಾಯಸಿ ತ್ವಂ ಯದೂನಾ-
ಮಧಿಪತಿಮಗೃಹಾಣಾಮಗ್ರತೋ ನಃ ಪುರಾಣಮ್ ।

ವಿಜಯಸಖಿಸಖೀನಾಂ ಗೀಯತಾಂ ತತ್ಪ್ರಸಂಗಃ
ಕ್ಷಪಿತಕುಚರುಜಸ್ತೇ ಕಲ್ಪಯಂತೀಷ್ಟಮಿಷ್ಟಾಃ ॥ ೧೪ ॥

ಎಲೈ ಷಟ್ಪದವೇ! ನಾವು ವನವಾಸಿಗಳು. ನಮಗೆ ಮನೆಮಠಗಳೂ ಇಲ್ಲ. ಅಂತಹ ನಮ್ಮ ಮುಂದೆ ನೀನು ಯದುಕುಲ ಶಿರೋಮಣಿಯಾದ ಶ್ರೀಕೃಷ್ಣನ ಗುಣಗಾನವನ್ನೇಕೆ ಮಾಡುತ್ತಿರುವೆ? ಇದು ನಮಗೆಲ್ಲ ಹಳೆಯ ದಾಗಿ ಹೋಗಿದೆ. ಅವನ ಗುಣ-ಗಣಗಳೆಲ್ಲವನ್ನೂ ನಾವು ಬಲ್ಲೆವು. ನಿನ್ನ ಕುತಂತ್ರವು ನಮ್ಮ ಬಳಿ ನಡೆಯದು. ನೀನು ಇಲ್ಲಿಂದ ಹೊರಟುಹೋಗು. ವಿಜಯವು ಸದಾ ಜೊತೆಯಿರುವ ಶ್ರೀಕೃಷ್ಣನ ಗುಣಗಾನವನ್ನು ಮಧುರಾಪುರವಾಸಿನಿಯರಾದ ಸಖಿಯರ ಮುಂದೆ ಹಾಡು. ಅವರು ಹೊಸಬರು. ಅವರಿಗೆ ಅವನ ಲೀಲೆಗಳು ಇನ್ನೂ ಅಷ್ಟಾಗಿ ತಿಳಿಯವು. ಈ ಸಮಯದಲ್ಲಿ ಅವರು ಅವನಿಗೆ ಪ್ರಿಯರಾಗಿದ್ದಾರೆ. ಅವರ ಹೃದಯದ ಪೀಡೆಯನ್ನು ಅವನು ಪರಿಹರಿಸಿರುವನು. ಅವರು ನಿನ್ನ ಪ್ರಾರ್ಥನೆಯನ್ನು ಸ್ವೀಕರಿಸುವರು. ನಿನ್ನ ಚಾತುರ್ಯದಿಂದ ಸಂತೋಷಗೊಂಡು ಅವರು ನಿನಗೆ ಬೇಕಾದ್ದನ್ನು ಕೊಡುವರು. ॥ ೧೪ ॥

ದಿವಿ ಭುವಿ ಚ ರಸಾಯಾಂ ಕಾಃ ಸ್ತ್ರಿಯಸ್ತದ್ದುರಾಪಾಃ
ಕಪಟರುಚಿರಹಾಸಭ್ರೂವಿಜೃಂಭಸ್ಯ ಯಾಃ ಸ್ಯುಃ ।

ಚರಣರಜ ಉಪಾಸ್ತೇ ಯಸ್ಯ ಭೂತಿರ್ವಯಂ ಕಾ
ಅಪಿ ಚ ಕೃಪಣಪಕ್ಷೇ ಹ್ಯುತ್ತಮಶ್ಲೋಕಶಬ್ದಃ ॥ ೧೫ ॥

ಎಲೈ ಕಪಟಿಯಾದ ದುಂಬಿಯೇ! ಸ್ವರ್ಗದಲ್ಲಾಗಲೀ, ಪಾತಾಳಲೋಕ ದಲ್ಲಾಗಲೀ, ಮನೋಹರವಾದ ನಗೆ, ಹುಬ್ಬು-ಹಾರಿಸುವುದು, ಕಡೆಗಣ್ಣಿನೋಟ ಇತ್ಯಾದಿಗಳುಳ್ಳ ಮುಕುಂದನಿಗೆ ವಶವಾಗದಿರುವ ಸ್ತ್ರೀಯರು ಯಾರು ತಾನೇ ಇದ್ದಾರೆ? ಮಹಾಲಕ್ಷ್ಮಿಯೇ ಯಾರ ಚರಣಕಮಲಗಳನ್ನು ಸದಾ ಸೇವಿಸುವಳೋ ಅಂತಹ ಶ್ಯಾಮ ಸುಂದರನಿಗೆ ನಾವು ಎಷ್ಟು ಮಾತ್ರದವರು. ಆದರೆ ದೀನರ ವಿಷಯ ದಲ್ಲಿ ಅವನಿಗಿರುವ ಪುಣ್ಯಕೀರ್ತಿ ಎಂಬರ್ಥದ ಉತ್ತಮಶ್ಲೋಕ ಶಬ್ದವು ಅನ್ವರ್ಥವಾಗುವುದೇನು? ॥ ೧೫ ॥

ವಿಸೃಜ ಶಿರಸಿ ಪಾದಂ ವೇದ್ಮ್ಯಹಂ ಚಾಟುಕಾರೈ-
ರನುನಯವಿದುಷಸ್ತೇಽಭ್ಯೇತ್ಯ ದೌತ್ಯೈರ್ಮುಕುಂದಾತ್ ।

ಸ್ವಕೃತ ಇಹ ವಿಸೃಷ್ಟಾಪತ್ಯಪತ್ಯನ್ಯಲೋಕಾ
ವ್ಯಸೃಜದಕೃತಚೇತಾಃ ಕಿಂ ನು ಸಂಧೇಯಮಸ್ಮಿನ್ ॥ ೧೬ ॥

ಭ್ರಮರವೇ! ತಲೆಯಮೇಲಿಟ್ಟಿರುವ ನಿನ್ನ ಪಾದವನ್ನು ತೆಗಿ; ದೂರಸರಿ. ಚಮತ್ಕಾರದ ಮಾತುಗಳನ್ನಾಡಿ ಸಂಧಾನಮಾಡುವುದರಲ್ಲಿ ನೀನು ನಿಪುಣನೆಂದು ನಾವು ಬಲ್ಲೆವು. ಚಮತ್ಕಾರವಾಗಿ ಮಾತನಾಡು ವುದನ್ನು ನೀನು ಶ್ರೀಕೃಷ್ಣನಿಂದಲೇ ಕಲಿತಿರುವೆ ಎಂದೆನಿಸುತ್ತದೆ. ಆದರೆ ನಿನ್ನ ಮಾತುಗಳು ನಮ್ಮಲ್ಲಿ ಪರಿಣಾಮ ಬೀರಲಾವು. ಏಕೆಂದರೆ, ನಿನ್ನ ಪ್ರಭುವಿಗಾಗಿಯೇ ನಾವು ಪತಿ-ಪುತ್ರರನ್ನು ಬಂಧುಗಳನ್ನು, ಪರಲೋಕಕ್ಕೆ ಸಾಧನವಾದ ಸಮಸ್ತ ಧರ್ಮಗಳನ್ನು ತ್ಯಜಿಸಿದೆವು. ಆದರೆ ಕೃತಜ್ಞತೆಯಿಲ್ಲದ ಅವನು ನಮ್ಮನ್ನು ಬಿಟ್ಟು ಹೊರಟೇಹೋದ. ಅಂತಹವನ ವಿಷಯದಲ್ಲಿ ಮೈತ್ರಿಮಾಡಿ ಕೊಳ್ಳುವುದೇನಿದೆ? ॥ ೧೬ ॥

ಮೃಗಯುರಿವ ಕಪೀಂದ್ರಂ ವಿವ್ಯಧೇ ಲುಬ್ಧಧರ್ಮಾ
ಸ್ತ್ರಿಯಮಕೃತ ವಿರೂಪಾಂ ಸ್ತ್ರೀಜಿತಃ ಕಾಮಯಾನಾಮ್ ।

ಬಲಿಮಪಿ ಬಲಿಮತ್ತ್ವಾವೇಷ್ಟಯದ್ ಧ್ವಾಂಕ್ಷವದ್ಯ-
ಸ್ತದಲಮಸಿತಸಖ್ಯೈರ್ದುಸ್ತ್ಯಜಸ್ತತ್ಕಥಾರ್ಥಃ ॥ ೧೭ ॥

ಯದನುಚರಿತಲೀಲಾಕರ್ಣಪೀಯೂಷವಿಪ್ರುಟ್-
ಸಕೃದದನವಿಧೂತದ್ವಂದ್ವಧರ್ಮಾ ವಿನಷ್ಟಾಃ ।

ಸಪದಿ ಗೃಹಕುಟುಂಬಂ ದೀನಮುತ್ಸೃಜ್ಯ ದೀನಾ
ಬಹವ ಇಹ ವಿಹಂಗಾ ಭಿಕ್ಷುಚರ್ಯಾಂ ಚರಂತಿ ॥ ೧೮ ॥

ವಯಮೃತಮಿವ ಜಿಹ್ಮವ್ಯಾಹೃತಂ ಶ್ರದ್ದಧಾನಾಃ
ಕುಲಿಕರುತಮಿವಾಜ್ಞಾಃ ಕೃಷ್ಣವಧ್ವೋ ಹರಿಣ್ಯಃ ।

ದದೃಶುರಸಕೃದೇತತ್ತನ್ನಖಸ್ಪರ್ಶತೀವ್ರ-
ಸ್ಮರರುಜ ಉಪಮಂತ್ರಿನ್ ಭಣ್ಯತಾಮನ್ಯವಾರ್ತಾ ॥ ೧೯ ॥

ಪ್ರಿಯಸಖ ಪುನರಾಗಾಃ ಪ್ರೇಯಸಾ ಪ್ರೇಷಿತಃ ಕಿಂ
ವರಯ ಕಿಮನುರುಂಧೇ ಮಾನನೀಯೋಽಸಿ ಮೇಽಂಗ ।

ನಯಸಿ ಕಥಮಿಹಾಸ್ಮಾನ್ ದುಸ್ತ್ಯಜದ್ವಂದ್ವಪಾರ್ಶ್ವಂ
ಸತತಮುರಸಿ ಸೌಮ್ಯ ಶ್ರೀರ್ವಧೂಃ ಸಾಕಮಾಸ್ತೇ ॥ ೨೦ ॥

ಭ್ರಮರವೇ ! ನಿನ್ನ ಪ್ರಭುವಿನ ನಿರ್ದಯತೆಯನ್ನು ಎಷ್ಟೊಂದು ವರ್ಣಿಸೋಣ. ಇವನು ಶ್ರೀರಾಮನಾಗಿದ್ದಾಗ ಕಪಿರಾಜನಾದ ವಾಲಿಯನ್ನು ವ್ಯಾಧನಂತೆ ಅಡಗಿಕೊಂಡು ನಿರ್ದಯತೆಯಿಂದ ಕೊಂದುಬಿಟ್ಟಿದ್ದನು. ಅದೇ ಅವತಾರದಲ್ಲಿ ಸ್ತ್ರೀಜಿತನಾದ ಇವನು ಕಾಮಿಸಿಬಂದ ಶೂರ್ಪಣಖಿಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದ್ದನು. ವಾಮನಾವತಾರದಲ್ಲಿ ತಾನೇ ಮಾಡಿದ್ದೇನು ? ವಟುವಿನ ವೇಷದಿಂದ ಬಂದ ಇವನನ್ನು ಬಲಿಚಕ್ರವರ್ತಿಯು ಯಥೋಚಿತವಾಗಿ ಸತ್ಕರಿಸಿದನು. ಬೇಡಿದ್ದನ್ನು ಕೊಟ್ಟುಬಿಟ್ಟನು. ಆದರೆ ಇವನು ಆ ಬಲಿಯನ್ನು ವರುಣ ಪಾಶದಿಂದ ಬಂಧಿಸಿ ಪಾತಾಳಕ್ಕಟ್ಟಿದನು. ಬಲಿಯನ್ನು ಭಕ್ಷಿಸಿದ ಕಾಗೆಯು ಬಲಿಯನ್ನಿತ್ತವನನ್ನೇ ಪರಿವಾರದೊಂದಿಗೆ ಮುತ್ತುವಂತೆ ಅಲ್ಲವೇ ಇದು. ಹೋಗಲಿ ಬಿಡು. ಈ ಕರಿಯನೊಡನೆ ಸ್ನೇಹವೇ ಸಾಕೆನಿಸಿದೆ. ಆದರೂ ಏನು ಮಾಡುವುದು ? ಅವನ ಲೀಲಾ ಪ್ರಸಂಗಗಳನ್ನು ಗಾನಮಾಡದೇ ಇರಲಾಗುವುದಿಲ್ಲ ॥ ೧೭ ॥ ಶ್ರೀಕೃಷ್ಣನ ಲೀಲಾರೂಪವಾದ ಕರ್ಣಾಮೃತದ ಒಂದು ತೊಟ್ಟನ್ನು ಪಾನ ಮಾಡಿದವರೂ ಕೂಡ ರಾಗ, ದ್ವೇಷ, ಸುಖ-ದುಃಖಿವೇ ಮೊದಲಾದ ದ್ವಂದ್ವಗಳಿಂದ ಬಿಡುಗಡೆ ಹೊಂದುವರು. ದಯನೀಯವಾದ ಸಂಸಾರವನ್ನೂ ಮನೆ-ಮತಗಳನ್ನು ತೊರೆದು ಅತ್ಯಂತ ದೀನರಾಗಿ ಸಂಗ್ರಹ-ಪರಿಗ್ರಹಗಳನ್ನು ಮಾಡದೆ ಪ್ರಾಣ ಧಾರಣೆಗೆ ಬೇಕಾದಷ್ಟು ಮಾತ್ರವೇ ಆಹಾರವನ್ನು ಸೇವಿಸುವ ಪಕ್ಷಿಗಳಂತೆ - ಈ ವೃಂದಾವನದಲ್ಲಿ ಬಹುಮಂದಿ ಭಿಕ್ಷಾಟನೆಯಿಂದ ಜೀವಿಸುತ್ತಿದ್ದಾರೆ. ಹೀಗಿದ್ದರೂ ಶ್ರೀಕೃಷ್ಣನ ಲೀಲಾಕಥೆಗಳನ್ನು ಬಿಡಲಿಕ್ಕಾಗುವುದಿಲ್ಲ. ನಮ್ಮ ಅವಸ್ಥೆಯೂ ಹೀಗೆ ಆಗಿದೆ. ॥ ೧೮ ॥ ಶ್ರೀಕೃಷ್ಣನ ಉಪಮಂತ್ರಿಯೇ ! ಕೃಷ್ಣಸಾರಮೃಗದ ಪತ್ನಿಯರಾದ ಹೆಣ್ಣು ಜಿಂಕೆಗಳು ವ್ಯಾಧನ ಸುಮಧುರ ಸಂಗೀತಕ್ಕೆ ಮರುಳಾಗಿ ಅವನು ಬೀಸಿದ ಬಲೆಯಲ್ಲಿ ಬಿದ್ದು ಪ್ರಾಣನೀಗುವಂತೆ ಶ್ರೀಕೃಷ್ಣನ ಪತ್ನಿಯರಾದ ನಾವೂ (ಗೋಪಿಯರೂ) ಕುಟಿಲನಾದ ಕೃಷ್ಣನ ಅಮೃತಮಯವಾದ ಮಾತನ್ನು ಸತ್ಯವೆಂದೇ ಬಗೆದು ಆ ಕೃಷ್ಣನ ನಖಸ್ಪರ್ಶದಿಂದ ಉಂಟಾದ ಕಾಮಬಾಧೆಯನ್ನು ಹಲವಾರು ಬಾರಿ ಅನುಭವಿಸಿದೆವು. ಆದುದರಿಂದ ಅವನ ವಿಷಯದಲ್ಲಿ ಬೇರೆ ಯಾವ ಮಾತನ್ನೂ ಆಡಬೇಡ. ಬೇರೇನಾದರೂ ವಾರ್ತೆಯಿದ್ದರೆ ತಿಳಿಸು. ॥ ೧೯ ॥ ನಮ್ಮ ಪ್ರಿಯತಮನ ಪ್ರಿಯಸಖನೇ ! ನೀನು ನಿನ್ನ ಸ್ವಾಮಿಯ ಬಳಿಗೆ ಹೋಗಿ ಪುನಃ ಆಗಮಿಸಿದಂತೆ ಕಾಣುತ್ತದೆ. ನಮ್ಮನ್ನಲ್ಲಿಗೆ ಕರೆದುಕೊಂಡು ಹೋಗಲು ನಮ್ಮ ಪ್ರಿಯತಮನು ಪುನಃ ನಿನ್ನನ್ನು ಕಳಿಸಿರಬೇಕಲ್ಲ ? ಪ್ರಿಯಭ್ರಮರವೇ ! ನೀನು ನಮಗೆ ಮಾನನೀಯನಾಗಿರುವೆ. ನಿನ್ನ ಇಚ್ಛೆ ಏನೆಂಬುದನ್ನು ಹೇಳು. ನೀನು ಹೇಳಿದಂತೆ ಮಾಡುತ್ತೇವೆ. ನಾವಲ್ಲಿಗೆ ಬರಲು ನೀನು ಅಪೇಕ್ಷಿಸುವೆಯಾ ? ಆದರೆ ಅವನ ಬಳಿಗೆ ಹೋದರೂ ಮರಳಬೇಕಾಗುವುದು. ನಾವೂ ಅವನ ಬಳಿಗೆ ಹೋಗಿದ್ದೆವು. ಆದರೆ ನೀನು ನಮ್ಮನ್ನಲ್ಲಿಗೆ ಕರೆದುಕೊಂಡು ಹೋಗಿ ಏನು ಮಾಡುವೆ ? ಸೌಮ್ಯನೇ ಅವನ ವಕ್ಷಸ್ಥಳದಲ್ಲಾದರೋ ಅವನ ಪ್ರಿಯಪತ್ನೀ ಲಕ್ಷ್ಮಿಯು ಸದಾಕಾಲ ಇರುವಳಲ್ಲ ! ಹಾಗಿರುವಾಗ ಅಲ್ಲಿ ನಮ್ಮದೇನು ನಡೆದೀತು ? ॥ ೨೦ ॥

ಅಪಿ ಬತ ಮಧುಪುರ್ಯಾಮಾರ್ಯಪುತ್ರೋಽಧುನಾಸ್ತೇ
ಸ್ಮರತಿ ಸ ಪಿತೃಗೇಹಾನ್ ಸೌಮ್ಯ ಬಂಧೂಂಶ್ಚ ಗೋಪಾನ್ ।

ಕ್ವಚಿದಪಿ ಸ ಕಥಾ ನಃ ಕಿಂಕರೀಣಾಂ ಗೃಣೀತೇ
ಭುಜಮಗುರುಸುಗಂಧಂ ಮೂರ್ಧ್ನ್ಯಧಾಸ್ಯತ್ ಕದಾ ನು
॥ ೨೧ ॥

ಶ್ರೀಶುಕ ಉವಾಚ

ಅಥೋದ್ಧವೋ ನಿಶಮ್ಯೈವಂ ಕೃಷ್ಣದರ್ಶನಲಾಲಸಾಃ ।
ಸಾಂತ್ವಯನ್ ಪ್ರಿಯಸಂದೇಶೈರ್ಗೋಪೀರಿದಮಭಾಷತ
॥ ೨೨ ॥

ಉದ್ಧವ ಉವಾಚ

ಅಹೋ ಯೂಯಂ ಸ್ಮಪೂರ್ಣಾರ್ಥಾ ಭವತ್ಯೋ ಲೋಕಪೂಜಿತಾಃ ।
ವಾಸುದೇವೇ ಭಗವತಿಯಾಸಾಮಿತ್ಯರ್ಪಿತಂ ಮನಃ
॥ ೨೩ ॥

ದಾನವ್ರತತಪೋಹೋಮಜಪಸ್ವಾಧ್ಯಾಯಸಂಯಮೈಃ ।
ಶ್ರೇಯೋಭಿರ್ವಿವಿಧೈಶ್ಚಾನ್ಯೈಃ ಕೃಷ್ಣೇ ಭಕ್ತಿರ್ಹಿ ಸಾಧ್ಯತೇ
॥ ೨೪ ॥

ಭಗವತ್ಯುತ್ತಮಶ್ಲೋಕೇ ಭವತೀಭಿರನುತ್ತಮಾ ।
ಭಕ್ತಿಃ ಪ್ರವರ್ತಿತಾ ದಿಷ್ಟ್ಯಾ ಮುನೀನಾಮಪಿ ದುರ್ಲಭಾ
॥ ೨೫ ॥

ದಿಷ್ಟ್ಯಾ ಪುತ್ರಾನ್ ಪತೀನ್ ದೇಹಾನ್
ಸ್ವಜನಾನ್ ಭವನಾನಿ ಚ ।
ಹಿತ್ವಾವೃಣೀತ ಯೂಯಂ ಯತ್
ಕೃಷ್ಣಾಖ್ಯಂ ಪುರುಷಂ ಪರಮ್ ॥ ೨೬ ॥

ಸರ್ವಾತ್ಮಭಾವೋಽಧಿಕೃತೋ ಭವತೀನಾಮಧೋಕ್ಷಜೇ ।
ವಿರಹೇಣ ಮಹಾಭಾಗಾ ಮಹಾನ್ ಮೇಽನುಗ್ರಹಃ ಕೃತಃ
॥ ೨೭ ॥

ಶ್ರೂಯತಾಂ ಪ್ರಿಯಸಂದೇಶೋ ಭವತೀನಾಂ ಸುಖಾವಹಃ ।
ಯಮಾದಾಯಾಗತೋ ಭದ್ರಾ ಅಹಂ ಭರ್ತುಃ ರಹಸ್ಕರಃ
॥ ೨೮ ॥

ನಮ್ಮ ಪ್ರಿಯತಮನ ಪ್ರಿಯಸಖನಾದ ಮಧುಕರನೇ ! ಆರ್ಯ ಪುತ್ರನಾದ ಭಗವಾನ್ ಶ್ರೀಕೃಷ್ಣನು ಗುರುಕುಲದಿಂದ ಮರಳಿ ಬಂದು ಈಗ ಮಥುರೆಯಲ್ಲಿ ಸುಖದಿಂದ ಇರುವನಲ್ಲ ? ಅವನು ಎಂದಾದರೂ ನಂದ-ಯಶೋದೆಯರನ್ನು, ಇಲ್ಲಿಯ ಮನೆಯನ್ನು ಸಂಬಂಧಿಗಳನ್ನು ಗೊಲ್ಲಬಾಲಕರನ್ನು ಸ್ಮರಿಸಿಕೊಳ್ಳುವನೇ ? ದಾಸಿಯರಾದ ನಮ್ಮ ಸಂಬಂಧವಾಗಿಯೂ ಯಾವಾಗಲಾದರೂ ಮಾತುಗಳನ್ನು ಆಡುತ್ತಿರುವನೇ ? ಮುಂದೆ ಎಂದಾದರೂ ಅಗರು ಸುಗಂಧಯುಕ್ತವಾದ ತನ್ನ ತೋಳನ್ನು ನಮ್ಮ ತಲೆಯ ಮೇಲೆ ಇರಿಸುವನೇ ? ಹೇಳು ? ಭ್ರಮರವೇ ! ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಶ್ರೀಕೃಷ್ಣನನ್ನು ಸಂದರ್ಶಿಸಲು ಅತ್ಯಂತ ಉತ್ಸುಕರಾಗಿದ್ದ ಗೋಪಿಯರ ಮಾತನ್ನು ಕೇಳಿದ ಉದ್ಧವನು ಶ್ರೀಕೃಷ್ಣನ ಪ್ರಿಯಸಂದೇಶಗಳಿಂದ ಸಂತೈಸುತ್ತಾ ಅವರಲ್ಲಿ ಹೀಗೆ ಹೇಳಿದನು. ॥ ೨೨ ॥

ಉದ್ಧವನು ಹೇಳುತ್ತಾನೆ – ಗೋಪಿಯರೇ ! ನೀವು ಕೃತ ಕೃತ್ಯರು. ನಿಮ್ಮ ಜೀವನವು ಸಫಲವಾಗಿದೆ. ನೀವು ಮೂರು ಲೋಕಗಳಲ್ಲಿಯೂ ಪೂಜ್ಯರಾಗಿರುವಿರಿ. ನೀವು ನಿಮ್ಮ ಸರ್ವಸ್ವವನ್ನು ಭಗವಾನ್ ಶ್ರೀಕೃಷ್ಣನಿಗೆ ಅರ್ಪಿಸಿಕೊಂಡು ಬಿಟ್ಟಿರುವಿರಿ. ನೀವೇ ಧನ್ಯರು. ॥ ೨೩ ॥ ದಾನ, ವ್ರತ, ತಪ, ಹೋಮ, ಜಪ, ವೇದಾಧ್ಯಯನ, ಧ್ಯಾನ, ಧಾರಣ, ಸಮಾಧಿ ಮತ್ತು ಶ್ರೇಯಸ್ಕರವಾದ ವಿಧ-ವಿಧವಾದ ಇತರ ಸಾಧನೆಗಳ ಮೂಲಕ ಭಗವಂತನಲ್ಲಿ ಭಕ್ತಿಯು ಹುಟ್ಟಲು ಸಾಧ್ಯವಾಗುತ್ತದೆ. ॥ ೨೪ ॥ ಆದರೆ ಉತ್ತಮಕೀರ್ತಿಯುಳ್ಳ ಭಗವಂತನ ಸರ್ವೋತ್ತಮವಾದ ಪ್ರೇಮಭಕ್ತಿಯನ್ನು ನೀವೆಲ್ಲರೂ ಪಡೆದುಕೊಂಡು ಅದರ ಆದರ್ಶವನ್ನು ಸ್ಥಾಪಿಸಿರುವಿರಿ. ಇದು ನಿಶ್ಚಯವಾಗಿಯೂ ಸೌಭಾಗ್ಯವೇ ಸರಿ. ಆ ಭಕ್ತಿಯು ಮಹಾ-ಮಹಾ ಋಷಿ-ಮುನಿಗಳಿಗೂ ಅತ್ಯಂತ ದುರ್ಲಭವಾದುದು. ॥ ೨೫ ॥ ನೀವುಗಳು ನಿಮ್ಮ ಪತಿ-ಪುತ್ರರನ್ನೂ, ದೇಹ ಸ್ವಜನರನ್ನೂ, ಮನೆ-ಮಠಗಳನ್ನು ಬಿಟ್ಟು ಸಮಸ್ತರ ಪರಮಪತಿಯಾದ ಪುರುಷೋತ್ತಮ ಭಗವಾನ್ ಶ್ರೀಕೃಷ್ಣನನ್ನು ಪತಿಯನ್ನಾಗಿ ವರಿಸಿರುವಿರಿ. ನಿಜವಾಗಿಯೂ ಇದು ಸೌಭಾಗ್ಯದ ಮಾತೇ ಸರಿ. ॥ ೨೬ ॥ ಮಹಾಭಾಗ್ಯವತಿಯರಾದ ಗೋಪಿಯರೇ ! ಭಗವಾನ್ ಶ್ರೀಕೃಷ್ಣನ ವಿಯೋಗದಿಂದ ನೀವು-ಸಮಸ್ತ ವಸ್ತುಗಳ ರೂಪದಲ್ಲಿ ಅವನ ದರ್ಶನವಾಗುವಂತಹ ಇಂದ್ರಿಯಾತೀತ ಪರಮಾತ್ಮನ ಕುರಿತು ಆ ಭಾವವನ್ನು ಪಡೆದುಕೊಂಡಿರುವಿರಿ. ನೀವೆಲ್ಲರೂ ಆ ಭಾವವನ್ನು ನನ್ನ ಮುಂದೆಯೇ ಪ್ರಕಟಿಸಿರುವಿರಿ. ಇದು ನನ್ನ ಮೇಲೆ ದೇವಿಯರಾದ ನೀವು ತೋರಿದ ಮಹತ್ಕೃಪೆಯೇ ಆಗಿದೆ. ॥ ೨೭ ॥ ನಾನು ನನ್ನ ಸ್ವಾಮಿಯ ರಹಸ್ಯವಾದ ಕಾರ್ಯಮಾಡುವಂತಹ ದೂತನಾಗಿದ್ದೇನೆ. ನಿಮ್ಮ ಪ್ರಿಯತಮನಾದ ಶ್ರೀಕೃಷ್ಣನು ಪರಮ ಸುಖದಾಯಕವಾದ ಸಂದೇಶವನ್ನು ನಿಮಗೆ ಕಳಿಸಿಕೊಟ್ಟಿರುವನು. ಮಂಗಳಾಂಗಿಯರೇ! ಅದನ್ನು ಹೊತ್ತುಕೊಂಡು ನಾನು ನಿಮ್ಮ ಬಳಿಗೆ ಬಂದಿರುವೆನು. ಈಗ ಅದನ್ನು ಲಾಲಿಸಿರಿ. ॥ ೨೮ ॥

ಶ್ರೀಭಗವಾನುವಾಚ

ಭವತೀನಾಂ ವಿಯೋಗೋ ಮೇ ನ ಹಿ ಸರ್ವಾತ್ಮನಾ ಕ್ವಚಿತ್ ।
ಯಥಾ ಭೂತಾನಿ ಭೂತೇಷು ಖಂ ವಾಯ್ವಗ್ನಿರ್ಜಲಂ ಮಹೀ ।
ತಥಾಹಂ ಚ ಮನಃಪ್ರಾಣಭೂತೇಂದ್ರಿಯಗುಣಾಶ್ರಯಃ
॥ ೨೯ ॥

ಭಗವಾನ್ ಶ್ರೀಕೃಷ್ಣನು ಹೇಳಿರುವನು – ನಾನು ಎಲ್ಲಕ್ಕೂ ಮೂಲಕಾರಣನಾದ್ದರಿಂದ ಸರ್ವರಿಗೂ ಆತ್ಮಸ್ವರೂಪನಾಗಿದ್ದೇನೆ. ಎಲ್ಲದರಲ್ಲಿಯೂ ನಾನೇ ಇದ್ದೇನೆ. ಆದುದರಿಂದ ನನಗೆ ನಿಮ್ಮೊಡನೆ ವಿಯೋಗವು ಎಂದಿಗೂ ಉಂಟಾಗಲಾರದು. ಪ್ರಪಂಚದ ಎಲ್ಲ ಭೌತಿಕ ಪದಾರ್ಥಗಳಲ್ಲಿ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಎಂಬ ಪಂಚಭೂತಗಳೂ ಸೇರಿಕೊಂಡೇ ಇರುತ್ತವೆ. ಇವುಗಳಿಂದಲೇ ಸಮಸ್ತ ವಸ್ತುಗಳು ಉಂಟಾಗಿವೆ. ಇವೇ ಆ ವಸ್ತುಗಳ ರೂಪದಲ್ಲಿವೆ. ಹಾಗೆಯೇ ಮನಸ್ಸು, ಪಂಚಭೂತ ಇಂದ್ರಿಯಗಳು ಮತ್ತು ಅವುಗಳ ವಿಷಯಗಳು – ಇವುಗಳ ಆಶ್ರಯ ನಾನೇ ಆಗಿದ್ದೇನೆ. ಅವು ನನ್ನಲ್ಲಿವೆ, ನಾನು ಅವುಗಳಲ್ಲಿದ್ದೇನೆ. ನಿಜವಾಗಿ ಹೇಳಬೇಕಾದರೆ ನಾನೇ ಅವುಗಳ ರೂಪದಲ್ಲಿ ಪ್ರಕಟನಾಗಿದ್ದೇನೆ. ॥ ೨೯ ॥ ನಾನೇ ನನ್ನ ಮಾಯೆಯ ಮೂಲಕ ಪ್ರಾಣಗಳು, ಇಂದ್ರಿಯಗಳು ಮತ್ತು ಅವುಗಳ ವಿಷಯಗಳ ರೂಪನಾಗಿ ಅವುಗಳ ಆಶ್ರಯನಾಗುತ್ತೇನೆ. ಸ್ವಯಂ ನಿಮಿತ್ತನಾಗಿಯೂ ನಾನೇ ನನ್ನನ್ನು ರಚಿಸಿ, ಪಾಲಿಸಿ, ತಿರೋಧಾನನಾಗುತ್ತೇನೆ. ॥ ೩೦ ॥ ಆತ್ಮನು ಮಾಯೆ ಮತ್ತು ಮಾಯೆಯ ಕಾರ್ಯಗಳಿಂದ ಪೃಥಕ್ಕಾಗಿರುವನು. ಅವನು ವಿಶುದ್ಧ ಜ್ಞಾನ ಸ್ವರೂಪನಾಗಿದ್ದು, ಜಡ ಪ್ರಕೃತಿ, ಅನಂತ ಜೀವರು ಹಾಗೂ ತನ್ನದೇ ಅವಾಂತರ ಭೇದಗಳಿಂದ ರಹಿತನಾಗಿ ಶುದ್ಧನಾಗಿದ್ದಾನೆ. ಯಾವುದೇ ಗುಣವು ಅವನನ್ನು ಸ್ಪರ್ಶಿಸಲಾರದು. ಸುಷುಪ್ತಿ, ಸ್ವಪ್ನ ಜಾಗ್ರತ್ ಎಂಬ ಮಾಯೆಯ ಮೂರು ವೃತ್ತಿಗಳಿಂದ ಅತೀತನಾದ ಅಖಂಡ, ಅನಂತ, ಬೋಧಸ್ವರೂಪನಾದ ಆತ್ಮನು ಕೆಲವೊಮ್ಮೆ ಪ್ರಾಜ್ಞನಾಗಿಯೂ, ಕೆಲವೊಮ್ಮೆ ತೈಜಸನಾಗಿಯೂ, ಕೆಲವೊಮ್ಮೆ ವಿಶ್ವನಾಗಿಯೂ ಕಂಡುಬರುತ್ತಾನೆ. ॥ ೩೧ ॥ ಸ್ವಪ್ನದಲ್ಲಿ ಕಂಡುಬರುವ ಪದಾರ್ಥಗಳಂತೆ ಜಾಗ್ರದವಸ್ಥೆಯಲ್ಲಿ ಕಂಡುಬರುವ ಇಂದ್ರಿಯ ವಿಷಯಗಳೂ ಮಿಥ್ಯೆಯೇ ಆಗಿವೆ ಎಂದು ಭಾವಿಸಿಕೊಂಡು ವಿಷಯಗಳ ಕಡೆಗೆ ಹರಿದುಹೋಗುವ ಮನಸ್ಸನ್ನು ಮತ್ತು ಇಂದ್ರಿಗಳನ್ನು ತಡೆಗಟ್ಟಬೇಕು. ಸ್ವಪ್ನದಿಂದ ಎಚ್ಚೆತ್ತ ಬಳಿಕ ಕಂಡ ಸ್ವಪ್ನವು ಸುಳ್ಳೆಂದು ಭಾವಿಸುವಂತೆಯೇ ಜಗತ್ತಿನ ವಿಷಯಗಳೂ ಮಿಥ್ಯೆಯೆಂದು ತ್ಯಜಿಸಿ ನನ್ನ ಸಾಕ್ಷಾತ್ಕಾರವನ್ನು ಪಡೆಯಬೇಕು. ॥ ೩೨ ॥ ಎಲ್ಲ ನದಿಗಳೂ ಹರಿದುಕೊಂಡು ಕೊನೆಗೆ ಸಮುದ್ರವನ್ನೇ ಸೇರುವಂತೆಯೇ ಮಹಾತ್ಮರು ಮಾಡುವ ವೇದಾಭ್ಯಾಸ, ಯೋಗ-ಸಾಧನೆ, ಆತ್ಮಾನಾತ್ಮ ವಿವೇಕ, ತ್ಯಾಗ, ತಪಸ್ಸು ಇಂದ್ರಿಯ ಸಂಯಮ, ಸತ್ಯ ಮುಂತಾದ ಸಮಸ್ತ ಧರ್ಮಗಳು ನನ್ನ ಪ್ರಾಪ್ತಿಯಲ್ಲೇ ಪರಿಸಮಾಪ್ತವಾಗುತ್ತವೆ. ಎಲ್ಲದರ ನಿಜವಾದ ಫಲವು ನನ್ನ ಸಾಕ್ಷಾತ್ಕಾರವೇ ಆಗಿದೆ. ಏಕೆಂದರೆ, ಅವೆಲ್ಲವೂ ಮನಸ್ಸನ್ನು ನಿಗ್ರಹಿಸಿ ನನ್ನ ಕಡೆಗೆ ಒಯ್ಯುತ್ತವೆ. ॥ ೩೩ ॥

ಗೋಪಿಯರೇ! ನಾನು ನಿಮ್ಮ ಕಣ್ಣುಗಳ ಧ್ರುವತಾರೆಯಾಗಿದ್ದೇನೆ. ನಿಮ್ಮ ಜೀವನ ಸರ್ವಸ್ವನಾಗಿರುವೆನು ಎಂಬುದರಲ್ಲಿ ಸಂದೇಹವೇ ಇಲ್ಲ. ನಾನು ಇಷ್ಟು ದೂರವಿದ್ದರೂ ನೀವು ನಿರಂತರವಾಗಿ ನನ್ನ ಧ್ಯಾನವನ್ನು ಮಾಡುತ್ತಿರುವಿರಿ. ನೀವು ಶರೀರದಿಂದ ದೂರವಿದ್ದರೂ ಮನಸ್ಸಿನಿಂದ ನನ್ನ ಸನ್ನಿಧಾನವನ್ನು ಅನುಭವಿಸುತ್ತಿರಿ. ನಿಮ್ಮ ಮನಸ್ಸನ್ನು ನನ್ನ ಬಳಿಯೇ ಇರಿಸಿರುವಿರಿ – ಇದೇ ನನ್ನ ಆಶಯವೂ ಆಗಿದೆ. ॥ ೩೪ ॥

ಆತ್ಮೈವಾತ್ಮನಾऽऽತ್ಮಾನಂ ಸೃಜೇ ಹನ್ಮ್ಯನುಪಾಲಯೇ ।
ಆತ್ಮಮಾಯಾನುಭಾವೇನ ಭೂತೇಂದ್ರಿಯಗುಣಾತ್ಮನಾ
॥ ೩೦ ॥

ಆತ್ಮಾ ಜ್ಞಾನಮಯಃ ಶುದ್ಧೋ ವ್ಯತಿರಿಕ್ತೋऽಗುಣಾನ್ವಯಃ ।
ಸುಷುಪ್ತಿಸ್ವಪ್ನಜಾಗ್ರದ್ಭಿಮಾಯಾವೃತ್ತಿಭಿರೀಯತೇ
॥ ೩೧ ॥

ಯೇನೇಂದ್ರಿಯಾರ್ಥಾನ್ ಧ್ಯಾಯೇತ ಮೃಷಾ ಸ್ವಪ್ನವದುತ್ಥಿತಃ ।
ತನ್ನಿರುಂಧ್ಯಾದಿಂದ್ರಿಯಾಣಿ ವಿನಿದ್ರಃ ಪ್ರತ್ಯಪದ್ಯತ
॥ ೩೨ ॥

ಏತದಂತಃ ಸಮಾಮ್ನಾಯೋ ಯೋಗಃ ಸಾಂಖ್ಯಂ ಮನೀಷಿಣಾಮ್ ।
ತ್ಯಾಗಸ್ತಪೋ ದಮಃ ಸತ್ಯಂ ಸಮುದ್ರಾಂತಾ ಇವಾಪಗಾಃ
॥ ೩೩ ॥

ಯತ್ತ್ವಹಂ ಭವತೀನಾಂ ವೈ ದೂರೇ ವರ್ತೇ ಪ್ರಿಯೋ ದೃಶಾಮ್ ।
ಮನಸಃ ಸನ್ನಿಕರ್ಷಾರ್ಥಂ ಮದನುಧ್ಯಾನಕಾಮ್ಯಯಾ
॥ ೩೪ ॥

ಯಥಾ ದೂರಚರೇ ಪ್ರೇಷ್ಠೇ ಮನ ಆವಿಶ್ಯ ವರ್ತತೇ ।
ಸ್ತ್ರೀಣಾಂ ಚ ನ ತಥಾ ಚೇತಃ ಸನ್ನಿಕೃಷ್ಟೇಽಕ್ಷಿಗೋಚರೇ
॥ ೩೫ ॥

ಸ್ತ್ರೀಯರ ಮತ್ತು ಬೇರೆ ಪ್ರೇಮಿಯರ ಮನಸ್ಸು ದೂರದಲ್ಲಿ ಇರುವ ಪ್ರಿಯತಮನ ಮೇಲೆ ನೆಲೆಸಿರುವಂತೆ, ಹತ್ತಿರವೇ ಯಾವಾಗಲೂ ಕಣ್ಣೆದುರಿಗೆ ಇರುವ ಪ್ರಿಯತಮನಲ್ಲಿ ನೆಲೆಸಿರುವುದಿಲ್ಲ ॥ ೩೫ ॥

ಮಯ್ಯಾವೇಶ್ಯ ಮನಃ ಕೃತ್ಸ್ನಂ ವಿಮುಕ್ತಾಶೇಷವೃತ್ತಿ ಯತ್ ।
ಅನುಸ್ಮರಂತ್ಯೋ ಮಾಂ ನಿತ್ಯಮಚಿರಾನ್ಮಾಮುಪೈಷ್ಯಥ
॥ ೩೬ ॥

ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ, ಇತರ ಸಮಸ್ತ ವ್ಯವಹಾರಗಳಿಂದ ನಿವೃತ್ತರಾಗಿ ನಿತ್ಯನಿರಂತರವಾಗಿ ನನ್ನನ್ನು ಧ್ಯಾನಿಸುತ್ತಿದ್ದರೆ ಬಹಳ ಬೇಗನೇ ನನ್ನನ್ನು ಹೊಂದುವಿರಿ. ॥ ೩೬ ॥

ಯಾ ಮಯಾ ಕ್ರೀಡತಾ ರಾತ್ರ್ಯಾಂ ವನೇಽಸ್ಮಿನ್ ವ್ರಜ ಆಸ್ಥಿತಾಃ ।
ಅಲಬ್ಧರಾಸಾಃ ಕಲ್ಯಾಣ್ಯೋ ಮಾಽಽಪುರ್ಮದ್ವೀರ್ಯಚಿಂತಯಾ
॥ ೩೭ ॥

ಕಲ್ಯಾಣಿಯರೇ ! ಶರತ್ಕಾಲದ ಹುಣ್ಣಿಮೆಯ ರಾತ್ರಿಯಲ್ಲಿ ನಾನು ನಿಮ್ಮೊಡನೆ ರಾಸಕ್ರೀಡೆಯನ್ನಾಡಿದೆನು. ಆ ಸಮಯದಲ್ಲಿ ಸ್ವಜನರಿಂದ ತಡೆಯಲ್ಪಟ್ಟು ನನ್ನೊಡನೆ ರಾಸ-ವಿಹಾರದಲ್ಲಿ ಸಮ್ಮಿಳಿತವಾಗಲು ಸಾಧ್ಯವಾಗದಿರುವ ಗೋಪಿಯರು ಮನೆಯಲ್ಲೇ ಉಳಿದು ನನ್ನ ಲೀಲೆಗಳನ್ನು ಸ್ಮರಿಸುತ್ತಾ ನನ್ನನ್ನೇ ಸೇರಿ ಹೋದರು. ನಿಮಗೂ ನಾನು ಅವಶ್ಯವಾಗಿ ದೊರೆಯುವೆನು. ನಿರಾಶರಾಗುವ ಮಾತೇ ಇಲ್ಲ ॥ ೩೭ ॥

ಶ್ರೀಶುಕ ಉವಾಚ

ಏವಂ ಪ್ರಿಯತಮಾದಿಷ್ಟಮಾಕರ್ಣ್ಯ ವ್ರಜಯೋಷಿತಃ ।
ತಾ ಊಚುರುದ್ಧವಂ ಪ್ರೀತಾಸ್ತತ್ಸಂದೇಶಾಗತಸ್ಮೃತೀಃ
॥ ೩೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ಈ ಸಂದೇಶವನ್ನು ಕೇಳಿ ಗೋಪಿಯರಿಗೆ ಮಹದಾನಂದವಾಯಿತು. ಅವನ ಸಂದೇಶದಿಂದ ಅವರು ಶ್ರೀಕೃಷ್ಣನ ಸ್ವರೂಪವನ್ನು ಮತ್ತು ಒಂದೊಂದೇ ಲೀಲೆಗಳನ್ನು ಸ್ಮರಿಸಿಕೊಂಡು ಪ್ರೇಮಮಗ್ನರಾಗಿ ಉದ್ಧವನಲ್ಲಿ ಇಂತೆಂದರು. ॥ ೩೮ ॥

ಗೋಪ್ಯ ಊಚುಃ

ವಿಷ್ಟ್ಯಾಹಿತೋ ಹತಃ ಕಂಸೋ ಯದೂನಾಂ ಸಾನುಗೋಽಘಕೃತ್ ।
ವಿಷ್ಟ್ಯಾಽಽಪ್ತೈರ್ಲಬ್ಧಸರ್ವಾರ್ಥೈಃ ಕುಶಲ್ಯಾಸ್ತೇಽಚ್ಯುತೋಽಧುನಾ
॥ ೩೯ ॥

ಗೋಪಿಯರು ಹೇಳುತ್ತಾರೆ – ಓ ಉದ್ಧವನೇ ! ಯದು ವಂಶೀಯರಿಗೆ ಉಪಟಳವನ್ನು ಕೊಡುತ್ತಿದ್ದ ಪಾಪಿಯಾದ ಕಂಸನು ತನ್ನ ಅನುಯಾಯಿಗಳೊಂದಿಗೆ ಸತ್ತು ಹೋದುದು ಸೌಭಾಗ್ಯದ ಮತ್ತು ಆನಂದದ ವಿಷಯವಾಗಿದೆ. ಶ್ರೀಕೃಷ್ಣನ ನೆಂಟರಿಷ್ಟರ ಗುರುಹಿರಿಯರ ಮನೋರಥಗಳೆಲ್ಲ ಪೂರ್ಣಗೊಂಡು, ನಮ್ಮ ಪ್ರಿಯತಮ ಶ್ಯಾಮಸುಂದರನು ಅವರೊಂದಿಗೆ ಕುಶಲನಾಗಿದ್ದಾನೆ ಎಂಬುದನ್ನು ಕೇಳಿ ನಾವು ಸಂತೋಷಗೊಂಡಿದ್ದೇವೆ. ॥ ೩೯ ॥

ಕಚ್ಚಿದ್ಗದಾಗ್ರಜಃ ಸೌಮ್ಯ ಕರೋತಿ ಪುರಯೋಷಿತಾಮ್ ।
ಪ್ರೀತಿಂ ನಃ ಸ್ನಿಗ್ಧಸವ್ರೀಡಹಾಸೋದಾರೇಕ್ಷಣಾರ್ಚಿತಃ
॥ ೪೦ ॥

ಆದರೆ ಉದ್ಧವನೇ ! ಅವನ ಕುರಿತಾದ ಒಂದು ಮಾತನ್ನು ಕೇಳಬಯಸುತ್ತೇವೆ. ನಾವು ಸ್ನೇಹಪೂರ್ಣವಾದ ನಾಚಿಕೆಯಿಂದ ಕೂಡಿದ ಮಂದಹಾಸದಿಂದಲೂ, ಉದಾರವಾದ ನೋಟದಿಂದಲೂ ಅವನ ಸೇವೆಯನ್ನು ಮಾಡುತ್ತಿದ್ದೆವು. ಅವನೂ ನಮ್ಮನ್ನು ಹಾಗೆಯೇ ಪ್ರೇಮಿಸುತ್ತಿದ್ದನು. ಇದೇ ರೀತಿಯಾಗಿ ಮಥುರೆಯ ಸ್ತ್ರೀಯರನ್ನು ಅವನು ಪ್ರೇಮಿಸುತ್ತಿರುವನೋ, ಇಲ್ಲವೋ ?॥ ೪೦ ॥

ಕಥಂ ರತಿವಿಶೇಷಜ್ಞಃ ಪ್ರಿಯಶ್ಚ ವರಯೋಷಿತಾಮ್ ।
ನಾನುಬಧ್ಯೇತ ತದ್ವಾಕ್ಯೈರ್ವಿಭ್ರಮೈಶ್ಚಾನುಭಾಜಿತಃ
॥ ೪೧ ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ – ಗೆಳತಿಯರೇ ! ನಮ್ಮ ಪ್ರಿಯತಮನಾದ ಶ್ಯಾಮಸುಂದರನು ಪ್ರೇಮದ ಕಲೆಯಲ್ಲಿ ವಿಶೇಷಜ್ಞನಾಗಿದ್ದಾನೆ. ಶ್ರೇಷ್ಠರಾದ ಸ್ತ್ರೀಯರೆಲ್ಲರೂ ಅವನನ್ನು ಪ್ರೀತಿಸುತ್ತಾರೆ. ಹೀಗಿರುವಾಗ ನಗರದ ಸ್ತ್ರೀಯರಾಡುವ ಮಧು ಮಧುರವಾದ ಮಾತುಗಳಿಂದಲೂ, ಹಾವ-ಭಾವಗಳಿಂದಲೂ ಅವನ ಕಡೆಗೆ ನೋಡುವಾಗ ಅವನು ಪ್ರೇಮಪಾಶದಲ್ಲಿ ಬಂಧಿಸದೆ ಇರುವನೇ ? ॥ ೪೧ ॥

ಅಪಿ ಸ್ಮರತಿ ನಃ ಸಾಧೋ ಗೋವಿಂದಃ ಪ್ರಸ್ತುತೇ ಕ್ವಚಿತ್ ।
ಗೋಷ್ಠೀ ಮಧ್ಯೇ ಪುರಸ್ತ್ರೀಣಾಂ ಗ್ರಾಮ್ಯಾಃ ಸ್ವೈರಕಥಾಂತರೇ
॥ ೪೨ ॥

ಇನ್ನೊಬ್ಬ ಗೋಪಿಯು ಹೇಳಿದಳು-ಸಾಧು ಪುರುಷನೇ! ನಗರದ ನಾರಿಯರು ಗುಂಪು ಕಟ್ಟಿಕೊಂಡು ಮಾತನಾಡಿ ಕೊಂಡಿರುವಾಗ ನಮ್ಮ ಪ್ರಿಯತಮನು ಸ್ವಚ್ಛಂದವಾಗಿ ಕಾಮಿನಿಯರ ಮನಸ್ಸನ್ನು ತಣಿಸುವ ಮಾತನ್ನಾಡುವಾಗ ಗೋಕುಲದ ಗೊಲ್ಲತಿಯರಾದ ನಮ್ಮನ್ನು ಎಂದಾದರೂ ಸ್ಮರಿಸುವನೇ ?॥ ೪೨ ॥

ತಾಃ ಕಿಂ ನಿಶಾಃ ಸ್ಮರತಿ ಯಾಸು ತದಾ ಪ್ರಿಯಾಭಿ-
ರ್ವೃಂದಾವನೇ ಕುಮುದಕುಂದ ಶಶಾಂಕರಮ್ಯೇ ।
ರೇಮೇ ಕ್ವಣಚ್ಚರಣನೂಪುರರಾಸಗೋಷ್ಠ್ಯಾ-
ಮಸ್ಮಾಭಿರೀಡಿತಮನೋಜ್ಞಕಥಃ ಕದಾಚಿತ್ ॥ ೪೩ ॥

ಮಗದೊಬ್ಬ ಗೋಪಿಯು ಕೇಳುತ್ತಾಳೆ – ಉದ್ಧವನೇ! ಶ್ರೀಕೃಷ್ಣನು ಎಂದಾದರೂ ಆ ದಿವ್ಯರಾತ್ರಿಗಳನ್ನು ಸ್ಮರಿಸುವನೋ ? ವಿಕಸಿತವಾದ ಬಿಳಿಯ ನೈದಿಲೆಗಳಿಂದಲೂ, ಮಲ್ಲಿಗೆ ಹೂವುಗಳಿಂದಲೂ, ಶರತ್ಕಾಲದ ಬೆಳದಿಂಗಳಿಂದಲೂ ವ್ಯಾಪ್ತವಾದ ವೃಂದಾವನದಲ್ಲಿ ಆ ರಾತ್ರಿಗಳಲ್ಲಿ ನಮ್ಮ ಪ್ರಿಯತಮನು ರಾಸಮಂಡಲದಲ್ಲಿ ನಮ್ಮೊಡನೆ ನೃತ್ಯವಾಡುತ್ತಿದ್ದನು. ನಿಶ್ಚಯವಾಗಿಯೂ ಎಷ್ಟು ಸುಂದರವಾದದ್ದು ಆ ರಾಸಲೀಲೆ! ನಂದಕಿಶೋರನ ಜೊತೆಯಲ್ಲಿ ನಾವು ನೃತ್ಯವಾಡುವಾಗ ನಮ್ಮ ಕಾಲಂದುಗೆಗಳು ಝಣ-ಝಣಿಸುತ್ತಿದ್ದವು. ನಾವೆಲ್ಲರೂ ಸೇರಿ ಅವನ ಲೀಲಾ ಪ್ರಸಂಗಗಳನ್ನು ಹಾಡುತ್ತಿದ್ದೆವು. ಹೀಗೆ ಅವನು ನಮ್ಮೊಡನೆ ನಾನಾ ಪ್ರಕಾರದಿಂದ ವಿಹರಿಸುತ್ತಿದ್ದನು. ಅಂತಹ ರಾತ್ರಿಗಳನ್ನು ನಾವು ಮರೆಯಲಾರೆವು. ಅವನಿಗೆ ಅದರ ಸ್ಮರಣೆ ಇದೆಯೇ ? ॥ ೪೩ ॥ ಇನ್ನೊಬ್ಬ ಗೋಪಿಯು ಕೇಳಿದಳು – ಉದ್ಧವನೇ! ನಾವೆಲ್ಲರೂ ಅವನ ವಿರಹಾಗ್ನಿಯಿಂದ ಬೇಯುತ್ತಿದ್ದೇವೆ. ದೇವೇಂದ್ರನು ಮಳೆಯನ್ನು ಸುರಿಸಿ ವನವನ್ನು ಹಚ್ಚ-ಹಸಿರಾಗಿಸುವಂತೆ ಶ್ರೀಕೃಷ್ಣನು ಎಂದಾದರೂ ತನ್ನ ಕರಸ್ಪರ್ಶಾದಿಗಳಿಂದ ನಮಗೂ ಜೀವನ ದಾನ ಮಾಡಲು ಇಲ್ಲಿಗೆ ಬರುವನೇ ? ॥ ೪೪ ॥

ಅಪ್ಯೇಷ್ಯತೀಹ ದಾಶಾರ್ಹಸ್ತಪ್ತಾಃ ಸ್ವಕೃತಯಾ ಶುಚಾ ।
ಸಂಜೀವಯನ್ನು ನೋ ಗಾತ್ರೈರ್ಯಥೇಂದ್ರೋ ವನಮಂಬುದೈಃ
॥ ೪೪ ॥

ಅಷ್ಟೊತ್ತಿಗೆ ಓರ್ವ ಗೋಪಿಯು ಹೇಳಿದಳು – ಎಲೈ ಸಖಿಯರೇ! ಈಗಲಾದರೋ ಅವನು ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದಿರುವನು. ರಾಜಕುಮಾರಿಯನ್ನು ವಿವಾಹವಾಗಿ, ಸಮಸ್ತ ಸಹೃದಯರಿಂದಲೂ ಪರಿವೃತನಾಗಿ ನಮ್ಮ ಪ್ರಿಯತಮನು ಆನಂದದಿಂದ ಇರುವನು. ನಮ್ಮಂತಹ ಗೊಲ್ಲತಿಯರ ಬಳಿಗೆ ಅವನೇಕೆ ಬರುವನು ? ॥ ೪೫ ॥

ಕಸ್ಮಾತ್ ಕೃಷ್ಣ ಇಹಾಯಾತಿ ಪ್ರಾಪ್ತರಾಜ್ಯೋ ಹತಾಹಿತಃ ।
ನರೇಂದ್ರಕನ್ಯಾ ಉದ್ವಾಹ್ಯ ಪ್ರೀತಃ ಸರ್ವಸುಹೃದ್ವೃತಃ
॥ ೪೫ ॥

ಮತ್ತೊಬ್ಬಳು ಹೇಳಿದಳು – ಸಖಿಯರೇ! ಹಾಗೇನಿಲ್ಲ, ಮಹಾತ್ಮನಾದ ಶ್ರೀಕೃಷ್ಣನು ಸಾಕ್ಷಾತ್ ಲಕ್ಷ್ಮೀಪತಿಯಾಗಿದ್ದಾನೆ. ಆಪ್ತಕಾಮನವನು. ಕೃತ್ಯ ಕೃತ್ಯನು. ಗೋಕುಲದ ಗೊಲ್ಲತಿಯರಾದ ನಮ್ಮಿಂದ ಅಥವಾ ಇತರ ರಾಜಕುಮಾರಿಯರಿಂದ ಅವನಿಗೇನು ಆಗಬೇಕು ? ನಾವಿಲ್ಲದೆ ಅವನ ಯಾವ ಕಾರ್ಯ ಉಳಿದಿದೆ ? ॥ ೪೬ ॥

ಕಿಮಸ್ಮಾಭಿರ್ವನೌಕೋಭಿರನ್ಯಾಭಿರ್ವಾ ಮಹಾತ್ಮನಃ ।
ಶ್ರೀಪತೇರಾಪ್ತಕಾಮಸ್ಯ ಕ್ರಿಯೇತಾರ್ಥಃ ಕೃತಾತ್ಮನಃ
॥ ೪೬ ॥

ನೋಡಿರಿ! ಪಿಂಗಳೆ ಎಂಬ ವೇಶ್ಯೆಯು – 'ಪ್ರಪಂಚದಲ್ಲಿ ಯಾವುದರ ಮೇಲೆಯೂ ಆಶೆಯನ್ನು ಇಟ್ಟುಕೊಳ್ಳದಿರುವುದೇ ಪರಮ ಸುಖವಾದುದು ಎಂದು ಎಷ್ಟು ಸರಿಯಾಗಿ ಹೇಳಿರುವಳು. ಇದನ್ನು ನಾವು ತಿಳಿದಿದ್ದರೂ ಭಗವಾನ್ ಶ್ರೀಕೃಷ್ಣನು ಮರಳಿ ಬರುವ ಆಸೆಯನ್ನು ಬಿಡುವುದರಲ್ಲಿ ಅಸಮರ್ಥರಾಗಿದ್ದೇವೆ. ಅವನ ಶುಭಾಗಮನದ ಆಸೆಯಿಂದಲೇ ನಾವು ಬದುಕಿದ್ದೇವಲ್ಲ॥ ೪೭ ॥

ಪರಂ ಸೌಖ್ಯಂ ಹಿ ನೈರಾಶ್ಯಂ ಸ್ವೈರಿಣ್ಯಪ್ಯಾಹ ಪಿಂಗಲಾ ।
ತಜ್ಜಾನತೀನಾಂ ನಃ ಕೃಷ್ಣೇ ತಥಾಪ್ಯಾಶಾ ದುರತ್ಯಯಾ
॥ ೪೭ ॥

ಕ ಉತ್ಸಹೇತ ಸಂತ್ಯಕ್ತುಮುತ್ತಮಶ್ಲೋಕಸಂವಿದಮ್ ।
ಅನಿಚ್ಛತೋಽಪಿ ಯಸ್ಯ ಶ್ರೀರಂಗಾನ್ನ ಚ್ಯವತೇ ಕ್ವಚಿತ್
॥ ೪೮ ॥

ದೊಡ್ಡ-ದೊಡ್ಡ ಮಹಾತ್ಮರು ಸದಾಕಾಲ ಕೀರ್ತಿಸುವಂತಹ ನಮ್ಮ ಪ್ರಿಯಕರ ಶ್ಯಾಮಸುಂದರನು ನಮ್ಮೊಂದಿಗೆ ಏಕಾಂತದಲ್ಲಿ ಎಂತೆಂತಹ ಮಧುರವಾದ ಪ್ರೇಮದ ಮಾತುಗಳನ್ನಾಡಿರುವನು. ಅವನ್ನು ಹೇಗೆ ತಾನೆ ಮರೆಯಲು ಸಾಧ್ಯ ? ಅವನಿಗೆ ಇಚ್ಛೆಯಿಲ್ಲದಿದ್ದರೂ ಲಕ್ಷ್ಮೀದೇವಿಯು ಸದಾಕಾಲ ಅವರ ಚರಣ ಕಮಲಗಳಿಗೆ ಅಂಟಿಕೊಂಡಂತೆ ಇರುತ್ತಾಳೆ. ಅವನ ವಕ್ಷಸ್ಥಳವನ್ನು ಕ್ಷಣಕಾಲವೂ ಬಿಟ್ಟಗಲುವುದೇ ಇಲ್ಲ ॥ ೪೮ ॥ ಉದ್ಧವನೇ ! ಅವನು ಜಲಕ್ರೀಡೆಯಾಡಿದ ಅದೋ ಈ ಯಮುನೆಯನ್ನು ನೋಡು. ಈ ಪರ್ವತವನ್ನು ನೋಡು, ಅದರ ಶಿಖರವನ್ನೇರಿ ಅವನು ಕೊಳಲನ್ನು ನುಡಿಸುತ್ತಿದ್ದನು. ಇದೇ ವನದಲ್ಲಿ ಅವನು ರಾತ್ರಿಯಲ್ಲಿ ರಾಸಕ್ರೀಡೆಯಾಡಿದುದು. ಅವನು ಮೇಯಿಸುತ್ತಿದ್ದ ಬೆಳಿಗ್ಗೆ ಸಾಯಂಕಾಲ ನಾವು ನೋಡುತ್ತಾ ಇರುವ ಈ ಗೋವುಗಳನ್ನು ನೋಡು. ಅವನು ತನ್ನ ಅಧರಕ್ಕೆ ಅಂಟಿಸಿಕೊಂಡು ನುಡಿಸುತ್ತಿದ್ದ ಆ ಮುರಳಿಯ ಮಧುರ ಗಾನವು ಇನ್ನೂ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದೆ. ಬಲರಾಮನೊಂದಿಗೆ ಇವೆಲ್ಲವನ್ನೂ ಅವನು ಸೇವಿಸುತ್ತಿದ್ದನು. ॥ ೪೯ ॥ ಉದ್ಧವನೇ ! ಎಷ್ಟೆಂದು ಹೇಳಲಿ ? ಇಲ್ಲಿಯ ಪ್ರತಿಯೊಂದು ಪ್ರದೇಶವೂ, ಪ್ರತಿಯೊಂದು ಧೂಳಿನ ಕಣವು ಲಕ್ಷ್ಮೀದೇವಿಗೆ ನೆಲೆಮನೆಯಾದ ಅವನ ಪರಮ ಸುಂದರ ಚರಣ ಚಿಹ್ನೆಗಳಿಂದ ಅಂಕಿತವಾಗಿವೆ. ಇವನ್ನು ನೋಡಿದಾಗಲೆಲ್ಲ, ಕೇಳಿದಾಗಲೆಲ್ಲ ಇವು ನಮ್ಮ ಪ್ರಿಯಕರ ಶ್ಯಾಮಸುಂದರ ನಂದನಂದನನನ್ನು ನಮ್ಮ ಕಣ್ಮುಂದೆ ತಂದು ನಿಲ್ಲಿಸುವುದು. ಉದ್ಧವಾ ! ನಾವು ಇದನ್ನು ಹೇಗೆ ಮರೆಯಬಲ್ಲೆವು ? ಸ್ವಲ್ಪವೂ ಮರೆಯಲಾರೆವು. ॥ ೫೦ ॥ ಉದ್ಧವನೇ ! ನಮ್ಮ ಇನಿಯನ ಹಂಸದ ನಡಿಗೆಯಂತಹ ಸುಂದರ ನಡಿಗೆ, ಮನೋಹರವಾದ ಕಿರುನಗೆ, ಚೇತೋಹಾರಿಯಾದ ಕುಡಿನೋಟ, ಮಧುರಮಯ ಮಾತುಗಳು, ಎಲ್ಲಕ್ಕಿಂತ ಹೆಚ್ಚಾಗಿ ಕೊಳಲಿನ ಕರೆ – ಇವುಗಳಿಂದ ನಮ್ಮ ಮನಸ್ಸನ್ನೇ ಅಪಹರಿಸಿಬಿಟ್ಟಿರುವನು. ನಮ್ಮ ಮನಸ್ಸು ನಮ್ಮವಶದಲ್ಲಿಲ್ಲ; ಅವನಲ್ಲೇ ಸೇರಿಹೋಗಿದೆ. ಹಾಗಿರುವಾಗ ಅವನನ್ನು ಮರೆಯಲು ಸಾಧ್ಯವೇ ? ॥ ೫೧ ॥ ನಮ್ಮೆಲ್ಲರಿಗೂ ಏಕೈಕಸ್ವಾಮಿಯಾಗಿರತಕ್ಕವನೇ ! ಪ್ರಾಣನಾಥನೇ ! ಲಕ್ಷ್ಮೀ ರಮಣನೇ ! ಗೋಕುಲನಾಥನೇ ! ತಂದೆ-ತಾಯಿಯರಿಂದಲೂ, ಸುಹೃದಯರಿಂದಲೂ, ನಮ್ಮಂತಹ ವಿರಹಿಣಿಯರಿಂದಲೂ, ನಿನಗೆ ಅತಿ ಪ್ರಿಯವಾದ ಗೋವುಗಳಿಂದಲೂ ಕೂಡಿದ ಗೋಕುಲವು ಈಗ ನಿನ್ನನ್ನು ಕಾಣದೆ ದುಃಖಸಾಗರದಲ್ಲಿ ಮುಳುಗಿದೆ. ಅದನ್ನು ರಕ್ಷಿಸು. ನಮ್ಮನ್ನು ಕಾಪಾಡು. ॥ ೫೨ ॥

ಸರಿಚ್ಛೈಲವನೋದ್ದೇಶಾ ಗಾವೋ ವೇಣುರವಾ ಇಮೇ ।
ಸಂಕರ್ಷಣಸಹಾಯೇನ ಕೃಷ್ಣೇನಾಚರಿತಾಃ ಪ್ರಭೋ
॥ ೪೯ ॥

ಪುನಃ ಪುನಃ ಸ್ಮಾರಯಂತಿ ನಂದಗೋಪಸುತಂ ಬತ ।
ಶ್ರೀನಿಕೇತೈಸ್ತತ್ಪದಕೈರ್ವಿಸ್ಮರ್ತುಂ ನೈವ ಶಕ್ನುಮಃ
॥ ೫೦ ॥

ಗತ್ಯಾ ಲಲಿತಯೋದಾರಹಾಸಲೀಲಾವಲೋಕನೈಃ ।
ಮಾಧ್ವ್ಯಾ ಗಿರಾ ಹೃತಧಿಯಃ ಕಥಂ ತಂ ವಿಸ್ಮರಾಮಹೇ
॥ ೫೧ ॥

ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ ।
ಮಗ್ನಮುದ್ಧರ ಗೋವಿಂದ ಗೋಕುಲಂ ವೃಜಿನಾರ್ಣವಾತ್
॥ ೫೨ ॥

ಶ್ರೀಶುಕ ಉವಾಚ

ತತಸ್ತಾಃ ಕೃಷ್ಣಸಂದೇಶೈರ್ವ್ಯಪೇತವಿರಹಜ್ವರಾಃ ।
ಆತ್ಮಾಂ ಪೂಜಯಾಂಚಕ್ರುರ್ಲ್ಲಬ್ಧ್ವಾತ್ಮಾನಮಧೋಕ್ಷಜಮ್
॥ ೫೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಭಗವಾನ್ ಶ್ರೀಕೃಷ್ಣನ ಪ್ರಿಯ ಸಂದೇಶವನ್ನು ಕೇಳಿದ ಗೋಪಿಯರ ವಿರಹವ್ಯಥೆಯು ಶಾಂತವಾಯಿತು. ಅವರು ಇಂದ್ರಿಯಾತೀತ ಭಗವಾನ್ ಶ್ರೀಕೃಷ್ಣನನ್ನು ತಮ್ಮ ಆತ್ಮಸ್ವರೂಪನೆಂದು ತಿಳಿದು ಕೊಂಡರು. ಅತ್ಯಂತ ಪ್ರೇಮಾದರಗಳಿಂದ ಉದ್ಧವನನ್ನು ಸತ್ಕರಿಸ ತೊಡಗಿದರು. ॥ ೫೩ ॥

ಉವಾಸ ಕತಿಚಿನ್ಮಾಸಾನ್ ಗೋಪೀನಾಂ ವಿನುದನ್ ಶುಚಃ ।
ಕೃಷ್ಣಲೀಲಾಕಥಾಂ ಗಾಯನ್ ರಮಯಾಮಾಸ ಗೋಕುಲಮ್
॥ ೫೪ ॥

ಉದ್ಧವನು ಗೋಪಿಯರ ವಿರಹ ವ್ಯಥೆಯನ್ನು ಕಳೆಯಲು ಕೆಲವು ತಿಂಗಳು ಗೋಕುಲದಲ್ಲೇ ಇದ್ದುಬಿಟ್ಟನು. ಅವನು ಭಗವಂತನ ಅನಂತ ಲೀಲೆಗಳನ್ನು ಮತ್ತು ಅವನ ಮಾತುಗಳನ್ನು ತಿಳಿಸುತ್ತಾ ವ್ರಜವಾಸಿಗಳನ್ನು ಆನಂದಪಡಿಸುತ್ತಿದ್ದನು. ॥ ೫೪ ॥

ಯಾವಂತ್ಯಹಾನಿ ನಂದಸ್ಯ ವ್ರಜೇಽವಾತ್ಸೀತ್ಸ ಉದ್ಧವಃ ।
ವ್ರಜೌಕಸಾಂ ಕ್ಷಣಪ್ರಾಯಾಣ್ಯಾಸನ್ ಕೃಷ್ಣಸ್ಯ ವಾರ್ತಯಾ
॥ ೫೫ ॥

ನಂದಗೋಕುಲದಲ್ಲಿ ಉದ್ಧವನು ಇರುವಷ್ಟು ದಿನವೂ ಭಗವಾನ್ ಶ್ರೀಕೃಷ್ಣನ ಲೀಲಾವಿನೋದದ ಚರ್ಚೆಯೇ ನಡೆಯುತ್ತಿದ್ದು ವ್ರಜವಾಸಿಗಳಿಗೆ ತಿಂಗಳುಗಳು ಒಂದು ಕ್ಷಣದಂತೆ ಭಾಸವಾಯಿತು. ॥ ೫೫ ॥

ಸರಿದ್ವನಗಿರಿದ್ರೋಣೀರ್ವೀಕ್ಷನ್ ಕುಸುಮಿತಾನ್ ದ್ರುಮಾನ್ ।
ಕೃಷ್ಣಂ ಸಂಸ್ಮಾರಯನ್ ರೇಮೇ ಹರಿದಾಸೋ ವ್ರಜೌಕಸಾಮ್
॥ ೫೬ ॥

ಭಗವಂತನ ಪರಮ ಪ್ರೇಮಿ ಉದ್ಧವನು ಕೆಲವೊಮ್ಮೆ ಯಮುನಾತೀರಕ್ಕೆ ಹೋಗುತ್ತಾನೆ, ಕೆಲವೊಮ್ಮೆ ವೃಂದಾವನದಲ್ಲಿ ಸಂಚರಿಸುತ್ತಾನೆ, ಕೆಲವೊಮ್ಮೆ ಗೋವರ್ಧನದ ತಪ್ಪಲಿನಲ್ಲಿ ಓಡಾಡುವನು. ಕೆಲವೊಮ್ಮೆ ಬಣ್ಣ-ಬಣ್ಣದ ಹೂವುಗಳಿಂದ ಕಂಗೊಳಿಸುವ ವೃಕ್ಷಗಳನ್ನು ನೋಡಿ ಮೈಮರೆಯುವನು. ಆಯಾ ಸ್ಥಳಗಳನ್ನು ತೋರಿಸುತ್ತಾ ಇಲ್ಲಿ ಶ್ರೀಕೃಷ್ಣನು ಯಾವ ಲೀಲೆಯನ್ನಾಡಿದನು? ಎಂದು ವ್ರಜವಾಸಿಗಳಲ್ಲಿ ಕೇಳುತ್ತಾ ಭಗವಂತನ ಲೀಲೆಗಳಲ್ಲಿ ಅವರನ್ನು ತನ್ಮಯಗೊಳಿಸಿಬಿಡುತ್ತಿದ್ದನು. ॥ ೫೬ ॥

ದೃಷ್ಟ್ವೈವಮಾದಿ ಗೋಪೀನಾಂ ಕೃಷ್ಣಾವೇಶಾತ್ಮವಿಕ್ಲವಮ್ ।
ಉದ್ಧವಃ ಪರಮಪ್ರೀತಸ್ತಾ ನಮಸ್ಯನ್ನಿದಂ ಜಗೌ
॥ ೫೭ ॥

ಉದ್ಧವನು ವ್ರಜದಲ್ಲಿ ಇರುತ್ತಾ ಗೋಪಿಯರ ಇಂತಹ ಪ್ರೇಮ ವಿಹ್ವಲತೆಯನ್ನು ಹಾಗೂ ಬಹಳಷ್ಟು ಪ್ರೇಮ ಚೇಷ್ಟೆಗಳನ್ನು ನೋಡಿದನು. ಅವರಿಗೆ ಶ್ರೀಕೃಷ್ಣನಲ್ಲಿ ಇರುವ ಈ ಪ್ರಕಾರದ ತನ್ಮಯತೆಯನ್ನು ನೋಡಿ ಅವನು ಪ್ರೇಮಾನಂದದಲ್ಲಿ ಮುಳುಗಿಹೋಗಿ ಪ್ರೇಮಮೂರ್ತಿಗಳಾದ ಗೋಪಿಯರನ್ನು ನಮಸ್ಕರಿಸಿ ಈ ಪ್ರಕಾರ ಹಾಡತೊಡಗಿದನು. ॥ ೫೭ ॥ ಆಹಾ ! "ಈ ಭೂಮಿಯಲ್ಲಿ ಕೇವಲ ಈ ಗೋಪಿಯರ ಶರೀರಧಾರಣೆಯೇ ಸಾರ್ಥಕ್ಯವನ್ನು ಹೊಂದಿದೆ. ಏಕೆಂದರೆ ಇವರು ಸರ್ವಾತ್ಮನಾದ ಭಗವಾನ್ ಶ್ರೀಕೃಷ್ಣನ ಪರಮಪ್ರೇಮಮಯ ದಿವ್ಯಭಾವದಲ್ಲಿ ನೆಲೆಸಿದ್ದಾರೆ. ಸಂಸಾರಕ್ಕೆ ಭಯಪಡುವ ಮುನಿಗಳು ಹಾಗೂ ಭಕ್ತರಾದ ನಾವು ಇದೇ ಸ್ಥಿತಿಯನ್ನು ಬಯಸುತ್ತೇವೆ. ಆದರೆ ಅಂತಹ ಅನುಪಮವಾದ ಮತ್ತು ರೂಢಮೂಲವಾದ ಪ್ರೇಮವು ಭಗವಂತನಲ್ಲಿ ನಮಗಿನ್ನೂ ಉಂಟಾಗಲಿಲ್ಲ. ಅನಂತನ ಕಥಾರಸವನ್ನು ನಿರಂತರವಾಗಿ ಪಾನಮಾಡುವ ಪ್ರೇಮಿಭಕ್ತರಿಗೆ ಬ್ರಾಹ್ಮಣರ ಜನ್ಮದಿಂದಾಲೀ, ಬ್ರಹ್ಮನ ಜನ್ಮದಿಂದಾಗಲೀ, ಏನಾಗಬೇಕಾಗಿದೆ? ॥ ೫೮ ॥ ವನಚರಿಯರೂ, ಆಚಾರ, ಜ್ಞಾನಹೀನರೂ ಮತ್ತು ಜಾತಿಯಿಂದ ಹೀನರೂ ಆದ ಈ ಗೊಲ್ಲತಿಯರೆಲ್ಲಿ! ಪರಮಾತ್ಮನಾದ ಶ್ರೀಕೃಷ್ಣನಲ್ಲಿ ಅವರಿಗಿರುವ ಗಾಢವಾದ ಪ್ರೇಮಭಾವವೆಲ್ಲಿ! ಆಹಾ! ಧನ್ಯ! ಧನ್ಯ! ಅಮೃತವನ್ನು ತಿಳಿಯದೆ ಕುಡಿದರೂ ಅದು ಅಮರನನ್ನಾಗಿಸುವಂತೆ, ದಯಾಮಯನಾದ ಭಗವಂತನು ತನ್ನನ್ನೇ ಅನನ್ಯ ಶರಣಾಗಿ ಭಜಿಸುವ ಮೂಢಜನರಿಗೂ ಶ್ರೇಯಸ್ಸನ್ನುಂಟುಮಾಡುವನು. ॥ ೫೯ ॥ ಭಗವಾನ್ ಶ್ರೀಕೃಷ್ಣನು ರಾಸೋತ್ಸವದ ಸಂದರ್ಭದಲ್ಲಿ ಗೋಕುಲದ ಗೊಲ್ಲತಿಯರ ಕಂಬುಕಂಠವನ್ನು ನೀಳವಾದ ತೋಳುಗಳಿಂದ ಅಪ್ಪಿಕೊಂಡು ಗೋಪಿಯರಿಗೆ ಪರಮಾನುಗ್ರಹವನ್ನು ಕರುಣಿಸಿದ ಭಗವಂತನ ಇಂತಹ ದಿವ್ಯಾಲಿಂಗನದ ವರಪ್ರಸಾದವು ಅವನ ವಕ್ಷಸ್ಥಳದಲ್ಲಿಯೇ ನಿರಂತರವಾಗಿ ವಾಸಿಸುತ್ತಿರುವ ಏಕಾಂತ ಪ್ರೇಮಿಯಾದ

ಏತಾಃ ಪರಂ ತನುಭೃತೋ ಭುವಿ ಗೋಪವಧ್ವೋ
ಗೋವಿಂದ ಏವ ನಿಖಿಲಾತ್ಮನಿ ರೂಢಭಾವಾಃ ।
ವಾಂಛಂತಿ ಯದ್ಭವಭಿಯೋ ಮುನಯೋ ವಯಂ ಚ
ಕಿಂ ಬ್ರಹ್ಮಜನ್ಮಭಿರನಂತ ಕಥಾರಸಸ್ಯ ॥ ೫೮ ॥

ಕ್ವೇಮಾಃ ಸ್ತ್ರಿಯೋ ವನಚರೀರ್ವ್ಯಭಿಚಾರದುಷ್ಟಾಃ
ಕೃಷ್ಣೇ ಕ್ವ ಚೈಷ ಪರಮಾತ್ಮನಿ ರೂಢಭಾವಃ ।
ನಸ್ವೀಶ್ವರೋಽನುಭಜತೋಽವಿದುಷೋಽಪಿ ಸಾಕ್ಷಾ-
ಚ್ಛ್ರೇಯಸ್ತನೋತ್ಯಗದರಾಜ ಇವೋಪಯುಕ್ತಃ ॥ ೫೯ ॥

ನಾಯಂ ಶ್ರಿಯೋಽಂಗ ಉ ನಿತಾಂತರತೇಃ ಪ್ರಸಾದಃ
ಸ್ವರ್ಯೋಷಿತಾಂ ನಲಿನಗಂಧರುಚಾಂ ಕುತೋಽನ್ಯಾಃ ।

ರಾಸೋತ್ಸವೇಽಸ್ಯ ಭುಜದಂಡಗೃಹೀತಕಂಠ-
ಲಬ್ಧಾಶಿಷಾಂ ಯ ಉದಗಾದ್ವ್ರಜವಲ್ಲವೀನಾಮ್ ॥ ೬೦ ॥

ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃಂದಾವನೇ ಕಿಮಪಿ ಗುಲ್ಮಲತೌಷಧೀನಾಮ್ ।
ಯಾ ದುಸ್ತ್ಯಜಂ ಸ್ವಜನಮಾರ್ಯಪಥಂ ಚ ಹಿತ್ವಾ
ಭೇಜುರ್ಮುಕುಂದಪದವೀಂ ಶ್ರುತಿಭಿರ್ವಿಮೃಗ್ಯಾಮ್ ॥ ೬೧ ॥

ಯಾ ವೈ ಶ್ರಿಯಾರ್ಚಿತಮಜಾದಿಭಿರಾಪ್ತಕಾಮೈ-
ರ್ಯೋಗೇಶ್ವರೈರಪಿ ಯದಾತ್ಮನಿ ರಾಸಗೋಷ್ಠ್ಯಾಮ್ ।
ಕೃಷ್ಣಸ್ಯ ತದ್ಭಗವತಶ್ಚರಣಾರವಿಂದಂ
ನ್ಯಸ್ತಂ ಸ್ತನೇಷು ವಿಜಹುಃ ಪರಿರಭ್ಯ ತಾಪಮ್ ॥ ೬೨ ॥

ವಂದೇ ನಂದವ್ರಜಸ್ತ್ರೀಣಾಂ ಪಾದರೇಣುಮಭೀಕ್ಷ್ಣಶಃ ।
ಯಾಸಾಂ ಹರಿಕಥೋದ್ಗೀತಂ ಪುನಾತಿ ಭುವನತ್ರಯಮ್
॥ ೬೩ ॥

ಶ್ರೀಶುಕ ಉವಾಚ

ಅಥ ಗೋಪೀರನುಜ್ಞಾಪ್ಯ ಯಶೋದಾಂ ನಂದಮೇವ ಚ ।
ಗೋಪಾನಾಮಂತ್ರ್ಯ ದಾಶಾರ್ಹೋ ಯಾಸ್ಯನ್ನಾರುರುಹೇ ರಥಮ್
॥ ೬೪ ॥

ತಂ ನಿರ್ಗತಂ ಸಮಾಸಾದ್ಯ ನಾನೋಪಾಯನಪಾಣಯಃ ।
ನಂದಾದಯೋಽನುರಾಗೇಣ ಪ್ರಾವೋಚನ್ನಶ್ರುಲೋಚನಾಃ
॥ ೬೫ ॥

ಮನಸೋ ವೃತ್ತಯೋ ನಃ ಸ್ಯುಃ ಕೃಷ್ಣಪಾದಾಂಬುಜಾಶ್ರಯಾಃ ।
ವಾಚೋಽಭಿಧಾಯಿನೀರ್ನಾಮ್ನಾಂ ಕಾಯಸ್ತತ್ಪ್ರಹ್ವಣಾದಿಷು
॥ ೬೬ ॥

ಕರ್ಮಭಿರ್ಭ್ರಾಮ್ಯಮಾಣಾನಾಂ ಯತ್ರ ಕ್ವಾಪೀಶ್ವರೇಚ್ಛಯಾ ।
ಮಂಗಲಾಚರಿತೈರ್ದಾನೈ ರತಿರ್ನಃ ಕೃಷ್ಣ ಈಶ್ವರೇ
॥ ೬೭ ॥

ಲಕ್ಷ್ಮೀದೇವಿಗಾಗಲೀ, ಪದ್ಮಗಂಧೆಯರೂ, ಪದ್ಮವರ್ಣಿಯರೂ ಆದ ದೇವಾಂಗನೆಯರಿಗೂ ಲಭಿಸಲಿಲ್ಲ. ಹೀಗಿರುವಾಗ ಉಳಿದ ಸಾಧಾರಣ ಸ್ತ್ರೀಯರಿಗೆ ಇಂತಹ ಪರಮಾನುಗ್ರಹವು ಹೇಗೆ ತಾನೇ ಲಭಿಸೀತು ? ॥ ೬೦ ॥ ಪರಿತ್ಯಜಿಸಲಾಗದ ಪತಿ – ಸುತ – ಬಂಧುಗಳನ್ನು ಪಾತಿವ್ರತ್ಯವೇ ಮೊದಲಾದ ಆರ್ಯಧರ್ಮಗಳನ್ನು ಪರಿತ್ಯಜಿಸಿ, ಶ್ರುತಿ-ಸ್ಮೃತಿಗಳಿಂದ ಹುಡುಕಲ್ಪಡುವ ಮುಕುಂದನ ಪರಮಪದವನ್ನು ಸೇರಿಬಿಟ್ಟಿರುವ ಗೋಪಿಯರ ಪಾದಧೂಳಿಯನ್ನು ಸತತವಾಗಿ ಸೇವಿಸುವ ವೃಂದಾವನದ ಯಾವುದಾದರೂ ಪೊದೆಗಳ ಅಥವಾ ಮರ-ಗಿಡ-ಬಳ್ಳಿಗಳ ರೂಪದಲ್ಲಿ ನಾನು ಹುಟ್ಟುವಂತಾಗಲೀ. ಭಗವಂತನ ಪರಮಭಕ್ತೆಯರಾದ ಗೋಪಿಯರ ಪಾದಧೂಳಿಯ ಸತತ ಸೇವನೆಯಿಂದಲಾದರೂ ನಾನು ಧನ್ಯನಾಗಿ ಹೋಗುವೆನು. ॥ ೬೧ ॥ ಭಗವತಿಯಾದ ಲಕ್ಷ್ಮಿಯಿಂದ ಅರ್ಚಿಸಲ್ಪಡುವ ಯಾವ ಪಾದಾರವಿಂದಗಳನ್ನು ಪೂರ್ಣಕಾಮರಾದ ಬ್ರಹ್ಮಾದಿಗಳೂ ಮತ್ತು ಯೋಗೇಶ್ವರರೂ ಕೇವಲ ತಮ್ಮ ಹೃದಯದಲ್ಲಿ ಧ್ಯಾನಮಾಡುವರೋ – ಅಂತಹ ದಿವ್ಯವಾದ ಚರಣಾರವಿಂದಗಳನ್ನು ರಾಸಕ್ರೀಡೆಯ ಸಮಯದಲ್ಲಿ ಗೋಪಿಯರು ತಮ್ಮ ವಕ್ಷಸ್ಥಳದಲ್ಲಿರಿಸಿಕೊಂಡು, ಅದನ್ನೇ ಆಲಿಂಗಿಸಿಕೊಂಡು ವಿರಹತಾಪವನ್ನು ಕಳೆದುಕೊಂಡರು. ॥ ೬೨ ॥ ನಂದ ಗೋಕುಲದಲ್ಲಿರುವ ಗೋಪಿಯರ ಪಾದಧೂಳಿಗೆ ನಾನು ಪುನಃ ಪುನಃ ನಮಸ್ಕರಿಸುತ್ತೇನೆ. ಅದನ್ನು ಶಿರದಲ್ಲಿ ಧರಿಸಿಕೊಳ್ಳುತ್ತೇನೆ. ಆ ಗೋಪಿಯರು ತನ್ಮಯರಾಗಿ ಹಾಡುವ ಶ್ರೀಕೃಷ್ಣನ ಲೀಲಾ ಪ್ರಸಂಗದ ಗೀತೆಗಳು ಮೂರು ಲೋಕಗಳನ್ನು ಪಾವನಗೊಳಿಸುವಂತಹುದು. ॥ ೬೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ್ತನೇ! ಹೀಗೆ ಉದ್ಧವನು ನಂದಗೋಕುಲದಲ್ಲಿ ಅನೇಕ ತಿಂಗಳಿದ್ದು ಮಥುರೆಗೆ ಹೋಗಲು ನಂದ-ಯಶೋದೆಯರ, ಗೋಪಿಯರ, ಗೋಪಾಲಕರ ಅನುಜ್ಞೆಯನ್ನು ಪಡೆದು ರಥವನ್ನೇರಿದನು.॥ ೬೪ ॥ ಪ್ರಯಾಣ ಹೊರಟ ಉದ್ಧವನ ರಥದ ಬಳಿಗೆ ನಂದಗೋಪನೇ ಮೊದಲಾದ ಗೋಪಾಲರು ಹಲವಾರು ಬಗೆಯ ಉಪಾಯನಗಳನ್ನು (ಕಾಣಿಕೆಗಳನ್ನು) ತೆಗೆದುಕೊಂಡು ಬಂದರು. ಕಣ್ಣುಗಳಲ್ಲಿ ಆನಂದ ಬಾಷ್ಪಗಳನ್ನು ತುಂಬಿಕೊಂಡು ಪ್ರೇಮಪುರಸ್ಸರವಾಗಿ ಹೀಗೆ ಹೇಳಿದರು. ॥ ೬೫ ॥ ಉದ್ಧವನೇ! ನಮ್ಮ ಮನಸ್ಸಿನ ಸಕಲ ವೃತ್ತಿಗಳು, ಪ್ರತಿಯೊಂದು ಸಂಕಲ್ಪವೂ ಶ್ರೀಕೃಷ್ಣನ ಚರಣಗಳನ್ನೇ ಆಶ್ರಯಿಸಿರಲಿ. ನಮ್ಮ ವಾಣಿಯು ನಿತ್ಯ ನಿರಂತರವಾಗಿ ಅವನ ಶುಭನಾಮಗಳನ್ನು ಹಾಡುತ್ತಿರಲಿ. ನಮ್ಮ ಶರೀರವು ಅವನಿಗೆ ನಮಸ್ಕರಿಸಲು ಮತ್ತು ಅವನ ಸೇವೆ ಮಾಡುವುದಕ್ಕೆ ಮೀಸಲಾಗಿ ಇರಲಿ. ॥ ೬೬ ॥ ಪಾಪ-ಪುಣ್ಯಗಳ ಫಲವಾಗಿ ಪರಮಾತ್ಮನ ಇಚ್ಛೆಯಿಂದ ನಾವು ಯಾವುದೇ ಯೋನಿಯಲ್ಲಿ ಜನಿಸಿದ್ದರೂ ನಾವು ಶುಭ ಆಚರಣೆಯನ್ನೇ ಮಾಡುತ್ತಾ, ದಾನಾದಿಗಳನ್ನು ಮಾಡುತ್ತಾ ಇರುವಂತಾಗಲಿ. ಅದರ ಫಲವಾಗಿ ಸರ್ವೇಶ್ವರನಾದ ಶ್ರೀಕೃಷ್ಣನಲ್ಲಿಯೇ ನಮಗೆ ಅಚಲವಾದ ಭಕ್ತಿಯುಂಟಾಗಲಿ. ॥ ೬೭ ॥

ಏವಂ ಸಭಾಜಿತೋ ಗೋಪೈಃ ಕೃಷ್ಣಭಕ್ತ್ಯಾ ನರಾಧಿಪ ।
ಉದ್ಧವಃ ಪುನರಾಗಚ್ಛನ್ಮಥುರಾಂ ಕೃಷ್ಣಪಾಲಿತಾಮ್
॥ ೬೮ ॥

ಕೃಷ್ಣಾಯ ಪ್ರಣಿಪತ್ಯಾಹ ಭಕ್ತ್ಯುದ್ರೇಕಂ ವ್ರಜೌಕಸಾಮ್ ।
ವಸುದೇವಾಯ ರಾಮಾಯ ರಾಜ್ಞೇ ಚೋಪಾಯನಾನ್ಯದಾತ್
॥ ೬೯ ॥

ಪರೀಕ್ಷಿತನೇ ! ಹೀಗೆ ಉದ್ಧವನು ಶ್ರೀಕೃಷ್ಣನ ಪರಮಭಕ್ತನೆಂಬ ಕಾರಣದಿಂದ ನಂದನಿಂದಲೂ, ಗೋಪಾಲರಿಂದಲೂ ಸಮ್ಮಾನಿತನಾಗಿ ಶ್ರೀಕೃಷ್ಣನಿಂದ ಪರಿಪಾಲಿಸುತ್ತಿರುವ ಮಥುರಾಪಟ್ಟಣಕ್ಕೆ ಹಿಂದಿರುಗಿದನು. ॥ ೬೮ ॥ ಮಥುರೆಗೆ ಸೇರಿದ ಬಳಿಕ ಅವನು ಭಗವಾನ್ ಶ್ರೀಕೃಷ್ಣನನ್ನು ಕಂಡು, ನಮಸ್ಕರಿಸಿಕೊಂಡು ಗೋಕುಲವಾಸಿಗಳ ಅತಿಶಯವಾದ ಭಕ್ತಿಯನ್ನು ತಾನು ನೋಡಿದಂತೆ ವಿವರಿಸಿ ಹೇಳಿದನು. ನಂದರಾಜನೂ, ಗೋಪಾಲಕರೂ ಕಳಿಸಿದ ಕಾಣಿಕೆಗಳನ್ನು ವಸುದೇವನಿಗೂ, ಶ್ರೀಕೃಷ್ಣ-ಬಲರಾಮರಿಗೂ ಮತ್ತು ರಾಜನಾದ ಉಗ್ರಸೇನನಿಗೂ ಸಮರ್ಪಿಸಿದನು. ॥ ೬೯ ॥

ನಲವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೪೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಉದ್ಧವಪ್ರತಿಯಾನೇ ಸಪ್ತಚತ್ವಾರಿಂಶೋಽಧ್ಯಾಯಃ॥ ೪೭ ॥

ನಲವತ್ತೆಂಟನೆಯ ಅಧ್ಯಾಯ

ಭಗವಂತನು ಕುಬ್ಜೆಯ ಮತ್ತು ಅಕ್ರೂರನ ಮನೆಗಳಿಗೆ ಹೋದುದು

ಶ್ರೀಶುಕ ಉವಾಚ

ಅಥ ವಿಜ್ಞಾಯ ಭಗವಾನ್ ಸರ್ವಾತ್ಮಾ ಸರ್ವದರ್ಶನಃ ।
ಸೈರಂಧ್ರ್ಯಾಃ ಕಾಮತಪ್ತಾಯಾಃ ಪ್ರಿಯಮಿಚ್ಛನ್ ಗೃಹಂ ಯಯೌ
॥ ೧ ॥

ಮಹಾರ್ಹೋಪಸ್ಕರೈರಾಢ್ಯಂ ಕಾಮೋಪಾಯೋಪಬೃಂಹಿತಮ್ ।
ಮುಕ್ತಾದಾಮಪತಾಕಾಭಿರ್ವಿತಾನಶಯನಾಸನೈಃ ।
ಧೂಪೈಃ ಸುರಭಿಭಿರ್ದೀಪೈಃ ಸ್ರಗ್ಗಂಧೈರಪಿ ಮಂಡಿತಮ್
॥ ೨ ॥

ಗೃಹಂ ತಮಾಯಾಂತಮವೇಕ್ಷ್ಯ ಸಾಽಽಸನಾತ್
ಸದ್ಯಃ ಸಮುತ್ಥಾಯ ಹಿ ಜಾತಸಂಭ್ರಮಾ ।
ಯಥೋಪಸಂಗಮ್ಯ ಸಖೀಭಿರಚ್ಯುತಂ
ಸಭಾಜಯಾಮಾಸ ಸದಾಸನಾದಿಭಿಃ ॥ ೩ ॥

ತಥೋದ್ಧವಃ ಸಾಧು ತಯಾಭಿಪೂಜಿತೋ
ನ್ಯಷೀದದುರ್ವ್ಯಾಮಭಿಮೃಶ್ಯ ಚಾಸನಮ್ ।
ಕೃಷ್ಣೋಽಪಿ ತೂರ್ಣಂ ಶಯನಂ ಮಹಾಧನಂ
ವಿವೇಶ ಲೋಕಾಚರಿತಾನ್ಯನುವ್ರತಃ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಅನಂತರ ಸಮಸ್ತರ ಆತ್ಮವಾಗಿರುವ ಹಾಗೂ ಸರ್ವದ್ರಷ್ಟಾರನಾದ ಭಗವಾನ್ ಶ್ರೀಕೃಷ್ಣನು ತನ್ನನ್ನು ಸೇರಬೇಕೆಂಬ ಆಸೆಯನ್ನಿಟ್ಟುಕೊಂಡು ಪರಿತಪಿಸುತ್ತಿದ್ದ ಕುಬ್ಜೆಯ ಮೇಲೆ ಅನುಗ್ರಹ ತೋರಲು ಅವಳ ಮನೆಗೆ ಹೋದನು. ॥ ೧ ॥ ಕುಬ್ಜೆಯ ಮನೆಯು ಸರ್ವ ಸಂಪತ್ಸಮೃದ್ಧವಾಗಿತ್ತು. ಆ ಮನೆಯು ಶೃಂಗಾರ ರಸವನ್ನು ಉದ್ದೀಪನಗೊಳಿಸುವಂತ ಬಹಳಷ್ಟು ಸಾಧನ-ಸಾಮಗ್ರಿಗಳಿಂದ ತುಂಬಿತ್ತು. ಆಕೆಯ ಆ ಭವನವು ಮುತ್ತಿನ ಹಾರಗಳಿಂದಲೂ, ಪತಾಕೆಗಳಿಂದಲೂ, ಮೇಲ್ಕಟ್ಟುಗಳಿಂದಲೂ, ಹಂಸತೂಲಿಕಾತಲ್ಪಗಳಿಂದಲೂ, ಸುವರ್ಣಮಯ ಆಸನಗಳಿಂದಲೂ ಸುಗಂಧ ಯುಕ್ತವಾದ ಧೂಪಗಳಿಂದಲೂ, ದೀಪಗಳಿಂದಲೂ, ಮಾಲೆಗಳಿಂದಲೂ, ಸುಗಂಧ ಚಂದನಗಳಿಂದಲೂ ಸಮಲಂಕೃತವಾಗಿತ್ತು. ॥ ೨ ॥ ತನ್ನ ಸ್ವಾಮಿಯು ಮನೆಯೊಳಗೆ ಬಂದುದನ್ನು ನೋಡಿ ಕುಬ್ಜೆಯು ಆಸನದಿಂದ ಮೇಲೆದ್ದು ಅತ್ಯಂತ ಸಂಭ್ರಮದಿಂದ ತನ್ನ ಸಖಿಯರೊಡನೆ ಶ್ರೀಕೃಷ್ಣನನ್ನು ಆದರದಿಂದ ಸ್ವಾಗತಿಸಿ, ಸುಖಾಸನವನ್ನಿತ್ತು, ಯಥಾವಿಧಿಯಾಗಿ ಪೂಜಿಸಿದಳು. ॥ ೩ ॥ ಶ್ರೀಕೃಷ್ಣನನ್ನು ಸತ್ಕರಿಸಿದಂತೆಯೇ ಅವನ ಭಕ್ತನಾದ ಉದ್ಧವನನ್ನು ಸತ್ಕರಿಸಿ, ಕುಳಿತುಕೊಳ್ಳಲು ದಿವ್ಯಾಸನವನ್ನಿತ್ತಳು. ಆದರೆ ಉದ್ಧವನು ಸ್ವಾಮಿಯ ಜೊತೆಯಲ್ಲಿ ಕುಳಿತುಕೊಳ್ಳಲು ಇಷ್ಟಪಡದೆ ಆಕೆಯಿತ್ತ ಆಸನವನ್ನು ಕೈಯಿಂದ ಮುಟ್ಟಿ ನೆಲದ ಮೇಲೆ ಕುಳಿತನು. ಲೋಕಾಚಾರಗಳನ್ನು ಅನುಸರಿಸುವ ಶ್ರೀಕೃಷ್ಣನು ಬಹುಮೂಲ್ಯವಾದ ಹಾಸಿಗೆಯ ಮೇಲೆ ಕುಳಿತನು. ॥ ೪ ॥

ಸಾ ಮಜ್ಜನಾಲೇಪದುಕೂಲಭೂಷಣ-
ಸ್ರಗ್ಗಂಧತಾಂಬೂಲಸುಧಾಸವಾದಿಭಿಃ ।
ಪ್ರಸಾಧಿತಾತ್ಮೋಪಸಸಾರ ಮಾಧವಂ
ಸವ್ರೀಡಲೀಲೋತ್ಸ್ಮಿತವಿಭ್ರಮೇಕ್ಷಿತೈಃ ॥ ೫ ॥

ಆಹೂಯ ಕಾಂತಾಂ ನವಸಂಗಮಹ್ರಿಯಾ
ವಿಶಂಕಿತಾಂ ಕಂಕಣಭೂಷಿತೇ ಕರೇ ।
ಪ್ರಗೃಹ್ಯ ಶಯ್ಯಾಮಧಿವೇಶ್ಯ ರಾಮಯಾ
ರೇಮೇಽನುಲೇಪಾರ್ಪಣಪುಣ್ಯಲೇಶಯಾ ॥ ೬ ॥

ಸಾನಂಗತಪ್ತಕುಚಯೋರುರಸಸ್ತಥಾಕ್ಷ್ಣೋ-
ರ್ಜಿಘ್ರಂತ್ಯನಂತಚರಣೇನ ರುಜೋ ಮೃಜಂತೀ ।
ದೋರ್ಭ್ಯಾಂ ಸ್ತನಾಂತರಗತಂ ಪರಿರಭ್ಯ ಕಾಂತ-
ಮಾನಂದಮೂರ್ತಿಮಜಹಾದತಿದೀರ್ಘತಾಪಮ್ ॥ ೭ ॥

ಸೈವಂ ಕೈವಲ್ಯನಾಥಂ ತಂ ಪ್ರಾಪ್ಯ ದುಷ್ಪ್ರಾಪಮೀಶ್ವರಮ್ ।
ಅಂಗರಾಗಾರ್ಪಣೇನಾಹೋ ದುರ್ಭಗೇದಮಯಾಚತ
॥ ೮ ॥

ಅಹೋಷ್ಯತಾಮಿಹ ಪ್ರೇಷ್ಯ ದಿನಾನಿ ಕತಿಚಿನ್ಮಯಾ ।
ರಮಸ್ವ ನೋತ್ಸಹೇ ತ್ಯಕ್ತುಂ ಸಂಗಂ ತೇಽಂಬುರುಹೇಕ್ಷಣ
॥ ೯ ॥

ತಸ್ಯೈ ಕಾಮವರಂ ದತ್ತ್ವಾ ಮಾನಯಿತ್ವಾ ಚ ಮಾನದಃ ।
ಸಹೋದ್ಧವೇನ ಸರ್ವೇಶಃ ಸ್ವಧಾಮಾಗಮದರ್ಚಿತಮ್
॥ ೧೦ ॥

ದುರಾರಾಧ್ಯಂ ಸಮಾರಾಧ್ಯ ವಿಷ್ಣುಂ ಸರ್ವೇಶ್ವರೇಶ್ವರಮ್ ।
ಯೋ ವೃಣೀತೇ ಮನೋಗ್ರಾಹ್ಯಮಸತ್ತ್ವಾತ್ ಕುಮನೀಷ್ಯಸೌ
॥ ೧೧ ॥

ಅಕ್ರೂರಭವನಂ ಕೃಷ್ಣಃ ಸಹರಾಮೋದ್ಧವಃ ಪ್ರಭುಃ ।
ಕಿಂಚಿಚ್ಚಿಕೀರ್ಷಯನ್ ಪ್ರಾಗಾದಕ್ರೂರಪ್ರಿಯಕಾಮ್ಯಯಾ
॥ ೧೨ ॥

ಆನಂತರ ಕುಬ್ಜೆಯು ಮಂಗಳಸ್ನಾನವನ್ನು ಮಾಡಿ, ಅಂಗರಾಗವನ್ನು ಲೇಪಿಸಿಕೊಂಡು, ದಿವ್ಯವಾದ ವಸ್ತ್ರಾಭೂಷಣಗಳಿಂದ ಸಮಲಂಕೃತೆಯಾಗಿ, ಗಂಧವನ್ನು ಪೂಸಿಕೊಂಡು, ಹೂಮುಡಿದುಕೊಂಡು, ಆಸವವನ್ನು ಕುಡಿದು, ತಾಂಬೂಲವನ್ನು ಸೇವಿಸಿ ಸೌಂದರ್ಯದ ಖನಿಯಂತಾಗಿ ನಾಚಿಕೆಯಿಂದ ಕೂಡಿದ ಮಂದ ಹಾಸದಿಂದಲೂ, ಹಾವ-ಭಾವಗಳಿಂದಲೂ ಭಗವಂತನನ್ನು ಕಡೆಗಣ್ಣನೋಟದಿಂದ ನೋಡುತ್ತಾ ಅವನ ಬಳಿಗೆ ಸಾರಿದಳು. ॥ ೫ ॥ ಕುಬ್ಜೆಯು ಹೊಸದಾಗಿ ಸೇರುವಿಕೆಯಿಂದ ನಾಚಿಕೊಂಡಳು. ಸಂಕೋಚದಿಂದ ಹಿಂಜರಿಯುತ್ತಿದ್ದ ಆಕೆಯನ್ನು ಶ್ರೀಕೃಷ್ಣನು ಬಳಿಗೆ ಕರೆದು ಬಳೆಗಳಿಂದ ಭೂಷಿತವಾದ ಅವಳ ಕೈಗಳನ್ನು ಹಿಡಿದುಕೊಂಡು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡನು. ಪರೀಕ್ಷಿತನೇ! ಕುಬ್ಜೆಯು ಈ ಜನ್ಮದಲ್ಲಿ ಭಗವಂತನಿಗೆ ಕೇವಲ ಅಂಗರಾಗವನ್ನು ಅರ್ಪಿಸಿದ್ದಳು. ಆ ಒಂದೇ ಶುಭಕರ್ಮದಿಂದ ಆಕೆಗೆ ಇಂತಹ ಅನುಪಮವಾದ ಅವಕಾಶದೊರೆಯಿತು. ॥ ೬ ॥ ಕುಬ್ಜೆಯು ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳನ್ನು ಕಾಮತಪ್ತವಾಗಿದ್ದ ವಕ್ಷಸ್ಥಳದ ಮೇಲೆ ಇಟ್ಟುಗೊಂಡು ಕಣ್ಣಿಗೊತ್ತಿಕೊಂಡು ಆ ದಿವ್ಯ ಚರಣಗಳ ಸುಗಂಧವನ್ನು ಆಘ್ರಾಣಿಸುತ್ತಾ ಹೃದಯದ ಆಧಿ-ವ್ಯಾಧಿಗಳೆಲ್ಲವನ್ನು ನಿವಾರಿಸಿಕೊಂಡಳು. ಹೀಗೆ ಭಗವಂತನ ಸಾನ್ನಿಧ್ಯವನ್ನು ಪಡೆದು ಆನಂದಸಾಗರದಲ್ಲಿ ಮುಳುಗಿ ಹೋದಳು. ॥೭॥ ಶ್ರೀಕೃಷ್ಣನು ಮೋಕ್ಷಕ್ಕೆ ಸ್ವಾಮಿಯು. ಬೇಡಿದವರಿಗೆ ಮೋಕ್ಷವನ್ನೀಯಲು ಸಮರ್ಥನು. ಸುಲಭವಾಗಿ ಸಿಕ್ಕತಕ್ಕವನಲ್ಲ. ಅಂತಹವನನ್ನು ಕೇವಲ ಅಂಗರಾಗ ಸಮರ್ಪಣದಿಂದ ಕುಬ್ಜೆಯು ಪಡೆದುಕೊಂಡಿದ್ದಳು. ಆದರೆ ಆ ದುರ್ಭಾಗ್ಯಳಾದ ಕೈರಂಧ್ರಿಯು ವ್ರಜದ ಗೋಪಿಕೆಯರಂತೆ ಸೇವೆಯನ್ನು ಬೇಡಿಕೊಳ್ಳದೆ ಹೀಗೆ ಬೇಡಿದಳು. ॥ ೮ ॥ ಪ್ರಿಯತಮನೇ! ನೀನು ಕೆಲವ್ಮದಿನ ಇಲ್ಲೇ ಇದ್ದು ನನ್ನೊಡನೆ ರಮಿಸುತ್ತಿರು. ಕಮಲಾಕ್ಷನೇ! ನಿನ್ನ ಸಂಗವನ್ನು ನನ್ನಿಂದ ಬಿಟ್ಟಿರಲಾಗುವುದಿಲ್ಲ. ॥ ೯ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸಮಸ್ತರಿಗೂ ಮಾನದನೂ, ಸರ್ವೇಶ್ವರನೂ ಆಗಿರುವನು ಅಕೆಯು ಅಪೇಕ್ಷಿಸಿದ ವರವನ್ನಿತ್ತು, ಆಕೆಯಿಂದ ಪೂಜೆಯನ್ನು ಕೈಗೊಂಡು ತನ್ನ ಪ್ರಿಯಭಕ್ತನಾದ ಉದ್ಧವನೊಂದಿಗೆ ತನ್ನ ಅರಮನೆಗೆ ಹಿಂದಿರುಗಿದನು. ॥ ೧೦ ॥ ರಾಜನೇ! ಭಗವಂತನು ಬ್ರಹ್ಮೇಂದ್ರಾದಿ ಸಮಸ್ತ ಈಶ್ವರರಿಗೂ ಈಶ್ವರನಾಗಿರುವನು. ಅವನನ್ನು ಒಲಿಸಿಕೊಳ್ಳುವುದು ಜೀವಿಗಳಿಗೆ ಸುಲಭವಲ್ಲ. ಅವನನ್ನು ಒಲಿಸಿಕೊಂಡು ಅವನಲ್ಲಿ ವಿಷಯ-ಸುಖವನ್ನು ಬೇಡಿದರೆ ಅವನು ನಿಶ್ಚಯವಾಗಿಯೂ ದುರ್ಬುದ್ಧಿಯವನೇ ಸರಿ. ಏಕೆಂದರೆ, ವಾಸ್ತವವಾಗಿ ವಿಷಯ-ಸುಖಗಳು ಅತ್ಯಂತ ತುಚ್ಛವಾಗಿದೆ. ಅದಕ್ಕೆ ಯಾವ ಬೆಲೆಯೂ ಇಲ್ಲ. ॥ ೧೧ ॥

ಕೆಲವು ದಿನ ಕಳೆದ ಬಳಿಕ ಒಂದು ದಿನ ಪ್ರಭುವಾದ ಶ್ರೀಕೃಷ್ಣನು ಬಲರಾಮ ಮತ್ತು ಉದ್ಧವರೊಂದಿಗೆ ಅಕ್ರೂರನ ಅಭಿಲಾಷೆಯನ್ನು ಪೂರ್ಣಗೊಳಿಸಲು ಹಾಗೂ ಅವನಿಂದ ಒಂದು ಕಾರ್ಯವನ್ನು ಮಾಡಿಸಿಕೊಳ್ಳಲು ಅವನ ಮನೆಗೆ ಹೋದನು. ॥ ೧೨ ॥

ಸ ತಾನ್ ನರವರಶ್ರೇಷ್ಠಾನಾರಾದ್ವೀಕ್ಷ್ಯ ಸ್ವಬಾಂಧವಾನ್ ।
ಪ್ರತ್ಯುತ್ಥಾಯ ಪ್ರಮುದಿತಃ ಪರಿಷ್ವಜ್ಯಾಭ್ಯನಂದತ
॥ ೧೩ ॥

ತನ್ನ ಬಂಧುಗಳಾದ ಮನುಷ್ಯಶ್ರೇಷ್ಠರಾದ ಬಲರಾಮ ಶ್ರೀಕೃಷ್ಣರು ಉದ್ಧವನೊಂದಿಗೆ ಬರುತ್ತಿರುವುದನ್ನು ದೂರದಿಂದಲೇ ನೋಡಿದ ಅಕ್ರೂರನು ತತ್‌ಕ್ಷಣ ಎದ್ದು ಮುಂದೆ ಬಂದು ಆನಂದ ತುಂದಿಲನಾಗಿ ಅಭಿನಂದಿಸುತ್ತಾ ಒಬ್ಬೊಬ್ಬರನ್ನು ಆಲಿಂಗಿಸಿ ಕೊಂಡನು. ॥ ೧೩ ॥

ನನಾಮ ಕೃಷ್ಣಂ ರಾಮಂ ಚ ಸ ತೈರಭ್ಯಭಿವಾದಿತಃ ।
ಪೂಜಯಾಮಾಸ ವಿಧಿವತ್ ಕೃತಾಸನಪರಿಗ್ರಹಾನ್
॥ ೧೪ ॥

ಅಕ್ರೂರನು ಭಗವಾನ್ ಶ್ರೀಕೃಷ್ಣ-ಬಲರಾಮರಿಗೆ ನಮಸ್ಕರಿಸಿದನು. ಉದ್ಧವನೊಂದಿಗೆ ಬಲರಾಮ-ಶ್ರೀಕೃಷ್ಣರೂ ಅಕ್ರೂರನಿಗೆ ವಂದಿಸಿದರು. ಎಲ್ಲರೂ ಸುಖಾಸೀನರಾದಾಗ ಅಕ್ರೂರನು ಎಲ್ಲರನ್ನೂ ವಿಧಿವತ್ತಾಗಿ ಪೂಜಿಸಿದನು. ॥ ೧೪ ॥

ಪಾದಾವನೇಜನೀರಾಪೋ ಧಾರಯನ್ ಶಿರಸಾ ನೃಪ ।
ಅರ್ಹಣೇನಾಂಬರೈರ್ದಿವ್ಯೈರ್ಗಂಧಸ್ರಗ್ಭೂಷಣೋತ್ತಮೈಃ
॥ ೧೫ ॥

ಪರೀಕ್ಷಿತನೇ! ಅವನು ಭಗವಂತನ ಚರಣಗಳನ್ನು ತೊಳೆದು ಪಾದೋದಕವನ್ನು ಶಿರದಲ್ಲಿ ಧರಿಸಿದನು. ಬಳಿಕ ಅನೇಕ ವಿಧದ ದಿವ್ಯ ವಸ್ತ್ರ, ಗಂಧ, ಮಾಲೆ, ಆಭೂಷಣಗಳೇ ಮುಂತಾದ ಪೂಜಾ ಸಾಮಗ್ರಿಗಳಿಂದ ಅವನನ್ನು ಅರ್ಚಿಸ ತೊಡಗಿದನು. ಶಿರಬಾಗಿ ನಮಸ್ಕರಿಸಿ, ಭಗವಂತನ ಚರಣಗಳನ್ನು ತನ್ನ ತೊಡೆಯಲ್ಲಿಟ್ಟು ಕೊಂಡು ಒತ್ತತೊಡಗಿದನು. ಆಗ ವಿನಯದಿಂದ ಶ್ರೀಕೃಷ್ಣ-ಬಲರಾಮರಲ್ಲಿ ಕೇಳಿದನು. ॥ ೧೫-೧೬ ॥

ಅರ್ಚಿತ್ವಾ ಶಿರಸಾऽऽನಮ್ಯ ಪಾದಾವಂಕಗತೌ ಮೃಜನ್ ।
ಪ್ರಶ್ರಯಾವನತೋऽಕ್ರೂರಃ ಕೃಷ್ಣರಾಮಾವಭಾಷತ
॥ ೧೬ ॥

ದಿಷ್ಟ್ಯಾ ಪಾಪೋ ಹತಃ ಕಂಸಃ ಸಾನುಗೋ ವಾಮಿದಂ ಕುಲಮ್ ।
ಭವದ್ಭ್ಯಾಮುದ್ಧೃತಂ ಕೃಚ್ಛ್ರಾದ್ದುರಂತಾಚ್ಚ ಸಮೇಧಿತಮ್
॥ ೧೭ ॥

ಯುವಾಂ ಪ್ರಧಾನಪುರುಷೌ ಜಗದ್ಧೇತೂ ಜಗನ್ಮಯೌ ।
ಭವದ್ಭ್ಯಾಂ ನ ವಿನಾ ಕಿಂಚಿತ್ ಪರಮಸ್ತಿ ನ ಚಾಪರಮ್
॥ ೧೮ ॥

ಆತ್ಮಸೃಷ್ಟಮಿದಂ ವಿಶ್ವಮನ್ವಾವಿಶ್ಯ ಸ್ವಶಕ್ತಿಭಿಃ ।
ಈಯತೇ ಬಹುಧಾ ಬ್ರಹ್ಮನ್ ಶ್ರುತಪ್ರತ್ಯಕ್ಷಗೋಚರಮ್
॥ ೧೯ ॥

ಯಥಾ ಹಿ ಭೂತೇಷು ಚರಾಚರೇಷು
ಮಹ್ಯಾದಯೋ ಯೋನಿಷು ಭಾಂತಿ ನಾನಾ ।
ಏವಂ ಭವಾನ್ ಕೇವಲ ಆತ್ಮಯೋನಿ-
ಷ್ವಾತ್ಮಾऽऽತ್ಮತಂತ್ರೋ ಬಹುಧಾ ವಿಭಾತಿ ॥ ೨೦ ॥

ಸೃಜಸ್ಯಥೋ ಲುಂಪಸಿ ಪಾಸಿ ವಿಶ್ವಂ
ರಜಸ್ತಮಃಸತ್ತ್ವಗುಣೈಃ ಸ್ವಶಕ್ತಿಭಿಃ ।
ನ ಬಧ್ಯಸೇ ತದ್ಗುಣಕರ್ಮಭಿರ್ವಾ
ಜ್ಞಾನಾತ್ಮನಸ್ತೇ ಕ್ವ ಚ ಬಂಧಹೇತುಃ ॥ ೨೧ ॥

ಅಕ್ರೂರನು ಭಗವಾನ್ ಶ್ರೀಕೃಷ್ಣ-ಬಲರಾಮರಲ್ಲಿ ಕೇಳಿದನು. ॥ ೧೬-೧೭ ॥ ಪ್ರಭುಗಳೇ! ಪಾಪಿಯಾದ ಕಂಸನು ತನ್ನ ಅನುಯಾಯಿಗಳೊಂದಿಗೆ ಸತ್ತುಹೋದುದು ಅತ್ಯಂತ ಆನಂದದ ಮತ್ತು ಸೌಭಾಗ್ಯದ ಮಾತಾಗಿದೆ. ಅವನನ್ನು ಕೊಂದು ನೀವಿಬ್ಬರೂ ಯದುವಂಶವನ್ನು ಭಾರೀ ದೊಡ್ಡ ಸಂಕಟದಿಂದ ಪಾರುಮಾಡಿದಿರಿ ಮತ್ತು ಅದನ್ನು ಸಮೃದ್ಧಗೊಳಿಸಿ ಔನ್ನತ್ಯಕ್ಕೇರಿಸಿದಿರಿ. ॥ ೧೭ ॥ ನೀವಿಬ್ಬರೂ ಜಗತ್ತಿಗೆ ಕಾರಣ ಭೂತರೂ, ಜಗದ್ರೂಪರೂ, ಆದಿಪುರುಷರೂ ಆಗಿರುವಿರಿ. ನಿಮಗಿಂತ ಬೇರೆಯಾದ ಯಾವ ವಸ್ತುವೂ ಇಲ್ಲ, ಕಾರ್ಯವೂ ಇಲ್ಲ, ಕಾರಣವೂ ಇಲ್ಲ. ॥ ೧೮ ॥ ಪರಮಾತ್ಮಾ! ನೀನೇ ನಿನ್ನ ಶಕ್ತಿಯಿಂದ ಈ ವಿಶ್ವವನ್ನು ಸೃಷ್ಟಿಸಿರುವೆ. ಕಾಲ-ಮಾಯೆ ಮುಂತಾದ ಶಕ್ತಿಗಳೊಡನೆ ನೀನೇ ಸೃಷ್ಟಿಸಿದ ಜಗತ್ತಿನಲ್ಲಿ ಪ್ರವಿಷ್ಟನಾಗಿ, ಕಂಡುಬರುವ, ಕೇಳಿಬರುವ ಎಲ್ಲ ವಸ್ತುಗಳ ರೂಪದಲ್ಲಿ ಕಂಡುಬರುತ್ತಿರುವೆ. ॥ ೧೯ ॥ ಪೃಥಿವಿಯೇ ಮೊದಲಾದ ಪಂಚ ಭೂತಗಳು ಆವುಗಳಿಂದಲೇ ಉಂಟಾದ ಚರಾಚರ ಜಗತ್ತಿನಲ್ಲಿ ನಾನಾ ರೂಪವಾಗಿ ಸೇರಿಕೊಂಡಿರುವಂತೆಯೇ, ಸರ್ವತಂತ್ರ ಸ್ವತಂತ್ರನಾದ ನೀನೂ ಕೂಡ ಆತ್ಮನಿರ್ಮಿತವಾದ ಕಾರ್ಯರೂಪವಾದ ಈ ಬ್ರಹ್ಮಾಂಡದಲ್ಲಿ ಅಂತರಾತ್ಮನಾಗಿ ಬಹುರೂಪದಿಂದ ತೋರುತ್ತಿರುವೆ. ಇದೂ ಒಂದು ನಿನ್ನ ಲೀಲೆಯೇ ಆಗಿದೆ. ॥ ೨೦ ॥ ಪ್ರಭುವೇ! ನೀನು ರಜೋಗುಣ-ಸತ್ವಗುಣ-ತಮೋಗುಣಗಳ ರೂಪವಾದ ನಿನ್ನ ಮಾಯಾಶಕ್ತಿಯಿಂದ ಕ್ರಮವಾಗಿ ಜಗತ್ತನ್ನು ಸೃಷ್ಟಿಸುವೆ, ಪಾಲಿಸುವೆ ಮತ್ತು ಸಂಹರಿಸುವೆ. ಆದರೆ ನೀನು ಈ ಗುಣಗಳಿಂದಾಗಲೀ, ಗುಣಗಳಿಂದಾಗುವ ಕರ್ಮಗಳಿಂದಾಗಲೀ ಬಂಧಿತನಾಗುವುದಿಲ್ಲ, ಏಕೆಂದರೆ, ಶುದ್ಧಜ್ಞಾನ ಸ್ವರೂಪನಾದ ನಿನಗೆ ಬಂಧನದ ಕಾರಣವಾದರೂ ಏನಿರಬಲ್ಲದು? ॥ ೨೧ ॥ ಪ್ರಭುವೇ! ಸ್ವಯಂ ಆತ್ಮವಸ್ತುವಿಗೆ ಸ್ಥೂಲ-ಸೂಕ್ಷ್ಮದೇಹಗಳೇ ಮುಂತಾದ ಉಪಾಧಿಗಳು ಇಲ್ಲದ ಕಾರಣ ಅದಕ್ಕೆ ಹುಟ್ಟು-ಸಾವುಗಳಿಲ್ಲ, ಅದರಲ್ಲಿ ಯಾವ ವಿಧವಾದ ಭೇದ-ಭಾವಗಳೂ ಇಲ್ಲ, ಈ ಕಾರಣದಿಂದಲೇ ನಿನಗೆ ಬಂಧನವಾಗಲೀ, ಮೋಕ್ಷವಾಗಲೀ

ದೇಹಾದ್ಯುಪಾಧೇರನಿರೂಪಿತತ್ವಾದ್
ಭವೋ ನ ಸಾಕ್ಷಾನ್ನ ಭಿದಾऽऽತ್ಮನಃ ಸ್ಯಾತ್ ।
ಅತೋ ನ ಬಂಧಸ್ತವ ನೈವ ಮೋಕ್ಷಃ
ಸ್ಯಾತಾಂ ನಿಕಾಮಸ್ತ್ವಯಿ ನೋऽವಿವೇಕಃ ॥ ೨೨ ॥

ತ್ವಯೋದಿತೋऽಯಂ ಜಗತೋ ಹಿತಾಯ
ಯದಾ ಯದಾ ವೇದಪಥಃ ಪುರಾಣಃ ।
ಬಾಧ್ಯೇತ ಪಾಷಂಡಪಥೈರಸದ್ಭಿ-
ಸ್ತದಾ ಭವಾನ್ ಸತ್ತ್ವಗುಣಂ ಬಿಭರ್ತಿ ॥ ೨೩ ॥

ಸತ್ವಂ ಪ್ರಭೋऽದ್ಯ ವಸುದೇವಗೃಹೇऽವತೀರ್ಣಃ
ಸ್ವಾಂಶೇನ ಭಾರಮಪನೇತುಮಿಹಾಸಿ ಭೂಮೇಃ ।
ಅಕ್ಷೌಹಿಣೀಶತವಧೇನ ಸುರೇತರಾಂಶ-
ರಾಜ್ಞಾಮಮುಷ್ಯ ಚ ಕುಲಸ್ಯ ಯಶೋ ವಿತನ್ವನ್ ॥ ೨೪ ॥

ಅದ್ಯೇಶ ನೋ ವಸತಯಃ ಖಿಲು ಭೂರಿಭಾಗಾ
ಯಃ ಸರ್ವದೇವಪಿತೃಭೂತನೃದೇವಮೂರ್ತಿಃ ।
ಯತ್ಪಾದಶೌಚಸಲಿಲಂ ತ್ರಿಜಗತ್ಪುನಾತಿ
ಸ ತ್ವಂ ಜಗದ್ಗುರುರಧೋಕ್ಷಜ ಯಾಃ ಪ್ರವಿಷ್ಟಃ ॥ ೨೫ ॥

ಕಃ ಪಂಡಿತಸ್ತ್ವದಪರಂ ಶರಣಂ ಸಮೀಯಾದ್
ಭಕ್ತಪ್ರಿಯಾದೃತಗಿರಃ ಸುಹೃದಃ ಕೃತಜ್ಞಾತ್ ।
ಸರ್ವಾನ್ದದಾತಿ ಸುಹೃದೋ ಭಜತೋऽಭಿಕಾಮಾ-
ನಾತ್ಮಾನಮಪ್ಯುಪಚಯಾಪಚಯೌ ನ ಯಸ್ಯ ॥ ೨೬ ॥

ದಿಷ್ಟ್ಯಾ ಜನಾರ್ದನ ಭವಾನಿಹ ನಃ ಪ್ರತೀತೋ
ಯೋಗೇಶ್ವರೈರಪಿ ದುರಾಪಗತಿಃ ಸುರೇಶೈಃ ।
ಛಿಂಧ್ಯಾಶು ನಃ ಸುತಕಲತ್ರಧನಾಪ್ತಗೇಹ-
ದೇಹಾದಿಮೋಹರಶನಾಂ ಭವದೀಯಮಾಯಾಮ್ ॥ ೨೭ ॥

ಶ್ರೀಶುಕ ಉವಾಚ

ಇತ್ಯರ್ಚಿತಃ ಸಂಸ್ತುತಶ್ಚ ಭಕ್ತೇನ ಭಗವಾನ್ ಹರಿಃ ।
ಅಕ್ರೂರಂ ಸಸ್ಮಿತಂ ಪ್ರಾಹ ಗೀರ್ಭಿಃ ಸಂಮೋಹಯನ್ನಿವ ॥ ೨೮ ॥

ಇರುವುದಿಲ್ಲ. ನಿನ್ನ ತತ್ತ್ವವನ್ನರಿಯದ ಅವಿವೇಕಿಗಳಾದ ನಾವು ನಿನ್ನಲ್ಲಿ ಬಂಧ-ಮೋಕ್ಷವನ್ನು ಆರೋಪಿಸುವುದೇ ಹೊರತಾಗಿ, ವಾಸ್ತವವಾಗಿ ನಿನಗೆ ಬಂಧನವೂ ಇಲ್ಲ; ಮೋಕ್ಷವೂ ಇಲ್ಲ ॥ ೨೨ ॥ ನೀನೇ ಜಗತ್ತಿನ ಕಲ್ಯಾಣಕ್ಕಾಗಿ ಸನಾತನವಾದ ವೇದಮಾರ್ಗವನ್ನು ಪ್ರಕಟಿಸಿರುವೆ. ಪಾಖಂಡ ಮತಾವಲಂಬಿಗಳಾದ ದುಷ್ಟರಿಂದ ಪ್ರಪಂಚವು ಬಾಧಿಸಲ್ಪಟ್ಟಾಗ ನೀನು ಶುದ್ಧ ಸತ್ತ್ವಮಯವಾದ ಶರೀರದೊಡನೆ ಅವತರಿಸುವೆ. ॥ ೨೩. ॥ ಸ್ವಾಮಿಯೇ! ಈ ಸಮಯದಲ್ಲಿ ನೀನು ನಿನ್ನ ಅಂಶಸಂಭೂತನಾದ ಬಲರಾಮನೊಡನೆ ಭೂಭಾರವನ್ನು ಕಳೆಯುವ ಸಲುವಾಗಿ ಮಗು ದೇವನ ಮನೆಯಲ್ಲಿ ಅವತರಿಸಿರುವೆ. ರಾಕ್ಷಸಾಂಶಸಂಭೂತರಾದ ರಾಜರ ನೂರಾರು ಅಕ್ಷೌಹಿಣೀ ಸೈನಿಕರನ್ನು ಸಂಹರಿಸಿ ಭೂಭಾರವನ್ನು ಕಳೆಯುವೆ ಮತ್ತು ನಿನ್ನ ವಂಶದ ಕೀರ್ತಿಯನ್ನು ವಿಸ್ತರಿಸುವೆ. ॥ ೨೪ ॥ ಇಂದ್ರಿಯಾತೀತನಾದ ಪರಮಾತ್ಮನೇ! ಸಮಸ್ತ ದೇವತೆಗಳೂ, ಪಿತೃಗಳೂ, ಭೂತಗಣಗಳೂ, ರಾಜರೂ ನಿನ್ನ ಸ್ವರೂಪರೇ ಆಗಿದ್ದಾರೆ. ನಿನ್ನ ದಿವ್ಯ ಚರಣಾರವಿಂದಗಳನ್ನು ತೊಳೆದ ಗಂಗೆಯು ಮೂರು ಲೋಕಗಳನ್ನು ಪವಿತ್ರಗೊಳಿಸುತ್ತಾಳೆ. ಸಮಸ್ತ ಜಗತ್ತಿಗೂ ಸದ್ಗುರುವಾದ ನೀನು ಅದೃಷ್ಟವಶದಿಂದ ನಮ್ಮ ಮನೆಗೆ ಆಗಮಿಸಿರುವೆ. ನಿಶ್ಚಯವಾಗಿಯೂ ಇಂದು ನಮ್ಮ ಮನೆಗಳು ಧನ್ಯವಾದವು. ಅವುಗಳ ಸೌಭಾಗ್ಯದ ಸೀಮೆಯೇ ಉಳಿಯಲಿಲ್ಲ ॥ ೨೫ ॥ ಪ್ರಭೋ! ನೀನು ಪ್ರೇಮಿಭಕ್ತರ ಪರಮ ಪ್ರಿಯತಮನೂ, ಸತ್ಯವಾದಿಯೂ, ಅಕಾರಣ ಹಿತೈಷಿಯೂ, ಕೃತಜ್ಞನೂ ಆಗಿರುವೆ. ಮಾಡಿದ ಅತ್ಯಲ್ಪ ಉಪಕಾರವನ್ನು ಸ್ಮರಿಸುತ್ತಿರುವೆ. ನೀನು ನಿನ್ನನ್ನು ಭಜಿಸುವ ಪ್ರೇಮಿಭಕ್ತರ ಸಮಸ್ತ ಅಭಿಲಾಷೆಗಳನ್ನು ಪೂರ್ಣಗೊಳಿಸುವೆ. ನಿನ್ನಲ್ಲಿ ಶರಣಾಗಿ ಪ್ರಾರ್ಥಿಸುವ ಏಕಾಂತ ಭಕ್ತರಿಗೆ ನಿನ್ನನ್ನೇ ಕೊಟ್ಟುಕೊಳ್ಳುವೆ. ಕ್ಷಯ-ವೃದ್ಧಿ ರಹಿತನಾದ ಪರಮಪುರುಷ ಪರಮಾತ್ಮನಾದ ನಿನ್ನನ್ನು ಬಿಟ್ಟು ಪಂಡಿತನಾದವನು ಯಾರು ತಾನೇ ಇತರರನ್ನು ಆಶ್ರಯಿಸುವನು? ॥ ೨೬ ॥ ಜನಾರ್ದನನೇ! ಯೋಗೇಶ್ವರರಿಂದಲೂ, ಸುರೇಶ್ವರರಿಂದಲೂ ತಿಳಿಯಲು ಅಶಕ್ಯವಾದ ಮಹಿಮೆಯುಳ್ಳ ನೀನು ಅದೃಷ್ಟವಶದಿಂದ ನಮಗೆ ಪ್ರತ್ಯಕ್ಷವಾಗಿ ನಮ್ಮ ಮನೆಯಲ್ಲೇ ದರ್ಶನವಿತ್ತಿಹೆ. ಸ್ವಾಮಿ! ನಾನು ಪತ್ನೀ-ಪುತ್ರ-ಸ್ವಜನ-ಧನ-ಮನೆ ಮಠಗಳು ಇವೇ ಮುಂತಾದ ಮೋಹಕವಾದ ಪಾಶಗಳಿಂದ ಬಂಧಿಸಲ್ಪಟ್ಟಿರುವೆನು. ನಿನ್ನ ಅನುಗ್ರಹ ರೂಪವಾಗಿ ನಿನ್ನದೇ ಆಗಿರುವ ಈ ಮಾಯಾಜಾಲವನ್ನು ಕತ್ತರಿಸಿ ನನ್ನನ್ನು ಉದ್ಧರಿಸು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಭಕ್ತನಾದ ಅಕ್ರೂರನು ಭಗವಾನ್ ಶ್ರೀಕೃಷ್ಣನನ್ನು ಪೂಜಿಸಿ, ಸ್ತುತಿಸಿದನು. ಅನಂತರ ಶ್ರೀಕೃಷ್ಣನು ಮುಗುಳ್ನಗುತ್ತಾ ಮೃದು ಮಧುರವಾಣಿಯಿಂದ ಅಕ್ರೂರನನ್ನು ವಿಮೋಹಗೊಳಿಸುತ್ತಾ ಇಂತೆಂದನು. ॥ ೨೮ ॥

ಶ್ರೀಭಗವಾನುವಾಚ

ತ್ವಂ ನೋ ಗುರುಃ ಪಿತೃವ್ಯಶ್ಚ ಶ್ಲಾಘ್ಯೋ ಬಂಧುಶ್ಚ ನಿತ್ಯದಾ ।
ವಯಂ ತು ರಕ್ಷ್ಯಾಃ ಪೋಷ್ಯಾಶ್ಚ ಅನುಕಂಪ್ಯಾಃ ಪ್ರಜಾ ಹಿ ವಃ
॥ ೨೯ ॥

ಭವದ್ವಿಧಾ ಮಹಾಭಾಗಾ ನಿಷೇವ್ಯಾ ಅರ್ಹಸತ್ತಮಾಃ ।
ಶ್ರೇಯಸ್ಕಾಮೈರ್ನಭಿರ್ನಿತ್ಯಂ ದೇವಾಃ ಸ್ವಾರ್ಥಾ ನ ಸಾಧವಃ
॥ ೩೦ ॥

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ
॥ ೩೧ ॥

ಸ ಭವಾನ್ ಸುಹೃದಾಂ ವೈ ನಃ ಶ್ರೇಯಾನ್‌ಶ್ರೇಯಶ್ಚಿಕೀರ್ಷಯಾ ।
ಜಿಜ್ಞಾಸಾರ್ಥಂ ಪಾಂಡವಾನಾಂ ಗಚ್ಛಸ್ವ ತ್ವಂ ಗಜಾಹ್ವಯಮ್
॥ ೩೨ ॥

ಪಿತರ್ಯುಪರತೇ ಬಾಲ್ಯಾಃ ಸಹ ಮಾತ್ರಾ ಸುದುಃಖಿತಾಃ ।
ಆನೀತಾಃ ಸ್ವಪುರಂ ರಾಜ್ಞಾ ವಸಂತ ಇತಿ ಶುಶ್ರುಮ
॥ ೩೩ ॥

ತೇಷು ರಾಜಾಂಬಿಕಾಪುತ್ರೋ ಭ್ರಾತೃಪುತ್ರೇಷು ದೀನಧೀಃ ।
ಸಮೋ ನ ವರ್ತತೇ ನೂನಂ ದುಷ್ಪುತ್ರವಶಗೋಽಂಧದೃಕ್
॥ ೩೪ ॥

ಗಚ್ಛ ಜಾನೀಹಿ ತದ್ವೃತ್ತಮಧುನಾ ಸಾಧ್ವಸಾಧು ವಾ ।
ವಿಜ್ಞಾಯ ತದ್ವಿಧಾಸ್ಯಾಮೋ ಯಥಾ ಶಂ ಸುಹೃದಾಂ ಭವೇತ್
॥ ೩೫ ॥

ಇತ್ಯಕ್ರೂರಂ ಸಮಾದಿಶ್ಯ ಭಗವಾನ್ ಹರಿರೀಶ್ವರಃ ।
ಸಂಕರ್ಷಣೋದ್ಧವಾಭ್ಯಾಂ ವೈ ತತಃ ಸ್ವಭವನಂ ಯಯೌ
॥ ೩೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಯ್ಯಾ ! ನೀನು ನಮ್ಮ ಗುರುವೂ ಹೀತೋಪದೇಶಕನೂ, ಚಿಕ್ಕಪ್ಪನೂ ಆಗಿರುವೆ. ನಮ್ಮ ವಂಶದಲ್ಲಿ ಅತ್ಯಂತ ಪ್ರಶಂಸನೀಯನೂ, ಹಿತೈಷಿಯೂ ಆಗಿರುವೆ. ನಾವಾದರೋ ನಿಮ್ಮ ಬಾಲಕರೇ ಆಗಿದ್ದೇವೆ. ಸದಾಕಾಲವೂ ನಿಮ್ಮಿಂದ ರಕ್ಷಿಸಲ್ಪಡುವವರೂ, ಕೃಪಾಪಾತ್ರರೂ ಆಗಿದ್ದೇವೆ. ॥ ೨೯ ॥ ತನ್ನ ಪರಮಶ್ರೇಯಸ್ಸನ್ನು ಬಯಸುವವನು ನಿಮ್ಮಂತಹ ಪರಮ ಪೂಜನೀಯರೂ, ಭಾಗ್ಯವಂತರೂ ಆದ ಸಂತರನ್ನು ಸದಾ ಸೇವಿಸಬೇಕು. ನಿಮ್ಮಂತಹ ಸಂತರು ದೇವತೆಗಳಿಗಿಂತಲೂ ಹೆಚ್ಚಿನವರು. ಏಕೆಂದರೆ, ದೇವತೆಗಳಲ್ಲಿಯೂ ಸ್ವಾರ್ಥವಿರುತ್ತದೆ, ಆದರೆ ಸಂತರಲ್ಲಿ ಇರುವುದಿಲ್ಲ. ॥ ೩೦ ॥ ಕೇವಲ ನೀರಿನ ಸರೋವರ, ನದಿಗಳು ತೀರ್ಥವಾಗುವುದಿಲ್ಲ, ಕೇವಲ ಮೃತ್ತಿಕೆ, ಶಿಲೆ ಮುಂತಾದವುಗಳಿಂದಾದ ವಿಗ್ರಹಗಳು ದೇವರಾಗುವುದಿಲ್ಲ, ಚಿಕ್ಕಪ್ಪ! ಬಹಳ ದಿನಗಳವರೆಗೆ ಶ್ರದ್ಧೆಯಿಂದ ಸೇವೆಮಾಡಿದಾಗಲೇ ಅವುಗಳು ಪವಿತ್ರವಾಗಿಸಬಲ್ಲವು. ಆದರೆ ಸತ್ಪುರುಷರು ತಮ್ಮ ದರ್ಶನಮಾತ್ರದಿಂದಲೇ ಪವಿತ್ರರಾಗಿಸಿ ಬಿಡುತ್ತಾರೆ. ॥ ೩೧ ॥ ಅಕ್ರೂರನೇ ! ನೀವು ನಮ್ಮ ಹಿತೈಷಿ, ಸುಹೃದರಲ್ಲಿ ಸರ್ವಶ್ರೇಷ್ಠರಾಗಿರುವಿರಿ. ಆದುದರಿಂದ ಪಾಂಡವರ ಹಿತವನ್ನು ಮಾಡಲು, ಅವರ ಕ್ಷೇಮ-ಸಮಾಚಾರವನ್ನು ತಿಳಿಯಲು ನೀವು ಹಸ್ತಿನಾಪುರಕ್ಕೆ ಹೋಗಬೇಕಾಗಿದೆ. ॥ ೩೨ ॥ ಪಾಂಡುರಾಜನು ಸತ್ತುಹೋದ ಬಳಿಕ ತಾಯಿ ಕುಂತೀದೇವಿಯರೊಂದಿಗೆ ಯುಧಿಷ್ಠಿರಾದಿ ಪಾಂಡವರು ಬಹಳ ದುಃಖಿತರಾಗಿದ್ದರೆಂದೂ, ಈಗ ಧೃತರಾಷ್ಟ್ರರಾಜನು ಅವರನ್ನು ಹಸ್ತಿನಾಪುರಕ್ಕೆ ಕರೆಸಿಕೊಂಡು, ಅವರು ಅಲ್ಲೇ ಇರುವರೆಂದೂ ಕೇಳಿದ್ದೇವೆ. ॥ ೩೩ ॥ ರಾಜಾ ಧೃತರಾಷ್ಟ್ರನು ಕುರುಡನಾಗಿದ್ದು ದುರ್ಬಲ ಬುದ್ಧಿಯವನೆಂದು ನೀನು ತಿಳಿದೇ ಇರುವೆ. ಪುತ್ರನಾದ ದುಷ್ಟ ದುರ್ಯೋಧನನ ಅಧೀನನಾಗಿ ಅವನು ಪಾಂಡವರೊಡನೆ ತನ್ನ ಪುತ್ರರಂತೆ ಸಮಾನವಾಗಿ ವ್ಯವಹರಿಸುತ್ತಿಲ್ಲ ॥ ೩೪ ॥ ಆದಕ್ಕಾಗಿ ನೀವು ಅಲ್ಲಿಗೆ ಹೋಗಿ ಪಾಂಡವರ ಸ್ಥಿತಿ-ಗತಿಯನ್ನು ತಿಳಿದುಕೊಂಡು ಬನ್ನಿರಿ. ಅವರ ಸಮಾಚಾರ ನಿಮ್ಮಿಂದ ತಿಳಿದ ಬಳಿಕ ಆ ಸುಹೃದರಿಗೆ ಸುಖಿಸಿಗುವಂತೆ ನಾನು ಉಪಾಯವನ್ನು ಮಾಡುವೆನು. ॥ ೩೫ ॥ ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನು ಅಕ್ರೂರನಿಗೆ ಹೀಗೆ ಆದೇಶವನ್ನಿತ್ತು -ಬಲರಾಮ-ಉದ್ಧವರೊಂದಿಗೆ ಅಲ್ಲಿಂದ ಹೊರಟು ತಮ್ಮ ಆರಮನೆಗೆ ಮರಳಿದನು. ॥ ೩೬ ॥

ನಲವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೪೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಅಷ್ಟಚತ್ವಾರಿಂಶೋಽಧ್ಯಾಯಃ ॥ ೪೮ ॥

ನಲವತ್ತೊಂಭತ್ತನೆಯ ಅಧ್ಯಾಯ

ಹಸ್ತಿನಾಪುರಕ್ಕೆ ಅಕ್ರೂರನ ಪ್ರಯಾಣ

ಶ್ರೀಶುಕ ಉವಾಚ

ಸ ಗತ್ವಾಹಾಸ್ತಿನಪುರಂ ಪೌರವೇಂದ್ರಯಶೋಽಂಕಿತಮ್ ।
ದದರ್ಶ ತತ್ರಾಂಬಿಕೇಯಂ ಸಭೀಷ್ಮಂ ವಿದುರಂ ಪೃಥಾಮ್
॥ ೧ ॥

ಸಹಪುತ್ರಂ ಚ ಬಾಹ್ಲೀಕಂ ಭಾರದ್ವಾಜಂ ಸಗೌತಮಮ್ ।
ಕರ್ಣಂ ಸುಯೋಧನಂ ದ್ರೌಣಿಂ ಪಾಂಡವಾನ್ ಸುಹೃದೋಽಪರಾನ್
॥ ೨ ॥

ಯಥಾವದುಪಸಂಗಮ್ಯ ಬಂಧುಭಿರ್ಗಾಂದಿನೀಸುತಃ ।
ಸಂಪೃಷ್ಟಸ್ತೈಃ ಸುಹೃದ್ವಾರ್ತಾಂ ಸ್ವಯಂ ಚಾಪೃಚ್ಛದವ್ಯಯಮ್
॥ ೩ ॥

ಉವಾಸ ಕತಿಚಿನ್ಮಾಸಾನ್ ರಾಜ್ಞೋ ವೃತ್ತವಿವಿತ್ಸಯಾ ।
ದುಷ್ಪ್ರಜಸ್ಯಾಲ್ಪಸಾರಸ್ಯ ಖಿಲಚ್ಛಂದಾನುವರ್ತಿನಃ
॥ ೪ ॥

ತೇಜ ಓಜೋ ಬಲಂ ವೀರ್ಯಂ ಪ್ರಶ್ರಯಾದೀಂಶ್ಚ ಸದ್ಗುಣಾನ್ ।
ಪ್ರಜಾನುರಾಗಂ ಪಾರ್ಥೇಷು ನ ಸಹದ್ಭಿಶ್ಚಿಕೀರ್ಷಿತಮ್
॥ ೫ ॥

ಕೃತಂ ಚ ಧಾರ್ತರಾಷ್ಟ್ರೈರ್ಯದ್ದರದಾನಾದ್ಯಪೇಶಲಮ್ ।
ಅಚಕ್ಷೌ ಸರ್ವಮೇವಾಸ್ಮೈ ಪೃಥಾ ವಿದುರ ಏವ ಚ
॥ ೬ ॥

ಪೃಥಾ ತು ಭ್ರಾತರಂ ಪ್ರಾಪ್ತಮಕ್ರೂರಮುಪಸೃತ್ಯ ತಮ್ ।
ಉವಾಚ ಜನ್ಮನಿಲಯಂ ಸ್ಮರಂತ್ಯಶ್ರುಕಲೇಕ್ಷಣಾ
॥ ೭ ॥

ಅಪಿ ಸ್ಮರಂತಿ ನಃ ಸೌಮ್ಯ ಪಿತರೌ ಭ್ರಾತರಶ್ಚ ಮೇ ।
ಭಗಿನ್ಯೋ ಭ್ರಾತೃಪುತ್ರಾಶ್ಚ ಜಾಮಯಃ ಸಖ್ಯ ಏವ ಚ
॥ ೮ ॥

ಭ್ರಾತ್ರೇಯೋ ಭಗವಾನ್ ಕೃಷ್ಣಃ ಶರಣ್ಯೋ ಭಕ್ತವತ್ಸಲಃ ।
ಪೈತೃಷ್ವಸೇಯಾನ್ ಸ್ಮರತಿ ರಾಮಶ್ಚಾಂಬುರುಹೇಕ್ಷಣಃ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಆಜ್ಞಾನುಸಾರವಾಗಿ ಅಕ್ರೂರನು ಕುರು ವಂಶೀಯರಾದವರ ಯಶಸ್ಸಿನಿಂದ ಅಂಕಿತವಾದ ಹಸ್ತಿನಾವತಿಗೆ ಪ್ರಯಾಣಮಾಡಿ, ಅಲ್ಲಿ ರಾಜನಾದ ಧೃತರಾಷ್ಟ್ರ, ಭೀಷ್ಮ, ವಿದುರ, ಕುಂತೀ, ಬಾಹ್ಲೀಕ ಮತ್ತು ಅವನ ಮಗ ಸೋಮದತ್ತ, ದ್ರೋಣಾಚಾರ್ಯರು, ಕೃಪಾಚಾರ್ಯರು, ಕರ್ಣ, ದುರ್ಯೋಧನ, ದ್ರೋಣಪುತ್ರ ಅಶ್ವತ್ಥಾಮ, ಯುಧಿಷ್ಠಿರಾದಿ ಪಂಚಪಾಂಡವರು ಇವರನ್ನು ಹಾಗೂ ಇತರ ಇಷ್ಟ-ಮಿತ್ರರನ್ನು ನೋಡಿದನು. ॥೧-೨॥ ಗಾಂದಿನೀನಂದನನಾದ ಅಕ್ರೂರನು ಎಲ್ಲ ಇಷ್ಟ-ಮಿತ್ರರನ್ನು ಮತ್ತು ಸಂಬಂಧಿಗಳನ್ನು ಭೇಟಿಯಾದಾಗ ಧೃತರಾಷ್ಟ್ರನೇ ಮೊದಲಾದವರೂ ತಮ್ಮ ಮಥುರಾವಾಸಿಗಳಾದ ಸ್ವಜನ- ಸಂಬಂಧಿಗಳ ಕ್ಷೇಮಸಮಾಚಾರವನ್ನು ಕೇಳಿದರು. ಅಂತೆಯೇ ಅಕ್ರೂರನೂ ಹಸ್ತಿನಾಪುರವಾಸಿಗಳ ಕ್ಷೇಮ-ಸಮಾಚಾರಗಳನ್ನು ಕೇಳಿದನು.॥೩॥ ಪರೀಕ್ಷಿತನೇ ! ಧೃತರಾಷ್ಟ್ರನು ಪಾಂಡವರೊಂದಿಗೆ ಹೇಗೆ ವ್ಯವಹರಿಸುತ್ತಾನೆಂದು ತಿಳಿಯಲು ಅಕ್ರೂರನು ಕೆಲವು ತಿಂಗಳು ಅಲ್ಲೇ ಉಳಿದುಕೊಂಡನು. ನಿಜ ಹೇಳಬೇಕಾದರೆ - ದುಷ್ಟಪುತ್ರರ ಇಚ್ಛೆಯ ವಿರುದ್ಧವಾಗಿ ಯಾವುದನ್ನು ಮಾಡುವ ಸಾಹಸ ಧೃತರಾಷ್ಟ್ರನಲ್ಲಿರಲಿಲ್ಲ, ಅವನು ಶಕುನಿ ಮೊದಲಾದ ದುಷ್ಟರ ಸಲಹೆಯಂತೆ ಕಾರ್ಯಮಾಡುತ್ತಿದ್ದನು. ॥ ೪ ॥ ಕುಂತೀ ಮತ್ತು ವಿದುರನು ಅಕ್ರೂರನಿಗೆ ತಿಳಿಯ ಹೇಳಿದರು - ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳು ಪಾಂಡವರ ಪ್ರಭಾವ, ಶಸ್ತ್ರ ಕೌಶಲ್ಯ, ಬಲ, ಪರಾಕ್ರಮ, ವಿನಯ ಮೊದಲಾದ ಸದ್ಗುಣಗಳನ್ನು ನೋಡಿ ಉರಿಯುತ್ತಿರುತ್ತಾರೆ. ಪ್ರಜೆಗಳು ಪಾಂಡವರನ್ನು ವಿಶೇಷವಾಗಿ ಪ್ರೀತಿಸಿದಾಗ ಅವರು ಇನ್ನೂ ಹೆಚ್ಚು ಹೊಟ್ಟೆಕಿಚ್ಚು ಪಟ್ಟುಕೊಂಡು ಪಾಂಡವರಿಗೆ ಅನಿಷ್ಟವನ್ನು ಮಾಡಲು ಹೊರಡುತ್ತಾರೆ. ಇಂದಿನ ತನಕ ದುರ್ಯೋಧನಾದಿ ಧೃತರಾಷ್ಟ್ರನ ಪುತ್ರರು ಪಾಂಡವರಿಗೆ ವಿಷ ಉಣಿಸುವುದೇ ಮುಂತಾದ ಬಹಳ ಅತ್ಯಾಚಾರವನ್ನು ಮಾಡಿರುವರು ಮತ್ತು ಮುಂದೆಯೂ ಕೂಡ ಬಹಳಷ್ಟು ಮಾಡಲು ಯೋಚಿಸುತ್ತಿದ್ದಾರೆ. ॥ ೫-೬ ॥

ಅಕ್ರೂರನು ಕುಂತಿಯ ಮನೆಗೆ ಬಂದಾಗ ಕುಂತಿಯು ಅವನ ಬಳಿಗೆ ಹೋಗಿ ಕುಳಿತಳು. ಅಕ್ರೂರನನ್ನು ನೋಡಿ ಆಕೆಗೆ ತನ್ನ ತವರು ಮನೆಯ ನೆನಪಾಗಿ ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಅವನಲ್ಲಿ ಹೇಳಿದಳು. ॥ ೭ ॥ ಪ್ರಿಯ ಸಹೋದರನೇ ! ನನ್ನ ತಂದೆ-ತಾಯಿಯರು, ಅಕ್ಕ-ತಂಗಿಯರು, ಅಳಿಯಂದಿರು, ಕುಟುಂಬದ ಸ್ತ್ರೀಯರು, ಗೆಳತಿಯರು ಎಂದಾದರೂ ನನ್ನನ್ನು ಸ್ಮರಿಸುವರೇ ? ॥ ೮ ॥ ನನ್ನ ಅಳಿಯಂದಿರಾದ ಭಗವಾನ್ ಶ್ರೀಕೃಷ್ಣ ಮತ್ತು ಕಮಲನಯನ ಬಲರಾಮ ಇವರಿಬ್ಬರೂ ಭಕ್ತವತ್ಸಲರೂ, ಶರಣಾಗತ ರಕ್ಷಕರೂ ಆಗಿದ್ದಾರೆ ಎಂದು ಕೇಳಿದ್ದೆ. ಅವರು ಎಂದಾದರೂ ತಮ್ಮ ಸೋದರ ಅತ್ತೆಯನ್ನು ಹಾಗೂ ಅಕೆಯ ಮಕ್ಕಳನ್ನು ನೆನೆಸಿಕೊಳ್ಳುವರೇನು?॥ ೯ ॥

ಸಾಪತ್ನಮಧ್ಯೇ ಶೋಚಂತೀಂ ವೃಕಾಣಾಂ ಹರಿಣೀಮಿವ ।
ಸಾಂತ್ವಯಿಷ್ಯತಿ ಮಾಂ ವಾಕ್ಯೈಃ ಪಿತೃಹೀನಾಂಶ್ಚ ಬಾಲಕಾನ್
॥ ೧೦ ॥

'ತೋಳಗಳ ನಡುವೆ ಸಿಕ್ಕಿಕೊಂಡ ಜಿಂಕೆಯಂತೆ' ನಾನು ಶತ್ರುಗಳ ಮಧ್ಯದಲ್ಲಿ ಸುತ್ತುವರಿದು ಶೋಕಾಕುಲಳಾಗಿದ್ದೇನೆ. ನನ್ನ ಮಕ್ಕಳು ತಂದೆಯನ್ನು ಕಳೆದುಕೊಂಡಿರುವರು. ನಮ್ಮ ಶ್ರೀಕೃಷ್ಣನು ಎಂದಾದರು ಇಲ್ಲಿಗೆ ಬಂದು ನನ್ನನ್ನು ಮತ್ತು ಈ ಅನಾಥ ಮಕ್ಕಳನ್ನು ಸಂತೈಸುವನೇ ? ॥ ೧೦ ॥ (ಶ್ರೀಕೃಷ್ಣನು ತನ್ನ ಮುಂದೆಯೇ ಇರುವಂತೆ ಭಾವಿಸಿ ಕುಂತಿಯು ಗದ್ಗದಿತಳಾಗಿ ಹೇಳತೊಡಗಿದಳು)

ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿಂದ ಶಿಶುಭಿಶ್ಚಾವಸೀದತೀಮ್
॥ ೧೧ ॥

ಓ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣ! ನೀನು ಮಹಾಯೋಗಿಯೂ, ವಿಶ್ವಾತ್ಮನೂ, ಸಮಸ್ತ ವಿಶ್ವಕ್ಕೆ ಆತ್ಮನಾಗಿಯೂ, ಜಗದ್ರಕ್ಷಕನೂ ಆಗಿರುವೆ. ಗೋವಿಂದ ! ನಾನು ನನ್ನ ಮಕ್ಕಳೊಂದಿಗೆ ದುಃಖದ ಮೇಲೆ ದುಃಖಗಳನ್ನೇ ಅನುಭವಿಸುತ್ತಿದ್ದೇನೆ. ನಿನಗೆ ಶರಣು ಬಂದಿರುವ ನನ್ನನ್ನು ರಕ್ಷಿಸು. ನನ್ನ ಮಕ್ಕಳನ್ನು ಕಾಪಾಡು. ॥ ೧೧ ॥

ನಾನ್ಯತ್ತವ ಪದಾಂಭೋಜಾತ್ ಪಶ್ಯಾಮಿ ಶರಣಂ ನೃಣಾಮ್ ।
ಭಿಭ್ಯತಾಂ ಮೃತ್ಯುಸಂಸಾರಾದೀಶ್ವರಸ್ಯಾಪವರ್ಗಿಕಾತ್
॥ ೧೨ ॥

ಶ್ರೀಕೃಷ್ಣನೇ ! ಈ ಪ್ರಪಂಚವು ಮೃತ್ಯುಮಯವಾಗಿದ್ದು ನಿನ್ನ ಚರಣಗಳು ಮೋಕ್ಷವನ್ನು ಕರುಣಿಸುವಂತಹುದು. ಈ ಸಂಸಾರಕ್ಕೆ ಹೆದರಿ ಶರಣಾದವರಿಗೆ ನಿನ್ನ ಚರಣಕಮಲಗಳಲ್ಲದೆ ಬೇರೆ ಯಾವುದೇ ಆಶ್ರಯವನ್ನು ನಾನು ನೋಡುತ್ತಿಲ್ಲ ॥ ೧೨ ॥

ನಮಃ ಕೃಷ್ಣಾಯ ಶುದ್ಧಾಯ ಬ್ರಹ್ಮಣೇ ಪರಮಾತ್ಮನೇ ।
ಯೋಗೇಶ್ವರಾಯ ಯೋಗಾಯ ತ್ವಾಮಹಂ ಶರಣಂ ಗತಾ
॥ ೧೩ ॥

ಶ್ರೀಕೃಷ್ಣನೇ ! ನೀನು ಮಾಯಾಲೇಶದಿಂದ ರಹಿತನಾದ ಪರಮ ಶುದ್ಧನಾಗಿರುವೆ. ಸಾಕ್ಷಾತ್ ಪರಬ್ರಹ್ಮ ಪರಮಾತ್ಮನಾಗಿರುವೆ. ಸಮಸ್ತ ಸಾಧನೆಗಳ, ಯೋಗಗಳ ಮತ್ತು ಉಪಾಯಗಳ ಸ್ವಾಮಿಯಾಗಿದ್ದು ಸಾಕ್ಷಾತ್ ಯೋಗವೂ ಆಗಿರುವೆ. ನಾನು ನಿನಗೆ ಶರಣಾಗಿದ್ದೇನೆ. ನೀನು ನನ್ನನ್ನು ರಕ್ಷಿಸು. ॥ ೧೩ ॥

ಶ್ರೀಶುಕ ಉವಾಚ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ !

ಇತ್ಯನುಸ್ಮೃತ್ಯ ಸ್ವಜನಂ ಕೃಷ್ಣಂ ಚ ಜಗದೀಶ್ವರಮ್ ।
ಪ್ರಾರುದದ್ದುಃಖಿತಾ ರಾಜನ್ ಭವತಾಂ ಪ್ರಪಿತಾಮಹೀ
॥ ೧೪ ॥

ನಿನ್ನ ಮುತ್ತಜ್ಜಿಯಾದ ಕುಂತೀದೇವಿಯು ಹೀಗೆ ತಮ್ಮ ಸಂಬಂಧಿಗಳನ್ನೂ ಕೊನೆಗೆ ಜಗದೀಶ್ವರನಾದ ಶ್ರೀಕೃಷ್ಣನನ್ನು ಸ್ಮರಿಸಿಕೊಂಡು ಕೊನೆಗೆ ಅತ್ಯಂತ ದುಃಖಿತಳಾಗಿ ಬಿಕ್ಕಿ-ಬಿಕ್ಕಿ ಅಳತೊಡಗಿದಳು. ॥ ೧೪ ॥

ಸಮದುಃಖಸುಖೌಽಕ್ರೂರೋ ವಿದುರಶ್ಚ ಮಹಾಯಶಾಃ ।
ಸಾಂತ್ವಯಾಮಾಸತುಃ ಕುಂತೀಂ ತತ್ಪುತ್ರೋತ್ಪತ್ತಿಹೇತುಭಿಃ
॥ ೧೫ ॥

ಅಕ್ರೂರನು ಮತ್ತು ವಿದುರರು ಇಬ್ಬರೂ ಸುಖ ದುಃಖಿಗಳನ್ನು ಸಮಾನವಾಗಿ ನೋಡುತ್ತಿದ್ದರು. ಯಶಸ್ವಿಯಾದ ಈ ಮಹಾತ್ಮರಿಬ್ಬರೂ ಕುಂತಿಗೆ ಅವಳ ಪುತ್ರರ ಜನ್ಮದಾತರಾದ ಧರ್ಮ, ವಾಯು ಮೊದಲಾದ ದೇವತೆಗಳ ನೆನಪನ್ನು ತಂದುಕೊಟ್ಟು ನಿನ್ನ ಮಕ್ಕಳು ಅಧರ್ಮವನ್ನು ನಾಶಗೊಳಿಸಲೆಂದೇ ಹುಟ್ಟಿರುವರು ಎಂದು ಬಹಳವಾಗಿ ತಿಳಿಯ ಹೇಳಿ ಸಾಂತ್ವನ ನೀಡಿದರು. ॥ ೧೫ ॥

ಯಾಸ್ಯನ್ ರಾಜಾನಮಭ್ಯೇತ್ಯ ವಿಷಮಂ ಪುತ್ರಲಾಲಸಮ್ ।
ಅವದತ್ ಸುಹೃದಾಂ ಮಧ್ಯೇ ಬಂಧುಭಿಃ ಸೌಹೃದೋದಿತಮ್
॥ ೧೬ ॥

ಧೃತರಾಷ್ಟ್ರನು ತನ್ನ ತಮ್ಮನ ಮಕ್ಕಳೊಂದಿಗೆ ಪಕ್ಷಪಾತವನ್ನು ಮಾಡುತ್ತಿದ್ದಾನೆ ಮತ್ತು ಅವರೊಂದಿಗೆ ತನ್ನ ಪುತ್ರರಂತೆ ವ್ಯವಹರಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿಯೇ ಇತ್ತು. ಮಥುರೆಗೆ ಹೊರಡುವಾಗ ಅಕ್ರೂರನು ಧೃತರಾಷ್ಟ್ರನ ಬಳಿಗೆ ಬಂದು ಕೌರವರಿಂದ ತುಂಬಿದ ಸಭೆಯಲ್ಲಿ ಶ್ರೀಕೃಷ್ಣ ಮತ್ತು ಬಲರಾಮಾದಿ ಹಿತೈಷಿಗಳ ಸಂದೇಶವನ್ನು ತಿಳಿಸಿದನು. ॥ ೧೬ ॥

ಅಕ್ರೂರ ಉವಾಚ

ಅಕ್ರೂರನು ಹೇಳಿದನು – ಕುರವಂಶೀಯರ ಕೀರ್ತಿಯನ್ನು ಹೆಚ್ಚಿಸುವ ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನೇ ! ನಿನ್ನ ತಮ್ಮನಾದ ಪಾಂಡುಮಹಾರಾಜನು ಅವಸಾನ ಹೊಂದಿದ ಬಳಿಕ ಈಗತಾನೇ ನೀನು ರಾಜ್ಯ ಸಿಂಹಾಸನವನ್ನು ಏರಿರುವೆ. ॥ ೧೭ ॥

ಭೋ ಭೋ ವೈಚಿತ್ರವೀರ್ಯ ತ್ವಂ ಕುರೂಣಾಂ ಕೀರ್ತಿವರ್ಧನ ।
ಭ್ರಾತರ್ಯುಪರತೇ ಪಾಂಡಾವಧುನಾಽಽಸನಮಾಸ್ಥಿತಃ
॥ ೧೭ ॥

ಧರ್ಮೇಣ ಪಾಲಯನ್ನುರ್ವೀಂ ಪ್ರಜಾಃ ಶೀಲೇನ ರಂಜಯನ್ ।
ವರ್ತಮಾನಃ ಸಮಃ ಸ್ವೇಷು ಶ್ರೇಯಃ ಕೀರ್ತಿಮವಾಪ್ಸ್ಯಸಿ
॥ ೧೮ ॥

ಅನ್ಯಥಾ ತ್ವಾಚರನ್ ಲೋಕೇ ಗರ್ಹಿತೋ ಯಾಸ್ಯಸೇ ತಮಃ ।
ತಸ್ಮಾತ್ಸಮತ್ವೇ ವರ್ತಸ್ವ ಪಾಂಡವೇಷ್ವಾತ್ಮಜೇಷು ಚ
॥ ೧೯ ॥

ನೇಹ ಚಾತ್ಯಂತಸಂವಾಸಃ ಕರ್ಹಿಚಿತ್ ಕೇನಚಿತ್ಸಹ ।
ರಾಜನ್ ಸ್ವೇನಾಪಿ ದೇಹೇನ ಕಿಮು ಜಾಯಾತ್ಮಜಾದಿಭಿಃ
॥ ೨೦ ॥

ಏಕಃ ಪ್ರಸೂಯತೇ ಜಂತುರೇಕ ಏವ ಪ್ರಲೀಯತೇ ।
ಏಕೋಽನುಭುಂಕ್ತೇ ಸುಕೃತಮೇಕ ಏವ ಚ ದುಷ್ಕೃತಮ್
॥ ೨೧ ॥

ಅಧರ್ಮೋಪಚಿತಂ ವಿತ್ತಂ ಹರಂತ್ಯನ್ಯೇಽಲ್ಪಮೇಧಸಃ ।
ಸಂಭೋಜನೀಯಾಪದೇಶೈರ್ಜಲಾನೀವ ಜಲೌಕಸಃ
॥ ೨೨ ॥

ಪುಷ್ಣಾತಿ ಯಾನಧರ್ಮೇಣ ಸ್ವಬುದ್ಧ್ಯಾ ತಮಪಂಡಿತಮ್ ।
ತೇಽಕೃತಾರ್ಥಂ ಪ್ರಹಿಣ್ವಂತಿ ಪ್ರಾಣಾ ರಾಯಃ ಸುತಾದಯಃ
॥ ೨೩ ॥

ಸ್ವಯಂ ಕಿಲ್ಬಿಷಮಾದಾಯ ತೈಸ್ತ್ಯಕ್ತೋ ನಾರ್ಥಕೋವಿದಃ ।
ಅಸಿದ್ಧಾರ್ಥೋ ವಿಶತ್ಯಂಧಂ ಸ್ವಧರ್ಮವಿಮುಖಿಸ್ತಮಃ
॥ ೨೪ ॥

ತಸ್ಮಾಲ್ಲೋಕಮಿಮಂ ರಾಜನ್ ಸ್ವಪ್ನಮಾಯಾಮನೋರಥಮ್ ।
ವೀಕ್ಷ್ಯಮುತ್ಸೃಜ್ಯ ತತ್ರಾತ್ಮಾನಂ ಸಮಃ ಶಾಂತೋ ಭವ ಪ್ರಭೋ
॥ ೨೫ ॥

ಧೃತರಾಷ್ಟ್ರ ಉವಾಚ

ಯಥಾ ವದತಿ ಕಲ್ಯಾಣೀಂ ವಾಚಂ ದಾನಪತೇ ಭವಾನ್ ।
ತಥಾನಯಾ ನ ತೃಪ್ಯಾಮಿ ಮರ್ತ್ಯಃ ಪ್ರಾಪ್ಯ ಯಥಾಮೃತಮ್
॥ ೨೬ ॥

ತಥಾಪಿ ಸೂನೃತಾ ಸೌಮ್ಯ ಹೃದಿ ನ ಸ್ಥೀಯತೇ ಚಲೇ ।
ಪುತ್ರಾನುರಾಗವಿಷಮೇ ವಿದ್ಯುತ್ ಸೌದಾಮನೀ ಯಥಾ
॥ ೨೭ ॥

ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಾ, ಸದ್ವ್ಯವಹಾರಗಳಿಂದ ಪ್ರಜೆಗಳನ್ನು ಸಂತೋಷಪಡಿಸುತ್ತಾ, ಸ್ವಜನರಲ್ಲಿ ಪಕ್ಷಪಾತವಿಲ್ಲದೆ ಸಮನಾಗಿ ವ್ಯವಹರಿಸುತ್ತಿದ್ದರೆ ಶ್ರೇಯಸ್ಸನ್ನೂ ಕೀರ್ತಿಯನ್ನೂ ಪಡೆಯುವೆ. ॥ ೧೮ ॥ ಇದಕ್ಕೆ ವಿಪರೀತವಾಗಿ ಆಚರಿಸಿದರೆ ಈ ಲೋಕದಲ್ಲಿ ನೀನು ನಿಂದೆಗೆ ಗುರಿಯಾಗುವೆ. ಸತ್ತ ಬಳಿಕ ನರಕಕ್ಕೆ ಹೋಗಬೇಕಾದೀತು. ಆದ್ದರಿಂದ ನಿನ್ನ ಪುತ್ರರಲ್ಲಿಯೂ ಮತ್ತು ಪಾಂಡವರಲ್ಲಿಯೂ ಸಮಾನತೆಯಿಂದ ವರ್ತಿಸು. ॥ ೧೯ ॥ ಮಹಾರಾಜ! ಯಾರು ಯಾವಾಗಲೂ ಯಾರೊಡನೆಯೂ ಹೆಚ್ಚು ಕಾಲ ಸೇರಿಕೊಂಡು ಇರುವುದಿಲ್ಲ. ತನ್ನದೆಂದು ತಿಳಿದಿರುವ ಈ ಶರೀರದಲ್ಲಿಯೂ ಹೆಚ್ಚು ಕಾಲ ಇರಲಾಗುವುದಿಲ್ಲ. ಹೀಗಿರುವಾಗ ಪತ್ನೀ-ಪುತ್ರರ ವಿಷಯವಾಗಿ ಹೇಳುವುದೇನಿದೆ ? ॥ ೨೦ ॥ ಜೀವಿಯು ಒಬ್ಬನೇ ಹುಟ್ಟುತ್ತಾನೆ. ಒಬ್ಬನೇ ಸತ್ತುಹೋಗುತ್ತಾನೆ ತಾನು ಮಾಡಿದ ಪಾಪ-ಪುಣ್ಯಗಳ ಫಲಗಳನ್ನೂ ಒಬ್ಬನೇ ಅನುಭವಿಸುತ್ತಾನೆ. ॥ ೨೧ ॥ ಸತಿ-ಸುತ ಬಂಧುಗಳು 'ನಾವು ನಿನ್ನವರು, ನಮ್ಮ ಭರಣ-ಪೋಷಣೆಗಳನ್ನು ನೀನು ಮಾಡಬೇಕು' ಎಂದು ಹೇಳಿಕೊಂಡು - ಅಲ್ಪಬುದ್ಧಿಯವನು ಅಧರ್ಮದಿಂದ ಸಂಪಾದಿಸಿದ ಧನವನ್ನು ಜಲಚರ ಪ್ರಾಣಿಗಳು ನೀರನ್ನು ಕುಡಿದುಬಿಡುವಂತೆ ತಿಂದುಹಾಕುತ್ತಾರೆ.॥೨೨॥ ಈ ಮೂರ್ಖ ಜೀವನು ಯಾರನ್ನು ತನ್ನವರೆಂದು ತಿಳಿದು ಅಧರ್ಮದಿಂದಲಾದರೂ ಪಾಲಿಸಿ-ಪೋಷಿಸುತ್ತಾರೋ, ಅವರೇ ಪ್ರಾಣ, ಧನ, ಪುತ್ರಾದಿಗಳು ಈ ಜೀವನನ್ನು ಅಸಂತುಷ್ಟನಿರುವಾಗಲೆ ಬಿಟ್ಟು ಹೊರಟುಹೋಗುತ್ತಾರೆ. ॥ ೨೩. ॥ ನಿಜವಾಗಿ ಹೇಳಬೇಕಾದರೆ - ತನ್ನ ಧರ್ಮದಿಂದ ವಿಮುಖನಾದವನು ತನ್ನ ಲೌಕಿಕ ಸ್ವಾರ್ಥವನ್ನು ತಿಳಿಯುವುದಿಲ್ಲ. ಯಾರಿಗಾಗಿ ಅವನು ಅಧರ್ಮವನ್ನು ಮಾಡುವನೋ, ಅವರೂ ಅವನನ್ನು ಬಿಟ್ಟೇ ಬಿಡುವರು. ಅವನಿಗೆ ಎಂದಿಗೂ ಸಂತೋಷವಾಗಲಾರದು ಹಾಗೂ ತನ್ನ ಪಾಪದ ಮೂಟೆಯನ್ನು ತಲೆಯಲ್ಲಿ ಹೊತ್ತುಕೊಂಡು ಘೋರವಾದ ನರಕಕ್ಕೆ ಹೋಗುವನು. ॥ ೨೪ ॥ ಆದಕ್ಕಾಗಿ ಮಹಾರಾಜ! ಈ ಪ್ರಪಂಚವನ್ನು ಕನಸೆಂದೂ, ಇಂದ್ರಜಾಲವೆಂದೂ, ಕೇವಲ ಮನಸ್ಸಿನ ಮಂಡಿಗೆಯೆಂದೂ, ನಶ್ವರವಾದುದೆಂದೂ ಭಾವಿಸಿ, ಬುದ್ಧಿಯಿಂದ ಮನಸ್ಸನ್ನು ಸಮಾಧಾನಪಡಿಸಿಕೊಂಡು ಮಕ್ಕಳೆಲ್ಲರನ್ನೂ ಸಮತ್ವದಿಂದ ಕಾಣುತ್ತಾ ಶಾಂತನಾಗಿರು. ॥ ೨೫ ॥

ಧೃತರಾಷ್ಟ್ರನು ಹೇಳಿದನು - ದಾನಪತಿಯಾದ ಅಕ್ರೂರ! ನೀನು ನಿಶ್ಚಯವಾಗಿಯೂ ನನಗೆ ಶ್ರೇಯಸ್ಕರವಾದ ಮಾತನ್ನೇ ಹೇಳಿರುವೆ. ಮನುಷ್ಯನು ಅಮೃತವನ್ನು ಎಷ್ಟು ಕುಡಿದರೂ ತೃಪ್ತನಾಗದಿರುವಂತೆ, ಅಮೃತಸ್ವರೂಪವಾದ ನಿನ್ನ ಮಾತುಗಳಿಂದ ನಾನು ತೃಪ್ತನಾಗಲಿಲ್ಲ. ಇನ್ನೂ ಕೇಳಬೇಕೆನಿಸುತ್ತದೆ. ॥ ೨೬ ॥ ಅಕ್ರೂರನೇ! ಹೀಗಿದ್ದರೂ ನಿನ್ನ ಹಿತಕರವಾದ ಒಳ್ಳೆಯ ಮಾತುಗಳು ಚಂಚಲವಾದ ನನ್ನ ಮನಸ್ಸಿನಲ್ಲಿ ಸ್ವಲ್ಪವೂ ಉಳಿಯಲಿಲ್ಲ. ಏಕೆಂದರೆ, ನನ್ನ ಹೃದಯವು ಪುತ್ರರ ವ್ಯಾಮೋಹದಿಂದ ಅತ್ಯಂತ ವಿಷಮಯವಾಗಿದೆ. ಸ್ಫಟಿಕ ಪರ್ವತದ ಮೇಲೆ ಮಿಂಚು ಒಮ್ಮೆ ಹೊಳೆದು ಮಾಯವಾಗುವಂತೆ ನಿನ್ನ ಉಪದೇಶಗಳ ಸ್ಥಿತಿಯೂ ಹಾಗೆಯೇ ಆಗಿದೆ. ॥ ೨೭ ॥

ಈಶ್ವರಸ್ಯ ವಿಧಿಂ ಕೋ ನು ವಿಧುನೋತ್ಯನ್ಯಥಾ ಪುಮಾನ್ ।
ಭೂಮೇರ್ಭಾರಾಮತಾರಾಯ ಯೋಽವತೀರ್ಣೋ ಯದೋಃ ಕುಲೇ
॥ ೨೮ ॥

ಯೋ ದುರ್ವಿಮರ್ಶಪಥಯಾ ನಿಜಮಾಯಯೇದಂ
ಸೃಷ್ಟ್ವಾ ಗುಣಾನ್ ವಿಭಜತೇ ತದನುಪ್ರವಿಷ್ಟಃ ।
ತಸ್ಮೈ ನಮೋ ದುರವಬೋಧವಿಹಾರತಂತ್ರ-
ಸಂಸಾರಚಕ್ರಗತಯೇ ಪರಮೇಶ್ವರಾಯ ॥ ೨೯ ॥

ಶ್ರೀಶುಕ ಉವಾಚ

ಇತ್ಯಭಿಪ್ರೇತ್ಯ ನೃಪತೇರಭಿಪ್ರಾಯಂ ಸ ಯಾದವಃ ।
ಸುಹೃದ್ಭಿಃ ಸಮನುಜ್ಞಾತಃ ಪುನರ್ಯದುಪುರೀಮಗಾತ್
॥ ೩೦ ॥

ಶಶಂಸ ರಾಮಕೃಷ್ಣಾಭ್ಯಾಂ ಧೃತರಾಷ್ಟ್ರವಿಚೇಷ್ಟಿತಮ್ ।
ಪಾಂಡವಾನ್ ಪ್ರತಿ ಕೌರವ್ಯ ಯದರ್ಥಂ ಪ್ರೇಷಿತಃ ಸ್ವಯಮ್
॥ ೩೧ ॥

ಅಕ್ರೂರನೇ ! ಸರ್ವಶಕ್ತನಾದ ಭಗವಂತನು ಪೃಥಿವಿಯ ಭಾರವನ್ನಿಳುಹಲೆಂದೇ ಯದುಕುಲದಲ್ಲಿ ಅವತರಿಸಿರುವನೆಂದು ನಾನು ಕೇಳಿದ್ದೇನೆ. ಅವನ ವಿಧಾನದಲ್ಲಿ ವ್ಯತ್ಯಾಸಮಾಡಬಲ್ಲ ಯಾವ ಮನುಷ್ಯನು ತಾನೇ ಸಮರ್ಥನು ? ಅವನ ಇಚ್ಛೆಯಂತೆಯೇ ನಡೆಯುವುದು. ॥ ೨೮ ॥ ಭಗವಂತನ ಮಾಯೆಯು ಅಚಿಂತ್ಯವಾದುದು. ಆ ಮಾಯೆಯಿಂದಲೇ ಈ ಜಗತ್ತನ್ನು ಸೃಷ್ಟಿಸಿ ತಾನೂ ಅದರಲ್ಲಿಯೇ ಸೇರಿಕೊಂಡು ಗುಣ-ಕರ್ಮಗಳನ್ನು ಪ್ರಪಂಚಕ್ಕೆ ವಿಭಾಗಿಸಿ ಕೊಡುತ್ತಾನೆ. ಈ ಜಗಚ್ಚಕ್ರದ ಅವಿಚ್ಛಿನ್ನ ಗತಿಯಲ್ಲಿ ಅವನ ಅಚಿಂತ್ಯ ಲೀಲಾಶಕ್ತಿಯ ಹೊರತು ಬೇರೆ ಯಾವ ಕಾರಣವೂ ಇಲ್ಲ. ಅಂತಹ ಪರಮೈಶ್ವರ್ಯಶಾಲಿಯಾದ ಪ್ರಭುವಿಗೆ ನಾನು ನಮಸ್ಕರಿಸುತ್ತೇನೆ. ॥ ೨೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಮಹಾರಾಜ ! ಹೀಗೆ ಅಕ್ರೂರನು ಧೃತರಾಷ್ಟ್ರನ ಅಭಿಪ್ರಾಯವನ್ನು ತಿಳಿದುಕೊಂಡು, ಕುರುವಂಶೀಯರಾದ ಸ್ವಜನರಿಂದ ಅನುಮತಿಯನ್ನು ಪಡೆದು ಮಥುರೆಗೆ ಮರಳಿದನು. ॥ ೩೦ ॥ ಪರೀಕ್ಷಿತನೇ ! ಅಕ್ರೂರನು ಅಲ್ಲಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಲ್ಲಿ ಧೃತರಾಷ್ಟ್ರನು ಪಾಂಡವರೊಡನೆ ವ್ಯವಹರಿಸುತ್ತಿದ್ದ ಎಲ್ಲ ವೃತ್ತಾಂತವನ್ನು ತಿಳಿಸಿದನು. ಏಕೆಂದರೆ ಅವನನ್ನು ಹಸ್ತಿನಾಪುರಕ್ಕೆ ಕಳಿಸಿದ ಉದ್ದೇಶವೇ ಅದಾಗಿತ್ತು. ॥ ೩೧ ॥

ಸಲವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೪೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಏಕೋನಪಂಚಾಶತ್ತಮೋಽಧ್ಯಾಯಃ ॥ ೪೯ ॥

ಹತ್ತನೆಯ ಸ್ಕಂಧದ ಪೂರ್ವಾರ್ಧವು ಸಂಪೂರ್ಣವಾಯಿತು.

ಹರಿಃ ಓಂ ತತ್ಸತ್ - ಹರಿಃ ಓಂ ತತ್ಸತ್

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದಶಮಃ ಸ್ಕಂಧಃ (ಉತ್ತರಾರ್ಧ)

ಐವತ್ತನೆಯ ಅಧ್ಯಾಯ

ಜರಾಸಂಧನೊಡನೆ ಯುದ್ಧ - ದ್ವಾರಕಾಪಟ್ಟಣ ನಿರ್ಮಾಣ

ಶ್ರೀಶುಕ ಉವಾಚ

ಅಸ್ತಿಃ ಪ್ರಾಪ್ತಿಶ್ಚ ಕಂಸಸ್ಯ ಮಹಿಷ್ಯೌ ಭರತರ್ಷಭ।
ಮೃತೇ ಭರ್ತರಿ ದುಃಖಾರ್ತೇ ಈಯತುಃ ಸ್ಮ ಪಿತುರ್ಗೃಹಾನ್
॥ ೧ ॥

ಪಿತ್ರೇ ಮಗಧರಾಜಾಯ ಜರಾಸಂಧಾಯ ದುಃಖಿತೇ।
ವೇದಯಾಂಚಕ್ರತುಃ ಸರ್ವಮಾತ್ಮವೈಧವ್ಯಕಾರಣಮ್
॥ ೨ ॥

ಸ ತದಪ್ರಿಯಮಾಕರ್ಣ್ಯ ಶೋಕಾಮರ್ಷಯುತೋ ನೃಪ।
ಅಯಾದವೀಂ ಮಹೀಂ ಕರ್ತುಂ ಚಕ್ರೇ ಪರಮಮುದ್ಯಮಮ್
॥ ೩ ॥

ಅಕ್ಷೌಹಿಣೀಭಿರ್ವಿಂಶತ್ಯಾ ತಿಸೃಭಿಶ್ಚಾಪಿ ಸಂವೃತಃ।
ಯದುರಾಜಧಾನೀಂ ಮಥುರಾಂ ನ್ಯರುಣತ್ ಸರ್ವತೋದಿಶಮ್
॥ ೪ ॥

ನಿರೀಕ್ಷ್ಯ ತದ್ಬಲಂ ಕೃಷ್ಣ ಉದ್ವೇಲಮಿವ ಸಾಗರಮ್।
ಸ್ವಪುರಂ ತೇನ ಸಂರುದ್ಧಂ ಸ್ವಜನಂ ಚ ಭಯಾಕುಲಮ್
॥ ೫ ॥

ಚಿಂತಯಾಮಾಸ ಭಗವಾನ್ ಹರಿಃ ಕಾರಣಮಾನುಷಃ।
ತದ್ದೇಶಕಾಲಾನುಗುಣಂ ಸ್ವಾವತಾರಪ್ರಯೋಜನಮ್
॥ ೬ ॥

ಹನಿಷ್ಯಾಮಿ ಬಲಂ ಹ್ಯೇತದ್ಭುವಿ ಭಾರಂ ಸಮಾಹಿತಮ್।
ಮಾಗಧೇನ ಸಮಾನೀತಂ ಪಕ್ಷ್ಯಾನಾಂ ಸರ್ವಭೂಭುಜಾಮ್
॥ ೭ ॥

ಅಕ್ಷೌಹಿಣೀಭಿಃ ಸಂಖ್ಯಾತಂ ಭಟಾಶ್ವರಥಕುಂಜರೈಃ।
ಮಾಗಧಸ್ತು ನ ಹಂತವ್ಯೋ ಭೂಯಃ ಕರ್ತಾ ಬಲೋದ್ಯಮಮ್
॥ ೮ ॥

ಏತದರ್ಥೋಽವತಾರೋಽಯಂ ಭೂಭಾರಹರಣಾಯ ಮೇ।
ಸಂರಕ್ಷಣಾಯ ಸಾಧೂನಾಂ ಕೃತೋಽನ್ಯೇಷಾಂ ವಧಾಯ ಚ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಭರತವಂಶ ಶಿರೋಮಣಿಯೇ! ಕಂಸನಿಗೆ ಅಸ್ತಿ ಮತ್ತು ಪ್ರಾಪ್ತಿ ಎಂಬ ಇಬ್ಬರು ಮಡದಿಯರಿದ್ದರು. ಪತಿಯ ಮರಣದಿಂದಾಗಿ ದುಃಖಿತರಾದ ಅವರು ತಮ್ಮ ತಂದೆಯ ಮನೆಗೆ ಹೊರಟುಹೋದರು. ॥ ೧ ॥ ದುಃಖಿತಪ್ತೆಯರಾಗಿದ್ದ ಅವರಿಬ್ಬರೂ ತಮ್ಮ ತಂದೆಯಾದ ಮಗಧ ರಾಜನಾದ ಜರಾಸಂಧನಲ್ಲಿ ತಮಗೆ ವೈಧವ್ಯವು ಬಂದ ಕಾರಣವನ್ನು ವಿವರಿಸಿ ಹೇಳಿದರು. ॥ ೨ ॥ ರಾಜನೇ! ಅಪ್ರಿಯವಾದ ಈ ಸಮಾಚಾರವನ್ನು ಕೇಳಿ ಜರಾಸಂಧನು ಬಹಳವಾಗಿ ಶೋಕಿಸಿದನು. ಆದರೆ ಒಡನೆಯೇ ಕೋಪದಿಂದ ಕಿಡಿ-ಕಿಡಿಯಾಗಿ, ಪೃಥಿವಿಯನ್ನೇ ಯಾದವರಿಂದ ರಹಿತವನ್ನಾಗಿ ಮಾಡಲು ನಿಶ್ಚಯಿಸಿ ಯುದ್ಧಕ್ಕೆ ಕಾರ್ಯೋನ್ಮುಖನಾದನು. ॥ ೩ ॥ ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯ ಸಮೇತನಾಗಿ ಯಾದವರ ರಾಜಧಾನಿಯಾದ ಮಥುರೆಗೆ ಬಂದು ನಾಲ್ಕು ಕಡೆಗಳಿಂದಲೂ ಮುತ್ತಿಗೆ ಹಾಕಿದನು. ॥ ೪ ॥

ಭಗವಾನ್ ಶ್ರೀಕೃಷ್ಣನು ನೋಡಿದನು - ಜರಾಸಂಧನ ಆ ಮಹಾಸೈನ್ಯವು ಉಕ್ಕಿಬರುವ ಸಮುದ್ರದಂತೆ ಇತ್ತು. ಅವನು ನಾಲ್ಕು ಕಡೆಗಳಿಂದಲೂ ತನ್ನ ರಾಜಧಾನಿಯನ್ನು ಪ್ರತಿಬಂಧಿಸಿದ್ದು ತನ್ನ ಸ್ವಜನರೂ, ಪುರವಾಸಿಗಳೂ ಭಯಗೊಂಡಿರುವುದನ್ನು ಗಮನಿಸಿದನು. ॥ ೫ ॥ ಭಗವಾನ್ ಶ್ರೀಕೃಷ್ಣನು ಭೂಭಾರಹರಣಕ್ಕಾಗಿಯೇ ಮನುಷ್ಯನಾಗಿ ಅವತರಿಸಿ ಬಂದಿದ್ದನು. ತನ್ನ ಅವತಾರದ ಪ್ರಯೋಜನವನ್ನೂ, ಈ ಸಮಯದಲ್ಲಿ ದೇಶಕಾಲಕ್ಕೆ ತಕ್ಕಂತೆ ಏನು ಮಾಡಬೇಕೆಂಬುದನ್ನು ಯೋಚಿಸಿ ನಿರ್ಧಾರಕ್ಕೆ ಬಂದನು. ॥ ೬ ॥ ಮಗಧರಾಜನಾದ ಜರಾಸಂಧನು ತನ್ನ ಅಧೀನದಲ್ಲಿರುವ ಸಾಮಂತರಿಂದ ಇಪ್ಪತ್ತಮೂರು ಅಕ್ಷೌಹಿಣೀ ಚತುರಂಗ ಸೈನ್ಯವನ್ನು ಸಂಗ್ರಹಿಸಿ ಇಲ್ಲಿಗೆ ತಂದಿರುವನು. ಭೂಮಿಯ ಭಾರವೆಲ್ಲವೂ ಒಂದೆಡೆಯಲ್ಲೇ ಕೇಂದ್ರೀಕೃತವಾಗಿದೆ. ಈ ಸೈನ್ಯವನ್ನು ನಾನೀಗಲೇ ನಾಶಮಾಡಿಬಿಡುತ್ತೇನೆ. ಆದರೆ ಜರಾಸಂಧನನ್ನು ಮಾತ್ರ ಕೊಲ್ಲುವುದಿಲ್ಲ, ಏಕೆಂದರೆ, ಅವನು ಬದುಕಿದ್ದರೆ ಪುನಃ ಅಸುರರ ದೊಡ್ಡ ಸೈನ್ಯವನ್ನು ಸೇರಿಸಿ ಇಲ್ಲಿಗೆ ಕರೆತರುವನು. ಇದರಿಂದ ನನ್ನ ಭೂಭಾರಹರಣ ಕಾರ್ಯವು ಸುಗಮವಾದಿತೆಂದು ಯೋಚಿಸಿದನು. ॥ ೭-೮ ॥ ಭೂಭಾರವನ್ನು ಹರಣಮಾಡಿ, ಸಾಧುಗಳ ರಕ್ಷಣೆ - ದುಷ್ಟ ಜನರ ಸಂಹಾರ ಇವೇ ನನ್ನ ಅವತಾರದ ಪ್ರಯೋಜನವಲ್ಲವೇ! ॥ ೯ ॥

ಅನ್ಯೋಽಪಿ ಧರ್ಮರಕ್ಷಾಯೈ ದೇಹಃ ಸಂಭ್ರಿಯತೇ ಮಯಾ ।
ವಿರಾಮಾಯಾಪ್ಯಧರ್ಮಸ್ಯ ಕಾಲೇ ಪ್ರಭವತಃ ಕ್ವಚಿತ್
॥ ೧೦ ॥

ಧರ್ಮದ ರಕ್ಷಣೆಗಾಗಿಯೂ, ಬೆಳೆಯುತ್ತಿರುವ ಅಧರ್ಮವನ್ನು ತಡೆಗಟ್ಟಲು ಕೆಲವು ಸಮಯದಲ್ಲಿ ನಾನು ಅನೇಕ ದೇಹಗಳಲ್ಲಿಯೂ ಅವತರಿಸುತ್ತೇನೆ. ॥ ೧೦ ॥

ಏವಂ ಧ್ಯಾಯತಿ ಗೋವಿಂದ ಆಕಾಶಾತ್ ಸೂರ್ಯವರ್ಚಸೌ ।
ರಥಾವುಪಸ್ಥಿತೌ ಸದ್ಯಃ ಸಸೂತೌ ಸಪರಿಚ್ಛದೌ
॥ ೧೧ ॥

ಪರೀಕ್ಷಿತ ಮಹಾರಾಜ! ಭಗವಾನ್ ಶ್ರೀಕೃಷ್ಣನು ಹೀಗೆ ಯೋಚಿಸುತ್ತಿರುವಾಗಲೇ ಆಕಾಶದಿಂದ ಸೂರ್ಯಸದೃಶ ಹೊಳೆಯುತ್ತಿರುವ ಎರಡು ರಥಗಳು ಅವನ ಬಳಿಗೆ ಬಂದುವು. ಅವುಗಳು ಸಾರಥಿಗಳಿಂದ ಕೂಡಿದ್ದು ಸಮಸ್ತ ಯುದ್ಧ ಸಾಮಗ್ರಿಗಳಿಂದ ಸುಸಜ್ಜಿತವಾಗಿದ್ದುವು. ॥ ೧೧ ॥ ಇದೇ ಸಮಯದಲ್ಲಿ ಭಗವಂತನ ಸನಾತನವಾದ ದಿವ್ಯ ಆಯುಧಗಳೂ ಅಲ್ಲಿಗೆ ಬಂದು ಉಪಸ್ಥಿತವಾದುವು. ಅವೆಲ್ಲವನ್ನು ನೋಡಿ ಭಗವಾನ್ ಶ್ರೀಕೃಷ್ಣನು ಬಲರಾಮನಲ್ಲಿ ಇಂತೆಂದನು. ॥ ೧೨ ॥ ಮಹಾಶಕ್ತಿಶಾಲಿಯಾದ ಅಣ್ಣನೇ! ನಿನ್ನಿಂದ ರಕ್ಷಿತವಾದ ಯಾದವರಿಗೆ ಇಂದು ಮಹಾಸಂಕಟವು ಪ್ರಾಪ್ತವಾಗಿದೆ. ಈ ಸಮಯದಲ್ಲಿ ಅವರ ಸಂಕಟವನ್ನು ನಿವಾರಿಸುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಕಾರ್ಯಕ್ಕೆ ಬೆಂಬಲವಾಗಿ ಆಕಾಶದಿಂದ ರಥಗಳೂ ಬಂದಿವೆ. ನಮಗೆ ಪ್ರಿಯವಾದ ಆಯುಧಗಳೂ ತಾವಾಗಿಯೇ ಬಂದಿವೆ. ॥ ೧೩ ॥ ಆಣ್ಣ! ನೀನು ರಥವನ್ನು ಹತ್ತಿ ಕುಳಿತು ಶತ್ರು ಸೈನ್ಯವನ್ನು ಸಂಹಾರಮಾಡಿ ನಮ್ಮ ಸ್ವಜನರನ್ನು ಈ ವಿಪತ್ತಿನಿಂದ ಪಾರುಮಾಡು. ಸಾಧುಗಳಿಗೆ ಸುಖವನ್ನುಂಟು ಮಾಡಲೆಂದೇ ನಾವಿಬ್ಬರೂ ಅವತರಿಸಿದ್ದೆವಲ್ಲ! ॥ ೧೪ ॥ ಆದ್ದರಿಂದ ಈಗ ಈ ಇಪ್ಪತ್ತಮೂರು ಅಕ್ಷೌಹಿಣಿ ಸೇನೆಯ ರೂಪದಲ್ಲಿರುವ ವಿಪುಲವಾದ ಭೂಭಾರವನ್ನು ಕಡಿಮೆ ಮಾಡು, ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮನು ಹೀಗೆ ಸಮಾಲೋಚಿಸಿ ಕವಚಗಳನ್ನು ಧರಿಸಿ, ರಥಾರೂಢರಾಗಿ ಮಥುರೆಯಿಂದ ಹೊರಟರು. ಆಗ ಅವರು ದಿವ್ಯಾಯುಧಗಳಿಂದ ಸಂಪನ್ನರಾಗಿದ್ದರು ಮತ್ತು ಅತ್ಯಲ್ಪವಾದ ಸೇನೆಯೂ ಅವರೊಂದಿಗೆ ಹಿಂಬಾಲಿಸಿತು. ಶ್ರೀಕೃಷ್ಣನ ರಥವನ್ನು ದಾರುಕನು ನಡೆಸುತ್ತಿದ್ದನು. ಪುರದಿಂದ ಹೊರಗೆ ಬಂದು ಅವನು ತನ್ನ ಪಾಂಚಜನ್ಯ ಶಂಖವನ್ನು ಊದಿದನು. ॥ ೧೫-೧೬ ॥ ಭಯಂಕರವಾದ ಆ ಶಂಖಧ್ವನಿಯನ್ನು ಕೇಳಿ ಶತ್ರು ಸೈನಿಕರ ಹೃದಯಗಳು ಭಯದಿಂದ ನಡುಗಿಹೋದುವು. ರಥದಲ್ಲಿ ಕುಳಿತು ಬಂದಿರುವ ಬಲರಾಮ-ಕೃಷ್ಣರನ್ನು ನೋಡಿ ಜರಾಸಂಧನು ಹೇಳಿದನು - ಎಲೈ ಪುರುಷಾಧಮನೇ! ನಿನ್ನಂತಹ ಬಾಲಕನೊಬ್ಬನೊಡನೆ ಯುದ್ಧಮಾಡಲು ನನಗೆ ನಾಚಿಕೆಯಾಗುತ್ತದೆ. ಇಷ್ಟು ದಿವಸಗಳವರೆಗೆ ಎಲ್ಲೆಲ್ಲೋ ಬಚ್ಚಿಕೊಂಡೇ ತಿರುಗುತ್ತಿದ್ದೆ. ಎಲೈ ಮೂರ್ಖನೇ! ನೀನು ನಿನ್ನ ಸೋದರ ಮಾವನನ್ನೇ ಕೊಂದವನು. ಅದಕ್ಕಾಗಿ ನಾನು ನಿನ್ನೊಡನೆ ಯುದ್ಧ ಮಾಡುವುದಿಲ್ಲ. ಹೊರಟು ಹೋಗು. ನನ್ನ ಮುಂದೆ ಇರಬೇಡ. ॥ ೧೭-೧೮ ॥ ಬಲರಾಮಾ! ಯುದ್ಧದಲ್ಲಿ ಮಡಿದರೆ ಸ್ವರ್ಗಪ್ರಾಪ್ತಿಯಾಗುತ್ತದೆ ಎಂಬ ಶ್ರದ್ಧೆ ನಿನಗಿದ್ದರೆ ಧೈರ್ಯದಿಂದ ನನ್ನೊಡನೆ ಯುದ್ಧಮಾಡು. ನನ್ನ ಬಾಣಗಳಿಂದ ಛಿನ್ನ-ಭಿನ್ನವಾದ ಶರೀರವನ್ನು ಇಲ್ಲೇ ಬಿಟ್ಟು ಸ್ವರ್ಗಕ್ಕೆ ಹೋಗು. ಇಲ್ಲವೇ ನಿನ್ನಲ್ಲಿ ಶಕ್ತಿಯಿದ್ದರೆ ನನ್ನನ್ನೇ ಕೊಂದು ಹಾಕು. ॥ ೧೯ ॥

ಅನ್ಯೋಽಪಿ ಧರ್ಮರಕ್ಷಾಯೈ ದೇಹಃ ಸಂಭ್ರಿಯತೇ ಮಯಾ ।
ವಿರಾಮಾಯಾಪ್ಯಧರ್ಮಸ್ಯ ಕಾಲೇ ಪ್ರಭವತಃ ಕ್ವಚಿತ್
॥ ೧೦ ॥

ಏವಂ ಧ್ಯಾಯತಿ ಗೋವಿಂದ ಆಕಾಶಾತ್ ಸೂರ್ಯವರ್ಚಸೌ ।
ರಥಾವುಪಸ್ಥಿತೌ ಸದ್ಯಃ ಸಸೂತೌ ಸಪರಿಚ್ಛದೌ
॥ ೧೧ ॥

ಆಯುಧಾನಿ ಚ ದಿವ್ಯಾನಿ ಪುರಾಣಾನಿ ಯದೃಚ್ಛಯಾ ।
ದೃಷ್ಟ್ವಾ ತಾನಿ ಹೃಷೀಕೇಶಃ ಸಂಕರ್ಷಣಮಥಾಬ್ರವೀತ್
॥ ೧೨ ॥

ಪಶ್ಯಾರ್ಯ ವ್ಯಸನಂ ಪ್ರಾಪ್ತಂ ಯದೂನಾಂ ತ್ವಾವತಾಂ ಪ್ರಭೋ ।
ಏಷ ತೇ ರಥ ಆಯಾತೋ ದಯಿತಾನ್ಯಾಯುಧಾನಿ ಚ
॥ ೧೩ ॥

ಯಾನಮಾಸ್ಥಾಯ ಜಹ್ಯೇತದ್ವ್ಯಸನಾತ್ ಸ್ವಾನ್ ಸಮುದ್ಧರ ।
ಏತದರ್ಥಂ ಹಿ ನೌ ಜನ್ಮ ಸಾಧೂನಾಮೀಶ ಶರ್ಮಕೃತ್
॥ ೧೪ ॥

ತ್ರಯೋವಿಂಶತ್ಯನೀಕಾಖ್ಯಂ ಭೂಮೇರ್ಭಾರಮಪಾಕುರು ।
ಏವಂ ಸಮ್ಮಂತ್ರ್ಯ ದಾಶಾರ್ಹೌ ದಂಶಿತೌ ರಥಿನೌ ಪುರಾತ್
॥ ೧೫ ॥

ನಿರ್ಯಯ್ಮತುಃ ಸ್ವಾಯುಧಾಢ್ಯೌ ಬಲೇನಾಲ್ಪೀಯಸಾಽಽವೃತೌ ।
ಶಂಖಂ ದಧ್ಮೌ ವಿನಿರ್ಗತ್ಯ ಹರಿರ್ದಾರುಕಸಾರಥಿಃ
॥ ೧೬ ॥

ತತೋಽಭೂತ್ ಪರಸೈನ್ಯಾನಾಂ ಹೃದಿ ವಿತ್ರಾಸವೇಪಥುಃ ।
ತಾವಾಹ ಮಾಗಧೋ ವೀಕ್ಷ್ಯ ಹೇ ಕೃಷ್ಣ ಪುರುಷಾಧಮ
॥ ೧೭ ॥

ನ ತ್ವಯಾ ಯೋದ್ಧುಮಿಚ್ಛಾಮಿ ಬಾಲೇನೈಕೇನ ಲಜ್ಜಯಾ ।
ಗುಪ್ತೇನ ಹಿ ತ್ವಯಾ ಮನ ನ ಯೋತ್ಸ್ಯೇ ಯಾಹಿ ಬಂಧುಹನ್
॥ ೧೮ ॥

ತವ ರಾಮ ಯದಿ ಶ್ರದ್ಧಾ ಯುಧ್ಯಸ್ವ ಧೈರ್ಯಮುದ್ವಹ ।
ಹಿತ್ವಾವಾ ಮಚ್ಛರೈಶ್ಛಿನ್ನಂ ದೇಹಂ ಸ್ವರ್ಯಾಹಿ ಮಾಂ ಜಹಿ
॥ ೧೯ ॥

ಶ್ರೀಭಗವಾನುವಾಚ

ನ ವೈ ಶೂರಾ ವಿಕತ್ಥಂತೇ ದರ್ಶಯಂತ್ಯೇವ ಪೌರುಷಮ್ ।
ನ ಗೃಹ್ಣೀಮೋ ವಚೋ ರಾಜನ್ನಾತುರಸ್ಯ ಮುಮೂರ್ಷತಃ
॥ ೨೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಜರಾಸಂಧನೇ ! ಶೂರರಾದವರು ನಿನ್ನಂತೆ ಯಾರೂ ಜಂಬ ಕೊಚ್ಚಿಕೊಳ್ಳುವುದಿಲ್ಲ. ಪರಾಕ್ರಮವನ್ನೇ ತೋರುತ್ತಾರೆ. ಸಾಯಲು ಹೊರಟಿರುವ ಸನ್ನಿಪಾತದ ರೋಗಿಯು ಗಳಹುತ್ತಿರುವಂತೆ ನಿನ್ನ ಮಾತುಗಳನ್ನು ನಾನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ॥ ೨೦ ॥

ಶ್ರೀಶುಕ ಉವಾಚ

ಜರಾಸುತಸ್ತಾವಭಿಸೃತ್ಯ ಮಾಧವೌ
ಮಹಾಬಲೌಘೇನ ಬಲೀಯಸಾऽऽವೃಣೋತ್ ।
ಸಸೈನ್ಯಯಾನಧ್ವಜವಾಜಿಸಾರಥೀ
ಸೂರ್ಯಾನಲೌ ವಾಯುರಿವಾಭ್ರರೇಣುಭಿಃ ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ವಾಯುವು ಮೋಡಗಳಿಂದ ಸೂರ್ಯನನ್ನು, ಅಗ್ನಿಯನ್ನು ಧೂಳಿನಿಂದಲೂ ಮುಚ್ಚಿಬಿಡುವಂತೆ ಜರೆಯ ಮಗನಾದ ಜರಾಸಂಧನು ಬಲರಾಮ-ಶ್ರೀಕೃಷ್ಣರನ್ನು ಬಲಿಷ್ಠವಾದ ಮಹಾಸೈನ್ಯದಿಂದ ಸುತ್ತುವರಿದು ಮುತ್ತಿಗೆ ಹಾಕಿದನು. ಇದರಿಂದ ಅವರ ಸೈನ್ಯ, ರಥ, ಧ್ವಜ, ಸಾರಥಿ, ಕುದುರೆಗಳು ಕಾಣದಾದರು. ॥ ೨೧ ॥ ಯುದ್ಧವನ್ನು ನೋಡಲು ಹೆಬ್ಬಾಲುಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ ನಿಂತಿದ್ದ ಮಥುರಾನಗರದ ಸ್ತ್ರೀಯರು ಗರುಡ-ತಾಲಧ್ವಜಗಳನ್ನು ಹೊಂದಿದ್ದ ಶ್ರೀಕೃಷ್ಣ-ಬಲರಾಮರ ರಥಗಳನ್ನು ಕಾಣದೆ ಶೋಕಾಭಿಭೂತರಾಗಿ ಮೂರ್ಛೆ ಹೊಂದಿದರು. ॥ ೨೨॥ ಶತ್ರುಸೈನ್ಯಗಳೆಂಬ ಮೇಘಗಳ ಮೂಲಕ ಬಾಣಗಳೆಂಬ ಅತಿವೃಷ್ಟಿಯಿಂದ ಪೀಡಿತವಾದ ತನ್ನ ಕಡೆಯ ಸೈನ್ಯವನ್ನು ನೋಡಿ ಶ್ರೀಹರಿಯು ದೇವಾಸುರರಿಂದ ಅರ್ಚಿಸಲ್ಪಡುತ್ತಿದ್ದ ಶಾರ್ಙ್ಗಧನುಸ್ಸನ್ನು ಟಂಕಾರ ಮಾಡಿದನು.॥ ೨೩. ॥ ಬಳಿಕ ಶ್ರೀಕೃಷ್ಣನು ಬತ್ತಳಿಕೆಯಿಂದ ತೀಕ್ಷ್ಣವಾದ ಬಾಣಗಳನ್ನು ತೆಗೆದು, ಧನುಸ್ಸಿಗೆ ಹೂಡಿ, ನಾಣನ್ನು ಆಕರ್ಣಾಂತವಾಗಿ ಸೆಳೆದು ಪುಂಖಾನು-ಪುಂಖವಾಗಿ ಪ್ರಯೋಗಿಸಿ, ಜರಾಸಂಧನ ಚತುರಂಗ ಸೈನ್ಯವನ್ನು ಸಂಹರಿಸುತ್ತಿದ್ದನು. ಆ ಸಮಯದಲ್ಲಿ ಅವನ ಧನಸ್ಸು ನಿರಂತರವಾಗಿ ತಿರುಗುವ ಕೊಳ್ಳಿಯ ಚಕ್ರದಂತೆ ಕಾಣುತ್ತಿತ್ತು.॥ ೨೪॥ ಸತತವಾದ ಬಾಣಗಳ ಪ್ರಹಾರದಿಂದ ಅನೇಕ ಆನೆಗಳ ಶಿರಸ್ಸುಗಳು ಕತ್ತರಿಸಲ್ಪಟ್ಟು ಸತ್ತು ಬೀಳುತ್ತಿದ್ದವು. ಬಾಣಗಳ ಮಳೆಯಿಂದ ಅನೇಕ ಕುದುರೆಗಳ ತಲೆಗಳು ತುಂಡಾಗಿ ಬೀಳುತ್ತಿದ್ದವು. ಕುದುರೆಗಳೂ, ಧ್ವಜಗಳೂ ಸಾರಥಿಗಳೂ, ರಥಿಕರೂ ಹತರಾಗಿ ಹೋಗುತ್ತಿದ್ದರು. ಪದಾತಿಗಳು ಶ್ರೀಕೃಷ್ಣನ ಚೂಪಾದ ಬಾಣಗಳಿಂದ ಕತ್ತರಿಸಲ್ಪಟ್ಟ ತೋಳು, ತೊಡೆ, ಕುತ್ತಿಗೆಗಳಿಂದ ಆಸನೀಗಿ ಕೆಳಕ್ಕೆ ಬೀಳುತ್ತಿದ್ದರು. ॥ ೨೫ ॥ ಶ್ರೀಕೃಷ್ಣನು ಪ್ರಯೋಗಿಸುತ್ತಿದ್ದ ಬಾಣಗಳಿಂದ ಕತ್ತರಿಸಲ್ಪಟ್ಟ ಪದಾತಿಗಳ, ಕುದುರೆ-ಆನೆಗಳ ಶರೀರದಿಂದ ರಕ್ತವು ಧಾರಾಕಾರವಾಗಿ ಹರಿದು ಆದರಿಂದ ನೂರಾರು ರುಧಿರನದಿಗಳು ಹುಟ್ಟಿಕೊಂಡು ಹರಿಯತೊಡಗಿದವು. ಭಯಂಕರವಾಗಿ ಕಾಣುತ್ತಿದ್ದ ಆ ರಣನದಿಗಳಲ್ಲಿ ಸೈನಿಕರ ತೋಳುಗಳು ನೀರುಹಾವುಗಳಂತೆ ಕಾಣುತ್ತಿದ್ದವು. ಸೈನಿಕರ ತಲೆಗಳು ಆಮೆಗಳಂತಿದ್ದವು. ಸತ್ತು ಬಿದ್ದಿದ್ದ ಮಹಾಗಜಗಳ ಶರೀರಗಳೇ ಆ ರಕ್ತನದಿಯ ದ್ವೀಪಗಳು. ಕುದುರೆಗಳು ಮೊಸಳೆಯಂತಿದ್ದರೆ, ಸೈನಿಕರ ಕತ್ತರಿಸಿ ಬಿದ್ದಿದ್ದ ಕೈ-ಕಾಲುಗಳು ಅದರಲ್ಲಿನ ಮೀನುಗಳಂತೆ ಕಾಣುತ್ತಿದ್ದವು. ಸೈನಿಕರ ತಲೆಕೂದಲುಗಳು ಆ ನದಿಯ ಪಾಚಿಯಂತಿದ್ದರೆ, ತುಂಡು ತುಂಡಾಗಿ ಬಿದ್ದಿದ್ದ ಧನಸ್ಸುಗಳೇ ನದಿಯ ಅಲೆಗಳಂತೆ ಕಾಣುತ್ತಿದ್ದವು. ರಾಶಿ-ರಾಶಿಯಾಗಿ ಬಿದ್ದಿದ್ದ ಆಯುಧಗಳು ನದಿಯ ದಡದಲ್ಲಿರುವ ಪೊದೆಗಳಂತಿದ್ದರೆ, ಗುರಾಣಿಗಳು ರಕ್ತನದಿಯ

ಹರಿಃ ಪರಾನೀಕಪಯೋಮುಚಾಂ ಮುಹುಃ
ಶಿಲೀಮುಖಾತ್ಯುಲ್ಬಣವರ್ಷಪೀಡಿತಮ್ ।
ಸ್ವಸೈನ್ಯಮಾಲೋಕ್ಯ ಸುರಾಸುರಾರ್ಚಿತಂ
ವ್ಯಸೂರ್ಜಯಚ್ಛಾರ್ಙ್ಗಶರಾಸನೋತ್ತಮಮ್ ॥ ೨೩ ॥

ಗೃಹ್ಣನ್ ನಿಷಂಗಾದಥ ಸಂದಧಚ್ಛರಾನ್
ಏಕೃಷ್ಯ ಮುಂಚನ್ಶಿತಬಾಣಪೂಗಾನ್ ।
ನಿಘ್ನನ್ ರಥಾನ್ ಕುಂಜರವಾಜಿಪತ್ತೀನ್
ನಿರಂತರಂ ಯದ್ವದಲಾತಚಕ್ರಮ್ ॥ ೨೪ ॥

ನಿರ್ಭಿನ್ನಕುಂಭಾಃ ಕರಿಣೋ ನಿಪೇತು-
ರನೇಕಶೋऽಶ್ವಾ ಶರವೃಣ್ಣಕಂಧರಾಃ ।
ತಥಾ ಹತಾಶ್ವಧ್ವಜಸೂತನಾಯಕಾಃ
ಪದಾತಯಶ್ಚಿನ್ನಭುಜೋರುಕಂಧರಾಃ ॥ ೨೫ ॥

ಸಂಛಿದ್ಯಮಾನದ್ವಿಪದೇಭವಾಜಿನಾ-
ಮಂಗಪ್ರಸೂತಾಃ ಶತಶೋऽಸೃಗಾಪಗಾಃ ।
ಭುಜಾಹಯಃ ಪೂರುಷಶೀರ್ಷಕಚ್ಛಪಾ
ಹತದ್ವಿಪದ್ವೀಪಹಯಗ್ರಹಾಕುಲಾಃ ॥ ೨೬ ॥

ಕರೋರುಮೀನಾ ನರಕೇಶಶೈವಲಾ
ಧನುಸ್ತರಂಗಾಯುಧಗುಲ್ಮಸಂಕುಲಾಃ ।
ಅಚ್ಛೂರಿಕಾವರ್ತಭಯಾನಕಾ ಮಹಾ-
ಮಣಿಪ್ರವೇಕಾಭರಣಾಶ್ಮಶರ್ಕರಾಃ ॥ ೨೭ ॥

ಪ್ರವರ್ತಿತಾ ಭೀರುಭಯಾವಹಾ ಮೃಧೇ
ಮನಸ್ವಿನಾಂ ಹರ್ಷಕರೀಃ ಪರಸ್ಪರಮ್ ।
ವಿನಿಘ್ನತಾರೀನ್ ಮುಸಲೇನ ದುರ್ಮದಾನ್
ಸಂಕರ್ಷಣೇನಾಪರಿಮೇಯತೇಜಸಾ ॥ ೨೮ ॥

ಬಲಂ ತದಂಗಾರ್ಣವದುರ್ಗಭೈರವಂ
ದುರಂತಪಾರಂ ಮಗಧೇಂದ್ರಪಾಲಿತಮ್ ।
ಕ್ಷಯಂ ಪ್ರಣೀತಂ ವಸುದೇವಪುತ್ರಯೋ-
ರ್ವಿಕ್ರೀಡಿತಂ ತಜ್ಜಗದೀಶಯೋಃ ಪರಮ್ ॥ ೨೯ ॥

ಸ್ಥಿತ್ಯುದ್ಭವಾಂತಂ ಭುವನತ್ರಯಸ್ಯ ಯಃ
ಸಮೀಹತೇऽನಂತಗುಣಃ ಸ್ವಲೀಲಯಾ ।
ನ ತಸ್ಯ ಚಿತ್ರಂ ಪರಪಕ್ಷನಿಗ್ರಹಃ
ತಥಾಪಿ ಮರ್ತ್ಯಾನುವಿಧಸ್ಯ ವರ್ಣ್ಯತೇ ॥ ೩೦ ॥

ಜಗ್ರಾಹ ವಿರಥಂ ರಾಮೋ ಜರಾಸಂಧಂ ಮಹಾಬಲಮ್ ।
ಹತಾನೀಕಾವಶಿಷ್ಟಾಸುಂ ಸಿಂಹಃ ಸಿಂಹಮಿವೌಜಸಾ ॥ ೩೧ ॥

ಬಧ್ಯಮಾನಂ ಹತಾರಾತಿಂ ಪಾಶೈರ್ವಾರುಣಮಾನುಷೈಃ ।
ವಾರಯಾಮಾಸ ಗೋವಿಂದಸ್ತೇನ ಕಾರ್ಯಚಿಕೀರ್ಷಯಾ ॥ ೩೨ ॥

ಸ ಮುಕ್ತೋ ಲೋಕನಾಥಾಭ್ಯಾಂ ವ್ರೀಡಿತೋ ವೀರಸಮ್ಮತಃ ।
ತಪಸೇ ಕೃತಸಂಕಲ್ಪೋ ವಾರಿತಃ ಪಥಿ ರಾಜಭಿಃ ॥ ೩೩ ॥

ವಾಕ್ಯೈಃ ಪವಿತ್ರಾರ್ಥಪದೈರ್ನಯನೈಃ ಪ್ರಾಕೃತೈರಪಿ ।
ಸ್ವಕರ್ಮಬಂಧಪ್ರಾಪ್ತೋऽಯಂ ಯದುಭಿಸ್ತೇ ಪರಾಭವಃ ॥ ೩೪ ॥

ಸುಳಿಗಳಂತೆ ಕಾಣುತ್ತಿದ್ದವು. ಬಹುಮೂಲ್ಯ ಮಣಿಗಳೂ, ಆಭೂಷಣಗಳೂ ನದಿಯಲ್ಲಿದ್ದ ಬಂಡೆಗಳಂತೆಯೂ, ಮರಳಿನಂತೆಯೂ ಇದ್ದವು. ॥ ೨೬-೨೭ ॥ ಊಹಿಸಲು ಅಸಾಧ್ಯವಾದ ಶಕ್ತಿ ಪರಾಕ್ರಮಗಳಿಂದ ಕೂಡಿದ್ದ ಬಲರಾಮನು ದುರ್ಮದರಾದ ಜರಾಸಂಧನ ಸೈನಿಕರನ್ನು ಮುಸಲಾಯುಧದಿಂದ ಸಂಹರಿಸುತ್ತಾ ಹೇಡಿಗಳಿಗೆ ಭಯವನ್ನೂ, ವೀರರಿಗೆ ಸಂತೋಷವನ್ನು ಉಂಟು ಮಾಡುವ ಅಂತಹ ನೂರಾರು ನದಿಗಳನ್ನು ರಣರಂಗದಲ್ಲಿ ಹರಿಸಿಬಿಟ್ಟನು. ॥ ೨೮ ॥ ಪರೀಕ್ಷಿತನೇ! ಜರಾಸಂಧನ ಆ ಸೈನ್ಯವು ಸಮುದ್ರದಂತೆ ಅತಿದುರ್ಗಮವಾಗಿತ್ತು. ಭಯಂಕರವಾಗಿತ್ತು. ಸಾಮಾನ್ಯರಿಂದ ಜಯಿಸಲು ಅಸಾಧ್ಯವಾಗಿತ್ತು. ಆದರೆ ಜಗದೀಶ್ವರರಾದ ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮನು ಅತ್ಯಂತ ಪ್ರಬಲವಾದ ಆ ಸೈನ್ಯವನ್ನು ನಾಶಮಾಡಿಬಿಟ್ಟರು. ಅವರಿಗೆ ಇದೊಂದು ಆಟವೇ ಆಗಿತ್ತು. ॥ ೨೯ ॥ ರಾಜೇಂದ್ರ! ಭಗವಂತನು ಅನಂತವಾದ ಗುಣಗಳುಳ್ಳವನು. ಮಹಾ-ಮಹಿಮನಾದ ಅವನು ಆಡುತ್ತಾಡುತ್ತಲೇ ಮೂರು ಲೋಕಗಳ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಾನೆ. ಅಂತಹವನಿಗೆ ಈ ಶತ್ರುಪಕ್ಷದ ವಿಜಯವು ಹೆಚ್ಚಿನ ದೇನಲ್ಲ. ಆದರೂ ಮನುಷ್ಯನಾಗಿ ಅವತರಿಸಿದಾಗ, ಮನುಷ್ಯರಂತೆ ಲೀಲೆಯನ್ನು ತೋರಿದಾಗ ಅವುಗಳೂ ಯಥಾವತ್ತಾಗಿ ವರ್ಣಿಸಲ್ಪಡುತ್ತವೆ. ॥ ೩೦ ॥

ಹೀಗೆ ಜರಾಸಂಧನ ಸೈನ್ಯವೆಲ್ಲವೂ ನಿರ್ನಾಮವಾಗಿ ಹೋಯಿತು. ರಥವೂ ಮುರಿದು ಹೋಯಿತು. ಶರೀರದಲ್ಲಿ ಪ್ರಾಣಮಾತ್ರ ಉಳಿದಿತ್ತು. ಆಗ ಭಗವಾನ್ ಬಲರಾಮನು ಒಂದು ಸಿಂಹವು ಮತ್ತೊಂದು ಸಿಂಹವನ್ನು ಹಿಡಿಯುವಂತೆ ಜರಾಸಂಧನನ್ನು ಬಲಪೂರ್ವಕವಾಗಿ ಹಿಡಿದುಕೊಂಡನು. ॥ ೩೧ ॥ ಹಲವಾರು ಶತ್ರುಗಳನ್ನು ಸಂಹರಿಸಿದ್ದ ಜರಾಸಂಧನನ್ನು ಮಾನುಷ ಪಾಶದಿಂದಲೂ, ವರುಣಪಾಶಗಳಿಂದಲೂ ಬಂಧಿಸುತ್ತಿದ್ದನು. ಇವನನ್ನು ಬಿಟ್ಟುಬಿಟ್ಟರೆ ಇನ್ನೂ ಅನೇಕ ಸೈನ್ಯವನ್ನು ಜೊತೆ ಸೇರಿಸಿಕೊಂಡು ಬರುವನು. ಆಗ ಭೂಭಾರಹರಣದ ಕಾರ್ಯವು ಸುಲಭವಾದೀತೆಂದು ಭಗವಾನ್ ಶ್ರೀಕೃಷ್ಣನು ಯೋಚಿಸಿ ಬಲರಾಮನಿಗೆ ಜರಾಸಂಧನನ್ನು ಬಂಧಿಸದಂತೆ ತಡೆದನು. ॥ ೩೨ ॥ ದೊಡ್ಡ-ದೊಡ್ಡ ಪರಾಕ್ರಮಶಾಲಿಗಳೂ ಜರಾಸಂಧನನ್ನು ಸಮ್ಮಾನಿಸುತ್ತಿದ್ದರು. ಬಲರಾಮ-ಕೃಷ್ಣರು ತನ್ನ ಮೇಲೆ ದಯತೋರಿ ದೀನನಂತೆ ಬಿಟ್ಟು ಬಿಟ್ಟರು. ಇದರಿಂದ ಅವನಿಗೆ ಅತಿಯಾದ ನಾಚಿಕೆ ಯಾಯಿತು. ಆಗ ಅವನು ಯಾರಿಗೂ ಮುಖತೋರದೆ ತಪಸ್ಸಿಗೆ ಹೋಗಲು ನಿಶ್ಚಯಿಸಿದನು. ಆದರೆ ದಾರಿಯಲ್ಲಿ ಅವನ ಸಂಗಡಿಗರಾದ ರಾಜರು ಅನೇಕ ವಿಧದಿಂದ ಸಮಾಧಾನ ಗೊಳಿಸುತ್ತಾ - ರಾಜನೇ! ಅಲ್ಪಬಲರಾದ ಯಾದವರೆಲ್ಲಿ? ಮಹಾಬಲಶಾಲಿಯಾದ ನೀನೆಲ್ಲಿ? ಅವರು ನಿನ್ನನ್ನು ಖಂಡಿತವಾಗಿ ಸೋಲಿಸಲಾರರು. ನಿನಗೆ ಪ್ರಾರಬ್ಧವಶದಿಂದ ಈ ಸೋಲು ಉಂಟಾಗಿದೆ. ಇದು ದೈವೇಚ್ಛೆಯೇ ಹೊರತು ಬೇರೇನಿಲ್ಲ. ಅವರು ಪುನಃ ವಿಜಯವನ್ನು ಸಂಪಾದಿಸುವ ಆಸೆಯನ್ನು ತೋರಿಸಿ, ಲೌಕಿಕವಾದ ದೃಷ್ಟಾಂತಗಳನ್ನೂ, ಯುಕ್ತಿಗಳನ್ನೂ ಮುಂದಿಟ್ಟು ಅವನು ತಪಸ್ಸಿಗೆ ಹೋಗಬಾರದೆಂದು ಜರಾಸಂಧನನ್ನು ತಡೆದರು.॥೩೩-೩೪॥

ಹತೇಷು ಸರ್ವಾನೀಕೇಷು ನೃಪೋ ಬಾರ್ಹದ್ರಥಸ್ತದಾ ।
ಉಪೇಕ್ಷಿತೋ ಭಗವತಾ ಮಗಧಾನ್ ದುರ್ಮನಾ ಯಯೌ
॥ ೩೫ ॥

ಮುಕುಂದೋಽಪ್ಯಕ್ಷತಬಲೋ ನಿಸ್ತೀರ್ಣಾರಿಬಲಾರ್ಣವಃ ।
ವಿಕೀರ್ಯಮಾಣಃ ಕುಸುಮೈಸ್ತ್ರಿದಶೈರನುಮೋದಿತಃ
॥ ೩೬ ॥

ಮಾಥುರೈರುಪಸಂಗಮ್ಯ ವಿಜ್ವರೈರ್ಮುದಿತಾತ್ಮಭಿಃ ।
ಉಪಗೀಯಮಾನವಿಜಯಃ ಸೂತಮಾಗಧವಂದಿಭಿಃ
॥ ೩೭ ॥

ಶಂಖದುಂದುಭಯೋ ನೇದುರ್ಭೇರೀತೂರ್ಯಾಣ್ಯನೇಕಶಃ ।
ವೀಣಾವೇಣುಮೃದಂಗಾನಿ ಪುರಂ ಪ್ರವಿಶತಿ ಪ್ರಭೌ
॥ ೩೮ ॥

ಸಿಕ್ತಮಾರ್ಗಾಂ ಹೃಷ್ಟಜನಾಂ ಪತಾಕಾಭಿರಲಂಕೃತಾಮ್ ।
ನಿರ್ಘುಷ್ಟಾಂ ಬ್ರಹ್ಮಘೋಷೇಣ ಕೌತುಕಾಬದ್ಧತೋರಣಾಮ್
॥ ೩೯ ॥

ನಿಚೀಯಮಾನೋ ನಾರೀಭಿರ್ಮಾಲ್ಯದಧ್ಯಕ್ಷತಾಂಕುರೈಃ ।
ನಿರೀಕ್ಷ್ಯಮಾಣಃ ಸಸ್ನೇಹಂ ಪ್ರೀತ್ಯುತ್ಕಲಿತಲೋಚನೈಃ
॥ ೪೦ ॥

ಆಯೋಧನಗತಂ ವಿತ್ತಮನಂತಂ ವೀರಭೂಷಣಮ್ ।
ಯದುರಾಜಾಯ ತತ್ ಸರ್ವಮಾಹೃತಂ ಪ್ರಾದಿಶತ್ಪ್ರಭುಃ
॥ ೪೧ ॥

ಏವಂ ಸಪ್ತದಶಕೃತ್ವಸ್ತಾವತ್ಯಕ್ಷೌಹಿಣೀಬಲಃ ।
ಯುಯುಧೇ ಮಾಗಧೋ ರಾಜಾ ಯದುಭಿಃ ಕೃಷ್ಣಪಾಲಿತೈಃ
॥ ೪೨ ॥

ಅಕ್ಷಿಣ್ವಂಸ್ತದ್ಬಲಂ ಸರ್ವಂ ವೃಷ್ಣಯಃ ಕೃಷ್ಣತೇಜಸಾ ।
ಹತೇಷು ಸ್ವೇಷ್ವನೀಕೇಷು ತ್ಯಕ್ತೋಽಯಾದರಿಭಿರ್ನೃಪಃ
॥ ೪೩ ॥

ಅಷ್ಟಾದಶಮಸಂಗ್ರಾಮೇ ಆಗಾಮಿನಿ ತದಂತರಾ ।
ನಾರದಪ್ರೇಷಿತೋ ವೀರೋ ಯವನಃ ಪ್ರತ್ಯದೃಶ್ಯತ
॥ ೪೪ ॥

ಪರೀಕ್ಷಿತನೇ ! ಆಗ ಜರಾಸಂಧನ ಎಲ್ಲ ಸೈನ್ಯವೂ ಸತ್ತುಹೋಗಿತ್ತು. ಭಗವಾನ್ ಬಲರಾಮನು ಅವನನ್ನು ಉಪೇಕ್ಷೆಯಿಂದಲೆ ಬಿಟ್ಟು ಬಿಟ್ಟನು. ಇದರಿಂದ ಅವನು ಬಹಳ ದುಃಖಿತನಾಗಿಯೇ ಮಗಧ ದೇಶಕ್ಕೆ ಮರಳಿದನು. ॥ ೩೫ ॥

ಪರೀಕ್ಷಿದ್ರಾಜನೇ! ಭಗವಾನ್ ಶ್ರೀಕೃಷ್ಣನ ಅಲ್ಪವಾದ ಸೈನ್ಯದಲ್ಲಿ ಯಾರ ಕೂದಲೂ ಕೊಂಕಲಿಲ್ಲ. ಜರಾಸಂಧನ ಸಮುದ್ರದಂತೆ ಇದ್ದ ಇಪ್ಪತ್ತಮೂರು ಅಕ್ಷೌಹಿಣೀ ಸೇನೆಯ ಮೇಲೆ ಸಹಜವಾಗಿ ವಿಜಯವನ್ನು ಪಡೆದರು. ಆಗ ದೇವತೆಗಳೂ ವಿಜಯಿಯಾದ ಶ್ರೀಕೃಷ್ಣನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿ ಅವನ ಕಾರ್ಯವನ್ನು ಅನುಮೋದಿಸಿದರು. ॥ ೩೬ ॥ ಜರಾಸಂಧನ ಪರಾಜಯದಿಂದ ಮಥುರಾನಿವಾಸಿಗಳು ಭಯರಹಿತರಾಗಿದ್ದರು ಹಾಗೂ ಶ್ರೀಕೃಷ್ಣನ ವಿಜಯದಿಂದ ಅವರ ಹೃದಯ ಆನಂದದಿಂದ ತುಂಬಿಹೋಗಿತ್ತು. ಶ್ರೀಕೃಷ್ಣನು ಬಂದು ಅವರೊಡನೆ ಸೇರಿಕೊಂಡಾಗ ಸೂತ, ಮಾಗಧ, ವಂದೀ ಜನರು ಅವನ ವಿಜಯೋತ್ಸವದ ವೀರಗೀತೆಗಳನ್ನು ಹಾಡುತ್ತಿದ್ದರು. ॥ ೩೭ ॥ ಭಗವಾನ್ ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದಾಗ ಅಲ್ಲಿ ಶಂಖ, ಭೇರಿ, ದುಂದುಭಿ, ವೀಣೆ, ವೇಣು, ಮೃದಂಗವೇ ಮೊದಲಾದ ಮಂಗಳ ವಾದ್ಯಗಳು ಮೊಳಗುತ್ತಿದ್ದವು. ॥ ೩೮ ॥ ಮಥುರೆಯ ಪ್ರತಿಯೊಂದು ಬೀದಿಯನ್ನೂ ಗುಡಿಸಿ-ಸಾರಿಸಿದ್ದರು. ಎಲ್ಲೆಲ್ಲೂ ಅತ್ಯುತ್ಸಾಹದಿಂದ ಪ್ರಜಾಜನರು ಓಡಾಡುತ್ತಿದ್ದರು. ಇಡೀ ನಗರವು ಸಣ್ಣ-ಸಣ್ಣ ಬಾವುಟಗಳಿಂದಲೂ, ದೊಡ್ಡ-ದೊಡ್ಡ ವಿಜಯ ಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಬ್ರಾಹ್ಮಣರ ವೇದ ಧ್ವನಿಗಳು ನಿನಾದಿತವಾಗುತ್ತಿದ್ದವು. ಆನಂದೋತ್ಸವದ ಸೂಚಕವಾಗಿ ಎಲ್ಲೆಡೆ ತೋರಣಗಳನ್ನು ಕಟ್ಟಿದ್ದರು. ॥ ೩೯ ॥ ಶ್ರೀಕೃಷ್ಣನು ನಗರವನ್ನು ಪ್ರವೇಶಿಸುತ್ತಿರುವಾಗ ನಗರದ ನಾರಿಯರು ಪ್ರೇಮೋತ್ಕಂಠಿತೆಯರಾಗಿ, ಸ್ನೇಹಪೂರ್ವಕವಾದ ಕಣ್ಣುಗಳಿಂದ ಅವನನ್ನು ದಿಟ್ಟಿಸುತ್ತಾ, ಹೂವಿನ ಹಾರಗಳನ್ನು, ಮೊಸರು ಬೆರೆಸಿದ ಅಕ್ಷತೆಗಳನ್ನು, ಧಾನ್ಯದ ಮೊಳಕೆಗಳನ್ನು ಶ್ರೀಕೃಷ್ಣನ ಮೇಲೆ ಎರಚುತ್ತಿದ್ದರು. ॥ ೪೦ ॥ ಭಗವಾನ್ ಶ್ರೀಕೃಷ್ಣನು ರಣಭೂಮಿಯಿಂದ ಅಪಾರ ಧನವನ್ನು ಮತ್ತು ವೀರರ ಆಭೂಷಣಗಳನ್ನು ತಂದಿದ್ದನು. ಅದೆಲ್ಲವನ್ನೂ ಯದುವಂಶೀಯ ರಾಜನಾದ ಉಗ್ರಸೇನನಿಗೆ ಒಪ್ಪಿಸಿದನು. ॥ ೪೧ ॥

ಪರೀಕ್ಷಿತನೇ ! ಹೀಗೆ ಮಗಧರಾಜ ಜರಾಸಂಧನು ಹದಿನೇಳು ಬಾರಿ ಇಪ್ಪತ್ತಮೂರು-ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯವನ್ನು ಸೇರಿಸಿ ಭಗವಾನ್ ಶ್ರೀಕೃಷ್ಣನಿಂದ ರಕ್ಷಿತವಾದ ಯದುವಂಶೀಯರೊಡನೆ ಯುದ್ಧಮಾಡಿದನು. ॥ ೪೨ ॥ ಆದರೆ ಯಾದವರು ಶ್ರೀಕೃಷ್ಣನ ಶಕ್ತಿಯಿಂದ ಪ್ರತಿಬಾರಿಯೂ ಅವನ ಸೈನ್ಯವನ್ನು ನಾಶಮಾಡಿದರು. ಸೈನ್ಯವೆಲ್ಲವೂ ನಾಶವಾದಾಗ ಯದುವಂಶೀಯರು ಉಪೇಕ್ಷೆಯಿಂದ ಬಿಟ್ಟುಬಿಟ್ಟಾಗ ಜರಾಸಂಧನು ತನ್ನ ರಾಜಧಾನಿಗೆ ಮರಳುತ್ತಿದ್ದನು. ॥ ೪೩ ॥ ಮಾಗಧನು ಹದಿನೆಂಟನೆಯ ಬಾರಿಯೂ ಸಂಗ್ರಾಮದ ಸಿದ್ಧತೆ ಮಾಡಿಕೊಂಡಾಗಲೇ ನಾರದರಿಂದ ಕಳುಹಲ್ಪಟ್ಟ ವೀರಕಾಲಯವನು ಕಾಣಿಸಿಕೊಂಡನು ॥ ೪೪ ॥

ರುರೋಧ ಮಥುರಾಮೇತ್ಯ ತಿಸೃಭಿರ್ಮ್ಲೇಚ್ಛಕೋಟಿಭಿಃ ।
ನೃಲೋಕೇ ಚಾಪ್ರತಿದ್ವಂದ್ವೋ ವೃಷ್ಣೀನ್ ಶ್ರುತ್ವಾऽऽತ್ಮಸಂಮಿತಾನ್
॥ ೪೫ ॥

ತಂ ದೃಷ್ಟ್ವಾ ಚಿಂತಯತ್ ಕೃಷ್ಣಃ ಸಂಕರ್ಷಣಸಹಾಯವಾನ್ ।
ಅಹೋ ಯದೂನಾಂ ವೃಜಿನಂ ಪ್ರಾಪ್ತಂ ಹ್ಯುಭಯತೋ ಮಹತ್
॥ ೪೬ ॥

ಯವನೋऽಯಂ ನಿರುಂಧೇऽಸ್ಮಾನದ್ಯ ತಾವನ್ಮಹಾಬಲಃ ।
ಮಾಗಧೋऽಪ್ಯದ್ಯ ವಾ ಶ್ವೋ ವಾ ಪರಶ್ವೋ ವಾऽऽಗಮಿಷ್ಯತಿ
॥ ೪೭ ॥

ಆವಯೋರ್ಯುಧ್ಯತೋರಸ್ಯ ಯದ್ಯಾಗಂತಾ ಜರಾಸುತಃ ।
ಬಂಧೂನ್ ವಧಿಷ್ಯತ್ಯಥವಾ ನೇಷ್ಯತೇ ಸ್ವಪುರಂ ಬಲೀ
॥ ೪೮ ॥

ತಸ್ಮಾದದ್ಯ ವಿಧಾಸ್ಯಾಮೋ ದುರ್ಗಂ ದ್ವಿಪದದುರ್ಗಮಮ್ ।
ತತ್ರ ಜ್ಞಾತೀನ್ ಸಮಾಧಾಯ ಯವನಂ ಘಾತಯಾಮಹೇ
॥ ೪೯ ॥

ಇತಿ ಸಮ್ಮಂತ್ರ್ಯ ಭಗವಾನ್ ದುರ್ಗಂ ದ್ವಾದಶಯೋಜನಮ್ ।
ಅಂತಃ ಸಮುದ್ರೇ ನಗರಂ ಕೃತ್ಸ್ನಾದ್ಭುತಮಚೀಕರತ್
॥ ೫೦ ॥

ದೃಶ್ಯತೇ ಯತ್ರ ಹಿ ತ್ವಾಷ್ಟ್ರಂ ವಿಜ್ಞಾನಂ ಶಿಲ್ಪನೈಪುಣಮ್ ।
ರಥ್ಯಾಚತ್ವರವೀಥೀಭಿರ್ಯಥಾವಾಸ್ತು ವಿನಿರ್ಮಿತಮ್
॥ ೫೧ ॥

ಸುರದ್ರುಮಲತೋದ್ಯಾನವಿಚಿತ್ರೋಪವನಾನ್ವಿತಮ್ ।
ಹೇಮಶೃಂಗೈರಿವಿಸ್ಪೃಗ್ಭಿಃ ಸ್ಫಾಟಿಕಾಟ್ಟಾಲಗೋಪುರೈಃ
॥ ೫೨ ॥

ರಾಜತಾರಕುಟೈಃ ಕೋಷ್ಣೈರ್ಹೇಮಕುಂಭೈರಲಂಕೃತೈಃ ।
ರತ್ನಕೂಟೈಃ ಗೃಹೈಃ ಹೈಮೈಃ ಮಹಾಮರಕತಸ್ಥಲೈಃ
॥ ೫೩ ॥

ವಾಸ್ತೋಷ್ಪತೀನಾಂ ಚ ಗೃಹೈರ್ವಲಭೀಭಿಶ್ಚ ನಿರ್ಮಿತಮ್ ।
ಚಾತುರ್ವರ್ಣ್ಯಜನಾಕೀರ್ಣಂ ಯದುದೇವಗೃಹೋಲ್ಲಸತ್
॥ ೫೪ ॥

ಯುದ್ಧದಲ್ಲಿ ಕಾಲಯವನ ಮುಂದೆ ನಿಲ್ಲಬಲ್ಲ ವೀರನು ಪ್ರಪಂಚದಲ್ಲೇ ಇನ್ನೊಬ್ಬನಿರಲಿಲ್ಲ. ಯದುವಂಶೀಯರು ನನ್ನಂತೆಯೇ ಬಲಶಾಲಿಗಳಾಗಿದ್ದಾರೆ ಮತ್ತು ನನ್ನೊಡನೆ ಯುದ್ಧಮಾಡಬಲ್ಲರು ಎಂದು ಕೇಳಿದಾಗ ಅವನು ಮೂರು ಕೋಟಿ ಮ್ಲೇಚ್ಛರ ಸೇನೆಯೊಂದಿಗೆ ಬಂದು ಮಥುರೆಯನ್ನು ಮುತ್ತಿದನು. ॥ ೪೫ ॥ ಕಾಲಯವನನು ಮಥುರಾ ಪಟ್ಟಣವನ್ನು ಆಕ್ರಮಿಸಿದುದನ್ನು ಕಂಡು ಸಂಕರ್ಷಣನಿಗೆ ಸಹಾಯಕನಾದ ಶ್ರೀಕೃಷ್ಣನು ಅವನೊಡನೆ ಯೋಚಿಸಿದನು – ಅಯ್ಯೋ! ಈ ಸಮಯದಲ್ಲಿ ಜರಾಸಂಧ ಮತ್ತು ಕಾಲಯವನ ಈ ಇಬ್ಬರೂ ಬಂದಿರುತ್ತಾರೆ. ಇದರಿಂದ ಯಾದವರ ಮೇಲೆ ಎರಡು ಆಪತ್ತುಗಳು ಏಕಕಾಲದಲ್ಲಿ ಸಂಭವಿಸಿವೆ. ॥ ೪೬ ॥ ಇಂದು ಕಾಲಯವನನು ಮೂರುಕೋಟಿ ಮ್ಲೇಚ್ಛಸೈನ್ಯಸಮೇತನಾಗಿ ಬಂದು ಆಕ್ರಮಿಸಿರುವನು. ಇಂದೋ ನಾಳೆಯೋ ಜರಾಸಂಧನೂ ಬರಬಹುದು. ॥ ೪೭ ॥ ನಾವಿಬ್ಬರೂ ಇವನೊಡನೆ ಯುದ್ಧದಲ್ಲಿ ತೊಡಗಿದಾಗಲೇ ಜರಾಸಂಧನು ಬಂದು ತಲುಪಿದರೆ ಮಹಾ ಬಲಿಷ್ಠನಾದ ಅವನು ನಮ್ಮ ಬಂಧುಗಳನ್ನೆಲ್ಲ ಕೊಂದು ಹಾಕಬಹುದು ಅಥವಾ ಸೆರೆಹಿಡಿದುಕೊಂಡು ತನ್ನ ನಗರಕ್ಕೆ ಕೊಂಡು ಹೋಗಬಹುದು. ॥ ೪೮ ॥ ಅದಕ್ಕಾಗಿ ಇಂದು ನಾವು ಯಾವುದೇ ಮನುಷ್ಯನಿಗೆ ಪ್ರವೇಶಿಸಲು ಅತ್ಯಂತ ಕಠಿಣವಾದ ಒಂದು ದುರ್ಗವನ್ನು ನಿರ್ಮಾಣಮಾಡೋಣ. ನಮ್ಮ ಸ್ವಜನ-ಸಂಬಂಧಿಗಳನ್ನು ಆ ಕೋಟೆಯಲ್ಲಿ ಇರಿಸಿ ಮತ್ತೆ ಈ ಕಾಲಯವನ ವಧೆ ಮಾಡಿಸೋಣ. ॥ ೪೯ ॥ ಬಲರಾಮನೊಂದಿಗೆ ಹೀಗೆ ವಿಚಾರ ವಿನಿಯಮ ಮಾಡಿ ಭಗವಾನ್ ಶ್ರೀಕೃಷ್ಣನು ಸಮುದ್ರದ ಮಧ್ಯದಲ್ಲಿ ಒಂದು ದುರ್ಗಮವಾದ ನಗರವನ್ನು ನಿರ್ಮಿಸಿದನು. ಆದರಲ್ಲಿ ಎಲ್ಲ ವಸ್ತುಗಳೂ ಅದ್ಭುತವಾಗಿದ್ದವು. ಆ ನಗರದ ಉದ್ದಗಲವು ಹನ್ನೆರಡು ಯೋಜನಗಳಷ್ಟಿತ್ತು. ॥ ೫೦ ॥ ಆ ನಗರದ ಒಂದೊಂದು ವಸ್ತುಗಳಲ್ಲೂ ವಿಶ್ವಕರ್ಮನ ವಾಸ್ತುವಿಜ್ಞಾನವು ಹಾಗೂ ಶಿಲ್ಪಕಲೆಯ ನೈಪುಣ್ಯವು ಪ್ರಕಟವಾಗಿತ್ತು. ಆದರಲ್ಲಿ ವಾಸ್ತುಶಾಸ್ತ್ರಕ್ಕನುಸಾರವಾಗಿ ದೊಡ್ಡ-ದೊಡ್ಡ ರಾಜಬೀದಿಗಳೂ, ವೃತ್ತಗಳೂ, ಇತರ ಮಾರ್ಗಗಳೂ ಯಥಾಸ್ಥಾನಗಳಲ್ಲಿ ವಿಭಾಜಿಸಲ್ಪಟ್ಟಿತ್ತು. ॥ ೫೧ ॥ ಆ ನಗರದಲ್ಲಿ ಪಾರಿಜಾತವೇ ಮೊದಲಾದ ದೇವತಾವೃಕ್ಷಗಳಿಂದಲೂ, ಲತೆಗಳಿಂದಲೂ ಸಂಪನ್ನವಾಗಿದ್ದ ಸುಂದರವಾದ ಉದ್ಯಾನವನಗಳೂ ಮತ್ತು ಚಿತ್ರ-ವಿಚಿತ್ರವಾದ ಉಪವನಗಳೂ ಇದ್ದವು. ಅಲ್ಲಿ ಆಕಾಶವನ್ನು ಮುಟ್ಟುತ್ತಿದ್ದ ಸ್ವರ್ಣಗೋಪುರಗಳಿಂದಲೂ, ಸ್ಫಟಿಕಮಯವಾದ ಉಪ್ಪರಿಗೆಗಳಿಂದಲೂ, ಬಹಿರ್ದ್ವಾರಗಳಿಂದಲೂ ಅತ್ಯಂತ ಸುಂದರವಾಗಿ ಕಾಣುತ್ತಿತ್ತು.॥೫೨॥ ಬೆಳ್ಳಿ ಮತ್ತು ಹಿತ್ತಾಳೆಗಳಿಂದ ನಿರ್ಮಿಸಿದ ಅನೇಕ ಧಾನ್ಯಭಂಡಾರಗಳಿದ್ದವು. ಕುಸುರಿ ಕೆಲಸಗಳಿಂದ ಕೂಡಿದ ಚಿನ್ನದ ಕಲಶಗಳಿಂದ ಅಲಂಕೃತವಾದ ಮಹಾ-ಮಹಾ ಸೌಧಗಳಿದ್ದು ಮರಕತಮಯವಾಗಿದ್ದ ಅದರ ನೆಲಗಳಿಂದ ಆ ದ್ವಾರಕಾ ಪಟ್ಟಣವು ಸುಂದರವಾಗಿ ಶೋಭಿಸುತ್ತಿತ್ತು. ॥ ೫೩. ॥ ಚಂದ್ರಶಾಲೆಗಳೊಡನೆ ನಿರ್ಮಿಸಿದ ವಾಸ್ತು ದೇವತೆಯ ಮಂದಿರಗಳು ನಿರ್ಮಾಣಗೊಂಡಿದ್ದವು. ಅದರಲ್ಲಿ ನಾಲ್ಕು ವರ್ಣದವರೂ ವಾಸಿಸುತ್ತಿದ್ದು ನಗರದ ಮಧ್ಯದಲ್ಲಿ ಯದುವಂಶ ಪ್ರಧಾನರಾದ ಉಗ್ರಸೇನ, ವಸುದೇವ, ಬಲರಾಮ, ಶ್ರೀಕೃಷ್ಣರೇ ಮೊದಲಾದವರ ಅರಮನೆಗಳು ಪ್ರಕಾಶಿಸುತ್ತಿದ್ದವು. ॥ ೫೪ ॥

ಸುಧರ್ಮಾಂ ಪಾರಿಜಾತಂ ಚ ಮಹೇಂದ್ರಃ ಪ್ರಾಹಿಣೋದ್ಧರೇಃ ।
ಯತ್ರ ಚಾವಸ್ಥಿತೋ ಮರ್ತ್ಯೋ ಮರ್ತ್ಯಧರ್ಮೈರ್ನ ಯುಜ್ಯತೇ
॥ ೫೫ ॥

ಶ್ಯಾಮೈಕಕರ್ಣಾನ್ ವರುಣೋ
ಹಯಾನ್ ಶುಕ್ಲಾನ್ ಮನೋಜವಾನ್ ।
ಅಷ್ಟೌ ನಿಧಿಪತಿಃ ಕೋಶಾನ್
ಲೋಕಪಾಲೋ ನಿಜೋದಯಾನ್ ॥ ೫೬ ॥

ಯದ್ಯದ್ಭಗವತಾ ದತ್ತಮಾಧಿಪತ್ಯಂ ಸ್ವಸಿದ್ಧಯೇ ।
ಸರ್ವಂ ಪ್ರತ್ಯರ್ಪಯಾಮಾಸುರ್ಹರೌ ಭೂಮಿಗತೇ ನೃಪ
॥ ೫೭ ॥

ತತ್ರ ಯೋಗಪ್ರಭಾವೇಣ ನೀತ್ವಾ ಸರ್ವಜನಂ ಹರಿಃ ।
ಪ್ರಜಾಪಾಲೇನ ರಾಮೇಣ ಕೃಷ್ಣಃ ಸಮನುಮಂತ್ರಿತಃ ।
ನಿರ್ಜಗಾಮ ಪುರದ್ವಾರಾತ್ ಪದ್ಮಮಾಲೀ ನಿರಾಯುಧಃ
॥ ೫೮ ॥

ಪರೀಕ್ಷಿತನೇ! ಆ ಸಮಯದಲ್ಲಿ ದೇವೇಂದ್ರನು ಭಗವಾನ್ ಶ್ರೀಕೃಷ್ಣನಿಗಾಗಿ ಪಾರಿಜಾತವೃಕ್ಷ ಮತ್ತು ಸುಧರ್ಮಾ ಎಂಬ ಸಭೆಯನ್ನು ಕಳುಹಿಸಿಕೊಟ್ಟನು. ಆ ದಿವ್ಯವಾದ ಸಭೆಯಲ್ಲಿ ಕುಳಿತವನಿಗೆ ಹಸಿವು-ಬಾಯಾರಿಕೆ ಮುಂತಾದ ಮರ್ತ್ಯಧರ್ಮವಿರುತ್ತಿರಲಿಲ್ಲ. ॥ ೫೫ ॥ ಒಂದು ಕಿವಿಮಾತ್ರ ಕಪ್ಪಾಗಿದ್ದು ಬಿಳಿಯ ಬಣ್ಣದಿಂದ ಪ್ರಕಾಶಿಸುತ್ತಿದ್ದ ಮನೋವೇಗಕ್ಕೆ ಸಮಾನ ವೇಗವುಳ್ಳ ಹಲವಾರು ಕುದುರೆಗಳನ್ನೂ ವರುಣನು ಕಳಿಸಿಕೊಟ್ಟನು. ಧನಪತಿಯಾದ ಕುಬೇರನು ತನ್ನ ಎಂಟು ನಿಧಿಗಳನ್ನೂ ಕಳಿಸಿಕೊಟ್ಟನು. ಲೋಕಪಾಲರೂ ಕೂಡ ತಮ್ಮ-ತಮ್ಮ ವಿಭೂತಿಗಳನ್ನು ಭಗವಂತನ ಬಳಿಗೆ ಕಳಿಸಿ ಕೊಟ್ಟರು. ॥ ೫೬ ॥ ಪರೀಕ್ಷಿತನೇ! ಸಮಸ್ತ ಲೋಕಪಾಲರಿಗೂ ಭಗವಾನ್ ಶ್ರೀಕೃಷ್ಣನು ಅವರವರ ಕಾರ್ಯವನ್ನು ನಿರ್ವಹಿಸಬೇಕಾದ ಶಕ್ತಿಗಳನ್ನೂ, ಸಿದ್ಧಿಗಳನ್ನೂ ದಯಪಾಲಿಸಿದ್ದನು. ಶ್ರೀಕೃಷ್ಣನು ಪೃಥಿವಿಯಲ್ಲಿ ಅವತರಿಸಿ, ಲೀಲೆಗಳನ್ನು ತೋರಿಸಲು ಪ್ರಾರಂಭಿಸಿದಾಗ ಲೋಕಪಾಲರೆಲ್ಲರೂ ತಮ್ಮಲ್ಲಿದ್ದ ಸಿದ್ಧಿಗಳನ್ನು ಶ್ರೀಕೃಷ್ಣನಿಗೆ ಸಮರ್ಪಿಸಿದರು. ॥ ೫೭ ॥ ಭಗವಾನ್ ಶ್ರೀಕೃಷ್ಣನು ತನ್ನ ಸಮಸ್ತ ಸ್ವಜನ ಸಂಬಂಧಿಗಳನ್ನು ತನ್ನ ಅಚಿಂತ್ಯವಾದ ಮಹಾಶಕ್ತಿಯಾದ ಯೋಗಮಾಯೆಯಿಂದ ದ್ವಾರಕೆಗೆ ಕರೆತಂದನು. ಉಳಿದ ಪ್ರಜೆಗಳ ರಕ್ಷಣೆಯನ್ನು ಬಲರಾಮನಿಗೆ ಒಪ್ಪಿಸಿ, ಅವನಿಂದ ಅನುಮತಿಯನ್ನು ಪಡೆದು ಭಗವಂತನು ಕಮಲದ ಮಾಲೆಯನ್ನು ಧರಿಸಿ ನಿರಾಯುಧನಾಗಿ ಪಟ್ಟಣದ ಮಹಾದ್ವಾರದಿಂದ ಹೊರಬಿದ್ದನು. ॥ ೫೮ ॥

ಐವತ್ತನೆಯ ಅಧ್ಯಾಯವು ಮುಗಿಯಿತು. ॥ ೫೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ದುರ್ಗನಿವೇಶನಂ ನಾಮ ಪಂಚಾಶತ್ತಮೋಽಧ್ಯಾಯಃ ॥ ೫೦ ॥

ಐವತ್ತೊಂದನೆಯ ಅಧ್ಯಾಯ

ಕಾಲಯವನನು ಭಸ್ಮವಾದುದು - ಮುಚುಕುಂದನ ಕಥೆ

ಶ್ರೀಶುಕ ಉವಾಚ

ತಂ ವಿಲೋಕ್ಯ ವಿನಿಷ್ಕ್ರಾಂತಮುಜ್ಜಿಹಾನಮಿವೋಡುಪಮ್ ।
ದರ್ಶನೀಯತಮಂ ಶ್ಯಾಮಂ ಪೀತಕೌಶೇಯವಾಸಸಮ್
॥ ೧ ॥

ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ।
ಪೃಥುದೀರ್ಘಚತುರ್ಬಾಹುಂ ನವಕಂಜಾರುಣೇಕ್ಷಣಮ್
॥ ೨ ॥

ನಿತ್ಯಪ್ರಮುದಿತಂ ಶ್ರೀಮತ್ಸುಕಪೋಲಂ ಶುಚಿಸ್ಮಿತಮ್ ।
ಮುಖಾರವಿಂದಂ ಬಿಭ್ರಾಣಂ ಸ್ಫುರನ್ಮಕರಕುಂಡಲಮ್
॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜ! ಮಥುರಾಪಟ್ಟಣದ ಮಹಾದ್ವಾರದಿಂದ ಹೊರಬಂದ ಶ್ರೀಕೃಷ್ಣನು ಆಗತಾನೆ ಉದಯಿಸಿದ ಪೂರ್ಣಚಂದ್ರನಂತೆ ಅತ್ಯಂತ ಸುಂದರವಾಗಿ ಕಾಣುತ್ತಿದ್ದನು. ಶ್ಯಾಮಲವರ್ಣನಾದ ಅವನು ದಿವ್ಯವಾದ ಪೀತಾಂಬರವನ್ನು ಉಟ್ಟಿದ್ದನು. ಅವನ ವಕ್ಷಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯಿತ್ತು. ಕೊರಳಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿತ್ತು. ಅವನಿಗೆ ದಪ್ಪವಾಗಿಯೂ, ನೀಳವಾಗಿಯೂ ಇದ್ದ ನಾಲ್ಕು ಭುಜಗಳಿದ್ದವು. ಆಗ ತಾನೇ ಅರಳಿದ ಕಮಲದಂತಹ ಕಣ್ಣುಗಳನ್ನು ಹೊಂದಿದ್ದನು. ಮುಖಕಮಲದಲ್ಲಿ ರಾಶಿ-ರಾಶಿಯಾಗಿ ಆನಂದವು ಮಿನುಗುತ್ತಿತ್ತು. ಅವನ ಮಂದ-ಮಂದ ಮುಗುಳು ನಗೆಯು ನೋಡುವವರ ಮನಸ್ಸನ್ನು ಅಪಹರಿಸುತ್ತಿತ್ತು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು ಓಲಾಡುತ್ತಿದ್ದವು. ಅವನನ್ನು ನೋಡಿದ ಕಾಲಯವನನು - ಇವನೇ ವಾಸುದೇವನೂ ಮತ್ತು ನಾರದರು

ವಾಸುದೇವೋ ಹ್ಯಯಮಿತಿ ಪುಮಾನ್ ಶ್ರೀವತ್ಸಲಾಂಛನಃ ।
ಚತುರ್ಭುಜೋಽರವಿಂದಾಕ್ಷೋ ವನಮಾಲ್ಯತಿಸುಂದರಃ
॥ ೪ ॥

ಲಕ್ಷಣೈರ್ನಾರದಪ್ರೋಕ್ತೈರ್ನಾನ್ಯೋ ಭವಿತುಮರ್ಹತಿ ।
ನಿರಾಯುಧಶ್ಚಲನ್ ಪದ್ಭ್ಯಾಂ ಯೋತ್ಸ್ಯೇಽನೇನ ನಿರಾಯುಧಃ
॥ ೫ ॥

ಇತಿ ನಿಶ್ಚಿತ್ಯ ಯವನಃ ಪ್ರಾದ್ರವಂತಂ ಪರಾಙ್ಮುಖಮ್ ।
ಅನ್ವಧಾವಜ್ಜಿಘೃಕ್ಷುಸ್ತಂ ದುರಾಪಮಪಿ ಯೋಗಿನಾಮ್
॥ ೬ ॥

ಹಸ್ತಪ್ರಾಪ್ತಮಿವಾತ್ಮಾನಂ ಹರಿಣಾ ಸ ಪದೇ ಪದೇ ।
ನೀತೋ ದರ್ಶಯತಾ ದೂರಂ ಯವನೇಶೋಽದ್ರಿಕಂದರಮ್
॥ ೭ ॥

ಪಲಾಯನಂ ಯದುಕುಲೇ ಜಾತಸ್ಯ ತವ ನೋಚಿತಮ್ ।
ಇತಿ ಕ್ಷಿಪನ್ನನುಗತೋ ನೈನಂ ಪ್ರಾಪಾಹತಾಶುಭಃ
॥ ೮ ॥

ಏವಂ ಕ್ಷಿಪ್ತೋಽಪಿ ಭಗವಾನ್ ಪ್ರಾವಿಶದ್ಗಿರಿಕಂದರಮ್ ।
ಸೋಽಪಿ ಪ್ರವಿಷ್ಟಸ್ತತ್ರಾನ್ಯಂ ಶಯಾನಂ ದದೃಶೇ ನರಮ್
॥ ೯ ॥

ನನ್ವಸೌ ದೂರಮಾನೀಯ ಶೇತೇ ಮಾಮಿಹ ಸಾಧುವತ್ ।
ಇತಿ ಮತ್ವಾಚ್ಯುತಂ ಮೂಢಸ್ತಂ ಪದಾ ಸಮತಾಡಯತ್
॥ ೧೦ ॥

ಸ ಉತ್ಥಾಯ ಚಿರಂ ಸುಪ್ತಃ ಶನೈರುನ್ಮೀಲ್ಯ ಲೋಚನೇ ।
ದಿಶೋ ವಿಲೋಕಯನ್ ಪಾರ್ಶ್ವೇ ತಮದ್ರಾಕ್ಷೀದವಸ್ಥಿತಮ್
॥ ೧೧ ॥

ಸ ತಾವತ್ತಸ್ಯ ರುಷ್ಟಸ್ಯ ದೃಷ್ಟಿಪಾತೇನ ಭಾರತ ।
ದೇಹಜೇನಾಗ್ನಿನಾ ದಗ್ಧೋ ಭಸ್ಮಸಾದಭವತ್ ಕ್ಷಣಾತ್
॥ ೧೨ ॥

ರಾಜೋವಾಚ

ಕೋ ನಾಮ ಸ ಪುಮಾನ್ ಬ್ರಹ್ಮನ್ ಕಸ್ಯ ಕಿಂವೀರ್ಯ ಏವ ಚ ।
ಕಸ್ಮಾದ್ಗುಹಾಂ ಗತಃ ಶಿಶ್ಯೇ ಕಿನ್ತೇಜೋ ಯವನಾರ್ದನಃ
॥ ೧೩ ॥

ಹೇಳಿದ್ದಂತೆ ಅವನು ಶ್ರೀವತ್ಸಲಾಂಛನನಾಗಿದ್ದನು. ಚತುರ್ಭುಜನಾಗಿದ್ದನು. ಕಮಲಾಕ್ಷನಾಗಿದ್ದನು. ವನಮಾಲಿಯಾಗಿದ್ದನು. ಕಡು ಚೆಲುವನೂ ಆಗಿದ್ದನು. ಇವನು ಶ್ರೀಕೃಷ್ಣನಲ್ಲದೆ ಬೇರೆಯವನಲ್ಲ ವೆಂದು ನಿಶ್ಚಯಿಸಿದನು. ಅವನು ಆಯುಧ ರಹಿತನಾಗಿ ಕಾಲ್ನಡಿಗೆ ಯಲ್ಲೇ ಹೋಗುತ್ತಿರುವುದರಿಂದ ತಾನೂ ನಿರಾಯುಧನಾಗಿಯೇ ಇವನೊಂದಿಗೆ ಯುದ್ಧಮಾಡುವೆನೆಂದು ಕಾಲಯವನನು ನಿಶ್ಚಯಿಸಿದನು. ॥ ೧-೫ ॥

ಹೀಗೆ ನಿಶ್ಚಯಿಸಿದ ಕಾಲಯವನನು ತನಗೆ ಬೆನ್ನತ್ತೋರಿ ಓಡಿ ಹೋಗುತ್ತಿದ್ದ, ಯೋಗಿಗಳಿಂದಲೂ ಹೊಂದಲು ಅಸಾಧ್ಯನಾಗಿದ್ದ ಶ್ರೀಕೃಷ್ಣನನ್ನು ಹಿಡಿಯಲಿಕ್ಕಾಗಿ ಅವನನ್ನು ಬೆನ್ನಟ್ಟಿಕೊಂಡು ಹೋದನು. ॥ ೬ ॥ ಶ್ರೀಕೃಷ್ಣನು ಪ್ರತಿಯೊಂದು ಹೆಜ್ಜೆಯಲ್ಲೂ ಸಿಕ್ಕಿ ಬಿದ್ದನೆಂದೇ ಕಾಲಯವನನಿಗೆ ಭಾಸವಾಗುತ್ತಿತ್ತು. ಆದರೆ ಲೀಲಾ ಮಾನುಷ ವಿಗ್ರಹನಾದ ಶ್ರೀಕೃಷ್ಣನು ಮಾತ್ರ ಅವನ ಕೈಗೆ ಸಿಗುತ್ತಿರಲಿಲ್ಲ. ಹೀಗೆ ಕಾಲಯವನನ್ನು ದೂರದ ಪರ್ವತ ಗುಹೆಯ ಬಳಿಗೆ ಕರೆದೊಯ್ದನು. ॥ ೭ ॥ ಶ್ರೀಕೃಷ್ಣನನ್ನು ಹಿಡಿದು ಬಿಡ ಬೇಕೆಂದು ಅವನ ಹಿಂದೆಯೇ ಓಡುತ್ತಿದ್ದ ಕಾಲಯವನನು ಗಟ್ಟಿ ಯಾಗಿ ಕೂಗಿ ಶ್ರೀಕೃಷ್ಣನಿಗೆ ಹೇಳಿದನು - ಶ್ರೇಷ್ಠವಾದ ಯದುವಂಶದಲ್ಲಿ ಹುಟ್ಟಿರುವ ನಿನಗೆ ಯುದ್ಧದಿಂದ ಪಲಾಯನ ಮಾಡುವುದು ಉಚಿತವಲ್ಲ. ಹೀಗೆ ಆಕ್ಷೇಪಿಸುತ್ತಾ ಮುಂದೆ-ಮುಂದೆ ಹೋಗುತ್ತಿದ್ದರೂ ಕಾಲಯವನನಿಗೆ ಪಾಪ ಶೇಷವು ಇನ್ನೂ ಇದ್ದುದರಿಂದ ಭಗವಂತನು ಅವನ ಕೈಗೆ ಸಿಗಲಿಲ್ಲ. ॥ ೮ ॥ ಹೀಗೆ ಅವನು ಆಕ್ಷೇಪಿಸುತ್ತಿದ್ದರೂ ಅದನ್ನು ಲಕ್ಷಿಸದೆ ಭಗವಂತನು ಆ ಪರ್ವತದ ಗುಹೆಯೊಳಗೆ ಹೊಕ್ಕನು. ಅವನ ಹಿಂದೆಯೇ ಕಾಲ ಯವನನೂ ಗುಹೆಯೊಳಗೆ ಹೋದನು. ಆದರೆ ಅಲ್ಲಿ ಶ್ರೀಕೃಷ್ಣನನ್ನು ಕಾಣದೆ ಬೇರೊಬ್ಬ ಪುರುಷನು ಮಲಗಿರುವುದನ್ನು ನೋಡಿದನು. ॥ ೯ ॥ ನನ್ನನ್ನು ಇಷ್ಟು ದೂರಕ್ಕೆ ಕರೆತಂದು ಸಾಧುವಿನಂತೆ ಮಾಯಾವಿಯಾದ ಕೃಷ್ಣನು ಮಲಗಿರುವನಲ್ಲ? ಹೀಗೆ ಹೇಳುತ್ತಾ ಮೂಢನಾದ ಕಾಲಯವನನು ಮಲಗಿರುವವನು ಅಚ್ಯುತನೆಂದೇ ಭಾವಿಸಿ ಕಾಲಿನಿಂದ ಅವನನ್ನು ಒದೆದನು. ॥ ೧೦ ॥ ಆ ಪುರುಷನು ಬಹಳ ದಿನಗಳಿಂದ ಅಲ್ಲೆ ಮಲಗಿದ್ದನು. ಕಾಲಿನ ಒದೆತವು ತಾಕಿ ದಾಕ್ಷಣ ಅವನು ಎಚ್ಚರಗೊಂಡು ನಿಧಾನವಾಗಿ ಕಣ್ಣುಗಳನ್ನು ಬಿಡುತ್ತಾ ಎಲ್ಲ ದಿಕ್ಕುಗಳನ್ನು ನೋಡುತ್ತಾ, ಕಡೆಗೆ ತನ್ನ ಪಕ್ಕದಲ್ಲಿಯೇ ನಿಂತಿದ್ದ ಕಾಲಯವನನ್ನು ನೋಡಿದನು. ॥ ೧೧ ॥ ಪರೀಕ್ಷಿತನೇ! ಕೋಪಿಷ್ಠನಾದ ಆ ಪುರುಷನ ದೃಷ್ಟಿಯು ಬಿದ್ದೊಡನೆಯೇ ಕಾಲಯವನು ತನ್ನ ದೇಹದಿಂದಲೇ ಹುಟ್ಟಿದ ಅಗ್ನಿಯಿಂದ ಸುಟ್ಟು ಕ್ಷಣಾರ್ಧದಲ್ಲಿ ಬೂದಿಯಾದನು. ॥ ೧೨ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ಕೇವಲ ದೃಷ್ಟಿಪಾತದಿಂದಲೇ ಕಾಲಯವನನು ಭಸ್ಮವಾಗಿ ಹೋದನಲ್ಲ ಆ ಮಹಾ ಪುರುಷನು ಯಾರು? ಯಾವ ವಂಶದವನು? ಯಾರ ಮಗನು? ಅವನಲ್ಲಿ ಅಂತಹ ಶಕ್ತಿಯು ಹೇಗಿತ್ತು? ಅವನು ಪರ್ವತದ ಗುಹೆಯಲ್ಲಿ ಹೋಗಿ ಏಕೆ ಮಲಗಿದ್ದನು? ದಯಮಾಡಿ ಇವೆಲ್ಲವನ್ನೂ ಹೇಳಿರಿ. ॥ ೧೩ ॥

ಶ್ರೀಶುಕ ಉವಾಚ

ಸ ಇಕ್ಷ್ವಾಕುಕುಲೇ ಜಾತೋ ಮಾಂಧಾತೃತನಯೋ ಮಹಾನ್ ।
ಮುಚುಕುಂದ ಇತಿ ಖ್ಯಾತೋ ಬ್ರಹ್ಮಣ್ಯಃ ಸತ್ಯಸಂಗರಃ
॥ ೧೪ ॥

ಸ ಯಾಚಿತಃ ಸುರಗಣೈರಿಂದ್ರಾದ್ಯೈರಾತ್ಮರಕ್ಷಣೇ ।
ಅಸುರೇಭ್ಯಃ ಪರಿತ್ರಸ್ತೈಸ್ತದ್ರಕ್ಷಾಂ ಸೋಽಕರೋಚ್ಚಿರಮ್
॥ ೧೫ ॥

ಲಬ್ಧ್ವಾ ಗುಹಂ ತೇ ಸ್ವಪಾಲಂ ಮುಚುಕುಂದ ಮಥಾಬ್ರುವನ್ ।
ರಾಜನ್ ವಿರಮತಾಂ ಕೃಚ್ಛ್ರಾದ್ಭವಾನ್ ನಃ ಪರಿಪಾಲನಾತ್
॥ ೧೬ ॥

ನರಲೋಕೇ ಪರಿತ್ಯಜ್ಯ ರಾಜ್ಯಂ ನಿಹತಕಂಟಕಮ್ ।
ಅಸ್ಮಾನ್ ಪಾಲಯತೋ ವೀರ ಕಾಮಾಸ್ತೇ ಸರ್ವ ಉಜ್ಝಿತಾಃ
॥ ೧೭ ॥

ಸುತಾ ಮಹಿಷ್ಯೋ ಭವತೋ ಜ್ಞಾತಯೋಽಮಾತ್ಯಮಂತ್ರಿಣಃ ।
ಪ್ರಜಾಶ್ಚ ತುಲ್ಯಕಾಲೀಯಾ ನಾಧುನಾ ಸಂತಿ ಕಾಲಿತಾಃ
॥ ೧೮ ॥

ಕಾಲೋ ಬಲೀಯಾನ್ ಬಲಿನಾಂ ಭಗವಾನೀಶ್ವರೋಽವ್ಯಯಃ ।
ಪ್ರಜಾಃ ಕಾಲಯತೇ ಕ್ರೀಡನ್ ಪಶುಪಾಲೋ ಯಥಾ ಪಶೂನ್
॥ ೧೯ ॥

ವರಂ ವೃಣೀಷ್ವ ಭದ್ರಂ ತೇ ಋತೇ ಕೈವಲ್ಯಮದ್ಯ ನಃ ।
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ
॥ ೨೦ ॥

ಏವಮುಕ್ತಃ ಸ ವೈ ದೇವಾನಭಿವಂದ್ಯ ಮಹಾಯಶಾಃ ।
ಅಶಯಿಷ್ಟ ಗುಹಾವಿಷ್ಟೋ ನಿದ್ರಯಾ ದೇವದತ್ತಯಾ
॥ ೨೧ ॥

ಸ್ವಾಪಂ ಯಾತಂ ಯಸ್ತು ಮಧ್ಯೇ ಬೋಧಯೇತ್ತ್ವಾಮಚೇತನಃ ।
ಸ ತ್ವಯಾ ದೃಷ್ಟಮಾತ್ರಸ್ತು ಭಸ್ಮೀಭವತು ತತ್ಕ್ಷಣಾತ್
॥ ೨೨ ॥

ಯವನೇ ಭಸ್ಮಸಾನ್ನೀತೇ ಭಗವಾನ್ ಸಾತ್ವತರ್ಷಭಃ ।
ಆತ್ಮಾನಂ ದರ್ಶಯಾಮಾಸ ಮುಚುಕುಂದಾಯ ಧೀಮತೇ
॥ ೨೩ ॥

ತಮಾಲೋಕ್ಯ ಘನಶ್ಯಾಮಂ ಪೀತಕೌಶೇಯವಾಸಸಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭೇನ ವಿರಾಜಿತಮ್
॥ ೨೪ ॥

ಚತುರ್ಭುಜಂ ರೋಚಮಾನಂ ವೈಜಯಂತ್ಯಾ ಚ ಮಾಲಯಾ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಮ್
॥ ೨೫ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಪರೀಕ್ಷಿತನೇ ! ಅವನು ಇಕ್ಷ್ವಾಕುವಂಶದ ಮಾಂಧಾತ ಮಹಾರಾಜನ ಪುತ್ರನಾದ ಮುಚುಕುಂದ ರಾಜನಾಗಿದ್ದನು. ಅತನು ಬ್ರಾಹ್ಮಣಪ್ರಿಯನೂ, ಸತ್ಯನಿಷ್ಠನೂ, ಸಂಗ್ರಾಮ ವಿಜಯಿಯೂ ಆಗಿದ್ದನು. ॥ ೧೪ ॥ ಇಂದ್ರಾದಿ ದೇವತೆಗಳು ಒಮ್ಮೆ ಅಸುರರಿಂದ ಭಯಗೊಂಡಿದ್ದಾಗ ಅವರು ತಮ್ಮ ರಕ್ಷಣೆಗಾಗಿ ಮುಚುಕುಂದ ರಾಜನನ್ನು ಪ್ರಾರ್ಥಿಸಿ ಕೊಂಡರು. ಅವನು ಬಹಳ ದಿನಗಳವರೆಗೆ ದೇವತೆಗಳನ್ನು ರಾಕ್ಷಸರಿಂದ ರಕ್ಷಿಸಿದನು. ॥ ೧೫ ॥ ಬಹಳ ದಿವಸಗಳ ತರುವಾಯ ದೇವತೆಗಳ ಸೇನಾಪತಿಯಾಗಿ ಕಾರ್ತಿಕೆಯನು ದೊರಕಿದಾಗ ದೇವತೆಗಳು ಮುಚುಕುಂದನಿಗೆ ಹೇಳಿದರು – ಮಹಾರಾಜಾ ! ನಮ್ಮನ್ನು ರಕ್ಷಿಸಲಿಕ್ಕಾಗಿ ನೀವು ಬಹಳ ಶ್ರಮಪಟ್ಟಿರುವಿರಿ. ಆದ್ದರಿಂದ ಈಗ ನೀವು ವಿಶ್ರಾಂತಿ ಪಡೆಯಿರಿ. ॥ ೧೬ ॥ ವೀರಶಿರೋಮಣಿಯೇ ! ನೀನು ನಮ್ಮ ರಕ್ಷಣೆಗಾಗಿ ಮರ್ತ್ಯಲೋಕದ ನಿಷ್ಕಂಟಕವಾದ ರಾಜ್ಯವನ್ನು ಜೀವನದ ಅಭಿಲಾಷೆಗಳನ್ನು, ಭೋಗಗಳನ್ನು ಪರಿತ್ಯಾಗ ಮಾಡಿರುವಿ. ॥ ೧೭ ॥ ಈಗ ನಿನ್ನ ಪುತ್ರರಾಗಲೀ, ಪತ್ನೀಯಾಗಲೀ, ಬಂಧು-ಬಾಂಧವರಾಗಲೀ, ಅಮಾತ್ಯ-ಮಂತ್ರಿಗಳಾಗಲೀ, ನೀನಿದ್ದಾಗ ಇದ್ದ ಪ್ರಜಾವರ್ಗವಾಗಲೀ ಯಾರೂ ಉಳಿಯಲಿಲ್ಲ, ಎಲ್ಲರೂ ಕಾಲವಶರಾಗಿ ಹೋಗಿದ್ದಾರೆ. ॥ ೧೮ ॥ ಕಾಲನೆಂಬುವನು ಸಮಸ್ತ ಬಲಿಷ್ಠರಿಗಿಂತಲೂ ಅತ್ಯಂತ ಬಲಿಷ್ಠನಾಗಿ ಇರುವನು. ಅವನು ಸಾಕ್ಷಾತ್ ಅವಿನಾಶಿಯಾದ ಭಗವತ್ಸ್ವರೂಪನಾಗಿರುವನು. ದನಗಾಯಿಗಳು ಹಸುಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳುವಂತೆ ಕಾಲನು ಆಡುತ್ತಾಡುತ್ತಲೇ ಸಮಸ್ತ ಪ್ರಜೆಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಾನೆ. ॥ ೧೯ ॥ ಮುಚುಕುಂದ ಮಹಾರಾಜ ! ನಿನಗೆ ಮಂಗಳವಾಗಲಿ. ಮೋಕ್ಷಪದವಿಯೊಂದನ್ನು ಇಟ್ಟು ಬೇರೆ ಯಾವುದೇ ವರವನ್ನಾದರೂ ನೀನು ನಮ್ಮಿಂದ ಕೇಳಿ ಪಡೆದುಕೋ. ಏಕೆಂದರೆ, ಕೈವಲ್ಯ ಪದವಿಯನ್ನು ದಯಪಾಲಿಸುವ ಸಾಮರ್ಥ್ಯವು ಕೇವಲ ಅವಿನಾಶಿಯಾದ ಭಗವಾನ್ ವಿಷ್ಣುವಿನಲ್ಲಿ ಇರುವುದು. ॥ ೨೦ ॥ ದೇವತೆಗಳು ಹೀಗೆ ಹೇಳಿದಾಗ ಪರಮಯಶಸ್ವಿಯಾದ ಮುಚುಕುಂದನು ಅವರಿಗೆ ವಂದಿಸಿ, ಬಹಳ ದಣಿದಿದ್ದರಿಂದ ನಿದ್ದೆಯನ್ನು ವರವಾಗಿ ಬೇಡಿಕೊಂಡನು. ಹೀಗೆ ದೇವತೆಗಳಿಂದ ವರವನ್ನು ಪಡೆದುಕೊಂಡು ನಿದ್ದೆಯಿಂದ ತುಂಬಿದವನಾಗಿ ಈ ಪರ್ವತದ ಗುಹೆಯಲ್ಲಿ ಬಂದು ಮಲಗಿದನು. ॥ ೨೧ ॥ ಆ ಸಮಯದಲ್ಲಿ ದೇವತೆಗಳು ಹೇಳಿದರು – ರಾಜನೇ ! ಮಲಗಿದ್ದಾಗ ನಿನ್ನನ್ನು ಯಾವನಾದರು ಮೂರ್ಖನು ಎಬ್ಬಿಸಿಬಿಟ್ಟರೆ, ಅವನು ನಿನ್ನ ದೃಷ್ಟಿಬೀಳುತ್ತಲೇ ಭಸ್ಮವಾಗಿ ಹೋಗುವನು. ॥ ೨೨ ॥

ಪರೀಕ್ಷಿತನೇ ! ಕಾಲಯವನನು ಭಸ್ಮವಾಗಿ ಹೋದಾಗ ಯದು ವಂಶ ಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಧೀಮಂತನಾದ ಮುಚುಕುಂದನಿಗೆ ಕಾಣಿಸಿಕೊಂಡನು. ಭಗವಾನ್ ಶ್ರೀಕೃಷ್ಣನ ಶ್ರೀವಿಗ್ರಹವು ವರ್ಷಾಕಾಲದ ಮೇಘದಂತೆ ಶ್ಯಾಮಲವಾಗಿತ್ತು. ರೇಷ್ಮೆಯ ಪೀತಾಂಬರವನ್ನು ಧರಿಸಿದ್ದನು. ವಕ್ಷಸ್ಥಳದಲ್ಲಿ ಶ್ರೀವತ್ಸವೂ, ಕೊರಳಲ್ಲಿ ಕೌಸ್ತುಭಮಣಿಯೂ ವಿರಾಜಿಸುತ್ತಿತ್ತು. ಚತುರ್ಭುಜನಾಗಿದ್ದು ವೈಜಯಂತಿಮಾಲೆಯು ಮಂಡಿಗಳವರೆಗೆ ನೇತಾಡುತ್ತಿತ್ತು. ಮುಖಕಮಲವು ಅತ್ಯಂತ ಸುಂದರವಾಗಿದ್ದು ಪ್ರಸನ್ನತೆಯಿಂದ ಅರಳಿತ್ತು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು

ಪ್ರೇಕ್ಷಣೀಯಂ ನೃಲೋಕಸ್ಯ ಸಾನುರಾಗಸ್ಮಿತೇಕ್ಷಣಮ್ ।
ಅಪೀಚ್ಯವಯಸಂ ಮತ್ತಮೃಗೇಂದ್ರೋದಾರವಿಕ್ರಮಮ್
॥ ೨೬ ॥

ಪರ್ಯಪೃಚ್ಛನ್ಮಹಾಬುದ್ಧಿಸ್ತೇಜಸಾ ತಸ್ಯ ಧರ್ಷಿತಃ ।
ಶಂಕಿತಃ ಶನಕೈ ರಾಜಾ ದುರ್ಧರ್ಷಮಿವ ತೇಜಸಾ
॥ ೨೭ ॥

ಮುಚುಕುಂದ ಉವಾಚ

ಕೋ ಭವಾನಿಹ ಸಂಪ್ರಾಪ್ತೋ ವಿಪಿನೇ ಗಿರಿಗಹ್ವರೇ ।
ಪದ್ಭ್ಯಾಂ ಪದ್ಮಪಲಾಶಾಭ್ಯಾಂ ವಿಚರಸ್ಯುರುಕಂಟಕೇ
॥ ೨೮ ॥

ಕಿಂಸ್ವಿತ್ತೇಜಸ್ವಿನಾಂ ತೇಜೋ
ಭಗವಾನ್ ವಾ ವಿಭಾವಸುಃ ।
ಸೂರ್ಯಃ ಸೋಮೋ ಮಹೇಂದ್ರೋ ವಾ
ಲೋಕಪಾಲೋಽಪರೋಽಪಿ ವಾ ॥ ೨೯ ॥

ಮನ್ಯೇ ತ್ವಾಂ ದೇವದೇವಾನಾಂ ತ್ರಯಾಣಾಂ ಪುರುಷರ್ಷಭಮ್ ।
ಯದ್ಬಾಧಸೇ ಗುಹಾಧ್ವಾಂತಂ ಪ್ರದೀಪಃ ಪ್ರಭಯಾ ಯಥಾ
॥ ೩೦ ॥

ಶುಶ್ರೂಷತಾಮವ್ಯಲೀಕಮಸ್ಮಾಕಂ ನರಪುಂಗವ ।
ಸ್ವಜನ್ಮ ಕರ್ಮ ಗೋತ್ರಂ ವಾ ಕಥ್ಯತಾಂ ಯದಿ ರೋಚತೇ
॥ ೩೧ ॥

ವಯಂ ತು ಪುರುಷವ್ಯಾಘ್ರ ಐಕ್ಷ್ವಾಕಾಃ ಕ್ಷತ್ರಬಂಧವಃ ।
ಮುಚುಕುಂದ ಇತಿ ಪ್ರೋಕ್ತೋ ಯೌವನಾಶ್ವಾತ್ಮಜಃ ಪ್ರಭೋ
॥ ೩೨ ॥

ಚಿರಪ್ರಜಾಗರಶ್ರಾಂತೋ ನಿದ್ರಯೋಪಹತೇಂದ್ರಿಯಃ ।
ಶಯೇಽಸ್ಮಿನ್ ವಿಜನೇ ಕಾಮಂ ಕೇನಾಪ್ಯುತ್ಥಾಪಿತೋಽಧುನಾ
॥ ೩೩ ॥

ಸೋಽಪಿ ಭಸ್ಮೀಕೃತೋ ನೂನಮಾತ್ಮೀಯೇನೈವ ಪಾಪ್ಮನಾ ।
ಅನಂತರಂ ಭವಾನ್ ಶ್ರೀಮಾನ್ ಲಕ್ಷಿತೋಽಮಿತ್ರಶಾತನಃ
॥ ೩೪ ॥

ತೇಜಸಾ ತೇಽವಿಷಹ್ಯೇಣ ಭೂರಿ ದ್ರಷ್ಟುಂ ನ ಶಕ್ನುಮಃ ।
ಹತೌಜಸೋ ಮಹಾಭಾಗ ಮಾನನೀಯೋಽಸಿ ದೇಹಿನಾಮ್
॥ ೩೫ ॥

ಏವಂ ಸಂಭಾಷಿತೋ ರಾಜ್ಞಾ ಭಗವಾನ್ ಭೂತಭಾವನಃ ।
ಪ್ರತ್ಯಾಹ ಪ್ರಹಸನ್ ವಾಕ್ಯಾ ಮೇಘನಾದಗಭೀರಯಾ
॥ ೩೬ ॥

ಹೊಳೆಯುತ್ತಿದ್ದವು. ತುಟಿಗಳಲ್ಲಿ ಪ್ರೇಮಪೂರ್ಣವಾದ ಮಂದ ಹಾಸವಿತ್ತು. ಕಟಾಕ್ಷವೀಕ್ಷಣೆಯಿಂದ ಅನುರಾಗದ ಮಳೆಯನ್ನೇ ಸುರಿಸುವಂತಿತ್ತು. ಅತ್ಯಂತ ದರ್ಶನೀಯವಾದ ತರುಣಾವಸ್ಥೆಯಿದ್ದು, ಮದಿಸಿದ ಸಿಂಹದಂತೆ ಗಂಭೀರವಾದ ನಡಿಗೆಯುಳ್ಳವನಾಗಿದ್ದನು. ಮುಚುಕುಂದರಾಜನು ಬಹಳ ಬುದ್ಧಿವಂತನೂ, ಧೀರನೂ ಆಗಿದ್ದರೂ ಭಗವಂತನ ಇಂತಹ ದಿವ್ಯಜ್ಯೋತಿರ್ಮಯ ಮೂರ್ತಿಯನ್ನು ನೋಡಿ ಚಕಿತನಾಗಿ ಅವನ ತೇಜಸ್ಸಿನಿಂದ ಹತ ಪ್ರಭನಾದನು. ಭಗವಂತನು ತನ್ನ ತೇಜಸ್ಸಿನಿಂದ ದುರ್ಧರ್ಷನಾಗಿ ಕಾಣುತ್ತಿದ್ದನು. ರಾಜನು ಸ್ವಲ್ಪ ಸಂಕೋಚದಿಂದಲೇ ಮೆಲ್ಲ-ಮೆಲ್ಲನೆ ಕೇಳಿದನು ॥ ೨೩-೨೭ ॥

ಮುಚುಕುಂದ ರಾಜನು ಕೇಳಿದನು – ಸ್ವಾಮಿ! ನೀನು ಯಾರು? ಕಲ್ಲು-ಮುಳ್ಳುಗಳಿಂದ ಕೂಡಿದ ಈ ಘೋರ ಅರಣ್ಯದಲ್ಲಿ ತಾವರೆಯಂತಿರುವ ಕೋಮಲ ಚರಣಗಳಿಂದ ಏಕೆ ವಿಚರಿಸುತ್ತಿರುವೆ? ಈ ಪರ್ವತದ ಗುಹೆಯೊಳಗೆ ಬರುವ ಪ್ರಯೋಜನವಾದರೂ ಏನಿತ್ತು? ॥ ೨೮ ॥ ಮೂರ್ತಿಮತ್ತಾಗಿ ಬಂದಿರುವ ತೇಜಸ್ವಿಗಳ ತೇಜಸ್ಸೇ ನೀನಾಗಿರುವೆಯಾ? ಅಥವಾ ಭಗವಾನ್ ಅಗ್ನಿದೇವನಲ್ಲವಲ್ಲ! ನೀನು ಸೂರ್ಯ, ಚಂದ್ರ, ದೇವರಾಜ ಇಂದ್ರ, ಅಥವಾ ಬೇರೆ ಯಾವನಾದರೂ ಲೋಕ ಪಾಲನಾಗಿರುವೆಯಾ? ॥ ೨೯ ॥ ದೇವತೆಗಳ ಆರಾಧ್ಯರಾದ ಬ್ರಹ್ಮ ವಿಷ್ಣು ಶಿವ, – ಇವರಲ್ಲಿ ಪುರುಷೋತ್ತಮನಾದ ಭಗವಾನ್ ನಾರಾಯಣನೇ ಆಗಿರುವೆ ಎಂದು ನಾನು ತಿಳಿಯುತ್ತೇನೆ. ಏಕೆಂದರೆ, ದೀಪವು ಕತ್ತಲೆಯನ್ನು ಓಡಿಸುವಂತೆ ನೀನು ನಿನ್ನ ಅಂಗಕಾಂತಿಯಿಂದ ಈ ಗುಹೆಯ ಅಂಧಕಾರವನ್ನು ದೂರ ಮಾಡುತ್ತಿರುವೆ. ॥ ೩೦ ॥ ಪುರುಷ ಶ್ರೇಷ್ಠನೇ! ನಿನಗೆ ಉಚಿತವೆನಿಸಿದರೆ ನಿನ್ನ ಜನ್ಮ ಕರ್ಮ ಮತ್ತು ಗೋತ್ರಗಳನ್ನು ನನಗೆ ಹೇಳು. ಏಕೆಂದರೆ, ನಾನು ಶುದ್ಧವಾದ ಹೃದಯದಿಂದ ಅದನ್ನು ಕೇಳಲು ಬಯಸುತ್ತೇನೆ. ॥ ೩೧ ॥ ಪುರುಷೋತ್ತಮನೇ! ನನ್ನ ವಿಷಯದಲ್ಲಿ ಕೇಳುವುದಾದರೆ, ನಾನು ಇಕ್ಷ್ವಾಕುವಂಶೀಯ ಕ್ಷತ್ರಿಯನು. ಮುಚುಕುಂದನೆಂದು ನನ್ನ ಹೆಸರು. ಯುವನಾಶ್ವನ ಮಗನಾದ ಮಾಂಧಾತನ ಮಗನಾಗಿದ್ದೇನೆ. ॥ ೩೨ ॥ ಪ್ರಭುವೇ! ನಾನು ಹಲವಾರು ವರ್ಷಗಳು ನಿದ್ರೆಯೇ ಇಲ್ಲದೆ ಬಹಳ ಆಯಾಸ ಗೊಂಡಿದ್ದೆ. ನಿದ್ರೆಯಿಂದ ನನ್ನ ಇಂದ್ರಿಯಗಳೆಲ್ಲವೂ ಶಕ್ತಿಹೀನವಾಗಿದ್ದವು. ಆದರಿಂದಾಗಿ ನಾನು ನಿರ್ಜನವಾಗಿದ್ದ ಈ ಗುಹೆಯಲ್ಲಿ ಮಲಗಿದ್ದೆ. ಈಗ ತಾನೇ ನನ್ನನ್ನು ಯಾರೋ ಎಚ್ಚರಿಸಿ ಬಿಟ್ಟರು. ॥ ೩೩ ॥ ತಾನು ಮಾಡಿದ್ದ ಪಾಪದ ಫಲವಾಗಿಯೇ ಆ ವ್ಯಕ್ತಿಯು ಭಸ್ಮವಾಗಿಹೋದನು. ಅನಂತರ ಶತ್ರುನಾಶಕನಾದ ಪರಮ ಸುಂದರನಾದ ನೀನು ನನಗೆ ಕಾಣಿಸಿಕೊಂಡೆ. ॥ ೩೪ ॥ ಮಹಾನುಭಾವಾ! ನೀನು ಸಮಸ್ತ ಪ್ರಾಣಿಗಳಿಗೂ ಪೂಜ್ಯನಾಗಿರುವೆ. ನಿನ್ನ ಸಹಿಸಲಶಕ್ಯವಾದ ದಿವ್ಯ ತೇಜಸ್ಸಿನಿಂದಾಗಿ ನಿನ್ನನ್ನು ದಿಟ್ಟಿಸಿ ನೋಡಲೂ ನನಗೆ ಸಾಧ್ಯವಾಗುತ್ತಿಲ್ಲ. ನಿನ್ನ ತೇಜಸ್ಸಿನ ಮುಂದೆ ನನ್ನ ತೇಜಸ್ಸು ಉಡುಗಿಹೋಗಿ ಬಿಟ್ಟಿದೆ. ॥ ೩೫ ॥ ಮುಚುಕುಂದ ಮಹಾರಾಜನು ಹೀಗೆ ಹೇಳಲು ಸಮಸ್ತ ಪ್ರಾಣಿಗಳ ನಿಯಾಮಕನಾದ ಭಗವಾನ್ ಶ್ರೀಕೃಷ್ಣನು ನಗುತ್ತಾ ಮೇಘಗಂಭೀರವಾದ ಧ್ವನಿಯಿಂದ ಹೀಗೆಂದನು. ॥ ೩೬ ॥

ಶ್ರೀಭಗವಾನುವಾಚ

ಜನ್ಮಕರ್ಮಾಭಿಧಾನಾನಿ ಸಂತಿ ಮೇಽಂಗ ಸಹಸ್ರಶಃ ।
ನ ಶಕ್ಯಂತೇಽನುಸಂಖ್ಯಾತುಮನಂತತ್ವಾನ್ಮಯಾಪಿ ಹಿ
॥ ೩೭ ॥

ಕ್ವಚಿದ್ರಜಾಂಸಿ ವಿಮಮೇ ಪಾರ್ಥಿವಾನ್ಯುರುಜನ್ಮಭಿಃ ।
ಗುಣಕರ್ಮಾಭಿಧಾನಾನಿ ನ ಮೇ ಜನ್ಮಾನಿ ಕರ್ಹಿಚಿತ್
॥ ೩೮ ॥

ಕಾಲತ್ರಯೋಪಪನ್ನಾನಿ ಜನ್ಮಕರ್ಮಾಣಿ ಮೇ ನೃಪ ।
ಅನುಕ್ರಮಂತೋ ನೈವಾಂತಂ ಗಚ್ಛಂತಿ ಪರಮರ್ಷಯಃ
॥ ೩೯ ॥

ತಥಾಪ್ಯದ್ಯತನಾನ್ಯಂಗ ಶೃಣುಷ್ವ ಗದತೋ ಮಮ ।
ವಿಜ್ಞಾಪಿತೋ ವಿರಿಂಚೇನ ಪುರಾಹಂ ಧರ್ಮಗುಪ್ತಯೇ ।
ಭೂಮೇರ್ಭಾರಾಯಮಾಣಾನಾಮಸುರಾಣಾಂ ಕ್ಷಯಾಯ ಚ
॥ ೪೦ ॥

ಅವತೀರ್ಣೋ ಯದುಕುಲೇ ಗೃಹ ಆನಕದುಂದುಭೇಃ ।
ವದಂತಿ ವಾಸುದೇವೇತಿ ವಸುದೇವಸುತಂ ಹಿ ಮಾಮ್
॥ ೪೧ ॥

ಕಾಲನೇಮಿರ್ಹತಃ ಕಂಸಃ ಪ್ರಲಂಬಾದ್ಯಾಶ್ಚ ಸದ್ದ್ವಿಷಃ ।
ಅಯಂ ಚ ಯವನೋ ದಗ್ಧೋ ರಾಜಂಸ್ತೇ ತಿಗ್ಮಚಕ್ಷುಷಾ
॥ ೪೨ ॥

ಸೋಽಹಂ ತವಾನುಗ್ರಹಾರ್ಥಂ ಗುಹಾಮೇತಾಮುಪಾಗತಃ ।
ಪ್ರಾರ್ಥಿತಃ ಪ್ರಚುರಂ ಪೂರ್ವಂ ತ್ವಯಾಹಂ ಭಕ್ತವತ್ಸಲಃ
॥ ೪೩ ॥

ವರಾನ್ ವೃಣೀಷ್ವ ರಾಜರ್ಷೇ
ಸರ್ವಾನ್ ಕಾಮಾನ್ ದದಾಮಿ ತೇ ।
ಮಾಂ ಪ್ರಪನ್ನೋ ಜನಃ ಕಶ್ಚಿನ್
ನಭೂಯೋಽರ್ಹತಿ ಶೋಚಿತುಮ್ ॥ ೪೪ ॥

ಶ್ರೀಶುಕ ಉವಾಚ

ಇತ್ಯುಕ್ತಸ್ತಂ ಪ್ರಣಮ್ಯಾಹ ಮುಚುಕುಂದೋ ಮುದಾನ್ವಿತಃ ।
ಜ್ಞಾತ್ವಾ ನಾರಾಯಣಂ ದೇವಂ ಗರ್ಗವಾಕ್ಯಮನುಸ್ಮರನ್
॥ ೪೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಮುಚುಕುಂದನೇ ! ನನ್ನ ಜನ್ಮ ಕರ್ಮ ಮತ್ತು ನಾಮಧೇಯಗಳು ಸಾವಿರಾರು ಸಂಖ್ಯೆಯಲ್ಲಿವೆ. ಅವು ಅನಂತವಾಗಿವೆ ; ಆದ್ದರಿಂದ ಅವುಗಳನ್ನು ವಿವರಿಸಿ ಹೇಳಲು ನನಗೂ ಶಕ್ಯವಿಲ್ಲ. ॥ ೩೭ ॥ ಯಾವನಾದರೂ ಮನುಷ್ಯನು ಹಲವಾರು ಜನ್ಮಗಳಲ್ಲಿ ಭೂಮಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸಬಲ್ಲನು. ಆದರೆ ನನ್ನ ಜನ್ಮ, ಗುಣ, ಕರ್ಮ, ನಾಮಗಳನ್ನು ಯಾರೇ ಆದರೂ ಎಂದಿಗೂ ಎಣಿಕೆ ಮಾಡುವ ಅಥವಾ ತಿಳಿಯುವ ಸಾಧ್ಯತೆಯೇ ಇಲ್ಲ. ॥ ೩೮ ॥ ಮಹಾರಾಜ ! ಸನಕ, ಸನಂದನರೇ ಮೊದಲಾದ ಮಹರ್ಷಿಗಳು ನನ್ನ ತ್ರಿಕಾಲ ಸಿದ್ಧವಾದ ಜನ್ಮ-ಕರ್ಮಗಳನ್ನು ವರ್ಣಿಸುತ್ತಲೇ ಇರುತ್ತಾರೆ. ಆದರೆ ಅದರ ಕೊನೆಯನ್ನು ಅವರೆಂದಿಗೂ ಮುಟ್ಟುವುದಿಲ್ಲ. ನನ್ನ ಜನ್ಮ ಕರ್ಮಗಳಿಗೆ ಅಂತ್ಯವೆಂಬುದೇ ಇಲ್ಲ. ॥ ೩೯ ॥ ಪ್ರಿಯ ಮುಚುಕುಂದನೇ ! ಹೀಗಿದ್ದರೂ ನಾನು ನನ್ನ ವರ್ತಮಾನ ಜನ್ಮ, ಕರ್ಮ ಮತ್ತು ನಾಮಗಳನ್ನು ವರ್ಣಿಸುವೆನು ಕೇಳು. ಹಿಂದೆ ಬ್ರಹ್ಮನು 'ಅಸುರರನ್ನು ಸಂಹರಿಸಿ ಭೂಭಾರವನ್ನು ಇಳಿಸಬೇಕೆಂದು ನನ್ನನ್ನು ಪ್ರಾರ್ಥಿಸಿದ್ದನು. ॥ ೪೦ ॥ ಚತುರ್ಮುಖನ ಪ್ರಾರ್ಥನೆಯಂತೆ ನಾನು ಯದುವಂಶದಲ್ಲಿ ವಸುದೇವನ ಮನೆಯಲ್ಲಿ ಅವತರಿಸಿರುವೆನು. ಈಗ ನಾನು ವಸುದೇವನ ಪುತ್ರನಾದ್ದರಿಂದ ಜನರು ನನ್ನನ್ನು ವಾಸುದೇವನೆಂದು ಕರೆಯುತ್ತಾರೆ. ॥ ೪೧ ॥ ಇದುವರೆಗೆ ಸತ್ಪುರುಷರನ್ನು ದ್ವೇಷಿಸುತ್ತಿದ್ದ ಕಂಸನಾಗಿ ಹುಟ್ಟಿದ್ದ ಕಾಲನೇಮಿ ಎಂಬ ಅಸುರನನ್ನೂ, ಪ್ರಲಂಬನೇ ಮೊದಲಾದ ಕಂಸನ ಅನುಯಾಯಿಗಳಾದ ಹಲವಾರು ರಾಕ್ಷಸರನ್ನು ಸಂಹಾರ ಮಾಡಿದ್ದೇನೆ. ರಾಜನೇ ! ಈ ಕಾಲಯವನನೂ ಕೂಡ ನನ್ನ ಪ್ರೇರಣೆಯಿಂದಲೇ ನಿನ್ನ ತೀಕ್ಷ್ಣದೃಷ್ಟಿಬಿದ್ದಾಕ್ಷಣ ಭಸ್ಮನಾಗಿ ಹೋದನು. ॥ ೪೨ ॥ ಆದೇ ನಾನು ನಿನ್ನ ಮೇಲೆ ಕೃಪೆದೋರಲು ಈ ಗುಹೆಗೆ ಬಂದಿರುವೆನು. ಭಕ್ತವತ್ಸಲನಾದ ನನ್ನನ್ನು ಹಿಂದೆ ನೀನು ಬಹಳವಾಗಿ ಆರಾಧಿಸಿದ್ದೆ. ॥ ೪೩ ॥ ಅದಕ್ಕಾಗಿ ರಾಜರ್ಷಿಯೇ! ನಿನಗೆ ಅಭೀಷ್ಟವಾದ ವರವನ್ನು ಬೇಡು. ನಾನು ನಿನ್ನ ಯಾವುದೇ ಕಾಮನೆಯನ್ನಾದರೂ ಪೂರ್ಣಗೊಳಿಸುವೆನು. ನನಗೆ ಶರಣಾಗತನಾದ ಯಾರೇ ಆಗಲಿ ಪುನಃ ಶೋಕಪಡಬಾರದು ; ಇದು ನನ್ನ ಆಶಯವಾಗಿದೆ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದಾಗ ಮುಚುಕುಂದನಿಗೆ – 'ಯದುವಂಶದಲ್ಲಿ ಭಗವಂತನು ಅವತರಿಸಲಿದ್ದಾನೆ' ಎಂಬ ವೃದ್ಧರಾದ ಗರ್ಗರ ಮಾತು ನೆನಪಿಗೆ ಬಂತು. ಇವನು ಸಾಕ್ಷಾತ್ ಭಗವಾನ್‌ನಾರಾಯಣನೇ ಆಗಿರುವನೆಂದು ಅವನು ತಿಳಿದು ಆನಂದತುಂದಿಲನಾಗಿ ಭಗವಂತನ ಚರಣಗಳಲ್ಲಿ ವಂದಿಸಿಕೊಂಡು ಇಂತೆಂದನು. ॥ ೪೫ ॥

ಮುಚುಕುಂದ ಉವಾಚ

ವಿಮೋಹಿತೋಽಯಂ ಜನ ಈಶ ಮಾಯಯಾ
ತ್ವದೀಯಯಾ ತ್ವಾಂ ನ ಭಜತ್ಯನರ್ಥದೃಕ್ ।
ಸುಖಾಯ ದುಃಖಪ್ರಭವೇಷು ಸಜ್ಜತೇ
ಗೃಹೇಷು ಯೋಷಿತ್ಪುರುಷಶ್ಚ ವಂಚಿತಃ ॥ ೪೬ ॥

ಲಬ್ಧ್ವಾ ಜನೋ ದುರ್ಲಭಮತ್ರ ಮಾನುಷಂ
ಕಥಂಚಿದವ್ಯಂಗ ಮಯತ್ನತೋಽನಘ ।
ಪಾದಾರವಿಂದಂ ನ ಭಜತ್ಯಸನ್ಮತಿ-
ರ್ಗೃಹಾಂಧಕೂಪೇ ಪತಿತೋ ಯಥಾ ಪಶುಃ ॥ ೪೭ ॥

ಮಮೈಷ ಕಾಲೋಽಜಿತ ನಿಷ್ಫಲೋ ಗತೋ
ರಾಜ್ಯಶ್ರಿಯೋನ್ನದ್ಧಮದಸ್ಯ ಭೂಪತೇಃ ।
ಮತ್ಯಾತ್ಮಬುದ್ಧೇಃ ಸುತದಾರಕೋಶಭೂ-
ಷ್ವಾಸಜ್ಜಮಾನಸ್ಯ ದುರಂತಚಿಂತಯಾ ॥ ೪೮ ॥

ಕಲೇವರೇಽಸ್ಮಿನ್ ಘಟಕುಡ್ಯಸಂನಿಭೇ
ನಿರೂಢಮಾನೋ ನರದೇವ ಇತ್ಯಹಮ್ ।
ವೃತೋ ರಥೇಭಾಶ್ವಪದಾತ್ಯನೀಕಪೈ-
ರ್ಗಾಂ ಪರ್ಯಟಂಸ್ತ್ವಾಗಣಯನ್ ಸುದುರ್ಮದಃ ॥ ೪೯ ॥

ಪ್ರಮತ್ತಮುಚ್ಚೈರಿತಿಕೃತ್ಯಚಿಂತಯಾ
ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।
ತ್ವಮಪ್ರಮತ್ತಃ ಸಹಸಾಭಿಪದ್ಯಸೇ
ಕ್ಷುಲ್ಲೇಲಿಹಾನೋಽಹಿರಿವಾಖುಮಂತಕಃ ॥ ೫೦ ॥

ಪುರಾ ರಥೈರ್ಹೇಮಪರಿಷ್ಕೃತೈಶ್ಚರನ್
ಮತಂಗಜೈರ್ವಾ ನರದೇವಸಂಜ್ಞಿತಃ ।
ಸ ಏವ ಕಾಲೇನ ದುರತ್ಯಯೇನ ತೇ
ಕಲೇವರೋ ವಿಟ್ಕೃಮಿಭಸ್ಮಸಂಜ್ಞಿತಃ ॥ ೫೧ ॥

ಮುಚುಕುಂದನು ಹೇಳಿದನು – ಪ್ರಭೋ! ಈ ಜನರು ನಿನ್ನ ಮಾಯೆಯಿಂದ ಅತ್ಯಂತ ವಿಮೋಹಿತರಾಗಿದ್ದಾರೆ. ನಿನ್ನಿಂದ ವಿಮುಖರಾದ ಇವರು ಅನರ್ಥಕಾರಿ ಸಂಸಾರದಲ್ಲೇ ಸಿಕ್ಕಿ ಹಾಕಿಕೊಂಡು ನಿನ್ನನ್ನು ಭಜಿಸುತ್ತಿಲ್ಲ ನಿನ್ನ ಮಾಯೆಯಿಂದ ವಂಚಿತರಾದ ಸ್ತ್ರೀ-ಪುರುಷರು ಸುಖವನ್ನು ಬಯಸಿ ದುಃಖಕ್ಕೆ ಮೂಲ ಕಾರಣವಾದ ಮನೆ-ಮಠಗಳೆಂಬ ಮಮಕಾರದಿಂದ ಸಂಸಾರದಲ್ಲಿ ಆಸಕ್ತರಾಗಿರುತ್ತಾರೆ. ॥ ೪೬ ॥ ಪಾಪರೂಪವಾದ ಸಂಸಾರದಿಂದ ಸರ್ವಥಾ ರಹಿತವಾದ ಪ್ರಭುವೇ! ಈ ಭೂಮಿಯು ಅತ್ಯಂತ ಪವಿತ್ರವಾದ ಕರ್ಮಭೂಮಿಯಾಗಿದೆ. ಇಲ್ಲಿ ಮನುಷ್ಯ ಜನ್ಮವು ಲಭಿಸುವುದು ಅತ್ಯಂತ ದುರ್ಲಭವೇ ಸರಿ. ಸರ್ವಾಂಗ ಪರಿಪೂರ್ಣವಾದ ಮನುಷ್ಯ ಶರೀರವನ್ನು ಪ್ರಯತ್ನವಿಲ್ಲದೆ ಹೇಗೋ ಹೊಂದಿಯೂ ಸದ್ಬುದ್ಧಿಯಿಲ್ಲದ ಜನರು ನಿನ್ನ ಪಾದಾರವಿಂದವನ್ನು ಭಜಿಸುವುದಿಲ್ಲ. ಹುಲ್ಲಿನ ಆಸೆಯಿಂದ ಪಶುವು ಪಾಳುಬಾವಿಯಲ್ಲಿ ಬೀಳುವಂತೆ ಮನುಷ್ಯನು ಸುಖಮಯವಾಗಿ ಕಾಣುವ ಸಂಸಾರವೆಂಬ ಕಗ್ಗತ್ತಲೆಯ ಬಾವಿಯಲ್ಲಿ ಬೀಳುತ್ತಾನೆ. ॥ ೪೭ ॥ ಓ ಅಜಿತ ಪ್ರಭುವೇ ? ನಾನೊಬ್ಬ ರಾಜನಾಗಿದ್ದು ಸಂಪತ್ಸಮೃದ್ಧವಾದ ರಾಜ್ಯಲಕ್ಷ್ಮಿಯನ್ನು ಪಡೆದು ಉನ್ಮತ್ತನಾಗಿದ್ದೆನು. ದೇಹಾತ್ಮ ಬುದ್ಧಿಯುಳ್ಳ ನಾನು ಪತ್ನೀ-ಪುತ್ರರು-ಭಂಡಾರ-ರಾಜ್ಯ -ಐಶ್ವರ್ಯ – ಇತ್ಯಾದಿಗಳಲ್ಲಿಯೇ ಸದಾಕಾಲ ಆಸಕ್ತನಾಗಿದ್ದೆ. ಹಗಲು-ರಾತ್ರಿಗಳಲ್ಲಿಯೂ ನನಗೆ ಅವುಗಳದ್ದೇ ಚಿಂತೆಯಾಗಿತ್ತು. ಹೀಗಾಗಿ ಇದುವರೆಗಿನ ನನ್ನ ಜೀವನವು ವ್ಯರ್ಥವಾಗಿ ಹೋಯಿತು. ॥ ೪೮ ॥ ದೇವದೇವನೇ! ಮಡಕೆಗೂ, ಗೋಡೆಗೂ ಸಮಾನವಾದ, ನನ್ನಿಂದ ಬೇರೆಯಾದ ಈ ದೇಹವನ್ನೇ ನನ್ನ ಸ್ವರೂಪವೆಂದು ತಿಳಿದುಕೊಂಡಿದ್ದೆ. ಮಾನವರೆಲ್ಲರೂ ನಾನು ರಾಜನಾಗಿರುವೆನೆಂದು ಭಾವಿಸಿಕೊಂಡು ರಥ-ಗಜಾಶ್ವ- ಪದಾತಿಗಳೆಂಬ ಚತುರಂಗ ಬಲದಿಂದ ಸಮಾವೃತನಾಗಿ ದುರಭಿಮಾನದಿಂದ ಭೂಮಿಯಲ್ಲಿ ಅಲೆದಾಡುತ್ತಿದ್ದೆ. ಹೀಗೆ ಮದಾಂಧನಾಗಿ ನಾನು ನಿನ್ನ ವಿಷಯದಲ್ಲಿ ಯೋಚಿಸಲೇ ಇಲ್ಲ. ॥ ೪೯ ॥ 'ಆ ರಾಜ್ಯವನ್ನು ಗೆಲ್ಲಬೇಕು, ಆವನ ಬೊಕ್ಕಸವನ್ನು ಅಪಹರಿಸಬೇಕು' ಮುಂತಾದ ಆಲೋಚನೆಗಳಿಂದ ಹೆಚ್ಚಿದ ಆಶೆಯುಳ್ಳವನಾಗಿ, ವಿಷಯಸುಖದಲ್ಲೇ ಆಸಕ್ತನಾದ, ಅತಿಯಾದ ಪ್ರಮಾದಕ್ಕೆ ವಶನಾಗಿರುವ ಮನುಷ್ಯನನ್ನು ನೀನು, ಅಪ್ರಮತ್ತನಾದ ಅಂತಕನಾಗಿ – ಹಸಿವಿನಿಂದ ಕಟವಾಯಿಗಳನ್ನು ಸವರಿಕೊಳ್ಳುತ್ತಾ ಇಲಿಯನ್ನು ಹಿಡಿಯುವ ಹಾವಿನಂತೆ – ಬೇಗನೇ ಹಿಡಿದು ಬಿಡುವೆ. ॥ ೫೦ ॥ ಹೀಗೆ ಸುವರ್ಣಾಭರಣಗಳಿಂದ ಸಮಲಂಕೃತವಾದ ರಥಗಳಲ್ಲಿ ಅಥವಾ ಚಿನ್ನದ ಅಂಬಾರಿಯಿಂದ ಮದಿಸಿದ ಆನೆಯ ಮೇಲೆ ಕುಳಿತು ನರದೇವನೆಂಬ ಅಭಿಧಾನವನ್ನು ಪಡೆದು ಪ್ರಪಂಚವೆಲ್ಲಾ ಪರ್ಯಟನೆ ಮಾಡುತ್ತಿದ್ದ ಶರೀರವು ನಾಶವಾಗಿ ಹೋಗಲು, ಅಶಕ್ಯವಾದ ನಿನ್ನ ಕಾಲಕ್ಕೆ ಪರವಶವಾಗಿ, ಪಕ್ಷಿಗಳ, ವಿಷ್ಠೆಯೋ, ಹುಳುವೋ ಅಥವಾ ಭಸ್ಮವೋ ಆಗಿಬಿಡುತ್ತದೆ. ॥ ೫೧ ॥ ಪ್ರಭುವೇ! ಒಬ್ಬ ಚಕ್ರವರ್ತಿಯು ಎಲ್ಲ ದಿಕ್ಕುಗಳಲ್ಲಿಯೂ ವಿಜಯವನ್ನು ಸಂಪಾದಿಸಿ, ತನ್ನೆದುರಿಗೆ ಯುದ್ಧಮಾಡುವವರೇ ಪ್ರಪಂಚದಲ್ಲಿ ಯಾರೂ ಇಲ್ಲವೆಂದು ಎಣಿಸಿ ಸಿಂಹಾಸನದ ಮೇಲೆ ಕುಳಿತಾಗ ಆವನಿಗೆ ಸಮಾನರಾದ ಮತ್ತು ಸಾಮಂತ ರಾಜರು ನತ

ನಿರ್ಜಿತ್ಯ ದಿಕ್ಚಕ್ರಮಭೂತವಿಗ್ರಹೋ
ವರಾಸನಸ್ಥಃ ಸಮರಾಜವಂದಿತಃ ।
ಗೃಹೇಷು ಮೈಥುನ್ಯಸುಖೇಷು ಯೋಷಿತಾಂ
ಕ್ರೀಡಾಮೃಗಃ ಪೂರುಷ ಈಶ ನೀಯತೇ ॥ ೫೨ ॥

ಕರೋತಿ ಕರ್ಮಾಣಿ ತಪಸ್ಸುನಿಷ್ಠಿತೋ
ನಿವೃತ್ತಭೋಗಸ್ತದಪೇಕ್ಷಯಾ ದದತ್ ।
ಪುನಶ್ಚ ಭೂಯೇಯಮಹಂ ಸ್ವರಾಡಿತಿ
ಪ್ರವೃದ್ಧತರ್ಷೋ ನ ಸುಖಾಯ ಕಲ್ಪತೇ ॥ ೫೩ ॥

ಭವಾಪವರ್ಗೋ ಭ್ರಮತೋ ಯದಾ ಭವೇ-
ಜ್ಜನಸ್ಯ ತರ್ಹ್ಯಚ್ಯುತ ಸತ್ಸಮಾಗಮಃ ।
ಸತ್ಸಂಗಮೋ ಯರ್ಹಿ ತದೈವ ಸದ್ಗತೌ
ಪರಾವರೇಶೇ ತ್ವಯಿ ಜಾಯತೇ ಮತಿಃ ॥ ೫೪ ॥

ಮನ್ಯೇ ಮಮಾನುಗ್ರಹ ಈಶ ತೇ ಕೃತೋ
ರಾಜ್ಯಾನುಬಂಧಾಪಗಮೋ ಯದೃಚ್ಛಯಾ ।
ಯಃ ಪ್ರಾರ್ಥ್ಯತೇ ಸಾಧುಭಿರೇಕಚರ್ಯಯಾ
ವನಂ ವಿವಿಕ್ಷದ್ಭಿರಖಂಡಭೂಮಿಪೈಃ ॥ ೫೫ ॥

ನ ಕಾಮಯೇಽನ್ಯಂ ತವ ಪಾದಸೇವನಾ-
ದಕಿಂಚನಪ್ರಾರ್ಥ್ಯತಮಾದ್ವರಂ ವಿಭೋ ।
ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ
ವೃಣೀತ ಆರ್ಯೋ ವರಮಾತ್ಮಬಂಧನಮ್ ॥ ೫೬ ॥

ತಸ್ಮಾದ್ವಿಸೃಜ್ಯಾಶಿಷ ಈಶ ಸರ್ವತೋ
ರಜಸ್ತಮಃಸತ್ತ್ವಗುಣಾನುಬಂಧನಾಃ ।
ನಿರಂಜನಂ ನಿರ್ಗುಣಮದ್ವಯಂ ಪರಂ
ತ್ವಾಂ ಜ್ಞಪ್ತಿಮಾತ್ರಂ ಪುರುಷಂ ವ್ರಜಾಮ್ಯಹಮ್ ॥ ೫೭ ॥

ಚಿರಮಿಹ ವೃಜಿನಾರ್ತಸ್ತಪ್ಯಮಾನೋಽನುತಾಪೈ-
ರವಿತೃಷಷಡಮಿತ್ರೋಽಲಬ್ಧಶಾಂತಿಃ ಕಥಂಚಿತ್ ।
ಶರಣದ ಸಮುಪೇತಸ್ತ್ವತ್ಪದಾಬ್ಜಂ ಪರಾತ್ಮ-
ನ್ನಭಯಮೃತಮಶೋಕಂ ಪಾಹಿ ಮಾಽಽಪನ್ನಮೀಶ ॥ ೫೮ ॥

ಮಸ್ತಕರಾಗುತ್ತಾರೋ, ಅಂತಹ ರಾಜಾಧಿರಾಜನು ಗ್ರಾಮಸುಖಿಗಳಿಗೆ ನೆಲೆಯಾಗಿರುವ ಮನೆಯಲ್ಲಿ ಹೆಂಗಸರ ಆಟದ ಪಶುವಾಗಿ ಬಿಡುತ್ತಾನೆ. ॥ ೫೨ ॥ ಬಹಳಷ್ಟು ಜನರು ವಿಷಯಭೋಗಗಳನ್ನು ತ್ಯಜಿಸಿ ತಪೋನಿಷ್ಠರಾಗಿ ಹಲವಾರು ದಾನಕರ್ಮಗಳನ್ನು, ಯಜ್ಞ ಕರ್ಮಗಳನ್ನೂ ಮಾಡುತ್ತಾರೆ. ಆದರೆ ಅವರ ಆ ತಪಸ್ಸು ನಾನು ಪುನಃ ಚಕ್ರವರ್ತಿಯಾಗಬೇಕೆಂಬುದೇ ಆಗಿರುತ್ತದೆ. ಹೀಗೆ ವೃದ್ಧಿ ಹೊಂದಿದ ತೃಷ್ಣೆಯುಳ್ಳವರು ಎಂದಿಗೂ ಸುಖಿಗಳಾಗಲಾರರು. ॥ ೫೩ ॥ ಅಚ್ಯುತನೇ! ಜೀವನು ಅನಾದಿಕಾಲದಿಂದಲೂ ಹುಟ್ಟು-ಸಾವುಗಳೆಂಬ ಸಂಸಾರ ಚಕ್ರದಲ್ಲಿ ಸಿಕ್ಕಿ ಸುತ್ತುತ್ತಲೇ ಇರುವನು. ಸಂಸಾರ ಚಕ್ರದಿಂದ ಪಾರಾಗುವ ಸಮಯವು ಬಂದಾಗ ಅವನಿಗೆ ಸತ್ಸಂಗವು ದೊರೆಯುತ್ತದೆ. ಸತ್ಸಂಗವಾದೊಡನೆಯೇ ಕಾರ್ಯ-ಕಾರಣರೂಪನಾದ, ಜಗತ್ತಿಗೆ ಏಕಮಾತ್ರಸ್ವಾಮಿಯಾದ, ಸತ್ಪುರುಷರಿಗೆ ಪರಮಾಶ್ರಯನಾದ ನಿನ್ನಲ್ಲಿ ಜೀವಿಯ ಬುದ್ಧಿಯು ಅತ್ಯಂತ ದೃಢತೆಯಿಂದ ತೊಡಗುತ್ತದೆ; ಇದು ನಿಶ್ಚಯವಾದುದು. ॥ ೫೪ ॥ ಸ್ವಾಮಿಯೇ! ನೀನು ನನ್ನ ಮೇಲೆ ಪರಮಾನುಗ್ರಹವನ್ನು ಮಾಡಿರುವೆಯೆಂದೇ ನಾನು ಭಾವಿಸುತ್ತೇನೆ. ನಿನ್ನ ಅನುಗ್ರಹದಿಂದ ಯಾವ ಪರಿಶ್ರಮವೂ ಇಲ್ಲದೆ ನನಗೆ ರಾಜ್ಯದ ಸಂಬಂಧ ಕಡಿದುಹೋಯಿತು. ಸಾಧು ಸ್ವಭಾವದ ಚಕ್ರವರ್ತಿಗಳೂ ಕೂಡ ರಾಜ್ಯವನ್ನು ಬಿಟ್ಟು ಏಕಾಂತದಲ್ಲಿ ಭಜನೆ-ಸಾಧನೆ ಮಾಡಬೇಕೆಂದು ಕಾಡಿಗೆ ಹೋಗಲು ಅಪೇಕ್ಷಿಸಿದಾಗ ಅಹಂಕಾರ-ಮಮಕಾರಗಳಿಂದ ಮುಕ್ತರಾಗಲು ನಿನ್ನನ್ನು ಬಹಳವಾಗಿ ಪ್ರಾರ್ಥಿಸುತ್ತಾರೆ. ॥ ೫೫ ॥ ಅಂತರ್ಯಾಮಿಯೇ! ಯಾರ ಬಳಿಯಲ್ಲಿ ಯಾವುದೇ ಸಂಗ್ರಹ-ಪರಿಗ್ರಹವಿಲ್ಲವೋ ಅಥವಾ ಅದರ ಅಭಿಮಾನದಿಂದ ರಹಿತರಾದ ಅಕಿಂಚನರೂ ಕೂಡ ನಿನ್ನ ಚರಣಸೇವೆಯಲ್ಲದೆ ಬೇರೆ ಏನನ್ನೂ ಬೇಡುವುದಿಲ್ಲ, ಹಾಗಿರುವಾಗ ಮೋಕ್ಷವನ್ನು ಕರುಣಿಸುವ ನಿನ್ನ ಆರಾಧನೆ ಮಾಡಿ - ತನ್ನನ್ನು ಬಂಧಿಸುವಂತಹ ಸಾಂಸಾರಿಕ ವಿಷಯಗಳನ್ನು ಯಾವ ಶ್ರೇಷ್ಠ ಪುರುಷನು ತಾನೇ ಬೇಡಿಕೊಳ್ಳುವನು ? ॥ ೫೬ ॥ ಆದ್ದರಿಂದ ಪ್ರಭುವೇ! ನಾನು ಸತ್ತ್ವ-ರಜ-ತಮೋಗುಣಗಳಿಗೆ ಸಂಬಂಧಿಸಿದ ಸಮಸ್ತ ಕಾಮನೆಗಳನ್ನು ಬಿಟ್ಟು ಮಾಯೆಯ ಲೇಶಮಾತ್ರ ಸಂಬಂಧವೂ ಇಲ್ಲದ, ಗುಣಾತೀತನಾದ, ಅದ್ವೀತಿಯನಾದ, ಚಿತ್ಸ್ವರೂಪನಾದ, ಪರಮಪುರುಷನಾದ ನಿನಗೆ ಶರಣಾಗುತ್ತೇನೆ. ॥ ೫೭ ॥ ಪರಮೇಶ್ವರನೇ! ಅನಾದಿಕಾಲದಿಂದಲೂ ನನ್ನ ಕರ್ಮಫಲಗಳನ್ನು ಅನುಭವಿಸುತ್ತಾ ನಾನು ಆರ್ತನಾಗಿದ್ದೆ. ಆ ದುಃಖದ ಜ್ವಾಲೆಯು ನನ್ನನ್ನು ಹಗಲು ರಾತ್ರಿಯೆನ್ನದೆ ದಹಿಸುತ್ತಲೇ ಇತ್ತು. ನನ್ನ ಆಂತರಿಕ ಆರು ಶತ್ರುಗಳು (ಐದು ಇಂದ್ರಿಗಳು ಒಂದು ಮನಸ್ಸು) ಎಂದೂ ಶಾಂತರಾಗುವುದೇ ಇಲ್ಲ, ಅವರ ವಿಷಯ ತೃಷ್ಣೆಯು ದಿನ-ದಿನಕ್ಕೆ ವೃದ್ಧಿಸುತ್ತಲೇ ಇದೆ. ಈಗ ನಾನು ಭಯ, ಶೋಕ, ಮೃತ್ಯು ಇವುಗಳಿಂದ ರಹಿತವಾದ ನಿನ್ನ ಪಾದಕಮಲಗಳಲ್ಲಿ ಶರಣಾಗತನಾಗಿದ್ದೇನೆ. ಪರಮಾತ್ಮನೇ! ಶರಣಾಗತನಾದ ನನ್ನನ್ನು ರಕ್ಷಿಸು. ॥ ೫೮ ॥

ಶ್ರೀಭಗವಾನುವಾಚ

ಸಾರ್ವಭೌಮ ಮಹಾರಾಜ ಮತಿಸ್ತೇ ವಿಮಲೋರ್ಜಿತಾ ।
ವರೈಃ ಪ್ರಲೋಭಿತಸ್ಯಾಪಿ ನ ಕಾಮೈರ್ವಿಹತಾ ಯತಃ
॥ ೫೯ ॥

ಪ್ರಲೋಭಿತೋ ವರೈರ್ಯತ್ತ್ವಮಪ್ರಮಾದಾಯ ವಿದ್ಧಿತತ್ ।
ನ ಧೀರ್ಮಯ್ಯೇಕಭಕ್ತಾನಾಮಾಶೀರ್ಭಿರ್ಭಿದ್ಯತೇ ಕ್ವಚಿತ್
॥ ೬೦ ॥

ಯುಂಜಾನಾನಾಮಭಕ್ತಾನಾಂ ಪ್ರಾಣಾಯಾಮಾದಿಭಿರ್ಮನಃ ।
ಅಕ್ಷೀಣವಾಸನಂ ರಾಜನ್ ದೃಶ್ಯತೇ ಪುನರುತ್ಥಿತಮ್
॥ ೬೧ ॥

ವಿಚರಸ್ವ ಮಹೀಂ ಕಾಮಂ ಮಯ್ಯಾವೇಶಿತಮಾನಸಃ ।
ಅಸ್ತ್ವೇವ ನಿತ್ಯದಾ ತುಭ್ಯಂ ಭಕ್ತಿರ್ಮಯ್ಯನಪಾಯಿನೀ
॥ ೬೨ ॥

ಕ್ಷಾತ್ರಧರ್ಮಸ್ಥಿತೋ ಜಂತೂನ್ ನ್ಯವಧೀರ್ಮೃಗಯಾದಿಭಿಃ ।
ಸಮಾಹಿತಸ್ತತ್ತಪಸಾ ಜಹ್ಯಘಂ ಮದುಪಾಶ್ರಿತಃ
॥ ೬೩ ॥

ಜನ್ಮನ್ಯನಂತರೇ ರಾಜನ್ ಸರ್ವಭೂತಸುಹೃತ್ತಮಃ ।
ಭೂತ್ವಾ ದ್ವಿಜವರಸ್ತ್ವಂ ವೈ ಮಾಮುಪೈಷ್ಯಸಿ ಕೇವಲಮ್
॥ ೬೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಸಾರ್ವಭೌಮ ಮಹಾರಾಜ! ನಿನ್ನ ಬುದ್ಧಿಯು ಪರಿಶುದ್ಧವಾಗಿಯೂ, ಉನ್ನತಮಟ್ಟದಲ್ಲಿಯೂ ಇದೆ. ನಾನು ಪುನಃ ಪುನಃ ನಿನಗೆ ವರದ ಲೋಭವನ್ನು ತೋರುತ್ತಿದ್ದರೂ ನಿನ್ನ ಬುದ್ಧಿಯು ಕಾಮನೆಗಳಿಗೆ ವಶವಾಗಲಿಲ್ಲ. ॥ ೫೯ ॥ ನಾನು ವರವನ್ನು ಕೊಡಲು ನಿನ್ನನ್ನು ಪ್ರಲೋಭಿಸಿದುದು ನಿನ್ನ ಬುದ್ಧಿಯು ಪ್ರಮತ್ತವಾಗಿದೆಯೋ, ಅಪ್ರಮತ್ತವಾಗಿದೆಯೋ ಎಂಬುದನ್ನು ಪರೀಕ್ಷಿಸಲಿಕ್ಕಾಗಿ. ನನ್ನ ಅನನ್ಯಭಕ್ತರಾದವರ ಬುದ್ಧಿಯು ಎಂದಿಗೂ ಕಾಮನೆಗಳಿಗಾಗಿ ಅತ್ತ-ಇತ್ತ ಅಲೆಯುವುದಿಲ್ಲ. ॥ ೬೦ ॥ ನನ್ನ ಭಕ್ತರಲ್ಲದವರು ಪ್ರಾಣಾಯಾಮಾದಿಗಳಿಂದ ತಮ್ಮ ಮನಸ್ಸನ್ನು ವಶಪಡಿಸಿಕೊಳ್ಳಲು ಎಷ್ಟೇ ಪ್ರಯತ್ನಮಾಡಿದರೂ ಅವರ ವಾಸನೆಗಳು ಕ್ಷೀಣಿಸುವುದಿಲ್ಲ. ರಾಜನೇ! ಅವರ ಮನಸ್ಸು ಪುನಃ ವಿಷಯಗಳಿಗಾಗಿ ತವಕಿಸುತ್ತದೆ. ॥ ೬೧ ॥ ರಾಜಾ! ನೀನು ನಿನ್ನ ಮನಸ್ಸನ್ನು ಮತ್ತು ಮನೋಭಾವಗಳನ್ನು ನನ್ನಲ್ಲಿ ಅರ್ಪಿಸಿಬಿಡು. ನನ್ನಲ್ಲಿ ತೊಡಗಿಸು ಮತ್ತೆ ಸ್ವೇಚ್ಛೆಯಿಂದ ಭೂಮಂಡಲದಲ್ಲಿ ಸಂಚರಿಸುತ್ತಿರು. ನನ್ನಲ್ಲಿ ನಿನಗೆ ಸ್ಥಿರವಾದ ಭಕ್ತಿಯು ನಿತ್ಯ-ನಿರಂತರವಾಗಿ ಇದ್ದೇ ಇರುವುದು. ॥ ೬೨ ॥ ನೀನು ಕ್ಷತ್ರಿಯ ಧರ್ಮವನ್ನು ಆಚರಿಸುತ್ತಿರುವಾಗ ಬೇಟೆಯೇ ಮೊದಲಾದ ಸಂದರ್ಭಗಳಲ್ಲಿ ಬಹಳಷ್ಟು ಪಶುಗಳನ್ನು ಕೊಂದಿರುವೆ. ಈಗ ಏಕಾಗ್ರಚಿತ್ತದಿಂದ ನನ್ನನ್ನು ಉಪಾಸಿಸುತ್ತಾ, ತಪಸ್ಸಿನ ಮೂಲಕ ಆ ಪಾಪಗಳನ್ನು ಕಳೆದುಕೋ. ॥ ೬೩ ॥ ರಾಜನೇ! ಮುಂದಿನ ಜನ್ಮದಲ್ಲಿ ನೀನು ಬ್ರಾಹ್ಮಣನಾಗಿ ಹುಟ್ಟಿ ಸಮಸ್ತ ಪ್ರಾಣಿಗಳ ನಿಜವಾದ ಹಿತೈಷಿಯೂ, ಪರಮಸುಹೃದನೂ ಆಗುವೆ. ಮತ್ತೆ ವಿಶುದ್ಧ ವಿಜ್ಞಾನಘನ ಪರಮಾತ್ಮನಾದ ನನ್ನನ್ನು ಪಡೆಯುವೆ. ॥ ೬೪ ॥

ಐವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೫೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಮುಚುಕುಂದಸ್ತುತಿರ್ನಾಮೈಕಪಂಚಾಶತ್ತಮೋऽಧ್ಯಾಯಃ ॥ ೫೧ ॥

ಐವತ್ತೆರಡನೆಯ ಅಧ್ಯಾಯ

ದ್ವಾರಕಾಗಮನ, ಬಲರಾಮನ ವಿವಾಹ, ರುಕ್ಮಿಣಿಯ ಸಂದೇಶವನ್ನು ಹೊತ್ತು ತಂದ ಬ್ರಾಹ್ಮಣನ ಆಗಮನ

ಶ್ರೀಶುಕ ಉವಾಚ

ಇತ್ಥಂ ಸೋऽನುಗೃಹೀತೋऽಂಗ ಕೃಷ್ಣೇನೇಕ್ಷ್ವಾಕುನಂದನಃ ।
ತಂ ಪರಿಕ್ರಮ್ಯ ಸನ್ನಮ್ಯ ನಿಶ್ಚಕ್ರಾಮ ಗುಹಾಮುಖಾತ್
॥ ೧ ॥

ಸ ವೀಕ್ಷ್ಯ ಕ್ಷುಲ್ಲಕಾನ್ ಮರ್ತ್ಯಾನ್ ಪಶೂನ್ ವೀರುದ್ವನಸ್ಪತೀನ್ ।
ಮತ್ವಾ ಕಲಿಯುಗಂ ಪ್ರಾಪ್ತಂ ಜಗಾಮ ದಿಶಮುತ್ತರಾಮ್
॥ ೨ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ! ಭಗವಾನ್ ಶ್ರೀಕೃಷ್ಣನು ಹೀಗೆ ಇಕ್ಷ್ವಾಕುಕುಲ ನಂದನನಾದ ಮುಚುಕುಂದನಿಗೆ ಅನುಗ್ರಹಿಸಿದನು. ಆಗ ಅವನು ಭಗವಂತನಿಗೆ ಪ್ರದಕ್ಷಿಣೆ ಬಂದು, ನಮಸ್ಕರಿಸಿ ಗುಹೆಯಿಂದ ಹೊರಗೆ ಹೊರಟನು. ॥ ೧ ॥ ಗುಹೆಯಿಂದ ಹೊರಗೆ ಬಂದು ಮುಚುಕುಂದನು ನೋಡುತ್ತಾನೆ – ಎಲ್ಲ ಮನುಷ್ಯರು, ಪಶುಗಳು, ಲತಾ-ವೃಕ್ಷಾದಿಗಳು ಮೊದಲಿಗಿಂತ ಬಹಳ ಸಣ್ಣ-ಸಣ್ಣದಾಗಿವೆ. ಓಹೋ! ಈಗ ಕಲಿಯುಗವು ಬಂದು ಬಿಟ್ಟಿದೆ ಎಂದು ತಿಳಿದು ಅವನು ಉತ್ತರದ ಕಡೆಗೆ ಪ್ರಯಾಣ ಮಾಡಿದನು. ॥ ೨ ॥

ತಪಃಶ್ರದ್ಧಾಯುತೋ ಧೀರೋ ನಿಃಸಂಗೋ ಮುಕ್ತಸಂಶಯಃ ।
ಸಮಾಧಾಯ ಮನಃ ಕೃಷ್ಣೇ ಪ್ರಾವಿಶದ್ಗಂಧಮಾದನಮ್
॥ ೩ ॥

ಬದರ್ಯಾಶ್ರಮಮಾಸಾದ್ಯ ನರನಾರಾಯಣಾಲಯಮ್ ।
ಸರ್ವದ್ವಂದ್ವಸಹಃ ಶಾಂತಸ್ತಪಸಾऽऽರಾಧಯದ್ಹರಿಮ್
॥ ೪ ॥

ಭಗವಾನ್ ಪುನರಾವ್ರಜ್ಯ ಪುರೀಂ ಯವನವೇಷ್ಟಿತಾಮ್ ।
ಹತ್ವಾ ಮ್ಲೇಚ್ಛಬಲಂ ನಿನ್ಯೇ ತದೀಯಂ ದ್ವಾರಕಾಂ ಧನಮ್
॥ ೫ ॥

ನೀಯಮಾನೇ ಧನೇ ಗೋಭಿರ್ನೃಭಿಶ್ಚಾಚ್ಯುತಚೋದಿತೈಃ ।
ಆಜಗಾಮ ಜರಾಸಂಧಸ್ತ್ರಯೋವಿಂಶತ್ಯನೀಕಪಃ
॥ ೬ ॥

ವಿಲೋಕ್ಯ ವೇಗರಭಸಂ ರಿಪುಸೈನ್ಯಸ್ಯ ಮಾಧವೌ ।
ಮನುಷ್ಯಚೇಷ್ಟಾಮಾಪನ್ನೌ ರಾಜನ್ ದುದ್ರುವತುರ್ಮುತಮ್
॥ ೭ ॥

ವಿಹಾಯ ವಿತ್ತಂ ಪ್ರಚುರಮಭೀತೌ ಭೀರುಭೀತವತ್ ।
ಪದ್ಭ್ಯಾಂ ಪದ್ಮಪಲಾಶಾಭ್ಯಾಂ ಚೇರತುರ್ಬಹುಯೋಜನಮ್
॥ ೮ ॥

ಪಲಾಯಮಾನೌ ತೌ ದೃಷ್ಟ್ವಾ ಮಾಗಧಃ ಪ್ರಹಸನ್ ಬಲೀ ।
ಅನ್ವಧಾವದ್ರಥಾನೀಕೈರೀಶಯೋರಪ್ರಮಾಣವಿತ್
॥ ೯ ॥

ಪ್ರದ್ರುತ್ಯ ದೂರಂ ಸಂಶ್ರಾಂತೌ ತುಂಗಮಾರುಹತಾಂ ಗಿರಿಮ್ ।
ಪ್ರವರ್ಷಣಾಖ್ಯಂ ಭಗವಾನ್ ನಿತ್ಯದಾ ಯತ್ರ ವರ್ಷತಿ
॥ ೧೦ ॥

ಗಿರೌ ನಿಲೀನಾವಾಜ್ಞಾಯ ನಾಧಿಗಮ್ಯ ಪದಂ ನೃಪ ।
ದದಾಹ ಗಿರಿಮೇಧೋಭಿಃ ಸಮಂತಾದಗ್ನಿಮುತ್ಸೃಜನ್
॥ ೧೧ ॥

ತತ ಉತ್ಪತ್ಯ ತರಸಾ ದಹ್ಯಮಾನತಟಾದುಭೌ ।
ದಶೈಕಯೋಜನೋತ್ತುಂಗಾನ್ನಿಪೇತತುರಧೋ ಭುವಿ
॥ ೧೨ ॥

ಅಲಕ್ಷ್ಯಮಾಣೌ ರಿಪುಣಾ ಸಾನುಗೇನ ಯದೂತ್ತಮೌ ।
ಸ್ವಪುರಂ ಪುನರಾಯಾತೌ ಸಮುದ್ರಪರಿಖಾಂ ನೃಪ
॥ ೧೩ ॥

ಸೋऽಪಿ ದಗ್ಧಾವಿತಿ ಮೃಷಾ ಮನ್ವಾನೋ ಬಲಕೇಶವೌ ।
ಬಲಮಾಕೃಷ್ಯ ಸುಮಹನ್ಮಗಧಾನ್ ಮಾಗಧೋ ಯಯೌ
॥ ೧೪ ॥

ಮುಚುಕುಂದ ರಾಜನು ತಪಸ್ಸು ಶ್ರದ್ಧೆ, ಧೈರ್ಯ, ಅನಾಸಕ್ತಿ ಇವುಗಳಿಂದ ಕೂಡಿದ್ದು ಸಂದೇಹ ರಹಿತನಾಗಿದ್ದನು. ಅವನು ತನ್ನ ಚಿತ್ತವನ್ನು ಭಗವಂತನಲ್ಲಿ ತೊಡಗಿಸಿ ಗಂಧಮಾದನ ಪರ್ವತಕ್ಕೆ ಹೋದನು. ॥ ೩॥ ಅಲ್ಲಿಂದ ಭಗವಾನ್ ನರ-ನಾರಾಯಣರ ನಿತ್ಯನಿವಾಸ ಸ್ಥಾನವಾದ ಬದರಿಕಾಶ್ರಮಕ್ಕೆ ತಲುಪಿ ಬಹಳ ಶಾಂತ ಭಾವದಿಂದ ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳನ್ನು ಸಹಿಸುತ್ತಾ ತಪಸ್ಸಿನಿಂದ ಭಗವಂತನ ಆರಾಧನೆಯಲ್ಲಿ ತೊಡಗಿದನು. ॥ ೪ ॥

ಇತ್ತಲಾಗಿ ಭಗವಾನ್ ಶ್ರೀಕೃಷ್ಣನು ಮಥುರೆಗೆ ಮರಳಿದನು. ಅದುವರೆಗೂ ಕಾಲಯವನನ ಸೈನಿಕರು ಮಥುರೆಯನ್ನು ಆಕ್ರಮಿಸಿಕೊಂಡೇ ಇದ್ದರು. ಶ್ರೀಕೃಷ್ಣನು ಆ ಮ್ಲೇಚ್ಛರ ಸೈನ್ಯವನ್ನು ಸಂಹರಿಸಿ, ಅವರ ಎಲ್ಲ ಧನವನ್ನು ಕಸಿದುಕೊಂಡು ದ್ವಾರಕೆಗೆ ತೆರಳಿದನು. ॥ ೫ ॥ ಶ್ರೀಕೃಷ್ಣನ ಆಜ್ಞೆಯಂತೆ ಆ ಧನವನ್ನು ಮನುಷ್ಯರ, ಎತ್ತುಗಳ ಮೂಲಕ ತೆಗೆದುಕೊಂಡು ಹೋಗುತ್ತಿದ್ದಾಗ ಜರಾಸಂಧನು ಪುನಃ ಹದಿನೆಂಟನೆಯ ಬಾರಿಗೆ ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯದೊಂದಿಗೆ ಆಗಮಿಸಿದನು. ॥ ೬ ॥ ಪರೀಕ್ಷಿತನೇ! ಶತ್ರು ಸೈನ್ಯವು ರಭಸದಿಂದ ಬರುತ್ತಿರುವುದನ್ನು ನೋಡಿದ ಭಗವಾನ್ ಶ್ರೀಕೃಷ್ಣ-ಬಲರಾಮರು ಮನುಷ್ಯರಂತೆ ಲೀಲೆಯನ್ನು ತೋರುತ್ತಾ ಅವನ ಇದಿರಿಗೆ ಪಲಾಯನ ಮಾಡಿದರು. ॥ ೭ ॥ ನಿಜವಾಗಿಯೂ ಅವರ ಮನಸ್ಸಿನಲ್ಲಿ ಸ್ವಲ್ಪವೂ ಭಯವಿರಲಿಲ್ಲ. ಆದರೂ ಅತ್ಯಂತ ಭಯಗೊಂಡವರಂತೆ ನಟಿಸುತ್ತಾ, ಆ ಎಲ್ಲ ಧನವನ್ನು ಅಲ್ಲೇ ಬಿಟ್ಟು ಅವರು ಅನೇಕ ಯೋಜನಗಳಷ್ಟು ತಮ್ಮ ಕಮಲದಳದಂತೆ ಇರುವ ಸುಕೋಮಲ ಚರಣಗಳಿಂದ ಓಡುತ್ತಾ ಹೋದರು. ॥ ೮ ॥ ಶ್ರೀಕೃಷ್ಣ-ಬಲರಾಮರು ಓಡುತ್ತಿರುವುದನ್ನು ಮಹಾಬಲಿಷ್ಠನಾದ ಮಾಗಧನು ನೋಡಿ ಗಹಗಹಿಸಿ ನಗುತ್ತಾ ತನ್ನ ರಥ ಸೇನೆಯೊಂದಿಗೆ ಅವರನ್ನು ಹಿಂಬಾಲಿಸಿದನು. ಅವನು ಬಲರಾಮ-ಕೃಷ್ಣರ ಪ್ರಭಾವವನ್ನು ತಿಳಿದವನಾಗಿರಲಿಲ್ಲ. ॥ ೯ ॥ ಬಹಳ ದೂರದವರೆಗೆ ಓಡಿದ್ದರಿಂದ ಸಹೋದರರಿಬ್ಬರೂ ಬಳಲಿ ದಂತಾಗಿ ಎತ್ತರವಾದ ಪ್ರವರ್ಷಣವೆಂಬ ಪರ್ವತವನ್ನು ಹತ್ತಿದರು. ಮೇಘಗಳು ಆ ಪರ್ವತದ ಮೇಲೆ ಸದಾಕಾಲವೂ ಮಳೆಗಳೆ ಯುತ್ತಿದ್ದರಿಂದ ಅದು 'ಪ್ರವರ್ಷಣ'ವೆಂಬ ಹೆಸರನ್ನು ಪಡೆದಿತ್ತು. ॥ ೧೦ ॥ ಪರೀಕ್ಷಿತನೇ! ಅವರಿಬ್ಬರೂ ಬೆಟ್ಟದಲ್ಲಿ ಅವಿತು ಕೊಂಡಿದ್ದು ಎಷ್ಟು ಹುಡುಕಿದರೂ ಅವರು ಕಾಣದಿದ್ದಾಗ ಜರಾಸಂಧನು ಪರ್ವತದ ಸುತ್ತಲೂ ಬೆಂಕಿಯಿಟ್ಟು ಅದನ್ನು ಸುಟ್ಟುಬಿಟ್ಟನು. ॥ ೧೧ ॥ ಪರ್ವತದ ತಪ್ಪಲು ಸುತ್ತಲೂ ಉರಿಯುತ್ತಿರುವುದನ್ನು ಭಗವಂತನು ನೋಡಿದನು. ಆಗ ಸೋದರರಿಬ್ಬರೂ ಜರಾಸಂಧನ ಸೈನ್ಯದಿಂದ ಸುತ್ತುವರಿಯಲ್ಪಟ್ಟ ಹನ್ನೊಂದು ಯೋಜನ ಎತ್ತರವಾಗಿದ್ದ ಆ ಪರ್ವತದಿಂದ ವೇಗವಾಗಿ ಕೆಳಗೆ ಭೂಮಿಗೆ ನೆಗೆದರು. ॥ ೧೨ ॥ ರಾಜೇಂದ್ರ! ಜರಾಸಂಧನಾಗಲೀ, ಅವನ ಸೈನಿಕರಾಗಲೀ ಯಾರಿಗೂ ಅವರು ಕಾಣಿಸಲಿಲ್ಲ. ಅವರಿಬ್ಬರೂ ಅಲ್ಲಿಂದ ಹೊರಟು ಸಮುದ್ರದಿಂದ ಸುತ್ತುವರಿಯಲ್ಪಟ್ಟ ತಮ್ಮ ದ್ವಾರಕೆಗೆ ಹೋಗಿಬಿಟ್ಟರು. ॥ ೧೩. ॥ ಜರಾಸಂಧನು ಶ್ರೀಕೃಷ್ಣ ಬಲರಾಮರನ್ನು ಕಾಣದೆ ಅವರು ಬೆಂಕಿಯಲ್ಲಿ ಸುಟ್ಟು ಹೋಗಿದ್ದಾರೆ ಎಂದು ತಪ್ಪಾಗಿ ತಿಳಿದುಕೊಂಡನು. ಮತ್ತೆ ಸೈನ್ಯದೊಂದಿಗೆ ಹಿಂದಿರುಗಿ ಮಗಧ ದೇಶಕ್ಕೆ ಹೊರಟು ಹೋದನು. ॥ ೧೪ ॥

ಆನರ್ತಾಧಿಪತಿಃ ಶ್ರೀಮಾನ್ ರೈವತೋ ರೇವತೀಂ ಸುತಾಮ್ ।
ಬ್ರಹ್ಮಣಾ ಚೋದಿತಃ ಪ್ರಾದಾದ್ಬಲಾಯೇತಿ ಪುರೋದಿತಮ್
॥ ೧೫ ॥

ಭಗವಾನಪಿ ಗೋವಿಂದ ಉಪಯೇಮೇ ಕುರೂದ್ವಹ ।
ವೈದರ್ಭೀಂ ಭೀಷ್ಮಕಸುತಾಂ ಶ್ರಿಯೋ ಮಾತ್ರಾಂ ಸ್ವಯಂವರೇ
॥ ೧೬ ॥

ಪ್ರಮಥ್ಯ ತರಸಾ ರಾಜ್ಞಃ ಶಾಲ್ವಾದೀಂಶ್ಚೈದ್ಯಪಕ್ಷಗಾನ್ ।
ಪಶ್ಯತಾಂ ಸರ್ವಲೋಕಾನಾಂ ತಾರ್ಕ್ಷ್ಯಪುತ್ರಃ ಸುಧಾಮಿವ
॥ ೧೭ ॥

ರಾಜೋವಾಚ

ಭಗವಾನ್ ಭೀಷ್ಮಕಸುತಾಂ ರುಕ್ಮಿಣೀಂ ರುಚಿರಾನನಾಮ್ ।
ರಾಕ್ಷಸೇನ ವಿಧಾನೇನ ಉಪಯೇಮ ಇತಿ ಶ್ರುತಮ್
॥ ೧೮ ॥

ಭಗವನ್ ಶ್ರೋತುಮಿಚ್ಛಾಮಿ ಕೃಷ್ಣಸ್ಯಾಮಿತತೇಜಸಃ ।
ಯಥಾ ಮಾಗಧಶಾಲ್ವಾದೀನ್ ಜಿತ್ವಾ ಕನ್ಯಾಮುಪಾಹರತ್
॥ ೧೯ ॥

ಬ್ರಹ್ಮನ್ ಕೃಷ್ಣಕಥಾಃ ಪುಣ್ಯಾ ಮಾಧ್ವೀರ್ಲೋಕಮಲಾಪಹಾಃ ।
ಕೋ ನು ತೃಪ್ಯೇತ ಶೃಣ್ವಾನಃ ಶ್ರುತಜ್ಞೋ ನಿತ್ಯನೂತನಾಃ
॥ ೨೦ ॥

ಶ್ರೀಶುಕ ಉವಾಚ

ರಾಜಾಽಽಸೀದ್ಭೀಷ್ಮಕೋ ನಾಮ ವಿದರ್ಭಾಧಿಪತಿರ್ಮಹಾನ್ ।
ತಸ್ಯ ಪಂಚಾಭವನ್ ಪುತ್ರಾಃ ಕನ್ಯೈಕಾ ಚ ವರಾನನಾ
॥ ೨೧ ॥

ರುಕ್ಮ್ಯಗ್ರಜೋ ರುಕ್ಮರಥೋ ರುಕ್ಮಬಾಹುರನಂತರಃ ।
ರುಕ್ಮಕೇಶೋ ರುಕ್ಮಮಾಲೀ ರುಕ್ಮಿಣ್ಯೇಷಾಂ ಸ್ವಸಾ ಸತೀ
॥ ೨೨ ॥

ಸೋಪಶ್ರುತ್ಯ ಮುಕುಂದಸ್ಯ ರೂಪವೀರ್ಯಗುಣಶ್ರಿಯಃ ।
ಗೃಹಾಗತೈರ್ಗೀಯಮಾನಾಸ್ತಂ ಮೇನೇ ಸದೃಶಂ ಪತಿಮ್
॥ ೨೩ ॥

ತಾಂ ಬುದ್ಧಿಲಕ್ಷಣೌದಾರ್ಯರೂಪಶೀಲಗುಣಾಶ್ರಯಾಮ್ ।
ಕೃಷ್ಣಶ್ಚ ಸದೃಶೀಂ ಭಾರ್ಯಾಂ ಸಮುದ್ವೋಢುಂ ಮನೋ ದಧೇ
॥ ೨೪ ॥

ಬಂಧೂನಾಮಿಚ್ಛತಾಂ ದಾತುಂ ಕೃಷ್ಣಾಯ ಭಗಿನೀಂ ನೃಪ ।
ತತೋ ನಿವಾರ್ಯ ಕೃಷ್ಣದ್ವಿಡ್ರುಕ್ಮೀ ಚೈದ್ಯಮಮನ್ಯತ
॥ ೨೫ ॥

ಪರೀಕ್ಷಿತ ಮಹಾರಾಜ! ನಾನು ಹಿಂದೆ (ಒಂಭತ್ತನೆಯ ಸ್ಕಂಧದಲ್ಲಿ) ಆನರ್ತ ದೇಶದ ರಾಜನಾದ ರೈವತನು ತನ್ನ ಮಗಳಾದ ರೇವತಿಯನ್ನು ಬ್ರಹ್ಮದೇವರ ಪ್ರೇರಣೆಯಂತೆ ಬಲರಾಮನಿಗೆ ಕೊಟ್ಟು ವಿವಾಹಮಾಡಿದನೆಂಬ ಸಂಗತಿಯನ್ನು ಹೇಳಿದ್ದೆನು.॥ ೧೫॥ ರಾಜನೇ! ಭಗವಾನ್ ಶ್ರೀಕೃಷ್ಣನೂ ಕೂಡ ಸ್ವಯಂವರಕ್ಕೆ ಬಂದ ಶಿಶುಪಾಲ ಮತ್ತು ಅವನ ಪಕ್ಷಪಾತಿಗಳು ಶಾಲ್ವರೇ ಮೊದಲಾದ ರಾಜರನ್ನು ಬಲಪೂರ್ವಕವಾಗಿ ಪರಾಜಯಗೊಳಿಸಿ, ಎಲ್ಲರೂ ನೋಡುತ್ತಿರುವಂತೆಯೇ ಗರುಡನು ಅಮೃತವನ್ನು ಅಪಹರಿಸಿದಂತೆಯೇ ವಿದರ್ಭದೇಶದ ರಾಜಕುಮಾರಿಯಾದ ರುಕ್ಮಿಣಿಯನ್ನು ಅಪಹರಿಸಿ ತಂದು ಅವಳೊಡನೆ ವಿವಾಹವಾದನು. ರುಕ್ಮಿಣಿಯು ಭೀಷ್ಮಕನ ಕನ್ಯೆಯಾಗಿದ್ದು ಸಾಕ್ಷಾತ್ ಲಕ್ಷ್ಮಿಯ ಅವತಾರವಾಗಿದ್ದಳು. ॥ ೧೬-೧೭ ॥

ಪರೀಕ್ಷಿತ ರಾಜನು ಕೇಳಿದನು - ಪೂಜ್ಯರೇ! ಭಗವಾನ್ ಶ್ರೀಕೃಷ್ಣನು ಭೀಷ್ಮಕನ ಮಗಳಾದ ಪರಮ ಸುಂದರಿ ರುಕ್ಮಿಣೀದೇವಿಯನ್ನು ಬಲವಂತವಾಗಿ ಕರೆತಂದು ರಾಕ್ಷಸ ವಿಧಿಯಂತೆ ಅವಳೊಂದಿಗೆ ವಿವಾಹವಾದನು ಎಂದು ನಾವು ಕೇಳಿದ್ದೇವೆ. ॥ ೧೮ ॥ ಮಹಾತ್ಮರೇ! ಪರಮತೇಜಸ್ವಿಯಾದ ಶ್ರೀಕೃಷ್ಣನು ಜರಾಸಂಧ, ಶಾಲ್ವ ಮೊದಲಾದ ರಾಜರನ್ನು ಗೆದ್ದು ಯಾವ ವಿಧಿಯಿಂದ ರುಕ್ಮಿಣಿಯನ್ನು ಅಪಹರಿಸಿದನು? ಇದನ್ನು ಕೇಳಲು ನಾನು ಇಚ್ಛಿಸುತ್ತೇನೆ. ॥ ೧೯ ॥ ಬ್ರಹ್ಮರ್ಷಿಗಳೇ! ನಿಶ್ಚಯವಾಗಿಯೂ ಭಗವಾನ್ ಶ್ರೀಕೃಷ್ಣನ ಲೀಲಾ ಪ್ರಸಂಗಗಳು ಪುಣ್ಯತಮವಾದವುಗಳು. ಜಗತ್ತಿನ ಪಾಪಗಳನ್ನು ಹೋಗಲಾಡಿಸಿ, ಪವಿತ್ರಮಾಡುವಂತಹುದು. ಇಂತಹ ನಿತ್ಯನೂತನವಾದ ಆ ಲೀಲೆಗಳನ್ನು ಶ್ರವಣಿಸಿ ಯಾವ ರಸಿಕನು ತಾನೇ ತೃಪ್ತಿಹೊಂದಬಲ್ಲನು ? ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಿದರ್ಭದೇಶಕ್ಕೆ ಭೀಷ್ಮಕ ಮಹಾರಾಜನು ಅಧಿಪತಿಯಾಗಿದ್ದನು. ಅವನಿಗೆ ಐವರು ಪುತ್ರರೂ, ಓರ್ವ ಸುಂದರಿಯಾದ ಕನ್ಯೆ ಇದ್ದಳು. ॥ ೨೧ ॥ ಹಿರಿಯ ಪುತ್ರನ ಹೆಸರು ರುಕ್ಮಿ ಎಂದಿದ್ದು ರುಕ್ಮರಥ, ರುಕ್ಮಬಾಹು, ರುಕ್ಮಕೇಶ ಮತ್ತು ರುಕ್ಮಮಾಲಿ ಎಂಬ ನಾಲ್ವರು ಸಹೋದರ ಹೆಸರುಗಳು. ಸತೀ ರುಕ್ಮಿಣಿಯು ಇವರಿಗೆ ಸಹೋದರಿಯಾಗಿದ್ದಳು. ॥ ೨೨ ॥ ಭೀಷ್ಮಕನ ಅರಮನೆಗೆ ಬರುತ್ತಿದ್ದ ಹರಿದಾಸರಿಂದ ಪ್ರಶಂಸಿಸಲ್ಪಟ್ಟ ಭಗವಾನ್ ಶ್ರೀಕೃಷ್ಣನ ಸೌಂದರ್ಯ, ಪರಾಕ್ರಮ, ಗುಣ-ವೈಭವಗಳನ್ನು ರುಕ್ಮಿಣಿಯು ಕೇಳಿದಳು. ಆಗ ಆಕೆಯು ಶ್ರೀಕೃಷ್ಣನೇ ನನಗೆ ಅನುರೂಪನಾದ ಪತಿಯೆಂದು ನಿಶ್ಚಯಿಸಿದಳು. ॥ ೨೩. ॥ ಅತ್ತ ಭಗವಾನ್ ಶ್ರೀಕೃಷ್ಣನೂ ರುಕ್ಮಿಣಿಯು ಅತ್ಯಂತ ಸುಂದರಳೂ, ಪರಮಬುದ್ಧಿವಂತೆಯೂ, ಉದಾರಳೂ, ಸೌಂದರ್ಯ-ಶೀಲಸ್ವಭಾವ ಗುಣಗಳಿಂದ ಅದ್ವಿತೀಯಳೂ ಆಗಿರುವಳೆಂದು ತಿಳಿದುಕೊಂಡು ರುಕ್ಮಿಣಿಯೇ ತನಗೆ ಅನುರೂಪ ಪತ್ನಿಯೆಂದೇ ಭಾವಿಸಿ ಅವಳೊಂದಿಗೆ ವಿವಾಹವಾಗುವುದಾಗಿ ನಿಶ್ಚಯಿಸಿದನು. ॥ ೨೪ ॥ ರುಕ್ಮಿಣಿಯ ವಿವಾಹವು ಶ್ರೀಕೃಷ್ಣನೊಂದಿಗೆ ಆಗಬೇಕೆಂದು ಬಂಧು-ಬಾಂಧವರು ಬಯಸುತ್ತಿದ್ದರು. ಆದರೆ ರುಕ್ಮಿಯು ಶ್ರೀಕೃಷ್ಣನನ್ನು ಬಹಳವಾಗಿ ದ್ವೇಷಿಸುತ್ತಿದ್ದನು. ಅವನು ಆಕೆಯನ್ನು ವಿವಾಹಮಾಡಿಕೊಡಲು ತಡೆದು, ತನ್ನ ಮಿತ್ರನಾದ ಶಿಶುಪಾಲನೇ ನಮ್ಮ ತಂಗಿಗೆ ಯೋಗ್ಯವರನೆಂದು ತಿಳಿಯುತ್ತಿದ್ದನು. ॥ ೨೫ ॥

ತದವೇತ್ಯಾಸಿತಾಪಾಂಗೀ ವೈದರ್ಭೀ ದುರ್ಮನಾ ಭೃಶಮ್ ।
ವಿಚಿಂತ್ಯಾಪ್ತಂ ದ್ವಿಜಂ ಕಂಚಿತ್ ಕೃಷ್ಣಾಯ ಪ್ರಾಹಿಣೋದ್ದ್ರುತಮ್
॥ ೨೬ ॥

ದ್ವಾರಕಾಂ ಸ ಸಮಭ್ಯೇತ್ಯ ಪ್ರತೀಹಾರೈಃ ಪ್ರವೇಶಿತಃ ।
ಅಪಶ್ಯದಾದ್ಯಂ ಪುರುಷಮಾಸೀನಂ ಕಾಂಚನಾಸನೇ
॥ ೨೭ ॥

ದೃಷ್ಟ್ವಾ ಬ್ರಹ್ಮಣ್ಯದೇವಸ್ತಮವರುಹ್ಯ ನಿಜಾಸನಾತ್ ।
ಉಪವೇಶ್ಯಾರ್ಹಯಾಂಚಕ್ರೇ ಯಥಾSSತ್ಮಾನಂ ದಿವೌಕಸಃ
॥ ೨೮ ॥

ತಂ ಭುಕ್ತವಂತಂ ವಿಶ್ರಾಂತಮುಪಗಮ್ಯ ಸತಾಂ ಗತಿಃ ।
ಪಾಣಿನಾಭಿಮೃಶನ್ ಪಾದಾವವ್ಯಗ್ರಸ್ತಮಪೃಚ್ಛತ
॥ ೨೯ ॥

ಕಚ್ಚಿದ್ದ್ವಿಜವರಶ್ರೇಷ್ಠ ಧರ್ಮಸ್ತೇ ವೃದ್ಧಸಮ್ಮತಃ ।
ವರ್ತತೇ ನಾತಿಕೃಚ್ಛ್ರೇಣ ಸಂತುಷ್ಟಮನಸಃ ಸದಾ
॥ ೩೦ ॥

ಸಂತುಷ್ಟೋ ಯರ್ಹಿ ವರ್ತೇತ ಬ್ರಾಹ್ಮಣೋ ಯೇನ ಕೇನಚಿತ್ ।
ಅಹೀಯಮಾನಃ ಸ್ವಾದ್ಧರ್ಮಾತ್ ಸ ಹ್ಯಸ್ಯಾಖಿಲಕಾಮಧುಕ್
॥ ೩೧ ॥

ಅಸಂತುಷ್ಟೋSಸಕೃಲ್ಲೋಕಾನಾಪ್ನೋತ್ಯಪಿ ಸುರೇಶ್ವರಃ ।
ಅಕಿಂಚನೋSಪಿ ಸಂತುಷ್ಟಃ ಶೇತೇ ಸರ್ವಾಂಗವಿಜ್ವರಃ
॥ ೩೨ ॥

ವಿಪ್ರಾನ್ ಸ್ವಲಾಭಸಂತುಷ್ಟಾನ್ ಸಾಧೂನ್ ಭೂತಸುಹೃತ್ತಮಾನ್ ।
ನಿರಹಂಕಾರಿಣಃ ಶಾಂತಾನ್ ನಮಸ್ಯೇ ಶಿರಸಾಸಕೃತ್
॥ ೩೩ ॥

ಕಚ್ಚಿದ್ಬ್ರಹ್ಮನ್ ಕುಶಲಂ ರಾಜತೋ ಯಸ್ಯ ಹಿ ಪ್ರಜಾಃ ।
ಸುಖಿಂ ವಸಂತಿ ವಿಷಯೇ ಪಾಲ್ಯಮಾನಾಃ ಸ ಮೇ ಪ್ರಿಯಃ
॥ ೩೪ ॥

ಯತಸ್ತ್ವಮಾಗತೋ ದುರ್ಗಂ ನಿಸ್ತೀರ್ಯೇಹ ಯದಿಚ್ಛಯಾ ।
ಸರ್ವಂ ನೋ ಬ್ರೂಹ್ಯಗುಹ್ಯಂ ಚೇತ್ ಕಿಂ ಕಾರ್ಯಂ ಕರವಾಮ ತೇ
॥ ೩೫ ॥

ತನ್ನ ಹಿರಿಯಣ್ಣನಾದ ರುಕ್ಮಿಯು ಶಿಶುಪಾಲನೊಂದಿಗೆ ನನ್ನ ವಿವಾಹ ಮಾಡಲಿದ್ದಾನೆಂದು ತಿಳಿದ ಪರಮಸುಂದರಳಾದ ರುಕ್ಮಿಣಿಯು ಅತ್ಯಂತ ದುಃಖಿತಳಾಗಿ ಬಹಳವಾಗಿ ಯೋಚಿಸಿ ಕೊನೆಗೆ ತನ್ನ ವಿಶ್ವಾಸಪಾತ್ರನಾದ ಓರ್ವ ಬ್ರಾಹ್ಮಣನ ಮೂಲಕ ಕೂಡಲೇ ಶ್ರೀಕೃಷ್ಣನಿಗೆ ಸಂದೇಶವನ್ನು ಕಳಿಸಿದಳು. ॥ ೨೬ ॥ ಆ ಬ್ರಾಹ್ಮಣನು ದ್ವಾರಕಾಪಟ್ಟಣಕ್ಕೆ ತಲುಪಿದಾಗ ದ್ವಾರಪಾಲಕರು ಕೃಷ್ಣನ ಅರಮನೆಯೊಳಗೆ ಕರೆದುಕೊಂಡು ಹೋದರು. ಅಲ್ಲಿ ಅವನು ಆದಿಪುರುಷನಾದ ಭಗವಾನ್ ಶ್ರೀಕೃಷ್ಣನು ಸ್ವರ್ಣ ಸಿಂಹಾಸನದ ಮೇಲೆ ವಿರಾಜಮಾನನಾಗಿ ಇರುವುದನ್ನು ನೋಡಿದನು. ॥ ೨೭ ॥ ಬ್ರಾಹ್ಮಣರ ಪರಮಭಕ್ತನಾದ ಭಗವಾನ್ ಶ್ರೀಕೃಷ್ಣನು ಆ ಭೂಸುರೋತ್ತಮನನ್ನು ನೋಡುತ್ತಲೇ ತನ್ನ ಆಸನದಿಂದ ಇಳಿದು, ಅವನನ್ನು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ದೇವತೆಗಳು ಭಗವಂತನನ್ನು ಪೂಜಿಸುವಂತೆಯೇ ಅವನನ್ನು ಪೂಜಿಸಿದನು. ॥ ೨೮ ॥ ಆದರ-ಸತ್ಕಾರವಾದ ಬಳಿಕ, ಕುಶಲ ಪ್ರಶ್ನೆಗಳಾದವು. ಬ್ರಾಹ್ಮಣನು ಉಂಡು-ತಿಂದು ವಿಶ್ರಾಂತಿ ಪಡೆಯುತ್ತಿದ್ದಾಗ ಪರಮಾಶ್ರಯನಾದ ಶ್ರೀಕೃಷ್ಣನು ಅವನ ಬಳಿಯಲ್ಲಿ ಕುಳಿತು ತನ್ನ ಕೋಮಲವಾದ ಕೈಗಳಿಂದ ಅವನ ಪಾದಸೇವೆಯನ್ನು ಮಾಡುತ್ತಾ, ಶಾಂತಭಾವದಿಂದ ಕೇಳಿದನು - ॥ ೨೯ ॥ ದ್ವಿಜಶ್ರೇಷ್ಠನೇ ! ನಿನ್ನ ಮನಸ್ಸು ಸದಾ ಸರ್ವದಾ ಸಂತುಷ್ಟವಾಗಿದೆಯಲ್ಲ ? ಹಿರಿಯರಿಗೆ ಒಪ್ಪಿಗೆಯಾದ ಧರ್ಮವನ್ನು ಆಚರಿಸಲು ನಿನಗೆ ಕಷ್ಟವೇನೂ ಆಗುತ್ತಿಲ್ಲವಲ್ಲ ! ॥ ೩೦ ॥ ಬ್ರಾಹ್ಮಣನು ದೊರೆತುದರಲ್ಲಿ ಸಂತುಷ್ಟನಾಗಿದ್ದು ಸ್ವಧರ್ಮವನ್ನು ಪಾಲಿಸುತ್ತಾ ಅದರಿಂದ ಚ್ಯುತನಾಗದಿದ್ದರೆ ಆ ಸಂತೋಷವೇ ಅವನ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುತ್ತದೆ. ॥ ೩೧ ॥ ಇಂದ್ರಪದವಿಯೂ ದೊರೆತರೂ ಸಂತೋಷವಾಗದಿರುವವನು ಸುಖಕ್ಕಾಗಿ ಒಂದು ಲೋಕದಿಂದ ಮತ್ತೊಂದು ಲೋಕಗಳಿಗೂ ಪದೇ-ಪದೇ ಅಲೆಯುತ್ತಾ ಎಂದಿಗೂ ಶಾಂತಿಯಿಂದ ಕುಳ್ಳಿರಲಾಗುವುದಿಲ್ಲ. ಆದರೆ ಬಳಿಯಲ್ಲಿ ಸ್ವಲ್ಪವೂ ಸಂಗ್ರಹ-ಪರಿಗ್ರಹವಿಲ್ಲದಿರುವವನು ಅದೇ ಸ್ಥಿತಿಯಲ್ಲಿ ಸಂತುಷ್ಟನಾಗಿದ್ದರೆ, ಅವನಿಗೆ ಎಲ್ಲ ರೀತಿಯ ಸಂತಾಪರಹಿತವಾದ ಸುಖ-ನಿದ್ದೆಯು ಬರುತ್ತದೆ. ॥ ೩೨ ॥ ತಾನಾಗಿ ದೊರೆತಿರುವ ವಸ್ತುವಿನಲ್ಲಿ ಸಂತೋಷಪಡುವ, ಸ್ವಭಾವವು ಅತ್ಯಂತ ಮೃದು ಮಧುರವಾಗಿದ್ದು, ಸಮಸ್ತ ಪ್ರಾಣಿಗಳ ಹಿತೈಷಿಯಾದ, ಅಹಂಕಾರ ರಹಿತರಾಗಿ ಶಾಂತರಾದ ಬ್ರಾಹ್ಮಣರನ್ನು ನಾನು ಸದಾಕಾಲ ತಲೆಬಾಗಿ ನಮಸ್ಕರಿಸುತ್ತೇನೆ. ॥ ೩೩ ॥ ಬ್ರಾಹ್ಮಣೋತ್ತಮನೇ ! ರಾಜನು ನಿಮ್ಮ ಯೋಗ-ಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವನಲ್ಲ ? ಯಾರ ರಾಜ್ಯದಲ್ಲಿ ಪ್ರಜೆಗಳು ರಾಜನಿಂದ ಪಾಲಿಸಲ್ಪಡುತ್ತಾ, ಸುಖದಿಂದ ಇರುವರೋ, ಅಂತಹ ರಾಜನು ನನಗೆ ಅತ್ಯಂತ ಪ್ರಿಯನು. ॥ ೩೪ ॥ ಭೂಸುರ ಶ್ರೇಷ್ಠರೇ ! ನೀವು ಎಲ್ಲಿಂದ, ಯಾವ ಕಾರ್ಯಾರ್ಥವಾಗಿ, ಯಾವ ಅಭಿಲಾಷೆಯಿಂದ ಇಷ್ಟೊಂದು ಕಠಿಣವಾದ ಮಾರ್ಗವನ್ನು ಕ್ರಮಿಸಿ ಇಲ್ಲಿಗೆ ಆಗಮಿಸಿರುವಿರಿ. ಅಂತಹ ವಿಶೇಷವಾದ ಗೋಪ್ಯವಲ್ಲವಾಗಿದ್ದರೆ ನನಗೆ ಹೇಳಿರಿ. ನಾನು ನಿಮಗೆ ಯಾವ ಸೇವೆ ಮಾಡಲಿ? ಅಪ್ಪಣೆ ಕೊಡಿರಿ. ॥ ೩೫ ॥

ಏವಂ ಸಂಪೃಷ್ಟಸಂಪ್ರಶ್ನೋ ಬ್ರಾಹ್ಮಣಃ ಪರಮೇಷ್ಠಿನಾ ।
ಲೀಲಾಗೃಹೀತದೇಹೇನ ತಸ್ಮೈ ಸರ್ವಮವರ್ಣಯತ್ ॥ ೩೬ ॥

ಪರೀಕ್ಷಿತನೇ ! ಲೀಲಾಮಾನುಷ ವಿಗ್ರಹನಾದ ಭಗವಾನ್ ಶ್ರೀಕೃಷ್ಣನು ಹೀಗೆ ಬ್ರಾಹ್ಮಣನಲ್ಲಿ ವಿಚಾರಿಸಿದಾಗ, ಅವನು ಎಲ್ಲವನ್ನೂ ಅರುಹಿದ ಬಳಿಕ ರುಕ್ಮಿಣೀದೇವಿಯ ಸಂದೇಶವನ್ನು ಭಗವಂತನಲ್ಲಿ ನಿವೇದಿಸಿಕೊಂಡನು. ॥ ೩೬ ॥

ರುಕ್ಮಿಣ್ಯುವಾಚ

ಶ್ರುತ್ವಾ ಗುಣಾನ್ ಭುವನಸುಂದರ ಶೃಣ್ವತಾಂ ತೇ
ನಿರ್ವಿಶ್ಯ ಕರ್ಣವಿವರೈರ್ಹರತೋಽಂಗತಾಪಮ್ ।
ರೂಪಂ ದೃಶಾಂ ದೃಶಿಮತಾಮಖಿಲಾರ್ಥಲಾಭಂ
ತ್ವಯ್ಯಚ್ಯುತಾವಿಶತಿ ಚಿತ್ತಮಪತ್ರಪಂ ಮೇ ॥ ೩೭ ॥

ರುಕ್ಮಿಣೀದೇವಿಯು ಹೇಳಿರುವಳು – ಓ ತ್ರಿಭುವನ ಸುಂದರನೇ ! ನಿನ್ನ ಗುಣಗಳು ಶ್ರವಣಿಸುವವರ ಕಿವಿಗಳ ಮೂಲಕ ಹೃದಯವನ್ನು ಪ್ರವೇಶಿಸಿ ಸರ್ವಾಂಗಗಳ ತಾಪವನ್ನು ಜನ್ಮ-ಜನ್ಮಾಂತರದ ಉರಿಯನ್ನು ಕಳೆಯುತ್ತವೆ. ನಿನ್ನ ರೂಪ-ಸೌಂದರ್ಯವಾದರೋ ಕಣ್ಣುಗಳಿಗೆ ಧರ್ಮಾರ್ಥಕಾಮ – ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಕೊಡುತ್ತದೆ. ನಿನ್ನ ದಿವ್ಯರೂಪವನ್ನು ಸಂದರ್ಶಿಸಿದವರಿಗೆ ಸಕಲ ಸಿದ್ಧಿಗಳೂ ದೊರಕುತ್ತವೆ. ಅಂತಹ ಗುಣಸಾಗರನಾದ ಅಚ್ಯುತನೇ ! ನಿನ್ನಲ್ಲಿ ನನ್ನ ಮನಸ್ಸು ಯಾವುದೇ ನಾಚಿಕೆಯಿಲ್ಲದೆ ನೆಟ್ಟಿದೆ. ॥ ೩೭ ॥ ಪ್ರೇಮಸ್ವರೂಪನಾದ ಶ್ಯಾಮ ಸುಂದರನೇ ! ಯಾವ ದೃಷ್ಟಿಯಿಂದ ನೋಡಿದರೂ, ಕುಲ, ಶೀಲ, ಸ್ವಭಾವ, ಸೌಂದರ್ಯ, ವಿದ್ಯೆ, ವಯಸ್ಸು, ಧನ-ಧಾಮ – ಹೀಗೆ ಎಲ್ಲದರಲ್ಲಿಯೂ ನೀನು ಅದ್ವಿತೀಯನಾಗಿರುವೆ. ನಿನ್ನಂತೆ ನೀನೇ ಆಗಿರುವೆ. ನರಶ್ರೇಷ್ಠನೇ ! ನೀನೇ ಹೇಳು. ಸತ್ಕುಲ ಪ್ರಸೂತೆಯಾದ, ಧೈರ್ಯಶಾಲಿಯಾದ, ಯಾವ ಕನ್ಯೆಯು ತಾನೇ ಕಾಲವು ಸನ್ನಿಹಿತವಾದಾಗ ಸಕಲ ಸದ್ಗುಣ ಸಂಪನ್ನನಾದ, ನರಲೋಕದ ಪ್ರಾಣಿಗಳ ಮನಸ್ಸನ್ನು ಆನಂದಗೊಳಿಸುವ ಸುಂದರನಾದ ನಿನ್ನನ್ನು ಪತಿಯನ್ನಾಗಿ ವರಿಸದೇ ಇರುವಳು ? ॥ ೩೮ ॥ ಪ್ರಿಯತಮನೇ ! ನಾನು ನಿನ್ನನ್ನು ಪತಿಯನ್ನಾಗಿ ವರಿಸಿಬಿಟ್ಟಿದ್ದೇನೆ. ನಾನು ನಿನಗೆ ಆತ್ಮಸಮರ್ಪಣೆ ಮಾಡಿರುವೆನು. ನೀನು ಆಂತರ್ಯಾಮಿಯಾಗಿರುವೆ. ನನ್ನ ಹೃದಯದಲ್ಲಿರುವುದನ್ನು ನೀನು ತಿಳಿದೇ ಇರುವೆ. ನೀನು ಇಲ್ಲಿಗೆ ಬಂದು ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸು. ಕಮಲನಯನ ! ಪ್ರಾಣವಲ್ಲಭ ! ನಾನು ನಿನ್ನಂತಹ ವೀರನಿಗೆ ಸಮರ್ಪಿತಳಾಗಿರುವೆನು ; ನಿನ್ನವಳಾಗಿರುವೆನು. ಸಿಂಹನಿಗೆ ಸಿಗಬೇಕಾದ ಭಾಗವನ್ನು ನರಿಯು ಮುಟ್ಟುವ ಆ ಶಿಶುಪಾಲನು ಎಲ್ಲಾದರೂ ಹತ್ತಿರಕ್ಕೆ ಬಂದು ನನ್ನನ್ನು ಸ್ಪರ್ಶಿಸದಿರಲಿ. ॥ ೩೯ ॥ ನಾನು ಈ ಹಿಂದೆ ಮಾಡಿದ ಇಷ್ಟಾ-ಪೂರ್ತಾದಿಗಳಿಂದಲೂ, ದಾನಗಳಿಂದಲೂ, ವ್ರತನಿಯಮಾದಿಗಳಿಂದಲೂ, ದೇವ-ಬ್ರಾಹ್ಮಣ ಗುರು ಜನರನ್ನು ಪೂಜಿಸುವುದರಿಂದಲೂ ಭಗವಾನ್ ಪರಮೇಶ್ವರನ ಆರಾಧನೆಯಿಂದ ಅವನು ಪ್ರಸನ್ನನಾಗಿದ್ದರೆ ಭಗವಾನ್ ಶ್ರೀಕೃಷ್ಣನು ಆಗಮಿಸಿ ನನ್ನ ಪಾಣಿಗ್ರಹಣಮಾಡಲಿ. ಶಿಶುಪಾಲನೇ ಆಗಲೀ, ಬೇರೆ ಯಾರೇ ಆಗಲಿ ನನ್ನ ಕೈ ಹಿಡಿಯುವುದು ಬೇಡ. ॥ ೪೦ ॥ ಪ್ರಭೋ ! ನೀನು ಅಜಿತನಾಗಿರುವೆ. ನನ್ನ ವಿವಾಹವು ನಡೆಯುವ ಒಂದು ದಿನ ಮುಂಚಿತವಾಗಿ ನೀನು ನಮ್ಮ ರಾಜಧಾನಿಗೆ ಗುಪ್ತರೂಪದಿಂದ ಬಂದುಬಿಡು. ಮತ್ತೆ ಶಿಶುಪಾಲ ಹಾಗೂ ಜರಾಸಂಧರ ಸೇನೆಗಳನ್ನು ಧ್ವಂಸಮಾಡಿ ವೀರ್ಯಶುಲ್ಕನಾದ ನನ್ನನ್ನು ಬಲವಂತವಾಗಿ ಸೆಳೆದೊಯ್ದು ರಾಕ್ಷಸವಿಧಿಯಂತೆ ಪಾಣಿಗ್ರಹಣ ಮಾಡಿಕೋ. ॥ ೪೧ ॥

ಕಾ ತ್ವಾಮುಕುಂದ ಮಹತೀ ಕುಲಶೀಲರೂಪ-
ವಿದ್ಯಾವಯೋದ್ರವಿಣಧಾಮಭಿರಾತ್ಮತುಲ್ಯಮ್ ।
ಧೀರಾ ಪತಿಂ ಕುಲವತೀ ನ ವೃಣೀತ ಕನ್ಯಾ
ಕಾಲೇ ನೃಸಿಂಹ ನರಲೋಕಮನೋಽಭಿರಾಮಮ್ ॥ ೩೯ ॥

ತನ್ಮೇ ಭವಾನ್ ಖಲು ವೃತಃ ಪತಿರಂಗ ಜಾಯಾ-
ಮಾತ್ಮಾರ್ಪಿತಶ್ಚ ಭವತೋಽತ್ರ ವಿಭೋ ವಿಧೇಹಿ ।
ಮಾ ವೀರಭಾಗಮಭಿಮರ್ಶತು ಚೈದ್ಯ ಆರಾದ್
ಗೋಮಾಯುವನ್ಮೃಗಪತೇರ್ಬಲಿಮಂಬುಜಾಕ್ಷ ॥ ೪೨ ॥

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ-
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ ।
ಆರಾಧಿತೋ ಯದಿ ಗದಾಗ್ರಜ ಏತ್ಯ ಪಾಣಿಂ
ಗೃಹ್ಣಾತು ಮೇ ನ ದಮಘೋಷಸುತಾದಯೋಽನ್ಯೇ ॥ ೪೦ ॥

ಶ್ವೋಭಾವಿನಿ ತ್ವಮಜಿತೋದ್ವಹನೇ ವಿದರ್ಭಾನ್
ಗುಪ್ತಃ ಸಮೇತ್ಯ ಪೃತನಾಪತಿಭಿಃ ಪರೀತಃ ।
ನಿರ್ಮಥ್ಯ ಚೈದ್ಯಮಗಧೇಂದ್ರಬಲಂ ಪ್ರಸಹ್ಯ
ಮಾಂ ರಾಕ್ಷಸೇನ ವಿಧಿನೋದ್ವಹ ವೀರ್ಯಶುಲ್ಕಾಮ್ ॥ ೪೧ ॥

ಅಂತಃಪುರಾಂತರಚರೀಮನಿಹತ್ಯ ಬಂಧೂಂ-
ಸ್ತ್ವಾಮುದ್ವಹೇ ಕಥಮಿತಿ ಪ್ರವದಾಮ್ಯುಪಾಯಮ್ ।
ಪೂರ್ವೇದ್ಯುರಸ್ತಿ ಮಹತೀ ಕುಲದೇವಿಯಾತ್ರಾ
ಯಸ್ಯಾಂ ಬಹಿರ್ನವವಧೂರ್ಗಿರಿಜಾಮುಪೇಯಾತ್ ॥ ೪೨ ॥

ಅಂತಃಪುರದ ರಾಣೀವಾಸದಲ್ಲಿರುವ ನನ್ನನ್ನು ಅಪಹರಿಸಿ ಕೊಂಡು ಬರಬೇಕಾದರೆ ತಡೆಯಲು ಬರುವ ರಾಜಭಟರನ್ನು, ಬಂಧುಗಳನ್ನು ಕೊಲ್ಲದೆ ಹೇಗೆ ತರಲಿ? ಎಂದು ನೀನು ಯೋಚಿಸುವೆಯಾದರೆ, ಇದಕ್ಕೊಂದು ಉಪಾಯವನ್ನು ನಾನು ತಿಳಿಸುತ್ತೇನೆ. ನಮ್ಮ ಕುಲಾಚಾರದಂತೆ ವಿವಾಹದ ಹಿಂದಿನ ದಿವಸ ಕುಲದೇವಿಯದರ್ಶನ ಮಾಡಲು ದೊಡ್ಡದೊಂದು ಯಾತ್ರೆಯೇ ಹೊರಡುತ್ತದೆ. ಅದರಲ್ಲಿ ವಿವಾಹವಾಗುವ ನವವಧುವು ಗಿರಿಜಾ ದೇವಿಯ ಮಂದಿರಕ್ಕೆ ಹೋಗಬೇಕು. ಆ ಸಮಯದಲ್ಲಿ ನೀನು ನನ್ನನು ಅಪಹರಿಸಿಕೊಂಡು ಹೋಗಬಹುದು. ॥ ೪೨ ॥

ಯಸ್ಯಾಂಘ್ರಿಪಂಕಜರಜಃಸ್ನಪನಂ ಮಹಾಂತೋ
ವಾಂಛಂತ್ಯುಮಾಪತಿರಿವಾತ್ಮತಮೋಽಪಹತ್ಯೈ ।
ಯರ್ಹ್ಯಂಬುಜಾಕ್ಷ ನ ಲಭೇಯ ಭವತ್ಪ್ರಸಾದಂ
ಜಹ್ಯಾಮಸೂನ್ ವ್ರತಕೃಶಾನ್ ಶತಜನ್ಮಭಿಃ ಸ್ಯಾತ್ ॥ ೪೩ ॥

ಕಮಲಾಕ್ಷನೇ ! ಉಮಾಪತಿಯಾದ ಭಗವಾನ್ ಶಂಕರನಿಗೆ ಸಮಾನ ರಾದ ದೊಡ್ಡ-ದೊಡ್ಡ ಮಹಾಪುರುಷರೂ ಕೂಡ ಆತ್ಮಶುದ್ಧಿಗಾಗಿ ನಿನ್ನ ಚರಣಕಮಲಗಳ ಧೂಳಿಯಲ್ಲಿ ಸ್ನಾನಮಾಡಲು ಬಯಸು ತ್ತಾರೆ. ನನಗೇನಾದರೂ ನಿನ್ನ ಪ್ರಸಾದವು, ಚರಣರಜವು ಪಡೆಯ ಲಾಗದಿದ್ದರೆ ವ್ರತೋಪವಾಸಾದಿಗಳಿಂದ ಶರೀರವನ್ನು ಶೋಷಿಸಿ ಪ್ರಾಣತ್ಯಾಗಮಾಡುತ್ತೇನೆ. ಬೇಕಾದರೆ ನೂರಾರು ಜನ್ಮಗಳು ಕಳೆದಾದರೂ ನಿನ್ನ ಆ ಪ್ರಸಾದವನ್ನು ಅವಶ್ಯಕವಾಗಿ ಪಡೆಯುತ್ತೇನೆ. ॥ ೪೩ ॥

ಬ್ರಾಹ್ಮಣ ಉವಾಚ

ಇತ್ಯೇತೇ ಗುಹ್ಯಸಂದೇಶಾ ಯದುದೇವ ಮಯಾಽಽಹೃತಾಃ ।
ವಿಮೃಶ್ಯ ಕರ್ತುಂ ಯಚ್ಚಾತ್ರ ಕ್ರಿಯತಾಂ ತದನಂತರಮ್
॥ ೪೪ ॥

ಬ್ರಾಹ್ಮಣನು ಹೇಳುತ್ತಾನೆ – ಯದುವಂಶ ಶಿರೋಮಣಿಯೇ ! ಇದೇ ರುಕ್ಮಿಣಿಯು ಕಳಿಸಿದ ಗುಹ್ಯವಾದ ಸಂದೇಶವಾಗಿದೆ. ಅದನ್ನು ಎತ್ತಿಕೊಂಡು ನಾನು ನಿನ್ನ ಬಳಿಗೆ ಬಂದಿರುವೆನು. ಈ ಸಂಬಂಧದಲ್ಲಿ ಏನು ಮಾಡಬೇಕೋ ಅದನ್ನು ಪರ್ಯಾಲೋಚಿಸಿ, ಅದಕ್ಕನು ಸಾರವಾಗಿ ಅತಿ ತ್ವರೆಯಿಂದ ಕಾರ್ಯವನ್ನು ಮಾಡು. ॥ ೪೪ ॥

ಐವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೫೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುಕ್ಮಿಣ್ಯುದ್ವಾಹಪ್ರಸ್ತಾವೇ ದ್ವಿಪಂಚಾಶತ್ತಮೋಽಧ್ಯಾಯಃ ॥ ೫೨ ॥

ಐವತ್ತಮೂರನೆಯ ಅಧ್ಯಾಯ

ರುಕ್ಮಿಣೀ ಕಲ್ಯಾಣ

ಶ್ರೀಶುಕ ಉವಾಚ

ವೈದರ್ಭ್ಯಾಃ ಸ ತು ಸಂದೇಶಂ ನಿಶಮ್ಯ ಯದುನಂದನಃ ।
ಪ್ರಗೃಹ್ಯ ಪಾಣಿನಾ ಪಾಣಿಂ ಪ್ರಹಸನ್ನಿದಮಬ್ರವೀತ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ವಿದರ್ಭ ರಾಜಪುತ್ರಿಯಾದ ರುಕ್ಮಿಣಿಯ ಈ ಸಂದೇಶವನ್ನು ಕೇಳಿ ಯದುವಂಶಜನಾದ ಶ್ರೀಕೃಷ್ಣನು ತನ್ನ ಕೈಯಿಂದ ಬ್ರಾಹ್ಮಣನ ಕೈಯನ್ನು ಹಿಡಿದುಕೊಂಡು ನಗುತ್ತಾ ಇಂತೆಂದನು. ॥ ೧ ॥

ಶ್ರೀಭಗವಾನುವಾಚ

ತಥಾಹಮಪಿ ತಚ್ಚಿತ್ತೋ ನಿದ್ರಾಂ ಚ ನ ಲಭೇ ನಿಶಿ ।
ವೇದಾಹಂ ರುಕ್ಮಿಣಾ ದ್ವೇಷಾನ್ಮಮೋದ್ವಾಹೋ ನಿವಾರಿತಃ
॥ ೨ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಬ್ರಾಹ್ಮಣೋತ್ತಮರೇ ! ವಿದರ್ಭರಾಜಕುಮಾರಿಯು ನನ್ನನ್ನು ಬಯಸುವಂತೆಯೇ ನಾನು ಆಕೆಯನ್ನು ಬಯಸುತ್ತಿರುವೆನು. ನನ್ನ ಮನಸ್ಸು ಅವಳಲ್ಲೇ ನೆಲೆಸಿಬಿಟ್ಟಿದೆ. ರಾತ್ರಿಯಲ್ಲಿ ನನಗೆ ನಿದ್ದೆಯೇ ಬರುವುದಿಲ್ಲ. ರುಕ್ಮಿಯು ದ್ವೇಷದಿಂದ ನನ್ನ ವಿವಾಹವನ್ನು ತಡೆಯುತ್ತಿದ್ದಾನೆ ಎಂಬುದನ್ನು ನಾನು ಬಲ್ಲೆನು. ॥ ೨ ॥

ತಾಮಾನಯಿಷ್ಯ ಉನ್ಮಥ್ಯ ರಾಜನ್ಯಾಪಸದಾನ್ ಮೃಧೇ ।
ಮತ್ಪರಾಮನವದ್ಯಾಂಗೀಮೇಧಸೋಽಗ್ನಿಶಿಖಾಮಿವ
॥ ೩ ॥

ಶ್ರೀಶುಕ ಉವಾಚ

ಉದ್ವಾಹರ್ಕ್ಷಂ ಚ ವಿಜ್ಞಾಯ ರುಕ್ಮಿಣ್ಯಾ ಮಧುಸೂದನಃ ।
ರಥಃ ಸಂಯುಜ್ಯತಾಮಾಶು ದಾರುಕೇತ್ಯಾಹ ಸಾರಥಿಮ್
॥ ೪ ॥

ಸ ಚಾಶ್ವೈಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕೈಃ ।
ಯುಕ್ತಂ ರಥಮುಪಾನೀಯ ತಸ್ಥೌ ಪ್ರಾಂಜಲಿರಗ್ರತಃ
॥ ೫ ॥

ಆರುಹ್ಯ ಸ್ಯಂದನಂ ಶೌರಿರ್ದ್ವಿಜಮಾರೋಪ್ಯ ತೂರ್ಣಗೈಃ ।
ಆನರ್ತಾದೇಕರಾತ್ರೇಣ ವಿದರ್ಭಾನಗಮದ್ಧಯೈಃ
॥ ೬ ॥

ರಾಜಾ ಸ ಕುಂಡಿನಪತಿಃ ಪುತ್ರಸ್ನೇಹವಶಂ ಗತಃ ।
ಶಿಶುಪಾಲಾಯ ಸ್ವಾಂ ಕನ್ಯಾಂ ದಾಸ್ಯನ್ ಕರ್ಮಾಣ್ಯಕಾರಯತ್
॥ ೭ ॥

ಪುರಂ ಸಮ್ಮೃಷ್ಟಸಂಸಿಕ್ತಮಾರ್ಗರಥ್ಯಾಚತುಷ್ಪಥಮ್ ।
ಚಿತ್ರಧ್ವಜಪತಾಕಾಭಿಸ್ತೋರಣೈಃ ಸಮಲಂಕೃತಮ್
॥ ೮ ॥

ಸ್ರಗ್ಗಂಧಮಾಲ್ಯಾಭರಣೈರ್ವಿರಜೋಽಂಬರಭೂಷಿತೈಃ ।
ಜುಷ್ಟಂ ಸ್ತ್ರೀಪುರುಷೈಃ ಶ್ರೀಮದ್ಗೃಹೈರಗುರುಧೂಪಿತೈಃ
॥ ೯ ॥

ಪಿತೃನ್ ದೇವಾನ್ ಸಮಭ್ಯರ್ಚ್ಯ ವಿಪ್ರಾಂಶ್ಚ ವಿಧಿವನ್ನೃಪ ।
ಭೋಜಯಿತ್ವಾಯಥಾನ್ಯಾಯಂ ವಾಚಯಾಮಾಸ ಮಂಗಲಮ್
॥ ೧೦ ॥

ಸುಸ್ನಾತಾಂ ಸುದತೀಂ ಕನ್ಯಾಂ ಕೃತಕೌತುಕಮಂಗಲಾಮ್ ।
ಅಹತಾಂಶುಕಯುಗ್ಮೇನ ಭೂಷಿತಾಂ ಭೂಷಣೋತ್ತಮೈಃ
॥ ೧೧ ॥

ಚಕ್ರುಃ ಸಾಮರ್ಗ್ಯಜುರ್ಮಂತ್ರೈರ್ವಧ್ವಾ ರಕ್ಷಾಂ ದ್ವಿಜೋತ್ತಮಾಃ ।
ಪುರೋಹಿತೋಽಥರ್ವವಿದ್ವೈ ಜುಹಾವ ಗ್ರಹಶಾಂತಯೇ
॥ ೧೨ ॥

ಹಿರಣ್ಯರೂಪ್ಯವಾಸಾಂಸಿ ತಿಲಾಂಶ್ಚ ಗುಡಮಿಶ್ರಿತಾನ್ ।
ಪ್ರಾದಾದ್ಧೇನೂಂಶ್ಚ ವಿಪ್ರೇಭ್ಯೋ ರಾಜಾ ವಿಧಿವಿದಾಂ ವರಃ
॥ ೧೩ ॥

ಆದರೆ ವಿಪ್ರೋತ್ತಮರೇ! ಎರಡು ಅರಣಿಗಳನ್ನು ಮಥಿಸಿ ಅಗ್ನಿಯನ್ನು ಹೊರತರುವಂತೆಯೇ ಯುದ್ಧದಲ್ಲಿ ಹೆಸರಾಂತ ಕ್ಷತ್ರಿಯ ಕುಲಕಲಂಕರಾದ ಶಿಶುಪಾಲ, ಜರಾಸಂಧರೇ ಮೊದಲಾದವರನ್ನು ಮಥಿಸಿ ನನ್ನಲ್ಲಿಯೇ ಆಸಕ್ತಳಾಗಿರುವ ಪರಮ ಸುಂದರಿಯಾದ ರುಕ್ಮಿಣಿಯನ್ನು ಕರೆತರುತ್ತೇನೆ. ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಮಧುಸೂದನ ಶ್ರೀಕೃಷ್ಣನು ಬ್ರಾಹ್ಮಣನಿಗೆ ಹೀಗೆ ಹೇಳಿ ರುಕ್ಮಿಣಿಯ ವಿವಾಹದ ಮುಹೂರ್ತವನ್ನು ಅವನಿಂದ ತಿಳಿದುಕೊಂಡು ಪ್ರಯಾಣಕ್ಕಾಗಿ ರಥವನ್ನು ಬೇಗನೇ ಸಿದ್ಧಗೊಳಿಸುವಂತೆ ಸಾರಥಿಯಾದ ದಾರುಕನಿಗೆ ಹೇಳಿದನು. ॥ ೪ ॥ ದಾರುಕನು ಭಗವಂತನ ರಥಕ್ಕೆ ಶೈಬ್ಯ-ಸುಗ್ರೀವ-ಮೇಘಪುಷ್ಪ ಮತ್ತು ಬಲಾಹಕಗಳೆಂಬ ದಿವ್ಯ ಕುದುರೆಗಳನ್ನು ಹೂಡಿ, ಸಜ್ಜುಗೊಳಿಸಿ ಕೈ ಜೋಡಿಸಿಕೊಂಡು ಶ್ರೀಕೃಷ್ಣನ ಮುಂದೆ ನಿಂತುಕೊಂಡನು.॥ ೫ ॥ ಶೌರಿಯು ಮೊದಲು ಬ್ರಾಹ್ಮಣನನ್ನು ರಥದಲ್ಲಿ ಹತ್ತಿಸಿ, ತಾನೂ ರಥಾರೂಢನಾಗಿ ಶೀಘ್ರಗಾಮಿಗಳಾದ ಕುದುರೆಗಳ ಮೂಲಕ ಒಂದೇ ರಾತ್ರಿಯಲ್ಲಿ ಆನರ್ತದೇಶದಿಂದ ವಿದರ್ಭದೇಶಕ್ಕೆ ಬಂದು ತಲುಪಿದನು. ॥ ೬ ॥ ಕುಂಡಿನನರೇಶನಾದ ಭೀಷ್ಮಕನು ತನ್ನ ಮಗನಾದ ರುಕ್ಮಿಯ ಮೇಲಿನ ವ್ಯಾಮೋಹದಿಂದ ಅವನ ಮಾತಿನಂತೆ ತನ್ನ ಕನ್ಯೆಯಾದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆಮಾಡಲು ವಿವಾಹೋತ್ಸವದ ಸಿದ್ಧತೆಗಳನ್ನು ಮಾಡತೊಡಗಿದನು. ॥ ೭ ॥

ಕುಂಡಿನ ನಗರದ ರಾಜಬೀದಿಗಳನ್ನು, ನಾಲ್ಕು ಬೀದಿಗಳು ಸೇರುವ ಚೌಕಗಳನ್ನು, ಗುಡಿಸಿ ಸಾರಿಸಿ, ಗಂಧೋದಕವನ್ನು ಎರಚಲಾಗಿತ್ತು. ಚಿತ್ರ-ವಿಚಿತ್ರವಾದ ಧ್ವಜಗಳಿಂದಲೂ, ಪತಾಕೆಗಳಿಂದಲೂ, ತೋರಣಗಳಿಂದಲೂ ಸಿಂಗರಿಸಿತ್ತು. ॥ ೮ ॥ ಆಲ್ಲಿಯ ಸ್ತ್ರೀ-ಪುರುಷರೆಲ್ಲರೂ ಪುಷ್ಪಹಾರಗಳಿಂದಲೂ, ಸುಗಂಧ ಯುಕ್ತವಾದ ಮಾಲೆಗಳಿಂದಲೂ, ನಾನಾ ವಿಧವಾದ ಸ್ವರ್ಣಾಭರಣಗಳಿಂದಲೂ, ನವೀನ ವಸ್ತ್ರಗಳಿಂದಲೂ ಭೂಷಿತರಾಗಿದ್ದರು. ಅಂದವಾದ ಮನೆಗಳಿಂದ ಅಗರು - ಚಂದನದ ಸುಗಂಧವು ಹೊರಸೂಸುತ್ತಿತ್ತು. ॥ ೯ ॥ ಪರೀಕ್ಷಿತನೇ! ಮಹಾರಾಜನಾದ ಭೀಷ್ಮಕನು ದೇವ-ಪಿತೃಗಳನ್ನು ಯಥಾವಿಧಿಯಾಗಿ ಪೂಜಿಸಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ನಿಯಮಾನುಸಾರ ಸ್ವಸ್ತಿವಾಚನವನ್ನು ಮಾಡಿಸಿದನು. ॥ ೧೦ ॥ ಸುಂದರವಾದ ಹಲ್ಲುಗಳಿಂದ ಶೋಭಿಸುತ್ತಿದ್ದ ಪರಮಸುಂದರಿಯಾದ ರುಕ್ಮಿಣೀದೇವಿಗೆ ಮಂಗಳಸ್ನಾನವನ್ನು ಮಾಡಿಸಿ, ನೂತನವಸ್ತ್ರಗಳನ್ನುಡಿಸಿ, ದಿವ್ಯಾಭರಣಗಳನ್ನು ತೊಡಿಸಿ, ಕೈಗಳಿಗೆ ಮಂಗಳಕರವಾದ ಕಂಕಣವನ್ನು ಕಟ್ಟಿದರು. ॥ ೧೧ ॥ ದ್ವಿಜಶ್ರೇಷ್ಠರು ಋಗ್ಯಜುಃ ಸಾಮ ಮಂತ್ರಗಳಿಂದ ನವವಧುವಿಗೆ ರಕ್ಷಾಬಂಧನವನ್ನು ಮಾಡಿದರು. ಅಥರ್ವವೇದದ ವಿದ್ವಾಂಸರಾದ ಪುರೋಹಿತರು ಗ್ರಹಶಾಂತಿಗಾಗಿ ಹೋಮವನ್ನು ಮಾಡಿದರು. ॥ ೧೨ ॥ ವಿಧಿನಿಯಮಗಳನ್ನು ಬಲ್ಲವರಲ್ಲಿ ಶ್ರೇಷ್ಠನಾದ ಭೀಷ್ಮಕಮಹಾರಾಜನು ಬ್ರಾಹ್ಮಣರಿಗೆ ಚಿನ್ನವನ್ನು, ಬೆಳ್ಳಿಯನ್ನು, ವಸ್ತ್ರಗಳನ್ನು, ಬೆಲ್ಲದೊಡನೆ ಸೇರಿಸಿದ ಎಳ್ಳನ್ನು, ಗೋವುಗಳನ್ನು ದಾನಮಾಡಿದನು. ॥ ೧೩ ॥

ಏವಂ ಚೇದಿಪತೇ ರಾಜಾ ದಮಘೋಷಃ ಸುತಾಯ ವೈ ।
ಕಾರಯಾಮಾಸ ಮಂತ್ರಜ್ಞೈಃ ಸರ್ವಮಭ್ಯುದಯೋಚಿತಮ್
॥ ೧೪ ॥

ಮದಚ್ಯುದ್ಭಿರ್ಗಜಾನೀಕೈಃ ಸ್ಯಂದನೈರ್ಹೇಮಮಾಲಿಭಿಃ ।
ಪತ್ತ್ಯಶ್ವಸಂಕುಲೈಃ ಸೈನ್ಯೈಃ ಪರೀತಃ ಕುಂಡಿನಂ ಯಯೌ
॥ ೧೫ ॥

ತಂ ವೈ ವಿದರ್ಭಾಧಿಪತಿಃ ಸಮಭ್ಯೇತ್ಯಾಭಿಪೂಜ್ಯ ಚ ।
ನಿವೇಶಯಾಮಾಸ ಮುದಾ ಕಲ್ಪಿತಾನ್ಯನಿವೇಶನೇ
॥ ೧೬ ॥

ತತ್ರ ಶಾಲ್ವೋ ಜರಾಸಂಧೋ ದಂತವಕ್ರೋ ವಿದೂರಥಃ ।
ಆಜಗ್ಮುಶ್ಚೈದ್ಯಪಕ್ಷೀಯಾಃ ಪೌಂಡ್ರಕಾದ್ಯಾಃ ಸಹಸ್ರಶಃ
॥ ೧೭ ॥

ಕೃಷ್ಣರಾಮದ್ವಿಷೋ ಯತ್ತಾಃ ಕನ್ಯಾಂ ಚೈದ್ಯಾಯ ಸಾಧಿತುಮ್ ।
ಯದ್ಯಾಗತ್ಯ ಹರೇತ್ ಕೃಷ್ಣೋ ರಾಮಾದ್ಯೈರ್ಯದುಭಿರ್ವೃತಃ
॥ ೧೮ ॥

ಯೋತ್ಸ್ಯಾಮಃ ಸಂಹತಾಸ್ತೇನ ಇತಿ ನಿಶ್ಚಿತಮಾನಸಾಃ ।
ಆಜಗ್ಮುರ್ಭೂಭುಜಃ ಸರ್ವೇ ಸಮಗ್ರಬಲವಾಹನಾಃ
॥ ೧೯ ॥

ಶ್ರುತ್ವೈತದ್ಭಗವಾನ್ ರಾಮೋ ವಿಪಕ್ಷೀಯನೃಪೋದ್ಯಮಮ್ ।
ಕೃಷ್ಣಂ ಚೈಕಂ ಗತಂ ಹರ್ತುಂ ಕನ್ಯಾಂ ಕಲಹಶಂಕಿತಃ
॥ ೨೦ ॥

ಬಲೇನ ಮಹತಾ ಸಾರ್ಧಂ ಭ್ರಾತೃಸ್ನೇಹಪರಿಪ್ಲುತಃ ।
ತ್ವರಿತಃ ಕುಂಡಿನಂ ಪ್ರಾಗಾದ್ಗಜಾಶ್ವರಥಪತ್ತಿಭಿಃ
॥ ೨೧ ॥

ಭೀಷ್ಮಕನ್ಯಾ ವರಾರೋಹಾ ಕಾಂಕ್ಷ್ಯಂತ್ಯಾಗಮನಂ ಹರೇಃ ।
ಪ್ರತ್ಯಾಪತ್ತಿಮಪಶ್ಯಂತೀ ದ್ವಿಜಸ್ಯಾಚಿಂತಯತ್ತದಾ
॥ ೨೨ ॥

ಅಹೋ ತ್ರಿಯಾಮಾಂತರಿತ ಉದ್ವಾಹೋ ಮೇಽಲ್ಪರಾಧಸಃ ।
ನಾಗಚ್ಛತ್ಯರವಿಂದಾಕ್ಷೋ ನಾಹಂ ವೇದ್ಮ್ಯತ್ರ ಕಾರಣಮ್ ।
ಸೋಽಪಿ ನಾವರ್ತತೇಽದ್ಯಾಪಿ ಮತ್ಸಂದೇಶಹರೋ ದ್ವಿಜಃ
॥ ೨೩ ॥

ಇದೇ ರೀತಿಯಲ್ಲಿ ಚೇದಿರಾಜನಾದ ದಮಘೋಷನೂ ತನ್ನ ಮಗನಾದ ಶಿಶುಪಾಲನ ವಿವಾಹದ ಸಂಬಂಧವಾಗಿ ಮಂತ್ರಜ್ಞರಾದ ಬ್ರಾಹ್ಮಣರಿಂದ ಮಾಂಗಲಿಕ ಕರ್ಮಗಳನ್ನು ಮಾಡಿಸಿದನು. ॥ ೧೪ ॥ ಆನಂತರ ಮದೋದಕವನ್ನು ಸುರಿಸುತ್ತಿದ್ದ ಗಜಸೈನ್ಯದಿಂದಲೂ, ಸುವರ್ಣಮಾಲೆಗಳಿಂದ ವಿಭೂಷಿತವಾಗಿದ್ದ ರಥಸೈನ್ಯದಿಂದಲೂ, ಪದಾತಿ, ಅಶ್ವಸೈನ್ಯದಿಂದಲೂ ಕೂಡಿಕೊಂಡು ಕುಂಡಿನ ನಗರಕ್ಕೆ ಬಂದು ತಲುಪಿದನು. ॥ ೧೫ ॥ ದಿಬ್ಬಣವು ಬಂದಿತೆಂದು ತಿಳಿದ ವಿದರ್ಭಾಧಿಪತಿ ಭೀಷ್ಮಕನು ಮುಂದೆ ಹೋಗಿ ಅವರನ್ನು ಸ್ವಾಗತ-ಸತ್ಕಾರಗಳಿಂದ ಪದ್ಧತಿಯಂತೆ ಪೂಜಿಸಿದನು. ಬಳಿಕ ಅವರಿಗಾಗಿ ಹಿಂದೆಯೇ ನಿಶ್ಚಯಿಸಿದ ರಾಜಭವನದಲ್ಲಿ ಬೀಗರನ್ನು ಇಳಿಸಿದನು. ॥ ೧೬ ॥ ಶಿಶುಪಾಲನ ಕಡೆಯವರಾಗಿ ಶಾಲ್ವ, ಜರಾಸಂಧ, ದಂತವಕ್ತ್ರ, ವಿದೂರಥ, ಪೌಂಡ್ರಕ ಮೊದಲಾದ ಸಾವಿರಾರು ರಾಜರು ಆಗಮಿಸಿದ್ದರು. ॥ ೧೭ ॥ ಆ ರಾಜರೆಲ್ಲರೂ ಶ್ರೀಕೃಷ್ಣ ಮತ್ತು ಬಲರಾಮರ ವಿರೋಧಿಗಳೇ ಆಗಿದ್ದರು. ರಾಜಕುಮಾರಿ ರುಕ್ಮಿಣಿಯು ಶಿಶುಪಾಲನಿಗೇ ಸಿಗಬೇಕೆಂಬ ಆಶಯದಿಂದ ಬಂದಿದ್ದರು. ಶ್ರೀಕೃಷ್ಣನು ಬಲರಾಮರೇ ಮೊದಲಾದ ಯದುವಂಶೀಯರೊಂದಿಗೆ ಬಂದು ರುಕ್ಮಿಣಿಯನ್ನು ಅಪಹರಿಸಲು ಪ್ರಯತ್ನಿಸಿದರೆ ನಾವೆಲ್ಲರೂ ಸೇರಿ ಯುದ್ಧಮಾಡಬೇಕೆಂದೇ ಅವರೆಲ್ಲರೂ ಮನಸ್ಸಿನಲ್ಲಿ ಮೊದಲೇ ನಿಶ್ಚಯಿಸಿದ್ದರು. ಆದರಿಂದಲೇ ಆ ರಾಜರುಗಳು ತಮ್ಮ-ತಮ್ಮ ಚತುರಂಗ ಸೈನ್ಯದೊಂದಿಗೆ ಬಂದಿದ್ದರು. ॥ ೧೮-೧೯ ॥

ಶತ್ರುಪಕ್ಷದ ಈ ಸನ್ನಾಹವು ಬಲರಾಮನಿಗೆ ತಿಳಿದು ಹೋಯಿತು. ತಮ್ಮನಾದ ಶ್ರೀಕೃಷ್ಣನು ಒಬ್ಬಂಟಿಗನಾಗಿಯೇ ರಾಜಕುಮಾರಿಯನ್ನು ಅಪಹರಿಸಿಕೊಂಡುಬರಲು ಹೋಗಿರುವನೆಂದು ತಿಳಿದಾಗ, ಕನ್ಯೆಯಸಲುವಾಗಿ ಎರಡೂ ಪಕ್ಷದಲ್ಲಿ ಯುದ್ಧವು ಸಂಭವಿಸಬಹುದೆಂದು ಅವನಿಗೆ ಅನಿಸಿತು. ॥ ೨೦ ॥ ಶ್ರೀಕೃಷ್ಣನ ಬಲ-ಪರಾಕ್ರಮಗಳನ್ನು ಬಲರಾಮನು ತಿಳಿದಿದ್ದರೂ ಭ್ರಾತೃಸ್ನೇಹದಿಂದ ಹೃದಯ ತುಂಬಿಬಂದು, ಕೂಡಲೇ ಗಜರಥಾಶ್ವಪದಾತಿಗಳಿಂದ ಕೂಡಿದ ಚತುರಂಗಿಣಿ ಸೈನ್ಯದೊಂದಿಗೆ ಕುಂಡಿನನಗರಕ್ಕೆ ಪ್ರಯಾಣ ಮಾಡಿದನು. ॥ ೨೧ ॥

ಇತ್ತ ಪರಮಸುಂದರಿಯಾದ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಶುಭಾಗಮನದ ಪ್ರತೀಕ್ಷೆ ಮಾಡುತ್ತಿದ್ದಳು. ಶ್ರೀಕೃಷ್ಣನ ಸಮಾಚಾರವನ್ನು ನನಗೆ ಯಾರು ತಿಳಿಸುವರು ? ಸಂದೇಶವನ್ನು ಕೊಂಡುಹೋದ ಬ್ರಾಹ್ಮಣನು ಇನ್ನೂ ಬಂದಿಲ್ಲ! ಹೀಗೆ ಯೋಚಿಸುತ್ತಾ ಚಿಂತಾತುರಳಾದಳು. ॥ ೨೨ ॥ ಅಯ್ಯೋ! ನಿರ್ಭಾಗ್ಯಳಾದ ನನ್ನ ವಿವಾಹಕ್ಕೆ ಕೇವಲ ಒಂದು ರಾತ್ರಿಮಾತ್ರ ಉಳಿದಿದೆ. ಆದರೆ ನನ್ನ ಜೀವನಸರ್ವಸ್ವನಾದ ಕಮಲನಯನ ಭಗವಂತನು ಇನ್ನೂ ಆಗಮಿಸಲಿಲ್ಲವಲ್ಲ! ಇದರ ಕಾರಣ ವೇನಿರಬಹುದು ? ತಿಳಿಯದಾಗಿದೆ. ಇಷ್ಟೇ ಅಲ್ಲ; ನನ್ನ ಸಂದೇಶವನ್ನು ಕೊಂಡುಹೋದ ವಿಪ್ರೋತ್ತಮನು ಇನ್ನೂ ಬಂದಿಲ್ಲವಲ್ಲ! ॥ ೨೩ ॥

ಅಪಿ ಮಯ್ಯನವದ್ಯಾತ್ಮಾ ದೃಷ್ಟ್ವಾ ಕಿಂಚಿಜ್ಜುಗುಪ್ಸಿತಮ್ ।
ಮತ್ಪಾಣಿಗ್ರಹಣೇ ನೂನಂ ನಾಯಾತಿ ಹಿ ಕೃತೋದ್ಯಮಃ
॥ ೨೪ ॥

ದುರ್ಭಗಾಯಾ ನ ಮೇ ಧಾತಾ ನಾನುಕೂಲೋ ಮಹೇಶ್ವರಃ ।
ದೇವೀ ವಾ ವಿಮುಖಾ ಗೌರೀ ರುದ್ರಾಣೀ ಗಿರಿಜಾ ಸತೀ
॥ ೨೫ ॥

ಏವಂ ಚಿಂತಯತೀ ಬಾಲಾ ಗೋವಿಂದಹೃತಮಾನಸಾ ।
ನ್ಯಮೀಲಯತ ಕಾಲಜ್ಞಾ ನೇತ್ರೇ ಚಾಶ್ರುಕಲಾಕುಲೇ
॥ ೨೬ ॥

ಏವಂ ವಧ್ವಾಃ ಪ್ರತೀಕ್ಷಂತ್ಯಾ ಗೋವಿಂದಾಗಮನಂ ನೃಪ ।
ವಾಮ ಊರುರ್ಭುಜೋ ನೇತ್ರಮಸ್ಫುರನ್ ಪ್ರಿಯಭಾಷಿಣಃ
॥ ೨೭ ॥

ಅಥ ಕೃಷ್ಣವಿನಿರ್ದಿಷ್ಟಃ ಸ ಏವ ದ್ವಿಜಸತ್ತಮಃ ।
ಅಂತಃಪುರಚರೀಂ ದೇವೀಂ ರಾಜಪುತ್ರೀಂ ದದರ್ಶ ಹ
॥ ೨೮ ॥

ಸಾ ತಂ ಪ್ರಹೃಷ್ಟವದನಮವ್ಯಗ್ರಾತ್ಮಗತಿಂ ಸತೀ ।
ಆಲಕ್ಷ್ಯ ಲಕ್ಷಣಾಭಿಜ್ಞಾ ಸಮಪೃಚ್ಛಚ್ಚುಚಿಸ್ಮಿತಾ
॥ ೨೯ ॥

ತಸ್ಯಾ ಆವೇದಯತ್ ಪ್ರಾಪ್ತಂ ಶಶಂಸ ಯದುನಂದನಮ್ ।
ಉಕ್ತಂ ಚ ಸತ್ಯವಚನಮಾತ್ಮೋಪನಯನಂ ಪ್ರತಿ
॥ ೩೦ ॥

ತಮಾಗತಂ ಸಮಾಜ್ಞಾಯ ವೈದರ್ಭೀ ಹೃಷ್ಟಮಾನಸಾ ।
ನ ಪಶ್ಯಂತೀ ಬ್ರಾಹ್ಮಣಾಯ ಪ್ರಿಯಮನ್ಯನ್ನನಾಮ ಸಾ
॥ ೩೧ ॥

ಪ್ರಾಪ್ತೌ ಶ್ರುತ್ವಾ ಸ್ವದುಹಿತುರುದ್ವಾಹಪ್ರೇಕ್ಷಣೋತ್ಸುಕೌ ।
ಅಭ್ಯಯಾತ್ತೂರ್ಯಘೋಷೇಣ ರಾಮಕೃಷ್ಣೌ ಸಮರ್ಹಣೈಃ
॥ ೩೨ ॥

ಮಧುಪರ್ಕಮುಪಾನೀಯ ವಾಸಾಂಸಿ ವಿರಜಾಂಸಿ ಸಃ ।
ಉಪಾಯನಾನ್ಯಭೀಷ್ಟಾನಿ ವಿಧಿವತ್ ಸಮಪೂಜಯತ್
॥ ೩೩ ॥

ತಯೋರ್ನಿವೇಶನಂ ಶ್ರೀಮದುಪಕಲ್ಪ್ಯ ಮಹಾಮತಿಃ ।
ಸಸೈನ್ಯಯೋಃ ಸಾನುಗಯೋರಾತಿಥ್ಯಂ ವಿದಧೇ ಯಥಾ
॥ ೩೪ ॥

ಪರಿಶುದ್ಧ ಹೃದಯನಾದ ಭಗವಾನ್ ಶ್ರೀಕೃಷ್ಣನೇನಾದರೂ ನನ್ನಲ್ಲಿ ಯಾವುದಾದರೂ ಜುಗುಪ್ಸಿತವಾದ ವ್ಯವಹಾರವನ್ನು ಕಂಡು ನನ್ನ ಪಾಣಿಗ್ರಹಣಕ್ಕೆ, ಪ್ರಯತ್ನಿಸದೆ ಇರುವುದು ಅವನು ಇಲ್ಲಿಗೆ ಬಾರದಿರುವ ಕಾರಣವಾಗಿರಬಹುದೇ ? ॥ ೨೪ ॥ ನಿಶ್ಚಯವಾಗಿಯೂ ನಾನು ದುರ್ಭಾಗ್ಯಳೇ ಸರಿ. ಬ್ರಹ್ಮನಾಗಲೀ, ಪರಶಿವನಾಗಲೀ ನನಗೆ ಅನುಕೂಲರಾಗಿಲ್ಲ, ರುದ್ರಪತ್ನಿಯಾದ ಗಿರಿರಾಜಕುಮಾರಿಯಾದ ಪಾರ್ವತಿಯೂ ನನ್ನ ವಿಷಯದಲ್ಲಿ ವಿಮುಖಿಳಾಗಿದ್ದಾಳೆಯೋ ಏನೋ ? ॥ ೨೫ ॥ ಪರೀಕ್ಷಿತನೇ ! ಗೋವಿಂದನಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳ ರುಕ್ಮಿಣೀ ದೇವಿಯು ಹೀಗೆ ಚಿಂತಿಸುತ್ತಾ, 'ಇನ್ನೂ ಸಮಯವಿದೆಯಲ್ಲ!' ಎಂದು ತಿಳಿದು ಕಣ್ಣೀರಿನಿಂದ ತುಂಬಿದ ತನ್ನ ಕಂಗಳನ್ನು ಹಾಗೆಯೇ ಮುಚ್ಚಿಕೊಂಡಳು. ॥ ೨೬ ॥ ಪರೀಕ್ಷಿತನೇ ! ಹೀಗೆ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಶುಭಾಗಮನವನ್ನು ಪ್ರತೀಕ್ಷೆ ಮಾಡುತ್ತಿದ್ದಾಳೇ ಆಕೆಯ ಎಡ ತೊಡೆ, ಭುಜ, ಕಣ್ಣುಗಳು ಅದುರತೊಡಗಿದವು. ಅವು ಪ್ರಿಯತಮನ ಆಗಮನದ ಪ್ರಿಯವಾರ್ತೆಯನ್ನು ಸೂಚಿಸುತ್ತಿದ್ದವು.॥ ೨೭ ॥ ಅಷ್ಟರಲ್ಲಿಯೇ ಭಗವಾನ್ ಶ್ರೀಕೃಷ್ಣನು ಕಳಿಸಿರುವ ಆ ಬ್ರಾಹ್ಮಣನು ಬಂದು ಅಂತಃಪುರದಲ್ಲಿದ್ದ ರಾಜಕುಮಾರಿ ರುಕ್ಮಿಣಿಯನ್ನು ಧ್ಯಾನಮಗ್ನಳಾದ ಯಾರೋ ದೇವಿಯೇ ಆಗಿರುವಳೋ ಎಂಬಂತೆ ನೋಡಿದನು. ॥ ೨೯ ॥ ಸಾಧ್ವಿಯಾದ ರುಕ್ಮಿಣಿಯು – ಬ್ರಾಹ್ಮಣನ ಮುಖವು ಪ್ರಫುಲ್ಲಿತವಾಗಿದೆ. ಮುಖದಲ್ಲಿ ಮನಸ್ಸಿನಲ್ಲಿ ಯಾವುದೇ ಆಳುಕೂ ಇಲ್ಲದ ಅವನನ್ನು ನೋಡಿ ಲಕ್ಷಣಶಾಸ್ತ್ರವನ್ನು ತಿಳಿದಿದ್ದ ಆಕೆಯು ತನ್ನ ಕಾರ್ಯವು ಸಿದ್ಧಿಯಾಗಿರುವುದೆಂದು ನಿಶ್ಚಯಿಸಿ, ಪ್ರಸನ್ನವದನೆಯಾಗಿ ಬ್ರಾಹ್ಮಣೋತ್ತಮನಲ್ಲಿ ಹೋದ ಕಾರ್ಯವೇನಾಯಿತೆಂದು ಕೇಳಿದಳು. ॥ ೨೯ ॥ ಆಗ ಭೂಸುರೋತ್ತಮನು – 'ಭಗವಾನ್ ಶ್ರೀಕೃಷ್ಣನು ಇಲ್ಲಿಗೆ ದಯಮಾಡಿಸಿರುವನು' ಎಂದು ನಿವೇದಿಸಿಕೊಂಡು ಶ್ರೀಕೃಷ್ಣನನ್ನು ಬಹಳವಾಗಿ ಪ್ರಶಂಸಿಸಿದನು. ರಾಜಕುಮಾರಿಯೇ ! ನಿನ್ನನ್ನು ಕೊಂಡು ಹೋಗುವುದಾಗಿ ಸತ್ಯಪ್ರತಿಜ್ಞೆಯನ್ನು ಮಾಡಿರುವನೆಂದೂ ತಿಳಿಸಿದನು. ॥ ೩೦ ॥ ಭಗವಂತನ ಶುಭಾಗಮನದ ವಾರ್ತೆಯನ್ನು ಕೇಳಿ ರುಕ್ಮಿಣೀದೇವಿಯ ಹೃದಯ ಆನಂದತುಂದಿಲವಾಯಿತು. ಆಕೆಯು ಇದಕ್ಕೆ ಬದಲಾಗಿ ಬ್ರಾಹ್ಮಣನಿಗೆ ಭಗವಂತನಲ್ಲದೆ ಬೇರೆ ಯಾವುದೂ ಪ್ರಿಯವಲ್ಲದ ಕಾರಣದಿಂದ ಅವನಿಗೆ ಕೇವಲ ಭಕ್ತಿಯಿಂದ ನಮಸ್ಕಾರವನ್ನು ಮಾಡಿದಳು. ॥ ೩೧ ॥

ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ತನ್ನ ಮಗಳ ವಿವಾಹವನ್ನು ನೋಡುವ ಉತ್ಸುಕತೆಯಿಂದ ಕುಂಡಿನ ನಗರಕ್ಕೆ ಆಗಮಿಸಿರುವರೆಂದು ಕೇಳಿದ ಭೀಷ್ಮಕನು ಮಂಗಳವಾದ್ಯಗಳ ಪುರಸ್ಸರವಾಗಿ ಅವರನ್ನು ಇದಿರ್ಗೊಂಡನು. ॥ ೩೨ ॥ ಮತ್ತೆ ಮಧುಪರ್ಕದಿಂದಲೂ, ಶುಭ್ರವಸ್ತ್ರಗಳಿಂದಲೂ, ಅಭೀಷ್ಟವಾದ ಕಾಣಿಕೆಗಳಿಂದಲೂ ಅವರನ್ನು ವಿಧಿಪೂರ್ವಕವಾಗಿ ಪೂಜಿಸಿದನು.॥ ೩೩ ॥ ಮೇಧಾವಿಯಾದ ಭೀಷ್ಮಕನು ಶ್ರೀಕೃಷ್ಣ-ಬಲರಾಮರಿಗೂ ಮತ್ತು ಅವರೊಡನೆ ಬಂದಿದ್ದ ಸೈನಿಕರಿಗೂ ಸಮಸ್ತ ಸಾಮಗ್ರಿಗಳಿಂದ ಕೂಡಿದ ಸುಂದರವಾದ ಬಿಡಾರಗಳನ್ನು ಕಲ್ಪಿಸಿಕೊಟ್ಟು ಯೋಗ್ಯ ರೀತಿಯಿಂದ ಆತಿಥ್ಯ-ಸತ್ಕಾರ ಮಾಡಿದನು. ॥ ೩೪ ॥

ಏವಂ ರಾಜ್ಞಾಂ ಸಮೇತಾನಾಂ ಯಥಾವೀರ್ಯಂ ಯಥಾವಯಃ ।
ಯಥಾಬಲಂ ಯಥಾವಿತ್ತಂ ಸರ್ವೈಃ ಕಾಮೈಃ ಸಮರ್ಹಯತ್
॥ ೩೫ ॥

ಕೃಷ್ಣಮಾಗತಮಾಕರ್ಣ್ಯ ವಿದರ್ಭಪುರವಾಸಿನಃ ।
ಆಗತ್ಯ ನೇತ್ರಾಂಜಲಿಭಿಃ ಪಪುಸ್ತನ್ಮುಖಪಂಕಜಮ್
॥ ೩೬ ॥

ಅಸ್ಯೈವ ಭಾರ್ಯಾ ಭವಿತುಂ ರುಕ್ಮಿಣ್ಯರ್ಹತಿ ನಾಪರಾ ।
ಅಸಾವಪ್ಯನವದ್ಯಾತ್ಮಾ ಭೈಷ್ಮ್ಯಾಃ ಸಮುಚಿತಃ ಪತಿಃ
॥ ೩೭ ॥

ಕಿಂಚಿತ್ಸುಚರಿತಂ ಯನ್ನಸ್ತೇನ ತುಷ್ಟಸ್ತ್ರಿಲೋಕಕೃತ್ ।
ಅನುಗೃಹ್ಣಾತು ಗೃಹ್ಣಾತು ವೈದರ್ಭ್ಯಾಃ ಪಾಣಿಮಚ್ಯುತಃ
॥ ೩೮ ॥

ಏವಂ ಪ್ರೇಮಕಲಾಬದ್ಧಾ ವದಂತಿ ಸ್ಮ ಪುರೌಕಸಃ ।
ಕನ್ಯಾ ಚಾಂತಃಪುರಾತ್ ಪ್ರಾಗಾದ್ಭವ್ಯೈರ್ಗುಪ್ತಾಂಬಿಕಾಲಯಮ್
॥ ೩೯ ॥

ಪದ್ಭ್ಯಾಂ ವಿನಿರ್ಯಯೌ ದ್ರಷ್ಟುಂ ಭವಾನ್ಯಾಃ ಪಾದಪಲ್ಲವಮ್ ।
ಸಾ ಚಾನುಧ್ಯಾಯತೀ ಸಮ್ಯಙ್ ಮುಕುಂದಚರಣಾಂಬುಜಮ್
॥ ೪೦ ॥

ಯತವಾಙ್ಮಾತೃಭಿಃ ಸಾರ್ಧಂ ಸಖೀಭಿಃ ಪರಿವಾರಿತಾ ।
ಗುಪ್ತಾ ರಾಜಭಟೈಃ ಶೂರೈಃ ಸನ್ನದ್ಧೈರುದ್ಯತಾಯುಧೈಃ ।
ಮೃದಂಗಶಂಖಿಪಣವಾಸ್ತೂರ್ಯಭೇರ್ಯಶ್ಚ ಜಘ್ನಿರೇ
॥ ೪೧ ॥

ನಾನೋಪಹಾರಬಲಿಭಿರ್ವಾರಮುಖ್ಯಾಃ ಸಹಸ್ರಶಃ ।
ಸ್ರಗ್ಗಂಧವಸ್ತ್ರಾಭರಣೈರ್ದ್ವಿಜಪತ್ನ್ಯಃ ಸ್ವಲಂಕೃತಾಃ
॥ ೪೨ ॥

ಗಾಯಂತಶ್ಚ ಸ್ತುವಂತಶ್ಚ ಗಾಯಕಾ ವಾದ್ಯವಾದಕಾಃ ।
ಪರಿವಾರ್ಯ ವಧೂಂ ಜಗ್ಮುಃ ಸೂತಮಾಗಧವಂದಿನಃ
॥ ೪೩ ॥

ಆಸಾದ್ಯ ದೇವೀಸದನಂ ಧೌತಪಾದಕರಾಂಬುಜಾ ।
ಉಪಸ್ಪೃಶ್ಯ ಶುಚಿಃ ಶಾಂತಾ ಪ್ರವಿವೇಶಾಂಬಿಕಾಂತಿಕಮ್
॥ ೪೪ ॥

ತಾಂ ವೈ ಪ್ರವಯಸೋ ಬಾಲಾಂ ವಿಧಿಜ್ಞಾ ವಿಪ್ರಯೋಷಿತಃ ।
ಭವಾನೀಂ ವಂದಯಾಂಚಕ್ರುರ್ಭವಪತ್ನೀಂ ಭವಾನ್ವಿತಾಮ್
॥ ೪೫ ॥

ಹೀಗೆ ಭೀಷ್ಮಕ ಮಹಾರಾಜನು ತನ್ನ ಆಹ್ವಾನದಂತೆ ಬಂದಿರುವ ರಾಜರೆಲ್ಲರನ್ನೂ ಅವರವರ ಪರಾಕ್ರಮ, ವಯಸ್ಸು, ಬಲ, ಧನ ಇವುಗಳಿಗನುಸಾರವಾಗಿ ಅವರು ಬಯಸಿದ ವಸ್ತುಗಳೆಲ್ಲವನ್ನು ಕೊಟ್ಟು ಬಹಳವಾಗಿ ಸತ್ಕರಿಸಿದನು. ॥ ೩೫॥ ಭಗವಾನ್ ಶ್ರೀಕೃಷ್ಣನು ತಮ್ಮ ನಗರಕ್ಕೆ ಬಂದಿರುವನೆಂದು ಕೇಳಿದಾಗ ನಗರವಾಸಿಗಳು ಭಗವಂತನ ನಿವಾಸಸ್ಥಾನಕ್ಕೆ ಬಂದು ತಮ್ಮ ಕಣ್ಣುಗಳೆಂಬ ಬೊಗಸೆಗಳಿಂದ ಶ್ರೀಕೃಷ್ಣನ ಮುಖಾರವಿಂದದ ಮಧುರ ಮಕರಂದರಸವನ್ನು ಪಾನಮಾಡತೊಡಗಿದರು. ॥ ೩೬ ॥ ಅವರು ಪರಸ್ಪರ ಹೀಗೆ ಮಾತನಾಡಿಕೊಳ್ಳುತ್ತಿದ್ದರು – ನಮ್ಮ ರುಕ್ಮಿಣಿಯು ಇವನ ಅರ್ಧಾಂಗಿಯಾಗಲು ಯೋಗ್ಯಳೇ ಆಗಿದ್ದಾಳೆ. ಈ ಪರಮ ಪವಿತ್ರಮೂರ್ತಿಯಾದ ಶ್ಯಾಮಸುಂದರನೇ ರುಕ್ಮಿಣಿಗೆ ಯೋಗ್ಯಪತಿಯಾಗಿದ್ದಾನೆ. ॥ ೩೭ ॥ ನಾವೇನಾದರೂ ಹಿಂದಿನ ಜನ್ಮದಲ್ಲಿ ಅಥವಾ ಈ ಜನ್ಮದಲ್ಲಿ ಏನಾದರೂ ಸತ್ಕರ್ಮಮಾಡಿದ್ದರೆ, ತ್ರೈಲೋಕ್ಯ ವಿಧಾತನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಿ ಶ್ಯಾಮಸುಂದರ ಶ್ರೀಕೃಷ್ಣನೇ ವಿದರ್ಭರಾಜಕುಮಾರಿ ರುಕ್ಮಿಣಿಯ ಪಾಣಿಗ್ರಹಣ ಮಾಡಿ ಅನುಗ್ರಹಿಸಲಿ. ॥ ೩೮ ॥

ಪರೀಕ್ಷಿತನೇ! ಕುಂಡಿನಪುರ ನಿವಾಸಿಗಳೆಲ್ಲರೂ ಪ್ರೇಮ ಪರವಶರಾಗಿ ಮಾತನಾಡಿಕೊಳ್ಳುತ್ತಿರುವಾಗಲೇ ರಾಜಭಟರಿಂದ ರಕ್ಷಿಸಲ್ಪಡುತ್ತಿದ್ದ ಮದುವಣಗಿತ್ತಿಯು ಅಂತಃಪುರದಿಂದ ಹೊರಟು ಅಂಬಿಕಾಲಯಕ್ಕೆ ದೇವಿಯ ಪೂಜೆಗಾಗಿ ಹೊರಟಳು. ॥ ೩೯ ॥ ರುಕ್ಮಿಣಿಯಾದರೋ ಶ್ರೀಕೃಷ್ಣನ ಚರಣಕಮಗಳನ್ನೇ ಧ್ಯಾನಿಸುತ್ತಾ, ಭಗವತಿ ಭವಾನಿಯ ಪದ ಪಲ್ಲವಗಳನ್ನು ಸಂದರ್ಶಿಸಲು ಕಾಲ್ನಡಿಗೆಯಿಂದಲೇ ದೇವಾಲಯಕ್ಕೆ ಹೋದಳು. ॥ ೪೦ ॥ ಮೌನವಾಗಿದ್ದ ಆಕೆಯು ಮಾತೃವರ್ಗದವರಿಂದ ಪರಿವೃತಳಾಗಿದ್ದಳು. ಆಯುಧಗಳನ್ನು ಧರಿಸಿ ಸನ್ನದ್ಧರಾದ ಶೂರ ರಾಜಭಟರು ಸುತ್ತಲೂ ಆಕೆಯನ್ನು ರಕ್ಷಿಸುತ್ತಿದ್ದರು. ಭೇರಿ, ಮೃದಂಗ, ಶಂಖ, ಪಣವ, ತೂರ್ಯ – ಮೊದಲಾದ ಮಂಗಳವಾದ್ಯಗಳು ಮೊಳಗುತ್ತಿದ್ದವು. ॥ ೪೧ ॥ ಹಲವಾರು ಬ್ರಾಹ್ಮಣಪತ್ನಿಯರು ಪುಷ್ಪಮಾಲೆಗಳಿಂದಲೂ, ಚಂದನಾದಿ ಸುಗಂಧ ದ್ರವ್ಯಗಳಿಂದಲೂ, ವಸ್ತ್ರಾಭರಣಗಳಿಂದಲೂ ಅಲಂಕರಿಸಿಕೊಂಡು ಜೊತೆ-ಜೊತೆಯಲ್ಲೇ ಹೋಗುತ್ತಿದ್ದರು. ಅನೇಕ ಪ್ರಕಾರದ ಕಾಣಿಕೆಗಳನ್ನು, ಪೂಜಾ ಸಾಮಗ್ರಿಗಳನ್ನು ಎತ್ತಿಕೊಂಡು ಸಾವಿರಾರು ವಾರಾಂಗನೆಯರು ವಧುವನ್ನು ಹಿಂಬಾಲಿಸುತ್ತಿದ್ದರು. ॥ ೪೨ ॥ ಗಾಯಕರು ಗಾನ ಮಾಡುತ್ತಿದ್ದರು. ವಾದ್ಯಗಾರರು ವಾದ್ಯಗಳನ್ನು ನುಡಿಸುತ್ತಾ ಸಾಗಿದ್ದರು. ಸೂತ-ಮಾಗಧ-ವಂದೀಜನರು ವಧುವಿನ ಸುತ್ತಲೂ ಜಯಕಾರ ಮಾಡುತ್ತಾ ಬಿರುದಾವಳಿಗಳನ್ನು ಉಚ್ಚರಿಸುತ್ತಿದ್ದರು. ॥ ೪೩ ॥ ದೇವಿಯ ಮಂದಿರವನ್ನು ತಲುಪಿದ ರುಕ್ಮಿಣಿಯು ಕಮಲದಂತಿರುವ ಸುಕೋಮಲವಾದ ಕೈ-ಕಾಲುಗಳನ್ನು ತೊಳೆದು, ಆಚಮನ ಮಾಡಿ, ಅಂತರ್ಬಾಹ್ಯಶುದ್ಧಳಾಗಿ, ಶಾಂತಭಾವದಿಂದ ಕೂಡಿಕೊಂಡು ಅಂಬಿಕೆಯ ಮಂದಿರವನ್ನು ಪ್ರವೇಶಿಸಿದಳು. ॥ ೪೪ ॥ ಜೊತೆಗಿದ್ದ ಅನೇಕ ವಿಧಿ-ವಿಧಾನಗಳನ್ನು ಬಲ್ಲ ಹಿರಿಯ ಬ್ರಾಹ್ಮಣ ಮುತ್ತೈದೆಯರು ಭಗವಾನ್ ಶಂಕರನ ಅರ್ಧಾಂಗಿನಿಯಾದ ಭವಾನಿಗೆ ಮತ್ತು ಭಗವಾನ್ ಪರತತ್ತ್ವನಿಗೆ ರುಕ್ಮಿಣಿಯಿಂದ ನಮಸ್ಕಾರವನ್ನು ಮಾಡಿಸಿದರು. ॥ ೪೫ ॥

ನಮಸ್ಯೇ ತ್ವಾಂಬಿಕೇಽಭೀಕ್ಷ್ಣಂ ಸ್ವಸಂತಾನಯುತಾಂ ಶಿವಾಮ್ ।
ಭೂಯಾತ್ ಪತಿರ್ಮೇ ಭಗವಾನ್ ಕೃಷ್ಣಸ್ತದನುಮೋದತಾಮ್
॥ ೪೬ ॥

ಅದ್ಭಿರ್ಗಂಧಾಕ್ಷತೈರ್ಧೂಪೈರ್ವಾಸಃಸ್ರಗ್ಭಿರ್ವಿಭೂಷಣೈಃ ।
ನಾನೋಪಹಾರಬಲಿಭಿಃ ಪ್ರದೀಪಾವಲಿಭಿಃ ಪೃಥಕ್
॥ ೪೭ ॥

ವಿಪ್ರಸ್ತ್ರಿಯಃ ಪತಿಮತೀಸ್ತಥಾ ತೈಃ ಸಮಪೂಜಯತ್ ।
ಲವಣಾಪೂಪತಾಂಬೂಲಕಂಠಸೂತ್ರಫಲೇಕ್ಷುಭಿಃ
॥ ೪೮ ॥

ತಸ್ಯೈ ಸ್ತ್ರಿಯಸ್ತಾಃ ಪ್ರದದುಃ ಶೇಷಾಂ ಯುಯುಜುರಾಶಿಷಃ ।
ತಾಭ್ಯೋ ದೇವ್ಯೈ ನಮಶ್ಚಕ್ರೇ ಶೇಷಾಂ ಚ ಜಗೃಹೇ ವಧೂಃ
॥ ೪೯ ॥

ಮುನಿವ್ರತಮಥ ತ್ಯಕ್ತ್ವಾ ನಿಶ್ಚಕ್ರಾಮಾಂಬಿಕಾಗೃಹಾತ್ ।
ಪ್ರಗೃಹ್ಯ ಪಾಣಿನಾ ಭೃತ್ಯಾಂ ರತ್ನಮುದ್ಯೋಪಶೋಭಿನಾ
॥ ೫೦ ॥

ತಾಂ ದೇವಮಾಯಾಮಿವ ವೀರಮೋಹಿನೀಂ
ಸುಮಧ್ಯಮಾಂ ಕುಂಡಲಮಂಡಿತಾನನಾಮ್ ।
ಶ್ಯಾಮಾಂ ನಿತಂಬಾರ್ಪಿತರತ್ನಮೇಖಲಾಂ
ವ್ಯಂಜತ್ಸ್ತನೀಂ ಕುಂತಲಶಂಕಿತೇಕ್ಷಣಾಮ್ ॥ ೫೧ ॥

ಶುಚಿಸ್ಮಿತಾಂ ಬಿಂಬಫಲಾಧರದ್ಯುತಿ-
ಶೋಣಾಯಮಾನದ್ವಿಜಕುಂದಕುಡ್ಮಲಾಮ್ ।
ಪದಾ ಚಲಂತೀಂ ಕಲಹಂಸಗಾಮಿನೀಂ
ಶಿಂಜತ್ಕಲಾನೂಪುರಧಾಮಶೋಭಿನಾ ।
ವಿಲೋಕ್ಯ ವೀರಾ ಮುಮುಹುಃ ಸಮಾಗತಾ
ಯಶಸ್ವಿನಸ್ತತ್ಕೃತಹೃಚ್ಛಯಾರ್ದಿತಾಃ ॥ ೫೨ ॥

ಯಾಂ ವೀಕ್ಷ್ಯ ತೇ ನೃಪತಯಸ್ತದುದಾರಹಾಸ-
ವ್ರೀಡಾವಲೋಕಹೃತಚೇತಸ ಉಜ್ಝಿತಾಸ್ತ್ರಾಃ ।
ಪೇತುಃ ಕ್ಷಿತೌ ಗಜರಥಾಶ್ವಗತಾ ವಿಮೂಢಾ
ಯಾತ್ರಾಚ್ಛಲೇನ ಹರಯೇಽರ್ಪಯತೀಂ ಸ್ವಶೋಭಾಮ್ ॥ ೫೩ ॥

ರುಕ್ಮಿಣಿಯು ಭಗವತಿಯಲ್ಲಿ ಪ್ರಾರ್ಥಿಸುತ್ತಾಳೆ – ಜಗದಂಬೇ ! ನಿನ್ನ ಮಡಿಲಲ್ಲಿ ಕುಳಿತಿರುವ ಗಣಪತಿಗೆ ಮತ್ತು ನಿನಗೆ ನಾನು ಪದೇ-ಪದೇ ನಮಸ್ಕರಿಸುತ್ತೇನೆ. ತಾಯೆ ! ಭಗವಾನ್ ಶ್ರೀಕೃಷ್ಣನೇ ನನ್ನ ಪತಿಯಾಗುವಂತೆ ಅನುಗ್ರಹಿಸಿ ಆಶೀರ್ವದಿಸು. ॥ ೪೬ ॥ ಬಳಿಕ ರುಕ್ಮಿಣಿಯು ಜಲ ಗಂಧ, ಅಕ್ಷತೆ, ವಸ್ತ್ರ, ಪುಷ್ಪಹಾರ, ಆಭೂಷಣಗಳು, ಧೂಪ, ದೀಪಾದಿಗಳಿಂದಲೂ, ನಾನಾ ವಿಧವಾದ ನೈವೇದ್ಯಗಳಿಂದಲೂ, ಕಾಣಿಕೆಗಳಿಂದಲೂ, ಮಂಗಳ ಆರತಿಗಳಿಂದಲೂ ಅಂಬಿಕೆಯನ್ನು ಪೂಜಿಸಿದಳು. ॥ ೪೭ ॥ ಅನಂತರ ಸುಮಂಗಲಿಯರಾದ ಬ್ರಾಹ್ಮಣ ಸ್ತ್ರೀಯರಿಗೆ ಮೇಲೆ ಹೇಳಿದ ಪೂಜಾ-ಸಾಮಗ್ರಿಗಳಿಂದಲೂ, ಉಪ್ಪು, ಅಪೂಪ, ತಾಂಬೂಲ, ಕಂಠಸೂತ್ರ, ಹಣ್ಣುಗಳು, ಕಬ್ಬು ಇತ್ಯಾದಿಗಳಿಂದಲೂ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದಳು. ॥ ೪೮ ॥ ಬ್ರಾಹ್ಮಣ ಸ್ತ್ರೀಯರು ರಾಜಕುಮಾರಿಗೆ ಪ್ರಸಾದವನ್ನಿತ್ತು ಆಶೀರ್ವದಿಸಿದರು. ಮದುಮಗಳು ಬ್ರಾಹ್ಮಣಿಯರಿಗೂ, ಜಗದಂಬೆಗೂ ನಮಸ್ಕರಿಸಿ ಪ್ರಸಾದವನ್ನು ಸ್ವೀಕರಿಸಿದಳು. ॥ ೪೯ ॥ ಬಳಿಕ ರಾಜಕುಮಾರಿಯು ಮೌನವನ್ನು ಮುರಿದು ರತ್ನಖಚಿತವಾದ ಉಂಗುರದಿಂದ ಶೋಭಾಯಮಾನವಾದ ತನ್ನ ಕೈಯಿಂದ ಸೇವಕಿಯೊಬ್ಬಳ ಕೈಯನ್ನು ಹಿಡಿದುಕೊಂಡು ಅಂಬಿಕಾಗುಡಿಯಿಂದ ಹೊರಬಿದ್ದಳು. ॥ ೫೦ ॥

ಪರೀಕ್ಷಿತನೇ ! ರುಕ್ಮಿಣಿಯು ಭಗವಂತನ ಮಾಯೆಯಂತೆಯೇ ವೀರಾಧಿವೀರರನ್ನು ವಿಮೋಹಗೊಳಿಸುತ್ತಿದ್ದಳು. ಆಕೆಯ ಕಟಿ ಪ್ರದೇಶವು ಸುಂದರವಾಗಿಯೂ, ತೆಳುವಾಗಿಯೂ ಇತ್ತು. ಫಳ ಫಳಿಸುವ ಕುಂಡಲಗಳಿಂದ ಮುಖಕಮಲವು ಸಮಲಂಕೃತವಾಗಿತ್ತು. ಯೌವನದ ಹೊಸ್ತಿಲನ್ನು ಆಗತಾನೇ ಮೆಟ್ಟಿದ್ದಳು. ನಿತಂಬವು ರತ್ನಮಯವಾದ ಸೊಂಟಪಟ್ಟಿಯಿಂದ ಅಲಂಕೃತವಾಗಿತ್ತು. ವಕ್ಷಃಸ್ಥಳವು ಆಗತಾನೇ ಎದ್ದು ಕಾಣುತ್ತಿತ್ತು. ಮುಂಗುರುಳುಗಳು ಮುಂದೆ ಚಾಚಿಕೊಂಡು ಇದ್ದುದರಿಂದ ನೋಟವು ಚಂಚಲವಾಗಿತ್ತು. ॥ ೫೧ ॥ ಆಕೆಯ ತುಟಿಗಳಲ್ಲಿ ಮನೋಹರವಾದ ಮುಗುಳ್ನಗೆ ಇತ್ತು, ತೊಂಡೆಹಣ್ಣಿನಂತಿದ್ದ ಅವಳ ತುಟಿಯ ಕೆಂಪಿನಿಂದ ಮಲ್ಲಿಗೆ ಮೊಗ್ಗುಗಳಂತಿದ್ದ ಆಕೆಯ ಹಲ್ಲುಗಳು ಸ್ವಲ್ಪ ಕೆಂಪಾಗಿ ಕಾಣುತ್ತಿದ್ದವು. ಝಣ-ಝಣಿಸುತ್ತಿದ್ದ ಕಾಲಂದುಗೆಗಳ ಕಾಂತಿಯಿಂದ ಮನೋಹರವಾಗಿ ಕಾಣುತ್ತಿದ್ದ ಕೋಮಲವಾದ ಕಾಲುಗಳಿಂದ ರಾಜಹಂಸದಂತೆ ನಡೆಯುತ್ತಿದ್ದಳು. ರುಕ್ಮಿಣಿಯ ಅಂತಹ ಅನುಪಮವಾದ ಅಂಗಕಾಂತಿಯನ್ನು ನೋಡಿ ಅಲ್ಲಿಗೆ ಬಂದ ದೊಡ್ಡ-ದೊಡ್ಡ ಯಶಸ್ವೀ ವೀರರೆಲ್ಲರೂ ಮೋಹಿತರಾದರು. ಮನ್ಮಥನೂ ಭಗವಂತನ ಕಾರ್ಯವನ್ನು ಸಾಧಿಸಿಕೊಡಲು ತನ್ನ ಹೂಬಾಣಗಳಿಂದ ಅವರ ಹೃದಯಗಳನ್ನು ಜರ್ಜರಿತವಾಗಿಸಿದ್ದನು. ॥ ೫೨ ॥ ರುಕ್ಮಿಣಿಯು ಹೀಗೆ ಯಾತ್ರೆಯ ವ್ಯಾಜದಿಂದ ಮಂದಗತಿಯಿಂದ ನಡೆಯುತ್ತಾ ಭಗವಾನ್ ಶ್ರೀಕೃಷ್ಣನಿಗೆ ತನ್ನ ಸೌಂದರ್ಯವನ್ನು ಅರ್ಪಿಸುತ್ತಿದ್ದಳು. ಆಕೆಯ ಲೋಕೋತ್ತರವಾದ ಮುಕ್ತಮಂದಹಾಸವನ್ನು ಹಾಗೂ ಕುಡಿನೋಟವನ್ನು ಕಂಡು ಬುದ್ಧಿಗೆಟ್ಟ ನರಪತಿಗಳು ತಾವು ಹಿಡಿದಿದ್ದ ಆಯುಧಗಳನ್ನು ಬಿಸಾಡಿ ತಾವು ಕುಳಿತಿದ್ದ ರಥಾಶ್ವ-ಗಜಗಳ ಮೇಲಿಂದ ಕೆಳಕ್ಕೆ ಬಿದ್ದು ಹೋದರು. ॥ ೫೩ ॥

ಸೈವಂ ಶನೈಶ್ಚಲಯತೀ ಚಲಪದ್ಮಕೋಶೌ
ಪ್ರಾಪ್ತಿಂ ತದಾ ಭಗವತಃ ಪ್ರಸಮೀಕ್ಷಮಾಣಾ ।
ಉತ್ಸಾರ್ಯ ವಾಮಕರಜೈರಲಕಾನಪಾಂಗೈಃ
ಪ್ರಾಪ್ತಾನ್ ಹ್ರಿಯೈಕ್ಷತ ನೃಪಾನ್ ದದೃಶೇऽಚ್ಯುತಂಸಾ ॥ ೫೪ ॥

ತಾಂ ರಾಜಕನ್ಯಾಂ ರಥಮಾರುರುಕ್ಷತೀಂ
ಜಹಾರ ಕೃಷ್ಣೋ ದ್ವಿಷತಾಂ ಸಮೀಕ್ಷತಾಮ್ ।
ರಥಂ ಸಮಾರೋಪ್ಯ ಸುಪರ್ಣಲಕ್ಷಣಂ
ರಾಜನ್ಯಚಕ್ರಂ ಪರಿಭೂಯ ಮಾಧವಃ ॥ ೫೫ ॥

ತತೋ ಯಯೌ ರಾಮಪುರೋಗಮೈಃ ಶನೈಃ
ಸೃಗಾಲಮಧ್ಯಾವಿವ ಭಾಗಹೃದ್ದರಿಃ ॥ ೫೬ ॥

ತಂ ಮಾನಿನಃ ಸ್ವಾಭಿಭವಂ ಯಶಃಕ್ಷಯಂ
ಪರೇ ಜರಾಸಂಧವಶಾ ನ ಸೇಹಿರೇ ।
ಅಹೋ ಧಿಗಸ್ಮಾನ್ ಯಶ ಆತ್ತಧನ್ವನಾಂ
ಗೋಪೈರ್ಹೃತಂ ಕೇಸರಿಣಾಂ ಮೃಗೈರಿವ ॥ ೫೭ ॥

ಹೀಗೆ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಶುಭಾಗಮನವನ್ನು ಪ್ರತೀಕ್ಷೆ ಮಾಡುತ್ತಾ ಕಮಲದಂತಹ ಸುಕೋಮಲವಾದ ಪಾದಪದ್ಮಗಳಿಂದ ಮೆಲ್ಲ-ಮೆಲ್ಲನೆ ನಡೆದುಕೊಂಡು ಹೋಗುತ್ತಿದ್ದಳು. ಮುಖವನ್ನು ಮುಚ್ಚುತ್ತಿದ್ದ ಮುಂಗುರುಳುಗಳನ್ನು ಎಡಗೈ ಬೆರಳುಗಳಿಂದ ಹಿಂದಕ್ಕೆ, ಸರಿಸಿ, ಅಲ್ಲಿ ಬಂದಿರುವ ರಾಜರನ್ನು ಲಜ್ಜೆಯಿಂದ ಕೂಡಿದ ಕಡೆಗಣ್ಣಿನಿಂದ ನೋಡುತ್ತಿದ್ದಳು. ಹಾಗೆಯೇ ಆಕೆಗೆ ಶ್ಯಾಮಸುಂದರನಾದ ಶ್ರೀಕೃಷ್ಣನ ದರ್ಶನವಾಯಿತು. ॥ ೫೪ ॥ ರಾಜಕುಮಾರಿ ರುಕ್ಮಿಣಿಯು ರಥದಲ್ಲಿ ಹತ್ತಲು ಅಪೇಕ್ಷಿಸುತ್ತಿದ್ದಾಗಲೇ ಭಗವಾನ್ ಶ್ರೀಕೃಷ್ಣನು ಸಮಸ್ತ ಶತ್ರುಗಳು ನೋಡು ನೋಡುತ್ತಿರುವಂತೆ ರುಕ್ಮಿಣಿಯನ್ನು ಎತ್ತಿಕೊಂಡು, ನೂರಾರು ರಾಜರ ತಲೆಯನ್ನು ಮೆಟ್ಟಿ, ಗರುಡಧ್ವಜದಿಂದ ಶೋಭಿಸುವ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡನು. ॥ ೫೫ ॥ ಬಳಿಕ ನರಿಗಳ ಮಧ್ಯದಲ್ಲಿದ್ದ ತನ್ನ ಬೇಟೆಯನ್ನು ಸಿಂಹವು ಎತ್ತಿಕೊಂಡು ಹೋಗುವಂತೆ ನರಿಗಳಂತಿದ್ದ ರಾಜರ ಮಧ್ಯದಿಂದ ರುಕ್ಮಿಣಿಯನ್ನು ಎತ್ತಿಕೊಂಡು ಶ್ರೀಕೃಷ್ಣನು ಬಲರಾಮಾದಿ ಯದುವಂಶೀಯ ಯೋಧರೊಡನೆ ಅಲ್ಲಿಂದ ಹೊರಟನು. ॥ ೫೬ ॥ ಆ ಸಮಯದಲ್ಲಿ ಜರಾಸಂಧನ ವಶವರ್ತಿಗಳಾದ ದುರಭಿಮಾನಿ ರಾಜರುಗಳಿಗೆ ಯಶಃಕೀರ್ತಿ ನಾಶಕವಾದ ಇಂತಹ ತಿರಸ್ಕಾರವನ್ನು ಸಹಿಸಿಕೊಳ್ಳಲಾಗಲಿಲ್ಲ. ಅವರೆಲ್ಲರೂ ಕೆರಳಿ ಕೂಗಾಡತೊಡಗಿದರು – ಆಹಾ ! ಆಯುಧಗಳನ್ನು ಹಿಡಿದು ನಿಂತಿರುವ ನಮಗೆ ಧಿಕ್ಕಾರವಿರಲಿ. ಸಿಂಹಗಳಿಗೆ ಸೇರಬೇಕಾದ ಭಾಗವನ್ನು ನರಿಗಳು ಅಪಹರಿಸುವಂತೆ ನಮ್ಮ ಯಶಸ್ಸನ್ನು ಸಾಧಾರಣರಾದ ಗೊಲ್ಲರು ಇಂದು ಅಪಹರಿಸಿ ಬಿಟ್ಟರಲ್ಲ ! ॥ ೫೭ ॥

ಐವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೫೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುಕ್ಮಿಣೀಹರಣಂ ನಾಮ ತ್ರಿಪಂಚಾಶತ್ತಮೋऽಧ್ಯಾಯಃ ॥ ೫೩ ॥

ಐವತ್ತನಾಲ್ಕನೆಯ ಅಧ್ಯಾಯ

ಶಿಶುಪಾಲನ ಅನುಯಾಯಿಗಳ ಮತ್ತು ರುಕ್ಮಿಯ ಪರಾಜಯ - ಶ್ರೀಕೃಷ್ಣ ರುಕ್ಮಿಣಿಯರ ವಿವಾಹ

ಶ್ರೀಶುಕ ಉವಾಚ

ಇತಿ ಸರ್ವೇ ಸುಸಂರಬ್ಧಾ ವಾಹಾನಾರುಹ್ಯ ದಂಶಿತಾಃ ।
ಸ್ವೈಃ ಸ್ವೈರ್ಬಲೈಃ ಪರಿಕ್ರಾಂತಾ ಅನ್ವೀಯುರ್ಧೃತಕಾರ್ಮುಕಾಃ ॥ ೧ ॥

ತಾನಾಪತತ ಆಲೋಕ್ಯ ಯಾದವಾನೀಕಯೂಥಪಾಃ ।
ತಸ್ಥುಸ್ತತ್ಸಮ್ಮುಖಾ ರಾಜನ್ವಿಸ್ಫೂರ್ಜ್ಯ ಸ್ವಧನೂಂಷಿ ತೇ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ಹೇಳಿ-ಕೇಳಿ ಎಲ್ಲ ರಾಜರೂ ಕೋಪದಿಂದ ಕಿಡಿ-ಕಿಡಿಯಾದರು. ಕವಚಗಳನ್ನು ಧರಿಸಿ ವಾಹನಗಳನ್ನೇರಿದರು. ತಮ್ಮ ತಮ್ಮ ಸೈನ್ಯದೊಂದಿಗೆ ಧನಸ್ಸನ್ನೆತ್ತಿಕೊಂಡು ಶ್ರೀಕೃಷ್ಣನನ್ನು ಹಿಂಬಾಲಿಸಿದರು. ॥ ೧ ॥ ರಾಜೇಂದ್ರನೇ ! ಶತ್ರುಗಳು ತಮ್ಮ ಮೇಲೆ ಆಕ್ರಮಿಸಿ ಬರುತ್ತಿರುವುದನ್ನು ನೋಡಿದ ಯದುವಂಶೀಯರಾದ ಸೇನಾಪತಿಗಳು ಹಿಂದಕ್ಕೆ ತಿರುಗಿ ಧನಸ್ಸುಗಳನ್ನು ಟೆಂಕರಿಸುತ್ತಾ ಶತ್ರುಸೈನ್ಯದ ಇದಿರಾಗಿ ಸಿದ್ಧರಾಗಿ ನಿಂತರು. ॥ ೨ ॥

ಅಶ್ವಪೃಷ್ಠೇ ಗಜಸ್ಕಂಧೇ ರಥೋಪಸ್ಥೇ ಚ ಕೋವಿದಾಃ।
ಮುಮುಚುಃ ಶರವರ್ಷಾಣಿ ಮೇಘಾ ಅದ್ರಿಷ್ವಪೋ ಯಥಾ
॥ ೩ ॥

ಪತ್ಯುರ್ಬಲಂ ಶರಾಸಾರೈಶ್ಛನ್ನಂ ವೀಕ್ಷ್ಯ ಸುಮಧ್ಯಮಾ।
ಸವ್ರೀಡಮೈಕ್ಷತ್ತದಕ್ತ್ರಂ ಭಯವಿಹ್ವಲಲೋಚನಾ
॥ ೪ ॥

ಪ್ರಹಸ್ಯ ಭಗವಾನಾಹ ಮಾ ಸ್ಮ ಭೈರ್ವಾಮಲೋಚನೇ।
ವಿನಂಕ್ಷ್ಯತ್ಯಧುನೈವೈತತ್ತಾವಕೈಃ ಶಾತ್ರವಂ ಬಲಮ್
॥ ೫ ॥

ತೇಷಾಂ ತದ್ವಿಕ್ರಮಂ ವೀರಾ ಗದಸಂಕರ್ಷಣಾದಯಃ।
ಅಮೃಷ್ಯಮಾಣಾ ನಾರಾಚೈರ್ಜಘ್ನುರ್ಹಯಗಜಾನ್ ರಥಾನ್
॥ ೬ ॥

ಪೇತುಃ ಶಿರಾಂಸಿ ರಥಿನಾಮಶ್ವಿನಾಂ ಗಜಿನಾಂ ಭುವಿ।
ಸಕುಂಡಲಕಿರೀಟಾನಿ ಸೋಷ್ಣೀಷಾಣಿ ಚ ಕೋಟಿಶಃ
॥ ೭ ॥

ಹಸ್ತಾಃ ಸಾಸಿಗದೇಷ್ವಾಸಾಃ ಕರಭಾ ಊರವೋಽಂಘ್ರಯಃ।
ಅಶ್ವಾಶ್ವತರನಾಗೋಷ್ಟ್ರಖರಮರ್ತ್ಯಶಿರಾಂಸಿ ಚ
॥ ೮ ॥

ಹನ್ಯಮಾನಬಲಾನೀಕಾ ವೃಷ್ಣಿಭಿರ್ಜಯಕಾಂಕ್ಷಿಭಿಃ।
ರಾಜಾನೋ ವಿಮುಖಾ ಜಗ್ಮುರ್ಜರಾಸಂಧಪುರಸ್ಸರಾಃ
॥ ೯ ॥

ಶಿಶುಪಾಲಂ ಸಮಭ್ಯೇತ್ಯ ಹೃತದಾರಮಿವಾತುರಮ್।
ನಷ್ಟತ್ವಿಷಂ ಗತೋತ್ಸಾಹಂ ಶುಷ್ಯದ್ವದನಮಬ್ರುವನ್
॥ ೧೦ ॥

ಭೋ ಭೋಃ ಪುರುಷಶಾರ್ದೂಲ ದೌರ್ಮನಸ್ಯಮಿದಂ ತ್ಯಜ।
ನ ಪ್ರಿಯಾಪ್ರಿಯಯೋ ರಾಜನ್ ನಿಷ್ಠಾ ದೇಹಿಷು ದೃಶ್ಯತೇ
॥ ೧೧ ॥

ಯಥಾ ದಾರುಮಯೀ ಯೋಷಿನ್ನೃತ್ಯತೇ ಕುಹಕೇಚ್ಛಯಾ।
ಏವಮೀಶ್ವರತಂತ್ರೋಽಯಮೀಹತೇ ಸುಖದುಃಖಿಯೋಃ
॥ ೧೨ ॥

ಶೌರೇಃ ಸಪ್ತದಶಾಹಂ ವೈ ಸಂಯುಗಾನಿ ಪರಾಜಿತಃ।
ತ್ರಯೋವಿಂಶತಿಭಿಃ ಸೈನ್ಯೈರ್ಜಿಗ್ಯ ಏಕಮಹಂ ಪರಮ್
॥ ೧೩ ॥

ಜರಾಸಂಧನ ಸೇನೆಯಲ್ಲಿ ಕೆಲವರು ಕುದುರೆಗಳ ಮೇಲೆ, ಕೆಲವರು ಆನೆಗಳ ಮೇಲೆ, ಕೆಲವರು ರಥದಲ್ಲಿ ಹತ್ತಿಕುಳಿತಿದ್ದರು. ಅವರೆಲ್ಲರೂ ಧನುರ್ವೇದದ ಮರ್ಮಜ್ಞರಾಗಿದ್ದರು. ಅವರು ಯದುವಂಶೀಯರ ಮೇಲೆ – ಮೇಘಗಳು ಪರ್ವತಗಳ ಮೇಲೆ ಮಳೆಗರೆಯುವಂತೆ ಬಾಣಗಳ ವೃಷ್ಟಿಯನ್ನೇ ಸುರಿಸಿಬಿಟ್ಟರು.॥ ೩. ॥ ಪರಮ ಸುಂದರಿಯಾದ ರುಕ್ಮಿಣಿಯು ತನ್ನ ಪತಿಯಾದ ಶ್ರೀಕೃಷ್ಣನ ಸೇನೆಯು ಶತ್ರುಪಕ್ಷದವರ ಬಾಣಗಳ ವರ್ಷದಿಂದ ಮುಚ್ಚಿ ಹೋದುದನ್ನು ಕಂಡು ಲಜ್ಜೆಯೊಂದಿಗೆ ಭಯಗೊಂಡ ಕಣ್ಣುಗಳಿಂದ ಭಗವಾನ್ ಶ್ರೀಕೃಷ್ಣನ ಮುಖವನ್ನು ನೋಡಿದಳು. ॥ ೪ ॥ ಭಗವಂತನು ನಗುತ್ತಾ ಹೇಳಿದನು – ಸುಂದರೀ ! ಭಯಪಡಬೇಡ. ನಮ್ಮ ಕಡೆಯ ಸೈನ್ಯವು ಶತ್ರುಸೈನ್ಯವನ್ನು ಈಗಿಂದೀಗಲೇ ಧ್ವಂಸ ಮಾಡಿಬಿಡುತ್ತದೆ. ॥ ೫ ॥ ಇತ್ತ ಗದ-ಸಂಕರ್ಷಣರೇ ಮೊದಲಾದ ಯದುವಂಶೀಯ ವೀರರು ಶತ್ರುಗಳ ಪರಾಕ್ರಮವನ್ನು ನೋಡಿ ಸಹಿಸದೆ ತಮ್ಮ ಬಾಣಗಳಿಂದ ಶತ್ರುಗಳ ಗಜಾಶ್ವರಥಗಳನ್ನು ತುಂಡರಿಸ ತೊಡಗಿದರು. ॥ ೬ ॥ ಇವರ ಬಾಣಗಳಿಂದ ರಥ, ಕುದುರೆಗಳ ಮತ್ತು ಆನೆಗಳ ಮೇಲೆ ಕುಳಿತ ಪ್ರತಿಪಕ್ಷದ ವೀರರ ಕುಂಡಲ, ಕಿರೀಟ, ರುಮಾಲುಗಳಿಂದ ಸಮಲಂಕೃತವಾದ ಕೋಟಿ ಕೋಟಿ ತಲೆಗಳೂ, ಖಡ್ಗ ಗದೆ, ಧನುಷ್ಯಗಳಿಂದ ಕೂಡಿದ ಕೈಗಳೂ, ತೊಡೆಗಳೂ, ಕಾಲುಗಳೂ ಕತ್ತರಿಸಲ್ಪಟ್ಟು ಭೂಮಿಗೆ ಬೀಳತೊಡಗಿದವು. ಹೀಗೆಯೇ ಕುದುರೆಗಳೂ, ಹೆಸರಕತ್ತೆಗಳೂ, ಒಂಟೆಗಳೂ, ಆನೆಗಳೂ, ಕತ್ತೆಗಳೂ ಮತ್ತು ಮನುಷ್ಯರ ತಲೆಗಳೂ ಲಕ್ಷ-ಲಕ್ಷ ಸಂಖ್ಯೆಯಲ್ಲಿ ನೆಲಕ್ಕುರುಳಿದವು. ॥ ೭-೮ ॥ ವಿಜಯಾಕಾಂಕ್ಷಿಗಳಾದ ಯಾದವರು ಶತ್ರುಸೈನ್ಯವೆಲ್ಲವನ್ನೂ ಧ್ವಂಸಮಾಡಿಬಿಟ್ಟರು. ಜರಾಸಂಧನೇ ಮೊದಲಾದ ರಾಜರೆಲ್ಲರೂ ಯುದ್ಧದಿಂದ ಪರಾಙ್ಮುಖರಾಗಿ ಪಲಾಯನ ಮಾಡಿದರು. ॥ ೯ ॥

ಅತ್ತ ಶಿಶುಪಾಲನು ತನ್ನನ್ನು ವಿವಾಹವಾಗಬೇಕಾಗಿದ್ದ ಭಾವೀ ಪತ್ನಿಯು ಕೈತಪ್ಪಿಹೋದ ಕಾರಣ ಅತೀವ ದುಃಖಿತನಾಗಿದ್ದನು. ಅವನ ಶರೀರದಲ್ಲಿ ಕಾಂತಿಯೂ, ಉತ್ಸಾಹವೂ ಉಡುಗಿ ಹೋಗಿತ್ತು. ಮುಖ ಬಾಡಿತ್ತು. ಜರಾಸಂಧನು ಅವನ ಬಳಿಗೆ ಹೋಗಿ ಸಮಾಧಾನ ಪಡಿಸುತ್ತಾ ಹೇಳಿದನು. ॥ ೧೦ ॥ ಶಿಶುಪಾಲನೇ ! ನೀನಾದರೋ ಶ್ರೇಷ್ಠ ಪುರುಷನಾಗಿರುವೆ. ಈ ದುಃಖಿದ ಮನೋಭಾವವನ್ನು ತ್ಯಜಿಸು. ತನ್ನ ಮನಸ್ಸಿಗೆ ಅನುಕೂಲವಾಗಿರಲೀ, ಪ್ರತಿಕೂಲವಾಗಿರಲೀ ಯಾವುದೇ ಮಾತು ಸ್ಥಿರವಾಗಿ ಇರುವುದನ್ನು ಪ್ರಾಣಿಗಳ ಜೀವನದಲ್ಲಿ ಕಂಡುಬರುವುದಿಲ್ಲ ॥ ೧೧ ॥ ಸೂತ್ರದ ಬೊಂಬೆಯು ಆಡಿಸುವವನ ಇಚ್ಛೆಗನುಸಾರವಾಗಿಯೇ ಕುಣಿಯುವಂತೆ, ಈ ಜೀವನೂ ಕೂಡ ಭಗವದಿಚ್ಛೆಗೆ ಅಧೀನನಾಗಿ ಸುಖ-ದುಃಖಗಳ ನಡುವೆ ಸಿಕ್ಕಿಕೊಂಡು ಪರಮಾತ್ಮನು ಕುಣಿಸಿದಂತೆ ಕುಣಿಯುತ್ತಾ ಇರುತ್ತಾನೆ ॥ ೧೨ ॥ ಇಪ್ಪತ್ತಮೂರು ಅಕ್ಷೌಹಿಣೀ ಸೈನ್ಯಸಮೇತನಾದ ನನ್ನನ್ನು ಶ್ರೀಕೃಷ್ಣನು ಹದಿನೇಳು ಬಾರಿ ಪರಾಜಯಗೊಳಿಸಿದನು. ಆದರೆ ನಾನು ಧೈರ್ಯ ಗೆಡಲಿಲ್ಲ. ಹದಿನೆಂಟನೆಯ ಬಾರಿ ನಾನು ಅವನನ್ನು ಸೋಲಿಸಲಿಲ್ಲವೇ ! ॥ ೧೩. ॥

ತಥಾಪ್ಯಹಂ ನ ಶೋಚಾಮಿ ನ ಪ್ರಹೃಷ್ಯಾಮಿ ಕರ್ಹಿಚಿತ್ ।
ಕಾಲೇನ ದೈವಯುಕ್ತೇನ ಜಾನನ್ ವಿದ್ರಾವಿತಂ ಜಗತ್
॥ ೧೪ ॥

ಅಧುನಾಪಿ ವಯಂ ಸರ್ವೇ ವೀರಯೂಥಪಯೂಥಪಾಃ ।
ಪರಾಜೈತಾಃ ಫಲ್ಗುತಂತ್ರೈರ್ಯದುಭಿಃ ಕೃಷ್ಣಪಾಲಿತೈಃ
॥ ೧೫ ॥

ರಿಪವೋ ಜಿಗ್ಯುರಧುನಾ ಕಾಲ ಆತ್ಮಾನುಸಾರಿಣಿ ।
ತದಾ ವಯಂ ವಿಜೇಷ್ಯಾಮೋ ಯದಾ ಕಾಲಃ ಪ್ರದಕ್ಷಿಣಃ
॥ ೧೬ ॥

ಏವಂ ಪ್ರಬೋಧಿತೋ ಮಿತ್ರೈಶ್ಚೈದ್ಯೋಽಗಾತ್ ಸಾನುಗಃ ಪುರಮ್ ।
ಹತಶೇಷಾಃ ಪುನಸ್ತೇಽಪಿ ಯಯುಃ ಸ್ವಂ ಸ್ವಂ ಪುರಂ ನೃಪಾಃ
॥ ೧೭ ॥

ರುಕ್ಮೀ ತು ರಾಕ್ಷಸೋದ್ವಾಹಂ ಕೃಷ್ಣದ್ವಿಡಸಹನ್ ಸ್ವಸುಃ ।
ಪೃಷ್ಠತೋಽನ್ವಗಮತ್ ಕೃಷ್ಣಮಕ್ಷೌಹಿಣ್ಯಾ ವೃತೋ ಬಲೀ
॥ ೧೮ ॥

ರುಕ್ಮ್ಯಮರ್ಷೀ ಸುಸಂರಬ್ಧಃ ಶೃಣ್ವತಾಂ ಸರ್ವಭೂಭುಜಾಮ್ ।
ಪ್ರತಿಜಜ್ಞೇ ಮಹಾಬಾಹುರ್ದಂಶಿತಃ ಸಶರಾಸನಃ
॥ ೧೯ ॥

ಅಹತ್ವಾ ಸಮರೇ ಕೃಷ್ಣಮಪ್ರತ್ಯೂಹ್ಯ ಚ ರುಕ್ಮಿಣೀಮ್ ।
ಕುಂಡಿನಂ ನ ಪ್ರವೇಕ್ಷ್ಯಾಮಿ ಸತ್ಯಮೇತದ್ಬ್ರವೀಮಿ ವಃ
॥ ೨೦ ॥

ಇತ್ಯುಕ್ತ್ವಾ ರಥಮಾರುಹ್ಯ ಸಾರಥಿಂ ಪ್ರಾಹ ಸತ್ವರಃ ।
ಚೋದಯಾಶ್ವಾನ್ ಯತಃ ಕೃಷ್ಣಸ್ಯ ಮೇ ಸಂಯುಗಂ ಭವೇತ್
॥ ೨೧ ॥

ಅದ್ಯಾಹಂ ನಿಶಿತೈರ್ಬಾಣೈರ್ಗೋಪಾಲಸ್ಯ ಸುದುರ್ಮತೇಃ ।
ನೇಷ್ಯೇ ವೀರ್ಯಮದಂ ಯೇನ ಸ್ವಸಾ ಮೇ ಪ್ರಸಭಂ ಹೃತಾ
॥ ೨೨ ॥

ವಿಕತ್ಥಮಾನಃ ಕುಮತಿರೀಶ್ವರಸ್ಯಾಪ್ರಮಾಣವಿತ್ ।
ರಥೇನೈಕೇನ ಗೋವಿಂದಂ ತಿಷ್ಠ ತಿಷ್ಠೇತ್ಯಥಾಹ್ವಯತ್
॥ ೨೩ ॥

ಧನುರ್ವಿಕೃಷ್ಯ ಸುದೃಢಂ ಜಘ್ನೇ ಕೃಷ್ಣಂ ತ್ರಿಭಿಃ ಶರೈಃ ।
ಆಹ ಚಾತ್ರ ಕ್ಷಣಂ ತಿಷ್ಠ ಯದೂನಾಂ ಕುಲಪಾಂಸನ
॥ ೨೪ ॥

ಕುತ್ರ ಯಾಸಿ ಸ್ವಸಾರಂ ಮೇ ಮುಷಿತ್ವಾ ಧ್ವಾಂಕ್ಷವದ್ಧವಿಃ ।
ಹರಿಷ್ಯೇಽದ್ಯ ಮದಂ ಮಂದ ಮಾಯಿನಃ ಕೂಟಯೋಧಿನಃ
॥ ೨೫ ॥

ಹೀಗಿದ್ದರೂ ಇದಕ್ಕಾಗಿ ನಾನು ಎಂದೂ ಶೋಕಿಸುವುದಿಲ್ಲ, ಹರ್ಷಿತನಾಗುವುದಿಲ್ಲ, ಏಕೆಂದರೆ, ದೈವಕ್ಕೆ ವಶವಾದ ಕಾಲನಿಂದ ಈ ಜಗತ್ತು ನಡೆಸಲ್ಪಡುತ್ತದೆ ಎಂಬುದನ್ನು ನಾನು ಅರಿತಿದ್ದೇನೆ. ॥ ೧೪ ॥ ನಾವುಗಳು ಮಹಾ-ಮಹಾ ವೀರ ಸೇನಾಪತಿಗಳಿಗೂ ಒಡೆಯರಾಗಿದ್ದೇವೆ. ಇದರಲ್ಲಿ ಸಂದೇಹವೇ ಇಲ್ಲ, ಹೀಗಿದ್ದರೂ ಈಗ ಶ್ರೀಕೃಷ್ಣನಿಂದ ಸುರಕ್ಷಿತವಾದ ಯಾದವರ ಅಲ್ಪ ಸೇನೆಯೂ ನಮ್ಮನ್ನು ಸೋಲಿಸಿಬಿಟ್ಟಿದೆ. ॥ ೧೫ ॥ ಈ ಸಲ ನಮ್ಮ ಶತ್ರುಗಳ ವಿಜಯವಾಗಿದೆ. ಏಕೆಂದರೆ, ಕಾಲವು ಅವರಿಗೆ ಅನುಕೂಲವಾಗಿತ್ತು. ಕಾಲವು ನಮಗೆ ಅನುಕೂಲವಾದಾಗ ನಾವುಗಳೂ ಕೂಡ ಅವರನ್ನು ಗೆಲ್ಲಬಲ್ಲೆವು. ॥ ೧೬ ॥ ಪರೀಕ್ಷಿತನೇ ! ಜರಾಸಂಧನೆ ಮೊದಲಾದ ಮಿತ್ರರು ಹೀಗೆ ಸಮಾಧಾನ ಹೇಳಿದಾಗ ಚೇದಿರಾಜ ಶಿಶುಪಾಲನು ತನ್ನ ಅನುಯಾಯಿಗಳೊಂದಿಗೆ ತನ್ನ ರಾಜಧಾನಿಗೆ ಮರಳಿದನು. ಸಾಯದೇ ಉಳಿದಿರುವ ಇತರ ಅವರ ಮಿತ್ರರಾಜರೂ ತಮ್ಮ-ತಮ್ಮ ನಗರಗಳಿಗೆ ಹಿಂದಿರುಗಿದರು. ॥ ೧೭ ॥

ರುಕ್ಮಿಣಿಯ ಹಿರಿಯಣ್ಣನಾದ ರುಕ್ಮಿಯು ಶ್ರೀಕೃಷ್ಣನನ್ನು ಬಹಳವಾಗಿ ದ್ವೇಷಿಸುತ್ತಿದ್ದನು. ತನ್ನ ತಂಗಿಯನ್ನು ಶ್ರೀಕೃಷ್ಣನು ಕದ್ದುಕೊಂಡು ಹೋಗಿ ರಾಕ್ಷಸವಿಧಿಯಿಂದ ವಿವಾಹವಾಗುವುದನ್ನು ಅವನಿಂದ ಸಹಿಸಲಾಗಲಿಲ್ಲ. ಪರಾಕ್ರಮಿಯಾದ ರುಕ್ಮಿಯು ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಶ್ರೀಕೃಷ್ಣನನ್ನು ಹಿಂಬಾಲಿಸಿದನು. ॥ ೧೮ ॥ ಮಹಾ ಬಾಹುವಾದ ರುಕ್ಮಿಯು ಕ್ರೋಧದಿಂದ ಉರಿಯುತ್ತಾ, ಕವಚವನ್ನು ಧರಿಸಿ, ಧನುಸ್ಸನ್ನೆತ್ತಿಕೊಂಡು ಸಮಸ್ತ ರಾಜರ ಮುಂದೆ ಹೀಗೆ ಪ್ರತಿಜ್ಞೆ ಮಾಡಿದನು. ॥ ೧೯ ॥ 'ಕೃಷ್ಣನನ್ನು ಯುದ್ಧದಲ್ಲಿ ಕೊಲ್ಲದೆ, ನನ್ನ ತಂಗಿಯಾದ ರುಕ್ಮಿಣಿಯನ್ನು ಹಿಂದಕ್ಕೆ ಕರೆತರದೆ ನಾನು ಕುಂಡಿನ ಪುರವನ್ನು ಪ್ರವೇಶಿಸುವುದಿಲ್ಲ'. ಸತ್ಯವಾದ ಈ ಮಾತನ್ನು ಪ್ರತಿಜ್ಞಾಪೂರ್ವಕ ನಿಮಗೆ ಹೇಳುತ್ತಿದ್ದೇನೆ. ॥ ೨೦ ॥ ಪರೀಕ್ಷಿತನೇ ! ಹೀಗೆ ಹೇಳಿ ಅವನು ರಥವನ್ನು ಹತ್ತಿ, ಸಾರಥಿಗೆ ಹೇಳಿದನು - 'ಕೃಷ್ಣನಿರುವಲ್ಲಿಗೆ ನನ್ನ ರಥವನ್ನು ಬೇಗನೇ ಓಡಿಸು. ಇಂದು ನಾನು ಅವನೊಡನೆ ಯುದ್ಧಮಾಡಬೇಕಾಗಿದೆ. ॥ ೨೧ ॥ ನನ್ನ ತಂಗಿಯನ್ನು ಬಲಾತ್ಕಾರವಾಗಿ ಸೆಳೆದುಕೊಂಡು ಹೋದ ಆ ದುರ್ಬುದ್ಧಿಯಾದ ಗೋಪಾಲನ ಪರಾಕ್ರಮ ಮದವನ್ನು ತೀಕ್ಷ್ಣವಾದ ಬಾಣಗಳಿಂದ ತೊಡೆದುಹಾಕುತ್ತೇನೆ.' ॥ ೨೨ ॥ ಪರೀಕ್ಷಿತ ಮಹಾರಾಜ ! ಕುಬುದ್ಧಿಯವನಾಗಿದ್ದ ರುಕ್ಮಿಯು ಸರ್ವೇಶ್ವರನಾದ ಶ್ರೀಕೃಷ್ಣನ ಪ್ರಭಾವವೆಷ್ಟೆಂಬುದನ್ನು ತಿಳಿದವನಾಗಿರಲಿಲ್ಲ. ಅವನು ಮನ ಬಂದಂತೆ ಬಡಬಡಿಸುತ್ತಾ ರಥೈಕ ಸಹಾಯಕನಾಗಿ ಶ್ರೀಕೃಷ್ಣನ ರಥದ ಇದಿರಿಗೆ ಹೋಗಿ ನಿಲ್ಲು! ನಿಲ್ಲು! ಎಂದು ಹೇಳುತ್ತಾ ಅವನನ್ನು ಯುದ್ಧಕ್ಕೆ ಆಹ್ವಾನಿಸಿದನು. ॥ ೨೩. ॥ ಅವನು ಸುದೃಢವಾದ ಧನುಸ್ಸನ್ನು ಬಲವಾಗಿ ಸೆಳೆದು ಶ್ರೀಕೃಷ್ಣನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿ, ಹೇಳಿದನು - ಯದುಕುಲಕಲಂಕನೇ ! ಕ್ಷಣಕಾಲ ನಿಲ್ಲು, ಕಾಗೆಯು ಮಂತ್ರಪೂತವಾದ ಹವಿಸ್ಸನ್ನು ಎತ್ತಿಕೊಂಡು ಹೋಗುವಂತೆ, ನನ್ನ ತಂಗಿಯನ್ನು ಕದ್ದುಕೊಂಡು ಎಲ್ಲಿಗೆ ಹೋಗುತ್ತಿರುವೆ ? ಕೂಟ ಯುದ್ಧ ಮಾಡುವುದರಲ್ಲಿ ನಿಷ್ಣಾತನಾದ, ಮಾಯಾವಿಯಾದ, ಮಂದಬುದ್ಧಿಯವನಾದ ನಿನ್ನ ಮದವನ್ನು ಕ್ಷಣಮಾತ್ರದಲ್ಲಿ ಅಡಗಿಸಿಬಿಡುತ್ತೇನೆ. ॥ ೨೪-೨೫ ॥

ಯಾವನ್ನ ಮೇ ಹತೋ ಬಾಣೈಃ
ಶಯೀಥಾ ಮುಂಚ ದಾರಿಕಾಮ್ ।
ಸ್ಮಯನ್ ಕೃಷ್ಣೋ ಧನುಶ್ಚಿತ್ತ್ವಾ
ಷಡ್ಭಿರ್ವಿವ್ಯಾಧ ರುಕ್ಮಿಣಮ್ ॥ ೨೬ ॥

ಅಷ್ಟಭಿಶ್ಚತುರೋ ವಾಹಾನ್ ದ್ವಾಭ್ಯಾಂ ಸೂತಂ ಧ್ವಜಂ ತ್ರಿಭಿಃ ।
ಸ ಚಾನ್ಯದ್ಧನುರಾದಾಯ ಕೃಷ್ಣಂ ವಿವ್ಯಾಧ ಪಂಚಭಿಃ
॥ ೨೭ ॥

ತೈಸ್ತಾಡಿತಃ ಶರೌಘೈಸ್ತು ಚಿಚ್ಛೇದ ಧನುರಚ್ಯುತಃ ।
ಪುನರನ್ಯದುಪಾದತ್ತ ತದಪ್ಯಚ್ಛಿನದವ್ಯಯಃ
॥ ೨೮ ॥

ಪರಿಘಂ ಪಟ್ಟಿಶಂ ಶೂಲಂ ಚರ್ಮಾಸೀ ಶಕ್ತಿತೋಮರೌ ।
ಯದ್ಯದಾಯುಧಮಾದತ್ತ ತತ್ ಸರ್ವಂ ಸೋಽಚ್ಛಿನದ್ಧರಿಃ
॥ ೨೯ ॥

ತತೋ ರಥಾದವಪ್ಲುತ್ಯ ಖಡ್ಗಪಾಣಿರ್ಜಿಘಾಂಸಯಾ ।
ಕೃಷ್ಣಮಭ್ಯದ್ರವತ್ ಕ್ರುದ್ಧಃ ಪತಂಗ ಇವ ಪಾವಕಮ್
॥ ೩೦ ॥

ತಸ್ಯ ಚಾಪತತಃ ಖಡ್ಗಂ ತಿಲಶಶ್ಚರ್ಮ ಚೇಷುಭಿಃ ।
ಭಿತ್ತ್ವಾಸಿಮಾದದೇ ತಿಗ್ಮಂ ರುಕ್ಮಿಣಂ ಹಂತುಮುದ್ಯತಃ
॥ ೩೧ ॥

ದೃಷ್ಟ್ವಾ ಭ್ರಾತೃವಧೋದ್ಯೋಗಂ ರುಕ್ಮಿಣೀ ಭಯವಿಹ್ವಲಾ ।
ಪತಿತ್ವಾ ಪಾದಯೋರ್ಭರ್ತುರುವಾಚ ಕರುಣಂ ಸತೀ
॥ ೩೨ ॥

ಯೋಗೇಶ್ವರಾಪ್ರಮೇಯಾತ್ಮನ್ ದೇವದೇವ ಜಗತ್ಪತೇ ।
ಹಂತುಂ ನಾರ್ಹಸಿ ಕಲ್ಯಾಣ ಭ್ರಾತರಂ ಮೇ ಮಹಾಭುಜ
॥ ೩೩ ॥

ಶ್ರೀಶುಕ ಉವಾಚ

ತಯಾ ಪರಿತ್ರಾಸವಿಕಂಪಿತಾಂಗಯಾ
ಶುಚಾವಶುಷ್ಯನ್ಮುಖಿರುದ್ಧಕಂಠಯಾ ।
ಕಾತರ್ಯವಿಸ್ರಂಸಿತಹೇಮಮಾಲಯಾ
ಗೃಹೀತಪಾದಃ ಕರುಣೋ ನ್ಯವರ್ತತ ॥ ೩೪ ॥

ಚೈಲೇನ ಬದ್ಧ್ವಾ ತಮಸಾಧುಕಾರಿಣಂ
ಸಶ್ಮಶ್ರುಕೇಶಂ ಪ್ರವಪನ್ ವ್ಯರೂಪಯತ್ ।
ತಾವನ್ಮಮರ್ದುಃ ಪರಸೈನ್ಯಮದ್ಭುತಂ
ಯದುಪ್ರವೀರಾ ನಲಿನೀಂ ಯಥಾ ಗಜಾಃ ॥ ೩೫ ॥

ನೋಡು, ನನ್ನ ಬಾಣಗಳಿಂದ ಹತನಾಗಿ ಭೂಮಿಯ ಮೇಲೆ ಮಲಗುವ ಮೊದಲೇ ನನ್ನ ತಂಗಿಯನ್ನು ಬಿಟ್ಟು ಹೋಗು. ರುಕ್ಮಿಯ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣನು ನಗುನಗುತ್ತಲೇ ಅವನ ಧನಸ್ಸನ್ನು ತುಂಡರಿಸಿ, ಅವನ ಮೇಲೆ ಆರು ಬಾಣಗಳನ್ನು ಎಸೆದನು. ॥ ೨೬ ॥ ಹಾಗೆಯೇ ಶ್ರೀಕೃಷ್ಣನು ಎಂಟು ಬಾಣಗಳನ್ನು ಕುದುರೆಗಳ ಮೇಲೆ, ಎರಡು ಬಾಣಗಳನ್ನು ಸಾರಥಿಗೆ ಹೊಡೆದು, ಮೂರು ಬಾಣಗಳಿಂದ ಅವನ ರಥದ ಧ್ವಜವನ್ನು ಕೆಡಹಿದನು. ಆಗ ರುಕ್ಮಿಯು ಮತ್ತೊಂದು ಧನುಸ್ಸನ್ನೆತ್ತಿಕೊಂಡು ಶ್ರೀಕೃಷ್ಣನಿಗೆ ಐದು ಬಾಣಗಳನ್ನು ಪ್ರಯೋಗಿಸಿದನು. ॥ ೨೭ ॥ ಆ ಬಾಣಗಳು ಬರುತ್ತಿರುವಂತೆ ಶ್ರೀಕೃಷ್ಣನು ಅವನ್ನು ತುಂಡರಿಸಿ, ರುಕ್ಮಿಯ ಧನುಷ್ಯವನ್ನೂ ಕತ್ತರಿಸಿ ಬಿಟ್ಟನು. ಅವನು ಮತ್ತೊಂದು ಧನುಸ್ಸನ್ನು ಎತ್ತಿಕೊಂಡು ಹೆದೆಯೇರಿಸುವ ಮೊದಲೇ ಅದನ್ನೂ ತುಂಡರಿಸಿ ಬಿಟ್ಟನು. ॥ ೨೮ ॥ ಹೀಗೆ ರುಕ್ಮಿಯು ಪರಿಘ, ಪಟ್ಟಿಶ, ಶೂಲ, ಕತ್ತಿ-ಗುರಾಣಿ, ಶಕ್ತಿ ತೋಮರ ಮೊದಲಾದ ಶಸ್ತ್ರಗಳನ್ನು ಎತ್ತಿ ಕೊಳ್ಳುತ್ತಿದ್ದಂತೆಯೇ ಅವೆಲ್ಲವನ್ನೂ ಪ್ರಹರಿಸುವ ಮೊದಲೇ ಭಗವಂತನು ಕತ್ತರಿಸಿಹಾಕಿದನು. ॥ ೨೯ ॥ ಆಗ ರುಕ್ಮಿಯು ಅತ್ಯಂತ ಕ್ರುದ್ಧನಾಗಿ ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ರಥದಿಂದ ಧುಮುಕಿ ಕೃಷ್ಣನನ್ನು ಕೊಂದುಬಿಡಬೇಕೆಂಬ ಛಲದಿಂದ ಪತಂಗದ ಹುಳುವು ಬೆಂಕಿಯ ಕಡೆಗೆ ರಭಸದಿಂದ ಧಾವಿಸುವಂತೆ ಶ್ರೀಕೃಷ್ಣನ ಕಡೆಗೆ ನುಗ್ಗಿದನು. ॥ ೩೦ ॥ ರುಕ್ಮಿಯು ತನ್ನ ಮೇಲೆ ಬೀಳಲು ರಭಸದಿಂದ ಮುನ್ನುಗ್ಗುತ್ತಿರುವುದನ್ನು ನೋಡಿದ ಭಗವಂತನು ತನ್ನ ಬಾಣಗಳಿಂದ ಕತ್ತಿ-ಗುರಾಣಿಗಳನ್ನು ನುಚ್ಚುನೂರಾಗಿಸಿದನು ಹಾಗೂ ಅವನನ್ನು ಕೊಂದೇ ಬಿಡಲು ಕೈಯಲ್ಲಿ ಖಡ್ಗವನ್ನೆತ್ತಿಕೊಂಡನು. ॥ ೩೧ ॥ ಭಗವಂತನು ತನ್ನ ಅಣ್ಣನಾದ ರುಕ್ಮಿಯನ್ನು ಕೊಂದೇ ಬಿಡುವನೆಂದು ನೋಡಿದ ರುಕ್ಮಿಣಿಯು ಭಯದಿಂದ ಕಳವಳಗೊಂಡು ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಬಿದ್ದು ಕರುಣಾಸ್ವರದಿಂದ ಇಂತೆಂದಳು. ॥ ೩೨ ॥ "ದೇವದೇವನೇ! ಜಗತ್ಪತಿಯೇ! ಯಾರಿಂದಲೂ ತಿಳಿಯಲಾಗದ ಆತ್ಮಸ್ವರೂಪವುಳ್ಳವನೇ! ಮಹಾಭುಜನೇ! ಕಲ್ಯಾಣಸ್ವರೂಪನೇ! ಪ್ರಭುವೇ! ನನ್ನ ಅಣ್ಣನನ್ನು ಸಂಹರಿಸುವುದು ನಿನಗೆ ಯೋಗ್ಯವಲ್ಲ." ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಆ ಸಮಯದಲ್ಲಿ ರುಕ್ಮಿಣಿಯ ಒಂದೊಂದು ಅವಯವಗಳೂ ಭಯದಿಂದ ನಡುಗುತ್ತಿದ್ದವು. ಶೋಕ ಹೆಚ್ಚಳದಿಂದ ಮುಖವು ಬಾಡಿ, ಗಂಟಲು ಒಣಗಿಹೋಗಿತ್ತು. ಕಾತುರಳಾದ ಆಕೆಯ ಕೊರಳಿನ ಸ್ವರ್ಣಹಾರವು ಕೆಳಗೆ ಬಿದ್ದುಬಿಟ್ಟಿತು. ಇದೇ ಸ್ಥಿತಿಯಲ್ಲಿ ಭಗವಂತನ ಚರಣಗಳನ್ನು ಹಿಡಿದುಕೊಂಡಿದ್ದಳು. ಪರಮ ದಯಾಳುವಾದ ಭಗವಂತನು ಭಯಗೊಂಡಿರುವ ಆಕೆಯನ್ನು ನೋಡಿ ರುಕ್ಮಿಯನ್ನು ಕೊಲ್ಲುವ ವಿಚಾರವನ್ನು ಬಿಟ್ಟು ಬಿಟ್ಟನು. ॥ ೩೪ ॥ ಹೀಗಿದ್ದರೂ ರುಕ್ಮಿಯು ಕೃಷ್ಣನ ಕುರಿತು ಪ್ರತೀಕಾರ ಮಾಡುವುದನ್ನು ಬಿಡಲಿಲ್ಲ. ಆಗ ಭಗವಾನ್ ಶ್ರೀಕೃಷ್ಣನು ಅವನ ವಲ್ಲಿಯಿಂದಲೇ ಅವನನ್ನು ಕಟ್ಟಿ ಗಡ್ಡ-ಮೀಸೆ-ತಲೆಗೂದಲು ಅಲ್ಲಲ್ಲಿ ಬೋಳಿಸಿ ಕುರೂಪಗೊಳಿಸಿದನು. ಅಷ್ಟರಲ್ಲಿ ಯಾದವವೀರರು ಶತ್ರು ಸೈನ್ಯವೆಲ್ಲವನ್ನೂ ಆನೆಯು ಕಮಲ ವನವನ್ನು ಧ್ವಂಸಮಾಡುವಂತೆ ನಿರ್ನಾಮಮಾಡಿದರು. ॥ ೩೫ ॥

ಕೃಷ್ಣಾಂತಿಕಮುಪವ್ರಜ್ಯ ದದೃಶುಸ್ತತ್ರ ರುಕ್ಮಿಣಮ್ ।
ತಥಾಭೂತಂ ಹತಪ್ರಾಯಂ ದೃಷ್ಟ್ವಾ ಸಂಕರ್ಷಣೋ ವಿಭುಃ ।
ವಿಮುಚ್ಯ ಬದ್ಧಂ ಕರುಣೋ ಭಗವಾನ್ ಕೃಷ್ಣಮಬ್ರವೀತ್
॥ ೩೬ ॥

ಅಸಾಧ್ವಿದಂ ತ್ವಯಾ ಕೃಷ್ಣ ಕೃತಮಸ್ಮಜ್ಜುಗುಪ್ಸಿತಮ್ ।
ವಪನಂ ಶ್ಮಶ್ರುಕೇಶಾನಾಂ ವೈರೂಪ್ಯಂ ಸುಹೃದೋ ವಧಃ
॥ ೩೭ ॥

ಮೈವಾಸ್ಮಾನ್ ಸಾಧ್ವ್ಯಸೂಯೇಥಾ
ಭ್ರಾತುರ್ವೈರೂಪ್ಯಚಿಂತಯಾ ।
ಸುಖದುಃಖದೋ ನ ಚಾನ್ಯೋಽಸ್ತಿ
ಯತಃ ಸ್ವಕೃತಭುಕ್ ಪುಮಾನ್ ॥ ೩೮ ॥

ಬಂಧುರ್ವಧಾರ್ಹದೋಷೋಽಪಿ ನ ಬಂಧೋರ್ವಧಮರ್ಹತಿ ।
ತ್ಯಾಜ್ಯಃ ಸ್ವೇನೈವ ದೋಷೇಣ ಹತಃ ಕಿಂ ಹನ್ಯತೇ ಪುನಃ
॥ ೩೯ ॥

ಕ್ಷತ್ರಿಯಾಣಾಮಯಂ ಧರ್ಮಃ ಪ್ರಜಾಪತಿವಿನಿರ್ಮಿತಃ ।
ಭ್ರಾತಾಪಿ ಭ್ರಾತರಂ ಹನ್ಯಾದ್ಯೇನ ಘೋರತರಸ್ತತಃ
॥ ೪೦ ॥

ರಾಜ್ಯಸ್ಯ ಭೂಮೇರ್ವಿತ್ತಸ್ಯ ಸ್ತ್ರಿಯೋ ಮಾನಸ್ಯ ತೇಜಸಃ ।
ಮಾನಿನೋಽನ್ಯಸ್ಯ ವಾ ಹೇತೋಃ ಶ್ರೀಮದಾಂಧಾಃ ಕ್ಷಿಪಂತಿ ಹಿ
॥ ೪೧ ॥

ತವೇಯಂ ವಿಷಮಾ ಬುದ್ಧಿಃ ಸರ್ವಭೂತೇಷು ದುರ್ಹೃದಾಮ್ ।
ಯನ್ಮನ್ಯಸೇ ಸದಾಭದ್ರಂ ಸುಹೃದಾಂ ಭದ್ರಮಜ್ಞವತ್
॥ ೪೨ ॥

ಆತ್ಮಮೋಹೋ ನೃಣಾಮೇಷ ಕಲ್ಪತೇ ದೇವಮಾಯಯಾ ।
ಸುಹೃದ್ದುರ್ಹೃದುದಾಸೀನ ಇತಿ ದೇಹಾತ್ಮಮಾನಿನಾಮ್
॥ ೪೩ ॥

ಏಕ ಏವ ಪರೋ ಹ್ಯಾತ್ಮಾ ಸರ್ವೇಷಾಮಪಿ ದೇಹಿನಾಮ್ ।
ನಾನೇವ ಗೃಹ್ಯತೇ ಮೂಢೈರ್ಯಥಾ ಜ್ಯೋತಿರ್ಯಥಾ ನಭಃ
॥ ೪೪ ॥

ಮತ್ತೆ ಅವರು ಮರಳಿ ಶ್ರೀಕೃಷ್ಣನ ಬಳಿಗೆ ಬಂದು ನೋಡುತ್ತಾರೆ ರುಕ್ಮಿಯು ಬಟ್ಟೆಯಿಂದ ಕಟ್ಟಲ್ಪಟ್ಟು ಹತಪ್ರಾಯನಾಗಿಬಿದ್ದಿದ್ದನು. ಅವನನ್ನು ನೋಡಿದ ಭಗವಾನ್ ಬಲರಾಮನಿಗೆ ದಯೆ ಉಂಟಾಗಿ, ಅವನ ಬಂಧವನ್ನು ಬಿಡಿಸಿ ಶ್ರೀಕೃಷ್ಣನಲ್ಲಿ ಹೇಳಿದನು - ॥ ೩೬ ॥ ಕೃಷ್ಣ! ನೀನು ಮಾಡಿದುದು ಸರಿಯಲ್ಲ. ಇಂತಹ ನಿಂದಿತ ಕಾರ್ಯವೂ ನಮ್ಮಂತಹವರಿಗೆ ಯೋಗ್ಯವಲ್ಲ. ತಮ್ಮ ಸಂಬಂಧಿಕರ ಗಡ್ಡ-ಮೀಸೆ ಬೋಳಿಸಿ ವಿರೂಪಗೊಳಿಸುವುದು ಒಂದು ರೀತಿಯಿಂದ ವಧೆಯೆ ಆಗಿದೆ. ॥ ೩೭ ॥ ಬಳಿಕ ಬಲರಾಮನು ರುಕ್ಮಿಣಿಯನ್ನು ಸಂಬೋಧಿಸಿ ಹೇಳಿದನು - ಸಾಧ್ವಿಯೇ! ಶ್ರೀಕೃಷ್ಣನು ನಿನ್ನಣ್ಣನನ್ನು ವಿರೂಪಗೊಳಿಸಿದನೆಂದು ನಮ್ಮ ಕುರಿತು ನೀನು ದೋಷ ವೆಣಿಸಬೇಡ. ಏಕೆಂದರೆ, ಜೀವನಿಗೆ ಸುಖ-ದುಃಖಗಳನ್ನು ಕೊಡುವವನು ಬೇರೆಯಾರೂ ಅಗಿರದೆ ತನ್ನ ಕರ್ಮಗಳನ್ನೇ ಭೋಗಿಸಬೇಕಾಗುತ್ತದೆ. ॥ ೩೮ ॥ ಈಗ ಶ್ರೀಕೃಷ್ಣನನ್ನು ಸಂಬೋಧಿಸಿ ಹೇಳುತ್ತಾನೆ - ಕೃಷ್ಣಾ! ನಮ್ಮ ಸಂಬಂಧಿಯು ವಧಾರ್ಹವಾದ ಅಪರಾಧವನ್ನೇ ಮಾಡಿದ್ದರೂ ನಾವು ಅವನನ್ನು ವಧಿಸಬಾರದು. ಅವನನ್ನು ಬಿಟ್ಟಿಬಿಡಬೇಕು. ಅವನಾದರೋ ತನ್ನ ದೋಷದಿಂದಲೇ ಸತ್ತುಹೋಗಿರುವನು. ಅಂತಹವನನ್ನು ಪುನಃ ಸಾಯಿಸಲು ಹೋಗುವುದೇ ? ॥ ೩೯ ॥ ಮತ್ತೆ ರುಕ್ಮಿಣಿಗೆ ಹೇಳುತ್ತಾನೆ ಸಾಧ್ವಿಮಣಿಯೇ! ಧರ್ಮರಕ್ಷಣೆಗಾಗಿ ಕ್ಷತ್ರಿಯ ನಾದವನು ತನ್ನ ಸೋದರನನ್ನೇ ಕೊಲ್ಲಬೇಕಾಗುತ್ತದೆ. ಬ್ರಹ್ಮನೇ ಕ್ಷತ್ರಿಯರಿಗೆ ಈ ಧರ್ಮವನ್ನು ವಿಧಿಸಿದ್ದಾನೆ. ಅದಕ್ಕಾಗಿ ಈ ಕ್ಷತ್ರಿಯಧರ್ಮವು ಅತ್ಯಂತ ಘೋರವಾಗಿದೆ. ॥ ೪೦ ॥ ಪುನಃ ಶ್ರೀಕೃಷ್ಣನಲ್ಲಿ ಹೇಳಿದನು ತಮ್ಮ! ಧನಮದದಿಂದ ಅಂಧರಾದ ಮದಾಂಧಕಾರಿಗಳು ರಾಜ್ಯ, ಭೂಮಿ, ಧನ, ಸ್ತ್ರೀ, ಮಾನ, ತೇಜಸ್ಸು ಇವುಗಳಿಂದಲೋ ಅಥವಾ ಬೇರೆ ಯಾವುದೇ ಕಾರಣದಿಂದ ತನ್ನ ಬಂಧುಗಳನ್ನೇ ತಿರಸ್ಕರಿಸುತ್ತಾರೆ. ॥ ೪೧ ॥ ರುಕ್ಮಿಣಿಯ ಬಳಿ ಹೇಳುತ್ತಾನೆ - ಸಾಧ್ವಿ ! ನಿನ್ನ ಬಂಧುಗಳು ಸಮಸ್ತ ಪ್ರಾಣಿಗಳ ವಿಷಯದಲ್ಲಿ ದುರ್ಭಾವನೆಯನ್ನಿಟ್ಟುಕೊಂಡಿರುವರು. ನಾವು ಅವರಿಗೆ ಒಳ್ಳೆಯದಾಗಲೆಂದೇ ಈ ಶಿಕ್ಷೆಯನ್ನು ವಿಧಿಸಿದ್ದೇವೆ. ಇದನ್ನು ನೀನು ಅಜ್ಞಾನಿಗಳಂತೆ ಅಮಂಗಳವೆಂದು ಭಾವಿಸಬೇಡ. ॥ ೪೨ ॥ ದೇವಿ! ಭಗವಂತನ ಮಾಯೆಯಿಂದ ಮೋಹಿತರಾಗಿ ದೇಹವನ್ನೇ ಆತ್ಮನೆಂದು ತಿಳಿದವರಿಗೆ ಇವನು ಮಿತ್ರನು, ಇವನು ಶತ್ರುವು, ಇವನು ಉದಾಸೀನ ಇಂತಹ ಆತ್ಮಮೋಹ ಉಂಟಾಗುತ್ತದೆ. ॥ ೪೩ ॥ ಸಮಸ್ತ ದೇಹಧಾರಿಗಳ ಆತ್ಮವು ಒಂದೇ ಆಗಿದೆ. ಅದಕ್ಕೆ ಮಾಯೆಯ ಯಾವ ಸಂಬಂಧವೂ ಇಲ್ಲ. ನೀರು, ಘಟ ಮುಂತಾದವುಗಳ ಭೇದದಿಂದ ಒಂದೇ ಯಾಗಿರುವ ಸೂರ್ಯ, ಚಂದ್ರರೇ ಮೊದಲಾದ ಪ್ರಕಾಶಮಾನ ಪದಾರ್ಥಗಳು ಮತ್ತು ಆಕಾಶವು ಭಿನ್ನ-ಭಿನ್ನವಾಗಿ ಕಂಡುಬರುವಂತೆ ಮೂರ್ಖಜನರು ಶರೀರ ಭೇದದಿಂದ ಆತ್ಮನಲ್ಲಿ ಭೇದವನ್ನು ಭಾವಿಸುತ್ತಾರೆ. ॥ ೪೪ ॥

ದೇಹ ಆದ್ಯಂತವಾನೇಷ ದ್ರವ್ಯಪ್ರಾಣಗುಣಾತ್ಮಕಃ।
ಆತ್ಮನ್ಯವಿದ್ಯಯಾ ಕ್ಲೃಪ್ತಃ ಸಂಸಾರಯತಿ ದೇಹಿನಮ್
॥ ೪೫ ॥

ನಾತ್ಮನೋಽನ್ಯೇನ ಸಂಯೋಗೋ ವಿಯೋಗಶ್ಚಾಸತಃ ಸತಿ।
ತದ್ಧೇತುತ್ವಾತ್ತತ್ಪಸಿದ್ಧೇರ್ದೃಗ್ರೂಪಾಭ್ಯಾಂ ಯಥಾ ರವೇಃ
॥ ೪೬ ॥

ಜನ್ಮಾದಯಸ್ತು ದೇಹಸ್ಯ ವಿಕ್ರಿಯಾ ನಾತ್ಮನಃ ಕ್ವಚಿತ್।
ಕಲಾನಾಮಿವ ನೈವೇಂದೋರ್ಮೃತಿರ್ಹ್ಯಸ್ಯ ಕುಹೂರಿವ
॥ ೪೭ ॥

ಯಥಾ ಶಯಾನ ಆತ್ಮಾನಂ ವಿಷಯಾನ್ ಫಲಮೇವ ಚ।
ಅನುಭುಂಕ್ತೇಽಪ್ಯಸತ್ಯರ್ಥೇ ತಥಾಽಽಪ್ನೋತ್ಯಬುಧೋ ಭವಮ್
॥ ೪೮ ॥

ತಸ್ಮಾದಜ್ಞಾನಜಂ ಶೋಕಮಾತ್ಮಶೋಷವಿಮೋಹನಮ್।
ತತ್ತ್ವಜ್ಞಾನೇನ ನಿರ್ಹೃತ್ಯ ಸ್ವಸ್ಥಾ ಭವ ಶುಚಿಸ್ಮಿತೇ
॥ ೪೯ ॥

ಶ್ರೀಶುಕ ಉವಾಚ

ಏವಂ ಭಗವತಾ ತನ್ವೀ ರಾಮೇಣ ಪ್ರತಿಬೋಧಿತಾ।
ವೈಮನಸ್ಯಂ ಪರಿತ್ಯಜ್ಯ ಮನೋ ಬುದ್ಧ್ಯಾ ಸಮಾದಧೇ
॥ ೫೦ ॥

ಪ್ರಾಣಾವಶೇಷ ಉತ್ಸ್ಫೂರ್ಜೋ ದ್ವಿಡ್ಬಿರ್ಹತಬಲಪ್ರಭಃ।
ಸ್ಮರನ್ ವಿರೂಪಕರಣಂ ವಿತಥಾತ್ಮಮನೋರಥಃ
॥ ೫೧ ॥

ಚಕ್ರೇ ಭೋಜಕಟಂ ನಾಮ ನಿವಾಸಾಯ ಮಹತ್ ಪುರಮ್।
ಅಹತ್ವಾ ದುರ್ಮತಿಂ ಕೃಷ್ಣಮಪ್ರತ್ಯೂಹ್ಯ ಯವೀಯಸೀಮ್।
ಕುಂಡಿನಂ ನ ಪ್ರವೇಕ್ಷ್ಯಾಮೀತ್ಯುಕ್ತ್ವಾ ತತ್ರಾವಸದ್ರುಷಾ
॥ ೫೨ ॥

ಈ ಶರೀರವು ಆದಿ-ಅಂತ್ಯವುಳ್ಳದ್ದು, ಪಂಚಭೂತಗಳು, ಪಂಚ ಪ್ರಾಣಗಳು, ಪಂಚತನ್ಮಾತ್ರೆಗಳು, ಮತ್ತು ತ್ರಿಗುಣಗಳೇ ಇದರ ಸ್ವರೂಪವಾಗಿದೆ. ಆತ್ಮನಲ್ಲಿರುವ ಅಜ್ಞಾನದಿಂದಲೇ ಈ ಶರೀರ ಕಲ್ಪಿತವಾಗಿದೆ. ಅದನ್ನೇ 'ನಾನು-ನನ್ನದು' ಎಂದು ತಿಳಿದು ಹುಟ್ಟು-ಸಾವಿನ ಸಂಸಾರ ಚಕ್ರದಲ್ಲಿ ಬೀಳುತ್ತಾನೆ. ॥ ೪೫ ॥ ಸಾಧ್ವಿ! ನೇತ್ರ ಮತ್ತು ರೂಪ ಎರಡೂ ಸೂರ್ಯನಿಂದ ಪ್ರಕಾಶಿಸುತ್ತವೆ. ಸೂರ್ಯನೇ ಅವುಗಳ ಕಾರಣನಾಗಿದ್ದಾನೆ. ಅದರಿಂದ ಸೂರ್ಯನೊಂದಿಗೆ ನೇತ್ರ ಮತ್ತು ರೂಪ ಇವುಗಳ ಸಂಯೋಗ-ವಿಯೋಗ ಎಂದೂ ಆಗುವುದಿಲ್ಲ. ಹೀಗೆಯೇ ಸಮಸ್ತ ಪ್ರಪಂಚದ ಅಸ್ತಿತ್ವವು ಆತ್ಮನ ಅಸ್ತಿತ್ವದ ಕಾರಣದಿಂದಲೇ ಕಂಡುಬರುತ್ತದೆ. ಸಮಸ್ತ ಪ್ರಪಂಚದ ಪ್ರಕಾಶವು ಆತ್ಮವೇ ಆಗಿದೆ. ಹಾಗಿರುವಾಗ ಆತ್ಮನೊಂದಿಗೆ ಬೇರೆ ಅಸತ್ ಪದಾರ್ಥಗಳ ಸಂಯೋಗ-ವಿಯೋಗ ಹೇಗಾಗಬಲ್ಲದು ? ॥ ೪೬ ॥ ಹುಟ್ಟುವುದು, ಇರುವುದು, ಬೆಳೆಯುವುದು, ಬದಲಾಗುವುದು, ಕುಗ್ಗುವುದು, ಸಾಯುವುದು - ಈ ವಿಕಾರಗಳೆಲ್ಲವೂ ಶರೀರದ್ದಾಗಿರುತ್ತವೆ, ಆತ್ಮನದಲ್ಲ. ಕೃಷ್ಣಪಕ್ಷದಲ್ಲಿ ಚಂದ್ರನ ಕಲೆಗಳದ್ದೇ ಕ್ಷಯವಾಗುತ್ತದೆ, ಚಂದ್ರನದ್ದಲ್ಲ. ಆದರೆ ಅಮಾವಾಸ್ಯೆಯದಿನ ಜನರು ವ್ಯವಹಾರದಲ್ಲಿ ಚಂದ್ರನದೇ ಕ್ಷಯವಾಯಿತೆಂದು ಹೇಳುತ್ತಾ-ಕೇಳುತ್ತಾ ಇರುತ್ತಾರೆ. ಹಾಗೆಯೇ ಹುಟ್ಟು-ಸಾವು ಮುಂತಾದ ವಿಕಾರಗಳೆಲ್ಲವೂ ಶರೀರದ್ದೇ ಆಗಿರುತ್ತವೆ. ಆದರೆ ಜನರು ಭ್ರಮೆಯಿಂದ ಆತ್ಮನದೇ ಎಂದು ಭಾವಿಸುತ್ತಾರೆ. ॥ ೪೭ ॥ ಮಲಗಿರುವ ವ್ಯಕ್ತಿಯು ಯಾವುದೇ ಪದಾರ್ಥಗಳು ಇಲ್ಲದೆಯೇ ಸ್ವಪ್ನದಲ್ಲಿ ಭೋಕ್ತಾ, ಭೋಗ್ಯ ಮತ್ತು ಭೋಗರೂಪವಾದ ಫಲಗಳನ್ನು ಅನುಭವಿಸುತ್ತಾನೆ. ಹಾಗೆಯೇ ಅಜ್ಞಾನೀ ಜನರು ಮಿಥ್ಯೆಯೇ ಆದ ಸಂಸಾರ ಚಕ್ರವನ್ನು ಅನುಭವಿಸುತ್ತಾರೆ. ॥ ೪೮ ॥ ಅದಕ್ಕಾಗಿ ಸಾಧ್ವಿಯೇ! ಅಜ್ಞಾನದಿಂದ ಉಂಟಾದ ಈ ಶೋಕವನ್ನು ತ್ಯಜಿಸು. ಅದು ಅಂತಃಕರಣವನ್ನು ಶೋಷಿಸಿಬಿಡುತ್ತದೆ; ಮೋಹಿತಗೊಳಿಸುತ್ತದೆ. ಆದುದರಿಂದ ಈ ಶೋಕವನ್ನು ಬಿಟ್ಟು ನೀನು ನಿನ್ನ ಸ್ವರೂಪದಲ್ಲಿ ಸ್ಥಿತನಾಗು. ॥ ೪೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಬಲರಾಮನು ಈ ಪ್ರಕಾರವಾಗಿ ಸಮಜಾಯಿಸಿದಾಗ ಪರಮ ಸುಂದರಿಯಾದ ರುಕ್ಮಿಣಿಯು ತನ್ನ ಮನಸ್ಸನ್ನು ಸಾಂತ್ವನಗೊಳಿಸಿ ವಿವೇಕ ಬುದ್ಧಿಯಿಂದ ಅದನ್ನು ಸಮಾಧಾನಗೊಳಿಸಿದಳು. ॥ ೫೦ ॥ ರುಕ್ಮಿಯ ಸೈನ್ಯ ಮತ್ತು ತೇಜವು ನಾಶವಾಗಿ ಹೋಗಿತ್ತು. ಕೇವಲ ಪ್ರಾಣಗಳು ಉಳಿದಿದ್ದವು. ಅವನ ಮನಸ್ಸಿನ ಎಲ್ಲ ಆಸೆ ಆಕಾಂಕ್ಷೆಗಳು ವ್ಯರ್ಥವಾಗಿ ಹೋಗಿದ್ದವು. ಶತ್ರುಗಳು ಅವನನ್ನು ಅವಮಾನಿತಗೊಳಿಸಿ ಬಿಟ್ಟುಬಿಟ್ಟಿದ್ದರು. ತನ್ನನ್ನು ವಿರೂಪಗೊಳಿಸಿದ ಕಷ್ಟದಾಯಕ ಸ್ಮೃತಿಯನ್ನು ಅವನಿಂದ ಮರೆಯಲಾಗಲಿಲ್ಲ ॥ ೫೧ ॥ 'ದುರ್ಬುದ್ಧಿಯಾದ ಕೃಷ್ಣನನ್ನು ಕೊಲ್ಲದೆ, ತಂಗಿಯನ್ನು ಮರಳಿ ತರದೆ ಕುಂಡಿನ ಪುರವನ್ನು ಪ್ರವೇಶಿಸುವುದಿಲ್ಲ' ಎಂದು ಅವನು ಹಿಂದೆಯೇ ಪ್ರತಿಜ್ಞೆ ಮಾಡಿದ್ದನು. ಆದ್ದರಿಂದ ಅವನು ಭೋಜಕಟ ಎಂಬ ನಗರವನ್ನು ನಿರ್ಮಿಸಿಕೊಂಡು, ಅಲ್ಲಿಯೇ ಕ್ರುದ್ಧನಾಗಿ ಇರತೊಡಗಿದನು. ॥ ೫೨ ॥

ಭಗವಾನ್ ಭೀಷ್ಮಕಸುತಾಮೇವಂ ನಿರ್ಜಿತ್ಯ ಭೂಮಿಪಾನ್ ।
ಪುರಮಾನೀಯ ವಿಧಿವದುಪಯೇಮೇ ಕುರೂದ್ವಹ
॥ ೫೩ ॥

ತದಾ ಮಹೋತ್ಸವೋ ನೃಣಾಂ ಯದುಪುರ್ಯಾಂ ಗೃಹೇ ಗೃಹೇ ।
ಅಭೂದನನ್ಯಭಾವಾನಾಂ ಕೃಷ್ಣೇ ಯದುಪತೌ ನೃಪ
॥ ೫೪ ॥

ನರಾ ನಾರ್ಯಶ್ಚ ಮುದಿತಾಃ ಪ್ರಮೃಷ್ಟಮಣಿಕುಂಡಲಾಃ ।
ಪಾರಿಬರ್ಹಮುಪಾಜಹ್ರುರ್ವರಯೋಶ್ಚಿತ್ರವಾಸಸೋಃ
॥ ೫೫ ॥

ಸಾ ವೃಷ್ಣಿಪುರ್ಯುತ್ತಭಿತೇಂದ್ರಕೇತುಭಿ-
ರ್ವಿಚಿತ್ರಮಾಲ್ಯಾಂಬರರತ್ನತೋರಣೈಃ ।
ಬಭೌ ಪ್ರತಿದ್ವಾರ್ಯುಪಕಲ್ಪ್ತಮಂಗಲೈ-
ರಾಪೂರ್ಣಕುಂಭಾಗುರುಧೂಪದೀಪಕೈಃ ॥ ೫೬ ॥

ಸಿಕ್ತಮಾರ್ಗಾ ಮದಚ್ಯುದ್ಭಿರಾಹೂತಪ್ರೇಷ್ಯಭೂಭುಜಾಮ್ ।
ಗಜೈರ್ದ್ವಾಸ್ಸು ಪರಾಮೃಷ್ಟರಂಭಾಪೂಗೋಪಶೋಭಿತಾ
॥ ೫೭ ॥

ಕುರುಸೃಂಜಯಕೈಕೇಯವಿದರ್ಭಯದುಕುಂತಯಃ ।
ಮಿಥೋ ಮುಮುದಿರೇ ತಸ್ಮಿನ್ಸಂಭ್ರಮಾತ್ ಪರಿಧಾವತಾಮ್
॥ ೫೮ ॥

ರುಕ್ಮಿಣ್ಯಾ ಹರಣಂ ಶ್ರುತ್ವಾ ಗೀಯಮಾನಂ ತತಸ್ತತಃ ।
ರಾಜಾನೋ ರಾಜಕನ್ಯಾಶ್ಚ ಬಭೂವುರ್ಭೃಶವಿಸ್ಮಿತಾಃ
॥ ೫೯ ॥

ದ್ವಾರಕಾಯಾಮಭೂದ್ ರಾಜನ್
ಮಹಾಮೋದಃ ಪುರೌಕಸಾಮ್ ।
ರುಕ್ಮಿಣ್ಯಾ ರಮಯೋಪೇತಂ
ದೃಷ್ಟ್ವಾ ಕೃಷ್ಣಂ ಶ್ರಿಯಃಪತಿಮ್ ॥ ೬೦ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಹೀಗೆ ಎಲ್ಲ ರಾಜರನ್ನು ಗೆದ್ದುಕೊಂಡು ರುಕ್ಮಿಣಿಯನ್ನು ದ್ವಾರಕೆಗೆ ಕರೆತಂದು ಆಕೆಯನ್ನು ವಿಧಿಪೂರ್ವಕವಾಗಿ ವಿವಾಹವಾದನು. ॥ ೫೩ ॥ ರಾಜೇಂದ್ರನೇ ! ಯದುಪತಿಯಾದ ಶ್ರೀಕೃಷ್ಣನಲ್ಲಿ ಅನನ್ಯವಾದ ಪ್ರೇಮವನ್ನು ಇರಿಸಿಕೊಂಡಿದ್ದ ದ್ವಾರಕಾನಗರದ ನಿವಾಸಿಗಳ ಮನೆ-ಮನೆಗಳಲ್ಲಿ ಶ್ರೀಕೃಷ್ಣನ ವಿವಾಹೋತ್ಸವವನ್ನು ಆಚರಿಸಿದರು. ॥ ೫೪ ॥ ಜಗಜಗಿಸುವ ರತ್ನದ ಕುಂಡಲಗಳನ್ನು ಧರಿಸಿದ್ದ ಅಲ್ಲಿಯ ನರ-ನಾರಿಯರು ಶ್ರೀಕೃಷ್ಣ-ರುಕ್ಮಿಣಿಯರ ವಿವಾಹ ಮಹೋತ್ಸವದಿಂದ ಆನಂದಭರಿತರಾಗಿ ಚಿತ್ರ-ವಿಚಿತ್ರವಾದ ವಸ್ತ್ರಗಳನ್ನು ಧರಿಸಿದ್ದ ವಧೂ-ವರರಿಗೆ ನಾನಾ ವಿಧವಾದ ಕಾಣಿಕೆ - ಉಡುಗೊರೆಗಳನ್ನು ತಂದೊಪ್ಪಿಸಿದರು. ॥ ೫೫ ॥ ಆ ಸಮಯದಲ್ಲಿ ದ್ವಾರಕಾಪಟ್ಟಣವು ಅಪೂರ್ವವಾದ ಶೋಭೆಯಿಂದ ಬೆಳಗುತ್ತಿದ್ದಿತು. ಎತ್ತರವಾದ ಇಂದ್ರಧ್ವಜಗಳು ಎಲ್ಲೆಡೆಯಲ್ಲಿಯೂ ಹಾರಾಡುತ್ತಿದ್ದವು. ಹಲವು ಬಣ್ಣದ ಪುಷ್ಪಹಾರಗಳ, ವಸ್ತ್ರಗಳ ಮತ್ತು ಮಣಿಗಳ ತೋರಣಗಳಿಂದ ಪಟ್ಟಣವು ಸಮಲಂಕೃತವಾಗಿತ್ತು. ಪ್ರತಿ ಮನೆಯ ಬಾಗಿಲುಗಳಲ್ಲಿಯೂ ಅರಳು, ಗರಿಕೆ, ಹೂವು ಮೊದಲಾದ ಮಂಗಳ ದ್ರವ್ಯಗಳನ್ನು ಪೂರ್ಣಕುಂಭಗಳನ್ನು ಇರಿಸಿದ್ದರು. ಅಗರು-ಧೂಪಗಳಿಂದಲೂ, ಸಾಲುದೀಪಗಳಿಂದಲೂ ಅಲ್ಲಿಯ ಶೋಭೆಯು ವಿಲಕ್ಷಣವಾಗಿತ್ತು. ॥ ೫೬ ॥ ವಿವಾಹಕ್ಕೆ ಆಹ್ವಾನಿಸಲ್ಪಟ್ಟ ಮಿತ್ರ ರಾಜರ ಮತ್ತಗಜಗಳ ಮದೋದಕದಿಂದ ಅಲ್ಲಿಯ ಬೀದಿಗಳು ತೊಯ್ದು ಹೋಗಿದ್ದವು. ಬಾಗಿಲುಗಳು ಸಾರಿಸಲ್ಪಟ್ಟು ಬಾಳೆಯ ಕಂಬಗಳಿಂದಲೂ, ಹೊಂಬಾಳೆಗಳಿಂದಲೂ, ಅಲಂಕರಿಸಲ್ಪಟ್ಟು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದವು. ॥ ೫೭ ॥ ಆ ವಿವಾಹಮಹೋತ್ಸವ ಸಂದರ್ಭದಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದವರಲ್ಲಿ ಕುರು-ಸೃಂಜಯ-ಕೇಕಯ-ವಿದರ್ಭ-ಯದು ಮತ್ತು ಕುಂತೀದೇಶದ ಅರಸರೂ ಪ್ರಜೆಗಳೂ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಆನಂದತುಂದಿಲರಾಗಿದ್ದರು. ॥ ೫೮ ॥ ಅಲ್ಲಲ್ಲಿ ಗಾಯಕರು ರುಕ್ಮಿಣೀಹರಣ ಪ್ರಸಂಗವನ್ನು ಮಧುರವಾಗಿ ಗಾಯನಮಾಡುತ್ತಿದ್ದರು. ಇದನ್ನು ಕೇಳಿದ ರಾಜರೂ ಮತ್ತು ರಾಜಕನ್ಯೆಯರೂ ಅತ್ಯಂತ ವಿಸ್ಮಿತರಾದರು. ॥ ೫೯ ॥ ರಾಜೇಂದ್ರನೇ ! ಲಕ್ಷ್ಮೀದೇವಿಯು ರುಕ್ಮಿಣೀರೂಪದಲ್ಲಿದ್ದು ಸಾಕ್ಷಾತ್ ಲಕ್ಷ್ಮೀಪತಿಯಾದ ಶ್ರೀಕೃಷ್ಣನೊಡನೆ ಸೇರಿರುವುದನ್ನು ನೋಡಿ ದ್ವಾರಕಾವಾಸಿಗಳಾದ ನರ-ನಾರಿಯರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿ ಹೋದರು. ॥ ೬೦ ॥

ಐವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೫೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುಕ್ಮಿಣ್ಯುದ್ವಾಹೋತ್ಸವೋ ನಾಮ ಚತುಃಪಂಚಾಶತ್ತಮೋಽಧ್ಯಾಯಃ ॥ ೫೪ ॥

ಐವತ್ತೈದನೆಯ ಅಧ್ಯಾಯ

ಪ್ರದ್ಯುಮ್ನನ ಜನ್ಮ - ಶಂಬರಾಸುರನ ವಧೆ

ಶ್ರೀಶುಕ ಉವಾಚ

ಕಾಮಸ್ತು ವಾಸುದೇವಾಂಶೋ ದಗ್ಧಃ ಪ್ರಾಗ್ರುದ್ರಮನ್ಯುನಾ ।
ದೇಹೋಪಪತ್ತಯೇ ಭೂಯಸ್ತಮೇವ ಪ್ರತ್ಯಪದ್ಯತ
॥ ೧ ॥

ಸ ಏವ ಜಾತೋ ವೈದರ್ಭ್ಯಾಂ ಕೃಷ್ಣವೀರ್ಯಸಮುದ್ಭವಃ ।
ಪ್ರದ್ಯುಮ್ನ ಇತಿ ವಿಖ್ಯಾತಃ ಸರ್ವತೋಽನವಮಃ ಪಿತುಃ
॥ ೨ ॥

ತಂ ಶಂಬರಃ ಕಾಮರೂಪೀ ಹೃತ್ವಾತೋಕಮನಿರ್ದಶಮ್ ।
ಸ ವಿದಿತ್ವಾತ್ಮನಃ ಶತ್ರುಂ ಪ್ರಾಸ್ಯೋದನ್ವತ್ಯಗಾದ್ಗೃಹಮ್
॥ ೩ ॥

ತಂ ನಿರ್ಜಗಾರ ಬಲವಾನ್ ಮೀನಃ ಸೋಽಪ್ಯಪರೈಃ ಸಹ ।
ವೃತೋ ಜಾಲೇನ ಮಹತಾ ಗೃಹೀತೋ ಮತ್ಸ್ಯಜೀವಿಭಿಃ
॥ ೪ ॥

ತಂ ಶಂಬರಾಯ ಕೈವರ್ತಾ ಉಪಾಜಹ್ರುರುಪಾಯನಮ್ ।
ಸೂದಾ ಮಹಾನಸಂ ನೀತ್ವಾವದ್ಯನ್ ಸ್ವಧಿತಿನಾದ್ಭುತಮ್
॥ ೫ ॥

ದೃಷ್ಟ್ವಾತದುದರೇ ಬಾಲಂ ಮಾಯಾವತ್ಯೈ ನ್ಯವೇದಯನ್ ।
ನಾರದೋಽಕಥಯತ್ ಸರ್ವಂ ತಸ್ಯಾಃ ಶಂಕಿತಚೇತಸಃ ।
ಬಾಲಸ್ಯ ತತ್ತ್ವಮುತ್ಪತ್ತಿಂ ಮತ್ಸ್ಯೋದರನಿವೇಶನಮ್
॥ ೬ ॥

ಸಾ ಚ ಕಾಮಸ್ಯ ವೈ ಪತ್ನೀ ರತಿರ್ನಾಮ ಯಶಸ್ವಿನೀ ।
ಪತ್ಯುರ್ನಿರ್ದಗ್ಧದೇಹಸ್ಯ ದೇಹೋತ್ಪತ್ತಿಂ ಪ್ರತೀಕ್ಷತೀ
॥ ೭ ॥

ನಿರೂಪಿತಾ ಶಂಬರೇಣ ಸಾ ಸೂಪೌದನಸಾಧನೇ ।
ಕಾಮದೇವಂ ಶಿಶುಂ ಬುದ್ಧ್ವಾ ಚಕ್ರೇ ಸ್ನೇಹಂ ತದಾರ್ಭಕೇ
॥ ೮ ॥

ನಾತಿದೀರ್ಘೇಣ ಕಾಲೇನ ಸ ಕಾರ್ಷ್ಣೀ ರೂಢಯೌವನಃ ।
ಜನಯಾಮಾಸ ನಾರೀಣಾಂ ವೀಕ್ಷಂತೀನಾಂ ಚ ವಿಭ್ರಮಮ್
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ರುದ್ರನಕ್ರೋಧಾಗ್ನಿಯಿಂದ ದಗ್ಧನಾಗಿ ಹೋಗಿದ್ದ ಕಾಮದೇವನು ಪುನಃ ಶರೀರವನ್ನು ಹೊಂದುವುದಕ್ಕಾಗಿ, ವಾಸುದೇವನ ಅಂಶನಾದ ಅವನು ತನ್ನ ಅಂಶೀ ವಾಸುದೇವನನ್ನೇ ಆಶ್ರಯಿಸಿದನು. ॥ ೧ ॥ ಅದೇ ಕಾಮದೇವನು ಈ ಬಾರಿ ಶ್ರೀಕೃಷ್ಣನಿಂದ ರುಕ್ಮಿಣೀದೇವಿಯಲ್ಲಿ ಹುಟ್ಟಿ ಪ್ರದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧನಾದನು. ಸೌಂದರ್ಯದಿಂದಾಗಲೀ, ವೀರ್ಯ-ಪರಾಕ್ರಮದಿಂದಾಗಲೀ, ಸೌಶೀಲ್ಯಾದಿ ಗುಣಗಳಿಂದಾಗಲೀ ಅವನು ಶ್ರೀಕೃಷ್ಣನಿಂದ ಯಾವ ವಿಧದಿಂದಲೂ ಕಡಿಮೆಯಾಗಿರಲಿಲ್ಲ. ॥ ೨ ॥ ಬಾಲಕ ಪ್ರದ್ಯುಮ್ನನಿಗೆ ಇನ್ನೂ ಹತ್ತು ದಿನಗಳಾದಾಗಲೇ ಇವನೇ ತನ್ನ ಭಾವೀ ಶತ್ರುವೆಂದು ತಿಳಿದಿದ್ದ ಕಾಮರೂಪಿಯಾದ ಶಂಬರಾಸುರನು ವೇಷವನ್ನು ಮರೆಸಿ ಸೂತಿಕಾಗೃಹದಿಂದ ಅವನನ್ನು ಕದ್ದುಕೊಂಡು ಹೋಗಿ ಸಮುದ್ರಕ್ಕೆಸೆದು ತನ್ನ ಮನೆಗೆ ಹೊರಟುಹೋದನು. ॥ ೩ ॥ ಬಾಲಕ ಪ್ರದ್ಯುಮ್ನನನ್ನು ಸಮುದ್ರದಲ್ಲಿ ಒಂದು ದೊಡ್ಡ ಮೀನು ನುಂಗಿಬಿಟ್ಟಿತು. ಮೀನು ಹಿಡಿಯುವ ಬೆಸ್ತರು ದೊಡ್ಡದೊಂದು ಬಲೆಯನ್ನು ಬೀಸಿ ಇತರ ಮೀನುಗಳ ಜೊತೆಗೆ ಈ ಮೀನನ್ನು ಹಿಡಿದರು. ॥ ೪ ॥ ಪ್ರದ್ಯುಮ್ನನನ್ನು ನುಂಗಿದ ಆ ದೊಡ್ಡ ಮೀನನ್ನು ಬೆಸ್ತರು ಶಂಬರಾಸುರನಿಗೆ ಕಾಣಿಕೆಯಾಗಿ ಒಪ್ಪಿಸಿದರು. ಶಂಬರಾಸುರನ ಪಾಚಕರು ಆ ಅದ್ಭುತವಾದ ಮೀನನ್ನು ಅಡಿಗೆ ಮನೆಗೆ ಕೊಂಡುಹೋಗಿ ಕತ್ತಿಯಿಂದ ಕತ್ತರಿಸ ತೊಡಗಿದರು. ॥ ೫ ॥ ಅಡಿಗೆಯವರು ಆ ಮೀನಿನ ಹೊಟ್ಟೆಯಲ್ಲಿ ಸುಂದರವಾದ ಬಾಲಕನನ್ನು ನೋಡಿ ಆಶ್ಚರ್ಯದಿಂದ ಮಾಯಾವತಿ ಎಂಬ ದಾಸಿಗೆ ಅದನ್ನು ಒಪ್ಪಿಸಿದರು. ಆಕೆಗೆ ಈ ಮಗುವು ಯಾರದ್ದಾಗಿರಬಹುದು? ಎಂಬ ಜಿಜ್ಞಾಸೆ ಉಂಟಾಯಿತು. ಆಗ ನಾರದ ಮಹರ್ಷಿಗಳು ಬಂದು ಆ ಮಾಯಾವತಿಗೆ ಈ ಬಾಲಕನು ಸಾಕ್ಷಾತ್ ಕಾಮದೇವನೇ ಆಗಿರುವನು. ಶ್ರೀಕೃಷ್ಣನ ಪತ್ನೀ ರುಕ್ಮಿಣಿಯ ಗರ್ಭದಿಂದ ಜನಿಸಿದವನು. ಬಳಿಕ ಮೀನಿನ ಹೊಟ್ಟೆಗೆ ಸೇರಿದುದನ್ನು ಹೀಗೆ ಎಲ್ಲವನ್ನು ತಿಳಿಸಿದರು. ॥ ೬ ॥ ಪರೀಕ್ಷಿತನೇ! ಆ ಮಾಯಾವತಿಯು ಕಾಮದೇವನ ಪತ್ನಿಯಾದ ಯಶಸ್ವಿನೀ ರತಿದೇವಿಯೇ ಆಗಿದ್ದಳು. ರುದ್ರನ ಕ್ರೋಧಾಗ್ನಿಯಿಂದ ಕಾಮದೇವನು ಭಸ್ಮವಾದಾಗಿನಿಂದ ಆಕೆಯು ಅನಂಗನಾದ ಅವನು ಸಶರೀರನಾಗಿ ಪುನಃ ಹುಟ್ಟುವುದನ್ನೇ ನಿರೀಕ್ಷಿಸುತ್ತಿದ್ದಳು. ॥ ೭ ॥ ಶಂಬಾಸುರನು ಆಕೆಯನ್ನು ಅನ್ನ-ತೊವ್ವೆ ಮಾಡುವ ಅಡಿಗೆಯವಳಾಗಿ ನಿಯಮಿಸಿಕೊಂಡಿದ್ದನು. ಶಿಶುರೂಪದಿಂದ ಇರುವ ಈ ಮಗುವು ತನ್ನ ಪತಿಯೇ ಎಂದು ಭಾವಿಸಿ ಅವನನ್ನು ಬಹುವಾಗಿ ಪ್ರೀತಿಸ ತೊಡಗಿದಳು. ॥ ೮ ॥ ಸ್ವಲ್ಪ ದಿವಸಗಳಲ್ಲಿಯೇ ಶ್ರೀಕೃಷ್ಣಕುಮಾರನಾದ ಪ್ರದ್ಯುಮ್ನನು ಯುವಕನಾದನು. ಅವನ ಅದ್ಭುತವಾದ ರೂಪ-ಲಾವಣ್ಯಗಳು ಅವನನ್ನು ನೋಡಿದ ಸ್ತ್ರೀಯರ ಮನಸ್ಸಿನಲ್ಲಿ ಶೃಂಗಾರರಸವು ಉಕ್ಕೇರುತ್ತಿತ್ತು. ॥ ೯ ॥

ಸಾ ತಂ ಪತಿಂ ಪದ್ಮದಲಾಯತೇಕ್ಷಣಂ
ಪ್ರಲಂಬ ಬಾಹುಂ ನರಲೋಕಸುಂದರಮ್ ।
ಸವ್ರೀಡಹಾಸೋತ್ತಭಿತಭ್ರುವೇಕ್ಷತೀ
ಪ್ರೀತ್ಯೋಪತಸ್ಥೇ ರತಿರಂಗ ಸೌರತೈಃ ॥ ೧೦ ॥

ತಾಮಾಹ ಭಗವಾನ್ ಕಾಷ್ಣಿರ್ಮಾತಸ್ತೇ ಮತಿರನ್ಯಥಾ ।
ಮಾತೃಭಾವಮತಿಕ್ರಮ್ಯ ವರ್ತಸೇ ಕಾಮಿನೀ ಯಥಾ
॥ ೧೧ ॥

ರತಿರುವಾಚ

ಭವಾನ್ ನಾರಾಯಣಸುತಃ ಶಂಬರೇಣಾಹೃತೋ ಗೃಹಾತ್ ।
ಅಹಂ ತೇಽಧಿಕೃತಾ ಪತ್ನೀ ರತಿಃ ಕಾಮೋ ಭವಾನ್ ಪ್ರಭೋ
॥ ೧೨ ॥

ಏಷ ತ್ವಾನಿರ್ದಶಂ ಸಿಂಧಾವಕ್ಷಿಪಚ್ಛಂಬರೋಽಸುರಃ ।
ಮತ್ಸ್ಯೋಽಗ್ರಸೀತ್ತದುದರಾದಿಹ ಪ್ರಾಪ್ತೋ ಭವಾನ್ ಪ್ರಭೋ
॥ ೧೩ ॥

ತಮಿಮಂ ಜಹಿ ದುರ್ಧರ್ಷಂ ದುರ್ಜಯಂ ಶತ್ರುಮಾತ್ಮನಃ ।
ಮಾಯಾಶತವಿದಂ ತ್ವಂ ಚ ಮಾಯಾಭಿರ್ಮೋಹನಾದಿಭಿಃ
॥ ೧೪ ॥

ಪರಿಶೋಚತಿ ತೇ ಮಾತಾ ಕುರರೀವ ಗತಪ್ರಜಾ ।
ಪುತ್ರಸ್ನೇಹಾಕುಲಾ ದೀನಾ ವಿವತ್ಸಾ ಗೌರಿವಾತುರಾ
॥ ೧೫ ॥

ಪ್ರಭಾಷ್ಯೈವಂ ದದೌ ವಿದ್ಯಾಂ
ಪ್ರದ್ಯುಮ್ನಾಯ ಮಹಾತ್ಮನೇ ।
ಮಾಯಾವತೀ ಮಹಾಮಾಯಾಂ
ಸರ್ವಮಾಯಾವಿನಾಶಿನೀಮ್ ॥ ೧೬ ॥

ಸ ಚ ಶಂಬರಮಭ್ಯೇತ್ಯ ಸಂಯುಗಾಯ ಸಮಾಹ್ವಯತ್ ।
ಅವಿಷಹ್ಯೈಸ್ತಮಾಕ್ಷೇಪೈಃ ಕ್ಷಿಪನ್ ಸಂಜನಯನ್ ಕಲಿಮ್
॥ ೧೭ ॥

ಸೋಽಧಿಕ್ಷಿಪ್ತೋ ದುರ್ವಚೋಭಿಃ ಪಾದಾಹತ ಇವೋರಗಃ ।
ನಿಶ್ಚಕ್ರಾಮ ಗದಾಪಾಣಿರಮರ್ಷಾತ್ತಾಮ್ರಲೋಚನಃ
॥ ೧೮ ॥

ಗದಾಮಾವಿಧ್ಯ ತರಸಾ ಪ್ರದ್ಯುಮ್ನಾಯ ಮಹಾತ್ಮನೇ ।
ಪ್ರಕ್ಷಿಪ್ಯ ವ್ಯನದನ್ನಾದಂ ವಜ್ರನಿಷ್ಪೇಷನಿಷ್ಠುರಮ್
॥ ೧೯ ॥

ಕಮಲದಳದಂತೆ ಕೋಮಲವಾದ ಮತ್ತು ವಿಶಾಲವಾದ ಕಣ್ಣುಗಳು ಉಳ್ಳವನಾಗಿಯೂ, ಆಜಾನುಬಾಹುವಾಗಿಯೂ, ಮನುಷ್ಯ ಲೋಕದಲ್ಲೇ ಅತ್ಯಂತ ಸುಂದರನೂ ಆಗಿದ್ದ ಪ್ರದ್ಯುಮ್ನನನ್ನು ರತಿದೇವಿಯು ತನ್ನ ಪತಿಯಾಗಿ ಭಾವಿಸಿ, ಕಟಾಕ್ಷವೀಕ್ಷಣ, ನಾಚಿಕೆಯಿಂದ ಕೂಡಿದ ಮಂದಹಾಸ, ಹುಬ್ಬು ಹಾರಿಸುವುದು ಮುಂತಾದ ಸುರತಕ್ರೀಡಾ ಲಕ್ಷಣಗಳಿಂದ ಪ್ರೇಮದಿಂದ ಅವನನ್ನು ಮೋಹಿಸಿದಳು. ॥ ೧೦ ॥ ಶ್ರೀಕೃಷ್ಣನಂದನ ಭಗವಾನ್ ಪ್ರದ್ಯುಮ್ನನು ಆಕೆಯ ಭಾವಗಳಲ್ಲಿ ಆದ ಪರಿವರ್ತನೆಗಳನ್ನು ಗಮನಿಸಿ – ದೇವಿ ! ನೀನಾದರೋ ನನಗೆ ತಾಯಿಯಂತೆಯೇ ಇರುವೆ. ನಿನ್ನ ಬುದ್ಧಿಯು ಹೀಗೆ ವಿಪರೀತವೇಕೆ ಆಯಿತು ? ಮಾತೃಭಾವವನ್ನು ಬಿಟ್ಟು ಕಾಮಿನಿಯಂತಹ ಹಾವ ಭಾವಗಳನ್ನು ನೀನು ತೋರಿಸುತ್ತಿರುವೆ. ಹೀಗೇಕೆ ? ॥ ೧೧ ॥

ರತಿಯು ಹೇಳಿದಳು – ಸ್ವಾಮಿಯೇ ! ನೀವು ಸಾಕ್ಷಾತ್ ನಾರಾಯಣನ ಪುತ್ರರಾಗಿರುವಿರಿ. ಶಂಬರಾಸುರನು ನಿಮ್ಮನ್ನು ಸೂತಿಕಾಗೃಹದಿಂದ ಕದ್ದು ತಂದಿದ್ದನು. ನೀವು ನನ್ನ ಪತಿ ಸಾಕ್ಷಾತ್ ಕಾಮದೇವರೇ ಆಗಿರುವಿರಿ. ನಾನು ನಿಮ್ಮ ಅಧಿಕೃತ ಪತ್ನಿಯಾದ ರತಿಯಾಗಿರುವೆನು. ॥ ೧೨ ॥ ನನ್ನ ಸ್ವಾಮಿಯೇ ! ನಿಮಗಿನ್ನು ಹತ್ತು ದಿವಸಗಳು ತುಂಬುವುದರೊಳಗೆ ಈ ಶಂಬರಾಸುರನು ನಿಮ್ಮನ್ನು ಅಪಹರಿಸಿ ಸಮುದ್ರಕ್ಕೆ ಎಸೆದು ಬಿಟ್ಟಿದ್ದನು. ಅಲ್ಲಿ ಒಂದು ಮೀನು ನಿಮ್ಮನ್ನು ನುಂಗಿಬಿಟ್ಟಿತು. ಆದರ ಹೊಟ್ಟೆಯಿಂದ ತಾವು ಇಲ್ಲಿ ನನಗೆ ದೊರೆತಿರುವಿರಿ. ॥ ೧೩ ॥ ಈ ಶಂಬರಾಸುರನು ನೂರಾರು ಪ್ರಕಾರದ ಮಾಯಾವಿದ್ಯೆಗಳನ್ನು ಬಲ್ಲವನು. ಇವನನ್ನು ವಶಪಡಿಸಿಕೊಳ್ಳುವುದು ಅಥವಾ ಗೆಲ್ಲುವುದು ಬಹಳ ಕಠಿಣವಾಗಿದೆ. ತಾವು ಈ ನಿಮ್ಮ ಶತ್ರುವನ್ನು ಮೋಹನವೇ ಮೊದಲಾದ ಮಾಯೆಗಳ ಮೂಲಕವಾಗಿ ನಾಶಮಾಡಿಬಿಡಿರಿ. ॥ ೧೪ ॥ ಪ್ರಿಯತಮನೇ ! ಮಗುವನ್ನು ಕಳಕೊಂಡ ನಿಮ್ಮ ತಾಯಿಯು–ಮರಿಯನ್ನು ಕಳಕೊಂಡ ಕುಕರಿಪಕ್ಷಿಯಂತೆ ಅಥವಾ ಕರುವನ್ನು ಕಳಕೊಂಡ ಹಸುವಿನಂತೆ ಪುತ್ರಸ್ನೇಹದಿಂದ ವ್ಯಾಕುಲಳಾಗಿ, ದುಃಖಾತುರಳಾಗಿ ಹಗಲೂ ರಾತ್ರಿ ಚಿಂತಿಸುತ್ತಿರುವಳು. ॥ ೧೫ ॥ ಹೀಗೆ ಹೇಳಿ ಮಾಯಾವತಿಯಾಗಿದ್ದ ರತಿಯು ಪರಮಶಕ್ತಿಶಾಲಿಯಾದ ಪ್ರದ್ಯುಮ್ನನಿಗೆ 'ಮಹಾಮಾಯಾ' ಎಂಬ ವಿದ್ಯೆಯನ್ನು ಕಲಿಸಿಕೊಟ್ಟಳು. ಇದು ಎಲ್ಲ ಪ್ರಕಾರದ ಮಾಯೆಗಳನ್ನು ನಾಶಮಾಡುವಂತಹ ವಿದ್ಯೆಯಾಗಿದೆ. ॥ ೧೬ ॥ ಆಗ ಪ್ರದ್ಯುಮ್ನನು ಶಂಬರಾಸುರನ ಬಳಿಗೆ ಹೋಗಿ ಅವನೊಡನೆ ಜಗಳವಾಡುವ ಉದ್ದೇಶದಿಂದ ಸಹಿಸಲಾಗದ ಕಟು ಮಾತುಗಳಿಂದ ಅವನನ್ನು ಆಕ್ಷೇಪಿಸಿದನು. ಇಷ್ಟೆ ಅಲ್ಲ ಕೊನೆಗೆ ಅವನನ್ನು ಯುದ್ಧಕ್ಕಾಗಿ ಆಹ್ವಾನಿಸಿಯೇ ಬಿಟ್ಟನು. ॥ ೧೭ ॥

ಪ್ರದ್ಯುಮ್ನನ ಕಟುವಚನಗಳಿಂದ ಶಂಬರಾಸುರನು ಕಾಲಿನಿಂದ ಮೆಟ್ಟಿದ ಸರ್ಪದಂತೆ ಕೋಪದಿಂದ ಕಿಡಿ-ಕಿಡಿಯಾದನು. ಅವನ ಕಣ್ಣುಗಳು ಕ್ರೋಧಾಗ್ನಿಯಿಂದ ಕೆಂಪಾಗಿ, ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಯುದ್ಧಕ್ಕಾಗಿ ಹೊರಟೇ ಬಿಟ್ಟನು. ॥ ೧೮ ॥ ಅವನು ತನ್ನ ಗದೆಯನ್ನು ಗಿರ-ಗಿರನೆ ತಿರುಗಿಸುತ್ತಾ ವಜ್ರಾಘಾತದಂತೆ ಕರ್ಕಶವಾಗಿ ಸಿಂಹನಾದವನ್ನು ಮಾಡುತ್ತಾ ಪ್ರದ್ಯುಮ್ನನ ಮೇಲೆ ಆ ಗದೆಯನ್ನು ಪ್ರಯೋಗಿಸಿದನು. ॥ ೧೯ ॥

ತಾಮಾಪತಂತೀಂ ಭಗವಾನ್ ಪ್ರದ್ಯುಮ್ನೋ ಗದಯಾ ಗದಾಮ್ ।
ಅಪಾಸ್ಯ ಶತ್ರವೇ ಕ್ರುದ್ಧಃ ಪ್ರಾಹಿಣೋತ್ ಸ್ವಗದಾಂ ನೃಪ
॥ ೨೦ ॥

ಸ ಚ ಮಾಯಾಂ ಸಮಾಶ್ರಿತ್ಯ
ದೈತೇಯೀಂ ಮಯದರ್ಶಿತಾಮ್ ।
ಮುಮುಚೇಽಸ್ತ್ರಮಯಂ ವರ್ಷಂ
ಕಾರ್ಷ್ಣೌ ವೈಹಾಯಸೋಽಸುರಃ ॥ ೨೧ ॥

ಬಾಧ್ಯಮಾನೋಽಸ್ತ್ರವರ್ಷೇಣ ರೌಕ್ಮಿಣೇಯೋ ಮಹಾರಥಃ ।
ಸತ್ತ್ವಾತ್ಮಿಕಾಂ ಮಹಾವಿದ್ಯಾಂ ಸರ್ವಮಾಯೋಪಮರ್ದಿನೀಮ್
॥ ೨೨ ॥

ತತೋ ಗೌಹ್ಯಕಗಾಂಧರ್ವಪೈಶಾಚೌರಗರಾಕ್ಷಸೀಃ ।
ಪ್ರಾಯುಂಕ್ತ ಶತಶೋ ದೈತ್ಯಃ ಕಾರ್ಷ್ಣಿರ್ವ್ಯಧಮಯತ್ ಸ ತಾಃ
॥ ೨೩ ॥

ನಿಶಾತಮಸಿಮುದ್ಯಮ್ಯ ಸ ಕಿರೀಟಂ ಸಕುಂಡಲಮ್ ।
ಶಂಬರಸ್ಯ ಶಿರಃ ಕಾಯಾತ್ ತಾಮ್ರಶ್ಮಶ್ರ್ವೋಜಸಾಹರತ್
॥ ೨೪ ॥

ಆಕೀರ್ಯಮಾಣೋ ದಿವಿಜೈಃ ಸ್ತುವದ್ಭಿಃ ಕುಸುಮೋತ್ಕರೈಃ ।
ಭಾರ್ಯಯಾಂಬರಚಾರಿಣ್ಯಾ ಪುರಂ ನೀತೋ ವಿಹಾಯಸಾ
॥ ೨೫ ॥

ಅಂತಃಪುರವರಂ ರಾಜನ್ ಲಲನಾಶತಸಂಕುಲಮ್ ।
ವಿವೇಶ ಪತ್ನ್ಯಾ ಗಗನಾದ್ವಿದ್ಯುತೇವ ಬಲಾಹಕಃ
॥ ೨೬ ॥

ತಂ ದೃಷ್ಟ್ವಾ ಜಲದಶ್ಯಾಮಂ ಪೀತಕೌಶೇಯವಾಸಸಮ್ ।
ಪ್ರಲಂಬಬಾಹುಂ ತಾಮ್ರಾಕ್ಷಂ ಸುಸ್ಮಿತಂ ರುಚಿರಾನನಮ್
॥ ೨೭ ॥

ಸ್ವಲಂಕೃತಮುಖಾಂಭೋಜಂ ನೀಲವಕ್ರಾಲಕಾಲಿಭಿಃ ।
ಕೃಷ್ಣಂ ಮತ್ವಾ ಸ್ತ್ರಿಯೋ ಹ್ರೀತಾ ನಿಲಿಲ್ಯುಸ್ತತ್ರ ತತ್ರ ಹ
॥ ೨೮ ॥

ಅವಧಾರ್ಯ ಶನೈರೀಷದ್ವೈಲಕ್ಷಣ್ಯೇನ ಯೋಷಿತಃ ।
ಉಪಜಗ್ಮುಃ ಪ್ರಮುದಿತಾಃ ಸಸ್ತ್ರೀರತ್ನಂ ಸುವಿಸ್ಮಿತಾಃ
॥ ೨೯ ॥

ಅಥ ತತ್ರಾಸಿತಾಪಾಂಗೀ ವೈದರ್ಭೀ ವಲ್ಗುಭಾಷಿಣೀ ।
ಅಸ್ಮರತ್ ಸ್ವಸುತಂ ನಷ್ಟಂ ಸ್ನೇಹಸ್ನುತಪಯೋಧರಾ
॥ ೩೦ ॥

ಪರೀಕ್ಷಿತನೇ! ಶಂಬರಾಸುರನ ಗದೆಯು ಅತಿವೇಗವಾಗಿ ತನ್ನೆಡೆಗೆ ಬರುತ್ತಿರುವುದನ್ನು ನೋಡಿದ ಪ್ರದ್ಯುಮ್ನನು ತನ್ನ ಗದೆಯಿಂದ ಹೊಡೆದು ಅವನ ಗದೆಯನ್ನು ಬೀಳಿಸಿ, ಕ್ರೋಧಗೊಂಡು ಅವನ ಮೇಲೆ ಗದಾಪ್ರಹಾರ ಮಾಡಿದನು. ॥ ೨೦ ॥ ಆಗ ಆ ದೈತ್ಯನು ಮಯಾಸುರನು ಕಲಿಸಿಕೊಟ್ಟ ಆಸುರೀಮಾಯೆಯನ್ನು ಆಶ್ರಯಿಸಿ ಆಕಾಶಕ್ಕೆ ಹೋಗಿ ಅಲ್ಲಿಂದಲೇ ಪ್ರದ್ಯುಮ್ನನ ಮೇಲೆ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸತೊಡಗಿದನು. ॥ ೨೧ ॥ ಮಹಾರಥನಾದ ಪ್ರದ್ಯುಮ್ನನು ಶಂಬರಾಸುರನ ಮಾಯಾಮಯವಾದ ಶಸ್ತ್ರಾಸ್ತ್ರಗಳಿಂದ ಪೀಡಿತನಾದಾಗ ಸಮಸ್ತ ಮಾಯೆಯನ್ನು ಶಾಂತಗೊಳಿಸುವಂತಹ ಸತ್ತ್ವಮಯಿಯಾದ ಮಹಾವಿದ್ಯೆಯನ್ನು ಪ್ರಯೋಗಿಸಿದನು. ॥ ೨೨ ॥ ಅನಂತರ ಶಂಬರಾಸುರನು ಯಕ್ಷ, ಗಂಧರ್ವ, ಪಿಶಾಚ, ನಾಗ ಮತ್ತು ರಾಕ್ಷಸರ ನೂರಾರು ಮಾಯೆಗಳನ್ನು ಪ್ರಯೋಗಿಸಿದನು. ಆದರೆ ಶ್ರೀಕೃಷ್ಣಕುಮಾರ ಪ್ರದ್ಯುಮ್ನನು ತನ್ನ ಮಹಾವಿದ್ಯೆಯಿಂದ ಅದೆಲ್ಲವನ್ನೂ ನಾಶಮಾಡಿಬಿಟ್ಟನು. ॥ ೨೩ ॥ ಬಳಿಕ ಅವನು ಒಂದು ಹರಿತವಾದ ಖಡ್ಗವನ್ನೆತ್ತಿಕೊಂಡು ಕಿರೀಟ ಕುಂಡಲಗಳಿಂದ ಸುಶೋಭಿತವಾದ, ಕೆಂಪಾದ ಗಡ್ಡ-ಮೀಸೆಗಳಿಂದ ಭಯಂಕರವಾಗಿದ್ದ ಶಂಬರಾಸುರನ ತಲೆಯನ್ನು ಕತ್ತರಿಸಿ ಹಾಕಿದನು. ॥ ೨೪ ॥ ದೇವತೆಗಳು ಪ್ರದ್ಯುಮ್ನನ ಮೇಲೆ ಪುಷ್ಪವೃಷ್ಟಿ ಮಾಡುತ್ತಾ ಸ್ತೋತ್ರ ಮಾಡತೊಡಗಿದರು. ಬಳಿಕ ಆಕಾಶಸಂಚಾರವನ್ನು ತಿಳಿದಿದ್ದ ರತಿದೇವಿಯು ಪ್ರದ್ಯುಮ್ನನನ್ನು ಆಕಾಶಮಾರ್ಗದಿಂದ ದ್ವಾರಕೆಗೆ ಕೊಂಡುಹೋದಳು. ॥ ೨೫ ॥

ಪರೀಕ್ಷಿತನೇ! ಮೇಘದೊಡನಿರುವ ಮಿಂಚಿನಂತೆ ಪ್ರದ್ಯುಮ್ನನು ಪತ್ನೀ ಸಮೇತನಾಗಿ ಆಕಾಶದಿಂದ ಕೆಳಗಿಳಿದು ನೂರಾರು ಲಲನೆಯರಿಂದ ಸಮಾಕುಲವಾಗಿದ್ದ, ಶ್ರೇಷ್ಠವಾದ ಅಂತಃಪುರವನ್ನು ಪ್ರವೇಶಿಸಿದನು. ॥ ೨೬ ॥ ನೀಲಮೇಘ ಶ್ಯಾಮನಾಗಿಯೂ, ರೇಷ್ಮೆಯ ಪೀತಾಂಬರವನ್ನುಟ್ಟಿದ್ದ, ಆಜಾನುಬಾಹುವಾದ, ಎಣ್ಣೆಗೆಂಪಾದ ಕಣ್ಣುಗಳಿಂದ ಕೂಡಿದ್ದ, ಮಂದಹಾಸವನ್ನು ಬೀರುತ್ತಿದ್ದ ಸುಂದರ ಮುಖಾರವಿಂದನಾಗಿದ್ದ, ಕಪ್ಪಾದ ಗುಂಗುರು ಕೂದಲುಗಳಿಂದ ಸಮಲಂಕೃತವಾದ ಮುಖಕಮಲದಿಂದ ಬೆಳಗುತ್ತಿದ್ದ ಪ್ರದ್ಯುಮ್ನನನ್ನು ಕಂಡು ಅಂತಃಪುರದ ನಾರಿಯರು ಕೃಷ್ಣನೇ ಬಂದನೆಂಬ ಭ್ರಾಂತಿಯಿಂದ ನಾಚಿಕೆಗೊಂಡು ಅಲ್ಲಲ್ಲಿಯೇ ಅಡಗಿಕೊಂಡರು. ॥ ೨೭-೨೮ ॥ ಸ್ವಲ್ಪ ಹೊತ್ತಾದ ಬಳಿಕ ಶ್ರೀಕೃಷ್ಣನಿಗಿಂತಲೂ ಇವನಲ್ಲಿ ಸ್ವಲ್ಪ ವೈಲಕ್ಷಣ್ಯವಿದ್ದುದರಿಂದ ಇವನು ಕೃಷ್ಣನಲ್ಲವೆಂದು ತಿಳಿದು ಆನಂದ-ವಿಸ್ಮಯದಿಂದ ಶ್ರೇಷ್ಠರಾದ ನೂತನ ದಂಪತಿಗಳ ಬಳಿಗೆ ಹೋದರು. ॥ ೨೯ ॥ ಅದೇ ಸಮಯಕ್ಕೆ ಸರಿಯಾಗಿ, ಕಪ್ಪಾದ ಕಣ್ಣುಗಳುಳ್ಳ, ಮಧುರಭಾಷಿಣಿಯಾದ ರುಕ್ಮಿಣೀದೇವಿಯು ಅಲ್ಲಿಗೆ ಬಂದಳು. ನೂತನ ದಂಪತಿಗಳನ್ನು ನೋಡಿದೊಡನೆಯೇ ಆಕೆಗೆ ಕಳೆದು ಹೋಗಿದ್ದ ಪುತ್ರನ ಸ್ಮರಣೆಯಾಗಿ, ವಾತ್ಸಲ್ಯಾಧಿಕ್ಯದಿಂದ ಅವಳ ಸ್ತನಗಳಲ್ಲಿ ಹಾಲು ಸ್ರವಿಸತೊಡಗಿತು. ॥ ೩೦ ॥ ರುಕ್ಮಿಣಿಯು ಹಾಗೆಯೇ ಯೋಚಿಸತೊಡಗಿದಳು. ಈ ರತ್ನ ಪ್ರಾಯನಾದ ತರುಣನು ಯಾರು? ಕಮಲನಯನನಾದ ಇವನು ಯಾರ ಪುತ್ರನಾಗಿರಬಹುದು? ಯಾವ ಮಹಾಸೌಭಾಗ್ಯವತಿಯು ಇವನನ್ನು

ಕೋ ನ್ವಯಂ ನರವೈದೂರ್ಯಃ ಕಸ್ಯ ವಾ ಕಮಲೇಕ್ಷಣಃ ।
ಧೃತಃ ಕಯಾ ವಾ ಜಠರೇ ಕೇಯಂ ಲಬ್ಧಾ ತ್ವನೇನ ವಾ
॥ ೩೧ ॥

ಮಮ ಚಾಪ್ಯಾತ್ಮಜೋ ನಷ್ಟೋ
ನೀತೋ ಯಃ ಸೂತಿಕಾಗೃಹಾತ್ ।
ಏತತ್ತುಲ್ಯವಯೋರೂಪೋ
ಯದಿ ಜೀವತಿ ಕುತ್ರಚಿತ್ ॥ ೩೨ ॥

ಕಥಂ ತ್ವನೇನ ಸಂಪ್ರಾಪ್ತಂ ಸಾರೂಪ್ಯಂ ಶಾರ್ಙ್ಗಧನ್ವನಃ ।
ಆಕೃತ್ಯಾವಯವೈರ್ಗತ್ಯಾ ಸ್ವರಹಾಸಾವಲೋಕನೈಃ
॥ ೩೩ ॥

ಸ ಏವ ವಾ ಭವೇನ್ನೂನಂ ಯೋ ಮೇ ಗರ್ಭೇ ಧೃತೋಽರ್ಭಕಃ ।
ಅಮುಷ್ಮಿನ್ ಪ್ರೀತಿರಧಿಕಾ ವಾಮಃ ಸ್ಫುರತಿ ಮೇ ಭುಜಃ
॥ ೩೪ ॥

ಏವಂ ಮೀಮಾಂಸಮಾನಾಯಾಂ ವೈದರ್ಭ್ಯಾಂ ದೇವಕೀಸುತಃ ।
ದೇವಕ್ಯಾನಕದುಂದುಭ್ಯಾಮುತ್ತಮಶ್ಲೋಕ ಆಗಮತ್
॥ ೩೫ ॥

ವಿಜ್ಞಾತಾರ್ಥೋಽಪಿ ಭಗವಾಂಸ್ತೂಷ್ಣೀಮಾಸ ಜನಾರ್ದನಃ ।
ನಾರದೋಽಕಥಯತ್ ಸರ್ವಂ ಶಂಬರಾಹರಣಾದಿಕಮ್
॥ ೩೬ ॥

ತಚ್ಛ್ರುತ್ವಾ ಮಹದಾಶ್ಚರ್ಯಂ ಕೃಷ್ಣಾಂತಃಪುರಯೋಷಿತಃ ।
ಅಭ್ಯನಂದನ್ ಬಹೂನಬ್ದಾನ್ನಷ್ಟಂ ಮೃತಮಿವಾಗತಮ್
॥ ೩೭ ॥

ದೇವಕೀ ವಸುದೇವಶ್ಚ ಕೃಷ್ಣರಾಮೌ ತಥಾ ಸ್ತ್ರಿಯಃ ।
ದಂಪತೀ ತೌ ಪರಿಷ್ವಜ್ಯ ರುಕ್ಮಿಣೀ ಚ ಯಯುರ್ಮುದಮ್
॥ ೩೮ ॥

ನಷ್ಟಂ ಪ್ರದ್ಯುಮ್ನಮಾಯಾತ-
ಮಾಕರ್ಣ್ಯ ದ್ವಾರಕೌಕಸಃ ।
ಅಹೋ ಮೃತ ಇವಾಯಾತೋ
ಬಾಲೋ ದಿಷ್ಟ್ಯೇತಿ ಹಾಬ್ರುವನ್ ॥ ೩೯ ॥

ಯಂ ವೈ ಮುಹುಃ ಪಿತೃಸರೂಪನಿಜೇಶಭಾವಾಃ
ತನ್ಮಾತರೋ ಯದಭಜನ್ ರಹರೂಢಭಾವಾಃ ।
ಚಿತ್ರಂ ನ ತತ್ ಖಲು ರಮಾಸ್ಪದಬಿಂಬಬಿಂಬೇ
ಕಾಮೇ ಸ್ಮರೇಽಕ್ಷಿವಿಷಯೇ ಕಿಮುತಾನ್ಯನಾರ್ಯಃ ॥ ೪೦ ॥

ಗರ್ಭದಲ್ಲಿ ಧರಿಸಿದ್ದಿರಬಹುದು ? ಯಾವ ಸೌಭಾಗ್ಯವತಿಯು ಇವನನ್ನು ಪತಿಯನ್ನಾಗಿವರಿಸಿರಬಹುದು ? ॥ ೩೧ ॥ ನನ್ನದೊಂದು ಎಳೆ ಗಂಡುಮಗು ಕಳೆದುಹೋಗಿತ್ತು. ಸೂತಿಕಾಗೃಹದಿಂದ ಯಾರು ಅಪಹರಿಸಿಕೊಂಡು ಹೋದರೋ ತಿಳಿಯದು. ಅವನೇನಾದರೂ ಬದುಕಿದ್ದರೆ ಇವನಂತೆಯೇ ನವ ಯುವಕನೂ, ರೂಪವಂತನೂ ಆಗಿರುತ್ತಿದ್ದನು. ॥ ೩೨ ॥ ಶಾರ್ಙ್ಗಧನ್ವನಾದ ಶ್ರೀಕೃಷ್ಣನ ಸಾರೂಪ್ಯವು ಇವನಿಗೆ ಹೇಗೆ ಪ್ರಾಪ್ತವಾಯಿತು ? ಆಕೃತಿಯಲ್ಲಿ, ಅವಯವಗಳಲ್ಲಿ, ನಡಿಗೆಯಲ್ಲಿ, ಸ್ವರದಲ್ಲಿ, ಮಂದಹಾಸಯುಕ್ತವಾದ ನೋಟದಲ್ಲಿ ಇವನು ಶ್ರೀಕೃಷ್ಣನಂತೆಯೇ ಇದ್ದಾನಲ್ಲ ? ಇದು ಹೇಗೆ ಸಾಧ್ಯವಾಯಿತು ? ॥ ೩೩ ॥ ಏನೇ ಇರಲಿ, ನಾನು ಗರ್ಭದಲ್ಲಿ ಧರಿಸಿದ್ದ ಶಿಶುವು ನಿಶ್ಚಯವಾಗಿಯೂ ಇವನೇ ಆಗಿರಬೇಕು ! ಇವನನ್ನು ನೋಡುತ್ತಿದ್ದಂತೆ ನನಗೆ ಇವನ ಮೇಲೆ ಪಾತ್ಸಲ್ಯವು ಹೆಚ್ಚುತ್ತಿದ್ದು ಶುಭಸೂಚಕವಾಗಿ ನನ್ನ ಎಡಭುಜವೂ ಅದುರುತ್ತಿದೆ ॥ ೩೪ ॥

ಪರೀಕ್ಷಿತನೇ ! ಹೀಗೆ ರುಕ್ಮಿಣಿಯು ತನ್ನ ಮನಸ್ಸಿನಲ್ಲಿಯೇ ತರ್ಕಿಸುತ್ತಿರಲಾಗಿ ದೇವಕಿಯ ಮಗನಾದ, ಪವಿತ್ರಕೀರ್ತಿಯಾದ ಶ್ರೀಕೃಷ್ಣನು ವಸುದೇವ-ದೇವಕಿಯರೊಡನೆ ಅಲ್ಲಿಗೆ ಆಗಮಿಸಿದನು. ॥ ೩೫ ॥ ಭಗವಾನ್ ಶ್ರೀಕೃಷ್ಣನು ಎಲ್ಲವನ್ನೂ ಬಲ್ಲವನಾಗಿದ್ದರೂ ಸುಮ್ಮನೆ ನಿಂತುಕೊಂಡಿದ್ದನು. ಆಷ್ಟರಲ್ಲಿ ದೇವರ್ಷಿಗಳಾದ ನಾರದರು ಅಲ್ಲಿಗೆ ಬಂದು - ಪ್ರದ್ಯುಮ್ನನನ್ನು ಶಂಬರಾಸುರನು ಅಪಹರಿಸಿದುದು, ಸಮುದ್ರಕ್ಕೆ ಎಸೆದುದು, ಮುಂತಾದ ನಡೆದ ಎಲ್ಲ ಘಟನೆಗಳನ್ನು ವಿಸ್ತಾರವಾಗಿ ತಿಳಿಯಪಡಿಸಿದನು. ॥ ೩೬ ॥ ನಾರದರಿಂದ ಈ ಆಶ್ಚರ್ಯಕರ ಘಟನೆಯನ್ನು ಕೇಳಿದ ಶ್ರೀಕೃಷ್ಣನ ಅಂತಃಪುರದ ನಾರಿಯರು ಆಶ್ಚರ್ಯಚಕಿತರಾಗಿ ಅನೇಕ ವರ್ಷಗಳಿಂದ ಕಳೆದುಹೋಗಿ ಮರಳಿ ಬಂದಿರುವ ಪ್ರದ್ಯುಮ್ನನನ್ನು ನೋಡಿ ಸತ್ತುಹೋದವನು ಮರಳಿ ಬಂದುಬಿಟ್ಟಂತೆ ಅಭಿನಂದಿಸತೊಡಗಿದರು. ॥ ೩೭ ॥ ವಸುದೇವ-ದೇವಕಿಯರು, ಶ್ರೀಕೃಷ್ಣ - ಬಲರಾಮರು, ರುಕ್ಮಿಣೀದೇವಿಯು ಹಾಗೂ ಇತರ ಸ್ತ್ರೀಯರೆಲ್ಲರೂ ನವದಂಪತಿಗಳನ್ನು ಆಲಿಂಗಿಸಿಕೊಂಡು ಆನಂದಿತರಾದರು. ॥ ೩೮ ॥ ಕಳೆದುಹೋದ ಪ್ರದ್ಯುಮ್ನನು ಮರಳಿ ಬಂದಿರುವನೆಂದು ತಿಳಿದಾಗ ದ್ವಾರಕೆಯ ನರ-ನಾರಿಯರು ಪರಸ್ಪರವಾಗಿ ಮಾತನಾಡಿಕೊಂಡರು ; ಆಹಾ ! ಈ ಬಾಲಕನು ಸತ್ತು ಮರಳಿ ಬಂದಂತೆಯೇ ಎಂತಹ ಸೌಭಾಗ್ಯವಂತನಾಗಿದೆ. ॥ ೩೯ ॥ ಪರೀಕ್ಷಿತನೇ ! ಪ್ರದ್ಯುಮ್ನನ ರೂಪ-ಸೌಂದರ್ಯಗಳು ಶ್ರೀಕೃಷ್ಣನ ರೂಪ-ಸೌಂದರ್ಯಗಳಿಗೆ ಎಷ್ಟು ಅನುರೂಪವಾಗಿತ್ತೆಂದರೆ, ಪ್ರದ್ಯುಮ್ನನನ್ನು ನೋಡಿದ ಶ್ರೀಕೃಷ್ಣನ ಪತ್ನೀಯರು ಕೆಲವೊಮ್ಮೆ ಶ್ರೀಕೃಷ್ಣನೇ ಬಂದಿರುವನೆಂದು ಭ್ರಮಿಸುತ್ತಿದ್ದರು. ಹೀಗಿರುವಾಗ ಲಕ್ಷ್ಮೀದೇವಿಗೆ ಆಶ್ರಯನಾದ ಶ್ರೀಕೃಷ್ಣನ ಪ್ರತಿಬಿಂಬ ಸ್ವರೂಪನಾದ ಕಾಮಾವತಾರನಾದ ಪ್ರದ್ಯುಮ್ನನನ್ನು ನೋಡಿದ ಇತರ ಸ್ತ್ರೀಯರ ಸ್ಥಿತಿಯು ವಿಚಿತ್ರವಾಗುತ್ತಿತ್ತು, ಎಂಬುದರಲ್ಲಿ ಹೇಳುವುದೇನಿದೆ ? ॥ ೪೦ ॥

ಐವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೫೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪ್ರದ್ಯುಮ್ನೋತ್ಪತ್ತಿನಿರೂಪಣಂ ನಾಮ ಪಂಚಪಂಚಾಶತ್ತಮೋಽಧ್ಯಾಯಃ ॥ ೫೫ ॥

ಐವತ್ತಾರನೆಯ ಅಧ್ಯಾಯ

ಸ್ಯಮಂತಕಮಣಿಯ ಕಥೆ
ಜಾಂಬವತಿ ಮತ್ತು ಸತ್ಯಭಾಮೆಯರೊಡನೆ ಶ್ರೀಕೃಷ್ಣನ ವಿವಾಹ

ಶ್ರೀಶುಕ ಉವಾಚ

ಸತ್ರಾಜಿತಃ ಸ್ವತನಯಾಂ ಕೃಷ್ಣಾಯ ಕೃತಕಿಲ್ಬಿಷಃ ।
ಸ್ಯಮಂತಕೇನ ಮಣಿನಾ ಸ್ವಯಮುದ್ಯಮ್ಯ ದತ್ತವಾನ್
॥ ೧ ॥

ರಾಜೋವಾಚ

ಸತ್ರಾಜಿತಃ ಕಿಮಕರೋದ್ಬ್ರಹ್ಮನ್ ಕೃಷ್ಣಸ್ಯ ಕಿಲ್ಬಿಷಮ್ ।
ಸ್ಯಮಂತಕಃ ಕುತಸ್ತಸ್ಯ ಕಸ್ಮಾದ್ದತ್ತಾ ಸುತಾ ಹರೇಃ
॥ ೨ ॥

ಶ್ರೀಶುಕ ಉವಾಚ

ಆಸೀತ್ಸತ್ರಾಜಿತಃ ಸೂರ್ಯೋ ಭಕ್ತಸ್ಯ ಪರಮಃ ಸಖಾ ।
ಪ್ರೀತಸ್ತಸ್ಮೈ ಮಣಿಂ ಪ್ರಾದಾತ್ ಸೂರ್ಯಸ್ತುಷ್ಟಃ ಸ್ಯಮಂತಕಮ್
॥ ೩ ॥

ಸ ತಂ ಬಿಭ್ರನ್ಮಣಿಂ ಕಂಠೇ ಭ್ರಾಜಮಾನೋ ಯಥಾ ರವಿಃ ।
ಪ್ರವಿಷ್ಟೋ ದ್ವಾರಕಾಂ ರಾಜಂಸ್ತೇಜಸಾ ನೋಪಲಕ್ಷಿತಃ
॥ ೪ ॥

ತಂ ವಿಲೋಕ್ಯ ಜನಾ ದೂರಾತ್ತೇಜಸಾ ಮುಷ್ಟದೃಷ್ಟಯಃ ।
ದೀವ್ಯತೇಽಕ್ಷೈರ್ಭಗವತೇ ಶಶಂಸುಃ ಸೂರ್ಯಶಂಕಿತಾಃ
॥ ೫ ॥

ನಾರಾಯಣ ನಮಸ್ತೇಽಸ್ತು ಶಂಖಚಕ್ರಗದಾಧರ ।
ದಾಮೋದರಾರವಿಂದಾಕ್ಷ ಗೋವಿಂದ ಯದುನಂದನ
॥ ೬ ॥

ಏಷ ಆಯಾತಿ ಸವಿತಾ ತ್ವಾಂ ದಿದೃಕ್ಷುರ್ಜಗತ್ಪತೇ ।
ಮುಷ್ಣನ್ಗಭಸ್ತಿಚಕ್ರೇಣ ನೃಣಾಂ ಚಕ್ಷೂಂಷಿ ತಿಗ್ಮಗುಃ
॥ ೭ ॥

ನನ್ವಿಚ್ಛಂತಿ ತೇ ಮಾರ್ಗಂ ತ್ರಿಲೋಕ್ಯಾಂ ವಿಬುಧರ್ಷಭಾಃ ।
ಜ್ಞಾತ್ವಾವ್ಯ ಗೂಢಂ ಯದುಷು ದ್ರಷ್ಟುಂ ತ್ವಾಂ ಯಾತ್ಯಜಃ ಪ್ರಭೋ
॥ ೮ ॥

ಶ್ರೀಶುಕ ಉವಾಚ

ನಿಶಮ್ಯ ಬಾಲವಚನಂ ಪ್ರಹಸ್ಯಾಂಬುಜಲೋಚನಃ ।
ಪ್ರಾಹ ನಾಸೌ ರವಿರ್ದೇವಃ ಸತ್ರಾಜಿನ್ಮಣಿನಾ ಜ್ವಲನ್
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ಸತ್ರಾಜಿತನು ಶ್ರೀಕೃಷ್ಣನ ಮೇಲೆ ಮಿಥ್ಯಾಪವಾದವನ್ನು ಹೊರಿಸಿದ್ದನು. ಮತ್ತೆ ಆ ಅಪರಾಧದಿಂದ ಮುಕ್ತನಾಗಲು ಅವನು ತಾನಾಗಿಯೇ ಸ್ಯಮಂತಕ ಮಣಿಯೊಡನೆ ತನ್ನ ಮಗಳಾದ ಸತ್ಯಭಾಮೆಯನ್ನು ಶ್ರೀಕೃಷ್ಣನಿಗೆ ವಿವಾಹಮಾಡಿಕೊಟ್ಟನು. ॥ ೧ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಸತ್ರಾಜಿತನು ಶ್ರೀಕೃಷ್ಣನಿಗೆ ಯಾವ ಅಪರಾಧವನ್ನು ಮಾಡಿದ್ದನು? ಅವನಿಗೆ ಸ್ಯಮಂತಕಮಣಿಯು ಹೇಗೆ ದೊರಕಿತ್ತು. ತನ್ನ ಕನ್ಯೆಯನ್ನು ಶ್ರೀಕೃಷ್ಣನಿಗೆ ಏಕೆ ಮದುವೆ ಮಾಡಿಕೊಟ್ಟನು? ॥ ೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತ ಮಹಾರಾಜ! ಸತ್ರಾಜಿತನು ಸೂರ್ಯನ ಪರಮಭಕ್ತನಾಗಿದ್ದನು. ಸೂರ್ಯದೇವನು ಅವನ ಭಕ್ತಿಗೆ ಒಲಿದು ಅವನ ಪರಮ ಮಿತ್ರನೂ ಆದನು. ಸೂರ್ಯನಾರಾಯಣನೇ ಪ್ರಸನ್ನನಾಗಿ ಪ್ರೀತಿಯಿಂದ ಅವನಿಗೆ ಸ್ಯಮಂತಕಮಣಿಯನ್ನು ಅನುಗ್ರಹಿಸಿದ್ದನು. ॥ ೩. ॥ ಸತ್ರಾಜಿತನು ಆ ಮಣಿಯನ್ನು ಕೊರಳಿನಲ್ಲಿ ಧರಿಸಿ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಪರೀಕ್ಷಿತನೇ! ಸತ್ರಾಜಿತನು ದ್ವಾರಕೆಗೆ ಬಂದಾಗ ಅತ್ಯಂತ ತೇಜಸ್ಸಿನಿಂದಾಗಿ ಅವನನ್ನು ಗುರುತಿಸದೆ ಹೋದರು. ॥ ೪॥ ದೂರದಿಂದಲೇ ಅವನನ್ನು ನೋಡಿ ಜನರಿಗೆ ಕಣ್ಣು ಕತ್ತಲೆಬಂತು. ಸಾಕ್ಷಾತ್ ಸೂರ್ಯನಾರಾಯಣನೇ ಬಂದಿರಬಹುದೇ? ಎಂದು ಜನರು ತಿಳಿದರು. ಅವರೆಲ್ಲರೂ ಈ ವಿಷಯವನ್ನು ಪಗಡೆಯಾಡುತ್ತಿದ್ದ ಶ್ರೀಕೃಷ್ಣನಿಗೆ ಹೇಳಿದರು. ॥ ೫ ॥ ಶಂಖ-ಚಕ್ರ ಗದಾಧರನಾದ ನಾರಾಯಣನೇ! ಕಮಲಾಕ್ಷನೇ! ದಾಮೋದರನೇ! ಯದುವಂಶ ಶಿರೋಮಣಿಯಾದ ಗೋವಿಂದನೇ! ನಿನಗೆ ನಮಸ್ಕಾರ ಮಾಡುತ್ತೇವೆ. ॥ ೬ ॥ ಜಗದೀಶ್ವರನೇ! ಇದೋ ನೋಡು. ಕೊರೈಸುವ ತನ್ನ ಕಿರಣಗಳಿಂದ ಮನುಷ್ಯರ ದೃಷ್ಟಿಗಳನ್ನೇ ಅಪಹರಿಸುತ್ತಾ ಪ್ರಚಂಡರಶ್ಮಿಯಾದ ಭಗವಾನ್ ಸೂರ್ಯನಾರಾಯಣನು ನಿನ್ನನ್ನು ಸಂದರ್ಶಿಸಲು ಆಗಮಿಸಿದ್ದಾನೆ. ॥ ೭ ॥ ಸಮಸ್ತ ಶ್ರೇಷ್ಠದೇವತೆಗಳು ಮೂರು ಲೋಕಗಳಲ್ಲಿಯೂ ನಿನ್ನನ್ನು ಹೊಂದುವ ಮಾರ್ಗವನ್ನು ಹುಡುಕುತ್ತಲೇ ಇದ್ದಾರೆ. ಆದರೆ ನೀನು ಅವರಿಗೆ ಸಿಗುವುದಿಲ್ಲ. ನೀನು ಯಾದವರಲ್ಲಿ ನಿಗೂಢನಾಗಿರುವೆನೆಂದು ತಿಳಿದು ಸೂರ್ಯನಾರಾಯಣನೇ ನಿನ್ನ ದರ್ಶನಕ್ಕಾಗಿ ಬರುತ್ತಿದ್ದಾನೆ. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ತಿಳಿವಳಿಕೆಯಿಲ್ಲದ ಜನರ ಈ ಮಾತನ್ನು ಕೇಳಿ ನಸುನಗುತ್ತಾ ಕಮಲಾಕ್ಷನಾದ ಶ್ರೀಕೃಷ್ಣನು ಹೇಳಿದನು – ಬಂಧುಗಳೇ! ಇವನು ಸೂರ್ಯದೇವನಲ್ಲ. ಸೂರ್ಯಮಣಿಯನ್ನು ಧರಿಸಿದ್ದರಿಂದ ಸತ್ರಾಜಿತನು ಹೀಗೆ ಪ್ರಕಾಶಮಾನನಾಗಿದ್ದಾನೆ. ॥ ೯ ॥

ಸತ್ರಾಜಿತ್ ಸ್ವಗೃಹಂ ಶ್ರೀಮತ್ ಕೃತಕೌತುಕಮಂಗಲಮ್ ।
ಪ್ರವಿಶ್ಯ ದೇವಸದನೇ ಮಣಿಂ ವಿಪ್ರೈರ್ನ್ಯವೇಶಯತ್
॥ ೧೦ ॥

ದಿನೇ ದಿನೇ ಸ್ವರ್ಣಭಾರಾನಷ್ಟೌ ಸ ಸೃಜತಿ ಪ್ರಭೋ ।
ದುರ್ಭಿಕ್ಷಮಾರ್ಯರಿಷ್ಟಾನಿ ಸರ್ಪಾಧಿವ್ಯಾಧಯೋಽಶುಭಾಃ ।
ನ ಸಂತಿ ಮಾಯಿನಸ್ತತ್ರ ಯತ್ರಾಸ್ತೇಽಭ್ಯರ್ಚಿತೋ ಮಣಿಃ
॥ ೧೧ ॥

ಸ ಯಾಚಿತೋ ಮಣಿಂ ಕ್ವಾಪಿ ಯದುರಾಜಾಯ ಶೌರಿಣಾ ।
ನೈವಾರ್ಥಕಾಮುಕಃ ಪ್ರಾದಾದ್ಯಾಂಚಾಭಂಗಮತರ್ಕಯನ್
॥ ೧೨ ॥

ತಮೇಕದಾ ಮಣಿಂ ಕಂಠೇ ಪ್ರತಿಮುಚ್ಯ ಮಹಾಪ್ರಭಮ್ ।
ಪ್ರಸೇನೋ ಹಯಮಾರುಹ್ಯ ಮೃಗಯಾಂ ವ್ಯಚರದ್ವನೇ
॥ ೧೩ ॥

ಪ್ರಸೇನಂ ಸಹಯಂ ಹತ್ವಾ ಮಣಿಮಾಚ್ಛಿದ್ಯ ಕೇಸರೀ ।
ಗಿರಿಂ ವಿಶನ್ ಜಾಂಬವತಾ ನಿಹತೋ ಮಣಿಮಿಚ್ಛತಾ
॥ ೧೪ ॥

ಸೋಽಪಿ ಚಕ್ರೇ ಕುಮಾರಸ್ಯ ಮಣಿಂ ಕ್ರೀಡನಕಂ ಬಿಲೇ ।
ಅಪಶ್ಯನ್ ಭ್ರಾತರಂ ಭ್ರಾತಾ ಸತ್ರಾಜಿತ್ ಪರ್ಯತಪ್ಯತ
॥ ೧೫ ॥

ಪ್ರಾಯಃ ಕೃಷ್ಣೇನ ನಿಹತೋ ಮಣಿಗ್ರೀವೋ ವನಂ ಗತಃ ।
ಭ್ರಾತಾ ಮಮೇತಿ ತಚ್ಛ್ರುತ್ವಾ ಕರ್ಣೇ ಕರ್ಣೇಽಜಪನ್ ಜನಾಃ
॥ ೧೬ ॥

ಭಗವಾಂಸ್ತದುಪಶ್ರುತ್ಯ ದುರ್ಯಶೋ ಲಿಪ್ತಮಾತ್ಮನಿ ।
ಮಾರ್ಷ್ಟುಂ ಪ್ರಸೇನಪದವೀಮನ್ವಪದ್ಯತ ನಾಗರೈಃ
॥ ೧೭ ॥

ಹತಂ ಪ್ರಸೇನಮಶ್ವಂ ಚ ವೀಕ್ಷ್ಯ ಕೇಸರಿಣಾ ವನೇ ।
ತಂ ಚಾದ್ರಿಪೃಷ್ಠೇ ನಿಹತಮೃಕ್ಷೇಣ ದದೃಶುರ್ಜನಾಃ
॥ ೧೮ ॥

ಋಕ್ಷರಾಜಬಿಲಂ ಭೀಮಮಂಧೇನ ತಮಸಾಽಽವೃತಮ್ ।
ಏಕೋ ವಿವೇಶ ಭಗವಾನವಸ್ಥಾಪ್ಯ ಬಹಿಃ ಪ್ರಜಾಃ
॥ ೧೯ ॥

ಬಳಿಕ ಸತ್ರಾಜಿತನು ಸಮೃದ್ಧವಾದ ತನ್ನ ಮನೆಯೊಳಗೆ ಪ್ರವೇಶಿಸಿದನು. ಅವನ ಶುಭಾಗಮನಕ್ಕಾಗಿ ಮನೆಯಲ್ಲಿ ಮಂಗಳೋತ್ಸವವನ್ನು ಆಚರಿಸಿದರು. ಅವನು ಬ್ರಾಹ್ಮಣರ ಮೂಲಕ ಸ್ಯಮಂತಕಮಣಿಯನ್ನು ದೇವರ ಮನೆಯಲ್ಲಿ ಪ್ರತಿಷ್ಠಾಪಿಸಿದನು. ॥ ೧೦ ॥ ರಾಜೇಂದ್ರನೇ ! ಆ ಮಣಿಯು ಅನುದಿನವೂ ಎಂಟು ಭಾರಗಳಷ್ಟು ಚಿನ್ನವನ್ನು ಕೊಡುತ್ತಿತ್ತು. ಆ ಮಣಿಯು ಪೂಜಿಸಲ್ಪಡುತ್ತಿದ್ದ ಪ್ರದೇಶದಲ್ಲಿ ದುರ್ಭಿಕ್ಷ, ಮಹಾಮಾರಿ, ಗ್ರಹಪೀಡೆ, ಸರ್ಪಭಯ, ಮಾನಸಿಕ ಮತ್ತು ಶಾರೀರಿಕವಾದ ರೋಗಗಳು, ಮಾಟ-ಮಂತ್ರಗಳ ಉಪದ್ರವ ಇಂತಹ ಅಶುಭ ಪ್ರಸಂಗಗಳು ಯಾವುವೂ ಇರುತ್ತಿರಲಿಲ್ಲ. ॥ ೧೧ ॥ ಒಮ್ಮೆ ಭಗವಾನ್ ಶ್ರೀಕೃಷ್ಣನು ಪ್ರಸಂಗವಶಾತ್ ಸತ್ರಾಜಿತನಿಗೆ ಹೇಳಿದನು – 'ನೀನು ನಿನ್ನ ಈ ಮಣಿಯನ್ನು ರಕ್ಷಣೆಯ ದೃಷ್ಟಿಯಿಂದ ಉಗ್ರಸೇನಮಹಾರಾಜನಿಗೆ ಕೊಟ್ಟು ಬಿಡು.' ಆದರೆ ಅರ್ಥಲುಬ್ಧನಾಗಿದ್ದ ಸತ್ರಾಜಿತನು ಭಗವಂತನ ಆಜ್ಞೆಯ ಉಲ್ಲಂಘನೆಯಾದೀತೆಂದೂ ಯಾವ ವಿಚಾರವನ್ನು ಮಾಡದೆ ಮಣಿಯನ್ನು ಮಹಾರಾಜನಿಗೆ ಕೊಡಲಿಲ್ಲ. ॥ ೧೨ ॥

ಒಂದು ದಿನ ಸತ್ರಾಜಿತನ ತಮ್ಮನಾದ ಪ್ರಸೇನನು ಆ ಪರಮ ಪ್ರಕಾಶಮಯ ಮಣಿಯನ್ನು ಕೊರಳಲ್ಲಿ ಧರಿಸಿಕೊಂಡು ಕುದುರೆಯನ್ನೇರಿ ಬೇಟೆಯಾಡುತ್ತಾ ಕಾಡಿನಲ್ಲಿ ಸಂಚರಿಸುತ್ತಿದ್ದನು. ॥ ೧೩ ॥ ಅಲ್ಲಿ ಒಂದು ಸಿಂಹವು ಕುದುರೆ ಸಹಿತವಾಗಿ ಪ್ರಸೇನನನ್ನು ಕೊಂದು ಆ ಮಣಿಯನ್ನು ಕಿತ್ತುಕೊಂಡಿತು. ಅದು ಇನ್ನೇನು ಮಣಿಯೊಡನೆ ಗುಹೆಯನ್ನು ಪ್ರವೇಶಿಸಬೇಕೆನ್ನುವಷ್ಟರಲ್ಲಿ ಋಕ್ಷರಾಜನಾದ ಜಾಂಬವಂತನು ಮಣಿಗಾಗಿ ಆ ಸಿಂಹವನ್ನು ಕೊಂದುಹಾಕಿದನು. ॥ ೧೪ ॥ ಜಾಂಬವಂತನು ಆ ಮಣಿಯನ್ನು ತನ್ನ ಗುಹೆಗೆ ಕೊಂಡುಹೋಗಿ ಮಗುವಿಗೆ ಆಡುವುದಕ್ಕಾಗಿ ಕೊಟ್ಟನು. ಬೇಟೆಯಾಡಲು ಹೋಗಿದ್ದ ಪ್ರಸೇನನು ಬಾರದಿರಲು ಅಣ್ಣನಾದ ಸತ್ರಾಜಿತನು ಬಹುದುಃಖಿತನಾದನು. ॥ ೧೫ ॥ ಅವನು ಹೇಳತೊಡಗಿದನು. 'ಪ್ರಾಯಶಃ ಮಣಿಯ ಆಸೆಯಿಂದ ಶ್ರೀಕೃಷ್ಣನೇ ನನ್ನ ತಮ್ಮನನ್ನು ಕೊಂದಿರಬೇಕು. ಏಕೆಂದರೆ ಅವನು ಮಣಿಯನ್ನು ಧರಿಸಿ ಕಾಡಿಗೆ ಹೋಗಿದ್ದನು.' ಸತ್ರಾಜಿತನ ಈ ಮಾತನ್ನು ಕೇಳಿದ ಜನರು ಪರಸ್ಪರ ಪಿಸುಗುಟ್ಟುತ್ತಿದ್ದರು. ॥ ೧೬ ॥ ಇದು (ಕರ್ಣಾಕರ್ಣಿಕೆಯಾಗಿ) ಶ್ರೀಕೃಷ್ಣನ ಕಿವಿಗೂ ಬಿತ್ತು. ಸುಳ್ಳು ಅಪವಾದವು ತನ್ನ ಮೇಲೆ ಬಂದಿರುವುದನ್ನು ತಿಳಿದಾಗ ಶ್ರೀಕೃಷ್ಣನು ಅಪವಾದದಿಂದ ಪಾರಾಗಲು ಹಲವಾರು ನಾಗರೀಕರೊಡನೆ ಪ್ರಸೇನನನ್ನು ಹುಡುಕಲು ವನಕ್ಕೆ ಹೊರಟನು. ॥ ೧೭ ॥ ಅಲ್ಲಿ ಜನರೆಲ್ಲರೂ ಹುಡುಕುತ್ತಾ-ಹುಡುಕುತ್ತಾ ಘೋರವಾದ ಅರಣ್ಯದಲ್ಲಿ ಸಿಂಹವು ಪ್ರಸೇನನನ್ನೂ, ಅವನ ಕುದುರೆಯನ್ನೂ ಕೊಂದು ಹಾಕಿರುವುದನ್ನು ನೋಡಿದರು. ಅವರು ಸಿಂಹದ ಹೆಜ್ಜೆಯ ಗುರುತನ್ನೇ ಹಿಡಿದುಕೊಂಡು ಮುಂದುವರಿದಾಗ ಪರ್ವತದಲ್ಲಿ ಒಂದು ಕರಡಿಯು ಸಿಂಹವನ್ನೂ ಕೊಂದು ಹಾಕಿರುವುದನ್ನು ನೋಡಿದರು. ॥ ೧೮ ॥ ಆ ಕರಡಿಯ ಕಾಲುಗಳ ಗುರುತನ್ನು ಅನುಸರಿಸಿ ಒಂದು ಗುಹಾದ್ವಾರಕ್ಕೆ ಬಂದಾಗ ಶ್ರೀಕೃಷ್ಣನು ಜನರೆಲ್ಲರನ್ನು ಅಲ್ಲೇ ನಿಲ್ಲಿಸಿ ಒಬ್ಬಂಟಿಗನಾಗಿ ಆ ಘೋರ ಅಂಧಕಾರದಿಂದ ತುಂಬಿದ ಋಕ್ಷರಾಜನ ಭಯಂಕರ ಗುಹೆಯನ್ನು ಪ್ರವೇಶಿಸಿದನು. ॥ ೧೯ ॥

ತತ್ರ ದೃಷ್ಟ್ವಾ ಮಣಿಶ್ರೇಷ್ಠಂ ಬಾಲಕ್ರೀಡನಕಂ ಕೃತಮ್ ।
ಹರ್ತುಂ ಕೃತಮತಿಸ್ತಸ್ಮಿನ್ನವತಸ್ಥೇಽರ್ಭಕಾಂತಿಕೇ
॥ ೨೦ ॥

ತಮಪೂರ್ವಂ ನರಂ ದೃಷ್ಟ್ವಾ ಧಾತ್ರೀ ಚುಕ್ರೋಶ ಭೀತವತ್ ।
ತಚ್ಛ್ರುತ್ವಾಭ್ಯದ್ರವತ್ಕ್ರುದ್ಧೋ ಜಾಂಬವಾನ್ ಬಲಿನಾಂ ವರಃ
॥ ೨೧ ॥

ಸ ವೈ ಭಗವತಾ ತೇನ ಯುಯುಧೇ ಸ್ವಾಮಿನಾಽಽತ್ಮನಃ ।
ಪುರುಷಂ ಪ್ರಾಕೃತಂ ಮತ್ವಾ ಕುಪಿತೋ ನಾನುಭಾವವಿತ್
॥ ೨೨ ॥

ದ್ವಂದ್ವಯುದ್ಧಂ ಸುತುಮುಲಮುಭಯೋರ್ವಿಜಿಗೀಷತೋಃ ।
ಆಯುಧಾಶ್ಮದ್ರುಮೈರ್ದೋರ್ಭಿಃ ಕ್ರವ್ಯಾರ್ಥೇ ಶ್ಯೇನಯೋರಿವ
॥ ೨೩ ॥

ಆಸೀತ್ತದಷ್ಟಾವಿಂಶಾಹಮಿತರೇತರಮುಷ್ಟಿಭಿಃ ।
ವಜ್ರನಿಷ್ಪೇಷಪರುಷೈರವಿಶ್ರಮಮಹರ್ನಿಶಮ್
॥ ೨೪ ॥

ಕೃಷ್ಣಮುಷ್ಟಿನಿಪಾತನಿಷ್ಪಿಷ್ಟಾಂಗೋರುಬಂಧನಃ ।
ಕ್ಷೀಣಸತ್ತ್ವಃ ಸ್ವಿನ್ನಗಾತ್ರಸ್ತಮಾಹಾತೀವ ವಿಸ್ಮಿತಃ
॥ ೨೫ ॥

ಜಾನೇ ತ್ವಾಂ ಸರ್ವಭೂತಾನಾಂ ಪ್ರಾಣ ಓಜಃ ಸಹೋ ಬಲಮ್ ।
ವಿಷ್ಣುಂ ಪುರಾಣಪುರುಷಂ ಪ್ರಭವಿಷ್ಣುಮಧೀಶ್ವರಮ್
॥ ೨೬ ॥

ತ್ವಂ ಹಿ ವಿಶ್ವಸೃಜಾಂ ಸ್ರಷ್ಟಾ ಸೃಜ್ಯಾನಾಮಪಿ ಯಚ್ಚ ಸತ್ ।
ಕಾಲಃ ಕಲಯತಾಮೀಶಃ ಪರ ಆತ್ಮಾ ತಥಾಽಽತ್ಮನಾಮ್
॥ ೨೭ ॥

ಯಸ್ಯೇಷದುತ್ಕಲಿತರೋಷಕಟಾಕ್ಷಮೋಕ್ಷೈ-
ರ್ವರ್ತ್ಮಾದಿಶತ್ ಕ್ಷುಭಿತನಕ್ರತಿಮಿಂಗಿಲೋಽಬ್ಧಿಃ ।
ಸೇತುಃ ಕೃತಃ ಸ್ವಯಶ ಉಜ್ಜ್ವಲಿತಾ ಚ ಲಂಕಾ
ರಕ್ಷಃಶಿರಾಂಸಿ ಭುವಿ ಪೇತುರಿಷುಕ್ಷತಾನಿ ॥ ೨೮ ॥

ಅಲ್ಲಿ ಆ ಶ್ರೇಷ್ಠವಾದ ಮಣಿಯು ಮಗುವಿನ ಆಟಿಕೆಯಾಗಿರುವುದನ್ನು ನೋಡಿದ ಭಗವಂತನು ಅದನ್ನು ತೆಗೆದುಕೊಂಡು ಹೋಗುವ ಇಚ್ಛೆಯಿಂದ ಆ ಮಗುವಿನ ಹತ್ತಿರ ಹೋಗಿ ನಿಂತನು. ॥ ೨೦ ॥ ಆ ಗುಹೆಯಲ್ಲಿ ಅಪರಿಚಿತನಾದ ಮನುಷ್ಯನೊಬ್ಬನನ್ನು ಕಂಡು ಆ ಮಗುವಿನ ಸಾಕುತಾಯಿಯು ಭಯಗೊಂಡು ಗಟ್ಟಿಯಾಗಿ ಕಿರುಚಿಕೊಂಡಳು. ಆಕೆಯ ಕೂಗನ್ನು ಕೇಳಿ ಮಹಾ ಬಲಿಷ್ಠನಾದ ಋಕ್ಷರಾಜ ಜಾಂಬವಂತನು ಕೋಪಗೊಂಡು ಅಲ್ಲಿಗೆ ಧಾವಿಸಿ ಬಂದನು. ॥ ೨೧ ॥ ಪರೀಕ್ಷಿತನೇ ! ಅತ್ಯಂತ ಕ್ರುದ್ಧನಾಗಿದ್ದ ಜಾಂಬವಂತನು ಆಗ ಭಗವಂತನ ಮಹಿಮೆ, ಪ್ರಭಾವ ಇವುಗಳನ್ನು ತಿಳಿಯದೇ ಹೋದನು. ಅವನನ್ನು ಒಬ್ಬ ಸಾಧಾರಣನೆಂದು ತಿಳಿದು ಜಾಂಬವಂತನು ತನ್ನ ಸ್ವಾಮಿಯಾದ ಶ್ರೀಕೃಷ್ಣನೊಡನೆ ಯುದ್ಧಮಾಡತೊಡಗಿದನು. ॥ ೨೨ ॥ ಮಾಂಸದ ಆಸೆಯಿಂದ ಎರಡು ಗಿಡುಗ ಪಕ್ಷಿಗಳು ಕಾದಾಡುವಂತೆಯೇ ವಿಜಯಾಭಿಲಾಷಿಗಳಾಗಿ ಶ್ರೀಕೃಷ್ಣನು ಮತ್ತು ಜಾಂಬವಂತನು ಪರಸ್ಪರ ಘೋರವಾದ ಯುದ್ಧದಲ್ಲಿ ತೊಡಗಿದರು. ಮೊದಲಿಗೆ ಅವರು ಅಸ್ತ್ರ-ಶಸ್ತ್ರಗಳಿಂದ ಪ್ರಹರಿಸಿದರೆ, ಮತ್ತೆ ಶಿಲೆಗಳಿಂದ, ಬಳಿಕ ವೃಕ್ಷಗಳಿಂದ ಕಾದಾಡುತ್ತಿದ್ದರು. ಕೊನೆಗೆ ಅವರಲ್ಲಿ ಬಾಹುಯುದ್ಧ ಪ್ರಾರಂಭವಾಯಿತು. ॥ ೨೩ ॥ ಪರೀಕ್ಷಿತನೇ ! ವಜ್ರಾಘಾತದಂತೆ ಕಠೋರ ಮುಷ್ಟಿಗಳಿಂದ ಪರಸ್ಪರವಾಗಿ ಹೊಡೆಯುತ್ತಾ ಇಪ್ಪತ್ತೆಂಟು ದಿನಗಳವರೆಗೆ ಅವಿಶ್ರಾಂತವಾಗಿ ಹಗಲು-ರಾತ್ರಿ ಯುದ್ಧಮಾಡಿದರು. ॥ ೨೪॥ ಕೊನೆಗೆ ಭಗವಾನ್ ಶ್ರೀಕೃಷ್ಣನ ವಜ್ರಮುಷ್ಟಿಯ ಏಟುಗಳಿಂದ ಜಾಂಬವಂತನ ಶರೀರದ ಮೂಳೆಗಳು ಸಡಿಲಗೊಂಡವು. ಅಂಗಾಂಗವೆಲ್ಲವೂ ಶಿಥಿಲವಾಯಿತು. ಉತ್ಸಾಹವು ಉಡುಗಿತು. ಮೈ ಬೆವತುಕೊಂಡಿತು. ಆಗ ಆವನು ಅತ್ಯಂತ ವಿಸ್ಮಿತನಾಗಿ ಶ್ರೀಕೃಷ್ಣನಲ್ಲಿ ಹೇಳಿದನು. ॥ ೨೫ ॥ ಪ್ರಭೋ ! ನೀನೇ ಸಮಸ್ತ ಪ್ರಾಣಿಗಳ ಸ್ವಾಮಿಯೂ, ರಕ್ಷಕನೂ, ಪುರಾಣ ಪುರುಷ ಭಗವಾನ್ ಶ್ರೀವಿಷ್ಣುವೇ ಆಗಿರುವೆ ಎಂಬುದನ್ನು ನಾನು ತಿಳಿದುಕೊಂಡೆ. ನೀನೇ ಎಲ್ಲರ ಪ್ರಾಣ, ಇಂದ್ರಿಯಬಲ, ಮನೋಬಲ ಮತ್ತು ಶರೀರ ಬಲವೂ ಆಗಿರುವೆ. ॥ ೨೬ ॥ ವಿಶ್ವವನ್ನು ರಚಿಸಿದ ಬ್ರಹ್ಮಾದಿಗಳಿಗೂ ನೀನು ಸೃಷ್ಟಿಕರ್ತನಾಗಿರುವೆ. ಸೃಷ್ಟಿಸಲ್ಪಟ್ಟ ಪದಾರ್ಥಗಳಲ್ಲಿಯೂ ಸತ್ತಾರೂಪದಿಂದ ನೀನೇ ವಿರಾಜಿಸುತ್ತಿರುವೆ. ಕಾಲದ ಅವಯವಗಳೆಲ್ಲದರ ನಿಯಾಮಕನಾದ ಪರಮಕಾಲನೂ ನೀನೇ ಆಗಿರುವೆ. ಶರೀರ ಭೇದದಿಂದ ಭಿನ್ನ-ಭಿನ್ನವಾಗಿ ಕಂಡುಬರುವ ಅಂತರಾತ್ಮಗಳ ಪರಮ ಆತ್ಮನೂ ನೀನೇ ಆಗಿರುವೆ. ॥ ೨೭ ॥ ಪ್ರಭೋ ! ನೀನು ನಿನ್ನ ಕಣ್ಣುಗಳ ಸ್ವಲ್ಪವೇ ಕ್ರೋಧಭಾವದಿಂದ ಸಮುದ್ರದ ಕಡೆಗೆ ನೋಡಿದಾಗ ಸಮುದ್ರದೊಳಗೆ ವಾಸಿಸುವ ತಿಮಿಂಗಿಲಗಳೂ, ಮೊಸಳೆಗಳೂ, ದೊಡ್ಡ-ದೊಡ್ಡ ಮೀನುಗಳೂ ತಲ್ಲಣಿಸಿ ಹೊದುವು ಮತ್ತು ಸಮುದ್ರರಾಜನು ನಿನಗೆ ದಾರಿಕೊಟ್ಟನು. ಆಗ ನೀನು ಅದರ ಮೇಲೆ ಸೇತುವನ್ನು ನಿರ್ಮಿಸಿ ಸುಂದರ ಯಶಸ್ಸನ್ನು ಸ್ಥಾಪಿಸಿ ಲಂಕೆಯನ್ನು ಧ್ವಂಸಗೊಳಿಸುತ್ತಾ ನಿನ್ನ ಬಾಣಗಳು ರಾಕ್ಷಸರ ತಲೆಗಳನ್ನು ಕಡಿ-ಕಡಿದು ಭೂಮಿಗೆ ಉರುಳಿಸುತ್ತಿದ್ದುದು ನನ್ನ ಸ್ಮರಣೆಗೆ ಬರುತ್ತಾ ಇದೆ. (ಖಂಡಿತವಾಗಿಯೂ ನೀನು ನನ್ನ ಸ್ವಾಮಿಯಾದ ಶ್ರೀರಾಮನೇ ಈಗ ಶ್ರೀಕೃಷ್ಣನಾಗಿ ಅವತರಿಸಿರುವೆ.) ॥ ೨೮ ॥

ಇತಿ ವಿಜ್ಞಾತವಿಜ್ಞಾನಮೃಕ್ಷರಾಜಾನಮಚ್ಯುತಃ ।
ವ್ಯಾಜಹಾರ ಮಹಾರಾಜ ಭಗವಾನ್ ದೇವಕೀಸುತಃ
॥ ೨೯ ॥

ಅಭಿಮೃಶ್ಯಾರವಿಂದಾಕ್ಷಃ ಪಾಣಿನಾ ಶಂಕರೇಣ ತಮ್ ।
ಕೃಪಯಾ ಪರಯಾ ಭಕ್ತಂ ಪ್ರೇಮಗಂಭೀರಯಾ ಗಿರಾ
॥ ೩೦ ॥

ಮಣಿಹೇತೋರಿಹ ಪ್ರಾಪ್ತಾ ವಯಮೃಕ್ಷಪತೇ ಬಿಲಮ್ ।
ಮಿಥ್ಯಾಭಿಶಾಪಂ ಪ್ರಮೃಜನ್ನಾತ್ಮನೋ ಮಣಿನಾಮುನಾ
॥ ೩೧ ॥

ಇತ್ಯುಕ್ತಃ ಸ್ವಾಂ ದುಹಿತರಂ ಕನ್ಯಾಂ ಜಾಂಬವತೀಂ ಮುದಾ ।
ಅರ್ಹಣಾರ್ಥಂ ಸ ಮಣಿನಾ ಕೃಷ್ಣಾಯೋಪಜಹಾರ ಹ
॥ ೩೨ ॥

ಅದೃಷ್ಟ್ವಾ ನಿರ್ಗಮಂ ಶೌರೇಃ ಪ್ರವಿಷ್ಟಸ್ಯ ಬಿಲಂ ಜನಾಃ ।
ಪ್ರತೀಕ್ಷ್ಯ ದ್ವಾದಶಾಹಾನಿ ದುಃಖಿತಾಃ ಸ್ವಪುರಂ ಯಯುಃ
॥ ೩೩ ॥

ನಿಶಮ್ಯ ದೇವಕೀ ದೇವೀ
ರುಕ್ಮಿಣ್ಯಾನಕದುಂದುಭಿಃ ।
ಸುಹೃದೋ ಜ್ಞಾತಯೋಽಶೋಚನ್
ಬಿಲಾತ್ ಕೃಷ್ಣಮನಿರ್ಗತಮ್ ॥ ೩೪ ॥

ಸತ್ರಾಜಿತಂ ಶಪನ್ ತಸ್ಮೇ ದುಃಖಿತಾ ದ್ವಾರಕೌಕಸಃ ।
ಉಪತಸ್ಥುರ್ಮಹಾಮಾಯಾಂ ದುರ್ಗಾಂ ಕೃಷ್ಣೋಪಲಬ್ಧಯೇ
॥ ೩೫ ॥

ತೇಷಾಂ ತು ದೇವ್ಯುಪಸ್ಥಾನಾತ್ ಪ್ರತ್ಯಾದಿಷ್ಟಾಶಿಷಾ ಸ ಚ ।
ಪ್ರಾದುರ್ಬಭೂವ ಸಿದ್ಧಾರ್ಥಃ ಸದಾರೋ ಹರ್ಷಯನ್ ಹರಿಃ
॥ ೩೬ ॥

ಉಪಲಭ್ಯ ಹೃಷೀಕೇಶಂ ಮೃತಂ ಪುನರಿವಾಗತಮ್ ।
ಸಹ ಪತ್ನ್ಯಾ ಮಣಿಗ್ರೀವಂ ಸರ್ವೇ ಜಾತಮಹೋತ್ಸವಾಃ
॥ ೩೭ ॥

ಸತ್ರಾಜಿತಂ ಸಮಾಹೂಯ ಸಭಾಯಾಂ ರಾಜಸನ್ನಿಧೌ ।
ಪ್ರಾಪ್ತಿಂ ಚಾಖ್ಯಾಯ ಭಗವಾನ್ ಮಣಿಂ ತಸ್ಮೈ ನ್ಯವೇದಯತ್
॥ ೩೮ ॥

ಸ ಚಾತಿವ್ರೀಡಿತೋ ರತ್ನಂ ಗೃಹೀತ್ವಾವಾಙ್ಮುಖಸ್ತತಃ ।
ಅನುತಪ್ಯಮಾನೋ ಭವನಮಗಮತ್ ಸ್ವೇನ ಪಾಪ್ಮನಾ
॥ ೩೯ ॥

ಪರೀಕ್ಷಿತನೇ! ಋಕ್ಷರಾಜನಾದ ಜಾಂಬವಂತನು ಭಗವಂತನನ್ನು ಗುರುತಿಸಿಕೊಂಡಾಗ ಕಮಲನಯನ ಶ್ರೀಕೃಷ್ಣನು ತನ್ನ ಪರಮ ಕಲ್ಯಾಣಕಾರವಾದ, ಶೀತಲವಾದ ಕರಕಮಲಗಳಿಂದ ಅವನ ಶರೀರವನ್ನು ನೇವರಿಸಿದನು. ಬಳಿಕ ಶ್ರೀಕೃಷ್ಣನು ಭಕ್ತನ ವಿಷಯದಲ್ಲಿ ಪರಮಕೃಪೆಯನ್ನು ತೋರುತ್ತಾ, ಪ್ರೇಮಪೂರ್ಣವಾದ ಗಂಭೀರ ವಾಣಿಯಿಂದ ಭಕ್ತನಾದ ಜಾಂಬವಂತನಲ್ಲಿ ಹೇಳಿದನು. ॥ ೨೯-೩೦॥ ಋಕ್ಷರಾಜನಾದ ಜಾಂಬವಂತನೇ! ನಾನು ಮಣಿಗಾಗಿಯೇ ನಿನ್ನ ಈ ಗುಹೆಗೆ ಬಂದಿರುವೆನು. ಈ ಮಣಿಯಿಂದಾಗಿ ನನ್ನ ಮೇಲೆ ಬಂದಿರುವ ಸುಳ್ಳು ಅಪವಾದವನ್ನು ಹೋಗಲಾಡಿಸಲು ಬಯಸುತ್ತೇನೆ. ॥ ೩೧ ॥ ಭಗವಂತನು ಹೀಗೆ ಹೇಳಿದಾಗ ಜಾಂಬವಂತನು ಅತ್ಯಂತ ಆನಂದದಿಂದ ಅವನನ್ನು ಪೂಜಿಸಿ, ತನ್ನ ಕನ್ಯೆಯಾದ ಜಾಂಬವತಿಯನ್ನು ಮಣಿಯೊಂದಿಗೆ ಶ್ರೀಕೃಷ್ಣನ ಚರಣಗಳಲ್ಲಿ ಸಮರ್ಪಿಸಿದನು. ॥ ೩೨ ॥

ಗುಹೆಯ ಬಾಗಿಲಲ್ಲಿ ಶ್ರೀಕೃಷ್ಣನು ಬರುವುದನ್ನೇ ನಿರೀಕ್ಷಿಸುತ್ತಾ ನಿಂತಿದ್ದ ಪುರಜನರು ಹನ್ನೆರಡು ದಿವಸಗಳವರೆಗೆ ಕಾದಿದ್ದರು. ಒಳಹೋದ ಶೌರಿಯು ಗುಹೆಯಿಂದ ಹೊರಗೆ ಬಾರದಿರಲು ಅತಿದುಃಖಿತರಾಗಿ ದ್ವಾರಕೆಗೆ ಹಿಂದಿರುಗಿದರು. ॥ ೩೩ ॥ ಹನ್ನೆರಡು ದಿವಸಗಳು ಕಳೆದರೂ ಶ್ರೀಕೃಷ್ಣನು ಗುಹೆಯಿಂದ ಹೊರಕ್ಕೆ ಬಾರದಿರುವುದನ್ನು ತಿಳಿದ ತಾಯಿಯಾದ ದೇವಕೀದೇವಿ, ತಂದೆಯಾದ ವಸುದೇವ, ರುಕ್ಮಿಣೀ, ಸುಹೃದರು, ಜ್ಞಾತಿ ಬಾಂಧವರು - ಎಲ್ಲರೂ ಬಹಳವಾಗಿ ದುಃಖಿಸಿದರು. ॥ ೩೪ ॥ ದ್ವಾರಕಾವಾಸಿಗಳೆಲ್ಲರೂ ಅತ್ಯಂತ ದುಃಖಿತರಾಗಿ ಸತ್ರಾಜಿತನನ್ನು ಶಪಿಸತೊಡಗಿದರು. ಭಗವಾನ್ ಶ್ರೀಕೃಷ್ಣನು ಕ್ಷೇಮದಿಂದ ಬೇಗಬರಲೆಂದು ಮಹಾಮಾಯೆಯಾದ ದುರ್ಗಾದೇವಿಯನ್ನು ಪ್ರಾರ್ಥಿಸುತ್ತಾ, ಉಪಾಸನೆ ಮಾಡಿದರು. ॥ ೩೫ ॥ ಅವರ ಉಪಾಸನೆಯಿಂದ ದುರ್ಗಾದೇವಿಯು ಪ್ರಸನ್ನಳಾಗಿ ಅವರಿಗೆ ಆಶೀರ್ವಾದವನ್ನು ಕೊಟ್ಟಳು. ಅದೇ ಸಮಯದಲ್ಲಿ ಅವರ ನಡುವೆಯೇ ಸ್ಯಮಂತಕಮಣಿ ಮತ್ತು ನವವಧೂ ಜಾಂಬವತಿಯೊಂದಿಗೆ ಸಫಲ ಮನೋರಥನಾದ ಶ್ರೀಕೃಷ್ಣನು ಪ್ರಕಟನಾಗಿ ಎಲ್ಲರನ್ನು ಸಂತೋಷಗೊಳಿಸಿದನು. ॥ ೩೬ ॥ ಸ್ಯಮಂತಕ ಮಣಿಯನ್ನು ಕೊರಳನಲ್ಲಿ ಧರಿಸಿಕೊಂಡ ಭಗವಾನ್ ಶ್ರೀಕೃಷ್ಣನು ಪತ್ನಿಯೊಂದಿಗೆ ಬಂದಿರುವುದನ್ನು ಕಂಡು ಸತ್ತವನು ಮರಳಿ ಬದುಕಿ ಬಂದಂತೆ ದ್ವಾರಕಾವಾಸಿಗಳೆಲ್ಲರೂ ಪರಮಾನಂದದಲ್ಲಿ ಮುಳುಗಿ ಹೋದರು. ॥ ೩೭ ॥

ಭಗವಾನ್ ಶ್ರೀಕೃಷ್ಣನು ಸತ್ರಾಜಿತನನ್ನು ಉಗ್ರಸೇನ ಮಹಾರಾಜರ ರಾಜಸಭೆಗೆ ಕರೆಸಿದನು ಹಾಗೂ ಮಣಿಯು ಹೇಗೆ ಪ್ರಾಪ್ತವಾಯಿತೆಂಬ ಎಲ್ಲ ಕಥೆಯನ್ನೂ ಎಲ್ಲರೆದುರಿಗೆ ಹೇಳಿ ಆ ಮಣಿಯನ್ನು ಸತ್ರಾಜಿತನಿಗೆ ಒಪ್ಪಿಸಿದನು. ॥ ೩೮ ॥ ಇದರಿಂದ ಸತ್ರಾಜಿತನು ಅತ್ಯಂತ ಲಜ್ಜಿತನಾಗಿ ಮಣಿಯನ್ನೇನೋ ತೆಗೆದುಕೊಂಡನು; ಆದರೆ ಅವನ ಕತ್ತು ಎಲ್ಲರೆದುರಿಗೆ ಬಾಗಿ ಹೋಯಿತು. ತನ್ನ ಅಪರಾಧದಿಂದ ಅವನಿಗೆ ಪಶ್ಚಾತ್ತಾಪ ಉಂಟಾಗಿ ಹೇಗೋ ಮನೆಯನ್ನು ಸೇರಿಕೊಂಡನು. ॥ ೩೯ ॥

ಸೋಽನುಧ್ಯಾಯಂಸ್ತದೇವಾಘಂ ಬಲವದ್ವಿಗ್ರಹಾಕುಲಃ ।
ಕಥಂ ಮೃಜಾಮ್ಯಾತ್ಮರಜಃ ಪ್ರಸೀದೇದ್ಭಾಚ್ಯುತಃ ಕಥಮ್
॥ ೪೦ ॥

ಕಿಂ ಕೃತ್ವಾಸಾಧು ಮಹ್ಯಂ ಸ್ಯಾನ್ನ ಶಪೇದ್ಭಾಜನೋ ಯಥಾ ।
ಅದೀರ್ಘದರ್ಶನಂ ಕ್ಷುದ್ರಂ ಮೂಢಂ ದ್ರವಿಣಲೋಲುಪಮ್
॥ ೪೧ ॥

ದಾಸ್ಯೇ ದುಹಿತರಂ ತಸ್ಮೈ ಸ್ತ್ರೀರತ್ನಂ ರತ್ನಮೇವ ಚ ।
ಉಪಾಯೋಽಯಂ ಸಮೀಚೀನಸ್ತಸ್ಯ ಶಾಂತಿರ್ನ ಚಾನ್ಯಥಾ
॥ ೪೨ ॥

ಏವಂ ವ್ಯವಸಿತೋ ಬುದ್ಧ್ಯಾ ಸತ್ರಾಜಿತ್ ಸ್ವಸುತಾಂ ಶುಭಾಮ್ ।
ಮಣಿಂ ಚ ಸ್ವಯಮುದ್ಯಮ್ಯ ಕೃಷ್ಣಾಯೋಪಜಹಾರ ಹ
॥ ೪೩ ॥

ತಾಂ ಸತ್ಯಭಾಮಾಂ ಭಗವಾನ್ ಉಪಯೇಮೇ ಯಥಾವಿಧಿ ।
ಬಹುಭಿರ್ಯಾಚಿತಾಂ ಶೀಲರೂಪೌದಾರ್ಯಗುಣಾನ್ವಿತಾಮ್
॥ ೪೪ ॥

ಭಗವಾನಾಹ ನ ಮಣಿಂ ಪ್ರತೀಚ್ಛಾವೋ ವಯಂ ನೃಪ ।
ತವಾಸ್ತಾಂ ದೇವಭಕ್ತಸ್ಯ ವಯಂ ಚ ಫಲಭಾಗಿನಃ
॥ ೪೫ ॥

ಅವನ ಮನಸ್ಸಿನಲ್ಲಿ ನಿರಂತರವಾಗಿ ತನ್ನ ಅಪರಾಧವು ಕುಣಿಯುತ್ತಿತ್ತು. ಜೊತೆಗೆ ಬಲಿಷ್ಠರೊಂದಿಗೆ ಉಂಟಾದ ವಿರೋಧದಿಂದಾಗಿ ಭಯ-ಭೀತನೂ ಆದನು. 'ನಾನು ನನ್ನ ಅಪರಾಧವನ್ನು ಹೇಗೆ ಕಳೆದುಕೊಳ್ಳಲಿ ? ಭಗವಾನ್ ಶ್ರೀಕೃಷ್ಣನು ನನ್ನ ಮೇಲೆ ಹೇಗೆ ಪ್ರಸನ್ನನಾದಾನು ?' ಎಂಬುದಾಗಿ ಸದಾ ಯೋಚಿಸುತ್ತಾ ಇದ್ದನು. ॥ ೪೦ ॥ ನನ್ನ ಶ್ರೇಯಸ್ಸು ಉಂಟಾಗಿ, ಜನರು ನನ್ನನ್ನು ನಿಂದಿಸದೇ ಇರುವಂತಹ ಯಾವ ಕಾರ್ಯವನ್ನು ಮಾಡಲಿ ? ನಿಜವಾಗಿ ನಾನು ಮುಂದಾಲೋಚನೆಯಿಲ್ಲದೆ ಕ್ಷುದ್ರನಾಗಿದ್ದೇನೆ. ಧನಲೋಭದಿಂದ ನಾನು ಬಹುದೊಡ್ಡ ಮೂಢತನದ ಕಾರ್ಯವನ್ನು ಮಾಡಿಬಿಟ್ಟೆನಲ್ಲ! ॥ ೪೧ ॥ ಈಗ ನಾನು ರಮಣೀಯರತ್ನದಂತಿರುವ ನನ್ನ ಕನ್ಯೆಯಾದ ಸತ್ಯಭಾಮೆಯನ್ನು ಸ್ಯಮಂತಕ ಮಣಿಯೊಂದಿಗೆ ಶ್ರೀಕೃಷ್ಣನಿಗೆ ಕೊಟ್ಟುಬಿಡುತ್ತೇನೆ. ಸಮೀಚೀನವಾದ ಈ ಉಪಾಯದಿಂದ ನನ್ನ ಅಪರಾಧವು ಪರಿಹಾರವಾಗುತ್ತದೆ. ಇದಲ್ಲದೆ ಬೇರೆ ಉಪಾಯವೇ ಇಲ್ಲ. ॥ ೪೨ ॥ ಸತ್ರಾಜಿತನು ತನ್ನ ವಿವೇಕ ಬುದ್ಧಿಯಿಂದ ಹೀಗೆ ನಿಶ್ಚಯಿಸಿ ಕಾರ್ಯಪ್ರವೃತ್ತನಾದನು. ತನ್ನ ಕನ್ಯಾಮಣಿಯನ್ನು ಮತ್ತು ಸ್ಯಮಂತಕ ಮಣಿಯನ್ನು ಕೊಂಡುಹೋಗಿ ಶ್ರೀಕೃಷ್ಣನಿಗೆ ಅರ್ಪಿಸಿಬಿಟ್ಟನು. ॥ ೪೩ ॥ ಶೀಲ-ಸ್ವಭಾವ, ಸೌಂದರ್ಯ, ಔದಾರ್ಯ ಮೊದಲಾದ ಸದ್ಗುಣಗಳಿಂದ ಸಂಪನ್ನಳಾಗಿದ್ದ ಸತ್ಯಭಾಮೆಯು ನಮಗೆ ಸಿಗಲಿ ಎಂದು ಬಹಳಷ್ಟು ಜನರು ಆಶಿಸುತ್ತಿದ್ದರು ಹಾಗೂ ಬೇಡಿಕೆಯನ್ನೂ ಮುಂದಿಟ್ಟಿದ್ದರು. ಆದರೆ ಈಗ ಭಗವಾನ್ ಶ್ರೀಕೃಷ್ಣನು ವಿಧಿಪೂರ್ವಕವಾಗಿ ಆಕೆಯ ಪಾಣಿಗ್ರಹಣ ಮಾಡಿದನು.॥ ೪೪ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಸತ್ರಾಜಿತನಿಗೆ ಹೇಳಿದನು- 'ನಾನು ಈ ಸ್ಯಮಂತಕಮಣಿಯನ್ನು ತೆಗೆದುಕೊಳ್ಳುವುದಿಲ್ಲ. ನೀನು ಸೂರ್ಯಭಗವಂತನ ಭಕ್ತನಾಗಿರುವೆ. ಆದ್ದರಿಂದ ಅದು ನಿನ್ನ ಬಳಿಯಲ್ಲೇ ಇರಲಿ. ನಾವಾದರೋ ಅದರ ಫಲಕ್ಕೆ ಅರ್ಥಾತ್ ಅದರಿಂದ ದೊರಕುವ ಚಿನ್ನಕ್ಕೆ ಅಧಿಕಾರಿಗಳಾಗಿದ್ದೇವೆ. ಅದನ್ನಷ್ಟು ನಮಗೆ ಕೊಡುತ್ತಾ ಬಾ. ॥ ೪೫ ॥

ಏಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೫೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಸ್ಯಮಂತಕೋಪಾಖ್ಯಾನೇ ಷಟ್ ಪಂಚಾಶತ್ತಮೋಽಧ್ಯಾಯಃ ॥ ೫೬ ॥

ಐವತ್ತೇಳನೆಯ ಅಧ್ಯಾಯ

ಶ್ಯಮಂತಕಮಣಿಯ ಹರಣ - ಶತಧನ್ವನ ವಧೆ - ಅಕ್ರೂರನನ್ನು ದ್ವಾರಕೆಗೆ ಕರೆಸಿಕೊಂಡುದು

ಶ್ರೀಶುಕ ಉವಾಚ

ವಿಜ್ಞಾತಾರ್ಥೋऽಪಿ ಗೋವಿಂದೋ
ದಗ್ಧಾನಾಕರ್ಣ್ಯ ಪಾಂಡವಾನ್ ।
ಕುಂತೀಂ ಚ ಕುಲ್ಯಕರಣೇ
ಸಹರಾಮೋ ಯಯೌ ಕುರೂನ್ ॥ ೧ ॥

ಭೀಷ್ಮಂ ಕೃಪಂ ಸವಿದುರಂ ಗಾಂಧಾರೀಂ ದ್ರೋಣಮೇವ ಚ ।
ತುಲ್ಯದುಃಖೌ ಚ ಸಂಗಮ್ಯ ಹಾ ಕಷ್ಟಮಿತಿ ಹೋಚತುಃ
॥ ೨ ॥

ಲಬ್ಧ್ವೈತದಂತರಂ ರಾಜನ್ ಶತಧನ್ವಾನಮೂಚತುಃ ।
ಅಕ್ರೂರಕೃತವರ್ಮಾಣೌ ಮಣಿಃ ಕಸ್ಮಾನ್ನ ಗೃಹ್ಯತೇ
॥ ೩ ॥

ಯೋऽಸ್ಮಭ್ಯಂ ಸಂಪ್ರತಿಶ್ರುತ್ಯ ಕನ್ಯಾರತ್ನಂ ವಿಗರ್ಹ್ಯ ನಃ ।
ಕೃಷ್ಣಾಯಾದಾನ್ನ ಸತ್ರಾಜಿತ್ ಕಸ್ಮಾದ್ಭ್ರಾತರಮನ್ವಿಯಾತ್
॥ ೪ ॥

ಏವಂ ಭಿನ್ನಮತಿಸ್ತಾಭ್ಯಾಂ ಸತ್ರಾಜಿತಮಸತ್ತಮಃ ।
ಶಯಾನಮವಧೀತ್ಲೋಭಾತ್ ಸ ಪಾಪಃ ಕ್ಷೀಣಜೀವಿತಃ
॥ ೫ ॥

ಸ್ತ್ರೀಣಾಂ ವಿಕ್ರೋಶಮಾನಾನಾಂ ಕ್ರಂದಂತೀನಾಮನಾಥವತ್ ।
ಹತ್ವಾ ಪಶೂನ್ ಸೌನಿಕವನ್ಮಣಿಮಾದಾಯ ಜಗ್ಮಿವಾನ್
॥ ೬ ॥

ಸತ್ಯಭಾಮಾ ಚ ಪಿತರಂ ಹತಂ ವೀಕ್ಷ್ಯ ಶುಚಾರ್ಪಿತಾ ।
ವ್ಯಲಪತ್ತಾತ ತಾತೇತಿ ಹಾ ಹತಾಸ್ಮೀತಿ ಮುಹ್ಯತೀ
॥ ೭ ॥

ತೈಲದ್ರೋಣ್ಯಾಂ ಮೃತಂ ಪ್ರಾಸ್ಯ ಜಗಾಮ ಗಜಸಾಹ್ವಯಮ್ ।
ಕೃಷ್ಣಾಯ ವಿದಿತಾರ್ಥಾಯ ತಪ್ತಾऽऽಚಖ್ಯೌ ಪಿತುರ್ವಧಮ್
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಲಾಕ್ಷಾಗೃಹದಲ್ಲಿ ಪಾಂಡವರು ಸುಟ್ಟುಹೋಗಿಲ್ಲವೆಂಬುದಾಗಿ ಭಗವಾನ್ ಶ್ರೀಕೃಷ್ಣನು ತಿಳಿದಿದ್ದರೂ ಕುಂತೀಸಹಿತ ಪಾಂಡವರು ಅರಗಿನಾಲಯದಲ್ಲಿ ಭಸ್ಮವಾಗಿ ಸತ್ತುಹೋದರೆಂಬ ವಾರ್ತೆ ಕೇಳಿದಾಗ ಕುಲಪರಂಪರೆಯಿಂದ ನಡೆದು ಬಂದಿರುವ ಕಾರ್ಯವನ್ನು ನಡೆಸಲು ಶ್ರೀಕೃಷ್ಣನು ಬಲರಾಮನೊಂದಿಗೆ ಹಸ್ತಿನಾಪುರಕ್ಕೆ ಹೋದನು. ॥ ೧ ॥ ಅಲ್ಲಿಗೆ ಹೋಗಿ ಭೀಷ್ಮ, ಕೃಪರು, ವಿದುರ, ಗಾಂಧಾರೀ, ದ್ರೋಣಾಚಾರ್ಯ ಮುಂತಾದವರನ್ನು ಭೇಟ್ಟಿಯಾಗಿ, ಅವರೊಂದಿಗೆ ಸಮಾನ ದುಃಖ ಸಹಾನುಭೂತಿ ಪ್ರಕಟಿಸುತ್ತಾ 'ಅಯ್ಯೋ! ಇದು ಅತ್ಯಂತ ದುಃಖದ ಪ್ರಸಂಗವಾಗಿದೆ' ಎಂದು ಮರುಗಿದನು. ॥ ೨ ॥

ಭಗವಾನ್ ಶ್ರೀಕೃಷ್ಣನು ಹಸ್ತಿನಾಪುರಕ್ಕೆ ಹೊರಟು ಹೋಗಿದ್ದರಿಂದ ದ್ವಾರಕೆಯಲ್ಲಿ ಅಕ್ರೂರ ಮತ್ತು ಕೃತವರ್ಮರಿಗೆ ಅವಕಾಶ ದೊರೆಯಿತು. ಅವರು ಶತಧನ್ವನ ಬಳಿಗೆ ಬಂದು - 'ನೀನು ಸತ್ರಾಜಿತನಲ್ಲಿರುವ ಮಣಿಯನ್ನು ಏಕೆ ಅಪಹರಿಸಬಾರದು?' ಎಂದು ಹೇಳಿದರು. ॥ ೩ ॥ ಸತ್ರಾಜಿತನು ತನ್ನ ಹಿರಿಯ ಮಗಳನ್ನು ನನಗೆ ಕೊಡುವ ಮಾತು ಕೊಟ್ಟಿದ್ದನು. ಈಗ ಅವನು ಸ್ವಲ್ಪವೂ ತಿರಸ್ಕರಿಸಿ ಶ್ರೀಕೃಷ್ಣನಿಗೆ ವಿವಾಹಮಾಡಿಕೊಟ್ಟಿರುವನು. ಈಗ ಸತ್ರಾಜಿತನು ತಮ್ಮನಾದ ಪ್ರಸೇನನಂತೆ ಯಮಪುರಿಗೆ ಏಕೆ ಹೋಗಬಾರದು? ॥ ೪ ॥ ಮಹಾಪಾಪಿಷ್ಠನಾದ ಶತಧನ್ವನ ಆಯುಸ್ಸು ತೀರಿಹೋಗಿತ್ತು. ಅಕ್ರೂರ-ಕೃತವರ್ಮರ ಪ್ರಚೋದನೆಯಿಂದಾಗಿ ಆ ಮಹಾ ದುಷ್ಟನು ಮಣಿಯ ಲೋಭದಿಂದ ಮಲಗಿದ್ದ ಸತ್ರಾಜಿತನನ್ನು ಕೊಂದು ಹಾಕಿದನು. ॥ ೫ ॥ ಈ ಸಮಯದಲ್ಲಿ ಸತ್ರಾಜಿತನ ಮನೆಯಲ್ಲಿದ್ದ ಸ್ತ್ರೀಯರು ಅನಾಥರಂತೆ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರೂ ಶತಧನ್ವನು ಅವರ ಕಡೆಗೆ ಗಮನವೇ ಕೊಡಲಿಲ್ಲ. ಕಟುಕನು ಪಶುಗಳನ್ನು ನಿರ್ದಯವಾಗಿ ಕತ್ತರಿಸುವಂತೆಯೇ ಅವನು ಸತ್ರಾಜಿತನನ್ನು ಕೊಚ್ಚಿಹಾಕಿ, ಮಣಿಯೊಂದಿಗೆ ಅಲ್ಲಿಂದ ಪರಾರಿಯಾದನು. ॥ ೬ ॥

ತಂದೆಯು ಹತನಾಗಿ ಬಿದ್ದಿರುವುದನ್ನು ನೋಡಿದ ಸತ್ಯಭಾಮೆಯು ಅತ್ಯಂತ ದುಃಖಿತಳಾಗಿ - 'ಅಪ್ಪಾ! ತಂದೆಯೇ! ನಿನಗೆಂತಹ ಸ್ಥಿತಿಯು ಒದಗಿತು? ನೀನು ಸ್ವರ್ಗಸ್ಥನಾದರೂ ನಾನು ಸತ್ತಂತೆಯೇ ಸರಿ. ಹೀಗೆ ಹೇಳಿಕೊಂಡು ಗೋಳಾಡುತ್ತಾ ಮೂರ್ಛೆ ಹೋದಳು. ಎಚ್ಚರಗೊಂಡು ಪುನಃ ಮುಚ್ಚಿಸುವಳು. ॥ ೭ ॥ ಅನಂತರ ಸತ್ಯಭಾಮೆಯು ತನ್ನ ತಂದೆಯ ಶವವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ, ತಾನು ಹಸ್ತಿನಾಪುರಕ್ಕೆ ಹೋದಳು. ಅವಳು ಅತ್ಯಂತ ದುಃಖದಿಂದ ಭಗವಾನ್ ಶ್ರೀಕೃಷ್ಣನಲ್ಲಿ ತಂದೆಯ ಹತ್ಯೆಯ ವೃತ್ತಾಂತವನ್ನು ತಿಳಿಸಿದಳು. ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನಾದರೋ ಇದನ್ನು ಮೊದಲೇ ತಿಳಿದಿದ್ದನು. ॥ ೮ ॥

ತದಾಕರ್ಣ್ಯೇಶ್ವರೌ ರಾಜನ್ನನುಸೃತ್ಯ ನೃಲೋಕತಾಮ್ ।
ಹೋ ನಃ ಪರಮಂ ಕಷ್ಟಮಿತ್ಯಸ್ರಾಕ್ಷೌ ವಿಲೇಪತುಃ
॥ ೯ ॥

ಆಗತ್ಯ ಭಗವಾಂಸ್ತಸ್ಮಾತ್ ಸಭಾರ್ಯಃ ಸಾಗ್ರಜಃ ಪುರಮ್ ।
ಶತಧನ್ವಾನಮಾರೇಭೇ ಹಂತುಂ ಹರ್ತುಂ ಮಣಿಂ ತತಃ
॥ ೧೦ ॥

ಸೋಽಪಿ ಕೃಷ್ಣೋದ್ಯಮಂ ಜ್ಞಾತ್ವಾ ಭೀತಃ ಪ್ರಾಣಪರೀಪ್ಸಯಾ ।
ಸಾಹಾಯ್ಯೇ ಕೃತವರ್ಮಾಣಮಯಾಚತ ಸ ಚಾಬ್ರವೀತ್
॥ ೧೧ ॥

ನಾಹಮೀಶ್ವರಯೋಃ ಕುರ್ಯಾಂ ಹೇಲನಂ ರಾಮಕೃಷ್ಣಯೋಃ ।
ಕೋ ನು ಕ್ಷೇಮಾಯ ಕಲ್ಪೇತ ತಯೋರ್ವ್ಯಜಿನಮಾಚರನ್
॥ ೧೨ ॥

ಕಂಸಃ ಸಹಾನುಗೋಽಪೀತೋ ಯದ್ದ್ವೇಷಾತ್ಯಾಜಿತಃ ಶ್ರಿಯಾ ।
ಜರಾಸಂಧಃ ಸಪ್ತದಶ ಸಂಯುಗಾನ್ ವಿರಥೋ ಗತಃ
॥ ೧೩ ॥

ಪ್ರತ್ಯಾಖ್ಯಾತಃ ಸ ಚಾಕ್ರೂರಂ ಪಾರ್ಷ್ಣಿಗ್ರಾಹಮಯಾಚತ ।
ಸೋಽಪ್ಯಾಹ ಕೋ ವಿರುಧ್ಯೇತ ವಿದ್ವಾನೀಶ್ವರಯೋರ್ಬಲಮ್
॥ ೧೪ ॥

ಯ ಇದಂ ಲೀಲಯಾ ವಿಶ್ವಂ ಸೃಜತ್ಯವತಿ ಹಂತಿ ಚ ।
ಚೇಷ್ಟಾಂ ವಿಶ್ವಸೃಜೋ ಯಸ್ಯ ನ ವಿದುರ್ಮೋಹಿತಾಜಯಾ
॥ ೧೫ ॥

ಯಃ ಸಪ್ತಹಾಯನಃ ಶೈಲಮುತ್ಪಾಟ್ಯೈಕೇನ ಪಾಣಿನಾ ।
ದಧಾರ ಲೀಲಯಾ ಬಾಲ ಉಚ್ಛಿಲೀಂಧ್ರಮಿವಾರ್ಭಕಃ
॥ ೧೬ ॥

ನಮಸ್ತಸ್ಮೈ ಭಗವತೇ ಕೃಷ್ಣಾಯಾದ್ಭುತಕರ್ಮಣೇ ।
ಅನಂತಾಯಾದಿಭೂತಾಯ ಕೂಟಸ್ಥಾಯಾತ್ಮನೇ ನಮಃ
॥ ೧೭ ॥

ಪ್ರತ್ಯಾಖ್ಯಾತಃ ಸ ತೇನಾಪಿ ಶತಧನ್ವಾ ಮಹಾಮಣಿಮ್ ।
ತಸ್ಮಿನ್ನಸ್ಯಾಶ್ವಮಾರುಹ್ಯ ಶತಯೋಜನಗಂ ಯಯೌ
॥ ೧೮ ॥

ಗರುಡಧ್ವಜಮಾರುಹ್ಯ ರಥಂ ರಾಮಜನಾರ್ದನೌ ।
ಅನ್ವಯಾತಾಂ ಮಹಾವೇಗೈರಶ್ವೈ ರಾಜನ್ ಗುರುದ್ರುಹಮ್
॥ ೧೯ ॥

ಪರೀಕ್ಷಿತನೇ ! ಸರ್ವಶಕ್ತನಾದ ಶ್ರೀಕೃಷ್ಣನು ಮತ್ತು ಬಲರಾಮರು ಎಲ್ಲವನ್ನು ಕೇಳಿ ಮನುಷ್ಯರಂತೆ ಲೀಲೆಯಾಡುತ್ತಾ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಅಯ್ಯೋ ! ನಮ್ಮಗಳ ಮೇಲೆ ಇದೆಂತಹ ವಿಪತ್ತು ಒದಗಿಬಂತಲ್ಲ! ಎಂದು ವಿಲಾಪಿಸತೊಡಗಿದರು. ॥ ೯ ॥ ಅನಂತರ ಶ್ರೀಕೃಷ್ಣನು ಸತ್ಯಭಾಮೆ ಮತ್ತು ಬಲರಾಮರೊಂದಿಗೆ ಹಸ್ತಿನಾಪುರದಿಂದ ಹೊರಟು ದ್ವಾರಕೆಗೆ ಮರಳಿದರು. ಸತ್ರಾಜಿತನನ್ನು ಕೊಂದಿರುವ ಶತಧನ್ವನನ್ನು ಸಂಹರಿಸಿ ಅವನಿಂದ ಮಣಿಯನ್ನು ಪಡೆಯಲು ಪ್ರಯತ್ನಿಸತೊಡಗಿದರು. ॥ ೧೦ ॥ ಭಗವಾನ್ ಶ್ರೀಕೃಷ್ಣನು ತನ್ನನ್ನು ಕೊಲ್ಲಲು ಹೊಂಚುಹಾಕುತ್ತಿರುವನೆಂದು ತಿಳಿದ ಶತಧನ್ವನು ಬಹಳವಾಗಿ ಹೆದರಿ ಹೋದನು. ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಅವನು ಕೃತವರ್ಮನ ಸಹಾಯನ್ನು ಬೇಡಿದನು. ಆಗ ಕೃತವರ್ಮನು ಹೇಳಿದನು. ॥ ೧೧ ॥ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ಸರ್ವಶಕ್ತರಾದ ಈಶ್ವರರಾಗಿದ್ದಾರೆ. ನಾನು ಅವರನ್ನು ಎದುರಿಸಲಾರೆ. ಅವರೊಂದಿಗೆ ವೈರವನ್ನು ಕಟ್ಟಿಕೊಂಡು ಕ್ಷೇಮದಿಂದಿರಲು ಯಾರಿಗೆ ತಾನೇ ಸಾಧ್ಯವಾದೀತು ? ॥ ೧೨ ॥ ಕಂಸನು ಅವರಲ್ಲಿನ ದ್ವೇಷದಿಂದಲೇ ರಾಜ್ಯಲಕ್ಷ್ಮಿಯನ್ನು ಕಳಕೊಂಡು, ಅನುಯಾಯಿಗಳೊಂದಿಗೆ ಅವಸಾನ ಹೊಂದಿದನು. ಜರಾಸಂಧನಂತಹ ಪರಾಕ್ರಮಿಯೂ ಹದಿನೇಳು ಬಾರಿ ಸೋತು ರಥವಿಹೀನನಾಗಿ ರಣರಂಗದಿಂದ ಓಡಬೇಕಾಯಿತು. ಇವೆಲ್ಲವನ್ನು ನೀನು ತಿಳಿದೇ ಇರುವೆ. ॥ ೧೩. ॥ ಕೊಲೆಗೆ ಪ್ರಚೋದಿಸಿದ ಕೃತವರ್ಮನು ಹೀಗೆ ಹೇಳಿ ಜಾರಿಕೊಳ್ಳಲು, ಶತಧನ್ವನು ಸಹಾಯಕ್ಕಾಗಿ ಅಕ್ರೂರನನ್ನು ಪ್ರಾರ್ಥಿಸಿದನು. ಅವನೆಂದನು – ಅಯ್ಯಾ ! ಸರ್ವಶಕ್ತನಾದ ಭಗವಂತನ ಬಲ-ಪರಾಕ್ರಮಗಳನ್ನು ತಿಳಿದು ತಿಳಿದು ಅವನೊಂದಿಗೆ ಯಾರು ತಾನೇ ವೈರವನ್ನು ಕಟ್ಟಿಕೊಳ್ಳುವನು ? ಭಗವಂತನೇ ಲೀಲಾವಿನೋದಕ್ಕಾಗಿಯೇ ಈ ವಿಶ್ವವನ್ನು ರಚಿಸಿ, ರಕ್ಷಿಸಿ, ಸಂಹರಿಸುತ್ತಾನೆ. ಅವನು ಎಂದು ಏನನ್ನು ಮಾಡಬಯಸುವನೋ ಇದನ್ನು ಮಾಯೆಯಿಂದ ಮೋಹಿತರಾದ ಬ್ರಹ್ಮಾದಿಗಳೂ ತಿಳಿಯಲಾರರು. ಇವನು ಬಾಲಕನಾಗಿದ್ದಾಗ ಏಳನೇ ವಯಸ್ಸಿನಲ್ಲೇ ಒಂದೇ ಕೈಯಿಂದ ಗೋವರ್ಧನವನ್ನು ಕಿತ್ತು ಮಗುವೊಂದು ನಾಯಿಕೊಡೆಯನ್ನು ಮೇಲೆತ್ತಿಹಿಡಿಯುವಂತೆ, ಲೀಲಾಜಾಲವಾಗಿ ಏಳು ದಿವಸಗಳ ತನಕ ಎತ್ತಿಹಿಡಿದಿದ್ದನು. ಅದ್ಭುತಕರ್ಮಿಯಾದ ಭಗವಾನ್ ಶ್ರೀಕೃಷ್ಣನಿಗೆ ನಾನಾದರೋ ನಮಸ್ಕಾರ ಮಾಡುತ್ತೇನೆ. ಅವನು ಅನಂತನೂ, ಅನಾದಿಯೂ, ಕೂಟಸ್ಥನೂ, ಆತ್ಮಸ್ವರೂಪನೂ ಆಗಿರುವನು. ಅಂತಹವನಿಗೆ ನಾನು ನಮಸ್ಕರಿಸುತ್ತೇನೆ. ॥ ೧೪-೧೭ ॥ ಹೀಗೆ ಶತಧನ್ವನು ಅಕ್ರೂರನಿಂದಲೂ ತಿರಸ್ಕರಿಸಲ್ಪಟ್ಟವನಾಗಿ ತನ್ನಲ್ಲಿದ್ದ ಮಣಿಯನ್ನು ಅಕ್ರೂರನಲ್ಲಿಯೇ ನ್ಯಾಸವಾಗಿಟ್ಟು ದಿನಕ್ಕೆ ನೂರು ಯೋಜನೆಗಳಷ್ಟು ಪ್ರಯಾಣಮಾಡುವಂತಹ ಕುದುರೆಯನ್ನೇರಿ ಅಲ್ಲಿಂದ ಹೊರಟು ಬಿಟ್ಟನು. ॥ ೧೮ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣ-ಬಲರಾಮರು ಶತಧನ್ವನು ದ್ವಾರಕೆಯಿಂದ ಹೊರಟುಹೋದ ವಾರ್ತೆಯನ್ನು ಕೇಳಿ ಗರುಡ ಧ್ವಜವಿರುವ ಹಾಗೂ ಮಹಾವೇಗವಾಗಿ ಚಲಿಸುವ ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತುಕೊಂಡು ಅವರು ತಮ್ಮ ಮಾವನನ್ನು ಕೊಂದಿರುವ ಶತಧನ್ವನನ್ನು ಬೆನ್ನಟ್ಟಿದರು. ॥ ೧೯ ॥

ಮಿಥಿಲಾಯಾಮುಪವನೇ ವಿಸೃಜ್ಯ ಪತಿತಂ ಹಯಮ್ ।
ಪದ್ಭ್ಯಾಮಧಾವತ್ ಸಂತ್ರಸ್ತಃ ಕೃಷ್ಣೋಽಪ್ಯನ್ವದ್ರವದ್ರುಷಾ
॥ ೨೦ ॥

ಪದಾತೇರ್ಭಗವಾಂಸ್ತಸ್ಯ ಪದಾತಿಸ್ತ್ವಗ್ಜವೇಮಿನಾ ।
ಚಕ್ರೇಣ ಶಿರ ಉತ್ಕೃತ್ಯ ವಾಸಸೋವ್ಯಚಿನೋನ್ಮಣಿಮ್
॥ ೨೧ ॥

ಅಲಬ್ಧಮಣಿರಾಗತ್ಯ ಕೃಷ್ಣ ಆಹಾಗ್ರಜಾಂತಿಕಮ್ ।
ವೃಥಾ ಹತಃ ಶತಧನುರ್ಮಣಿಸ್ತತ್ರ ನ ವಿದ್ಯತೇ
॥ ೨೨ ॥

ತತ ಆಹ ಬಲೋ ನೂನಂ ಸ ಮಣಿಃ ಶತಧನ್ವನಾ ।
ಕಸ್ಮಿಂಶ್ಚಿತ್ ಪುರುಷೇ ನ್ಯಸ್ತಸ್ತಮನ್ವೇಷ ಪುರಂ ವ್ರಜ
॥ ೨೩ ॥

ಅಹಂ ವಿದೇಹಮಿಚ್ಛಾಮಿ ದ್ರಷ್ಟುಂ ಪ್ರಿಯತಮಂ ಮಮ ।
ಇತ್ಯುಕ್ತ್ವಾ ಮಿಥಿಲಾಂ ರಾಜನ್ ವಿವೇಶ ಯದುನಂದನಃ
॥ ೨೪ ॥

ತಂ ದೃಷ್ಟ್ವಾ ಸಹಸೋತ್ಥಾಯ ಮೈಥಿಲಃ ಪ್ರೀತಮಾನಸಃ ।
ಅರ್ಹಯಾಮಾಸ ವಿಧಿವದರ್ಹಣೀಯಂ ಸಮರ್ಹಣೈಃ
॥ ೨೫ ॥

ಉವಾಸ ತಸ್ಯಾಂ ಕತಿಚಿನ್ಮಿಥಿಲಾಯಾಂ ಸಮಾ ವಿಭುಃ ।
ಮಾನಿತಃ ಪ್ರೀತಿಯುಕ್ತೇನ ಜನಕೇನ ಮಹಾತ್ಮನಾ ।
ತತೋಽಶಿಕ್ಷದ್ಗದಾಂ ಕಾಲೇ ಧಾರ್ತರಾಷ್ಟ್ರಃ ಸುಯೋಧನಃ
॥ ೨೬ ॥

ಕೇಶವೋ ದ್ವಾರಕಾಮೇತ್ಯ ನಿಧನಂ ಶತಧನ್ವನಃ ।
ಅಪ್ರಾಪ್ತಿಂ ಚ ಮಣೇಃ ಪ್ರಾಹ ಪ್ರಿಯಾಯಾಃ ಪ್ರಿಯಕೃದ್ವಿಭುಃ
॥ ೨೭ ॥

ತತಃ ಸ ಕಾರಯಾಮಾಸ ಕ್ರಿಯಾ ಬಂಧೋರ್ಹತಸ್ಯ ವೈ ।
ಸಾಕಂ ಸುಹೃದ್ಭಿರ್ಭಗವಾನ್ ಯಾ ಯಾಃ ಸ್ಯುಃ ಸಾಂಪರಾಯಿಕಾಃ
॥ ೨೮ ॥

ಅಕ್ರೂರಃ ಕೃತವರ್ಮಾ ಚ ಶ್ರುತ್ವಾ ಶತಧನೋರ್ವಧಮ್ ।
ವ್ಯಾಷತುರ್ಭಯವಿತ್ರಸ್ತೌ ದ್ವಾರಕಾಯಾಃ ಪ್ರಯೋಜಕೌ
॥ ೨೯ ॥

ಅಕ್ರೂರೇ ಪ್ರೋಷಿತೇಽರಿಷ್ಟಾನ್ಯಾಸನ್ ವೈ ದ್ವಾರಕೌಕಸಾಮ್ ।
ಶಾರೀರಾ ಮಾನಸಾಸ್ತಾಪಾ ಮುಹುರ್ದೈವಿಕಭೌತಿಕಾಃ
॥ ೩೦ ॥

ಮಿಥಿಲಾಪಟ್ಟಣದ ಉಪವನವೊಂದರಲ್ಲಿ ಶತಧನ್ವನ ಕುದುರೆಯು ಬಿದ್ದು ಹೋಯಿತು. ಆಗ ಅವನು ಅದನ್ನು ಬಿಟ್ಟು ಅಲ್ಲೇ ಬಹಳವಾಗಿ ಭಯಗೊಂಡು ಓಡಲಾರಂಭಿಸಿದನು. ಭಗವಾನ್ ಶ್ರೀಕೃಷ್ಣನೂ ಕ್ರುದ್ಧವಾಗಿ ಅವನನ್ನು ಹಿಂಬಾಲಿಸಿದನು. ॥ ೨೦ ॥ ಶತಧನ್ವನು ಪದಾತಿಯಾಗಿಯೇ ಓಡುತ್ತಿದ್ದುದರಿಂದ ಭಗವಂತನು ಹಾಗೆಯೇ ರಥವನ್ನು ಬಿಟ್ಟು ಪದಾತಿಯಾಗಿಯೇ ಓಡಿ ಹೋಗಿ ಹರಿತವಾದ ತನ್ನ ಸುದರ್ಶನದಿಂದ ಅವನ ತಲೆಯನ್ನು ತರಿದು ಅವನು ಉಟ್ಟಿದ್ದ ಬಟ್ಟೆಯಲ್ಲಿ ಸ್ಯಮಂತಕ ಮಣಿಯನ್ನು ಹುಡುಕಿದನು. ॥ ೨೧ ॥ ಆದರೆ ಮಣಿಯು ಸಿಗದಿದ್ದಾಗ ಶ್ರೀಕೃಷ್ಣನು ಅಣ್ಣನಾದ ಬಲರಾಮನ ಬಳಿಗೆ ಬಂದು – ಶತಧನ್ವನನ್ನು ವ್ಯರ್ಥವಾಗಿ ಕೊಂದಂತಾಯಿತು. ಏಕೆಂದರೆ, ಅವನ ಬಳಿಯಲ್ಲಿ ಸ್ಯಮಂತಕ ಮಣಿಯು ಇರಲೇ ಇಲ್ಲ ಎಂದು ಹೇಳಿದನು. ॥ ೨೨ ॥ ಬಲರಾಮನು ಹೇಳಿದನು – ಕೃಷ್ಣ! ಶತಧನ್ವನು ಸ್ಯಮಂತಕ ಮಣಿಯನ್ನು ಬೇರೆ ಯಾರಲ್ಲಾದರೂ ಇಟ್ಟಿರಬೇಕು. ನೀನು ದ್ವಾರಕೆಗೆ ಹೋಗಿ ಅದು ಯಾರಲ್ಲಿದೆ ಎಂಬುದನ್ನು ತಿಳಿದುಕೊ. ॥ ೨೩. ॥ ನನ್ನ ಪ್ರಿಯಮಿತ್ರನಾದ ವಿದೇಹರಾಜನನ್ನು ಕಾಣಲು ನಾನು ಬಯಸುತ್ತೇನೆ. ಪರೀಕ್ಷಿತನೇ! ಹೀಗೆ ಹೇಳಿ ಯದುವಂಶ ಶಿರೋಮಣಿಯಾದ ಬಲರಾಮನು ಮಿಥಿಲಾ ನಗರಕ್ಕೆ ಹೋದನು. ॥ ೨೪ ॥ ಪರಮಪೂಜನೀಯನಾದ ಬಲರಾಮನು ಆಗಮಿಸಿರುವನೆಂದು ತಿಳಿದ ಮಿಥಿಲಾ ನರೇಶನ ಹೃದಯವು ಆನಂದದಿಂದ ತುಂಬಿಹೋಯಿತು. ಅವನು ಲಗುಬಗೆಯಿಂದ ಆಸನದಿಂದ ಎದ್ದು ಅನೇಕ ಪೂಜಾಸಾಮಗ್ರಿಗಳಿಂದ ಬಲರಾಮನನ್ನು ಪೂಜಿಸಿದನು. ॥ ೨೫ ॥ ಇದಾದ ಬಳಿಕ ಭಗವಾನ್ ಬಲರಾಮನು ಕೆಲವು ವರ್ಷಗಳವರೆಗೆ ಮಿಥಿಲೆಯಲ್ಲೇ ಇದ್ದು ಬಿಟ್ಟನು. ಮಹಾತ್ಮಾ ಜನಕನು ಅತ್ಯಂತ ಪ್ರೇಮಾದರಗಳಿಂದ ಅವನನ್ನು ಇರಿಸಿಕೊಂಡನು. ಅದೇ ಸಮಯದಲ್ಲಿ ಧೃತರಾಷ್ಟ್ರನ ಮಗನಾದ ದುರ್ಯೋಧನನು ಮಿಥಿಲೆಗೆ ಬಂದು ಬಲರಾಮನಿಂದ ಗದಾಯುದ್ಧವನ್ನು ಕಲಿತುಕೊಂಡನು. ॥ ೨೬ ॥ ಇತ್ತ ಪ್ರಿಯೆಯಾದ ಸತ್ಯಭಾಮೆಯ ಪ್ರಿಯಕಾರ್ಯವನ್ನು ಮಾಡಿ ಭಗವಾನ್ ಶ್ರೀಕೃಷ್ಣನು ದ್ವಾರಕೆಗೆ ಮರಳಿ ಬಂದು ಆಕೆಯ ಬಳಿ ಶತಧನ್ವನನ್ನು ಕೊಂದುಹಾಕಿದರೂ ಸ್ಯಮಂತಕಮಣಿಯು ಅವನ ಬಳಿ ದೊರಕಲಿಲ್ಲವೆಂದು ತಿಳಿಸಿದನು. ॥ ೨೭ ॥ ಅನಂತರ ಶ್ರೀಕೃಷ್ಣನು ಮಾವನಾದ ಸತ್ರಾಜಿತನಿಗೆ ಪರಲೋಕಸಾಧನವಾದ ಔರ್ಧ್ವದೇಹಿಕಕ್ರಿಯೆಗಳನ್ನು ಸುಹೃದರೊಡನೆ ಸೇರಿ ಮಾಡಿದನು.॥ ೨೮ ॥

ಸತ್ರಾಜಿತನನ್ನು ಕೊಲ್ಲಲು ಶತಧನ್ವನನ್ನು ಅಕ್ರೂರ ಮತ್ತು ಕೃತವರ್ಮರೇ ಪ್ರೇರೇಪಿಸಿದ್ದರು. ಭಗವಾನ್ ಶ್ರೀಕೃಷ್ಣನು ಶತಧನ್ವನನ್ನು ಕೊಂದಿರುವ ವಾರ್ತೆಯನ್ನು ಕೇಳಿದಾಗ ಅವರು ಬಹಳವಾಗಿ ಭಯಗೊಂಡು ದ್ವಾರಕೆಯಿಂದ ಓಡಿಹೋದರು. ॥ ೨೯ ॥ ಪರೀಕ್ಷಿತನೇ! ಅಕ್ರೂರನು ದ್ವಾರಕೆಯಿಂದ ಹೊರಟು ಹೋದ ಬಳಿಕ ದ್ವಾರಕಾನಿವಾಸಿಗಳಿಗೆ ಅನೇಕ ವಿಧವಾದ ಅನಿಷ್ಟಗಳನ್ನು, ಅರಿಷ್ಟಗಳನ್ನು ಇದಿರಿಸಬೇಕಾಯಿತು ಎಂದು ಕೆಲವರು ಭಾವಿಸಿದರು. ಇವರೆಲ್ಲರೂ ಹಿಂದೆ ನಡೆದ ಶ್ರೀಕೃಷ್ಣನ ಮಹಾತ್ಮ್ಯ–ಮಹಿಮೆಯನ್ನು ಮರೆತೇ ಬಿಟ್ಟಿದ್ದರು. ಮಹರ್ಷಿಗಳ ಮನೋವೃತ್ತಿಗೆ

ಇತ್ಯಂಗೋಪದಿಶಂತ್ಯೇಕೇ ವಿಸ್ಮೃತ್ಯ ಪ್ರಾಗುದಾಹೃತಮ್ ।
ಮುನಿವಾಸನಿವಾಸೇ ಕಿಂ ಘಟೇತಾರಿಷ್ಟದರ್ಶನಮ್
॥ ೩೧ ॥

ದೇವೇಽವರ್ಷತಿ ಕಾಶೀಶಃ ಶ್ವಫಲ್ಕಾಯಾಗತಾಯ ವೈ ।
ಸ್ವಸುತಾಂ ಗಾಂದಿನೀಂ ಪ್ರಾದಾತ್ತತೋಽವರ್ಷತ್ಸ್ಮ ಕಾಶಿಷು
॥ ೩೨ ॥

ತತ್ಸುತಸ್ತತ್ಪ್ರಭಾವೋಽಸಾವಕ್ರೂರೋ ಯತ್ರ ಯತ್ರ ಹ ।
ದೇವೋಽಭಿವರ್ಷತೇ ತತ್ರ ನೋಪತಾಪಾ ನ ಮಾರಿಕಾಃ
॥ ೩೩ ॥

ಇತಿ ವೃದ್ಧವಚಃ ಶ್ರುತ್ವಾ ನೈತಾವದಿಹ ಕಾರಣಮ್ ।
ಇತಿ ಮತ್ವಾಸಮಾನಾಯ್ಯ ಪ್ರಾಹಾಕ್ರೂರಂ ಜನಾರ್ದನಃ
॥ ೩೪ ॥

ಪೂಜಯಿತ್ವಾಭಿಭಾಷ್ಯೈನಂ ಕಥಯಿತ್ವಾ ಪ್ರಿಯಾಃ ಕಥಾಃ ।
ವಿಜ್ಞಾತಾಖಿಲಚಿತ್ತಜ್ಞಃ ಸ್ಮಯಮಾನ ಉವಾಚ ಹ
॥ ೩೫ ॥

ನನು ದಾನಪತೇ ನ್ಯಸ್ತಸ್ತ್ವಯ್ಯಾಸ್ತೇ ಶತಧನ್ವನಾ ।
ಸ್ಯಮಂತಕೋ ಮಣಿಃ ಶ್ರೀಮಾನ್ ವಿದಿತಃ ಪೂರ್ವಮೇವ ನಃ
॥ ೩೬ ॥

ಸತ್ರಾಜಿತೋಽನಪತ್ಯತ್ವಾದ್ದೌಹ್ಲೀಯುರ್ದುಹಿತುಃ ಸುತಾಃ ।
ದಾಯಂ ನಿನೀಯಾಪಃ ಪಿಂಡಾನ್ವಿಮುಚ್ಯರ್ಣಂ ಚ ಶೇಷಿತಮ್
॥ ೩೭ ॥

ತಥಾಪಿ ದುರ್ಧರಸ್ತ್ವನ್ಯೈಸ್ತ್ವಯ್ಯಾಸ್ತಾಂ ಸುವ್ರತೇ ಮಣಿಃ ।
ಕಿಂತು ಮಾಮಗ್ರಜಃ ಸಮ್ಯಙ್ನಪ್ರತ್ಯೇತಿ ಮಣಿಂ ಪ್ರತಿ
॥ ೩೮ ॥

ದರ್ಶಯಸ್ವ ಮಹಾಭಾಗ ಬಂಧೂನಾಂ ಶಾಂತಿಮಾವಹ ।
ಅವ್ಯುಚ್ಛಿನ್ನಾ ಮಖಾಸ್ತೇಽದ್ಯ ವರ್ತಂತೇ ರುಕ್ಮವೇದಯಃ
॥ ೩೯ ॥

ನೆಲೆಯೆನಿಸಿರುವ ಭಗವಂತನಿಗೆ ನಿವಾಸಸ್ಥಾನವಾದ ದ್ವಾರಕೆಯಲ್ಲಿ ಅನಿಷ್ಟಗಳು ಹೇಗೆ ತಾನೆ ಉಂಟಾಗಬಲ್ಲವು ? ಎಂದು ಮತ್ತೆ ಕೆಲವರು ಹೇಳತೊಡಗಿದರು. ॥ ೩೦-೩೧ ॥ "ಒಮ್ಮೆ ಕಾಶೀರಾಜ್ಯದಲ್ಲಿ ಮಳೆಯೇ ಇಲ್ಲದೆ ಕ್ಷಾಮ ತಲೆದೋರಿತ್ತಂತೆ. ಆ ಸಮಯದಲ್ಲಿ ಕಾಶೀರಾಜರು ತನ್ನ ರಾಜ್ಯಕ್ಕೆ ಬಂದಿರುವ ಅಕ್ರೂರನ ತಂದೆಯಾದ ಶ್ವಫಲ್ಕನಿಗೆ ತನ್ನ ಮಗಳಾದ ಗಾಂದಿನಿಯನ್ನು ಕೊಟ್ಟು ಮದುವೆಮಾಡಿದೊಡನೆಯೇ ಮಳೆಯಾಯಿತಂತೆ. ಶ್ವಫಲ್ಕನ ಮಗನಾದ ಅಕ್ರೂರನಲ್ಲಿಯೂ ಇಂತಹುದೇ ಮಹಿಮೆಯಿರುವುದಂತೆ. ಅವನೆಲ್ಲಿಗೆ ಹೋದರೂ ಅಲ್ಲಿ ಮಳೆ-ಬೆಳೆಗಳು ಸಮೃದ್ಧವಾಗಿ, ಯಾವುದೇ ವಿಧವಾದ ಕಷ್ಟವಾಗಲೀ, ಮಹಾಮಾರಿಯೇ ಮುಂತಾದ ಉಪದ್ರವಗಳಾಗಲೀ ಇರುವುದಿಲ್ಲವಂತೆ.' ಹೀಗೆ ಕೆಲವು ಹಿರಿಯರು ಮಾತನಾಡಿಕೊಳ್ಳುತ್ತಿದ್ದರು. ಪರೀಕ್ಷಿತನೇ ! ಅವರ ಮಾತನ್ನು ಕೇಳಿದ ಭಗವಂತನು - ಈಗ ತಲೆದೋರಿದ ಉಪದ್ರವಗಳಿಗೆ ಈ ಕಾರಣವಿರಲಾರದು ಎಂದು ಯೋಚಿಸಿ ಶ್ರೀಕೃಷ್ಣನು ದೂತನನ್ನು ಕಳುಹಿಸಿ ಅಕ್ರೂರನನ್ನು ಹುಡುಕಿಸಿ, ಕರೆತಂದು ಅವನೊಡನೆ ಮಾತಾನಾಡಿದನು. ॥ ೩೨-೩೪ ॥ ಭಗವಂತನು ಅವನನ್ನು ಬಹಳವಾಗಿ ಸ್ವಾಗತ-ಸತ್ಕಾರಮಾಡಿ, ಸವಿಮಾತುಗಳನ್ನಾಡಿದನು. ಪರೀಕ್ಷಿತನೇ ! ಎಲ್ಲರ ಮನಸ್ಸಿನ ಪ್ರತಿಯೊಂದು ಸಂಕಲ್ಪವನ್ನು ಬಲ್ಲವನಾದ ಶ್ರೀಕೃಷ್ಣನು ಮುಗುಳುನಗುತ್ತಾ ಅಕ್ರೂರನಿಗೆ ಹೇಳಿದನು. ॥ ೩೫ ॥ ದಾನಪತಿಯಾದ ಚಿಕ್ಕಪ್ಪನೇ! ಶತಧನ್ವನು ಪ್ರಕಾಶಮಾನವಾದ ಮತ್ತು ಸಂಪತ್ತನ್ನು ಕೊಡುವ ಸ್ಯಮಂತಕಮಣಿಯನ್ನು ನಿನ್ನಲ್ಲಿ ನ್ಯಾಸವಾಗಿ ಇಟ್ಟಿರುವ ನೆಂಬುದು ನನಗೆ ಮೊದಲೇ ತಿಳಿದಿತ್ತು. ॥ ೩೬ ॥ ಸತ್ರಾಜಿತನಿಗೆ ಗಂಡು ಮಕ್ಕಳಿಲ್ಲದುದು ನೀನು ತಿಳಿದೇ ಇರುವೆ. ಅದಕ್ಕಾಗಿ ಅವನ ಮಗಳ ಮಕ್ಕಳು ಅವನಿಗೆ ಮಾಡಬೇಕಾದ ಪಿಂಡಪ್ರದಾನ, ತಿಲಾಂಜಲಿಯೇ ಮೊದಲಾದ ಕರ್ಮಾಂತರಗಳನ್ನು ಮಾಡಿರುವರು. ಅವನ ಋಣವನ್ನು ತೀರಿಸಿರುವರು. ಆದ್ದರಿಂದ ಅವನಲ್ಲಿರಬಹುದಾದ ಆಸ್ತಿಗೆ ಅವರೇ ಹಕ್ಕುದಾರರಾಗುತ್ತಾರೆ. ॥ ೩೭ ॥ ಹೀಗೆ ಶಾಸ್ತ್ರ ಸಂಪ್ರದಾಯದಂತೆ ಆ ಸ್ಯಮಂತಕ ಮಣಿಯು ನನ್ನ ಪುತ್ರರಿಗೆ ಲಭಿಸಬೇಕಾಗಿದೆ. ಆದರೆ ಆ ದಿವ್ಯಮಣಿಯು ನಿನ್ನಲ್ಲಿಯೇ ಇರಲಿ. ಏಕೆಂದರೆ, ನೀನು ವ್ರತನಿಷ್ಠನೂ, ಪವಿತ್ರಾತ್ಮನೂ ಆಗಿರುವೆ. ಇತರರಿಗೆ ಆ ಮಣಿಯನ್ನು ಇರಿಸಿಕೊಳ್ಳುವುದು ಕಷ್ಟವೇ ಸರಿ. ಆದರೆ ನಮ್ಮಣ್ಣ ಬಲರಾಮನು ಮಣಿಯ ವಿಷಯದಲ್ಲಿ ನನ್ನ ಮಾತಿನಲ್ಲಿ ವಿಶ್ವಾಸವಿಡುವುದಿಲ್ಲ. ಇದೇ ನಮ್ಮ ಮುಂದೆ ಬಂದಿರುವ ದೊಡ್ಡ ಸಮಸ್ಯೆಯಾಗಿದೆ. ॥ ೩೮ ॥ ಆದ್ದರಿಂದ ಭಾಗ್ಯಶಾಲಿಯಾದ ಅಕ್ರೂರನೇ ! ನೀನು ಆ ಮಣಿಯನ್ನು ತೋರಿಸಿ ನಮ್ಮ ಇಷ್ಟ-ಮಿತ್ರರ, ಬಲರಾಮನ, ಸತ್ಯಭಾಮೆಯ ಮತ್ತು ಜಾಂಬವತಿಯ ಸಂದೇಹವನ್ನು ದೂರಗೊಳಿಸು ಹಾಗೂ ಅವರ ಹೃದಯಕ್ಕೆ, ಶಾಂತಿಯನ್ನು ನೀಡು. ಆ ಮಣಿಯ ಪ್ರಭಾವದಿಂದಲೇ ಇತ್ತೀಚೆಗೆ ನೀನು ಸ್ವರ್ಣವೇದಿಗಳಿಂದೊಡಗೂಡಿದ ಮಹಾಯಜ್ಞಗಳನ್ನು ನಿರಂತರವಾಗಿ ಮಾಡುತ್ತಿರುವೆ ಎಂಬುದೂ ನನಗೆ ತಿಳಿದಿದೆ. ॥ ೩೯ ॥

ಏವಂ ಸಾಮಭಿರಾಲಬ್ಧಃ ಶ್ವಫಲ್ಕತನಯೋ ಮಣಿಮ್ ।
ಆದಾಯ ವಾಸಸಾಚ್ಛನ್ನಂ ದದೌ ಸೂರ್ಯಸಮಪ್ರಭಮ್
॥ ೪೦ ॥

ಸ್ಯಮಂತಕಂ ದರ್ಶಯಿತ್ವಾ ಜ್ಞಾತಿಭ್ಯೋ ರಜ ಆತ್ಮನಃ ।
ವಿಮೃಜ್ಯ ಮಣಿನಾ ಭೂಯಸ್ತಸ್ಮೈ ಪ್ರತ್ಯರ್ಪಯತ್ ಪ್ರಭುಃ
॥ ೪೧ ॥

ಯಸ್ತ್ವೇತದ್ಭಗವತ ಈಶ್ವರಸ್ಯ ವಿಷ್ಣೋ-
ರ್ವೀರ್ಯಾಢ್ಯಂ ವೃಜಿನಹರಂ ಸುಮಂಗಲಂ ಚ ।
ಆಖ್ಯಾನಂ ಪಠತಿ ಶೃಣೋತ್ಯನುಸ್ಮರೇದ್ವಾ
ದುಷ್ಕೀರ್ತಿಂ ದುರಿತಮಪೋಹ್ಯ ಯಾತಿ ಶಾಂತಿಮ್ ॥ ೪೨ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೇಳಿದ ಈ ಪ್ರಕಾರದ ಸಾಂತ್ವನದ ಮಾತುಗಳಿಂದ ಪ್ರೇರಿತನಾದ ಅಕ್ರೂರನು ವಸ್ತ್ರದಲ್ಲಿ ಸುತ್ತಿಟ್ಟ ಸ್ಯಮಂತಕಮಣಿಯನ್ನು ಹೊರ ತೆಗೆದು ಭಗವಂತನಿಗೆ ಅರ್ಪಿಸಿಬಿಟ್ಟನು. ॥ ೪೦ ॥ ಭಗವಾನ್ ಶ್ರೀಕೃಷ್ಣನು ಆ ಸ್ಯಮಂತಕ ಮಣಿಯನ್ನು ತನ್ನ ಜ್ಞಾತಿಬಾಂಧವರೆಲ್ಲರಿಗೂ ತೋರಿಸಿ ತನಗೆ ಬಂದ ಅಪವಾದವನ್ನು ಕಳೆದುಕೊಂಡನು. ಅದನ್ನು ಇಟ್ಟುಕೊಳ್ಳಲು ತಾನು ಸಮರ್ಥನಾಗಿದ್ದರೂ ಪುನಃ ಅಕ್ರೂರನಿಗೆ ಆ ಮಣಿಯನ್ನು ಕೊಟ್ಟನು. ॥ ೪೧ ॥ ಸರ್ವಶಕ್ತನಾದ, ಸರ್ವವ್ಯಾಪಕನಾದ ಭಗವಾನ್ ಶ್ರೀಕೃಷ್ಣನ ಪರಾಕ್ರಮಗಳಿಂದ ಕೂಡಿದ ಮಂಗಲಮಯವಾದ ಈ ಆಖ್ಯಾನವು ಸಮಸ್ತ ಪಾಪಗಳನ್ನೂ, ಅಪವಾದಗಳನ್ನೂ, ಕಳಂಕಗಳನ್ನೂ ತೊಡೆದು ಹಾಕುತ್ತದೆ. ಇದನ್ನು ಪಠಿಸುವವನು, ಶ್ರವಣಿಸುವವನು, ಅಥವಾ ಸ್ಮರಿಸುವವನೂ ಎಲ್ಲ ವಿಧವಾದ ದುಷ್ಕೀರ್ತಿಗಳಿಂದ, ಪಾಪಗಳಿಂದ ಬಿಡುಗಡೆಹೊಂದಿ ಪರಮ ಶಾಂತಿಯನ್ನು ಹೊಂದುತ್ತಾನೆ. ॥ ೪೨ ॥

ಐವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೫೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಸ್ಯಮಂತಕೋಪಾಖ್ಯಾನೇ ಸಪ್ತಪಂಚಾಶತ್ತಮೋಽಧ್ಯಾಯಃ ॥ ೫೭ ॥

ಐವತ್ತೆಂಟನೆಯ ಅಧ್ಯಾಯ

ಶ್ರೀಕೃಷ್ಣನ ಇತರ ವಿವಾಹ ಮಹೋತ್ಸವಗಳು

ಶ್ರೀಶುಕ ಉವಾಚ

ಏಕದಾ ಪಾಂಡವಾನ್ ದ್ರಷ್ಟುಂ ಪ್ರತೀತಾನ್ ಪುರುಷೋತ್ತಮಃ ।
ಇಂದ್ರಪ್ರಸ್ಥಂ ಗತಃ ಶ್ರೀಮಾನ್ ಯುಯುಧಾನಾದಿಭಿರ್ವೃತಃ
॥ ೧ ॥

ದೃಷ್ಟ್ವಾ ತಮಾಗತಂ ಪಾರ್ಥಾ ಮುಕುಂದಮಖಿಲೇಶ್ವರಮ್ ।
ಉತ್ತಸ್ಥುರ್ಯುಗಪದ್ವೀರಾಃ ಪ್ರಾಣಾ ಮುಖ್ಯಮಿವಾಗತಮ್
॥ ೨ ॥

ಪರಿಷ್ವಜ್ಯಾಚ್ಯುತಂ ವೀರಾ ಅಂಗಸಂಗಹತೈನಸಃ ।
ಸಾನುರಾಗಸ್ಮಿತಂ ವಕ್ತ್ರಂ ವೀಕ್ಷ್ಯ ತಸ್ಯ ಮುದಂ ಯಯುಃ
॥ ೩ ॥

ಯುಧಿಷ್ಠಿರಸ್ಯ ಭೀಮಸ್ಯ ಕೃತ್ವಾ ಪಾದಾಭಿವಂದನಮ್ ।
ಫಾಲ್ಗುನಂ ಪರಿರಭ್ಯಾಥ ಯಮಾಭ್ಯಾಂ ಚಾಭಿವಂದಿತಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಪಾಂಡವರು ಲಾಕ್ಷಾಗೃಹದಲ್ಲಿ ಸುಟ್ಟುಹೋಗದೆ ಜೀವಂತವಾಗಿರುವರೆಂಬುದು ಈಗ ತಿಳಿದಿತ್ತು. ಒಂದು ದಿನ ಭಗವಾನ್ ಶ್ರೀಕೃಷ್ಣನು ಅವರನ್ನು ಭೇಟ್ಟಿಯಾಗಲು ಸಾತ್ಯಕಿಯೇ ಮೊದಲಾದ ಸುಹೃದರೊಡನೆ ಇಂದ್ರಪ್ರಸ್ಥಕ್ಕೆ ಪ್ರಯಾಣಮಾಡಿದನು. ॥ ೧ ॥ ಸರ್ವೇಶ್ವರನಾದ ಭಗವಾನ್ ಶ್ರೀಕೃಷ್ಣನು ದಯಮಾಡಿಸಿರುವನೆಂದು ನೋಡಿ ಪ್ರಾಣಸಂಚಾರವಾದೊಡನೆ ಇಂದ್ರಿಯಗಳೆಲ್ಲವೂ ಸಚೇತನವಾಗುವಂತೆಯೇ ವೀರವರರಾದ ಪಾಂಡವರೆಲ್ಲರೂ ಒಂದೇ ಬಾರಿಗೆ ಎದ್ದು ನಿಂತರು. ॥ ೨ ॥ ವೀರರಾದ ಪಾಂಡವರು ಭಗವಂತನಾದ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡರು. ಪರಮಾತ್ಮನ ಅಂಗಸ್ಪರ್ಶದಿಂದ ಅವರ ಪಾಪಗಳೆಲ್ಲವೂ ಪರಿಹಾರವಾದುವು. ಭಗವಂತನ ಪ್ರೀತಿಯ ಮಂದಹಾಸದಿಂದ ಕೂಡಿದ ಮುಖಾರವಿಂದವನ್ನು ನೋಡಿ ಅವರೆಲ್ಲರೂ ಆನಂದ ತುಂದಿಲರಾದರು. ॥ ೩ ॥ ಭಗವಾನ್ ಶ್ರೀಕೃಷ್ಣನು ಯುಧಿಷ್ಠಿರನಿಗೆ ಮತ್ತು ಭೀಮಸೇನನಿಗೆ ಪಾದಾಭಿವಂದನೆಯನ್ನು ಮಾಡಿದನು. ಅರ್ಜುನನ್ನು ಆಲಿಂಗಿಸಿಕೊಂಡನು. ನಕುಲ-ಸಹದೇವರು ಭಗವಂತನ ಪಾದಗಳಿಗೆರಗಿದರು. ॥ ೪ ॥

ಪರಮಾಸನ ಆಸೀನಂ ಕೃಷ್ಣಾ ಕೃಷ್ಣಮನಿಂದಿತಾ ।
ನವೋಢಾ ವ್ರೀಡಿತಾ ಕಿಂಚಿಚ್ಚನ್ನೈರೇತ್ಯಾಭ್ಯವಂದತ
॥ ೫ ॥

ತಥೈವ ಸಾತ್ಯಕಿಃ ಪಾರ್ಥೈಃ ಪೂಜಿತಶ್ಚಾಭಿವಂದಿತಃ ।
ನಿಷಸಾದಾಸನೇಽನ್ಯೇ ಚ ಪೂಜಿತಾಃ ಪರ್ಯುಪಾಸತ
॥ ೬ ॥

ಪೃಥಾಂ ಸಮಾಗತ್ಯ ಕೃತಾಭಿವಾದನ-
ಸ್ತಯಾತಿಹಾರ್ದಾರ್ದ್ರದೃಶಾಭಿರಂಭಿತಃ ।
ಆಪೃಷ್ಟವಾಂಸ್ತಾಂ ಕುಶಲಂ ಸಹಸ್ನುಷಾಂ
ಪಿತೃಷ್ವಸಾರಂ ಪರಿಪೃಷ್ಟಬಾಂಧವಃ ॥ ೭ ॥

ತಮಾಹ ಪ್ರೇಮವೈಕ್ಲವ್ಯರುದ್ಧಕಂಠಾಶ್ರುಲೋಚನಾ ।
ಸ್ಮರಂತೀ ತಾನ್ಬಹೂನ್ ಕ್ಲೇಶಾನ್ ಕ್ಲೇಶಾಪಾಯಾತ್ಮದರ್ಶನಮ್
॥ ೮ ॥

ತದೈವ ಕುಶಲಂ ನೋಽಭೂತ್ ಸನಾಥಾಸ್ತೇ ಕೃತಾ ವಯಮ್ ।
ಜ್ಞಾತೀನ್ನಃ ಸ್ಮರತಾ ಕೃಷ್ಣ ಭ್ರಾತಾ ಮೇ ಪ್ರೇಷಿತಸ್ತ್ವಯಾ
॥ ೯ ॥

ನ ತೇಽಸ್ತಿಸ್ವಪರಭ್ರಾಂತಿರ್ವಿಶ್ವಸ್ಯ ಸುಹೃದಾತ್ಮನಃ ।
ತಥಾಪಿ ಸ್ಮರತಾಂ ಶಶ್ವತ್ ಕ್ಲೇಶಾನ್ ಹಂಸಿ ಹೃದಿ ಸ್ಥಿತಃ
॥ ೧೦ ॥

ಯುಧಿಷ್ಠಿರ ಉವಾಚ

ಕಿಂ ನ ಆಚರಿತಂ ಶ್ರೇಯೋ
ನ ವೇದಾಹಮಧೀಶ್ವರ ।
ಯೋಗೇಶ್ವರಾಣಾಂ ದುರ್ದರ್ಶೋ
ಯನ್ನೋ ದೃಷ್ಟಃ ಕುಮೇಧಸಾಮ್ ॥ ೧೧ ॥

ಇತಿ ವೈ ವಾರ್ಷಿಕಾನ್ಮಾಸಾನ್ರಾಜ್ಞಾಸೋಽಭ್ಯರ್ಥಿತಃ ಸುಖಮ್ ।
ಜನಯನ್ ನಯನಾನಂದಮಿಂದ್ರಪ್ರಸ್ಥೌಕಸಾಂ ವಿಭುಃ
॥ ೧೨ ॥

ಭಗವಾನ್ ಶ್ರೀಕೃಷ್ಣನು ಶ್ರೇಷ್ಠಸಿಂಹಾಸನದಲ್ಲಿ ವಿರಾಜಮಾನನಾದಾಗ ಆಗ ತಾನೇ ಪಾಂಡವರನ್ನು ವಿವಾಹವಾಗಿದ್ದ ಪರಮ ಸುಂದರಿಯಾದ ಕೃಷ್ಣೆಯು ನಾಚಿಕೆಯಿಂದಾಗಿ ನಿಧಾನವಾಗಿ ನಡೆದುಕೊಂಡಬಂದು ಶ್ರೀಕೃಷ್ಣನಿಗೆ ನಮಸ್ಕರಿಸಿದಳು. ॥ ೫ ॥ ಪಾಂಡವರು ಶ್ರೀಕೃಷ್ಣನಂತೆಯೇ ವೀರ ಸಾತ್ಯಕಿಗೂ ಸ್ವಾಗತ-ಸತ್ಕಾರಗಳನ್ನು ಮಾಡಿ ಅಭಿನಂದಿಸಿ ಒಂದು ಆಸನದಲ್ಲಿ ಕುಳ್ಳಿರಿಸಿದರು. ಶ್ರೀಕೃಷ್ಣನೊಂದಿಗೆ ಬಂದಿರುವ ಇತರ ಯದುವಂಶೀಯರನ್ನೂ ಯಥಾಯೋಗ್ಯವಾಗಿ ಸತ್ಕರಿಸಿದರು. ಅವರೆಲ್ಲರೂ ಕೃಷ್ಣನ ಸುತ್ತಲೂ ಕುಳಿತುಕೊಂಡರು. ॥ ೬ ॥ ಬಳಿಕ ಶ್ರೀಕೃಷ್ಣನು ತನ್ನ ಸೋದರತ್ತೆಯಾದ ಕುಂತೀದೇವಿಯ ಬಳಿಗೆ ಹೋಗಿ ಅವಳ ಚರಣಗಳಲ್ಲಿ ನಮಸ್ಕರಿಸಿದನು. ಕುಂತಿಯೂ ಅತ್ಯಂತ ಸ್ನೇಹದಿಂದ ಕೃಷ್ಣನನ್ನು ಅಪ್ಪಿಕೊಂಡಳು. ಆಕೆಯ ಕಣ್ಣುಗಳಲ್ಲಿ ಆನಂದಾಶ್ರುಗಳು ಸುರಿಯುತ್ತಿರುವಂತೆ ಶ್ರೀಕೃಷ್ಣನಲ್ಲಿ ತನ್ನ ತವರಿನ ಬಂಧುಗಳ ಕ್ಷೇಮಸಮಾಚಾರವನ್ನು ಕೇಳಿದಳು. ಭಗವಂತನು ಯಥೋಚಿತವಾಗಿ ಉತ್ತರಿಸಿ ಕುಂತಿಯಲ್ಲಿ ಆಕೆಯ ಮತ್ತು ಸೊಸೆಯಾದ ದ್ರೌಪದಿಯ ಕುಶಲವನ್ನು ವಿಚಾರಿಸಿದನು. ॥ ೭ ॥ ಆ ಸಮಯದಲ್ಲಿ ಪ್ರೇಮವಿಹ್ವಲಳಾದ ಕುಂತಿಯ ಕಂಠವು ಉಮ್ಮಳಿಸಿ, ಕಣ್ಣುಗಳಿಂದ ಅಶ್ರುಗಳು ಹರಿಯುತ್ತಿದ್ದವು. ಭಗವಂತನು ಆಕೆಯಲ್ಲಿ ವಿಚಾರಿಸಿದಾಗ ಅವಳಿಗೆ ತನ್ನ ಹಿಂದಿನ ಅನಂತಕ್ಲೇಶಗಳು ನೆನಪಾದುವು. ಅವಳು ಸಾವರಿಸಿಕೊಂಡು-ದರ್ಶನಮಾತ್ರದಿಂದಲೇ ಸಮಸ್ತ ಕಷ್ಟಗಳನ್ನು ನಿವಾರಿಸುವ ಶ್ರೀಕೃಷ್ಣ ಪರಮಾತ್ಮನಲ್ಲಿ ಹೇಳತೊಡಗಿದಳು. ॥ ೮ ॥ ಶ್ರೀಕೃಷ್ಣಾ! ನೀನು ನಮ್ಮನ್ನು ತನ್ನವರೆಂದು, ತನ್ನ ಕುಟುಂಬದವರೆಂದು ಭಾವಿಸಿ ನಮ್ಮ ಯೋಗಕ್ಷೇಮವನ್ನು ವಿಚಾರಿಸಲು ನನ್ನ ಸೋದರನಾದ ಅಕ್ರೂರನನ್ನು ಕಳಿಸಿದಾಗಲೇ ನಮ್ಮ ಕಲ್ಯಾಣವಾಗಿ ಹೋಯಿತು. ನಮ್ಮಂತಹ ಅನಾಥರನ್ನು ನೀನು ಸನಾಥರನ್ನಾಗಿಸಿದೆ. ॥ ೯ ॥ ಸಮಸ್ತ ಜಗತ್ತಿನ ಪರಮಸುಹೃದನೂ, ಹಿತೈಷಿಯೂ, ಆತ್ಮ ಸ್ವರೂಪನೂ ಆಗಿರುವೆ ಎಂಬುದನ್ನು ನಾನು ಬಲ್ಲೆನು. ಇವನು ನನ್ನವನು, ಇವನು ಪರನು ಎಂಬ ಭ್ರಾಂತಿಯೂ ನಿನ್ನಲ್ಲಿಲ್ಲ. ಹೀಗಿದ್ದರೂ ಕೃಷ್ಣಾ! ಸದಾಕಾಲ ನಿನ್ನನ್ನು ಸ್ಮರಿಸುವವನ ಹೃದಯದಲ್ಲಿ ಬಂದು ನೀನು ನೆಲೆಸಿರುವೆ ಮತ್ತು ಅವನ ಕ್ಲೇಶ ಪರಂಪರೆಯನ್ನು ಎಂದೆಂದಿಗೂ ಇಲ್ಲವಾಗಿಸುವೆ. ॥ ೧೦ ॥

ಯುಧಿಷ್ಠಿರನು ಹೇಳಿದನು - ಸರ್ವೇಶ್ವರನಾದ ಶ್ರೀಕೃಷ್ಣ! ನಾವು ಪೂರ್ವಜನ್ಮದಲ್ಲಾಗಲೀ, ಈ ಜನ್ಮದಲ್ಲಾಗಲೀ ಯಾವ ಶ್ರೇಯಸ್ಕರ ಸಾಧನೆಯನ್ನು ಮಾಡಿರುವೆವೋ ನಮಗೆ ತಿಳಿಯದು. ನಿನ್ನ ದರ್ಶನವು ಮಹಾ-ಮಹಾ ಯೋಗೇಶ್ವರರಿಗೂ ದುರ್ಲಭವೆನಿಸಿರುವಾಗ ದುರ್ಬುದ್ಧಿಯವರಾದ ನಮಗೆ ಮನೆಯಲ್ಲಿ ಕುಳಿತಿರುವಾಗಲೇ ನಿನ್ನ ದರ್ಶನವಾಗುತ್ತಿದೆ. ॥ ೧೧ ॥ ಯುಧಿಷ್ಠಿರನು ಭಗವಂತನನ್ನು ಹೀಗೆ ಸ್ತುತಿಸುತ್ತಾ ಹಲವಾರು ದಿವಸಗಳಾದರೂ ಇಂದ್ರಪ್ರಸ್ಥದಲ್ಲೇ ಇರುವಂತೆ ಪ್ರಾರ್ಥಿಸಿಕೊಂಡನು. ಶ್ರೀಕೃಷ್ಣನು ಇದಕ್ಕೆ ಸಮ್ಮತಿಸಿ ಇಂದ್ರಪ್ರಸ್ಥದಲ್ಲಿನ ನರ-ನಾರಿಯರ ಕಣ್ಣುಗಳಿಗೆ ಆನಂದೋತ್ಸವವನ್ನು ಕಲ್ಪಿಸುತ್ತಾ ಮಳೆಗಾಲದ ನಾಲ್ಕು ತಿಂಗಳುಗಳನ್ನು ಅಲ್ಲಿಯೇ ಕಳೆದನು. ॥ ೧೨ ॥

ಏಕದಾ ರಥಮಾರುಹ್ಯ ವಿಜಯೋ ವಾನರಧ್ವಜಮ್ ।
ಗಾಂಡೀವಂ ಧನುರಾದಾಯ ತೂಣೌ ಚಾಕ್ಷಯಸಾಯಕೌ
॥ ೧೩ ॥

ಸಾಕಂ ಕೃಷ್ಣೇನ ಸನ್ನದ್ಧೋ ವಿಹರ್ತುಂ ವಿಪಿನಂ ಮಹತ್ ।
ಬಹುವ್ಯಾಲಮೃಗಾಕೀರ್ಣಂ ಪ್ರಾವಿಶತ್ ಪರವೀರಹಾ
॥ ೧೪ ॥

ತತ್ರಾವಿಧ್ಯಚ್ಛರೈರ್ವ್ಯಾಘ್ರಾನ್ಸೂಕರಾನ್ ಮಹಿಷಾನ್ರುರೂನ್ ।
ಶರಭಾನ್ಗವಯಾನ್ಖಡ್ಗಾನ್ ಹರಿಣಾಂಶ್ಚಶಲ್ಯಕಾನ್
॥ ೧೫ ॥

ತಾನ್ನಿಘ್ನಃ ಕಿಂಕರಾ ರಾಜ್ಞೋ ಮೇಧ್ಯಾನ್ಪರ್ಣ್ಯುಪಾಗತೇ ।
ತೃಟ್ಪರೀತಃ ಪರಿಶ್ರಾಂತೋ ಬೀಭತ್ಸುರ್ಯಮುನಾಮಗಾತ್
॥ ೧೬ ॥

ತತ್ರೋಪಸ್ಪೃಶ್ಯ ವಿಶದಂ ಪೀತ್ವಾ ವಾರಿ ಮಹಾರಥೌ ।
ಕೃಷ್ಣೌ ದದೃಶತುಃ ಕನ್ಯಾಂ ಚರಂತೀಂ ಚಾರುದರ್ಶನಾಮ್
॥ ೧೭ ॥

ತಾಮಾಸಾದ್ಯ ವರಾರೋಹಾಂ ಸುದ್ವಿಜಾಂ ರುಚಿರಾನನಾಮ್ ।
ಪಪ್ರಚ್ಛಪ್ರೇಷಿತಃ ಸಖ್ಯಾ ಫಾಲ್ಗುನಃ ಪ್ರಮದೋತ್ತಮಾಮ್
॥ ೧೮ ॥

ಕಾ ತ್ವಂ ಕಸ್ಯಾಸಿ ಸುಶ್ರೋಣಿ ಕುತೋಽಸಿ ಕಿಂ ಚಿಕೀರ್ಷಸಿ ।
ಮನ್ಯೇ ತ್ವಾಂ ಪತಿಮಿಚ್ಛಂತೀಂ ಸರ್ವಂ ಕಥಯ ಶೋಭನೇ
॥ ೧೯ ॥

ಕಾಲಿಂದ್ಯುವಾಚ

ಅಹಂ ದೇವಸ್ಯ ಸವಿತುರ್ದುಹಿತಾ ಪತಿಮಿಚ್ಛತೀ ।
ವಿಷ್ಣುಂ ವರೇಣ್ಯಂ ವರದಂ ತಪಃ ಪರಮಮಾಸ್ಥಿತಾ
॥ ೨೦ ॥

ನಾನ್ಯಂ ಪತಿಂ ವೃಣೇ ವೀರ ತಮೃತೇ ಶ್ರೀನಿಕೇತನಮ್ ।
ತುಷ್ಯತಾಂ ಮೇ ಸ ಭಗವಾನ್ ಮುಕುಂದೋಽನಾಥಸಂಶ್ರಯಃ
॥ ೨೧ ॥

ಕಾಲಿಂದೀತೀ ಸಮಾಖ್ಯಾತಾ ವಸಾಮಿ ಯಮುನಾಜಲೇ ।
ನಿರ್ಮಿತೇ ಭವನೇ ಪಿತ್ರಾ ಯಾವದಚ್ಯುತದರ್ಶನಮ್
॥ ೨೨ ॥

ತಥಾವದದ್ಧೃಷೀಕೇಶೋ ವಾಸುದೇವಾಯ ಸೋಽಪಿ ತಾಮ್ ।
ರಥಮಾರೋಪ್ಯ ತದ್ವಿದ್ವಾನ್ ಧರ್ಮರಾಜಮುಪಾಗಮತ್
॥ ೨೩ ॥

ಯದೈವ ಕೃಷ್ಣ ಸಂದಿಷ್ಟ ಪಾರ್ಥಾನಾಂ ಪರಮಾದ್ಭುತಮ್ ।
ಕಾರಯಾಮಾಸ ನಗರಂ ವಿಚಿತ್ರಂ ವಿಶ್ವಕರ್ಮಣಾ
॥ ೨೪ ॥

ಒಮ್ಮೆ ವೀರನಾದ ಅರ್ಜುನನು ಗಾಂಡೀವಧನುಸ್ಸನ್ನೂ ಅಕ್ಷಯ ಬತ್ತಳಿಕೆಗಳನ್ನು ತೆಗೆದುಕೊಂಡು ಕವಚವನ್ನು ತೊಟ್ಟು ಶ್ರೀಕೃಷ್ಣನೊಡನೆ ವಾನರಧ್ವಜವುಳ್ಳ ರಥದಲ್ಲಿ ಕುಳಿತು ಬೇಟೆಯಾಡುವ ಸಲುವಾಗಿ ಸರ್ಪಗಳಿಂದಲೂ, ಸಿಂಹಗಳಿಂದಲೂ, ವ್ಯಾಘ್ರಗಳಿಂದಲೂ, ಕೂಡಿದ ಅತ್ಯಂತ ಭಯಂಕರವಾದ ಅರಣ್ಯವನ್ನು ಪ್ರವೇಶಿಸಿದನು.॥೧೩-೧೪॥ ಆ ಮಹಾರಣ್ಯದಲ್ಲವನು ತನ್ನ ತೀಕ್ಷ್ಣವಾದ ಬಾಣಗಳಿಂದ ಋಷಿಗಳಿಗೆ ತೊಂದರೆ ಕೊಡುತ್ತಿದ್ದ ದುಷ್ಟ ಕಾಡುಮೃಗಗಳನ್ನು ಸಂಹರಿಸಿದನು. ॥ ೧೫ ॥ ಪರ್ವಕಾಲವು ಸನ್ನಿಹಿತವಾಗಿರಲಾಗಿ ಯಜ್ಞಕ್ಕೆ ಯೋಗ್ಯವಾದ ಹಲವಾರು ಸಾಮಗ್ರಿಗಳನ್ನು ಸೇವಕರು ಮಹಾರಾಜ ಯುಧಿಷ್ಠಿರನಿಗಾಗಿ ಒಯ್ದರು. ಅರ್ಜುನ-ಶ್ರೀಕೃಷ್ಣನಿಗೆ ಬಾಯಾರಿಕೆ ಉಂಟಾದ್ದರಿಂದ ಅವರಿಬ್ಬರೂ ಯಮುನಾತೀರಕ್ಕೆ ಹೋದರು. ॥ ೧೬ ॥ ಮಹಾರಥರಾದ ಕೃಷ್ಣಾರ್ಜುನರು ಯಮುನಾನದಿಗೆ ಹೋಗಿ ಕೈ-ಕಾಲುಗಳನ್ನು ತೊಳೆದುಕೊಂಡು ನಿರ್ಮಲವಾದ ನೀರನ್ನು ಕುಡಿದು, ಅಲ್ಲಿಯೇ ತಪಸ್ಸು ಮಾಡುತ್ತಿದ್ದ ಪರಮಸುಂದರಳಾದ ಕನ್ಯೆಯೊರ್ವಳನ್ನು ನೋಡಿದರು. ॥ ೧೭ ॥ ಆ ಸುಂದರಿಯ ತೊಡೆ, ಹಲ್ಲು ಮತ್ತು ಮುಖಗಳು ಅತ್ಯಂತ ಸುಂದರವಾಗಿತ್ತು. ಪ್ರಿಯಮಿತ್ರನಾದ ಶ್ರೀಕೃಷ್ಣನಿಂದ ಕಳುಹಲ್ಪಟ್ಟ ಅರ್ಜುನನು ಆಕೆಯ ಬಳಿಗೆ ಹೋಗಿ ವಿಚಾರಿಸಿದನು. ॥ ೧೮ ॥ ಎಲೈ ಸುಂದರಿಯೇ! ನೀನು ಯಾರಾಗಿರುವೆ? ಯಾರ ಪುತ್ರಿಯಾಗಿರುವೆ? ಎಲ್ಲಿಂದ ಬಂದಿರುವೆ? ಏನು ಮಾಡಬೇಕೆಂದಿರುವೆ? ನೀನು ನಿನಗೆ ಯೋಗ್ಯನಾದ ಪತಿಯನ್ನು ಬಯಸುತ್ತಿರುವೆ ಎಂದು ನಾನು ತಿಳಿಯುತ್ತೇನೆ. ಓ ಕಲ್ಯಾಣಿಯೇ! ನೀನು ನಿನ್ನ ಎಲ್ಲ ವೃತ್ತಾಂತವನ್ನು ತಿಳಿಸು. ॥ ೧೯ ॥

ಕಾಲಿಂದಿಯು ಹೇಳಿದಳು – ನಾನು ಭಗವಾನ್ ಸೂರ್ಯನಾರಾಯಣನ ಪುತ್ರಿಯಾಗಿದ್ದೇನೆ. ಸರ್ವಶ್ರೇಷ್ಠ ವರದಾಯಕನಾದ ಭಗವಾನ್ ವಿಷ್ಣುವನ್ನು ಪತಿಯನ್ನಾಗಿ ಪಡೆಯಲು ಬಯಸುತ್ತಿರುವೆನು. ಅದಕ್ಕಾಗಿ ಇಂತಹ ಕಠೋರ ತಪಸ್ಸನ್ನು ಮಾಡುತ್ತಿದ್ದೇನೆ. ॥ ೨೦ ॥ ವೀರವರನಾದ ಅರ್ಜುನ! ಲಕ್ಷ್ಮೀದೇವಿಗೆ ಪರಮಾಶ್ರಯನಾದ ಭಗವಂತನನ್ನು ಬಿಟ್ಟು ಬೇರೆ ಯಾರನ್ನೂ ಪತಿಯಾಗಿ ನಾನು ಸ್ವೀಕರಿಸುವುದಿಲ್ಲ. ಅನಾಥರಿಗೆ ಏಕಮಾತ್ರ ಆಸರೆಯಾದ ಭಗವಾನ್ ಶ್ರೀಕೃಷ್ಣನು ನನ್ನ ಮೇಲೆ ಪ್ರಸನ್ನನಾಗಲಿ. ॥ ೨೧ ॥ ನನ್ನ ಹೆಸರು ಕಾಳಿಂದೀ ಎಂದಾಗಿದೆ. ಯಮುನಾಜಲದಲ್ಲಿ ನನ್ನ ತಂದೆಯಾದ ಸೂರ್ಯನು ನನಗಾಗಿ ಒಂದು ಭವನವನ್ನು ನಿರ್ಮಿಸಿಕೊಟ್ಟಿರುವನು. ಅದರಲ್ಲೇ ನಾನಿರುವುದು. ಭಗವಂತನ ದರ್ಶನವಾಗುವವರೆಗೆ ನಾನು ಇಲ್ಲೇ ಇರುವೆನು. ॥ ೨೨ ॥ ಅರ್ಜುನನು ಶ್ರೀಕೃಷ್ಣನ ಬಳಿಗೆ ಹೋಗಿ ಎಲ್ಲ ವಿಷಯಗಳನ್ನು ಹೇಳಿದನು. ಶ್ರೀಕೃಷ್ಣನಾದರೋ ಈ ವಿಷಯಗಳೆಲ್ಲವನ್ನೂ ಮೊದಲೇ ತಿಳಿದಿದ್ದನು. ಕೃಷ್ಣಾರ್ಜುನರಿಬ್ಬರೂ ಕಾಳಿಂದಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಧರ್ಮರಾಜನ ಬಳಿಗೆ ಹೋದರು. ॥೨೩॥ ಪಾಂಡವರ ಪ್ರಾರ್ಥನೆಯಂತೆ ಶ್ರೀಕೃಷ್ಣನು ಪಾಂಡವರ ವಾಸಕ್ಕಾಗಿ ಪರಮಾದ್ಭುತವಾದ ಮತ್ತು ವಿಚಿತ್ರವಾದ ನಗರವೊಂದನ್ನು ವಿಶ್ವಕರ್ಮನಿಂದ ನಿರ್ಮಾಣ ಮಾಡಿಸಿಕೊಟ್ಟನು. ॥ ೨೪ ॥

ಭಗವಾಂಸ್ತತ್ರ ನಿವಸನ್ ಸ್ವಾನಾಂ ಪ್ರಿಯಚಿಕೀರ್ಷಯಾ ।
ಅಗ್ನಯೇ ಖಾಂಡವಂ ದಾತುಮರ್ಜುನಸ್ಯಾಸ ಸಾರಥಿಃ
॥ ೨೫ ॥

ಪಾಂಡವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂಬ ಆಶಯದಿಂದಲೇ ಶ್ರೀಕೃಷ್ಣನು ಕೆಲವುಕಾಲ ಅಲ್ಲೇ ವಾಸವಾಗಿದ್ದನು. ಈ ಮಧ್ಯದಲ್ಲೇ ಖಾಂಡವವನವನ್ನು ಅಗ್ನಿಗೆ ಅರ್ಪಿಸುವ ಸಲುವಾಗಿ ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯೂ ಆದನು. ॥ ೨೫ ॥

ಸೋಽಗ್ನಿಸ್ತುಷ್ಟೋ ಧನುರದಾದ್ಧಯಾನ್ ಶ್ವೇತಾನ್ರಥಂ ನೃಪ ।
ಅರ್ಜುನಾಯಾಕ್ಷಯೌ ತೂಣೌ ವರ್ಮ ಚಾಭೇದ್ಯಮಸ್ತ್ರಿಭಿಃ
॥ ೨೬ ॥

ಖಾಂಡವವನದ ಭೋಜನದಿಂದ ಸಂತೃಪ್ತನಾದ ಅಗ್ನಿದೇವನು ಅರ್ಜುನನಿಗೆ ಗಾಂಡೀವವೆಂಬ ಧನಸ್ಸನ್ನೂ, ನಾಲ್ಕು ಬಿಳಿಯ ಕುದುರೆಗಳನ್ನು, ಒಂದು ರಥವನ್ನು, ಎರಡು ಅಕ್ಷಯವಾದ ಬತ್ತಳಿಕೆಗಳನ್ನು, ಶತ್ರುಗಳಿಂದ ಅಭೇದ್ಯವಾದ ಕವಚವನ್ನು ಅನುಗ್ರಹಿಸಿ ಕೊಟ್ಟನು. ॥ ೨೬ ॥

ಮಯಶ್ಚ ಮೋಚಿತೋ ವಹ್ನೇಃ ಸಭಾಂ ಸಖ್ಯ ಉಪಾಹರತ್ ।
ಯಸ್ಮಿನ್ ದುರ್ಯೋಧನಸ್ಯಾಸೀಜ್ಜಲಸ್ಥಲದೃಶಿಭ್ರಮಃ
॥ ೨೭ ॥

ಅದ್ದರಿಂದ ಅವನು ಅರ್ಜುನನೊಂದಿಗೆ ಮೈತ್ರಿಯನ್ನು ಬೆಳೆಸಿ ಪಾಂಡವರ ಸಲುವಾಗಿ ಒಂದು ಅದ್ಭುತವಾದ ಸಭಾಭವನವನ್ನು ನಿರ್ಮಿಸಿಕೊಟ್ಟನು. ಆದೇ ಸಭಾಭವನದಲ್ಲಿ ದುರ್ಯೋಧನನು ನೆಲ-ಜಲದ ಭ್ರಮೆಯಿಂದಾಗಿ ಅವಮಾನಿತ ನಾಗಿದ್ದನು. ॥ ೨೭ ॥

ಸ ತೇನ ಸಮನುಜ್ಞಾತಃ ಸುಹೃದ್ಭಿಶ್ಚಾನುಮೋದಿತಃ ।
ಆಯಯೌ ದ್ವಾರಕಾಂ ಭೂಯಃ ಸಾತ್ಯಕಿಪ್ರಮುಖೈರ್ವೃತಃ
॥ ೨೮ ॥

ಕೆಲವು ದಿವಸಗಳ ಬಳಿಕ ಭಗವಾನ್ ಶ್ರೀಕೃಷ್ಣನು ಅರ್ಜುನನಿಂದ ಹಾಗೂ ಇತರ ಸಂಬಂಧಿಕರಿಂದ ಅನುಮತಿಯನ್ನು ಪಡೆದುಕೊಂಡು, ಸಾತ್ಯಕಿಯೇ ಮೊದಲಾದವರೊಂದಿಗೆ ದ್ವಾರಕೆಗೆ ಹಿಂದಿರಿಗಿದನು. ॥ ೨೮ ॥

ಅಥೋಪಯೇಮೇ ಕಾಲಿಂದೀಂ ಸುಪುಣ್ಯರ್ತ್ವರ್ಕ ಊರ್ಜಿತೇ ।
ವಿತನ್ವನ್ ಪರಮಾನಂದಂ ಸ್ವಾನಾಂ ಪರಮಮಂಗಲಮ್
॥ ೨೯ ॥

ಅಲ್ಲಿಗೆ ಬಂದು ಶ್ರೀಕೃಷ್ಣನು ಪ್ರಶಸ್ತವಾದ ಋತು-ನಕ್ಷತ್ರ-ಮುಹೂರ್ತದಲ್ಲಿ ಸ್ವಜನರಿಗೆ ಆನಂದವನ್ನೂ ಶುಭವನ್ನೂ ಮಂಗಳವನ್ನೂ ಉಂಟುಮಾಡುತ್ತಾ ಕಾಳಿಂದಿಯನ್ನು ವಿಧಿಪೂರ್ವಕವಾಗಿ ವಿವಾಹವಾದನು. ॥ ೨೯ ॥

ವಿಂದಾನುವಿಂದಾವಾವಂತ್ಯೌ ದುರ್ಯೋಧನವಶಾನುಗೌ ।
ಸ್ವಯಂವರೇ ಸ್ವಭಗಿನೀಂ ಕೃಷ್ಣೇ ಸಕ್ತಾಂ ನ್ಯಷೇಧತಾಮ್
॥ ೩೦ ॥

ಅವಂತಿ ದೇಶಕ್ಕೆ (ಉಜ್ಜೈನಿ) ರಾಜನಾಗಿದ್ದ ವಿಂದಾನುವಿಂದರು ದುರ್ಯೋಧನನಿಗೆ ಸಾಮಂತರಾಗಿದ್ದರು. ಅವರಿಗೆ ಮಿತ್ರವಿಂದಾ ಎಂಬ ತಂಗಿಯಿದ್ದಳು. ಆಕೆಯು ಸ್ವಯಂವರದಲ್ಲಿ ಶ್ರೀಕೃಷ್ಣನನ್ನೇ ತನ್ನ ಪತಿಯಾಗಿಸಿಕೊಳ್ಳಲು ಬಯಸಿದ್ದಳು. ಆದರೆ ವಿಂದ-ಅನುವಿಂದರು ತಂಗಿಯನ್ನು ತಡೆದರು. ॥ ೩೦ ॥

ರಾಜಾಧಿದೇವ್ಯಾಸ್ತನಯಾಂ ಮಿತ್ರವಿಂದಾಂ ಪಿತೃಷ್ವಸುಃ ।
ಪ್ರಸಹ್ಯ ಹೃತವಾನ್ ಕೃಷ್ಣೋ ರಾಜನ್ ರಾಜ್ಞಾಂ ಪ್ರಪಶ್ಯತಾಮ್
॥ ೩೧ ॥

ಪರೀಕ್ಷಿತನೇ! ಮಿತ್ರವಿಂದೆಯು ಶ್ರೀಕೃಷ್ಣನ ಸೋದರತ್ತೆಯಾದ ರಾಜಾಧಿದೇವಿಯ ಮಗಳಾಗಿದ್ದಳು. ಶ್ರೀಕೃಷ್ಣನು ರಾಜರಿಂದ ತುಂಬಿದ ಸಭೆಯಲ್ಲಿ ಸಮಸ್ತರಾಜರು ನೋಡುತ್ತಿರುವಂತೆ ಆಕೆಯನ್ನು ಬಲವಂತವಾಗಿ ಅಪಹರಿಸಿಕೊಂಡು ಹೋದನು. ॥ ೩೧ ॥

ನಗ್ನಜಿನ್ನಾಮ ಕೌಸಲ್ಯ ಆಸೀದ್ರಾಜಾತಿಧಾರ್ಮಿಕಃ ।
ತಸ್ಯ ಸತ್ಯಾಭವತ್ ಕನ್ಯಾ ದೇವೀ ನಾಗ್ನಜಿತೀ ನೃಪ
॥ ೩೨ ॥

ಪರೀಕ್ಷಿತನೇ! ಕೋಸಲದೇಶದಲ್ಲಿ ನಗ್ನಜಿತನೆಂಬ ಧಾರ್ಮಿಕನಾದ ರಾಜನಿದ್ದನು. ಅವನಿಗೆ ಕಡುಚೆಲುವೆಯಾದ ಸತ್ಯಾ ಎಂಬ ಹೆಸರಿನ ಕನ್ಯೆಯಿದ್ದಳು. ನಗ್ನಜಿತನ ಮಗಳಾದ್ದರಿಂದ ಅವಳಿಗೆ ನಾಗ್ನಜಿತಿ ಎಂಬ ಇನ್ನೊಂದು ಹೆಸರಿತ್ತು. ಪರೀಕ್ಷಿತನೇ! ರಾಜನ ವೀರ್ಯಶುಲ್ಕ ಪ್ರತಿಜ್ಞೆಗೆ ಅನುಸಾರವಾಗಿ ಅವನಲ್ಲಿದ್ದ ಬಲಿಷ್ಠವಾದ ಏಳುಗೂಳಿಗಳನ್ನು ಯಾವ ರಾಜಕುಮಾರನೂ ಜಯಿಸಲಿಲ್ಲವಾದ ಕಾರಣ ರಾಜಕುಮಾರರು ಆಕೆಯೊಂದಿಗೆ ಮದುವೆಯಾಗದೇ ಹೋದರು. ಏಕೆಂದರೆ, ಆ ಗೂಳಿಗಳ ಕೊಂಬುಗಳು ಅತ್ಯಂತ ಚೂಪಾಗಿದ್ದುವು. ಯಾರಿಂದಲೂ ಎದುರಿಸಲು ಅವು ಅಸಾಧ್ಯವಾಗಿದ್ದವು. ವೀರಪುರುಷರ ವಾಸನೆಯನ್ನು ಅವು ಸಹಿಸುತ್ತಿರಲಿಲ್ಲ. ॥ ೩೨-೩೩ ॥

ನ ತಾಂ ಶೇಕುರ್ನೃಪಾ ವೋಢು-
ಮಜಿತ್ವಾ ಸಪ್ತ ಗೋವೃಷಾನ್ ।
ತೀಕ್ಷ್ಣಶೃಂಗಾನ್ ಸುದುರ್ಧರ್ಷಾನ್
ವೀರಗಂಧಾಸಹಾನ್ಬಲಾನ್
॥ ೩೩ ॥

ತಾಂ ಶ್ರುತ್ವಾ ವೃಷಜಿಲ್ಲಭ್ಯಾಂ ಭಗವಾನ್ ಸಾತ್ವತಾಂ ಪತಿಃ ।
ಜಗಾಮ ಕೌಸಲ್ಯಪುರಂ ಸೈನ್ಯೇನ ಮಹತಾ ವೃತಃ
॥ ೫೪ ॥

ಸ ಕೋಸಲಪತಿಃ ಪ್ರೀತಃ ಪ್ರತ್ಯುತ್ಥಾನಾಸನಾದಿಭಿಃ ।
ಅರ್ಹಣೇನಾಪಿ ಗುರುಣಾ ಪೂಜಯನ್ ಪ್ರತಿನಂದಿತಃ
॥ ೫೫ ॥

ವರಂ ವಿಲೋಕ್ಯಾಭಿಮತಂ ಸಮಾಗತಂ
ನರೇಂದ್ರಕನ್ಯಾ ಚಕಮೇ ರಮಾಪತಿಮ್ ।
ಭೂಯಾದಯಂ ಮೇ ಪತಿರಾಶಿಷೋಽಮಲಾಃ
ಕರೋತು ಸತ್ಯಾ ಯದಿ ಮೇ ಧೃತೋ ವ್ರತೈಃ ॥ ೫೬ ॥

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ
ಶ್ರೀರಬ್ಜಜಃ ಸಗಿರಿಶಃ ಸಹಲೋಕಪಾಲೈಃ ।
ಲೀಲಾತನೂಃ ಸ್ವಕೃತಸೇತುಪರೀಪ್ಸಯೇಶಃ
ಕಾಲೇ ದಧತ್ ಸ ಭಗವಾನ್ ಮಮ ಕೇನ ತುಷ್ಯೇತ್ ॥ ೫೭ ॥

ಅರ್ಚಿತಂ ಪುನರಿತ್ಯಾಹ ನಾರಾಯಣ ಜಗತ್ಪತೇ ।
ಆತ್ಮಾನಂದೇನ ಪೂರ್ಣಸ್ಯ ಕರವಾಣಿ ಕಿಮಲ್ಪಕಃ
॥ ೫೮ ॥

ಶ್ರೀಶುಕ ಉವಾಚ

ತಮಾಹ ಭಗವಾನ್ ಹೃಷ್ಟಃ ಕೃತಾಸನಪರಿಗ್ರಹಃ ।
ಮೇಘಗಂಭೀರಯಾ ವಾಚಾ ಸಸ್ಮಿತಂ ಕುರುನಂದನ
॥ ೫೯ ॥

ಶ್ರೀಭಗವಾನುವಾಚ

ನರೇಂದ್ರಯಾಂಚಾ ಕವಿಭಿರ್ವಿಗರ್ಹಿತಾ
ರಾಜನ್ಯಬಂಧೋರ್ನಿಜಧರ್ಮವರ್ತಿನಃ ।
ತಥಾಪಿ ಯಾಚೇ ತವ ಸೌಹೃದೇಚ್ಛಯಾ
ಕನ್ಯಾಂ ತ್ವದೀಯಾಂ ನ ಹಿ ಶುಲ್ಕದಾ ವಯಮ್ ॥ ೬೦ ॥

ರಾಜೋವಾಚ

ಕೋಽನ್ಯಸ್ತೇಽಭ್ಯಧಿಕೋ ನಾಥ ಕನ್ಯಾವರ ಇಹೇಪ್ಸಿತಃ ।
ಗುಣೈಕಧಾಮ್ನೋ ಯಸ್ಯಾಂಗೇ ಶ್ರೀರ್ವಸತ್ಯನಪಾಯಿನೀ
॥ ೬೧ ॥

'ಅಂತಹ ಕೊಬ್ಬಿದ ಗೂಳಿಗಳನ್ನು ಗೆದ್ದವನಿಗೇ ರಾಜಕನ್ಯೆ ದೊರೆಯುವಳು' ಎಂಬುದನ್ನು ಕೇಳಿ ಯದುವಂಶಶಿರೋಮಣಿಯಾದ ಶ್ರೀಕೃಷ್ಣನು ಅಪಾರವಾದ ಸೈನ್ಯದೊಡನೆ ಕೋಸಲಪುರಕ್ಕೆ ಪ್ರಯಾಣಮಾಡಿದನು. ॥ ೫೪ ॥ ಕೋಸಲರಾಜನಾದ ನಗ್ನಜಿತನು ಶ್ರೀಕೃಷ್ಣನನ್ನು ನೋಡಿ ಸುಪ್ರೀತನಾಗಿ ಅವನನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದನು. ಭಗವಾನ್ ಶ್ರೀಕೃಷ್ಣನೂ ಕೂಡ ರಾಜನನ್ನು ಯಥಾಯೋಗ್ಯವಾಗಿ ಅಭಿನಂದಿಸಿದನು. ॥ ೫೫ ॥ ಬಹಳ ದಿವಸಗಳಿಂದಲೂ ತಾನು ಬಯಸುತ್ತಿದ್ದ ರಮಾರಮಣನಾದ ಶ್ರೀಕೃಷ್ಣನೇ ಆಗಮಿಸಿರುವುದನ್ನು ನೋಡಿ ಆನಂದತುಂದಿಲಳಾದ ಸತ್ಯೆಯು ಅವನನ್ನೇ ತನ್ನ ಪತಿಯಾಗಬೇಕೆಂದು ಅಪೇಕ್ಷಿಸಿದಳು. 'ನಾನು ವ್ರತನಿಯಮಾದಿಗಳನ್ನು ಆಚರಿಸುತ್ತಾ ಇವನನ್ನೇ ಸದಾಕಾಲ ಚಿಂತಿಸುತ್ತಿದ್ದುದು ಸತ್ಯವಾದರೆ ಇವನೇ ನನಗೆ ಪತಿಯಾಗಲಿ ಮತ್ತು ನನ್ನ ಶುದ್ಧವಾದ ಲಾಲಸೆಗಳು ಪೂರ್ಣಗೊಳ್ಳಲಿ' ಎಂದು ಹರಿಸಿಕೊಂಡಳು. ॥ ೫೬ ॥ ನಾಗ್ನಜಿತೀ ಸತ್ಯೆಯು ಮನಸ್ಸಿನಲ್ಲೇ ಯೋಚಿಸತೊಡಗಿದಳು – ಯಾರ ಪಾದಧೂಳಿಯನ್ನು ಲಕ್ಷ್ಮೀದೇವಿ, ಬ್ರಹ್ಮ-ರುದ್ರರು, ಸಮಸ್ತ ಲೋಕಪಾಲರು ಮತ್ತು ದೇವಾಧಿದೇವತೆಗಳು ತಮ್ಮ ತಲೆಯಲ್ಲಿ ಭಕ್ತಿಯಿಂದ ಧರಿಸುವರೋ, ಯಾವನು ತಾನೇ ಕಲ್ಪಿಸಿದ ಲೋಕಮರ್ಯಾದೆಯನ್ನು ಸಂಪನ್ನಗೊಳಿಸುವ ಸಲುವಾಗಿ ಆಗಾಗ ಅನೇಕ ಲೀಲಾವತಾರಗಳನ್ನು ತಾಳುವನೋ, ಅಂತಹ ಪ್ರಭುವು ನನ್ನ ಯಾವ ವ್ರತ ನಿಯಮಗಳಿಂದ ತಾನೇ ಪ್ರಸನ್ನನಾದಾನು ? ಕೇವಲ ಅವನ ಕೃಪೆಯಿಂದಲೇ ನನ್ನನ್ನು ವರಿಸಬೇಕಾಗಿದೆ. ॥ ೫೭ ॥ ಪರೀಕ್ಷಿತನೇ ! ನಗ್ನಜಿತರಾಜನು ಭಗವಾನ್ ಶ್ರೀಕೃಷ್ಣನನ್ನು ವಿಧಿಪೂರ್ವಕವಾಗಿ ಪೂಜಿಸಿ ಹೀಗೆ ಪ್ರಾರ್ಥಿಸಿದನು – 'ನಾರಾಯಣ ! ಜಗತ್ಪತಿಯೇ ! ನೀನು ಆತ್ಮಾನಂದದಿಂದ ಪರಿಪೂರ್ಣನಾಗಿರುವೆ. ನಾನಾದರೋ ಅಲ್ಪ ಮನುಷ್ಯನು. ನಾನು ನಿನ್ನ ಯಾವ ಸೇವೆ ಮಾಡಲಿ ?' ॥ ೫೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ನಗ್ನಜಿತ ಮಹಾರಾಜನು ಇತ್ತ ಆಸನ, ಪೂಜಾದಿಗಳನ್ನು ಸ್ವೀಕರಿಸಿ ಭಗವಾನ್ ಶ್ರೀಕೃಷ್ಣನು ಅತ್ಯಂತ ಸಂತುಷ್ಟನಾದನು. ಅವನು ಮುಗುಳ್ನಗುತ್ತಾ ಮೇಘಗಂಭೀರವಾಣಿಯಿಂದ ಇಂತೆಂದನು.॥೫೯॥

ಭಗವಾನ್ ಶ್ರೀಕೃಷ್ಣನು ಹೇಳಿದನು – ರಾಜನೇ ! ತನ್ನ ಧರ್ಮದಲ್ಲಿ ನೆಲೆಯಾಗಿ ನಿಂತ ಕ್ಷತ್ರಿಯನು ಏನನ್ನೂ ಬೇಡುವುದು ಉಚಿತವಲ್ಲ. ಧರ್ಮಜ್ಞರಾದ ವಿದ್ವಾಂಸರು ಅವನ ಈ ಕರ್ಮವನ್ನು ನಿಂದಿಸಿರುವರು. ಹೀಗಿದ್ದರೂ ನಾನು ನಿನ್ನಲ್ಲಿ ಪ್ರೇಮ ಸೌಹಾರ್ದದ ಸಂಬಂಧವನ್ನು ಬೆಳೆಸುವ ಇಚ್ಛೆಯಿಂದ ನಿನ್ನ ಕನ್ಯೆಯನ್ನು ಬಯಸುತ್ತಿದ್ದೇನೆ. ಆದರೆ ನಾವು ಕನ್ಯಾಶುಲ್ಕವನ್ನು ಕೊಡತಕ್ಕವರಲ್ಲ. ॥ ೬೦ ॥

ನಗ್ನಜಿತರಾಜನು ಹೇಳಿದನು – "ಪ್ರಭುವೇ! ನೀನು ಸಮಸ್ತ ಗುಣಗಳಿಗೆ ಪರಮಾಶ್ರಯನಾಗಿರುವೆ. ಸಾಕ್ಷಾತ್ ಮಹಾಲಕ್ಷ್ಮಿಯೇ ನಿನ್ನ ವಕ್ಷಸ್ಥಳದಲ್ಲಿ ವಾಸಮಾಡುತ್ತಾಳೆ. ನನ್ನ ಮಗಳಿಗೆ ನಿನಗಿಂತಲೂ ಶ್ರೇಷ್ಠನಾದ ವರನು ಬೇರೆ ಯಾರು ತಾನೇ ಇರಬಲ್ಲನು ? ॥ ೬೧ ॥

ಕಿಂ ತ್ವಸ್ಮಾಭಿಃ ಕೃತಃ ಪೂರ್ವಂ ಸಮಯಃ ಸಾತ್ವತರ್ಷಭ ।
ಪುಂಸಾಂ ವೀರ್ಯಪರೀಕ್ಷಾರ್ಥಂ ಕನ್ಯಾವರಪರೀಪ್ಸಯಾ
॥ ೪೨ ॥

ಸಪ್ತೈತೇ ಗೋವೃಷಾ ವೀರ ದುರ್ದಾಂತಾ ದುರವಗ್ರಹಾಃ ।
ಏತೈರ್ಭಗ್ನಾಃ ಸುಬಹವೋ ಭಿನ್ನಗಾತ್ರಾ ನೃಪಾತ್ಮಜಾಃ
॥ ೪೩ ॥

ಯದಿಮೇ ನಿಗೃಹೀತಾಃ ಸ್ಯುಸ್ತ್ವಯೈವ ಯದುನಂದನ ।
ವರೋ ಭವಾನಭಿಮತೋ ದುಹಿತುರ್ಮೇ ಶ್ರಿಯಃ ಪತೇ
॥ ೪೪ ॥

ಏವಂ ಸಮಯಮಾಕರ್ಣ್ಯ ಬದ್ಧ್ವಾ ಪರಿಕರಂ ಪ್ರಭುಃ ।
ಆತ್ಮಾನಂ ಸಪ್ತಧಾ ಕೃತ್ವಾ ನ್ಯಗೃಹ್ಣಾಲ್ಲೀಲಯೈವ ತಾನ್
॥ ೪೫ ॥

ಬದ್ಧ್ವಾತಾನ್ ದಾಮಭಿಃ ಶೌರಿ-
ರ್ಭಗ್ನದರ್ಪಾನ್ ಹತೌಜಸಃ ।
ವ್ಯಕರ್ಷಲ್ಲೀಲಯಾ ಬದ್ಧಾನ್-
ಬಲೋ ಧಾರುಮಯಾನ್ ಯಥಾ ॥ ೪೬ ॥

ತತಃ ಪ್ರೀತಃ ಸುತಾಂ ರಾಜಾ ದದೌ ಕೃಷ್ಣಾಯ ವಿಸ್ಮಿತಃ ।
ತಾಂ ಪ್ರತ್ಯಗೃಹ್ಣಾದ್ಭಗವಾನ್ ವಿಧಿವತ್ಸದೃಶೀಂ ಪ್ರಭುಃ
॥ ೪೭ ॥

ರಾಜಪತ್ನ್ಯಶ್ಚ ದುಹಿತುಃ ಕೃಷ್ಣಂ ಲಬ್ಧ್ವಾ ಪ್ರಿಯಂ ಪತಿಮ್ ।
ಲೇಭಿರೇ ಪರಮಾನಂದಂ ಜಾತಶ್ಚ ಪರಮೋತ್ಸವಃ
॥ ೪೮ ॥

ಶಂಖಭೇರ್ಯಾನಕಾ ನೇದುರ್ಗೀತವಾದ್ಯದ್ವಿಜಾಶಿಷಃ ।
ನರಾ ನಾರ್ಯಃ ಪ್ರಮುದಿತಾಃ ಸುವಾಸಃ ಸ್ರಗಲಂಕೃತಾಃ
॥ ೪೯ ॥

ದಶಧೇನುಸಹಸ್ರಾಣಿ ಪಾರಿಬರ್ಹಮದಾದ್ವಿಭುಃ ।
ಯುವತೀನಾಂ ತ್ರಿಸಾಹಸ್ರಂ ನಿಷ್ಕಗ್ರೀವಸುವಾಸಸಾಮ್
॥ ೫೦ ॥

ನವನಾಗಸಹಸ್ರಾಣಿ ನಾಗಾಚ್ಛತಗುಣಾನ್ರಥಾನ್ ।
ರಥಾಚ್ಛತಗುಣಾನಶ್ವಾನಶ್ವಾಚ್ಛತಗುಣಾನ್ ನರಾನ್
॥ ೫೧ ॥

ದಂಪತೀ ರಥಮಾರೋಪ್ಯ ಮಹತ್ಯಾ ಸೇನಯಾ ವೃತೌ ।
ಸ್ನೇಹಪ್ರಕ್ಲಿನ್ನಹೃದಯೋ ಯಾಪಯಾಮಾಸ ಕೋಸಲಃ
॥ ೫೨ ॥

ಆದರೆ ಯದುವಂಶ ಶಿರೋಮಣಿಯೇ ! ಕನ್ಯೆಗೆ ಅನುರೂಪ ನಾದ ವರನು ಯಾರೆಂಬುದನ್ನು ತಿಳಿಯಲು ಮತ್ತು ವರನ ಶೌರ್ಯ-ಸಾಮರ್ಥ್ಯಗಳನ್ನು ಪರೀಕ್ಷಿಸಲಿಕ್ಕಾಗಿ ಹಿಂದಿನಿಂದಲೂ ಒಂದು ನಿಯಮವನ್ನು ಪಾಲಿಸುತ್ತಾ ಬಂದಿದ್ದೇವೆ. ॥ ೪೨ ॥ ವೀರಶ್ರೇಷ್ಠನಾದ ಶ್ರೀಕೃಷ್ಣ! ನಮ್ಮಲ್ಲಿ ಎದಿರಿಸಲು ಅಸಾಧ್ಯವಾದ ಮತ್ತು ಹಿಡಿಯಲು ದುಸ್ಸಾಧ್ಯವಾದ ಏಳು ಕೊಬ್ಬಿದ ಗೂಳಿಗಳಿವೆ. ಇವುಗಳನ್ನು ಬಗ್ಗಿಸಲು ಹೋಗಿ ಹಲವಾರು ರಾಜಕುಮಾರರು ಕೈ-ಕಾಲುಗಳನ್ನು ಮುರಿದುಕೊಂಡಿದ್ದಾರೆ. ॥ ೪೩ ॥ ಯದುನಂದನನೇ ! ಶ್ರೀಯಃಪತಿಯೇ ! ನಿನ್ನಿಂದೇನಾದರೂ ಈ ಏಳು ಗೂಳಿಗಳೂ ನಿಗ್ರಹಿಸಲ್ಪಟ್ಟರೆ ಆಗ ನೀನು ನನ್ನ ಮಗಳಿಗೆ ಅನುರೂಪನಾದ, ಅಭೀಷ್ಟನಾದ ವರನಾಗುವೆ" ॥ ೪೪ ॥ ಸರ್ವಶಕ್ತನಾದ ಶ್ರೀಕೃಷ್ಣನು ನಗ್ನಜಿತನ ಈ ಪಣವನ್ನು ಕೇಳಿ ತನ್ನನ್ನು ಏಳು ರೂಪವಾಗಿ ಕಲ್ಪಿಸಿಕೊಂಡು ನಡಕಟ್ಟನ್ನು ಬಿಗಿದು ಲೀಲಾಜಾಲವಾಗಿ ಆ ಏಳು ಗೂಳಿಗಳನ್ನು ನಿಗ್ರಹಿಸಿದನು. ॥ ೪೫ ॥ ಅವುಗಳಿಗೆ ಮೂಗು ದಾರವನ್ನು ಹಾಕಿ, ಹಗ್ಗದಿಂದ ಬಿಗಿದು, ದರ್ಪವನ್ನು ಕಳೆದು ಕೊಂಡಿದ್ದ ಮತ್ತು ಶಕ್ತಿಗುಂದಿದ್ದ ಆ ಗೂಳಿಗಳನ್ನು ಬಾಲಕರು ಮರದ ಬಸವನನ್ನು ಅತ್ತಲಿತ್ತ ಎಳೆದಾಡುವಂತೆಯೇ ಎಳೆದಾಡಿದನು.॥ ೪೬ ॥ ವಿಸ್ಮಿತನಾದ ನಗ್ನಜಿತ ಮಹಾರಾಜನು ಶ್ರೀಕೃಷ್ಣನ ವೀರ್ಯ-ಸಾಹಸವನ್ನು ನೋಡಿ ಸುಪ್ರೀತನಾಗಿ ತನ್ನ ಮಗಳನ್ನು ಶ್ರೀಕೃಷ್ಣನಿಗೆ ಒಪ್ಪಿಸಿಕೊಟ್ಟನು. ಭಗವಂತನು ತನಗೆ ಅನುರೂಪಳಾಗಿದ್ದ ಸತ್ಯೆಯನ್ನು ವಿಧಿಪೂರ್ವಕವಾಗಿ ಪಾಣಿಗ್ರಹಣಮಾಡಿಕೊಂಡನು. ॥ ೪೭ ॥ ತಮ್ಮ ಮಗಳಿಗೆ ಅತ್ಯಂತ ಪ್ರಿಯನಾಗಿದ್ದ ಶ್ರೀಕೃಷ್ಣನು ಪತಿಯಾಗಿ ದೊರೆತಿರುವುದನ್ನು ನೋಡಿದ ರಾಜಪತ್ನಿಯರು ಪರಮಾನಂದವನ್ನು ಹೊಂದಿದರು. ಕಲ್ಯಾಣಮಹೋತ್ಸವವು ಸಂಭ್ರಮದಿಂದ ಜರುಗಿತು. ॥ ೪೮ ॥ ಶಂಖ, ಡೋಲು, ಭೇರಿ, ನಗಾರಿಗಳು ಮೊಳಗಿದವು. ಎಲ್ಲೆಡೆ ಗಾಯನ, ವಾದ್ಯ ಘೋಷಗಳು ನಡೆದವು. ಬ್ರಾಹ್ಮಣರು ಆಶೀರ್ವದಿಸುತ್ತಿದ್ದರು. ಸುಂದರವಾದ ವಸ್ತ್ರಾಭರಣಗಳಿಂದ, ಹೂವಿನ ಹಾರಗಳಿಂದ ಅಲಂಕರಿಸಿ ಕೊಂಡು ನಗರದ ನರ-ನಾರಿಯರು ಆನಂದ ಸಾಗರದಲ್ಲಿ ಮುಳುಗಿಹೋದರು. ॥ ೪೯ ॥ ನಗ್ನಜಿತರಾಜನು ಹತ್ತುಸಾವಿರ ಗೋವುಗಳನ್ನು, ಸುಂದರವಾದ ವಸ್ತ್ರಗಳನ್ನೂ, ಸ್ವರ್ಣ ಹಾರಗಳನ್ನೂ ಧರಿಸಿದ ಮೂರುಸಾವಿರ ನವಯುತಿಯರಾದ ದಾಸಿಯರನ್ನು ಬಳುವಳಿಯಾಗಿ ಕೊಟ್ಟನು. ಜೊತೆಗೆ ಒಂಭತ್ತು ಸಾವಿರ ಆನೆಗಳು, ಒಂಭತ್ತು ಲಕ್ಷ ರಥಗಳು, ಒಂಭತ್ತು ಕೋಟಿ ಕುದುರೆಗಳನ್ನು ಒಂಭತ್ತು ಅರ್ಬುದ ಸೇವಕರನ್ನು ಬಳುವಳಿಯಾಗಿ ನೀಡಿದನು. ॥ ೫೦-೫೧ ॥ ಕೋಸಲದ ರಾಜನಾದ ನಗ್ನಜಿತನು ಮಗಳು-ಅಳಿಯನನ್ನು ರಥದಲ್ಲಿ ಕುಳ್ಳಿರಿಸಿ ಒಂದು ಬೃಹತ್ತಾದ ಸೇನೆಯೊಂದಿಗೆ ಬೀಳ್ಕೊಟ್ಟನು. ಆಗ ಅವನ ಹೃದಯವು ಸ್ನೇಹ-ವಾತ್ಸಲ್ಯದ ಉದ್ರೇಕದಿಂದ ಆರ್ದ್ರವಾಯಿತು. ॥ ೫೨ ॥

ಶ್ರುತ್ವೈತದ್ಧಾರುಧಭೂಪಾ ನಯಂತಂ ಪಥಿ ಕನ್ಯಕಾಮ್ ।
ಭಗ್ನವೀರ್ಯಾಃ ಸುದುರ್ಮರ್ಷಾ ಯದುಭಿರ್ಗೋವೃಷೈಃ ಪುರಾ
॥ ೫೩ ॥

ತಾನಸ್ಯತಃ ಶರವ್ರಾತಾನ್ ಬಂಧುಪ್ರಿಯಕೃದರ್ಜುನಃ ।
ಗಾಂಡೀವೀ ಕಾಲಯಾಮಾಸ ಸಿಂಹಃ ಕ್ಷುದ್ರಮೃಗಾನಿವ
॥ ೫೪ ॥

ಪಾರಿಬರ್ಹಮುಪಾಗೃಹ್ಯ ದ್ವಾರಕಾಮೇತ್ಯ ಸತ್ಯಯಾ ।
ರೇಮೇ ಯದೂನಾಮೃಷಭೋ ಭಗವಾನ್ ದೇವಕೀಸುತಃ
॥ ೫೫ ॥

ಶ್ರುತಕೀರ್ತೇಃ ಸುತಾಂ ಭದ್ರಾಮುಪಯೇಮೇ ಪಿತೃಷ್ವಸುಃ ।
ಕೈಕೇಯೀಂ ಭ್ರಾತೃಭಿರ್ದತ್ತಾಂ ಕೃಷ್ಣಃ ಸಂತರ್ದನಾದಿಭಿಃ
॥ ೫೬ ॥

ಸುತಾಂ ಚ ಮದ್ರಾಧಿಪತೇರ್ಲಕ್ಷ್ಮಣಾಂ ಲಕ್ಷಣೈರ್ಯುತಾಮ್ ।
ಸ್ವಯಂವರೇ ಜಹಾರೈಕಃ ಸ ಸುಪರ್ಣಃ ಸುಧಾಮಿವ
॥ ೫೭ ॥

ಅನ್ಯಾಶ್ಚೈವಂವಿಧಾ ಭಾರ್ಯಾಃ ಕೃಷ್ಣಸ್ಯಾಸನ್ ಸಹಸ್ರಶಃ ।
ಭೌಮಂ ಹತ್ವಾ ತನ್ನಿರೋಧಾದಾಹೃತಾಶ್ಚಾರುದರ್ಶನಾಃ
॥ ೫೮ ॥

ಪರೀಕ್ಷಿತನೇ ! ಯದುವಂಶೀಯರಿಂದಲೂ, ನಗ್ನಜಿತನ ಏಳು ಗೂಳಿಗಳಿಂದಲೂ ಭಗ್ನವೀರ್ಯರಾಗಿದ್ದ ರಾಜಕುಮಾರರು - ಶ್ರೀಕೃಷ್ಣನು ಸತ್ಯೆಯನ್ನು ಕರೆದುಕೊಂಡು ಹೋಗುತ್ತಿರುವನೆಂಬ ವಾರ್ತೆಯನ್ನು ಕೇಳಿ, ಅಸಹನಶೀಲರಾಗಿ ಶ್ರೀಕೃಷ್ಣನ ರಥವನ್ನು ಆಕ್ರಮಿಸಿದರು. ॥ ೫೩ ॥ ಅವರೆಲ್ಲರೂ ಶ್ರೀಕೃಷ್ಣನ ಮೇಲೆ ವೇಗವಾಗಿ ಬಾಣಗಳನ್ನು ಸುರಿಸತೊಡಗಿದರು. ಆಗ ಪಾಂಡವವೀರನಾದ ಅರ್ಜುನನು ಗೆಳೆಯನಾದ ಶ್ರೀಕೃಷ್ಣನಿಗೆ ಪ್ರಿಯವನ್ನುಂಟು ಮಾಡಲು ಗಾಂಡೀವ ಧನುಸ್ಸನ್ನು ಹಿಡಿದು, ಸಿಂಹವು ಕ್ಷುದ್ರ ಮೃಗಗಳನ್ನು ಧ್ವಂಸಮಾಡುವಂತೆ ಆ ರಾಜಕುಮಾರರನ್ನು ಧ್ವಂಸಮಾಡಿಬಿಟ್ಟನು. ॥ ೫೪ ॥ ಆನಂತರ ಯದುವಂಶ ಶಿರೋಮಣಿಯಾದ ದೇವಕೀನಂದನ ಶ್ರೀಕೃಷ್ಣನು ಆ ಬಳುವಳಿಯನ್ನು ಮತ್ತು ಸತ್ಯೆಯನ್ನು ಜೊತೆಸೇರಿ ದ್ವಾರಕೆಗೆ ಬಂದು, ಅಲ್ಲಿ ಗೃಹಸ್ಥೋಚಿತವಾಗಿ ವಿಹರಿಸತೊಡಗಿದನು. ॥ ೫೫ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಸೋದರತ್ತೆಯಾದ ಶ್ರುತಕೀರ್ತಿಯನ್ನು ಕೇಕಯರಾಜನು ವಿವಾಹವಾಗಿದ್ದನು. ಅವಳಿಗೆ ಭದ್ರಾ ಎಂಬ ಮಗಳಿದ್ದಳು. ಆಕೆಯ ಸೋದರರಾದ ಸಂತರ್ದನರೇ ಮೊದಲಾದವರು ಭದ್ರೆಯನ್ನು ಶ್ರೀಕೃಷ್ಣನಿಗೆ ಅರ್ಪಿಸಿದರು. ಅವನು ಆಕೆಯ ಪಾಣಿಗ್ರಹಣ ಮಾಡಿದನು. ॥ ೫೬ ॥ ಮದ್ರದೇಶದ ರಾಜನಿಗೆ ಲಕ್ಷ್ಮಣಾ ಎಂಬ ಅತ್ಯಂತ ಸುಲಕ್ಷಣಳಾದ ಕನ್ಯೆಯೊಬ್ಬಳಿದ್ದಳು. ಗರುಡನು ಸ್ವರ್ಗದಿಂದ ಅಮೃತವನ್ನು ಹರಣಮಾಡಿದಂತೆಯೇ ಶ್ರೀಕೃಷ್ಣನು ಸ್ವಯಂವರದಲ್ಲಿ ಒಬ್ಬಂಟಿಗನಾಗಿ ಆಕೆಯನ್ನು ಅಪಹರಿಸಿ ತಂದನು. ॥ ೫೭ ॥

ಪರೀಕ್ಷಿತನೇ ! ಹೀಗೆಯೇ ಭಗವಾನ್ ಶ್ರೀಕೃಷ್ಣನಿಗೆ ಇನ್ನೂ ಸಾವಿರಾರು ಪತ್ನಿಯರಿದ್ದರು. ಆ ಪರಮಸುಂದರಿಯನ್ನು ಭೌಮಾಸುರನನ್ನು ಸಂಹರಿಸಿ ಅವನ ಕಾರಾಗೃಹದಿಂದ ಬಿಡಿಸಿ ತಂದಿದ್ದನು. ॥ ೫೮ ॥

ಐವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೫೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಅಷ್ಟಮಹಿಷ್ಯುದ್ವಾಹೋ ನಾಮೋಽಷ್ಟಪಂಚಾಶತ್ತಮೋಽಧ್ಯಾಯಃ॥ ೫೮ ॥

ಐವತ್ತೊಂಭತ್ತನೆಯ ಅಧ್ಯಾಯ

ನರಕಾಸುರನ ಸಂಹಾರ

ಹದಿನಾರು ಸಾವಿರದ ನೂರುಮಂದಿ ರಾಜಕನ್ಯೆಯರೊಡನೆ ಶ್ರೀಕೃಷ್ಣನ ವಿವಾಹ

ರಾಜೋವಾಚ

ಯಥಾ ಹತೋ ಭಗವತಾ ಭೌಮೋ ಯೇನ ಚ ತಾಃ ಸ್ತ್ರಿಯಃ ।
ನಿರುದ್ಧಾ ಏತದಾಚಕ್ಷ್ವ ವಿಕ್ರಮಂ ಶಾರ್ಙ್ಗಧನ್ವನಃ
॥ ೧ ॥

ಪರೀಕ್ಷಿದ್ರಾಜನು ಪ್ರಶ್ನಿಸುತ್ತಾನೆ - ಪೂಜ್ಯರೇ ! ಸಾವಿರಾರು ಸ್ತ್ರೀಯರನ್ನು ಬಂಧನದಲ್ಲಿರಿಸಿದ ಭೌಮಾಸುರ (ನರಕಾಸುರ)ನನ್ನು ಶ್ರೀಕೃಷ್ಣನು ಹೇಗೆ ಸಂಹರಿಸಿದನು ? ಶಾರ್ಙ್ಗಧನುಸ್ಸನ್ನು ಧರಿಸಿದ್ದ ಶ್ರೀಕೃಷ್ಣನ ಈ ವಿಚಿತ್ರ ಚರಿತ್ರವನ್ನು ವಿಸ್ತಾರವಾಗಿ ಹೇಳಿರಿ. ॥ ೧ ॥

ಶ್ರೀಶುಕ ಉವಾಚ

ಇಂದ್ರೇಣ ಹೃತಚ್ಛತ್ರೇಣ ಹೃತಕುಂಡಲಬಂಧುನಾ ।
ಹೃತಾಮರಾದ್ರಿಸ್ಥಾನೇನ ಜ್ಞಾಪಿತೋ ಭೌಮಚೇಷ್ಟಿತಮ್ ।
ಸಭಾರ್ಯೋ ಗರುಡಾರೂಢಃ ಪ್ರಾಗ್ಜ್ಯೋತಿಷಪುರಂ ಯಯೌ ॥ ೨ ॥

ಗಿರಿದುರ್ಗೈಃ ಶಸ್ತ್ರದುರ್ಗೈರ್ಜಲಾಗ್ನ್ಯನಿಲದುರ್ಗಮಮ್ ।
ಮುರಪಾಶಾಯುತೈರ್ಘೋರೈರ್ದೃಢೈಃ ಸರ್ವತ ಆವೃತಮ್ ॥ ೩ ॥

ಗದಯಾ ನಿರ್ಬಿಭೇದಾದ್ರೀನ್ ಶಸ್ತ್ರದುರ್ಗಾಣಿ ಸಾಯಕೈಃ ।
ಚಕ್ರೇಣಾಗ್ನಿಂ ಜಲಂ ವಾಯುಂ ಮುರಪಾಶಾಂಸ್ತಥಾಸಿನಾ ॥ ೪ ॥

ಶಂಖನಾದೇನ ಯಂತ್ರಾಣಿ ಹೃದಯಾನಿ ಮನಸ್ವಿನಾಮ್ ।
ಪ್ರಾಕಾರಂ ಗದಯಾ ಗುರ್ವ್ಯಾ ನಿರ್ಬಿಭೇದ ಗದಾಧರಃ ॥ ೫ ॥

ಪಾಂಚಜನ್ಯಧ್ವನಿಂ ಶ್ರುತ್ವಾ ಯುಗಾಂತಾಶನಿಭೀಷಣಮ್ ।
ಮುರಃ ಶಯಾನ ಉತ್ತಸ್ಥೌ ದೈತ್ಯಃ ಪಂಚಶಿರಾ ಜಲಾತ್ ॥ ೬ ॥

ತ್ರಿಶೂಲಮುದ್ಯಮ್ಯ ಸುದುರ್ನಿರೀಕ್ಷಣೋ
ಯುಗಾಂತಸೂರ್ಯಾನಲರೋಚಿರುಲ್ಬಣಃ ।
ಗ್ರಸಂಸ್ತ್ರಿಲೋಕೀಮಿವ ಪಂಚಭಿರ್ಮುಖೈ-
ರಭ್ಯದ್ರವತ್ತಾರ್ಕ್ಷ್ಯಸುತಂ ಯಥೋರಗಃ ॥ ೭ ॥

ಆವಿಧ್ಯ ಶೂಲಂ ತರಸಾ ಗರುತ್ಮತೇ
ನಿರಸ್ಯ ವಕ್ತ್ರೈರ್ವ್ಯನದತ್ ಸ ಪಂಚಭಿಃ ।
ಸ ರೋದಸೀ ಸರ್ವದಿಶೋಽಂತರಂ ಮಹಾ-
ನಾಪೂರಯನ್ನಂಡಕಟಾಹಮಾವೃಣೋತ್ ॥ ೮ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಪರೀಕ್ಷಿತನೇ ! ಭೌಮಾಸುರನು ವರುಣನ ಛತ್ರವನ್ನೂ ಅದಿತಿಯ ಕುಂಡಲಗಳನ್ನು ಮೇರು ಪರ್ವತದಲ್ಲಿರುವ ದೇವತೆಗಳ ಮಣಿಪರ್ವತವೆಂಬ ಸ್ಥಾನವನ್ನು ಅಪಹರಿಸಿದ್ದನು. ಇದರಿಂದ ದೇವೇಂದ್ರನು ದ್ವಾರಕೆಗೆ ಬಂದು ಭಗವಾನ್ ಶ್ರೀಕೃಷ್ಣನಲ್ಲಿ ಭೌಮಾಸುರನ ಉಪಟಳವೆಲ್ಲವನ್ನು ನಿವೇದಿಸಿಕೊಂಡನು. ಆಗ ಶ್ರೀಕೃಷ್ಣನು ಸತ್ಯಭಾಮೆಯೊಡನೆ ಗರುಡನನ್ನೇರಿ ಭೌಮನ ರಾಜಧಾನಿಯಾದ ಪ್ರಾಗ್ಜ್ಯೋತಿಷಪುರಕ್ಕೆ ಹೋದನು. ॥ ೨ ॥ ಆ ಪುರವನ್ನು ಪ್ರವೇಶಿಸುವುದು ಅತ್ಯಂತ ಕಠಿಣವಾಗಿತ್ತು. ಮೊದಲನೆಯದಾಗಿ ಆ ಪಟ್ಟಣದ ಸುತ್ತಲೂ ಪರ್ವತಗಳದ್ದೇ ಕೋಟೆಯಿತ್ತು. ಕ್ರಮವಾಗಿ ಶಸ್ತ್ರದುರ್ಗದಿಂದಲೂ, ಜಲದುರ್ಗದಿಂದಲೂ, ಅಗ್ನಿದುರ್ಗದಿಂದಲೂ, ವಾಯುದುರ್ಗದಿಂದಲೂ ಸಮಾವೃತವಾಗಿತ್ತು. ಇದೆಲ್ಲ ಕಳೆದ ಬಳಿಕ ಮುರನೆಂಬ ರಾಕ್ಷಸನು ಹತ್ತುಸಾವಿರ ಕಬ್ಬಿಣದ ಸರಪಳಿಗಳ ದೃಢವಾದ ಜಾಲವನ್ನು ಹರಡಿಟ್ಟಿದ್ದನು. ॥ ೩ ॥ ಭಗವಾನ್ ಶ್ರೀಕೃಷ್ಣನು ತನ್ನ ಕೌಮೋದಕೀಗದೆಯಿಂದ ಪರ್ವತ ಪ್ರಾಕಾರಗಳನ್ನು ಭೇದಿಸಿದನು. ಬಾಣಗಳಿಂದ ಶಸ್ತ್ರದುರ್ಗವನ್ನು ಧ್ವಂಸಮಾಡಿದನು. ಸುದರ್ಶನ ಚಕ್ರದಿಂದ ಅಗ್ನಿ, ಜಲ, ವಾಯು ದುರ್ಗಗಳನ್ನು ನಾಶಮಾಡಿದನು. ನಂದಕವೆಂಬ ಖಡ್ಗದಿಂದ ಮುರಾಸುರನ ಪಾಶಗಳನ್ನು ಕತ್ತರಿಸಿ ಹಾಕಿದನು. ॥ ೪ ॥ ಪಾಂಚಜನ್ಯ ಶಂಖದ ಧ್ವನಿಯಿಂದ ಯಂತ್ರ-ತಂತ್ರ-ಮಂತ್ರಗಳನ್ನು, ಧೈರ್ಯಶಾಲಿಗಳಾದ ರಾಕ್ಷಸರ ಮನಸ್ಸನ್ನು ಭೇದಿಸಿದನು ಮತ್ತು ನಗರದ ಕೋಟೆಯನ್ನು ಗದಾಧರನಾದ ಭಗವಂತನು ತನ್ನ ಗದೆಯಿಂದ ಧ್ವಂಸಗೊಳಿಸಿದನು. ॥ ೫ ॥

ಭಗವಂತನ ಪಾಂಚಜನ್ಯದ ಧ್ವನಿಯು ಪ್ರಳಯಕಾಲದ ಸಿಡಿಲಿನಂತೆ ಮಹಾಭಯಂಕರವಾಗಿತ್ತು. ಅದನ್ನು ಕೇಳುತ್ತಲೇ ನೀರಿನಲ್ಲಿ ನಿದ್ರಿಸುತ್ತಿದ್ದ ಐದು ತಲೆಗಳಿಂದ ಕೂಡಿದ ಮುರನೆಂಬ ದೈತ್ಯನು ಎಚ್ಚರಗೊಂಡು ಎದ್ದು ಬಂದನು. ॥ ೬ ॥ ಆ ಮಹಾದೈತ್ಯನು ಪ್ರಳಯಕಾಲದ ಸೂರ್ಯಾಗ್ನಿಗಳಂತೆ ಪ್ರಚಂಡ ತೇಜಸ್ವಿಯಾಗಿದ್ದನು. ಅವನನ್ನು ಕಣ್ಣೆತ್ತಿ ದಿಟ್ಟಿಸಿ ನೋಡಲೂ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಪ್ರಾಣಬಿಡಲು ಇಚ್ಛಿಸಿದ ಸರ್ಪವು ಗರುಡನ ಬಳಿಗೆ ಧಾವಿಸುವಂತೆ ಮುರಾಸುರನು ತ್ರಿಶೂಲವನ್ನೆತ್ತಿಕೊಂಡು ಶ್ರೀಕೃಷ್ಣನ ಬಳಿಗೆ ಧಾವಿಸಿದನು. ಆ ಸಮಯದಲ್ಲಿ ತನ್ನ ಐದು ಮುಖಗಳಿಂದ ಮೂರು ಲೋಕಗಳನ್ನೂ ನುಂಗಿಬಿಡುವನೋ ಎಂಬಂತೆ ಕಾಣುತ್ತಿದ್ದನು. ॥ ೭ ॥ ಆ ಮಹಾಸುರನು ತನ್ನ ತ್ರಿಶೂಲವನ್ನು ರಭಸದಿಂದ ತಿರುಗಿಸಿ ಶ್ರೀಕೃಷ್ಣನ ವಾಹನವಾದ ಗರುಡನ ಮೇಲೆ ಪ್ರಯೋಗಿಸಿ ತನ್ನ ಐದು ಮುಖಗಳಿಂದಲೂ ಸಿಂಹನಾದವನ್ನು ಮಾಡಿದನು. ಆ ಸಿಂಹ ನಾದದ ಮಹಾಶಬ್ದವು ಪೃಥಿವಿ, ಆಕಾಶ, ಪಾತಾಳ ಮತ್ತು ಹತ್ತುದಿಕ್ಕುಗಳಲ್ಲಿಯೂ ತುಂಬಿ ಬ್ರಹ್ಮಾಂಡವನ್ನೇ ವ್ಯಾಪಿಸಿತು. ॥ ೮ ॥

ತದಾಪತದ್ವೈ ತ್ರಿಶಿಖಂ ಗರುತ್ಮತೇ
ಹರಿಃ ಶರಾಭ್ಯಾಮಭಿನತ್ತ್ರಿಧೌಜಸಾ ।
ಮುಖೇಷು ತಂ ಚಾಪಿ ಶರೈರತಾಡಯತ್
ತಸ್ಮೈ ಗದಾಂ ಸೋಽಪಿ ರುಷಾ ವ್ಯಮುಂಚತ ॥ ೯ ॥

ತಾಮಾಪತಂತೀಂ ಗದಯಾ ಗದಾಂ ಮೃಧೇ
ಗದಾಗ್ರಜೋ ನಿರ್ಬಿಭಿದೇ ಸಹಸ್ರಧಾ ।
ಉದ್ಯಮ್ಯ ಬಾಹೂನಭಿಧಾವತೋಽಜಿತಃ
ಶಿರಾಂಸಿ ಚಕ್ರೇಣ ಜಹಾರ ಲೀಲಯಾ ॥ ೧೦ ॥

ವ್ಯಸುಃ ಪಪಾತಾಂಭಸಿ ಕೃತ್ತಶೀರ್ಷೋ
ನಿಕೃತ್ತಶೃಂಗೋಽದ್ರಿರಿವೇಂದ್ರತೇಜಸಾ ।
ತಸ್ಯಾತ್ಮಜಾಃ ಸಪ್ತ ಪಿತುರ್ವಧಾತುರಾಃ
ಪ್ರತಿಕ್ರಿಯಾಮರ್ಷಜುಷಃ ಸಮುದ್ಯತಾಃ ॥ ೧೧ ॥

ತಾಮ್ರೋಽಂತರಿಕ್ಷಃ ಶ್ರವಣೋ ವಿಭಾವಸು-
ರ್ವಸುರ್ನಭಸ್ವಾನರುಣಶ್ಚ ಸಪ್ತಮಃ ।
ಪೀಠಂ ಪುರಸ್ಕೃತ್ಯ ಚಮೂಪತಿಂ ಮೃಧೇ
ಭೌಮಪ್ರಯುಕ್ತಾ ನಿರಗನ್ ಧೃತಾಯುಧಾಃ ॥ ೧೨ ॥

ಪ್ರಾಯುಂಜತಾಸಾದ್ಯ ಶರಾನಸೀನ್ ಗದಾಃ
ಶಕ್ತ್ಯೃಷ್ಟಿಶೂಲಾನ್ಯಜಿತೇ ರುಷೋಲ್ಬಣಾಃ ।
ತಚ್ಛಸ್ತ್ರಕೂಟಂ ಭಗವಾನ್ ಸ್ವಮಾರ್ಗಣೈ-
ರಮೋಘವೀರ್ಯಸ್ತಿಲಶಶ್ಚಕರ್ತ ಹ ॥ ೧೩ ॥

ತಾನ್ ಪೀಠಮುಖ್ಯಾನನಯದ್ಯಮಕ್ಷಯಂ
ನಿಕೃತ್ತಶೀರ್ಷೋರುಭುಜಾಂಘ್ರಿವರ್ಮಣಃ ।
ಸ್ವಾನೀಕಪಾನಚ್ಯುತಚಕ್ರಸಾಯಕೈ-
ಸ್ತಥಾ ನಿರಸ್ತಾನ್ ನರಕೋ ಧರಾಸುತಃ ॥ ೧೪ ॥

ನಿರೀಕ್ಷ್ಯ ದುರ್ಮರ್ಷಣ ಆಸ್ರವನ್ಮದೈ-
ರ್ಗಜೈಃ ಪಯೋಧಿಪ್ರಭವೈರ್ನಿರಾಕ್ರಮತ್ ।
ದೃಷ್ಟ್ವಾಜಸಹಾಯಂ ಗರುಡೋಪರಿ ಸ್ಥಿತಂ
ಸೂರ್ಯೋಪರಿಷ್ಟಾತ್ ಸತಡಿದ್ಘನಂ ಯಥಾ ।
ಕೃಷ್ಣಂ ಸ ತಸ್ಮೈ ವ್ಯಸೃಜಚ್ಛತಘ್ನೀಂ
ಯೋಧಾಶ್ಚ ಸರ್ವೇ ಯುಗಪತ್ ಸ್ಮ ವಿವ್ಯಧುಃ ॥ ೧೫ ॥

ಮುರಾಸುರನು ಪ್ರಯೋಗಿಸಿದ ತ್ರಿಶೂಲವು ವೇಗವಾಗಿ ಗರುಡನ ಕಡೆಗೆ ಬರುತ್ತಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ಹಸ್ತಕೌಶಲ್ಯವನ್ನು ತೋರುತ್ತಾ, ಎರಡು ಬಾಣಗಳಿಂದ ಆ ತ್ರಿಶೂಲವನ್ನು ಮೂರು ತುಂಡಾಗಿ ಕತ್ತರಿಸಿ ಹಾಕಿದನು. ಮರುಕ್ಷಣದಲ್ಲೇ ಮುರಾಸುರನ ಐದು ಮುಖಗಳಲ್ಲಿಯೂ ಭಗವಂತನು ಬಾಣಗಳನ್ನು ಪ್ರಯೋಗಿಸಿದನು. ಇದರಿಂದ ಅತಿ ಕ್ರುದ್ಧನಾದ ಮುರಾಸುರನು ಶ್ರೀಕೃಷ್ಣನ ಮೇಲೆ ತನ್ನ ಗದೆಯನ್ನು ಪ್ರಯೋಗಿಸಿದನು. ॥ ೯ ॥ ಆದರೆ ಶ್ರೀಕೃಷ್ಣನು ತನ್ನ ಗದಾ ಪ್ರಹಾರದಿಂದ ಮುರಾಸುರನ ಗದೆಯನ್ನು ತನ್ನ ಬಳಿಗೆ ಬರುವ ಮೊದಲೇ ನುಚ್ಚುನೂರಾಗಿಸಿದನು. ಈಗ ಅವನು ನಿಃಶಸ್ತ್ರನಾದ್ದರಿಂದ ತನ್ನ ಭುಜಗಳನ್ನು ಚಾಚಿ ಶ್ರೀಕೃಷ್ಣನ ಕಡೆಗೆ ನುಗ್ಗಿದನು. ತತ್‌ಕ್ಷಣ ಅಜಿತನಾದ ಭಗವಂತನು ಚಕ್ರಾಯುಧದಿಂದ ರಾಕ್ಷಸನ ಐದು ತಲೆಗಳನ್ನು ಲೀಲಾಜಾಲವಾಗಿ ಕತ್ತರಿಸಿ ಹಾಕಿದನು ॥ ೧೦ ॥ ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತವು ಸಮುದ್ರದಲ್ಲಿ ಬೀಳುವಂತೆ ಶ್ರೀಕೃಷ್ಣನ ಚಕ್ರದಿಂದ ಕತ್ತರಿಸಲ್ಪಟ್ಟು ಶಿರಸ್ಸು ರಹಿತವಾಗಿದ್ದ ಮುರಾಸುರನ ಶರೀರವು ಪ್ರಾಣರಹಿತವಾಗಿ ನೀರಿನಲ್ಲಿ ಬಿದ್ದು ಹೋಯಿತು. ಮುರಾಸುರನಿಗೆ - ತಾಮ್ರ, ಅಂತರಿಕ್ಷ, ಶ್ರವಣ, ವಿಭಾವಸು, ವಸು, ನಭಸ್ವಾನ್ ಮತ್ತು ಅರುಣನೆಂಬ ಏಳು ಮಕ್ಕಳಿದ್ದರು. ಅವರು ತಮ್ಮ ತಂದೆಯ ಮೃತ್ಯುವಿನಿಂದಾಗಿ ಅತ್ಯಂತ ಶೋಕಾಕುಲರಾಗಿ, ಸೇಡು ತೀರಿಸಿಕೊಳ್ಳಲು ಅತ್ಯಂತ ಕ್ರುದ್ಧರಾಗಿ ಭೌಮಾಸುರನ ಆದೇಶದಿಂದ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಪೀಠನೆಂಬ ದೈತನನ್ನು ತಮ್ಮ ಸೇನಾಪತಿಯನ್ನಾಗಿಸಿಕೊಂಡು ಶ್ರೀಕೃಷ್ಣನ ಮೇಲೆ ಆಕ್ರಮಣ ಮಾಡಿದರು. ॥ ೧೧-೧೨ ॥ ಅವರು ಅಲ್ಲಿಗೆ ಬಂದು ಭಯಂಕರ ಸಿಟ್ಟಿನಿಂದ ಶ್ರೀಕೃಷ್ಣನ ಮೇಲೆ ಬಾಣ, ಖಡ್ಗ, ಗದೆ, ಶಕ್ತಿ, ಋಷ್ಟಿ, ತ್ರಿಶೂಲ ಮೊದಲಾದ ಪ್ರಚಂಡ ಶಸ್ತ್ರಗಳನ್ನು ಮಳೆಗರೆದರು. ಪರೀಕ್ಷಿತನೇ! ಭಗವಂತನ ಶಕ್ತಿಯು ಅಮೋಘವೂ, ಅನಂತವೂ ಆದುದು. ಶ್ರೀಕೃಷ್ಣನು ತನ್ನ ಹಲವಾರು ಬಾಣಗಳಿಂದ ಅವರ ಕೋಟಿ-ಕೋಟಿ ಶಸ್ತ್ರಾಸ್ತ್ರಗಳನ್ನು ನುಚ್ಚುನೂರಾಗಿಸಿದನು. ॥ ೧೩. ॥ ಭಗವಂತನು ಶಸ್ತ್ರಪ್ರಹಾರದಿಂದ ಸೇನಾಪತಿ ಪೀಠ ಮತ್ತು ಅವನ ಸೈನಿಕರ ತಲೆಗಳು, ತೊಡೆಗಳು, ಭುಜಗಳು, ಕಾಲುಗಳು, ಕವಚಗಳು ಹೀಗೆ ಎಲ್ಲವನ್ನು ತುಂಡು ತುಂಡಾಗಿ ಕತ್ತರಿಸಿ ಅವರೆಲ್ಲರನ್ನು ಯಮಸದನಕ್ಕೆ ಕಳಿಸಿದನು. ಭಗವಾನ್ ಶ್ರೀಕೃಷ್ಣನ ಚಕ್ರಾಯುಧದಿಂದಲೂ, ಬಾಣಗಳಿಂದಲೂ ತನ್ನ ಸೇನೆ ಮತ್ತು ಸೇನಾಪತಿಗಳ ಸಂಹಾರವನ್ನು ಕಂಡು ಭೂಮಿಪುತ್ರನಾದ ನರಕಾಸುರನು ಕ್ರುದ್ಧನಾದನು. ಸಮುದ್ರದಲ್ಲಿ ಹುಟ್ಟಿದ್ದ ಅನೇಕ ಮದಭರಿತ ಆನೆಗಳ ಸೈನ್ಯದೊಂದಿಗೆ ನಗರದಿಂದ ಹೊರಬಿದ್ದನು. ಸೂರ್ಯನ ಮೇಲ್ಭಾಗದಲ್ಲಿ ಮಿಂಚಿನಿಂದ ಕೂಡಿದ ವರ್ಷಾಕಾಲದ ಶ್ಯಾಮಲ ಮೇಘದಂತೆ ಪತ್ನಿಯೊಡನೆ ಗರುಡಾರೂಢನಾದ ಶ್ರೀಕೃಷ್ಣನನ್ನು ನರಕನು ನೋಡಿದನು. ಅವನನ್ನು ನೋಡುತ್ತಲೇ ಭೌಮಾಸುರನು ಭಗವಂತನ ಮೇಲೆ ಶತಘ್ನಿ ಎಂಬ ಶಕ್ತಿಯನ್ನು ಪ್ರಯೋಗಿಸಿದನು ಮತ್ತು ಅವನ ಸೈನಿಕರು ಒಟ್ಟಿಗೆ ಕೃಷ್ಣನ ಮೇಲೆ ತಮ್ಮ-ತಮ್ಮ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸಿದರು. ॥ ೧೪-೧೫ ॥

ತದ್ಭೌಮಸೈನ್ಯಂ ಭಗವಾನ್ ಗದಾಗ್ರಜೋ
ವಿಚಿತ್ರವಾಜೈರ್ನಿಶಿತೈಃ ಶಿಲೀಮುಖೈಃ ।
ನಿಕೃತ್ತಬಾಹೂರುಶಿರೋಧ್ವವಿಗ್ರಹಂ
ಚಕಾರ ತರ್ಹ್ಯೇವ ಹತಾಶ್ವಕುಂಜರಮ್ ॥ ೧೬ ॥

ಯಾನಿ ಯೋದ್ಧೈಃ ಪ್ರಯುಕ್ತಾನಿ ಶಸ್ತ್ರಾಸ್ತ್ರಾಣಿ ಕುರೂದ್ವಹ ।
ಹರಿಸ್ತಾನ್ಯಚ್ಛಿನತ್ತೀಕ್ಷ್ಣೈಃ ಶರೈರೇಕೈಕಶಸ್ತ್ರಿಭಿಃ
॥ ೧೭ ॥

ಉಹ್ಯಮಾನಃ ಸುಪರ್ಣೇನ ಪಕ್ಷಾಭ್ಯಾಂ ನಿಘ್ನತಾ ಗಜಾನ್ ।
ಗರುತ್ಮತಾ ಹನ್ಯಮಾನಾಸ್ತುಂಡಪಕ್ಷನಖೈರ್ಗಜಾಃ
॥ ೧೮ ॥

ಪುರಮೇವಾವಿಶನ್ನಾರ್ತಾ ನರಕೋ ಯುಧ್ಯಯುಧ್ಯತ ।
ದೃಷ್ಟ್ವಾವಿದ್ರಾವಿತಂ ಸೈನ್ಯಂ ಗರುಡೇನಾರ್ದಿತಂ ಸ್ವಕಮ್
॥ ೧೯ ॥

ತಂ ಭೌಮಃ ಪ್ರಾಹರಚ್ಛಕ್ತ್ಯಾ ವಜ್ರಃ ಪ್ರತಿಹತೋ ಯತಃ ।
ನಾಕಂಪತ ತಯಾ ವಿದ್ಧೋ ಮಾಲಾಹತ ಇವ ದ್ವಿಪಃ
॥ ೨೦ ॥

ಶೂಲಂ ಭೌಮೋಽಚ್ಯುತಂ ಹಂತುಮಾದದೇ ವಿತಥೋದ್ಯಮಃ ।
ತದ್ವಿಸರ್ಗಾತ್ ಪೂರ್ವಮೇವ ನರಕಸ್ಯ ಶಿರೋ ಹರಿಃ ।
ಅಪಾಹರದ್ಗಜಸ್ಥಸ್ಯ ಚಕ್ರೇಣ ಕ್ಷುರನೇಮಿನಾ
॥ ೨೧ ॥

ಸಕುಂಡಲಂ ಚಾರುಕಿರೀಟಭೂಷಣಂ
ಬಭೌ ಪೃಥಿವ್ಯಾಂ ಪತಿತಂ ಸಮುಜ್ಜ್ವಲತ್ ।
ಹಾ ಹೇತಿ ಸಾಧ್ವಿತ್ಯೃಷಯಃ ಸುರೇಶ್ವರಾ
ಮಾಲ್ಯೈರ್ಮುಕುಂದಂ ವಿಕಿರಂತ ಈಡಿರೇ ॥ ೨೨ ॥

ತತಶ್ಚ ಭೂಃ ಕೃಷ್ಣಮುಪೇತ್ಯ ಕುಂಡಲೇ
ಪ್ರತಪ್ತಜಾಂಬೂನದರತ್ನಭಾಸ್ವರೇ ।
ಸವೈಜಯಂತ್ಯಾ ವನಮಾಲಯಾರ್ಪಯತ್
ಪ್ರಾಚೇತಸಂ ಛತ್ರಮಥೋ ಮಹಾಮಣಿಮ್ ॥ ೨೩ ॥

ಅಸ್ತೌಷೀದಥ ವಿಶ್ವೇಶಂ ದೇವೀ ದೇವವರಾರ್ಚಿತಮ್ ।
ಪ್ರಾಂಜಲಿಃ ಪ್ರಣತಾ ರಾಜನ್ ಭಕ್ತಿಪ್ರವಣಯಾ ಧಿಯಾ
॥ ೨೪ ॥

ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನೂ ಕೂಡ ಚಿತ್ರ-ವಿಚಿತ್ರವಾದ ಗರಿಕಟ್ಟಿದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಇವುಗಳಿಂದ ಆಗಲೇ ಭೌಮಾಸುರ ಸೈನಿಕರ ಭುಜಗಳು, ತೊಡೆಗಳು, ತಲೆಗಳು ಕತ್ತರಿಸಲ್ಪಟ್ಟು ತೊಪ-ತೊಪನೆ ನೆಲಕ್ಕುರುಳಿದವು ಮತ್ತು ಅಸಂಖ್ಯಾತವಾದ ಆನೆ, ಕುದುರೆಗಳೂ ಅಸುನೀಗಿದವು. ॥ ೧೬ ॥ ಪರೀಕ್ಷಿತನೇ ! ನರಕಾಸುರನ ಸೈನಿಕರು ಭಗವಂತನ ಮೇಲೆ ಪ್ರಯೋಗಿಸಿದ ಅಸ್ತ್ರ-ಶಸ್ತ್ರಗಳೆಲ್ಲವನ್ನೂ ಶ್ರೀಕೃಷ್ಣನು ಮೂರು-ಮೂರು ಬಾಣಗಳಿಂದ ಕತ್ತರಿಸಿ ಹಾಕಿದನು. ॥ ೧೭ ॥ ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಗರುಡಾರೂಢನಾಗಿದ್ದನು ಹಾಗೂ ಗರುಡನೂ ತನ್ನ ಬಲಿಷ್ಠವಾದ ರೆಕ್ಕೆಗಳಿಂದ ಗಜಸೈನ್ಯವನ್ನು ಬಡಿದು ಕೊಲ್ಲುತ್ತಿದ್ದನು. ಕೊಕ್ಕಿನಿಂದ ಕುಕ್ಕಿ, ಪಂಜಗಳಿಂದ, ರೆಕ್ಕೆಗಳಿಂದ ಪ್ರಹರಿಸುತ್ತಿದ್ದ ಏಟುಗಳನ್ನು ತಾಳಲಾರದೆ ಆನೆಗಳೆಲ್ಲವೂ ಸಂಕಟಪಡುತ್ತಾ, ಕಿರಿಚಿಕೊಳ್ಳುತ್ತಾ ಯುದ್ಧಭೂಮಿಯಿಂದ ಓಡಿ ಹೋಗಿ ನಗರವನ್ನು ಹೊಕ್ಕವು. ಆಗ ಭೌಮಾಸುರನು ಒಬ್ಬಂಟಿಗನಾಗಿ ಕಾದಾಡುತ್ತಿದ್ದನು. ಗರುಡನ ಏಟುಗಳಿಂದ ಪೀಡಿತವಾಗಿ ತನ್ನ ಸೇನೆಯು ಓಡುತ್ತಿರುವುದನ್ನು ಕಂಡು ನರಕನು ವ್ರಜಾಯುಧವನ್ನೂ ವಿಫಲಗೊಳಿಸಿದ ಭಾರೀ ಶಕ್ತಿಯೊಂದನ್ನು ಗರುಡನ ಮೇಲೆ ಪ್ರಯೋಗಿಸಿದನು. ಆದರೆ ಆ ಶಕ್ತಿಯಿಂದ ಗರುಡನು ಸ್ವಲ್ಪವೂ ವಿಚಲಿತನಾಗದೆ ಯಾರಾದರೂ ಆನೆಯನ್ನು ಹೂವಿನ ಹಾರದಿಂದ ಹೊಡೆದಂತೆ ನಿಶ್ಚಲನಾಗಿದ್ದನು. ॥ ೧೮-೨೦ ॥ ತಾನು ಪ್ರಯೋಗಿಸಿದ ಆಯುಧಗಳೆಲ್ಲವೂ ವ್ಯರ್ಥವಾಗಿ ಹೋಗುತ್ತಿರಲು ಅತಿಕ್ರುದ್ಧವಾದ ನರಕಾಸುರನು ಶ್ರೀಕೃಷ್ಣನನ್ನು ಕೊಂದುಹಾಕಲು ಒಂದು ತ್ರಿಶೂಲವನ್ನು ಎತ್ತಿಕೊಂಡನು. ಆದರೆ ಅದನ್ನು ಪ್ರಯೋಗಿಸಬೇಕೆನ್ನುವಷ್ಟರಲ್ಲಿ ಭಗವಾನ್ ಶ್ರೀಕೃಷ್ಣನು ಖಡ್ಗದಂತೆ ಹರಿತವಾಗಿದ್ದ ಅಂಚುಳ್ಳ ಚಕ್ರಾಯುಧದಿಂದ ಗಜಾರೂಢನಾದ ಭೌಮಾಸುರನ ತಲೆಯನ್ನು ಕತ್ತರಿಸಿ ಹಾಕಿದನು. ॥ ೨೧ ॥ ಸುಂದರವಾದ ಕಿರೀಟ ಕುಂಡಲಗಳಿಂದ ಹೊಳೆಯುತ್ತಿದ್ದ ಅವನ ಶಿರಸ್ಸು ನೆಲಕ್ಕೆ ಉರುಳಿತು. ಅದನ್ನು ನೋಡಿದ ನರಕಾಸುರನ ಸಂಬಂಧಿಗಳು ಅಯ್ಯೋ ! ನಮ್ಮ ಗತಿ ಏನು ? ಎಂದು ಕಿರುಚಿಕೊಂಡರು. ಋಷಿ-ಮುನಿಗಳು ಸಾಧು ! ಸಾಧು ! ಎಂದು ಶ್ರೀಕೃಷ್ಣನನ್ನು ಪ್ರಶಂಸಿಸಿದರು. ದೇವತೆಗಳು ಅವನ ಮೇಲೆ ಪುಷ್ಪವೃಷ್ಟಿಯನ್ನು ಗರೆಯುತ್ತಾ ಸ್ತುತಿಸತೊಡಗಿದರು. ॥ ೨೨ ॥

ಬಳಿಕ ನರಕಾಸುರನ ತಾಯಿಯಾದ ಭೂದೇವಿಯು ಶ್ರೀಕೃಷ್ಣನ ಬಳಿಗೆ ಬಂದು ಅವನ ಕೊರಳಿಗೆ ವೈಜಯಂತಿ ಯೊಂದಿಗೆ ವನಮಾಲೆಯನ್ನು ತೊಡಿಸಿದಳು ಮತ್ತು ಪುಟಕ್ಕೆ ಹಾಕಿದ ಬಂಗಾರದಿಂದಲೂ ಶ್ರೇಷ್ಠವಾದ ರತ್ನಗಳಿಂದಲೂ ಬೆಳಗುತ್ತಿದ್ದ ಅದಿತಿಯ ಕುಂಡಲಗಳನ್ನು ಭಗವಂತನಿಗೆ ನೀಡಿದಳು. ಜೊತೆಗೆ ವರುಣನ ಛತ್ರವನ್ನೂ ಒಂದು ಮಹಾಮಣಿಯನ್ನು ಅರ್ಪಿಸಿದಳು. ॥ ೨೩ ॥ ರಾಜೇಂದ್ರನೇ ! ಬಳಿಕ ಭೂದೇವಿಯು ದೇವಶ್ರೇಷ್ಠರಿಂದ ಅರ್ಚಿಸಲ್ಪಡುತ್ತಿದ್ದ ವಿಶ್ವೇಶನಾದ ಭಗವಾನ್ ಶ್ರೀಕೃಷ್ಣನಿಗೆ ಪ್ರಣಾಮಗೈದು, ಕೈಜೋಡಿಸಿಕೊಂಡು ಭಕ್ತಿಭಾವದಿಂದ ತುಂಬಿದ ಹೃದಯದಿಂದ ಸ್ತುತಿಸತೊಡಗಿದಳು. ॥ ೨೪ ॥

ಭೂಮಿರುವಾಚ

ನಮಸ್ತೇ ದೇವದೇವೇಶ ಶಂಖಚಕ್ರಗದಾಧರ ।
ಭಕ್ತೇಚ್ಛೋಪಾತ್ತರೂಪಾಯ ಪರಮಾತ್ಮನ್ ನಮೋಽಸ್ತು ತೇ
॥ ೨೫ ॥

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ
॥ ೨೬ ॥

ನಮೋ ಭಗವತೇ ತುಭ್ಯಂ ವಾಸುದೇವಾಯ ವಿಷ್ಣವೇ ।
ಪುರುಷಾಯಾದಿಬೀಜಾಯ ಪೂರ್ಣಬೋಧಾಯ ತೇ ನಮಃ
॥ ೨೭ ॥

ಅಜಾಯ ಜನಯಿತ್ರೇಽಸ್ಯ ಬ್ರಹ್ಮಣೇಽನಂತಶಕ್ತಯೇ ।
ಪರಾವರಾತ್ಮನ್ ಭೂತಾತ್ಮನ್ ಪರಮಾತ್ಮನ್ ನಮೋಽಸ್ತು ತೇ
॥ ೨೮ ॥

ತ್ವಂ ವೈ ಸಿಸೃಕ್ಷೂ ರಜ ಉತ್ಕಟಂ ಪ್ರಭೋ
ತಮೋ ನಿರೋಧಾಯ ಬಿಭರ್ಷ್ಯಸಂವೃತಃ ।
ಸ್ಥಾನಾಯ ಸತ್ತ್ವಂ ಜಗತೋ ಜಗತ್ಪತೇ
ಕಾಲಃ ಪ್ರಧಾನಂ ಪುರುಷೋ ಭವಾನ್ಪರಃ ॥ ೨೯ ॥

ಅಹಂ ಪಯೋ ಜ್ಯೋತಿರಥಾನಿಲೋ ನಭೋ
ಮಾತ್ರಾಣಿ ದೇವಾ ಮನ ಇಂದ್ರಿಯಾಣಿ ।
ಕರ್ತಾ ಮಹಾನಿತ್ಯಖಿಲಂ ಚರಾಚರಂ
ತ್ವಯ್ಯದ್ವಿತೀಯೇ ಭಗವನ್ನಯಂ ಭ್ರಮಃ ॥ ೩೦ ॥

ತಸ್ಯಾತ್ಮಜೋಽಯಂ ತವ ಪಾದಪಂಕಜಂ
ಭೀತಃ ಪ್ರಪನ್ನಾರ್ತಿಹರೋಪಸಾದಿತಃ ।
ತತ್ಪಾಲಯೈನಂ ಕುರು ಹಸ್ತಪಂಕಜಂ
ಶಿರಸ್ಯಮುಷ್ಯಾಖಿಲಕಲ್ಮಷಾಪಹಮ್ ॥ ೩೧ ॥

ಪೃಥಿವಿದೇವಿಯು ಹೇಳಿದಳು – ಶಂಖಚಕ್ರಗದಾಧರನೇ ! ದೇವದೇವೇಶ್ವರನೇ ! ನಾನು ನಿನಗೆ ನಮಸ್ಕರಿಸುತ್ತೇನೆ. ಪರಮಾತ್ಮನೇ ! ನೀನು ನಿನ್ನ ಭಕ್ತರ ಇಚ್ಛೆಯನ್ನು ಪೂರ್ಣಗೊಳಿಸಲು ಅದಕ್ಕನುಸಾರವಾಗಿ ರೂಪಗಳನ್ನು ಹೊಂದುವಂತಹ ನಿನಗೆ ನಮಸ್ಕರಿಸುತ್ತೇನೆ. ॥ ೨೫ ॥ ಪ್ರಭುವೇ ! ನಿನ್ನ ನಾಭಿಯಿಂದ ಕಮಲವು ಪ್ರಕಟವಾಗಿದೆ. ನೀನು ಕಮಲದ ಮಾಲೆಯನ್ನು ಧರಿಸಿರುವೆ. ನಿನ್ನ ನೇತ್ರಗಳು ಕಮಲದಂತೆ ಅರಳಿ ಶಾಂತಿದಾಯಕಗಳಾಗಿವೆ. ನಿನ್ನ ಚರಣಗಳು ಕಮಲದಂತೆ ಸುಕೋಮಲ ಮತ್ತು ಭಕ್ತರ ಹೃದಯಗಳನ್ನು ಶೀತಲಗೊಳಿಸುವಂತಹುವುಗಳು. ಅಂತಹ ನಿನಗೆ ಪದೇ-ಪದೇ ನಮಸ್ಕರಿಸುತ್ತೇನೆ. ॥ ೨೬ ॥ ನೀನು ಸಮಗ್ರ ಐಶ್ವರ್ಯ, ಧರ್ಮ, ಯಶ, ಸಂಪತ್ತು, ಜ್ಞಾನ ಮತ್ತು ವೈರಾಗ್ಯ ಇವುಗಳಿಗೆ ಆಶ್ರಯನಾಗಿರುವೆ. ನೀನು ಸರ್ವವ್ಯಾಪಕನಾಗಿದ್ದರೂ ವಸುದೇವನ ನಂದನನಾಗಿ ಪ್ರಕಟನಾಗುವೆ. ನಾನು ನಿನಗೆ ನಮಸ್ಕರಿಸುತ್ತೇನೆ. ಪುರುಷೋತ್ತಮನಾಗಿರುವ, ಸಮಸ್ತ ಕಾರಣಗಳಿಗೂ ಪರಮಕಾರಣನಾದ, ಪೂರ್ಣಜ್ಞಾನಸ್ವರೂಪನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೭ ॥ ನೀನು ಜನ್ಮರಹಿತನಾದರೂ ಈ ಜಗತ್ತಿಗೆ ಜನ್ಮದಾತನಾಗಿರುವೆ. ನೀನೇ ಅನಂತ ಶಕ್ತಿಗಳಿಗೆ ಆಶ್ರಯನಾದ ಪರಬ್ರಹ್ಮನಾಗಿರುವೆ. ಜಗತ್ತಿನಲ್ಲಿರುವ ಕಾರ್ಯ ಕಾರಣರೂಪಗಳೂ, ಚರಾಚರಗಳೆಲ್ಲವೂ ನಿನ್ನ ಸ್ವರೂಪವೇ ಆಗಿದೆ. ಪರಮಾತ್ಮನೇ ! ನಿನಗೆ ಪುನಃ ಪುನಃ ನಮಸ್ಕಾರಗಳು. ॥ ೨೮ ॥ ಪ್ರಭುವೇ ! ನೀನು ಜಗತ್ತನ್ನು ಸೃಷ್ಟಿಮಾಡಲು ಇಚ್ಛಿಸಿದಾಗ ಉತ್ಕಟವಾದ ರಜೋಗುಣವನ್ನು, ಅದನ್ನು ಪ್ರಳಯ ಮಾಡಲು ಬಯಸಿದಾಗ ತಮೋಗುಣವನ್ನು ಹಾಗೂ ಅದನ್ನು ಪಾಲಿಸಲು ಬಯಸಿದಾಗ ಸತ್ವಗುಣವನ್ನು ಸ್ವೀಕರಿಸುವೆ. ಆದರೆ ಇದೆಲ್ಲವನ್ನೂ ಮಾಡಿಯೂ ನೀನು ಗುಣಗಳಿಂದ ಲಿಪ್ತನಾಗುವುದಿಲ್ಲ. ಜಗತ್ಪತಿಯೇ ! ನೀನು ಸಾಕ್ಷಾತ್ ಪ್ರಕೃತಿ, ಪುರುಷ ಮತ್ತು ಎರಡರ ಸಂಯೋಗ-ವಿಯೋಗಗಳಿಗೆ ಕಾರಣವಾದ ಕಾಲಸ್ವರೂಪನೂ ಆಗಿರುವೆ ; ಅವುಗಳಿಂದ ಬೇರೆಯೂ ಆಗಿರುವೆ. ॥ ೨೯ ॥ ಭಗವಂತ ! ಭೂಮಿಯಾದ ನಾನು, ಜಲ, ಅಗ್ನಿ, ವಾಯು, ಆಕಾಶ, ಪಂಚತನ್ಮಾತ್ರೆಗಳು, ಮನಸ್ಸು, ಇಂದ್ರಿಯಗಳು ಮತ್ತು ಇವುಗಳ ಅಧಿಷ್ಠಾತೃ ದೇವತೆಗಳು, ಅಹಂಕಾರ, ಮಹತ್ತತ್ತ್ವ, ಸಮಸ್ತ ಚರಾಚರ ಜಗತ್ತು – ಇವೆಲ್ಲವೂ ಅದ್ವಿತೀಯನಾದ ನಿನ್ನಲ್ಲಿ ಭ್ರಾಂತಿಯಿಂದಾಗಿ ಪ್ರತ್ಯೇಕವಾಗಿ ಕಾಣುತ್ತದೆ. ಆದರೆ ವಸ್ತುತಃ ಇವೆಲ್ಲವೂ ನಿನ್ನ ಸ್ವರೂಪವೇ ಆಗಿದೆ. ॥ ೩೦ ॥ ಶರಣಾಗತ ಭಯಭಂಜನನಾದ ಪ್ರಭುವೇ ! ನನ್ನ ಪುತ್ರನಾದ ಭೌಮಾಸುರನ ಮಗ ಭಗದತ್ತನು ಅತ್ಯಂತ ಭಯಗೊಂಡಿರುವನು. ನಾನು ಇವನನ್ನು ನಿನ್ನ ಚರಣಾರವಿಂದಗಳ ಆಶ್ರಯವನ್ನು ಬೇಡಲು ಕರೆತಂದಿರುವೆನು. ಪ್ರಭೋ ! ನೀನು ಇವನನ್ನು ರಕ್ಷಿಸು ಮತ್ತು ಸಮಸ್ತ ಜಗತ್ತಿನ ಪಾಪ-ತಾಪಗಳನ್ನು ನಾಶಗೊಳಿಸುವಂತಹ ನಿನ್ನ ಕರಕಮಲವನ್ನು ಇವನ ತಲೆಯ ಮೇಲೆ ಇರಿಸು. ॥ ೩೧ ॥

ಶ್ರೀಶುಕ ಉವಾಚ

ಇತಿ ಭೂಮ್ಯಾರ್ಥಿತೋ ವಾಗ್ಭಿರ್ಭಗವಾನ್ ಭಕ್ತಿನಮ್ರಯಾ ।
ದತ್ತ್ವಾ ಭಯಂ ಭೌಮಗೃಹಂ ಪ್ರಾವಿಶತ್ ಸಕಲರ್ದ್ಧಿಮತ್
॥ ೩.೨ ॥

ತತ್ರ ರಾಜನ್ಯಕನ್ಯಾನಾಂ ಷಟ್ಸಹಸ್ರಾಧಿಕಾಯುತಮ್ ।
ಭೌಮಾಹೃತಾನಾಂ ವಿಕ್ರಮ್ಯ ರಾಜಭ್ಯೋ ದದೃಶೇ ಹರಿಃ
॥ ೩.೩ ॥

ತಂ ಪ್ರವಿಷ್ಟಂ ಸ್ತ್ರಿಯೋ ವೀಕ್ಷ್ಯ ನರವೀರಂ ವಿಮೋಹಿತಾಃ ।
ಮನಸಾ ವವ್ರಿರೇಽಭೀಷ್ಟಂ ಪತಿಂ ದೈವೋಪಸಾದಿತಮ್
॥ ೩.೪ ॥

ಭೂಯಾತ್ ಪತಿರಯಂ ಮಹ್ಯಂ ಧಾತಾ ತದನುಮೋದತಾಮ್ ।
ಇತಿ ಸರ್ವಾಃ ಪೃಥಕ್ ಕೃಷ್ಣೇ ಭಾವೇನ ಹೃದಯಂ ದಧುಃ
॥ ೩.೫ ॥

ತಾಃ ಪ್ರಾಹಿಣೋದ್ದ್ವಾರವತೀಂ
ಸುಮೃಷ್ಟನಿರಜೋಽಂಬರಾಃ ।
ನರಯಾನೈರ್ಮಹಾಕೋಶಾನ್
ರಥಾಶ್ವಾನ್ ದ್ರವಿಣಂ ಮಹತ್ ॥ ೩.೬ ॥

ಐರಾವತಕುಲೇಭಾಂಶ್ಚ ಚತುರ್ದಂತಾಂಸ್ತರಸ್ವಿನಃ ।
ಪಾಂಡುರಾಂಶ್ಚ ಚತುಃಷಷ್ಟಿ ಪ್ರೇಷಯಾಮಾಸ ಕೇಶವಃ
॥ ೩.೭ ॥

ಗತ್ವಾ ಸುರೇಂದ್ರಭವನಂ ದತ್ತ್ವಾದಿತ್ಯೈ ಚ ಕುಂಡಲೇ ।
ಪೂಜಿತಸ್ತ್ರಿದಶೇಂದ್ರೇಣ ಸಹೇಂದ್ರಾಣ್ಯಾ ಚ ಸಪ್ರಿಯಃ
॥ ೩.೮ ॥

ಚೋದಿತೋ ಭಾರ್ಯಯೋತ್ತಾಟ್ಯ ಪಾರಿಜಾತಂ ಗರುತ್ಮತಿ ।
ಆರೋಪ್ಯ ಸೇಂದ್ರಾನ್ವಿಬುಧಾನ್ನಿರ್ಜಿತ್ಯೋಪಾನಯತ್ ಪುರಮ್
॥ ೩.೯ ॥

ಸ್ಥಾಪಿತಃ ಸತ್ಯಭಾಮಾಯಾ ಗೃಹೋದ್ಯಾನೋಪಶೋಭನಃ ।
ಅನ್ವಗುರ್ಭ್ಯಮರಾಃ ಸ್ವರ್ಗಾತ್ ತದ್ಗಂಧಾಸವಲಂಪಟಾಃ
॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭೂದೇವಿಯು ಭಕ್ತಿಭಾವದಿಂದ, ವಿನಮ್ರಳಾಗಿ ಹೀಗೆ ಭಗವಾನ್ ಶ್ರೀಕೃಷ್ಣನನ್ನು ಪ್ರಾರ್ಥಿಸಿದಾಗ ಅವನು ಭಗದತ್ತನಿಗೆ ಅಭಯ ದಾನವನ್ನು ಇತ್ತು ಭೌಮಾಸುರನ ಸಮಸ್ತ ಸಂಪತ್ಸಮೃದ್ಧವಾದ ಅರಮನೆಯನ್ನು ಪ್ರವೇಶಿದನು. ॥ ೩.೨ ॥ ಭಗವಂತನು ಅಲ್ಲಿಗೆ ಹೋಗಿ ನೋಡಿದನು – ಭೌಮಾಸುರನು ಬಲಾತ್ಕಾರವಾಗಿ ರಾಜರಿಂದ ಹದಿನಾರು ಸಾವಿರ ರಾಜಕುಮಾರಿಯರನ್ನು ಅಪಹರಿಸಿ ತನ್ನಲ್ಲಿ ಇಟ್ಟುಕೊಂಡಿದ್ದನು. ॥ ೩.೩ ॥ ಅಂತಃಪುರವನ್ನು ಪ್ರವೇಶಿಸಿದ ನರಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನನ್ನು ನೋಡಿದಾಗ ಆ ರಾಜಕುಮಾರಿಯರು ಮೋಹಿತರಾಗಿ ಭಗವಂತನ ಅಹೈತುಕವಾದ ದಯೆ ಮತ್ತು ತಮ್ಮ ಸೌಭಾಗ್ಯವೆಂದೇ ಭಾವಿಸಿ ಮನಸ್ಸಿನಲ್ಲಿಯೇ ಅವನನ್ನು ಪರಮಪ್ರಿಯತಮ ಪತಿಯ ರೂಪದಲ್ಲಿ ವರಿಸಿದರು. ॥ ೩.೪ ॥ ಆ ರಾಜಕುಮಾರಿಯರಲ್ಲಿ ಪ್ರತಿಯೊಬ್ಬಳೂ ಬೇರೆ-ಬೇರೆಯಾಗಿ – 'ಈ ಶ್ರೀಕೃಷ್ಣನೇ ನನಗೆ ಪತಿಯಾಗಲಿ ಹಾಗೂ ವಿಧಾತನು ನನ್ನ ಈ ಅಭಿಲಾಷೆಯನ್ನು ಪೂರ್ಣಗೊಳಿಸಲಿ' ಎಂದು ಮನಸ್ಸಿನಲ್ಲೆ ನಿಶ್ಚಯಿಸಿ, ಅವರು ಪ್ರೇಮಭಾವದಿಂದ ತಮ್ಮ ಹೃದಯಗಳನ್ನು ಭಗವಂತನಿಗೆ ಅರ್ಪಿಸಿಬಿಟ್ಟರು. ॥ ೩.೫ ॥ ಶ್ರೀಕೃಷ್ಣನು ಅವರೆಲ್ಲರಿಗೆ ಅಭಯವನಿತ್ತನು. ಸುಂದರವಾದ ವಸ್ತ್ರಾಭರಣಗಳಿಂದ ಸಮಲಂಕೃತೆಯರಾಗಿದ್ದ ಆ ರಾಜಕುಮಾರಿಯರನ್ನು ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ ದ್ವಾರಕೆಗೆ ಕಳಿಸಿಕೊಟ್ಟನು. ಜೊತೆಗೆ ನರಾಕುಸರನಲ್ಲಿದ್ದ ಅತುಲವಾದ ಭಂಡಾರವನ್ನು, ರಥಾಶ್ವಗಳನ್ನೂ, ಐಶ್ವರ್ಯವನ್ನೂ ದ್ವಾರಕೆಗೆ ಕಳಿಸಿದನು.॥ ೩.೬ ॥ ಐರಾವತದ ವಂಶದಲ್ಲಿ ಹುಟ್ಟಿದ, ಅತ್ಯಂತ ವೇಗವುಳ್ಳ, ನಾಲ್ಕು ನಾಲ್ಕು ದಂತಗಳುಳ್ಳ ಬಿಳಿಯ ಬಣ್ಣದ ಅರವತ್ತನಾಲ್ಕು ಆನೆಗಳನ್ನು ಭಗವಂತನು ಅಲ್ಲಿಂದ ದ್ವಾರಕೆಗೆ ಕಳಿಸಿದನು. ॥ ೩.೭ ॥

ಅನಂತರ ಭಗವಾನ್ ಶ್ರೀಕೃಷ್ಣನು ಸತ್ಯಭಾಮೆಯೊಂದಿಗೆ ಅಮರಾವತಿಯಲ್ಲಿದ್ದ ದೇವೇಂದ್ರನ ಅರಮನೆಗೆ ಹೋದನು. ಅಲ್ಲಿ ಇಂದ್ರನು ತನ್ನ ಪತ್ನಿಯಾದ ಶಚಿದೇವಿಯೊಡನೆ ಸತ್ಯಭಾಮೆಯನ್ನೂ, ಭಗವಾನ್ ಶ್ರೀಕೃಷ್ಣನನ್ನು ಯಥೋಚಿತವಾಗಿ ಪೂಜಿಸಿದನು. ಬಳಿಕ ಭಗವಂತನು ಅದಿತಿಯ ಕುಂಡಲಗಳನ್ನು ಅವನಿಗೆ ಕೊಟ್ಟನು. ॥ ೩.೮ ॥ ಅಲ್ಲಿಂದ ಮರಳುವಾಗ ಸತ್ಯಭಾಮೆಯ ಪ್ರೇರಣೆಯಂತೆ ಭಗವಾನ್ ಶ್ರೀಕೃಷ್ಣನು ನಂದನವನದ ಪಾರಿಜಾತವನ್ನು ಕಿತ್ತು ಗರುಡನ ಹೆಗಲೇರಿಸಿ, ದೇವೇಂದ್ರ ಹಾಗೂ ಸಮಸ್ತ ದೇವತೆಗಳನ್ನು ಜಯಿಸಿ ಅದನ್ನು ದ್ವಾರಕೆಗೆ ತೆಗೆದುಕೊಂಡು ಬಂದನು. ॥ ೩.೯ ॥ ಭಗವಂತನು ಅದನ್ನು ಸತ್ಯಭಾಮೆಯ ಅರಮನೆಯ ಹೂದೋಟದಲ್ಲಿ ನೆಟ್ಟನು. ಇದರಿಂದ ಆ ಉದ್ಯಾನದ ಶೋಭೆಯು ಇನ್ನೂ ಹೆಚ್ಚಾಯಿತು. ಕಲ್ಪವೃಕ್ಷದೊಂದಿಗೆ ಅದರ ಹೂಗಳ ಮತ್ತು ಮಕರಂದದ ಲೋಭಿಗಳಾದ ದುಂಬಿಗಳು ಸ್ವರ್ಗದಿಂದ ದ್ವಾರಕೆಗೆ ಬಂದುಬಿಟ್ಟವು. ॥ ೪೦ ॥

ಪರೀಕ್ಷಿತನೇ! ಇಂದ್ರನು ಶ್ರೀಕೃಷ್ಣನಿಂದ ಯಾವುದಾದರೂ ಕೆಲಸವಾಗಬೇಕಾದಾಗ ಅವನು ತಲೆಯನ್ನು ತಗ್ಗಿಸಿ ಕಿರೀಟದ ತುದಿಯಿಂದ ಶ್ರೀಕೃಷ್ಣನ ಚರಣಗಳನ್ನು ಸ್ಪರ್ಶಿಸಿ ಅವನಲ್ಲಿ ಭಿಕ್ಷೆ

ಯಯಾಚ ಆನಮ್ಯ ಕಿರೀಟಕೋಟಿಭಿಃ
ಪಾದೌ ಸ್ಪೃಶನ್ನಚ್ಯುತಮರ್ಥಸಾಧನಮ್ ।
ಸಿದ್ಧಾರ್ಥ ಏತೇನ ವಿಗೃಹ್ಯತೇ ಮಹಾ-
ನಹೋ ಸುರಾಣಾಂ ಚ ತಮೋ ಧಿಗಾಢ್ಯತಾಮ್ ॥ ೪೧ ॥

ಅಥೋ ಮುಹೂರ್ತ ಏಕಸ್ಮಿನ್
ನಾನಾಗಾರೇಷು ತಾಃ ಸ್ತ್ರಿಯಃ ।
ಯಥೋಪಯೇಮೇ ಭಗವಾಂ-
ಸ್ತಾವದ್ರೂಪಧರೋಽವ್ಯಯಃ ॥ ೪೨ ॥

ಗೃಹೇಷು ತಾಸಾಮನಪಾಯ್ಯತರ್ಕ್ಯಕೃ-
ನ್ನಿರಸ್ತಸಾಮ್ಯಾತಿಶಯೇಷ್ವವಸ್ಥಿತಃ ।
ರೇಮೇ ರಮಾಭಿರ್ನಿಜಕಾಮಸಂಪ್ಲುತೋ
ಯಥೇತರೋ ಗಾರ್ಹಕಮೇಧಿಕಾಂಶ್ಚರನ್ ॥ ೪೩ ॥

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ನವಿದುಃ ಪದವೀಂ ಯದೀಯಾಮ್ ।
ಭೇಜುರ್ಮುದಾವಿರತಮೇಧಿತಯಾನುರಾಗ-
ಹಾಸಾವಲೋಕನವಸಂಗಮಜಲ್ಪಲಜ್ಜಾಃ ॥ ೪೪ ॥

ಪ್ರತ್ಯುದ್ಗಮಾಸನವರಾರ್ಹಣಪಾದಶೌಚ-
ತಾಂಬೂಲವಿಶ್ರಮಣವೀಜನಗಂಧಮಾಲ್ಯೈಃ ।
ಕೇಶಪ್ರಸಾರಶಯನಸ್ನಪನೋಪಹಾರ್ಯೈ-
ರ್ದಾಸೀಶತಾ ಅಪಿ ವಿಭೋರ್ವಿದಧುಃ ಸ್ಮ ದಾಸ್ಯಮ್ ॥ ೪೫ ॥

ಬೇಡಿದ್ದನು. ಆದರೆ ಕೆಲಸವಾದಮೇಲೆ ಅವನು ಅದೇ ಶ್ರೀಕೃಷ್ಣನಲ್ಲಿ ಯುದ್ಧವನ್ನು ಮಾಡಲು ಹಿಂದು ಮುಂದು ನೋಡಲಿಲ್ಲ. ನಿಜವಾಗಿ ನೋಡಿದರೆ ಈ ದೇವತೆಗಳೂ ಕೂಡ ಭಾರೀ ತಮೋ ಗುಣಿಗಳು ಸ್ವಾರ್ಥಿಗಳು ಮತ್ತು ಅವರಲ್ಲಿರುವ ದೊಡ್ಡ ದೋಷ ವೆಂದರೆ ಧನಾಢ್ಯತೆ. ಇಂತಹ ಧನಾಢ್ಯತೆಗೆ ಧಿಕ್ಕಾರವಿರಲಿ. ॥ ೪೧ ॥

ಅನಂತರ ಭಗವಾನ್ ಶ್ರೀಕೃಷ್ಣನು ಒಂದೇ ಮುಹೂರ್ತದಲ್ಲಿ ಪ್ರತ್ಯೇಕ-ಪ್ರತ್ಯೇಕ ಭವನಗಳಲ್ಲಿ ಬೇರೆ-ಬೇರೆಯ ರಾಜಕನ್ಯೆಯರಿಗೆ ಅಭೀಷ್ಟವಾದ ಅಷ್ಟೂ ರೂಪಗಳನ್ನು ಧರಿಸಿಕೊಂಡು ಒಂದೇ ಬಾರಿಗೆ ಹದಿನಾರುಸಾವಿರ ಕನ್ಯೆಯರ ಪಾಣಿಗ್ರಹಣ ಮಾಡಿದನು. ಸರ್ವಶಕ್ತನಾದ ಅವಿನಾಶಿ ಭಗವಂತನ ವಿಷಯದಲ್ಲಿ ಆಶ್ಚರ್ಯದ ಮಾತೇನಿದೆ ? ॥ ೪೨ ॥ ಭಗವಂತನ ಪತ್ನೀಯರ ಬೇರೆ-ಬೇರೆ ಭವನಗಳಲ್ಲಿ ಜಗತ್ತಿನಲ್ಲಿ ಅದಕ್ಕೆ ಸರಿಸಮಾನವಾದ ಯಾವುದೇ ಸಾಮಗ್ರಿಗಳೂ ಎಲ್ಲಿಯೂ, ಇಲ್ಲದಿರುವಂತಹ ದಿವ್ಯ ಸಾಮಗ್ರಿಗಳು ತುಂಬಿದ್ದವು. ಆ ಅರಮನೆಗಳಲ್ಲಿ ಇದ್ದುಕೊಂಡು ಮತಿಗೆ ನಿಲುಕದ ಲೀಲೆಯನ್ನು ತೋರುವ ಅವಿನಾಶಿ ಭಗವಾನ್ ಶ್ರೀಕೃಷ್ಣನು ಆತ್ಮಾನಂದದಲ್ಲಿ ಮಗ್ನನಾಗಿರುತ್ತಾ ಲಕ್ಷ್ಮೀದೇವಿಯ ಅಂಶರೂಪರಾದ ಆ ಪತ್ನಿಯರೊಂದಿಗೆ - ಸಾಧಾರಣ ಗೃಹಸ್ಥ ನಂತೆ ಗೃಹಸ್ಥ ಧರ್ಮಕ್ಕನುಸಾರ ಆಚರಣೆಗಳನ್ನು ಮಾಡುತ್ತಾ ವಿಹರಿಸುತ್ತಿದ್ದನು. ॥ ೪೩. ॥ ಪರೀಕ್ಷಿತನೇ ! ಬ್ರಹ್ಮಾದಿ ಶ್ರೇಷ್ಠದೇವತೆ ಗಳೂ ಕೂಡ ಭಗವಂತನ ವಾಸ್ತವಿಕವಾದ ಸ್ವರೂಪವನ್ನು ಮತ್ತು ಅವನ ಪ್ರಾಪ್ತಿಯ ಮಾರ್ಗವನ್ನೂ ತಿಳಿಯುತ್ತಿಲ್ಲ. ಅಂತಹ ರಮಾ ರಮಣನಾದ ಭಗವಾನ್ ಶ್ರೀಕೃಷ್ಣನನ್ನು ಆ ಪತ್ನಿಯರು ಪತಿಯಾಗಿ ಪಡೆದುಕೊಂಡಿದ್ದರು. ಈಗ ನಿತ್ಯ-ನಿರಂತರ ಅವರ ಪ್ರೇಮಾನಂದ ಗಳು ಅಭಿವೃದ್ಧಿಯಾಗುತ್ತಿತ್ತು. ಅವರು ಪ್ರೇಮದಿಂದ ಕೂಡಿದ ಮಂದಹಾಸದಿಂದಲೂ ಮಧುರವಾದ ನೋಟದಿಂದಲೂ, ನೂತನ ಸಮಾಗಮ ದಿಂದಲೂ, ಪ್ರೇಮಾಲಾಪ ಹಾಗೂ ಪ್ರೇಮ ಭಾವವನ್ನು ಹೆಚ್ಚಿಸುವ ಲಜ್ಜೆಯಿಂದ ಕೂಡಿಕೊಂಡು ಎಲ್ಲ ಪ್ರಕಾರದಿಂದ ಭಗವಂತನ ಸೇವೆ ಮಾಡುತ್ತಿದ್ದರು. ॥ ೪೪ ॥ ಅವರಲ್ಲಿ ಎಲ್ಲ ಪತ್ನಿಯರೊಂದಿಗೂ ಸೇವೆ ಮಾಡುವ ಸಾವಿರಾರು ದಾಸಿಯರು ಇರುತ್ತಿದ್ದರು. ಹೀಗಿದ್ದರೂ ಅವರ ಅರಮನೆಗೆ ಭಗವಂತನು ದಯಮಾಡಿಸಿದಾಗ ಅವರು ಸ್ವತಃ ಮುಂದೆ ಬಂದು ಆದರದಿಂದ ಬರಮಾಡಿಕೊಂಡು ಶ್ರೇಷ್ಠ ಆಸನದಲ್ಲಿ ಕುಳ್ಳಿರಿಸಿ, ಉತ್ತಮ ಸಾಮಗ್ರಿಗಳಿಂದ ಪೂಜಿಸುವರು. ಚರಣಕಮಲಗಳನ್ನು ತೊಳೆದು ಸುವಾಸಿತವಾದ ತಾಂಬೂಲವನ್ನು ನೀಡುವರು. ಕಾಲೊತ್ತುತ್ತಾ ಬಳಲಿಕೆಯನ್ನು ದೂರಮಾಡುವರು. ಗಾಳಿ ಬೀಸು ವರು, ಚಂದನ ಮುಂತಾದ ಪರಿಮಳ ದ್ರವ್ಯಗಳನ್ನು ಪೂಸುವರು. ಹೂವಿನ ಹಾರಗಳನ್ನು ತೊಡಿಸಿ, ಕೂದಲು ಸರಿಪಡಿಸುವರು. ಸ್ನಾನಮಾಡಿಸುವರು, ಮಲಗಿಸುವರು, ಬಗೆ-ಬಗೆಯ ಭೋಜನ ಮಾಡಿಸುವರು - ಹೀಗೆ ತಮ್ಮ ಕೈಗಳಿಂದಲೇ ಭಗವಂತನ ಸೇವೆ ಮಾಡುತ್ತಿದ್ದರು. ॥ ೪೫ ॥

ಐವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೫೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪಾರಿಜಾತಹರಣನರಕವಧೋ ನಾಮೈಕೋನಷಷ್ಟಿತಮೋಽಧ್ಯಾಯಃ ॥ ೫೯ ॥

ಅರವತ್ತನೆಯ ಅಧ್ಯಾಯ

ಶ್ರೀಕೃಷ್ಣ-ರುಕ್ಮಿಣೀ-ಸಂವಾದ

ಶ್ರೀಶುಕ ಉವಾಚ

ಕರ್ಹಿಚಿತ್ ಸುಖಮಾಸೀನಂ ಸ್ವತಲ್ಪಸ್ಥಂ ಜಗದ್ಗುರುಮ್ ।
ಪತಿಂ ಪರ್ಯಚರದ್ಭೈಷ್ಮೀ ವ್ಯಜನೇನ ಸಖೀಜನೈಃ ॥ ೧ ॥

ಯಸ್ತ್ವೇತಲ್ಲೀಲಯಾ ವಿಶ್ವಂ ಸೃಜತ್ಯತ್ಸ್ಯವತೀಶ್ವರಃ ।
ಸ ಹಿ ಜಾತಃ ಸ್ವಸೇತೂನಾಂ ಗೋಪೀಥಾಯ ಯದುಷ್ವಜಃ ॥ ೨ ॥

ತಸ್ಮಿನ್ನಂತರ್ಗೃಹೇ ಭ್ರಾಜನ್ಮುಕ್ತಾದಾಮವಿಲಂಬಿನಾ ।
ವಿರಾಜಿತೇ ವಿತಾನೇನ ದೀಪೈರ್ಮಣಿಮಯೈರಪಿ ॥ ೩ ॥

ಮಲ್ಲಿಕಾದಾಮಭಿಃ ಪುಷ್ಪೈರ್ದ್ವಿರೇಫಕುಲನಾದಿತೈಃ ।
ಜಾಲರಂಧ್ರಪ್ರವಿಷ್ಟೈಶ್ಚ ಗೋಭಿಶ್ಚಂದ್ರಮಸೋಽಮಲೈಃ ॥ ೪ ॥

ಪಾರಿಜಾತವನಾಮೋದವಾಯುನೋದ್ಯಾನಶಾಲಿನಾ ।
ಧೂಪೈರಗುರುಜೈ ರಾಜನ್ ಜಾಲರಂಧ್ರವಿನಿರ್ಗತೈಃ ॥ ೫ ॥

ಪಯಃಫೇನನಿಭೇ ಶುಭ್ರೇ ಪರ್ಯಂಕೇ ಕಶಿಪೂತ್ತಮೇ ।
ಉಪತಸ್ಥೇ ಸುಖಾಸೀನಂ ಜಗತಾಮೀಶ್ವರಂ ಪತಿಮ್ ॥ ೬ ॥

ಬಾಲವ್ಯಜನಮಾದಾಯ ರತ್ನದಂಡಂ ಸಖೀಕರಾತ್ ।
ತೇನ ವೀಜಯತೀ ದೇವೀ ಉಪಾಸಾಂಚಕ್ರ ಈಶ್ವರಮ್ ॥ ೭ ॥

ಸೋಪಾಚ್ಯುತಂ ಕ್ವಣಯತೀ ಮಣಿನೂಪುರಾಭ್ಯಾಂ
ರೇಜೇಽಂಗುಲೀಯವಲಯವ್ಯಜನಾಗ್ರಹಸ್ತಾ ।
ವಸ್ತ್ರಾಂತಗೂಢಕುಚಕುಂಕುಮಶೋಣಹಾರ-
ಭಾಸಾ ನಿತಂಬಧೃತಯಾ ಚ ಪರಾರ್ಧ್ಯಕಾಂಚ್ಯಾ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ಇರುತ್ತಿರಲಾಗಿ ಒಂದು ದಿನ ಸಮಸ್ತ ಜಗತ್ತಿಗೂ ಗುರುವಾದ ಭಗವಾನ್ ಶ್ರೀಕೃಷ್ಣನು ರುಕ್ಮಿಣಿಯ ಮಂಚದಮೇಲೆ ಸುಖವಾಗಿ ಕುಳಿತಿದ್ದನು. ರುಕ್ಮಿಣೀದೇವಿಯು ತನ್ನ ಸಖಿಯರೊಂದಿಗೆ ಸ್ವಾಮಿಗೆ ಗಾಳಿ ಬೀಸುತ್ತಾ ಉಪಚರಿಸುತ್ತಿದ್ದಳು. ॥ ೧ ॥ ಸರ್ವಶಕ್ತನಾದ ಭಗವಂತನು ಲೀಲೆಯಿಂದ ಈ ವಿಶ್ವವನ್ನು ಸೃಜಿಸಿ, ರಕ್ಷಿಸಿ, ಕಡೆಯಲ್ಲಿ ಪ್ರಳಯವನ್ನೂ ಮಾಡುವನು. ಅಂತಹ ಹುಟ್ಟು ಸಾವುಗಳಿಲ್ಲದ ಪ್ರಭುವು ತಾನೇ ಕಲ್ಪಿಸಿದ ಧರ್ಮಮರ್ಯಾದೆಗಳ ರಕ್ಷಣೆಗಾಗಿ ಯದುವಂಶದಲ್ಲಿ ಅವತರಿಸಿದ್ದನು. ॥ ೨ ॥ ಪರೀಕ್ಷಿತನೇ ! ರುಕ್ಮಿಣಿಯ ಆ ಅಂತಃಪುರವು ಬಹು ಸುಂದರವಾಗಿತ್ತು. ವಸ್ತ್ರಗಳಿಂದ ಕಲ್ಪಿಸಿದ್ದ ಮೇಲುಛಾವಣಿಯಲ್ಲಿ ಥಳ-ಥಳಿಸುವ ಮುತ್ತಿನ ಸರಗಳನ್ನು ತೂಗುಹಾಕಿದ್ದರು. ಮಣಿಮಯವಾದ ದೀಪಗಳು ಝಗ-ಝಗಿಸುತ್ತಿದ್ದವು. ॥ ೩ ॥ ದುಂಬಿಗಳ ನಿನಾದದಿಂದ ಕೂಡಿದ ಜಾಜಿ, ಮಲ್ಲಿಗೆ ಹೂವುಗಳ ಹಾರಗಳಿಂದಲೂ ಅಂತಃಪುರವು ಸಮಲಂಕೃತವಾಗಿತ್ತು. ಪೂರ್ಣಚಂದ್ರನ ಶುಭ್ರವಾದ ಕಿರಣಗಳು ಕಿಟಕಿಗಳ ಮೂಲಕವಾಗಿ ಅಂತಃಪುದಲ್ಲಿ ಹರಡಿದ್ದವು. ॥ ೪ ॥ ಉದ್ಯಾನದಲ್ಲಿ ಪಾರಿಜಾತ ಪುಷ್ಪಗಳ ಮೇಲೆ ಬೀಸಿದ ಸುಗಂಧಮಯ ಮಂದಾನಿಲವು ಎಲ್ಲೆಡೆ ಪಸರಿಸಿತ್ತು. ಅಗರು ಧೂಪಗಳ ಪರಿಮಳವು ಕಿಟಕಿಯ ರಂಧ್ರಗಳಿಂದ ಹೊರಗೆ ಹೋಗಿ ಹರಡುತ್ತಿತ್ತು. ॥ ೫ ॥ ಅಂತಹ ಅಂತಃಪುರದಲ್ಲಿ ಹಾಲಿನ ನೊರೆಯಂತೆ ಶುಭ್ರವಾದ ಹಂಸತೂಲಿಕಾತಲ್ಪದಲ್ಲಿ ಆನಂದ ತುಂದಿಲನಾಗಿ ಶ್ರೀಕೃಷ್ಣನು ವಿರಾಜಿಸುತ್ತಿದ್ದನು. ರುಕ್ಮಿಣೀದೇವಿಯು ತ್ರಿಲೋಕಾಧೀಶನನ್ನು ತನ್ನ ಪತಿಯನ್ನಾಗಿಸಿಕೊಂಡು ಅವನ ಸೇವೆ ಮಾಡುತ್ತಿದ್ದಳು. ॥ ೬ ॥ ಲಕ್ಷ್ಮೀಸ್ವರೂಪಿಣಿಯಾದ ರುಕ್ಮಿಣಿ ದೇವಿಯು ರತ್ನಖಚಿತವಾದ ಹಿಡಿಯುಳ್ಳ ಮನೋಹರವಾದ ಚಾಮರವನ್ನು ಸಖಿಯ ಕೈಯಿಂದ ತೆಗೆದುಕೊಂಡು ತಾನೇ ಶ್ರೀಕೃಷ್ಣನಿಗೆ ಬೀಸುತ್ತಾ ಅವನ ಸೇವೆಯನ್ನು ಮಾಡುತ್ತಿದ್ದಳು. ॥ ೭ ॥ ಆಕೆಯ ಕರಕಮಲಗಳಲ್ಲಿ ಕೈಗಡಗಗಳೂ, ಉಂಗುರಗಳೂ, ರತ್ನ ಖಚಿತ ಬಳೆಗಳೂ, ಚಾಮರವೂ ಶೋಭಿಸುತ್ತಿದ್ದವು. ಚರಣಗಳಲ್ಲಿ ಮಣಿಖಚಿತ ನೂಪುರಗಳು ಝಣ-ಝಣಿಸುತ್ತಿದ್ದವು. ಸೆರಗಿನಲ್ಲಿ ಅಡಗಿದ್ದ ಸ್ತನಗಳ ಕುಂಕುಮಕೇಸರದ ಬಣ್ಣದಿಂದ ಕೊರಳ ಹಾರಗಳು ಕೆಂಪಾಗಿ ಕಾಣುತ್ತಾ, ಚಾಮರ ಬೀಸುವಾಗ ಸ್ಪಂದಿಸುತ್ತಿದ್ದವು. ಸೊಂಟದಲ್ಲಿ ಧರಿಸಿದ್ದ ರತ್ನಖಚಿತವಾದ ಡಾಬಿನ ಸರಗಳು ನಿತಂಬಗಳ ಮೇಲೆ ಜೋಲಾಡುತ್ತಿದ್ದವು. ಹೀಗೆ ಆಕೆಯು ಭಗವಂತನ ಬಳಿಯಲ್ಲೇ ಇದ್ದು ಅವನ ಸೇವೆಯಲ್ಲಿ ತಲ್ಲೀನಳಾಗಿದ್ದಳು. ॥ ೮ ॥

ತಾಂ ರೂಪಿಣೀಂ ಶ್ರಿಯಮನನ್ಯಗತಿಂ ನಿರೀಕ್ಷ್ಯ
ಯಾ ಲೀಲಯಾ ಧೃತತನೋರನುರೂಪರೂಪಾ ।
ಪ್ರೀತಃ ಸ್ಮಯನ್ನಲಕಕುಂಡಲನಿಷ್ಕಕಂಠ-
ವಕ್ತ್ರೋಲ್ಲಸತ್ಸ್ಮಿತಸುಧಾಂ ಹರಿರಾಬಭಾಷೇ ॥ ೯ ॥

ಶ್ರೀಭಗವಾನುವಾಚ

ರಾಜಪುತ್ರೀಪ್ಸಿತಾ ಭೂಪೈರ್ಲೋಕಪಾಲವಿಭೂತಿಭಿಃ ।
ಮಹಾನುಭಾವೈಃ ಶ್ರೀಮದ್ಭಿ ರೂಪೌದಾರ್ಯಬಲೋರ್ಜಿತೈಃ
॥ ೧೦ ॥

ತಾನ್ ಪ್ರಾಪ್ತಾನರ್ಥಿನೋ ಹಿತ್ವಾ
ಚೈದ್ಯಾದೀನ್ಸ್ಮರದುರ್ಮದಾನ್ ।
ದತ್ತಾ ಭ್ರಾತ್ರಾ ಸ್ವಪಿತ್ರಾ ಚ
ಕಸ್ಮಾನ್ನೋ ವವೃಷೇಽಸಮಾನ್ ॥ ೧೧ ॥

ರಾಜಭ್ಯೋ ಬಿಭ್ಯತಃ ಸುಭ್ರೂಃ ಸಮುದ್ರಂ ಶರಣಂ ಗತಾನ್ ।
ಬಲವದ್ಭಿಃ ಕೃತದ್ವೇಷಾನ್ಪ್ರಾಯಸ್ಯುಗ್ರನೃಪಾಸನಾನ್
॥ ೧೨ ॥

ಅಸ್ಪಷ್ಟಮರ್ಮನಾಂ ಪುಂಸಾಮಲೋಕಪಥಮೀಯುಷಾಮ್ ।
ಆಸ್ಥಿತಾಃ ಪದವೀಂ ಸುಭ್ರೂಃ ಪ್ರಾಯಃ ಸೀದಂತಿ ಯೋಷಿತಃ
॥ ೧೩ ॥

ನಿಷ್ಕಿಂಚನಾ ವಯಂ ಶಶ್ವನ್ನಿಷ್ಕಿಂಚನಜನಪ್ರಿಯಾಃ ।
ತಸ್ಮಾತ್ ಪ್ರಾಯೇಣ ನ ಹ್ಯಾಢ್ಯಾ ಮಾಂ ಭಜಂತಿ ಸುಮಧ್ಯಮೇ
॥ ೧೪ ॥

ಯಯೋರಾತ್ಮಸಮಂ ವಿತ್ತಂ ಜನ್ಮೈಶ್ವರ್ಯಾಕೃತಿರ್ಭವಃ ।
ತಯೋರ್ವಿವಾಹೋ ಮೈತ್ರೀ ಚ ನೋತ್ತಮಾಧಮಯೋಃ ಕ್ವಚಿತ್
॥ ೧೫ ॥

ವೈದರ್ಭ್ಯೇತದವಿಜ್ಞಾಯ ತ್ವಯಾದೀರ್ಘಸಮೀಕ್ಷಯಾ ।
ವೃತಾ ವಯಂ ಗುಣೈರ್ಹೀನಾ ಭಿಕ್ಷುಭಿಃ ಶ್ಲಾಘಿತಾ ಮುಧಾ
॥ ೧೬ ॥

ಅಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಮ್ ।
ಯೇನ ತ್ವಮಾಶಿಷಃ ಸತ್ಯಾ ಇಹಾಮುತ್ರ ಚ ಲಪ್ಸ್ಯಸೇ
॥ ೧೭ ॥

ಚೈದ್ಯಶಾಲ್ವಜರಾಸಂಧದಂತವಕ್ತ್ರಾದಯೋ ನೃಪಾಃ ।
ಮಮ ದ್ವಿಷಂತಿ ವಾಮೋರು ರುಕ್ಮೀ ಚಾಪಿ ತವಾಗ್ರಜಃ
॥ ೧೮ ॥

ಲೀಲೆಗಾಗಿ ಮನುಷ್ಯರೂಪವನ್ನು ಧರಿಸಿ ಬಂದಿರುವ ತನಗೆ ಅನುರೂಪಳಾಗಿರುವ, ಅನನ್ಯ ಶರಣಾಗಿರುವ, ಕಡು ಚೆಲುವೆಯಾದ, ಲಕ್ಷ್ಮಿಯ ಸ್ವರೂಪಳೇ ಆಗಿರುವ, ಮುಂಗುರುಳು ಗಳಿಂದಲೂ, ಕುಂಡಲಗಳಿಂದಲೂ, ಕನಕಹಾರಗಳಿಂದಲೂ ವಿರಾಜಿಸುತ್ತಿದ್ದ ಮುಖದಲ್ಲಿ ಮಂದಹಾಸವೆಂಬ ಅಮೃತವನ್ನು ಸುರಿಸುತ್ತಿರುವ ರುಕ್ಮಿಣೀದೇವಿಯನ್ನು ನೋಡಿ ಸುಪ್ರೀತನಾದ ಶ್ರೀಹರಿಯು ಅವಳಲ್ಲಿ ಇಂತೆಂದನು – ॥ ೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ರಾಜಕುಮಾರಿ! ಐಶ್ವರ್ಯದಲ್ಲಿ ಲೋಕಪಾಲರಂತಿದ್ದ ಹೆಚ್ಚು ಪ್ರಭಾವಶಾಲಿ ಗಳಾಗಿದ್ದ ಶ್ರೀಮಂತರಾಗಿದ್ದ ರೂಪ-ಔದಾರ್ಯ-ಬಲದಲ್ಲಿ ಅಧಿಕರಾಗಿದ್ದ ಹಲವಾರು ರಾಜರು ನಿನ್ನನ್ನು ವಿವಾಹವಾಗಲು ಅಪೇಕ್ಷಿಸಿದ್ದರು. ॥ ೧೦ ॥ ನಿನ್ನ ತಂದೆ ಮತ್ತು ಅಣ್ಣಂದಿರು ಶಿಶುಪಾಲನೊಂದಿಗೆ ನಿನ್ನ ಮದುವೆಮಾಡುವುದಾಗಿ ವಾಗ್ದಾನವನ್ನೂ ಮಾಡಿದ್ದರು. ಕಾಮೋನ್ಮತ್ತರಾದ ಶಿಶುಪಾಲನೇ ಮೊದಲಾದವರು ನಿನ್ನನ್ನು ಯಾಚಿಸಲೂ ಬಂದಿದ್ದರು. ಅಂತಹವರೆಲ್ಲರನ್ನು ತ್ಯಜಿಸಿ, ನಿನಗೆ ಸರಿದೂಗದಿರುವ ನನ್ನನ್ನೇಕೆ ನೀನು ಮದುವೆಯಾದೆ? ಸುಂದರಿ! ನೋಡು, ಜರಾಸಂಧನೇ ಮೊದಲಾದ ಶತ್ರುರಾಜರಿಗೆ ಹೆದರಿ ನಾವು ಸಮುದ್ರದಲ್ಲಿ ಮನೆಮಾಡಿಕೊಂಡು ಇದ್ದೇವೆ. ಬಲಿಷ್ಠರೊಡನೆ ನಾವು ವೈರವನ್ನು ಕಟ್ಟಿಕೊಂಡಿದ್ದೇವೆ. ಮೇಲಾಗಿ ನಾವು ರಾಜಸಿಂಹಾಸನದ ಅಧಿಕಾರದಿಂದಲೂ ವಂಚಿತರಾಗಿ ದ್ದೇವೆ. ॥ ೧೨ ॥ ಸುಂದರಿಯೇ! ಅಸ್ಪಷ್ಟಮಾರ್ಗವುಳ್ಳ, ಲೋಕದ ಜನರ ಮಾರ್ಗವನ್ನು ಅನುಸರಿಸದೆ, ವಿಲಕ್ಷಣವಾದ ಮಾರ್ಗವನ್ನು ಹಿಡಿದಿರುವ ನಮ್ಮಂತಹ ಪುರುಷರ ಮಾರ್ಗವನ್ನು ಹಿಡಿದ ಸ್ತ್ರೀಯರು ಪ್ರಾಯಶಃ ಕಷ್ಟಕ್ಕೆ ಒಳಗಾಗುತ್ತಾರೆ. ॥ ೧೩. ॥ ಸುಂದರಳೇ! ನಾವು ಯಾವಾಗಲೂ ಯಾವುದೇ ಕಾಮನೆ ಇಲ್ಲದ ವರು ಆದುದರಿಂದ ನಮಗೆ ಅಂಥ ನಿಷ್ಕಂಚನರನ್ನು ಕಂಡರೆ ಬಹಳ ಪ್ರೀತಿ. ಈ ಕಾರಣದಿಂದಲೇ ಪ್ರಾಯಶಃ ಧನಿಕರಾದವರು ನನ್ನನ್ನು ಆಶ್ರಯಿಸುವುದಿಲ್ಲ ॥ ೧೪ ॥ ಧನ, ಕುಲ, ಐಶ್ವರ್ಯ, ಸೌಂದರ್ಯ, ಆದಾಯ – ಇವುಗಳಲ್ಲಿ ತಮಗೆ ಸಮಾನರಾದವರೊಂದಿಗೆ ವಿವಾಹ ಮತ್ತು ಮೈತ್ರಿಯ ಸಂಬಂಧವನ್ನು ಬೆಳೆಸಬೇಕು. ತನ್ನಿಂದ ಶ್ರೇಷ್ಠ ಅಥವಾ ಕನಿಷ್ಠರೊಂದಿಗೆ ಸಂಬಂಧ ಬೆಳೆಸ ಬಾರದು. ॥ ೧೫ ॥ ವಿದರ್ಭರಾಜಕುಮಾರೀ! ನೀನು ದೂರದೃಷ್ಟಿ ಯಿಲ್ಲದೆ ಈ ವಿಷಯಗಳ ಕುರಿತು ವಿಚಾರಮಾಡಲಿಲ್ಲ. ಏನೂ ತಿಳಿಯದ ಭಿಕ್ಷುಕರಿಂದ ನನ್ನ ಪ್ರಶಂಸೆಯನ್ನು ಕೇಳಿ, ಗುಣಹೀನ ನಾದ ನನ್ನನ್ನು ವರಿಸಿದೆ. ॥ ೧೬ ॥ ದೇವಿ! ಈಗಲೂ ಕಾಲಮಿಂಚಿ ಹೋಗಿಲ್ಲ. ನೀನು ನಿನಗೆ ಅನುರೂಪನಾದ, ಶ್ರೇಷ್ಠನಾದ ಕ್ಷತ್ರಿಯ ಕುಮಾರನನ್ನು ಈಗಲೂ ವರಿಸಬಹುದು. ಇದರಿಂದ ಇಹಲೋಕ-ಪರಲೋಕಗಳ ಸಮಸ್ತ ಆಸೆ-ಆಕಾಂಕ್ಷೆಗಳು ಈಡೇರುತ್ತವೆ. ॥ ೧೭ ॥ ಸುಂದರೀ! ಶಿಶುಪಾಲ, ಶಾಲ್ವ, ಜರಾಸಂಧ, ದಂತವಕ್ತ್ರ ಮುಂತಾದ ರಾಜರು ಮತ್ತು ನಿಮ್ಮಣ್ಣ ರುಕ್ಮಿಯೂ ಸದಾಕಾಲ ನನ್ನನ್ನು ದ್ವೇಷಿಸುತ್ತಾರೆ – ಇದು ನಿನಗೆ ತಿಳಿದೇ ಇದೆ. ॥ ೧೮ ॥

ತೇಷಾಂ ವೀರ್ಯಮದಾಂಧಾನಾಂ ದೃಪ್ತಾನಾಂ ಸ್ಮಯನುತ್ತಯೇ ।
ಅನೀತಾಸಿ ಮಯಾ ಭದ್ರೇ ತೇಜೋಽಪಹರತಾ ಸತಾಮ್
॥ ೧೯ ॥

ಉದಾಸೀನಾ ವಯಂ ನೂನಂ ನ ಸ್ತ್ರ್ಯಪತ್ಯಾರ್ಥಕಾಮುಕಾಃ ।
ಆತ್ಮಲಬ್ಧ್ಯಾಸ್ಮಹೇ ಪೂರ್ಣಾ ಗೇಹಯೋರ್ಜ್ಯೋತಿರಕ್ರಿಯಾಃ
॥ ೨೦ ॥

ಶ್ರೀಶುಕ ಉವಾಚ

ಏತಾವದುಕ್ತ್ವಾ ಭಗವಾನಾತ್ಮಾನಂ ವಲ್ಲಭಾಮಿವ ।
ಮನ್ಯಮಾನಾಮವಿಶ್ಲೇಷಾತ್ ತದ್ದರ್ಪಘ್ನ ಉಪಾರಮತ್
॥ ೨೧ ॥

ಇತಿ ತ್ರಿಲೋಕೇಶಪತೇಸ್ತದಾऽऽತ್ಮನಃ
ಪ್ರಿಯಸ್ಯ ದೇವ್ಯಶ್ರುತಪೂರ್ವಮಪ್ರಿಯಮ್ ।
ಆಶ್ರುತ್ಯ ಭೀತಾ ಹೃದಿ ಜಾತವೇಪಥುಃ
ಚಿಂತಾಂ ದುರಂತಾಂ ರುದತೀ ಜಗಾಮ ಹ ॥ ೨೨ ॥

ಪದಾ ಸುಜಾತೇನ ನಖಾರುಣಶ್ರಿಯಾ
ಭುವಂ ಲಿಖಿಂತ್ಯಶ್ರುಭಿರಂಜನಾಸಿತೈಃ ।
ಆಸಿಂಚತೀ ಕುಂಕುಮರೂಷಿತೌ ಸ್ತನೌ
ತಸ್ಥಾವಧೋಮುಖ್ಯತಿದುಃಖರುದ್ಧವಾಕ್ ॥ ೨೩ ॥

ತಸ್ಯಾಃ ಸುದುಃಖಭಯಶೋಕವಿನಷ್ಟಬುದ್ಧೇ-
ರ್ಹಸ್ತಾಚ್ಚಥದ್ವಲಯತೋ ವ್ಯಜನಂ ಪಪಾತ ।
ದೇಹಶ್ಚ ವಿಕ್ಲವಧಿಯಃ ಸಹಸೈವ ಮುಹ್ಯನ್
ರಂಭೇವ ವಾಯುವಿಹತಾ ಪ್ರವಿಕೀರ್ಯಕೇಶಾನ್ ॥ ೨೪ ॥

ತದ್ದೃಷ್ಟ್ವಾ ಭಗವಾನ್ ಕೃಷ್ಣಃ ಪ್ರಿಯಾಯಾಃ ಪ್ರೇಮಬಂಧನಮ್ ।
ಹಾಸ್ಯಪ್ರೌಢಿಮಜಾನಂತ್ಯಾಃ ಕರುಣಃ ಸೋऽನ್ವಕಂಪತ
॥ ೨೫ ॥

ಪರ್ಯಂಕಾದವರುಹ್ಯಾಶು ತಾಮುತ್ಥಾಪ್ಯ ಚತುರ್ಭುಜಃ ।
ಕೇಶಾನ್ ಸಮುಹ್ಯ ತದ್ವಕ್ತ್ರಂ ಪ್ರಾಮೃಜತ್ ಪದ್ಮಪಾಣಿನಾ
॥ ೨೬ ॥

ಕಲ್ಯಾಣೀ! ಅವರೆಲ್ಲರೂ ಬಲ-ಪರಾಕ್ರಮದ ಮದದಿಂದ ಕುರುಡರಾಗಿದ್ದರು. ತಮ್ಮ ಮುಂದೆ ಯಾರನ್ನೂ ಲೆಕ್ಕಿಸುತ್ತಿರಲಿಲ್ಲ. ಅಂತಹ ದುಷ್ಟರ ಗರ್ವವನ್ನೂ ಮುರಿಯಲಿಕ್ಕಾಗಿಯೇ ನಾನು ನಿನ್ನನ್ನು ಅಪಹರಿಸಿ ತಂದಿರುವೆನು. ಇದಲ್ಲದೆ ಬೇರೆ ಯಾವ ಕಾರಣವೂ ಇಲ್ಲ. ॥ ೧೯ ॥ ನಿಶ್ಚಯವಾಗಿಯೂ ನಾವು ಉದಾಸೀನರು. ನಮಗೆ ಪತ್ನೀ-ಪುತ್ರರಲ್ಲಾಗಲೀ, ಧನದಲ್ಲಾಗಲೀ ಲಾಲಸೆಯಿಲ್ಲ. ಪತ್ನೀ-ಪುತ್ರರನ್ನು ಪಡೆಯಬೇಕೆಂಬ ಕಾಮನೆಯೂ ಇಲ್ಲ. ಈ ಮನೆಯಲ್ಲಿಯೂ, ದೇಹದಲ್ಲಿಯೂ ದೀಪಶಿಖೆಯಂತೆ ಸಾಕ್ಷಿಭೂತರಾಗಿ ನಿಷ್ಕ್ರಿಯರಾಗಿ ಕುಳಿತಿದ್ದೇವೆ. ಆತ್ಮಸಾಕ್ಷಾತ್ಕಾರವನ್ನು ಪಡೆದು ಪೂರ್ಣಕಾಮರಾಗಿ ಕೃತಕೃತರಾಗಿದ್ದೇವೆ. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನನ್ನು ಅರೆಕ್ಷಣವೂ ಬಿಟ್ಟಿರಲಾರದೇ ಇರುವ ರುಕ್ಮಿಣಿಯಲ್ಲಿ - ನಾನು ಎಲ್ಲರಿಗಿಂತ ಹೆಚ್ಚು ನನ್ನ ಇನಿಯನಿಗೆ ಪ್ರಿಯಳಾಗಿದ್ದೇನೆ' ಎಂಬ ಅಭಿಮಾನ ಉಂಟಾಗಿತ್ತು. ಇಂತಹ ಗರ್ವವನ್ನು ಕಳೆಯಲಿಕ್ಕಾಗಿಯೇ ಭಗವಂತನು ಇಷ್ಟನ್ನು ಹೇಳಿ ಸುಮ್ಮನಾದನು. ॥ ೨೧ ॥ ರಾಜೇಂದ್ರನೇ! ರುಕ್ಮಿಣೀದೇವಿಯು ತನ್ನ ಪರಮ ಪ್ರಿಯತಮನೂ, ತ್ರೈಲೋಕ್ಯನಾಥನೂ ಆದ ಭಗವಂತನ ಇಂತಹ ಅಪ್ರಿಯವಾದ ಮಾತನ್ನು ಹಿಂದೆ ಎಂದೂ ಕೇಳಿರಲಿಲ್ಲ. ಇಂದು ಕೇಳಿದಾಗ ಅತ್ಯಂತ ಭಯಗೊಂಡಳು. ಹೃದಯವು ನಡುಗತೊಡಗಿತು. ಬಿಕ್ಕಿ-ಬಿಕ್ಕಿ ಅಳುತ್ತಾ ಅಗಾಧವಾದ ಚಿಂತಾಸಾಗರದಲ್ಲಿ ಮುಳುಗಿಹೋದಳು. ॥ ೨೨ ॥ ಆಕೆಯು ಕಮಲದಂತೆ ಕೋಮಲವಾದ ಹಾಗೂ ನಸುಗೆಂಪಾದ ಉಗುರುಗಳುಳ್ಳ ಪಾದದಿಂದ ನೆಲವನ್ನು ಕೆರೆಯುತ್ತಾ, ಕಾಡಿಗೆಯಿಂದ ಕಪ್ಪಾದ ಕಣ್ಣೀರಿನಿಂದ ಕುಂಕುಮಾಂಕಿತವಾದ ಸ್ತನಗಳನ್ನು ನೆನೆಸುತ್ತಾ, ತಲೆಯನ್ನು ತಗ್ಗಿಸಿ ನಿಂತಿದ್ದಳು. ಅತೀವ ದುಃಖದಿಂದಾಗಿ ಆಕೆಯ ಕಂಠವು ಬಿಗಿದು ಮಾತುನಿಂತು ಹೋಗಿತ್ತು. ॥ ೨೩ ॥ ಅತ್ಯಂತ ವ್ಯಥೆ, ಭಯ, ಶೋಕದ ಕಾರಣಗಳಿಂದಾಗಿ ವಿಚಾರ ಶಕ್ತಿಯು ಲುಪ್ತವಾಗಿತ್ತು. ಪತಿಯ ವಿಯೋಗವು ಸಂಭವಿಸಬಹುದೆಂಬ ಕಾರಣದಿಂದ ಕ್ಷಣಮಾತ್ರದಲ್ಲಿ ಕೃಶಳಾಗಿ, ಕೈಯ, ಕಂಕಣಗಳು ಉದುರಿಹೋದವು. ಹಿಡಿದಿದ್ದ ಚಾಮರವು ಕೈಯಿಂದ ಜಾರಿತು. ತಲೆಯು ಕೆದರಿತ್ತು. ಕಳವಳಗೊಂಡ ಬುದ್ಧಿಯಿಂದ ಕೂಡಿದ್ದ ದೇಹವು ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡವು ಬುಡಮೇಲಾಗಿ ಬೀಳುವಂತೆ ಪ್ರಜ್ಞಾಹೀನಳಾಗಿ ನೆಲಕ್ಕುರುಳಿದಳು. ॥ ೨೪ ॥ ಹಾಸ್ಯದ ಹಿರಿಮೆಯನ್ನರಿಯದ ಪ್ರೇಯಸಿಯ ಪ್ರೇಮಪಾಶದ ದಾರ್ಢ್ಯವನ್ನು ಕಂಡು ಪರಮ ಕಾರುಣಿಕನಾದ ಭಗವಾನ್ ಶ್ರೀಕೃಷ್ಣನ ಹೃದಯವು ರುಕ್ಮಿಣಿಯ ಕುರಿತು ಕರುಣೆಯಿಂದ ತುಂಬಿಹೋಯಿತು. ॥ ೨೫ ॥ ಮರಕ್ಷಣದಲ್ಲೇ ಮಂಚದಿಂದ ಕೆಳಗಿಳಿದು ತನ್ನ ನಾಲ್ಕು ಕೈಗಳಿಂದಲೂ ಪ್ರೇಯಸಿಯನ್ನು ಹಿಡಿದೆತ್ತಿ ಕೆದರಿಹೋಗಿದ್ದ ಆಕೆಯ ಕೇಶಪಾಶಗಳನ್ನು ಸರಿಪಡಿಸಿ ತನ್ನ ಶೀತಲವಾದ ಕರಕಮಲಗಳಿಂದ ಆಕೆಯ ಮುಖವನ್ನು ನೇವರಿಸಿದನು. ॥ ೨೬ ॥

ಪ್ರಮೃಜ್ಯಾಶ್ರುಕಲೇ ನೇತ್ರೇ ಸ್ತನೌ ಚೋಪಹತೌ ಶುಚಾ ।
ಆಶ್ಲಿಷ್ಯ ಬಾಹುನಾ ರಾಜನ್ನನನ್ಯವಿಷಯಾಂ ಸತೀಮ್
॥ ೨೭ ॥

ಸಾಂತ್ವಯಾಮಾಸ ಸಾಂತ್ವಜ್ಞಃ ಕೃಪಯಾ ಕೃಪಣಾಂ ಪ್ರಭುಃ ।
ಹಾಸ್ಯಪ್ರೌಢಿಭ್ರಮಚ್ಚಿತ್ತಾಮತದರ್ಹಾಂ ಸತಾಂ ಗತಿಃ
॥ ೨೮ ॥

ಶ್ರೀಭಗವಾನುವಾಚ

ಮಾ ಮಾ ವೈದರ್ಭ್ಯಸೂಯೇಥಾ
ಜಾನೇ ತ್ವಾಂ ಮತ್ಪರಾಯಣಾಮ್ ।
ತ್ವದ್ವಚಃ ಶ್ರೋತುಕಾಮೇನ
ಕ್ಷ್ವೇಲ್ಯಾऽऽಚರಿತಮಂಗನೇ ॥ ೨೯ ॥

ಮುಖಂ ಚ ಪ್ರೇಮಸಂರಂಭಸ್ಫುರಿತಾಧರಮೀಕ್ಷಿತುಮ್ ।
ಕಟಾಕ್ಷೇಪಾರುಣಾಪಾಂಗಂ ಸುಂದರಭ್ರುಕುಟೀತಟಮ್
॥ ೩೦ ॥

ಅಯಂ ಹಿ ಪರಮೋ ಲಾಭೋ
ಗೃಹೇಷು ಗೃಹಮೇಧಿನಾಮ್ ।
ಯನ್ನರ್ಮೈರ್ನಿರ್ಯತೇ ಯಾಮಃ
ಪ್ರಿಯಯಾ ಭೀರು ಭಾಮಿನಿ ॥ ೩೧ ॥

ಶ್ರೀಶುಕ ಉವಾಚ

ಸೈವಂ ಭಗವತಾ ರಾಜನ್ ವೈದರ್ಭೀ ಪರಿಸಾಂತ್ವಿತಾ ।
ಜ್ಞಾತ್ವಾ ತತ್ಪರಿಹಾಸೋಕ್ತಿಂ ಪ್ರಿಯತ್ಯಾಗಭಯಂ ಜಹೌ
॥ ೩೨ ॥

ಬಭಾಷ ಋಷಭಂ ಪುಂಸಾಂ ವೀಕ್ಷಂತೀ ಭಗವನ್ಮುಖಮ್ ।
ಸವ್ರೀಡಹಾಸರುಚಿರಸ್ನಿಗ್ಧಾಪಾಂಗೇನ ಭಾರತ
॥ ೩೩ ॥

ರುಕ್ಮಿಣ್ಯುವಾಚ

ನನ್ವೇವಮೇತದರವಿಂದವಿಲೋಚನಾಹ
ಯದ್ವೈ ಭವಾನ್ ಭಗವತೋऽಸದೃಶೀ ವಿಭೂಮ್ನಃ ।
ಕ್ವಸ್ವೇ ಮಹಿಮ್ನ್ಯಭಿರತೋ ಭಗವಾಂಸ್ತ್ರ್ಯಧೀಶಃ
ಕ್ವಾಹಂ ಗುಣಪ್ರಕೃತಿರಜ್ಞಗೃಹೀತಪಾದಾ ॥ ೩೪ ॥

ಭಗವಂತನು ರುಕ್ಮಿಣಿಯ ಕಣ್ಣುಗಳನ್ನು ಮತ್ತು ಕಣ್ಣೀರಿನಿಂದ ನೆನೆದಿದ್ದ ಸ್ತನಗಳನ್ನು ಒರೆಸಿ, ತನ್ನಲ್ಲಿ ಅನನ್ಯ ಪ್ರೇಮಭಾವವುಳ್ಳ ಆ ಸಾಧ್ವಿಯಾದ ರುಕ್ಮಿಣಿಯನ್ನು ಗಾಢವಾಗಿ ಆಲಿಂಗಿಸಿ ಕೊಂಡನು. ॥ ೨೭ ॥ ಭಗವಾನ್ ಶ್ರೀಕೃಷ್ಣನು ಸಾಂತ್ವನಗೊಳಿಸುವು ದರಲ್ಲಿ ಅತ್ಯಂತ ಕುಶಲನಾಗಿದ್ದನು ಮತ್ತು ತನ್ನ ಪ್ರೇಮಿ ಭಕ್ತರಿಗೆ ಏಕಮಾತ್ರ ಆಶ್ರಯನಾಗಿದ್ದನು. ಹಾಸ್ಯದ ಗಂಭೀರತೆಯಿಂದಾಗಿ ರುಕ್ಮಿಣಿಯ ಬುದ್ಧಿಯು ಭ್ರಮಿಸಿ, ಅತ್ಯಂತ ದೀನಳಾಗಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ಪ್ರೇಯಸಿಯನ್ನು ನಯದ ಮಾತುಗಳಿಂದ ಸಮಾಧಾನಗೊಳಿಸಿದನು. ॥ ೨೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ವಿದರ್ಭನಂದಿನಿಯೇ ! ನನ್ನಲ್ಲಿ ನೀನು ದೋಷವೆಣಿಸಬೇಡ. ನೀನು ಏಕಮಾತ್ರ ನನ್ನಲ್ಲೇ ಪರಾಯಣಳಾಗಿರುವೆ ಎಂಬುದನ್ನು ನಾನು ಬಲ್ಲೆನು. ಪ್ರಿಯ ಸಹಚರಿಯೇ ! ನಿನ್ನ ಪ್ರೇಮಪೂರ್ಣವಾದ ಮಾತನ್ನು ಕೇಳಲೆಂದೇ ನಾನು ವಿನೋದಕ್ಕಾಗಿ, ಹೀಗೆ ಮಾತನಾಡಿದೆ. ॥ ೨೯ ॥ ಸುಂದರಿಯೇ ! ಪ್ರಣಯಕೋಪದಿಂದ ನಿನ್ನ ಕೆಂಪಾದ ತುಟಿಗಳು ಅದುರುವುದನ್ನೂ, ನಸುಗೆಂಪಾದ ಕಡೆಗಣ್ಣ ನೋಟವನ್ನೂ ಗಂಟಿಕ್ಕಿದ ಸುಂದರವಾದ ಹುಬ್ಬುಗಳನ್ನು, ಮುನಿಸಿನಿಂದ ಕೂಡಿದ ಮುದ್ದುಮುಖವನ್ನೂ ನೋಡಬೇಕೆಂದೇ ನಾನು ಹೀಗೆ ಹೇಳಿದೆ ॥ ೩೦ ॥ ಪರಮಪ್ರಿಯಳಾದ ಭಾಮಿನಿಯೇ ! ಮನೆಯ ಕೆಲಸ-ಕಾರ್ಯ ಗಳಲ್ಲಿ ಹಗಲು-ರಾತ್ರಿಯೂ ತೊಡಗಿರುವ ಗೃಹಸ್ಥರಿಗೆ ತನ್ನ ಪ್ರಿಯತಮೆಯಾದ ಅರ್ಧಾಂಗಿಯೊಡನೆ ಸ್ವಲ್ಪಕಾಲವಾದರೂ ಪರಿಹಾಸ-ವಿನೋದದಲ್ಲಿ ಕಳೆಯುವುದೇ ಮಹತ್ತರವಾದ ಒಂದು ಲಾಭವಲ್ಲವೇ ? ॥ ೩೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರನೇ ! ಭಗವಾನ್ ಶ್ರೀಕೃಷ್ಣನು ತನ್ನ ಪ್ರೇಯಸಿಯನ್ನು ಹೀಗೆ ನಯವಿನ ಯವಾದ ಮಾತುಗಳಿಂದ ಸಮಾಧಾನಗೊಳಿಸಲು, ತನ್ನ ಪ್ರಿಯ ಕರನು ಹೇಳಿದುದು ಹಾಸ್ಯಕ್ಕಾಗಿ ಎಂದು ತಿಳಿದ ರುಕ್ಮಿಣಿಯು ತನ್ನನ್ನು ಪರಿತ್ಯಾಗ ಮಾಡಿಬಿಡುವನೋ ಎಂಬ ಭಯವನ್ನು ತ್ಯಜಿಸಿ ನಿಶ್ಚಿಂತ ಳಾದಳು. ॥ ೩೨ ॥ ಪರೀಕ್ಷಿತನೇ ! ಈಗ ಆಕೆಯು ನಾಚಿಕೆಯಿಂದ ಕೂಡಿದ ಪ್ರೇಮಪೂರ್ಣವಾದ ಕಡೆಗಣ್ಣ ನೋಟದಿಂದ ಪುರುಷ ಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನನ್ನು ವೀಕ್ಷಿಸುತ್ತಾ ಮಧುರವಾದ ಮಾತಿನಿಂದ ಇಂತೆಂದಳು. ॥ ೩೩ ॥

ರುಕ್ಮಿಣೀದೇವಿಯು ಹೇಳಿದಳು – ಕಮಲಾಕ್ಷನೇ ! ನೀನು ಹೇಳಿರುವುದು ಸರಿಯಾಗಿಯೇ ಇದೆ. ಬಹಳ ದೊಡ್ಡವನಾದ ನಿನಗೆ ನಾನು ಖಂಡಿತವಾಗಿಯೂ ಸಮಾನಳಲ್ಲ. ಅಪಾರವಾದ ಮಹಿಮೆಯುಳ್ಳ, ಸ್ವಸ್ವರೂಪದಲ್ಲಿ ಆನಂದವನ್ನು ಹೊಂದುವ, ತ್ರಿಗುಣಗಳಿಗೆ ಸ್ವಾಮಿಯಾದ, ಬ್ರಹ್ಮಾದಿ ದೇವತೆಗಳಿಂದ ಸೇವಿತ ನಾದ ಷಡ್ಗುಣೈಶ್ವರ್ಯ ಸಂಪನ್ನನಾದ ನೀನೆಲ್ಲಿ? ತ್ರಿಗುಣಾತ್ಮಕ ಪ್ರಕೃತಿಯಾಗಿ, ಫಲಾಪೇಕ್ಷಿಗಳಾದ ಮೂಢರಿಂದ ವಂದಿಸಲ್ಪಡುವ ಪಾದಗಳುಳ್ಳ ನಾನೆಲ್ಲಿ? ॥ ೩೪ ॥

ಸತ್ಯಂ ಭಯಾದಿವ ಗುಣೇಭ್ಯ ಉರುಕ್ರಮಾಂತಃ
ಶೇತೇ ಸಮುದ್ರ ಉಪಲಂಭನಮಾತ್ರ ಆತ್ಮಾ ।

ತ್ರಿವಿಕ್ರಮಸ್ವರೂಪನೇ ! 'ರಾಜರಿಗೆ ಹೆದರಿ ಸಮುದ್ರವನ್ನು ಸೇರಿಕೊಂಡಿರುವೆವು' ಎಂದು ನೀನು ಹೇಳಿದುದು ಸರಿಯೇ; ಆದರೆ ರಾಜರೆಂದರೆ ಭೂಮಂಡಲದ ರಾಜರಲ್ಲ, ಸತ್ತ್ವರಜಸ್ತಮ ಗಳೆಂಬ ಮೂವರು ರಾಜರು. ಅವರಿಗೆ ಹೆದರಿ ನೀನು ಅಂತಃಕರಣರೂಪವಾದ ಸಮುದ್ರದಲ್ಲಿ ಸಚ್ಚಿದಾನಂದಮಯ ವಾದ ಆತ್ಮಸ್ವರೂಪದಲ್ಲಿ ರಾರಾಜಿಸುತ್ತಿರುವೆ. 'ಬಲಿಷ್ಠರೊಡನೆ ದ್ವೇಷವನ್ನು ಕಟ್ಟಿಕೊಂಡವರು' ಎಂದು ಹೇಳಿಕೊಂಡೆ. ಇದೂ ನಿಜವೇ. ಮಹಾಬಲಿಷ್ಠವಾದುದು ಈ ಇಂದ್ರಿಯಗಳೇ. ಅವ ರೊಂದಿಗೆ ನಿನ್ನ ವೈರವಿದ್ದೇ ಇದೆ. 'ರಾಜಸಿಂಹಾಸನದಿಂದ ವಂಚಿತರಾದವರು' ಎಂದು ಹೇಳಿದುದೂ ಸರಿಯೇ. ನಿನ್ನ ಪಾದ ಸೇವಕರೂ ಕೂಡ ರಾಜಪದವಿಯನ್ನು ಅಜ್ಞಾನಾಂಧಕಾರಮಯ ವಾದುದೆಂದು ಧಿಕ್ಕರಿಸುವಾಗ, ನಿತ್ಯತೃಪ್ತನೂ ಆಪ್ತಕಾಮನೂ ಆದ ನಿನ್ನ ವಿಷಯದಲ್ಲಿ ಹೇಳುವುದೇನಿದೆ ? ॥ ೩.೫ ॥ ನಾವು ಸ್ಪಷ್ಟವಾದ ಮಾರ್ಗವಿಲ್ಲದವರೆಂದೂ, ಲೌಕಿಕ ವ್ಯವಹಾರಗಳನ್ನು ಪಾಲಿಸತಕ್ಕ ವರಲ್ಲವೆಂದೂ, ಹೇಳಿಕೊಂಡೆ ; ಇದೂ ಯಥಾರ್ಥವೇ ಆಗಿದೆ. ಏಕೆಂದರೆ, ನಿನ್ನ ಪಾದಪದ್ಮಗಳ ಮಕರಂದವನ್ನು ಸೇವಿಸುವವರ ಮಾರ್ಗವೂ ಅಸ್ಪಷ್ಟವಾಗಿರುತ್ತದೆ ಮತ್ತು ವಿಷಯಗಳಲ್ಲಿ ಮೈಮರೆತ ನರಪಶುಗಳಿಂದ ಅದನ್ನು ಊಹಿಸಲು ಸಾಧ್ಯವಾಗುವುದಿಲ್ಲ, ಓ ಅನಂತನೇ ! ನಿನ್ನ ಮಾರ್ಗದಲ್ಲಿ ನಡೆಯುವ ನಿನ್ನ ಭಕ್ತರ ಚೇಷ್ಟೆಗಳೂ ಪ್ರಾಯಶಃ ಅಲೌಕಿಕವಾಗಿರುವಾಗ ಸಮಸ್ತ ಶಕ್ತಿಗಳ ಮತ್ತು ಐಶ್ವರ್ಯಗಳ ಆಶ್ರಯನಾದ ನಿನ್ನ ಚೇಷ್ಟೆಗಳು ಅಲೌಕಿವಾಗಿರುವುದರಲ್ಲಿ ಹೇಳುವುದೇನಿದೆ ? ॥ ೩.೬ ॥ ನಾವು ಅಕಿಂಚನರು ಎಂದು ಹೇಳಿಕೊಂಡೆ, ಆದರೆ ನಿನ್ನ ಅಕಿಂಚನತೆ ದರಿದ್ರತೆಯಲ್ಲ, ನೀನಲ್ಲದೆ ಬೇರೆ ಯಾವ ವಸ್ತುವೂ ಇಲ್ಲದಿರುವುದರಿಂದ ಎಲ್ಲವೂ ನೀನೇ ಆಗಿರುವೆ ಎಂಬುದೇ ಅರ್ಥವಾಗಿದೆ. ನಿನ್ನ ಬಳಿಯಲ್ಲಿ ಇಟ್ಟುಕೊಳ್ಳಲಿಕ್ಕಾಗಿ ಏನೂ ಇಲ್ಲ, ಆದರೆ ಯಾರು ಬ್ರಹ್ಮಾದಿ ದೇವತೆಗಳನ್ನು ಪೂಜಿಸುವರೋ, ಕಾಣಿಕೆಗಳನ್ನು ಅರ್ಪಿಸುವರೋ ಆ ಜನರೇ ನಿನ್ನನ್ನೂ ಪೂಜಿಸುತ್ತಲೇ ಇರುತ್ತಾರೆ. ನೀನು ಅವರಿಗೆ ಪ್ರಿಯನಾಗಿರುವೆ, ಅವರು ನಿನಗೆ ಪ್ರಿಯರಾಗಿರುವರು. ಧನಾಢ್ಯರಾದವರು ನನ್ನನ್ನು ಭಜಿಸುವುದಿಲ್ಲ ಎಂದು ನೀನು ಹೇಳಿದುದೂ ಉಚಿತವೇ ಆಗಿದೆ. ತಮ್ಮ ಶ್ರೀಮಂತಿಕೆಯ ಅಭಿಮಾನದಿಂದ ಕುರುಡರಾಗಿ, ಇಂದ್ರಿಯ ಗಳನ್ನು ತೃಪ್ತಿಪಡಿಸುವುದರಲ್ಲೇ ತೊಡಗಿರುವವರು ನಿನ್ನನ್ನು ಭಜಿಸುವುದಿಲ್ಲ, ಸೇವಿಸುವುದಿಲ್ಲ, ನೀನೇ ಮೃತ್ಯು(ಕಾಲ)ರೂಪ ದಿಂದ ಅವರ ತಲೆಯ ಮೇಲೆ ಕುಳಿತಿರುವೆ ಎಂಬುದನ್ನೂ ಅವರು ತಿಳಿಯರು. ॥ ೩.೭ ॥ ಜಗತ್ತಿನಲ್ಲಿ ಜೀವಿಯ ವಾಂಛನೀಯವಾದ ಧರ್ಮ, ಅರ್ಥ, ಕಾಮ, ಮೋಕ್ಷ – ಇವೆಲ್ಲದರ ರೂಪದಲ್ಲಿ ನೀನೇ ಪ್ರಕಟನಾಗಿರುವೆ. ಸಮಸ್ತ ವೃತ್ತಿ-ಪ್ರವೃತ್ತಿಗಳು, ಸಾಧನೆಗಳು, ಸಿದ್ಧಿಗಳು ಮತ್ತು ಸಾಧ್ಯಗಳು ಇವೆಲ್ಲದರ ಫಲಸ್ವರೂಪ ನೀನೆ ಆಗಿರುವೆ. ವಿಚಾರಶೀಲರಾದ ಜನರು ನಿನ್ನನ್ನು ಪಡೆಯಲಿಕ್ಕಾಗಿ, ಎಲ್ಲವನ್ನೂ ಬಿಟ್ಟುಬಿಡುತ್ತಾರೆ. ಭಗವಂತಾ! ಅಂತಹ ವಿವೇಕೀ ಜನರೊಂದಿಗೆ ನಿನ್ನ ಸಂಬಂಧವಾಗಬೇಕು. ಸ್ತ್ರೀ-ಪುರುಷರ ಸಹವಾಸದಿಂದ ದೊರಕುವ ಸುಖ ಅಥವಾ ದುಃಖಗಳಿಗೆ ವಶೀಭೂತರಾದ ಜನರು ಎಂದಿಗೂ ನಿನ್ನೊಂದಿಗೆ ಸಂಬಂಧ ಬೆಳೆಸಲು ಯೋಗ್ಯರಾಗಿರುವುದಿಲ್ಲ ॥ ೩.೮ ॥

ನಿತ್ಯಂ ಕದಿಂದ್ರಿಯಗಣೈಃ ಕೃತವಿಗ್ರಹಸ್ತ್ವಂ
ತತ್ತ್ವೇವಕೈರ್ನ್ಯಪಪದಂ ವಿಧುತಂ ತಮೋಽಂಧಮ್ ॥ ೩.೫ ॥

ತತ್ತ್ವಾವದಪದ್ಮಮಕರಂದಜುಷಾಂ ಮುನೀನಾಂ
ವರ್ತ್ಮಾಸ್ಫುಟಂ ನೃಪಶುಭಿರ್ನನು ದುರ್ವಿಭಾವ್ಯಮ್ ।

ಯಸ್ಮಾದಲೌಕಿಕಮಿವೇಹಿತಮೀಶ್ವರಸ್ಯ
ಭೂಮಂಸ್ತವೇಹಿತಮಥೋ ಅನು ಯೇ ಭವಂತಮ್ ॥ ೩.೬ ॥

ನಿಷ್ಕಿಂಚನೋ ನನು ಭವಾನ್ ನ ಯತೋಽಸ್ತಿ ಕಿಂಚಿದ್
ಯಸ್ಮೈ ಬಲಿಂ ಬಲಿಭುಜೋಽಪಿ ಹರಂತ್ಯಜಾದ್ಯಾಃ ।

ನ ತ್ವಾ ವಿದಂತ್ಯಸುತೃಪೋಽಂತಕಮಾಢ್ಯತಾಂಧಾಃ
ಪ್ರೇಷ್ಠೋ ಭವಾನ್ ಬಲಿಭುಜಾಮಪಿ ತೇಽಪಿ ತುಭ್ಯಮ್
॥ ೩.೭ ॥

ತ್ವಂ ವೈ ಸಮಸ್ತಪುರುಷಾರ್ಥಮಯಃ ಫಲಾತ್ಮಾ
ಯದ್ವಾಂಛಯಾ ಸುಮತಯೋ ವಿಸೃಜಂತಿ ಕೃತ್ಸ್ನಮ್ ।

ತೇಷಾಂ ವಿಭೋ ಸಮುಚಿತೋ ಭವತಃ ಸಮಾಜಃ
ಪುಂಸಃ ಸ್ತ್ರಿಯಾಶ್ಚ ರತಯೋಃ ಸುಖಿದುಃಖಿನೋರ್ನ
॥ ೩.೮ ॥

ತ್ವಂ ನ್ಯಸ್ತದಂಡಮುನಿಭಿರ್ಗದಿತಾನುಭಾವ
ಆತ್ಮಾऽऽತ್ಮದಶ್ಚ ಜಗತಾಮಿತಿ ಮೇ ವೃತೋऽಸಿ ।

ಹಿತ್ವಾ ಭವದ್ಭ್ರುವ ಉದೀರಿತಕಾಲವೇಗ-
ಧ್ವಸ್ತಾಶಿಷೋऽಬ್ಜಭವನಾಕಪತೀನ್ ಕುತೋऽನ್ಯೇ ॥ ೩೯ ॥

ಜಾಡ್ಯಂ ವಚಸ್ತವ ಗದಾಗ್ರಜ ಯಸ್ತು ಭೂಪಾನ್
ವಿದ್ರಾವ್ಯ ಶಾರ್ಙ್ಗನಿನದೇನ ಜಹರ್ಥ ಮಾಂ ತ್ವಮ್ ।

ಸಿಂಹೋ ಯಥಾ ಸ್ವಬಲಿಮೀಶ ಪಶೂನ್ ಸ್ವಭಾಗಂ
ತೇಭ್ಯೋ ಭಯಾದ್ಯದುದಧಿಂ ಶರಣಂ ಪ್ರಪನ್ನಃ ॥ ೪೦ ॥

ಯದ್ವಾಂಛಯಾ ನೃಪಶಿಖಾಮಣಯೋऽಂಗವೈನ್ಯ-
ಜಾಯಂತನಾಹುಷಗಯಾದಯ ಐಕಪತ್ಯಮ್ ।

ರಾಜ್ಯಂ ವಿಸೃಜ್ಯ ವಿವಿಶುರ್ವನಮಂಬುಜಾಕ್ಷ
ಸೀದಂತಿ ತೇऽನುಪದವೀಂ ತ ಇಹಾಸ್ಥಿತಾಃ ಕಿಮ್ ॥ ೪೧ ॥

ಕಾನ್ಯಂ ಶ್ರಯೇತ ತವ ಪಾದಸರೋಜಗಂಧಮ್
ಆಘ್ರಾಯ ಸನ್ಮುಖರಿತಂ ಜನತಾಪವರ್ಗಮ್ ।

ಲಕ್ಷ್ಮ್ಯಾಲಯಂ ತ್ವವಿಗಣಯ್ಯ ಗುಣಾಲಯಸ್ಯ
ಮರ್ತ್ಯಾ ಸದೋರುಭಯಮರ್ಥವಿವಿಕ್ತದೃಷ್ಟಿಃ ॥ ೪೨ ॥

ತಂ ತ್ವಾನುರೂಪಮಭಜಂ ಜಗತಾಮಧೀಶ-
ಮಾತ್ಮಾನಮತ್ರ ಚ ಪರತ್ರ ಚ ಕಾಮಪೂರಮ್ ।

ಸ್ಯಾನ್ಮೇ ತವಾಂಘ್ರಿರರಣಂ ಸೃತಿಭಿರ್ಭ್ರಮಂತ್ಯಾ
ಯೋ ವೈ ಭಜಂತಮುಪಯಾತ್ಯನೃತಾಪವರ್ಗಃ ॥ ೪೩ ॥

ಭಿಕ್ಷುಕರಿಂದ ವ್ಯರ್ಥವಾಗಿ ಪ್ರಶಂಸಿಸಲ್ಪಡುವವನು ಎಂದು ಹೇಳಿಕೊಂಡಿರುವೆ. ಆದರೆ ಯಾವ ಭಿಕ್ಷುಕರು? ಪರಮ ಶಾಂತರೂ, ಸಂನ್ಯಾಸಿಗಳೂ, ಮಹಾಪರಾಧಿಯನ್ನು ಶಿಕ್ಷಿಸಬಾರದೆಂದು ನಿಶ್ಚಯಿಸಿಕೊಂಡವರೂ ಆದ ಮಹಾತ್ಮರು ನಿನ್ನ ಮಹಿಮೆಯನ್ನು ವರ್ಣಿಸಿರುವರು. ನಾನು ದೂರದರ್ಶಿತ್ವವಿಲ್ಲದೆ ನಿನ್ನನ್ನು ವರಿಸಲಿಲ್ಲ. ನೀನು ಸಮಸ್ತ ಜಗತ್ತಿನ ಆತ್ಮನಾಗಿರುವೆ. ನಿನ್ನ ಪ್ರೇಮಿಗಳಿಗೆ ನಿನ್ನನ್ನೇ ಕೊಟ್ಟುಕೊಳ್ಳುವೆ. ನೀನು ಕೇವಲ ಹುಬ್ಬನ್ನು ಹಾರಿಸಿದ ಮಾತ್ರದಿಂದ ಪ್ರೇರಿತವಾದ ಕಾಲವು ಬ್ರಹ್ಮೇಂದ್ರಾದಿಗಳ ಐಶ್ವರ್ಯವನ್ನೂ, ಆಕಾಂಕ್ಷೆಗಳನ್ನೂ ಧ್ವಂಸಮಾಡಿಬಿಡುತ್ತದೆ. ಇದನ್ನು ತಿಳಿದೇ ನಾನು ಅವರನ್ನು ತ್ಯಾಗಮಾಡಿರುವೆನು. ಹಾಗಿರುವಾಗ ಬೇರೆಯವರ ವಿಷಯದಲ್ಲಿ ಹೇಳುವುದೇನಿದೆ? ॥ ೩೯ ॥

ಗದಾಗ್ರಜನೇ! ಸಿಂಹವು ತನ್ನ ಗರ್ಜನೆಯಿಂದ ಕಾಡಿನ ಮೃಗಗಳನ್ನು ಓಡಿಸಿ, ಅದರ ಭಾಗವನ್ನು ಕಚ್ಚಿಕೊಂಡು ಹೋಗುವಂತೆ ಕೇವಲ ಶಾರ್ಙ್ಗಧನುಸ್ಸಿನ ಟಂಕಾರದಿಂದಲೇ ಸಮಸ್ತ ರಾಜರನ್ನು ಓಡಿಸಿ, ನಿನ್ನ ದಾಸಿಯಾದ ನನ್ನನ್ನು ಅಪಹರಿಸಿಕೊಂಡು ಬಂದಿರುವೆ. ಇದಕ್ಕೆ ನಾನೇ ಸಾಕ್ಷಿಯಾಗಿದ್ದೇನೆ. ಹೀಗಿರುವಾಗ ರಾಜರಿಗೆ ಹೆದರಿ ಸಮುದ್ರವನ್ನು ಆಶ್ರಯಿಸಿರುವೆನು ಎಂಬ ನಿನ್ನ ಮಾತು ಯುಕ್ತಿಯುಕ್ತವಾಗಿ ಕಾಣುವುದಿಲ್ಲ. ॥ ೪೦ ॥ ಕಮಲನಯನ! 'ನನ್ನನ್ನು ಅನುಸರಿಸಿದವರು ಪ್ರಾಯಶಃ ಕಷ್ಟವನ್ನೇ ಪಡುತ್ತಾರೆ' ಎಂದು ನೀನು ಹೇಗೆ ಹೇಳಬಲ್ಲೆ? ಹಿಂದೆ ಅಂಗ, ಪೃಥು, ಭರತ, ಯಯಾತಿ, ಗಯ ಇವೇ ಮೊದಲಾದ ರಾಜಾಧಿರಾಜರು ತಮ್ಮ ಏಕಚ್ಛತ್ರ ಸಾಮ್ರಾಜ್ಯವನ್ನು ಪರಿತ್ಯಜಿಸಿ ಕೇವಲ ನಿನ್ನನ್ನು ಸೇರಬೇಕೆಂಬ ಮಹತ್ವಾಕಾಂಕ್ಷೆಯಿಂದ ತಪಸ್ಸು ಮಾಡಲು ಅರಣ್ಯಕ್ಕೆ ಹೋದರು. ನಿನ್ನನ್ನು ಅನುಸರಣೆ ಮಾಡಿದ ಅವರು ಏನಾದರೂ ಕಷ್ಟವನ್ನು ಅನುಭವಿಸುತ್ತಿರುವರೇ? ॥ ೪೧ ॥ ಬೇರೆ ಯಾರಾದರೂ ರಾಜಕುಮಾರನನ್ನು ವರಿಸೆಂದು ನೀನು ನನಗೆ ಸಲಹೆ ಮಾಡಿದೆ. ಭಗವಂತಾ! ನೀನು ಸಮಸ್ತ ಗುಣಗಳಿಗೆ ಏಕಮಾತ್ರ ಆಶ್ರಯನಾಗಿರುವೆ. ಸತ್ಪುರುಷರು ನಿನ್ನ ಚರಣಕಮಲಗಳ ಗಂಧವನ್ನು ಆಘ್ರಾಣಿಸಿ ಅವನ್ನು ಗಾನಮಾಡುತ್ತಲೇ ಇರುತ್ತಾರೆ. ದಿವ್ಯವಾದ ಆ ನಿನ್ನ ಚರಣಕಮಲಗಳ ಆಶ್ರಯವನ್ನು ಹೊಂದಿದೊಡನೆಯೇ ಸಂಸಾರದ ಪಾಪ-ತಾಪಗಳಿಂದ ಮುಕ್ತಿ ಸಿಗುತ್ತದೆ. ಲಕ್ಷ್ಮಿಯು ಸದಾಕಾಲ ಅವುಗಳಲ್ಲೇ ನಿವಾಸಮಾಡಿಕೊಂಡಿದ್ದಾಳೆ. ತನ್ನ ಸ್ವಾರ್ಥ ಪರಮಾರ್ಥಗಳನ್ನು ಚೆನ್ನಾಗಿ ತಿಳಿದಿರುವ ಯಾವ ಸ್ತ್ರೀಯು ತಾನೇ ಒಮ್ಮೆ ಅಂತಹ ಚರಣಕಮಲಗಳ ಗಂಧವನ್ನು ಆಘ್ರಾಣಿಸಿದ ಬಳಿಕ ಅದನ್ನು ತಿರಸ್ಕರಿಸಿ, ಹುಟ್ಟು-ಸಾವುಗಳ, ರೋಗ-ರುಜಿನಗಳ ಭಯದಿಂದ ಪೀಡಿತರಾದ ಮನುಷ್ಯರನ್ನು ವರಿಸಿಯಾಳು? ಬುದ್ಧಿವಂತೆಯಾದ ಯಾವ ಸ್ತ್ರೀಯೂ ಹಾಗೆ ಮಾಡಲಾರಳು. ॥ ೪೨ ॥ ಪ್ರಭುವೇ! ಸಮಸ್ತ ಜಗತ್ತಿಗೂ ನೀನೇ ಸ್ವಾಮಿಯಾಗಿರುವೆ. ನೀನು ಇಹ-ಪರಲೋಕಗಳಲ್ಲಿರುವ ಸಮಸ್ತ ಪ್ರಾಣಿಗಳ ಆಸೆ ಆಕಾಂಕ್ಷೆಗಳನ್ನು ಪೂರ್ಣಗೊಳಿಸುವವನೂ ಮತ್ತು ಆತ್ಮನೂ ಆಗಿರುವೆ. ಅಂತಹ ನಿನ್ನನ್ನು ಆತ್ಮರೂಪನೆಂದೇ ತಿಳಿದು ನಾನು ವರಿಸಿರುವೆನು. ನನ್ನ ಕರ್ಮಕ್ಕೆ ಅನುಸಾರವಾಗಿ ಬೇರೆ-ಬೇರೆ

ತಸ್ಯಾಃ ಸ್ಯುರಚ್ಯುತ ನೃಪಾ ಭವತೋಪದಿಷ್ಟಾಃ
ಸ್ತ್ರೀಣಾಂ ಗೃಹೇಷು ಖರಗೋಶ್ವಬಿಡಾಲಭೃತ್ಯಾಃ ।

ಯತ್ಕರ್ಣಮೂಲಮರಿಕರ್ಷಣ ನೋಪಯಾಯಾದ್
ಯುಷ್ಮತ್ಕಥಾಮೃಡವಿರಿಂಚಸಭಾಸು ಗೀತಾ ॥ ೪೪ ॥

ತ್ವಕ್ಶ್ಮಶ್ರುರೋಮನಖಕೇಶಪಿನದ್ಧಮಂತ-
ರ್ಮಾಂಸಾಸ್ಥಿರಕ್ತಕೃಮಿವಿಟ್ಕಫಪಿತ್ತವಾತಮ್ ।

ಜೀವಚ್ಛವಂ ಭಜತಿ ಕಾಂತಮತಿರ್ವಿಮೂಢಾ
ಯಾ ತೇ ಪದಾಬ್ಜಮಕರಂದಮಜಿಘ್ರತೀ ಸ್ತ್ರೀ ॥ ೪೫ ॥

ಅಸ್ತ್ವಂಬುಜಾಕ್ಷ ಮಮ ತೇ ಚರಣಾನುರಾಗ
ಆತ್ಮನ್ನತಸ್ಯ ಮಯಿ ಚಾನತಿರಿಕ್ತದೃಷ್ಟೇಃ ।

ಯರ್ಹ್ಯಸ್ಯ ವೃದ್ಧಯ ಉಪಾತ್ತರಜೋಽತಿಮಾತ್ರೋ
ಮಾಮೀಕ್ಷಸೇ ತದು ಹ ನಃ ಪರಮಾನುಕಂಪಾ ॥ ೪೬ ॥

ನೈವಾಲೀಕಮಹಂ ಮನ್ಯೇ ವಚಸ್ತೇ ಮಧುಸೂದನ ।
ಅಂಬಾಯಾ ಇವ ಹಿ ಪ್ರಾಯಃ ಕನ್ಯಾಯಾಃ ಸ್ಯಾದ್ರತಿಃ ಕ್ವಚಿತ್
॥ ೪೭ ॥

ವ್ಯೂಢಾಯಾಶ್ಚಾಪಿ ಪುಂಶ್ಚಲ್ಯಾ ಮನೋಽಭ್ಯೇತಿ ನವಂ ನವಮ್ ।
ಬುಧೋಽಸತೀಂ ನ ಬಿಭೃಯಾತ್ ತಾಂ ಬಿಭ್ರದುಭಯಚ್ಯುತಃ
॥ ೪೮ ॥

ಶ್ರೀಭಗವಾನುವಾಚ

ಸಾಧ್ವೇತಚ್ಛ್ರೋತುಕಾಮೈಸ್ತ್ವಂ ರಾಜಪುತ್ರಿ ಪ್ರಲಂಬಿತಾ ।
ಮಯೋದಿತಂ ಯದನಾತ್ಥ ಸರ್ವಂ ತತ್ ಸತ್ಯಮೇವ ಹಿ
॥ ೪೯ ॥

ಯೋನಿಗಳಲ್ಲಿ ಹುಟ್ಟಬೇಕಾದರೂ ನಾನು ಆ ಬಗ್ಗೆ ಯೋಚಿಸುವುದಿಲ್ಲ, ನಿನ್ನನ್ನು ಸದಾ ಭಜಿಸುವವರ ಮಿಥ್ಯಾಸಂಸಾರವನ್ನು ನಾಶಗೊಳಿಸುವ ನಿನ್ನ ಚರಣಕಮಲಗಳೇ ನನಗೆ ಎಲ್ಲ ಜನ್ಮಗಳಲ್ಲಿಯೂ ಆಶ್ರಯವಾಗಿರಲೆಂಬ ಒಂದೇ ಅಭಿಲಾಷೆ ಇರುವುದು. ॥ ೪೩ ॥ ಅಚ್ಯುತನೇ! ಶತ್ರುಧ್ವಂಸನೇ! ಕತ್ತೆಗಳಂತೆ, ಎತ್ತುಗಳಂತೆ, ಕುದುರೆಗಳಂತೆ, ಬೆಕ್ಕುಗಳಂತೆ ಮತ್ತು ಭೃತ್ಯರಂತೆ ಅರಮನೆಯಲ್ಲಿ ಹೆಂಗಸರ ಸೇವೆ ಮಾಡಿಕೊಂಡಿರುವ ರಾಜರ ಕುರಿತು ವರಿಸಲು ನೀನು ಸಂಕೇತ ಮಾಡಿರುವೆ. ಆದರೆ ಶಂಕರ, ಬ್ರಹ್ಮಾದಿ ದೇವತೆಗಳ ಸಭೆಯಲ್ಲಿ ಗಾನಮಾಡಲ್ಪಡುವ ನಿನ್ನ ಲೀಲಾಕಥೆಗಳು ಯಾರ ಕಿವಿಗಳಲ್ಲಿ ಪ್ರವೇಶಮಾಡಲಿಲ್ಲವೋ ಅಂತಹ ದುರ್ಭಾಗ್ಯರಾದ ಸ್ತ್ರೀಯರೇ ಆ ರಾಜರನ್ನು ವರಿಸಲಿ. ॥ ೪೪ ॥ ಈ ಮನುಷ್ಯ ಶರೀರವು ಜೀವಿಸಿದ್ದರೂ ಹೆಣದಂತೆ ಇದೆ. ಮೇಲಿನಿಂದ ಚರ್ಮ, ಗಡ್ಡ-ಮೀಸೆ, ರೋಮ, ನಖ, ಕೂದಲುಗಳಿಂದ ಮುಚ್ಚಿರುತ್ತದೆ. ಆದರೆ ಇದರೊಳಗೆ ಮಾಂಸ, ಎಲುಬು, ರಕ್ತ, ಕ್ರಿಮಿ, ಮಲಮೂತ್ರ, ಕಫ-ಪಿತ್ತ ವಾತಗಳಿಂದ ತುಂಬಿದೆ. ಎಂದಿಗೂ ನಿನ್ನ ಚರಣಾರವಿಂದದ ಮಕರಂದವನ್ನು ಆಘ್ರಾಣಿಸದ ಮೂಢ ಸ್ತ್ರೀಯರೇ ಇಂತಹವರನ್ನು ತಮ್ಮ ಪ್ರಿಯತಮನೆಂದು ತಿಳಿದು ಸೇವಿಸುತ್ತಿರುವರು. ॥ ೪೫ ॥ ಕಮಲಾಕ್ಷನೇ! ನೀನು ಆತ್ಮಾರಾಮನಾಗಿರುವೆ. ನಾನು ಸುಂದರಳಾಗಿದ್ದೇನೆ, ಗುಣವತಿಯಾಗಿದ್ದೇನೆ ಇದರ ಕಡೆಗೆ ನಿನ್ನ ದೃಷ್ಟಿಯೇ ಹೋಗುವುದಿಲ್ಲ, ಆದ್ದರಿಂದ ನೀನು ಉದಾಸೀನನಾಗಿರುವುದು ಸ್ವಾಭಾವಿಕವೇ ಆಗಿದೆ. ಹೀಗಿದ್ದರೂ ನಿನ್ನ ಚರಣಕಮಲಗಳಲ್ಲಿ ನನ್ನ ಅನುರಾಗವು ಸುದೃಢವಾಗಿರಲೆಂದೇ ನನಗೆ ಅಭಿಲಾಷೆಯು. ನೀನು ಈ ಜಗತ್ತಿನ ಅಭಿವೃದ್ಧಿಗೆ ಉತ್ಕಟ ರಜೋಗುಣವನ್ನು ಸ್ವೀಕರಿಸಿ ನನ್ನ ಕಡೆಗೆ ನೋಡಿದಾಗಲೇ ನಿನ್ನ ಪರಮಾನುಗ್ರಹವಾಗಿದೆ. ॥ ೪೬ ॥ ಮಧುಸೂದನ! 'ನಿನಗೆ ಅನುರೂಪನಾದ ಕ್ಷತ್ರಿಯ ಶ್ರೇಷ್ಠನನ್ನು ನೀನು ಸೇವಿಸು' ಎಂದೂ ನೀನೇ ಹೇಳಿದೆ. ನಿನ್ನ ಮಾತು ಸುಳ್ಳೆಂದು ನಾನು ಭಾವಿಸುವುದಿಲ್ಲ, ಕೆಲವರ ವಿಷಯದಲ್ಲಿ ಇದು ನಿಜ. ಕಾಶೀರಾಜನ ಮಗಳಾದ ಅಂಬೆಯು ಮೊದಲು ಒಬ್ಬನನ್ನು ಪ್ರೀತಿಸಿ, ಅನಂತರ ಮತ್ತೊಬ್ಬನನ್ನು ಪ್ರೀತಿಸಿದಳು. ಹಾಗೆಯೇ ಕೆಲವು ಕನ್ಯೆಯರು ಮೊದಲು ಒಬ್ಬನನ್ನು ಪ್ರೀತಿಸಿದ್ದು ಬಳಿಕ ಬೇರೆಯವರನ್ನು ಪ್ರೀತಿಸಬಹುದು. ॥ ೪೭ ॥ ಕುಲಟೆಯಾದ ಸ್ತ್ರೀಯಳ ಮನಸ್ಸು ವಿವಾಹವಾದ ಬಳಿಕವೂ ಹೊಸ-ಹೊಸ ಪುರುಷರ ಕಡೆಗೆ ಸೆಳೆಯಲ್ಪಡುತ್ತದೆ. ಬುದ್ಧಿವಂತನಾದವನು ಇಂತಹ ಕುಲಟೆಯಾದ ಸ್ತ್ರೀಯನ್ನು ಇಟ್ಟುಕೊಳ್ಳಬಾರದು. ಅಂತಹ ವಳನ್ನು ತನ್ನವಳನ್ನಾಗಿಸಿಕೊಳ್ಳುವವರು ಇಹ-ಪರ ಎರಡೂ ಲೋಕಗಳನ್ನು ಕಳೆದುಕೊಳ್ಳುವರು, ಉಭಯ ಭ್ರಷ್ಟರಾಗುವರು. ॥ ೪೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಸಾಧ್ವಿಯೇ! ರಾಜಕುಮಾರಿಯೇ! ನಿನ್ನ ಇಂತಹ ಮಾತುಗಳನ್ನು ಕೇಳಬೇಕೆಂದೇ ನಾನು ನಿನ್ನಲ್ಲಿ ಹೀಗೆ ಪರಿಹಾಸದ ಮಾತುಗಳನ್ನಾಡಿದೆ. ನಾನು ಹೇಳಿದುದಕ್ಕೆ ನಿನ್ನ ವ್ಯಾಖ್ಯಾನವು ಸಮಂಜಸವಾಗಿದೆ. ಸತ್ಯವಾಗಿಯೂ ಇದೆ. ॥ ೪೯ ॥

ಯಾನ್ ಯಾನ್ ಕಾಮಯಸೇ ಕಾಮಾ ನ್ಮಯ್ಯಕಾಮಾಯ ಭಾಮಿನಿ ।
ಸಂತಿ ಹ್ಯೇಕಾಂತಭಕ್ತಾಯಾ ಸ್ತವ ಕಲ್ಯಾಣಿ ನಿತ್ಯದಾ ॥ ೫೦ ॥

ಉಪಲಬ್ಧಂ ಪತಿಪ್ರೇಮ ಪಾತಿವ್ರತ್ಯಂ ಚ ತೇಽನಘೇ ।
ಯದ್ವಾಕ್ಯೈಶ್ಚಾಲ್ಯಮಾನಾಯಾ ನ ಧೀರ್ಮಯ್ಯಪಕರ್ಷಿತಾ ॥ ೫೧ ॥

ಯೇ ಮಾಂ ಭಜಂತಿ ದಾಂಪತ್ಯೇ ತಪಸಾ ವ್ರತಚರ್ಯಯಾ ।
ಕಾಮಾತ್ಮಾನೋಽಪವರ್ಗೇಶಂ ಮೋಹಿತಾ ಮಮ ಮಾಯಯಾ ॥ ೫೨ ॥

ಮಾಂ ಪ್ರಾಪ್ಯ ಮಾನಿನ್ಯಪವರ್ಗಸಂಪದಂ
ವಾಂಛಂತಿ ಯೇ ಸಂಪದ ಏವ ತತ್ಪತಿಮ್ ।
ತೇ ಮಂದಭಾಗ್ಯಾ ನಿರಯೇಽಪಿ ಯೇ ನೃಣಾಂ
ಮಾತ್ಮಾತ್ಮಕತ್ವಾನ್ನಿರಯಃ ಸುಸಂಗಮಃ ॥ ೫೩ ॥

ದಿಷ್ಟ್ಯಾ ಗೃಹೇಶ್ವರ್ಯಸಕೃನ್ಮಯಿ ತ್ವಯಾ
ಕೃತಾನುವೃತ್ತಿರ್ಭವಮೋಚನೀ ಜನೈಃ ।
ಸುದುಷ್ಕರಾಸೌ ಸುತರಾಂ ದುರಾಶಿಷೋ
ಹ್ಯಸುಂಭರಾಯಾ ನಿಕೃತಿಂಜುಷಃ ಸ್ತ್ರಿಯಾಃ ॥ ೫೪ ॥

ನ ತ್ವಾದೃಶೀಂ ಪ್ರಣಯಿನೀಂ ಗೃಹಿಣೀಂ ಗೃಹೇಷು
ಪಶ್ಯಾಮಿ ಮಾನಿನಿ ಯಯಾ ಸ್ವವಿವಾಹಕಾಲೇ ।
ಪ್ರಾಪ್ತಾನ್ನೃಪಾನವಗಣಯ್ಯ ರಹೋಹರೋ ಮೇ
ಪ್ರಸ್ಥಾಪಿತೋ ದ್ವಿಜ ಉಪಶ್ರುತಸತ್ಕಥಸ್ಯ ॥ ೫೫ ॥

ಭ್ರಾತುರ್ವಿರೂಪಕರಣಂ ಯುಧಿ ನಿರ್ಜಿತಸ್ಯ
ಪ್ರೋದ್ವಾಹಪರ್ವಣಿ ಚ ತದ್ವಧಮಕ್ಷಗೋಷ್ಠ್ಯಾಮ್ ।
ದುಃಖಂ ಸಮುತ್ಥಮಸಹೋಽಸ್ಮದಯೋಗಭೀತ್ಯಾ
ನೈವಾಬ್ರವೀಃ ಕಿಮಪಿ ತೇನ ವಯಂ ಜಿತಾಸ್ತೇ ॥ ೫೬ ॥

ಸುಂದರೀ ! ನೀನು ನನ್ನ ಅನನ್ಯ ಪ್ರೇಯಸಿಯಾಗಿರುವೆ. ನಿನಗೆ ನನ್ನಲ್ಲಿಯೂ ಅನನ್ಯ ಪ್ರೀತಿಯಿದೆ. ನೀನು ನನ್ನಿಂದ ಬಯಸುವುದೆಲ್ಲವೂ ನಿನಗೆ ಸರ್ವದಾ ಸಿದ್ಧವಾಗಿಯೇ ಇದೆ. ನನ್ನಲ್ಲಿ ಮಾಡಿದ ಅಭಿಲಾಷೆಗಳು ಸಾಂಸಾರಿಕ ಕಾಮನೆಗಳಂತೆ ಬಂಧನಕ್ಕೆ ಕಾರಣವಾಗುವುದಿಲ್ಲ. ಏಕಾಂತ ಭಕ್ತೆಯಾದ ನಿನಗೆ ಇತರ ಎಲ್ಲ ಕಾಮನೆಗಳನ್ನು ನಿವೃತ್ತಿಗೊಳಿಸಿ ನನ್ನನ್ನೇ ಸೇರಲು ಅನುವು ಮಾಡಿಕೊಡುತ್ತದೆ. ॥ ೫೦ ॥ ಪುಣ್ಯಾತ್ಮಳೇ ! ನಾನು ನಿನ್ನ ಪತಿಪ್ರೇಮವನ್ನೂ, ಪಾತಿವ್ರತ್ಯವನ್ನೂ ಚೆನ್ನಾಗಿ ಕಂಡುಕೊಂಡೆ. ಬುದ್ಧಿಯನ್ನು ಕದಲಿಸಬಹುದಾದ ನನ್ನ ಮಾತುಗಳಿಂದಲೂ ನಿನ್ನ ಬುದ್ಧಿಯು ನನ್ನಿಂದ ಸ್ವಲ್ಪವಾದರೂ ವಿಚಲಿತವಾಗಲಿಲ್ಲ. ॥ ೫೧ ॥ ಪ್ರಿಯೇ ! ನಾನು ಮೋಕ್ಷಕ್ಕೆ ಸ್ವಾಮಿಯಾಗಿರುವೆನು. ಜನರನ್ನು ಸಂಸಾರ ಸಾಗರದಿಂದ ಪಾರುಮಾಡುತ್ತೇನೆ. ನಾನಾ ವಿಧದ ವ್ರತ, ತಪಸ್ಸು ಮಾಡುತ್ತಾ ದಾಂಪತ್ಯ ಜೀವನದ ವಿಷಯ-ಸುಖದ ಅಭಿಲಾಷೆಯಿಂದ ನನ್ನ ಭಜನೆ ಮಾಡುವ ಸಕಾಮ ಪುರುಷರು ನನ್ನ ಮಾಯೆಯಿಂದ ಮೋಹಿತರಾಗಿದ್ದಾರೆ. ॥ ೫೨ ॥ ಮಾನಿನಿಯೇ ! ನಾನು ಮೋಕ್ಷಕ್ಕೂ ಮತ್ತು ಸಮಸ್ತ ಸಂಪತ್ತುಗಳಿಗೂ ಅಧೀಶ್ವರನಾಗಿದ್ದೇನೆ. ಪರಮಾತ್ಮನಾದ ನನ್ನನ್ನು ಪಡೆದ ಬಳಿಕವೂ, ಯಾರು ಕೇವಲ ವಿಷಯಸುಖದ ಸಾಧನವಾದ ಸಂಪತ್ತನ್ನೇ ಬಯಸುತ್ತಾರೋ, ನನ್ನ ಪರಾಭಕ್ತಿಯನ್ನು ಬಯಸುವುದಿಲ್ಲವೋ ಅವರು ಮಂದಭಾಗ್ಯರೇ ಸರಿ, ಏಕೆಂದರೆ, ವಿಷಯಸುಖವಾದರೋ ನರಕದಲ್ಲಿ ಮತ್ತು ನರಕಕ್ಕೆ ಸಮಾನವಾದ ಹಂದಿ, ನಾಯಿ ಮೊದಲಾದ ಯೋನಿಗಳಲ್ಲಿಯೂ ದೊರಕಬಲ್ಲದು. ಆದರೆ ಆ ಜನರ ಮನಸ್ಸು ವಿಷಯಗಳಲ್ಲೇ ತೊಡಗಿರುತ್ತದೆ ಅದಕ್ಕಾಗಿ ಅವರಿಗೆ ನರಕಕ್ಕೆ ಹೋಗುವುದೂ ಒಳ್ಳೆಯದೆನಿಸುತ್ತದೆ. ॥ ೫೩ ॥ ಗೃಹೇಶ್ವರಿಯೇ ! ಪ್ರಾಣಪ್ರಿಯಳೇ ! ನೀನು ಅದೃಷ್ಟವಶದಿಂದ ಸಂಸಾರಬಂಧನದಿಂದ ವಿಮುಕ್ತಗೊಳಿಸುವ ನನ್ನ ಸೇವೆಯನ್ನು ನಿರಂತರವಾಗಿ ಮಾಡುತ್ತಿರುವೆ. ದುಷ್ಟರಾದವರು ಹೀಗೆಂದೂ ಮಾಡಲಾರರು. ಅದರಲ್ಲಿಯೂ ದುಷ್ಟವಾದ ಕಾಮನೆಗಳಿಂದ ತುಂಬಿಹೋಗುವ ಮನಸ್ಸುಳ್ಳ, ಇಂದ್ರಿಯಗಳ ತೃಪ್ತಿಗಾಗಿ ಅನೇಕ ವಂಚನೆಗಳನ್ನು ಮಾಡುವ ಹೆಂಗಸಿಗೆ ಇಂತಹ ನಿಷ್ಕಾಮ ಸೇವೆಯನ್ನಂತೂ ಮಾಡಲು ಸಾಧ್ಯವೇ ಆಗುವುದಿಲ್ಲ. ॥ ೫೪ ॥ ಮಾನಿನಿಯೇ! ನನಗೆ ನನ್ನ ಮನೆಗಳಲ್ಲಿ ನಿನ್ನಂತೆ ಪ್ರೇಮಿಸುವ ಭಾರ್ಯೆ ಬೇರೆಯಾರೂ ಕಂಡುಬರುವುದಿಲ್ಲ, ಏಕೆಂದರೆ, (ವಿವಾಹದ ಸಮಯದಲ್ಲಿ) ನೀನು ನನ್ನನ್ನು ನೋಡಿರಲಿಲ್ಲ, ಕೇವಲ ನನ್ನ ಪ್ರಶಂಸೆಯನ್ನು ಕೇಳಿದ್ದೆಯಷ್ಟೆ. ಆಗಲೂ ನಿನ್ನ ವಿವಾಹಕ್ಕೆ ಬಂದಿರುವ ರಾಜರನ್ನು ಉಪೇಕ್ಷೆಮಾಡಿ ಬ್ರಾಹ್ಮಣನ ಮೂಲಕ ನನ್ನ ಬಳಿಗೆ ಗುಪ್ತ ಸಂದೇಶವನ್ನು ಕಳಿಸಿದ್ದೆ. ॥ ೫೫ ॥ ನಿನ್ನನ್ನು ಅಪಹರಿಸಿಕೊಂಡು ಬರುವಾಗ ನಿನ್ನ ಅಣ್ಣನನ್ನು ಯುದ್ಧದಲ್ಲಿ ಗೆದ್ದು ವಿರೂಪಗೊಳಿಸಿದ್ದೆ ಹಾಗೂ ಅನಿರುದ್ಧನ ವಿವಾಹ ಮಹೋತ್ಸವದಲ್ಲಿ ಪಗಡೆಯಾಡುವಾಗ ಬಲರಾಮನು ರುಕ್ಮಿಯನ್ನು ಕೊಂದು ಹಾಕಿದನು. ಆದರೆ ನನ್ನಿಂದ ವಿಯೋಗವಾಗುವ ಭಯದಿಂದ ನೀನು ಮೌನವಾಗಿ ಎಲ್ಲ ದುಃಖವನ್ನು ನುಂಗಿಕೊಂಡೆ. ನನ್ನಲ್ಲಿ ಒಂದು ಮಾತೂ ಆಡಲಿಲ್ಲ ನಿನ್ನ ಈ ಗುಣದಿಂದ ನಾನು ನಿನ್ನ ವಶನಾಗಿಬಿಟ್ಟಿದ್ದೇನೆ. ॥ ೫೬॥

ದೂತಸ್ತ್ವಯಾऽऽತ್ಮಲಭನೇ ಸುವಿವಿಕ್ತಮಂತ್ರಃ
ಪ್ರಸ್ಥಾಪಿತೋ ಮಯಿ ಚಿರಾಯತಿ ಶೂನ್ಯಮೇತತ್ ।
ಮತ್ವಾಜಿಹಾಸ ಇದಮಂಗಮನನ್ಯಯೋಗ್ಯಂ
ತಿಷ್ಠೇತ ತತ್ತ್ವಯಿ ವಯಂ ಪ್ರತಿನಂದಯಾಮಃ ॥ ೫೭ ॥

ನೀನು ನನ್ನ ಪ್ರಾಪ್ತಿಗಾಗಿ ಬ್ರಾಹ್ಮಣನ ಮೂಲಕ ಗುಪ್ತ ಸಂದೇಶವನ್ನು ಕಳಿಸಿದ್ದೆ. ಆದರೆ ನಾನು ತಲುಪಲು ಸ್ವಲ್ಪ ತಡವಾದಾಗ ನಿನಗೆ ಇಡೀ ಜಗತ್ತೇ ಶೂನ್ಯವಾದಂತಾಗಿತ್ತು. ಆ ಸಮಯದಲ್ಲಿ ನಿನ್ನ ಈ ಸರ್ವಾಂಗ ಸುಂದರ ಶರೀರವನ್ನು ಬೇರೆ ಯಾರಿಗೂ ಅರ್ಪಿಸುವುದು ಯೋಗ್ಯವಲ್ಲವೆಂದು ತಿಳಿದು ಅದನ್ನು ಬಿಟ್ಟು ಬಿಡುವ ಸಂಕಲ್ಪವನ್ನು ಮಾಡಿದೆ. ನಿನ್ನ ಈ ಪ್ರೇಮಭಾವವು ನಿನ್ನೊಳಗೆ ಇರಲಿ. ಇದಕ್ಕೆ ಬದಲಾಗಿ ನಾನು ಏನನ್ನೂ ಕೊಡಲಾರೆ. ಸರ್ವೋಚ್ಚವಾದ ನಿನ್ನ ಈ ಪ್ರೇಮಭಾವವನ್ನು ನಾನು ಅಭಿನಂದಿಸುತ್ತೇನೆ. ॥ ೫೭ ॥

ಶ್ರೀಶುಕ ಉವಾಚ

ಏವಂ ಸೌರತಸಂಲಾಪೈರ್ಭಗವಾನ್ ಜಗದೀಶ್ವರಃ ।
ಸ್ವರತೋ ರಮಯಾ ರೇಮೇ ನರಲೋಕಂ ವಿಡಂಬಯನ್
॥ ೫೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನು ಆತ್ಮಾರಾಮನಾಗಿದ್ದಾನೆ. ಅವನು ಮನುಷ್ಯರಂತೆ ಲೀಲೆ ಮಾಡುತ್ತಿರುವಾಗ ಅದರಲ್ಲಿ ದಾಂಪತ್ಯ ಪ್ರೇಮವನ್ನು ವೃದ್ಧಿಪಡಿಸುವ ವಿನೋದದಿಂದ ತುಂಬಿದ ಮಾತು-ಕತೆಯನ್ನು ಮಾಡುತ್ತಾ ಮತ್ತು ಹೀಗೆ ಲಕ್ಷ್ಮೀರೂಪಳಾದ ರುಕ್ಮಿಣಿಯೊಂದಿಗೆ ವಿಹರಿಸುತ್ತಿದ್ದನು. ॥ ೫೮ ॥ ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿಗೆ ಶಿಕ್ಷಣವನ್ನು ಕೊಡುವ ಸರ್ವವ್ಯಾಪಕನಾಗಿದ್ದಾನೆ. ಅವನು ಹೀಗೆಯೇ ಇತರ ಪತ್ನಿಯರ ಅರಮನೆಗಳಲ್ಲಿಯೂ ಗೃಹಸ್ಥರಂತೆ ಇರುತ್ತಾ, ಗೃಹಸ್ಥೋಚಿತವಾದ ಧರ್ಮವನ್ನು ಪಾಲಿಸುತ್ತಿದ್ದನು. ॥ ೫೯ ॥

ತಥಾನ್ಯಾಸಾಮಪಿ ವಿಭುರ್ಗೃಹೇಷು ಗೃಹವಾನಿವ ।
ಆಸ್ಥಿತೋ ಗೃಹಮೇಧೀಯಾಂಧರ್ಮಾಂಲ್ಲೋಕಗುರುರ್ಹರಿಃ
॥ ೫೯ ॥

ಅರವತ್ತನೆಯ ಅಧ್ಯಾಯವು ಮುಗಿಯಿತು. ॥ ೬೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಕೃಷ್ಣರುಕ್ಮಿಣೀಸಂವಾದೋ ನಾಮ ಷಷ್ಟಿತಮೋऽಧ್ಯಾಯಃ॥ ೬೦ ॥

ಅರವತ್ತೊಂದನೆಯ ಅಧ್ಯಾಯ

ಭಗವಂತನ ಸಂತತಿಯ ವರ್ಣನೆ - ಅನಿರುದ್ಧನ ವಿವಾಹ - ರುಕ್ಮಿಯ ವಧೆ

ಶ್ರೀಶುಕ ಉವಾಚ

ಏಕೈಕಶಸ್ತಾಃ ಕೃಷ್ಣಸ್ಯ ಪುತ್ರಾನ್ ದಶ ದಶಾಬಲಾಃ ।
ಅಜೀಜನನ್ನನವಮಾನಿತುಃ ಸರ್ವಾತ್ಮಸಂಪದಾ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಪ್ರತಿಯೋರ್ವ ಪತ್ನಿಯಲ್ಲಿ ಹತ್ತತ್ತು ಪುತ್ರರು ಹುಟ್ಟಿದರು. ಅವರೆಲ್ಲರೂ ರೂಪ, ಬಲಾದಿಗಳಲ್ಲಿ ತಂದೆಯಾದ ಶ್ರೀಕೃಷ್ಣನಿಗಿಂತ ಯಾವುದರಲ್ಲಿಯೂ ಕಡಿಮೆಯಾಗಿರಲಿಲ್ಲ. ॥ ೧ ॥

ಗೃಹಾದನಪಗಂ ವೀಕ್ಷ್ಯ ರಾಜಪುತ್ರ್ಯೋऽಚ್ಯುತಂ ಸ್ಥಿತಮ್ ।
ಪ್ರೇಷ್ಠಂ ನ್ಯಮಂಸತ ಸ್ವಂ ಸ್ವಂ ನ ತತ್ತತ್ತ್ವವಿದಃ ಸ್ತ್ರಿಯಃ
॥ ೨ ॥

ತಮ್ಮ ಭವನದಿಂದ ಯಾವಾಗಲೂ ಹೊರಕ್ಕೆ ಹೋಗದೆ ತಮ್ಮೊಡನೆಯೇ ಇರುತ್ತಿದ್ದ ಶ್ರೀಕೃಷ್ಣನನ್ನು ನೋಡಿ ಅವನ ಎಲ್ಲ ಪತ್ನಿಯರು ಶ್ರೀಕೃಷ್ಣನು ತನ್ನೊಬ್ಬಳನ್ನೇ ಬಹಳವಾಗಿ ಪ್ರೀತಿಸುತ್ತಿರುವನೆಂದು ಭಾವಿಸುತ್ತಿದ್ದರು. ಪರೀಕ್ಷಿತನೇ! ನಿಜವಾಗಿ ಹೇಳಬೇಕಾದರೆ ಅವರು ತಮ್ಮ ಪತಿಯಾದ ಶ್ರೀಕೃಷ್ಣನ ತತ್ತ್ವವನ್ನು ಮಹಿಮೆಯನ್ನು ತಿಳಿದವರಾಗಿರಲಿಲ್ಲ. ॥ ೨ ॥

ಚಾರ್ವಬ್ಜಕೋಶವದನಾಯತಬಾಹುನೇತ್ರ-
ಸಪ್ರೇಮಹಾಸರಸವೀಕ್ಷಿತವಲ್ಗುಜಲ್ಪೈಃ ।
ಸಮ್ಮೋಹಿತಾ ಭಗವತೋ ನ ಮನೋ ವಿಜೇತುಂ
ಸ್ವೈರ್ವಿಭ್ರಮೈಃ ಸಮಶಕನ್ನಿತಾ ವಿಭೂಮ್ನಃ ॥ ೩ ॥

ಸ್ಮಾಯಾವಲೋಕಲವದರ್ಪಿತಭಾವಹಾರಿ-
ಭ್ರೂಮಂಡಲಪ್ರಹಿತಸೌರತಮಂತ್ರಶೌಂಡೈಃ ।
ಪತ್ನ್ಯಸ್ತು ಷೋಡಶಸಹಸ್ರಮನಂಗಬಾಣೈ-
ರ್ಯಸ್ಯೇಂದ್ರಿಯಂ ವಿಮಥಿತುಂ ಕರಣೈರ್ನ ಶೇಕುಃ ॥ ೪ ॥

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ನ ವಿದುಃ ಪದವೀಂ ಯದೀಯಾಮ್ ।
ಭೇಜುರ್ಮುದಾವಿರತಮೇಧಿತಯಾನುರಾಗ-
ಹಾಸಾವಲೋಕನವಸಂಗಮಲಾಲಸಾದ್ಯಮ್ ॥ ೫ ॥

ಪ್ರತ್ಯುದ್ಗಮಾಸನವರಾರ್ಹಣಪಾದಶೌಚ-
ತಾಂಬೂಲವಿಶ್ರಮಣವೀಜನಗಂಧಮಾಲ್ಯೈಃ ।
ಕೇಶಪ್ರಸಾರಶಯನಸ್ನಪನೋಪಹಾರ್ಯೈ
ರ್ದಾಸೀಶತಾ ಅಪಿ ವಿಭೋರ್ವಿದಧುಃ ಸ್ಮ ದಾಸ್ಯಮ್ ॥ ೬ ॥

ತಾಸಾಂ ಯಾ ದಶಪುತ್ರಾಣಾಂ ಕೃಷ್ಣಸ್ತ್ರೀಣಾಂ ಪುರೋದಿತಾಃ ।
ಅಷ್ಟೌ ಮಹಿಷ್ಯಸ್ತತ್ಪುತ್ರಾನ್ ಪ್ರದ್ಯುಮ್ನಾದೀನ್ ಗೃಣಾಮಿ ತೇ
॥ ೭ ॥

ಚಾರುದೇಷ್ಣಃ ಸುದೇಷ್ಣಶ್ಚ ಚಾರುದೇಹಶ್ಚ ವೀರ್ಯವಾನ್ ।
ಸುಚಾರುಶ್ಚಾರುಗುಪ್ತಶ್ಚ ಭದ್ರಚಾರುಸ್ತಥಾಪರಃ
॥ ೮ ॥

ಚಾರುಚಂದ್ರೋ ವಿಚಾರುಶ್ಚ ಚಾರುಶ್ಚ ದಶಮೋ ಹರೇಃ ।
ಪ್ರದ್ಯುಮ್ನಪ್ರಮುಖಾ ಜಾತಾ ರುಕ್ಮಿಣ್ಯಾಂ ನಾವಮಾಃ ಪಿತುಃ
॥ ೯ ॥

ಆ ಸುಂದರಿಯರು - ತನ್ನ ಆತ್ಮಾನಂದದಲ್ಲೇ ನೆಲೆಸಿರುವ ಭಗವಾನ್ ಶ್ರೀಕೃಷ್ಣನ ಕಮಲದ ಮೊಗ್ಗಿನಂತಹ ಸುಂದರ ಮುಖ, ನೀಳವಾದ ಬಾಹುಗಳು, ಕಮಲದಂಥ ವಿಶಾಲನೇತ್ರಗಳು, ಪ್ರೇಮ ತುಂಬಿದ ಮಂದಹಾಸ, ರಸಮಯ ಕುಡಿನೋಟ, ಮಧುರವಾದ ಮಾತು - ಇವುಗಳಿಂದ ಸ್ವತಃ ಮೋಹಿತರಾಗುತ್ತಿದ್ದರು. ಅವರು ತಮ್ಮ ಶೃಂಗಾರ ಸಂಬಂಧವಾದ ಹಾವ-ಭಾವಗಳಿಂದ ಅವನ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಸಮರ್ಥರಾಗಲಿಲ್ಲ. ॥ ೩ ॥ ಅವರು ಹದಿನಾರು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರೆಲ್ಲರೂ ತಮ್ಮ ಮಂದವಾದ ಮುಗುಳ್ನಗೆಯಿಂದ, ಓರೆನೋಟದಿಂದ ಕೂಡಿದ ಹುಬ್ಬುಗಳ ಸಂಕೇತದಿಂದ, ಕಾಮ-ಕಲೆಯಭಾವಗಳಿಂದ ತುಂಬಿದ ಪ್ರೇಮಬಾಣಗಳನ್ನು ಪ್ರಯೋಗಿಸುತ್ತಿದ್ದರು. ಆದರೆ ಯಾವುದೇ ವಿಧದಿಂದ, ಯಾವುದೇ ಸಾಧನೆಯಿಂದ ಅವರು ಭಗವಂತನ ಮನ-ಇಂದ್ರಿಯಗಳಲ್ಲಿ ಚಂಚಲತೆಯನ್ನು ಉಂಟುಮಾಡಲು ಅಸಮರ್ಥರಾಗಿದ್ದರು. ॥ ೪ ॥ ಪರೀಕ್ಷಿತನೇ! ಬ್ರಹ್ಮಾದಿ ಮಹಾ-ಮಹಾ ದೇವತೆಗಳೂ ಕೂಡ ಭಗವಂತನ ವಾಸ್ತವಿಕ ಸ್ವರೂಪವನ್ನು ಅಥವಾ ಅವನನ್ನು ಪಡೆಯುವ ಮಾರ್ಗವನ್ನು ತಿಳಿಯುತ್ತಿರಲಿಲ್ಲ, ಅಂತಹ ರಮಾರಮಣ ಭಗವಾನ್ ಶ್ರೀಕೃಷ್ಣನು ಆ ಸ್ತ್ರೀಯರಿಗೆ ಪತಿಯಾಗಿ ದೊರಕಿದ್ದನು. ಈಗ ನಿತ್ಯ-ನಿರಂತರ ಅವರ ಪ್ರೇಮ-ಆನಂದದ ಅಭಿವೃದ್ಧಿಯಾಗುತ್ತಲೇ ಇತ್ತು. ಅವರು ಪ್ರೇಮತುಂಬಿದ ಮಂದಹಾಸದಿಂದ, ಕುಡಿನೋಟದಿಂದ, ನವ ಸಮಾಗಮದ ಲಾಲಸೆಗಳಿಂದ ಭಗವಂತನ ಸೇವೆ ಮಾಡುತ್ತಾ ಇದ್ದರು. ॥ ೫ ॥ ಅವರಲ್ಲಿ ಎಲ್ಲ ಪತ್ನಿಯರೊಂದಿಗೆ ಸೇವೆಮಾಡುವಂತಹ ನೂರಾರು ದಾಸಿಯರಿರುತ್ತಿದ್ದರು. ಹೀಗಿದ್ದರೂ ಅವರ ಅರಮನೆಗೆ ಭಗವಂತನು ದಯಮಾಡಿಸಿದಾಗ ಅವರು ಸ್ವತಃ ಮುಂದೆ ಬಂದು ಆದರದಿಂದ ಅವನನ್ನು ಸ್ವಾಗತಿಸಿ ಶ್ರೇಷ್ಠ ಆಸನದಲ್ಲಿ ಕುಳ್ಳಿರಿಸಿ, ಉತ್ತಮ ಸಾಮಗ್ರಿಗಳಿಂದ ಅವನನ್ನು ಪೂಜಿಸಿ, ಚರಣಕಮಲಗಳನ್ನು ತೊಳೆದು ತಾಂಬೂಲವನ್ನಿತ್ತು, ಕಾಲುಗಳನ್ನು ಒತ್ತಿ ಅವನ ಬಳಲಿಕೆಯನ್ನು ದೂರಗೊಳಿಸುತ್ತಿದ್ದರು. ಬೀಸಣಿಕೆಯಿಂದ ಗಾಳಿಹಾಕಿ, ಸುಗಂಧ ದ್ರವ್ಯ-ಚಂದನವನ್ನು ಪೂಸುವರು. ಹೂವಿನ ಹಾರವನ್ನು ತೊಡಿಸುವರು. ಕೂದಲನ್ನು ಸರಿಪಡಿಸುವರು. ಸ್ನಾನಮಾಡಿಸುವರು, ಮಲಗಿಸುವರು. ಷಡ್ರಸೋಪೇತವಾದ ಭೋಜನವನ್ನು ಮಾಡಿಸುವರು - ಹೀಗೆ ತಮ್ಮ ಕೈಗಳಿಂದ ಭಗವಂತನ ಸೇವೆ ಮಾಡುತ್ತಿದ್ದರು. ॥ ೬ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಪ್ರತಿಯೋರ್ವ ಪತ್ನಿಯರಲ್ಲಿ ಹತ್ತತ್ತು ಪುತ್ರರು ಹುಟ್ಟಿದರೆಂದು ನಾನು ಹೇಳಿಬಿಟ್ಟಿದ್ದೆ. ಆ ರಾಣಿಯರಲ್ಲಿ ಎಂಟು ಮಂದಿ ಪಟ್ಟದರಸಿಯರಿದ್ದರು. ಅವರ ವಿವಾಹದ ಕಥೆಯನ್ನು ಮೊದಲೇ ವರ್ಣಿಸಿರುವೆನು. ಈಗ ಪ್ರದ್ಯುಮ್ನನೇ ಮುಂತಾದ ಅವನ ಪುತ್ರರನ್ನು ವರ್ಣಿಸುವೆನು. ॥ ೭ ॥ ಪ್ರದ್ಯುಮ್ನ, ಚಾರುದೇಷ್ಣ, ಸುದೇಷ್ಣ, ಪರಾಕ್ರಮಿ ಚಾರುದೇಹ, ಸುಚಾರು, ಚಾರುಗುಪ್ತ, ಭದ್ರಚಾರು, ಚಾರುಚಂದ್ರ, ವಿಚಾರು ಮತ್ತು ಚಾರು ಎಂಬ ಹತ್ತು ಪುತ್ರರು ರುಕ್ಮಿಣಿಯ ಗರ್ಭದಿಂದ ಹುಟ್ಟಿದ್ದರು. ಇವರೆಲ್ಲರೂ ತಂದೆಯಾದ ಭಗವಾನ್ ಶ್ರೀಕೃಷ್ಣನಿಗೆ ಯಾವುದರಲ್ಲಿಯೂ ಕಡಿಮೆಯಾಗಿರಲಿಲ್ಲ. ॥ ೮-೯ ॥

ಭಾನುಃ ಸುಭಾನುಃ ಸ್ವರ್ಭಾನುಃ ಪ್ರಭಾನುರ್ಭಾನುಮಾಂಸ್ತಥಾ ।
ಚಂದ್ರಭಾನುರ್ಬೃಹದ್ಭಾನುರತಿಭಾನುಸ್ತಥಾಷ್ಟಮಃ
॥ ೧೦ ॥

ಶ್ರೀಭಾನುಃ ಪ್ರತಿಭಾನುಶ್ಚ ಸತ್ಯಭಾಮಾತ್ಮಜಾ ದಶ ।
ಸಾಂಬಃ ಸುಮಿತ್ರಃ ಪುರುಜಿಚ್ಛತಜಿಚ್ಚ ಸಹಸ್ರಜಿತ್
॥ ೧೧ ॥

ವಿಜಯಶ್ಚಿತ್ರಕೇತುಶ್ಚ ವಸುಮಾನ್ ದ್ರವಿಡಃ ಕ್ರತುಃ ।
ಜಾಂಬವತ್ಯಾಃ ಸುತಾ ಹ್ಯೇತೇ ಸಾಂಬಾದ್ಯಾಃ ಪಿತೃಸಮ್ಮತಾಃ
॥ ೧೨ ॥

ವೀರಶ್ಚಂದ್ರೋಽಶ್ವಸೇನಶ್ಚ ಚಿತ್ರಗುರ್ವೇಗವಾನ್ವೃಷಃ ।
ಆಮಃ ಶಂಕುರ್ವಸುಃ ಶ್ರೀಮಾನ್ ಕುಂತಿರ್ನಾಗ್ನಜಿತೇಃ ಸುತಾಃ
॥ ೧೩ ॥

ಶ್ರುತಃ ಕವಿರ್ವೃಷೋ ವೀರಃ ಸುಬಾಹುರ್ಭದ್ರ ಏಕಲಃ ।
ಶಾಂತಿರ್ದರ್ಶಃ ಪೂರ್ಣಮಾಸಃ ಕಾಲಿಂದ್ಯಾಃ ಸೋಮಕೋಽವರಃ
॥ ೧೪ ॥

ಪ್ರಘೋಷೋ ಗಾತ್ರವಾನ್ಸಿಂಹೋ ಬಲಃ ಪ್ರಬಲ ಊರ್ಧ್ವಗಃ ।
ಮಾದ್ರ್ಯಾಃ ಪುತ್ರಾ ಮಹಾಶಕ್ತಿಃ ಸಹ ಓಜೋಽಪರಾಜಿತಃ
॥ ೧೫ ॥

ವೃಕೋ ಹರ್ಷೋಽನಿಲೋ ಗೃಧ್ರೋ ವರ್ಧನೋಽನ್ನಾದ ಏವ ಚ ।
ಮಹಾಶಃ ಪಾವನೋ ವಹ್ನಿರ್ಮಿತ್ರವಿಂದಾತ್ಮಜಾಃ ಕ್ಷುಧಿಃ
॥ ೧೬ ॥

ಸಂಗ್ರಾಮಜಿದ್ಬೃಹತ್ಸೇನಃ ಶೂರಃ ಪ್ರಹರಣೋಽರಿಜಿತ್ ।
ಜಯಃ ಸುಭದ್ರೋ ಭದ್ರಾಯಾ ವಾಮ ಆಯುಶ್ಚ ಸತ್ಯಕಃ
॥ ೧೭ ॥

ದೀಪ್ತಿಮಾಂಸ್ತಾಮ್ರತಪ್ತಾದ್ಯಾ ರೋಹಿಣ್ಯಾಸ್ತನಯಾ ಹರೇಃ ।
ಪ್ರದ್ಯುಮ್ನಾಚ್ಚಾನಿರುದ್ಧೋಽಭೂದ್ರುಕ್ಮವತ್ಯಾಂ ಮಹಾಬಲಃ
॥ ೧೮ ॥

ಪುತ್ರ್ಯಾಂ ತು ರುಕ್ಮಿಣೋ ರಾಜನ್ ನಾಮ್ನಾ ಭೋಜಕಟೇ ಪುರೇ ।
ಏತೇಷಾಂ ಪುತ್ರಪೌತ್ರಾಶ್ಚ ಬಭೂವುಃ ಕೋಟಿಶೋ ನೃಪ ।
ಮಾತರಃ ಕೃಷ್ಣಜಾತಾನಾಂ ಸಹಸ್ರಾಣಿ ಚ ಷೋಡಶ
॥ ೧೯ ॥

ರಾಜೋವಾಚ

ಕಥಂ ರುಕ್ಮ್ಯರಿಪುತ್ರಾಯ ಪ್ರಾದಾದ್ದುಹಿತರಂ ಯುಧಿ ।
ಕೃಷ್ಣೇನ ಪರಿಭೂತಸ್ತಂ ಹಂತುಂ ರಂಧ್ರಂ ಪ್ರತೀಕ್ಷತೇ ।
ಏತದಾಖ್ಯಾಹಿ ಮೇ ವಿದ್ವನ್ ದ್ವಿಷೋರ್ವೈವಾಹಿಕಂ ಮಿಥಃ
॥ ೨೦ ॥

ಅನಾಗತಮತೀತಂ ಚ ವರ್ತಮಾನಮತೀಂದ್ರಿಯಮ್ ।
ವಿಪ್ರಕೃಷ್ಟಂ ವ್ಯವಹಿತಂ ಸಮ್ಯಕ್ ಪಶ್ಯಂತಿ ಯೋಗಿನಃ
॥ ೨೧ ॥

ಸತ್ಯಭಾಮೆಯಲ್ಲಿಯೂ ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಂತ, ಚಂದ್ರಭಾನು, ಬೃಹದ್ಭಾನು, ಅತಿಭಾನು, ಶ್ರೀಭಾನು ಮತ್ತು ಪ್ರತಿಭಾನು ಎಂಬ ಹತ್ತು ಪುತ್ರರು ಹುಟ್ಟಿದರು. ಜಾಂಬವತಿಯಲ್ಲಿಯೂ - ಸಾಂಬ, ಸುಮಿತ್ರ, ಪುರುಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರಕೇತು, ವಸುಮಾನ್, ದ್ರವಿಡ ಮತ್ತು ಕ್ರತು ಎಂಬ ಹತ್ತ ಪುತ್ರರುದಿಸಿದರು. ಇವರೆಲ್ಲರೂ ಶ್ರೀಕೃಷ್ಣನಿಗೆ ಪ್ರಿಯರಾಗಿದ್ದರು. ॥ ೧೦-೧೨ ॥ ನಾಗ್ನಜಿತಿ ಸತ್ಯೆಯಲ್ಲಿಯೂ ವೀರ, ಚಂದ್ರ, ಅಶ್ವಸೇನ, ಚಿತ್ರಗು, ವೇಗವಾನ್, ವೃಷ, ಆಮ, ಶಂಕು, ವಸು ಮತ್ತು ಪರಮತೇಜಸ್ವಿಯಾದ ಕುಂತಿ ಎಂಬ ಹತ್ತು ಮಕ್ಕಳಾದರು. ॥ ೧೩. ॥ ಕಾಲಿಂದಿಗೆ ಶ್ರುತ, ಕವಿ, ವೃಷ, ವೀರ, ಸುಬಾಹು, ಭದ್ರ, ಶಾಂತಿ, ದರ್ಶ, ಪೂರ್ಣಮಾಸ ಮತ್ತು ಸೋಮಕ ಎಂಬ ಪುತ್ರರಿದ್ದರು. ॥ ೧೪ ॥ ಮದ್ರದೇಶದ ರಾಜಕುಮಾರಿ ಲಕ್ಷ್ಮಣೆಯ ಗರ್ಭದಲ್ಲಿ-ಪ್ರಘೋಷ, ಗಾತ್ರವಾನ್, ಸಿಂಹ, ಬಲ, ಪ್ರಬಲ, ಊರ್ಧ್ವಗ, ಮಹಾಶಕ್ತಿ, ಸಹ, ಓಜ ಮತ್ತು ಅಪರಾಜಿತರೆಂಬ ಹತ್ತು ಮಕ್ಕಳು ಹುಟ್ಟಿದ್ದರು. ॥ ೧೫ ॥ ಮಿತ್ರವಿಂದೆಯಲ್ಲಿ ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ಅನ್ನಾದ, ಮಹಾಶ, ಪಾವನ, ವಹ್ನಿ ಮತ್ತು ಕ್ಷುಧಿ ಎಂಬ ಹತ್ತು ಪುತ್ರರು ಹುಟ್ಟಿದ್ದರು. ॥ ೧೬ ॥ ಭದ್ರಾ ಎಂಬುವಳಲ್ಲಿ - ಸಂಗ್ರಾಮಜಿತ್, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ್, ಜಯ, ಸುಭದ್ರ, ವಾಮ, ಆಯು ಮತ್ತು ಸತ್ಯಕ ಎಂಬ ಹತ್ತು ಪುತ್ರರು ಹುಟ್ಟಿದರು. ॥ ೧೭ ॥ ಈ ಎಂಟು ಪಟ್ಟರಾಣಿಯರಲ್ಲದೆ ಭಗವಂತನಿಗೆ ರೋಹಿಣಿಯೇ ಮೊದಲಾದ ಹದಿನಾರು ಸಾವಿರದ ಒಂದು ನೂರು ಇನ್ನೂ ಪತ್ನಿಯರಿದ್ದರು. ರೋಹಿಣಿಯ ಗರ್ಭದಲ್ಲಿ ದೀಪ್ತಮಾನ್, ತಾಮ್ರತಪ್ತ ಮೊದಲಾದ ಹತ್ತು-ಹತ್ತು ಮಂದಿ ಪುತ್ರರು ಹುಟ್ಟಿದರು. ರುಕ್ಮಿಣೀ ನಂದನನಾದ ಪ್ರದ್ಯುಮ್ನನಿಗೆ ಮಾಯಾವತಿಯಲ್ಲದೆ ಭೋಜಕಟ ನಿವಾಸಿಯಾದ ರುಕ್ಮಿಯ ಮಗಳಾದ ರುಕ್ಮವತಿ ಯೊಡನೆಯೂ ವಿವಾಹವಾಗಿತ್ತು. ಪರೀಕ್ಷಿತನೇ! ಶ್ರೀಕೃಷ್ಣನ ಮಕ್ಕಳ ತಾಯಂದಿರೇ ಹದಿನಾರು ಸಾವಿರಕ್ಕಿಂತಲೂ ಹೆಚ್ಚಾಗಿದ್ದರು. ಅದರಿಂದ ಅವನ ಪುತ್ರರು-ಪೌತ್ರರು ಇವರ ಸಂಖ್ಯೆಯು ಕೋಟಿಯನ್ನೂ ಮೀರಿತ್ತು. ॥ ೧೮-೧೯ ॥

ಪರೀಕ್ಷಿದ್ರಾಜನು ಕೇಳಿದನು - ಮಹಾಮುನಿಗಳೇ! ನೀವೀಗ ರುಕ್ಮಿಯ ಮಗಳೊಡನೆ ಪ್ರದ್ಯುಮ್ನನ ವಿವಾಹವಾಯಿತೆಂದು ಹೇಳಿದಿರಿ. ಪರಮ ಶತ್ರುವಾದ ಶ್ರೀಕೃಷ್ಣನ ಮಗನಿಗೆ ಏಕೆ ರುಕ್ಮಿಯು ತನ್ನ ಮಗಳನ್ನು ಕೊಟ್ಟನು? ಶ್ರೀಕೃಷ್ಣನಿಂದ ಪರಾಜಿತನಾಗಿ ಅವಮಾನಿತನಾಗಿದ್ದ ಅವನು ಶ್ರೀಕೃಷ್ಣನನ್ನೇ ಸಂಹರಿಸಲು ಸಮಯ ಕಾಯುತ್ತಿದ್ದನು. ಇಬ್ಬರು ವೈರಿಗಳ ನಡುವೆ ವಿವಾಹ ಸಂಬಂಧವು ಹೇಗೆ ಏರ್ಪಟ್ಟಿತೆಂಬುದನ್ನು ದಯಮಾಡಿ ಹೇಳಿರಿ. ॥ ೨೦ ॥ ಬ್ರಾಹ್ಮಣ ಶ್ರೇಷ್ಠರೇ! ಯೋಗಿಗಳಾದವರು ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದವರಾಗಿರುತ್ತಾರೆ. ಇಂದ್ರಿಯಗಳಿಗೆ ಗೋಚರಿಸದೇ ಇರುವುದನ್ನು, ದೂರದಲ್ಲಿರುವುದನ್ನೂ, ಮರೆಯಾಗಿರುವುದನ್ನೂ ತಿಳಿಯಲು ಅವರು ಸಮರ್ಥರು. ತಮ್ಮಂತಹ ಯೋಗಿಗಳಿಗೆ ತಿಳಿಯದೇ ಇರುವ ವಿಷಯವೇ ಇಲ್ಲ. ಆದ್ದರಿಂದ ನಿಗೂಢವಾಗಿರುವ ಈ ವಿಷಯವನ್ನು ನನಗೆ ಹೇಳಿರಿ. ॥ ೨೧ ॥

ಶ್ರೀಶುಕ ಉವಾಚ

ವೃತಃ ಸ್ವಯಂವರೇ ಸಾಕ್ಷಾದನಂಗೋಽಂಗಯುತಸ್ತಯಾ ।
ರಾಜ್ಞಃ ಸಮೇತಾನ್ನಿರ್ಜಿತ್ಯ ಜಹಾರೈಕರಥೋ ಯುಧಿ
॥ ೨೨ ॥

ಯದ್ಯಪ್ಯನುಸ್ಮರನ್ ವೈರಂ ರುಕ್ಮೀ ಕೃಷ್ಣಾವಮಾನಿತಃ ।
ವ್ಯತರದ್ಭಾಗಿನೇಯಾಯ ಸುತಾಂ ಕುರ್ವನ್ಸ್ವಸುಃ ಪ್ರಿಯಮ್
॥ ೨೩ ॥

ರುಕ್ಮಿಣ್ಯಾಸ್ತನಯಾಂ ರಾಜನ್ ಕೃತವರ್ಮಸುತೋ ಬಲೀ ।
ಉಪಯೇಮೇ ವಿಶಾಲಾಕ್ಷೀಂ ಕನ್ಯಾಂ ಚಾರುಮತೀಂ ಕಿಲ
॥ ೨೪ ॥

ದೌಹಿತ್ರ್ಯಾಯಾನಿರುದ್ಧಾಯ ಪೌತ್ರೀಂ ರುಕ್ಮ್ಯದದಾದ್ಧರೇಃ ।
ರೋಚನಾಂ ಬದ್ಧವೈರೋಽಪಿ ಸ್ವಸುಃ ಪ್ರಿಯಚಿಕೀರ್ಷಯಾ ।
ಜಾನನ್ನಧರ್ಮಂ ತದ್ಯೌನಂ ಸ್ನೇಹಪಾಶಾನುಬಂಧನಃ
॥ ೨೫ ॥

ತಸ್ಮಿನ್ನಭ್ಯುದಯೇ ರಾಜನ್ ರುಕ್ಮಿಣೀ ರಾಮಕೇಶವೌ ।
ಪುರಂ ಭೋಜಕಟಂ ಜಗ್ಮುಃ ಸಾಂಬಪ್ರದ್ಯುಮ್ನಾದಯಃ
॥ ೨೬ ॥

ತಸ್ಮಿನ್ ನಿವೃತ್ತ ಉದ್ವಾಹೇ ಕಾಲಿಂಗಪ್ರಮುಖಾ ನೃಪಾಃ ।
ದೃಪ್ತಾಸ್ತೇ ರುಕ್ಮಿಣಂ ಪ್ರೋಚುರ್ಬಲಮಕ್ಷೈರ್ವಿನಿರ್ಜಯ
॥ ೨೭ ॥

ಅನಕ್ಷಜ್ಞೋ ಹ್ಯಯಂ ರಾಜನ್ನಪಿ ತದ್ವ್ಯಸನಂ ಮಹತ್ ।
ಇತ್ಯುಕ್ತೋ ಬಲಮಾಹೂಯ ತೇನಾಕ್ಷೈ ರುಕ್ಮ್ಯದೀವ್ಯತ
॥ ೨೮ ॥

ಶತಂ ಸಹಸ್ರಮಯುತಂ ರಾಮಸ್ತತ್ರಾದದೇ ಪಣಮ್ ।
ತಂ ತು ರುಕ್ಮ್ಯಜಯತ್ತತ್ರ ಕಾಲಿಂಗಃ ಪ್ರಾಹಸದ್ಬಲಮ್ ।
ದಂತಾನ್ ಸಂದರ್ಶಯನ್ನುಚ್ಚೈರ್ನಾಮೃಷ್ಯತ್ತದ್ಬಲಾಯುಧಃ
॥ ೨೯ ॥

ತತೋ ಲಕ್ಷಂ ರುಕ್ಮ್ಯಗೃಹ್ಣಾದ್ ಗ್ಲಹಂ ತತ್ರಾಜಯದ್ಬಲಃ ।
ಜಿತವಾನಹಮಿತ್ಯಾಹ ರುಕ್ಮೀ ಕೈತವಮಾಶ್ರಿತಃ
॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಪ್ರದ್ಯುಮ್ನನು ಮೂರ್ತಿಮಂತನಾದ ಕಾಮದೇವನೇ ಆಗಿದ್ದನು. ಅವನ ಸೌಂದರ್ಯ ಮತ್ತು ಗುಣಗಳಿಗೆ ಮಾರುಹೋಗಿ ರುಕ್ಮವತಿಯು ಸ್ವಯಂವರದಲ್ಲಿ ಅವನಿಗೆ ವರಮಾಲೆಯನ್ನು ಹಾಕಿದಳು. ಪ್ರದ್ಯುಮ್ನನು ಒಬ್ಬಂಟಿಗನಾಗಿ ಯುದ್ಧದಲ್ಲಿ ಅಲ್ಲಿ ನೆರೆದ ರಾಜರನ್ನು ಗೆದ್ದು ರುಕ್ಮವತಿಯನ್ನು ಅಪಹರಿಸಿಕೊಂಡು ಬಂದನು. ॥ ೨೨ ॥ ಶ್ರೀಕೃಷ್ಣನಿಂದ ಅಪಮಾನಿತನಾದ ಕಾರಣ ರುಕ್ಮಿಯ ಹೃದಯದಲ್ಲಿ ಕ್ರೋಧಾಗ್ನಿಯು ಇನ್ನೂ ಆರಿರಲಿಲ್ಲ, ಇನ್ನೂ ಅವನೊಂದಿಗೆ ವೈರವನ್ನು ಸಾಧಿಸುತ್ತಲೇ ಇದ್ದನು. ಹೀಗಿದ್ದರೂ ತನ್ನ ತಂಗಿ ರುಕ್ಮಿಣಿಯನ್ನು ಸಂತೋಷಗೊಳಿಸಲಿಕ್ಕಾಗಿ ಅವನು ತನ್ನ ಸೋದರಳಿಯನಾದ ಪ್ರದ್ಯುಮ್ನನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟನು. ॥ ೨೩ ॥ ಪರೀಕ್ಷಿತನೇ! ಹತ್ತು ಪುತ್ರರಲ್ಲದೆ ರುಕ್ಮಿಣಿಗೆ ಪರಮ ಸುಂದರಳಾದ, ದೊಡ್ಡ-ದೊಡ್ಡ ಕಣ್ಣುಗಳುಳ್ಳ ಚಾರುಮತಿ ಎಂಬ ಕನ್ಯೆಯೋರ್ವಳಿದ್ದಳು. ಕೃತವರ್ಮನ ಪುತ್ರನಾದ ಬಲಿಯು ಆಕೆಯೊಂದಿಗೆ ವಿವಾಹವಾಗಿದ್ದನು. ॥ ೨೪ ॥

ಪರೀಕ್ಷಿತನೇ! ರುಕ್ಮಿಗೆ ಭಗವಾನ್ ಶ್ರೀಕೃಷ್ಣನೊಂದಿಗೆ ಹಳೆಯ ವೈರವಿದ್ದರೂ ತನ್ನ ತಂಗಿಗೆ ಸಂತೋಷವನ್ನುಂಟುಮಾಡಲು ಅವನು ತನ್ನ ಮೊಮ್ಮಗಳಾದ ರೋಚನೆಯ ವಿವಾಹವನ್ನು ರುಕ್ಮಿಣಿಯ ಮೊಮ್ಮಗನಾದ ಅನಿರುದ್ಧನೊಂದಿಗೆ ಮಾಡಿಬಿಟ್ಟನು. ಈ ಪ್ರಕಾರದ ವಿವಾಹವು ಧರ್ಮಕ್ಕೆ ಅನುಕೂಲವಿಲ್ಲದಿದ್ದರೂ ಸ್ನೇಹಸಂಬಂಧದಲ್ಲಿ ಬಂಧಿತನಾದ ರುಕ್ಮಿಯು ಹೀಗೆ ಮಾಡಿದ್ದನು. ॥ ೨೫ ॥ ರಾಜೇಂದ್ರನೇ! ಅನಿರುದ್ಧನ ವಿವಾಹ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಭಗವಾನ್ ಶ್ರೀಕೃಷ್ಣ ಬಲರಾಮ, ರುಕ್ಮಿಣೀ, ಪ್ರದ್ಯುಮ್ನ ಸಾಂಬ ಮೊದಲಾದ ದ್ವಾರಕಾ ನಿವಾಸಿಗಳು ಭೋಜಕಟ ನಗರಕ್ಕೆ ಬಂದಿದ್ದರು. ॥ ೨೬॥ ವಿವಾಹ ಮಹೋತ್ಸವವು ಸಾಂಗವಾಗಿ ನೆರವೇರಿದ ನಂತರ ಗರ್ವಿಷ್ಠರಾಗಿದ್ದ ಕಳಿಂಗನೇ ಮೊದಲಾದ ರಾಜರು ಪಗಡೆಯಾಟದಲ್ಲಿ ಬಲರಾಮನನ್ನು ಸೋಲಿಸುವಂತೆ ರುಕ್ಮಿಯನ್ನು ಪ್ರಚೋದಿಸಿದರು. ॥ ೨೭ ॥

ಬಲರಾಮನು ಪಗಡೆಯಾಟದಲ್ಲಿ ಚತುರನಾಗಿರಲಿಲ್ಲ ಆದರೆ ಅವನಿಗೆ ಆಟವಾಡುವುದರಲ್ಲಿ ಆಸಕ್ತಿ ಇತ್ತು. ಕಳಿಂಗರೇ ಮೊದಲಾದ ರಾಜರ ಪ್ರೇರಣೆಯಿಂದ ರುಕ್ಮಿಯು ಬಲರಾಮನನ್ನು ಆಟಕ್ಕೆ ಆಹ್ವಾನಿಸಿ ಬಲರಾಮನೊಂದಿಗೆ ಪಗಡೆಯಾಡತೊಡಗಿದನು. ॥೨೯॥ ಬಲರಾಮನು ಮೊದಲಿಗೆ ನೂರು, ಮತ್ತೆ ಸಾವಿರ, ಬಳಿಕ ಹತ್ತು ಸಾವಿರ ವರಹಗಳನ್ನು ಪಣಕ್ಕೊಡಿದನು. ಅವನ್ನು ರುಕ್ಮಿಯು ಗೆದ್ದುಕೊಂಡನು. ರುಕ್ಮಿಯು ಗೆದ್ದಾಗ ಕಳಿಂಗನರೇಶನು ಹಲ್ಕಿರಿದು ಗಹ-ಗಹಿಸಿ ನಗುತ್ತಾ ಬಲರಾಮನ ಉಪಹಾಸ್ಯ ಮಾಡಿದನು. ಬಲರಾಮನಿಗೆ ಆ ನಗುವು ಸಹಿಸಲಾಗಲಿಲ್ಲ, ಅವನು ಸ್ವಲ್ಪ ಸಿಟ್ಟಾದನು. ॥ ೨೯ ॥ ಅನಂತರ ರುಕ್ಮಿಯು ಒಂದು ಲಕ್ಷ ವರಹ ಪಣಕ್ಕೊಡ್ಡಿದನು. ಅದನ್ನು ಬಲರಾಮನು ಗೆದ್ದುಕೊಂಡನು. ಆದರೆ ಧೂರ್ತನಾದ ರುಕ್ಮಿಯು 'ನಾನೇ ಗೆದ್ದೆ' ಎಂದು ಹೇಳತೊಡಗಿದ ॥ ೩೦ ॥

ಮನ್ಯುನಾ ಕ್ಷುಭಿತಃ ಶ್ರೀಮಾನ್ ಸಮುದ್ರ ಇವ ಪರ್ವಣಿ ।
ಜಾತ್ಯಾರುಣಾಕ್ಷೋಽತಿರುಷಾ ನ್ಯರ್ಬುದಂ ಗ್ಲಹಮಾದದೇ
॥ ೩೧ ॥

ತಂ ಚಾಪಿ ಜಿತವಾನ್ ರಾಮೋ ಧರ್ಮೇಣ ಚ್ಛಲಮಾಶ್ರಿತಃ ।
ರುಕ್ಮೀ ಜಿತಂ ಮಯಾತ್ರೇಮೇ ವದಂತು ಪ್ರಾಶ್ನಿಕಾ ಇತಿ
॥ ೩೨ ॥

ತದಾಬ್ರವೀನ್ನಭೋವಾಣೀ ಬಲೇನೈವ ಜಿತೋ ಗ್ಲಹಃ ।
ಧರ್ಮತೋ ವಚನೇನೈವ ರುಕ್ಮೀ ವದತಿ ವೈ ಮೃಷಾ
॥ ೩೩ ॥

ತಾಮನಾದೃತ್ಯ ವೈದರ್ಭೋ ದುಷ್ಟರಾಜನ್ಯಚೋದಿತಃ ।
ಸಂಕರ್ಷಣಂ ಪರಿಹಸನ್ ಬಭಾಷೇ ಕಾಲಚೋದಿತಃ
॥ ೩೪ ॥

ನೈವಾಕ್ಷಕೋವಿದಾ ಯೂಯಂ ಗೋಪಾಲಾ ವನಗೋಚರಾಃ ।
ಅಕ್ಷೈರ್ದೀವ್ಯಂತಿ ರಾಜಾನೋ ಬಾಣೈಶ್ಚ ನ ಭವಾದೃಶಾಃ
॥ ೩೫ ॥

ರುಕ್ಮಿನ್ಯೈವಮಧಿಕ್ಷಿಪ್ತೋ ರಾಜಭಿಶ್ಚೋಪಹಾಸಿತಃ ।
ಕ್ರುದ್ಧಃ ಪರಿಘಮುದ್ಯಮ್ಯ ಜಘ್ನೇ ತಂ ನೃಮ್ಣಸಂಸದಿ
॥ ೩೬ ॥

ಕಲಿಂಗರಾಜಂ ತರಸಾ ಗೃಹೀತ್ವಾ ದಶಮೇ ಪದೇ ।
ದಂತಾನಪಾತಯತ್ಕ್ರುದ್ಧೋ ಯೋಽಹಸದ್ವಿವೃತೈರ್ದ್ವಿಜೈಃ
॥ ೩೭ ॥

ಅನ್ಯೇ ನಿರ್ಭಿನ್ನಬಾಹೂರುಶಿರಸೋ ರುಧಿರೋಕ್ಷಿತಾಃ ।
ರಾಜಾನೋ ದುದ್ರುವುರ್ಭೀತಾ ಬಲೇನ ಪರಿಘಾರ್ದಿತಾಃ
॥ ೩೮ ॥

ನಿಹತೇ ರುಕ್ಮಿಣಿ ಶ್ಯಾಲೇ ನಾಬ್ರವೀತ್ ಸಾಧ್ವಸಾಧು ವಾ ।
ರುಕ್ಮಿಣೇಬಲಯೋ ರಾಜನ್ ಸ್ನೇಹಭಂಗಭಯಾದ್ಹರಿಃ
॥ ೩೯ ॥

ತತೋಽನಿರುದ್ಧಂ ಸಹ ಸೂರ್ಯಯಾ ವರಂ
ರಥಂ ಸಮಾರೋಪ್ಯ ಯಯುಃ ಕುಶಸ್ಥಲೀಮ್ ।
ರಾಮಾದಯೋ ಭೋಜಕಟಾದ್ಸಾರ್ಹಾಃ
ಸಿದ್ಧಾಖಿಲಾರ್ಥಾ ಮಧುಸೂದನಾಶ್ರಯಾಃ ॥ ೪೦ ॥

ಇದರಿಂದ ಬಲರಾಮನು ಕೆಂಡಾಮಂಡಲನಾದನು. ಪೂರ್ಣಿಮೆಯ ದಿನ ಸಮುದ್ರಕ್ಕೆ ಭರ್ತಿಬರುವಂತೆ ಅವನು ಕ್ಷೋಭೆಗೊಂಡನು. ಸ್ವಾಭಾವಿಕವಾಗಿಯೇ ಕೆಂಪಾಗಿದ್ದ ಅವನ ಕಣ್ಣುಗಳು ಕ್ರೋಧದಿಂದ ಕಿಡಿಕಾರಿದವು. ಈಗ ಅವನು ಹತ್ತು ಕೋಟಿ ವರಹಗಳನ್ನು ಪಣಕ್ಕೆ ಒಡ್ಡಿದನು. ॥ ೩೧ ॥ ಈ ಬಾರಿಯೂ ದ್ಯೂತದ ನಿಯಮದಂತೆ ಬಲರಾಮನೇ ಗೆದ್ದನು. ಆದರೆ ರುಕ್ಮಿಯು 'ನಾನೇಗೆದ್ದೆ' ಎಂದು ಬೊಬ್ಬೆ ಹಾಕುತ್ತಾ ಈ ವಿಷಯದ ವಿಶೇಷಜ್ಞನಾದ ಕಳಿಂಗರಾಜನೇ ಇದನ್ನು ನಿರ್ಣಯಿಸಲಿ ಎಂದು ಹಟಹಿಡಿದನು. ॥ ೩೨ ॥ ಆ ಸಮಯದಲ್ಲಿ ಆಕಾಶವಾಣಿಯೊಂದು ಮೊಳಗಿತು – ಧರ್ಮ ಪೂರ್ವಕವಾಗಿ ಹೇಳಬೇಕಾದರೆ ಬಲರಾಮನೇ ಈ ಆಟವನ್ನು ಗೆದ್ದಿರುವನು. ನಾನು ಗೆದ್ದೆ ಎಂದು ಹೇಳುವ ರುಕ್ಮಿಯ ಮಾತು ಪೂರ್ಣವಾಗಿ ಸುಳ್ಳಾಗಿದೆ'. ॥ ೩೩ ॥ ರುಕ್ಮಿಯ ತಲೆಯ ಮೇಲೆ ಮೃತ್ಯು ಕುಣಿಯುತ್ತಿತ್ತು. ಜೊತೆಗೆ ಸಂಗಡಿಗರಾದ ದುಷ್ಟರಾಜರು ಅವನನ್ನು ಎತ್ತಿಕಟ್ಟಿದರು. ಇದರಿಂದ ಅವನು ಆಕಾಶವಾಣಿಯನ್ನು ನಿರ್ಲಕ್ಷಿಸಿ ಬಲರಾಮನನ್ನು ಅಪಹಾಸ್ಯ ಮಾಡುತ್ತಾ ಹೀಗೆ ಹೇಳಿದನು. ॥ ೩೪ ॥ ಎಲೈ ಬಲರಾಮಾ ! ಕಾಡಿನಲ್ಲಿ ಹಸುಗಳನ್ನು ಮೇಯಿಸುತ್ತಾ ಸಂಚರಿಸುವ ನೀವು ಅಕ್ಷವಿದ್ಯೆಯನ್ನು ಬಲ್ಲವರಲ್ಲ. ಪಗಡೆಕಾಯಿಗಳಿಂದ ಮತ್ತು ಬಾಣಗಳಿಂದ ನಮ್ಮಂಥ ರಾಜರೇ ಆಟವಾಡುತ್ತಾ ಇರುತ್ತೇವೆ. ನಿಮ್ಮಂಥ ಗೋಪಾಲಕರಲ್ಲ. ॥ ೩೫ ॥ ರುಕ್ಮಿಯು ಮಾಡಿದ ಆಕ್ಷೇಪದಿಂದ ಮತ್ತು ರಾಜರುಗಳ ಉಪಹಾಸದಿಂದ ಬಲರಾಮನು ಅತ್ಯಂತ ಕ್ರುದ್ಧನಾಗಿ ಒಂದು ಪರಿಘಾಯುಧವನ್ನೆತ್ತಿ ಆ ವಿವಾಹದ ಸಭೆಯಲ್ಲೇ ರುಕ್ಮಿಯನ್ನು ಕೊಂದು ಹಾಕಿದನು. ॥ ೩೬ ॥ ಕಳಿಂಗ ರಾಜನು ಮೊದಲು ಹಲ್ಕಿರಿದು ನಕ್ಕಿದ್ದನು. ಬಲರಾಮನ ಸಿಟ್ಟನ್ನು ನೋಡಿ ಅಲ್ಲಿಂದ ಓಡಿದನು ; ಆದರೆ ಬಲರಾಮನು ಹತ್ತೇ ಹೆಜ್ಜೆಗಳಲ್ಲಿ ಅವನನ್ನು ಹಿಡಿದು ಕ್ರೋಧದಿಂದ ಅವನ ಹಲ್ಲುಗಳನ್ನು ಉದುರಿಸಿಬಿಟ್ಟನು. ॥ ೩೭ ॥ ಬಲರಾಮನು ತನ್ನ ಪರಿಘಾಯುಧದ ಏಟುಗಳಿಂದ ಇತರ ರಾಜರ ಭುಜ, ತೊಡೆ, ತಲೆಗಳನ್ನು ಬಡಿದುಹಾಕಿದನು. ಅವರೆಲ್ಲರೂ ರಕ್ತದಿಂದ ತೊಯ್ದುಹೋಗಿ ಭಯದಿಂದ ಅಲ್ಲಿಂದ ಓಡಿ ಹೋದರು. ॥ ೩೮ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು – ಬಲರಾಮನನ್ನು ಸಮರ್ಥಿಸಿದರೆ ರುಕ್ಮಿಣಿಗೆ ಅಸಮಾಧಾನವಾಗಬಹುದು. ರುಕ್ಮಿಯ ವಧೆಯು ಸರಿಯಲ್ಲವೆಂದು ಹೇಳಿದರೆ ಬಲರಾಮನು ಸಿಟ್ಟಾಗುವನು. ಎಂದು ಯೋಚಿಸಿ ಭಾವ ಮೈದುನನ ಮೃತ್ಯುವಿನ ವಿಷಯದಲ್ಲಿ ಏನನ್ನೂ ಹೇಳದೆ ಮೌನವಾಗಿದ್ದನು. ॥ ೩೯ ॥ ಹೀಗೆ ಅನಿರುದ್ಧನ ವಿವಾಹವೂ, ಶತ್ರುವಿನ ವಧೆಯೂ ಆದನಂತರ ಭಗವಂತನ ಆಶ್ರಿತನಾದ ಬಲರಾಮನೇ ಮೊದಲಾದ ಯದುವಂಶೀಯರು ನವವಧುವಾದ ರೋಚನೆಯೊಂದಿಗೆ ಅನಿರುದ್ಧನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಭೋಜಕಟ ನಗರದಿಂದ ದ್ವಾರಕಾಪುರಿಗೆ ಪ್ರಯಾಣ ಮಾಡಿದರು. ॥ ೪೦ ॥

ಅರವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೬೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಅನಿರುದ್ಧವಿವಾಹೇ ರುಕ್ಮಿವಧೋ ನಾಮೈಕಷಷ್ಟಿತಮೋಽಧ್ಯಾಯಃ ॥ ೬೧ ॥

ಅರವತ್ತೆರಡನೆಯ ಅಧ್ಯಾಯ

ಉಷಾ - ಅನಿರುದ್ಧರ ಮಿಲನ

ರಾಜೋವಾಚ

ಬಾಣಸ್ಯ ತನಯಾಮೂಷಾಮುಪಯೇಮೇ ಯದೂತ್ತಮಃ ।
ತತ್ರ ಯುದ್ಧಮಭೂದ್ಘೋರಂ ಹರಿಶಂಕರಯೋರ್ಮಹತ್ ।
ಏತತ್ಸರ್ವಂ ಮಹಾಯೋಗಿನ್ ಸಮಾಖ್ಯಾತುಂ ತ್ವಮರ್ಹಸಿ
॥ ೧ ॥

ಪರೀಕ್ಷಿದ್ರಾಜನು ಕೇಳಿದನು - ಮಹಾಯೋಗಿಗಳಾದ ಶುಕಮಹರ್ಷಿಗಳೇ! ಯದುವಂಶ ಶಿರೋಮಣಿ ಅನಿರುದ್ಧನು ಬಾಣಾಸುರನ ಮಗಳಾದ ಉಷೆಯೊಂದಿಗೆ ವಿವಾಹವಾದನು ಮತ್ತು ಈ ಸಂದರ್ಭದಲ್ಲಿ ಭಗವಾನ್ ಶ್ರೀಕೃಷ್ಣನಿಗೂ ಹಾಗೂ ಶಂಕರನಿಗೂ ಘೋರವಾದ ಯುದ್ಧವು ನಡೆಯಿತೆಂದು ನಾನು ಕೇಳಿದ್ದೇನೆ. ತಾವು ದಯಮಾಡಿ ಈ ವೃತ್ತಾಂತವನ್ನು ವಿಸ್ತಾರವಾಗಿ ಹೇಳಿರಿ. ॥ ೧॥

ಶ್ರೀಶುಕ ಉವಾಚ

ಬಾಣಃ ಪುತ್ರಶತಜ್ಯೇಷ್ಠೋ ಬಲೇರಾಸೀನ್ಮಹಾತ್ಮನಃ ।
ಯೇನ ವಾಮನರೂಪಾಯ ಹರಯೇಽದಾಯಿ ಮೇದಿನೀ
॥ ೨ ॥

ಶ್ರೀಶುಕಮಹಾಮುನಿಗಳು ಹೇಳಿದರು - ಪರೀಕ್ಷಿತ ಮಹಾರಾಜ! ಮಹಾತ್ಮನಾದ ಬಲಿಯ ಕಥೆಯನ್ನು ನೀನು ಈಗಾಗಲೇ ಕೇಳಿರುವೆ. ಅವನು ವಾಮನರೂಪನಾದ ಭಗವಂತನಿಗೆ ಇಡೀ ಪೃಥಿವಿಯನ್ನೇ ದಾನಮಾಡಿದ್ದನು. ಬಲಿಚಕ್ರವರ್ತಿಗೆ ನೂರು ಮಂದಿ ಮಕ್ಕಳಿದ್ದರು, ಅವರಲ್ಲಿ ಹಿರಿಯವನೇ ಬಾಣಾಸುರ. ॥೨ ॥ ದೈತ್ಯರಾಜನಾದ ಬಲಿಯ ಔರಸ ಪುತ್ರನಾದ ಬಾಣಾಸುರನು ಶಿವನಭಕ್ತಿಯಲ್ಲೇ ಸದಾಕಾಲ ನಿರತನಾಗಿರುತ್ತಿದ್ದನು. ಅವನು ಸಮಸ್ತರಿಗೂ ಮಾನ್ಯನಾಗಿದ್ದನು ; ಉದಾರಿಯಾಗಿದ್ದನು. ಅವನು ಮಹಾಬುದ್ಧಿ ಶಾಲಿಯೂ, ಸತ್ಯಸಂಧನೂ, ದೃಢವಾದ ವ್ರತಾನುಷ್ಠಾನ ಉಳ್ಳವನೂ ಆಗಿದ್ದನು. ॥ ೩ ॥ ಆ ದಿನಗಳಲ್ಲಿ ಬಾಣಾಸುರನು ಪರಮರಮಣೀಯವಾದ ಶೋಣಿತಪುರದಲ್ಲಿ ರಾಜ್ಯವಾಳುತ್ತಿದ್ದನು. ಭಗವಾನ್ ಶಂಕರನ ವರಪ್ರಸಾದದಿಂದ ಇಂದ್ರಾದಿ ದೇವತೆಗಳು ಸೇವಕರಂತೆ ಅವನ ಸೇವೆ ಮಾಡುತ್ತಿದ್ದರು. ಅವನಿಗೆ ಸಾವಿರ ತೋಳುಗಳಿದ್ದವು. ಒಂದು ದಿನ ಭಗವಾನ್ ಶಂಕರನು ತಾಂಡವನೃತ್ಯವನ್ನಾಡುತ್ತಿದ್ದಾಗ ಅವನು ತನ್ನ ಸಾವಿರ ಕೈಗಳಿಂದ ಅನೇಕ ವಿಧವಾದ ವಾದ್ಯಗಳನ್ನು ನುಡಿಸಿ ಮೃಡನನ್ನು ಪ್ರಸನ್ನಗೊಳಿಸಿದನು. ॥ ೪ ॥ ಭಗವಂತನಾದ ಶಂಕರನು ನಿಜವಾಗಿಯೂ ಭಕ್ತವತ್ಸಲನೂ, ಶರಣಾಗತ ರಕ್ಷಕನೂ ಆಗಿದ್ದಾನೆ. ಸಮಸ್ತ ಪ್ರಾಣಿಗಳ ಏಕಮಾತ್ರ ಈಶನಾದ ಪ್ರಭುವು ಬಾಣಾಸುರನಲ್ಲಿ ಹೇಳಿದನು - 'ನಿನಗೆ ಇಚ್ಛಿತವಾದ ವರವನ್ನು ಬೇಡು'. ಆಗ ಬಾಣಾಸುರನು - 'ಭಗವಂತಾ! ನೀನು ನನ್ನ ನಗರವನ್ನು ರಕ್ಷಿಸುತ್ತಾ ಇಲ್ಲೆ ಇರಬೇಕೆಂಬುದು ನನ್ನ ಆಸೆ' ಎಂದು ಪ್ರಾರ್ಥಿಸಿಕೊಂಡನು. ॥ ೫ ॥

ತಸ್ಯೌರಸಃ ಸುತೋ ಬಾಣಃ ಶಿವಭಕ್ತಿರತಃ ಸದಾ ।
ಮಾನ್ಯೋ ವದಾನ್ಯೋ ಧೀಮಾಂಶ್ಚ ಸತ್ಯಸಂಧೋ ದೃಢವ್ರತಃ
॥ ೩ ॥

ಶೋಣಿತಾಖ್ಯೇ ಪುರೇ ರಮ್ಯೇ ಸ ರಾಜ್ಯಮಕರೋತ್ಪುರಾ ।
ತಸ್ಯ ಶಂಭೋಃ ಪ್ರಸಾದೇನ ಕಿಂಕರಾ ಇವ ತೇಽಮರಾಃ ।
ಸಹಸ್ರಬಾಹುರ್ವಾದ್ಯೇನ ತಾಂಡವೇಽತೋಷಯನ್ಮೃಡಮ್
॥ ೪ ॥

ಭಗವಾನ್ ಸರ್ವಭೂತೇಶಃ ಶರಣ್ಯೋ ಭಕ್ತವತ್ಸಲಃ ।
ವರೇಣಚ್ಛಂದಯಾಮಾಸ ಸ ತಂ ವವ್ರೇ ಪುರಾಧಿಪಮ್
॥ ೫ ॥

ಒಂದು ದಿನ ಬಲ-ಪರಾಕ್ರಮದಿಂದ ಕೊಬ್ಬಿಹೋದ ಬಾಣಾಸುರನು ಪಕ್ಕದಲ್ಲಿಯೇ ಇದ್ದ ಪರಮೇಶ್ವರನ ಪಾದ ಕಮಲಗಳನ್ನು ಸೂರ್ಯನಂತೆ ಹೊಳೆಯುತ್ತಿರುವ ಕಿರೀಟದಿಂದ ಸ್ಪರ್ಶಿಸಿ ನಮಸ್ಕಾರಗೈದು ಹೀಗೆ ಹೇಳಿದನು. ॥ ೬ ॥ ದೇವಾಧಿದೇವಾ! ನೀನು ಸಮಸ್ತ ಚರಾಚರ ಜಗತ್ತಿಗೆ ಗುರುವೂ, ಸ್ವಾಮಿಯೂ ಆಗಿರುವೆ. ನಾನು ನಿನಗೆ ನಮಸ್ಕರಿಸುತ್ತೇನೆ. ಯಾರ ಮನೋರಥಗಳು ಇದುವರೆಗೆ ಪೂರ್ಣಗೊಂಡಿಲ್ಲವೋ ಅಂತಹ ವರ ಮನೋರಥಗಳನ್ನು ಈಡೇರಿಸಿಕೊಡುವುದರಲ್ಲಿ ನೀನು ಕಲ್ಪವೃಕ್ಷದಂತೆ ಇರುವೆ. ॥ ೭ ॥

ಸ ಏಕದಾಽಽಹ ಗಿರಿಶಂ ಪಾರ್ಶ್ವಸ್ಥಂ ವೀರ್ಯದುರ್ಮದಃ ।
ಕಿರೀಟೇನಾರ್ಕವರ್ಣೇನ ಸಂಸ್ಪೃಶಂಸ್ತತ್ಪದಾಂಬುಜಮ್
॥ ೬ ॥

ನಮಸ್ಯೇ ತ್ವಾಂ ಮಹಾದೇವ ಲೋಕಾನಾಂ ಗುರುಮೀಶ್ವರಮ್ ।
ಪುಂಸಾಮಪೂರ್ಣಕಾಮಾನಾಂ ಕಾಮಪೂರಾಮರಾಂಘ್ರಿಪಮ್
॥ ೭ ॥

ದೋಃಸಹಸ್ರಂ ತ್ವಯಾ ದತ್ತಂ ಪರಂ ಭಾರಾಯ ಮೇಽಭವತ್ ।
ತ್ರಿಲೋಕ್ಯಾಂ ಪ್ರತಿಯೋದ್ಧಾರಂ ನ ಲಭೇ ತ್ವದೃತೇ ಸಮಮ್
॥ ೮ ॥

ಕಂಡೂತ್ಯಾ ನಿಭೃತೈರ್ದೋರ್ಭಿರ್ಯುಯುತ್ಸುರ್ದಿಗ್ಗಜಾನಹಮ್ ।
ಆದ್ಯಾಯಾಂ ಚೂರ್ಣಯನ್ನದ್ರೀನ್ ಭೀತಾಸ್ತೇಽಪಿ ಪ್ರದುದ್ರುವುಃ
॥ ೯ ॥

ತಚ್ಛ್ರುತ್ವಾ ಭಗವಾನ್ ಕ್ರುದ್ಧಃ ಕೇತುಸ್ತೇ ಭಜ್ಯತೇ ಯದಾ ।
ತ್ವದ್ದರ್ಪಘ್ನಂ ಭವೇನ್ಮೂಢ ಸಂಯುಗಂ ಮತ್ಸಮೇನ ತೇ
॥ ೧೦ ॥

ಇತ್ಯುಕ್ತಃ ಕುಮತಿರ್ಹೃಷ್ಟಃ ಸ್ವಗೃಹಂ ಪ್ರಾವಿಶನ್ನೃಪ ।
ಪ್ರತೀಕ್ಷನ್ ಗಿರಿಶಾದೇಶಂ ಸ್ವವೀರ್ಯನಶನಂ ಕುಧೀಃ
॥ ೧೧ ॥

ತಸ್ಯೋಷಾ ನಾಮ ದುಹಿತಾ ಸ್ವಪ್ನೇ ಪ್ರಾದ್ಯುಮ್ನಿನಾ ರತಿಮ್ ।
ಕನ್ಯಾಲಭತ ಕಾಂತೇನ ಪ್ರಾಗದೃಷ್ಟಶ್ರುತೇನ ಸಾ
॥ ೧೨ ॥

ಸಾ ತತ್ರ ತಮಪಶ್ಯಂತೀ ಕ್ವಾಸಿ ಕಾಂತೇತಿ ವಾದಿನೀ ।
ಸಖೀನಾಂ ಮಧ್ಯ ಉತ್ತಸ್ಥೌ ವಿಹ್ವಲಾ ವ್ರೀಡಿತಾ ಭೃಶಮ್
॥ ೧೩ ॥

ಬಾಣಸ್ಯ ಮಂತ್ರೀ ಕುಂಭಾಂಡಶ್ಚಿತ್ರಲೇಖಾ ಚ ತತ್ಸುತಾ ।
ಸಖ್ಯಿಪೃಚ್ಛತ್ಸಖೀಮೂಷಾಂ ಕೌತೂಹಲಸಮನ್ವಿತಾ
॥ ೧೪ ॥

ಕಂ ತ್ವಂ ಮೃಗಯಸೇ ಸುಭ್ರೂಃ ಕೀದೃಶಸ್ತೇ ಮನೋರಥಃ ।
ಹಸ್ತಗ್ರಾಹಂ ನ ತೇಽದ್ಯಾಪಿ ರಾಜಪುತ್ರ್ಯುಪಲಕ್ಷಯೇ
॥ ೧೫ ॥

ಉಷೋವಾಚ

ದೃಷ್ಟಃ ಕಶ್ಚಿನ್ನರಃ ಸ್ವಪ್ನೇ ಶ್ಯಾಮಃ ಕಮಲಲೋಚನಃ ।
ಪೀತವಾಸಾ ಬೃಹದ್ಬಾಹುರ್ಯೋಷಿತಾಂ ಹೃದಯಂಗಮಃ
॥ ೧೬ ॥

ತಮಹಂ ಮೃಗಯೇ ಕಾಂತಂ ಪಾಯಯಿತ್ವಾಧರಂ ಮಧು ।
ಕ್ವಾಪಿ ಯಾತಃ ಸ್ಪೃಹಯತೀಂ ಕ್ಷಿಪ್ತ್ವಾ ಮಾಂ ವೃಜಿನಾರ್ಣವೇ
॥ ೧೭ ॥

ಭಗವಂತಾ ! ನೀನು ನನಗೆ ಸಾವಿರ ಬಾಹುಗಳನ್ನು ಕರುಣಿಸಿರುವೆ. ಆದರೆ ಅವು ನನಗೆ ಭಾರವೇ ಆಗುತ್ತಿವೆ. ಏಕೆಂದರೆ, ಮೂರು ಲೋಕಗಳಲ್ಲಿ ನಿನ್ನನ್ನು ಬಿಟ್ಟು ನನಗೆ ಸರಿಸಮಾನವಾಗಿ ನನ್ನೊಡನೆ ಯುದ್ಧಮಾಡುವಂತಹ ಯಾವ ಯೋಧನೂ ನನಗೆ ಸಿಕ್ಕಿಲ್ಲ ॥ ೮ ॥ ಆದಿದೇವಾ ! ಒಮ್ಮೆ ನನ್ನ ಬಾಹುಗಳಲ್ಲಿ ಯುದ್ಧ ಮಾಡುವ ತೀಟೆಯುಂಟಾಗಿ ಅದನ್ನು ತಡೆಯಲಾರದೆ ದಿಗ್ಗಜ ರೊಂದಿಗೆ ಯುದ್ಧಮಾಡಲು ಹೊರಟೆ. ಆದರೆ ಅವುಗಳು ಭಯ ದಿಂದ ಓಡಿಹೋದವು. ಆ ಸಮಯದಲ್ಲಿ ನಾನು ಬಾಹುಗಳ ಆಘಾತದಿಂದ ಅನೇಕ ಪರ್ವತಗಳನ್ನು ಪುಡಿ-ಪುಡಿಮಾಡಿ ದೆನು. ॥ ೯ ॥ ಬಾಣಾಸುರನ ಈ ಪ್ರಾರ್ಥನೆಯನ್ನು ಕೇಳಿ ಶಿವನು ಸ್ವಲ್ಪ ಬೇಸರದಿಂದಲೇ ಹೇಳಿದನು - ಎಲೈ ಮೂರ್ಖ ! ನಿನ್ನ ರಥದ ಧ್ವಜವು ಮುರಿದುಬಿದ್ದಾಗ ನನಗೆ ಸಮಾನನಾದ ಯೋಧ ನೊಂದಿಗೆ ನಿನ್ನ ಯುದ್ಧ ನಡೆಯುವುದು ಮತ್ತು ಆ ಯುದ್ಧವು ನಿನ್ನ ದರ್ಪವನ್ನು ನುಚ್ಚು ನೂರಾಗಿಸುವುದು. ॥ ೧೦ ॥ ಪರೀಕ್ಷಿತನೇ ! ಭಗವಾನ್ ಶಂಕರನ ಮಾತುಕೇಳಿ ಬುದ್ಧಿಕೆಟ್ಟು ಹೋಗಿದ್ದ ಅವನಿಗೆ ಹರ್ಷವುಂಟಾಗಿ ಮನೆಗೆ ಮರಳಿದನು. ಈಗ ಆ ಮೂರ್ಖನು ಪರಶಿವನ ಆದೇಶದಂತೆ ಅವನ ಬಲ-ಪರಾಕ್ರಮಗಳ ನಾಶವಾಗು ವಂತಹ ಯುದ್ಧವನ್ನು ಇದಿರುನೋಡುತ್ತಿದ್ದನು. ॥ ೧೧ ॥

ಪರೀಕ್ಷಿತ ಮಹಾರಾಜ ! ಬಾಣಸುರನಿಗೆ ಉಷಾ ಎಂಬ ಕನ್ಯೆ ಯೋರ್ವಳಿದ್ದಳು. ಅವಳು ಇನ್ನೂ ಕುಮಾರಿಯೇ ಆಗಿದ್ದಾಗ ಒಂದು ದಿನ ಸ್ವಪ್ನದಲ್ಲಿ ಪರಮ ಸುಂದರ ಅನಿರುದ್ಧನೊಡನೆ ಅವಳ ಸಮಾಗಮವಾದಂತೆ ಕಂಡಳು. ಅಚ್ಚರಿಯ ವಿಷಯವೆಂದರೆ, ಅವಳು ಅದುವರೆಗೂ ಅನಿರುದ್ಧನನ್ನು ನೋಡಿರಲಿಲ್ಲ ; ಅವನ ಹೆಸರೂ ಕೇಳಿರಲಿಲ್ಲ ॥ ೧೨ ॥ ಸ್ವಪ್ನದಲ್ಲಿ ಅನಿರುದ್ಧನನ್ನು ಕಂಡು ಬಳಿಕ ಕಾಣದಿರುವಾಗ 'ಪ್ರಾಣಪ್ರಿಯನೇ ! ನೀನು ಎಲ್ಲಿರುವೇ ?' ಎಂದೆನ್ನುತ್ತಾ ಥಟ್ಟನೆ ಎದ್ದು ಕುಳಿತಳು. ತಾನು ಸಖಿಯರ ಮಧ್ಯ ದಲ್ಲಿರುವುದನ್ನು ತಿಳಿದು ಆಕೆಯು ಬಹಳವಾಗಿ ನಾಚಿ ಕೊಂಡಳು. ॥ ೧೩ ॥ ಪರೀಕ್ಷಿತನೇ ! ಬಾಣಾಸುರನಿಗೆ ಕುಂಭಾಂಡ ನೆಂಬ ಮಂತ್ರಿಯಿದ್ದನು. ಅವನಿಗೆ ಚಿತ್ರಲೇಖಾ ಎಂಬ ಕನ್ಯೆ ಯೊಬ್ಬಳಿದ್ದಳು. ಉಷಾ ಮತ್ತು ಚಿತ್ರಲೇಖೆಯು ಪರಸ್ಪರ ಸಖಿ ಯರಾಗಿದ್ದರು. ಚಿತ್ರಲೇಖೆಯು ಕುತೂಹಲದಿಂದ ಉಷೆಯ ಬಳಿ ಕೇಳಿದಳು. ॥ ೧೪ ॥ ಸುಂದರಿಯೇ ! ರಾಜಕುಮಾರಿಯೇ ! ಇದುವರೆಗೂ ಯಾರೂ ನಿನ್ನ ಪಾಣಿಗ್ರಹಣವನ್ನೇ ಮಾಡಲಿಲ್ಲ. ನೀನು ಯಾರನ್ನು ಹುಡುಕುತ್ತಿರುವೆ ? ನಿನ್ನ ಮನೋರಥವೇನು ? ಎಲ್ಲವನ್ನೂ ಮರೆಮಾಚದೆ ನನಗೆ ಹೇಳು. ॥ ೧೫ ॥

ಉಷೆಯು ಹೇಳಿದಳು - ಚಿತ್ರಲೇಖೆ ! ನಾನು ಸ್ವಪ್ನದಲ್ಲಿ ಒಬ್ಬ ಅತೀವ ಸುಂದರನಾದ ಪುರುಷನನ್ನು ಕಂಡೆನು. ಅವನು ಶ್ಯಾಮಲ ವರ್ಣದವನಾಗಿದ್ದು, ಕಮಲಾಕ್ಷನಾಗಿದ್ದನು. ಪೀತಾಂಬರವನ್ನು ಉಟ್ಟಿದ್ದನು. ಆಜಾನುಬಾಹುವಾಗಿದ್ದನು. ಸ್ತ್ರೀಯರ ಮನಸ್ಸನ್ನು ಅಪಹರಿಸುವಷ್ಟು ಚೆಲುವನಾಗಿದ್ದನು. ॥ ೧೬ ॥ ಅವನು ಮೊದ ಲಿಗೆ ಅಧರಗಳ ಮಧುವನ್ನು ನನಗೆ ಕುಡಿಸಿದನು. ನಾನೂ ಅವನ ಅಧರಗಳ ಮಧುವನ್ನು ಕುಡಿಯಬೇಕೆನ್ನುವಷ್ಟರಲ್ಲಿ ನನ್ನನ್ನು ದುಃಖ ಸಾಗರದಲ್ಲಿ ಮುಳುಗಿಸಿ ಮಾಯವಾಗಿಬಿಟ್ಟನು. ಆ ನನ್ನ ಪ್ರಾಣ ವಲ್ಲಭನನ್ನು ಆಗಿನಿಂದಲೂ ಹುಡುಕುತ್ತಿದ್ದೇನೆ. ॥ ೧೭ ॥

ಚಿತ್ರಲೇಖೋವಾಚ

ವ್ಯಸನಂ ತೇऽಪಕರ್ಷಾಮಿ ತ್ರಿಲೋಕ್ಯಾಂ ಯದಿ ಭಾವ್ಯತೇ ।
ತಮಾನೇಷ್ಯೇ ನರಂ ಯಸ್ತೇ ಮನೋಹರ್ತಾ ತಮಾದಿಶ
॥ ೧೮ ॥

ಇತ್ಯುಕ್ತ್ವಾ ದೇವಗಂಧರ್ವಸಿದ್ಧಚಾರಣಪನ್ನಗಾನ್ ।
ದೈತ್ಯವಿದ್ಯಾಧರಾನ್ ಯಕ್ಷಾನ್ ಮನುಜಾಂಶ್ಚ ಯಥಾಲಿಖತ್
॥ ೧೯ ॥

ಮನುಜೇಷು ಚ ಸಾ ವೃಷ್ಣೀನ್ ಶೂರಮಾನಕದುಂದುಭಿಮ್ ।
ವ್ಯಲಿಖದ್ರಾಮಕೃಷ್ಣೌ ಚ ಪ್ರದ್ಯುಮ್ನಂ ವೀಕ್ಷ್ಯ ಲಜ್ಜಿತಾ
॥ ೨೦ ॥

ಅನಿರುದ್ಧಂ ವಿಲಿಖಿತಂ ವೀಕ್ಷ್ಯೋಷಾವಾಙ್ಮುಖೀ ಹ್ರಿಯಾ ।
ಸೋऽಸಾವಸಾವಿತಿ ಪ್ರಾಹ ಸ್ಮಯಮಾನಾ ಮಹೀಪತೇ
॥ ೨೧ ॥

ಚಿತ್ರಲೇಖಾ ತಮಾಜ್ಞಾಯ ಪೌತ್ರಂ ಕೃಷ್ಣಸ್ಯ ಯೋಗಿನೀ ।
ಯಯೌ ವಿಹಾಯಸಾ ರಾಜನ್ ದ್ವಾರಕಾಂ ಕೃಷ್ಣಪಾಲಿತಾಮ್
॥ ೨೨ ॥

ತತ್ರ ಸುಪ್ತಂ ಸುಪರ್ಯಂಕೇ ಪ್ರಾದ್ಯುಮ್ನಿಂ ಯೋಗಮಾಸ್ಥಿತಾ ।
ಗೃಹೀತ್ವಾ ಶೋಣಿತಪುರಂ ಸಖ್ಯೈ ಪ್ರಿಯಮದರ್ಶಯತ್
॥ ೨೩ ॥

ಸಾ ಚ ತಂ ಸುಂದರವರಂ ವಿಲೋಕ್ಯ ಮುದಿತಾನನಾ ।
ದುಷ್ಪ್ರೇಕ್ಷ್ಯೇ ಸ್ವಗೃಹೇ ಪುಂಭೀ ರೇಮೇ ಪ್ರಾದ್ಯುಮ್ನಿನಾ ಸಮಮ್
॥ ೨೪ ॥

ಪರಾರ್ಧ್ಯವಾಸಃ ಸ್ರಗ್ಗಂಧಧೂಪದೀಪಾಸನಾದಿಭಿಃ ।
ಪಾನಭೋಜನಭಕ್ಷ್ಯೈಶ್ಚ ವಾಕ್ಯೈಃ ಶುಶ್ರೂಷಯಾರ್ಚಿತಃ
॥ ೨೫ ॥

ಗೂಢಃ ಕನ್ಯಾಪುರೇ ಶಶ್ವತ್ಪ್ರವೃದ್ಧಸ್ನೇಹಯಾ ತಯಾ ।
ನಾಹರ್ಗಣಾನ್ ಸ ಬುಬುಧೇ ಊಷಯಾಪಹೃತೇಂದ್ರಿಯಃ
॥ ೨೬ ॥

ಚಿತ್ರಲೇಖೆಯು ಹೇಳಿದಳು – ಸಖಿಯೇ! ನಿನ್ನ ಚಿತ್ತವನ್ನು ಅಪಹರಿಸಿದವನು ಮೂರುಲೋಕಗಳಲ್ಲಿ ಎಲ್ಲೇ ಇದ್ದರೂ, ನೀನು ಗುರುತಿಸುವೆಯಾದರೆ ನಾನು ನಿನ್ನ ವಿರಹವ್ಯಥೆಯನ್ನು ಕಳೆಯ ಬಲ್ಲೆನು. ನಾನು ಚಿತ್ರಗಳನ್ನು ಬರೆಯುತ್ತಾ ಹೋಗುತ್ತೇನೆ. ನೀನು ನಿನ್ನ ಇನಿಯನನ್ನು ಗುರುತಿಸಬೇಕು. ಮತ್ತೆ ಅವನು ಎಲ್ಲೇ ಇದ್ದರೂ ನಾನು ಅವನನ್ನು ನಿನ್ನ ಬಳಿಗೆ ಕರೆತರುವೆನು. ॥ ೧೮ ॥ ಹೀಗೆ ಹೇಳಿ ಚಿತ್ರಲೇಖೆಯು ಮಾತು-ಮಾತಿನಲ್ಲೇ ಬಹಳಷ್ಟು ದೇವತೆಗಳ, ಗಂಧರ್ವರ, ಸಿದ್ಧರ, ಚಾರಣರ, ಪನ್ನಗರ, ದೈತ್ಯರ, ವಿದ್ಯಾಧರರ, ಯಕ್ಷರ ಮತ್ತು ಮನುಷ್ಯರ ಚಿತ್ರಗಳನ್ನು ಬರೆದು ತೋರಿಸಿದಳು. ॥ ೧೯ ॥ ಮನುಷ್ಯರಲ್ಲಿ ಆಕೆಯು ವೃಷ್ಣಿವಂಶದ ಶೂರಸೇನ, ವಸುದೇವ, ಬಲರಾಮ ಮತ್ತು ಭಗವಾನ್ ಶ್ರೀಕೃಷ್ಣ ಇವರ ಚಿತ್ರಗಳನ್ನು ರಚಿಸಿದಳು. ಪ್ರದ್ಯುಮ್ನನ ಚಿತ್ರವನ್ನು ನೋಡುತ್ತಲೇ ಉಷೆಯು ನಾಚಿಕೊಂಡಳು. ॥ ೨೦ ॥ ಪರೀಕ್ಷಿತನೇ! ಆಕೆಯು ಅನಿರುದ್ಧನ ಚಿತ್ರವನ್ನು ನೋಡುತ್ತಲೇ ಲಜ್ಜೆಯಿಂದ ತಲೆತಗ್ಗಿಸಿದಳು. ತಗ್ಗಿಸಿದ ತಲೆ ಎತ್ತಲೇ ಇಲ್ಲ. ಮತ್ತೆ ಮಂದಹಾಸವನ್ನು ಬೀರುತ್ತಾ ಮೆಲ್ಲನೆ ಹೇಳಿದಳು – 'ನನ್ನ ಪ್ರಿಯತಮನು ಇವನೇ ಆಗಿದ್ದಾನೆ, ಇವನೇ.' ॥ ೨೧ ॥

ಪರೀಕ್ಷಿದ್ರಾಜನೇ! ಯೋಗಿನಿಯಾದ ಚಿತ್ರಲೇಖೆಗೆ ಈ ಚಿತ್ರದಲ್ಲಿರುವವನು ಶ್ರೀಕೃಷ್ಣನ ಮೊಮ್ಮಗನೆಂದು ತಿಳಿದು ಹೋಯಿತು. ಆಕೆಯು ರಾತ್ರಿಯಲ್ಲೇ ಆಕಾಶಮಾರ್ಗದಿಂದ ಭಗವಾನ್ ಶ್ರೀಕೃಷ್ಣನಿಂದ ರಕ್ಷಿತವಾದ ದ್ವಾರಕೆಗೆ ಬಂದಳು. ॥ ೨೨ ॥ ಅಲ್ಲಿ ಅನಿರುದ್ಧನು ಅಂತಃಪುರದಲ್ಲಿ ಸುಂದರವಾದ ಮಂಚದಲ್ಲಿ ಪವಡಿಸಿದ್ದನು. ಯೋಗಸಿದ್ಧಿಯ ಪ್ರಭಾವದಿಂದ ಚಿತ್ರಲೇಖೆಯು ಅನಿರುದ್ಧನನ್ನು ಎತ್ತಿಕೊಂಡು ಶೋಣಿತಪುರಕ್ಕೆ ತಂದು ತನ್ನ ಗೆಳತಿಯಾದ ಉಷೆಗೆ ಅವಳ ಪ್ರಿಯಕರನ ದರ್ಶನ ಮಾಡಿಸಿದಳು. ॥ ೨೩. ॥ ತನ್ನ ಪರಮ ಸುಂದರ ಪ್ರಾಣವಲ್ಲಭನನ್ನು ಪಡೆದು ಆನಂದದಿಂದ ಉಷೆಯ ಮುಖವರಳಿತು. ಆಕೆಯು ಅನಿರುದ್ಧನೊಂದಿಗೆ ತನ್ನ ಅಂತಃಪುರದಲ್ಲಿ ವಿಹರಿಸ ತೊಡಗಿದಳು. ಪರೀಕ್ಷಿತನೇ! ಅವಳ ಅಂತಃಪುರವು ಯಾವನೇ ಪುರುಷನು ಇಣಿಕಿನೋಡಲೂ ಕೂಡ ಸಾಧ್ಯವಿಲ್ಲದಷ್ಟು ಸುರಕ್ಷಿತವಾಗಿತ್ತು. ॥ ೨೪ ॥

ಉಷಾ-ಅನಿರುದ್ಧರ ಪರಸ್ಪರ ಪ್ರೀತಿಯು ದಿನ-ದಿನಕ್ಕೂ ವೃದ್ಧಿಹೊಂದುತಿತ್ತು. ಉಷೆಯು ಬಹುಮೂಲ್ಯ ವಸ್ತ್ರಗಳಿಂದಲೂ, ಪುಷ್ಪಹಾರಗಳಿಂದಲೂ, ಗಂಧ-ಧೂಪ-ದೀಪ, ಆಸನಾದಿಗಳಿಂದಲೂ, ಸುಮಧುರ ಪಾನೀಯಗಳಿಂದಲೂ, ಭಕ್ಷ್ಯ-ಭೋಜ್ಯಗಳಿಂದಲೂ, ಮೃದು-ಮಧುರ ಮಾತಿನಿಂದಲೂ, ಸೇವಾಶುಶ್ರೂಷೆಗಳಿಂದಲೂ ಅನಿರುದ್ಧನನ್ನು ಬಹಳವಾಗಿ ಸತ್ಕರಿಸಿದಳು. ಆಕೆಯು ತನ್ನ ಪ್ರೇಮದಿಂದ ಅನಿರುದ್ಧನ ಮನಸ್ಸನ್ನು ವಶಪಡಿಸಿಕೊಂಡಿದ್ದಳು. ಆಕೆಯ ಅಂತಃಪುರದಲ್ಲಿ ನಿಗೂಢನಾಗಿದ್ದ ಅನಿರುದ್ಧನು ತನ್ನನ್ನೇ ತಾನು ಮರೆತು ಬಿಟ್ಟಿದ್ದನು. ನಾನು ಇಲ್ಲಿಗೆ ಬಂದು ಎಷ್ಟು ದಿನಗಳಾದವು ಎಂಬುದನ್ನು ತಿಳಿಯದೆ ಹೋದನು. ॥ ೨೫-೨೬ ॥

ತಾಂ ತಥಾ ಯದುವೀರೇಣ ಭುಜ್ಯಮಾನಾಂ ಹತವ್ರತಾಮ್ ।
ಹೇತುಭಿರ್ಲಕ್ಷಯಾನ್ ಚಕ್ರುರಾಪ್ತೀತಾಂ ದುರವಚ್ಛದೈಃ
॥ ೨೭ ॥

ಭಟಾ ಆವೇದಯಾನ್ ಚಕ್ರೂ ರಾಜಂಸ್ತೇ ದುಹಿತುರ್ವಯಮ್ ।
ವಿಚೇಷ್ಟಿತಂ ಲಕ್ಷಯಾಮಃ ಕನ್ಯಾಯಾಃ ಕುಲದೂಷಣಮ್
॥ ೨೮ ॥

ಅನಪಾಯಿಭಿರಸ್ಮಾಭಿರ್ಗುಪ್ತಾಯಾಶ್ಚ ಗೃಹೇ ಪ್ರಭೋ ।
ಕನ್ಯಾಯಾ ದೂಷಣಂ ಪುಂಭಿರ್ದುಷ್ಪ್ರೇಕ್ಷ್ಯಾಯಾ ನ ವಿದ್ಮಹೇ
॥ ೨೯ ॥

ತತಃ ಪ್ರವ್ಯಥಿತೋ ಬಾಣೋ ದುಹಿತುಃ ಶ್ರುತದೂಷಣಃ ।
ತ್ವರಿತಃ ಕನ್ಯಕಾಗಾರಂ ಪ್ರಾಪ್ತೋಽದ್ರಾಕ್ಷೀದ್ಯದೂದ್ವಹಮ್
॥ ೩೦ ॥

ಕಾಮಾತ್ಮಜಂ ತಂ ಭುವನೈಕಸುಂದರಂ
ಶ್ಯಾಮಂ ಪಿಶಂಗಾಂಬರಮಂಬುಜೇಕ್ಷಣಮ್ ।
ಬೃಹದ್ಭುಜಂ ಕುಂಡಲಕುಂತಲತ್ವಿಷಾ
ಸ್ಮಿತಾವಲೋಕೇನ ಚ ಮಂಡಿತಾನನಮ್ ॥ ೩೧ ॥

ದೀವ್ಯಂತಮಕ್ಷೈಃ ಪ್ರಿಯಯಾಭಿನೃಮ್ಣಯಾ
ತದಂಗಸಂಗಸ್ತನಕುಂಕುಮಸ್ರಜಮ್ ।
ಬಾಹ್ವೋರ್ದಧಾನಂ ಮಧುಮಲ್ಲಿಕಾಶ್ರಿತಾಂ
ತಸ್ಯಾಗ್ರ ಆಸೀನಮವೇಕ್ಷ್ಯ ವಿಸ್ಮಿತಃ ॥ ೩೨ ॥

ಸ ತಂ ಪ್ರವಿಷ್ಟಂ ವೃತಮಾತತಾಯಿಭಿ-
ರ್ಭಟೈರನೀಕೈರವಲೋಕ್ಯ ಮಾಧವಃ ।
ಉದ್ಯಮ್ಯ ಮೌರ್ವಂ ಪರಿಘಂ ವ್ಯವಸ್ಥಿತೋ
ಯಥಾಂತಕೋ ದಂಡಧರೋ ಜಿಘಾಂಸಯಾ ॥ ೩೩ ॥

ಪರೀಕ್ಷಿತನೇ! ಯದುಕುಮಾರ ಅನಿರುದ್ಧನ ಸಹವಾಸದಿಂದ ಉಷೆಯ ಕನ್ಯತ್ವವು ನಷ್ಟವಾಗಿ ಹೋಗಿತ್ತು. ಆಕೆಯ ಶರೀರದಲ್ಲಿ ಕಾಣುತ್ತಿದ್ದ ಚಿಹ್ನೆಗಳು ಯಾವ ರೀತಿಯಿಂದಲೂ ಅಡಗಿಸಲಾರದಷ್ಟು ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದವು. ಉಷೆಯು ಒಬಳವಾಗಿ ಪ್ರಸನ್ನವಾಗಿ ಇರುತ್ತಿದ್ದಳು. ಇವಳಿಗೆ ಯಾರೋ ಪುರುಷನೊಂದಿಗೆ ಸಂಬಂಧವು ಖಂಡಿತವಾಗಿ ಉಂಟಾಗಿದೆ ಎಂದು ಕಾವಲುಗಾರರು ತಿಳಿದುಕೊಂಡರು. ಅವರು ಬಾಣಾಸುರನ ಬಳಿಗೆ ಹೋಗಿ ನಿವೇದಿಸಿಕೊಂಡರು - ಮಹಾರಾಜರೇ! ಕುಲಕ್ಕೆ ಕಳಂಕ ತರುವಂತಹ ನಿಮ್ಮ ಅವಿವಾಹಿತಳಾದ ರಾಜಕುಮಾರಿಯ ಚೇಷ್ಟೆಗಳನ್ನು ನಾವು ನೋಡಿದೆವು. ॥ ೨೭-೨೮ ॥ ಪ್ರಭುಗಳೇ! ನಾವು ಕ್ರಮತಪ್ಪದೆ ಹಗಲೂ-ರಾತ್ರಿ ಕಾವಲು ಕಾಯುತ್ತಿದ್ದೇವೆ. ಇದರಲ್ಲಿ ಸಂದೇಹವೇ ಇಲ್ಲ. ನಿಮ್ಮ ಮಗಳನ್ನು ಹೊರಗಿನ ಮನುಷ್ಯರು ನೋಡಲೂ ಕೂಡ ಸಾಧ್ಯವಿಲ್ಲ. ಹೀಗಿದ್ದರೂ ಆವಳು ಕಳಂಕಿತೆ ಹೇಗಾದಳು ? ಇದರ ಕಾರಣ ನಮಗೆ ತಿಳಿಯದಾಗಿದೆ. ॥ ೨೯ ॥

ಪರೀಕ್ಷಿದ್ರಾಜನೇ! ತನ್ನ ಕನ್ಯೆಯ ಚರಿತ್ರವು ದೂಷಿತವಾಗಿದೆ ಎಂಬ ಸಮಾಚಾರವನ್ನು ಕಾವಲುಗಾರರಿಂದ ತಿಳಿದ ಬಾಣಾಸುರನ ಹೃದಯದಲ್ಲಿ ಅತ್ಯಂತ ಪೀಡೆ ಉಂಟಾಯಿತು. ಅವನು ಲಗುಬಗೆಯಿಂದ ಆಕೆಯ ಅಂತಃಪುರಕ್ಕೆ ಹೋಗಿ ನೋಡಿದರೆ ಅಲ್ಲಿ ಅನಿರುದ್ಧನು ಕುಳಿತಿದ್ದನು. ॥ ೩೦ ॥ ಪ್ರಿಯ ಪರೀಕ್ಷಿತನೇ! ಅನಿರುದ್ಧನು ಸಾಕ್ಷಾತ್ ಕಾಮದೇವರ ಅವತಾರನಾಗಿದ್ದ ಪ್ರದ್ಯುಮ್ನನ ಪುತ್ರನಾಗಿದ್ದನು. ಮೂರು ಲೋಕಗಳಲ್ಲಿಯೂ ಅವನಂತಹ ಸುಂದರನು ಯಾರೂ ಇರಲಿಲ್ಲ. ಶ್ಯಾಮಲ ಶರೀರದ ಮೇಲೆ ಪೀತಾಂಬರವು ಹೊಳೆಯುತ್ತಿತ್ತು. ಕಮಲದ ಎಸಳಿನಂತಹ ವಿಶಾಲಕೋಮಲ ಕಣ್ಣುಗಳು. ಆಜಾನುಬಾಹುಗಳು. ಕಪೋಲಗಳ ಮೇಲೆ ಮುಂಗುರುಳು ಮತ್ತು ಕುಂಡಲಗಳು ಝಗ-ಝಗಿಸುವ ಜ್ಯೋತಿ. ತುಟಿಗಳಲ್ಲಿ ಮಂದವಾದ ಮಂದಹಾಸ. ಕಡೆಗಣ್ಣ ನೋಟದಿಂದ ಅವನ ಮುಖದ ಶೋಭೆಯು ವಿಲಕ್ಷಣವಾಗಿತ್ತು. ॥ ೩೧ ॥ ಆಗ ಅನಿರುದ್ಧನು ಸರ್ವಾಲಂಕಾರಗಳಿಂದ ಭೂಷಿತಳಾಗಿ ಕುಳಿತಿರುವ ಪ್ರಿಯತಮೆ ಉಷೆಯೊಂದಿಗೆ ಪಗಡೆಯಾಡುತ್ತಿದ್ದನು. ಆಕೆಯ ಕೊರಳಲ್ಲಿ ಸುಶೋಭಿತವಾದ ಮಲ್ಲಿಗೆಯ ಹೂವಿನ ಹಾರವು ಸ್ತನಮಂಡಲದ ಕುಂಕುಮದಿಂದ ಕೆಂಪಾಗಿ ಹೋಗಿತ್ತು. ಹೀಗೆ ಉಷೆಯ ಎದುರಿನಲ್ಲೇ ಕುಳಿತು ಆಟವಾಡುತ್ತಿದ್ದ ಅನಿರುದ್ಧನನ್ನು ಕಂಡು ಬಾಣಾಸುರನು ಚಕಿತನಾದನು. ॥ ೩೨ ॥ ತನ್ನನ್ನು ಕೊಲ್ಲುವುದಕ್ಕಾಗಿ ಆಯುಧಪಾಣಿಗಳಾದ ಸಾವಿರಾರು ರಾಜಭಟರೊಡನೆ ಬಾಣಾಸುರನು ಬಂದುದನ್ನು ನೋಡಿದ ಅನಿರುದ್ಧನು. ಒಡನೆಯೇ ಅವರೆಲ್ಲರನ್ನು ಸಂಹರಿಸುವ ಇಚ್ಛೆಯಿಂದ ಲೋಹಮಯವಾದ, ಅತಿಭಯಂಕರವಾಗಿದ್ದ ಪರಿಘಾಯುಧವನ್ನು ಹಿಡಿದು ಕಾಲದಂಡ ವನ್ನೆತ್ತಿಕೊಂಡು ಕಾಲಯಮನೇ ನಿಂತಿರುವನೋ ಎಂಬಂತೆ ಯುದ್ಧಸನ್ನದ್ಧವಾಗಿ ನಿಂತನು. ॥ ೩೩ ॥

ಜಿಘೃಕ್ಷಯಾ ತಾನ್ಪರಿತಃ ಪ್ರಸರ್ಪತಃ
ಶುನೋ ಯಥಾ ಸೂಕರಯೂಥಪೋಽಹನತ್ ।
ತೇ ಹನ್ಯಮಾನಾ ಭವನಾದ್ವಿನಿರ್ಗತಾ
ನಿರ್ಭಿನ್ನಮೂರ್ಧೋರುಭುಜಾಃ ಪ್ರದುದ್ರುವುಃ ॥ ೩೪ ॥

ಬಳಿಕ ನಾಯಿಗಳ ಗುಂಪನ್ನು ಧ್ವಂಸಮಾಡುವ ಕಾಡುಹಂದಿಯಂತೆ ಅನಿರುದ್ಧನು ತನ್ನನ್ನು ಹಿಡಿಯಲು ಮುನ್ನುಗ್ಗಿ ಬರುತ್ತಿದ್ದ ಸೈನಿಕರೆಲ್ಲರನ್ನು ಪರಿಘಾಯುಧದಿಂದ ಧ್ವಂಸಮಾಡಿ ಬಿಟ್ಟನು. ಅನಿರುದ್ಧನ ಪ್ರಹಾರದಿಂದ ಹಲವಾರು ಸೈನಿಕರ ತಲೆಗಳು, ಭುಜಗಳು, ತೊಡೆಗಳು ಮುರಿದು, ಕಳಚಿ ಬೀಳುತ್ತಿದ್ದವು. ಕೆಲವರು ಪ್ರಾಣದ ಆಸೆಯಿಂದ ಅಲ್ಲಿಂದ ಓಡಿ ಹೋದರು. ॥ ೩೪ ॥

ತಂ ನಾಗಪಾಶೈರ್ಬಲಿನಂದನೋ ಬಲೀ
ಘ್ನಂತಂ ಸ್ವಸೈನ್ಯಂ ಕುಪಿತೋ ಬಬಂಧ ಹ ।
ಊಷಾ ಭೃಶಂ ಶೋಕವಿಷಾದವಿಹ್ವಲಾ
ಬದ್ಧಂ ನಿಶಮ್ಯಾಶ್ರುಕಲಾಕ್ಷ್ಯರೌದಿಷೀತ್ ॥ ೩೫ ॥

ಅನಿರುದ್ಧನು ತನ್ನ ಸೈನಿಕರೆಲ್ಲರನ್ನು ಸಂಹಾರ ಮಾಡುತ್ತಿರುವುದನ್ನು ನೋಡಿದ ಬಾಣಾಸುರನು ಕ್ರೋಧೋನ್ಮತ್ತನಾಗಿ ನಾಗಪಾಶದಿಂದ ಅನಿರುದ್ಧನನ್ನು ಬಂಧಿಸಿಬಿಟ್ಟನು. ತನ್ನ ಪ್ರಿಯತಮನನ್ನು ಬಂಧಿಸಿರುವುದನ್ನು ಕೇಳಿದ ಉಷೆಯು ಅತ್ಯಂತ ಶೋಕ, ವಿಷಾದಗಳಿಂದ ವಿಹ್ವಲಳಾದಳು. ಆಕೆಯ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯುತ್ತಾ ಅಳುತ್ತಿದ್ದಳು. ॥ ೩೫ ॥

ಅರವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೬೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಅನಿರುದ್ಧಬಂಧೋ ನಾಮ ದ್ವಿಷಷ್ಟಿತಮೋಽಧ್ಯಾಯಃ ॥ ೬೨ ॥

ಅರವತ್ತಮೂರನೆಯ ಅಧ್ಯಾಯ

ಭಗವಾನ್ ಶ್ರೀಕೃಷ್ಣನೊಂದಿಗೆ ಬಾಣಾಸುರನ ಯುದ್ಧ

ಶ್ರೀಶುಕ ಉವಾಚ

ಅಪಶ್ಯತಾಂ ಚಾನಿರುದ್ಧಂ ತದ್ಬಂಧೂನಾಂ ಚ ಭಾರತ।
ಚತ್ವಾರೋ ವಾರ್ಷಿಕಾ ಮಾಸಾ ವ್ಯತೀಯುರನುಶೋಚತಾಮ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ ! ಮಳೆಗಾಲದ ನಾಲ್ಕು ತಿಂಗಳುಗಳು ಕಳೆದು ಹೋದುವು. ಅನಿರುದ್ಧನು ಎಲ್ಲಿಗೆ ಹೋದನು ? ಎಲ್ಲಿರುವನೆಂಬುದೇ ಯಾರಿಗೂ ತಿಳಿಯಲಿಲ್ಲ. ಅವನ ಬಂಧುಗಳು ಈ ಘಟನೆಯಿಂದ ಶೋಕಾಕುಲರಾದರು. ॥ ೧ ॥

ನಾರದಾತ್ತದುಪಾಕರ್ಣ್ಯ ವಾರ್ತಾಂ ಬದ್ಧಸ್ಯ ಕರ್ಮ ಚ।
ಪ್ರಯಯುಃ ಶೋಣಿತಪುರಂ ವೃಷ್ಣಯಃ ಕೃಷ್ಣದೇವತಾಃ
॥ ೨ ॥

ಒಂದು ದಿನ ನಾರದ ಮಹರ್ಷಿಗಳು ದ್ವಾರಕೆಗೆ ಬಂದು, ಯೋಗಿನಿಯು ಅನಿರುದ್ಧನನ್ನು ಶೋಣಿತಪುರಕ್ಕೆ ಕೊಂಡು ಹೋದುದು, ಬಾಣಾಸುರನ ಸೈನಿಕರನ್ನು ಧ್ವಂಸಮಾಡಿದುದು, ನಾಗಪಾಶದಿಂದ ಬಂಧಿತನಾದುದು ಎಲ್ಲ ವೃತ್ತಾಂತವನ್ನು ಶ್ರೀಕೃಷ್ಣನಲ್ಲಿ ತಿಳಿಸಿದರು. ಶ್ರೀಕೃಷ್ಣನನ್ನೇ ತಮ್ಮ ಆರಾಧ್ಯದೇವನೆಂದು ಭಾವಿಸಿದ್ದ ಯದುವಂಶೀವೀರರು ಶೋಣಿಪುರಕ್ಕೆ ಪ್ರಯಾಣ ಮಾಡಿದರು. ॥ ೨ ॥

ಪ್ರದ್ಯುಮ್ನೋ ಯುಯುಧಾನಶ್ಚ ಗದಃ ಸಾಂಬೋಽಥ ಸಾರಣಃ।
ನಂದೋಪನಂದಭದ್ರಾದ್ಯಾ ರಾಮಕೃಷ್ಣಾನುವರ್ತಿನಃ
॥ ೩ ॥

ಬಲರಾಮ-ಶ್ರೀಕೃಷ್ಣರ ಜೊತೆಗೆ ಅವರ ಅನುಯಾಯಿಗಳಾದ ಪ್ರದ್ಯುಮ್ನ, ಸಾತ್ಯಕಿ, ಗದ, ಸಾಂಬ, ಸಾರಣ, ನಂದ, ಉಪನಂದ ಮತ್ತು ಭದ್ರ ಮೊದಲಾದ ಯಾದವರ ಹನ್ನೆರಡು ಅಕ್ಷೌಹಿಣಿ ಸೈನ್ಯ ಸಮೇತರಾಗಿ ಶೋಣಿತಪುರಕ್ಕೆ ಹೋಗಿ, ಆ ಪಟ್ಟಣಕ್ಕೆ ನಾಲ್ಕು ಕಡೆಗಳಿಂದಲೂ ಮುತ್ತಿಗೆ ಹಾಕಿದರು. ॥ ೩-೪ ॥

ಅಕ್ಷೌಹಿಣೀಭಿರ್ದ್ವಾದಶಭಿಃ ಸಮೇತಾಃ ಸರ್ವತೋದಿಶಮ್ ।
ರುರುಧುರ್ಬಾಣನಗರಂ ಸಮಂತಾತ್ ಸಾತ್ವತರ್ಷಭಾಃ
॥ ೪ ॥

ಪಟ್ಟಣದ ಉದ್ಯಾನವನಗಳನ್ನೂ, ಕೋಟೆ-ಕೊತ್ತಲುಗಳನ್ನು, ಮಹಾದ್ವಾರಗಳನ್ನು ಯಾದವ ಸೈನಿಕರು ಧ್ವಂಸಮಾಡುತ್ತಿರುವುದನ್ನು ನೋಡಿ ಕುಪಿತನಾದ ಬಾಣಾಸುರನು ಅಷ್ಟೇ ಸಂಖ್ಯೆಯ ಹನ್ನೆರಡು ಅಕ್ಷೌಹಿಣಿ ಸೈನ್ಯದೊಂದಿಗೆ ಪಟ್ಟಣದಿಂದ ಹೊರಬಂದನು. ॥ ೫ ॥

ಭಜ್ಯಮಾನಪುರೋದ್ಯಾನಪ್ರಾಕಾರಾಟ್ಟಾಲಗೋಪುರಮ್ ।
ಪ್ರೇಕ್ಷಮಾಣೋ ರುಷಾವಿಷ್ಟಸ್ತುಲ್ಯಸೈನ್ಯೋಽಭಿನಿರ್ಯಯೌ
॥ ೫ ॥

ಬಾಣಾರ್ಥೇ ಭಗವಾನ್ ರುದ್ರಃ ಸಸುತೈಃ ಪ್ರಮಥೈರ್ವೃತಃ ।
ಆರುಹ್ಯ ನಂದಿವೃಷಭಂ ಯುಯುಧೇ ರಾಮಕೃಷ್ಣಯೋಃ
॥ ೬ ॥

ಆಸೀತ್ ಸುತುಮುಲಂ ಯುದ್ಧಮದ್ಭುತಂ ರೋಮಹರ್ಷಣಮ್ ।
ಕೃಷ್ಣಶಂಕರಯೋ ರಾಜನ್ ಪ್ರದ್ಯುಮ್ನಗುಹಯೋರಪಿ
॥ ೭ ॥

ಕುಂಭಾಂಡಕೂಪಕರ್ಣಾಭ್ಯಾಂ ಬಲೇನ ಸಹ ಸಂಯುಗಃ ।
ಸಾಂಬಸ್ಯ ಬಾಣಪುತ್ರೇಣ ಬಾಣೇನ ಸಹ ಸಾತ್ಯಕೇಃ
॥ ೮ ॥

ಬ್ರಹ್ಮಾದಯಃ ಸುರಾಧೀಶಾ ಮುನಯಃ ಸಿದ್ಧಚಾರಣಾಃ ।
ಗಂಧರ್ವಾಪ್ಸರಸೋ ಯಕ್ಷಾ ವಿಮಾನೈರ್ದ್ರಷ್ಟುಮಾಗಮನ್
॥ ೯ ॥

ಶಂಕರಾನುಚರಾನ್ ಶೌರಿರ್ಭೂತಪ್ರಮಥಗುಹ್ಯಕಾನ್ ।
ಡಾಕಿನೀರ್ಯಾತುಧಾನಾಂಶ್ಚ ವೇತಾಲಾನ್ಸವಿನಾಯಕಾನ್
॥ ೧೦ ॥

ಪ್ರೇತಮಾತೃಪಿಶಾಚಾಂಶ್ಚ ಕೂಷ್ಮಾಂಡಾನ್ ಬ್ರಹ್ಮರಾಕ್ಷಸಾನ್ ।
ದ್ರಾವಯಾಮಾಸ ತೀಕ್ಷ್ಣಾಗ್ರೈಃ ಶರೈಃ ಶಾರ್ಙ್ಗಧನುಶ್ಚ್ಯುತೈಃ
॥ ೧೧ ॥

ಪೃಥಗ್ವಿಧಾನಿ ಪ್ರಾಯುಂಕ್ತ ಪಿನಾಕ್ಯಸ್ತ್ರಾಣಿ ಶಾರ್ಙ್ಗಿಣೇ ।
ಪ್ರತ್ಯಸ್ತ್ರೈಃ ಶಮಯಾಮಾಸ ಶಾರ್ಙ್ಗಪಾಣಿರವಿಸ್ಮಿತಃ
॥ ೧೨ ॥

ಬ್ರಹ್ಮಾಸ್ತ್ರಸ್ಯ ಚ ಬ್ರಹ್ಮಾಸ್ತ್ರಂ ವಾಯವ್ಯಸ್ಯ ಚ ಪಾರ್ವತಮ್ ।
ಆಗ್ನೇಯಸ್ಯ ಚ ಪಾರ್ಜನ್ಯಂ ನೈಜಂ ಪಾಶುಪತಸ್ಯ ಚ
॥ ೧೩ ॥

ಮೋಹಯಿತ್ವಾ ತು ಗಿರಿಶಂ ಜೃಂಭಣಾಸ್ತ್ರೇಣ ಜೃಂಭಿತಮ್ ।
ಬಾಣಸ್ಯ ಪೃತನಾಂ ಶೌರಿರ್ಜಘಾನಾಸಿಗದೇಷುಭಿಃ
॥ ೧೪ ॥

ಸ್ಕಂದಃ ಪ್ರದ್ಯುಮ್ನಬಾಣೌಘೈರರ್ದ್ಯಮಾನಃ ಸಮಂತತಃ ।
ಅಸೃಗ್ವಿಮುಂಚನ್ ಗಾತ್ರೇಭ್ಯಃ ಶಿಖಿನಾಪಾಕ್ರಮದ್ರಣಾತ್
॥ ೧೫ ॥

ಕುಂಭಾಂಡಃ ಕೂಪಕರ್ಣಶ್ಚ ಪೇತತುರ್ಮುಸಲಾರ್ದಿತೌ ।
ದುದ್ರುವುಸ್ತದನೀಕಾನಿ ಹತನಾಥಾನಿ ಸರ್ವತಃ
॥ ೧೬ ॥

ವಿಶೀರ್ಯಮಾಣಂ ಸ್ವಬಲಂ ದೃಷ್ಟ್ವಾ ಬಾಣೋಽತ್ಯಮರ್ಷಣಃ ।
ಕೃಷ್ಣಮಭ್ಯದ್ರವತ್ ಸಂಖ್ಯೇ ರಥೀ ಹಿತ್ವೈವ ಸಾತ್ಯಕಿಮ್
॥ ೧೭ ॥

ಬಾಣಾಸುರನ ಸಹಾಯಾರ್ಥವಾಗಿ ಸಾಕ್ಷಾತ್ ರುದ್ರದೇವನೇ ವೃಷಭಾರೂಢನಾಗಿ ತನ್ನ ಮಗನಾದ ಕಾರ್ತಿಕೇಯನಿಂದಲೂ, ಪ್ರಮಥಗಣಗಳಿಂದಲೂ ಕೂಡಿಕೊಂಡು ರಣಭೂಮಿಗೆ ಬಂದು ಬಲರಾಮ-ಶ್ರೀಕೃಷ್ಣರೊಡನೆ ಯುದ್ಧದಲ್ಲಿ ತೊಡಗಿದನು. ॥ ೬ ॥ ಪರೀಕ್ಷಿತನೇ! ಶಂಕರನಿಗೂ ಮತ್ತು ಶ್ರೀಕೃಷ್ಣನಿಗೂ, ಕಾರ್ತಿಕೇಯ ಮತ್ತು ಪ್ರದ್ಯುಮ್ನರಿಗೂ, ಅತ್ಯಂತ ಭಯಂಕರವೂ, ಅತ್ಯದ್ಭುತವೂ, ರೋಮಾಂಚಕಾರಿಯೂ ಆದ ಯುದ್ಧವು ನಡೆಯಿತು. ॥ ೭ ॥ ಬಲರಾಮನೊಡನೆ ಕುಂಭಾಂಡ-ಕೂಪಕರ್ಣರು ಯುದ್ಧಮಾಡುತ್ತಿದ್ದರು. ಬಾಣಾಸುರನ ಮಗನೊಡನೆ ಸಾಂಬನೂ, ಬಾಣಾಸುರನೊಡನೆ ಸಾತ್ಯಕಿಯೂ ಯುದ್ಧಮಾಡುತ್ತಿದ್ದರು. ॥ ೮ ॥ ಬ್ರಹ್ಮನೇ ಮೊದಲಾದ ಸುರಾಧೀಶರೂ, ಋಷಿ-ಮುನಿಗಳೂ, ಸಿದ್ಧ-ಚಾರಣರೂ, ಗಂಧರ್ವಾಪ್ಸರೆಯರೂ, ಯಕ್ಷರೂ ಆ ಯುದ್ಧವನ್ನು ನೋಡುವುದಕ್ಕಾಗಿ ವಿಮಾನಗಳಲ್ಲಿ ಕುಳಿತು ಆಗಮಿಸಿದರು. ॥ ೯ ॥ ಭಗವಾನ್ ಶ್ರೀಕೃಷ್ಣನು ತನ್ನ ಶಾರ್ಙ್ಗ ಧನುಸ್ಸಿನಿಂದ ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ಶಂಕರನ ಅನುಚರರಾದ ಭೂತ, ಪ್ರೇತ, ಪ್ರಮಥ, ಗುಹ್ಯಕ, ಡಾಕಿನೀ, ಯಾತುಧಾನ, ವೇತಾಲ, ವಿನಾಯಕ, ಪ್ರೇತಗಣ, ಮಾತೃಗಣ, ಪಿಶಾಚ, ಕೂಷ್ಮಾಂಡ ಮತ್ತು ಬ್ರಹ್ಮರಾಕ್ಷಸ - ಇವರೆಲ್ಲರನ್ನು ಓಡಿಸಿ ಬಿಟ್ಟನು. ॥ ೧೦-೧೧ ॥ ಪಿನಾಕಪಾಣಿಯಾದ ಶಂಕರನು ಭಗವಾನ್ ಶ್ರೀಕೃಷ್ಣನ ಮೇಲೆ ನಾನಾ ಪ್ರಕಾರದ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸಿದನು. ಆದರೆ ಶ್ರೀಕೃಷ್ಣನು ಯಾವುದೇ ವಿಸ್ಮಯವಿಲ್ಲದೆ ಅವುಗಳನ್ನು ವಿರೋಧಿ, ಶಸ್ತ್ರಾಸ್ತ್ರಗಳಿಂದ ಉಪಶಮನ ಮಾಡಿದನು. ॥ ೧೨ ॥ ಭಗವಾನ್ ಶ್ರೀಕೃಷ್ಣನು ಬ್ರಹ್ಮಾಸ್ತ್ರದ ಉಪಶಮನಕ್ಕೆ ಬ್ರಹ್ಮಾಸ್ತ್ರವನ್ನೂ, ವಾಯುವ್ಯಾಸ್ತ್ರಕ್ಕೆ ಪರ್ವತಾಸ್ತ್ರವನ್ನು, ಆಗ್ನೇಯಾಸ್ತ್ರಕ್ಕೆ ಪರ್ಜನ್ಯಾಸ್ತ್ರವನ್ನು, ಪಾಶುಪತಾಸ್ತ್ರಕ್ಕಾಗಿ, ನಾರಾಯಣಾಸ್ತ್ರವನ್ನೂ ಪ್ರಯೋಗ ಮಾಡಿದನು. ॥ ೧೩ ॥ ಇದಾದ ನಂತರ ಭಗವಾನ್ ಶ್ರೀಕೃಷ್ಣನು ಜೃಂಭಣಾಸ್ತ್ರದಿಂದ ಮಹಾದೇವನನ್ನು ಮೋಹಿತಗೊಳಿಸಿದನು. ಅವನು ಯುದ್ಧದಿಂದ ನಿವೃತ್ತನಾಗಿ ಆಕಳಿಸುತ್ತಲೇ ಇರಬೇಕಾಯಿತು. ಆಗ ಶ್ರೀಕೃಷ್ಣನು ಕತ್ತಿ-ಗದೆ-ಬಾಣ ಇವೇ ಮುಂತಾದ ಆಯುಧಗಳಿಂದ ಬಾಣಾಸುರನ ಸೈನ್ಯವನ್ನು ಧ್ವಂಸಮಾಡಿ ಬಿಟ್ಟನು. ॥ ೧೪ ॥ ಇತ್ತ ಪ್ರದ್ಯುಮ್ನನು ಬಾಣಗಳ ಮಳೆಯನ್ನು ಸುರಿಸಿ ಕಾರ್ತಿಕೇಯ ಸ್ವಾಮಿಯನ್ನು ಘಾಸಿಗೊಳಿಸಿದನು. ಅವನು ರಣರಂಗವನ್ನು ಬಿಟ್ಟು ನವಿಲಿನ ಮೇಲೆ ಕುಳಿತು ಓಡಿ ಹೋದನು. ॥ ೧೫ ॥ ಬಲರಾಮನು ತನ್ನ ಹಲಾಯುಧದಿಂದ ಕುಂಭಾಂಡನನ್ನು ಮತ್ತು ಕೂಪಕರ್ಣನನ್ನು ಗಾಯಗೊಳಿಸಿ ರಣರಂಗದಲ್ಲಿ ಕೊಂದುಕೆಡಹಿ ಹಾಕಿದನು. ಹೀಗೆ, ತನ್ನ ಸೇನಾಪತಿಗಳು ಹತರಾಗುವುದನ್ನು ಕಂಡ ಬಾಣಾಸುರನ ಸಮಸ್ತ ಸೇನೆಯೂ ಚಲ್ಲಾ-ಪಿಲ್ಲಿಯಾಗಿ ಹೋಯಿತು. ॥ ೧೬ ॥

ರಥಾರೂಢನಾದ ಬಾಣಾಸುರನು ಶ್ರೀಕೃಷ್ಣಾದಿಗಳ ಪ್ರಹಾರದಿಂದ ತನ್ನ ಸೇನೆಯು ಚೆಲ್ಲಾಪಿಲ್ಲಿಯಾಗಿ ನಾಶ ಹೊಂದಿರುವುದನ್ನು ನೋಡಿ ಅತ್ಯಂತ ಕ್ರೋಧಗೊಂಡನು. ಅವನು ಕೆರಳಿ ಸಾತ್ಯಕಿಯನ್ನು ಬಿಟ್ಟು ಭಗವಾನ್ ಶ್ರೀಕೃಷ್ಣನನ್ನು ಆಕ್ರಮಿಸಲು ಅವನೆಡೆಗೆ ಧಾವಿಸಿದನು. ॥ ೧೭ ॥

ಧನೂಂಷ್ಯಾಕೃಷ್ಯ ಯುಗಪದ್ಬಾಣಾಃ ಪಂಚಶತಾನಿ ವೈ ।
ಏಕೈಕಸ್ಮಿನ್ ಶರೌ ದ್ವೌ ದ್ವೌ ಸಂದಧೇ ರಣದುರ್ಮದಃ
॥ ೧೮ ॥

ತಾನಿ ಚಿಚ್ಛೇದ ಭಗವಾನ್ ಧನೂಂಷಿ ಯುಗಪದ್ಧರಿಃ ।
ಸಾರಥಿಂ ರಥಮಶ್ವಾಂಶ್ಚ ಹತ್ವಾ ಶಂಖಮಪೂರಯತ್
॥ ೧೯ ॥

ತನ್ಮಾತಾ ಕೋಟರಾ ನಾಮ ನಗ್ನಾ ಮುಕ್ತಶಿರೋರುಹಾ ।
ಪುರೋಽವತಸ್ಥೇ ಕೃಷ್ಣಸ್ಯ ಪುತ್ರಪ್ರಾಣರಿರಕ್ಷಯಾ
॥ ೨೦ ॥

ತತಸ್ತಿರ್ಯಙ್ಮುಖೋ ನಗ್ನಾಮನಿರೀಕ್ಷನ್ಗದಾಗ್ರಜಃ ।
ಬಾಣಶ್ಚ ತಾವದ್ವಿರಥಶ್ಚಿನ್ನಧನ್ವಾವಿಶತ್ಪುರಮ್
॥ ೨೧ ॥

ವಿದ್ರಾವಿತೇ ಭೂತಗಣೇ ಜ್ವರಸ್ತು ತ್ರಿಶಿರಾಸ್ತ್ರಿಪಾತ್ ।
ಅಭ್ಯಧಾವತ ದಾಶಾರ್ಹಂ ದಹನ್ನಿವ ದಿಶೋ ದಶ
॥ ೨೨ ॥

ಅಥ ನಾರಾಯಣಃ ದೇವಸ್ತಂ ದೃಷ್ಟ್ವಾ ವ್ಯಸೃಜಜ್ಜ್ವರಮ್ ।
ಮಾಹೇಶ್ವರೋ ವೈಷ್ಣವಶ್ಚ ಯುಯುಧಾತೇ ಜ್ವರಾವುಭೌ
॥ ೨೩ ॥

ಮಾಹೇಶ್ವರಃ ಸಮಾಕ್ರಂದನ್ ವೈಷ್ಣವೇನ ಬಲಾರ್ದಿತಃ ।
ಅಲಬ್ಧ್ವಾಭಯಮನ್ಯತ್ರ ಭೀತೋ ಮಾಹೇಶ್ವರೋ ಜ್ವರಃ ।
ಶರಣಾರ್ಥೀ ಹೃಷೀಕೇಶಂ ತುಷ್ಟಾವ ಪ್ರಯತಾಂಜಲಿಃ
॥ ೨೪ ॥

ಜ್ವರ ಉವಾಚ

ನಮಾಮಿ ತ್ವಾನಂತಶಕ್ತಿಂ ಪರೇಶಂ
ಸರ್ವಾತ್ಮಾನಂ ಕೇವಲಂ ಜ್ಞಪ್ತಿಮಾತ್ರಮ್ ।
ವಿಶ್ವೋತ್ಪತ್ತಿಸ್ಥಾನಸಂರೋಧಹೇತುಂ
ಯತ್ತದ್ಬ್ರಹ್ಮ ಬ್ರಹ್ಮಲಿಂಗಂ ಪ್ರಶಾಂತಮ್ ॥ ೨೫ ॥

ಕಾಲೋ ದೈವಂ ಕರ್ಮ ಜೀವಃ ಸ್ವಭಾವೋ
ದ್ರವ್ಯಂ ಕ್ಷೇತ್ರಂ ಪ್ರಾಣ ಆತ್ಮಾ ವಿಕಾರಃ ।
ತತ್ಸಂಘಾತೋ ಬೀಜರೋಹಪ್ರವಾಹ-
ಸ್ತ್ವನ್ಮಾಯೈಷಾ ತನ್ನಿಷೇಧಂ ಪ್ರಪದ್ಯೇ ॥ ೨೬ ॥

ಪರೀಕ್ಷಿತನೇ ! ರಣೋನ್ಮತ್ತನಾದ ಬಾಣಾಸುರನು ತನ್ನ ಒಂದು ಸಾವಿರ ಕೈಗಳಿಂದ ಒಂದೇ ಬಾರಿಗೆ ಐದುನೂರು ಧನಸ್ಸುಗಳಿಂದ ಪ್ರತಿಯೊಬ್ಬ ಸೈನಿಕರ ಮೇಲೂ ಎರಡೆರಡು ಬಾಣಗಳನ್ನು ಪ್ರಯೋಗಿಸಿದನು. ॥ ೧೮ ॥ ಆದರೆ ಭಗವಾನ್ ಶ್ರೀಕೃಷ್ಣನು ಒಂದೇ ಬಾರಿಗೆ ಬಾಣಾಸುರನ ಐದುನೂರು ಧನಸ್ಸುಗಳನ್ನು ಕತ್ತರಿಸಿ, ಸಾರಥಿ, ರಥ, ಕುದುರೆಗಳನ್ನು ನೆಲಸಮಾಡಿದನು ಹಾಗೂ ಪಾಂಚಜನ್ಯ ಶಂಖವನ್ನೂದಿದನು. ॥ ೧೯ ॥ ಕೋಟರಾ ಎಂಬ ಹೆಸರಿನ ದೇವತಾ ಸ್ತ್ರೀಯು ಬಾಣಾಸುರನಿಗೆ ಧರ್ಮಮಾತೆಯಾಗಿದ್ದಳು. ಅವಳು ತನ್ನ ಉಪಾಸಕ ಪುತ್ರನ ಪ್ರಾಣಗಳ ರಕ್ಷಣೆಗಾಗಿ ಕೂದಲು ಕೆದರಿಕೊಂಡು ಬೆತ್ತಲೆಯಾಗಿ ಶ್ರೀಕೃಷ್ಣನ ಮುಂದೆ ಬಂದು ನಿಂತಳು. ॥ ೨೦ ॥ ಆಗ ಗದಾಗ್ರಜನಾದ ಶ್ರೀಕೃಷ್ಣ ಬೆತ್ತಲೆಯಾದ ಆಕೆಯನ್ನು ನೋಡಬಾರದೆಂದು ಮುಖತಿರುಗಿಸಿ ನಿಂತನು. ಅಷ್ಟರಲ್ಲಿ ಧನಸ್ಸುಗಳನ್ನೂ ರಥವನ್ನೂ ಕಳೆದುಕೊಂಡು ಬಾಣಾಸುರನು ಪಟ್ಟಣಕ್ಕೆ ಹಿಂದಿರುಗಿದನು. ॥ ೨೧ ॥

ಇತ್ತಲಾಗಿ ಶಂಕರನ ಭೂತಗಣಗಳೆಲ್ಲವೂ ಪಲಾಯನ ಮಾಡಿದ ನಂತರ ಮೂರು ತಲೆಗಳನ್ನೂ, ಮೂರು ಕಾಲುಗಳನ್ನು ಹೊಂದಿದ್ದು ಮಾಹೇಶ್ವರ ಜ್ವರವು ಹತ್ತು ದಿಕ್ಕುಗಳನ್ನು ದಹಿಸಿ ಬಿಡುವುದೋ ಎಂಬಂತೆ ಆರ್ಭಟಿಸುತ್ತಾ ಭಗವಾನ್ ಶ್ರೀಕೃಷ್ಣನ ಬಳಿಗೆ ಬಂದಿತು. ॥ ೨೨ ॥ ಭಗವಾನ್ ಶ್ರೀಕೃಷ್ಣನು ತನ್ನ ಕಡೆಗೆ ಧಾವಿಸಿ ಬರುತ್ತಿರುವ ಮಾಹೇಶ್ವರ ಜ್ವರವನ್ನು ನೋಡಿ ಅದನ್ನು ಎದುರಿಸಲಿಕ್ಕಾಗಿ ತನ್ನ ವೈಷ್ಣವಜ್ವರವನ್ನು ಬಿಟ್ಟನು. ಈಗ ವೈಷ್ಣವಜ್ವರ ಮತ್ತು ಮಾಹೇಶ್ವರ ಜ್ವರಗಳು ಪರಸ್ಪರ ಕಾದಾಡತೊಡಗಿದವು. ॥ ೨೩ ॥ ಕೊನೆಗೆ ವೈಷ್ಣವ ಜ್ವರದ ತೇಜಸ್ಸಿನಿಂದ ಮಾಹೇಶ್ವರ ಜ್ವರವು ಪೀಡಿಸಲ್ಪಟ್ಟುಕೂಗಿಕೊಳ್ಳಲು ಪ್ರಾರಂಭಿಸಿತು. ಭಯಗೊಂಡಿದ್ದ ಅದಕ್ಕೆ ಎಲ್ಲಿಯೂ ಅಭಯ ದೊರೆಯಲಿಲ್ಲ. ಆಗ ಅದು ಕೈ ಜೋಡಿಸಿಕೊಂಡು ಶ್ರೀಕೃಷ್ಣನನ್ನೇ ಶರಣುಹೊಂದಿ ಪ್ರಾರ್ಥಿಸಿತು. ॥ ೨೪ ॥

ಮಾಹೇಶ್ವರ ಜ್ವರವು ಹೇಳಿತು – ಪ್ರಭುವೇ ! ನಿನ್ನ ಶಕ್ತಿಯು ಅನಂತವಾಗಿದೆ. ನೀನು ಬ್ರಹ್ಮೇಶ್ವರರಿಗಿಂತಲೂ ಶ್ರೇಷ್ಠನಾದ ಈಶ್ವರನಾಗಿರುವೆ. ಸಮಸ್ತರ ಆತ್ಮನೂ ನೀನೇ. ಅದ್ವಿತೀಯನೂ ಕೇವಲ ಜ್ಞಾನಸ್ವರೂಪನೂ ನೀನೇ ಆಗಿರುವೆ. ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನು ನೀನೇ. ಶ್ರುತಿಗಳ ಮೂಲಕ ನಿನ್ನನ್ನು ಸ್ತುತಿಸಿ, ಅನುಮಾನಿಸಲಾಗುತ್ತದೆ. ಸಮಸ್ತ ವಿಕಾರಗಳಿಂದಲೂ ರಹಿತವಾದ ಶುದ್ಧಬ್ರಹ್ಮವೂ ನೀನೇ ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೫ ॥ ಕಾಲ, ಅದೃಷ್ಟ, ಕರ್ಮ, ಜೀವ, ಸ್ವಭಾವ, ಸೂಕ್ಷ್ಮಭೂತ, ಶರೀರ, ಸೂತ್ರಾತ್ಮಾ ಪ್ರಾಣ, ಅಹಂಕಾರ, ಏಕಾದಶ ಇಂದ್ರಿಯಗಳು ಮತ್ತು ಪಂಚಭೂತಗಳು ಇವುಗಳ ಸಂಘಾತದಿಂದ ಉಂಟಾದ ಲಿಂಗಶರೀರ, ಬೀಜಾಂಕುರ ನ್ಯಾಯದಂತೆ ಅದರ ಕರ್ಮ ಮತ್ತು ಕರ್ಮದಿಂದ ಪುನಃ ಲಿಂಗಶರೀರದ ಉತ್ಪತ್ತಿ – ಇವೆಲ್ಲವೂ ನಿನ್ನ ಮಾಯೆಯೇ ಆಗಿದೆ. ಈ ಮಾಯೆಗೆ ದೂರನಾಗಿ ಅದನ್ನು ನಿವಾರಣೆ ಮಾಡುವ ನಿನಗೆ ಶರಣಾಗಿದ್ದೇನೆ. ॥ ೨೬ ॥

ನಾನಾಭಾವೈರ್ಲೀಲಯೈವೋಪಪನ್ನೈ-
ರ್ದೇವಾನಾಸಾಧೂನ್ ಲೋಕಸೇತೂನ್ಬಿಭರ್ಷಿ ।
ಹಂಸ್ಯುನ್ಮಾರ್ಗಾನ್ ಹಿಂಸಯಾ ವರ್ತಮಾನಾನ್
ಜನ್ಮೈತತ್ತೇ ಭಾರಹಾರಾಯ ಭೂಮೇಃ ॥ ೨೭ ॥

ತಪ್ತೋಽಹಂ ತೇ ತೇಜಸಾ ದುಸ್ಸಹೇನ
ಶಾಂತೋಗ್ರೇಣಾತ್ಯುಲ್ಬಣೇನ ಜ್ವರೇಣ ।
ತಾವತ್ತಾಪೋ ದೇಹಿನಾಂ ತೇಽಂಘ್ರಿಮೂಲಂ
ನೋ ಸೇವೇರನ್ಯಾವದಾಶಾನುಬದ್ಧಾಃ ॥ ೨೮ ॥

ಶ್ರೀಭಗವಾನುವಾಚ

ತ್ರಿಶಿರಸ್ತೇ ಪ್ರಸನ್ನೋಽಸ್ಮಿ ವ್ಯೇತು ತೇ ಮಜ್ಜ್ವರಾದ್ಭಯಮ್ ।
ಯೋ ನೌ ಸ್ಮರತಿ ಸಂವಾದಂ ತಸ್ಯ ತ್ವನ್ನ ಭವೇದ್ಭಯಮ್
॥ ೨೯ ॥

ಇತ್ಯುಕ್ತೋಽಚ್ಯುತಮಾನಮ್ಯ ಗತೋ ಮಾಹೇಶ್ವರೋ ಜ್ವರಃ ।
ಬಾಣಸ್ತು ರಥಮಾರೂಢಃ ಪ್ರಾಗಾದ್ಯೋತ್ಸ್ಯನ್ ಜನಾರ್ದನಮ್
॥ ೩೦ ॥

ತತೋ ಬಾಹುಸಹಸ್ರೇಣ ನಾನಾಯುಧಧರೋಽಸುರಃ ।
ಮುಮೋಚ ಪರಮಕ್ರುದ್ಧೋ ಬಾಣಾಂಶ್ಚಕ್ರಾಯುಧೇ ನೃಪ
॥ ೩೧ ॥

ತಸ್ಯಾಸ್ಯತೋಽಸ್ತ್ರಾಣ್ಯಸಕೃಚ್ಚಕ್ರೇಣ ಕ್ಷುರನೇಮಿನಾ ।
ಚಿಚ್ಛೇದ ಭಗವಾನ್ಬಾಹೂನ್ ಶಾಖಾ ಇವ ವನಸ್ಪತೇಃ
॥ ೩೨ ॥

ಬಾಹುಷ್ವಚ್ಛಿದ್ಯಮಾನೇಷು ಬಾಣಸ್ಯ ಭಗವಾನ್ ಭವಃ ।
ಭಕ್ತಾನುಕಂಪ್ಯುಪವ್ರಜ್ಯ ಚಕ್ರಾಯುಧಮಭಾಷತ
॥ ೩೩ ॥

ಶ್ರೀರುದ್ರ ಉವಾಚ

ತ್ವಂ ಹಿ ಬ್ರಹ್ಮ ಪರಂ ಜ್ಯೋತಿರ್ಗೂಢಂ ಬ್ರಹ್ಮಣಿ ವಾಙ್ಮಯೇ ।
ಯಂ ಪಶ್ಯಂತ್ಯಮಲಾತ್ಮಾನ ಆಕಾಶಮಿವ ಕೇವಲಮ್
॥ ೩೪ ॥

ನಾಭಿರ್ನಭೋಽಗ್ನಿರ್ಮುಖಮಂಬು ರೇತೋ
ದ್ಯೌಃ ಶೀರ್ಷಮಾಶಾ ಶ್ರುತಿರಂಘ್ರಿರುರ್ವೀ ।
ಚಂದ್ರೋ ಮನೋ ಯಸ್ಯ ದೃಗರ್ಕ ಆತ್ಮಾ
ಅಹಂ ಸಮುದ್ರೋ ಜಠರಂ ಭುಜೇಂದ್ರಃ ॥ ೩೫ ॥

ರೋಮಾಣಿ ಯಸ್ಯೌಷಧಯೋಽಂಬುವಾಹಾಃ
ಕೇಶಾ ವಿರಿಂಚೋ ಧಿಷಣಾ ವಿಸರ್ಗಃ ।
ಪ್ರಜಾಪತಿರ್ಹೃದಯಂ ಯಸ್ಯ ಧರ್ಮಃ
ಸ ವೈ ಭವಾನ್ಪುರುಷೋ ಲೋಕಕಲ್ಪಃ ॥ ೩೬ ॥

ಪ್ರಭೋ! ನೀನು ಲೀಲೆಯಿಂದಲೇ ಅನೇಕ ರೂಪಗಳನ್ನು ಧರಿಸಿ, ದೇವತೆಗಳ, ಸಾಧುಗಳ ಮತ್ತು ಲೋಕಮರ್ಯಾದೆಯ ಪಾಲನೆ-ಪೋಷಣೆ ಮಾಡುತ್ತಿರುವೆ. ಲೋಕಕಂಟಕರಾದ ದುರ್ಮಾರ್ಗಿಗಳನ್ನು ಸಂಹರಿಸುವೆ. ಆದುದರಿಂದ ನಿನ್ನ ಅವತಾರಗಳೆಲ್ಲವೂ ಭೂಭಾರಹರಣಕ್ಕಾಗಿ ಆಗಿವೆ. ॥ ೨೭ ॥ ಪ್ರಭುವೇ! ಶಾಂತವಾದಂತೆ ಕಂಡರೂ ಉಗ್ರವಾಗಿರುವ ನಿನ್ನ ಅತ್ಯಂತ ಭಯಾನಕವಾದ ಮತ್ತು ದುಸ್ಸಹವಾದ ಜ್ವರದಿಂದ ನಾನು ಪರಿತಪಿಸುತ್ತಿದ್ದೇನೆ. ದೇಹಧಾರಿಗಳಾದ ಜೀವರು ಆಸೆಯಿಂದ ಬಂಧಿತರಾಗಿ ನಿನ್ನ ಪಾದ ಕಮಲವನ್ನು ಸೇವಿಸುವವರೆಗೂ ತಾಪ-ಸಂತಾಪದಲ್ಲಿ ಬೇಯುತ್ತಿರುತ್ತಾರೆ. ॥ ೨೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ತ್ರಿಶಿರಸನೇ! ನಾನು ನಿನ್ನ ಮೇಲೆ ಪ್ರಸನ್ನನಾಗಿರುವೆನು. ಈಗ ನೀನು ನನ್ನ ಜ್ವರದಿಂದ ನಿರ್ಭಯನಾಗು. ಜಗತ್ತಿನಲ್ಲಿ ನಮ್ಮಿಬ್ಬರ ಈ ಸಂವಾದವನ್ನು ಸ್ಮರಿಸುವವರಿಗೆ ನಿನ್ನಿಂದ ಯಾವುದೇ ಭಯ ಇರಲಾರದು. ॥ ೨೯ ॥ ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದಾಗ ಮಾಹೇಶ್ವರಜ್ವರವು ಅವನಿಗೆ ನಮಸ್ಕರಿಸಿ ಹೊರಟುಹೋಯಿತು. ಅಷ್ಟರಲ್ಲಿ ಬಾಣಾಸುರನು ರಥಾರೂಢನಾಗಿ ಶ್ರೀಕೃಷ್ಣನೊಡನೆ ಯುದ್ಧಮಾಡಲು ಆಗಮಿಸಿದನು. ॥ ೩೦ ॥ ಪರೀಕ್ಷಿತನೇ! ಬಾಣಾಸುರನು ತನ್ನ ಸಾವಿರ ಕೈಗಳಲ್ಲಿ ನಾನಾ ವಿಧವಾದ ಆಯುಧಗಳನ್ನು ಧರಿಸಿದ್ದನು. ಅತ್ಯಂತ ಕೋಪಾವಿಷ್ಟನಾದ ಅವನು ಚಕ್ರಪಾಣಿ ಭಗವಂತನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ॥ ೩೧ ॥ ಬಾಣಾಸುರನ ಬಾಣಗಳ ಮಳೆಯನ್ನು ನೋಡಿದಾಗ ಭಗವಾನ್ ಶ್ರೀಕೃಷ್ಣನು ವೃಕ್ಷಗಳ ಕೊಂಬೆಗಳನ್ನು ಕತ್ತರಿಸುವಂತೆ ಅತ್ಯಂತ ತೀಕ್ಷ್ಣವಾದ ಅಲಗಿನಿಂದ ಕೂಡಿದ ಸುದರ್ಶನ ಚಕ್ರದಿಂದ ಬಾಣಾಸುರನ ಬಾಹುಗಳು ಕತ್ತರಿಸಲ್ಪಡುವುದನ್ನು ಕಂಡು ಭಕ್ತವತ್ಸಲನಾದ ಭಗವಾನ್ ಶಂಕರನು ಚಕ್ರಧಾರಿ ಶ್ರೀಕೃಷ್ಣನ ಬಳಿಗೆ ಬಂದು ಅವನನ್ನು ಸ್ತುತಿಸ ತೊಡಗಿದನು. ॥ ೩೨-೩೩ ॥

ಭಗವಾನ್ ಶಂಕರನು ಹೇಳಿದನು – ಪ್ರಭೋ! ನೀನು ವೇದ ಮಂತ್ರಗಳಲ್ಲಿ ತಾತ್ಪರ್ಯರೂಪದಿಂದ ಅಡಗಿರುವ ಪರಮ ಜ್ಯೋತಿಸ್ವರೂಪ ಪರಬ್ರಹ್ಮನಾಗಿರುವೆ. ಶುದ್ಧಹೃದಯಗಳ ಮಹಾತ್ಮರು ನಿನ್ನ ಆಕಾಶದಂತೆ ಸರ್ವವ್ಯಾಪಕ ಮತ್ತು ನಿರ್ವಿಕಾರ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ॥ ೩೪ ॥ ಆಕಾಶವು ನಿನ್ನ ನಾಭಿಯಾಗಿದೆ. ಅಗ್ನಿಯು ಮುಖ ಮತ್ತು ಜಲವು ವೀರ್ಯವಾಗಿದೆ. ಸ್ವರ್ಗವು ತಲೆಯು, ದಿಕ್ಕುಗಳೇ ಕಿವಿಗಳು, ಪೃಥಿವಿಯೇ ಚರಣಗಳಾಗಿವೆ. ಚಂದ್ರನೇ ಮನಸ್ಸು ಸೂರ್ಯನೇ ಕಣ್ಣುಗಳು, ಶಿವನಾದ ನಾನು ನಿನ್ನ ಅಹಂಕಾರನಾಗಿರುವೆನು. ಸಮುದ್ರವೇ ನಿನ್ನ ಹೊಟ್ಟೆಯು ಮತ್ತು ಇಂದ್ರನು ನಿನ್ನ ಭುಜವಾಗಿದ್ದಾನೆ. ॥ ೩೫ ॥ ಧಾನ್ಯಾದಿ ಔಷಧಿಗಳು ನಿನ್ನ ರೋಮಗಳು, ಮೇಘಗಳೇ ತಲೆಕೂದಲು, ಬ್ರಹ್ಮನೇ ಬುದ್ಧಿಯಾಗಿದ್ದಾನೆ. ಪ್ರಜಾಪತಿಯೇ ನಿನ್ನ ಲಿಂಗವು, ಧರ್ಮವು ಹೃದಯವಾಗಿದೆ. ಹೀಗೆ ಸಮಸ್ತ ಲೋಕ-ಲೋಕಾಂತರಗಳ ಜೊತೆಗೆ ಯಾರ ಶರೀರದ ತುಲನೆ ಮಾಡಲಾಗುತ್ತದೋ ಆ ಪರಮಪುರುಷನು ನೀನೇ ಆಗಿರುವೆ. ॥ ೩೬ ॥

ತವಾವತಾರೋಽಯಮಕುಂಠಧಾಮನ್
ಧರ್ಮಸ್ಯ ಗುಪ್ತ್ಯೈ ಜಗತೋ ಭವಾಯ ।
ವಯಂ ಚ ಸರ್ವೇ ಭವತಾನುಭಾವಿತಾ
ವಿಭಾವಯಾಮೋ ಭುವನಾನಿ ಸಪ್ತ ॥ ೩೭ ॥

ತ್ವಮೇಕ ಆದ್ಯಃ ಪುರುಷೋಽದ್ವಿತೀಯ-
ಸ್ತುರ್ಯಃ ಸ್ವದೃಗ್ಹೇತುರಹೇತುರೀಶಃ ।
ಪ್ರತೀಯಸೇಽಥಾಪಿ ಯಥಾವಿಕಾರಂ
ಸ್ವಮಾಯಯಾ ಸರ್ವಗುಣಪ್ರಸಿದ್ಧ್ಯೈ ॥ ೩೮ ॥

ಯಥೈವ ಸೂರ್ಯಃ ಪಿಹಿತಶ್ಚಾಯಯಾ ಸ್ವಯಾ
ಛಾಯಾಂ ಚ ರೂಪಾಣಿ ಚ ಸಂಚಕಾಸ್ತಿ ।
ಏವಂ ಗುಣೇನಾಪಿಹಿತೋ ಗುಣಾಂಸ್ತ್ವ-
ಮಾತ್ಮಪ್ರದೀಪೋ ಗುಣಿನಶ್ಚ ಭೂಮನ್ ॥ ೩೯ ॥

ಯನ್ಮಾಯಾಮೋಹಿತಧಿಯಃ ಪುತ್ರದಾರಗೃಹಾದಿಷು ।
ಉನ್ಮಜ್ಜಂತಿ ನಿಮಜ್ಜಂತಿ ಪ್ರಸಕ್ತಾ ವೃಜಿನಾರ್ಣವೇ
॥ ೪೦ ॥

ದೇವದತ್ತಮಿಮಂ ಲಬ್ಧ್ವಾ ನೃಲೋಕಮಜಿತೇಂದ್ರಿಯಃ ।
ಯೋ ನಾದ್ರಿಯೇತ ತ್ವತ್ಪಾದೌ ಸ ಶೋಚ್ಯೋ ಹ್ಯಾತ್ಮವಂಚಕಃ
॥ ೪೧ ॥

ಯಸ್ತ್ವಾಂ ವಿಸೃಜತೇ ಮರ್ತ್ಯ ಆತ್ಮಾನಂ ಪ್ರಿಯಮೀಶ್ವರಮ್ ।
ವಿಪರ್ಯಯೇಂದ್ರಿಯಾರ್ಥಾರ್ಥಂ ವಿಷಮತ್ಯಮೃತಂ ತ್ಯಜನ್
॥ ೪೨ ॥

ಅಹಂ ಬ್ರಹ್ಮಾಥ ವಿಬುಧಾ ಮುನಯಶ್ಚಾಮಲಾಶಯಾಃ ।
ಸರ್ವಾತ್ಮನಾ ಪ್ರಪನ್ನಾಸ್ತ್ವಾಮಾತ್ಮಾನಂ ಪ್ರೇಷ್ಠಮೀಶ್ವರಮ್
॥ ೪೩ ॥

ತಂ ತ್ವಾ ಜಗತ್ಸ್ಥಿತ್ಯುದಯಾಂತಹೇತುಂ
ಸಮಂ ಪ್ರಶಾಂತಂ ಸುಹೃದಾತ್ಮದೈವಮ್ ।
ಅನನ್ಯಮೇಕಂ ಜಗದಾತ್ಮಕೇತಂ
ಭವಾಪವರ್ಗಾಯ ಭಜಾಮ ದೇವಮ್ ॥ ೪೪ ॥

ಆಖಿಂಡ ಜ್ಯೋತಿಸ್ವರೂಪನಾದ ಪರಮಾತ್ಮನೇ! ನಿನ್ನ ಈ ಅವತಾರವು ಧರ್ಮರಕ್ಷಣೆಗಾಗಿ ಮತ್ತು ಪ್ರಪಂಚದ ಅಭ್ಯುದಯ ಅಭಿವೃದ್ಧಿಗಾಗಿಯೇ ಆಗಿರುವುದು. ನಾವೆಲ್ಲರೂ ನಿನ್ನ ಪ್ರಭಾವ ದಿಂದಲೇ ಪ್ರಭಾವಿತರಾಗಿ ಏಳು ಭುವನಗಳನ್ನು ಪಾಲಿಸುತ್ತಿ ದ್ದೇವೆ. ॥ ೩೭ ॥ ಪ್ರಭೋ! ನೀನು ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದ ರಹಿತನಾದ ಅದ್ವಿತೀಯ - ಆದಿಪುರುಷ ನಾಗಿರುವೆ. ಮಾಯಾಕೃತವಾದ ಜಾಗೃತ್, ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿ ಅನುಗತವಾದ ಮತ್ತು ಅವುಗಳಿಂದ ಅತೀತ ತುರೀಯ ತತ್ತ್ವವೂ ನೀನೇ ಆಗಿರುವೆ. ನೀನು ಬೇರೆ ಯಾವುದೇ ವಸ್ತುವಿನಿಂದ ಪ್ರಕಾಶಿತನಾಗದೆ ಸ್ವಯಂ ಪ್ರಕಾಶನಾಗಿರುವೆ. ನೀನು ಎಲ್ಲದರ ಕಾರಣನಾಗಿದ್ದರೂ ನಿನಗೆ ಯಾವ ಕಾರಣವೂ ಇಲ್ಲ ಭಗವಂತನೇ! ಹೀಗಿದ್ದರೂ ಕೂಡ ತ್ರಿಗುಣಗಳ ವಿಭಿನ್ನ ವಿಷಮತೆ ಗಳನ್ನು ಪ್ರಕಾಶಿತಗೊಳಿಸಲು ನಿನ್ನ ಮಾಯೆಯಿಂದಲೇ ದೇವತೆ, ಪಶು-ಪಕ್ಷಿ, ಮನುಷ್ಯ ಮುಂತಾದ ಶರೀರಗಳಿಗೆ ಅನುಸಾರವಾಗಿ ಬೇರೆ-ಬೇರೆ ರೂಪಗಳನ್ನು ಹೊಂದಿ ವಿಶ್ವರೂಪನಾಗಿ ಕಂಡು ಬರುವೆ. ॥ ೩೮ ॥ ಪ್ರಭುವೇ! ಸೂರ್ಯನು ತನ್ನ ನೆರಳಾದ ಮೇಘಗಳಿಂದ ಮುಚ್ಚಿಹೋಗುತ್ತಾನೆ ಮತ್ತು ಆ ಮೋಡಗಳನ್ನು ಹಾಗೂ ಬೇರೆ-ಬೇರೆ ರೂಪಗಳನ್ನು ಪ್ರಕಾಶಿಸುವಂತೆಯೇ ನೀನಾದರೋ ಸ್ವಯಂಪ್ರಕಾಶನಾಗಿದ್ದರೂ ಗುಣಗಳ ಮೂಲಕ ಮುಚ್ಚಿಹೋಗುವೆ ಮತ್ತು ಸಮಸ್ತ ಗುಣಗಳನ್ನು ಗುಣಾಭಿ ಮಾನಿಗಳಾದ ಜೀವರನ್ನು ಪ್ರಕಾಶಿಸುತ್ತಿರುವೆ. ವಾಸ್ತವದಲ್ಲಿ ನೀನು ಅನಂತನಾಗಿರುವೆ. ॥ ೩೯ ॥

ಭಗವಂತಾ! ನಿನ್ನ ಮಾಯೆಯಿಂದ ಮೋಹಿತರಾದ ಜನರು ಪತ್ನಿ-ಪುತ್ರ, ದೇಹ-ಗೇಹ ಮುಂತಾದವುಗಳಲ್ಲಿ ಆಸಕ್ತರಾಗಿ, ಮತ್ತೆ ದುಃಖದ ಅಪಾರ ಸಮುದ್ರದಲ್ಲಿ ಮುಳುಗಿರುತ್ತಾರೆ. ॥ ೪೦ ॥ ಜಗತ್ತಿನ ಮಾನವರಿಗೆ ಈ ಮನುಷ್ಯ ಶರೀರವನ್ನು ನೀನು ಮಹತ್ತರ ಕೃಪೆಮಾಡಿಕೊಟ್ಟಿರುವೆ. ಇದನ್ನು ಪಡೆದರೂ ಕೂಡ ತನ್ನ ಇಂದ್ರಿಯ ಗಳನ್ನು ಯಾವನು ವಶಪಡಿಸಿಕೊಳ್ಳುವುದಿಲ್ಲವೋ, ನಿನ್ನ ಚರಣ ಕಮಲಗಳನ್ನು ಆಶ್ರಯಿಸುವುದಿಲ್ಲವೋ, ಅವನ್ನು ಸೇವಿಸುವು ದಿಲ್ಲವೋ ಅಂತಹ ಮನುಷ್ಯನ ಜೀವನವು ಅತ್ಯಂತ ಶೋಚನೀಯ ವಾಗಿದೆ. ಅವನು ಸ್ವತಃ ತನ್ನನ್ನು ವಂಚಿಸಿ ಕೊಳ್ಳುತ್ತಿದ್ದಾನೆ. ॥ ೪೧ ॥ ಪ್ರಭುವೇ! ನೀನು ಸಮಸ್ತ ಪ್ರಾಣಿಗಳ ಆತ್ಮನೂ, ಪ್ರಿಯತಮನೂ, ಈಶ್ವರನೂ ಆಗಿರುವೆ. ಮೃತ್ಯುಧರ್ಮವುಳ್ಳ ಮನುಷ್ಯನು ನಿನ್ನನ್ನು ಬಿಟ್ಟು ಅನಾತ್ಮವೂ, ದುಃಖರೂಪವೂ, ತುಚ್ಛವೂ ಆದ ವಿಷಯ ಗಳಲ್ಲಿ ಬುದ್ಧಿಯುಳ್ಳ ಮೂರ್ಖನು ಅಮೃತವನ್ನು ಬಿಟ್ಟು ವಿಷವನ್ನು ಕುಡಿದಂತೆಯೇ ಆಗಿದೆ. ॥ ೪೨ ॥ ಸರ್ವೇಶ್ವರನೇ! ನಾನು, ಬ್ರಹ್ಮಾ ಸಮಸ್ತ ದೇವತೆಗಳು ಮತ್ತು ಶುದ್ಧಾತ್ಮರಾದ ಋಷಿ-ಮುನಿಗಳು ಸರ್ವಾತ್ಮಭಾವದಿಂದ ನಿನಗೆ ಶರಣಾಗಿದ್ದೇವೆ. ಏಕೆಂದರೆ, ನೀನೇ ನಮ್ಮೆಲ್ಲರ ಆತ್ಮನೂ, ಪ್ರಿಯತಮನೂ, ಈಶ್ವರನೂ ಆಗಿರುವೆ.॥೪೩॥ ನೀನು ಜಗತ್ತಿನ ಉತ್ಪತ್ತಿ-ಸ್ಥಿತಿ ಪ್ರಳಯಗಳಿಗೆ ಕಾರಣನಾಗಿರುವೆ. ನೀನು ಎಲ್ಲದರಲ್ಲಿ ಸಮನೂ, ಪರಮಶಾಂತನೂ, ಎಲ್ಲರ ಸುಹೃದನೂ, ಆತ್ಮನೂ, ಇಷ್ಟದೇವನೂ ಆಗಿರುವೆ. ನೀನು ಅನನ್ಯನೂ, ಅದ್ವೀತಿ ಯನೂ, ಜಗದಾಧಾರನೂ, ಅಧಿಷ್ಠಾನನೂ ಆಗಿರುವೆ. ಪ್ರಭೋ! ನಾವೆಲ್ಲರೂ ಪ್ರಪಂಚದಿಂದ ಮುಕ್ತರಾಗಲಿಕ್ಕಾಗಿ ನಿನ್ನನ್ನು ಭಜಿಸು ತ್ತೇವೆ. ॥ ೪೪ ॥

ಅಯಂ ಮಮೇಷ್ಟೋ ದಯಿತೋಽನುವರ್ತೀ
ಮಯಾಭಯಂ ದತ್ತಮಮುಷ್ಯ ದೇವ ।
ಸಂಪಾದ್ಯತಾಂ ತದ್ಭವತಃ ಪ್ರಸಾದೋ
ಯಥಾ ಹಿ ತೇ ದೈತ್ಯಪತೌ ಪ್ರಸಾದಃ ॥ ೪೫ ॥

ಶ್ರೀಭಗವಾನುವಾಚ

ಯದಾತ್ಥ ಭಗವಂಸ್ತನ್ನಃ ಕರವಾಮ ಪ್ರಿಯಂ ತವ ।
ಭವತೋ ಯದ್ವ್ಯವಸಿತಂ ತನ್ಮೇ ಸಾಧ್ವನುಮೋದಿತಮ್
॥ ೪೬ ॥

ಅವಧ್ಯೋಽಯಂ ಮಮಾಪ್ಯೇಷ
ವೈರೋಚನಿಸುತೋಽಸುರಃ ।
ಪ್ರಹ್ಲಾದಾಯ ವರೋ ದತ್ತೋ
ನ ವಧ್ಯೋ ಮೇ ತವಾನ್ವಯಃ ॥ ೪೭ ॥

ದರ್ಪೋಪಶಮನಾಯಾಸ್ಯ ಪ್ರವೃಕ್ಣಾ ಬಾಹವೋ ಮಯಾ ।
ಸೂದಿತಂ ಚ ಬಲಂ ಭೂರಿ ಯಚ್ಚ ಭಾರಾಯಿತಂ ಭುವಃ
॥ ೪೮ ॥

ಚತ್ವಾರೋಽಸ್ಯ ಭುಜಾಃ ಶಿಷ್ಟಾ ಭವಿಷ್ಯಂತ್ಯಜರಾಮರಾಃ ।
ಪಾರ್ಷದಮುಖ್ಯೋ ಭವತೋ ನ ಕುತಶ್ಚಿದ್ಭಯೋಽಸುರಃ
॥ ೪೯ ॥

ಇತಿ ಲಬ್ಧ್ವಾಽಭಯಂ ಕೃಷ್ಣಂ ಪ್ರಣಮ್ಯ ಶಿರಸಾಸುರಃ ।
ಪ್ರಾದ್ಯುಮ್ನಿಂ ರಥಮಾರೋಪ್ಯ ಸವಧ್ವಾಸಮುಪಾನಯತ್
॥ ೫೦ ॥

ಅಕ್ಷೌಹಿಣ್ಯಾ ಪರಿವೃತಂ ಸುವಾಸಃಸಮಲಂಕೃತಮ್ ।
ಸಪತ್ನೀಕಂ ಪುರಸ್ಕೃತ್ಯ ಯಯೌ ರುದ್ರಾನುಮೋದಿತಃ
॥ ೫೧ ॥

ಸ್ವರಾಜಧಾನೀಂ ಸಮಲಂಕೃತಾಂ ಧ್ವಜೈಃ
ಸತೋರಣೈರುಕ್ಷಿತಮಾರ್ಗಚತ್ವರಾಮ್ ।
ವಿವೇಶ ಶಂಖಾನಕದುಂದುಭಿಸ್ವನೈ-
ರಭ್ಯುದ್ಯತಃ ಪೌರಸುಹೃದ್ದ್ವಿಜಾತಿಭಿಃ ॥ ೫೨ ॥

ಯ ಏವಂ ಕೃಷ್ಣವಿಜಯಂ ಶಂಕರೇಣ ಚ ಸಂಯುಗಮ್ ।
ಸಂಸ್ಮರೇತ್ಪ್ಯುತ್ಥಾಯ ನ ತಸ್ಯ ಸ್ಯಾತ್ ಪರಾಜಯಃ
॥ ೫೩ ॥

ದೇವಾ ! ಈ ಬಾಣಾಸುರನು ನನಗೆ ಪರಮಪ್ರಿಯನೂ, ಕೃಪಾಪಾತ್ರನೂ, ಸೇವಕನೂ ಆಗಿರುವನು. ನಾನು ಇವನಿಗೆ ಅಭಯದಾನವನ್ನು ಕೊಟ್ಟಿರುವೆನು. ಪ್ರಭೋ ! ಇವನ ಮುತ್ತಾತನಾದ ಪ್ರಹ್ಲಾದನ ಮೇಲೆ ಹೇಗೆ ನೀನು ಕೃಪೆಯನ್ನು ತೋರಿದೆಯೋ ಹಾಗೆಯೇ ಇವನ ಮೇಲೆಯೂ ನೀನು ಕೃಪೆಯನ್ನು ತೋರು. ॥ ೪೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಭಗವಂತನಾದ ರುದ್ರನೇ ! ನಿನ್ನ ಮಾತಿನಂತೆ ನಾನು ಇವನನ್ನು ನಿರ್ಭಯನನ್ನಾಗಿಸುತ್ತೇನೆ. ನೀನು ಹಿಂದೆ ಇವನ ವಿಷಯದಲ್ಲಿ ನಿಶ್ಚಯಿಸಿರುವುದನ್ನೇ ನಾನು ಇವನ ಭುಜಗಳನ್ನು ಕತ್ತರಿಸಿ ಅನುಮೋದಿಸಿದ್ದೇನೆ. ॥ ೪೬ ॥ ಬಾಣಾಸುರನು ದೈತ್ಯರಾಜ ಬಲಿಯ ಮಗನಾಗಿರುವುದನ್ನು ನಾನು ಬಲ್ಲೆನು. ಅದಕ್ಕಾಗಿ ನಾನು ಇವನನ್ನು ವಧಿಸಲಾರೆ ; ಏಕೆಂದರೆ, ನಾನು ಪ್ರಹ್ಲಾದನಿಗೆ – 'ನಿನ್ನ ವಂಶದಲ್ಲಿ ಹುಟ್ಟಿದ ಯಾವ ದೈತ್ಯನನ್ನೂ ನಾನು ವಧಿಸುವುದಿಲ್ಲ' ಎಂಬ ವರವನ್ನು ಕೊಟ್ಟಿರುವೆನು. ॥ ೪೭ ॥ ಇವನ ದರ್ಪವನ್ನು ಮುರಿಯುವ ಸಲುವಾಗಿ ನಾನು ಇವನ ತೋಳುಗಳನ್ನು ಕತ್ತರಿಸಿ ಹಾಕಿದೆನು. ಇವನ ಬಹಳ ದೊಡ್ಡ ಸೈನ್ಯವು ಭೂಮಿಗೆ ಭಾರವಾಗಿತ್ತು. ಅದಕ್ಕಾಗಿ ನಾನು ಅದನ್ನು ಸಂಹರಿಸಿ ಬಿಟ್ಟಿರುವೆನು. ॥ ೪೮ ॥ ಈಗ ಇವನಿಗೆ ನಾಲ್ಕು ಭುಜಗಳು ಉಳಿದಿವೆ. ಅವು ಅಜರಾಮರವಾಗಿರುವವು. ಈ ಬಾಣಾಸುರನು ನಿನ್ನ ಪಾರ್ಷದರಲ್ಲಿ ಮುಖ್ಯನಾಗಿರುವನು. ಇನ್ನು ಇವನಿಗೆ ಯಾರಿಂದಲೂ, ಯಾವುದೇ ರೀತಿಯ ಭಯವು ಇರುವುದಿಲ್ಲ ॥ ೪೯ ॥

ಶ್ರೀಕೃಷ್ಣನಿಂದ ಹೀಗೆ ಅಭಯದಾನವನ್ನು ಪಡೆದು ಬಾಣಾಸುರನು ಅವನ ಬಳಿಗೆ ಬಂದು ಶಿರಸಾಷ್ಟಾಂಗ ನಮಸ್ಕಾರಮಾಡಿ, ಅನಿರುದ್ಧನನ್ನು, ತನ್ನ ಪುತ್ರಿಯಾದ ಉಷೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಭಗವಂತನ ಬಳಿಗೆ ಕರೆದುಕೊಂಡು ಬಂದನು.॥೫೦॥ ಅನಂತರ ಭಗವಾನ್ ಶ್ರೀಕೃಷ್ಣನು ಮಹಾದೇವನಿಂದ ಅನುಮತಿಯನ್ನು ಪಡೆದು ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ವಸ್ತ್ರಾಲಂಕಾರ ಭೂಷಿತರಾದ ಉಷೆ – ಅನಿರುದ್ಧರನ್ನು ಮುಂದಿಟ್ಟುಕೊಂಡು ದ್ವಾರಕೆಗೆ ಪ್ರಯಾಣ ಮಾಡಿದನು. ॥ ೫೧ ॥ ಇತ್ತ ದ್ವಾರಕೆಯಲ್ಲಿ ಭಗವಾನ್ ಶ್ರೀಕೃಷ್ಣರೇ ಮೊದಲಾದವರ ಶುಭಾಗಮನದ ಸಮಾಚಾರವನ್ನು ಕೇಳಿ ನಗರವಾಸಿಗಳು ತಳಿರು-ತೋರಣಗಳಿಂದ ನಗರದ ಮೂಲೆ-ಮೂಲೆಗಳನ್ನು ಸಿಂಗರಿಸಿದರು. ರಾಜಬೀದಿಗಳನ್ನು ಚೌಕಗಳನ್ನೂ ಗುಡಿಸಿ-ಸಾರಿಸಿ ಸುಗಂಧಿತ ನೀರನ್ನು ಸಿಂಪಡಿಸಿದರು. ನಗರದ ನಾಗರೀಕರೂ, ಬಂಧು-ಬಾಂಧವರೂ, ಬ್ರಾಹ್ಮಣರೂ ಮುಂದೆ ಬಂದು ವೈಭವದಿಂದ ಸ್ವಾಗತಿಸಿದರು. ಆಗ ಶಂಖ, ಮೃದಂಗ, ನಗಾರಿ, ಕಹಳೆ ಮೊದಲಾದ ವಾದ್ಯಗಳು ಮೊಳಗುತ್ತಿರಲು ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದನು. ॥ ೫೨ ॥ ಪರೀಕ್ಷಿತನೇ ! ಶ್ರೀಕೃಷ್ಣ – ಶಂಕರರ ಈ ಯುದ್ಧ ಪ್ರಸಂಗವನ್ನು ಮತ್ತು ಶ್ರೀಕೃಷ್ಣನ ವಿಜಯದ ಕಥೆಯನ್ನು ಬೆಳಗೆದ್ದೊಡನೆ ಸ್ಮರಿಸುವ ಮನುಷ್ಯನಿಗೆ ಯಾವ ಕಾರ್ಯದಲ್ಲೂ ಪರಾಜಯವಾಗುವುದಿಲ್ಲ ॥ ೫೩ ॥

ಅರವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೬೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಅನಿರುದ್ಧಾನಯನಂ ನಾಮ ತ್ರಿಷಷ್ಟಿತಮೋಽಧ್ಯಾಯಃ ॥ ೬೩ ॥

ಅರವತ್ತನಾಲ್ಕನೆಯ ಅಧ್ಯಾಯ

ನೃಗರಾಜನ ಕಥೆ

ಶ್ರೀಶುಕ ಉವಾಚ

ಏಕದೋಪವನಂ ರಾಜನ್ ಜಗ್ಮುರ್ಯದುಕುಮಾರಕಾಃ ।
ವಿಹರ್ತುಂ ಸಾಂಬಪ್ರದ್ಯುಮ್ನಚಾರುಭಾನುಗದಾದಯಃ
॥ ೧ ॥

ಕ್ರೀಡಿತ್ವಾ ಸುಚಿರಂ ತತ್ರ ವಿಚಿನ್ವಂತಃ ಪಿಪಾಸಿತಾಃ ।
ಜಲಂ ನಿರುದಕೇ ಕೂಪೇ ದದೃಶುಃ ಸತ್ತ್ವಮದ್ಭುತಮ್
॥ ೨ ॥

ಕೃಕಲಾಸಂ ಗಿರಿನಿಭಂ ವೀಕ್ಷ್ಯ ವಿಸ್ಮಿತಮಾನಸಾಃ ।
ತಸ್ಯ ಚೋದ್ಧರಣೇ ಯತ್ನಂ ಚಕ್ರುಸ್ತೇ ಕೃಪಯಾನ್ವಿತಾಃ
॥ ೩ ॥

ಚರ್ಮಜ್ಯೈಸ್ತಾಂತವೈಃ ಪಾಶೈರ್ಬದ್ಧ್ವಾ ಪತಿತಮರ್ಭಕಾಃ ।
ನಾಶಕ್ನುವನ್ ಸಮುದ್ಧರ್ತುಂ ಕೃಷ್ಣಾಯಾಚಖ್ಯುರುತ್ಸುಕಾಃ
॥ ೪ ॥

ತತ್ರಾಗತ್ಯಾರವಿಂದಾಕ್ಷೋ ಭಗವಾನ್ ವಿಶ್ವಭಾವನಃ ।
ವೀಕ್ಷ್ಯೈಜ್ಜಹಾರ ವಾಮೇನ ತಂ ಕರೇಣ ಸ ಲೀಲಯಾ
॥ ೫ ॥

ಸ ಉತ್ತಮಶ್ಲೋಕಕರಾಭಿಮೃಷ್ಟೋ
ವಿಹಾಯ ಸದ್ಯಃ ಕೃಕಲಾಸರೂಪಮ್ ।
ಸಂತಪ್ತಚಾಮೀಕರಚಾರುವರ್ಣಃ
ಸ್ವರ್ಗ್ಯದ್ಭುತಾಲಂಕರಣಾಂಬರಸ್ರಕ್ ॥ ೬ ॥

ಪಪ್ರಚ್ಛ ವಿದ್ವಾನಪಿ ತನ್ನಿದಾನಂ
ಜನೇಷು ವಿಖ್ಯಾಪಯಿತುಂ ಮುಕುಂದಃ ।
ಕಸ್ತ್ವಂ ಮಹಾಭಾಗ ವರೇಣ್ಯರೂಪೋ
ದೇವೋತ್ತಮಂ ತ್ವಾಂ ಗಣಯಾಮಿ ನೂನಮ್ ॥ ೭ ॥

ದಶಾಮಿಮಾಂ ವಾ ಕತಮೇನ ಕರ್ಮಣಾ
ಸಂಪ್ರಾಪಿತೋಽಸ್ಯತದರ್ಹಃ ಸುಭದ್ರ ।
ಆತ್ಮಾನಮಾಖ್ಯಾಹಿ ವಿವಿತ್ಸತಾಂ ನೋ
ಯನ್ನಸ್ಯಸೇ ನಃ ಕ್ಷಮಮತ್ರ ವಕ್ತುಮ್ ॥ ೮ ॥

ಶ್ರೀಶುಕ ಉವಾಚ

ಇತಿ ಸ್ಮ ರಾಜಾ ಸಂಪೃಷ್ಟಃ ಕೃಷ್ಣೇನಾನಂತಮೂರ್ತಿನಾ ।
ಮಾಧವಂ ಪ್ರಣಿಪತ್ಯಾಹ ಕಿರೀಟೇನಾರ್ಕವರ್ಚಸಾ
॥ ೯ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ ! ಒಂದು ದಿನ ಸಾಂಬ, ಪ್ರದ್ಯುಮ್ನ, ಚಾರುಭಾನು ಮತ್ತು ಗದ ಮೊದಲಾದ ಯದುವಂಶೀಯ ರಾಜಕುಮಾರರು ವಿಹಾರಾರ್ಥವಾಗಿ ಉಪವನಕ್ಕೆ ಹೋದರು. ॥ ೧ ॥ ಅವರು ಅಲ್ಲಿ ಬಹಳ ಹೊತ್ತಿನವರೆಗೆ ಆಟವಾಡುತ್ತಾ ಬಳಲಿ, ಬಾಯಾರಿಕೆ ಉಂಟಾಗಿ, ನೀರನ್ನು ಹುಡುಕಿಕೊಂಡು ಹೊರಟರು. ಅವರು ಒಂದು ಬಾವಿಯ ಬಳಿಗೆ ಹೋಗಿ ನೋಡಿದಾಗ ಅದರಲ್ಲಿ ನೀರಿರಲಿಲ್ಲ, ಒಂದು ದೊಡ್ಡದಾದ ವಿಚಿತ್ರವಾದ ಜೀವವು ಕಂಡುಬಂತು. ॥ ೨ ॥ ಆ ಜೀವಿಯು ಪರ್ವತಾಕಾರದ ಒಂದು ಓತಿಕೇತವಾಗಿತ್ತು. ಅದನ್ನು ನೋಡಿ ಆಶ್ಚರ್ಯಚಕಿತರಾಗಿ ಮರುಕಗೊಂಡು ಅವರು ಆ ಪ್ರಾಣಿಯನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರು. ॥ ೩ ॥ ರಾಜಕುಮಾರರು ತೊಗಲು ಮಿಣಿಗಳಿಂದ, ನೂಲು ಹಗ್ಗಗಳಿಂದ ಆ ಪ್ರಾಣಿಯನ್ನು ಕಟ್ಟಿ ಮೇಲಕ್ಕೆ ಎತ್ತಲಾರದೆ ಹೋದರು. ಆಗ ಕುತೂಹಲದಿಂದ ಅವರು ಈ ಆಶ್ಚರ್ಯಕರ ಸಂಗತಿಯನ್ನು ಶ್ರೀಕೃಷ್ಣನ ಬಳಿಗೆ ಬಂದು ನಿವೇದಿಸಿಕೊಂಡರು. ॥ ೪ ॥ ವಿಶ್ವಭಾವನನಾದ, ಕಮಲಾಕ್ಷನಾದ ಶ್ರೀಕೃಷ್ಣನು ಬಾವಿಯ ಬಳಿಗೆ ಬಂದು ಆ ಮಹಾಪ್ರಾಣಿಯನ್ನು ಎಡಗೈಯಿಂದ ಲೀಲಾಜಾಲವಾಗಿ ಮೇಲಕ್ಕೆತ್ತಿದನು. ॥ ೫ ॥ ಭಗವಾನ್ ಶ್ರೀಕೃಷ್ಣನ ಕರಕಮಲಗಳ ಸ್ಪರ್ಶವಾಗುತ್ತಲೇ ಅದರ ಓತಿಕ್ಯಾತದ ರೂಪವು ಹೊರಟುಹೋಗಿ ಒಬ್ಬ ಸ್ವರ್ಗೀಯ ದೇವತೆಯಂತೆ ರೂಪವಂತನಾದನು. ಅವನ ಶರೀರದ ಬಣ್ಣವು ಕಾದ ಚಿನ್ನದಂತೆ ಹೊಳೆಯುತ್ತಿತ್ತು. ಶರೀರದ ಮೇಲೆ ಅದ್ಭುತವಾದ ವಸ್ತ್ರಗಳು, ಆಭೂಷಣಗಳು ಮತ್ತು ಪುಷ್ಪಹಾರಗಳು ಶೋಭಿಸುತ್ತಿದ್ದವು. ॥ ೬ ॥ ಅಂತಹ ದಿವ್ಯಪುರುಷನಿಗೆ ಓತಿಕ್ಯಾತ ಜನ್ಮವು ಏಕೆ ಬಂತು ಎಂಬುದು ಭಗವಾನ್ ಶ್ರೀಕೃಷ್ಣನಿಗೆ ತಿಳಿದಿತ್ತಾದರೂ ಸಮಸ್ತರಿಗೂ ಈ ವಿಷಯವು ತಿಳಿಯಲೆಂಬ ಆಶಯದಿಂದ ಶ್ರೀಕೃಷ್ಣನು ಆ ದಿವ್ಯ ಪುರುಷನನ್ನು ಪ್ರಶ್ನಿಸಿದನು – ಮಹಾಭಾಗನೇ ! ನೀನು ಯಾರು ? ನಿನ್ನ ರೂಪವಾದರೋ ಬಹಳ ಸುಂದರವಾಗಿದೆ. ನೀನು ಶ್ರೇಷ್ಠದೇವತೆಯಾಗಿರಬಹುದೆಂದು ನಾನು ಭಾವಿಸುತ್ತೇನೆ. ॥ ೭ ॥ ಕಲ್ಯಾಣಮೂರ್ತಿಯೇ ! ನೀನು ಯಾವ ಕರ್ಮವಿಪಾಕದಿಂದ ಇಂತಹ ಜನ್ಮವನ್ನು ಹೊಂದಿದೆ ? ವಾಸ್ತವವಾಗಿ ನೀನು ಇಂತಹ ಯೋನಿಯಲ್ಲಿ ಹುಟ್ಟಬಾರದಿತ್ತು. ನಿನ್ನ ಜನ್ಮ ವೃತ್ತಾಂತವನ್ನು ತಿಳಿಸಲು ನಿನಗೆ ಉಚಿತವೆನಿಸಿದರೆ ನಮಗೆ ಅದನ್ನು ತಿಳಿಸು. ನಾವು ಅದನ್ನು ಕೇಳ ಬಯಸುತ್ತೇವೆ. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಅನಂತಮೂರ್ತಿ ಭಗವಾನ್ ಶ್ರೀಕೃಷ್ಣನು ನೃಗನಲ್ಲಿ (ಏಕೆಂದರೆ ಅವನು ಅದೇ ರೂಪದಲ್ಲಿ ಪ್ರಕಟನಾಗಿದ್ದನು) ಹೀಗೆ ಪ್ರಶ್ನಿಸಿದಾಗ ಸೂರ್ಯತೇಜಸ್ಸಿನಂತೆ ಜಗ-ಜಗಿಸುತ್ತಿರುವ ಕಿರೀಟದೊಡನೆ ಶ್ರೀಕೃಷ್ಣನಿಗೆ ನಮಸ್ಕರಿಸಿ ದೇವಸದೃಶನಾದ ಅವನು ಇಂತೆಂದನು. ॥ ೯ ॥

ನೃಗ ಉವಾಚ

ನೃಗೋ ನಾಮ ನರೇಂದ್ರೋಽಹಮಿಕ್ಷ್ವಾಕುತನಯಃ ಪ್ರಭೋ ।
ದಾನಿಷ್ವಾಖ್ಯಾಯಮಾನೇಷು ಯದಿ ತೇ ಕರ್ಣಮಸ್ಪೃಶಮ್
॥ ೧೦ ॥

ಕಿಂ ನು ತೇಽವಿದಿತಂ ನಾಥ ಸರ್ವಭೂತಾತ್ಮಸಾಕ್ಷಿಣಃ ।
ಕಾಲೇನಾವ್ಯಾಹತದೃಶೋ ವಕ್ಷ್ಯೇಽಥಾಪಿ ತವಾಜ್ಞಯಾ
॥ ೧೧ ॥

ಯಾವತ್ಯಃ ಸಿಕತಾ ಭೂಮೇರ್ಯಾವತ್ಯೋ ದಿವಿ ತಾರಕಾಃ ।
ಯಾವತ್ಯೋ ವರ್ಷಧಾರಾಶ್ಚ ತಾವತೀರದದಾಂ ಸ್ಮ ಗಾಃ
॥ ೧೨ ॥

ಪಯಸ್ವಿನೀಸ್ತರುಣೀಃ ಶೀಲರೂಪ-
ಗುಣೋಪಪನ್ನಾಃ ಕಪಿಲಾ ಹೇಮಶೃಂಗೀಃ ।
ನ್ಯಾಯಾರ್ಜಿತಾ ರೂಪ್ಯಖುರಾಃ ಸವತ್ಸಾ
ದುಕೂಲಮಾಲಾಭರಣಾ ದದಾವಹಮ್ ॥ ೧೩ ॥

ಸ್ವಲಂಕೃತೇಭ್ಯೋ ಗುಣಶೀಲವದ್ಭ್ಯಃ
ಸೀದತ್ಕುಟುಂಬೇಭ್ಯ ಋತವ್ರತೇಭ್ಯಃ ।
ತಪಃಶ್ರುತಬ್ರಹ್ಮವದಾನ್ಯಸದ್ಭ್ಯಃ
ಪ್ರಾದಾಂ ಯುವಭ್ಯೋ ದ್ವಿಜಪುಂಗವೇಭ್ಯಃ ॥ ೧೪ ॥

ಗೋಭೂಹಿರಣ್ಯಾಯತನಾಶ್ವಹಸ್ತಿನಃ
ಕನ್ಯಾಃ ಸದಾಸೀಸ್ತಿಲರೂಪ್ಯಶಯ್ಯಾಃ ।
ವಾಸಾಂಸಿ ರತ್ನಾನಿ ಪರಿಚ್ಛದಾನ್ರಥಾ-
ನಿಷ್ಟ್ವಂ ಚ ಯಜ್ಞೈಶ್ಚರಿತಂ ಚ ಪೂರ್ತಮ್ ॥ ೧೫ ॥

ಕಸ್ಯಚಿದ್ದ್ವಿಜಮುಖ್ಯಸ್ಯ ಭ್ರಷ್ಟಾ ಗೌರ್ಮಮ ಗೋಧನೇ ।
ಸಂಪೃಕ್ತಾಽವಿದುಷಾ ಸಾ ಚ ಮಯಾ ದತ್ತಾ ದ್ವಿಜಾತಯೇ
॥ ೧೬ ॥

ತಾಂ ನೀಯಮಾನಾಂ ತತ್ಸ್ವಾಮೀ
ದೃಷ್ಟ್ವೋವಾಚ ಮಮೇತಿ ತಮ್ ।
ಮಮೇತಿ ಪ್ರತಿಗ್ರಾಹ್ಯಾಹ
ನೃಗೋ ಮೇ ದತ್ತವಾನಿತಿ ॥ ೧೭ ॥

ವಿಪ್ರೌ ವಿವದಮಾನೌ ಮಾಮೂಚತುಃ ಸ್ವಾರ್ಥಸಾಧಕೌ ।
ಭವಾನ್ ದಾತಾಪಹರ್ತೇತಿ ತಚ್ಛ್ರುತ್ವಾಮೇಽಭವದ್ಭ್ರಮಃ
॥ ೧೮ ॥

ನೃಗರಾಜನು ಹೇಳಿದನು – ಪ್ರಭೋ ! ನಾನು ಇಕ್ಷ್ವಾಕು ಮಹಾರಾಜನ ಪುತ್ರನಾದ ನೃಗನಾಗಿರುವೆನು. ವಿಶ್ವವಿಖ್ಯಾತರಾದ ದಾನಿಗಳ ಹೆಸರುಗಳನ್ನು ಹೇಳುವಾಗ ನನ್ನ ಹೆಸರನ್ನು ನೀನು ಕೇಳಿರಬಹುದು. ॥ ೧೦ ॥ ಪ್ರಭೋ ! ಸಮಸ್ತ ಪ್ರಾಣಿಗಳಿಗೂ ಆತ್ಮಸಾಕ್ಷಿಯಾಗಿರುವ ನಿನಗೆ ತಿಳಿಯದಿರುವ ವಿಷಯವು ಯಾವುದು ತಾನೇ ಇರುವುದು ? ನಿನ್ನ ಜ್ಞಾನಕ್ಕೆ ಕಾಲದ ತಡೆಯಿಲ್ಲ, ಆದರೂ ನಿನ್ನ ಆಜ್ಞಾನುಸಾರವಾಗಿ ನನ್ನ ವೃತ್ತಾಂತವನ್ನು ಹೇಳುತ್ತೇನೆ. ॥ ೧೧ ॥ ಭಗವಂತಾ ! ಪೃಥಿವಿಯಲ್ಲಿ ಇರುವ ಧೂಳಿನ ಕಣಗಳಷ್ಟು, ಆಕಾಶದಲ್ಲಿರುವ ತಾರೆಗಳಷ್ಟು, ಮಳೆಯಲ್ಲಿ ಬೀಳುವ ನೀರಧಾರೆಗಳಷ್ಟು ಸಂಖ್ಯೆಯ ಗೋವುಗಳನ್ನು ನಾನು ದಾನಮಾಡಿದ್ದೆನು. ॥ ೧೨ ॥ ಅವೆಲ್ಲ ಗೋವುಗಳೂ ಹಾಲು ಕರೆಯುತ್ತಿದ್ದು, ಎಳೆಪ್ರಾಯದ, ಶೀಲ, ರೂಪ ಗುಣಗಳಿಂದ ಸಂಪನ್ನವಾದ ಕಪಿಲಾ ಗೋವುಗಳಾಗಿದ್ದವು. ಅವೆಲ್ಲವನ್ನು ನಾನು ನ್ಯಾಯದಿಂದಲೇ ಸಂಪಾದಿಸಿದ್ದೆನು. ಎಲ್ಲವೂ ಕರುಗಳಿಂದ ಕೂಡಿದ್ದವು. ಅವುಗಳ ಕೊಂಬುಗಳಿಗೆ ಚಿನ್ನದ ಕಲಶಗಳಿದ್ದು, ಗೊರಸುಗಳಿಗೆ ಬೆಳ್ಳಿಯ ಕವಚಗಳಿರುತ್ತಿದ್ದವು. ಅವನ್ನು ವಸ್ತ್ರಾಭರಣಗಳಿಂದಲೂ, ಹೂವಿನ ಹಾರಗಳಿಂದಲೂ ಅಲಂಕರಿಸಲಾಗಿತ್ತು. ಅಂತಹ ಗೋವುಗಳನ್ನು ನಾನು ದಾನ ಮಾಡಿದ್ದೆನು. ॥ ೧೩ ॥ ಭಗವಂತಾ ! ಯುವಕರಾದ, ಸದ್ಗುಣಿಗಳಾದ, ಶೀಲಸಂಪನ್ನರಾದ, ಸಂಸಾರವನ್ನು ನಿರ್ವಹಿಸ ಲಾರದೆ ಕಷ್ಟಪಡುತ್ತಿದ್ದ, ಅದಾಂಭಿಕರಾದ, ತಪಸ್ವಿಗಳಾದ, ವೇದಾಧ್ಯಯನ ಶೀಲರಾದ, ಶಿಷ್ಯರಿಗೆ ವಿದ್ಯಾದಾನವನ್ನು ಮಾಡುತ್ತಿದ್ದ ಸತ್ಪುರುಷರಿಗೆ ಅವರನ್ನು ವಸ್ತ್ರಾಭರಣ ಮಾಲೆಗಳಿಂದ ಅಲಂಕರಿಸಿ ದಾನಮಾಡುತ್ತಿದ್ದೆನು. ॥ ೧೪ ॥ ಗೋದಾನ ಮಾತ್ರವಲ್ಲದೆ ಭೂಮಿ, ಚಿನ್ನ, ಮನೆ, ಕುದುರೆ, ಆನೆ, ಕನ್ಯೆ, ಎಳ್ಳು, ಬೆಳ್ಳಿ, ಹಾಸಿಗೆ, ವಸ್ತ್ರ ರತ್ನಗಳಿಂದ ಸಮಲಂಕೃತವಾದ ರಥ – ಇವೇ ಮೊದಲಾದುವನ್ನು ಆಯಾಯ ಕಾಲಗಳಲ್ಲಿ ದಾನಮಾಡುತ್ತಿದ್ದೆನು. ಯಜ್ಞಯಾಗಾದಿಗಳನ್ನು, ಇಷ್ಟಾಪೂರ್ತ ಕರ್ಮಗಳನ್ನು ಮಾಡುತ್ತಿದ್ದೆನು. ॥ ೧೫ ॥

ಒಂದು ದಿನ ಯಾರೋ ಬ್ರಾಹ್ಮಣ ಶ್ರೇಷ್ಠನೊಬ್ಬನ ಒಂದು ಹಸುವು ತಪ್ಪಿಸಿಕೊಂಡು ನನ್ನ ಹಸುಗಳಲ್ಲಿ ಬಂದು ಸೇರಿಕೊಂಡಿತು. ಇದನ್ನು ತಿಳಿಯದ ನಾನು ಆ ಗೋವನ್ನು ಮತ್ತೊಬ್ಬ ಬ್ರಾಹ್ಮಣನಿಗೆ ದಾನಮಾಡಿಬಿಟ್ಟೆ ॥ ೧೬ ॥ ನನ್ನಿಂದ ದಾನ ಪಡೆದ ಆ ಬ್ರಾಹ್ಮಣನು ಹಸುವನ್ನು ಹೊಡೆದುಕೊಂಡು ಹೋಗುತ್ತಿದ್ದಾಗ, ಆ ಗೋವಿನ ಹಿಂದಿನ ಒಡೆಯನು 'ಇದು ನನ್ನ ಹಸು' ಎಂದು ಹೇಳಿದನು. ದಾನಪಡೆದವನು – ಇದು ನನ್ನದೇ ಹಸು ಆಗಿದೆ. ಏಕೆಂದರೆ, ನೃಗರಾಜನು ನನಗೆ ಇದನ್ನು ದಾನಮಾಡಿರುವನು. ॥ ೧೭ ॥ ಅವರು ಇಬ್ಬರೂ ಬ್ರಾಹ್ಮಣರು ಪರಸ್ಪರ ಜಗಳಾಡುತ್ತಾ ತಮ್ಮ-ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾ ನನ್ನ ಬಳಿಗೆ ಬಂದರು. ನನ್ನಿಂದ ದಾನ ಪಡೆದ ಬ್ರಾಹ್ಮಣನು ತನ್ನ ವಾದವನ್ನು ಮುಂದಿಡುತ್ತಾ – ಈ ಹಸುವನ್ನು ಈಗಾಗಲೇ ನೀನು ದಾನ ಮಾಡಿರುವೆ. ಇದು ನನಗೆ ಸೇರಿದ್ದಾಗಿದೆ. ಇನ್ನೊಬ್ಬನು ಹೇಳಿದನು. – ಬ್ರಾಹ್ಮಣನು ಹೇಳುತ್ತಿರುವುದು ನಿಶ್ಚಯವಾದರೆ ನೀನು ನನ್ನ ಹಸುವನ್ನು ಕದ್ದಿರುವೆ. ಭಗವಂತಾ ! ಆ ಬ್ರಾಹ್ಮಣರಿಬ್ಬರ ಮಾತು ಕೇಳಿ ನನ್ನ ಚಿತ್ತವು ಭ್ರಮಿಸಿಹೋಯಿತು. ॥ ೧೮ ॥

ಅನುನೀತಾವುಭೌ ವಿಪ್ರೌ ಧರ್ಮಕೃಚ್ಛ್ರಗತೇನ ವೈ ।
ಗವಾಂ ಲಕ್ಷಂ ಪ್ರಕೃಷ್ಟಾನಾಂ ದಾಸ್ಯಾಮ್ಯೇಷಾ ಪ್ರದೀಯತಾಮ್
॥ ೧೯ ॥

ಭವಂತಾವನುಗೃಹ್ಣೀತಾಂ ಕಿಂಕರಸ್ಯಾವಿಜಾನತಃ ।
ಸಮುದ್ಧರತ ಮಾಂ ಕೃಚ್ಛ್ರತ್ಪತಂತಂ ನಿರಯೇಽಶುಚೌ
॥ ೨೦ ॥

ನಾಹಂ ಪ್ರತೀಚ್ಛೇ ವೈ ರಾಜನ್ನಿತ್ಯುಕ್ತ್ವಾಸ್ವಮ್ಯಪಾಕ್ರಮತ್ ।
ನಾನ್ಯದ್ಗವಾಮಪ್ಯಯುತಮಿಚ್ಛಾಮೀತ್ಯಪರೋ ಯಯೌ
॥ ೨೧ ॥

ಏತಸ್ಮಿನ್ನಂತರೇ ಯಾಮ್ಯೈರ್ದೂತೈರ್ನೀತೋ ಯಮಕ್ಷಯಮ್ ।
ಯಮೇನ ಪೃಷ್ಟಸ್ತತ್ರಾಹಂ ದೇವದೇವ ಜಗತ್ಪತೇ
॥ ೨೨ ॥

ಪೂರ್ವಂ ತ್ವಮಶುಭಂ ಭುಂಕ್ಷೇ ಉತಾಹೋ ನೃಪತೇ ಶುಭಮ್ ।
ನಾಂತಂ ದಾನಸ್ಯ ಧರ್ಮಸ್ಯ ಪಶ್ಯೇ ಲೋಕಸ್ಯ ಭಾಸ್ವತಃ
॥ ೨೩ ॥

ಪೂರ್ವಂ ದೇವಾಶುಭಂ ಭುಂಜ ಇತಿ ಪ್ರಾಹ ಪತೇತಿ ಸಃ ।
ತಾವದದ್ರಾಕ್ಷಮಾತ್ಮಾನಂ ಕೃಕಲಾಸಂ ಪತನ್ಪ್ರಭೋ
॥ ೨೪ ॥

ಬ್ರಹ್ಮಣ್ಯಸ್ಯ ವದಾನ್ಯಸ್ಯ ತವ ದಾಸಸ್ಯ ಕೇಶವ ।
ಸ್ಮೃತಿರ್ನಾದ್ಯಾಪಿ ವಿಧ್ವಸ್ತಾ ಭವತ್ಸಂದರ್ಶನಾರ್ಥಿನಃ
॥ ೨೫ ॥

ಸ ತ್ವಂ ಕಥಂ ಮಮ ವಿಭೋಽಕ್ಷಿಪಥಃ ಪರಾತ್ಮಾ
ಯೋಗೇಶ್ವರೈಃ ಶ್ರುತಿದೃಶಾಮಲಹೃದ್ವಿಭಾವ್ಯಃ ।
ಸಾಕ್ಷಾದಧೋಕ್ಷಜ ಉರುವ್ಯಸನಾಂಧಬುದ್ಧೇಃ
ಸ್ಯಾನ್ಮೇಽನುದೃಶ್ಯ ಇಹ ಯಸ್ಯ ಭವಾಪವರ್ಗಃ ॥ ೨೬ ॥

ದೇವದೇವ ಜಗನ್ನಾಥ ಗೋವಿಂದ ಪುರುಷೋತ್ತಮ ।
ನಾರಾಯಣ ಹೃಷೀಕೇಶ ಪುಣ್ಯಶ್ಲೋಕಾಚ್ಯುತಾವ್ಯಯ
॥ ೨೭ ॥

ಅನುಜಾನೀಹಿ ಮಾಂ ಕೃಷ್ಣ ಯಾಂತಂ ದೇವಗತಿಂ ಪ್ರಭೋ ।
ಯತ್ರ ಕ್ವಾಪಿ ಸತಶ್ಚೇತೋ ಭೂಯಾನ್ಮೇ ತ್ವತ್ಪದಾಸ್ಪದಮ್
॥ ೨೮ ॥

ನಾನು ಧರ್ಮಸಂಕಟದಲ್ಲಿ ಬಿದ್ದು ಅವರಿಬ್ಬರಲ್ಲಿ ತುಂಬಾ ಅನುನಯಗಳಿಂದ ಬೇಡಿಕೊಂಡೆನು – 'ನಾನು ಇದರ ಬದಲಿಗೆ ಒಂದು ಲಕ್ಷ ಉತ್ತಮ ಗೋವುಗಳನ್ನು ಕೊಡುತ್ತೇನೆ. ತಾವು ಆ ಹಸುವನ್ನು ನನಗೆ ಕೊಟ್ಟುಬಿಡಿರಿ. ॥ ೧೯ ॥ ನಾನು ನಿಮ್ಮ ಸೇವಕನಾಗಿದ್ದೇನೆ. ಅಜ್ಞಾನದಿಂದ ಈ ಅಪರಾಧವು ನನ್ನಿಂದ ನಡೆದು ಹೋಯಿತು. ನನ್ನ ಮೇಲೆ ಕೃಪೆದೋರಿ, ಈ ಘೋರ ಕಷ್ಟದಿಂದ ಮತ್ತು ನರಕದಿಂದ ನನ್ನನ್ನು ಕಾಪಾಡಿರಿ. ॥ ೨೦ ॥ ರಾಜನೇ! ನಾನು ಇದರ ಬದಲಿಗೆ ಬೇರೆ ಏನನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಹಸುವಿನ ಒಡೆಯ ಹೊರಟುಹೋದ. ದಾನಪಡೆದ ಬ್ರಾಹ್ಮಣನೂ – 'ನೀನು ಇದರ ಬದಲಿಗೆ ಒಂದು ಲಕ್ಷವಲ್ಲ ಅದರ ಮೇಲೆ ಹತ್ತು ಸಾವಿರ ಗೋವುಗಳನ್ನು ಕೊಟ್ಟರೂ ನನಗೆ ಬೇಡ' ಎಂದು ಹೇಳಿ ಅವನೂ ಹೋಗಿಬಿಟ್ಟನು. ॥ ೨೧ ॥ ದೇವಾಧಿದೇವ! ಜಗದೀಶ್ವರನೇ! ಇದಾದ ಬಳಿಕ ನನ್ನ ಆಯುಸ್ಸು ಮುಗಿದಾಗ ಯಮದೂತರು ಬಂದು ನನ್ನನ್ನು ಯಮಪುರಿಗೆ ಕೊಂಡುಹೋದರು. ಅಲ್ಲಿ ಯಮನು ನನ್ನಲ್ಲಿ ಕೇಳಿದನು. ॥ ೨೨ ॥ ರಾಜನೇ! ನೀನು ಮೊದಲಿಗೆ ನಿನ್ನ ಪಾಪದ ಫಲವನ್ನು ಅನುಭವಿಸುವೆಯಾ? ಅಥವಾ ಪುಣ್ಯದ್ದೋ? ನೀನು ಮಾಡಿದ ದಾನ ಧರ್ಮದ ಫಲವಾಗಿ ನಿನಗೆ ಅಸೀಮವಾದ ತೇಜೋಮಯವಾದ ಲೋಕಗಳು ಪ್ರಾಪ್ತವಾಗುವವು. ॥ ೨೩. ॥ ಭಗವಂತಾ! ಅದಕ್ಕೆ ನಾನು ಮೊದಲಿಗೆ ಪಾಪದ ಫಲವನ್ನು ಅನುಭವಿಸುವೆ ಎಂದು ಯಮರಾಜನಿಗೆ ಹೇಳಿದೆನು. ಯಮರಾಜನು – ನಿನ್ನ ಪಾಪದ ಫಲವಾಗಿ 'ನೀನು ನೀಚ ಯೋನಿಯಲ್ಲಿ ಬೀಳು' ಎಂದು ಹೇಳಿದೊಡನೆಯೇ ನಾನು ಓತಿಕ್ಯಾತನಾಗಿ ಈ ಬಾವಿಯಲ್ಲಿ ಬಿದ್ದೆನು. ॥ ೨೪ ॥ ಪ್ರಭೋ! ನಾನು ಬ್ರಾಹ್ಮಣರ ಸೇವಕನೂ, ಉದಾರದಾನಿಯೂ, ನಿನ್ನ ಭಕ್ತನೂ ಆಗಿದ್ದೆ ನಿನ್ನ ದರ್ಶನವಾಗ ಬೇಕೆಂಬ ಉತ್ಕಟ ಅಭಿಲಾಷೆಯಿತ್ತು. ಹೀಗೆ ನಿನ್ನ ಕೃಪೆಯಿಂದ ನನ್ನ ಹಿಂದಿನ ಜನ್ಮದ ಸ್ಮೃತಿಯು ನಾಶವಾಗಲಿಲ್ಲ ॥ ೨೫ ॥ ಪ್ರಭುವೇ! ನೀನು ಪರಮಾತ್ಮನೇ ಆಗಿರುವೆ. ಶುದ್ಧ ಹೃದಯರಾದ ಮಹಾ ಯೋಗಿಗಳು ವೇದಾಂತಜ್ಞಾನವೆಂಬ ಕಣ್ಣಿನಿಂದ ತಮ್ಮ ಹೃದಯದಲ್ಲಿ ನಿನ್ನನ್ನು ಧ್ಯಾನಿಸುತ್ತಾ ಇರುತ್ತಾರೆ. ಇಂದ್ರಿಯಾತೀತನಾದ ಪರಮಾತ್ಮನೇ! ನೀನು ಸಾಕ್ಷಾತ್ತಾಗಿ ನನಗೆ ಹೇಗೆ ಕಾಣಿಸಿಕೊಂಡೆ? ನಾನಾದರೋ ಅನೇಕ ಪ್ರಕಾರದ ವ್ಯಸನಗಳಿಂದ ಕುರುಡನಾಗಿ ಬಿಟ್ಟಿದ್ದೆನು. ಸಂಸಾರಸಾಗರದಿಂದ ಬಿಡುಗಡೆಯ ಸಮಯವು ಸನ್ನಿಹಿತವಾದಾಗಲೇ ನಿನ್ನ ದರ್ಶನವಾಗುವುದು. ॥ ೨೬ ॥ ದೇವತೆಗಳ ಆರಾಧ್ಯನಾದ ದೇವಾ ದೇವನೇ! ಜಗನ್ನಾಥನೇ, ಗೋವಿಂದನೇ, ಪುರುಷೋತ್ತಮನೇ! ನಾರಾಯಣನೇ! ಹೃಷಿಕೇಶನೇ! ಪುಣ್ಯಶ್ಲೋಕನೇ! ಅಚ್ಯುತನೇ! ಅವ್ಯಯನೇ! ನೀನೇ ಸಮಸ್ತ ಇಂದ್ರಿಯಗಳಿಗೆ ಸ್ವಾಮಿಯಾಗಿರುವೆ. ॥ ೨೭ ॥ ಶ್ರೀಕೃಷ್ಣನೇ! ನಾನು ಈಗ ದೇವತೆಗಳ ಲೋಕಕ್ಕೆ ಹೋಗುತ್ತಿದ್ದೇನೆ. ನೀನು ಅನುಮತಿಯನ್ನು ನೀಡು. ನಾನು ಎಲ್ಲಿಯೇ ಇದ್ದರೂ, ಯಾವುದೇ ಯೋನಿಯಲ್ಲಿ ಇದ್ದರೂ ನನ್ನ ಮನಸ್ಸು ಸದಾಕಾಲವೂ ನಿನ್ನ ಚರಣಕಮಲಗಳಲ್ಲೇ ಲೀನವಾಗುವಂತೆ ಅನುಗ್ರಹಿಸು. ॥ ೨೮ ॥

ನಮಸ್ತೇ ಸರ್ವಭಾವಾಯ ಬ್ರಹ್ಮಣೇऽನಂತಶಕ್ತಯೇ।
ಕೃಷ್ಣಾಯ ವಾಸುದೇವಾಯ ಯೋಗಾನಾಂ ಪತಯೇ ನಮಃ
॥ ೨೯ ॥

ಇತ್ಯುಕ್ತ್ವಾ ತಂ ಪರಿಕ್ರಮ್ಯ ಪಾದೌ ಸ್ಪೃಷ್ಟ್ವಾ ಸ್ವಮೌಲಿನಾ।
ಅನುಜ್ಞಾತೋ ವಿಮಾನಾಗ್ರ್ಯಮಾರುಹತ್ ಪಶ್ಯತಾಂ ನೃಣಾಮ್
॥ ೩೦ ॥

ಕೃಷ್ಣಃ ಪರಿಜನಂ ಪ್ರಾಹ ಭಗವಾನ್ ದೇವಕೀಸುತಃ।
ಬ್ರಹ್ಮಣ್ಯದೇವೋ ಧರ್ಮಾತ್ಮಾ ರಾಜನ್ಯಾನನುಶಿಕ್ಷಯನ್
॥ ೩೧ ॥

ದುರ್ಜರಂ ಬತ ಬ್ರಹ್ಮಸ್ವಂ ಭುಕ್ತಮಗ್ನೇರ್ಮನಾಗಪಿ।
ತೇಜೀಯಸೋऽಪಿ ಕಿಮುತ ರಾಜ್ಞಾಮೀಶ್ವರಮಾನಿನಾಮ್
॥ ೩೨ ॥

ನಾಹಂ ಹಾಲಾಹಲಂ ಮನ್ಯೇ ವಿಷಂ ಯಸ್ಯ ಪ್ರತಿಕ್ರಿಯಾ।
ಬ್ರಹ್ಮಸ್ವಂ ಹಿ ವಿಷಂ ಪ್ರೋಕ್ತಂ ನಾಸ್ಯ ಪ್ರತಿವಿಧಿರ್ಭುವಿ
॥ ೩೩ ॥

ಹಿನಸ್ತಿ ವಿಷಮತ್ತಾರಂ ವಹ್ನಿರದ್ಭಿಃ ಪ್ರಶಾಮ್ಯತಿ।
ಕುಲಂ ಸಮೂಲಂ ದಹತಿ ಬ್ರಹ್ಮಸ್ವಾರಣಿಪಾವಕಃ
॥ ೩೪ ॥

ಬ್ರಹ್ಮಸ್ವಂ ದುರನುಜ್ಞಾತಂ ಭುಕ್ತಂ ಹಂತಿ ತ್ರಿಪೂರುಷಮ್।
ಪ್ರಸಹ್ಯತು ಬಲಾದ್ಭುಕ್ತಂ ದಶ ಪೂರ್ವಾನ್ ದಶಾಪರಾನ್
॥ ೩೫ ॥

ರಾಜಾನೋ ರಾಜಲಕ್ಷ್ಮ್ಯಾಂಧಾ ನಾತ್ಮಪಾತಂ ವಿಚಕ್ಷತೇ।
ನಿರಯಂ ಯೇऽಭಿಮನ್ಯಂತೇ ಬ್ರಹ್ಮಸ್ವಂ ಸಾಧು ಬಾಲಿಶಾಃ
॥ ೩೬ ॥

ಗೃಹ್ಣಂತಿ ಯಾವತಃ ಪಾಂಸೂನ್ಕಂದತಾಮಶ್ರುಬಿಂದವಃ।
ವಿಪ್ರಾಣಾಂ ಹೃತವೃತ್ತೀನಾಂ ವದಾನ್ಯಾನಾಂ ಕುಟುಂಬಿನಾಮ್
॥ ೩೭ ॥

ರಾಜಾನೋ ರಾಜಕುಲ್ಯಾಶ್ಚ ತಾವತೋऽಬ್ದಾನ್ನಿರಂಕುಶಾಃ।
ಕುಂಭೀಪಾಕೇಷು ಪಚ್ಯಂತೇ ಬ್ರಹ್ಮದಾಯಾಪಹಾರಿಣಃ
॥ ೩೮ ॥

ಸರ್ವಸ್ವರೂಪನೇ! ಬ್ರಹ್ಮಸ್ವರೂಪನೇ! ಅನಂತವಾದ ಶಕ್ತಿಯುಳ್ಳವನೇ! ನಿನಗೆ ನಮಸ್ಕರಿಸುತ್ತೇನೆ. ಸಚ್ಚಿದಾನಂದ ಸ್ವರೂಪನಾದ ಸರ್ವಾಂತರ್ಯಾಮಿ ವಾಸುದೇವ ಶ್ರೀಕೃಷ್ಣನೇ! ಸಮಸ್ತ ಯೋಗಿಗಳಿಗೂ ಸ್ವಾಮಿಯಾದ ಯೋಗೇಶ್ವರನೇ! ನಾನು ನಿನಗೆ ಪುನಃ ಪುನಃ ನಮಸ್ಕರಿಸುತ್ತೇನೆ. ॥ ೨೯ ॥

ನೃಗರಾಜನು ಹೀಗೆ ಭಗವಂತನಿಗೆ ಪ್ರದಕ್ಷಿಣೆಮಾಡಿ ತನ್ನ ಕಿರೀಟದಿಂದ ಅವನ ಚರಣಗಳನ್ನು ಸ್ಪರ್ಶಿಸಿ ನಮಸ್ಕರಿಸಿದನು. ಮತ್ತೆ ಶ್ರೀಕೃಷ್ಣನಿಂದ ಅನುಮತಿಯನ್ನು ಪಡೆದು ಎಲ್ಲರೂ ನೋಡುತ್ತಿರುವಂತೆಯೇ ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ದೇವಲೋಕಕ್ಕೆ ಹೊರಟು ಹೋದನು. ॥ ೩೦ ॥

ಪರೀಕ್ಷಿತನೇ! ನೃಗರಾಜನು ಹೊರಟುಹೋದ ಬಳಿಕ ಬ್ರಾಹ್ಮಣರಿಗೆ ಪರಮಪ್ರಿಯನಾದ, ಧರ್ಮಾತ್ಮನಾದ ದೇವಕಿನಂದನ ಭಗವಾನ್ ಶ್ರೀಕೃಷ್ಣನು ಕ್ಷತ್ರಿಯರಿಗೆ ಉಪದೇಶವನ್ನು ಕೊಡುವ ಸಲುವಾಗಿ ಆಲ್ಲಿ ನೆರೆದಿದ್ದ ತನ್ನ ಕುಟುಂಬ ವರ್ಗದ ಜನರಲ್ಲಿ ಹೇಳಿದನು. ॥ ೩೧ ॥ ಬಂಧುಗಳೇ! ಅಗ್ನಿಯಂತಹ ತೇಜಸ್ವಿಗಳೂ ಕೂಡ ಬ್ರಾಹ್ಮಣರ ಅತ್ಯಲ್ಪವಾದ ಧನವನ್ನೂ ಅರಗಿಸಿಕೊಳ್ಳಲಾರರು. ಹೀಗಿರುವಾಗ ತಾವೇ ಈಶ್ವರರೆಂದು ಭಾವಿಸಿಕೊಂಡಿರುವ ದುರಭಿಮಾನಿಗಳಾದ ರಾಜರೇ ಆಗಿದ್ದರೂ ಅವರ ವಿಷಯದಲ್ಲಿ ಹೇಳುವುದೇನಿದೆ ? ॥ ೩೨ ॥ ನಾನು ಹಾಲಾಹಲ ವಿಷವನ್ನೂ ವಿಷವೆಂದು ಭಾವಿಸುವುದಿಲ್ಲ, ಏಕೆಂದರೆ, ಅದರ ಚಿಕಿತ್ಸೆಯೂ ಆಗುತ್ತದೆ. ವಾಸ್ತವವಾಗಿ ಬ್ರಾಹ್ಮಣರ ಧನವೇ ಪರಮ ವಿಷವಾಗಿದೆ. ಅದನ್ನು ಅರಗಿಸಿಕೊಳ್ಳುವಂತಹ ಯಾವುದೇ ಔಷಧವೂ, ಉಪಾಯವೂ ಭೂಮಿಯಲಿಲ್ಲ. ॥ ೩೩ ॥ ಹಾಲಾಹಲ ವಿಷವು ಕೇವಲ ತಿಂದವನನ್ನೇ ಕೊಲ್ಲುತ್ತದೆ ಮತ್ತು ಬೆಂಕಿಯನ್ನು ನೀರಿನಿಂದ ಆರಿಸಲಾಗುತ್ತದೆ. ಆದರೆ ಬ್ರಾಹ್ಮಣ ಧನರೂಪವಾದ ಅರಣಿಯಿಂದ ಉಂಟಾದ ಅಗ್ನಿಯು ಇಡೀ ಕುಲವನ್ನೇ ಸಮೂಲವಾಗಿ ಸುಟ್ಟುಬಿಡುತ್ತದೆ. ॥ ೩೪ ॥ ಬ್ರಾಹ್ಮಣನ ಅನುಮತಿಯನ್ನು ಪಡೆಯದೆ ಅವನ ಧನವನ್ನು ಉಪಭೋಗಿಸಿದವರು ಮಕ್ಕಳು, ಮೊಮ್ಮಕ್ಕಳು ಹೀಗೆ ಮೂರು ತಲೆಮಾರುಗಳು ವಿನಾಶಹೊಂದುವರು. ಇನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಅದನ್ನು ಭೋಗಿಸಿದರೆ ಹಿಂದಿನ ಹತ್ತು ತಲೆಮಾರಿನವರು, ಮುಂದಿನ ಹತ್ತು ತಲೆಮಾರಿನವರು ನರಕಕ್ಕೆ ಹೋಗುತ್ತಾರೆ. ॥ ೩೫ ॥ ಮೂರ್ಖನಾದ ರಾಜನು ತನ್ನ ರಾಜ್ಯಲಕ್ಷ್ಮಿಯ ಮದದಿಂದ ಕುರುಡನಾಗಿ ಬ್ರಾಹ್ಮಣರ ಧನವನ್ನು ಕಬಳಿಸಲು ಬಯಸುವವನು ನರಕದ ದಾರಿಯನ್ನು ಕಂಡುಕೊಂಡನೆಂದೇ ತಿಳಿಯಬೇಕು. ಅವರು ಎಂತಹ ಅಧಃಪತನದ ಹೊಂಡದಲ್ಲಿ ಬೀಳಲಿದ್ದೇವೆ ಎಂಬುದನ್ನೂ ನೋಡುವುದಿಲ್ಲ. ॥ ೩೬ ॥ ಉದಾರಹೃದಯರಾದ, ಕುಟುಂಬಿಗಳಾದ ಬ್ರಾಹ್ಮಣರ ವೃತ್ತಿಯನ್ನು ಕಿತ್ತುಕೊಂಡಾಗ, ಆ ಬ್ರಾಹ್ಮಣರು ಅಳುವಾಗ ಕಣ್ಣಿನಿಂದ ಬಿದ್ದ ಕಣ್ಣೀರಿನಿಂದ ಭೂಮಿಯ ಎಷ್ಟು ಕಣಗಳು ನೆನೆಯುವುವೋ ಅಷ್ಟು ವರ್ಷಗಳಕಾಲ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ ಉಚ್ಚ್ರೃಂಖಿಲ ರಾಜನು ಮತ್ತು ಅವನ ವಂಶಜರು ಕುಂಭೀಪಾಕ ನರಕದಲ್ಲಿ ದುಃಖಿವನ್ನು ಅನುಭವಿಸಬೇಕಾಗುತ್ತದೆ. ॥ ೩೭-೩೮ ॥

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇಚ್ಚ ಯಃ।
ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ
॥ ೩೯ ॥

ನ ಮೇ ಬ್ರಹ್ಮಧನಂ ಭೂಯಾ-
ದ್ಯದ್ಗೃದ್ಧ್ವಾಲ್ಪಾಯುಷೋ ನೃಪಾಃ।
ಪರಾಜೈತಾಶ್ಚ್ಯುತಾ ರಾಜ್ಯಾದ್
ಭವಂತ್ಯುದ್ವೇಜಿನೋಽಹಯಃ ॥ ೪೦ ॥

ವಿಪ್ರಂ ಕೃತಾಗಸಮಪಿ ನೈವ ದ್ರುಹ್ಯತ ಮಾಮಕಾಃ।
ಘ್ನಂತಂ ಬಹು ಶಪಂತಂ ವಾ ನಮಸ್ಕುರುತ ನಿತ್ಯಶಃ
॥ ೪೧ ॥

ಯಥಾಹಂ ಪ್ರಣಮೇ ವಿಪ್ರಾನನುಕಾಲಂ ಸಮಾಹಿತಃ।
ತಥಾ ನಮತ ಯೂಯಂ ಚ ಯೋಽನ್ಯಥಾ ಮೇ ಸ ದಂಡಭಾಕ್
॥ ೪೨ ॥

ಬ್ರಾಹ್ಮಣಾರ್ಥೋ ಹ್ಯಪಹೃತೋ ಹರ್ತಾರಂ ಪಾತಯತ್ಯಧಃ।
ಅಜಾನಂತಮಪಿ ಹ್ಯೇನಂ ನೃಗಂ ಬ್ರಾಹ್ಮಣಗೌರಿವ
॥ ೪೩ ॥

ಏವಂ ವಿಶ್ರಾವ್ಯ ಭಗವಾನ್ ಮುಕುಂದೋ ದ್ವಾರಕೌಕಸಃ।
ಪಾವನಃ ಸರ್ವಲೋಕಾನಾಂ ವಿವೇಶ ನಿಜಮಂದಿರಮ್
॥ ೪೪ ॥

ಬ್ರಾಹ್ಮಣರಿಗೆ ತಾನು ಕೊಟ್ಟದ್ದಾಗಲೀ, ಬೇರೆಯವರು ಕೊಟ್ಟದ್ದಾಗಲಿ ಜೀವನಾಧಾರವಾದ ವೃತ್ತಿಯನ್ನು (ಧನವನ್ನು) ಕಿತ್ತುಕೊಳ್ಳುವ ರಾಜನು ಅರವತ್ತು ಸಾವಿರ ವರ್ಷಗಳವರೆಗೆ ಮಲದ ಕ್ರಿಮಿಯಾಗುತ್ತಾನೆ. ॥ ೩೯ ॥ ಬ್ರಾಹ್ಮಣನ ಸ್ವತ್ತಿಗೆ ಆಸೆಪಡುವುದರಿಂದಲೇ ರಾಜನು ಅಲ್ಪಾಯುವಾಗುತ್ತಾನೆ. ಶತ್ರುಗಳಿಂದ ಪರಾಜಿತನಾಗುತ್ತಾನೆ. ರಾಜ್ಯಭ್ರಷ್ಟನಾಗುತ್ತಾನೆ. ಸತ್ತನಂತರವೂ ಬೇರೆಯವರಿಗೆ ಕಷ್ಟಕೊಡುವಂತಹ ಹಾವಾಗುತ್ತಾನೆ. ಆದುದರಿಂದ ಯಾವುದೇ ಕಾರಣದಿಂದಲೂ ನನಗೆ ಬ್ರಾಹ್ಮಣರ ಸ್ವತ್ತು ಬೇಡ. ॥ ೪೦ ॥ ಆದ್ದರಿಂದ ನನ್ನ ಆತ್ಮೀಯರೇ! ಬ್ರಾಹ್ಮಣನು ಅಪರಾಧವನ್ನು ಮಾಡಿದರೂ ಅವನನ್ನು ದ್ವೇಷಿಸಬೇಡಿರಿ. ಅವನು ಹೊಡೆದರೂ, ಬಹಳವಾಗಿ ಬೈದರೂ, ಶಪಿಸಿದರೂ ನೀವು ಅವನಿಗೆ ನಮಸ್ಕಾರವನ್ನೇ ಮಾಡುತ್ತಾ ಇರಿ. ॥ ೪೧ ॥ ನಾನು ಬಹಳ ಎಚ್ಚರಿಕೆಯಿಂದ ಮೂರು ಹೊತ್ತು ಬ್ರಾಹ್ಮಣರನ್ನು ನಮಸ್ಕರಿಸುವಂತೆಯೇ ನೀವೂ ಮಾಡುತ್ತಾ ಇರಿ. ನನ್ನ ಈ ಆಜ್ಞೆಯನ್ನು ಉಲ್ಲಂಘಿಸುವವನನ್ನು ನಾನು ಕ್ಷಮಿಸದೆ, ಶಿಕ್ಷಿಸಿಬಿಡುತ್ತೇನೆ. ॥ ೪೨ ॥ ಅಪಹರಿಸಲ್ಪಟ್ಟ ಬ್ರಾಹ್ಮಣನ ಐಶ್ವರ್ಯವು ಅಪಹಾರಿಯನ್ನು ಬ್ರಾಹ್ಮಣನ ಸ್ವತ್ತೆಂಬುದನ್ನು ತಿಳಿಯದೆ ಅವನು ಆ ಅಪರಾಧವನ್ನು ಮಾಡಿದ್ದರೂ ಬ್ರಾಹ್ಮಣನ ಹಸುವು ನೃಗಮಹಾರಾಜನನ್ನು ನರಕಕ್ಕೆ ತಳ್ಳಿದಂತೆ ಅಧಃಪತನಗೊಳಿಸುತ್ತದೆ. ॥ ೪೩ ॥ ಪರೀಕ್ಷಿತನೇ! ಸಮಸ್ತ ಲೋಕಗಳನ್ನು ಪವಿತ್ರಗೊಳಿಸುವಂತಹ ಭಗವಾನ್ ಶ್ರೀಕೃಷ್ಣನು ದ್ವಾರಕಾವಾಸಿಗಳಿಗೆ ಹೀಗೆ ಉಪದೇಶಮಾಡಿ ತನ್ನ ಅರಮನೆಗೆ ಹೊರಟುಹೋದನು. ॥ ೪೪ ॥

ಅರವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೬೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ನೃಗೋಪಾಖ್ಯಾನಂ ನಾಮ ಚತುಃಷಷ್ಟಿತಮೋಽಧ್ಯಾಯಃ ॥ ೬೪ ॥

ಅರವತ್ತೈದನೆಯ ಅಧ್ಯಾಯ

ಬಲರಾಮನು ವ್ರಜಕ್ಕೆ ಆಗಮಿಸಿದುದು

ಶ್ರೀಶುಕ ಉವಾಚ

ಬಲಭದ್ರಃ ಕುರುಶ್ರೇಷ್ಠ ಭಗವಾನ್ ರಥಮಾಸ್ಥಿತಃ।
ಸುಹೃದ್ದಿದೃಕ್ಷುರುತ್ಕಂಠಃ ಪ್ರಯಯೌ ನಂದಗೋಕುಲಮ್
॥ ೧ ॥

ಪರಿಷ್ವಕ್ತಶ್ಚಿರೋತ್ಕಂಠೈರ್ಗೋಪೈರ್ಗೋಪೀಭಿರೇವ ಚ।
ರಾಮೋಽಭಿವಾದ್ಯ ಪಿತರಾವಾಶೀರ್ಭಿರಭಿನಂದಿತಃ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕುರುಶ್ರೇಷ್ಠನಾದ ಪರೀಕ್ಷಿತನೇ! ಭಗವಾನ್ ಬಲಭದ್ರನು ನಂದಗೋಪನೇ ಮೊದಲಾದ ಸುಹೃದರನ್ನು ನೋಡುವ ತವಕದಿಂದ ರಥದಲ್ಲಿ ಕುಳಿತು ದ್ವಾರಕೆಯಿಂದ ನಂದಗೋಕುಲಕ್ಕೆ ಪ್ರಯಾಣ ಮಾಡಿದನು. ॥ ೧ ॥ ಇತ್ತ ಬಲರಾಮ – ಶ್ರೀಕೃಷ್ಣನನ್ನು ನೋಡಬೇಕೆಂದು ವ್ರಜವಾಸಿಗಳಾದ ಗೋಪ-ಗೋಪಿಯರೂ ಬಹಳ ದಿವಸಗಳಿಂದ ಉತ್ಕಂಠಿತರಾಗಿದ್ದರು. ಅವರೆಲ್ಲರೂ ಬಲರಾಮನನ್ನು ನೋಡುತ್ತಲೇ ಆನಂದತುಂದಿಲರಾಗಿ ಬಲರಾಮನನ್ನು ಗಾಢವಾಗಿ ಆಲಿಂಗಿಸಿಕೊಂಡರು. ಬಲರಾಮನೂ ಕೂಡ ತಾಯಿಯಾದ ಯಶೋದೆಗೂ, ನಂದರಾಜನಿಗೂ ನಮಸ್ಕಾರಮಾಡಿದನು. ಅವರು ಆಶೀರ್ವದಿಸುತ್ತಾ ಅವನನ್ನು ಅಭಿನಂದಿಸಿದರು. ॥ ೨ ॥

ಚಿರಂ ನಃ ಪಾಹಿ ದಾಶಾರ್ಹ ಸಾನುಜೋ ಜಗದೀಶ್ವರಃ।
ಇತ್ಯಾರೋಪ್ಯಾಂಕಮಾಲಿಂಗ್ಯ ನೇತ್ರೈಃ ಸಿಷಿಚತುರ್ಜಲೈಃ
॥ ೩ ॥

'ದಾಶಾರ್ಹನೇ! ನೀನು ಜಗದೀಶ್ವರನಾಗಿರುವೆ. ನಿನ್ನ ತಮ್ಮನಾದ ಶ್ರೀಕೃಷ್ಣನೊಡನೆ ಸದಾ ನೀನು ನಮ್ಮನ್ನು ರಕ್ಷಿಸುತ್ತಿರು' ಎಂದು ಹೇಳುತ್ತಾ ಅವನನ್ನು ತೊಡೆಯಲ್ಲಿ ಕುಳ್ಳಿಸಿಕೊಂಡು ಆನಂದ ಬಾಷ್ಪದಿಂದ ಅವನಿಗೆ ಅಭಿಷೇಕ ಮಾಡಿದರು. ॥ ೩ ॥

ಗೋಪವೃದ್ಧಾಂಶ್ಚ ವಿಧಿವದ್ಯವಿಷ್ಠೈರಭಿವಂದಿತಃ।
ಯಥಾವಯೋ ಯಥಾಸಖ್ಯಂ ಯಥಾಸಂಬಂಧಮಾತ್ಮನಃ
॥ ೪ ॥

ಬಳಿಕ ಬಲರಾಮನು ಹಿರಿಯ ಗೋಪರಿಗೆ ನಮಸ್ಕರಿಸಿದನು. ಕಿರಿಯರು ಅವನಿಗೆ ನಮಸ್ಕಾರ ಮಾಡಿದರು. ಹೀಗೆ ಬಲರಾಮನು ಗೋಪಾಲಕರ ವಯಸ್ಸಿಗೆ ಅನುಸಾರವಾಗಿ, ಅವರೊಡನೆ ತನಗಿದ್ದ ಮೈತ್ರಿಗೆ ಅನುಸಾರವಾಗಿ ನೆಂಟಸ್ತಿಕೆಗೆ ತಕ್ಕಂತೆ ಎಲ್ಲರನ್ನು ಸಮಾದರಿಸಿದನು. ॥ ೪ ॥

ಸಮುಪೇತ್ಯಾಥ ಗೋಪಾಲಾನ್ಹಾಸ್ಯಹಸ್ತಗ್ರಹಾದಿಭಿಃ।
ವಿಶ್ರಾಂತಂ ಸುಖಮಾಸೀನಂ ಪಪ್ರಚ್ಛುಃ ಪರ್ಯುಪಾಗತಾಃ
॥ ೫ ॥

ಬಲರಾಮನು ಗೋಪಾಲಕರ ಬಳಿಗೆ ಹೊಗಿ ಕೆಲವರನ್ನು ಕೈಕುಲುಕಿದನು. ಕೆಲವರಲ್ಲಿ ವಿನೋದದ ಮಾತುಗಳನ್ನಾಡಿದನು. ಕೆಲವರನ್ನು ನಗು-ನಗುತ್ತಾ ಅಪ್ಪಿಕೊಂಡನು. ಇದಾದ ಬಳಿಕ ಬಲರಾಮನು ಬಳಲಿಕೆಯನ್ನು ಕಳೆದುಕೊಂಡು ಸುಖಾಸನದಲ್ಲಿ ಕುಳಿತಿರುವಾಗ, ಕಮಲನಯನ ಭಗವಾನ್ ಶ್ರೀಕೃಷ್ಣನಿಗಾಗಿ ಸಮಸ್ತ ಭೋಗಗಳನ್ನೂ ಸ್ವರ್ಗ, ಮೋಕ್ಷವನ್ನೂ ತ್ಯಜಿಸಿದ ಗೋಪಾಲಕರು ಬಲರಾಮನ ಬಳಿಗೆ ಬಂದರು. ಬಲರಾಮನು ಅವರ ಮನೆಯವರ ಕುರಿತು ಕುಶಲ ಪ್ರಶ್ನೆಗಳನ್ನು ಕೇಳಿದಾಗ ಅವರು ಪ್ರೇಮದಿಂದ ಉಕ್ಕಿಬರುತ್ತಿದ್ದ ಕಣ್ಣೀರಿನಿಂದಾಗಿ, ಗದ್ಗದವಾಗಿದ್ದ ಸ್ವರದಿಂದ ಅವನಲ್ಲಿ ಪ್ರಶ್ನಿಸಿದರು. ॥ ೫-೬ ॥ ಬಲರಾಮನೇ! ವಸುದೇವನೇ ಮೊದಲಾದ ನಮ್ಮ ಬಂಧುಗಳೆಲ್ಲರೂ ಕ್ಷೇಮವಾಗಿರುವರೇ? ಈಗ ನೀವು ಪತ್ನೀ-ಪುತ್ರರೊಂದಿಗೆ ಆನಂದದಿಂದ ಸಂಸಾರವನ್ನು ನಿರ್ವಹಿಸುತ್ತಿರುವಿರಿ. ಎಂದಾದರೂ ನಿಮಗೆ ನಮ್ಮಗಳ ಸ್ಮರಣೆಯುಂಟಾಗುವುದೇ? ॥ ೭ ॥ ಪಾಪಿಯಾದ ಕಂಸನನ್ನು ನೀವು ಸಂಹಾರಮಾಡಿದಿರಿ. ಇದು ದೊಡ್ಡ ಸೌಭಾಗ್ಯದ ಮಾತಾಗಿದೆ. ನಿಮ್ಮ ಸುಹೃದ್ - ಸಂಬಂಧಿಗಳನ್ನು ಕಷ್ಟ-ಕಾರ್ಪಣ್ಯಗಳಿಂದ ಕಾಪಾಡಿದಿರಿ. ನೀವು ಇನ್ನೂ ಅನೇಕ ಶತ್ರುಗಳನ್ನು ಕೊಂದುಹಾಕಿದಿರಿ, ಗೆದ್ದುಕೊಂಡಿರಿ ಇದು ಬಹು ದೊಡ್ಡ ಆನಂದದ ವಿಷಯವೇ ಆಗಿದೆ. ಈಗ ನೀವುಗಳು ಅತ್ಯಂತ ಸುರಕ್ಷಿತವಾದ ಸಮುದ್ರ ಮಧ್ಯದ ದ್ವಾರಕೆಯಲ್ಲಿ ವಾಸಿಸುತ್ತಿರುವಿರಿ. ॥ ೮ ॥

ಪೃಷ್ಟಾಶ್ಚಾನಾಮಯಂ ಸ್ವೇಷು ಪ್ರೇಮಗದ್ಗದಯಾ ಗಿರಾ।
ಕೃಷ್ಣೇ ಕಮಲಪತ್ರಾಕ್ಷೇ ಸಂನ್ಯಸ್ತಾಖಿಲರಾಧಸಃ
॥ ೬ ॥

ಕಚ್ಚಿನ್ನೋ ಬಾಂಧವಾ ರಾಮ ಸರ್ವೇ ಕುಶಲಮಾಸತೇ।
ಕಚ್ಚಿತ್ಪುರಥ ನೋ ರಾಮ ಯೂಯಂ ದಾರಸುತಾನ್ವಿತಾಃ
॥ ೭ ॥

ದಿಷ್ಟ್ಯಾ ಕಂಸೋ ಹತಃ ಪಾಪೋ ದಿಷ್ಟ್ಯಾ ಮುಕ್ತಾಃ ಸುಹೃಜ್ಜನಾಃ।
ನಿಹತ್ಯ ನಿರ್ಜಿತ್ಯ ರಿಪೂನ್ ದಿಷ್ಟ್ಯಾ ದುರ್ಗಂ ಸಮಾಶ್ರಿತಾಃ
॥ ೮ ॥

ಪರೀಕ್ಷಿತನೇ! ಭಗವಾನ್ ಬಲರಾಮನ ದರ್ಶನದಿಂದ, ಅವನ ಪ್ರೇಮಪೂರ್ಣ ನೋಟದಿಂದ ಗೋಪಿಯರು ಮಾರುಹೋದರು. ಅವರು ನಗುತ್ತಾ ಕೇಳುತ್ತಾರೆ - ಬಲರಾಮನೇ! ನಗರದ ನಾರಿಯರಿಗೆ ಪ್ರಾಣವಲ್ಲಭನಾದ ಶ್ರೀಕೃಷ್ಣನು ಕುಶಲಿಯಾಗಿರುವನಲ್ಲ? ॥ ೯ ॥ ಎಂದಾದರೂ ಅವನಿಗೆ ತನ್ನ ಬಂಧುಗಳ, ತಂದೆ-ತಾಯಿಯರ ನೆನಪು ಬರುತ್ತದೆಯೇ? ಅವನು ತನ್ನ ತಾಯಿಯ ದರ್ಶನಕ್ಕಾಗಿ ಒಮ್ಮೆಯಾದರೂ ಇಲ್ಲಿಗೆ ಬರಬಲ್ಲನೇ? ಮಹಾಬಾಹುವಾದ ಶ್ರೀಕೃಷ್ಣನು ಎಂದಾದರೂ ನಾವೆಲ್ಲರೂ ಮಾಡಿದ ಸೇವೆಯನ್ನು ಸ್ಮರಿಸುತ್ತಿರುವನೇ? ॥ ೧೦ ॥ ಬಲಭದ್ರನೇ! ಸ್ವಜರನ್ನು ಪರಿತ್ಯಜಿಸುವುದು ಎಷ್ಟು ದುಸ್ತರವಾದುದು ಎಂಬುದು ನಿನಗೆ ತಿಳಿದೆ ಇದೆ. ಆದರೂ ನಾವು ನಮ್ಮ ಪ್ರಿಯತಮನಾದ ಶ್ರೀಕೃಷ್ಣನಿಗಾಗಿ ತಂದೆ-ತಾಯಿಯರನ್ನೂ ಅಣ್ಣ ತಮ್ಮಂದಿರನ್ನೂ ಪತಿ-ಪುತ್ರ ಮತ್ತು ಸಹೋದರಿಯರನ್ನು ಪುತ್ರಿ

ಕಚ್ಚಿತ್ಪುರತಿ ವಾ ಬಂಧೂನಿತರಂ ಮಾತರಂ ಚ ಸಃ।
ಅಪ್ಯಸೌ ಮಾತರಂ ದ್ರಷ್ಟುಂ ಸಕೃದಪ್ಯಾಗಮಿಷ್ಯತಿ।
ಅಪಿ ವಾ ಸ್ಮರತೇಽಸ್ಮಾಕಮನುಸೇವಾಂ ಮಹಾಭುಜಃ
॥ ೧೦ ॥

ಮಾತರಂ ಪಿತರಂ ಭ್ರಾತೃನ್ಪತೀನ್ ಪುತ್ರಾನ್ ಸ್ವಸ್ಸೂರಪಿ ।
ಯದರ್ಥೇ ಜಹಿಮ ದಾಶಾರ್ಹ ದುಸ್ತ್ಯಜಾನ್ಸ್ವಜನಾನ್ ಪ್ರಭೋ
॥ ೧೧ ॥

ತಾ ನಃ ಸದ್ಯಃ ಪರಿತ್ಯಜ್ಯ ಗತಃ ಸಂಛಿನ್ನಸೌಹೃದಃ ।
ಕಥಂ ನು ತಾದೃಶಂ ಸ್ತ್ರೀಭಿರ್ನ ಶ್ರದ್ದೀಯೇತ ಭಾಷಿತಮ್
॥ ೧೨ ॥

ಕಥಂ ನು ಗೃಹ್ಣಂತ್ಯನವಸ್ಥಿತಾತ್ಮನೋ
ವಚಃ ಕೃತಘ್ನಸ್ಯ ಬುಧಾಃ ಪುರಸ್ತ್ರಿಯಃ ।
ಗೃಹ್ಣಂತಿ ವೈ ಚಿತ್ರಕಥಸ್ಯ ಸುಂದರ-
ಸ್ಮಿತಾವಲೋಕೋಚ್ಛ್ವಸಿತಸ್ಮರಾತುರಾಃ ॥ ೧೩ ॥

ಕಿಂ ನಸ್ತತ್ಕಥಯಾ ಗೋಪ್ಯಃ ಕಥಾಃ ಕಥಯತಾಪರಾಃ ।
ಯಾತ್ಯಸ್ಮಾಭಿರ್ವಿನಾ ಕಾಲೋ ಯದಿ ತಸ್ಯ ತಥೈವ ನಃ
॥ ೧೪ ॥

ಇತಿ ಪ್ರಹಸಿತಂ ಶೌರೇರ್ಜಲ್ಪಿತಂ ಚಾರುವೀಕ್ಷಿತಮ್ ।
ಗತಿಂ ಪ್ರೇಮಪರಿಷ್ವಂಗಂ ಸ್ಮರಂತ್ಯೋ ರುರುದುಃ ಸ್ತ್ರಿಯಃ
॥ ೧೫ ॥

ಸಂಕರ್ಷಣಸ್ತಾಃ ಕೃಷ್ಣಸ್ಯ ಸಂದೇಶೈರ್ಹೃದಯಂಗಮೈಃ ।
ಸಾಂತ್ವಯಾಮಾಸ ಭಗವಾನ್ ನಾನಾನುನಯಕೋವಿದಃ
॥ ೧೬ ॥

ದ್ವೌ ಮಾಸೌ ತತ್ರ ಚಾವಾತ್ಸೀನ್ಮಧುಂ ಮಾಧವಮೇವ ಚ ।
ರಾಮಃ ಕ್ಷಪಾಸು ಭಗವಾನ್ ಗೋಪೀನಾಂ ರತಿಮಾವಹನ್
॥ ೧೭ ॥

ಪೂರ್ಣಚಂದ್ರಕಲಾಮೃಷ್ಟೇ ಕೌಮುದೀಗಂಧವಾಯುನಾ ।
ಯಮುನೋಪವನೇ ರೇಮೇ ಸೇವಿತೇ ಸ್ತ್ರೀಗಣೈರ್ವೃತಃ
॥ ೧೮ ॥

ವರುಣಪ್ರೇಷಿತಾ ದೇವೀ ವಾರುಣೀ ವೃಕ್ಷಕೋಟರಾತ್ ।
ಪತಂತೀ ತದ್ವನಂ ಸರ್ವಂ ಸ್ವಗಂಧೇನಾಧ್ಯವಾಸಯತ್
॥ ೧೯ ॥

ಯರನ್ನು ತ್ಯಜಿಸಿ ಬಿಟ್ಟೆವು. ಆದರೆ ಪ್ರಭೋ ! ಅವನು ನಮ್ಮೆಲ್ಲರನ್ನೂ ಕ್ಷಣಮಾತ್ರದಲ್ಲಿ ಪರಿತ್ಯಜಿಸಿ, ನಮ್ಮ ಸೌಹಾರ್ದವನ್ನೂ ಪ್ರೇಮ ಬಂಧನವನ್ನೂ ಕತ್ತರಿಸಿಹಾಕಿ ಹೊರಟೇ ಹೋದನು. ಆ ಸಮಯ ದಲ್ಲಿ ನಾವು ಬಯಸಿದ್ದರೆ ತಡೆಯುತ್ತಿದ್ದೆವು. ಆದರೆ ಅವನು 'ನಾನು ನಿಮ್ಮ ಋಣಿಯಾಗಿದ್ದೇನೆ. ನಿಮ್ಮ ಉಪಕಾರವನ್ನು ಎಂದಿಗೂ ತೀರಿಸಲಾರೆನು. ಬೇಗನೇ ನಿಮ್ಮ ಬಳಿಗೆ ಬರುವೆನು' ಎಂದು ಹೇಳಿದ ಬಿನ್ನಾಣದ ಮಾತುಗಳನ್ನು ಕೇಳಿದ ಯಾವ ಸ್ತ್ರೀಯು ತಾನೇ ವಿಶ್ವಾಸವನ್ನಿಡದೇ ಇದ್ದಾಳು ? ॥ ೧೧-೧೨ ॥ ಆಗ ಒಬ್ಬ ಗೋಪಿಯು ಹೇಳಿದಳು – ಬಲರಾಮನೇ ನಾವೇನೋ ಹಳ್ಳಿಗರು. ಏನೂ ತಿಳಿಯದವರು. ಅವನ ಮೃದು ಮಧುರವಾದ ಮಾತನ್ನು ನಂಬಿಬಿಡಬಹುದು. ಆದರೆ ಚತುರರಾದ ನಗರದ ಸ್ತ್ರೀಯರು ಚಂಚಲನೂ, ಕೃತಘ್ನನೂ ಆದ ಶ್ರೀಕೃಷ್ಣನ ಮಾತುಗಳನ್ನು ಏಕೆ ನಂಬುತ್ತಾರೆ ? ಅವರನ್ನು ಇವನು ಮೋಸಗೊಳಿಸಲಾರನು. ಮತ್ತೊಬ್ಬ ಗೋಪಿಯು ಹೇಳಿದಳು – ಸಖೀಯರೇ ! ಯಾರಾದ ರೇನು ? ನಮ್ಮ ಪ್ರಿಯತಮನು ಕಿರುನಗೆಯನ್ನು ಬೀರುತ್ತಾ, ಕಡೆಗಣ್ಣನ್ನೋಟದಿಂದ ನೋಡಿದಾಕ್ಷಣ ನಗರದ ಸ್ತ್ರೀಯರೂ ಕೂಡ ಪ್ರೇಮವಶರಾಗಿ ವ್ಯಾಕುಲರಾಗುವರು. ಅವರು ಖಂಡಿತವಾಗಿ ಅವನ ಮಾತನ್ನು ನಂಬಿ ತಮ್ಮನ್ನು ಅರ್ಪಿಸಿಕೊಳ್ಳುವರು. ॥ ೧೩ ॥ ಮೂರನೆಯ ಗೋಪಿಯು ಹೇಳಿದಳು – ಗೋಪಿಯರೇ ! ಅವನ ಕಥೆಯಿಂದ ನಮಗೇನು ಆಗಬೇಕಾಗಿದೇ ? ಬೇರೆ ಯಾವು ದಾದರೂ ಪ್ರಸಂಗವಿದ್ದರೆ ಹೇಳಿರಿ. ನಾವಿಲ್ಲದೆ ಅವನು ಕಾಲವನ್ನು ಕಳೆಯಬಹುದಾದರೆ ಅವನಿಲ್ಲದೆ ನಾವೂ ಕಾಲವನ್ನು ಕಳೆ ಯೋಣ. ॥ ೧೪ ॥ ಹೀಗೆ ಹೇಳುತ್ತಿದ್ದ ಗೋಪಿಯರು ಪ್ರಿಯತಮ ನಾದ ಶ್ರೀಕೃಷ್ಣನ ನಗು, ಸವಿನುಡಿಗಳು, ಚೇತೋಹಾರಿಯಾದ ಸುಂದರನೋಟ, ಆಂದವಾದ ನಡಿಗೆ, ಪ್ರೇಮಾಲಿಂಗನ ಇವು ಗಳನ್ನು ಸ್ಮರಿಸಿಕೊಂಡು ಬಿಕ್ಕಿ-ಬಿಕ್ಕಿ ಅತ್ತುಬಿಟ್ಟರು. ॥ ೧೫ ॥

ಪರೀಕ್ಷಿತನೇ ! ಬಗೆ-ಬಗೆಯ ಸಾಂತ್ವನದ ಮಾತುಗಳನ್ನು ಹೇಳಿ ಸಮಾಧಾನಗೊಳಿಸುವುದರಲ್ಲಿ ಚತುರನಾದ ಬಲರಾಮನು ಶ್ರೀಕೃಷ್ಣನು ಕಳುಹಿಸಿದ್ದ ಹೃದಯಂಗಮವಾದ ಸಂದೇಶಗಳಿಂದ ಆ ಗೋಪಿಕೆ ಯರನ್ನು ಸಮಾಧಾನಪಡಿಸಿದನು. ॥ ೧೬ ॥ ಹೀಗೆ ವಸಂತ ಋತು ವಿನ ಚೈತ್ರ-ವೈಶಾಖ ಈ ತಿಂಗಳು ಪೂರ್ತಿಯಾಗಿ ಬಲರಾಮನು ರಾತ್ರಿಯಲ್ಲಿ ಗೋಪಿಯರಿಗೆ ಸಂತೋಷವನ್ನುಂಟುಮಾಡುತ್ತಾ ಗೋಕುಲದಲ್ಲಿದ್ದನು. ॥ ೧೭ ॥ ಆಗ ಕುಮುದ ಪುಷ್ಪದ ಸುಗಂಧ ವನ್ನು ಹೊತ್ತು ತಂಗಾಳಿಯು ಮೆಲ್ಲ-ಮೆಲ್ಲನೆ ಬೀಸುತ್ತಿರಲಾಗಿ, ಪೂರ್ಣಚಂದ್ರನ ಬೆಳದಿಂಗಳಿನಿಂದ ಜಾಜ್ವಲ್ಯಮಾನಾಗಿ ಕಾಣುತ್ತಿದ್ದ ಯಮುನಾ ತಟದ ಉಪವನದಲ್ಲಿ ಭಗವಾನ್ ಬಲರಾಮನು ಗೋಪಿಯರೊಂದಿಗೆ ವಿಹರಿಸುತ್ತಿದ್ದನು. ॥ ೧೮ ॥ ವರುಣ ದೇವನು ಕಳಿಸಿದ ವಾರುಣಿಯು ಒಂದು ಮರದ ಪೊಟರೆಯಿಂದ ಹರಿದುಕೊಂಡು ಬರುತ್ತಾ ಆ ಉಪವನವೆಲ್ಲವನ್ನು ಸುಗಂಧದಿಂದ ಸುವಾಸಿತಗೊಳಿಸಿದಳು. ॥ ೧೯ ॥

ತಂ ಗಂಧಂ ಮಧುಧಾರಾಯಾ ವಾಯುನೋಪಹೃತಂ ಬಲಃ ।
ಆಘ್ರಾಯೋಪಗತಸ್ತತ್ರ ಲಲನಾಭಿಃ ಸಮಂ ಪಪೌ
॥ ೨೦ ॥

ಉಪಗೀಯಮಾನಚರಿತೋ ವನಿತಾಭಿರ್ಮದಾಯುಧಃ ।
ವನೇಷು ವ್ಯಚರತ್ ಕ್ಷೀಬೋ ಮದವಿಹ್ವಲಲೋಚನಃ
॥ ೨೧ ॥

ಸ್ರಗ್ವ್ಯೇಕಕುಂಡಲೋ ಮತ್ತೋ
ವೈಜಯಂತ್ಯಾ ಚ ಮಾಲಯಾ ।
ಬಿಭ್ರತ್ ಸ್ಮಿತಮುಖಾಂಭೋಜಂ
ಸ್ವೇದಪ್ರಾಲೇಯಭೂಷಿತಮ್ ॥ ೨೨ ॥

ಸ ಆಜುಹಾವ ಯಮುನಾಂ ಜಲಕ್ರೀಡಾರ್ಥಮೀಶ್ವರಃ ।
ನಿಜಂ ವಾಕ್ಯಮನಾದೃತ್ಯ ಮತ್ತ ಇತ್ಯಾಪಗಾಂ ಬಲಃ ।
ಅನಾಗತಾಂ ಹಲಾಗ್ರೇಣ ಕುಪಿತೋ ವಿಚಕರ್ಷ ಹ
॥ ೨೩ ॥

ಪಾಪೇ ತ್ವಂ ಮಾಮವಜ್ಞಾಯ ಯನ್ನಾಯಾಸಿ ಮಯಾऽऽಹುತಾ ।
ನೇಷ್ಯೇ ತ್ವಾಂ ಲಾಂಗಲಾಗ್ರೇಣ ಶತಧಾ ಕಾಮಚಾರಿಣೀಮ್
॥ ೨೪ ॥

ಏವಂ ನಿರ್ಭರ್ತ್ಸಿತಾ ಭೀತಾ ಯಮುನಾ ಯದುನಂದನಮ್ ।
ಉವಾಚ ಚಕಿತಾ ವಾಚಂ ಪತಿತಾ ಪಾದಯೋರ್ನೃಪ
॥ ೨೫ ॥

ಯಮುನೋವಾಚ

ರಾಮ ರಾಮ ಮಹಾಬಾಹೋ ನ ಜಾನೇ ತವ ವಿಕ್ರಮಮ್ ।
ಯಸ್ಯೈಕಾಂಶೇನ ವಿಧೃತಾ ಜಗತೀ ಜಗತಃ ಪತೇ
॥ ೨೬ ॥

ಪರಂ ಭಾವಂ ಭಗವತೋ ಭಗವನ್ ಮಾಮಜಾನತೀಮ್ ।
ಮೋಕ್ತುಮರ್ಹಸಿ ವಿಶ್ವಾತ್ಮನ್ ಪ್ರಪನ್ನಾಂ ಭಕ್ತವತ್ಸಲ
॥ ೨೭ ॥

ತತೋ ವ್ಯಮುಂಚದ್ಯಮುನಾಂ ಯಾಚಿತೋ ಭಗವಾನ್ಬಲಃ ।
ವಿಜಗಾಹ ಜಲಂ ಸ್ತ್ರೀಭಿಃ ಕರೇಣುಭಿರಿವೇಭರಾಟ್
॥ ೨೮ ॥

ಕಾಮಂ ವಿಹೃತ್ಯ ಸಲಿಲಾದುತ್ತೀರ್ಣಾಯಾಸಿತಾಂಬರೇ ।
ಭೂಷಣಾನಿ ಮಹಾರ್ಹಾಣಿ ದದೌ ಕಾಂತಿಃ ಶುಭಾಂ ಸ್ರಜಮ್
॥ ೨೯ ॥

ವಾಯುವಿನಿಂದ ತರಲ್ಪಟ್ಟ ಆ ಮಧುಧಾರೆಯ ವಾಸನೆಯನ್ನು ಬಲರಾಮನು ಆಘ್ರಾಣಿಸಿ ವಾರುಣಮಧುವು ಸುರಿಯುತ್ತಿದ್ದಲ್ಲಿಗೆ ಹೋಗಿ ಗೋಪಿಯರೊಂದಿಗೆ ಅದನ್ನು ಪಾನಮಾಡಿದನು. ॥ ೨೦ ॥ ಆ ಸಮಯದಲ್ಲಿ ಗೋಪಿಯರು ಬಲರಾಮನ ಸುತ್ತಲೂ ನೆರೆದು ಅವನ ಚರಿತ್ರವನ್ನು ಹಾಡುತ್ತಿದ್ದರು. ಮಧುಪಾನದಿಂದ ಅಮಲೇರಿ ಬಂದು ಬಲರಾಮನು ಆ ವನದಲ್ಲಿ ಸಂಚರಿಸುತ್ತಿದ್ದನು. ಅವನ ಕಣ್ಣುಗಳು ಆನಂದಮದದಿಂದ ವಿಹ್ವಲವಾಗಿದ್ದವು. ॥ ೨೧ ॥ ಮತ್ತನಾದ ಅವನು ಕೊರಳಲ್ಲಿ ವೈಜಯಂತಿ ಮಾಲೆಯನ್ನು ಧರಿಸಿದ್ದನು. ಅವನ ಒಂದೇ ಕಿವಿಯಲ್ಲಿ ಕುಂಡಲವಿತ್ತು. ಹಿಮದ ಹನಿಗಳಂತೆ - ಕಾಣುತ್ತಿದ್ದ ಬೆವರಿನಿಂದ ವಿಭೂಷಿತನಾಗಿ, ಮಂದ ಹಾಸದಿಂದ ಕೂಡಿದ ಮುಖಕಮಲದಿಂದ ಬಲರಾಮನು ಅತ್ಯಂತ ಶೋಭಾಯಮಾನನಾಗಿ ಕಾಣುತ್ತಿದ್ದನು. ॥ ೨೨ ॥ ಸರ್ವಶಕ್ತಿ ಸಂಪನ್ನನಾದ ಬಲರಾಮನು ಜಲಕ್ರೀಡೆಗಾಗಿ ಯಮುನೆಯನ್ನು ಆಹ್ವಾನಿಸಿದನು. ಆದರೆ ಯಮುನೆಯು ಇವನು ಮದಮತ್ತನಾಗಿರುವನೆಂದು ತಿಳಿದು ಅವನ ಆಜ್ಞೆಯನ್ನು ಉಲ್ಲಂಘಿಸಿ ಅವನ ಬಳಿಗೆ ಬರಲಿಲ್ಲ. ಆಗ ಬಲರಾಮನು ಕ್ರೋಧಗೊಂಡು ತನ್ನ ಹಲಾಯುಧದಿಂದ ಅಕೆಯನ್ನು ತನ್ನತ್ತ ಸೆಳೆದುಕೊಂಡನು. ॥ ೨೩ ॥ ಹಾಗೂ ಹೇಳಿದನು - ಪಾಪಿಷ್ಠೆ! ನಾನು ಜಲಕ್ರೀಡೆಗಾಗಿ ಕರೆದರೂ ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ಬಳಿಗೆ ಬರಲಿಲ್ಲ. ಸ್ವೇಚ್ಛಾಚಾರಿಣಿಯಾದ ನಿನ್ನನ್ನು ಈಗಲೇ ಹಲಾಯುಧದ ಅಗ್ರಭಾಗದಿಂದ ನೂರಾರು ತುಂಡುಗಳಾಗಿ ಕತ್ತರಿಸಿಬಿಡುತ್ತೇನೆ. ॥ ೨೪ ॥ ಬಲರಾಮನು ಯಮುನೆಯನ್ನು ಹೀಗೆ ಗದರಿಸಿದಾಗ ಭಯಗೊಂಡು ಆಕೆಯು ಬಲಭದ್ರನ ಕಾಲಿಗೆ ಬಿದ್ದು ದೈನ್ಯದಿಂದ ಪ್ರಾರ್ಥಿಸಿದಳು. ॥ ೨೫ ॥

ಯಮುನೆಯು ಹೇಳಿದಳು - ಮಹಾಬಾಹುವಾದ ಬಲರಾಮನೇ! ನಾನು ನಿನ್ನ ಪರಾಕ್ರಮವನ್ನು ಮರೆತುಹೋಗಿದ್ದೆ. ಜಗತ್ಪತಿಯೇ! ನಿನ್ನ ಒಂದಂಶನಾದ ಶೇಷನು ಇಡೀ ಜಗತ್ತನ್ನೇ ಧರಿಸಿದ್ದಾನೆ. ಹಾಗಿರುವಾಗ ಪೂರ್ಣಾಂಶನಾದ ನಿನ್ನ ಸಾಮರ್ಥ್ಯಕ್ಕೆ ಮಿತಿಯುಂಟೆ ? ॥ ೨೬ ॥ ಭಗವಂತಾ! ನೀನು ಪರಮ ಐಶ್ವರ್ಯಶಾಲಿಯಾಗಿರುವೆ. ನಿನ್ನ ನಿಜವಾದ ಸ್ವರೂಪವನ್ನು ತಿಳಿಯದ ಕಾರಣದಿಂದಲೇ ನನ್ನಿಂದ ಇಂತಹ ಅಪರಾಧ ನಡೆದುಹೋಯಿತು. ಸರ್ವಸ್ವರೂಪನಾದ ಭಕ್ತವತ್ಸಲನೇ! ನಾನು ನಿನ್ನಲ್ಲಿ ಶರಣಾಗಿದ್ದೇನೆ. ನೀನು ನನ್ನ ತಪ್ಪನ್ನು ಮನ್ನಿಸಿ, ಕ್ಷಮಿಸಿ ನನ್ನನ್ನು ಬಿಟ್ಟುಬಿಡು. ॥ ೨೭ ॥

ಯಮುನೆಯ ಪ್ರಾರ್ಥನೆಯನ್ನು ಮನ್ನಿಸಿ ಭಗವಾನ್ ಬಲರಾಮನು ಅಕೆಯನ್ನು ಕ್ಷಮಿಸಿ, ಗಜರಾಜನು ಹೆಣ್ಣಾನೆಗಳೊಂದಿಗೆ ಕ್ರೀಡಿಸುವಂತೆಯೇ ಅವನು ಗೋಪಿಕೆಯರೊಂದಿಗೆ ಜಲಕ್ರೀಡೆಯಾಡಿದನು. ॥ ೨೮ ॥ ಯಥೇಚ್ಛವಾಗಿ ಜಲಕ್ರೀಡೆಯಾಡಿ ಬಲರಾಮನು ನೀರಿನಿಂದ ಹೊರಗೆ ಬಂದಾಗ, ವರುಣನಿಂದ ಕಳುಹಲ್ಪಟ್ಟ ಕಾಂತೀದೇವಿಯು ಅವನಿಗೆ ನೀಲಾಂಬರವನ್ನು ಬಹುಮೂಲ್ಯವಾದ ಆಭರಣಗಳನ್ನು ಸುಂದರವಾದ ಚಿನ್ನದ ಹಾರವನ್ನು ಅರ್ಪಿಸಿದಳು. ॥ ೨೯ ॥

ಮಿತ್ವಾವಾಸಸೀ ನೀಲೇ ಮಾಲಾಮಾಮುಚ್ಯ ಕಾಂಚನೀಮ್ ।
ರೇಜೇ ಸ್ವಲಂಕೃತೋ ಲಿಪ್ತೋ ಮಾಹೇಂದ್ರ ಇವ ವಾರಣಃ
॥ ೩೦ ॥

ಬಲರಾಮನು ನೀಲಾಂಬರವನ್ನುಟ್ಟು ಬಂಗಾರದ ಮಾಲೆಯನ್ನು ತೊಟ್ಟುಕೊಂಡನು. ಅಂಗರಾಗವನ್ನು ಮೈಗೆ ಪೂಸಿಕೊಂಡು, ಸುಂದರ ಭೂಷಣಗಳಿಂದ ಅಲಂಕರಿಸಿಕೊಂಡು ಇಂದ್ರನ ಬಿಳಿಯಾದ ಐರಾವತದಂತೆ ಶೋಭಿಸಿದನು. ॥ ೩೦ ॥

ಅದ್ಯಾಪಿ ದೃಶ್ಯತೇ ರಾಜನ್ ಯಮುನಾಽಽಕೃಷ್ಟವರ್ತ್ಮನಾ ।
ಬಲಸ್ಯಾನಂತವೀರ್ಯಸ್ಯ ವೀರ್ಯಂ ಸೂಚಯತೀವ ಹಿ
॥ ೩೧ ॥

ಪರೀಕ್ಷಿತನೇ! ಅನಂತವೀರ್ಯನಾದ ಬಲರಾಮನ ವೀರ್ಯ – ಪರಾಕ್ರಮವನ್ನು ಸೂಚಿಸುತ್ತಿದೆಯೋ ಎಂಬಂತೆ ಈಗಲೂ ಯಮುನಾನದಿಯು ನೇಗಿಲಿನಿಂದ ಸೆಳೆಯಲ್ಪಟ್ಟ ಮಾರ್ಗದಲ್ಲೇ ಹರಿಯುತ್ತಿದೆ. ॥ ೩೧ ॥

ಏವಂ ಸರ್ವಾ ನಿಶಾ ಯಾತಾ ಏಕೇವ ರಮತೋ ವ್ರಜೇ ।
ರಾಮಸ್ಯಾಕ್ಷಿಪ್ತಚಿತ್ತಸ್ಯ ಮಾಧುರ್ಯೈರ್ವ್ರಜಯೋಷಿತಾಮ್
॥ ೩೨ ॥

ವ್ರಜವಾಸಿನಿಯರಾದ ಗೋಪಿಯರ ಮಾಧುರ್ಯ, ಬೆಡಗು ಬಿನ್ನಾಣಗಳಿಂದ ಬಲರಾಮನ ಮನಸ್ಸು ಅಪಹರಿಸಲ್ಪಟ್ಟಿತ್ತು. ಹಲವಾರು ರಾತ್ರಿಗಳು ಒಂದೇ ರಾತ್ರಿಯಂತೆ ಕಳೆದುಹೋದ ಸಮಯವು ಅವರ ಅರಿವಿಗೆ ಬರಲೇ ಇಲ್ಲ. ಹೀಗೆ ಬಲರಾಮನು ವ್ರಜದಲ್ಲಿ ವಿಹರಿಸುತ್ತಿದ್ದನು. ॥ ೩೨ ॥

ಅರವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೬೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಬಲದೇವವಿಜಯೇ ಯಮುನಾಕರ್ಷಣಂ ನಾಮ ಪಂಚಷಷ್ಟಿತಮೋಽಧ್ಯಾಯಃ ॥ ೬೫ ॥

ಅರವತ್ತಾರನೆಯ ಅಧ್ಯಾಯ

ಪೌಂಡ್ರಕ ಮತ್ತು ಕಾಶಿರಾಜನ ಉದ್ಧಾರ

ಶ್ರೀಶುಕ ಉವಾಚ

ನಂದವ್ರಜಂ ಗತೇ ರಾಮೇ ಕರೂಷಾಧಿಪತಿರ್ನೃಪ ।
ವಾಸುದೇವೋಽಹಮಿತ್ಯಜ್ಞೋ ದೂತಂ ಕೃಷ್ಣಾಯ ಪ್ರಾಹಿಣೋತ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಬಲರಾಮನು ನಂದಗೋಕುಲಕ್ಕೆ ಹೋಗಿದ್ದ ಸಮಯದಲ್ಲಿ ಕರೂಷ ದೇಶದ ಮೂರ್ಖನಾದ ಪೌಂಡ್ರಕನೆಂಬ ರಾಜನು ತಾನೇ ವಾಸುದೇವನೆಂದು ಹೇಳಿಕೊಂಡು ಶ್ರೀಕೃಷ್ಣನ ಬಳಿಗೆ ದೂತನೊಬ್ಬನನ್ನು ಕಳುಹಿಸಿಕೊಟ್ಟನು. ॥ ೧ ॥

ತ್ವಂ ವಾಸುದೇವೋ ಭಗವಾನವತೀರ್ಣೋ ಜಗತ್ಪತಿಃ ।
ಇತಿ ಪ್ರಸ್ತೋಭಿತೋ ಬಾಲೈರ್ಮೌಢ್ಯೇನ ಆತ್ಮಾನಮಚ್ಯುತಮ್
॥ ೨ ॥

ಆ ದೇಶದ ಮೂರ್ಖಜನರು ರಾಜನನ್ನು ಸಂತೋಷಗೊಳಿಸಲು ಅವನನ್ನು ಕಂಡೊಡನೆ – 'ನೀನೇ ಭಗವಂತನಾದ ವಾಸುದೇವನಾಗಿರುವೆ. ಜಗತ್ತಿನ ರಕ್ಷಣೆಗಾಗಿ ನೀನಿಲ್ಲಿ ಅವತರಿಸಿರುವೆ' ಎಂದು ಹೊಗಳುತ್ತಿದ್ದರು. ಇದರಿಂದ ಆ ಮೂರ್ಖರಾಜನು ತಾನೇ ಭಗವಾನ್ ಅಚ್ಯುತನೆಂದು ಭಾವಿಸಿಕೊಂಡುಬಿಟ್ಟನು. ॥ ೨ ॥

ದೂತಂ ಚ ಪ್ರಾಹಿಣೋನ್ಮಂದಃ ಕೃಷ್ಣಾಯಾವ್ಯಕ್ತವರ್ತ್ಮನೇ ।
ದ್ವಾರಕಾಯಾಂ ಯಥಾ ಬಾಲೋ ನೃಪೋ ಬಾಲಕೃತೋಽಬುಧಃ
॥ ೩ ॥

ಹುಡುಗರು ಪರಸ್ಪರ ಆಟವಾಡುವಾಗ ಒಬ್ಬನನ್ನು ರಾಜನನ್ನಾಗಿಸಿಕೊಂಡು ತಾತ್ಕಾಲಿಕವಾಗಿ ಅವನನ್ನು ರಾಜನೆಂದೇ ಭಾವಿಸಿ ವ್ಯವಹರಿಸುವಂತೆ – ಪೌಂಡ್ರಕನ ಪ್ರಜೆಗಳೂ ಆಟಕ್ಕಾಗಿ ತಮ್ಮ ರಾಜನನ್ನು ವಾಸುದೇವನೆಂದೇ ಕರೆಯುತ್ತಿದ್ದರು. ಇದನ್ನು ಅರ್ಥವಿಸದೆ ಆ ಮಂದಮತಿ ಅಜ್ಞಾನಿಯಾದ ಪೌಂಡ್ರಕನು ಅಚಿಂತ್ಯಗತಿಯಾದ ಭಗವಾನ್ ಶ್ರೀಕೃಷ್ಣನ ಲೀಲಾ ರಹಸ್ಯಗಳನ್ನು ತಿಳಿಯದೆ, ಅವನ ಬಳಿಗೆ ದೂತನನ್ನು ಕಳಿಸಿಕೊಟ್ಟನು. ॥ ೩ ॥

ದೂತಸ್ತು ದ್ವಾರಕಾಮೇತ್ಯ ಸಭಾಯಾಮಾಸ್ಥಿತಂ ಪ್ರಭುಮ್ ।
ಕೃಷ್ಣಂ ಕಮಲಪತ್ರಾಕ್ಷಂ ರಾಜಸಂದೇಶಮಬ್ರವೀತ್
॥ ೪ ॥

ಪೌಂಡ್ರಕನ ದೂತನು ದ್ವಾರಕೆಗೆ ಬಂದು, ರಾಜಸಭೆಯಲ್ಲಿ ಕುಳಿತಿರುವ ಕಮಲಾಕ್ಷನಾದ ಭಗವಾನ್ ಶ್ರೀಕೃಷ್ಣನಿಗೆ ತನ್ನ ರಾಜನ ಸಂದೇಶವನ್ನು ತಿಳಿಸಿದನು. ॥ ೪ ॥

ವಾಸುದೇವೋಽವತೀರ್ಣೋಽಹಮೇಕ ಏವ ನ ಚಾಪರಃ ।
ಭೂತಾನಾಮನುಕಂಪಾರ್ಥಂ ತ್ವಂ ತು ಮಿಥ್ಯಾಭಿಧಾಂ ತ್ಯಜ
॥ ೫ ॥

ವಾಸುದೇವನೆಂಬುವನು ನಾನೊಬ್ಬನೇ ಆಗಿದ್ದೇನೆ. ಬೇರೆ ಯಾವನೂ ಇಲ್ಲ. ಪ್ರಾಣಿಗಳ ಮೇಲೆ ಕೃಪೆದೋರಲು ನಾನೇ ಅವತರಿಸಿರುವೆನು. ನೀನು ಸುಳ್ಳು-ಸುಳ್ಳನೇ ನಿನ್ನ ಹೆಸರನ್ನು ವಾಸುದೇವನೆಂದು ಇಟ್ಟು ಕೊಂಡಿರುವೆ. ಈಗ ಅದನ್ನು ಬಿಟ್ಟುಬಿಡು. ॥ ೫ ॥

ಯಾನಿ ತ್ವಮಸ್ಮಚ್ಚಿಹ್ನಾನಿ ಮೌಢ್ಯಾದ್ಬಿಭರ್ಷಿ ಸಾತ್ವತ ।
ತ್ಯಕ್ತ್ವೈಹಿ ಮಾಂ ತ್ವಂ ಶರಣಂ ನೋ ಚೇದ್ದೇಹಿ ಮಮಾಹವಮ್
॥ ೬ ॥

ಯದುವಂಶೀಯನೇ! ನೀನು ಮೂರ್ಖತೆಯಿಂದ ಶಂಖ ಚಕ್ರ ಮೊದಲಾದ ನನ್ನ ಚಿಹ್ನೆಗಳನ್ನು ಧರಿಸಿಕೊಂಡಿರುವೆ. ಅವು ಗಳನ್ನು ಬಿಟ್ಟು ನನಗೆ ಶರಣುಬಾ. ನನ್ನ ಮಾತು ನಿನಗೆ ಒಪ್ಪಿಗೆ ಯಾಗಲಿಲ್ಲವಾದರೆ ನನ್ನೊಂದಿಗೆ ಯುದ್ಧಮಾಡು. ॥ ೬ ॥

ಶ್ರೀಶುಕ ಉವಾಚ

ಕತ್ಥನಂ ತದುಪಾಕರ್ಣ್ಯ ಪೌಂಡ್ರಕಸ್ಯಾಲ್ಪಮೇಧಸಃ ।
ಉಗ್ರಸೇನಾದಯಃ ಸಭ್ಯಾ ಉಚ್ಚಕೈರ್ಜಹಸುಸ್ತದಾ
॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮಂದಮತಿಯಾದ ಪೌಂಡ್ರಕನ ಈ ಮಾತನ್ನು ಕೇಳಿ ಉಗ್ರಸೇನರೇ ಮೊದಲಾದ ಸಭಾಸದರು ಗಹ-ಗಹಿಸಿ ನಗತೊಡಗಿದರು. ॥ ೭ ॥

ಉವಾಚ ದೂತಂ ಭಗವಾನ್ ಪರಿಹಾಸಕಥಾಮನು ।
ಉತ್ಸ್ರಕ್ಷ್ಯೇ ಮೂಢ ಚಿಹ್ನಾನಿ ಯೈಸ್ತ್ವಮೇವಂ ವಿಕತ್ಥಸೇ
॥ ೮ ॥

ಆವರೆಲ್ಲರ ನಗುವು ನಿಂತ ಮೇಲೆ ಭಗವಾನ್ ಶ್ರೀಕೃಷ್ಣನು ದೂತನಲ್ಲಿ ಹೇಳಿದನು – ನೀನು ಹೋಗಿ ನಿಮ್ಮ ರಾಜನಲ್ಲಿ ಹೀಗೆ ಹೇಳು – 'ಎಲೈ ಮೂರ್ಖನೇ! ನಾನು ನನ್ನ ಚಿಹ್ನೆಗಳನ್ನು ನಿನ್ನ ಮೇಲೆ ಬಿಡುತ್ತೇನೆ ಮತ್ತು ನೀನು ಯಾರ ಪ್ರೇರಣೆಯಿಂದ ಈ ಪ್ರಕಾರ ಗಳಹುತ್ತಿರುವೆಯೋ ಅವರ ಮೇಲೆಯೂ ಪ್ರಯೋಗಿಸುವೆನು. ಎಲೈ ಮೂಢನೇ! ಆ ಸಮಯದಲ್ಲಿ ನೀನು ನನ್ನಿಂದ ಹತನಾಗಿ ಮುಖವನ್ನು ಮುಚ್ಚಿಕೊಂಡು ಹದ್ದು, ರಣಹದ್ದು ಮುಂತಾದ ಮಾಂಸವನ್ನು ತಿನ್ನುವ ಪಕ್ಷಿಗಳಿಂದ ಸುತ್ತುವರಿದು ಮಲಗಿಬಿಡುವೆ. ನೀನು ನನಗೆ ರಕ್ಷಕನಾಗುವುದಿರಲಿ, ನಾಯಿಗಳಿಗಂತೂ ರಕ್ಷಕನಾಗು ವುದು ನಿಜ. ನಿನ್ನ ಮಾಂಸವನ್ನು ನಾಯಿಗಳು ತಿಂದು ತೇಗು ವವು'. ॥ ೮-೯ ॥ ಪರೀಕ್ಷಿತನೇ! ಭಗವಂತನ ಇಂತಹ ತಿರಸ್ಕಾರ ಪೂರ್ಣ ಸಂದೇಶವನ್ನು ಹೊತ್ತುಕೊಂಡು ಪೌಂಡ್ರಕನ ದೂತನು ತನ್ನ ಒಡೆಯನ ಬಳಿಗೆ ಹೋಗಿ ನಿವೇದಿಸಿಕೊಂಡನು. ಇತ್ತ ಭಗವಾನ್ ಶ್ರೀಕೃಷ್ಣನೂ ಕೂಡ ರಥದಲ್ಲಿ ಕುಳಿತು ಕಾಶಿಪಟ್ಟಣಕ್ಕೆ ಪ್ರಯಾಣ ಮಾಡಿದನು. ಏಕೆಂದರೆ, ಆ ಸಮಯದಲ್ಲಿ ಕರೂಷದ ರಾಜನು ತನ್ನ ಮಿತ್ರನಾದ ಕಾಶಿರಾಜನ ಜೊತೆಯಲ್ಲಿದ್ದನು. ॥ ೧೦ ॥

ಮುಖಿಂ ತದಪಿಧಾಯಾಜ್ಞ ಕಂಕಗೃಧ್ರವಟೈರ್ವೃತಃ ।
ಶಯಿಷ್ಯಸೇ ಹತಸ್ತತ್ರ ಭವಿತಾ ಶರಣಂ ಶುನಾಮ್
॥ ೯ ॥

ಇತಿ ದೂತಸ್ತದಾಕ್ಷೇಪಂ ಸ್ವಾಮಿನೇ ಸರ್ವಮಾಹರತ್ ।
ಕೃಷ್ಣೋಽಪಿ ರಥಮಾಸ್ಥಾಯ ಕಾಶೀಮುಪಜಗಾಮ ಹ
॥ ೧೦ ॥

ಪೌಂಡ್ರಕೋಽಪಿ ತದುದ್ಯೋಗಮುಪಲಭ್ಯ ಮಹಾರಥಃ ।
ಅಕ್ಷೌಹಿಣೀಭ್ಯಾಂ ಸಂಯುಕ್ತೋ ನಿಶ್ಚಕ್ರಾಮ ಪುರಾದ್ದ್ರುತಮ್
॥ ೧೧ ॥

ಭಗವಾನ್ ಶ್ರೀಕೃಷ್ಣನ ಆಕ್ರಮಣದ ಸಮಾಚಾರ ತಿಳಿದ ಮಹಾ ರಥಿ ಪೌಂಡ್ರಕನೂ ಕೂಡ ಎರಡು ಅಕ್ಷೌಹಿಣಿ ಸೈನ್ಯದೊಂದಿಗೆ ಶೀಘ್ರವಾಗಿ ನಗರದಿಂದ ಹೊರಬಿದ್ದನು. ॥ ೧೧ ॥ ಕಾಶಿರಾಜನು ಪೌಂಡ್ರಕನನ್ನು ಮಿತ್ರನಾಗಿದ್ದನು. ಆದ್ದರಿಂದ ಅವನೂ ಕೂಡ ಮಿತ್ರನಿಗೆ ಸಹಾಯಮಾಡಲು ಮೂರು ಅಕ್ಷೌಹಿಣಿ ಸೇನೆಯೊಡನೆ ಪೌಂಡ್ರಕನನ್ನ ಹಿಂಬಾಲಿಸುತ್ತಾ ಬಂದನು. ಪರೀಕ್ಷಿತನೇ! ಆಗ ಶ್ರೀಕೃಷ್ಣನು ಪೌಂಡ್ರಕನನ್ನು ನೋಡಿದನು. ॥ ೧೨ ॥ ಪೌಂಡ್ರಕನೂ ಶಂಖ, ಚಕ್ರ, ಖಡ್ಗ ಗದೆ, ಶಾರ್ಙ್ಗಧನುಸ್ಸನ್ನು, ಶ್ರೀವತ್ಸ ಚಿಹ್ನೆ ಮೊದಲಾದುವನ್ನು ಧರಿಸಿದ್ದನು. ಅವನು ವಕ್ಷಸ್ಥಳದಲ್ಲಿ ಕೃತ್ರಿಮ ವಾದ ಕೌಸ್ತುಭ ಮಣಿಯಿಂದಲೂ ವನಮಾಲೆಯಿಂದಲೂ ವಿಭೂ ಷಿತನಾಗಿದ್ದನು. ॥ ೧೩. ॥ ಅವನು ಪೀತಾಂಬರವನ್ನು ಉಟ್ಟಿದ್ದನು. ರಥದ ಧ್ವಜದಲ್ಲಿಯೂ ಗರುಡನ ಚಿಹ್ನೆಯೇ ಇತ್ತು. ಅವನ ತಲೆಯ ಮೇಲೆ ಬಹುಮೂಲ್ಯ ಕಿರೀಟವೂ, ಕಿವಿಗಳಲ್ಲಿ ಮಕರಾ ಕೃತಿಯ ಕುಂಡಲಗಳೂ ಹೊಳೆಯುತ್ತಿತ್ತು. ॥ ೧೪ ॥

ತಸ್ಯ ಕಾಶಿಪತಿರ್ಮಿತ್ರಂ ಪಾರ್ಷ್ಣಿಗ್ರಾಹೋಽನ್ವಯಾನ್ನೃಪ ।
ಅಕ್ಷೌಹಿಣೀಭಿಸ್ತಿಸೃಭಿರಪಶ್ಯತ್ ಪೌಂಡ್ರಕಂ ಹರಿಃ
॥ ೧೨ ॥

ಶಂಖಾರ್ಯಸಿಗದಾಶಾರ್ಙ್ಗಶ್ರೀವತ್ಸಾದ್ಯುಪಲಕ್ಷಿತಮ್ ।
ಬಿಭ್ರಾಣಂ ಕೌಸ್ತುಭಮಣಿಂ ವನಮಾಲಾವಿಭೂಷಿತಮ್
॥ ೧೩. ॥

ಕೌಶೇಯವಾಸಸೀ ಪೀತೇ ವಸಾನಂ ಗರುಡಧ್ವಜಮ್ ।
ಅಮೂಲ್ಯಮೌಲ್ಯಾಭರಣಂ ಸ್ಫುರನ್ಮಕರಕುಂಡಲಮ್
॥ ೧೪ ॥

ದೃಷ್ಟ್ವಾ ತಮಾತ್ಮನಸ್ತುಲ್ಯವೇಷಂ ಕೃತ್ರಿಮಮಾಸ್ಥಿತಮ್ ।
ಯಥಾ ನಟಂ ರಂಗಗತಂ ವಿಜಹಾಸ ಭೃಶಂ ಹರಿಃ
॥ ೧೫ ॥

ಶೂಲೈರ್ಗದಾಭಿಃ ಪರಿಘೈಃ ಶಕ್ತ್ಯೃಷ್ಟಿಪ್ರಾಸತೋಮರೈಃ ।
ಅಸಿಭಿಃ ಪಟ್ಟಿಶೈರ್ಬಾಣೈಃ ಪ್ರಾಹರನ್ನರಯೋ ಹರಿಮ್
॥ ೧೬ ॥

ಕೃಷ್ಣಸ್ತು ತತ್ಪೌಂಡ್ರಕಕಾಶಿರಾಜಯೋ-
ರ್ಬಲಂ ಗಜಸ್ಯಂದನವಾಜಿಪತ್ತಿಮತ್ ।
ಗದಾಸಿಚಕ್ರೇಷುಭಿರಾರ್ದಯದ್ ಭೃಶಂ
ಯಥಾ ಯುಗಾಂತೇ ಹುತಭುಕ್ ಪೃಥಕ್ ಪ್ರಜಾಃ ॥ ೧೭ ॥

ಆಯೋಧನಂ ತದ್ರಥವಾಜಿಕುಂಜರ-
ದ್ವಿಪತ್ಪರೋಷ್ಟ್ರೈರರಿಣಾವಖಿಂಡಿತೈಃ ।
ಬಭೌ ಚಿತಂ ಮೋದವಹಂ ಮನಸ್ವಿನಾ-
ಮಾಕ್ರೀಡನಂ ಭೂತಪತೇರಿವೋಲ್ಬಣಮ್ ॥ ೧೮ ॥

ಅಥಾಹ ಪೌಂಡ್ರಕಮ್ ಶೌರಿರ್ಭೋ ಭೋಃ ಪೌಂಡ್ರಕ ಯದ್ಬಲಾನ್ ।
ದೂತವಾಕ್ಯೇನ ಮಾಮಾಹ ತಾನ್ಯಸ್ತ್ರಾಣ್ಯುತ್ಸೃಜಾಮಿ ತೇ
॥ ೧೯ ॥

ತ್ಯಾಜಯಿಷ್ಯೇಽಭಿಧಾನಂ ಮೇ ಯತ್ತ್ವಯಾಜ್ಞ್ಞಮೃಷಾ ಧೃತಮ್ ।
ವ್ರಜಾಮಿ ಶರಣಂ ತೇಽದ್ಯ ಯದಿ ನೇಚ್ಛಾಮಿ ಸಂಯುಗಮ್
॥ ೨೦ ॥

ಇತಿ ಕ್ಷಿಪ್ತ್ವಾ ಶಿತೈರ್ಬಾಣೈರ್ವಿರಥೀಕೃತ್ಯ ಪೌಂಡ್ರಕಮ್ ।
ಶಿರೋಽವೃಶ್ಚದ್ರಥಾಂಗೇನ ವಜ್ರೇಣೇಂದ್ರೋ ಯಥಾ ಗಿರೇಃ
॥ ೨೧ ॥

ತಥಾ ಕಾಶಿಪತೇಃ ಕಾಯಾಚ್ಛಿರ ಉತ್ಕೃತ್ಯ ಪತ್ರಿಭಿಃ ।
ನ್ಯಪಾತಯತ್ ಕಾಶಿಪುರ್ಯಾಂ ಪದ್ಮಕೋಶಮಿವಾನಿಲಃ
॥ ೨೨ ॥

ಏವಂ ಮತ್ಸರಿಣಂ ಹತ್ವಾ ಪೌಂಡ್ರಕಂ ಸಸಖಿಂ ಹರಿಃ ।
ದ್ವಾರಕಾಮಾವಿಶತ್ ಸಿದ್ಧೈರ್ಗೀಯಮಾನಕಥಾಮೃತಃ
॥ ೨೩ ॥

ಸ ನಿತ್ಯಂ ಭಗವದ್ಧ್ಯಾನಪ್ರಧ್ವಸ್ತಾಖಿಲಬಂಧನಃ ।
ಬಿಭ್ರಾಣಶ್ಚ ಹರೇ ರಾಜನ್ ಸ್ವರೂಪಂ ತನ್ಮಯೋಽಭವತ್
॥ ೨೪ ॥

ಅವನ ಇದೆಲ್ಲ ವೇಷವೂ ಕೃತ್ರಿಮವಾದುದೇ ಆಗಿತ್ತು. ಯಾರೋ ನಟನು ರಂಗಸ್ಥಳದಲ್ಲಿ ಅಭಿನಯಿಸಲು ಸಿಂಗರಿಸಿ ಕೊಂಡು ಬಂದಂತಿತ್ತು. ಅವನ ವೇಷ-ಭೂಷಣಗಳನ್ನು ನೋಡಿ ಶ್ರೀಕೃಷ್ಣನು ಗಹ-ಗಹಿಸಿ ನಗತೊಡಗಿದನು. ॥ ೧೫ ॥ ಆಗ ಶತ್ರು ಗಳು ಭಗವಾನ್ ಶ್ರೀಕೃಷ್ಣನ ಮೇಲೆ ತ್ರಿಶೂಲ, ಗದೆ, ಮುದ್ಗರ, ಶಕ್ತಿ, ಋಷ್ಟಿ, ಪ್ರಾಸ, ತೋಮರ, ಖಡ್ಗ, ಪಟ್ಟಿಶ, ಬಾಣ ಮುಂತಾದ ಅಸ್ತ್ರ-ಶಸ್ತ್ರಗಳಿಂದ ಪ್ರಹಾರಮಾಡಿದರು. ॥ ೧೬ ॥ ಪ್ರಳಯಕಾಲ ದಲ್ಲಿ ಅಗ್ನಿಯು ಎಲ್ಲ ರೀತಿಯ ಪ್ರಾಣಿಗಳನ್ನು ಸುಟ್ಟು ಹಾಕು ವಂತೆಯೇ ಭಗವಾನ್ ಶ್ರೀಕೃಷ್ಣನೂ ಕೂಡ ಗದೆ, ಖಡ್ಗ, ಚಕ್ರ ಮತ್ತು ಬಾಣಗಳೇ ಮೊದಲಾದ ಶಸ್ತಾಸ್ತ್ರಗಳಿಂದ ಪೌಂಡ್ರಕ ಹಾಗೂ ಕಾಶೀರಾಜನ ಆನೆ, ಕುದುರೆ, ರಥ, ಪದಾತಿಗಳಿಂದ ಕೂಡಿದ ಚತು-ರಂಗ ಸೈನ್ಯವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿ ಬಿಟ್ಟನು. ॥ ೧೭ ॥ ಭಗವಂತನ ಚಕ್ರದಿಂದ ತುಂಡು-ತುಂಡಾದ ರಥ, ಆನೆ, ಕುದುರೆ, ಮನುಷ್ಯರು, ಕತ್ತೆ, ಒಂಟೆ ಮುಂತಾದವುಗಳಿಂದ ರಣರಂಗವು ತುಂಬಿಹೋಯಿತು. ಅದು ಭೂತನಾಥನಾದ ಶಿವನ ಭಯಂಕರ ವಾದ ಆಡುಂಬೊಲದಂತೆ ಕಂಡುಬರುತ್ತಿತ್ತು. ಅದನ್ನು ನೋಡಿದ ಶೂರರ ಉತ್ಸಾಹವು ಇನ್ನೂ ಹೆಚ್ಚುಟ್ಟಿತ್ತು. ॥ ೧೮ ॥

ಬಳಿಕ ಭಗವಾನ್ ಶ್ರೀಕೃಷ್ಣನು ಪೌಂಡ್ರಕನಲ್ಲಿ ಹೇಳಿದನು ಎಲವೋ ಪೌಂಡ್ರಕನೇ! ನನ್ನ ಅಸ್ತ್ರ-ಶಸ್ತಾದಿಗಳನ್ನು ಬಿಟ್ಟುಬಿಡಲು ನೀನು ದೂತನ ಮೂಲಕ ಹೇಳಿಕಳಿಸಿದ್ದೆ. ಸರಿ ಈಗ ನಾನು ಅವನ್ನು ನಿನ್ನ ಮೇಲೆ ಬಿಡುತ್ತಿದ್ದೇನೆ. ॥ ೧೯ ॥ ನೀನು ಸುಳ್ಳು-ಸುಳ್ಳೆ ನನ್ನ ಹೆಸರನ್ನು ಇಟ್ಟುಕೊಂಡಿರುವೆ. ಆದ್ದರಿಂದ ಮೂರ್ಖನೇ! ಈಗ ನಾನು ನಿನ್ನಿಂದ ಆ ಹೆಸರುಗಳನ್ನು ಬಿಡಿಸಿಬಿಡುತ್ತೇನೆ. ಇನ್ನು ಉಳಿದಿರುವುದು ಶರಣಾಗುವ ಮಾತು - ನಾನು ನಿನ್ನೊಡನೆ ಯುದ್ಧಮಾಡಲಾಗದಿದ್ದಾಗ ನಿನಗೆ ಶರಣು ಬರುವೆನು. ॥ ೨೦ ॥ ಶ್ರೀಕೃಷ್ಣನು ಹೀಗೆ ಪೌಂಡ್ರಕನನ್ನು ತಿರಸ್ಕರಿಸುತ್ತಾ ತನ್ನ ತೀಕ್ಷ್ಣವಾದ ಬಾಣಗಳಿಂದ ಅವನ ರಥವನ್ನು ಮುರಿದು ಹಾಕಿ, ಇಂದ್ರನು ವಜ್ರಾಯುಧದಿಂದ ಪರ್ವತಗಳನ್ನು ಕತ್ತರಿಸಿ ಹಾಕುವಂತೆ ಸುದರ್ಶನ ಚಕ್ರದಿಂದ ಅವನ ತಲೆಯನ್ನು ಹಾರಿಸಿಬಿಟ್ಟನು. ॥ ೨೧ ॥ ಹಾಗೆಯೇ ಭಗವಂತನು ತನ್ನ ಬಾಣಗಳಿಂದ ಕಾಶೀನರೇಶನ ತಲೆ ಯನ್ನು ಹಾರಿಸಿ ಗಾಳಿಯು ಕಮಲದ ಹೂವನ್ನು ಹಾರಿಸಿಕೊಂಡು ಹೋಗುವಂತೆ ಕಾಶೀನಗರದಲ್ಲಿ ಬೀಳಿಸಿದನು. ॥ ೨೨ ॥ ಈ ಪ್ರಕಾರ ವಾಗಿ ತನ್ನೊಡನೆ ದ್ವೇಷವನ್ನು ಸಾಧಿಸುತ್ತಿದ್ದ ಪೌಂಡ್ರಕನನ್ನು ಮತ್ತು ಅವನ ಸ್ನೇಹಿತನಾದ ಕಾಶೀರಾಜನನ್ನು ಸಂಹರಿಸಿದ ಭಗವಾನ್ ಶ್ರೀಕೃಷ್ಣನು ತನ್ನ ರಾಜಧಾನಿಯಾದ ದ್ವಾರಕೆಗೆ ಹಿಂದಿರುಗಿದನು. ಆ ಸಮಯದಲ್ಲಿ ಸಿದ್ಧರು ಭಗವಂತನ ಕಥಾಮೃತವನ್ನು ಹಾಡುತ್ತಿ ದ್ದರು. ॥ ೨೩ ॥ ಪರೀಕ್ಷಿತನೇ! ಪೌಂಡ್ರಕನು ಭಗವಂತನ ರೂಪ ವನ್ನು ಯಾವುದೇ ಭಾವದಿಂದಲೂ ಸದಾಕಾಲ ಚಿಂತಿಸುತ್ತಲೇ ಇದ್ದನು. ಇದರಿಂದ ಅವನ ಎಲ್ಲ ಬಂಧನಗಳು ಹರಿದುಹೋಯಿತು. ಅವನು ಭಗವಂತನಂತೆಯೇ ವೇಷವನ್ನು ಧರಿಸುತ್ತಿದ್ದನು. ಇದ ರಿಂದ ಪದೇ-ಪದೇ ಅವನ ಸ್ಮರಣೆಯಾಗುವುದರಿಂದ ಅವನು ಭಗವಂತನ ಸಾರೂಪ್ಯಮುಕ್ತಿಯನ್ನು ಹೊಂದಿದನು. ॥ ೨೪ ॥

ಶಿರಃ ಪತಿತಮಾಲೋಕ್ಯ ರಾಜದ್ವಾರೇ ಸಕುಂಡಲಮ್ ।
ಕಿಮಿದಂ ಕಸ್ಯ ವಾ ವಕ್ತ್ರಮಿತಿ ಸಂಶಿಶ್ಯಿರೇ ಜನಾಃ
॥ ೨೫ ॥

ರಾಜ್ಞಃ ಕಾಶಿಪತೇರ್ಜ್ಞಾತ್ವಾ ಮಹಿಷ್ಯಃ ಪುತ್ರಬಾಂಧವಾಃ ।
ಪೌರಾಶ್ಚ ಹಾ ಹತಾ ರಾಜನ್ ನಾಥ ನಾಥೇತಿ ಪ್ರಾರುದನ್
॥ ೨೬ ॥

ಸುದಕ್ಷಿಣಸ್ತಸ್ಯ ಸುತಃ ಕೃತ್ವಾ ಸಂಸ್ಥಾವಿಧಿಂ ಪಿತುಃ ।
ನಿಹತ್ಯ ಪಿತೃಹಂತಾರಂ ಯಾಸ್ಯಾಮ್ಯಪಚಿತಿಂ ಪಿತುಃ
॥ ೨೭ ॥

ಇತ್ಯಾತ್ಮನಾಭಿಸಂಧಾಯ ಸೋಪಾಧ್ಯಾಯೋ ಮಹೇಶ್ವರಮ್ ।
ಸುದಕ್ಷಿಣೋಽರ್ಚಯಾಮಾಸ ಪರಮೇಣ ಸಮಾಧಿನಾ
॥ ೨೮ ॥

ಪ್ರೀತೋಽವಿಮುಕ್ತೇ ಭಗವಾಂಸ್ತಸ್ಮೈ ವರಮದಾದ್ಭವಃ ।
ಪಿತೃಹಂತೃವಧೋಪಾಯಂ ಸ ವವ್ರೇ ವರಮೀಪ್ಸಿತಮ್
॥ ೨೯ ॥

ದಕ್ಷಿಣಾಗ್ನಿಂ ಪರಿಚರ ಬ್ರಾಹ್ಮಣೈಃ ಸಮಮೃತ್ವಿಜಮ್ ।
ಅಭಿಚಾರವಿಧಾನೇನ ಸ ಚಾಗ್ನಿಃ ಪ್ರಮಥೈರ್ವೃತಃ
॥ ೩೦ ॥

ಸಾಧಯಿಷ್ಯತಿ ಸಂಕಲ್ಪಮಬ್ರಹ್ಮಣ್ಯೇ ಪ್ರಯೋಜಿತಃ ।
ಇತ್ಯಾದಿಷ್ಟಸ್ತಥಾ ಚಕ್ರೇ ಕೃಷ್ಣಾಯಾಭಿಚರನ್ ವ್ರತೀ
॥ ೩೧ ॥

ತತೋಽಗ್ನಿರುತ್ಥಿತಃ ಕುಂಡಾನ್ಮೂರ್ತಿಮಾನತಿಭೀಷಣಃ ।
ತಪ್ತತಾಮ್ರಶಿಖಾಶ್ಮಶ್ರುರಂಗಾರೋದ್ಗಾರಿಲೋಚನಃ
॥ ೩೨ ॥

ದಂಷ್ಟ್ರೋಗ್ರಭ್ರುಕುಟೀದಂಡಕಠೋರಾಸ್ಯಃ ಸ್ವಜಿಹ್ವಯಾ ।
ಆಲಿಹನ್ಸ್ವಕ್ಕಿಣೀ ನಗ್ನೋ ವಿಧುನ್ವಂಸ್ತ್ರಿಶಿಖಂ ಜ್ವಲನ್
॥ ೩೩ ॥

ಪದ್ಭ್ಯಾಂ ತಾಲಪ್ರಮಾಣಾಭ್ಯಾಂ ಕಂಪಯನ್ನಘನೀತಲಮ್ ।
ಸೋಽಭ್ಯಧಾವದ್ವೃತೋ ಭೂತೈರ್ದ್ವಾರಕಾಂ ಪ್ರದಹಂದಿಶಃ
॥ ೩೪ ॥

ತಮಾಭಿಚಾರದಹನಮಾಯಾಂತಂ ದ್ವಾರಕೌಕಸಃ ।
ವಿಲೋಕ್ಯ ತತ್ರಸುಃ ಸರ್ವೇ ವನದಾಹೇ ಮೃಗಾ ಯಥಾ
॥ ೩೫ ॥

ಇತ್ತ ಕಾಶಿಯ ಅರಮನೆಯ ಮಹಾದ್ವಾರದಲ್ಲಿ ಬಿದ್ದಿದ್ದ ಕುಂಡಲ ಮಂಡಿತವಾದ ಒಂದು ಮುಂಡವನ್ನು ನೋಡಿ ಜನರು 'ಇದು ಯಾರ ತಲೆಯಾಗಿರಬಹುದು? ಎಂದು ನಾನಾ ರೀತಿಯಿಂದ ತರ್ಕಿಸತೊಡಗಿದರು. ॥ ೨೫ ॥ ಇದಾದರೋ ಕಾಶಿರಾಜನ ತಲೆ ಎಂದು ತಿಳಿದಾಗ ರಾಣಿಯರು, ರಾಜಕುಮಾರರು, ರಾಜಪರಿವಾರದ ಜನರು ಹಾಗೂ ನಾಗರಿಕರು ಅಳುತ್ತಾ ಅಯ್ಯೋ! ಸ್ವಾಮಿ! ನಮ್ಮ ಸರ್ವನಾಶವಾಯಿತೆಂದು ಗೋಳಾಡಿದರು. ॥ ೨೬ ॥ ಕಾಶಿರಾಜನ ಮಗನಾದ ಸುದಕ್ಷಿಣನು ತನ್ನ ತಂದೆಯ ಅಂತ್ಯೇಷ್ಟಿಯನ್ನು ನೆರವೇರಿಸಿ, ನನ್ನ ತಂದೆಯನ್ನು ಕೊಂದಿರುವವನನ್ನು ಕೊಂದೇ ತಂದೆಯ ಋಣದಿಂದ ಮುಕ್ತನಾಗುವೆನು ಎಂದು ಮನಸ್ಸಿನಲ್ಲೇ ನಿಶ್ಚಯಿಸಿಕೊಂಡನು. ಆದರಂತೆ ಅವನು ತನ್ನ ಕುಲ-ಪುರೋಹಿತ ಮತ್ತು ಆಚಾರ್ಯರೊಡನೆ ಅತ್ಯಂತ ಏಕಾಗ್ರತೆಯಿಂದ ಭಗವಂತನಾದ ಶಂಕರನನ್ನು ಆರಾಧಿಸತೊಡಗಿದನು. ॥ ೨೭-೨೮ ॥ ಕಾಶೀ ನಗರದಲ್ಲಿ ಅವನ ಆರಾಧನೆಯಿಂದ ಪ್ರಸನ್ನನಾದ ಭಗವಾನ್ ಶಂಕರನು ಅವನಲ್ಲಿ ವರವನ್ನು ಬೇಡಲು ಹೇಳಿದನು. ಸುದಕ್ಷಿಣನು - 'ನನಗೆ ನನ್ನ ಪಿತೃಘಾತಿಯ ವಧೆಯ ಉಪಾಯವನ್ನು ತಿಳಿಸಬೇಕೆಂಬ ವರವನ್ನು ಬೇಡಿದನು. ॥ ೨೯॥ ಪರಶಿವನು ಹೇಳಿದನು - 'ನೀನು ಬ್ರಾಹ್ಮಣರೊಂದಿಗೆ ಸೇರಿ ಯಜ್ಞದ ದೇವತೆಯಾದ ಋತ್ವಿಗ್ಭೂತವಾದ ದಕ್ಷಿಣಾಗ್ನಿಯನ್ನು ಅಭಿಚಾರವಿಧಿಯಿಂದ ಆರಾಧಿಸು. ಇದರಿಂದ ಆ ಅಗ್ನಿಯು ಪ್ರಮಥಗಣಗಳೊಂದಿಗೆ ಪ್ರಕಟವಾಗುತ್ತದೆ. ಬ್ರಾಹ್ಮಣ ಭಕ್ತರಲ್ಲದವರ ಮೇಲೆ ಅದನ್ನು ಪ್ರಯೋಗಿಸಿದರೆ ಅದು ನಿನ್ನ ಸಂಕಲ್ಪವನ್ನು ಸಿದ್ಧಿಸಿಕೊಡುವುದು. ಭಗವಾನ್ ಶಂಕರನ ಇಂತಹ ಆಜ್ಞೆಯನ್ನು ಪಡೆದುಕೊಂಡು ಸುದಕ್ಷಿಣನು ಅನುಷ್ಠಾನಕ್ಕೆ ಬೇಕಾದ ನಿಯಮಗಳನ್ನು ಸ್ವೀಕರಿಸಿ, ಭಗವಾನ್ ಶ್ರೀಕೃಷ್ಣನಿಗಾಗಿ ಅಭಿಚಾರ (ಮಾರಣದ ಪುರಶ್ಚರಣ)ವನ್ನು ಮಾಡತೊಡಗಿದನು.॥೩೦-೩೧॥ ಅಭಿಚಾರ ಹೋಮವು ಪೂರ್ಣವಾಗುತ್ತಿದ್ದಂತೆ ಯಜ್ಞಕುಂಡದಿಂದ ಅತಿ ಭೀಷಣವಾದ ಅಗ್ನಿಯು ಮೂರ್ತಿಮತ್ತಾಗಿ ಪ್ರಕಟನಾದನು. ಆವನ ಕೂದಲು, ಗಡ್ಡ-ಮೀಸೆಗಳು ಕಾಯಿಸಿದ ತಾಮ್ರದಂತೆ ಕೆಂಪಾಗಿದ್ದವು. ಕಣ್ಣುಗಳು ಕೆಂಡವನ್ನು ಉಗುಳುತ್ತಿವೆಯೋ ಎಂಬಂತೆ ಇತ್ತು. ॥ ೩೨ ॥ ಕೋರೆದಾಡೆಗಳಿದ್ದು ವಕ್ರವಾದ ಹುಬ್ಬುಗಳಿಂದಾಗಿ ಮುಖವು ಅತ್ಯುಗ್ರವಾಗಿತ್ತು. ಅವನು ತನ್ನ ಕೆನ್ನಾಲಿಗೆಯಿಂದ ಕಟವಾಯಿಗಳನ್ನು ನೆಕ್ಕಿಕೊಳ್ಳುತ್ತಿದ್ದನು. ಬೆತ್ತಲಾಗಿದ್ದನು. ಕೈಯಲ್ಲಿ ಬೆಂಕಿಯ ಜ್ವಾಲೆಗಳು ಹೊರಹೊಮ್ಮುತ್ತಿದ್ದ ತ್ರಿಶೂಲವೊಂದನ್ನು ಹಿಡಿದುಕೊಂಡು ತಿರುಗಿಸುತ್ತಾ ಇದ್ದನು. ॥ ೩೩ ॥ ತಾಳೆಮರದಂತೆ ದೊಡ್ಡ-ದೊಡ್ಡ ಕಾಲುಗಳಿದ್ದವು. ಅವನು ನಡೆಯುವಾಗ ಭೂಮಿಯನ್ನು ನಡುಗಿಸುತ್ತಾ, ತನ್ನ ಜ್ವಾಲೆಗಳಿಂದ ಹತ್ತು ದಿಕ್ಕುಗಳನ್ನು ಸುಡುತ್ತಾ ದ್ವಾರಕೆಯ ಕಡೆಗೆ ಧಾವಿಸಿದನು. ಅವನೊಡನೆ ಅನೇಕ ಭೂತಗಳೂ ಇದ್ದವು. ॥ ೩೪ ॥ ಆ ಅಭಿಚಾರಿಕವಾದ ಅಗ್ನಿಯು ಬರುತ್ತಿರುವುದನ್ನು ನೋಡಿ ದ್ವಾರಕಾ ನಿವಾಸಿಗಳು ಕಾಡಿನಲ್ಲಿ ಬೆಂಕಿಯು ಹೊತ್ತಿಕೊಂಡಾಗ ಜಿಂಕೆಗಳು ಹೆದರುವಂತೆ ಹೆದರಿಹೋದರು. ॥ ೩೫ ॥

ಅಕ್ಷೈಃ ಸಭಾಯಾಂ ಕ್ರೀಡಂತಂ ಭಗವಂತಂ ಭಯಾತುರಾಃ ।
ತ್ರಾಹಿ ತ್ರಾಹಿ ತ್ರಿಲೋಕೇಶ ವಹ್ನೇಃ ಪ್ರದಹತಃ ಪುರಮ್
॥ ೩೬ ॥

ಶ್ರುತ್ವಾ ತಜ್ಜನವೈಕ್ಲವ್ಯಂ ದೃಷ್ಟ್ವಾ ಸ್ವಾನಾಂ ಚ ಸಾಧ್ವಸಮ್ ।
ಶರಣ್ಯಃ ಸಂಪ್ರಹಸ್ಯಾಹ ಮಾ ಭೈಷ್ಟೇತ್ಯವಿತಾಸ್ಮ್ಯಹಮ್
॥ ೩೭ ॥

ಸರ್ವಸ್ಯಾಂತರ್ಬಹಿಃಸಾಕ್ಷೀ ಕೃತ್ಯಾಂ ಮಾಹೇಶ್ವರೀಂ ವಿಭುಃ ।
ವಿಜ್ಞಾಯ ತದ್ವಿಘಾತಾರ್ಥಂ ಪಾರ್ಶ್ವಸ್ಥಂ ಚಕ್ರಮಾದಿಶತ್
॥ ೩೮ ॥

ತತ್ಸೂರ್ಯಕೋಟಿಪ್ರತಿಮಂ ಸುದರ್ಶನಂ
ಜಾಜ್ವಲ್ಯಮಾನಂ ಪ್ರಲಯಾನಲಪ್ರಭಮ್ ।
ಸ್ವತೇಜಸಾ ಖಂ ಕಕುಭೋಽಥ ರೋದಸೀ
ಚಕ್ರಂ ಮುಕುಂದಾಸ್ತ್ರಮಥಾಗ್ನಿಮಾರ್ದಯತ್ ॥ ೩೯ ॥

ಕೃತ್ಯಾನಲಃ ಪ್ರತಿಹತಃ ಸ ರಥಾಂಗಪಾಣೇ-
ರಸ್ತ್ರೌಜಸಾ ಸ ನೃಪ ಭಗ್ನಮುಖೋ ನಿವೃತ್ತಃ ।
ವಾರಾಣಸೀಂ ಪರಿಸಮೇತ್ಯ ಸುದಕ್ಷಿಣಂ ತಂ
ಸರ್ತ್ವಿಗ್ಜನಂ ಸಮದಹತ್ಸ್ವಕೃತೋಽಭಿಚಾರಃ ॥ ೪೦ ॥

ಚಕ್ರಂ ಚ ವಿಷ್ಣೋಸ್ತದನುಪ್ರವಿಷ್ಟಂ
ವಾರಾಣಸೀಂ ಸಾಟ್ಟಸಭಾಲಯಾಪಣಾಮ್ ।
ಸಗೋಪುರಾಟ್ಟಾಲಕಕೋಷ್ಠಸಂಕುಲಾಂ
ಸಕೋಶಹಸ್ತ್ಯಶ್ವರಥಾನ್ನಶಾಲಾಮ್ ॥ ೪೧ ॥

ದಗ್ಧ್ವಾ ವಾರಾಣಸೀಂ ಸರ್ವಾಂ ವಿಷ್ಣೋಶ್ಚಕ್ರಂ ಸುದರ್ಶನಮ್ ।
ಭೂಯಃ ಪಾರ್ಶ್ವಮುಪಾತಿಷ್ಠತ್ ಕೃಷ್ಣಸ್ಯಾಕ್ಲಿಷ್ಟಕರ್ಮಣಃ
॥ ೪೨ ॥

ಯ ಏತಚ್ಚಾವಯೇನ್ಮರ್ತ್ಯ ಉತ್ತಮಶ್ಲೋಕವಿಕ್ರಮಮ್ ।
ಸಮಾಹಿತೋ ವಾ ಶೃಣುಯಾತ್ ಸರ್ವಪಾಪೈಃ ಪ್ರಮುಚ್ಯತೇ
॥ ೪೩ ॥

ಅವರೆಲ್ಲರೂ ಭಯಗೊಂಡು ಭಗವಂತನ ಬಳಿಗೆ ಓಡಿ ಬಂದರು. ಶ್ರೀಕೃಷ್ಣನು ಆಗ ಸಭೆಯಲ್ಲಿ ಕುಳಿತು ಪಗಡೆಯಾಡುತ್ತಿದ್ದನು. ಅವರೆಲ್ಲರೂ ಪ್ರಾರ್ಥಿಸಿದರು –ತ್ರಿಲೋಕೇಶನೇ ! ಭಯಂಕರವಾದ ಅಗ್ನಿಯಿಂದ ದ್ವಾರಕಾಪಟ್ಟಣವು ಸುಡುತ್ತಿದೆ. ಕಾಪಾಡು ! ಕಾಪಾಡು ! ॥ ೩೬ ॥ ದ್ವಾರಕಾವಾಸಿಗಳೂ ಸ್ವಜನರೂ ದುಃಖಿಪಡುತ್ತಿರುವುದನ್ನು ಭಯದಿಂದ ನಡುಗುತ್ತಾ ಕೂಗಿಕೊಳ್ಳುವುದನ್ನು ನೋಡಿದ ಶರಣಾಗತವತ್ಸಲನಾದ ಭಗವಂತನು ನಗುತ್ತಾ ಹೇಳಿದನು – ಹೆದರಬೇಡಿರಿ. ನಾನು ನಿಮ್ಮೆಲ್ಲರನ್ನು ರಕ್ಷಿಸುತ್ತೇನೆ ॥ ೩೭॥

ಪರೀಕ್ಷಿತನೇ ! ಭಗವಂತನು ಸಮಸ್ತರ ಹೊರಗಿನ-ಒಳಗಿನ ವ್ಯಾಪಾರಗಳಿಗೆ ಸಾಕ್ಷಿಯಾಗಿದ್ದಾನೆ. ಇದು ಕಾಶಿಯಿಂದ ಬಂದಿರುವ ಮಾಹೇಶ್ವರೀ ಕೃತ್ಯೆಯಾಗಿದೆ ಎಂದು ತಿಳಿದು ಅವನು ಅದರ ಪ್ರತೀಕಾರಕ್ಕಾಗಿ ಬಳಿಯಲ್ಲೇ ವಿರಾಜಮಾನವಾಗಿದ್ದ ಸುದರ್ಶನ ಚಕ್ರಕ್ಕೆ ಆಜ್ಞಾಪಿಸಿದನು. ॥ ೩೮ ॥ ಭಗವಾನ್ ಮುಕುಂದನ ಪ್ರಿಯವಾದ ಅಸ್ತ್ರ ಸುದರ್ಶನ ಚಕ್ರವು ಕೋಟಿ-ಕೋಟಿ ಸೂರ್ಯನಂತೆ ತೇಜಸ್ಸುಳ್ಳದ್ದು ಪ್ರಳಯಕಾಲದ ಅಗ್ನಿಯಂತೆ ಜಾಜ್ವಲ್ಯಮಾನವಾಗಿತ್ತು. ಅದರ ತೇಜದಿಂದ ಆಕಾಶ, ದಿಕ್ಕುಗಳು ಮತ್ತು ಅಂತರಿಕ್ಷವು ಬೆಳಗುತ್ತಿದ್ದವು. ಶ್ರೀಕೃಷ್ಣನ ಅಪ್ಪಣೆಯಂತೆ ಅದು ಅಭಿಚಾರ ಅಗ್ನಿಯನ್ನು ಕ್ಷಣಮಾತ್ರದಲ್ಲಿ ಹಿಮ್ಮೆಟ್ಟಿಸಿದನು. ॥ ೩೯ ॥ ರಥಾಂಗಪಾಣಿಯಾದ ಶ್ರೀಕೃಷ್ಣನ ಅಸ್ತ್ರವಾದ ಸುದರ್ಶನ ಚಕ್ರದ ಶಕ್ತಿಯಿಂದ ಕೃತ್ಯಾಗ್ನಿಯ ಮುಖಭಂಗವಾಯಿತು. ಅದರ ತೇಜವು ನಷ್ಟವಾಗಿ, ಶಕ್ತಿಯು ಕುಂದಿಹೋಗಿ ಅದು ಅಲ್ಲಿಂದ ಹಿಂದಿರುಗಿ ಕಾಶಿಗೆ ಬಂದು ಋತ್ವಿಜ ಆಚಾರ್ಯರೊಂದಿಗೆ ಸುದಕ್ಷಿಣನನ್ನು ಸುಟ್ಟು ಬೂದಿಮಾಡಿತು. ಹೀಗೆ ಅಭಿಚಾರವು ಅವನಿಗೆ ಮುಳುವಾಯಿತು. ॥ ೪೦॥ ಕೃತ್ಯಾಗ್ನಿಯ ಬೆನ್ನಿಗೇ ಸುದರ್ಶನವು ಕಾಶಿಗೆ ಬಂದು, ವಿಶಾಲವಾದ ಆ ನಗರಿಯ ದೊಡ್ಡ – ದೊಡ್ಡ ಉಪ್ಪರಿಗೆ ಮನೆಗಳನ್ನೂ, ಸಭಾಭವನಗಳನ್ನು, ಆಂಗಡಿಮುಂಗಟ್ಟುಗಳನ್ನು, ನಗರದ್ವಾರಗಳನ್ನೂ, ಗೋಪುರಗಳನ್ನೂ, ಪ್ರಾಕಾರಗಳನ್ನೂ, ಭಂಡಾರಗಳನ್ನೂ, ಆನೆ, ಕುದುರೆ, ರಥಗಳನ್ನು, ಅನ್ನ ಶಾಲೆಗಳನ್ನೂ ಕ್ಷಣಾರ್ಧದಲ್ಲಿ ಬೂದಿಮಾಡಿ, ಮತ್ತೆ ಅದು ಪರಮಾನಂದಮಯವಾದ ಲೀಲೆಗಳನ್ನು ಮಾಡುವಂತಹ ಭಗವಾನ್ ಶ್ರೀಕೃಷ್ಣನ ಬಳಿಗೆ ಬಂದು ಕುಳಿತುಕೊಂಡಿತು. ॥ ೪೧-೪೨ ॥

ಪುಣ್ಯಕೀರ್ತಿಯಾದ ಭಗವಾನ್ ಶ್ರೀಕೃಷ್ಣನ ಈ ಚರಿತ್ರವನ್ನು ಏಕಾಗ್ರತೆಯಿಂದ ಹೇಳುವ, ಕೇಳುವ ಮನುಷ್ಯನು ಎಲ್ಲ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ. ॥ ೪೩ ॥

ಅರವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೬೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪೌಂಡ್ರಕಾದಿವಧೋ ನಾಮ ಷಟ್‌ಷಷ್ಟಿತಮೋಽಧ್ಯಾಯಃ ॥ ೬೬ ॥

ಅರವತ್ತೇಳನೆಯ ಅಧ್ಯಾಯ

ಬಲರಾಮನಿಂದ ದ್ವಿವಿದನ ಸಂಹಾರ

ರಾಜೋವಾಚ

ಭೂಯೋಽಹಂ ಶ್ರೋತುಮಿಚ್ಛಾಮಿ ರಾಮಸ್ಯಾದ್ಭುತಕರ್ಮಣಃ ।
ಅನಂತಸ್ಯಾಪ್ರಮೇಯಸ್ಯ ಯದನ್ಯತ್ಕೃತವಾನ್ ಪ್ರಭುಃ ॥ ೧ ॥

ಪರೀಕ್ಷಿತರಾಜನು ಕೇಳಿದನು – ಪೂಜ್ಯರೇ! ಭಗವಾನ್ ಬಲರಾಮನು ಅದ್ಭುತ ಕಾರ್ಯಗಳನ್ನು ಮಾಡುವವನೂ, ಅನಂತನೂ, ಅಪ್ರಮೇಯನೂ ಆಗಿರುವನು. ಅಂತಹ ಬಲಭದ್ರನು ಮಾಡಿದ ಇತರ ಸಾಹಸ ಕಾರ್ಯಗಳನ್ನು ಕೇಳಲು ಬಯಸುತ್ತೇನೆ. ದಯಮಾಡಿ ಹೇಳಿರಿ. ॥ ೧ ॥

ಶ್ರೀಶುಕ ಉವಾಚ

ನರಕಸ್ಯ ಸಖಾ ಕಶ್ಚಿದ್ದ್ವಿವಿದೋ ನಾಮ ವಾನರಃ ।
ಸುಗ್ರೀವಸಚಿವಃ ಸೋಽಥ ಭ್ರಾತಾ ಮೈಂದಸ್ಯ ವೀರ್ಯವಾನ್ ॥ ೨ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ! ದ್ವಿವಿದನೆಂಬ ಒಬ್ಬ ವಾನರನಿದ್ದನು. ಅವನು ಭೌಮಾಸುರನ ಮಿತ್ರನೂ, ಸುಗ್ರೀವನ ಮಂತ್ರಿಯೂ, ಶಕ್ತಿಶಾಲಿಯೂ, ಮೈಂದನಿಗೆ ಸಹೋದರನೂ ಆಗಿದ್ದನು. ॥ ೨ ॥ ತನ್ನ ಮಿತ್ರನಾದ ಭೌಮಾಸುರನನ್ನು ಶ್ರೀಕೃಷ್ಣನು ಸಂಹರಿಸಿದನೆಂಬ ವಾರ್ತೆಯನ್ನು ಕೇಳುತ್ತಲೇ ದ್ವಿವಿದನು ತನ್ನ ಮಿತ್ರನ ಮಿತ್ರಋಣವನ್ನು ತೀರಿಸಬೇಕೆಂದು ರಾಷ್ಟ್ರದಲ್ಲಿ ವಿಪ್ಲವವನ್ನುಂಟುಮಾಡಲು ತೊಡಗಿದನು. ಆ ವಾನರನು

ಸಖ್ಯುಃ ಸೋಽಪಚಿತಿಂ ಕುರ್ವನ್ವಾನರೋ ರಾಷ್ಟ್ರವಿಪ್ಲವಮ್ ।
ಪುರಗ್ರಾಮಾಕರಾನ್ಘೋಷಾನದಹದ್ವಹ್ನಿಮುತ್ಸೃಜನ್ ॥ ೩ ॥

ನಗರಗಳನ್ನು, ಪಟ್ಟಣಗಳನ್ನೂ, ಹಳ್ಳಿಗಳನ್ನೂ, ಗೋಪಾಲಕರ ಹಟ್ಟಿಗಳನ್ನು ಸುಡಲು ಪ್ರಾರಂಭಿಸಿದನು. ॥ ೩ ॥ ಕೆಲವೊಮ್ಮೆ ಅವನು ದೊಡ್ಡ-ದೊಡ್ಡ ಪರ್ವತಗಳನ್ನು ಕಿತ್ತು ಊರುಗಳ ಮೇಲೆ, ಗ್ರಾಮಗಳ ಮೇಲೆ ಎಸೆದು ಪುಡಿ-ಪುಡಿ ಮಾಡಿಬಿಡುತ್ತಿದ್ದನು. ವಿಶೇಷವಾಗಿ ಅವನು ಆನರ್ತ ದೇಶದಲ್ಲಿಯೇ ಇಂತಹ ಉತ್ಪಾತಗಳನ್ನು ಮಾಡುತ್ತಿದ್ದನು. ಏಕೆಂದರೆ, ತನ್ನ ಮಿತ್ರಹಂತಕನಾದ ಶ್ರೀಕೃಷ್ಣನು ಅಲ್ಲೇ ವಾಸಿಸುತ್ತಿದ್ದನು. ॥ ೪॥ ದ್ವಿವಿದನಲ್ಲಿ ಹತ್ತು ಸಾವಿರ ಆನೆಗಳ ಬಲವಿತ್ತು. ಕೆಲವೊಮ್ಮೆ ಆ ದುಷ್ಟನು ಸಮುದ್ರದಲ್ಲಿ ನಿಂತು ಕೈಗಳಿಂದ ನೀರನ್ನು ಮೊಗೆದು ಸಮುದ್ರತಟದಲ್ಲಿದ್ದ ಊರುಗಳನ್ನೇ ಮುಳುಗಿಸಿ ಬಿಡುತ್ತಿದ್ದನು. ॥ ೫॥ ಆ ದುಷ್ಟನು ದೊಡ್ಡ ದೊಡ್ಡ ಋಷಿಮುನಿಗಳ ಆಶ್ರಮದ ಸುಂದರವಾದ ಲತಾ-ವನಸ್ಪತಿಗಳನ್ನು ಕಿತ್ತು ಹಾಕುತ್ತಿದ್ದನು. ಅವರ ಯಜ್ಞಕುಂಡಗಳಲ್ಲಿ ಮೂತ್ರ ಪುರೀಷಗಳನ್ನು ವಿಸರ್ಜಿಸಿ ಅಗ್ನಿಗಳನ್ನು ಕೆಡಿಸುತ್ತಿದ್ದನು. ॥ ೬ ॥ ಕಣಜದ ಹುಳವು ಬೇರೊಂದು ಕ್ರಿಮಿಯನ್ನು ತಂದು ತನ್ನ ಗೂಡಿನಲ್ಲಿಟ್ಟು ಮುಚ್ಚಿಬಿಡುವಂತೆಯೇ ಆ ಮದೋನ್ಮತ್ತನಾದ ವಾನರನು ಸ್ತ್ರಿಯರನ್ನು, ಪುರುಷರನ್ನು ಎತ್ತಿಕೊಂಡು ಹೋಗಿ ಪರ್ವತಗಳ ಗುಹೆಗಳಲ್ಲಿ ಕೂಡಿಹಾಕಿ ಬಾಗಿಲಿಗೆ ಬಂಡೆಗಳನ್ನು ಮುಚ್ಚಿ ಬಿಡುತ್ತಿದ್ದನು. ॥ ೭ ॥ ಹೀಗೆ ಅವನು ದೇಶವಾಸಿಗಳನ್ನು ತಿರಸ್ಕರಿಸುತ್ತಾ ಕುಲೀನ ಸ್ತ್ರೀಯರನ್ನು ಕೆಡಿಸುತ್ತಿದ್ದನು. ಒಂದು ದಿನ ಆ ದುಷ್ಟನು ಕರ್ಣಾನಂದಕರವಾದ ಸಂಗೀತವನ್ನು ಕೇಳಿ ರೈವತಕ ಪರ್ವತಕ್ಕೆ ಹೋದನು. ॥ ೮ ॥

ಕ್ವಚಿತ್ಸ ಶೈಲಾನುತ್ಪಾಟ್ಯ ತೈರ್ದೇಶಾನ್ಸಮಚೂರ್ಣಯತ್ ।
ಆನರ್ತಾನುತ್ತರಾಮೇವ ಯತ್ರಾಸ್ತೇ ಮಿತ್ರಹಾ ಹರಿಃ ॥ ೪ ॥

ಕ್ವಚಿತ್ಸಮುದ್ರಮಧ್ಯಸ್ಥೋ ದೋರ್ಭ್ಯಾಮುತ್ಕ್ಷಿಪ್ಯ ತಜ್ಜಲಮ್ ।
ದೇಶಾನ್ನಾಗಾಯುತಪ್ರಾಣೋ ವೇಲಾಕೂಲಾನಮಜ್ಜಯತ್ ॥ ೫ ॥

ಆಶ್ರಮಾನೃಷಿಮುಖ್ಯಾನಾಂ ಕೃತ್ವಾ ಭಗ್ನವನಸ್ಪತೀನ್ ।
ಅದೂಷಯಚ್ಛಕೃನ್ಮೂತ್ರೈರಗ್ನೀನ್ವೈತಾನಿಕಾನ್ಖಲಃ ॥ ೬ ॥

ಪುರುಷಾನ್ಯೋಷಿತೋ ದೃಪ್ತಃ ಕ್ಷ್ಮಾಭೃದ್ದ್ರೋಣೀಗುಹಾಸು ಸಃ ।
ನಿಕ್ಷಿಪ್ಯ ಚಾಪ್ಯಧಾಚ್ಛೈಲೈಃ ಪೇಶಸ್ಕಾರೀವ ಕೀಟಕಮ್ ॥ ೭ ॥

ಏವಂ ದೇಶಾನ್ವಿಪ್ರಕುರ್ವನ್ದೂಷಯಂಶ್ಚ ಕುಲಸ್ತ್ರಿಯಃ ।
ಶ್ರುತ್ವಾ ಸುಲಲಿತಂ ಗೀತಂ ಗಿರಿಂ ರೈವತಕಂ ಯಯೌ ॥ ೮ ॥

ತತ್ರಾಪಶ್ಯದ್ಯದುಪತಿಂ ರಾಮಂ ಪುಷ್ಕರಮಾಲಿನಮ್ ।
ಸುದರ್ಶನೀಯಸರ್ವಾಂಗಂ ಲಲನಾಯೂಥಮಧ್ಯಗಮ್ ॥ ೯ ॥

ಅಲ್ಲಿ ಯದುವಂಶ ಶಿರೋಮಣಿ ಬಲರಾಮನು ಸುಂದರವಾದ ಯುವತಿಯರೊಂದಿಗೆ ವಿರಾಜಿಸುತ್ತಿರುವುದನ್ನು ಅವನು ನೋಡಿದನು. ಬಲರಾಮನ ಪ್ರತಿಯೊಂದು ಅಂಗಾಂಗಗಳು ಸುಂದರವೂ, ದರ್ಶನೀಯವೂ ಆಗಿದ್ದು ಕೊರಳಲ್ಲಿ ಕಮಲ ಪುಷ್ಪಗಳ ಮಾಲೆಯು ಶೋಭಿಸುತ್ತಿತ್ತು. ॥ ೯ ॥

ಗಾಯಂತಂ ವಾರುಣೀಂ ಪೀತ್ವಾ ಮದವಿಹ್ವಲಲೋಚನಮ್ ।
ವಿಭ್ರಾಜಮಾನಂ ವಪುಷಾ ಪ್ರಭಿನ್ನಮಿವ ವಾರಣಮ್
॥ ೧೦ ॥

ದುಷ್ಟಃ ಶಾಖಾಮೃಗಃ ಶಾಖಾ ಮಾರೂಢಃ ಕಂಪಯನ್ ದ್ರುಮಾನ್ ।
ಚಕ್ರೀ ಕಿಲಕಿಲಾಶಬ್ದ ಮಾತ್ಮಾನಂ ಸಂಪ್ರದರ್ಶಯನ್
॥ ೧೧ ॥

ತಸ್ಯ ಧಾರ್ಷ್ಟ್ಯಂ ಕಪೇರ್ವೀಕ್ಷ್ಯ ತರುಣ್ಯೋ ಜಾತಿಚಾಪಲಾಃ ।
ಹಾಸ್ಯಪ್ರಿಯಾ ವಿಜಹಸುರ್ಬಲದೇವಪರಿಗ್ರಹಾಃ
॥ ೧೨ ॥

ತಾ ಹೇಲಯಾಮಾಸ ಕಪಿರ್ಭೂಕ್ಷೇಪೈಃ ಸಮ್ಮುಖಾದಿಭಿಃ ।
ದರ್ಶಯನ್ ಸ್ವಗುದಂ ತಾಸಾಂ ರಾಮಸ್ಯ ಚ ನಿರೀಕ್ಷತಃ
॥ ೧೩ ॥

ತಂ ಗ್ರಾವ್ಣಾ ಪ್ರಾಹರತ್ಕ್ರುದ್ಧೋ ಬಲಃ ಪ್ರಹರತಾಂ ವರಃ ।
ಸ ವಂಚಯಿತ್ವಾ ಗ್ರಾವಾಣಂ ಮದಿರಾಕಲಶಂ ಕಪಿಃ
॥ ೧೪ ॥

ಗೃಹೀತ್ವಾ ಹೇಲಯಾಮಾಸ ಧೂರ್ತಸ್ತಂ ಕೋಪಯನ್ಹರಿಮ್ ।
ನಿರ್ಭಿದ್ಯ ಕಲಶಂ ದುಷ್ಟೋ ವಾಸಾಂಸ್ಯಾಸ್ಫಾಲಯದ್ಬಲಮ್
॥ ೧೫ ॥

ಕದರ್ಥೀಕೃತ್ಯ ಬಲವಾನ್ವಿಪ್ರಚಕ್ರೇ ಮದೋದ್ಧತಃ ।
ತಂ ತಸ್ಯಾವಿನಯಂ ದೃಷ್ಟ್ವಾ ದೇಶಾಂಶ್ಚ ತದುಪದ್ರುತಾನ್
॥ ೧೬ ॥

ಕ್ರುದ್ಧೋ ಮುಸಲಮಾದತ್ತ ಹಲಂ ಚಾರಿಜಿಘಾಂಸಯಾ ।
ದ್ವಿವಿದೋಽಪಿ ಮಹಾವೀರ್ಯಃ ಶಾಲಮುದ್ಯಮ್ಯ ಪಾಣಿನಾ
॥ ೧೭ ॥

ಅಭ್ಯೇತ್ಯ ತರಸಾ ತೇನ ಬಲಂ ಮೂರ್ಧ್ನ್ಯತಾಡಯತ್ ।
ತಂ ತು ಸಂಕರ್ಷಣೋ ಮೂರ್ಧ್ನಿ ಪತಂತಮಚಲೋ ಯಥಾ
॥ ೧೮ ॥

ಪ್ರತಿಜಗ್ರಾಹ ಬಲವಾನ್ಸುನಂದೇನಾಹನಚ್ಚ ತಮ್ ।
ಮುಸಲಾಹತಮಸ್ತಿಷ್ಕೋ ವಿರೇಜೇ ರಕ್ತಧಾರಯಾ
॥ ೧೯ ॥

ಗಿರಿರ್ಯಥಾ ಗೈರಿಕಯಾ ಪ್ರಹಾರಂ ನಾನುಚಿಂತಯನ್ ।
ಪುನರನ್ಯಂ ಸಮುತ್ಕ್ಷಿಪ್ಯ ಕೃತ್ವಾ ನಿಷ್ಪತ್ರಮೋಜಸಾ
॥ ೨೦ ॥

ತೇನಾಹನತ್ಸುಸಂಕ್ರುದ್ಧಸ್ತಂ ಬಲಃ ಶತಧಾಚ್ಛಿನತ್ ।
ತತೋಽನ್ಯೇನ ರುಷಾ ಜಘ್ನೇ ತಂ ಚಾಪಿ ಶತಧಾಚ್ಛಿನತ್
॥ ೨೧ ॥

ಅವನು ಮಧುಪಾನ ಮಾಡಿ ಮಧುರವಾಗಿ ಸಂಗೀತವನ್ನು ಹಾಡುತ್ತಿದ್ದನು. ಅವನ ಕಣ್ಣುಗಳು ಆನಂದೋನ್ಮಾದದಿಂದ ವಿಹ್ವಲವಾಗಿದ್ದವು. ಅವನ ಶರೀರವು ಮತ್ತಗಜದಂತೆ ಶೋಭಾಯಮಾನವಾಗಿತ್ತು. ॥ ೧೦ ॥ ಆ ದುಷ್ಟವಾನರನು ಬಲರಾಮನಿದ್ದಲ್ಲಿಗೆ ಬಂದು ಮರದ ಮೆಲೆ ಹತ್ತಿ ಕೊಂಬೆಗಳನ್ನು ರಭಸದಿಂದ ಅಲ್ಲಾಡಿಸುತ್ತಿದ್ದನು. ಕೆಲವೊಮ್ಮೆ ಸ್ತ್ರೀಯರ ಮುಂದೆ ನಿಂತು ಕಲ-ಕಲಶಬ್ದ ಮಾಡುತ್ತಾ ತಾನಿರುವುದನ್ನು ತೋರಿಸಿಕೊಳ್ಳುವನು. ॥ ೧೧ ॥ ಯುವತಿಯರು ಸ್ವಾಭಾವಿಕವಾಗಿ ಚಂಚಲೆಯರೂ ಹಾಸ್ಯಪ್ರಿಯರೂ ಆಗಿರುತ್ತಾರೆ. ದ್ವಿವಿದನ ಕಪಿಚೇಷ್ಟೆಗಳನ್ನು ಕಂಡು ಬಲರಾಮನ ಪ್ರೇಯಸಿಯರು ಪಕ-ಪಕನೆ ನಗತೊಡಗಿದರು. ॥ ೧೨ ॥ ಈಗ ಆ ವಾನರನು ಬಲರಾಮನು ನೋಡುತ್ತಿರುವಂತೆಯೇ ಸ್ತ್ರೀಯರನ್ನು ಹಲ್ಲುಕಿರಿಯುತ್ತಾ, ಗರ್ಜಿಸುತ್ತಾ, ಹುಬ್ಬುಗಳನ್ನು ಹಾರಿಸುತ್ತಾ, ಅಣಕಿಸುತ್ತಿದ್ದನು. ಕೆಲವೊಮ್ಮೆ ಅವರಿಗೆ ಗುದವನ್ನು ತೋರಿಸಿ ಅವಹೇಳನ ಮಾಡುತ್ತಿದ್ದನು. ॥ ೧೩ ॥ ವೀರ ಶಿರೋಮಣಿ ಬಲರಾಮನು ಅವನ ಇಂತಹ ಚೇಷ್ಟೆಗಳನ್ನು ನೋಡಿ ಕ್ರೋಧಿತನಾಗಿ ಅವನ ಮೇಲೆ ಒಂದು ಕಲ್ಲನ್ನು ಎಸೆದನು. ಆದರೆ ದ್ವಿವಿದನು ಅದನ್ನು ತಪ್ಪಿಸಿಕೊಂಡು, ಬಲರಾಮನ ಬಳಿಯಿದ್ದ ಮಧುಕಲಶವನ್ನೆತ್ತಿಕೊಂಡು ಹೋಗಿ ಬಲರಾಮನನ್ನು ಅಣಕಿಸಿದನು. ಆ ಧೂರ್ತನು ಮಧುಕಲಶವನ್ನು ಒಡೆದು ಹಾಕಿದನು ಮತ್ತು ಸ್ತ್ರೀಯರ ವಸ್ತ್ರಗಳನ್ನು ಹರಿದು ಹಾಕಿದನು. ಈಗ ಅವನು ಗಹ-ಗಹಿಸಿ ನಗುತ್ತಾ ಬಲರಾಮನನ್ನು ಕ್ರೋಧಿತಗೊಳಿಸತೊಡಗಿದನು. ॥ ೧೪-೧೫ ॥ ಪರೀಕ್ಷಿತನೇ! ಈ ಪ್ರಕಾರವಾಗಿ ಬಲಿಷ್ಠನೂ, ಮದೋನ್ಮತ್ತನೂ ಆದ ದ್ವಿವಿದನು ಬಲರಾಮನನ್ನು ಅಣಕಿಸುತ್ತಾ, ತಿರಸ್ಕರಿಸತೊಡಗಿದಾಗ, ಬಲರಾಮನು ಅವನ ಉದ್ಧಟತನವನ್ನು ನೋಡಿ, ಅವನಿಂದ ಪೀಡಿಸಲ್ಪಟ್ಟ ದೇಶಗಳ ದುರ್ದಶೆಯ ಕುರಿತು ವಿಚಾರಮಾಡಿ ಆ ಶತ್ರುವನ್ನು ಕೊಂದು ಹಾಕುವುದೆಂದು ಕ್ರೋಧಗೊಂಡು ಹಲಾಯುಧವನ್ನು ಎತ್ತಿದನು. ಮಹಾವೀರ್ಯನಾದ ದ್ವಿವಿದನು ಸಾಲವೃಕ್ಷವೊಂದನ್ನು ಕಿತ್ತುಕೊಂಡು ರಭಸದಿಂದ ಬಲರಾಮನ ತಲೆಯಮೇಲೆ ಪ್ರಹರಿಸಿದನು. ಪರ್ವತದಂತೆ ಅಚಲನಾಗಿ ನಿಂತುಕೊಂಡಿದ್ದ ಬಲರಾಮನು ತನ್ನ ತಲೆಯ ಮೇಲೆ ಬೀಳಲಿದ್ದ ಮರವನ್ನು ಹಿಡಿದನು. ಬಳಿಕ ಸುನಂದವೆಂಬ ಮುಸಲಾಯುಧದಿಂದ ದ್ವಿವಿದನನ್ನು ಪ್ರಹರಿಸಿದನು. ಮುಸಲಾಯುಧದ ಏಟಿನಿಂದ ದ್ವಿವಿದನ ತಲೆಯು ಒಡೆದು ರಕ್ತದ ಧಾರೆಯೇ ಹರಿಯಿತು. ಆಗ ಅವನು ಗೈರಿಕಾದಿ ಧಾತುಗಳಿಂದ ಕೂಡಿದ ಪರ್ವತದಂತೆ ಕಾಣುತ್ತಿದ್ದನು. ತಲೆಯೊಡೆದು ರಕ್ತವು ಹರಿಯುತ್ತಿದ್ದರೂ ಅದನ್ನು ಲೆಕ್ಕಿಸದೆ ಕೋಪಗೊಂಡು ಇನ್ನೊಂದು ಮರವನ್ನು ಕಿತ್ತು ತನ್ನ ಭುಜಬಲದಿಂದ ಅದನ್ನು ಪತ್ರರಹಿತವನ್ನಾಗಿ ಮಾಡಿ ಅದರಿಂದ ಬಲರಾಮನನ್ನು ಜೋರಾಗಿ ಪ್ರಹರಿಸಿದನು. ಬಲರಾಮನು ಆ ವೃಕ್ಷವನ್ನು ಮುಸಲಾಯುಧದಿಂದ ನೂರು ಚೂರುಗಳನ್ನಾಗಿ ಮಾಡಿದನು. ಮತ್ತೆ ದ್ವಿವಿದನು ಮತ್ತೊಂದು ವೃಕ್ಷವನ್ನೆತ್ತಿಕೊಂಡು ಸಿಟ್ಟಿನಿಂದ ಪ್ರಯೋಗಿಸಿದನು. ಅದನ್ನು ಬಲರಾಮನು ಚೂರು-ಚೂರು ಮಾಡಿದನು. ॥ ೧೬-೨೧ ॥

ಏವಂ ಯುಧ್ಯನ್ಭಗವತಾ ಭಗ್ನೇ ಭಗ್ನೇ ಪುನಃ ಪುನಃ ।
ಆಕೃಷ್ಯ ಸರ್ವತೋ ವೃಕ್ಷಾನ್ನಿರ್ವೃಕ್ಷಮಕರೋದ್ವನಮ್
॥ ೨೨ ॥

ತತೋಽಮುಂಚಚ್ಛಿಲಾವರ್ಷಂ ಬಲಸ್ಯೋಪರ್ಯಮರ್ಷಿತಃ ।
ತತ್ಸರ್ವಂ ಚೂರ್ಣಯಾಮಾಸ ಲೀಲಯಾ ಮುಸಲಾಯುಧಃ
॥ ೨೩ ॥

ಸ ಬಾಹೂ ತಾಲಸಂಕಾಶೌ ಮುಷ್ಟೀಕೃತ್ಯ ಕಪೀಶ್ವರಃ ।
ಆಸಾದ್ಯ ರೋಹಿಣೀಪುತ್ರಂ ತಾಭ್ಯಾಂ ವಕ್ಷಸ್ಯರೂರುಜತ್
॥ ೨೪ ॥

ಯಾದವೇಂದ್ರೋಽಪಿತಂ ದೋರ್ಭ್ಯಾಂ ತ್ಯಕ್ತ್ವಾ ಮುಸಲಲಾಂಗಲೇ ।
ಜತ್ರಾವಭ್ಯರ್ದಯತ್ಕ್ರುದ್ಧಃ ಸೋಽಪತದ್ರುಧಿರಂ ವಮನ್
॥ ೨೫ ॥

ಚಕಂಪೇ ತೇನ ಪತತಾ ಸಟಂಕಃ ಸವನಸ್ಪತಿಃ ।
ಪರ್ವತಃ ಕುರುಶಾರ್ದೂಲ ವಾಯುನಾ ನೌರಿವಾಂಭಸಿ
॥ ೨೬ ॥

ಜಯಶಬ್ದೋ ನಮಃಶಬ್ದಃ ಸಾಧು ಸಾಧ್ವಿತಿ ಚಾಂಬರೇ ।
ಸುರಸಿದ್ಧಮುನೀಂದ್ರಾಣಾಮಾಸೀತ್ಕುಸುಮವರ್ಷಿಣಾಮ್
॥ ೨೭ ॥

ಏವಂ ನಿಹತ್ಯ ದ್ವಿವಿದಂ ಜಗದ್ವ್ಯತಿಕರಾವಹಮ್ ।
ಸಂಸ್ತೂಯಮಾನೋ ಭಗವಾನ್ ಜನೈಃ ಸ್ವಪುರಮಾವಿಶತ್
॥ ೨೮ ॥

ಹೀಗೆ ಯುದ್ಧಮಾಡುತ್ತಿದ್ದಾಗ ಒಂದು ಮರ ಪುಡಿ-ಪುಡಿಯಾಗಿ ಹೋದರೆ ಮತ್ತೊಂದು, ಇನ್ನೊಂದು ಹೀಗೆ ಮರಗಳ ಮೇಲೆ ಮರಗಳನ್ನು ಕಿತ್ತು ಪ್ರಹರಿಸುವನು. ಬಲರಾಮನು ಪುಡಿ ಮಾಡುವನು ಆಗ ಆ ಪರ್ವತವು ವೃಕ್ಷರಹಿತವಾಯಿತು. ॥ ೨೨ ॥ ಮರಗಳೇ ಸಿಗದಿದ್ದಾಗ ದ್ವಿವಿದನ ಕ್ರೋಧವು ಇನ್ನೂ ಹೆಚ್ಚಿತು. ಆಗ ಕೆರಳಿ ಆತನು ಬಲರಾಮನ ಮೇಲೆ ದೊಡ್ಡ-ದೊಡ್ಡ ಬಂಡೆಗಳ ಮಳೆಯನ್ನೇ ಸುರಿಸಿದನು. ಬಲಭದ್ರನು ಲೀಲಾಜಾಲವಾಗಿ ತನ್ನ ಮುಸಲಾಯುಧದಿಂದ ಅವೆಲ್ಲವನ್ನೂ ನುಚ್ಚು-ನೂರಾಗಿಸಿ ಬಿಟ್ಟನು. ॥ ೨೩. ॥ ಬಂಡೆಗಳೂ ಮುಗಿದು ಹೋದಾಗ ಕಪೀಶ್ವರನು ತಾಳೆಯ ಮರಕ್ಕಿಂತ ಉದ್ದವಾಗಿದ್ದ ತನ್ನ ಕೈಗಳ ಮುಷ್ಟಿ ಬಿಗಿದುಕೊಂಡು ಬಲರಾಮನ ಬಳಿಗೆ ಹೋಗಿ ಅವನ ಎದೆಗೆ ಪ್ರಹರಿಸಿದನು. ॥ ೨೪ ॥ ಇದರಿಂದ ಪರಮ ಕ್ರುದ್ಧನಾದ ಯದುವಂಶ ಶಿರೋಮಣಿ ಬಲರಾಮನು ಮುಸಲಾಯುಧ ಮತ್ತು ಹಲಾಯುಧಗಳಿಂದ ದ್ವಿವಿದನ ಹೆಗಲಿಗೆ ಬಲವಾಗಿ ಪ್ರಹರಿಸಿದನು. ಒಡನೆಯೇ ಕಪೀಶ್ವರನು ರಕ್ತವನ್ನು ಕಾರುತ್ತಾ ಕೆಳಗೆಬಿದ್ದನು. ॥ ೨೫ ॥ ಪರೀಕ್ಷಿತನೇ ! ಬಿರುಗಾಳಿ ಬಂದಾಗ ಸಮುದ್ರದಲ್ಲಿರುವ ನಾವೆಯು ಅಳ್ಳಾಡುವಂತೆ ಅವನು ನೆಲಕ್ಕೆ ಬೀಳುತ್ತಲೇ ವೃಕ್ಷಗಳ ಸಹಿತವಾಗಿ ರೈವತಕ ಪರ್ವತವು ನಡುಗಿಹೋಯಿತು. ॥ ೨೬ ॥ ಆಕಾಶದಲ್ಲಿ ದೇವತೆಗಳು ಬಲರಾಮನಿಗೆ ಜಯವಾಗಲೀ, ಜಯವಾಗಲೀ ಎಂದು ಜಯಘೋಷ ಮಾಡಿದರು. ಸಿದ್ಧರು ನಮೋ ನಮಃ ಎಂದು ನಮಸ್ಕರಿಸಿದರು. ಋಷಿ-ಮುನಿಗಳು ಭಲೇ ! ಬಲರಾಮ ! ಭಲೇ !! ಎಂದು ಪ್ರಶಂಸಿಸುತ್ತಾ ಅವನ ಮೇಲೆ ಹೂಮಳೆಗರೆದರು. ॥ ೨೭ ॥ ಪರೀಕ್ಷಿತನೇ ! ಜಗತ್ತಿನಲ್ಲಿ ಭಾರೀ ಉಪದ್ರವನ್ನುಂಟುಮಾಡಿದ ದ್ವಿವಿದನನ್ನು ಭಗವಾನ್ ಬಲರಾಮನು ಸಂಹರಿಸಿ ದ್ವಾರಕೆಗೆ ಹಿಂದಿರುಗಿದನು. ಆ ಸಮಯದಲ್ಲಿ ಪುರಜನರು-ಪರಿಜನರು ಅವನನ್ನು ವಿಧ-ವಿಧವಾಗಿ ಕೊಂಡಾಡಿದರು. ॥ ೨೮ ॥

ಅರವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೬೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ದ್ವಿವಿದವಧೋ ನಾಮ ಸಪ್ತಷಷ್ಟಿತಮೋಽಧ್ಯಾಯಃ॥ ೬೭ ॥

ಅರವತ್ತೆಂಟನೆಯ ಅಧ್ಯಾಯ

ಕೌರವರ ಮೇಲೆ ಬಲರಾಮನ ಕೋಪ ಮತ್ತು ಸಾಂಬನ ವಿವಾಹ

ಶ್ರೀಶುಕ ಉವಾಚ

ದುರ್ಯೋಧನಸುತಾಂ ರಾಜನ್ ಲಕ್ಷ್ಮಣಾಂ ಸಮಿತಿಂಜಯಃ ।
ಸ್ವಯಂವರಸ್ಥಾಮಹರತ್ಸಾಂಬೋ ಜಾಂಬವತೀಸುತಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹಲವಾರು ವೀರರನ್ನು ಗೆದ್ದಿರುವ ಮಹಾಶೂರನಾದ ಜಾಂಬವತಿಯ ಮಗನಾದ ಸಾಂಬನು ಸ್ವಯಂವರ ಮಂಟಪದಿಂದ ಕೌರವನ ಮಗಳಾದ ಲಕ್ಷ್ಮಣಾ ಎಂಬುವಳನ್ನು ಅಪಹರಿಸಿಕೊಂಡು ಹೋದನು. ॥ ೧ ॥

ಕೌರವಾಃ ಕುಪಿತಾ ಊಚುರ್ದುರ್ವಿನೀತೋಽಯಮರ್ಭಕಃ।
ಕದರ್ಥೀಕೃತ್ಯ ನಃ ಕನ್ಯಾಮಕಾಮಾಮಹರದ್ಬಲಾತ್
॥ ೨ ॥

ಬಧ್ನೀತೇಮಂ ದುರ್ವಿನೀತಂ ಕಿಂ ಕರಿಷ್ಯಂತಿ ವೃಷ್ಣಯಃ।
ಯೇಽಸ್ಮತ್ಪ್ರಸಾದೋಪಚಿತಾಂ ದತ್ತಾಂ ನೋ ಭುಂಜತೇ ಮಹೀಮ್
॥ ೩ ॥

ನಿಗೃಹೀತಂ ಸುತಂ ಶ್ರುತ್ವಾ ಯದ್ಯೇಷ್ಯಂತೀಹ ವೃಷ್ಣಯಃ।
ಭಗ್ನದರ್ಪಾಃ ಶಮಂ ಯಾಂತಿ ಪ್ರಾಣಾ ಇವ ಸುಸಂಯತಾಃ
॥ ೪ ॥

ಇತಿ ಕರ್ಣಃ ಶಲೋ ಭೂರಿರ್ಯಜ್ಞಕೇತುಃ ಸುಯೋಧನಃ।
ಸಾಂಬಮಾರೇಭಿರೇ ಬದ್ಧುಂ ಕುರುವೃದ್ಧಾನುಮೋದಿತಾಃ
॥ ೫ ॥

ದೃಷ್ಟ್ವಾನುಧಾವತಃ ಸಾಂಬೋ ಧಾರ್ತರಾಷ್ಟ್ರಾನ್ಮಹಾರಥಃ।
ಪ್ರಗೃಹ್ಯ ರುಚಿರಂ ಚಾಪಂ ತಸ್ಥೌ ಸಿಂಹ ಇವೈಕಲಃ
॥ ೬ ॥

ತಂ ತೇ ಜಿಘೃಕ್ಷವಃ ಕ್ರುದ್ಧಾಸ್ತಿಷ್ಠ ತಿಷ್ಠೇತಿ ಭಾಷಿಣಃ।
ಆಸಾದ್ಯ ಧನ್ವಿನೌ ಬಾಣೈಃ ಕರ್ಣಾಗ್ರಣ್ಯಃ ಸಮಾಕಿರನ್
॥ ೭ ॥

ಸೋಽಪವಿದ್ಧಃ ಕುರುಶ್ರೇಷ್ಠ ಕುರುಭಿರ್ಯದುನಂದನಃ।
ನಾಮೃಷ್ಯತ್ತದಚಿಂತ್ಯಾರ್ಭಃ ಸಿಂಹಃ ಕ್ಷುದ್ರಮೃಗೈರಿವ
॥ ೮ ॥

ವಿಸೃಜ್ಯ ರುಚಿರಂ ಚಾಪಂ ಸರ್ವಾನ್ವಿವ್ಯಾಧ ಸಾಯಕೈಃ।
ಕರ್ಣಾದೀನ್ ಷಡ್ರಥಾನ್ ವೀರಾಂಸ್ತಾವದ್ಭಿರ್ಯುಗಪತ್ಪೃಥಕ್
॥ ೯ ॥

ಚತುರ್ಭಿಶ್ಚತುರೋ ವಾಹಾನೇಕೈಕೇನ ಚ ಸಾರಥೀನ್।
ರಥಿನಶ್ಚ ಮಹೇಷ್ವಾಸಾಂಸ್ತಸ್ಯ ತತ್ತೇಽಭ್ಯಪೂಜಯನ್
॥ ೧೦ ॥

ತಂ ತು ತೇ ವಿರಥಂ ಚಕ್ರುಶ್ಚತ್ವಾರಶ್ಚತುರೋ ಹಯಾನ್।
ಏಕಸ್ತು ಸಾರಥಿಂ ಜಘ್ನೇ ಚಿಚ್ಛೇದಾನ್ಯಃ ಶರಾಸನಮ್
॥ ೧೧ ॥

ಇದರಿಂದ ಕುಪಿತರಾದ ಕೌರವರು ಮನಬಂದಂತೆ ಮಾತನಾಡುತ್ತಾ 'ಈ ಬಾಲಕನು ಎಷ್ಟು ಉದ್ಧಟನಾಗಿದ್ದಾನೆ; ನೋಡಿದಿರಾ? ನಮ್ಮನ್ನು ಲೆಕ್ಕಿಸದೆ ನಮ್ಮ ಕನ್ಯೆಯನ್ನು ಅಪಹರಿಸಿಕೊಂಡು ಹೋಗಿ ದ್ದಾನೆ. ಅಲ್ಲದೆ ನಮ್ಮ ಕನ್ಯೆಯೂ ಅವನನ್ನು ಪ್ರೀತಿಸುತ್ತಿರಲಿಲ್ಲ. ॥ ೨ ॥ ಆದ್ದರಿಂದ ದುರ್ವಿನೀತನಾದ ಇವನನ್ನು ಈಗಲೇ ಬಂಧಿಸಿರಿ. ವೃಷ್ಣಿವಂಶೀಯರಾದರೂ ಏನು ಮಾಡುವರು? ನೋಡೋಣ. ಅವರಾದರೋ ನಾವು ಕೊಟ್ಟಿರುವ ಧನ-ಧಾನ್ಯಗಳಿಂದ ಸಮೃದ್ಧವಾದ ರಾಜ್ಯವನ್ನು ನಮ್ಮ ಕೃಪೆಯಿಂದಲೇ ಆಳುತ್ತಿದ್ದಾರೆ. ॥ ೩ ॥ ತಮ್ಮ ಪುತ್ರನ ಬಂಧನವನ್ನು ಕೇಳಿ ವೃಷ್ಣಿಗಳೇನಾದರೂ ಇಲ್ಲಿಗೆ ಬಂದರೆ ನಾವುಗಳು ಅವರ ದರ್ಪವನ್ನು ಪುಡಿ-ಪುಡಿಮಾಡಿ ಬಿಡುವೆವು. ಸಂಯಮಿಗಳಾದ ಜನರ ಇಂದ್ರಿಯಗಳು ಪ್ರಾಣಾಯಾಮದಿಂದ ಶಾಂತವಾಗುವಂತೆ ಅವರ ಅಹಂಕಾರವು ಶಾಂತವಾಗುವುದು. ॥ ೪ ॥ ಕರ್ಣ, ಶಲ, ಭೂರಿಶ್ರವ, ಯಜ್ಞಕೇತು, ಸುಯೋಧನ ಮೊದಲಾದ ವೀರರು ಹೀಗೆ ಯೋಚಿಸಿ, ಕುರುವೃದ್ಧರ ಅನುಮತಿಯನ್ನು ಪಡೆದು ಸಾಂಬನನ್ನು ಬಂಧಿಸಲು ಅನುವಾದರು. ॥ ೫ ॥

ಧೃತರಾಷ್ಟ್ರನ ಪುತ್ರರು ತನ್ನನ್ನು ಹಿಂಬಾಲಿಸಿ ಬರುತ್ತಿದ್ದಾರೆಂದು ನೋಡಿದಾಗ ಮಹಾರಥಿಯಾದ ಸಾಂಬನು ಸುಂದರವಾದ ಧನುಸ್ಸನ್ನು ಸಿದ್ಧಪಡಿಸಿಕೊಂಡು ಸಿಂಹದಂತೆ ಏಕಾಕಿಯಾಗಿ ಕೌರವ ರನ್ನು ಎದುರಿಸಿ ನಿಂತನು. ॥ ೬ ॥ ಕರ್ಣನನ್ನು ಮುಂದಾಳಾಗಿಟ್ಟು ಕೊಂಡು ಕೌರವವೀರರು ಧನುಸ್ಸನ್ನೆತ್ತಿಕೊಂಡು ಸಾಂಬನ ಬಳಿಗೆ ಬಂದು, ಅವನನ್ನು ಹಿಡಿಯಲಿಕ್ಕಾಗಿ ನಿಲ್ಲು! ನಿಲ್ಲು! ಎಂದು ಕೂಗುತ್ತಾ ಪರಮಕ್ರುದ್ಧರಾಗಿ ಅವನ ಮೇಲೆ ಬಾಣಗಳ ಮಳೆ ಯನ್ನೇ ಸುರಿಸಿದರು. ॥ ೭ ॥ ಪರೀಕ್ಷಿತನೇ! ಯದುನಂದನ ಸಾಂಬನು ಅಚಿಂತ್ಯಮಹಿಮೆಯುಳ್ಳ ಭಗವಾನ್ ಶ್ರೀಕೃಷ್ಣನ ಪುತ್ರ ನಾಗಿದ್ದನು. ಕೌರವರ ಪ್ರಹಾರಗಳಿಂದ ಅವನು ಕ್ಷುದ್ರಮೃಗಗಳಿಂದ ಆಕ್ರಮಿಸಲ್ಪಟ್ಟ ಸಿಂಹದಂತೆ ಕೆರಳಿ ಪರಮಕ್ರುದ್ಧನಾದನು. ॥ ೮ ॥ ಸಾಂಬನು ತನ್ನ ಸುಂದರವಾದ ಧನುಸ್ಸನ್ನು ಟಂಕಾರಮಾಡಿ ಬೇರೆ-ಬೇರೆ ರಥಗಳಲ್ಲಿದ್ದ ಕರ್ಣನೇ ಮೊದಲಾದ ಆರು ವೀರರ ಮೇಲೆ ಒಂದೇ ಬಾರಿಗೆ ಆರಾರು ಬಾಣಗಳನ್ನು ಪ್ರತ್ಯೇಕ-ಪ್ರತ್ಯೇಕ ವಾಗಿ ಪ್ರಯೋಗಿಸಿದನು. ॥ ೯ ॥ ಅವುಗಳಲ್ಲಿ ನಾಲ್ಕು-ನಾಲ್ಕು ಬಾಣಗಳು ಕುದುರೆಗಳ ಮೇಲೂ, ಒಂದೊಂದು ಬಾಣಗಳನ್ನು ಸಾರಥಿಗಳ ಮೇಲೂ, ಒಂದೊಂದು ಬಾಣವನ್ನು ಆ ಆರುಮಂದಿ ಧನುಷ್ಮಂತರಾದ ಮಹಾರಥಿಗಳ ಮೇಲೂ ಪ್ರಯೋಗಿಸಿದನು. ಸಾಂಬನ ಈ ಅದ್ಭುತವಾದ ಕರಕೌಶಲ್ಯವನ್ನು ಕಂಡು ವೀರರೂ ಕೂಡ ಮುಕ್ತಕಂಠದಿಂದ ಅವನನ್ನು ಪ್ರಶಂಸಿಸಿದರು. ॥ ೧೦ ॥ ಬಳಿಕ ಕುಪಿತರಾದ ಆ ಆರುಮಂದಿ ವೀರರು ಒಟ್ಟಿಗೆ ಸೇರಿ ಸಾಂಬನನ್ನು ರಥಹೀನನ್ನಾಗಿಸಿದರು. ನಾಲ್ಕು ವೀರರು ಒಂದೊಂದು ಬಾಣದಿಂದ ಅವನ ಕುದುರೆಗಳನ್ನು ಕೊಂದು ಹಾಕಿದರು. ಒಬ್ಬನು ಸಾರಥಿಯನ್ನು ಕೊಂದು ಮತ್ತೊಬ್ಬನು ಸಾಂಬನ ಧನುಸ್ಸನ್ನು ತುಂಡರಿಸಿದನು. ॥ ೧೧ ॥

ತಂ ಬದ್ಧ್ವಾ ವಿರಥೀಕೃತ್ಯ ಕೃಚ್ಛ್ರೇಣ ಕುರವೋ ಯುಧಿ।
ಕುಮಾರಂ ಸ್ವಸ್ಯ ಕನ್ಯಾಂ ಚ ಸ್ವಪುರಂ ಜಯಿನೋಽವಿಶನ್
॥ ೧೨ ॥

ತಚ್ಛ್ರುತ್ವಾ ನಾರದೋಕ್ತೇನ ರಾಜನ್ ಸಂಜಾತಮನ್ಯವಃ।
ಕುರೂನ್ ಪ್ರತ್ಯುದ್ಯಮಂ ಚಕ್ರುರುಗ್ರಸೇನಪ್ರಚೋದಿತಾಃ
॥ ೧೩ ॥

ಸಾಂತ್ವಯಿತ್ವಾತು ತಾನ್ ರಾಮಃ ಸಂನದ್ಧಾನ್ ವೃಷ್ಣಿಪುಂಗವಾನ್।
ನೈಚ್ಛತ್ಕುರೂಣಾಂ ವೃಷ್ಣೀನಾಂ ಕಲಿಂ ಕಲಿಮಲಾಪಹಃ
॥ ೧೪ ॥

ಜಗಾಮ ಹಾಸ್ತಿನಪುರಂ ರಥೇನಾದಿತ್ಯವರ್ಚಸಾ।
ಬ್ರಾಹ್ಮಣೈಃ ಕುಲವೃದ್ಧೈಶ್ಚ ವೃತಶ್ಚಂದ್ರ ಇವ ಗ್ರಹೈಃ
॥ ೧೫ ॥

ಗತ್ವಾ ಗಜಾಹ್ವಯಂ ರಾಮೋ ಬಾಹ್ಯೋಪವನಮಾಸ್ಥಿತಃ।
ಉದ್ಧವಂ ಪ್ರೇಷಯಾಮಾಸ ಧೃತರಾಷ್ಟ್ರಂ ಬುಭುತ್ಸಯಾ
॥ ೧೬ ॥

ಸೋಽಭಿವಂದ್ಯಾಂಬಿಕಾಪುತ್ರಂ
ಭೀಷ್ಮಂ ದ್ರೋಣಂ ಚ ಬಾಹ್ಲಿಕಮ್।
ದುರ್ಯೋಧನಂ ಚ ವಿಧಿವದ್ರಾ-
ಮಮಾಗತಮಬ್ರವೀತ್
॥ ೧೭ ॥

ತೇಽತಿಪ್ರೀತಾಸ್ತಮಾಕರ್ಣ್ಯ ಪ್ರಾಪ್ತಂ ರಾಮಂ ಸುಹೃತ್ತಮಮ್।
ತಮರ್ಚಯಿತ್ವಾಭಿಯಯುಃ ಸರ್ವೇ ಮಂಗಲಪಾಣಯಃ
॥ ೧೮ ॥

ತಂ ಸಂಗಮ್ಯ ಯಥಾನ್ಯಾಯಂ ಗಾಮರ್ಘ್ಯಂ ಚ ನ್ಯವೇದಯನ್।
ತೇಷಾಂ ಯೇ ತತ್ಪ್ರಭಾವಜ್ಞಾಃ ಪ್ರಣೇಮುಃ ಶಿರಸಾ ಬಲಮ್
॥ ೧೯ ॥

ಬಂಧೂನ್ ಕುಶಲಿನಃ ಶ್ರುತ್ವಾ ಪೃಷ್ಟ್ವಾಶ್ಚಾವಿಮನಾಮಯಮ್।
ಪರಸ್ಪರಮಥೋ ರಾಮೋ ಬಭಾಷೇಽವಿಕ್ಲವಂ ವಚಃ
॥ ೨೦ ॥

ಉಗ್ರಸೇನಃ ಕ್ಷಿತೀಶೇಶೋ ಯದ್ವ ಆಜ್ಞಾಪಯತ್ಪ್ರಭುಃ।
ತದವ್ಯಗ್ರಧಿಯಃ ಶ್ರುತ್ವಾ ಕುರುಧ್ವಂ ಮಾವಿಲಂಬಿತಮ್
॥ ೨೧ ॥

ಯದ್ಯೂಯಂ ಬಹವಸ್ತ್ವೇಕಂ ಜಿತ್ವಾಽಧರ್ಮೇಣ ಧಾರ್ಮಿಕಮ್।
ಅಬಧ್ನೀತಾಥ ತನ್ಮೃಷ್ಯೇ ಬಂಧೂನಾಮೈಕ್ಯಕಾಮ್ಯಯಾ
॥ ೨೨ ॥

ಈ ಪ್ರಕಾರವಾಗಿ ಕೌರವರು ಯುದ್ಧದಲ್ಲಿ ಬಹಳ ಕಷ್ಟಪಟ್ಟು ಸಾಂಬನನ್ನು ರಥವಿಹೀನನ್ನಾಗಿಸಿ ಬಂಧಿಸಿದರು. ಅನಂತರ ಅವನನ್ನೂ ಹಾಗೂ ತಮ್ಮ ಮಗಳಾದ ಲಕ್ಷ್ಮಣೆಯನ್ನೂ ಕರಕೊಂಡು ಹಸ್ತಿನಾವತಿಗೆ ಮರಳಿದರು. ॥ ೧೨ ॥

ಪರೀಕ್ಷಿತನೇ! ನಾರದ ಮಹರ್ಷಿಗಳಿಂದ ಈ ಸಮಾಚಾರವನ್ನು ಕೇಳಿದ ಯಾದವವೀರರು ಪರಮಕ್ರುದ್ಧರಾದರು. ಅವರು ಉಗ್ರಸೇನ ಮಹಾರಾಜರ ಪ್ರೇರಣೆಯಂತೆ ಕೌರವರೊಡನೆ ಯುದ್ಧಮಾಡಲು ಸಿದ್ಧರಾದರು. ॥ ೧೩. ॥ ಕಲಹ ಪ್ರಧಾನವಾದ ಕಲಿಯುಗದ ಸಮಸ್ತ ಪಾಪಗಳನ್ನು ಹೋಗಲಾಡಿಸುವುದರಲ್ಲಿ ಅತ್ಯಂತ ಸಮರ್ಥನಾದ ಬಲರಾಮನಿಗೆ ವೃಷ್ಣಿ-ಕೌರವರೊಳಗೆ ಯುದ್ಧವಾಗುವುದು ಇಷ್ಟವಾಗಲಿಲ್ಲ. ಯದುವಂಶೀಯರು ಯುದ್ಧದ ಸಿದ್ಧತೆಮಾಡಿಕೊಂಡಿದ್ದರು. ಅವರನ್ನು ಸಮಾಧಾನ ಪಡಿಸಿ, ಸೂರ್ಯನ ತೇಜಸ್ಸಿಗೆ ಸಮಾನವಾದ ರಥದಲ್ಲಿ ಕುಳಿತು ಗ್ರಹಗಳಿಂದ ಪರಿವೃತನಾದ ಚಂದ್ರನಂತೆ ಬ್ರಾಹ್ಮಣರಿಂದಲೂ, ಕುಲವೃದ್ಧರಿಂದಲೂ ಕೂಡಿಕೊಂಡು ಹಸ್ತಿನಾವತಿಗೆ ಪ್ರಯಾಣ ಮಾಡಿದನು. ॥ ೧೪-೧೫ ॥ ಹಸ್ತಿನಾಪುರಕ್ಕೆ ತಲುಪಿ ನಗರದ ಹೊರ ಉದ್ಯಾನದಲ್ಲಿ ತಂಗಿದ ಬಲರಾಮನು ಕೌರವರ ಆಶಯ ವೇನೆಂಬುದನ್ನು ತಿಳಿಯಲು ಉದ್ಧವನನ್ನು ಧೃತರಾಷ್ಟ್ರನ ಬಳಿಗೆ ಕಳಿಸಿಕೊಟ್ಟನು. ॥ ೧೬ ॥

ಉದ್ಧವನು ಕೌರವರ ರಾಜಸಭೆಗೆ ಹೋಗಿ ಧೃತರಾಷ್ಟ್ರ, ಭೀಷ್ಮ, ದ್ರೋಣ, ಬಾಹ್ಲಿಕ, ದುರ್ಯೋಧನ ಇವರನ್ನು ಯಥಾಯೋಗ್ಯವಾಗಿ ಅಭಿನಂದಿಸಿ ಬಲರಾಮನು ಬಂದಿರುವ ವಾರ್ತೆಯನ್ನು ತಿಳಿಸಿದನು. ॥ ೧೭ ॥ ತಮಗೆ ಪರಮ ಹಿತೈಷಿಯೂ, ಪ್ರಿಯತಮನೂ ಆದ ಬಲರಾಮನ ಬರವನ್ನು ಕೇಳಿ ಕೌರವರು ಆನಂದಗೊಂಡರು. ಅವರು ಉದ್ಧವನನ್ನು ಸತ್ಕರಿಸಿ, ಬಲರಾಮನನ್ನು ಸ್ವಾಗತಿಸಲು ಮಂಗಳ ದ್ರವ್ಯಗಳನ್ನೆತ್ತಿಕೊಂಡು ಅವನಿದ್ದಲ್ಲಿಗೆ ಬಂದರು. ॥ ೧೮ ॥ ಬಲರಾಮನನ್ನು ಕಂಡು ಕೌರವ ಪ್ರಮುಖರು ಅವನಿಗೆ ಯಥಾವಿಧಿಯಾಗಿ ಗೋವನ್ನು ಅರ್ಪಿಸಿ, ಅರ್ಘ್ಯ ಪಾದ್ಯಾದಿಗಳಿಂದ ಅವನನ್ನು ಸತ್ಕರಿಸಿದರು. ಅವನ ಪ್ರಭಾವವನ್ನು ಚೆನ್ನಾಗಿ ತಿಳಿದಿದ್ದ ಕೌರವ ಪ್ರಮುಖರು ಬಲರಾಮನಿಗೆ ತಲೆಬಾಗಿ ನಮಸ್ಕರಿಸಿದರು. ॥ ೧೯ ॥ ಅನಂತರ ಅವರೆಲ್ಲರೂ ಪರಸ್ಪರ ಕುಶಲಪ್ರಶ್ನೆಗಳನ್ನು ಮಾಡಿ ಜ್ಞಾತಿ-ಬಂಧುಗಳಲ್ಲಿ ಪ್ರತಿಯೊಬ್ಬರ ಯೋಗ-ಕ್ಷೇಮವನ್ನು ವಿಚಾರಿಸಿದ ಬಳಿಕ ಬಲರಾಮನು ಗಂಭೀರವಾಗಿ ದಿಟ್ಟತನದಿಂದಲೇ, ಹೀಗೆ ಹೇಳಿದನು. ॥ ೨೦ ॥ ಸರ್ವಸಮರ್ಥನಾದ ಉಗ್ರಸೇನ ಮಹಾರಾಜನು ನಿಮಗೆ ಆಜ್ಞೆಯನ್ನು ಕಳಿಸಿರುವನು. ನೀವೆಲ್ಲರೂ ಏಕಾಗ್ರತೆಯಿಂದಲೂ ಸಾವಧಾನತೆಯಿಂದಲೂ ಕೇಳಿರಿ ಹಾಗೂ ವಿಳಂಬವಿಲ್ಲದೆ ಅದನ್ನು ಪಾಲಿಸಿರಿ. ॥ ೨೧ ॥ ಉಗ್ರಸೇನನು ಹೇಳಿರುವನು - ಹಲವಾರು ಮಂದಿ ಮಹಾರಥರು ಒಟ್ಟಿಗೆ ಸೇರಿ ಏಕಾಕಿಯಾಗಿದ್ದ ಧಾರ್ಮಿಕನಾದ ಸಾಂಬನನ್ನು ಅಧರ್ಮದಿಂದ ಪರಾಜಯಗೊಳಿಸಿ ಬಂಧಿಸಿರಿವಿರಿ. ಬಂಧುಗಳಲ್ಲಿ ಪರಸ್ಪರ ಐಕ್ಯಮತ್ಯವಿರಬೇಕೆಂಬ ಆಶಯ

ವೀರ್ಯಶೌರ್ಯಬಲೋನ್ನದ್ಧಮಾತ್ಮಶಕ್ತಿಸಮಂ ವಚಃ ।
ಕುರವೋ ಬಲದೇವಸ್ಯ ನಿಶಮ್ಯೋಚುಃ ಪ್ರಕೋಪಿತಾಃ
॥ ೨೩ ॥

ಅಹೋ ಮಹಚ್ಚಿತ್ರಮಿದಂ ಕಾಲಗತ್ಯಾ ದುರತ್ಯಯಾ ।
ಆರುರುಕ್ಷತ್ಯುಪಾನದ್ವೈ ಶಿರೋ ಮುಕುಟಸೇವಿತಮ್
॥ ೨೪ ॥

ಏತೇ ಯೌನೇನ ಸಂಬದ್ಧಾಃ ಸಹಶಯ್ಯಾಸನಾಶನಾಃ ।
ವೃಷ್ಣಯಸ್ತುಲ್ಯತಾಂ ನೀತಾ ಅಸ್ಮದ್ದತ್ತನೃಪಾಸನಾಃ
॥ ೨೫ ॥

ಚಾಮರವ್ಯಜನೇ ಶಂಖಿಮಾತಪತ್ರಂ ಚ ಪಾಂಡುರಮ್ ।
ಕಿರೀಟಮಾಸನಂ ಶಯ್ಯಾಂ ಭುಂಜಂತ್ಯಸ್ಮದುಪೇಕ್ಷಯಾ
॥ ೨೬ ॥

ಅಲಂ ಯದೂನಾಂ ನರದೇವಲಾಂಛನೈ-
ರ್ದಾತುಃ ಪ್ರತೀಪೈಃ ಫಣಿನಾಮಿವಾಮೃತಮ್ ।
ಯೇಽಸ್ಮತ್ಪ್ರಸಾದೋಪಚಿತಾ ಹಿ ಯಾದವಾ
ಆಜ್ಞಾಪಯಂತ್ಯದ್ಯ ಗತತ್ರಪಾ ಬತ ॥ ೨೭ ॥

ಕಥಮಿಂದ್ರೋಽಪಿ ಕುರುಭಿರ್ಭೀಷ್ಮದ್ರೋಣಾರ್ಜುನಾದಿಭಿಃ ।
ಅದತ್ತಮವರುಂಧೀತ ಸಿಂಹಗ್ರಸ್ತಮಿವೋರಣಃ
॥ ೨೮ ॥

ಶ್ರೀಶುಕ ಉವಾಚ

ಇತ್ಯಬಂಧುಶ್ರಿಯೋನ್ನದ್ಧಮದಾಸ್ತೇ ಭರತರ್ಷಭ ।
ಆಶ್ರಾವ್ಯ ರಾಮಂ ದುರ್ವಾಚ್ಯಮಸಭ್ಯಾಃ ಪುರಮಾವಿಶನ್
॥ ೨೯ ॥

ದಿಂದ ಈ ತಿರಸ್ಕಾರವನ್ನು ಇಷ್ಟರವರೆಗೆ ನಾವು ಸಹಿಸಿಕೊಂಡೆವು. ಸಾಂಬನನ್ನು ಕೂಡಲೇ ಬಿಡುಗಡೆ ಮಾಡಿ ನವವಧುವಿನೊಡನೆ ಅವನನ್ನು ಕಳಿಸಿಕೊಡದೆ ಇದ್ದರೆ ನಮ್ಮ ಸೈರಣೆಯು ಹೀಗೆಯೇ ಉಳಿಯಲಾರದು. ॥ ೨೨ ॥

ಪರೀಕ್ಷಿತನೇ! ಬಲರಾಮನ ವಾಣಿಯು ಆತನ ವೀರ್ಯ ಶೌರ್ಯ-ಬಲ-ಪೌರುಷ-ಉತ್ಸಾಹ ಮತ್ತು ಶಕ್ತಿಗಳಿಗೆ ಅನುರೂಪವಾಗಿತ್ತು. ಬಲರಾಮನ ನಿಷ್ಠುರವಾದ ಈ ಮಾತನ್ನು ಕೇಳಿ ಕುಪಿತರಾದ ಕೌರವರು ಆತನಲ್ಲಿ ಹೇಳಿದರು - ॥ ೨೩ ॥ ನಿಶ್ಚಯವಾಗಿಯೂ ಇದು ಎಂತಹ ಆಶ್ಚರ್ಯದ ಸಂಗತಿ! ಮೀರಿನಡೆಯಲು ಅಸಾಧ್ಯವಾದ ಕಾಲಗತಿಯಿಂದಾಗಿ ಕಾಲಿನಲ್ಲಿರಬೇಕಾದ ಪಾದರಕ್ಷೆಯು ಕಿರೀಟವಿರುವ ತಲೆಯನ್ನೇರಲು ಹವಣಿಸುತ್ತಿದೆಯಲ್ಲ! ॥ ೨೪ ॥ ಯದುವಂಶೀಯರು ರಾಜಮನೆತನಕ್ಕೆ ಸೇರಿದವರಲ್ಲವಾದರೂ ನಾವು ಇವರೊಡನೆ ವಿವಾಹ ಸಂಬಂಧವನ್ನು ಬೆಳೆಸಿದೆವು. ಇದರಿಂದ ಇವರು ನಮ್ಮೊಂದಿಗೆ ಮಲಗುವುದು-ಕುಳಿತುಕೊಳ್ಳುವುದು ಮತ್ತು ಸಹಪಂಕ್ತಿಭೋಜನವನ್ನು ಮಾಡತೊಡಗಿದರು. ಇವರಿಗೆ ನಾವೇ ರಾಜಸಿಂಹಾಸನವನ್ನಿತ್ತು ನಮಗೆ ಸಮಾನರನ್ನಾಗಿಸಿದೆವು. ॥ ೨೫ ॥ ಈ ಯದುವಂಶೀಯರು ರಾಜೋಚಿತವಾದ ಚಾಮರ, ವ್ಯಜನ, ಶಂಖ, ಶ್ವೇತಚ್ಛತ್ರ, ಕಿರೀಟ, ರಾಜಸಿಂಹಾಸನ, ರಾಜೋಚಿತವಾದ ಹಂಸತೂಲಿಕಾತಲ್ಪ - ಹೀಗೆ ಎಲ್ಲವನ್ನು ಉಪಭೋಗಿಸುತ್ತಿದ್ದಾರೆ. ನಾವುಗಳು ಬೇಕೆಂತಲೇ ಈ ವಿಷಯದಲ್ಲಿ ಉಪೇಕ್ಷೆಯಿಂದ ಇದ್ದೇವೆ. ॥ ೨೬ ॥ ಇನ್ನು ಸಾಕು! ಸಾಕು! ಯದುವಂಶೀಯರಲ್ಲಿ ರಾಜಚಿಹ್ನೆಗಳು ಇರುವುದು ಆವಶ್ಯಕತೆಯಿಲ್ಲ. ಅದನ್ನು ಕಿತ್ತುಕೊಳ್ಳಲೇಬೇಕು. ಹಾವಿಗೆ ಹಾಲುಣಿಸುವವನಿಗೇ ಘಾತಕವಾಗುವಂತೆಯೇ ನಾವು ಕೊಟ್ಟಿರುವ ರಾಜಚಿಹ್ನೆಗಳನ್ನು ಪಡೆದು ಈ ಯದುವಂಶೀಯರು ನಮಗೆ ಪ್ರತಿಕಾರ ಮಾಡುತ್ತಿದ್ದಾರಲ್ಲ! ಅಯ್ಯೋ! ನಮ್ಮ ಅನುಗ್ರಹದಿಂದಲೇ ಅಭಿವೃದ್ಧಿಯನ್ನು ಹೊಂದಿದ ಇವರು ನಿರ್ಲಜ್ಜರಾಗಿ ನಮಗೆ ಆಜ್ಞೆ ಮಾಡುವ ಮಟ್ಟಕ್ಕೆ ಬಂದಿರುವರಲ್ಲ! ॥ ೨೭ ॥ ಸಿಂಹದ ಪಾಲನ್ನು ಕುರಿಮರಿಯು ಹೇಗೆ ಕಿತ್ತುಕೊಳ್ಳಲಾರದೋ ಹಾಗೆಯೇ ಭೀಷ್ಮ ದ್ರೋಣಾರ್ಜುನರೇ ಮೊದಲಾದ ಕೌರವರು ಬಿಟ್ಟುಕೊಡದೇ ಇರುವ ವಸ್ತುವನ್ನು ದೇವೇಂದ್ರನಾದರೂ ಹೇಗೆ ತಾನೇ ಕಸಿದುಕೊಂಡು ಹೋದಾನು? ಹಾಗಿರುವಾಗ ಸಾಂಬನನ್ನು ಬಿಡಿಸಿಕೊಂಡು ಹೋಗುವುದು ಯಾದವರಿಗೆ ಹೇಗೆ ಸಾಧ್ಯವಾಗುವುದು? ॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಕೌರವರು ತಮ್ಮ ಕುಲೀನತೆಯಿಂದ, ತಮಗಿದ್ದ ಮಹಾಶೂರರಾದ ಬಂಧುವರ್ಗದವರಿಂದ, ಬಲದಿಂದ, ಸಂಪತ್ತಿನಿಂದ ಮದೋದ್ಧತರಾಗಿ ಬಿಟ್ಟಿರುವರು. ಅವರು ಸಾಧಾರಣ ಶಿಷ್ಟಾಚಾರವನ್ನು ಲೆಕ್ಕಿಸದೆ ಅಸಭ್ಯವರ್ತನೆಯಿಂದ ಕೂಡಿದವರಾಗಿ ಬಲರಾಮನೊಂದಿಗೆ ಇಂತಹ ದುರ್ವಚನಗಳನ್ನಾಡಿ ಹಸ್ತಿನಾಪುರಕ್ಕೆ ಹಿಂದಿರುಗಿದರು. ॥ ೨೯ ॥

ದೃಷ್ಟ್ವಾಽಽಕುರೂಣಾಂ ದೌಃಶೀಲ್ಯಂ ಶ್ರುತ್ವಾವಾಚ್ಯಾನಿ ಚಾಚ್ಯುತಃ ।
ಅವೋಚತ್ಕೋಪಸಂರಬ್ಧೋ ದುಷ್ಪ್ರೇಕ್ಷ್ಯಃ ಪ್ರಹಸನ್ಮುಹುಃ
॥ ೩೦ ॥

ನೂನಂ ನಾನಾಮದೋನ್ನದ್ಧಾಃ ಶಾಂತಿಂ ನೇಚ್ಛಂತ್ಯಸಾಧವಃ ।
ತೇಷಾಂ ಹಿ ಪ್ರಶಮೋ ದಂಡಃ ಪಶೂನಾಂ ಲಗುಡೋ ಯಥಾ
॥ ೩೧ ॥

ಅಹೋ ಯದೂನ್ಸುಸಂರಬ್ಧಾನ್ ಕೃಷ್ಣಂ ಚ ಕುಪಿತಂ ಶನೈಃ ।
ಸಾಂತ್ವಯಿತ್ವಾಹಮೇತೇಷಾಂ ಶಮಮಿಚ್ಛನ್ನಿಹಾಗತಃ
॥ ೩೨ ॥

ತ ಇಮೇ ಮಂದಮತಯಃ ಕಲಹಾಭಿರತಾಃ ಖಿಲಾಃ ।
ತಂ ಮಾಮವಜ್ಞಾಯ ಮುಹುರ್ದು-
ರ್ಭಾಷಾನ್ ಮಾನಿನೋಽಬ್ರುವನ್
॥ ೩೩ ॥

ನೋಗ್ರಸೇನಃ ಕಿಲ ವಿಭುರ್ಭೋಜವೃಷ್ಣ್ಯಂಧಕೇಶ್ವರಃ ।
ಶಕ್ರಾದಯೋ ಲೋಕಪಾಲಾ ಯಸ್ಯಾದೇಶಾನುವರ್ತಿನಃ
॥ ೩೪ ॥

ಸುಧರ್ಮಾಽಽಕ್ರಮ್ಯತೇ ಯೇನ ಪಾರಿಜಾತೋಽಮರಾಂಘ್ರಿಪಃ ।
ಆನೀಯ ಭುಜ್ಯತೇ ಸೋಽಸೌ ನ ಕಿಲಾಧ್ಯಾಸನಾರ್ಹಣಃ
॥ ೩೫ ॥

ಯಸ್ಯ ಪಾದಯುಗಂ ಸಾಕ್ಷಾತ್ ಶ್ರೀರುಪಾಸ್ತೇಽಖಿಲೇಶ್ವರೀ ।
ಸ ನಾರ್ಹತಿ ಕಿಲ ಶ್ರೀಶೋ ನರದೇವಪರಿಚ್ಛದಾನ್
॥ ೩೬ ॥

ಯಸ್ಯಾಂಘ್ರಿಪಂಕಜರಜೋಽಖಿಲಲೋಕಪಾಲೈ-
ರ್ಮೌಲ್ಯುತ್ತಮೈರ್ಧೃತಮುಪಾಸಿತತೀರ್ಥತೀರ್ಥಮ್ ।
ಬ್ರಹ್ಮಾ ಭವೋಽಹಮಪಿ ಯಸ್ಯ ಕಲಾಃ ಕಲಾಯಾಃ
ಶ್ರೀಶ್ಚೋದ್ವಹೇಮ ಚಿರಮಸ್ಯ ನೃಪಾಸನಂ ಕ್ವ ॥ ೩೭ ॥

ಭುಂಜತೇ ಕುರುಭಿರ್ದತ್ತಂ ಭೂಖಿಂಡಂ ವೃಷ್ಣಯಃ ಕಿಲ ।
ಉಪಾನಹಃ ಕಿಲ ವಯಂ ಸ್ವಯಂ ತು ಕುರವಃ ಶಿರಃ
॥ ೩೮ ॥

ಬಲರಾಮನು ಕೌರವರ ದುಷ್ಟತೆಯನ್ನೂ ಅಶಿಷ್ಟತೆಯನ್ನು ನೋಡಿ, ದುರ್ವಚನಗಳನ್ನು ಕೇಳಿ ಅವನು ಕೆರಳಿ ಕೋಪದಿಂದ ಕಿಡಿ-ಕಿಡಿಯಾದನು. ಅವನನ್ನು ನೋಡಲೂ ಕೂಡ ಆಗುತ್ತಿರಲಿಲ್ಲ. ಪುನಃ ಪುನಃ ಗಟ್ಟಿಯಾಗಿ ನಗುತ್ತಾ ಹೇಳತೊಡಗಿದನು – ॥ ೩೦ ॥ ನಿಜ ! ಅಸತ್ಪುರುಷರು ಕುಲಮದ, ಧನಮದ, ವೀರ್ಯಮದ ಮೊದಲಾದ ಮದಗಳಿಂದ ಕೊಬ್ಬಿದವರಾಗಿ ಶಾಂತಿಯನ್ನು ಬಯಸುವುದಿಲ್ಲ. ಪಶುಗಳನ್ನು ಹತೋಟಿಯಲ್ಲಿಡಲು ದೊಣ್ಣೆಯೇ ಆವಶ್ಯಕವಿರುವಂತೆ, ಇಂತಹ ದುಷ್ಟರನ್ನು ಹತೋಟಿಗೆ ತರಲು ದಂಡೋಪಾಯವೇ ಸೂಕ್ತವಾದುದು. ॥ ೩೧ ॥ ನೋಡಿರಲ್ಲ! ಎಲ್ಲ ಯದುವೀರರೂ ಮತ್ತು ಶ್ರೀಕೃಷ್ಣನೂ ಕೂಡ ಕೋಪಗೊಂಡು ಯುದ್ಧಕ್ಕೆ ಸಿದ್ಧರಾಗಿದ್ದರು. ನಾನು ಅವರೆಲ್ಲರನ್ನು ಸಮಾಧಾನಪಡಿಸಿ ಶಾಂತಿಯನ್ನು ಬಯಸಿ ಇಲ್ಲಿಗೆ ಬಂದೆನು. ॥ ೩೨ ॥ ಆದರೆ ಈ ಕೌರವರು ಶಾಂತಿಪ್ರಿಯರಲ್ಲ, ಮಂದಬುದ್ಧಿಯವರು. ಕಲಹಪ್ರಿಯರು. ನೀಚರು. ದುರಭಿಮಾನಿಗಳು. ನನ್ನನ್ನು ತಿರಸ್ಕರಿಸುತ್ತಾ ಕೆಟ್ಟ-ಕೆಟ್ಟ ಮಾತುಗಳನ್ನೇ ಆಡಿದರು. ॥ ೩೩ ॥ ಇಂದ್ರನೇ ಮೊದಲಾದ ಲೋಕಪಾಲರು ಯಾರ ಆದೇಶವನ್ನು ಶಿರಸಾವಹಿಸಿಕೊಂಡು ಪಾಲಿಸುವರೋ ಅಂತಹ ಭೋಜ, ವೃಷ್ಣಿ ಅಂಧಕವಂಶೀಯರಿಗೆ ರಾಜನಾದ ಉಗ್ರಸೇನ ಮಹಾರಾಜರು ರಾಜನಲ್ಲವಂತೆ ! ಇದೆಂತಹ ಮಾತು ! ॥ ೩೪ ॥ ಯಾರು ಸುಧರ್ಮಾ ಎಂಬ ದೇವಸಭೆಯನ್ನಾಕ್ರಮಿಸಿ, ದೇವತಾವೃಕ್ಷವಾದ ಪಾರಿಜಾತವನ್ನು ಕಿತ್ತು ತಂದು ಅದರ ಫಲವನ್ನಿಲ್ಲಿ ಅನುಭವಿಸುತ್ತಿರುವನೋ ಅಂತಹ ಭಗವಾನ್ ಶ್ರೀಕೃಷ್ಣನು ರಾಜಸಿಂಹಾಸನಕ್ಕೆ ಅಧಿಕಾರಿಯಲ್ಲವಂತೆ ! ಇರಲಿ. ॥ ೩೫ ॥ ಸಮಸ್ತ ಜಗತ್ತಿಗೂ ಒಡೆಯಳಾದ ಭಗವತಿ ಲಕ್ಷ್ಮೀ ದೇವಿಯೇ ಯಾರ ಚರಣಕಮಲಗಳನ್ನು ಉಪಾಸಿಸುತ್ತಿರುವಳೋ ಅಂತಹ ಲಕ್ಷ್ಮೀಪತಿಯಾದ ಭಗವಾನ್ ಶ್ರೀಕೃಷ್ಣನಿಗೆ ರಾಜೋಚಿತವಾದ ಛತ್ರ, ಚಾಮರಾದಿಗಳು ಸಲ್ಲಿಸುವುದಿಲ್ಲವಂತೆ ! ॥ ೩೬ ॥ ಸರಿಯಪ್ಪಾ! ಸರಿ! ಯಾರ ಚರಣಕಮಲಗಳ ಧೂಳಿಯು ಸತ್ಪುರುಷರಿಂದ ಸೇವಿಸಲ್ಪಡುವ ಗಂಗೆಯೇ ಮೊದಲಾದ ತೀರ್ಥಗಳಿಗೂ ತೀರ್ಥರೂಪವಾಗಿರುವುದೋ ಅಂತಹ ಪಾದಧೂಳಿಯನ್ನು ಸಮಸ್ತ ಲೋಕಪಾಲರೂ ತಮ್ಮ-ತಮ್ಮ ಕಿರೀಟಗಳಲ್ಲಿ ಧರಿಸುವರೋ, ನಾನು, ಬ್ರಹ್ಮ, ಶಂಕರ, ಲಕ್ಷ್ಮೀದೇವಿ ಇವರೇ ಮೊದಲಾದ ವಿಭೂತಿಗಳು ಯಾರ ಅಂಶಾಂಶ ಭೂತರಾಗಿರುವೆವೋ ಹಾಗೂ ಯಾರ ಚರಣಧೂಳಿಯನ್ನು ಸದಾ ಶಿರದಲ್ಲಿ ಧರಿಸುವೆವೋ ಅಂತಹ ಶ್ರೀಕೃಷ್ಣನಿಗೆ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಅರ್ಹತೆಯಿಲ್ಲವಂತೆ ! ಎಂತಹ ಸೊಗಸಾದ ಮಾತು ! ॥ ೩೭ ॥ ಕೌರವರು ಕೊಟ್ಟಿರುವ ಭೂಮಿಯ ತುಂಡನ್ನು ಬಡಪಾಯಿಗಳಾದ ಯಾದವರು ಉಪಭೋಗಿಸುತ್ತಿದ್ದಾರಂತೆ. ನಾವು ಪಾದರಕ್ಷೆಗಳಂತೆ ! ಕುರುಗಳು ತಲೆಯಂತೆ ! ಎಂತಹ ಹೋಲಿಕೆ ! ॥ ೩೮ ॥

ಅಹೋ ಐಶ್ವರ್ಯಮತ್ತಾನಾಂ ಮತ್ತಾನಾಮಿವ ಮಾನಿನಾಮ್ ।
ಅಸಂಬದ್ಧಾ ಗಿರೋ ರೂಕ್ಷಾಃ ಕಃ ಸಹೇತಾನುಶಾಸಿತಾ
॥ ೩೯ ॥

ಅದ್ಯ ನಿಷ್ಕೌರವೀಂ ಪೃಥ್ವೀಂ ಕರಿಷ್ಯಾಮೀತ್ಯಮರ್ಷಿತಃ ।
ಗೃಹೀತ್ವಾ ಹಲಮುತ್ತಸ್ಥೌ ದಹನ್ನಿವ ಜಗತ್ತ್ರಯಮ್
॥ ೪೦ ॥

ಲಾಂಗಲಾಗ್ರೇಣ ನಗರಮುದ್ವಿದಾರ್ಯ ಗಜಾಹ್ವಯಮ್ ।
ವಿಚಕರ್ಷ ಸ ಗಂಗಾಯಾಂ ಪ್ರಹರಿಷ್ಯನ್ನಮರ್ಷಿತಃ
॥ ೪೧ ॥

ಜಲಯಾನಮಿವಾಘೂರ್ಣಂ ಗಂಗಾಯಾಂ ನಗರಂ ಪತತ್ ।
ಆಕೃಷ್ಯಮಾಣಮಾಲೋಕ್ಯ ಕೌರವಾ ಜಾತಸಂಭ್ರಮಾಃ
॥ ೪೨ ॥

ತಮೇವ ಶರಣಂ ಜಗ್ಮುಃ ಸಕುಟುಂಬಾ ಜಿಜೀವಿಷವಃ ।
ಸಲಕ್ಷ್ಮಣಂ ಪುರಸ್ಕೃತ್ಯ ಸಾಂಬಂ ಪ್ರಾಂಜಲಯಃ ಪ್ರಭುಮ್
॥ ೪೩ ॥

ರಾಮ ರಾಮಾಖಿಲಾಧಾರ ಪ್ರಭಾವಂ ನ ವಿದಾಮ ತೇ ।
ಮೂಢಾನಾಂ ನಃ ಕುಬುದ್ಧೀನಾಂ ಕ್ಷಂತುಮರ್ಹಸ್ಯತಿಕ್ರಮಮ್
॥ ೪೪ ॥

ಸ್ಥಿತ್ಯುತ್ಪತ್ತ್ಯಪ್ಯಯಾನಾಂ ತ್ವಮೇಕೋ ಹೇತುರ್ನಿರಾಶ್ರಯಃ ।
ಲೋಕಾನ್ ಕ್ರೀಡನಕಾನೀಶ ಕ್ರೀಡತಸ್ತೇ ವದಂತಿ ಹಿ
॥ ೪೫ ॥

ತ್ವಮೇವ ಮೂರ್ಧ್ನೀದಮನಂತ ಲೀಲಯಾ
ಭೂಮಂಡಲಂ ಬಿಭರ್ಷಿ ಸಹಸ್ರಮೂರ್ಧನ್ ।
ಅಂತೇ ಚ ಯಃ ಸ್ವಾತ್ಮನಿ ರುದ್ಧವಿಶ್ವಂ
ಶೇಷೇಽದ್ವಿತೀಯಃ ಪರಿಶಿಷ್ಯಮಾಣಃ ॥ ೪೬ ॥

ಕೋಪಸ್ತೇಽಖಿಲಶಿಕ್ಷಾರ್ಥಂ ನ ದ್ವೇಷಾನ್ನ ಚ ಮತ್ಸರಾತ್ ।
ಬಿಭ್ರತೋ ಭಗವನ್ಸತ್ತ್ವಂ ಸ್ಥಿತಿಪಾಲನತತ್ಪರಃ
॥ ೪೭ ॥

ನಮಸ್ತೇ ಸರ್ವಭೂತಾತ್ಮನ್ ಸರ್ವಶಕ್ತಿಧರಾವ್ಯಯ ।
ವಿಶ್ವಕರ್ಮನ್ ನಮಸ್ತೇಽಸ್ತು ತ್ವಾಂ ವಯಂ ಶರಣಂ ಗತಾಃ
॥ ೪೮ ॥

ಐಶ್ವರ್ಯಮದದಿಂದ ಉನ್ಮತ್ತರಾಗಿ ದರ್ಪಿಷ್ಠರಾಗಿರುವ ಈ ಕೌರವರು ಹುಚ್ಚರಂತಾಗಿದ್ದಾರೆ. ಇವರ ಒಂದೊಂದು ಮಾತೂ ಕಠೋರವಾಗಿದೆ ಹಾಗೂ ತಲೆ-ಬುಡ ಇಲ್ಲದ್ದಾಗಿದೆ. ಇಂತಹ ವರನ್ನು ಶಿಕ್ಷಿಸಲು, ಇವರನ್ನು ದಂಡಿಸುವ ಸಾಮರ್ಥ್ಯವುಳ್ಳ ನನ್ನಂತ ಹವನು ಇಂತಹ ಮಾತುಗಳನ್ನು ಹೇಗೆ ತಾನೇ ಸಹಿಸ ಬಲ್ಲನು ? ॥ ೩೯ ॥ 'ಇಂದು ನಾನು ಭೂಮಂಡಲವನ್ನು ಕೌರವ ರಿಂದ ರಹಿತನನ್ನಾಗಿಸಿಬಿಡುತ್ತೇನೆ' ಎಂದೆನ್ನುತ್ತಾ ಅತ್ಯಂತ ಕ್ರುದ್ಧ ನಾದ ಬಲರಾಮನು ಮೂರು ಲೋಕಗಳನ್ನು ಸುಟ್ಟುಬಿಡುವನೋ ಎಂಬಂತೆ ಹಲಾಯುಧವನ್ನು ಹಿಡಿದು ಮೇಲಕ್ಕೆದ್ದನು. ॥ ೪೦ ॥ ಬಳಿಕ ಆತನು ನೇಗಿಲತುದಿಯಿಂದ ಹಸ್ತಿನಾಪಟ್ಟಣವನ್ನು ಕಿತ್ತು ಅದನ್ನು ಮುಳುಗಿಸಿಬಿಡಬೇಕೆಂದು ಗಂಗೆಯ ಕಡೆಗೆ ಸೆಳೆಯ ತೊಡಗಿದನು. ॥ ೪೧ ॥

ಹಲಾಯುಧದಿಂದ ಸೆಳೆಯಲ್ಪಟ್ಟಾಗ ಹಸ್ತಿನಾವತಿಯು ನೀರಿ ನಲ್ಲಿರುವ ದೋಣಿಯು ಅಲ್ಲಾಡುವಂತೆ ನಡುಗತೊಡಗಿತು. ತಮ್ಮ ನಗರವಾದರೋ ಗಂಗೆಯಲ್ಲಿ ಮುಳುಗುತ್ತಾ ಇದೆ; ಎಂದು ನೋಡಿದ ಕೌರವರು ಗಾಬರಿಗೊಂಡರು. ॥ ೪೨ ॥ ಮತ್ತೆ ಕೌರವರು ಲಕ್ಷ್ಮಣೆಯ ಜೊತೆಗೆ ಸಾಂಬನನ್ನು ಮುಂದೆ ಮಾಡಿ ಕೊಂಡು ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಕುಟುಂಬ ಸಹಿತ ಕೈ ಜೋಡಿಸಿಕೊಂಡು ಸರ್ವಶಕ್ತನಾದ ಭಗವಾನ್ ಬಲರಾಮನಿಗೆ ಶರಣಾಗಿ ಪ್ರಾರ್ಥಿಸಿದರು. ॥ ೪೩ ॥ ಲೋಕಾಭಿರಾಮನಾದ ಬಲರಾಮನೇ ! ನೀನು ಸಮಸ್ತ ಜಗತ್ತಿಗೂ ಆಧಾರಭೂತನಾದ ಶೇಷನೇ ಆಗಿರುವೆ. ನಾವು ನಿನ್ನ ಪ್ರಭಾವವನ್ನು ತಿಳಿದವರಲ್ಲ, ನಾವು ನಿಶ್ಚಯವಾಗಿಯೂ ಮೂರ್ಖರು. ಕುತ್ಸಿತವಾದ ಬುದ್ಧಿಯುಳ್ಳ ವರು. ನಾವು ಮಾಡಿದ ಅಪರಾಧವನ್ನು ಕ್ಷಮಿಸಿಬಿಡು. ॥ ೪೪ ॥ ಪ್ರಭುವೇ ! ನೀನು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಏಕಮಾತ್ರ ಕಾರಣನಾಗಿರುವೆ. ನೀನು ನಿರಾಧಾರನು. ಲೋಕಗಳನ್ನೇ ಆಟಿಕೆ ಗಳನ್ನಾಗಿಸಿಕೊಂಡು ನೀನು ಆಟವಾಡುವೆಯೆಂದು ಜ್ಞಾನಿಗಳಾದ ಋಷಿ-ಮುನಿಗಳು ಹೇಳುತ್ತಾರೆ. ॥ ೪೫ ॥ ಅನಂತನೇ ! ನಿನಗೆ ಸಾವಿರ ತಲೆಗಳಿವೆ. ನೀನು ಆಟವಾಡುತ್ತಲೇ ಈ ಅಖಂಡ ಭೂಮಂಡಲವನ್ನು ನಿನ್ನ ತಲೆಯಲ್ಲಿ ಧರಿಸಿರುವೆ. ಪ್ರಳಯಕಾಲವು ಸನ್ನಿಹಿತವಾದಾಗ ಸಮಸ್ತ ಜಗತ್ತನ್ನು ನಿನ್ನಲ್ಲಿಯೇ ಲೀನಗೊಳಿಸಿ ಕೊಳ್ಳುವೆ. ಆ ಸಮಯದಲ್ಲಿ ಉಳಿದಿರುವ ನೀನೊಬ್ಬನೇ ಅದ್ವಿತೀಯ ರೂಪದಿಂದ ಪವಡಿಸುವೆ. ॥ ೪೬ ॥ ಭಗವಂತನೇ ! ನೀನು ಜಗತ್ತಿನ ಸ್ಥಿತಿ ಮತ್ತು ಪಾಲನೆಗಾಗಿ ಶುದ್ಧಸತ್ತ್ವಮಯವಾದ ಶರೀರ ವನ್ನು ಗ್ರಹಣಮಾಡುವೆ. ನಿನ್ನ ಈ ಕ್ರೋಧವು ದ್ವೇಷ ಅಥವಾ ಮತ್ಸರದ ಕಾರಣದಿಂದ ಉಂಟಾದುದಲ್ಲ, ಇದಾದರೋ ಸಮಸ್ತ ಪ್ರಾಣಿಗಳ ಶಿಕ್ಷಣಾರ್ಥವಾಗಿಯೇ ಇದೆ. ॥ ೪೭ ॥ ಸಮಸ್ತ ಶಕ್ತಿಗಳನ್ನು ಧರಿಸತಕ್ಕವನೇ ! ಸಮಸ್ತ ಪ್ರಾಣಿಗಳ ಆತ್ಮಸ್ವರೂಪನೇ ಅವಿನಾಶಿಯೇ ! ಭಗವಂತನೇ ! ನಾವು ನಿನಗೆ ನಮಸ್ಕರಿಸುತ್ತೇವೆ. ಸಮಸ್ತ ವಿಶ್ವವನ್ನೂ ಸೃಷ್ಟಿಸುವ ದೇವನೇ ! ನಾವು ಪುನಃ ಪುನಃ ನಿನಗೆ ನಮಸ್ಕರಿಸುತ್ತೇವೆ. ನಾವು ನಿನಗೆ ಶರಣಾಗಿದ್ದೇವೆ. ನೀನು ದಯಮಾಡಿ ನಮ್ಮನ್ನು ರಕ್ಷಿಸು. ॥ ೪೮ ॥

ಶ್ರೀಶುಕ ಉವಾಚ

ಏವಂ ಪ್ರಪನ್ನೈಃ ಸಂವಿಗ್ಭಿರ್ವೀಪಮಾನಾಯನೈರ್ಬಲಃ ।
ಪ್ರಸಾದಿತಃ ಸುಪ್ರಸನ್ನೋ ಮಾ ಭೈಷ್ಟೇತ್ಯಭಯಂ ದದೌ
॥ ೪೯ ॥

ದುರ್ಯೋಧನಃ ಪಾರಿಬರ್ಹಂ ಕುಂಜರಾನ್ ಷಷ್ಟಿಹಾಯನಾನ್ ।
ದದೌ ಚ ದ್ವಾದಶಶತಾನ್ಯಯುತಾನಿ ತುರಂಗಮಾನ್
॥ ೫೦ ॥

ರಥಾನಾಂ ಷಟ್ ಸಹಸ್ರಾಣಿ ರೌಕ್ಮಾಣಾಂ ಸೂರ್ಯವರ್ಚಸಾಮ್ ।
ದಾಸೀನಾಂ ನಿಷ್ಕಕಂಠೀನಾಂ ಸಹಸ್ರಂ ದುಹಿತೃವತ್ಸಲಃ
॥ ೫೧ ॥

ಪ್ರತಿಗೃಹ್ಯ ತು ತತ್ಸರ್ವಂ ಭಗವಾನ್ ಸಾತ್ವತರ್ಷಭಃ ।
ಸಸುತಃ ಸಸ್ನುಷಃ ಪ್ರಾಗಾತ್ಸುಹೃದ್ಭಿರಭಿನಂದಿತಃ
॥ ೫೨ ॥

ತತಃ ಪ್ರವಿಷ್ಟಃ ಸ್ವಪುರಂ ಹಲಾಯುಧಃ
ಸಮೇತ್ಯ ಬಂಧೂನನುರಕ್ತಚೇತಸಃ ।
ಶಶಂಸ ಸರ್ವಂ ಯದುಪುಂಗವಾನಾಂ
ಮಧ್ಯೇ ಸಭಾಯಾಂ ಕುರುಷು ಸ್ವಚೇಷ್ಟಿತಮ್ ॥ ೫೩ ॥

ಅದ್ಯಾಪಿ ಚ ಪುರಂ ಹ್ಯೇತತ್ಸೂಚಯದ್ರಾಮವಿಕ್ರಮಮ್ ।
ಸಮುನ್ನತಂ ದಕ್ಷಿಣತೋ ಗಂಗಾಯಾಮನುದೃಶ್ಯತೇ
॥ ೫೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕೌರವರ ಗಜಪುರಿಯು ನಡುಗುತ್ತಾ ಇದ್ದು ಅವರು ಅತ್ಯಂತ ಗಾಬರಿಗೊಂಡಿದ್ದರು. ಸಮಸ್ತ ಕುರುವಂಶೀಯರು ಹೀಗೆ ಭಗವಾನ್ ಬಲರಾಮನಿಗೆ ಶರಣಾಗಿ, ಅವನನ್ನು ಪ್ರಾರ್ಥಿಸಿದಾಗ ಅವನು ಪ್ರಸನ್ನನಾಗಿ – 'ಹೆದರಬೇಡಿರಿ' ಎಂದು ಹೇಳಿ ಅವರಿಗೆ ಅಭಯವನ್ನು ನೀಡಿದನು. ॥ ೪೯ ॥ ಪರೀಕ್ಷಿತನೇ! ಅನಂತರ ಮಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದ ದುರ್ಯೋಧನನು ಅರವತ್ತು ವರ್ಷವಯಸ್ಸಿನ ಹನ್ನೆರಡು ನೂರು ಆನೆಗಳನ್ನು, ಹತ್ತ ಸಾವಿರ ಕುದುರೆಗಳನ್ನು ಸೂರ್ಯನಂತೆ ಹೊಳೆಯುವ ಚಿನ್ನದ ಆರು ಸಾವಿರ ರಥಗಳನ್ನು ಮತ್ತು ಸುವರ್ಣ ಹಾರಗಳಿಂದ ಸಮಲಂಕೃತೆಯರಾದ ಒಂದು ಸಾವಿರ ದಾಸಿಯರನ್ನು ಮಗಳಿಗೆ ಬಳುವಳಿಯಾಗಿ ಕೊಟ್ಟನು. ॥ ೫೦-೫೧ ॥ ಯದುವಂಶ ಶಿರೋಮಣಿಯಾದ ಬಲರಾಮನು ಸಮಸ್ತವಾದ ಬಳುವಳಿಯನ್ನು ಸ್ವೀಕರಿಸಿ ಲಕ್ಷ್ಮಣೆ ಮತ್ತು ಸಾಂಬರೊಂದಿಗೆ ಕೌರವರ ಅಭಿನಂದನೆಗಳನ್ನು ಸ್ವೀಕರಿಸಿ ದ್ವಾರಕೆಗೆ ಪ್ರಯಾಣ ಬೆಳೆಸಿದನು. ॥ ೫೨ ॥

ಬಲರಾಮನು ದ್ವಾರಕೆಗೆ ಹೋಗಿ ತನ್ನಲ್ಲಿಯೇ ಅನುರಕ್ತರಾಗಿದ್ದ ಹಾಗೂ ಸಮಾಚಾರವನ್ನು ತಿಳಿಯಲು ಉತ್ಸುಕರಾದ ಬಂಧುಗಳೊಡನೆ ಸೇರಿ, ಯದುಪುಂಗವರ ಸಭಾಮಧ್ಯದಲ್ಲಿ ತಾನು ಕೌರವರೊಂದಿಗೆ ವ್ಯವಹರಿಸಿದ ಸಕಲ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳಿದನು. ॥ ೫೩ ॥ ಪರೀಕ್ಷಿತನೇ! ಹಸ್ತಿನಾಪುರವು ಈಗಲೂ ದಕ್ಷಿಣದಿಕ್ಕಿನಲ್ಲಿ ಸ್ವಲ್ಪ ಎತ್ತರವಾಗಿದ್ದು ಗಂಗಾನದಿಯ ಕಡೆಗೆ ಸ್ವಲ್ಪವಾಲಿಕೊಂಡಿದೆ. ಹೀಗೆ ಅದು ಭಗವಾನ್ ಬಲರಾಮನ ಅತುಲಪರಾಕ್ರಮವನ್ನು ಸೂಚಿಸುತ್ತದೆ. ॥ ೫೪ ॥

ಅರವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೬೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಹಸ್ತಿನಾಪುರಕರ್ಷಣರೂಪಸಂಕರ್ಷಣವಿಜಯೋ ನಾಮ ಅಷ್ಟಷಷ್ಟಿತಮೋऽಧ್ಯಾಯಃ॥ ೬೮ ॥

ಅರವತ್ತೊಂಭತ್ತನೆಯ ಅಧ್ಯಾಯ

ದೇವರ್ಷಿ ನಾರದರು ಭಗವಂತನ ಗೃಹಸ್ಥ ವ್ಯವಹಾರಗಳನ್ನು ನೋಡಿದುದು

ಶ್ರೀಶುಕ ಉವಾಚ

ನರಕಂ ನಿಹತಂ ಶ್ರುತ್ವಾ ತಥೋದ್ವಾಹಂ ಚ ಯೋಷಿತಾಮ್ ।
ಕೃಷ್ಣೇನೈಕೇನ ಬಹ್ವೀನಾಂ ತದ್ದಿದೃಕ್ಷುಃ ಸ್ಮ ನಾರದಃ
॥ ೧ ॥

ಚಿತ್ರಂ ಬತೈತದೇಕೇನ ವಪುಷಾ ಯುಗಪತ್ ಪೃಥಕ್ ।
ಗೃಹೇಷು ದ್ವ್ಯಷ್ಟಸಾಹಸ್ರಂ ಸ್ತ್ರಿಯ ಏಕ ಉದಾವಹತ್
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ನರಕಾಸುರನನ್ನು ಕೊಂದು ಒಬ್ಬನೇ ಸಾವಿರಾರು ರಾಜಕುಮಾರಿಯರೊಂದಿಗೆ ವಿವಾಹವಾದನೆಂದು ಕೇಳಿದ ನಾರದಮಹರ್ಷಿಗಳಿಗೆ ಭಗವಂತನು ಅವರೊಂದಿಗೆ ಗೃಹಚರ್ಯೆಯನ್ನು ಹೇಗೆ ನಡೆಸುವನೆಂದು ನೋಡುವ ಬಯಕೆ ಉಂಟಾಯಿತು. ॥ ೧ ॥ ಅವರು ಹೀಗೆ ಯೋಚಿಸತೊಡಗಿದರು ಭಗವಾನ್ ಶ್ರೀಕೃಷ್ಣನು ಒಂದೇ ಶರೀರದಲ್ಲಿ ಒಂದೇ ಸಮಯದಲ್ಲಿ ಹದಿನಾರು ಸಾವಿರ ಅರಮನೆಯಲ್ಲಿ ಬೇರೆ-ಬೇರೆಯಾಗಿ ಹದಿನಾರು ಸಾವಿರ ರಾಜಕುಮಾರಿಯರೊಂದಿಗೆ ಹೇಗೆ ಪಾಣಿಗ್ರಹಣ ಮಾಡಿದನು? ಇದು ಪರಮಾಶ್ಚರ್ಯವಾಗಿದೆ. ॥ ೨ ॥

ಇತ್ಯುತ್ಸುಕೋ ದ್ವಾರವತೀಂ ದೇವರ್ಷಿರ್ದರ್ಶನೋತ್ಸವಃ ।
ಪುಷ್ಪಿತೋಪವನಾರಾಮದ್ವಿಜಾಲಿಕುಲನಾದಿತಾಮ್
॥ ೩ ॥

ಉತ್ಫುಲ್ಲೇಂದೀವರಾಂಭೋಜಕಹ್ಲಾರಕುಮುದೋತ್ಪಲೈಃ ।
ಛುರಿತೇಷು ಸರಸ್ಸ್ವಚ್ಛೈಃ ಕೂಜಿತಾಂ ಹಂಸಸಾರಸೈಃ
॥ ೪ ॥

ಪ್ರಾಸಾದಲಕ್ಷೈರ್ನವಭಿರ್ಜುಷ್ಟಾಂ ಸ್ಫಾಟಿಕರಾಜತೈಃ ।
ಮಹಾಮರಕತಪ್ರಖ್ಯೈಃ ಸ್ವರ್ಣರತ್ನಪರಿಚ್ಛದೈಃ
॥ ೫ ॥

ವಿಭಕ್ತರಥ್ಯಾಪಥಚತ್ವರಾಪಣೈಃ
ಶಾಲಾಸಭಾಭೀ ರುಚಿರಾಂ ಸುರಾಲಯೈಃ ।
ಸಂಸಿಕ್ತಮಾರ್ಗಾಂಗಣವೀಥಿದೇಹಲೀಂ
ಪತತ್ಪತಾಕಾಧ್ವಜವಾರಿತಾತಪಾಮ್ ॥ ೬ ॥

ತಸ್ಯಾಮಂತಃಪುರಂ ಶ್ರೀಮದರ್ಚಿತಂ ಸರ್ವಧಿಷ್ಣ್ಯಪೈಃ ।
ಹರೇಃ ಸ್ವಕೌಶಲಂ ಯತ್ರ ತ್ವಷ್ಟಾ ಕಾರ್ತ್ಸ್ನ್ಯೇನ ದರ್ಶಿತಮ್
॥ ೭ ॥

ತತ್ರ ಷೋಡಶಭಿಃ ಸದ್ಮಸಹಸ್ರೈಃ ಸಮಲಂಕೃತಮ್ ।
ವಿವೇಶೈಕತಮಂ ಶೌರೇಃ ಪತ್ನೀನಾಂ ಭವನಂ ಮಹತ್
॥ ೮ ॥

ವಿಷ್ಟಬ್ಧಂ ವಿದ್ರುಮಸ್ತಂಭೈರ್ವೈದೂರ್ಯಫಲಕೋತ್ತಮೈಃ ।
ಇಂದ್ರನೀಲಮಯೈಃ ಕುಡ್ಯೈರ್ಜಗತ್ಯಾ ಚಾಹತತ್ವಿಷಾ
॥ ೯ ॥

ವಿತಾನೈರ್ನಿರ್ಮಿತೈಸ್ತ್ವಷ್ಟಾ ಮುಕ್ತಾದಾಮವಿಲಂಬಿಭಿಃ ।
ದಾಂತೈರಾಸನಪರ್ಯಂಕೈರ್ಮಣ್ಯುತ್ತಮಪರಿಷ್ಕೃತೈಃ
॥ ೧೦ ॥

ದಾಸೀಭಿರ್ನಿಷ್ಕಕಂಠೀಭಿಃ ಸುವಾಸೋಭಿರಲಂಕೃತಮ್ ।
ಪುಂಭಿಃ ಸಕಂಚುಕೋಷ್ಣೀಷಸುವಸ್ತ್ರಮಣಿಕುಂಡಲೈಃ
॥ ೧೧ ॥

ರತ್ನಪ್ರದೀಪನಿಕರದ್ಯುತಿಭಿರ್ನಿರಸ್ತ-
ಧ್ವಾಂತಂ ವಿಚಿತ್ರವಲಭೀಷು ಶಿಖಂಡಿನೋಽಂಗ ।
ನೃತ್ಯಂತಿ ಯತ್ರ ವಿಹಿತಾಗುರುಧೂಪಮಕ್ಷೈ-
ರ್ನಿರ್ಯಾಂತಮೀಕ್ಷ್ಯ ಘನಬುದ್ಧಯ ಉನ್ನದಂತಃ ॥ ೧೨ ॥

ದೇವಋಷಿ ನಾರದರು ಈ ಉತ್ಸುಕತೆಯಿಂದ ಪ್ರೇರಿತರಾಗಿ ಭಗವಂತನ ಲೀಲೆಗಳನ್ನು ನೋಡಲಿಕ್ಕಾಗಿ ದ್ವಾರಕೆಗೆ ಬಂದರು. ಅಲ್ಲಿನ ವನ-ಉಪವನಗಳಲ್ಲಿ ಬಣ್ಣ-ಬಣ್ಣದ ಅರಳಿದ ಪುಷ್ಪ ಗಳಿಂದ ತುಂಬಿದ ವೃಕ್ಷಗಳು ತುಂಬಿಕೊಂಡಿದ್ದವು. ಅವುಗಳಲ್ಲಿ ನಾನಾ ರೀತಿಯ ಪಕ್ಷಿಗಳು ಚಿಲಿ-ಪಿಲಿಗುಟ್ಟುತ್ತಿದ್ದವು. ದುಂಬಿಗಳು ಝೇಂಕರಿಸುತ್ತಿದ್ದವು. ॥ ೩. ॥ ನಿರ್ಮಲವಾದ ನೀರಿನಿಂದ ತುಂಬಿದ ಸರೋವರಗಳಲ್ಲಿ ನೀಲಿ, ಕೆಂಪು, ಬಿಳಿ ಬಣ್ಣಗಳ ಕಮಲ ನೈದಿಲೆ, ಕೆನ್ನೈದಿಲೆ ಮೊದಲಾದ ಸುಗಂಧಯುಕ್ತವಾದ ಪುಷ್ಪಗಳಿದ್ದವು. ಆ ಪುಷ್ಪಗಳ ಮಧ್ಯದಲ್ಲಿ ಹಂಸ-ಕಾರಂಡವ ಮೊದಲಾದ ಪಕ್ಷಿಗಳು ಕಲರವ ಮಾಡುತ್ತಿದ್ದವು. ॥ ೪ ॥ ದ್ವಾರಕೆಯಲ್ಲಿ ಸ್ಫಟಿಕದ ಮತ್ತು ಬೆಳ್ಳಿಯಿಂದ ನಿರ್ಮಿಸಿದ ಒಂಭತ್ತು ಲಕ್ಷ ಅರಮನೆಗಳಿದ್ದವು. ಅವುಗಳ ನೆಲಗಳು ಮರಕತಮಣಿಗಳ ಪ್ರಭೆಯಿಂದ ಹೊಳೆಯು ತ್ತಿದ್ದುವು ಮತ್ತು ಅವುಗಳಲ್ಲಿ ಚಿನ್ನ ಹಾಗೂ ವಜ್ರಗಳಿಂದ ಮಾಡಿದ ಪರಿಕರಗಳಿಂದ ಸಂಪನ್ನವಾಗಿದ್ದವು. ॥ ೫ ॥ ಅಲ್ಲಿಯ ರಾಜಬೀದಿ ಗಳು, ಗಲ್ಲಿಗಳು, ಚೌಕಗಳು, ಪೇಟೆಗಳು ಅತ್ಯಂತ ಸುಂದರ ವಾಗಿದ್ದವು. ಅಶ್ವಶಾಲೆಗಳು, ಗೋಶಾಲೆಗಳು, ಸಭಾಭವನಗಳು, ದೇವ ಮಂದಿರಗಳು ಇವುಗಳಿಂದಾಗಿ ಅದರ ಸೌಂದರ್ಯವು ಇನ್ನೂ ಬೆಳಗುತ್ತಿತ್ತು. ದ್ವಾರಕೆಯ ಬೀದಿಗಳಲ್ಲಿ, ಚೌಕಗಳಲ್ಲಿ, ಓಣಿಗಳಲ್ಲಿ, ಬಾಗಿಲುಗಳಲ್ಲಿ ಸುಗಂಧ ದ್ರವ್ಯಗಳನ್ನು ಸಿಂಪಡಿಸಿತ್ತು. ಹಾರಾಡುತ್ತಿದ್ದ ಧ್ವಜ-ಪತಾಕೆಗಳು ಬಿಸಿಲಿನ ತಾಪವನ್ನು ತಡೆಯುತ್ತಿದ್ದವು. ॥ ೬ ॥

ಆ ದ್ವಾರಕೆಯ ಮಧ್ಯಭಾಗದಲ್ಲಿ ಭಗವಾನ್ ಶ್ರೀಕೃಷ್ಣನ ವಿಶಾಲ ವಾದ ಸುಂದರವಾದ ಲೋಕಪಾಲರಿಂದ ಪೂಜಿಸಲ್ಪಡುತ್ತಿದ್ದ ಅಂತಃಪುರವಿತ್ತು. ಅದನ್ನು ನಿರ್ಮಿಸಲು ವಿಶ್ವಕರ್ಮನು ತನ್ನ ಎಲ್ಲ ಕಲಾ-ಕೌಶಲ್ಯವನ್ನು ಉಪಯೋಗಿಸಿದ್ದನು. ॥ ೭ ॥ ಅತ್ಯಂತ ದೊಡ್ಡ ದಾದ ಆ ಅಂತಃಪುರವು ಹದಿನಾರು ಸಾವಿರ ಉಪಾಂತಃಪುರ ಗಳಿಂದ ಸಮಲಂಕೃತವಾಗಿತ್ತು. ಶೌರಿಯ ಅಷ್ಟು ಅಂತಃಪುರಗಳಲ್ಲಿ ದೊಡ್ಡದಾದ ಭವನದಲ್ಲಿ ನಾರದರು ಪ್ರವೇಶಿಸಿದರು. ॥ ೮ ॥ ಆ ಭವನದಲ್ಲಿ ವೈಡೂರ್ಯದ ಬೋದಿಗೆಗಳಿಂದ ಕೂಡಿದ ಹವಳದ ಕಂಬಗಳು, ಇಂದ್ರನೀಲಮಣಿಯ ಗೋಡೆಗಳು ಮತ್ತು ನೆಲಗಳು ಥಳ-ಥಳಿಸುತ್ತಿದ್ದವು. ॥ ೯ ॥ ಮುತ್ತಿನ ಸರಗಳಿಂದ ಸಮಲಂಕೃತವಾದ ಅನೇಕ ಚಪ್ಪರಗಳು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿತ್ತು. ಹಸ್ತಿದಂತದಿಂದ ಮಾಡಿದ ಆಸನಗಳೂ ಮತ್ತು ಮಂಚಗಳಿದ್ದು, ಅವುಗಳಲ್ಲಿ ಶ್ರೇಷ್ಠವಾದ ಮಣಿ-ರತ್ನಗಳನ್ನು ಜೋಡಿಸಿದ್ದರು. ॥ ೧೦ ॥ ಸುಂದರವಾದ ವಸ್ತ್ರಗಳನ್ನುಟ್ಟು ಚಿನ್ನದ ಸರಗಳನ್ನು ಧರಿಸಿದ್ದ ನೂರಾರು ದಾಸಿಯರಿಂದ ಆ ಭವನವು ಸಮಲಂಕೃತವಾಗಿತ್ತು. ಅಂಗಿ-ಪೇಟ-ಸುಂದರವಾದ ಸಮವಸ್ತ್ರ ಮತ್ತು ಮಣಿಕುಂಡಲಗಳನ್ನು ಧರಿಸಿದ್ದ ಸೇವಕರೂ ತಮ್ಮ-ತಮ್ಮ ಕೆಲಸದಲ್ಲಿ ವ್ಯಸ್ತರಾಗಿದ್ದು ಭವನದ ಶೋಭೆಯನ್ನು ಹೆಚ್ಚಿಸಿ ದ್ದರು. ॥ ೧೧ ॥ ಅನೇಕ ರತ್ನದೀಪಗಳು ತಮ್ಮ ಪ್ರಭೆಯಿಂದ ಕತ್ತಲನ್ನು ಓಡಿಸುತ್ತಿದ್ದವು. ಅಗರು ಧೂಪದ ಹೊಗೆಯು ಕಿಡಿಕಿ ಗಳಿಂದ ಹೊರಸೂಸುತ್ತಿತ್ತು. ಅದನ್ನು ನೋಡಿದ ನವಿಲುಗಳು ಮೋಡಗಳೆಂದು ಭ್ರಮಿಸಿ ಕೇಕೆಹಾಕಿ ಕುಣಿಯುತ್ತಿದ್ದವು. ॥ ೧೨ ॥

ತಸ್ಮಿನ್ ಸಮಾನಗುಣರೂಪವಯಸ್ಸುವೇಷ-
ದಾಸೀಸಹಸ್ರಯುತಯಾನುಸವಂ ಗೃಹಿಣ್ಯಾ ।
ವಿಪ್ರೋ ದದರ್ಶ ಚಮರವ್ಯಜನೇನ ರುಕ್ಮ-
ದಂಡೇನ ಸಾತ್ವತಪತಿಂ ಪರಿವೀಜಯಂತ್ಯಾ ॥ ೧೩ ॥

ಅಂತಹ ದಿವ್ಯವಾದ ಅಂತಃಪುರದಲ್ಲಿ ರೂಪ-ಗುಣ ವಯಸ್ಸು-ವೇಷ-ಇವುಗಳಲ್ಲಿ ತನಗೆ ಸಮಾನರಾಗಿದ್ದ ಸಾವಿರಾರು ದಾಸಿಯರಿಂದ ಪರಿವೃತಳಾದ ರುಕ್ಮಿಣೀದೇವಿಯು ಚಿನ್ನದ ಹಿಡಿಯುಳ್ಳ ಬೀಸಣಿಕೆಯನ್ನು ಹಿಡಿದು ಪರ್ಯಂಕದಲ್ಲಿ ಕುಳಿತ್ತಿದ್ದ ಶ್ರೀಕೃಷ್ಣನಿಗೆ ಗಾಳಿ ಬೀಸುತ್ತಿರುವುದನ್ನು ನಾರದರು ನೋಡಿದರು. ॥ ೧೩ ॥

ತಂ ಸನ್ನಿರೀಕ್ಷ್ಯ ಭಗವಾನ್ ಸಹಸೋತ್ಥಿತಃ ಶ್ರೀ-
ಪರ್ಯಂಕತಃ ಸಕಲಧರ್ಮಭೃತಾಂ ವರಿಷ್ಠಃ ।
ಆನಮ್ಯ ಪಾದಯುಗಲಂ ಶಿರಸಾ ಕಿರೀಟ-
ಜುಷ್ಟೇನ ಸಾಂಜಲಿರವೀವಿಶದಾಸನೇ ಸ್ವೇ ॥ ೧೪ ॥

ನಾರದ ಮಹರ್ಷಿಗಳನ್ನು ಕಾಣುತ್ತಲೇ ಸಮಸ್ತ ಧಾರ್ಮಿಕರ ಮುಕುಟಮಣಿಯಾದ ಭಗವಾನ್ ಶ್ರೀಕೃಷ್ಣನು ರುಕ್ಮಿಣಿಯ ಪರ್ಯಂಕದಿಂದ ಮೇಲೆದ್ದು ಮುಂದೆ ಹೋಗಿ ಅವರ ಚರಣ ಕಮಲಗಳಿಗೆ ಕಿರೀಟದಿಂದ ಕೂಡಿದ ತಲೆಯಿಂದ ನಮಸ್ಕರಿಸಿ, ಕೈಜೋಡಿಸಿಕೊಂಡು ಅವರನ್ನು ತನ್ನ ಆಸನದಲ್ಲಿ ಕುಳ್ಳಿರಿಸಿದನು. ॥ ೧೪ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಚರಾಚರ ಜಗತ್ತಿಗೆ ಪರಮಗುರುವಾಗಿದ್ದು, ಅವನ ಚರಣಕಮಲಗಳಿಂದ ಹುಟ್ಟಿದ ಗಂಗೆಯು ಮೂರು ಲೋಕಗಳನ್ನು ಪಾವನಗೊಳಿಸುವಂತಹುದು. ಹೀಗಿದ್ದರೂ ಅವನು ಪರಮಭಕ್ತವತ್ಸಲನೂ, ಸಂತರ ಪರಮ ಆದರ್ಶನೂ, ಸಂತರ ಸ್ವಾಮಿಯೂ ಆಗಿರುವನು. ಅವನಿಗೆ ಬ್ರಹ್ಮಣ್ಯದೇವ ಎಂಬುದೊಂದು ಅಸಾಧಾರಣ ಹೆಸರೂ ಕೂಡ ಇದೆ. ಅವನು ಬ್ರಾಹ್ಮಣರನ್ನೇ ತನ್ನ ಆರಾಧ್ಯರೆಂದು ಭಾವಿಸುವನು. ಬ್ರಹ್ಮಣ್ಯದೇವ ಎಂಬ ನಾಮವು ಅವನ ಗುಣಗಳಿಗೆ ಅನುರೂಪವೇ ಆಗಿದ್ದು ಉಚಿತವೂ ಆಗಿದೆ. ಆದರಿಂದಲೇ ಶ್ರೀಕೃಷ್ಣನು ನಾರದರ ಕಾಲನ್ನು ತೊಳೆದು ಆ ಚರಣೋದಕವನ್ನು ತನ್ನ ತಲೆಯಲ್ಲಿ ಧರಿಸಿಕೊಂಡನು. ॥ ೧೫ ॥ ಹೀಗೆ ಅರ್ಜುನನ ಮಿತ್ರನೂ, ಸಮದರ್ಶಿಯೂ ಪುರಾಣಪುರುಷನೂ ಆದ ಭಗವಾನ್ ಶ್ರೀನಾರಾಯಣನು ಶಾಸ್ತ್ರೋಕ್ತವಿಧಿಯಿಂದ ದೇವರ್ಷಿ ಶ್ರೇಷ್ಠರಾದ ನಾರದರನ್ನು ಪೂಜಿಸಿದನು. ಅನಂತರ ಅಮೃತಕ್ಕಿಂತಲೂ ಮಧುರವಾದ, ಮಿತವಾದ ಮಾತುಗಳಿಂದ ಅವರನ್ನು ಸ್ವಾಗತಿಸಿ-ಸತ್ಕರಿಸಿ, ಕೇಳಿದನು - ಪ್ರಭುಗಳೇ! ಷಡ್ಗುಣೈಶ್ವರ್ಯ ಸಂಪನ್ನರಾದ ನಿಮಗೆ ನಾನು ಯಾವ ಸೇವೆ ಮಾಡಲಿ ? ॥ ೧೬ ॥

ತಸ್ಯಾವನಿಜ್ಯ ಚರಣೌ ತದಪಃ ಸ್ವಮೂರ್ಧ್ನಾ
ಬಿಭ್ರಜ್ಜಗದ್ಗುರುತರೋಽಪಿ ಸತಾಂ ಪತಿರ್ಹಿ ।
ಬ್ರಹ್ಮಣ್ಯದೇವ ಇತಿ ಯದ್ಗುಣನಾಮ ಯುಕ್ತಂ
ತಸ್ಯೈವ ಯಚ್ಚರಣಶೌಚಮಶೇಷತೀರ್ಥಮ್ ॥ ೧೫ ॥

ಸಂಪೂಜ್ಯ ದೇವಋಷಿವರ್ಯಮೃಷಿಃ ಪುರಾಣೋ
ನಾರಾಯಣೋ ನರಸಖೋ ವಿಧಿನೋದಿತೇನ ।
ವಾಣ್ಯಾಭಿಭಾಷ್ಯ ಮಿತಯಾಮೃತಮಿಷ್ಟಯಾ ತಂ
ಪ್ರಾಹ ಪ್ರಭೋ ಭಗವತೇ ಕರವಾಮ ಹೇ ಕಿಮ್ ॥ ೧೬ ॥

ದೇವರ್ಷಿ ನಾರದರು ಹೇಳಿದರು - ಭಗವಂತಾ! ನೀನು ಸಮಸ್ತ ಲೋಕಗಳಿಗೆ ಏಕಮಾತ್ರ ಸ್ವಾಮಿಯಾಗಿರುವೆ. ಭಕ್ತರಲ್ಲಿ ಪ್ರೇಮ, ದುಷ್ಟರಲ್ಲಿ ದಂಡವೆಂಬುದು ನಿನ್ನಲ್ಲಿ ಹೊಸದಾದ ವಿಷಯವೇನೂ ಅಲ್ಲ. ಪರಮಯಶಸ್ವಿಯಾದ ಪ್ರಭೋ! ನೀನು ಜಗತ್ತಿನ ಸ್ಥಿತಿ ಮತ್ತು ರಕ್ಷಣೆಯ ಮೂಲಕ ಸಮಸ್ತ ಪ್ರಾಣಿಗಳಿಗೂ ಕಲ್ಯಾಣವನ್ನುಂಟುಮಾಡುವ ಸಲುವಾಗಿಯೇ ಸ್ವೆಚ್ಛೆಯಿಂದ ಅವತಾರವೆತ್ತುವೆ. ಉರುಗಾಯನೇ! ನಾವು ಈ ವಿಷಯವನ್ನು ಚೆನ್ನಾಗಿ ತಿಳಿದಿರುತ್ತೇವೆ. ॥ ೧೭ ॥ ಇಂದು ನನಗೆ ನಿನ್ನ ಚರಣ ಕಮಲಗಳ ದರ್ಶನವಾದುದು ದೊಡ್ಡ ಸೌಭಾಗ್ಯದ ಮಾತಾಗಿದೆ. ನಿನ್ನ ಈ ಚರಣಕಮಲಗಳು ಸಮಸ್ತ ಜನರಿಗೆ ಮೋಕ್ಷವನ್ನು ಕೊಡುವುದರಲ್ಲಿ ಸಮರ್ಥವಾಗಿವೆ. ಅಸೀಮವಾದ ಜ್ಞಾನವುಳ್ಳ ಬ್ರಹ್ಮಾ ಶಂಕರರೇ ಮೊದಲಾದವರು ಸದಾಕಾಲ ತಮ್ಮ ಹೃದಯದಲ್ಲಿ ಅವುಗಳನ್ನು ಚಿಂತಿಸುತ್ತಾ ಇರುತ್ತಾರೆ. ವಾಸ್ತವವಾಗಿ ಆ ಶ್ರೀಚರಣಗಳೇ ಸಂಸಾರವೆಂಬ ಬಾವಿಯಲ್ಲಿ ಬಿದ್ದಿರುವ ಜನರನ್ನು ಮೇಲಕ್ಕೆತ್ತಲೂ ಆಧಾರಭೂತವಾಗಿದೆ. ನಿನ್ನ ಆ ಚರಣಕಮಲಗಳ ಸ್ಮರಣೆಯು ನನಗಿರಲಿ ಮತ್ತು ನಾನು ಎಲ್ಲೇ ಇದ್ದರೂ, ಹೇಗಿದ್ದರೂ ಅವುಗಳ ಧ್ಯಾನದಲ್ಲೇ ತನ್ಮಯನಾಗಿರುವಂತೆ ಅನುಗ್ರಹಿಸು. ॥ ೧೭ ॥

ನಾರದ ಉವಾಚ

ನೈವಾದ್ಭುತಂ ತ್ವಯಿ ವಿಭೋಽಖಿಲಲೋಕನಾಥೇ
ಮೈತ್ರೀ ಜನೇಷು ಸಕಲೇಷು ದಮಃ ಖಲಾನಾಮ್ ।
ನಿಃಶ್ರೇಯಸಾಯ ಹಿ ಜಗತ್ಸ್ಥಿತಿರಕ್ಷಣಾಭ್ಯಾಂ
ಸ್ವೈರಾವತಾರ ಉರುಗಾಯ ವಿದಾಮ ಸುಷ್ಠು ॥ ೧೭ ॥

ದೃಷ್ಟಂ ತವಾಂಘ್ರಿಯುಗಲಂ ಜನತಾಪವರ್ಗಂ
ಬ್ರಹ್ಮಾದಿಭಿರ್ಹೃದಿ ವಿಚಿಂತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಂಬಂ
ಧ್ಯಾಯಂಶ್ಚರಾಮ್ಯನುಗೃಹಾಣ ಯಥಾ ಸ್ಮೃತಿಃ ಸ್ಯಾತ್ ॥ ೧೮ ॥

ತತೋಽನ್ಯದಾವಿಶದ್ಗೇಹಂ ಕೃಷ್ಣಪತ್ನ್ಯಾಃ ಸ ನಾರದಃ ।
ಯೋಗೇಶ್ವರೇಶ್ವರಸ್ಯಾಂಗ ಯೋಗಮಾಯಾವಿವಿತ್ಸಯಾ
॥ ೧೯ ॥

ದೀವ್ಯಂತಮಕ್ಷೈಸ್ತತ್ರಾಪಿ ಪ್ರಿಯಯಾ ಚೋದ್ಧವೇನ ಚ ।
ಪೂಜಿತಃ ಪರಯಾ ಭಕ್ತ್ಯಾ ಪ್ರತ್ಯುತ್ಥಾನಾಸನಾದಿಭಿಃ
॥ ೨೦ ॥

ಪೃಷ್ಟಶ್ಚಾವಿದುಷೇವಾಸೌ ಕದಾಽಽಯಾತೋ ಭವಾನಿತಿ ।
ಕ್ರಿಯತೇ ಕಿಂ ನು ಪೂರ್ಣಾನಾಮಪೂರ್ಣೈರಸ್ಮದಾದಿಭಿಃ
॥ ೨೧ ॥

ಅಥಾಪಿ ಬ್ರೂಹಿ ನೋ ಬ್ರಹ್ಮನ್ನೈತಚ್ಚೋಭನಂ ಕುರು ।
ಸ ತು ವಿಸ್ಮಿತ ಉತ್ಥಾಯ ತೂಷ್ಣೀಮನ್ಯದಗಾದ್ಗೃಹಮ್
॥ ೨೨ ॥

ತತ್ರಾಪ್ಯಚಷ್ಟಗೋವಿಂದಂ ಲಾಲಯಂತಂ ಸುತಾನ್ನಿಜಾನ್ ।
ತತೋಽನ್ಯಸ್ಮಿನ್ಗೃಹೇಽಪಶ್ಯನ್ಮಜ್ಜನಾಯ ಕೃತೋದ್ಯಮಮ್
॥ ೨೩ ॥

ಜುಹ್ವಂತಂ ಚ ವಿತಾನಾಗ್ನೀನ್ ಯಜಂತಂ ಪಂಚಭಿರ್ಮಖೈಃ ।
ಭೋಜಯಂತಂ ದ್ವಿಜಾನ್ ಕ್ವಾಪಿ ಭುಂಜಾನಮವಶೇಷಿತಮ್
॥ ೨೪ ॥

ಕ್ವಾಪಿ ಸಂಧ್ಯಾಮುಪಾಸೀನಂ ಜಪಂತಂ ಬ್ರಹ್ಮ ವಾಗ್ಯತಮ್ ।
ಏಕತ್ರ ಚಾಸಿಚರ್ಮಭ್ಯಾಂ ಚರಂತಮಸಿವರ್ತ್ಮಸು
॥ ೨೫ ॥

ಅಶ್ವೈರ್ಗಜೈ ರಥೈಃ ಕ್ವಾಪಿ ವಿಚರಂತಂ ಗದಾಗ್ರಜಮ್ ।
ಕ್ವಚಿಚ್ಛಯಾನಂ ಪರ್ಯಂಕೇ ಸ್ತೂಯಮಾನಂ ಚ ವಂದಿಭಿಃ
॥ ೨೬ ॥

ಮಂತ್ರಯಂತಂ ಚ ಕಸ್ಮಿಂಶ್ಚಿನ್ಮಂತ್ರಿಭಿರ್ವೃಷ್ಣಿದೇವತಾದಿಭಿಃ ।
ಜಲಕ್ರೀಡಾರತಂ ಕ್ವಾಪಿ ವಾರಮುಖ್ಯಾಬಲಾವೃತಮ್
॥ ೨೭ ॥

ಕುತ್ರಚಿದ್ದ್ವಿಜಮುಖ್ಯೇಭ್ಯೋ ದದತಂ ಗಾಃ ಸ್ವಲಂಕೃತಾಃ ।
ಇತಿಹಾಸಪುರಾಣಾನಿ ಶೃಣ್ವಂತಂ ಮಂಗಲಾನಿ ಚ
॥ ೨೮ ॥

ಹಸಂತಂ ಹಾಸ್ಯಕಥಯಾ ಕದಾಚಿತ್ ಪ್ರಿಯಯಾ ಗೃಹೇ ।
ಕ್ವಾಪಿ ಧರ್ಮಂ ಸೇವಮಾನಮರ್ಥಕಾಮೌ ಚ ಕುತ್ರಚಿತ್
॥ ೨೯ ॥

ಪರೀಕ್ಷಿತನೇ ! ಅನಂತರ ನಾರದ ಮಹರ್ಷಿಗಳು ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನ ಯೋಗಮಾಯೆಯ ರಹಸ್ಯವನ್ನು ತಿಳಿಯಲು ಮತ್ತೊಬ್ಬ ಪತ್ನಿಯ ಅಂತಃಪುರಕ್ಕೆ ಹೋದರು. ॥ ೧೯ ॥ ಅಲ್ಲಿ ಶ್ರೀಕೃಷ್ಣನು ತನ್ನ ಪ್ರಿಯೆಯೊಂದಿಗೆ ಮತ್ತು ಉದ್ಧವನೊಂದಿಗೆ ಪಗಡೆಯಾಡುತ್ತಿದ್ದುದನ್ನು ನೋಡಿದರು. ಅಲ್ಲಿಯೂ ಭಗವಂತನು ಎದ್ದುನಿಂತು, ನಾರದರನ್ನು ಸ್ವಾಗತಿಸಿ, ಆಸನದಲ್ಲಿ ಕುಳ್ಳಿರಿಸಿ ಬಗೆ-ಬಗೆಯ ಸಾಮಗ್ರಿಗಳಿಂದ ಭಕ್ತಿಯಿಂದ ಪೂಜಿಸಿದನು. ॥ ೨೦ ॥ ಬಳಿಕ ಭಗವಂತನು ಏನೂ ತಿಳಿಯದವನಂತೆ ಕೇಳಿದನು. ಮಹರ್ಷಿಗಳೇ ! ಯಾವಾಗ ತಾವು ದಯಮಾಡಿಸಿದಿರಿ ? ನೀವಾದರೋ ಪರಿಪೂರ್ಣ ಆತ್ಮಾರಾಮರಾಗಿರುವಿರಿ. ಅಪೂರ್ಣರಾದ ನಾವು ನಿಮ್ಮ ಯಾವ ಸೇವೆ ಮಾಡಬಲ್ಲೆವು ? ॥ ೨೧ ॥ ಹೀಗಿದ್ದರೂ ಬ್ರಹ್ಮಸ್ವರೂಪರಾದ ನಾರದರೇ ! ಯಾವ ಕಾರ್ಯವನ್ನು ಮಾಡಿಕೊಡಬೇಕೆಂದು ಆಜ್ಞಾಪಿಸಿರಿ. ತಮ್ಮ ಸೇವೆಗೆ ಅವಕಾಶ ಮಾಡಿಕೊಟ್ಟು ನಮ್ಮ ಜನ್ಮವನ್ನು ಸಾರ್ಥಕಗೊಳಿಸಿರಿ. ಇದನ್ನು ನೋಡಿದ ನಾರದರು ಆಶ್ಚರ್ಯಚಕಿತರಾದರು. ಅವರು ಅಲ್ಲಿಂದೆದ್ದು ಏನೂ ಮಾತನಾಡದೆ ಇನ್ನೊಂದು ಅಂತಃಪುರಕ್ಕೆ ಹೊರಟು ಹೋದರು. ॥ ೨೨ ॥ ಆ ಅಂತಃಪುರದಲ್ಲಿ ಭಗವಾನ್ ಶ್ರೀಕೃಷ್ಣನು ಎಳೆಯ ಮಕ್ಕಳನ್ನು ಆಡಿಸುತ್ತಾ ಕುಳಿತಿರುವುದನ್ನು ನೋಡಿದರು. ಅಲ್ಲಿಂದ ಮತ್ತೆ ಮತ್ತೊಂದು ಅಂತಃಪುರಕ್ಕೆ ಹೋದರೆ ಅಲ್ಲಿ ಶ್ರೀಕೃಷ್ಣನು ಸ್ನಾನದ ಸಿದ್ಧತೆ ಮಾಡುತ್ತಿರುವುದನ್ನು ನೋಡಿದರು. ॥ ೨೩ ॥ (ಹೀಗೆಯೇ ದೇವರ್ಷಿನಾರದರು ಬೇರೆ ಬೇರೆ ಅಂತಃಪುರಗಳಲ್ಲಿ ಭಗವಂತನು ಬೇರೆ-ಬೇರೆ ಕಾರ್ಯಗಳನ್ನು ಮಾಡುತ್ತಿರುವುದನ್ನು ನೋಡಿದರು) – ಕೆಲವು ಕಡೆ ಅವನು ಯಜ್ಞಕುಂಡದಲ್ಲಿ ಹೋಮಮಾಡುತ್ತಿದ್ದನು. ಕೆಲವೆಡೆ ಪಂಚಮಹಾಯಜ್ಞಗಳಿಂದ ದೇವತೆ ಮೊದಲಾದವರನ್ನು ಆರಾಧಿಸುತ್ತಿದ್ದನು. ಕೆಲವೆಡೆ ಬ್ರಾಹ್ಮಣರಿಗೆ ಭೋಜನಮಾಡಿಸುತ್ತಿದ್ದನು. ಕೆಲವೆಡೆ ಯಜ್ಞಶೇಷವನ್ನು ಭುಂಜಿಸುತ್ತಿದ್ದನು. ॥ ೨೪ ॥ ಕೆಲವೆಡೆ ಸಂಧ್ಯಾವಂದನೆ ಮಾಡುತ್ತಿದ್ದರೆ, ಕೆಲವೆಡೆ ಮೌನವಾಗಿ ಗಾಯತ್ರೀ ಜಪಮಾಡುತ್ತಿದ್ದನು. ಕೆಲವೆಡೆ ಕತ್ತಿ-ಗುರಾಣಿ ಹಿಡಿದು ಶಸ್ತ್ರಾಭ್ಯಾಸ ಮಾಡುತ್ತಿದ್ದನು. ॥ ೨೫ ॥ ಕೆಲವುಕಡೆ ಆನೆ, ಕುದುರೆ, ರಥಗಳಲ್ಲಿ ಕುಳಿತು ಶ್ರೀಕೃಷ್ಣನು ಸಂಚರಿಸುತ್ತಿದ್ದನು. ಕೆಲವೆಡೆ ಮಂಚದಲ್ಲಿ ಪವಡಿಸಿದ್ದರೆ, ಕೆಲವೆಡೆ ಮಂದಿ-ಮಾಗಧರು ಸ್ತುತಿಸುತ್ತಾ ಇದ್ದಾರೆ. ॥ ೨೬ ॥ ಯಾವುದೋ ಅಂತಃಪುರದಲ್ಲಿ ಉದ್ಧವಾದಿ ಮಂತ್ರಿಗಳೊಡನೆ ಗಂಭೀರವಾದ ಮಂತ್ರಾವಲೋಚನೆ ಮಾಡುತ್ತಿದ್ದರೆ, ಕೆಲವೆಡೆ ಉತ್ತಮೋತ್ತಮ ವಾರಾಂಗನೆಯರೊಡನೆ ಜಲಕ್ರೀಡೆಯಾಡುತ್ತಿದ್ದನು. ॥ ೨೭ ॥ ಕೆಲವೆಡೆ ಶ್ರೇಷ್ಠವಾದ ಬ್ರಾಹ್ಮಣರಿಗೆ ವಸ್ತ್ರಾಭೂಷಗಳಿಂದ ಅಲಂಕೃತವಾದ ಗೋವುಗಳನ್ನು ದಾನಮಾಡುತ್ತಿದ್ದ ಕೆಲವೆಡೆ ಮಂಗಲಮಯ ಇತಿಹಾಸ ಪುರಾಣಗಳನ್ನು ಶ್ರವಣಿಸುತ್ತಿದ್ದನು. ॥ ೨೮ ॥ ಕೆಲವು ಪತ್ನಿಯರ ಅಂತಃಪುರಗಳಲ್ಲಿ ತನ್ನ ಪ್ರೇಯಸಿಯರೊಡನೆ ಹಾಸ್ಯ-ವಿನೋದದ ಮಾತುಗಳನ್ನಾಡುತ್ತಾ ನಗುತ್ತಿದ್ದನು. ಕೆಲವೆಡೆ ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ನಿರತನಾಗಿದ್ದರೆ, ಕೆಲವೆಡೆ ಅರ್ಥಸಂಗ್ರಹದ ವಿಷಯವಾಗಿ ಮಂತ್ರಿಗಳೊಡನೆ ಸಮಾಲೋಚಿಸುತ್ತಿದ್ದನು. ಕೆಲವು ಕಡೆ ಧರ್ಮಾನುಕೂಲ ಗೃಹಸ್ಥೋಚಿತ ವಿಷಯಭೋಗಗಳನ್ನು ಅನುಭವಿಸುತ್ತಿದ್ದನು. ॥ ೨೯ ॥

ಧ್ಯಾಯಂತಮೇಕಮಾಸೀನಂ ಪುರುಷಂ ಪ್ರಕೃತೇಃ ಪರಮ್ ।
ಶುಶ್ರೂಷಂತಂ ಗುರೂನ್ ಕ್ವಾಪಿ ಕಾಮೈರ್ಭೋಗ್ಯೈಃ ಸಪರ್ಯಯಾ
॥ ೩೦ ॥

ಕುರ್ವಂತಂ ವಿಗ್ರಹಂ ಕೈಶ್ಚಿತ್ಸಂಧಿಂ ಚಾನ್ಯತ್ರ ಕೇಶವಮ್ ।
ಕುತ್ರಾಪಿ ಸಹ ರಾಮೇಣ ಚಿಂತಯಂತಂ ಸತಾಂ ಶಿವಮ್
॥ ೩೧ ॥

ಪುತ್ರಾಣಾಂ ದುಹಿತೃಣಾಂ ಚ ಕಾಲೇ ವಿಧ್ಯುಪಯಾಪನಮ್ ।
ದಾರೈರ್ವರೈಸ್ತತ್ಸದೃಶೈಃ ಕಲ್ಪಯಂತಂ ವಿಭೂತಿಭಿಃ
॥ ೩೨ ॥

ಪ್ರಸ್ಥಾಪನೋಪಾನಯನೈರಪತ್ಯಾನಾಂ ಮಹೋತ್ಸವಾನ್ ।
ವೀಕ್ಷ್ಯ ಯೋಗೇಶ್ವರೇಶಸ್ಯ ಯೇಷಾಂ ಲೋಕಾ ವಿಸಿಸ್ಮಿರೇ
॥ ೩೩ ॥

ಯಜಂತಂ ಸಕಲಾನ್ ದೇವಾನ್ ಕ್ವಾಪಿ ಕ್ರತುಭಿರೂರ್ಜಿತೈಃ ।
ಪೂರ್ತಯಂತಂ ಕ್ವಚಿದ್ಧರ್ಮಂ ಕೂಪಾರಾಮಮಠಾದಿಭಿಃ
॥ ೩೪ ॥

ಚರಂತಂ ಮೃಗಯಾಂ ಕ್ವಾಪಿ ಹಯಮಾರುಹ್ಯ ಸೈಂಧವಮ್ ।
ಘ್ನಂತಂ ತತಃ ಪಶೂನ್ ಮೇಧ್ಯಾನ್ ಪರೀತಂ ಯದುಪುಂಗವೈಃ
॥ ೩೫ ॥

ಅವ್ಯಕ್ತಲಿಂಗಂ ಪ್ರಕೃತಿಷ್ವಂತಃಪುರಗೃಹಾದಿಷು ।
ಕ್ವಚಿಚ್ಚರಂತಂ ಯೋಗೇಶಂ ತತ್ತದ್ಭಾವಬುಭುತ್ಸಯಾ
॥ ೩೬ ॥

ಅಥೋವಾಚ ಹೃಷೀಕೇಶಂ ನಾರದಃ ಪ್ರಹಸನ್ನಿವ ।
ಯೋಗಮಾಯೋದಯಂ ವೀಕ್ಷ್ಯ ಮಾನುಷೀಮೀಯುಷೋ ಗತಿಮ್
॥ ೩೭ ॥

ವಿದಾಮ ಯೋಗಮಾಯಾಸ್ತೇ ದುರ್ದರ್ಶಾ ಅಪಿ ಮಾಯಿನಾಮ್ ।
ಯೋಗೇಶ್ವರಾತ್ಮನ್ ನಿರ್ಭಾತಾ ಭವತ್ಪಾದನಿಷೇವಯಾ
॥ ೩೮ ॥

ಅನುಜಾನೀಹಿ ಮಾಂ ದೇವ
ಲೋಕಾಂಸ್ತೇ ಯಶಸಾऽऽಪ್ಲುತಾನ್ ।
ಪರ್ಯಟಾಮಿ ತವೋದ್ಗಾಯನ್
ಲೀಲಾಂ ಭುವನಪಾವನೀಮ್ ॥ ೩೯ ॥

ಶ್ರೀಭಗವಾನುವಾಚ

ಬ್ರಹ್ಮನ್ ಧರ್ಮಸ್ಯ ವಕ್ತಾಹಂ ಕರ್ತಾ ತದನುಮೋದಿತಾ ।
ತಚ್ಛಿಕ್ಷಯನ್ನೋಕಮಿಮಮಾಸ್ಥಿತಃ ಪುತ್ರ ಮಾ ಖಿದಃ
॥ ೪೦ ॥

ಕೆಲವೆಡೆ ಏಕಾಂತದಲ್ಲಿ ಕುಳಿತು ಪ್ರಕೃತಿಗೆ ಅತೀತನಾದ ಪುರಾಣ ಪುರುಷನನ್ನು ಧ್ಯಾನಿಸುತ್ತಿದ್ದನು. ಕೆಲವೆಡೆ ಗುರು-ಹಿರಿಯರಿಗೆ ಇಚ್ಛಿತ ಭೋಗ ಸಾಮಗ್ರಿಗಳನ್ನಿತ್ತು ಅವರ ಸೇವೆ-ಶುಶ್ರೂಷೆ ಮಾಡುತ್ತಿದ್ದನು. ॥ ೩೦ ॥ ದೇವಋಷಿ ನಾರದರು ನೋಡುತ್ತಾರೆ ಭಗವಾನ್ ಶ್ರೀಕೃಷ್ಣನು ಯಾರೊಂದಿಗೋ ಯುದ್ಧದ ಮಾತನ್ನಾಡುತ್ತಿದ್ದರೆ, ಯಾರೊಂದಿಗೋ ಸಂಧಿಯ ಪ್ರಸ್ತಾಪವನ್ನು ಮಾಡುತ್ತಿದ್ದನು. ಕೆಲವು ಕಡೆ ಬಲರಾಮನೊಂದಿಗೆ ಕುಳಿತುಕೊಂಡು ಸತ್ಪುರುಷರ ಕಲ್ಯಾಣದ ಕುರಿತು ಯೋಚಿಸುತ್ತಿದ್ದನು. ॥ ೩೧ ॥ ಕೆಲವೆಡೆ ಉಚಿತ ಸಮಯದಲ್ಲಿ ಪುತ್ರ-ಪುತ್ರಿಯರು ಅವರಿಗೆ ಅನುರೂಪರಾದ ವಧೂ-ವರರೊಂದಿಗೆ ಸಂಭ್ರದಿಂದ ವಿಧಿವತ್ತಾಗಿ ವಿವಾಹ ಮಾಡುತ್ತಿದ್ದನು. ॥ ೩೨ ॥ ಕೆಲವು ಕಡೆ ವಿವಾಹಿತ ಕನ್ಯೆಯನ್ನು ಅತ್ತೆ ಮನೆಗೆ ಕಳಿಸುತ್ತಿದ್ದರೆ, ಕೆಲವೆಡೆ ಕನ್ಯೆಯರನ್ನು ಕರೆಸುವ ಸಿದ್ಧತೆ ಮಾಡುತ್ತಿದ್ದನು. ಯೋಗೇಶ್ವರ ಭಗವಾನ್ ಶ್ರೀಕೃಷ್ಣನ ಈ ವಿರಾಟ್ ಉತ್ಸವವನ್ನು ನೋಡಿ ಎಲ್ಲ ಜನರು ಆಶ್ಚರ್ಯಚಕಿತರಾಗುತ್ತಿದ್ದರು. ॥ ೩೩ ॥ ಕೆಲವೆಡೆ ದೊಡ್ಡ-ದೊಡ್ಡ ಯಜ್ಞಗಳ ಮೂಲಕ ದೇವತೆಗಳನ್ನು ಪೂಜಿಸುತ್ತಿದ್ದರೆ, ಕೆಲವು ಕಡೆ ಬಾವಿ, ಉದ್ಯಾನ, ಆಗ್ರಹಾರ ಮುಂತಾದುವನ್ನು ಮಾಡಿಸಿ ಇಷ್ಟಾಪೂರ್ತ ಧರ್ಮವನ್ನು ಆಚರಿಸುತ್ತಿದ್ದನು. ॥ ೩೪ ॥ ಕೆಲವೆಡೆ ಶ್ರೇಷ್ಠ ಯಾದವರಿಂದ ಸುತ್ತುವರಿದು ಸಿಂಧುದೇಶದ ಕುದುರೆಯ ಮೇಲೆ ಕುಳಿತುಕೊಂಡು ಬೇಟೆಯಾಡುತ್ತಾ ಯಜ್ಞಕ್ಕಾಗಿ ಪಶುಗಳನ್ನು ಸಂಗ್ರಹಿಸುತ್ತಾ ॥ ೩೫ ॥ ಕೆಲವೆಡೆ ಅಂತಃಪುರಗಳಲ್ಲಿ ಹಾಗೂ ಪ್ರಜೆಗಳ ಮಧ್ಯದಲ್ಲಿಯೂ ವೇಷವನ್ನು ಬದಲಿಸಿ ಅಡಗಿಕೊಂಡು ಎಲ್ಲರ ಅಭಿಪ್ರಾಯವನ್ನು ತಿಳಿಯಲು ಸಂಚರಿಸುತ್ತಿದ್ದ ಮಹಾಯೋಗಿಯಾದ ಶ್ರೀಕೃಷ್ಣನನ್ನು ನೋಡಿ ನಾರದರು ಮೂಕರಾದರು. ॥ ೩೬ ॥

ಪರೀಕ್ಷಿತನೇ ! ಹೀಗೆ ಮನುಷ್ಯರಂತೆ ಲೀಲೆ ಮಾಡುವ ಹೃಷೀಕೇಶ ಭಗವಂತನ ಯೋಗಮಾಯೆಯ ವೈಭವವನ್ನು ನೋಡಿ ದೇವರ್ಷಿ ನಾರದರು ಮುಗುಳ್ನಗುತ್ತಾ ಹೇಳಿದರು - ॥ ೩೭ ॥ ಯೋಗೇಶ್ವರರಿಗೂ ಆತ್ಮಸ್ವರೂಪನಾದವನೇ ! ನಿನ್ನ ಯೋಗಮಾಯೆಯನ್ನು ಬ್ರಹ್ಮಾದಿ ಮಹಾ-ಮಹಾ ಮಾಯಾವಿಗಳಿಗೂ ತಿಳಿಯಲು ಅಗಮ್ಯವಾಗಿದೆ. ಆದರೆ ನಿನ್ನ ಚರಣಕಮಲಗಳ ಸೇವೆಯಿಂದ ನಾವು ಆ ಯೋಗಮಾಯೆಯನ್ನು ತಿಳಿದುಕೊಂಡೆವು. ॥ ೩೮ ॥ ದೇವ ದೇವನೇ! ನನಗೆ ಹೋಗಲು ಅನುಮತಿಯನ್ನು ದಯಪಾಲಿಸು. ನಿನ್ನ ಯಶಸ್ಸಿನಿಂದ ತುಂಬಿಹೋಗಿರುವ ಮೂರು ಲೋಕಗಳಲ್ಲಿಯೂ, ತ್ರಿಭುವನ ಪಾವನಿಯಾದ ನಿನ್ನ ಲೀಲೆಗಳನ್ನು ಹಾಡುತ್ತಾ ಸಂಚರಿಸುತ್ತೇನೆ. ॥ ೩೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಬ್ರಾಹ್ಮಣ ಶ್ರೇಷ್ಠನೇ! ನಾನೇ ಧರ್ಮದ ಉಪದೇಶಕನೂ, ಪಾಲನೆ ಮಾಡುವವನೂ, ಅದನ್ನು ಅನುಷ್ಠಾನ ಮಾಡುವವರನ್ನು ಅನುಮೋದಿಸುವವನೂ ಆಗಿದ್ದೇನೆ. ಪ್ರಪಂಚಕ್ಕೆ ಧರ್ಮದ ಶಿಕ್ಷಣವನ್ನು ಕೊಡಬೇಕೆನ್ನುವ ಉದ್ದೇಶದಿಂದಲೇ ನಾನು ಈ ಪ್ರಕಾರ ಧರ್ಮವನ್ನು ಆಚರಿಸುತ್ತಿದ್ದೇನೆ. ಪ್ರಿಯ ಪುತ್ರನೇ ! ನೀನು ನನ್ನ ಈ ಯೋಗ ಮಾಯೆಯನ್ನು ನೋಡಿ ಮೋಹಿತನಾಗಬೇಡ. ॥ ೪೦ ॥

ಶ್ರೀಶುಕ ಉವಾಚ

ಇತ್ಯಾಚರಂತಂ ಸದ್ಧರ್ಮಾನ್ ಪಾವನಾನ್ಗೃಹಮೇಧಿನಾಮ್ ।
ತಮೇವ ಸರ್ವಗೇಹೇಷು ಸಂತಮೇಕಂ ದದರ್ಶ ಹ
॥ ೪೧ ॥

ಕೃಷ್ಣಸ್ಯಾನಂತವೀರ್ಯಸ್ಯ ಯೋಗಮಾಯಾಮಹೋದಯಮ್ ।
ಮುಹುರ್ದೃಷ್ಟ್ವಾ ಋಷಿರಭೂದ್ವಿಸ್ಮಿತೋ ಜಾತಕೌತುಕಃ
॥ ೪೨ ॥

ಇತ್ಯರ್ಥಕಾಮಧರ್ಮೇಷು ಕೃಷ್ಣೇನ ಶ್ರದ್ಧಿತಾತ್ಮನಾ ।
ಸಮ್ಯಕ್ಸಭಾಜಿತಃ ಪ್ರೀತಸ್ತಮೇವಾನುಸ್ಮರನ್ಯಯೌ
॥ ೪೩ ॥

ಏವಂ ಮನುಷ್ಯಪದವೀಮನುವರ್ತಮಾನೋ
ನಾರಾಯಣೋಽಖಿಲಭವಾಯ ಗೃಹೀತಶಕ್ತಿಃ ।
ರೇಮೇಂಗ ಷೋಡಶಸಹಸ್ರವರಾಂಗನಾನಾಂ
ಸವ್ರೀಡಸೌಹೃದನಿರೀಕ್ಷಣಹಾಸಜುಷ್ಟಃ ॥ ೪೪ ॥

ಯಾನೀಹ ವಿಶ್ವವಿಲಯೋದ್ಭವವೃತ್ತಿಹೇತುಃ
ಕರ್ಮಾಣ್ಯನನ್ಯವಿಷಯಾಣಿ ಹರಿಶ್ಚಕಾರ ।
ಯಸ್ತ್ವಂಗಗಾಯತಿ ಶೃಣೋತ್ಯನುಮೋದತೇ ವಾ
ಭಕ್ತಿರ್ಭವೇದ್ಭಗವತಿ ಹ್ಯಪವರ್ಗಮಾರ್ಗೇ ॥ ೪೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಭಗವಾನ್ ಶ್ರೀಕೃಷ್ಣನು ಗೃಹಸ್ಥಾಶ್ರಮಿಗಳನ್ನು ಪವಿತ್ರಗೊಳಿಸುವ ಶ್ರೇಷ್ಠವಾದ ಧರ್ಮಗಳನ್ನು ಆಚರಿಸುತ್ತಿದ್ದನು - ಅವನು ಒಬ್ಬನೇ ಆಗಿದ್ದರೂ ನಾರದ ಮಹರ್ಷಿಗಳು ಅವನನ್ನು ಅವನ ಪ್ರತಿಯೊಬ್ಬ ಪತ್ನಿಯರ ಅಂತಃಪುರಗಳಲ್ಲಿ ಬೇರೆ-ಬೇರೆಯಾಗಿ ನೋಡಿದರು. ॥ ೪೧ ॥ ಅನಂತಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣನ ಯೋಗಮಾಯೆಯ ಪರಮೈಶ್ವರ್ಯವನ್ನು ಪದೇ-ಪದೇ ನೋಡಿ ದೇವರ್ಷಿ ನಾರದರು ಕುತೂಹಲವಿಷ್ಟರಾಗಿ ವಿಸ್ಮಿತರಾದರು. ॥ ೪೨ ॥ ದ್ವಾರಕೆಯಲ್ಲಿ ಭಗವಾನ್ ಶ್ರೀಕೃಷ್ಣನು ಗೃಹಸ್ಥರಂತೆಯೇ ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸುತ್ತಿದ್ದನು. ಅವನು ದೇವರ್ಷಿ ನಾರದರನ್ನು ಬಹಳವಾಗಿ ಸನ್ಮಾನಿಸಿದನು. ನಾರದರು ಸುಪ್ರೀತರಾಗಿ ಭಗವಂತನನ್ನು ಸ್ಮರಿಸುತ್ತಾ ಅಲ್ಲಿಂದ ಹೊರಟು ಹೋದರು. ॥ ೪೩. ॥

ಪರೀಕ್ಷಿತ ಮಹಾರಾಜ! ಭಗವಾನ್ ನಾರಾಯಣನು ಅಖಿಲ ಜಗತ್ತಿನ ಕಲ್ಯಾಣಕ್ಕಾಗಿ ತನ್ನ ಅಚಿಂತ್ಯ ಮಹಾಶಕ್ತಿಯಾದ ಯೋಗಮಾಯೆಯನ್ನು ಸ್ವೀಕರಿಸಿಕೊಂಡು ಮನುಷ್ಯರಂತೆ ಲೀಲೆ ಮಾಡುತ್ತಿದ್ದನು. ಹದಿನಾರು ಸಾವಿರಕ್ಕಿಂತಲೂ ಹೆಚ್ಚಾಗಿದ್ದ ಪತ್ನಿಯರು ಲಜ್ಜೆ, ಸೌಹಾರ್ದ, ಕಟಾಕ್ಷವೀಕ್ಷಣೆ, ಮಂದಹಾಸ ಇವುಗಳಿಂದ ಅವನ ಸೇವೆ ಮಾಡುತ್ತಿದ್ದರು. ಅಂತಹ ತನ್ನ ಪ್ರೇಯಸಿಯರೊಡನೆ ಶ್ರೀಕೃಷ್ಣನು ವಿಹರಿಸುತ್ತಿದ್ದನು. ॥ ೪೪ ॥ ಮಹಾರಾಜ! ಭಗವಾನ್ ಶ್ರೀಕೃಷ್ಣನು ಮಾಡಿತೋರಿದ ಲೀಲೆಗಳನ್ನು ಬೇರೆಯಾರೂ ಮಾಡಲಾರರು. ಅವನೇ ವಿಶ್ವದ ಉತ್ಪತ್ತಿ, ಸ್ಥಿತಿ, ಪ್ರಳಯಗಳಿಗೆ ಪರಮ ಕಾರಣನಾಗಿದ್ದಾನೆ. ಅವನ ಲೀಲೆಗಳನ್ನು ಹಾಡುವವನು, ಕೇಳುವವನು ಮತ್ತು ಗಾನಮಾಡಲು ಪ್ರೋತ್ಸಾಹಿಸುವವನು ಮೋಕ್ಷಕ್ಕೆ ಮಾರ್ಗಸ್ವರೂಪನಾದ ಶ್ರೀಕೃಷ್ಣನಲ್ಲಿ ಪರಮ ಭಕ್ತಿಯುಳ್ಳವನಾಗುವನು. ॥ ೪೫ ॥

ಅರವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೬೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಕೃಷ್ಣಗಾರ್ಹಸ್ಥ್ಯದರ್ಶನಂ ನಾಮೈಕೋನಸಪ್ತತಿತಮೋಽಧ್ಯಾಯಃ॥ ೬೯ ॥

ಎಪ್ಪತ್ತನೆಯ ಅಧ್ಯಾಯ

ಶ್ರೀಕೃಷ್ಣನ ದಿನಚರ್ಯೆ ಮತ್ತು ಜರಾಸಂಧನ ಬಂದಿಗಳಾಗಿದ್ದ ರಾಜರ ದೂತನ ಆಗಮನ

ಶ್ರೀಶುಕ ಉವಾಚ

ಅಥೋಷಸ್ಯುಪವೃತ್ತಾಯಾಂ ಕುಕ್ಕುಟಾನ್ ಕೂಜತೋಽಶಪನ್ ।
ಗೃಹೀತಕಂಠ್ಯಃ ಪತಿಭಿರ್ಮಾಧ್ವ್ಯೋ ವಿರಹಾತುರಾಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಬೆಳಗಾಗಿ ಕೋಳಿ ಕೂಗುತ್ತಲೇ ಶ್ರೀಕೃಷ್ಣನ ಬಾಹುಲತೆಗಳಿಂದ ಬಳಸಲ್ಪಟ್ಟ ಕಂಠಗಳುಳ್ಳ ಶ್ರೀಕೃಷ್ಣನ ಪತ್ನಿಯರು ಕಾಂತನು ನಮ್ಮನ್ನು ಅಗಲುವನೆಂಬ ಆಶಂಕೆಯಿಂದ ವ್ಯಾಕುಲರಾಗಿ ಕೋಳಿಗಳನ್ನೇ ಬೈಯ್ಯುತ್ತಿದ್ದರು. ॥ ೧ ॥

ವಯಾಂಸ್ಯರೂರುವನ್ ಕೃಷ್ಣಂ ಬೋಧಯಂತೀವ ವಂದಿನಃ ।
ಗಾಯತ್ಸ್ವಲಿಷ್ವನಿದ್ರಾಣಿ ಮಂದಾರವನವಾಯುಭಿಃ
॥ ೨ ॥

ಮುಹೂರ್ತಂ ತಂ ತು ವೈದರ್ಭೀ ನಾಮೃಷ್ಯದತಿಶೋಭನಮ್ ।
ಪರಿರಂಭಣವಿಶ್ಲೇಷಾತ್ ಪ್ರಿಯಬಾಹ್ವಂತರಂ ಗತಾ
॥ ೩ ॥

ಬ್ರಾಹ್ಮೇ ಮುಹೂರ್ತ ಉತ್ಥಾಯ ವಾರ್ಯುಪಸ್ಪೃಶ್ಯ ಮಾಧವಃ ।
ದಧ್ಯೌ ಪ್ರಸನ್ನಕರಣ ಆತ್ಮಾನಂ ತಮಸಃ ಪರಮ್
॥ ೪ ॥

ಏಕಂ ಸ್ವಯಂಜ್ಯೋತಿರನನ್ಯಮವ್ಯಯಂ
ಸ್ವಸಂಸ್ಥಯಾ ನಿತ್ಯನಿರಸ್ತಕಲ್ಮಷಮ್ ।
ಬ್ರಹ್ಮಾಖ್ಯಮಸ್ಯೋದ್ಭವನಾಶಹೇತುಭಿಃ
ಸ್ವಶಕ್ತಿಭಿರ್ಲಕ್ಷಿತಭಾವನಿರ್ವೃತಿಮ್ ॥ ೫ ॥

ಅಥಾಪ್ಲುತೋಽಂಭಸ್ಯಮಲೇ ಯಥಾವಿಧಿ
ಕ್ರಿಯಾಕಲಾಪಂ ಪರಿಧಾಯ ವಾಸಸೀ ।
ಚಕಾರ ಸಂಧ್ಯೋಪಗಮಾದಿ ಸತ್ತಮೋ
ಹುತಾನಲೋ ಬ್ರಹ್ಮ ಜಜಾಪ ವಾಗ್ಯತಃ ॥ ೬ ॥

ಉಪಸ್ಥಾಯಾರ್ಕಮುದ್ಯಂತಂ ತರ್ಪಯಿತ್ವಾಽಽತ್ಮನಃ ಕಲಾಃ ।
ದೇವಾನೃಷೀನ್ ಪಿತೄನ್ವೃದ್ಧಾನ್ ವಿಪ್ರಾನಭ್ಯರ್ಚ್ಯ ಚಾತ್ಮವಾನ್
॥ ೭ ॥

ಧೇನೂನಾಂ ರುಕ್ಮಶೃಂಗೀಣಾಂ ಸಾಧ್ವೀನಾಂ ಮೌಕ್ತಿಕಸ್ರಜಾಮ್ ।
ಪಯಸ್ವಿನೀನಾಂ ಗೃಷ್ಟೀನಾಂ ಸವತ್ಸಾನಾಂ ಸುವಾಸಸಾಮ್
॥ ೮ ॥

ಆ ಸಮಯದಲ್ಲಿ ಪಾರಿಜಾತಪುಷ್ಪದ ಸುಗಂಧಿತ ಗಾಳಿಯು ಮಂದ-ಮಂದವಾಗಿ ಬೀಸುತ್ತಿತ್ತು. ದುಂಬಿಗಳು ಝೇಂಕರಿಸುತ್ತಾ ಸುಪ್ರಭಾತವನ್ನು ಹಾಡುತ್ತಿದ್ದವು. ನಿದ್ದೆಯಿಂದ ಎಚ್ಚೆತ್ತ ಪಕ್ಷಿಗಳು ವಂದಿ-ಮಾಗಧರಂತೆ ಮಧುರ ಸ್ವರಗಳಿಂದ ಶ್ರೀಕೃಷ್ಣನನ್ನು ಎಚ್ಚರಿಸುತ್ತಿವೆಯೋ ಎಂಬಂತೆ ಚಿಲಿ-ಪಿಲಿಗುಟ್ಟುತ್ತಿದ್ದವು. ॥ ೨ ॥ ಪ್ರಿಯತಮನ ಬಾಹುಪಾಶಗಳ ಅಂತರ್ಗತಳಾಗಿದ್ದ ರುಕ್ಮಿಣೀ ದೇವಿಯು ಆಲಿಂಗನಕ್ಕೆ ವಿಚ್ಛಿತ್ತಿಯುಂಟಾಗುವುದೆಂಬ ಭಯದಿಂದ ಮಂಗಳ ಕರವಾದ ಬ್ರಾಹ್ಮಮುಹೂರ್ತವು ಬಂದುದನ್ನು ಸಹಿಸದೇ ಹೋದಳು. ॥ ೩ ॥ ಭಗವಾನ್ ಶ್ರೀಕೃಷ್ಣನು ಪ್ರತಿದಿನವೂ ಬ್ರಾಹ್ಮ ಮುಹೂರ್ತದಲ್ಲೇ ಎದ್ದು ಕೈ-ಕಾಲುಗಳನ್ನು ತೊಳೆದು ಕೊಂಡು, ಆಚಮನಮಾಡಿ, ಮಾಯಾತೀತವಾದ ಚಿದಾತ್ಮ ಸ್ವರೂಪವನ್ನು ಧ್ಯಾನಮಾಡಲು ತೊಡಗುವನು. ಆ ಸಮಯದಲ್ಲಿ ಆವನ ರೋಮ-ರೋಮಗಳು ಆನಂದದಿಂದ ಪ್ರಸನ್ನವಾಗಿ ಇರುತ್ತಿದ್ದವು. ॥ ೪ ॥ ಪರೀಕ್ಷಿದ್ರಾಜನೇ ! ಭಗವಂತನ ಆ ಆತ್ಮ ಸ್ವರೂಪವು ಅದ್ವಿತೀಯವೂ, ಅಖಂಡವೂ, ಅವಿನಾಶಿಯೂ ಆದ ಸತ್ಯ ಸ್ವರೂಪವಾಗಿದೆ. ಚಂದ್ರಸೂರ್ಯರು ನೇತ್ರೇಂದ್ರಿಯದ ಮೂಲವಾಗಿಯೂ, ನೇತ್ರೇಂದ್ರಿಯವು ಚಂದ್ರ-ಸೂರ್ಯರ ಮೂಲಕವಾಗಿಯೂ ಪ್ರಕಾಶಗೊಳ್ಳುವಂತೆ ಆತ್ಮಸ್ವರೂಪವು ಬೇರೆ ಯಾವುದರಿಂದಲೂ ಪ್ರಕಾಶಿಸುವುದಿಲ್ಲ, ಸ್ವಯಂ ಪ್ರಕಾಶವಾಗಿದೆ. ಅದು ಸ್ವಸ್ವರೂಪದಲ್ಲಿ ಸದಾ-ಸರ್ವದಾ ಕಾಲಾತೀತವಾಗಿ ಏಕರಸವಾಗಿ ಇರುವುದರಿಂದ ಅವಿದ್ಯೆಯು ಅದನ್ನು ಸ್ಪರ್ಶಿಸಲೂ ಕೂಡ ಸಮರ್ಥವಾಗುವುದಿಲ್ಲ, ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ನಾಶಕ್ಕೆ ಕಾರಣಭೂತರಾದ ಬ್ರಹ್ಮಶಕ್ತಿ, ವಿಷ್ಣುಶಕ್ತಿ, ರುದ್ರಶಕ್ತಿಗಳ ಮೂಲಕವಾಗಿ ಆ ಆತ್ಮಸ್ವರೂಪವು ಏಕರಸ ಸತ್ತ್ವರೂಪವಾಗಿ ಆನಂದ ಸ್ವರೂಪವಾಗಿರುವುದೆಂದು ಊಹಿಸಬಹುದು. ಅದನ್ನು ತಿಳಿಸುವುದಕ್ಕಾಗಿಯೇ 'ಬ್ರಹ್ಮ' ಎಂಬ ಹೆಸರಿನಿಂದ ಹೇಳಲಾಗಿದೆ. ಭಗವಾನ್ ಶ್ರೀಕೃಷ್ಣನು ತನ್ನ ಆ ಆತ್ಮಸ್ವರೂಪವನ್ನೇ ಧ್ಯಾನಮಾಡುತ್ತಾನೆ. ॥ ೫ ॥ ಅನಂತರ ಅವನು ವಿಧಿಪೂರ್ವಕವಾಗಿ ನಿರ್ಮಲವೂ ಪವಿತ್ರವೂ ಆದ ನೀರಿನಲ್ಲಿ ಮುಳುಗಿ ಸ್ನಾನಮಾಡುವನು. ಮತ್ತೆ ಶುದ್ಧವಾದ ಧೋತಿಯನ್ನುಟ್ಟು ಉತ್ತರೀಯವನ್ನು ಹೊದ್ದು ಸಂಧ್ಯಾ ವಂದನೆಯೇ ಮೊದಲಾದ ನಿತ್ಯಕರ್ಮಗಳನ್ನು ಮಾಡುತ್ತಾನೆ. ಬಳಿಕ ಹವನ ಮಾಡಿ, ಮೌನವಾಗಿ ಗಾಯತ್ರಿಯನ್ನು ಜಪಿಸುವನು. ॥ ೬ ॥ ಬಳಿಕ ಸೂರ್ಯನು ಉದಯಿಸುವವರೆಗೆ ಸೂರ್ಯೋಪಸ್ಥಾನವನ್ನು ಮಾಡಿ, ತನ್ನ ಕಲಾಸ್ವರೂಪರಾದ ದೇವತೆಗಳಿಗೆ, ಋಷಿಗಳಿಗೆ ಮತ್ತು ಪಿತೃಗಳಿಗೆ ತರ್ಪಣಗಳನ್ನು ಕೊಡುತ್ತಿದ್ದನು. ಮತ್ತೆ ಕುಲವೃದ್ಧರನ್ನು, ಬ್ರಾಹ್ಮಣರನ್ನು ಯಥಾವಿಧಿಯಾಗಿ ಪೂಜಿಸುವನು. ಅನಂತರ ಮನನಶೀಲನಾದ ಶ್ರೀಕೃಷ್ಣನು ಹಾಲು ಕೊಡುವ, ಸಾಧು ಸ್ವಭಾವದ ಸವತ್ಸಗೋವುಗಳನ್ನು ದಾನ ಮಾಡುತ್ತಿದ್ದನು. ಆಗ ಆ ಗೋವುಗಳನ್ನು ಸುಂದರವಾದ ವಸ್ತ್ರಗಳಿಂದ, ಮುತ್ತಿನಹಾರಗಳಿಂದ ಅಲಂಕರಿಸಿ, ಅವುಗಳ ಕೊಂಬುಗಳಿಗೆ ಚಿನ್ನವನ್ನು ಅಲಂಕರಿಸಿ, ಗೊರಸುಗಳಿಗೆ ಬೆಳ್ಳಿಯ ಕವಚ

ದದೌ ರೂಪ್ಯಖುರಾಗ್ರಾಣಾಂ ಕ್ಷೌಮಾಜಿನತಿಲೈಃ ಸಹ ।
ಅಲಂಕೃತೇಭ್ಯೋ ವಿಪ್ರೇಭ್ಯೋ ಬದ್ವಂ ಬದ್ವಂ ದಿನೇ ದಿನೇ
॥ ೯ ॥

ಗೋವಿಪ್ರದೇವತಾವೃದ್ಧಗುರೂನ್ ಭೂತಾನಿ ಸರ್ವಶಃ ।
ನಮಸ್ಕೃತ್ಯಾತ್ಮಸಂಭೂತೀರ್ಮಂಗಲಾನಿ ಸಮಸ್ಪೃಶತ್
॥ ೧೦ ॥

ಆತ್ಮಾನಂ ಭೂಷಯಾಮಾಸ ನರಲೋಕವಿಭೂಷಣಮ್ ।
ವಾಸೋಭಿರ್ಭೂಷಣೈಃ ಸ್ವೀಯೈರ್ದಿವ್ಯಸ್ರಗನುಲೇಪನೈಃ
॥ ೧೧ ॥

ಅವೇಕ್ಷ್ಯಾಜ್ಯಂ ತಥಾऽऽದರ್ಶಂ ಗೋವೃಷದ್ವಿಜದೇವತಾಃ ।
ಕಾಮಾಂಶ್ಚ ಸರ್ವವರ್ಣಾನಾಂ ಪೌರಾಂತಃಪುರಚಾರಿಣಾಮ್ ।
ಪ್ರದಾಪ್ಯ ಪ್ರಕೃತೀಃ ಕಾಮೈಃ ಪ್ರತೋಷ್ಯ ಪ್ರತ್ಯನಂದತ
॥ ೧೨ ॥

ಸಂವಿಭಜ್ಯಾಗ್ರತೋ ವಿಪ್ರಾನ್ ಸ್ರಕ್ತಾಂಬೂಲಾನುಲೇಪನೈಃ ।
ಸುಹೃದಃ ಪ್ರಕೃತೀರ್ದಾರಾನುಪಾಯುಂಕ್ತ ತತಃ ಸ್ವಯಮ್
॥ ೧೩ ॥

ತಾವತ್ಸೂತ ಉಪಾನೀಯ ಸ್ಯಂದನಂ ಪರಮಾದ್ಭುತಮ್ ।
ಸುಗ್ರೀವಾದ್ಯೈರ್ಹಯೈರ್ಯುಕ್ತಂ ಪ್ರಣಮ್ಯಾವಸ್ಥಿತೋऽಗ್ರತಃ
॥ ೧೪ ॥

ಗೃಹೀತ್ವಾ ಪಾಣಿನಾ ಪಾಣೇ ಸಾರಥೇಸ್ತಮಥಾರುಹತ್ ।
ಸಾತ್ಯಕ್ಯುದ್ಧವಸಂಯುಕ್ತಃ ಪೂರ್ವಾದ್ರಿಮಿವ ಭಾಸ್ಕರಃ
॥ ೧೫ ॥

ಈಕ್ಷಿತೋऽಂತಃಪುರಸ್ತ್ರೀಣಾಂ ಸವ್ರೀಡಪ್ರೇಮವೀಕ್ಷಿತೈಃ ।
ಕೃಚ್ಛ್ರಾದ್ವಿಸೃಷ್ಟೋ ನಿರಗಾಜ್ಜಾತಹಾಸೋ ಹರನ್ ಮನಃ
॥ ೧೬ ॥

ಸುಧರ್ಮಾಖ್ಯಾಂ ಸಭಾಂ ಸರ್ವೈರ್ವೃಷ್ಣಿಭಿಃ ಪರಿವಾರಿತಃ ।
ಪ್ರಾವಿಶದ್ಯನ್ನಿವಿಷ್ಟಾನಾಂ ನ ಸಂತ್ಯಂಗ ಷಡೂರ್ಮಯಃ
॥ ೧೭ ॥

ತತ್ರೋಪವಿಷ್ಟಃ ಪರಮಾಸನೇ ವಿಭು-
ರ್ಬಭೌ ಸ್ವಭಾಸಾ ಕಕುಭೋऽವಭಾಸಯನ್ ।
ವೃತೋ ನೃಸಿಂಹೈರ್ಯದುಭಿರ್ಯದೂತ್ತಮೋ
ಯಥೋಡುರಾಜೋ ದಿವಿ ತಾರಕಾಗಣೈಃ ॥ ೧೮ ॥

ಗಳನ್ನು ತೊಡಿಸಲಾಗುತ್ತಿತ್ತು. ಶ್ರೀಕೃಷ್ಣನು ಬ್ರಾಹ್ಮಣರನ್ನು ವಸ್ತ್ರಾಭೂಷಣಗಳಿಂದ ಸತ್ಕರಿಸಿ, ರೇಷ್ಮೆ ವಸ್ತ್ರ, ಮೃಗಚರ್ಮ ಮತ್ತು ಎಳ್ಳಿನೊಂದಿಗೆ ಪ್ರತಿದಿನವೂ ಹದಿ ಮೂರುಸಾವಿರದ ಎಂಭತ್ತನಾಲ್ಕು (ಒಂದು ಬಧ್ವ) ಗೋವುಗಳನ್ನು ದಾನಮಾಡುತ್ತಿದ್ದನು. ॥ ೭-೯ ॥ ಬಳಿಕ ತನ್ನ ವಿಭೂತಿರೂಪವಾದ ಗೋವು, ಬ್ರಾಹ್ಮಣ, ದೇವತೆ, ಕುಲವೃದ್ಧರು, ಗುರುಗಳು ಮತ್ತು ಸಮಸ್ತ ಪ್ರಾಣಿಗಳನ್ನು ನಮಸ್ಕರಿಸಿ ಮಾಂಗಲಿಕ ವಸ್ತುಗಳನ್ನು ಸ್ಪರ್ಶಿಸುತ್ತಿದ್ದನು. ॥ ೧೦ ॥ ಪರೀಕ್ಷಿತನೇ ! ಭಗವಂತನ ಶರೀರದ ಸಹಜ ಸೌಂದರ್ಯವೇ ಮನುಷ್ಯಲೋಕದ ಅಲಂಕಾರವಾಗಿದ್ದರೂ ಅವನು ಪೀತಾಂಬರವೇ ಮೊದಲಾದ ದಿವ್ಯ ವಸ್ತ್ರಗಳನ್ನು, ಕೌಸ್ತುಭಾದಿ ಆಭೂಷಣಗಳನ್ನು, ಪುಷ್ಪಹಾರಗಳನ್ನು ಧರಿಸಿಕೊಂಡು, ಚಂದನವೇ ಮುಂತಾದ ದಿವ್ಯ ಪರಿಮಳ ದ್ರವ್ಯಗಳಿಂದ ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದನು. ॥ ೧೧ ॥ ಮತ್ತೆ ಅವನು ತುಪ್ಪದಲ್ಲಿಯೂ, ದರ್ಪಣದಲ್ಲಿಯೂ ತನ್ನ ಮುಖಾರವಿಂದವನ್ನು ನೋಡಿಕೊಂಡು, ಗೋ, ವೃಷಭ, ಬ್ರಾಹ್ಮಣ, ದೇವತಾ ಪ್ರತಿಮೆಗಳನ್ನು ದರ್ಶಿಸುವನು. ಪುನಃ ಪುರವಾಸಿಗಳ ಮತ್ತು ಅಂತಃಪುರದಲ್ಲಿ ವಾಸಿಸುವ ನಾಲ್ಕು ವರ್ಣದ ಜನರುಗಳ ಅಭಿಲಾಷೆಯನ್ನು ಪೂರ್ಣಗೊಳಿಸಿ, ಅವರನ್ನು ಸಂತುಷ್ಟಗೊಳಿಸಿ, ಬೇರೆ ಗ್ರಾಮವಾಸಿ ಪ್ರಜೆಗಳ ಕಾಮನೆಗಳನ್ನು ಪೂರ್ಣಗೊಳಿಸಿ, ಹೀಗೆ ಎಲ್ಲರನ್ನು ಸಂತೋಷಪಡಿಸಿ, ಅವರನ್ನು ನೋಡಿ ತಾನು ಸಂತೋಷ ಗೊಳ್ಳುವನು. ॥ ೧೨ ॥ ಅವನು ಪುಷ್ಪಮಾಲೆ, ತಾಂಬೂಲ, ಚಂದನ ಮತ್ತು ಅಂಗರಾಗ ಮೊದಲಾದ ವಸ್ತುಗಳನ್ನು ಮೊದಲಿಗೆ ಬ್ರಾಹ್ಮಣರಿಗೆ, ಸ್ವಜನ-ಸಂಬಂಧಿಗಳಿಗೆ, ಮಂತ್ರಿ, ರಾಣಿಯರಿಗೆ ಹಂಚಿಕೊಟ್ಟು ಉಳಿದುದನ್ನು ತಾನು ಉಪಯೋಗಿಸುತ್ತಿದ್ದನು. ॥ ೧೩ ॥ ಭಗವಂತನು ಇಷ್ಟೆಲ್ಲ ಮಾಡುವಷ್ಟರಲ್ಲಿ ಸಾರಥಿಯಾದ ದಾರುಕನು ಸುಗ್ರೀವಾದಿ ಕುದುರೆಗಳನ್ನು ಹೂಡಿದ ಅತ್ಯಂತ ಅದ್ಭುತವಾದ ರಥವನ್ನು ತಂದು ನಿಲ್ಲಿಸಿ ಶ್ರೀಕೃಷ್ಣನಿಗೆ ವಂದಿಸಿ ಅವನ ಮುಂದೆ ನಿಲ್ಲುತ್ತಿದ್ದನು. ॥ ೧೪ ॥ ಅನಂತರ ಭಗವಾನ್ ಶ್ರೀಕೃಷ್ಣನು ಸಾತ್ಯಕಿ ಮತ್ತು ಉದ್ಧವರೊಂದಿಗೆ, ಸಾರಥಿಯ ಕೈಯನ್ನು ಹಿಡಿದುಕೊಂಡು ಭುವನ ಭಾಸ್ಕರ ಭಗವಾನ್ ಸೂರ್ಯನು ಉದಯಾಚಲದಲ್ಲಿ ಆರೂಢನಾಗುವಂತೆಯೇ ರಥಾರೂಢನಾಗುವನು. ॥ ೧೫ ॥ ಆ ಸಮಯದಲ್ಲಿ ರಾಣಿವಾಸದ ಸ್ತ್ರೀಯರು ನಾಚಿಕೆ ಮತ್ತು ಪ್ರೇಮ ಪೂರ್ಣವಾದ ನೋಟದಿಂದ ಅವನನ್ನು ನೋಡುತ್ತಾ ಬಹಳ ಕಷ್ಟದಿಂದ ಬೀಳ್ಕೊಡುತ್ತಿದ್ದರು. ಭಗವಂತನು ಅವರ ಚಿತ್ತವನ್ನು ಅಪಹರಿಸಿಕೊಂಡು ಅರಮನೆಯಿಂದ ಹೊರಡುತ್ತಿದ್ದನು. ॥ ೧೬ ॥

ಪರೀಕ್ಷಿತನೇ ! ಅನಂತರ ಭಗವಾನ್ ಶ್ರೀಕೃಷ್ಣನು ಸಮಸ್ತ ಯದುವಂಶೀಯರೊಂದಿಗೆ ಸುಧರ್ಮಾ ಎಂಬ ಸಭೆಯನ್ನು ಪ್ರವೇಶಿಸುವನು. ಆ ಸಭೆಯ ಮಹಿಮೆ ಎಂದರೆ ಅದರಲ್ಲಿ ಕುಳಿತಿರುವವರಿಗೆ ಹಸಿವು-ಬಾಯಾರಿಕೆ, ಶೋಕ-ಮೋಹ, ಜರಾಮೃತ್ಯುವೆಂಬ ಆರು ಊರ್ಮಿಗಳು ಬಾಧಿಸುವುದಿಲ್ಲ. ॥ ೧೭ ॥ ಭಗವಾನ್ ಶ್ರೀಕೃಷ್ಣನು ತನ್ನ ಅಂಗಕಾಂತಿಯಿಂದ ದಶದಿಕ್ಕುಗಳನ್ನು ಬೆಳಗಿಸುತ್ತಾ ಶ್ರೇಷ್ಠ ಸಿಂಹಾಸನದಲ್ಲಿ ವಿರಾಜಿಸುವನು. ಆ ಸಮಯದಲ್ಲಿ ಯದುವಂಶೀಯ ವೀರರ ನಡುವೆ ಯದುವಂಶಶಿರೋಮಣಿ ಭಗವಾನ್ ಶ್ರೀಕೃಷ್ಣನು ಆಕಾಶದಲ್ಲಿ ತಾರೆಯರಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ಆ ಸಭೆಯಲ್ಲಿ ಶೋಭಿಸುತ್ತಿದ್ದನು. ॥ ೧೮ ॥

ತತ್ರೋಪಮಂತ್ರಿಣೋ ರಾಜನ್ ನಾನಾಹಾಸ್ಯರಸೈರ್ವಿಭುಮ್ ।
ಉಪತಸ್ಥುರ್ನಟಾಚಾರ್ಯಾ ನರ್ತಕ್ಯಸ್ತಾಂಡವೈಃ ಪೃಥಕ್
॥ ೧೯ ॥

ಮೃದಂಗವೀಣಾಮುರಜವೇಣುತಾಲದರಸ್ವನೈಃ ।
ನನೃತುರ್ಜಗುಸ್ತುಷ್ಟುವುಶ್ಚ ಸೂತಮಾಗಧವಂದಿನಃ
॥ ೨೦ ॥

ತತ್ರಾಹುರ್ಬ್ರಾಹ್ಮಣಾಃ ಕೇಚಿದಾಸೀನಾ ಬ್ರಹ್ಮವಾದಿನಃ ।
ಪೂರ್ವೇಷಾಂ ಪುಣ್ಯಯಶಸಾಂ ರಾಜ್ಞಾಂ ಚಾಕಥಯನ್ಕಥಾಃ
॥ ೨೧ ॥

ತತ್ರೈಕಃ ಪುರುಷೋ ರಾಜನ್ನಾಗತೋಽಪೂರ್ವದರ್ಶನಃ ।
ವಿಜ್ಞಾಪಿತೋ ಭಗವತೇ ಪ್ರತೀಹಾರೈಃ ಪ್ರವೇಶಿತಃ
॥ ೨೨ ॥

ಸ ನಮಸ್ಕೃತ್ಯ ಕೃಷ್ಣಾಯ ಪರೇಶಾಯ ಕೃತಾಂಜಲಿಃ ।
ರಾಜ್ಞಾಮಾವೇದಯದ್ದುಃಖಂ ಜರಾಸಂಧನಿರೋಧಜಮ್
॥ ೨೩ ॥

ಯೇ ಚ ದಿಗ್ವಿಜಯೇ ತಸ್ಯ ಸಂನತಿಂ ನ ಯಯುರ್ನೃಪಾಃ ।
ಪ್ರಸಹ್ಯ ರುದ್ಧಾಸ್ತೇನಾಸನ್ನಯುತೇ ದ್ವೇ ಗಿರಿವ್ರಜೇ
॥ ೨೪ ॥

ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಪ್ರಪನ್ನಭಯಭಂಜನ ।
ವಯಂ ತ್ವಾಂ ಶರಣಂ ಯಾಮೋ ಭವಭೀತಾಃ ಪೃಥಗ್ಧಿಯಃ
॥ ೨೫ ॥

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥ ೨೬ ॥

ಲೋಕೇ ಭವಾನ್ಪ್ರಗದಿನಃ ಕಲಯಾವತೀರ್ಣಃ
ಸದ್ರಕ್ಷಣಾಯ ಖಲನಿಗ್ರಹಣಾಯ ಚಾನ್ಯಃ ।
ಕಶ್ಚಿತ್ತ್ವದೀಯಮತಿಯಾತಿ ನಿದೇಶಮೀಶ
ಕಿಂ ವಾ ಜನಃ ಸ್ವಕೃತಮೃಚ್ಛತಿ ತನ್ನ ವಿದ್ಮಃ ॥ ೨೭ ॥

ಪರೀಕ್ಷಿತನೇ! ಆ ಸಭೆಯಲ್ಲಿ ವಿದೂಷಕರು ನಾನಾ ವಿಧದ ಹಾಸ್ಯಚಟಾಕಿಗಳಿಂದ, ನಾಟ್ಯಾಚಾರ್ಯರು ನಟನೆಯಿಂದ, ನರ್ತಕಿಯರು ಬೇರೆ-ಬೇರೆ ಗುಂಪು-ಗುಂಪಾಗಿ ಕಲಾಪೂರ್ಣ ನೃತ್ಯಗಳಿಂದ ಭಗವಂತನ ಸೇವೆ ಮಾಡುತ್ತಿದ್ದರು. ॥ ೧೯ ॥ ಆಗ ಮೃದಂಗ, ವೀಣೆ, ಪಖವಾಜ್, ಕೊಳಲು, ಕರತಾಳ, ಶಂಖ ಮೊದಲಾದ ವಾದ್ಯಗಳು ಮೊಳಗುತ್ತಿದ್ದವು. ಸೂತ-ಮಾಗಧ ವಂದೀಜನರು ಹಾಡುತ್ತಾ-ಕುಣಿಯುತ್ತಾ ಭಗವಂತನನ್ನು ಸ್ತುತಿಸುತ್ತಿದ್ದರು. ॥ ೨೦ ॥ ಕೆಲವು ವ್ಯಾಖ್ಯಾನ ಕುಶಲರಾದ ಬ್ರಾಹ್ಮಣರು ಅಲ್ಲಿ ಕುಳಿತು ಬ್ರಹ್ಮತತ್ತ್ವವನ್ನು ಪ್ರತಿಪಾದಿಸುತ್ತಿದ್ದರು. ಮತ್ತೆ ಕೆಲವರು ಪೂರ್ವಕಾಲದ ಪವಿತ್ರಕೀರ್ತಿಗಳಾದ ರಾಜರ ಕಥೆಗಳನ್ನು ಹೇಳುತ್ತಿದ್ದರು. ಹೀಗೆಯೇ ಶ್ರೀಕೃಷ್ಣನ ದಿನಚರಿಯು ಅನುದಿನವೂ ನಡೆಯುತ್ತಿತ್ತು. ॥ ೨೧ ॥

ಹೀಗೆಯೇ ಒಂದು ದಿನ ಭಗವಂತನು ಸುಧರ್ಮಾ ಸಭೆಯಲ್ಲಿ ಸಿಂಹಾಸನಾರೂಢನಾಗಿ ಕುಳಿತಿರುವಾಗ ಸಭಾದ್ವಾರಕ್ಕೆ ಒಬ್ಬ ಅಪರಿತ ವ್ಯಕ್ತಿಯು ಬಂದನು. ದ್ವಾರಪಾಲಕರು ಶ್ರೀಕೃಷ್ಣನಿಗೆ ಇದರ ಸೂಚನೆಯಿತ್ತು ಅವನನ್ನು ಸಭೆಗೆ ಕರೆತಂದರು. ॥ ೨೨ ॥ ಆ ಮನುಷ್ಯನು ಪರಮೇಶ್ವರನಾದ ಶ್ರೀಕೃಷ್ಣನಿಗೆ ಕೈಜೋಡಿಸಿ ನಮಸ್ಕರಿಸಿ ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ರಾಜರಿಗೆ ಉಂಟಾದ ದುಃಖವನ್ನು ವಿವರಿಸಿ ಹೇಳಿದನು. ಜರಾಸಂಧನು ದಿಗ್ವಿಜಯದ ಸಮಯದಲ್ಲಿ ಆತನಿಗೆ ತಲೆಬಾಗದಿದ್ದ ರಾಜರನ್ನು ಯುದ್ಧದಲ್ಲಿ ಪರಾಜಯಗೊಳಿಸಿ ಗಿರಿವ್ರಜದ ಸೆರೆಮನೆಯಲ್ಲಿಡುತ್ತಿದ್ದನು. ಅಂತಹವರ ಸಂಖ್ಯೆಯು ಇಪ್ಪತ್ತು ಸಾವಿರದಷ್ಟಿದೆ. ಅಂತಹ ರಾಜರು ತಮ್ಮ ಪ್ರಾರ್ಥನೆಯನ್ನು ಹೀಗೆ ಕಳಿಸಿದ್ದಾರೆ - ॥ ೨೩-೨೪ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಅಪ್ರಮೇಯಾತ್ಮನೇ! ಶರಣಾಗತರಾದವರ ಭಯವನ್ನು ಧ್ವಂಸಮಾಡುವವನೇ! ನಮ್ಮ ಭೇದ ಬುದ್ಧಿಯು ಅಳಿಸಿಹೋಗಿಲ್ಲ. ನಾವು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರದಿಂದ ಭಯಗೊಂಡು ನಿನಗೆ ಶರಣು ಬಂದಿದ್ದೇವೆ. ॥ ೨೫ ॥ ಭಗವಂತಾ! ಲೋಕದಲ್ಲಿ ಅಧಿಕಾಂಶ ಜನರು ಸಕಾಮಕರ್ಮಗಳಲ್ಲಿ ಮತ್ತು ನಿಷಿದ್ಧಕರ್ಮಗಳಲ್ಲಿ ತೊಡಗಿದ್ದು ಕ್ಷೇಮಕರವಾದ ಸ್ವಧರ್ಮಗಳಲ್ಲಿ ವಿಸ್ಮರಣೆಯನ್ನು ಹೊಂದಿರುವರು. ನಿನ್ನಿಂದಲೇ ಹೇಳಲ್ಪಟ್ಟ ಪಾಂಚರಾತ್ರಾದ್ಯಾಗಮದ ಮೂಲಕ ನಿನ್ನ ಪೂಜಾದ್ಯುಪಚಾರಗಳನ್ನು ಮಾಡುವ ಮನಸ್ಸುಳ್ಳವರಾಗುವುದಿಲ್ಲ. ನೀನು ಮಹಾಬಲಿಷ್ಠನಾಗಿರುವೆ. ಕಾಲರೂಪದಿಂದ ನೀನು ಸದಾ-ಸರ್ವದಾ ಸಾವಧಾನದಿಂದಿರುತ್ತಾ ಅಂತಹವರ ಆಶಾಲತೆಯನ್ನು ಕ್ಷಣಮಾತ್ರದಲ್ಲಿ ಕತ್ತರಿಸಿಹಾಕುವೆ. ಅಂತಹ ಕಾಲರೂಪವಾದ ನಿನಗೆ ನಮಸ್ಕರಿಸುತ್ತೇವೆ. ॥ ೨೬ ॥ ಪ್ರಭುವೇ! ನೀನು ಜಗದೀಶ್ವರನೇ ಆಗಿರುವೆ. ಸತ್ಪುರುಷರ ರಕ್ಷಣೆಗಾಗಿಯೂ, ದುಷ್ಟರ ನಿಗ್ರಹಕ್ಕಾಗಿಯೂ ಜ್ಞಾನ-ಬಲ ಇವೇ ಮುಂತಾದ ಕಲೆಗಳೊಡನೆ ನೀನು ಅವತರಿಸಿರುವೆ. ಇಂತಹ ಸ್ಥಿತಿಯಲ್ಲಿ ಜರಾಸಂಧನಾಗಲೀ ಇತರ ರಾಜರಾಗಲೀ ನಿನ್ನ ಇಚ್ಛೆಗೆ ಮತ್ತು ಆಜ್ಞೆಗೆ ವಿರುದ್ಧವಾಗಿ ನಮ್ಮನ್ನು ಹೀಗೆ ತೊಂದರೆಪಡಿಸುತ್ತಿದ್ದಾರೆ? ಇದನ್ನು ನಾವು ಅರಿಯೆವು. ಒಂದು ವೇಳೆ 'ಜರಾಸಂಧನು ಕಷ್ಟವನ್ನು ಕೊಡುತ್ತಿಲ್ಲ ಅವನ

ಸ್ವಪ್ನಾಯಿತಂ ನೃಪಸುಖಂ ಪರತಂತ್ರಮೀಶ
ಶಶ್ವದ್ಭಯೇನ ಮೃತಕೇನ ಧುರಂ ವಹಾಮಃ ।
ಹಿತ್ವಾ ತದಾತ್ಮನಿ ಸುಖಂ ತ್ವದನೀಹಲಭ್ಯಂ
ಕ್ಲಿಶ್ಯಾಮಹೇಽತಿಕೃಪಣಾಸ್ತವ ಮಾಯಯೇಹ ॥ ೨೮ ॥

ರೂಪದಿಂದ, ಅವನನ್ನು ನಿಮಿತ್ತವಾಗಿಸಿಕೊಂಡು ನಮ್ಮ ಅಶುಭ ಕರ್ಮಗಳೇ ನಮಗೆ ದುಃಖಕೊಡುತ್ತಿವೆ' ಎಂದು ಹೇಳಿದರೂ ಇದು ಸರಿಯಲ್ಲ. ಏಕೆಂದರೆ, ನಾವುಗಳು ನಿನ್ನವರಾದಾಗ ನಮ್ಮ ದುಷ್ಕರ್ಮಗಳು ನಮಗೆ ಫಲಕೊಡಲು ಹೇಗೆ ಸಮರ್ಥವಾದಾವು? ಆದ್ದರಿಂದ ನೀನು ದಯತೋರಿ ಅವಶ್ಯವಾಗಿ ನಮ್ಮನ್ನು ಈ ಕ್ಲೇಶಗಳಿಂದ ಬಿಡುಗಡೆಗೊಳಿಸು. ॥ ೨೭ ॥ ಪ್ರಭುವೇ! ರಾಜಸೌಖ್ಯವೆಂಬುದು ಸ್ವಪ್ನಪ್ರಾಯವಾದುದು ಮತ್ತು ಪರಾಧೀನವಾದುದು. ರಾಜಸುಖವನ್ನು ಉಪಭೋಗಿಸುವ ಈ ಶರೀರವು ಜೀವಚ್ಛವದಂತಿದೆ. ಸದಾ ಭಯಗೊಂಡೇ ಹೆಣದಂತಿರುವ ಈ ಶರೀರದಿಂದ ರಾಜ್ಯದ ಹೊರೆಯನ್ನು ಹೊರುತ್ತೇವೆ. ನಿನ್ನ ಕೃಪೆಯಿಂದ ನಿಷ್ಕಾಮಕರ್ಮಗಳಿಗೆ ಪ್ರಾಪ್ತವಾಗುವ ಸ್ವತಂತ್ರವಾದ ಆತ್ಮಸುಖವನ್ನು ತ್ಯಜಿಸಿದ್ದೇವೆ. ಅಜ್ಞಾನಿಗಳಾದ ನಾವು ನಿನ್ನ ಮಾಯೆಯಿಂದ ವಿಮೋಹಿತರಾಗಿ ಬಹಳವಾಗಿ ಕ್ಲೇಶಗಳನ್ನು ಅನುಭವಿಸುತ್ತಿದ್ದೇವೆ. ॥ ೨೮ ॥ ಭಗವಂತ! ನಿನ್ನ ಚರಣಕಮಲಗಳು ಶರಣಾಗತರಾದವರ ಸಮಸ್ತ ಶೋಕಗಳನ್ನೂ, ಮೋಹಗಳನ್ನೂ ನಾಶಗೊಳಿಸುತ್ತವೆ. ಆದುದರಿಂದ ಜರಾಸಂಧರೂಪವಾದ ಕರ್ಮ ಬಂಧನದಿಂದ ನಮ್ಮನ್ನು ಬಿಡುಗಡೆಗೊಳಿಸು. ಪ್ರಭೋ! ಈ ಜರಾಸಂಧನು ಹತ್ತು ಸಾವಿರ ಆನೆಗಳ ಬಲವನ್ನು ಒಬ್ಬನೇ ಹೊಂದಿದ್ದಾನೆ. ಸಿಂಹವು ಕುರಿಗಳನ್ನು ತಡೆಹಿಡಿದಿರುವಂತೆ ಇವನು ನಮ್ಮನ್ನು ಬಂಧನದಲ್ಲಿರಿಸಿದ್ದಾನೆ. ॥ ೨೯ ॥ ಚಕ್ರಪಾಣಿಯೇ! ಜರಾಸಂಧನು ಹದಿನೆಂಟು ಬಾರಿ ನಿನ್ನೊಡನೆ ಯುದ್ಧಮಾಡಿ ಹದಿನೇಳು ಬಾರಿ ಪರಾಜಿತನಾಗಿ ಓಡಿದ್ದಾನೆ. ಆದರೇ ಒಂದೇ ಸಲ ನಿನ್ನನ್ನು ಗೆದ್ದಿರುವನು. ನಿನ್ನ ಶಕ್ತಿ-ಬಲ-ಪೌರುಷಗಳು ಅನಂತವಾಗಿವೆ ಎಂಬುದನ್ನು ನಾವು ಬಲ್ಲೆವು. ಹೀಗಿದ್ದರೂ ಮನುಷ್ಯರಂತೆ ಆಚರಿಸಿ ನೀನೇ ಸೋತವನಂತೆ ಅಭಿನಯಿಸಿದೆ. ಆದರೆ ಇದರಿಂದ ಅವನ ಅಹಂಕಾರವು ಬೆಳದು ಹೋಯಿತು. ಓ ಅಜಿತನೇ! ನಾವೆಲ್ಲರೂ ನಿನ್ನ ಭಕ್ತರಾಗಿ ಇದ್ದೇವೆ, ನಿನ್ನ ಪ್ರಜೆಗಳಾಗಿದ್ದೇವೆ ಎಂದು ತಿಳಿದು ನಮಗೆಲ್ಲ ಇನ್ನೂ ಜಾಸ್ತಿ ಕಷ್ಟಗಳನ್ನು ಕೊಡುತ್ತಿದ್ದಾನೆ. ಈಗ ನಿನಗೆ ಉಚಿತವೆನಿಸಿದಂತೆ ಮಾಡು. ॥ ೩೦ ॥

ತನ್ನೋ ಭವಾನ್ಪ್ರಣತಶೋಕಹರಾಂಘ್ರಿಯುಗ್ಮೋ
ಬದ್ಧಾನ್ವಿಯುಂಕ್ಷ್ವ ಮಗಧಾಹ್ವಯಕರ್ಮಪಾಶಾತ್ ।
ಯೋ ಭೂಭುಜೋಽಯುತಮತಂಗಜವೀರ್ಯಮೇಕೋ
ಬಿಭ್ರದ್ರುರೋಧ ಭವನೇ ಮೃಗರಾಡಿವಾವೀಃ
॥ ೨೯ ॥

ಯೋ ವೈ ತ್ವಯಾ ದ್ವಿನವಕೃತ್ವ ಉದಾತ್ತಚಕ್ರ
ಭಗ್ನೋ ಮೃಧೇ ಖಲು ಭವಂತಮನಂತವೀರ್ಯಮ್ ।
ಜಿತ್ವಾ ನೃಲೋಕನಿರತಂ ಸಕೃದೂಢದರ್ಪೋ
ಯುಷ್ಮತ್ಪ್ರಜಾ ರುಜತಿ ನೋಽಜಿತ ತದ್ವಿಧೇಹಿ
॥ ೩೦ ॥

ದೂತನು ಹೇಳಿದನು – ಭಗವಂತಾ! ಜರಾಸಂಧನಲ್ಲಿ ಬಂದಿಯಾದ ರಾಜರು ಹೀಗೆ ನಿನ್ನಲ್ಲಿ ಪ್ರಾರ್ಥಿಸಿದ್ದಾರೆ. ಅವರೆಲ್ಲರೂ ನಿನ್ನ ಚರಣಕಮಲಗಳಲ್ಲಿ ಶರಣಾಗಿದ್ದಾರೆ ಮತ್ತು ನಿನ್ನ ದರ್ಶನವನ್ನು ಅಪೇಕ್ಷಿಸುತ್ತಿದ್ದಾರೆ. ನೀನು ದಯತೋರಿ ಆ ದೀನರಿಗೆ ಸುಖವನ್ನು ಉಂಟುಮಾಡು. ॥ ೩೧ ॥

ದೂತ ಉವಾಚ

ಇತಿ ಮಾಗಧಸಂರುದ್ಧಾ ಭವದ್ದರ್ಶನಕಾಂಕ್ಷಿಣಃ ।
ಪ್ರಪನ್ನಾಃ ಪಾದಮೂಲಂ ತೇ ದೀನಾನಾಂ ಶಂ ವಿಧೀಯತಾಮ್
॥ ೩೧ ॥

ಶ್ರೀಶುಕ ಉವಾಚ

ರಾಜದೂತೇ ಬ್ರುವತ್ಯೇವಂ ದೇವರ್ಷಿಃ ಪರಮದ್ಯುತಿಃ ।
ಬಿಭ್ರತ್ ಪಿಂಗಜಟಾಭಾರಂ ಪ್ರಾದುರಾಸೀದ್ಯಥಾ ರವಿಃ
॥ ೩೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ರಾಜದೂತನು ಹೀಗೆ ಹೇಳುತ್ತಿರುವಂತೆಯೇ ಪರಮ ತೇಜಸ್ವಿಗಳಾದ ನಾರದಮಹರ್ಷಿಗಳು ಹೊಂಬಣ್ಣದ ಜಟಾಭಾರವನ್ನು ಧರಿಸಿದ್ದ ಸೂರ್ಯನಂತೇ ತೇಜಃಪುಂಜರಾಗಿ ಶ್ರೀಕೃಷ್ಣನ ಸಭೆಗೆ ಆಗಮಿಸಿದರು. ॥ ೩೨ ॥ ಬ್ರಹ್ಮನೇ ಮೊದಲಾದ ಸಮಸ್ತ ಲೋಕಪಾಲರಿಗೂ ಏಕಮಾತ್ರಸ್ವಾಮಿಯಾದ ಶ್ರೀಕೃಷ್ಣನು ನಾರದರನ್ನು ನೋಡುತ್ತಲೇ ಹರ್ಷಗೊಂಡು ಸಭ್ಯರೊಡನೆಯೂ, ಸೇವಕರೊಡನೆಯೂ ಎದ್ದುನಿಂತು ತಲೆಬಾಗಿ ನಮಸ್ಕರಿಸಿದನು. ॥ ೩೩ ॥

ತಂ ದೃಷ್ಟ್ವಾಽಽ ಭಗವಾನ್ ಕೃಷ್ಣಃ ಸರ್ವಲೋಕೇಶ್ವರೇಶ್ವರಃ ।
ವವಂದ ಉತ್ಥಿತಃ ಶೀರ್ಷ್ಣಾ ಸಸಭ್ಯಃ ಸಾನುಗೋ ಮುದಾ
॥ ೩೩ ॥

ಸಭಾಜಯಿತ್ವಾ ವಿಧಿವತ್ ಕೃತಾಸನಪರಿಗ್ರಹಮ್ ।
ಬಭಾಷೇ ಸೂನೃತೈರ್ವಾಕ್ಯೈಃ ಶ್ರದ್ದಯಾ ತರ್ಪಯನ್ ಮುನಿಮ್
॥ ೩೪ ॥

ನಾರದಮಹರ್ಷಿಗಳು ಆಸನವನ್ನು ಪರಿಗ್ರಹಿಸಿ ಆಸೀನರಾದ ನಂತರ ಭಗವಂತನು ಅವರನ್ನು ಯಥಾವಿಧಿಯಾಗಿ ಪೂಜಿಸಿ ಸಂತುಷ್ಟಗೊಳಿಸಿ ಸವಿಯಾದ ಮಾತುಗಳಿಂದ ಹೀಗೆ ಹೇಳಿದನು – ॥ ೩೪ ॥

ಅಪಿ ಸ್ವಿದದ್ಯ ಲೋಕಾನಾಂ ತ್ರಯಾಣಾಮಕುತೋಭಯಮ್ ।
ನನು ಭೂಯಾನ್ ಭಗವತೋ ಲೋಕಾನ್ಪರ್ಯಟತೋ ಗುಣಃ
॥ ೩೫ ॥

ದೇವರ್ಷಿಗಳೇ ! ಈ ಸಮಯದಲ್ಲಿ ಮೂರು ಲೋಕಗಳೂ ನಿರ್ಭಯವಾಗಿ ಸಕುಶಲರಾಗಿರುವುದಲ್ಲವೇ ? ನೀವು ತ್ರಿಲೋಕ ಸಂಚಾರಿಗಳು. ಇದರಿಂದ ನಮಗೆ ಮನೆಯಲ್ಲಿದ್ದೇ ಎಲ್ಲ ಸಮಾಚಾರಗಳು ತಿಳಿಯುತ್ತಿರುವುದು ದೊಡ್ಡಲಾಭವಾಗಿದೆ. ॥ ೩೫ ॥

ನ ಹಿ ತೇಽವಿದಿತಂ ಕಿಂಚಿತ್ ಲೋಕೇಷ್ವೀಶ್ವರಕರ್ತೃಷು ।
ಅಥ ಪೃಚ್ಛಾಮಹೇ ಯುಷ್ಮಾನ್ ಪಾಂಡವಾನಾಂ ಚಿಕೀರ್ಷಿತಮ್
॥ ೩೬ ॥

ಈಶ್ವರನಿಂದ ರಚಿಸಲ್ಪಟ್ಟ ಮೂರು ಲೋಕಗಳಲ್ಲಿಯೂ ನಿಮಗೆ ತಿಳಿಯದಿರುವ ಯಾವುದೇ ವಿಷಯವಿಲ್ಲ. ಆದ್ದರಿಂದ ಯುಧಿಷ್ಠಿರಾದಿ ಪಾಂಡವರು ಈಗ ಏನು ಮಾಡಬೇಕೆಂದಿರುವರು ? ಇದನ್ನು ನಿಮ್ಮಿಂದ ತಿಳಿಯಲು ನಾನು ಬಯಸುತ್ತೇನೆ. ॥ ೩೬ ॥

ಶ್ರೀನಾರದ ಉವಾಚ

ದೇವರ್ಷಿಗಳಾದ ನಾರದರು ಹೇಳಿದರು – ಸರ್ವವ್ಯಾಪಕನಾದ ಅನಂತನೇ ! ವಿಶ್ವಕರ್ತೃವಾದ ನೀನು ಮಹಾಮಾಯಾವಿಯು. ಬ್ರಹ್ಮನೇ ಮೊದಲಾದ ದೊಡ್ಡ-ದೊಡ್ಡ ಮಾಯಾವಿಗಳೂ ಕೂಡ ನಿನ್ನ ಮಾಯೆಯ ಕೊನೆಯನ್ನು ಕಾಣರು. ಕಟ್ಟಿಗೆಯಲ್ಲಿ ಅಗ್ನಿಯು ಅಡಗಿರುವಂತೆಯೇ ನೀನು ಸಮಸ್ತ ಪ್ರಾಣಿಗಳ ಶರೀರಗಳಲ್ಲಿ ಅಚಿಂತ್ಯ ಶಕ್ತಿಯಿಂದ ವ್ಯಾಪ್ತನಾಗಿರುವೆ. ಆದರೆ ಜನರ ದೃಷ್ಟಿಯು ಸತ್ವಾದಿಗುಣಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರಿಂದ ತಮ್ಮೊಳಗೆ ಇರುವ ನಿನ್ನನ್ನು ಅವರು ಕಾಣಲಾರರು. ನಾನು ಒಂದಲ್ಲ ಅನೇಕ ಬಾರಿ ನಿನ್ನ ಮಾಯೆಯನ್ನು ಕಂಡಿರುವೆನು. ಆದರಿಂದ ನೀನು ಏನೂ ತಿಳಿಯದವರಂತೆ ಪಾಂಡವರ ಸಮಾಚಾರವನ್ನು ಕೇಳುವುದರಲ್ಲಿ ನನಗೆ ಅದ್ಭುತವೇನೂ ಕಾಣುತ್ತಿಲ್ಲ ॥ ೩೭ ॥ ಭಗವಂತಾ ! ನೀನು ನಿನ್ನ ಮಾಯೆಯಿಂದಲೇ ಈ ಜಗತ್ತನ್ನು ರಚಿಸಿ, ಸಂಹಾರಮಾಡುವೆ. ಇದು ಮಿಥ್ಯೆಯಾಗಿದ್ದರೂ ನಿನ್ನ ಮಾಯೆಯಿಂದಾಗಿ ಸತ್ಯವಾಗಿರುವಂತೆ ಕಂಡುಬರುತ್ತದೆ. ನೀನು ಯಾವಾಗ ಏನು ಮಾಡಬೇಕೆಂದಿರುವೆಯೋ ಇದನ್ನು ಸರಿಯಾಗಿ ಯಾರು ತಾನೇ ಬಲ್ಲರು ? ನಿನ್ನ ಸ್ವರೂಪವು ಸರ್ವಥಾ ಅಚಿಂತ್ಯವಾಗಿದೆ. ಅಂತಹ ಸರ್ವವಿಲಕ್ಷಣನಾದ ನಿನ್ನನ್ನು ಪದೇ-ಪದೇ ನಮಸ್ಕರಿಸುತ್ತೇನೆ. ॥ ೩೮ ॥ ಶರೀರ ಮತ್ತು ಇದರೊಂದಿಗೆ ಸಂಬಂಧಿಸಿದ ವಾಸನೆಗಳಲ್ಲಿ ಸಿಕ್ಕಿಹಾಕಿಕೊಂಡ ಜೀವನು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರದಲ್ಲಿ ಅಲೆಯುತ್ತಾ ಇದ್ದು ಈ ಶರೀರದಿಂದ ಹೇಗೆ ಮುಕ್ತನಾಗುವೆ ಎಂಬುದು ತಿಳಿಯುತ್ತಿಲ್ಲ. ವಾಸ್ತವವಾಗಿ ಜೀವಿಗಳ ಹಿತಕ್ಕಾಗಿಯೇ ನೀನು ವಿವಿಧ ಲೀಲಾವತಾರಗಳನ್ನು ಎತ್ತಿ ನಿನ್ನ ಪವಿತ್ರಕೀರ್ತಿಯ ಉಜ್ವಲವಾದ ದೀಪವನ್ನು ಪ್ರಜ್ವಲಿಸುವೆ. ಅಂತಹ ನಿನಗೆ ಸರ್ವಾತ್ಮನಾ ಶರಣಾಗಿದ್ದೇನೆ. ॥ ೩೯ ॥ ಪ್ರಭೋ ! ನೀನು ಸಾಕ್ಷಾತ್ ಪರಬ್ರಹ್ಮನಾಗಿದ್ದರೂ ಮನುಷ್ಯರಂತಹ ಲೀಲಾನಾಟಕವನ್ನಾಡುತ್ತಾ ನನ್ನಲ್ಲಿ ಕೇಳುತ್ತಿರುವೆಯಲ್ಲ! ಅದಕ್ಕಾಗಿ ನಿನ್ನ ಸೋದರಳಿಯನೂ, ಪ್ರೇಮಿ ಭಕ್ತನೂ ಆದ ಯುಧಿಷ್ಠಿರನು ಏನು ಮಾಡಬೇಕೆಂದಿರುವನೋ ಅದನ್ನು ನಾನು ನಿನಗೆ ಹೇಳುತ್ತೇನೆ. ॥ ೪೦ ॥

ದೃಷ್ಟಾಮಯಾ ತೇ ಬಹುಶೋ ದುರತ್ಯಯಾ
ಮಾಯಾ ವಿಭೋ ವಿಶ್ವಸೃಜಶ್ಚ ಮಾಯಿನಃ ।
ಭೂತೇಷು ಭೂಮಂಶ್ಚರತಃ ಸ್ವಶಕ್ತಿಭಿ-
ರ್ವಹ್ನೇರಿವಚ್ಛನ್ನರುಚೋ ನ ಮೇಽದ್ಭುತಮ್ ॥ ೩೭ ॥

ತವೇಹಿತಂ ಕೋಽರ್ಹತಿ ಸಾಧು ವೇದಿತುಂ
ಸ್ವಮಾಯಯೇದಂ ಸೃಜತೋ ನಿಯಚ್ಛತಃ ।
ಯದ್ವಿದ್ಯಮಾನಾತ್ಮತಯಾವಭಾಸತೇ
ತಸ್ಮೈ ನಮಸ್ತೇ ಸ್ವವಿಲಕ್ಷಣಾತ್ಮನೇ ॥ ೩೮ ॥

ಜೀವಸ್ಯ ಯಃ ಸಂಸರತೋ ವಿಮೋಕ್ಷಣಂ
ನ ಜಾನತೋಽನರ್ಥವಹಾಚ್ಛರೀರತಃ ।
ಲೀಲಾವತಾರೈಃ ಸ್ವಯಶಃ ಪ್ರದೀಪಕಂ
ಪ್ರಾಜ್ವಾಲಯತ್ತ್ವಾ ತಮಹಂ ಪ್ರಪದ್ಯೇ ॥ ೩೯ ॥

ಅಥಾಪ್ಯಾಶ್ರಾವಯೇ ಬ್ರಹ್ಮ ನರಲೋಕವಿಡಂಬನಮ್ ।
ರಾಜ್ಞಃ ಪೈತೃಷ್ವಸೇಯಸ್ಯ ಭಕ್ತಸ್ಯ ಚ ಚಿಕೀರ್ಷಿತಮ್
॥ ೪೦ ॥

ಯಕ್ಷ್ಯತಿ ತ್ವಾಂ ಮಖೇಂದ್ರೇಣ ರಾಜಸೂಯೇನ ಪಾಂಡವಃ ।
ಪಾರಮೇಷ್ಠ್ಯಕಾಮೋ ನೃಪತಿಸ್ತದ್ಭವಾನನುಮೋದತಾಮ್
॥ ೪೧ ॥

ತಸ್ಮಿನ್ ದೇವ ಕ್ರತುವರೇ ಭವಂತಂ ವೈ ಸುರಾದಯಃ ।
ದಿದೃಕ್ಷವಃ ಸಮೇಷ್ಯಂತಿ ರಾಜಾನಶ್ಚ ಯಶಸ್ವಿನಃ
॥ ೪೨ ॥

ಶ್ರವಣಾತ್ಕೀರ್ತನಾತ್ ಧ್ಯಾನಾತ್ ಪೂಯಂತೇಽಂತೇವಸಾಯಿನಃ ।
ತವ ಬ್ರಹ್ಮಮಯಸ್ಯೇಶ ಕಿಮುತೇಕ್ಷಾಭಿಮರ್ಶಿನಃ
॥ ೪೩ ॥

ಯಸ್ಯಾಮಲಂ ದಿವಿ ಯಶಃ ಪ್ರಥಿತಂ ರಸಾಯಾಂ
ಭೂಮೌ ಚ ತೇ ಭುವನಮಂಗಲ ದಿಗ್ವಿತಾನಮ್ ।
ಮಂದಾಕಿನೀತಿ ದಿವಿ ಭೋಗವತೀತಿ ಚಾಧೋ
ಗಂಗೇತಿ ಚೇಹ ಚರಣಾಂಬು ಪುನಾತಿ ವಿಶ್ವಮ್ ॥ ೪೪ ॥

ಶ್ರೀಶುಕ ಉವಾಚ

ತತ್ರ ತೇಷ್ವಾತ್ಮಪಕ್ಷೇಷ್ವಗೃಹ್ಣತ್ಸು ವಿಜಿಗೀಷಯಾ ।
ವಾಚಃ ಪೇಶೈಃ ಸ್ಮಯನ್ಭೃತ್ಯಮುದ್ಧವಂ ಪ್ರಾಹ ಕೇಶವಃ
॥ ೪೫ ॥

ಶ್ರೀಭಗವಾನುವಾಚ

ತ್ವಂ ಹಿ ನಃ ಪರಮಂ ಚಕ್ಷುಃ ಸುಹೃನ್ಮಂತ್ರಾರ್ಥತತ್ತ್ವವಿತ್ ।
ಅಥಾತ್ರ ಬ್ರೂಹ್ಯನುಷ್ಠೇಯಂ ಶ್ರದ್ದಧ್ಮಃ ಕರವಾಮ ತತ್
॥ ೪೬ ॥

ಇತ್ಯುಪಾಮಂತ್ರಿತೋ ಭರ್ತ್ರಾ ಸರ್ವಜ್ಞೇನಾಪಿ ಮುಗ್ಧವತ್ ।
ನಿದೇಶಂ ಶಿರಸಾಽಽಧಾಯ ಉದ್ಧವಃ ಪ್ರತ್ಯಭಾಷತ
॥ ೪೭ ॥

ಬ್ರಹ್ಮಲೋಕದಲ್ಲಿ ಪ್ರಾಪ್ತವಾಗುವ ಭೋಗವು ಯುಧಿಷ್ಠಿರ ಮಹಾರಾಜನಿಗೆ ಇಲ್ಲೇ ದೊರೆತಿದೆ ; ಇದರಲ್ಲಿ ಸಂದೇಹವೇ ಇಲ್ಲ. ಆದರೂ ಅವನು ಶ್ರೇಷ್ಠವಾದ ರಾಜಸೂಯಯಜ್ಞದ ಮೂಲಕ ನಿನ್ನನ್ನು ಆರಾಧಿಸ ಬೇಕೆಂದಿರುವನು. ನೀನು ಕೃಪೆದೋರಿ ಅದನ್ನು ಅನುಮೋದಿಸುವವನಾಗು. ॥ ೪೧ ॥ ಭಗವಂತಾ ! ಆ ಶ್ರೇಷ್ಠವಾದ ಯಜ್ಞದಲ್ಲಿ ನಿನ್ನ ದರ್ಶನ ಪಡೆಯಲು ದೊಡ್ಡ-ದೊಡ್ಡ ದೇವತೆಗಳೂ, ಯಶೋವಂತರಾದ ನರಪತಿಗಳೂ ಆಗಮಿಸುವರು. ॥ ೪೨ ॥ ಪ್ರಭೋ ! ನೀನು ಸಾಕ್ಷಾತ್ ವಿಜ್ಞಾನಾನಂದ ಘನಬ್ರಹ್ಮನೇ ಆಗಿರುವೆ. ನಿನ್ನ ನಾಮಶ್ರವಣ, ನಾಮ ಸಂಕೀರ್ತನ ಮತ್ತು ಧ್ಯಾನಮಾತ್ರದಿಂದ ಅಂತ್ಯಜರೂ ಕೂಡ ಪವಿತ್ರರಾಗಿ ಬಿಡುತ್ತಾರೆ. ಹೀಗಿರುವಾಗ ನಿನ್ನ ದರ್ಶನ, ಸ್ಪರ್ಶಮಾಡುವವರ ಕುರಿತು ಹೇಳುವುದೇನಿದೆ ? ॥ ೪೩ ॥ ತ್ರಿಭುವನ ಮಂಗಳನೇ ! ನಿನ್ನ ನಿರ್ಮಲ ಕೀರ್ತಿಯು ಸಮಸ್ತ ದಿಕ್ಕುಗಳಲ್ಲಿಯೂ, ಸ್ವರ್ಗ, ಮರ್ತ್ಯ, ಪಾತಾಳಲೋಕಗಳಲ್ಲಿಯೂ ಹರಡಿಕೊಂಡುಬಿಟ್ಟಿದೆ. ಹಾಗೆಯೇ ನಿನ್ನ ಚರಣಾಮೃತ ತೀರ್ಥವು ಸ್ವರ್ಗದಲ್ಲಿ ಮಂದಾಕಿನಿಯಾಗಿಯೂ, ಪಾತಾಳದಲ್ಲಿ ಭೋಗವತಿಯಾಗಿಯೂ, ಭೂಲೋಕದಲ್ಲಿ ಗಂಗೆ ಎಂಬ ಹೆಸರಿನಿಂದಲೂ ಪ್ರವಹಿಸಿ ಸಮಸ್ತ ವಿಶ್ವವನ್ನು ಪವಿತ್ರಗೊಳಿಸುತ್ತಿದೆ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ಸಭೆಯಲ್ಲಿ ಉಪಸ್ಥಿತರಾಗಿದ್ದ ಯದುವೀರರೆಲ್ಲರೂ ಮೊದಲು ಜರಾಸಂಧನೊಡನೆ ಯುದ್ಧಮಾಡಿ ಅವನನ್ನು ಗೆದ್ದುಕೊಳ್ಳ ಬೇಕೆಂದು ಅತ್ಯಂತ ಉತ್ಸುಕರಾಗಿದ್ದರು. ಆದ್ದರಿಂದ ನಾರದರ ಮಾತು ಅವರಿಗೆ ರುಚಿಸಲಿಲ್ಲ. ಆಗ ಬ್ರಹ್ಮಾದಿಗಳಿಗೆ ಶಾಸಕನಾದ ಭಗವಾನ್ ಶ್ರೀಕೃಷ್ಣನು ಮುಗುಳ್ನಗುತ್ತಾ ಸುಮಧುರವಾದ ಮಾತಿನಿಂದ ಉದ್ಧವನಲ್ಲಿ ಇಂತೆಂದನು - ॥ ೪೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಉದ್ಧವನೇ ! ನೀನು ನಮ್ಮ ಹಿತೈಷಿಯೂ, ಸುಹೃದನೂ ಆಗಿರುವೆ. ಮಂತ್ರಾಲೋಚನೆಗಳ ರಹಸ್ಯವನ್ನು ತಿಳಿದಿರುವೆ. ಅದರಿಂದ ನೀನು ನಮಗೆ ಕಣ್ಣಿನಂತೆಯೇ ಇರುವೆ. ಈಗ ನಾವು ಏನು ಮಾಡಬೇಕೆಂಬುದನ್ನು ನೀನೇ ಹೇಳು. ನಿನ್ನ ಮಾತಿನಲ್ಲಿ ನಮಗೆ ವಿಶ್ವಾಸವಿದೆ. ಆದ್ದರಿಂದ ನಿನ್ನ ಸಲಹೆಯಂತೆಯೇ ನಾವು ನಡೆದುಕೊಳ್ಳುವೆವು. ॥ ೪೬ ॥ ಭಗವಾನ್ ಶ್ರೀಕೃಷ್ಣನು ಸರ್ವಜ್ಞನಾಗಿದ್ದರೂ ಏನೂ ತಿಳಿಯದವನಂತೆ ನನ್ನಲ್ಲಿ ಸಲಹೆ ಕೇಳುತ್ತಿರುವನಲ್ಲ ! ಇರಲಿ, ಅವನ ಆಜ್ಞೆಯನ್ನು ಶಿರಸಾವಹಿಸಿ ಅತನು ಉತ್ತರಿಸತೊಡಗಿದನು. ॥ ೪೭ ॥

ಎಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೭೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಭಗವದ್ಯಾನವಿಚಾರೇ ಸಪ್ತತಿತಮೋಽಧ್ಯಾಯಃ ॥ ೭೦ ॥

ಎಪ್ಪತ್ತೊಂದನೆಯ ಅಧ್ಯಾಯ

ಶ್ರೀಕೃಷ್ಣನು ಇಂದ್ರಪ್ರಸ್ಥಕ್ಕೆ ದಯಮಾಡಿಸಿದುದು

ಶ್ರೀಶುಕ ಉವಾಚ

ಇತ್ಯುದೀರಿತಮಾಕರ್ಣ್ಯ ದೇವರ್ಷೇರುದ್ಧವೋಽಬ್ರವೀತ್ ।
ಸಭ್ಯಾನಾಂ ಮತಮಾಜ್ಞಾಯ ಕೃಷ್ಣಸ್ಯ ಚ ಮಹಾಮತಿಃ
॥ ೧ ॥

ಉದ್ಧವ ಉವಾಚ

ಯದುಕ್ತಮೃಷಿಣಾ ದೇವ ಸಾಚಿವ್ಯಂ ಯಕ್ಷ್ಯತಸ್ತ್ವಯಾ ।
ಕಾರ್ಯಂ ಪೈತೃಷ್ವಸೇಯಸ್ಯ ರಕ್ಷಾ ಚ ಶರಣೈಷಿಣಾಮ್
॥ ೨ ॥

ಯಷ್ಟವ್ಯಂ ರಾಜಸೂಯೇನ ದಿಕ್ಚಕ್ರಜಯಿನಾ ವಿಭೋ ।
ಅತೋ ಜರಾಸುತಜಯ ಉಭಯಾರ್ಥೋ ಮತೋ ಮಮ
॥ ೩ ॥

ಅಸ್ಮಾಕಂ ಚ ಮಹಾನರ್ಥೋ ಹ್ಯೇತೇನೈವ ಭವಿಷ್ಯತಿ ।
ಯಶಶ್ಚ ತವ ಗೋವಿಂದ ರಾಜ್ಞೋ ಬದ್ಧಾನ್ವಿಮುಂಚತಃ
॥ ೪ ॥

ಸ ವೈ ದುರ್ವಿಷಹೋ ರಾಜಾ ನಾಗಾಯುತಸಮೋ ಬಲೇ ।
ಬಲಿನಾಮಪಿ ಚಾನ್ಯೇಷಾಂ ಭೀಮಂ ಸಮಬಲಂ ವಿನಾ
॥ ೫ ॥

ದ್ವೈರಥೇ ಸ ತು ಜೇತವ್ಯೋ ಮಾ ಶತಾಕ್ಷೌಹಿಣೀಯುತಃ ।
ಬ್ರಹ್ಮಣ್ಯೋಽಭ್ಯರ್ಥಿತೋ ವಿಪ್ರೈರ್ನ ಪ್ರತ್ಯಾಖ್ಯಾತಿ ಕರ್ಹಿಚಿತ್
॥ ೬ ॥

ಬ್ರಹ್ಮವೇಷಧರೋ ಗತ್ವಾ ತಂ ಭಿಕ್ಷೇತ ವೃಕೋದರಃ ।
ಹನಿಷ್ಯತಿ ನ ಸಂದೇಹೋ ದ್ವೈರಥೇ ತವ ಸನ್ನಿಧೌ
॥ ೭ ॥

ನಿಮಿತ್ತಂ ಪರಮೀಶಸ್ಯ ವಿಶ್ವಸರ್ಗನಿರೋಧಯೋಃ ।
ಹಿರಣ್ಯಗರ್ಭಃ ಶರ್ವಶ್ಚ ಕಾಲಸ್ಯಾರೂಪಿಣಸ್ತವ
॥ ೮ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ ! ಮಹಾಮತಿಯಾದ ಉದ್ಧವನು ಶ್ರೀಕೃಷ್ಣನ ಮಾತನ್ನು ಕೇಳಿ, ದೇವರ್ಷಿಗಳಾದ ನಾರದರ, ಸಭಾಸದರ, ಬಂದಿರಾಜರುಗಳ ದೂತನ ನಿವೇದನೆಯ ಬಗೆಗೆ ಮತ್ತು ಶ್ರೀಕೃಷ್ಣನ ಅಭಿಪ್ರಾಯವೇನೆಂಬುದನ್ನು ವಿಚಾರಮಾಡಿ ಹೇಳತೊಡಗಿದನು. ॥ ೧ ॥

ಉದ್ಧವನು ಹೇಳಿದನು – ಭಗವಂತ ! ನಿನ್ನ ಸೋದರಳಿಯರಾದ ಪಾಂಡವರು ರಾಜಸೂಯಯಜ್ಞದಲ್ಲಿ ಭಾಗವಹಿಸಿ ಅವರಿಗೆ ಸಹಾಯ ಮಾಡಬೇಕೆಂದು ನಾರದರು ಹೇಳಿದ ಮಾತು ಸರಿಯಾಗಿದೆ. ಜೊತೆಗೆ ಶರಣಾಗತರ ರಕ್ಷಣೆಯೂ ಅವಶ್ಯಕವಾದ ಕರ್ತವ್ಯವೇ ಆಗಿದೆ. ॥ ೨ ॥ ಪ್ರಭೋ ! ಹತ್ತು ದಿಕ್ಕುಗಳನ್ನು ಜಯಿಸಿದವನೇ ರಾಜಸೂಯಯಜ್ಞವನ್ನು ಮಾಡಬಲ್ಲನು ಎಂಬ ದೃಷ್ಟಿಯಿಂದ ವಿಚಾರಮಾಡಿದಾಗ ಪಾಂಡವರ ಯಜ್ಞ ಮತ್ತು ಶರಣಾಗತರ ರಕ್ಷಣೆ ಎರಡೂ ಕಾರ್ಯಗಳಿಗಾಗಿ ಜರಾಸಂಧನನ್ನು ಜಯಿಸುವುದು ಅವಶ್ಯಕವಾಗಿದೆ ಎಂಬುದು ನಿರ್ವಿವಾದವಾಗಿದೆ. ॥ ೩ ॥ ಸ್ವಾಮಿ ! ಕೇವಲ ಜರಾಸಂಧನನ್ನು ಜಯಿಸುವುದರಿಂದ ನಮ್ಮ ಉದ್ದೇಶವು ಸಫಲವಾಗುವುದು ; ಜೊತೆಗೆ ಅದರಿಂದ ಬಂಧಿತರಾಜರ ಮುಕ್ತಿ ಮತ್ತು ಅವರ ಕಾರಣದಿಂದ ನಿನಗೆ ನಿರ್ಮಲವಾದ ಕೀರ್ತಿಯೂ ಪ್ರಾಪ್ತವಾಗುತ್ತದೆ. ॥ ೪ ॥ ಬಲದಲ್ಲಿ ಹತ್ತು ಸಾವಿರ ಆನೆಗಳ ಬಲವಿರುವ ಜರಾಸಂಧನನ್ನು ಇತರ ಬಲಿಷ್ಠರಾಜರು ಗೆಲ್ಲಲಾರರು. ಅವನಿಗೆ ಸಮಾನಬಲವಿರುವ ಭೀಮಸೇನನೊಬ್ಬನು ಮಾತ್ರ ಅವನನ್ನು ಜಯಿಸಬಲ್ಲನು. ॥ ೫ ॥ ಅವನೊಡನೆ ದ್ವಂದ್ವಯುದ್ಧವನ್ನೇ ಮಾಡಿ ಅವನನ್ನ ಗೆಲ್ಲಬೇಕು. ನೂರು ಅಕ್ಷೌಹಿಣಿ ಸೈನ್ಯದೊಂದಿಗೆ ಅವನನ್ನು ಯುದ್ಧಕ್ಕೆ ನಿಂತರೆ ಅವನನ್ನು ಗೆಲ್ಲುವುದು ಅಷ್ಟು ಸುಲಭವಲ್ಲ. ಜರಾಸಂಧನು ಬಹಳ ದೊಡ್ಡ ಬ್ರಾಹ್ಮಣಭಕ್ತನಾಗಿದ್ದಾನೆ. ಬ್ರಾಹ್ಮಣರು ಅವನಲ್ಲಿ ಏನೇ ಬೇಡಿದರೂ ಎಂದಿಗೂ ಅವನು ಇಲ್ಲವೆನ್ನುವುದಿಲ್ಲ. ॥ ೬ ॥ ಆದುದರಿಂದ ಭೀಮಸೇನನು ಬ್ರಾಹ್ಮಣವೇಷವನ್ನು ಧರಿಸಿ ಅವನ ಬಳಿಗೆ ಹೋಗಿ ಯುದ್ಧ ಭಿಕ್ಷೆಯನ್ನು ಬೇಡಬೇಕು. ಭಗವಂತಾ ! ನಿನ್ನ ಉಪಸ್ಥಿತಿಯಲ್ಲಿ ಭೀಮಸೇನ ಮತ್ತು ಜರಾಸಂಧರ ದ್ವಂದ್ವ ಯುದ್ಧ ನಡೆದರೆ ಭೀಮಸೇನನು ಅವನನ್ನು ಕೊಲ್ಲುವುದರಲ್ಲಿ ಸಂದೇಹವೇ ಇಲ್ಲ. ॥ ೭ ॥ ಪ್ರಭೋ ! ನೀನು ಸರ್ವಶಕ್ತಿವಂತನೂ, ರೂಪರಹಿತ ಕಾಲಸ್ವರೂಪನಾಗಿರುವೆ. ವಿಶ್ವದ ಸೃಷ್ಟಿ ಮತ್ತು ಪ್ರಳಯ ನಿನ್ನ ಶಕ್ತಿಯಿಂದಲೇ ನಡೆಯುತ್ತದೆ. ಬ್ರಹ್ಮ-ರುದ್ರರು ಅದರಲ್ಲಿ ಕೇವಲ ನಿಮಿತ್ತರಾಗಿದ್ದಾರೆ. ಹೀಗೆಯೇ ನಿನ್ನ ಶಕ್ತಿಯಿಂದಲೇ ಜರಾಸಂಧನ ವಧೆಯಾಗುವುದು; ಭೀಮಸೇನನು ನೆಪಮಾತ್ರಕ್ಕಿರುತ್ತಾನೆ. ॥ ೮ ॥

ಗಾಯಂತಿ ತೇ ವಿಶದಕರ್ಮ ಗೃಹೇಷು ದೇವ್ಯೋ
ರಾಜ್ಞಾಂ ಸ್ವಶತ್ರುವಧಮಾತ್ಮವಿಮೋಕ್ಷಣಂ ಚ ।
ಗೋಪ್ಯಶ್ಚ ಕುಂಜರಪತೇರ್ಜನಕಾತ್ಮಜಾಯಾಃ
ಪಿತ್ರೋಶ್ಚ ಲಬ್ಧಶರಣಾ ಮುನಯೋ ವಯಂ ಚ ॥ ೯ ॥

ಶಂಖಚೂಡನಿಂದ ಮುಕ್ತರಾದ ಗೋಪಿಯರು ನಿನ್ನ ಕೀರ್ತಿಯನ್ನು ಗಾನಮಾಡುವಂತೆ, ಮೊಸಳೆಯಿಂದ ಮುಕ್ತನಾದ ಗಜೇಂದ್ರನು, ನಿನಗೆ ಶರಣಾಗತರಾದ ಮುನಿಗಳು, ಸೀತೆಯನ್ನು ಉದ್ಧರಿಸಿದ ಲೀಲೆಯನ್ನು ನಿನ್ನ ತಂದೆ-ತಾಯಿಯರನ್ನು ಕಾರಾಗೃಹದಿಂದ ಬಂಧಮುಕ್ತಗೊಳಿಸಿದ ನಿನ್ನ ಲೀಲೆಯನ್ನು ನಾವು ಹಾಡುವಂತೆಯೇ ನೀನು ಜರಾಸಂಧನ ವಧೆ ಮಾಡಿಸಿದಾಗ ಬಂಧನದಿಂದ ಮುಕ್ತರಾದ ಆ ರಾಜರ ಪಟ್ಟಮಹಿಷಿಯರು ತಮ್ಮ ಅರಮನೆಗಳಲ್ಲಿ – ನೀನು ಅವರ ಶತ್ರುವನ್ನು ನಾಶಗೊಳಿಸಿ ತಮ್ಮ ಪ್ರಾಣಪತಿಗಳನ್ನು ಬಿಡಿಸಿದ ನಿನ್ನ ಅಲೌಕಿಕ ಲೀಲೆಯನ್ನು ಹಾಡುವರು. ॥ ೯ ॥

ಜರಾಸಂಧವಧಃ ಕೃಷ್ಣ ಭೂರ್ಯರ್ಥಾಯೋಪಕಲ್ಪತೇ ।
ಪ್ರಾಯಃ ಪಾಕವಿಪಾಕೇನ ತವ ಚಾಭಿಮತಃ ಕ್ರತುಃ
॥ ೧೦ ॥

ಅದಕ್ಕಾಗಿ ಪ್ರಭೋ! ಜರಾಸಂಧನ ವಧೆಯು ಅನೇಕ ಪ್ರಯೋಜನಗಳನ್ನು ಸಿದ್ಧಗೊಳಿಸುವುದು. ಸೆರೆಯಾದ ರಾಜರ ಪುಣ್ಯದ ಪರಿಣಾಮದಿಂದಲೋ, ಜರಾಸಂಧನ ಪಾಪದ ಪರಿಣಾಮದಿಂದಲೋ ರಾಜಸೂಯಯಾಗ ಮಾಡಲು ನಿನ್ನ ಒಪ್ಪಿಗೆಯೂ ಲಭಿಸಿದೆ. ಆದುದರಿಂದ ನೀನು ಮೊದಲಿಗೆ ಇಂದ್ರಪ್ರಸ್ಥಕ್ಕೆ ಹೋಗುವುದೇ ಸೂಕ್ತವಾಗಿದೆ ಎಂದು ನನಗೆ ಅನಿಸುತ್ತದೆ. ॥ ೧೦ ॥

ಶ್ರೀಶುಕ ಉವಾಚ

ಇತ್ಯುದ್ಧವವಚೋ ರಾಜನ್ ಸರ್ವತೋಭದ್ರಮಚ್ಯುತಮ್ ।
ದೇವರ್ಷಿರ್ಯದುವೃದ್ಧಾಶ್ಚ ಕೃಷ್ಣಶ್ಚ ಪ್ರತ್ಯಪೂಜಯನ್
॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಉದ್ಧವನ ಈ ಸಲಹೆಯು ಎಲ್ಲ ರೀತಿಯಿಂದ ಹಿತಕರವೂ, ನಿರ್ದೋಷವೂ ಆಗಿತ್ತು. ದೇವರ್ಷಿ ನಾರದರು, ಯದುವಂಶದ ಹಿರಿಯರು ಮತ್ತು ಸ್ವಯಂ ಭಗವಾನ್ ಶ್ರೀಕೃಷ್ಣನೂ ಆವನ ಮಾತನ್ನು ಸಮರ್ಥಿಸಿದರು. ॥ ೧೧ ॥

ಅಥಾದಿಶತ್ಪ್ರಯಾಣಾಯ ಭಗವಾನ್ ದೇವಕೀಸುತಃ ।
ಭೃತ್ಯಾನ್ದಾರುಕಜೈತ್ರಾದೀನನುಜ್ಞಾಪ್ಯ ಗುರೂನ್ ವಿಭುಃ
॥ ೧೨ ॥

ಆಗ ಅಂತರ್ಯಾಮಿಯಾದ ಭಗವಾನ್ ಶ್ರೀಕೃಷ್ಣನು ವಸುದೇವನೇ ಮೊದಲಾದ ಹಿರಿಯರಿಂದ ಅನುಮತಿಯನ್ನು ಪಡೆದು ಸಾರಥಿಯಾದ ದಾರುಕನಿಗೆ ಮತ್ತು ಜೈತ್ರ ಮುಂತಾದ ಸೇವಕರಿಗೆ ಇಂದ್ರಪ್ರಸ್ಥಕ್ಕೆ ಹೋಗಲು ಸಿದ್ಧತೆಮಾಡಲು ಅಪ್ಪಣೆಮಾಡಿದನು. ॥ ೧೨ ॥

ನಿರ್ಗಮಯ್ಯಾವರೋಧಾನ್ ಸ್ವಾನ್ ಸಸುತಾನ್ ಸಪರಿಚ್ಛದಾನ್ ।
ಸಂಕರ್ಷಣಮನುಜ್ಞಾಪ್ಯ ಯದುರಾಜಂ ಚ ಶತ್ರುಹನ್ ।
ಸೂತೋಪನೀತಂ ಸ್ವರಥಮಾರುಹದ್ಗರುಡಧ್ವಜಮ್
॥ ೧೩ ॥

ಆನಂತರ ಶ್ರೀಕೃಷ್ಣನು ಯದುರಾಜ ಉಗ್ರಸೇನ ಮತ್ತು ಬಲರಾಮನಿಂದ ಅಪ್ಪಣೆಯನ್ನು ಪಡೆದು ಮಕ್ಕಳೊಂದಿಗೆ ರಾಣಿಯರನ್ನು ಮತ್ತು ಅವರ ಸಾಮಗ್ರಿಗಳನ್ನು ಮುಂದಾಗಿ ಕಳಿಸಿಕೊಟ್ಟು ಮತ್ತೆ ದಾರುಕನು ಸಿದ್ಧಪಡಿಸಿ ತಂದಿರುವ ಗರುಡಧ್ವಜ ರಥದಲ್ಲಿ ತಾನು ಕುಳಿತನು. ॥ ೧೩ ॥

ತತೋ ರಥದ್ವಿಪಭಟಸಾದಿನಾಯಕೈಃ
ಕರಾಲಯಾ ಪರಿವೃತ ಆತ್ಮಸೇನಯಾ ।
ಮೃದಂಗಭೇರ್ಯಾನಕಶಂಖಿಗೋಮುಖೈಃ
ಪ್ರಘೋಷಘೋಷಿತಕಕುಭೋ ನಿರಾಕ್ರಮತ್ ॥ ೧೪ ॥

ಬಳಿಕ ಶ್ರೀಕೃಷ್ಣನು ಗಜಾಶ್ವ-ರಥ-ಪದಾತಿಗಳಿಂದ ಕೂಡಿದ ಚತುರಂಗ ಸೇನಾಸಮೇತನಾಗಿ ಇಂದ್ರಪ್ರಸ್ಥಕ್ಕೆ ಪ್ರಸ್ಥಾನಮಾಡಿದನು. ಆಗ ಮೃದಂಗ, ಭೇರಿ, ಡೊಳ್ಳು, ಶಂಖಿ, ಗೋಮುಖ ಮುಂತಾದ ವಾದ್ಯಗಳ ಧ್ವನಿಯು ದಶದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ॥ ೧೪ ॥

ನೃವಾಜಿಕಾಂಚನಶಿಬಿಕಾಭಿರಚ್ಯುತಂ
ಸಹಾತ್ಮಜಾಃ ಪತಿಮನು ಸುವ್ರತಾ ಯಯುಃ ।
ವರಾಂಬರಾಭರಣವಿಲೇಪನಸ್ರಜಃ
ಸುಸಂವೃತಾ ನೃಭಿರಸಿಚರ್ಮಪಾಣಿಭಿಃ ॥ ೧೫ ॥

ಸತಿಶಿರೋಮಣಿ ರುಕ್ಮಿಣಿಯೇ ಮೊದಲಾದ ಸಾವಿರಾರು ಶ್ರೀಕೃಷ್ಣನ ಪತ್ನಿಯರು ತಮ್ಮ-ತಮ್ಮ ಸಂತಾನಗಳೊಂದಿಗೆ ಸುಂದರವಾದ ವಸ್ತ್ರಾಭೂಷಣಗಳಿಂದಲೂ, ಚಂದನ, ಅಂಗರಾಗ, ಪುಷ್ಪಹಾರಗಳಿಂದ ಅಲಂಕರಿಸಿಕೊಂಡು, ಸ್ವರ್ಣಪಲ್ಲಕ್ಕಿಗಳಲ್ಲಿ, ಡೋಲಿಗಳಲ್ಲಿ, ರಥಗಳಲ್ಲಿ ಕುಳಿತುಕೊಂಡು ಪತಿದೇವನಾದ ಶ್ರೀಕೃಷ್ಣನ ಹಿಂದೆಯೇ ಹೋಗುತ್ತಿದ್ದರು. ಕಾಲಾಳುಗಳು ಕೈಗಳಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದುಕೊಂಡು ಅವರನ್ನು ರಕ್ಷಿಸುತ್ತಾ ನಡೆಯುತ್ತಿದ್ದರು. ॥ ೧೫ ॥

ನರೋಷ್ಟ್ರಗೋಮಹಿಷಖರಾಶ್ವತರ್ಯನಃ-
ಕರೇಣುಭಿಃ ಪರಿಜನವಾರಯೋಷಿತಃ ।
ಸ್ವಲಂಕೃತಾಃ ಕಟಕುಟಿಕಂಬಲಾಂಬರಾ-
ದ್ಯುಪಸ್ಕರಾ ಯಯುರಧಿಯುಜ್ಯ ಸರ್ವತಃ ॥ ೧೬ ॥

ಬಲಂ ಬೃಹದ್ಧ್ವಜಪಟಛತ್ರಚಾಮರೈ-
ರ್ವರಾಯುಧಾಭರಣಕಿರೀಟವರ್ಮಭಿಃ ।
ದಿವಾಂಶುಭಿಸ್ತುಮುಲರವಂ ಬಭೌ ರವೇ-
ರ್ಯಥಾರ್ಣವಃ ಕ್ಷುಭಿತತಿಮಿಂಗಿಲೋರ್ಮಿಭಿಃ ॥ ೧೭ ॥

ಅಥೋ ಮುನಿರ್ಯದುಪತಿನಾ ಸಭಾಜಿತಃ
ಪ್ರಣಮ್ಯ ತಂ ಹೃದಿ ವಿದಧದ್ವಿಹಾಯಸಾ ।
ನಿಶಮ್ಯ ತದ್ವ್ಯವಸಿತಮಾಹೃತಾರ್ಹಣೋ
ಮುಕುಂದಸಂದರ್ಶನನಿರ್ವೃತೇಂದ್ರಿಯಃ ॥ ೧೮ ॥

ರಾಜದೂತಮುವಾಚೇದಂ ಭಗವಾನ್ ಪ್ರೀಣಯನ್ ಗಿರಾ ।
ಮಾ ಭೈಷ್ಟ ದೂತ ಭದ್ರಂ ವೋ ಘಾತಯಿಷ್ಯಾಮಿ ಮಾಗಧಮ್
॥ ೧೯ ॥

ಇತ್ಯುಕ್ತಃ ಪ್ರಸ್ಥಿತೋ ದೂತೋ ಯಥಾವದವದನ್ನೃಪಾನ್ ।
ತೇऽಪಿ ಸಂದರ್ಶನಂ ಶೌರೇಃ ಪ್ರತ್ಯೈಕ್ಷನ್ ಯನ್ಮುಮುಕ್ಷವಃ
॥ ೨೦ ॥

ಅನರ್ತಸೌವೀರಮರೂಂಸ್ತೀರ್ತ್ವಾ ವಿನಶನಂ ಹರಿಃ ।
ಗಿರೀನ್ ನದೀರತೀಯಾಯ ಪುರಗ್ರಾಮವ್ರಜಾಕರಾನ್
॥ ೨೧ ॥

ತತೋ ದೃಷದ್ವತೀಂ ತೀರ್ತ್ವಾ ಮುಕುಂದೋऽಥ ಸರಸ್ವತೀಮ್ ।
ಪಂಚಾಲಾನಥ ಮತ್ಸ್ಯಾಂಶ್ಚ ಶಕ್ರಪ್ರಸ್ಥಮಥಾಗಮತ್
॥ ೨೨ ॥

ತಮುಪಾಗತಮಾಕರ್ಣ್ಯ ಪ್ರೀತೋ ದುರ್ದರ್ಶನಂ ನೃಣಾಮ್ ।
ಅಜಾತಶತ್ರುರ್ನಿರಗಾತ್ ಸೋಪಾಧ್ಯಾಯಃ ಸುಹೃದ್ವೃತಃ
॥ ೨೩ ॥

ಹಾಗೆಯೇ ದಾಸ-ದಾಸಿಯರೂ, ವೇಶ್ಯೆಯರೂ, ವಸ್ತ್ರಾಭರಣಗಳಿಂದ ಅಲಂಕೃತರಾಗಿ ಚಾಪೆಗಳೂ, ಗುಡಾರಗಳೂ, ಕಂಬಳಿಗಳೂ, ವಸ್ತ್ರಗಳೂ ಮೊದಲಾದ ಸಾಮಗ್ರಿಗಳನ್ನು ಆಳುಗಳ ಮೇಲೆಯೂ ಒಂಟೆ, ಎತ್ತು, ಕೋಣ, ಹೇಸರಗತ್ತೆ, ಆನೆ-ಬಂಡಿಗಳು, ಇವುಗಳ ಮೇಲೆ ಹೇರಿಕೊಂಡು, ತಾವು ಪಲ್ಲಕ್ಕಿ, ಒಂಟೆ, ಎತ್ತಿನಗಾಡಿ, ಆನೆಗಳು ಇವುಗಳ ಮೆಲೆ ಕುಳಿತು ಪ್ರಯಾಣ ಮಾಡಿದರು. ॥ ೧೬ ॥ ಮೊಸಳೆಗಳಿಂದಲೂ, ದೊಡ್ಡ-ದೊಡ್ಡ ಅಲೆಗಳಿಂದಲೂ ಭೋರ್ಗರೆಯುವ ಸಮುದ್ರವು ಶೋಭಿಸುವಂತೆಯೇ, ಭಯಂಕರ ಶಬ್ದಗಳಿಂದಲೂ ಹಾರಾಡುತ್ತಿದ್ದ ದೊಡ್ಡ-ದೊಡ್ಡ ಧ್ವಜ-ಪತಾಕೆಗಳಿಂದಲೂ, ಛತ್ರ-ಚಾಮರಗಳಿಂದಲೂ, ಶ್ರೇಷ್ಠವಾದ ಅಸ್ತ್ರ-ಶಸ್ತ್ರಗಳಿಂದಲೂ, ವಸ್ತ್ರಾಭೂಷಣಗಳಿಂದಲೂ, ಕಿರೀಟಗಳಿಂದಲೂ, ಕವಚಗಳಿಂದಲೂ ಕೂಡಿದ ಶ್ರೀಕೃಷ್ಣನ ಸೈನ್ಯದ ಮೇಲೆ ಬಿದ್ದ ಸೂರ್ಯಕಿರಣಗಳಿಂದ ಅದು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿತ್ತು. ॥ ೧೭॥ ಶ್ರೀಕೃಷ್ಣನಿಂದ ಸಮ್ಮಾನಿತರಾದ ನಾರದ ಮಹರ್ಷಿಗಳು ಅವನ ನಿಶ್ಚಯವನ್ನು ಕೇಳಿ ಅತ್ಯಂತ ಪ್ರಸನ್ನರಾದರು. ಭಗವಂತನ ದರ್ಶನದಿಂದ ಅವರ ಹೃನ್ಮನಗಳೂ, ಇಂದ್ರಿಯಗಳೂ ಪರಮಾನಂದ ಭರಿತವಾದುವು. ಬೀಳ್ಕೊಡುವಾಗ ಶ್ರೀಕೃಷ್ಣನು ಅವರನ್ನು ನಾನಾ ವಿಧವಾದ ಸಾಮಗ್ರಿಗಳಿಂದ ಪೂಜಿಸಿದನು. ದೇವ ಋಷಿ ನಾರದರು ಶ್ರೀಕೃಷ್ಣನನ್ನು ವಂದಿಸುತ್ತಾ, ಅವನ ದಿವ್ಯಮೂರ್ತಿಯನ್ನು ಹೃದಯದಲ್ಲಿ ಧರಿಸಿಕೊಂಡು ಆಕಾಶಮಾರ್ಗದಿಂದ ಹೊರಟುಹೋದರು. ॥ ೧೮ ॥ ಬಳಿಕ ಭಗವಾನ್ ಶ್ರೀಕೃಷ್ಣನು ಜರಾಸಂಧನ ಬಂದಿಯಾದ ರಾಜರ ದೂತನಿಗೆ ಸುಮಧುರ ಮಾತಿನಿಂದ ಆಶ್ವಾಸನೆಯನ್ನೀಯುತ್ತಾ - ದೂತನೇ ! ನೀನು ರಾಜರ ಬಳಿಗೆ ಹೋಗಿ - 'ಹೆದರಬೇಡಿರಿ. ನಿಮ್ಮೆಲ್ಲರಿಗೆ ಮಂಗಳವಾಗಲಿ. ನಾನು ಜರಾಸಂಧನನ್ನು ಕೊಲ್ಲಿಸುವೆನು.' ಎಂದು ಹೇಳು. ॥ ೧೯ ॥ ಹೀಗೆ ಭಗವಂತನ ಆಜ್ಞೆಯನ್ನು ಪಡೆದು ಆ ದೂತನು ಗಿರಿವ್ರಜಕ್ಕೆ ಹೊರಟು ಹೋದನು. ಅಲ್ಲಿ ರಾಜರಿಗೆ ಭಗವಾನ್ ಶ್ರೀಕೃಷ್ಣನ ಸಂದೇಶವನ್ನು ಯಥಾಮತ್ತಾಗಿ ಮುಟ್ಟಿಸಿದನು. ಆ ರಾಜರೂ ಕೂಡ ಕಾರಾಗೃಹದಿಂದ ಬಿಡುಗಡೆ ಹೊಂದಲೂ, ಶೀಘ್ರವೇ ಭಗವಂತನ ಶುಭ ದರ್ಶನವನ್ನು ಪಡೆಯಲು ಕಾತರದಿಂದ ಪ್ರತೀಕ್ಷಿಸುತ್ತಿದ್ದರು. ॥ ೨೦ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ದ್ವಾರಕೆಯಿಂದ ಹೊರಟು ಆನರ್ತ, ಸೌವೀರ, ಮರು, ಕುರುಕ್ಷೇತ್ರ ಇವುಗಳ ನಡುವೆ ಸಿಕ್ಕುವ ಪರ್ವತ ನದಿ, ನಗರ, ಗ್ರಾಮ, ಹಳ್ಳಿ, ಗಣಿಗಳಿದ್ದ ಪ್ರದೇಶಗಳನ್ನು ದಾಟಿ ಮುಂದರಿಯುತ್ತಿದ್ದನು. ॥ ೨೧ ॥ ಭಗವಾನ್ ಮುಕುಂದನು ದಾರಿಯಲ್ಲಿ ದೃಷದ್ವತೀ ಹಾಗೂ ಸರಸ್ವತೀ ನದಿಗಳನ್ನು ದಾಟಿ ಪಾಂಚಾಲ, ಮತ್ಸ್ಯ ದೇಶಗಳ ಮೂಲಕವಾಗಿ ಇಂದ್ರಪ್ರಸ್ಥವನ್ನು ತಲುಪಿದನು. ॥ ೨೨ ॥ ಪರೀಕ್ಷಿತನೇ ! ಮಾನವರಿಂದ ಸಂದರ್ಶಿಸಲು ಸುದುರ್ಲಭನಾದ ಶ್ರೀಕೃಷ್ಣನು ಪರಿವಾರ ಸಹಿತವಾಗಿ ತನ್ನ ರಾಜಧಾನಿಗೆ ಬರುತ್ತಿದ್ದಾನೆಂಬ ವಾರ್ತೆಯನ್ನು ಕೇಳಿ ಅಜಾತಶತ್ರುವಾದ ಯುಧಿಷ್ಠಿರನು ಹಿರಿ-ಹಿರಿ ಹಿಗ್ಗಿದನು. ಅವನು ಆಚಾರ್ಯರೊಡನೆಯೂ, ಸ್ವಜನಬಂಧುಗಳೊಂದಿಗೂ ಭಗವಂತನನ್ನು ಇದಿರ್ಗೊಳ್ಳಲು ಊರ ಹೊರಬಾಗಿಲಿಗೆ ಬಂದನು. ॥ ೨೩. ॥

ಗೀತವಾದಿತ್ರಘೋಷೇಣ ಬ್ರಹ್ಮಘೋಷೇಣ ಭೂಯಸಾ ।
ಅಭ್ಯಯಾತ್ಸ ಹೃಷೀಕೇಶಂ ಪ್ರಾಣಾಃ ಪ್ರಾಣಮಿವಾದೃತಃ
॥ ೨೪ ॥

ದೃಷ್ಟ್ವಾ ವಿಕ್ಲಿನ್ನಹೃದಯಃ ಕೃಷ್ಣಂ ಸ್ನೇಹೇನ ಪಾಂಡವಃ ।
ಚಿರಾದ್ದೃಷ್ಟಂ ಪ್ರಿಯತಮಂ ಸಸ್ವಜೇಽಥ ಪುನಃ ಪುನಃ
॥ ೨೫ ॥

ದೋರ್ಭ್ಯಾಂ ಪರಿಷ್ವಜ್ಯ ರಮಾಮಲಾಲಯಂ
ಮುಕುಂದಗಾತ್ರಂ ನೃಪತಿರ್ಹತಾಶುಭಃ ।
ಲೇಭೇ ಪರಾಂ ನಿರ್ವೃತಿಮಶ್ರುಲೋಚನೋ
ಹೃಷ್ಯತ್ತನುರ್ವಿಸ್ಮೃತಲೋಕವಿಭ್ರಮಃ ॥ ೨೬ ॥

ತಂ ಮಾತುಲೇಯಂ ಪರಿರಭ್ಯ ನಿರ್ವೃತೋ
ಭೀಮಃ ಸ್ಮಯನ್ ಪ್ರೇಮಜವಾಕುಲೇಂದ್ರಿಯಃ ।
ಯಮೌ ಕಿರೀಟೀ ಚ ಸುಹೃತ್ತಮಂ ಮುದಾ
ಪ್ರವೃದ್ಧಬಾಷ್ಪಾಃ ಪರಿರೇಭಿರೇಽಚ್ಯುತಮ್ ॥ ೨೭ ॥

ಅರ್ಜುನೇನ ಪರಿಷ್ವಕ್ತೋ ಯಮಾಭ್ಯಾಮಭಿವಾದಿತಃ ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ವೃದ್ಧೇಭ್ಯಶ್ಚ ಯಥಾರ್ಹತಃ
॥ ೨೮ ॥

ಮಾನಿತೋ ಮಾನಯಾಮಾಸ ಕುರುಸೃಂಜಯಕೈಕಯಾನ್ ।
ಸೂತಮಾಗಧಗಂಧರ್ವಾ ವಂದಿನಶ್ಚೋಪಮಂತ್ರಿಣಃ
॥ ೨೯ ॥

ಮೃದಂಗಶಂಖಪಟಹವೀಣಾಪಣವಗೋಮುಖೈಃ ।
ಬ್ರಾಹ್ಮಣಾಶ್ಚಾರವಿಂದಾಕ್ಷಂ ತುಷ್ಟುವುರ್ನನೃತುರ್ಜಗುಃ
॥ ೩೦ ॥

ಏವಂ ಸುಹೃದ್ಭಿಃ ಪರ್ಯಸ್ತಃ ಪುಣ್ಯಶ್ಲೋಕಶಿಖಾಮಣಿಃ ।
ಸಂಸ್ತೂಯಮಾನೋ ಭಗವಾನ್ ವಿವೇಶಾಲಂಕೃತಂ ಪುರಮ್
॥ ೩೧ ॥

ಸಂಸಿಕ್ತವರ್ತ್ಮ ಕರಿಣಾಂ ಮದಗಂಧತೋಯ್ಯೈ-
ಶ್ಚಿತ್ರಧ್ವಜೈಃ ಕನಕತೋರಣಪೂರ್ಣಕುಂಭೈಃ ।
ಮೃಷ್ಟಾತ್ಮಭಿರ್ನವದುಕೂಲವಿಭೂಷಣಸ್ರಗ್
ಗಂಧೈರ್ನರೈರ್ಯುವತಿಭಿಶ್ಚ ವಿರಾಜಮಾನಮ್ ॥ ೩೨ ॥

ಮಂಗಳ ಗೀತೆಗಳು, ವಾದ್ಯಗಳು ಮೊಳಗಿದವು. ಅನೇಕ ಬ್ರಾಹ್ಮಣರು ಮಂತ್ರೋಚ್ಚಾರಣೆ ಮಾಡತೊಡಗಿದರು. ಇಂದ್ರಿಯಗಳು ಮುಖ್ಯ ಪ್ರಾಣದೊಡನೆ ಸೇರುವಂತೆ ಯುಧಿಷ್ಠಿರನು ಭಗವಾನ್ ಹೃಷಿಕೇಶನನ್ನು ಸ್ವಾಗತಿಸಲು ಮುಂದಾದನು. ॥ ೨೪ ॥ ಭಗವಾನ್ ಶ್ರೀಕೃಷ್ಣನನ್ನು ನೋಡಿದ ಯುಧಿಷ್ಠಿರನ ಹೃದಯವು ಸ್ನೇಹಾತಿರೇಕದಿಂದ ಗದ್ಗದವಾಯಿತು. ಬಹಳ ದಿವಸಗಳ ಬಳಿದ ತನ್ನ ಪ್ರಿಯನಾದ ಭಗವಾನ್ ಶ್ರೀಕೃಷ್ಣನನ್ನು ನೋಡುವ ಸೌಭಾಗ್ಯವು ಒದಗಿತ್ತು. ಆದ್ದರಿಂದ ಅವನು ಕೃಷ್ಣನನ್ನು ಬಾರಿ-ಬಾರಿಗೂ ಆಲಿಂಗಿಸಿಕೊಂಡನು. ॥ ೨೫ ॥ ಭಗವಾನ್ ಶ್ರೀಕೃಷ್ಣನ ಶ್ರೀವಿಗ್ರಹವು ಲಕ್ಷ್ಮೀದೇವಿಗೆ ಪವಿತ್ರವೂ, ವಾಸಸ್ಥಾನವೂ ಆಗಿದೆ. ಯುಧಿಷ್ಠಿರನು ತನ್ನೆರಡೂ ಭುಜಗಳಿಂದ ಅದನ್ನು ಆಲಿಂಗಿಸಿಕೊಂಡು ಸಮಸ್ತ ಪಾಪ-ತಾಪಗಳಿಂದ ಬಿಡುಗಡೆ ಹೊಂದಿದನು. ಅವನು ಪರಮಾನಂದದ ಸಾಗರದಲ್ಲಿ ಮುಳುಗಿ ಹೋದನು. ಕಣ್ಣುಗಳಿಂದ ಆನಂದಾಶ್ರುಗಳು ಸುರಿಯುತ್ತಿದ್ದು, ಶರೀರ ಪುಳಕಗೊಂಡಿತು. ಅವನು ಲೋಕವ್ಯವಹಾರವನ್ನೇ ಸಂಪೂರ್ಣವಾಗಿ ಮರೆತು ಬಿಟ್ಟನು. ॥ ೨೬ ॥ ಅನಂತರ ಭೀಮಸೇನನು ನಸುನಗುತ್ತಾ ಸೋದರ ಮಾವನ ಮಗನಾದ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ಆನಂದಿಸಿದನು. ಪ್ರೇಮಾತಿಶಯದಿಂದ ಪರವಶನಾಗಿ ಬಾಹ್ಯಸ್ಮೃತಿಯೇ ಸ್ತಬ್ಧವಾಯಿತು. ಅರ್ಜುನ-ನಕುಲ-ಸಹದೇವರೂ ಕೂಡ ತಮಗೆ ಅತ್ಯಂತ ಪ್ರಿಯನಾದ ಶ್ರೀಕೃಷ್ಣನನ್ನು ಆನಂದದಿಂದ ಆಲಿಂಗಿಸಿಕೊಂಡರು. ಆಗ ಅವರ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯುತ್ತಿದ್ದವು. ॥ ೨೭ ॥ ಅರ್ಜುನನು ಪುನಃ ಭಗವಂತನನ್ನು ಆಲಿಂಗಿಸಿಕೊಂಡನು. ನಕುಲ-ಸಹದೇವರು ಅಭಿವಾದನ ಮಾಡಿದರು ಮತ್ತು ಭಗವಾನ್ ಶ್ರೀಕೃಷ್ಣನು ಬ್ರಾಹ್ಮಣರನ್ನೂ, ಕುರುವಂಶೀ ವೃದ್ಧರನ್ನೂ ಯಥಾಯೋಗ್ಯವಾಗಿ ನಮಸ್ಕಾರ ಮಾಡಿದನು. ॥ ೨೮ ॥ ಕುರು, ಸೃಂಜಯ, ಕೇಕಯ ದೇಶದ ರಾಜರೂ ಭಗವಾನ್ ಶ್ರೀಕೃಷ್ಣನನ್ನು ಸಮ್ಮಾನಿಸಿದರು. ಭಗವಂತನೂ ಅವರನ್ನು ಯಥೋಚಿತವಾಗಿ ಸತ್ಕರಿಸಿದನು. ಸೂತ-ಮಾಗಧ-ವಂದೀಜನರು ಮತ್ತು ಬ್ರಾಹ್ಮಣರು ಭಗವಂತನನ್ನು ಸ್ತುತಿಸತೊಡಗಿದರು. ಗಂಧರ್ವರು, ನಟರು, ವಿದೂಷಕ ಮುಂತಾದವರು ಮೃದಂಗ, ಶಂಖ, ಡೋಲು, ವೀಣೆ, ಕೊಂಬು-ಕಹಳೆಗಳನ್ನು ನುಡಿಸುತ್ತಾ, ಹಾಡುತ್ತಾ, ನರ್ತನವಾಡಿದರು. ॥ ೨೯-೩೦ ॥ ಹೀಗೆ ಪುಣ್ಯಶ್ಲೋಕ ಶಿರೋಮಣಿಯಾದ ಶ್ರೀಕೃಷ್ಣನು ಸುಹೃದ್-ಸ್ವಜನರೊಂದಿಗೆ ಸರ್ವಾಲಂಕಾರ ಶೋಭಿತವಾದ ಇಂದ್ರಪ್ರಸ್ಥ ನಗರಿಯನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಜನರು ಪರಸ್ಪರವಾಗಿ ಭಗವಾನ್ ಶ್ರೀಕೃಷ್ಣನನ್ನು ಪ್ರಶಂಸಿಸುತ್ತಾ ನಡೆಯುತ್ತಿದ್ದರು. ॥ ೩೧ ॥ ಇಂದ್ರಪ್ರಸ್ಥ ನಗರದ ಮಾರ್ಗಗಳು ಮದಿಸಿದ ಆನೆಗಳ ಸುಗಂಧಯುಕ್ತವಾದ ಮದೋದಕದಿಂದ ತೋಯಿಸಲ್ಪಟ್ಟಿದ್ದವು. ಅಲ್ಲಲ್ಲಿ ಬಣ್ಣ-ಬಣ್ಣದ ಧ್ವಜ-ಪತಾಕೆಗಳು ಹಾರಾಡುತ್ತಿದ್ದವು. ಚಿನ್ನದ ತೋರಣಗಳನ್ನು ಕಟ್ಟಿದ್ದರು. ನೀರು ತುಂಬಿದ ಚಿನ್ನದ ಕಲಶಗಳನ್ನು ಶ್ರೀಕೃಷ್ಣನ ಸ್ವಾಗತಕ್ಕಾಗಿ ಎಲ್ಲೆಡೆಗಳಲ್ಲಿ ಇಡಲ್ಪಟ್ಟಿದ್ದವು. ನಗರದ ನರ-ನಾರಿಯರು ನೂತನವಸ್ತ್ರಗಳನ್ನು, ಆಭರಣಗಳನ್ನು ತೊಟ್ಟು ಪುಷ್ಪಮಾಲಿಕೆಗಳನ್ನು ಧರಿಸಿಕೊಂಡು, ಸುಗಂಧ ದ್ರವ್ಯಗಳನ್ನು ಪೂಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ಓಡಾಡುತ್ತಿದ್ದರು. ॥ ೩೨ ॥

ಉದ್ದೀಪ್ತದೀಪಬಲಿಭಿಃ ಪ್ರತಿಸದ್ಮಜಾಲ-
ನಿರ್ಯಾತಧೂಪರುಚಿರಂ ವಿಲಸತ್ಪತಾಕಮ್ ।
ಮೂರ್ಧನ್ಯಹೇಮಕಲಶೈ ರಜತೋರುಶೃಂಗೈ-
ರ್ಜುಷ್ಟಂ ದದರ್ಶ ಭವನೈಃ ಕುರುರಾಜಧಾಮ ॥ ೩೩ ॥

ಮನೆ-ಮನೆ ಹೊಸ್ತಿಲುಗಳಲ್ಲಿ ದೀಪಗಳನ್ನು ಬೆಳಗಿಸಿದ್ದರು, ಅದನ್ನು ನೋಡಿದಾಗ ದೀಪಾವಳಿಯೇ ನೆನಪಾಗುತ್ತಿತ್ತು. ಪ್ರತಿಯೊಂದು ಮನೆಗಳ ಗವಾಕ್ಷಿಗಳಿಂದ ಅಗರುರೂಪದ ಹೊಗೆ ಹೊರ ಸೂಸುತ್ತಿತ್ತು. ಎಲ್ಲ ಮನೆಗಳ ಮೇಲೆಯೂ ಧ್ವಜಗಳು ಹಾರಾಡುತ್ತಿದ್ದು ಬೆಳ್ಳಿಯ ಶಿಖರಗಳಿದ್ದು ಚಿನ್ನದ ಕಲಶಗಳು ಹೊಳೆಯುತ್ತಿದ್ದುವು. ಇಂತಹ ಸೌಧಗಳಿಂದ ಕೂಡಿದ್ದ ಪಾಂಡವರ ರಾಜಧಾನಿ ಇಂದ್ರಪ್ರಸ್ಥವನ್ನು ನೋಡುತ್ತಾ ಭಗವಾನ್ ಶ್ರೀಕೃಷ್ಣನು ಮುಂದರಿಯುತ್ತಿದ್ದನು. ॥ ೩೩. ॥ ಮನುಷ್ಯರ ಕಣ್ಣುಗಳ ಪಾನಪಾತ್ರೆ ಅರ್ಥಾತ್ ಅತ್ಯಂತ ದರ್ಶನೀಯನಾದ ಭಗವಾನ್ ಶ್ರೀಕೃಷ್ಣನು ರಾಜಮಾರ್ಗದಲ್ಲಿ ಬರುತ್ತಿರುವನೆಂದು ಕೇಳಿದ ನಗರದ ಯುವತಿಯರು ಅವನ ದರ್ಶನದ ಔತ್ಸುಕ್ಯದಿಂದ ಮನೆಯ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ, ತಮ್ಮ ಗಂಡಂದಿರನ್ನೂ ಬಿಟ್ಟು ಅವರಿಗೂ ಹೇಳದೆ ಓಡಿ ಹೋಗುತ್ತಿರುವಾಗ ಮುಡಿಯು ಬಿಚ್ಚಿಹೋಗಿರುವುದನ್ನು ಉಟ್ಟಸೀರೆಯು ಸಡಲಿಸಿರುವುದನ್ನು ಗಮನಿಸದೆ ಧಾವಿಸಿ ರಾಜಬೀದಿಗೆ ಬಂದರು. ॥ ೩೪ ॥

ಪ್ರಾಪ್ತಂ ನಿಶಮ್ಯ ನರಲೋಚನಪಾನಪಾತ್ರ-
ಮೌತ್ಸುಕ್ಯವಿಶ್ಲಥಿತಕೇಶದುಕೂಲಬಂಧಾಃ ।
ಸದ್ಯೋ ವಿಸೃಜ್ಯ ಗೃಹಕರ್ಮ ಪತೀಂಶ್ಚ ತಲ್ಪೇ
ದ್ರಷ್ಟುಂ ಯಯುರ್ಯುವತಯಃ ಸ್ಮ ನರೇಂದ್ರಮಾರ್ಗೇ ॥ ೩೪ ॥

ರಥಾಶ್ವ-ಗಜ-ಪದಾತಿ ಸೈನಿಕರಿಂದ ಸಮಾಕುಲವಾಗಿದ್ದ ರಾಜಪಥದಲ್ಲಿ ಪತ್ನಿಯರ ಸಮೇತನಾಗಿ ಬರುತ್ತಿದ್ದ ಭಗವಾನ್ ಶ್ರೀಕೃಷ್ಣನನ್ನು ಮನೆಗಳ ಉಪ್ಪರಿಗೆಗಳ ಮೇಲೆ ನಿಂತ ಸ್ತ್ರೀಯರು ದರ್ಶನಮಾಡಿ ಅವನ ಮೇಲೆ ಹೂವಿನ ಮಳೆಯನ್ನು ಸುರಿಸಿದರು. ಮನಸ್ಸಿನಿಂದಲೇ ಜಗದಾನಂದಕಂದನನ್ನು ಆಲಿಂಗಿಸಿಕೊಂಡು, ಪ್ರೇಮಪೂರ್ಣವಾದ ಮಂದಹಾಸದಿಂದಲೂ, ಕಡೆಗಣ್ಣ ನೋಟಗಳಿಂದಲೂ ಶ್ರೀಕೃಷ್ಣನನ್ನು ಸ್ವಾಗತಿಸಿದರು. ॥ ೩೫ ॥ ನಗರದ ನಾರಿಯರು ರಾಜಪಥದಲ್ಲಿ ಚಂದ್ರನೊಡನೆ ಇರುವ ನಕ್ಷತ್ರ ದೇವತೆಗಳಂತಿದ್ದ ಶ್ರೀಕೃಷ್ಣನ ಪತ್ನಿಯರನ್ನು ನೋಡಿ ಹೀಗೆ ಮಾತಾಡಿಕೊಂಡರು – ಸಖಿಯರೇ! ಪುರುಷಶ್ರೇಷ್ಠನಾದ ಶ್ರೀಕೃಷ್ಣನು ಉದಾರವಾದ ಹಾಸ್ಯದಿಂದಲೂ, ವಿಲಾಸಪೂರ್ಣ ಕಟಾಕ್ಷವೀಕ್ಷಣದಿಂದಲೂ ತನ್ನ ಪತ್ನಿಯರ ಕಡೆಗೆ ನೋಡುತ್ತಾ ಅವರ ಕಣ್ಣುಗಳಿಗೆ ಪರಮಾನಂದಪ್ರದನಾಗಿದ್ದಾನೆ. ಇಂತಹ ಸೌಭಾಗ್ಯವನ್ನು ಪಡೆಯಲು ಇವರು ಎಂತಹ ಪುಣ್ಯಕಾರ್ಯಗಳನ್ನು ಮಾಡಿದ್ದರು ?॥೩೬॥ ಹೀಗೆ ಭಗವಾನ್ ಶ್ರೀಕೃಷ್ಣನು ರಾಜಬೀದಿಯಲ್ಲಿ ಹೋಗುತ್ತಿದ್ದಾಗ ಅಲ್ಲಲ್ಲಿ ಪುಣ್ಯಾತ್ಮರಾದ ಶ್ರೀಮಂತರೂ, ವ್ಯಾಪಾರಿಗಳೂ, ಪರಜನರೂ ಅನೇಕ ಮಾಂಗಲಿಕ ದ್ರವ್ಯಗಳನ್ನು ತಂದು-ತಂದು ಶ್ರೀಕೃಷ್ಣನನ್ನು ಪೂಜಿಸಿ, ಸ್ವಾಗತಿಸಿ, ಸತ್ಕರಿಸುತ್ತಿದ್ದರು. ॥ ೩೭ ॥

ತಸ್ಮಿನ್ ಸುಸಂಕುಲ ಇಭಾಶ್ವರಥದ್ವಿಪದ್ಭಿಃ
ಕೃಷ್ಣಂ ಸಭಾರ್ಯಮುಪಲಭ್ಯ ಗೃಹಾಧಿರೂಢಾಃ ।
ನಾರ್ಯೋ ವಿಕೀರ್ಯ ಕುಸುಮೈರ್ಮನಸೋಪಗುಹ್ಯ
ಸುಸ್ವಾಗತಂ ವಿದಧುರುತ್ಸ್ಮಯವೀಕ್ಷಿತೇನ ॥ ೩೫ ॥

ಅಂತಃಪುರದ ಸ್ತ್ರೀಯರು ಭಗವಾನ್ ಶ್ರೀಕೃಷ್ಣನನ್ನು ನೋಡಿ ಪ್ರೇಮಾನಂದದಲ್ಲಿ ಮುಳುಗಿಹೋದರು. ಅವರು ಪ್ರೇಮವಿಹ್ವಲ ಮತ್ತು ಆನಂದದಿಂದ ಅರಳಿದ್ದ ತಮ್ಮ ಕಣ್ಣುಗಳಿಂದ ಭಗವಂತನನ್ನು ಸ್ವಾಗತಿಸಿ ಸತ್ಕರಿಸಿದರು. ಅವರ ಸ್ವಾಗತ-ಸತ್ಕಾರವನ್ನು ಸ್ವೀಕರಿಸುತ್ತಾ ಶ್ರೀಕೃಷ್ಣನು ಅರಮನೆಯನ್ನು ಪ್ರವೇಶಿಸಿದನು. ॥ ೩೮ ॥ ಕುಂತಿಯು ತ್ರಿಭುವನೇಶ್ವರನಾದ ತನ್ನ ಅಣ್ಣನ ಮಗನಾದ ಶ್ರೀಕೃಷ್ಣನನ್ನು ನೋಡಿದಾಗ ಆಕೆಯ ಹೃದಯ ಪ್ರೇಮದಿಂದ ತುಂಬಿ ಬಂತು. ಆವಳು ಮಂಚದಿಂದಿಳಿದು ಸೊಸೆಯಾದ ದ್ರೌಪದಿಯೊಡನೆ ಮುಂದೆ ಬಂದು ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡಳು. ॥ ೩೯ ॥

ಊಚುಃ ಸ್ತ್ರಿಯಃ ಪಥಿ ನಿರೀಕ್ಷ್ಯ ಮುಕುಂದಪತ್ನೀ-
ಸ್ತಾರಾ ಯಥೋಡುಪಸಹಾಃ ಕಿಮಕಾರ್ಯಮೂಭಿಃ ।
ಯಚ್ಚಕ್ಷುಷಾಂ ಪುರುಷಮೌಲಿರುದಾರಹಾಸ-
ಲೀಲಾವಲೋಕಕಲಯೋತ್ಸವಮಾತನೋತಿ ॥ ೩೬ ॥

ಹೀಗೆ ಭಗವಾನ್ ಶ್ರೀಕೃಷ್ಣನು ರಾಜಬೀದಿಯಲ್ಲಿ ಹೋಗುತ್ತಿದ್ದಾಗ ಅಲ್ಲಲ್ಲಿ ಪುಣ್ಯಾತ್ಮರಾದ ಶ್ರೀಮಂತರೂ, ವ್ಯಾಪಾರಿಗಳೂ, ಪರಜನರೂ ಅನೇಕ ಮಾಂಗಲಿಕ ದ್ರವ್ಯಗಳನ್ನು ತಂದು-ತಂದು ಶ್ರೀಕೃಷ್ಣನನ್ನು ಪೂಜಿಸಿ, ಸ್ವಾಗತಿಸಿ, ಸತ್ಕರಿಸುತ್ತಿದ್ದರು. ॥ ೩೭ ॥

ತತ್ರ ತತ್ರೋಪಸಂಗಮ್ಯ ಪೌರಾ ಮಂಗಲಪಾಣಯಃ ।
ಚಕ್ರುಃ ಸಪರ್ಯಾಂ ಕೃಷ್ಣಾಯ ಶ್ರೇಣೀಮುಖ್ಯಾ ಹತೈನಸಃ
॥ ೩೭ ॥

ಅಂತಃಪುರಜನೈಃ ಪ್ರೀತ್ಯಾ ಮುಕುಂದಃ ಫುಲ್ಲಲೋಚನೈಃ ।
ಸಸಂಭ್ರಮೈರಭ್ಯುಪೇತಃ ಪ್ರಾವಿಶದ್ರಾಜಮಂದಿರಮ್
॥ ೩೮ ॥

ಪೃಥಾ ವಿಲೋಕ್ಯ ಭ್ರಾತೃಜಂ ಕೃಷ್ಣಂ ತ್ರಿಭುವನೇಶ್ವರಮ್ ।
ಪ್ರೀತಾತ್ಮೋತ್ಥಾಯ ಪರ್ಯಂಕಾತ್ಸಸ್ನುಷಾ ಪರಿಷಸ್ವಜೇ
॥ ೩೯ ॥

ಗೋವಿಂದಂ ಗೃಹಮಾನೀಯ ದೇವದೇವೇಶಮಾದೃತಃ ।
ಪೂಜಾಯಾಂ ನಾವಿದತ್ ಕೃತ್ಯಂ ಪ್ರಮೋದೋಪಹತೋ ನೃಪಃ
॥ ೪೦ ॥

ಪಿತೃಷ್ವಸುರ್ಗುರುಸ್ತ್ರೀಣಾಂ ಕೃಷ್ಣಶ್ಚಕ್ರೇಽಭಿವಾದನಮ್ ।
ಸ್ವಯಂ ಚ ಕೃಷ್ಣಯಾ ರಾಜನ್ ಭಗಿನ್ಯಾ ಚಾಭಿವಂದಿತಃ
॥ ೪೧ ॥

ಶ್ವಶ್ರ್ವಾ ಸಂಚೋದಿತಾ ಕೃಷ್ಣಾ ಕೃಷ್ಣಪತ್ನೀಶ್ಚ ಸರ್ವತಃ ।
ಆನರ್ಚ ರುಕ್ಮಿಣೀಂ ಸತ್ಯಾಂ ಭದ್ರಾಂ ಜಾಂಬವತೀಂ ತಥಾ
॥ ೪೨ ॥

ಕಾಲಿಂದೀಂ ಮಿತ್ರವಿಂದಾಂ ಚ ಶೈಬ್ಯಾಂ ನಾಗ್ನಜಿತೀಂ ಸತೀಮ್ ।
ಅನ್ಯಾಶ್ಚಾಭ್ಯಾಗತಾ ಯಾಸ್ತು ವಾಸಃಸ್ರಜ್ಮಂಡನಾದಿಭಿಃ
॥ ೪೩ ॥

ಸುಖಂ ನಿವಾಸಯಾಮಾಸ ಧರ್ಮರಾಜೋ ಜನಾರ್ದನಮ್ ।
ಸಸೈನ್ಯಂ ಸಾನುಗಾಮಾತ್ಯಂ ಸಭಾರ್ಯಂ ಚ ನವಂ ನವಮ್
॥ ೪೪ ॥

ತರ್ಪಯಿತ್ವಾ ಖಾಂಡವೇನ ವಹ್ನಿಂ ಫಾಲ್ಗುನಸಂಯುತಃ ।
ಮೋಚಯಿತ್ವಾಮಯಂ ಯೇನ ರಾಜ್ಞೇ ದಿವ್ಯಾ ಸಭಾ ಕೃತಾ
॥ ೪೫ ॥

ಉವಾಸ ಕತಿಚಿನ್ಮಾಸಾನ್ ರಾಜ್ಞಃ ಪ್ರಿಯಚಿಕೀರ್ಷಯಾ ।
ವಿಹರನ್ರಥಮಾರುಹ್ಯ ಫಾಲ್ಗುನೇನ ಭಟೈರ್ವೃತಃ
॥ ೪೬ ॥

ದೇವದೇವೇಶ್ವರ ಭಗವಾನ್ ಶ್ರೀಕೃಷ್ಣನನ್ನು ಆದರಭಾವದಿಂದ ಅರಮನೆಯೊಳಗೆ ಕರೆತಂದಾಗ ಯುಧಿಷ್ಠಿರನು ಆನಂದೋದ್ರೇಕದಿಂದ ಮೈಮರೆತನು. ಭಗವಂತನನ್ನು ಯಾವ ವಿಧದಿಂದ ಪೂಜಿಸಬೇಕೆಂಬುದು ತಿಳಿಯದೆ ಹೋಯಿತು. ॥ ೪೦ ॥ ಭಗವಾನ್ ಶ್ರೀಕೃಷ್ಣನು ತನ್ನ ಅತ್ತೆ ಕುಂತಿಯನ್ನು ಹಾಗೂ ಗುರುಪತ್ನಿಯರಿಗೂ ನಮಸ್ಕರಿಸಿದನು. ಅವನ ತಂಗಿಯಾದ ಸುಭದ್ರೆ ಮತ್ತು ದ್ರೌಪದಿಯು ಭಗವಂತನಿಗೆ ನಮಸ್ಕರಿಸಿದರು. ॥ ೪೧ ॥ ಅತ್ತೆಯಾದ ಕುಂತೀದೇವಿಯ ಪ್ರೇರಣೆಯಂತೆ ದ್ರೌಪದಿಯು ರುಕ್ಮಿಣೀ, ಸತ್ಯಭಾಮೆ, ಭದ್ರಾ, ಜಾಂಬವತೀ, ಕಾಲಿಂದೀ, ಮಿತ್ರವಿಂದಾ, ಲಕ್ಷ್ಮಣಾ ಮತ್ತು ಸತ್ಯಾ ಮೊದಲಾದ ಶ್ರೀಕೃಷ್ಣನ ಪಟ್ಟದರಾಣಿಯರನ್ನು ಹಾಗೂ ಅಲ್ಲಿಗೆ ಬಂದ ಶ್ರೀಕೃಷ್ಣನ ಇತರ ರಾಣಿಯರನ್ನು ವಸ್ತ್ರಾಭರಣ, ಪುಷ್ಪಹಾರಗಳಿಂದ ಯಥಾಯೋಗ್ಯವಾಗಿ ಸತ್ಕರಿಸಿದಳು. ॥ ೪೨-೪೩ ॥ ಧರ್ಮರಾಜ ಯುಧಿಷ್ಠಿರನು ಶ್ರೀಕೃಷ್ಣನಿಗೆ ಅವನ ಸೈನ್ಯಕ್ಕೆ, ಸೇವಕ-ಮಂತ್ರಿಗಳಿಗೆ ಹಾಗೂ ಪತ್ನಿಯರಿಗೆ ಯಥಾಯೋಗ್ಯವಾದ ಸುಖಕರ ವಸತಿಗಳನ್ನು ಏರ್ಪಡಿಸಿಕೊಟ್ಟು ಅನುದಿನವು ಹೊಸ-ಹೊಸ ಬಗೆಯ ಸತ್ಕಾರಗಳಿಂದ ಅವರೆಲ್ಲರನ್ನು ಉಪಚರಿಸುತ್ತಿದ್ದನು. ॥ ೪೪ ॥ ಭಗವಾನ್ ಶ್ರೀಕೃಷ್ಣನು ಅರ್ಜುನನೊಂದಿಗೆ ಇದ್ದು ಖಾಂಡವವನವನ್ನು ದಹಿಸಲು ಅಗ್ನಿಗೆ ಅನುವುಮಾಡಿಕೊಟ್ಟು ಅವನನ್ನು ತೃಪ್ತಪಡಿಸಿದನು. ಆ ಅಗ್ನಿಯಿಂದ ಬದುಕಿಸಿದ್ದ ಮಾಯಾಸುರನು ಭಗವಂತನ ಆಜ್ಞೆಯಂತೆ ಯುಧಿಷ್ಠಿರನಿಗೆ ದಿವ್ಯವಾದೊಂದು ಸಭಾಭವನವನ್ನು ನಿರ್ಮಿಸಿಕೊಟ್ಟನು. ॥ ೪೫ ॥ ಶ್ರೀಕೃಷ್ಣನು ಯುಧಿಷ್ಠಿರನನ್ನು ಸಂತೋಷಪಡಿಸಲೆಂದೇ ಕೆಲವು ತಿಂಗಳುಗಳ ಕಾಲ ಇಂದ್ರಪ್ರಸ್ಥದಲ್ಲೇ ಉಳಿದುಕೊಂಡನು. ಅವನು ಆಗಾಗ ಅರ್ಜುನನೊಡನೆ ರಥದಲ್ಲಿ ಕುಳಿತು ಅಲ್ಲಿ-ಇಲ್ಲಿ ಸಂಚರಿಸುತ್ತಿದ್ದನು. ಆಗ ಮಹಾ-ಮಹಾ ವೀರ ಸೈನಿಕರೂ ಕೂಡ ಅವರ ಸೇವೆಗೆ ಜೊತೆಯಲ್ಲೇ ಹೋಗುತ್ತಿದ್ದರು. ॥ ೪೬ ॥

ಎಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೭೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಕೃಷ್ಣಸ್ಯೇಂದ್ರಪ್ರಸ್ಥಗಮನಂ ನಾಮೈಕಸಪ್ತತಿತಮೋಽಧ್ಯಾಯಃ ॥ ೭೧ ॥

ಎಪ್ಪತ್ತೆರಡನೆಯ ಅಧ್ಯಾಯ

ಪಾಂಡವರಿಂದ ರಾಜಸೂಯ ಯಜ್ಞದ ಉಪಕ್ರಮ ಮತ್ತು ಜರಾಸಂಧನ ಉದ್ಧಾರ

ಶ್ರೀಶುಕ ಉವಾಚ

ಏಕದಾ ತು ಸಭಾಮಧ್ಯೇ ಆಸ್ಥಿತೋ ಮುನಿಭಿರ್ವೃತಃ ।

ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈರ್ಭ್ರಾತೃಭಿಶ್ಚ ಯುಧಿಷ್ಠಿರಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಂದು ದಿನ ಯುಧಿಷ್ಠಿರ ಮಹಾರಾಜನು ಹಲವಾರು ಮುನಿಗಳಿಂದಲೂ ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ, ವೈಶ್ಯರಿಂದಲೂ, ಭೀಮಸೇನನೇ ಮೊದಲಾದ ಸಹೋದರರಿಂದಲೂ, ಆಚಾರ್ಯರಿಂದಲೂ, ಕುರುಕುಲದ ಹಿರಿಯರಿಂದಲೂ, ಬಂಧು ಬಾಂಧವರಿಂದಲೂ ಕೂಡಿಕೊಂಡು ರಾಜಸಭೆಯಲ್ಲಿ ಕುಳಿತಿದ್ದನು.

ಆಚಾರ್ಯೈಃ ಕುಲವೃದ್ಧೈಶ್ಚ ಜ್ಞಾತಿಸಂಬಂಧಿ ಬಾಂಧವೈಃ ।
ಶೃಣ್ವತಾಮೇವ ಚೈ ತೇಷಾಮಾಭಾಷ್ಯೇದಮುವಾಚ ಹ
॥ ೨ ॥

ಯುಧಿಷ್ಠಿರ ಉವಾಚ

ಕ್ರತುರಾಜೇನ ಗೋವಿಂದ ರಾಜಸೂಯೇನ ಪಾವನೀಃ ।
ಯಕ್ಷ್ಯೇ ವಿಭೂತೀರ್ಭವತಸ್ತತ್ಸಂಪಾದಯ ನಃ ಪ್ರಭೋ
॥ ೩ ॥

ತ್ವತ್ಪಾದುಕೇ ಅವಿರತಂ ಪರಿ ಯೇ ಚರಂತಿ
ಧ್ಯಾಯಂತ್ಯಭದ್ರನಶನೇ ಶುಚಯೋ ಗೃಣಂತಿ ।
ವಿಂದಂತಿ ತೇ ಕಮಲನಾಭ ಭವಾಪವರ್ಗ-
ಮಾಶಾಸತೇ ಯದಿ ತ ಆಶಿಷ ಈಶ ನಾನ್ಯೇ ॥ ೪ ॥

ತದ್ದೇವದೇವ ಭವತಶ್ಚರಣಾರವಿಂದ-
ಸೇವಾನುಭಾವಮಿಹ ಪಶ್ಯತು ಲೋಕ ಏಷಃ ।
ಯೇ ತ್ವಾಂ ಭಜಂತಿ ನ ಭಜಂತ್ಯುತ ವೋಭಯೇಷಾಂ
ನಿಷ್ಠಾಂ ಪ್ರದರ್ಶಯ ವಿಭೋ ಕುರುಸೃಂಜಯಾನಾಮ್ ॥ ೫ ॥

ನ ಬ್ರಹ್ಮಣಃ ಸ್ವಪರಭೇದಮತಿಸ್ತವ ಸ್ಯಾತ್
ಸರ್ವಾತ್ಮನಃ ಸಮದೃಶಃ ಸ್ವಸುಖಾನುಭೂತೇಃ ।
ಸಂಸೇವತಾಂ ಸುರತರೋರಿವ ತೇ ಪ್ರಸಾದಃ
ಸೇವಾನುರೂಪಮುದಯೋ ನ ವಿಪರ್ಯಯೋಽತ್ರ ॥ ೬ ॥

ಶ್ರೀಭಗವಾನುವಾಚ

ಸಮ್ಯಗ್ವ್ಯವಸಿತಂ ರಾಜನ್ ಭವತಾ ಶತ್ರುಕರ್ಶನ ।
ಕಲ್ಯಾಣೀ ಯೇನ ತೇ ಕೀರ್ತಿರ್ಲೋಕಾನನುಭವಿಷ್ಯತಿ
॥ ೭ ॥

ಋಷೀಣಾಂ ಪಿತೃದೇವಾನಾಂ ಸುಹೃದಾಮಪಿ ನಃ ಪ್ರಭೋ ।
ಸರ್ವೇಷಾಮಪಿ ಭೂತಾನಾಮೀಪ್ಸಿತಃ ಕ್ರತುರಾಡಯಮ್
॥ ೮ ॥

ವಿಜಿತ್ಯ ನೃಪತೀನ್ಸರ್ವಾನ್ಕೃತ್ವಾ ಚ ಜಗತೀಂ ವಶೇ ।
ಸಂಭೃತ್ಯ ಸರ್ವಸಂಭಾರಾನಾಹರಸ್ವ ಮಹಾಕ್ರತುಮ್
॥ ೯ ॥

ಏತೇ ತೇ ಭ್ರಾತರೋ ರಾಜನ್ ಲೋಕಪಾಲಾಂಶಸಂಭವಾಃ ।
ಜಿತೋಽಸ್ಮ್ಯಾತ್ಮವತಾ ತೇಽಹಂ ದುರ್ಜಯೋ ಯೋಽಕೃತಾತ್ಮಭಿಃ
॥ ೧೦ ॥

ಆಗ ಭಗವಾನ್ ಶ್ರೀಕೃಷ್ಣನನ್ನು ಸಂಬೋಧಿಸುತ್ತಾ ಎಲ್ಲರೆದುರಿಗೆ ಇಂತೆಂದನು – ॥ ೧-೨ ॥

ಧರ್ಮರಾಜ ಯುಧಿಷ್ಠಿರನು ಹೇಳಿದನು – ಗೋವಿಂದ! ಸರ್ವಶ್ರೇಷ್ಠ ರಾಜಸೂಯಯಾಗದ ಮೂಲಕ ನಿನ್ನನ್ನು ಮತ್ತು ನಿನ್ನ ಪರಮಪಾವನ ವಿಭೂತಿಸ್ವರೂಪರಾದ ದೇವತೆಗಳನ್ನು ಪೂಜಿಸಲು ನಾನು ಬಯಸಿದ್ದೇನೆ. ಪ್ರಭೋ! ಕೃಪೆಮಾಡಿ ನನ್ನ ಈ ಸಂಕಲ್ಪವನ್ನು ನಡೆಸಿಕೊಡಬೇಕು. ॥ ೩ ॥ ಪದ್ಮನಾಭನೇ! ನಿನ್ನ ಚರಣಕಮಲಗಳ ಪಾದುಕೆಗಳು ಸಮಸ್ತ ಆಮಂಗಳಗಳನ್ನು ನಾಶಮಾಡುವಂತಹುಗಳು. ನಿರಂತರವಾಗಿ ಅವನ್ನು ಸೇವಿಸುವವರು, ಧ್ಯಾನಿಸುತ್ತಾ ಸ್ತುತಿಸುವವರೇ ನಿಜವಾದ ಪವಿತ್ರಾತ್ಮರು. ಅವರು ಜನ್ಮ-ಮೃತ್ಯುವಿನ ಚಕ್ರದಿಂದ ಬಿಡುಗಡೆ ಹೊಂದುವರು. ಅವರು ಒಂದು ವೇಳೆ ಸಾಂಸಾರಿಕ ವಿಷಯಗಳನ್ನು ಆಶಿಸಿದರೂ ಅವರಿಗೆ ಅವು ದೊರೆಯುತ್ತವೆ. ಆದರೆ ನಿನ್ನ ಚರಣಕಮಲಗಳಲ್ಲಿ ಶರಣಾಗದವರಿಗೆ ಮುಕ್ತಿಯು ಸಿಗುವುದಿಲ್ಲ ಸಾಂಸಾರಿಕ ಭೋಗಗಳೂ ಸಿಗುವುದಿಲ್ಲ ॥ ೪ ॥ ದೇವತೆಗಳಿಗೂ ಆರಾಧ್ಯನಾದ ಶ್ರೀಕೃಷ್ಣನೇ! ಸಂಸಾರಿ ಜನರು ನಿನ್ನ ಚರಣಕಮಲಗಳ ಸೇವೆಯ ಮಹಿಮೆಯನ್ನು ಕಾಣಲೆಂದೇ ನಾನು ಬಯಸುತ್ತೇನೆ. ಪ್ರಭೋ! ಕುರುವಂಶೀಯ ರಾಜರಲ್ಲಿ ಮತ್ತು ಸೃಂಜಯವಂಶೀಯ ರಾಜರಲ್ಲಿ ನಿನ್ನನ್ನು ಭಜಿಸುವವರ ಮತ್ತು ಭಜಿಸದವರ ವ್ಯತ್ಯಾಸವನ್ನು ಜನತೆಗೆ ನೀನು ತೋರಿಸಿಕೊಡು. ॥ ೫ ॥ ಪ್ರಭುವೇ! ನೀನು ಎಲ್ಲರ ಆತ್ಮನೂ, ಸಮದರ್ಶಿಯೂ, ಆತ್ಮಾನಂದದ ಸಾಕ್ಷಾತ್ಕಾರನೂ, ಪರಬ್ರಹ್ಮನೂ ಆಗಿರುವೆ. 'ಇದು ನನ್ನದು, ಇದು ಪರರದ್ದು; ಇವನು ನನ್ನವನು ಇವನು ಪರಕೀಯನು' ಎಂಬ ಭೇದಭಾವವು ನಿನ್ನಲ್ಲಿಲ್ಲ. ಹೀಗಿದ್ದರೂ ಕಲ್ಪವೃಕ್ಷವನ್ನು ಸೇವಿಸುವವರಿಗೆ ತಮ್ಮ ಭಾವನೆಗೆ ಅನುಸಾರವಾಗಿ ಸಕಲ ವಸ್ತುಗಳು, ಫಲಗಳು ಸಿಗವಂತೆ ದೊರೆಯುತ್ತವೆ. ಆ ಫಲದಲ್ಲಿ ಇರುವ ನ್ಯೂನಾಧಿಕ್ಯವು ಅವರವರ ಸೇವೆಗೆ ಅನುರೂಪವಾಗಿಯೇ ಇರುವುದು. ಇದರಿಂದ ನಿನ್ನಲ್ಲಿ ವಿಷಮತೆ, ನಿರ್ದಯತೆ ಮುಂತಾದ ದೋಷಗಳು ಉಂಟಾಗುವುದಿಲ್ಲ ॥ ೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಶತ್ರುವಿಜಯಿಯಾದ ಯುಧಿಷ್ಠಿರನೇ! ರಾಜಸೂಯಯಜ್ಞಮಾಡುವ ನಿನ್ನ ನಿರ್ಧಾರವು ಶ್ಲಾಘ್ಯವಾಗಿದೆ. ಇದರಿಂದ ನಿನ್ನ ಮಂಗಳಮಯ ಕೀರ್ತಿಯು ಎಲ್ಲ ಲೋಕಗಳಲ್ಲಿಯೂ ಹರಡುವುದು. ॥ ೭ ॥ ರಾಜನೇ! ನಿನ್ನ ಈ ಮಹಾಯಜ್ಞವು ಋಷಿಗಳಿಗೂ, ಪಿತೃಗಳಿಗೂ, ದೇವತೆಗಳಿಗೂ, ಸುಹೃದರಿಗೂ ನಮಗೂ ಮತ್ತು ಸಮಸ್ತ ಪ್ರಾಣಿಗಳಿಗೂ ಅಭೀಷ್ಟವೇ ಆಗಿದೆ. ॥ ೮ ॥ ಮಹಾರಾಜ! ಭೂಮಿಯ ಸಮಸ್ತ ರಾಜರನ್ನು ಗೆದ್ದುಕೊಂಡು, ಇಡೀ ಪೃಥಿವಿಯನ್ನು ವಶಪಡಿಸಿಕೊಂಡು, ಯಜ್ಞೋಚಿತವಾದ ಸಮಸ್ತ ಸಾಮಗ್ರಿಗಳನ್ನು ಒಟ್ಟುಗೂಡಿಸಿಕೊಂಡು ಮತ್ತೆ ಈ ಮಹಾ ಯಜ್ಞಾನುಷ್ಠಾನವನ್ನು ಮಾಡು. ॥ ೯ ॥ ಧರ್ಮರಾಯನೇ! ನಿನ್ನ ನಾಲ್ಕು ತಮ್ಮಂದಿರು ವಾಯು, ಇಂದ್ರರೇ ಮೊದಲಾದ ಲೋಕಪಾಲರ ಅಂಶದಿಂದ ಹುಟ್ಟಿದವರು. ಅವರೆಲ್ಲರೂ ಮಹಾವೀರರಾಗಿದ್ದಾರೆ. ನೀನಾದರೋ ಮಹಾಮನಸ್ವಿಯೂ, ಸಂಯಮಿಯೂ ಆಗಿರುವೆ. ನೀವೆಲ್ಲರೂ ನಿಮ್ಮ ಸದ್ಗುಣಗಳಿಂದ ನನ್ನನ್ನು ವಶಪಡಿಸಿಕೊಂಡಿರುವಿರಿ. ಇಂದ್ರಿಯಗಳನ್ನೂ ಮನವನ್ನು ಸಂಯಮಿಸಿಕೊಳ್ಳದವರು ನನ್ನನ್ನು ವಶಪಡಿಸಿಕೊಳ್ಳಲಾರರು. ॥ ೧೦ ॥

ನ ಕಶ್ಚಿನ್ನತ್ತರಂ ಲೋಕೇ ತೇಜಸಾ ಯಶಸಾ ಶ್ರಿಯಾ ।
ವಿಭೂತಿಭಿರ್ವಾಭಿಭವೇದ್ದೇವೋಽಪಿ ಕಿಮು ಪಾರ್ಥಿವಃ
॥ ೧೧ ॥

ಶ್ರೀಶುಕ ಉವಾಚ

ನಿಶಮ್ಯ ಭಗವದ್ಗೀತಂ ಪ್ರೀತಃ ಪುಲ್ಲಮುಖಾಂಬುಜಃ ।
ಭ್ರಾತೄನ್ ದಿಗ್ವಿಜಯೇಽಯುಂಕ್ತ ವಿಷ್ಣುತೇಜೋಪಬೃಂಹಿತಾನ್
॥ ೧೨ ॥

ಸಹದೇವಂ ದಕ್ಷಿಣಸ್ಯಾಮಾದಿಶತ್ಸಹ ಸೃಂಜಯೈಃ ।
ದಿಶಿ ಪ್ರತೀಚ್ಯಾಂ ನಕುಲಮುದೀಚ್ಯಾಂ ಸವ್ಯಸಾಚಿನಮ್ ।
ಪ್ರಾಚ್ಯಾಂ ವೃಕೋದರಂ ಮತ್ಸ್ಯೈಃ ಕೇಕಯೈಃ ಸಹ ಮದ್ರಕೈಃ
॥ ೧೩ ॥

ತೇ ವಿಜಿತ್ಯ ನೃಪಾನ್ವೀರಾ ಆಜಹ್ರುರ್ದಿಗ್ಭ್ಯ ಓಜಸಾ ।
ಅಜಾತಶತ್ರವೇ ಭೂರಿ ದ್ರವಿಣಂ ನೃಪ ಯಕ್ಷ್ಯತೇ
॥ ೧೪ ॥

ಶ್ರುತ್ವಾಜಿತಂ ಜರಾಸಂಧಂ ನೃಪತೇರ್ಧ್ಯಾಯತೋ ಹರಿಃ ।
ಆಹೋಪಾಯಂ ತಮೇವಾದ್ಯ ಉದ್ದವೋ ಯಮುವಾಚ ಹ
॥ ೧೫ ॥

ಭೀಮಸೇನೋಽರ್ಜುನಃ ಕೃಷ್ಣೋ ಬ್ರಹ್ಮಲಿಂಗಧರಾಸ್ತ್ರಯಃ ।
ಜಗ್ಮುರ್ಗಿರಿವ್ರಜಂ ತಾತ ಬೃಹದ್ರಥಸುತೋ ಯತಃ
॥ ೧೬ ॥

ತೇ ಗತ್ವಾಽತಿಥ್ಯವೇಲಾಯಾಂ ಗೃಹೇಷು ಗೃಹಮೇಧಿನಮ್ ।
ಬ್ರಹ್ಮಣ್ಯಂ ಸಮಯಾಚೇರನ್ರಾಜನ್ಯಾ ಬ್ರಹ್ಮಲಿಂಗಿನಃ
॥ ೧೭ ॥

ರಾಜನ್ವಿದ್ಧ್ಯತಿಥೀನ್ ಪ್ರಾಪ್ತಾನರ್ಥಿನೋ ದೂರಮಾಗತಾನ್ ।
ತನ್ನಃ ಪ್ರಯಚ್ಛ ಭದ್ರಂ ತೇ ಯದ್ವಯಂ ಕಾಮಯಾಮಹೇ
॥ ೧೮ ॥

ಕಿಂ ದುರ್ಮರ್ಷಂ ತಿತಿಕ್ಷೂಣಾಂ ಕಿಮಕಾರ್ಯಮಸಾಧುಭಿಃ ।
ಕಿಂ ನ ದೇಯಂ ವದಾನ್ಯಾನಾಂ ಕಃ ಪರಃ ಸಮದರ್ಶಿನಾಮ್
॥ ೧೯ ॥

ಯೋಽನಿತ್ಯೇನ ಶರೀರೇಣ ಸತಾಂ ಗೇಯಂ ಯಶೋ ಧ್ರುವಮ್ ।
ನಾಚಿನೋತಿ ಸ್ವಯಂ ಕಲ್ಪಃ ಸ ವಾಚ್ಯಃ ಶೋಚ್ಯ ಏವ ಸಃ
॥ ೨೦ ॥

ಪ್ರಪಂಚದಲ್ಲಿ ದೊಡ್ಡ-ದೊಡ್ಡ ದೇವತೆಗಳೂ ಕೂಡ ತೇಜ, ಯಶಸ್ಸು ಲಕ್ಷ್ಮೀ, ಸೌಂದರ್ಯ, ಐಶ್ವರ್ಯ ಮುಂತಾದವುಗಳ ಮೂಲಕ ನನ್ನ ಭಕ್ತರನ್ನು ತಿರಸ್ಕರಿಸಲಾರರು. ಹಾಗಿರುವಾಗ ಯಾರೇ ರಾಜನು ಅವನ ತಿರಸ್ಕಾರವನ್ನು ಮಾಡಲು ಸಂಭವವೇ ಇಲ್ಲ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಂತನ ಮಾತನ್ನು ಕೇಳಿ ಮಹಾರಾಜ ಯುಧಿಷ್ಠಿರನ ಹೃದಯ ಆನಂದತುಂದಿಲವಾಯಿತು. ಅವನ ಮುಖವು ಪ್ರಫುಲ್ಲಿತ ವಾಯಿತು. ಆಗ ಅವನು ತನ್ನ ತಮ್ಮಂದಿರನ್ನು ದಿಗ್ವಿಜಯಕ್ಕಾಗಿ ಕಳಿಸಿದನು. ಭಗವಾನ್ ಶ್ರೀಕೃಷ್ಣನು ಪಾಂಡವರಲ್ಲಿ ತನ್ನ ಶಕ್ತಿಯನ್ನು ತುಂಬಿ ಅತ್ಯಂತ ಪ್ರಭಾವಿಯನ್ನಾಗಿಸಿದನು. ॥ ೧೨ ॥ ಧರ್ಮರಾಜ ಯುಧಿಷ್ಠಿರನು ಸೃಂಜಯವಂಶದ ವೀರರೊಂದಿಗೆ ಸಹದೇವನನ್ನು ದಕ್ಷಿಣ ದಿಕ್ಕಿಗೆ ದಿಗ್ವಿಜಯಕ್ಕಾಗಿ ಕಳಿಸಿದನು. ಮತ್ಸ್ಯದೇಶದವೀರ ರೊಂದಿಗೆ ನಕುಲನನ್ನು ಪಶ್ಚಿಮಕ್ಕೂ, ಕೇಕಯ ದೇಶದ ವೀರ ರೊಂದಿಗೆ ಅರ್ಜುನನ್ನು ಉತ್ತರಕ್ಕೂ, ಮದ್ರದೇಶದ ವೀರರೊಂದಿಗೆ ಭೀಮಸೇನನನ್ನು ದಿಗ್ವಿಜಯಕ್ಕಾಗಿ ಪೂರ್ವದಿಕ್ಕಿಗೂ ಕಳಿಸಿ ಕೊಟ್ಟನು. ॥ ೧೩ ॥ ಪರೀಕ್ಷಿತನೇ ! ಭೀಮಸೇನನೇ ಮೊದಲಾದ ಆ ವೀರರು ತಮ್ಮ ಬಲ-ಪೌರುಷದಿಂದ ಎಲ್ಲ ದಿಕ್ಕಿನ ರಾಜರನ್ನು ಗೆದ್ದುಕೊಂಡು, ಯಜ್ಞಮಾಡಲು ಉದ್ಯುಕ್ತನಾದ ಯುಧಿಷ್ಠಿರನಿಗೆ ಅತುಲವಾದ ಧನವನ್ನು ತಂದು ಒಪ್ಪಿಸಿದರು. ॥ ೧೪ ॥ ಇನ್ನೂ ಜರಾಸಂಧನನ್ನು ಗೆದ್ದುಕೊಂಡಿಲ್ಲ ಎಂಬುದನ್ನು ಕೇಳಿದ ಯುಧಿಷ್ಠಿರನು ಚಿಂತಾತುರನಾದನು. ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಹಿಂದೆ ಉದ್ಧವನು ಹೇಳಿದ ಉಪಾಯವನ್ನು ಧರ್ಮರಾಯನಿಗೆ ತಿಳಿಸಿದನು. ॥ ೧೫ ॥ ಪರೀಕ್ಷಿತನೇ ! ಅನಂತರ ಭೀಮಸೇನ, ಅರ್ಜುನ ಮತ್ತು ಭಗವಾನ್ ಶ್ರೀಕೃಷ್ಣ ಹೀಗೆ ಮೂವರೂ ಬ್ರಾಹ್ಮಣರ ವೇಷವನ್ನು ಧರಿಸಿ ಜರಾಸಂಧನ ರಾಜಧಾನಿಯಾದ ಗಿರಿವ್ರಜಕ್ಕೆ ಹೋದರು. ॥ ೧೬ ॥ ಜರಾಸಂಧನು ಬ್ರಾಹ್ಮಣರ ಭಕ್ತನಾಗಿದ್ದು, ಗೃಹಸ್ಥೋಚಿತವಾದ ಧರ್ಮಗಳನ್ನು ಪಾಲಿಸುವವನಾಗಿ ಇದ್ದನು. ಶ್ರೀಕೃಷ್ಣನೇ ಮೊದಲಾದ ಕ್ಷತ್ರಿಯ ವೀರರು ಬ್ರಾಹ್ಮಣರ ವೇಷಗಳನ್ನು ಧರಿಸಿ ಅತಿಥಿ-ಅಭ್ಯಾಗತರ ಸತ್ಕಾರ ಸಮಯದಲ್ಲಿ ಜರಾಸಂಧನ ಬಳಿಗೆ ಹೋಗಿ ಅವನಲ್ಲಿ ಹೀಗೆ ಯಾಚಿಸಿದರು. ॥ ೧೭ ॥ ಮಹಾರಾಜ ! ನಿನಗೆ ಮಂಗಳವಾಗಲಿ. ನಾವು ಮೂವರೂ ನಿಮ್ಮ ಅತಿಥಿಗಳಾಗಿದ್ದು ಬಹಳ ದೂರದಿಂದ ಬಂದಿದ್ದೇವೆ. ನಿಶ್ಚಯವಾಗಿಯೂ ನಾವು ನಿನ್ನಿಂದ ಒಂದು ವಿಶೇಷ ಪ್ರಯೋಜನವನ್ನು ಪಡೆಯಲು ಇಲ್ಲಿಗೆ ಬಂದಿರುವೆವು. ಆದುದರಿಂದ ನಾವು ನಿನ್ನಿಂದ ಅಪೇಕ್ಷಿಸುವುದನ್ನು ನೀನು ಅವಶ್ಯಕವಾಗಿ ಕೊಡಬೇಕು. ॥ ೧೮ ॥ ಲೋಕದಲ್ಲಿ ತಿತಿಕ್ಷುಗಳಿಗೆ ಸೈರಿಸಲಾಗದಿರುವುದು ಯಾವುದಿದೆ ? ದುಷ್ಟರು ಮಾಡದಿರುವ ಅಕಾರ್ಯ ಯಾವುದಿದೆ ? ಉದಾರಿಗಳಿಗೆ ಕೊಡದಿರುವ ವಸ್ತುವು ಯಾವುದಿದೆ ? ಸಮದರ್ಶಿಗಳಿಗೆ ಪರರೆಂಬುವರು ಯಾರಿದ್ದಾರೆ ? ॥ ೧೯ ॥ ಯಾವ ಮನುಷ್ಯನು ತಾನು ಸಮರ್ಥನಾಗಿದ್ದರೂ ಅನಿತ್ಯವಾದ ಈ ಶರೀರದಿಂದ ಸತ್ಪುರುಷರು ಹೊಗಳುವಂತಹ ಅವಿನಾಶಿಯಾದ ಶಾಶ್ವತವಾದ ಯಶಸ್ಸನ್ನು ಸಂಪಾದಿಸುವುದಿಲ್ಲವೋ ಅವನನ್ನು ಎಷ್ಟು ನಿಂದಿಸಿದರೂ ಕಡಿಮೆಯೇ. ಅವನ ಜೀವನವು ಅತ್ಯಂತ ಶೋಚನೀಯವಾಗಿದೆ. ॥ ೨೦ ॥

ಹರಿಶ್ಚಂದ್ರೋ ರಂತಿದೇವ ಉಂಛವೃತ್ತಿಃ ಶಿಬಿರ್ಬಲಿಃ।
ವ್ಯಾಧಃ ಕಪೋತೋ ಬಹವೋ ಹ್ಯಧ್ರುವೇಣ ಧ್ರುವಂ ಗತಾಃ
॥ ೨೧ ॥

ಶ್ರೀಶುಕ ಉವಾಚ

ಸ್ವರೈರಾಕೃತಿಭಿಸ್ತಾಂಸ್ತು ಪ್ರಕೋಷ್ಠ್ಯಾರ್ಜ್ಯಾಹತೈರಪಿ।
ರಾಜನ್ಯಬಂಧೂನ್ ವಿಜ್ಞಾಯ ದೃಷ್ಟಪೂರ್ವಾನಚಿಂತಯತ್
॥ ೨೨ ॥

ರಾಜನ್ಯಬಂಧವೋ ಹ್ಯೇತೇ ಬ್ರಹ್ಮಲಿಂಗಾನಿ ಬಿಭ್ರತಿ।
ದದಾಮಿ ಭಿಕ್ಷಿತಂ ತೇಭ್ಯ ಆತ್ಮಾನಮಪಿ ದುಸ್ತ್ಯಜಮ್
॥ ೨೩ ॥

ಬಲೇರ್ನು ಶ್ರೂಯತೇ ಕೀರ್ತಿರ್ವಿತತಾ ದಿಕ್ಷ್ವಕಲ್ಮಷಾ।
ಐಶ್ವರ್ಯಾದ್ಭ್ರಂಶಿತಸ್ಯಾಪಿ ವಿಪ್ರವ್ಯಾಜೇನ ವಿಷ್ಣುನಾ
॥ ೨೪ ॥

ಶ್ರಿಯಂ ಜಿಹೀರ್ಷತೇಂದ್ರಸ್ಯ ವಿಷ್ಣವೇ ದ್ವಿಜರೂಪಿಣೇ।
ಜಾನನ್ನಪಿ ಮಹೀಂ ಪ್ರಾದಾದ್ವಾರ್ಯಮಾಣೋಽಪಿ ದೈತ್ಯರಾಟ್
॥ ೨೫ ॥

ಜೀವತಾ ಬ್ರಾಹ್ಮಣಾರ್ಥಾಯ ಕೋ ನ್ವರ್ಥಃ ಕ್ಷತ್ರಬಂಧುನಾ।
ದೇಹೇನ ಪತಮಾನೇನ ನೇಹತಾ ವಿಪುಲಂ ಯಶಃ
॥ ೨೬ ॥

ಇತ್ಯುದಾರಮತಿಃ ಪ್ರಾಹ ಕೃಷ್ಣಾರ್ಜುನವೃಕೋದರಾನ್।
ಹೇ ವಿಪ್ರಾ ವ್ರಿಯತಾಂ ಕಾಮೋ ದದಾಮ್ಯಾತ್ಮಶಿರೋಽಪಿ ವಃ
॥ ೨೭ ॥

ಶ್ರೀಭಗವಾನುವಾಚ

ಯುದ್ಧಂ ನೋ ದೇಹಿ ರಾಜೇಂದ್ರ ದ್ವಂದ್ವಶೋ ಯದಿ ಮನ್ಯಸೇ।
ಯುದ್ಧಾರ್ಥಿನೋ ವಯಂ ಪ್ರಾಪ್ತಾ ರಾಜನ್ಯಾ ನಾನ್ಯಕಾಂಕ್ಷಿಣಃ
॥ ೨೮ ॥

ಅಸೌ ವೃಕೋದರಃ ಪಾರ್ಥ-
ಸ್ತಸ್ಯ ಭ್ರಾತಾರ್ಜುನೋ ಹ್ಯಯಮ್।
ಅನಯೋರ್ಮಾತುಲೇಯಂ ಮಾಂ
ಕೃಷ್ಣಂ ಜಾನೀಹಿ ತೇ ರಿಪುಮ್ ॥ ೨೯ ॥

ಜರಾಸಂಧನೇ! ನಿನಗೆ ತಿಳಿದಿರುವಂತೆ ಹರಿಶ್ಚಂದ್ರ, ರಂತಿದೇವ, ಉಂಛವೃತ್ತಿಯಿಂದ ಜೀವಿಸುತ್ತಿದ್ದ ಮುದ್ಗಲ, ಶಿಬಿ, ಬಲಿ, ವ್ಯಾಧ ಮತ್ತು ಕಪೋತ ಮುಂತಾದ ಬಹಳಷ್ಟು ಜನರು ಅತಿಥಿಗಳಿಗೆ ತಮ್ಮ ಸರ್ವಸ್ವವನ್ನು ಕೊಟ್ಟು ಈ ನಾಶಯುಕ್ತವಾದ ಶರೀರದ ಮೂಲಕ ಅವಿನಾಶೀ ಪದವನ್ನು ಪಡೆದುಕೊಂಡಿರುವರು. ಅದಕ್ಕಾಗಿ ನೀನೂ ನಮ್ಮನ್ನು ನಿರಾಶೆಗೊಳಿಸಬೇಡ. ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಜರಾಸಂಧನು ಅವರ ಮಾತಿನ ಧ್ವನಿಯನ್ನೂ ದೇಹದ ಆಕೃತಿಯನ್ನೂ ಬಿಲ್ಲಿನ ಹೆದೆಯನ್ನು ಬಾರಿ-ಬಾರಿಗೂ ಸೆಳೆದು ಜಡ್ಡು ಕಟ್ಟಿರುವ ಅಂಗೈಯನ್ನು ನೋಡಿ ಇವರು ಬ್ರಾಹ್ಮಣರಾಗಿರದೆ ಕ್ಷತ್ರಿಯರೇ ಆಗಿದ್ದಾರೆಂದೂ ನಿಶ್ಚಯಿಸಿಕೊಂಡನು. ಅವನು ಇವರನ್ನು ಎಲ್ಲಿಯೋ ನೋಡಿರುವುದಾಗಿ ಅಂದು ಕೊಂಡನು. ॥ ೨೨ ॥ ಇವರು ಕ್ಷತ್ರಿಯರೇ ಆಗಿದ್ದರೂ ನನ್ನ ಭಯದಿಂದ ಬ್ರಾಹ್ಮಣ ವೇಷವನ್ನು ಧರಿಸಿ ಬಂದಿರುವರು. ಆದ್ದರಿಂದ ಇವರು ಏನನ್ನು ಯಾಚಿಸಿದರೂ ನಾನು ಕೊಟ್ಟುಬಿಡುತ್ತೇನೆ. ಅತ್ಯಂತ ಪ್ರಿಯವಾದ ಮತ್ತು ತ್ಯಜಿಸಲು ದುಸ್ತರವಾದ ಈ ಶರೀರವನ್ನೇ ಕೇಳಿದರೂ ಕೊಟ್ಟು ಬಿಡುವೆನು ಎಂದು ಮನಸ್ಸಿನಲ್ಲೇ ಯೋಚಿಸಿದನು. ॥ ೨೩ ॥ ಭಗವಂತನಾದ ವಿಷ್ಣುವು ಬ್ರಾಹ್ಮಣನ ವೇಷವನ್ನು ಧರಿಸಿ ಬಲಿಚಕ್ರವರ್ತಿಯ ರಾಜ್ಯೈಶ್ವರ್ಯಗಳೆಲ್ಲವನ್ನೂ ಅಪಹರಿಸಿಬಿಟ್ಟಿದ್ದನು. ಆದರೆ ಬಲಿಯ ಧವಳ ಕೀರ್ತಿಯು ಈಗಲೂ ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದೆ. ಇಂದು ಕೂಡ ಜನರು ಆದರದಿಂದ ಅದನ್ನು ಕೊಂಡಾಡುತ್ತಾ ಇದ್ದಾರಲ್ಲ! ॥ ೨೪ ॥ ಭಗವಾನ್ ವಿಷ್ಣುವು ದೇವೇಂದ್ರನ ರಾಜ್ಯಲಕ್ಷ್ಮಿಯನ್ನು ಬಲಿಯಿಂದ ಕಸಿದು ಕೊಂಡು ಅವನಿಗೆ ಕೊಡಲೆಂದೇ ಬ್ರಾಹ್ಮಣ ವೇಷವನ್ನು ಧರಿಸಿದ್ದನೆಂಬುದರಲ್ಲಿ ಸಂದೇಹವಿಲ್ಲ, ದೈತ್ಯರಾಜ ಬಲಿಗೂ ಇದು ತಿಳಿದಿತ್ತು. ಗುರುಗಳಾದ ಶುಕ್ರಾಚಾರ್ಯರೂ ಅವನನ್ನು ತಡೆದಿದ್ದರೂ ಅವನು ಭೂ ದಾನವನ್ನು ಮಾಡಿಯೇ ಬಿಟ್ಟನು. ॥ ೨೫ ॥ ಈ ಶರೀರವು ನಾಶವುಳ್ಳದ್ದು. ಈ ಶರೀರದಿಂದ ಯಾರು ವಿಪುಲವಾದ ಯಶಸ್ಸನ್ನು ಗಳಿಸುವುದಿಲ್ಲವೋ ಮತ್ತು ಯಾವ ಕ್ಷತ್ರಿಯನು ಬ್ರಾಹ್ಮಣರಿಗಾಗಿಯೇ ಜೀವಿಸುವುದಿಲ್ಲವೋ ಅವನು ಬದುಕಿರುವುದು ವ್ಯರ್ಥವಾದುದೆಂದೇ ನನ್ನ ನಿಶ್ಚಯವು. ॥ ೨೬ ॥ ಪರೀಕ್ಷಿತನೇ! ನಿಜವಾಗಿಯೂ ಜರಾಸಂಧನ ಬುದ್ಧಿಯು ಉದಾರವಾಗಿತ್ತು. ಮೇಲಿನಂತೆ ವಿಚಾರಮಾಡಿ ಅವನು ಬ್ರಾಹ್ಮಣ ವೇಷಧಾರಿ ಶ್ರೀಕೃಷ್ಣ ಅರ್ಜುನ ಮತ್ತು ಭೀಮಸೇನರಲ್ಲಿ ಹೇಳಿದನು - ಎಲೈ ಬ್ರಾಹ್ಮಣರೇ! ನಿಮಗೆ ಬೇಕಾದ್ದನ್ನು ಕೇಳಿರಿ. ನನ್ನ ತಲೆಯನ್ನೇ ಬಯಸಿದರೂ ನಿಮಗೆ ಕೊಟ್ಟು ಬಿಡುತ್ತೇನೆ. ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ರಾಜೇಂದ್ರನೇ! ನಾವು ಅನ್ನಾಪೇಕ್ಷಿಗಳಾದ ಬ್ರಾಹ್ಮಣರಲ್ಲ, ನಾವು ನಿನ್ನೊಡನೆ ಯುದ್ಧವನ್ನು ಅಪೇಕ್ಷಿಸಿ ಬಂದಿರುವ ಕ್ಷತ್ರಿಯರು. ನಿನಗೆ ಉಚಿತವೆನಿಸಿದರೆ ದ್ವಂದ್ವ ಯುದ್ಧದ ಭಿಕ್ಷೆಯನ್ನು ಕೊಡು. ॥ ೨೮ ॥ ನೋಡು, ಇವನು ಪಾಂಡುಪುತ್ರನಾದ ಭೀಮಸೇನನು ಮತ್ತು ಇವನು ಅವನ ತಮ್ಮ ಅರ್ಜುನನು ಮತ್ತು ನಾನು ಇವರಿಬ್ಬರ ಸೋದರ ಮಾವನ ಮಗನಾದ ನಿನ್ನ ಹಳೆಯ ಶತ್ರುವಾದ ಕೃಷ್ಣನೆಂದೇ ತಿಳಿ. ॥ ೨೯ ॥

ಏವಮಾವೇದಿತೋ ರಾಜಾ ಜಹಾಸೋಚ್ಚೈಃ ಸ್ಮ ಮಾಗಧಃ ।
ಆಹ ಚಾಮರ್ಷಿತೋ ಮಂದಾ ಯುದ್ಧಂ ತರ್ಹಿ ದದಾಮಿ ವಃ
॥ ೩೦ ॥

ಭಗವಾನ್ ಶ್ರೀಕೃಷ್ಣನು ಹೀಗೆ ತನ್ನನ್ನು ಪರಿಚಯಿಸಿದಾಗ ಜರಾಸಂಧನು ಗಹ-ಗಹಿಸಿ ನಗತೊಡಗಿದನು ಮತ್ತು ಕೆರಳಿ ನುಡಿದನು ಎಲೈ ಮೂರ್ಖರೇ! ನಿಮಗೆ ಯುದ್ಧದ ಇಚ್ಛೆಯಿದ್ದರೆ ತಗೊಳ್ಳಿ ಕೊಟ್ಟಿದ್ದೇನೆ, ನಿಮ್ಮ ಪ್ರಾರ್ಥನೆಯನ್ನು ಸ್ವೀಕರಿಸುತ್ತೇನೆ. ॥ ೩೦ ॥

ನ ತ್ವಯಾ ಭೀರುಣಾ ಯೋತ್ಸ್ಯೇ ಯುಧಿ ವಿಕ್ಲವಚೇತಸಾ ।
ಮಥುರಾಂ ಸ್ವಪುರೀಂ ತ್ಯಕ್ತ್ವಾ ಸಮುದ್ರಂ ಶರಣಂ ಗತಃ
॥ ೩೧ ॥

ಆದರೆ ಕೃಷ್ಣ! ಯುದ್ಧವೆಂದರೆ ಭಯಗೊಳ್ಳುವ, ಹೇಡಿಯಾದ ನೀನು, ನಾನು ಯುದ್ಧಕ್ಕೆ ಬಂದಾಗ ಮಥುರೆಯನ್ನೇ ಬಿಟ್ಟು ಓಡಿಹೋಗಿ ಸಮುದ್ರದ ಮಧ್ಯದಲ್ಲಿ ನೆಲೆಸಿರುವೆ. ನಿನ್ನೊಡನೆ ನಾನು ಯುದ್ಧಮಾಡುವುದಿಲ್ಲ. ॥ ೩೧ ॥

ಅಯಂ ತು ವಯಸಾತುಲ್ಯೋ ನಾತಿಸತ್ತ್ವೋ ನ ಮೇ ಸಮಃ ।
ಅರ್ಜುನೋ ನ ಭವೇದ್ಯೋದ್ಧಾ ಭೀಮಸ್ತುಲ್ಯಬಲೋ ಮಮ
॥ ೩೨ ॥

ಈ ಅರ್ಜುನನು ಒಬ್ಬ ಯೋಧನೇ ? ಒಂದೋ ವಯಸ್ಸಿನಲ್ಲಿ ನನ್ನಿಂದ ಬಹಳ ಚಿಕ್ಕವನು, ಇನ್ನೊಂದು ವಿಶೇಷ ಬಲವಂತನೂ ಅಲ್ಲ. ಆದ್ದರಿಂದ ಇವನು ನನಗೆ ಸರಿಸಮಾನನಾಗಲಾರನು. ಇವನೊಡನೆ ಯುದ್ಧಮಾಡುವುದಿಲ್ಲ. ಆದರೆ ಈ ಭೀಮಸೇನನು ನನ್ನಂತೆಯೇ ಬಲಿಷ್ಠನಾಗಿದ್ದು ನನಗೆ ಸರಿಸಮಾನನಾಗಿದ್ದಾನೆ. ॥ ೩೨ ॥

ಇತ್ಯುಕ್ತ್ವಾ ಭೀಮಸೇನಾಯ ಪ್ರಾದಾಯ ಮಹತೀಂ ಗದಾಮ್ ।
ದ್ವಿತೀಯಾಂ ಸ್ವಯಮಾದಾಯ ನಿರ್ಯಗಾಮ ಪುರಾದ್ಬಹಿಃ
॥ ೩೩ ॥

ಜರಾಸಂಧನು ಹೀಗೆ ಹೇಳಿ ಭೀಮಸೇನನಿಗೆ ದೊಡ್ಡದಾದ ಗದೆಯೊಂದನ್ನು ಕೊಟ್ಟನು. ತಾನು ಇನ್ನೊಂದು ಗದೆಯನ್ನು ಎತ್ತಿಕೊಂಡು ದ್ವಂದ್ವಯುದ್ಧಕ್ಕಾಗಿ ನಗರದಿಂದ ಹೊರಗೆ ಬಂದನು. ॥ ೩೩ ॥

ತತಃ ಸಮೇ ಖಿಲೇ ವೀರೌ ಸಂಯುಕ್ತಾವಿತರೇತರೌ ।
ಜಘ್ನತುರ್ವಜ್ರಕಲ್ಪಾಭ್ಯಾಂ ಗದಾಭ್ಯಾಂ ರಣದುರ್ಮದೌ
॥ ೩೪ ॥

ಬಳಿಕ ರಣೋನ್ಮತ್ತರಾದ ಭೀಮ-ಜರಾಸಂಧರು ರಣರಂಗಕ್ಕೆ ಬಂದು ವಜ್ರಕ್ಕೆ ಸಮಾನವಾಗಿದ್ದ ಗದೆಗಳಿಂದ ಪರಸ್ಪರ ಯುದ್ಧಮಾಡಲು ತೊಡಗಿದರು. ॥ ೩೪ ॥

ಮಂಡಲಾನಿ ವಿಚಿತ್ರಾಣಿ ಸವ್ಯಂ ದಕ್ಷಿಣಮೇವ ಚ ।
ಚರತೋಃ ಶುಶುಭೇ ಯುದ್ಧಂ ನಟಯೋರಿವ ರಂಗಿಣೋಃ
॥ ೩೫ ॥

ರಂಗಮಂಟಪದಲ್ಲಿ ಇಬ್ಬರು ನಟರು ಯುದ್ಧದ ಅಭಿನಯವನ್ನು ತೋರಿಸುವಂತೆ ಅವರಿಬ್ಬರೂ ಎಡಕ್ಕೂ, ಬಲಕ್ಕೂ ವಿಚಿತ್ರ ರೀತಿಯಲ್ಲಿ ಮಂಡಲಾಕಾರವಾಗಿ ಸುತ್ತುತ್ತಾ ಗದಾಯುದ್ಧದ ವರಸೆಗಳನ್ನು ತೋರಿಸುತ್ತಾ ರಾರಾಜಿಸಿದರು. ॥ ೩೫ ॥

ತತಶ್ಚಟಚಟಾಶಬ್ದೋ ವಜ್ರನಿಷ್ಪೇಷಸನ್ನಿಭಃ ।
ಗದಯೋಃ ಕ್ಷಿಪ್ತಯೋ ರಾಜನ್ ದಂತಯೋರಿವ ದಂತಿನೋಃ
॥ ೩೬ ॥

ಪರೀಕ್ಷಿತನೇ! ಪರಸ್ಪರವಾಗಿ ಪ್ರಹರಿಸಿದ ಗದಾಘಾತದಿಂದ ಉಂಟಾಗುತ್ತಿದ್ದ ಶಬ್ದವು ಸಿಡಿಲು ಬಡಿದಂತೆಯೂ, ಎರಡು ಆನೆಗಳು ಪರಸ್ಪರವಾಗಿ ದಂತಗಳಿಂದ ತಿವಿಯುತ್ತಾ ಕಾದಾಡುವಾಗ ಉಂಟಾಗುವ ಚಟ-ಚಟಾ ಶಬ್ದದಂತೆಯೂ ಕೇಳಿಬರುತ್ತಿತ್ತು. ॥ ೩೬ ॥

ತೇ ವೈ ಗದೇ ಭುಜಜವೇನ ನಿಪಾತ್ಯ ಮಾನೇ
ಅನ್ಯೋನ್ಯತೋಽಂಸಕಟಿಪಾದಕರೋರುಜತ್ರೂನ್ ।
ಚೂರ್ಣೀಬಭೂವತುರುಪೇತ್ಯ ಯಥಾರ್ಕಶಾಖೇ
ಸಂಯುಧ್ಯತೋರ್ದ್ವಿರದಯೋರಿವ ದೀಪ್ತಮನ್ಯ್ವೋಃ
॥ ೩೭ ॥

ಭೀಮ ಜರಾಸಂಧರು ಭುಜಗಳಿಂದ ಗದೆಗಳನ್ನು ವೇಗವಾಗಿ ಅಪ್ಪಳಿಸಿದಾಗ ಆ ಗದೆಗಳು-ಪರಸ್ಪರವಾಗಿ ಅವರ ಹೆಗಲು, ಸೊಂಟ, ಕೈ-ಕಾಲುಗಳು, ತೊಡೆ, ಕಂಕುಳಗಳಲ್ಲಿ ಬಿದ್ದು ಕೋಪದಿಂದ ಹೋರಾಡುವ ಆನೆಗೆ ಹೊಡೆದ ಎಕ್ಕದ ಕೊಂಬೆಯಂತೆ ನುಚ್ಚು ನೂರಾದವು. ॥ ೩೭ ॥

ಇತ್ಥಂ ತಯೋಃ ಪ್ರಹತಯೋರ್ಗದಯೋರ್ನೃವೀರೌ
ಕ್ರುದ್ಧೌ ಸ್ವಮುಷ್ಟಿಭಿರಯಃಸ್ಪರ್ಶೈರಪಿಷ್ಟಾಮ್ ।
ಶಬ್ದಸ್ತಯೋಃ ಪ್ರಹರತೋರರಿಭಯೋರಿವಾಸೀ-
ನ್ನಿರ್ಘಾತವಜ್ರಪರುಷಸ್ತಲತಾಡನೋತ್ಥಃ
॥ ೩೮ ॥

ಪರೀಕ್ಷಿತನೇ! ಜರಾಸಂಧ ಭೀಮಸೇನರಿಬ್ಬರ ದ್ವಂದ್ವಯುದ್ಧದಲ್ಲಿ ಕೌಶಲ್ಯ, ಬಲ ಮತ್ತು ಉತ್ಸಾಹಗಳು ಸಮಾನವಾಗಿದ್ದವು. ಅಷ್ಟು ಕಾಲ ಯುದ್ಧ ಮಾಡಿದರೂ ಅವರ ಬಲವು ಸ್ವಲ್ಪವಾದರೂ ಕುಂದಲಿಲ್ಲ. ಹೀಗೆ ಅವ್ಯಾಹತವಾಗಿ ಪ್ರಹರಿಸುತ್ತಿದ್ದರೂ ಯಾರಿಗೂ ಸೋಲು-ಗೆಲುವು ಉಂಟಾಗಲಿಲ್ಲ. ॥ ೩೮ ॥

ತಯೋರೇವಂ ಪ್ರಹರತೋಃ ಸಮಶಿಕ್ಷಾಬಲೌಜಸೋಃ ।
ನಿರ್ವಿಶೇಷಮಭೂದ್ಯುದ್ಧಮಕ್ಷೀಣಜವಯೋರ್ನೃಪ
॥ ೩೯ ॥

ಏವಂ ತಯೋರ್ಮಹಾರಾಜ ಯುಧ್ಯತೋಃ ಸಪ್ತವಿಂಶತಿಃ।
ದಿನಾನಿ ನಿರಗಂಸ್ತತ್ರ ಸುಹೃದ್ವನ್ನಿಶಿ ತಿಷ್ಠತೋಃ
॥ ೪೦ ॥

ಏಕದಾ ಮಾತುಲೇಯಂ ವೈ ಪ್ರಾಹ ರಾಜನ್ ವೃಕೋದರಃ।
ನ ಶಕ್ತೋಽಹಂ ಜರಾಸಂಧಂ ನಿರ್ಜೇತುಂ ಯುಧಿ ಮಾಧವ
॥ ೪೧ ॥

ಶತ್ರೋರ್ಜನ್ಮಮೃತೀ ವಿದ್ವಾನ್ ಜೀವಿತಂ ಚ ಜರಾಕೃತಮ್।
ಪಾರ್ಥಮಾಪ್ಯಾಯಯನ್ ಸ್ವೇನ ತೇಜಸಾಚಿಂತಯದ್ಧರಿಃ
॥ ೪೨ ॥

ಸಂಚಿಂತ್ಯಾರಿವಧೋಪಾಯಂ ಭೀಮಸ್ಯಾಮೋಘದರ್ಶನಃ।
ದರ್ಶಯಾಮಾಸ ವಿಟಪಂ ಪಾಟಯನ್ನಿವ ಸಂಜ್ಞಯಾ
॥ ೪೩ ॥

ತದ್ವಿಜ್ಞಾಯ ಮಹಾಸತ್ತ್ವೋ ಭೀಮಃ ಪ್ರಹರತಾಂ ವರಃ।
ಗೃಹೀತ್ವಾಪಾದಯೋಃ ಶತ್ರುಂ ಪಾತಯಾಮಾಸ ಭೂತಲೇ
॥ ೪೪ ॥

ಏಕಂ ಪಾದಂ ಪದಾಽಽಕ್ರಮ್ಯ ದೋರ್ಭ್ಯಾಮನ್ಯಂ ಪ್ರಗೃಹ್ಯ ಸಃ।
ಗುದತಃ ಪಾಟಯಾಮಾಸ ಶಾಖಾಮಿವ ಮಹಾಗಜಃ
॥ ೪೫ ॥

ಏಕಪಾದೋರುವೃಷಣಕಟಿಪೃಷ್ಠಸ್ತನಾಂಸಕೇ ।
ಏಕಬಾಹ್ವಕ್ಷಿಭ್ರೂಕರ್ಣೇ ಶಕಲೇ ದದೃಶುಃ ಪ್ರಜಾಃ
॥ ೪೬ ॥

ಹಾಹಾಕಾರೋ ಮಹಾನಾಸೀನ್ನಿಹತೇ ಮಗಧೇಶ್ವರೇ।
ಪೂಜಯಾಮಾಸತುರ್ಭೀಮಂ ಪರಿರಭ್ಯ ಜಯಾಚ್ಯುತೌ
॥ ೪೭ ॥

ಸಹದೇವಂ ತತ್ತನಯಂ ಭಗವಾನ್ ಭೂತಭಾವನಃ।
ಅಭ್ಯಷಿಂಚದಮೇಯಾತ್ಮಾ ಮಗಧಾನಾಂ ಪತಿಂ ಪ್ರಭುಃ।
ಮೋಚಯಾಮಾಸ ರಾಜನ್ಯಾನ್ಸಂರುದ್ಧಾ ಮಾಗಧೇನ ಯೇ
॥ ೪೮ ॥

ಆ ವೀರರಿಬ್ಬರೂ ರಾತ್ರಿಯಲ್ಲಿ ಸುಹೃದರಂತೆ ಇರುತ್ತಿದ್ದರು. ಬೆಳಗಾಗುತ್ತಲೇ ಯುದ್ಧದಲ್ಲಿ ತೊಡಗುತ್ತಿದ್ದರು. ಮಹಾರಾಜನೇ! ಈ ಪ್ರಕಾರವಾಗಿ ಅವರ ದ್ವಂದ್ವ ಯುದ್ಧವು ಇಪ್ಪತ್ತೇಳು ದಿನಗಳವರೆಗೂ ನಡೆಯಿತು. ॥ ೪೦ ॥ ಪ್ರಿಯ ಪರೀಕ್ಷಿತನೇ! ಇಪ್ಪತ್ತೆಂಟನೆಯ ದಿನ ಭೀಮಸೇನನು ಸೋದರಮಾವನ ಮಗನಾದ ಶ್ರೀಕೃಷ್ಣನಲ್ಲಿ ಹೇಳಿದನು – ಮಾಧವ! ಯುದ್ಧದಲ್ಲಿ ಜರಾಸಂಧನನ್ನು ನಾನು ಜಯಿಸಲಾರೆನು. ॥ ೪೧ ॥ ಭಗವಾನ್ ಶ್ರೀಕೃಷ್ಣನು ಜರಾಸಂಧನ ಜನ್ಮ ಮತ್ತು ಮೃತ್ಯುವಿನ ರಹಸ್ಯವನ್ನು ತಿಳಿದಿದ್ದನು. ಜರಾ ಎಂಬ ರಾಕ್ಷಸಿಯು ಎರಡು ಹೋಳುಗಳಾಗಿ ಬಿದ್ದಿದ್ದ ಶರೀರದ ಭಾಗಗಳನ್ನು ಜೋಡಿಸಿ ಜರಾಸಂಧನಿಗೆ ಜೀವದಾನ ಮಾಡಿದ್ದಳೆಂಬುದೂ ಅವನಿಗೆ ತಿಳಿದಿತ್ತು. ಅದಕ್ಕಾಗಿ ಭೀಮಸೇನನ ಶರೀರದಲ್ಲಿ ತನ್ನ ಶಕ್ತಿಯನ್ನು ತುಂಬಿ ಜರಾಸಂಧನ ವಧೆಯ ಉಪಾಯವನ್ನು ಯೋಚಿಸಿದನು. ॥ ೪೨ ॥ ಪರೀಕ್ಷಿತನೇ! ಬಳಿಕ ಅಮೋಘ ಜ್ಞಾನಶಕ್ತಿಯನ್ನು ಹೊಂದಿದ್ದ ಶ್ರೀಕೃಷ್ಣನು ಜರಾಸಂಧನ ಮೃತ್ಯುವಿನ ಉಪಾಯವನ್ನು ಅರಿತು ಒಂದು ಮರದ ರೆಂಬೆಯನ್ನು ಉದ್ದವಾಗಿ ಸೀಳಿ ಹಾಕಿ ಈ ಸಂಜ್ಞೆಯ ಮೂಲಕ ಭೀಮಸೇನನಿಗೆ ತೋರಿಸಿದನು. ॥ ೪೩ ॥ ವೀರಶಿರೋಮಣಿಯೂ, ಶಕ್ತಿಶಾಲಿಯೂ ಆದ ಭೀಮಸೇನನು ಭಗವಾನ್ ಶ್ರೀಕೃಷ್ಣನ ಅಭಿಪ್ರಾಯವನ್ನು ಗ್ರಹಿಸಿ, ಜರಾಸಂಧನ ಕಾಲನ್ನು ಹಿಡಿದು ನೆಲಕ್ಕೆ ಕೆಡವಿದನು. ॥ ೪೪ ॥ ಬಳಿಕ ಜರಾಸಂಧನ ಒಂದು ಕಾಲನ್ನು ತನ್ನ ಕಾಲಿನಿಂದ ಮೆಟ್ಟಿಕೊಂಡು ಮತ್ತೊಂದು ಕಾಲನ್ನು ಎರಡೂ ಕೈಗಳಿಂದ ಹಿಡಿದು, ಸಲಗವು ಮರದ ರೆಂಬೆಯನ್ನು ಸೀಳುವಂತೆ ಗುದದ್ವಾರದ ಕಡೆಯಿಂದ ಅವನನ್ನು ಸೀಳಿಬಿಟ್ಟನು. ॥ ೪೫ ॥ ನೆರೆದಿದ್ದ ಜನರು ಎರಡು ಸೀಳುಗಳಲ್ಲಿಯೂ ಒಂದೊಂದು ಕಾಲು, ತೊಡೆ, ಅಂಡಕೋಶ, ಕಟಿಭಾಗ, ಪೃಷ್ಠ, ಸ್ತನ, ಹೆಗಲು, ತೋಳು, ಕಣ್ಣು ಹುಬ್ಬು ಮತ್ತು ಕಿವಿಗಳಿರುವುದನ್ನು ನೋಡಿದರು. ॥ ೪೬ ॥ ಮಗಧರಾಜನಾದ ಜರಾಸಂಧನು ಸತ್ತುಹೋದಾಗ ಅವನ ಪ್ರಜೆಗಳು ಗಟ್ಟಿಯಾಗಿ ಅಯ್ಯೋ! ಅಯ್ಯೋ! ನಮಗೆ ಇನ್ನಾರುಗತಿ! ಎಂದು ಗೋಳಾಡಿದರು. ಭಗವಾನ್ ಶ್ರೀಕೃಷ್ಣಾರ್ಜುನರು ಭೀಮಸೇನನನ್ನು ಆಲಿಂಗಿಸಿಕೊಂಡು ಪ್ರಶಂಸಿಸಿದರು. ॥ ೪೭ ॥ ಸಕಲ ಪ್ರಾಣಿಗಳನ್ನು ಪರಿಪಾಲಿಸುವ, ಅಪ್ರಮೇಯಾತ್ಮನಾದ ಶ್ರೀಕೃಷ್ಣನು ಜರಾಸಂಧನ ಮಗನಾದ ಸಹದೇವನನ್ನು ಮಗಧರಾಜ್ಯಕ್ಕೆ ರಾಜನನ್ನಾಗಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದನು. ಜರಾಸಂಧನು ಬಂಧಿಸಿಟ್ಟಿದ್ದ ರಾಜರೆಲ್ಲರನ್ನು ಬಂಧಮುಕ್ತಗೊಳಿಸಿದನು. ॥ ೪೮ ॥

ಎಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೭೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಜರಾಸಂಧವಧೋ ನಾಮ ದ್ವಿಸಪ್ತತಿತಮೋಽಧ್ಯಾಯಃ॥ ೭೨ ॥

ಎಪ್ಪತ್ತಮೂರನೆಯ ಅಧ್ಯಾಯ

ಜರಾಸಂಧನ ಸೆರೆಮನೆಯಲ್ಲಿದ್ದ ರಾಜರ ಬೀಳ್ಕೊಡಿಗೆ, ಶ್ರೀಕೃಷ್ಣನು ಭೀಮಾರ್ಜುನರೊಡನೆ ಇಂದ್ರಪ್ರಸ್ಥಕ್ಕೆ ಹಿಂದಿರುಗಿದುದು

ಶ್ರೀಶುಕ ಉವಾಚ

ಅಯುತೇ ದ್ವೇ ಶತಾನ್ಯಷ್ಟೌ ಲೀಲಯಾ ಯುಧಿ ನಿರ್ಜಿತಾಃ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾ ಮಲವಾಸಸಃ
॥ ೧ ॥

ಕ್ಷುತ್ಕ್ಷಾಮಾಃ ಶುಷ್ಕವದನಾಃ ಸಂರೋಧಪರಿಕರ್ಶಿತಾಃ।
ದದೃಶುಸ್ತೇ ಘನಶ್ಯಾಮಂ ಪೀತಕೌಶೇಯವಾಸಸಮ್
॥ ೨ ॥

ಶ್ರೀವತ್ಸಾಂಕಂ ಚತುರ್ಬಾಹುಂ ಪದ್ಮಗರ್ಭಾರುಣೇಕ್ಷಣಮ್ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಮ್
॥ ೩ ॥

ಪದ್ಮಹಸ್ತಂ ಗದಾಶಂಖಿರಥಾಂಗೈರುಪಲಕ್ಷಿತಮ್ ।
ಕಿರೀಟಹಾರಕಟಕಕಟಿಸೂತ್ರಾಂಗದಾಚಿತಮ್
॥ ೪ ॥

ಭ್ರಾಜದ್ವರಮಣಿಗ್ರೀವಂ ನಿವೀತಂ ವನಮಾಲಯಾ।
ಪಿಬಂತ ಇವ ಚಕ್ಷುರ್ಭ್ಯಾಂ ಲಿಹಂತ ಇವ ಜಿಹ್ವಯಾ
॥ ೫ ॥

ಜಿಘ್ರಂತ ಇವ ನಾಸಾಭ್ಯಾಂ ರಂಭಂತ ಇವ ಬಾಹುಭಿಃ ।
ಪ್ರಣೇಮುರ್ಹತಪಾಪ್ಮಾನೋ ಮೂರ್ಧಭಿಃ ಪಾದಯೋರ್ಹರೇಃ
॥ ೬ ॥

ಕೃಷ್ಣಸಂದರ್ಶನಾಹ್ಲಾದಧ್ವಸ್ತಸಂರೋಧನಕ್ಲಮಾಃ ।
ಪ್ರಶಶಂಸುರ್ಹೃಷೀಕೇಶಂ ಗೀರ್ಭಿಃ ಪ್ರಾಂಜಲಯೋ ನೃಪಾಃ
॥ ೭ ॥

ರಾಜಾನ ಊಚುಃ

ನಮಸ್ತೇ ದೇವದೇವೇಶ ಪ್ರಪನ್ನಾರ್ತಿಹರಾವ್ಯಯ।
ಪ್ರಪನ್ನಾನ್ನಃ ಕೃಷ್ಣ ನಿರ್ವಿಣ್ಣಾನ್ ಘೋರಸಂಸೃತೇಃ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಜರಾಸಂಧನು ಅನಾಯಾಸವಾಗಿ ಇಪ್ಪತ್ತು ಸಾವಿರದ ಎಂಟು ನೂರು ರಾಜರನ್ನು ಜಯಿಸಿ ಪರ್ವತಗಳ ಮಧ್ಯದಲ್ಲಿದ್ದ ಸೆರೆಮನೆಯಲ್ಲಿಟ್ಟಿದ್ದನು. ಭಗವಾನ್ ಶ್ರೀಕೃಷ್ಣನು ಅವರನ್ನು ಮುಕ್ತಗೊಳಿಸಿದಾಗ ಸೆರೆಮನೆಯಿಂದ ಹೊರಬಂದರು. ಆಗ ಅವರ ಶರೀರಗಳು ಮತ್ತು ವಸ್ತ್ರಗಳು ಅತ್ಯಂತ ಮಲಿನವಾಗಿದ್ದವು. ॥ ೧ ॥ ಹಸಿವಿನಿಂದ ಕಂಗೆಟ್ಟು ಮುಖಗಳು ಬಾಡಿಹೋಗಿದ್ದವು. ಸೆರೆಮನೆಯ ವಾಸದಿಂದ ಅವರ ಅಂಗಾಂಗಗಳು ಶಿಥಿಲಗೊಂಡಿದ್ದವು. ಅಲ್ಲಿಂದ ಹೊರಬರುತ್ತಲೇ ರಾಜರೆಲ್ಲರೂ ತಮ್ಮ ಮುಂದೆ ನಿಂತಿದ್ದ ಭಗವಾನ್ ಶ್ರೀಕೃಷ್ಣನನ್ನು ನೋಡಿದರು. ಅವನ ಶರೀರವು ಮೇಘಶ್ಯಾಮಲವಾಗಿದ್ದು ರೇಷ್ಮೆಯ ಪೀತಾಂಬರವನ್ನು ಧರಿಸಿದ್ದನು. ॥ ೨ ॥ ಅವನಿಗೆ ನಾಲ್ಕು ಭುಜಗಳಿದ್ದು ಶಂಖ, ಚಕ್ರ, ಗದಾ, ಪದ್ಮಗಳಿಂದ ಸುಶೋಭಿತವಾಗಿದ್ದವು. ವಕ್ಷಸ್ಥಳದಲ್ಲಿ ಶ್ರೀವತ್ಸ ಚಿಹ್ನೆಯು ವಿರಾಜಿಸುತ್ತಿತ್ತು. ಕಮಲದ ಒಳಭಾಗದಂತೆ ಕೋಮಲವಾದ ನಸುಗೆಂಪು ಕಣ್ಣುಗಳು, ಸುಂದರವಾದ ವದನವು ಪ್ರಸನ್ನತೆಯ ಸದನದಂತಿದೆ. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು, ಸುಂದರವಾದ ಕಿರೀಟ, ಮುತ್ತಿನಹಾರಗಳು, ಕಡಗ-ಕಂಕಣ ಮತ್ತು ತೊಳ್ಬಂದಿಗಳು ಆಯಾಯ ಸ್ಥಾನಗಳಲ್ಲಿ ಶೋಭಿಸುತ್ತಿದ್ದವು. ॥ ೩-೪ ॥ ಕೊರಳಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿತ್ತು. ವನಮಾಲೆಯನ್ನು ತೊಟ್ಟುಕೊಂಡಿರುವ ಶ್ರೀಕೃಷ್ಣನನ್ನು ಆ ರಾಜರು ಕಣ್ಣುಗಳನ್ನು ಅರಳಿಸಿಕೊಂಡು, ತೆರೆದಬಾಯಿಂದ ಎವೆಯಿಕ್ಕದೆ ನೋಡುತ್ತಿರುವುದನ್ನು ನೋಡಿದರೆ ಅವರು ತಮ್ಮ ಕಣ್ಣುಗಳಿಂದಲೇ ಅವನ ರೂಪಮಾಧುರ್ಯವನ್ನು ಸವಿಯುತ್ತಿರುವಂತೆಯೂ, ನಾಲಿಗೆಯಿಂದ ನೆಕ್ಕುತ್ತಿರುವಂತೆಯೂ, ಮೂಗಿನಿಂದ ಆಘ್ರಾಣಿಸುವಂತೆಯೂ, ಬಾಹುಗಳಿಂದ ಆಲಿಂಗಿಸಿಕೊಳ್ಳುತ್ತಿರುವಂತೆಯೂ ಅನಿಸುತ್ತಿತ್ತು. ಆತನ ದರ್ಶನ ಮಾತ್ರದಿಂದಲೇ ಸಮಸ್ತ ಪಾಪಗಳನ್ನು ಕಳೆದುಕೊಂಡ ಆ ರಾಜರು ಭಗವಂತನ ಚರಣಗಳಲ್ಲಿ ಶಿರಸ್ಸನ್ನಿಟ್ಟು ನಮಸ್ಕರಿಸಿದರು. ॥ ೫-೬ ॥ ಭಗವಾನ್ ಶ್ರೀಕೃಷ್ಣನ ದರ್ಶನದಿಂದಾದ ಆನಂದದಲ್ಲಿ ಸೆರೆಮನೆಯ ಕಷ್ಟಗಳೆಲ್ಲ ಮರೆತು ಹೋದುವು. ಅವರೆಲ್ಲರೂ ಕೈಜೋಡಿಸಿಕೊಂಡು ಏನಮ್ರ ವಾಣಿಯಿಂದ ಶ್ರೀಕೃಷ್ಣನನ್ನು ಸ್ತುತಿಸತೊಡಗಿದರು. ॥ ೭ ॥

ರಾಜರುಗಳೆಂದರು – ಶರಣಾಗತರ ಸಮಸ್ತ ದುಃಖಿಗಳನ್ನೂ, ಭಯವನ್ನು ಹೋಗಲಾಡಿಸುವವನೇ ! ದೇವದೇವೇಶ್ವರನೇ ! ಸಚ್ಚಿದಾನಂದ ಸ್ವರೂಪನೇ ! ಅವಿನಾಶಿಯೇ ! ಶ್ರೀಕೃಷ್ಣನೇ ! ನಾವೆಲ್ಲರೂ ನಿನಗೆ ನಮಸ್ಕರಿಸುತ್ತೇವೆ. ಜರಾಸಂಧನ ಕಾರಾಗೃಹದಿಂದೆನ್ನೋ ನಮ್ಮನ್ನು ಬಿಡುಗಡೆ ಮಾಡಿದೆ. ಈಗ ಈ ಜನ್ಮ-ಮರಣ ರೂಪವಾದ ಘೋರವಾದ ಸಂಸಾರ ಚಕ್ರದಿಂದಲೂ ಬಿಡುಗಡೆಮಾಡು. ಸಂಸಾರದ ಕಟುವಾದ ದುಃಖವನ್ನು ಅನುಭವಿಸಿ ಬೇಸತ್ತಿದ್ದೇವೆ. ಶರಣಾಗತರಾಗಿರುವ ನಮ್ಮನ್ನು ಸಂರಕ್ಷಿಸು. ॥ ೮ ॥

ನೈನಂ ನಾಥಾನ್ವಸೂಯಾಮೋ ಮಾಗಧಂ ಮಧುಸೂದನ ।
ಅನುಗ್ರಹೋ ಯದ್ಭವತೋ ರಾಜ್ಞಾಂ ರಾಜ್ಯಚ್ಯುತಿರ್ವಿಭೋ
॥ ೯ ॥

ರಾಜ್ಯೈಶ್ವರ್ಯಮದೋನ್ನದ್ಧೋ ನ ಶ್ರೇಯೋ ವಿಂದತೇ ನೃಪಃ ।
ತ್ವನ್ಮಾಯಾಮೋಹಿತೋಽನಿತ್ಯಾ ಮನ್ಯತೇ ಸಂಪದೋಽಚಲಾಃ
॥ ೧೦ ॥

ಮೃಗತೃಷ್ಣಾಂ ಯಥಾ ಬಾಲಾ ಮನ್ಯಂತ ಉದಕಾಶಯಮ್ ।
ಏವಂ ವೈಕಾರಿಕೀಂ ಮಾಯಾಮಯುಕ್ತಾ ವಸ್ತು ಚಕ್ಷತೇ
॥ ೧೧ ॥

ವಯಂ ಪುರಾ ಶ್ರೀಮದನಷ್ಟದೃಷ್ಟಯೋ
ಜಿಗೀಷಯಾಸ್ಯಾ ಇತರೇತರಸ್ಪೃಧಃ ।
ಘ್ನಂತಃ ಪ್ರಜಾಃ ಸ್ವಾಅತಿನಿರ್ಘೃಣಾಃ ಪ್ರಭೋ
ಮೃತ್ಯುಂ ಪುರಸ್ತ್ವಾವಿಗಣಯ್ಯ ದುರ್ಮದಾಃ ॥ ೧೨ ॥

ತ ಏವ ಕೃಷ್ಣಾದ್ಯ ಗಭೀರರಂಹಸಾ
ದುರಂತವೀರ್ಯೇಣ ವಿಚಾಲಿತಾಃ ಶ್ರಿಯಃ ।
ಕಾಲೇನ ತನ್ವಾ ಭವತೋಽನುಕಂಪಯಾ
ವಿನಷ್ಟದರ್ಪಾಶ್ಚರಣೌ ಸ್ಮರಾಮ ತೇ ॥ ೧೩ ॥

ಅಥೋ ನ ರಾಜ್ಯಂ ಮೃಗತೃಷ್ಣಿರೂಪಿತಂ
ದೇಹೇನ ಶಶ್ವತ್ ಪತತಾ ರುಜಾಂ ಭುವಾ ।
ಉಪಾಸಿತವ್ಯಂ ಸ್ಪೃಹಯಾಮಹೇ ವಿಭೋ
ಕ್ರಿಯಾಫಲಂ ಪ್ರೇತ್ಯ ಚ ಕರ್ಣರೋಚನಮ್ ॥ ೧೪ ॥

ತಂ ನಃ ಸಮಾದಿಶೋಪಾಯಂ ಯೇನ ತೇ ಚರಣಾಬ್ಜಯೋಃ ।
ಸ್ಮೃತಿರ್ಯಥಾ ನ ವಿರಮೇದಪಿ ಸಂಸರತಾಮಿಹ
॥ ೧೫ ॥

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ
॥ ೧೬ ॥

ಶ್ರೀಶುಕ ಉವಾಚ

ಸಂಸ್ತೂಯಮಾನೋ ಭಗವಾನ್ ರಾಜಭಿರ್ಮುಕ್ತಬಂಧನೈಃ ।
ತಾನಾಹ ಕರುಣಸ್ತಾತ ಶರಣ್ಯಃ ಶ್ಲಕ್ಷ್ಣಯಾ ಗಿರಾ
॥ ೧೭ ॥

ನಮ್ಮ ಸ್ವಾಮಿಯಾದ ಮಧುಸೂದನನೇ! ರಾಜ್ಯಚ್ಯುತರಾದ ಬಗ್ಗೆ ಜರಾಸಂಧನಲ್ಲಿ ನಾವು ದೋಷವೆಣಿಸುವುದಿಲ್ಲ ಭಗವಂತಾ! ಇದಾದರೋ ನಿನ್ನ ಅನುಗ್ರಹವನ್ನು ಪಡೆಯಲು ಕಾರಣವಾಯಿತು. ॥ ೯ ॥ ರಾಜ್ಯ ಐಶ್ವರ್ಯದ ಮದದಿಂದ ಉನ್ಮತ್ತರಾದ ರಾಜರಿಗೆ ನಿಜಸುಖದ – ಶ್ರೇಯಸ್ಸಿನ ಪ್ರಾಪ್ತಿಯು ಎಂದಿಗೂ ಆಗುವುದಿಲ್ಲ ಅವರು ನಿನ್ನ ಮಾಯೆಯಿಂದ ಮೋಹಿತರಾಗಿ ಅನಿತ್ಯವಾದ ಸಂಪತ್ತುಗಳನ್ನು ಅಚಲವೆಂದು ತಿಳಿದಿರುತ್ತಾರೆ. ॥ ೧೦ ॥ ಮೂರ್ಖರಾದವರು ಬಿಸಿಲ್ಗುದುರೆಯನ್ನು ಜಲಾಶಯವೆಂದು ಭಾವಿಸುವಂತೆಯೇ ಇಂದ್ರಿಯ ಲೋಲುಪರಾದ ಅಜ್ಞಾನಿಗಳು ಈ ಪರಿವರ್ತನ ಶೀಲವಾದ ಮಾಯೆಯನ್ನು ಸತ್ಯವಾದದ್ದೆಂದು ತಿಳಿಯುತ್ತಾರೆ. ॥ ೧೧ ॥ ಭಗವಂತಾ! ಮೊದಲು ನಾವುಗಳು ಧನ-ಸಂಪತ್ತಿನ ಅಮಲಿನಿಂದ ಕುರುಡರಾಗಿದ್ದೆವು. ಈ ಪೃಥಿವಿಯನ್ನು ಗೆಲ್ಲಲು ಪರಸ್ಪರ ಸ್ಪರ್ಧಿಸುತ್ತಿದ್ದೆವು ಹಾಗೂ ನಮ್ಮ ಪ್ರಜೆಗಳನ್ನೇ ಪೀಡಿಸುತ್ತಿದ್ದೆವು. ನಿಜವಾಗಿಯೂ ನಮ್ಮ ಜೀವನವು ಅತ್ಯಂತ ಕ್ರೂರತೆಯಿಂದ ಕೂಡಿತ್ತು. ನೀನೇ ಮೃತ್ಯುರೂಪದಿಂದ ನಮ್ಮ ಮುಂದೆ ನಿಂತಿರುವೆ ಎಂಬುದನ್ನು ಲೆಕ್ಕಿಸದಷ್ಟು ನಾವು ಗರ್ವಿಷ್ಠರಾಗಿದ್ದೆವು. ॥ ೧೨ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಕಾಲದ ಗತಿಯು ಅತ್ಯಂತ ಗಹನವಾಗಿದೆ. ಯಾರಿಂದಲೂ ನಿವಾರಿಸಲಾರದಷ್ಟು ಬಲವತ್ತರವಾಗಿದೆ. ಎಷ್ಟಾದರೂ ಅದು ನಿನ್ನ ಸ್ವರೂಪವೇ ಅಲ್ಲವೇ! ಈಗ ಅದು ನಮ್ಮನ್ನು ಶ್ರೀಹೀನರನ್ನಾಗಿಯೂ, ರಾಜ್ಯಹೀನರನ್ನಾಗಿಯೂ ಮಾಡಿಬಿಟ್ಟಿದೆ. ನಿನ್ನ ಅಹೈತುಕವಾದ ಅನುಕಂಪದಿಂದಾಗಿ ನಮ್ಮ ಮದವು ನುಚ್ಚು-ನೂರಾಯಿತು. ಈಗ ನಾವು ನಿನ್ನ ಚರಣಗಳನ್ನು ಸ್ಮರಿಸುತ್ತೇವೆ. ॥ ೧೩ ॥ ಪ್ರಭೋ! ಈ ಶರೀರವು ದಿನ-ದಿನಕ್ಕೆ ಕ್ಷೀಣಿಸುತ್ತಾ ಹೋಗುತ್ತದೆ. ರೋಗಗಳ ಜನ್ಮಭೂಮಿಯೇ ಆಗಿದೆ. ಆದುದರಿಂದ ಮರೀಚಿಕೆಯಂತೆ ಸುಖಮಯವಾಗಿ ಕಾಣುವ ಈ ರಾಜ್ಯಭೋಗವೂ ಮರಣಾಂತರದಲ್ಲಿ ಕರ್ಮಗಳ ಫಲವಾಗಿ ನಮಗೆ ಸಿಗುವ ಸ್ವರ್ಗಾದಿಗಳೂ ಬೇಡ. ಏಕೆಂದರೆ, ಅವು ನಿಸ್ಸಾರವಾದವುಗಳು ಎಂದೂ, ಕೇವಲ ಕೇಳಲು ಮಾತ್ರ ಆಕರ್ಷಕವಾಗಿವೆ ಎಂಬುದೂ ನಾವು ತಿಳಿದಿದ್ದೇವೆ. ॥ ೧೪ ॥ ನಿನ್ನ ಚರಣಾರವಿಂದಗಳ ಸ್ಮೃತಿಯು ಎಂದೂ ಮರೆಯದೆ ಅದು ಸದಾ ಸ್ಮೃತಿ ಪಥದಲ್ಲಿ ನಿರಂತರವಾಗುವಂತಹ ಯಾವುದಾದರೂ ಉಪಾಯವನ್ನು ಹೇಳು. ನಾವು ಪ್ರಪಂಚದ ಯಾವುದೇ ಯೋನಿಯಲ್ಲಿಯೂ ಪುನಃ ಹುಟ್ಟಿದರೂ ನಿನ್ನ ಸ್ಮೃತಿಯು ಸದಾಕಾಲ ಇರುವಂತೆ ಮಾಡು. ॥ ೧೫ ॥ ನಮಿಸಿದವರ ಕ್ಲೇಶಗಳನ್ನು ಹೋಗಲಾಡಿಸುವ ಶ್ರೀಕೃಷ್ಣನಿಗೆ, ವಾಸುದೇವನಿಗೆ, ಶ್ರೀಹರಿಯೇ! ಪರಮಾತ್ಮನೇ! ಗೋವಿಂದನೇ! ನಿನಗೆ ಪುನಃ ಪುನಃ ನಮಸ್ಕರಿಸುತ್ತೇವೆ. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕಾರಾಗೃಹದಿಂದ ಮುಕ್ತರಾದ ರಾಜರು ಕರುಣಾ ಸಮುದ್ರನಾದ ಭಗವಾನ್ ಶ್ರೀಕೃಷ್ಣನನ್ನು ಹೀಗೆ ಸ್ತೋತ್ರಮಾಡಲು, ಶರಣಾಗತ ರಕ್ಷಕನಾದ ಪ್ರಭುವು ಮಧುರವಾದ ಮಾತಿನಿಂದ ಅವರಲ್ಲಿ ಇಂತೆಂದನು. ॥ ೧೭ ॥

ಶ್ರೀಭಗವಾನುವಾಚ

ಅದ್ಯಪ್ರಭೃತಿ ವೋ ಭೂಪಾ ಮಯ್ಯಾತ್ಮನ್ಯಖಿಲೇಶ್ವರೇ ।
ಸುದೃಢಾ ಜಾಯತೇ ಭಕ್ತಿರ್ಬಾಢಮಾಶಂಸಿತಂ ತಥಾ
॥ ೧೮ ॥

ದಿಷ್ಟ್ಯಾ ವ್ಯವಸಿತಂ ಭೂಪಾ ಭವಂತ ಋತಭಾಷಿಣಃ ।
ಶ್ರಿಯೈಶ್ವರ್ಯಮದೋನ್ನಾಹಂ ಪಶ್ಯ ಉನ್ಮಾದಕಂ ನೃಣಾಮ್
॥ ೧೯ ॥

ಹೈಹಯೋ ನಹುಷೋ ವೇನೋ ರಾವಣೋ ನರಕೋಽಪರೇ ।
ಶ್ರೀಮದಾದ್ಭ್ರಂಶಿತಾಃ ಸ್ಥಾನಾದ್ದೇವದೈತ್ಯನರೇಶ್ವರಾಃ
॥ ೨೦ ॥

ಭವಂತ ಏತದ್ವಿಜ್ಞಾಯ ದೇಹಾದ್ಯುತ್ಪಾದ್ಯಮಂತವತ್ ।
ಮಾಂ ಯಜಂತೋಽಧ್ವರೈರ್ಯುಕ್ತಾಃ ಪ್ರಜಾ ಧರ್ಮೇಣ ರಕ್ಷಥ
॥ ೨೧ ॥

ಸಂತನ್ವಂತಃ ಪ್ರಜಾತಂತೂನ್ ಸುಖಂ ದುಃಖಂ ಭವಾಭವೌ ।
ಪ್ರಾಪ್ತಂ ಪ್ರಾಪ್ತಂ ಚ ಸೇವಂತೋ ಮಚ್ಚಿತ್ತಾ ವಿಚರಿಷ್ಯಥ
॥ ೨೨ ॥

ಉದಾಸೀನಾಶ್ಚ ದೇಹಾದಾವಾತ್ಮಾರಾಮಾ ಧೃತವ್ರತಾಃ ।
ಮಯ್ಯಾವೇಶ್ಯ ಮನಃ ಸಮ್ಯಙ್ಮಾಮಂತೇ ಬ್ರಹ್ಮ ಯಾಸ್ಯಥ
॥ ೨೩ ॥

ಶ್ರೀಶುಕ ಉವಾಚ

ಇತ್ಯಾದಿಶ್ಯ ನೃಪಾನ್ ಕೃಷ್ಣೋ ಭಗವಾನ್ ಭುವನೇಶ್ವರಃ ।
ತೇಷಾಂ ನ್ಯಯುಂಕ್ತ ಪುರುಷಾನ್ ಸ್ತ್ರಿಯೋ ಮಜ್ಜನಕರ್ಮಣಿ
॥ ೨೪ ॥

ಸಪರ್ಯಾಂ ಕಾರಯಾಮಾಸ ಸಹದೇವೇನ ಭಾರತ ।
ನರದೇವೋಚಿತೈರ್ವಸ್ತ್ರೈರ್ಭೂಷಣೈಃ ಸ್ರಗ್ವಿಲೇಪನೈಃ
॥ ೨೫ ॥

ಭೋಜಯಿತ್ವಾವರಾನ್ನೇನ ಸುಸ್ನಾತಾನ್ ಸಮಲಂಕೃತಾನ್ ।
ಭೋಗೈಶ್ಚ ವಿವಿಧೈರ್ಯುಕ್ತಾಂಸ್ತಾಂಬೂಲಾದ್ಯೈರ್ನ್ಯಪೋಚಿತೈಃ
॥ ೨೬ ॥

ತೇ ಪೂಜಿತಾ ಮುಕುಂದೇನ ರಾಜಾನೋ ಮೃಷ್ಟಕುಂಡಲಾಃ ।
ವಿರೇಜುರ್ಮೋಚಿತಾಃ ಕ್ಲೇಶಾತ್ಪಾವೃಡಂತೇ ಯಥಾ ಗ್ರಹಾಃ
॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ನರಪತಿಗಳೇ ! ನಿಮ್ಮ ಅಪೇಕ್ಷೆಯಂತೆ ಇಂದಿನಿಂದ ನಿಮಗೆ ಆತ್ಮಸ್ವರೂಪನಾದ ಮತ್ತು ಅಖಿಲೇಶ್ವರನಾದ ನನ್ನಲ್ಲಿ ಭಕ್ತಿಯು ಉಂಟಾಗುತ್ತದೆ. ॥ ೧೮ ॥ ರಾಜರುಗಳೇ ! ನನ್ನನ್ನು ಯಾವಾಗಲೂ ಸ್ಮರಿಸುತ್ತಿರಬೇಕೆಂದು ನೀವು ನಿಶ್ಚಯವನ್ನು ಮಾಡಿರುವಿರಿ. ನೀವೆಲ್ಲರೂ ಸತ್ಯಭಾಷಿಗಳೇ ಆಗಿರುವಿರಿ. ಐಶ್ವರ್ಯಮದ ಮತ್ತು ಪ್ರಭುತ್ವಮದದಿಂದ ಉಂಟಾಗುವ ಗರ್ವಾತಿರೇಕವು ಜನರಿಗೆ ಹುಚ್ಚು ಹಿಡಿಸುವು ದೆಂಬುದನ್ನು ನಾನು ನೋಡಿದ್ದೇನೆ. ॥ ೧೯ ॥ ಹೈಹಯ, ನಹುಷ, ವೇನ, ರಾವಣ, ನರಕಾಸುರ ಮೊದಲಾದ ಅನೇಕ ದೇವ ದೈತ್ಯ-ನರಪತಿಗಳು ಶ್ರೀಮದದ ಮತ್ತು ಅಧಿಕಾರ ಮದದಿಂದ ತಮ್ಮ ಸ್ಥಾನದಿಂದ ಚ್ಯುತರಾದರು. ॥ ೨೦ ॥ ಶರೀರ ಮತ್ತು ಆದರ ಸಂಬಂಧಿಗಳು ಹುಟ್ಟುತ್ತಾರೆ ಅದಕ್ಕಾಗಿ ಅವರ ನಾಶವೂ ಅವಶ್ಯ ವಾಗಿ ಆಗುತ್ತದೆ ಇದನ್ನು ನೆನಪಿನಲ್ಲಿಟ್ಟುಕೊಳ್ಳಿ. ಆದ್ದರಿಂದ ಅದರಲ್ಲಿ ಆಸಕ್ತರಾಗಬೇಡಿರಿ. ಮನಸ್ಸನ್ನು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಯಜ್ಞಗಳ ಮೂಲಕ ನನ್ನನ್ನು ಆರಾಧಿಸಿ, ಧರ್ಮದಿಂದ ಪ್ರಜೆಗಳನ್ನು ರಕ್ಷಿಸಿರಿ. ॥ ೨೧ ॥ ನೀವು ಪುತ್ರರನ್ನು ಪಡೆದು ವಂಶಪರಂಪರೆಯನ್ನು ರಕ್ಷಿಸಿರಿ. ಪ್ರಾರಬ್ಧದ ಅನುಸಾರ ವಾಗಿ ಪ್ರಾಪ್ತವಾಗುವ ಸುಖ-ದುಃಖಗಳನ್ನು, ಹುಟ್ಟು-ಸಾವು ಗಳನ್ನು, ಲಾಭ-ನಷ್ಟಗಳನ್ನು ಸಮಭಾವದಿಂದ ಕಾಣುತ್ತಾ ನನ್ನ ಪ್ರಸಾದವೆಂದು ಭಾವಿಸಿ ಅನುಭವಿಸಿರಿ. ಯಾವಾಗಲೂ ನಿಮ್ಮ ಮನಸ್ಸನ್ನು ನನ್ನಲ್ಲಿಯೇ ನೆಲೆಗೊಳಿಸಿ ಜೀವನವನ್ನು ಸಾಗಿಸಿರಿ. ॥ ೨೨ ॥ ದೇಹ ಮತ್ತು ದೇಹ ಸಂಬಂಧಿಗಳಲ್ಲಿ ಯಾವುದೇ ಆಸಕ್ತಿಯನ್ನಿಡದೇ ಉದಾಸೀನರಾಗಿರಿ. ದೃಢವ್ರತ ರಾಗಿ, ನಿಮ್ಮ-ನಿಮ್ಮ ಆತ್ಮಗಳಲ್ಲೇ ರಮಿಸುತ್ತ ಇರಿ. ನಿಮ್ಮ ಮನಸ್ಸನ್ನು ನನ್ನಲ್ಲಿಯೇ ಚೆನ್ನಾಗಿ ನೆಲೆಗೊಳಿಸಿ, ನೀವು ಕಡೆಯಲ್ಲಿ ಬ್ರಹ್ಮ ಸ್ವರೂಪನಾದ ನನ್ನನ್ನೇ ಹೊಂದುವಿರಿ. ॥ ೨೩. ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭುವನೇಶ್ವರನಾದ ಭಗವಾನ್ ಶ್ರೀಕೃಷ್ಣನು ರಾಜರುಗಳಿಗೆ ಹೀಗೆ ಉಪದೇಶಮಾಡಿ ಅವರಿಗೆ ಸ್ನಾನಾದಿಗಳನ್ನು ಮಾಡಿಸಲು ಅನೇಕ ಸ್ತ್ರೀ-ಪುರುಷರನ್ನು ನೇಮಿಸಿದನು. ॥ ೨೪ ॥ ಪರೀಕ್ಷಿದ್ರಾಜನೇ ! ಜರಾಸಂಧನ ಪುತ್ರನಾದ ಸಹದೇವನಿಂದ ಅವರಿಗೆಲ್ಲ ರಾಜೋಚಿತ ವಾದ ವಸ್ತ್ರಾಭೂಷಣಗಳನ್ನು, ಮಾಲೆ - ಚಂದನಾದಿಗಳನ್ನು ಕೊಡಿಸಿ ಬಹಳವಾಗಿ ಸನ್ಮಾನಿಸಿದನು. ॥ ೨೫॥ ರಾಜರೆಲ್ಲರೂ ಸ್ನಾನ ಮಾಡಿ ವಸ್ತ್ರಾಭರಣಗಳಿಂದ ಅಲಂಕೃತರಾದಾಗ ಅವರಿಗೆ ನಾನಾ ವಿಧವಾದ ಮೃಷ್ಟಾನ್ನದ ಭೋಜನವನ್ನು ಮಾಡಿಸಿ, ರಾಜೋಚಿತ ವಾದ ಫಲ-ಪುಷ್ಪ-ತಾಂಬೂಲಗಳನ್ನು ಸಹದೇವನಿಂದ ಶ್ರೀಕೃಷ್ಣನು ಕೊಡಿಸಿದನು. ॥ ೨೬ ॥ ಭಗವಾನ್ ಶ್ರೀಕೃಷ್ಣನು ಹೀಗೆ ಸೆರೆಯಿಂದ ಮುಕ್ತರಾದ ರಾಜರನ್ನು ಸಮ್ಮಾನಿಸಿದನು. ಈಗ ಅವರು ಸಮಸ್ತ ಕ್ಲೇಶಗಳಿಂದ ಬಿಡುಗಡೆಹೊಂದಿ, ದಿವ್ಯವಾದ ಕುಂಡಲಗಳಿಂದ ಸಮಲಂಕೃತರಾಗಿ ವರ್ಷಾಕಾಲವು ಕಳೆದನಂತರ ಮೋಡಗಳಿಲ್ಲದ ಆಕಾಶದಲ್ಲಿ ತಾರೆಗಳು ಬೆಳಗುವಂತೆ ರಾರಾಜಿಸಿದರು. ॥ ೨೭ ॥

ರಥಾನ್ಸದಶ್ವಾನಾರೋಪ್ಯ ಮಣಿಕಾಂಚನಭೂಷಿತಾನ್ ।
ಪ್ರೀಣಯ್ಯ ಸೂನೃತೈರ್ವಾಕ್ಯೈಃ ಸ್ವದೇಶಾನ್ವ್ಯಸೃಜತ್ ಪ್ರಭುಃ
॥ ೨೮ ॥

ತ ಏವಂ ಮೋಚಿತಾಃ ಕೃಚ್ಛ್ರಾತ್ ಕೃಷ್ಣೇನ ಸುಮಹಾತ್ಮನಾ ।
ಯಯುಸ್ತಮೇವ ಧ್ಯಾಯಂತಃ ಕೃತಾನಿ ಚ ಜಗತ್ಪತೇಃ
॥ ೨೯ ॥

ಜಗದುಃ ಪ್ರಕೃತಿಜ್ಞಸ್ಯ ಮಹಾಪುರುಷಚೇಷ್ಟಿತಮ್ ।
ಯಥಾನ್ವಶಾಸದ್ಭಗವಾಂಸ್ತಥಾ ಚಕ್ರುರತಂದ್ರಿತಾಃ
॥ ೩೦ ॥

ಜರಾಸಂಧಂ ಘಾತಯಿತ್ವಾ ಭೀಮಸೇನೇನ ಕೇಶವಃ ।
ಪಾರ್ಥಾಭ್ಯಾಂ ಸಂಯುತಃ ಪ್ರಾಯಾತ್ಸಹದೇವೇನ ಪೂಜಿತಃ
॥ ೩೧ ॥

ಗತ್ವಾ ತೇ ಖಾಂಡವಪ್ರಸ್ಥಂ ಶಂಖಾನ್ ದಧ್ಮುರ್ಜಿತಾರಯಃ ।
ಹರ್ಷಯಂತಃ ಸ್ವಸುಹೃದೋ ದುರ್ಹೃದಾಂ ಚಾಸುಖಾವಹಾಃ
॥ ೩೨ ॥

ತಚ್ಛ್ರುತ್ವಾ ಪ್ರೀತಮನಸ ಇಂದ್ರಪ್ರಸ್ಥನಿವಾಸಿನಃ ।
ಮೇನಿರೇ ಮಾಗಧಂ ಶಾಂತಂ ರಾಜಾ ಚಾಪ್ತಮನೋರಥಃ
॥ ೩೩ ॥

ಅಭಿವಂದ್ಯಾಥ ರಾಜಾನಂ ಭೀಮಾರ್ಜುನಜನಾರ್ದನಾಃ ।
ಸರ್ವಮಾಶ್ರಾವಯಾಂಚಕ್ರುರಾತ್ಮನಾ ಯದನುಷ್ಠಿತಮ್
॥ ೩೪ ॥

ನಿಶಮ್ಯ ಧರ್ಮರಾಜಸ್ತತ್ ಕೇಶವೇನಾನುಕಂಪಿತಮ್ ।
ಆನಂದಾಶ್ರುಕಲಾಂ ಮುಂಚನ್ನೈಮ್ಷ್ಣೋವಾಚ ಕಿಂಚನ
॥ ೩೫ ॥

ಮತ್ತೆ ಭಗವಾನ್ ಶ್ರೀಕೃಷ್ಣನು ಮಣಿಕಾಂಚನಗಳಿಂದ ಭೂಷಿತವಾದ, ಶ್ರೇಷ್ಠವಾದ ಕುದುರೆಗಳಿಂದ ಕೂಡಿದ ರಥಗಳಲ್ಲಿ ಆ ರಾಜರನ್ನು ಕುಳ್ಳಿರಿಸಿ, ಸುಮಧುರವಾದ ಮಾತುಗಳಿಂದ ಅವರನ್ನು ತೃಪ್ತಿಪಡಿಸಿ ಅವರವರ ದೇಶಗಳಿಗೆ ಕಳಿಸಿಕೊಟ್ಟನು. ॥ ೨೮ ॥ ಹೀಗೆ ಉದಾರಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಎಲ್ಲ ರಾಜರನ್ನು ಕಷ್ಟದಿಂದ ಪಾರುಮಾಡಿದನು. ಆ ರಾಜರೆಲ್ಲರೂ ಜಗತ್ಪತಿಯಾದ ಶ್ರೀಕೃಷ್ಣನ ರೂಪ, ಗುಣ ಮತ್ತು ಲೀಲೆಗಳನ್ನು ಚಿಂತಿಸುತ್ತಾ ತಮ್ಮ-ತಮ್ಮ ರಾಜಧಾನಿಗಳಿಗೆ ಪ್ರಯಾಣ ಮಾಡಿದರು. ॥ ೨೯ ॥ ತಮ್ಮ ರಾಜಧಾನಿಗೆ ತೆರಳಿದ ಬಳಿಕ ಆ ರಾಜರೆಲ್ಲರೂ ಮಹಾಪುರುಷನಾದ ಶ್ರೀಕೃಷ್ಣನು ತಮಗೆ ಮಾಡಿದ ಉಪಕಾರವನ್ನೂ, ಅವನ ಇತರ ಅದ್ಭುತವಾದ ಲೀಲಾ ಪ್ರಸಂಗಗಳನ್ನು ಪ್ರಜೆಗಳಲ್ಲಿ ಪ್ರಚುರಪಡಿಸಿದರು. ಮತ್ತೆ ಎಚ್ಚರಿಕೆಯಿಂದ ಭಗವಂತನ ಆಜ್ಞಾನುಸಾರವಾಗಿ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದರು. ॥ ೩೦ ॥

ಪರೀಕ್ಷಿತನೇ ! ಈ ಪ್ರಕಾರವಾಗಿ ಭಗವಾನ್ ಶ್ರೀಕೃಷ್ಣನು ಭೀಮಸೇನನಿಂದ ಜರಾಸಂಧನ ವಧೆಯನ್ನು ಮಾಡಿಸಿ, ಭೀಮಸೇನ ಮತ್ತು ಅರ್ಜುನರೊಂದಿಗೆ ಜರಾಸಂಧನ ಮಗನಾದ ಸಹದೇವನಿಂದ ಸತ್ಕೃತರಾಗಿ ಇಂದ್ರಪ್ರಸ್ಥಕ್ಕೆ ಪ್ರಯಾಣ ಮಾಡಿದರು. ವಿಜಯಿಗಳಾಗಿ ಬಂದಿರುವ ಕೃಷ್ಣಾರ್ಜುನ ಭೀಮಸೇನರು ಇಂದ್ರಪ್ರಸ್ಥದ ಸಮೀಪಕ್ಕೆ ಬಂದು ತಮ್ಮ-ತಮ್ಮ ಶಂಖಗಳನ್ನು ಊದಿದರು. ಇದರಿಂದ ಅವರ ಇಷ್ಟ ಮಿತ್ರರಿಗೆ ಬಹಳ ಸುಖವಾದರೆ ಶತ್ರುಗಳಿಗೆ ತುಂಬಾ ದುಃಖವಾಯಿತು. ॥ ೩೧-೩೨ ॥ ಆ ಶಂಖಧ್ವನಿಯನ್ನು ಕೇಳಿ ಇಂದ್ರಪ್ರಸ್ಥದ ನಿವಾಸಿಗಳ ಮನಸ್ಸು ಪ್ರಫುಲ್ಲಿತವಾಯಿತು. ಜರಾಸಂಧನು ಮೃತನಾದನೆಂದೇ ಅವರು ತಿಳಿದುಕೊಂಡರು. ಇನ್ನು ಯುಧಿಷ್ಠಿರ ಮಹಾರಾಜರ ರಾಜಸೂಯಯಜ್ಞದ ಸಂಕಲ್ಪವು ಈಡೇರಿದಂತೆಯೇ ಸರಿ ಎಂದು ಆನಂದಿಸಿದರು. ॥ ೩೩ ॥ ಭೀಮಾರ್ಜುನ ಶ್ರೀಕೃಷ್ಣರು ಅರಮನೆಗೆ ಬಂದು ಯುಧಿಷ್ಠಿರನನ್ನು ವಂದಿಸಿ, ಜರಾಸಂಧನ ವಧೆಗಾಗಿ ತಾವು ಮಾಡಿದ ಎಲ್ಲ ಕಾರ್ಯಗಳನ್ನು ವಿವರಿಸಿ ಹೇಳಿದರು. ॥ ೩೪ ॥ ಭಗವಾನ್ ಶ್ರೀಕೃಷ್ಣನ ಪರಮಾನುಗ್ರಹದ ಮಾತನ್ನು ಕೇಳಿದ ಯುಧಿಷ್ಠಿರನು ಆನಂದಭರಿತನಾದನು. ಆನಂದಾಶ್ರುಗಳು ಕಣ್ಣುಗಳಿಂದ ಹರಿಯತೊಡಗಿದವು. ಇದರಿಂದ ಅವನಿಗೆ ಏನನ್ನೂ ಮಾತನಾಡಲು ಸಾಧ್ಯವಾಗದೇ ಹೋಯಿತು. ॥ ೩೫ ॥

ಎಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೭೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಕೃಷ್ಣಾದ್ಯಾಗಮನಂ ನಾಮ ತ್ರಿಸಪ್ತತಿತಮೋऽಧ್ಯಾಯಃ ॥ ೭೩ ॥

ಎಪ್ಪತ್ತನಾಲ್ಕನೆಯ ಅಧ್ಯಾಯ

ಭಗವಂತನ ಅಗ್ರಪೂಜೆ - ಶಿಶುಪಾಲವಧೆ

ಶ್ರೀಶುಕ ಉವಾಚ

ಏವಂ ಯುಧಿಷ್ಠಿರೋ ರಾಜಾ ಜರಾಸಂಧವಧಂ ವಿಭೋಃ ।
ಕೃಷ್ಣಸ್ಯ ಚಾನುಭಾವಂ ತಂ ಶ್ರುತ್ವಾ ಪ್ರೀತಸ್ತಮಬ್ರವೀತ್
॥ ೧ ॥

ಯುಧಿಷ್ಠಿರ ಉವಾಚ

ಯೇ ಸ್ಯುಸ್ತ್ರೈಲೋಕ್ಯಗುರವಃ ಸರ್ವೇ ಲೋಕಮಹೇಶ್ವರಾಃ ।
ವಹಂತಿ ದುರ್ಲಭಂ ಲಬ್ಧ್ವಾ ಶಿರಸೈವಾನುಶಾಸನಮ್
॥ ೨ ॥

ಸ ಭವಾನರವಿಂದಾಕ್ಷೋ ದೀನಾನಾಮೀಶಮಾನಿನಾಮ್ ।
ಧತ್ತೇಽನುಶಾಸನಂ ಭೂಮಂಸ್ತದತ್ಯಂತವಿಡಂಬನಮ್
॥ ೩ ॥

ನ ಹ್ಯೇಕಸ್ಯಾದ್ವಿತೀಯಸ್ಯ ಬ್ರಹ್ಮಣಃ ಪರಮಾತ್ಮನಃ ।
ಕರ್ಮಭಿರ್ವರ್ಧತೇ ತೇಜೋ ಹ್ರಸತೇ ಚ ಯಥಾ ರವೇಃ
॥ ೪ ॥

ನ ವೈ ತೇಽಜಿತ ಭಕ್ತಾನಾಂ ಮಮಾಹಮಿತಿ ಮಾಧವ ।
ತ್ವಂ ತವೇತಿ ಚ ನಾನಾಧೀಃ ಪಶೂನಾಮಿವ ವೈಕೃತಾ
॥ ೫ ॥

ಶ್ರೀಶುಕ ಉವಾಚ

ಇತ್ಯುಕ್ತ್ವಾ ಯಜ್ಞಿಯೇ ಕಾಲೇ ವವ್ರೇ ಯುಕ್ತಾನ್ಸ ಋತ್ವಿಜಃ ।
ಕೃಷ್ಣಾನುಮೋದಿತಃ ಪಾರ್ಥೋ ಬ್ರಾಹ್ಮಣಾನ್ಬ್ರಹ್ಮವಾದಿನಃ
॥ ೬ ॥

ದ್ವೈಪಾಯನೋ ಭರದ್ವಾಜಃ ಸುಮಂತುರ್ಗೌತಮೋಽಸಿತಃ ।
ವಸಿಷ್ಠಶ್ಚ್ಯವನಃ ಕಣ್ವೋ ಮೈತ್ರೇಯಃ ಕವಷಸ್ತ್ರಿತಃ
॥ ೭ ॥

ವಿಶ್ವಾಮಿತ್ರೋ ವಾಮದೇವಃ ಸುಮತಿರ್ಜೈಮಿನಿಃ ಕ್ರತುಃ ।
ಪೈಲಃ ಪರಾಶರೋ ಗರ್ಗೋ ವೈಶಂಪಾಯನ ಏವ ಚ
॥ ೮ ॥

ಅಥರ್ವಾ ಕಶ್ಯಪೋ ಧೌಮ್ಯೋ ರಾಮೋ ಭಾರ್ಗವ ಆಸುರಿಃ ।
ಏತಿಹೋತ್ರೋ ಮಧುಚ್ಛಂದಾ ವೀರಸೇನೋಽಕೃತವ್ರಣಃ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಯುಧಿಷ್ಠಿರ ಮಹಾರಾಜನು ಜರಾಸಂಧನ ವಧೆ ಮತ್ತು ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನ ಅದ್ಭುತ ಮಹಿಮೆಯನ್ನು ಕೇಳಿ ಸುಪ್ರೀತನಾಗಿ ಇಂತೆಂದನು - ॥ ೧ ॥

ಯುಧಿಷ್ಠಿರನು ಹೇಳಿದನು - ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣ! ಮೂರು ಲೋಕಗಳಿಗೂ ಸ್ವಾಮಿಗಳಾದ ಬ್ರಹ್ಮಾ-ಶಂಕರರು ಮತ್ತು ಇಂದ್ರನೇ ಮೊದಲಾದ ಲೋಕಪಾಲರು ನಿನ್ನ ಆಜ್ಞೆಯನ್ನು ಪಡೆಯಲು ತವಕಿಸುತ್ತಿರುವರು. ಅದು ದೊರಕಿದರೆ ಬಹಳ ಶ್ರದ್ಧೆಯಿಂದ ಶಿರಸಾವಹಿಸಿ ಪಾಲಿಸುತ್ತಾರೆ. ॥ ೨ ॥ ಅನಂತನೇ ! ನಾವಾದರೋ ಅತ್ಯಂತ ದೀನರಾಗಿದ್ದರೂ ಭೂಪತಿ, ನರಪತಿಗಳೆಂದು ಭಾವಿಸಿಕೊಂಡಿದ್ದೇವೆ. ಇಂತಹ ಸ್ಥಿತಿಯಲ್ಲಿ ನಾವು ದಂಡನೆಗೆ ಅರ್ಹರಾಗಿದ್ದರೂ ನೀನು ನಮ್ಮ ಆಜ್ಞೆಯನ್ನು ಸ್ವೀಕರಿಸಿ ಅದನ್ನು ಪಾಲಿಸುತ್ತಿರುವೆ. ಸರ್ವಶಕ್ತನಾದ, ಕಮಲಾಕ್ಷನಾದ ಭಗವಂತನಿಗೆ ಇದು ಮನುಷ್ಯಲೀಲೆಯ ಅಭಿನಯ ಮಾತ್ರವಾಗಿದೆ. ॥ ೩ ॥ ಉದಯಾಸ್ತಮಾನಗಳಿಗೆ ಕಾರಣನಾದ ಸೂರ್ಯನ ತೇಜಸ್ಸು ಹೆಚ್ಚು-ಕಡಿಮೆಯಾಗದಿರುವಂತೆಯೇ, ಯಾವುದೇ ಪ್ರಕಾರದ ಕರ್ಮಗಳಿಂದ ನಿನ್ನಲ್ಲಿ ಉಲ್ಲಾಸವಾಗಲೀ, ಹ್ರಾಸವಾಗಲಿ ಆಗುವುದಿಲ್ಲ. ಏಕೆಂದರೆ, ನೀನ ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದದಿಂದ ರಹಿತನಾದ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನಾಗಿರುವೆ. ॥ ೪ ॥ ಯಾರಿಂದಲೂ ಜಯಿಸಲ್ಪಡದ ಮಾಧವನೇ! 'ಇದು ನಾನು-ನನ್ನದು, ಇದು ನೀನು-ನಿನ್ನದು' ಇಂತಹ ವಿಕಾರಯುಕ್ತ ಭೇದ ಬುದ್ಧಿಯು ಪಶುಗಳಲ್ಲಿರುತ್ತದೆ. ಆದರೆ ನಿನ್ನ ಅನನ್ಯ ಭಕ್ತರಾದವರ ಚಿತ್ತದಲ್ಲಿ ಇಂತಹ ಹುಚ್ಚುತನದ ವಿಚಾರವೇ ಬರುವುದಿಲ್ಲ, ಹೀಗಿರುವಾಗ ನಿನ್ನಲ್ಲಿ ಹೇಗಿದ್ದೀತು ? ನೀನು ಮಾಡುವುದೆಲ್ಲವೂ ಲೀಲೆಯೇ ಆಗಿದೆ. ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ಹೀಗೆ ಹೇಳಿ ಯುಧಿಷ್ಠಿರನು ಭಗವಾನ್ ಶ್ರೀಕೃಷ್ಣನ ಅನುಮತಿಯಂತೆ ಯಜ್ಞದ ಕಾಲವು ಸನ್ನಿಹಿತವಾಗಲು ಯಜ್ಞಕರ್ಮಗಳಲ್ಲಿ ನಿಪುಣರಾದ ವೇದವಾದಿಗಳಾದ ಬ್ರಾಹ್ಮಣರನ್ನು, ಋತ್ವಿಕ್-ಆಚಾರ್ಯರನ್ನು ವರಣಮಾಡಿಕೊಂಡನು. ॥ ೬ ॥ ಅವರ ಹೆಸರು ಇಂತಿತ್ತು - ಶ್ರೀಕೃಷ್ಣ ದ್ವೈಪಾಯನ ವ್ಯಾಸರು, ಭರದ್ವಾಜ, ಸುಮಂತು, ಗೌತಮ, ಅಸಿತ, ವಸಿಷ್ಠ, ಚ್ಯವನ, ಕಣ್ವ, ಮೈತ್ರೇಯ, ಕವಷ, ತ್ರಿತ, ವಿಶ್ವಾಮಿತ್ರ, ವಾಮದೇವ, ಸುಮತಿ, ಜೈಮಿನಿ, ಕ್ರತು, ಪೈಲ, ಪರಾಶರ, ಗರ್ಗ, ವೈಶಂಪಾಯನ, ಅಥರ್ವಣ, ಕಶ್ಯಪ, ಧೌಮ್ಯ, ಪರಶುರಾಮ, ಶುಕ್ರಾಚಾರ್ಯ, ಆಸುರಿ, ಏತಿಹೋತ್ರ, ಮಧುಚ್ಛಂದಸ, ವೀರಸೇನ ಮತ್ತು ಅಕೃತವ್ರಣ. ॥ ೭-೯ ॥

ಉಪಹೂತಾಸ್ತಥಾ ಚಾನ್ಯೇ ದ್ರೋಣಭೀಷ್ಮಕೃಪಾದಯಃ।
ಧೃತರಾಷ್ಟ್ರಃ ಸಹಸುತೋ ವಿದುರಶ್ಚ ಮಹಾಮತಿಃ
॥ ೧೦ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯಜ್ಞದಿದೃಕ್ಷವಃ।
ತತ್ರೇಯುಃ ಸರ್ವರಾಜಾನೋ ರಾಜ್ಞಾಂ ಪ್ರಕೃತಯೋ ನೃಪ
॥ ೧೧ ॥

ತತಸ್ತೇ ದೇವಯಜನಂ ಬ್ರಾಹ್ಮಣಾಃ ಸ್ವರ್ಣಲಾಂಗಲೈಃ।
ಕೃಷ್ಟ್ವಾತತ್ರ ಯಥಾಮ್ನಾಯಂ ದೀಕ್ಷಯಾಂಚಕ್ರಿರೇ ನೃಪಮ್
॥ ೧೨ ॥

ಹೈಮಾಃ ಕಿಲೋಪಕರಣಾ ವರುಣಸ್ಯ ಯಥಾ ಪುರಾ।
ಇಂದ್ರಾದಯೋ ಲೋಕಪಾಲಾ ವಿರಿಂಚಭವಸಂಯುತಾಃ
॥ ೧೩ ॥

ಸಗಣಾಃ ಸಿದ್ಧಗಂಧರ್ವಾ ವಿದ್ಯಾಧರಮಹೋರಗಾಃ।
ಮುನಯೋ ಯಕ್ಷರಕ್ಷಾಂಸಿ ಖಗಕಿನ್ನರಚಾರಣಾಃ
॥ ೧೪ ॥

ರಾಜಾನಶ್ಚ ಸಮಾಹೂತಾ ರಾಜಪತ್ನ್ಯಶ್ಚ ಸರ್ವಶಃ।
ರಾಜಸೂಯಂ ಸಮೀಯುಃ ಸ್ಮ ರಾಜ್ಞಃ ಪಾಂಡುಸುತಸ್ಯ ವೈ
॥ ೧೫ ॥

ಮೇನಿರೇ ಕೃಷ್ಣಭಕ್ತಸ್ಯ ಸೂಪಪನ್ನಮವಿಸ್ಮಿತಾಃ।
ಅಯಾಜಯನ್ಮಹಾರಾಜಂ ಯಾಜಕಾ ದೇವವರ್ಚಸಃ।
ರಾಜಸೂಯೇನ ವಿಧಿವತ್ಪಾಚೇತಸಮಿವಾಮರಾಃ
॥ ೧೬ ॥

ಸೌತ್ಯೇಽಹನ್ಯವನೀಪಾಲೋ ಯಾಜಕಾನ್ ಸದಸಸ್ಪತೀನ್।
ಅಪೂಜಯನ್ಮಹಾಭಾಗಾನ್ ಯಥಾವತ್ ಸುಸಮಾಹಿತಃ
॥ ೧೭ ॥

ಸದಸ್ಯಾಗ್ರ್ಯಾರ್ಹಣಾರ್ಹಂ ವೈ ವಿಮೃಶಂತಃ ಸಭಾಸದಃ।
ನಾಧ್ಯಗಚ್ಛನ್ನೈಕಾಂತ್ಯಾತ್ ಸಹದೇವಸ್ತದಾಬ್ರವೀತ್
॥ ೧೮ ॥

ಅರ್ಹತಿ ಹ್ಯಚ್ಯುತಃ ಶ್ರೈಷ್ಠ್ಯಂ ಭಗವಾನ್ ಸಾತ್ವತಾಂ ಪತಿಃ।
ಏಷ ವೈ ದೇವತಾಃ ಸರ್ವಾ ದೇಶಕಾಲಧನಾದಯಃ
॥ ೧೯ ॥

ಯದಾತ್ಮಕಮಿದಂ ವಿಶ್ವಂ ಕ್ರತವಶ್ಚ ಯದಾತ್ಮಕಾಃ।
ಅಗ್ನಿರಾಹುತಯೋ ಮಂತ್ರಾಃ ಸಾಂಖ್ಯಂ ಯೋಗಶ್ಚ ಯತ್ಪರಃ
॥ ೨೦ ॥

ಇವರಲ್ಲದೇ ದ್ರೋಣಾಚಾರ್ಯ, ಭೀಷ್ಮಪಿತಾಮಹ, ಕೃಪಾಚಾರ್ಯ, ಧೃತರಾಷ್ಟ್ರ, ದುರ್ಯೋಧನನೇ ಮೊದಲಾದ ಅವನ ಮಕ್ಕಳು, ಮಹಾಮತಿ ವಿದುರ ಇವರನ್ನು ಧರ್ಮರಾಯನು ಕರೆಸಿದನು. ॥ ೧೦ ॥ ರಾಜೇಂದ್ರ! ರಾಜಸೂಯ ಯಜ್ಞವನ್ನು ನೋಡಲು ದೇಶ-ದೇಶಗಳ ಎಲ್ಲ ರಾಜರೂ ಅವರ ಮಂತ್ರಿಗಳೂ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೂ, ಸಮಸ್ತ ಪ್ರಜೆಗಳೂ ಇಂದ್ರ ಪ್ರಸ್ಥಕ್ಕೆ ಆಗಮಿಸಿದರು. ॥ ೧೧ ॥

ಆನಂತರ ಋತ್ವಿಜ ಬ್ರಾಹ್ಮಣರು ಶುಭಮುಹೂರ್ತದಲ್ಲಿ ಚಿನ್ನದ ನೇಗಿಲಿನಿಂದ ಯಾಗಭೂಮಿಯನ್ನು ಉತ್ತು ಯುಧಿಷ್ಠಿರನಿಗೆ ಶಾಸ್ತ್ರವಿಧಿಗನುಸಾರವಾಗಿ ಯಜ್ಞದೀಕ್ಷೆಯನ್ನು ಕೊಟ್ಟರು. ॥ ೧೨ ॥ ಹಿಂದಿನ ಕಾಲದಲ್ಲಿ ವರುಣನ ಯಜ್ಞದಲ್ಲಿ ಯಜ್ಞಪಾತ್ರೆಗಳೆಲ್ಲವೂ ಸ್ವರ್ಣಮಯವಾಗಿದ್ದಂತೆಯೇ ಯುಧಿಷ್ಠಿರನ ಯಜ್ಞದಲ್ಲಿಯೂ ಎಲ್ಲ ಸ್ವರ್ಣಪಾತ್ರೆಗಳೇ ಇದ್ದವು ರಾಜಸೂಯಯಜ್ಞಕ್ಕೆ ಯುಧಿಷ್ಠಿರ ನಿಂದ ಆಹ್ವಾನವನ್ನು ಸ್ವೀಕರಿಸಿದ ಬ್ರಹ್ಮದೇವರು, ರುದ್ರ ದೇವರು, ಇಂದ್ರಾದಿ ಲೋಕಪಾಲರು, ತಮ್ಮ-ತಮ್ಮ ಗಣಗಳೊಂದಿಗೆ ಸಿದ್ಧ ಗಂಧರ್ವರು, ವಿದ್ಯಾಧರರು, ನಾಗರು, ಮುನಿಗಳು, ಯಕ್ಷರು, ರಾಕ್ಷಸರು, ಪಕ್ಷಿಗಳು, ಕಿನ್ನರ-ಚಾರಣರು, ದೊಡ್ಡ-ದೊಡ್ಡ ರಾಜರು, ರಾಜಪತ್ನಿಯರು - ಹೀಗೆ ಇವರೆಲ್ಲರೂ ಆಗಮಿಸಿದರು. ॥ ೧೩.-೧೫ ॥ ರಾಜಸೂಯದ ವೈಭವವನ್ನು ಕಂಡು ಯಾರೂ ಅಚ್ಚರಿಗೊಳ್ಳಲಿಲ್ಲ. ಭಗವಾನ್ ಶ್ರೀಕೃಷ್ಣನ ಪರಮ ಭಕ್ತನಾದ ಯುಧಿಷ್ಠಿರನಿಗೆ ಇದು ಅನುರೂಪವಾಗಿರುವುದೆಂದೇ ಎಲ್ಲರೂ ಭಾವಿಸಿದರು. ಹಿಂದೆ ವರುಣನಿಂದ ದೇವತೆಗಳು ರಾಜಸೂಯ ಯಾಗವನ್ನು ಮಾಡಿಸಿದಂತೆಯೇ, ದೇವತೆಗಳಂತೆಯೇ ಮಹಾ ತೇಜಸ್ವಿಗಳಾದ ಯಾಜಕರು ಯುಧಿಷ್ಠಿರನಿಂದ ವಿಧಿವತ್ತಾಗಿ ರಾಜಸೂಯ ಯಜ್ಞವನ್ನು ಮಾಡಿಸಿದರು. ॥ ೧೬ ॥ ಸೋಮರಸವನ್ನು ಹಿಂಡುವ ದಿವಸ ಧರ್ಮರಾಜನು ತನ್ನ ಪರಮಭಾಗ್ಯಶಾಲಿಗಳಾದ ಯಾಜಕರನ್ನು ಮತ್ತು ಯಜ್ಞದ ನ್ಯೂನಾತಿರೇಕಗಳನ್ನು ನಿರೀಕ್ಷಿಸಲು ನಿಯುಕ್ತರಾಗಿದ್ದ ಸದಸಸ್ಪತಿಗಳನ್ನು ಏಕಾಗ್ರ ಚಿತ್ತದಿಂದ ಪೂಜಿಸಿ ಸತ್ಕರಿಸಿದನು. ॥ ೧೭ ॥

ಈಗ ಸಭಾಸದ್ಯರಲ್ಲಿ ಮೊಟ್ಟಮೊದಲಿಗೆ ಯಾರನ್ನು ಪೂಜಿಸಬೇಕು? ಅಗ್ರಪೂಜೆ ಯಾರಿಗೆ ಎಂಬ ವಿಷಯದಲ್ಲಿ ಅಲ್ಲಿ ನೆರೆದ ಸಭಾಸದರು ಚರ್ಚಿಸತೊಡಗಿದರು. ಎಷ್ಟು ಮತಿಗಳೋ ಅಷ್ಟು ಮತಗಳು. ಅದರಿಂದ ಸರ್ವಸಮ್ಮತವಾದ ನಿರ್ಣಯವು ಆಗದೇ ಹೋಯಿತು. ಇಂತಹ ಸ್ಥಿತಿಯಲ್ಲಿ ಸಹದೇವನು ಹೇಳಿದನು-॥೧೮॥ ಯದುವಂಶಶಿರೋಮಣಿ ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನೇ ಸರ್ವಸದಸ್ಯರಲ್ಲಿ ಶ್ರೇಷ್ಠನೂ, ಅಗ್ರಪೂಜೆಗೆ ಯೋಗ್ಯನಾಗಿದ್ದಾನೆ. ಏಕೆಂದರೆ, ಇವನೇ ಸಮಸ್ತ ದೇವತೆಗಳ ರೂಪದಲ್ಲಿರುವವನು ಮತ್ತು ದೇಶ, ಕಾಲ, ಧನ ಮುಂತಾದ ಇರುವ ಎಲ್ಲ ವಸ್ತುಗಳ ರೂಪದಲ್ಲಿಯೂ ಅವನೇ ಆಗಿದ್ದಾನೆ. ॥ ೧೯ ॥ ಸಮಸ್ತ ವಿಶ್ವವೂ ಶ್ರೀಕೃಷ್ಣನ ರೂಪವೇ ಆಗಿದೆ. ಭಗವಾನ್ ಶ್ರೀಕೃಷ್ಣನೇ ಅಗ್ನಿ, ಆಹುತಿ ಮತ್ತು ಮಂತ್ರದ ಸ್ವರೂಪನಾಗಿರುವನು. ಜ್ಞಾನಮಾರ್ಗ ಮತ್ತು ಕರ್ಮಮಾರ್ಗ ಇವೆರಡೂ ಅವನನ್ನು ಪಡೆಯುವ ಸಾಧನಗಳಾಗಿವೆ. ॥ ೨೦ ॥

ಏಕ ಏವಾದ್ವಿತೀಯೋಽಸಾವೈತದಾತ್ಮ್ಯಮಿದಂ ಜಗತ್ ।
ಆತ್ಮನಾಽಽತ್ಮಾಶ್ರಯಃ ಸಭ್ಯಾಃ ಸೃಜತ್ಯವತಿ ಹಂತ್ಯಜಃ
॥ ೨೧ ॥

ವಿವಿಧಾನೀಹ ಕರ್ಮಾಣಿ ಜನಯನ್ನದವೇಕ್ಷಯಾ ।
ಈಹತೇ ಯದಯಂ ಸರ್ವಃ ಶ್ರೇಯೋ ಧರ್ಮಾದಿಲಕ್ಷಣಮ್
॥ ೨೨ ॥

ತಸ್ಮಾತ್ ಕೃಷ್ಣಾಯ ಮಹತೇ ದೀಯತಾಂ ಪರಮಾರ್ಹಣಮ್ ।
ಏವಂ ಚೇತ್ ಸರ್ವಭೂತಾನಾಮಾತ್ಮನಶ್ಚಾರ್ಹಣಂ ಭವೇತ್
॥ ೨೩ ॥

ಸರ್ವಭೂತಾತ್ಮಭೂತಾಯ ಕೃಷ್ಣಾಯಾನನ್ಯದರ್ಶಿನೇ ।
ದೇಯಂ ಶಾಂತಾಯ ಪೂರ್ಣಾಯ ದತ್ತಸ್ಯಾನಂತ್ಯಮಿಚ್ಛತಾ
॥ ೨೪ ॥

ಇತ್ಯುಕ್ತ್ವಾ ಸಹದೇವೋಽಭೂತ್ತೂಷ್ಣೀಂ ಕೃಷ್ಣಾನುಭಾವವಿತ್ ।
ತಚ್ಛ್ರುತ್ವಾ ತುಷ್ಟುವುಃ ಸರ್ವೇ ಸಾಧು ಸಾಧ್ವಿತಿ ಸತ್ತಮಾಃ
॥ ೨೫ ॥

ಶ್ರುತ್ವಾದ್ವಿಜೇರಿತಂ ರಾಜಾ ಜ್ಞಾತ್ವಾಹಾರ್ದಂ ಸಭಾಸದಾಮ್ ।
ಸಮರ್ಹಯದ್ಧೃಷೀಕೇಶಂ ಪ್ರೀತಃ ಪ್ರಣಯವಿಹ್ವಲಃ
॥ ೨೬ ॥

ತತ್ಪಾದಾವವನಿಜ್ಯಾಪಃ ಶಿರಸಾ ಲೋಕಪಾವನೀಃ ।
ಸಭಾರ್ಯಃ ಸಾನುಜಾಮಾತ್ಯಃ ಸಕುಟುಂಬೋಽವಹನ್ಮುದಾ
॥ ೨೭ ॥

ವಾಸೋಭಿಃ ಪೀತಕೌಶೇಯೈರ್ಭೂಷಣೈಶ್ಚ ಮಹಾಧನೈಃ ।
ಅರ್ಹಯಿತ್ವಾಶ್ರುಪೂರ್ಣಾಕ್ಷೋ ನಾಶಕತ್ಸಮವೇಕ್ಷಿತುಮ್
॥ ೨೮ ॥

ಇತ್ಥಂ ಸಭಾಜಿತಂ ವೀಕ್ಷ್ಯ ಸರ್ವೇ ಪ್ರಾಂಜಲಯೋ ಜನಾಃ ।
ನಮೋ ಜಯೇತಿ ನೇಮುಸ್ತಂ ನಿಪೇತುಃ ಪುಷ್ಪವೃಷ್ಟಯಃ
॥ ೨೯ ॥

ಇತ್ಥಂ ನಿಶಮ್ಯ ದಮಘೋಷಸುತಃ ಸ್ವಪೀಠಾ-
ದುತ್ಥಾಯ ಕೃಷ್ಣಗುಣವರ್ಣನಜಾತಮನ್ಯುಃ ।
ಉತ್ಕ್ಷಿಪ್ಯ ಬಾಹುಮಿದಮಾಹ ಸದಸ್ಯಮರ್ಷೀ
ಸಂಶ್ರಾವಯನ್ ಭಗವತೇ ಪರುಷಾಣ್ಯಭೀತಃ ॥ ೩೦ ॥

ಸಭಾಸದರೇ ! ಭಗವಾನ್ ಶ್ರೀಕೃಷ್ಣನು ಏಕಮೇವಾದ್ವಿತೀಯ ಬ್ರಹ್ಮ ನಾಗಿದ್ದಾನೆ. ಅಖಿಂಡ ಬ್ರಹ್ಮಾಂಡವೂ ಇವನ ಸ್ವರೂಪವೇ ಆಗಿದೆ. ಅವನು ತಾನೇ-ತನ್ನಲ್ಲಿ ಸ್ಥಿತನಾಗಿದ್ದಾನೆ ಮತ್ತು ಜನ್ಮ, ಅಸ್ತಿತ್ವ, ವೃದ್ಧಿ ಮೊದಲಾದ ಆರು ಭಾವ ವಿಕಾರಗಳಿಂದ ರಹಿತನಾಗಿದ್ದಾನೆ. ಅವನು ತನ್ನ ಆತ್ಮಸ್ವರೂಪ ಸಂಕಲ್ಪದಿಂದಲೇ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಾನೆ. ॥ ೨೧ ॥ ಸಮಸ್ತ ಜಗತ್ತು ಶ್ರೀಕೃಷ್ಣನ ಅನುಗ್ರಹದಿಂದಲೇ ಅನೇಕ ವಿಧದ ಕರ್ಮಾನುಷ್ಠಾನಗಳನ್ನು ಮಾಡುತ್ತಾ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥ ಗಳನ್ನು ಸಾಧಿಸಿಕೊಳ್ಳುತ್ತಾರೆ. ॥ ೨೨ ॥ ಅದಕ್ಕಾಗಿ ಸರ್ವಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನದೇ ಅಗ್ರಪೂಜೆಯಾಗಬೇಕು. ಇವನನ್ನು ಪೂಜಿಸುವುದರಿಂದ ಸಮಸ್ತ ಪ್ರಾಣಿಗಳ ಹಾಗೂ ತನ್ನಾತ್ಮದ ಪೂಜೆಯೂ ನಡೆದಂತಾಗುತ್ತದೆ. ॥ ೨೩ ॥ ದಾನಕ್ಕೆ ಅನಂತವಾದ ಫಲವನ್ನು ಅಪೇಕ್ಷಿಸುವವನು ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪ ನಾದ, ಭೇದಭಾವರಹಿತನಾದ, ಪರಮಶಾಂತನಾದ, ಪರಿಪೂರ್ಣ ನಾದ, ಮಹಾತ್ಮನಾದ ಶ್ರೀಕೃಷ್ಣನಿಗೇ ದಾನಮಾಡಬೇಕು. ॥ ೨೪ ॥ ಪರೀಕ್ಷಿತನೇ! ಭಗವಂತನ ಮಹಿಮೆಯನ್ನೂ, ಅವನ ಪ್ರಭಾವವನ್ನು ಅರಿತಿದ್ದ ಸಹದೇವನು ಹೀಗೆ ಹೇಳಿ ಸುಮ್ಮನಾದನು. ಆ ಸಮಯ ದಲ್ಲಿ ಧರ್ಮರಾಯನ ಯಜ್ಞಸಭೆಯಲ್ಲಿ ಉಪಸ್ಥಿತರಾಗಿದ್ದ ಸತ್ಪುರು ಷರೆಲ್ಲರೂ ಏಕಕಂಠದಿಂದ ಸಾಧು ! ಸಾಧು ! ಬಹಳ ಚೆನ್ನಾಗಿದೆ ಎಂದು ಹೇಳಿ ಸಹದೇವನ ಮಾತನ್ನು ಸಮರ್ಥಿಸಿದರು. ॥ ೨೫ ॥ ಯುಧಿಷ್ಠಿರನು ಬ್ರಾಹ್ಮಣರ ಈ ಸಾಧುವಾದವನ್ನು ಕೇಳಿ, ಸಭ್ಯರ ಅಭಿಪ್ರಾಯವನ್ನು ತಿಳಿದವನಾಗಿ ಆನಂದದಿಂದಲೂ, ಪ್ರೇಮೋ ದ್ರೇಕದಿಂದಲೂ ವಿಹ್ವಲನಾಗಿ ಭಗವಾನ್ ಶ್ರೀಕೃಷ್ಣನ ಅಗ್ರಪೂಜೆ ಯನ್ನು ಮಾಡಿದನು. ॥ ೨೬ ॥ ಯುಧಿಷ್ಠಿರನು ತನ್ನ ಪತ್ನಿಯರು, ತಮ್ಮಂದಿರು, ಮಂತ್ರಿಗಳು ಮತ್ತು ಕುಟುಂಬ ವರ್ಗದವರೊಡನೆ ಅತ್ಯಂತ ಪ್ರೇಮದಿಂದಲೂ, ಆನಂದದಿಂದಲೂ ಭಗವಂತನ ಚರಣಾರವಿಂದಗಳನ್ನು ತೊಳೆದು ಲೋಕಪಾವನವಾದ ಚರಣ ತೀರ್ಥವನ್ನು ತಲೆಯಲ್ಲಿ ಧರಿಸಿಕೊಂಡನು. ॥ ೨೭ ॥ ಆಗ ಅವನು ಭಗವಂತನಿಗೆ ರೇಷ್ಮೆಯ ಪೀತಾಂಬರವನ್ನು, ಬಹುಮೂಲ್ಯವಾದ ಆಭರಣಗಳನ್ನು ಸಮರ್ಪಿಸಿದನು. ಆ ಸಮಯದಲ್ಲಿ ಅವನ ಕಣ್ಣುಗಳು ಪ್ರೇಮಾನಂದದ ಅಶ್ರುಗಳಿಂದ ತುಂಬಿಹೋಗಿ ಭಗವಂತನನ್ನು ಸರಿಯಾಗಿ ನೋಡಲು ಸಾಧ್ಯವಾಗಲಿಲ್ಲ. ॥ ೨೮ ॥ ಹೀಗೆ ಅಗ್ರಪೂಜೆಯಿಂದ ಸಮ್ಮಾನಿತನಾದ ಶ್ರೀಕೃಷ್ಣನನ್ನು ನೋಡಿ ಆ ಸಭೆಯಲ್ಲಿ ಕುಳಿತಿದ್ದವರೆಲ್ಲರೂ ಕೈಜೋಡಿಸಿಕೊಂಡು ಶ್ರೀಕೃಷ್ಣಾಯ ನಮೋ ನಮಃ, ಶ್ರೀಕೃಷ್ಣನಿಗೆ ಜಯವಾಗಲಿ ಎಂದು ಹೇಳಿಕೊಂಡು ನಮಸ್ಕರಿಸತೊಡಗಿದರು. ಆಗ ಆಕಾಶದಿಂದ ತಾನಾಗಿಯೇ ಪುಷ್ಪ ವೃಷ್ಟಿಯಾಗತೊಡಗಿತು. ॥ ೨೯ ॥

ಪರೀಕ್ಷಿತನೇ ! ತನ್ನ ಆಸನದಲ್ಲಿ ಕುಳಿತಿದ್ದ ಶಿಶುಪಾಲನು ಇದೆಲ್ಲ ವನ್ನು ನೋಡಿ-ಕೇಳುತ್ತಿದ್ದನು. ಭಗವಾನ್ ಶ್ರೀಕೃಷ್ಣನ ಗುಣಗಾನ ವನ್ನು ಕೇಳಿ ಕ್ರೋಧಗೊಂಡು ಎದ್ದುನಿಂತು, ತುಂಬಿದ ಸಭೆಯಲ್ಲಿ ಕೈಯನ್ನು ಮೇಲಕ್ಕೆತ್ತಿ ಅಸಹಿಷ್ಣುತೆಯಿಂದ, ನಿರ್ಭಯನಾಗಿ ಭಗವಂತನಿಗೆ ಕೇಳಿಸುವಂತೆ ಅತ್ಯಂತ ಕಠೋರವಾದ ಮಾತುಗಳನ್ನಾಡ ತೊಡಗಿದನು. ॥ ೩೦ ॥

ಈಶೋ ದುರತ್ಯಯಃ ಕಾಲ ಇತಿ ಸತ್ಯವತೀ ಶ್ರುತಿಃ ।
ವೃದ್ಧಾನಾಮಪಿ ಯದ್ಬುದ್ಧಿರ್ಬಾಲವಾಕ್ಯೈರ್ವಿಭದ್ಯತೇ
॥ ೩೧ ॥

ಯೂಯಂ ಪಾತ್ರವಿದಾಂ ಶ್ರೇಷ್ಠಾ ಮಾ ಮನ್ಧ್ವಂ ಬಾಲಭಾಷಿತಮ್ ।
ಸದಸಸ್ಪತಯಃ ಸರ್ವೇ ಕೃಷ್ಣೋ ಯತ್ಸಮ್ಮತೋಽರ್ಹಣೇ
॥ ೩೨ ॥

ತಪೋವಿದ್ಯಾವ್ರತಧರಾನ್ ಜ್ಞಾನವಿಧ್ವಸ್ತಕಲ್ಮಷಾನ್ ।
ಪರಮರ್ಷೀನ್ ಬ್ರಹ್ಮನಿಷ್ಠಾನ್ಲೋಕಪಾಲೈಶ್ಚ ಪೂಜಿತಾನ್
॥ ೩೩ ॥

ಸದಸಸ್ಪತೀನತಿಕ್ರಮ್ಯ ಗೋಪಾಲಃ ಕುಲಪಾಂಸನಃ ।
ಯಥಾ ಕಾಕಃ ಪುರೋಡಾಶಂ ಸಪರ್ಯಾಂ ಕಥಮರ್ಹತಿ
॥ ೩೪ ॥

ವರ್ಣಾಶ್ರಮಕುಲಾಪೇತಃ ಸರ್ವಧರ್ಮಬಹಿಷ್ಕೃತಃ ।
ಸ್ವೈರವರ್ತೀ ಗುಣೈರ್ಹೀನಃ ಸಪರ್ಯಾಂ ಕಥಮರ್ಹತಿ
॥ ೩೫ ॥

ಯಯಾತಿನೈಷಾಂ ಹಿ ಕುಲಂ ಶಪ್ತಂ ಸದ್ಭಿರ್ಬಹಿಷ್ಕೃತಮ್ ।
ವೃಥಾ ಪಾನರತಂ ಶಶ್ವತ್ಸಪರ್ಯಾಂ ಕಥಮರ್ಹತಿ
॥ ೩೬ ॥

ಬ್ರಹ್ಮರ್ಷಿಸೇವಿತಾನ್ ದೇಶಾನ್ ಹಿತ್ವೈತೇಽಬ್ರಹ್ಮವರ್ಚಸಮ್ ।
ಸಮುದ್ರಂ ದುರ್ಗಮಾಶ್ರಿತ್ಯ ಬಾಧಂತೇ ದಸ್ಯವಃ ಪ್ರಜಾಃ
॥ ೩೭ ॥

ಏವಮಾದೀನ್ಯಭದ್ರಾಣಿ ಬಭಾಷೇ ನಷ್ಟಮಂಗಲಃ ।
ನೋವಾಚ ಕಿಂಚಿದ್ಭಗವಾನ್ ಯಥಾ ಸಿಂಹಃ ಶಿವಾರುತಮ್
॥ ೩೮ ॥

ಭಗವನ್ನಿಂದನಂ ಶ್ರುತ್ವಾ ದುಃಸಹಂ ತತ್ಸಭಾಸದಃ ।
ಕರ್ಣೌ ಪಿಧಾಯ ನಿರ್ಜಗ್ಮುಃ ಶಪಂತಶ್ಚೇದಿಪಂ ರುಷಾ
॥ ೩೯ ॥

ಸಭ್ಯರೇ ! 'ಕಾಲನೇ ಈಶ್ವರನಾಗಿದ್ದಾನೆ' ಎಂದು ಹೇಳಿದ ಶ್ರುತಿಯ ಮಾತು ಅಕ್ಷರಶಃ ಸತ್ಯವಾಗಿದೆ. ಲಕ್ಷ-ಲಕ್ಷ ಪ್ರಯತ್ನ ಮಾಡಿದರೂ ಅದು ತನ್ನ ಕೆಲಸವನ್ನು ಮಾಡಿಯೇ ತೀರುತ್ತದೆ. ಇಲ್ಲಿ ಮಕ್ಕಳ ಮತ್ತು ಮೂರ್ಖರ ಮಾತುಗಳಿಂದ ದೊಡ್ಡ-ದೊಡ್ಡ ವಯೋವೃದ್ಧರ, ಜ್ಞಾನವೃದ್ಧರ ಬುದ್ಧಿಯೂ ಪಲ್ಲಟವಾಗುವುದು. ಇದರ ಪ್ರತ್ಯಕ್ಷಪ್ರಮಾಣವಾಗಿದೆ. ॥ ೩೧ ॥ ನೀವೆಲ್ಲರೂ ಅಗ್ರ ಪೂಜೆಗೆ ಅರ್ಹರಾರೆಂಬುದನ್ನು ನಿರ್ಣಯಿಸುವುದರಲ್ಲಿ ಸಮರ್ಥರಾಗಿರುವಿರಿ ಎಂದು ನಾನು ತಿಳಿದಿದ್ದೇನೆ. ಅದಕ್ಕಾಗಿ ಸದಸಸ್ಪತಿಗಳೇ ! ಬಾಲಕನಾದ ಸಹದೇವನು ಹೇಳಿದ – 'ಶ್ರೀಕೃಷ್ಣನೇ ಅಗ್ರಪೂಜೆಗೆ ಅರ್ಹನಾಗಿದ್ದಾನೆ' ಎಂಬ ಮಾತನ್ನು ನೀವು ಅನುಮೋದಿಸಬೇಡಿರಿ. ॥ ೩೨ ॥ ಇಲ್ಲಿ ದೊಡ್ಡ-ದೊಡ್ಡ ತಪಸ್ವಿಗಳು, ವಿದ್ವಾಂಸರು, ವ್ರತನಿಷ್ಠರು, ಜ್ಞಾನದ ಮೂಲಕ ತಮ್ಮ ಸಮಸ್ತ ಪಾಪ-ತಾಪಗಳನ್ನು ಶಾಂತಗೊಳಿಸಿದವರು, ಪರಮಜ್ಞಾನಿ ಪರಮ ಮರ್ಷಿಗಳಾದ ಬ್ರಹ್ಮನಿಷ್ಠರು ಮುಂತಾದವರು ಉಪಸ್ಥಿತರಾಗಿ ಇದ್ದಾರೆ. ಇಂತಹವರನ್ನು ದೊಡ್ಡ-ದೊಡ್ಡ ಲೋಕಪಾಲರೂ ಪೂಜಿಸುತ್ತಿರುವರು. ॥ ೩೩ ॥ ಯಜ್ಞದ ನ್ಯೂನಾತಿರೇಕವನ್ನು ಹೇಳುವಂತಹ ಆ ಸದಸತ್ಪತಿಗಳನ್ನು ಬಿಟ್ಟು ಈ ಕುಲಕಲಂಕನಾದ ಗೊಲ್ಲನು ಹೇಗೆ ತಾನೆ ಅಗ್ರಪೂಜೆಗೆ ಅಧಿಕಾರಿಯಾಗಬಲ್ಲನು ? ಎಂದಾದರೂ ಕಾಗೆಯು ಯಜ್ಞದ ಪುರೋಡಾಶಕ್ಕೆ ಅಧಿಕಾರಿಯಾಗಬಲ್ಲುದೇ ? ॥ ೩೪ ॥ ಇವನಿಗೆ ಯಾವುದೇ ವರ್ಣವಾಗಲಿ, ಆಶ್ರಮವಾಗಲೀ ಇಲ್ಲ, ಕುಲವೂ ಉನ್ನತವಾಗಿಲ್ಲ, ಎಲ್ಲ ಧರ್ಮಗಳಿಂದಲೂ ಹೊರಗಾಗಿರುವನು. ವೇದ ಮತ್ತು ಲೋಕ ಮರ್ಯಾದೆಗಳನ್ನು ಉಲ್ಲಂಘಿಸಿ ಮನಬಂದಂತೆ ವರ್ತಿಸುತ್ತಾನೆ. ಇವನಲ್ಲಿ ಯಾವುದೇ ಗುಣಗಳಿಲ್ಲ, ಇಂತಹ ಸ್ಥಿತಿಯಲ್ಲಿ ಇವನು ಅಗ್ರಪೂಜೆಗೆ ಹೇಗೆ ಅರ್ಹನಾಗಬಲ್ಲನು ? ॥ ೩೫ ॥ ಯಯಾತಿ ರಾಜನು ಇವನ ವಂಶಕ್ಕೆ ಶಪಿಸಿದುದು ನೀವೆಲ್ಲರೂ ತಿಳಿದಿರುವಿರಿ. ಅದಕ್ಕಾಗಿ ಸತ್ಪುರುಷರು ಈ ವಂಶವನ್ನು ಬಹಿಷ್ಕರಿಸಿರುವರು. ಇವರೆಲ್ಲರೂ ಸದಾಕಾಲ ಮಧುಪಾನದಲ್ಲೇ ಆಸಕ್ತರಾಗಿರುತ್ತಾರೆ. ಹೀಗಿರುವಾಗ ಇವನು ಅಗ್ರಪೂಜೆಗೆ ಹೇಗೆ ಯೋಗ್ಯನಾಗಬಲ್ಲನು ? ॥ ೩೬ ॥ ಇವರೆಲ್ಲರೂ ಬ್ರಹ್ಮರ್ಷಿಗಳಿಂದ ಸೇವಿತವಾದ ಮಥುರೆಯನ್ನು ತ್ಯಜಿಸಿ, ಬ್ರಹ್ಮವರ್ಚಸ್ಸಿನ ವಿರೋಧಿಯಾದ (ವೇದ ಚರ್ಚಾರಹಿತ) ಸಮುದ್ರದಲ್ಲಿ ದುರ್ಗವನ್ನು ರಚಿಸಿಕೊಂಡು ಇರುತ್ತಾರೆ. ಅಲ್ಲಿಂದ ಇವರು ಹೊರಗೆ ಬಂದಾಗ ಕಳ್ಳರಂತೆ ಪ್ರಜೆಗಳೆಲ್ಲರನ್ನೂ ತೊಂದರೆಪಡಿಸುತ್ತಾರೆ. ॥ ೩೭ ॥ ಪರೀಕ್ಷಿತನೇ ! ನಿರ್ಭಾಗ್ಯನಾದ ಶಿಶುಪಾಲನು ಹೀಗೆ ಅನೇಕ ಕರ್ಣಕಠೋರವಾದ ಮತ್ತು ಅಶುಭವಾದ ಮಾತುಗಳಿಂದ ಶ್ರೀಕೃಷ್ಣನನ್ನು ನಿಂದೆ ಮಾಡುತ್ತಿರಲು – ಸಿಂಹವು ನರಿಯ ಕೂಗನ್ನು ಅಲಕ್ಷಿಸುವಂತೆ ಭಗವಾನ್ ಶ್ರೀಕೃಷ್ಣನು ಅವನೊಡನೆ ಏನನ್ನು ಮಾತನಾಡಲಿಲ್ಲ. ॥ ೩೮ ॥ ಆದರೆ ಸಭಾಸರಿಗೆ ಭಗವಂತನ ನಿಂದೆಯನ್ನು ಕೇಳುವುದು ಅಸಹ್ಯವುಂಟಾಗಿ ತಮ್ಮ-ತಮ್ಮ ಕಿವಿಗಳನ್ನು ಮುಚ್ಚಿಕೊಂಡು ಸಿಟ್ಟಿನಿಂದ ಶಿಶುಪಾಲನನ್ನು ನಿಂದಿಸುತ್ತಾ ಸಭಾಭವನದಿಂದ ಹೊರಟುಹೋದರು. ॥ ೩೯ ॥

ನಿಂದಾಂ ಭಗವತಃ ಶೃಣ್ವಂಸ್ತತ್ಪರಸ್ಯ ಜನಸ್ಯ ವಾ ।
ತತೋ ನಾಪೈತಿ ಯಃ ಸೋಽಪಿ ಯಾತ್ಯಧಃ ಸುಕೃತಾಚ್ಚ್ಯುತಃ
॥ ೪೦ ॥

ತತಃ ಪಾಂಡುಸುತಾಃ ಕ್ರುದ್ಧಾ ಮತ್ಸ್ಯಕೈಕಯಸೃಂಜಯಾಃ ।
ಉದಾಯುಧಾಃ ಸಮುತ್ತಸ್ಥುಃ ಶಿಶುಪಾಲಜಿಘಾಂಸವಃ
॥ ೪೧ ॥

ತತಶ್ಚೈದ್ಯಸ್ತ್ವಸಂಭ್ರಾಂತೋ ಜಗೃಹೇ ಖಡ್ಗ ಚರ್ಮಣೇ ।
ಭರ್ತ್ಸಯನ್ ಕೃಷ್ಣಪಕ್ಷೀಯಾನ್ರಾಜ್ಞಃ ಸದಸಿ ಭಾರತ
॥ ೪೨ ॥

ತಾವದುತ್ಥಾಯ ಭಗವಾನ್ ಸ್ವಾನ್ನಿವಾರ್ಯ ಸ್ವಯಂ ರುಷಾ ।
ಶಿರಃ ಕ್ಷುರಾಂತಚಕ್ರೇಣ ಜಹಾರಾಪತತೋ ರಿಪೋಃ
॥ ೪೩ ॥

ಶಬ್ದಃ ಕೋಲಾಹಲೋಽಪ್ಯಾಸೀತ್ ಶಿಶುಪಾಲೇ ಹತೇ ಮಹಾನ್ ।
ತಸ್ಯಾನುಯಾಯಿನೋ ಭೂಪಾ ದುದ್ರುವುರ್ಜೀವಿತೈಷಿಣಃ
॥ ೪೪ ॥

ಚೈದ್ಯದೇಹೋತ್ಥಿತಂ ಜ್ಯೋತಿರ್ವಾಸುದೇವಮುಪಾವಿಶತ್ ।
ಪಶ್ಯತಾಂ ಸರ್ವಭೂತಾನಾಮುಲ್ಕೇವ ಭುವಿ ಖಾಚ್ಚ್ಯುತಾ
॥ ೪೫ ॥

ಜನ್ಮತ್ರಯಾನುಗುಣಿತವೈರಸಂರಬ್ಧಯಾ ಧಿಯಾ ।
ಧ್ಯಾಯಂಸ್ತನ್ಮಯತಾಂ ಯಾತೋ ಭಾವೋ ಹಿ ಭವಕಾರಣಮ್
॥ ೪೬ ॥

ಋತ್ವಿಗ್ಭ್ಯಃ ಸಸದಸ್ಯೇಭ್ಯೋ ದಕ್ಷಿಣಾಂ ವಿಪುಲಾಮದಾತ್ ।
ಸರ್ವಾನ್ ಸಂಪೂಜ್ಯ ವಿಧಿವಚ್ಚಕ್ರೇಽವಭೃಥಮೇಕರಾಟ್
॥ ೪೭ ॥

ಸಾಧಯಿತ್ವಾ ಕ್ರತುಂ ರಾಜ್ಞಃ ಕೃಷ್ಣೋ ಯೋಗೇಶ್ವರೇಶ್ವರಃ ।
ಉವಾಸ ಕತಿಚಿನ್ಮಾಸಾನ್ಸುಹೃದ್ವಿರಭಿಯಾಚಿತಃ
॥ ೪೮ ॥

ತತೋಽನುಜ್ಞಾಪ್ಯ ರಾಜಾನಮನಿಚ್ಛಂತಮಪೀಶ್ವರಃ ।
ಯಯೌ ಸಭಾರ್ಯಃ ಸಾಮಾತ್ಯಃ ಸ್ವಪುರಂ ದೇವಕೀಸುತಃ
॥ ೪೯ ॥

ವರ್ಣಿತಂ ತದುಪಾಖ್ಯಾನಂ ಮಯಾ ತೇ ಬಹುವಿಸ್ತರಮ್ ।
ವೈಕುಂಠವಾಸಿನೋರ್ಜನ್ಮ ವಿಪ್ರಶಾಪಾತ್ ಪುನಃ ಪುನಃ
॥ ೫೦ ॥

ಪರೀಕ್ಷಿದ್ರಾಜನೇ ! ಭಗವಂತನ ಅಥವಾ ಆವನ ಭಕ್ತರ ನಿಂದೆಯನ್ನು ಕೇಳಿ ಅಲ್ಲಿಂದ ಹೊರಟುಹೋಗದವನು ತನ್ನ ಶುಭಕರ್ಮಗಳಿಂದ ಚ್ಯುತನಾಗಿ, ಅವನ ಅಧೋಗತಿಯಾಗುತ್ತದೆ. ॥ ೪೦ ॥ ಪರೀಕ್ಷಿತನೇ ! ಶಿಶುಪಾಲನ ಶ್ರೀಕೃಷ್ಣನಿಂದಾವಾಕ್ಯಗಳಿಂದ ಅತಿ ಕ್ರುದ್ಧರಾದ ಪಾಂಡವ, ಮತ್ಸ್ಯ, ಕೇಕಯ ಮತ್ತು ಸೃಂಜಯ ನರಪತಿಗಳು ಶಿಶುಪಾಲನನ್ನು ಕೊಂದುಹಾಕಲೆಂದು ಆಯುಧಗಳನ್ನು ಧರಿಸಿ ಎದ್ದುನಿಂತರು. ॥ ೪೧ ॥ ಆದರೆ ಇದರಿಂದ ಶಿಶುಪಾಲನು ಗಾಬರಿಗೊಳ್ಳಲಿಲ್ಲ, ಅವನು ಹಿಂದೆ-ಮುಂದೆ ಯೋಚಿಸದೆ ತನ್ನ ಕತ್ತಿ ಗುರಾಣಿಗಳನ್ನು ಎತ್ತಿಕೊಂಡು ತುಂಬಿದ ಆ ಸಭೆಯಲ್ಲಿ ಶ್ರೀಕೃಷ್ಣನ ಪಕ್ಷಪಾತಿಗಳಾದ ರಾಜರೆದುರಿಗೆ ಯುದ್ಧಕ್ಕೆ ಸಿದ್ಧನಾದನು. ॥ ೪೨ ॥ ಅಷ್ಟರಲ್ಲಿ ಭಗವಾನ್ ಶ್ರೀಕೃಷ್ಣನು ಆಸನದಿಂದ ಮೇಲೆದ್ದು ತನ್ನ ಕಡೆಯವರೆಲ್ಲರನ್ನು ಹಿಂದಕ್ಕೆ ಸರಿಸಿ, ಪರಮ ಕ್ರುದ್ಧನಾಗಿ ಕತ್ತಿಯಂತೆ ಹರಿತವಾದ ಅಲಗಿನಿಂದ ಕೂಡಿದ್ದ ಚಕ್ರದ ಧಾರೆಯಿಂದ ತನ್ನ ಕಡೆಗೆ ನುಗ್ಗಿಬರುತ್ತಿದ್ದ ಶಿಶುಪಾಲನ ಶಿರಸ್ಸನ್ನು ಕತ್ತರಿಸಿ ಬಿಟ್ಟನು. ॥ ೪೩ ॥ ಶಿಶುಪಾಲನ ಸಂಹಾರವಾದೊಡನೆ ಆ ಸಭೆಯಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಶಿಶುಪಾಲನ ಅನುಯಾಯಿಗಳಾದ ರಾಜರು ಜೀವಿಸಿರಬೇಕೆಂಬ ಆಸೆಯಿಂದ ಅಲ್ಲಿಂದ ಪಲಾಯನ ಮಾಡಿದರು. ॥ ೪೪ ॥ ಉಲ್ಕೆಯು ಅಂತರಿಕ್ಷದಿಂದ ಭೂಮಿಗೆ ಬೀಳುವಂತೆ ಸಮಸ್ತರು ನೋಡುತ್ತಿರುವಂತೆ ಶಿಶುಪಾಲನ ಶರೀರದಿಂದ ಹೊರಟ ಅವನ ಜೀವಜ್ಯೋತಿಯು ಭಗವಾನ್ ಶ್ರೀಕೃಷ್ಣನಲ್ಲಿ ಸೇರಿಹೋಯಿತು. ॥ ೪೫ ॥ ಪರೀಕ್ಷಿತನೇ ! ಶಿಶಿಪಾಲನ ಅಂತಃಕರಣದಲ್ಲಿ ಮೂರು ಜನ್ಮಗಳಿಂದಲೂ ಒಂದೇ ಸಮನೆ ವೈರಭಾವವು ಬೆಳೆಯುತ್ತಲೇ ಇತ್ತು. ಹೀಗೆ ವೈರಭಾವದಿಂದಲೇ ಆಗಲಿ ಅವನು ಶ್ರೀಕೃಷ್ಣನನ್ನು ಸದಾ ಧ್ಯಾನಿಸುತ್ತಲೇ ಇದ್ದನು. ಈ ಕಾರಣದಿಂದಲೇ ಅವನು ವಿಷ್ಣುವಿನ ಪಾರ್ಷದರಲ್ಲಿ ಸೇರಿ ಹೋದನು. ಮರಣಾನಂತರ ದೊರೆಯುವ ಗತಿಗೆ ಭಾವವೇ ಕಾರಣವಾಗುತ್ತದೆ. ॥ ೪೬ ॥ ಶಿಶುಪಾಲನಿಗೆ ಸದ್ಗತಿಯುಂಟಾದ ಬಳಿಕ ಚಕ್ರವರ್ತಿ ಧರ್ಮರಾಜ ಯುಧಿಷ್ಠಿರನು ಆಚಾರ್ಯರಿಗೂ ಮತ್ತು ಋತ್ವಿಜರಿಗೂ ಹೇರಳವಾದ ದಕ್ಷಿಣೆಯನ್ನು ಕೊಟ್ಟು ಸತ್ಕರಿಸಿ ವಿಧಿಪೂರ್ವಕವಾಗಿ ಯಜ್ಞಾಂತ್ಯದ ಅವಭೃತಸ್ನಾನ ಮಾಡಿದನು. ॥ ೪೭ ॥

ಪರೀಕ್ಷಿತನೇ ! ಈ ಪ್ರಕಾರವಾಗಿ ಯೋಗೇಶ್ವರ ಭಗವಾನ್ ಶ್ರೀಕೃಷ್ಣನು ಯುಧಿಷ್ಠಿರನ ರಾಜಸೂಯ ಯಜ್ಞವನ್ನು ಪೂರ್ಣಗೊಳಿಸಿಕೊಟ್ಟು ತನ್ನ ನೆಂಟರಿಷ್ಟರ ಮತ್ತು ಸುಹೃದರ ಆಗ್ರಹದಿಂದ ಕೆಲವು ತಿಂಗಳುಗಳವರೆಗೆ ಅಲ್ಲೇ ಇದ್ದನು. ॥ ೪೮ ॥ ಅನಂತರ ಯುಧಿಷ್ಠಿರನಿಗೆ ಕಳಿಸಿಕೊಡಲು ಇಷ್ಟವಿಲ್ಲದಿದ್ದರೂ ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನು ಅವನಿಂದ ಬೀಳ್ಕೊಂಡು ತನ್ನ ರಾಣಿಯರೊಂದಿಗೆ, ಮಂತ್ರಿಗಳೊಡನೆ ಇಂದ್ರಪ್ರಸ್ಥದಿಂದ ದ್ವಾರಕೆಗೆ ಪ್ರಯಾಣ ಬೆಳೆಸಿದನು. ॥ ೪೯ ॥ ಪರೀಕ್ಷಿತನೇ ! ವೈಕುಂಠವಾಸಿಗಳಾದ ಜಯ-ವಿಜಯರು ಸನಕಾದಿಗಳ ಶಾಪದಿಂದ ಪುನಃ ಪುನಃ ಹುಟ್ಟಬೇಕಾಗಿ ಬಂದ ಉಪಾಖ್ಯಾನವನ್ನು ನಾನು ಹಿಂದೆ (ಸಪ್ತಮಸ್ಕಂಧದಲ್ಲಿ) ನಿನಗೆ ವಿಸ್ತಾರವಾಗಿ ಹೇಳಿಬಿಟ್ಟಿದ್ದೇನೆ.॥ ೫೦ ॥

ರಾಜಸೂಯಾವಭೃಥ್ಯೇನ ಸ್ನಾತೋ ರಾಜಾ ಯುಧಿಷ್ಠಿರಃ ।
ಬ್ರಹ್ಮಕ್ಷತ್ರಸಭಾಮಧ್ಯೇ ಶುಶುಭೇ ಸುರರಾಡಿವ
॥ ೫೧ ॥

ರಾಜ್ಞಾ ಸಭಾಜಿತಾಃ ಸರ್ವೇ ಸುರಮಾನವಖೇಚರಾಃ ।
ಕೃಷ್ಣಂ ಕ್ರತುಂ ಚ ಶಂಸಂತಃ ಸ್ವಧಾಮಾನಿ ಯಯುರ್ಮುದಾ
॥ ೫೨ ॥

ದುರ್ಯೋಧನಮೃತೇ ಪಾಪಂ
ಕಲಿಂ ಕುರುಕುಲಾಮಯಮ್ ।
ಯೋ ನ ಸೇಹೇ ಶ್ರಿಯಂ ಸ್ಫೀತಾಂ
ದೃಷ್ಟ್ವಾ ಪಾಂಡುಸುತಸ್ಯ ತಾಮ್ ॥ ೫೩ ॥

ಯ ಇದಂ ಕೀರ್ತಯೇದ್ವಿಷ್ಣೋಃ ಕರ್ಮ ಚೈದ್ಯವಧಾದಿಕಮ್ ।
ರಾಜಮೋಕ್ಷಂ ವಿತಾನಂ ಚ ಸರ್ವಪಾಪೈಃ ಪ್ರಮುಚ್ಯತೇ
॥ ೫೪ ॥

ರಾಜಸೂಯ ಯಾಗವನ್ನು ಮಾಡಿ ವಿಧಿವತ್ತಾಗಿ ಅವಭೃತ ಸ್ನಾನ ಮಾಡಿದ ಯುಧಿಷ್ಠಿರನು ಬ್ರಾಹ್ಮಣ ಮತ್ತು ಕ್ಷತ್ರಿಯರ ಸಭೆಯಲ್ಲಿ ದೇವೇಂದ್ರನಂತೆ ಪ್ರಕಾಶಿಸಿದನು. ॥ ೫೧ ॥ ಯುಧಿಷ್ಠಿರನು ದೇವತೆಗಳನ್ನು ಮನುಷ್ಯರನ್ನು ಆಕಾಶಚಾರಿಗಳನ್ನು ಯಥಾಯೋಗ್ಯವಾಗಿ ಸತ್ಕರಿಸಿದನು. ಅವರೆಲ್ಲರೂ ರಾಜಸೂಯ ಯಜ್ಞವನ್ನು ಮತ್ತು ಭಗವಾನ್ ಶ್ರೀಕೃಷ್ಣನನ್ನು ಪ್ರಶಂಸಿಸುತ್ತಾ ಬಹಳ ಆನಂದದಿಂದ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ॥ ೫೨ ॥ ಪರೀಕ್ಷಿತನೇ! ಎಲ್ಲರೂ ಸಂತೋಷಗೊಂಡರು ಆದರೆ ದುರ್ಯೋಧನನಿಗೆ ಪಾಂಡವರ ಈ ಉಜ್ವಲ ರಾಜ್ಯಲಕ್ಷ್ಮಿಯ ಉತ್ಕರ್ಷವುಸಹಿಸದಾಯಿತು. ಏಕೆಂದರೆ, ಅವನು ಸ್ವಭಾವದಿಂದಲೇ ಪಾಪಿಯೂ, ಕಲಹಪ್ರಿಯನೂ ಮತ್ತು ಕುರುಕುಲವನ್ನು ನಾಶಗೊಳಿಸುವಂತಹ ಒಂದು ರೋಗವೇ ಆಗಿದ್ದನು. ॥ ೫೩ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ-ಶಿಶುಪಾಲ ವಧೆ, ಜರಾಸಂಧ ವಧೆ, ಸೆರೆಯಾಳಾದ ರಾಜರ ಬಿಡುಗಡೆ, ಯಜ್ಞಾನುಷ್ಠಾನ ಮೊದಲಾದ ಈ ಲೀಲೆಗಳನ್ನು ಕೀರ್ತನೆ ಮಾಡುವವನು ಸಮಸ್ತ ಪಾಪಗಳಿಂದ ಮುಕ್ತನಾಗಿ ಹೋಗುವನು. ॥ ೫೪ ॥

ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೭೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಶಿಶುಪಾಲವಧೋ ನಾಮ ಚತುಃಸಪ್ತತಿತಮೋऽಧ್ಯಾಯಃ ॥ ೭೪ ॥

ಎಪ್ಪತ್ತೈದನೆಯ ಅಧ್ಯಾಯ

ರಾಜಸೂಯ ಯಜ್ಞದ ಪರಿಸಮಾಪ್ತಿ - ದುರ್ಯೋಧನನಿಗಾದ ಅವಮಾನ

ರಾಜೋವಾಚ

ಅಜಾತಶತ್ರೋಸ್ತಂ ದೃಷ್ಟ್ವಾ ರಾಜಸೂಯಮಹೋದಯಮ್ ।
ಸರ್ವೇ ಮುಮುದಿರೇ ಬ್ರಹ್ಮನ್ನದೇವಾ ಯೇ ಸಮಾಗತಾಃ
॥ ೧ ॥

ದುರ್ಯೋಧನಂ ವರ್ಜಯಿತ್ವಾ ರಾಜಾನಃ ಸರ್ಷಯಃ ಸುರಾಃ ।
ಇತಿ ಶ್ರುತಂ ನೋ ಭಗವಂಸ್ತತ್ರ ಕಾರಣಮುಚ್ಯತಾಮ್
॥ ೨ ॥

ಋಷಿರುವಾಚ

ಪಿತಾಮಹಸ್ಯ ತೇ ಯಜ್ಞೇ ರಾಜಸೂಯೇ ಮಹಾತ್ಮನಃ ।
ಬಾಂಧವಾಃ ಪರಿಚರ್ಯಾಯಾಂ ತಸ್ಯಾಸನ್ ಪ್ರೇಮಬಂಧನಾಃ
॥ ೩ ॥

ಭೀಮೋ ಮಹಾನಸಾಧ್ಯಕ್ಷೋ ಧನಾಧ್ಯಕ್ಷಃ ಸುಯೋಧನಃ ।
ಸಹದೇವಸ್ತು ಪೂಜಾಯಾಂ ನಕುಲೋ ದ್ರವ್ಯಸಾಧನೇ
॥ ೪ ॥

ಗುರುಶುಶ್ರೂಷಣೇ ಜಿಷ್ಣುಃ ಕೃಷ್ಣಃ ಪಾದಾವನೇಜನೇ ।
ಪರಿವೇಷಣೇ ದ್ರುಪದಜಾ ಕರ್ಣೋ ದಾನೇ ಮಹಾಮನಾಃ
॥ ೫ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ಅಜಾತಶತ್ರುವಾದ ಯುಧಿಷ್ಠಿರನ ರಾಜಸೂಯ ಯಜ್ಞವನ್ನು ನೋಡಲು ಬಂದಿರುವ ಮನುಷ್ಯರೂ, ರಾಜರೂ, ಋಷಿ-ಮುನಿಗಳೂ, ದೇವತೆಗಳೂ ಮುಂತಾದವರೆಲ್ಲರೂ ಆನಂದಿತರಾದರು. ಆದರೆ ದುರ್ಯೋಧನನಿಗೆ ಮಾತ್ರ ಸಂತೋಷವಾಗಲಿಲ್ಲ ದುಃಖವಾಯಿತು ಎಂದು ನೀವು ಹೇಳಿದಿರಿ. ಇದರ ಕಾರಣವನ್ನು ದಯವಿಟ್ಟು ಹೇಳಿರಿ. ॥ ೧-೨ ॥

ಶ್ರೀಶುಕಮಹಾಮುನಿಗಳು ಹೇಳಿದರು - ಪರೀಕ್ಷಿತನೇ! ನಿನ್ನ ಪಿತಾಮಹ ಯುಧಿಷ್ಠಿರನು ಮಹಾತ್ಮನಾಗಿದ್ದನು. ಅವನ ಪ್ರೇಮ ಬಂಧನಕ್ಕೆ ಸಿಲುಕಿದ ಎಲ್ಲ ಬಂಧುಬಾಂಧವರು ರಾಜಸೂಯ ಯಜ್ಞದಲ್ಲಿ ಬೇರೆ-ಬೇರೆ ಸೇವಾಕಾರ್ಯಗಳನ್ನು ವಹಿಸಿಕೊಂಡಿದ್ದರು. ॥ ೩ ॥ ಭೀಮಸೇನನು ಪಾಕಶಾಲೆಗೆ ಅಧ್ಯಕ್ಷನಾಗಿದ್ದನು. ದುರ್ಯೋಧನನು ಧನಾಕ್ಷನಾಗಿದ್ದನು. ಸಹದೇವನು ಅಭ್ಯಾಗತರ ಸ್ವಾಗತ-ಸತ್ಕಾರದಲ್ಲಿ ನಿಯುಕ್ತನಾಗಿದ್ದನು. ನಕುಲನು ಸಾಮಗ್ರಿಗಳನ್ನು ಸಂಗ್ರಹಿಸುವ ಕಾರ್ಯವನ್ನು ನೋಡಿಕೊಳ್ಳುತ್ತಿದ್ದನು. ॥ ೪ ॥ ಅರ್ಜುನನು ಗುರುಜನರ ಸೇವಾ-ಶುಶ್ರೂಷೆಗಳ ಹೊಣೆಯನ್ನು ಹೊತ್ತಿದ್ದನು. ಭಗವಾನ್ ಶ್ರೀಕೃಷ್ಣನು ಅತಿಥಿಗಳ ಕಾಲುಗಳನ್ನು ತೊಳೆಯುವ ಕೆಲಸಮಾಡುತ್ತಿದ್ದನು. ದ್ರೌಪದಾದೇವಿಯು ಊಟ ಬಡಿಸುವ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದಳು. ಉದಾರಶಿರೋಮಣಿಯಾದ ಕರ್ಣನು ಮುಕ್ತಹಸ್ತದಿಂದ ದಾನಮಾಡುತ್ತಿದ್ದನು. ॥ ೫ ॥

ಯುಯುಧಾನೋ ವಿಕರ್ಣಶ್ಚ ಹಾರ್ದಿಕ್ಯೋ ವಿದುರಾದಯಃ ।
ಬಾಹ್ಲೀಕಪುತ್ರಾ ಭೂರ್ಯಾದ್ಯಾ ಯೇ ಚ ಸಂತರ್ದನಾದಯಃ
॥ ೬ ॥

ನಿರೂಪಿತಾ ಮಹಾಯಜ್ಞೇ ನಾನಾಕರ್ಮಸು ತೇ ತದಾ ।
ಪ್ರವರ್ತಂತೇ ಸ್ಮ ರಾಜೇಂದ್ರ ರಾಜ್ಞಃ ಪ್ರಿಯಚಿಕೀರ್ಷವಃ
॥ ೭ ॥

ಋತ್ವಿಕ್ಸದಸ್ಯಬಹುವಿತ್ಸು ಸುಹೃತ್ತಮೇಷು
ಸ್ನಿಗ್ಧೇಷು ಸೂನೃತಸಮರ್ಹಣದಕ್ಷಿಣಾಭಿಃ ।
ಚೈದ್ಯೇ ಚ ಸಾತ್ವತಪತೇಶ್ಚರಣಂ ಪ್ರವಿಷ್ಟೇ
ಚಕ್ರುಸ್ತತಸ್ತ್ವವಭೃಥಸ್ನಪನಂ ದ್ಯುನದ್ಯಾಮ್ ॥ ೮ ॥

ಮೃದಂಗಶಂಖಪಣವಧುಂಧುರ್ಯಾನಕಗೋಮುಖಾಃ ।
ವಾದಿತ್ರಾಣಿ ವಿಚಿತ್ರಾಣಿ ನೇದುರಾವಭೃಥೋತ್ಸವೇ
॥ ೯ ॥

ನರ್ತಕ್ಯೋ ನನೃತುರ್ಹೃಷ್ಟಾ ಗಾಯಕಾ ಯೂಥಶೋ ಜಗುಃ ।
ವೀಣಾವೇಣುತಲೋನ್ನಾದಸ್ತೇಷಾಂ ಸ ದಿವಮಸ್ಪೃಶತ್
॥ ೧೦ ॥

ಚಿತ್ರಧ್ವಜಪತಾಕಾಗ್ರೈರಿಭೇಂದ್ರಸ್ಯಂದನಾರ್ವಭಿಃ ।
ಸ್ವಲಂಕೃತೈರ್ಭಟೈರ್ಭೂಪಾ ನಿರ್ಯಯೂ ರುಕ್ಮಮಾಲಿನಃ
॥ ೧೧ ॥

ಯದುಸೃಂಜಯಕಾಂಭೋಜಕುರುಕೇಕಯಕೋಸಲಾಃ ।
ಕಂಪಯಂತೋ ಭುವಂ ಸೈನ್ಯೈರ್ಯಜಮಾನಪುರಸ್ಸರಾಃ
॥ ೧೨ ॥

ಸದಸ್ಯರ್ತ್ವಿಗ್ದ್ವಿಜಶ್ರೇಷ್ಠಾ ಬ್ರಹ್ಮಘೋಷೇಣ ಭೂಯಸಾ ।
ದೇವರ್ಷಿಪಿತೃಗಂಧರ್ವಾಸ್ತುಷ್ಟುವುಃ ಪುಷ್ಪವರ್ಷಿಣಃ
॥ ೧೩ ॥

ಸ್ವಲಂಕೃತಾ ನರಾ ನಾರ್ಯೋ ಗಂಧಸ್ರಗ್ಭೂಷಣಾಂಬರೈಃ ।
ವಿಲಿಂಪಂತ್ಯೋಽಭಿಷಿಂಚಂತ್ಯೋ ವಿಜಹ್ರುರ್ವಿವಿಧೈ ರಸೈಃ
॥ ೧೪ ॥

ತೈಲಗೋರಸಗಂಧೋದಹರಿದ್ರಾಸಾಂದ್ರಕುಂಕುಮೈಃ ।
ಪುಂಭಿರ್ನಿಷ್ಟಾಃ ಪ್ರಲಿಂಪಂತ್ಯೋ ವಿಜಹ್ರುರ್ವಾರಯೋಷಿತಃ
॥ ೧೫ ॥

ಗುಪ್ತಾ ನೃಭಿರ್ನಿರಗಮನ್ನುಪಲಬ್ಧುಮೇತದ್
ದೇವ್ಯೋ ಯಥಾ ದಿವಿ ವಿಮಾನವರೈರ್ನ ದೇವ್ಯಃ ।
ತಾ ಮಾತುಲೇಯಸಖಿಭಿಃ ಪರಿಷಿಚ್ಯಮಾನಾಃ
ಸವ್ರೀಡಹಾಸವಿಕಸದ್ವದನಾ ವಿರೇಜುಃ ॥ ೧೬ ॥

ಪರೀಕ್ಷಿತನೇ ! ಹೀಗೆಯೆ ಸಾತ್ಯಕಿ, ವಿಕರ್ಣ, ಹಾರ್ದಿಕ್ಯ, ವಿದುರ, ಭೂರಿಶ್ರವಾ ಮೊದಲಾದ ಬಾಹ್ಲಿಕನ ಮಕ್ಕಳು, ಸಂತರ್ದನರೇ ಮುಂತಾದವರೆಲ್ಲರೂ ರಾಜಸೂಯ ಯಜ್ಞದಲ್ಲಿ ಬೇರೆ-ಬೇರೆ ಕಾರ್ಯದಲ್ಲಿ ನಿಯುಕ್ತರಾದರು. ಎಲ್ಲರ ಆಶಯವೂ ಕೂಡ ಯುಧಿಷ್ಠಿರನಿಗೆ ಪ್ರಿಯ ಮತ್ತು ಹಿತವನ್ನುಂಟುಮಾಡಬೇಕೆಂದೇ ಇತ್ತು. ॥ ೬-೭ ॥

ಪರೀಕ್ಷಿತನೇ ! ಹೀಗೆ ಋತ್ವಿಜರು, ಸದಸ್ಯರು, ವಿದ್ವಾಂಸರು, ಇಷ್ಟ-ಮಿತ್ರರು, ಬಂಧು-ಬಾಂಧವರು ಸಮಸ್ತರೂ ಪ್ರಿಯವಚನ ಗಳಿಂದಲೂ, ಮರ್ಯಾದೆಗಳಿಂದಲೂ, ದಕ್ಷಿಣೆಗಳಿಂದಲೂ ಯಥಾ ಯೋಗ್ಯವಾಗಿ ಪೂಜಿಸಲ್ಪಟ್ಟು ಶಿಶುಪಾಲನು ಭಕ್ತವತ್ಸಲ ನಾದ ಭಗವಂತನ ಚರಣಗಳಲ್ಲಿ ಸೇರಿ ಹೋದನು. ಬಳಿಕ ಧರ್ಮ ರಾಜನು ದೇವಗಂಗೆಯಲ್ಲಿ ಅವಭೃತಸ್ನಾನಕ್ಕಾಗಿ ಹೊರಟನು.॥ ೮ ॥ ಅವನು ಅವಭೃತಸ್ನಾನ ಮಾಡತೊಡಗಿದಾಗ ಮೃದಂಗ, ಶಂಖ, ಪಣವ, ಆನಕ, ನಗಾರಿ, ಢಕ್ಕೆ ಗೋಮುಖ ಮೊದಲಾದ ಮಂಗಳ ವಾದ್ಯಗಳು ಮೊಳಗಿದವು. ॥ ೯ ॥ ನರ್ತಕಿಯರು ನರ್ತನ ವಾಡಿದರು. ಗಾಯಕರು ಗುಂಪು-ಗುಂಪಾಗಿ ಹಾಡತೊಡಗಿದರು. ವೀಣೆ, ಕೊಳಲು, ತಾಳಗಳು ನುಡಿಸಲ್ಪಟ್ಟವು. ಇವುಗಳ ಶಬ್ದವು ಆಕಾಶದಲ್ಲೆಲ್ಲ ಪ್ರತಿಧ್ವನಿಸಿತು. ॥ ೧೦ ॥ ಸುವರ್ಣದ ಹಾರ ಗಳಿಂದ ಸಮಲಂಕೃತರಾದ ಯದು, ಸೃಂಜಯ, ಕಾಂಬೋಜ, ಕುರು, ಕೇಕಯ ಮತ್ತು ಕೋಸಲ ದೇಶಗಳ ರಾಜರು ಬಣ್ಣ-ಬಣ್ಣದ ಧ್ವಜಪತಾಕೆಗಳಿಂದ ಅಲಂಕೃತವಾಗಿದ್ದ ಮಹಾಗಜಗಳ ಮೇಲೂ, ಕುದುರೆಗಳ ಮೇಲೂ, ರಥಗಳಲ್ಲಿಯೂ ಕುಳಿತು ಪದಾತಿ ಸೈನಿಕರೊಡನೆ ಭೂಮಿಯನ್ನೇ ನಡುಗಿಸುತ್ತಾ ಯುಧಿಷ್ಠಿರ ಮಹಾ ರಾಜನನ್ನು ಮುಂದುಮಾಡಿಕೊಂಡು ಅವಭೃತಕ್ಕೆ ಹೋಗುತ್ತಿ ದ್ದರು. ॥ ೧೧-೧೨ ॥ ಯಜ್ಞದ ಸದಸ್ಯರು, ಋತ್ವಿಜರು, ಬಹಳಷ್ಟು ಮಂದಿ ಬ್ರಾಹ್ಮಣಶ್ರೇಷ್ಠರು ಉಚ್ಚ ಸ್ವರದಲ್ಲಿ ಮಂತ್ರಗಳನ್ನು ಪಠಿಸತೊಡಗಿದರು. ದೇವತೆಗಳು, ಋಷಿಗಳು, ಪಿತೃಗಳು, ಗಂಧ ರ್ವರು ಆಕಾಶದಿಂದ ಹೂಮಳೆಗರೆಯುತ್ತಾ ಯುಧಿಷ್ಠಿರನನ್ನು ಹೊಗಳುತ್ತಿದ್ದರು. ॥ ೧೩. ॥ ಗಂಧಮಾಲ್ಯಾಭರಣ ವಸ್ತ್ರಗಳಿಂದ ಸಮಲಂಕೃತರಾಗಿದ್ದ ಇಂದ್ರಪ್ರಸ್ಥದ ನರ-ನಾರಿಯರು ಓಕುಳಿಯ ನೀರು, ಹಾಲು, ಎಣ್ಣೆ, ಬೆಣ್ಣೆ ಮುಂತಾದವುಗಳನ್ನು ಒಬ್ಬರ ಮೇಲೊಬ್ಬರು ಎರಚಾಡುತ್ತಾ, ಆಟವಾಡುತ್ತಾ ಹಿಂಬಾಲಿಸು ತ್ತಿದ್ದರು. ॥ ೧೪ ॥ ವಾರಾಂಗನೆಯರು ಎಣ್ಣೆ, ಹಾಲು, ತುಪ್ಪ, ಬೆಣ್ಣೆ, ಪನ್ನೀರು, ಅರಸಿನ ಇವೇ ಮುಂತಾದುವನ್ನು ಬೆರಸಿದ ಕೇಸರೀ ಮಿಶ್ರಿತವಾದ ಕೆಂಪುನೀರನ್ನು ಪುರುಷರ ಮೇಲೆ ಸುರಿಯು ವರು ಮತ್ತು ಪುರುಷರೂ ಅವರ ಮೇಲೆ ಎರಚುತ್ತಾ ಓಕುಳಿಯ ಆಟವನ್ನಾಡುತ್ತಿದ್ದರು. ॥ ೧೫ ॥

ಆ ಸಮಯದಲ್ಲಿ ಅವಭೃತೋತ್ಸವವನ್ನು ನೋಡುವ ಸಲು ವಾಗಿ ಶ್ರೇಷ್ಠವಾದ ವಿಮಾನಗಳಲ್ಲಿ ಕುಳಿತು ಆಕಾಶದಲ್ಲಿ ಅಸಂಖ್ಯಾತ ದೇವಿಯರು ಉಪಸ್ಥಿತರಾಗಿರುವಂತೆಯೇ ಇಂದ್ರಪ್ರಸ್ಥದ ರಾಜ ಮಹಿಷಿಯರು ಸೈನಿಕರಿಂದ ಸಂರಕ್ಷಿತರಾಗಿ ಸುಂದರವಾದ ಪಲ್ಲಕ್ಕಿ ಗಳಲ್ಲಿ ಕುಳಿತು ಆಗಮಿಸಿದ್ದರು. ಪಾಂಡವರ ಸೋದರಮಾವನ

ತಾ ದೇವರಾನುತ ಸಖೀನ್ಸಿಷಿಚುರ್ದ್ಯುತೀಭಿಃ
ಕ್ಲಿನ್ನಾಂಬರಾ ವಿವೃತಗಾತ್ರಕುಚೋರುಮಧ್ಯಾಃ ।
ಔತ್ಸುಕ್ಯಮುಕ್ತಕಬರಾಚ್ಚ್ಯವಮಾನಮಾಲ್ಯಾಃ
ಕ್ಷೋಭಂ ದಧುರ್ಮಲಧಿಯಾಂ ರುಚಿರೈರ್ವಿಹಾರೈಃ ॥ ೧೭ ॥

ಸ ಸಮ್ರಾಡ್ ರಥಮಾರೂಢಃ ಸದಶ್ವಂ ರುಕ್ಮಮಾಲಿನಮ್ ।
ವ್ಯರೋಚತ ಸ್ವಪತ್ನೀಭಿಃ ಕ್ರಿಯಾಭಿಃ ಕ್ರತುರಾಡಿವ
॥ ೧೮ ॥

ಪತ್ನೀಸಂಯಾಜಾವಭೃಥ್ಯೈಶ್ಚರಿತ್ವಾ ತೇ ತಮೃತ್ವಿಜಃ ।
ಅಚಾಂತಂ ಸ್ನಾಪಯಾಂಚಕ್ರುರ್ಗಂಗಾಯಾಂ ಸಹ ಕೃಷ್ಣಯಾ
॥ ೧೯ ॥

ದೇವದುಂದುಭಯೋ ನೇದುರ್ನರದುಂದುಭಿಭಿಃ ಸಮಮ್ ।
ಮುಮುಚುಃ ಪುಷ್ಪವರ್ಷಾಣಿ ದೇವರ್ಷಿಪಿತೃಮಾನವಾಃ
॥ ೨೦ ॥

ಸಸ್ನುಸ್ತತ್ರ ತತಃ ಸರ್ವೇ ವರ್ಣಾಶ್ರಮಯುತಾ ನರಾಃ ।
ಮಹಾಪಾತಕ್ಯಪಿ ಯತಃ ಸದ್ಯೋ ಮುಚ್ಯೇತ ಕಿಲ್ಬಿಷಾತ್
॥ ೨೧ ॥

ಅಥ ರಾಜಾಽಹತೇ ಕೌಮೇ ಪರಿಧಾಯ ಸ್ವಲಂಕೃತಃ ।
ಋತ್ವಿಕ್ಸದಸ್ಯವಿಪ್ರಾದೀನಾನರ್ಚಾಭರಣಾಂಬರೈಃ
॥ ೨೨ ॥

ಬಂಧುಜ್ಞಾತಿನೃಪಾನ್ಮಿತ್ರಸುಹೃದೋಽನ್ಯಾಂಶ್ಚ ಸರ್ವಶಃ ।
ಅಭೀಕ್ಷ್ಣಂ ಪೂಜಯಾಮಾಸ ನಾರಾಯಣಪರೋ ನೃಪಃ
॥ ೨೩ ॥

ಸರ್ವೇ ಜನಾಃ ಸುರರುಚೋ ಮಣಿಕುಂಡಲಸ್ರ-
ಗುಷ್ಣೀಷಕಂಚುಕದುಕೂಲಮಹಾರ್ಘ್ಯಹಾರಾಃ ।
ನಾರ್ಯಶ್ಚ ಕುಂಡಲಯುಗಾಲಕವೃಂದ ಜುಷ್ಟ-
ವಕ್ತ್ರಶ್ರಿಯಃ ಕನಕಮೇಖಲಯಾ ವಿರೇಜುಃ ॥ ೨೪ ॥

ಮಗನಾದ ಶ್ರೀಕೃಷ್ಣ ಮತ್ತು ಅವನ ಸ್ನೇಹಿತರು ಆ ರಾಣಿಯರ ಮೇಲೆ ಓಕುಳಿಯನ್ನು ಚೆಲ್ಲುತ್ತಿದ್ದರು ಇದರಿಂದ ರಾಜಮಹಿಷಿಯರ ಮುಖವು ನಾಚಿಕೆಯಿಂದಲೂ, ಮಂದಹಾಸದಿಂದಲೂ ವಿಕಸಿತವಾಗಿ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿತ್ತು. ॥ ೧೬ ॥ ಹಾಗೆಯೇ ಪಲ್ಲಕ್ಕಿಗಳಲ್ಲಿ ಕುಳಿತಿದ್ದ ರಾಣಿಯರೂ ಕೂಡ ಭಾವ ಮೈದುನರ ಮೇಲೂ, ಸಖಿಯರ ಮೇಲೂ ಜೀರ್ಕೊಳವೆಯಿಂದ ಓಕುಳಿಯನ್ನು ಎರಚುತ್ತಿದ್ದರು. ಹೀಗೆ ಪರಸ್ಪರ ಓಕುಳಿಯ ಆಟವನ್ನಾಡುತ್ತಿದ್ದಾಗ ಸ್ತ್ರೀಯರ ಬಟ್ಟೆಗಳೆಲ್ಲವೂ ಒದ್ದೆಯಾಗಿದ್ದವು. ಆಟವಾಡುವ ಸಂಭ್ರಮದಲ್ಲಿ ಅವರ ಮುಡಿಗಳು ಸಡಿಲವಾಗಿ ಮುಡಿದ ಹೂವುಗಳು ನಕ್ಷತ್ರಗಳಂತೆ ಉದುರುತ್ತಿದ್ದವು. ಪರೀಕ್ಷಿತನೇ ! ಅವರ ಇಂತಹ ಸುಂದರವಾದ ಮತ್ತು ಪವಿತ್ರವಾದ ವಿಹಾರವನ್ನು ಕಂಡು ಮಲಿನವಾದ ಅಂತಃಕರಣವುಳ್ಳ ಪುರುಷರ ಮನಸ್ಸು ಕ್ಷೋಭೆಗೊಂಡವು. ॥ ೧೭ ॥

ಚಕ್ರವರ್ತಿ ಮಹಾರಾಜ ಯುಧಿಷ್ಠಿರನು ದ್ರೌಪದಿಯೇ ಮೊದಲಾದ ತನ್ನ ಪತ್ನಿಯರೊಡನೆ ಸುಂದರವಾದ ಕುದುರೆಗಳನ್ನು ಹೂಡಲ್ಪಟ್ಟ ಸುವರ್ಣಮಾಲೆಗಳಿಂದ ಸಮಲಂಕೃತವಾದ ದಿವ್ಯರಥದಲ್ಲಿ ಕುಳಿತು ಪ್ರಯಾಜವೇ ಮೊದಲಾದ ಯಜ್ಞಕ್ರಿಯೆಗಳಿಂದ ಕೂಡಿ ಮೂರ್ತಿವತ್ತಾಗಿ ಆವಿರ್ಭವಿಸಿದ ರಾಜಸೂಯ ಯಜ್ಞದಂತೆಯೇ ಪ್ರಕಾಶಿಸಿದನು. ॥ ೧೮ ॥ ಅನಂತರ ಋತ್ವಿಜರು ಪತ್ನೀಸಂಯಾಜ (ಒಂದು ಯಜ್ಞಕ್ರಿಯೆ)ವೆಂಬ ವಿಶೇಷಯಾಗವನ್ನೂ ಮತ್ತು ಯಜ್ಞಾಂತ-ಸ್ನಾನದ ಸಂಬಂಧವಾದ ಕರ್ಮಗಳನ್ನು ಯುಧಿಷ್ಠಿರನಿಂದ ಮಾಡಿಸಿ, ಅವನಿಂದ ಶುದ್ಧಾಚಮನ ಮಾಡಿಸಿದನಂತರ ದ್ರೌಪದಿಯೊಡನೆ ಗಂಗಾಸ್ನಾನವನ್ನು ಮಾಡಿಸಿದರು. ॥ ೧೯ ॥ ಆ ಸಮಯದಲ್ಲಿ ನುಡಿಸಿದ ದುಂದುಭಿಗಳೊಡನೆ ದೇವದುಂದುಭಿಗಳೂ ಮೊಳಗಿದವು. ದೇವರ್ಷಿ-ಪಿತೃ-ಮನುಷ್ಯರು ಧರ್ಮರಾಜನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ॥ ೨೦ ॥ ಮಹಾರಾಜ ಯುಧಿಷ್ಠಿರನು ದ್ರೌಪದಿಯೊಡನೆ ಅವಭೃತ ಸ್ನಾನಮಾಡಿದನಂತರ ಇತರ ಸಮಸ್ತ ವರ್ಣದವರೂ ಗಂಗೆಯಲ್ಲಿ ಸ್ನಾನ ಮಾಡಿದರು. ಈ ಪವಿತ್ರಸ್ನಾನದಿಂದ ಮಹಾಪಾತಕಿಯಾದರೂ ತನ್ನ ಪಾಪಗಳಿಂದ ಕ್ಷಣದಲ್ಲೇ ಮುಕ್ತನಾಗಿ ಹೋಗುತ್ತಾನೆ. ॥ ೨೧ ॥ ಬಳಿಕ ಯುಧಿಷ್ಠಿರನು ನವೀನ ರೇಷ್ಮೆಯ ಪಂಚೆ-ಉತ್ತರೀಯವನ್ನು ಧರಿಸಿಕೊಂಡು ವಿಧ-ವಿಧವಾದ ಆಭರಣಗಳಿಂದ ಅಲಂಕೃತನಾದನು. ಮತ್ತೆ ಋತ್ವಿಜರಿಗೆ, ಸದಸ್ಯರಿಗೆ, ಬ್ರಾಹ್ಮಣರಿಗೆ ವಸ್ತ್ರಾಭೂಷಣಗಳನ್ನು ಕೊಟ್ಟು ಸತ್ಕರಿಸಿದನು. ॥ ೨೨ ॥ ನಾರಾಯಣಪರಾಯಣನೂ, ಎಲ್ಲರಲ್ಲಿಯೂ ಭಗವಂತನನ್ನೇ ಕಾಣುವವನೂ, ಶ್ರೀಕೃಷ್ಣನ ಪರಮಭಕ್ತನೂ ಆದ ಯುಧಿಷ್ಠಿರನು ಬಂಧುಗಳನ್ನೂ, ಜ್ಞಾತಿಗಳನ್ನೂ, ರಾಜರನ್ನೂ, ಸುಹೃದರನ್ನೂ, ಸಮಸ್ತರನ್ನೂ ಪುನಃ ಪುನಃ ಪೂಜಿಸಿ ಸತ್ಕರಿಸಿದನು. ॥ ೨೩ ॥ ಆ ಸಮಯದಲ್ಲಿ ಸಮಸ್ತ ಜನರೂ ರತ್ನಕುಂಡಲಗಳಿಂದಲೂ, ಪುಷ್ಪಹಾರಗಳಿಂದಲೂ, ರುಮಾಲುಗಳಿಂದಲೂ, ಕವಚಗಳಿಂದಲೂ, ಪಟ್ಟೆವಸ್ತ್ರಗಳಿಂದಲೂ, ಬಹು ಮೂಲ್ಯ ರತ್ನಹಾರಗಳಿಂದಲೂ ಸಮಲಂಕೃತರಾಗಿ ದೇವತೆಗಳಂತೆ

ಅಥರ್ತ್ವಿಜೋ ಮಹಾಶೀಲಾಃ ಸದಸ್ಯಾ ಬ್ರಹ್ಮವಾದಿನಃ ।
ಬ್ರಹ್ಮಕ್ಷತ್ರಿಯವಿಟ್ಶೂದ್ರಾ ರಾಜಾನೋ ಯೇ ಸಮಾಗತಾಃ
॥ ೨೫ ॥

ದೇವರ್ಷಿಪಿತೃಭೂತಾನಿ ಲೋಕಪಾಲಾಃ ಸಹಾನುಗಾಃ ।
ಪೂಜಿತಾಸ್ತಮನುಜ್ಞಾಪ್ಯ ಸ್ವಧಾಮಾನಿ ಯಯುರ್ನೃಪ
॥ ೨೬ ॥

ಹರಿದಾಸ್ಯ ರಾಜರ್ಷೇ ರಾಜಸೂಯಮಹೋದಯಮ್ ।
ನೈವಾತೃಪ್ಯನ್ ಪ್ರಶಂಸಂತಃ ಪಿಬನ್ಮರ್ತ್ಯೋಽಮೃತಂ ಯಥಾ
॥ ೨೭ ॥

ತತೋ ಯುಧಿಷ್ಠಿರೋ ರಾಜಾ ಸುಹೃತ್ಸಂಬಂಧಿ ಬಾಂಧವಾನ್ ।
ಪ್ರೇಮ್ಣಾ ನಿವಾಸಯಾಮಾಸ ಕೃಷ್ಣಂ ಚ ತ್ಯಾಗಕಾತರಃ
॥ ೨೮ ॥

ಭಗವಾನಪಿ ತತ್ರಾಂಗ ನ್ಯವಾತ್ಸೀತ್ತತ್ಪ್ರಿಯಂಕರಃ ।
ಪ್ರಸ್ಥಾಪ್ಯ ಯದುವೀರಾಂಶ್ಚ ಸಾಂಬಾದೀಂಶ್ಚ ಕುಶಸ್ಥಲೀಮ್
॥ ೨೯ ॥

ಇತ್ಥಂ ರಾಜಾ ಧರ್ಮಸುತೋ ಮನೋರಥಮಹಾರ್ಣವಮ್ ।
ಸುದುಸ್ತರಂ ಸಮುತ್ತೀರ್ಯ ಕೃಷ್ಣೇನಾಸೀದ್ಗತಜ್ವರಃ
॥ ೩೦ ॥

ಏಕದಾಂತಃಪುರೇ ತಸ್ಯ ವೀಕ್ಷ್ಯ ದುರ್ಯೋಧನಃ ಶ್ರಿಯಮ್ ।
ಅತಪ್ಯದ್ರಾಜಸೂಯಸ್ಯ ಮಹಿತ್ವಂ ಚಾಚ್ಯುತಾತ್ಮನಃ
॥ ೩೧ ॥

ಯಸ್ಮಿನ್ ನರೇಂದ್ರದಿತಿಜೇಂದ್ರಸುರೇಂದ್ರಲಕ್ಷ್ಮೀ-
ರ್ನಾನಾ ವಿಭಾಂತಿ ಕಿಲ ವಿಶ್ವಸೃಜೋಪಕಲ್ಪ್ತಾಃ ।
ತಾಭಿಃ ಪತೀಂದ್ರುಪದರಾಜಸುತೋಪತಸ್ಥೇ
ಯಸ್ಯಾಂ ವಿಷಕ್ತಹೃದಯಃ ಕುರುರಾಡತಪ್ಯತ್ ॥ ೩೨ ॥

ಶೋಭಿಸುತ್ತಿದ್ದರು. ಸ್ತ್ರೀಯರೂ ಕೂಡ ಥಳ-ಥಳಿಸುವ ಓಲೆಗಳನ್ನು ಧರಿಸಿ, ಗುಂಗುರು ಕೂದಲುಗಳಿಂದ ಅಲಂಕೃತವಾದ ಮುಖ ಕಮಲಗಳಿಂದಲೂ, ಸುವರ್ಣಮಯವಾದ ಸೊಂಟಪಟ್ಟಿಯಿಂದಲೂ ಕೂಡಿ ಅತ್ಯಂತ ಶೋಭಾಯಮಾನರಾಗಿ ಕಾಣುತ್ತಿದ್ದರು. ॥ ೨೪ ॥

ಪರೀಕ್ಷಿತನೇ ! ರಾಜಸೂಯ ಯಜ್ಞಕ್ಕೆ ಆಗಮಿಸಿದ್ದ ಶೀಲವಂತರಾದ ಋತ್ವಿಜರು, ವೇದಪಾಠಿಗಳಾದ ಸದಸ್ಯರು, ಬ್ರಾಹ್ಮಣ ಕ್ಷತ್ರಿಯ-ವೈಶ್ಯ-ಶೂದ್ರರು, ರಾಜರು, ದೇವತೆಗಳು, ಋಷಿಗಳು, ಮುನಿಗಳು, ಪಿತೃದೇವತೆಗಳು, ಇತರ ಪ್ರಾಣಿಗಳೂ ತಮ್ಮ-ತಮ್ಮ ಅನುಯಾಯಿಗಳೊಂದಿಗೆ ಆಗಮಿಸಿದ್ದ ಲೋಕಪಾಲರು - ಇವರೆಲ್ಲರನ್ನೂ ಧರ್ಮರಾಜನಾದ ಯುಧಿಷ್ಠಿರನು ಯಥೋಚಿತವಾಗಿ ಪೂಜಿಸಿ ಸತ್ಕರಿಸಿದನು. ಅನಂತರ ಅವರೆಲ್ಲರೂ ರಾಜನ ಅನುಮತಿಯನ್ನು ಪಡೆದು ತಮ್ಮ-ತಮ್ಮ ನಿವಾಸಸ್ಥಾನಗಳಿಗೆ ಹೊರಟು ಹೋದರು. ॥ ೨೫-೨೬ ॥ ಪರೀಕ್ಷಿದ್ರಾಜನೇ ! ಅಮೃತಪಾನ ಮಾಡುತ್ತಾ-ಮಾಡುತ್ತಾ ಮನುಷ್ಯನು ತೃಪ್ತನಾಗದಿರುವಂತೆಯೇ ಹರಿದಾಸನಾದ, ರಾಜರ್ಷಿಯಾದ ಯುಧಿಷ್ಠಿರನ ರಾಜಸೂಯ ಯಾಗವನ್ನು ಎಷ್ಟು ಹೊಗಳಿದರೂ ಜನರಿಗೆ ತೃಪ್ತಿಯೇ ಆಗುತ್ತಿರಲಿಲ್ಲ. ॥ ೨೭ ॥ ಬಳಿಕ ಯುಧಿಷ್ಠಿರನು ಪ್ರಯಾಣ ಹೊರಟಿದ್ದ ತನ್ನ ಸುಹೃದರನ್ನು, ನೆಂಟರಿಷ್ಟರನ್ನು, ಬಂಧುಗಳನ್ನು ಮತ್ತು ಶ್ರೀಕೃಷ್ಣನನ್ನು ಅವರ ವಿಯೋಗವನ್ನು ಸಹಿಸಿಕೊಳ್ಳಲಾರದೆ ಪ್ರೇಮದಿಂದ ಅವರೆಲ್ಲರನ್ನೂ ತಡೆಹಿಡಿದು ಇರಿಸಿಕೊಂಡನು. ॥ ೨೮ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಯದುವಂಶದ ವೀರರಾದ ಸಾಂಬರೇ ಮೊದಲಾದವರನ್ನು ದ್ವಾರಕೆಗೆ ಕಳಿಸಿಕೊಟ್ಟು ತಾನು ಯುಧಿಷ್ಠಿರರಾಜನ ಅಭಿಲಾಷೆಯನ್ನು ಪೂರ್ಣಗೊಳಿಸಲಿಕ್ಕಾಗಿ, ಅವನಿಗೆ ಆನಂದವನ್ನುಂಟುಮಾಡುವುದಕ್ಕಾಗಿ ಸ್ವಲ್ಪಕಾಲ ಅಲ್ಲೇ ಇರಲು ಬಯಸಿದನು. ॥ ೨೯ ॥ ಹೀಗೆ ಧರ್ಮನಂದನನಾದ ಯುಧಿಷ್ಠಿರನು ದಾಟಲು ಅತ್ಯಂತ ದುಸ್ತರವಾಗಿದ್ದ ಮನೋರಥವೆಂಬ ಮಹಾಸಮುದ್ರವನ್ನು ಭಗವಾನ್ ಶ್ರೀಕೃಷ್ಣನ ಕೃಪಾವಿಶೇಷದಿಂದ ಸುಲಭವಾಗಿ ದಾಟಿ ನಿಶ್ಚಿಂತನಾದನು. ॥ ೩೦ ॥

ಹಾಗೆ ಉಳಿದುಕೊಂಡವರಲ್ಲಿ ದುರ್ಯೋಧನನು ಒಬ್ಬನು. ಒಂದು ದಿನ ಭಗವಂತನ ಪರಮಪ್ರೇಮಿ ಯುಧಿಷ್ಠಿರ ರಾಜನ ಅಂತಃಪುರದ ಸೌಂದರ್ಯ - ಸಂಪತ್ತನ್ನೂ, ರಾಜಸೂಯಯಜ್ಞದಿಂದ ಪ್ರಾಪ್ತವಾದ ಮಹತ್ವವನ್ನು ನೋಡಿದ ದುರ್ಯೋಧನನ ಮನಸ್ಸು ಮತ್ಸರದಿಂದ ಕುದಿಯಲು ತೊಡಗಿತು. ॥ ೩೧ ॥ ಪರೀಕ್ಷಿತನೇ ! ಪಾಂಡವರಿಗಾಗಿ ಮಯನಿಂದ ನಿರ್ಮಿಸಿಕೊಟ್ಟಿದ್ದ ಆ ಸಭಾಭವನದಲ್ಲಿ ನರೇಂದ್ರರ, ದೈತ್ಯೇಂದ್ರರ ಮತ್ತು ಸುರೇಂದ್ರರ ವೈಭವವು ಎದ್ದು ಕಾಣುತ್ತಿತ್ತು. ನಾನಾ ಪ್ರಕಾರದ ಭೋಗಸಾಮಗ್ರಿಗಳು ಆ ಸಭಾಭವನದಲ್ಲಿದ್ದು, ಅವುಗಳ ಮೂಲಕ ದ್ರೌಪದಿಯು ತನ್ನ ಪತಿಗಳ ಸೇವೆ ಮಾಡುತ್ತಿದ್ದಳು. ಅಂತಹ ರಾಜಭವನದಲ್ಲಿ ಆ ದಿನಗಳಲ್ಲಿ ಶ್ರೀಕೃಷ್ಣನ ಸಾವಿರಾರು ರಾಣಿಯರು ವಾಸಿಸುತ್ತಿದ್ದರು. ಅವರು ನಿತಂಬಗಳ ಭಾರದಿಂದ ನಿಧಾನವಾಗಿ ನಡೆಯುತ್ತಿದ್ದರು. ಆಗ ಅವರ ಕಾಲ್ಗೆಜ್ಜೆಗಳ ಝಣ-ಝಣ ನಿನಾದವು ಎಲ್ಲೆಡೆ ವ್ಯಾಪಿಸಿತ್ತು. ಸುಂದರವಾದ ಕಟಿಭಾಗವುಳ್ಳ ಅವರು ಧರಿಸಿದ್ದ ಬಿಳಿಯ ಮುತ್ತಿನ ಹಾರಗಳು ಕುಚಗಳಿಗೆ ಲೇಪಿತವಾದ ಕುಂಕುಮ

ಯಸ್ಮಿಂಸ್ತದಾ ಮಧುಪತೇರ್ಮಹಿಷೀಸಹಸ್ರಂ
ಶ್ರೋಣೀಭರೇಣ ಶನಕೈಃ ಕ್ವಣದಂಘ್ರಿಶೋಭಮ್ ।
ಮಧ್ಯೇ ಸುಚಾರು ಕುಚಕುಂಕುಮಶೋಣಹಾರಂ
ಶ್ರೀಮನ್ಮುಖಂ ಪ್ರಚಲಕುಂಡಲಕುಂತಲಾಢ್ಯಮ್ ॥ ೩೩ ॥

ಸಭಾಯಾಂ ಮಯಕೃಪ್ತಾಯಾಂ ಕ್ವಾಪಿ ಧರ್ಮಸುತೋಽರಾಟ್ ।
ವೃತೋಽನುಜೈರ್ಬಂಧುಭಿಶ್ಚಕೃಷ್ಣೇನಾಪಿ ಸ್ವಚಕ್ಷುಷಾ
॥ ೩೪ ॥

ಆಸೀನಃ ಕಾಂಚನೇ ಸಾಕ್ಷಾದಾಸನೇ ಮಘವಾನಿವ ।
ಪಾರಮೇಷ್ಠ್ಯಶ್ರಿಯಾ ಜುಷ್ಟಃ ಸ್ತೂಯಮಾನಶ್ಚ ವಂದಿಭಿಃ
॥ ೩೫ ॥

ತತ್ರ ದುರ್ಯೋಧನೋ ಮಾನೀ ಪರೀತೋ ಭ್ರಾತೃಭಿರ್ನೃಪ ।
ಕಿರೀಟಮಾಲೀ ನ್ಯವಿಶದಸಿಹಸ್ತಃ ಕ್ಷಿಪನ್ರುಷಾ
॥ ೩೬ ॥

ಸ್ಥಲೇಽಭ್ಯಗೃಹ್ಣದ್ವಸ್ತ್ರಾಂತಂ ಜಲಂ ಮತ್ವಾ ಸ್ಥಲೇಽಪತತ್ ।
ಜಲೇ ಚ ಸ್ಥಲವದ್ಭ್ರಾಂತ್ಯಾ ಮಯಮಾಯಾವಿಮೋಹಿತಃ
॥ ೩೭ ॥

ಜಹಾಸ ಭೀಮಸ್ತಂ ದೃಷ್ಟ್ವಾ ಸ್ತ್ರಿಯೋ ನೃಪತಯೋಽಪರೇ ।
ನಿವಾರ್ಯಮಾಣಾ ಅಪ್ಯಂಗ ರಾಜ್ಞಾ ಕೃಷ್ಣಾನುಮೋದಿತಾಃ
॥ ೩೮ ॥

ಸ ವ್ರೀಡಿತೋಽವಾಗ್ವದನೋ ರುಷಾ ಜ್ವಲನ್
ನಿಷ್ಕ್ರಮ್ಯ ತೂಷ್ಣೀಂ ಪ್ರಯಯೌ ಗಜಾಹ್ವಯಮ್ ।
ಹಾಹೇತಿ ಶಬ್ದಃ ಸುಮಹಾನಭೂತ್ಸಭಾ-
ಮಜಾತಶತ್ರ್ವಿಮನಾ ಇವಾಭವತ್ ।
ಬಭೂವ ತೂಷ್ಣೀಂ ಭಗವಾನ್ಭುವೋ ಭರಂ
ಸಮುಜ್ಜಿಹೀರ್ಷುರ್ಭಗವಾನಿತಿ ಸ್ಮ ಯದ್ದೃಶಾ ॥ ೩೯ ॥

ಏತತ್ತೇಽಭಿಹಿತಂ ರಾಜನ್ ಯತ್ಪೃಷ್ಟೋಽಹಮಿಹ ತ್ವಯಾ ।
ಸುಯೋಧನಸ್ಯ ದೌರಾತ್ಮ್ಯಂ ರಾಜಸೂಯೇ ಮಹಾಕ್ರತೌ
॥ ೪೦ ॥

ಕೇಸರಿಯಿಂದಾಗಿ ಕೆಂಪಾಗಿ ಕಾಣುತ್ತಿದ್ದವು. ಕುಂಡಲಗಳು ಮತ್ತು ಮುಂಗುರುಳುಗಳ ನಲಿದಾಟದಿಂದ ಅವರ ಮುಖದ ಶೋಭೆಯು ಇನ್ನೂ ಹೆಚ್ಚಾಗುತ್ತಿತ್ತು. ಇಂತಹ ವೈಭವವನ್ನು ಕಂಡ ದುರ್ಯೋಧನನು ಅಂತಹ ವೈಭವವು ತನಗಿಲ್ಲವಲ್ಲ ಎಂದು ಪರಿತಪಿಸಿದನು. ಪರೀಕ್ಷಿತನೇ ! ನಿಜ ಹೇಳಬೇಕೆಂದರೆ, ದುರ್ಯೋಧನನ ಮನಸ್ಸು ದ್ರೌಪದಿಯಲ್ಲಿ ಆಸಕ್ತವಾಗಿದ್ದುದೇ ಅವನ ಸಂತಾಪಕ್ಕೆ ಮುಖ್ಯ ಕಾರಣವಾಗಿತ್ತು. ॥ ೩೨-೩೩ ॥

ಒಂದು ದಿನ ರಾಜಾಧಿರಾಜನಾದ ಯುಧಿಷ್ಠಿರ ಮಹಾರಾಜನು ತನ್ನ ಅನುಜರಿಂದಲೂ, ಸಂಬಂಧಿಗಳಿಂದಲೂ, ತನ್ನ ಕಣ್ಣಿನಂತೆಯೂ, ಪರಮಹಿತೈಷಿಯೂ ಆದ ಭಗವಾನ್ ಶ್ರೀಕೃಷ್ಣನೊಡನೆ ಮಯಸಭೆಯಲ್ಲಿ ಸ್ವರ್ಣ ಸಿಂಹಾಸನದಲ್ಲಿ ದೇವೇಂದ್ರನಂತೆ ವಿರಾಜಮಾನನಾಗಿದ್ದನು. ಅವನಲ್ಲಿದ್ದ ಭೋಗ-ಸಾಮಗ್ರಿಗಳೂ, ರಾಜ್ಯಲಕ್ಷ್ಮಿಯೂ ಬ್ರಹ್ಮನ ಐಶ್ವರ್ಯಕ್ಕೆ ಸಮಾನವಾಗಿತ್ತು. ವಂದೀಜನರು ಅವನನ್ನು ಸ್ತುತಿಸುತ್ತಿದ್ದರು. ॥ ೩೪-೩೫ ॥ ಅದೇ ಸಮಯಕ್ಕೆ ಅಭಿಮಾನಿಯಾದ ದುರ್ಯೋಧನನು ತನ್ನ ತಮ್ಮಂದಿರಾದ ದುಃಶಾಸನರೇ ಮೊದಲಾದವರೊಂದಿಗೆ ಅಲ್ಲಿಗೆ ಬಂದನು. ಅವನ ತಲೆಯಲ್ಲಿ ಕಿರೀಟ, ಕತ್ತಿನಲ್ಲಿ ಹಾರಗಳು, ಕೈಯಲ್ಲಿ ಖಡ್ಗವಿದ್ದು, ಅವನು ಕ್ರೋಧಗೊಂಡು ದ್ವಾರಪಾಲಕರನ್ನು ತಿರಸ್ಕರಿಸುತ್ತಾ ಪ್ರವೇಶಿಸಿದನು. ॥ ೩೬॥ ಆ ಸಭಾಭವನದಲ್ಲಿ ಮಯನು ನಿರ್ಮಿಸಿದ ಮಾಯೆಯಿಂದಾಗಿ ದುರ್ಯೋಧನನು ಮೋಹಿತನಾಗಿ ನೆಲವನ್ನು ಜಲವೆಂದೂ ಭ್ರಮಿಸಿ ತನ್ನ ಬಟ್ಟೆಗಳನ್ನು ಎತ್ತಿ ಹಿಡಿದನು ಹಾಗೂ ಜಲವನ್ನು ನೆಲವೆಂದು ತಿಳಿದು ಅದರಲ್ಲಿ ಬಿದ್ದುಬಿಟ್ಟನು. ॥೩೭ ॥ ಅವನು ಬಿದ್ದುದನ್ನು ನೋಡಿ ಭೀಮಸೇನ, ರಾಣಿಯರು ಹಾಗೂ ನೆರೆದಿದ್ದ ರಾಜರೆಲ್ಲರೂ ನಗತೊಡಗಿದರು. ಯುಧಿಷ್ಠಿರನು ನಗಬಾರದೆಂದು ತಡೆಯತ್ತಿದ್ದರೂ, ಅವರಿಗೆ ಶ್ರೀಕೃಷ್ಣನ ಸಂಕೇತ-ಅನುಮೋದನೆಯೂ ದೊರಕಿತ್ತು. ॥ ೩೮ ॥ ಇದರಿಂದ ದುರ್ಯೋಧನನು ನಾಚಿಕೊಂಡು ಅವನ ರೋಮ ರೋಮಗಳೆಲ್ಲ ಕ್ರೋಧದಿಂದ ಉರಿಯತೊಡಗಿತು. ಅವನು ತಲೆತಗ್ಗಿಸಿಕೊಂಡು, ಏನನ್ನೂ ಮಾತನಾಡದೆ ಹಸ್ತಿನಾಪುರಕ್ಕೆ ಹೊರಟು ಹೋದನು. ಈ ಘಟನೆಯನ್ನು ನೋಡಿ ಸತ್ಪುರಷರಲ್ಲಿ ಹಾಹಾಕಾರವೆದ್ದಿತು. ಧರ್ಮರಾಜ ಯುಧಿಷ್ಠಿರನ ಮನಸ್ಸು ಖಿನ್ನವಾಯಿತು. ಪರೀಕ್ಷಿತನೇ ! ಇದೆಲ್ಲವೂ ನಡೆದರೂ ಶ್ರೀಕೃಷ್ಣನು ಸುಮ್ಮನಿದ್ದನು. ಯಾವುದೇ ಪ್ರಕಾರದಿಂದ ಭೂಭಾರವು ತಗ್ಗಬೇಕೆಂಬುದೇ ಅವನ ಇಚ್ಛೆಯಿತ್ತು. ನಿಜಹೇಳಬೇಕಾದರೆ ಅವನ ಮಾಯೆಯಿಂದಲೇ ದುರ್ಯೋಧನನಿಗೆ ಅಂತಹ ಭ್ರಮೆ ಉಂಟಾಗಿತ್ತು. ॥ ೩೯ ॥ ಪರೀಕ್ಷಿತನೇ ! ಆ ಮಹಾರಾಜಸೂಯ ಯಜ್ಞದಲ್ಲಿ ದುರ್ಯೋಧನನಿಗೆ ಏಕೆ ಮತ್ಸರವುಂಟಾಗಿತ್ತು ? ಎಂದು ನೀನು ಕೇಳಿದ್ದೆಯಲ್ಲ ! ಅದೆಲ್ಲವನ್ನು ನಾನು ನಿನಗೆ ವಿಸ್ತಾರವಾಗಿ ತಿಳಿಸಿದ್ದೇನೆ. ॥ ೪೦ ॥

ಎಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೭೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ದುರ್ಯೋಧನಮಾನಭಂಗೋ ನಾಮ ಪಂಚಸಪ್ತತಿತಮೋಽಧ್ಯಾಯಃ ॥ ೭೫ ॥

ಎಪ್ಪತ್ತಾರನೆಯ ಅಧ್ಯಾಯ

ಶಾಲ್ವನೊಡನೆ ಯಾದವರ ಯುದ್ಧ

ಶ್ರೀಶುಕ ಉವಾಚ

ಅಥಾನ್ಯದಪಿ ಕೃಷ್ಣಸ್ಯ ಶೃಣು ಕರ್ಮಾದ್ಭುತಂ ನೃಪ।
ಕ್ರೀಡಾನರಶರೀರಸ್ಯ ಯಥಾ ಸೌಭಪತಿರ್ಹತಃ
॥ ೧ ॥

ಶಿಶುಪಾಲಸಖಿಃ ಶಾಲ್ವೋ ರುಕ್ಮಿಣ್ಯುದ್ವಾಹ ಆಗತಃ।
ಯದುಭಿರ್ನಿರ್ಜಿತಃ ಸಂಖ್ಯೇ ಜರಾಸಂಧಾದಯಸ್ತಥಾ
॥ ೨ ॥

ಶಾಲ್ವಃ ಪ್ರತಿಜ್ಞಾಮಕರೋತ್ ಶೃಣ್ವತಾಂ ಸರ್ವಭೂಭುಜಾಮ್।
ಅಯಾದವೀಂ ಕ್ಷ್ಮಾಂ ಕರಿಷ್ಯೇ ಪೌರುಷಂ ಮಮ ಪಶ್ಯತ
॥ ೩ ॥

ಇತಿ ಮೂಢಃ ಪ್ರತಿಜ್ಞಾಯ ದೇವಂ ಪಶುಪತಿಂ ಪ್ರಭುಮ್।
ಆರಾಧಯಾಮಾಸ ನೃಪ ಪಾಂಸುಮುಷ್ಟಿಂ ಸಕೃದ್ದಸನ್
॥ ೪ ॥

ಸಂವತ್ಸರಾಂತೇ ಭಗವಾನಾಶುತೋಷ ಉಮಾಪತಿಃ।
ವರೇಣಚ್ಛಂದಯಾಮಾಸ ಶಾಲ್ವಂ ಶರಣಮಾಗತಮ್
॥ ೫ ॥

ದೇವಾಸುರಮನುಷ್ಯಾಣಾಂ ಗಂಧರ್ವೋರಗರಕ್ಷಸಾಮ್।
ಅಭೇದ್ಯಂ ಕಾಮಗಂ ವವ್ರೇ ಸ ಯಾನಂ ವೃಷ್ಣಿಭೀಷಣಮ್
॥ ೬ ॥

ತಥೇತಿ ಗಿರಿಶಾದಿಷ್ಟೋ ಮಯಃ ಪರಪುರಂಜಯಃ।
ಪುರಂ ನಿರ್ಮಾಯ ಶಾಲ್ವಾಯ ಪ್ರಾದಾತ್ಸೌಭಮಯಯ್ಮಯಮ್
॥ ೭ ॥

ಸ ಲಬ್ಧ್ವಾ ಕಾಮಗಂ ಯಾನಂ ತಮೋಧಾಮ ದುರಾಸದಮ್।
ಯಯೌ ದ್ವಾರವತೀಂ ಶಾಲ್ವೋ ವೈರಂ ವೃಷ್ಣಿಕೃತಂ ಸ್ಮರನ್
॥ ೮ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಪರೀಕ್ಷಿತನೇ ! ಲೀಲಾಮಾನುಷ ವಿಗ್ರಹನಾದ ಭಗವಾನ್ ಶ್ರೀಕೃಷ್ಣನ ಮತ್ತೊಂದು ಅದ್ಭುತವಾದ ಚರಿತ್ರೆಯನ್ನು ಹೇಳುವೆನು ; ಕೇಳು. ಇದರಲ್ಲಿ ಸೌಭವೆಂಬ ವಿಮಾನಕ್ಕೆ ಒಡೆಯನಾದ ಶಾಲ್ವನು ಶ್ರೀಕೃಷ್ಣನಿಂದ ಹೇಗೆ ಹತನಾದನೆಂಬುದನ್ನು ಹೇಳಲಾಗುವುದು. ॥ ೧ ॥ ಶಾಲ್ವನು ಶಿಶುಪಾಲನ ಸ್ನೇಹಿತನಾಗಿದ್ದು ರುಕ್ಮಿಣಿಯ ವಿವಾಹದ ಸಂದರ್ಭದಲ್ಲಿ ಶಿಶುಪಾಲನ ದಿಬ್ಬಣದೊಂದಿಗೆ ಇವನೂ ಬಂದಿದ್ದನು. ಆ ಸಮಯದಲ್ಲಿ ಯಾದವವೀರರು ಯುದ್ಧದಲ್ಲಿ ಜರಾಸಂಧರೇ ಮೊದಲಾದವರೊಂದಿಗೆ ಶಾಲ್ವನನ್ನು ಗೆದ್ದುಕೊಂಡಿದ್ದರು. ॥ ೨ ॥ ಆ ದಿನ ಎಲ್ಲ ರಾಜರ ಮುಂದೆ ಶಾಲ್ವನು ಹೀಗೆ ಪ್ರತಿಜ್ಞೆಮಾಡಿದ್ದನು 'ನಾನು ಈ ಭೂಮಂಡಲವನ್ನು ಯಾದವರಿಂದ ರಹಿತವನ್ನಾಗಿಸಿ ಬಿಡುತ್ತೇನೆ. ಅಂತಹ ನನ್ನ ಪೌರುಷವನ್ನು ನೀವು ನೋಡವಿರಂತೆ.' ॥ ೩ ॥ ಪರೀಕ್ಷಿತನೇ ! ಮೂರ್ಖನಾದ ಶಾಲ್ವನು ಹೀಗೆ ಪ್ರತಿಜ್ಞೆಮಾಡಿ ದೇವಾಧಿದೇವನಾದ ಭಗವಾನ್ ಪಶುಪತಿಯ ಆರಾಧನೆಯನ್ನು ಪ್ರಾರಂಭಿಸಿದನು. ಅವನು ದಿನಕ್ಕೆ ಒಂದು ಮುಷ್ಟಿಯಷ್ಟು ಬೂದಿಯನ್ನು ಮಾತ್ರ ಸೇವಿಸುತ್ತಿದ್ದನು. ॥ ೪ ॥ ಉಮಾಪತಿಯಾದ ಶಿವನು ಬಹಳ ಬೇಗ ಸಂತುಷ್ಟನಾಗುವವನಾದರೂ ಶಾಲ್ವನ ಮನಸ್ಸಿನಲ್ಲಿದ್ದ ದುರಭಿಪ್ರಾಯವನ್ನು ಗ್ರಹಿಸಿ ಒಂದು ವರ್ಷದ ಮೇಲೆಯೇ ಪ್ರಸನ್ನನಾಗಿ ಶರಣಾಗತನಾದ ಶಾಲ್ವನಿಗೆ ವರವನ್ನು ಕೇಳಿಕೊಳ್ಳುವಂತೆ ಅನುಗ್ರಹಿಸಿದನು. ॥ ೫ ॥ ಆಗ ಶಾಲ್ವನು – ದೇವಾಸುರ-ಮನುಷ್ಯರಿಂದಲೂ, ಗಂಧರ್ವೋರಗ ರಾಕ್ಷಸರಿಂದಲೂ ಭೇದಿಸಲಾಗದ, ಇಚ್ಛೆಬಂದಡೆಗೆ ಹೋಗುವ, ವೃಷ್ಣಿವಂಶದವರಿಗೆ ಭಯವನ್ನುಂಟುಮಾಡುವ ವಿಮಾನವೊಂದನ್ನು ದಯಪಾಲಿಸುವಂತೆ ಪರಶಿವನಲ್ಲಿ ಕೇಳಿಕೊಂಡನು. ॥ ೬ ॥ ಹಾಗೆಯೇ ಆಗಲೆಂದು ಹೇಳಿ ಭಗವಾನ್ ಶಂಕರನು ಅಂತಹ ಅಪೂರ್ವವಾದ ವಿಮಾನವೊಂದನ್ನು ನಿರ್ಮಿಸಿಕೊಡುವಂತೆ ದಾನವ ಶಿಲ್ಪಿಯಾದ ಮಯಾಸುರನಿಗೆ ಆಜ್ಞಾಪಿಸಿದನು. ಶತ್ರು ಪಟ್ಟಣವನ್ನು ಜಯಿಸುವ ಸಾಮರ್ಥ್ಯವುಳ್ಳ ಮಯಾಸುರನು ಶಿವನ ಆಜ್ಞೆಯಂತೆ ಲೋಹಮಯವಾದ ಸೌಭವೆಂಬ ವಿಮಾನವನ್ನು ನಿರ್ಮಿಸಿ ಶಾಲ್ವನಿಗೆ ಕೊಟ್ಟನು. ॥ ೭ ॥ ಅದ್ಭುತವಾದ ನಗರದಂತೆ ಇದ್ದ ಆ ವಿಮಾನವು ಅಂಧಕಾರಮಯವಾಗಿತ್ತು. ಯಾರ ಕಣ್ಣಿಗೂ ಕಾಣಿಸುತ್ತಿರಲಿಲ್ಲ. ಆದುದರಿಂದ ಅದನ್ನು ಯಾರಿಂದಲೂ ಹಿಡಿಯಲಾಗುತ್ತಿರಲಿಲ್ಲ. ಅದು ನಡೆಸುವವನ ಇಚ್ಛೆಬಂದಲ್ಲಿಗೆ ಹೋಗುವ ಸಾಮರ್ಥ್ಯ ಹೊಂದಿತ್ತು. ಶಾಲ್ವನು ವೃಷ್ಣಿಗಳೊಡನೆ ಅಥವಾ ಶ್ರೀಕೃಷ್ಣನೊಡನೆ ತನಗಿದ್ದ ವೈರವನ್ನು ಪದೇ-ಪದೇ ಸ್ಮರಿಸಿಕೊಳ್ಳುತ್ತಾ ಸೌಭವಿಮಾನಾರೂಢನಾಗಿ ಸೈನ್ಯಸಮೇತನಾಗಿ ದ್ವಾರಕೆಯನ್ನು ಮುತ್ತಿದನು. ॥ ೮ ॥

ನಿರುದ್ಧ್ಯ ಸೇನಯಾ ಶಾಲ್ವೋ ಮಹತ್ಯಾ ಭರತರ್ಷಭ।
ಪುರೀಂ ಬಭಂಜೋಪವನಾನ್ಯುದ್ಯಾನಾನಿ ಚ ಸರ್ವಶಃ
॥ ೯ ॥

ಸಗೋಪುರಾಣಿ ದ್ವಾರಾಣಿ ಪ್ರಾಸಾದಾಟ್ಟಾಲತೋಲಿಕಾಃ।
ವಿಹಾರಾನ್ಸ ವಿಮಾನಾಗ್ರ್ಯಾನ್ನಿಪೇತುಃ ಶಸ್ತ್ರವೃಷ್ಟಯಃ
॥ ೧೦ ॥

ಶಿಲಾ ದ್ರುಮಾಶ್ಚಾಶನಯಃ ಸರ್ಪಾ ಆಸಾರಶರ್ಕರಾಃ।
ಪ್ರಚಂಡಶ್ಚಕ್ರವಾತೋಽಭೂದ್ರಜಸಾऽऽಚ್ಛಾದಿತಾ ದಿಶಃ
॥ ೧೧ ॥

ಇತ್ಯರ್ದ್ಯಮಾನಾ ಸೌಭೇನ ಕೃಷ್ಣಸ್ಯ ನಗರೀ ಭೃಶಮ್।
ನಾಭ್ಯಪದ್ಯತ ಶಂ ರಾಜಂಸ್ತ್ರಿಪುರೇಣ ಯಥಾ ಮಹೀ
॥ ೧೨ ॥

ಪ್ರದ್ಯುಮ್ನೋ ಭಗವಾನ್ ವೀಕ್ಷ್ಯ ಬಾಧ್ಯಮಾನಾ ನಿಜಾಃ ಪ್ರಜಾಃ।
ಮಾ ಭೈಷ್ಟೇತ್ಯಭ್ಯಧಾದ್ವೀರೋ ರಥಾರೂಢೋ ಮಹಾಯಶಾಃ
॥ ೧೩ ॥

ಸಾತ್ಯಕಿಶ್ಚಾರುದೇಷ್ಣಶ್ಚ ಸಾಂಬೋऽಕ್ರೂರಃ ಸಹಾನುಜಃ।
ಹಾರ್ದಿಕ್ಯೋ ಭಾನುವಿಂದಶ್ಚ ಗದಶ್ಚ ಶುಕಸಾರಣೌ
॥ ೧೪ ॥

ಅಪರೇ ಚ ಮಹೇಷ್ವಾಸಾ ರಥಯೂಥಪಯೂಥಪಾಃ।
ನಿರ್ಯಯುರ್ದಂಶಿತಾ ಗುಪ್ತಾ ರಥೇಭಾಶ್ವಪದಾತಿಭಿಃ
॥ ೧೫ ॥

ತತಃ ಪ್ರವವೃತೇ ಯುದ್ಧಂ ಶಾಲ್ವಾನಾಂ ಯದುಭಿಃ ಸಹ।
ಯಥಾಸುರಾಣಾಂ ವಿಬುಧೈಸ್ತುಮುಲಂ ಲೋಮಹರ್ಷಣಮ್
॥ ೧೬ ॥

ತಾಶ್ಚ ಸೌಭಪತೇರ್ಮಾಯಾ ದಿವ್ಯಾಸ್ತ್ರೈ ರುಕ್ಮಿಣೀಸುತಃ।
ಕ್ಷಣೇನ ನಾಶಯಾಮಾಸ ನೈಶಂ ತಮ ಇವೋಷ್ಣಗುಃ
॥ ೧೭ ॥

ವಿವ್ಯಾಧ ಪಂಚವಿಂಶತ್ಯಾ ಸ್ವರ್ಣಪುಂಖೈರಯೋಮುಖೈಃ।
ಶಾಲ್ವಸ್ಯ ಧ್ವಜಿನೀಪಾಲಂ ಶರೈಃ ಸನ್ನತಪರ್ವಭಿಃ
॥ ೧೮ ॥

ಶತೇನಾತಾಡಯಚ್ಛಾಲ್ವಮೇಕೈಕೇನಾಸ್ಯ ಸೈನಿಕಾನ್।
ದಶಭಿರ್ದಶಭಿರ್ನೇತೄನ್ ವಾಹನಾನಿ ತ್ರಿಭಿಸ್ತ್ರಿಭಿಃ
॥ ೧೯ ॥

ತದದ್ಭುತಂ ಮಹತ್ಕರ್ಮ ಪ್ರದ್ಯುಮ್ನಸ್ಯ ಮಹಾತ್ಮನಃ।
ದೃಷ್ಟ್ವಾತಂ ಪೂಜಯಾಮಾಸುಃ ಸರ್ವೇ ಸ್ವಪರಸೈನಿಕಾಃ
॥ ೨೦ ॥

ಪರೀಕ್ಷಿತನೇ! ಸೇನಾಸಮೇತನಾಗಿದ್ದ ಶಾಲ್ವನು ದ್ವಾರಕೆಯನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿಗೆ ಹಾಕಿ, ಫಲ-ಪುಷ್ಪಗಳಿಂದ ತುಂಬಿದ್ದ ಉಪವನಗಳನ್ನು, ಉದ್ಯಾನಗಳನ್ನು, ಧ್ವಂಸಮಾಡಿದನು. ಹಾಗೆಯೇ ನಗರದ್ವಾರಗಳನ್ನು, ಪ್ರಕಾರಗಳನ್ನು, ಉಪ್ಪರಿಗೆಯ ಸೌಧಗಳನ್ನು, ರಾಜಭವನಗಳನ್ನು, ಕ್ರೀಡಾಸ್ಥಳಗಳನ್ನು ನಾಶಮಾಡ ತೊಡಗಿದನು. ಶಾಲ್ವನು ಸೌಭವಿಮಾನದ ಅಗ್ರಭಾಗದಿಂದ ಶಸ್ತ್ರಾಸ್ತ್ರಗಳ ಮಳೆಯನ್ನೇ ಸುರಿಸಿದನು. ॥ ೯-೧೦ ॥ ಅಷ್ಟೇ ಅಲ್ಲದೆ ಆ ವಿಮಾನದಿಂದ ದೊಡ್ಡ-ದೊಡ್ಡ ಬಂಡೆಗಳು, ಮರಗಳು ಸರ್ಪಗಳ ವೃಷ್ಟಿಯೇ ಆಗುತ್ತಿತ್ತು. ಸಿಡಿಲು ಬಡಿದು, ಆಲಿಕಲ್ಲಿನ ಮಳೆಗರೆಯುತ್ತಿತ್ತು. ಪ್ರಚಂಡವಾದ ಸುಂಟರಗಾಳಿ ಎದ್ದು ದ್ವಾರಕೆಯ ಎಲ್ಲೆಡೆ ಧೂಳನ್ನು ತುಂಬಿಬಿಟ್ಟಿತ್ತು. ॥ ೧೧ ॥ ಪರೀಕ್ಷಿತನೇ! ಹಿಂದೆ ತ್ರಿಪುರಾಸುರನಿಂದ ಭೂಮಿಯು ಕ್ಷೋಭೆಗೊಂಡಂತೆ ಶಾಲ್ವನ ವಿಮಾನದಿಂದ ಪೀಡಿಸಲ್ಪಡುತ್ತಿದ್ದ ಶ್ರೀಕೃಷ್ಣನ ದ್ವಾರಕಾಪಟ್ಟಣವು ಆಗ ಸ್ವಲ್ಪವಾದರೂ ಸುಖವನ್ನು ಕಾಣದೆ, ಪ್ರಜೆಗಳು ತತ್ತರಿಸಿ ಹೋದರು. ॥ ೧೨ ॥ (ಆ ಸಮಯದಲ್ಲಿ ಶ್ರೀಕೃಷ್ಣನೂ ದ್ವಾರಕೆಯಲ್ಲಿರಲಿಲ್ಲ) ಆಗ ಶ್ರೀಕೃಷ್ಣನ ಮಗನಾದ ಪರಮಯಶಸ್ವೀ ವೀರಪ್ರದ್ಯುಮ್ನನು - ತಮ್ಮ ಪ್ರಜೆಗಳೆಲ್ಲರೂ ಕಷ್ಟಪಡುತ್ತಿರುವುದನ್ನು ಕಂಡು - 'ಹೆದರಬೇಡಿರಿ' ಎಂದು ಅವರಿಗೆ ಧೈರ್ಯತುಂಬಿ ರಥಾರೂಢನಾಗಿ ಯುದ್ಧಕ್ಕೆ ಹೊರಟೇ ಬಿಟ್ಟನು. ॥ ೧೩. ॥ ಅವನನ್ನು ಅನುಸರಿಸುತ್ತಾ ಸಾತ್ಯಕಿ, ಚಾರುದೇಷ್ಣ, ಸಾಂಬ, ತಮ್ಮಂದಿರೊಡನೆ ಅಕ್ರೂರ, ಕೃತವರ್ಮಾ, ಭಾನುವಿಂದ, ಗದ, ಶುಕ, ಸಾರಣ ಮೊದಲಾದ ಮಹಾರಥಿಗಳಾದ ಅನೇಕ ಮಹಾ-ಮಹಾವೀರರು ಕವಚಗಳನ್ನು ತೊಟ್ಟು, ಧನುಷ್ಪಾಣಿಯಾಗಿ ಹೊರಟರು. ಅವರೊಂದಿಗೆ ಅಸಂಖ್ಯಾತ ರಥ, ಗಜ, ಅಶ್ವ ಮತ್ತು ಪದಾತಿಗಳೆಂಬ ಚತುರಂಗ ಸೇನೆಯು ಹೊರಟಿತು. ॥ ೧೪-೧೫ ॥ ಹಿಂದಿನ ಕಾಲದಲ್ಲಿ ದೇವತೆಗಳೊಂದಿಗೆ ಅಸುರರ ತುಮುಲಯುದ್ಧವಾದಂತೆಯೇ ಶಾಲ್ವನ ಸೈನಿಕರೊಡನೆ ಯಾದವವೀರರ ಯುದ್ಧವು ಪ್ರಾರಂಭಗೊಂಡಿತು. ಆ ಅದ್ಭುತಯುದ್ಧವನ್ನು ನೋಡಿದವರ ರೋಮಗಳು ನಿಮಿರಿನಿಂತಿರುತ್ತಿದ್ದುವು. ॥ ೧೬ ॥ ಸೂರ್ಯನು ತನ್ನ ಪ್ರಖರವಾದ ಕಿರಣಗಳಿಂದ ಕತ್ತಲೆಯನ್ನು ಅಳಿಸಿಹಾಕುವಂತೆ ವೀರವರನಾದ ಪ್ರದ್ಯುಮ್ನನು ತನ್ನ ದಿವ್ಯ ಅಸ್ತ್ರಗಳಿಂದ ಕ್ಷಣದಲ್ಲಿ ಸೌಭಪತಿ ಶಾಲ್ವನ ಮಾಯೆಯೆಯಲ್ಲವನ್ನೂ ಕತ್ತರಿಸಿ ಹಾಕಿದನು. ॥ ೧೭ ॥ ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ ಲೋಹದ ಅಗ್ರಭಾಗವುಳ್ಳ ಇಪ್ಪತ್ತೈದು ಬಾಣಗಳಿಂದ ಪ್ರದ್ಯುಮ್ನನು ಶಾಲ್ವನ ಸೇನಾಪತಿಯನ್ನು ಘಾಸಿಗೊಳಿಸಿದನು. ॥ ೧೮ ॥ ಮಹಾವೀರನಾದ ಪ್ರದ್ಯುಮ್ನನು ಪುನಃ ಶಾಲ್ವನನ್ನು ನೂರು ಬಾಣಗಳಿಂದಲೂ, ಒಬ್ಬೊಬ್ಬ ಸೈನಿಕರನ್ನು ಒಂದೊಂದು ಬಾಣದಿಂದಲೂ ಸಾರಥಿಗಳನ್ನು ಹತ್ತತ್ತು ಬಾಣಗಳಿಂದಲೂ, ವಾಹನಗಳನ್ನು ಮೂರು-ಮೂರು ಬಾಣಗಳಿಂದ ಪ್ರಹರಿಸಿ ಗಾಯಗೊಳಿಸಿದನು. ॥ ೧೯ ॥ ಮಹಾತ್ಮನಾದ ಪ್ರದ್ಯುಮ್ನನ ಈ ಮಹತ್ಕಾರ್ಯವನ್ನು ಕಂಡು ಅವನ ಕಡೆಯ ಸೈನಿಕರು ಮತ್ತು ಶತ್ರು ಪಕ್ಷದ ಸೈನಿಕರೂ ಕೂಡ ಅವನನ್ನು ಬಹಳವಾಗಿ ಪ್ರಶಂಸಿಸಿದರು. ॥ ೨೦ ॥

ಬಹುರೂಪೈಕರೂಪಂ ತದ್ದೃಶ್ಯತೇ ನ ಚ ದೃಶ್ಯತೇ ।
ಮಾಯಾಮಯಂ ಮಯಕೃತಂ ದುರ್ವಿಭಾವ್ಯಂ ಪರೈರಭೂತ್
॥ ೨೧ ॥

ಪರೀಕ್ಷಿತನೇ ! ಮಾಯಾಸುರನಿಂದ ನಿರ್ಮಿಸಲ್ಪಟ್ಟ ಸೌಭ ವಿಮಾನವು ಅತ್ಯಂತ ಮಾಯಾಮಯವಾಗಿತ್ತು. ಕೆಲವೊಮ್ಮೆ ಅನೇಕ ರೂಪದಿಂದ ಕಂಡುಬಂದರೆ, ಕೆಲವೊಮ್ಮೆ ಒಂದೇಯಾಗಿ ತೋರುತ್ತಿತ್ತು. ಕೆಲವೊಮ್ಮೆ ಕಣ್ಮರೆಯಾಗುತ್ತಿತ್ತು. ಯದುವೀರರಿಗೆ ಆ ವಿಮಾನವು ಎಲ್ಲಿದೆ ? ಯಾವಾಗ ಬರುತ್ತಿದೆ ? ಎಂಬುದೇ ತಿಳಿಯುತ್ತಿರಲಿಲ್ಲ. ॥ ೨೧ ॥ ಅದು ಕೆಲವೊಮ್ಮೆ ಭೂಮಿಯಲ್ಲಿ ಸಂಚರಿಸಿದರೆ, ಕೆಲವೊಮ್ಮೆ ಆಕಾಶದಲ್ಲಿ ಹಾರುತ್ತಿತ್ತು. ಕೆಲವೊಮ್ಮೆ ಪರ್ವತಾಗ್ರದಲ್ಲಿ ಕಂಡುಬಂದರೆ, ಕೆಲವೊಮ್ಮೆ ನೀರಿನ ಮೇಲೆ ತೇಲುತ್ತಿತ್ತು. ಆ ಸೌಭವಿಮಾನವು ಕೊಳ್ಳಿಯ ಚಕ್ರದಂತೆ ಎಲ್ಲೆಂದರಲ್ಲಿ ಸಂಚರಿಸುತ್ತಾ ನಿಂತಲ್ಲಿ ನಿಲ್ಲದೆ ಯದುವೀರರಿಗೆ ಭ್ರಾಂತಿಯನ್ನು ಉಂಟುಮಾಡುತ್ತಿತ್ತು. ॥ ೨೨ ॥ ಶಾಲ್ವನು ಸೈನಿಕರೊಡನೆ ಮತ್ತು ತನ್ನ ವಿಮಾನದೊಡನೆ ಕಂಡಬಂದಲ್ಲೆಲ್ಲ ಯಾದವ ಸೇನಾಪತಿಗಳು ಬಾಣಗಳ ಮಳೆಯನ್ನೇ ಸುರಿಸುತ್ತಿದ್ದರು. ॥ ೨೩ ॥ ಅವರ ಬಾಣಗಳು ಸೂರ್ಯ, ಅಗ್ನಿಗಳಂತೆ ಉರಿಯುತ್ತಾ ಪ್ರಖರವಾಗಿದ್ದು, ವಿಷಸರ್ಪಗಳಂತೆ ತಡೆದುಕೊಳ್ಳಲು ಅಸಾಧ್ಯವಾಗಿದ್ದವು. ಅವುಗಳಿಂದ ಶಾಲ್ವನ ನಗರಾಕಾರವಾದ ವಿಮಾನ ಮತ್ತು ಸೈನ್ಯವು ಅತ್ಯಂತ ಪೀಡಿತವಾಯಿತು. ಕೊನೆಗೆ ಯಾದವರ ಬಾಣಗಳಿಂದ ಶಾಲ್ವನೂ ಮೂರ್ಛೆಗೊಂಡನು. ॥ ೨೪ ॥

ಕ್ವಚಿದ್ಭೂಮೌ ಕ್ವಚಿದ್ವ್ಯೋಮ್ನಿ ಗಿರಿಮೂರ್ಧ್ನಿ ಜಲೇ ಕ್ವಚಿತ್ ।
ಅಲಾತಚಕ್ರವದ್ದೃಶ್ಯಮೌಭಂ ತದ್ದುರವಸ್ಥಿತಮ್
॥ ೨೨ ॥

ಶರೈರಗ್ನ್ಯರ್ಕಸಂಸ್ಪರ್ಶೈರಾಶೀವಿಷದುರಾಸದೈಃ ।
ಪೀಡ್ಯಮಾನಪುರಾನೀಕಃ ಶಾಲ್ವೋऽಮುಹ್ಯತ್ಪರೇರಿತೈಃ
॥ ೨೪ ॥

ಯತ್ರ ಯತ್ರೋಪಲಕ್ಷ್ಯೇತ ಸಸೌಭಃ ಸಹಸೈನಿಕಃ ।
ಶಾಲ್ವಸ್ತತಸ್ತತೋऽಮುಂಚನ್ ಶರಾನ್ಸಾತ್ವತಯೂಥಪಾಃ
॥ ೨೩ ॥

ಪರೀಕ್ಷಿತನೇ ! ಶಾಲ್ವನ ಸೇನಾಪತಿಗಳೂ ಯಾದವ ಸೈನ್ಯದ ಮೇಲೆ ಶಸ್ತ್ರಾಸ್ತ್ರಗಳನ್ನು ಮಳೆಗರೆದರು. ಇದರಿಂದ ಯಾದವ ಸೈನಿಕರು ಬಹಳ ಗಾಯಗೊಂಡರು. ಆದರೂ 'ಜಯಿಸಿದರೆ ಭೋಗ, ಸತ್ತರೆ ಸ್ವರ್ಗ' ಎಂದು ಯೋಚಿಸುತ್ತಾ ಅವರು ರಣಭೂಮಿಯನ್ನು ಬಿಟ್ಟು ಹೋಗಲಿಲ್ಲ. ॥ ೨೫ ॥ ಪರೀಕ್ಷಿದ್ರಾಜನೇ ! ಶಾಲ್ವನ ದ್ಯುಮಂತನೆಂಬ ಮಂತ್ರಿಯು ಈ ಹಿಂದೆ ಪ್ರದ್ಯುಮ್ನನು ಪ್ರಯೋಗಿಸಿದ ಇಪ್ಪತ್ತೈದು ಬಾಣಗಳಿಂದ ಬಹಳ ಗಾಯಗೊಂಡಿದ್ದನು. ಸ್ವಲ್ಪ ಚೇತರಿಸಿಕೊಂಡು ; ಪುನಃ ಪ್ರದ್ಯುಮ್ನನೊಡನೆ ಯುದ್ಧಮಾಡಲು ಬಂದು ಮಹಾಬಲಿಷ್ಠನಾದ ದ್ಯುಮಂತನು ಕಬ್ಬಿಣದ ಗದೆಯಿಂದ ಪ್ರದ್ಯುಮ್ನನನ್ನು ರಭಸದಿಂದ ಪ್ರಹರಿಸಿ ಗಟ್ಟಿಯಾಗಿ ಗರ್ಜಿಸಿದನು. ॥ ೨೬ ॥ ಪರೀಕ್ಷಿತನೇ ! ದ್ಯುಮಂತನ ಗದಾಪ್ರಹಾರದಿಂದ ಪ್ರದ್ಯುಮ್ನನ ಎದೆ ಒಡೆದಂತಾಗಿ ಮೂರ್ಛಿತನಾದನು. ಅವನ ರಥವನ್ನು ನಡೆಸುತ್ತಿದ್ದ ದಾರುಕನ ಪುತ್ರನು ಸಾರಥಿಯ ಧರ್ಮಕ್ಕನುಸಾರ ಅವನನ್ನು ರಣಭೂಮಿಯಿಂದ ಹೊರಕ್ಕೆ ಕೊಂಡೊಯ್ದನು. ॥ ೨೭ ॥ ಮುಹೂರ್ತಕಾಲವು ಕಳೆದನಂತರ ಪ್ರದ್ಯುಮ್ನನಿಗೆ ಮೂರ್ಛೆಯ ತಿಳಿಯಿತು. ಆಗ ಅವನು ಸಾರಥಿಗೆ ಹೇಳಿದನು ಸಾರಥಿಯೇ ! ನನ್ನನ್ನು ರಣರಂಗದಿಂದ ಹಿಂದಕ್ಕೆ ಕರೆತಂದು ಬಹಳ ತಪ್ಪು ಕೆಲಸವನ್ನು ಮಾಡಿಬಿಟ್ಟಿರುವೆ. ನೀನು ಹೀಗೆ ಮಾಡಬಾರದಾಗಿತ್ತು. ॥ ೨೮ ॥ ಸೂತನೇ ! ನಮ್ಮ ವಂಶದಲ್ಲಿ ಯಾವನೇ ವೀರನು ರಣರಂಗದಿಂದ ಪಲಾಯನಮಾಡಿದನೆಂಬುದು ನಾನು ಇದೂವರೆಗೂ ಕೇಳಿಯೇ ಇಲ್ಲ. ಹೇಡಿಯಾದ ಸಾರಥಿಯಿಂದಾಗಿ ನಾನೊಬ್ಬನು ಇಂತಹ ಕಳಂಕಕ್ಕೆ ಗುರಿಯಾಗಬೇಕಾಯಿತಲ್ಲ ! ॥ ೨೯ ॥

ಶಾಲ್ವಾನೀಕಪಶಸ್ತ್ರೌಘೈರ್ವೃಷ್ಣಿವೀರಾ ಭೃಶಾರ್ದಿತಾಃ ।
ನ ತತ್ಯಜೂ ರಣಂ ಸ್ವಂ ಸ್ವಂ ಲೋಕದ್ವಯಜಿಗೀಷವಃ
॥ ೨೫ ॥

ಶಾಲ್ವಾಮಾತ್ಯೋ ದ್ಯುಮಾನ್ನಾಮ ಪ್ರದ್ಯುಮ್ನಂ ಪ್ರಾಕ್ಕೃಪೀಡಿತಃ ।
ಆಸಾದ್ಯ ಗದಯಾ ಮೌರ್ವ್ಯಾ ವ್ಯಾಹತ್ಯ ವ್ಯನದದ್ಬಲೀ
॥ ೨೬ ॥

ಪ್ರದ್ಯುಮ್ನಂ ಗದಯಾ ಶೀರ್ಣವಕ್ಷಃಸ್ಥಲಮರಿಂದಮಮ್ ।
ಅಪೋವಾಹ ರಣಾತ್ಸೂತೋ ಧರ್ಮವಿದ್ದಾರುಕಾತ್ಮಜಃ
॥ ೨೭ ॥

ಲಬ್ಧಸಂಜ್ಞೋ ಮುಹೂರ್ತೇನ ಕಾರ್ಷ್ಣಿಃ ಸಾರಥಿಮಬ್ರವೀತ್ ।
ಅಹೋ ಅಸಾಧ್ವಿದಂ ಸೂತ ಯದ್ರಣಾನ್ಮೇऽಪಸರ್ಪಣಮ್
॥ ೨೮ ॥

ನ ಯದೂನಾಂ ಕುಲೇ ಜಾತಃ ಶ್ರೂಯತೇ ರಣವಿಚ್ಯುತಃ ।
ವಿನಾ ಮತ್ಕ್ಲೀಬಚಿತ್ತೇನ ಸೂತೇನ ಪ್ರಾಪ್ತ ಕಿಲ್ಬಿಷಾತ್
॥ ೨೯ ॥

ಕಿಂ ನು ವಕ್ಷ್ಯೇಭಿಸಂಗಮ್ಯ ಪಿತರೌ ರಾಮಕೇಶವೌ ।
ಯುದ್ಧಾತ್ಸಮ್ಯಗಪಕ್ರಾಂತಃ ಪೃಷ್ಟಸ್ತತ್ರಾತ್ಮನಃ ಕ್ಷಮಮ್
॥ ೩೦ ॥

ವ್ಯಕ್ತಂ ಮೇ ಕಥಯಿಷ್ಯಂತಿ ಹಸಂತ್ಯೋ ಭ್ರಾತೃಜಾಮಯಃ ।
ಕ್ಲೈಬ್ಯಂ ಕಥಂ ಕಥಂ ವೀರ ತವಾನ್ಯೈಃ ಕಥ್ಯತಾಂ ಮೃಧೇ
॥ ೩೧ ॥

ಸಾರಥಿರುವಾಚ

ಧರ್ಮಂ ವಿಜಾನತಾऽऽಯುಷ್ಮನ್ ಕೃತಮೇತನ್ಮಯಾ ವಿಭೋ ।
ಸೂತಃ ಕೃಚ್ಛ್ರಗತಂ ರಕ್ಷೇದ್ರಥಿನಂ ಸಾರಥಿಂ ರಥೀ
॥ ೩೨ ॥

ಏತದ್ವಿದಿತ್ವಾತು ಭವಾನ್ ಮಯಾಪೋವಾಹಿತೋ ರಣಾತ್ ।
ಉಪಸೃಷ್ಟಃ ಪರೇಣೇತಿ ಮೂರ್ಚ್ಛಿತೋ ಗದಯಾ ಹತಃ
॥ ೩೩ ॥

ಈಗ ನಾನು ದೊಡ್ಡಪ್ಪನಾದ ಬಲರಾಮನ ಮತ್ತು ತಂದೆಯಾದ ಶ್ರೀಕೃಷ್ಣನ ಮುಂದೆ ಹೋಗಿ ಏನು ಹೇಳಲಿ ? ಈಗಲಾದರೋ ಎಲ್ಲ ಜನರು 'ನಾನು ಯುದ್ಧದಿಂದ ಓಡಿ ಹೋದೆ' ಎಂದೇ ಹೇಳುವರು. ಅವರು ಪ್ರಶ್ನಿಸಿದಾಗ ನನ್ನ ಶೌರ್ಯ-ಸಾಹಸಗಳಿಗೆ ಅನುರೂಪವಾದ ಯಾವ ಉತ್ತರವನ್ನು ಕೊಡಲಿ ? ॥ ೩೦ ॥ ನನ್ನ ಅತ್ತಿಗೆ-ನಾದಿನಿಯರು ನನ್ನ ಹೇಡಿತನವನ್ನು ಹಂಗಿಸುತ್ತಾ, ಗಹ-ಗಹಿಸಿ ನಗುತ್ತಾ 'ವೀರಶೂರನೇ ! ನೀನು ನಪುಂಸಕ ಹೇಗಾದೆ ? ನೀನು ಶತ್ರುಗಳೊಡನೆ ರಣರಂಗದಲ್ಲಿ ಹೇಗೆ ಯುದ್ಧ ಮಾಡಿದೆ ? ವಿವರಿಸಿ ಹೇಳು' ಎಂದು ಕೇಳಿದರೆ ನಾನೇನು ಉತ್ತರಿಸಲಿ ? ॥ ೩೧ ॥

ಸಾರಥಿಯು ಹೇಳಿದನು – ಆಯುಷ್ಮಂತನೇ ! ನಾನು ಸಾರಥಿಯ ಧರ್ಮವನ್ನು ಅರಿತುಕೊಂಡೇ ಮಾಡಿರುವೆನು. ಒಡೆಯಾ ! ಪ್ರಾಣಾಪತ್ತಿನಲ್ಲಿ ಸಿಕ್ಕಿಬಿದ್ದಿರುವಾಗ ಸಾರಥಿಯು ರಥಿಕನನ್ನು ರಕ್ಷಿಸಬೇಕು. ಹಾಗೆಯೇ ಸಾರಥಿಯನ್ನು ಕಾಪಾಡಬೇಕು ಎಂಬುದು ಯುದ್ಧದ ಧರ್ಮವಾಗಿದೆಯಲ್ಲ ! ॥ ೩೨ ॥ ಈ ಧರ್ಮವನ್ನು ತಿಳಿದುಕೊಂಡೇ ನಾನು ನಿಮ್ಮನ್ನು ರಣರಂಗದಿಂದ ಕರೆತಂದಿರುವೆನು. ಶತ್ರುವು ನಿಮ್ಮ ಮೇಲೆ ಗದಾ ಪ್ರಹಾರಮಾಡಿದಾಗ ನೀವು ಮೂರ್ಛಿತರಾದಿರಿ. ದೊಡ್ಡ ಆಪತ್ತಿನಲ್ಲಿ ಸಿಲುಕಿದಿರಿ. ಅದರಿಂದಾಗಿ ನಾನು ಹೀಗೆ ಮಾಡಬೇಕಾಯಿತು. (ಸೂತನ ಮಾತನ್ನು ಕೇಳಿ ಪ್ರದ್ಯುಮ್ನನಿಗೂ ಸಮಾಧಾನವಾಯಿತು.) ॥ ೩೩ ॥

ಎಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೭೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಶಾಲ್ವಯುದ್ಧೇ ಷಟ್‌ಸಪ್ತತಿತಮೋऽಧ್ಯಾಯಃ ॥ ೭೬ ॥

ಎಪ್ಪತ್ತೇಳನೆಯ ಅಧ್ಯಾಯ

ಶಾಲ್ವನ ಸಂಹಾರ

ಶ್ರೀಶುಕ ಉವಾಚ

ಸ ತೂಪಸ್ಪೃಶ್ಯ ಸಲಿಲಂ ದಂಶಿತೋ ಧೃತಕಾರ್ಮುಕಃ ।
ನಯ ಮಾಂ ದ್ಯುಮತಃ ಪಾರ್ಶ್ವಂ ವೀರಸ್ಯೇತ್ಯಾಹ ಸಾರಥಿಮ್
॥ ೧ ॥

ವಿಧಮಂತಂ ಸ್ವಸೈನ್ಯಾನಿ ದ್ಯುಮಂತಂ ರುಕ್ಮಿಣೀಸುತಃ ।
ಪ್ರತಿಹತ್ಯ ಪ್ರತ್ಯವಿಧ್ಯನ್ನಾರಾಚೈರಷ್ಟಭಿಃ ಸ್ಮಯನ್
॥ ೨ ॥

ಚತುರ್ಭಿಶ್ಚತುರೋ ವಾಹಾನ್ ಸೂತಮೇಕೇನ ಚಾಹನತ್ ।
ದ್ವಾಭ್ಯಾಂ ಧನುಶ್ಚ ಕೇತುಂ ಚ ಶರೇಣಾನ್ಯೇನ ವೈ ಶಿರಃ
॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜನೇ ! ಬಳಿಕ ಪ್ರದ್ಯುಮ್ನನು ಶುದ್ಧಾಚಮನವನ್ನು ಮಾಡಿ ಕವಚವನ್ನು ತೊಟ್ಟು ಧನುಸ್ಸನ್ನು ಧರಿಸಿ ಸಾರಥಿಗೆ ಹೇಳಿದನು ಶೀಘ್ರವಾಗಿ ನನ್ನನ್ನು ದ್ಯುಮಂತನ ಬಳಿಗೆ ಕರೆದೊಯ್ಯುವವನಾಗು. ॥ ೧ ॥ ಪ್ರದ್ಯುಮ್ನನ ಆಜ್ಞೆಯಂತೆ ಸಾರಥಿಯು ರಥವನ್ನು ದ್ಯುಮಂತನ ಬಳಿಗೆ ಒಯ್ದನು. ಆಗ ಅವನು ಯಾದವರ ಸೈನ್ಯವನ್ನು ಧ್ವಂಸಮಾಡುತ್ತಿದ್ದನು. ಪ್ರದ್ಯುಮ್ನನು ಅವನನ್ನು ತಡೆದು ಎಂಟು ಬಾಣಗಳಿಂದ ನಸುನಗುತ್ತಲೇ ಪ್ರಹರಿಸಿದನು. ॥ ೨ ॥ ನಾಲ್ಕು ಬಾಣಗಳಿಂದ ಅವನ ನಾಲ್ಕು, ಕುದುರೆಗಳನ್ನು ಕೊಂದು, ಒಂದು ಬಾಣದಿಂದ ಸಾರಥಿಯನ್ನು, ಎರಡು ಬಾಣಗಳಿಂದ ಧನುಸ್ಸನ್ನು, ಧ್ವಜವನ್ನು ಕತ್ತರಿಸಿ, ಮತ್ತೊಂದು ಬಾಣದಿಂದ ದ್ಯುಮಂತನ ತಲೆಯನ್ನು ತರಿದನು. ॥ ೩ ॥

ಗದಸಾತ್ಯಕಿಸಾಂಬಾದ್ಯಾ ಜಘ್ನುಃ ಸೌಭಪತೇರ್ಬಲಮ್ ।
ಪೇತುಃ ಸಮುದ್ರೇ ಸೌಭೇಯಾಃ ಸರ್ವೇ ಸಂಛಿನ್ನಕಂಧರಾಃ
॥ ೪ ॥

ಏವಂ ಯದೂನಾಂ ಶಾಲ್ವಾನಾಂ ನಿಘ್ನತಾಮಿತರೇತರಮ್ ।
ಯುದ್ಧಂ ತ್ರಿಣವರಾತ್ರಂ ತದಭೂತ್ತುಮುಲಮುಲ್ಬಣಮ್
॥ ೫ ॥

ಇಂದ್ರಪ್ರಸ್ಥಂ ಗತಃ ಕೃಷ್ಣ ಆಹೂತೋ ಧರ್ಮಸೂನುನಾ ।
ರಾಜಸೂಯೇಽಥ ನಿರ್ವೃತ್ತೇ ಶಿಶುಪಾಲೇ ಚ ಸಂಸ್ಥಿತೇ
॥ ೬ ॥

ಕುರುವೃದ್ಧಾನನುಜ್ಞಾಪ್ಯ ಮುನೀಂಶ್ಚ ಸಸುತಾಂ ಪೃಥಾಮ್ ।
ನಿಮಿತ್ತಾನ್ಯತಿಘೋರಾಣಿ ಪಶ್ಯನ್ ದ್ವಾರವತೀಂ ಯಯೌ
॥ ೭ ॥

ಅಹ ಚಾಹಮಿಹಾಯಾತ ಆರ್ಯಮಿಶ್ರಾಭಿಸಂಗತಃ ।
ರಾಜನ್ಯಾಶ್ಚೈದ್ಯಪಕ್ಷೀಯಾ ನೂನಂ ಹನ್ಯುಃ ಪುರೀಂ ಮಮ
॥ ೮ ॥

ವೀಕ್ಷ್ಯ ತತ್ಕದನಂ ಸ್ವಾನಾಂ ನಿರೂಪ್ಯ ಪುರರಕ್ಷಣಮ್ ।
ಸೌಭಂ ಚ ಶಾಲ್ವರಾಜಂ ಚ ದಾರುಕಂ ಪ್ರಾಹ ಕೇಶವಃ
॥ ೯ ॥

ರಥಂ ಪ್ರಾಪಯ ಮೇ ಸೂತ ಶಾಲ್ವಸ್ಯಾಂತಿಕಮಾಶು ವೈ ।
ಸಂಭ್ರಮಸ್ತೇ ನ ಕರ್ತವ್ಯೋ ಮಾಯಾವೀ ಸೌಭರಾಡಯಮ್
॥ ೧೦ ॥

ಇತ್ಯುಕ್ತಶ್ಚೋದಯಾಮಾಸ ರಥಮಾಸ್ಥಾಯ ದಾರುಕಃ ।
ವಿಶಂತಂ ದದೃಶುಃ ಸರ್ವೇ ಸ್ವೇ ಪರೇ ಚಾರುಣಾನುಜಮ್
॥ ೧೧ ॥

ಶಾಲ್ವಶ್ಚ ಕೃಷ್ಣಮಾಲೋಕ್ಯ ಹತಪ್ರಾಯಬಲೇಶ್ವರಃ ।
ಪ್ರಾಹರತ್ ಕೃಷ್ಣಸೂತಾಯ ಶಕ್ತಿಂ ಭೀಮರವಾಂ ಮೃಧೇ
॥ ೧೨ ॥

ತಾಮಾಪತಂತೀಂ ನಭಸಿ ಮಹೋಲ್ಕಾಮಿವ ರಂಹಸಾ ।
ಭಾಸಯಂತೀಂ ದಿಶಃ ಶೌರಿಃ ಸಾಯಕೈಃ ಶತಧಾಚ್ಛಿನತ್
॥ ೧೩ ॥

ತಂ ಚ ಷೋಡಶಭಿರ್ವಿದ್ಧ್ವಾ ಬಾಣೈಃ ಸೌಭಂ ಚ ಖೇ ಭ್ರಮತ್ ।
ಅವಿಧ್ಯಚ್ಛರಸಂದೋಹೈಃ ಖಂ ಸೂರ್ಯ ಇವ ರಶ್ಮಿಭಿಃ
॥ ೧೪ ॥

ಶಾಲ್ವಃ ಶೌರೇಸ್ತು ದೋಃ ಸವ್ಯಂ ಸಾರ್ಙ್ಗಂ ಶಾರ್ಙ್ಗಧನ್ವನಃ ।
ಬಿಭೇದ ನ್ಯಪತದ್ಧಸ್ತಾತ್ ಶಾರ್ಙ್ಗಮಾಸೀತ್ತದದ್ಭುತಮ್
॥ ೧೫ ॥

ಇತ್ತ ಕಡೆ ಗದ, ಸಾತ್ಯಕಿ, ಸಾಂಬ ಮೊದಲಾದ ಯಾದವ ವೀರರೂ ಶಾಲ್ವನ ಸೇನೆಯನ್ನು ಸಂಹರಿಸಲು ತೊಡಗಿದರು, ಸೌಭ ವಿಮಾನದಲ್ಲಿದ್ದ ಸೈನಿಕರ ತಲೆಗಳು ತುಂಡಾಗಿ ಸಮುದ್ರಕ್ಕೆ ಬೀಳುತ್ತಿದ್ದವು. ॥ ೪ ॥ ಹೀಗೆ ಯದುವಂಶೀಯ ವೀರರಲ್ಲಿ ಮತ್ತು ಶಾಲ್ವನ ಸೈನಿಕರಲ್ಲಿ ಪರಸ್ಪರವಾಗಿ ಪ್ರಹರಿಸುತ್ತಾ ಇಪ್ಪತ್ತೇಳು ದಿನಗಳ ವರೆಗೆ ಅತ್ಯಂತ ಘೋರವಾದ ಮತ್ತು ಭಯಂಕರವಾದ ಯುದ್ಧವು ನಡೆಯಿತು. ॥ ೫ ॥

ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಧರ್ಮನಂದನನ ಕರೆಯಂತೆ ಇಂದ್ರಪ್ರಸ್ಥಕ್ಕೆ ಹೋಗಿದ್ದನು. ರಾಜಸೂಯಯಜ್ಞವೂ ಮುಗಿದಿತ್ತು. ಶಿಶುಪಾಲನ ವಧೆಯೂ ಆಗಿಹೋಗಿತ್ತು. ॥ ೬ ॥ ಅಲ್ಲಿ ಭಯಂಕರವಾದ ಅಪಶಕುನಗಳು ಆಗುತ್ತಿರುವುದನ್ನು ಕಂಡು ಭಗವಾನ್ ಶ್ರೀಕೃಷ್ಣನು ಕುರವಂಶದ ಹಿರಿಯರಿಂದ, ಋಷಿ-ಮುನಿಗಳಿಂದ, ಕುಂತೀ ಮತ್ತು ಪಾಂಡವರಿಂದ ಅನುಮತಿ ಪಡೆದು ದ್ವಾರಕೆಗೆ ಪ್ರಯಾಣ ಮಾಡಿದನು. ॥ ೭ ॥ 'ನಾನು ಪೂಜ್ಯನಾದ ಅಣ್ಣ ಬಲರಾಮನೊಂದಿಗೆ ಇಂದ್ರಪ್ರಸ್ಥಕ್ಕೆ ಬಂದು ಬಿಟ್ಟೆ. ಈಗ ಶಿಶುಪಾಲನ ಪಕ್ಷಪಾತಿಗಳಾದ ಕ್ಷತ್ರಿಯರು ಅವಶ್ಯಕವಾಗಿ ದ್ವಾರಕೆಯ ಮೇಲೆ ಆಕ್ರಮಣ ಮಾಡಿರಬಹುದು' ಎಂದು ಮನಸ್ಸಿನಲ್ಲೇ ಅಂದುಕೊಂಡನು. ॥ ೮ ॥ ಭಗವಾನ್ ಶ್ರೀಕೃಷ್ಣನು ದ್ವಾರಕೆಗೆ ಬಂದು ನೋಡುತ್ತಾನೆ - ನಿಜವಾಗಿಯೂ ಯಾದವರ ಮೇಲೆ ದೊಡ್ಡ ಆಪತ್ತು ಬಂದೊದಗಿದೆ. ಆಗ ಬಲರಾಮನನ್ನು ದ್ವಾರಕೆಯ ರಕ್ಷಣೆಗಾಗಿ ನಿಯೋಜಿಸಿ, ಸೌಭಪತಿ ಶಾಲ್ವನನ್ನು ನೋಡಿ ತನ್ನ ಸಾರಥಿಯಾದ ದಾರುಕನಲ್ಲಿ ಹೇಳಿದನು - ॥ ೯ ॥ ದಾರುಕನೇ! ನೀನು ಅತಿ ಶೀಘ್ರವಾಗಿ ನನ್ನ ರಥವನ್ನು ಶಾಲ್ವನ ಬಳಿಗೆಕೊಂಡು ಹೋಗು. ನೋಡು, ಈ ಶಾಲ್ವನು ಮಹಾಮಾಯಾವಿಯಾಗಿದ್ದಾನೆ. ಆದರೂ ನೀನು ಸ್ವಲ್ಪವೂ ಭಯಪಡಬೇಡ. ॥ ೧೦ ॥ ಶ್ರೀಕೃಷ್ಣನ ಆಜ್ಞೆ ಯಾದೊಡನೆಯೇ ದಾರುಕನು ರಥವನ್ನು ಶಾಲ್ವನ ಬಳಿಗೆ ಒಯ್ದನು. ಭಗವಂತನ ರಥದ ಗರುಡಧ್ವಜವನ್ನು ಕಂಡೊಡನೆ ಶ್ರೀಕೃಷ್ಣನೇ ಆಗಮಿಸಿದನೆಂದು ಯಾದವರೂ ಮತ್ತು ಶತ್ರು ಸೈನ್ಯದವರು ಭಾವಿಸಿದರು. ॥ ೧೧ ॥ ಪರೀಕ್ಷಿತನೆ! ಅಷ್ಟರೊಳಗೆ ಶಾಲ್ವನ ಸೈನ್ಯವೆಲ್ಲ ಪ್ರಾಯಶಃ ನಾಶವಾಗಿ ಹೋಗಿತ್ತು. ಭಗವಾನ್ ಶ್ರೀಕೃಷ್ಣನನ್ನು ನೋಡುತ್ತಲೇ ಶಾಲ್ವನು ಅತ್ಯಂತ ಭಯಂಕರವಾದ ಶಕ್ತ್ಯಾಯುಧವೊಂದನ್ನು ದಾರುಕನ ಮೇಲೆ ಪ್ರಯೋಗಿಸಿದನು. ಆ ಶಕ್ತಿಯು ಭಾರೀ ಶಬ್ದಮಾಡುತ್ತಾ, ಹತ್ತು ದಿಕ್ಕುಗಳನ್ನು ಬೆಳಗಿಸುತ್ತಾ ದೊಡ್ಡ ಉಲ್ಕೆಯಂತೆ ವೇಗವಾಗಿ ಸಾರಥಿಯ ಕಡೆಗೆ ಬರುತ್ತಿರುವುದನ್ನು ನೋಡಿದ ಶ್ರೀಕೃಷ್ಣನು ತನ್ನ ಬಾಣಗಳಿಂದ ಅದನ್ನು ನೂರಾರು ತುಂಡುಗಳಾಗಿ ಕತ್ತರಿಸಿ ಬಿಟ್ಟನು. ॥ ೧೨-೧೩. ॥ ಮತ್ತೆ ಶ್ರೀಕೃಷ್ಣನು ಹದಿನಾರು ಬಾಣಗಳಿಂದ ಶಾಲ್ವನನ್ನು ಪ್ರಹರಿಸಿ, ಆಕಾಶದಲ್ಲಿ ಸಂಚರಿಸುತ್ತಿದ್ದ ಸೌಭವಿಮಾನವನ್ನೂ ಸೂರ್ಯನು ತನ್ನ ಕಿರಣಗಳಿಂದ ಆಕಾಶವನ್ನು ಮುಚ್ಚಿಬಿಡುವಂತೆ - ಅಸಂಖ್ಯಾತವಾದ ಬಾಣಗಳಿಂದ ಮುಚ್ಚಿಬಿಟ್ಟನು. ॥ ೧೪ ॥ ಇದಕ್ಕೆ ಪ್ರತಿಯಾಗಿ ಶಾಲ್ವನು ಶಾರ್ಙ್ಗಧನುಸ್ಸಿನಿಂದ ಕೂಡಿದ ಶ್ರೀಕೃಷ್ಣನ ಎಡ ತೋಳನ್ನು ತೀಕ್ಷ್ಣವಾದ ಬಾಣದಿಂದ ಪ್ರಹರಿಸಿದನು. ಇದರಿಂದ ಭಗವಂತನು ಧರಿಸಿದ್ದ ಶಾರ್ಙ್ಗಧನುಸ್ಸು ಕೆಳಗೆ ಬಿದ್ದು ಹೋಯಿತು. ಇಂತಹ ಅದ್ಭುತವಾದೊಂದು ಘಟನೆ ನಡೆದುಹೋಯಿತು. ॥ ೧೫ ॥

ಹಾಹಾಕಾರೋ ಮಹಾನಾಸೀದ್ ಭೂತಾನಾಂ ತತ್ರ ಪಶ್ಯತಾಮ್ ।
ವಿನದ್ಯ ಸೌಭರಾಡುಚ್ಚೈರಿದಮಾಹ ಜನಾರ್ದನಮ್
॥ ೧೬ ॥

ಯತ್ತ್ವಯಾ ಮೂಢ ನಃ ಸಖ್ಯುರ್ಭ್ರಾತುರ್ಭಾರ್ಯಾ ಹೃತೇಕ್ಷತಾಮ್ ।
ಪ್ರಮತ್ತಃಸ ಸಭಾಮಧ್ಯೇ ತ್ವಯಾ ವ್ಯಾಪಾದಿತಃ ಸಖಾ
॥ ೧೭ ॥

ತಂ ತ್ವಾದ್ಯ ನಿಶಿತೈರ್ಬಾಣೈರಪರಾಜಿತಮಾನಿನಮ್ ।
ನಯಾಮ್ಯಪುನರಾವೃತ್ತಿಂ ಯದಿ ತಿಷ್ಠೇರ್ಮಮಾಗ್ರತಃ
॥ ೧೮ ॥

ಶ್ರೀಭಗವಾನುವಾಚ

ವೃಥಾ ತ್ವಂ ಕತ್ಥಸೇ ಮಂದ ನ ಪಶ್ಯಸ್ಯಂತಿಕೇಽಂತಕಮ್ ।
ಪೌರುಷಂ ದರ್ಶಯಂತಿ ಸ್ಮ ಶೂರಾ ನ ಬಹುಭಾಷಿಣಃ
॥ ೧೯ ॥

ಇತ್ಯುಕ್ತ್ವಾ ಭಗವಾನ್ ಶಾಲ್ವಂ ಗದಯಾ ಭೀಮವೇಗಯಾ ।
ತತಾಡ ಜತ್ರೌ ಸಂರಬ್ಧಃ ಸ ಚಕಂಪೇ ವಮನ್ನೃಕ್
॥ ೨೦ ॥

ಗದಾಯಾಂ ಸನ್ನಿವೃತ್ತಾಯಾಂ ಶಾಲಸ್ತ್ವಂತರಧೀಯತ ।
ತತೋ ಮುಹೂರ್ತ ಆಗತ್ಯ ಪುರುಷಃ ಶಿರಸಾಚ್ಯುತಮ್ ।
ದೇವಕ್ಯಾ ಪ್ರಹಿತೋಽಸ್ಮೀತಿ ನತ್ವಾಪ್ರಾಹ ವಚೋ ರುದನ್
॥ ೨೧ ॥

ಕೃಷ್ಣ ಕೃಷ್ಣ ಮಹಾಬಾಹೋ ಪಿತಾ ತೇ ಪಿತೃವತ್ಸಲ ।
ಬದ್ಧ್ವಾನೀತಃ ಶಾಲ್ವೇನ ಸೌನಿಕೇನ ಯಥಾ ಪಶುಃ
॥ ೨೨ ॥

ನಿಶಮ್ಯ ವಿಪ್ರಿಯಂ ಕೃಷ್ಣೋ ಮಾನುಷೀಂ ಪ್ರಕೃತಿಂ ಗತಃ ।
ವಿಮನಸ್ಕೋ ಘೃಣೀ ಸ್ನೇಹಾದ್ಬಭಾಷೇ ಪ್ರಾಕೃತೋ ಯಥಾ
॥ ೨೩ ॥

ಕಥಂ ರಾಮಮಸಂಭ್ರಾಂತಂ ಜಿತ್ವಾಽಜೇಯಂ ಸುರಾಸುರೈಃ ।
ಶಾಲ್ವೇನಾಲ್ಪೀಯಸಾ ನೀತಃ ಪಿತಾ ಮೇ ಬಲವಾನ್ ವಿಧಿಃ
॥ ೨೪ ॥

ಇತಿ ಬ್ರುವಾಣೇ ಗೋವಿಂದೇ ಸೌಭರಾಟ್ ಪ್ರತ್ಯುಪಸ್ಥಿತಃ ।
ವಸುದೇವಮಿವಾನೀಯ ಕೃಷ್ಣಂ ಚೇದಮುವಾಚ ಸಃ
॥ ೨೫ ॥

ಏಷ ತೇ ಜನಿತಾ ತಾತೋ ಯದರ್ಥಮಿಹ ಜೀವಸಿ ।
ವಧಿಷ್ಯೇ ವೀಕ್ಷತಸ್ತೇಽಮುಮೀಶಶ್ಚೇತ್ ಪಾಹಿ ಬಾಲಿಶ
॥ ೨೬ ॥

ಆಕಾಶದಲ್ಲಿ ಮತ್ತು ಭೂಮಿಯಲ್ಲಿ ಈ ಯುದ್ಧವನ್ನು ನೋಡುತ್ತಿದ್ದ ಜನರು ಗಟ್ಟಿಯಾಗಿ ಹಾಹಾಕಾರ ಮಾಡಿದರು. ಆಗ ಶಾಲ್ವನು ಗರ್ಜಿಸುತ್ತಾ ಶ್ರೀಕೃಷ್ಣನಲ್ಲಿ ಹೀಗೆ ಹೇಳಿದನು – ॥ ೧೬ ॥ ಎಲೈ ಮೂಢನೇ! ನಾವೆಲ್ಲರೂ ನೋಡು–ನೋಡುತ್ತಿರುವಂತೆಯೇ ನಮ್ಮ ತಮ್ಮನೂ, ಮಿತ್ರನೂ ಆದ ಶಿಶುಪಾಲನ ಪತ್ನಿಯನ್ನು ನೀನು ಕದ್ದು ಕೊಂಡು ಹೋದೆ ಮತ್ತು ತುಂಬಿದ ಸಭೆಯಲ್ಲಿ ನಮ್ಮ ಮಿತ್ರನಾದ ಶಿಶುಪಾಲನು ಅಜಾಗರೂಕನಾಗಿದ್ದಾಗ ನೀನು ಅವನನ್ನು ಕೊಂದು ಹಾಕಿದೆ. ॥ ೧೭ ॥ ಆದರೂ ನಿನ್ನನ್ನು ಅಜೇಯನೆಂದು ಭಾವಿಸಿರುವೆ. ಒಂದು ವೇಳೆ ನನ್ನೆದುರಿಗೆ ಯುದ್ಧಕ್ಕೆ ನಿಂತರೆ ಇಂದು ತೀಕ್ಷ್ಣವಾದ ಬಾಣಗಳಿಂದ ಮರಳಿ ಬಾರದಿರುವ ಜಾಗಕ್ಕೆ ತಲುಪಿಸಿ ಬಿಡುತ್ತೇನೆ. ॥ ೧೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಎಲೈ ಮೂರ್ಖನೇ! ನೀನು ವ್ಯರ್ಥವಾಗಿ ಗಳಹುತ್ತಿರುವೆ. ನಿನ್ನ ತಲೆಯ ಮೇಲೆ ಮೃತ್ಯುವು ಕುಣಿಯುತ್ತಿರುವುದನ್ನು ನೀನರಿಯೆ. ನಿಜವಾದ ಶೂರರು ಹೆಚ್ಚು ಮಾತನಾಡುವುದಿಲ್ಲ. ತನ್ನ ಪೌರುಷವನ್ನು ತೋರಿಸಿಕೊಡುತ್ತಾರೆ. ॥ ೧೯ ॥ ಹೀಗೆ ಹೇಳಿ ಭಗವಾನ್ ಶ್ರೀಕೃಷ್ಣನು ಕ್ರುದ್ಧನಾಗಿ, ಅತ್ಯಂತ ವೇಗಶಾಲಿಯಾದ, ಭಯಂಕರವಾದ ತನ್ನ ಗದೆಯಿಂದ ಶಾಲ್ವನ ಹೆಗಲಮೇಲೆ ಪ್ರಹರಿಸಿದನು. ಇದರಿಂದ ಅವನು ರಕ್ತವನ್ನು ಕಕ್ಕುತ್ತಾ ಥರ–ಥರನೆ ನಡುಗಿಹೋದನು. ॥ ೨೦ ॥ ಇತ್ತ ಗದೆಯು ಭಗವಂತನ ಬಳಿಗೆ ಮರಳಿ ಬಂದಾಗ ಶಾಲ್ವನು ಅಂತರ್ಧಾನನಾದನು. ಅನಂತರ ಮುಹೂರ್ತಕಾಲ ಕಳೆಯುತ್ತಿರುವಂತೆ ಒಬ್ಬ ಮನುಷ್ಯನು ಭಗವಂತನ ಸಮೀಪಕ್ಕೆ ಬಂದು ತಲೆ ಬಾಗಿ ನಮಸ್ಕರಿಸಿ, ಅಳುತ್ತಾ ಹೇಳಿದನು – ನನ್ನನ್ನು ನಿಮ್ಮ ತಾಯಿ ದೇವಕಿಯು ಕಳಿಸಿರುವಳು – ॥ ೨೧ ॥ ಆಕೆಯು ಹೇಳಿರುವಳು – ಕೃಷ್ಣ! ಕೃಷ್ಣಾ! ಮಹಾಬಾಹುವೇ! ಪಿತೃವತ್ಸಲನೇ! ಶಾಲ್ವನು ನಿನ್ನ ತಂದೆಯನ್ನು ಬಂಧಿಸಿ, ಕಟುಕನು ಪಶುವನ್ನು ಕಟ್ಟಿಕೊಂಡು ಎಳೆದೊಯ್ಯುವಂತೆ ಕೊಂಡುಹೋಗಿರುವನು. ॥ ೨೨ ॥ ಈ ಅಪ್ರಿಯವಾದ ಸಮಾಚಾರವನ್ನು ಕೇಳಿದ ಭಗವಾನ್ ಶ್ರೀಕೃಷ್ಣನ ಮುಖದಲ್ಲಿ ಮನುಷ್ಯ ಸ್ವಭಾವದಂತೆ ಖಿನ್ನತೆ ಆವರಿಸಿತು. ಅವನು ಸಾಮಾನ್ಯ ಮನುಷ್ಯರಂತೆ ಅತ್ಯಂತ ದಯಾಪರನಾಗಿ ಪಿತೃಸ್ನೇಹದಿಂದ ಹೀಗೆ ಹೇಳತೊಡಗಿದನು. ॥ ೨೩ ॥ ಅರೇ! ನನ್ನಣ್ಣ ಬಲರಾಮನನ್ನು ದೇವತೆಗಳು ಅಥವಾ ಅಸುರರು ಯಾರೂ ಗೆಲ್ಲಲಾರರು. ಅವನು ಸದಾಕಾಲ ಸಾವಧಾನವಾಗಿರುವವನು. ಶಾಲ್ವನ ಬಲ–ಪೌರುಷವಾದರೋ ಅಲ್ಪವಾದುದು. ಹೀಗಿದ್ದರೂ ಇವನು ನನ್ನಣ್ಣನನ್ನು ಹೇಗೆ ಗೆದ್ದುಕೊಂಡನು? ನಮ್ಮ ತಂದೆಯನ್ನು ಹೇಗೆ ಬಂಧಿಸಿಕೊಂಡು ಹೋದನು? ನಿಜವಾಗಿ ಪ್ರಾರಬ್ಧವು ಬಲವತ್ತರವಾದುದು. ॥ ೨೪ ॥ ಭಗವಾನ್ ಶ್ರೀಕೃಷ್ಣನು ಹೀಗೆ ಹೇಳುತ್ತಿರುವಂತೆಯೇ ಶಾಲ್ವನು ವಸುದೇವನಂತಹ ಒಬ್ಬ ಮಾಯಾರಚಿತ ಮನುಷ್ಯನನ್ನು ಹಿಡಿದುಕೊಂಡು ಬಂದು, ಶ್ರೀಕೃಷ್ಣನಲ್ಲಿ ಹೇಳತೊಡಗಿದನು. ॥ ೨೫ ॥ ಮೂರ್ಖನೇ! ನೀನು ಯಾರಿಗಾಗಿ ಬದುಕಿರುವೆಯೋ ಅಂತಹ ನಿನಗೆ ಜನ್ಮದಾತನಾದ ತಂದೆಯೇ ಇವನಾಗಿದ್ದಾನೆ; ನೋಡು. ನೀನು ನೋಡುತ್ತಿರುವಂತೆ ಇವನನ್ನು ನಾನೀಗ ಕತ್ತರಿಸಿಬಿಡುತ್ತೇನೆ. ನಿನಗೇನಾದರೂ ಶಕ್ತಿಯಿದ್ದರೆ ಇವನನ್ನು ಬದುಕಿಸಿಕೋ. ॥ ೨೬ ॥

ಏವಂ ನಿರ್ಭರ್ತ್ಸ್ಯ ಮಾಯಾವೀ ಖಿಡ್ಗೀನಾನಕದುಂದುಭೇಃ ।
ಉತ್ಕೃತ್ಯ ಶಿರ ಆದಾಯ ಖಿಸ್ತಂ ಸೌಭಂ ಸಮಾವಿಶತ್
॥ ೨೭ ॥

ತತೋ ಮುಹೂರ್ತಂ ಪ್ರಕೃತಾವುಪಪ್ಲುತಃ
ಸ್ವಬೋಧ ಆಸ್ತೇ ಸ್ವಜನಾನುಷಂಗತಃ ।
ಮಹಾನುಭಾವಸ್ತದಬುದ್ಧ್ಯದಾಸುರೀಂ
ಮಾಯಾಂ ಸ ಶಾಲ್ವಪ್ರಸೃತಾಂ ಮಯೋದಿತಾಮ್ ॥ ೨೮ ॥

ನ ತತ್ರ ದೂತಂ ನ ಪಿತುಃ ಕಲೇವರಂ
ಪ್ರಬುದ್ಧ ಆಜೌ ಸಮಪಶ್ಯದಚ್ಯುತಃ ।
ಸ್ವಾಪ್ನಂ ಯಥಾ ಚಾಂಬರಚಾರಿಣಂ ರಿಪುಂ
ಸೌಭಸ್ಥ ಮಾಲೋಕ್ಯ ನಿಹಂತುಮುದ್ಯತಃ ॥ ೨೯ ॥

ಏವಂ ವದಂತಿ ರಾಜರ್ಷೇ ಋಷಯಃ ಕೇಚ ನಾನ್ವಿತಾಃ ।
ಯತ್ ಸ್ವವಾಚೋ ವಿರುಧ್ಯೇತ ನೂನಂ ತೇ ನ ಸ್ಮರಂತ್ಯುತ
॥ ೩೦ ॥

ಕ್ವಶೋಕಮೋಹೌ ಸ್ನೇಹೋ ವಾ ಭಯಂ ವಾ ಯೇಽಜ್ಞಸಂಭವಾಃ ।
ಕ್ವ ಚಾಖಂಡಿತವಿಜ್ಞಾನಜ್ಞಾನೈಶ್ವರ್ಯಸ್ತ್ವಖಂಡಿತಃ
॥ ೩೧ ॥

ಯತ್ಪಾದಸೇವೋರ್ಜಿತ ಯಾಽಽತ್ಮವಿದ್ಯಯಾ
ಹಿನ್ವಂತ್ಯನಾದ್ಯಾತ್ಮವಿಪರ್ಯಯಗ್ರಹಮ್ ।
ಲಭಂತ ಆತ್ಮೀಯಮನಂತಮೈಶ್ವರಂ
ಕುತೋ ನು ಮೋಹಃ ಪರಮಸ್ಯ ಸದ್ಗತೇಃ ॥ ೩೨ ॥

ತಂ ಶಸ್ತ್ರಪೂಗೈಃ ಪ್ರಹರಂತಮೋಜಸಾ
ಶಾಲ್ವಂ ಶರೈಃ ಶೌರಿರಮೋಘವಿಕ್ರಮಃ ।
ವಿದ್ಧ್ವಾಚ್ಛಿನದ್ವರ್ಮ ಧನುಃ ಶಿರೋಮಣಿಂ
ಸೌಭಂ ಚ ಶತ್ರೋರ್ಗದಯಾ ರುರೋಜ ಹ ॥ ೩೩ ॥

ತತ್ ಕೃಷ್ಣಹಸ್ತೇರಿತಯಾ ವಿಚೂರ್ಣಿತಂ
ಪಪಾತ ತೋಯೇ ಗದಯಾ ಸಹಸ್ರಧಾ ।
ವಿಸೃಜ್ಯ ತದ್ಭೂತಲಮಾಸ್ಥಿತೋ ಗದಾ-
ಮುದ್ಯಮ್ಯ ಶಾಲ್ವೋಽಚ್ಯುತಮಭ್ಯಗಾದ್ರುತಮ್ ॥ ೩೪ ॥

ಮಾಯಾವಿಯಾದ ಶಾಲ್ವನು ಹೀಗೆ ಭಗವಂತನನ್ನು ನಿಂದಿಸುತ್ತಾ ಮಾಯಾರಚಿತ ವಸುದೇವನ ತಲೆಯನ್ನು ಕತ್ತಿಯಿಂದ ತುಂಡರಿಸಿ, ಅದನ್ನೆತ್ತಿಕೊಂಡು ಆಕಾಶದಲ್ಲಿ ನಿಂತಿದ್ದ ಸೌಭವಿಮಾನವನ್ನೇರಿದನು. ॥ ೨೭ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಸ್ವಯಂಸಿದ್ಧ ಜ್ಞಾನಸ್ವರೂಪನೂ, ಮಹಾನುಭಾವನೂ ಆಗಿದ್ದನು. ಆ ಘಟನೆಯನ್ನು ನೋಡಿ ಎರಡು ಗಳಿಗೆ ತಂದೆಯಾದ ವಸುದೇವನ ವಿಷಯದಲ್ಲಿ ಅತ್ಯಂತ ಪ್ರೀತಿಯಿದ್ದ ಕಾರಣ ಸಾಧಾರಣ ಮನುಷ್ಯರಂತೆ ಶೋಕ ಸಾಗರದಲ್ಲಿ ಮುಳುಗಿ ಹೋದನು. ಸ್ವಲ್ಪ ಹೊತ್ತಾದನಂತರ ತಾನು ಕಂಡದ್ದು ಶಾಲ್ವನಿಗೆ ಮಯನು ಉಪದೇಶಿಸಿದ್ದ ಮಾಯಾವಿದ್ಯೆಯ ಪ್ರದರ್ಶನವೆಂಬುದು ಶ್ರೀಕೃಷ್ಣನಿಗೆ ತಿಳಿದು ಹೋಯಿತು. ॥ ೨೮ ॥ ಕನಸಿನಲ್ಲಿ ಕಂಡದ್ದೆಲ್ಲಾ ಎಚ್ಚರವಾದೊಡನೆ ಕಾಣದೇ ಹೋಗುವಂತೆಯೇ ಶ್ರೀಕೃಷ್ಣನಿಗೆ ನಿಜಸ್ಥಿತಿಯುಂಟಾಗುತ್ತಲೇ ಅಲ್ಲಿ ಆ ದೂತನಾಗಲೀ, ತಂದೆಯ ಶರೀರವಾಗಲೀ ಏನೂ ಇರಲಿಲ್ಲ. ವಿಮಾನವನ್ನು ಹತ್ತಿ ಅಟ್ಟಹಾಸದಿಂದ ಆಕಾಶದಲ್ಲಿ ಸಂಚರಿಸುತ್ತಿದ್ದ ಶಾಲ್ವನನ್ನು ನೋಡಿ ಅವನನ್ನು ವಧಿಸಲು ಮುಂದಾದನು. ॥ ೨೯ ॥

ಪ್ರಿಯ ಪರೀಕ್ಷಿತನೇ ! ಶ್ರೀಕೃಷ್ಣನಿಗೆ ವಿಮೋಹ ಉಂಟಾದ ಮಾತುಗಳನ್ನು ಪೂರ್ವಾಪರ ವಿಚಾರ ಮಾಡದ ಕೆಲವು – ಕೆಲವು ಋಷಿಗಳು ಹೇಳುತ್ತಿರುತ್ತಾರೆ. ಶ್ರೀಕೃಷ್ಣನ ವಿಷಯದಲ್ಲಿ ಹೀಗೆ ಹೇಳುವುದು – 'ಅವನು ಮಾಯಾತೀತನೂ, ಸರ್ವಜ್ಞನೂ' ಎಂದು ಅವರೇ ಹಿಂದೆ ಹೇಳಿದ ಮಾತುಗಳಿಗೆ ವಿರೋಧವಾಗಿದೆ. ॥ ೩೦ ॥ ಅಜ್ಞಾನದಿಂದುಟಾಗುವ ಶೋಕ-ಮೋಹ-ಸ್ನೇಹ-ಭಯಗಳೆಲ್ಲಿ ? ಪರಿಪೂರ್ಣವಾದ ಜ್ಞಾನ- ವಿಜ್ಞಾನೈಶ್ವರ್ಯಗಳಿಗೆ ನೆಲೆಯಾದ, ದೇವವಂದ್ಯನಾದ, ಪರಿಪೂರ್ಣನಾದ ಶ್ರೀಕೃಷ್ಣನೆಲ್ಲಿ? (ಅವನಲ್ಲಿ ಇಂತಹ ಭಾವಗಳಿರುವುದು ಸಂಭವವೇ ಇಲ್ಲ.) ॥ ೩೧ ॥ ದೊಡ್ಡ ದೊಡ್ಡ ಋಷಿಮುನಿಗಳು ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಸೇವೆ ಮಾಡಿ ಆತ್ಮವಿದ್ಯೆಯನ್ನು ಸಂಪಾದಿಸಿಕೊಳ್ಳುತ್ತಾರೆ ಮತ್ತು ಅನಾದಿ ಕಾಲದಿಂದಲೂ ಬಂದಿರುವ ಅಜ್ಞಾನರೂಪವಾದ ದೇಹಾತ್ಮ ಬುದ್ಧಿಯನ್ನು ತೊರೆಯುತ್ತಾರೆ. ಆತ್ಮಸಂಬಂಧಿಯಾದ ಅನಂತ ಐಶ್ವರ್ಯವನ್ನು ಪಡೆದುಕೊಳ್ಳುತ್ತಾರೆ. ಅಂತಹ ಸಂತರ ಪರಮಗತಿ ಸ್ವರೂಪನಾದ ಭಗವಾನ್ ಶ್ರೀಕೃಷ್ಣನಲ್ಲಿ ಇಂತಹ ಮೋಹವು ಹೇಗೆ ತಾನೇ ಉಂಟಾಗಬಲ್ಲದು ? ॥ ೩೨ ॥

ಈಗ ಶಾಲ್ವನು ಉತ್ಸಾಹಭರಿತನಾಗಿ ಶ್ರೀಕೃಷ್ಣನ ಮೇಲೆ ಪುಂಖಾನುಪುಂಖವಾಗಿ ಶಸ್ತ್ರಗಳ ಮಳೆಗರೆಯತೊಡಗಿದನು. ಅಮೋಘಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣನೂ ಕೂಡ ತನ್ನ ಬಾಣಗಳಿಂದ ಶಾಲ್ವನನ್ನು ಗಾಯಗೊಳಿಸಿ, ಕವಚ, ಧನುಸ್ಸು ಮತ್ತು ಕಿರೀಟವನ್ನು ಪುಡಿ-ಪುಡಿ ಮಾಡಿದನು. ಜೊತೆಗೆ ಗದಾಘಾತದಿಂದ ಅವನ ವಿಮಾನವನ್ನು ಘಾಸಿಗೊಳಿಸಿದನು. ॥ ೩೩ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ವೇಗವಾಗಿ ಎಸೆದಿರುವ ಗದೆಯಿಂದ ಆ ವಿಮಾನವು ನುಚ್ಚು-ನೂರಾಗಿ ಸಮುದ್ರಕ್ಕೆ ಬಿದ್ದು ಹೋಯಿತು. ಅದು ಬೀಳುವ ಮೊದಲೇ ಶಾಲ್ವನು ವಿಮಾನದಿಂದ ನೆಲಕ್ಕೆ ಹಾರಿ ಗದಾಪಾಣಿಯಾಗಿ ವೇಗವಾಗಿ ಶ್ರೀಕೃಷ್ಣನ ಕಡೆಗೆ ಮುನ್ನುಗ್ಗಿದನು. ॥ ೩೪ ॥

ಅಧಾವತಃ ಸಗದಂ ತಸ್ಯ ಬಾಹುಂ
ಭಲ್ಲೇನ ಛಿತ್ತ್ವಾಥ ರಥಾಂಗಮದ್ಭುತಮ್ ।
ವಧಾಯ ಶಾಲ್ವಸ್ಯ ಲಯಾರ್ಕಸನ್ನಿಭಂ
ಬಿಭ್ರದ್ಬಭೌ ಸಾರ್ಕ ಇವೋದಯಾಚಲಃ ॥ ೩೫ ॥

ಜಹಾರ ತೇನೈವ ಶಿರಃ ಸಕುಂಡಲಂ
ಕಿರೀಟಯುಕ್ತಂ ಪುರುಮಾಯಿನೋ ಹರಿಃ ।
ವಜ್ರೇಣ ವೃತ್ರಸ್ಯ ಯಥಾ ಪುರಂದರೋ
ಬಭೂವ ಹಾಹೇತಿ ವಚಸ್ತದಾ ನೃಣಾಮ್ ॥ ೩೬ ॥

ತಸ್ಮಿನ್ನಿಪತಿತೇ ಪಾಪೇ ಸೌಭೇ ಚ ಗದಯಾ ಹತೇ ।
ನೇದುರ್ದುಂದುಭಯೋ ರಾಜನ್ ದಿವಿ ದೇವಗಣೇರಿತಾಃ ।
ಸುಖೀನಾಮಪಚಿತಿಂ ಕುರ್ವನ್ ದಂತವಕ್ತ್ರೋ ರುಷಾಭ್ಯಗಾತ್
॥ ೩೭ ॥

ಶಾಲ್ವನ ಆಕ್ರಮಣವನ್ನು ನೋಡಿದ ಶ್ರೀಕೃಷ್ಣನು ಭಲ್ಲೆಯಿಂದ ಗದೆಯ ಸಹಿತ ಆವನ ತೋಳನ್ನು ಕತ್ತರಿಸಿ ಹಾಕಿದನು. ಮತ್ತೆ ಅವನನ್ನು ಕೊಲ್ಲಲಿಕ್ಕಾಗಿ ಪ್ರಳಯಕಾಲದ ಸೂರ್ಯನಂತೆ ತೇಜಸ್ಸಿನಿಂದ ಕೂಡಿದ್ದ ಪರಮಾದ್ಭುತವಾದ ಸುದರ್ಶನ ಚಕ್ರವನ್ನು ಧರಿಸಿ ಸೂರ್ಯನಿಂದ ಕೂಡಿದ ಉದಯಾಚಲದಂತೆ ಪ್ರಕಾಶಿಸಿದನು. ॥ ೩೫ ॥ ಭಗವಾನ್ ಶ್ರೀಕೃಷ್ಣನು ಮಾಯಾವಿ ಶಾಲ್ವನ ಕಿರೀಟ ಕುಂಡಲ ಸಹಿತ ಶಿರಸ್ಸನ್ನು-ಇಂದ್ರನು ವಜ್ರಾಯುಧದಿಂದ ವೃತ್ರಾಸುರನ ಶಿರವನ್ನು ಕತ್ತರಿಸಿದಂತೆ ಚಕ್ರಾಯುಧದಿಂದ ಕತ್ತರಿಸಿಬಿಟ್ಟನು. ಆ ಸಮಯದಲ್ಲಿ ಶಾಲ್ವನ ಸೈನಿಕರೆಲ್ಲರೂ ದುಃಖಿತಪ್ತರಾಗಿ ಅಯ್ಯೋ ! ಅಯ್ಯೋ ! ಎಂದು ಕಿರುಚಿಕೊಂಡರು. ॥ ೩೬ ॥

ಪರೀಕ್ಷಿತನೇ ! ಹೀಗೆ ಪಾಪಿಯಾದ ಶಾಲ್ವನು ಹತನಾಗಿ ಅವನ ವಿಮಾನವೂ ಗದೆಯಿಂದ ವಿಧ್ವಸ್ತವಾದಾಗ ದೇವತೆಗಳು ಆಕಾಶದಲ್ಲಿ ದುಂದುಭಿಗಳನ್ನು ನುಡಿಸತೊಡಗಿದರು. ಇದೇ ಸಮಯಕ್ಕೆ ಸರಿಯಾಗಿ ದಂತವಕ್ತ್ರನು ತನ್ನ ಮಿತ್ರನಾದ ಶಿಶುಪಾಲನೇ ಮೊದಲಾದವರ ಸಾವಿನ ಸೇಡನ್ನು ತೀರಿಸಿಕೊಳ್ಳಲು ಅತ್ಯಂತ ಕ್ರುದ್ಧನಾಗಿ ದ್ವಾರಕೆಗೆ ಆಗಮಿಸಿದನು. ॥ ೩೭ ॥

ಎಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೭೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಸೌಭವಧೋನಾಮ ಸಪ್ತಸಪ್ತತಿತಮೋऽಧ್ಯಾಯಃ॥ ೭೭ ॥

ಎಪ್ಪತ್ತೆಂಟನೆಯ ಅಧ್ಯಾಯ

ದಂತವಕ್ತ್ರ-ವಿದೂರಥ ಸಂಹಾರ
ತೀರ್ಥಯಾತ್ರೆಯಲ್ಲಿ ಬಲರಾಮನಿಂದ ಸೂತಪುರಾಣಿಕರ ವಧೆ

ಶ್ರೀಶುಕ ಉವಾಚ

ಶಿಶುಪಾಲಸ್ಯ ಶಾಲ್ವಸ್ಯ ಪೌಂಡ್ರಕಸ್ಯಾಪಿ ದುರ್ಮತಿಃ ।
ಪರಲೋಕಗತಾನಾಂ ಚ ಕುರ್ವನ್ ಪಾರೋಕ್ಷ್ಯಸೌಹೃದಮ್
॥ ೧ ॥

ಏಕಃ ಪದಾತಿಃ ಸಂಕ್ರುದ್ಧೋ ಗದಾಪಾಣಿಃ ಪ್ರಕಂಪಯನ್ ।
ಪದ್ಭ್ಯಾಮಿಮಾಂ ಮಹಾರಾಜ ಮಹಾಸತ್ತ್ವೋ ವ್ಯದೃಶ್ಯತ
॥ ೨ ॥

ತಂ ತಥಾऽऽಯಾಂತಮಾಲೋಕ್ಯ ಗದಾಮಾದಾಯ ಸತ್ವರಃ ।
ಅವಪ್ಲುತ್ಯ ರಥಾತ್ ಕೃಷ್ಣಃ ಸಿಂಧುಂ ವೇಲೇವ ಪ್ರತ್ಯಧಾತ್
॥ ೩ ॥

ಗದಾಮುದ್ಯಮ್ಯ ಕಾರೂಷೋ ಮುಕುಂದಂ ಪ್ರಾಹ ದುರ್ಮದಃ ।
ದಿಷ್ಟ್ಯಾ ದಿಷ್ಟ್ಯಾ ಭವಾನದ್ಯ ಮಮ ದೃಷ್ಟಿಪಥಂ ಗತಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ಶಿಶುಪಾಲ, ಶಾಲ್ವ, ಪೌಂಡ್ರಕ ಮೊದಲಾದವರು ಪರಲೋಕವನ್ನು ಸೇರಿದುದರಿಂದ ಅವರ ಮಿತ್ರ ಋಣವನ್ನು ತೀರಿಸಬೇಕೆಂದು ದುರ್ಮತಿಯಾದ ದಂತವಕ್ತ್ರನು ಒಬ್ಬಂಟಿಗನಾಗಿ ಕಾಲ್ನಡಿಗೆಯಿಂದ ಯುದ್ಧಭೂಮಿಗೆ ಆಗಮಿಸಿದನು. ಆಗ ಮಹಾಶಕ್ತಿಶಾಲಿಯಾದ ಅವನು ಅತ್ಯಂತ ಕ್ರುದ್ಧನಾಗಿ ಗದೆಯನ್ನೆತ್ತಿಕೊಂಡು, ಗಡುಸಾದ ಹೆಜ್ಜೆಗಳಿಂದ ಭೂಮಿಯನ್ನು ನಡುಗಿಸುತ್ತಾ ಬರುತ್ತಿರುವುದನ್ನು ಜನರು ನೋಡಿದರು. ॥ ೧-೨ ॥ ಹೀಗೆ ತನ್ನೆಡೆಗೆ ಬರುತ್ತಿರುವ ದಂತವಕ್ತ್ರನನ್ನು ನೋಡಿ ಭಗವಾನ್ ಶ್ರೀಕೃಷ್ಣನು ಶೀಘ್ರವಾಗಿ ಗದೆಯನ್ನೆತ್ತಿಕೊಂಡು ರಥದಿಂದ ಧುಮುಕಿ-ಸಮುದ್ರದ ಅಲೆಗಳನ್ನು ತೀರವು ತಡೆದು ನಿಲ್ಲಿಸುವಂತೆ ಅವನನ್ನು ತಡೆದು ನಿಲ್ಲಿಸಿದನು. ॥ ೩ ॥ ಶ್ರೀಕೃಷ್ಣನು ಎದುರಿಗೆ ನಿಂತಿರುವುದನ್ನು ನೋಡಿ ದುರ್ಮದನಾದ ಕರೂಷನರೇಶನಾದ ದಂತವಕ್ತ್ರನು ಗದೆಯನ್ನು ಮೇಲೆತ್ತಿಕೊಂಡು ಶ್ರೀಕೃಷ್ಣನಿಗೆ ಹೇಳಿದನು - ಇಂದು ನೀನು ಸೌಭಾಗ್ಯವಶದಿಂದ ನನ್ನ ಕಣ್ಣಿಗೆ ಬಿದ್ದಿರುವೆ. ॥ ೪ ॥

ತ್ವಂ ಮಾತುಲೇಯೋ ನಃ ಕೃಷ್ಣ ಮಿತ್ರಧ್ರುಜ್ಜಾಂ ಜಿಘಾಂಸಸಿ ।
ಅತಸ್ತ್ವಾಂ ಗದಯಾ ಮಂದ ಹನಿಷ್ಯೇ ವಜ್ರಕಲ್ಪಯಾ
॥ ೫ ॥

ತಥ್ಯಾನೃಣ್ಯಮುಪೈಮ್ಯಜ್ಞ ಮಿತ್ರಾಣಾಂ ಮಿತ್ರವತ್ಸಲಃ ।
ಬಂಧುರೂಪಮರಿಂ ಹತ್ವಾ ವ್ಯಾಧಿಂ ದೇಹಚರಂ ಯಥಾ
॥ ೬ ॥

ಏವಂ ರೂಕ್ಷೈಸ್ತುದನ್ ವಾಕ್ಯೈಃ ಕೃಷ್ಣಂ ತೋತ್ತ್ರೈರಿವ ದ್ವಿಪಮ್ ।
ಗದಯಾ ತಾಡಯನ್ಮೂರ್ಧ್ನಿ ಸಿಂಹವದ್ವ್ಯನದಚ್ಚ ಸಃ
॥ ೭ ॥

ಗದಯಾಭಿಹತೋಽಪ್ಯಾಜೌ ನ ಚಚಾಲ ಯದೂದ್ವಹಃ ।
ಕೃಷ್ಣೋಽಪಿ ತಮಹನ್ಗುರ್ವ್ಯಾ ಕೌಮೋದಕ್ಯಾಸ್ತನಾಂತರೇ
॥ ೮ ॥

ಗದಾನಿರ್ಭಿನ್ನ ಹೃದಯ ಉದ್ವಮನ್ರುಧಿರಂ ಮುಖಾತ್ ।
ಪ್ರಸಾರ್ಯ ಕೇಶಬಾಹ್ವಂಘ್ರೀಂಧರಣ್ಯಾಂ ನ್ಯಪತದ್ವ್ಯಸುಃ
॥ ೯ ॥

ತತಃ ಸೂಕ್ಷ್ಮತರಂ ಜ್ಯೋತಿಃ ಕೃಷ್ಣಮಾವಿಶದದ್ಭುತಮ್ ।
ಪಶ್ಯತಾಂ ಸರ್ವಭೂತಾನಾಂ ಯಥಾ ಚೈದ್ಯವಧೇ ನೃಪ
॥ ೧೦ ॥

ವಿದೂರಥಸ್ತು ತದ್ಭ್ರಾತಾ ಭ್ರಾತೃಶೋಕಪರಿಪ್ಲುತಃ ।
ಆಗಚ್ಛದಸಿಚರ್ಮಭ್ಯಾಮುಚ್ಛ್ವಸಂಸ್ತಜ್ಜಿಘಾಂಸಯಾ
॥ ೧೧ ॥

ತಸ್ಯ ಚಾಪತತಃ ಕೃಷ್ಣಶ್ಚಕ್ರೇಣ ಕ್ಷುರನೇಮಿನಾ ।
ಶಿರೋ ಜಹಾರ ರಾಜೇಂದ್ರ ಸಕಿರೀಟಂ ಸಕುಂಡಲಮ್
॥ ೧೨ ॥

ಏವಂ ಸೌಭಂ ಚ ಶಾಲ್ವಂ ಚ ದಂತವಕ್ತ್ರಂ ಸಹಾನುಜಮ್ ।
ಹತ್ವಾ ದುರ್ವಿಷಹಾನನ್ಯೈರೀಡಿತಃ ಸುರಮಾನವೈಃ
॥ ೧೩ ॥

ಮುನಿಭಿಃ ಸಿದ್ಧಗಂಧರ್ವೈರ್ವಿದ್ಯಾಧರಮಹೋರಗೈಃ ।
ಅಪ್ಸರೋಭಿಃ ಪಿತೃಗಣೈರ್ಯಕ್ಷೈಃ ಕಿನ್ನರಚಾರಣೈಃ
॥ ೧೪ ॥

ಕೃಷ್ಣ! ನೀನು ನನ್ನ ಮಾವನ ಮಗನೇ ಆಗಿರುವೆ. ಆದ್ದರಿಂದ ನಿನ್ನನ್ನು ಕೊಲ್ಲಬಾರದು. ಆದರೆ ಅಂದು ನೀನು ನನ್ನ ಮಿತ್ರನನ್ನು ಕೊಂದು ಹಾಕಿದೆ. ಮತ್ತೆ ಇಂದು ನನ್ನನ್ನು ಕೊಲ್ಲಲೆಳಸುವೆ. ಆದಕ್ಕಾಗಿ ಎಲೈ ಮೂರ್ಖನೇ! ಈಗ ನಾನು ನಿನ್ನನ್ನು ನನ್ನ ವಜ್ರಕರ್ಕಶವಾದ ಗದೆಯಿಂದ ಸಂಹರಿಸಿಬಿಡುತ್ತೇನೆ. ॥ ೫ ॥ ಮಂದಮತಿಯೇ! ಹಾಗೆ ನೋಡಿದರೆ ನೀನು ನನಗೆ ಸಂಬಂಧಿಯೇ ಆಗಿರುವೆ. ಆದರೆ ಶರೀರದಲ್ಲಿ ಇರುವ ಯಾವುದಾದರೂ ರೋಗದಂತೆ ನೀನು ಶತ್ರುವೇ ಆಗಿರುವೆ. ನಾನು ನನ್ನ ಮಿತ್ರರನ್ನು ತುಂಬಾ ಪ್ರೀತಿಸುತ್ತೇನೆ. ಅವರ ಋಣ ನನ್ನ ಮೇಲಿದೆ. ಈಗ ನಿನ್ನನ್ನು ಕೊಂದು ಅದನ್ನು ತೀರಿಸಿಕೊಳ್ಳುವೆ. ॥ ೬ ॥ ಮಾವುತನು ಅಂಕುಶದಿಂದ ತಿವಿದು ಆನೆಯನ್ನು ಕೆರಳಿಸುವಂತೆ ದಂತವಕ್ತ್ರನು ತನ್ನ ಕಠೋರವಾದ ಮಾತುಗಳಿಂದ ಶ್ರೀಕೃಷ್ಣನನ್ನು ಕೆಣಕಿದನು ಹಾಗೂ ವೇಗವಾಗಿ ಅವನ ತಲೆಯಮೇಲೆ ಗದೆಯಿಂದ ಹೊಡೆದು ಸಿಂಹದಂತೆ ಗರ್ಜಿಸಿದನು. ॥ ೭॥ ರಣರಂಗದಲ್ಲಿ ಗದೆಯ ಏಟನ್ನು ತಿಂದರೂ ಭಗವಾನ್ ಶ್ರೀಕೃಷ್ಣನು ಹಿಂದಕ್ಕೆ ಸರಿಯದೆ ಸ್ಥಿರವಾಗಿ ನಿಂತು ತನ್ನ ಅತ್ಯಂತ ಭಾರವಾಗಿದ್ದ ಕೌಮೋದಕೀ ಗದೆಯಿಂದ ದಂತವಕ್ತ್ರನ ವಕ್ಷಸ್ಥಳದಲ್ಲಿ ರಭಸದಿಂದ ಪ್ರಹರಿಸಿದನು. ॥ ೮ ॥ ಗದಾಘಾತದಿಂದ ದಂತವಕ್ತ್ರನ ಎದೆಯೊಡೆದು ರಕ್ತವನ್ನು ಕಾರತೊಡಗಿದನು. ಕೂದಲುಗಳು ಕೆದರಿಹೋಯಿತು. ಬಾಹುಗಳನ್ನು ಚಾಚಿ ಗತಪ್ರಾಣನಾಗಿ ಅವನು ಭೂಮಿಗೊರಗಿದನು. ॥ ೯ ॥ ಪರೀಕ್ಷಿತನೇ! ಶಿಶುಪಾಲನ ವಧೆಯ ಸಮಯದಲ್ಲಿ ಆದಂತೆಯೇ, ಗತಪ್ರಾಣನಾದ ದಂತವಕ್ತ್ರನ ಶರೀರದಿಂದ ಅತ್ಯಂತ ಸೂಕ್ಷ್ಮವಾದ ಜ್ಯೋತಿಯೊಂದು ಹೊರಬಂದು ಎಲ್ಲರೂ ನೋಡುತ್ತಿರುವಂತೆಯೇ ಅದು ವಿಚಿತ್ರ ರೀತಿಯಿಂದ ಭಗವಾನ್ ಶ್ರೀಕೃಷ್ಣನಲ್ಲಿ ಸೇರಿ ಹೋಯಿತು. ॥ ೧೦ ॥

ವಿದೂರಥನೆಂಬುವನು ದಂತವಕ್ತ್ರನ ತಮ್ಮನು. ಅವನು ಅಣ್ಣನ ಮರಣದಿಂದಾಗಿ ಅತ್ಯಂತ ಶೋಕಾಕುಲನಾಗಿದ್ದನು. ಈಗವನು ಬಹಳವಾಗಿ ಕ್ರುದ್ಧನಾಗಿ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಕೈಯಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದು ಶ್ರೀಕೃಷ್ಣನನ್ನು ಕೊಂದುಹಾಕುವುದಕ್ಕಾಗಿ ಬಂದನು. ॥ ೧೧ ॥ ರಾಜೇಂದ್ರನೇ! ಅವನು ತನ್ನ ಮೇಲೆ ಪ್ರಹಾರಮಾಡಲು ಬಯಸುತ್ತಿರುವುದನ್ನು ನೋಡಿದ ಭಗವಾನ್ ಶ್ರೀಕೃಷ್ಣನು ಕತ್ತಿಯಂತೆ ಹರಿತವಾದ ಅಂಚುಗಳುಳ್ಳ ಚಕ್ರಾಯುಧದಿಂದ ಕಿರೀಟ-ಕುಂಡಲಗಳ ಸಹಿತವಾಗಿ ಅವನ ತಲೆಯನ್ನು ಕತ್ತರಿಸಿ ಹಾಕಿದನು. ॥ ೧೨ ॥ ಈ ಪ್ರಕಾರವಾಗಿ ಶ್ರೀಕೃಷ್ಣನು ಇತರರಿಂದ ಎದುರಿಸಲು ಅಸಾಧ್ಯರಾದ ಶಾಲ್ವನನ್ನೂ ಅವನ ಸೌಭ ವಿಮಾನವನ್ನೂ, ದಂತವಕ್ತ್ರನನ್ನೂ, ವಿದೂರಥನನ್ನು ಸಂಹರಿಸಿ ದ್ವಾರಕಾ ಪಟ್ಟಣವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ದೇವತೆಗಳು, ಮನುಷ್ಯರು ಅವನನ್ನು ಸ್ತುತಿಸುತ್ತಿದ್ದರು. ದೊಡ್ಡ-ದೊಡ್ಡ ಋಷಿ-ಮುನಿಗಳು, ಸಿದ್ಧರು-ಗಂಧರ್ವರು, ವಿದ್ಯಾಧರರು ಮತ್ತು ವಾಸುಕಿಯೇ ಮೊದಲಾದ ನಾಗರು, ಅಪ್ಸರೆಯರು, ಪಿತೃಗಳೂ, ಯಕ್ಷರು, ಕಿನ್ನರರು, ಚಾರಣರೂ ಅವನ ಮೇಲೆ ಹೂವಿನ ಮಳೆಗರೆಯುತ್ತಾ, ಅವನ ವಿಜಯ ಕೀರ್ತನೆಗಳನ್ನು ಹಾಡುತ್ತಿದ್ದರು.

ಉಪಗೀಯಮಾನವಿಜಯಃ ಕುಸುಮೈರಭಿವರ್ಷಿತಃ ।
ವೃತಶ್ಚ ವೃಷ್ಣಿಪ್ರವರೈರ್ವಿವೇಶಾಲಂಕೃತಾಂ ಪುರೀಮ್
॥ ೧೫ ॥

ಏವಂ ಯೋಗೇಶ್ವರಃ ಕೃಷ್ಣೋ ಭಗವಾನ್ ಜಗದೀಶ್ವರಃ ।
ಈಯತೇ ಪಶುದೃಷ್ಟೀನಾಂ ನಿರ್ಜಿತೋ ಜಯತೀತಿ ಸಃ
॥ ೧೬ ॥

ಶ್ರುತ್ವಾ ಯುದ್ಧೋದ್ಯಮಂ ರಾಮಃ ಕುರೂಣಾಂ ಸಹ ಪಾಂಡವೈಃ ।
ತೀರ್ಥಾಭಿಷೇಕವ್ಯಾಜೇನ ಮಧ್ಯಸ್ಥಃ ಪ್ರಯಯೌ ಕಿಲ
॥ ೧೭ ॥

ಸ್ನಾತ್ವಾ ಪ್ರಭಾಸೇ ಸಂತರ್ಪ್ಯ ದೇವರ್ಷಿಪಿತೃಮಾನವಾನ್ ।
ಸರಸ್ವತೀಂ ಪ್ರತಿಸ್ರೋತಂ ಯಯೌ ಬ್ರಾಹ್ಮಣಸಂವೃತಃ
॥ ೧೮ ॥

ಪೃಥೂದಕಂ ಬಿಂದುಸರಸ್ತ್ರಿತಕೂಪಂ ಸುದರ್ಶನಮ್ ।
ವಿಶಾಲಂ ಬ್ರಹ್ಮತೀರ್ಥಂ ಚ ಚಕ್ರಂ ಪ್ರಾಚೀಂ ಸರಸ್ವತೀಮ್
॥ ೧೯ ॥

ಯಮುನಾಮನು ಯಾನ್ಯೇವ ಗಂಗಾಮನು ಚ ಭಾರತ ।
ಜಗಾಮ ನೈಮಿಷಂ ಯತ್ರ ಋಷಯಃ ಸತ್ರಮಾಸತೇ
॥ ೨೦ ॥

ತಮಾಗತಮಭಿಪ್ರೇತ್ಯ ಮುನಯೋ ದೀರ್ಘಸತ್ರಿಣಃ ।
ಅಭಿನಂದ್ಯ ಯಥಾನ್ಯಾಯಂ ಪ್ರಣಮ್ಯೋತ್ಥಾಯ ಚಾರ್ಚಯನ್
॥ ೨೧ ॥

ಸೋಽರ್ಚಿತಃ ಸಪರೀವಾರಃ ಕೃತಾಸನಪರಿಗ್ರಹಃ ।
ರೋಮಹರ್ಷಣಮಾಸೀನಂ ಮಹರ್ಷೇಃ ಶಿಷ್ಯಮೈಕ್ಷತ
॥ ೨೨ ॥

ಅಪ್ರತ್ಯುತ್ಥಾಯಿನಂ ಸೂತಮಕೃತಪ್ರಹ್ವಣಾಂಜಲಿಮ್ ।
ಅಧ್ಯಾಸೀನಂ ಚ ತಾನ್ವಿಪ್ರಾಂಶ್ಚುಕೋಪೋದ್ವೀಕ್ಷ್ಯ ಮಾಧವಃ
॥ ೨೩ ॥

ಕಸ್ಮಾದಸಾವಿಮಾನ್ ವಿಪ್ರಾನಧ್ಯಾಸ್ತೇ ಪ್ರತಿಲೋಮಜಃ ।
ಧರ್ಮಪಾಲಾಂಸ್ತಥೈವಾಸ್ಮಾನ್ ವಧಮರ್ಹತಿ ದುರ್ಮತಿಃ
॥ ೨೪ ॥

ಭಗವಂತನು ಪ್ರವೇಶಿಸುವಾಗ ದ್ವಾರಕೆಯು ಬಹಳ ಅಲಂಕೃತವಾಗಿತ್ತು. ಮಹಾ-ಮಹಾ ವೃಷ್ಣಿವಂಶೀ ಯಾದವ ವೀರರೂ ಅವನನ್ನೇ ಅನುಸರಿಸುತ್ತಿದ್ದರು. ॥ ೧೫.-೧೫ ॥

ಪರೀಕ್ಷಿತನೇ! ಯೋಗೇಶ್ವರನೂ, ಜಗದೀಶ್ವರನೂ ಆದ ಭಗವಾನ್ ಶ್ರೀಕೃಷ್ಣನು ಹೀಗೆ ಅನೇಕ ಪ್ರಕಾರವಾದ ಲೀಲೆಗಳನ್ನು ಆಡುತ್ತಿದ್ದನು. ಇವನ ನಿಜಸ್ವರೂಪವನ್ನು ತಿಳಿಯದಿದ್ದ ಪಾಮರರಾದ ಅವಿವೇಕಿಗಳು ಕೆಲವು ಸಲ ಶ್ರೀಕೃಷ್ಣನು ಸೋತನೆಂದೂ, ಕೆಲವು ಸಲ ಜಯಗಳಿಸಿದನೆಂದೂ ಭಾವಿಸುತ್ತಿದ್ದರು. ಆದರೆ ವಾಸ್ತವವಾಗಿ ಅವನು ಸದಾಕಾಲ ವಿಜಯಿಯೇ ಆಗಿದ್ದಾನೆ. ಅವನಿಗೆ ಸೋಲೆಂಬುದೇ ಇಲ್ಲ. ಇದೆಲ್ಲವೂ ಲೀಲಾಮಾತ್ರ ಆಗಿದೆ. ॥ ೧೬ ॥

ಒಮ್ಮೆ ಬಲರಾಮನು ಕೌರವರಿಗೂ-ಪಾಂಡವರಿಗೂ ಯುದ್ಧಕ್ಕಾಗಿ ಸಿದ್ಧತೆಗಳು ಆಗುತ್ತಿರುವುದೆಂಬ ವಾರ್ತೆಯನ್ನು ಕೇಳಿದನು. ಯಾರೊಬ್ಬರ ಪಕ್ಷವನ್ನೂ ವಹಿಸುವುದು ಅವನಿಗೆ ಇಷ್ಟವಿರಲಿಲ್ಲ. ಅವನು ತಟಸ್ಥನಾಗಿದ್ದನು. ಅದಕ್ಕಾಗಿ ಅವನು ತೀರ್ಥಯಾತ್ರೆಯ ನೆಪದಿಂದ ದ್ವಾರಕೆಯಿಂದ ಹೊರಟು ಬಿಟ್ಟನು. ॥ ೧೭ ॥ ಅಲ್ಲಿಂದ ಹೊರಟು ಅವನು ಮೊದಲಿಗೆ ಪ್ರಭಾಸಕ್ಷೇತ್ರದಲ್ಲಿ ಸ್ನಾನ ತರ್ಪಣಾದಿಗಳನ್ನು ಮಾಡಿ, ಬ್ರಾಹ್ಮಣ ಭೋಜನದ ಮೂಲಕ ದೇವತೆಗಳನ್ನು, ಋಷಿಗಳನ್ನು, ಪಿತೃಗಳನ್ನು, ಮನುಷ್ಯರನ್ನು ಸಂತೃಪ್ತಗೊಳಿಸಿದನು. ಅನಂತರ ಅವನು ಕೆಲವು ಬ್ರಾಹ್ಮಣರೊಂದಿಗೆ ಪಶ್ಚಿಮವಾಹಿನಿಯಾದ ಸರಸ್ವತೀನದಿಯ ತೀರಕ್ಕೆ ಬಂದನು.॥೧೮॥ ಅಲ್ಲಿ ಸ್ನಾನಾದಿಗಳನ್ನು ಮುಗಿಸಿಕೊಂಡು ಕ್ರಮವಾಗಿ ಪೃಥೂದಕ, ಬಿಂದುಸರ, ತ್ರಿತಕೂಪ, ಸುದರ್ಶನತೀರ್ಥ, ವಿಶಾಲತೀರ್ಥ, ಬ್ರಹ್ಮತೀರ್ಥ ಚಕ್ರತೀರ್ಥ ಮತ್ತು ಪೂರ್ವವಾಹಿನಿಯಾದ ಸರಸ್ವತೀ ಮುಂತಾದ ತೀರ್ಥಗಳಿಗೆ ಹೋದನು. ॥ ೧೯ ॥ ಪರೀಕ್ಷಿತನೇ! ಅನಂತರ ಯಮುನಾತೀರದ ಮತ್ತು ಮುಖ್ಯ-ಮುಖ್ಯ ತೀರ್ಥಗಳನ್ನು ಸಂದರ್ಶಿಸುತ್ತಾ ದೊಡ್ಡ-ದೊಡ್ಡ ಋಷಿಗಳು ಸತ್ಸಂಗ ಸತ್ರವನ್ನು ನಡೆಸುತ್ತಿದ್ದ ನೈಮಿಷಾರಣ್ಯಕ್ಕೆ ಬಂದನು. ॥ ೨೦ ॥ ದೀರ್ಘಕಾಲ ನಡೆಯುವ ಸತ್ರಯಾಗದ ವ್ರತವನ್ನು ಕೈಗೊಂಡು ಕುಳಿತಿದ್ದ ಮಹರ್ಷಿಗಳು ಬಲರಾಮನು ಬಂದುದನ್ನು ನೋಡಿ ತಮ್ಮ ಆಸನಗಳಿಂದೆದ್ದು ಮುಂದೆ ಹೋಗಿ ಆತನನ್ನು ಸ್ವಾಗತಿಸಿ ಯಥಾಯೋಗ್ಯವಾಗಿ ಅಭಿನಂದಿಸಿ ಅವನನ್ನು ಪೂಜಿಸಿದರು. ॥ ೨೧ ॥ ತನ್ನ ಜೊತೆಯವರೊಡನೆ ಆಸನವನ್ನು ಸ್ವೀಕರಿಸಿ ಕುಳಿತು ಅವರಿಂದ ಸತ್ಕೃತನಾದ ಬಲರಾಮನು-ವ್ಯಾಸ-ಪೀಠದಲ್ಲಿ ಕುಳಿತಿದ್ದ ಭಗವಾನ್ ವ್ಯಾಸರ ಶಿಷ್ಯನಾದ ರೋಮಹರ್ಷಣನನ್ನು ನೋಡಿದನು. ॥ ೨೨ ॥ ರೋಮಹರ್ಷಣನು ಸೂತಜಾತಿಯಲ್ಲಿ ಹುಟ್ಟಿದವನಾಗಿದ್ದರೂ ಬ್ರಾಹ್ಮಣರು ಕುಳಿತಿದ್ದುದಕ್ಕಿಂತ ಎತ್ತರವಾದ ಆಸನದಲ್ಲಿ ಕುಳಿತಿದ್ದುದನ್ನು, ತಾನು ಆಗಮಿಸಿದರೂ ಮೇಲೆದ್ದು ಅಭಿನಂದಿಸದೇ ಇದ್ದುದನ್ನು ನೋಡಿ ಬಲರಾಮನು ಕುಪಿತನಾಗಿ ಗುಡುಗಿದನು - ॥ ೨೩. ॥ "ಈ ರೋಮಹರ್ಷಣನು ಪ್ರತಿಲೋಮ ಜಾತಿಯಲ್ಲಿ ಹುಟ್ಟಿದವನಾಗಿದ್ದರೂ ಈ ಶ್ರೇಷ್ಠರಾದ ಬ್ರಾಹ್ಮಣರು ಮತ್ತು ಧರ್ಮರಕ್ಷಕರಾದ ನಾವು ಕುಳಿತಿರುವುದಕ್ಕಿಂತ ಉನ್ನತವಾದ ಪೀಠದಲ್ಲಿ ಕುಳಿತಿರುವನು. ಆದುದರಿಂದ ಈ ದುರ್ಬುದ್ಧಿಯು ಮರಣದಂಡನೆಗೆ ಪಾತ್ರನಾಗಿದ್ದಾನೆ. ॥ ೨೪ ॥

ಋಷೇರ್ಭಗವತೋ ಭೂತ್ವಾ ಶಿಷ್ಯೋಽಧೀತ್ಯ ಬಹೂನಿ ಚ ।
ಸೇತಿಹಾಸಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ
॥ ೨೫ ॥

ಅದಾಂತಸ್ಯಾವಿನೀತಸ್ಯ ವೃಥಾ ಪಂಡಿತಮಾನಿನಃ ।
ನ ಗುಣಾಯ ಭವಂತಿ ಸ್ಮ ನಟಸ್ಯೇವಾಜಿತಾತ್ಮನಃ
॥ ೨೬ ॥

ಏತದರ್ಥೋಹಿ ಲೋಕೇಽಸ್ಮಿನ್ನವತಾರೋ ಮಯಾ ಕೃತಃ ।
ವಧ್ಯಾ ಮೇ ಧರ್ಮಧ್ವಜಿನಸ್ತೇ ಹಿ ಪಾತಕಿನೋಽಧಿಕಾಃ
॥ ೨೭ ॥

ಏತಾವದುಕ್ತ್ವಾ ಭಗವಾನ್ ನಿವೃತ್ತೋಽಸದ್ವಧಾದಪಿ ।
ಭಾವಿತ್ವಾತ್ತಂ ಕುಶಾಗ್ರೇಣ ಕರಸ್ಥೇನಾಹನತ್ ಪ್ರಭುಃ
॥ ೨೮ ॥

ಹಾಹೇತಿ ವಾದಿನಃ ಸರ್ವೇ ಮುನಯಃ ಖಿನ್ನ ಮಾನಸಾಃ ।
ಊಚುಃ ಸಂಕರ್ಷಣಂ ದೇವಮಧರ್ಮಸ್ತೇ ಕೃತಃ ಪ್ರಭೋ
॥ ೨೯ ॥

ಅಸ್ಯ ಬ್ರಹ್ಮಾಸನಂ ದತ್ತಮಸ್ಮಾಭಿರ್ಯದುನಂದನ ।
ಆಯುಶ್ಚಾತ್ಮಾಕ್ಲಮಂ ತಾವದ್ಯಾವತ್ಸತ್ರಂ ಸಮಾಪ್ಯತೇ
॥ ೩೦ ॥

ಅಜಾನತೈವಾಚರಿತಸ್ತ್ವಯಾ ಬ್ರಹ್ಮವಧೋ ಯಥಾ ।
ಯೋಗೇಶ್ವರಸ್ಯ ಭವತೋ ನಾಮ್ನಾಯೋಽಪಿ ನಿಯಾಮಕಃ
॥ ೩೧ ॥

ಯದ್ಯೇತದ್ಬ್ರಹ್ಮಹತ್ಯಾಯಾಃ ಪಾವನಂ ಲೋಕಪಾವನ ।
ಚರಿಷ್ಯತಿ ಭವಾನ್ಲೋಕಸಂಗ್ರಹೋಽನನ್ಯಚೋದಿತಃ
॥ ೩೨ ॥

ಶ್ರೀಭಗವಾನುವಾಚ

ಕರಿಷ್ಯೇ ವಧನಿರ್ವೇಶಂ ಲೋಕಾನುಗ್ರಹಕಾಮ್ಯಯಾ ।
ನಿಯಮಃ ಪ್ರಥಮೇ ಕಲ್ಪೇ ಯಾವಾನ್ಸ್ತು ವಿಧೀಯತಾಮ್
॥ ೩೩ ॥

ಈ ಮೂರ್ಖನು ಭಗವಾನ್ ವ್ಯಾಸಮಹರ್ಷಿಗಳ ಶಿಷ್ಯನಾಗಿ ಅವರಿಂದ ಇತಿಹಾಸ-ಪುರಾಣಗಳನ್ನು, ಧರ್ಮಶಾಸ್ತ್ರವೇ ಮೊದಲಾದ ಹಲವಾರು ಶಾಸ್ತ್ರಗಳನ್ನೂ ಅಧ್ಯಯನ ಮಾಡಿರುವನು. ಆದರೆ ಇವನಿಗೆ ಮನಸ್ಸಿನ ಮೇಲೆ ಸಂಯಮವೇ ಇಲ್ಲ, ಇವನಲ್ಲಿ ವಿನಯವು ಇರದೆ, ಉದ್ದಂಡನಾಗಿದ್ದಾನೆ. ತಾನೇ ಮಹಾಪಂಡಿತನೆಂದು ಭಾವಿಸಿಕೊಂಡು ಬಿಟ್ಟಿದ್ದಾನೆ. ನಟನಾದವನ ಎಲ್ಲ ಚೇಷ್ಟೆಗಳೂ ಅಭಿನಯಮಾತ್ರವಾಗಿರುವಂತೆ ಇವನ ಅಧ್ಯಯನವೆಲ್ಲವೂ ಕೇವಲ ತೋರಿಕೆಗೆ ಮಾತ್ರವಾಗಿದೆ. ಇದರಿಂದ ಇವನಿಗಾಗಲೀ, ಇತರರಿಗಾಗಲೀ ಯಾವ ಪ್ರಯೋಜನವೂ ಇಲ್ಲ ॥ ೨೫-೨೬ ॥ ಧರ್ಮದ ಲಾಂಛನಗಳನ್ನು ಧರಿಸಿಕೊಂಡು ಧರ್ಮವನ್ನು ಪಾಲಿಸದಿರುವವರು ಹೆಚ್ಚು ಪಾಪಿಗಳಾಗಿದ್ದಾರೆ. ಇವರು ವಧಿಸಲು ಯೋಗ್ಯರಾಗಿದ್ದಾರೆ. ಈ ಜಗತ್ತಿನಲ್ಲಿ ಇಂತಹ ಧರ್ಮಧ್ವಜಿಗಳನ್ನು ಶಿಕ್ಷಿಸುವ ಸಲುವಾಗಿಯೇ ನಾನು ಅವತಾರವೆತ್ತಿದ್ದೇನೆ.'' ॥ ೨೭ ॥

ಭಗವಾನ್ ಬಲರಾಮನು ತೀರ್ಥಯಾತ್ರೆಯ ಕಾರಣದಿಂದ ದುಷ್ಟರ ಸಂಹಾರವನ್ನು ನಿಲ್ಲಿಸಿಬಿಟ್ಟಿದ್ದರೂ ಹೀಗೆ ಹೇಳಿ ಅವನು ಕೈಯಲ್ಲಿದ್ದ ದರ್ಭೆಯ ಅಗ್ರಭಾಗದಿಂದ ರೋಮಹರ್ಷಣನನ್ನು ಪ್ರಹರಿಸಿದನು. ಕೂಡಲೇ ಅವನು ಅಸುನೀಗಿದನು. ಆಗಬೇಕಾಗಿದ್ದುದು ಆಗಿಯೇ ತೀರುವುದು. ॥ ೨೮ ॥ ಸೂತನು ಹತನಾದುದನ್ನು ಕಂಡು ಎಲ್ಲ ಋಷಿ-ಮುನಿಗಳು 'ಆಯ್ಯೋ! ಎಂತಹ ಅನಾಹುತವಾಯಿತು!' ಎಂದು ಕೂಗಿಕೊಳ್ಳುತ್ತಾ ಖಿನ್ನಮನಸ್ಕರಾದರು. ಅವರು ದೇವಾಧಿದೇವನಾದ ಭಗವಾನ್ ಬಲರಾಮನಲ್ಲಿ - 'ಪ್ರಭೋ! ನೀನು ಭಾರೀ ದೊಡ್ಡ ಅಧರ್ಮವನ್ನು ಮಾಡಿಬಿಟ್ಟೆ' ಎಂದು ಹೇಳಿದರು. ॥ ೨೯ ॥ ಯದುವಂಶ ಶಿರೋಮಣಿಯೇ! ರೋಮಹರ್ಷಣ ಸೂತನನ್ನು ಯಜ್ಞದಲ್ಲಿ ಪುರಾಣವನ್ನು ಹೇಳಲು ಬ್ರಹ್ಮನ ಆಸನದಲ್ಲಿ ನಾವೇ ಕುಳ್ಳಿರಿಸಿದ್ದೆವು. ನಾವು ಪ್ರಾರಂಭಿಸಿದ ಸತ್ರಯಾಗವು ಮುಗಿಯುವವರೆಗೆ ಈತನಿಗೆ ಶಾರೀರಿಕ ಕಷ್ಟಗಳಿಂದ ರಹಿತವಾದ ಆಯುಸ್ಸನ್ನೂ ಕೊಟ್ಟಿದ್ದೆವು. ॥ ೩೦ ॥ ಈ ವಿಷಯವನ್ನು ತಿಳಿಯದ ನೀನು ಬ್ರಹ್ಮಹತ್ಯೆಗೆ ಸಮಾನವಾದ ಕಾರ್ಯವನ್ನು ಮಾಡಿಬಿಟ್ಟಿರುವೆ. ಯೋಗೇಶ್ವರನಾದ ನಿನ್ನ ಮೇಲೆ ವೇದಗಳೂ ಕೂಡ ವಿಧಿ-ನಿಷೇಧಗಳನ್ನು ಹೇರಲಾರವು ಎಂಬುದನ್ನೂ ನಾವು ಅರಿತಿದ್ದೇವೆ. ಲೋಕವನ್ನು ಪವಿತ್ರಗೊಳಿಸುವ ಸಲುವಾಗಿಯೇ ನಿನ್ನ ಅವತಾರವಾಗಿದೆ. ಆದರೂ ನಮ್ಮದೊಂದು ಪ್ರಾರ್ಥನೆಯಿದೆ. ಯಾರ ಪ್ರೇರಣೆಯೂ ಇಲ್ಲದೆ ಸ್ವೇಚ್ಛೆಯಿಂದಲೇ ನೀನು ಬ್ರಹ್ಮಹತ್ಯಾ ದೋಷಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಇದರಿಂದ ಜನರಿಗೆ ದೊಡ್ಡ ಪಾಠಸಿಗಬಹುದು. ॥ ೩೧-೩೨ ॥

ಭಗವಾನ್ ಬಲರಾಮನು ಹೇಳುತ್ತಾನೆ - ನಾನು ಲೋಕ ಶಿಕ್ಷಣಕ್ಕಾಗಿ ಮತ್ತು ಲೋಕಾನುಗ್ರಹಕ್ಕಾಗಿ ಬ್ರಹ್ಮಹತ್ಯಾಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ. ಆದುದರಿಂದ ಪ್ರಥಮ ಶ್ರೇಣಿಯ ಪ್ರಾಯಶ್ಚಿತ್ತದ ವಿಧಿ-ವಿಧಾನಗಳನ್ನು ನೀವು ನನಗೆ ಹೇಳಿರಿ. ॥ ೩೩ ॥

ದೀರ್ಘಮಾಯುರ್ಬತೈತಸ್ಯ ಸತ್ತ್ವಮಿಂದ್ರಿಯಮೇವ ಚ।
ಆಶಾಸಿತಂ ಯತ್ತದ್ ಬ್ರೂತ ಸಾಧಯೇ ಯೋಗಮಾಯಯಾ
॥ ೩೪ ॥

ಋಷಯ ಊಚುಃ

ಅಸ್ತ್ರಸ್ಯ ತವ ವೀರ್ಯಸ್ಯ ಮೃತ್ಯೋರಸ್ಮಾಕಮೇವ ಚ।
ಯಥಾ ಭವೇದ್ವಚಃ ಸತ್ಯಂ ತಥಾ ರಾಮ ವಿಧೀಯತಾಮ್
॥ ೩೫ ॥

ಶ್ರೀಭಗವಾನುವಾಚ

ಆತ್ಮಾ ವೈ ಪುತ್ರ ಉತ್ಪನ್ನ ಇತಿ ವೇದಾನುಶಾಸನಮ್।
ತಸ್ಮಾದಸ್ಯ ಭವೇದ್ವಕ್ತಾ ಆಯುರಿಂದ್ರಿಯಸತ್ತ್ವವಾನ್
॥ ೩೬ ॥

ಕಿಂ ವಃ ಕಾಮೋ ಮುನಿಶ್ರೇಷ್ಠಾ ಬ್ರೂತಾಹಂ ಕರವಾಣ್ಯಥ।
ಅಜಾನತಸ್ತ್ವಪಚಿತಿಂ ಯಥಾ ಮೇ ಚಿಂತ್ಯತಾಂ ಬುಧಾಃ
॥ ೩೭ ॥

ಋಷಯ ಊಚುಃ

ಇಲ್ವಲಸ್ಯ ಸುತೋ ಘೋರೋ ಬಲ್ವಲೋ ನಾಮ ದಾನವಃ।
ಸ ದೂಷಯತಿ ನಃ ಸತ್ರಮೇತ್ಯ ಪರ್ವಣಿ ಪರ್ವಣಿ
॥ ೩೮ ॥

ತಂ ಪಾಪಂ ಜಹಿ ದಾಶಾರ್ಹ ತನ್ನಃ ಶುಶ್ರೂಷಣಂ ಪರಮ್।
ಪೂಯಶೋಣಿತವಿಣ್ಮೂತ್ರಸುರಾಮಾಂಸಾಭಿವರ್ಷಿಣಮ್
॥ ೩೯ ॥

ತತಶ್ಚ ಭಾರತಂ ವರ್ಷಂ ಪರೀತ್ಯ ಸುಸಮಾಹಿತಃ।
ಚರಿತ್ವಾ ದ್ವಾದಶ ಮಾಸಾಂಸ್ತೀರ್ಥಸ್ನಾಯೀ ವಿಶುದ್ಧ್ಯಸೇ
॥ ೪೦ ॥

ಈ ರೋಮಹರ್ಷನಿಗೆ ನೀವು ಕೊಡಲು ಬಯಸಿದ ದೀರ್ಘಾಯುಷ್ಯವನ್ನು, ಶರೀರ ಬಲವನ್ನೂ, ಇಂದ್ರಿಯಶಕ್ತಿಯನ್ನೂ ನನಗೆ ಹೇಳಿರಿ. ನನ್ನ ಯೋಗಮಾಯೆಯಿಂದ ಅವೆಲ್ಲವನ್ನು ಸಾಧಿಸಿಕೊಡುತ್ತೇನೆ. ॥ ೩೪ ॥

ಋಷಿಗಳು ಹೇಳಿದರು – ಬಲರಾಮನೇ! ನಿನ್ನ ಅಸ್ತ್ರ, ಪರಾಕ್ರಮ ಮತ್ತು ಇವನ ಮೃತ್ಯುವು ವ್ಯರ್ಥವಾಗಬಾರದು. ನಾವು ಇವನಿಗೆ ಕೊಟ್ಟವರದಾನವೂ ಸತ್ಯವಾಗಬೇಕು. ನಿನ್ನ ಯೋಗ ಮಾಯೆಯಿಂದ ಇದನ್ನು ಸಾಧಿಸಿಕೊಡು ಪ್ರಭುವೇ! ॥ ೩೫ ॥

ಭಗವಾನ್ ಬಲರಾಮನು ಹೇಳಿದನು – ಋಷಿಗಳಿರಾ! ತಾನೇ (ಆತ್ಮನು) ಪುತ್ರನ ರೂಪದಲ್ಲಿ ಹುಟ್ಟುವನೆಂದು ವೇದವು ಹೇಳುತ್ತದೆ. ಅದಕ್ಕಾಗಿ ರೋಮಹರ್ಷಣನ ಸ್ಥಾನದಲ್ಲಿ ಅವನ ಮಗನು ನಿಮಗೆ ಪುರಾಣಕಥೆಗಳನ್ನು ಹೇಳುವನು. ಅವನಿಗೆ ನಾನು ನನ್ನ ಶಕ್ತಿಯಿಂದ ದೀರ್ಘಾಯುಸ್ಸು ಇಂದ್ರಿಯಪಟುತ್ವ ಮತ್ತು ಬಲವನ್ನು ಕರುಣಿಸುತ್ತೇನೆ. ॥ ೩೬ ॥ ಮಹರ್ಷಿಗಳೇ! ಇದಲ್ಲದೆ ಇನ್ನೇನು ನೀವುಗಳು ಬಯಸುವಿರೋ ಅದನ್ನು ಹೇಳಿರಿ. ನಾನು ನಿಮ್ಮಗಳ ಇಚ್ಛೆಯನ್ನು ಪೂರ್ಣಗೊಳಿಸುವೆನು. ತಿಳಿಯದೆ ನನ್ನಿಂದಾದ ಅಪರಾಧಕ್ಕೆ ಪ್ರಾಯಶ್ಚಿತ್ತವನ್ನೂ ಹೇಳಿರಿ. ಏಕೆಂದರೆ, ತಾವು ಈ ವಿಷಯದಲ್ಲಿ ವಿದ್ವಾಂಸರಾಗಿದ್ದೀರಿ. ॥ ೩೭ ॥

ಋಷಿಗಳು ಹೇಳಿದರು – ಇಲ್ವಲನ ಮಗ ಬಲ್ವಲ ಎಂಬ ಭಯಂಕರನಾದ ದಾನವನಿರುವನು. ಅವನು ಪ್ರತಿಯೊಂದು ಪರ್ವಗಳಲ್ಲಿಯೂ (ಅಮಾವಾಸ್ಯೆ ಮತ್ತು ಪೌರ್ಣಿಮೆ) ಇಲ್ಲಿಗೆ ಬಂದು ನಮ್ಮ ಸತ್ರವನ್ನು ಕೆಡಿಸುತ್ತಾನೆ. ॥ ೩೮ ॥ ಯದು ನಂದನನೇ! ಅವನು ಇಲ್ಲಿಗೆ ಬಂದು ಕೀವು, ರಕ್ತ, ಅಮೇಧ್ಯ, ಮೂತ್ರ, ಮದ್ಯ, ಮಾಂಸ ಇವುಗಳನ್ನು ಯಜ್ಞವೇದಿಕೆಯಲ್ಲಿ ಸುರಿಯುತ್ತಾನೆ. ನೀನು ಆ ಪಾಪಿಯನ್ನು ಸಂಹರಿಸಿದರೆ ನಮ್ಮಗಳ ದೊಡ್ಡ ಸೇವೆ ಮಾಡಿದಂತಾಗುವುದು. ॥ ೩೯ ॥ ಅನಂತರ ನೀನು ಏಕಾಗ್ರ ಮನಸ್ಸಿನಿಂದ ತೀರ್ಥಗಳಲ್ಲಿ, ಸ್ನಾನ ಮಾಡುತ್ತಾ ಹನ್ನೆರಡು ತಿಂಗಳವರೆಗೆ ಭಾರತವರ್ಷವನ್ನು ಸಂಚರಿಸು. ಇದರಿಂದ ನಿನ್ನ ಶುದ್ಧಿಯಾಗುವುದು. ॥ ೪೦ ॥

ಎಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೭೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಬಲದೇವಚರಿತ್ರೇ ಬಲ್ವಲವಧೋಪಕ್ರಮೋನಾಮಾಷ್ಟಸಪ್ತತಿತಮೋऽಧ್ಯಾಯಃ॥ ೭೮ ॥

ಎಪ್ಪತ್ತೊಂಭತ್ತನೆಯ ಅಧ್ಯಾಯ

ಬಲರಾಮನಿಂದ ಬಲ್ವಲನ ಸಂಹಾರ - ತೀರ್ಥಯಾತ್ರೆ

ಶ್ರೀಶುಕ ಉವಾಚ

ತತಃ ಪರ್ವಣ್ಯುಪಾವೃತ್ತೇ ಪ್ರಚಂಡಃ ಪಾಂಸುವರ್ಷಣಃ ।
ಭೀಮೋ ವಾಯುರಭೂದ್ರಾಜನ್ ಪೂಯಗಂಧಸ್ತು ಸರ್ವಶಃ
॥ ೧ ॥

ತತೋಽಮೇಧ್ಯಮಯಂ ವರ್ಷಂ ಬಲ್ವಲೇನ ವಿನಿರ್ಮಿತಮ್ ।
ಅಭವದ್ಯಜ್ಞಶಾಲಾಯಾಂ ಸೋಽನ್ವದೃಶ್ಯತ ಶೂಲಧೃಕ್
॥ ೨ ॥

ತಂ ವಿಲೋಕ್ಯ ಬೃಹತ್ಕಾಯಂ ಭಿನ್ನಾಂಜನಚಯೋಪಮಮ್ ।
ತಪ್ತತಾಮ್ರಶಿಖಾಶ್ಮಶ್ರುಂ ದಂಷ್ಟ್ರೋಗ್ರಭ್ರುಕುಟೀಮುಖಮ್
॥ ೩ ॥

ಸಸ್ಮಾರ ಮುಸಲಂ ರಾಮಃ ಪರಸೈನ್ಯವಿದಾರಣಮ್ ।
ಹಲಂ ಚ ದೈತ್ಯದಮನಂ ತೇ ತೂರ್ಣಮುಪತಸ್ಥತುಃ
॥ ೪ ॥

ತಮಾಕೃಷ್ಯ ಹಲಾಗ್ರೇಣ ಬಲ್ವಲಂ ಗಗನೇಚರಮ್ ।
ಮುಸಲೇನಾಹನತ್ಮೂರ್ಧ್ನಿ ಬ್ರಹ್ಮಘ್ನಂ ಬಲವಾನ್ ಬಲಃ
॥ ೫ ॥

ಸೋಽಪತದ್ಭುವಿ ನಿರ್ಭಿನ್ನ ಲಲಾಟೋಽಸೃಕ್ಸಮುತ್ಸೃಜನ್ ।
ಮುಂಚನ್ನಾರ್ತಸ್ವರಂ ಶೈಲೋ ಯಥಾ ವಜ್ರಹತೋಽರುಣಃ
॥ ೬ ॥

ಸಂಸ್ತುತ್ಯ ಮುನಯೋ ರಾಮಂ ಪ್ರಯುಜ್ಯಾವಿತಥಾಶಿಷಃ ।
ಅಭ್ಯಷಿಂಚನ್ಮಹಾಭಾಗಾ ವೃತ್ರಘ್ನಂ ವಿಬುಧಾ ಯಥಾ
॥ ೭ ॥

ವೈಜಯಂತೀಂ ದದುರ್ಮಾಲಾಂ ಶ್ರೀಧಾಮಾಮ್ಲಾನಪಂಕಜಾಮ್ ।
ರಾಮಾಯ ವಾಸಸೀ ದಿವ್ಯೇ ದಿವ್ಯಾನ್ಯಾಭರಣಾನಿ ಚ
॥ ೮ ॥

ಅಥ ತೈರಭ್ಯನುಜ್ಞಾತಃ ಕೌಶಿಕೀಮೇತ್ಯ ಬಾಹ್ಮಣೈಃ ।
ಸ್ನಾತ್ವಾ ಸರೋವರಮಗಾದ್ಯತಃ ಸರಯೂರಾಸ್ರವತ್
॥ ೯ ॥

ಅನುಸ್ರೋತೇನ ಸರಯೂಂ ಪ್ರಯಾಗಮುಪಗಮ್ಯ ಸಃ ।
ಸ್ನಾತ್ವಾಸಂತರ್ಪ್ಯ ದೇವಾದೀನ್ಜಗಾಮ ಪುಲಹಾಶ್ರಮಮ್
॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಪರ್ವದಿವಸವು ಬಂದಾಗ ಭಯಂಕರ ಗಾಳಿಯು ಬೀಸ ತೊಡ ಗಿತು. ಧೂಳಿನ ಮಳೆಯು ಸುರಿಯತೊಡಗಿತು. ಎಲ್ಲ ಕಡೆಯಿಂದ ಕೀವಿನ ದುರ್ಗಂಧವು ಹರಡಿಕೊಂಡಿತು. ॥ ೧ ॥ ಬಳಿಕ ಬಲ್ವಲ ರಾಕ್ಷಸನು ಯಜ್ಞಶಾಲೆಯಲ್ಲಿ ಮಲ-ಮೂತ್ರಾದಿ ಅಪವಿತ್ರ ವಸ್ತು ಗಳನ್ನು ಸುರಿಸಿದನು. ಅನಂತರ ಕೈಯಲ್ಲಿ ತ್ರಿಶೂಲವನ್ನು ಹಿಡಿದು ಕೊಂಡು ಕಾಣಿಸಿಕೊಂಡನು. ॥ ೨ ॥ ದೊಡ್ಡದಾದ ಶರೀರವನ್ನು ಹೊಂದಿದ್ದು ಅವನು ಕಾಡಿಗೆಯ ಬೆಟ್ಟದಂತೆ ಕಪ್ಪಾಗಿದ್ದು ಕಾಯಿಸಿದ ತಾಮ್ರದಂತೆ ಕೆಂಪಾದ ತಲೆದೂದಲು, ಗಡ್ಡ-ಮೀಸೆ ಗಳನ್ನು ಹೊಂದಿದ್ದನು. ದೊಡ್ಡ-ದೊಡ್ಡ ಕೋರೆದಾಡೆಗಳಿಂದಲೂ, ಗಂಟಕ್ಕಿದ ಹುಬ್ಬುಗಳಿಂದಲೂ ಅವನ ಮುಖವು ಭಯಂಕರವಾಗಿ ಕಾಣುತ್ತಿತ್ತು. ಅವನನ್ನು ನೋಡಿದೊಡನೆ ಬಲರಾಮನು ಶತ್ರುಸೈನ್ಯ ವನ್ನು ಧ್ವಂಸಗೊಳಿಸುವ ಮುಸಲಾಯುಧವನ್ನು, ದೈತ್ಯರನ್ನು ಸಂಹರಿಸುವ ಹಲಾಯುಧ ವನ್ನು ಸ್ಮರಿಸಿಕೊಂಡನು. ಸ್ಮರಿಸಿದಾಕ್ಷಣ ದಲ್ಲೇ ಆ ದಿವ್ಯಾಯುಧಗಳು ಬಲರಾಮನ ಕೈಗಳನ್ನು ಅಲಂಕರಿಸಿ ದುವು. ॥ ೩-೪ ॥ ಬಲರಾಮನು ಆಕಾಶದಲ್ಲಿ ಸಂಚರಿಸುವ ಬಲ್ವಲ ದೈತ್ಯನನ್ನು ತನ್ನ ಹಲಾಯುಧದಿಂದ ಸೆಳೆದುಕೊಂಡು ಆ ಬ್ರಹ್ಮದ್ರೋಹಿಯ ಶಿರಸ್ಸಿನಲ್ಲಿ ಅತ್ಯಂತ ಕ್ರೋಧಗೊಂಡು ಮುಸಲಾ ಯುಧದಿಂದ ಬಲವಾಗಿ ಹೊಡೆದನು. ಇದರಿಂದ ಅವನ ಹಣೆ ಒಡೆದು, ರಕ್ತವನ್ನು ಉಗುಳುತ್ತಾ ವಜ್ರಘಾತದಿಂದ ಗೈರಿಕಾದಿ ಧಾತುಗಳಿಂದ ಕೆಂಪಾದ ಪರ್ವತವು ಉರುಳುವಂತೆ ಆರ್ತಸ್ವರ ದಿಂದ ಬೊಬ್ಬಿರಿದು ಸತ್ತು ನೆಲಕ್ಕೆ ಉರುಳಿದನು. ॥ ೫-೬ ॥ ನೈಮಿಷಾರಣ್ಯ ನಿವಾಸಿಗಳಾದ ಮಹಾಭಾಗ್ಯ ಶಾಲಿಗಳಾದ ಮುನಿಗಳು ಬಲರಾಮನನ್ನು ಸ್ತುತಿಸಿ, ಎಂದೂ ವ್ಯರ್ಥವಾಗದಿರುವ ಆಶೀರ್ವಾದಗಳನ್ನು ಕೊಟ್ಟರು. ಮತ್ತೆ ದೇವತೆಗಳು ಇಂದ್ರನಿಗೆ ಅಭಿಷೇಕ ಮಾಡಿದಂತೆಯೇ ಬಲರಾಮನಿಗೆ ಅಭಿಷೇಕ ಮಾಡಿ ದರು. ॥ ೭ ॥ ಅನಂತರ ಋಷಿಗಳು ಬಲರಾಮನಿಗೆ ದಿವ್ಯವಾದ ವಸ್ತ್ರಾಭೂಷಣಗಳನ್ನು ಸಮರ್ಪಿಸಿ, ಎಂದೂ ಬಾಡದಿರುವ, ಸೌಂದರ್ಯಕ್ಕೆ ಆಶ್ರಯವಾದ ಕಮಲ ಪುಷ್ಪಗಳಿಂದ ಕೂಡಿದ ವೈಜಯಂತಿ ಮಾಲೆಯನ್ನು ಅರ್ಪಿಸಿದರು. ॥ ೮ ॥

ಅನಂತರ ನೈಮಿಷಾರಣ್ಯವಾಸಿಗಳಾದ ಋಷಿಗಳಿಂದ ಬೀಳ್ಕೊಂಡು, ಅವರ ಆಜ್ಞೆಯಂತೆ ಬಲರಾಮನು ಬ್ರಾಹ್ಮಣರೊಡನೆ ಕೌಶಿಕೀ ನದಿಯ ತೀರಕ್ಕೆ ಬಂದನು. ಅಲ್ಲಿ ಸ್ನಾನ ಮಾಡಿ, ಸರಯೂ ನದಿಯ ಉಗಮವಾದ ಮಾನಸ ಸರೋವರವರಕ್ಕೆ ಹೋದನು. ॥ ೯ ॥ ಅಲ್ಲಿಂದ ಸರಯೂ ತೀರದಲ್ಲೇ ಮುಂದರಿಯುತ್ತಾ ತೀರ್ಥರಾಜ ಪ್ರಯಾಗಕ್ಕೆ ಬಂದರು. ಅಲ್ಲಿ ಸ್ನಾನಮಾಡಿ, ದೇವ-ಋಷಿ ಪಿತೃ ತರ್ಪಣಗಳನ್ನು ಮಾಡಿ ಅಲ್ಲಿಂದ ಪುಲಹಾಶ್ರಮಕ್ಕೆ ಹೋದನು. ॥ ೧೦ ॥

ಗೋಮತೀಂ ಗಂಡಕೀಂ ಸ್ನಾತ್ವಾ ವಿಪಾಶಾಂ ಶೋಣ ಆಪ್ಲುತಃ ।
ಗಯಾಂ ಗತ್ವಾ ಪಿತೄನ್ ನಿಷ್ಟಾ ಗಂಗಾಸಾಗರಸಂಗಮೇ
॥ ೧೧ ॥

ಉಪಸ್ಪೃಶ್ಯ ಮಹೇಂದ್ರಾದ್ರೌ ರಾಮಂ ದೃಷ್ಟ್ವಾಭಿವಾದ್ಯ ಚ ।
ಸಪ್ತಗೋದಾವರೀಂ ವೇಣಾಂ ಪಂಪಾಂ ಭೀಮರಥೀಂ ತತಃ
॥ ೧೨ ॥

ಸ್ಕಂದಂ ದೃಷ್ಟ್ವಾ ಯಯೌ ರಾಮಃ ಶ್ರೀಶೈಲಂ ಗಿರಿಶಾಲಯಮ್ ।
ದ್ರವಿಡೇಷು ಮಹಾಪುಣ್ಯಂ ದೃಷ್ಟ್ವಾದ್ರಿಂ ವೇಂಕಟಂ ಪ್ರಭುಃ
॥ ೧೩ ॥

ಕಾಮಕೋಷ್ಣೀಂ ಪುರೀಂ ಕಾಂಚೀಂ ಕಾವೇರೀಂ ಚ ಸರಿದ್ವರಾಮ್ ।
ಶ್ರೀರಂಗಾಖ್ಯಂ ಮಹಾಪುಣ್ಯಂ ಯತ್ರ ಸನ್ನಿಹಿತೋ ಹರಿಃ
॥ ೧೪ ॥

ಋಷಭಾದ್ರಿಂ ಹರೇಃ ಕ್ಷೇತ್ರಂ ದಕ್ಷಿಣಾಂ ಮಥುರಾಂ ತಥಾ ।
ಸಾಮುದ್ರಂ ಸೇತುಮಗಮನ್ಮಹಾಪಾತಕನಾಶನಮ್
॥ ೧೫ ॥

ತತ್ರಾಯುತಮದಾದ್ಧೇನೂರ್ಬ್ರಾಹ್ಮಣೇಭ್ಯೋ ಹಲಾಯುಧಃ ।
ಕೃತಮಾಲಾಂ ತಾಮ್ರಪರ್ಣೀಂ ಮಲಯಂ ಚ ಕುಲಾಚಲಮ್
॥ ೧೬ ॥

ತತ್ರಾಗಸ್ತ್ಯಂ ಸಮಾಸೀನಂ ನಮಸ್ಕೃತ್ಯಾಭಿವಾದ್ಯ ಚ ।
ಯೋಜಿತಸ್ತೇನ ಚಾಶೀರ್ಭಿರನುಜ್ಞಾತೋ ಗತೋಽರ್ಣವಮ್ ।
ದಕ್ಷಿಣಂ ತತ್ರ ಕನ್ಯಾಖ್ಯಾಂ ದುರ್ಗಾಂ ದೇವೀಂ ದದರ್ಶ ಸಃ
॥ ೧೭ ॥

ತತಃ ಫಾಲ್ಗುನಮಾಸಾದ್ಯ ಪಂಚಾಪ್ಸರಸಮುತ್ತಮಮ್ ।
ವಿಷ್ಣುಃ ಸನ್ನಿಹಿತೋ ಯತ್ರ ಸ್ನಾತ್ವಾ ಸರ್ವದ್ಗವಾಯುತಮ್
॥ ೧೮ ॥

ತತೋಽಭಿವ್ರಜ್ಯ ಭಗವಾನ್ ಕೇರಲಾಂಸ್ತು ತ್ರಿಗರ್ತಕಾನ್ ।
ಗೋಕರ್ಣಾಖ್ಯಂ ಶಿವಕ್ಷೇತ್ರಂ ಸಾನ್ನಿಧ್ಯಂ ಯತ್ರ ಧೂರ್ಜಟೇಃ
॥ ೧೯ ॥

ಆರ್ಯಾಂ ದ್ವೈಪಾಯನೀಂ ದೃಷ್ಟ್ವಾ ಶೂರ್ಪಾರಕಮಗಾದ್ಬಲಃ ।
ತಾಪೀಂ ಪಯೋಷ್ಣೀಂ ನಿರ್ವಿಂಧ್ಯಾಮುಪಸ್ಪೃಶ್ಯಾಥ ದಂಡಕಮ್
॥ ೨೦ ॥

ಅಲ್ಲಿಂದ ಮುಂದೆ ಗಂಡಕೀ, ಗೋಮತೀ, ವಿಪಾಶಾ, ಶೋಣಾ ಮುಂತಾದ ಪುಣ್ಯನದಿಗಳಲ್ಲಿ ಸ್ನಾನಮಾಡಿ, ಗಯಾ ಕ್ಷೇತ್ರಕ್ಕೆ ಬಂದು ಅಲ್ಲಿ ಪಿತೃಗಳಿಗೆ ಶ್ರಾದ್ಧಮಾಡಿ, ತರ್ಪಣಾದಿಗಳನ್ನಿತ್ತು ಮುಂದೆ ಪ್ರಯಾಣ ಮಾಡುತ್ತಾ ಗಂಗಾ-ಸಾಗರ ಸಂಗಮಕ್ಕೆ ಹೋಗಿ ಅಲ್ಲಿ ಸ್ನಾನಾದಿ ತೀರ್ಥಕರ್ಮಗಳನ್ನಾಚರಿಸಿ, ಮಹೇಂದ್ರ ಪರ್ವತಕ್ಕೆ ಹೋದನು. ಅಲ್ಲಿ ಪರಶುರಾಮರ ದರ್ಶನ ಮತ್ತು ಅಭಿವಾದನ ಮಾಡಿದನು. ಅನಂತರ ಸಪ್ತಗೋದಾವರೀ, ವೇಣಾ, ಪಂಪಾ ಭೀಮರಥೀ ಮುಂತಾದವುಗಳಲ್ಲಿ ಸ್ನಾನಮಾಡಿ, ಕಾರ್ತಿಕ ಸ್ವಾಮಿಯನ್ನು ದರ್ಶಿಸಿ ಪರಶಿವನ ನಿವಾಸವಾದ ಶ್ರೀಶೈಲಕ್ಕೆ ತಲುಪಿದನು. ಬಳಿಕ ಬಲರಾಮನು ದ್ರವಿಡ ದೇಶದ ಪರಮ ಪುಣ್ಯಮಯ ವೇಂಕಟಾದ್ರಿ ಕ್ಷೇತ್ರವನ್ನು ದರ್ಶನಮಾಡಿ ಅಲ್ಲಿಂದ ಅವನು ಕಂಚಿ ಕಾಮಾಕ್ಷಿ ಶಿವಕಾಂಚಿ, ವಿಷ್ಣುಕಾಂಚಿ ದರ್ಶನ ಮಾಡುತ್ತಾ ಶ್ರೇಷ್ಠವಾದ ಕಾವೇರಿ ನದಿಯಲ್ಲಿ ಸ್ನಾನಮಾಡಿ, ಪುಣ್ಯಪ್ರದವಾದ, ಶ್ರೀಹರಿಯ ಸಾಕ್ಷಾತ್ ಸಾನ್ನಿಧ್ಯವಿರುವ ಶ್ರೀರಂಗಕ್ಷೇತ್ರಕ್ಕೆ ಆಗಮಿಸಿದನು. ॥ ೧೧-೧೪ ॥ ಅಲ್ಲಿ ರಂಗನಾಥ ಸ್ವಾಮಿಯನ್ನು ಸಂದರ್ಶಿಸಿ ಅಲ್ಲಿಂದ ಭಗವಾನ್ ವಿಷ್ಣುವಿನ ಮತ್ತೊಂದು ಕ್ಷೇತ್ರವಾದ ಋಷಭ ಪರ್ವತ, ದಕ್ಷಿಣ ಮಥುರೆ ಹಾಗೂ ಮಹಾ ಮಹಾ ಪಾಪಗಳನ್ನು ನಾಶಗೊಳಿಸುವ ಸೇತುಬಂಧದ ಯಾತ್ರೆ ಮಾಡಿದನು. ॥ ೧೫ ॥ ಅಲ್ಲಿ ಬಲರಾಮನು ಬ್ರಾಹ್ಮಣರಿಗೆ ಹತ್ತು ಸಾವಿರ ಗೋವುಗಳನ್ನು ದಾನಮಾಡಿದನು. ಪುನಃ ಅಲ್ಲಿಂದ ಕೃತಮಾಲಾ, ತಾಮ್ರಪರ್ಣಿ ನದಿಗಳಲ್ಲಿ ಸ್ನಾನಮಾಡಿ ಮತ್ತೆ ಮಲಯಾಚಲಕ್ಕೆ ಹೋದನು. ಆ ಪರ್ವತವು ಏಳು ಕುಲಪರ್ವತಗಳಲ್ಲಿ ಒಂದಾಗಿದೆ. ॥ ೧೬ ॥ ಅಲ್ಲಿ ವಿರಾಜಮಾನರಾದ ಅಗಸ್ತ್ಯ ಮುನಿಗಳನ್ನು ಅಭಿವಾದನ - ನಮಸ್ಕಾರಮಾಡಿ, ಅವರಿಂದ ಆಶೀರ್ವಾದ-ಅನುಜ್ಞೆಯನ್ನು ಪಡೆದು ಬಲರಾಮನು ದಕ್ಷಿಣ ಸಮುದ್ರದ ಯಾತ್ರೆ ಗೈದನು. ಅಲ್ಲಿ ಅವನು ದುರ್ಗಾದೇವಿಯನ್ನು ಕನ್ಯಾಕುಮಾರಿಯ ರೂಪದಲ್ಲಿ ದರ್ಶಿಸಿದನು. ॥ ೧೭ ॥ ಅನಂತರ ಅವನು ಫಾಲ್ಗುಣತೀರ್ಥವಾದ ಅನಂತಶಯನ ಕ್ಷೇತ್ರಕ್ಕೆ ಹೋಗಿ ಅಲ್ಲಿಯ ಪಂಚಾಪ್ಸರಸ ತೀರ್ಥದಲ್ಲಿ ಸ್ನಾನಮಾಡಿದನು. ಆ ತೀರ್ಥದಲ್ಲಿ ಭಗವಾನ್ ವಿಷ್ಣುವಿನ ಸದಾ ಸಾನ್ನಿಧ್ಯವಿರುತ್ತದೆ. ಅಲ್ಲಿ ಬಲರಾಮನು ಹತ್ತು ಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ॥ ೧೮ ॥

ಅನಂತರ ಭಗವಾನ್ ಬಲರಾಮನು ಅಲ್ಲಿಂದ ಹೊರಟು ಕೇರಳ ಮತ್ತು ತ್ರಿಗರ್ತದೇಶಗಳನ್ನು ಸಂಚರಿಸಿ ಸದಾ-ಸರ್ವದಾ ಶ್ರೀಶಂಕರನ ಸಾನ್ನಿಧ್ಯವಿರುವ ಗೋಕರ್ಣಕ್ಷೇತ್ರಕ್ಕೆ ಹೋಗಿ ಮಹಾಬಲೇಶ್ವರನದರ್ಶನ ಮಾಡಿದನು. ॥ ೧೯ ॥ ಅಲ್ಲಿಂದ ಮುಂದೆ ನೀರಿನಿಂದಾವೃತವಾದ ದ್ವೀಪದಲ್ಲಿ ನಿವಾಸ ಮಾಡಿದ್ದ ಆರ್ಯಾ ದುರ್ಗೆಯ ದರ್ಶನಮಾಡಲು ಕೊಂಕಣ ಪ್ರದೇಶಕ್ಕೆ ಹೋದನು ಮತ್ತೆ ಅಲ್ಲಿಂದ ಹೊರಟು ಶೂರ್ಪಾರಕ ಕ್ಷೇತ್ರದ ಯಾತ್ರೆ ಮಾಡಿದನು. ಬಳಿಕ ತಾಪೀ, ಪಯೋಷ್ಣಿ ಮತ್ತು ನಿರ್ವಿಂಧ್ಯಾ ನದಿಗಳಲ್ಲಿ ಸ್ನಾನಮಾಡಿ ದಂಡಕಾರಣ್ಯಕ್ಕೆ ಹೋದನು. ॥ ೨೦ ॥

ಪ್ರವಿಶ್ಯ ರೇವಾಮಗಮದ್ಯತ್ರ ಮಾಹಿಷ್ಮತೀ ಪುರೀ ।
ಮನುತೀರ್ಥಮುಪಸ್ಪೃಶ್ಯ ಪ್ರಭಾಸಂ ಪುನರಾಗಮತ್
॥ ೨೧ ॥

ಶ್ರುತ್ವಾ ದ್ವಿಜೈಃ ಕಥ್ಯಮಾನಂ ಕುರುಪಾಂಡವಸಂಯುಗೇ ।
ಸರ್ವರಾಜನ್ಯನಿಧನಂ ಭಾರಂ ಮೇನೇ ಹೃತಂ ಭುವಃ
॥ ೨೨ ॥

ಸ ಭೀಮದುರ್ಯೋಧನಯೋರ್ಗದಾಭ್ಯಾಂ ಯುಧ್ಯತೋರ್ಮಧೇ ।
ವಾರಯಿಷ್ಯನ್ನಿನಶನಂ ಜಗಾಮ ಯದುನಂದನಃ
॥ ೨೩ ॥

ಯುಧಿಷ್ಠಿರಸ್ತು ತಂ ದೃಷ್ಟ್ವಾ ಯಮೌ ಕೃಷ್ಣಾರ್ಜುನಾವಪಿ ।
ಅಭಿವಾದ್ಯಾಭವಂಸ್ತೂಷ್ಣೀಂ ಕಿಂವಿವಕ್ಷುರಿಹಾಗತಃ
॥ ೨೪ ॥

ಗದಾಪಾಣೀ ಉಭೌ ದೃಷ್ಟ್ವಾ ಸಂರಬ್ಧೌ ವಿಜಯೈಷಿಣೌ ।
ಮಂಡಲಾನಿ ವಿಚಿತ್ರಾಣಿ ಚರಂತಾವಿದಮಬ್ರವೀತ್
॥ ೨೫ ॥

ಯುವಾಂ ತುಲ್ಯಬಲೌ ವೀರೌ ಹೇ ರಾಜನ್ ಹೇ ವೃಕೋದರ ।
ಏಕಂ ಪ್ರಾಣಾಧಿಕಂ ಮನ್ಯೇ ಉತೈಕಂ ಶಿಕ್ಷಯಾಧಿಕಮ್
॥ ೨೬ ॥

ತಸ್ಮಾದೇಕತರಸ್ಯೇಹ ಯುವಯೋಃ ಸಮವೀರ್ಯಯೋಃ ।
ನ ಲಕ್ಷ್ಯತೇ ಜಯೋಽನ್ಯೋ ವಾ ವಿರಮತ್ವಫಲೋ ರಣಃ
॥ ೨೭ ॥

ನ ತದಾಕ್ಷ್ಯಂ ಜಗೃಹತುರ್ಬದ್ಧವೈರೌ ನೃಪಾರ್ಹವತ್ ।
ಅನುಸ್ಮರಂತಾವನ್ಯೋನ್ಯಂ ದುರುಕ್ತಂ ದುಷ್ಕೃತಾನಿ ಚ
॥ ೨೮ ॥

ದಿಷ್ಟ್ಯಾ ತದನುಮನ್ವಾನೋ ರಾಮೋ ದ್ವಾರವತೀಂ ಯಯೌ ।
ಉಗ್ರಸೇನಾದಿಭಿಃ ಪ್ರೀತೈರ್ಜ್ಞಾತಿಭಿಃ ಸಮುಪಾಗತಃ
॥ ೨೯ ॥

ತಂ ಪುನರ್ನೈಮಿಷಂ ಪ್ರಾಪ್ತಮೃಷಯೋಽಯಾಜಯನ್ಮುದಾ ।
ಕ್ರತ್ವಂಗಂ ಕ್ರತುಭಿಃ ಸರ್ವೈರ್ನಿವೃತ್ತಾಖಿಲವಿಗ್ರಹಮ್
॥ ೩೦ ॥

ಅಲ್ಲಿಂದ ನರ್ಮದಾ ತೀರದಲ್ಲಿರುವ ಮಾಹಿಷ್ಮತಿಪುರಿಗೆ ಹೋಗಿ ಅಲ್ಲಿ ಮನುತೀರ್ಥದಲ್ಲಿ ಸ್ನಾನಮಾಡಿ ಮತ್ತೆ ಪ್ರಭಾಸ ಕ್ಷೇತ್ರಕ್ಕೆ ಹೊರಟುಬಂದನು. ॥ ೨೧ ॥ ಅಲ್ಲಿ ಅವನು ಕೌರವ-ಪಾಂಡವರ ಯುದ್ಧದಲ್ಲಿ ಅಧಿಕಾಂಶ ಕ್ಷತ್ರಿಯರ ಸಂಹಾರವಾಗಿದೆ ಎಂದು ಬ್ರಾಹ್ಮಣರಿಂದ ಕೇಳಿದನು. ಈಗ ಬಹಳಷ್ಟು ಭೂಭಾರವು ತಗ್ಗಿತೆಂದು ಅವನು ಅಂದುಕೊಂಡನು. ॥ ೨೨ ॥ ಮಹಾಭಾರತ ಸಂಗ್ರಾಮದ ಕೊನೆಯ ದಿನ ರಣರಂಗದಲ್ಲಿ ಭೀಮಸೇನ ಮತ್ತು ದುರ್ಯೋಧನರ ಗದಾಯುದ್ಧ ನಡೆಯುತ್ತಿದ್ದಾಗಲೇ ಬಲರಾಮನು ಅವರನ್ನು ತಡೆಯಲು ಕುರುಕ್ಷೇತ್ರಕ್ಕೆ ಹೋದನು. ॥ ೨೩. ॥

ಬಲರಾಮನನ್ನು ನೋಡಿ ಮಹಾರಾಜಯುಧಿಷ್ಠಿರ, ನಕುಲ, ಸಹದೇವ, ಭಗವಾನ್ ಶ್ರೀಕೃಷ್ಣ ಅರ್ಜುನ - ಇವರೆಲ್ಲರೂ ಅವನಿಗೆ ನಮಸ್ಕಾರ ಮಾಡಿ ಸುಮ್ಮನೇ ಇದ್ದರು. ಇವನು ಏನು ಹೇಳಲು ಇಲ್ಲಿಗೆ ಬಂದಿರುವನೋ ಎಂದು ಹೆದರುತ್ತಲೇ ಮನಸ್ಸಿನಲ್ಲಿ ಯೋಚಿಸುತ್ತಿದ್ದರು. ॥ ೨೪ ॥ ಆ ಸಮಯದಲ್ಲಿ ಭೀಮಸೇನ ಮತ್ತು ದುರ್ಯೋಧನ ಇಬ್ಬರೂ ಕೈಗಳಲ್ಲಿ ಗದೆಗಳನ್ನು ಹಿಡಿದು ಕೊಂಡು ಕ್ರೋಧಾಭಿಭೂತರಾಗಿ ಒಬ್ಬರು ಮತ್ತೊಬ್ಬರನ್ನು ಗೆಲ್ಲ ಬೇಕೆಂಬ ಆಶಯದಿಂದ ಮಂಡಲಾಕಾರವಾಗಿ ಹೆಜ್ಜೆಯ ನ್ನಿಡುತ್ತಾ ನಾನಾ ರೀತಿಯ ಪಟ್ಟುಗಳನ್ನು ಪ್ರಯೋಗಿಸುತ್ತಾ ಕಾದಾಡುತ್ತಿದ್ದರು. ಅವರನ್ನು ನೋಡಿ ಬಲರಾಮನು ಹೇಳಿದನು - ॥ ೨೫ ॥ ಭೀಮ ದುರ್ಯೋಧನರೇ ! ನೀವಿಬ್ಬರು ವೀರರಿದ್ದೀರಿ. ನಿಮ್ಮಿಬ್ಬರಲ್ಲಿಯೂ ಬಲ-ಪೌರುಷಗಳು ಸಮಾನವಾಗಿವೆ. ಭೀಮಸೇನನಲ್ಲಿ ಬಲವು ಹೆಚ್ಚಾಗಿದೆ ಮತ್ತು ದುರ್ಯೋಧನನು ಗದಾಯುದ್ಧದಲ್ಲಿ ಹೆಚ್ಚಿನ ಶಿಕ್ಷಣ ಪಡೆದಿರುವನೆಂದು ನಾನು ತಿಳಿಯುತ್ತೇನೆ. ॥ ೨೬ ॥ ಆದ್ದರಿಂದ ನಿಮ್ಮಂತಹ ಸಮಾನ ಬಲಶಾಲಿಗಳಲ್ಲಿ ಯಾರೇ ಒಬ್ಬನ ವಿಜಯ ಅಥವಾ ಪರಾಜಯವಾಗುವುದು ಕಾಣುವುದಿಲ್ಲ. ಆದ್ದರಿಂದ ನೀವು ವ್ಯರ್ಥವಾಗಿ ಯುದ್ಧಮಾಡಬೇಡಿ. ಈಗ ಇದನ್ನು ನಿಲ್ಲಿಸಿ ಬಿಡಿರಿ. ॥ ೨೭ ॥ ಪರೀಕ್ಷಿತನೇ ! ಬಲರಾಮನ ಮಾತು ಇಬ್ಬರಿಗೂ ಹಿತಕರವಾಗಿತ್ತು. ಆದರೆ ಅವರಿಬ್ಬರ ವೈರಭಾವವು ಅತೀವದೃಢವಾಗಿದ್ದರಿಂದ ಅವರು ಬಲರಾಮನ ಮಾತನ್ನು ಪುರಸ್ಕರಿಸಲಿಲ್ಲ. ಅವರು ಹಿಂದಿನ ದುರ್ವ್ಯವಹಾರಗಳನ್ನು ನೆನೆಯುತ್ತಾ ಕಟುಮಾತುಗಳನ್ನಾಡುತ್ತಾ ಉನ್ಮತ್ತರಾಗಿಯೇ ಇದ್ದರು. ॥ ೨೮ ॥ ಭಗವಾನ್ ಬಲರಾಮನು - 'ಇವರ ಪ್ರಾರಬ್ಧವೇ ಹೀಗಿದೆ' ಎಂದು ನಿಶ್ಚಯಿಸಿ, ಈ ವಿಷಯದಲ್ಲಿ ಆಗ್ರಹ ಮಾಡದೆ ದ್ವಾರಕೆಗೆ ಹೊರಟುಹೋದನು. ದ್ವಾರಕೆಯಲ್ಲಿ ಉಗ್ರಸೇನರೇ ಮುಂತಾದ ಹಿರಿಯರೂ ಹಾಗೂ ಇತರ ಸಂಬಂಧಿಗಳು ಅತ್ಯಂತ ಪ್ರೇಮದಿಂದ ಮುಂದೆ ಬಂದು ಬಲರಾಮನನ್ನು ಸ್ವಾಗತಿಸಿದರು. ॥ ೨೯ ॥ ಅಲ್ಲಿಂದ ಪುನಃ ಬಲರಾಮನು ನೈಮಿಷಾರಣ್ಯ ಕ್ಷೇತ್ರಕ್ಕೆ ಹೋದನು. ಅಲ್ಲಿಯ ಋಷಿಗಳು ಯುದ್ಧಾದಿಗಳಿಂದ ನಿವೃತ್ತನಾದ ಬಲರಾಮನಿಂದ ತುಂಬು ಪ್ರೇಮದಿಂದ ಎಲ್ಲ ಪ್ರಕಾರದ ಯಜ್ಞಗಳನ್ನು ಮಾಡಿಸಿದರು. ಪರೀಕ್ಷಿತನೇ ! ನಿಜಹೇಳಬೇಕೆಂದರೆ, ಇರುವ ಎಲ್ಲ ಯಜ್ಞಗಳು ಬಲರಾಮನ ಅಂಗಭೂತವೇ ಆಗಿವೆ. ಅದಕ್ಕಾಗಿ ಅವನ ಈ ಯಜ್ಞಾನುಷ್ಠಾನವು ಕೇವಲ ಲೋಕಸಂಗ್ರಹಕ್ಕಾಗಿಯೇ ಇತ್ತು. ॥ ೩೦ ॥

ತೇಭ್ಯೋ ವಿಶುದ್ಧವಿಜ್ಞಾನಂ ಭಗವಾನ್ ವ್ಯತರದ್ವಿಭುಃ ।
ಯೇನೈವಾತ್ಮನ್ಯದೋ ವಿಶ್ವಮಾತ್ಮಾನಂ ವಿಶ್ವಗಂ ವಿದುಃ
॥ ೩೧ ॥

ಸರ್ವಸಮರ್ಥನಾದ ಬಲಭದ್ರನು ಆ ಋಷಿಗಳಿಗೆ ವಿಶುದ್ಧ ತತ್ತ್ವಜ್ಞಾನದ ಉಪದೇಶ ಮಾಡಿದನು. ಇದರಿಂದ ಆ ಜನರೆಲ್ಲರೂ ಈ ಸಮಸ್ತ ವಿಶ್ವವು ತನ್ನಲ್ಲಿ ಮತ್ತು ತನ್ನನ್ನು ಸಮಸ್ತ ವಿಶ್ವದಲ್ಲಿ ಅನುಭವಿಸತೊಡಗಿದರು. ॥ ೩೧ ॥

ಸ್ವಪತ್ನ್ಯಾವಭೃಥಸ್ನಾತೋ ಜ್ಞಾತಿಬಂಧುಸುಹೃದ್ವೃತಃ ।
ರೇಜೇ ಸ್ವಜ್ಯೋತ್ಸ್ನಯೇವೇಂದುಃ ಸುವಾಸಾಃ ಸುಷ್ಠ್ವಲಂಕೃತಃ
॥ ೩೨ ॥

ಅನಂತರ ಬಲರಾಮನು ತನ್ನ ಪತ್ನೀ ರೇವತಿಯೊಂದಿಗೆ ಯಜ್ಞಾಂತಸ್ನಾನ (ಅವಭೃತ) ಮಾಡಿ, ಸುಂದರವಾದ ವಸ್ತ್ರಾಲಂಕಾರಗಳಿಂದ ವಿಭೂಷಿತನಾಗಿ ಸ್ವಜನ-ಸಂಬಂಧಿಗಳೊಡನೆ - ತನ್ನ ಬೆಳದಿಂಗಳಿಂದ ನಕ್ಷತ್ರಗಳೊಡನೆ ಬೆಳಗುವ ಚಂದ್ರನಂತೆ ಶೋಭಾಯಮಾನನಾದನು. ॥ ೩೨ ॥

ಈದೃಗ್ವಿಧಾನ್ಯಸಂಖ್ಯಾನಿ ಬಲಸ್ಯ ಬಲಶಾಲಿನಃ ।
ಅನಂತಸ್ಯಾಪ್ರಮೇಯಸ್ಯ ಮಾಯಾಮರ್ತ್ಯಸ್ಯ ಸಂತಿ ಹಿ
॥ ೩೩ ॥

ಪರೀಕ್ಷಿತನೇ! ಭಗವಾನ್ ಬಲರಾಮನು ಸಾಕ್ಷಾತ್ ಅನಂತನೇ ಆಗಿದ್ದಾನೆ. ಅವನ ಸ್ವರೂಪವು ಮನ-ವಚನಗಳಿಗೆ ಅತೀತವಾದುದು. ಅವನು ಲೀಲೆಗಾಗಿಯೆ ಮನುಷ್ಯ ಶರೀರವನ್ನು ಧರಿಸಿರುವನು. ಆ ಮಹಾಬಲಶಾಲಿಯಾದ ಬಲರಾಮನ ಇಂತಹ ಅನಂತ ಚರಿತ್ರೆಗಳನ್ನು ಯಾರು ತಾನೇ ಎಣಿಸಬಲ್ಲರು ? ॥ ೩೩ ॥ ಅನಂತನೂ, ಸರ್ವವ್ಯಾಪಕನೂ, ಅದ ಅದ್ಭುತ ಕರ್ಮಗಳನ್ನು ಮಾಡಿದ ಭಗವಾನ್ ಬಲರಾಮನ ಚರಿತ್ರೆಗಳನ್ನು ಸಾಯಂಕಾಲ-ಪ್ರಾತಃಕಾಲಗಳಲ್ಲಿ ಸ್ಮರಿಸುವ ಮನುಷ್ಯನು ಭಗವಂತನಿಗೆ ಅತ್ಯಂತ ಪ್ರಿಯನೆನಿಸುವನು. ॥ ೩೪ ॥

ಯೋಽನುಸ್ಮರೇತ ರಾಮಸ್ಯ ಕರ್ಮಾಣ್ಯದ್ಭುತಕರ್ಮಣಃ ।
ಸಾಯಂ ಪ್ರಾತರನಂತಸ್ಯ ವಿಷ್ಣೋಃ ಸ ದಯಿತೋ ಭವೇತ್
॥ ೩೪ ॥

ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೭೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
• ಬಲದೇವತೀರ್ಥಯಾತ್ರಾ ನಿರೂಪಣಂ ನಾಮ ಏಕೋನಾಶೀತಿತಮೋಽಧ್ಯಾಯಃ ॥ ೭೯ ॥

ಎಂಭತ್ತನೆಯ ಅಧ್ಯಾಯ

ಶ್ರೀಕೃಷ್ಣನಿಂದ ಸುದಾಮನ ಸ್ವಾಗತ

ರಾಜೋವಾಚ

ಭಗವನ್ ಯಾನಿ ಚಾನ್ಯಾನಿ
ಮುಕುಂದಸ್ಯ ಮಹಾತ್ಮನಃ ।
ವೀರ್ಯಾಣ್ಯನಂತವೀರ್ಯಸ್ಯ
ಶ್ರೋತುಮಿಚ್ಛಾಮಹೇ ಪ್ರಭೋ ॥ ೧ ॥

ಪರೀಕ್ಷಿದ್ರಾಜನು ಕೇಳಿದನು - ಮಹಾತ್ಮರೇ! ಪ್ರೇಮ ಮತ್ತು ಮುಕ್ತಿಯನ್ನು ಕರುಣಿಸುವ ಪರಬ್ರಹ್ಮ ಪರಮಾತ್ಮನಾದ ಭಗವಾನ್ ಶ್ರೀಕೃಷ್ಣನ ಶಕ್ತಿಯು ಅನಂತವಾಗಿದೆ. ಅದಕ್ಕಾಗಿ ಮಾಧುರ್ಯ ಹಾಗೂ ಐಶ್ವರ್ಯಗಳಿಂದ ಕೂಡಿದ ಲೀಲೆಗಳೂ ಅನಂತವಾಗಿವೆ. ತಾವು ಇದುವರೆಗೂ ವರ್ಣಿಸದಿರುವ ಅವನ ಇತರ ಲೀಲೆಗಳನ್ನೂ ಕೇಳಲು ನಾವು ಬಯಸುತ್ತಿದ್ದೇವೆ. ॥ ೧ ॥ ಬ್ರಾಹ್ಮಣೋತ್ತಮರೇ! ಈ ಜೀವನು ವಿಷಯ ಸುಖವನ್ನು ಅರಸುತ್ತಾ-ಅರಸುತ್ತಾ ಅತ್ಯಂತ ದುಃಖಿತನಾಗಿದ್ದಾನೆ. ಅವು ಬಾಣಗಳಂತೆ ಇವನ ಮನಸ್ಸಿಗೆ ನಾಟುತ್ತಾ ಇರುತ್ತವೆ. ಇಂತಹ ಸ್ಥಿತಿಯಲ್ಲಿ ಪವಿತ್ರಕೀರ್ತಿ ಭಗವಾನ್ ಶ್ರೀಕೃಷ್ಣನ ಮಂಗಳಮಯ ಲೀಲೆಗಳನ್ನು ಪದೇ-ಪದೇ ಶ್ರವಣಿಸಿದ ರಸಜ್ಞನಾದಮನು ಅದರಿಂದ ಹೇಗೆ ತಾನೇ ವಿಮುಖನಾದಾನು ? ॥ ೨ ॥ ಭಗವಂತನ ಗುಣಗಳನ್ನು ಹಾಡುತ್ತಿರುವ ವಾಣಿಯೆ ನಿಜವಾದ ವಾಣಿಯು. ಭಗವಂತನ ಸೇವೆಗಾಗಿ ದುಡಿಯುವ ಕೈಗಳೇ ನಿಜವಾದ ಕೈಗಳು. ಚರಾಚರ ಪ್ರಾಣಿಗಳಲ್ಲಿ ವಾಸಿಸುವ ಭಗವಂತನನ್ನು ಸ್ಮರಿಸುವ ಮನಸ್ಸೇ ನಿಜವಾದ ಮನಸ್ಸು. ಭಗವಂತನ ಪುಣ್ಯಮಯ ಕಥೆಗಳನ್ನು ಕೇಳುವ ಕಿವಿಗಳೇ ನಿಜವಾದ ಕಿವಿಗಳೆಂದು ಕರೆಯಲ್ಪಡುವವು. ॥ ೩ ॥

ಕೋ ನು ಶ್ರುತ್ವಾಸಕೃದ್ ಬ್ರಹ್ಮನ್ನುತ್ತಮಶ್ಲೋಕಸತ್ಕಥಾಃ ।
ವಿರಮೇತ ವಿಶೇಷಜ್ಞೋ ವಿಷಣ್ಣಃ ಕಾಮಮಾರ್ಗಣೈಃ
॥ ೨ ॥

ಸಾ ವಾಗ್ಯಯಾ ತಸ್ಯ ಗುಣಾನ್ ಗೃಣೀತೇ
ಕರೌ ಚ ತತ್ಕರ್ಮಕರೌ ಮನಶ್ಚ ।
ಸ್ಮರೇದ್ವಸಂತಂ ಸ್ಥಿರಜಂಗಮೇಷು
ಶೃಣೋತಿ ತತ್ಪುಣ್ಯಕಥಾಃ ಸ ಕರ್ಣಃ ॥ ೩ ॥

ಶಿರಸ್ತು ತಸ್ಯೋಭಯಲಿಂಗಮಾನಮೇ-
ತ್ತದೇವ ಯತ್ಪಶ್ಯತಿ ತದ್ಧಿ ಚಕ್ಷುಃ ।
ಅಂಗಾನಿ ವಿಷ್ಣೋರಥ ತಜ್ಜನಾನಾಂ
ಪಾದೋದಕಂ ಯಾನಿ ಭಜಂತಿ ನಿತ್ಯಮ್ ॥ ೪ ॥

ಚರಾಚರ ಜಗತ್ತನ್ನು ಭಗವಂತನ ಅಚಲ ಪ್ರತಿಮೆ ಎಂದು ಅರಿತು ನಮಸ್ಕರಿಸುವ ತಲೆಯೇ ಸಾರ್ಥಕವಾದ ತಲೆಯು. ಸರ್ವತ್ರ ಭಗವದ್ವಿಗ್ರಹವನ್ನು ದರ್ಶಿಸುವ ಕಣ್ಣುಗಳೇ ವಾಸ್ತವವಾದ ಕಣ್ಣುಗಳು. ಭಗವಂತನ ಮತ್ತು ಅವನ ಭಕ್ತರ ಚರಣೋದಕವನ್ನು ಸೇವಿಸುವ ಅಂಗಗಳೇ ನಿಜವಾದ ಅಂಗಗಳು. ನಿಜಹೇಳ ಬೇಕೆಂದರೆ ಅವನವರಾಗುವುದೇ ಸಾರ್ಥಕ ಜೀವನವು. ಆದುದ ರಿಂದ ಅವನ ಕಥಾಮೃತವನ್ನು ವರ್ಣಿಸಿರಿ. ॥ ೪ ॥

ಸೂತ ಉವಾಚ

ವಿಷ್ಣುರಾತೇನ ಸಂಪೃಷ್ಟೋ ಭಗವಾನ್ ಬಾದರಾಯಣಿಃ ।
ವಾಸುದೇವೇ ಭಗವತಿ ನಿಮಗ್ನಹೃದಯೋಽಬ್ರವೀತ್
॥ ೫ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ ! ಪರೀಕ್ಷಿದ್ರಾಜನು ಹೀಗೆ ಪ್ರಶ್ನಿಸಿದಾಗ ಪೂಜ್ಯರಾದ ಭಕ್ತಶಿರೋಮಣಿ ಗಳಾದ ಶ್ರೀಶುಕಮುನಿಗಳ ಮನಸ್ಸು ಶ್ರೀಕೃಷ್ಣನಲ್ಲೇ ತಲ್ಲೀನವಾಗಿ ಹೋಯಿತು. ಸ್ವಲ್ಪ ಹೊತ್ತು ತಡೆದು ಅವರು ಪರೀಕ್ಷಿತನಿಗೆ ಹೇಳತೊಡಗಿದರು. ॥ ೫ ॥

ಶ್ರೀಶುಕ ಉವಾಚ

ಕೃಷ್ಣಸ್ಯಾಸೀತ್ಸಖಾ ಕಶ್ಚಿದ್ ಬ್ರಾಹ್ಮಣೋ ಬ್ರಹ್ಮವಿತ್ತಮಃ ।
ವಿರಕ್ತ ಇಂದ್ರಿಯಾರ್ಥೇಷು ಪ್ರಶಾಂತಾತ್ಮಾ ಜಿತೇಂದ್ರಿಯಃ
॥ ೬ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನಿಗೆ ಪರಮಮಿತ್ರನಾದ ಬ್ರಾಹ್ಮಣನೊಬ್ಬನಿದ್ದನು. ಅವನು ಮಹಾಬ್ರಹ್ಮಜ್ಞಾನಿಯೂ, ವಿಷಯಗಳಿಂದ ವಿರಕ್ತನೂ, ಶಾಂತಚಿತ್ತನೂ, ಜೀತೇಂದ್ರಿಯನೂ ಆಗಿದ್ದನು. ॥ ೬ ॥ ಅವನು ಗೃಹಸ್ಥನಾಗಿದ್ದರೂ ಯಾವುದೇ ಪ್ರಕಾರದ ಸಂಗ್ರಹ- ಪರಿಗ್ರಹ ವಿಲ್ಲದೆ ಪ್ರಾರಬ್ಧಕ್ಕನುಸಾರ ದೊರೆತುದರಲ್ಲಿ ಸಂತುಷ್ಟನಾಗಿರುತ್ತಿ ದ್ದನು. ಅವನ ವಸ್ತ್ರಗಳು ಹರಿದು – ಹಳೆಯದಾಗಿದ್ದು ಕುಚೇಲ ನೆಂದೇ ಜನರು ಅವನನ್ನು ಕರೆಯುತ್ತಿದ್ದರು. ಅವನ ಪತ್ನಿಯೂ ಅವನಂತೇ ಇದ್ದು ಪತಿಯಂತೆ–ಹಸಿವೆಯಿಂದ ಕೃಶಳಾಗಿದ್ದಳು.॥ ೭ ॥

ಯದೃಚ್ಛಯೋಪಪನ್ನೇನ ವರ್ತಮಾನೋ ಗೃಹಾಶ್ರಮೀ ।
ತಸ್ಯ ಭಾರ್ಯಾ ಕುಚೈಲಸ್ಯ ಕುತ್ಸ್ಯಾಮಾ ಚ ತಥಾವಿಧಾ
॥ ೭ ॥

ಪತಿವ್ರತಾ ಪತಿಂ ಪ್ರಾಹ ಮ್ಲಾಯತಾ ವದನೇನ ಸಾ ।
ದರಿದ್ರಾ ಸೀದಮಾನಾ ಸಾ ವೇಪಮಾನಾಭಿಗಮ್ಯ ಚ
॥ ೮ ॥

ದರಿದ್ರತೆಯ ಪ್ರತಿಮೂರ್ತಿಯಂತಿದ್ದ ದುಃಖಿತಳಾದ ಪತಿವ್ರತೆ ಯಾದ ಆಕೆಯು ಹಸಿವಿನಿಂದ ಕಂಗೆಟ್ಟು ಒಂದು ದಿನ ತನ್ನ ಪತಿಯ ಬಳಿಗೆ ಹೋಗಿ ಬಾಡಿದ ಮುಖದಿಂದ ಸಂಕೋಚದಿಂದಲೇ ಹೀಗೆಂದಳು – ॥ ೮ ॥ ಬ್ರಾಹ್ಮಣೋತ್ತಮರೇ ! ಸಾಕ್ಷಾತ್ ಲಕ್ಷ್ಮೀಪತಿ ಯಾದ ಭಗವಾನ್ ಶ್ರೀಕೃಷ್ಣನು ನಿಮಗೆ ಸ್ನೇಹಿತನಾಗಿರುವನು. ಅವನು ವಾಂಛಾಕಲ್ಪತರುವೂ, ಶರಣಾಗತವತ್ಸಲನೂ, ಬ್ರಾಹ್ಮಣರ ಪರಮಭಕ್ತನೂ ಆಗಿರುವನು. ॥ ೯ ॥ ಪರಮಭಾಗ್ಯಶಾಲಿಗಳಾದ ಆರ್ಯಪುತ್ರರೇ ! ಆ ಭಗವಂತನು ಸಂತರ ಏಕಮಾತ್ರ ಆಶ್ರಯ ನಾಗಿರುವನು. ತಾವು ದಯವಿಟ್ಟು ಅವನ ಬಳಿಗೆ ಹೋಗಿರಿ. ನೀವು ಕುಟುಂಬಿಗಳಾಗಿದ್ದೀರಿ, ಅನ್ನವಿಲ್ಲದೆ ದುಃಖಿತರಾಗಿರುವಿರಿ ಎಂದು ತಿಳಿದಾಗ ಅವನು ನಿಮಗೆ ಬಹಳಷ್ಟು ಧನವನ್ನು ಕೊಡುವನು. ॥ ೧೦ ॥

ನನು ಬ್ರಹ್ಮನ್ ಭಗವತಃ ಸಖಾ ಸಾಕ್ಷಾಚ್ಛ್ರಿಯಃ ಪತಿಃ ।
ಬ್ರಹ್ಮಣ್ಯಶ್ಚ ಶರಣ್ಯಶ್ಚ ಭಗವಾನ್ ಸಾತ್ವತರ್ಷಭಃ
॥ ೯ ॥

ತಮುಪೈಹಿ ಮಹಾಭಾಗ ಸಾಧೂನಾಂ ಚ ಪರಾಯಣಮ್ ।
ದಾಸ್ಯತಿ ದ್ರವಿಣಂ ಭೂರಿ ಸೀದತೇ ತೇ ಕುಟುಂಬಿನೇ
॥ ೧೦ ॥

ಭೋಜ, ವೃಷ್ಣಿ ಅಂಧಕ ಇವರೇ ಮೊದಲಾದ ಯಾದವರಿಗೆ ಸ್ವಾಮಿಯಾಗಿ ಶ್ರೀಕೃಷ್ಣನು ಈಗ ದ್ವಾರಕೆಯಲ್ಲೇ ಇದ್ದಾನೆ. ತನ್ನ ಚರಣಕಮಲಗಳನ್ನು ಸ್ಮರಿಸುವ ಭಕ್ತರಿಗೆ ಅವನು ತನ್ನನ್ನೇ ಕೊಟ್ಟು ಕೊಂಡು ಬಿಡುತ್ತಾನೆ. ಹೀಗಿರು ವಾಗ ಜಗದ್ಗುರುವಾದ ಶ್ರೀಕೃಷ್ಣನು ತನ್ನ ಭಕ್ತರಿಗೆ ಲೆಕ್ಕಕ್ಕಿಲ್ಲದ (ಭಕ್ತಿಯ ಹೊರತಾಗಿ ಬೇರೇನೂ ಬೇಕಿಲ್ಲ) ಪ್ರಾಪಂಚಿಕ ಸುಖಿಗಳನ್ನು ಐಶ್ವರ್ಯವನ್ನು ದಯ ಪಾಲಿಸುವುದರಲ್ಲಿ ಆಶ್ಚರ್ಯವೇನಿದೆ ? ॥ ೧೧ ॥ ಹೀಗೆ ಆ ಪತಿ ವ್ರತೆಯು ತನ್ನ ಪತಿಯಲ್ಲಿ ಹಲವುಬಾರಿ ನಮ್ರತೆಯಿಂದ ಪ್ರಾರ್ಥಿಸಿ ದಾಗ, ಸುದಾಮನೂ – ಧನದ ಮಾತಿರಲಿ, ಆದರೆ ಭಗವಾನ್ ಶ್ರೀಕೃಷ್ಣನ ದರ್ಶನವಾಗುವುದೇ ! ಇಡೀ ಜೀವನದ ಬಹಳ ದೊಡ್ಡ ಲಾಭವಾಗಿದೆ ಎಂದು ಯೋಚಿಸಿದನು. ॥ ೧೨ ॥

ಅಸ್ತೇಽಧುನಾ ದ್ವಾರವತ್ಯಾಂ ಭೋಜವೃಷ್ಣ್ಯಂಧಕೇಶ್ವರಃ ।
ಸ್ಮರತಃ ಪಾದಕಮಲಮಾತ್ಮಾನಮಪಿ ಯಚ್ಛತಿ ।
ಕಿಂನ್ವರ್ಥಕಾಮಾನ್ಭಜತೋ ನಾತ್ಯಭೀಷ್ಟಾನ್ ಜಗದ್ಗುರುಃ
॥ ೧೧ ॥

ಸ ಏವಂ ಭಾರ್ಯಯಾ ವಿಪ್ರೋ ಬಹುಶಃ ಪ್ರಾರ್ಥಿತೋ ಮುದು ।
ಅಯಂ ಹಿ ಪರಮೋ ಲಾಭ ಉತ್ತಮಶ್ಲೋಕದರ್ಶನಮ್
॥ ೧೨ ॥

ಇತಿ ಸಂಚಿಂತ್ಯ ಮನಸಾ ಗಮನಾಯ ಮತಿಂ ದಧೇ ।
ಅಪ್ಯಸ್ತ್ಯುಪಾಯನಂ ಕಿಂಚಿದ್ಗೃಹೇ ಕಲ್ಯಾಣಿ ದೀಯತಾಮ್
॥ ೧೩ ॥

ಯಾಚಿತ್ವಾ ಚತುರೋ ಮುಷ್ಟೀನ್ ವಿಪ್ರಾನ್ ಪೃಥುಕತಂಡುಲಾನ್ ।
ಚೈಲಖಂಡೇನ ತಾನ್ಬದ್ಧ್ವಾ ಭರ್ತ್ರೇ ಪ್ರಾದಾದುಪಾಯನಮ್
॥ ೧೪ ॥

ಸ ತಾನಾದಾಯ ವಿಪ್ರಾಗ್ರ್ಯಃ ಪ್ರಯಯೌ ದ್ವಾರಕಾಂ ಕಿಲ ।
ಕೃಷ್ಣಸಂದರ್ಶನಂ ಮಹ್ಯಂ ಕಥಂ ಸ್ಯಾದಿತಿ ಚಿಂತಯನ್
॥ ೧೫ ॥

ತ್ರೀಣಿ ಗುಲ್ಮಾನ್ಯತೀಯಾಯ ತಿಸ್ರಃ ಕಕ್ಷಾಶ್ಚ ಸ ದ್ವಿಜಃ ।
ವಿಪ್ರೋಽಗಮ್ಯಾಂಧಕವೃಷ್ಣೀನಾಂ ಗೃಹೇಷ್ವಚ್ಯುತಧರ್ಮಿಣಾಮ್
॥ ೧೬ ॥

ಗೃಹಂ ದ್ವ್ಯಷ್ಟಸಹಸ್ರಾಣಾಂ ಮಹಿಷೀಣಾಂ ಹರೇರ್ದ್ವಿಜಃ ।
ವಿವೇಶೈಕತಮಂ ಶ್ರೀಮದ್ಬ್ರಹ್ಮಾನಂದಂ ಗತೋ ಯಥಾ
॥ ೧೭ ॥

ತಂ ವಿಲೋಕ್ಯಾಚ್ಯುತೋ ದೂರಾತ್ ಪ್ರಿಯಾಪರ್ಯಂಕಮಾಸ್ಥಿತಃ ।
ಸಹಸೋತ್ಥಾಯ ಚಾಭ್ಯೇತ್ಯ ದೋರ್ಭ್ಯಾಂ ಪರ್ಯಗ್ರಹೀನ್ಮುದಾ
॥ ೧೮ ॥

ಸಖ್ಯುಃ ಪ್ರಿಯಸ್ಯ ವಿಪ್ರರ್ಷೇರಂಗಸಂಗಾತಿನಿರ್ವೃತಃ ।
ಪ್ರೀತೋ ವ್ಯಮುಂಚದಬ್ಬಿಂದೂನ್ನೇತ್ರಾಭ್ಯಾಂ ಪುಷ್ಕರೇಕ್ಷಣಃ
॥ ೧೯ ॥

ಅಥೋಪವೇಶ್ಯ ಪರ್ಯಂಕೇ ಸ್ವಯಂ ಸಖ್ಯುಃ ಸಮರ್ಹಣಮ್ ।
ಉಪಹೃತ್ಯಾವನಿಜ್ಯಾಸ್ಯ ಪಾದೌ ಪಾದಾವನೇಜನೀಃ
॥ ೨೦ ॥

ಅಗ್ರಹೀಚ್ಛಿರಸಾ ರಾಜನ್ ಭಗವಾನ್ ಲೋಕಪಾವನಃ ।
ವ್ಯಲಿಂಪದ್ದಿವ್ಯಗಂಧೇನ ಚಂದನಾಗುರುಕುಂಕುಮೈಃ
॥ ೨೧ ॥

ಧೂಪೈಃ ಸುರಭಿಭಿರ್ಮಿತ್ರಂ ಪ್ರದೀಪಾವಲಿಭಿರ್ಮುದಾ ।
ಅರ್ಚಿತ್ವಾವೇದ್ಯ ತಾಂಬೂಲಂ ಗಾಂ ಚ ಸ್ವಾಗತಮಬ್ರವೀತ್
॥ ೨೨ ॥

ಹೀಗೆ ವಿಚಾರಮಾಡಿ ಅವನು ದ್ವಾರಕೆಗೆ ಹೋಗಲು ನಿಶ್ಚಯಿಸಿದನು ಮತ್ತು ಪತ್ನಿಯಲ್ಲಿ ಕೇಳಿದನು – ಕಲ್ಯಾಣೀ ! ಶ್ರೀಕೃಷ್ಣನಿಗೆ ಕೊಡಲು ಯೋಗ್ಯವಾದ ಏನಾದರೂ ವಸ್ತು ಮನೆಯಲ್ಲಿದೆಯೇ ? ಇದ್ದರೆ ಕೊಡು. ಸ್ನೇಹಿತನನ್ನು ಬರಿಗೈಯಿಂದ ಎಂತು ಕಾಣುವುದು ? ॥ ೧೩ ॥ ಆಗ ಆ ಬ್ರಾಹ್ಮಣಿಯು ಅಕ್ಕ-ಪಕ್ಕದ ಬ್ರಾಹ್ಮಣರ ಮನೆಗಳಿಂದ ನಾಲ್ಕು ಮುಷ್ಟಿ ಅವಲಕ್ಕಿಯನ್ನು ಬೇಡಿ ತಂದು, ಒಂದು ಹರಕು ಬಟ್ಟೆಯಲ್ಲಿ ಕಟ್ಟಿ ಭಗವಂತನಿಗೆ ಕೊಡಲಿಕ್ಕಾಗಿ ಗಂಡನ ಕೈಯಲ್ಲಿಟ್ಟಳು. ॥ ೧೪ ॥ ಆನಂತರ ಆ ಅವಲಕ್ಕಿಯನ್ನು ಕಂಕುಳಲ್ಲಿಟ್ಟುಕೊಂಡು ಸುದಾಮನು ದ್ವಾರಕೆಗೆ ಹೊರಟನು. ನನಗೆ ಭಗವಾನ್ ಶ್ರೀಕೃಷ್ಣನ ದರ್ಶನ ಎಂತಾಗುವುದು ಎಂದು ದಾರಿಯಲ್ಲಿ ಯೋಚಿಸುತ್ತಾ ಹೋಗುತ್ತಿದ್ದನು. ॥ ೧೫ ॥

ಪರೀಕ್ಷಿತನೇ ! ದ್ವಾರಕೆಯನ್ನು ತಲುಪಿದೊಡನೆ ಆ ಬ್ರಾಹ್ಮಣೋತ್ತಮನು ಇತರ ಬ್ರಾಹ್ಮಣರೊಂದಿಗೆ ಮೂರು ಸೇನಾ ತುಕಡಿಗಳನ್ನು, ಮೂರು ಪ್ರಾಕಾರವನ್ನು ದಾಟಿ, ಪ್ರವೇಶಿಸಲು ಅತ್ಯಂತ ಕಠಿಣವಾದ ಭಗವದ್ಧರ್ಮವನ್ನು ಪಾಲಿಸುವ ಅಂಧಕ, ವೃಷ್ಣಿ ವಂಶೀಯರಾದವರ ಅರಮನೆಗಳನ್ನು ತಲುಪಿದನು. ॥ ೧೬ ॥ ಅವುಗಳ ನಡುವೆ ಭಗವಾನ್ ಶ್ರೀಕೃಷ್ಣನ ಹದಿನಾರು ಸಾವಿರ ರಾಣಿಯರ ಅರಮನೆಗಳಿದ್ದವು. ಅವುಗಳಲ್ಲಿ ಬಹಳವಾಗಿ ಅಲಂಕರಿಸಲ್ಪಟ್ಟು ಅತ್ಯಂತ ಶೋಭಾಯುಕ್ತವಾಗಿದ್ದ ಅರಮನೆಯೊಂದರೊಳಗೆ ಬ್ರಾಹ್ಮಣನು ಪ್ರವೇಶಿಸಿದನು. ಅದನ್ನು ಪ್ರವೇಶಿಸುತ್ತಲೇ ಅವನಿಗೆ ಬ್ರಹ್ಮಾನಂದದ ಸಮುದ್ರದಲ್ಲಿ ತೇಲಾಡಿದಂತೆ ಅನಿಸಿತು. ॥ ೧೭ ॥ ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ತನ್ನ ಪ್ರಾಣಪ್ರಿಯಳಾದ ರುಕ್ಮಿಣಿಯ ಮಂಚದಲ್ಲಿ ವಿರಾಜಮಾನನಾಗಿದ್ದನು. ತನ್ನೆಡೆಗೆ ಬರುತ್ತಿದ್ದ ವಿಪ್ರೋತ್ತಮನನ್ನು ದೂರದಲ್ಲೇ ಕಂಡು ಮಂಚದಿಂದ ಇಳಿದು ಅವನ ಬಳಿಗೆ ತೆರಳಿ ಅತ್ಯಂತ ಆನಂದದಿಂದ ಅವನನ್ನು ಬಿಗಿದಪ್ಪಿಕೊಂಡನು. ॥ ೧೮ ॥ ಪರೀಕ್ಷಿತನೇ ! ಪರಮಾನಂದ ಸ್ವರೂಪನಾದ ಶ್ರೀಕೃಷ್ಣನು ತನ್ನ ಪ್ರಿಯಸುಖನಾದ ವಿಪ್ರೋತ್ತಮನ ಆಂಗಸಂಗದಿಂದ ಅತ್ಯಂತ ಆನಂದಿತನಾದನು. ಅವನ ಕಮಲದಂತಿರುವ ಕೋಮಲ ನೇತ್ರಗಳಿಂದ ಪ್ರೇಮಾಶ್ರುಗಳು ಸುರಿಯತೊಡಗಿದುವು. ॥ ೧೯ ॥ ಬಳಿಕ ಭಗವಾನ್ ಶ್ರೀಕೃಷ್ಣನು ಅವನನ್ನು ಕರೆತಂದು ತನ್ನ ಪರ್ಯಂಕದಲ್ಲಿ ಕುಳ್ಳಿರಿಸಿದನು. ಸ್ವತಃ ತಾನೇ ಪೂಜಾಸಾಮಗ್ರಿಗಳನ್ನು ತಂದು ಅವನನ್ನು ಪೂಜಿಸಿದನು. ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಎಲ್ಲರನ್ನು ಪವಿತ್ರಗೊಳಿಸುವವನಾಗಿದ್ದರೂ ಅವನು ತನ್ನ ಕೈಗಳಿಂದಲೇ ಬ್ರಾಹ್ಮಣೋತ್ತಮನ ಕಾಲುಗಳನ್ನು ತೊಳೆದು, ಆ ಚರಣೋದಕವನ್ನು ತನ್ನ ತಲೆಯಲ್ಲಿ ಧರಿಸಿಕೊಂಡನು ಹಾಗೂ ಅವನ ಶರೀರಕ್ಕೆ ಚಂದನ, ಅಗರು, ಕೇಸರಿ ಮುಂತಾದ ದಿವ್ಯ ಸುಗಂಧ ದ್ರವ್ಯಗಳನ್ನು ಲೇಪಿಸಿದನು. ॥ ೨೦-೨೧ ॥ ಮತ್ತೆ ಅವನು ಬಹಳ ಆನಂದದಿಂದ ಸುಗಂಧಿತ ಧೂಪದಿಂದ, ದೀಪಾವಳಿಗಳಿಂದ ಆರತಿಯನ್ನೆತ್ತಿ ಪೂಜೆಮಾಡಿ, ತಾಂಬೂಲ ಮತ್ತು ಗೋವನ್ನು ಕೊಟ್ಟು ಸುಮಧುರ ವಚನಗಳಿಂದ ಮಿತ್ರನೇ ! ನೀನು ಬಂದುದು ಬಹಳ ಒಳ್ಳೆಯದಾಯಿತು ಎಂದು ಹೇಳುತ್ತಾ ಸ್ವಾಗತಿಸಿದನು. ॥ ೨೨ ॥

ಕುಚೈಲಂ ಮಲಿನಂ ಕ್ಷಾಮಂ ದ್ವಿಜಂ ಧಮನಿಸಂತತಮ್ ।
ದೇವೀ ಪರ್ಯಚರತ್ಸಾಕ್ಷಾಚ್ಚಾಮರವ್ಯಜನೇನ ವೈ
॥ ೨೩ ॥

ಅಂತಃಪುರಜನೋ ದೃಷ್ಟ್ವಾ ಕೃಷ್ಣೇನಾಮಲಕೀರ್ತಿನಾ ।
ವಿಸ್ಮಿತೋಽಭೂದತಿಪ್ರೀತ್ಯಾ ಅವಧೂತಂ ಸಭಾಜಿತಮ್
॥ ೨೪ ॥

ಕಿಮನೇನ ಕೃತಂ ಪುಣ್ಯಮವಧೂತೇನ ಭಿಕ್ಷುಣಾ ।
ಶ್ರಿಯಾ ಹೀನೇನ ಲೋಕೇಽಸ್ಮಿನ್ ಗರ್ಹಿತೇನಾಧಮೇನ ಚ
॥ ೨೫ ॥

ಯೋಽಸೌ ತ್ರಿಲೋಕಗುರುಣಾ ಶ್ರೀನಿವಾಸೇನ ಸಂಭೃತಃ ।
ಪರ್ಯಂಕಸ್ಥಾಂ ಶ್ರಿಯಂ ಹಿತ್ವಾಪರಿಷ್ವಕ್ತೋಽಗ್ರಜೋ ಯಥಾ
॥ ೨೬ ॥

ಕಥಯಾಂಚಕ್ರತುರ್ಗಾಥಾಃ ಪೂರ್ವಾ ಗುರುಕುಲೇ ಸತೋಃ ।
ಆತ್ಮನೋ ಲಲಿತಾ ರಾಜನ್ಕರೌ ಗೃಹ್ಯ ಪರಸ್ಪರಮ್
॥ ೨೭ ॥

ಶ್ರೀಭಗವಾನುವಾಚ

ಅಪಿ ಬ್ರಹ್ಮನ್ಗುರುಕುಲಾದ್ಭವತಾ ಲಬ್ಧದಕ್ಷಿಣಾತ್ ।
ಸಮಾವೃತ್ತೇನ ಧರ್ಮಜ್ಞ ಭಾರ್ಯೋಢಾ ಸದೃಶೀ ನ ವಾ
॥ ೨೮ ॥

ಪ್ರಾಯೋ ಗೃಹೇಷು ತೇ ಚಿತ್ತಮಕಾಮವಿಹತಂ ತಥಾ ।
ನೈವಾತಿಪ್ರೀಯಸೇ ವಿದ್ವನ್ ಧನೇಷು ವಿದಿತಂ ಹಿ ಮೇ
॥ ೨೯ ॥

ಕೇಚಿತ್ಕುರ್ವಂತಿ ಕರ್ಮಾಣಿ ಕಾಮ್ಯೈರಹತಚೇತಸಃ ।
ತ್ಯಜಂತಃ ಪ್ರಕೃತೀರ್ದೈವೀರ್ಯಥಾಹಂ ಲೋಕಸಂಗ್ರಹಮ್
॥ ೩೦ ॥

ಕಚ್ಚಿದ್ಗುರುಕುಲೇ ವಾಸಂ ಬ್ರಹ್ಮನ್ಸ್ಮರಸಿ ನೌ ಯತಃ ।
ದ್ವಿಜೋ ವಿಜ್ಞಾಯ ವಿಜ್ಞೇಯಂ ತಮಸಃ ಪಾರಮಶ್ನುತೇ
॥ ೩೧ ॥

ಸ ವೈ ಸತ್ಕರ್ಮಣಾಂ ಸಾಕ್ಷಾತ್ ದ್ವಿಜಾತೇರಿಹ ಸಂಭವಃ ।
ಆದ್ಯೋಽಂಗ ಯತ್ರಾಶ್ರಮಿಣಾಂ ಯಥಾಹಂ ಜ್ಞಾನದೋ ಗುರುಃ
॥ ೩೨ ॥

ಕುಚೇಲನು ಹರಿದ-ಹಳೆಯ ವಸ್ತ್ರಗಳನ್ನುಟ್ಟಿದ್ದನು. ಅವನ ಶರೀರವು ದುರ್ಬಲವೂ ಮಲಿನವೂ ಆಗಿದ್ದಿತು. ಶರೀರದ ನರಗಳೆಲ್ಲ ಎದ್ದು ಕಾಣುತ್ತಿದ್ದವು. ಅಂತಹವನಿಗೆ ಸಾಕ್ಷಾತ್ ರುಕ್ಮಿಣೀ ದೇವಿಯೇ ಚಾಮರವನ್ನು ಬೀಸುತ್ತಾ ಸೇವೆ ಮಾಡುತ್ತಿದ್ದಳು. ॥ ೨೩ ॥ ಪವಿತ್ರ ಕೀರ್ತಿಯಾದ ಭಗವಾನ್ ಶ್ರೀಕೃಷ್ಣನು ಅತಿಶಯ ಪ್ರೀತ್ಯಾದರಗಳಿಂದ ಈ ಕುಚೇಲನಾದ ಅವಧೂತ ಬ್ರಾಹ್ಮಣನ ಸೇವೆ ಮಾಡುತ್ತಿರುವುದನ್ನು ಕಂಡು ಅಂತಃಪುರದ ಸ್ತ್ರೀಯರೆಲ್ಲ ಅಚ್ಚರಿಗೊಂಡರು. ॥ ೨೪ ॥ ಅವರು ಪರಸ್ಪರ ಹೇಳಿಕೊಂಡರು – 'ಈ ನಿರ್ಧನನೂ, ನಿಂದನೀಯನೂ, ನಿಕೃಷ್ಟನೂ, ಭಿಕ್ಷುಕನೂ ಆದ ಈ ಅವಧೂತ ಬ್ರಾಹ್ಮಣನು ಏನು ಪುಣ್ಯಮಾಡಿದ್ದನೋ! ಆದರಿಂದ ಮೂರುಲೋಕದ ಗುರುವಾದ ಶ್ರೀನಿವಾಸ ಶ್ರೀಕೃಷ್ಣನು ಸ್ವತಃ ಇವನ ಆದರ-ಸತ್ಕಾರವನ್ನು ಮಾಡುತ್ತಿರುವನಲ್ಲ! ನೋಡೇ! ಇವನು ತನ್ನ ಪರ್ಯಂಕದಲ್ಲಿ ಸೇವೆಮಾಡುತ್ತಿದ್ದ ಸಾಕ್ಷಾತ್ ಲಕ್ಷ್ಮೀರೂಪಳಾದ ರುಕ್ಮಿಣೀದೇವಿಯನ್ನು ಬಿಟ್ಟು ಈ ಬ್ರಾಹ್ಮಣನನ್ನು ತನ್ನಣ್ಣ ಬಲರಾಮನಂತೆ ಆಲಿಂಗಿಸಿಕೊಂಡನಲ್ಲ!' ॥ ೨೫-೨೬ ॥ ಪ್ರಿಯ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಮತ್ತು ಆ ಬ್ರಾಹ್ಮಣನು ಇಬ್ಬರೂ ಕೈ ಕೈಹಿಡಿದುಕೊಂಡು ತಮ್ಮ ಬಾಲ್ಯದ ಜೀವನದ ಆನಂದದಾಯಕ ಘಟನೆಗಳನ್ನು ಸ್ಮರಿಸಿಕೊಳ್ಳುತ್ತ, ಗುರುಕುಲದಲ್ಲಿದ್ದಾಗ ನಡೆದ ಘಟನೆಗಳನ್ನು ಮೆಲುಕುಹಾಕತೊಡಗಿದರು. ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಧರ್ಮಜ್ಞನಾದ ಬ್ರಾಹ್ಮಣನೇ! ಗುರುದಕ್ಷಿಣೆಯನ್ನು ಸಮರ್ಪಿಸಿ ಗುರುಕುಲದಿಂದ ಹಿಂದಿರುಗಿದ ನಂತರ ನೀನು ತನಗೆ ಅನುರೂಪಳಾದ ಭಾರ್ಯೆಯನ್ನು ವಿವಾಹವಾದೆಯಲ್ಲವೇ? ॥ ೨೮ ॥ ವಿವಾಹಿತನಾಗಿ ಗೃಹಸ್ಥಧರ್ಮದಲ್ಲಿದ್ದರೂ ಕೂಡ ಪ್ರಾಯಶಃ ನಿನ್ನ ಮನಸ್ಸು ವಿಷಯ ಭೋಗಗಳಲ್ಲಿ ಆಸಕ್ತವಾಗಿಲ್ಲವೆಂದು ನಾನು ಭಾವಿಸಿದ್ದೇನೆ ವಿದ್ವಾಂಸನೇ! ಧನಾದಿಗಳಲ್ಲಿಯೂ ಕೂಡ ನಿನಗೆ ಯಾವ ಪ್ರೀತಿಯು ಇಲ್ಲವೆಂಬುದು ನನಗೆ ತಿಳಿದಿದೆ. ॥ ೨೯ ॥ ಪ್ರಪಂಚದಲ್ಲಿ ಕೆಲವೇ ಜನರು ಮಾಯೆಯಿಂದ ನಿರ್ಮಿತವಾದ ವಿಷಯ ಸಂಬಂಧವಾದ ವಾಸನೆಗಳನ್ನು ದೂರಮಾಡಿ, ವಿಷಯ ವಾಸನೆಯು ಕಿಂಚಿತ್ತಾದರೂ ಮನಸ್ಸಿನಲ್ಲಿ ಇರದಿದ್ದರೂ ನನ್ನಂತೆ ಲೋಕಸಂಗ್ರಹಕ್ಕಾಗಿ ಕರ್ತವ್ಯ ಕರ್ಮಗಳನ್ನು ಮಾಡುತ್ತಿರುತ್ತಾರೆ. ॥ ೩೦ ॥ ಬ್ರಾಹ್ಮಣ ಶ್ರೇಷ್ಠನೇ! ನಾವಿಬ್ಬರೂ ಒಟ್ಟಿಗೆ ಗುರುಕುಲದಲ್ಲಿ ವಾಸಿಸುತ್ತಿದ್ದಾಗಿನ ಮಾತುಗಳು ನೆನಪಿದೆಯೆ? ನಿಜವಾಗಿ ಗುರುಕುಲದಲ್ಲೇ ದ್ವಿಜರಿಗೆ ತಾವು ತಿಳಿಯಬೇಕಾದ ಜ್ಞಾನವುಂಟಾಗುತ್ತದೆ. ಅದರ ಮೂಲಕ ಅವರು ಅಜ್ಞಾನಾಂಧಕಾರದಿಂದ ಪಾರಾಗಿ ಹೋಗುವರು. ॥ ೩೧ ॥ ಮಿತ್ರನೇ! ಈ ಪ್ರಪಂಚದಲ್ಲಿ ಶರೀರಕ್ಕೆ ಕಾರಣನಾದ ಜನ್ಮದಾತ ತಂದೆಯು ಮೊದಲನೆಯ ಗುರು. ಅನಂತರ ಉಪನಯನಾದಿ ಸಂಸ್ಕಾರಗಳನ್ನು ಮಾಡಿ ಸತ್ಕರ್ಮಗಳ ಶಿಕ್ಷಣವನ್ನು ಕೊಡುವವನು ಎರಡನೆಯ ಗುರುವು ಪೂಜ್ಯನೇ ಆಗಿರುವನು. ಬಳಿಕ ಜ್ಞಾನೋಪದೇಶವನ್ನು ಮಾಡಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಡುವ ಗುರುವು ಪರಮಾತ್ಮಸ್ವರೂಪನೇ ಆಗಿರುವನು. ವರ್ಣಾಶ್ರಮಿಗಳಿಗೆ ಹೀಗೆ ಮೂರು ಗುರುಗಳಿರುತ್ತಾರೆ.॥ ೩೨ ॥

ನನ್ವರ್ಥಕೋವಿದಾ ಬ್ರಹ್ಮನ್ ವರ್ಣಾಶ್ರಮವತಾಮಿಹ ।
ಯೇ ಮಯಾ ಗುರುಣಾ ವಾಚಾ ತರಂತ್ಯಂಜೋ ಭವಾರ್ಣವಮ್
॥ ೩೩ ॥

ನಾಹಮಿಜ್ಯಾಪ್ರಜಾತಿಭ್ಯಾಂ ತಪಸೋಪಶಮೇನ ವಾ ।
ತುಷ್ಯೇಯಂ ಸರ್ವಭೂತಾತ್ಮಾ ಗುರುಶುಶ್ರೂಷಯಾ ಯಥಾ
॥ ೩೪ ॥

ಅಪಿ ನಃ ಸ್ಮರ್ಯತೇ ಬ್ರಹ್ಮನ್ವೃತ್ತಂ ನಿವಸತಾಂ ಗುರೌ ।
ಗುರುದಾರೈಶ್ಚೋದಿತಾನಾಮಿಂಧನಾನಯನೇ ಕ್ವಚಿತ್
॥ ೩೫ ॥

ಪ್ರವಿಷ್ಟಾನಾಂ ಮಹಾರಣ್ಯಮಪರ್ತೌ ಸುಮಹದ್ದ್ವಿಜ ।
ವಾತವರ್ಷಮಭೂತ್ತೀವ್ರಂ ನಿಷ್ಠುರಾಃ ಸ್ತನಯಿತ್ನವಃ
॥ ೩೬ ॥

ಸೂರ್ಯಶ್ಚಾಸ್ತಂ ಗತಸ್ತಾವತ್ತಮಸಾ ಚಾವೃತಾ ದಿಶಃ ।
ನಿಮ್ನಂ ಕೂಲಂ ಜಲಮಯಂ ನ ಪ್ರಾಜ್ಞಾಯತ ಕಿಂಚನ
॥ ೩೭ ॥

ವಯಂ ಭೃಶಂ ತತ್ರ ಮಹಾನಿಲಾಂಬುಭಿ-
ರ್ನಿಹನ್ಯಮಾನಾ ಮುಹುರಂಬುಸಂಪ್ಲವೇ ।
ದಿಶೋಽವಿದಂತೋಽಥ ಪರಸ್ಪರಂ ವಯೇ
ಗೃಹೀತಹಸ್ತಾಃ ಪರಿಬಭ್ರಿಮಾತುರಾಃ ॥ ೩೮ ॥

ಏತದ್ವಿದಿತ್ವಾ ಉದಿತೇ ರವೌ ಸಾಂದೀಪನಿರ್ಗುರುಃ ।
ಅನ್ವೇಷಮಾಣೋ ನಃ ಶಿಷ್ಯಾನಾಚಾರ್ಯೋಽಪಶ್ಯದಾತುರಾನ್
॥ ೩೯ ॥

ಅಹೋ ಹೇ ಪುತ್ರಕಾ ಯೂಯಮಸ್ಮದರ್ಥೇಽತಿದುಃಖಿತಾಃ ।
ಆತ್ಮಾ ವೈ ಪ್ರಾಣಿನಾಂ ಪ್ರೇಷ್ಠಸ್ತಮನಾದೃತ್ಯ ಮತ್ಪರಾಃ
॥ ೪೦ ॥

ಏತದೇವ ಹಿ ಸಚ್ಛಿಷ್ಯೈಃ ಕರ್ತವ್ಯಂ ಗುರುನಿಷ್ಕೃತಮ್ ।
ಯದ್ವೈ ವಿಶುದ್ಧಭಾವೇನ ಸರ್ವಾರ್ಥಾತ್ಮಾರ್ಪಣಂ ಗುರೌ
॥ ೪೧ ॥

ತುಷ್ಟೋಽಹಂ ಭೋ ದ್ವಿಜಶ್ರೇಷ್ಠಾಃ ಸತ್ಯಾಃ ಸಂತು ಮನೋರಥಾಃ ।
ಛಂದಾಂಸ್ಯಯಾತಯಾಮಾನಿ ಭವನ್ತ್ವಿಹ ಪರತ್ರ ಚ
॥ ೪೨ ॥

ಪ್ರಿಯಸಖಿನೇ! ಗುರುವಿನ ಸ್ವರೂಪದಲ್ಲಿ ಸಾಕ್ಷಾತ್ ನಾನೇ ಆಗಿರುವೆನು. ಈ ಜಗತ್ತಿನ ವರ್ಣಾಶ್ರಮಿಗಳಲ್ಲಿ ತನ್ನ ಸದ್ಗುರುವಿನ ಉಪದೇಶದಂತೆ ಅಯಾಸವಿಲ್ಲದೆಯೇ ಭವಸಾಗರವನ್ನು ದಾಟುವವರೇ ತನ್ನ ಸ್ವಾರ್ಥ ಮತ್ತು ಪರಮಾರ್ಥದ ನಿಜವಾದ ಕೋವಿದರಲ್ಲವೇ? ॥ ೩೩ ॥ ಪ್ರಿಯ ಮಿತ್ರನೇ! ನಾನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಂತರ್ಯಾಮಿರೂಪದಿಂದ ಆತ್ಮನಾಗಿ ವಿರಾಜಿಸುತ್ತಿರುವೆನು. ಸದ್ಗುರುವಿನ ಸೇವಾ ಶುಶ್ರೂಷೆಗಳಿಂದ ನಾನು ಸಂತುಷ್ಟನಾಗುವಂತೆ, ಗೃಹಸ್ಥರ ಧರ್ಮವಾದ ಪಂಚಮಹಾಯಜ್ಞಾದಿಗಳನ್ನು ಮಾಡುವುದರಿಂದಾಗಲೀ, ಬ್ರಹ್ಮಚಾರಿಯ ಧರ್ಮವಾದ ವೇದಾಧ್ಯಯನದಿಂದಾಗಲೀ, ವಾನಪ್ರಸ್ಥಾಶ್ರಮದ ಧರ್ಮವಾದ ತಪಸ್ಸಿನಿಂದಾಗಲೀ, ಸಂನ್ಯಾಸಿಗಳ ಧರ್ಮವಾದ ವಿರಕ್ತತೆಯಿಂದಾಗಲೀ ನನಗೆ ತೃಪ್ತಿಯಾಗುವುದಿಲ್ಲ ॥ ೩೪ ॥

ಬ್ರಾಹ್ಮಣೋತ್ತಮನೇ ! ನಾವಿಬ್ಬರೂ ಗುರುಕುಲದಲ್ಲಿದ್ದಾಗ ನಡೆದ ಒಂದು ಪ್ರಸಂಗವು ನಿನಗೆ ನೆನಪಿದೆಯೇ! ಒಂದು ದಿನ ನಮ್ಮಿಬ್ಬರಿಗೂ ಗುರುಪತ್ನೀಯರು ಸೌದೆಯನ್ನು ತರಲು ಕಾಡಿಗೆ ಕಳಿಸಿದ್ದರು. ॥ ೩೫ ॥ ಆಗ ನಾವುಗಳು ನಿಬಿಡವಾದ ಕಾಡೊಂದನ್ನು ಪ್ರವೇಶಿಸಿದೆವು. ಅದು ಮಳೆಗಾಲವಲ್ಲದಿದ್ದರೂ ಭಯಂಕರವಾದ ಬಿರುಗಾಳಿಯೊಂದಿಗೆ ಧಾರಾಕಾರ ಮಳೆಯು ಸುರಿಯತೊಡಗಿತು. ಆಕಾಶದಲ್ಲಿ ಗುಡುಗು-ಸಿಡಿಲುಗಳು ಆರ್ಭಟಿಸುತ್ತಿದ್ದವು. ॥ ೩೬ ॥ ಸೂರ್ಯನಾರಾಯಣನು ಅಸ್ತಮಿಸಿದನು. ಎಲ್ಲೆಡೆ ಗಾಢಾಂಧಕಾರವು ಕವಿಯಿತು. ಅತಿವೃಷ್ಟಿಯಿಂದಾಗಿ ಎಲ್ಲಾ ಕಡೆ ನೀರು ತುಂಬಿಹೋಗಿ ಹಳ್ಳವೆಲ್ಲಿದೆ? ತಿಟ್ಟೆಲ್ಲಿದೆ? ಎಂಬುದೇ ತಿಳಿಯುತ್ತಿರಲಿಲ್ಲ ॥ ೩೭ ॥ ಅದೊಂದು ಸಣ್ಣ ಪ್ರಳಯದಂತೆ ಇತ್ತು. ಬಿರುಗಾಳಿಯ ಮತ್ತು ಮಳೆಯ ನೀರಿನ ಹೊಡೆತದಿಂದ ನಮಗೆ ಅತ್ಯಂತ ಪೀಡೆಯುಂಟಾಗಿ ದಿಕ್ಕುಗಾಣದೆ ಪರಸ್ಪರ ಕೈ ಕೈ ಹಿಡಿದುಕೊಂಡು ಭಯಗೊಂಡವರಾಗಿ ಅರಣ್ಯದಲ್ಲಿ ಅತ್ತ-ಇತ್ತ ಅಲೆಯುತ್ತಿದ್ದೆವು. ॥ ೩೮ ॥ ರಾತ್ರಿಯಲ್ಲಿ ನಾವು ಆಶ್ರಮಕ್ಕೆ ಹಿಂದಿರುಗಲಿಲ್ಲವೆಂದು ತಿಳಿದ ಸಾಂದೀಪನಿಮುನಿಗಳು ಸೂರ್ಯೋದಯವಾಗುತ್ತಲೇ ಶಿಷ್ಯರೊಡನೆ ನಮ್ಮನ್ನು ಹುಡುಕುತ್ತಾ ಬಂದು ಭಯಗೊಂಡಿದ್ದ ನಮ್ಮನ್ನು ನೋಡಿದರು. ॥ ೩೯॥ ಅವರು ಹೇಳಿದರು - ಆಶ್ಚರ್ಯ! ಏನಚ್ಚರಿ! ಮಕ್ಕಳೇ! ನೀವು ನಮ್ಮ ಸಲುವಾಗಿ ಬಹಳವಾಗಿ ಕಷ್ಟಪಡುತ್ತಿರುವಿರಿ. ಎಲ್ಲ ಪ್ರಾಣಿಗಳಿಗೂ ಆವರವರ ಶರೀರವು ಎಲ್ಲಕ್ಕಿಂತ ಹೆಚ್ಚು ಪ್ರಿಯವಾಗಿರುತ್ತದೆ. ಆದರೆ ನೀವಿಬ್ಬರೂ ಅದನ್ನು ಲೆಕ್ಕಿಸದೇ ನಮ್ಮ ಸೇವೆಯಲ್ಲಿ ತತ್ಪರರಾಗಿರುವಿರಿ. ॥ ೪೦ ॥ ಸತ್ ಶಿಷ್ಯರಿಗೆ ವಿಶುದ್ಧಭಾವದಿಂದ ತನ್ನ ಸಮಸ್ತವನ್ನೂ ಮತ್ತು ಶರೀರವನ್ನು ಗುರುಗಳ ಸೇವೆಯಲ್ಲಿ ಸಮರ್ಪಿಸುವುದೇ ಗುರುಗಳ ಋಣದಿಂದ ಮುಕ್ತರಾಗಲು ಇರುವ ಕರ್ತವ್ಯವಾಗಿದೆ. ॥ ೪೧ ॥ ದ್ವಿಜ ಶಿರೋಮಣಿಗಳೇ! ನಾನು ನಿಮ್ಮ ವಿಷಯದಲ್ಲಿ ಸಂತುಷ್ಟನಾಗಿದ್ದೇನೆ. ನಿಮ್ಮ ಸಮಸ್ತ ಮನೋರಥಗಳು ಪೂರ್ಣಗೊಳ್ಳಲಿ. ನೀವುಗಳು ನಮ್ಮಿಂದ ಮಾಡಿರುವ ವೇದಾಧ್ಯಯನವು ನಿಮಗೆ ಸದಾಕಾಲ ಕಂಠಸ್ಥವಾಗಿದ್ದು, ಈ ಲೋಕ-ಪರಲೋಕಗಳಲ್ಲಿ ಎಲ್ಲಿಯೂ ನಿಷ್ಫಲವಾಗದಿರಲಿ. ॥ ೪೨ ॥

ಇತ್ಥಂವಿಧಾನ್ಯನೇಕಾನಿ ವಸತಾಂ ಗುರುವೇಶ್ಮಸು ।
ಗುರೋರನುಗ್ರಹೇಣೈವ ಪುಮಾನ್ಪೂರ್ಣಃ ಪ್ರಶಾಂತಯೇ
॥ ೪೩ ॥

ಪ್ರಿಯಮಿತ್ರನೇ! ನಾವುಗಳು ಗುರುಕುಲದಲ್ಲಿ ವಾಸವಾಗಿದ್ದಾಗ ನಮ್ಮ ಜೀವನದಲ್ಲಿ ಇಂತಹ ಅನೇಕ ಘಟನೆಗಳು ಘಟಿಸಿದ್ದವು. ಸದ್ಗುರುವಿನ ಕೃಪೆಯಿಂದಲೇ ಮನುಷ್ಯನು ಶಾಂತಿಯ ಅಧಿಕಾರಿಯಾಗುತ್ತಾನೆ ಮತ್ತು ಪೂರ್ಣತೆಗೆ ತಲುಪುತ್ತಾನೆ ಇದರಲ್ಲಿ ಸಂದೇಹವೇ ಇಲ್ಲ. ॥ ೪೩ ॥

ಬ್ರಾಹ್ಮಣ ಉವಾಚ

ಕಿಮಸ್ಮಾಭಿರನಿರ್ವೃತ್ತಂ ದೇವದೇವ ಜಗದ್ಗುರೋ ।
ಭವತಾ ಸತ್ಯಕಾಮೇನ ಯೇಷಾಂ ವಾಸೋ ಗುರಾವಭೂತ್
॥ ೪೪ ॥

ಸುದಾಮ ಬ್ರಾಹ್ಮಣನು ಹೇಳಿದನು – ದೇವ ದೇವನಾದ ಜಗದ್ಗುರು ಶ್ರೀಕೃಷ್ಣನೇ! ಸತ್ಯಸಂಕಲ್ಪನಾದ, ಪರಮಾತ್ಮನಾದ ನಿನ್ನೊಡನೆ ಗುರುಕುಲದಲ್ಲಿ ವಾಸಮಾಡುವ ಸೌಭಾಗ್ಯವು ಸಿಕ್ಕಿದ ನನಗೆ ಇನ್ನು ಏನು ತಾನೇ ಮಾಡಲು ಉಳಿದಿದೆ? ಎಲ್ಲ ಕರ್ತವ್ಯಗಳನ್ನು ಮುಗಿಸಿದಂತಾಗಿದೆ. ॥ ೪೪ ॥ ಪ್ರಭುವೇ! ಛಂದೋಮಯವಾದ ವೇದವು ಚತುರ್ವಿಧ ಪುರುಷಾರ್ಥಗಳಿಗೂ ಮೂಲಸ್ರೋತವಾಗಿದೆ ಹಾಗೂ ಅದು ನಿನ್ನ ಶರೀರವೇ ಆಗಿದೆ. ಅಂತಹ ನೀನು ವೇದಾಧ್ಯಯನಕ್ಕಾಗಿ ಗುರುಕುಲದಲ್ಲಿ ವಾಸಿಸುವುದು ಮನುಷ್ಯಲೀಲೆಯ ಅಭಿನಯವಲ್ಲದೆ ಮತ್ತೇನಿದೆ? ॥ ೪೫ ॥

ಯಸ್ಯಚ್ಛಂದೋಮಯಂ ಬ್ರಹ್ಮ ದೇಹ ಆವಪನಂ ವಿಭೋ ।
ಶ್ರೇಯಸಾಂ ತಸ್ಯ ಗುರುಷು ವಾಸೋಽತ್ಯಂತವಿಡಂಬನಮ್
॥ ೪೫ ॥

ಎಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೮೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಶ್ರೀದಾಮಚರಿತೇ ಅಶೀತಿತಮೋಽಧ್ಯಾಯಃ ॥ ೮೦ ॥

ಎಂಭತ್ತೊಂದನೆಯ ಅಧ್ಯಾಯ

ಸುದಾಮನಿಗೆ ಐಶ್ವರ್ಯದ ಪ್ರಾಪ್ತಿ

ಶ್ರೀಶುಕ ಉವಾಚ

ಸ ಇತ್ಥಂ ದ್ವಿಜಮುಖ್ಯೇನ ಸಹ ಸಂಕಥಯನ್ ಹರಿಃ ।
ಸರ್ವಭೂತಮನೋಽಭಿಜ್ಞಃ ಸ್ಮಯಮಾನ ಉವಾಚ ತಮ್
॥ ೧ ॥

ಬ್ರಹ್ಮಣ್ಯೋ ಬ್ರಾಹ್ಮಣಂ ಕೃಷ್ಣೋ ಭಗವಾನ್ಬ್ರಹ್ಮಸನ್ನಿಯಮ್ ।
ಪ್ರೇಮ್ಣಾ ನಿರೀಕ್ಷಣೇನೈವ ಪ್ರೇಕ್ಷನ್ ಖಿಲು ಸತಾಂ ಗತಿಃ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸಮಸ್ತರ ಮನಸ್ಸಿನ ಮಾತನ್ನು ತಿಳಿದಿರುತ್ತಾನೆ. ಅವನು ಬ್ರಾಹ್ಮಣರ ಪರಮಭಕ್ತನಾಗಿದ್ದು, ಅವರ ಕ್ಲೇಶಗಳ ನಾಶಕನೂ, ಸಂತರ ಏಕಮಾತ್ರ ಆಶ್ರಯನೂ ಆಗಿರುವ ಶ್ರೀಕೃಷ್ಣನು ಹಿಂದೆ ಹೇಳಿದಂತೆ ತನ್ನ ಪ್ರಿಯಸಖನೊಂದಿಗೆ ಬಹಳ ಹೊತ್ತಿನವರೆಗೆ ಮಾತನಾಡುತ್ತಾ ಇದ್ದನು. ಅವನು ತನ್ನ ಪ್ರಿಯಸಖನಾದ ಸುದಾಮನನ್ನು ಪ್ರೇಮಪೂರ್ಣವಾದ ದೃಷ್ಟಿಯಿಂದ ನೋಡುತ್ತಾ ಸ್ವಲ್ಪ ಮುಗುಳ್ನಕ್ಕು ವಿನೋದದಿಂದ ಇಂತೆಂದನು. ॥ ೧-೨ ॥

ಶ್ರೀಭಗವಾನುವಾಚ

ಕಿಮುಪಾಯನಮಾನೀತಂ ಬ್ರಹ್ಮನ್ ಮೇ ಭವತಾ ಗೃಹಾತ್ ।
ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್ ।
ಭೂರ್ಯಪ್ಯಭಕ್ತೋಪಹೃತಂ ನ ಮೇ ತೋಷಾಯ ಕಲ್ಪತೇ
॥ ೩ ॥

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ
॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯಸಖನೇ! ನನಗಾಗಿ ನೀನು ಮನೆಯಿಂದ ಯಾವ ಉಪಹಾರವನ್ನು ತಂದಿರುವೆ? ನನ್ನ ಪ್ರಿಯಭಕ್ತರು ಪ್ರೇಮದಿಂದ ಸಣ್ಣದಾದ ವಸ್ತುವನ್ನು ಅರ್ಪಿಸಿದರೂ ನನಗೆ ಅದು ಬಹುದೊಡ್ಡದಾಗಿ ಹೋಗುತ್ತದೆ. ಆದರೆ ಭಕ್ತಿಯಿಲ್ಲದವರು ಬಹಳಷ್ಟು ವಸ್ತುಗಳನ್ನು ಕಾಣಿಕೆಯಾಗಿ ಕೊಟ್ಟರೂ ನಾನು ಅದರಿಂದ ಸಂತುಷ್ಟನಾಗುವುದಿಲ್ಲ. ॥ ೩ ॥ ಭಕ್ತ ಪರವಶನಾಗಿ ಫಲ, ಪುಷ್ಪ, ಪತ್ರೆ, ನೀರು – ಇವುಗಳಲ್ಲಿ ಯಾವುದೇ ವಸ್ತುವನ್ನು ನನಗೆ ಅರ್ಪಿಸುವ ಆ ಶುದ್ಧ ಹೃದಯದ ಭಕ್ತನ ಪ್ರೇಮೋಪಹಾರವನ್ನು ನಾನು ಸ್ವೀಕರಿಸುತ್ತೇನೆ ಮಾತ್ರವಲ್ಲ ಅದನ್ನು ಆದರದಿಂದ ಸೇವಿಸುತ್ತೇನೆ. ॥ ೪ ॥

ಇತ್ಯುಕ್ತೋಽಪಿ ದ್ವಿಜಸ್ತಸ್ಮೈ ವ್ರೀಡಿತಃ ಪತಯೇ ಶ್ರಿಯಃ ।
ಪೃಥುಕಪ್ರಸೃತಿಂ ರಾಜನ್ ನ ಪ್ರಾಯಚ್ಛದವಾಙ್ಮುಖಃ
॥ ೫ ॥

ಸರ್ವಭೂತಾತ್ಮದೃಕ್ ಸಾಕ್ಷಾತ್ ತಸ್ಯಾಗಮನಕಾರಣಮ್ ।
ವಿಜ್ಞಾಯಾಚಿಂತಯನ್ನಾಯಂ ಶ್ರೀಕಾಮೋ ಮಾಭಜತ್ಪುರಾ
॥ ೬ ॥

ಪತ್ನ್ಯಾಃ ಪತಿವ್ರತಾಯಾಸ್ತು ಸಖಾ ಪ್ರಿಯಚಿಕೀರ್ಷಯಾ ।
ಪ್ರಾಪ್ತೋ ಮಾಮಸ್ಯ ದಾಸ್ಯಾಮಿ ಸಂಪದೋಽಮರ್ತ್ಯದುರ್ಲಭಾಃ
॥ ೭ ॥

ಇತ್ಥಂ ವಿಚಿಂತ್ಯ ವಸನಾಚ್ಚೀರಬದ್ಧಾನ್ ದ್ವಿಜನ್ಮನಃ ।
ಸ್ವಯಂ ಜಹಾರ ಕಿಮಿದಮಿತಿ ಪೃಥುಕತಂಡುಲಾನ್
॥ ೮ ॥

ನನ್ವೇತದುಪನೀತಂ ಮೇ ಪರಮಪ್ರೀಣನಂ ಸಖೇ ।
ತರ್ಪಯಂತ್ಯಂಗ ಮಾಂ ವಿಶ್ವಮೇತೇ ಪೃಥುಕತಂಡುಲಾಃ
॥ ೯ ॥

ಇತಿ ಮುಷ್ಟಿಂ ಸಕೃಜ್ಜಗ್ಧ್ವಾ ದ್ವಿತೀಯಾಂ ಜಗ್ಧುಮಾದದೇ ।
ತಾವಚ್ಛ್ರೀರ್ಜಗೃಹೇ ಹಸ್ತಂ ತತ್ಪರಾ ಪರಮೇಷ್ಠಿನಃ
॥ ೧೦ ॥

ಏತಾವತಾಲಂ ವಿಶ್ವಾತ್ಮನ್ಸರ್ವಸಂಪತ್ಸಮೃದ್ಧಯೇ ।
ಅಸ್ಮಿನ್ಲೋಕೇಽಥವಾಮುಷ್ಮಿನ್ಪುಂಸಸ್ತ್ವತ್ತೋಷಕಾರಣಮ್
॥ ೧೧ ॥

ಬ್ರಾಹ್ಮಣಸ್ತಾಂ ತು ರಜನೀಮುಷಿತ್ವಾಚ್ಯುತಮಂದಿರೇ ।
ಭುಕ್ತ್ವಾಪೀತ್ವಾಸುಖಂ ಮೇನೇ ಆತ್ಮಾನಂ ಸ್ವರ್ಗತಂ ಯಥಾ
॥ ೧೨ ॥

ಶ್ವೋಭೂತೇ ವಿಶ್ವಭಾವೇನ ಸ್ವಸುಖೇನಾಭಿವಂದಿತಃ ।
ಜಗಾಮ ಸ್ವಾಲಯಂ ತಾತ ಪಥ್ಯನುವ್ರಜ್ಯ ನಂದಿತಃ
॥ ೧೩ ॥

ಸ ಚಾಲಬ್ಧ್ವಾ ಧನಂ ಕೃಷ್ಣಾನ್ನ ತು ಯಾಚಿತವಾನ್ ಸ್ವಯಮ್ ।
ಸ್ವಗೃಹಾನ್ ವ್ರೀಡಿತೋಽಗಚ್ಛನ್ಮಹದ್ದರ್ಶನನಿರ್ವೃತಃ
॥ ೧೪ ॥

ಅಹೋ ಬ್ರಹ್ಮಣ್ಯದೇವಸ್ಯ ದೃಷ್ಟಾ ಬ್ರಹ್ಮಣ್ಯತಾ ಮಯಾ ।
ಯದ್ದರಿದ್ರತಮೋ ಲಕ್ಷ್ಮೀಮಾಶ್ಲಿಷ್ಟೋ ಬಿಭ್ರತೋರಸಿ
॥ ೧೫ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದ್ದರೂ ಆ ಬ್ರಾಹ್ಮಣನು ನಾಚಿಕೆಯಿಂದಾಗಿ ಶ್ರೀಯಃಪತಿಯಾದ ತನ್ನ ಮಿತ್ರನಿಗೆ ನಾಲ್ಕು ಮುಷ್ಟಿ ಅವಲಕ್ಕಿಯನ್ನು ಕೊಡಲಿಲ್ಲ. ಸಂಕೋಚದಿಂದ ತಲೆತಗ್ಗಿಸಿ ಕುಳಿತುಬಿಟ್ಟನು. ಪರೀಕ್ಷಿತ! ಶ್ರೀಕೃಷ್ಣನು ಸಮಸ್ತ ಪ್ರಾಣಿಗಳ ಮನಸ್ಸಿನಲ್ಲಿ ಏನಿರುವುದೆಂಬುದನ್ನು ಸಾಕ್ಷಾತ್ತಾಗಿ ಕಾಣುವ ಸಾಮರ್ಥ್ಯವನ್ನು ಹೊಂದಿದವನು. ಸುದಾಮನ ಆಗಮನದ ಕಾರಣವನ್ನು ತಿಳಿದುಕೊಂಡನು, ಅವಹ ಹೃದಯದ ಮಾತೂ ಅರ್ಥವಾಗಿತ್ತು. 'ಇವನಾದರೋ ನನ್ನ ಪ್ರಿಯಮಿತ್ರನಾಗಿರುವನು. ಅಲ್ಲದೆ ಇವನು ಎಂದಿಗೂ ಶ್ರೀಕಾಮನಾಗಿ ನನ್ನನು ಭಜಿಸಲಿಲ್ಲ. ಈ ಸಮಯದಲ್ಲಿ ತನ್ನ ಪತಿವ್ರತೆಯಾದ ಪತ್ನಿಯ ಮನಃಸಂತೋಷಕ್ಕಾಗಿ, ಆಕೆಯ ಆಗ್ರಹದಿಂದ ಇಲ್ಲಿಗೆ ಬಂದಿರುವನು. ಈಗ ನಾನು ಇವನಿಗೆ ದೇವತೆಗಳಿಗೂ ಅತ್ಯಂತ ದುರ್ಲಭವಾದ ಸಂಪತ್ತನ್ನು ಅನುಗ್ರಹಿಸುವೆನು' ಎಂದು ಯೋಚಿಸಿದನು. ॥ ೫-೭ ॥ ಭಗವಾನ್ ಶ್ರೀಕೃಷ್ಣನು ಹೀಗೆ ವಿಚಾರಮಾಡಿ ಅವನ ಕಂಕುಳಲ್ಲಿದ್ದ ಅವಲಕ್ಕಿಯ ಬಟ್ಟೆ ಗಂಟನ್ನು 'ಇದೇನಿದು?' ಎಂದು ಹೇಳುತ್ತಾ ಕಸಿದು ಕೊಂಡನು. ॥ ೮ ॥ ಪ್ರಿಯ ಮಿತ್ರನೇ! ನಾನಾದರೋ ನನಗೆ ಅತ್ಯಂತ ಪ್ರಿಯವಾದ ತಿಂಡಿಯನ್ನೇ ತಂದಿರುವೆಯಲ್ಲ! ಸುದಾಮಾ! ಈ ಅವಲಕ್ಕಿಯು ಕೇವಲ ನನ್ನನ್ನೇ ಅಲ್ಲ ಇಡೀ ಪ್ರಪಂಚವನ್ನೇ ತೃಪ್ತಿ ಪಡಿಸಲು ಸಾಕಾಗುವಷ್ಟಿದೆ ಎಂದು ಅತ್ಯಾದರದಿಂದ ನುಡಿದನು. ॥ ೯ ॥ ಹೀಗೆ ಹೇಳಿ ಶ್ರೀಕೃಷ್ಣನು ಆದರಲ್ಲಿ ಒಂದು ಮುಷ್ಟಿ ಅವಲಕ್ಕಿಯನ್ನು ತೆಗೆದು ತಿಂದುಬಿಟ್ಟನು ಮತ್ತು ಇನ್ನೊಂದು ಮುಷ್ಟಿಯನ್ನು ಎತ್ತಿಕೊಂಡಾಗ ಸಾಕ್ಷಾತ್ ಲಕ್ಷ್ಮೀದೇವಿಯಾದ ರುಕ್ಮಿಣೀಯು ಭಗವಾನ್ ಶ್ರೀಕೃಷ್ಣನ ಕೈಯನ್ನು ಹಿಡಿದುಕೊಂಡಳು. ಏಕೆಂದರೆ, ಆಕೆಯು ಏಕಮಾತ್ರ ಭಗವಂತನಲ್ಲೇ ಪರಾಯಣಳಾಗಿದ್ದಳು. ಅವನನ್ನು ಬಿಟ್ಟು ಬೇರೆಲ್ಲಿಗೂ ಹೋಗಲಾರಳು. ॥ ೧೦ ॥ ರುಕ್ಮಿಣಿಯು ಹೇಳಿದಳು - ವಿಶ್ವಾತ್ಮನೇ! ಸಾಕು, ಸಾಕು! ಮನುಷ್ಯನಿಗೆ ಈ ಲೋಕದಲ್ಲಿ ಹಾಗೂ ಪರಲೋಕದಲ್ಲಿ ಸಮಸ್ತ ಸಂಪತ್ಸಮೃದ್ಧಿಯನ್ನು ಹೊಂದಲು ನೀನು ತಿಂದಿರುವ ಈ ಒಂದು ಮುಷ್ಟಿ ಅವಲಕ್ಕಿಯೇ ಹೆಚ್ಚಾಗಿದೆ. ಏಕೆಂದರೆ, ಇಷ್ಟರಿಂದಲೇ ನೀನು ಸಂತುಷ್ಟನಾಗಿರುವೆ. ॥ ೧೧ ॥

ಪರೀಕ್ಷಿತನೇ! ಸುದಾಮನು ಅಂದಿನ ಇರುಳನ್ನು ಭಗವಾನ್ ಶ್ರೀಕೃಷ್ಣನ ಅರಮನೆಯಲ್ಲೇ ಕಳೆದನು. ಆದರ ಪೂರ್ವಕವಾಗಿ ಶ್ರೀಕೃಷ್ಣನಿತ್ತ ಮೃಷ್ಟಾನ್ನವನ್ನು ತಿಂದು, ಪಾನೀಯಗಳನ್ನು ಕುಡಿದು, ನಾನು ವೈಕುಂಠವನ್ನೇ ಸೇರಿರುವೆನೋ ಎಂಬಂತೆ ಅನುಭವಿಸಿದನು. ॥ ೧೨ ॥ ಪರೀಕ್ಷಿತನೇ! ಶ್ರೀಕೃಷ್ಣನಿಂದ ಸುದಾಮನಿಗೆ ಪ್ರತ್ಯಕ್ಷವಾಗಿ ಏನೂ ಸಿಗದಿದ್ದರೂ ಅವನು ಮಿತ್ರನಲ್ಲಿ ಏನನ್ನೂ ಬೇಡಲಿಲ್ಲ. ಅವನು ತನ್ನ ಚಿತ್ತದ ಕಾರ್ಯದ ಬಗ್ಗೆ ಸ್ವಲ್ಪ ಲಜ್ಜಿತನಾಗಿ ಭಗವಂತನ ದರ್ಶನದಿಂದ ಉಂಟಾದ ಆನಂದಾಂಬುಧಿಯಲ್ಲಿ ಮುಳುಗಿ, ತೇಲುತ್ತಾ ತನ್ನ ಮನೆಯ ಕಡೆಗೆ ಹೊರಟನು. ॥ ೧೩-೧೪ ॥ ಅವನು ಮನಸ್ಸಿನಲ್ಲೇ ಯೋಚಿಸತೊಡಗಿದನು - ಆಹಾ! ಎಂತಹ ಆನಂದದ ಮತ್ತು ಆಶ್ಚರ್ಯದ ಮಾತಾಗಿದೆ! ಬ್ರಾಹ್ಮಣರನ್ನು ತನ್ನ ಇಷ್ಟದೇವರೆಂದು ತಿಳಿಯುವ ಭಗವಾನ್ ಶ್ರೀಕೃಷ್ಣನ ಬ್ರಾಹ್ಮಣ ಭಕ್ತಿಯನ್ನು ಇಂದು ನಾನು ಕಣ್ಣಾರೆ ಕಂಡೆನು. ಧನ್ಯ, ಧನ್ಯನಿವನು! ವಕ್ಷಸ್ಥಳದಲ್ಲಿ ಸಾಕ್ಷಾತ್ ಲಕ್ಷ್ಮೀದೇವಿಯನ್ನು ಧರಿಸಿದ್ದ ಶ್ರೀಕೃಷ್ಣನು ನನ್ನಂತಹ ಕಡುಬಡವನನ್ನು ಆಲಿಂಗಿಸಿಕೊಂಡುಬಿಟ್ಟನಲ್ಲ! ॥ ೧೫ ॥

ಕ್ವಾಹಂ ದರಿದ್ರಃ ಪಾಪೀಯಾನ್ ಕ್ವ ಕೃಷ್ಣಃ ಶ್ರೀನಿಕೇತನಃ ।
ಬ್ರಹ್ಮಬಂಧುರಿತಿ ಸ್ಮಾಹಂ ಬಾಹುಭ್ಯಾಂ ಪರಿರಂಭಿತಃ
॥ ೧೬ ॥

ನಿವಾಸಿತಃ ಪ್ರಿಯಾಜುಷ್ಟೇ ಪರ್ಯಂಕೇ ಭ್ರಾತರೋ ಯಥಾ ।
ಮಹಿಷ್ಯಾ ವೀಜಿತಃ ಶ್ರಾಂತೋ ವಾಲವ್ಯಜನಹಸ್ತಯಾ
॥ ೧೭ ॥

ಶುಶ್ರೂಷಯಾ ಪರಮಯಾ ಪಾದಸಂವಾಹನಾದಿಭಿಃ ।
ಪೂಜಿತೋ ದೇವದೇವೇನ ವಿಪ್ರದೇವೇನ ದೇವವತ್
॥ ೧೮ ॥

ಸ್ವರ್ಗಾಪವರ್ಗಯೋಃ ಪುಂಸಾಂ ರಸಾಯಾಂ ಭುವಿ ಸಂಪದಾಮ್ ।
ಸರ್ವಾಸಾಮಪಿ ಸಿದ್ಧೀನಾಂ ಮೂಲಂ ತಚ್ಚರಣಾರ್ಚನಮ್
॥ ೧೯ ॥

ಅಧನೋಽಯಂ ಧನಂ ಪ್ರಾಪ್ಯ ಮಾದ್ಯನ್ನುಚ್ಚೈರ್ನ ಮಾಂ ಸ್ಮರೇತ್ ।
ಇತಿ ಕಾರುಣಿಕೋ ನೂನಂ ಧನಂ ಮೇಽಭೂರಿ ನಾದದಾತ್
॥ ೨೦ ॥

ಇತಿ ತಚ್ಚಿಂತಯನ್ನಂತಃ ಪ್ರಾಪ್ತೋ ನಿಜಗೃಹಾಂತಿಕಮ್ ।
ಸೂರ್ಯಾನಲೇಂದು ಸಂಕಾಶೈರ್ವಿಮಾನೈಃ ಸರ್ವತೋ ವೃತಮ್
॥ ೨೧ ॥

ವಿಚಿತ್ರೋಪವನೋದ್ಯಾನೈಃ ಕೂಜದ್ದ್ವಿಜಕುಲಾಕುಲೈಃ ।
ಪ್ರೋತ್ಫುಲ್ಲಕುಮುದಾಂಭೋಜಕಹ್ಲಾರೋತ್ಪಲವಾರಿಭಿಃ
॥ ೨೨ ॥

ಜುಷ್ಟಂ ಸ್ವಲಂಕೃತೈಃ ಪುಂಭಿಃ ಸ್ತ್ರೀಭಿಶ್ಚ ಹರಿಣಾಕ್ಷಿಭಿಃ ।
ಕಿಮಿದಂ ಕಸ್ಯ ವಾ ಸ್ಥಾನಂ ಕಥಂ ತದಿದಮಿತ್ಯಭೂತ್
॥ ೨೩ ॥

ಏವಂ ಮೀಮಾಂಸಮಾನಂ ತಂ ನರಾ ನಾರ್ಯೋಽಮರಪ್ರಭಾಃ ।
ಪ್ರತ್ಯಗೃಹ್ಣನ್ಮಹಾಭಾಗಂ ಗೀತವಾದ್ಯೇನ ಭೂಯಸಾ
॥ ೨೪ ॥

ಪತಿಮಾಗತಮಾಕರ್ಣ್ಯ ಪತ್ನ್ಯುದ್ಧರ್ಷಾತಿಸಂಭ್ರಮಾ ।
ನಿಷ್ಕ್ರಾಮ ಗೃಹಾತ್ತೂರ್ಣಂ ರೂಪಿಣೀ ಶ್ರೀರಿವಾಲಯಾತ್
॥ ೨೫ ॥

ಅತ್ಯಂತ ಪಾಪಿಯೂ, ದರಿದ್ರನೂ ಆದ ನಾನೆಲ್ಲಿ! ಲಕ್ಷ್ಮೀದೇವಿಯ ಏಕಮಾತ್ರ ಆಶ್ರಯನಾದ ಭಗವಾನ್ ಶ್ರೀಕೃಷ್ಣನೆಲ್ಲಿ! ಆದರೂ ಅವನು 'ಇವನು ಬ್ರಾಹ್ಮಣ' ಎಂದು ಭಾವಿಸಿ ನನ್ನನ್ನು ತನ್ನ ನಳತೋಳುಗಳಿಂದ ಅಪ್ಪಿಕೊಂಡನು. ॥ ೧೬ ॥ ಇಷ್ಟೇ ಅಲ್ಲ ತನ್ನ ಪ್ರಾಣಪ್ರಿಯಳಾದ ರುಕ್ಮಿಣೀ ದೇವಿಯು ಮಲಗುವ ಶ್ರೇಷ್ಠವಾದ ಮಂಚದಲ್ಲಿ ತನ್ನ ನಿಜ ಸಹೋದರನಂತೆ ನನ್ನನ್ನು ಮಲಗಿಸಿದನು. ಪರ್ಯಂಕದಲ್ಲಿ ಎಷ್ಟೊಂದು ಹೇಳಲೀ ! ಬಳಲಿದ್ದ ನನಗೆ ಸಾಕ್ಷಾತ್ ಅವನ ಪಟ್ಟದರಸಿಯಾದ ರುಕ್ಮಿಣಿಯೇ ತನ್ನ ಕೈಯಾರೆ ಚಾಮರಬೀಸಿ ನನ್ನ ಸೇವೆಮಾಡಿದಳು. ॥ ೧೭ ॥ ಆಹಾ ! ದೇವತೆಗಳಿಗೆ ಆರಾಧ್ಯನಾಗಿದ್ದರೂ ಬ್ರಾಹ್ಮಣರನ್ನು ತನ್ನ ಇಷ್ಟದೇವರೆಂದು ಭಾವಿಸಿರುವ ಪ್ರಭುವು ನನ್ನ ಕಾಲನ್ನೊತ್ತಿ, ತನ್ನ ಕೈಯಿಂದ ಊಟೋಪಚಾರ ಮಾಡಿಸಿ ಅತ್ಯಂತ ಆದರದಿಂದ ದೇವತೆಯಂತೆ ಪೂಜಿಸಿ ಸೇವೆ ಮಾಡಿದನು. ॥ ೧೮ ॥ ಸ್ವರ್ಗ, ಮೋಕ್ಷ ಪೃಥಿವಿ ಮತ್ತು ರಸಾತಲದ ಸಮಸ್ತ ಸಂಪತ್ತು ಹಾಗೂ ಸಮಸ್ತ ಯೋಗ ಸಿದ್ಧಿಗಳ ಪ್ರಾಪ್ತಿಯ ಮೂಲಸಾಧನೆ ಶ್ರೀಕೃಷ್ಣನ ಚರಣ ಕಮಲಗಳ ಪೂಜೆಯೇ ಆಗಿದೆ. ॥ ೧೯ ॥ ಹೀಗಿದ್ದರೂ ಪರಮ ದಯಾಳುವಾದ ಶ್ರೀಕೃಷ್ಣನು – ಎಲ್ಲಾದರೂ ಈ ದರಿದ್ರನು ಧನವನ್ನು ಪಡೆದು ಧನಮದದಿಂದ ತನ್ನನ್ನು ಮರೆಯದಿರಲಿ ಎಂದು ಭಾವಿಸಿಯೇ ನನಗೆ ಸ್ವಲ್ಪವೂ ಧನವನ್ನು ಕೊಡಲಿಲ್ಲ. ॥ ೨೦ ॥

ಸುದಾಮನು ಹೀಗೆ ಆನಂದ ಮಗ್ನನಾಗಿ ಯೋಚಿಸುತ್ತಾ ಶ್ರೀಕೃಷ್ಣನ ಆತಿಥ್ಯವನ್ನು ಬಾರಿ-ಬಾರಿಗೂ ಸ್ಮರಿಸುತ್ತಾ ತನ್ನ ಮನೆಯ ಬಳಿಗೆ ಬಂದನು. ಅಲ್ಲಿ ತಾನು ಹಿಂದೆ ವಾಸವಾಗಿದ್ದ ಜೋಪಡಿಯು ಕಾಣಿಸಲೇ ಇಲ್ಲ. ಸೂರ್ಯಾಗ್ನಿ-ಚಂದ್ರರ ತೇಜಸ್ಸಿಗೆ ಸಮಾನವಾದ ತೇಜಸ್ಸಿನ ರತ್ನಗಳಿಂದ ನಿರ್ಮಿತವಾದ ಗೋಪುರಗಳಿಂದ ಆ ಸ್ಥಳವು ಸಮಾವೃತವಾಗಿತ್ತು. ಆ ಅರಮನೆಯ ಸುತ್ತಲೂ ಉಪವನಗಳೂ, ಉದ್ಯಾನಗಳೂ ಕಂಗೊಳಿಸುತ್ತಿದ್ದು, ಅಲ್ಲಿದ್ದ ಮರಗಳ ಮೇಲೆ ವಿಧ-ವಿಧವಾದ ಬಣ್ಣದ ಪಕ್ಷಿಗಳು ಗುಂಪು-ಗುಂಪಾಗಿ ಚಿಲಿ-ಪಿಲಿ ಗುಟ್ಟುತ್ತಿದ್ದವು. ಆ ಉದ್ಯಾನಗಳಲ್ಲಿನ ಸರೋವರಗಳಲ್ಲಿ ಅರಳಿದ ಕನ್ನೈದಿಲೆ, ತಾವರೆ, ಕೆಂದಾವರೆಗಳೂ ಇದ್ದು ಅವು ಅತ್ಯಂತ ಶೋಭಾಯಮಾನವಾಗಿದ್ದವು. ಹರಿಣಾಕ್ಷಿಯರೂ, ಪುರುಷ ಸಿಂಹರೂ ಸುಂದರವಾದ ವಸ್ತ್ರಾಭರಣಗಳಿಂದ ಸಮಲಂಕೃತರಾಗಿ ಅಲ್ಲಲ್ಲಿ ಓಡುತ್ತಿದ್ದರು. ಆ ಸ್ಥಾನವನ್ನು ನೋಡಿ ಸುದಾಮನು ಇದೇನಿದು ? ಇದು ಯಾರ ನಿವಾಸ ? ನಾನಿದ್ದ ಮನೆಯೇ ಇದಾಗಿದ್ದರೆ ಇದು ಹೇಗಾಯಿತು ? ಹೀಗೆ ಪರಿ-ಪರಿಯಾಗಿ ಯೋಚಿಸಿದನು. ॥೨೧-೨೩. ॥ ಹೀಗೆ ಚಿಂತಿಸುತ್ತಿರುವಾಗಲೇ ಅಲ್ಲಿದ್ದ ದೇವತೆಗಳಂತೆಯೇ ಪ್ರಕಾಶಮಾನರಾಗಿದ್ದ ನರ-ನಾರಿಯರು ಮಂಗಳ ಗೀತ-ವಾದ್ಯಗಳೊಂದಿಗೆ ಬಂದು ಮಹಾಭಾಗ್ಯಶಾಲಿ ಯಾದ ಸುದಾಮನನ್ನು ಸ್ವಾಗತಿಸಿದರು. ॥ ೨೪ ॥ ಪತಿದೇವನ ಆಗಮನದಿಂದ ಸುದಾಮನ ಪತ್ನಿಗೆ ಪರಮಾನಂದವಾಯಿತು. ಆಕೆಯು ಪತಿಯನ್ನು ಸ್ವಾಗತಿಸಲು ಸಂಭ್ರಮದಿಂದಲೂ, ಲಗು-ಬಗೆಯಿಂದಲೂ ಮೇಲೆದ್ದು ಹೊರಗೆ ಬಂದಳು. ಆವಳಾಗ ಕಮಲ ವನದಿಂದ ಆಗಮಿಸಿದ್ದ ಸಾಕ್ಷಾತ್ ಲಕ್ಷ್ಮೀದೇವಿಯಂತೆ ಕಾಣುತ್ತಿದ್ದಳು. ॥ ೨೫ ॥

ಪತಿವ್ರತಾ ಪತಿಂ ದೃಷ್ಟ್ವಾಪ್ರೇಮೋತ್ಕಂಠಾಶ್ರುಲೋಚನಾ ।
ಮೀಲಿತಾಕ್ಷ್ಯನಮದ್ಬುದ್ಧ್ಯಾ ಮನಸಾ ಪರಿಷಸ್ವಜೇ
॥ ೨೬ ॥

ಪತಿದೇವನನ್ನು ನೋಡುತ್ತಲೇ ಪ್ರೇಮದ ಔತ್ಸುಕ್ಯದಿಂದ ಆಕೆಯ ಕಣ್ಣುಗಳಲ್ಲಿ ಆನಂದಬಾಷ್ಪಗಳು ಚಿಮ್ಮಿದುವು. ಕಣ್ಣುಗಳನ್ನು ಮುಚ್ಚಿ ಕೊಂಡು ಆಕೆಯು ಪತಿದೇವನಿಗೆ ನಮಸ್ಕರಿಸಿ, ಮನಸ್ಸಿನಿಂದಲೇ ಅವನನ್ನು ಆಲಿಂಗಿಸಿಕೊಂಡಳು. ॥ ೨೬ ॥

ಪತ್ನೀಂ ವೀಕ್ಷ್ಯ ವಿಸ್ಫುರಂತೀಂ ದೇವೀಂ ವೈಮಾನಿಕೀಮಿವ ।
ದಾಸೀನಾಂ ನಿಷ್ಕಕಂಠೀನಾಂ ಮಧ್ಯೇ ಭಾಂತೀಂ ಸ ವಿಸ್ಮಿತಃ
॥ ೨೭ ॥

ಪ್ರಿಯ ಪರೀಕ್ಷಿತನೇ! ಬ್ರಾಹ್ಮಣನ ಪತ್ನಿಯು ಚಿನ್ನದ ಹಾರ ಗಳನ್ನು ಧರಿಸಿದ್ದ ಸೇವಕಿಯರ ಮಧ್ಯದಲ್ಲಿ ವಿಮಾನಸ್ಥಳಾದ ದೇವಾಂಗನೆಯಂತೆಯೆ ಅತ್ಯಂತ ಶೋಭಾಯಮಾನಳಾಗಿ ಕಾಣು ತ್ತಿದ್ದಳು. ಆಕೆಯನ್ನು ಈ ರೂಪದಲ್ಲಿ ನೋಡಿದ ಸುದಾಮನು ವಿಸ್ಮಿತನಾದನು. ॥ ೨೭ ॥

ಪ್ರೀತಃ ಸ್ವಯಂ ತಯಾ ಯುಕ್ತಃ ಪ್ರವಿಷ್ಟೋ ನಿಜಮಂದಿರಮ್ ।
ಮಣಿಸ್ತಂಭಶತೋಪೇತಂ ಮಹೇಂದ್ರಭವನಂ ಯಥಾ
॥ ೨೮ ॥

ಆಕೆಯನ್ನು ಪರಮ ಪ್ರೀತನಾಗಿ ಪ್ರವೇಶಿಸಿದನು. ॥ ೨೮ ॥ ಆಲ್ಲಿ ಹಸ್ತಿದಂತಗಳಿಂದ ನಿರ್ಮಿತವಾಗಿದ್ದ ಸ್ವರ್ಣ ಖಚಿತವಾದ ಮಂಚ ಗಳಲ್ಲಿ ಹಾಲಿನ ನೊರೆಯಂತಿದ್ದ ಬಿಳಿಯ ಹಂಸತೂಲಿಕಾ ತಲ್ಪಗಳು ಹಾಸಿದ್ದವು. ಚಿನ್ನದ ಹಿಡಿಗಳಿದ್ದ ಛತ್ರ-ಚಾಮರಗಳು ಅಲ್ಲಿ ಇಡಲ್ಪಟ್ಟಿದ್ದವು. ॥ ೨೯॥ ಸ್ವರ್ಣ ಸಿಂಹಾಸನದಲ್ಲಿ ಮೃದುವಾದ ಮೆತ್ತೆಗಳು, ಮೇಲ್ಭಾಗದಲ್ಲಿ ತೂಗುಹಾಕಿದ್ದ ಮುತ್ತಿನ ಗೊಂಚಲು ಗಳಿಂದ ಅಲಂಕೃತವಾದ ಮೇಲ್ಕಟ್ಟುಗಳೂ ಇದ್ದವು. ॥ ೩೦ ॥ ಆ ಆರಮನೆಯಲ್ಲಿ ಸ್ವಚ್ಛವಾದ ಸ್ಫಟಿಕದ ಗೋಡೆಗಳು ಮರಕತ ಮಣಿಗಳಿಂದ ಚಿತ್ರಿತವಾಗಿದ್ದವು. ರತ್ನನಿರ್ಮಿತವಾದ ಸ್ತ್ರೀವಿಗ್ರಹಗಳ ಕೈಗಳಲ್ಲಿ ರತ್ನಮಣಿ ದೀಪಗಳು ಬೆಳಗುತ್ತಿದ್ದವು. ॥ ೩೧ ॥ ಹೀಗೆ ಸಮಸ್ತ ಸಂಪತ್ತುಗಳ ಸಮೃದ್ಧಿಯನ್ನು ನೋಡಿ, ಅದರ ಪ್ರತ್ಯಕ್ಷವಾದ ಯಾವ ಕಾರಣವನ್ನು ಕಾಣದೆ ಬ್ರಾಹ್ಮಣ ಸುದಾಮನು – ನನ್ನ ಬಳಿ ಇಷ್ಟೊಂದು ಸಂಪತ್ತು ಹೇಗೆ ಬಂತು? ಎಂದು ಗಹನವಾಗಿ ಯೋಚಿಸತೊಡಗಿದನು. ॥ ೩೨ ॥ ನಾನು ಹುಟ್ಟಿನಿಂದಲೇ ಭಾಗ್ಯ ಹೀನನಾದ ದರಿದ್ರನು. ಹೀಗಿದ್ದರೂ ನನ್ನ ಸಂಪತ್ತಿನ ಸಮೃದ್ಧತೆಗೆ ಕಾರಣವೇನಿರಬಹುದು ಎಂದು ಮನಸ್ಸಿನಲ್ಲೆ ಅಂದುಕೊಂಡನು. ಪರಮೈಶ್ವರ್ಯಶಾಲಿಯಾದ ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಕೃಪಾಕಟಾಕ್ಷವಲ್ಲದೆ ಬೇರೆ ಯಾವ ಕಾರಣವೂ ಖಂಡಿತ ವಾಗಿಯೂ ಇರಲಾರದು. ॥ ೩೩. ॥ ಇದೆಲ್ಲವೂ ಅವನ ಕರುಣಾ ಪ್ರಸಾದವೇ ಆಗಿದೆ. ಸಾಕ್ಷಾತ್ ಭಗವಾನ್ ಶ್ರೀಕೃಷ್ಣನು ಪೂರ್ಣ ಕಾಮನೂ, ಲಕ್ಷ್ಮೀಪತಿಯೂ ಆಗಿರುವುದರಿಂದಲೇ ಅನಂತ ಭೋಗ ಸಾಮಗ್ರಿಗಳಿಂದ ಕೂಡಿರುವನು. ಅದಕ್ಕಾಗಿ ಅವನು ಬೇಡುವ ಭಕ್ತನಿಗೆ ಅವನ ಮನಸ್ಸಿನ ಭಾವವನ್ನರಿತು ಬಹಳಷ್ಟು ಕೊಡುತ್ತಾನೆ; ಆದರೆ ಕೊಟ್ಟಿದ್ದು ಸ್ವಲ್ಪವೇ ಎಂದು ಭಾವಿಸಿ ಮುಂದುಗಡೆ ಏನನ್ನೂ ಆಡುವುದಿಲ್ಲ. ನನ್ನ ಮಿತ್ರನಾದ ಯದುವಂಶಭೂಷಣ ಶ್ಯಾಮ ಸುಂದರನು ನಿಜವಾಗಿ – ಸಮುದ್ರವನ್ನೇ ತುಂಬುವ ಸಾಮರ್ಥ್ಯ ವಿದ್ದರೂ ಮೇಘಗಳು ರೈತನಿಗೆ ಕಾಣಿಸದೆ ಅವನು ಮಲಗಿದಾಗ ರಾತ್ರಿಯಲ್ಲ ಮಳೆಸುರಿಸಿದರೂ ನಾನು ಸ್ವಲ್ಪವೇ ಕೊಟ್ಟಿರುವೆನು ಎಂದುತಿಳಿಯುವಂತೆ, ಆ ಮೇಘಗಳಿಂದಲೂ ಮಿಗಿಲಾದ ಉದಾರನಾಗಿದ್ದಾನೆ. ॥ ೩೪ ॥

ಪಯಃಫೇನನಿಭಾಃ ಶಯ್ಯಾ ದಾಂತಾ ರುಕ್ಮಪರಿಚ್ಛದಾಃ ।
ಪರ್ಯಂಕಾ ಹೇಮದಂಡಾನಿ ಚಾಮರವ್ಯಜನಾನಿ ಚ
॥ ೨೯ ॥

ಅಸನಾನಿ ಚ ಹೈಮಾನಿ ಮೃದೂಪಸ್ತರಣಾನಿ ಚ ।
ಮುಕ್ತಾದಾಮವಿಲಂಬೀನಿ ವಿತಾನಾನಿ ದ್ಯುಮಂತಿ ಚ
॥ ೩೦ ॥

ಸ್ವಚ್ಛಸ್ಫಟಿಕಕುಡ್ಯೇಷು ಮಹಾಮಾರಕತೇಷು ಚ ।
ರತ್ನದೀಪಾ ಭ್ರಾಜಮಾನಾ ಲಲನಾರತ್ನ ಸಂಯುತಾಃ
॥ ೩೧ ॥

ವಿಲೋಕ್ಯ ಬ್ರಾಹ್ಮಣಸ್ತತ್ರ ಸಮೃದ್ಧೀಃ ಸರ್ವಸಂಪದಾಮ್ ।
ತರ್ಕಯಾಮಾಸ ನಿರ್ವ್ಯಗ್ರಃ ಸ್ವಸಮೃದ್ಧಿಮಹೈತುಕೀಮ್
॥ ೩೨ ॥

ನೂನಂ ಬತೈತನ್ಮಮ ದುರ್ಭಗಸ್ಯ
ಶಶ್ವದ್ದರಿದ್ರಸ್ಯ ಸಮೃದ್ಧಿಹೇತುಃ ।
ಮಹಾವಿಭೂತೇರವಲೋಕತೋಽನ್ಯೋ
ನೈವೋಪಪದ್ಯೇತ ಯದೂತ್ತಮಸ್ಯ ॥ ೩೩ ॥

ನನ್ವಬ್ರುವಾಣೋ ದಿಶತೇ ಸಮಕ್ಷಂ
ಯಾಚಿಷ್ಣವೇ ಭೂರ್ಯಪಿ ಭೂರಿಭೋಜಃ ।
ಪರ್ಜನ್ಯವತ್ತತ್ತ್ವಯಮೀಕ್ಷಮಾಣೋ
ದಾಶಾರ್ಹಕಾಣಾಮೃಷಭಃ ಸಖಾ ಮೇ ॥ ೩೪ ॥

ಕಿಂಚಿತ್ಕರೋತ್ಯುರ್ವಪಿ ಯತ್ಸ್ವದತ್ತಂ
ಸುಹೃತ್ಕೃತಂ ಫಲ್ಗ್ವಪಿ ಭೂರಿಕಾರೀ ।
ಮಯೋಪನೀತಾಂ ಪೃಥುಕೈಕಮುಷ್ಟಿಂ
ಪ್ರತ್ಯಗ್ರಹೀತ್ ಪ್ರೀತಿಯುತೋ ಮಹಾತ್ಮಾ ॥ ೩೫ ॥

ನನ್ನ ಪ್ರಿಯ ಸಖಿನಾದ ಶ್ರೀಕೃಷ್ಣನು ಅನಂತವಾಗಿ ಕರುಣಿಸಿದರೂ ಅಲ್ಪವೆಂದೇ ಭಾವಿಸುವನು. ಅವನ ಪ್ರೇಮಿಭಕ್ತರು ಅವನಿಗಾಗಿ ಏನಾದರೂ ಕಿಂಚಿತ್ ಕೊಟ್ಟರೂ ಅವನು ಅಪಾರವೆಂದು ಭಾವಿಸಿಕೊಳ್ಳುತ್ತಾನೆ. ನಾನು ಅವನಿಗೆ ಕೇವಲ ಒಂದು ಹಿಡಿ ಅವಲಕ್ಕಿಯನ್ನು ಕೊಟ್ಟಿದ್ದು; ಆದರೆ ಉದಾರಶಿರೋಮಣಿಯಾದ ಶ್ರೀಕೃಷ್ಣನು ಅದನ್ನು ಅತಿದೊಡ್ಡ ಕಾಣಿಕೆ ಎಂದು ಭಾವಿಸಿ ಅತ್ಯಂತ ಆದರ ಪ್ರೀತಿಯಿಂದ ತಿಂದುಬಿಟ್ಟನಲ್ಲ! ॥ ೩೫ ॥ ಜನ್ಮ-ಜನ್ಮಗಳಲ್ಲಿಯೂ ನನಗೆ ನನ್ನ ಪ್ರಿಯಸಖಿನಾದ, ಮಹಾನುಭಾವನಾದ, ಸಮಸ್ತ ಗುಣಗಳಿಗೂ ಏಕಮಾತ್ರ ನಿವಾಸಸ್ಥಾನನಾದ ಶ್ರೀಕೃಷ್ಣನೊಬ್ಬನ ಸೌಹೃದ, ಸಖ್ಯ, ಮೈತ್ರಿ, ದಾಸ್ಯಗಳು ಲಭಿಸಲಿ. ಭಗವಾನ್ ಶ್ರೀಕೃಷ್ಣನ ಪಾದಾರವಿಂದಗಳಲ್ಲಿಯೇ ನನ್ನ ಅನುರಾಗವು ಬೆಳೆಯುತ್ತಾ ಇರಲಿ. ಅವನ ಪ್ರೇಮಿ ಭಕ್ತರ ಸತ್ಸಂಗ ದೊರೆಯುತ್ತಾ ಇರಲಿ. ॥ ೩೬ ॥ ಅಜನ್ಮನಾದ ಭಗವಾನ್ ಶ್ರೀಕೃಷ್ಣನು ಸಂಪತ್ತು ಮುಂತಾದವುಗಳ ದೋಷವನ್ನು ತಿಳಿದಿರುವನು. ದೊಡ್ಡ ದೊಡ್ಡ ಶ್ರೀಮಂತರಿಗೆ ಧನಮದದಿಂದ ಉಂಟಾಗುವ ಅಧಃಪತನವನ್ನು ನೋಡುತ್ತಾನೆ. ಅದಕ್ಕಾಗಿ ಅವನು ದೂರದೃಷ್ಟಿಯಿಲ್ಲದ ತನ್ನ ಭಕ್ತನು ಬಯಸಿದರೂ ನಾನಾ ರೀತಿಯ ರಾಜ್ಯ, ಸಂಪತ್ತು, ಐಶ್ವರ್ಯ ಮುಂತಾದವುಗಳನ್ನು ಅವನಿಗೆ ಕೊಡುವುದಿಲ್ಲ. ಇದು ಅವನ ಪರಮ ಕರುಣೆಯೇ ಆಗಿದೆ. ॥ ೩೭ ॥

ಭಕ್ತಾಯ ಚಿತ್ರಾ ಭಗವಾನ್ ಹಿ ಸಂಪದೋ
ರಾಜ್ಯಂ ವಿಭೂತೀರ್ನ ಸಮರ್ಥಯತ್ಯಜಃ ।
ಅದೀರ್ಘಬೋಧಾಯ ವಿಚಕ್ಷಣಃ ಸ್ವಯಂ
ಪಶ್ಯನ್ನಿಪಾತಂ ಧನಿನಾಂ ಮದೋದ್ಭವಮ್ ॥ ೩೭ ॥

ಪರೀಕ್ಷಿತನೇ! ಸುದಾಮನು ಹೀಗೆ ತನ್ನ ಬುದ್ಧಿಯಿಂದ ನಿಶ್ಚಯಿಸಿ, ತ್ಯಾಗಪೂರ್ವಕ ಅನಾಸಕ್ತಿ ಭಾವದಿಂದ ತನ್ನ ಪತ್ನಿಯೊಂದಿಗೆ ಭಗವತ್ಪ್ರಸಾದ ರೂಪವಾಗಿ ದೊರೆತ ವಿಷಯಗಳನ್ನು ಅನುಭವಿಸತೊಡಗಿದನು. ಹೀಗೆ ದಿನದಿಂದ ದಿನಕ್ಕೆ ಅವನ ಪ್ರೇಮ-ಭಕ್ತಿಗಳು ಹೆಚ್ಚುತ್ತಲೇ ಹೋದವು. ॥ ೩೮ ॥

ಇತ್ಥಂ ವ್ಯವಸಿತೋ ಬುದ್ಧ್ಯಾ ಭಕ್ತೋಽತೀವ ಜನಾರ್ದನೇ ।
ವಿಷಯಾನ್ ಜಾಯಯಾ ತ್ಯಕ್ಷ್ಯನ್ ಬುಭುಜೇ ನಾತಿಲಂಪಟಃ ॥ ೩೮ ॥

ತಸ್ಯ ವೈ ದೇವದೇವಸ್ಯ ಹರೇರ್ಯಜ್ಞಪತೇಃ ಪ್ರಭೋಃ ।
ಬ್ರಾಹ್ಮಣಾಃ ಪ್ರಭವೋ ದೈವಂ ನತೇಭ್ಯೋ ವಿದ್ಯತೇ ಪರಮ್ ॥ ೩೯ ॥

ಪ್ರಿಯ ಪರೀಕ್ಷಿತನೇ! ದೇವದೇವನೂ, ಭಕ್ತಭಯಹಾರಿಯೂ, ಯಜ್ಞಪತಿಯೂ ಆದ ಪ್ರಭುವು ಬ್ರಾಹ್ಮಣರನ್ನು ಸಾಕ್ಷಾತ್ ತನ್ನ ಇಷ್ಟದೇವರೆಂದು ಭಾವಿಸುತ್ತಾನೆ. ಅದಕ್ಕಾಗಿ ಬ್ರಾಹ್ಮಣರಿಗಿಂತ ಮಿಗಿಲಾದ ಯಾವುದೇ ಪ್ರಾಣಿಯು ಜಗತ್ತಿನಲ್ಲಿ ಇಲ್ಲ. ॥ ೩೯ ॥

ಏವಂ ಸ ವಿಪ್ರೋ ಭಗವತ್ಸುಹೃತ್ತದಾ
ದೃಷ್ಟ್ವಾ ಸ್ವಭೃತ್ಯೈರ್ಜಿತಂ ಪರಾಜಿತಮ್ ।
ತದ್ಧ್ಯಾನವೇಗೋದ್ಗ್ರಥಿತಾತ್ಮಬಂಧನ-
ಸ್ತದ್ಧಾಮ ಲೇಭೇಽಚಿರತಃ ಸತಾಂ ಗತಿಮ್ ॥ ೪೦ ॥

ಹೀಗೆ ಭಗವಂತನ ಪ್ರಿಯಮಿತ್ರನಾದ ಸುದಾಮನು-ಯಾರಿಂದಲೂ ಜಯಿಸಲ್ಪಡದ ಭಗವಂತನು ತನ್ನ ಸೇವಕರಾದ ಭಕ್ತರಿಂದ ಜಯಿಸಲ್ಪಟ್ಟಿರುವುದನ್ನು ಕಂಡು ಅವನ ಧ್ಯಾನದಲ್ಲಿಯೇ ಸದಾ ನಿರತನಾಗಿರುತ್ತಿದ್ದನು. ಧ್ಯಾನದ ಆವೇಗದಿಂದ ಅವಿದ್ಯೆಯ ಗಂಟು ಕಳಚಿಹೋಗಿ, ಅತ್ಯಲ್ಪ ಸಮಯದಲ್ಲೇ ಸಂತರಿಗೆ ಏಕಮಾತ್ರ ಆಶ್ರಯನಾದ ಭಗವಂತನ ಧಾಮವನ್ನು ಸೇರಿದನು. ॥ ೪೦ ॥

ಏತದ್ಬ್ರಹ್ಮಣ್ಯದೇವಸ್ಯ ಶ್ರುತ್ವಾ ಬ್ರಹ್ಮಣ್ಯತಾಂ ನರಃ ।
ಲಬ್ಧಭಾವೋ ಭಗವತಿ ಕರ್ಮಬಂಧಾದ್ವಿಮುಚ್ಯತೇ ॥ ೪೧ ॥

ಪರೀಕ್ಷಿತನೇ! ಬ್ರಾಹ್ಮಣರನ್ನು ತನ್ನ ಇಷ್ಟದೇವರೆಂದು ಭಾವಿಸುವ ಭಗವಾನ್ ಶ್ರೀಕೃಷ್ಣನ ಈ ಬ್ರಾಹ್ಮಣಭಕ್ತಿಯನ್ನು ಕೇಳುವವನಿಗೆ ಭಗವಂತನ ಚರಣಗಳಲ್ಲಿ ಪ್ರೇಮಭಾವವು ಉಂಟಾಗಿ, ಅವನು ಕರ್ಮಬಂಧನದಿಂದ ಬಿಡುಗಡೆ ಹೊಂದುವನು. ॥ ೪೧ ॥

ಎಂಭತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೮೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪೃಥುಕೋಪಾಖ್ಯಾನಂ ನಾಮ ಏಕಾಶೀತಿತಮೋಽಧ್ಯಾಯಃ ॥ ೮೧ ॥

ಎಂಭತ್ತೆರಡನೆಯ ಅಧ್ಯಾಯ

ಬಲರಾಮ ಕೃಷ್ಣರು ಗೋಪ-ಗೋಪಿಯರನ್ನು ಸಂಧಿಸಿದುದು

ಶ್ರೀಶುಕ ಉವಾಚ

ಅಥೈಕದಾ ದ್ವಾರವತ್ಯಾಂ ವಸತೋ ರಾಮಕೃಷ್ಣಯೋಃ ।
ಸೂರ್ಯೋಪರಾಗಃ ಸುಮಹಾನಾಸೀತ್ಕಲ್ಪಕ್ಷಯೇ ಯಥಾ ॥ ೧ ॥

ತಂ ಜ್ಞಾತ್ವಾ ಮನುಜಾ ರಾಜನ್ ಪುರಸ್ತಾದೇವ ಸರ್ವತಃ ।
ಸಮಂತಪಂಚಕಂ ಕ್ಷೇತ್ರಂ ಯಯುಃ ಶ್ರೇಯೋವಿಧಿತ್ಸಯಾ ॥ ೨ ॥

ನಿಃಕ್ಷತ್ರಿಯಾಂ ಮಹೀಂ ಕುರ್ವನ್ರಾಮಃ ಶಸ್ತ್ರಭೃತಾಂ ವರಃ ।
ನೃಪಾಣಾಂ ರುಧಿರೌಘೇಣ ಯತ್ರ ಚಕ್ರೇ ಮಹಾಹ್ರದಾನ್ ॥ ೩ ॥

ಈಜೇ ಚ ಭಗವಾನ್ರಾಮೋ ಯತ್ರಾಸ್ಪೃಷ್ಟೋಽಪಿ ಕರ್ಮಣಾ ।
ಲೋಕಸ್ಯ ಗ್ರಾಹಯನ್ನೀಶೋ ಯಥಾನ್ಯೋಽಘಾಪನುತ್ತಯೇ ॥ ೪ ॥

ಮಹತ್ಯಾಂ ತೀರ್ಥಯಾತ್ರಾಯಾಂ ತತ್ರಾಗನ್ ಭಾರತೀಃ ಪ್ರಜಾಃ ।
ವೃಷ್ಣಯಶ್ಚ ತಥಾಕ್ರೂರವಸುದೇವಾಹುಕಾದಯಃ ॥ ೫ ॥

ಯಯುರ್ಭಾರತ ತತ್ ಕ್ಷೇತ್ರಂ ಸ್ವಮಘಂ ಕ್ಷಪಯಿಷ್ಣವಃ ।
ಗದಪ್ರದ್ಯುಮ್ನಸಾಂಬಾದ್ಯಾಃ ಸುಚಂದ್ರಶುಕಸಾರಣೈಃ ॥ ೬ ॥

ಆಸ್ತೇಽನಿರುದ್ಧೋ ರಕ್ಷಾಯಾಂ ಕೃತವರ್ಮಾ ಚ ಯೂಥಪಃ ।
ತೇ ರಥೈರ್ದೇವಧಿಷ್ಣ್ಯಾಭೈರ್ಹಯೈಶ್ಚ ತರಲಪ್ಲವೈಃ ॥ ೭ ॥

ಗಜೈರ್ನದದ್ಭಿರಭ್ರಾಭೈರ್ನಭಿರ್ವಿದ್ಯಾಧರದ್ಯುಭಿಃ ।
ವ್ಯರೋಚಂತ ಮಹಾತೇಜಾಃ ಪಥಿ ಕಾಂಚನಮಾಲಿನಃ ॥ ೮ ॥

ದಿವ್ಯಸ್ರಗ್ವಸ್ತ್ರ ಸನ್ನಾಹಾಃ ಕಲತ್ರೈಃ ಖೇಚರಾ ಇವ ।
ತತ್ರ ಸ್ನಾತ್ವಾ ಮಹಾಭಾಗಾ ಉಪೋಷ್ಯ ಸುಸಮಾಹಿತಾಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ಬಲರಾಮ-ಶ್ರೀಕೃಷ್ಣರು ದ್ವಾರಕೆಯಲ್ಲಿ ವಾಸಮಾಡುತ್ತಿದ್ದಾಗ ಒಮ್ಮೆ ಪ್ರಳಯಕಾಲದೋಪಾದಿಯಲ್ಲಿ ಮಹತ್ತರವಾದ ಪೂರ್ಣಗ್ರಾಸ ಸೂರ್ಯಗ್ರಹಣವು ಉಂಟಾಗಿತ್ತು. ॥ ೧ ॥ ಪರೀಕ್ಷಿತನೇ ! ಇದನ್ನು ಮೊದಲೇ ತಿಳಿದ ಜನರು ತಮ್ಮ ಶ್ರೇಯಃ ಪ್ರಾಪ್ತಿಗಾಗಿ ಎಲ್ಲ ಕಡೆಗಳಿಂದಲೂ ಸ್ಯಮಂತಪಂಚಕ ಕ್ಷೇತ್ರಕ್ಕೆ (ಕುರುಕ್ಷೇತ್ರ)ಕ್ಕೆ ಧಾವಿಸಿದರು. ॥ ೨ ॥ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಪರಶುರಾಮನು ಭೂಮಂಡಲವನ್ನೇ ಕ್ಷತ್ರಿಯರಿಂದ ರಹಿತವಾಗಿಸಿ ರಾಜರ ರಕ್ತದ ಕೋಡಿಯಿಂದಲೇ ದೊಡ್ಡ-ದೊಡ್ಡ ಕುಂಡಗಳನ್ನು ನಿರ್ಮಿಸಿದನು. ಅದೇ ಸ್ಯಮಂತಪಂಚಕ ಕ್ಷೇತ್ರವು. ॥ ೩ ॥ ಸಾಧಾರಣ ಮನುಷ್ಯನು ತನ್ನ ಪಾಪಪರಿಹಾರಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಂತೆಯೇ ಸರ್ವಶಕ್ತನಾದ ಭಗವಾನ್ ಪರಶುರಾಮನು – ತನಗೂ, ತಾನು ಮಾಡಿದ ಕರ್ಮಕ್ಕೂ ಸಂಬಂಧವಿಲ್ಲದಿದ್ದರೂ ಲೋಕಮರ್ಯಾದೆಯನ್ನು ರಕ್ಷಿಸಲಿಕ್ಕಾಗಿ ಅಲ್ಲಿಯೇ ಮಹಾಯಜ್ಞವನ್ನು ಮಾಡಿದ್ದನು. ॥ ೪ ॥

ಪರೀಕ್ಷಿತನೇ ! ಮಹತ್ವಪೂರ್ಣವಾದ ಆ ತೀರ್ಥಯಾತ್ರೆಯ ಸಮಯದಲ್ಲಿ ಭಾರತವರ್ಷದ ಎಲ್ಲ ಪ್ರಾಂತಗಳ ಪ್ರಜೆಗಳು ಕುರುಕ್ಷೇತ್ರಕ್ಕೆ ಆಗಮಿಸಿದರು. ಅವರಲ್ಲಿ ಅಕ್ರೂರ, ವಸುದೇವ, ಉಗ್ರಸೇನನೇ ಮೊದಲಾದ ಹಿರಿಯರೂ, ಗದ, ಪ್ರದ್ಯುಮ್ನ ಸಾಂಬರೇ ಮೊದಲಾದ ಬೇರೆ ಯುದವಂಶೀಯರೂ ತಮ್ಮ-ತಮ್ಮ ಪಾಪಗಳನ್ನು ನಾಶಮಾಡಿಕೊಳ್ಳಲು ಕುರುಕ್ಷೇತ್ರಕ್ಕೆ ಬಂದಿದ್ದರು. ಪ್ರದ್ಯುಮ್ನನಂದನ ಅನಿರುದ್ಧ ಮತ್ತು ಯಾದವ ಸೇನಾಪತಿ ಕೃತವರ್ಮ ಇವರಿಬ್ಬರೂ ಸುಚಂದ್ರ, ಶುಕ, ಸಾರಣ ಮೊದಲಾದವರೊಡನೆ ನಗರದ ರಕ್ಷಣೆಗಾಗಿ ದ್ವಾರಕೆಯಲ್ಲೇ ಉಳಿದರು. ಯಾದವರು ಮೊದಲೇ ಸ್ವಭಾವದಿಂದ ಪರಮ ತೇಜಸ್ವಿಗಳಾಗಿದ್ದರು. ಈಗ ಕೊರಳಲ್ಲಿ ಚಿನ್ನದ ಸರಗಳನ್ನು, ಪುಷ್ಪಹಾರಗಳನ್ನೂ ಬಹುಮೂಲ್ಯ ವಸ್ತ್ರಗಳನ್ನು, ಕವಚಗಳನ್ನು ಧರಿಸಿ ಅವರ ಶೋಭೆ ಇನ್ನೂ ಹೆಚ್ಚಾಗಿತ್ತು. ಅವರೆಲ್ಲರೂ ದೇವತೆಗಳ ವಿಮಾನಕ್ಕೆ ಸದೃಶವಾದ ರಥಗಳಲ್ಲಿಯೂ, ಸಮುದ್ರದ ಅಲೆಗಳಂತೆ ಚಲಿಸುವ ಕುದುರೆಗಳ ಮೇಲೆಯೂ, ಮೇಘಸದೃಶವಾದ ಘೀಳಿಡುತ್ತಿದ್ದ ಆನೆಗಳ ಮೇಲೆಯೂ, ವಿದ್ಯಾಧರರಿಗೆ ಸದೃಶರಾದ ಮನುಷ್ಯರಿಂದ ಒಯ್ಯಲ್ಪಡುತ್ತಿದ್ದ ಪಲ್ಲಕ್ಕಿಗಳ ಮೇಲೆಯೂ ತಮ್ಮ-ತಮ್ಮ ಮಡದಿಯರೊಂದಿಗೆ ಕುಳಿತು ಸ್ವರ್ಗದ ದೇವತೆಗಳಂತೆಯೇ ಯಾತ್ರೆ ಮಾಡಿದರು. ಮಹಾಭಾಗ್ಯಶಾಲಿಗಳಾದ ಯದುವಂಶೀಯರು ಕುರುಕ್ಷೇತ್ರಕ್ಕೆ ತಲುಪಿ ಏಕಾಗ್ರತೆಯಿಂದ ಪುಣ್ಯತೀರ್ಥದಲ್ಲಿ ಸ್ನಾನ ಮಾಡಿ ಉಪವಾಸದಿಂದಿದ್ದು ಗ್ರಹಣದ ಪರ್ವಕಾಲವನ್ನು ನಿರೀಕ್ಷಿಸುತ್ತಿದ್ದರು. ॥ ೫-೯ ॥

ಬ್ರಾಹ್ಮಣೇಭ್ಯೋ ದದುರ್ಧೇನೂರ್ವಾಸಃಸ್ರಗ್ರುಕ್ಮಮಾಲಿನೀಃ ।
ರಾಮಹ್ರದೇಷು ವಿಧಿವತ್ಸ್ನುರಾಪ್ಲುತ್ಯ ವೃಷ್ಣಯಃ
॥ ೧೦ ॥

ಸೂರ್ಯಗ್ರಹಣವು ಪ್ರಾರಂಭವಾಗುತ್ತಲೇ ವಸ್ತ್ರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಮತ್ತು ಚಿನ್ನದ ಸರಗಳಿಂದಲೂ ಸಮಲಂಕೃತವಾದ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದರು. ಗ್ರಹಣದ ಮೋಕ್ಷವಾಗುತ್ತಲೇ ಅವರು ಪರಶುರಾಮನಿಂದ ನಿರ್ಮಿತವಾದ ಕುಂಡಗಳಲ್ಲಿ ಯಾದವರು ವಿಧಿವತ್ತಾಗಿ ಸ್ನಾನ ಮಾಡಿದರು ಹಾಗೂ ಸತ್ಪಾತ್ರರಾದ ಬ್ರಾಹ್ಮಣರಿಗೆ ಮೃಷ್ಟಾನ್ನವನ್ನು ಭೋಜನ ಮಾಡಿಸಿ, ಶ್ರೀಕೃಷ್ಣನಲ್ಲಿ ತಮಗೆ ಅಚಲವಾದ ಭಕ್ತಿ ಇರುವಂತೆ ಆಶೀರ್ವದಿಸಬೇಕೆಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸಿದರು. ಭಗವಾನ್ ಶ್ರೀಕೃಷ್ಣನನ್ನೇ ತಮ್ಮ ಆದರ್ಶ ಮತ್ತು ಇಷ್ಟದೇವನೆಂದು ತಿಳಿದಿರುವ ಯದುವಂಶೀಯರು ಬ್ರಾಹ್ಮಣರಿಂದ ಅನುಮತಿ ಪಡೆದು ಭೋಜನಮಾಡಿದರು. ಮತ್ತೆ ದಟ್ಟವಾದ ಮರಗಳ ಕೆಳಗೆ ತಂಪಾದ ನೆರಳಲ್ಲಿ ತಮ್ಮ-ತಮ್ಮ ಇಚ್ಛಾನುಸಾರವಾಗಿ ಬಿಡಾರಗಳನ್ನು ನಿರ್ಮಿಸಿಕೊಂಡು ವಿಶ್ರಮಿಸಿದರು. ಪರೀಕ್ಷಿತನೇ! ಹೀಗೆ ವಿಶ್ರಾಂತಿ ಪಡೆದು ಯಾದವರು ಅಲ್ಲಿಗೆ ಬಂದಿದ್ದ ತಮ್ಮ ಸುಹೃದರನ್ನು ಸಂಬಂಧಿಗಳನ್ನು ಸಂದರ್ಶಿಸತೊಡಗಿದರು. ॥ ೧೦-೧೨ ॥

ದದುಃ ಸ್ವನ್ನಂ ದ್ವಿಜಾಗ್ರ್ಯೇಭ್ಯಃ ಕೃಷ್ಣೇ ನೋ ಭಕ್ತಿರಸ್ತ್ವಿತಿ ।
ಸ್ವಯಂ ಚ ತದನುಜ್ಞಾತಾ ವೃಷ್ಣಯಃ ಕೃಷ್ಣದೇವತಾಃ
॥ ೧೧ ॥

ಭುಕ್ತ್ವೋಪವಿವಿಶುಃ ಕಾಮಂ ಸ್ನಿಗ್ಧಚ್ಛಾಯಾಂಘ್ರಿಪಾಂಘ್ರಿಷು ।
ತತ್ರಾಗತಾಂಸ್ತೇ ದದೃಶುಃ ಸುಹೃತ್ಸಂಬಂಧಿನೋ ನೃಪಾನ್
॥ ೧೨ ॥

ಅಲ್ಲಿಗೆ ಮತ್ಸ್ಯ, ಉಶೀನರ, ಕೋಸಲ, ವಿದರ್ಭ, ಕುರು, ಸೃಂಜಯ, ಕಾಂಭೋಜ, ಕೈಕಯ, ಮದ್ರ, ಕುಂತಿ, ಆನರ್ತ, ಕೇರಳ, ಹಾಗೆಯೇ ಬೇರೆ ಅನೇಕ ದೇಶದ ತಮ್ಮ ಪಕ್ಷದ ಮತ್ತು ಶತ್ರುಪಕ್ಷದ ನೂರಾರು ರಾಜರು ಬಂದಿದ್ದರು. ಪರೀಕ್ಷಿತನೇ! ಇದಲ್ಲದೆ ಪರಮ ಹಿತೈಷಿ ನಂದರಾಜ ಮೊದಲಾದ ಗೋಪಾಲಕರೂ ಮತ್ತು ಭಗವಂತನ ದರ್ಶನಕ್ಕಾಗಿ ಎಷ್ಟೋ ಕಾಲದಿಂದ ಉತ್ಕಂಠಿತರಾದ ಗೋಪಿಯರೂ ಅಲ್ಲಿಗೆ ಬಂದಿದ್ದರು. ಯಾದವರು ಇವರೆಲ್ಲರನ್ನೂ ನೋಡಿದರು. ॥ ೧೩.-೧೪ ॥ ಪರೀಕ್ಷಿತನೇ! ಪರಸ್ಪರ ದರ್ಶನ, ಮಿಲನ, ವಾರ್ತಾಲಾಪದಿಂದ ಎಲ್ಲರಿಗೂ ಬಹಳ ಆನಂದವಾಯಿತು. ಎಲ್ಲರ ಹೃದಯ-ಕಮಲ ಹಾಗೂ ಮುಖ-ಕಮಲಗಳು ಅರಳಿದವು. ಒಬ್ಬರು ಮತ್ತೊಬ್ಬರನ್ನು ಬರಸೆಳೆದು ಅಪ್ಪಿಕೊಳ್ಳುವರು, ಅವರ ಕಣ್ಣುಗಳಲ್ಲಿ ಆನಂದಾಶ್ರುಗಳು ಸುರಿಯುತ್ತಿದ್ದವು. ರೋಮಾಂಚನವುಂಟಾಗಿ ಪ್ರೇಮೋದ್ರೇಕದಿಂದ ಗಂಟಲು ಬಿಗಿದುಕೊಂಡಿತು. ಸಮಸ್ತರೂ ಆನಂದ ಸಾಗರದಲ್ಲಿ ಮುಳುಗಿ ಹೋದರು. ॥ ೧೫ ॥ ಪುರುಷರಂತೆಯೇ ಸ್ತ್ರೀಯರೂ ಪರಸ್ಪರ ಒಬ್ಬರನ್ನೊಬ್ಬರನ್ನು ನೋಡಿ ಪ್ರೇಮಾನಂದಭರಿತರಾದರು. ಅವರು ಅತ್ಯಂತ ಸೌಹಾರ್ದಭಾವವನ್ನು ಸೂಚಿಸುತ್ತಾ ಮಂದಹಾಸವನ್ನು ಬೀರುತ್ತಾ ಕಡೆಗಣ್ಣನೋಟದಿಂದ ಅನುರಾಗವನ್ನು ವ್ಯಕ್ತಪಡಿಸುತ್ತಾ ಆನಂದಿಸಿದರು. ಒಬ್ಬರನ್ನೊಬ್ಬರು ಬಿಗಿದಪ್ಪಿಕೊಂಡಾಗ ಕುಂಕುಮ ಲಿಪ್ತವಾದ ಕುಚಗಳಿಂದ ಕುಚಗಳನ್ನು ಸಂಘಟಿಸುತ್ತಾ, ಆನಂದ ಬಾಷ್ಪವನ್ನು ಸುರಿಸುತ್ತಾ ನಲಿದಾಡಿದರು. ॥ ೧೬ ॥ ಆನಂತರ ತಮಗಿಂತ ಹಿರಿಯರಿಗೆ ನಮಸ್ಕರಿಸಿದರು ಮತ್ತು ತಮಗಿಂತ ಕಿರಿಯವರಿಂದ ನಮಸ್ಕಾರ ಸ್ವೀಕರಿಸಿದರು. ಅವರು ಪರಸ್ಪರ ಸ್ವಾಗತಿಸುತ್ತಾ, ಕ್ಷೇಮಸಮಾಚಾರವನ್ನು ಕೇಳಿಕೊಂಡು ಮತ್ತೆ ಶ್ರೀಕೃಷ್ಣನ ಮಧುರ ಲೀಲೆಗಳನ್ನು ಒಬ್ಬರು ಮತ್ತೊಬ್ಬರಿಗೆ ಹೇಳಿಕೊಳ್ಳತೊಡಗಿದರು. ॥ ೧೭ ॥

ಮತ್ಸ್ಯೋಶೀನರಕೌಸಲ್ಯವಿದರ್ಭಕುರುಸೃಂಜಯಾನ್ ।
ಕಾಂಭೋಜಕೈಕಯಾನ್ಮದ್ರಾನ್ ಕುಂತೀನಾನರ್ತಕೇರಲಾನ್
॥ ೧೩ ॥

ಅನ್ಯಾಂಶ್ಚೈವಾತ್ಮಪಕ್ಷೀಯಾನ್ ಪರಾಂಶ್ಚ ಶತಶೋ ನೃಪ ।
ನಂದಾದೀನ್ಸುಹೃದೋ ಗೋಪಾನ್ ಗೋಪೀಶ್ಚೋತ್ಕಂಠಿತಾಶ್ಚಿರಮ್
॥ ೧೪ ॥

ಅನ್ಯೋನ್ಯಸಂದರ್ಶನಹರ್ಷರಂಹಸಾ
ಪ್ರೋತ್ಫುಲ್ಲಹೃದ್ವಕ್ತ್ರಸರೋರುಹಶ್ರಿಯಃ ।
ಆಶ್ಲಿಷ್ಯ ಗಾಢಂ ನಯನೈಃ ಸ್ರವಜ್ಜಲಾ
ಹೃಷ್ಟತ್ವಚೋ ರುದ್ಧಗಿರೋ ಯಯುರ್ಮುದಮ್ ॥ ೧೫ ॥

ಸ್ತ್ರಿಯಶ್ಚ ಸಂವೀಕ್ಷ್ಯ ಮಿಥೋಽತಿಸೌಹೃದ-
ಸ್ಮಿತಾಮಲಾಪಾಂಗದೃಶೋಽಭಿರೇಭಿರೇ ।
ಸ್ತನೈಃ ಸ್ತನಾನ್ಕುಂಕುಮಪಂಕರೂಷಿತಾನ್
ನಿಹತ್ಯ ದೋರ್ಭಿಃ ಪ್ರಣಯಾಶ್ರುಲೋಚನಾಃ ॥ ೧೬ ॥

ತತೋಽಭಿವಾದ್ಯ ತೇ ವೃದ್ಧಾನ್ಯವಿಷ್ಠೈರಭಿವಾದಿತಾಃ ।
ಸ್ವಾಗತಂ ಕುಶಲಂ ಪೃಷ್ಟ್ವಾ ಚಕ್ರುಃ ಕೃಷ್ಣಕಥಾ ಮಿಥಃ
॥ ೧೭ ॥

ಪೃಥಾ ಭ್ರಾತೄನ್ಸ್ವಸ್ರೀಯಾಂಶ್ಚ ತತ್ಪುತ್ರಾನ್ಪಿತರಾವಪಿ ।
ಭ್ರಾತೃಪತ್ನೀರ್ಮುಕುಂದಂ ಚ ಜಹೌ ಸಂಕಥಯಾ ಶುಚಃ
॥ ೧೮ ॥

ಕುಂತ್ಯುವಾಚ

ಆರ್ಯ ಭ್ರಾತರಹಂ ಮನ್ಯೇ ಆತ್ಮಾನಮಕೃತಾಶಿಷಮ್ ।
ಯದ್ವಾ ಆಪತ್ಸು ಮದ್ವಾರ್ತಾಂ ನಾನುಸ್ಮರಥ ಸತ್ತಮಾಃ
॥ ೧೯ ॥

ಸುಹೃದೋ ಜ್ಞಾತಯಃ ಪುತ್ರಾ ಭ್ರಾತರಃ ಪಿತರಾವಪಿ ।
ನಾನುಸ್ಮರಂತಿ ಸ್ವಜನಂ ಯಸ್ಯ ದೈವಮದಕ್ಷಿಣಮ್
॥ ೨೦ ॥

ವಸುದೇವ ಉವಾಚ

ಅಂಬ ಮಾಸ್ಮಾನಸೂಯೇಥಾ ದೈವಕ್ರೀಡನಕಾನ್ನರಾನ್ ।
ಈಶಸ್ಯ ಹಿ ವಶೇ ಲೋಕಃ ಕುರುತೇ ಕಾರ್ಯತೇऽಥವಾ
॥ ೨೧ ॥

ಕಂಸಪ್ರತಾಪಿತಾಃ ಸರ್ವೇ ವಯಂ ಯಾತಾ ದಿಶಂ ದಿಶಮ್ ।
ಏತರ್ಹ್ಯೇವ ಪುನಃ ಸ್ಥಾನಂ ದೈವೇನಾಸಾದಿತಾಃ ಸ್ವಸಃ
॥ ೨೨ ॥

ಶ್ರೀಶುಕ ಉವಾಚ

ವಸುದೇವೋಗ್ರಸೇನಾದ್ಯೈರ್ಯದುಭಿಸ್ತೇऽರ್ಚಿತಾ ನೃಪಾಃ ।
ಆಸನ್ನಚ್ಯುತಸಂದರ್ಶಪರಮಾನಂದನಿರ್ವೃತಾಃ
॥ ೨೩ ॥

ಭೀಷ್ಮೋ ದ್ರೋಣೋऽಂಬಿಕಾಪುತ್ರೋ ಗಾಂಧಾರೀ ಸುತಾ ತಥಾ ।
ಸದಾರಾಃ ಪಾಂಡವಾಃ ಕುಂತೀ ಸೃಂಜಯೋ ವಿದುರಃ ಕೃಪಃ
॥ ೨೪ ॥

ಕುಂತಿಭೋಜೋ ವಿರಾಟಶ್ಚ ಭೀಷ್ಮಕೋ ನಗ್ನಜಿನ್ಮಹಾನ್ ।
ಪುರುಜಿದ್ದ್ರುಪದಃ ಶಲ್ಯೋ ಧೃಷ್ಟಕೇತುಃ ಸ ಕಾಶಿರಾಟ್
॥ ೨೫ ॥

ದಮಘೋಷೋ ವಿಶಾಲಾಕ್ಷೋ ಮೈಥಿಲೋ ಮದ್ರಕೇಕಯೌ ।
ಯುಧಾಮನ್ಯುಃ ಸುಶರ್ಮಾ ಚ ಸಸುತಾ ಬಾಹ್ಲಿಕಾದಯಃ
॥ ೨೬ ॥

ರಾಜಾನೋ ಯೇ ಚ ರಾಜೇಂದ್ರ ಯುಧಿಷ್ಠಿರಮನುವ್ರತಾಃ ।
ಶ್ರೀನಿಕೇತಂ ವಪುಃ ಶೌರೇಃ ಸಸ್ತ್ರೀಕಂ ವೀಕ್ಷ್ಯ ವಿಸ್ಮಿತಾಃ
॥ ೨೭ ॥

ಅಥ ತೇ ರಾಮಕೃಷ್ಣಾಭ್ಯಾಂ ಸಮ್ಯಕ್ ಪ್ರಾಪ್ತಸಮರ್ಹಣಾಃ ।
ಪ್ರಶಶಂಸುರ್ಮುದಾ ಯುಕ್ತಾ ವೃಷ್ಣೀನ್ಕೃಷ್ಣಪರಿಗ್ರಹಾನ್
॥ ೨೮ ॥

ಪರೀಕ್ಷಿತನೇ! ಕುಂತಿಯು ವಸುದೇವನೇ ಮೊದಲಾದ ತನ್ನ ಸಹೋದರ-ಸಹೋದರಿಯರನ್ನೂ, ಅವರ ಪುತ್ರರನ್ನೂ, ತಂದೆ ತಾಯಿ, ಅತ್ತಿಗೆಯರನ್ನು ಹಾಗೂ ಭಗವಾನ್ ಶ್ರೀಕೃಷ್ಣನನ್ನು ನೋಡಿ, ಅವರೊಂದಿಗೆ ಮಾತಾಡಿ ತನ್ನ ದುಃಖವೆಲ್ಲವನ್ನೂ ಮರೆತಳು.॥೧೮॥

ಕುಂತಿಯು ವಸುದೇವನಲ್ಲಿ ಹೇಳಿದಳು - ಅಣ್ಣಾ! ನಾನು ನಿಜವಾಗಿಯೂ ನಿರ್ಭಾಗ್ಯಳೇ ಸರಿ. ನನ್ನ ಒಂದೂ ಆಸೆ ಈಡೇರಲಿಲ್ಲ. ನಿಮ್ಮಂತಹ ಸಾಧು-ಸ್ವಭಾವದ ಸಜ್ಜನ ಸಹೋದರರೂ ಆಪತ್ತಿನಲ್ಲಿ ಸಿಕ್ಕಿಕೊಂಡ ನನ್ನ ಸಮಾಚಾರವನ್ನು ಸ್ಮರಿಸಲೇ ಇಲ್ಲ. ಇದಕ್ಕಿಂತ ಮಿಗಿಲಾದ ದುಃಖದ ಮಾತೇನಿರಬಹುದು ? ॥ ೧೯ ॥ ಅಣ್ಣಾ! ದೈವವು ಪ್ರತಿಕೂಲವಾದಾಗ ಅಂತಹವರನ್ನು ಸ್ವಜನರು, ಸಂಬಂಧಿಗಳು, ಪುತ್ರರು, ತಂದೆ-ತಾಯಿಗಳು, ಸಹೋದರರು ಮರೆತು ಬಿಡುತ್ತಾರೆ. ಇದರಲ್ಲಿ ನಿಮ್ಮದೇನೂ ದೋಷವಿಲ್ಲ ॥ ೨೦ ॥

ವಸುದೇವನು ಹೇಳಿದನು - ತಂಗೀ! ಬೇಸರಪಡಬೇಡ. ನಮ್ಮಿಂದ ಬೇರೆ ಎಂದು ಎಣಿಸಬೇಡ. ಮನುಷ್ಯರೆಲ್ಲರೂ ದೈವದ ಕೈಯ ಆಟದ ಗೊಂಬೆಗಳು. ಈ ಸಂಪೂರ್ಣ ಜಗತ್ತು ಈಶ್ವರನ ಅಧೀನದಲ್ಲಿದ್ದು ಕರ್ಮಮಾಡುತ್ತಾ ಅದರ ಫಲವನ್ನು ಅನುಭವಿಸುತ್ತಾರೆ. ॥ ೨೧॥ ಸಹೋದರಿ! ಕಂಸನ ಉಪಟಳದಿಂದ ನಾವೆಲ್ಲರೂ ದಿಕ್ಕಾಪಾಲಾಗಿ ಹೋಗಿದ್ದೆವು. ಈಶ ಕೃಪೆಯಿಂದ ನಾವೆಲ್ಲರೂ ಪುನಃ ನಮ್ಮ-ನಮ್ಮ ಸ್ಥಾನವನ್ನು ಹೊಂದಿ ಕೆಲವೇ ದಿನಗಳಾಗಿವೆ. ॥ ೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಸುದೇವ, ಉಗ್ರಸೇನರೇ ಮೊದಲಾದ ಯಾದವರು ಇಲ್ಲಿಗೆ ಬಂದಿರುವ ಎಲ್ಲ ರಾಜರನ್ನೂ ಯಥೋಚಿತ ನಮಸ್ಕಾರ ಮಾಡಿದರು. ಅವರೆಲ್ಲರೂ ಭಗವಾನ್ ಶ್ರೀಕೃಷ್ಣನ ದರ್ಶನವನ್ನು ಪಡೆದು ಪರಮಾನಂದಭರಿತರಾಗಿ ಶಾಂತಿಯನ್ನು ಅನುಭವಿಸಿದರು. ॥ ೨೩. ॥ ಪರೀಕ್ಷಿತನೇ! ಪಿತಾಮಹ ಭೀಷ್ಮರು, ದ್ರೋಣಾಚಾರ್ಯರು, ಧೃತರಾಷ್ಟ್ರ, ದುರ್ಯೋಧನಾದಿ ಪುತ್ರರೊಂದಿಗೆ ಗಾಂಧಾರಿ, ಪತ್ನಿಯರೊಂದಿಗೆ ಯುಧಿಷ್ಠಿರನೇ ಮೊದಲಾದ ಪಾಂಡವರು, ಕುಂತೀ, ಸೃಂಜಯ, ವಿದುರ, ಕೃಪಾಚಾರ್ಯರು, ಕುಂತಿಭೋಜ, ವಿರಾಟ, ಭೀಷ್ಮಕ, ಮಹಾರಾಜ ನಾಗ್ನಜಿತ್ತು, ಪುರುಜಿತ್ತು, ದ್ರುಪದ, ಶಲ್ಯ, ಧೃಷ್ಟಕೇತು, ಕಾಶೀರಾಜ, ದಮಘೋಷ, ವಿಶಾಲಾಕ್ಷ ಮಿಥಿಲಾನರೇಶ, ಮದ್ರರಾಜ, ಕೇಕಯನರೇಶ, ಯುಧಾಮನ್ಯು, ಸುಶರ್ಮಾ, ತಮ್ಮ ಪುತ್ರರೊಂದಿಗೆ ಬಾಹ್ಲೀಕ ಹಾಗೂ ಇತರ ಯುಧಿಷ್ಠಿರನ ಅನುಯಾಯಿಗಳಾದ ರಾಜರು - ಹೀಗೆ ಇವರೆಲ್ಲರೂ ರಾಣಿಯರೊಡಗೂಡಿದ್ದ ಭಗವಾನ್ ಶ್ರೀಕೃಷ್ಣನ ಪರಮಸುಂದರ ಶ್ರೀನಿಕೇತನ ದಿವ್ಯಮಂಗಳ ವಿಗ್ರಹವನ್ನು ನೋಡಿ ಅತ್ಯಂತ ವಿಸ್ಮಿತರಾದರು. ॥ ೨೪-೨೭ ॥ ಈಗ ಅವರೆಲ್ಲರೂ ಬಲರಾಮ-ಶ್ರೀಕೃಷ್ಣರಿಂದ ಯಥೋಚಿತವಾದ ಸಮ್ಮಾನವನ್ನು ಪಡೆದು ಅತ್ಯಾನಂದದಿಂದ ಶ್ರೀಕೃಷ್ಣನನ್ನು, ಅವನ ಸ್ವಜನ ಯದುವಂಶೀಯರನ್ನೂ ಪ್ರಶಂಸಿತೊಡಗಿದರು. ॥ ೨೮ ॥

ಅಹೋ ಭೋಜಪತೇ ಯೂಯಂ ಜನ್ಮಭಾಜೋ ನೃಣಾಮಿಹ ।
ಯತ್ಪಶ್ಯಥಾಸಕೃತ್ಕೃಷ್ಣಂ ದುರ್ದರ್ಶಮಪಿ ಯೋಗಿನಾಮ್
॥ ೨೯ ॥

ಯದ್ವಿಶ್ರುತಿಃ ಶ್ರುತಿನುತೇದಮಲಂ ಪುನಾತಿ
ಪಾದಾವನೇಜನಪಯಶ್ಚ ವಚಶ್ಚ ಶಾಸ್ತ್ರಮ್ ।
ಭೂಃ ಕಾಲಭರ್ಜಿತಭಗಾಪಿ ಯದಂಘ್ರಿಪದ್ಮ-
ಸ್ಪರ್ಶೋತ್ಥಶಕ್ತಿರಭಿವರ್ಷತಿ ನೋಽಖಿಲಾರ್ಥಾನ್ ॥ ೩೦ ॥

ತದ್ದರ್ಶನಸ್ಪರ್ಶನಾನುಪಥಪ್ರಜಲ್ಪ-
ಶಯ್ಯಾಸನಾಶನಸಯೌನಸಪಿಂಡಬಂಧಃ ।
ಯೇಷಾಂ ಗೃಹೇ ನಿರಯವರ್ತ್ಮನಿ ವರ್ತತಾಂ ವಃ
ಸ್ವರ್ಗಾಪವರ್ಗವಿರಮಃ ಸ್ವಯಮಾಸ ವಿಷ್ಣುಃ ॥ ೩೧ ॥

ಆವರೆಲ್ಲರೂ ಪ್ರಧಾನವಾಗಿ ಉಗ್ರಸೇನನನ್ನು ಸಂಬೋಧಿಸುತ್ತಾ ಹೇಳತೊಡಗಿದರು – "ಭೋಜರಾಜ ಉಗ್ರಸೇನನೇ! ಮನುಷ್ಯ ಲೋಕದಲ್ಲಿ ಜನ್ಮತಾಳಿರುವ ನಿಮ್ಮ ಜೀವನವೇ ನಿಶ್ಚಯವಾಗಿ ಧನ್ಯವಾಗಿದೆ. ಸಾರ್ಥಕವಾಗಿದೆ. ಏಕೆಂದರೆ, ದೊಡ್ಡ-ದೊಡ್ಡ ಯೋಗಿಗಳಿಗೂ ದರ್ಶನಕ್ಕೆ ದುರ್ಲಭನಾದ ಶ್ರೀಕೃಷ್ಣನನ್ನು ನೀವೆಲ್ಲರೂ ನಿತ್ಯ-ನಿರಂತರವಾಗಿ ನೋಡುತ್ತಾ ಇದ್ದೀರಿ. ॥ ೨೯ ॥ ವೇದಗಳು ಆತ್ಯಾದರದಿಂದ ಭಗವಾನ್ ಶ್ರೀಕೃಷ್ಣನ ಕೀರ್ತಿಯನ್ನು ಕೊಂಡಾಡುತ್ತವೆ. ಅವನ ಚರಣೋದಕ ಗಂಗೆಯು, ಅವನ ವಾಣಿಯಾದ (ಗೀತೆಯು) ಶಾಸ್ತ್ರವು ಮತ್ತು ಅವನ ಮಂಗಳ ಕೀರ್ತಿಯು ಈ ಜಗತ್ತನ್ನು ಪಾವನಗೊಳಿಸುತ್ತಿದೆ. ಕಾಲಬಾಧಿತವಾಗಿ ಪೃಥಿವಿಯ ಸೌಭಾಗ್ಯವೆಲ್ಲವೂ ನಾಶವಾಗಿ ಹೋಗಿತ್ತು. ಆದರೆ ಅವನ ಚರಣಕಮಲಗಳ ಸ್ಪರ್ಶಸುಖವನ್ನು ಪಡೆದು ಭೂದೇವಿಯೂ ಸರ್ವಸಮರ್ಥಳಾಗಿ ನಾವು ಅಪೇಕ್ಷಿಸಿದುದೆಲ್ಲವನ್ನೂ ಮಳೆಗರೆಯುತ್ತಿದ್ದಾಳೆ. ॥ ೩೦ ॥ ಉಗ್ರಸೇನನೇ! ಅಂತಹ ದೇವ-ದೇವನಾದ ಶ್ರೀಕೃಷ್ಣನೊಡನೆ ನಿಮಗೆ ವಿವಾಹಸಂಬಂಧ ಹಾಗೂ ಗೋತ್ರ ಸಂಬಂಧವೂ ಇದೆ. ಇಷ್ಟೇ ಅಲ್ಲ; ನೀವೆಲ್ಲರೂ ಯಾವಾಗಲೂ ಅವನನ್ನು ದರ್ಶಿಸುತ್ತಾ, ಸ್ಪರ್ಶಿಸುತ್ತಾ ಇರುವಿರಿ. ಅವನೊಡನೆ ನಡೆಯುವಿರಿ, ಮಾತನಾಡುವಿರಿ, ಮಲಗುವಿರಿ, ಕುಳಿತುಕೊಳ್ಳುವಿರಿ, ಊಟ-ತಿಂಡಿಗಳನ್ನು ಮಾಡುತ್ತಿರುವಿರಿ. ನೀವು ನರಕಕ್ಕೆ ದಾರಿಯಾದ ಸಂಸಾರಸಾಗರದಲ್ಲಿ ಬಿದ್ದು ತೊಳಲುತ್ತಿದ್ದರೂ ನಿಮ್ಮ ಮನೆಯಲ್ಲಿ ಸರ್ವವ್ಯಾಪಕನಾದ ಭಗವಾನ್ ವಿಷ್ಣುವು ಮೂರ್ತಿಮಂತನಾಗಿ ನಿವಾಸಮಾಡಿದ್ದಾನೆ. ಅವನ ದರ್ಶನ ಮಾತ್ರದಿಂದಲೇ ಸ್ವರ್ಗ-ಮೋಕ್ಷಗಳ ಅಭಿಲಾಷೆಗಳೂ ಇಲ್ಲವಾಗುತ್ತವೆ." ॥ ೩೧ ॥

ಶ್ರೀ ಶುಕ ಉವಾಚ

ನಂದಸ್ತತ್ರ ಯದೂನ್ಪ್ರಾಪ್ತಾನ್ ಜ್ಞಾತ್ವಾಕೃಷ್ಣಪುರೋಗಮಾನ್ ।
ತತ್ರಾಗಮದ್ವೃತೋ ಗೋಪೈರನಃಸ್ಥಾರ್ಥೈರ್ದಿದೃಕ್ಷಯಾ
॥ ೩೨ ॥

ತಂ ದೃಷ್ಟ್ವಾ ವೃಷ್ಣಯೋ ಹೃಷ್ಟಾಸ್ತನ್ವಃ ಪ್ರಾಣಮಿವೋತ್ಥಿತಾಃ ।
ಪರಿಷಸ್ವಜಿರೇ ಗಾಢಂ ಚಿರದರ್ಶನಕಾತರಾಃ
॥ ೩೩ ॥

ವಸುದೇವಃ ಪರಿಷ್ವಜ್ಯ ಸಂಪ್ರೀತಃ ಪ್ರೇಮವಿಹ್ವಲಃ ।
ಕ್ಲೇಶಾನ್ ಕಂಸಕೃತಾನ್ ಕ್ಲೇಶಾನ್ ಪುತ್ರನ್ಯಾಸಂ ಚ ಗೋಕುಲೇ
॥ ೩೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶ್ರೀಕೃಷ್ಣನೇ ಮೊದಲಾದ ಯಾದವರು ಕುರುಕ್ಷೇತ್ರಕ್ಕೆ ಆಗಮಿಸಿರುವರು ಎಂದು ಕೇಳಿದ ನಂದಗೋಪನು ಗೋಪಾಲರೊಂದಿಗೆ ತಮ್ಮ ಸಾಮಗ್ರಿಗಳನ್ನು ಎತ್ತಿನ ಗಾಡಿಗಳಲ್ಲಿ ಹೇರಿಕೊಂಡು ತಮ್ಮ ಪ್ರಿಯ ಪುತ್ರರಾದ ಶ್ರೀಕೃಷ್ಣ ಬಲರಾಮರನ್ನು ನೋಡಲಿಕ್ಕಾಗಿ ಅಲ್ಲಿಗೆ ಬಂದರು. ॥ ೩೨ ॥ ನಂದರಾಜ ಮೊದಲಾದ ಗೋಪಾಲರನ್ನು ನೋಡಿ ಸಮಸ್ತ ಯಾದವರು ಆನಂದತುಂದಿಲರಾದರು. ಮೃತ ಶರೀರದಲ್ಲಿ ಪ್ರಾಣಸಂಚಾರವಾದಂತೆ ಲಗುಬಗೆಯಿಂದ ಎದ್ದು ನಿಂತರು. ಪರಸ್ಪರ ಅವರು ಒಬ್ಬರನ್ನೊಬ್ಬರು ಭೇಟಿಯಾಗಲು ಬಹಳ ದಿನಗಳಿಂದ ಕಾತುರರಾಗಿದ್ದರು. ಅದರಿಂದ ಒಬ್ಬರ ನ್ನೊಬ್ಬರು ಬಹಳ ಹೊತ್ತಿನವರೆಗೆ ಗಾಢವಾಗಿ ಆಲಿಂಗಿಸಿಕೊಂಡೇ ಇದ್ದರು. ॥ ೩೩ ॥ ವಸುದೇವನು ಅತ್ಯಂತ ಪ್ರೇಮವಿಹ್ವಲನಾಗಿ ನಂದಗೋಪನನ್ನು ಅಪ್ಪಿಕೊಂಡನು. ಕಂಸನು ಯಾವ ರೀತಿಯಿಂದ ಸತಾಯಿಸುತ್ತಿದ್ದನು, ತನ್ನ ಪುತ್ರರನ್ನು ಗೋಕುಲಕ್ಕೆ ಕೊಂಡು ಹೋಗಿ ನಂದರಾಜನಲ್ಲಿ ಹೇಗೆ ಇರಿಸಿದೆನು, ಹೀಗೆ ಎಲ್ಲ ಘಟನೆಗಳು ಒಂದೊಂದಾಗಿ ಅವನಿಗೆ ನೆನಪಾದುವು. ॥ ೩೪ ॥

ಕೃಷ್ಣರಾಮೌ ಪರಿಷ್ವಜ್ಯ ಪಿತರಾವಭಿವಾದ್ಯ ಚ ।
ನ ಕಿಂಚನೋಚತುಃ ಪ್ರೇಮ್ಣಾ ಸಾಶ್ರುಕಂಠೌ ಕುರೂದ್ವಹ
॥ ೩೫ ॥

ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ತಾಯಿ ಯಶೋದೆಯನ್ನು ತಂದೆ ನಂದಗೋಪನನ್ನು ಪ್ರೇಮಾದರದಿಂದ ಅಪ್ಪಿಕೊಂಡು, ಚರಣಗಳಲ್ಲಿ ವಂದಿಸಿಕೊಂಡರು. ಪರೀಕ್ಷಿತನೇ! ಆ ಸಮಯದಲ್ಲಿ ಪ್ರೇಮೋದ್ರೇಕದಿಂದ ಸಹೋದರರಿಬ್ಬರ ಗಂಟಲು ಕಟ್ಟಿಕೊಂಡು ಏನನ್ನೂ ಮಾತನಾಡದಾದರು. ॥ ೩೫ ॥

ತಾವಾತ್ಮಾಸನಮಾರೋಪ್ಯ ಬಾಹುಭ್ಯಾಂ ಪರಿರಭ್ಯ ಚ ।
ಯಶೋದಾ ಚ ಮಹಾಭಾಗಾ ಸುತೌ ವಿಜಹತುಃ ಶುಚಃ
॥ ೩೬ ॥

ಮಹಾಭಾಗ್ಯಶಾಲಿಯಾದ ಯಶೋದೆ ಮತ್ತು ನಂದರಾಜನು ಪುತ್ರರಿಬ್ಬರನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡು, ಗಾಢವಾಗಿ ಬಿಗಿದಪ್ಪಿಕೊಂಡರು. ಬಹಳ ಕಾಲದಿಂದ ಕಾಣದೇ ಇದ್ದ ಅವರ ಹೃದಯದ ದುಃಖವೆಲ್ಲವೂ ಅಳಿದುಹೋಯಿತು. ॥ ೩೬ ॥

ರೋಹಿಣೀ ದೇವಕೀ ಚಾಥ ಪರಿಷ್ವಜ್ಯ ವ್ರಜೇಶ್ವರೀಮ್ ।
ಸ್ಮರಂತ್ಯೌ ತತ್ಕೃತಾಂ ಮೈತ್ರಿಂ ಬಾಷ್ಪಕಂಠ್ಯೌ ಸಮೂಚತುಃ
॥ ೩೭ ॥

ವಸುದೇವನ ಪತ್ನಿಯರಾದ ದೇವಕೀ-ರೋಹಿಣಿಯರು ವ್ರಜೇಶ್ವರಿಯಾದ ಯಶೋದೆಯನ್ನು ಗಾಢವಾಗಿ ಆಲಿಂಗಿಸಿಕೊಂಡು ಆನಂದ ಬಾಷ್ಪಗಳನ್ನು ಸುರಿಸಿದರು. ತಮ್ಮ ಹಿಂದಿನ ಮೈತ್ರಿಯನ್ನು ಮತ್ತು ಯಶೋದೆಯು ಮಾಡಿದ ಉಪಕಾರವನ್ನು ಜ್ಞಾಪಿಸಿಕೊಳ್ಳುತ್ತಾ ಅವರು ಯಶೋದೆಯ ಬಳಿ ಹೇಳಿದರು – ॥ ೩೭ ॥

ಕಾ ವಿಸ್ಮರೇತ ವಾಂ ಮೈತ್ರೀಮನಿವೃತ್ತಾಂ ವ್ರಜೇಶ್ವರಿ ।
ಅವಾಪ್ಯಾಪ್ಯೈಂದ್ರಮೈಶ್ವರ್ಯಂ ಯಸ್ಯಾ ನೇಹ ಪ್ರತಿಕ್ರಿಯಾ
॥ ೩೮ ॥

ಯಶೋದಾದೇವಿಯೇ! ನಿನ್ನ ಮತ್ತು ವ್ರಜೇಶ್ವರನಾದ ನಂದಗೋಪನ ಸುಸ್ಥಿರವಾದ ಮೈತ್ರಿಯನ್ನು ಯಾವಳು ತಾನೇ ಮರೆಯಬಲ್ಲಳು? ಇಂದ್ರನ ಐಶ್ವರ್ಯವನ್ನೇ ಪಡೆದುಕೊಂಡು ನಿಮಗೆ ಕೊಟ್ಟರೂ ನೀವು ಮಾಡಿದ ಉಪಕಾರವನ್ನು ತೀರಿಸಲಾಗದು. ॥ ೩೮ ॥

ಏತಾವದ್ಧ್ಯಷ್ಟಪಿತರೌ ಯುವಯೋಃ ಸ್ಮ ಪಿತ್ರೋಃ
ಸಂಪ್ರೀಣನಾಭ್ಯುದಯಪೋಷಣಪಾಲನಾನಿ ।
ಪ್ರಾಪ್ಯೋಷತುರ್ಭವತಿ ಪಕ್ಷ್ಮ ಹ ಯದ್ವದಕ್ಷ್ಣೋ-
ರ್ನ್ಯಸ್ತಾವಕುತ್ರ ಚ ಭಯೌ ನ ಸತಾಂ ಪರಃ ಸ್ವಃ ॥ ೩೯ ॥

ದೇವಿ! ಬಲರಾಮ - ಶ್ರೀಕೃಷ್ಣರು ತಂದೆ-ತಾಯಿಯರನ್ನೇ ಕಾಣದ್ದಾಗ ಇವರ ತಂದೆಯು ಇವರನ್ನು ನ್ಯಾಸರೂಪವಾಗಿ ನಿಮ್ಮಲ್ಲಿ ಬಿಟ್ಟು ಬಂದರು. ಆ ಸಮಯದಲ್ಲಿ ನೀವು ಇವರಿಬ್ಬರನ್ನೂ ರೆಪ್ಪೆಗಳು ಕಣ್ಣನ್ನು ರಕ್ಷಿಸುವಂತೆ ರಕ್ಷಿಸಿದಿರಿ. ನೀವು ಈ ಮಕ್ಕಳನ್ನು ನಿಮ್ಮ ಮುದ್ದು ಮಕ್ಕಳೆಂದೇ ಭಾವಿಸಿ ಪ್ರೀತಿಸಿದಿರಿ, ಬೆಳೆಸಿದಿರಿ, ಲಾಲಿಸಿ ಪಾಲಿಸಿದಿರಿ, ಇವರ ಅಭ್ಯುದಯಕ್ಕಾಗಿ ಅನೇಕ ಮಾಂಗಲಿಕ ಉತ್ಸವಗಳನ್ನು ಆಚರಿಸಿದಿರಿ. ನಿಜಹೇಳಬೇಕೆಂದರೆ ಇವರ ತಂದೆ ತಾಯಿಗಳು ನೀವೇ ಆಗಿದ್ದೀರಿ. ನಿಮ್ಮ ಪಾಲನೆಯಲ್ಲಿ ಇವರು ಯಾವ ಭಯವೂ ಇಲ್ಲದೆ ನಿಮ್ಮ ಮನೆಯಲ್ಲಿ ಇದ್ದರು. ಹೀಗೆ ಮಾಡಿದುದು ಸತ್ಪುರುಷರಾದ ನಿಮಗೆ ಅನುಗುಣವೇ ಆಗಿತ್ತು. ಏಕೆಂದರೆ, ಸತ್ಪುರುಷರ ದೃಷ್ಟಿಯಲ್ಲಿ 'ನಮ್ಮದು-ಬೇರೆಯವರದ್ದು' ಎಂಬ ಭೇದ-ಭಾವವೇ ಇರುವುದಿಲ್ಲ, ಹೀಗೆ ಹೇಳುತ್ತ ಯಶೋದೆಯನ್ನು ಬಹಳವಾಗಿ ಶ್ಲಾಘಿಸಿದರು. ॥ ೩೯ ॥

ಶ್ರೀಶುಕ ಉವಾಚ

ಗೋಪ್ಯಶ್ಚ ಕೃಷ್ಣಮುಪಲಭ್ಯ ಚಿರಾದಭೀಷ್ಟಂ-
ಯತ್ಪ್ರೇಕ್ಷಣೇ ದೃಶಿಷು ಪಕ್ಷ್ಮಕೃತಂ ಶಪಂತಿ ।
ದೃಗ್ಭಿರ್ಹೃದೀಕೃತಮಲಂ ಪರಿರಭ್ಯ ಸರ್ವಾಃ
ತದ್ಭಾವಮಾಪುರಪಿ ನಿತ್ಯಯುಜಾಂ ದುರಾಪಮ್ ॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಗೋಪಿಯರಿಗೆ ಪರಮಪ್ರಿಯತಮನೂ, ಜೀವನಸರ್ವಸ್ವನೂ ಶ್ರೀಕೃಷ್ಣನೇ ಆಗಿದ್ದನು ಎಂದು ನಾನು ಹೇಳಿದನಷ್ಟೆ! ಅವನನ್ನು ದರ್ಶನಮಾಡುವಾಗ ರೆಪ್ಪೆಗಳು ಮುಚ್ಚಿಕೊಂಡಾಗ ಅವರು ಆ ರೆಪ್ಪೆಗಳನ್ನು ಸೃಷ್ಟಿಸಿದವನನ್ನೇ ಬೈಯುತ್ತಿದ್ದರು. ಅಂತಹ ಪ್ರೇಮಮೂರ್ತಿಗಳಾದ ಗೋಪಿಯರಿಗೆ ಬಹಳ ದಿನಗಳ ಬಳಿಕ ಇಂದು ಭಗವಾನ್ ಶ್ರೀಕೃಷ್ಣನ ದರ್ಶನವಾಯಿತು. ಇದಕ್ಕಾಗಿ ಅವರ ಮನಸ್ಸಿನಲ್ಲಿದ್ದ ಅಭಿಲಾಷೆಯನ್ನು ಯಾರೂ ಅಳೆಯಲಾರರು. ಅವರು ಕಂಗಳ ಮೂಲಕ ತಮ್ಮ ಪ್ರಿಯತಮ ಶ್ರೀಕೃಷ್ಣನನ್ನು ಹೃದಯಕ್ಕೊಯ್ದು ಗಾಢವಾಗಿ ಆಲಿಂಗಿಸಿಕೊಂಡರು ಮತ್ತು ಮನಸ್ಸಿನಲ್ಲೇ ಆಲಿಂಗಿಸಿಕೊಂಡು ತನ್ಮಯರಾಗಿಬಿಟ್ಟರು. ಪರೀಕ್ಷಿತನೇ! ನಿತ್ಯ-ನಿರಂತರ ಅಭ್ಯಾಸ ಮಾಡುವಂತಹ ಯೋಗಿಗಳಿಗೂ ಅತ್ಯಂತ ದುರ್ಲಭವಾದ ಭಾವಸ್ಥಿತಿಯನ್ನು ಅಂದು ಅವರು ಪಡೆದುಕೊಂಡರು. ॥ ೪೦ ॥

ಭಗವಾಂಸ್ತಾಸ್ತಥಾಭೂತಾ ವಿವಿಕ್ತ ಉಪಸಂಗತಃ ।
ಆಶ್ಲಿಷ್ಯಾನಾಮಯಂ ಪೃಷ್ಟ್ವಾ ಪ್ರಹಸನ್ನಿದಮಬ್ರವೀತ್
॥ ೪೧ ॥

ಅಪಿ ಸ್ಮರಥ ನಃ ಸಖ್ಯಃ ಸ್ವಾನಾಮರ್ಥಚಿಕೀರ್ಷಯಾ ।
ಗತಾಂಶ್ಚಿರಾಯಿತಾನ್ ಶತ್ರುಪಕ್ಷಕ್ಷಪಣಚೇತಸಃ
॥ ೪೨ ॥

ಅಪ್ಯವಧ್ಯಾಯಥಾಸ್ಮಾನ್ ಸ್ವಿದಕೃತಜ್ಞಾವಿಶಂಕಯಾ ।
ನೂನಂ ಭೂತಾನಿ ಭಗವಾನ್ ಯುನಕ್ತಿ ವಿಯುನಕ್ತಿ ಚ
॥ ೪೩ ॥

ವಾಯುರ್ಯಥಾ ಘನಾನೀಕಂ ತೃಣಂ ತೂಲಂ ರಜಾಂಸಿ ಚ ।
ಸಂಯೋಜ್ಯಾಕ್ಷಿಪತೇ ಭೂಯಸ್ತಥಾ ಭೂತಾನಿ ಭೂತಕೃತ್
॥ ೪೪ ॥

ಮಯಿ ಭಕ್ತಿರ್ಹಿ ಭೂತಾನಾಮಮೃತತ್ವಾಯ ಕಲ್ಪತೇ ।
ದಿಷ್ಟ್ಯಾ ಯದಾಸೀನ್ಮತ್ಸ್ನೇಹೋ ಭವತೀನಾಂ ಮದಾಪನಃ
॥ ೪೫ ॥

ಅಹಂ ಹಿ ಸರ್ವಭೂತಾನಾಮಾದಿರಂತೋಽಂತರಂ ಬಹಿಃ ।
ಭೌತಿಕಾನಾಂ ಯಥಾ ಖಂ ವಾರ್ಭೂರ್ವಾಯುರ್ಜ್ಯೋತಿರಂಗನಾಃ
॥ ೪೬ ॥

ಏವಂ ಹ್ಯೇತಾನಿ ಭೂತಾನಿ ಭೂತೇಷ್ವಾತ್ಮಾತ್ಮನಾ ತತಃ ।
ಉಭಯಂ ಮಯ್ಯಥ ಪರೇ ಪಶ್ಯತಾಭಾತಮಕ್ಷರೇ
॥ ೪೭ ॥

ಶ್ರೀಶುಕ ಉವಾಚ

ಅಧ್ಯಾತ್ಮಶಿಕ್ಷಯಾ ಗೋಪ್ಯ ಏವಂ ಕೃಷ್ಣೇನ ಶಿಕ್ಷಿತಾಃ ।
ತದನುಸ್ಮರಣಧ್ವಸ್ತಜೀವಕೋಶಾಸ್ತಮಧ್ಯಗನ್
॥ ೪೮ ॥

ಗೋಪಿಯರು ತನ್ನಲ್ಲಿ ತನ್ಮಯರಾಗಿ ಬಿಟ್ಟಿದ್ದಾರೆ ಎಂದು ನೋಡಿದ ಭಗವಾನ್ ಶ್ರೀಕೃಷ್ಣನು ಏಕಾಂತದಲ್ಲಿ ಅವರ ಬಳಿಗೆ ಹೋದನು. ಅವರನ್ನು ಆಪ್ತಿಕೊಂಡನು. ಕ್ಷೇಮ-ಸಮಾಚಾರವನ್ನು ಕೇಳುತ್ತಾ, ನಸು-ನಗುತ್ತಾ ಹೀಗೆ ಹೇಳಿದನು – ॥ ೪೧ ॥ ಸಖಿಯರೇ ! ನಾವು ನಮ್ಮ ಸ್ವಜನ-ಸಂಬಂಧಿಗಳ ಕೆಲಸವನ್ನು ಮಾಡುವುದಕ್ಕಾಗಿ ವ್ರಜದಿಂದ ಹೊರಗೆ ಮತ್ತು ಹೀಗೆ ನಿಮ್ಮಂತಹ ಪ್ರೇಯಸಿಯರನ್ನು ಬಿಟ್ಟು ನಾವು ಶತ್ರುಗಳನ್ನು ನಾಶಮಾಡುವುದರಲ್ಲಿ ತೊಡಗಿ ಬಿಟ್ಟೆವು. ಬಹಳದಿನಗಳು ಕಳೆದುವು ಎಂದಾದರು ನೀವುಗಳು ನಮ್ಮನ್ನು ಸ್ಮರಿಸುತ್ತಿರೇನು ? ॥ ೪೨ ॥ ಪ್ರಿಯಗೋಪಿಯರೇ ! ಮಾಡಿದ ಉಪಕಾರವನ್ನು ಸ್ಮರಿಸುವವನಲ್ಲವೆಂದು ಭಾವಿಸಿ ನನ್ನನ್ನು ಕಡೆಗಾಣಿಸಿ ಬಿಟ್ಟಿದ್ದೀರಾ ? ಹಾಗೆ ನನ್ನನ್ನು ತಿಳಿಯಬೇಡಿರಿ. ಸೇರುವಿಕೆಯೂ ಅಗಲುವಿಕೆಯೂ ನಮ್ಮ ಅಧೀನದಲ್ಲಿಲ್ಲ. ಭಗವಂತನೇ ಪ್ರಾಣಿಗಳ ಸಂಯೋಗ ಮತ್ತು ವಿಯೋಗಕ್ಕೆ ಕಾರಣನಾಗಿದ್ದಾನೆ. ॥ ೪೩ ॥ ವಾಯುವು ಮೋಡಗಳನ್ನು ಹುಲ್ಲುಕಡ್ಡಿಗಳನ್ನು, ಹತ್ತಿಯನ್ನು ಧೂಳಿನ ಕಣಗಳನ್ನು ಒಮ್ಮೆ ಒಂದಾಗಿಸಿ ಮತ್ತೊಮ್ಮೆ ಛಿದ್ರಗೊಳಿಸುತ್ತದೆಯೋ ಹಾಗೆಯೇ ಸಮಸ್ತ ಪದಾರ್ಥಗಳ ಸೃಷ್ಟಿಕರ್ತನಾದ ಭಗವಂತನು ಪ್ರಾಣಿಗಳಿಗೆ ಸ್ವೇಚ್ಛೆಯಿಂದ ಸಂಯೋಗ-ವಿಯೋಗಗಳನ್ನು ಉಂಟುಮಾಡುತ್ತಾನೆ. ॥ ೪೪ ॥ ಸಖಿಯರೇ ! ನನ್ನನ್ನು ಪಡೆಯುವಂತಹ ಪರಮಪ್ರೇಮವು ನಿಮಗೆಲ್ಲರಿಗೆ ಪ್ರಾಪ್ತವಾಗಿರುವುದು ದೊಡ್ಡ ಸೌಭಾಗ್ಯದ ಮಾತಾಗಿದೆ. ಏಕೆಂದರೆ, ನನ್ನ ಕುರಿತು ಉಂಟಾದ ಪ್ರೇಮಾ-ಭಕ್ತಿಯು ಪ್ರಾಣಿಗಳಿಗೆ ಅಮೃತತ್ತ್ವವನ್ನು ದೊರಕಿಸುವುದರಲ್ಲಿ ಸಮರ್ಥವಾಗಿದೆ. ॥ ೪೫ ॥ ಪ್ರಿಯ ಗೋಪಿಯರೇ ! ಘಟ-ಪಟಗಳೇ ಮೊದಲಾದ ಭೌತಿಕ ಪದಾರ್ಥಗಳಿಗೆ ಪಂಚಭೂತಗಳಾದ ಪೃಥಿವಿ, ಜಲ, ವಾಯು, ಅಗ್ನಿ ಆಕಾಶಗಳೇ ಮೂಲಕಾರಣವಾಗಿದ್ದು ಅವುಗಳ ಹೊರಗೂ, ಒಳಗೂ ಇದ್ದು ಅವುಗಳಲ್ಲಿ ಹಾಸುಹೊಕ್ಕಾಗಿದೆಯೋ ಹಾಗೆಯೇ ನಾನು ಸಮಸ್ತ ಪ್ರಾಣಿಗಳ ಆದಿಯೂ, ಮಧ್ಯನೂ, ಅಂತ್ಯನೂ ಹಾಗೂ ಅವುಗಳ ಹೊರಗೆ, ಒಳಗೆ ಕೇವಲ ನಾನೇ ವ್ಯಾಪಿಸಿಕೊಂಡಿದ್ದೇನೆ. ॥ ೪೬ ॥ ಹೀಗೆ ಸಮಸ್ತ ಪ್ರಾಣಿಗಳ ಶರೀರಗಳಲ್ಲಿಯೂ ಈ ಪಂಚಭೂತಗಳೇ ಕಾರಣರೂಪದಿಂದ ಉಪಸ್ಥಿತವಾಗಿವೆ. ಆತ್ಮನು ಭೋಕ್ತೃವಿನ ರೂಪದಲ್ಲಿ ಅಥವಾ ಜೀವರೂಪದಿಂದ ಇದ್ದಾನೆ. ನಾನಾದರೋ ಇವೆರಡರಿಂದಲೂ ಬೇರೆಯಾಗಿ ಅವಿನಾಶಿಯಾದ ಸತ್ಯಸ್ವರೂಪದಲ್ಲಿರುತ್ತೇನೆ. ಆದುದರಿಂದ ಇವೆರಡೂ ನನ್ನೊಳಗೆ ಕಂಡುಬರುತ್ತವೆ. ಹೀಗೆ ನೀವೆಲ್ಲರೂ ಕಂಡುಕೊಳ್ಳಿರಿ. ॥ ೪೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಹೀಗೆ ಗೋಪಿಯರಿಗೆ ಅಧ್ಯಾತ್ಮಜ್ಞಾನದ ಉಪದೇಶವನ್ನಿತ್ತನು. ಇಂತಹ ಭಗವದುಪದೇಶವನ್ನು ಪದೇ-ಪದೇ ಸ್ಮರಿಸಿಕೊಳ್ಳುತ್ತಾ ಗೋಪಿಯರ ಜೀವಕೋಶ (ಲಿಂಗಶರೀರ) ನಾಶವಾಗಿ ಹೋಯಿತು. ಅವರೆಲ್ಲರೂ ಭಗವಂತನ ನಿಜಸ್ವರೂಪವನ್ನು ಹೊಂದಿದರು. ॥ ೪೮ ॥

ಆಹುಶ್ಚ ತೇ ನಲಿನನಾಭ ಪದಾರವಿಂದಂ
ಯೋಗೇಶ್ವರೈರ್ಹೃದಿ ವಿಚಿಂತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಂಬಂ
ಗೇಹಂಜುಷಾಮಪಿ ಮನಸ್ಯುದಿಯಾತ್ಸದಾ ನಃ ॥ ೪೯ ॥

ಆನಂದತುಂದಿಲರಾದ ಅವರು ಶ್ರೀಕೃಷ್ಣನನ್ನು ಹೀಗೆ ಪ್ರಾರ್ಥಿಸಿಕೊಂಡರು – ಓ ಕಮಲನಾಭನೆ! ಜ್ಞಾನ ಸಂಪನ್ನರಾದ ಮಹಾ-ಮಹಾಯೋಗಿಗಳು ತಮ್ಮ ಹೃದಯಕಮಲಗಳಲ್ಲಿ ನಿನ್ನ ದಿವ್ಯವಾದ ಚರಣಕಮಲಗಳನ್ನು ಸದಾ ಧ್ಯಾನ ಮಾಡುತ್ತಿರುತ್ತಾರೆ. ಸಂಸಾರ ಕೂಪದಲ್ಲಿ ಬಿದ್ದಿರುವ ಜನರಿಗೆ ಪಾರಾಗಲು ನಿನ್ನ ಚರಣಕಮಲಗಳೇ ಏಕಮಾತ್ರ ಆವಲಂಬನೆಯಾಗಿದೆ. ಪ್ರಭೋ! ನಿನ್ನ ಚರಣಕಮಲಗಳು ಮನೆವಾರ್ತೆಯ ಕೆಲಸ ಮಾಡುತ್ತಿದ್ದರೂ ಸದಾಕಾಲ ನಮ್ಮ ಹೃದಯದಲ್ಲಿ ವಿರಾಜಿಸುತ್ತಿರಲಿ; ನಾವು ಒಂದು ಕ್ಷಣವೂ ಅದನ್ನು ಮರೆಯದಂತೆ ದಯಮಾಡಿ ಅನುಗ್ರಹಿಸು. ॥ ೪೯ ॥

ಎಂಭತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೮೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ವೃಷ್ಣಿಗೋಪಸಂಗಮೋನಾಮ ದ್ವ್ಯಶೀತಿತಮೋऽಧ್ಯಾಯಃ॥ ೮೨ ॥

ಎಂಭತ್ತಮೂರನೆಯ ಅಧ್ಯಾಯ

ಶ್ರೀಕೃಷ್ಣನ ಪಟ್ಟದರಸಿಯರೊಡನೆ ದ್ರೌಪದಿಯ ಮಾತುಕತೆ

ಶ್ರೀಶುಕ ಉವಾಚ

ತಥಾನುಗೃಹ್ಯ ಭಗವಾನ್ ಗೋಪೀನಾಂ ಸ ಗುರುರ್ಗತಿಃ ।
ಯುಧಿಷ್ಠಿರಮಥಾಪೃಚ್ಛತ್ಸರ್ವಾಂಶ್ಚ ಸುಹೃದೋऽವ್ಯಯಮ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ! ಗೋಪಿಯರಿಗೆ ಪರಮಗುರುವೂ, ಪರಮಾಶ್ರಯನೂ ಆದ ಶ್ರೀಕೃಷ್ಣನು ನಾನು ಹಿಂದೆ ಹೇಳಿದ ಪ್ರಕಾರ ಗೋಪಿಯರಿಗೆ ಅಧ್ಯಾತ್ಮ ಶಿಕ್ಷಣವನ್ನು ಕೊಟ್ಟು ಅನುಗ್ರಹಿಸಿ, ಯುಧಿಷ್ಠಿರನ ಮತ್ತು ಇತರ ಸಮಸ್ತ ಸುಹೃದರ ಕುಶಲಗಳನ್ನು ಕೇಳಿದನು. ॥ ೧ ॥

ತ ಏವಂ ಲೋಕನಾಥೇನ ಪರಿಪೃಷ್ಟಾಃ ಸುಸತ್ಕೃತಾಃ ।
ಪ್ರತ್ಯೂಚುರ್ಹೃಷ್ಟಮನಸಸ್ತತ್ಪಾದೇಕ್ಷಾಹತಾಂಹಸಃ
॥ ೨ ॥

ಲೋಕನಾಥನಾದ ಶ್ರೀಕೃಷ್ಣನಿಂದ ಸತ್ಕೃತರಾಗಿ ಕುಶಲಪ್ರಶ್ನೆ ಮಾಡಲ್ಪಟ್ಟು ಹಾಗೂ ಆ ಭಗವಂತನ ದಿವ್ಯಪಾದಾರವಿಂದಗಳ ದರ್ಶನಮಾತ್ರದಿಂದಲೇ ಸಮಸ್ತ ಪಾಪಗಳಿಂದ ವಿಮುಕ್ತರಾದ ಯುಧಿಷ್ಠಿರನೇ ಮೊದಲಾದವರು ಪರಮಸಂತುಷ್ಟರಾಗಿ ವಾಸುದೇವನಲ್ಲಿ ಹೇಳಿದರು. ॥ ೨ ॥

ಕುತೋऽಶಿವಂ ತ್ವಚ್ಚರಣಾಂಬುಜಾಸವಂ
ಮಹನ್ಮನಸ್ತೋ ಮುಖನಿಃಸೃತಂ ಕ್ವಚಿತ್ ।
ಪಿಬಂತಿ ಯೇ ಕರ್ಣಪುಟೈರಲಂ ಪ್ರಭೋ
ದೇಹಂಭೃತಾಂ ದೇಹಕೃದಸ್ಮೃತಿಚ್ಛಿದಮ್ ॥ ೩ ॥

ಭಗವಂತಾ! ಮಹಾ ಪುರಷರು ಸದಾಕಾಲ ತಮ್ಮ ಮನಸ್ಸಿನಲ್ಲೇ ನಿನ್ನ ಪಾದಾರವಿಂದಗಳ ಮಕರಂದವನ್ನು ಪಾನಮಾಡುತ್ತಾ ಇರುತ್ತಾರೆ. ಕೆಲವೊಮ್ಮೆ ಅವರ ಮುಖಕಮಲದಿಂದ ಲೀಲಾ-ಕಥೆಯ ರೂಪದಲ್ಲಿ ಆ ರಸವು ಹೊರಹೊಮ್ಮುವುದು. ಪ್ರಭೋ! ಅಂತಹ ದಿವ್ಯರಸವನ್ನು ಯಾವುದೇ ಪ್ರಾಣಿಯು ಪಾನಮಾಡಿದರೆ ಅವನ ಜನ್ಮ-ಮೃತ್ಯುವಿನ ಚಕ್ರದಲ್ಲಿ ಕೆಡಹುವ ಅವಿದ್ಯೆಯನ್ನು ನಾಶಮಾಡಿಬಿಡುತ್ತದೆ. ಅಂತಹ ರಸವನ್ನು ಕಿವಿಗಳೆಂಬ ದೊನ್ನೆಯಿಂದ ಪಾನಮಾಡುವವರಿಗೆ ಅಮಂಗಳದ ಆಶಂಕೆಯು ಎಲ್ಲಿಯದು? ॥ ೩ ॥

ಹಿತ್ವಾऽऽತ್ಮಧಾಮ ವಿಧುತಾತ್ಮಕೃತತ್ರ್ಯವಸ್ಥ-
ಮಾನಂದಸಂಪ್ಲವಮಖಿಂಡಮಕುಂಠಬೋಧಮ್ ।
ಕಾಲೋಪಸೃಷ್ಟನಿಗಮಾವನ ಆತ್ತಯೋಗ-
ಮಾಯಾಕೃತಿಂ ಪರಮಹಂಸಗತಿಂ ನತಾಃ ಸ್ಮ ॥ ೪ ॥

ಭಗವಂತನೇ! ನೀನು ಏಕರಸನೂ, ಜ್ಞಾನಸ್ವರೂಪನೂ, ಅಖಿಂಡ ಆನಂದದ ಸಮುದ್ರನೂ ಆಗಿರುವೆ. ಬುದ್ಧಿ-ವೃತ್ತಿಗಳಿಂದ ಉಂಟಾಗುವ ಜಾಗ್ರತ್, ಸ್ವಪ್ನ ಸುಷುಪ್ತಿ - ಈ ಮೂರು ಅವಸ್ಥೆಗಳೂ ನಿನ್ನ ಸ್ವಯಂಪ್ರಕಾಶ ಸ್ವರೂಪದವರೆಗೆ ತಲುಪ ಲಾರವು; ದೂರದಿಂದಲೇ ನಾಶವಾಗಿ ಹೋಗುವುದು. ನೀನು ಪರಮಹಂಸರಿಗೆ ಏಕಮಾತ್ರ ಗತಿಸ್ವರೂಪನು. ಕಾಲಕ್ರಮದಲ್ಲಿ ವೇದಗಳು ಹ್ರಾಸ ಗೊಂಡಿರುವುದನ್ನು ನೋಡಿ, ಅವನ್ನು ರಕ್ಷಿಸಲಿಕ್ಕಾಗಿ ನೀನೇ ಅಚಿಂತ್ಯ ಯೋಗಮಾಯೆಯ ಮೂಲಕ ಮನುಷ್ಯರಂತೆ ಶರೀರವನ್ನು ಗ್ರಹಿಸುತ್ತೀಯೆ. ಅಂತಹ ನಿನ್ನ ಚರಣಗಳಲ್ಲಿ ನಾವು ಪದೇ-ಪದೇ ನಮಸ್ಕರಿಸುತ್ತೇವೆ. ॥ ೪ ॥

ಋಷಿರುವಾಚ

ಇತ್ಯುತ್ತಮಶ್ಲೋಕಶಿಖಾಮಣಿಂ ಜನೇ-
ಷ್ವಭಿಷ್ಟುವತ್ಸ್ವಂಧಕಕೌರವಸ್ತ್ರಿಯಃ ।
ಸಮೇತ್ಯ ಗೋವಿಂದ ಕಥಾ ಮಿಥೋऽಗೃಣಂ-
ಸ್ತ್ರಿಲೋಕಗೀತಾಃ ಶೃಣು ವರ್ಣಯಾಮಿ ತೇ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಯುಧಿಷ್ಠಿರಾದಿಗಳು ಶ್ರೀಕೃಷ್ಣನನ್ನು ಸ್ತುತಿಸುತ್ತಿದ್ದಾಗ ಯಾದವ ಸ್ತ್ರೀಯರು ಮತ್ತು ಕೌರವ ಕುಲದ ಸ್ತ್ರೀಯರು ಒಟ್ಟಾಗಿ ಕುಳಿತು ಪರಸ್ಪರವಾಗಿ ಭಗವಂತನ ತ್ರಿಭುವನವಿಖ್ಯಾತವಾದ ಲೀಲೆಗಳನ್ನು ಮಾತನಾಡಿಕೊಳ್ಳುತ್ತಿದ್ದರು. ಈಗ ನಾನು ನಿನಗೆ ಅವರ ಮಾತು ಗಳನ್ನು ವರ್ಣಿಸುವೆನು. ಏಕಾಗ್ರಚಿತ್ತನಾಗಿ ಕೇಳು. ॥ ೫ ॥

ದ್ರೌಪದ್ಯುವಾಚ

ಹೇ ವೈದರ್ಭ್ಯಚ್ಯುತೋ ಭದ್ರೇ ಹೇ ಜಾಂಬವತಿ ಕೌಸಲೇ ।
ಹೇ ಸತ್ಯಭಾಮೇ ಕಾಲಿಂದಿ ಶೈಬ್ಯೇ ರೋಹಿಣಿ ಲಕ್ಷ್ಮಣೇ
॥ ೬ ॥

ದ್ರೌಪದಿಯು ಹೇಳಿದಳು - ಎಲೌ ರುಕ್ಮಿಣಿಯೇ! ಭದ್ರೆ! ಜಾಂಬವತಿ! ಸತ್ಯೆ! ಸತ್ಯಭಾಮೆ! ಕಾಲಿಂದಿ! ಶೈಬ್ಯೆ! ಮಿತ್ರವಿಂದೆ! ಲಕ್ಷ್ಮಣೇ! ರೋಹಿಣಿಯೇ! ಮತ್ತು ಶ್ರೀಕೃಷ್ಣನ ಇತರ ಪತ್ನಿಯರೇ! ಸಾಕ್ಷಾತ್ ಭಗವಾನ್ ಶ್ರೀಕೃಷ್ಣನು ತನ್ನ ಮಾಯೆ ಯಿಂದ ಲೋಕಾಚಾರವನ್ನು ಅನುಸರಿಸುತ್ತಾ ಯಾವ ರೀತಿಯಿಂದ ನಿಮ್ಮೆಲ್ಲರನ್ನು ಮದುವೆಯಾದನು? ಇದನ್ನು ಕೇಳುವ ಉತ್ಸುಕತೆ ನಮಗಿದೆ. ನಿಮ್ಮ-ನಿಮ್ಮ ವಿವಾಹ ಪ್ರಸಂಗವನ್ನು ವಿವರಿಸಿ ಹೇಳಿರಿ. ॥ ೬-೭ ॥

ಹೇ ಕೃಷ್ಣಪತ್ನ್ಯ ಏತನ್ನೋ ಬ್ರೂತವೋ ಭಗವಾನ್ ಸ್ವಯಮ್ ।
ಉಪಯೇಮೇ ಯಥಾ ಲೋಕಮನುಕುರ್ವನ್ನಮಾಯಯಾ
॥ ೭ ॥

ರುಕ್ಮಿಣ್ಯುವಾಚ

ಚೈದ್ಯಾಯ ಮಾರ್ಪಯಿತುಮುದ್ಯತಕಾರ್ಮುಕೇಷು
ರಾಜಸ್ವಜೇಯಭಟಶೇಖರಿತಾಂಘ್ರಿರೇಣುಃ ।
ನಿಘ್ನೇ ಮೃಗೇಂದ್ರ ಇವ ಭಾಗಮಜಾವಿಯೂಥಾತ್
ತಚ್ಛ್ರೀನಿಕೇತ ಚರಣೋऽಸ್ತು ಮಮಾರ್ಚನಾಯ ॥ ೮ ॥

ರುಕ್ಮಿಣಿಯು ಹೇಳುತ್ತಾಳೆ - ದ್ರೌಪದಾದೇವೀ! ಜರಾಸಂಧನೇ ಮೊದಲಾದ ಸಮಸ್ತರಾಜರು ನನ್ನ ವಿವಾಹವು ಶಿಶುಪಾಲನೊಂದಿಗೆ ಆಗಬೇಕೆಂದು ಬಯಸುತ್ತಿದ್ದರು. ಅದಕ್ಕಾಗಿ ಅವರೆಲ್ಲರೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಯುದ್ಧಮಾಡಲು ಸಿದ್ಧರಾಗಿ ದ್ದರು. ಆದರೆ ಭಗವಂತನು - ಸಿಂಹವು ಕುರಿಯ ಮಂದೆಗೆ ನುಗ್ಗಿ ತನ್ನ ಭಾಗವನ್ನು ಕೊಂಡೊಯ್ಯುವಂತೆ ಆ ರಾಜರ ಮಧ್ಯದಿಂದ ನನ್ನನ್ನು ಕೊಂಡೊಯ್ದನು. ಸಮಸ್ತ ಸಂಪತ್ತಿಗೂ, ಸೌಂದರ್ಯಕ್ಕೂ ಆಶ್ರಯವಾದ ಆ ಭಗವಂತನ ಚರಣಕಮಲಗಳೇ ಜನ್ಮ-ಜನ್ಮ ಗಳಲ್ಲಿ ನನ್ನ ಆರಾಧನೆಗೆ ಲಭಿಸುವಂತಾಗಲಿ. ॥ ೮ ॥

ಸತ್ಯಭಾಮೋವಾಚ

ಯೋ ಮೇ ಸನಾಭಿವಧತಪ್ತಹೃದಾ ತತೇನ
ಲಿಪ್ತಾಭಿಶಾಪಮಪಮಾರ್ಷ್ಟುಮುಪಾಜಹಾರ ।
ಜಿತ್ವರ್ಕ್ಷರಾಜಮಥ ರತ್ನಮದಾತ್ಸತೇನ
ಭೀತಃ ಪಿತಾದಿಶತ ಮಾಂ ಪ್ರಭವೇऽಪಿ ದತ್ತಾಮ್ ॥ ೯ ॥

ಸತ್ಯಭಾಮೆಯು ಹೇಳುತ್ತಾಳೆ - ದ್ರೌಪದಿಯೇ! ನನ್ನ ತಂದೆಯು ತಮ್ಮನಾದ ಪ್ರಸೇನನ ಮೃತ್ಯುವಿನಿಂದಾಗಿ ಬಹಳ ದುಃಖಿತನಾಗಿ ದ್ದನು. ಆದ್ದರಿಂದ ಅವನು ತಮ್ಮನ ವಧೆಯ ಕಲಂಕವನ್ನು ಭಗವಂತನಿಗೆ ಹಚ್ಚಿದನು. ಆ ಕಲಂಕವನ್ನು ದೂರ ಮಾಡಲಿಕ್ಕಾಗಿ ಭಗವಂತನು ಋಕ್ಷರಾಜ ಜಾಂಬವಂತನನ್ನು ಜಯಿಸಿ ಆ ಸ್ಯಮಂತಕ ರತ್ನವನ್ನು ತಂದು ನನ್ನ ತಂದೆಗೆ ಕೊಟ್ಟನು. ಮಿಥ್ಯಾಪ ವಾದ ಹೊರಿಸಿದ ಕಾರಣದಿಂದ ಹೆದರಿಹೋಗಿದ್ದ ನನ್ನ ತಂದೆಯು ಬೇರೆಯವರಿಗೆ ವಾಗ್ದಾನಮಾಡಿದ್ದರೂ, ಅವರು ನನ್ನನ್ನು ಸ್ಯಮಂತಕ ಮಣಿಯೊಂದಿಗೆ ಭಗವಂತನ ಚರಣಗಳಲ್ಲಿ ಅರ್ಪಿಸಿದನು. ॥ ೯ ॥

ಜಾಂಬವತ್ಯುವಾಚ

ಪ್ರಾಜ್ಞಾಯ ದೇಹಕೃದಮುಂ ನಿಜನಾಥದೈವಂ
ಸೀತಾಪತಿಂ ತ್ರಿಣವಹಾನ್ಯಮುನಾಭ್ಯಯುಧ್ಯತ್ ।
ಜ್ಞಾತ್ವಾ ಪರೀಕ್ಷಿತ ಉಪಾಹರದರ್ಹಣಂ ಮಾಂ
ಪಾದೌ ಪ್ರಗೃಹ್ಯ ಮಣಿನಾಹಮಮುಷ್ಯ ದಾಸೀ ॥ ೧೦ ॥

ಕಾಲಿಂದ್ಯುವಾಚ

ತಪಶ್ಚರಂತೀಮಾಜ್ಞಾಯ ಸ್ವಪಾದಸ್ಪರ್ಶನಾಶಯಾ ।
ಸಖ್ಯೋಪೇತ್ಯಾಗ್ರಹೀತ್ಪಾಣಿಂ ಯೋಽಹಂ ತದ್ಗೃಹಮಾರ್ಜನೀ
॥ ೧೧ ॥

ಮಿತ್ರವಿಂದೋವಾಚ

ಯೋ ಮಾಂ ಸ್ವಯಂವರ ಉಪೇತ್ಯ ವಿಜಿತ್ಯ ಭೂಪಾನ್
ನಿನ್ಯೇ ಶ್ವಯೂಥಗಮಿವಾತ್ಮಬಲಿಂ ದ್ವಿಷಾರಿಃ ।
ಭ್ರಾತ್ಮಂಶ್ಚ ಮೇಽಪಕುರುತಃ ಸ್ವಪುರಂ ಶ್ರಿಯೌಕ-
ಸ್ತಸ್ಯಾಸ್ತು ಮೇಽನುಭವಮಂಘ್ರ್ಯವನೇಜನತ್ವಮ್ ॥ ೧೨ ॥

ಸತ್ಯೋವಾಚ

ಸಪ್ತೋಕ್ಷಣೋಽತಿಬಲವೀರ್ಯಸುತೀಕ್ಷ್ಣಶೃಂಗಾನ್
ಪಿತ್ರಾಕೃತಾನ್ನೃಪವೀರ್ಯ ಪರೀಕ್ಷಣಾಯ ।
ತಾನ್ವೀರದುರ್ಮದಹನಸ್ತರಸಾ ನಿಗೃಹ್ಯ
ಕ್ರೀಡನ್ಬಬಂಧ ಹ ಯಥಾ ಶಿಶವೋಽಜತೋಕಾನ್ ॥ ೧೩ ॥

ಯ ಇತ್ಥಂ ವೀರ್ಯಶುಲ್ಕಾಂ ಮಾಂ ದಾಸೀಭಿಶ್ಚತುರಂಗಿಣೀಮ್ ।
ಪಥಿ ನಿರ್ಜಿತ್ಯ ರಾಜನ್ಯಾನ್ನಿನ್ಯೇ ತದ್ದಾಸ್ಯಮಸ್ತು ಮೇ
॥ ೧೪ ॥

ಜಾಂಬವತಿಯು ಹೇಳುತ್ತಾಳೆ – ಪಾಂಚಾಲಿಯೇ! ಋಕ್ಷರಾಜನಾದ ನನ್ನ ತಂದೆ ಜಾಂಬವಂತನಿಗೆ ಶ್ರೀಕೃಷ್ಣನು ತನ್ನ ಸ್ವಾಮಿಯಾದ ಸೀತಾಪತಿ ಶ್ರೀರಾಮನೇ ಎಂಬುದು ಮೊದಲು ತಿಳಿದಿರಲಿಲ್ಲ. ಇದರಿಂದ ನನ್ನ ತಂದೆಯು ಇವರೊಂದಿಗೆ ಇಪ್ಪತ್ತೇಳು ದಿನಗಳವರೆಗೆ ಯುದ್ಧಮಾಡಿದನು. ಆದರೆ ಪರೀಕ್ಷೆಯು ಪೂರ್ಣಗೊಂಡಾಗ ಇವನು ಭಗವಾನ್ ಶ್ರೀರಾಮನೇ ಆಗಿರುವನು ಎಂದು ತಿಳಿದಾಗ ಶ್ರೀಕೃಷ್ಣನ ಚರಣಕಮಲಗಳನ್ನು ಹಿಡಿದುಕೊಂಡು ಸ್ಯಮಂತಕ ಮಣಿಯೊಂದಿಗೆ ಕಾಣಿಕೆಯಾಗಿ ನನ್ನನ್ನೂ ಸಮರ್ಪಿಸಿದನು. ಜನ್ಮ-ಜನ್ಮಗಳಲ್ಲಿಯೂ ಇವರ ದಾಸಿಯಾಗಿಯೇ ಇರಬೇಕೆಂದು ನಾನೂ ಬಯಸಿದ್ದೆ. ॥ ೧೦ ॥

ಕಾಲಿಂದಿಯು ಹೇಳುತ್ತಾಳೆ – ದ್ರೌಪದೀದೇವಿ! ನಾನು ಭಗವಂತನ ಚರಣಗಳನ್ನು ಸ್ಪರ್ಶಿಸಬೇಕೆಂಬ ಅಭಿಲಾಷೆಯಿಂದ ತಪಸ್ಸು ಮಾಡುತ್ತಿದ್ದೇನೆ ಎಂದು ತಿಳಿದ ಶ್ರೀಕೃಷ್ಣನು ತನ್ನ ಮಿತ್ರನಾದ ಅರ್ಜುನನೊಂದಿಗೆ ಯಮುನಾತೀರಕ್ಕೆ ಬಂದು ನನ್ನನ್ನು ಪರಿಗ್ರಹಿಸಿದನು. ನಾನು ಅವನ ಮನೆಯ ಕಸಗುಡಿಸುವ ದಾಸಿಯಾಗಿದ್ದೇನೆ. ॥ ೧೧ ॥

ಮಿತ್ರವಿಂದೆಯು ಹೇಳಿದಳು – ಪಾಂಚಾಲರಾಜಕುಮಾರಿ! ನನ್ನ ಸ್ವಯಂವರವನ್ನು ಏರ್ಪಡಿಸಿದ್ದರು. ಅಲ್ಲಿಗೆ ಬಂದು ಭಗವಂತನು – ಸಿಂಹವು ನಾಯಿಗಳ ಮಧ್ಯದಲ್ಲಿರುವ ತನ್ನ ಭಾಗವನ್ನು ಎತ್ತಿಕೊಂಡು ಹೋಗುವಂತೆಯೇ ಅಲ್ಲಿ ನೆರೆದಿದ್ದ ಸಮಸ್ತ ರಾಜರನ್ನು ಗೆದ್ದು ನನ್ನನ್ನು ತನ್ನ ಶೋಭಾಸಂಪನ್ನ ದ್ವಾರಕೆಗೆ ಕರೆತಂದನು. ನನ್ನ ಸಹೋದರರನೂ ಕೂಡ ಭಗವಂತನಿಂದ ಬಿಡಿಸಿ ನನಗೆ ಉಪಕಾರವನ್ನು ಮಾಡಲೆಳಸಿದನು; ಆದರೆ ಅವನೂ ಸೋತು ಹಿಂದಿರುಗಿದನು. ನನಗೆ ಜನ್ಮ-ಜನ್ಮಾಂತರಗಳಲ್ಲಿಯೂ ಭಗವಂತನ ಪಾದಸೇವೆ ಮಾಡುವ ಸೌಭಾಗ್ಯವು ಪ್ರಾಪ್ತವಾಗಲೆಂದೇ ನಾನು ಬಯಸುತ್ತೇನೆ. ॥ ೧೨ ॥

ಸತ್ಯೆಯು ಹೇಳಿದಳು – ದ್ರೌಪದಿ! ನನ್ನ ತಂದೆಯು ಸ್ವಯಂವರಕ್ಕೆ ಆಗಮಿಸುವ ರಾಜಕುಮಾರರ ಬಲ-ಪೌರುಷಗಳನ್ನು ಪರೀಕ್ಷಿಸುವ ಸಲುವಾಗಿ ಬಲಿಷ್ಠವಾಗಿದ್ದ, ಪರಾಕ್ರಮಿಗಳಾದ ಮತ್ತು ತೀಕ್ಷ್ಣವಾದ ಕೊಂಬುಗಳಿಂದ ಭಯಂಕರವಾಗಿ ಕಾಣುತ್ತಿದ್ದ ಏಳು ಹೋರಿಗಳನ್ನು ಸಿದ್ಧಗೊಳಿಸಿದ್ದನು. ಆ ಹೋರಿಗಳನ್ನು ಪಳಗಿಸಿದವನಿಗೆ ನನ್ನನ್ನು ಕೊಡುವುದಾಗಿ ನನ್ನ ತಂದೆಯ ಆಶಯವಾಗಿತ್ತು. ನನ್ನ ಕೈಹಿಡಿಯಲು ಬಂದಿದ್ದ ಹಲವಾರು ರಾಜಕುಮಾರರನ್ನು ಆ ಹೋರಿಗಳು ಛಿನ್ನ-ಭಿನ್ನಗೊಳಿಸಿದ್ದವು. ಆದರೆ ನನ್ನ ಪ್ರಭುವಾದ ಶ್ರೀಕೃಷ್ಣನು ಆ ಏಳು ಹೋರಿಗಳನ್ನು – ಬಾಲಕರು ಮೇಕೆಯ ಮರಿಗಳನ್ನು ಹಿಡಿದು ಕಟ್ಟಿಹಾಕುವಂತೆ ಆಟವಾಡುತ್ತಲೇ ಬಂದಿಸಿಬಿಟ್ಟನು. ॥ ೧೩॥ ಹೀಗೆ ಭಗವಂತನು ಬಲ-ಪೌರುಷಗಳಿಂದ ನನ್ನನ್ನು ಪಡೆದುಕೊಂಡು ಚತುರಂಗ ಸೈನ್ಯದೊಂದಿಗೆ ಮತ್ತು ಹಲವಾರು ದಾಸಿಯರೊಂದಿಗೆ ದ್ವಾರಕೆಗೆ ಕರೆತಂದನು. ದಾರಿಯಲ್ಲಿ ವಿಘ್ನವನ್ನೊಡ್ಡಿದ ರಾಜರನ್ನು ಸೋಲಿಸಿಬಿಟ್ಟನು. ನನಗೆ ಅವನ ಸೇವೆಯ ಸೌಭಾಗ್ಯವು ಸದಾ-ಸರ್ವಕಾಲಗಳಲ್ಲಿ ದೊರೆಯುತ್ತಿರಬೇಕೆಂಬುದೇ ನನ್ನ ಬಯಕೆಯಾಗಿದೆ. ॥ ೧೪ ॥

ಭದ್ರೋವಾಚ

ಪಿತಾ ಮೇ ಮಾತುಲೇಯಾಯ ಸ್ವಯಮಾಹೂಯ ದತ್ತವಾನ್ ।
ಕೃಷ್ಣೇ ಕೃಷ್ಣಾಯ ತಚ್ಚಿತ್ತಾಮಕ್ಷೌಹಿಣ್ಯಾ ಸಖೀಜನೈಃ
॥ ೧೫ ॥

ಅಸ್ಯ ಮೇ ಪಾದಸಂಸ್ಪರ್ಶೋ ಭವೇಜ್ಜನ್ಮನಿ ಜನ್ಮನಿ ।
ಕರ್ಮಭಿರ್ಭ್ರಾಮ್ಯಮಾಣಾಯಾ ಯೇನ ತಚ್ಛ್ರೇಯ ಆತ್ಮನಃ
॥ ೧೬ ॥

ಲಕ್ಷ್ಮಣೋವಾಚ

ಮಮಾಪಿ ರಾಜ್ಞ್ಯಚ್ಯುತಜನ್ಮಕರ್ಮ
ಶ್ರುತ್ವಾ ಮುಹುರ್ನಾರದಗೀತಮಾಸ ಹ ।
ಚಿತ್ತಂ ಮುಕುಂದೇ ಕಿಲ ಪದ್ಮಹಸ್ತಯಾ
ವೃತಃ ಸುಸಂಮೃಶ್ಯ ವಿಹಾಯ ಲೋಕಪಾನ್ ॥ ೧೭ ॥

ಜ್ಞಾತ್ವಾ ಮಮ ಮತಂ ಸಾಧ್ವಿ ಪಿತಾ ದುಹಿತೃವತ್ಸಲಃ ।
ಬೃಹತ್ಸೇನ ಇತಿ ಖ್ಯಾತಸ್ತತ್ರೋಪಾಯಮಚೀಕರತ್
॥ ೧೮ ॥

ಯಥಾ ಸ್ವಯಂವರೇ ರಾಜ್ಞಿ ಮತ್ಸ್ಯಃ ಪಾರ್ಥೇಪ್ಸಯಾ ಕೃತಃ ।
ಅಯಂ ತು ಬಹಿರಾಚ್ಯನ್ನೋ ದೃಶ್ಯತೇ ಸ ಜಲೇ ಪರಮ್
॥ ೧೯ ॥

ಶ್ರುತ್ವೈತತ್ಸರ್ವತೋ ಭೂಪಾ ಆಯಯುರ್ಮತ್ಪಿತುಃ ಪುರಮ್ ।
ಸರ್ವಾಸ್ತ್ರಶಸ್ತ್ರತತ್ತ್ವಜ್ಞಾಃ ಸೋಪಾಧ್ಯಾಯಾಃ ಸಹಸ್ರಶಃ
॥ ೨೦ ॥

ಪಿತ್ರಾ ಸಂಪೂಜಿತಾಃ ಸರ್ವೇ ಯಥಾವೀರ್ಯಂ ಯಥಾವಯಃ ।
ಆದದುಃ ಸಶರಂ ಚಾಪಂ ವೇದ್ಧುಂ ಪರ್ಷದಿ ಮದ್ಧಿಯಃ
॥ ೨೧ ॥

ಆದಾಯ ವ್ಯಸೃಜನ್ ಕೇಚಿತ್ಸಜ್ಯಂ ಕರ್ತುಮನೀಶ್ವರಾಃ ।
ಆಕೋಟಿ ಜ್ಯಾಂ ಸಮುತ್ಕೃಷ್ಯ ಪೇತುರೇಕೇऽಮುನಾ ಹತಾಃ
॥ ೨೨ ॥

ಸಜ್ಯಂ ಕೃತ್ವಾ ಪರೇ ವೀರಾ ಮಾಗಧಾಂಬಷ್ಠಚೇದಿಪಾಃ ।
ಭೀಮೋ ದುರ್ಯೋಧನಃ ಕರ್ಣೋ ನಾವಿಂದಂಸ್ತದವಸ್ಥಿತಿಮ್
॥ ೨೩ ॥

ಭದ್ರೆಯು ಹೇಳಿದಳು – ದ್ರುಪದನಂದಿನಿ! ಭಗವಾನ್ ಶ್ರೀಕೃಷ್ಣನು ನನ್ನ ಸಹೋದರಮಾವನ ಮಗನು, ನನ್ನ ಚಿತ್ತವು ಅವರ ಚರಣಗಳಲ್ಲೇ ಅನುರಕ್ತವಾಗಿ ಹೋಗಿತ್ತು. ನನ್ನ ತಂದೆಯವರಿಗೆ ಈ ವಿಷಯ ತಿಳಿದಾಗ ಅವರು ಸ್ವತಃ ಭಗವಂತನನ್ನು ಕರೆಸಿ ಅನೇಕ ಅಕ್ಷೌಹಿಣೀ ಸೈನ್ಯ ಮತ್ತು ಬಹಳಷ್ಟು ದಾಸಿಯರೊಂದಿಗೆ ನನ್ನನ್ನು ಇವರ ಚರಣಗಳಲ್ಲಿ ಸಮರ್ಪಿಸಿದನು. ॥ ೧೫ ॥ ನಾನು ಮಾಡಿದ ಕರ್ಮಕ್ಕನುಸಾರ ನನಗೆ ಎಲ್ಲೆ ಹುಟ್ಟಬೇಕಾಗಿ ಬಂದರೂ ಎಲ್ಲಾ ಕಡೆಗಳಲ್ಲಿಯೂ ಶ್ರೀಕೃಷ್ಣನ ಚರಣಕಮಲಗಳ ಸಂಸ್ಪರ್ಶವೇ ದೊರೆಯುತ್ತಿರಲಿ. ಇದರಲ್ಲೇ ನನ್ನ ಶ್ರೇಯಸ್ಸಿದೆ ಎಂದು ತಿಳಿಯುತ್ತೇನೆ. ॥ ೧೬ ॥

ಲಕ್ಷ್ಮಣೆಯು ಹೇಳುತ್ತಾಳೆ – ಮಹಾರಾಣಿ! ದೇವಋಷಿ ನಾರದರು ಪದೇ-ಪದೇ ಭಗವಂತನ ಅವತಾರ, ಲೀಲಾಪ್ರಸಂಗಗಳನ್ನು ಹಾಡುತ್ತಾ ಇರುತ್ತಾರೆ. ಲಕ್ಷ್ಮೀದೇವಿಯು ಸಮಸ್ತ ಲೋಕಪಾಲರನ್ನು ತ್ಯಜಿಸಿ ಭಗವಂತನನ್ನೇ ವರಿಸಿದಳು; ಇದನ್ನು ಕೇಳಿದ ನಾನೂ ಭಗವಂತನನ್ನೇ ಸೇರಬೇಕೆಂದು ವಿಚಾರಮಾಡಿ ನನ್ನ ಮನಸ್ಸೂ ಭಗವಂತನ ಚರಣಗಳಲ್ಲಿ ಆಸಕ್ತವಾಯಿತು. ॥ ೧೭ ॥ ಸಾಧ್ವಿ! ನನ್ನ ತಂದೆಯಾದ ಬೃಹತ್ಸೇನನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದನು. ನನ್ನ ಅಭಿಪ್ರಾಯವು ಅವನಿಗೆ ತಿಳಿಸಿದಾಗ ಅವನು ನನ್ನ ಇಚ್ಛೆಯನ್ನು ನೆರವೇರಿಸಲು ಹೀಗೆ ಉಪಾಯಮಾಡಿದನು. ॥ ೧೮ ॥ ದ್ರೌಪದಿಯೇ! ಪಾಂಡವವೀರನಾದ ಅರ್ಜುನನನ್ನು ಅಳಿಯನನ್ನಾಗಿಸಿಕೊಳ್ಳಲು ನಿನ್ನ ತಂದೆಯು ಸ್ವಯಂವರದಲ್ಲಿ ಮತ್ಸ್ಯಯಂತ್ರವನ್ನು ಇರಿಸಿದ್ದನೋ ಹಾಗೆಯೇ ನನ್ನ ತಂದೆಯೂ ಮಾಡಿದರು. ಆದರೆ ನಿಮ್ಮ ಮತ್ಸ್ಯಯಂತ್ರಕ್ಕಿಂತ ನಮ್ಮದು ವಿಶಿಷ್ಟವಾಗಿತ್ತು. ನಿಮ್ಮಲ್ಲಿ ಮತ್ಸ್ಯವು ಹೊರಗಿನಿಂದ ಕಂಡುಬಂದರೆ ನಮ್ಮದು ಹೊರಗಿಂದ ಮುಚ್ಚಲ್ಪಟ್ಟು ಅದರ ನೆರಳು ಕೆಳಗಿನ ನೀರಿನಲ್ಲಿ ಮಾತ್ರ ಕಾಣುತ್ತಿತ್ತು. ॥ ೧೯ ॥ ಈ ಸಮಾಚಾರವು ರಾಜರಿಗೆ ತಿಳಿದಾಗ ಎಲ್ಲ ಕಡೆಗಳಿಂದ ಸಾವಿರಾರು ಅಸ್ತ್ರ-ಶಸ್ತ್ರಗಳ ತಜ್ಞರಾದ ರಾಜರು ತಮ್ಮ-ತಮ್ಮ ಗುರುಗಳೊಂದಿಗೆ ನಮ್ಮ ತಂದೆಯ ರಾಜಧಾನಿಗೆ ಆಗಮಿಸಿದರು. ॥ ೨೦ ॥ ನನ್ನ ತಂದೆಯವರು ಬಂದಿರುವ ರಾಜರೆಲ್ಲರ ಬಲ-ಪೌರುಷ, ವಯಸ್ಸಿಗೆ ತಕ್ಕಂತೆ ಯಥೋಚಿತವಾಗಿ ಸ್ವಾಗತ-ಸತ್ಕಾರವನ್ನು ಮಾಡಿದರು. ಬಂದವರು ನನ್ನನ್ನು ಪಡೆದುಕೊಳ್ಳಲೋಸುವ ಸ್ವಯಂವರ ಸಭೆಯಲ್ಲಿ ಇಟ್ಟ ಧನುರ್ಬಾಣಗಳನ್ನು ಎತ್ತಿಕೊಂಡರು. ॥ ೨೧ ॥ ಅವರಲ್ಲಿ ಎಷ್ಟೋ ರಾಜರು ಧನುಸ್ಸಿಗೆ ಹೆದೆಯೇರಿಸದೇ ಹೋದರು. ಅವರು ಧನುಸ್ಸನ್ನು ಹಾಗೆಯೇ ಇಟ್ಟುಬಿಟ್ಟರು. ಕೆಲವರು ಹೆದೆಯೇರಿಸುವಾಗ ನಾಣನ್ನು ಇನ್ನೊಂದು ತುದಿಗೆ ಬಿಗಿಯಬೇಕೆನ್ನುವಷ್ಟರಲ್ಲಿ ಕೈಜಾರಿ ಬಿದ್ದುಬಿಟ್ಟರು. ॥ ೨೨ ॥ ಮಹಾರಾಣಿ! ಜರಾಸಂಧ, ಅಂಬಷ್ಠನರೇಶ, ಶಿಶುಪಾಲ, ಭೀಮಸೇನ, ದುರ್ಯೋಧನ, ಕರ್ಣ ಮೊದಲಾದ ಮಹಾ-ಮಹಾ ಪ್ರಸಿದ್ಧ ವೀರರು ಹೆದೆಯೇನೋ ಏರಿಸಿದರು. ಆದರೆ ಅವರಿಗೆ ಮೀನಿನ ಲಕ್ಷ್ಯವು ತಿಳಿಯದೇ ಹೋಯಿತು. ॥ ೨೩ ॥

ಮತ್ಸ್ಯಾಭಾಸಂ ಜಲೇ ವೀಕ್ಷ್ಯ ಜ್ಞಾತ್ವಾ ಚ ತದವಸ್ಥಿತಿಮ್ ।
ಪಾರ್ಥೋ ಯತ್ತೋಽಸೃಜದ್ಬಾಣಂ ನಾಚ್ಛಿನತ್ತ್ವಶೇ ಪರಮ್
॥ ೨೪ ॥

ರಾಜನ್ಯೇಷು ನಿವೃತ್ತೇಷು ಭಗ್ನಮಾನೇಷು ಮಾನಿಷು ।
ಭಗವಾನ್ ಧನುರಾದಾಯ ಸಜ್ಯಂ ಕೃತ್ವಾಥ ಲೀಲಯಾ
॥ ೨೫ ॥

ತಸ್ಮಿನ್ಸಂಧಾಯ ವಿಶಿಖಂ ಮತ್ಸ್ಯಂ ವೀಕ್ಷ್ಯ ಸಕೃಜ್ಜಲೇ ।
ಛಿತ್ತ್ವೇಷುಣಾಪಾತಯತ್ತಂ ಸೂರ್ಯೇ ಚಾಭಿಜಿತಿ ಸ್ಥಿತೇ
॥ ೨೬ ॥

ದಿವಿ ದುಂದುಭಯೋ ನೇದುರ್ಜಯಶಬ್ದಯುತಾ ಭುವಿ ।
ದೇವಾಶ್ಚ ಕುಸುಮಾಸಾರಾನ್ಮುಮುಚುರ್ಹರ್ಷವಿಹ್ವಲಾಃ
॥ ೨೭ ॥

ತದ್ರಂಗಮಾವಿಶಮಹಂ ಕಲನೂಪುರಾಭ್ಯಾಂ
ಪದ್ಭ್ಯಾಂ ಪ್ರಗೃಹ್ಯ ಕನಕೋಜ್ಜ್ವಲರತ್ನಮಾಲಾಮ್ ।
ನೂತ್ನೇ ನಿವೀಯ ಪರಿಧಾಯ ಚ ಕೌಶಿಕಾಗ್ರ್ಯೇ
ಸವ್ರೀಡಹಾಸವದನಾ ಕಬರೀಧೃತಸ್ರಕ್ ॥ ೨೮ ॥

ಉನ್ನೀಯ ವಕ್ತ್ರಮುರುಕುಂತಲಕುಂಡಲತ್ವಿಡ್-
ಗಂಡಸ್ಥಲಂ ಶಿಶಿರಹಾಸಕಟಾಕ್ಷಮೋಕ್ಷೈಃ ।
ರಾಜ್ಞೋ ನಿರೀಕ್ಷ್ಯ ಪರಿತಃ ಶನಕೈರ್ಮುರಾರೇ-
ರಂಸೇಽನುರಕ್ತಹೃದಯಾ ನಿದಧೇ ಸ್ವಮಾಲಾಮ್ ॥ ೨೯ ॥

ತಾವನ್ಮೃದಂಗಪಟಹಾಃ ಶಂಖಿಭೇರ್ಯಾನಕಾದಯಃ ।
ನಿನೇದುರ್ನಟನರ್ತಕ್ಯೋ ನನೃತುರ್ಗಾಯಕಾ ಜಗುಃ
॥ ೩೦ ॥

ಏವಂ ವೃತೇ ಭಗವತಿ ಮಯೀಶೇ ನೃಪಯೂಥಪಾಃ ।
ನ ಸೇಹಿರೇ ಯಾಜ್ಞಸೇನಿ ಸ್ಪರ್ಧಂತೋ ಹೃಚ್ಛಯಾತುರಾಃ
॥ ೩೧ ॥

ಮಾಂ ತಾವದ್ರಥಮಾರೋಪ್ಯ ಹಯರತ್ನಚತುಷ್ಟಯಮ್ ।
ಶಾರ್ಙ್ಗಮುದ್ಯಮ್ಯ ಸನ್ನದ್ಧಸ್ತಸ್ಥಾವಾಜೌ ಚತುರ್ಭುಜಃ
॥ ೩೨ ॥

ಮಧ್ಯಮ ಪಾಂಡವನಾದ ಅರ್ಜುನನು ನೀರಿನಲ್ಲಿ ಮೀನಿನ ನೆರಳನ್ನು ಗುರುತಿಸಿ ಅದೆಲ್ಲಿದೆ ಎಂಬುದನ್ನು ತಿಳಿದುಕೊಂಡನು. ಬಹಳ ಎಚ್ಚರಿಕೆಯಿಂದ ಬಾಣವನ್ನೂ ಪ್ರಯೋಗಿಸಿದನು. ಆದರೆ ಅವನಿಂದಲೂ ಲಕ್ಷ್ಯವೇಧವಾಗದೆ ಈ ಬಾಣವು ಲಕ್ಷ್ಯವನ್ನು ಸ್ಪರ್ಶಿಸಿ ಹೊರಟುಹೋಯಿತು. ॥ ೨೪ ॥

ಮಹಾರಾಣಿ! ಹೀಗೆ ಮಹಾ-ಮಹಾ ಅಭಿಮಾನಿಗಳಾಗಿದ್ದ ರಾಜರು ಭಗ್ನದರ್ಪರಾಗಿ, ಭಗ್ನಮನೋರಥರಾಗಿ ಹಿಂದಿರುಗಿದ ನಂತರ ಉಳಿದವರೂ ನನ್ನನ್ನು ಪಡೆಯಬೇಕೆಂಬ ಆಸೆಯನ್ನು ಮತ್ಸ್ಯಯಂತ್ರಭೇದನದ ಪ್ರಯತ್ನವನ್ನು ತೊರೆದುಬಿಟ್ಟರು. ಆಗ ಭಗವಂತನು ಧನುಸ್ಸನ್ನೆತ್ತಿಕೊಂಡು ಆಡುತ್ತಾಡುತ್ತಲೇ ನಿರಾಯಸವಾಗಿ ಹೆದೆಯನ್ನೇರಿಸಿ, ಬಾಣವನ್ನು ಸಂಧಾನಗೈದು ನೀರಿನಲ್ಲಿ ಒಂದೇ ಬಾರಿಗೆ ಮೀನಿನ ನೆರಳನ್ನು ನೋಡಿ ಬಾಣವನ್ನು ಹೂಡಿ ಮೀನನ್ನು ಕೆಳಗೆ ಬೀಳಿಸಿದನು. ಆ ಸಮಯದಲ್ಲಿ ಸರಿಯಾಗಿ ಮಧ್ಯಾಹ್ನವಾಗಿದ್ದು ಸರ್ವಸಾಧಕ ಅಭಿಜಿನ್ಮುಹೂರ್ತವಾಗಿತ್ತು. ॥ ೨೫-೨೬ ॥ ದೇವಿಯೇ! ಆಗ ದೇವದುಂದುಭಿಗಳು ಮೊಳಗಿದವು. ಶ್ರೀಕೃಷ್ಣನಿಗೆ ಜಯವಾಗಲಿ ಎಂಬ ಜಯಘೋಷ ಭೂಮಂಡಲದಲ್ಲೆಲ್ಲ ಕೇಳಿಬರುತ್ತಿತ್ತು. ದೇವತೆಗಳು ಆನಂದ ತುಂದಿಲರಾಗಿ ಹೂವಿನ ಮಳೆಯನ್ನು ಸುರಿಸಿದರು. ॥ ೨೭ ॥ ಮಹಾರಾಣಿ! ಅದೇ ಸಮಯಕ್ಕೆ ಕಾಲಂದುಗೆಗಳು ಝಣ ಝಣಿಸುತ್ತಾ ನಾನು ಸ್ವಯಂವರ ಮಂಟಪವನ್ನು ಪ್ರವೇಶಿಸಿದೆನು. ನಾನು ನವೀನವಾದ ರೇಷ್ಮೆಸೀರೆಯನ್ನುಟ್ಟಿದ್ದು, ತುರುಬಿಗೆ ಮಲ್ಲಿಗೆಯ ದಂಡೆಯನ್ನು ಮುಡಿದುಕೊಂಡು ಬರುವಾಗ ನನ್ನ ಮುಖದಲ್ಲಿ ಲಜ್ಜಾಮಿತ್ರವಾದ ಮಂದಹಾಸವು ಮಿನುಗುತ್ತಿತ್ತು. ನಾನು ಕೈಯಲ್ಲಿ ರತ್ನಗಳನ್ನು ಕೋದ ಸ್ವರ್ಣ ಹಾರವನ್ನು ಹಿಡಿದಿದ್ದೆನು. ದ್ರೌಪದಿ! ಆಗ ನನ್ನ ಮುಖಮಂಡಲವು ಮುಂಗುರುಗಳಿಂದಲೂ, ಕೆನ್ನೆಗಳ ಮೇಲೆ ಬಿದ್ದ ಕುಂಡಲಗಳ ಪ್ರಭೆಯಿಂದ ಅತ್ಯಂತ ಸುಶೋಭಿತವಾಗಿತ್ತು. ನಾನೊಮ್ಮೆ ಮುಖವೆತ್ತಿ ಚಂದ್ರಕಿರಣದಂತಿರುವ ಶೀತಲ ಓರೆನೋಟದಿಂದ ಸುತ್ತಲೂ ಕುಳಿತಿದ್ದ ರಾಜರ ಕಡೆಗೆ ನೋಡಿ ಮತ್ತೆ ನಿಧಾನವಾಗಿ ಮುನ್ನಡೆದು ಶ್ರೀಕೃಷ್ಣನಲ್ಲೇ ಅನುರಕ್ತವಾದ ಮನಸ್ಸಿನಿಂದ ವರಮಾಲೆಯನ್ನು ಭಗವಂತನ ಕೊರಳಿಗೆ ಹಾಕಿದೆನು. ॥ ೨೮-೨೯ ॥ ನಾನು ವರಮಾಲೆಯನ್ನು ತೊಡಿಸುತ್ತಲೇ ಮೃದಂಗ, ಪಟಹ, ಶಂಖ, ಡೋಲು, ನಗಾರಿ ಮುಂತಾದ ಮಂಗಳವಾದ್ಯಗಳು ಮೊಳಗಿದವು. ನಟ ನರ್ತಕಿಯರು ನೃತ್ಯವಾಡತೊಡಗಿದರು, ಗಾಯಕರು ಕರ್ಣಾನಂದವಾಗಿ ಹಾಡುತ್ತಿದ್ದರು. ॥ ೩೦ ॥

ದ್ರೌಪದಾದೇವಿಯೇ! ನಾನು ಈ ಪ್ರಕಾರವಾಗಿ ಸರ್ವೇಶ್ವರನಾದ ಶ್ರೀಕೃಷ್ಣನ ಕೊರಳಿಗೆ ವರಮಾಲೆಯನ್ನು ತೊಡಿಸಿ ವರಿಸಿಕೊಂಡಾಗ ಕಾಮಾತುರರಾದ ರಾಜರೆಲ್ಲರೂ ಸಹಿಸಲಾರದೆ ಮತ್ಸರಗೊಂಡು ಕೆರಳಿನಿಂತರು. ॥ ೩೧ ॥ ಚತುರ್ಭುಜನಾದ ಭಗವಂತನು ಶ್ರೇಷ್ಠವಾದ ನಾಲ್ಕು ಕುದುರೆಗಳನ್ನು ಹೂಡಿದ್ದ ರಥದಲ್ಲಿ ನನ್ನನ್ನು ಕುಳ್ಳಿರಿಸಿಕೊಂಡು, ಕವಚವನ್ನು ತೊಟ್ಟು ಕೈಯಲ್ಲಿ ಶಾರ್ಙ್ಗಧನುಸ್ಸನ್ನು ಹಿಡಿದುಕೊಂಡು ಯುದ್ಧಕ್ಕೆ ಸಿದ್ಧನಾಗಿ ನಿಂತನು. ॥ ೩೨ ॥

ದಾರುಕಶ್ಚೋದಯಾಮಾಸ ಕಾಂಚನೋಪಸ್ಕರಂ ರಥಮ್ ।
ಮಿಷತಾಂ ಭೂಭುಜಾಂ ರಾಜ್ಞಿ ಮೃಗಾಣಾಂ ಮೃಗರಾಡಿವ
॥ ೩೩ ॥

ತೇऽನ್ವಸಜ್ಜಂತ ರಾಜನ್ಯಾ ನಿಷೇದ್ಧುಂ ಪಥಿ ಕೇಚನ ।
ಸಂಯತ್ತಾ ಉದ್ಧತೇಷ್ವಾಸಾ ಗ್ರಾಮಸಿಂಹಾ ಯಥಾ ಹರಿಮ್
॥ ೩೪ ॥

ತೇ ಶಾರ್ಙ್ಗಚ್ಯುತಬಾಣೌಘೈಃ ಕೃತ್ತಬಾಹ್ವಂಘ್ರಿಕಂಧರಾಃ ।
ನಿಪೇತುಃ ಪ್ರಧನೇ ಕೇಚಿದೇಕೇ ಸಂತ್ಯಜ್ಯ ದುದ್ರುವುಃ
॥ ೩೫ ॥

ತತಃ ಪುರೀಂ ಯದುಪತಿರತ್ಯಲಂಕೃತಾಮ್
ರವಿಚ್ಛದಧ್ವಜಪಟಚಿತ್ರತೋರಣಾಮ್ ।
ಕುಶಸ್ಥಲೀಂ ದಿವಿ ಭುವಿ ಚಾಭಿಸಂಸ್ತುತಾಂ
ಸಮಾವಿಶತ್ತರಣಿರಿವ ಸ್ವಕೇತನಮ್ ॥ ೩೬ ॥

ಪಿತಾ ಮೇ ಪೂಜಯಾಮಾಸ ಸುಹೃತ್ಸಂಬಂಧಿ ಬಾಂಧವಾನ್ ।
ಮಹಾರ್ಹವಾಸೋऽಲಂಕಾರೈಃ ಶಯ್ಯಾಸನಪರಿಚ್ಛದೈಃ
॥ ೩೭ ॥

ದಾಸೀಭಿಃ ಸರ್ವಸಂಪದ್ಭಿರ್ಭಟೇಭರಥವಾಜಿಭಿಃ ।
ಆಯುಧಾನಿ ಮಹಾರ್ಹಾಣಿ ದದೌ ಪೂರ್ಣಸ್ಯ ಭಕ್ತಿತಃ
॥ ೩೮ ॥

ಆತ್ಮಾರಾಮಸ್ಯ ತಸ್ಯೇಮಾ ವಯಂ ವೈ ಗೃಹದಾಸಿಕಾಃ ।
ಸರ್ವಸಂಗನಿವೃತ್ತ್ಯಾದ್ಧಾ ತಪಸಾ ಚ ಬಭೂವಿಮ
॥ ೩೯ ॥

ಮಹಿಷ್ಯ ಊಚುಃ

ಭೌಮಂ ನಿಹತ್ಯ ಸಗಣಂ ಯುಧಿ ತೇನ ರುದ್ಧಾ
ಜ್ಞಾತ್ವಾಥ ನಃ ಕ್ಷಿತಿಜಯೇ ಜಿತರಾಜಕನ್ಯಾಃ ।
ನಿರ್ಮುಚ್ಯ ಸಂಸೃತಿವಿಮೋಕ್ಷಮನುಸ್ಮರಂತೀಃ
ಪಾದಾಂಬುಜಂ ಪರಿಣಿನಾಯ ಯ ಆಪ್ತಕಾಮಃ ॥ ೪೦ ॥

ಮಹಾರಾಣಿಯೇ! ಸಿಂಹವು ಜಿಂಕೆಗಳ ಗುಂಪಿನ ನಡುವಿನಿಂದ ಹಾದುಹೋಗುವಂತೆ ಶ್ರೀಕೃಷ್ಣನ ಸಾರಥಿಯಾಗಿ ದಾರುಕನು ಸ್ವರ್ಣಮಯ ಸಾಮಗ್ರಿಗಳಿಂದ ಸುಸಜ್ಜಿತವಾದ ದಿವ್ಯರಥವನ್ನು ರಾಜರುಗಳು ನೋಡುತ್ತಿರುವಂತೆ ಮುನ್ನುಗ್ಗಿಸಿದನು. ॥ ೩೩ ॥ ಸ್ಪರ್ಧಿಸಲು ಹೊರಟಿದ್ದ ರಾಜರಲ್ಲಿ ಕೆಲವರು ಆಯುಧಗಳನ್ನು ಧರಿಸಿ ಯುದ್ಧಸನ್ನದ್ಧರಾಗಿ ಸಿಂಹವನ್ನು ಗ್ರಾಮಸಿಂಹ (ನಾಯಿಗಳು)ಗಳು ಹಿಂಬಾಲಿಸುವಂತೆ ನಾವು ಕುಳಿತಿದ್ದ ರಥವನ್ನು ಹಿಂಬಾಲಿಸಿದರು. ॥ ೩೪ ॥ ಶ್ರೀಕೃಷ್ಣನು ರಥವನ್ನು ನಿಲ್ಲಿಸಿ ಅವರೊಡನೆ ಯುದ್ಧಮಾಡತೊಡಗಿದನು. ಶಾರ್ಙ್ಗಧನುಸ್ಸಿನಿಂದ ಹೊರಟ ಬಾಣಗಳಿಂದ ಹಲವು ರಾಜರ ತೋಳುಗಳು, ತೊಡೆಗಳು, ಕುತ್ತಿಗೆಗಳೂ ಕತ್ತರಿಸಲ್ಪಟ್ಟು ಕೆಳಕ್ಕೆ ಬಿದ್ದವು. ಕೆಲವು ಧರಾಶಾಯಿಗಳಾದರು. ಆಳಿದುಳಿದ ಕೆಲವರು ರಣರಂಗದಿಂದ ಪಲಾಯನ ಮಾಡಿದರು. ॥ ೩೫ ॥

ಅನಂತರ ಸೂರ್ಯನನ್ನು ಮರೆಮಾಡುವ ಧ್ವಜ-ಪತಾಕೆಗಳಿಂದಲೂ, ಚಿತ್ರ-ವಿಚಿತ್ರವಾದ ತೋರಣಗಳಿಂದ ಅತಿಶಯವಾಗಿ ಅಲಂಕರಿಸಲ್ಪಟ್ಟಿದ್ದ ಸ್ವರ್ಗದಲ್ಲಿಯೂ, ಭೂಮಿಯಲ್ಲಿಯೂ ಪ್ರಶಂಸಿತವಾದ ಕುಶಸ್ಥಳಿಯನ್ನು (ದ್ವಾರಕೆಯನ್ನು) ಸೂರ್ಯನಂತೆ ಯದುವಂಶ ಶಿರೋಮಣಿಯಾದ ಶ್ರೀಕೃಷ್ಣನು ಪ್ರವೇಶಿದನು. ॥ ೩೬ ॥ ನನ್ನ ಮನೋರಥವು ಪೂರ್ಣಗೊಂಡಿದ್ದರಿಂದ ನನ್ನ ತಂದೆಯವರಿಗೆ ಬಹಳ ಸಂತೋಷವಾಯಿತು. ಅವನು ತನ್ನ ಹಿತೈಷಿ ಸುಹೃದರನ್ನು, ಬಂಧು-ಬಾಂಧವರನ್ನು, ಜ್ಞಾತಿ-ಬಂಧುಗಳನ್ನು ಬಹುಮೂಲ್ಯ ವಸ್ತ್ರಾಭೂಷಣ, ಶಯ್ಯೆ ಆಸನ ಮೊದಲಾದ ವಿವಿಧ ಸಾಮಗ್ರಿಗಳನ್ನು ಕೊಟ್ಟು ಸನ್ಮಾನಿಸಿದನು. ॥ ೩೭ ॥ ಭಗವಂತನು ಪರಿಪೂರ್ಣನಾಗಿದ್ದರೂ ನನ್ನ ತಂದೆಯು ಅವನಿಗೆ ಅನೇಕ ದಾಸಿಯರನ್ನು, ಅತುಲಸಂಪತ್ತನ್ನೂ, ಚತುರಂಗ ಸೈನ್ಯವನ್ನು ಬಹುಮೂಲ್ಯ ಶಸ್ತ್ರಾಸ್ತ್ರಗಳನ್ನು ಬಳುವಳಿಯಾಗಿ ಸಮರ್ಪಿಸಿದನು. ॥ ೩೮ ॥ ಮಹಾರಾಣಿ! ನಾವು ಹಿಂದಿನ ಜನ್ಮದಲ್ಲಿ ಎಲ್ಲದರ ಆಸಕ್ತಿಯನ್ನು ತ್ಯಜಿಸಿ ಯಾವುದೋ ಮಹತ್ತರ ತಪಸ್ಸು ಮಾಡಿದ್ದಿರಬೇಕು; ಆದರಿಂದಲೇ ನಮಗೆ ಈ ಜನ್ಮದಲ್ಲಿ ಆತ್ಮಾರಾಮನಾದ ಭಗವಂತನ ದಾಸಿಯರಾಗಿರುವ ಸೌಭಾಗ್ಯವು ದೊರೆಯಿತು. ॥ ೩೯ ॥

ಹದಿನಾರು ಸಾವಿರ ಪತ್ನಿಯರ ಪರವಾಗಿ ರೋಹಿಣಿಯು ಹೇಳುತ್ತಾಳೆ - ದ್ರೌಪದಿಯೇ! ಭೌಮಾಸುರನು ದಿಗ್ವಿಜಯದ ಸಮಯದಲ್ಲಿ ಬಹಳಷ್ಟು ರಾಜರನ್ನು ಗೆದ್ದು ಅವರ ಕನ್ಯೆಯರಾದ ನಮ್ಮನ್ನು ಕಾರಾಗೃಹದಲ್ಲಿ ಇರಿಸಿದ್ದನು. ಇದನ್ನು ತಿಳಿದ ಭಗವಂತನು ಭೌಮಾಸುರನನ್ನು ಮತ್ತು ಅವನ ಸೇನೆಯನ್ನು ಸಂಹರಿಸಿ, ಶ್ರೀಕೃಷ್ಣನು ಪೂರ್ಣಕಾಮನಾಗಿದ್ದರೂ ಅವನು ನಮ್ಮನ್ನು, ಅಲ್ಲಿಂದ ಬಿಡಿಸಿ, ನಮ್ಮ ಪಾಣಿಗ್ರಹಣವನ್ನು ಮಾಡಿ ತನ್ನ ದಾಸಿಯರನ್ನಾಗಿಸಿದರು. ನಾವೆಲ್ಲರೂ ಸದಾಕಾಲ ಜನ್ಮ-ಮೃತ್ಯುರೂಪವಾದ ಸಂಸಾರದಿಂದ ಬಿಡುಗಡೆಹೊಂದಲು ಅವನ ಚರಣಕಮಲಗಳನ್ನೇ ಧ್ಯಾನಿಸುತ್ತಾ ಇದ್ದೆವು. ॥ ೪೦ ॥

ನ ವಯಂ ಸಾಧ್ವಿ ಸಾಮ್ರಾಜ್ಯಂ ಸ್ವಾರಾಜ್ಯಂ ಭೌಜ್ಯಮಪ್ಯುತ ।
ವೈರಾಜ್ಯಂ ಪಾರಮೇಷ್ಠ್ಯಂ ಚ ಆನಂತ್ಯಂ ವಾ ಹರೇಃ ಪದಮ್
॥ ೪೧ ॥

ಸಾಧ್ವಿಯೇ! ನಮಗೆ ಸಾಮ್ರಾಜ್ಯವಾಗಲೀ (ಚಕ್ರವರ್ತಿ ಪದವಿ), ಸ್ವಾರಾಜ್ಯವಾಗಲೀ (ಇಂದ್ರ ಪದವಿ), ಭೌಜ್ಯವಾಗಲೀ (ತ್ರೈಲೋಕ್ಯಾಧಿಪತ್ಯ), ವೈರಾಜ್ಯವಾಗಲೀ (ಅಣಿಮಾದಿ ಅಷ್ಟ ಸಿದ್ಧಿಗಳು), ಪಾರಮೇಷ್ಠ್ಯವಾಗಲೀ (ಬ್ರಹ್ಮ ಪದವಿ), ಮೋಕ್ಷವಾಗಲೀ, ಅಪೇಕ್ಷಿತವಲ್ಲ. ಶ್ರೀದೇವಿಯ ಕುಚ ಕುಂಕುಮದಿಂದ ಸುಗಂಧಿತವಾದ ಶ್ರೀಕೃಷ್ಣನ ಸುಕೋಮಲವಾದ ಪಾದಾರವಿಂದಗಳ ಧೂಳಿಯನ್ನು ಸದಾ ತಲೆಯಲ್ಲಿ ಧರಿಸಿಕೊಂಡಿರಲು ಬಯಸುತ್ತೇವೆ. ॥ ೪೧-೪೨ ॥

ಕಾಮಯಾಮಹ ಏತಸ್ಯ ಶ್ರೀಮತ್ಪಾದರಜಃಶ್ರಿಯಃ ।
ಕುಚಕುಂಕುಮಗಂಧಾಢ್ಯಂ ಮೂರ್ಧ್ನಾ ವೋಢುಂ ಗದಾಭೃತಃ
॥ ೪೨ ॥

ಜಗದಾನಂದ ಕಂದನಾದ ಶ್ರೀಕೃಷ್ಣನು ಹಸುಗಳನ್ನು ಮೇಯಿಸುವಾಗ ಅವನ ಕಾಲಿನ ಯಾವ ಧೂಳಿಯನ್ನು ಸ್ಪರ್ಶಿಸಬೇಕೆಂದು ಗೊಲ್ಲತಿಯರೂ, ಗೋಪರೂ, ಬೇಡತಿಯರೂ ಅಪೇಕ್ಷಿಸುತ್ತಿದ್ದರೋ, ಹುಲ್ಲು-ಕಡ್ಡಿಗಳೂ ಯಾರ ಪಾದಸ್ಪರ್ಶವನ್ನು ಬಯಸುತ್ತಿದ್ದವೋ, ಹಾಗೆಯೇ ನಾವೂ ಕೂಡ ಅವನ ದಿವ್ಯಪಾದಧೂಳಿಯನ್ನು ತಲೆಯಲ್ಲಿ ಸದಾಕಾಲ ಅಪೇಕ್ಷಿಸುತ್ತೇವೆ. ॥ ೪೩ ॥

ವ್ರಜಸ್ತ್ರಿಯೋ ಯದ್ವಾಂಛಂತಿ ಪುಲಿಂದ್ಯಸ್ತೃಣವೀರುಧಃ ।
ಗಾವಶ್ಚಾರಯತೋ ಗೋಪಾಃ ಪಾದಸ್ಪರ್ಶಂ ಮಹಾತ್ಮನಃ
॥ ೪೩ ॥

ಎಂಭತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೮೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ತ್ರ್ಯಶೀತಿತಮೋಽಧ್ಯಾಯಃ ॥ ೮೩ ॥

ಎಂಭತ್ತನಾಲ್ಕನೆಯ ಅಧ್ಯಾಯ

ವಸುದೇವನ ಯಜ್ಞೋತ್ಸವವು

ಶ್ರೀಶುಕ ಉವಾಚ

ಶ್ರುತ್ವಾಪೃಥಾ ಸುಬಲಪುತ್ರ್ಯಥ ಯಾಜ್ಞಸೇನೀ
ಮಾಧವ್ಯಥ ಕ್ಷಿತಿಪಪತ್ನ್ಯ ಉತ ಸ್ವಗೋಪ್ಯಃ ।
ಕೃಷ್ಣೇಽಖಿಲಾತ್ಮನಿ ಹರೌ ಪ್ರಣಯಾನುಬಂಧಂ
ಸರ್ವಾ ವಿಸಿಸ್ಮ್ಯುರಲಮಶ್ರುಕಲಾಕುಲಾಕ್ಷ್ಯಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಸರ್ವಾತ್ಮನಾದ ಭಕ್ತಜನ ಭಯಾಪಹಾರಿಯಾದ ಭಗವಾನ್ ಶ್ರೀಕೃಷ್ಣನ ಕುರಿತು ಅವರ ಪತ್ನಿಯರಿಗೆ ಇರುವ ಪ್ರೇಮಾನುಬಂಧವನ್ನು ಅವರ ಬಾಯಿಯಿಂದಲೇ ಕೇಳಿದ ಕುಂತೀ, ಗಾಂಧಾರಿ, ದ್ರೌಪದಿ, ಸುಭದ್ರೆ, ಇತರ ರಾಜಪತ್ನಿಯರು ಮತ್ತು ಭಗವಂತನ ಪ್ರಿಯತಮೆಯರಾದ ಗೋಪಿಯರು – ಅವರ ಅಲೌಕಿಕ ಪ್ರೇಮವನ್ನು ನೋಡಿ ಅತ್ಯಂತ ಮುಗ್ಧರಾಗಿ ಅಚ್ಚರಿ ಗೊಂಡರು. ಎಲ್ಲರ ಕಣ್ಣುಗಳಲ್ಲಿಯೂ ಪ್ರೇಮಾಶ್ರುಗಳು ಸುರಿದವು. ॥ ೧ ॥

ಇತಿ ಸಂಭಾಷಮಾಣಾಸು ಸ್ತ್ರೀಭಿಃ ಸ್ತ್ರೀಷು ನೃಭಿರ್ನೃಷು ।
ಆಯಯುರ್ಮುನಯಸ್ತತ್ರ ಕೃಷ್ಣರಾಮದಿದೃಕ್ಷಯಾ
॥ ೨ ॥

ಈ ಪ್ರಕಾರವಾಗಿ ಸ್ತ್ರೀಯರೊಂದಿಗೆ ಸ್ತ್ರೀಯರೂ, ಪುರುಷರೊಂದಿಗೆ ಪುರುಷರೂ ಮಾತನಾಡಿಕೊಂಡಿರುವಾಗಲೇ ಅನೇಕ ಋಷಿ-ಮುನಿಗಳು ಭಗವಾನ್ ಶ್ರೀಕೃಷ್ಣನನ್ನು ಮತ್ತು ಬಲರಾಮನನ್ನು ದರ್ಶನಮಾಡಲು ಅಲ್ಲಿಗೆ ಬಂದರು. ॥ ೨ ॥

ದ್ವೈಪಾಯನೋ ನಾರದಶ್ಚ ಚ್ಯವನೋ ದೇವಲೋಽಸಿತಃ ।
ವಿಶ್ವಾಮಿತ್ರಃ ಶತಾನಂದೋ ಭರದ್ವಾಜೋಽಥ ಗೌತಮಃ
॥ ೩ ॥

ರಾಮಃ ಸಶಿಷ್ಯೋ ಭಗವಾನ್ ವಸಿಷ್ಠೋ ಗಾಲವೋ ಭೃಗುಃ ।
ಪುಲಸ್ತ್ಯಃ ಕಶ್ಯಪೋಽತ್ರಿಶ್ಚ ಮಾರ್ಕಂಡೇಯೋ ಬೃಹಸ್ಪತಿಃ
॥ ೪ ॥

ದ್ವಿತಸ್ತ್ರಿತಶ್ಚೈಕತಶ್ಚ ಬ್ರಹ್ಮಪುತ್ರಾಸ್ತಥಾಂಗಿರಾಃ ।
ಅಗಸ್ತ್ಯೋ ಯಾಜ್ಞವಲ್ಕ್ಯಶ್ಚ ವಾಮದೇವಾದಯೋಽಪರೇ
॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಸರ್ವಾತ್ಮನಾದ ಭಕ್ತಜನ ಭಯಾಪಹಾರಿಯಾದ ಭಗವಾನ್ ಶ್ರೀಕೃಷ್ಣನ ಕುರಿತು ಅವರ ಪತ್ನಿಯರಿಗೆ ಇರುವ ಪ್ರೇಮಾನುಬಂಧವನ್ನು ಅವರ ಬಾಯಿಯಿಂದಲೇ ಕೇಳಿದ ಕುಂತೀ, ಗಾಂಧಾರಿ, ದ್ರೌಪದಿ, ಸುಭದ್ರೆ, ಇತರ ರಾಜಪತ್ನಿಯರು ಮತ್ತು ಭಗವಂತನ ಪ್ರಿಯತಮೆಯರಾದ ಗೋಪಿಯರು – ಅವರ ಅಲೌಕಿಕ ಪ್ರೇಮವನ್ನು ನೋಡಿ ಅತ್ಯಂತ ಮುಗ್ಧರಾಗಿ ಅಚ್ಚರಿ ಗೊಂಡರು. ಎಲ್ಲರ ಕಣ್ಣುಗಳಲ್ಲಿಯೂ ಪ್ರೇಮಾಶ್ರುಗಳು ಸುರಿದವು. ॥ ೧ ॥ ಈ ಪ್ರಕಾರವಾಗಿ ಸ್ತ್ರೀಯರೊಂದಿಗೆ ಸ್ತ್ರೀಯರೂ, ಪುರುಷರೊಂದಿಗೆ ಪುರುಷರೂ ಮಾತನಾಡಿಕೊಂಡಿರುವಾಗಲೇ ಅನೇಕ ಋಷಿ-ಮುನಿಗಳು ಭಗವಾನ್ ಶ್ರೀಕೃಷ್ಣನನ್ನು ಮತ್ತು ಬಲರಾಮನನ್ನು ದರ್ಶನಮಾಡಲು ಅಲ್ಲಿಗೆ ಬಂದರು. ॥ ೨ ॥ ಅವರಲ್ಲಿ ಶ್ರೀಕೃಷ್ಣದ್ವೈಪಾಯನ ವ್ಯಾಸರು, ದೇವರ್ಷಿನಾರದರು, ಚ್ಯವನ, ದೇವಲ, ಆಸಿತ, ವಿಶ್ವಾಮಿತ್ರ, ಶತಾನಂದ, ಭರದ್ವಾಜ, ಗೌತಮ, ತನ್ನ ಶಿಷ್ಯನೊಂದಿಗೆ ಭಗವಾನ್ ಪರಶುರಾಮ, ವಸಿಷ್ಠ, ಗಾಲವ, ಭೃಗು, ಪುಲಸ್ತ್ಯ, ಕಶ್ಯಪ, ಅತ್ರಿ, ಮಾರ್ಕಂಡೇಯ, ಬೃಹಸ್ಪತಿ, ದ್ವಿತ, ತ್ರಿತ, ಏಕತ, ಸನಕ, ಸನಂದನ, ಸನಾತನ, ಸನತ್ಕುಮಾರ, ಅಂಗಿರಸ್ಸು, ಅಗಸ್ತ್ಯ, ಯಾಜ್ಞವಲ್ಕ್ಯ ಮತ್ತು ವಾಮದೇವ – ಇವರು ಪ್ರಧಾನರಾಗಿದ್ದರು. ॥ ೩-೫ ॥

ತಾನ್ ದೃಷ್ಟ್ವಾ ಸಹಸೋತ್ಥಾಯ ಪ್ರಾಗಾಸೀನಾ ನೃಪಾದಯಃ ।
ಪಾಂಡವಾಃ ಕೃಷ್ಣರಾಮೌ ಚ ಪ್ರಣೇಮುರ್ವಿಶ್ವವಂದಿತಾನ್
॥ ೬ ॥

ಋಷಿಗಳನ್ನು ನೋಡುತ್ತಲೇ ಮೊದಲಿನಿಂದ ಕುಳಿತಿದ್ದ ರಾಜರುಗಳೂ, ಯುಧಿಷ್ಠಿರಾದಿ ಪಾಂಡವರೂ, ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರೂ ಎದ್ದು ನಿಂತು ವಿಶ್ವವಂದಿತರಾದ ಋಷಿಗಳಿಗೆ ನಮಸ್ಕರಿಸಿದರು. ॥ ೬ ॥

ತಾನಾಸೂರ್ಯಥಾ ಸರ್ವೇ ಸಹರಾಮೋಽಚ್ಯುತೋಽರ್ಚಯತ್ ।
ಸ್ವಾಗತಾಸನಪಾದ್ಯಾರ್ಘ್ಯಮಾಲ್ಯಧೂಪಾನುಲೇಪನೈಃ
॥ ೭ ॥

ಅನಂತರ ಸಮಸ್ತ ರಾಜರೂ, ಬಲರಾಮನೊಂದಿಗೆ ಭಗವಾನ್ ಶ್ರೀಕೃಷ್ಣನೂ ಆ ಋಷಿಗಳಿಗೆಲ್ಲರಿಗೂ ಸ್ವಾಗತ, ಆಸನ, ಅರ್ಘ್ಯ, ಪಾದ್ಯ, ಹೂವಿನ ಹಾರ, ಧೂಪ, ಚಂದನಾದಿಗಳಿಂದ ವಿಧಿವತ್ತಾಗಿ ಪೂಜಿಸಿದರು. ॥ ೭ ॥

ತಾನ್ ಸುಖಾಸೀನಾನುಪಲಭ್ಯ ಸತ್ಕಥಾಃ
ಸಭಾಸದೋ ಭಾಗವತಾಃ ಸನಾತನಾಃ ।
ಉವಾಚ ಧರ್ಮಾನ್ ಪರಮಾತ್ಮದೈವತಾನ್
ಪ್ರಾಚೀನಬರ್ಹಿಃ ಪ್ರಮುಖಾನ್ ಪರಾವರಜ್ಞಃ
॥ ೮ ॥

ಋಷಿ-ಮುನಿಗಳು ಸುಖಾಸನದಲ್ಲಿ ಕುಳಿತನಂತರ, ಸಭಾಸದರೂ ಮೌನದಿಂದ ಕುಳಿತಿರಲಾಗಿ, ಸಮಸ್ತರೂ ಕೇಳುವಂತೆ ಧರ್ಮದ ರಕ್ಷಣೆಗಾಗಿಯೇ ಅವತರಿಸಿದ್ದ ಭಗವಾನ್ ಶ್ರೀಕೃಷ್ಣನು ಇಂತೆಂದನು – ॥ ೮ ॥

ಉವಾಚ ಸುಖಮಾಸೀನಾನ್ ಭಗವಾನ್ ಧರ್ಮಗುಪ್ತನುಃ ।
ಸದಸಸ್ಪತಯ ಮಹತೋ ಯತವಾಚೋಽನುಶೃಣ್ವತಃ
॥ ೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪೂಜ್ಯರಾದ ಋಷಿ ಶ್ರೇಷ್ಠರೇ ! ನಾವಿಂದು ಧನ್ಯರಾದೆವು. ನಮ್ಮ ಜನ್ಮವು ಸಾರ್ಥಕ್ಯವನ್ನು ಹೊಂದಿತು. ಹುಟ್ಟಿನ ಪೂರ್ಣಫಲವನ್ನು ಇಂದು ಪಡೆದಂತಾಯಿತು. ದೊಡ್ಡ-ದೊಡ್ಡ ದೇವತೆಗಳಿಗೂ ಅತ್ಯಂತ ದುರ್ಲಭವಾದ ಮಹಾಯೋಗೇಶ್ವರರ ದರ್ಶನವು ನಮಗೆ ನಿರಾಯಾಸವಾಗಿ ಪ್ರಾಪ್ತವಾಯಿತು. ॥ ೯ ॥ ಸ್ವಲ್ಪವೇ ತಪಸ್ಸು ಮಾಡುವವರಿಗೆ ಮತ್ತು ಇಷ್ಟದೇವತೆಯನ್ನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೋಡದೆ ಕೇವಲ ವಿಗ್ರಹಗಳಲ್ಲೇ ದೇವರನ್ನು ಕಾಣುವವರಿಗೆ ತಮ್ಮಂತಹ ಮಹಾತ್ಮರ ದರ್ಶನ, ಸ್ಪರ್ಶನ, ಕುಶಲಪ್ರಶ್ನೆ, ಪ್ರಣಾಮ, ಪಾದಪೂಜೆ ಮೊದಲಾದವುಗಳ ಸದವಕಾಶ ಹೇಗೆ ತಾನೇ ದೊರೆಯಬಲ್ಲದು ? ॥ ೧೦ ॥ ಕೇವಲ ನೀರು ತೀರ್ಥವೆನಿಸುವುದಿಲ್ಲ, ಕೇವಲ ಮಣ್ಣಿನ ಅಥವಾ ಕಲ್ಲಿನ ವಿಗ್ರಹಗಳು ದೇವತೆಗಳಾಗುವುದಿಲ್ಲ, ಸಂತ-ಸತ್ಪುರುಷರೇ ನಿಜವಾಗಿ ತೀರ್ಥರೂಪರು ಮತ್ತು ದೇವತೆಗಳಾಗಿದ್ದಾರೆ. ಏಕೆಂದರೆ, ತೀರ್ಥಗಳು, ದೇವತೆಗಳು ಬಹಳ ಸಮಯದವರೆಗೆ ಸೇವಿಸಿದಾಗಲೇ ಅವು ಪವಿತ್ರವಾಗಿಸಬಲ್ಲವು. ಆದರೆ ಸತ್ಪುರುಷರು ದರ್ಶನಮಾತ್ರದಿಂದಲೇ ಕೃತಾರ್ಥರಾಗಿಸುತ್ತಾರೆ. ॥ ೧೧ ॥ ಅಗ್ನಿ, ಸೂರ್ಯ, ಚಂದ್ರ, ತಾರೆಗಳು, ಪೃಥಿವಿ, ಜಲ, ಆಕಾಶ, ವಾಯು, ವಾಣಿ ಮತ್ತು ಮನಸ್ಸಿನ ಅಧಿಷ್ಠಾತೃ ದೇವತೆಗಳು – ಇವುಗಳ ಉಪಾಸನೆ ಮಾಡಿದರೂ ಪಾಪವೂ ಪೂರ್ಣವಾಗಿ ನಾಶವಾಗಲಾರದು. ಏಕೆಂದರೆ, ಅವರ ಉಪಾಸನೆಯಿಂದ ಭೇದಬುದ್ಧಿಯು ನಾಶವಾಗದೇ ಇನ್ನೂ ಬೆಳೆಯುತ್ತದೆ. ಆದರೆ ಎರಡು ಗಳಿಗೆಯಾದರೂ ಜ್ಞಾನೀಮಹಾಪುರುಷರ ಸೇವೆ ಮಾಡಿದರೂ ಸಕಲ ಪಾಪಗಳು ಅಳಿದು ಹೋಗುತ್ತವೆ. ಏಕೆಂದರೆ, ಅವರು ಭೇದ-ಬುದ್ಧಿಯ ವಿನಾಶಕರಾಗಿದ್ದಾರೆ. ॥ ೧೨ ॥ ಮಹಾತ್ಮರೇ ಮತ್ತು ಸಭಾಸದರೇ ! ಯಾವ ಮನುಷ್ಯರಿಗೆ ವಾತ, ಪಿತ್ತ, ಕಫ – ಈ ಮೂರು ಧಾತುಗಳಿಂದ ಉಂಟಾದ ಶವದಂತಿರುವ ಶರೀರದಲ್ಲೇ ತಾನೆಂಬ ಅಭಿಮಾನವಿರುತ್ತದೋ, ಹೆಂಡತಿ ಮಕ್ಕಳು ಇವರನ್ನೇ ತನ್ನವರೆಂದು ತಿಳಿಯುತ್ತಾರೋ, ಕಲ್ಲು, ಮಣ್ಣು, ಕಟ್ಟಿಗೆ ಮೊದಲಾದ ಪಾರ್ಥಿವ ವಿಕಾರಗಳನ್ನೇ ಇಷ್ಟದೇವರೆಂದು ತಿಳಿಯುತ್ತಾರೋ ಜ್ಞಾನೀ ಪುರುಷರಲ್ಲದೆ ಕೇವಲ ನೀರನ್ನೇ ತೀರ್ಥವೆಂದು ತಿಳಿಯುತ್ತಾರೋ, ಅಂತಹವರು ಮನುಷ್ಯರಾಗಿದ್ದರೂ ಪಶುಗಳಲ್ಲಿಯೂ ನಿಮ್ನ ಕೋಟಿಯವರೇ ಆಗಿದ್ದಾರೆ. ॥ ೧೩ ॥

ಶ್ರೀಭಗವಾನುವಾಚ

ಅಹೋ ವಯಂ ಜನ್ಮಭೃತೋ ಲಬ್ಧಂ ಕಾರ್ತ್ಸ್ನ್ಯೇನ ತತ್ಫಲಮ್ ।
ದೇವಾನಾಮಪಿ ದುಷ್ಪ್ರಾಪಂ ಯದ್ಯೋಗೇಶ್ವರದರ್ಶನಮ್
॥ ೯ ॥

ಕಿಂ ಸ್ವಲ್ಪತಪಸಾಂ ನೃಣಾಮರ್ಚಾಯಾಂ ದೇವಚಕ್ಷುಷಾಮ್ ।
ದರ್ಶನಸ್ಪರ್ಶನಪ್ರಶ್ನಪ್ರಹ್ವಪಾದಾರ್ಚನಾದಿಕಮ್
॥ ೧೦ ॥

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ
॥ ೧೧ ॥

ನಾಗ್ನಿರ್ನ ಸೂರ್ಯೋ ನ ಚ ಚಂದ್ರತಾರಕಾ
ನ ಭೂರ್ಜಲಂ ಖಂ ಶ್ವಸನೋಽಥ ವಾಙ್ಮನಃ ।
ಉಪಾಸಿತಾ ಭೇದಕೃತೋ ಹರಂತ್ಯಘಂ
ವಿಪಶ್ಚಿತೋ ಘ್ನಂತಿ ಮುಹೂರ್ತಸೇವಯಾ ॥ ೧೨ ॥

ಯಸ್ಯಾತ್ಮಬುದ್ಧಿಃ ಕುಣಪೇ ತ್ರಿಧಾತುಕೇ
ಸ್ವಧೀಃ ಕಲತ್ರಾದಿಷು ಭೌಮ ಇಜ್ಯಧೀಃ ।
ಯತ್ತೀರ್ಥಬುದ್ಧಿಃ ಸಲಿಲೇ ನ ಕರ್ಹಿಚಿ-
ಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥ ೧೩ ॥

ಶ್ರೀಶುಕ ಉವಾಚ

ನಿಶಮ್ಯೇತ್ಥಂ ಭಗವತಃ ಕೃಷ್ಣಸ್ಯಾಕುಂಠಮೇಧಸಃ ।
ವಚೋ ದುರನ್ವಯಂ ವಿಪ್ರಾಸ್ತೂಷ್ಣೀಮಾಸನ್ಸ್ವಮದ್ಧಿಯಃ
॥ ೧೪ ॥

ಚಿರಂ ವಿಮೃಶ್ಯ ಮುನಯ ಈಶ್ವರಸ್ಯೇಶಿತವ್ಯತಾಮ್ ।
ಜನಸಂಗ್ರಹ ಇತ್ಯೂಚುಃ ಸ್ಮಯಂತಸ್ತಂ ಜಗದ್ಗುರುಮ್
॥ ೧೫ ॥

ಮುನಯ ಊಚುಃ

ಯನ್ಮಾಯಯಾ ತತ್ತ್ವವಿದುತ್ತಮಾ ವಯಂ
ವಿಮೋಹಿತಾ ವಿಶ್ವಸೃಜಾಮಧೀಶ್ವರಾಃ ।
ಯದೀಶಿತವ್ಯಾಯತಿ ಗೂಢ ಈಹಯಾ
ಅಹೋ ವಿಚಿತ್ರಂ ಭಗವದ್ವಿಚೇಷ್ಟಿತಮ್ ॥ ೧೬ ॥

ಅನೀಹ ಏತದ್ಬಹುಧೈಕ ಆತ್ಮನಾ
ಸೃಜತ್ಯವತ್ಯತ್ತಿ ನ ಬಧ್ಯತೇ ಯಥಾ ।
ಭೌಮೈರ್ಹಿ ಭೂಮಿರ್ಬಹುನಾಮರೂಪಿಣೀ
ಅಹೋ ವಿಭೂಮ್ನಶ್ಚರಿತಂ ವಿಡಂಬನಮ್ ॥ ೧೭ ॥

ಅಥಾಪಿ ಕಾಲೇ ಸ್ವಜನಾಭಿಗುಪ್ತಯೇ
ಬಿಭರ್ಷಿ ಸತ್ತ್ವಂ ಖಲನಿಗ್ರಹಾಯ ಚ ।
ಸ್ವಲೀಲಯಾ ವೇದಪಥಂ ಸನಾತನಂ
ವರ್ಣಾಶ್ರಮಾತ್ಮಾ ಪುರುಷಃ ಪರೋ ಭವಾನ್ ॥ ೧೮ ॥

ಬ್ರಹ್ಮ ತೇ ಹೃದಯಂ ಶುಕ್ಲಂ ತಪಃಸ್ವಾಧ್ಯಾಯಸಂಯಮೈಃ ।
ಯತ್ರೋಪಲಬ್ಧಂ ಸದ್ವ್ಯಕ್ತಮವ್ಯಕ್ತಂ ಚ ತತಃ ಪರಮ್
॥ ೧೯ ॥

ತಸ್ಮಾದ್ ಬ್ರಹ್ಮಕುಲಂ ಬ್ರಹ್ಮನ್ ಶಾಸ್ತ್ರಯೋನೇಸ್ತ್ವಮಾತ್ಮನಃ ।
ಸಭಾಜಯಸಿ ಸದ್ಧಾಮ ತದ್ ಬ್ರಹ್ಮಣ್ಯಾಗ್ರಣೀರ್ಭವಾನ್
॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಅಖಂಡ ಜ್ಞಾನಸಂಪನ್ನನಾಗಿರುವನು. ಅವನ ಈ ಗೂಢವಾದ ಮಾತುಗಳನ್ನು ಕೇಳಿ ಎಲ್ಲ ಋಷಿಮುನಿಗಳು ಸುಮ್ಮನಾಗಿಬಿಟ್ಟರು. ಭಗವಂತನು ಹೀಗೆ ಏಕೆ ಹೇಳುತ್ತಿರುವನೆಂದು ಅರಿಯದೆ ಅವರ ಬುದ್ಧಿಗೆ ಮಂಕುಕವಿದಂತಾಯಿತು. ॥ ೧೪ ॥ ಅವರು ಬಹಳ ಹೊತ್ತು ವಿಚಾರಮಾಡಿದ ಬಳಿಕ ಭಗವಂತನು ಸರ್ವೇಶ್ವರನಾಗಿದ್ದರೂ ಈ ರೀತಿಯ ಸಾಮಾನ್ಯ ಕರ್ಮಪರತಂತ್ರ ಜೀವರಂತೆ ವ್ಯವಹರಿಸುವುದು ಕೇವಲ ಲೋಕಸಂಗ್ರಹಕ್ಕಾಗಿಯೇ ಇದೆ ಎಂದು ನಿಶ್ಚಯಿಸಿ, ಅವರೆಲ್ಲರೂ ಮುಗುಳ್ನಗುತ್ತಾ ಜಗದ್ಗುರು ಭಗವಾನ್ ಶ್ರೀಕೃಷ್ಣನಲ್ಲಿ ಹೇಳತೊಡಗಿದರು. ॥ ೧೫ ॥

ಮುನಿಗಳು ಹೇಳುತ್ತಾರೆ – ಭಗವಂತಾ! ನಿನ್ನ ಮಾಯೆಯಿಂದ ಪ್ರಜಾಪತಿಗಳು, ಅಧೀಶ್ವರರಾದ ಮರೀಚಿಯೇ ಮೊದಲಾದವರು ಹಾಗೂ ದೊಡ್ಡ-ದೊಡ್ಡ ತತ್ತ್ವಜ್ಞಾನಿಗಳಾದ ನಾವುಗಳು ಮೋಹಿತರಾಗಿಬಿಟ್ಟಿದ್ದೇವೆ. ನೀನು ಸಾಕ್ಷಾತ್ ಭಗವಂತನೇ ಆಗಿದ್ದರೂ ಮನುಷ್ಯರಂತಹ ಚೇಷ್ಟೆಗಳಿಂದ ನಿನ್ನನ್ನು ಅಡಿಗಿಸಿಟ್ಟುಕೊಂಡು ಜೀವಿಗಳಂತೆ ಆಚರಿಸುತ್ತಿರುವೆಯಲ್ಲ! ಭಗವಂತಾ! ನಿಜವಾಗಿಯೂ ನಿನ್ನ ಲೀಲೆಯು ವಿಚಿತ್ರವೂ ಆಶ್ಚರ್ಯಮಯವೂ ಆಗಿದೆ. ॥ ೧೬ ॥ ಪೃಥಿವಿಯು ತನ್ನ ವಿಕಾರಗಳಾದ ವೃಕ್ಷ, ಕಲ್ಲು, ಘಟ ಮೊದಲಾದವುಗಳ ಮೂಲಕ ಅನೇಕ ನಾಮ-ರೂಪಗಳನ್ನು ಪಡೆಯುತ್ತದೆ, ವಾಸ್ತವವಾಗಿ ಅದು ಒಂದೇ ಆಗಿದೆ. ಹಾಗೆಯೇ ನೀನು ಏಕನೂ, ಚೇಷ್ಟಾರಹಿತನೂ ಆಗಿದ್ದರೂ ಅನೇಕ ರೂಪಗಳನ್ನು ಧರಿಸುತ್ತೀಯೆ. ನೀನು-ನಿನ್ನಿಂದಲೇ ಈ ಜಗತ್ತಿನ ರಚನೆ, ರಕ್ಷಣೆ ಮತ್ತು ಸಂಹಾರ ಮಾಡುತ್ತಿರುವೆ. ಆದರೆ ಇದೆಲ್ಲವನ್ನು ಮಾಡುತ್ತಿದ್ದರೂ ಈ ಕರ್ಮಗಳಿಂದ ಲಿಪ್ತನಾಗುವುದಿಲ್ಲ ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದ ಶೂನ್ಯನೂ, ಏಕರಸನೂ, ಅನಂತನೂ ಆದ ನಿನ್ನ ಈ ವಿಚಿತ್ರ ಚರಿತ್ರವು ಲೀಲೆಯಲ್ಲದೆ ಮತ್ತೇನು? ॥ ೧೭॥ ಭಗವಂತ! ನೀನು ಪ್ರಕೃತಿಗೆ ಅತೀತನಾದ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನೇ ಆಗಿದ್ದರೂ ಆಗಾಗ ಭಕ್ತ ಜನರನ್ನು ರಕ್ಷಿಸಲು ಹಾಗೂ ದುಷ್ಟರ ದಮನಕ್ಕಾಗಿ ವಿಶುದ್ಧ ಸತ್ತ್ವಮಯ ಶ್ರೀವಿಗ್ರಹವನ್ನು ಪ್ರಕಟಿಸುತ್ತಿರುವೆ. ನಿನ್ನ ಲೀಲೆಗಳ ಮೂಲಕ ಸನಾತನ ವೈದಿಕ ಧರ್ಮವನ್ನು ರಕ್ಷಿಸುತ್ತಿರುವೆ. ಏಕೆಂದರೆ, ಎಲ್ಲ ವರ್ಣ ಮತ್ತು ಆಶ್ರಮಗಳ ರೂಪದಲ್ಲಿ ನೀನೇ ಸ್ವಯಂ ಪ್ರಕಟನಾಗಿರುವೆ. ॥ ೧೮ ॥ ಭಗವಂತ! ವೇದವೇ ನಿನ್ನ ವಿಶುದ್ಧ ಹೃದಯವಾಗಿದೆ. ತಪಸ್ಸು, ಸ್ವಾಧ್ಯಾಯ, ಧಾರಣೆ, ಧ್ಯಾನ ಮತ್ತು ಸಮಾಧಿಯ ಮೂಲಕ ಅದರಲ್ಲೇ ನಿನ್ನ ಸಾಕಾರ-ನಿರಾಕಾರ ಎರಡೂ ರೂಪಗಳ ಅಧಿಷ್ಠಾನ ಸ್ವರೂಪವಾದ ಪರಬ್ರಹ್ಮ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ॥ ೧೯ ॥ ಪರಮಾತ್ಮ! ಬ್ರಾಹ್ಮಣರೇ ವೇದಗಳ ಆಧಾರಭೂತ ನಿನ್ನ ಸ್ವರೂಪದ ಉಪಲಬ್ಧಿಯ ಸ್ಥಾನರಾಗಿದ್ದಾರೆ. ಇದರಿಂದಲೇ ನೀನು ಬ್ರಾಹ್ಮಣರಿಗೆ ಸಮ್ಮಾನ ಕೊಡುವೆ. ಇದರಿಂದಲೆ ನೀನು ಬ್ರಾಹ್ಮಣ ಭಕ್ತರಲ್ಲಿ ಅಗ್ರಗಣ್ಯನಾಗಿರುವೆ. ॥ ೨೦ ॥

ಅದ್ಯ ನೋ ಜನ್ಮಸಾಫಲ್ಯಂ ವಿದ್ಯಾಯಾಸ್ತಪಸೋ ದೃಶಃ ।
ತ್ವಯಾ ಸಂಗಮ್ಯ ಸದ್ಗತ್ಯಾ ಯದಂತಃ ಶ್ರೇಯಸಾಂ ಪರಃ
॥ ೨೧ ॥

ನೀನು ಸಮಸ್ತವಾದ ಶ್ರೇಯಸ್ಸುಗಳಿಗೂ ಚರಮಸ್ಥಾನನಾಗಿರುವೆ. ಸತ್ಪುರುಷರಿಗೆ ಏಕಮಾತ್ರ ಆಶ್ರಯನಾಗಿರುವೆ. ನಿನ್ನನ್ನು ಸೇರಿ ಇಂದು ನಮ್ಮ ಜನ್ಮ, ವಿದ್ಯೆ, ತಪಸ್ಸು ಮತ್ತು ಜ್ಞಾನ – ಇವೆಲ್ಲವೂ ಸಫಲವಾದುವು. ವಾಸ್ತವವಾಗಿ ಎಲ್ಲದರ ಪರಮ ಫಲವು ನೀನೇ ಆಗಿರುವೆ. ॥ ೨೧ ॥ ಪ್ರಭುವೇ! ನಿನ್ನ ಜ್ಞಾನವು ಅನಂತವಾಗಿದೆ. ನೀನು ಸಾಕ್ಷಾತ್ ಸಚ್ಚಿದಾನಂದ ಸ್ವರೂಪನಾದ ಪರಬ್ರಹ್ಮ, ಪರ ಮಾತ್ಮ ಭಗವಂತನೇ ಆಗಿರುವೆ. ನೀನು ನಿನ್ನ ಅಚಿಂತ್ಯ ಶಕ್ತಿಯಾದ ಯೋಗಮಾಯೆಯ ಮೂಲಕ ನಿನ್ನ ಮಹಿಮೆಯನ್ನು ಅಡಗಿಸಿ ಕೊಂಡಿರುವೆ. ಅಂತಹ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೨೨ ॥ ಈ ಸಭೆಯಲ್ಲಿ ಕುಳಿತಿರುವ ರಾಜರಾಗಲೀ, ನಿನ್ನ ಒಡನಾಡಿಗಳಾಗಿ ನಿನ್ನೊಡನೆ ಆಹಾರ-ವಿಹಾರ ಮಾಡುವ ಯದುವಂಶೀಯರಾಗಲೀ ನಿನ್ನನ್ನು ವಾಸ್ತವವಾಗಿ ತಿಳಿದವರಲ್ಲ. ಏಕೆಂದರೆ, ನೀನು ಸರ್ವಾಂತರ್ಯಾಮಿಯೂ, ಜಗತ್ತಿಗೆ ನಿಯಾಮಕನೂ, ಆದಿ ಕಾರಣನೂ ಆಗಿದ್ದರೂ ಮಾಯೆಯೆಂಬ ತೆರೆಯಿಂದ ಮುಚ್ಚಿ ಲ್ಪಟ್ಟಿರುವೆ. ॥ ೨೩॥ ಕನಸ್ಸನ್ನು ಕಾಣುತ್ತಿರುವಾಗ ಮನುಷ್ಯನು ಸ್ವಪ್ನದಲ್ಲಿ ಮಿಥ್ಯೆಯಾದ ಪದಾರ್ಥಗಳನ್ನು ಸತ್ಯವೆಂದೇ ತಿಳಿಯು ತ್ತಾನೆ. ಹೆಸರಿಗೆ ಮಾತ್ರ ಸತ್ಯವೆಂದು ತೋರುವ ತನ್ನ ಸ್ವಪ್ನ ಶರೀರ ವನ್ನೇ ನಿಜವೆಂದು ಭಾವಿಸುತ್ತಾನೆ. ಸ್ವಪ್ನವಿರುವತನಕ ಅವನಿಗೆ ಈ ಸ್ವಪ್ನ ಶರೀರವಲ್ಲದೆ ಇನ್ನೊಂದು ಜಾಗ್ರದವಸ್ಥೆಯ ಶರೀರವಿದೆ ಎಂಬುದೂ ತಿಳಿದಿರುವುದಿಲ್ಲ ॥ ೨೪ ॥ ಹೀಗೆಯೇ ಜಾಗ್ರದವಸ್ಥೆ ಯಲ್ಲಿಯೂ ಇಂದ್ರಿಯಗಳ ಪ್ರವೃತ್ತಿರೂಪವಾದ ಮಾಯೆಯಿಂದ ಚಿತ್ತವು ವಿಮೋಹಿತವಾಗಿ ಹೆಸರಿಗಷ್ಟೇ ಇರುವ ವಿಷಯಗಳಲ್ಲಿ ಅಲೆಯುತ್ತಿರುತ್ತದೆ. ಆ ಸಮಯದಲ್ಲಿಯೂ ಚಿತ್ತದ ಭ್ರಾಂತಿ ಯಿಂದ ವಿವೇಕಶಕ್ತಿಯು ಮುಚ್ಚಲ್ಪಟ್ಟಿರುತ್ತದೆ. ಇದರಿಂದ ತಾನು ಈ ಜಗತ್ತು – ಸಂಸಾರದಿಂದ ಅತೀತನಾಗಿರುವವನು ಎಂಬುದೂ ಜೀವಿಗೆ ತಿಳಿದಿರುವುದಿಲ್ಲ ॥ ೨೫ ॥ ಪ್ರಭೋ! ದೊಡ್ಡ-ದೊಡ್ಡ ಋಷಿ-ಮುನಿಗಳು ಅತ್ಯಂತ ಪರಿಪಕ್ವ ಯೋಗಸಾಧನೆಯ ಮೂಲಕ ಸಮಸ್ತ ಪಾಪರಾಶಿಯನ್ನೂ ನಾಶಮಾಡುವಂತಹ, ಗಂಗೆಗೆ ಆಶ್ರಯಸ್ಥಾನವಾದ ನಿನ್ನ ಚರಣಕಮಲಗಳನ್ನು ಹೃದಯ ದಲ್ಲಿ ಧರಿಸಿಕೊಂಡಿರುತ್ತಾರೆ. ಇಂದು ನಮಗೆ ಅಂತಹ ಚರಣ ಕಮಲಗಳ ದರ್ಶನವಾದುದು ನಮ್ಮ ಸೌಭಾಗ್ಯವೇ ಆಗಿದೆ. ಪ್ರಭೋ! ನಾವು ನಿನ್ನ ಭಕ್ತರಾಗಿದ್ದೇವೆ. ನೀನು ನಮ್ಮ ಮೇಲೆ ದಯೆದೋರು. ಏಕೆಂದರೆ, ಯಾರ ಲಿಂಗಶರೀರರೂಪವಾದ ಜೀವಕೋಶವು ನಿನ್ನ ಅತ್ಯುಚ್ಚ ಭಕ್ತಿಯ ಮೂಲಕ ನಾಶವಾಗಿದೆಯೋ ಅವರಿಗೆ ನಿನ್ನ ಪರಮ ಪದದ ಪ್ರಾಪ್ತಿಯಾಗುತ್ತದೆ. ॥ ೨೬ ॥

ನಮಸ್ತಸ್ಮೈ ಭಗವತೇ ಕೃಷ್ಣಾಯಾಕುಂಠಮೇಧಸೇ ।
ಸ್ವಯೋಗಮಾಯಯಾಚ್ಛನ್ನಮಹಿಮ್ನೇ ಪರಮಾತ್ಮನೇ
॥ ೨೨ ॥

ನ ಯಂ ವಿದಂತ್ಯಮೀ ಭೂಪಾ ಏಕಾರಾಮಾಶ್ಚ ವೃಷ್ಣಯಃ ।
ಮಾಯಾಜವನಿಕಾಚ್ಛನ್ನಮಾತ್ಮಾನಂ ಕಾಲಮೀಶ್ವರಮ್
॥ ೨೩ ॥

ಯಥಾ ಶಯಾನಃ ಪುರುಷಃ ಆತ್ಮಾನಂ ಗುಣತತ್ತ್ವದೃಕ್ ।
ನಾಮಮಾತ್ರೇಂದ್ರಿಯಾಭಾತಂ ನ ವೇದ ರಹಿತಂ ಪರಮ್
॥ ೨೪ ॥

ಏವಂ ತ್ವಾ ನಾಮಮಾತ್ರೇಷು ವಿಷಯೇಷ್ವಿಂದ್ರಿಯೇಹಯಾ ।
ಮಾಯಯಾ ವಿಭ್ರಮಚ್ಚಿತ್ತೋ ನ ವೇದ ಸ್ವತ್ಯುಪಪ್ಲವಾತ್
॥ ೨೫ ॥

ತಸ್ಯಾದ್ಯ ತೇ ದದೃಶಿಮಾಂಘ್ರಿಮಘೌಘಮರ್ಷ-
ತೀರ್ಥಾಸ್ಪದಂ ಹೃದಿ ಕೃತಂ ಸುವಿಪಕ್ವಯೋಗೈಃ ।
ಉತ್ಸಿಕ್ತಭಕ್ತ್ಯುಪಹತಾಶಯಜೀವಕೋಶಾ
ಆಪುರ್ಭವದ್ಗತಿಮಥೋಽನುಗೃಹಾಣ ಭಕ್ತಾನ್ ॥ ೨೬ ॥

ಶ್ರೀಶುಕ ಉವಾಚ

ಇತ್ಯನುಜ್ಞಾಪ್ಯ ದಾಶಾರ್ಹಂ ಧೃತರಾಷ್ಟ್ರಂ ಯುಧಿಷ್ಠಿರಮ್ ।
ರಾಜರ್ಷೇ ಸ್ವಾಶ್ರಮಾನ್ಗಂತುಂ ಮುನಯೋ ದಧಿರೇ ಮನಃ
॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜರ್ಷಿ ಪರೀಕ್ಷಿತನೇ! ಭಗವಂತನನ್ನು ಈ ಪ್ರಕಾರವಾಗಿ ಸ್ತುತಿಗೈದು, ಅವನಿಂದ, ಧೃತ ರಾಷ್ಟ್ರನಿಂದ, ಧರ್ಮರಾಜ ಯುಧಿಷ್ಠಿರನಿಂದ ಅನುಮತಿ ಯನ್ನು ಪಡೆದು ಅವರೆಲ್ಲರೂ ತಮ್ಮ-ತಮ್ಮ ಆಶ್ರಮಗಳಿಗೆ ಹೋಗಲು ವಿಚಾರಮಾಡಿದರು. ॥ ೨೭ ॥

ತದ್ದೀಕ್ಷ್ಯ ತಾನುಪವ್ರಜ್ಯ ವಸುದೇವೋ ಮಹಾಯಶಾಃ ।
ಪ್ರಣಮ್ಯ ಚೋಪಸಂಗೃಹ್ಯ ಬಭಾಷೇದಂ ಸುಯಂತ್ರಿತಃ
॥ ೨೮ ॥

ವಸುದೇವ ಉವಾಚ

ನಮೋ ವಃ ಸರ್ವದೇವೇಭ್ಯ ಋಷಯಃ ಶ್ರೋತುಮರ್ಹಥ ।
ಕರ್ಮಣಾ ಕರ್ಮನಿರ್ಹಾರೋ ಯಥಾ ಸ್ಯಾನ್ನಸ್ತದುಚ್ಯತಾಮ್
॥ ೨೯ ॥

ನಾರದ ಉವಾಚ

ನಾತಿಚಿತ್ರಮಿದಂ ವಿಪ್ರಾ ವಸುದೇವೋ ಬುಭುತ್ಸಯಾ ।
ಕೃಷ್ಣಂ ಮತ್ವಾರ್ಭಕಂ ಯನ್ನಃ ಪೃಚ್ಛತಿ ಶ್ರೇಯ ಆತ್ಮನಃ
॥ ೩೦ ॥

ಸನ್ನಿಕರ್ಷೋ ಹಿ ಮರ್ತ್ಯಾನಾಮನಾದರಣಕಾರಣಮ್ ।
ಗಾಂಗಂ ಹಿತ್ವಾಯಥಾನ್ಯಾಂಭಸ್ತತ್ರತ್ಯೋ ಯಾತಿ ಶುದ್ಧಯೇ
॥ ೩೧ ॥

ಯಸ್ಯಾನುಭೂತಿಃ ಕಾಲೇನ ಲಯೋತ್ಪತ್ತ್ಯಾದಿನಾಸ್ಯ ವೈ ।
ಸ್ವತೋಽನ್ಯಸ್ಮಾಚ್ಚ ಗುಣತೋ ನ ಕುತಶ್ಚನ ರಿಷ್ಯತಿ
॥ ೩೨ ॥

ತಂ ಕ್ಲೇಶಕರ್ಮಪರಿಪಾಕಗುಣಪ್ರವಾಹೈ-
ರವ್ಯಾಹತಾನುಭವಮೀಶ್ವರಮದ್ವಿತೀಯಮ್ ।
ಪ್ರಾಣಾದಿಭಿಃ ಸ್ವವಿಭವೈರುಪಗೂಢಮನ್ಯೋ
ಮನ್ಯೇತ ಸೂರ್ಯಮಿವ ಮೇಘಹಿಮೋಪರಾಗೈಃ ॥ ೩೩ ॥

ಅಘೋಚುರ್ಮುನಯೋ ರಾಜನ್ನಾ-
ಭಾಷ್ಯಾನಕದುಂದುಭಿಮ್ ।
ಸರ್ವೇಷಾಂ ಶೃಣ್ವತಾಂ ರಾಜ್ಞಾಂ
ತಥೈವಾಚ್ಯುತರಾಮಯೋಃ
॥ ೩೪ ॥

ಕರ್ಮಣಾ ಕರ್ಮನಿರ್ಹಾರ ಏಷ ಸಾಧು ನಿರೂಪಿತಃ ।
ಯಚ್ಛ್ರದ್ಧಯಾ ಯಜೇದ್ವಿಷ್ಣುಂ ಸರ್ವಯಜ್ಞೇಶ್ವರಂ ಮಖೈಃ
॥ ೩೫ ॥

ಚಿತ್ತಸ್ಯೋಪಶಮೋಽಯಂ ವೈ ಕವಿಭಿಃ ಶಾಸ್ತ್ರಚಕ್ಷುಷಾ ।
ದರ್ಶಿತಃ ಸುಗಮೋ ಯೋಗೋ ಧರ್ಮಶ್ಚಾತ್ಮಮುದಾವಹಃ
॥ ೩೬ ॥

ಮಹಾಯಶೋವಂತನಾದ ವಸುದೇವನು ಋಷಿ-ಮುನಿಗಳು ಹೊರಟು ಹೋಗುವ ವಿಚಾರವನ್ನು ತಿಳಿದು ಅವರ ಬಳಿಗೆ ಹೋಗಿ ಅವರ ಕಾಲುಗಳನ್ನು ಹಿಡಿದು ವಂದಿಸಿಕೊಂಡು ವಿನಮ್ರನಾಗಿ ನಿವೇದಿಸಿಕೊಂಡನು. ॥ ೨೮॥

ವಸುದೇವನು ಹೇಳಿದನು – ಋಷಿ ಮುನಿಗಳೇ! ನೀವು ಸಮಸ್ತ ದೇವತಾ ಸ್ವರೂಪರಾಗಿದ್ದೀರಿ. ನಾನು ನಿಮಗೆ ವಂದಿಸುತ್ತಿದ್ದೇನೆ. ತಾವುಗಳು ನನ್ನದೊಂದು ಪ್ರಾರ್ಥನೆಯನ್ನು ಆಲಿಸಬೇಕು. ಯಾವ ಕರ್ಮಗಳ ಅನುಷ್ಠಾನದಿಂದ ಕರ್ಮಗಳು ಮತ್ತು ಕರ್ಮವಾಸನೆಗಳ ಆತ್ಯಂತಿಕ ನಾಶವಾಗಿ ಮೋಕ್ಷವುಂಟಾಗುವುದೋ ಅದನ್ನು ನೀವುಗಳು ನನಗೆ ಉಪದೇಶಿಸಿರಿ. ॥ ೨೯ ॥

ನಾರದರು ಹೇಳಿದರು – ಋಷಿವರ್ಯರೇ! ವಸುದೇವನು ಶ್ರೀಕೃಷ್ಣನನ್ನು ತನ್ನ ಮಗನೆಂದು ತಿಳಿದು ಶುದ್ಧಜಿಜ್ಞಾಸೆಯ ಭಾವದಿಂದ ತನ್ನ ಶ್ರೇಯಸ್ಸಿನ ಸಾಧನೆಯನ್ನು ನಮ್ಮ ಬಳಿ ಕೇಳುತ್ತಿರುವನು. ಇದರಲ್ಲಿ ಯಾವುದೇ ಆಶ್ಚರ್ಯವಿಲ್ಲ ॥ ೩೦ ॥ ಪ್ರಪಂಚದಲ್ಲಿ ಬಹಳ ಹತ್ತಿರವಿರುವುದು ಅನಾದರಕ್ಕೆ ಕಾರಣವಾಗುತ್ತದೆ. ಗಂಗಾತೀರದಲ್ಲಿರುವವರು ಗಂಗೆಯನ್ನು ಬಿಟ್ಟು ತಮ್ಮ ಪಾಪಶುದ್ಧಿಗಾಗಿ ಬೇರೆ ತೀರ್ಥಕ್ಕೆ ಹೋಗುತ್ತಿರುವುದನ್ನು ನೋಡುತ್ತೇವಲ್ಲ! ॥ ೩೧ ॥ ಶ್ರೀಕೃಷ್ಣನ ಅನುಭೂತಿಯು ಕಾಲಾನುಕ್ರಮವಾಗಿ ನಡೆಯುವ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳಿಂದ ಅಳಿದುಹೋಗುವಂತಹುದಲ್ಲ. ಅದು ಸ್ವತಃ ಯಾವುದೇ ಬೇರೆ ನಿಮಿತ್ತದಿಂದ, ಗುಣಗಳಿಂದ ಮತ್ತು ಯಾವುದರಿಂದಲೂ ಕ್ಷೀಣಿಸುವಂತಹುದಲ್ಲ ॥ ೩೨ ॥ ಅವನ ಜ್ಞಾನಮಯ ಸ್ವರೂಪವು ಅವಿದ್ಯೆಯಿಂದಾಗಲೀ, ರಾಗ-ದ್ವೇಷಾದಿ ಕ್ಲೇಶಗಳಿಂದಾಗಲೀ, ಪುಣ್ಯ-ಪಾಪಮಯ ಕರ್ಮಗಳಿಂದಾಗಲೀ, ಸುಖ-ದುಃಖಾದಿ ಕರ್ಮಫಲಗಳಿಂದಾಗಲೀ, ಸತ್ತ್ವಾದಿಗುಣ ಪ್ರವಾಹದಿಂದಾಗಲೀ ನಾಶಹೊಂದುವುದಿಲ್ಲ. ಅವನು ಸಾಕ್ಷಾತ್ ಅದ್ವಿತೀಯ ಪರಮಾತ್ಮನಾಗಿದ್ದಾನೆ. ಅವನು ತನ್ನನ್ನು ತನ್ನದೇ ಶಕ್ತಿಗಳಿಂದ ಪ್ರಾಣಾದಿಗಳಿಂದ ಮುಚ್ಚಿಕೊಳ್ಳುವನು; ಆಗ ಮೂರ್ಖಜನರು – ಮೋಡ, ಮಂಜು ಅಥವಾ ಗ್ರಹಣದಿಂದ ಮರೆಯಾದ ಸೂರ್ಯನು ಮಚ್ಚಿಹೋಗಿರುವನು ಎಂದು ತಿಳಿಯುವಂತೆಯೇ ಶ್ರೀಕೃಷ್ಣನನ್ನು ತಿಳಿಯುತ್ತಾರೆ. ॥ ೩೩ ॥

ಪರೀಕ್ಷಿತನೇ! ಆನಂತರ ಋಷಿ-ಮುನಿಗಳು ಭಗವಾನ್ ಶ್ರೀಕೃಷ್ಣ-ಬಲರಾಮರು, ಯುಧಿಷ್ಠಿರನೇ ಮೊದಲಾದ ರಾಜರ ಸಮ್ಮುಖದಲ್ಲಿ ವಸುದೇವನನ್ನು ಸಂಬೋಧಿಸುತ್ತಾ ಹೇಳಿದರು.॥ ೩೪ ॥ ವಸುದೇವನೇ! ಯಜ್ಞಾದಿಗಳ ಮೂಲಕ ಸಮಸ್ತ ಯಜ್ಞಗಳ ಅಧಿಪತಿಯಾದ ಭಗವಾನ್ ವಿಷ್ಣುವನ್ನು ಶ್ರದ್ಧಾಪೂರ್ವಕ ಆರಾಧಿಸುವುದೇ ಕರ್ಮಗಳ ಮೂಲಕ ಕರ್ಮವಾಸನೆ ಮತ್ತು ಕರ್ಮಫಲಗಳನ್ನು ಆತ್ಯಂತಿಕವಾಗಿ ನಾಶಮಾಡುವ ಒಳ್ಳೆಯ ಉಪಾಯವಾಗಿದೆ. ॥ ೩೫ ॥ ತ್ರಿಕಾಲದರ್ಶಿಗಳಾದ ಜ್ಞಾನಿಗಳು ಶಾಸ್ತ್ರದೃಷ್ಟಿಯಿಂದ ಚಿತ್ತದ ಶಾಂತಿಗೆ ಇದೇ ಉಪಾಯವೆಂದೂ, ಸುಲಭವಾದ ಮೋಕ್ಷಸಾಧನವೆಂದೂ, ಚಿತ್ತದಲ್ಲಿ ಆನಂದೋಲ್ಲಾಸವನ್ನು ಉಂಟುಮಾಡುವ ಧರ್ಮವೆಂದೂ ತಿಳಿಸಿರುವರು. ॥ ೩೬ ॥

ಅಯಂ ಸ್ವಸ್ತ್ಯಯನಃ ಪಂಥಾ ದ್ವಿಜಾತೇರ್ಗೃಹಮೇಧಿನಃ ।
ಯಚ್ಛ್ರದ್ಧಯಾऽऽಪ್ತವಿತ್ತೇನ ಶುಕ್ಲೇನೇಜ್ಯೇತ ಪೂರುಷಃ
॥ ೩೭ ॥

ವಿತ್ತೈಷಣಾಂ ಯಜ್ಞದಾನೈರ್ಗೃಹೈರ್ದಾರಸುತೈಷಣಾಮ್ ।
ಆತ್ಮಲೋಕೈಷಣಾಂ ದೇವ ಕಾಲೇನ ವಿಸೃಜೇದ್ಬುಧಃ ।
ಗ್ರಾಮೇ ತ್ಯಕ್ತೈಷಣಾಃ ಸರ್ವೇ ಯಯುರ್ಧೀರಾಸ್ತಪೋವನಮ್
॥ ೩೮ ॥

ಋಣೈಸ್ತ್ರಿಭಿರ್ದ್ವಿಜೋ ಜಾತೋ ದೇವರ್ಷಿಪಿತೃಣಾಂ ಪ್ರಭೋ ।
ಯಜ್ಞಾಧ್ಯಯನಪುತ್ರೈಸ್ತಾನ್ಯನಿಸ್ತೀರ್ಯ ತ್ಯಜನ್ಪತೇತ್
॥ ೩೯ ॥

ತ್ವಂ ತ್ವದ್ಯ ಮುಕ್ತೋ ದ್ವಾಭ್ಯಾಂ ವೈ ಋಷಿಪಿತ್ರೋರ್ಮಹಾಮತೇ ।
ಯಜ್ಞೈರ್ದೇವರ್ಣಮುನ್ಮುಚ್ಯ ನಿರ್ಋಣೋऽಶರಣೋ ಭವ
॥ ೪೦ ॥

ವಸುದೇವ ಭವಾನ್ ನೂನಂ ಭಕ್ಯಾ ಪರಮಯಾ ಹರಿಮ್ ।
ಜಗತಾಮೀಶ್ವರಂ ಪ್ರಾರ್ಚಃ ಸ ಯದ್ವಾಂ ಪುತ್ರತಾಂ ಗತಃ
॥ ೪೧ ॥

ಶ್ರೀಶುಕ ಉವಾಚ

ಇತಿ ತದ್ವಚನಂ ಶ್ರುತ್ವಾ ವಸುದೇವೋ ಮಹಾಮನಾಃ ।
ತಾನೃಷೀನೃತ್ವಿಜೋ ಮತ್ವೇ ಮೂರ್ಧ್ನಾऽऽನಮ್ಯ ಪ್ರಸಾದ್ಯ ಚ
॥ ೪೨ ॥

ತ ಏನಮೃಷಯೋ ರಾಜನ್ ವೃತಾ ಧರ್ಮೇಣ ಧಾರ್ಮಿಕಮ್ ।
ತಸ್ಮಿನ್ನಯಾಜಯನ್ ಕ್ಷೇತ್ರೇ ಮಖೈರುತ್ತಮಕಲ್ಪಕೈಃ
॥ ೪೩ ॥

ತದ್ದೀಕ್ಷಾಯಾಂ ಪ್ರವೃತ್ತಾಯಾಂ ವೃಷ್ಣಯಃ ಪುಷ್ಕರಸ್ರಜಃ ।
ಸ್ನಾತಾಃ ಸುವಾಸಸೋ ರಾಜನ್ ರಾಜಾನಃ ಸುಷ್ಠ್ವಲಂಕೃತಾಃ
॥ ೪೪ ॥

ತನ್ಮಹಿಷ್ಯಶ್ಚ ಮುದಿತಾ ನಿಷ್ಕಕಂಠ್ಯಃ ಸುವಾಸಸಃ ।
ದೀಕ್ಷಾಶಾಲಾಮುಪಾಜಗ್ಮುರಾಲಿಪ್ತಾ ವಸ್ತುಪಾಣಯಃ
॥ ೪೫ ॥

ನೇದುರ್ಮೃದಂಗಪಟಹಶಂಖಿಭೇರ್ಯಾನಕಾದಯಃ ।
ನನೃತುರ್ನಟನರ್ತಕ್ಯಸ್ತುಷ್ಟುವುಃ ಸೂತಮಾಗಧಾಃ ।
ಜಗುಃ ಸುಕಂಠ್ಯೋ ಗಂಧರ್ವ್ಯಃ ಸಂಗೀತಂ ಸಹಭರ್ತೃಕಾಃ
॥ ೪೬ ॥

ತನ್ನ ನ್ಯಾಯೋಪಾರ್ಜಿತ ಧನದಿಂದ ಶ್ರದ್ಧಾಪೂರ್ವಕವಾಗಿ ಭಗವಾನ್ ಪುರುಷೋತ್ತಮನನ್ನು ಆರಾಧಿಸುವುದೇ ದ್ವಿಜರಾದ ಗೃಹಸ್ಥರಿಗೆ ಪರಮ ಶ್ರೇಯಸ್ಸಿನ ಮಾರ್ಗವಾಗಿದೆ. ॥ ೩೭ ॥ ವಸುದೇವನೇ ! ವಿದ್ವಾಂಸನಾದವನು ಯಜ್ಞ, ದಾನಾದಿಗಳಿಂದ ಧನದ ಆಸೆಯನ್ನೂ, ಗೃಹಸ್ಥೋಚಿತ ಭೋಗಗಳಿಂದ ಪತ್ನೀ-ಪುತ್ರರ ಇಚ್ಛೆಯನ್ನೂ, ಕಾಲಾನುಕ್ರಮವಾಗಿ ಸ್ವರ್ಗಾದಿಭೋಗಗಳು ನಾಶವಾಗುವವು ಎಂಬ ಅರಿವಿನಿಂದ ಲೋಕೈಷಣವನ್ನು ತ್ಯಾಗ ಮಾಡಬೇಕು. ಹೀಗೆ ಈಷಣ ತ್ರಯಗಳನ್ನು ತ್ಯಾಗಮಾಡಿದ ವಿಚಾರವಂತ ಮನುಷ್ಯನು ಗ್ರಾಮವನ್ನು ಬಿಟ್ಟು ಅರಣ್ಯದ ದಾರಿಯನ್ನು ಹಿಡಿಯುತ್ತಾನೆ. ॥ ೩೮ ॥ ಸಮರ್ಥನಾದ ವಸುದೇವನೇ ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ - ಇವರು ದೇವ-ಋಷಿ-ಪಿತೃ ಎಂಬ ಮೂರು ಋಣವನ್ನು ಪಡೆದುಕೊಂಡೇ ಹುಟ್ಟುತ್ತಾರೆ. ಯಜ್ಞ, ಅಧ್ಯಯನ, ಸಂತಾನೋತ್ಪತ್ತಿ ಇವುಗಳಿಂದ ಈ ಮೂರು ಋಣದಿಂದ ಬಿಡುಗಡೆ ಹೊಂದುತ್ತಾನೆ. ಆ ಋಣವನ್ನು ತೀರಿಸದೆಯೇ ಸಂಸಾರವನ್ನು ತ್ಯಾಗ ಮಾಡುವವರಿಗೆ ಅಧಃಪತನವಾಗುತ್ತದೆ. ॥ ೩೯ ॥ ಮಹಾಮತಿಯಾದ ವಸುದೇವ ! ನೀನೀಗ ಋಷಿ ಮತ್ತು ಪಿತೃಗಳ ಋಣಗಳಿಂದ ಮುಕ್ತನಾಗಿರುವೆ. ಇನ್ನು ಯಜ್ಞಗಳ ಮೂಲಕ ದೇವತೆಗಳ ಋಣವನ್ನು ತೀರಿಸಿಬಿಡು. ಹೀಗೆ ಎಲ್ಲ ಋಣಗಳಿಂದ ಬಿಡುಗಡೆ ಹೊಂದಿ ಗೃಹತ್ಯಾಗಮಾಡಿ ಭಗವಂತನಿಗೆ ಶರಣಾಗು. ॥ ೪೦ ॥ ವಸುದೇವನೇ ! ನೀನು ಅವಶ್ಯವಾಗಿ ಪರಮಭಕ್ತಿಯಿಂದ ಜಗದೀಶ್ವರನಾದ ಶ್ರೀಹರಿಯನ್ನು ಉಪಾಸನೆ ಮಾಡಿರುವೆ. ಆದರಿಂದಲೇ ಜಗದೊಡೆಯರಾದ ಇಬ್ಬರು ಪುತ್ರರನ್ನು ಪಡೆದಿರುವೆ. ॥ ೪೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಮನನಶೀಲನಾದ ವಸುದೇವನು ಋಷಿಗಳ ಈ ಮಾತನ್ನು ಕೇಳಿ, ಅವರ ಚರಣಗಳಲ್ಲಿ ಶಿರಸ್ಸನ್ನಿಟ್ಟು ಪ್ರಣಾಮ ಮಾಡಿ ಅವರನ್ನು ಪ್ರಸನ್ನಗೊಳಿಸಿ, ಯಜ್ಞಕ್ಕಾಗಿ ಅವರನ್ನು ಋತ್ವಿಜರಾಗಿ ವರಣಮಾಡಿಕೊಂಡನು. ॥ ೪೨ ॥ ಪರೀಕ್ಷಿತನೇ ! ಹೀಗೆ ವಸುದೇವನಿಂದ ಧರ್ಮಪೂರ್ವಕವಾಗಿ ವರಣಮಾಡಲ್ಪಟ್ಟ ಋಷಿಮುನಿಗಳು ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಪರಮಧಾರ್ಮಿಕನಾದ ವಸುದೇವನಿಂದ ಉತ್ತಮೋತ್ತಮ ಸಾಮಗ್ರಿಗಳಿಂದ ಕೂಡಿದ ಹಲವಾರು ಯಜ್ಞಗಳನ್ನು ಮಾಡಿಸಿದರು. ॥ ೪೩ ॥ ಪರೀಕ್ಷಿತ ! ವಸುದೇವನು ಯಜ್ಞದೀಕ್ಷಿತನಾದಾಗ ಯಾದವರು ಸ್ನಾನಾದಿಗಳನ್ನು ಮಾಡಿ ಸುಂದರ ವಸ್ತ್ರಾಭೂಷಣಗಳನ್ನು ಕಮಲಪುಷ್ಪಗಳ ಮಾಲೆಗಳನ್ನು ಧರಿಸಿದರು. ಸಮಸ್ತ ರಾಜರೂ ವಸ್ತ್ರಾಭರಣಗಳಿಂದ ಸಜ್ಜಾದರು. ॥ ೪೪ ॥ ವಸುದೇವನ ಪತ್ನಿಯರೂ ಸುಂದರವಸ್ತ್ರ ಅಂಗರಾಗ, ಸ್ವರ್ಣಹಾರಗಳಿಂದ ಅಲಂಕರಿಸಿಕೊಂಡು, ಪರಮಾನಂದ ಭರಿತರಾಗಿ ಕೈಗಳಲ್ಲಿ ಮಂಗಳ ದ್ರವ್ಯಗಳನ್ನು ಹಿಡಿದುಕೊಂಡು ಯಜ್ಞಶಾಲೆಯನ್ನು ಪ್ರವೇಶಿಸಿದರು. ॥ ೪೫ ॥ ಆ ಸಮಯದಲ್ಲಿ ಮೃದಂಗ, ಪಟಹ, ಶಂಖ, ಭೇರಿ, ನಗಾರಿಗಳು ಮುಂತಾದ ಮಂಗಳ ವಾದ್ಯಗಳು ಮೊಳಗುತ್ತಿದ್ದವು. ಸೂತ-ಮಾಗಧರೂ ಸ್ತುತಿಸತೊಡಗಿದರು. ಗಂಧರ್ವಸ್ತ್ರೀಯರು ತಮ್ಮ ಗಂಡಂದಿರೊಡನೆ ಸುಶ್ರಾವ್ಯವಾಗಿ ಹಾಡತೊಡಗಿದರು. ॥ ೪೬ ॥

ತಮಭ್ಯಷಿಂಚನ್ ವಿಧಿವದದಕ್ತಮಭ್ಯಕ್ತಮೃತ್ವಿಜಃ ।
ಪತ್ನೀಭಿರಷ್ಟಾದಶಭಿಃ ಸೋಮರಾಜಮಿವೋಡುಭಿಃ
॥ ೪೭ ॥

ತಾಭಿರ್ದುಕೂಲವಲಯೈರ್ಹಾರನೂಪುರಕುಂಡಲೈಃ ।
ಸ್ವಲಂಕೃತಾಭಿರ್ವಿಬಭೌ ದೀಕ್ಷಿತೋಽಜಿನಸಂವೃತಃ
॥ ೪೮ ॥

ತಸ್ಯರ್ತ್ವಿಜೋ ಮಹಾರಾಜ ರತ್ನಕೌಶೇಯವಾಸಸಃ ।
ಸಸದಸ್ಯಾ ವಿರೇಜುಸ್ತೇ ಯಥಾ ವೃತ್ರಹಣೋಽಧ್ವರೇ
॥ ೪೯ ॥

ತದಾ ರಾಮಶ್ಚ ಕೃಷ್ಣಶ್ಚ ಸ್ವೈಃ ಸ್ವೈರ್ಬಂಧುಭಿರನ್ವಿತೌ ।
ರೇಜತುಃ ಸ್ವಸುತೈರ್ದಾರೈರ್ಜೀವೇಶೌ ಸ್ವವಿಭೂತಿಭಿಃ
॥ ೫೦ ॥

ಈಜೇಽನುಯಜ್ಞಂ ವಿಧಿನಾ ಅಗ್ನಿಹೋತ್ರಾದಿಲಕ್ಷಣೈಃ ।
ಪ್ರಾಕೃತೈರ್ವೈಕೃತೈರ್ಯಜ್ಞೈರ್ದ್ರವ್ಯಜ್ಞಾನಕ್ರಿಯೇಶ್ವರಮ್
॥ ೫೧ ॥

ಅಥರ್ತ್ವಿಗ್ಭ್ಯೋಽದದಾತ್ಕಾಲೇ ಯಥಾಮ್ನಾತಂ ಸ ದಕ್ಷಿಣಾಃ ।
ಸ್ವಲಂಕೃತೇಭ್ಯೋಽಲಂಕೃತ್ಯ ಗೋಭೂಕನ್ಯಾ ಮಹಾಧನಾಃ
॥ ೫೨ ॥

ಪತ್ನೀಸಂಯಾಜಾವಭೃಥ್ಯೈಶ್ಚರಿತ್ವಾ ತೇ ಮಹರ್ಷಯಃ ।
ಸಸ್ನೂ ರಾಮಹ್ರದೇ ವಿಪ್ರಾ ಯಜಮಾನಪುರಸ್ಸರಾಃ
॥ ೫೩ ॥

ಸ್ನಾತೋಽಲಂಕಾರವಾಸಾಂಸಿ ವಂದಿಭ್ಯೋಽದಾತ್ತಥಾ ಸ್ತ್ರಿಯಃ ।
ತತಃ ಸ್ವಲಂಕೃತೋ ವರ್ಣಾನಾಶ್ವಭ್ಯೋಽನ್ನೇನ ಪೂಜಯತ್
॥ ೫೪ ॥

ಬಂಧೂನ್ ಸದಾರಾನ್ ಸಸುತಾನ್ ಪಾರಿಬರ್ಹೇಣ ಭೂಯಸಾ ।
ವಿದರ್ಭಕೋಸಲಕುರೂನ್ ಕಾಶಿಕೇಕಯಸೃಂಜಯಾನ್
॥ ೫೫ ॥

ಸದಸ್ಯರ್ತ್ವಿಕ್ ಸುರಗಣಾನ್ ನೃಭೂತಪಿತೃಚಾರಣಾನ್ ।
ಶ್ರೀನಿಕೇತಮನುಜ್ಞಾಪ್ಯ ಶಂಸಂತಃ ಪ್ರಯಯುಃ ಕ್ರತುಮ್
॥ ೫೬ ॥

ವಸುದೇವನು ಮೊದಲಿಗೆ ಕಣ್ಣುಗಳಿಗೆ ಕಾಡಿಗೆ ಹಚ್ಚಿಕೊಂಡು, ಮೈಗೆ ಬೆಣ್ಣೆಯನ್ನು ಲೇಪಿಸಿಕೊಂಡನು. ದೇವಕಿಯೇ ಮೊದಲಾದ ಅವನ ಹದಿನೆಂಟು ಮಂದಿ ಪತ್ನಿಯರೊಂದಿಗೆ ಹಿಂದೆ ನಕ್ಷತ್ರಗಳೊಂದಿಗೆ ಚಂದ್ರನ ಅಭಿಷೇಕವಾದಂತೆ ಋತ್ವಿಜರು ವಸುದೇವನಿಗೆ ಮಹಾಭಿಷೇಕ ಮಾಡಿದರು. ॥ ೪೭ ॥ ಆಗ ಯಜ್ಞದೀಕ್ಷಿತನಾದ್ದರಿಂದ ವಸುದೇವನು ಮೃಗಚರ್ಮವನ್ನು ಹೊದ್ದುಕೊಂಡಿದ್ದನು. ಅವನ ಪತ್ನಿಯರು ಸುಂದರವಾದ ಸೀರೆಗಳಿಂದಲೂ, ಚಿನ್ನದ ಬಳೆ, ಹಾರಗಳಿಂದಲೂ, ಕಾಲಂದುಗೆಗಳಿಂದಲೂ, ಹೊಳೆಯುತ್ತಿದ್ದ ಕರ್ಣಾಭರಣಗಳಿಂದಲೂ ಅಲಂಕರಿಸಿಕೊಂಡಿದ್ದರು. ಪತ್ನಿಯರೊಡನೆ ವಸುದೇವನು ಬಹಳವಾಗಿ ಸುಶೋಭಿತನಾಗಿದ್ದನು. ॥ ೪೮ ॥ ವಸುದೇವನ ಋತ್ವಿಜರೂ, ಸದಸ್ಯರೂ ಹಿಂದೆ ಇಂದ್ರನ ಯಜ್ಞದಲ್ಲಿ ಶೋಭಿಸುತ್ತಿದ್ದ ಋತ್ವಿಜರಂತೆಯೇ ರೇಷ್ಮೆಯ ವಸ್ತ್ರಗಳಿಂದ, ರತ್ನಜಡಿತ ಆಭರಣಗಳಿಂದ ಸಮಲಂಕೃತರಾಗಿ ಶೋಭಿಸುತ್ತಿದ್ದರು. ॥ ೪೯ ॥ ಸಮಸ್ತ ಜೀವಕೋಟಿಗೂ ಪ್ರಭುಗಳಾದ ಬಲರಾಮ-ಶ್ರೀಕೃಷ್ಣರು ತಮ್ಮ-ತಮ್ಮ ಬಂಧುಗಳಿಂದಲೂ, ಪತ್ನೀ-ಪುತ್ರರೊಂದಿಗೂ ಪರಿವೃತರಾಗಿ ತಮ್ಮದೇ ಆದ ವೈಭವದಿಂದ ರಾರಾಜಿಸಿದರು. ॥ ೫೦ ॥

ವಸುದೇವನು ಪ್ರತಿಯೊಂದು ಯಜ್ಞದಲ್ಲಿಯೂ ಗಾರ್ಹಪತ್ಯವೇ ಮೊದಲಾದ ಅಗ್ನಿತ್ರಯಗಳ ಉಪಾಸನೆಯೇ ಮುಖ್ಯಲಕ್ಷ್ಯವಾಗಿರುವ ಅಗ್ನಿಷ್ಟೋಮ, ದರ್ಶ, ಪೂರ್ಣಮಾಸ ಮುಂತಾದ ಪ್ರಕೃತಿಯಾಗಗಳಿಂದಲೂ, ಸೂರ್ಯಸತ್ರವೇ ಮೊದಲಾದ ವಿಕೃತಿಯಾಗಗಳಿಂದಲೂ, ಅಗ್ನಿಹೋತ್ರಾದಿ ಇತರ ಯಜ್ಞಗಳ ಮೂಲಕ ದ್ರವ್ಯ, ಜ್ಞಾನ, ಕ್ರಿಯೆ ಇವುಗಳಿಗೆ ಈಶ್ವರನಾದ ಯಜ್ಞಪುರುಷ ವಿಷ್ಣುವನ್ನು ಆರಾಧಿಸಿದನು. ॥ ೫೧ ॥ ಅನಂತರ ವಸುದೇವನು ಸಮುಚಿತ ಕಾಲದಲ್ಲಿ ಋತ್ವಿಜರನ್ನು ವಸ್ತ್ರಾಲಂಕಾರಗಳಿಂದ ಪೂಜಿಸಿ ಶಾಸ್ತ್ರಕ್ತನುಸಾರವಾಗಿ ಅವರಿಗೆ ಹೇರಳವಾದ ದಕ್ಷಿಣೆಯೊಂದಿಗೆ ಸಾಲಂಕೃತ ಗೋವುಗಳನ್ನು, ಭೂಮಿಯನ್ನು ಸುಂದರ ಕನ್ಯೆಯರನ್ನು ದಾನಮಾಡಿದನು. ॥ ೫೨ ॥ ಬಳಿಕ ಮಹರ್ಷಿಗಳು ಪತ್ನೀಸಂಯಾಜ ಮತ್ತು ಅವಭೃಥ್ಯಗಳೆಂಬ ಯಜ್ಞಾಂಗಕರ್ಮಗಳನ್ನು ವಸುದೇವನಿಂದಲೂ ಪತ್ನಿಯರಿಂದಲೂ ಮಾಡಿಸಿ, ಆತನನ್ನು ಮುಂದೆ ಮಾಡಿಕೊಂಡು ಪರಶುರಾಮನು ನಿರ್ಮಿಸಿದ ಸಮಂತಪಂಚಕ ಸರೋವರದಲ್ಲಿ ಅವಭೃತಸ್ನಾನ ಮಾಡಿಸಿದರು. ॥ ೫೩ ॥ ಸ್ನಾನಮಾಡಿದನಂತರ ವಸುದೇವನು ಮತ್ತು ಆತನ ಪತ್ನಿಯರು ತಾವು ಉಟ್ಟಿದ್ದ ವಸ್ತ್ರಾಭರಣಗಳನ್ನು ವಂದಿಮಾಗಧರಿಗೆ ಕೊಟ್ಟುಬಿಟ್ಟರು. ಬಳಿಕ ವಸುದೇವನು ನೂತನ ವಸ್ತ್ರಾಭರಣಗಳಿಂದ ಸಮಲಂಕೃತನಾಗಿ ಬ್ರಾಹ್ಮಣರಿಂದ ಹಿಡಿದು ನಾಯಿಯವರೆಗಿನ ಸಮಸ್ತ ಪ್ರಾಣಿಗಳಿಗೂ ಮೃಷ್ಟಾನ್ನ ಭೋಜನ ಮಾಡಿಸಿದನು. ॥ ೫೪ ॥ ಮತ್ತೆ ವಸುದೇವನು ತನ್ನ ಬಂಧು ಬಾಂಧವರಿಗೆ, ಅವರ ಪತ್ನೀ-ಪುತ್ರರಿಗೆ ಹಾಗೂ ವಿದರ್ಭ, ಕೋಸಲ, ಕುರು, ಕಾಶಿ, ಕೇಕಯ, ಸೃಂಜಯ ಮೊದಲಾದ ರಾಜರುಗಳಿಗೆ, ಸದಸ್ಯರಿಗೆ, ಋತ್ವಿಜರಿಗೆ, ದೇವತೆಗಳಿಗೆ, ಮನುಷ್ಯರಿಗೆ, ಭೂತಗಳಿಗೆ, ಪಿತೃಗಳಿಗೆ, ಚಾರಣರಿಗೆ ಹಲವಾರು ವಿಧದ ಪಾರಿತೋಷಕಗಳನ್ನು ಕೊಟ್ಟು ಸನ್ಮಾನಿಸಿದನು. ಅವರೆಲ್ಲರೂ ಶ್ರೀನಿಕೇತನನಾದ ಶ್ರೀಕೃಷ್ಣನ ಅನುಮತಿಯನ್ನು ಪಡೆದು ಯಜ್ಞವನ್ನು ಪ್ರಶಂಸಿಸುತ್ತಾ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು. ॥ ೫೫-೫೬ ॥

ಧೃತರಾಷ್ಟ್ರೋಽನುಜಃ ಪಾರ್ಥಾ ಭೀಷ್ಮೋ ದ್ರೋಣಃ ಪೃಥಾ ಯಮೌ ।
ನಾರದೋ ಭಗವಾನ್ ವ್ಯಾಸಃಸುಹೃತ್ಸಂಬಂಧಿಬಾಂಧವಾಃ
॥ ೫೭ ॥

ಬಂಧೂನ್ ಪರಿಷ್ವಜ್ಯ ಯದೂನ್ ಸೌಹೃದಾತ್ ಕ್ಲಿನ್ನಚೇತಸಃ ।
ಯಯುರ್ವಿರಹಕೃಚ್ಛ್ರೇಣ ಸ್ವದೇಶಾಂಶ್ಚಾಪರೇ ಜನಾಃ
॥ ೫೮ ॥

ನಂದಸ್ತು ಸಹ ಗೋಪಾಲೈರ್ಬಹತ್ಯಾ ಪೂಜಯಾರ್ಚಿತಃ ।
ಕೃಷ್ಣರಾಮೋಗ್ರಸೇನಾದ್ಯೈರ್ನ್ಯವಾತ್ಸೀದ್ಬಂಧುವತ್ಸಲಃ
॥ ೫೯ ॥

ವಸುದೇವೋಽಂಜಸೋತ್ತೀರ್ಯ ಮನೋರಥಮಹಾರ್ಣವಮ್ ।
ಸುಹೃದ್ವೃತಃ ಪ್ರೀತಮನಾ ನಂದಮಾಹ ಕರೇ ಸ್ಪೃಶನ್
॥ ೬೦ ॥

ವಸುದೇವ ಉವಾಚ

ಭ್ರಾತರೀಶಕೃತಃ ಪಾಶೋ ನೃಣಾಂ ಯಃ ಸ್ನೇಹಸಂಜ್ಞಿತಃ ।
ತಂ ದುಸ್ತ್ಯಜಮಹಂ ಮನ್ಯೇ ಶೂರಾಣಾಮಪಿ ಯೋಗಿನಾಮ್
॥ ೬೧ ॥

ಅಸ್ಮಾಸ್ವಪ್ರತಿಕಲ್ಪೇಯಂ ಯತ್ಕೃತಾಜ್ಞೇಷು ಸತ್ತಮೈಃ ।
ಮೈತ್ರ್ಯರ್ಪಿತಾಫಲಾ ವಾಪಿ ನ ನಿವರ್ತೇತ ಕರ್ಹಿಚಿತ್
॥ ೬೨ ॥

ಪ್ರಾಗಕಲ್ಪಾಚ್ಚ ಕುಶಲಂ ಭ್ರಾತರ್ವೋ ನಾಚರಾಮ ಹಿ ।
ಅಧುನಾ ಶ್ರೀಮದಾಂಧಾಕ್ಷಾ ನ ಪಶ್ಯಾಮಃ ಪುರಃ ಸತಃ
॥ ೬೩ ॥

ಮಾ ರಾಜ್ಯಶ್ರೀರಭೂತ್ ಪುಂಸಃ ಶ್ರೇಯಸ್ಕಾಮಸ್ಯ ಮಾನದ ।
ಸ್ವಜನಾನುತ ಬಂಧೂನ್ ವಾ ನ ಪಶ್ಯತಿ ಯಯಾಂಧದೃಕ್
॥ ೬೪ ॥

ಶ್ರೀಶುಕ ಉವಾಚ

ಏವಂ ಸೌಹೃದಶೈಥಿಲ್ಯಚಿತ್ತ ಆನಕದುಂದುಭಿಃ ।
ಪುರೋದ ತತ್ಕೃತಾಂ ಮೈತ್ರೀಂ ಸ್ಮರನ್ನಶ್ರುವಿಲೋಚನಃ
॥ ೬೫ ॥

ಆ ಸಮಯದಲ್ಲಿ ಧೃತರಾಷ್ಟ್ರ-ವಿದುರ-ಯುಧಿಷ್ಠಿರ, ಭೀಮಾರ್ಜುನ-ನಕುಲ-ಸಹದೇವರೂ, ಭೀಷ್ಮ-ದ್ರೋಣಾದಿಗಳೂ, ಕುಂತೀ, ನಾರದರೂ, ಭಗವಾನ್ ವೇದವ್ಯಾಸರೂ ಹಾಗೂ ಇತರ ಸ್ವಜನ ಸಂಬಂಧಿಗಳೂ ಹಿತೈಷಿಗಳಾದ ಯಾದವರನ್ನು ಬಿಟ್ಟು ಹೋಗಲು ಸಾಧ್ಯವಾಗದೆ ವಿರಹ ವ್ಯಥೆಯನ್ನು ಅನುಭವಿಸುತ್ತಿದ್ದರು. ಅವರು ಅತ್ಯಂತ ಸ್ನೇಹಾರ್ದ್ರರಾಗಿ ಯುದುವೀರರನ್ನು ಗಾಢವಾಗಿ ಆಲಿಂಗಿಸಿಕೊಂಡು, ಅವರಿಂದ ಅನುಮತಿಯನ್ನು ಪಡೆದು ಬಹಳ ಕಷ್ಟದಿಂದ ತಮ್ಮ-ತಮ್ಮ ದೇಶಗಳಿಗೆ ಹಿಂದಿರುಗಿದರು. ಹಾಗೆಯೇ ಯಜ್ಞವನ್ನು ನೋಡಲು ಬಂದಿದ್ದ ಇತರರೂ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು. ॥ ೩೭-೩೯ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣ-ಬಲರಾಮರು ಹಾಗೂ ಉಗ್ರಸೇನರೇ ಮೊದಲಾದವರು ನಂದಗೋಪನನ್ನು ಮತ್ತು ಇತರ ಎಲ್ಲ ಗೋಪಾಲಕರನ್ನು ಅಮೂಲ್ಯ ವಸ್ತುಗಳಿಂದ ಪೂಜಿಸಿ ಸತ್ಕರಿಸಿದನು. ಅವರೂ ಪ್ರೇಮ ಪರವಶರಾಗಿ ಅನೇಕ ದಿನಗಳವರೆಗೆ ಅಲ್ಲಿಯೇ ಇದ್ದರು. ॥ ೫೯ ॥ ವಸುದೇವನು ಮನೋರಥವೆಂಬ ಮಹಾಸಾಗರವನ್ನು ಅನಾಯಾಸವಾಗಿ ದಾಟಿಬಿಟ್ಟನು. ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಸುಹೃದರಿಂದ ಸುತ್ತುವರಿಯಲ್ಪಟ್ಟ ಪ್ರಸನ್ನಚಿತ್ತನಾದ ವಸುದೇವನು ನಂದಗೋಪನ ಕೈಹಿಡಿದುಕೊಂಡು ಇಂತೆಂದನು. ॥ ೬೦ ॥

ವಸುದೇವನು ಹೇಳಿದನು - ಸಹೋದರ! ಭಗವಂತನು ಮನುಷ್ಯರಿಗೆ ಸ್ನೇಹ, ಪ್ರೇಮಪಾಶವೆಂಬ ಬಂಧನವನ್ನು ಕಲ್ಪಿಸಿಬಿಟ್ಟಿದ್ದಾನೆ. ಈ ಸ್ನೇಹ ಸಂಬಂಧವನ್ನು ತ್ಯಜಿಸಲು ದೊಡ್ಡ-ದೊಡ್ಡ ಶೂರರಿಗೂ, ಯೋಗಿ-ಯತಿಗಳಿಗೂ ಸಾಧ್ಯವಾಗದೆಂದು ನಾನು ಭಾವಿಸುತ್ತೇನೆ. ॥ ೬೧ ॥ ನಮ್ಮಂತಹ ಅಕೃತಜ್ಞರೊಂದಿಗೆ ನೀವು ಅಸದೃಶವಾದ ಸ್ನೇಹದ ವ್ಯವಹಾರಮಾಡಿರುವಿರಿ. ನಿಮ್ಮಂತಹ ಸಂತಶಿರೋಮಣಿಗಳಿಗೆ ಇಂತಹ ವ್ಯವಹಾರವು ಸ್ವಭಾವಸಿದ್ಧವೇ ಆಗಿರುತ್ತದೆ. ನಾವು ಇದನ್ನು ಎಂದೂ ತೀರಿಸಲಾರೆವು. ನಿಮಗೆ ಇದರ ಪ್ರತಿಫಲವನ್ನು ಕೊಡಲು ಸಮರ್ಥರಲ್ಲ. ಹೀಗಿದ್ದರೂ ನಮ್ಮಗಳ ಈ ನಿರ್ವ್ಯಾಜವಾದ ಮಿತ್ರತೆಯ ಸಂಬಂಧವು ಅಚಲವಾಗಿಯೇ ಉಳಿಯಲಿ. ॥ ೬೨ ॥ ಹಿಂದೆ ನಾವು ಕಾರಾಗೃಹದಲ್ಲಿ ಬಂಧಿತರಾಗಿದ್ದರಿಂದ ನಿಮಗೆ ಯಾವುದೇ ಉಪಕಾರವನ್ನು ಮಾಡಲೂ ಅಶಕ್ಯವಾಗಿತ್ತು. ಈಗಲಾದರೋ ಧನಮದದಿಂದ ಕುರುಡರಾಗಿ ನೀವು ನಮ್ಮ ಮುಂದೆಯೇ ಇದ್ದರೂ ಕಣ್ಣೆತ್ತಿಯೂ ನೋಡುತ್ತಿಲ್ಲ. ॥ ೬೩ ॥ ಮಾನದನಾದ ನಂದಗೋಪನೇ! ಶ್ರೇಯಸ್ಕಾಮನಾದವನಿಗೆ ರಾಜ್ಯಲಕ್ಷ್ಮಿಯು ದೊರಕದಿರುವುದೇ ಒಳಿತಿದೆ. ಏಕೆಂದರೆ, ಮನುಷ್ಯನು ರಾಜ್ಯಲಕ್ಷ್ಮಿಯಿಂದ ಕುರುಡನಾಗುತ್ತಾನೆ ಮತ್ತು ತನ್ನ ಸ್ವಜನರನ್ನಾಗಲೀ, ಬಂಧುಗಳನ್ನೂ ನೋಡಲಾರನು. ॥ ೬೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಹೇಳುತ್ತಿದ್ದಂತೆಯೇ ವಸುದೇವನ ಹೃದಯವು ಪ್ರೇಮದಿಂದ ಗದ್ಗದವಾಯಿತು. ನಂದಗೋಪನ ಮೈತ್ರಿಯೂ ಹಿಂದೆ ಮಾಡಿದ ಉಪಕಾರಗಳೂ ಸ್ಮರಣೆಗೆ ಬಂದು ಅವನ ಕಣ್ಣುಗಳಲ್ಲಿ ನೀರು ತುಂಬಿಬಂದು ಗಳಗಳನೆ ಅತ್ತುಬಿಟ್ಟನು. ॥ ೬೫ ॥

ನಂದಸ್ತು ಸಖ್ಯುಃ ಪ್ರಿಯಕೃತ್ ಪ್ರೇಮ್ಣಾ ಗೋವಿಂದರಾಮಯೋಃ ।
ಅದ್ಯ ಶ್ವ ಇತಿ ಮಾಸಾಂಸ್ತ್ರೀನ್ ಯದುಭಿರ್ಮಾನಿತೋಽವಸತ್
॥ ೬೬ ॥

ನಂದಗೋಪನು ತನ್ನ ಮಿತ್ರನಾದ ವಸುದೇವನಿಗೆ ಹಾಗೂ ಶ್ರೀಕೃಷ್ಣ-ಬಲರಾಮರಿಗೆ ಸಂತೋಷಪಡಿಸಲು, ಅವರ ಪ್ರೇಮ ಪಾಶದಲ್ಲಿ ಬಂಧಿತನಾಗಿ ಇಂದು-ನಾಳೆ ಎಂದೆನ್ನುತ್ತಾ ಮೂರು ತಿಂಗಳು ಅಲ್ಲೇ ಇದ್ದುಬಿಟ್ಟನು. ॥ ೬೬ ॥

ತತಃ ಕಾಮೈಃ ಪೂರ್ಯಮಾಣಃ ಸವ್ರಜಃ ಸಹಬಾಂಧವಃ ।
ಪರಾರ್ಧ್ಯಾಭರಣಕ್ಷೌಮನಾನಾನರ್ಘ್ಯಪರಿಚ್ಛದೈಃ
॥ ೬೭ ॥

ಬಳಿಕ ಬಹುಮೂಲ್ಯವಾದ ಆಭೂಷಣಗಳಿಂದ, ರೇಷ್ಮೆ ವಸ್ತ್ರಗಳಿಂದ, ನಾನಾವಿಧದ ಉತ್ತಮೋತ್ತಮ ವಸ್ತುಗಳಾದ ಮತ್ತು ಭೋಗಸಾಮಗ್ರಿಗಳಿಂದ ನಂದ ಗೋಪನನ್ನು, ಅವನ ವ್ರಜವಾಸಿಗಳಾದ ಸಂಗಡಿಗರನ್ನೂ, ಬಂಧು ಬಾಂಧವರನ್ನು ಉದಾರ ಮನಸ್ಸಿನಿಂದ ತೃಪ್ತಿಪಡಿಸಿದನು. ॥ ೬೭ ॥

ವಸುದೇವೋಗ್ರಸೇನಾಭ್ಯಾಂ ಕೃಷ್ಣೋದ್ಧವಬಲಾದಿಭಿಃ ।
ದತ್ತಮಾದಾಯ ಪಾರಿಬರ್ಹಂ ಯಾಪಿತೋ ಯದುಭಿರ್ಯಯೌ
॥ ೬೮ ॥

ವಸುದೇವ, ಉಗ್ರಸೇನ, ಶ್ರೀಕೃಷ್ಣ-ಬಲರಾಮರು, ಉದ್ಧವರೇ ಮೊದಲಾದ ಯದುವಂಶೀಯರು ಬೇರೆ-ಬೇರೆಯಾಗಿ ಅವನಿಗೆ ಅನೇಕ ಉಡುಗೊರೆಗಳನ್ನು ಕೊಟ್ಟರು. ಅವರಿಂದ ಬೀಳ್ಕೊಂಡು, ಅವರಿತ್ತ ಸಾಮಗ್ರಿಗಳಿಂದೊಡಗೂಡಿ ನಂದಗೋಪನು ತನ್ನ ವ್ರಜಮಂಡಲಕ್ಕೆ ಪ್ರಯಾಣಮಾಡಿದನು. ॥ ೬೮ ॥

ನಂದೋ ಗೋಪಾಶ್ಚ ಗೋಪ್ಯಶ್ಚ ಗೋವಿಂದಚರಣಾಂಬುಜೇ ।
ಮನಃ ಕ್ಷಿಪ್ತಂ ಪುನರ್ಹರ್ತುಮನೀಶಾ ಮಥುರಾಂ ಯಯುಃ
॥ ೬೯ ॥

ನಂದಗೋಪ, ಗೋಪಾಲರು ಮತ್ತು ಗೋಪಿಯರ ಚಿತ್ತವು ಭಗವಾನ್ ಶ್ರೀಕೃಷ್ಣನ ಚರಣಕಮಲಗಳಲ್ಲಿ ಎಷ್ಟು ನೆಟ್ಟುಹೋಗಿತ್ತೆಂದರೆ ಅದನ್ನು ಪ್ರಯತ್ನ ಮಾಡಿದರೂ ಹಿಂದಿರುಗಿಸದಾದರು. ಕೊನೆಗೆ ಮನಸ್ಸಿಲ್ಲದೆಯೇ ಅವರು ಮಥುರೆಗೆ ಹೊರಟು ಹೋದರು. ॥ ೬೯ ॥

ಬಂಧುಷು ಪ್ರತಿಯಾತೇಷು ವೃಷ್ಣಯಃ ಕೃಷ್ಣದೇವತಾಃ ।
ವೀಕ್ಷ್ಯ ಪ್ರಾವೃಷಮಾಸನ್ನಾಂ ಯಯುರ್ದ್ವಾರವತೀಂ ಪುನಃ
॥ ೭೦ ॥

ಬಂಧು-ಮಿತ್ರರು ಹೋದನಂತರ ಶ್ರೀಕೃಷ್ಣನನ್ನೇ ಏಕಮಾತ್ರ ಇಷ್ಟದೇವನೆಂದು ಭಾವಿಸಿದ್ದ ಯಾದವರು ವರ್ಷಾಕಾಲವು ಸನ್ನಿಹಿತವಾದುದನ್ನು ಕಂಡು ದ್ವಾರಕೆಗೆ ಪ್ರಯಾಣ ಮಾಡಿದರು. ॥ ೭೦ ॥

ಜನೇಭ್ಯಃ ಕಥಯಾಂಚಕ್ರುರ್ಯದುದೇವಮಹೋತ್ಸವಮ್ ।
ಯದಾಸೀತ್ತೀರ್ಥಯಾತ್ರಾಯಾಂ ಸುಹೃತ್ಸಂದರ್ಶನಾದಿಕಮ್
॥ ೭೧ ॥

ದ್ವಾರಾವತಿಯನ್ನು ಸೇರಿದ ಬಳಿಕ ಅವರೆಲ್ಲರೂ ಅಲ್ಲಿದ್ದ ಪ್ರಜೆಗಳಿಗೆ ವಸುದೇವನ ಯಜ್ಞೋತ್ಸವವನ್ನು, ತೀರ್ಥಯಾತ್ರೆಯ ಪ್ರಸಂಗದಲ್ಲಿ ಸ್ವಜನ-ಸಂಬಂಧಿಗಳ ದರ್ಶನ-ಭೇಟಿ, ವಾರ್ತಾಲಾಪ ಮೊದಲಾದುವನ್ನು ವಿವರಿಸಿ ಹೇಳಿದರು. ॥ ೭೧ ॥

ಎಂಭತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೮೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ತೀರ್ಥಯಾತ್ರಾನುವರ್ಣನಂ ನಾಮ ಚತುರಶೀತಿತಮೋಽಧ್ಯಾಯಃ॥ ೮೪ ॥

ಎಂಭತ್ತೈದನೆಯ ಅಧ್ಯಾಯ

ಭಗವಂತನು ವಸುದೇವನಿಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿದುದು - ಗತಿಸಿಹೋದ ದೇವಕಿಯ ಆರು ಮಕ್ಕಳನ್ನು ಶ್ರೀಕೃಷ್ಣನು ಹಿಂದಕ್ಕೆ ತಂದುದು

ಶ್ರೀಬಾದರಾಯಣಿರುವಾಚ

ಅಥೈಕದಾಽಽತ್ಮಜೌ ಪ್ರಾಪ್ತೌ ಕೃತಪಾದಾಭಿವಂದನೌ ।
ವಸುದೇವೋಽಭಿನಂದ್ಯಾಹ ಪ್ರೀತ್ಯಾ ಸಂಕರ್ಷಣಾಚ್ಯುತೌ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ದೈನಂದಿನ ಪದ್ಧತಿಯಂತೆ ಶ್ರೀಕೃಷ್ಣ-ಬಲರಾಮರು ಒಂದು ದಿನ ಪ್ರಾತಃಕಾಲದಲ್ಲಿ ನಮಸ್ಕರಿಸಲು ತಂದೆ-ತಾಯಿಗಳ ಬಳಿಗೆ ಬಂದರು. ಅಭಿವಂದಿಸಿದ ಬಳಿಕ ವಸುದೇವ-ದೇವಕಿಯರು ಪುತ್ರರಿಬ್ಬರನ್ನು ಅತ್ಯಂತ ಪ್ರೇಮದಿಂದ ಪ್ರಶಂಸಿಸುತ್ತಾ ಹೇಳತೊಡಗಿದರು. ॥ ೧ ॥

ಮುನೀನಾಂ ಸ ವಚಃ ಶ್ರುತ್ವಾಪುತ್ರಯೋರ್ಧಾಮಸೂಚಕಮ್ ।
ತದ್ವೀರ್ಯೈರ್ಜಾತವಿಶ್ರಂಭಃ ಪರಿಭಾಷ್ಯಾಭ್ಯಭಾಷತ
॥ ೨ ॥

ಕೃಷ್ಣ ಕೃಷ್ಣ ಮಹಾಯೋಗಿನ್ ಸಂಕರ್ಷಣ ಸನಾತನ ।
ಜಾನೇ ವಾಮಸ್ಯ ಯತ್ಸಾಕ್ಷಾತ್ ಪ್ರಧಾನಪುರುಷೌ ಪರೌ
॥ ೩ ॥

ಯತ್ರ ಯೇನ ಯತೋ ಯಸ್ಯ ಯಸ್ಮೈ ಯದ್ಯದ್ಯಥಾ ಯದಾ ।
ಸ್ಯಾದಿದಂ ಭಗವಾನ್ ಸಾಕ್ಷಾತ್ತದ್ಧಾನಪುರುಷೇಶ್ವರಃ
॥ ೪ ॥

ಏತನ್ನಾನಾವಿಧಂ ವಿಶ್ವಮಾತ್ಮಸೃಷ್ಟಮಧೋಕ್ಷಜ ।
ಆತ್ಮನಾನುಪ್ರವಿಶ್ಯಾತ್ಮನ್ ಪ್ರಾಣೋ ಜೀವೋ ಬಿಭರ್ಷ್ಯಜಃ
॥ ೫ ॥

ಪ್ರಾಣಾದೀನಾಂ ವಿಶ್ವಜಾಂ ಶಕ್ತಯೋ ಯಾಃ ಪರಸ್ಯ ತಾಃ ।
ಪಾರತಂತ್ರ್ಯಾದ್ ವೈಸಾದೃಶ್ಯಾದ್ ದ್ವಯೋಶ್ಚೇಷ್ಟೈವ ಚೇಷ್ಟತಾಮ್
॥ ೬ ॥

ಕಾಂತಿಸ್ತೇಜಃ ಪ್ರಭಾ ಸತ್ತಾ ಚಂದ್ರಾಗ್ನ್ಯರ್ಕರ್ಕ್ಷವಿದ್ಯುತಾಮ್ ।
ಯತ್ ಸ್ಥೈರ್ಯಂ ಭೂಭೃತಾಂ ಭೂಮೇ-
ರ್ವೃತ್ತಿರ್ಗಂಧೋಽರ್ಥತೋ ಭವಾನ್
॥ ೭ ॥

ತರ್ಪಣಂ ಪ್ರಾಣನಮಪಾಂ ದೇವ ತ್ವಂ ತಾಶ್ಚ ತದ್ರಸಃ ।
ಓಜಃ ಸಹೋ ಬಲಂ ಚೇಷ್ಟಾ ಗತಿರ್ವಾಯೋಸ್ತವೇಶ್ವರ
॥ ೮ ॥

ದಿಶಾಂ ತ್ವಮವಕಾಶೋಽಸಿ ದಿಶಃ ಖಂ ಸ್ಫೋಟ ಆಶ್ರಯಃ ।
ನಾದೋ ವರ್ಣಸ್ತ್ವಮೋಂಕಾರ ಆಕೃತೀನಾಂ ಪೃಥಕ್ಕೃತಿಃ
॥ ೯ ॥

ವಸುದೇವನು ಮಹಾ-ಮಹಾ ಋಷಿಗಳ ಮುಖದಿಂದ ಭಗವಂತನ ಮಹಿಮೆಯನ್ನು ಕೇಳಿದ್ದನು ಮತ್ತು ಐಶ್ವರ್ಯ ಪೂರ್ಣವಾದ ಅವನ ಚರಿತ್ರೆಗಳನ್ನು ಕಣ್ಣಾರೆ ಕಂಡಿದ್ದನು. ಇವನು ಸಾಧಾರಣವಲ್ಲವೆಂದೂ ಸಾಕ್ಷಾತ್ ಭಗವಂತನೇ ಆಗಿರುವನೆಂಬ ಮಾತಿನಲ್ಲಿ ದೃಢವಿಶ್ವಾಸವಿತ್ತು. ಇದರಿಂದ ಅವನು ತನ್ನ ಪುತ್ರರನ್ನು ಪ್ರೇಮಪೂರ್ವಕವಾಗಿ ಸಂಬೋಧಿಸಿ ಹೀಗೆ ಹೇಳಿದನು. ॥ ೨ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಮಹಾಯೋಗೀಶ್ವರ ಸಂಕರ್ಷಣನೇ! ನೀವಿಬ್ಬರೂ ಸನಾತನರಾಗಿರುವಿರಿ. ನೀವಿಬ್ಬರೂ ಪ್ರಕೃತಿ-ಪುರುಷ ಸ್ವರೂಪರೆಂದೂ ಸಾಕ್ಷಾತ್ ಈಶ್ವರರೆಂದೂ ನಾನು ತಿಳಿದಿರುತ್ತೇನೆ. ॥ ೩ ॥ ಈ ಜಗತ್ತಿನ ಆಧಾರರೂ, ನಿರ್ಮಾತೃಗಳೂ, ನಿರ್ಮಾಣ ಸಾಮಗ್ರಿಯೂ ನೀವೇ ಆಗಿದ್ದೀರಿ. ಈ ಸಮಸ್ತ ಜಗತ್ತಿನ ಸ್ವಾಮಿಯೂ ನೀವಿಬ್ಬರು ಆಗಿರುವಿರಿ. ಮತ್ತು ನಿಮ್ಮ ಕ್ರೀಡೆ ಗಾಗಿಯೇ ಇದರ ನಿರ್ಮಾಣವಾಗಿದೆ. ಇದು ಯಾವಾಗ, ಯಾವ ರೂಪದಿಂದ, ಏನೆಲ್ಲ ಇರುತ್ತದೋ, ಆಗುತ್ತಿದೆಯೋ ಅದೆಲ್ಲವೂ ನೀವೇ ಆಗಿದ್ದೀರಿ. ಈ ಜಗತ್ತಿನಲ್ಲಿ ಪ್ರಕೃತಿರೂಪದಿಂದ ಭೋಗ್ಯನೂ ಮತ್ತು ಪುರುಷರೂಪದಿಂದ ಭೋಕ್ತಾನು ಹಾಗೂ ಎರಡರಿಂದಲೂ ಅತೀತನೂ, ಎರಡರ ನಿಯಾಮಕರೂ ಆದ ಸಾಕ್ಷಾತ್ ಭಗವಂತನೇ ನೀವಾಗಿರುವಿರಿ. ॥ ೪ ॥ ಇಂದ್ರಿಯಾತೀತನೇ! ಜನ್ಮ-ಸ್ಥಿತಿಯೇ ಮೊದಲಾದ ಭಾವವಿಕಾರದಿಂದ ರಹಿತರಾದ ಪರಮಾತ್ಮನೇ! ಈ ಚಿತ್ರ - ವಿಚಿತ್ರವಾದ ಜಗತ್ತನ್ನು ನೀವೇ ನಿರ್ಮಿಸಿರುವಿರಿ. ಇದರಲ್ಲಿ ನೀವೇ ಆತ್ಮರೂಪದಿಂದ ಪ್ರವೇಶಿಸಿಯೂ ಇದ್ದಿರಿ. ನೀವು ಪ್ರಾಣ (ಕ್ರಿಯಾಶಕ್ತಿ) ಮತ್ತು ಜೀವ (ಜ್ಞಾನಶಕ್ತಿ) ರೂಪದಿಂದ ಇದನ್ನು ಪಾಲಿಸುತ್ತಾ-ಪೋಷಿಸುತ್ತಾ ಇರುವಿರಿ. ॥ ೫ ॥ ಕ್ರಿಯಾಶಕ್ತಿ ಪ್ರಧಾನವಾದ ಪ್ರಾಣವೇ ಮೊದಲಾದುವುಗಳಿಗೆ ಜಗತ್ತಿನ ವಸ್ತುಗಳನ್ನು ಸೃಷ್ಟಿಸುವ ಸಾಮರ್ಥ್ಯವಿದೆಯೋ ಅದು ಅವುಗಳ ಸಾಮರ್ಥ್ಯವಾಗಿರದೆ ನಿನ್ನದೇ ಆಗಿದೆ. ಏಕೆಂದರೆ, ಅವು ನಿನ್ನಂತೆ ಚೇತನರಲ್ಲ ಅಚೇತನರಾಗಿರುವರು. ಸ್ವತಂತ್ರರಲ್ಲ ಪರತಂತ್ರರಾಗಿದ್ದಾರೆ. ಆದ್ದರಿಂದ ಆ ಚೇಷ್ಟಾಶೀಲ ಪ್ರಾಣವೇ ಮೊದಲಾದುವುಗಳಲ್ಲಿ ಕೇವಲ ಚೇಷ್ಟಾಮಾತ್ರವಿರುತ್ತದೆ, ಶಕ್ತಿಯಲ್ಲ, ಶಕ್ತಿಯಾದರೋ ನಿನ್ನದೇ ಆಗಿದೆ. ॥ ೬ ॥ ಪ್ರಭೋ! ಚಂದ್ರನಕಾಂತಿ, ಅಗ್ನಿಯತೇಜ, ಸೂರ್ಯನಪ್ರಭೆ, ನಕ್ಷತ್ರ ಮತ್ತು ವಿದ್ಯುತ್ತಿನ ಸ್ಫುರಣರೂಪದ ಸತ್ತೆ, ಪರ್ವತಗಳ ಸ್ಥಿರತೆ, ಪೃಥಿವಿಯ ಆಧಾರ ಶಕ್ತಿರೂಪವಾದ ವೃತ್ತಿ ಮತ್ತು ಗಂಧರೂಪ ಗುಣ - ಇವೆಲ್ಲವೂ ವಾಸ್ತವವಾಗಿ ನೀನೇ ಆಗಿರುವೆ. ॥ ೭ ॥ ಪರಮೇಶ್ವರನೇ! ನೀರಿನಲ್ಲಿರುವ ತೃಪ್ತಿಪಡಿಸುವ, ಜೀವನ ನೀಡುವ, ಶುದ್ಧಿಗೊಳಿಸುವ ಶಕ್ತಿಗಳು ನಿನ್ನದೇ ಸ್ವರೂಪವಾಗಿದೆ. ಜಲ ಮತ್ತು ಅದರ ರಸ ನೀನೇ ಆಗಿರುವೆ. ಪ್ರಭೋ ವಾಯುವಿನಲ್ಲಿರುವ ಇಂದ್ರಿಯ ಶಕ್ತಿ ಅಂತಃಕರಣದ ಶಕ್ತಿ, ಶರೀರದ ಶಕ್ತಿ, ಚೇಷ್ಟೆ ಗಮನ ಶಕ್ತಿ - ಈ ಶಕ್ತಿಗಳೆಲ್ಲವೂ ನಿನ್ನವುಗಳೇ ಆಗಿವೆ. ॥ ೮ ॥ ದಿಕ್ಕುಗಳಲ್ಲಿರುವ ಅವಕಾಶವು ನೀನೇ ಆಗಿರುವೆ. ಆಕಾಶ ಮತ್ತು ಅದರ ಆಶ್ರಯಭೂತವಾಗಿರುವ ಸ್ಫೋಟ, ಶಬ್ದ ತನ್ಮಾತ್ರೆ ಅಥವಾ ಪರಾವಾಣಿ, ನಾದ-ಪಶ್ಯಂತಿ, ಓಂಕಾರ-ಮಧ್ಯಮಾ ಮತ್ತು ವರ್ಣ (ಅಕ್ಷರ) ಹಾಗೂ ಪದಾರ್ಥಗಳನ್ನು ಬೇರೆ-ಬೇರೆಯಾಗಿ ನಿರ್ದೇಶಿಸುವ ಪದ, ರೂಪ ವೈಖರಿ ವಾಣಿಯೂ ನೀನೇ ಆಗಿರುವೆ. ॥ ೯ ॥

ಇಂದ್ರಿಯಂ ತ್ವೀಂದ್ರಿಯಾಣಾಂ ತ್ವಂ ದೇವಾಶ್ಚ ತದನುಗ್ರಹಃ ।
ಅವಬೋಧೋ ಭವಾನ್ ಬುದ್ಧೇರ್ಜೀವಸ್ಯಾನುಸ್ಮೃತಿಃ ಸತೀ
॥ ೧೦ ॥

ಇಂದ್ರಿಯಗಳು, ಅವುಗಳ ವಿಷಯ ಪ್ರಕಾಶಿನಿ ಶಕ್ತಿ ಮತ್ತು ಅಧಿಷ್ಠಾತೃದೇವತೆಗಳು ನೀನೆ ಆಗಿರುವೆ. ಬುದ್ಧಿಯ ನಿಶ್ಚಯಾತ್ಮಿಕಾಶಕ್ತಿ ಮತ್ತು ಜೀವಿಯ ವಿಶುದ್ಧ ಸ್ಮರಣಶಕ್ತಿಯೂ ನೀನೇ ಆಗಿರುವೆ. ॥ ೧೦ ॥

ಭೂತಾನಾಮಸಿ ಭೂತಾದಿರಿಂದ್ರಿಯಾಣಾಂ ಚ ತೈಜಸಃ ।
ವೈಕಾರಿಕೋ ವಿಕಲ್ಪಾನಾಂ ಪ್ರಧಾನಮನುಶಾಯಿನಾಮ್
॥ ೧೧ ॥

ಭೂತಮಾತ್ರರಲ್ಲಿ ಅವುಗಳ ಕಾರಣವಾದ ತಾಮಸಾಹಂಕಾರ ಮತ್ತು ಇಂದ್ರಿಯಗಳಿಗೆ ಕಾರಣವಾದ ತೈಜಸಾಹಂಕಾರ ಹಾಗೂ ಇಂದ್ರಿಯಗಳ ಅಧಿಷ್ಠಾತೃ-ದೇವತೆಗಳಲ್ಲಿ ಅವರ ಕಾರಣವಾದ ಸಾತ್ವಿಕ ಅಹಂಕಾರ ಜೀವನ ಹುಟ್ಟು-ಸಾವಿಗೆ ಕಾರಣವಾದ ಮಾಯೆಯು ನೀನೇ ಆಗಿರುವೆ. ॥ ೧೧ ॥ ಭಗವಂತಾ ! ಮಣ್ಣಿನ ವಸ್ತುಗಳ ವಿಕಾರವಾದ ಗಡಿಗೆ, ಮರ ಮುಂತಾದವುಗಳಲ್ಲಿ ಮಣ್ಣೇ ನಿರಂತರವಾಗಿರುತ್ತದೆ ಮತ್ತು ವಾಸ್ತವವಾಗಿ ಅವು ಕಾರಣ (ಮಣ್ಣು) ರೂಪವೇ ಆಗಿವೆ. ಹಾಗೆಯೇ ನಾಶಹೊಂದುವ ಎಲ್ಲ ಪದಾರ್ಥಗಳಲ್ಲಿಯೂ ನೀನೇ ಕಾರಣರೂಪದಿಂದ ಅವಿನಾಶೀ ತತ್ತ್ವನಾಗಿರುವೆ. ವಾಸ್ತವವಾಗಿ ಅವೆಲ್ಲವೂ ನಿನ್ನ ಸ್ವರೂಪವೇ ಆಗಿವೆ. ॥ ೧೨ ॥

ನಶ್ವರೇಷ್ವಿಹ ಭಾವೇಷು ತದಸಿ ತ್ವಮನಶ್ವರಮ್ ।
ಯಥಾ ದ್ರವ್ಯವಿಕಾರೇಷು ದ್ರವ್ಯಮಾತ್ರಂ ನಿರೂಪಿತಮ್
॥ ೧೨ ॥

ಸತ್ತ್ವಂ ರಜಸ್ತಮ ಇತಿ ಗುಣಾಸ್ತದ್ವೃತ್ತಯಶ್ಚ ಯಾಃ ।
ತ್ವಯ್ಯದ್ಧಾ ಬ್ರಹ್ಮಣಿ ಪರೇ ಕಲ್ಪಿತಾ ಯೋಗಮಾಯಯಾ
॥ ೧೩ ॥

ಪ್ರಭೋ ! ಸತ್ತ್ವ, ರಜ, ತಮ - ಈ ತ್ರಿಗುಣಗಳು ಮತ್ತು ಅವುಗಳ ವೃತ್ತಿಗಳು (ಪರಿಣಾಮ) - ಮಹತ್ತತ್ತ್ವಾದಿಗಳು ಪರಬ್ರಹ್ಮ ಪರಮಾತ್ಮನಾದ ನಿನ್ನಲ್ಲೇ ಯೋಗಮಾಯೆಯಿಂದ ಕಲ್ಪಿತವಾಗಿವೆ. ॥ ೧೩. ॥

ತಸ್ಮಾನ್ನ ಸಂತ್ಯಮೀ ಭಾವಾ ಯರ್ಹಿ ತ್ವಯಿ ವಿಕಲ್ಪಿತಾಃ ।
ತ್ವಂ ಚಾಮೀಷು ವಿಕಾರೇಷು ಹ್ಯನ್ಯದಾ ವ್ಯವಹಾರಿಕಃ
॥ ೧೪ ॥

ಅದಕ್ಕಾಗಿ ಜನ್ಮ-ಸ್ಥಿತಿ ಮೊದಲಾದ ಈ ಭಾವವಿಕಾರಗಳು ನಿನ್ನಲ್ಲಿ ಖಂಡಿತವಾಗಿಯೂ ಇಲ್ಲ. ನಿನ್ನಲ್ಲಿ ಇವುಗಳನ್ನು ಕಲ್ಪಿಸಿಕೊಂಡಾಗ ನೀನು ಈ ವಿಕಾರಗಳಲ್ಲಿ ಅನುಗತನಾದವನಂತೆ ಕಂಡುಬರುವೆ. ಕಲ್ಪನೆಯ ನಿವೃತ್ತಿ ಉಂಟಾದಾಗ ನಿರ್ವಿಕಲ್ಪ ಪರಮಾರ್ಥ ಸ್ವರೂಪನಾದ ನೀನೇ ಉಳಿದುಬಿಡುವೆ. ॥ ೧೪ ॥

ಗುಣಪ್ರವಾಹ ಏತಸ್ಮಿನ್ನಬುಧಾಸ್ತ್ವಖಿಲಾತ್ಮನಃ ।
ಗತಿಂ ಸೂಕ್ಷ್ಮಾಮಬೋಧೇನ ಸಂಸರಂತೀಹ ಕರ್ಮಭಿಃ
॥ ೧೫ ॥

ಈ ಜಗತ್ತು ಸತ್ತ್ವ, ರಜ, ತಮ - ಈ ತ್ರಿಗುಣಗಳ ಪ್ರವಾಹವಾಗಿದೆ. ದೇಹ, ಇಂದ್ರಿಯಗಳು, ಅಂತಃಕರಣ, ಸುಖ, ದುಃಖ, ರಾಗ-ಲೋಭಾದಿಗಳು ಅವುಗಳ ಕಾರ್ಯವಾಗಿದೆ. ಇದರಲ್ಲಿ ಅಜ್ಞಾನಿಗಳಾದವರು ನಿನ್ನ ಸರ್ವಾತ್ಮಕವಾದ ಸೂಕ್ಷ್ಮಸ್ವರೂಪವನ್ನು ತಿಳಿಯುತ್ತಿಲ್ಲ. ಅವರು ತಮ್ಮ ದೇಹಾಭಿಮಾನರೂಪವಾದ ಅಜ್ಞಾನದಿಂದಲೇ ಕರ್ಮ ಗಳಲ್ಲಿ ಸಿಕ್ಕುಹಾಕಿಕೊಂಡು ಪದೇ-ಪದೇ ಹುಟ್ಟು- ಸಾವಿನ ಉರುಳಾಟದಲ್ಲಿ ಅಲೆಯುತ್ತಾ ಇರುತ್ತಾರೆ. ॥ ೧೫ ॥

ಯದೃಚ್ಛಯಾ ನೃತಾಂ ಪ್ರಾಪ್ಯ ಸುಕಲ್ಪಾಮಿಹ ದುರ್ಲಭಾನ್ ।
ಸ್ವಾರ್ಥೇ ಪ್ರಮತ್ತಸ್ಯ ವಯೋ ಗತಂ ತ್ವನ್ಮಾಯಯೇಶ್ವರ
॥ ೧೬ ॥

ಪರಮೇಶ್ವರನೇ ! ನನಗೆ ಶುಭ ಪ್ರಾರಬ್ಧಕ್ಕನುಸಾರವಾಗಿ ಸಶಕ್ತ ಇಂದ್ರಿಗಳಿಂದ ಕೂಡಿದ ಅತ್ಯಂತ ದುರ್ಲಭವಾದ ಮನುಷ್ಯ ಶರೀರವು ದೊರೆತಿದೆ. ಆದರೆ ನಿನ್ನ ಮಾಯೆಗೆ ವಶನಾಗಿ ಪ್ರಮತ್ತನಾಗಿರುವ ನನ್ನ ಆಯುಷ್ಯವೂ ನಿಜವಾದ ಪರಮಾರ್ಥ ಸಾಧನೆಯಲ್ಲಿ ವ್ಯರ್ಥವಾಗಿ ಕಳೆದು ಹೋಯಿತು. ॥ ೧೬ ॥

ಅಸಾವಹಂ ಮಮೈವೈತೇ ದೇಹೇ ಚಾಸ್ಯಾನ್ವಯಾದಿಷು ।
ಸ್ನೇಹಪಾಶೈರ್ನಿಬಧ್ನಾತಿ ಭವಾನ್ ಸರ್ವಮಿದಂ ಜಗತ್
॥ ೧೭ ॥

ಪ್ರಭೋ ! ಈ ಶರೀರವು ನನ್ನದು ಮತ್ತು ಈ ಶರೀರದ ಸಂಬಂಧಿಗಳು ನನ್ನವರಾಗಿದ್ದಾರೆ ಎಂಬ ಅಹಂತೆ-ಮಮತೆಯ ರೂಪವಾದ ಸ್ನೇಹದ ಬಲೆಯಲ್ಲಿ ನೀನೇ ಈ ಸಮಸ್ತ ಜಗತ್ತನ್ನು ಕಟ್ಟಿಹಾಕಿರುವೆ. ॥ ೧೭ ॥ ನೀವಿಬ್ಬರೂ ನನ್ನ ಪುತ್ರರಾಗಿರದೇ ಸಂಪೂರ್ಣ ಪ್ರಕೃತಿ ಮತ್ತು ಜೀವರ ಸ್ವಾಮಿಯಾಗಿರುವಿರಿ ಎಂಬುದು ನಾನು ತಿಳಿದಿರುತ್ತೇನೆ. ಭೂಮಿಗೆ ಭಾರವಾಗಿದ್ದ ರಾಜರನ್ನು ವಿನಾಶಗೊಳಿಸಲೆಂದೇ ನೀವು ಅವತರಿಸಿರುವಿರಿ. ಈ ಮಾತನ್ನು ನೀವು ಹಿಂದೆ ನನಗೆ ಹೇಳಿಯೂ ಇದ್ದೀರಿ. ॥ ೧೮ ॥

ಯುವಾಂ ನ ನಃ ಸುತೌ ಸಾಕ್ಷಾತ್ಪ್ರಧಾನಪುರುಷೇಶ್ವರೌ ।
ಭೂಭಾರಕ್ಷತ್ರಕ್ಷಪಣ ಅವತೀರ್ಣೌ ತಥಾSSತ್ಥ ಹ
॥ ೧೮ ॥

ತತ್ತೇ ಗತೋಽಸ್ಮ್ಯರಣಮದ್ಯ ಪದಾರವಿಂದ-
ಮಾಪನ್ನಸಂಸೃತಿಭಯಾಪಹಮಾರ್ತಬಂಧೋ ।
ಏತಾವತಾಲಮಲಮಿಂದ್ರಿಯಲಾಲಸೇನ
ಮರ್ತ್ಯಾತ್ಮದೃಕ್ ತ್ವಯಿ ಪರೇ ಯದಪತ್ಯಬುದ್ಧಿಃ ॥ ೧೯ ॥

ಸೂತೀಗೃಹೇ ನನು ಜಗಾದ ಭವಾನಜೋ ನೌ
ಸಂಜಜ್ಞ ಇತ್ಯನುಯುಗಂ ನಿಜಧರ್ಮಗುಪ್ತ್ಯೈ ।
ನಾನಾತನೂರ್ಗಗನವದ್ವಿದಧಜ್ಜಹಾಸಿ
ಕೋ ವೇದ ಭೂಮ್ನ ಉರುಗಾಯ ವಿಭೂತಿಮಾಯಾಮ್ ॥ ೨೦ ॥

ಶ್ರೀಶುಕ ಉವಾಚ

ಅಕರ್ಣ್ಯೈತ್ಥಂ ಪಿತುರ್ವಾಕ್ಯಂ ಭಗವಾನ್ ಸಾತ್ವತರ್ಷಭಃ ।
ಪ್ರತ್ಯಾಹ ಪ್ರಶ್ರಯಾನಮ್ರಃ ಪ್ರಹಸನ್ಶ್ಲಕ್ಷ್ಣಯಾ ಗಿರಾ ॥ ೨೧ ॥

ಶ್ರೀಭಗವಾನುವಾಚ

ವಚೋ ವಃ ಸಮವೇತಾರ್ಥಂ ತಾತೈತದುಪಮನ್ಮಹೇ ।
ಯನ್ನಃ ಪುತ್ರಾನ್ಸಮುದ್ದಿಶ್ಯ ತತ್ತ್ವಗ್ರಾಮ ಉದಾಹೃತಃ ॥ ೨೨ ॥

ಅಹಂ ಯೂಯಮಸಾವಾರ್ಯ ಇಮೇ ಚ ದ್ವಾರಕೌಕಸಃ ।
ಸರ್ವೇಽಪ್ಯೇವಂ ಯದುಶ್ರೇಷ್ಠ ವಿಮೃಶ್ಯಾಃ ಸಚರಾಚರಮ್ ॥ ೨೩ ॥

ಆತ್ಮಾಹ್ಯೇಕಃ ಸ್ವಯಂಜ್ಯೋತಿರ್ನಿತ್ಯೋಽನ್ಯೋ ನಿರ್ಗುಣೋ ಗುಣೈಃ ।
ಆತ್ಮಸೃಷ್ಟೈಸ್ತತ್ಕೃತೇಷು ಭೂತೇಷು ಬಹುಧೇಯತೇ ॥ ೨೪ ॥

ಖಂ ವಾಯುರ್ಜ್ಯೋತಿರಾಪೋ ಭೂಸ್ತತ್ಕೃತೇಷು ಯಥಾಶಯಮ್ ।
ಆವಿಸ್ತಿರೋಽಲ್ಪಭೂರ್ಯೇಕೋ ನಾನಾತ್ವಂ ಯಾತ್ಯಸಾವಪಿ ॥ ೨೫ ॥

ಶ್ರೀಶುಕ ಉವಾಚ

ಏವಂ ಭಗವತಾ ರಾಜನ್ ವಸುದೇವ ಉದಾಹೃತಮ್ ।
ಶ್ರುತ್ವಾವಿನಷ್ಟನಾನಾಧೀಸ್ತೂಷ್ಣೀಂ ಪ್ರೀತಮನಾ ಅಭೂತ್ ॥ ೨೬ ॥

ಅದಕ್ಕಾಗಿ ದೀನ ಜನರ ಹಿತೈಷಿಯೇ ! ಶರಣಾಗತವತ್ಸಲನೇ ! ಶರಣಾಗತರ ಸಂಸಾರಭಯವನ್ನು ದೂರಮಾಡುವಂತಹ ನಿನ್ನ ಚರಣಕಮಲಗಳಲ್ಲಿ ಶರಣಾಗತನಾಗಿದ್ದೇನೆ. ನನಗಿನ್ನು ಈ ಪ್ರಾಪಂಚಿಕ ವಿಷಯಗಳಲ್ಲಿ ಭೋಗಲಾಲಸೆಯು ಉಂಟಾಗದಂತೆ ಕೃಪೆಮಾಡು. ನಶ್ವರವಾದ ಈ ಶರೀರದಲ್ಲಿ ಆತ್ಮಬುದ್ಧಿಯನ್ನು ಹೊಂದಿ, ಸರ್ವೇಶ್ವರನಾದ ನಿನ್ನಲ್ಲಿ ಪುತ್ರನೆಂಬ ಬುದ್ಧಿಯನ್ನು ಹೊಂದಿದೆನು. ॥ ೧೯ ॥ ಶ್ರೀಹರಿಯೇ ! ಹುಟ್ಟು ಸಾವುಗಳಿಲ್ಲದ ನೀನು ಧರ್ಮವನ್ನು ಪರಿಪಾಲಿಸಲಿಕ್ಕಾಗಿ ಪ್ರತಿಯುಗದಲ್ಲಿಯೂ ನಮ್ಮಿಬ್ಬರಿಗೂ ಮಗನಾಗಿ ಹುಟ್ಟುವೆನು ಎಂದು ನೀನು ಹುಟ್ಟಿದೊಡನೆಯೇ ಪ್ರಸೂತಿಗೃಹದಲ್ಲಿ ನಮಗೆ ಹೇಳಿದೆಯಲ್ಲವೇ ? ಆಕಾಶದಂತೆ ನಿರ್ಲಿಪ್ತನಾಗಿರುವ ನೀನು ನಾನಾ ಅವತಾರಗಳನ್ನು ಧರಿಸುವೆ ಮತ್ತು ಪರಿತ್ಯಜಿಸುವೆ. ವ್ಯಾಪಕವಾದ ನಿನ್ನ ಲೀಲೈಶ್ವರ್ಯಗಳನ್ನು ಯಾರು ತಾನೇ ತಿಳಿಯಬಲ್ಲರು ? ಎಲ್ಲ ಜನರೂ ನಿನ್ನ ಕೀರ್ತಿಯನ್ನೇ ಕೊಂಡಾಡುತ್ತಿರುವರು. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ವಸುದೇವನ ಈ ವಚನಗಳನ್ನು ಕೇಳಿ ಯದುವಂಶ ಕುಲತಿಲಕ ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನು ಮುಗುಳ್ನಕ್ಕನು. ಅವನು ವಿನಯದಿಂದ ತಲೆತಗ್ಗಿಸಿಕೊಂಡು ಮಧುರವಾಗಿ ಇಂತೆಂದನು. ॥ ೨೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಪ್ಪಾ ! ನಾವು ನಿನ್ನ ಮಕ್ಕಳೇ ಆಗಿದ್ದೇವೆ. ನಮ್ಮನ್ನು ಕುರಿತೇ ನೀನು ಈ ತತ್ತ್ವಜ್ಞಾನದ ಉಪದೇಶವನ್ನು ಮಾಡಿರುವೆ. ನಿನ್ನ ಒಂದೊಂದು ಮಾತೂ ಕೂಡ ಯುಕ್ತಿಯುಕ್ತವೆಂದು ನಾವು ಭಾವಿಸುತ್ತೇವೆ. ॥ ೨೨ ॥ ತಂದೆಯೇ ! ನಾನು, ನೀವು, ನಮ್ಮಣ್ಣ ಬಲರಾಮ, ದ್ವಾರಕೆಯ ಈ ಪ್ರಜೆಗಳೆಲ್ಲರೂ, ಸಂಪೂರ್ಣ ಚರಾಚರ ಜಗತ್ತು-ಸಮಸ್ತವೂ ನೀವು ಹೇಳಿದಂತೆ ಬ್ರಹ್ಮವಸ್ತುವೆಂದೇ ವಿಮರ್ಶಿಸಿ ತಿಳಿಯಬೇಕು. ॥ ೨೩. ॥ ತಂದೆಯೇ ! ಆತ್ಮನಾದರೋ ಒಂದೇ ಆಗಿದೆ. ಆದರೆ ಅವನು ತನ್ನಲ್ಲೇ ಗುಣಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಗುಣಗಳ ಮೂಲಕ ಉಂಟಾದ ಪಂಚಭೂತಗಳಲ್ಲಿ ಒಂದೇ ಆಗಿದ್ದರೂ ಅನೇಕ, ಸ್ವಯಂಪ್ರಕಾಶನಾಗಿದ್ದರೂ ದೃಶ್ಯ, ತನ್ನ ಸ್ವರೂಪವೇ ಆಗಿದ್ದರೂ ತನ್ನಿಂದ ಭಿನ್ನ, ನಿತ್ಯನಾಗಿದ್ದರೂ ಅನಿತ್ಯ, ನಿರ್ಗುಣನಾಗಿದ್ದರೂ ಸಗುಣರೂಪದಿಂದ ಕಂಡುಬರುತ್ತಾನೆ. ॥ ೨೪ ॥ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, – ಈ ಪಂಚಭೂತಗಳು ತಮ್ಮ ಕಾರ್ಯವಾದ ಘಟ-ಪಟಾದಿಗಳಲ್ಲಿ ಪ್ರಕಟ-ಅಪ್ರಕಟ, ದೊಡ್ಡದು-ಸಣ್ಣದು, ಹೆಚ್ಚು-ಕಡಿಮೆ, ಏಕ ಅನೇಕ ಹೀಗೆ ಕಂಡುಬರುತ್ತವೆ. ಆದರೆ ವಾಸ್ತವವಾಗಿ ಸತ್ತಾರೂಪದಿಂದ ಅವು ಒಂದೇ ಆಗಿರುವಂತೆಯೇ ಆತ್ಮನಲ್ಲಿಯೂ ಉಪಾಧಿಗಳ ಭೇದದಿಂದಲೇ ನಾನಾತ್ವದ ಪ್ರತೀತಿ ಆಗುತ್ತದೆ. ಅದಕ್ಕಾಗಿ 'ನಾನೇ ಎಲ್ಲವೂ ಆಗಿದ್ದೇನೆ' ಎಂಬ ನಿನ್ನ ಮಾತು ಸಮುಚಿತವೇ ಆಗಿದೆ. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಭಗವಾನ್ ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿ ವಸುದೇವನ ನಾನಾತ್ವ ಬುದ್ಧಿಯು ಹೊರಟುಹೋಯಿತು. ಆನಂದ ಮಗ್ನನಾಗಿ ಅವನ ಮಾತು ನಿಂತು ಹೋಯಿತು. ಮನಸ್ಸು ನಿರ್ವಿಷಯವಾಯಿತು. ॥ ೨೬ ॥

ಅಥ ತತ್ರ ಕುರುಶ್ರೇಷ್ಠ ದೇವಕೀ ಸರ್ವದೇವತಾ ।
ಶ್ರುತ್ವಾऽऽನೀತಂ ಗುರೋಃ ಪುತ್ರಮಾತ್ಮಜಾಭ್ಯಾಂ ಸುವಿಸ್ಮಿತಾ
॥ ೨೭ ॥

ಕೃಷ್ಣರಾಮೌ ಸಮಾಶ್ವಾವ್ಯ ಪುತ್ರಾನ್ ಕಂಸವಿಹಿಂಸಿತಾನ್ ।
ಸ್ಮರಂತೀ ಕೃಪಣಂ ಪ್ರಾಹ ವೈಕ್ಲವ್ಯಾದಶ್ರುಲೋಚನಾ
॥ ೨೮ ॥

ದೇವಕ್ಯುವಾಚ

ರಾಮ ರಾಮಾಪ್ರಮೇಯಾತ್ಮನ್ ಕೃಷ್ಣ ಯೋಗೇಶ್ವರೇಶ್ವರ ।
ವೇದಾಹಂ ವಾಂ ವಿಶ್ವಸೃಜಾಮೀಶ್ವರಾವಾದಿಪೂರುಷೌ
॥ ೨೯ ॥

ಕಾಲವಿಧ್ವಸ್ತಸತ್ತ್ವಾನಾಂ ರಾಜ್ಞಾಮುಚ್ಚಾವಚ್ಮರ್ತಿನಾಮ್ ।
ಭೂಮೇರ್ಭಾರಾಯಮಾಣಾನಾಮವತೀರ್ಣೌ ಕಿಲಾದ್ಯ ಮೇ
॥ ೩೦ ॥

ಯಸ್ಯಾಂಶಾಂಶಾಂಶಭಾಗೇನ ವಿಶ್ವೋತ್ಪತ್ತಿಲಯೋದಯಾಃ ।
ಭವಂತಿ ಕಿಲ ವಿಶ್ವಾತ್ಮಂಸ್ತಂ ತ್ವಾದ್ಯಾಹಂ ಗತಿಂ ಗತಾ
॥ ೩೧ ॥

ಚಿರಾನ್ಮೃತಸುತಾದಾನೇ ಗುರುಣಾ ಕಾಲಚೋದಿತೌ ।
ಆನಿನ್ಯಥುಃ ಪಿತೃಸ್ಥಾನಾದ್ಗುರವೇ ಗುರುದಕ್ಷಿಣಾಮ್
॥ ೩೨ ॥

ತಥಾ ಮೇ ಕುರುತಂ ಕಾಮಂ ಯುವಾಂ ಯೋಗೇಶ್ವರೇಶ್ವರೌ ।
ಭೋಜರಾಜಹತಾನುತ್ರಾನ್ ಕಾಮಯೇ ದ್ರಷ್ಟುಮಾಹೃತಾನ್
॥ ೩೩ ॥

ಋಷಿರುವಾಚ

ಏವಂ ಸಂಚೋದಿತೌ ಮಾತ್ರಾ ರಾಮಃ ಕೃಷ್ಣಶ್ಚ ಭಾರತ ।
ಸುತಲಂ ಸಂವಿವಿಶತುರ್ಯೋಗಮಾಯಾಮುಪಾಶ್ರಿತೌ
॥ ೩೪ ॥

ತಸ್ಮಿನ್ವಿಷ್ಟಾವುಪಲಭ್ಯ ದೈತ್ಯರಾಡ್
ವಿಶ್ವಾತ್ಮದೈವಂ ಸುತರಾಂ ತಥಾऽऽತ್ಮನಃ ।
ತದ್ದರ್ಶನಾಹ್ಲಾದಪರಿಪ್ಲುತಾಶಯಃ
ಸದ್ಯಃ ಸಮುತ್ಥಾಯ ನನಾಮ ಸಾನ್ವಯಃ ॥ ೩೫ ॥

ಕುರುಶ್ರೇಷ್ಠನೇ! ಆ ಸಮಯದಲ್ಲಿ ಅಲ್ಲಿ ಸಮಸ್ತ ದೇವತಾ ಸ್ವರೂಪಳಾದ ದೇವಕಿಯೂ ಕುಳಿತಿದ್ದಳು. ಬಹಳ ಹಿಂದೆ ಸತ್ತು ಹೋದ ಗುರುಪುತ್ರನನ್ನು ಶ್ರೀಕೃಷ್ಣ-ಬಲರಾಮರು ಯಮಲೋಕದಿಂದ ಮರಳತಂದಿದ್ದರೆಂದು ಕೇಳಿದ್ದ ಆಕೆಯು ಅತ್ಯಂತ ವಿಸ್ಮಿತಳಾಗಿದ್ದಳು. ॥ ೨೭ ॥ ಆಗ ಅವಳಿಗೆ ಕಂಸನು ಕೊಂದುಹಾಕಿದ ತನ್ನ ಆರು ಹಸುಳೆಗಳ ನೆನಪಾಯಿತು. ಒಡನೆಯೇ ಮನಸ್ಸು ಕಳವಳಗೊಂಡಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಕರುಣಾಜನಕ ಮಾತುಗಳಿಂದ ಆಕೆಯು ಬಲರಾಮ-ಶ್ರೀಕೃಷ್ಣರನ್ನು ಸಂಬೋಧಿಸಿ ಇಂತೆಂದಳು – ॥ ೨೮ ॥

ದೇವಕಿಯು ಹೇಳಿದಳು – ಅಪ್ರಮೇಯಾತ್ಮನಾದ ಲೋಕಾಭಿರಾಮನಾದ ಬಲರಾಮನೇ! ಯೋಗೇಶ್ವರರಿಗೂ ಈಶ್ವರನಾದ ಶ್ರೀಕೃಷ್ಣನೇ! ನೀವಿಬ್ಬರೂ ಪ್ರಜಾಪತಿಗಳೂ ಈಶ್ವರರಾದ ಆದಿಪುರುಷರೆಂಬುದನ್ನು ನಾನು ತಿಳಿದಿರುತ್ತೇನೆ. ॥ ೨೯ ॥ ಕಾಲದ ಮಹಿಮೆಯಿಂದ ಸತ್ತ್ವಗುಣವನ್ನು ಕಳೆದುಕೊಂಡು (ತಾಮಸಿಗಳು), ಈ ಕಾರಣದಿಂದಲೇ ಶಾಸ್ತ್ರನಿರ್ದೇಶಗಳನ್ನು ಉಲ್ಲಂಘಿಸುತ್ತಿರುವ ಸ್ವೇಚ್ಛಾಚಾರಿಗಳಾದ, ಭೂಮಿಗೆ ಭಾರವಾದ ರಾಜರನ್ನು ಸಂಹರಿಸುವ ಸಲುವಾಗಿಯೇ ನೀವಿಬ್ಬರೂ ನನ್ನ ಗರ್ಭದಲ್ಲಿ ಅವತರಿಸಿರುವಿರೆಂಬುದನ್ನೂ ನಾನು ತಿಳಿದಿರುವೆನು. ॥ ೩೦ ॥ ವಿಶ್ವಾತ್ಮನೇ! ನಿನ್ನ ಪುರುಷರೂಪದ ಅಂಶದಿಂದ ಉತ್ಪನ್ನವಾದ ಮಾಯೆಯಿಂದ ಗುಣಗಳು ಹುಟ್ಟುತ್ತವೆ ಮತ್ತು ಅವುಗಳ ಲೇಶಮಾತ್ರ ಅಂಶದಿಂದ ಜಗತ್ತಿನ ಉತ್ಪತ್ತಿ, ವಿಕಾಸ, ಲಯಗಳಾಗುತ್ತವೆ. ಈಗ ನಾನು ಅಂತಃಕರಣಪೂರ್ವಕವಾಗಿ ನಿನಗೆ ಶರಣಾಗತಳಾಗಿದ್ದೇನೆ. ॥ ೩೧ ॥ ನಿಮ್ಮ ಗುರುಗಳಾದ ಸಾಂದೀಪನಿಮುನಿಗಳ ಪುತ್ರನು ತೀರಿಹೋಗಿ ಬಹಳ ದಿನಗಳಾಗಿದ್ದವು. ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ ಗುರುಗಳ ಆಜ್ಞೆಯಂತೆ ಹಾಗೂ ಕಾಲದ ಪ್ರೇರಣೆಯಂತೆ ನೀವಿಬ್ಬರೂ ಆವರ ಸತ್ತುಹೋದ ಪುತ್ರನನ್ನು ಯಮಲೋಕದಿಂದ ಮರಳಿತಂದು ಕೊಟ್ಟಿರಿ ಎಂದೂ ನಾನು ಕೇಳಿದ್ದೇನೆ. ॥ ೩೨ ॥ ನೀವಿಬ್ಬರೂ ಯೋಗೇಶ್ವರರಿಗೂ ಈಶ್ವರರಾಗಿರುವಿರಿ. ಆದರಿಂದಾಗಿ ಇಂದು ನನ್ನ ಅಭಿಲಾಷೆಯನ್ನು ಪೂರ್ಣಗೊಳಿಸಿರಿ. ನೀವಿಬ್ಬರೂ ಕಂಸನು ಅಂದು ಕೊಂದು ಹಾಕಿದ ನನ್ನ ಪುತ್ರರನ್ನು ತಂದು ಕೊಡಿರಿ. ಅವರನ್ನು ಕಣ್ತುಂಬಾ ನೋಡಬೇಕೆಂದು ನಾನು ಬಯಸುತ್ತೇನೆ. ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ತಾಯಿಯಾದ ದೇವಕಿಯ ಈ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಿಬ್ಬರೂ ಯೋಗಮಾಯೆಯನ್ನು ಆಶ್ರಯಿಸಿ ಸುತಲಲೋಕವನ್ನು ಪ್ರವೇಶಿಸಿದರು. ॥ ೩೪ ॥ ಜಗದಾತ್ಮನೂ, ಇಷ್ಟದೇವನೂ, ತನ್ನ ಪರಮಸ್ವಾಮಿಯೂ ಆದ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ತನ್ನ ಸುತಲಲೋಕಕ್ಕೆ ಆಗಮಿಸಿರುವರು ಎಂದು ನೋಡಿದ ಬಲಿಚಕ್ರವರ್ತಿಯ ಮನಸ್ಸು ಆನಂದ ಸಾಗರದಲ್ಲಿ ಮುಳುಗಿ ಹೋಯಿತು. ಅವನು ಒಡನೆಯೇ ಆಸನದಿಂದೆದ್ದು ಪರಿವಾರ ಸಹಿತನಾಗಿ ಭಗವಂತನ ಚರಣಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೩೫ ॥

ತಯೋಃ ಸಮಾನೀಯ ವರಾಸನಂ ಮುದಾ
ನಿವಿಷ್ಟಯೋಸ್ತತ್ರ ಮಹಾತ್ಮನೋಸ್ತಯೋಃ ।
ದಧಾರ ಪಾದಾವವನಿಜ್ಯ ತಜ್ಜಲಂ
ಸವೃಂದ ಆಬ್ರಹ್ಮ ಪುನದ್ಯದಂಬು ಹ ॥ ೩೬ ॥

ಸಮರ್ಹಯಾಮಾಸ ಸ ತೌ ವಿಭೂತಿಭಿ-
ರ್ಮಹಾರ್ಹವಸ್ತ್ರಾಭರಣಾನುಲೇಪನೈಃ ।
ತಾಂಬೂಲದೀಪಾಮೃತಭಕ್ಷಣಾದಿಭಿಃ
ಸ್ವಗೋತ್ರವಿತ್ತಾತ್ಮ ಸಮರ್ಪಣೇನ ಚ ॥ ೩೭ ॥

ಸ ಇಂದ್ರಸೇನೋ ಭಗವತ್ಪದಾಂಬುಜಂ
ಬಿಭ್ರನ್ಮುಹುಃ ಪ್ರೇಮವಿಭಿನ್ನಯಾ ಧಿಯಾ ।
ಉವಾಚ ಹಾನಂದಜಲಾಕುಲೇಕ್ಷಣಃ
ಪ್ರಹೃಷ್ಟರೋಮಾ ನೃಪ ಗದ್ಗದಾಕ್ಷರಮ್ ॥ ೩೮ ॥

ಬಲಿರುವಾಚ

ನಮೋಽನಂತಾಯ ಬೃಹತೇ ನಮಃ ಕೃಷ್ಣಾಯ ವೇಧಸೇ ।
ಸಾಂಖ್ಯಯೋಗವಿತಾನಾಯ ಬ್ರಹ್ಮಣೇ ಪರಮಾತ್ಮನೇ
॥ ೩೯ ॥

ದರ್ಶನಂ ವಾಂ ಹಿ ಭೂತಾನಾಂ ದುಷ್ಪ್ರಾಪಂ ಚಾಪ್ಯದುರ್ಲಭಮ್ ।
ರಜಸ್ತಮಃಸ್ವಭಾವಾನಾಂ ಯನ್ನಃ ಪ್ರಾಪ್ತೌ ಯದೃಚ್ಛಯಾ
॥ ೪೦ ॥

ದೈತ್ಯದಾನವಗಂಧರ್ವಾಃ ಸಿದ್ಧವಿದ್ಯಾಧ್ರಚಾರಣಾಃ ।
ಯಕ್ಷರಕ್ಷಃಪಿಶಾಚಾಶ್ಚ ಭೂತಪ್ರಮಥನಾಯಕಾಃ
॥ ೪೧ ॥

ವಿಶುದ್ಧಸತ್ತ್ವಧಾಮ್ನ್ಯದ್ಧಾ ತ್ವಯಿ ಶಾಸ್ತ್ರಶರೀರಿಣಿ ।
ನಿತ್ಯಂ ನಿಬದ್ಧವೈರಾಸ್ತೇ ವಯಂ ಚಾನ್ಯೇ ಚ ತಾದೃಶಾಃ
॥ ೪೨ ॥

ಕೇಚನೋದ್ಬದ್ಧವೈರೇಣ ಭಕ್ತ್ಯಾ ಕೇಚನ ಕಾಮತಃ ।
ನ ತಥಾ ಸತ್ತ್ವಸಂರಬ್ಧಾಃ ಸಂನಿಕೃಷ್ಟಾಃ ಸುರಾದಯಃ
॥ ೪೩ ॥

ಇದಮಿತ್ಥಮಿತಿ ಪ್ರಾಯ ಸ್ತವ ಯೋಗೇಶ್ವರೇಶ್ವರ ।
ನ ವಿದಂತ್ಯಪಿ ಯೋಗೇಶಾ ಯೋಗಮಾಯಾಂ ಕುತೋ ವಯಮ್
॥ ೪೪ ॥

ಆನಂದತುಂದಿಲನಾದ ದೈತ್ಯರಾಜ ಬಲಿಯು ಶ್ರೀಕೃಷ್ಣ-ಬಲರಾಮರನ್ನು ಶ್ರೇಷ್ಠವಾದ ಸಿಂಹಾಸನಗಳಲ್ಲಿ ಕುಳ್ಳಿರಿಸಿದನು. ಅವರು ಸುಖಾಸೀನರಾದ ಬಳಿಕ ಅವರಿಬ್ಬರ ದಿವ್ಯಪಾದಗಳನ್ನು ತೊಳೆದು ಆ ಚರಣೋದಕವನ್ನು ಪರಿವಾರ ಸಹಿತ ತನ್ನ ತಲೆಯಲ್ಲಿ ಧರಿಸಿಕೊಂಡನು. ಪರೀಕ್ಷಿತನೇ! ಭಗವಂತನ ಚರಣೋದಕವು ಬ್ರಹ್ಮಪರ್ಯಂತವಾಗಿ ಸಮಸ್ತ ಜಗತ್ತನ್ನು ಪವಿತ್ರ ಗೊಳಿಸುತ್ತದೆ. ॥ ೩೬ ॥ ಆನಂತರ ದೈತ್ಯರಾಜನಾದ ಬಲಿಯು ಬಹು ಮೂಲ್ಯವಾದ ವಸ್ತ್ರ ಆಭೂಷಣ, ಚಂದನ, ತಾಂಬೂಲ, ಧೂಪ, ದೀಪ, ಅಮೃತೋಪಮವಾದ ಭೋಜನ ಹಾಗೂ ಇತರ ಸಾಮಗ್ರಿಗಳಿಂದ ಭಗವಂತನನ್ನು ಪೂಜಿಸಿ, ತನ್ನ ಸಮಸ್ತ ಪರಿವಾರ, ಧನ, ಶರೀರಾದಿಗಳನ್ನು ಅವನ ಚರಣಗಳಲ್ಲಿ ಸಮರ್ಪಿಸಿದನು. ॥ ೩೭ ॥ ಪರೀಕ್ಷಿತನೇ! ಬಲಿಚಕ್ರವರ್ತಿಯು ಪದೇ-ಪದೇ ಭಗವಂತನ ಚರಣಕಮಲಗಳನ್ನು ತನ್ನ ವಕ್ಷಸ್ಥಳದಲ್ಲಿ ಶಿರದಲ್ಲಿರಿಸಿಕೊಂಡು ಪ್ರೇಮಾನಂದದಿಂದ ವಿಹ್ವಲನಾದನು. ಕಣ್ಣುಗಳಿಂದ ಆನಂದಾಶ್ರುಗಳು ಹರಿಯತೊಡಗಿದವು. ರೋಮಕೋಟಿಗಳು ನಿಮಿರಿನಿಂತವು. ಗದ್ಗದಕಂಠದಿಂದ ಭಗವಂತನನ್ನು ಸ್ತುತಿಸತೊಡಗಿದನು. ॥ ೩೮ ॥

ದೈತ್ಯರಾಜ ಬಲಿಯು ಹೇಳಿದನು – ಬಲರಾಮನೇ! ನೀನು ಅನಂತನಾಗಿರುವೆ. ಮಹಾಮಹಿಮನಾದ ನಿನ್ನೊಳಗೆ ಶೇಷನೇ ಮೊದಲಾದ ಸಮಸ್ತ ವಿಗ್ರಹಗಳು ಅಂತರ್ಭೂತವಾಗಿವೆ. ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಸಮಸ್ತ ಜಗತ್ತನ್ನು ನೀನೇ ಸೃಷ್ಟಿಸಿರುವೆ. ಜ್ಞಾನಯೋಗ-ಭಕ್ತಿಯೋಗಗಳ ಪ್ರವರ್ತಕನೂ ನೀನೇ ಆಗಿದ್ದೀಯೆ. ನೀನೆ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನು. ನಾನು ನಿಮ್ಮಿಬ್ಬರಿಗೂ ನಮಸ್ಕರಿಸುತ್ತೇನೆ. ॥ ೩೯ ॥ ಭಗವಂತಾ! ನಿಮ್ಮಿಬ್ಬರ ದರ್ಶನವು ಪ್ರಾಣಿಗಳಿಗೆ ಅತ್ಯಂತ ದುರ್ಲಭವಾದುದು. ಹೀಗಿದ್ದರೂ ನಿನ್ನ ಕೃಪೆಯಿಂದ ಅದು ಸುಲಭವಾಗುತ್ತದೆ. ಏಕೆಂದರೆ, ಇಂದು ನೀನು ದಯೆಗೈದು ರಜೋಗುಣೀ ಹಾಗೂ ತಮೋಗುಣಿಗಳಾದ ನಮ್ಮಂತಹ ದೈತ್ಯರಿಗೂ ದರ್ಶನವಿತ್ತಿಹೆ. ॥ ೪೦ ॥ ಪ್ರಭುವೇ! ಸಾಕ್ಷಾತ್ ವೇದಮಯವೂ, ವಿಶುದ್ಧಸತ್ತ್ವಮಯವೂ ಆದ ನಿನ್ನ ಶ್ರೀವಿಗ್ರಹವನ್ನು ನಾವು ಮತ್ತು ನಮ್ಮಂತೆಯೇ ಇರುವ ಇತರ ದೈತ್ಯರು ದ್ವೇಷಿಸುತ್ತೇವೆ. ಹಾಗೆಯೇ ದಾನವರೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ ಚಾರಣರೂ, ಯಕ್ಷರೂ, ರಾಕ್ಷಸರೂ, ಪಿಶಾಚಿಗಳೂ ಭೂತ-ಪ್ರಮಥಾದಿಗಳು ನಿನ್ನನ್ನು ಭಜಿಸುವುದಿರಲಿ ನಿನ್ನಲ್ಲಿ ಸದಾಕಾಲ ದೃಢವಾದ ವೈರವನ್ನೇ ಇರಿಸುತ್ತಾರೆ. ಅದರಿಂದಲೇ ನಮ್ಮಲ್ಲಿ ಅನೇಕರು ದೃಢವಾದ ವೈರ ಭಾವದಿಂದ, ಕೆಲವರು ಭಕ್ತಿಯಿಂದ, ಕೆಲವರು ಕಾಮನೆಯಿಂದ ನಿನ್ನನ್ನು ಸ್ಮರಿಸಿ – ನಿನ್ನ ಸನಿಹದಲ್ಲೇ ಇರುವ ಸತ್ತ್ವಪ್ರಧಾನರಾದ ದೇವತೆಗಳಿಗೂ ಪ್ರಾಪ್ತವಾಗದಿರುವ ಆ ಪರಮಪದವನ್ನು ಪಡೆದು ಕೊಂಡಿರುವರು. ॥ ೪೧-೪೩.॥ ಯೋಗೇಶ್ವರರ ಅಧೀಶ್ವರನೇ! ನಿನ್ನ ಯೋಗಮಾಯೆಯು ಹೀಗೆಯೇ ಇದೆ ಎಂಬುದನ್ನು ದೊಡ್ಡ-ದೊಡ್ಡ ಯೋಗೇಶ್ವರರೂ ಪ್ರಾಯಶಃ ತಿಳಿಯಲಾರರು. ಅಂತಿರುವಾಗ ನಮ್ಮಂತಹವರ ಮಾತೇನು ? ॥ ೪೪ ॥

ತನ್ನಃ ಪ್ರಸೀದ ನಿರಪೇಕ್ಷವಿಮೃಗ್ಯಯುಷ್ಮತ್-
ಪಾದಾರವಿಂದಧಿಷಣಾನ್ಯಗೃಹಾಂಧಕೂಪಾತ್ ।
ನಿಷ್ಕ್ರಮ್ಯ ವಿಶ್ವಶರಣಾಂಘ್ರ್ಯುಪಲಬ್ಧವೃತ್ತಿಃ
ಶಾಂತೋ ಯಥೈಕ ಉತ ಸರ್ವಸಖೈಶ್ಚರಾಮಿ ॥ ೪೫ ॥

ಶಾಧ್ಯಸ್ಮಾನೀಶಿತವ್ಯೇಶ ನಿಷ್ಪಾಪಾನ್ಕುರು ನಃ ಪ್ರಭೋ।
ಪುಮಾನ್ಯಚ್ಛ್ರದ್ಧಯಾऽऽತಿಷ್ಠಂಶ್ಚೋದನಾಯಾ ವಿಮುಚ್ಯತೇ
॥ ೪೬ ॥

ಶ್ರೀಭಗವಾನುವಾಚ

ಆಸನ್ ಮರೀಚೇಃ ಷಟ್ ಪುತ್ರಾ
ಊರ್ಣಾಯಾಂ ಪ್ರಥಮೇऽಂತರೇ ।
ದೇವಾಃ ಕಂ ಜಹಸುರ್ವೀಕ್ಷ್ಯ
ಸುತಾಂ ಯಭಿತುಮುದ್ಯತಮ್ ॥ ೪೭ ॥

ತೇನಾಸುರೀಮಗನ್ಯೋನಿಮಧುನಾವದ್ಯಕರ್ಮಣಾ ।
ಹಿರಣ್ಯಕಶಿಪೋರ್ಜಾತಾ ನೀತಾಸ್ತೇ ಯೋಗಮಾಯಯಾ
॥ ೪೮ ॥

ದೇವಕ್ಯಾ ಉದರೇ ಜಾತಾ ರಾಜನ್ ಕಂಸವಿಹಿಂಸಿತಾಃ ।
ಸಾ ತಾನ್ ಶೋಚತ್ಯಾತ್ಮಜಾನ್ಸ್ವಾಪ್ತ ಇಮೇऽಧ್ಯಾಸತೇऽಂತಿಕೇ
॥ ೪೯ ॥

ಇತ ಏತಾನ್ನೃಪೇಷ್ಯಾಮೋ ಮಾತೃಶೋಕಾಪನುತ್ತಯೇ ।
ತತಃ ಶಾಪಾದ್ವಿನಿರ್ಮುಕ್ತಾ ಲೋಕಂ ಯಾಸ್ಯಂತಿ ವಿಜ್ವರಾಃ
॥ ೫೦ ॥

ಸ್ಮರೋದ್ಗೀಥಃ ಪರಿಷ್ವಂಗಃ ಪತಂಗಃ ಕ್ಷುದ್ರಭೃದ್ಘೃಣೇ ।
ಷಡಿಮೇ ಮತ್ಪ್ರಸಾದೇನ ಪುನರ್ಯಾಸ್ಯಂತಿ ಸದ್ಗತಿಮ್
॥ ೫೧ ॥

ಇತ್ಯುಕ್ತ್ವಾ ತಾನ್ಸಮಾದಾಯ ಇಂದ್ರಸೇನೇನ ಪೂಜಿತೌ ।
ಪುನರ್ದ್ವಾರವತೀಮೇತ್ಯ ಮಾತುಃ ಪುತ್ರಾನಯಚ್ಛತಾಮ್
॥ ೫೨ ॥

ತಾನ್ದೃಷ್ಟ್ವಾ ಬಾಲಕಾನ್ ದೇವೀ ಪುತ್ರಸ್ನೇಹಸ್ನುತಸ್ತನೀ ।
ಪರಿಷ್ವಜ್ಯಾಂಕಮಾರೋಪ್ಯ ಮೂರ್ಧ್ನ್ಯಜಿಘ್ರದಭೀಕ್ಷ್ಣಶಃ
॥ ೫೩ ॥

ಅದಕ್ಕಾಗಿ ಸ್ವಾಮಿ ! ಯಾವುದರ ಅಪೇಕ್ಷೆಯೂ ಇಲ್ಲದಿರುವ ಪರಮಹಂಸರು ಸದಾ ಹುಡುಕುತ್ತಿರುವ ನಿನ್ನ ಚರಣಕಮಲಗಳಲ್ಲಿ ನನ್ನ ಚಿತ್ತವೃತ್ತಿಯು ನೆಲೆಗೊಳ್ಳುವಂತೆ ನನ್ನ ಮೇಲೆ ಕೃಪೆಮಾಡು. ಅದನ್ನು ಆಶ್ರಯಿಸಿದ ನಾನು ಅದಕ್ಕಿಂತ ಭಿನ್ನವಾದ ಈ ಅಂಧ ಕಾರಮಯ ಸಂಸಾರಕೂಪದಿಂದ ಪಾರಾಗಿ ಹೋಗುವೆನು. ಪ್ರಭೋ ! ಹೀಗೆ ಸಮಸ್ತ ಜಗತ್ತಿಗೆ ಏಕಮಾತ್ರ ಆಶ್ರಯವಾದ ನಿನ್ನ ಚರಣಕಮಲಗಳಲ್ಲಿ ಶರಣಾಗಿ ಶಾಂತನಾಗುವೆನು. ಒಬ್ಬಂಟಿಗನಾಗಿ ಸಂಚರಿಸುವೆನು. ಯಾರದಾದರೂ ಸಂಗವನ್ನು ಮಾಡಲೇ ಬೇಕೆಂದಾಗ ಸಮಸ್ತರ ಪರಮ ಹಿತೈಷಿಗಳಾದ ಸಂತರ ಸಂಗವೇ ಮಾಡುವೆನು. ॥ ೪೫ ॥ ಪ್ರಭೋ ! ನೀನು ಸಮಸ್ತ ಚರಾಚರ ಜಗತ್ತಿನ ನಿಯಾಮಕನೂ, ಒಡೆಯನೂ ಆಗಿರುವೆ. ನೀನು ನಮಗೆ ಆಜ್ಞಾಪಿಸಿ ನಿಷ್ಪಾಪರನ್ನಾಗಿ ಮಾಡು. ನಮ್ಮ ಪಾಪಗಳನ್ನು ನಾಶ ಮಾಡಿಬಿಡು. ಏಕೆಂದರೆ, ಶ್ರದ್ಧೆಯಿಂದ ನಿನ್ನ ಆಜ್ಞೆಯನ್ನು ಪಾಲಿಸುವವನು ವಿಧಿ-ನಿಷೇಧಗಳ ಬಂಧನಗಳಿಂದ ಬಿಡುಗಡೆ ಹೊಂದುವನು. ॥ ೪೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ರಾಜನೇ ! ಸ್ವಾಯಂಭುವ ಮನ್ವಂತರಗಳಲ್ಲಿ ಪ್ರಜಾಪತಿಯಾದ ಮರೀಚಿಯ ಪತ್ನೀ ಊರ್ಣಾಳ ಗರ್ಭದಿಂದ ಆರು ಮಂದಿ ಪುತ್ರರು ಹುಟ್ಟಿದ್ದರು. ಅವರೆಲ್ಲರೂ ದೇವತೆಗಳೇ ಆಗಿದ್ದರು. ಒಮ್ಮೆ ಬ್ರಹ್ಮನು ತನ್ನ ಪುತ್ರಿಯರೊಂದಿಗೆ ಸಮಾಗಮ ಮಾಡಲಿದ್ದುದನ್ನು ಕಂಡು ಅವರು ನಕ್ಕುಬಿಟ್ಟರು. ॥ ೪೭ ॥ ಇಂತಹ ಉಪಹಾಸರೂಪವಾದ ಅಪರಾಧದಿಂದ ಅವರಿಗೆ ಬ್ರಹ್ಮದೇವರು ಶಾಪವನ್ನಿತ್ತರು ಹಾಗೂ ಅವರು ಅಸುರ ಯೋನಿಯಲ್ಲಿ ಹಿರಣ್ಯಕಶಿಪುವಿನ ಪುತ್ರರಾಗಿ ಹುಟ್ಟಿದರು. ಆಗ ಯೋಗಮಾಯೆಯು ಅವರನ್ನು ಅಲ್ಲಿಂದ ತಂದು ದೇವಕಿಯ ಗರ್ಭದಲ್ಲಿರಿಸಿದಳು. ಅವರು ಹುಟ್ಟುತ್ತಲೇ ಕಂಸನು ಕೊಂದುಹಾಕಿದನು. ದೈತ್ಯರಾಜನೇ! ನನ್ನ ತಾಯಿಯಾದ ದೇವಕಿಯು ಆ ಪುತ್ರರಿಗಾಗಿ ಅತ್ಯಂತ ಶೋಕಾತುರಳಾಗಿರುವಳು. ಆ ಮಕ್ಕಳು ನಿನ್ನ ಬಳಿಯಲ್ಲೇ ಇದ್ದಾರೆ. ॥ ೪೮-೪೯ ॥ ಆದ್ದರಿಂದ ನಾವು ನಮ್ಮ ತಾಯಿಯ ಶೋಕವನ್ನು ದೂರಗೊಳಿಸಲಿಕ್ಕಾಗಿ ಇವರನ್ನು ಇಲ್ಲಿಂದ ಕೊಂಡುಹೋಗುವೆವು. ಅನಂತರ ಇವರು ಶಾಪದಿಂದ ಮುಕ್ತರಾಗಿ ಆನಂದಭರಿತರಾಗಿ ತಮ್ಮ ಲೋಕಗಳಿಗೆ ಹೊರಟುಹೋಗುವರು. ॥ ೫೦ ॥ ಈಗ ನಿನ್ನ ಬಳಿಯಲ್ಲಿರುವ ಸ್ಮರ, ಉದ್ಗೀಥ, ಪರಿಷ್ವಂಗ, ಪತಂಗ, ಕ್ಷುದ್ರಭೃತ್ ಮತ್ತು ಘೃಣಿ - ಎಂಬ ಈ ಮಕ್ಕಳು. ನನ್ನ ಕೃಪೆಯಿಂದಾಗಿ ಪುನಃ ಅವರಿಗೆ ಸದ್ಗತಿಯು ದೊರೆಯುತ್ತದೆ. ॥ ೫೧ ॥ ಪರೀಕ್ಷಿತನೇ ! ಇಷ್ಟು ಹೇಳಿ ಭಗವಾನ್ ಶ್ರೀಕೃಷ್ಣನು ಸುಮ್ಮನಾದನು. ದೈತ್ಯರಾಜ ಬಲಿಚಕ್ರವರ್ತಿಯು ಪುನಃ ಅವರನ್ನು ಪೂಜಿಸಿದನು. ಅನಂತರ ಶ್ರೀಕೃಷ್ಣ ಬಲರಾಮರು ಆ ಮಕ್ಕಳನ್ನು ಕರೆದುಕೊಂಡು ದ್ವಾರಕೆಗೆ ಬಂದು ತಾಯಿ ದೇವಕಿಗೆ ಒಪ್ಪಿಸಿದರು. ॥ ೫೨ ॥ ಆ ಬಾಲಕರನ್ನು ನೋಡಿ ದೇವಕೀದೇವಿಯ ಹೃದಯ ವಾತ್ಸಲ್ಯದಿಂದ ತುಂಬಿಹೋಗಿ ಸ್ತನಗಳಿಂದ ಹಾಲು ಒಸರತೊಡಗಿತು. ಆಕೆಯು ಮತ್ತೆ-ಮತ್ತೆ ಅವರನ್ನು ಆಲಿಂಗಿಸಿ ತೊಡೆಯಲ್ಲಿ ಕುಳ್ಳಿರಿಸಿಕೊಂಡು ನೆತ್ತಿಯನ್ನು ಆಘ್ರಾಣಿಸಿದಳು. ॥ ೫೩ ॥

ಅಪಾಯಯತ್ ಸ್ತನಂ ಪ್ರೀತಾ ಸುತಸ್ಪರ್ಶಪರಿಪ್ಲುತಾ ।
ಮೋಹಿತಾ ಮಾಯಯಾ ವಿಷ್ಣೋರ್ಯಯಾ ಸೃಷ್ಟಿಃ ಪ್ರವರ್ತತೇ
॥ ೫೪ ॥

ಪೀತ್ವಾಮೃತಂ ಪಯಸ್ತಸ್ಯಾಃ ಪೀತಶೇಷಂ ಗದಾಭೃತಃ ।
ನಾರಾಯಣಾಂಗಸಂಸ್ಪರ್ಶಪ್ರತಿಲಬ್ಧಾತ್ಮದರ್ಶನಾಃ
॥ ೫೫ ॥

ತೇ ನಮಸ್ಕೃತ್ಯ ಗೋವಿಂದಂ ದೇವಕೀಂ ಪಿತರಂ ಬಲಮ್ ।
ಮಿಷತಾಂ ಸರ್ವಭೂತಾನಾಂ ಯಯುರ್ಧಾಮ ದಿವೌಕಸಾಮ್
॥ ೫೬ ॥

ತಂ ದೃಷ್ಟ್ವಾ ದೇವಕೀ ದೇವೀ ಮೃತಾಗಮನನಿರ್ಗಮಮ್ ।
ಮೇನೇ ಸುವಿಸ್ಮಿತಾ ಮಾಯಾಂ ಕೃಷ್ಣಸ್ಯ ರಚಿತಾಂ ನೃಪ
॥ ೫೭ ॥

ಏವಂವಿಧಾನ್ಯದ್ಭುತಾನಿ ಕೃಷ್ಣಸ್ಯ ಪರಮಾತ್ಮನಃ ।
ವೀರ್ಯಾಣ್ಯನಂತವೀರ್ಯಸ್ಯ ಸಂತ್ಯನಂತಾನಿ ಭಾರತ
॥ ೫೮ ॥

ಪುತ್ರರ ಸ್ಪರ್ಶದಿಂದ ಆನಂದಸಾಗರದಲ್ಲಿ ಮುಳುಗಿಹೋಗಿದ್ದ ದೇವಕಿಯು ಅವರೆಲ್ಲರಿಗೂ ಸ್ತನ್ಯಪಾನ ಮಾಡಿಸಿದಳು. ಆ ಸಮಯದಲ್ಲಿ ಆಕೆಯು ಸೃಷ್ಟಿಗೆ ಮೂಲಕಾರಣನಾದ ಭಗವಾನ್ ಶ್ರೀವಿಷ್ಣುವಿನ ಯೋಗಮಾಯೆಯಿಂದ ಮೋಹಿತಳಾಗಿದ್ದಳು. ॥ ೫೪ ॥ ಪರೀಕ್ಷಿತನೇ! ದೇವಕಿಯ ಎದೆ ಹಾಲು ಶ್ರೀಕೃಷ್ಣನು ಉಂಡು ಮಿಕ್ಕಿದ್ದರಿಂದ ಅದು ಅಮೃತಮಯವೇ ಆಗಿತ್ತು. ಆ ಬಾಲಕರೂ ಆ ಅಮೃತಮಯ ಎದೆಹಾಲನ್ನು ಕುಡಿದುದರಿಂದಲೂ, ಶ್ರೀಕೃಷ್ಣನ ಅಂಗಸ್ಪರ್ಶದಿಂದಲೂ ಯೋಗಿಗಳಿಗೂ ದುರ್ಲಭವಾದ ಆತ್ಮ ಸಾಕ್ಷಾತ್ಕಾರವನ್ನೇ ಪಡೆದುಕೊಂಡರು. ॥ ೫೫ ॥ ಆನಂತರ ಆ ಬಾಲಕರು ಭಗವಾನ್ ಶ್ರೀಕೃಷ್ಣನಿಗೆ, ತಾಯಿ ದೇವಕಿಗೆ, ತಂದೆ ವಸುದೇವನಿಗೆ ಮತ್ತು ಬಲರಾಮನಿಗೆ ನಮಸ್ಕಾರ ಮಾಡಿ ಎಲ್ಲರೂ ನೋಡುತ್ತಿರುವಂತೆಯೇ ದೇವಲೋಕಕ್ಕೆ ಹೊರಟು ಹೋದರು. ॥ ೫೬ ॥ ಪರೀಕ್ಷಿತನೇ! ದೇವಕೀದೇವಿಯು ತನ್ನ ಸತ್ತುಹೋಗಿರುವ ಮಕ್ಕಳು ಮರಳಿ ಬಂದರು ಮತ್ತು ಪುನಃ ಹೊರಟುಹೋದರು ಇದನ್ನು ಕಂಡು ಅತ್ಯಂತ ವಿಸ್ಮಿತಳಾದಳು. ಇದು ಶ್ರೀಕೃಷ್ಣನ ಯಾವುದೋ ಲೀಲಾ ಕೌಶಲ್ಯವೇ ಆಗಿರಬೇಕೆಂದು ಆಕೆಯು ನಿಶ್ಚಯಿಸಿಕೊಂಡಳು. ॥ ೫೭ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನಾಗಿದ್ದು ಅವನ ಶಕ್ತಿ ಅನಂತವಾಗಿದೆ. ಅವನ ಇಂತಹ ಅದ್ಭುತ ಚರಿತ್ರೆಗಳು ಅಪಾರವಾಗಿವೆ. ಎಷ್ಟು ಹೇಳಿದರೂ ಮುಗಿಯದಷ್ಟು ಅವನ ಲೀಲಾಪ್ರಸಂಗಗಳಿವೆ. ॥ ೫೮ ॥

ಸೂತ ಉವಾಚ

ಯ ಇದಮನುಶೃಣೋತಿ ಶ್ರಾವಯೇದ್ವಾಮುರಾರೇ-
ಶ್ಚರಿತಮಮೃತಕೀರ್ತೇರ್ವರ್ಣಿತಂ ವ್ಯಾಸಪುತ್ರೈಃ ।
ಜಗದಘಭಿದಲಂ ತದ್ ಭಕ್ತಸತ್ಕರ್ಣಪೂರಂ
ಭಗವತಿ ಕೃತಚಿತ್ತೋ ಯಾತಿ ತತ್ ಕ್ಷೇಮಧಾಮ ॥ ೫೯ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಮಹರ್ಷಿಗಳೇ! ಭಗವಾನ್ ಶ್ರೀಕೃಷ್ಣನ ಕೀರ್ತಿಯು ಅಮರವೂ, ಅಮೃತಮಯವೂ ಆಗಿದೆ. ವ್ಯಾಸನಂದನರಾದ ಭಗವಾನ್ ಶ್ರೀಶುಕಮುನಿಯಿಂದ ಹೇಳಲ್ಪಟ್ಟ ಅವನ ಚರಿತಾಮೃತವು ಭಕ್ತಜನರ ಪಾಪ ನಿವಾರಕವೂ, ಶ್ರೋತ್ರಾನಂದಕರವೂ ಆಗಿದೆ. ಇದನ್ನು ಶ್ರವಣಿಸುವವನ, ಇತರರಿಗೆ ಹೇಳುವವನ, ಚಿತ್ತವೃತ್ತಿಗಳು ಭಗವಂತನಲ್ಲಿ ನೆಲೆಸಿ ಪರಮಾತ್ಮನ ಪರಮಪದವನ್ನು ಪಡೆಯುವನು. ॥ ೫೯ ॥

ಎಂಭತ್ತೈದನೆಯ ಅಧ್ಯಾಯವು ಮುಗಿಯಿತು. ॥ ೮೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಮೃತಾಗ್ರಜಾನಯನಂ ನಾಮ ಪಂಚಾಶೀತಿತಮೋऽಧ್ಯಾಯಃ ॥ ೮೫ ॥

ಎಂಭತ್ತಾರನೆಯ ಅಧ್ಯಾಯ

ಸುಭದ್ರಾಹರಣ – ಭಗವಾನ್ ಶ್ರೀಕೃಷ್ಣನು ಮಿಥಿಲೆಯ ರಾಜನಾದ ಜನಕನ ಅರಮನೆಗೂ ಮತ್ತು ಶ್ರುತದೇವ ಬ್ರಾಹ್ಮಣನ ಮನೆಗೂ ಏಕಕಾಲದಲ್ಲಿ ಪ್ರವೇಶಿಸಿದುದು

ರಾಜೋವಾಚ

ಬ್ರಹ್ಮನ್ ವೇದಿತುಮಿಚ್ಛಾಮಃ ಸ್ವಸಾರಂ ರಾಮಕೃಷ್ಣಯೋಃ ।
ಯಥೋಪಯೇಮೇ ವಿಜಯೋ
ಯಾ ಮಮಾಸೀತ್ ಪಿತಾಮಹೀ ॥ ೧ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ನನ್ನ ತಾತನಾದ ಅರ್ಜುನನು ಶ್ರೀಕೃಷ್ಣ-ಬಲರಾಮರ ತಂಗಿಯಾದ, ನನ್ನ ಅಜ್ಜಿಯಾದ ಸುಭದ್ರೆಯನ್ನು ಹೇಗೆ ಮದುವೆಯಾದನು? ಇದನ್ನು ಕೇಳಲು ನಾನು ಬಹಳ ಉತ್ಸುಕನಾಗಿದ್ದೇನೆ. ॥ ೧ ॥

ಶ್ರೀಶುಕ ಉವಾಚ

ಅರ್ಜುನಸ್ತೀರ್ಥಯಾತ್ರಾಯಾಂ ಪರ್ಯಟನ್ನವನೀಂ ಪ್ರಭುಃ ।
ಗತಃ ಪ್ರಭಾಸಮಶೃಣೋನ್ಮಾತುಲೇಯೀಂ ಸ ಆತ್ಮನಃ ॥ ೨ ॥

ದುರ್ಯೋಧನಾಯ ರಾಮಸ್ತಾಂ ದಾಸ್ಯತೀತಿ ನ ಚಾಪರೇ ।
ತಲ್ಲಿಪ್ಸುಃ ಸ ಯತಿರ್ಭೂತ್ವಾ ತ್ರಿದಂಡೀ ದ್ವಾರಕಾಮಗಾತ್ ॥ ೩ ॥

ತತ್ರ ವೈ ವಾರ್ಷಿಕಾನ್ ಮಾಸಾನವಾತ್ಸೀತ್ತಾರ್ಥಸಾಧಕಃ ।
ಪೌರೈಃ ಸಭಾಜಿತೋಽಭೀಕ್ಷ್ಣಂ ರಾಮೇಣಾಜಾನತಾ ಚ ಸಃ ॥ ೪ ॥

ಏಕದಾ ಗೃಹಮಾನೀಯ ಅತಿಥ್ಯೇನ ನಿಮಂತ್ರ್ಯ ತಮ್ ।
ಶ್ರದ್ಧಯೋಪಹೃತಂ ಭೈಕ್ಷ್ಯಂ ಬಲೇನ ಬುಭುಜೇ ಕಿಲ ॥ ೫ ॥

ಸೋಽಪಶ್ಯತ್ತತ್ರ ಮಹತೀಂ ಕನ್ಯಾಂ ವೀರಮನೋಹರಾಮ್ ।
ಪ್ರೀತ್ಯುತ್ಫುಲ್ಲೇಕ್ಷಣಸ್ತಸ್ಯಾಂ ಭಾವಕ್ಷುಬ್ಧಂ ಮನೋ ದಧೇ ॥ ೬ ॥

ಸಾಪಿ ತಂ ಚಕಮೇ ವೀಕ್ಷ್ಯ ನಾರೀಣಾಂ ಹೃದಯಂಗಮಮ್ ।
ಹಸಂತೀ ವ್ರೀಡಿತಾಪಾಂಗೀ ತನ್ನ್ಯಸ್ತಹೃದಯೇಕ್ಷಣಾ ॥ ೭ ॥

ತಾಂ ಪರಂ ಸಮನುಧ್ಯಾಯನ್ನಂತರಂ ಪ್ರೇಪ್ಸುರರ್ಜುನಃ ।
ನ ಲೇಭೇ ಶಂ ಭ್ರಮಚ್ಚಿತ್ತಃ ಕಾಮೇನಾತಿಬಲೀಯಸಾ ॥ ೮ ॥

ಮಹತ್ಯಾಂ ದೇವಯಾತ್ರಾಯಾಂ ರಥಸ್ಥಾಂ ದುರ್ಗನಿರ್ಗತಾಮ್ ।
ಜಹಾರಾನುಮತಃ ಪಿತ್ರೋಃ ಕೃಷ್ಣಸ್ಯ ಚ ಮಹಾರಥಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ ! ಒಮ್ಮೆ ಪ್ರಭಾವಶಾಲಿಯಾದ ಅರ್ಜುನನು ತೀರ್ಥಯಾತ್ರೆಯನ್ನು ಮಾಡುತ್ತಾ ಭೂಮಂಡಲದಲ್ಲಿ ಸಂಚರಿಸುತ್ತಿದ್ದಾಗ ಪ್ರಭಾಸಕ್ಷೇತ್ರಕ್ಕೆ ಆಗಮಿಸಿದನು. ಅಲ್ಲವನು ತಮ್ಮ ಸೋದರ ಮಾವನ ಮಗಳಾದ ಸುಭದ್ರೆಯನ್ನು ದುರ್ಯೋಧನನಿಗೆ ಕೊಟ್ಟು ಮದುವೆ ಮಾಡಲು ಬಲರಾಮನು ನಿಶ್ಚಯಿಸಿದ್ದಾನೆಂದೂ, ಇದಕ್ಕೆ ವಸುದೇವನ ಮತ್ತು ಶ್ರೀಕೃಷ್ಣನ ಸಹಮತವಿಲ್ಲವೆಂದೂ ಕೇಳಿದನು. ಆಗ ಅರ್ಜುನನ ಮನಸ್ಸಿನಲ್ಲಿ ಸುಭದ್ರೆಯನ್ನು ತಾನು ಮದುವೆಯಾಗಬೇಕೆಂಬ ಆಸೆಯು ಅಂಕುರಿಸಿತು. ಇದನ್ನು ಸಾಧಿಸಲಿಕ್ಕಾಗಿ ತ್ರಿದಂಡೀ ಸಂನ್ಯಾಸಿ ವೇಷವನ್ನು ಧರಿಸಿ ಅವನು ದ್ವಾರಕೆಗೆ ಹೋದನು. ॥ ೨-೩ ॥ ಅರ್ಜುನನು ಸುಭದ್ರೆಯನ್ನು ಪಡೆದುಕೊಳ್ಳಲು ದ್ವಾರಕೆಯಲ್ಲಿ ವರ್ಷಾಕಾಲದ ನಾಲ್ಕು ತಿಂಗಳು ತಂಗಿದನು. ಅಲ್ಲಿ ನಗರವಾಸಿಗಳೂ, ಬಲರಾಮನೂ ಅವನನ್ನು ಬಹಳವಾಗಿ ಸನ್ಮಾನಿಸಿದರು. ಆದರೆ ಇವನು ಅರ್ಜುನನೆಂದು ಅವರಿಗೆ ತಿಳಿಯಲಿಲ್ಲ ॥ ೪ ॥

ಒಂದು ದಿನ ಬಲರಾಮನು ಆತಿಥ್ಯವನ್ನು ನೀಡಲು ಆ ಸಂನ್ಯಾಸಿಯನ್ನು ತಮ್ಮ ಅರಮನೆಗೆ ಕರೆದುಕೊಂಡು ಬಂದನು. ಸಂನ್ಯಾಸಿ ವೇಷಧಾರಿಯಾದ ಅರ್ಜುನನಿಗೆ ಬಲರಾಮನು ಬಹಳ ಶ್ರದ್ಧೆಯೊಂದಿಗೆ ಮೃಷ್ಟಾನ್ನವನ್ನು ಭೋಜನಮಾಡಿಸಿದನು. ॥ ೫ ॥ ಅರ್ಜುನನು ಭೋಜನಮಾಡುವಾಗ ಅಲ್ಲಿ ವಿವಾಹಯೋಗ್ಯಳಾದ ಪರಮ ಸುಂದರಿಯಾದ ಸುಭದ್ರೆಯನ್ನು ನೋಡಿದನು. ಆಕೆಯ ಸೌಂದರ್ಯವು ಮಹಾ-ಮಹಾವೀರರ ಮನಸ್ಸನ್ನು ಅಪಹರಿಸುವಂತಹುದಿತ್ತು. ಆಕೆಯನ್ನು ನೋಡಿ ಅರ್ಜುನನ ಕಣ್ಣುಗಳು ಅರಳಿದವು. ಅವಳನ್ನು ಪಡೆಯಬೇಕೆಂಬ ಆಕಾಂಕ್ಷೆಯಿಂದ ಅವನ ಮನಸ್ಸು ಕುಬ್ಜವಾಯಿತು ಮತ್ತು ಅವಳನ್ನು ಪತ್ನಿಯಾಗಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ॥ ೬ ॥ ಪರೀಕ್ಷಿತನೇ ! ನಿನ್ನ ತಾತನಾದ ಅರ್ಜುನನೂ ತುಂಬಾ ಸುಂದರನಾಗಿದ್ದನು. ಅವನ ಸೌಂದರ್ಯಕ್ಕೆ ಆಕರ್ಷಿತರಾಗದ ಸ್ತ್ರೀಯರೇ ಇರಲಿಲ್ಲ, ಅಂತಹ ಸುಂದರ ಪುರುಷನನ್ನು ನೋಡಿದ ಸುಭದ್ರೆಯೂ ಕೂಡ ಅವನನ್ನೇ ಪತಿಯನ್ನಾಗಿ ವರಿಸಲು ನಿಶ್ಚಯಿಸಿದಳು. ಅವಳು ಸ್ವಲ್ಪ ಮುಗುಳ್ನಕ್ಕು ನಾಚಿಕೆಯಿಂದ ಕೂಡಿದ ಓರೆಗಣ್ಣನೋಟದಿಂದ ಅವನನ್ನು ನೋಡಿದಳು. ಆಕೆಯು ತನ್ನ ಹೃದಯವನ್ನು ಅವನಿಗೆ ಸಮರ್ಪಿಸಿಬಿಟ್ಟಳು. ॥ ೭ ॥ ಈಗ ಅರ್ಜುನನು ಕೇವಲ ಅವಳ ಚಿಂತೆಯಲ್ಲೇ ಇದ್ದು, ಇವಳನ್ನು ಯಾವಾಗ ಅಪಹರಿಸಿಕೊಂಡು ಹೋಗಬಹುದೆಂದು ಸಂದರ್ಭವನ್ನು ಹುಡುಕುತ್ತಿದ್ದನು. ಸುಭದ್ರೆಯನ್ನು ಪಡೆಯುವ ಉತ್ಕಟ ಕಾಮನೆಯಿಂದ ಅವನ ಚಿತ್ತವು ಚಂಚಲವಾಗಿ, ಅವನಿಗೆ ಸ್ವಲ್ಪವೂ ಶಾಂತಿಯೇ ಇಲ್ಲದಂತಾಯಿತು. ॥ ೮ ॥

ಒಮ್ಮೆ ಸುಭದ್ರೆಯು ದೇವರ ದರ್ಶನಕ್ಕಾಗಿ ರಥದಲ್ಲಿ ಕುಳಿತುಕೊಂಡು ದ್ವಾರಕೆಯ ದುರ್ಗದಿಂದ ಹೊರಗೆ ಹೊರಟಳು. ಅದೇ ಸಮಯದಲ್ಲಿ ಅರ್ಜುನನು ವಸುದೇವ-ದೇವಕಿಯ ಮತ್ತು ಶ್ರೀಕೃಷ್ಣನ ಅನುಮತಿಯನ್ನು ಪಡೆದು ಸುಭದ್ರೆಯನ್ನು ಅಪಹರಿಸಿಕೊಂಡು ಹೋದನು. ॥ ೯ ॥

ರಥಸ್ಥೋ ಧನುರಾದಾಯ ಶೂರಾಂಶ್ಚಾರುಂಧತೋ ಭಟಾನ್ ।
ವಿದ್ರಾವ್ಯ ಕ್ರೋಶತಾಂ ಸ್ವಾನಾಂ ಸ್ವಭಾಗಂ ಮೃಗರಾಡಿವ
॥ ೧೦ ॥

ತಚ್ಚ್ರುತ್ವಾಕ್ಷುಭಿತೋ ರಾಮಃ ಪರ್ವಣೀವ ಮಹಾರ್ಣವಃ ।
ಗೃಹೀತಪಾದಃ ಕೃಷ್ಣೇನ ಸುಹೃದ್ಭಿಶ್ಚಾನ್ವಶಾಮ್ಯತ
॥ ೧೧ ॥

ಪ್ರಾಹಿಣೋತ್ಪಾರಿಬರ್ಹಾಣಿ ವರವಧ್ವೋರ್ಮುದಾ ಬಲಃ ।
ಮಹಾಧನೋಪಸ್ಕರೇಭರಥಾಶ್ವನರಯೋಷಿತಃ
॥ ೧೨ ॥

ಶ್ರೀಶುಕ ಉವಾಚ

ಕೃಷ್ಣಸ್ಯಾಸೀದ್ದ್ವಿಜಶ್ರೇಷ್ಠಃ ಶ್ರುತದೇವ ಇತಿ ಶ್ರುತಃ ।
ಕೃಷ್ಣೈಕಭಕ್ತ್ಯಾ ಪೂರ್ಣಾರ್ಥಃ ಶಾಂತಃ ಕವಿರಲಂಪಟಃ
॥ ೧೩ ॥

ಸ ಉವಾಸ ವಿದೇಹೇಷು ಮಿಥಿಲಾಯಾಂ ಗೃಹಾಶ್ರಮೀ ।
ಅನೀಹಯಾಽಽಗತಾಹಾರ್ಯನಿರ್ವರ್ತಿತನಿಜಕ್ರಿಯಃ
॥ ೧೪ ॥

ಯಾತ್ರಾಮಾತ್ರಂ ತ್ವಹರಹರ್ದೈವಾದುಪನಮತ್ಯುತ ।
ನಾಧಿಕಂ ತಾವತಾ ತುಷ್ಟಃ ಕ್ರಿಯಾಶ್ಚಕ್ರೇ ಯಥೋಚಿತಾಃ
॥ ೧೫ ॥

ತಥಾ ತದ್ರಾಷ್ಟ್ರಪಾಲೋಽಂಗ ಬಹುಲಾಶ್ವ ಇತಿ ಶ್ರುತಃ ।
ಮೈಥಿಲೋ ನಿರಹಮ್ಮಾನ ಉಭಾವಪ್ಯಚ್ಯುತಪ್ರಿಯೌ
॥ ೧೬ ॥

ತಯೋಃ ಪ್ರಸನ್ನೋ ಭಗವಾನ್ ದಾರುಕೇಣಾಹೃತಂ ರಥಮ್ ।
ಆರುಹ್ಯ ಸಾಕಂ ಮುನಿಭಿರ್ವಿದೇಹಾನ್ವ್ಯಯಯೌ ಪ್ರಭುಃ
॥ ೧೭ ॥

ನಾರದೋ ವಾಮದೇವೋಽತ್ರಿಃ ಕೃಷ್ಣೋ ರಾಮೋಽಸಿತೋಽರುಣಿಃ ।
ಅಹಂ ಬೃಹಸ್ಪತಿಃ ಕಣ್ವೋ ಮೈತ್ರೇಯಶ್ಚ್ಯವನಾದಯಃ
॥ ೧೮ ॥

ತತ್ರ ತತ್ರ ತಮಾಯಾಂತಂ ಪೌರಾ ಜಾನಪದಾ ನೃಪ ।
ಉಪತಸ್ಥುಃ ಸಾರ್ಘ್ಯಹಸ್ತಾ ಗ್ರಹೈಃ ಸೂರ್ಯಮಿವೋದಿತಮ್
॥ ೧೯ ॥

ರಥಾರೂಢನಾದ ವೀರ ಅರ್ಜುನನು ಧನುಸ್ಸನ್ನು ಎತ್ತಿಕೊಂಡು ತನ್ನನ್ನು ತಡೆಯಲು ಬಂದ ಸೈನಿಕರನ್ನು ಹೊಡೆದು ಓಡಿಸಿದನು. ಸುಭದ್ರೆಯ ಆಪ್ತವರ್ಗವು ಅಳುತ್ತಾಗೋಳಾಡುತ್ತಿದ್ದಂತೆ ಸಿಂಹವು ತನಗೆ ಸೇರಬೇಕಾದ ಭಾಗವನ್ನು ನಿರ್ಭಯವಾಗಿ ಎತ್ತಿಕೊಂಡು ಹೋಗುವಂತೆ ಅರ್ಜುನನು ಸುಭದ್ರೆಯನ್ನು ರಥದಲ್ಲಿ ಕುಳ್ಳಿರಿಸಿ ಕೊಂಡು ಹೊರಟುಹೋದನು. ॥ ೧೦ ॥ ಈ ಸಮಾಚಾರವನ್ನು ಕೇಳಿದ ಬಲರಾಮನ ಕೋಪವು ಹುಣ್ಣಿಮೆಯ ದಿನ ಸಮುದ್ರವು ಉಕ್ಕೇರುವಂತೆ, ಉಕ್ಕೇರಿಬಂದಿತು. ಆದರೆ ಭಗವಾನ್ ಶ್ರೀಕೃಷ್ಣನು ಹಾಗೂ ಇತರ ಸುಹೃದ್ ಸಂಬಂಧಿಗಳು ಅವನ ಕಾಲುಗಳನ್ನು ಹಿಡಿದುಕೊಂಡು ನಾನಾ ವಿಧದಿಂದ ಸಮಾಧಾನಪಡಿಸಿದಾಗ ಶಾಂತನಾದನು. ॥ ೧೧ ॥ ಆನಂತರ ಬಲರಾಮನು ಪ್ರಸನ್ನನಾಗಿ ವಧೂ-ವರರಿಗೆ ಅಪಾರವಾದ ಧನವನ್ನು ನಾನಾ ಸಾಮಗ್ರಿಗಳನ್ನು, ಆನೆ, ಕುದುರೆ, ರಥ ಮತ್ತು ದಾಸೀ-ದಾಸರನ್ನು ಬಳುವಳಿಯಾಗಿ ಕಳಿಸಿಕೊಟ್ಟನು. ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಿದೇಹರಾಜ್ಯದ ರಾಜಧಾನಿಯಾದ ಮಿಥಿಲಾಪಟ್ಟಣದಲ್ಲಿ ಶ್ರುತ ದೇವನೆಂಬ ಒಬ್ಬ ಗೃಹಸ್ಥ ಬ್ರಾಹ್ಮಣನಿದ್ದನು. ಅವನು ಭಗವಾನ್ ಶ್ರೀಕೃಷ್ಣನ ಪರಮಭಕ್ತನಾಗಿದ್ದನು. ಅವನು ಏಕಮಾತ್ರ ಭಗವದ್ಭಕ್ತಿ ಯಿಂದ ಪೂರ್ಣಮನೋರಥನೂ, ಪರಮಶಾಂತನೂ, ಜ್ಞಾನಿಯೂ, ವಿರಕ್ತನೂ ಆಗಿದ್ದನು. ॥ ೧೩. ॥ ಅವನು ಗೃಹಸ್ಥಾಶ್ರಮದಲ್ಲಿ ಇರುತ್ತಿ ದ್ದರೂ ಜೀವನ ನಿರ್ವಹಣೆಗಾಗಿ ಯಾವುದೇ ಉದ್ಯೋಗವನ್ನು ಮಾಡುತ್ತಿರಲಿಲ್ಲ. ಭಗವಂತನ ದಯೆಯಿಂದ ದೊರೆತುದರಲ್ಲೇ ಜೀವನ ಸಾಗಿಸುತ್ತಿದ್ದನು. ॥ ೧೪ ॥ ಪ್ರಾರಬ್ಧವಶದಿಂದ ಅವನಿಗೆ ಪ್ರತಿದಿನವೂ ಜೀವನನಿರ್ವಾಹಕ್ಕಾಗುವಷ್ಟು ಸಾಮಗ್ರಿಯು ದೊರೆ ಯುತ್ತಿತ್ತು. ಹೆಚ್ಚಿಗೆ ಮಿಗುತ್ತಿರಲಿಲ್ಲ. ಅವನು ಅಷ್ಟರಲ್ಲೇ ಸಂತುಷ್ಟ ನಾಗಿದ್ದು ತನ್ನ ವರ್ಣಾಶ್ರಮಕ್ಕನುಸಾರ ಧರ್ಮವನ್ನು ಪಾಲಿಸುವುದ ರಲ್ಲಿ ತತ್ಪರನಾಗಿರುತ್ತಿದ್ದನು. ॥ ೧೫ ॥ ಪ್ರಿಯ ಪರೀಕ್ಷಿತನೇ! ಆ ದೇಶದ ರಾಜನೂ ಕೂಡ ಬ್ರಾಹ್ಮಣನಂತೆಯೇ ಭಕ್ತಿಯುಳ್ಳವನಾಗಿ ದ್ದನು. ಮಿಥಿಲಾ ಪಟ್ಟಣದ ಆ ಪ್ರತಿಷ್ಠಿತ ನರಪತಿಯ ಹೆಸರು ಬಹು ಲಾಶ್ವನೆಂದಿತ್ತು. ಅವನಲ್ಲಿ ಅಹಂಕಾರ ಲೇಶಮಾತ್ರವೂ ಇರಲಿಲ್ಲ. ಶ್ರುತದೇವ ಮತ್ತು ಬಹುಲಾಶ್ವರಿಬ್ಬರೂ ಭಗವಾನ್ ಶ್ರೀಕೃಷ್ಣನ ಪರಮಭಕ್ತರಾಗಿದ್ದರು. ॥ ೧೬ ॥

ಒಮ್ಮೆ ಭಗವಾನ್ ಶ್ರೀಕೃಷ್ಣನು ಅವರಿಬ್ಬರ ಮೇಲೆ ಪ್ರಸನ್ನನಾಗಿ ದಾರುಕನಿಂದ ರಥವನ್ನು ಸಿದ್ಧಗೊಳಿಸಿ, ಆ ರಥವನ್ನು ಹತ್ತಿ ದ್ವಾರಕೆ ಯಿಂದ ವಿದೇಹ ನಗರಕ್ಕೆ ಪ್ರಯಾಣ ಬೆಳೆಸಿದನು. ॥ ೧೭ ॥ ಭಗವಂತನೊಂದಿಗೆ ನಾರದರು, ವಾಮದೇವ, ಅತ್ರಿ, ವೇದ ವ್ಯಾಸರು, ಪರಶುರಾಮರು, ಅಸಿತ, ಆರುಣಿ, ಬೃಹಸ್ಪತಿ, ಕಣ್ವ, ಮೈತ್ರೇಯ, ಚ್ಯವನ ಮೊದಲಾದ ಋಷಿಗಳೊಂದಿಗೆ ನಾನೂ (ಶುಕರು) ಅವರಲ್ಲಿ ಸೇರಿಕೊಂಡಿದ್ದೆ. ॥ ೧೮ ॥ ಪರೀಕ್ಷಿತನೇ! ಅವರು ಹೋದಲೆಲ್ಲ ಅಲ್ಲಿಯ ನಾಗರೀಕರೂ, ಗ್ರಾಮನಿವಾಸಿ ಗಳೂ ಪೂಜಾಸಾಮಗ್ರಿಗಳೊಂದಿಗೆ ಉಪಸ್ಥಿತರಿದ್ದರು. ಗ್ರಹ ಗಳೊಂದಿಗೆ ಸಾಕ್ಷಾತ್ ಸೂರ್ಯನಾರಾಯಣನೇ ಉದಯಿಸಿ ಬಂದಿರುವನೋ ಎಂದು ತಿಳಿದು ಭಗವಂತನನ್ನು ಭಕ್ತಿಯಿಂದ ಪೂಜಿಸುತ್ತಿದ್ದರು. ॥ ೧೯ ॥

ಆನರ್ತಧನ್ವಕುರುಜಾಂಗಲಕಂಕಮತ್ಸ್ಯ-
ಪಾಂಚಾಲಕುಂತಿಮಧುಕೇಕಯಕೋಸಲಾರ್ಣಾಃ ।
ಅನ್ಯೇ ಚ ತನ್ಮುಖಸರೋಜಮುದಾರಹಾಸ-
ಸ್ನಿಗ್ಧೇಕ್ಷಣಂ ನೃಪ ಪಪುರ್ದೃಶಿಭಿರ್ನಾರ್ಯಃ ॥ ೨೦ ॥

ತೇಭ್ಯಃ ಸ್ವಯೀಕ್ಷಣವಿನಷ್ಟತಮಿಸ್ರದೃಗ್ಭ್ಯಃ
ಕ್ಷೇಮಂ ತ್ರಿಲೋಕಗುರುರರ್ಥದೃಶಂ ಚ ಯಚ್ಛನ್ ।
ಶೃಣ್ವನ್ ದಿಗಂತಧವಲಂ ಸ್ವಯಶೋಽಶುಭಘ್ನಂ
ಗೀತಂ ಸುರೈರ್ನೃಭಿರಗಾಚ್ಚನಕೈರ್ವಿದೇಹಾನ್ ॥ ೨೧ ॥

ತೇಽಚ್ಯುತಂ ಪ್ರಾಪ್ತಮಾಕರ್ಣ್ಯ ಪೌರಾ ಜಾನಪದಾ ನೃಪ ।
ಅಭೀಯುರ್ಮುದಿತಾಸ್ತಸ್ಮೈ ಗೃಹೀತಾರ್ಹಣಪಾಣಯಃ
॥ ೨೨ ॥

ದೃಷ್ಟ್ವಾತ ಉತ್ತಮಶ್ಲೋಕಂ ಪ್ರೀತ್ಯುತ್ಫುಲ್ಲಾನನಾಶಯಾಃ ।
ಕೈರ್ಧೃತಾಂಜಲಿಭಿರ್ನೇಮುಃ ಶ್ರುತಪೂರ್ವಾಂಸ್ತಥಾ ಮುನೀನ್
॥ ೨೩ ॥

ಸ್ವಾನುಗ್ರಹಾಯ ಸಂಪ್ರಾಪ್ತಂ ಮನ್ವಾನೌ ತಂ ಜಗದ್ಗುರುಮ್ ।
ಮೈಥಿಲಃ ಶ್ರುತದೇವಶ್ಚ ಪಾದಯೋಃ ಪೇತತುಃ ಪ್ರಭೋಃ
॥ ೨೪ ॥

ನ್ಯಮಂತ್ರಯೇತಾಂ ದಾಶಾರ್ಹಮಾತಿಥ್ಯೇನ ಸಹ ದ್ವಿಜೈಃ ।
ಮೈಥಿಲಃ ಶ್ರುತದೇವಶ್ಚ ಯುಗಪತ್ಸಂಹತಾಂಜಲೀ
॥ ೨೫ ॥

ಭಗವಾಂಸ್ತದಭಿಪ್ರೇತ್ಯ ದ್ವಯೋಃ ಪ್ರಿಯಚಿಕೀರ್ಷಯಾ ।
ಉಭಯೋರಾವಿಶದ್ಗೇಹಮುಭಾಭ್ಯಾಂ ತದಲಕ್ಷಿತಃ
॥ ೨೬ ॥

ಶ್ರೋತುಮಭ್ಯಸತಾಂ ದೂರಾನ್ ಜನಕಃ ಸ್ವಗೃಹಾಗತಾನ್ ।
ಆನೀತೇಷ್ವಾಸನಾಗ್ರ್ಯೇಷು ಸುಖಾಸೀನಾನ್ಮಹಾಮನಾಃ
॥ ೨೭ ॥

ಪ್ರವೃದ್ಧಭಕ್ತ್ಯಾ ಉದ್ದರ್ಷಹೃದಯಾಸ್ರಾವಿಲೇಕ್ಷಣಃ ।
ನತ್ವಾತದಂಘ್ರೀನ್ ಪ್ರಕ್ಷಾಲ್ಯ ತದಪೋ ಲೋಕಪಾವನೀಃ
॥ ೨೮ ॥

ಪರೀಕ್ಷಿತನೇ ! ದಾರಿಯಲ್ಲಿ ಆನರ್ತ, ಧನ್ವ, ಕುರುಜಾಂಗಲ, ಕಂಕ, ಮತ್ಸ್ಯ, ಪಾಂಚಾಲ, ಕುಂತೀ, ಮಧು, ಕೇಕಯ, ಕೋಸಲ, ಅರ್ಣ ಮೊದಲಾದ ಅನೇಕ ದೇಶದ ನರ-ನಾರಿಯರು ತಮ್ಮ ನೇತ್ರಗಳೆಂಬ ದ್ರೋಣಗಳಿಂದ ಭಗವಾನ್ ಶ್ರೀಕೃಷ್ಣನ ಉನ್ಮುಕ್ತ ಹಾಸ್ಯವನ್ನೂ ಪ್ರೇಮಪೂರ್ಣ ಕಟಾಕ್ಷದಿಂದ ಕೂಡಿದ ಮುಖಾರವಿಂದದ ಮಕರಂದವನ್ನು ಪಾನಮಾಡಿದರು. ॥ ೨೦ ॥ ಮೂರು ಲೋಕಗಳ ಗುರುವಾದ ಭಗವಾನ್ ಶ್ರೀಕೃಷ್ಣನ ದರ್ಶನದಿಂದ ಆ ಜನರ ಅಜ್ಞಾನದೃಷ್ಟಿಯು ನಾಶವಾಯಿತು. ಪ್ರಭುವು ದರ್ಶನ ಮಾಡುವ ನರ-ನಾರಿಯರಿಗೆ ತನ್ನ ಕರುಣಾ ದೃಷ್ಟಿಯಿಂದ ಪರಮ ಶ್ರೇಯಸ್ಸನ್ನು ಅತ್ಮಜ್ಞಾನವನ್ನು ಕರುಣಿಸುತ್ತಾ ಮುಂದರಿಯುತ್ತಿದ್ದನು. ಅಲ್ಲಲ್ಲಿ ಮನುಷ್ಯರು, ದೇವತೆಗಳು - ಸಮಸ್ತ ದಿಕ್ಕುಗಳನ್ನು ಉಜ್ವಲಗೊಳಿಸುವಂತಹ, ಸಮಸ್ತ ಅಶುಭಗಳನ್ನು ನಾಶಮಾಡುವಂತಹ ಭಗವಂತನ ಮಂಗಳ ಕೀರ್ತಿಯನ್ನು ಹಾಡುತ್ತಿದ್ದರು. ಅಂತಹ ಸ್ತೋತ್ರಗಳನ್ನು ಆಲಿಸುತ್ತಾ ಭಗವಾನ್ ಶ್ರೀಕೃಷ್ಣನು ಮಿಥಿಲಾ ಪಟ್ಟಣವನ್ನು ಸೇರಿದನು. ॥ ೨೧ ॥

ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಶುಭಾಗಮನದ ಸಮಾಚಾರವನ್ನು ಕೇಳಿದ ಮಿಥಿಲಾಪುರ ನಿವಾಸಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ಅವರು ಕೈಗಳಲ್ಲಿ ವಿವಿಧ ಪೂಜಾಸಾಮಗ್ರಿಗಳನ್ನು ಹಿಡಿದುಕೊಂಡು ಶ್ರೀಕೃಷ್ಣನನ್ನು ಸ್ವಾಗತಿಸಲು ಧಾವಿಸಿ ಬಂದರು. ॥ ೨೨ ॥ ಭಗವಾನ್ ಶ್ರೀಕೃಷ್ಣನ ದರ್ಶನವನ್ನು ಪಡೆದು ಅವರ ಹೃದಯ ಮತ್ತು ಮುಖಕಮಲಗಳು ಆನಂದದಿಂದ ವಿಕಸಿತವಾದುವು. ಅವರೆಲ್ಲರೂ ಭಗವಂತನ ಹಾಗೂ ಮುನಿಗಳ ಹೆಸರುಗಳನ್ನು ಮಾತ್ರ ಕೇಳಿದ್ದರೇ ವಿನಹ ನೋಡಿರಲಿಲ್ಲ. ಈಗ ಪ್ರತ್ಯಕ್ಷವಾಗಿ ನೋಡಿ ಕೈಜೋಡಿಸಿ, ತಲೆತಗ್ಗಿಸಿ ವಂದಿಸಿಕೊಂಡರು. ॥ ೨೩ ॥ ಜಗದ್ಗುರು ಭಗವಾನ್ ಶ್ರೀಕೃಷ್ಣನು ನಮ್ಮ ಮೇಲೆ ಅನುಗ್ರಹಿಸಲಿಕ್ಕಾಗಿಯೇ ಆಗಮಿಸಿರುವನೆಂದು ತಿಳಿದ ಮಿಥಿಲೇಶಬಹುಲಾಶ್ವ ಮತ್ತು ಶ್ರುತದೇವರು ಅವನ ಚರಣಗಳಲ್ಲಿ ಬಿದ್ದು ನಮಸ್ಕರಿಸಿಕೊಂಡರು. ॥ ೨೪ ॥ ಬಹುಲಾಶ್ವ ಹಾಗೂ ಶ್ರುತದೇವರಿಬ್ಬರೂ ಒಟ್ಟಿಗೆ ಕೈಜೋಡಿಸಿಕೊಂಡು ಮುನಿ ಮಂಡಳಿಯೊಂದಿಗೆ ಭಗವಾನ್ ಶ್ರೀಕೃಷ್ಣನಿಗೆ ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿಕೊಂಡರು. ॥ ೨೫ ॥ ಭಗವಾನ್ ಶ್ರೀಕೃಷ್ಣನು ಇಬ್ಬರ ಪ್ರಾರ್ಥನೆಯನ್ನು ಸ್ವೀಕರಿಸಿ ಇಬ್ಬರನ್ನು ಸಂತೋಷಪಡಿಸಲಿಕ್ಕಾಗಿ ಒಂದೇ ಬಾರಿಗೆ ಬೇರೆ-ಬೇರೆ ರೂಪಗಳಿಂದ ಇಬ್ಬರ ಮನೆಗಳಿಗೂ ತೆರಳಿದನು. ಆದರೆ ಭಗವಾನ್ ಶ್ರೀಕೃಷ್ಣನು ನನ್ನ ಮನೆಗೆ ಬಂದಿರುವನು ಬೇರೆಲ್ಲೂ ಹೋಗಲಿಲ್ಲ ಎಂಬ ವಿಷಯವು ತಿಳಿಯಲೇ ಇಲ್ಲ. ॥ ೨೬ ॥ ದುಷ್ಟ-ದುರಾಚಾರಿ ಅಸತ್ಪುರುಷರು ಯಾರ ಹೆಸರೂ ಕೂಡ ಕೇಳಲಾರರೋ ಅಂತಹ ಭಗವಾನ್ ಶ್ರೀಕೃಷ್ಣನು ಮತ್ತು ಋಷಿ-ಮುನಿಗಳು ತನ್ನ ಮನೆಗೆ ಆಗಮಿಸಿದ್ದನ್ನು ನೋಡಿದ ಮಹಾನುಭಾವನಾದ ಬಹುಲಾಶ್ವನು ಸುಂದರವಾದ ಆಸನಗಳನ್ನು ತರಿಸಿ ಭಗವಂತನನ್ನು ಹಾಗೂ ಋಷಿ - ಮುನಿಗಳನ್ನು ಕುಳ್ಳಿರಿಸಿದನು. ಆ ಸಮಯದಲ್ಲಿ ಬಹುಲಾಶ್ವನಿಗೆ ಪ್ರೇಮ - ಭಕ್ತಿಯ ಉದ್ರೇಕದಿಂದ ಹೃದಯ ತುಂಬಿಬಂತು. ಕಣ್ಣುಗಳಲ್ಲಿ ಆನಂದಾಶ್ರುಗಳು ಚಿಮ್ಮಿದವು. ಅವನು ತನ್ನ ಪರಮಪೂಜ್ಯ ಅತಿಥಿಯಾ

ಸಕುಟುಂಬೋ ವಹನ್ಮೂರ್ಧ್ನಾ ಪೂಜಯಾಂಚಕ್ರ ಈಶ್ವರಾನ್ ।
ಗಂಧಮಾಲ್ಯಾಂಬರಾಕಲ್ಪಧೂಪದೀಪಾರ್ಘ್ಯಗೋವೃಷೈಃ
॥ ೨೯ ॥

ವಾಚಾ ಮಧುರಯಾ ಪ್ರೀಣನ್ನಿದಮಾಹಾನ್ನತರ್ಪಿತಾನ್ ।
ಪಾದಾವಂಕಗತೌ ವಿಷ್ಣೋಃ ಸಂಸ್ಪೃಶನ್ ಶನಕೈರ್ಮುದಾ
॥ ೩೦ ॥

ರಾಜೋವಾಚ

ಭವಾನ್ ಹಿ ಸರ್ವಭೂತಾನಾಮಾತ್ಮಾ ಸಾಕ್ಷೀ ಸ್ವದೃಗ್ವಿಭೋ ।
ಅಥ ನಸ್ತ್ವತ್ಪದಾಂಭೋಜಂ ಸ್ಮರತಾಂ ದರ್ಶನಂ ಗತಃ
॥ ೩೧ ॥

ಸ್ವವಚಸ್ತದೃತಂ ಕರ್ತುಮಸ್ಮದ್ಗ್ರಹೋಚಿರೋ ಭವಾನ್ ।
ಯದಾತ್ಥೈಕಾಂತಭಕ್ತಾನ್ಮೇ ನಾನಂತಃ ಶ್ರೀರಜಃ ಪ್ರಿಯಃ
॥ ೩೨ ॥

ಕೋ ನು ತ್ವಚ್ಚರಣಾಂಭೋಜಮೇವಂವಿದ್ವಿಸೃಜೇತ್ಪುಮಾನ್ ।
ನಿಷ್ಕಿಂಚನಾನಾಂ ಶಾಂತಾನಾಂ ಮುನೀನಾಂ ಯಸ್ತ್ವಮಾತ್ಮದಃ
॥ ೩೩ ॥

ಯೋಽವತೀರ್ಯ ಯದೋರ್ವಂಶೇ ನೃಣಾಂ ಸಂಸರತಾಮಿಹ ।
ಯಶೋ ವಿತೇನೇ ತಚ್ಛಾಂತ್ಯೈ ತ್ರೈಲೋಕ್ಯವೃಜಿನಾಪಹಮ್
॥ ೩೪ ॥

ನಮಸ್ತುಭ್ಯಂ ಭಗವತೇ ಕೃಷ್ಣಾಯಾಕುಂಠಮೇಧಸೇ ।
ನಾರಾಯಣಾಯ ಋಷಯೇ ಸುಶಾಂತಂ ತಪ ಈಯುಷೇ
॥ ೩೫ ॥

ದಿನಾನಿ ಕತಿಚಿದ್ಭೂಮನ್ ಗೃಹಾನ್ ನೋ ನಿವಸ ದ್ವಿಜೈಃ ।
ಸಮೇತಃ ಪಾದರಜಸಾ ಪುನೀಹೀದಂ ನಿಮೇಃ ಕುಲಮ್
॥ ೩೬ ॥

ಇತ್ಯುಪಾಮಂತ್ರಿತೋ ರಾಜ್ಞಾ ಭಗವಾನ್ಲೋಕಭಾವನಃ ।
ಉವಾಸ ಕುರ್ವನ್ ಕಲ್ಯಾಣಂ ಮಿಥಿಲಾನರಯೋಷಿತಾಮ್
॥ ೩೭ ॥

ಶ್ರುತದೇವೋಽಚ್ಯುತಂ ಪ್ರಾಪ್ತಂ ಸ್ವಗೃಹಾನ್ನತಕೋ ಯಥಾ ।
ನತ್ವಾ ಮುನೀನ್ ಸುಸಂಹೃಷ್ಟೋ ಧುನ್ವನ್ವಾಸೋ ನನರ್ತ ಹ
॥ ೩೮ ॥

ಚರಣಗಳಲ್ಲಿ ನಮಸ್ಕಾರ ಮಾಡಿ, ಪಾದಗಳನ್ನು ತೊಳೆದು ಆ ಪವಿತ್ರ ಚರಣೋದಕವನ್ನು ತನ್ನ ಕುಟುಂಬದವರೊಂದಿಗೆ ತಲೆಯಲ್ಲಿ ಧರಿಸಿಕೊಂಡನು. ಮತ್ತೆ ಭಗವಂತನನ್ನು ಮತ್ತು ಭಗವತ್ಸ್ವರೂಪಿಗಳಾದ ಋಷಿಗಳನ್ನು ಗಂಧ, ಪುಷ್ಪಮಾಲೆ, ವಸ್ತ್ರಾಲಂಕಾರ, ಧೂಪ, ದೀಪ, ಅರ್ಘ್ಯ, ಗೋ, ವೃಷಭ ಮುಂತಾದುವನ್ನು ಸಮರ್ಪಿಸಿ ಭಕ್ತಿಯಿಂದ ಪೂಜೆಮಾಡಿದನು. ॥ ೨೭-೨೯ ॥ ಎಲ್ಲ ಜನರೂ ಭೋಜನಾದಿಗಳಿಂದ ತೃಪ್ತರಾದಾಗ ಬಹುಲಾಶ್ವರಾಜನು ಭಗವಾನ್ ಶ್ರೀಕೃಷ್ಣನ ಚರಣಗಳನ್ನು ತನ್ನ ತೊಡೆಯಲ್ಲಿ ಎತ್ತಿಕೊಂಡು ಅತ್ಯಂತ ಆನಂದದಿಂದ ನಿಧಾನವಾಗಿ ಕಾಲುಗಳನ್ನೊತ್ತುತ್ತಾ, ಮಧುರವಾದ ಮಾತುಗಳಿಂದ ಭಗವಂತನನ್ನು ಸ್ತುತಿಸತೊಡಗಿದನು. ॥ ೩೦ ॥

ಬಹುಲಾಶ್ವರಾಜನು ಹೇಳಿದನು – ಪ್ರಭುವೇ ! ನೀನು ಸಮಸ್ತ ಪ್ರಾಣಿಗಳ ಆತ್ಮಸ್ವರೂಪದ ಸಾಕ್ಷಿಯೂ, ಸ್ವಯಂ ಪ್ರಕಾಶನೂ ಆಗಿರುವೆ. ನಾವು ಯಾವಾಗಲೂ ನಿನ್ನ ಚರಣ ಕಮಲಗಳ ಸ್ಮರಣೆಯನ್ನು ಮಾಡುತ್ತಲೇ ಇದ್ದೇವೆ. ಆದರಿಂದಲೆ ನೀನು ನಮಗೆ ದಿವ್ಯದರ್ಶನವನ್ನಿತ್ತು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿರುವೆ.॥ ೩೧ ॥ ಭಗವಂತಾ ! ನನ್ನಲ್ಲಿ ಅನನ್ಯವಾದ ಭಕ್ತಿಯಿರುವ ಏಕಾಂತ ಭಕ್ತರು – ನನ್ನ ಸ್ವರೂಪರೇ ಆಗಿದ್ದಾರೆ. ಅವರು ಅನಂತನಿಗಿಂತಲೂ, ಅರ್ಧಾಂಗಿನೀ ಲಕ್ಷ್ಮೀದೇವಿಗಿಂತಲೂ, ಪುತ್ರನಾದ ಬ್ರಹ್ಮದೇವರಿಗಿಂತಲೂ ಹೆಚ್ಚು ಪ್ರಿಯರಾದವರು ಎಂದು ಹೇಳಿರುವ ನಿನ್ನ ಮಾತನ್ನು ಸತ್ಯಗೊಳಿಸುವ ಸಲುವಾಗಿಯೇ ನೀನು ನಮಗೆ ದರ್ಶನವನ್ನು ಕೊಟ್ಟಿರುವೆ. ॥ ೩೨ ॥ ನಿನ್ನ ಇಂತಹ ಪರಮ ದಯೆಯನ್ನೂ ಪ್ರೇಮಪರವಶತೆಯನ್ನು ತಿಳಿದಿರುವ ಯಾವನು ತಾನೇ ನಿನ್ನ ಚರಣಕಮಲಗಳನ್ನು ತ್ಯಜಿಸಬಲ್ಲನು ? ನಿನ್ನನ್ನು ಬಿಟ್ಟು ಬೇರೆ ತಮ್ಮದೆಂಬ ಯಾವ ವಸ್ತುವೂ ಇಲ್ಲದಿರುವ ಶಾಂತಾತ್ಮರಾದ ಮುನಿಗಳಿಗೆ ನೀನು ನಿನ್ನನ್ನೇ ಕೊಟ್ಟುಕೊಳ್ಳುವೆ. ॥ ೩೩ ॥ ನೀನು ಯದುವಂಶದಲ್ಲಿ ಅವತರಿಸಿ ಹುಟ್ಟು ಸಾವುಗಳೆಂಬ ಚಕ್ರದಲ್ಲಿ ಸಿಕ್ಕಿ ನರಳುತ್ತಿರುವ ಮನುಷ್ಯರನ್ನು ಉದ್ಧರಿಸುವ ಸಲುವಾಗಿ, ಮೂರು ಲೋಕಗಳ ಪಾಪಗಳನ್ನು ತೊಡೆದು ಹಾಕುವಂತಹ ನಿನ್ನ ಧವಳ ಕೀರ್ತಿಯನ್ನು ವಿಸ್ತರಿಸಿರುವೆ. ॥ ೩೪ ॥ ಅಚಿಂತ್ಯ ಮಹಿಮನಾದ, ಪಾಪಹರನಾದ, ತಡೆಯಿಲ್ಲದ ಮೇಧಾಶಕ್ತಿಯುಳ್ಳ ನಾರಾಯಣ ಋಷಿಸ್ವರೂಪನೂ, ಶಾಂತತಪಸ್ಕನೂ ಆದ ಶ್ರೀಕೃಷ್ಣ ನಿನಗೆ ನಮಸ್ಕರಿಸುತ್ತೇನೆ. ॥ ೩೫ ॥ ಪರಬ್ರಹ್ಮ ಸ್ವರೂಪನೇ ! ನೀನು ಕೆಲವು ದಿವಸಗಳಾದರೂ ಋಷಿ ಮುನಿಗಳೊಡನೆ ನಮ್ಮ ಆತಿಥ್ಯವನ್ನು ಸ್ವೀಕರಿಸುತ್ತಾ ನಮ್ಮ ಅರಮನೆಯಲ್ಲೇ ಇದ್ದು, ನಿನ್ನ ಚರಣಕಮಲಗಳ ಧೂಳಿನಿಂದ ನಿಮಿವಂಶವನ್ನು ಪವಿತ್ರಗೊಳಿಸು. ॥ ೩೬ ॥ ಪರೀಕ್ಷಿತನೇ ! ಎಲ್ಲರ ಜೀವನದಾತೃವಾದ ಭಗವಾನ್ ಶ್ರೀಕೃಷ್ಣನು ಬಹುಲಾಶ್ವರಾಜನ ಈ ಪ್ರಾರ್ಥನೆಯನ್ನು ಮನ್ನಿಸಿ ಮಿಥಿಲೆಯ ನರ-ನಾರಿಯರ ಕಲ್ಯಾಣವನ್ನುಂಟುಮಾಡುತ್ತಾ ಕೆಲವು ದಿವಸಗಳ ವರೆಗೆ ಅಲ್ಲೇ ಇದ್ದನು. ॥ ೩೭ ॥

ಪ್ರಿಯ ಪರೀಕ್ಷಿತನೇ ! ಇತ್ತ ರಾಜಾಬಹುಲಾಶ್ವನಂತೆಯೇ ಶ್ರುತದೇವನೂ ಭಗವಾನ್ ಶ್ರೀಕೃಷ್ಣನನ್ನು ಮತ್ತು ಋಷಿಮುನಿಗಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಶ್ರೀಕೃಷ್ಣನಿಗೂ, ಮುನಿಗಳಿಗೂ ನಮಸ್ಕರಿಸಿ ಆನಂದತುಂದಿಲನಾಗಿ ವಸ್ತ್ರವನ್ನು ಮೇಲಕ್ಕೆ ಹಾರಿಸುತ್ತಾ ಕುಣಿದಾಡಿದನು. ॥ ೩೮ ॥

ತೃಣಪೀಠಬೃಸೀಷ್ವೇತಾನಾನೀತೇಷೂಪವೇಶ್ಯ ಸಃ ।
ಸ್ವಾಗತೇನಾಭಿನಂದ್ಯಾಂಘ್ರೀನ್ ಸಭಾರ್ಯೋಽವನಿಜೇ ಮುದಾ
॥ ೩೯ ॥

ತದಂಭಸಾ ಮಹಾಭಾಗ ಆತ್ಮಾನಂ ಸಗೃಹಾನ್ವಯಮ್ ।
ಸ್ನಾಪಯಾಂಚಕ್ರ ಉದ್ಧರ್ಷೋ ಲಬ್ಧಸರ್ವಮನೋರಥಃ
॥ ೪೦ ॥

ಫಲಾರ್ಹಣೋಶೀರಶಿವಾಮೃತಾಂಬುಭಿ-
ರ್ಮ್ಯದಾ ಸುರಭ್ಯಾ ತುಲಸೀಕುಶಾಂಬುಜೈಃ ।
ಆರಾಧಯಾಮಾಸ ಯಥೋಪಪನ್ನಯಾ
ಸಪರ್ಯಯಾ ಸತ್ತ್ವವಿವರ್ಧನಾಂಧಸಾ ॥ ೪೧ ॥

ಸ ತರ್ಕಯಾಮಾಸ ಕುತೋ ಮಮಾನ್ವಭೂ-
ದ್ಗೃಹಾಂಧಕೂಪೇ ಪತಿತಸ್ಯ ಸಂಗಮಃ ।
ಯಃ ಸರ್ವತೀರ್ಥಾಸ್ಪದಪಾದರೇಣುಭಿಃ
ಕೃಷ್ಣೇನ ಚಾಸ್ಯಾತ್ಮನಿಕೇತಭೂಸುರೈಃ ॥ ೪೨ ॥

ಸೂಪವಿಷ್ಟಾನ್ ಕೃತಾತಿಥ್ಯಾನ್ ಶ್ರುತದೇವ ಉಪಸ್ಥಿತಃ ।
ಸಭಾರ್ಯಸ್ವಜನಾಪತ್ಯ ಉವಾಚಾಂಘ್ರ್ಯಭಿಮರ್ಶನಃ
॥ ೪೩ ॥

ಶ್ರುತದೇವ ಉವಾಚ

ನಾದ್ಯ ನೋ ದರ್ಶನಂ ಪ್ರಾಪ್ತಃ ಪರಂ ಪರಮಪೂರುಷಃ ।
ಯರ್ಹೀದಂ ಶಕ್ತಿಭಿಃ ಸೃಷ್ಟ್ವಾ ಪ್ರವಿಷ್ಟೋ ಹ್ಯಾತ್ಮಸತ್ತಯಾ
॥ ೪೪ ॥

ಯಥಾ ಶಯಾನಃ ಪುರುಷೋ ಮನಸ್ಯೇವಾತ್ಮಮಾಯಯಾ ।
ಸೃಷ್ಟ್ವಾ ಲೋಕಂ ಪರಂ ಸ್ವಾಪ್ನಮನುವಿಶ್ಯಾವಭಾಸತೇ
॥ ೪೫ ॥

ಶೃಣ್ವತಾಂ ಗದತಾಂ ಶಶ್ವದರ್ಚತಾಂ ತ್ವಾಭಿವಂದತಾಮ್ ।
ನೃಣಾಂ ಸಂವದತಾಮಂತರ್ಹೃದಿ ಭಾಸ್ಯಮಲಾತ್ಮನಾಮ್
॥ ೪೬ ॥

ಶ್ರುತದೇವನು ಮಣೆ, ಚಾಪೆ, ದರ್ಭಾಸನಗಳನ್ನು ಹಾಸಿ ಭಗವಾನ್ ಶ್ರೀಕೃಷ್ಣನನ್ನು ಮತ್ತು ಮುನಿಗಳನ್ನು ಕುಳ್ಳಿರಿಸಿ ಸ್ವಾಗತ ಭಾಷಣಗಳ ಮೂಲಕ ಅವರನ್ನು ಅಭಿನಂದಿಸಿ, ತನ್ನ ಪತ್ನಿಯೊಂದಿಗೆ ಅತ್ಯಂತ ಆನಂದದಿಂದ ಎಲ್ಲರ ಕಾಲುಗಳನ್ನು ತೊಳೆದನು. ॥ ೩೯ ॥ ಬಳಿಕ ಮಹಾ ಸೌಭಾಗ್ಯಶಾಲಿಯಾದ ಶ್ರುತದೇವನು ಭಗವಂತನ ಹಾಗೂ ಋಷಿಗಳ ಚರಣೋದಕವನ್ನು ಮನೆ-ಕುಟುಂಬದವರಿಗೆ ಸಿಂಪಡಿಸಿ, ತಾನೂ ತಲೆಯಲ್ಲಿ ಧರಿಸಿಕೊಂಡನು. ಆ ಸಮಯದಲ್ಲಿ ಅವನ ಸಕಲಮನೋರಥಗಳು ಪೂರ್ಣಗೊಂಡವು. ಅವನು ಹರ್ಷಾತಿರೇಕದಿಂದ ಉನ್ಮತ್ತನಂತಾಗಿದ್ದನು. ॥ ೪೦॥ ಅನಂತರ ಅವನು ಫಲ,- ಗಂಧ, ಲಾವಂಚದಿಂದ ಸುವಾಸಿತವಾದ, ನಿರ್ಮಲವಾದ, ಸುಮಧುರವಾದ ಶುದ್ಧೋದಕ, ಸುಗಂಧಿತ ವೃತ್ತಿಕೆ, ತುಲಸೀ, ದರ್ಭೆ, ಕಮಲ ಮುಂತಾದ ಸುಲಭವಾಗಿ ದೊರೆಯುವ ಪೂಜಾಸಾಮಗ್ರಿಗಳಿಂದಲೂ, ಸತ್ತ್ವಗುಣವನ್ನು ಹೆಚ್ಚಿಸುವ ಮೃಷ್ಟಾನ್ನದಿಂದಲೂ ಎಲ್ಲರ ಆರಾಧನೆಯನ್ನು ಮಾಡಿದನು. ॥ ೪೧ ॥ ಆ ಸಮಯದಲ್ಲಿ ಶ್ರುತದೇವನು ತನ್ನಲ್ಲೇ ಹೀಗೆ ಯೋಚಿಸಿದನು – 'ನಾನಾದರೋ ಮನೆ-ಮತ ಎಂಬ ಸಂಸಾರದ ಕಗ್ಗತ್ತಲೆಯ ಬಾವಿಯಲ್ಲಿ ಬಿದ್ದ ನಿರ್ಭಾಗ್ಯನಾಗಿದ್ದೇನೆ. ನನಗೆ ಸಮಸ್ತ ತೀರ್ಥಗಳನ್ನು ತೀರ್ಥೀಕರಿಸುವ ಪರಮ ಪವಿತ್ರವಾದ ಪಾದಧೂಳಿಯನ್ನು ಹೊಂದಿರುವ ಭಗವಾನ್ ಶ್ರೀಕೃಷ್ಣನ ಮತ್ತು ಭಾಗವತೋತ್ತಮರ ಸಂಗವು ಹೇಗೆ ತಾನೇ ಪ್ರಾಪ್ತವಾಯಿತು ? ॥ ೪೨ ॥ ಅತಿಥಿಗಳೆಲ್ಲರೂ ಆದರದ ಆತಿಥ್ಯವನ್ನು ಸ್ವೀಕರಿಸಿ ಸುಖಾಸನಗಳಲ್ಲಿ ಕುಳಿತನಂತರ ಶ್ರುತದೇವನು ತನ್ನ ಪತ್ನೀ-ಪುತ್ರರೊಡನೆ ಹಾಗೂ ಇತರ ಸಂಬಂಧಿಗಳೊಂದಿಗೆ ಅವರ ಸೇವೆಯಲ್ಲಿ ತೊಡಗಿದನು. ಭಗವಾನ್ ಶ್ರೀಕೃಷ್ಣನ ಚರಣಕಮಲಗಳನ್ನು ಹಿಡಿದುಕೊಂಡು ಅವನು ಪರಿ-ಪರಿಯಾಗಿ ಸ್ತುತಿಸಿದನು – ॥ ೪೩ ॥

ಶ್ರುತದೇವನು ಹೇಳಿದನು – ಪ್ರಭೋ! ನೀನು ವ್ಯಕ್ತಾವ್ಯಕ್ತ ರೂಪೀ ಪ್ರಕೃತಿ ಮತ್ತು ಜೀವರಿಂದ ಅತೀತನಾದ ಪುರುಷೋತ್ತಮನಾಗಿರುವೆ. ನೀನು ನನಗೆ ಇಂದೇ ದರ್ಶನ ಕೊಟ್ಟಿರುವೆ ಎಂದೇನಿಲ್ಲ. ನೀನು ನಿನ್ನ ಶಕ್ತಿಗಳಿಂದ ಈ ಜಗತ್ತನ್ನು ಸೃಷ್ಟಿಸಿ, ಆತ್ಮಸತ್ತೆಯ ರೂಪದಿಂದ ಇದರಲ್ಲಿ ಪ್ರವೇಶಿಸಿದೆ. ಅಂದಿನಿಂದಲೂ ನಮಗೆಲ್ಲರಿಗೆ ದೊರೆತಿರುವೆ. ॥ ೪೪ ॥ ಮಲಗಿರುವ ಮನುಷ್ಯನು ಸ್ವಪ್ನಾವಸ್ಥೆಯಲ್ಲಿ ಅವಿದ್ಯಾವಶನಾಗಿ ಮನಸ್ಸಿನಿಂದಲೇ ಸ್ವಪ್ನಜಗತ್ತನ್ನು ಸೃಷ್ಟಿಸಿ, ಆ ಜಗತ್ತಿನಲ್ಲೇ ಅನೇಕ ರೂಪಗಳಿಂದ ಕರ್ಮಮಾಡುತ್ತಿರುವಂತೆ ತೋರುತ್ತದೆ. ಹಾಗೆಯೇ ನೀನು ನಿನ್ನಲ್ಲೇ ನಿನ್ನ ಮಾಯೆಯಿಂದ ಜಗತ್ತನ್ನು ರಚಿಸಿ ಅದರಲ್ಲಿ ಪ್ರವಿಷ್ಟನಾಗಿ ಅನೇಕ ರೂಪಗಳಿಂದ ಪ್ರಕಾಶಿಸುತ್ತಿರುವೆ. ॥ ೪೫ ॥ ಸದಾಕಾಲವೂ ನಿನ್ನ ಲೀಲಾಕಥೆಗಳನ್ನು ಶ್ರವಣ-ಕೀರ್ತನೆ ಮತ್ತು ನಿನ್ನ ಪ್ರತಿಮೆಗಳ ಅರ್ಚನೆ-ವಂದನೆ ಮಾಡುತ್ತಾ, ಪರಸ್ಪರವಾಗಿ ನಿನ್ನ ಕುರಿತಾಗಿಯೇ ಚರ್ಚಿಸುತ್ತಿರುವವರ ಹೃದಯ ಶುದ್ಧವಾಗುತ್ತದೆ ಮತ್ತು ನೀನು ಅದರಲ್ಲಿ ಪ್ರಕಾಶಿತನಾಗುವೆ. ॥ ೪೬ ॥

ಹೃದಿಸ್ಥೋಽಪ್ಯತಿದೂರಸ್ಥಃ ಕರ್ಮವಿಕ್ಷಿಪ್ತಚೇತಸಾಮ್ ।
ಆತ್ಮಶಕ್ತಿಭಿರಗ್ರಾಹ್ಯೋಽಪ್ಯಂತ್ಯುಪೇತಗುಣಾತ್ಮನಾಮ್
॥ ೪೭ ॥

ನಮೋಽಸ್ತು ತೇಽಧ್ಯಾತ್ಮವಿದಾಂ ಪರಾತ್ಮನೇ
ಅನಾತ್ಮನೇ ಸ್ವಾತ್ಮವಿಭಕ್ತಮೃತ್ಯವೇ ।
ಸಕಾರಣಾಕಾರಣಲಿಂಗಮೀಯುಷೇ
ಸ್ವಮಾಯಯಾಸಂವೃತರುದ್ದದೃಷ್ಟಯೇ ॥ ೪೮ ॥

ಸ ತ್ವಂ ಶಾಧಿ ಸ್ವಭೃತ್ಯಾನ್ ನಃ ಕಿಂ ದೇವ ಕರವಾಮಹೇ ।
ಏತದಂತೋ ನೃಣಾಂ ಕ್ಲೇಶೋ ಯದ್ಭವಾನಕ್ಷಿಗೋಚರಃ
॥ ೪೯ ॥

ಶ್ರೀಶುಕ ಉವಾಚ

ತದುಕ್ತಮಿತ್ಯುಪಾಕರ್ಣ್ಯ ಭಗವಾನ್ ಪ್ರಣತಾರ್ತಿಹಾ ।
ಗೃಹೀತ್ವಾ ಪಾಣಿನಾ ಪಾಣಿಂ ಪ್ರಹಸಂಸ್ತಮುವಾಚ ಹ
॥ ೫೦ ॥

ಶ್ರೀಭಗವಾನುವಾಚ

ಬ್ರಹ್ಮಂಸ್ತೇಽನುಗ್ರಹಾರ್ಥಾಯ
ಸಂಪ್ರಾಪ್ತಾನ್ ವಿದ್ಧ್ಯಮೂನ್ ಮುನೀನ್ ।
ಸಂಚರಂತಿ ಮಯಾ ಲೋಕಾನ್
ಪುನಂತಃ ಪಾದರೇಣುಭಿಃ ॥ ೫೧॥

ದೇವಾಃ ಕ್ಷೇತ್ರಾಣಿ ತೀರ್ಥಾನಿ ದರ್ಶನಸ್ಪರ್ಶನಾರ್ಚನೈಃ ।
ಶನೈಃ ಪುನಂತಿ ಕಾಲೇನ ತದಪ್ಯರ್ಹತ್ತಮೇಕ್ಷಯಾ
॥ ೫೨ ॥

ಬ್ರಾಹ್ಮಣೋ ಜನ್ಮನಾ ಶ್ರೇಯಾನ್ಸರ್ವೇಷಾಂ ಪ್ರಾಣಿನಾಮಿಹ ।
ತಪಸಾ ವಿದ್ಯಯಾ ತುಷ್ಟ್ಯಾ ಕಿಮು ಮತ್ಕಲಯಾ ಯುತಃ
॥ ೫೩ ॥

ನ ಬ್ರಾಹ್ಮಣಾನ್ಮೇ ದಯಿತಂ ರೂಪಮೇತಚ್ಚತುರ್ಭುಜಮ್ ।
ಸರ್ವವೇದಮಯೋ ವಿಪ್ರಃ ಸರ್ವದೇವಮಯೋ ಹ್ಯಹಮ್
॥ ೫೪ ॥

ನೀನು ಸಮಸ್ತರ ಹೃದಯದಲ್ಲಿ ನೆಲೆಸಿದ್ದರೂ ಕಾಮ್ಯಕರ್ಮಗಳಲ್ಲಿ ತೊಡಗಿ ಚಂಚಲ ಚಿತ್ತರಾದವರಿಂದ ನೀನು ಬಹಳ ದೂರನಾಗಿರುವೆ. ಆದರೆ ನಿನ್ನ ಗುಣಗಾನದಿಂದ ತಮ್ಮ ಅಂತಃಕರಣವನ್ನು ಸದ್ಗುಣ ಸಂಪನ್ನವಾಗಿಸಿಕೊಂಡವರಿಗೆ ಚಿತ್ತವೃತ್ತಿಗಳಿಂದ ಅಗ್ರಾಹ್ಯನಾದರೂ ನೀನು ಅತ್ಯಂತ ಸಮೀಪದವನಾಗುವೆ. ॥ ೪೭ ॥

ಪ್ರಭೋ! ಅಧ್ಯಾತ್ಮತತ್ತ್ವವನ್ನು ತಿಳಿದ ಜ್ಞಾನಿಗಳಿಗೆ ನೀನು ಆತ್ಮ ಸ್ವರೂಪನಾಗಿ ಅವರ ಹೃದಯದಲ್ಲಿ ಬೆಳಗುವೆ. ದೇಹಾತ್ಮಬುದ್ಧಿಯುಳ್ಳವರಿಗೆ ನೀನು ಅವರಿಗೆ ಪ್ರಾಪ್ತವಾಗುವ ಮೃತ್ಯುವಿನ ಸ್ವರೂಪನಾಗಿರುವೆ. ಮಹತ್ತತ್ತ್ವವೇ ಮೊದಲಾದ ಕಾರ್ಯಕಾರಣ ರೂಪವಾದ ಪ್ರಕೃತಿಯ ನಿಯಾಮಕನೂ, ಶಾಸಕನೂ ನೀನೇ ಆಗಿರುವೆ. ನಿನ್ನಿಂದಲೇ ಸೃಷ್ಟಿಸಲ್ಪಟ್ಟ ಮಾಯೆಯು ನಿನ್ನನ್ನು ಮುಚ್ಚಲಾರದು. ನೀನು ಮಾಯೆಗೆ ಅತೀತನಾಗಿರುವೆ. ಆದರೆ ಆ ಮಾಯೆಯು ಇತರರ ದೃಷ್ಟಿಯನ್ನು ಮುಚ್ಚಿಬಿಡುತ್ತದೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೪೮ ॥ ದೇವದೇವ! ನಿನ್ನ ಸೇವಕರಾಗಿರುವ ನಾವು ನಿನ್ನ ಯಾವ ಸೇವೆ ಮಾಡಲಿ ಎಂದು ಆಜ್ಞಾಪಿಸು. ಕಣ್ಣುಗಳಿಂದ ನಿನ್ನ ದರ್ಶನವಾಗುವ ತನಕ ಜೀವರಿಗೆ ಕ್ಲೇಶಗಳಿರುತ್ತವೆ. ನಿನ್ನ ದರ್ಶನವಾಗುತ್ತಲೇ ಸಮಸ್ತ ಕ್ಲೇಶಗಳು ಹೊರಟುಹೋಗುತ್ತವೆ. ॥ ೪೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶರಣಾಗತಭಯಹಾರಿಯಾದ ಭಗವಾನ್ ಶ್ರೀಕೃಷ್ಣನು ಶ್ರುತದೇವನ ಪ್ರಾರ್ಥನೆಯನ್ನು ಕೇಳಿ, ತನ್ನ ಕೈಯಿಂದ ಅವನ ಕೈ ಹಿಡಿದುಕೊಂಡು ಮುಗುಳ್ನಗುತ್ತಾ ಇಂತೆಂದನು. ॥ ೫೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಶ್ರುತದೇವನೇ! ಈ ಮಹಾ-ಮಹಾ-ಋಷಿ-ಮುನಿಗಳು ನಿನ್ನನ್ನು ಅನುಗ್ರಹಿಸಲೆಂದೇ ಇಲ್ಲಿಗೆ ಆಗಮಿಸಿದ್ದಾರೆ. ಇವರು ತಮ್ಮ ಚರಣಕಮಲಗಳ ಧೂಳಿಯಿಂದ ಜನರನ್ನು ಮತ್ತು ಲೋಕಗಳನ್ನು ಪವಿತ್ರಗೊಳಿಸುತ್ತಾ ನನ್ನೊಡನೆ ಸಂಚರಿಸುತ್ತಿರುವರು. ॥ ೫೧ ॥ ದೇವತೆಗಳು, ಪುಣ್ಯಕ್ಷೇತ್ರಗಳು, ತೀರ್ಥಗಳು – ಇವೆಲ್ಲ ದರ್ಶನ, ಸ್ಪರ್ಶನ, ಅರ್ಚನ ಮುಂತಾದವುಗಳ ಮೂಲಕ ನಿಧಾನವಾಗಿ ಬಹಳ ದಿನಗಳಲ್ಲಿ ಪವಿತ್ರಗೊಳಿಸುತ್ತವೆ. ಆದರೆ ಸತ್ಪುರುಷರಾದವರು ತಮ್ಮ ದೃಷ್ಟಿಯಿಂದಲೇ ಪವಿತ್ರರಾಗಿಸಿಬಿಡುತ್ತಾರೆ. ಇಷ್ಟೇ ಅಲ್ಲ, ದೇವತಾದಿಗಳಲ್ಲಿರುವ ಪವಿತ್ರ ಮಾಡುವ ಶಕ್ತಿಯೂ ಕೂಡ ಅವರಿಗೆ ಸಂತರ ದೃಷ್ಟಿಯಿಂದಲೇ ದೊರೆತಿದೆ. ॥ ೫೨ ॥ ಶ್ರುತದೇವ! ಹುಟ್ಟಿನಿಂದಲೇ ಬ್ರಾಹ್ಮಣನು ಸಕಲ ಪ್ರಾಣಿಗಳಿಗೂ ಶ್ರೇಷ್ಠನೆನಿಸುತ್ತಾನೆ. ಹೀಗಿರುವಾಗ ಅವನು ತಪಸ್ಸು ವಿದ್ಯೆ, ಸಂತೋಷ ಮತ್ತು ನನ್ನ ಉಪಾಸನೆ ನನ್ನ ಭಕ್ತಿಯಿಂದ ಕೂಡಿದ್ದರೆ ಹೇಳುವುದೇನಿದೆ? ॥ ೫೩ ॥ ನನಗೆ ಈ ನನ್ನ ಚತುರ್ಭುಜಗಳಿಂದ ಕೂಡಿದ ಶರೀರವೂ ಕೂಡ ಬ್ರಾಹ್ಮಣರಷ್ಟು ಪ್ರಿಯವಲ್ಲ, ಏಕೆಂದರೆ, ಬ್ರಾಹ್ಮಣನು ಸರ್ವವೇದಮಯನಾಗಿದ್ದಾನೆ. ನಾನು ಸರ್ವದೇವಮಯನಾಗಿರುವೆನು. ಸರ್ವದೇವತೆಗಳು ವೇದಕ್ಕೆ ಅಧೀನರಲ್ಲವೇ? ॥ ೫೪ ॥

ದುಷ್ಪ್ರಜ್ಞಾ ಅವಿದಿತ್ವೈವಮವಜಾನಂತ್ಯಸೂಯವಃ ।
ಗುರುಂ ಮಾಂ ವಿಪ್ರಮಾತ್ಮಾನಮರ್ಚಾದಾವಿಜ್ಯದೃಷ್ಟಯಃ
॥ ೫೫ ॥

ದುರ್ಬುದ್ಧಿಯುಳ್ಳ ಮನುಷ್ಯರು ಇದನ್ನು ತಿಳಿಯದೆ ಕೇವಲ ಶಿಲಾ-ಲೋಹವಿಗ್ರಹಗಳಲ್ಲಿಯೇ ಪೂಜ್ಯಬುದ್ಧಿಯನ್ನಿಡುತ್ತಾ, ಗುಣಗಳಲ್ಲಿ ದೋಷವನ್ನೇ ಹುಡುಕುತ್ತಾ, ಸರ್ವರಿಗೂ ಗುರುವಾದ ಬ್ರಾಹ್ಮಣರನ್ನು ಮತ್ತು ನನ್ನನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಾರೆ. ॥ ೫೫ ॥

ಚರಾಚರಮಿದಂ ವಿಶ್ವಂ ಭಾವಾ ಯೇ ಚಾಸ್ಯ ಹೇತವಃ ।
ಮದ್ರೂಪಾಣೀತಿ ಚೇತಸ್ಯಾಧತ್ತೇ ವಿಪ್ರೋ ಮದೀಕ್ಷಯಾ
॥ ೫೬ ॥

ಬ್ರಾಹ್ಮಣರು ನನ್ನ ಸಾಕ್ಷಾತ್ಕಾರವನ್ನು ಪಡೆದು ಈ ಚರಾಚರ ಜಗತ್ತು, ಇದರ ಸಂಬಂಧಿಸಿದ ಎಲ್ಲ ಭಾವನೆಗಳು, ಇದರ ಕಾರಣಗಳಾದ ಪ್ರಕೃತಿ-ಮಹತ್ತತ್ತ್ವವೇ ಮೊದಲಾದ ಎಲ್ಲವೂ ಆತ್ಮಸ್ವರೂಪೀ ಭಗವಂತನ ರೂಪಗಳೇ ಆಗಿವೆ ಎಂದು ತಮ್ಮ ಚಿತ್ತದಲ್ಲಿ ನಿಶ್ಚಯಿಸಿಕೊಳ್ಳುವರು. ॥ ೫೬ ॥

ತಸ್ಮಾದ್ ಬ್ರಹ್ಮಋಷೀನೇತಾನ್ ಬ್ರಹ್ಮನ್ ಮಚ್ಚ್ರದ್ಧಯಾರ್ಚಯ ।
ಏವಂ ಚೇದರ್ಚಿತೋಽಸ್ಮ್ಯದ್ಧಾ ನಾನ್ಯಥಾ ಭೂರಿಭೂತಿಭಿಃ
॥ ೫೭ ॥

ಅದಕ್ಕಾಗಿ ಶ್ರುತದೇವನೇ ! ನೀನು ಈ ಮಹರ್ಷಿಗಳನ್ನು ನನ್ನ ಸ್ವರೂಪರೆಂದೇ ತಿಳಿದು ಪೂರ್ಣ ಶ್ರದ್ಧೆಯಿಂದ ಇವರನ್ನು ಪೂಜಿಸು. ನೀನು ಹೀಗೆ ಮಾಡಿದರೆ ಆಯಾಸವಿಲ್ಲದೆ ಸಾಕ್ಷಾತ್ ನನ್ನ ಪೂಜೆಯನ್ನೇ ಮಾಡಿದಂತಾಗುವುದು. ಇಲ್ಲದಿದ್ದರೆ ಬಹುಮೂಲ್ಯ ಪೂಜಾಸಾಮಗ್ರಿಗಳಿಂದಲೂ ಮಾಡಿದ ಅರ್ಚನೆಯು ನನ್ನ ಪೂಜೆಯಾಗಲಾರದು. ॥ ೫೭ ॥

ಶ್ರೀಶುಕ ಉವಾಚ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ !

ಸ ಇತ್ಥಂ ಪ್ರಭುಣಾಽಽದಿಷ್ಟಃ ಸಹಕೃಷ್ಣಾನ್ ದ್ವಿಜೋತ್ತಮಾನ್ ।
ಆರಾಧ್ಯೈಕಾತ್ಮಭಾವೇನ ಮೈಥಿಲಶ್ಚಾಪ ಸದ್ಗತೀಮ್
॥ ೫೮ ॥

ಭಗವಾನ್ ಶ್ರೀಕೃಷ್ಣನ ಈ ಆದೇಶವನ್ನು ಕೇಳಿ ಶ್ರುತದೇವನು ಶ್ರೀಕೃಷ್ಣನನ್ನು ಮತ್ತು ಆ ಬ್ರಹ್ಮರ್ಷಿಗಳನ್ನು ಏಕಾತ್ಮಭಾವನೆಯಿಂದ ಆರಾಧಿಸಿದನು ಹಾಗೂ ಅವರ ಕೃಪೆಯಿಂದ ಅವನು ಭಗವತ್ಸ್ವರೂಪವನ್ನು ಹೊಂದಿದನು. ಬಹುಲಾಶ್ವರಾಜನೂ ಅದೇ ಸದ್ಗತಿಯನ್ನು ಪಡೆದನು. ॥ ೫೮ ॥ ಪ್ರಿಯ ಪರೀಕ್ಷಿತನೇ ! ಭಕ್ತನಾದವನು ಭಗವಂತನಲ್ಲಿ ಹೇಗೆ ಭಕ್ತಿಯನ್ನಿಡುವನೋ ಹಾಗೆಯೇ ಭಗವಂತನೂ ಕೂಡ ಭಕ್ತರ ಕುರಿತು ಭಕ್ತಿಯನ್ನಿಡುತ್ತಾನೆ. ಇಬ್ಬರೂ ಭಕ್ತರಿಗೆ ಸಂತೋಷಪಡಿಸಲಿಕ್ಕಾಗಿ ಕೆಲವು ದಿನಗಳವರೆಗೆ ಶ್ರೀಕೃಷ್ಣನು ಮಿಥಿಲೆಯಲ್ಲೆ ಇದ್ದು, ಅವರಿಗೆ ಸಾಧು ಸತ್ಪುರಷರ ಮಾರ್ಗದ ಉಪದೇಶವನ್ನಿತ್ತು ದ್ವಾರಕೆಗೆ ಮರಳಿದನು. ॥ ೫೯ ॥

ಏವಂ ಸ್ವಭಕ್ತಯೋ ರಾಜನ್ ಭಗವಾನ್ ಭಕ್ತಭಕ್ತಿಮಾನ್ ।
ಉಷಿತ್ವಾऽऽದಿಶ್ಯ ಸನ್ಮಾರ್ಗಂ ಪುನರ್ದ್ವಾರವತೀಮಗಾತ್
॥ ೫೯ ॥

ಎಂಭತ್ತಾರನೆಯ ಅಧ್ಯಾಯವು ಮುಗಿಯಿತು. ॥ ೮೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಶ್ರುತದೇವಾನುಗ್ರಹೋ ನಾಮ ಷಡಶೀತಿತಮೋऽಧ್ಯಾಯಃ ॥ ೮೬ ॥

ಎಂಭತ್ತೇಳನೆಯ ಅಧ್ಯಾಯ

ವೇದಸ್ತುತಿ

ಪರೀಕ್ಷಿದುವಾಚ

ಬ್ರಹ್ಮನ್ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇ ಗುಣವೃತ್ತಯಃ ।
ಕಥಂ ಚರಂತಿ ಶ್ರುತಯಃ ಸಾಕ್ಷಾತ್ ಸದಸತಃ ಪರೇ
॥ ೧ ॥

ಪರೀಕ್ಷಿದ್ರಾಜನು ಕೇಳಿದನು - ಬ್ರಾಹ್ಮಣೋತ್ತಮರೇ ! ಪರಬ್ರಹ್ಮ ತತ್ತ್ವವು ಕಾರ್ಯ-ಕಾರಣಗಳಿಂದ ಸರ್ವಥಾ ಅತೀತವಾಗಿದೆ. ಮನಸ್ಸು-ವಾಣಿಯ ಮೂಲಕ ಸಂಕೇತರೂಪದಿಂದಲೂ ಅದನ್ನು ನಿರ್ದೇಶಿಸಲಾಗುವುದಿಲ್ಲ. ಆದರೆ ಶ್ರುತಿಗಳು ಗುಣಗಳ ವಿಷಯದಲ್ಲೇ ಹೇಳಬಲ್ಲವು. ನಿರ್ಗುಣ ತತ್ತ್ವದ ಸ್ವರೂಪವಾದರೋ ಅವುಗಳಿಗೆ ನಿಲುಕಲಾರದು. ಹೀಗಿರುವಾಗ ಶ್ರುತಿಗಳು ನಿರ್ಗುಣ ಬ್ರಹ್ಮವನ್ನು ಹೇಗೆ ಪ್ರತಿಪಾದಿಸುತ್ತವೆ ? ॥ ೧ ॥

ಶ್ರೀಶುಕ ಉವಾಚ

ಬುದ್ಧೀಂದ್ರಿಯಮನಃಪ್ರಾಣಾನ್ ಜನಾನಾಮಸೃಜತ್ಪ್ರಭುಃ ।
ಮಾತ್ರಾರ್ಥಂ ಚ ಭವಾರ್ಥಂ ಚ ಆತ್ಮನೇऽಕಲ್ಪನಾಯ ಚ
॥ ೨ ॥

ಸೈಷಾ ಹ್ಯುಪನಿಷದ್ಬ್ರಹ್ಮೀ ಪೂರ್ವೇಷಾಂ ಪೂರ್ವಜೈರ್ಧೃತಾ ।
ಶ್ರದ್ಧಯಾ ಧಾರಯೇದ್ಯಸ್ತಾಂ ಕ್ಷೇಮಂ ಗಚ್ಛೇದಕಿಂಚನಃ
॥ ೩ ॥

ಅತ್ರ ತೇ ವರ್ಣಯಿಷ್ಯಾಮಿ ಗಾಥಾಂ ನಾರಾಯಣಾನ್ವಿತಾಮ್ ।
ನಾರದಸ್ಯ ಚ ಸಂವಾದಮೃಷೇರ್ನಾರಾಯಣಸ್ಯ ಚ
॥ ೪ ॥

ಏಕದಾ ನಾರದೋ ಲೋಕಾನ್ ಪರ್ಯಟನ್ ಭಗವತ್ಪ್ರಿಯಃ ।
ಸನಾತನಮೃಷಿಂ ದ್ರಷ್ಟುಂ ಯಯೌ ನಾರಾಯಣಾಶ್ರಮಮ್
॥ ೫ ॥

ಯೋ ವೈ ಭಾರತವರ್ಷೇऽಸ್ಮಿನ್ ಕ್ಷೇಮಾಯ ಸ್ವಸ್ತಯೇ ನೃಣಾಮ್ ।
ಧರ್ಮಜ್ಞಾನಶಮೋಪೇತಮಾಕಲ್ಪಾದಾಸ್ಥಿತಸ್ತಪಃ
॥ ೬ ॥

ತತ್ರೋಪವಿಷ್ಟಮೃಷಿಭಿಃ ಕಲಾಪಗ್ರಾಮವಾಸಿಭಿಃ ।
ಪರೀತಂ ಪ್ರಣತೋऽಪೃಚ್ಛದಿದಮೇವ ಕುರೂದ್ವಹ
॥ ೭ ॥

ತಸ್ಮೈ ಹ್ಯವೋಚದ್ಭಗವಾನ್ ಋಷೀಣಾಂ ಶೃಣ್ವತಾಮಿದಮ್ ।
ಯೋ ಬ್ರಹ್ಮವಾದಃ ಪೂರ್ವೇಷಾಂ ಜನಲೋಕನಿವಾಸಿನಾಮ್
॥ ೮ ॥

ಶ್ರೀಭಗವಾನುವಾಚ

ಸ್ವಾಯಂಭುವ ಬ್ರಹ್ಮಸತ್ರಂ ಜನಲೋಕೇऽಭವತ್ಪುರಾ ।
ತತ್ರಸ್ಥಾನಾಂ ಮಾನಸಾನಾಂ ಮುನೀನಾಮೂರ್ಧ್ವರೇತಸಾಮ್
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಂತನು ಮನುಷ್ಯರಿಗಾಗಿ ಮನ, ಬುದ್ಧಿ ಇಂದ್ರಿಯಗಳನ್ನು ಮತ್ತು ಪ್ರಾಣಗಳನ್ನೂ ಜೊತೆಗೆ ವಿಷಯಗಳನ್ನು ಸೃಷ್ಟಿಸಿದನು. ಅದರಿಂದ ಅವರು ಆ ವಿಷಯಗಳನ್ನು ಅನುಭವಿಸುತ್ತಾ ಜೀವನ ಧಾರಣಮಾಡಬಲ್ಲರು. ಇದರಿಂದ ಸೃಷ್ಟಿಯ ಪರಂಪರೆಯೂ ನಡೆಯುತ್ತಿರುವುದು ಮತ್ತು ಅವರು ಧರ್ಮವನ್ನು ಆಚರಿಸ ಬಲ್ಲರು, ಕರ್ಮಫಲವನ್ನು ಭೋಗಿಸಬಲ್ಲರು. ಜೊತೆಗೆ ಅವರು ತಮ್ಮ ಆತ್ಮಸ್ವರೂಪವನ್ನು ಅರಿತುಕೊಂಡು ಸಂಸಾರಬಂಧನದಿಂದ ಮುಕ್ತರೂ ಆಗುವರು. ॥ ೨ ॥

ಬ್ರಹ್ಮನನ್ನು ಪ್ರತಿಪಾದಿಸುವ ಈ ಉಪನಿಷತ್ತನ್ನು ಪೂರ್ವಜರಿಗೂ ಪೂರ್ವಜರಾದ ಸನಕಾದಿ ಋಷಿಗಳು ಧರಿಸಿದ್ದರು. ಯಾರಿಗೆ ಯಾವುದೇ ಕಾಮನೆ ಇಲ್ಲವೋ ಅವರೇ ಇದನ್ನು ಶ್ರದ್ಧೆಯಿಂದ ಧರಿಸಬಲ್ಲರು. ಅವರೇ ಕಲ್ಯಾಣ ಸ್ವರೂಪವಾದ ಪರಬ್ರಹ್ಮ ಪರಮಾತ್ಮನನ್ನು ಪಡೆದುಕೊಳ್ಳುತ್ತಾರೆ. ॥ ೩ ॥ ಈ ವಿಷಯದಲ್ಲಿ ಭಗವಾನ್ ನಾರಾಯಣನಿಗೆ ಸಂಬಂಧಿಸಿದ ಒಂದು ಕಥೆಯನ್ನು ಹೇಳುವೆನು. ಅದರಲ್ಲಿ ದೇವಋಷಿ ನಾರದರು ಮತ್ತು ಋಷಿಶ್ರೇಷ್ಠ ನಾರಾಯಣನ ಸಂವಾದವಿದೆ. ॥ ೪ ॥ ಒಮ್ಮೆ ಭಗವಂತನ ಪ್ರಿಯಭಕ್ತರಾದ ದೇವಋಷಿ ನಾರದರು ಬೇರೆ-ಬೇರೆ ಲೋಕ ಗಳಲ್ಲಿ ಸಂಚರಿಸುತ್ತಾ ಸನಾತನ ಋಷಿಗಳಾದ ಭಗವಾನ್ ನಾರಾಯಣನನ್ನು ದರ್ಶಿಸಲು ಬದರಿಕಾಶ್ರಮಕ್ಕೆ ತೆರಳಿದನು. ॥ ೫ ॥ ಭಗವಾನ್ ನಾರಾಯಣನು ಮನಷ್ಯರ ಅಭ್ಯುದಯ (ಲೌಕಿಕ ಕಲ್ಯಾಣ)ಕ್ಕಾಗಿ ಮತ್ತು ನಿಃಶ್ರೇಯಸ್ಸಿಗಾಗಿ (ಮೋಕ್ಷ ಪ್ರಾಪ್ತಿಗಾಗಿ) ಈ ಭಾರತ ವರ್ಷದಲ್ಲಿ ಕಲ್ಪದ ಪ್ರಾರಂಭದಿಂದಲೇ ಧರ್ಮ, ಜ್ಞಾನ, ಸಂಯಮದೊಂದಿಗೆ ಮಹಾತಪಸ್ಸನ್ನು ಮಾಡುತ್ತಿದ್ದನು. ॥ ೬ ॥ ನಾರದರು ಬದರಿಕಾಶ್ರಮಕ್ಕೆ ಹೋಗಿ ಭಗವಾನ್ ನಾರಾಯಣನಿಗೆ ನಮಸ್ಕಾರ ಮಾಡಿ ವಿನಮ್ರಭಾವದಿಂದ ಕುಳಿತು ತತ್ತ್ವದ ಬಗೆಗೆ ಇದೇ ಪ್ರಶ್ನೆ ಮಾಡಿದರು. ಭಗವಂತನು ಆ ಕಲಾಪಗ್ರಾಮ ವಾಸಿಗಳಾದ ಋಷಿಗಳ ಸಮಕ್ಷಮದಲ್ಲೇ ಈ ವಿಷಯವಾಗಿ ತಿಳಿಸಿದ್ದನು. ಪ್ರಿಯ ಪರೀಕ್ಷಿತನೇ ! ನೀನೂ ಕೂಡ ಈಗ ನನ್ನಲ್ಲಿ ಆ ಬ್ರಹ್ಮನ ವಿಷಯದಲ್ಲೇ ಕೇಳುತ್ತಿರುವೆ. ಬ್ರಹ್ಮನ ಸ್ವರೂಪದ ವಿಷಯದಲ್ಲಿ ನಾನು ನಿನಗೆ ಹೇಳುವುದನ್ನು ನೀನು ಭಗವಾನ್ ನಾರಾಯಣನ ಶಬ್ದಗಳಲ್ಲೇ ಕೇಳು, ಇದನ್ನು ಬಹಳ ಹಿಂದೆ ಸ್ವತಃ ಭಗವಾನ್ ನಾರಾಯಣನು ಜನೋಲೋಕ ನಿವಾಸಿಗಳಾದ ಸನಕಾದಿ ಋಷಿಗಳಿಗೆ ಹೇಳಿದ್ದನು. ಅಲ್ಲಿಯೂ ಬ್ರಹ್ಮವಿಷಯಕ ವಾದ ಚರ್ಚೆಯೇ ನಡೆಯುತ್ತಿತ್ತು. ॥ ೮ ॥

ಭಗವಾನ್ ನಾರಾಯಣನು ಹೇಳಿದನು – ಪ್ರಿಯನಾರದನೇ ! ಒಮ್ಮೆ ಜನೋಲೋಕದಲ್ಲಿ ಇಂತಹುದೇ ಒಂದು ಬ್ರಹ್ಮಸತ್ರ ನಡೆದಿತ್ತು. ಆ ಸತ್ರವು ಅಲ್ಲಿ ವಾಸಿಸುವ ಬ್ರಹ್ಮಮಾನಸ ಪುತ್ರರಾದ ಸನಕ, ಸನಂದನ, ಸನಾತನ, ಸನತ್ಕುಮಾರ ಇವರ ನಡುವೆ ನಡೆ ದಿತ್ತು. ಇವರು ನಾಲ್ವರೂ ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದಾರೆ. ॥ ೯ ॥

ಶ್ವೇತದ್ವೀಪಂ ಗತವತಿ ತ್ವಯಿ ದ್ರಷ್ಟುಂ ತದೀಶ್ವರಮ್ ।
ಬ್ರಹ್ಮವಾದಃ ಸುಸಂವೃತ್ತಃ ಶ್ರುತಯೋ ಯತ್ರ ಶೇರತೇ ।
ತತ್ರ ಹಾಯಮಭೂತ್ ಪ್ರಶ್ನಸ್ತ್ವಂ ಮಾಂ ಯಮನುಪೃಚ್ಛಸಿ
॥ ೧೦ ॥

ಆ ಸಮಯದಲ್ಲಿ ನೀನು ಶ್ವೇತದ್ವೀಪಾಧಿಪತಿಯಾದ ನನ್ನ ಅನಿರುದ್ಧ ಮೂರ್ತಿಯನ್ನು ದರ್ಶನ ಮಾಡಲು ಹೋಗಿದ್ದೆ. ಆ ಸಮಯದಲ್ಲಿ ಜನೋಲೋಕದಲ್ಲಿ ಬ್ರಹ್ಮನ ವಿಷಯದಲ್ಲಿ ಬಹಳ ಸುಂದರವಾದ ಚರ್ಚೆನಡೆಯಿತು. ಈ ವಿಷಯದಲ್ಲಿ ಶ್ರುತಿಗಳೂ ಕೂಡ ವರ್ಣಿಸಲಾರವು. ಅಲ್ಲಿ 'ಶ್ರುತಿಗಳು ಹೇಗೆ ನಿರ್ಗುಣ ಬ್ರಹ್ಮನನ್ನು ವರ್ಣಿಸಬಲ್ಲವು?' ಎಂದು ನೀನು ನನ್ನಲ್ಲಿ ಕೇಳಿರುವ ಪ್ರಶ್ನೆಯೇ ಪ್ರಸ್ತುತವಾಗಿತ್ತು. ॥ ೧೦ ॥ ಸನಕಾದಿ ನಾಲ್ವರೂ ಋಷಿಗಳು ಶಾಸ್ತ್ರೀಯ ಜ್ಞಾನದಿಂದ ಸಂಪನ್ನರಾಗಿದ್ದರು. ತಪಸ್ಸು ಶೀಲ-ಸ್ವಭಾವಗಳಲ್ಲಿಯೂ ಸಮಾನರಾಗಿದ್ದರು. ಅವರ ದೃಷ್ಟಿಯಲ್ಲಿ ಶತ್ರು-ಮಿತ್ರ ಉದಾಸೀನ – ಇವರುಗಳು ಒಂದೇ ಆಗಿದ್ದರು. ಅವರು ತಮ್ಮಲ್ಲಿ ಸನಂದನನ್ನು ಪ್ರವಚನಕಾರನನ್ನಾಗಿ ಮಾಡಿ ಉಳಿದ ಮೂವರೂ ಶ್ರೋತೃಗಳಾದರು. ॥ ೧೧ ॥

ತುಲ್ಯ ಶ್ರುತತಪಃಶೀಲಾಸ್ತುಲ್ಯಸ್ವೀಯಾರಿಮಧ್ಯಮಾಃ ।
ಅಪಿ ಚಕ್ರುಃ ಪ್ರವಚನಮೇಕಂ ಶುಶ್ರೂಷವೋಽಪರೇ
॥ ೧೧ ॥

ಸನಂದನ ಉವಾಚ

ಸ್ವಸೃಷ್ಟಮಿದಮಾಪೀಯ ಶಯಾನಂ ಸಹ ಶಕ್ತಿಭಿಃ ।
ತದಂತೇ ಬೋಧಯಾಂಚಕ್ರುಸ್ತಲ್ಲಿಂಗೈಃ ಶ್ರುತಯಃ ಪರಮ್
॥ ೧೨ ॥

ಸನಂದನರು ಹೇಳುತ್ತಾರೆ – ಪರಮಾತ್ಮನು ತಾನೇ ಸೃಷ್ಟಿಸಿದ್ದ ಜಗತ್ತನ್ನು ತನ್ನೊಳಗೆ ಲೀನವಾಗಿಸಿಕೊಂಡು ತನ್ನ ಶಕ್ತಿಗಳೊಂದಿಗೆ ಯೋಗನಿದ್ರಾವಶನಾಗಿ ಮಲಗಿದ್ದು ಪ್ರಳಯಕಾಲವು ಮುಗಿದು ಪುನಃ ಸೃಷ್ಟಿಯ ಸಮಯವು ಬಂದಾಗ – ಮಲಗಿರುವ ಸಾಮ್ರಾಟನನ್ನು ಎಚ್ಚರಿಸಲು ಪ್ರಾತಃಕಾಲದಲ್ಲಿ ರಾಜೋಪಜೀವಿಗಳಾದ ವಂದಿಜನರು ಬಂದು ಅವನ ಪರಾಕ್ರಮಗಳನ್ನು ಮತ್ತು ಸತ್‌ಕೀರ್ತಿಯನ್ನು ವರ್ಣಿಸಿ ಎಬ್ಬಿಸುವಂತೆಯೇ-ಶ್ರುತ್ರಿಗಳು ಪರಮಾತ್ಮನನ್ನು ಪ್ರತಿಪಾದಿಸುವ ಸೂಕ್ತಗಳಿಂದ ಎಚ್ಚರಗೊಳಿಸಿದವು. ॥ ೧೨-೧೩. ॥

ಯಥಾ ಶಯಾನಂ ಸಮ್ರಾಜಂ ವಂದಿನಸ್ತತ್ಪರಾಕ್ರಮೈಃ ।
ಪ್ರತ್ಯೂಷೇಽಭ್ಯೇತ್ಯ ಸುಶ್ಲೋಕೈರ್ಬೋಧಯಂತ್ಯನುಜೀವಿನಃ
॥ ೧೩. ॥

ಶ್ರುತಿಗಳು ಹೇಳುತ್ತವೆ – ಅಜಿತನೇ! ನೀನು ಸರ್ವಶ್ರೇಷ್ಠನಾಗಿರುವೆ. ನಿನಗೆ ಜಯವಾಗಲಿ! ಜಯವಾಗಲಿ! ಈ ಚರಾಚರ ಜಗತ್ತಿನ ಅನಂದಾದಿ ಗುಣಗಳನ್ನು ಮರೆಮಾಡುವುದಕ್ಕಾಗಿಯೇ ಈ ಮಾಯೆಯು ಸತ್ತ್ವಾದಿ ಗುಣಗಳನ್ನು ಸ್ವೀಕರಿಸಿದೆ. ಅಂತಹ ಮಾಯೆಯನ್ನು ನೀನು ನಾಶಗೊಳಿಸು. ಏಕೆಂದರೆ, ನೀನೇ ಸಾಕ್ಷಾತ್ತಾಗಿ ಸಮಸ್ತ ಐಶ್ವರ್ಯಗಳಿಂದ ಪರಿಪೂರ್ಣನಾಗಿರುವೆ. ಆದ್ದರಿಂದ ಮನುಷ್ಯರೇ ಆದಿಯಾಗಿ ಸಮಸ್ತ ಪ್ರಾಣಿಗಳ ಜ್ಞಾನ ವೈರಾಗ್ಯ ಮುಂತಾದ ಶಕ್ತಿಗಳನ್ನು ಜಾಗ್ರತಗೊಳಿಸುವವನೂ ನೀನೇ ಆಗಿರುವೆ. ಕೆಲವೊಮ್ಮೆ ನೀನು ಮಾಯೆಯಿಂದ ಜಗತ್ತಿನ ರೂಪದಲ್ಲಿ ಪ್ರಕಟನಾಗುವೆ. ಕೆಲವೊಮ್ಮೆ ಸಚ್ಚಿದಾನಂದ ಸ್ವರೂಪದಲ್ಲಿ ಸ್ಥಿತನಾಗಿರುವೆ. ಎಂದಾದರೂ ನೀನು ವಿಶ್ವವನ್ನು ನಿರ್ಮಿಸುವ ಸಂಕಲ್ಪವನ್ನೂ ಮಾಡಿದಾಗ ಸೃಷ್ಟಿ, ಸ್ಥಿತಿ, ಸಂಹಾರದ ಲೀಲೆಯನ್ನು ಮಾಡುವೆ. (ಅಥವಾ ಜಗತ್ತಿನ ಕಲ್ಯಾಣಕ್ಕಾಗಿ, ಅವತರಿಸಿಯೂ ಲೀಲೆ ಮಾಡುವೆ.) ಅಂತಹ ನಿನ್ನ ಸಗುಣರೂಪವನ್ನು ವರ್ಣಿಸುವುದರಲ್ಲಿ ಶ್ರುತಿಗಳಾದ ನಾವು ಯತ್ಕಿಂಚಿತ್ ಸಮರ್ಥರಾಗುತ್ತೇವೆ. ॥ ೧೪ ॥

ಶ್ರುತಯ ಊಚುಃ

ಜಯ ಜಯ ಜಹ್ಯಜಾಮಜಿತ ದೋಷಗೃಭೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ ।
ಅಗಜಗದೋಕಸಾಮಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾಽಽತ್ಮನಾ ಚ ಚರತೋಽನುಚರೇನ್ನಿಗಮಃ
॥ ೧೪ ॥

ಪ್ರಭುವೇ! ಈ ಸಮಸ್ತ ಜಗತ್ತು ನಿನ್ನಿಂದಲೇ ಉತ್ಪನ್ನವಾಗಿದೆ. ಆದಕ್ಕಾಗಿ ಈ ಸಂಪೂರ್ಣ ಜಗತ್ತು ಬ್ರಹ್ಮನದೇ ಸ್ವರೂಪವಾಗಿದೆ. ಪರಮಜ್ಞಾನಿಗಳು ಇಡೀ ವಿಶ್ವವನ್ನು ಬ್ರಹ್ಮಮಯವಾಗಿ ಭಾವಿಸುತ್ತಾರೆ. ಏಕೆಂದರೆ, ಇದು ಬ್ರಹ್ಮನಿಂದಲೇ ಉತ್ಪನ್ನವಾಗಿದೆ ಮತ್ತು ಬ್ರಹ್ಮನಲ್ಲೇ ವಿಲೀನಗೊಳ್ಳುವುದು. ಶೇಷವಾಗಿ ಪರಮಾತ್ಮನೇ

ಬೃಹದುಪಲಬ್ಧಮೇತದವಯಂತ್ಯವಶೇಷತಯಾ

ಯತ ಉದಯಾಸ್ತಮಯೌ ವಿಕೃತೇರ್ಮೃದಿ ವಾವಿಕೃತಾತ್ ।

ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ

ಕಥಮಯಥಾ ಭವಂತಿ ಭುವಿ ದತ್ತಪದಾನಿ ನೃಣಾಮ್

॥ ೧೫ ॥

ಉಳಿಯುವನು. ಆದಕ್ಕಾಗಿ ತತ್ತ್ವದೃಷ್ಟಿಯಿಂದ ಏಕಮಾತ್ರ ಪರಬ್ರಹ್ಮನ ಸತ್ತೆಯೆ ಇದೆ. ಮಣ್ಣಿನಿಂದ ನಿರ್ಮಿಸಿದ ನಾನಾ ತರಹದ ಪಾತ್ರೆಗಳಲ್ಲಿ ಬೇರೆ-ಬೇರೆ ಆಕೃತಿಗಳು ಇರುತ್ತವೆ. ಪಾತ್ರೆಗಳು ಆಗುವ ಮೊದಲು ಮಣ್ಣೇ ಇತ್ತು; ಪಾತ್ರೆಗಳು ನಾಶವಾದಾಗಲೂ ಮಣ್ಣೇ ಉಳಿಯುತ್ತದೆ. ಮಣ್ಣು ಅವಿಕಾರೀ-ರೂಪದಿಂದ ಒಂದೇ ಆಗಿರುತ್ತದೆ. ಹಾಗೆಯೇ ಪ್ರಪಂಚದ ನಿರ್ಮಾಣವು ನಿನ್ನಿಂದಲೇ ಆಗುವುದರಿಂದ ಇದರ ಆದಿ-ಮಧ್ಯ-ಅಂತ್ಯಗಳಲ್ಲಿ ಅವಿಕಾರೀರೂಪದಿಂದ ನೀನೇ ಇರುತ್ತೀಯೆ. ಪ್ರಕೃತಿಯ ಕಾರ್ಯರೂಪವಾದ ಜಗತ್ತಿನಲ್ಲಿ ಪ್ರತಿಕ್ಷಣವೂ ಪರಿವರ್ತನೆಯಾಗುತ್ತಾ ಇರುತ್ತದೆ. ಆದಕ್ಕಾಗಿ ಋಷಿಗಳ ಮನಸ್ಸಿನಿಂದಾಗುವ ಚಿಂತನೆ, ವಾಣಿಯಿಂದ ಹೇಳುವ ಮಾತು, ಅವೆಲ್ಲವೂ ಪರಬ್ರಹ್ಮನ ಚಿಂತನ-ಮನನ, ವರ್ಣನೆಯೇ ಆಗುತ್ತದೆ. ಮನುಷ್ಯನು ಎಲ್ಲೇ ಕಾಲಿಟ್ಟರೂ ಅದು ಪೃಥಿವಿಯ ಮೇಲೆಯೇ ಇಟ್ಟಂತಾಗುವುದು. ಏಕೆಂದರೆ, ಅವೆಲ್ಲವೂ ಪೃಥಿವಿಯ ಸ್ವರೂಪವೇ ಆಗಿದೆ. ಹಾಗೆಯೇ ಅಗ್ನಿ ವರುಣ, ಇಂದ್ರ ಮುಂತಾದರೂಪಗಳಲ್ಲಿ ಮಾಡುವ ಉಪಾಸನೆಯೆಲ್ಲವೂ ಬ್ರಹ್ಮನ ಉಪಾಸನೆಯೇ ಆಗಿದೆ. ಆದಕ್ಕಾಗಿ ಶ್ರುತಿಗಳಾದನಾವು ಯಾವುದೇ ನಾಮ ರೂಪದಿಂದ ವರ್ಣಿಸಿದರೂ ಅದೆಲ್ಲವೂ ನಿನ್ನ ವರ್ಣನೆಯೇ ಆಗುವುದು. ॥ ೧೫ ॥

ಇತಿ ತವ ಸೂರಯಸ್ತ್ರ್ಯಧಿಪತೇಽಖಿಲಲೋಕಮಲ-

ಕ್ಷಪಣಕಥಾಮೃತಾಬ್ಧಮವಗಾಹ್ಯ ತಪಾಂಸಿ ಜಹುಃ ।

ಕಿಮುತ ಪುನಃ ಸ್ವಧಾಮವಿಧುತಾಶಯಕಾಲಗುಣಾಃ

ಪರಮ ಭಜಂತಿ ಯೇ ಪದಮಜಸ್ರಸುಖಾನುಭವಮ್

॥ ೧೬ ॥

ಓ ತ್ರೈಲೋಕ್ಯಾಧಿಪತಿಯೇ! ಪರಮಾತ್ಮನೇ! ನಿನ್ನ ತತ್ತ್ವ ರಹಸ್ಯವನ್ನು ತಿಳಿದ ಭಕ್ತರಲ್ಲಿ ಎಷ್ಟೋ ಭಕ್ತರಾದರೋ ನಿನ್ನ ಲೀಲಾ ಕಥಾಮೃತ ಸಾಗರದಲ್ಲಿ ಮುಳುಗಿ ತಮ್ಮ ಪಾಪ-ತಾಪಗಳನ್ನು ತೊಳೆದುಕೊಂಡು ನಿನ್ನನ್ನೇ ಹೊಂದುತ್ತಾರೆ. ಇತರ ಎಷ್ಟೋ ಭಕ್ತರು ಜ್ಞಾನಮಾರ್ಗದ ಮೂಲಕ ರಾಗ-ದ್ವೇಷಾದಿಗಳನ್ನು ಇಲ್ಲವಾಗಿಸಿ ಕರ್ಮವಾಸನೆ ಕ್ಷೀಣವಾದಾಗ ನಿನ್ನ ಸ್ವರೂಪದಲ್ಲೇ ಒಂದಾಗಿ ನಿನ್ನನ್ನೇ ಹೊಂದುತ್ತಾರೆ. ಈ ಪ್ರಕಾರ ನಿನ್ನ ಆ ಭಕ್ತರು ತಮ್ಮ ಅಂತಃಕರಣವನ್ನು ಆತ್ಮಜ್ಞಾನದ ಮೂಲಕ ಶಾಂತವೂ, ಪರಿಶುದ್ಧವೂ ಮಾಡಿಕೊಂಡಿರುವರು. ಆದ್ದರಿಂದ ಅವರಿಗೆ ಶರೀರದಲ್ಲಾಗುವ ಕಾಲಧರ್ಮಗಳಾದ ಜರಾ-ಮರಣವೇ ಮುಂತಾದ ದೋಷಗಳೂ ಬಾಧಿಸಲಾರವು. ಅವರಾದರೋ ನಿರಂತರವಾಗಿ ಪರಮಾನಂದವನ್ನು ಅನುಭವಿಸುತ್ತಾ ನಿನ್ನ ಭಜನೆ-ಧ್ಯಾನದಲ್ಲೇ ತೊಡಗಿರುತ್ತಾರೆ. ॥ ೧೬ ॥

ಪರಮಾತ್ಮನೇ! ಪ್ರಾಣಿಯು ನಿನ್ನ ಭಜನೆ-ಪೂಜೆ ಮುಂತಾದುವನ್ನು ಮಾಡಿದಾಗಲೇ ಅವರ ಜೀವನ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಅವನು ಉಸಿರಾಡುವುದು ಕಮ್ಮಾರನ ತಿದಿಯಂತೆ ವ್ಯರ್ಥವೇ ಆಗಿದೆ. ಮಹತತ್ತ್ವಾದಿ ಇರುವ ತತ್ತ್ವಗಳೆಲ್ಲವೂ ಜಡವಾಗಿವೆ. ಸೃಷ್ಟಿರಚನಾಕಾರ್ಯದಲ್ಲಿ ಇವುಗಳು ಸಫಲವಾಗದಿದ್ದಾಗ ನೀನೇ ಕೃಪೆದೋರಿ ಈ ತತ್ತ್ವಗಳಲ್ಲಿ ಅನುಪ್ರವೇಶ ಮಾಡಿದಾಗಲೇ ಇವು ಸೃಷ್ಟಿನಿರ್ಮಾಣ ಕಾರ್ಯದಲ್ಲಿ ಸಫಲರಾದುವು. ಹೀಗೆ ನಿನ್ನ ಅನುಗ್ರಹದಿಂದಲೇ ಸೃಷ್ಟಿಯ ನಿರ್ಮಾಣವಾಯಿತು. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಲ್ಲಿ ಆಯಾಯ ಶರೀರಕ್ಕನುಸಾರವಾಗಿ ನೀನೇ ಪುರುಷರೂಪದಿಂದ ಇರುತ್ತೀಯೆ.

ದೃತಯ ಇವ ಶ್ವಸಂತ್ಯಸುಭೃತೋ ಯದಿ ತೇऽನುವಿಧಾ
ಮಹದಹಮಾದಯೋऽಂಡಮಸೃಜನ್ ಯದನುಗ್ರಹತಃ ।
ಪುರುಷವಿಧೋऽನ್ವಯೋऽತ್ರ ಚರಮೋऽನ್ನಮಯಾದಿಷು
ಯಃ ಸದಸತಃ ಪರಂ ತ್ವಮಥ ಯದೇಷ್ವವಶೇಷಮೃತಮ್
॥ ೧೭ ॥

ಇವುಗಳಲ್ಲಿ ಕಡೆಯದಾದ ಆನಂದಮಯಕೋಶವು ನಿನ್ನದೇ ಸ್ವರೂಪವಾಗಿದೆ. ಆ ಆನಂದಮಯ ಕೋಶವು ನಿನ್ನನ್ನು ಪಡೆಯುವ ಸ್ಥಾನವಾಗಿದೆ. ನೀನು ಅದರಿಂದಲೂ ಬೇರೆ ಆಗಿರುವೆ. ಸತ್-ಅಸತ್ ಅರ್ಥಾತ್ ಕಾರ್ಯ-ಕಾರಣರೂಪವಾದ ಜಗತ್ತಿಗಿಂತ ನೀನು ಅತೀತನಾಗಿರುವೆ. ಆದ್ದರಿಂದ ಜ್ಞಾನಿಗಳು ಈ ಸಮಗ್ರ ಜಗತ್ತನ್ನು 'ನೇತಿ-ನೇತಿ' ಈ ಉಪನಿಷದ್ವಾಕ್ಯದಿಂದ ನಿರಾಕರಣ ಮಾಡಿದ ಮೇಲೆ ಉಳಿಯುವ ಪರಮಾತ್ಮ ತತ್ತ್ವವನ್ನೇ ಋತ್ ಅರ್ಥಾತ್ ಸತ್ಯವೆಂದು ತಿಳಿಯುತ್ತಾರೆ. ಆ ಸತ್ಯ-ತತ್ತ್ವವು ನೀನೇ ಆಗಿರುವೆ. ॥ ೧೭ ॥

ಉದರಮುಪಾಸತೇ ಯ ಋಷಿವರ್ತ್ಮಸು ಕೂರ್ಪದೃಶಃ
ಪರಿಸರಪದ್ಧತಿಂ ಹೃದಯಮಾರುಣಯೋ ದಹರಮ್ ।
ತತ ಉದಗಾದನಂತ ತವ ಧಾಮ ಶಿರಃ ಪರಮಂ
ಪುನರಿಹ ಯತ್ಸಮೇತ್ಯ ನ ಪತಂತಿ ಕೃತಾಂತಮುಖೇ
॥ ೧೮ ॥

ಪ್ರಭುವೇ! ಋಷಿಗಳು ನಿನ್ನ ಪ್ರಾಪ್ತಿಗಾಗಿ ಅನೇಕ ಮಾರ್ಗಗಳನ್ನು ಹೇಳಿರುವರು. ಅವರಲ್ಲಿ ಸ್ಥೂಲದೃಷ್ಟಿಯುಳ್ಳವರು ಮಣಿಪೂರ ಚಕ್ರದಲ್ಲಿ (ನಾಭಿಯಲ್ಲಿ) ಅಗ್ನಿರೂಪದಿಂದ ನಿನ್ನನ್ನು ಉಪಾಸಿಸುತ್ತಾರೆ. ಇತರ ಅರುಣ ವಂಶದ ಋಷಿಗಳು ಸಮಸ್ತ ನಾಡಿಗಳಿಗೂ ಪ್ರಸರಣ ಸ್ಥಾನವೆನಿಸಿದ ಅನಾಹತಚಕ್ರದಲ್ಲಿ (ಹೃದಯದಲ್ಲಿ) ದಹರಾಕಾಶರೂಪವಾದ ಬ್ರಹ್ಮನನ್ನು ಉಪಾಸಿಸುತ್ತಾರೆ. ಹೇ ಅನಂತ! ನಿನ್ನನ್ನು ಪಡೆಯುವ ಶ್ರೇಷ್ಠಮಾರ್ಗವಾದ ಹೃದಯದಿಂದ ಮಸ್ತಿಷ್ಕದಲ್ಲಿ ಬ್ರಹ್ಮರಂಧ್ರ (ಸಹಸ್ರಾರ)ದವರೆಗೆ ಹೋಗಿರುವ ಸುಷುಮ್ನಾನಾಡಿಯಾದ ಜ್ಯೋತಿರ್ಮಯ ಮಾರ್ಗದ ಮೂಲಕ ಯೋಗಿಯು ಮೇಲಕ್ಕೆ ಹೋಗಿ ನಿನ್ನನ್ನು ಪಡೆದು ಕೊಳ್ಳುವನು. ಇದಕ್ಕೆ ಅರ್ಚಿರಾದಿ ಮಾರ್ಗವೆಂದು ಹೇಳುತ್ತಾರೆ. ನಿನ್ನನ್ನು ಪಡೆದ ಮೇಲೆ ಜೀವನು ಜನ್ಮ-ಮರಣ ಚಕ್ರದಿಂದ ಬಿಡುಗಡೆ ಹೊಂದುವನು. ॥ ೧೮ ॥

ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ
ತರತಮತಶ್ಚಕಾಸ್ಸ್ಯನಲವತ್ ಸ್ವಕೃತಾನುಕೃತಿಃ ।
ಅಥ ವಿತಥಾಸ್ವಮೂಷ್ವವಿತಥಂ ತವ ಧಾಮ ಸಮಂ
ವಿರಜಧಿಯೋऽನ್ವಯಂತ್ಯಭಿವಿಪಣ್ಯವ ಏಕರಸಮ್
॥ ೧೯ ॥

ಭಗವಂತನೇ! ನೀನೇ ನಾನಾ ಪ್ರಕಾರದ ಯೋನಿಗಳನ್ನು ನಿರ್ಮಿಸಿ, ಅವುಗಳಲ್ಲಿ ಕಾರಣರೂಪದಿಂದ ಪ್ರವೇಶಿಸಿರುವಂತೆ ಕಾಣುವೆ. ನೀನಾದರೋ ಸರ್ವವ್ಯಾಪಕನಾಗಿರುವೆ. ಮತ್ತೆ ನೀನು ಪ್ರವೇಶಮಾಡಿದೆ ಎಂಬ ಮಾತು ಹೇಗೆ ಹೇಳಬಹುದು? ಹೀಗಿದ್ದರೂ ಪ್ರವೇಶಿಸಿದಂತೆಯೇ ಅನಿಸುವುದು. ಅಗ್ನಿಯು ಎಲ್ಲ ಕಡೆಗಳಲ್ಲಿ ಸಮಾನವಾಗಿ ಇದ್ದರೂ ಕಟ್ಟಿಗೆಯ ಆಕೃತಿಯ ಭೇದದಿಂದ ಬೇರೆ-ಬೇರೆ ರೂಪದಲ್ಲಿ ಕಂಡುಬರುವಂತೆಯೇ ನೀನು ಸದಾ ಸರ್ವದಾ ಸರ್ವತ್ರ ಏಕರಸವಾಗಿ ಸಮಭಾವದಿಂದ ವ್ಯಾಪಕನಾಗಿರುವೆ. ಆನಂದ ಸ್ವರೂಪನಾಗಿರುವೆ, ಸತ್ಯಸ್ವರೂಪನಾಗಿರುವೆ. ಹೀಗಿದ್ದರೂ ಕೆಲವು ಕಡೆ ಉತ್ತಮರೂಪದಿಂದಲೂ, ಕೆಲವೆಡೆಗಳಲ್ಲಿ ಕನಿಷ್ಠರೂಪದಲ್ಲಿಯೂ ಕಾಣಿಸಿಕೊಳ್ಳುವೆ. ನಿರ್ಮಲ ಬುದ್ಧಿಯುಳ್ಳ ಮಹಾಪುರುಷರು ಕರ್ಮಗಳ ಫಲದ ಕಾಮನೆಯಿಂದ ರಹಿತರಾಗಿ ಪ್ರಾಪಂಚಿಕ ಸತ್ತೆಯನ್ನು ಹಾಗೂ ಆ ಆಕೃತಿಗಳನ್ನು ಮಿಥ್ಯೆಯೆಂದು ತಿಳಿದು ಹೊರಗಿನ ನಾಮ-ರೂಪಗಳನ್ನು ತ್ಯಜಿಸಿ ತತ್ತ್ವರೂಪದಿಂದ ಏಕಮಾತ್ರ ಪರಮಾತ್ಮಸತ್ತೆಯನ್ನೇ ಯಾವಾಗಲೂ ಎಲ್ಲೆಡೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ॥ ೧೯ ॥

ಸ್ವಕೃತಪುರೇಷ್ವಮೀಷ್ವಬಹಿರಂತರಸಂವರಣಂ
ತವ ಪುರುಷಂ ವದಂತ್ಯಖಿಲಶಕ್ತಿಧೃತೋಽಂಶಕೃತಮ್ ।
ಇತಿ ನೃಗತಿಂ ವಿವಿಚ್ಯ ಕವಯೋ ನಿಗಮಾವಪನಂ
ಭವತ ಉಪಾಸತೇಽಂಘ್ರಿಮಭವಂ ಭುವಿ ವಿಶ್ವಸಿತಾಃ
॥ ೨೦ ॥

ಜೀವಿಯ ಎಲ್ಲ ಶರೀರಗಳನ್ನು ನೀನೇ ನಿರ್ಮಾಣ ಮಾಡಿರುವೆ. ಆ ಶರೀರಗಳಲ್ಲಿರುವ ಜೀವನು ಏಕಮಾತ್ರ ನಿನ್ನದೇ ಸನಾತನ ಅಂಶನಾಗಿರುವವನು. (**ಮಮೈವಾಂಶೋ ಜೀವಲೋಕೆ ಜೀವ ಭೂತಃ ಸನಾತನಃ** - ಭಗವದ್ಗೀತೆ) ಜಡತತ್ತ್ವಗಳಿಂದ ನಿನ್ನ ಸ್ವರೂಪವು ಅತೀತವಾಗಿರುವಂತೆಯೇ ನಿನ್ನದೇ ಅಂಶನಾದ ಕಾರಣ ನಿನಗೆ ಪಿತಾ-ಪುತ್ರರಂತೆ ಸಂಬಂಧವಿದೆ. ಇವನ ವಾಸ್ತವಿಕ ಸ್ವರೂಪವೂ ಜಡದಿಂದ ಪೂರ್ಣವಾಗಿ ಅತೀತವಾಗಿದೆ. ನಿನ್ನಿಂದ ರಚಿಸಲ್ಪಟ್ಟ ಶರೀರಗಳಲ್ಲಿ ಜೀವನು (ಅಂತಃಸಂವರಣಮ್ ಅರ್ಥಾತ್ - ಪ್ರಕೃತಿಯ ಕಾರಣದ ಆವರಣ ಮತ್ತು ಬಹಿಃ ಸಂವರಣಮ್ ಅರ್ಥಾತ್ - ಪ್ರಕೃತಿಯ ಕಾರ್ಯರೂಪವಾದ ಶರೀರದ-ಆವರಣ) ಈ ಎರಡೂ ಆವರಣಗಳಿಂದ ರಹಿತನಾಗಿದ್ದಾನೆ. ಅರ್ಥಾತ್-ಜಡ ಪ್ರಕೃತಿಗಿಂತ ಪರನಾಗಿದ್ದಾನೆ. ನಿನ್ನ ವಾಸ್ತವಿಕ ಸ್ವರೂಪವು ಶುದ್ಧ ಚೇತನವು ಆನಂದ ಸ್ವರೂಪವೂ, ಅವಿನಾಶಿಯೂ ಆಗಿರುವಂತೆಯೇ ಜೀವನೂ ಕೂಡ ಚೇತನನೂ, ಶುದ್ಧನೂ, ಸಹಜಸುಖರಾಶಿಯೂ, ಅವಿನಾಶಿಯೂ ಆಗಿರುವನು. ತತ್ತ್ವಜ್ಞಾನಿಗಳು ಇವನನ್ನು ಸಮಸ್ತ ಶಕ್ತಿಗಳನ್ನು ಧರಿಸುವಂತಹ ನಿನ್ನದೇ ಸನಾತನ ಅಂಶವೆಂದು ಭಾವಿಸುತ್ತಾರೆ. ಜೀವಿಯ ಇಂತಹ ಮಹತ್ವವನ್ನು ಅರಿತು ಜ್ಞಾನಿಗಳು ನಿನ್ನ ಚರಣಗಳ ಉಪಾಸನೆಯನ್ನೇ ಮಾಡುತ್ತಾರೆ. ನಿನ್ನ ಚರಣಗಳ ಸೇವೆ-ಪೂಜೆಗಳು ಸಂಸಾರ ಚಕ್ರವನ್ನು ನಾಶಮಾಡುತ್ತವೆ. ಎಲ್ಲ ವಿಧದ ಲೌಕಿಕ-ವೈದಿಕ ಕರ್ಮಗಳ ಸಮರ್ಪಣ ಸ್ಥಾನವೂ ನಿನ್ನ ಈ ಚರಣಕಮಲಗಳೇ ಆಗಿವೆ. ಇಂತಹ ದೃಢನಿಶ್ಚಯದೊಂದಿಗೆ ನಿನ್ನ ಉಪಾಸನೆ ಮಾಡುತ್ತಾ ನಿನ್ನ ಭಕ್ತರು ವೈಕುಂಠಧಾಮಕ್ಕೆ ಹೋಗುತ್ತಾರೆ. ॥ ೨೦ ॥

ದುರವಗಮಾತ್ಮತತ್ತ್ವನಿಗಮಾಯ ತವಾತ್ತತನೋ-
ಶ್ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ ।
ನ ಪರಿಲಷಂತಿ ಕೇಚಿದಪವರ್ಗಮಪೀಶ್ವರ ತೇ
ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ
॥ ೨೧ ॥

ಈಶ್ವರನೇ ! ಪರಮಾತ್ಮತತ್ತ್ವದ ಜ್ಞಾನವನ್ನು ಪಡೆಯುವುದು ಬಹಳ ಕಠಿಣವಾಗಿದೆ. ಹೀಗೆ ವಿಚಾರಮಾಡಿ, ಜೀವಿಗಳ ಮೇಲೆ ಅನುಗ್ರಹವನ್ನು ಮಾಡುವುದಕ್ಕಾಗಿ ಹಾಗೂ ಅವರನ್ನು ಸಂಸಾರ ಚಕ್ರದಿಂದ ಬಿಡುಗಡೆಗೊಳಿಸಲು ನೀನು ನಾನಾ ಪ್ರಕಾರದ ಅವತಾರಗಳನ್ನು ಧರಿಸಿ ಅಮೃತ ಸಾಗರದಂತೆ ಲೀಲೆಗಳನ್ನು ಮಾಡುವೆ. ಆ ಸಾಗರದಲ್ಲಿ ಮುಳುಗಿ-ಮುಳುಗಿ ಜೀವನು ಸಾಂಸಾರಿಕ ಕ್ಲೇಶ-ಬಾಧೆಗಳನ್ನು ಶಾಂತೊಳಿಸುವನು. ಸಂಸಾರ ಭ್ರಮಣೆಯ ಬಳಲಿಕೆಯನ್ನು ಕಳೆದುಕೊಳ್ಳುವನು. ಆದ್ದರಿಂದ ನಿನ್ನ ಭಕ್ತರು ನಿನ್ನ ಚರಣ-ಕಮಲಗಳ ಪ್ರೇಮಿಗಳಾದ ಪರಮಹಂಸರ ಸತ್ಸಂಗದಲ್ಲೇ ಅನಂತ ಆನಂದವನ್ನು ಅನುಭವಿಸುತ್ತಾರೆ. ಅವರು ಮತ್ತೆ ಮನೆ ಮಠ, ಪತ್ನೀ-ಪುತ್ರರನ್ನೂ ನೆನೆಯುವುದೂ ಇಲ್ಲ. ಅವರು ಕಥಾಮೃತದ ಆನಂದವಲ್ಲದೆ ಮೋಕ್ಷವನ್ನು ಬಯಸುವುದಿಲ್ಲ. ಏಕೆಂದರೆ, ನಿನ್ನ ಕಥೆಯು ಒಂದು ಅಮೃತದ ತರಂಗಿತ ಸಾಗರವೇ ಆಗಿದೆ. ಅವರ ಚಿತ್ತವು ಪೂರ್ಣರೂಪದಿಂದ ನಿನ್ನಲ್ಲೇ ನೆಲೆಸಿರುತ್ತದೆ. ಆದ್ದರಿಂದ ನೀನು ಅವತರಿಸುವುದೂ ಕೂಡ ಜೀವಿಗಳ ಮೇಲೆ ನಿನ್ನ ಪರಮಾನುಗ್ರಹವೇ ಆಗಿದೆ. ॥ ೨೧ ॥

ತ್ವದನುಪಥಂ ಕುಲಾಯಮಿದಮಾತ್ಮಸುಹೃತ್ಪ್ರಿಯವ-
ಚ್ಚರತಿ ತಥೋನ್ಮುಖೇ ತ್ವಯಿ ಹಿತೇ ಪ್ರಿಯ ಆತ್ಮನಿ ಚ ।
ನ ಬತ ರಮಂತ್ಯಹೋ ಅಸದುಪಾಸನಯಾऽऽತ್ಮಹನೋ
ಯದನುಶಯಾ ಭ್ರಮಂತ್ಯುರುಭಯೇ ಕುಶರೀರಭೃತಃ
॥ ೨೨ ॥

ಪರಮಾತ್ಮನೇ ! ಈ ಪಾಂಚಭೌತಿಕ ಶರೀರವು ನಿನ್ನನ್ನು ಪಡೆಯುವ ಒಂದು ಸಾಧನವಾಗಿದೆ. ಇದನ್ನು ನಿನ್ನ ಪ್ರಾಪ್ತಿಯ ಮಾರ್ಗಕ್ಕೆ ತೊಡಗಿಸಿದರೆ ಇದೇ ತನ್ನ ಆತ್ಮೀಯ, ಪ್ರಿಯ ಸುಹೃದನಂತೆ ಆಚರಿಸುತ್ತದೆ. ಏಕೆಂದರೆ, ನೀನು ಜೀವಿಯ ಮಿಲನಕ್ಕೆ ಸದಾ ಸಿದ್ಧನಾಗಿರುವೆ. ಅವನ ಮುಂದೆಯೇ ಇರುವೆ. ಹೆಚ್ಚೇನು ಹೇಳಲಿ ನೀನು ಎಲ್ಲರ ಸುಹೃದನೂ, ಪ್ರಿಯನೂ, ಆತ್ಮನೂ ಆಗಿರುವೆ. ಇಂತಹ ಸ್ಥಿತಿಯಲ್ಲಿ ನಿನ್ನ ಕಡೆಯಿಂದ ನಿನ್ನನ್ನು ಪಡೆಯಲು ಸಾಕಷ್ಟು ಸಾಮಗ್ರಿಯನ್ನು ನೀನೇ ಪ್ರಸ್ತುತಪಡಿಸಿರುವೆ. ಹೀಗಿದ್ದರೂ ಜೀವನು ಅಸತ್ ಭೋಗಗಳ ಕಾಮನೆಗಳನ್ನು ಮಾಡುತ್ತಾ ಅವುಗಳಲ್ಲೇ ರಮಿಸಿಹೋಗುತ್ತಾನೆ ಮತ್ತು ಕಾಮನಾ ಪೂರ್ತಿಗಾಗಿ ತೊಡಗುತ್ತಾನೆ. ಇದು ಎಂತಹ ದುಃಖಿದ ಮಾತಾಗಿದೆ. ಈ ಪ್ರಕಾರವಾಗಿ ಅವರು ತಮ್ಮ ಆತ್ಮವನ್ನೇ ಹನನ ಮಾಡುತ್ತಿದ್ದಾರೆ. ಇಂತಹ ಜೀವಿಗಳು ಶರೀರ ಧರಿಸುವುದು ಒಂದು ರೀತಿಯಿಂದ ಜನ್ಮ-ಮೃತ್ಯುವಿನ ಚಕ್ರದಲ್ಲಿ ಅಲೆಯುವುದೇ ಆಗಿದೆ. ಇವರ ಜೀವನವೂ ವ್ಯರ್ಥವೇ ಆಗಿದೆ. ॥ ೨೨ ॥

ನಿಭೃತಮರುನ್ಮನೋऽಕ್ಷದೃಢಯೋಗಯುಜೋ ಹೃದಿಯನ್
ಮುನಯ ಉಪಾಸತೇ ತದರಯೋऽಪಿ ಯಯುಃ ಸ್ಮರಣಾತ್ ।
ಸ್ತ್ರಿಯ ಉರಗೇಂದ್ರಭೋಗಭುಜದಂಡವಿಷಕ್ತಧಿಯೋ
ವಯಮಪಿ ತೇ ಸಮಾಃ ಸಮದೃಶೋऽಂಘ್ರಿಸರೋಜಸುಧಾಃ
॥ ೨೩ ॥

ಪ್ರಭೋ ! ನಿನಗೆ ಎಲ್ಲರ ಕುರಿತು ಸಮಾನ ಭಾವವಿದೆ. ಜೊತೆಗೇ ಸಮಸ್ತ ಜೀವರ ಕುರಿತು ನಿನಗೆ ಅಪಾರ ಕರುಣೆ ಇದೆ. ಇದರ ಪ್ರಮಾಣ - ಪ್ರಾಣಾಯಾಮಾದಿಗಳ ಮೂಲಕ ಮನ ಇಂದ್ರಿಯಗಳನ್ನು ವಶಪಡಿಸಿಕೊಂಡಿರುವ ಯೋಗಿಗಳೂ ನಿನ್ನ ಉಪಾಸನೆಯನ್ನೇ ಮಾಡುತ್ತಾ ನಿನ್ನನ್ನೇ ಹೊಂದುತ್ತಾರೆ. ಅದೇ ಪ್ರಕಾರದಿಂದ ನಿನ್ನನ್ನು ಶತ್ರುಭಾವದಿಂದ ಸ್ಮರಿಸುವವರೂ (ರಾವಣ, ಕಂಸ, ಶಿಶಿಪಾಲರೇ ಮುಂತಾದವರು) ಕೂಡ ನಿನ್ನನ್ನೇ ಪಡೆದು ಕೊಳ್ಳುತ್ತಾರೆ. ಇದಲ್ಲದೆ ಸರ್ಪರಾಜನಂತೆ ನೀಳವಾದ ಭುಜಗಳುಳ್ಳ ನಿನ್ನಲ್ಲೇ ಬುದ್ಧಿಯನ್ನು ನೆಲೆಸಿಬಿಟ್ಟಿರುವ ಗೋಪಿಯರೇ ಆದಿ ಸ್ತ್ರೀಯರು ಹಾಗೂ ಇತರ ಕಾಮಭಾವದಿಂದ ಪ್ರೇಮಿಸುವ ಸ್ತ್ರೀಯರೂ ಕೂಡ ನಿನ್ನನ್ನು ಪ್ರೇಮಭಾವದಿಂದ ಸ್ಮರಿಸಿ ನಿನ್ನನ್ನೇ ಪಡೆದುಕೊಂಡರು. ನಿನ್ನ ಚರಣಕಮಲಗಳನ್ನು ಚೆನ್ನಾಗಿ ಧರಿಸಿ ಕೊಂಡಿರುವ ಶ್ರುತಿಗಳಾದ ನಾವೂ ಕೂಡ ನಿನ್ನನ್ನೇ ಸೇರುತ್ತೇವೆ. ಅರ್ಥಾತ್ ನಿನ್ನ ಸ್ಮರಣೆಯನ್ನು ಯಾವುದೇ ಭಾವದಿಂದ ಮಾಡಿದರೂ ಕೊನೆಗೆ ನಿನ್ನ ಪ್ರಾಪ್ತಿಯೇ ಆಗುತ್ತದೆ. ಹೀಗೆ ನಿನಗೆ ಎಲ್ಲರ ಕುರಿತು ಸಮಾನ ಭಾವವಿದೆ. ॥ ೨೩ ॥

ಕ ಇಹ ನು ವೇದ ಬತಾವರಜನ್ಮಲಯೋऽಗ್ರಸರಂ
ಯತ ಉದಗಾದೃಷಿರ್ಯಮನು ದೇವಗಣಾ ಉಭಯೇ ।
ತರ್ಹಿ ನ ಸನ್ನ ಚಾಸದುಭಯಂ ನ ಚ ಕಾಲಜವಃ
ಕಿಮಪಿ ನ ತತ್ರ ಶಾಸ್ತ್ರ ಮವಕೃಷ್ಯ ಶಯೀತ ಯದಾ
॥ ೨೪ ॥

ಭಗವಂತನೇ ! ನೀನೆ ಎಲ್ಲರ ಆದಿಕಾರಣನಾಗಿರುವೆ. ನಿನ್ನಿಂದಲೆ ಮೊಟ್ಟಮೊದಲಿಗೆ ಬ್ರಹ್ಮದೇವರ ಉತ್ಪತ್ತಿಯಾಯಿತು. ಆನಂತರ ಎರಡೂ ಪ್ರಕಾರದ (ಆಧ್ಯಾತ್ಮಿಕ ಮತ್ತು ಆಧಿದೈವಿಕ) ದೇವತೆಗಳು (ಆಧ್ಯಾತ್ಮಿಕ ಅರ್ಥಾತ್ ಶರೀರದಲ್ಲಿರುವ ಮನ-ಇಂದ್ರಿಯಗಳ ಅಭಿಮಾನಿ ದೇವತೆಗಳು.) ಆಧಿದೈವಿಕ (ಅರ್ಥಾತ್-ಹೊರಗಿನ ಇತರ ಲೋಕಪಾಲರು) ಉತ್ಪನ್ನರಾದರು. ಹೀಗೆ ಎಲ್ಲರೂ ನಿನ್ನಿಂದಲೇ ಉತ್ಪನ್ನರಾದವರು ಎಲ್ಲರಿಗೂ ಮೂಲಕಾರಣನಾದ ನಿನ್ನ ವಾಸ್ತವಿಕ ಸ್ವರೂಪವನ್ನು ನಿನ್ನ ಆನಂತರ ಹುಟ್ಟಿದವರು ಹೀಗೆ ತಾನೆ ತಿಳಿಯಬಲ್ಲರು ? ಹುಟ್ಟಿದವರ ಸಾವು ನಿಶ್ಚಿತವಾಗಿದೆಯಲ್ಲ ! ಅವಿನಾಶಿಯಾದ ನೀನು ಸಮಗ್ರ ಪ್ರಪಂಚವನ್ನು ಆಡಗಿಸಿಕೊಂಡು

ಜನಿಮಸತಃ ಸತೋ ಮೃತಿಮುತಾತ್ಮನಿ ಯೇ ಚ ಭಿದಾಂ
ವಿಪಣಮೃತಂ ಸ್ಮರಂತ್ಯುಪದಿಶಂತಿ ತ ಆರುಪಿತೈಃ ।
ತ್ರಿಗುಣಮಯಃ ಪುಮಾನಿತಿ ಭಿದಾ ಯದಬೋಧಕೃತಾ
ತ್ವಯಿ ನ ತತಃ ಪರತ್ರ ಸ ಭವೇದವಬೋಧರಸೇ
॥ ೨೫ ॥

ಮಲಗಿದ್ದಾಗ ಕಾರಣವಾಗಲೀ, ಕಾರ್ಯವಾಗಲೀ ಇರುವುದಿಲ್ಲ. ಅರ್ಥಾತ್ - ಸೂಕ್ಷ್ಮ ಮತ್ತು ಸ್ಥೂಲ ಎರಡು ಬಗೆಯ ಸೃಷ್ಟಿಯೂ ಇರುವುದಿಲ್ಲ. ಕಾಲದ ಅವಯವಗಳೂ ವೇಗವೂ ಇರುವುದಿಲ್ಲ. ಯಾವುದೇ ಶಾಸ್ತ್ರವೂ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ನೀನು ಹೇಗಿದ್ದಿಯೇ ಎಂಬುದರ ಕುರಿತು ಕಲ್ಪನೆಯನ್ನಾದರೂ ಹೇಗೆ ಮಾಡಬಹುದು ? ॥ ೨೪ ॥

ಈ ಪ್ರಕಾರವಾಗಿ ನಿನ್ನ ವಾಸ್ತವಿಕ ತತ್ತ್ವದ ಜ್ಞಾನ ಪಡೆಯುವುದು ಸುಲಭವಲ್ಲ. ಇದರಿಂದಲೇ ಉಪದೇಶಕರಲ್ಲಿ ಅನೇಕ ಬಗೆಯ ಮತಭೇದಗಳು ಉಂಟಾಗುತ್ತವೆ. ಅವರಲ್ಲಿ ಕೆಲವರು ನಾಸ್ತಿಕ ವಾದವನ್ನು ಒಪ್ಪುವವರು - ಈ ಪ್ರಪಂಚದ ಉತ್ಪತ್ತಿಯು ಜಡ ದಿಂದ ಉಂಟಾಗಿದೆ. ಅರ್ಥಾತ್-ಸ್ತ್ರೀ-ಪುರುಷರ ಸಂಯೋಗ ದಿಂದ ಪ್ರಕೃತಿಯ ಮೂಲಕ ಈ ಜಗತ್ತಿನ ಉತ್ಪತ್ತಿಯಾಯಿತು. ಉತ್ಪನ್ನವಾದುದು ಒಂದು ದಿನ ನಾಶವೂ ಆಗುತ್ತದೆ; ಅದೂ ಪ್ರಕೃತಿಯ ಮೂಲಕವೇ ಎಂದು ಹೇಳುತ್ತಾರೆ. ಕೆಲವರು ದುಃಖದ ನಾಶವಾದ ಬಳಿಕವೇ ಮುಕ್ತಿ ಎಂದೂ ತಿಳಿಯುತ್ತಾರೆ. ಇತರ ಕೆಲವರು ಕರ್ಮ ಮತ್ತು ಅದರ ಫಲವನ್ನು ಸತ್ಯವೆಂದೇ ತಿಳಿಯುತ್ತಾರೆ. ಇನ್ನೂ ಕೆಲವರು ಆತ್ಮನನ್ನು ಅನೇಕ ರೂಪಗಳಲ್ಲಿ ಇದೆ ಎಂದು ಹೇಳುತ್ತಾರೆ. ಇವೆಲ್ಲವನ್ನೂ ಭ್ರಮೆಯಿಂದ ಆರೋ ಪಿಸಿಯೇ ಹೀಗೆ ಹೇಳುತ್ತಾರೆ. ಕೆಲವರು ಜೀವನನ್ನು ತ್ರಿಗುಣ ಮಯವೆಂದು ಹೇಳುತ್ತಾರೆ. ವಾಸ್ತವವಾಗಿ ಇವೆಲ್ಲ ಮಾತುಗಳು ಅಜ್ಞಾನದ ಕಾರಣದಿಂದಲೇ ಇವೆ. ನೀನು ಜ್ಞಾನಸ್ವರೂಪನಾಗಿ ರುವಂತಯೇ ಜೀವನೂ ವಾಸ್ತವವಾಗಿ ಜ್ಞಾನಸ್ವರೂಪನೇ ಆಗಿರುವನು. ಆದರೆ ಅವನು ತನ್ನ ಆತ್ಮಸ್ವರೂಪವನ್ನು ಮರೆತು ಮಾಯೆಯ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವನು. ಇದರಿಂದ ನಾನಾ ಬಗೆಯ ಭ್ರಮೆಗಳು ಉಪಸ್ಥಿತವಾದುವು. ಜ್ಞಾನಸ್ವರೂಪ ನಾದ ನಿನ್ನಲ್ಲಿ ಇವೆಲ್ಲ ಭ್ರಮೆಗಳು ಕಿಂಚಿತ್ತಾದರೂ ಇಲ್ಲ ॥ ೨೫ ॥

ಸದಿವ ಮನಸ್ತ್ರಿವೃತ್ತ್ವಯಿ ವಿಭಾತ್ಯಸದಾಮನುಜಾತ್
ಸದಭಿಮೃಶಂತ್ಯಶೇಷಮಿದಮಾತ್ಮತಯಾऽऽತ್ಮವಿದಃ ।
ನ ಹಿ ವಿಕೃತಿಂ ತ್ಯಜಂತಿ ಕನಕಸ್ಯ ತದಾತ್ಮತಯಾ
ಸ್ವಕೃತಮನುಪ್ರವಿಷ್ಟಮಿದಮಾತ್ಮತಯಾವಸಿತಮ್
॥ ೨೬ ॥

ಈ ತ್ರಿಗುಣಾತ್ಮಕ ಜಗತ್ತು ಮನಸ್ಸಿನ ಕಲ್ಪನೆಯೇ ಆಗಿದೆ. ಪ್ರಕೃತಿಯ ಕಾರ್ಯವಾದ್ದರಿಂದ ಅಸತ್ತಾಗಿಯೇ ಇದೆ. ಆದರೆ ಇದರ ಆಧಾರವಾದ ನೀನೇ ಇದರಲ್ಲಿ ಪರಿಪೂರ್ಣನಾಗಿರುವೆ. ಅದಕ್ಕಾಗಿ ಇದು ಅಸತ್ತಾಗಿದ್ದರೂ ಸತ್ಯದಂತೆ ಕಂಡುಬರುತ್ತದೆ. ಆತ್ಮಜ್ಞಾನಿಗೆ ಬ್ರಹ್ಮದೃಷ್ಟಿ ಇರುವುದರಿಂದ ಅವನಿಗೆ ಈ ಇಡೀ ವಿಶ್ವವು ಬ್ರಹ್ಮಮಯವೇ ಆಗಿದೆ. ಅವನು ಇದರಲ್ಲಿ ನಿನ್ನದೇ ಸ್ವರೂಪವನ್ನು ನೋಡುತ್ತಾನೆ. ಅವನು ಮಾಯೆಯನ್ನು ಸ್ವೀಕರಿಸುವುದಿಲ್ಲ. ಚಿನ್ನದಿಂದ ಮಾಡಿದ ಒಡವೆಗಳಲ್ಲಿ ಸುವರ್ಣತತ್ತ್ವವನ್ನು ತಿಳಿದ ವನು ಒಡವೆಗಳ ಆಕೃತಿಯನ್ನು ಮಿಥ್ಯೆಯೆಂದೇ ತಿಳಿದು, ಚಿನ್ನದ ಬೆಲೆಯನ್ನು ಮಾತ್ರ ಅರಿಯುತ್ತಾನೆ. ಹಾಗೆಯೇ ತತ್ತ್ವಜ್ಞಾನಿ ಯಾದವನು ಮಾಯಾನಿರ್ಮಿತ ಆಕೃತಿಗಳನ್ನು ಮಿಥ್ಯೆಯೆಂದು ತಿಳಿದು, ಅಧಿಷ್ಠಾನ ರೂಪದಲ್ಲಿರುವ ನಿನ್ನನ್ನೇ ನೋಡುತ್ತಾನೆ. ಏಕೆಂದರೆ, ಈ ವಿಶ್ವವನ್ನು ನಿರ್ಮಿಸಿ ನೀನೇ ಇದರಲ್ಲಿ ಪ್ರವಿಷ್ಟ ನಾಗಿರುವೆ. ॥ ೨೬ ॥

ತವ ಪರಿ ಯೇ ಚರಂತ್ಯಖಿಲಸತ್ತ್ವನಿಕೇತತಯಾ
ತ ಉತ ಪದಾಽಽಕ್ರಮಂತ್ಯವಿಗಣಯ್ಯ ಶಿರೋ ನಿರ್ಋತೇಃ ।
ಪರಿವಯಸೇ ಪಶೂನಿವ ಗಿರಾ ವಿಬುಧಾನಪಿ ತಾಂ-
ಸ್ತ್ವಯಿ ಕೃತಸೌಹೃದಾಃ ಖಲು ಪುನಂತಿ ನ ಯೇ ವಿಮುಖಾಃ
॥ ೨೭ ॥

ಈ ಪ್ರಕಾರ ಸಮಸ್ತ ಪ್ರಾಣಿಗಳಲ್ಲಿ ನೀನೇ ಪ್ರಕಾಶಿಸುತ್ತಿರುವೆ ಎಂದು ತಿಳಿದು ನಿನ್ನ ಅನನ್ಯ ಭಕ್ತರಾದವರು ಎಲ್ಲರ ಕುರಿತು ವಿಕಾತ್ಮಭಾವವನ್ನಿರಿಸಿಕೊಂಡು ಸಮಸ್ತ ಪ್ರಾಣಿಗಳ ಸೇವೆಯು ನಿನ್ನದೇ ಸೇವೆ ಎಂದು ಭಾವಿಸುತ್ತಾರೆ. ಅಂತಹ ಮಹಾಪುರುಷರ ಎಲ್ಲ ಕ್ರಿಯಾ-ಕಲಾಪಗಳು ನಿನ್ನೊಡನೆಯೇ ಆಗುತ್ತಾ ಇರುತ್ತವೆ. ಅವರು ಮೃತ್ಯುವಿನಿಂದ ಭಯ ಪಡದೆ ಅದರ ತಲೆಯನ್ನು ಮೆಟ್ಟಿಬಿಡುತ್ತಾರೆ. ಅಂತಹ ಭಕ್ತರ ಮನಸ್ಸು ನಿನ್ನಲ್ಲೇ ನೆಲಸಿದ್ದರಿಂದ ಅವರು ಅತ್ಯಂತ ಪವಿತ್ರರಾಗಿರುತ್ತಾರೆ. ಆದ್ದರಿಂದ ಅವರು ಹುಟ್ಟು-ಸಾವಿನ ಕಟ್ಟಳೆಯಲ್ಲಿ ಸಿಲುಕುವುದಿಲ್ಲ. ಆದರೆ ನಿನ್ನ ಭಕ್ತಿಯಿಂದ ವಿಮುಖರಾದವರು ವಿದ್ವಾಂಸರಾಗಿದ್ದರೂ ಕರ್ಮಫಲವನ್ನು ವರ್ಣಿಸುವ ವೇದವಾಣಿಗಳಲ್ಲೇ ತೊಡಗಿರುತ್ತಾರೆ. ಆ ವಾಣಿಗಳಲ್ಲಿರುವ ಕರ್ಮಫಲದ ಆಸೆಯೇ ಅವರನ್ನು ಕರ್ಮಗಳನ್ನು ಆಚರಿಸಲು ಬಂಧಿಸುತ್ತದೆ. ಪಶುವನ್ನು ಬಂಧಿಸಿ ಅದರಿಂದ ಕೆಲಸ ಮಾಡಿಸಿಕೊಳ್ಳುವಂತೆಯೇ ಅವರು ಆ ವಾಣಿಗಳಲ್ಲಿ ಮೋಸ ಹೋಗಿ ಕರ್ಮಗಳನ್ನು ಮಾಡುತ್ತಲೇ ಇರುತ್ತಾರೆ. ತಮ್ಮ ಪುಣ್ಯ-ಪಾಪಗಳ ಫಲವಾಗಿ ಅವರಿಗೆ ಹುಟ್ಟು-ಸಾವುಗಳ ಚಕ್ರ ಅಂಟಿಕೊಂಡೇ ಇರುತ್ತದೆ. ಆದರೆ ನಿನ್ನ ಭಕ್ತರಾದರೋ ನಿನ್ನನ್ನೇ ಹೊಂದುತ್ತಾರೆ. ಅವರು ಪುನಃ ಜಗತ್ತಿಗೆ ಬರುವುದಿಲ್ಲ. ಆದುದರಿಂದ ನಿನ್ನ ಭಕ್ತಿಯೇ ಜೀವಿಗಳಿಗೆ ಸರ್ವೋತ್ಕೃಷ್ಟ ಸಾಧನವಾಗಿದೆ. ॥ ೨೭ ॥

ತ್ವಮಕರಣಃ ಸ್ವರಾಡಖಿಲಕಾರಕಶಕ್ತಿಧರ-
ಸ್ತವ ಬಲಿಮುದ್ವಹಂತಿ ಸಮದಂತ್ಯಜಯಾನಿಮಿಷಾಃ ।
ವರ್ಷಭುಜೋಽಖಿಲಕ್ಷಿತಿಪತೇರಿವ ವಿಶ್ವಸೃಜೋ
ವಿದಧತಿ ಯತ್ರ ಯೇ ತ್ವಧಿಕೃತಾ ಭವತಶ್ಚಕಿತಾಃ
॥ ೨೮ ॥

ಪ್ರಭುವೇ ! ನೀನು ಮನ, ಬುದ್ಧಿ ಇಂದ್ರಿಯಾದಿಗಳಿಂದ ರಹಿತನಾಗಿದ್ದರೂ ಸಮಸ್ತ ಇಂದ್ರಿಯಗಳ ಶಕ್ತಿಗಳನ್ನು ಧರಿಸಿರುವ ಸ್ವಯಂ ಪ್ರಕಾಶ ಸ್ವರೂಪನಾಗಿರುವೆ. ನೀನೇ ಎಲ್ಲರಿಗೆ ಎಲ್ಲ ವಿಧದ ಶಕ್ತಿಯನ್ನು ಕರುಣಿಸುತ್ತಿರುವೆ. ಅದಕ್ಕಾಗಿ ಸಮಸ್ತ ದೇವತೆಗಳು ತಮ್ಮ-ತಮ್ಮ ಉಪಹಾರವನ್ನು ನಿನಗೆ ಸಮರ್ಪಿಸುತ್ತಾರೆ. ಮತ್ತೆ ನಿನ್ನಿಂದಲೇ ಆ ವಸ್ತುಗಳನ್ನು ಪ್ರಸಾದವಾಗಿ ಪಡೆದುಕೊಂಡು ಇಂದ್ರಿಯಗಳ ದೇವತೆಗಳರೂಪದಲ್ಲಿ ಆಯಾಯ ವಿಷಯಗಳನ್ನು ಅನುಭವಿಸುತ್ತಾರೆ. ಭಗವಂತಾ! ಇದೆಲ್ಲವೂ ನಿನ್ನ ಪೂಜೆಯೇ ಆಗಿದೆ. ದೊಡ್ಡ ಸಾಮ್ರಾಟನ ಅಧೀನದಲ್ಲಿರುವ ಮಾಂಡಲಿಕ ರಾಜರು ಪ್ರಜೆಗಳಿಂದ ಕಂದಾಯವನ್ನು ಪಡೆದು ಸಾಮ್ರಾಟನಿಗೆ ಒಪ್ಪಿಸಿ ಅವನಿಂದ ದೊರೆತುದನ್ನು ಅನುಭವಿಸುತ್ತಾರೆ. ಹಾಗೆಯೇ ಈ ದೇವತೆಗಳೂ ನಿನ್ನಿಂದ ಸಮಸ್ತ ಭೋಗಗಳನ್ನು ಪಡೆದುಕೊಂಡು ಅವನ್ನು ಅನುಭವಿಸುತ್ತಾರೆ ಹಾಗೂ ನಿನ್ನಿಂದ ನಿಯಮಿಸಲ್ಪಟ್ಟ ತಮ್ಮ-ತಮ್ಮ ಕಾರ್ಯಗಳನ್ನು ನಿನಗೆ ಹೆದರಿಕೊಂಡೇ ಎಚ್ಚರಿಕೆಯಿಂದ ಮಾಡುತ್ತಾ ಇರುತ್ತಾರೆ. ॥ ೨೮ ॥

ಸ್ಥಿರಚರಜಾತಯಃ ಸ್ಯುರಜಯೋತ್ಥನಿಮಿತ್ತಯುಜೋ
ವಿಹರ ಉದೀಕ್ಷಯಾ ಯದಿ ಪರಸ್ಯ ವಿಮುಕ್ತ ತತಃ ।
ನ ಹಿ ಪರಮಸ್ಯ ಕಶ್ಚಿದಪರೋ ನ ಪರಶ್ಚ ಭವೇ-
ದ್ವಿಯತ ಇವಾಪದಸ್ಯ ತವ ಶೂನ್ಯತುಲಾಂ ದಧತಃ
॥ ೨೯ ॥

ನಿತ್ಯಮುಕ್ತನಾದ ಪರಮೇಶ್ವರನೇ ! ನಿನಗೆ ಲೀಲೆಯನ್ನು ನಡೆಸಬೇಕೆಂಬ ಇಚ್ಛೆಯುಂಟಾದಾಗ ನಿನ್ನ ಸಂಕಲ್ಪ ಮಾತ್ರದಿಂದ ಸ್ಥಾವರ ಜಂಗಮ ಪ್ರಾಣಿಗಳು ಮತ್ತು ಇತರ ಪದಾರ್ಥಗಳು ಇವೆಲ್ಲದರ ನಾಮ-ರೂಪಾತ್ಮಕವಾದ ಸೃಷ್ಟಿಯಾಗುತ್ತದೆ. ಆ ಸಮಯದಲ್ಲಿ ಹಿಂದಿನ ಸಂಸ್ಕಾರಗಳಿಂದ ಕೂಡಿಕೊಂಡು ಎಲ್ಲ ಪ್ರಾಣಿಗಳು ಉತ್ಪನ್ನವಾಗುತ್ತವೆ. ನೀನಾದರೋ ಆಕಾಶದಂತೆ ಎಲ್ಲದರಲ್ಲಿ ಅಸಂಗನಾಗಿಯೇ ಇರುತ್ತೀಯೆ. ಸರ್ವವ್ಯಾಪಿಯೂ, ಸರ್ವಶ್ರೇಷ್ಠನೂ, ಪರಮನೂ ಆದ ನಿನಗೆ ತನ್ನವರು-ಪರರು ಎಂದು ಯಾರೂ ಇಲ್ಲ. ಹೀಗಿದ್ದರೂ ನಿನ್ನನ್ನು ಭಜಿಸುವವರು ಈ ಜನ್ಮ-ಮೃತ್ಯುರೂಪವಾದ ಸಂಸಾರದಿಂದ ಪಾರಾಗಿ ಪರಮಪದವನ್ನು ಪಡೆದುಕೊಳ್ಳುವರು. ॥೨೯॥

ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವಗತಾ-
ಸ್ತರ್ಹಿ ನ ಶಾಸ್ಯತೇತಿ ನಿಯಮೋ ಧ್ರುವ ನೇತರಥಾ ।
ಅಜನಿ ಚ ಯನ್ಮಯಂ ತದವಿಮುಚ್ಯ ನಿಯಂತೃ ಭವೇತ್
ಸಮಮನುಜಾನತಾಂ ಯದಮತಂ ಮತದುಷ್ಟತಯಾ
॥ ೩೦ ॥

ಸತ್ಯಸ್ವರೂಪನಾದ ಪರಮಾತ್ಮನೇ! ಅಸಂಖ್ಯರಾದ ಪ್ರಾಣಿಗಳನ್ನು ಸತ್ಯರೂ-ಸರ್ವವ್ಯಾಪಿಗಳೂ ಎಂದು ತಿಳಿದುಕೊಂಡರೆ ಇವೆಲ್ಲ ಜೀವರು ನಿನಗೆ ಸಮಾನರೇ ಆಗುವರು. ಮತ್ತೆ ಅಂತಹ ಸ್ಥಿತಿಯಲ್ಲಿ ಅವನ್ನು ನಿಯಂತ್ರಿಸುವುದು ನಿನಗೆ ಅಸಂಭವವಾಗುತ್ತಿತ್ತು. ಏಕೆಂದರೆ, ಶಾಸಿತನಾಗುವವನು ಸರ್ವವ್ಯಾಪಕನಾಗಲಾರನು. ಆದರಿಂದಲೇ ಯಾವ ಕಾರಣದಿಂದ ಇದು ಯುಕ್ತವಾಗಿದೆಯೋ ಮತ್ತು ಯಾವುದರಿಂದ ಉತ್ಪನ್ನವಾಗಿದೆಯೋ ಅವನೇ ಇದರ ಶಾಸಕನಾಗಬಲ್ಲನು. ಈ ವಿಶ್ವವು ನಿನ್ನಿಂದಲೇ ಉತ್ಪನ್ನವಾಗಿದೆ. ಇದರ ಉಪಾದಾನ ಕಾರಣವೂ ಆಗಿರುವೆ. ನೀನೇ ಇದರ ನಿಯಾಮಕನಾಗಿದ್ದೀಯೆ. ಈ ವಿಶ್ವದಲ್ಲಿ ಇದ್ದುಕೊಂಡು ನೀನೇ ಎಲ್ಲರನ್ನು ಸಮಭಾವದಿಂದ ಶಾಸನ ಮಾಡುತ್ತಿರುವೆ. ಈ ವಿಶ್ವವು ನಿನ್ನದೇ ಸ್ವರೂಪವಾಗಿದೆ. ಆದ್ದರಿಂದ ನಿನ್ನನ್ನು ಬಿಟ್ಟು ಬೇರೆ ಯಾರೂ ಇದರ ನಿಯಾಮಕನಾಗಲಾರನು. ಯಾರಾದರೂ ನಾನು ನಿನ್ನನ್ನು ತಿಳಿದಿದ್ದೇನೆ ಎಂದು ಹೇಳಿದರೆ, ಅವನು ಹೇಳುವುದರಲ್ಲಿ ಮತಿಯ ದೋಷವಿರುವುದರಿಂದ ಸರಿಯಾಗಲಾರದು. ಪರಮ ಪಿತಾ ಪರಮೇಶ್ವರನಾದ ನಿನ್ನ ಚರಣಗಳಲ್ಲಿ ಶರಣಾಗುವುದೇ ಅಭಯ ಪದವನ್ನು ಪಡೆಯುವ ಸಾಧನವೆಂಬುದಾಗಿ ನಮ್ಮ ಮತವಾಗಿದೆ. ॥ ೩೦ ॥

ನ ಘಟತ ಉದ್ಭವಃ ಪ್ರಕೃತಿಪೂರುಷಯೋರಜಯೋ-
ರುಭಯಯುಜಾ ಭವಂತ್ಯಸುಭೃತೋ ಜಲಬುದ್ಬುದವತ್ ।
ತ್ವಯಿ ತ ಇಮೇ ತತೋ ವಿವಿಧನಾಮಗುಣೈಃ ಪರಮೇ
ಸರಿತ ಇವಾರ್ಣವೇ ಮಧುನಿ ಲಿಲ್ಯುರಶೇಷರಸಾಃ
॥ ೩೧ ॥

ಸ್ವಾಮಿಯೇ! ಪ್ರಕೃತಿ ಮತ್ತು ಪುರುಷ ಎರಡೂ ಅಜನ್ಮಾ ಅನಾದಿಯಾಗಿದೆ. ಆದರೆ ಇವುಗಳಿಂದ ಈ ವಿಶ್ವದ ಉತ್ಪತ್ತಿಯು ಘಟಿಸುವುದಿಲ್ಲ. (ನೀನಾದರೋ ನಿನ್ನ ಸಂಕಲ್ಪ ಮಾತ್ರದಿಂದಲೇ ಅನಂತ ಕೋಟಿ ಬ್ರಹ್ಮಾಂಡಗಳನ್ನು ನಿರ್ಮಾಣ ಮಾಡುತ್ತೀಯೆ.) ನೀರು ಮತ್ತು ಗಾಳಿಯ ಸಂಯೋಗದಿಂದ ನೀರಗುಳ್ಳೆಗಳು ಉಂಟಾಗುತ್ತವೆ ಹಾಗೂ ವಿಲೀನವಾಗುತ್ತವೆ. ಹಾಗೆಯೇ ಪ್ರಾಣಿಗಳೂ ಕೂಡ ಪ್ರಕೃತಿ ಮತ್ತು ಪುರುಷರ ಸಂಯೋಗದಿಂದ ಉತ್ಪನ್ನರಾಗುತ್ತಾರೆ. ಮತ್ತೆ ನದಿಗಳು ತಮ್ಮ ನಾಮ-ರೂಪಗಳನ್ನು ಕಳೆದುಕೊಂಡು ಸಮುದ್ರದಲ್ಲಿ ಒಂದಾಗುವಂತೆ ಕೊನೆಯಲ್ಲಿ ಅನೇಕ ನಾಮ-ಗುಣಗಳೊಂದಿಗೆ ಸರ್ವಶ್ರೇಷ್ಠನಾದ ನಿನ್ನಲ್ಲೇ ಸೇರಿ ಹೋಗುತ್ತಾರೆ. ಜೇನಿನಲ್ಲಿ ಎಲ್ಲ ಹೂವುಗಳ ರಸವು ಸೇರಿಹೋಗುವಂತೆಯೇ ಎಲ್ಲ ಜೀವರು ನಿನ್ನಲ್ಲೇ ಲೀನವಾಗುತ್ತಾರೆ. ॥ ೩೧ ॥

ನೃಷು ತವ ಮಾಯಯಾ ಭ್ರಮಮಮೀಷ್ವವಗತ್ಯ ಭೃಶಂ
ತ್ವಯಿ ಸುಧಿಯೋಽಭವೇ ದಧತಿ ಭಾವಮನುಪ್ರಭವಮ್ ।
ಕಥಮನುವರ್ತತಾಂ ಭವಭಯಂ ತವ ಯದ್ಭ್ರುಕುಟಿಃ
ಸೃಜತಿ ಮುಹುಸ್ತ್ರಿಣೇಮಿರಭವಚ್ಚರಣೇಷು ಭಯಮ್
॥ ೩೨ ॥

ಪ್ರಭೋ! ನೀನು ಅಜನಾಗಿರುವೆ. ಜ್ಞಾನಿಗಳು ನಿನ್ನ ಚರಣ ಕಮಲಗಳನ್ನು ದೃಢವಾಗಿ ಆಶ್ರಯಿಸಿ ಅಭಯ ಪದವನ್ನು ಪಡೆಯುವರು. ನಿನ್ನ ಮಾಯೆಯ ಹಿಡಿತಕ್ಕೆ ಸಿಕ್ಕಿಬಿದ್ದು ಜೀವನು ಅಲೆಯುತ್ತಾ ಇದ್ದಾನೆ. ನಿನ್ನ ಚರಣಗಳಲ್ಲಿ ಶರಣಾಗದೆ ಇರುವುದರಿಂದ ಅವನಿಗೆ ನಿನ್ನ ಕಾಲಚಕ್ರವು ಪದೇ-ಪದೇ ಭಯವನ್ನುಂಟು ಮಾಡುತ್ತದೆ. ಮಳೆ, ಸೆಕೆ, ಛಳಿ ಎಂಬ ಮೂರು ಭಾಗವುಳ್ಳ ಸಂವತ್ಸರರೂಪವಾದ ಕಾಲಚಕ್ರವು ನಿನ್ನ ಭ್ರೂವಿಲಾಸವಾಗಿದೆ ಎಂಬುದನ್ನು ಚೆನ್ನಾಗಿ ತಿಳಿದು ಜ್ಞಾನಿಗಳು ಪೂರ್ಣರೂಪದಿಂದ ನಿನ್ನಲ್ಲಿಯೇ ಭಕ್ತಿಭಾವವನ್ನಿರಿಸುತ್ತಾರೆ. ನಿನ್ನನ್ನು ಅನುಸರಿಸುವವರಿಗೆ ಸಂಸಾರದ ಭಯವು ಉಂಟಾಗಲಾರದು. ಆದ್ದರಿಂದ ಭಗವಂತನೇ! ನಿನಗೆ ಶರಣು ಬಂದಿರುವ ಈ ಜೀವರನ್ನು ನೀನೇ ಉದ್ಧರಿಸು ॥ ೩೨ ॥

ವಿಜಿತಹೃಷೀಕವಾಯುಭಿರದಾಂತಮನಸ್ತುರಗಂ
ಯ ಇಹ ಯತಂತಿ ಯಂತುಮತಿಲೋಲಮುಪಾಯವಿದಃ।
ವ್ಯಸನಶತಾನ್ವಿತಾಃ ಸಮವಹಾಯ ಗುರೋಶ್ಚರಣಂ
ವಣಿಜ ಇವಾಜ ಸಂತ್ಯಕೃತಕರ್ಣಧರಾ ಜಲಧೌ
॥ ೩೩ ॥

ಜನ್ಮಾದಿಗಳಿಲ್ಲದ ಪ್ರಭುವೇ! ಪ್ರಾಣಾಯಾಮಾದಿ ಸಾಧನೆಗಳ ಮೂಲಕ ಇಂದ್ರಿಯಗಳ ಮೇಲೆ ಹತೋಟಿ ಪಡೆದಿದ್ದರೂ, ಸದ್ಗುರುವಿನ ಚರಣಗಳನ್ನು ಆಶ್ರಯಿಸದ ಕಾರಣ ಅತ್ಯಂತ ಚಂಚಲವಾದ ಅವನ ಮನೋರೂಪೀ ಕುದುರೆಯು ವಶವಾಗುವುದಿಲ್ಲ. ಅದು ಅವರ ಇಂದ್ರಿಯಗಳನ್ನು ಪದೇ-ಪದೇ ಕುಬ್ಜಗೊಳಿಸುತ್ತಾ ಇರುತ್ತದೆ ಮತ್ತು ಅನೇಕ ವಿಪತ್ತುಗಳನ್ನು ಅವರ ಮುಂದೆ ಒಡ್ಡುತ್ತದೆ. ನಾವಿಕನಿಲ್ಲದ ಸಮುದ್ರದ ಹಡಗಿನಲ್ಲಿ ಪ್ರಯಾಣಿಸುವ ವ್ಯಾಪಾರಿಯಂತೆಯೇ ಅವರ ಸ್ಥಿತಿಗತಿಯಾಗುತ್ತದೆ. ಆದ್ದರಿಂದ ಮನೋರೂಪಿ ಕುದುರೆಯನ್ನು ವಶದಲ್ಲಿಟ್ಟುಕೊಳ್ಳಲು, ಪರಮಾನಂದದ ಪ್ರಾಪ್ತಿಗಾಗಿ ಸದ್ಗುರುವಿನ ಚರಣಗಳಲ್ಲಿ ಶರಣಾಗಬೇಕು. ಸದ್ಗುರುವಿನ ರೂಪದಲ್ಲಿ ಸಾಕ್ಷಾತ್ ನೀನೇ ಇರುವೆ. ॥ ೩೩ ॥

ಸ್ವಜನಸುತಾತ್ಮದಾರಧನಧಾಮಧರಾಸುರಥೈ-
ಸ್ತ್ವಯಿ ಸತಿ ಕಿಂ ನೃಣಾಂ ಶ್ರಯತ ಆತ್ಮನಿ ಸರ್ವರಸೇ।
ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ
ಸುಖಯತಿ ಕೋ ನ್ವಿಹ ಸ್ವವಿಹತೇ ಸ್ವನಿರಸ್ತಭಗೇ
॥ ೩೪ ॥

ಭಗವಂತಾ! ನೀನು ಅಖಿಂಡ ಆನಂದಸ್ವರೂಪನೂ, ಶರಣಾಗತ ಭಕ್ತರಿಗೆ ಆತ್ಮಸ್ವರೂಪನೂ ಆಗಿರುವೆ. ನೀನಿರುವಾಗ ಸ್ವಜನರೆಂದು ಹೇಳಿಕೊಳ್ಳುವ ಪತ್ನೀ-ಪುತ್ರರು, ದೇಹ-ಗೇಹ, ಧನ ಸಂಪತ್ತು, ಭೂಮಿ, ರಥ-ವಾಹನಾದಿಗಳಿಂದ ಏನು ಪ್ರಯೋಜನ? ಈ ಸತ್ಯವನ್ನು ಅರಿಯದ ಜನರು ಆನಂದವನ್ನು ಪಡೆಯಲು ಸಂಸಾರದಲ್ಲಿ ರಮಮಾಣರಾಗುತ್ತಾರೆ ಹಾಗೂ ವಿಷಯಗಳ ಕಡೆಗೆ ಓಡುತ್ತಾ ಇರುತ್ತಾರೆ. ಆ ವಿಷಯಗಳಾದರೋ ಸ್ವರೂಪತಃ ವಿನಾಶವುಳ್ಳದ್ದೂ ಸಾರಹೀನವೂ ಆಗಿವೆ. ಅವು ಜೀವನಿಗೆ ಯಾವ ಸುಖವನ್ನು ತಾನೇ ಕೊಡಬಲ್ಲವು? ಆದ್ದರಿಂದ ಜೀವಿಯು ಪರಮಾನಂದ ಸ್ವರೂಪನಾದ ನಿನ್ನನ್ನೇ ಭಜಿಸಬೇಕು. ॥ ೩೪ ॥

ಭುವಿ ಪುರುಪುಣ್ಯತೀರ್ಥಸದನಾನ್ಯೃಷಯೋ ವಿಮದಾ
ಸ್ತ ಉತ ಭವತ್ಪದಾಂಬುಜಹೃದೋಽಘಭಿದಂಘ್ರಿಜಲಾಃ।
ದಧತಿ ಸಕೃನ್ಮನಸ್ತ್ವಯಿ ಯ ಆತ್ಮನಿ ನಿತ್ಯಸುಖೇ
ನ ಪುನರುಪಾಸತೇ ಪುರುಷಸಾರಹರಾವಸಥಾನ್
॥ ೩೫ ॥

ಭಗವಂತನೇ! ನಿನ್ನ ಚರಣಗಳನ್ನು ಹೃದಯದಲ್ಲಿ ಧರಿಸಿರುವಂತಹ ಮಹಾಪುರುಷರು ಮದ-ಮತ್ಸರಾದಿ ದೋಷಗಳಿಂದ ರಹಿತರಾಗಿರುತ್ತಾರೆ. ಇಂತಹವರು ಈ ಭೂಮಂಡಲದಲ್ಲಿ ಅತ್ಯಂತ ಪವಿತ್ರರಾಗಿದ್ದು ಸಾಕ್ಷಾತ್ ತೀರ್ಥಸ್ವರೂಪಿಗಳೇ ಆಗಿದ್ದಾರೆ. ಆ ಮಹಾಪುರುಷರ ಚರಣೋದಕವು ಸಮಸ್ತ ಪಾಪ-ತಾಪಗಳನ್ನು ಎಂದೆಂದಿಗೂ ನಾಶಮಾಡುವಂತಹುದು. ನೀನು ನಿತ್ಯಾನಂದ ಸ್ವರೂಪನೂ, ಎಲ್ಲರ ಆತ್ಮರೂಪನೂ ಆಗಿರುವೆ. ನಿನ್ನ ಲೀಲಾ-ಕಥೆಗಳು ನಿರಂತರವಾಗಿಯೂ ಕೇಳಲು ಸಿಗುವಂತಹ ಆ ಮಹಾಪುರುಷರ ಸತ್ಸಂಗದಲ್ಲಿ ಒಮ್ಮೆಯಾದರೂ ತನ್ನ ಮನಸ್ಸನ್ನು ತೊಡಗಿಸಿದರೆ ಮತ್ತೆ ಮನುಷ್ಯರ ಗುಣಗಳನ್ನು ಹರಣಮಾಡುವ ಸಂಸಾರದ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ॥ ೩೫ ॥

ಈ ಜಗತ್ತು ಸತ್‌ವಸ್ತುವಿನಿಂದ ಉತ್ಪನ್ನವಾಗಿದೆ. ಆದ್ದರಿಂದ ಇದನ್ನೂ ಸತ್ಯವೆಂದೇ ತಿಳಿದುಕೊಂಡರೆ ಆಪತ್ತೇನಿದೆ? ಎಂದು ಪ್ರಶ್ನಿಸಿದರೆ, ಇದರ ಉತ್ತರ - ಈ ಮಾತು ತರ್ಕದಿಂದ ಸಿದ್ಧವಾಗುವುದಿಲ್ಲ. ಏಕೆಂದರೆ, ಇದರಲ್ಲಿ ಅನೇಕತೆಯ ಜೊತೆಗೆ ಅಸತ್ಯವೂ ಕಂಡುಬರುತ್ತದೆ. ಆದ್ದರಿಂದ ಇದನ್ನು ಸತ್ಯವೆಂದು ತಿಳಿಯಲಾಗುವುದಿಲ್ಲ. ವಾಸ್ತವವಾಗಿ ಇದು ವಿದ್ಯೆ ಮತ್ತು ಅವಿದ್ಯೆ ಅರ್ಥಾತ್-ಚೇತನ ಮತ್ತು ಜಡ ಎರಡರಿಂದಲೂ ಸೇರಿಕೊಂಡೇ ಇದೆ. ಪ್ರಭೋ! ಇದರ ಅಧಿಷ್ಠಾನದಲ್ಲಿ ಸತ್ತ್ವರೂಪ ಪರಮಾತ್ಮನಾದ ನೀನೇ ಇರುವೆ. ಜೊತೆಗೆ ಮಾಯೆಯ ಕಾರ್ಯರೂಪೀ ಪ್ರಪಂಚವೂ ಇದೆ. ಅದು ವಿಕಲ್ಪದಿಂದ ಇದೆ, ಆದರೂ

ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ
ವ್ಯಭಿಚರತಿ ಕ್ವ ಚ ಕ್ವ ಚ ಮೃಷಾ ನ ತಥೋಭಯಯುಕ್ ।
ವ್ಯವಹೃತಯೇ ವಿಕಲ್ಪ ಇಷಿತೋಽಂಧಪರಂಪರಯಾ
ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್
॥ ೩೬ ॥

ವ್ಯವಹಾರಕ್ಕಾಗಿ ಒಪ್ಪಿಕೊಂಡದ್ದಾಗಿದೆ; ಎನ್ನುವ ಮಾನ್ಯತೆಯೂ ಅಂಧಪರಂಪರೆಯಿಂದ ನಡೆದುಬಂದಿದೆ. ನಿನ್ನ ವಾಣಿಯಾದ ವೇದದ ವಾಸ್ತವಿಕ ತಾತ್ಪರ್ಯ ಜಗತ್ತಿನ ಸತ್ಯತೆಯಲ್ಲಿಲ್ಲ. ಹೀಗಿದ್ದರೂ ಕರ್ಮಕಾಂಡದಲ್ಲಿ ಸಿಕ್ಕಿಹಾಕಿಕೊಂಡ ಜನರು ದೊಡ್ಡ-ದೊಡ್ಡ ಕರ್ಮಫಲಗಳ ಪ್ರಲೋಭನೆಯಿಂದ ಸ್ವರ್ಗಾದಿಭೋಗಗಳನ್ನೇ ಹಾಗೂ ಭೌತಿಕ ಸುಖವನ್ನೇ ಸುಖವೆಂದು ತಿಳಿಯುತ್ತಾರೆ. ಅವರ ಈ ಮಾನ್ಯತೆಯು ಭ್ರಮೆಯಿಂದ ಹಗ್ಗವನ್ನು ಸರ್ಪವೆಂದು ತಿಳಿಯುವಂತೆಯೇ ಆಗಿದೆ. ಆ ಭ್ರಾಂತಿಯಿಂದ ಹಗ್ಗವೂ ಹಾವಾಗಿ ಕಂಡುಬರುತ್ತದೆ. ಹಾಗೆಯೇ ಈ ಜಗತ್ತಿನ ರೂಪದಲ್ಲಿ ಸಗುಣ ನಿರಾಕಾರ ರೂಪದಿಂದ ಪರಮಾತ್ಮನ ಸತ್ತೆಯೇ ಇದೆ. ಆದರೆ ಮಾಯೆಯ ಪರದೆಯ ಕಾರಣ ಪ್ರಪಂಚವೇ ಸತ್ಯವಾಗಿ ತೋರುವುದು, ಪರಮಾತ್ಮನು ಕಾಣುವುದಿಲ್ಲ. ॥ ೩೬ ॥

ನ ಯದಿದಮಗ್ರ ಆಸ ನ ಭವಿಷ್ಯದತೋ ನಿಧನಾ-
ದನುಮಿತಮಂತರಾ ತ್ವಯಿ ವಿಭಾತಿ ಮೃಷೈಕರಸೇ ।
ಅತ ಉಪಮೀಯತೇ ದ್ರವಿಣಜಾತಿವಿಕಲ್ಪಪಥೈ-
ರ್ವಿತಥಮನೋವಿಲಾಸಮೃತಮಿತ್ಯವಯಂತ್ಯಬುಧಾಃ
॥ ೩೭ ॥

ಇದರ ಇನ್ನೊಂದು ಮುಖ್ಯ ಪ್ರಮಾಣ - ಈ ಜಗತ್ತು ಉತ್ಪತ್ತಿಗೆ ಮೊದಲು ಇರಲಿಲ್ಲ, ಪ್ರಳಯದ ನಂತರವೂ ಇರಲಾರದು. ಆದುದರಿಂದ ನಡುವೆಯೂ ಮಿಥ್ಯೆಯೇ ಆಗಿದೆ ಎಂಬುದು ಸಿದ್ಧವಾಗುತ್ತದೆ. ಕೆಲವು ಸಮಯದವರೆಗೆ ಇದು ನಿನ್ನಲ್ಲಿ ಕಂಡುಬರುತ್ತದೆ. ದ್ರವ್ಯ, ಜಾತಿ, ಆಕಾರ ಮುಂತಾದವುಗಳ ಮೂಲಕ ಇವೆಲ್ಲದರ ವ್ಯವಹಾರಕ್ಕಾಗಿ ಅವೆಲ್ಲವುಗಳಿಗೆ ನಾಮ-ರೂಪಗಳನ್ನು ಇರಿಸಲಾಗುತ್ತದೆ. ವಾಸ್ತವವಾಗಿ ಇದೂ ಕೂಡ ವಾಣಿಯ ವಿಲಾಸವೇ ಆಗಿದೆ. ಅವುಗಳ ಹೆಸರನ್ನೆತ್ತಿ ವ್ಯವಹಾರದಲ್ಲಿ ಬಳಸುವುದೂ ಒಂದು ರೀತಿಯಿಂದ ನಮ್ಮ ಕಲ್ಪನೆಯೇ ಆಗಿದೆ. ಜ್ಞಾನಿಗಳು ಅವೆಲ್ಲವನ್ನು ಮತ್ತು ಅವುಗಳ ವ್ಯವಹಾರವನ್ನು ಮಿಥ್ಯೆಯೆಂದೇ ತಿಳಿಯುತ್ತಾರೆ. ಅವರ ದೃಷ್ಟಿಯಲ್ಲಿ ಎಲ್ಲದರಲ್ಲಿಯೂ ಏಕರಸನಾದ ನೀನೇ ಇರುವೆ. ಅವರು ನಿನ್ನ ಸಾಕ್ಷಾತ್ಕಾರವನ್ನೇ ಪಡೆಯುತ್ತಾರೆ. ಆದರೆ ಅಜ್ಞಾನಿಗಳಿಗೆ ನೀನು ಕಾಣುವುದಿಲ್ಲ; ಪ್ರಾಪಂಚಿಕ ವಸ್ತುಗಳನ್ನೇ ನೋಡುತ್ತಾರೆ ಹಾಗೂ ಅವನ್ನೇ ಸತ್ಯವೆಂದು ತಿಳಿಯುತ್ತಾರೆ. ॥ ೩೭ ॥

ಸ ಯದಜಯಾ ತ್ವಜಾಮನುಶಯೀತ ಗುಣಾಂಶ್ಚ ಜುಷನ್
ಭಜತಿ ಸರೂಪತಾಂ ತದನು ಮೃತ್ಯುಮಪೇತಭಗಃ ।
ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗೋ
ಮಹಸಿ ಮಹೀಯಸೇಽಷ್ಟಗುಣಿತೇಽಪರಿಮೇಯಭಗಃ
॥ ೩೮ ॥

ಹೀಗೆ ಈ ಜೀವನು ಮಾಯೆಯ ಕಾರಣ ಮಾಯೆಯನ್ನು ಸ್ವೀಕರಿಸಿ ಮತ್ತೆ ಗುಣಗಳನ್ನು ಸ್ವೀಕರಿಸಿ ತಾನು ಮಾಯಾಮಯನೇ ಆಗಿ ಹೋಗುತ್ತಾನೆ. ತನ್ನ ಸ್ವರೂಪವಾದ ಸಚ್ಚಿದಾನಂದ ಸ್ವರೂಪವನ್ನು ಪೂರ್ಣವಾಗಿ ಮರೆತುಬಿಡುತ್ತಾನೆ. ಹೀಗೆ ತನ್ನ ಐಶ್ವರ್ಯವನ್ನು ನಾಶಪಡಿಸಿಕೊಂಡು ಮೃತ್ಯುಮುಖನಾಗುತ್ತಾನೆ ಹಾಗೂ ಜನ್ಮ-ಮರಣ ಚಕ್ರದಲ್ಲಿ ಅಲೆಯುತ್ತಾ ಇರುತ್ತಾನೆ. ಆದರೆ ನೀನು ನಿನ್ನ ಐಶ್ವರ್ಯವನ್ನು ನಿನ್ನ ಬಳಿಯೇ ಇಟ್ಟುಕೊಂಡು ಹಾವು ಪೊರೆಯನ್ನು ಕಳಚುವಂತೆ ಮಾಯೆಯನ್ನು ಬಿಟ್ಟುಬಿಡುವೆ. ನೀನು ನಿನ್ನದೇ ಆದ ಅಪರಿಮಿತ ಅಣಿಮಾದಿ ಅಷ್ಟಸಿದ್ಧಿಗಳಿಂದ ಕೂಡಿಕೊಂಡು ನಿನ್ನ ಐಶ್ವರ್ಯದಲ್ಲೇ ಸ್ಥಿತನಾಗಿರುವೆ. ಜೀವನು ನಿನ್ನ ಅಂಶನಾದ್ದರಿಂದ ಸಚ್ಚಿದಾನಂದ ಸ್ವರೂಪನೇ ಆಗಿದ್ದಾನೆ. ಆದರೆ ಅಲ್ಪವಾದ ಜೀವನು ತನ್ನ ಐಶ್ವರ್ಯವನ್ನು ಕಳೆದುಕೊಳ್ಳುವನು. ಮಹಾನ್ ಆದ ನೀನು ನಿನ್ನ ಮಹಿಮೆಯಲ್ಲೇ ಸ್ಥಿತನಾಗಿರುವೆ. ॥ ೩೮ ॥

ಯದಿ ನ ಸಮುದ್ಧರಂತಿ ಯತಯೋ ಹೃದಿ ಕಾಮಜಟಾ
ದುರಧಿಗಮೋಽಸತಾಂ ಹೃದಿ ಗತೋಽಸ್ಮೃತಕಂಠಮಣಿಃ ।
ಅಸುತೃಪಯೋಗಿನಾಮುಭಯತೋಽಶುಭಿಂ ಭಗವನ್
ನನಪಗತಾಂತಕಾದನಧಿರೂಢಪದಾದ್ಭವತಃ
॥ ೩೯ ॥

ಪ್ರಭುವೇ ! ಹೃದಯದಲ್ಲಿರುವ ಕಾಮವಾಸನೆಯ ಜಾಲವನ್ನು ಸಂಯಮದ ಮೂಲಕ ಸಮೂಲವಾಗಿ ಕಿತ್ತೊಗೆಯದಿದ್ದರೆ ವಿಷಯಗಳಲ್ಲಿ ಮುಳುಗಿದ ಸಾಧಕರ ಹೃದಯದಲ್ಲಿ ನೀನಿದ್ದರೂ ಕೊರಳ ಕಂಠೀಹಾರವನ್ನು ಮರೆತಂತೆ ನಿನ್ನ ದರ್ಶನ ಪಡೆಯುವುದು ಅವರಿಗೆ ಕಷ್ಟವೇ ಇದೆ. ಈ ಕಾರಣದಿಂದಲೇ ವಿಷಯೀ ಮನುಷ್ಯರು ನಿನ್ನಿಂದ ವಿಮುಖರಾಗಿದ್ದು ಇಂದ್ರಿಯಗಳನ್ನು ಮತ್ತು ಪ್ರಾಣಗಳನ್ನು ತೃಪ್ತಿಪಡಿಸುವುದರಲ್ಲೇ ತೊಡಗಿರುತ್ತಾರೆ. ಅವರು ಮೃತ್ಯುವಿನಿಂದ ಬಿಡುಗಡೆ ಹೊಂದುವುದೇ ಇಲ್ಲ. ನಿನ್ನ ಸ್ವರೂಪವನ್ನು ತಿಳಿಯದ ಕಾರಣ ಮರಣಾನಂತರ ನರಕವನ್ನೂ ಅನುಭವಿಸಬೇಕಾಗುತ್ತದೆ. ಹೀಗೆ ಇಹಲೋಕ ಮತ್ತು ಪರಲೋಕ ಎರಡರಿಂದಲೂ ಅವನಿಗೆ ದುಃಖವೇ ದುಃಖವಿದೆ. ॥ ೩೯ ॥

ತ್ವದವಗಮೀ ನ ವೇತ್ತಿ ಭವದುತ್ಥಶುಭಾಶುಭಯೋ-
ರ್ಗುಣವಿಗುಣಾನ್ವಯಾಂಸ್ತರ್ಹಿ ದೇಹಭೃತಾಂ ಚ ಗಿರಃ ।
ಅನುಯುಗಮನ್ವಹಂ ಸಗುಣ ಗೀತಪರಂಪರಯಾ
ಶ್ರವಣಭೃತೋ ಯತಸ್ತ್ವಮಪವರ್ಗಗತಿರ್ಮನುಜೈಃ
॥ ೪೦ ॥

ಸಗುಣನಾದ ಪರಮಾತ್ಮನೇ! ನಿನ್ನನ್ನು ತಿಳಿದ ಭಕ್ತನು ಪುಣ್ಯ ಪಾಪಗಳ ಫಲಗಳನ್ನು ಇಲ್ಲೇ ತ್ಯಜಿಸಿ ಬಿಡುತ್ತಾನೆ. ಇವೆರಡೂ ಅವನಿಗೆ ಸಂಬಂಧಿಸಿದ್ದಲ್ಲ. ಅವನು ಇತರ ದೇಹಧಾರಿಗಳಿಗೆ ಇರುವ ವಿಧಿ-ನಿಷೇಧಗಳೆಂಬ ವೇದವಾಣಿಯನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಅವನು ತನ್ನ ವಾಸ್ತವಿಕ ಸ್ವರೂಪವನ್ನು ಅರ್ಥಾತ್ ನಿನ್ನನ್ನು ಪಡೆದುಕೊಂಡುಬಿಟ್ಟಿರುವನು. ನಿನ್ನನ್ನು ಪಡೆಯುವುದೇ ಶಾಸ್ತ್ರಗಳ ಚರಮ ಸಿದ್ಧಾಂತವಾಗಿದೆ. ಭಕ್ತರು ಪ್ರತಿಯುಗದಲ್ಲಿಯೂ ಗೀತ ಪರಂಪರೆಯಿಂದ ನಿನ್ನ ಗುಣಗಳನ್ನು ಹಾಡುತ್ತಾ ಬಂದಿದ್ದಾರೆ. ಅವನ್ನು ಅವನು ಶ್ರವಣಿಸುತ್ತಾನೆ. ಶ್ರವಣ ಮಾಡುತ್ತಾ-ಮಾಡುತ್ತಾ ಅವನ ವೃತ್ತಿಯು ತದಾಕಾರವಾಗಿ ಹೋಗುತ್ತದೆ. ಅವನಿಗೆ ನೀನು ಮೋಕ್ಷ ಸ್ವರೂಪ ಸದ್ಗತಿಯನ್ನು ಕರುಣಿಸುತ್ತೀಯೆ. ॥ ೪೦ ॥

ದ್ಯುಪತಯ ಏವ ತೇ ನ ಯಯುರಂತಮನಂತತಯಾ
ತ್ವಮಪಿ ಯದಂತರಾಂಡನಿಚಯಾ ನನು ಸಾವರಣಾಃ ।
ಖ ಇವ ರಜಾಂಸಿ ವಾಂತಿ ವಯಸಾ ಸಹ ಯಚ್ಛ್ರುತಯ-
ಸ್ತ್ವಯಿ ಹಿ ಫಲಂತ್ಯತನ್ನಿರಸನೇನ ಭವನ್ನಿಧನಾಃ
॥ ೪೧ ॥

ಭಗವಂತನೇ ! ನಿನ್ನೊಳಗೆ ಏಳೇಳು ಆವರಣಗಳ ಸಹಿತ ಅನೇಕ ಬ್ರಹ್ಮಾಂಡಗಳ ಸಮುದಾಯವೇ ಇದೆ. ಅನಂತಕೋಟಿ ಬ್ರಹ್ಮಾಂಡ ನಾಯಕನಾದ ನಿನ್ನಲ್ಲಿ ಅವು ಆಕಾಶದಲ್ಲಿ ಹಾರಾಡುತ್ತಿರುವ ಧೂಳಿನ ಕಣಗಳಂತೆ ಸುತ್ತುತ್ತಾ ಇವೆ. ನೀನು ಅನಂತನೂ, ಅಸೀಮನೂ ಆಗಿರುವೆ. ನಿನ್ನ ಆದಿ-ಅಂತ್ಯವನ್ನು ನಿನ್ನಿಂದಲೇ ವರ್ಣಿಸಲಾಗದಿದ್ದಾಗ ಸಾಧಾರಣ ಬೇರೆ ಪ್ರಾಣ ಅದನ್ನು ಹೇಗೆ ತಿಳಿಯಬಲ್ಲನು? ಇದೆಂತಹ ಆಶ್ಚರ್ಯವಾಗಿದೆ. ಅವೆಲ್ಲ ಬ್ರಹ್ಮಾಂಡಗಳು ಕಾಲನ ವೇಗದಿಂದ ಸುತ್ತುತ್ತಾ ಇರುತ್ತವೆ. ಶ್ರುತಿಗಳಾದ ನಾವೂ ಕೂಡ 'ನೇತಿ-ನೇತಿ' ಎಂಬ ವಾಕ್ಯಗಳ ಮೂಲಕ ಇತರ ಎಲ್ಲವನ್ನು ನಿರಾಕರಣ ಮಾಡಿ ಕೊನೆಗೆ ಶೇಷವಾಗಿ ಉಳಿಯುವ ನಿನ್ನಲ್ಲೇ ಸಫಲರಾಗುತ್ತೇವೆ. ॥ ೪೧ ॥

ಶ್ರೀಭಗವಾನುವಾಚ

ಇತ್ಯೇತದ್ ಬ್ರಹ್ಮಣಃ ಪುತ್ರಾ ಆಶ್ರುತ್ಯಾತ್ಮಾನುಶಾಸನಮ್ ।
ಸನಂದನಮಥಾನರ್ಚುಃ ಸಿದ್ಧಾ ಜ್ಞಾತ್ವಾಽಽತ್ಮನೋ ಗತಿಮ್
॥ ೪೨ ॥

ಭಗವಾನ್ ನಾರಾಯಣನು ಹೇಳಿದನು – ದೇವರ್ಷಿಗಳೇ ! ಈ ಪ್ರಕಾರ ಸನಕಾದಿ ಋಷಿಗಳು ಜೀವ (ಆತ್ಮ) ಮತ್ತು ಬ್ರಹ್ಮನ ಏಕತೆಯನ್ನು ಹೇಳುವ ಉಪದೇಶವನ್ನು ಕೇಳಿ ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡರು. ನಿತ್ಯಸಿದ್ಧರಾಗಿದ್ದರೂ ಅವರ ಉಪದೇಶವನ್ನು ಶ್ರವಣಿಸಿ ಅವರು ಕೃತಕೃತ್ಯರಾಗಿ ಸನಂದನರನ್ನು ಪೂಜಿಸಿದರು. ॥ ೪೨ ॥

ಇತ್ಯಶೇಷಸಮಾಮ್ನಾಯಪುರಾಣೋಪನಿಷದ್ರಸಃ ।
ಸಮುದ್ಧೃತಃ ಪೂರ್ವಜಾತೈರ್ವ್ಯೋಮಯಾನೈರ್ಮಹಾತ್ಮಭಿಃ
॥ ೪೩ ॥

ನಾರದನೇ ! ಸನಕಾದಿ ಋಷಿಗಳು ಸೃಷ್ಟಿಯ ಮೊದಲಿಗೆ ಉತ್ಪನ್ನರಾಗಿದ್ದರು. ಆದ್ದರಿಂದ ಅವರು ಎಲ್ಲರ ಪೂರ್ವಜರಾಗಿದ್ದಾರೆ. ಆಕಾಶಗಾಮಿಗಳಾದ ಆ ಮಹಾತ್ಮರು ಈ ಪ್ರಕಾರ ಸಮಸ್ತ ವೇದ, ಪುರಾಣ ಮತ್ತು ಉಪನಿಷತ್ತುಗಳು ಸಾರವನ್ನು ತೆಗೆದು ಹೇಳಿದುದು ಸಮಸ್ತ ಶಾಸ್ತ್ರಗಳ ಸಾರವಾಗಿದೆ. ॥ ೪೩. ॥

ತ್ವಂ ಚೈತದ್ಬ್ರಹ್ಮದಾಯಾದ ಶ್ರದ್ಧಯಾऽऽತ್ಮಾನುಶಾಸನಮ್ ।
ಧಾರಯಂಶ್ಚರ ಗಾಂ ಕಾಮಂ ಕಾಮಾನಾಂ ಭರ್ಜನಂ ನೃಣಾಮ್
॥ ೪೪ ॥

ದೇವರ್ಷಿಯೇ ! ನೀನೂ ಕೂಡ ಅವರಂತೆಯೇ ಬ್ರಹ್ಮಮಾನಸ ಪುತ್ರನಾಗಿರುವೆ. ಆವರ ಜ್ಞಾನಸಂಪತ್ತಿಗೆ ಅಧಿಕಾರಿಯಾಗಿರುವೆ. ಆದ್ದರಿಂದ ನೀನೂ ಈ ಬ್ರಹ್ಮವಿದ್ಯೆಯನ್ನು ಧರಿಸಿಕೊಂಡು ಸ್ವಚ್ಛಂದ ಭಾವದಿಂದ ಭೂಮಂಡಲದಲ್ಲಿ ಸಂಚರಿಸು. ಈ ವಿದ್ಯೆಯು ಸಮಸ್ತ ವಾಸನೆಗಳನ್ನು ಭಸ್ಮಮಾಡುವಂತಹುದು. ॥ ೪೪ ॥

ಶ್ರೀಶುಕ ಉವಾಚ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ ! ದೇವಋಷಿನಾರದರು ದೊಡ್ಡ ಸಂಯಮಿಯೂ, ಜ್ಞಾನಿಗಳೂ, ಪೂರ್ಣಕಾಮರೂ, ನೈಷ್ಠಿಕ ಬ್ರಹ್ಮಚಾರಿಗಳೂ ಆಗಿದ್ದಾರೆ. ಭಗವಾನ್ ನಾರಾಯಣನಿಂದ ಕೊಡಲ್ಪಟ್ಟ ಉಪದೇಶವನ್ನು ಅವರು ಬಹಳ ಶ್ರದ್ಧೆಯಿಂದ ಶ್ರವಣಿಸಿ ಇಂತೆಂದರು – ॥ ೪೫ ॥

ಏವಂ ಸ ಋಷಿಣಾऽऽದಿಷ್ಟಂ ಗೃಹೀತ್ವಾ ಶ್ರದ್ಧಯಾऽऽತ್ಮವಾನ್ ।
ಪೂರ್ಣಃ ಶ್ರುತಧರೋ ರಾಜನ್ನಾಹ ವೀರವ್ರತೋ ಮುನಿಃ
॥ ೪೫ ॥

ನಾರದ ಉವಾಚ

ದೇವರ್ಷಿನಾರದರು ಹೇಳಿದರು – ಭಗವಂತನೇ ! ನೀನು ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ ಆಗಿರುವೆ. ನಿನ್ನ ಕೀರ್ತಿಯು ಪರಮ ಪವಿತ್ರವಾಗಿದೆ. ನೀನು ಸಮಸ್ತ ಪ್ರಾಣಿಗಳ ಪರಮ ಕಲ್ಯಾಣಕ್ಕಾಗಿ ಅವರ ಮೇಲೆ ಅನುಗ್ರಹವನ್ನು ತೋರಲು ಮನೋಹರವಾದ ಅವತಾರವನ್ನು ತಾಳುವ ಲೀಲೆಯನ್ನು ಮಾಡುತ್ತಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೪೬ ॥

ನಮಸ್ತಸ್ಮೈ ಭಗವತೇ ಕೃಷ್ಣಾಯಾಮಲಕೀರ್ತಯೇ ।
ಯೋ ಧತ್ತೇ ಸರ್ವಭೂತಾನಾಮಭವಾಯೋಪಪತೀಃ ಕಲಾಃ
॥ ೪೬ ॥

ಪ್ರಿಯಪರೀಕ್ಷಿತನೇ ! ಹೀಗೆ ಆದಿಋಷಿ ಭಗವಾನ್ ನಾರಾಯಣನಿಗೆ ಮತ್ತು ಅವನ ಶಿಷ್ಯರಿಗೆ ನಮಸ್ಕಾರ ಮಾಡಿ ದೇವರ್ಷಿನಾರದರು ನನ್ನ ತಂದೆಯವರಾದ ಶ್ರೀಕೃಷ್ಣದ್ವೈಪಾಯನರ ಆಶ್ರಮಕ್ಕೆ ಹೋದರು. ॥ ೪೭ ॥ ಅಲ್ಲಿ ನನ್ನ ತಂದೆಯವರಾದ ಶ್ರೀವೇದವ್ಯಾಸರು ಅವರನ್ನು ಯಥೋಚಿತವಾಗಿ ಸತ್ಕರಿಸಿದರು. ಅವರು ಸುಖಾಸೀನರಾಗಿ ಕುಳಿತು ಭಗವಾನ್ ನಾರಾಯಣನ ಶ್ರೀಮುಖದಿಂದ ಕೇಳಿದ ಬ್ರಹ್ಮವಿಷಯಕ ಚರ್ಚೆಯನ್ನು ಆದ್ಯಂತವಾಗಿ ತಿಳಿಸಿದರು. ॥ ೪೮ ॥ ರಾಜೇಂದ್ರನೇ ! "ಶ್ರುತಿಗಳು ಬ್ರಹ್ಮ ವಸ್ತುವನ್ನು ಹೇಗೆ ಪ್ರತಿಪಾದಿಸಬಲ್ಲವು ? ಏಕೆಂದರೆ, ನಿರ್ಗುಣ ತತ್ತ್ವವಾದರೋ ಮನಸ್ಸು ಮಾತಿಗಿಂತ ಅತೀತವಾಗಿದೆ ಮತ್ತು ಪ್ರಕೃತಿ ಗುಣಗಳಿಂದ ರಹಿತವಾಗಿದೆ" ಎಂದು ನೀನು ಕೇಳಿದ ಪ್ರಶ್ನೆಗೆ ನಾನು ಉತ್ತರ ಕೊಟ್ಟಂತಾತಯಿತಲ್ಲ ! ॥ ೪೯ ॥ ಪ್ರಿಯಪರೀಕ್ಷಿತನೇ ! ಭಗವಂತನು ತನ್ನ ಸಂಕಲ್ಪದಿಂದಲೇ ಈ ವಿಶ್ವವನ್ನು ನಿರ್ಮಿಸಿರುತ್ತಾನೆ. ಅವನೇ ಎಲ್ಲರ ಪ್ರೇರಕನೂ ಆಗಿದ್ದಾನೆ. ಆದಿ, ಮಧ್ಯ, ಅಂತ್ಯದಲ್ಲಿ ಅವನೇ ಇರುತ್ತಾನೆ. ಅವನೇ ಅವ್ಯಕ್ತ ಪ್ರಕೃತಿ ಮತ್ತು ಜೀವ ಎರಡರ ಈಶ್ವರನಾಗಿದ್ದಾನೆ. ಅವನೇ ಈ ವಿಶ್ವವನ್ನು ಸೃಷ್ಟಿಸಿ ಜೀವರೂಪದಿಂದ ಇದರಲ್ಲಿ ಪ್ರವೇಶಿಸಿದನು. ಜೀವನು ಸಾಕ್ಷಾತ್ ಪರಮಾತ್ಮನ ಅಂಶನಾದ್ದರಿಂದ ಇವನು ಋಷಿಸ್ವರೂಪನಾಗಿದ್ದಾನೆ. ಇವನಿಗೆ ನಿಲ್ಲಲೆಂದೇ ಪರಮಾತ್ಮನು

ಇತ್ಯಾದ್ಯಮೃಷಿಮಾನಮ್ಯ ತಚ್ಚಿಷ್ಯಾಂಶ್ಚ ಮಹಾತ್ಮನಃ ।
ತತೋऽಗಾದಾಶ್ರಮಂ ಸಾಕ್ಷಾತ್ ಪಿತುರ್ದ್ವೈಪಾಯನಸ್ಯ ಮೇ
॥ ೪೭ ॥

ಸಭಾಜಿತೋ ಭಗವತಾ ಕೃತಾಸನಪರಿಗ್ರಹಃ ।
ತಸ್ಮೈ ತದ್ವರ್ಣಯಾಮಾಸ ನಾರಾಯಣಮುಖಾಚ್ಛ್ರುತಮ್
॥ ೪೮ ॥

ಇತ್ಯೇತದ್ವರ್ಣಿತಂ ರಾಜನ್ ಯನ್ನಃ ಪ್ರಶ್ನಃ ಕೃತಸ್ತ್ವಯಾ ।
ಯಥಾ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇऽಪಿ ಮನಶ್ಚರೇತ್
॥ ೪೯ ॥

ಯೋಽಸ್ಯೋತ್ಪೈಕ್ಷಕ ಆದಿಮಧ್ಯನಿಧನೇ
ಯೋಽವ್ಯಕ್ತಜೀವೇಶ್ವರೋ
ಯಃ ಸೃಷ್ಟ್ವೇದಮನುಪ್ರವಿಶ್ಯ ಋಷಿಣಾ
ಚಕ್ರೇ ಪುರಃ ಶಾಸ್ತಿ ತಾಃ ।

ಯಂ ಸಂಪದ್ಯ ಜಹಾತ್ಯಜಾಮನುಶಯೀ
ಸುಪ್ತಃ ಕುಲಾಯಂ ಯಥಾ
ತಂ ಕೈವಲ್ಯನಿರಸ್ತಯೋನಿಮಭಯಂ
ಧ್ಯಾಯೇದಜಸ್ರಂ ಹರಿಮ್ ॥ ೫೦ ॥

ದೇಹವನ್ನು ನಿರ್ಮಿಸಿ ಸಮಸ್ತ ಜೀವರ ನಿಯಂತ್ರಣವನ್ನು ಮಾಡುತ್ತಿರುವನು. ಆ ಪರಬ್ರಹ್ಮ ಪರಮಾತ್ಮನನ್ನು ಪ್ರಾಪ್ತಮಾಡಿ ಕೊಂಡು ಜೀವನು ಮಾಯೆಯನ್ನು ತ್ಯಜಿಸಿ ತನ್ನ ಸ್ವರೂಪವಾದ ಪರಬ್ರಹ್ಮನನ್ನು ಹೊಂದುತ್ತಾನೆ. ಗಾಢನಿದ್ದೆಯಲ್ಲಿ ಮನುಷ್ಯನಿಗೆ ಈ ಪಾಂಚಭೌತಿಕ ಶರೀರದ ಎಚ್ಚರವಿರುವುದಿಲ್ಲವೋ ಹಾಗೆಯೇ ಸತತ ಪರಮಾತ್ಮನನ್ನು ಚಿಂತಿಸುತ್ತಿರುವ ಭಕ್ತನಿಗೆ ಮಾಯಾಮಯ ಪದಾರ್ಥಗಳ ಚಿಂತನೆ ಯಾಗುವುದಿಲ್ಲ. ಆದ್ದರಿಂದ ಮುಕ್ತನಾಗಲು ಏಕಮಾತ್ರ ಸರಳ ಉಪಾಯವು ಸತತವಾಗಿ ಭಗವಂತನನ್ನು ಸ್ಮರಿಸು ವುದೇ ಆಗಿದೆ. ಭಗವಂತನು ಕೈವಲ್ಯ ಸ್ವರೂಪನಾಗಿದ್ದಾನೆ. ಅವನ ಭಜನೆ ಮಾಡುವುದರಿಂದ ಪ್ರಪಂಚದ ಆವಾಗಮನವು ನಾಶವಾಗಿ ಹೋಗುತ್ತದೆ. ಆದ್ದರಿಂದ ಯಾವಾಗಲೂ ಭಗವಂತನನ್ನೇ ಚಿಂತನೆ ಭಜನೆ ಮಾಡುತ್ತಾ ಇರಬೇಕು. ಅದರಲ್ಲೇ ಜೀವಿಯ ಮಂಗಳವಿದೆ, ಅದೇ ನಿರ್ಭಯ ಸ್ಥಾನವಾಗಿದೆ. ಆದ್ದರಿಂದ ಭಗವಂತನಲ್ಲಿ ಶರಣಾ ಗಬೇಕು. ॥ ೫೦ ॥

ಎಂಭತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೮೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ನಾರದನಾರಾಯಣಸಂವಾದೇ ವೇದಸ್ತುತಿರ್ನಾಮ ಸಪ್ತಾಶೀತಿತಮೋಽಧ್ಯಾಯಃ॥ ೮೭ ॥

ಎಂಭತ್ತೆಂಟನೆಯ ಅಧ್ಯಾಯ

ವೃಕಾಸುರನ ಕಥೆ

ರಾಜೋವಾಚ

ದೇವಾಸುರಮನುಷ್ಯೇಷು ಯೇ ಭಜಂತ್ಯಶಿವಂ ಶಿವಮ್ ।
ಪ್ರಾಯಸ್ತೇ ಧನಿನೋ ಭೋಜಾ ನ ತು ಲಕ್ಷ್ಮೀಪತಿಂ ಹರಿಮ್ ॥ ೧ ॥

ಏತದ್ವೇದಿತುಮಿಚ್ಛಾಮಃ ಸಂದೇಹೋಽತ್ರ ಮಹಾನ್ ಹಿ ನಃ ।
ವಿರುದ್ಧಶೀಲಯೋಃ ಪ್ರಭ್ವೋರ್ವಿರುದ್ಧಾ ಭಜತಾಂ ಗತಿಃ ॥ ೨ ॥

ಪರೀಕ್ಷಿದ್ರಾಜನು ಕೇಳುತ್ತಾನೆ – ಪೂಜ್ಯರೇ! ಭಗವಾನ್ ಶಂಕರನು ಸಕಲಭೋಗಪರಿತ್ಯಾಗಿಯು. ಆದರೆ ಅವನನ್ನು ಉಪಾಸಿ ಸುವ ದೇವಾಸುರ-ಮನುಷ್ಯರು ಪ್ರಾಯಶಃ ಶ್ರೀಮಂತರೂ, ಭೋಗಸಂಪನ್ನರೂ ಆಗುತ್ತಾರೆ. ಇದಕ್ಕೆ ಪ್ರತಿಯಾಗಿ ಭಗವಾನ್ ವಿಷ್ಣುವು ಲಕ್ಷ್ಮೀಪತಿಯು. ಅವನನ್ನು ಉಪಾಸಿಸುವವರು ಪ್ರಾಯಶಃ ಧನಹೀನರೂ, ವಿರಾಗಿಗಳೂ ಆಗಿರುತ್ತಾರೆ. ॥ ೧ ॥ ಇಬ್ಬರೂ ಪ್ರಭು ಗಳು ತ್ಯಾಗ ಮತ್ತು ಭೋಗಗಳ ದೃಷ್ಟಿಯಿಂದ ವಿರುದ್ಧ ಸ್ವಭಾವದವ ರಾಗಿದ್ದಾರೆ. ಆದರೆ ಅವರ ಉಪಾಸಕರಿಗೆ ಅವರ ಸ್ವರೂಪದ ವಿರುದ್ಧ ಫಲವೇ ಸಿಗುತ್ತದೆ. ತ್ಯಾಗಿಯ ಉಪಾಸನೆಯಿಂದ ಭೋಗ ಮತ್ತು ಲಕ್ಷ್ಮೀಪತಿಯ ಉಪಾಸನೆಯಿಂದ ತ್ಯಾಗ ಹೇಗೆ ದೊರೆ ಯುತ್ತದೆ? ಈ ವಿಷಯದಲ್ಲಿ ನನಗೆ ಸಂದೇಹ ಉಂಟಾಗಿದೆ ದಯವಿಟ್ಟು ಇದನ್ನು ತಿಳಿಸಿರಿ. ॥ ೨ ॥

ಶ್ರೀಶುಕ ಉವಾಚ

ಶಿವಃ ಶಕ್ತಿಯುತಃ ಶಶ್ವತ್ತ್ರಿಲಿಂಗೋ ಗುಣಸಂವೃತಃ ।
ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧಾ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷತ್ತನೇ! ಶಿವನು ಸದಾ ತನ್ನ ಶಕ್ತಿಯಿಂದ ಯುಕ್ತನಾಗಿರುವನು. ಅವನು ಸತ್ತ್ವಾದಿ ಗುಣಗಳಿಂದ ಕೂಡಿ ಅಹಂಕಾರಕ್ಕೆ ಅಧಿಷ್ಠಾನನೂ ಆಗಿರುವನು. ವೈಕಾರಿಕ, ತೈಜಸ ಮತ್ತು ತಾಮಸ – ಇವು ಅಹಂ ಕಾರದ ಮೂರು ಭೇದಗಳು. ॥ ೩ ॥

ತತೋ ವಿಕಾರಾ ಅಭವನ್ ಷೋಡಶಾಮೀಷು ಕಂಚನ ।
ಉಪಧಾವನ್ ವಿಭೂತೀನಾಂ ಸರ್ವಾಸಾಮಶ್ನುತೇ ಗತಿಮ್
॥ ೪ ॥

ಈ ತ್ರಿವಿಧ ಅಹಂಕಾರದಿಂದ ಹತ್ತು ಇಂದ್ರಿಯಗಳು, ಐದು ಮಹಾಭೂತಗಳು, ಒಂದು ಮನಸ್ಸು - ಹೀಗೆ ಹದಿನಾರು ವಿಕಾರಗಳಾದುವು. ಆದ್ದರಿಂದ ಇವೆಲ್ಲದರ ಅಧಿಷ್ಠಾತೃ ದೇವತೆಗಳಲ್ಲಿ ಯಾರನ್ನೇ ಉಪಾಸನೆ ಮಾಡಿದರೂ ಸಮಸ್ತ ಐಶ್ವರ್ಯಗಳು ದೊರೆಯುತ್ತವೆ. ॥ ೪ ॥ ಪರೀಕ್ಷಿತನೇ! ಆದರೆ ಶ್ರೀಹರಿಯಾದರೋ ಪ್ರಕೃತಿಗಿಂತ ಆಚೆಗಿರುವ ಪುರುಷೋತ್ತಮನು. ಪ್ರಾಕೃತಗುಣರಹಿತನು. ಅವನು ಸರ್ವಜ್ಞನೂ, ಎಲ್ಲರ ಅಂತಃಕರಣಗಳ ಸಾಕ್ಷಿಯೂ ಆಗಿದ್ದಾನೆ. ಅವನನ್ನು ಭಜಿಸುವವನೂ ಗುಣಾತೀತನಾಗಿ ಹೋಗುತ್ತಾನೆ. ॥ ೫ ॥ ಪರೀಕ್ಷಿತ! ಹಿಂದೆ ನಿನ್ನ ತಾತನಾದ ಯುಧಿಷ್ಠಿರನು ಅಶ್ವಮೇಧ ಯಜ್ಞವನ್ನು ಮಾಡಿದಾಗ ಭಗವಂತನಿಂದ ಭಾಗವತಧರ್ಮದ ವರ್ಣನೆಯನ್ನು ಕೇಳುತ್ತಿದ್ದಾಗಲೂ ಅವನು ಇದೇ ಪ್ರಶ್ನೆಯನ್ನು ಕೇಳಿದ್ದನು. ॥ ೬ ॥

ಹರಿರ್ಹಿ ನಿರ್ಗುಣಃ ಸಾಕ್ಷಾತ್ ಪುರುಷಃ ಪ್ರಕೃತೇಃ ಪರಃ ।
ಸ ಸರ್ವದೃಗುಪದ್ರಷ್ಟಾ ತಂ ಭಜನ್ ನಿರ್ಗುಣೋ ಭವೇತ್
॥ ೫ ॥

ನಿವೃತ್ತೇಷ್ವಶ್ವಮೇಧೇಷು ರಾಜಾ ಯುಷ್ಮತ್ಪಿತಾಮಹಃ ।
ಶೃಣ್ವನ್ಭಗವತೋ ಧರ್ಮಾನಪೃಚ್ಛದಿದಮಚ್ಯುತಮ್
॥ ೬ ॥

ಮಹಾರಾಜ! ಮನುಷ್ಯರ ಕಲ್ಯಾಣಕ್ಕಾಗಿಯೇ ಯದುವಂಶದಲ್ಲಿ ಅವರಿಸಿದ ಭಗವಾನ್ ಶ್ರೀಕೃಷ್ಣನು ಸರ್ವಶಕ್ತನಾದ ಪರಮೇಶ್ವರನೇ ಆಗಿದ್ದಾನೆ. ಧರ್ಮರಾಯನ ಪ್ರಶ್ನೆಯನ್ನು ಆಲಿಸಿ, ಅದನ್ನು ಕೇಳಬೇಕೆಂದು ತವಕಿಸುತ್ತಿರುವ ಅವನಲ್ಲಿ ಪರಮಪ್ರೀತಿಯಿಂದ ಹೀಗೆ ಉತ್ತರಿಸತೊಡಗಿದನು. ॥ ೭ ॥

ಸ ಆಹ ಭಗವಾನ್‌ಸ್ತಸ್ಮೈ ಪ್ರೀತಃ ಶುಶ್ರೂಷವೇ ಪ್ರಭುಃ ।
ನೃಣಾಂ ನಿಃಶ್ರೇಯಸಾರ್ಥಾಯ ಯೋಽವತೀರ್ಣೋ ಯದೋಃ ಕುಲೇ
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಯುಧಿಷ್ಠಿರನೇ! ನಾನು ಯಾರಿಗೆ ಅನುಗ್ರಹತೋರುವೆನೋ ಅವನ ಸಂಪತ್ತೆಲ್ಲವನ್ನೂ ನಿಧಾನವಾಗಿ ಕಸಿದುಕೊಳ್ಳುವೆನು. ಅವನು ನಿರ್ಧನನಾದಾಗ ಅವನ ನೆಂಟರಿಷ್ಟರೆಲ್ಲರೂ ಅತನು ದುಃಖಿತನಾಗಿದ್ದರೂ ಎಣಿಸದೆ ಬಿಟ್ಟುಬಿಡುತ್ತಾರೆ. ॥ ೮ ॥ ಮತ್ತೆ ಅವನು ಧನಸಂಗ್ರಹಣೆಗೆ ಉದ್ಯೋಗಶೀಲನಾದಾಗ ನಾನು ಅವನ ಆ ಪ್ರಯತ್ನವನ್ನು ನಿಷ್ಫಲ ಮಾಡಿಬಿಡುತ್ತೇನೆ. ಹೀಗೆ ಪದೇ-ಪದೇ ಅಸಫಲನಾಗಿ ಅವನ ಮನಸ್ಸು ಧನವನ್ನು ಗಳಿಸುವುದರಿಂದ ವಿರಕ್ತವಾಗುತ್ತದೆ. ಧನದ ಮೇಲಿನ ಆಸೆಯು ದುಃಖಕ್ಕೆ ಕಾರಣವೆಂದರಿತು ನನ್ನ ಭಕ್ತರೊಂದಿಗೆ ಮೈತ್ರಿಯನ್ನು ಬೆಳೆಸುತ್ತಾನೆ. ಆಗ ನಾನು ಅವನ ಮೇಲೆ ಅಹೈತುಕವಾದ ಕೃಪಾವರ್ಷವನ್ನು ಗರೆಯುತ್ತೇನೆ. ॥ ೯ ॥ ನನ್ನ ಕೃಪೆಯಿಂದ ಅವನಿಗೆ ಪರಮಸೂಕ್ಷ್ಮ ಅನಂತ ಸಚ್ಚಿದಾನಂದ ಸ್ವರೂಪ ಪರಬ್ರಹ್ಮನ ಪ್ರಾಪ್ತಿಯಾಗುತ್ತದೆ. ಹೀಗೆ ನನ್ನ ಅನುಗ್ರಹವೂ, ಆರಾಧನೆಯೂ ಬಹಳ ಕಠಿಣವಾಗಿದೆ. ಅದರಿಂದ ಸಾಮಾನ್ಯ ಜನರು ನನ್ನನ್ನು ಬಿಟ್ಟು ನನ್ನದೇ ರೂಪವಾದ ಬೇರೆ-ಬೇರೆ ದೇವತೆಗಳನ್ನು ಆರಾಧಿಸುತ್ತಾರೆ. ॥ ೧೦ ॥ ಇತರ ದೇವತೆಗಳು ಬೇಗನೇ ಪ್ರಸನ್ನರಾಗುತ್ತಾರೆ. ಇಂತಹ ಆಶು-ತೋಷ ದೇವತೆಗಳ ಭಕ್ತರಿಗೆ ಸಾಮ್ರಾಜ್ಯ ಲಕ್ಷ್ಮಿಯನ್ನು ಕೊಟ್ಟುಬಿಡುತ್ತಾರೆ. ಅದನ್ನು ಪಡೆದ ಅವರು ಉಚ್ಛೃಂಖಿಲರೂ, ಪ್ರಮಾದಿಗಳೂ, ಮದೋನ್ಮತ್ತರೂ ಆಗಿ, ತಮ್ಮ ಆರಾಧ್ಯ ದೇವತೆಗಳನ್ನೇ ಮರೆತುಬಿಡುತ್ತಾರೆ ಹಾಗೂ ಅವರನ್ನು ತಿರಸ್ಕರಿಸುತ್ತಾರೆ. ॥ ೧೧ ॥

ಶ್ರೀಭಗವಾನುವಾಚ

ಯಸ್ಯಾಹಮನುಗೃಹ್ಣಾಮಿ ಹರಿಷ್ಯೇ ತದ್ಧನಂ ಶನೈಃ ।
ತತೋಽಧನಂ ತ್ಯಜಂತ್ಯಸ್ಯ ಸ್ವಜನಾ ದುಃಖದುಃಖಿತಮ್
॥ ೮ ॥

ಸ ಯದಾ ವಿತಥೋದ್ಯೋಗೋ ನಿರ್ವಿಣ್ಣಃ ಸ್ಯಾದ್ಧನೇಹಯಾ ।
ಮತ್ಪರೈಃ ಕೃತಮೈತ್ರಸ್ಯ ಕರಿಷ್ಯೇ ಮದನುಗ್ರಹಮ್
॥ ೯ ॥

ತದ್ಬ್ರಹ್ಮ ಪರಮಂ ಸೂಕ್ಷ್ಮಂ ಚಿನ್ಮಾತ್ರಂ ಸದನಂತಕಮ್ ।
ಅತೋ ಮಾಂ ಸುದುರಾರಾಧ್ಯಂ ಹಿತ್ವಾನ್ಯಾನ್ ಭಜತೇ ಜನಃ
॥ ೧೦ ॥

ತತಸ್ತ ಆಶುತೋಷೇಭ್ಯೋ ಲಬ್ಧರಾಜ್ಯಶ್ರಿಯೋದ್ಧತಾಃ ।
ಮತ್ತಾಃ ಪ್ರಮತ್ತಾ ವರದಾನ್ ವಿಸ್ಮರಂತ್ಯವಜಾನತೇ
॥ ೧೧ ॥

ಶ್ರೀಶುಕ ಉವಾಚ

ಶಾಪಪ್ರಸಾದಯೋರೀಶಾ ಬ್ರಹ್ಮವಿಷ್ಣುಶಿವಾದಯಃ ।
ಸದ್ಯಃ ಶಾಪಪ್ರಸಾದೋಽಂಗ ಶಿವೋ ಬ್ರಹ್ಮಾ ನ ಚಾಚ್ಯುತಃ
॥ ೧೨ ॥

ಅತ್ರ ಚೋದಾಹರಂತೀಮಮಿತಿಹಾಸಂ ಪುರಾತನಮ್ ।
ವೃಕಾಸುರಾಯ ಗಿರಿಶೋ ವರಂ ದತ್ತ್ವಾಽಽಪ ಸಂಕಟಮ್
॥ ೧೩ ॥

ವೃಕೋ ನಾಮಾಸುರಃ ಪುತ್ರಃ ಶಕುನೇಃ ಪಥಿ ನಾರದಮ್ ।
ದೃಷ್ಟ್ವಾಽಽಶುತೋಷಂ ಪಪ್ರಚ್ಛ ದೇವೇಷು ತ್ರಿಷು ದುರ್ಮತಿಃ
॥ ೧೪ ॥

ಸ ಆಹ ದೇವಂ ಗಿರಿಶಮುಪಾಧಾವಾಶು ಸಿದ್ಧ್ಯಸಿ ।
ಯೋಽಲ್ಪಾಭ್ಯಾಂ ಗುಣದೋಷಾಭ್ಯಾಮಾಶು ತುಷ್ಯತಿ ಕುಷ್ಯತಿ
॥ ೧೫ ॥

ದಶಾಸ್ಯಬಾಣಯೋಸ್ತುಷ್ಟಃ ಸ್ತುವತೋರ್ವಂದಿನೋರಿವ ।
ಐಶ್ವರ್ಯಮತುಲಂ ದತ್ತ್ವಾ ತತ ಆಪ ಸುಸಂಕಟಮ್
॥ ೧೬ ॥

ಇತ್ಯಾದಿಷ್ಟಸ್ತಮಸುರ ಉಪಾದಾಧಾವತ್ಸ ಗಾತ್ರತಃ ।
ಕೇದಾರ ಆತ್ಮಕ್ರವ್ಯೇಣ ಜುಹ್ವಾನೋಽಗ್ನಿಮುಖಂ ಹರಮ್
॥ ೧೭ ॥

ದೇವೋಪಲಬ್ಧಿಮಪ್ರಾಪ್ಯ ನಿರ್ವೇದಾತ್ಸಪ್ತಮೇಽಹನಿ ।
ಶಿರೋಽವೃಶ್ಚತ್ ಸ್ವಧಿತಿನಾ ತತ್ತೀರ್ಥಕ್ಲಿನ್ನಮೂರ್ಧಜಮ್
॥ ೧೮ ॥

ತದಾ ಮಹಾಕಾರುಣಿಕಃ ಸ ಧೂರ್ಜಟಿ-
ರ್ಯಥಾ ವಯಂ ಚಾಗ್ನಿರಿವೋತ್ಥಿತೋಽನಲಾತ್ ।
ನಿಗೃಹ್ಯ ದೋರ್ಭ್ಯಾಂ ಭುಜಯೋರ್ನ್ಯವಾರಯತ್-
ತತ್ ಸ್ಪರ್ಶನಾದ್ಯೂಯ ಉಪಸೃತಾಕೃತಿಃ ॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಬ್ರಹ್ಮಾ-ವಿಷ್ಣು-ಮಹೇಶ್ವರ ಇವರು ಮುವರೂ ಶಾಪಾನುಗ್ರಹ ಸಾಮರ್ಥ್ಯವುಳ್ಳವರೇ. ಆದರೆ ಇವರಲ್ಲಿ ಮಹಾದೇವ ಮತ್ತು ಬ್ರಹ್ಮದೇವರು ಬೇಗನೇ ಪ್ರಸನ್ನರಾಗಿ ವರವನ್ನು ಕೊಡುತ್ತಾರೆ. ಹಾಗೆಯೇ ಬಹಳ ಬೇಗ ಕೋಪಗೊಂಡು ಶಾಪವನ್ನೂ ಕೊಟ್ಟು ಬಿಡುತ್ತಾರೆ. ಆದರೆ ಭಗವಾನ್ ವಿಷ್ಣುವು ಹಾಗಲ್ಲ ॥ ೧೨ ॥ ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನ ಇತಿಹಾಸವನ್ನು ಹೇಳುತ್ತಾ ಇರುತ್ತಾರೆ. ಭಗವಾನ್ ಶಂಕರನು ಒಮ್ಮೆ ವೃಕಾಸುರ ನೆಂಬುವನಿಗೆ ವರವನ್ನು ಕೊಟ್ಟು ಸಂಕಟಕ್ಕೊಳಗಾಗಿದ್ದನು. ॥ ೧೩. ॥ ಪರೀಕ್ಷಿತನೇ! ಶಕುನಿಯ ಪುತ್ರನಾದ ವೃಕಾಸುರನ ಬುದ್ಧಿಯು ಬಹಳವಾಗಿ ಕೆಟ್ಟು ಹೋಗಿತ್ತು. ಒಂದು ದಿನ ಅವನು ಎಲ್ಲೋ ಹೋಗುವಾಗ ದೇವರ್ಷಿನಾರದರನ್ನು ನೋಡಿದನು. ಅವರಿಗೆ ವಂದಿಸಿ ಸ್ವಾಮಿ! ಮೂರು ದೇವತೆಗಳಲ್ಲಿ ಶೀಘ್ರವಾಗಿ ಪ್ರಸನ್ನ ರಾಗುವವರು ಯಾರು ? ಎಂದು ಕೇಳಿದನು. ॥ ೧೪ ॥

ದೇವರ್ಷಿ ನಾರದರು ಹೇಳಿದರು – ನೀನು ಭಗವಾನ್ ಶಂಕರನನ್ನು ಆರಾಧಿಸು. ಇದರಿಂದ ನಿನ್ನ ಮನೋರಥವು ಬಹುಬೇಗನೇ ಈಡೇರುವುದು. ಅವನು ಅತ್ಯಲ್ಪ ಗುಣಗಳಿಂದ (ಪ್ರಾರ್ಥನೆಯಿಂದ) ಶೀಘ್ರಾತಿಶೀಘ್ರವಾಗಿ ಪ್ರಸನ್ನನಾಗುತ್ತಾನೆ ಮತ್ತು ಸಣ್ಣ ಅಪರಾಧದಿಂದಲೂ ಕೂಡಲೇ ಕ್ರೋಧಗೊಳ್ಳುವನು. ॥ ೧೫ ॥ ರಾವಣ ಮತ್ತು ಬಾಣಾಸುರರು ಕೇವಲ ವಂದಿ ಮಾಗಧರಂತೆ ಶಂಕರನನ್ನು ಸ್ತೋತ್ರಮಾಡಿದ್ದರು. ಇದರಿಂದಲೆ ಶಿವನು ಅವರಿಗೆ ಅತುಳವಾದ ಐಶ್ವರ್ಯವನ್ನು ಕೊಟ್ಟಿದ್ದನು. ಬಳಿಕ ರಾವಣನು ಕೈಲಾಸವನ್ನೇ ಎತ್ತಿದುದರಿಂದ ಮತ್ತು ಬಾಣಾಸುರನ ನಗರ ರಕ್ಷಣೆಯ ಹೊಣೆಯನ್ನು ಹೊತ್ತಿದ್ದರಿಂದ ಶಂಕರನು ಸಂಕಟಕ್ಕೀಡಾದನು. ॥ ೧೬ ॥

ನಾರದರಿಂದ ಉಪದೇಶವನ್ನು ಪಡೆದು ವೃಕಾಸುರನು ಕೇದಾರ ಕ್ಷೇತ್ರಕ್ಕೆ ಹೋಗಿ, ಅಗ್ನಿಯನ್ನು ಶಂಕರನ ಮುಖವೆಂದು ಭಾವಿಸಿ ತನ್ನ ಶರೀರದ ಮಾಂಸಖಂಡಗಳನ್ನೇ ಕಡಿದು ಕಡಿದು ಹೋಮ ಮಾಡುತ್ತಾ ಆರಾಧಿಸತೊಡಗಿದನು. ॥ ೧೭ ॥ ಈ ಪ್ರಕಾರ ಆರು ದಿನಗಳವರೆಗೆ ಉಪಾಸನೆ ಮಾಡಿದರೂ ಭಗವಾನ್ ಶಂಕರನು ಪ್ರಸನ್ನನಾಗದಿದ್ದಾಗ ಅವನಿಗೆ ತುಂಬಾ ದುಃಖವಾಯಿತು. ಏಳನೆಯ ದಿನ ಕೇದಾರತೀರ್ಥದಲ್ಲಿ ಸ್ನಾನಮಾಡಿ ಅವನು ಒದ್ದೆಯಾದ ತನ್ನ ತಲೆಯನ್ನೇ ಕತ್ತಿಯಿಂದ ಕಡಿದು ಹೋಮ ಮಾಡಲು ಬಯಸಿದನು. ॥ ೧೮ ॥ ಪರೀಕ್ಷಿತನೇ ! ಜಗತ್ತಿನಲ್ಲಿ ಯಾರಾದರೂ ದುಃಖದಿಂದ ಆತ್ಮಹತ್ಯೆ ಮಾಡಿಕೊಳ್ಳಲು ತೊಡಗಿದರೆ ನಾವು ಕರುಣೆಯಿಂದ ಅವನನ್ನು ತಡೆಯುವಂತೆಯೇ ಪರಮ ದಯಾಳುವಾದ ಭಗವಾನ್ ಶಂಕರನು ವೃಕಾಸುರನ ಆತ್ಮಘಾತದ ಮೊದಲೇ ಅಗ್ನಿಕುಂಡದಿಂದ ಯಜ್ಞೇಶ್ವರನಂತೆ ಪ್ರಕಾಶಿಸುತ್ತಾ ಪ್ರಕಟನಾಗಿ ತನ್ನೆರಡೂ ಕೈಗಳಿಂದ ಅವನ ಎರಡೂ ಕೈಗಳನ್ನು ಹಿಡಿದುಕೊಂಡು ಕತ್ತನ್ನು ತುಂಡರಿಸುವುದನ್ನು ತಡೆದನು. ಶಿವನ ಸ್ಪರ್ಶವಾಗುತ್ತಲೇ ವೃಕಾಸುರನ ಅಂಗಾಂಗಗಳು ಮೊದಲಿದ್ದಂತೆ ಹೃಷ್ಟ-ಪುಷ್ಟಗಳಾದವು. ॥ ೧೯ ॥ ಭಗವಾನ್ ಶಂಕರನು ಪ್ರಸನ್ನನಾಗಿ ಹೇಳಿದನು

ತಮಾಹ ಚಾಂಗಾಲಮಲಂ ವೃಣೀಷ್ವ ಮೇ
ಯಥಾಭಿಕಾಮಂ ವಿತರಾಮಿ ತೇ ವರಮ್ ।
ಪ್ರಿಯೇಯ ತೋಯೇನ ನೃಣಾಂ ಪ್ರಪದ್ಯತಾ-
ಮಹೋತ್ತಯಾऽऽತ್ಮಾ ಭೃಶಮರ್ದ್ಯತೇ ವೃಥಾ ॥ ೨೦ ॥

ದೇವಂ ಸ ವವ್ರೇ ಪಾಪೀಯಾನ್
ವರಂ ಭೂತಭಯಾವಹಮ್ ।
ಯಸ್ಯ ಯಸ್ಯ ಕರಂ ಶೀರ್ಷ್ಣಿ
ಧಾಸ್ಯೇ ಸ ಮ್ರಿಯತಾಮಿತಿ ॥ ೨೧ ॥

ತಚ್ಛ್ರುತ್ವಾ ಭಗವಾನ್ ರುದ್ರೋ ದುರ್ಮನಾ ಇವ ಭಾರತ ।
ಓಮಿತಿ ಪ್ರಹಸಂಸ್ತಸ್ಮೈ ದದೇऽಹೇರಮೃತಂ ಯಥಾ
॥ ೨೨ ॥

ಇತ್ಯುಕ್ತಃ ಸೋऽಸುರೋ ನೂನಂ ಗೌರೀಹರಣಲಾಲಸಃ ।
ಸ ತದ್ವರಪರೀಕ್ಷಾರ್ಥಂ ಶಂಭೋರ್ಮೂರ್ಧ್ನಿ ಕಿಲಾಸುರಃ ।
ಸ್ವಹಸ್ತಂ ಧಾತುಮಾರೇಭೇ ಸೋऽಬಿಭ್ಯತ್ ಸ್ವಕೃತಾಚ್ಛಿವಃ
॥ ೨೩ ॥

ತೇನೋಪಸೃಷ್ಟಃ ಸಂತ್ರಸ್ತಃ ಪರಾಧಾವನ್ಸವೇಪಥುಃ ।
ಯಾವದಂತಂ ದಿವೋ ಭೂಮೇಃ ಕಾಷ್ಠಾನಾಮುದಗಾದುದಕ್
॥ ೨೪ ॥

ಅಜಾನಂತಃ ಪ್ರತಿವಿಧಿಂ ತೂಷ್ಣೀಮಾಸನ್ಸುರೇಶ್ವರಾಃ ।
ತತೋ ವೈಕುಂಠ ಮಗಮದ್ಭಾಸ್ವರಂ ತಮಸಃ ಪರಮ್
॥ ೨೫ ॥

ಯತ್ರ ನಾರಾಯಣಃ ಸಾಕ್ಷಾನ್ನೃಣಾಂ ಪರಮಾಗತಿಃ ।
ಶಾಂತಾನಾಂ ನ್ಯಸ್ತದಂಡಾನಾಂ ಯತೋ ನಾವರ್ತತೇ ಗತಃ
॥ ೨೬ ॥

ತಂ ತಥಾವ್ಯಸನಂ ದೃಷ್ಟ್ವಾ ಭಗವಾನ್ ವೃಜಿನಾರ್ದನಃ ।
ದೂರಾತ್ ಪ್ರತ್ಯುದಿಯಾದ್ಭೂತ್ವಾ ವಟುಕೋ ಯೋಗಮಾಯಯಾ
॥ ೨೭ ॥

ಮೇಖಲಾಜಿನದಂಡಾಕ್ಷ್ಯತೇಜಸಾಗ್ನಿರಿವ ಜ್ವಲನ್ ।
ಅಭಿವಾದಯಾಮಾಸ ಚ ತಂ ಕುಶಪಾಣಿರ್ವಿನೀತವತ್
॥ ೨೮ ॥

ವೃಕಾಸುರನೇ ! ಸಾಕುಮಾಡು ನಿಲ್ಲಿಸು ! ನಿನಗೆ ಬೇಕಾದವರನ್ನು ಕೇಳು, ನಾನು ನಿನಗೆ ಕೊಡುತ್ತೇನೆ. ನಾನಾದರೋ ಶರಣಾಗತರಾದ ಭಕ್ತರು ಮಾಡಿದ ಕೇವಲ ನೀರಿನ ಅಭಿಷೇಕದಿಂದಲೇ ಸಂತುಷ್ಟನಾಗುವವನು. ನೀನು ನಿನ್ನ ಶರೀರವನ್ನೇ ವಿನಾಶಗೊಳಿಸಲು ವ್ಯರ್ಥವಾಗಿ ಪ್ರಯತ್ನಿಸುತ್ತಿರುವೆಯಲ್ಲ ! ॥ ೨೦ ॥ ಪರೀಕ್ಷಿತನೇ ! ಅತ್ಯಂತ ಪಾಪಿಯಾದ ವೃಕಾಸುರನು ಸಮಸ್ತ ಪ್ರಾಣಿಗಳನ್ನು ಭಯಭೀತಗೊಳಿಸುವಂತಹ ವರವನ್ನು ಕೇಳಿದನು – ಸ್ವಾಮಿ ! ನಾನು ಯಾರ ತಲೆಯ ಮೇಲೆ ಕೈಯನ್ನಿಡುವೆನೋ ಅವನು ಮರಣಹೊಂದಬೇಕು. ॥ ೨೧ ॥ ರಾಜೇಂದ್ರ ! ಅವನ ಈ ಬೇಡಿಕೆಯನ್ನು ಕೇಳಿದ ಭಗವಾನ್ ರುದ್ರನು ಮನಗುಂದಿದವನಂತಾಗಿ ಕೊಡಲು ಮನಸ್ಸಿಲ್ಲದಿದ್ದರೂ ನಸುನಗುತ್ತಾ ವರವನ್ನು ಕೊಟ್ಟು ಸರ್ಪಕ್ಕೆ ಅಮೃತವನ್ನುಣಿಸಿದಂತೆ – 'ಸರಿ ! ಹಾಗೆಯೇ ಆಗಲಿ' ಎಂದು ಹೇಳಿದನು. ॥ ೨೨ ॥

ಭಗವಾನ್ ಶಂಕರನಿಂದ ಇಂತಹ ಸರ್ವನಾಶಕವಾದ ವರವನ್ನು ಪಡೆದ ವೃಕಾಸುರನ ಮನಸ್ಸಿನಲ್ಲಿ ಮೊದಲಿಗೆ ಪಾರ್ವತಿಯನ್ನು ಅಪಹರಿಸಬೇಕೆಂಬ ಲಾಲಸೆ ಉಂಟಾಯಿತು. ಅದಕ್ಕಾಗಿ ಆ ಅಸುರನು ಶಂಕರನ ವರವನ್ನು ಪರೀಕ್ಷಿಸಲಿಕ್ಕಾಗಿ ಅವನ ತಲೆಯ ಮೇಲೆಯೇ ಕೈಯನ್ನಿಡಲು ಹೊರಟನು. ಇದರಿಂದ ಶಿವನು ತಾನು ಕೊಟ್ಟ ವರದಿಂದಲೇ ಭಯಗೊಂಡನು. ॥ ೨೩ ॥ ದೈತ್ಯನು ಬೆನ್ನಟ್ಟಿಕೊಂಡು ಬರುವುದನ್ನು ಕಂಡು ಶಂಕರನು ಭಯದಿಂದ ನಡುಗುತ್ತ ಓಡತೊಡಗಿದನು. ಅವನು ಪೃಥಿವಿ, ಸ್ವರ್ಗ, ದಿಗಂತ ವರೆಗೂ ಓಡಿದನು. ಆದರೂ ಬೆನ್ನಬಿದ್ದ ಅಸುರನನ್ನು ನೋಡಿ ಉತ್ತರದ ಕಡೆಗೆ ಓಡಿದನು. ॥ ೨೪ ॥ ಶಿವನ ಈ ಸಂಕಟದಿಂದ ಪಾರಾಗಿಸಲು ಕೈಲಾಗದೆ ದೊಡ್ಡ-ದೊಡ್ಡ ದೇವತೆಗಳು ಸುಮ್ಮನಾದರು. ಕೊನೆಗೆ ಅವನು ಪ್ರಾಕೃತಿಕ ಅಂಧಕಾರದಿಂದ ಅಚೆಗೆ ಇರುವ ಪ್ರಕಾಶಮಯ ವೈಕುಂಠಕ್ಕೆ ಹೋದನು. ॥ ೨೫ ॥ ಸಾಕ್ಷಾತ್ ಭಗವಾನ್ ಶ್ರೀಮನ್ನಾರಾಯಣನು ಆ ವೈಕುಂಠದಲ್ಲಿ ವಾಸವಾಗಿದ್ದನು. ಸಂನ್ಯಾಸಿಗಳಿಗೆ ಏಕಮಾತ್ರ ಪರಮಗತಿಸ್ವರೂಪನಾದ ಅವನು ಸಮಸ್ತ ಜಗತ್ತಿಗೆ ಅಭಯವನ್ನಿತ್ತು ಶಾಂತಭಾವದಿಂದ ವಿರಾಜಿಸುತ್ತಿದ್ದನು. ವೈಕುಂಠದಲ್ಲಿ ಅವನನ್ನು ನೋಡಿದ ಬಳಿಕ ಮರ್ತ್ಯಲೋಕಕ್ಕೆ ಮರಳಬೇಕಾಗುವುದಿಲ್ಲ. ॥ ೨೬ ॥ ಶಂಕರನು ಬಹುದೊಡ್ಡ ಸಂಕಟಕ್ಕೆ ಸಿಕ್ಕಿಕೊಂಡಿದ್ದನ್ನು ಕಂಡು ಭಕ್ತಭಯಹಾರಿಯಾದ ಭಗವಂತನು ತನ್ನ ಯೋಗಮಾಯೆಯಿಂದ ಬ್ರಹ್ಮಚಾರಿಯ ರೂಪವನ್ನಾಂತು ನಿಧಾನವಾಗಿ ಬರುತ್ತಿದ್ದ ವೃಕಾಸುರನ ಕಡೆಗೆ ನಡೆಯತೊಡಗಿದನು. ॥ ೨೭ ॥ ಆಗ ಭಗವಂತನು ಮೌಂಜಿಯ ಮೇಖಲೆಯನ್ನೂ, ಕೃಷ್ಣಮೃಗ ಚರ್ಮವನ್ನು, ದಂಡವನ್ನೂ, ರುದ್ರಾಕ್ಷಮಾಲೆಯನ್ನು ಧರಿಸಿದ್ದನು. ಅವನು ಪ್ರತಿಯೊಂದು ಅಂಗದಿಂದಲೂ ಧಗಧಗಿಸುತ್ತಿರುವ ದಿವ್ಯಜ್ಯೋತಿಯಿಂದ ಪ್ರಕಾಶಿಸುತ್ತಿದ್ದನು. ಕೈಯಲ್ಲಿ ದರ್ಭೆಗಳನ್ನು ಹಿಡಿದಿದ್ದನು. ವೃಕಾಸುರನನ್ನು ನೋಡುತ್ತಲೇ ಅವನು ಬಹಳ ನಮ್ರತೆಯಿಂದ ಬಾಗಿ ವಂದಿಸಿದನು. ॥ ೨೮ ॥

ಶ್ರೀಭಗವಾನುವಾಚ

ಶಾಕುನೇಯ ಭವಾನ್ ವ್ಯಕ್ತಂ ಶ್ರಾಂತಃ ಕಿಂ ದೂರಮಾಗತಃ।
ಕ್ಷಣಂ ವಿಶ್ರಮ್ಯತಾಂ ಪುಂಸ ಆತ್ಮಾಯಂ ಸರ್ವಕಾಮಧುಕ್
॥ ೨೯ ॥

ಯದಿ ನಃ ಶ್ರವಣಾಯಾಲಂ ಯುಷ್ಮದ್ವ್ಯವಸಿತಂ ವಿಭೋ।
ಭಣ್ಯತಾಂ ಪ್ರಾಯಶಃ ಪುಂಭಿರ್ಧೃತೈಃ ಸ್ವಾರ್ಥಾನ್ಸಮೀಹತೇ
॥ ೩೦ ॥

ಶ್ರೀಶುಕ ಉವಾಚ

ಏವಂ ಭಗವತಾ ಪೃಷ್ಟೋ ವಚಸಾಮೃತವರ್ಷಿಣಾ।
ಗತಕ್ಲಮೋಽಬ್ರವೀತ್ತಸ್ಮೈ ಯಥಾಪೂರ್ವಮನುಷ್ಠಿತಮ್
॥ ೩೧ ॥

ಶ್ರೀಭಗವಾನುವಾಚ

ಏವಂ ಚೇತ್ತರ್ಹಿ ತದ್ವಾಕ್ಯಂ ನ ವಯಂ ಶ್ರದ್ದಧೀಮಹಿ।
ಯೋ ದಕ್ಷಶಾಪಾತ್ ಪೈಶಾಚ್ಯಂ ಪ್ರಾಪ್ತಃ ಪ್ರೇತಪಿಶಾಚರಾಟ್
॥ ೩೨ ॥

ಯದಿ ವಸ್ತತ್ರ ವಿಶ್ರಂಭೋ ದಾನವೇಂದ್ರ ಜಗದ್ಗುರೌ।
ತರ್ಹ್ಯಂಗಾಶು ಸ್ಥವಿರಸಿ ಹಸ್ತಂ ನ್ಯಸ್ಯ ಪ್ರತೀಯತಾಮ್
॥ ೩೩ ॥

ಯದ್ಯಸತ್ಯಂ ವಚಃ ಶಂಭೋಃ ಕಥಂಚಿದ್ದಾನವರ್ಷಭ।
ತದೈನಂ ಜಹ್ಯಸದ್ವಾಚಂ ನ ಯದ್ವಕ್ತ್ರಾನೃತಂ ಪುನಃ
॥ ೩೪ ॥

ಇತ್ಥಂ ಭಗವತಶ್ಚಿತ್ರೈರ್ವಚೋಭಿಃ ಸ ಸುಪೇಶಲೈಃ।
ಭಿನ್ನಧೀರ್ವಿಸ್ಮೃತಃ ಶೀರ್ಷ್ಣಿ ಸ್ವಹಸ್ತಂ ಕುಮತಿರ್ಯಧಾತ್
॥ ೩೫ ॥

ಅಥಾಪತದ್ಭಿನ್ನಶಿರಾ ವಜ್ರಾಹತ ಇವ ಕ್ಷಣಾತ್।
ಜಯಶಬ್ದೋ ನಮಃಶಬ್ದಃ ಸಾಧುಶಬ್ದೋಽಭವದ್ದಿವಿ
॥ ೩೬ ॥

ಮುಮುಚುಃ ಪುಷ್ಪವರ್ಷಾಣಿ ಹತೇ ಪಾಪೇ ವೃಕಾಸುರೇ।
ದೇವರ್ಷಿಪಿತೃಗಂಧರ್ವಾ ಮೋಚಿತಃ ಸಂಕಟಾಚ್ಛಿವಃ
॥ ೩೭ ॥

ಬ್ರಹ್ಮಚಾರಿ ವೇಷಧಾರಿಯಾದ ಭಗವಂತನು ಹೇಳಿದನು – ಶಕುನಿ ನಂದನ ವೃಕಾಸುರನೇ! ನೀನು ಬಹಳ ಬಳಲಿದವನಂತೆ ಕಂಡು ಬರುತ್ತೀಯೆ. ಇಂದು ನೀನು ಬಹಳ ದೂರದಿಂದ ಬಂದಿರುವೆಯೋ? ಸ್ವಲ್ಪ ವಿಶ್ರಾಂತಿಯನ್ನು ಪಡೆದುಕೊ. ನೋಡು, ಈ ಶರೀರವು ಎಲ್ಲ ಸುಖಿಗಳ ಮೂಲವಾಗಿದೆ. ಇದರಿಂದಲೇ ಸಮಸ್ತ ಕಾಮನೆಗಳೂ ಕೈಗೂಡುವವು. ಇದಕ್ಕೆ ಹೆಚ್ಚು ಕಷ್ಟಕೊಡ ಬಾರದು. ॥ ೨೯ ॥, ನೀನಾದರೋ ಸರ್ವಸಮರ್ಥನಾಗಿರುವೆ. ಈ ಸಮಯದಲ್ಲಿ ನೀನು ಏನು ಮಾಡಬೇಕೆಂದಿರುವೆ? ನಾನು ಕೇಳಲು ಯೋಗ್ಯವಾಗಿದ್ದರೆ ಹೇಳು. ಏಕೆಂದರೆ ಪ್ರಪಂಚದಲ್ಲಿ ಜನರು ಸಹಾಯಕರಿಂದ ಬಹಳಷ್ಟು ಕೆಲಸವನ್ನು ಸಾಧಿಸಿಕೊಳ್ಳುವುದನ್ನು ನೋಡುತ್ತೇವೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಪ್ರತಿಯೊಂದು ಶಬ್ದವು ಅಮೃತದಲ್ಲಿ ಅದ್ದಿತೆಗೆದಂತಿತ್ತು. ಅವನ್ನು ಕೇಳಿದಾಗ ಅವನು ಕೊಂಚ ಸುಧಾರಿಸಿಕೊಂಡು ಕ್ರಮವಾಗಿ ತಾನು ಮಾಡಿದ ತಪಸ್ಸು, ಪಡೆದ ವರ, ಶಂಕರನನ್ನು ಬೆನ್ನಟ್ಟಿ ಹೋದುದೆಲ್ಲವನ್ನು ಮೊದಲಿನಿಂದ ಹೇಳಿದನು. ॥ ೩೧ ॥

ಶ್ರೀಭಗವಂತನು ಹೇಳಿದನು – ಸರಿ, ಹೀಗೋ ಮಾತು! ಅಯ್ಯಾ! ನಾವು ಆ ಶಿವನ ಮಾತಿನಲ್ಲಿ ವಿಶ್ವಾಸವಿಡುವುದಿಲ್ಲ, ನಿನಗೆ ಇದು ಗೊತ್ತಿಲ್ಲವೇ? ಅವನಾದರೋ ದಕ್ಷಪ್ರಜಾಪತಿಯ ಶಾಪದಿಂದ ಪಿಶಾಚಭಾವವನ್ನು ತಳೆದಿರುವನು. ಇಂದು ಅವನೇ ಪ್ರೇತಗಳ, ಪಿಶಾಚಗಳ ಸಾಮ್ರಾಟನಾಗಿದ್ದಾನೆ. ॥ ೩೨ ॥ ದಾನವೇಂದ್ರಾ! ನೀನು ಇಷ್ಟು ದೊಡ್ಡವನಾದರೂ ಇಂತಹ ಸಣ್ಣ-ಪುಟ್ಟ ಮಾತುಗಳಲ್ಲಿ ವಿಶ್ವಾಸವಿಡುತ್ತೀಯಲ್ಲ? ನೀನು ಈಗಲೂ ಅವನನ್ನು ಜಗದ್ಗುರು ಎಂದು ಭಾವಿಸುವುದಾದರೆ, ಅವನ ಮಾತಿನಲ್ಲಿ ವಿಶ್ವಾಸವಿಡುವೆಯಾದರೆ ಕೂಡಲೇ ನಿನ್ನ ಕೈಯನ್ನು ನಿನ್ನ ತಲೆಯ ಮೇಲೆ ಇಟ್ಟುಕೊಂಡು ಪರೀಕ್ಷಿಸಬಾರದೇ! ॥ ೩೩॥ ದಾನವಶಿರೋಮಣಿ! ಯಾವುದೇ ರೀತಿಯಿಂದ ಶಂಕರನ ಮಾತು ಸುಳ್ಳಾದರೆ ಆ ಅಸತ್ಯವಾದಿಯನ್ನು ಕೊಂದುಬಿಡು. ಇದರಿಂದ ಮತ್ತೆ ಅವನು ಸುಳ್ಳುಹೇಳಲಾರನು. ॥ ೩೪ ॥ ಪರೀಕ್ಷಿತನೇ! ಭಗವಂತನು ಇಂತಹ ಮೋಹಗೊಳಿಸುವಂತಹ ಅದ್ಭುತವಾದ ಸಿಹಿಯಾದ ಮಾತುಗಳನ್ನು ಕೇಳುತ್ತಲೇ ಅವನ ಬುದ್ಧಿಯು ಮಂಕಾಯಿತು. ಆ ದುರ್ಬುದ್ಧಿಯು ವರದಾನವನ್ನು ಮರೆತು ತನ್ನ ಕೈಯನ್ನೇ ತನ್ನ ತಲೆಯ ಮೇಲಿರಿಸಿಕೊಂಡನು. ॥ ೩೫ ॥ ಸರಿ, ಆ ಕ್ಷಣವೇ ಅವನ ತಲೆ ಒಡೆದು, ಸಿಡಿಲು ಬಡಿದವನಂತೆ ನೆಲಕ್ಕುರುಳಿ ಸತ್ತು ಹೋದನು. ಆ ಸಮಯದಲ್ಲಿ ದೇವತೆಗಳು ಆಕಾಶದಲ್ಲಿ ಸಾಧು! ಸಾಧು! ಎಂದು ಹೇಳುತ್ತಾ ನಮೋ ನಮಃ ಎಂದು ವಂದಿಸುತ್ತಾ ಜಯ-ಜಯಕಾರ ಮಾಡಿದರು. ॥ ೩೬ ॥ ಪಾಪಿಯಾದ ವೃಕಾಸುರನ ಮೃತ್ಯುವಿನಿಂದ ದೇವತೆಗಳು, ಪಿತೃಗಳು, ಗಂಧರ್ವರು ಅತ್ಯಂತ ಸಂತೋಷಗೊಂಡು ಪುಷ್ಪವೃಷ್ಟಿಗರೆದರು. ಭಗವಾನ್ ಶಂಕರನು ಅಂತಹ ವಿಕಟ ಸಂಕಟದಿಂದ ಮುಕ್ತನಾದನು. ॥ ೩೭ ॥

ಮುಕ್ತಂ ಗಿರಿಶಮಭ್ಯಾಹ ಭಗವಾನ್ ಪುರುಷೋತ್ತಮಃ।
ಅಹೋ ದೇವ ಮಹಾದೇವ ಪಾಪೋಽಯಂ ಸ್ವೇನ ಪಾಪ್ಮನಾ
॥ ೩೮ ॥

ಹತಃ ಕೋ ನು ಮಹತ್ತ್ವೀಶ ಜಂತುರ್ವೈ ಕೃತಕಿಲ್ಬಿಷಃ।
ಕ್ಷೇಮೀ ಸ್ಯಾತ್ ಕಿಮು ವಿಶ್ವೇಶೇ ಕೃತಾಗಸ್ಕೋ ಜಗದ್ಗುರೌ
॥ ೩೯ ॥

ಯ ಏವಮವ್ಯಾಕೃತಶಕ್ತ್ಯುದನ್ವತಃ
ಪರಸ್ಯ ಸಾಕ್ಷಾತ್ ಪರಮಾತ್ಮನೋ ಹರೇಃ।
ಗಿರಿತ್ರಮೋಕ್ಷಂ ಕಥಯೇಚ್ಛೃಣೋತಿ ವಾ
ವಿಮುಚ್ಯತೇ ಸಂಸೃತಿಭಿಸ್ತಥಾರಿಭಿಃ ॥ ೪೦ ॥

ಆಗ ಭಯ ಗೊಂಡಿರುವ ಶಂಕರನ ಬಳಿ ಭಗವಾನ್ ಪುರುಷೋತ್ತಮನು ಹೇಳಿದನು - ದೇವಾಧಿದೇವಾ! ಈ ದುಷ್ಟನನ್ನು ಅವನ ಪಾಪಗಳೇ ಕೊಂದು ಹಾಕಿದುದು ಸಂತೋಷದ ಮಾತೇ ಸರಿ. ಪರಮೇಶ್ವರನೇ! ಮಹಾಪುರಷರಿಗೆ ಅಪರಾಧವನ್ನು ಮಾಡಿದವರು ಯಾರು ತಾನೇ ಕ್ಷೇಮದಿಂದ ಇರಬಲ್ಲನು? ಮತ್ತೆ ಸಾಕ್ಷಾತ್ ಜಗದ್ಗುರು ವಿಶ್ವೇಶ್ವರನಾದ ನಿನಗೆ ಅಪರಾಧವನ್ನು ಮಾಡಿದ ಯಾರಾದರೂ ಕುಶಲಿಯಾಗಿ ಹೇಗೆ ಇರಬಲ್ಲರು? ॥ ೩೮-೩೯ ॥

ಅನಂತಶಕ್ತಿಗಳ ಸಮುದ್ರನಾದ ಭಗವಂತನ ಒಂದೊಂದು ಶಕ್ತಿಯೂ ಮಾತು-ಮನಸ್ಸಿನ ಸೀಮೆಯಿಂದ ಅತೀತವಾದುದು. ಅವನು ಪ್ರಕೃತಿಗಿಂತ ಪರನಾದ ಸಾಕ್ಷಾತ್ ಪರಮಾತ್ಮನಾಗಿದ್ದಾನೆ. ಶಂಕರನನ್ನು ಈ ಸಂಕಟದಿಂದ ಬಿಡಿಸಿದ ಅವನ ಈ ಲೀಲೆಯನ್ನು ಹೇಳುವವನು, ಕೇಳುವವನು ಸಂಸಾರ ಬಂಧನದಿಂದ ಮತ್ತು ಶತ್ರುಗಳ ಭಯದಿಂದ ಮುಕ್ತನಾಗಿ ಹೋಗುತ್ತಾನೆ. ॥ ೪೦ ॥

ಎಂಭತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೮೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುದ್ರಮೋಕ್ಷಣಂ ನಾಮ ಅಷ್ಟಾಶೀತಿತಮೋಽಧ್ಯಾಯಃ॥ ೮೮ ॥

ಎಂಭತ್ತೊಂಭತ್ತನೆಯ ಅಧ್ಯಾಯ

ಭೃಗು ಮಹರ್ಷಿಯು ತ್ರಿಮೂರ್ತಿಗಳನ್ನು ಪರೀಕ್ಷಿಸಿದುದು - ಭಗವಂತನು ಸತ್ತು ಹೋಗಿದ್ದ ಬ್ರಾಹ್ಮಣ ಬಾಲಕರನ್ನು ಮರಳಿ ತಂದು ಕೊಟ್ಟಿದ್ದು

ಶ್ರೀಶುಕ ಉವಾಚ

ಸರಸ್ವತ್ಯಾಸ್ತಟೇ ರಾಜನ್ನೃಷಯಃ ಸತ್ರಮಾಸತ।
ವಿತರ್ಕಃ ಸಮಭೂತ್ತೇಷಾಂ ತ್ರಿಷ್ವಧೀಶೇಷು ಕೋ ಮಹಾನ್
॥ ೧ ॥

ತಸ್ಯ ಜಿಜ್ಞಾಸಯಾ ತೇ ವೈ ಭೃಗುಂ ಬ್ರಹ್ಮಸುತಂ ನೃಪ।
ತಜ್ಞಪ್ತ್ಯೈ ಪ್ರೇಷಯಾಮಾಸುಃ ಸೋಽಭ್ಯಗಾದ್ಬ್ರಹ್ಮಣಃ ಸಭಾಮ್
॥ ೨ ॥

ನ ತಸ್ಮೈ ಪ್ರಹ್ವಣಂ ಸ್ತೋತ್ರಂ ಚಕ್ರೇ ಸತ್ತ್ವಪರೀಕ್ಷಯಾ।
ತಸ್ಮೈ ಚುಕ್ರೋಧ ಭಗವಾನ್ ಪ್ರಜ್ವಲನ್ ಸ್ವೇನ ತೇಜಸಾ
॥ ೩ ॥

ಸ ಆತ್ಮನ್ಯುತ್ಥಿತಂ ಮನ್ಯುಮಾತ್ಮಜಾಯಾತ್ಮನಾ ಪ್ರಭುಃ।
ಅಶೀಶಮದ್ಯಥಾ ವಹ್ನಿಂ ಸ್ವಯೋನ್ಯಾ ವಾರಿಣಾಽಽತ್ಮಭೂಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಒಮ್ಮೆ ಪವಿತ್ರವಾದ ಸರಸ್ವತೀ ನದಿಯ ತೀರದಲ್ಲಿ ಮಹಾಯಜ್ಞವನ್ನು ಪ್ರಾರಂಭಿಸುವ ಸಲುವಾಗಿ ಮಹಾ-ಮಹಾ ಋಷಿಮುನಿಗಳು ಸೇರಿದರು. ಅವರಲ್ಲಿ ಬ್ರಹ್ಮ-ವಿಷ್ಣು-ಶಿವರಲ್ಲಿ ಎಲ್ಲಕ್ಕಿಂತ ದೊಡ್ಡವರು ಯಾರು? ಎಂಬ ವಿಷಯದಲ್ಲಿ ವಿವಾದ ನಡೆಯುತ್ತಿತ್ತು. ॥ ೧ ॥ ಪರೀಕ್ಷಿತನೇ! ಅವರೆಲ್ಲರೂ ಈ ವಿಷಯವನ್ನು ತಿಳಿಯಲಿಕ್ಕಾಗಿ ಹಾಗೂ ಬ್ರಹ್ಮ ವಿಷ್ಣು ಮಹೇಶ್ವರರನ್ನು ಪರೀಕ್ಷಿಸುವ ಉದ್ದೇಶದಿಂದ ಬ್ರಹ್ಮಮಾನಸ ಪುತ್ರರಾದ ಭೃಗುಮಹರ್ಷಿಗಳನ್ನು ಅವರ ಬಳಿಗೆ ಕಳಿಸಿದರು. ಭೃಗುಮಹರ್ಷಿಗಳು ಮೊಟ್ಟ ಮೊದಲಿಗೆ ಬ್ರಹ್ಮದೇವರ ಸಭೆಗೆ ಹೋದರು. ॥ ೨ ॥ ಅವರು ಬ್ರಹ್ಮನ ಸತ್ವವನ್ನು ಪರೀಕ್ಷಿಸುವುದಕ್ಕಾಗಿ ಅವನನ್ನು ಸ್ತುತಿಸಲೂ ಇಲ್ಲ, ನಮಸ್ಕರಿಸಲೂ ಇಲ್ಲ. ಇದರಿಂದ ಬ್ರಹ್ಮನು ತನ್ನ ತೇಜದಿಂದ ಉರಿಯುತ್ತಿದ್ದನು. ಅವನು ಕ್ರೋಧಗೊಂಡಿರುವನೆಂದು ತಿಳಿಯಿತು.॥೩॥ ಆದರೆ ಸಮರ್ಥನಾದ ಬ್ರಹ್ಮದೇವರು ಇವನಾದರೋ ನನ್ನ ಪುತ್ರನಾಗಿದ್ದಾನೆಂದು ನೋಡಿದಾಗ ತನ್ನ ಮನಸ್ಸಿನಲ್ಲಿ ಎದ್ದ ಕ್ರೋಧಾಗ್ನಿಯನ್ನು ಅರಣಿಮಂಥನದಿಂದ ಉತ್ಪನ್ನವಾದ ಅಗ್ನಿಯನ್ನು ನೀರನ್ನು ಹಾಕಿ ನಂದಿಸುವಂತೆ ವಿವೇಕ ಬುದ್ಧಿಯ ಮೂಲಕ ಮನಸ್ಸಿನಲ್ಲೇ ಅಡಗಿಸಿಕೊಂಡನು. ॥ ೪ ॥

ತತಃ ಕೈಲಾಸಮಗಮತ್ ಸ ತಂ ದೇವೋ ಮಹೇಶ್ವರಃ ।
ಪರಿರಬ್ಧುಂ ಸಮಾರೇಭೇ ಉತ್ಥಾಯ ಭ್ರಾತರಂ ಮುದಾ
॥ ೫ ॥

ನೈಚ್ಛತ್ತ್ವಮಸ್ಯುತ್ಪಥಗ ಇತಿ ದೇವಶ್ಚುಕೋಪ ಹ ।
ಶೂಲಮುದ್ಯಮ್ಯ ತಂ ಹಂತುಮಾರೇಭೇ ತಿಗ್ಮಲೋಚನಃ
॥ ೬ ॥

ಪತಿತ್ವಾಪಾದಯೋರ್ದೇವೀ ಸಾಂತ್ವಯಾಮಾಸ ತಂ ಗಿರಾ ।
ಅಥೋ ಜಗಾಮ ವೈಕುಂಠಂ ಯತ್ರ ದೇವೋ ಜನಾರ್ದನಃ
॥ ೭ ॥

ಶಯಾನಂ ಶ್ರಿಯ ಉತ್ಸಂಗೇ ಪದಾ ವಕ್ಷಸ್ಯತಾಡಯತ್ ।
ತತ ಉತ್ಥಾಯ ಭಗವಾನ್ ಸಹ ಲಕ್ಷ್ಮ್ಯಾ ಸತಾಂ ಗತಿಃ
॥ ೮ ॥

ಸ್ವತಲ್ಪಾದವರುಹ್ಯಾಥ ನನಾಮ ಶಿರಸಾ ಮುನಿಮ್ ।
ಆಹ ತೇ ಸ್ವಾಗತಂ ಬ್ರಹ್ಮನ್ ನಿಷೀದಾತ್ರಾಸನೇ ಕ್ಷಣಮ್ ।
ಅಜಾನತಾಮಾಗತಾನ್ವಃ ಕ್ಷಂತುಮರ್ಹಥ ನಃ ಪ್ರಭೋ
॥ ೯ ॥

ಅತೀವ ಕೋಮಲೌ ತಾತ ಚರಣೌ ತೇ ಮಹಾಮುನೇ ।
ಇತ್ಯುಕ್ತ್ವಾ ವಿಪ್ರಚರಣೌ ಮರ್ದಯನ್ಸ್ವೇನ ಪಾಣಿನಾ
॥ ೧೦ ॥

ಪುನೀಹಿ ಸಹಲೋಕಂ ಮಾಂ ಲೋಕಪಾಲಾಂಶ್ಚಮದ್ಗತಾನ್ ।
ಪಾದೋದಕೇನ ಭವತಸ್ತೀರ್ಥಾನಾಂ ತೀರ್ಥಕಾರಿಣಾ
॥ ೧೧ ॥

ಅದ್ಯಾಹಂ ಭಗವನ್ ಲಕ್ಷ್ಮ್ಯಾ ಆಸಮೇಕಾಂತಭಾಜನಮ್ ।
ವತ್ಸ್ಯತ್ಯುರಸಿ ಮೇ ಭೂತಿರ್ಭವತ್ಪಾದಹತಾಂಹಸಃ
॥ ೧೨ ॥

ಶ್ರೀಶುಕ ಉವಾಚ

ಏವಂ ಬ್ರುವಾಣೇ ವೈಕುಂಠೇ ಭೃಗುಸ್ತನ್ಮಂದ್ರಯಾ ಗಿರಾ ।
ನಿರ್ವೃತಸ್ತರ್ಪಿತಸ್ತೂಷ್ಣೀಂ ಭಕ್ತ್ಯುತ್ಕಂಠೋಽಶ್ರುಲೋಚನಃ
॥ ೧೩ ॥

ಪುನಶ್ಚ ಸತ್ರಮಾವ್ರಜ್ಯ ಮುನೀನಾಂ ಬ್ರಹ್ಮವಾದಿನಾಮ್ ।
ಸ್ವಾನುಭೂತಮಶೇಷೇಣ ರಾಜನ್ ಭೃಗುರವರ್ಣಯತ್
॥ ೧೪ ॥

ಅಲ್ಲಿಂದ ಭೃಗುಗಳು ಕೈಲಾಸಕ್ಕೆ ಹೋದರು. ದೇವಾಧಿದೇವ ನಾದ ಭಗವಾನ್ ಶಂಕರನು ತನ್ನ ತಮ್ಮನಾದ ಭೃಗುವು ಬಂದಿರುವ ನೆಂದು ನೋಡಿದಾಗ ಆನಂದದಿಂದ ಎದ್ದುನಿಂತು ಆಲಿಂಗಿಸಿ ಕೊಳ್ಳಲು ಬಾಹುಗಳನ್ನು ಚಾಚಿದನು. ॥ ೫ ॥ ಆದರೆ ಭೃಗು ಮಹರ್ಷಿಗಳು ಅವನ ಆಲಿಂಗನವನ್ನು ತಿರಸ್ಕರಿಸುತ್ತಾ ಹೇಳುತ್ತಾರೆ 'ನೀನು ಲೋಕ ಮತ್ತು ವೇದದ ಮರ್ಯಾದೆಯನ್ನು ಉಲ್ಲಂಘಿ ಸಿರುವೆ. ಇದರಿಂದ ನಾನು ನಿನ್ನನ್ನು ಆಲಿಂಗಿಸಿಕೊಳ್ಳುವುದಿಲ್ಲ.' ಭೃಗುಗಳ ಮಾತನ್ನು ಕೇಳಿದ ಭಗವಾನ್ ಶಂಕರನು ಕ್ರೋಧದಿಂದ ಉರಿದೆದ್ದು, ಹುಬ್ಬನ್ನು ಮೇಲೇರಿಸಿಕೊಂಡು ತ್ರಿಶೂಲವನ್ನೆತ್ತಿಕೊಂಡು ಭೃಗುವನ್ನು ಕೊಲ್ಲಲು ಬಯಸಿದನು. ॥ ೬ ॥ ಆದರೆ ಅದೇ ಸಮಯದಲ್ಲಿ ಸತೀದೇವಿಯು ಅವನ ಚರಣಗಳನ್ನು ಹಿಡಿದು ಕೊಂಡು ಬಹಳ ಅನುನಯಗಳಿಂದ ಅವನ ಕ್ರೋಧವನ್ನು ಶಾಂತ ಗೊಳಿಸಿದಳು. ಮತ್ತೆ ಭೃಗುಮಹರ್ಷಿಗಳು ಭಗವಾನ್ ವಿಷ್ಣುವಿನ ನಿವಾಸಸ್ಥಾನವಾದ ವೈಕುಂಠಕ್ಕೆ ಹೋದರು. ॥ ೭ ॥ ಆ ಸಮಯ ದಲ್ಲಿ ಭಗವಾನ್ ವಿಷ್ಣುವು ಲಕ್ಷ್ಮೀದೇವಿಯ ತೊಡೆಯ ಮೇಲೆ ತಲೆಯನ್ನಿಟ್ಟು ಒರಗಿದ್ದನು. ಭೃಗುಗಳು ಹೋಗಿ ಅವನ ವಕ್ಷಸ್ಥಳಕ್ಕೆ, ಕಾಲಿನಿಂದ ಒದ್ದು ಬಿಟ್ಟನು. ಭಕ್ತವತ್ಸಲನಾದ ಭಗವಾನ್ ಮಹಾ ವಿಷ್ಣುವು ಲಕ್ಷ್ಮೀದೇವಿಯೊಂದಿಗೆ ಎದ್ದು ಲಗುಬಗೆಯಿಂದ ಹಾಸಿಗೆ ಯಿಂದ ಕೆಳಗಿಳಿದು ಮುನಿಗಳಿಗೆ ತಲೆಬಾಗಿ ವಂದಿಸಿದನು. ಭಗವಂತನೆಂದನು – ಬ್ರಾಹ್ಮಣಶ್ರೇಷ್ಠರೇ! ತಾವು ಬಂದುದು ಬಹಳ ಚೆನ್ನಾಯ್ತು, ತಮಗೆ ಸ್ವಾಗತ ಕೋರುತ್ತೇವೆ. ಈ ಸುಖಾಸನ ದಲ್ಲಿ ಕುಳಿತು ವಿಶ್ರಮಿಸಿಕೊಳ್ಳಿ. ಸ್ವಾಮಿ! ತಮ್ಮ ಶುಭಾಗಮನದ ವಿಚಾರತಿಳಿದಿರಲಿಲ್ಲ, ಇಲ್ಲದಿದ್ದರೆ ನಿಮ್ಮನ್ನು ಸ್ವಾಗತಿಸಲು ನಾನೇ ಮುಂದೆ ಬರುತ್ತಿದ್ದೆ. ನನ್ನ ಅಪರಾಧವನ್ನು ಕ್ಷಮಿಸಿಬಿಡಿ. ॥ ೮-೯ ॥ ಮಹಾಮುನಿಗಳೇ! ತಮ್ಮ ಚರಣಗಳು ಅತ್ಯಂತ ಕೋಮಲವಾಗಿದೆ ಎಂದು ಹೇಳಿ ಭೃಗುಗಳ ಚರಣಗಳನ್ನು ಭಗವಂತನು ತನ್ನ ಕೈಗಳಿಂದ ಒತ್ತತೊಡಗಿದನು. ॥ ೧೦ ॥ ಮಹರ್ಷಿಯೇ! ತಮ್ಮ ಚರಣಗಳ ಜಲವು ತೀರ್ಥಗಳನ್ನು ತೀರ್ಥವಾಗಿಸುವಂತಹುದು. ನೀವು ಅದರಿಂದ ಈ ವೈಕುಂಠಲೋಕವನ್ನು, ನನ್ನನ್ನು ಮತ್ತು ಲೋಕಪಾಲಕರನ್ನು ಪವಿತ್ರಗೊಳಿಸಿದಿರಿ. ॥ ೧೧ ॥ ಪೂಜ್ಯರೇ! ತಮ್ಮ ಚರಣಕಮಲಗಳ ಸ್ಪರ್ಶದಿಂದ ನನ್ನ ಎಲ್ಲ ಪಾಪಗಳು ತೊಳೆದುಹೋದುವು. ಇಂದು ನಾನು ಲಕ್ಷ್ಮೀದೇವಿಯ ಏಕಮಾತ್ರ ಆಶ್ರಯನಾದೆ. ಈಗ ನಿಮ್ಮ ಚರಣಗಳಿಂದ ಅಂಕಿತಗೊಂಡ ನನ್ನ ವಕ್ಷಸ್ಥಳದಲ್ಲಿ ಲಕ್ಷ್ಮಿಯು ಸದಾ-ಸರ್ವದಾ ನಿವಾಸ ಮಾಡುವಳು. ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಅತ್ಯಂತ ಗಂಭೀರ ವಾಣಿಯಿಂದ ಹೀಗೆ ಹೇಳಿದಾಗ ಭೃಗುಮುನಿ ಪರಮಸುಖಿಗಳೂ, ತೃಪ್ತರೂ ಆದರು. ಭಕ್ತಿಯ ಉದ್ರೇಕದಿಂದ ಅವರ ಕಂಠವು ಬಿಗಿದುಕೊಂಡಿತು. ಕಣ್ಣುಗಳಲ್ಲಿ ನೀರು ತುಂಬಿಬಂದು, ಮೌನವಾಗಿಬಿಟ್ಟರು. ॥ ೧೩ ॥ ಪರೀಕ್ಷಿತನೇ! ಭೃಗಮುನಿಗಳು ಅಲ್ಲಿಂದ ಮರಳಿ ಯಜ್ಞಕಾರ್ಯ ನಡೆವಲ್ಲಿ ಬ್ರಹ್ಮ ವಾದಿಗಳಾದ ಮುನಿಗಳ ಸತ್ಸಂಗದಲ್ಲಿ ಬಂದು ಸೇರಿ ಬ್ರಹ್ಮಾ, ಶಿವ ಮತ್ತು ವಿಷ್ಣು ಭಗವಂತರಲ್ಲಿ ನಡೆದುದೆಲ್ಲವನ್ನು ಹೇಳಿದರು. ॥ ೧೪ ॥

ತನ್ನಿಶಮ್ಯಾಥ ಮುನಯೋ ವಿಸ್ಮಿತಾ ಮುಕ್ತಸಂಶಯಾಃ ।
ಭೂಯಾಂಸಂ ಶ್ರದ್ದಧುರ್ವಿಷ್ಣುಂ ಯತಃ ಶಾಂತಿರ್ಯತೋಽಭಯಮ್
॥ ೧೫ ॥

ಧರ್ಮಃ ಸಾಕ್ಷಾದ್ಯತೋ ಜ್ಞಾನಂ ವೈರಾಗ್ಯಂ ಚ ತದನ್ವಿತಮ್ ।
ಐಶ್ವರ್ಯಂ ಚಾಷ್ಟಧಾ ಯಸ್ಮಾದ್ಯಶಶ್ಚಾತ್ಮಮಲಾಪಹಮ್
॥ ೧೬ ॥

ಮುನೀನಾಂ ನ್ಯಸ್ತದಂಡಾನಾಂ ಶಾಂತಾನಾಂ ಸಮಚೇತಸಾಮ್ ।
ಅಕಿಂಚನಾನಾಂ ಸಾಧೂನಾಂ ಯಮಾಹುಃ ಪರಮಾಂ ಗತಿಮ್
॥ ೧೭ ॥

ಸತ್ತ್ವಂ ಯಸ್ಯ ಪ್ರಿಯಾ ಮೂರ್ತಿರ್ಬ್ರಾಹ್ಮಣಾಸ್ತಿಷ್ಟದೇವತಾಃ ।
ಭಜಂತ್ಯನಾಶಿಷಃ ಶಾಂತಾ ಯಂ ವಾ ನಿಪುಣಬುದ್ಧಯಃ
॥ ೧೮ ॥

ತ್ರಿವಿಧಾಕೃತಯಸ್ತಸ್ಯ ರಾಕ್ಷಸಾ ಅಸುರಾಃ ಸುರಾಃ ।
ಗುಣಿನ್ಯಾ ಮಾಯಯಾ ಸೃಷ್ಟಾಃ ಸತ್ತ್ವಂ ತತ್ತೀರ್ಥಸಾಧನಮ್
॥ ೧೯ ॥

ಶ್ರೀಶುಕ ಉವಾಚ

ಏವಂ ಸಾರಸ್ವತಾ ವಿಪ್ರಾ ನೃಣಾಂ ಸಂಶಯನುತ್ತಯೇ ।
ಪುರುಷಸ್ಯ ಪದಾಂಭೋಜಸೇವಯಾ ತದ್ಗತಿಂ ಗತಾಃ
॥ ೨೦ ॥

ಸೂತ ಉವಾಚ

ಇತ್ಯೇತನ್ಮುನಿತನಯಾಸ್ಯಪದ್ಮಗಂಧ-
ಪೀಯೂಷಂ ಭವಭಯಭಿತ್ಪರಸ್ಯ ಪುಂಸಃ ।
ಸುಶ್ಲೋಕಂ ಶ್ರವಣಪುಟೈಃ ಪಿಬತ್ಯಭೀಕ್ಷ್ಣಂ
ಪಾಂಥೋಽಧ್ವಭ್ರಮಣಪರಿಶ್ರಮಂ ಜಹಾತಿ ॥ ೨೧ ॥

ಶ್ರೀಶುಕ ಉವಾಚ

ಏಕದಾ ದ್ವಾರವತ್ಯಾಂ ತು ವಿಪ್ರಪತ್ನ್ಯಾಃ ಕುಮಾರಕಃ ।
ಜಾತಮಾತ್ರೋ ಭುವಂ ಸ್ಪೃಷ್ಟ್ವಾ ಮಮಾರ ಕಿಲ ಭಾರತ
॥ ೨೨ ॥

ವಿಪ್ರೋ ಗೃಹೀತ್ವಾ ಮೃತಕಂ ರಾಜದ್ವಾರ್ಯುಪಧಾಯ ಸಃ ।
ಇದಂ ಪ್ರೋವಾಚ ವಿಲಪನ್ನಾತುರೋ ದೀನಮಾನಸಃ
॥ ೨೩ ॥

ಬ್ರಹ್ಮದ್ವಿಷಃ ಶಠಧಿಯೋ ಲುಬ್ಧಸ್ಯ ವಿಷಯಾತ್ಮನಃ ।
ಕ್ಷತ್ರಬಂಧೋಃ ಕರ್ಮದೋಷಾತ್ಪಂಚತ್ವಂ ಮೇ ಗತೋಽರ್ಭಕಃ
॥ ೨೪ ॥

ಭೃಗುಮುನಿಗಳ ಅನುಭವವನ್ನು ಕೇಳಿದ ಎಲ್ಲ ಋಷಿ-ಮುನಿಗಳಿಗೆ ಅತ್ಯಂತ ವಿಸ್ಮಯವಾಯಿತು. ಅವರಲ್ಲಿದ್ದ ಸಂದೇಹ ದೂರವಾಯಿತು. ಅಂದಿನಿಂದ ಅವರು ಶಾಂತಿ ಮತ್ತು ಅನುಭವಗಳ ಉದ್ಗಮಸ್ಥಾನವಾದ ಭಗವಾನ್ ವಿಷ್ಣುವನ್ನೇ ಸರ್ವೋತ್ತಮನೆಂದು ಭಾವಿಸಿತೊಡಗಿದರು. ॥ ೧೫ ॥ ಭಗವಾನ್ ವಿಷ್ಣುವಿನಿಂದಲೇ ಸಾಕ್ಷಾತ್ ಧರ್ಮ, ಜ್ಞಾನ, ವೈರಾಗ್ಯ, ಎಂಟು ಬಗೆಯ ಐಶ್ವರ್ಯ ಮತ್ತು ಚಿತ್ತವನ್ನು ಶುದ್ಧಗೊಳಿಸುವ ಯಶಸ್ಸು ಪ್ರಾಪ್ತವಾಗುತ್ತದೆ. ॥ ೧೬ ॥ ಶಾಂತರೂ, ಸಮಚಿತ್ತರೂ, ಅಕಿಂಚನರೂ, ಎಲ್ಲರಿಗೆ ಅಭಯವನ್ನು ಕೊಡುವವರೂ ಆದ ಸಾಧು-ಸಂತರಿಗೆ ಅವನೇ ಏಕಮಾತ್ರ ಪರಮಗತಿಯಾಗಿದ್ದಾನೆ ಎಂದು ಸಮಸ್ತ ಶಾಸ್ತ್ರಗಳು ಹೇಳುತ್ತವೆ. ॥ ೧೭ ॥ ಶುದ್ಧಸತ್ತ್ವವೇ ಅವನಿಗೆ ಪ್ರಿಯವಾದ ಶರೀರ. ಬ್ರಾಹ್ಮಣರೇ ಅವನ ಇಷ್ಟದೇವರು. ನಿಷ್ಕಾಮರೂ, ಶಾಂತಸ್ವಭಾವದವರೂ, ವಿವೇಕ ಸಂಪನ್ನರೂ ಅಂತಹ ಶ್ರೀಹರಿಯನ್ನೇ ಭಜಿಸುತ್ತಾರೆ. ॥ ೧೮ ॥ ಭಗವಂತನ ಗುಣಮಯಿಮಾಯೆಯು ರಾಕ್ಷಸ ಅಸುರ-ದೇವತೆಗಳೆಂಬ ಮೂರು ರೂಪಗಳನ್ನು ಅವನಲ್ಲಿ ಕಲ್ಪಿಸಿದೆ. ಇವುಗಳಲ್ಲಿ ಸತ್ವಗುಣವೇ ಅವನ ಪ್ರಾಪ್ತಿಯ ಸಾಧನೆಯಾಗಿದೆ. ಅವನು ಸಾಕ್ಷಾತ್ ಸಮಸ್ತ ಪುರುಷಾರ್ಥ ಸ್ವರೂಪನಾಗಿದ್ದಾನೆ. ॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಸರಸ್ವತೀ ತೀರದಲ್ಲಿದ್ದ ಋಷಿಗಳು ತಮಗಾಗಿ ಅಲ್ಲ ; ಮನುಷ್ಯರ ಸಂಶಯವನ್ನು ದೂರಗೊಳಿಸಲೆಂದೇ ಈ ಯುಕ್ತಿಯನ್ನು ರಚಿಸಿದ್ದರು. ಪುರುಷೋತ್ತಮ ಭಗವಂತನ ಚರಣಕಮಲಗಳ ಸೇವೆ ಮಾಡಿ ಅವರೆಲ್ಲರೂ ಅವನ ಪರಮಪದವನ್ನು ಪಡೆದುಕೊಂಡರು. ॥ ೨೦ ॥

ಸೂತಪುರಾಣಿಕರು ಹೇಳುತ್ತಾರೆ - ಶೌನಕಾದಿ ಋಷಿಗಳೇ! ಹೀಗೆ ವ್ಯಾಸಮುನಿಗಳ ಪುತ್ರರಾದ ಶ್ರೀಶುಕಮಹಾಮುನಿಗಳ ಮುಖಾರವಿಂದದಿಂದ ಹೊರಟ ಸುಗಂಧಯುಕ್ತವಾದ, ಸಂಸಾರ ಭಯವನ್ನು ಹೋಗಲಾಡಿಸುವ, ಪರಮಪುರುಷನ ಶ್ಲಾಘ್ಯವಾದ ಹರಿಕಥಾಮೃತವನ್ನು ಕಿವಿಗಳಿಂದ ಆಡಿಗಡಿಗೆ ಪಾನಮಾಡುವವರು ಸಂಸಾರದಲ್ಲಿ ಅಲೆದಾಡುವ ಆಯಾಸದಿಂದ ಮುಕ್ತರಾಗುತ್ತಾರೆ. ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಮ್ಮೆ ದ್ವಾರಕಾಪಟ್ಟಣದಲ್ಲಿ ಬ್ರಾಹ್ಮಣಿಯೊಬ್ಬಳ ಗರ್ಭದಿಂದ ಒಂದು ಮಗು ಹುಟ್ಟಿತು. ಆದರೆ ಅದು ಭೂಸ್ಪರ್ಶವಾಗುತ್ತಲೇ ತೀರಿಹೋಯಿತು. ॥ ೨೨ ॥ ಬ್ರಾಹ್ಮಣನು ತನ್ನ ಮೃತ ಬಾಲಕನನ್ನು ಎತ್ತಿಕೊಂಡು ದ್ವಾರಕೆಯ ಮಹಾದ್ವಾರಕ್ಕೆ ಹೋದನು, ಅಲ್ಲಿ ಅದನ್ನಿಟ್ಟು ಅತ್ಯಂತ ದೀನ ಮನಸ್ಸಿನಿಂದ ತವಕಗೊಂಡಿದ್ದ ಅವನು ಈ ರೀತಿ ಹೇಳತೊಡಗಿದನು. ॥ ೨೩ ॥ ಬ್ರಾಹ್ಮಣದ್ರೋಹಿಯಾದ, ಧೂರ್ತನಾದ, ಕೃಪಣನಾದ, ವಿಷಯಲಂಟಪನಾದ ರಾಜನ ಕರ್ಮದೋಷದಿಂದಲೇ ನನ್ನ ಮಗುವು ಸತ್ತುಹೋಯಿತು. ಇದರಲ್ಲಿ ಸಂದೇಹವೇ ಇಲ್ಲ. ॥ ೨೪ ॥ ಹಿಂಸಾಪರಾಯಣನಾದ,

ಹಿಂಸಾವಿಹಾರಂ ನೃಪತಿಂ ದುಃಶೀಲಮಜಿತೇಂದ್ರಿಯಮ್ ।
ಪ್ರಜಾ ಭಜಂತ್ಯಃ ಸೀದಂತಿ ದರಿದ್ರಾ ನಿತ್ಯದುಃಖಿತಾಃ
॥ ೨೫ ॥

ಏವಂ ದ್ವಿತೀಯಂ ವಿಪ್ರರ್ಷಿಸ್ಸುತೀಯಂ ತ್ವೇವಮೇವ ಚ ।
ವಿಸೃಜ್ಯ ಸ ನೃಪದ್ವಾರಿ ತಾಂ ಗಾಥಾಂ ಸಮಗಾಯತ
॥ ೨೬ ॥

ತಾಮರ್ಜುನ ಉಪಶ್ರುತ್ಯ ಕರ್ಹಿಚಿತ್ ಕೇಶವಾಂತಿಕೇ ।
ಪರೇತೇ ನವಮೇ ಬಾಲೇ ಬ್ರಾಹ್ಮಣಂ ಸಮಭಾಷತ
॥ ೨೭ ॥

ಕಿಂಸ್ವಿದ್ ಬ್ರಹ್ಮಂಸ್ತ್ವನ್ನಿವಾಸೇ ಇಹ ನಾಸ್ತಿ ಧನುರ್ಧರಃ ।
ರಾಜನ್ಯಬಂಧುರೇತೇ ವೈ ಬ್ರಾಹ್ಮಣಾಃ ಸತ್ರ ಆಸತೇ
॥ ೨೮ ॥

ಧನದಾರಾತ್ಮಜಾಪೃಕ್ತಾ ಯತ್ರ ಶೋಚಂತಿ ಬ್ರಾಹ್ಮಣಾಃ ।
ತೇ ವೈ ರಾಜನ್ಯವೇಷೇಣ ನಟಾ ಜೀವಂತ್ಯಸುಂಭರಾಃ
॥ ೨೯ ॥

ಅಹಂ ಪ್ರಜಾವಾಂ ಭಗವನ್ ರಕ್ಷಿಷ್ಯೇ ದೀನಯೋರಿಹ ।
ಅನಿಸ್ತೀರ್ಣಪ್ರತಿಜ್ಞೋಽಗ್ನಿಂ ಪ್ರವೇಕ್ಷ್ಯೇ ಹತಕಲ್ಮಷಃ
॥ ೩೦ ॥

ಬ್ರಾಹ್ಮಣ ಉವಾಚ

ಸಂಕರ್ಷಣೋ ವಾಸುದೇವಃ ಪ್ರದ್ಯುಮ್ನೋ ಧನ್ವಿನಾಂ ವರಃ ।
ಅನಿರುದ್ಧೋಽಪ್ರತಿರಥೋ ನ ತ್ರಾತುಂ ಶಕ್ನುವಂತಿ ಯತ್
॥ ೩೧ ॥

ತತ್ ಕಥಂ ನು ಭವಾನ್ ಕರ್ಮ ದುಷ್ಕರಂ ಜಗದೀಶ್ವರೈಃ ।
ಚಿಕೀರ್ಷಸಿ ತ್ವಂ ಬಾಲಿಶ್ಯಾತ್ ತನ್ನ ಶ್ರದ್ದಧ್ಮಹೇ ವಯಮ್
॥ ೩೨ ॥

ಅರ್ಜುನ ಉವಾಚ

ನಾಹಂ ಸಂಕರ್ಷಣೋ ಬ್ರಹ್ಮನ್ ನ ಕೃಷ್ಣ ಕಾರ್ಷ್ಣಿರೇವ ಚ ।
ಅಹಂ ವಾ ಅರ್ಜುನೋ ನಾಮ ಗಾಂಡೀವಂ ಯಸ್ಯ ವೈ ಧನುಃ
॥ ೩೩ ॥

ಮಾವಮಂಸ್ಥಾ ಮಮ ಬ್ರಹ್ಮನ್-
ವೀರ್ಯಂ ತ್ರ್ಯಂಬಕತೋಷಣಮ್ ।
ಮೃತ್ಯುಂ ವಿಜಿತ್ಯ ಪ್ರಧನೇ
ಆನೇಷ್ಯೇ ತೇ ಪ್ರಜಾಂ ಪ್ರಭೋ ॥ ೩೪ ॥

ದುಃಶೀಲನಾದ, ವಿಷಯಲಂಟಪನಾದ ಮನುಷ್ಯನನ್ನು ರಾಜನೆಂದು ಭಾವಿಸಿ ಅವನ ಸೇವೆ ಮಾಡುವ ಪ್ರಜೆಗಳು ದರಿದ್ರರಾಗಿ ದುಃಖದ ಮೇಲೆ ದುಃಖವನ್ನು ಅನುಭವಿಸುತ್ತಾ ವಿನಾಶ ಹೊಂದುವರು. ॥ ೨೫ ॥ ಪರೀಕ್ಷಿತನೇ! ಹೀಗೆಯೇ ಎರಡನೇ ಮೂರನೇ ಮಕ್ಕಳು ಹುಟ್ಟುತ್ತಲೇ ಸತ್ತು ಹೋದಾಗ ಆ ಬ್ರಾಹ್ಮಣನು ಮಗುವಿನ ಶವವನ್ನು ಅರಮನೆಯ ಮಹಾದ್ವಾರದಲ್ಲಿಟ್ಟು ಹಿಂದಿನಂತೆಯೇ ಮಾತುಗಳನ್ನಾಡಿದನು. ॥ ೨೬ ॥ ಒಂಭತ್ತನೇ ಮಗುವೂ ಸತ್ತು ಅವನು ರಾಜದ್ವಾರಕ್ಕೆ ಬಂದಾಗ ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನ ಬಳಿಯಲ್ಲಿ ಅರ್ಜುನನೂ ಕುಳಿತಿದ್ದನು. ಅವನು ಬ್ರಾಹ್ಮಣನ ಮಾತನ್ನು ಕೇಳಿ ಅವನಲ್ಲಿ ಕೇಳಿದನು. ॥ ೨೭ ॥ ಎಲೈ ಬ್ರಾಹ್ಮಣನೇ! ನೀನು ವಾಸಿಸುವ ದ್ವಾರಕೆಯಲ್ಲಿ ಯಾರೂ ಧನುರ್ಧಾರಿಯಾದ ಕ್ಷತ್ರಿಯನಿಲ್ಲವೇ? ಈ ಯದುವಂಶೀಯರು ಬ್ರಾಹ್ಮಣರಂತೆ ಪ್ರಜಾಪಾಲನೆಯನ್ನು ಬಿಟ್ಟು ಯಾವುದೋ ಯಜ್ಞದಲ್ಲಿ ಕುಳಿತಂತಿದೆ. ॥ ೨೮ ॥ ಯಾರ ರಾಜ್ಯದಲ್ಲಿ ಬ್ರಾಹ್ಮಣರು ಪತ್ನೀ-ಪುತ್ರರು-ಧನ ಇವುಗಳನ್ನು ಕಳೆದುಕೊಂಡು ದುಃಖಿಸುವರೋ ಅವರು ನಿಜವಾದ ಕ್ಷತ್ರಿಯರಾಗಿರದೆ ರಾಜರ ವೇಷದಲ್ಲಿರುವ ನಟರೇ ಸರಿ. ಅವರ ಜೀವನವು ವ್ಯರ್ಥವಾದುದು. ॥ ೨೯ ॥

ಬ್ರಾಹ್ಮಣೋತ್ತಮನೇ! ದಂಪತಿಗಳಾದ ನೀವು ಪುತ್ರರ ಮೃತ್ಯು ವಿನಿಂದಾಗಿ ಅತ್ಯಂತ ದೀನರಾಗಿರುವಿರಿ ಎಂದು ನಾನು ತಿಳಿಯುತ್ತೇನೆ. ನಾನು ನಿನ್ನ ಸಂತಾನವನ್ನು ರಕ್ಷಿಸಿಕೊಡುತ್ತೇನೆ. ನಾನು ನನ್ನ ಪ್ರತಿಜ್ಞೆಯನ್ನು ಈಡೇರಿಸದಿದ್ದರೆ ಅಗ್ನಿಪ್ರವೇಶ ಮಾಡಿ ಪ್ರತಿಜ್ಞಾ ಭಂಗದ ಪಾಪವನ್ನು ಕಳೆದುಕೊಳ್ಳುವೆನು. ॥ ೩೦ ॥

ಬ್ರಾಹ್ಮಣನೆಂದನು – ಅರ್ಜುನಾ! ಇಲ್ಲಿ ಬಲರಾಮ, ಭಗವಾನ್ ಶ್ರೀಕೃಷ್ಣ ಧನುಷ್ಮಂತರಲ್ಲಿ ಶ್ರೇಷ್ಠನಾದ ಪ್ರದ್ಯುಮ್ನ ಅಪ್ರತಿರಥನಾದ ಅನಿರುದ್ಧ-ಇಂತಹ ಮಹಾ-ಮಹಾವೀರರೂ ನನ್ನ ಬಾಲಕರನ್ನು ರಕ್ಷಿಸಲು ಅಸಮರ್ಥರಾಗಿರುವಾಗ ಈ ಜಗದೀಶ್ವರರಿಗೆ ಕಠಿಣವೆನಿಸಿದ ಕಾರ್ಯವನ್ನು ಏಕಾಕಿಯಾದ ನೀನು ಹೇಗೆ ತಾನೇ ಮಾಡಬಲ್ಲೇ! ನಿಜವಾಗಿಯೂ ಇದು ನಿನ್ನ ಮೂರ್ಖತೆಯೇ ಆಗಿದೆ. ನಾನಂತೂ ನಿನ್ನ ಮಾತಿನಲ್ಲಿ ಖಂಡಿತವಾಗಿ ವಿಶ್ವಾಸವಿಡುವುದಿಲ್ಲ. ॥ ೩೧-೩೨ ॥

ಅರ್ಜುನನು ಹೇಳಿದನು – ಬ್ರಾಹ್ಮಣೋತ್ತಮನೇ! ನಾನು ಶ್ರೀಕೃಷ್ಣನಾಗಲೀ, ಬಲರಾಮನಾಗಲೀ, ಪ್ರದ್ಯುಮ್ನನಾಗಲೀ ಅಲ್ಲ. ನಾನು ಅರ್ಜುನನಾಗಿದ್ದೇನೆ. ನನ್ನ ಗಾಂಡೀವವೆಂಬ ಧನುಸ್ಸು ವಿಶ್ವವಿಖ್ಯಾತವಾಗಿದೆ. ॥ ೩೩ ॥ ವಿಪ್ರೋತ್ತಮನೇ! ನೀನು ನನ್ನ ಬಲ ಪೌರುಷಗಳನ್ನು ತಿರಸ್ಕರಿಸಬೇಡ. ನಾನು ನನ್ನ ಪರಾಕ್ರಮದಿಂದ ಭಗವಾನ್ ಶಂಕರನನ್ನು ಸಂತೋಷಗೊಳಿಸಿದ್ದುದನ್ನು ನೀನು ತಿಳಿಯೆ. ಸ್ವಾಮಿ! ಹೆಚ್ಚೇನು ಹೇಳಲಿ. ನಾನು ಯುದ್ಧದಲ್ಲಿ ಸಾಕ್ಷಾತ್ ಮೃತ್ಯುವನ್ನು ಗೆದ್ದು ನಿನ್ನ ಸಂತಾನವನ್ನು ತಂದು ಕೊಡುವೆ. ॥ ೩೪ ॥

ಏವಂ ವಿಶ್ರಂಭಿತೋ ವಿಪ್ರಃ ಫಾಲ್ಗುನೇನ ಪರಂತಪ ।
ಜಗಾಮ ಸ್ವಗೃಹಂ ಪ್ರೀತಃ ಪಾರ್ಥವೀರ್ಯಂ ನಿಶಾಮಯನ್
॥ ೩೫ ॥

ಪ್ರಸೂತಿಕಾಲ ಆಸನ್ನೇ ಭಾರ್ಯಯಾ ದ್ವಿಜಸತ್ತಮಃ ।
ಪಾಹಿ ಪಾಹಿ ಪ್ರಜಾಂ ಮೃತ್ಯೋರಿತ್ಯಾಹಾರ್ಜುನಮಾತುರಃ
॥ ೩೬ ॥

ಸ ಉಪಸ್ಪೃಶ್ಯ ಶುಚ್ಯಂಭೋ ನಮಸ್ಕೃತ್ಯ ಮಹೇಶ್ವರಮ್ ।
ದಿವ್ಯಾನ್ಯಸ್ತ್ರಾಣಿ ಸಂಸ್ಮೃತ್ಯ ಸಜ್ಯಂ ಗಾಂಡೀವಮಾದದೇ
॥ ೩೭ ॥

ನ್ಯರುಣತ್ಸೂತಿಕಾಗಾರಂ ಶರೈರ್ನಾನಾಸ್ತ್ರ ಯೋಜಿತೈಃ ।
ತಿರ್ಯಗೂರ್ಧ್ವಮಧಃ ಪಾರ್ಥಶ್ಚಕಾರ ಶರಪಂಜರಮ್
॥ ೩೮ ॥

ತತಃ ಕುಮಾರಃ ಸಂಜಾತೋ ವಿಪ್ರಪತ್ಯಾರುದನ್ ಮುಹುಃ ।
ಸದ್ಯೋಽದರ್ಶನಮಾಪೇದೇ ಸಶರೀರೋ ವಿಹಾಯಸಾ
॥ ೩೯ ॥

ತದಾಽಽಹ ವಿಪ್ರೋ ವಿಜಯಂ ವಿನಿಂದನ್ ಕೃಷ್ಣಸಂನಿಧೌ ।
ಮೌಢ್ಯಂ ಪಶ್ಯತ ಮೇ ಯೋಽಹಂ ಶ್ರದ್ದಧೇ ಕ್ಲೀಬಕತ್ಥನಮ್
॥ ೪೦ ॥

ನ ಪ್ರದ್ಯುಮ್ನೋ ನಾನಿರುದ್ಧೋ ನ ರಾಮೋ ನ ಚ ಕೇಶವಃ ।
ಯಸ್ಯ ಶೇಕುಃ ಪರಿತ್ರಾತುಂ ಕೋಽನ್ವಸ್ತದವಿತೇಶ್ವರಃ
॥ ೪೧ ॥

ಧಿಗರ್ಜುನಂ ಮೃಷಾವಾದಂ ಧಿಗಾತ್ಮಶ್ಲಾಘಿನೋ ಧನುಃ ।
ದೈವೋಪಸೃಷ್ಟಂ ಯೋ ಮೌಢ್ಯಾದಾನಿನೀಷತಿ ದುರ್ಮತಿಃ
॥ ೪೨ ॥

ಏವಂ ಶಪತಿ ವಿಪ್ರರ್ಷೌ ವಿದ್ಯಾಮಾಸ್ಥಾಯ ಫಾಲ್ಗುನಃ ।
ಯಯೌ ಸಂಯಮನೀಮಾಶು ಯತ್ರಾಸ್ತೇ ಭಗವಾನ್ ಯಮಃ
॥ ೪೩ ॥

ವಿಪ್ರಾಪತ್ಯಮಚಕ್ಷಾಣಸ್ತತ ಐಂದ್ರೀಮಗಾತ್ ಪುರೀಮ್ ।
ಆಗ್ನೇಯೀಂ ನೈರ್ಋತೀಂ ಸೌಮ್ಯಾಂ ವಾಯವ್ಯಾಂ ವಾರುಣೀಮಥ ।
ರಸಾತಲಂ ನಾಕಪೃಷ್ಠಂ ಧಿಷ್ಣ್ಯಾನ್ಯನ್ಯಾನ್ಯದಾಯುಧಃ
॥ ೪೪ ॥

ತತೋಽಲಬ್ಧ್ವಿಜಸುತೋ ಹ್ಯನಿಸ್ತೀರ್ಣಪ್ರತಿಶ್ರುತಃ ।
ಅಗ್ನಿಂ ವಿವಿಕ್ಷುಃ ಕೃಷ್ಣೇನ ಪ್ರತ್ಯುಕ್ತಃ ಪ್ರತಿಷೇಧತಾ
॥ ೪೫ ॥

ಪರೀಕ್ಷಿತನೇ! ಅರ್ಜುನನು ಬ್ರಾಹ್ಮಣನಿಗೆ ಈ ಪ್ರಕಾರವಾಗಿ ವಿಶ್ವಾಸವನ್ನುಂಟುಮಾಡಿದಾಗ ಅವನು ಅರ್ಜುನನ ಬಲ-ಪೌರುಷವನ್ನು ಜನರಲ್ಲಿ ಕೊಂಡಾಡುತ್ತಾ ಸಂತೋಷಗೊಂಡು ಮನೆಗೆ ಮರಳಿದನು. ॥ ೩೫ ॥ ಮತ್ತೊಂದು ಹೆರಿಗೆಯು ಸಮೀಪಿಸಿದಾಗ ಬ್ರಾಹ್ಮಣನು ಕಾತುರನಾಗಿ ಅರ್ಜುನನ ಬಳಿಗೆ ಬಂದು ಹೇಳಿದನು - 'ಈ ಬಾರಿಯಾದರೂ ನನ್ನ ಮಗುವನ್ನು ಮೃತ್ಯುವಿನಿಂದ ಬದುಕಿಸಿಕೊಡು.' ॥ ೩೬ ॥ ಇದನ್ನು ಕೇಳಿದ ಅರ್ಜುನನು ಶುದ್ಧ ಜಲದಿಂದ ಆಚಮನಮಾಡಿ ಮಹೇಶ್ವರನಿಗೆ ನಮಸ್ಕರಿಸಿ, ದಿವ್ಯಾಸ್ತ್ರಗಳನ್ನು ಸ್ಮರಿಸಿಕೊಂಡು ಗಾಂಡೀವ ಧನುಸ್ಸಿಗೆ ಹೆದೆಯೇರಿಸಿ ಕೈಗೆತ್ತಿಕೊಂಡನು. ॥ ೩೭ ॥ ಅರ್ಜುನನು ಬಾಣಗಳನ್ನು ಅನೇಕ-ವಿಧದಿಂದ ಅಸ್ತ್ರ-ಮಂತ್ರಗಳಿಂದ ಅಭಿಮಂತ್ರಿಸಿ ಪ್ರಸವಗೃಹಕ್ಕೆ ಸುತ್ತಲೂ ಬಾಣಗಳ ಪಂಜರವನ್ನೇ ನಿರ್ಮಿಸಿದನು. ॥ ೩೮ ॥ ಬಳಿಕ ಬ್ರಾಹ್ಮಣಿಯ ಗರ್ಭದಿಂದ ಒಂದು ಮಗು ಹುಟ್ಟಿತು. ಅದು ಪದೇ-ಪದೇ ಜೋರಾಗಿ ಅಳುತ್ತಿತ್ತು. ಆದರೆ ನೋಡು ನೋಡುತ್ತಾ ಅದು ಸಶರೀರವಾಗಿ ಆಕಾಶದಲ್ಲಿ ಅಂತರ್ಧಾನವಾಯಿತು. ॥ ೩೯ ॥ ಬ್ರಾಹ್ಮಣನು ಶ್ರೀಕೃಷ್ಣನ ಮುಂದೆಯೇ ಅರ್ಜುನನನ್ನು ನಿಂದಿಸತೊಡಗಿದನು. ಅವನೆಂದ - ಅಯ್ಯೋ! ನನ್ನ ಮೂರ್ಖತೆಯನ್ನು ನೋಡಿರಿ. ನಾನು ಈ ನಪುಂಸಕನ ಜಂಬದ ಮಾತುಗಳನ್ನು ನಂಬಿದೆನಲ್ಲ! ॥ ೪೦ ॥

ಪ್ರದ್ಯುಮ್ನ, ಅನಿರುದ್ಧ, ಬಲರಾಮ, ಶ್ರೀಕೃಷ್ಣನಿಂದಲೂ ರಕ್ಷಿಸಲೂ ಸಾಧ್ಯವಾಗದಿದ್ದಾಗ ಯಾರು ತಾನೇ ಸಮರ್ಥನಾಗುವನು ? ॥ ೪೧ ॥ ಮಿಥ್ಯಾವಾದಿಯಾದ ಅರ್ಜುನನಿಗೆ ಧಿಕ್ಕಾರವಿರಲಿ! ಗಾಂಡೀವ ಧನುಸ್ಸು ತನ್ನಲ್ಲಿದೆ ಎಂದು ಜಂಬಕೊಚ್ಚಿಕೊಳ್ಳುವ ಆತನಿಗೂ, ಆತನ ಧನುಸ್ಸಿಗೂ ಧಿಕ್ಕಾರವಿಲಿ! ಇವನ ದುರ್ಬುದ್ಧಿಯನ್ನಾದರೂ ನೋಡಿರಲ್ಲ ಈ ದುರ್ಮತಿಯಾದವನು ಪ್ರಾರಬ್ಧವಶದಿಂದ ನಮ್ಮಿಂದ ಅಗಲಿ ಹೋದ ಆ ಬಾಲಕನನ್ನು ಮರಳಿ ತರಲು ಬಯಸುತ್ತಾನೆ. ॥ ೪೨ ॥

ಆ ಬ್ರಾಹ್ಮಣನು ಹೀಗೆ ಅರ್ಜುನನನ್ನು ಹೀನಾಯವಾಗಿ ನಿಂದಿಸಿದಾಗ ಅವನು ಯೋಗಬಲದಿಂದ ಒಡನೆಯೇ ಯಮಧರ್ಮನ ನಿವಾಸವಾದ ಸಂಯಮಿನೀ ಪುರಿಗೆ ಹೋದನು. ॥ ೪೩. ॥ ಅಲ್ಲಿ ಬ್ರಾಹ್ಮಣಕುಮಾರನನ್ನು ಕಾಣದಿದ್ದಾಗ ಶಸ್ತ್ರಧಾರಿಯಾದ ಅವನು ಕ್ರಮವಾಗಿ ಇಂದ್ರ, ಅಗ್ನಿ ನಿರ್ಋತಿ, ಸೋಮ, ವಾಯು, ವರುಣ ಮೊದಲಾದವರ ಲೋಕಗಳಿಗೆ ಹೋದನು. ಅತಲವೇ ಮೊದಲಾದ ಕೆಳಗಿನ ಲೋಕಗಳಿಗೆ, ಸ್ವರ್ಗದಿಂದ ಮೇಲಕ್ಕಿರುವ ಮಹರ್ಲೋಕಗಳಿಗೂ ಹಾಗು ಇತರ ಸ್ಥಾನಗಳಿಗೂ ಹೋದನು.॥ ೪೪ ॥ ಆದರೆ ಅವನಿಗೆ ಎಲ್ಲಿಯೂ ಬ್ರಾಹ್ಮಣ ಬಾಲಕನು ಸಿಗಲಿಲ್ಲ. ಅವನ ಪ್ರತಿಜ್ಞೆ ಈಡೇರಲಿಲ್ಲ. ಆಗ ಅವನು ಅಗ್ನಿಪ್ರವೇಶಮಾಡಲು ನಿಶ್ಚಯಿಸಿದನು. ಆದರೆ ಭಗವಾನ್ ಶ್ರೀಕೃಷ್ಣನು ಹೀಗೆ ಮಾಡಲು ತಡೆದು ಹೇಳಿದನು - ॥ ೪೫ ॥ ಅಯ್ಯಾ ಅರ್ಜುನ! ನಿನ್ನನ್ನೇ

ದರ್ಶಯೇ ದ್ವಿಜಸೂನೂಂಸ್ತೇ ಮಾವಜ್ಞಾತ್ಮಾನಮಾತ್ಮನಾ ।
ಯೇ ತೇ ನಃ ಕೀರ್ತಿಂ ವಿಮಲಾಂ ಮನುಷ್ಯಾಃ ಸ್ಥಾಪಯಿಷ್ಯಂತಿ
॥ ೪೬ ॥

ಇತಿ ಸಂಭಾಷ್ಯ ಭಗವಾನರ್ಜುನೇನ ಸಹೇಶ್ವರಃ ।
ದಿವ್ಯಂ ಸ್ವರಥಮಾಸ್ಥಾಯ ಪ್ರತೀಚೀಂ ದಿಶಮಾವಿಶತ್
॥ ೪೭ ॥

ಸಪ್ತ ದ್ವೀಪಾನ್ ಸಪ್ತ ಸಿಂಧೂನ್ ಸಪ್ತಸಪ್ತಗಿರೀನಥ ।
ಲೋಕಾಲೋಕಂ ತಥಾತೀತ್ಯ ವಿವೇಶ ಸುಮಹತ್ತಮಃ
॥ ೪೮ ॥

ತತ್ರಾಶ್ವಾಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕಾಃ ।
ತಮಸಿ ಭ್ರಷ್ಟಗತಯೋ ಬಭೂವುರ್ಭರತರ್ಷಭ
॥ ೪೯ ॥

ತಾನ್ ದೃಷ್ಟ್ವಾ ಭಗವಾನ್ ಕೃಷ್ಣೋ ಮಹಾಯೋಗೇಶ್ವರೇಶ್ವರಃ ।
ಸಹಸ್ರಾದಿತ್ಯಸಂಕಾಶಂ ಸ್ವಚಕ್ರಂ ಪ್ರಾಹಿಣೋತ್ಪುರಃ
॥ ೫೦ ॥

ತಮಃ ಸುಘೋರಂ ಗಹನಂ ಕೃತಂ ಮಹದ್
ವಿದಾರಯದ್ಭೂರಿತರೇಣ ರೋಚಿಷಾ ।
ಮನೋಜವಂ ನಿರ್ವಿವಿಶೇ ಸುದರ್ಶನಂ
ಗುಣಚ್ಯುತೋ ರಾಮಶರೋ ಯಥಾ ಚಮೂಃ ॥ ೫೧ ॥

ದ್ವಾರೇಣ ಚಕ್ರಾನುಪಥೇನ ತತ್ತಮಃ
ಪರಂ ಪರಂ ಜ್ಯೋತಿರನಂತಪಾರಮ್ ।
ಸಮಶ್ನುವಾನಂ ಪ್ರಸಮೀಕ್ಷ್ಯ ಫಾಲ್ಗುನಃ
ಪ್ರತಾಡಿತಾಕ್ಷೋಽಪಿದಧೇಽಕ್ಷಿಣೀ ಉಭೇ ॥ ೫೨ ॥

ತತಃ ಪ್ರವಿಷ್ಟಃ ಸಲಿಲಂ ನಭಸ್ವತಾ
ಬಲೀಯಸೈಜದ್ಬೃಹದೂರ್ಮಿಭೂಷಣಮ್ ।
ತತ್ರಾದ್ಭುತಂ ವೈ ಭವನಂ ದ್ಯುಮತ್ತಮಂ
ಭ್ರಾಜನ್ಮಣಿಸ್ತಂಭಸಹಸ್ರಶೋಭಿತಮ್ ॥ ೫೩ ॥

ತಸ್ಮಿನ್ ಮಹಾಭೀಮಮನಂತಮದ್ಭುತಂ
ಸಹಸ್ರಮೂರ್ಧನ್ಯಫಣಾಮಣಿದ್ಯುಭಿಃ ।
ವಿಭ್ರಾಜಮಾನಂ ದ್ವಿಗುಣೋಲ್ಬಣೇಕ್ಷಣಂ
ಸಿತಾಚಲಾಭಂ ಶಿತಿಕಂಠಜಿಹ್ವಮ್ ॥ ೫೪ ॥

ನೀನು ಹಳಿದುಕೊಳ್ಳಬೇಡ. ನಾನು ನಿನಗೆ ಬ್ರಾಹ್ಮಣನ ಎಲ್ಲ ಬಾಲಕರನ್ನು ತೋರಿಸಿಕೊಡುತ್ತೇನೆ. ಇಂದು ನಿನ್ನನ್ನು ನಿಂದಿಸುವವರೇ ನಾಳೆ ನಿನ್ನ ಕೀರ್ತಿಯನ್ನು ಲೋಕದಲ್ಲಿ ಕೊಂಡಾಡುವರು. ॥ ೪೬ ॥

ಸರ್ವೇಶ್ವರನಾದ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿ ಅವನೊಡನೆ ದಿವ್ಯವಾದ ರಥದಲ್ಲಿ ಕುಳಿತು ಪಶ್ಚಿಮ ದಿಕ್ಕಿನ ಕಡೆಗೆ ಪ್ರಯಾಣ ಹೊಟನು. ॥ ೪೭ ॥ ಅವರು ಏಳೇಳು ಪರ್ವತಗಳಿದ್ದ ಏಳು ದ್ವೀಪಗಳನ್ನು, ಏಳು ಸಮುದ್ರಗಳನ್ನೂ ಲೋಕಾಲೋಕವೆಂಬ ಪರ್ವತವನ್ನು ದಾಟಿ ಗಾಢಾಂಧಕಾರವನ್ನು ಪ್ರವೇಶಿಸಿದರು. ॥ ೪೮ ॥ ಪರೀಕ್ಷಿತನೇ ! ಶ್ರೀಕೃಷ್ಣನ ರಥಕ್ಕೆ ಹೂಡಿದ್ದ ಶೈಬ್ಯ, ಸುಗ್ರೀವ, ಮೇಘಪುಷ್ಪ ಬಲಾಹಕಗಳೆಂಬ ನಾಲ್ಕು ಕುದುರೆಗಳು ಆ ಗಾಂಢಾಂಧಕಾರದಲ್ಲಿ ದಾರಿತಪ್ಪಿ ಏನೂ ತೋಚದೆ ಯದ್ವಾ ತದ್ವಾ ಹೋಗತೊಡಗಿದವು. ॥ ೪೯ ॥ ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನು ಕುದುರೆಗಳ ಈ ಸ್ಥಿತಿಯನ್ನು ಕಂಡು ಸಾವಿರಾರು ಸೂರ್ಯರಿಗೆ ಸಮಾನವಾದ ಪ್ರಕಾಶವುಳ್ಳ ತನ್ನ ಸುದರ್ಶನಕ್ಕೆ ಮುಂದೆ ಹೋಗುವಂತೆ ಆಜ್ಞಾಪಿಸಿದನು. ॥ ೫೦ ॥ ಸುದರ್ಶನ ಚಕ್ರವು ತನ್ನ ಜ್ಯೋತಿರ್ಮಯ ತೇಜದಿಂದ ಸಾಕ್ಷಾತ್ ಭಗವಂತನಿಂದಲೇ ಉತ್ಪನ್ನವಾದ ಗಾಢಾಂಧಕಾರವನ್ನು ಸೀಳುತ್ತಾ ಭಗವಾನ್ ರಾಮನ ಬಾಣವು ರಾಕ್ಷಸ ಸೈನ್ಯವನ್ನು ಹೊಕ್ಕು ಧ್ವಂಸ ಮಾಡುವಂತೆ ಮನಸ್ಸಿನ ವೇಗಕ್ಕಿಂತಲೂ ತೀವ್ರವಾದ ವೇಗದಿಂದ ಮುಂದರಿಯಿತು. ॥ ೫೧ ॥

ಈ ಪ್ರಕಾರವಾಗಿ ಸುದರ್ಶನ ಚಕ್ರವು ತೋರಿದ ದಾರಿಯಿಂದ ಮುಂದೆ ಹೋಗುತ್ತಾ ರಥವು ಅಂಧಕಾರದ ಕೊನೆಯ ತುದಿಗೆ ತಲುಪಿತು. ಆ ಅಂಧಕಾರದ ಆಚೆ ಸರ್ವಶ್ರೇಷ್ಠ ಪರಮಜ್ಯೋತಿಯು ಎಲ್ಲೆಡೆ ಬೆಳಗುತ್ತಿತ್ತು. ಅದನ್ನು ನೋಡಿ ಅರ್ಜುನನ ಕಣ್ಣುಗಳು ಕೋರೈಸಿದಂತಾಗಿ ಅವನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ॥೫೨॥ ಅನಂತರ ಭಗವಂತನ ರಥವು ದಿವ್ಯ ಜಲರಾಶಿಯಲ್ಲಿ ಪ್ರವೇಶಿಸಿತು. ಅತ್ಯಂತ ಬಲಿಷ್ಠವಾದ ಬಿರುಗಾಳಿಯು ಬೀಸುತ್ತಿದ್ದರಿಂದ ಆ ನೀರಿನಲ್ಲಿ ದೊಡ್ಡ-ದೊಡ್ಡ ಅಲೆಗಳು ಏಳುತ್ತಿದ್ದವು. ಅವು ಜಲರಾಶಿಗೆ ಭೂಷಣಪ್ರಾಯವಾಗಿ ಕಾಣುತ್ತಿದ್ದವು. ಅಲ್ಲಿ ಅತ್ಯಂತ ಸುಂದರವಾದ ಒಂದು ಭವನವಿತ್ತು. ಅದರಲ್ಲಿ ಮಣಿಗಳ ಸಾವಿರಾರು ಕಂಬಗಳು ಹೊಳೆಯುತ್ತಾ ಅದರ ಶೋಭೆಯನ್ನು ಹೆಚ್ಚಿಸಿದ್ದವು. ಹಾಗೂ ಅದರ ಸುತ್ತಲೂ ಉಜ್ವಲ ಜ್ಯೋತಿಯು ಹರಡಿತ್ತು. ॥ ೫೩. ॥ ಅದೇ ಭವನದಲ್ಲಿ ಭಗವಾನ್ ಆದಿಶೇಷನು ವಿರಾಜಮಾನನಾಗಿದ್ದನು. ಅವನ ಶರೀರವು ಅತ್ಯಂತ ಭಯಾನಕವೂ, ಅದ್ಭುತವೂ ಆಗಿತ್ತು. ಅವನಿಗೆ ಸಾವಿರ ಹೆಡೆಗಳಿದ್ದು ಪ್ರತಿಯೊಂದರಲ್ಲಿಯೂ ಸುಂದರ ಮಣಿಗಳು ಹೊಳೆಯುತ್ತಿದ್ದವು. ಪ್ರತಿಯೊಂದು ಹೆಡೆಗೂ ಭಯಂಕರವಾದ ಎರಡೆರಡು ಕಣ್ಣುಗಳಿದ್ದವು. ಅವನ ಶರೀರವೆಲ್ಲವೂ ಕೈಲಾಸದಂತೆ ಬೆಳ್ಳಗಿದ್ದು, ಕಂಠ ಮತ್ತು ನಾಲಗೆಗಳು ನೀಲವಾಗಿದ್ದವು. ॥ ೫೪ ॥ ಆ ಆದಿಶೇಷನನ್ನೇ ಸುಖಿಮಯವಾದ

ದದರ್ಶ ತದ್ಭೋಗಸುಖಾಸನಂ ವಿಭುಂ
ಮಹಾನುಭಾವಂ ಪುರುಷೋತ್ತಮೋತ್ತಮಮ್ ।
ಸಾಂದ್ರಾಂಬುದಾಭಂ ಸುಪಿಶಂಗವಾಸಸಂ
ಪ್ರಸನ್ನವಕ್ತ್ರಂ ರುಚಿರಾಯತೇಕ್ಷಣಮ್ ॥ ೫೫ ॥

ಮಹಾಮಣಿವ್ರಾತಕಿರೀಟಕುಂಡಲ-
ಪ್ರಭಾಪರಿಕ್ಷಿಪ್ತಸಹಸ್ರಕುಂತಲಮ್ ।
ಪ್ರಲಂಬಚಾರ್ವಷ್ಟಭುಜಂ ಸಕೌಸ್ತುಭಂ
ಶ್ರೀವತ್ಸಲಕ್ಷ್ಮಂ ವನಮಾಲಯಾ ವೃತಮ್ ॥ ೫೬॥

ಸುನಂದನಂದಪ್ರಮುಖೈಃ ಸ್ವಪಾರ್ಷದೈಃ
ಚಕ್ರಾದಿಭಿರ್ಮೂರ್ತಿಧರೈರ್ನಿಜಾಯುಧೈಃ ।
ಪುಷ್ಟ್ಯಾ ಶ್ರಿಯಾ ಕೀರ್ತ್ಯಜಯಾಖಿಲರ್ದ್ಧಿಭಿಃ
ನಿಷೇವ್ಯಮಾಣಂ ಪರಮೇಷ್ಠಿನಾಂ ಪತಿಮ್ ॥ ೫೭ ॥

ವವಂದ ಆತ್ಮಾನಮನಂತಮಚ್ಯುತೋ
ಜಿಷ್ಣುಶ್ಚ ತದ್ದರ್ಶನಜಾತಸಾಧ್ವಸಃ ।
ತಾವಾಹ ಭೂಮಾ ಪರಮೇಷ್ಠಿನಾಂ ಪ್ರಭು-
ರ್ಬದ್ಧಾಂಜಲೀ ಸಸ್ಮಿತಮೂರ್ಜಯಾ ಗಿರಾ ॥ ೫೮ ॥

ದ್ವಿಜಾತ್ಮಜಾ ಮೇ ಯುವಯೋರ್ದಿದೃಕ್ಷುಣಾ
ಮಯೋಪನೀತಾ ಭುವಿ ಧರ್ಮಗುಪ್ತಯೇ ।
ಕಲಾವತೀರ್ಣಾವವನೇರ್ಭರಾಸುರಾನ್
ಹತ್ವೇಹ ಭೂಯಸ್ತ್ವರಯೇತಮಂತಿ ಮೇ ॥ ೫೯ ॥

ಪೂರ್ಣಕಾಮಾವಪಿ ಯುವಾಂ ನರನಾರಾಯಣಾವೃಷೀ ।
ಧರ್ಮಮಾಚರತಾಂ ಸ್ಥಿತ್ಯೈ ಋಷಭೌ ಲೋಕಸಂಗ್ರಹಮ್
॥ ೬೦ ॥

ಇತ್ಯಾದಿಷ್ಟೌ ಭಗವತಾ ತೌ ಕೃಷ್ಣೌ ಪರಮೇಷ್ಠಿನಾ ।
ಓಮಿತ್ಯಾನಮ್ಯ ಭೂಮಾನಮಾದಾಯ ದ್ವಿಜದಾರಕಾನ್
॥ ೬೧ ॥

ನ್ಯವರ್ತತಾಂ ಸ್ವಕಂ ಧಾಮ ಸಂಪ್ರಹೃಷ್ಟೌ ಯಥಾಗತಮ್ ।
ವಿಪ್ರಾಯ ದದತುಃ ಪುತ್ರಾನ್ ಯಥಾರೂಪಂ ಯಥಾವಯಃ
॥ ೬೨ ॥

ಹಾಸಿಗೆಯನ್ನಾಗಿಸಿಕೊಂಡು ಸರ್ವವ್ಯಾಪಕನೂ, ಅತ್ಯಂತ ಪ್ರಭಾವ ಶಾಲಿಯೂ ಆದ ಪುರುಷೋತ್ತಮನು ಪವಡಿಸಿರುವುದನ್ನು ಅರ್ಜುನನು ನೋಡಿದನು. ಆ ಪುರುಷೋತ್ತಮನು ನೀಲಮೇಘ ಶ್ಯಾಮನಾಗಿದ್ದನು. ಸುಂದರವಾದ ಪೀತಾಂಬರವನ್ನು ಉಟ್ಟಿದ್ದನು. ಪ್ರಸನ್ನವದನನಾಗಿದ್ದನು. ಸುಂದರವೂ ವಿಶಾಲವೂ ಆದ ಕಣ್ಣುಗಳನ್ನು ಹೊಂದಿದ್ದನು. ॥ ೫೫ ॥ ಭಗವಂತನ ಸಾವಿರಾರು ಮುಂಗುರುಳುಗಳು ಮಹಾಮಣಿಗಳ ರಾಶಿಯಿಂದ ಸಿದ್ಧಗೊಳಿಸಿದ ಕಿರೀಟ-ಕುಂಡಲಗಳ ಕಾಂತಿಯಿಂದ ರಾರಾಜಿಸುತ್ತಿದ್ದವು. ನೀಳವಾದ ಅಷ್ಟಭುಜಗಳಿದ್ದವು. ಕೊರಳಲ್ಲಿ ಕೌಸ್ತುಭ ಮಣಿಯಿದ್ದು, ವಕ್ಷಸ್ಥಳದಲ್ಲಿ ಶ್ರೀವತ್ಸಲಾಂಛನವು ಶೋಭಿಸುತ್ತಿತ್ತು. ಅವನು ವನಮಾಲೆಯಿಂದ ಸಮಲಂಕೃತನಾಗಿದ್ದನು. ॥ ೫೬ ॥ ನಂದ, ಸುನಂದ ಮುಂತಾದ ಪಾರ್ಷದರೂ, ಚಕ್ರ-ಸುದರ್ಶನ ಮುಂತಾದ ಆಯುಧಗಳು ಮೂರ್ತಿಮಂತರಾಗಿ, ಪುಷ್ಟಿ-ಶ್ರೀ ಕೀರ್ತಿ-ಅಜಾ ಎಂಬ ನಾಲ್ಕು ಶಕ್ತಿಗಳೂ, ಸಮಸ್ತ ಋದ್ಧಿಗಳೂ, ಬ್ರಹ್ಮಾದಿಲೋಕಪಾಲರು ಜಗದೀಶ್ವರನಾದ ಭಗವಂತನನ್ನು ಸೇವಿಸುತ್ತಿರುವುದನ್ನು ಅರ್ಜುನನು ನೋಡಿದನು. ॥ ೫೭ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ತನ್ನದೇ ಸ್ವರೂಪವಾದ ಅನಂತ ಭಗವಂತನಿಗೆ ವಂದಿಸಿದನು. ಅರ್ಜುನನು ಅವನ ದರ್ಶನದಿಂದ ಸ್ವಲ್ಪ ಭಯಗೊಂಡಿದ್ದನು. ಶ್ರೀಕೃಷ್ಣನು ವಂದಿಸಿದ ಬಳಿಕ ಅವನೂ ಭಗವಂತನಿಗೆ ನಮಸ್ಕರಿಸಿದನು. ಕೈಗಳನ್ನು ಜೋಡಿಸಿಕೊಂಡು ನಿಂತಿದ್ದ ಶ್ರೀಕೃಷ್ಣಾರ್ಜುನರನ್ನು ಕುರಿತು ಪರಬ್ರಹ್ಮಸ್ವರೂಪನೂ, ಲೋಕಪಾಲರೆಲ್ಲರ ಪ್ರಭುವೂ ಆದ ಪುರುಷೋತ್ತಮನು ಮೇಘಗಂಭೀರವಾಣಿಯಿಂದ ಈ ಮಾತನ್ನು ಹೇಳಿದನು – ॥ ೫೮ ॥

ಕೃಷ್ಣಾರ್ಜುನರೇ! ನಿಮ್ಮಿಬ್ಬರನ್ನು ನೋಡುವ ಸಲುವಾಗಿಯೇ ಬ್ರಾಹ್ಮಣ ಬಾಲಕರನ್ನು ನನ್ನ ಬಳಿಗೆ ಕರೆತಂದಿರುವೆನು. ನೀವಿಬ್ಬರೂ ಧರ್ಮದ ರಕ್ಷಣೆಗಾಗಿಯೇ ನನ್ನ ಕಲಾಂಶಗಳಿಂದ ಭೂಮಿಯಲ್ಲಿ ಅವತರಿಸಿರುವಿರಿ. ಪೃಥಿವಿಗೆ ಭಾರರೂಪವಾದ ದೈತ್ಯರೆಲ್ಲರನ್ನು ಸಂಹರಿಸಿ ನೀವಿಬ್ಬರೂ ಶೀಘ್ರಾತಿಶೀಘ್ರವಾಗಿ ನನ್ನ ಬಳಿಗೆ ಮರಳಿ ಬನ್ನಿರಿ. ॥ ೫೯ ॥ ನೀವಿಬ್ಬರೂ ಋಷಿಶ್ರೇಷ್ಠರಾದ ನರ-ನಾರಾಯಣರೇ ಆಗಿರುವಿರಿ. ನೀವು ಪೂರ್ಣಕಾಮರೂ, ಸರ್ವಶ್ರೇಷ್ಠರೂ, ಆಗಿದ್ದರೂ ಜಗತ್ತಿನ ಸ್ಥಿತಿ ಮತ್ತು ಲೋಕಸಂಗ್ರಹಕ್ಕಾಗಿ ಧರ್ಮವನ್ನು ಆಚರಿಸುತ್ತಾ ಇರಿ. ॥ ೬೦ ॥

ಪರಬ್ರಹ್ಮ ಸ್ವರೂಪನಾದ ಪುರುಷೋತ್ತಮನು ಕೃಷ್ಣಾರ್ಜುನರಿಗೆ ಹೀಗೆ ಆದೇಶವನ್ನು ನೀಡಲು, ಅವರು ಅದನ್ನು ಸ್ವೀಕರಿಸಿ ಅವನಿಗೆ ನಮಸ್ಕಾರಮಾಡಿ ಅತ್ಯಂತ ಆನಂದದಿಂದ ಬ್ರಾಹ್ಮಣಬಾಲಕರನ್ನು ಕರೆದುಕೊಂಡು ಬಂದ ದಾರಿಯಿಂದಲೇ ದ್ವಾರಕೆಗೆ ಮರಳಿದರು. ಬ್ರಾಹ್ಮಣನ ಬಾಲಕರು ತಮ್ಮ-ತಮ್ಮ ವಯಸ್ಸಿಗೆ ಅನುಗುಣವಾದ ರೂಪವುಳ್ಳವರಾಗಿಯೂ, ಆಕೃತಿಯುಳ್ಳವರಾಗಿಯೂ ಇದ್ದರು. ಭಗವಾನ್ ಶ್ರೀಕೃಷ್ಣ ಮತ್ತು ಅರ್ಜುನರು ಅವರನ್ನು ಬ್ರಾಹ್ಮಣನಿಗೆ ಒಪ್ಪಿಸಿದರು. ॥ ೬೧-೬೨ ॥

ನಿಶಾಮ್ಯ ವೈಷ್ಣವಂ ಧಾಮ ಪಾರ್ಥಃ ಪರಮವಿಸ್ಮಿತಃ ।
ಯತ್ಕಿಂಚಿತೌರುಷಂ ಪುಂಸಾಂ ಮೇನೇ ಕೃಷ್ಣಾನುಕಂಪಿತಮ್
॥ ೬೩ ॥

ಭಗವಾನ್ ವಿಷ್ಣುವಿನ ಆ ಪರಮ ಧಾಮವನ್ನು ನೋಡಿದ ಅರ್ಜುನನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಜೀವರಲ್ಲಿರುವ ಬಲ-ಪೌರುಷಗಳೆಲ್ಲವೂ ಭಗವಾನ್ ಶ್ರೀಕೃಷ್ಣನ ಕೃಪೆಯ ಫಲವೇ ಆಗಿದೆ ಎಂದು ಅವನು ಅರಿತು ಕೊಂಡನು. ॥ ೬೩ ॥

ಇತೀದೃಶಾನ್ಯನೇಕಾನಿ ವೀರ್ಯಾಣೀಹ ಪ್ರದರ್ಶಯನ್ ।
ಬುಭುಜೇ ವಿಷಯಾನ್ ಗ್ರಾಮ್ಯಾನೀಜೇ ಚಾತ್ಯೂರ್ಜಿತೈರ್ಮಖೈಃ
॥ ೬೪ ॥

ಪರೀಕ್ಷಿತನೇ ! ಭಗವಂತನು ಇಂತಹ ಅನೇಕ ಐಶ್ವರ್ಯಯುಕ್ತವೂ, ವೀರ್ಯ-ಶೌರ್ಯಗಳಿಂದಲೂ ಪರಿ ಪೂರ್ಣವಾದ ಲೀಲೆಗಳನ್ನು ಮಾಡಿದನು. ಲೌಕಿಕದೃಷ್ಟಿಯಲ್ಲಿ ಸಾಮಾನ್ಯ ಜನರಂತೆ ಸಾಂಸಾರಿಕ ವಿಷಯಗಳನ್ನು ಅನುಭವಿಸಿದನು ಮತ್ತು ದೊಡ್ಡ-ದೊಡ್ಡ ಮಹಾರಾಜರಂತೆ ಶ್ರೇಷ್ಠವಾದ ಯಜ್ಞಗಳನ್ನು ಮಾಡಿದನು. ॥ ೬೪ ॥

ಪ್ರವವರ್ಷಾಖಿಲಾನ್ ಕಾಮಾನ್ ಪ್ರಜಾಸು ಬ್ರಾಹ್ಮಣಾದಿಷು ।
ಯಥಾಕಾಲಂ ಯಥೈವೇಂದ್ರೋ ಭಗವಾನ್ ಶ್ರೈಷ್ಠ್ಯಮಾಸ್ಥಿತಃ
॥ ೬೫ ॥

ಭಗವಾನ್ ಶ್ರೀಕೃಷ್ಣನು ಆದರ್ಶ ಮಹಾ ಪುರುಷರಂತೆಯೇ ಆಚರಣೆ ಮಾಡುತ್ತಾ ಬ್ರಾಹ್ಮಣರೇ ಮೊದಲಾದ ಎಲ್ಲ ಪ್ರಜಾಜನರ ಸಮಸ್ತ ಮನೋರಥಗಳನ್ನು ಇಂದ್ರನು ಪ್ರಜೆಗಳಿಗೆ ಸಮಯಕ್ಕೆ ಸರಿಯಾಗಿ ಮಳೆಸುರಿಸುವಂತೆ ಪೂರ್ಣಗೊಳಿಸಿದನು. ॥ ೬೫ ॥

ಹತ್ವಾ ನೃಪಾನಧರ್ಮಿಷ್ಠಾನ್ ಘಾತಯಿತ್ವಾರ್ಜುನಾದಿಭಿಃ ।
ಅಂಜಸಾ ವರ್ತಯಾಮಾಸ ಧರ್ಮಂ ಧರ್ಮಸುತಾದಿಭಿಃ
॥ ೬೬ ॥

ಅವನು ಬಹಳಷ್ಟು ಅಧರ್ಮಿಗಳಾದ ರಾಜನನ್ನು ತಾನೇ ಸಂಹರಿಸಿದನು ಮತ್ತು ಅನೇಕರನ್ನು ಅರ್ಜುನಾದಿಗಳಿಂದ ಕೊಲ್ಲಿಸಿದನು. ಈ ಪ್ರಕಾರವಾಗಿ ಧರ್ಮರಾಜ ಯುಧಿಷ್ಠಿರಾದಿ ಧಾರ್ಮಿಕ ರಾಜರುಗಳಿಂದ ಅವನು ಅನಾಯಾಸವಾಗಿಯೇ ಸಮಸ್ತ ಪೃಥಿವಿಯಲ್ಲಿ ಧರ್ಮ ಮರ್ಯಾದೆಯನ್ನು ಸ್ಥಾಪಿಸಿದನು. ॥ ೬೬ ॥

ಎಂಭತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೮೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ದ್ವಿಜಕುಮಾರಾನಯನಂ ನಾಮ ಏಕೋನನವತಿತಮೋಽಧ್ಯಾಯಃ ॥ ೮೯ ॥

ತೊಂಭತ್ತನೆಯ ಅಧ್ಯಾಯ

ಭಗವಾನ್ ಶ್ರೀಕೃಷ್ಣನ ಲೀಲಾವಿಹಾರ ವರ್ಣನೆ

ಶ್ರೀಶುಕ ಉವಾಚ

ಸುಖಿಂ ಸ್ವಪುರ್ಯಾಂ ನಿವಸನ್ ದ್ವಾರಕಾಯಾಂ ಶ್ರಿಯಃ ಪತಿಃ ।
ಸರ್ವಸಂಪತ್ಸಮೃದ್ಧಾಯಾಂ ಜುಷ್ಟಾಯಾಂ ವೃಷ್ಣಿಪುಂಗವೈಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಶ್ರಿಯಃಪತಿಯಾದ ಶ್ರೀಕೃಷ್ಣನು ಸಕಲ ವಿಧವಾದ ಸಂಪತ್ತುಗಳಿಂದಲೂ ಸಮೃದ್ಧವಾಗಿದ್ದ ತನ್ನ ದ್ವಾರಕೆಯಲ್ಲಿ ಯಾದವ ಶ್ರೇಷ್ಠರಿಂದ ಪರಿವೃತನಾಗಿ ಸುಖದಿಂದ ವಾಸಮಾಡಿಕೊಂಡಿದ್ದನು. ॥ ೧ ॥

ಸ್ತ್ರೀಭಿಶ್ಚೋತ್ತಮವೇಷಾಭಿರ್ನವಯೌವನಕಾಂತಿಭಿಃ ।
ಕಂದುಕಾದಿಭಿರ್ಹರ್ಮ್ಯೇಷು ಕ್ರೀಡಂತೀಭಿಸ್ತಡಿದ್ಭಿಭಿಃ
॥ ೨ ॥

ನವಯೌವನ ಕಾಂತಿಯಿಂದ ಬೆಳಗುತ್ತಿದ್ದ, ಶ್ರೇಷ್ಠವಾದ ವೇಷ ಭೂಷಗಳನ್ನು ಧರಿಸಿದ್ದ, ಮಿಂಚಿನಂತೆ ಕಾಂತಿಯುಳ್ಳವರಾಗಿದ್ದು ಅಂತಃಪುರದಲ್ಲಿ ಚೆಂಡಾಟಗಳನ್ನಾಡುತ್ತಿದ್ದ ಶ್ರೀಕೃಷ್ಣನ ಪ್ರೇಯಸಿಯರಿಂದ ದ್ವಾರಕೆಯು ಬೆಳಗುತ್ತಿತ್ತು. ॥ ೨ ॥

ನಿತ್ಯಂ ಸಂಕುಲಮಾರ್ಗಾಯಾಂ ಮದಚ್ಯುದ್ಭಿರ್ಮತಂಗಜೈಃ ।
ಸ್ವಲಂಕೃತೈರ್ಭಟೈರಶ್ವೈ ರಥೈಶ್ಚ ಕನಕೋಜ್ಜ್ವಲೈಃ
॥ ೩ ॥

ದ್ವಾರಕೆಯ ಬೀದಿಗಳು ಮದೋದಕವನ್ನು ಸುರಿಸುತ್ತಿದ್ದ ಮಹಾಗಜಗಳಿಂದಲೂ, ವಸ್ತ್ರಾಭರಣಗಳಿಂದ ಸಮಲಂಕೃತರಾದ ಭಟರಿಂದಲೂ, ಶ್ರೇಷ್ಠವಾದ ಕುದುರೆಗಳಿಂದಲೂ, ಕನಕಾಲಂಕಾರಭೂಷಿತವಾದ ರಥಗಳಿಂದಲೂ ನಿಬಿಡವಾಗಿದ್ದವು. ॥ ೩ ॥ ಅಲ್ಲಿ ಅಡಿಗಡಿಗೂ ಉದ್ಯಾನಗಳೂ

ಉದ್ಯಾನೋಪವನಾಢ್ಯಾಯಾಂ ಪುಷ್ಪಿತದ್ರುಮರಾಜಿಷು ।
ನಿರ್ವಿಶದ್ ಭೃಂಗವಿಹಗೈರ್ನಾದಿತಾಯಾಂ ಸಮಂತತಃ
॥ ೪ ॥

ರೇಮೇ ಷೋಡಶಸಾಹಸ್ರಪತ್ನೀನಾಮೇಕವಲ್ಲಭಃ ।
ತಾವದ್ವಿಚಿತ್ರರೂಪೋಽಸೌ ತದ್ಗೃಹೇಷು ಮಹರ್ದ್ಧಿಷು
॥ ೫ ॥

ಪ್ರೋತ್ಫುಲ್ಲೋತ್ಪಲಕಲ್ಹಾರಕುಮುದಾಂಭೋಜರೇಣುಭಿಃ ।
ವಾಸಿತಾಮಲತೋಯೇಷು ಕೂಜದ್ದ್ವಿಜಕುಲೇಷು ಚ
॥ ೬ ॥

ವಿಜಹಾರ ವಿಗಾಹ್ಯಾಂಭೋ ಹ್ರದಿನೀಷು ಮಹೋದಯಃ ।
ಕುಚಕುಂಕುಮಲಿಪ್ತಾಂಗಃ ಪರಿರಬ್ಧಶ್ಚ ಯೋಷಿತಾಮ್
॥ ೭ ॥

ಉಪಗೀಯಮಾನೋ ಗಂಧರ್ವೈರ್ಮ್ಯದಂಗಪಣವಾನಕಾನ್ ।
ವಾದಯದ್ಭಿರ್ಮುದಾ ವೀಣಾಂ ಸೂತಮಾಗಧವಂದಿಭಿಃ
॥ ೮ ॥

ಸಿಚ್ಯಮಾನೋಽಚ್ಯುತಸ್ತಾಭಿರ್ಹಸಂತೀಭಿಃ ಸ್ಮ ರೇಚಕೈಃ ।
ಪ್ರತಿಷಿಂಚನ್ವಿಚಿಕ್ರೀಡೇ ಯಕ್ಷೀಭಿರ್ಯಕ್ಷರಾಡಿವ
॥ ೯ ॥

ತಾಃ ಕ್ಲಿನ್ನವಸ್ತ್ರ ವಿವೃತೋರುಕುಚಪ್ರದೇಶಾಃ
ಸಿಂಚಂತ್ಯ ಉದ್ಧೃತಬೃಹತ್ಕಬರಪ್ರಸೂನಾಃ ।
ಕಾಂತಂ ಸ್ಮ ರೇಚಕಜಿಹೀರಷಯೋಪಗುಹ್ಯ
ಜಾತಸ್ಮರೋತ್ಸವಲಸದ್ವದನಾ ವಿರೇಜುಃ ॥ ೧೦ ॥

ಕೃಷ್ಣಸ್ತು ತತ್ಸ್ತನವಿಷಜ್ಜಿತಕುಂಕುಮಸ್ರಕ್
ಕ್ರೀಡಾಭಿಷಂಗಧುತಕುಂತಲವೃಂದಬಂಧಃ ।
ಸಿಂಚನ್ಮುಹುರ್ಯುವತಿಭಿಃ ಪ್ರತಿಷಿಚ್ಯಮಾನೋ
ರೇಮೇ ಕರೇಣುಭಿರಿವೇಭಪತಿಃ ಪರೀತಃ ॥ ೧೧ ॥

ಹೂದೋಟಗಳೂ, ತೋಪುಗಳೂ ಇದ್ದುವು. ಅವುಗಳಲ್ಲಿನ ಮರ ಗಿಡ ಬಳ್ಳಿಗಳು ಹೂವುಗಳಿಂದ ಸಮಲಂಕೃತವಾಗಿದ್ದು ದುಂಬಿಗಳೂ, ಹಕ್ಕಿಗಳೂ ಕುಳಿತು ಇಂಪಾಗಿ ಹಾಡುತ್ತಿದ್ದವು. ॥ ೪ ॥ ಭಗವಾನ್ ಶ್ರೀಕೃಷ್ಣನು ಹದಿನಾರು ಸಾವಿರಕ್ಕಿಂತಲೂ ಅಧಿಕವಾದ ಪತ್ನಿಯರಿಗೆ ಏಕಮಾತ್ರ ವಲ್ಲಭನಾಗಿದ್ದನು. ಪ್ರಭುವಿನ ಪತ್ನಿಯರ ಪ್ರತ್ಯೇಕ ಪ್ರತ್ಯೇಕವಾದ ಅರಮನೆಗಳೂ ಐಶ್ವರ್ಯದಿಂದ ಸಮೃದ್ಧವಾಗಿದ್ದವು. ಎಷ್ಟು ಸಂಖ್ಯೆಯಲ್ಲಿ ಪತ್ನಿಯರಿದ್ದರೋ ಶ್ರೀಕೃಷ್ಣನು ಅಷ್ಟೇ ಸಂಖ್ಯೆಯಲ್ಲಿ ಅದ್ಭುತ ರೂಪಗಳನ್ನು ಧರಿಸಿ ಅವರೊಂದಿಗೆ ವಿಹರಿಸುತ್ತಿದ್ದನು. ॥ ೫ ॥ ಎಲ್ಲ ಪತ್ನಿಯರ ಅರಮನೆಗಳಲ್ಲಿಯೂ ಸುಂದರವಾದ ಸರೋವರ ಗಳಿದ್ದವು. ಅವುಗಳಲ್ಲಿದ್ದ ನಿರ್ಮಲವಾದ ನೀರು ನೈದಿಲೆ, ಕೆಂದಾವರೆ, ಬಿಳಿನೈದಿಲೆ, ಶತಪತ್ರ ಮುಂತಾದ ಬಗೆ-ಬಗೆಯ ಕಮಲ ಪುಷ್ಪಗಳ ಪರಾಗದಿಂದ ಸುಗಂಧಿತವಾಗಿತ್ತು. ಆ ಸರೋವರಗಳಲ್ಲಿ ಹಂಸ, ಸಾರಸ ಮುಂತಾದ ಜಲಚರ ಪಕ್ಷಿಗಳು ನಲಿದಾಡುತ್ತಿದ್ದವು. ಭಗವಾನ್ ಶ್ರೀಕೃಷ್ಣನು ಅಂತಹ ಸುಂದರವಾದ ಸರೋವರ ಗಳಲ್ಲಿಯೂ, ಕೆಲವೊಮ್ಮೆ ನದಿಗಳಲ್ಲಿಯೂ ತನ್ನ ಪತ್ನಿಯರೊಡನೆ ಜಲಕ್ರೀಡೆಯಾಡುವನು. ಮಹಾನುಭಾವನಾದ ಶ್ರೀಕೃಷ್ಣನು ಹಾಗೆ ಜಲಕ್ರೀಡೆಯಾಡುತ್ತಿದ್ದಾಗ ಪತ್ನಿಯರಿಂದ ಆಲಿಂಗಿಸಲ್ಪಟ್ಟು ಅವರ ಕುಚಕುಂಕುಮಗಂಧಗಳಿಂದ ಲಿಪ್ತವಾದ ವಕ್ಷಸ್ಥಳದಿಂದ ಕೂಡಿ ಬಹಳವಾಗಿ ಶೋಭಿಸುತ್ತಿದ್ದನು. ॥ ೬-೭ ॥ ಆ ಸಮಯದಲ್ಲಿ ಗಂಧರ್ವರು ಶ್ರೀಕೃಷ್ಣನ ಧರ್ಮ-ಕೀರ್ತಿಗಳನ್ನು ಗಾನಮಾಡುತ್ತಿದ್ದರು. ಸೂತ-ಮಾಗಧ-ವಂದಿಗಳು ಆನಂದತುಂದಿಲರಾಗಿ ವೀಣಾ, ಮೃದಂಗ, ಮದ್ದಳೆಗಳನ್ನು ನುಡಿಸುತ್ತಿದ್ದರು. ॥ ೮ ॥

ಶ್ರೀಕೃಷ್ಣನ ಪತ್ನಿಯರು ಕಿಲ-ಕಿಲನೆ ನಗುತ್ತಾ ಅವನ ಸುತ್ತಲೂ ನಿಂತು ನೀರ್ಕೋವಿಯಿಂದ ಶ್ರೀಕೃಷ್ಣನ ಮೇಲೆ ನೀರು ಸುರಿಸುವರು. ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನು ಅವರ ಮೇಲೆ ರಭಸದಿಂದ ನೀರುಗ್ಗುತ್ತಾ ಯಕ್ಷಸ್ತ್ರೀಯರೊಡನೆ ಯಕ್ಷರು ಜಲಕ್ರೀಡೆಯಾಡು ವಂತೆ ನೀರಾಟವಾಡುತ್ತಿದ್ದನು. ॥ ೯ ॥ ನೀರಿನ ಎರಚಾಟದಿಂದ ಲಲನೆಯರ ವಸ್ತ್ರಗಳು ನೆನೆಯುತ್ತಿದ್ದವು. ಅವರ ದೊಡ್ಡ-ದೊಡ್ಡ ಮುಡಿಗಳಿಂದ ಪುಷ್ಪಗಳು ಉದುರುತ್ತಿದ್ದವು. ಕೃಷ್ಣನಿಂದ ನೀರನ್ನು ಸುರಿಸಲ್ಪಡುತ್ತಿದ್ದ ಜೀರ್ಕೋವಿಯನ್ನು ಕಿತ್ತುಕೊಳ್ಳುವ ನೆಪದಿಂದ ಪ್ರಮದೆಯರು ಪುರುಷೋತ್ತಮನನ್ನು ಆಲಿಂಗಿಸಿಕೊಳ್ಳುತ್ತಿದ್ದರು. ಅವನ ಸ್ಪರ್ಶದಿಂದ ಪತ್ನಿಯರ ಹೃದಯದಲ್ಲಿ ಪ್ರೇಮ-ಭಾವದ ಅಭಿವೃದ್ಧಿಯಾಗುತ್ತಿತ್ತು. ಆದರಿಂದ ಅವರ ಮುಖಕಮಲಗಳು ವಿಕಸಿತವಾಗಿ ಅವರ ಶೋಭೆಯು ಇನ್ನೂ ಹೆಚ್ಚುತ್ತಿತ್ತು. ॥ ೧೦ ॥ ಆ ಸಮಯದಲ್ಲಿ ಶ್ರೀಕೃಷ್ಣನ ವನಮಾಲೆಯು ಆ ರಾಣಿಯರ ವಕ್ಷಸ್ಥಳಕ್ಕೆ ಹಚ್ಚಿಕೊಂಡ ಕುಂಕುಮಕೇಸರಿಯ ಬಣ್ಣದಿಂದ ಕೆಂಪಾಗುತಿತ್ತು. ನೀರಾಟದ ಸಂಭ್ರಮದಲ್ಲಿ ಶ್ರೀಕೃಷ್ಣನ ಗುಂಗುರು ಕೂದಲುಗಳು ಕೆದರಿ ತಲೆಯಸುತ್ತಲೂ ಹರಡಿಕೊಂಡಿದ್ದವು. ಅವನು ತನ್ನ ರಾಣಿಯರನ್ನು ಮೇಲಿಂದ ಮೇಲೆ ನೀರಿನಿಂದ ನೆನೆಸಿಬಿಡುತ್ತಿದ್ದರೆ, ಅವರೂ ಶ್ರೀಕೃಷ್ಣನನ್ನು ನೆನೆಸಿಬಿಡುತ್ತಿದ್ದರು. ಗಜರಾಜನು ಹೆಣ್ಣಾನೆಗಳೊಡನೆ ಸುತ್ತುವರಿದು ಜಲಕ್ರೀಡೆಯಾಡುವಂತೆ ಶ್ರೀಕೃಷ್ಣನು ಪತ್ನಿಯರೊಡನೆ ವಿಹರಿಸಿದನು. ॥ ೧೧ ॥

ನಟಾನಾಂ ನರ್ತಕೀನಾಂ ಚ ಗೀತವಾದ್ಯೋಪಜೀವಿನಾಮ್ ।
ಕ್ರೀಡಾಲಂಕಾರವಾಸಾಂಸಿ ಕೃಷ್ಣೋऽದಾತ್ತಸ್ಯ ಚ ಸ್ತ್ರಿಯಃ
॥ ೧೨ ॥

ಭಗವಾನ್ ಶ್ರೀಕೃಷ್ಣನ ಮತ್ತು ಅವರ ಪತ್ನಿಯರು ಕ್ರೀಡೆಯಾಡಿದ ಬಳಿಕ ತಮ್ಮ-ತಮ್ಮ ವಸ್ತ್ರಾಭರಣಗಳನ್ನು ಕಳಚಿ ಗೀತ-ವಾದ್ಯ ಗಳಿಂದಲೇ ಜೀವನ ನಿರ್ವಹಿಸುತ್ತಿದ್ದ ನಟ-ನರ್ತಕಿಯರಿಗೆ ಕೊಡುತ್ತಿದ್ದರು. ॥ ೧೨ ॥ ಪರೀಕ್ಷಿತನೇ ! ಈ ರೀತಿಯಿಂದ ಶ್ರೀಕೃಷ್ಣನು ಅವರೊಡನೆ ವಿಹರಿಸುತ್ತಿದ್ದನು. ಶ್ರೀಕೃಷ್ಣನು ಪ್ರಿಯ ವಿಲಾಸ ಗಳಿಂದಲೂ, ಮಂದಗಮನದಿಂದಲೂ, ಕಿರುನಗೆಯಿಂದಲೂ, ಪರಿಹಾಸೋಕ್ತಿಗಳಿಂದಲೂ, ಕಡೆಗಣ್ಣ ನೋಟದಿಂದಲೂ, ಆಲಿಂಗನ ಚುಂಬನಾದಿಗಳಿಂದಲೂ ಸ್ತ್ರೀಯರ ಮನಸ್ಸನ್ನು ಸಂಪೂರ್ಣವಾಗಿ ಅಪಹರಿಸಿ ಬಿಟ್ಟಿದ್ದನು. ॥ ೧೩ ॥ ರಾಣಿಯರಿಗೆ ಜೀವನ ಸರ್ವ ಸ್ವವೂ ಏಕಮಾತ್ರ ಹೃದಯೇಶ್ವರನಾದ ಶ್ರೀಕೃಷ್ಣನೇ ಆಗಿದ್ದನು. ಅವರು ಕೆಲವು ವೇಳೆ ಯಾರೊಂದಿಗೂ ಮಾತನ್ನಾಡದೆ ಮೌನವಾಗಿ ಕಮಲನಯನ ಶ್ಯಾಮಸುಂದರನ ಧ್ಯಾನದಲ್ಲೇ ತಲ್ಲೀನರಾಗು ತ್ತಿದ್ದರು. ಕೆಲವೊಮ್ಮೆ ಉನ್ಮತ್ತರಂತೆ ಮಾತುಗಳನ್ನಾಡುವರು. ಕೆಲ ವೊಮ್ಮೆ ಶ್ರೀಕೃಷ್ಣನ ಸನಿಹದಲ್ಲೇ ಇದ್ದರೂ ಪ್ರೇಮೋನ್ಮಾದದ ಕಾರಣ ಅವನ ವಿರಹವನ್ನು ಅನುಭವಿಸುತ್ತಿದ್ದರು ಮತ್ತು ಏನೇನೋ ಮಾತನಾಡುತ್ತಿದ್ದರು. ಮಹಾರಾಜಾ ! ಅವರಾಡುತ್ತಿದ್ದ ಮಾತು ಗಳನ್ನು ಯಥಾವತ್ತಾಗಿ ಹೇಳುತ್ತೇನೆ, ಕೇಳು. ॥ ೧೪ ॥

ನೂಚುರ್ಮುಕುಂದೈಕಧಿಯೋऽಗಿರ ಉನ್ಮತ್ತವಜ್ಜಡಮ್ ।
ಚಿಂತಯಂತ್ಯೋऽರವಿಂದಾಕ್ಷಂ ತಾನಿ ಮೇ ಗದತಃ ಶೃಣು
॥ ೧೪ ॥

ಮಹಿಷ್ಯ ಊಚುಃ

ಕುರರಿ ವಿಲಪಸಿ ತ್ವಂ ವೀತನಿದ್ರಾ ನ ಶೇಷೇ
ಸ್ವಪಿತಿ ಜಗತಿ ರಾತ್ರ್ಯಾಮೀಶ್ವರೋ ಗುಪ್ತಬೋಧಃ ।
ವಯಮಿವ ಸಖಿ ಕಚ್ಚಿದ್ಗಾಢನಿರ್ಭಿನ್ನಚೇತಾ
ನಲಿನನಯನಹಾಸೋದಾರಲೀಲೇಕ್ಷಿತೇನ ॥ ೧೫ ॥

ರಾಣಿಯರು ಹೇಳುತ್ತಾರೆ – ಎಲೈ ಕುಕರ ಪಕ್ಷಿಯೇ ! ಸರ್ವೇಶ್ವರನಾದ ಶ್ರೀಕೃಷ್ಣನು ಬಾಹ್ಯ ವಿಷಯಗಳನ್ನು ಮರೆತು ಈ ರಾತ್ರಿಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದಾನೆ. ನೀನಾದರೋ ನಿದ್ರಿಸುತ್ತಿಲ್ಲ ಮಾತ್ರವಲ್ಲ ಅಳುತ್ತಿರುವೆ. ಇದರಿಂದ ಪ್ರಭುವಿನ ನಿದ್ರೆಗೆ ಭಂಗವುಂಟಾಗದೇ ? ಸಖಿಯೇ ! ಕಮಲಾಕ್ಷನಾದ ಶ್ರೀಕೃಷ್ಣನ ಉದಾರವಾದ ಲೀಲಾಕಟಾಕ್ಷವೀಕ್ಷಣದಿಂದ ನನ್ನಂತೆಯೇ ನಿನ್ನ ಮನಸ್ಸು ಕದಡಿ ಹೋಗಿದೆಯೇ ? ॥ ೧೫ ॥

ನೇತ್ರೇ ನಿಮೀಲಯಸಿ ನಕ್ತಮದೃಷ್ಟಬಂಧು-
ಸ್ತ್ವಂ ರೋರವೀಷಿ ಕರುಣಂ ಬತ ಚಕ್ರವಾಕಿ ।
ದಾಸ್ಯಂ ಗತಾ ವಯಮಿವಾಚ್ಯುತಪಾದಜುಷ್ಟಾಂ
ಕಿಂ ವಾ ಸ್ರಜಂ ಸ್ಪೃಹಯಸೇ ಕಬರೇಣ ವೋಢುಮ್ ॥ ೧೬ ॥

ಚಕ್ರವಾಕ ಪಕ್ಷಿಯೇ ! ನೀನೇಕೆ ರಾತ್ರಿಯಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡಿರುವೆ ? ನಿನ್ನ ಪತಿಯು ದೇಶಾಂತರಕ್ಕೇನಾದರೂ ಹೋಗಿರುವನೇ ? ಇದರಿಂದಲೇ ನೀನು ಕರುಣಾಜನಕವಾದ ಸ್ವರದಲ್ಲಿ ಕೂಗಿಕೊಳ್ಳುತ್ತಿರುವೆಯಾ ? ಅಯ್ಯೋ ಪಾಪ ! ನೀನು ಬಹಳದುಃಖಿಯಾಗಿರುವೆ. ಅಥವಾ ನಮ್ಮಂತೆಯೇ ನಿನ್ನ ಹೃದಯ ದಲ್ಲಿ ಭಗವಂತನ ದಾಸೀಭಾವವು ಜಾಗ್ರತವಾಗಿದೆಯೇ ? ಈ ಕಾರಣದಿಂದಲೇ ನೀನು ಅವನ ಚರಣಗಳಲ್ಲಿ ಏರಿಸಿರುವ ಪುಷ್ಪ ಮಾಲೆಯನ್ನು ನಿನ್ನ ತರುಬಿನಲ್ಲಿ ಧರಿಸಲು ಅಪೇಕ್ಷಿಸುತ್ತಿರು ವೆಯಾ ? ॥ ೧೬ ॥

ಭೋ ಭೋಃ ಸದಾ ನಿಷ್ಪನಸೇ ಉದನ್ವ-
ನ್ನಲಬ್ಧನಿದ್ರೋऽಧಿಗತಪ್ರಜಾಗರಃ ।
ಕಿಂ ವಾ ಮುಕುಂದಾಪಹೃತಾತ್ಮಲಾಂಛನಃ
ಪ್ರಾಪ್ತಾಂ ದಶಾಂ ತ್ವಂ ಚ ಗತೋ ದುರತ್ಯಯಾಮ್ ॥ ೧೭ ॥

ಎಲೈ ಸಮುದ್ರವೇ ! ನೀನು ನಿರಂತರ ಭೋರ್ಗರೆಯುತ್ತಲೇ ಇರುವೆಯಲ್ಲ! ನಿನಗೆ ನಿದ್ದೆ ಬರುವುದಿಲ್ಲವೇ ? ನಿನಗೆ ನಿದ್ರೆ ಬಾರದಿರುವ ರೋಗವೇನಾದರೂ ಉಂಟಾಗಿದೆಯೇ ? ಆದರೆ ಹಾಗಲ್ಲ, ನಿನಗೆ ಪ್ರಿಯನಾದ ಶ್ಯಾಮಸುಂದರನು ನಿನ್ನ ಧೈರ್ಯ, ಗಾಂಭೀರ್ಯ ಮೊದಲಾದ ಸ್ವಾಭಾವಿಕ ಗುಣಗಳನ್ನು ಕಿತ್ತು ಕೊಂಡಿರು ವನು. ಇದರಿಂದ ನೀನು ನಮ್ಮಂತೆಯೇ ಯಾವುದೇ ಔಷಧಿಯೇ ಇಲ್ಲದ ರೋಗಕ್ಕೆ ತುತ್ತಾಗಿರುವಂತೆ ಕಾಣುತ್ತದೆ. ॥ ೧೭ ॥

ಎಲೈ ಚಂದ್ರನೇ ! ನೀನು ಬಲವಾದ ಕ್ಷಯರೋಗದಿಂದ ಪೀಡಿತನಾಗಿರುವೆ. ಅದರಿಂದಲೇ ಅತ್ಯಂತ ದುರ್ಬಲನಾಗಿರುವೆ. ಅಯ್ಯೋ ! ರಾಮ, ರಾಮ ! ಈಗ ನೀನು ನಿನ್ನ ಕಿರಣಗಳಿಂದ

ತ್ವಂ ಯಕ್ಷ್ಮಣಾ ಬಲವತಾಸಿ ಗೃಹೀತ ಇಂದೋ
ಕ್ಷೀಣಸ್ತಮೋ ನ ನಿಜದೀಧಿತಿಭಿಃ ಕ್ಷಿಣೋಷಿ ।
ಕಚ್ಚಿನ್ಮುಕುಂದಗದಿತಾನಿ ಯಥಾ ವಯಂ ತ್ವಂ
ವಿಸ್ಮೃತ್ಯ ಭೋಃ ಸ್ಥಗಿತಗೀರುಪಲಕ್ಷ್ಯಸೇ ನಃ ॥ ೧೮ ॥

ಕಿಂ ತ್ವಾಚರಿತಮಸ್ಮಾಭಿರ್ಮಲಯಾನಿಲ ತೇಽಪ್ರಿಯಮ್ ।
ಗೋವಿಂದಾಪಾಂಗನಿರ್ಭಿನ್ನೇ ಹೃದೀರಯಸಿ ನಃ ಸ್ಮರಮ್
॥ ೧೯ ॥

ಮೇಘ ಶ್ರೀಮಂಸ್ತ್ವಮಸಿ ದಯಿತೋ ಯಾದವೇಂದ್ರಸ್ಯ ನೂನಂ
ಶ್ರೀವತ್ಸಾಂಕಂ ವಯಮಿವ ಭವಾನ್ ಧ್ಯಾಯತಿ ಪ್ರೇಮಬದ್ಧಃ ।
ಅತ್ಯುತ್ಕಂಠಃ ಶಬಲಹೃದಯೋಽಸ್ಮದ್ವಿಧೋ ಬಾಷ್ಪಧಾರಾಃ
ಸ್ಮೃತ್ವಾ ಸ್ಮೃತ್ವಾ ವಿಸೃಜಸಿ ಮುಹುರ್ದುಃಖಿದಸ್ತತ್ಸಂಗಃ
॥ ೨೦ ॥

ಪ್ರಿಯರಾವಪದಾನಿ ಭಾಷಸೇಮೃತ-
ಸಂಜೀವಿಕಯಾನಯಾ ಗಿರಾ ।
ಕರವಾಣಿ ಕಿಮದ್ಯ ತೇ ಪ್ರಿಯಂ
ವದ ಮೇ ವಲ್ಗಿತಕಂಠ ಕೋಕಿಲ ॥ ೨೧ ॥

ನ ಚಲಸಿ ನ ವದಸ್ಯುದಾರಬುದ್ಧೇ
ಕ್ಷಿತಿಧರ ಚಿಂತಯಸೇ ಮಹಾಂತಮರ್ಥಮ್ ।
ಅಪಿ ಬತ ವಸುದೇವನಂದನಾಂಘ್ರಿಂ
ವಯಮಿವ ಕಾಮಯಸೇ ಸ್ತನೈರ್ವಿಧರ್ತುಮ್ ॥ ೨೨ ॥

ಶುಷ್ಯದ್ದ್ರುದಾಃ ಕರ್ಶಿಕಾ ಬತ ಸಿಂಧುಪತ್ನ್ಯಃ
ಸಂಪ್ರತ್ಯಪಾಸ್ತಕಮಲಶ್ರಿಯ ಇಷ್ಟಭರ್ತುಃ ।
ಯದ್ವದ್ವಯಂ ಮಧುಪತೇಃ ಪ್ರಣಯಾವಲೋಕಮ್
ಅಪ್ರಾಪ್ಯ ಮುಷ್ಟಹೃದಯಾಃ ಪುರುಕರ್ಶಿತಾಃ ಸ್ಮ ॥ ೨೩ ॥

ಕತ್ತಲೆಯನ್ನು ಓಡಿಸಲು ಅಸಮರ್ಥನಾಗಿರುವೆ. ನಮ್ಮ ಪ್ರಿಯ ಶ್ಯಾಮಸುಂದರನ ಮಧುರವಾದ ರಹಸ್ಯವಾದ ಮಾತುಗಳನ್ನು ಮರೆತು ಅದನ್ನೇ ಪುನಃ ಸ್ಮರಿಸುತ್ತಾ ನೀನು ಕ್ಷೀಣನೂ, ಮೌನಿಯೂ ಆಗಿರಬಹುದೇ ? ॥ ೧೮ ॥

ಎಲೈ ಮಲಯಾನಿಲವೇ ! ನಮ್ಮ ಹೃದಯದಲ್ಲಿ ಸುಪ್ತವಾಗಿದ್ದ ಕಾಮವನ್ನು ಬಡಿದೆಬ್ಬಿಸುತ್ತಿರುವೆಯಲ್ಲ ! ನಾವೇನು ನಿನಗೆ ಅಪರಾಧ ವೆಸಗಿದ್ದೇವೆ ? ಅಯ್ಯಾ ! ಭಗವಂತನ ಕಟಾಕ್ಷ-ವೀಕ್ಷಣದಿಂದ ನಮ್ಮ ಹೃದಯಗಳು ಮೊದಲೇ ಘಾಸಿಗೊಂಡಿವೆ. ಇದನ್ನು ತಿಳಿಯದೆ ಪುನಃ ನಮ್ಮನ್ನು ಏಕೆ ಸತಾಯಿಸುತ್ತಿರುವೆ ? ॥ ೧೯ ॥

ಶ್ರೀಮಂತನಾದ ಮೇಘರಾಜನೇ ! ನೀನು ಶ್ಯಾಮಲವರ್ಣ ದವನಾದ್ದರಿಂದ ಮೇಘಶ್ಯಾಮನಾದ ನಮ್ಮ ಪ್ರಿಯತಮನಿಗೆ ಅತ್ಯಂತ ಪ್ರಿಯನಾಗಿರುವೆ. ಅದರಿಂದಲೇ ನೀನು ನಮ್ಮಂತೆಯೇ ಪ್ರೇಮಪಾಶದಲ್ಲಿ ಬಿದ್ದು ಅವನನ್ನು ಧ್ಯಾನಮಾಡುತ್ತಿರುವೆ. ನೋಡು ! ನೋಡು ! ನಿನ್ನ ಹೃದಯವು ಚಿಂತೆಯಿಂದ ತುಂಬಿ ಹೋಗಿದೆ. ನೀನು ಅವನಿಗಾಗಿ ಅತ್ಯಂತ ಉತ್ಕಂಠಿತನಾಗಿರುವೆ. ಅದಕ್ಕೆಂದೇ ಪದೇ-ಪದೇ ಅವನನ್ನು ನೆನೆಯುತ್ತಾ ನಮ್ಮಂತೆಯೇ ಕಣ್ಣೀರ ಧಾರೆಗಳನ್ನು ಸುರಿಸುತ್ತಿರುವೆ. ಶ್ಯಾಮಘನ ! ನಿಜ ವಾಗಿಯೂ ಘನಶ್ಯಾಮನಲ್ಲಿ ಸಂಬಂಧ ಬೆಳೆಸುವುದೆಂದರೆ ದುಃಖ ಗಳಿಗೆ ಆಮಂತ್ರಣ ಕೊಟ್ಟಂತೆಯೇ ಸರಿ. ॥ ೨೦ ॥

ಎಲೈ ಕೋಗಿಲೆಯೇ ! ನೀನು ರಮಣೀಯವಾದ ಕಂಠ ಮಾಧುರ್ಯದಿಂದ ಕೂಡಿರುವೆ. ನಮ್ಮ ಪ್ರಿಯಕರ ಶ್ರೀಕೃಷ್ಣ ನಂತೆಯೇ ನೀನು ಕೂಡ ಮೃದುಮಧುರವಾದ, ಸತ್ತವರನ್ನೂ ಬದುಕಿಸುವ ಮಾಧರ್ಯದಿಂದ ಕೂಡಿರುವ ಮಾತುಗಳನ್ನೇ ಆಡುತ್ತಿರುವೆ. ಈಗ ನಿನಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಿಕೊಡಲಿ ? ಹೇಳು. ॥ ೨೧ ॥

ಉದಾರ ಬುದ್ಧಿಯುಳ್ಳ ಕ್ಷಿತಿಧರನೇ ! ಪರ್ವತವೇ ! ನೀನು ಚಲಿಸುವುದಿಲ್ಲ, ಮಾತನಾಡುವುದೂ ಇಲ್ಲ, ಯಾವುದೋ ಗಂಭೀರ ವಾದ ವಿಷಯವನ್ನು ಕುರಿತು ಆಲೋಚಿಸುತ್ತಿರುವಂತೆ ಕಾಣುತ್ತಿ ರುವೆ. ನಾವು ನಮ್ಮ ಸ್ತನಗಳಿಂದ ಧರಿಸಲು ಬಯಸುವ ವಾಸು ದೇವನ ಚರಣಾರವಿಂದಗಳನ್ನು ನಿನ್ನ ಶಿಖರಗಳಿಂದೇನಾದರೂ ಧರಿಸಲು ಅಪೇಕ್ಷಿಸುತ್ತಿರುವೆಯಾ ? ಅದನ್ನೇ ಗಾಢವಾಗಿ ಯೋಚಿಸು ತ್ತಿರುವೆಯಾ ? ಹೇಳು. ॥ ೨೨ ॥

ಎಲೈ ಸಮುದ್ರಪತ್ನಿಯರಾದ ನದಿಗಳೇ ! ಇದು ಗ್ರೀಷ್ಮಋತು. ನಿಮ್ಮ ಮಡುಗಳೆಲ್ಲ ಒಣಗಿ ಹೋಗಿವೆ. ನಿಮ್ಮಲ್ಲಿ ಅರಳಿದ ಕಮಲ ಗಳ ಸೌಂದರ್ಯವು ಕಂಡುಬರುವುದಿಲ್ಲ, ನೀವು ಬಹಳ ಸೊರಗಿ ದ್ದೀರಿ. ನಾವು ನಮ್ಮ ಪ್ರಿಯತಮ ಶ್ಯಾಮಸುಂದರನ ಪ್ರೇಮ ತುಂಬಿದ ಓರೆನೋಟವನ್ನು ಪಡೆಯದೆ ನಮ್ಮ ಹೃದಯಗಳು ಬರಿದಾಗಿ ಅತ್ಯಂತ ಸೊರಗಿ ಹೋಗಿದ್ದೇವೆ. ಹಾಗೆಯೇ ನೀವು ಕೂಡ ಮೇಘಗಳ ಮೂಲಕ ನಿಮ್ಮ ಪ್ರಿಯಕರ ಸಮುದ್ರದ ನೀರು ಪಡೆಯದೆ ಹೀಗೆ ದೀನರಾಗಿದ್ದೀರಿ ಎಂದು ತೋರುತ್ತದೆ. ॥ ೨೩. ॥

ಎಲೈ ಹಂಸವೇ ! ಬಾ ! ಬಾ ! ನಿನಗೆ ಸ್ವಾಗತ ಬಯಸುತ್ತೇವೆ. ಈ ಪೀಠದಲ್ಲಿ ಕುಳಿತುಕೋ. ಸ್ವಲ್ಪ ಹಾಲು ಕುಡಿ. ಪ್ರಿಯ ಹಂಸವೇ ! ಶ್ಯಾಮಸುಂದರನ ಸಮಾಚಾರವನ್ನು ಹೇಳು. ನೀನು ಅವನ

ಹಂಸ ಸ್ವಾಗತಮಾಸ್ಯತಾಂ ಪಿಬ ಪಯೋ
ಬ್ರೂಹ್ಯಂಗ ಶೌರೇಃ ಕಥಾಂ
ದೂತಂ ತ್ವಾಂ ನು ವಿದಾಮ ಕಚ್ಚಿದಜಿತಃ
ಸ್ವಸ್ಯಾಪ್ತ ಉಕ್ತಂ ಪುರಾ ।
ಕಿಂ ವಾ ನಶ್ಚಲಸೌಹೃದಃ ಸ್ಮರತಿ ತಂ
ಕಸ್ಮಾದ್ವಜಾಮೋ ವಯಂ
ಕ್ಷೌದ್ರಾಲಾಪಯ ಕಾಮದಂ ಶ್ರಿಯಮೃತೇ
ಸೈವೈಕನಿಷ್ಠಾ ಸ್ತ್ರಿಯಾಂ ॥ ೨೪ ॥

ಶ್ರೀಶುಕ ಉವಾಚ

ಇತೀದೃಶೇನ ಭಾವೇನ ಕೃಷ್ಣೇ ಯೋಗೇಶ್ವರೇಶ್ವರೇ ।
ಕ್ರಿಯಮಾಣೇನ ಮಾಧವ್ಯೋ ಲೇಭಿರೇ ಪರಮಾಂ ಗತಿಮ್
॥ ೨೫ ॥

ಶ್ರುತಮಾತ್ರೋಽಪಿ ಯಃ ಸ್ತ್ರೀಣಾಂ ಪ್ರಸಹ್ಯಾಕರ್ಷತೇ ಮನಃ ।
ಉರುಗಾಯೋರುಗೀತೋ ವಾ ಪಶ್ಯಂತೀನಾಂ ಕುತಃ ಪುನಃ
॥ ೨೬ ॥

ಯಾಃ ಸಂಪರ್ಯಚರನ್ಪ್ರೇಮ್ಣಾ ಪಾದಸಂವಾಹನಾದಿಭಿಃ ।
ಜಗದ್ಗುರುಂ ಭರ್ತೃಬುದ್ಧ್ಯಾ ತಾಸಾಂ ಕಿಂ ವರ್ಣ್ಯತೇ ತಪಃ
॥ ೨೭ ॥

ಏವಂ ವೇದೋದಿತಂ ಧರ್ಮಮನುತಿಷ್ಠನ್ ಸತಾಂ ಗತಿಃ ।
ಗೃಹಂ ಧರ್ಮಾರ್ಥಕಾಮಾನಾಂ ಮುಹುಶ್ಚಾದರ್ಶಯತ್ಪದಮ್
॥ ೨೮ ॥

ಆಸ್ಥಿತಸ್ಯ ಪರಂ ಧರ್ಮಂ ಕೃಷ್ಣಸ್ಯ ಗೃಹಮೇಧಿನಾಮ್ ।
ಆಸನ್ ಷೋಡಶಸಾಹಸ್ರಂ ಮಹಿಷ್ಯಶ್ಚ ಶತಾಧಿಕಮ್
॥ ೨೯ ॥

ತಾಸಾಂ ಸ್ತ್ರೀರತ್ನಭೂತಾನಾಮಷ್ಟೌ ಯಾಃ ಪ್ರಾಗುದಾಹೃತಾಃ ।
ರುಕ್ಮಿಣೀಪ್ರಮುಖಾ ರಾಜನ್ಸ್ತತ್ಪುತ್ರಾಶ್ಚಾನುಪೂರ್ವಶಃ
॥ ೩೦ ॥

ದೂತನಾಗಿರುವೆ ಎಂದೇ ನಾವು ಭಾವಿಸುತ್ತೇವೆ. ಯಾರಿಗೂ ವಶನಾಗದಿರುವ ಶ್ಯಾಮಸುಂದರನು ಕುಶಲನಾಗಿರುವನಲ್ಲ? ಅಯ್ಯಾ! ಅವನ ಸ್ನೇಹ ಬಹಳ ಅಸ್ಥಿರ ಹಾಗೂ ಕ್ಷಣಭಂಗುರ. ನೀವೇ ನನಗೆ ಪರಮಪ್ರಿಯರು ಎಂದು ಅವನು ನಮಗೆ ಹೇಳಿದ್ದನು. ಏನು ಅದು ಅವನಿಗೆ ಸ್ಮರಣೆಯಲ್ಲಿದೆಯೇ? ನೀನೇ ಹೇಳು. ಹೋಗು! ಹೋಗು! ನಾವು ನಿನ್ನ ಅನುನಯ-ವಿನಯವನ್ನು ಕೇಳುವುದಿಲ್ಲ. ಅವನೇ ನಮ್ಮನ್ನು ಲಕ್ಷಿಸುವುದಿಲ್ಲವಾದರೆ ನಾವಾದರೂ ಅವನ ಹಿಂದೆ ಏಕೆ ಬೀಳಬೇಕು? ಕ್ಷುದ್ರನಾದ ದೂತನೇ! ನಾವು ಅವನ ಬಳಿಗೆ ಹೋಗುವುದಿಲ್ಲ. ಏನು ಹೇಳಿದ ಅವನು? ನಮ್ಮ ಇಚ್ಛೆಯನ್ನು ಪೂರ್ಣಗೊಳಿಸಲು ಅವನು ಬರಲು ಇಚ್ಛಿಸುವನೇ? ಸರಿ! ಹಾಗಾದರೆ ಅವನನ್ನು ಕರಕೊಂಡು ಬಾ, ಅವನೊಡನೆ ಮಾತನಾಡಲು ಅವಕಾಶಮಾಡಿಕೊಡು. ಆದರೆ ಲಕ್ಷ್ಮಿಯನ್ನು ಎಲ್ಲಾದರು ಜೊತೆಗೆ ಕರೆದುಕೊಂಡು ಬರುವುದು ಬೇಡ. ಹಾಗೇನೆ ಅವನು ಲಕ್ಷ್ಮಿಯನ್ನು ಬಿಟ್ಟು ಇಲ್ಲಿಗೆ ಬರಲು ಇಚ್ಛಿಸುವುದಿಲ್ಲವೇ? ಇದೆಂತಹ ಮಾತು? ಏನು ಸ್ತ್ರೀಯರಲ್ಲಿ ಲಕ್ಷ್ಮಿಯೊಬ್ಬಳಿಗೇ ಭಗವಂತನಲ್ಲಿ ಪ್ರೇಮವಿರುವುದೇ? ಏನು ನಮ್ಮಲ್ಲಿ ಯಾರೂ ಅಂತಹವರಿಲ್ಲವೇ? ॥ ೨೪ ॥

ಶ್ರೀಶುಕಮಹಾಮುನಿಗಳು ಹೇಳಿದರು - ಪರೀಕ್ಷಿತನೇ! ಶ್ರೀಕೃಷ್ಣನ ಪತ್ನಿಯರು ಯೋಗೇಶ್ವರನಾದ ಭಗವಂತನಲ್ಲಿ ಇಂತಹ ಅನನ್ಯವಾದ ಪ್ರೇಮಭಾವವನ್ನು ಇಟ್ಟಿದ್ದರು. ಅದರಿಂದಲೇ ಅವರು ಪರಮಪದವನ್ನು ಪಡೆದುಕೊಂಡರು. ॥ ೨೫ ॥ ಭಗವಾನ್ ಶ್ರೀಕೃಷ್ಣನ ಅನಂತ ಲೀಲೆಗಳು ವಿವಿಧ ಪ್ರಕಾರದಿಂದ, ಅನೇಕ ಗೀತಗಳಿಂದ ಹಾಡಲ್ಪಟ್ಟಿವೆ. ಅವನ್ನು ಕೇಳಿದ ಮಾತ್ರದಿಂದಲೇ ಸ್ತ್ರೀಯರ ಮನಸ್ಸು ಬಲವಂತವಾಗಿ ಅವನೆಡೆಗೆ ಆಕರ್ಷಿಸಲ್ಪಡುವಷ್ಟು ಮಧುರವೂ, ಮನೋಹರವು ಆಗಿವೆ. ಹಾಗಿರುವಾಗ ಅವನನ್ನು ಕಣ್ಣಾರೆಕಂಡ ಸ್ತ್ರೀಯರ ವಿಷಯದಲ್ಲಿ ಹೇಳುವುದೇನಿದೆ? ॥ ೨೬ ॥ ಜಗದ್ಗುರು ಭಗವಾನ್ ಶ್ರೀಕೃಷ್ಣನನ್ನೇ ಪತಿಯೆಂದು ಭಾವಿಸಿದ ಸೌಭಾಗ್ಯವತಿಯರು ಅವನಿಗೆ ಪರಮ ಪ್ರೇಮದಿಂದ ಸ್ನಾನಮಾಡಿಸುವುದು, ಚರಣಗಳನ್ನು ಒತ್ತುವುದು, ಊಟಮಾಡಿಸುವುದು, ಮುಂತಾದ ಅನೇಕ ವಿಧದಿಂದ ಸೇವೆ ಮಾಡಿದರು. ಅವರ ತಪಸ್ಸನ್ನು ಯಾರು ತಾನೇ ವರ್ಣಿಸಬಲ್ಲರು? ॥ ೨೭ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸತ್ಪುರುಷರಿಗೆ ಏಕಮಾತ್ರ ಆಶ್ರಯನಾಗಿರುವನು. ಅವನು ವೇದೋಕ್ತ ಧರ್ಮವನ್ನು ಪದೇ-ಪದೇ ಆಚರಿಸಿ - ಮನೆಯೇ, ಧರ್ಮ, ಅರ್ಥ, ಕಾಮ ಇವುಗಳನ್ನು ಸಾಧಿಸುವ ಸ್ಥಳವಾಗಿದೆ ಎಂದು ಜನರಿಗೆ ತೋರಿಸಿಕೊಟ್ಟಿರುವನು. ॥ ೨೮ ॥ ಇದಕ್ಕಾಗಿಯೇ ಅವನು ಗೃಹಸ್ಥೋಚಿತವಾದ ಶ್ರೇಷ್ಠಧರ್ಮವನ್ನು ಆಶ್ರಯಿಸಿ ವ್ಯವಹರಿಸುತ್ತಿದ್ದನು. ಪರೀಕ್ಷಿತನೇ! ಅವನ ರಾಣಿಯರ ಸಂಖ್ಯೆ ಹದಿನಾರುಸಾವಿರದ ಒಂದುನೂರ ಎಂಟು ಇತ್ತು ಎಂದು ನಾನು ಮೊದಲೇ ನಿನಗೆ ಹೇಳಿರುವೆನು. ॥ ೨೯ ॥ ಅಂತಹ ಶ್ರೇಷ್ಠ ಸ್ತ್ರೀಯರಲ್ಲಿ ರುಕ್ಮಿಣಿಯೇ ಮೊದಲಾದ ಎಂಟು ಜನ ಪಟ್ಟದರಸಿಯರು ಮತ್ತು ಅವರ ಪುತ್ರರ ಕುರಿತು ನಾನು ಮೊದಲೇ ಕ್ರಮವಾಗಿ ವರ್ಣಿಸಿರುವೆನು. ॥ ೩೦ ॥

ಏಕೈಕಸ್ಯಾಂ ದಶ ದಶ ಕೃಷ್ಣೋಽಜೀಜನದಾತ್ಮಜಾನ್ ।
ಯಾವತ್ಯ ಆತ್ಮನೋ ಭಾರ್ಯಾ ಅಮೋಘಗತಿರೀಶ್ವರಃ
॥ ೩.೧ ॥

ತೇಷಾಮುದ್ದಾಮವೀರ್ಯಾಣಾಮಷ್ಟಾದಶ ಮಹಾರಥಾಃ ।
ಆಸನ್ನುದಾರಯಶಸಸ್ತೇಷಾಂ ನಾಮಾನಿ ಮೇ ಶೃಣು
॥ ೩.೨ ॥

ಪ್ರದ್ಯುಮ್ನಶ್ಚಾನಿರುದ್ಧಶ್ಚ ದೀಪ್ತಿಮಾನ್ ಭಾನುರೇವ ಚ ।
ಸಾಂಬೋ ಮಧುರ್ಬೃಹದ್ಭಾನುಶ್ಚಿತ್ರಭಾನುರ್ವೃಕೋಽರುಣಃ
॥ ೩.೩ ॥

ಪುಷ್ಕರೋ ವೇದಬಾಹುಶ್ಚ ಶ್ರುತದೇವಃ ಸುನಂದನಃ ।
ಚಿತ್ರಬಾಹುರ್ವಿರೂಪಶ್ಚ ಕವಿರ್ನ್ಯಗ್ರೋಧ ಏವ ಚ
॥ ೩.೪ ॥

ಏತೇಷಾಮಪಿ ರಾಜೇಂದ್ರ ತನುಜಾನಾಂ ಮಧುದ್ವಿಷಃ ।
ಪ್ರದ್ಯುಮ್ನ ಆಸೀತ್ಪ್ರಥಮಃ ಪಿತೃವದ್ರುಕ್ಮಿಣೀಸುತಃ
॥ ೩.೫ ॥

ಸ ರುಕ್ಮಿಣೋ ದುಹಿತರಮುಪಯೇಮೇ ಮಹಾರಥಃ ।
ತಸ್ಯಾತ್ಸುತೋಽನಿರುದ್ಧೋಽಭೂನ್ನಾಗಾಯುತಬಲಾನ್ವಿತಃ
॥ ೩.೬ ॥

ಸ ಚಾಪಿ ರುಕ್ಮಿಣಃ ಪೌತ್ರೀಂ ದೌಹಿತ್ರೋ ಜಗೃಹೇ ತತಃ ।
ವಜ್ರಸ್ತಸ್ಯಾಭವದ್ಯಸ್ತು ಮೌಸಲಾದವಶೇಷಿತಃ
॥ ೩.೭ ॥

ಪ್ರತಿಬಾಹುರಭೂತ್ತಸ್ಮಾತ್ ಸುಬಾಹುಸ್ತಸ್ಯ ಚಾತ್ಮಜಃ ।
ಸುಬಾಹೋಃ ಶಾಂತಸೇನೋಽಭೂಚ್ಛತಸೇನಸ್ತು ತತ್ಸುತಃ
॥ ೩.೮ ॥

ನ ಹ್ಯೇತಸ್ಮಿನ್ಕುಲೇ ಜಾತಾ ಅಧನಾ ಅಬಹುಪ್ರಜಾಃ ।
ಅಲ್ಪಾಯುಷೋಽಲ್ಪವೀರ್ಯಾಶ್ಚ ಅಬ್ರಹ್ಮಣ್ಯಾಶ್ಚ ಜಜ್ಞಿರೇ
॥ ೩.೯ ॥

ಯದುವಂಶಪ್ರಸೂತಾನಾಂ ಪುಂಸಾಂ ವಿಖ್ಯಾತಕರ್ಮಣಾಮ್ ।
ಸಂಖ್ಯಾ ನ ಶಕ್ಯತೇ ಕರ್ತುಮಪಿ ವರ್ಷಾಯುತೈರ್ನೃಪ
॥ ೪೦ ॥

ತಿಸ್ರಃ ಕೋಟ್ಯಃ ಸಹಸ್ರಾಣಾಮಷ್ಟಾಶೀತಿಶತಾನಿ ಚ ।
ಆಸನ್ ಯದುಕುಲಾಚಾರ್ಯಾಃ ಕುಮಾರಾಣಾಮಿತಿ ಶ್ರುತಮ್
॥ ೪೧ ॥

ಸಂಖ್ಯಾನಂ ಯಾದವಾನಾಂ ಕಃ ಕರಿಷ್ಯತಿ ಮಹಾತ್ಮನಾಮ್ ।
ಯತ್ರಾಯುತಾನಾಮಯುತಲಕ್ಷೇಣಾಸ್ತೇ ಸ ಆಹುಕಃ
॥ ೪೨ ॥

ದೇವಾಸುರಾಹವಹತಾ ದೈತೇಯಾ ಯೇ ಸುದಾರುಣಾಃ ।
ತೇ ಚೋತ್ಪನ್ನಾ ಮನುಷ್ಯೇಷು ಪ್ರಜಾ ದೃಪ್ತಾ ಬಬಾಧಿರೇ
॥ ೪೩ ॥

ಇವರಲ್ಲದೆ ಇತರ ಶ್ರೀಕೃಷ್ಣನ ಪತ್ನಿಯರಲ್ಲಿ ಪ್ರತಿಯೊಬ್ಬಳಲ್ಲಿಯೂ ಹತ್ತ-ಹತ್ತು ಪುತ್ರರು ಇದ್ದರು. ಇದೇನೋ ಆಶ್ಚರ್ಯದಸಂಗತಿಯಲ್ಲ. ಏಕೆಂದರೆ ಭಗವಂತನು ಸರ್ವಶಕ್ತನೂ, ಸತ್ಯಸಂಕಲ್ಪನೂ ಆಗಿರುವನು. ॥ ೩.೧ ॥ ಭಗವಂತನ ಪರಮ ಪರಾಕ್ರಮಿ ಪುತ್ರರಲ್ಲಿ ಹದಿನೆಂಟು ಮಂದಿ ಮಹಾರಥರೇ ಆಗಿದ್ದರು. ಅವರ ಕೀರ್ತಿಯೂ ಇಡೀ ಜಗತ್ತಿನಲ್ಲಿ ಹರಡಿತ್ತು. ಅವರ ಹೆಸರು ಇಂತಿದೆ. ॥ ೩.೨ ॥ ಪ್ರದ್ಯುಮ್ನ ಅನಿರುದ್ಧ ದೀಪ್ತಿಮಂತ, ಭಾನು, ಸಾಂಬ, ಮಧು, ಬೃಹದ್ಭಾನು, ಚಿತ್ರಭಾನು, ವೃಕ, ಅರುಣ, ಪುಷ್ಕರ, ವೇದಬಾಹು, ಶ್ರುತದೇವ, ಸುನಂದನ, ಚಿತ್ರಬಾಹು, ವಿರೂಪ, ಕವಿ ಮತ್ತು ನ್ಯಗ್ರೋಧ. ॥ ೩.೩-೩.೪ ॥ ರಾಜೇಂದ್ರನೇ ! ಭಗವಾನ್ ಶ್ರೀಕೃಷ್ಣನ ಈ ಪುತ್ರರಲ್ಲಿ ರುಕ್ಮಿಣೀನಂದನ ಪ್ರದ್ಯುಮ್ನನೇ ಸರ್ವಶ್ರೇಷ್ಠನಾಗಿದ್ದನು. ಅವನು ಸರ್ವಗುಣಗಳಲ್ಲಿ ತಂದೆಯಂತೆಯೇ ಇದ್ದನು. ॥ ೩.೫ ॥ ಮಹಾರಥಿ ಪ್ರದ್ಯುಮ್ನನು ರುಕ್ಮಿಯ ಮಗಳೊಂದಿಗೆ ವಿವಾಹವಾಗಿದ್ದನು. ಅಕೆಯ ಗರ್ಭದಲ್ಲಿ ಹತ್ತು ಸಾವಿರ ಆನೆಗಳ ಬಲವುಳ್ಳ ಅನಿರುದ್ಧನು ಹುಟ್ಟಿದನು. ॥ ೩.೬ ॥ ಅನಿರುದ್ಧನು ರುಕ್ಮಿಯ ಮೊಮ್ಮಗಳನ್ನು ವಿವಾಹವಾಗಿ ಅವಳಲ್ಲಿ ವಜ್ರನಾಭನೆಂಬ ಮಗನನ್ನು ಪಡೆದನು. ಬ್ರಾಹ್ಮಣರ ಶಾಪದಿಂದ ಯದುವಂಶವು ನಾಶವಾಗಿ ಹೋದ ಬಳಿಕ ಏಕಮಾತ್ರ ವಜ್ರನಾಭನು ಉಳಿದಿದ್ದನು. ॥ ೩.೭ ॥

ವಜ್ರನಾಭನ ಪುತ್ರನು ಪ್ರತಿಬಾಹು, ಪ್ರತಿಬಾಹುವಿಗೆ ಸುಬಾಹು, ಸುಬಾಹುವಿಗೆ ಶಾಂತಸೇನ ಮತ್ತು ಶಾಂತಸೇನನಿಗೆ ಶತಸೇನ ಹುಟ್ಟಿದನು. ॥ ೩.೮ ॥ ಪರೀಕ್ಷಿತನೇ ! ಈ ವಂಶದಲ್ಲಿ ಸಂತಾನವಿಲ್ಲದವನೂ, ನಿರ್ಧನನೂ, ಅಲ್ಪಾಯುವೂ ಅಲ್ಪವೀರ್ಯನೂ ಯಾರೂ ಇರಲಿಲ್ಲ. ಅವರೆಲ್ಲರೂ ಬ್ರಾಹ್ಮಣ ಭಕ್ತರಾಗಿದ್ದರು. ॥ ೩.೯ ॥ ಪರೀಕ್ಷಿತನೇ ! ಯದುವಂಶದಲ್ಲಿ ಆಗಿಹೋದ ಇಂತಿಂತಹ ಯಶಸ್ವಿಗಳ, ಪರಾಕ್ರಮಿಗಳ ಗಣನೆಯು ಸಾವಿರಾರು ವರ್ಷಗಳಲ್ಲಿಯೂ ಮುಗಿಯಲಾರದು. ॥ ೪೦ ॥ ಯದುವಂಶದಲ್ಲಿ ಬಾಲಕರಿಗೆ ಕಲಿಸಲು ಮೂರು ಕೋಟಿ ಎಂಭತ್ತೆಂಟು ಲಕ್ಷ ಆಚಾರ್ಯರಿದ್ದರೆಂದು ನಾನು ಕೇಳಿದ್ದೆ. ॥ ೪೧ ॥ ಇಂತಹ ಸ್ಥಿತಿಯಲ್ಲಿ ಮಹಾತ್ಮರಾದ ಯದುವಂಶಿಯರ ಸಂಖ್ಯೆಯನ್ನಾದರೋ ಹೇಗೆ ಹೇಳಬಹುದಾಗಿದೆ. ಮಹಾರಾಜನಾದ ಉಗ್ರಸೇನನೊಡನೆ ಅಂದಾಜು ಒಂದು ನೀಲ (ಒಂದು ಅಂಕೆ ಬರೆದು ಹದಿಮೂರು ಸೊನ್ನೆ ಬರೆಯಬೇಕು.) ಸೈನಿಕರಿದ್ದರು. ॥ ೪೨ ॥

ಪರೀಕ್ಷಿತನೇ ! ಹಿಂದೆ ನಡೆದ ದೇವಾಸುರರ ಸಂಗ್ರಾಮದಲ್ಲಿ ಅಸಂಖ್ಯಾತ ಭಯಂಕರ ಅಸುರರು ಅಸುನೀಗಿದರು. ಅವರೇ ಈಗ ಮನುಷ್ಯರಾಗಿ ಹುಟ್ಟಿ ಮಹಾಗರ್ವಿಷ್ಠರಾಗಿ ಜನರನ್ನು ಪೀಡಿಸತೊಡಗಿದರು. ॥ ೪೩ ॥ ಅವರನ್ನು ನಿಗ್ರಹಿಸುವ ಸಲುವಾಗಿ ಭಗವಂತನ

ತನ್ನಿಗ್ರಹಾಯ ಹರಿಣಾ ಪ್ರೋಕ್ತಾ ದೇವಾ ಯದೋಃ ಕುಲೇ ।
ಅವತೀರ್ಣಾಃ ಕುಲಶತಂ ತೇಷಾಮೇಕಾಧಿಕಂ ನೃಪ
॥ ೪೪ ॥

ಆಜ್ಞೆಯಂತೆ ದೇವತೆಗಳೇ ಯದುವಂಶದಲ್ಲಿ ಅವತರಿಸಿದ್ದರು. ಪರೀಕ್ಷಿತನೇ! ಯದುವಂಶದಲ್ಲಿ ಒಳಭೇದಗಳಾಗಿ ಒಂದುನೂರ ಒಂದು ಕುಲಗಳಿದ್ದವು. ॥ ೪೪ ॥

ತೇಷಾಂ ಪ್ರಮಾಣಂ ಭಗವಾನ್ ಪ್ರಭುತ್ವೇನಾಭವದ್ಧರಿಃ ।
ಯೇ ಚಾನುವರ್ತಿನಸ್ತಸ್ಯ ವವೃಧುಃ ಸರ್ವಯಾದವಾಃ
॥ ೪೫ ॥

ಅವರೆಲ್ಲರೂ ಭಗವಾನ್ ಶ್ರೀಕೃಷ್ಣನನ್ನೇ ತಮ್ಮ ಸ್ವಾಮಿಯೆಂದೂ, ಆದರ್ಶನೆಂದೂ ಭಾವಿಸಿದ್ದರು. ಅವನ ಅನುಯಾಯಿಗಳಾದ ಯಾದವರಿಗೆ ಎಲ್ಲ ವಿಧದಿಂದ ಉನ್ನತಿಯಾಯಿತು. ॥ ೪೫ ॥ ಯದುವಂಶೀಯರ ಚಿತ್ತವು ಮಲಗುವಾಗ, ಕುಳಿತಿರುವಾಗ, ಅಡ್ಡಾಡುವಾಗ, ಆಟವಾಡುವಾಗ, ಮಾತನಾಡುವಾಗ, ಸ್ನಾನಮಾಡುವಾಗ ಮೊದಲಾದ ಎಲ್ಲ ಕರ್ಮಗಳಲ್ಲಿ ಭಗವಾನ್ ಶ್ರೀಕೃಷ್ಣನಲ್ಲೇ ನೆಲೆಸಿದ್ದು ತಮ್ಮ ಶರೀರದ ಪ್ರಜ್ಞೆಯು ಇರುತ್ತಿರಲಿಲ್ಲ. ತಮ್ಮ ಶರೀರವು ಏನುಮಾಡುತ್ತಿದೆ ಎಂಬುದೂ ಅವರಿಗೆ ಅರಿವಿರಲಿಲ್ಲ. ಶರೀರದ ಎಲ್ಲ ಕ್ರಿಯೆಗಳು ಯಂತ್ರದಂತೆ ತಾನೇ-ತಾನಾಗಿ ನಡೆಯುತ್ತಿದ್ದವು. ॥ ೪೬ ॥

ಶಯ್ಯಾಸನಾಟನಾಲಾಪಕ್ರೀಡಾಸ್ನಾನಾದಿಕರ್ಮಸು ।
ನ ವಿದುಃ ಸಂತಮಾತ್ಮಾನಂ ವೃಷ್ಣಯಃ ಕೃಷ್ಣಚೇತಸಃ
॥ ೪೬ ॥

ಪರೀಕ್ಷಿತನೇ! ವಿಷ್ಣುಪಾದೋದ್ಭವೆಯಾದ ಗಂಗಾದೇವಿಯು ವಿಶ್ವದಲ್ಲೇ ಪವಿತ್ರತಮಳೆಂದು ಪ್ರಸಿದ್ಧಿಯನ್ನು ಹೊಂದಿದ್ದರೂ ಯಾದವಕುಲದಲ್ಲಿ ಶ್ರೀಕೃಷ್ಣನ ಕೀರ್ತಿರೂಪವಾದ ತೀರ್ಥವು ಉದಯಿಸಿದಾಗ ದೇವಗಂಗೆಯ ಮಹಿಮೆಯು ಕಡಿಮೆಯಾಯಿತು. ಶತ್ರು-ಮಿತ್ರರೆಂಬ ಭೇದವೇ ಇಲ್ಲದೆ ಪರಮಪುರುಷನಾದ ಶ್ರೀಕೃಷ್ಣನನ್ನು ಭಜಿಸಿದವರೆಲ್ಲರೂ ಪರಮಪದವನ್ನು ಪಡೆದರು. ಯಾವಳ ಕೃಪಾಕಟಾಕ್ಷವನ್ನು ಸಂಪಾದಿಸಲು ಬ್ರಹ್ಮನೇ ಮೊದಲಾದ ದೇವತೆಗಳು ಯಜ್ಞಮಾಡುವರೋ, ಆಕೆಯೇ ಭಗವಂತನ ಸೇವೆಯಲ್ಲಿ ನಿತ್ಯ-ನಿರಂತರವಾಗಿ ತೊಡಗಿರುವಳು. ಭಗವಂತನ ನಾಮವನ್ನು ಒಂದು ಬಾರಿ ಕೇಳುವುದರಿಂದ, ಉಚ್ಚರಿಸುವುದರಿಂದಲೇ ಸಮಸ್ತ ಅಮಂಗಳಗಳು ನಾಶವಾಗಿ ಹೋಗುತ್ತವೆ. ಋಷಿಗಳ ವಂಶಜರಲ್ಲಿ ಪ್ರಚಲಿತವಾಗಿರುವ ಧರ್ಮಗಳೆಲ್ಲವುಗಳ ಸಂಸ್ಥಾಪಕನು ಭಗವಾನ್ ಶ್ರೀಕೃಷ್ಣನೇ ಆಗಿರುವನು. ಅವನು ತನ್ನ ಕೈಯಲ್ಲಿ ಕಾಲಸ್ವರೂಪವಾದ ಚಕ್ರವನ್ನು ಧರಿಸಿರುವನು. ಪರೀಕ್ಷಿತನೇ! ಇಂತಹ ಸ್ಥಿತಿಯಲ್ಲಿ ಅವನು ಭೂಭಾರ ಹರಣ ಮಾಡಿದುದು ಏನು ತಾನೇ ದೊಡ್ಡ ಮಾತು? ॥ ೪೭ ॥ ಭಗವಾನ್ ಶ್ರೀಕೃಷ್ಣನೇ ಸಮಸ್ತ ಜೀವರ ಆಶ್ರಯಸ್ಥಾನನಾಗಿದ್ದಾನೆ. ಅವನು ಸದಾ-ಸರ್ವದಾ ಸರ್ವತ್ರ- ವ್ಯಾಪ್ತನಾಗಿದ್ದರೂ ಹೆಸರಿಗಷ್ಟೇ ದೇವಕಿಯ ಗರ್ಭದಲ್ಲಿ ಜನಿಸಿದನು. ಯದುವಂಶದ ವೀರರು ಪಾರ್ಷದರಂತೆ ಅವನ ಸೇವೆ ಮಾಡುತ್ತಾ ಇರುತ್ತಾರೆ. ಅವನು ತನ್ನ ಭುಜಬಲದಿಂದ ಅಧರ್ಮವನ್ನು ನಾಶಗೊಳಿಸಿದನು. ಪರೀಕ್ಷಿತನೇ! ಭಗವಂತನು ಸ್ವಭಾವತಃ ಚರಾಚರ ಜಗತ್ತಿನ ದುಃಖವನ್ನು ಕಳೆಯುತ್ತಿರುವನು. ಅವನ ಮಂದ ಮಧುರವಾದ ಮುಗ್ಧುಳಗೆಯಿಂದ ಕೂಡಿದ ಸುಂದರ ಮುಖಾರವಿಂದದಿಂದ ವ್ರಜಸ್ತ್ರೀಯರ ಮತ್ತು ಪುರಸ್ತ್ರೀಯರ ಹೃದಯದಲ್ಲಿ ಪ್ರೇಮಸಂಚಾರವಾಗುತ್ತಿತ್ತು. ವಾಸ್ತವವಾಗಿ ಸಮಸ್ತ ಜಗತ್ತಿನಲ್ಲಿ ಅವನೇ ವಿಜಯಿಯಾಗಿದ್ದಾನೆ. ಅವನಿಗೆ ಜಯವಾಗಲಿ! ಜಯವಾಗಲಿ! ॥ ೪೮ ॥

ತೀರ್ಥಂ ಚಕ್ರೇ ನೃಪೋನಂ ಯದಜನಿ ಯದುಷು
ಸ್ವಃಸರಿತ್ಪಾದಶೌಚಂ
ವಿದ್ವಿಷ್ಣ್ವಿಗ್ಧಾಃ ಸ್ವರೂಪಂ ಯುಯುರಜಿತಪರಾ
ಶ್ರೇಯ್ಯದರ್ಥೇಽನ್ಯಯತ್ನಃ ।
ಯನ್ನಾಮಾಮಂಗಲಘ್ನಂ ಶ್ರುತಮಥ ಗದಿತಂ
ಯತ್ಕೃತೋ ಗೋತ್ರಧರ್ಮಃ
ಕೃಷ್ಣಸ್ಯೈತನ್ನ ಚಿತ್ರಂ ಕ್ಷಿತಿಭರಹರಣಂ
ಕಾಲಚಕ್ರಾಯುಧಸ್ಯ ॥ ೪೭ ॥

ಜಯತಿ ಜನನಿವಾಸೋ ದೇವಕೀಜನ್ಮವಾದೋ
ಯದುವರಪರ್ಷತ್ಯಸ್ರ್ದೋರ್ಭಿರಸ್ಯನ್ನಧರ್ಮಮ್ ।
ಸ್ಥಿರಚರವೃಜಿನಘ್ನಃ ಸುಸ್ಮಿತಶ್ರೀಮುಖೇನ
ವ್ರಜಪುರವನಿತಾನಾಂ ವರ್ಧಯನ್ಕಾಮದೇವಮ್ ॥ ೪೮ ॥

ಇತ್ಥಂ ಪರಸ್ಯ ನಿಜವರ್ತ್ಮರಿರಕ್ಷಯಾಽಽತ್ತ-
ಲೀಲಾತನೋಸ್ತದನುರೂಪವಿಡಂಬನಾನಿ ।
ಕರ್ಮಾಣಿ ಕರ್ಮಕಷಣಾನಿ ಯದೂತ್ತಮಸ್ಯ
ಶ್ರೃಯಾದಮುಷ್ಯ ಪದಯೋರನುವೃತ್ತಿಮಿಚ್ಛನ್ ॥ ೪೯ ॥

ಪರೀಕ್ಷಿತನೇ! ಪ್ರಕೃತಿಗೆ ಅತೀತನಾದ ಪರಮಾತ್ಮನು ತಾನೇ ಸ್ಥಾಪಿಸಿದ ಧರ್ಮಮರ್ಯಾದೆಯ ರಕ್ಷಣೆಗಾಗಿ ದಿವ್ಯ ಲೀಲಾ ಶರೀರವನ್ನು ಗ್ರಹಣಮಾಡಿ, ಅದಕ್ಕನುರೂಪವಾಗಿ ಅನೇಕ ಅದ್ಭುತ ಚರಿತ್ರಗಳನ್ನು ಅಭಿನಯಿಸಿದನು. ಅವನ ಒಂದೊಂದು ಕರ್ಮವನ್ನು ಸ್ಮರಿಸುವವರ ಕರ್ಮಬಂಧನಗಳು ಕಡಿದುಹೋಗುತ್ತವೆ. ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಸೇವೆಯ ಅಧಿಕಾರ ಪಡೆಯಬೇಕಿದ್ದರೆ ಅವನ ಲೀಲೆಗಳನ್ನೇ ಶ್ರವಣಿಸಬೇಕು. ॥ ೪೯ ॥ ಪರೀಕ್ಷಿತನೇ! ಮನುಷ್ಯನು ಪ್ರತಿಕ್ಷಣವೂ ಭಗವಾನ್ ಶ್ರೀಕೃಷ್ಣನ ಮನೋಹರವಾದ ಲೀಲಾಕಥೆಗಳನ್ನು ಹೆಚ್ಚೆಚ್ಚು ಶ್ರವಣ, ಕೀರ್ತನೆ, ಚಿಂತನೆ ಮಾಡತೊಡಗಿದಾಗ ಅವನ ಈ ಭಕ್ತಿಯೇ ಅವನನ್ನು ಭಗವಂತನ ಪರಮಧಾಮಕ್ಕೆ ಕೊಂಡೊಯ್ಯುತ್ತದೆ. ಕಾಲನ ಗತಿಯನ್ನು ಮೀರುವುದು ಬಹಳ ಕಷ್ಟವಾಗಿದ್ದರೂ ಭಗವಂತನ ಧಾಮದಲ್ಲಿ ಕಾಲನ ಪ್ರಭಾವ ನಡೆಯುವುದಿಲ್ಲ. ಅದು ಅಲ್ಲಿಗೆ ತಲುಪಲಾರದು. ಅದೇ ಧಾಮದ ಪ್ರಾಪ್ತಿಗಾಗಿ ಅನೇಕ ಸಾಮ್ರಾಟರು ತಮ್ಮ ರಾಜ್ಯಲಕ್ಷ್ಮಿಯನ್ನು ತೊರೆದು ತಪಸ್ಸಿಗಾಗಿ ಅರಣ್ಯಕ್ಕೆ ಹೋದರು. ಅದಕ್ಕಾಗಿ ಮನುಷ್ಯನು ಅವನ ಲೀಲಾ ಕಥೆಗಳನ್ನು ಶ್ರವಣಿಸುತ್ತಲೇ ಇರಬೇಕು. ॥ ೫೦ ॥

ಮರ್ತ್ಯಸ್ತಯಾನುಸವಮೇಧಿತಯಾ ಮುಕುಂದ-
ಶ್ರೀಮತ್ಕಥಾಶ್ರವಣಕೀರ್ತನಚಿಂತಯೈತಿ ।
ತದ್ಧಾಮ ದುಸ್ತರಕೃತಾಂತಜವಾಪವರ್ಗಂ
ಗ್ರಾಮಾದ್ವನಂ ಕ್ಷಿತಿಭುಜೋಽಪಿ ಯಯುರ್ಯದರ್ಥಾಃ ॥ ೫೦ ॥

ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಶ್ರೀಕೃಷ್ಣಚರಿತಾನುವರ್ಣನಂ ನಾಮ ನವತಿತಮೋಽಧ್ಯಾಯಃ ॥ ೯೦ ॥

ಹತ್ತನೆಯ ಸ್ಕಂಧದ ಉತ್ತರಾರ್ಧವು ಸಂಪೂರ್ಣವಾಯಿತು.

ದಶಮ ಸ್ಕಂಧವು ಮುಗಿಯಿತು

ಹರಿಃ ಓಂ ತತ್ಸತ್ ಹರಿಃ ಓಂ ತತ್ಸತ್

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಏಕಾದಶಃ ಸ್ಕಂಧಃ

ಮೊದಲನೆಯ ಅಧ್ಯಾಯ

ಯದುವಂಶಕ್ಕೆ ಋಷಿಗಳ ಶಾಪ

ಶ್ರೀಬಾದರಾಯಣಿರುವಾಚ

ಕೃತ್ವಾ ದೈತ್ಯವಧಂ ಕೃಷ್ಣಃ ಸರಾಮೋ ಯದುಭಿರ್ವೃತಃ।
ಭುವೋಽವತಾರಯದ್ಭಾರಂ ಜವಿಷ್ಠಂ ಜನಯನ್ಕಲಿಮ್
॥ ೧ ॥

ಯೇ ಕೋಪಿತಾಃ ಸುಬಹು ಪಾಂಡುಸುತಾಃ ಸಪತ್ನೈ-
ರ್ದ್ಯೂತಹೇಲನಕಚಗ್ರಹಣಾದಿಭಿಸ್ತಾನ್।
ಕೃತ್ವಾ ನಿಮಿತ್ತಮಿತರೇತರತಃ ಸಮೇತಾನ್
ಹತ್ವಾ ನೃಪಾನ್ ನಿರಹರತ್ಕ್ಷಿತಿಭಾರಮೀಶಃ ॥ ೨ ॥

ಭೂಭಾರರಾಜಪೃತನಾ ಯದುಭಿರ್ನಿರಸ್ಯ
ಗುಪ್ತೈಃ ಸ್ವಬಾಹುಭಿರಚಿಂತಯದಪ್ರಮೇಯಃ।
ಮನ್ಯೇಽವನೇರ್ನನು ಗತೋಽಪ್ಯಗತಂ ಹಿ ಭಾರಂ
ಯದ್ಯಾದವಂ ಕುಲಮಹೋ ಅವಿಷಹ್ಯಮಾಸ್ತೇ ॥ ೩ ॥

ನೈವಾನ್ಯತಃ ಪರಿಭವೋಽಸ್ಯ ಭವೇತ್ ಕಥಂಚಿನ್
ಮತ್ಸಂಶ್ರಯಸ್ಯ ವಿಭವೋನ್ನ ಹನಸ್ಯ ನಿತ್ಯಮ್।
ಅಂತಃಕಲಿಂ ಯದುಕುಲಸ್ಯ ವಿಧಾಯ ವೇಣು-
ಸ್ತಂಬಸ್ಯ ವಹ್ನಿಮಿವ ಶಾಂತಿಮುಪೈಮಿ ಧಾಮ ॥ ೪ ॥

ಏವಂ ವ್ಯವಸಿತೋ ರಾಜನ್ ಸತ್ಯಸಂಕಲ್ಪ ಈಶ್ವರಃ।
ಶಾಪವ್ಯಾಜೇನ ವಿಪ್ರಾಣಾಂ ಸಂಜಹ್ರೇ ಸ್ವಕುಲಂ ವಿಭುಃ
॥ ೫ ॥

ವ್ಯಾಸನಂದನ ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಬಲರಾಮ ಹಾಗೂ ಬೇರೆ ಯಾದವರೊಂದಿಗೆ ಸೇರಿ ಅನೇಕ ದೈತ್ಯರನ್ನು ಸಂಹರಿಸಿ, ಕೌರವ ಪಾಂಡವರಲ್ಲಿ ಭಾರೀ ಕಲಹವನ್ನು ಉಂಟುಮಾಡಿ ಭೂಭಾರವನ್ನು ಇಳಿಸಿದನು. ॥ ೧ ॥ ಪಾಂಡವರನ್ನು ಅವರ ಶತ್ರುಗಳಾದ ಕೌರವರು ಕಪಟದ್ಯೂತದಿಂದ ಸೋಲಿಸಿ, ದ್ರೌಪದಿಯ ಮಾನ ಭಂಗವೇ ಮೊದಲಾದ ಅತ್ಯಾಚಾರಗಳಿಂದ ಕೆಣಕಿದರು. ಅಂತಹ ಪಾಂಡವರನ್ನು ನಿಮಿತ್ತವಾಗಿಸಿ ಭಗವಾನ್ ಶ್ರೀಕೃಷ್ಣನು ಕೌರವ ಪಾಂಡವರ ಎರಡೂ ಪಕ್ಷದಲ್ಲಿ ಸೇರಿದ ರಾಜರನ್ನು ಪರಸ್ಪರ ಕೊಲ್ಲಿಸಿದನು. ಈ ವಿಧವಾಗಿ ಅವನು ಪೃಥ್ವಿಯ ಭಾರವನ್ನು ಇಳಿಸಿದನು. ॥ ೨ ॥ ಅಪ್ರಮೇಯಸ್ವರೂಪೀ ಭಗವಾನ್ ಶ್ರೀಕೃಷ್ಣನು ತನ್ನ ಬಾಹುಬಲದಿಂದ ರಕ್ಷಿತ ಯಾದವರ ಮೂಲಕ ಕಂಟಕಪ್ರಾಯರಾದ ರಾಜರನ್ನು ಅವರ ಸೇನೆಯನ್ನೂ ವಿನಾಶಗೊಳಿಸಿದನು. ಈಗ ಲಾದರೋ ಯಾದವರು ಈ ಭೂಮಿಯಲ್ಲಿ ಇರುವ ಬೇರೆ ಯಾರಿಂದಲೂ ಜಯಿಸಲಾರರು. ಇಂತಹ ಪ್ರಬಲ ಪರಾಕ್ರಮಿ ಯಾದವರು ಭೂಮಂಡಲದಲ್ಲಿ ಜೀವಿಸಿರುವ ತನಕ, ಇಷ್ಟು ಭೂಭಾರ ತಗ್ಗಿದರೂ ಇನ್ನೂ ಪೃಥ್ವಿಯ ಭಾರ ಕಡಿಮೆಯಾಗಿಲ್ಲ ಎಂದೇ ನಾನು ತಿಳಿಯುತ್ತೇನೆ; ಹೀಗೆ ಯೋಚಿಸಿದನು. ॥ ೩ ॥ ನನ್ನ ಆಶ್ರಯದಲ್ಲಿರುವುದರಿಂದ ಈ ಯಾದವರನ್ನು ಬೇರೆ ಯಾರೂ ಪರಾಭವಗೊಳಿಸಲಾರರು. ಇವರು ಪೂರ್ಣವಾಗಿ ಉಚ್ಛೃಂಖಿಲರಾಗುತ್ತಿದ್ದಾರೆ. ಅಪಾರ ಸಂಪತ್ತು – ವೈಭವದಿಂದಾಗಿ ಇವರು ಯಾರ ಶಾಸನವನ್ನೂ ಲೆಕ್ಕಿಸರು. ಆದ್ದರಿಂದ ಬಿದಿರುಮೇಳೆ ಒಂದಕ್ಕೊಂದರ ಸಂಘರ್ಷದಿಂದ ಉಂಟಾದ ಬೆಂಕಿಯಿಂದ ಬಿದಿರುವನವನ್ನೇ ಸುಡುವಂತೆ ಈ ಯಾದವರಲ್ಲಿ ಪರಸ್ಪರ ಜಗಳ ಉಂಟುಮಾಡಿ ನಾನು ನನ್ನ ಶಾಂತಸ್ವರೂಪ ಪರಮಧಾಮಕ್ಕೆ ತೆರಳುವೆನು. ॥ ೪ ॥ ಎಲೈ ರಾಜನೇ! ಸತ್ಯಸಂಕಲ್ಪ ಸರ್ವ ಸಮರ್ಥ ಭಗವಂತನು ಹೀಗೆ ನಿಶ್ಚಯಿಸಿ, ಆ ಸರ್ವವ್ಯಾಪೀ ಪರಮಾತ್ಮನು ಬ್ರಾಹ್ಮಣರ ಶಾಪವನ್ನು ನಿಮಿತ್ತವಾಗಿಸಿ ತನ್ನ ಕುಲದ ಸಂಹಾರ ಮಾಡಿಸಿದನು. ॥ ೫ ॥

ಸ್ವಮೂರ್ತ್ಯಾ ಲೋಕಲಾವಣ್ಯನಿರ್ಮುಕ್ತ್ಯಾ ಲೋಚನಂ ನೃಣಾಮ್ ।
ಗೀರ್ಭಿಸ್ತಾಃ ಸ್ಮರತಾಂ ಚಿತ್ತಂ ಪದೈಸ್ತಾನೀಕ್ಷತಾಂ ಕ್ರಿಯಾಃ
॥ ೬ ॥

ಆಚ್ಛಿದ್ಯ ಕೀರ್ತಿಂ ಸುಶ್ಲೋಕಾಂ ವಿತತ್ಯ ಹ್ಯಂಜಸಾನು ಕೌ ।
ತಮೋಽನಯಾ ತರಿಷ್ಯಂತೀತ್ಯಗಾತ್ಸ್ವಂ ಪದಮೀಶ್ವರಃ
॥ ೭ ॥

ರಾಜೋವಾಚ

ಬ್ರಹ್ಮಣ್ಯಾನಾಂ ವದಾನ್ಯಾನಾಂ ನಿತ್ಯಂ ವೃದ್ಧೋಪಸೇವಿನಾಮ್ ।
ವಿಪ್ರಶಾಪಃ ಕಥಮಭೂದ್ವೃಷ್ಣೀನಾಂ ಕೃಷ್ಣಚೇತಸಾಮ್
॥ ೮ ॥

ಯನ್ನಿಮಿತ್ತಃ ಸ ವೈ ಶಾಪೋ ಯಾದೃಶೋ ದ್ವಿಜಸತ್ತಮ ।
ಕಥಾಮೇಕಾತ್ಮನಾಂ ಭೇದ ಏತತ್ಸರ್ವಂ ವದಸ್ವ ಮೇ
॥ ೯ ॥

ಶ್ರೀಶುಕ ಉವಾಚ

ಬಿಭ್ರದ್ವಪುಃ ಸಕಲಸುಂದರಸನ್ನಿವೇಶಂ
ಕರ್ಮಾಚರನ್ ಭುವಿ ಸುಮಂಗಲಮಾಪ್ತಕಾಮಃ ।
ಆಸ್ಥಾಯ ಧಾಮ ರಮಮಾಣ ಉದಾರಕೀರ್ತಿಃ
ಸಂಹರ್ತುಮೈಚ್ಛತ ಕುಲಂ ಸ್ಥಿತಕೃತ್ಯಶೇಷಃ ॥ ೧೦ ॥

ಭಗವಾನ್ ಶ್ರೀಕೃಷ್ಣನು ಅಖಿಂಡ ತ್ರಿಲೋಕಕ್ಕೆ ಸೌಂದರ್ಯ, ಮಾಧುರ್ಯವನ್ನು ಕರುಣಿಸುವವನು. ಅವನು ಸೌಂದರ್ಯ ಮಾಧುರ್ಯದ ನಿಧಿಯಾಗಿದ್ದಾನೆ. ಭಗವಂತನ ಶ್ಯಾಮಸುಂದರ ಸ್ವರೂಪವು ಯಾರೇ ಆಗಲೀ ಒಮ್ಮೆ ನೋಡಿದರೆ ಸಾಕು ಅವರ ಕಣ್ಣುಗಳು ಆ ಭಗವಂತನಲ್ಲಿ ಎಂದೆಂದಿಗೂ ನೆಟ್ಟುಹೋಗುವಷ್ಟು ಸುಂದರ, ಮನೋಹರವಾಗಿತ್ತು. ಅವನ ವಾಣಿಯು ಚಿಂತಿಸುವವರ ಚಿತ್ತವು ಮತ್ತೆ ಭಗವಂತನಲ್ಲೇ ಸ್ಥಿರವಾಗಿ ತೊಡಗುವಷ್ಟು ಮಧುರವಾಗಿತ್ತು. ಅವನ ಸುಮಧುರ ಮುರಳಿಯಗಾನ, ತ್ರಿಭಂಗಿ ಲಲಿತ ಭಂಗಿಯು, ಎಲ್ಲ ಪ್ರಾಣಿಗಳು ತಮ್ಮ ಕ್ರಿಯೆಗಳನ್ನು ಮರೆತು, ಕೆಲಸ-ಕಾರ್ಯಗಳನ್ನು ಬಿಟ್ಟು ಅವನೆಡೆಗೆ ಸೆಳೆಯಲ್ಪಡುತ್ತಿದ್ದವು. (ಈ ಪ್ರಕಾರ ಕಣ್ಣುಗಳನ್ನು ಆಕರ್ಷಿಸಿ ಅವರ ಸ್ಥೂಲಶರೀರವನ್ನು, ಚಿತ್ತವನ್ನು ಸೆಳೆದು ಅವರ ಸೂಕ್ಷ್ಮ ಶರೀರವನ್ನು, ಕ್ರಿಯೆಗಳನ್ನು ಆಕೃಷ್ಟವಾಗಿಸಿ, ಕರ್ಮವಾಸನೆಯ ಬೀಜವನ್ನೇ ನಾಶಗೊಳಿಸಿ ಅವರ ಕಾರಣಶರೀರವನ್ನು, ಹೀಗೆ ಎಲ್ಲವನ್ನೂ ತನ್ನತ್ತ ಸೆಳೆದುಕೊಂಡು ಜೀವಿಗಳನ್ನು ಪೂರ್ಣವಾಗಿ ಕರ್ಮಬಂಧನಗಳಿಂದ ಮುಕ್ತವಾಗಿಸುತ್ತಿದ್ದನು.) ಭಗವಂತನು ಈ ಪ್ರಕಾರ ತನ್ನ ಕೀರ್ತಿಯನ್ನು ಭೂಮಂಡಲದಲ್ಲಿ ವಿಸ್ತರಿಸಿದನು. ಆ ಲೀಲೆಗಳನ್ನು ಹಾಡಿ ಕೇಳಿ ಮನುಷ್ಯರು ಅಯಾಸವಿಲ್ಲದೆ ಈ ಅಜ್ಞಾನಾಂಧಕಾರವನ್ನು ದಾಟಿ ಹೋಗುವರು.* ಪರಮ ದಯಾಳು ಭಗವಾನ್ ಶ್ರೀಕೃಷ್ಣನು ಈ ರೀತಿ ತನ್ನ ಪವಿತ್ರ ಯಶಸ್ಸನ್ನು ವಿಸ್ತರಿಸಿ ತನ್ನ ಪರಮಧಾಮಕ್ಕೆ ತೆರಳಿದನು. ॥ ೬-೭ ॥

ರಾಜಾ ಪರೀಕ್ಷಿತನು ಕೇಳಿದನು – ಈ ಯದುವಂಶೀಯರಾದರೋ ಬ್ರಾಹ್ಮಣಭಕ್ತರಾಗಿದ್ದರು. ಉದಾರರಾಗಿದ್ದು ಗುರು ಹಿರಿಯರನ್ನು ಆದರಪೂರ್ವಕವಾಗಿ ಸೇವಿಸುವವರಾಗಿದ್ದರು. ಅವರ ಚಿತ್ತ ಸದಾಕಾಲ ಶ್ರೀಕೃಷ್ಣನಲ್ಲೇ ತೊಡಗಿರುತ್ತಿತ್ತು. ಅವರಿಗೆ ಬ್ರಾಹ್ಮಣರ ಶಾಪ ಹೇಗೆ ಉಂಟಾಯಿತು ? ಯಾವ ಕಾರಣದಿಂದ ಶಾಪ ಒದಗಿತು ? ಆ ಶಾಪ ಏನಾಗಿತ್ತು ? ಎಲ್ಲ ಯಾದವರು ಪರಸ್ಪರ ಪ್ರೇಮದಿಂದಲೇ ಕೂಡಿಕೊಂಡಿದ್ದರೂ ಅವರಲ್ಲಿ ಇಂತಹ ಭೇದಭಾವ ಏಕೆ ಉಂಟಾಯಿತು ? ವಿರಸ ಹೇಗೆ ಉಂಟಾಯಿತು ? ಇದೆಲ್ಲವನ್ನು ತಾವು ನನಗೆ ತಿಳಿಸುವ ಕೃಪೆಮಾಡಬೇಕು. ॥ ೮-೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಶ್ರೀಕೃಷ್ಣನ ಶ್ರೀವಿಗ್ರಹದಲ್ಲಿ ಸಮಸ್ತ ಸೌಂದರ್ಯರೂಪರಾಶಿಯು ರಾರಾಜಿಸುತ್ತಿತ್ತು. ಆ ಪ್ರಭುವು ಈ ಭೂಮಂಡಲದಲ್ಲಿ ಅನೇಕ ಮಂಗಲಮಯ ಶ್ರೇಯಸ್ಕರವಾದ ಕರ್ಮಗಳನ್ನು ಆಚರಿಸಿದನು.

* ಭಗವಂತನು ಎಲ್ಲ ಪ್ರಾಣಿಗಳ ನಿಜವಾದ ಸುಹೃದ್ ಆಗಿದ್ದಾನೆ. ಜೀವಿಗಳ ಉದ್ಧಾರಕ್ಕಾಗಿಯೇ ಆವನು ಅವತಾರ ಲೀಲೆಗಳನ್ನು ನಡೆಸುತ್ತಾನೆ. ಮನುಷ್ಯರು ಭಗವಂತನ ಆ ಲೀಲೆಗಳನ್ನು ಮನನ-ಚಿಂತನ-ಸ್ಮರಣೆಗೈದು ನಿಜವಾಗಿ ಈ ಮೃತ್ಯುಸಂಸಾರ ಸಾಗರದಿಂದ ದಾಟಿ ಹೋಗುವರು. ಇದರಲ್ಲಿಯೂ ಭಗವಂತನ ಅಸೀಮ ಕೃಪೆಯೇ ತುಂಬಿದೆ. ಆದ್ದರಿಂದ ಭಗವಂತನ ನಾಮದ ಜಪ, ಸ್ವರೂಪದ ಚಿಂತನೆ, ಲೀಲೆಗಳ ಸ್ಮರಣೆ ಮಾಡುವ ಅಭ್ಯಾಸ ಹೆಚ್ಚಿಸಿಕೊಳ್ಳಬೇಕು. ಭಗವಂತನು ಭಗವದ್ಗೀತೆಯಲ್ಲಿ ಹೀಗೆ ಹೇಳಿರುವನು –
ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ । ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ (ಭಗವದ್ಗೀತೆ – ೧೦/೯)
ನಿರಂತರವಾಗಿ ನನ್ನಲ್ಲಿ ಮನಸ್ಸನ್ನು ತೊಡಗಿಸುವವರು ಮತ್ತು ನನ್ನಲ್ಲೇ ಪ್ರಾಣಗಳನ್ನು ಅರ್ಪಿಸುವ ಭಕ್ತಜನರು, ನನ್ನ ಭಕ್ತಿಯ ಚರ್ಚೆಯ ಮೂಲಕ ತಮ್ಮ ತಮ್ಮಲ್ಲಿ ನನ್ನ ಪ್ರಭಾವವನ್ನು ತಿಳಿಸಿಕೊಡುತ್ತ ಹಾಗೂ ಗುಣ ಮತ್ತು ಪ್ರಭಾವಸಹಿತ ನನ್ನ ಕಥೆಗಳನ್ನು ಹೇಳಿಕೊಳ್ಳುತ್ತಲೇ ನಿರಂತರ ಸಂತುಷ್ಟರಾಗುತ್ತಾರೆ ಮತ್ತು ವಾಸುದೇವನಾದ ನನ್ನಲ್ಲಿಯೇ ರಮಿಸುತ್ತಾರೆ.

ಕರ್ಮಾಣಿ ಪುಣ್ಯನಿವಹಾನಿ ಸುಮಂಗಲಾನಿ
ಗಾಯಜ್ಜಗತ್ಕಲಿಮಲಾಪಹರಾಣಿ ಕೃತ್ವಾ ।
ಕಾಲಾತ್ಮನಾ ನಿವಸತಾ ಯದುದೇವಗೇಹೇ
ಪಿಂಡಾರಕಂ ಸಮಗಮನ್ ಮುನಯೋ ನಿಸೃಷ್ಟಾಃ ॥ ೧೦ ॥

ವಿಶ್ವಾಮಿತ್ರೋಽಸಿತಃ ಕಣ್ವೋ ದುರ್ವಾಸಾ ಭೃಗುರಂಗಿರಾಃ ।
ಕಶ್ಯಪೋ ವಾಮದೇವೋಽತ್ರಿರ್ವಸಿಷ್ಠೋ ನಾರದಾದಯಃ
॥ ೧೨ ॥

ಕ್ರೀಡಂತಸ್ತಾನುಪವ್ರಜ್ಯ ಕುಮಾರಾ ಯದುನಂದನಾಃ ।
ಉಪಸಂಗೃಹ್ಯ ಪಪ್ರಚ್ಛುರವಿನೀತಾ ವಿನೀತವತ್
॥ ೧೩ ॥

ತೇ ವೇಷಯಿತ್ವಾಸ್ತ್ರೀವೇಷೈಃ ಸಾಂಬಂ ಜಾಂಬವತೀಸುತಮ್ ।
ಏಷಾ ಪೃಚ್ಛತಿ ವೋ ವಿಪ್ರಾ ಅಂತರ್ವತ್ನ್ಯಸಿತೇಕ್ಷಣಾ
॥ ೧೪ ॥

ಪ್ರಷ್ಟುಂ ವಿಲಜ್ಜತೀ ಸಾಕ್ಷಾತ್ ಪ್ರಬ್ರೂತಾಮೋಘದರ್ಶನಾಃ ।
ಪ್ರಸೋಷ್ಯಂತೀ ಪುತ್ರಕಾಮಾ ಕಿಂಸ್ವಿತ್ ಸಂಜನಯಿಷ್ಯತಿ
॥ ೧೫ ॥

ಏವಂ ಪ್ರಲಬ್ಧಾ ಮುನಯಸ್ತಾನೂಚುಃ ಕುಪಿತಾ ನೃಪ ।
ಜನಯಿಷ್ಯತಿ ವೋ ಮಂದಾ ಮುಸಲಂ ಕುಲನಾಶನಮ್
॥ ೧೬ ॥

ತಚ್ಛ್ರುತ್ವಾ ತೇಽತಿಸಂತ್ರಸ್ತಾ ವಿಮುಚ್ಯ ಸಹಸೋದರಮ್ ।
ಸಾಂಬಸ್ಯ ದದೃಶುಸ್ತಸ್ಮಿನ್ ಮುಸಲಂ ಖಲ್ವಯಸ್ಮಯಮ್
॥ ೧೭ ॥

ಕಿಂ ಕೃತಂ ಮಂದಭಾಗ್ಯೈರ್ನಃ ಕಿಂ ವದಿಷ್ಯಂತಿ ನೋ ಜನಾಃ ।
ಇತಿ ವಿಹ್ವಲಿತಾ ಗೇಹಾನಾದಾಯ ಮುಸಲಂ ಯಯುಃ
॥ ೧೮ ॥

ತಚ್ಚೋಪನೀಯ ಸದಸಿ ಪರಿಮ್ಲಾನಮುಖಶ್ರಿಯಃ ।
ರಾಜ್ಞ ಆವೇದಯಾಂಚಕ್ರುಃ ಸರ್ವಯಾದವಸನ್ನಿಧೌ
॥ ೧೯ ॥

ಅವನು ಸ್ವತಃ ಪೂರ್ಣಕಾಮನಾಗಿದ್ದನು. ತನ್ನ ಪರಮಧಾಮದಲ್ಲಿ ಇದ್ದುಕೊಂಡು ತನ್ನಲ್ಲೇ ರಮಮಾಣನಾದ ಉದಾರಕೀರ್ತಿಯುಳ್ಳ ಪ್ರಭುವು ತನ್ನ ಕುಲದ ಸಂಹಾರಮಾಡಲು ಸಂಕಲ್ಪಿಸಿದನು. ಭೂಭಾರ ಹರಣದಲ್ಲಿ ಇದೊಂದೇ ಕಾರ್ಯ ಉಳಿದಿತ್ತು ಎಂದು ಯೋಚಿಸಿದನು. ॥ ೧೦ ॥ ಭಗವಾನ್ ಶ್ರೀಕೃಷ್ಣನು ಅನೇಕ ಮಂಗಲಮಯ ಮತ್ತು ಪುಣ್ಯಕರ ಕರ್ಮಗಳನ್ನು ಮಾಡಿದನು. ಅದನ್ನು ಕೊಂಡಾಡುವವರ ಎಲ್ಲ ಪಾಪಗಳು ನಾಶವಾಗಿ ಹೋಗುತ್ತವೆ. ಇಂತಹ ಪವಿತ್ರ ಕರ್ಮಗಳನ್ನಾಚರಿಸಿ ಈಗ ಅವನು ಕಾಲರೂಪದಿಂದ ವಸುದೇವನ ಮನೆಯಲ್ಲಿ ವಾಸಿಸುತ್ತಿದ್ದನು. ಆಗಲೇ ಅವನು ಅನೇಕ ಮುನಿಗಳನ್ನು ಪಿಂಡಾರಕ(ಪ್ರಭಾಸ)ಕ್ಷೇತ್ರಕ್ಕೆ ಹೋಗಲು ಪ್ರೇರೇಪಿಸಿದನು. ಭಗವಂತನ ಸಂಕಲ್ಪದಂತೆ ಅವರೆಲ್ಲರೂ ಅಲ್ಲಿಗೆ ತೆರಳಿದರು. ಆ ಮುನಿಗಳಲ್ಲಿ ವಿಶ್ವಾಮಿತ್ರ, ಅಸಿತ, ಕಣ್ವ, ದುರ್ವಾಸ, ಭೃಗು, ಅಂಗಿರಾ, ಕಶ್ಯಪ, ವಾಮದೇವ, ಅತ್ರಿ, ವಸಿಷ್ಠ, ನಾರದ ಮುಂತಾದವರಿದ್ದರು. ॥ ೧೧-೧೨ ॥

ಒಂದು ದಿನ ಕೆಲವು ಯದುವಂಶೀಯ ಕುಮಾರರು ಆಡುತ್ತಾ ಆಡುತ್ತಾ ಅವರ ಬಳಿಗೆ ತಲುಪಿದರು. ಅವರು ಉದ್ದಟರಾಗಿದ್ದರು, ಆದರೆ ಕೃತಕ ವಿನಯವನ್ನು ತೋರುತ್ತಾ ಮುನಿಗಳಲ್ಲಿ ಪ್ರಶ್ನಿಸಿದರು. ॥ ೧೩ ॥ ಆ ಯದುವಂಶೀ ಬಾಲಕರು ಜಾಂಬವತಿಯ ಪುತ್ರ ಸಾಂಬನಿಗೆ ಸ್ತ್ರೀವೇಷ ತೊಡಿಸಿಕೊಂಡು ಹೋಗಿ ಅವರು ಬ್ರಾಹ್ಮಣರಲ್ಲಿ – ವಿಪ್ರವರ್ಯರೇ! ಈ ವಿಶಾಲಾಕ್ಷಿಯಾದ ಸುಂದರಿಯು ಗರ್ಭವತಿಯಾಗಿರುವಳು. ಇವಳು ಪುತ್ರರತ್ನವನ್ನು ಹಡೆಯಬೇಕೆಂದು ಬಯಸುವಳು. ಸ್ವತಃ ನಿಮ್ಮಲ್ಲಿ ಕೇಳಲು ನಾಚಿಕೊಳ್ಳುತ್ತಿರುವಳು. ನಿಮ್ಮ ಜ್ಞಾನ ಅಮೋಘವಾಗಿದೆ. ಆದ್ದರಿಂದ ಇವಳು ಗಂಡುಹಡೆಯುವಳೋ ಹೆಣ್ಣೋ? ಇದನ್ನು ತಿಳಿಸಿರಿ; ಎಂದು ವಿನಂತಿಸಿ ಕೊಂಡರು. ॥ ೧೪-೧೫ ॥ ರಾಜನೇ! ಈ ವಿಧವಾಗಿ ಆ ಕುಮಾರರು ಮುನಿಗಳಲ್ಲಿ ಒತ್ತಾಯಮಾಡಿದಾಗ, ಮುನಿಗಳು ಕುಪಿತರಾಗಿ ನುಡಿದರು – ಎಲೈ ಮೂರ್ಖರಿರಾ! ಇವನು ನಿಮ್ಮ ಕುಲವನ್ನು ಸಂಹಾರ ಮಾಡುವಂತಹ ಒನಕೆಯನ್ನು ಹಡೆಯುವನು. ॥ ೧೬ ॥ ಇದನ್ನು ಕೇಳಿ ಅವರೆಲ್ಲರೂ ಅತ್ಯಂತ ಭಯಪಟ್ಟರು. ಕೂಡಲೇ ಸಾಂಬನ ಹೊಟ್ಟೆಯನ್ನು ಬಿಚ್ಚಿನೋಡಿದರೆ ನಿಜವಾಗಿಯೇ ಒಂದು ಕಬ್ಬಿಣದ ಒನಕೆಯೇ ಇತ್ತು.* ॥ ೧೭ ॥ ಅವರೆಲ್ಲರೂ ಯೋಚಿಸತೊಡಗಿದರು – ನಮ್ಮಗಳ ಭಾಗ್ಯವೇ ಬಹಳ ಕೆಟ್ಟದಾಗಿದೆ. ನಾವೇನು ಮಾಡಿಬಿಟ್ಟೆವು? ನಮಗೆ ಜನರು ಏನನ್ನುವರು? ಈ ಪ್ರಕಾರ ವ್ಯಾಕುಲರಾಗಿ ಅವರೆಲ್ಲರೂ ಆ ಒನಕೆಯನ್ನು ಎತ್ತಿಕೊಂಡು ಮನೆಗೆ ತೆರಳಿದರು. ॥ ೧೮ ॥ ಆ ಒನಕೆಯನ್ನು ಎಲ್ಲ ಯಾದವರ ಮುಂದಿರಿಸಿ ರಾಜಾ ಉಗ್ರಸೇನನಿಗೆ ಎಲ್ಲ ನಿಜಸಂಗತಿಯನ್ನು ಅರುಹಿದರು. ಆಗ ಅವರೆಲ್ಲರ ಮುಖಗಳು ಬಾಡಿಹೋಗಿದ್ದವು. ॥ ೧೯ ॥

* ಆ ಬಾಲಕರು ಮುನಿಗಳನ್ನು ಮೋಸಮಾಡಲು ಸಾಂಬನ ಹೊಟ್ಟೆಗೆ ಬಟ್ಟೆ ಸುತ್ತಿದ್ದರು. ಆದರೆ ವಿಧಿವಶದಿಂದ ಅದು ಕಬ್ಬಿಣದ ಒನಕೆಯಾಗಿಹೋಯಿತು. ಈ ಪ್ರಕಾರ ತಮ್ಮ ಕೃತ್ಯದ ಕುರಿತು ಪಶ್ಚಾತ್ತಾಪಪಟ್ಟರು.

ಶ್ರುತ್ವಾತಮೋಘಂ ವಿಪ್ರಶಾಪಂ ದೃಷ್ಟ್ವಾ ಚ ಮುಸಲಂ ನೃಪ।
ವಿಸ್ಮಿತಾ ಭಯಸಂತ್ರಸ್ತಾ ಬಭೂವುರ್ದ್ವಾರಕೌಕಸಃ
॥ ೨೦ ॥

ಎಲೈ ರಾಜನೇ! ಬ್ರಾಹ್ಮಣರ ಶಾಪವು ಅಮೋಘವಾದುದು. ಎಲ್ಲ ದ್ವಾರಕಾವಾಸಿಗಳು ಬ್ರಾಹ್ಮಣರ ಶಾಪವೃತ್ತಾಂತವನ್ನು ಕೇಳಿ, ಆ ಒನಕೆಯನ್ನು ನೋಡಿ, ಬಹು ವಿಸ್ಮಿತರಾಗಿ, ಭಯದಿಂದ ನಡುಗಿ ಹೋದರು. ॥ ೨೦ ॥

ತಚ್ಚೂರ್ಣಯಿತ್ವಾ ಮುಸಲಂ ಯದುರಾಜಃ ಸ ಆಹುಕಃ।
ಸಮುದ್ರಸಲಿಲೇ ಪ್ರಾಸ್ಯಲ್ಲೋಹಂ ಚಾಸ್ಯಾವಶೇಷಿತಮ್
॥ ೨೧ ॥

ಯಾದವರ ರಾಜನಾದ ಉಗ್ರಸೇನನು ಆ ಒನಕೆಯನ್ನು ಪುಡಿಮಾಡಿ ಚೂರ್ಣವನ್ನಾಗಿಸಿ, ಅದನ್ನು ಸಮುದ್ರದಲ್ಲಿ ಹಾಕಿಸಿಬಿಟ್ಟನು. ಅದರ ಉಳಿದ ತುದಿಯ ಒಂದು ತುಂಡು ಚೂರಾಗದೆ ಹಾಗೆ ಉಳಿಯಿತು. ಅದನ್ನು ಹಾಗೆಯೇ ಸಮುದ್ರದಲ್ಲಿ ಎಸೆದರು. ॥ ೨೧ ॥

ಕಶ್ಚಿನ್ಮತ್ಸ್ಯೋಽಗ್ರಸೀಲ್ಲೋಹಂ ಚೂರ್ಣಾನಿ ತರಲೈಸ್ತತಃ।
ಉಹ್ಯಮಾನಾನಿ ವೇಲಾಯಾಂ ಲಗ್ನಾನ್ಯಾಸನ್ನಿಲೈರಕಾಃ
॥ ೨೨ ॥

ಕೆಲವು ದಿನಗಳಲ್ಲಿ ಆ ಒನಕೆಯ ಪುಡಿಯು ಸಮುದ್ರದ ಅಲೆಗಳಿಂದಾಗಿ ಸಮುದ್ರತೀರಕ್ಕೆ ಬಂದುಬಿದ್ದಿತು. ಅದರಿಂದ ಐರಕ ವೆಂಬ ಹುಲ್ಲು ಹುಟ್ಟಿಕೊಂಡಿತು. ತುದಿಯ ಕಬ್ಬಿಣದ ತುಂಡನ್ನು ಮೀನೊಂದು ನುಂಗಿಬಿಟ್ಟಿತು. ॥ ೨೨ ॥ ಆ ಮೀನು ಯಾವನೋ ಬೆಸ್ತನ ಬಲೆಯಲ್ಲಿ ಸಿಕ್ಕಿಬಿತ್ತು. ಜರ್ಜ ಬೇಡನು ಆ ಮೀನನ್ನು ಕೊಂಡುಹೋದನು. ಅದರ ಹೊಟ್ಟೆಯಲ್ಲಿ ಅವನಿಗೆ ಕಬ್ಬಿಣದ ಚೂರೊಂದು ದೊರೆಯಿತು. ಅದನ್ನು ಆ ಬೇಡನು ತನ್ನ ಬಾಣದ ತುದಿಗೆ ಜೋಡಿಸಿದನು.* ॥ ೨೩ ॥ ಭಗವಂತನು ಎಲ್ಲವನ್ನು ಬಲ್ಲವನಾಗಿದ್ದಾನೆ. ಅವನು ಸರ್ವಸಮರ್ಥನಾಗಿದ್ದಾನೆ. ಬ್ರಾಹ್ಮಣರ ಶಾಪವನ್ನು ವ್ಯರ್ಥವಾಗಿಸುವ ಸಾಮರ್ಥ್ಯ ಅವನಲ್ಲಿದ್ದರೂ ಆ ಕಾಲ ಸ್ವರೂಪೀ ಭಗವಂತನು ಬ್ರಾಹ್ಮಣರ ಶಾಪವನ್ನು ಅನುಮೋದಿಸಿದನು. ॥ ೨೪ ॥

ಮತ್ಸ್ಯೇ ಗೃಹೀತೋ ಮತ್ಸ್ಯಘ್ನೈರ್ಜರ್ಜಾಲೇನಾನ್ಯೈಃ ಸಹಾರ್ಣವೇ।
ತಸ್ಯೋದರಗತಂ ಲೋಹಂ ಸ ಶಲ್ಯೇ ಲುಬ್ಧಕೋಽಕರೋತ್
॥ ೨೩ ॥

ಭಗವಾನ್ ಜ್ಞಾತಸರ್ವಾರ್ಥ ಈಶ್ವರೋಽಪಿ ತದನ್ಯಥಾ।
ಕರ್ತುಂ ನೈಚ್ಛದ್ವಿಪ್ರಶಾಪಂ ಕಾಲರೂಪ್ಯನ್ವಮೋದತ
॥ ೨೪ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪ್ರಥಮೋಽಧ್ಯಾಯಃ॥ ೧ ॥

ಎರಡನೆಯ ಅಧ್ಯಾಯ

ವಸುದೇವನ ಬಳಿಗೆ ನಾರದರು ಬರುವುದು, ಅವರಿಗೆ ರಾಜಾ ನಿಮಿ ಹಾಗೂ ಒಂಭತ್ತು ಯೋಗೀಶ್ವರರ ಸಂವಾದವನ್ನು ತಿಳಿಸಿದುದು

ಶ್ರೀಶುಕ ಉವಾಚ

ಗೋವಿಂದಭುಜಗುಪ್ತಾಯಾಂ ದ್ವಾರವತ್ಯಾಂ ಕುರೂದ್ವಹ।
ಅವಾತ್ಸೀನ್ನಾರದೋಽಭೀಕ್ಷ್ಣಂ ಕೃಷ್ಣೋಪಾಸನಲಾಲಸಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಕುರುನಂದನಾ! ಭಗವಾನ್ ಶ್ರೀಕೃಷ್ಣನ ಬಾಹುಬಲದಿಂದ ಸಂರಕ್ಷಿತ ದ್ವಾರಕಾಪುರಿಯಲ್ಲಿ ಶ್ರೀಕೃಷ್ಣದರ್ಶನದ ಲಾಲಸೆಯಿಂದ ನಾರದ ಮಹರ್ಷಿಗಳು ಮೇಲಿಂದ ಮೇಲೆ ಬಂದು ತಂಗುತ್ತಿದ್ದರು. ॥ ೧ ॥ ಎಲೈ ರಾಜನೇ! ಬ್ರಹ್ಮಾದಿ ದೇವತೆಗಳ ಉಪಾಸ್ಯನಾದ ಭಗವಂತನ ಚರಣಕಮಲಗಳ ದಿವ್ಯ ಮಧುರ ಮಕರಂದವನ್ನು ಪಾನಮಾಡದವನು, ಭಜಿಸದವನು, ಅವನ ಅಲೌಕಿಕ ರೂಪಮಾಧುರ್ಯವನ್ನು ನೋಡದವನು, ಮಂಗಲಮಯ ಧ್ವನಿಯನ್ನು ಕೇಳದವನು ಯಾರಿರುವನು? ಏಕೆಂದರೆ, ಅವನು ಎಲ್ಲ ಕಡೆಯಿಂದ ಮೃತ್ಯುವಿನಿಂದ ಮುತ್ತಲ್ಪಟ್ಟವನಾಗಿದ್ದಾನೆ. ॥ ೨ ॥

ಕೋ ನು ರಾಜನ್ನಿಂದ್ರಿಯವಾನ್ ಮುಕುಂದಚರಣಾಂಬುಜಮ್।
ನ ಭಜೇತ್ ಸರ್ವತೋಮೃತ್ಯುರುಪಾಸ್ಯಮಮರೋತ್ತಮೈಃ
॥ ೨ ॥

* ಮೀನಿನ ಹೊಟ್ಟೆಯಲ್ಲಿ ದೊರೆತಿರುವ ಕಬ್ಬಿಣದ ಚೂರನ್ನು ಬಾಣದ ತುದಿಗೆ ಅಳವಡಿಸಿದರೆ, ಅಸಾಧ್ಯಬೇಟೆಯು ಸುಲಭವಾಗಿ ಸಿಗುತ್ತದೆ. ಆ ಬಾಣವು ಅಮೋಘವಾಗುತ್ತದೆ. ಇದೆಲ್ಲ ನಡೆದ ಘಟನೆಗಳು ಸ್ವಯಂ ಭಗವಂತನ ಇಚ್ಛೆಯೇ ಆಗಿತ್ತು.

ತಮೇಕದಾ ತು ದೇವರ್ಷಿಂ ವಸುದೇವೋ ಗೃಹಾಗತಮ್ ।
ಅರ್ಚಿತಂ ಸುಖಮಾಸೀನಮಭಿವಾದ್ಯೇದಮಬ್ರವೀತ್
॥ ೩ ॥

ವಸುದೇವ ಉವಾಚ

ಭಗವನ್ ಭವತೋ ಯಾತ್ರಾ ಸ್ವಸ್ತಯೇ ಸರ್ವದೇಹಿನಾಮ್ ।
ಕೃಪಣಾನಾಂ ಯಥಾ ಪಿತ್ರೋರುತ್ತಮಶ್ಲೋಕವರ್ತ್ಮನಾಮ್
॥ ೪ ॥

ಭೂತಾನಾಂ ದೇವಚರಿತಂ ದುಃಖಾಯ ಚ ಸುಖಾಯ ಚ ।
ಸುಖಾಯೈವ ಹಿ ಸಾಧೂನಾಂ ತ್ವಾದೃಶಾಮಚ್ಯುತಾತ್ಮನಾಮ್
॥ ೫ ॥

ಭಜಂತಿ ಯೇ ಯಥಾ ದೇವಾನ್ ದೇವಾ ಅಪಿ ತಥೈವ ತಾನ್ ।
ಛಾಯೇವ ಕರ್ಮಸಚಿವಾಃ ಸಾಧವೋ ದೀನವತ್ಸಲಾಃ
॥ ೬ ॥

ಬ್ರೂಹ್ಯಂಸ್ತಥಾಪಿ ಪೃಚ್ಛಾಮೋ ಧರ್ಮಾನ್ ಭಾಗವತಾಂಸ್ತವ ।
ಯಾಂಶ್ರುತ್ವಾ ಶ್ರದ್ಧಯಾ ಮರ್ತ್ಯೋ ಮುಚ್ಯತೇ ಸರ್ವತೋಭಯಾತ್
॥ ೭ ॥

ಅಹಂ ಕಿಲ ಪುರಾನಂತಂ ಪ್ರಜಾರ್ಥೋ ಭುವಿ ಮುಕ್ತಿದಮ್ ।
ಅಪೂಜಯಂ ನ ಮೋಕ್ಷಾಯ ಮೋಹಿತೋ ದೇವಮಾಯಯಾ
॥ ೮ ॥

ಯಥಾ ವಿಚಿತ್ರವ್ಯಸನಾದ್ಭವದ್ಭಿರ್ವಿಶ್ವತೋಭಯಾತ್ ।
ಮುಚ್ಯೇಮ ಹ್ಯಂಜಸೈವಾದ್ಧಾ ತಥಾ ನಃ ಶಾಧಿ ಸುವ್ರತ
॥ ೯ ॥

ಶ್ರೀಶುಕ ಉವಾಚ

ರಾಜನ್ನೇವಂ ಕೃತಪ್ರಶ್ನೋ ವಸುದೇವೇನ ಧೀಮತಾ ।
ಪ್ರೀತಸ್ತಮಾಹ ದೇವರ್ಷಿರ್ಹರೇಃ ಸಂಸ್ಮಾರಿತೋ ಗುಣೈಃ
॥ ೧೦ ॥

ನಾರದ ಉವಾಚ

ಸಮ್ಯಗೇತದ್ವ್ಯವಸಿತಂ ಭವತಾ ಸಾತ್ವತರ್ಷಭ ।
ಯತ್ಪೃಚ್ಛಸೇ ಭಾಗವತಾನ್ ಧರ್ಮಾಂಸ್ತ್ವಂ ವಿಶ್ವಭಾವನಾನ್
॥ ೧೧ ॥

ಒಮ್ಮೆ ಶ್ರೀನಾರದರು ವಸುದೇವನ ಆರಮನೆಗೆ ಬಂದಿದ್ದರು. ವಸುದೇವನು ಆದರಪೂರ್ವಕ ಅವರನ್ನು ಅಭಿನಂದಿಸಿ, ಸುಖಾಸನದಲ್ಲಿ ಕುಳ್ಳಿರಿಸಿ, ಅವರನ್ನು ಯಥಾವಿಧಿಯಿಂದ ಪೂಜಿಸಿದನು. ಮತ್ತೆ ವಂದಿಸಿಕೊಂಡು ಇಂತೆಂದನು – ॥ ೩ ॥

ವಸುದೇವನು ಹೇಳಿದನು – ಮಹಾತ್ಮರಾದ ನಾರದರೇ! ನೀವು ಪುಣ್ಯಶ್ಲೋಕ ಭಗವಂತನ ಮಾರ್ಗಾನುಯಾಯಿಗಳು. ತಮ್ಮ ಸಂಚಾರ (ಯಾತ್ರೆ)ವು ಎಲ್ಲ ಪ್ರಾಣಿಗಳ ಮಂಗಳಕ್ಕಾಗಿಯೇ ಇರುತ್ತದೆ. ತಂದೆ-ತಾಯಿಯವರನ್ನೇ ಅವಲಂಬಿಸಿರುವ ಸಣ್ಣ ಮಕ್ಕಳಿಗೆ ಅವರು ಬಳಿಗೆ ಬಂದಾಗ ಪರಮಹರ್ಷವಾಗುವಂತೆ, ನಿಮ್ಮಂತಹ ಮಹಾಪುರುಷರ ಆಗಮನವು ಎಲ್ಲ ಪ್ರಾಣಿಗಳಿಗೆ ಶ್ರೇಯಸ್ಕರವೇ ಆಗಿರುತ್ತದೆ. ॥ ೪ ॥ ಬೇರೆ ದೇವತೆಗಳ ವ್ಯವಹಾರ ಪ್ರಾಣಿಗಳ ಸುಖಕ್ಕಾಗಿಯೂ, ದುಃಖಕ್ಕಾಗಿಯೂ ಆಗಿರುತ್ತದೆ. (ದೇವತೆಗಳನ್ನು ವಿಧಿವತ್ತಾಗಿ ಪೂಜಿಸಿದರೆ ಸಂತೋಷಗೊಂಡು ಸುಖಕೊಡುತ್ತಾರೆ, ಪೂಜೆಯಲ್ಲಿ ಕೊರತೆಯಾದರೆ, ಸಿಟ್ಟಾಗಿ ದುಃಖವನ್ನೂ ಕೊಡುತ್ತಾರೆ.) ಆದರೆ ನಿಮ್ಮಂತಹ ಮಹಾತ್ಮರ, ಭಗವದ್ಭಕ್ತರ, ಸಂತರ ವ್ಯವಹಾರ ಯಾವಾಗಲೂ ಎಲ್ಲ ಪ್ರಾಣಿಗಳ ಹಿತಕ್ಕಾಗಿಯೇ ಇರುತ್ತದೆ. ॥ ೫ ॥ ಜನರು ದೇವತೆಗಳನ್ನು ಉಪಾಸನೆ ಮಾಡುವ ಭಾವಕ್ಕನುಸಾರ ದೇವತೆಗಳು ಫಲನೀಡುತ್ತಾರೆ. ಅವರು ನೆರಳಿನಂತಿರುತ್ತಾರೆ. ಕರ್ಮಕ್ಕನುಸಾರ ಫಲಕೊಡುತ್ತಾರೆ. ಆದರೆ ಸಾಧು ಮಹಾತ್ಮರ ಸ್ವಭಾವ ದೀನರ ಮೇಲೆ ಅಹೈತುಕವಾಗಿ ಕೃಪೆದೋರುವುದೇ ಆಗಿರುತ್ತದೆ. ॥ ೬ ॥ ಓ ಬ್ರಹ್ಮಸ್ವರೂಪರೇ! ಶ್ರದ್ಧಾಪೂರ್ವಕ ಶ್ರವಣಿಸುವುದರಿಂದ ಮನುಷ್ಯರು ಎಲ್ಲ ವಿಧದ ಭಯದಿಂದ ಮುಕ್ತರಾಗುವಂತಹ, ಭಾಗವತ ಧರ್ಮದ ಕುರಿತು ಈಗ ನಾನು ನಿಮ್ಮಲ್ಲಿ ಕೇಳುತ್ತೇನೆ. ॥ ೭ ॥ ಭಗವಾನ್ ವಿಷ್ಣುವು ಮುಕ್ತಿದಾತನು. ಹಿಂದೆ ನಾನು ಆ ಮೋಕ್ಷದಾತನಾದ ಭಗವಂತನ ಉಪಾಸನೆಯನ್ನು ಮೋಕ್ಷಕ್ಕಾಗಿ ಮಾಡದೆ, ಅವನನ್ನು ನನ್ನ ಪುತ್ರರೂಪದಿಂದ ಪಡೆಯಲು ಮಾಡಿದ್ದೆ, ಏಕೆಂದರೆ, ಆಗ ನಾನು ಅವನ ಮಾಯೆಯಿಂದ ಮೋಹಿತನಾಗಿದ್ದೆ. ॥ ೮ ॥ ಓ ಭಗವನ್ನಿಷ್ಠರೇ! ಪ್ರಪಂಚದ ದುಃಖಗಳೂ ಕೂಡ ಸುಖದಂತೆ ಭಾಸವಾಗುತ್ತವೆ, ಇದೆಂತಹ ವಿಚಿತ್ರವಾದ ವಿಷಯ, ಅದ್ಯಂತ ದುಃಖರೂಪವಾದ ಇಂತಹ ವಿಚಿತ್ರವ್ಯಸನಗಳಿಂದ (ದುಃಖಗಳಿಂದ) ನಾನು ಆಯಾಸವಿಲ್ಲದೆ, ನಿಶ್ಚಿತವಾಗಿ ಮುಕ್ತನಾಗುವಂತಹ ಸರಳವಾದ ಉಪಾಯವನ್ನು ತಿಳಿಸಿರಿ. ॥ ೯ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ರಾಜನೇ! ಬುದ್ಧಿವಂತನಾದ ವಸುದೇವನು ಈ ಪ್ರಕಾರ ಪ್ರಶ್ನಿಸಿದಾಗ, ದೇವರ್ಷಿ ನಾರದರು ಭಗವಂತನ ಅನಂತಕಲ್ಯಾಣಗುಣಗಳನ್ನು ಸ್ಮರಿಸುತ್ತಾ ತನ್ಮಯರಾದರು. ಪ್ರೇಮಾನಂದದಲ್ಲಿ ಮಗ್ನರಾಗಿ ನುಡಿಯತೊಡಗಿದರು. ॥ ೧೦ ॥

ಶ್ರೀನಾರದರು ಹೇಳುತ್ತಾರೆ – ಓ ಯದುವಂಶ ಶಿರೋಮಣಿ! ನೀನು ಇಡೀ ವಿಶ್ವದ ಕಲ್ಯಾಣ ಮಾಡುವಂತಹ ಭಾಗವತ ಧರ್ಮದ ಕುರಿತು ಕೇಳುತ್ತಿರುವೆ. ಈ ನಿನ್ನ ನಿಶ್ಚಯವು ಬಹಳ ಸರಿಯಾಗಿದೆ. ॥ ೧೧ ॥

ಶ್ರುತೋಽನುಪಠಿತೋ ಧ್ಯಾತ ಆದೃತೋ ವಾನುಮೋದಿತಃ ।
ಸದ್ಯಃ ಪುನಾತಿ ಸದ್ಧರ್ಮೋ ದೇವವಿಶ್ವದ್ರುಹೋಽಪಿ ಹಿ
॥ ೧೨ ॥

ತ್ವಯಾ ಪರಮಕಲ್ಯಾಣಃ ಪುಣ್ಯಶ್ರವಣಕೀರ್ತನಃ ।
ಸ್ಮಾರಿತೋ ಭಗವಾನದ್ಯ ದೇವೋ ನಾರಾಯಣೋ ಮಮ
॥ ೧೩ ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಆರ್ಷಭಾಣಾಂ ಚ ಸಂವಾದಂ ವಿದೇಹಸ್ಯ ಮಹಾತ್ಮನಃ
॥ ೧೪ ॥

ಪ್ರಿಯವ್ರತೋ ನಾಮ ಸುತೋ ಮನೋಃ ಸ್ವಾಯಂಭುವಸ್ಯ ಯಃ ।
ತಸ್ಯಾಗ್ನೀಧ್ರಸ್ತತೋ ನಾಭಿರ್ಋಷಭಸ್ತತ್ಸುತಃ ಸ್ಮೃತಃ
॥ ೧೫ ॥

ತಮಾಹುರ್ವಾಸುದೇವಾಂಶಂ ಮೋಕ್ಷಧರ್ಮವಿವಕ್ಷಯಾ ।
ಅವತೀರ್ಣಂ ಸುತಶತಂ ತಸ್ಯಾಸೀದ್ಬ್ರಹ್ಮಪಾರಗಮ್
॥ ೧೬ ॥

ತೇಷಾಂ ವೈ ಭರತೋ ಜ್ಯೇಷ್ಠೋ ನಾರಾಯಣಪರಾಯಣಃ ।
ವಿಖ್ಯಾತಂ ವರ್ಷಮೇತದ್ಯನ್ನಾಮ್ನಾ ಭಾರತಮದ್ಭುತಮ್
॥ ೧೭ ॥

ಸ ಭುಕ್ತಭೋಗಾಂ ತ್ಯಕ್ತ್ವೇಮಾಂ ನಿರ್ಗತಸ್ತಪಸಾ ಹರಿಮ್ ।
ಉಪಾಸೀನಸ್ತತ್ಪದವೀಂ ಲೇಭೇ ವೈ ಜನ್ಮಭಿಸ್ತ್ರಿಭಿಃ
॥ ೧೮ ॥

ತೇಷಾಂ ನವ ನವದ್ವೀಪಪತಯೋಽಸ್ಯ ಸಮಂತತಃ ।
ಕರ್ಮತಂತ್ರಪ್ರಣೇತಾರ ಏಕಾಶೀತಿರ್ದ್ವಿಜಾತಯಃ
॥ ೧೯ ॥

ನವಾಭವನ್ಮಹಾಭಾಗಾ ಮುನಯೋ ಹ್ಯರ್ಥಶಂಸಿನಃ ।
ಶ್ರಮಣಾ ವಾತರಶನಾ ಆತ್ಮವಿದ್ಯಾವಿಶಾರದಾಃ
॥ ೨೦ ॥

ಕವಿರ್ಹರಿರಂತರಿಕ್ಷಃ ಪ್ರಬುದ್ಧಃ ಪಿಪ್ಪಲಾಯನಃ ।
ಆವಿರ್ಹೋತ್ರೋಽಥ ದ್ರುಮಿಲಶ್ಚಮಸಃ ಕರಭಾಜನಃ
॥ ೨೧ ॥

ಎಲ್ಲೆ ವಸುದೇವನೇ ! ಈ ಭಾಗವತ ಧರ್ಮವನ್ನು ಕಿವಿಗೊಟ್ಟು ಶ್ರವಣಿಸಿದರೆ, ವಾಣಿಯಿಂದ ಕೊಂಡಾಡಿದರೆ, ಮನಸ್ಸಿನಿಂದ ಸ್ಮರಿಸಿದರೆ, ಹೃತ್ಪೂರ್ವಕವಾಗಿ ಆದರಿಸಿದರೆ, ಒಪ್ಪಿಕೊಂಡರೆ ಮನುಷ್ಯನು ಆಗಲೇ ಪುನೀತನಾಗಿ ಹೋಗುತ್ತಾನೆ. ಇದನ್ನು ಆಶ್ರಯಿಸಿದವರು ಎಷ್ಟೇ ದುಷ್ಟನಾಗಿರಲಿ, ಅವನನ್ನೂ ಪವಿತ್ರ ವಾಗಿಸುವಂತಹ ಮಹಿಮೆ ಈ ಭಾಗವತ ಧರ್ಮದ್ದಾಗಿದೆ. ಭಗವಂತನು ಪರಮ ಕಲ್ಯಾಣ ಸ್ವರೂಪನು. ಅವನ ನಾಮಸ್ಮರಣೆ, ಕೀರ್ತನೆ ಭಾರೀ ಪುಣ್ಯ ಪ್ರದವಾಗಿದೆ. ಇಂತಹ ದೇವಾಧಿದೇವ ಆದಿಪುರುಷ ಭಗವಾನ್ ನಾರಾಯಣ ಸ್ಮರಣೆಯನ್ನು ನೀನು ನನಗೆ ಮಾಡಿಸಿದೆ. ॥ ೧೨-೧೩. ॥ ಈ ವಿಷಯದಲ್ಲಿ ಒಂದು ಪ್ರಾಚೀನ ಇತಿಹಾಸವನ್ನು ಉದಾಹರಣೆಯಾಗಿ ನಿನಗೆ ಅರುಹುತ್ತೇನೆ. ಅದರಲ್ಲಿ ಮಹಾತ್ಮಾ ವಿದೇಹರಾಜ ನಿಮಿಯ ಹಾಗೂ ಋಷಭದೇವರ ಒಂಭತ್ತು ಪುತ್ರರ (ಯೋಗೀಶ್ವರರ) ಸಂವಾದವಿದೆ. ॥ ೧೪ ॥ ಹಿಂದೆ ಸ್ವಾಯಂಭುವ ಮನುವಿನ ಪುತ್ರ ಪ್ರಿಯವ್ರತನೆಂಬುವನಿದ್ದನು. ಅವನಿಂದ ಆಗ್ನೀಧ್ರನಾದನು. ಅವನಿಂದ ನಾಭಿ ಮತ್ತು ನಾಭಿಯ ಪುತ್ರನಾಗಿ ಭಗವಂತನು ಋಷಭದೇವನಾಗಿ ಉದಿಸಿದನು. ॥ ೧೫ ॥ ಆ ಋಷಭದೇವನನ್ನು ಭಗವಾನ್ ವಾಸುದೇವನ ಅಂಶಾವತಾರವೆಂದೇ ತಿಳಿಯಲಾಗಿದೆ. ಆವನು ಮೋಕ್ಷಧರ್ಮದ ಉಪದೇಶ ಕೊಡುವುದಕ್ಕಾಗಿಯೇ ಅವತರಿಸಿದ್ದನು. ಅವನಿಗೆ ನೂರುಮಂದಿ ಪುತ್ರರುದಿಸಿದರು. ಆವರೆಲ್ಲರೂ ವೇದಗಳಲ್ಲಿ ಪಾರಂಗತರಾಗಿದ್ದರು. ॥ ೧೬ ॥

ಆವರಲ್ಲಿ ಭರತನೇ ಹಿರಿಯವನಾಗಿದ್ದನು. ಆವನು ಭಗವಾನ್ ನಾರಾಯಣಪರಾಯಣನಾಗಿದ್ದನು. ಆವನ ಹೆಸರಿನಿಂದಲೇ ಈ ದೇಶದ ಹೆಸರು ಭಾರತವರ್ಷವೆಂದು ಪ್ರಸಿದ್ಧವಾಯಿತು. ॥ ೧೭ ॥ ರಾಜರ್ಷಿ ಭರತನು ಸಮಸ್ತ ಭೂಮಂಡಲವನ್ನು ಆಳಿದನು. ಮತ್ತೆ ರಾಜ್ಯವನ್ನು ತ್ಯಜಿಸಿ ಭಗವಂತನ ಆರಾಧನೆಗಾಗಿ, ತಪಸ್ಸಿಗಾಗಿ ಕಾಡಿಗೆ ಹೊರಟುಹೋದನು. ಅಲ್ಲಿ ಭಗವಂತನ ಉಪಾಸನೆಗೈದು ಮೂರು ಜನ್ಮಗಳಲ್ಲಿ ಭಗವಂತನನ್ನು ಪಡೆದುಕೊಂಡನು. (ಇದೇ ರಾಜರ್ಷಿ ಭರತನು ಎರಡನೇ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದ್ದನು. ಮೂರನೆಯ ಬ್ರಾಹ್ಮಣಜನ್ಮದಲ್ಲಿ ಜಡಭರತನ ಹೆಸರಿನಿಂದ ಖ್ಯಾತನಾಗಿದ್ದ ಈ ಕಥೆ ಪ್ರಸಿದ್ಧವಾಗಿದೆ.) ॥ ೧೮ ॥ ಋಷಭದೇವರ ನೂರು ಮಂದಿ ಪುತ್ರರಲ್ಲಿ ಒಂಭತ್ತು ಜನರು ಒಂಭತ್ತು ದ್ವೀಪಗಳ ಅಧಿಪತಿಗಳಾದರು. ಅವು ಭಾರತವರ್ಷದ ಸುತ್ತಲೂ ನೆಲೆಸಿವೆ. ಉಳಿದ ಎಂಭತ್ತೊಂದು ಮಂದಿ ಕರ್ಮಕಾಂಡದ ರಚಯಿತರೂ, ಅಗ್ನಿಹೋತ್ರಾದಿಗಳನ್ನು ಮಾಡುವ ಬ್ರಾಹ್ಮಣರಾದರು. ॥ ೧೯ ॥ ಹಾಗೂ ಪರಮಾರ್ಥ ತತ್ತ್ವದ ಪ್ರಚಾರಕ ಮಹಾಭಾಗ್ಯವಾನ್ ಒಂಭತ್ತು ಮಂದಿ ಸಂನ್ಯಾಸಿಗಳಾದರು. ಅವರು ದಿಗಂಬರ ಸಂನ್ಯಾಸಿಗಳಾಗಿದ್ದು ಆತ್ಮವಿದ್ಯೆಯಲ್ಲಿ ಪಾರಂಗತರಾಗಿದ್ದರು. ಆವರ ಹೆಸರುಗಳು ಇಂತಿವೆ – ಕವಿ, ಹರಿ, ಅಂತರಿಕ್ಷ ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರ, ದ್ರುಮಿಲ, ಚಮಸ ಮತ್ತು ಕರಭಾಜನ. ॥ ೨೦-೨೧ ॥

ತ ಏತೇ ಭಗವದ್ರೂಪಂ ವಿಶ್ವಂ ಸದಸದಾತ್ಮಕಮ್ ।
ಆತ್ಮನೋऽವ್ಯತಿರೇಕೇಣ ಪಶ್ಯಂತೋ ವ್ಯಚರನ್ಮಹೀಮ್
॥ ೨೨ ॥

ಅವ್ಯಾಹತೇಷ್ಟಗತಯಃ ಸುರಸಿದ್ಧಸಾಧ್ಯ-
ಗಂಧರ್ವಯಕ್ಷನರಕಿನ್ನರನಾಗಲೋಕಾನ್ ।
ಮುಕ್ತಾಶ್ಚರಂತಿ ಮುನಿಚಾರಣಭೂತನಾಥ-
ವಿದ್ಯಾಧರದ್ವಿಜಗವಾಂ ಭುವನಾನಿ ಕಾಮಮ್ ॥ ೨೩ ॥

ತ ಏಕದಾ ನಿಮೇಃ ಸತ್ರಮುಪಜಗ್ಮುರ್ಯದೃಚ್ಛಯಾ ।
ವಿತಾಯಮಾನಮೃಷಿಭಿರಜನಾಭೇ ಮಹಾತ್ಮನಃ
॥ ೨೪ ॥

ತಾನ್ದೃಷ್ಟ್ವಾ ಸೂರ್ಯಸಂಕಾಶಾನ್ ಮಹಾಭಾಗವತಾನ್ನೃಪಃ ।
ಯಜಮಾನೋऽಗ್ನಯೋ ವಿಪ್ರಾಃ ಸರ್ವ ಏವೋಪತಸ್ಥಿರೇ
॥ ೨೫ ॥

ವಿದೇಹಸ್ತಾನಭಿಪ್ರೇತ್ಯ ನಾರಾಯಣಪರಾಯಣಾನ್ ।
ಪ್ರೀತಃ ಸಂಪೂಜಯಾಂಚಕ್ರೇ ಆಸನಸ್ಥಾನ್ಯಥಾರ್ಹತಃ
॥ ೨೬ ॥

ತಾನ್ನೋಚಮಾನಾನ್ ಸ್ವರುಚಾ ಬ್ರಹ್ಮಪುತ್ರೋಪಮಾನ್ನವ ।
ಪಪ್ರಚ್ಛ ಪರಮಪ್ರೀತಃ ಪ್ರಶ್ರಯಾವನತೋ ನೃಪಃ
॥ ೨೭ ॥

ವಿದೇಹ ಉವಾಚ

ಮನ್ಯೇ ಭಗವತಸ್ಸಾಕ್ಷಾತ್ಪಾರ್ಷದಾನ್ವೋ ಮಧುದ್ವಿಷಃ ।
ವಿಷ್ಣೋರ್ಭೂತಾನಿ ಲೋಕಾನಾಂ ಪಾವನಾಯ ಚರಂತಿ ಹಿ
॥ ೨೮ ॥

ದುರ್ಲಭೋ ಮಾನುಷೋ ದೇಹೋ ದೇಹಿನಾಂ ಕ್ಷಣಭಂಗುರಃ ।
ತತ್ರಾಪಿ ದುರ್ಲಭಂ ಮನ್ಯೇ ವೈಕುಂಠಪ್ರಿಯದರ್ಶನಮ್
॥ ೨೯ ॥

ಅತ ಆತ್ಯಂತಿಕಂ ಕ್ಷೇಮಂ ಪೃಚ್ಛಾಮೋ ಭವತೋऽನಘಾಃ ।
ಸಂಸಾರೇऽಸ್ಮಿನ್ ಕ್ಷಣಾರ್ಧೋऽಪಿ ಸತ್ಸಂಗಃ ಶೇವಧಿರ್ನೃಣಾಮ್
॥ ೩೦ ॥

ಧರ್ಮಾನ್ ಭಾಗವತಾನ್ಬ್ರೂತ ಯದಿ ನಃ ಶ್ರುತಯೇ ಕ್ಷಮಮ್ ।
ಯೈಃ ಪ್ರಸನ್ನಃ ಪ್ರಪನ್ನಾಯ ದಾಸ್ಯತ್ಯಾತ್ಮಾನಮಪ್ಯಜಃ
॥ ೩೧ ॥

ಇವರೆಲ್ಲ ಮಹಾತ್ಮರು ಈ ಜಡ-ಚೇತನಾತ್ಮಕ ಸಮಸ್ತ ವಿಶ್ವವನ್ನು ಭಗವಂತನ ಸ್ವರೂಪವೆಂದೇ ತಿಳಿಯುತ್ತಿದ್ದರು. ಅದನ್ನು ತನ್ನಿಂದ ಬೇರೆ ಎಂದು ನೋಡುತ್ತಿರಲಿಲ್ಲ. ಅರ್ಥಾತ್ – ಎಲ್ಲ ಕಡೆಗಳಲ್ಲಿ ಅವರಿಗೆ ಪರಮಾತ್ಮನೊಬ್ಬನ ದರ್ಶನವೇ ಆಗುತ್ತಿತ್ತು. ಈ ವಿಧವಾಗಿ ಸರ್ವತ್ರ ಆತ್ಮಭಾವವನ್ನಿರಿಸಿಕೊಂಡು ಅದ್ವಿತೀಯ ಪರಮಾತ್ಮನನ್ನೇ ದರ್ಶಿಸುತ್ತಾ ವಿಶ್ವಾದ್ಯಂತ ಸಂಚರಿಸುತ್ತಿದ್ದರು. ॥ ೨೨ ॥ ಮೂರು ಲೋಕಗಳಲ್ಲೆಲ್ಲ ಅವರ ಗತಿ ಅಬಾಧಿತವಾಗಿತ್ತು. ಅವರು ದೇವತೆ, ಸಿದ್ಧ, ಸಾಧ್ಯ, ಗಂಧರ್ವ, ಯಕ್ಷ, ಮನುಷ್ಯ, ಕಿನ್ನರ, ನಾಗಲೋಕ ಹೀಗೆ ಎಲ್ಲ ಲೋಕಗಳಲ್ಲಿ ಸ್ವಚ್ಛಂದವಾಗಿ ವಿಚರಿಸುತ್ತಿದ್ದರು. ಇಷ್ಟೇ ಅಲ್ಲದೆ ಅವರು ಇನ್ನೂ ಕೂಡ ಮುನಿ, ಚಾರಣ, ಭೂತನಾಥ, ವಿದ್ಯಾಧರ, ಬ್ರಾಹ್ಮಣ ಮತ್ತು ಗೋವುಗಳು ಇವರ ಸ್ಥಾನಗಳಲ್ಲಿ ಮುಕ್ತರಾಗಿ ವಿಹರಿಸುತ್ತಿದ್ದರು. ॥ ೨೩ ॥

ಒಮ್ಮೆ ಅಜನಾಭವರ್ಷದಲ್ಲಿ (ಭಾರತವರ್ಷದಲ್ಲಿ) ಮಹಾತ್ಮಾ ನಿಮಿರಾಜನು ದೊಡ್ಡ-ದೊಡ್ಡ ಋಷಿಗಳಿಂದೊಡಗೂಡಿ ಯಜ್ಞ ಮಾಡುತ್ತಿದ್ದನು. ಆಗ ಈ ಒಂಭತ್ತು ಯೋಗೀಶ್ವರರು ನಿಮಿಯ ಯಜ್ಞದಲ್ಲಿ ಸ್ವಾಭಾವಿಕವಾಗಿ ಸಂಚರಿಸುತ್ತಾ ಬಂದು ತಲುಪಿದರು. ॥ ೨೪ ॥ ಈ ಪರಮ ಭಾಗವತ ಮಹಾತ್ಮರು ಸೂರ್ಯನಂತೆ ತಮ್ಮ ಕಾಂತಿಯಿಂದ ಪ್ರಕಾಶಿಸುತ್ತಿದ್ದರು. ಇಂತಹ ಯೋಗೀಶ್ವರರನ್ನು ಕಂಡು ಯಜ್ಞಮಾಡುತ್ತಿದ್ದ ರಾಜಾ ನಿಮಿ, ಮೂರ್ತಿಮಂತ ಅಗ್ನಿದೇವರು, ಋತ್ವಿಜಾದಿ ಬ್ರಾಹ್ಮಣರು ಹೀಗೆ ಎಲ್ಲರೂ ಅವರ ಸ್ವಾಗತಕ್ಕಾಗಿ ಎದ್ದುನಿಂತರು. ॥ ೨೫ ॥ ರಾಜಾ ನಿಮಿಯು ಆ ಒಂಭತ್ತು ಯೋಗೀಶ್ವರರನ್ನು ಭಗವಾನ್ ನಾರಾಯಣ ಪರಾಯಣರೆಂದು ಭಾವಿಸಿ, ಬಹಳ ಹರ್ಷಿತನಾಗಿ ಅವರನ್ನು ಉಚಿತಾಸನಗಳಲ್ಲಿ ಕುಳ್ಳಿರಿಸಿ, ವಿಧಿಪೂರ್ವಕ ಅವರನ್ನು ಪೂಜಿಸಿದನು. ॥ ೨೬ ॥ ಆ ಯೋಗೀಶ್ವರರು ಸಾಕ್ಷಾತ್ ಬ್ರಹ್ಮಮಾನಸ ಪುತ್ರರಾದ ಸನಕಾದಿಗಳಂತೆ ತಮ್ಮ ಕಾಂತಿಯಿಂದ ಪ್ರಕಾಶಿತರಾಗಿದ್ದರು. ರಾಜಾ ನಿಮಿಯು ವಿನಯದಿಂದ ತಲೆಬಾಗಿ, ಕೈಜೋಡಿಸಿಕೊಂಡು ಪರಮ ಪ್ರೇಮದಿಂದ ಅವರಲ್ಲಿ ಇಂತು ಪ್ರಶ್ನಿಸಿದನು. ॥ ೨೭ ॥

ವಿದೇಹರಾಜನಾದ ನಿಮಿಯು ಹೇಳಿದನು – ನಾನು ನಿಮ್ಮನ್ನು ಸಾಕ್ಷಾತ್ ಭಗವಾನ್ ಮಧುಸೂದನನ ಪಾರ್ಷದರೆಂದೇ ತಿಳಿಯುತ್ತೇನೆ. ಭಗವಾನ್ ಮಹಾವಿಷ್ಣುವಿನ ಸೇವಕರು, ದಾಸರು ಸಮಸ್ತ ಲೋಕಗಳನ್ನು ಪವಿತ್ರ ಮಾಡಲೆಂದೇ ಸಂಚರಿಸುತ್ತಾರೆ. ॥ ೨೮ ॥ ಈ ಮನುಷ್ಯಜನ್ಮವು ಜೀವರಿಗೆ ತುಂಬಾ ದುರ್ಲಭವಾಗಿದೆ ಹಾಗೂ ಕ್ಷಣಭಂಗುರವೂ ಆಗಿದೆ. ಅದರಲ್ಲಿಯೂ ಭಗವಂತನ ಭಕ್ತರಾದ ವರ ದರ್ಶನಭಾಗ್ಯ ದೊರೆಯುವುದು ಇನ್ನೂ ದುರ್ಲಭವಾಗಿದೆ. ॥ ೨೯ ॥ ಆದ್ದರಿಂದ ತ್ರಿಲೋಕಗಳನ್ನು ಪಾವನಗೊಳಿಸುವ ಮಹಾತ್ಮರೇ ! ನಾನು ನಿಮ್ಮಗಳಲ್ಲಿ ಆತ್ಯಂತಿಕ ಶ್ರೇಯಸ್ಸಿನ ಕುರಿತು ಕೇಳುತ್ತಿದ್ದೇನೆ. ಏಕೆಂದರೆ, ಈ ಪ್ರಪಂಚದಲ್ಲಿ ಅರೆಕ್ಷಣದ ಸತ್ಸಂಗವೂ ಕೂಡ ಮನುಷ್ಯರಿಗಾಗಿ ಶ್ರೇಷ್ಠನಿಧಿಯಾಗಿದೆ. ॥ ೩೦ ॥ ನಾನು ಇದರ ಬಗ್ಗೆ ಯೋಗ್ಯ ಅಧಿಕಾರಿ ಎಂದು ತಿಳಿಯುವಿರಾದರೆ ದಯೆಗೈದು ಭಾಗವತ ಧರ್ಮಗಳ ಕುರಿತು ತಿಳಿಸುವರಾಗಿರಿ. ಆ ಭಾಗವತ ಧರ್ಮದಿಂದ ಅಜನ್ಮಾ ಭಗವಂತನು ಪ್ರಸನ್ನನಾಗಿ ತನ್ನ ಶರಣಾಗತ ಭಕ್ತರಿಗೆ ಸ್ವತಃ ತನ್ನನ್ನೇ ಕೊಟ್ಟುಕೊಳ್ಳುವನು. ॥ ೩೧ ॥

ಶ್ರೀನಾರದ ಉವಾಚ

ಏವಂ ತೇ ನಿಮಿನಾ ಪೃಷ್ಟಾ ವಸುದೇವ ಮಹತ್ತಮಾಃ ।
ಪ್ರತಿಪೂಜ್ಯಾಬ್ರುವನ್ ಪ್ರೀತ್ಯಾ ಸಸದಸ್ಯರ್ತ್ವಿಜಂ ನೃಪಮ್
॥ ೩.೨ ॥

ಶ್ರೀನಾರದರು ಹೇಳಿದರು – ಎಲೈ ವಸುದೇವನೇ ! ಈ ವಿಧವಾಗಿ ಆ ಮಹಾತ್ಮಾ ಯೋಗೀಶ್ವರರಲ್ಲಿ ರಾಜಾ ನಿಮಿಯು ಪ್ರಶ್ನಿಸಿದನು. ಆಗ ಯೋಗೀಶ್ವರರು ಅವನ ಪ್ರಶ್ನೆಯನ್ನು ಪ್ರಶಂಸಿಸುತ್ತಾ , ಆ ಸಭೆಯಲ್ಲಿ ಕುಳಿತಿರುವ ಸದಸ್ಯರನ್ನು ಮತ್ತು ರಾಜನನ್ನು ಸಂಬೋಧಿಸಿ ಹೇಳತೊಡಗಿದರು. ॥ ೩.೨ ॥

ಕವಿರುವಾಚ

ಮನ್ಯೇಽಕುತಶ್ಚಿದ್ಭಯಮಚ್ಯುತಸ್ಯ
ಪಾದಾಂಬುಜೋಪಾಸನಮತ್ರ ನಿತ್ಯಮ್ ।
ಉದ್ವಿಗ್ನಬುದ್ಧೇರಸದಾತ್ಮಭಾವಾದ್
ವಿಶ್ವಾತ್ಮನಾ ಯತ್ರ ನಿವರ್ತತೇ ಭೀಃ ॥ ೩.೩ ॥

ಮೊದಲಿಗೆ ಮಹಾತ್ಮಾ ಕವಿ ಯೋಗೀಶ್ವರರು ಹೇಳಿದರು – ಎಲೈ ರಾಜನೇ ! (ಆತ್ಯಂತಿಕ ಶ್ರೇಯಸ್ಸಿಗಾಗಿ ನೀನು ಪ್ರಶ್ನಿಸಿರುವೆ. ಅದಕ್ಕಾಗಿ ಅನನ್ಯ ಶರಣಾಗತಿಯೇ ಸರ್ವೋತ್ಕೃಷ್ಟ ಸಾಧನವಾಗಿದೆ.) ಈ ವಿಷಯದಲ್ಲಿ ಭಗವಾನ್ ಅಚ್ಯುತನ ಚರಣಗಳಿಗೆ ಶರಣಾಗುವುದೇ, ಶಾಶ್ವತವಾಗಿ ಭಯರಹಿತನಾಗಲು ಉತ್ತಮೋತ್ತಮ ಸಾಧನವೆಂದು ನಾನು ತಿಳಿಯುತ್ತೇನೆ. ಏಕೆಂದರೆ, ಸಾಂಸಾರಿಕ ಪದಾರ್ಥಗಳಲ್ಲಿ ಆತ್ಮಬುದ್ಧಿ ಸುಖಬುದ್ಧಿ ಇರುವ ಜನರೂ ಕೂಡ ಭಗವಂತನಿಗೆ ಅನನ್ಯ ಶರಣಾದರೆ ಅದರ ಫಲವಾಗಿ ಅವರ ಅಜ್ಞಾನ ದೂರವಾಗುತ್ತದೆ. ಪ್ರಪಂಚದಲ್ಲಿ ದುಃಖದ ಅನುಭವ ಪಡೆದು ಅವರು ವಿರಕ್ತರಾಗುತ್ತಾರೆ. ಅವರಿಗೆ ಆಧ್ಯಾತ್ಮಿಕ ಪ್ರಸನ್ನತೆ ಪ್ರಾಪ್ತವಾಗಿ, ಅವರ ಭಯ ಪೂರ್ಣರೂಪದಿಂದ ನಿವೃತ್ತವಾಗುತ್ತದೆ. ॥ ೩.೩ ॥ ಅವರಿಗೆ ಎಲ್ಲ ಕಡೆಗಳಲ್ಲಿ ಆತ್ಮಭಾವ ಉಂಟಾಗಿ ಸರ್ವತ್ರ, ಸಮಭಾವದಿಂದ ನಿರಂತರ ಪರಮಾತ್ಮನ ಅನುಭವವೇ ಆಗತೊಡಗುತ್ತದೆ. ಸಾಮಾನ್ಯ ಅಜ್ಞಾನಿ ಜನರಿಗೂ ಕೂಡ ತುಂಬಾ ಸುಲಭವಾಗಿ ತನ್ನ ಸಾಕ್ಷಾತ್ಕಾರ ಪ್ರಾಪ್ತಿಯ ಉಪಾಯವನ್ನು ಭಗವಂತನು ತನ್ನ ಶ್ರೀಮುಖದಿಂದ ತಿಳಿಸಿರುವನು. ಅದನ್ನೇ ಭಗವತ್-ಸಂಬಂಧೀ ಭಾಗವತ ಧರ್ಮವೆಂದು ತಿಳಿ. ॥ ೩.೪ ॥ ರಾಜನೇ ! ಈ ಭಾಗವತ ಧರ್ಮಗಳನ್ನು ಅವಲಂಬಿಸುವ ಮನುಷ್ಯನು ಎಂದೂ ಯಾವುದೇ ದುಃಖಿಗಳಿಂದ ಪೀಡಿತನಾಗುವುದಿಲ್ಲ. ಕಣ್ಣುಮುಚ್ಚಿ ಓಡಿದರೂ ಕೂಡ ಅರ್ಥಾತ್ ವಿಧಿ-ವಿಧಾನಗಳಲ್ಲಿ ಕೊರತೆ ಉಂಟಾದರೂ ಮತ್ತೆ ಅವನು ಪತಿತನಾಗಲಾರನು. ಫಲದಿಂದ ವಂಚಿತನೂ ಆಗಲಾರನು. ॥ ೩.೫ ॥ ಮನುಷ್ಯನು ತನ್ನ ಶರೀರದಿಂದಾಗಲೀ, ವಾಣಿಯಿಂದಾಗಲೀ, ಮನಸ್ಸಿನಿಂದಾಗಲೀ, ಇಂದ್ರಿಯಗಳಿಂದಾಗಲೀ, ಬುದ್ಧಿಯಿಂದಾಗಲೀ, ಅಹಂಕಾರದಿಂದಾಗಲೀ, ಅಥವಾ ತನ್ನ ಸ್ವಭಾವಕ್ಕನುಸಾರ ಯಾವುದೇ ಕರ್ಮಮಾಡಿದರೂ ಅದೆಲ್ಲವನ್ನು ಪರಾತ್ಪರ ಭಗವಾನ್ ನಾರಾಯಣನಿಗೆ ಅರ್ಪಿಸಿಬಿಡುವುದೇ ಬಹಳ ಸರಳ, ಸುಲಭ ಉಪಾಯವಾಗಿದೆ. ॥ ೩.೬ ॥ ಭಗವಂತನಲ್ಲದೆ ಬೇರೆ ವಸ್ತುಗಳಲ್ಲಿ ದೇಹ, ಗೇಹಾದಿಗಳಲ್ಲಿ ಆಸಕ್ತಿ ಇರುವುದರಿಂದಲೇ ಅರ್ಥಾತ್ – ಅಸತ್ ವಸ್ತುವಿನ ಅಸ್ತಿತ್ವವನ್ನು ಒಪ್ಪಿಕೊಂಡು, ಅದರ ಕುರಿತು ಹೆಚ್ಚಿನ ಪ್ರೀತಿ ಇರುವುದರಿಂದಲೇ ಭಯ ಉಂಟಾಗುತ್ತದೆ. ಇಂತಹ ಸ್ಥಿತಿಯಲ್ಲಿ ಅವನು ಪರಮಾತ್ಮನಿಂದ ವಿಮುಖನಾಗುತ್ತಾನೆ. ಅವನು ಭ್ರಮೆಯಿಂದಾಗಿ ಅನಾತ್ಮವಸ್ತುಗಳಲ್ಲಿ ಆತ್ಮಬುದ್ಧಿಯನ್ನಿರಿಸುತ್ತಾನೆ. ಅದರಿಂದಾಗಿ ತನ್ನ ನಿಜಸ್ವರೂಪವನ್ನು ಮರೆಯುತ್ತಾನೆ. ಭಗವಂತನ ಮಾಯೆಯಿಂದಲೇ ಹೀಗಾಗುತ್ತದೆ. ಆದ್ದರಿಂದ ಬುದ್ಧಿವಂತನಾದವನು ಅಜ್ಞಾನದಿಂದ ಬಿಡುಗಡೆ ಹೊಂದಲು ಅನನ್ಯ ಭಕ್ತಿಪೂರ್ವಕ ಓರ್ವ ಪರಮಾತ್ಮನಿಗೇ ಶರಣಾಗಬೇಕು. ಇದಕ್ಕಾಗಿ ಗುರುವಿನಲ್ಲಿ ಭಗವದ್ಬುದ್ಧಿ ಇರಿಸಬೇಕು. ॥ ೩.೭ ॥

ಯೇ ವೈ ಭಗವತಾ ಪ್ರೋಕ್ತಾ ಉಪಾಯಾ ಹ್ಯಾತ್ಮಲಬ್ಧಯೇ ।
ಅಂಜಃ ಪುಂಸಾಮವಿದುಷಾಂ ವಿದ್ಧಿ ಭಾಗವತಾನ್ಹಿ ತಾನ್
॥ ೩.೪ ॥

ಯಾನಾಸ್ಥಾಯ ನರೋ ರಾಜನ್ ನ ಪ್ರಮಾದ್ಯೇತ ಕರ್ಹಿಚಿತ್ ।
ಧಾವನ್ನಿಮೀಲ್ಯ ವಾ ನೇತ್ರೇ ನ ಸ್ಖಲೇನ್ನ ಪತೇದಿಹ
॥ ೩.೫ ॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾSSತ್ಮನಾ ವಾನುಸೃತಸ್ವಭಾವಾತ್ ।
ಕರೋತಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತೀ ಸಮರ್ಪಯೇತ್ತತ್ ॥ ೩.೬ ॥

ಭಯಂ ದ್ವಿತೀಯಾಭಿನಿವೇಶತಃ ಸ್ಯಾ-
ದೀಶಾದಪೇತಸ್ಯ ವಿಪರ್ಯಯೋSಸ್ಮೃತಿಃ ।
ತನ್ಮಾಯಯಾತೋ ಬುಧ ಆಭಜೇತ್ತಂ
ಭಕ್ತ್ಯೈಕಯೇಶಂ ಗುರುದೇವತಾತ್ಮಾ ॥ ೩.೭ ॥

ಅವಿದ್ಯಮಾನೋಽಪ್ಯವಭಾತಿ ಹಿ ದ್ವಯೋ-
ಧ್ಯಾತುರ್ಧಿಯಾ ಸ್ವಪ್ನಮನೋರಥೌ ಯಥಾ ।

ವಾಸ್ತವದಲ್ಲಿ ಪರಮಾತ್ಮತತ್ತ್ವವೇ ಸತ್ಯವಸ್ತುವಾಗಿದೆ. ಆದರೆ ನಾನಾತ್ವ (ಪ್ರಪಂಚ) ವನ್ನು ಚಿಂತಿಸುವವರಿಗೆ ಆ ವಸ್ತುಗಳ ಚಿಂತನೆಯಿಂದ ಬುದ್ಧಿಯಲ್ಲಿ ಅವುಗಳ ಪ್ರತೀತಿ ಉಂಟಾಗುತ್ತದೆ. ಅವನ್ನೇ ಸತ್ ಎಂದು ಒಪ್ಪಿಕೊಂಡಿದ್ದರಿಂದ ಅಸತ್ ಪದಾರ್ಥಗಳ ಸತ್ತೆಯನ್ನು ಸ್ವೀಕರಿಸುತ್ತಾರೆ. ಆದರೆ ಸ್ವಪ್ನಾವಸ್ಥೆಯ ದೃಶ್ಯಗಳು ಎಚ್ಚರವಾದ ಮೇಲೆ ಅವುಗಳ ಮಿಥ್ಯತ್ವ ಅರಿವಿಗೆ ಬರುತ್ತದೆ, ಹಾಗೆಯೇ ಸಾಂಸಾರಿಕ ವಿಷಯಗಳ ಕುರಿತು ಮಾಡಲಾದ ಜಾಗ್ರತ್ ಅವಸ್ಥೆಯ ಮನೋರಥಗಳೂ ಮಿಥ್ಯೆಯೇ ಆಗಿವೆ. ಆದ್ದರಿಂದ

ತತ್ಕರ್ಮಸಂಕಲ್ಪವಿಕಲ್ಪಕಂ ಮನೋ
ಬುಧೋ ನಿರುಂಧ್ಯಾದಭಯಂ ತತಃ ಸ್ಯಾತ್ ॥ ೩೮ ॥

ಬುದ್ಧಿವಂತರಾದವರು ಪ್ರಾಪಂಚಿಕ ಕರ್ಮಗಳ ಸಂಬಂಧದಲ್ಲಿ ಸಂಕಲ್ಪ-ವಿಕಲ್ಪಮಾಡುವ ಅಲೆಯುವ ಮನಸ್ಸನ್ನು ತಡೆಯಬೇಕು. ಹೀಗೆ ಮಾಡುವುದರಿಂದಲೇ ಅವರಿಗೆ ಅಭಯಪದದ ಅರ್ಥಾತ್ ಪರಮಪದದ ಪ್ರಾಪ್ತಿ ಆಗಿಹೋದೀತು. ॥ ೩೮ ॥

ಶೃಣ್ವನ್ ಸುಭದ್ರಾಣಿ ರಥಾಂಗಪಾಣೇ-
ರ್ಜನ್ಮಾನಿ ಕರ್ಮಾಣಿ ಚ ಯಾನಿ ಲೋಕೇ ।

ಜಗತ್ತಿನಲ್ಲಿ ಭಗವಂತನ ಜನ್ಮ-ಕರ್ಮಗಳ ಲೀಲೆಗಳ ಬಹಳ ಮಂಗಲಮಯ ಕಥೆಗಳು ಪ್ರಸಿದ್ಧವಾಗಿವೆ. ಇವನ್ನು ಶ್ರವಣ ಮನನಮಾಡುವುದೇ ಮನಸ್ಸನ್ನು ಭಗವಂತನಲ್ಲಿ ತೊಡಗಿಸುವ ಉಪಾಯವೆಂದು ಹೇಳಲಾಗಿದೆ. ಹಾಗೆಯೇ ಅವನ ಗುಣಗಳನ್ನು, ಲೀಲೆಗಳನ್ನು ಸ್ಮರಣೆಗೆ

ಗೀತಾನಿ ನಾಮಾನಿ ತದರ್ಥಕಾನಿ
ಗಾಯನ್ ವಿಲಜ್ಜೋ ವಿಚರೇದಸಂಗಃ ॥ ೩೯ ॥

ತರುವ ಭಗವಂತನ ಅನೇಕ ನಾಮಗಳು ಪ್ರಸಿದ್ಧವಾಗಿವೆ. ಅಂಜಿಕೆ ನಾಚಿಕೆಬಿಟ್ಟು ಅವನ್ನು ಕೊಂಡಾಡುತ್ತಾ ಇರಬೇಕು. ಯಾವುದೇ ವ್ಯಕ್ತಿ, ವಸ್ತು, ಸ್ಥಾನಗಳಲ್ಲಿ ಆಸಕ್ತಿಯನ್ನಿಡಬಾರದು. ॥ ೩೯ ॥ ಈ ಪ್ರಕಾರ ವಿಶುದ್ಧ ವ್ರತ, ನಿಯಮವನ್ನು ಕೈಗೊಳ್ಳುವವನ ಹೃದಯದಲ್ಲಿ ತನ್ನ ಪರಮಪ್ರಿಯತಮ ಪ್ರಭುವಿನ ನಾಮ-ಕೀರ್ತನೆಯಿಂದ ಭಗವಂತನಲ್ಲಿ ಪ್ರೇಮವು ಅಂಕುರಿಸುತ್ತದೆ. ಅವನ ಚಿತ್ತ ದ್ರವಿತವಾಗುತ್ತದೆ. ಆಗ ಅವನು ಸಾಧಾರಣ ಜನರ ಸ್ಥಿತಿಯಿಂದ

ಏವಂವ್ರತಃ ಸ್ವಪ್ರಿಯನಾಮಕೀರ್ತ್ಯಾ
ಜಾತಾನುರಾಗೋ ದ್ರುತಚಿತ್ತ ಉಚ್ಚೈಃ ।

ಮೇಲೇರುತ್ತಾನೆ. ಜನರ ಮಾನ್ಯತೆ, ನಂಬಿಕೆಗಳಿಂದ ಅತೀತನಾಗುತ್ತಾನೆ. ದಂಭವಿಲ್ಲದೆ ಸ್ವಾಭಾವಿಕವಾಗಿ ಉನ್ಮತ್ತನಾಗಿ ಕೆಲವೊಮ್ಮೆ

ಹಸತ್ಯಥೋ ರೋದಿತಿ ರೌತಿ ಗಾಯ-
ತ್ಯುನ್ಮಾದವನ್ನೃತ್ಯತಿ ಲೋಕಬಾಹ್ಯಃ ॥ ೪೦ ॥

ಭಗವಂತನ ಲೀಲೆಗಳನ್ನು ನೋಡುತ್ತಾ ಆನಂದದಲ್ಲಿ ಮುಳುಗಿ ನಗುತ್ತಿರುತ್ತಾನೆ. ಕೆಲವೊಮ್ಮೆ ಗೋಪಿಯರಂತೆ ಪ್ರಭು! ನೀನೆಲ್ಲಿ ಹೋಗಿರುವೆ ? ಎಂದು ಬಿದ್ದು-ಬಿದ್ದು ಅಳುತ್ತಾನೆ. ಕೆಲವೊಮ್ಮೆ ಗಟ್ಟಿಯಾಗಿ ಭಗವಂತನನ್ನು ಕೂಗುತ್ತಾನೆ. ಕೆಲವೊಮ್ಮೆ ಮಧುರವಾಗಿ ಅವನ ಗುಣಗಾನ ಮಾಡುತ್ತಾನೆ. ಕೆಲ-ಕೆಲವೊಮ್ಮೆ ತನ್ನ ಪ್ರಿಯತಮನನ್ನು ಕಣ್ಣುಮುಂದೆ ದರ್ಶಿಸುತ್ತಾ ಉನ್ಮಾದದಿಂದ ನೃತ್ಯವಾಡ ತೊಡಗುತ್ತಾನೆ. ಈ ಪ್ರಕಾರ ಅವನ ಎಲ್ಲ ಕ್ರಿಯೆಗಳು ಲೋಕ ವಿಲಕ್ಷಣವಾಗುತ್ತದೆ. ॥ ೪೦ ॥

ಖಂ ವಾಯುಮಗ್ನಿಂ ಸಲಿಲಂ ಮಹೀಂ ಚ
ಜ್ಯೋತೀಂಷಿ ಸತ್ತ್ವಾನಿ ದಿಶೋ ದ್ರುಮಾದೀನ್ ।

ರಾಜನೇ! ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ಗ್ರಹ, ನಕ್ಷತ್ರ, ಪ್ರಾಣಿಗಳು, ದಿಕ್ಕುಗಳು, ವೃಕ್ಷ-ವನಸ್ಪತಿ, ನದಿ, ಸಮುದ್ರ ಇವೆಲ್ಲವೂ ಭಗವಂತನ ಶರೀರವಾಗಿದೆ. ಎಲ್ಲ ರೂಪಗಳಲ್ಲಿ ಸ್ವತಃ ಭಗವಂತನೇ ಪ್ರಕಟನಾಗಿದ್ದಾನೆ. ಹೀಗೆ ತಿಳಿದುಕೊಂಡು ಅವನು

ಸರಿತ್ಸಮುದ್ರಾಂಶ್ಚ ಹರೇಃ ಶರೀರಂ
ಯತ್ಕಿಂಚ ಭೂತಂ ಪ್ರಣಮೇದನನ್ಯಃ ॥ ೪೧ ॥

ತನ್ನ ಮುಂದೆ ಸುಳಿಯುವುದೆಲ್ಲವನ್ನೂ – ಭಗವದ್ಭಾವದಿಂದ ನಮಸ್ಕರಿಸುತ್ತಾನೆ. ॥ ೪೧ ॥

ಭಕ್ತಿಃ ಪರೇಶಾನುಭವೋ ವಿರಕ್ತಿ-
ರನ್ಯತ್ರ ಚೈಷ ತ್ರಿಕ ಏಕಕಾಲಃ ।
ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯು-
ಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್ ॥ ೪೨ ॥

ಇತ್ಯಚ್ಯುತಾಂಘ್ರಿಂ ಭಜತೋಽನುವೃತ್ತ್ಯಾ
ಭಕ್ತಿರ್ವಿರಕ್ತಿರ್ಭಗವತ್ತ್ವಬೋಧಃ ।
ಭವಂತಿ ವೈ ಭಾಗವತಸ್ಯ ರಾಜಂ
ತತಃ ಪರಾಂ ಶಾಂತಿಮುಪೈತಿ ಸಾಕ್ಷಾತ್ ॥ ೪೩ ॥

ರಾಜೋವಾಚ

ಅಥ ಭಾಗವತಂ ಬ್ರೂತ ಯದ್ಧರ್ಮೋ ಯಾದೃಶೋ ನೃಣಾಮ್ ।
ಯಥಾ ಚರತಿ ಯದ್ಬ್ರೂತೇ ಯೈರ್ಲಿಂಗೈರ್ಭಗವತ್ಪ್ರಿಯಃ
॥ ೪೪ ॥

ಹರಿರುವಾಚ

ಸರ್ವಭೂತೇಷು ಯಃ ಪಶ್ಯೇದ್ಭಗವದ್ಭಾವಮಾತ್ಮನಃ ।
ಭೂತಾನಿ ಭಗವತ್ಯಾತ್ಮನ್ಯೇಷ ಭಾಗವತೋತ್ತಮಃ
॥ ೪೫ ॥

ಈಶ್ವರೇ ತದಧೀನೇಷು ಬಾಲಿಶೇಷು ದ್ವಿಷತ್ಸು ಚ ।
ಪ್ರೇಮಮೈತ್ರೀಕೃಪೋಪೇಕ್ಷಾ ಯಃ ಕರೋತಿ ಸ ಮಧ್ಯಮಃ
॥ ೪೬ ॥

ಅರ್ಚಾಯಾಮೇವ ಹರಯೇ ಪೂಜಾಂ ಯಃ ಶ್ರದ್ಧಯೇಹತೇ ।
ನ ತದ್ಭಕ್ತೇಷು ಚಾನ್ಯೇಷು ಸ ಭಕ್ತಃ ಪ್ರಾಕೃತಃ ಸ್ಮೃತಃ
॥ ೪೭ ॥

ಗೃಹೀತ್ವಾಪೀಂದ್ರಿಯೈರರ್ಥಾನ್ ಯೋ ನ ದ್ವೇಷ್ಟಿ ನ ಹೃಷ್ಯತಿ ।
ವಿಷ್ಣೋರ್ಮಾಯಾಮಿದಂ ಪಶ್ಯನ್ಸವೈ ಭಾಗವತೋತ್ತಮಃ
॥ ೪೮ ॥

ಊಟಮಾಡುವಾಗ ಪ್ರತಿಯೊಂದು ತುತ್ತಿಗೂ ತುಷ್ಟಿ (ತೃಪ್ತಿ ಅಥವಾ ಸುಖ), ಪುಷ್ಟಿ (ಜೀವನ ಶಕ್ತಿಯ ಸಂಚಾರ), ಕ್ಷುಧಾನಿವೃತ್ತಿ ಇವು ಮೂರು ಒಂದೇ ಬಾರಿಗೆ ಆಗುತ್ತಾ ಇರುತ್ತದೆ. ಹಾಗೆಯೇ ಭಗವಂತನಿಗೆ ಶರಣಾಗಿ ಅವನ ಭಜನೆ ಮಾಡುವವನಿಗೆ, ಭಜನೆಯ ಪ್ರತಿಯೊಂದು ಕ್ಷಣದಲ್ಲಿ ಭಗವಂತನ ಕುರಿತು ಪ್ರೀತಿ, ತನ್ನ ಪ್ರೇಮಾಸ್ಪದ ಪ್ರಭುವಿನ ಸ್ವರೂಪದ ಅನುಭವ ಹಾಗೂ ಅವನಲ್ಲದ ಇತರ ವಸ್ತುಗಳಲ್ಲಿ ವೈರಾಗ್ಯ ಇವು ಮೂರು ಒಂದೇ ಬಾರಿಗೆ ಪ್ರಾಪ್ತಿಯಾಗುತ್ತವೆ. ॥ ೪೨ ॥ ರಾಜನೇ! ಈ ವಿಧವಾಗಿ ಪ್ರತಿಕ್ಷಣ ಪ್ರತಿಯೊಂದು ವೃತ್ತಿಯ ಮೂಲಕ ಭಗವಂತನ ಚರಣ ಕಮಲಗಳನ್ನು ಭಜಿಸುವವನಿಗೆ ಭಗವಂತನ ಕುರಿತು ಪ್ರೇಮಮಯ ಭಕ್ತಿ, ಪ್ರಪಂಚದ ಕುರಿತು ವೈರಾಗ್ಯ, ತನ್ನ ಪ್ರಿಯತಮ ಭಗವಂತನ ಸ್ವರೂಪದ ಜ್ಞಾನ ಇವೆಲ್ಲವೂ ಅವಶ್ಯವಾಗಿ ಉಂಟಾಗುತ್ತವೆ. ಅವನು ಭಾಗವತನಾಗಿ ಹೋಗುತ್ತಾನೆ. ಇವೆಲ್ಲವೂ ಪ್ರಾಪ್ತವಾದಾಗ ಅವನು ಪರಮಶಾಂತಿಯನ್ನು ಅನುಭವಿಸತೊಡಗುವನು. (ಆದ್ದರಿಂದ ಶ್ರೇಯೋಕಾಮಿ ಮನುಷ್ಯನು ಭಗವಂತನಿಗೆ ಶರಣಾಗಬೇಕು. ಇದು ಸರ್ವೋತ್ತಮ ಸರಳ ಸಾಧನೆಯಾಗಿದೆ.) ॥ ೪೩ ॥

ರಾಜಾ ನಿಮಿಯು ಕೇಳಿದನು – ಯೋಗೀಶ್ವರರೇ! ಈಗ ನೀವು ದಯಮಾಡಿ ಭಗವದ್ಭಕ್ತನ ಲಕ್ಷಣಗಳನ್ನು ವರ್ಣಿಸಿರಿ. ಅವನ ಧರ್ಮವೇನು? ಅವನ ಸ್ವಭಾವ ಹೇಗಿರುತ್ತದೆ. ಅವನು ಇತರ ರೊಂದಿಗೆ ವ್ಯವಹರಿಸುವಾಗ ಅವನ ಆಚರಣೆ ಹೇಗೆ ಇರುತ್ತದೆ? ಹೇಗೆ ಮಾತಾಡುತ್ತಾನೆ? ಯಾವ ಲಕ್ಷಣಗಳಿಂದ ಅವನು ಭಗವಂತನಿಗೆ ಪ್ರಿಯನಾಗಿರುತ್ತಾನೆ? ॥ ೪೪ ॥

ಒಂಭತ್ತು ಯೋಗೀಶ್ವರರಲ್ಲಿ ಎರಡನೆಯವರಾದ ಹರಿಯೋಗಿಗಳು ಇಂತೆಂದರು – ರಾಜನೇ! ಎಲ್ಲಕ್ಕಿಂತ ಶ್ರೇಷ್ಠ ಭಗವದ್ಭಕ್ತನ ಲಕ್ಷಣಗಳನ್ನು ಹೇಳುತ್ತೇನೆ; ಕೇಳು. ಸಮಸ್ತ ಪ್ರಾಣಿಗಳಲ್ಲಿ ಒಂದೇ ಆತ್ಮನಿರುವನು ಎಂದು ಭಾವಿಸಿ, ಭಗವಂತನ ಸತ್ತೆಯನ್ನು ನೋಡುವವನು, ಸಮಸ್ತ ಪ್ರಾಣಿಗಳನ್ನು ಆತ್ಮಸ್ವರೂಪೀ ಭಗವಂತನಲ್ಲಿ ನೋಡುವವನು ಉತ್ತಮ ಭಾಗವತನಾಗಿದ್ದಾನೆ. ಆದರೆ ಭಗವಂತನಲ್ಲಿ ಪ್ರೇಮವನ್ನಿರಿಸಿ, ಅವನ ಭಕ್ತರಲ್ಲಿ ಸಖಿತನವಿರಿಸುತ್ತಾ, ದುಃಖಿತರ, ಅಜ್ಞಾನಿಗಳ ಮೇಲೆ ದಯೆವಿರಿಸುತ್ತಾ, ಇದ್ದರೂ ಭಗವಂತನನ್ನು ದ್ವೇಷಿಸುವವನನ್ನು ಉಪೇಕ್ಷಿಸುವವನು ಮಧ್ಯಮ ದರ್ಜೆಯ ಭಕ್ತನಾಗಿದ್ದಾನೆ. ॥ ೪೫-೪೬ ॥ ಇದರಿಂದ ಬೇರೆಯಾಗಿ ಭಗವಂತನ ಅರ್ಚಾ-ವಿಗ್ರಹ-ಮೂರ್ತಿಗಳ ಪೂಜೆಯನ್ನೇನೋ ಶ್ರದ್ಧೆಯಿಂದ ಮಾಡುತ್ತಾನೆ, ಆದರೆ ಭಗವಂತನ ಭಕ್ತರಲ್ಲೇ ಅವನಿಗೆ ಶ್ರದ್ಧೆ ಇಲ್ಲ – ಎಂದಾಗ ಬೇರೆ ಜನರಲ್ಲಾದರೋ ಶ್ರದ್ಧೆ ಹೇಗೆ ಉಂಟಾದೀತು? ಇಂತಹವನು ಪ್ರಾಕೃತನಾಗಿದ್ದಾನೆ. ಅವನು ಕೆಳದರ್ಜೆಯ ಭಕ್ತನಾಗಿದ್ದಾನೆ. ॥ ೪೭ ॥

ಗುಣಾತೀತ ಅವಸ್ಥೆಯನ್ನು ವರ್ಣಿಸುತ್ತಾ ಹೇಳುತ್ತಾರೆ – ಇಂದ್ರಿಯಗಳ ಮೂಲಕ ವಿಷಯಗಳನ್ನು ಗ್ರಹಿಸುತ್ತಾ, ಅವು ಬಂದು ಹೋಗುವುದರಲ್ಲಿ ಹರ್ಷಿತನಾಗುವುದಿಲ್ಲ, ಅವುಗಳನ್ನು ದ್ವೇಷಿಸುವುದೂ ಇಲ್ಲ, ಈ ವಿಶ್ವವನ್ನು ಭಗವಂತನ ಮಾಯೆಯೆಂದು ತಿಳಿಯುವವನು ಉತ್ತಮ ಭಾಗವತನಾಗಿದ್ದಾನೆ. ॥ ೪೮ ॥

ದೇಹೇಂದ್ರಿಯ ಪ್ರಾಣಮನೋಧಿಯಾಂ ಯೋ
ಜನ್ಮಾಪ್ಯಯಕ್ಷುದ್ಭಯತರ್ಷಕೃಚ್ಛ್ರೈಃ ।
ಸಂಸಾರಧರ್ಮೈರವಿಮುಹ್ಯಮಾನಃ
ಸ್ಮೃತ್ಯಾ ಹರೇರ್ಭಾಗವತಪ್ರಧಾನಃ ॥ ೪೯ ॥

ಜನ್ಮ - ಮೃತ್ಯು, ಹಸಿವು - ಬಾಯಾರಿಕೆ, ಭಯ, ಕಷ್ಟ ಮುಂತಾದ ಪ್ರಾಪಂಚಿಕ ಧರ್ಮಗಳು ದೇಹ, ಇಂದ್ರಿಯ, ಪ್ರಾಣ, ಮನ, ಬುದ್ಧಿ ಇವುಗಳಲ್ಲಿ ಬಂದುಹೋಗುತ್ತಾ ಇರುತ್ತವೆ. ಆದರೆ ಭಗವಂತನ ಸ್ಮೃತಿಯಲ್ಲಿ ನಿಮಗ್ನನಾಗಿದ್ದು ಅವುಗಳಿಂದ ಬಾಧಿತನಾಗದ ಭಗವದ್ಭಕ್ತನು ಉತ್ತಮ ಶ್ರೇಣಿಯ ಭಕ್ತನಾಗಿದ್ದಾನೆ. ಮನಸ್ಸಿನಲ್ಲಿ ವಿಷಯ-ಭೋಗಗಳ ಇಚ್ಛೆ, ಕರ್ಮ ಪ್ರವೃತ್ತಿ, ಅವುಗಳ ಬೀಜ ವಾಸನೆಗಳು ಉಂಟಾಗದಿರುವವನು, ಏಕಮಾತ್ರ ಭಗವಾನ್ ವಾಸುದೇವನಲ್ಲೇ ವಾಸಿಸುವವನು ಉತ್ತಮ ಭಗವದ್ಭಕ್ತನಾಗಿರುವನು. ॥ ೪೯-೫೦ ॥ ಆ ಭಕ್ತನು ಜನ್ಮ ಹಾಗೂ ಕರ್ಮದಿಂದಾಗಿ ಅಥವಾ ವರ್ಣ, ಆಶ್ರಮ, ಜಾತಿಯಿಂದಾಗಿ ಅಥವಾ ಶರೀರದಿಂದಾಗಿ ಎಲ್ಲಿಯೂ ಅಹಂತೆ, ಮಮತೆ ಇಡುವುದಿಲ್ಲ ಮತ್ತು ಇವೆಲ್ಲದರಲ್ಲಿ ಆಸಕ್ತನಾಗಿರುವುದಿಲ್ಲ, ಇಂತಹವನು ಭಗವಂತನಿಗೆ ನಿಶ್ಚಯವಾಗಿ ಬಹು ಪ್ರಿಯನಾಗಿರುವನು. ॥ ೫೧ ॥ ಧನ, ಶರೀರಾದಿಗಳಲ್ಲಿ ಆಸಕ್ತಿ ಇಲ್ಲದವನು 'ಇದು ನನ್ನದು, ಇದು ಪರರದು' ಈ ಪ್ರಕಾರದ ಭೇದವಿರಿಸುವುದಿಲ್ಲ, ಅವನು ಸರ್ವತ್ರ ಸಮಭಾವದಿಂದ ಏಕಮಾತ್ರ ಪರಮಾತ್ಮನನ್ನೇ ನೋಡುವನು. ಯಾವುದೇ ಘಟನೆ ಅಥವಾ ಸಂಕಲ್ಪದಿಂದ ವಿಕ್ಷಿಪ್ತನಾಗದೆ ಸದಾ ಕಾಲ ಶಾಂತವಾಗಿರುತ್ತಾನೆ. ಅವನು ಖಂಡಿತವಾಗಿಯೇ ಭಗವಂತನ ಉತ್ತಮ ಭಕ್ತನಾಗಿದ್ದಾನೆ. ॥ ೫೨ ॥ ರಾಜನೇ! ದೊಡ್ಡ-ದೊಡ್ಡ ದೇವತೆ ಮುಂತಾದವರೂ ಕೂಡ ತಮ್ಮ ಮನಸ್ಸು, ಶರೀರ, ಇಂದ್ರಿಯಗಳನ್ನು ತಮ್ಮ ವಶಪಡಿಸಿಕೊಳ್ಳದೆ, ಭಗವಂತನ ಆ ಚರಣಾರವಿಂದಗಳನ್ನು ಹುಡುಕುತ್ತಲೇ ಇರುತ್ತಾರೆ. ಆದರೆ ಅವರೂ ಕೂಡ ಭಗವತ್‌ಕೃಪೆಯಿಲ್ಲದೆ ಅವನ್ನು ಪಡೆಯಲಾರರು. ಆದರೆ ಭಗವಂತನ ಪ್ರೇಮೀಭಕ್ತನ ಚಿತ್ತ ನಿರಂತರ ಆ ಚರಣಗಳ ಸನ್ನಿಧಿಯಲ್ಲಿ ಹಾಗೂ ಸೇವೆಯಲ್ಲಿ ತೊಡಗಿರುತ್ತದೆ. ಅವನಿಗೆ ಯಾರಾದರೂ ಮೂರುಲೋಕದ ರಾಜ್ಯಲಕ್ಷ್ಮಿಯ ಪ್ರಲೋಭನೆ ಒಡ್ಡಿದರೂ ಅವನು ಭಗವತ್ ಸ್ಮೃತಿಯಿಂದ ವಿಚಲಿತನಾಗುವುದಿಲ್ಲ. ಏನೇ ಹೇಳಲೀ, ಅವನು ಆ ರಾಜ್ಯಲಕ್ಷ್ಮಿಯ ಕಡೆಗೆ ಗಮನವನ್ನೇ ಕೊಡುವುದಿಲ್ಲ, ಇಂತಹ ಭಕ್ತನಿಗಾಗಿ ಭಗವಂತನು ಅರೆಕ್ಷಣವೂ ಮರೆಯಾಗುವುದಿಲ್ಲ, ಅವನೂ ಕೂಡ ಭಗವಂತನಿಂದ ಮರೆಯಾಗುವುದಿಲ್ಲ, ಇಂತಹ ಭಗವದ್ಭಕ್ತನು ವೈಷ್ಣವರಲ್ಲಿ ಅಗ್ರಗಣ್ಯನಾಗಿದ್ದಾನೆ. ಎಲ್ಲರಿಂದ ಶ್ರೇಷ್ಠನಾಗಿದ್ದಾನೆ. ॥ ೫೩ ॥ ಭಗವಂತನ ಪರಾಕ್ರಮ ಅಸೀಮವಾಗಿದೆ. ಇಂತಹ ಆ ಪ್ರಭುವಿನ ಪಾದನಖಚಂದ್ರಿಕೆಯಿಂದ ಶರಣಾಗತ ಭಕ್ತರ ಹೃದಯದ ಸಂತಾಪವು ಒಮ್ಮೆಗೇ ದೂರವಾಗಿಹೋಗುತ್ತದೆ. ಆ ಭಕ್ತನು ಭಗವಂತನ ಭಕ್ತಿಯಲ್ಲೇ ಆನಂದಿತನಾಗಿರುತ್ತಾನೆ. ಭಗವಂತನ ಚರಣಗಳಲ್ಲಿ ಅನನ್ಯ ಶರಣಾಗತಿಯ ಹೊರತು ಅವನು ಎಲ್ಲಿಗೂ ಹೋಗಲಾರನು. ಚಂದ್ರೋದಯವಾದ ಬಳಿಕ ಸೂರ್ಯನ ಪ್ರಖರ ತಾಪ ಬಾಧಿಸದಂತೆ, ಅವನನ್ನು ಕಾಮ, ಕ್ರೋಧಾದಿ ಶತ್ರುಗಳು ಮತ್ತೆ ಪ್ರಭಾವಿತನನ್ನಾಗಿಸಲಾರವು. ॥ ೫೪ ॥

ನ ಕಾಮಕರ್ಮಬೀಜಾನಾಂ ಯಸ್ಯ ಚೇತಸಿ ಸಂಭವಃ ।
ವಾಸುದೇವೈಕನಿಲಯಃ ಸ ವೈ ಭಾಗವತೋತ್ತಮಃ
॥ ೫೦ ॥

ನ ಯಸ್ಯ ಜನ್ಮ ಕರ್ಮಭ್ಯಾಂ ನ ವರ್ಣಾಶ್ರಮಜಾತಿಭಿಃ ।
ಸಜ್ಜತೇಽಸ್ಮಿನ್ನಹಂಭಾವೋ ದೇಹೇ ವೈ ಸ ಹರೇಃ ಪ್ರಿಯಃ
॥ ೫೧ ॥

ನ ಯಸ್ಯ ಸ್ವಃ ಪರ ಇತಿ ವಿತ್ತೇಷ್ವಾತ್ಮನಿ ವಾ ಭಿದಾ ।
ಸರ್ವಭೂತಸಮಃ ಶಾಂತಃ ಸ ವೈ ಭಾಗವತೋತ್ತಮಃ
॥ ೫೨ ॥

ತ್ರಿಭುವನವಿಭವಹೇತವೇಽಪ್ಯಕುಂಠ-
ಸ್ಮೃತಿರಜಿತಾತ್ಮ ಸುರಾದಿಭಿರ್ವಿಮೃಗ್ಯಾತ್ ।
ನ ಚಲತಿ ಭಗವತ್ಪದಾರವಿಂದಾ-
ಲ್ಲವನಿಮಿಷಾರ್ಧಮಪಿ ಯಃ ಸ ವೈಷ್ಣವಾಗ್ರ್ಯಃ ॥ ೫೩ ॥

ಭಗವತ ಉರುವಿಕ್ರಮಾಂಘ್ರಿಶಾಖಾ-
ನಖಮಣಿಚಂದ್ರಿಕಯಾ ನಿರಸ್ತತಾಪೇ ।
ಹೃದಿ ಕಥಮುಪಸೀದತಾಂ ಪುನಃ ಸ
ಪ್ರಭವತಿ ಚಂದ್ರ ಇವೋದಿತೇಽರ್ಕತಾಪಃ ॥ ೫೪ ॥

ವಿಸೃಜತಿ ಹೃದಯಂ ನ ಯಸ್ಯ ಸಾಕ್ಷಾ-
ದ್ಧರಿರವಶಾಭಿಹಿತೋಽಪ್ಯಘೌಘನಾಶಃ ।
ಪ್ರಣಯರಶನಯಾ ಧೃತಾಂಘ್ರಿಪದ್ಮಃ
ಸ ಭವತಿ ಭಾಗವತಪ್ರಧಾನ ಉಕ್ತಃ ॥ ೫೫ ॥

ಭಗವಂತನ ನಾಮವನ್ನು ವಿವಶನಾಗಿ ಉಚ್ಚರಿಸಿದರೂ ಕೂಡ ಭಗವಂತನು ಅವನ ಸಂಪೂರ್ಣ ಪಾಪರಾಶಿಯನ್ನು ತತ್‌ಕಾಲವೇ ನಾಶಮಾಡಿಬಿಡುತ್ತಾನೆ. ಅಂತಹ ಸ್ವಯಂ ಭಗವಾನ್ ಶ್ರೀಹರಿಯು ಅವನ ಹೃದಯದಿಂದ ಒಂದು ಕ್ಷಣವೂ ಅಗಲುವುದಿಲ್ಲ. ಏಕೆಂದರೆ, ಅವನು ಪ್ರೇಮಸೂತ್ರದಿಂದ ಅವನ ಚರಣಕಮಲಗಳನ್ನು ಗಟ್ಟಿಯಾಗಿ ಕಟ್ಟಿ ಇಟ್ಟಿರುವನು. ನಿಜವಾಗಿ ಇಂತಹವನೇ ಭಗವಂತನ ಭಕ್ತರಲ್ಲಿ ಅಗ್ರೇಸರನಾಗಿರುವನು. ಅವನೇ ಮಹಾಪುರುಷನಾಗಿದ್ದಾನೆ. ॥ ೫೫ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಮಾಯೆ, ಮಾಯೆಯಿಂದ ಪಾರಾಗುವ ಉಪಾಯ – ಬ್ರಹ್ಮಹಾಗೂ ಕರ್ಮಯೋಗದ ನಿರೂಪಣೆ

ರಾಜೋವಾಚ

ಪರಸ್ಯ ವಿಷ್ಣೋರೀಶಸ್ಯ ಮಾಯಿನಾಮಪಿ ಮೋಹಿನೀಮ್ ।
ಮಾಯಾಂ ವೇದಿತುಮಿಚ್ಛಾಮೋ ಭಗವಂತೋ ಬ್ರುವಂತು ನಃ
॥ ೧ ॥

ರಾಜಾ ನಿಮಿಯು ಕೇಳಿದನು – ಭಗವನ್ ! ಸರ್ವಶಕ್ತಿಸಂಪನ್ನ ಪರಮಕಾರಣ ಭಗವಾನ್ ವಿಷ್ಣುವಿನ ಮಾಯೆಯು ಬ್ರಹ್ಮದೇವರಿಂದ ಹಿಡಿದು ಸಮಸ್ತ ಜೀವಿಗಳನ್ನೂ ಮೋಹಿಸುತ್ತದೆ. ಅದರ ನಿಜರೂಪವನ್ನು ಯಾರೂ ತಿಳಿಯಲಾರರು. ನಾನು ಪ್ರಭುವಿನ ಮಾಯೆಯ ಸ್ವರೂಪವನ್ನು ತಿಳಿಯಬಯಸುತ್ತೇನೆ. ಕೃಪೆದೋರಿ ನನಗೆ ತಿಳಿಸುವರಾಗಿರಿ. ॥ ೧ ॥ ಈ ಮನುಷ್ಯನು ಪ್ರಪಂಚದ ತ್ರಿತಾಪದಿಂದ ಬೇಯುತ್ತಿದ್ದಾನೆ. ಇಂತಹ ತಾಪದಿಂದ ಬಿಡುಗಡೆ ಹೊಂದಲು ಭಗವಂತನ ಅಮೃತಮಯ ಹರಿಕಥೆಯೇ ಏಕಮಾತ್ರ ಪರಮೌಷಧವಾಗಿದೆ. ನಿಮ್ಮ ಮೂಲಕ ಭಗವತ್‌ಕಥಾಮೃತವನ್ನು

ನಾನುತೃಪ್ಯೇ ಜುಷನ್ಯುಷ್ಮದ್ವಚೋ ಹರಿಕಥಾಮೃತಮ್ ।
ಸಂಸಾರತಾಪನಿಸ್ತಪ್ತೋ ಮರ್ತ್ಯಸ್ತತ್ತಾಪಭೇಷಜಮ್
॥ ೨ ॥

ಪಾನಮಾಡುತ್ತಿದ್ದರೂ ನಮಗೆ ತೃಪ್ತಿಯಾಗುತ್ತಿಲ್ಲ. ಇನ್ನೂ-ಮತ್ತೂ ಕೇಳುವ ಉತ್ಕಂಠತೆ ಹೆಚ್ಚುತ್ತಾ ಹೋಗುತ್ತದೆ. ॥ ೨ ॥

ಅಂತರಿಕ್ಷ ಉವಾಚ

ಮೂರನೇಯ ಅಂತರಿಕ್ಷ ಯೋಗೀಶ್ವರರು ಹೇಳಿದರು – ಮಹಾಬಾಹುವೇ ! ಆದಿಪುರುಷ ಭಗವಾನ್ ನಾರಾಯಣನು ಸರ್ವಪ್ರಾಣಿಗಳ ಆತ್ಮಾ ಆಗಿದ್ದಾನೆ. ಅವನೇ ಈ ಪಂಚಭೂತಗಳಿಂದ ಸಣ್ಣ-ದೊಡ್ಡ ಎಲ್ಲ ರೀತಿಯ ಪ್ರಾಣಿಗಳನ್ನು ಸೃಷ್ಟಿಸಿದನು ಹಾಗೂ ತಾನೇ ಸ್ವತಃ ವಿಷಯಭೋಗ ಪ್ರದಾನ ಮಾಡಲು ಅನೇಕ ವಿಧದಿಂದ ಸಾಮಗ್ರಿಯನ್ನೂ ಪ್ರಸ್ತುತಪಡಿಸಿದನು. ತನ್ನ ಆತ್ಮ ಸ್ವರೂಪದ ಜ್ಞಾನದ ವಿಸ್ತಾರಕ್ಕಾಗಿ ಅವನು ಸ್ವಯಂ ಅನೇಕ ರೂಪಗಳನ್ನು ಧರಿಸಿದನು. ಈ ಪ್ರಕಾರ ಸಮಸ್ತ ಸೃಷ್ಟಿ ಏಕಮಾತ್ರ ಪರಮಾತ್ಮನದ್ದೇ ಸ್ವರೂಪವಾಗಿದೆ. ॥ ೩ ॥ ಈ ವಿಧದಿಂದ ಪರಮಾತ್ಮನು ಎಲ್ಲ ಪ್ರಾಣಿಗಳನ್ನು ನಿರ್ಮಿಸಿ, ಪಂಚಮಹಾಭೂತಗಳಿಂದ ಉಂಟಾದ ಆ ಶರೀರಗಳಲ್ಲಿ ಅಂತರ್ಯಾಮಿಯಾಗಿ ಸ್ವತಃ ಪ್ರವಿಷ್ಟನಾದನು. ಒಂದು ಮನಸ್ಸು ಮತ್ತು ಹತ್ತು ಇಂದ್ರಿಯಗಳ ಮೂಲಕ ತನ್ನನ್ನೇ ವಿಭಕ್ತನನ್ನಾಗಿಸಿ, ಸ್ವಯಂ ಆ ಗುಣಗಳನ್ನು ಉಪಭೋಗಿಸುತ್ತಾನೆ. ಆದರೆ ಅವನು ಆ ಗುಣಗಳಲ್ಲಿ ಆಸಕ್ತನಾಗುವುದಿಲ್ಲ. ತನ್ನ ಮೂಲಕವೇ ಪ್ರಕಾಶಿತವಾದ ಈ ಗುಣಗಳೇ

ಏಭಿರ್ಭೂತಾನಿ ಭೂತಾತ್ಮಾ ಮಹಾಭೂತೈರ್ಮಹಾಭುಜ ।
ಸಸರ್ಜೋಚ್ಚಾವಚಾನ್ಯಾದ್ಯಃ ಸ್ವಮಾತ್ಮಾತ್ಮಪ್ರಸಿದ್ಧಯೇ
॥ ೩ ॥

ಏವಂ ಸೃಷ್ಟಾನಿ ಭೂತಾನಿ ಪ್ರವಿಷ್ಟಃ ಪಂಚಧಾತುಭಿಃ ।
ಏಕಧಾ ದಶಧಾऽऽತ್ಮಾನಂ ವಿಭಜನ್ ಜುಷತೇ ಗುಣಾನ್
॥ ೪ ॥

ಗುಣೈರ್ಗುಣಾನ್ ಸ ಭುಂಜಾನ ಆತ್ಮಪ್ರದ್ಯೋತಿತೈಃ ಪ್ರಭುಃ।
ಮನ್ಯಮಾನ ಇದಂ ಸೃಷ್ಟಮಾತ್ಮಾನಮಿಹ ಸಜ್ಜತೇ
॥ ೫ ॥

ಕರ್ಮಾಣಿ ಕರ್ಮಭಿಃ ಕುರ್ವನ್ಸನಿಮಿತ್ತಾನಿ ದೇಹಭೃತ್।
ತತ್ತತ್ಕರ್ಮಫಲಂ ಗೃಹ್ಣನ್ಭ್ರಮತೀಹ ಸುಖೇತರಮ್
॥ ೬ ॥

ಇತ್ಥಂ ಕರ್ಮಗತೀರ್ಗಚ್ಛನ್ ಬಹ್ವಭದ್ರವಹಾಃ ಪುಮಾನ್।
ಆಭೂತಸಂಪ್ಲವಾತ್ ಸರ್ಗಪ್ರಲಯಾವಶ್ನುತೇಽವಶಃ
॥ ೭ ॥

ಧಾತೂಪಪ್ಲವ ಆಸನ್ನೇ ವ್ಯಕ್ತಂ ದ್ರವ್ಯಗುಣಾತ್ಮಕಮ್।
ಅನಾದಿನಿಧನಃ ಕಾಲೋ ಹ್ಯವ್ಯಕ್ತಾಯಾಪಕರ್ಷತಿ
॥ ೮ ॥

ಶತವರ್ಷಾ ಹ್ಯನಾವೃಷ್ಟಿರ್ಭವಿಷ್ಯತ್ಯುಲ್ಬಣಾ ಭುವಿ।
ತತ್ಕಾಲೋಪಚಿತೋಷ್ಣಾರ್ಕೋ ಲೋಕಾಂಸ್ತ್ರೀನ್ ಪ್ರತಪಿಷ್ಯತಿ
॥ ೯ ॥

ಪಾತಾಲತಲಮಾರಭ್ಯ ಸಂಕರ್ಷಣಮುಖಾನಲಃ।
ದಹನ್ನೂರ್ಧ್ವಶಿಖೋ ವಿಷ್ವಗ್ವರ್ಧತೇ ವಾಯುನೇರಿತಃ
॥ ೧೦ ॥

ಸಾಂವರ್ತಕೋ ಮೇಘಗಣೋ ವರ್ಷತಿ ಸ್ಮ ಶತಂ ಸಮಾಃ।
ಧಾರಾಭಿರ್ಹಸ್ತಿಹಸ್ತಾಭಿರ್ಲೀಯತೇ ಸಲಿಲೇ ವಿರಾಟ್
॥ ೧೧ ॥

ತತೋ ವಿರಾಜಮುತ್ಸೃಜ್ಯ ವೈರಾಜಃ ಪುರುಷೋ ನೃಪ।
ಅವ್ಯಕ್ತಂ ವಿಶತೇ ಸೂಕ್ಷ್ಮಂ ನಿರಿಂಧನ ಇವಾನಲಃ
॥ ೧೨ ॥

ವಾಯುನಾ ಹೃತಗಂಧಾ ಭೂಃ ಸಲಿಲತ್ವಾಯ ಕಲ್ಪತೇ।
ಸಲಿಲಂ ತದ್ಧೃತರಸಂ ಜ್ಯೋತಿಷ್ಟ್ವಾಯೋಪಕಲ್ಪತೇ
॥ ೧೩ ॥

ಹೃತರೂಪಂ ತು ತಮಸಾ ವಾಯೌ ಜ್ಯೋತಿಃ ಪ್ರಲೀಯತೇ।
ಹೃತಸ್ಪರ್ಶೋಽವಕಾಶೇನ ವಾಯುರ್ನಭಸಿ ಲೀಯತೇ
॥ ೧೪ ॥

ಗುಣಗಳಲ್ಲಿ ವರ್ತಿಸುತ್ತವೆ. ಆದರೆ ಜೀವಿಯು ಅವನಿಂದ ನಿರ್ಮಿಸಲ್ಪಟ್ಟ ಪ್ರಪಂಚದಲ್ಲಿ ಆತ್ಮಬುದ್ಧಿಯನ್ನಿರಿಸಿ, 'ಇದೆಲ್ಲವೂ ನಾನೇ ಆಗಿದ್ದೇನೆ, ನನ್ನದೇ ಆಗಿದೆ' ಎಂಬ ಸಂಬಂಧವನ್ನು ಜೋಡಿಸಿಕೊಂಡು, ತನ್ನಲ್ಲಿ ಕರ್ತೃತ್ವ-ಭೋಕ್ತೃತ್ವವನ್ನು ಆರೋಪಿಸಿಕೊಂಡು ಅವನು ಬಂಧಿತ ನಾಗುವನು. ಇದೇ ಮಾಯೆ ಆಗಿದೆ. ॥ ೪-೫ ॥ ಈ ಪ್ರಕಾರ ದೇಹಾಭಿಮಾನಿ ಮನುಷ್ಯನು ಕರ್ಮೇಂದ್ರಿಯಗಳಿಂದ ಕರ್ಮಗಳನ್ನು ಸಕಾಮಭಾವದಿಂದ ಮಾಡುತ್ತಾ ಆಯಾಯಾ ಕರ್ಮಗಳನುಸಾರ ಫಲವನ್ನು ಭೋಗಿಸುತ್ತಾನೆ ಹಾಗೂ ಸುಖ ದುಃಖಿಗಳಲ್ಲಿ ಸಿಕ್ಕಿಹಾಕಿಕೊಂಡು ಜನ್ಮ-ಮರಣಗಳ ಸುಳಿಯಲ್ಲಿ ಅಲೆಯುತ್ತಾ ಇರುತ್ತಾನೆ. ಅವನು ಇದರಿಂದ ಮುಕ್ತನಾಗುವುದಿಲ್ಲ. ॥ ೬ ॥ ಹೀಗೆ ಈ ಜೀವಿಯು ಅಹಂಭಾವದ ಕಾರಣವೇ ಅನೇಕ ಅಮಂಗಳ ಗತಿಗಳನ್ನು ಹೊಂದುತ್ತಾ ಇರುತ್ತಾನೆ. ಮಹಾ ಪ್ರಳಯದವರೆಗೂ ಹುಟ್ಟಿದ ಬಳಿಕ ಮೃತ್ಯು, ಮೃತ್ಯುವಿನ ಬಳಿಕ ಜನ್ಮ ಹೀಗೆ ಪರವಶನಾಗಿ ಹುಟ್ಟು-ಸಾವಿನ ಚಕ್ರದಲ್ಲಿ ಯಾವಾಗಲೂ ಸುತ್ತುತ್ತಾ ಇರುತ್ತಾನೆ. ಇದೆಲ್ಲವೂ ಭಗವಂತನ ಮಾಯೆಯಾಗಿದೆ. ॥ ೭ ॥ ಪಂಚಮಹಾಭೂತಗಳ ಪ್ರಳಯದ ಸಮಯ ಸಮೀಪಿಸಿದಾಗ ಅನಾದಿ ಹಾಗೂ ಅನಂತ ಕಾಲನೇ ಸ್ಥೂಲ, ಸೂಕ್ಷ್ಮ ದ್ರವ್ಯ, ಗುಣರೂಪೀ ಈ ಸಮಸ್ತ ದೃಶ್ಯಪ್ರಪಂಚವನ್ನು ಅವ್ಯಕ್ತದ ಕಡೆಗೆ ಅರ್ಥಾತ್ ತನ್ನ ಮೂಲಪ್ರಕೃತಿಯಲ್ಲಿ ಸೆಳೆದುಕೊಳ್ಳುವನು. ಅಂದರೆ ಎಲ್ಲವನ್ನೂ ತನ್ನಲ್ಲಿ ಲೀನಗೊಳಿಸಿಕೊಳ್ಳುವನು. ಆಗ ಒಂದೇ ಸವನೆ ನೂರುವರ್ಷ ಭಯಂಕರ ಕ್ಷಾಮತಲೆದೋರಿ, ಭೂಮಿಯಲ್ಲಿ ಭಾರೀ ಉಷ್ಣತೆ ಬೆಳೆಯುತ್ತದೆ. ಆ ಹೆಚ್ಚಾದ ಉಷ್ಣತೆಯಿಂದ ಮೂರೂ ಲೋಕಗಳು ಸುಡಲು ತೊಡಗುತ್ತವೆ. ॥ ೮-೯ ॥ ಆಗಲೇ ಸಂಕರ್ಷಣನ ಮುಖದಿಂದ ಪ್ರಚಂಡ ಅಗ್ನಿಜ್ವಾಲೆಗಳು ಹೊರಬೀಳುತ್ತವೆ. ವಾಯುವಿನ ಪ್ರೇರಣೆಯಿಂದ ಆ ಜ್ವಾಲೆಗಳು ಪಾತಾಳದಿಂದ ಸುಡಲು ಪ್ರಾರಂಭಿಸುತ್ತವೆ ಹಾಗೂ ಅತಿ ಎತ್ತರಕ್ಕೆ ಬೆಳೆಯುತ್ತಾ ಎಲ್ಲೆಡೆ ಹರಡಿಕೊಂಡು ಇಡೀ ವಿಶ್ವವನ್ನು ಸುಡಲು ತೊಡಗುತ್ತವೆ. ॥ ೧೦ ॥ ಆ ಪ್ರಚಂಡ ಉಷ್ಣತೆಯ ಪರಿಣಾಮವಾಗಿ ನೂರು ವರ್ಷಗಳವರೆಗೆ ಪ್ರಳಯಕಾಲದ ಸಂವರ್ತಕ ಮೇಘಗಳು ಆನೆಯ ಸೊಂಡಿಲಿನ ಗಾತ್ರದ ಭಾರೀ ಮಳೆ ಸುರಿಸುತ್ತವೆ. ಆಗ ಈ ವಿರಾಟ್ ವಿಶ್ವವು ನೀರಿನಲ್ಲಿ ಮುಳುಗಿಹೋಗುತ್ತದೆ. ॥ ೧೧ ॥ ಎಲೈ ರಾಜನೇ! ಉರವಲು ಮುಗಿದಾಗ ಅಗ್ನಿಯು ತನ್ನ ಅವ್ಯಕ್ತ ಸ್ವರೂಪದಲ್ಲಿ ಲೀನವಾಗುವಂತೆ, ಈ ವಿರಾಟ್ ಸ್ವರೂಪವುಳ್ಳ ಪರಮಾತ್ಮನು ತನ್ನ ವಿರಾಟ್ ಶರೀರವನ್ನು ತ್ಯಜಿಸಿ ತನ್ನ ಅವ್ಯಕ್ತ ಸ್ವರೂಪದಲ್ಲಿ ಇರುತ್ತಾನೆ. ಆ ಪ್ರಳಯಕಾಲದಲ್ಲಿ ಪೃಥ್ವಿಯ ಗಂಧ ತನ್ಮಾತ್ರೆಯನ್ನು ವಾಯುವು ಸೆಳೆದುಕೊಂಡಾಗ ಪೃಥ್ವಿಯು ನೀರಿನಲ್ಲಿ ಮುಳುಗಿಹೋಗುತ್ತದೆ. ಹೀಗೆಯೇ ಜಲದ ತನ್ಮಾತ್ರೆ ರಸವನ್ನೂ ವಾಯು ಸೆಳೆದು ಕೊಂಡಾಗ ಜಲವು ತನ್ನ ಕಾರಣವಾದ ಅಗ್ನಿಯಲ್ಲಿ ವಿಲೀನವಾಗುತ್ತದೆ. ॥ ೧೨-೧೩. ॥ ಅಂಧಕಾರದ ಮೂಲಕ ಅಗ್ನಿಯ ರೂಪತನ್ಮಾತ್ರೆಯನ್ನು ಹೀರಿಕೊಂಡಾಗ ಜ್ಯೋತಿ (ಅಗ್ನಿ) ತತ್ತ್ವವು ವಾಯುವಿನಲ್ಲಿ ವಿಲೀನವಾಗಿ ಹೋಗುತ್ತದೆ. ಹೀಗೆಯೇ ವಾಯುವಿನ ಗುಣ ಸ್ಪರ್ಶ ತನ್ಮಾತ್ರೆಯನ್ನು ಆಕಾಶದ ಮೂಲಕ ಹೀರಿಕೊಂಡಾಗ ವಾಯು ಆಕಾಶದಲ್ಲಿ ವಿಲೀನವಾಗುತ್ತದೆ. ॥ ೧೪ ॥

ಕಾಲಾತ್ಮನಾ ಹೃತಗುಣಂ ನಭ ಆತ್ಮನಿ ಲೀಯತೇ ।
ಇಂದ್ರಿಯಾಣಿ ಮನೋ ಬುದ್ಧಿಃ ಸಹ ವೈಕಾರಿಕೈರ್ನೃಪ ।
ಪ್ರವಿಶಂತಿ ಹ್ಯಹಂಕಾರಂ ಸ್ವಗುಣೈರಹಮಾತ್ಮನಿ
॥ ೧೫ ॥

ಕಾಲಸ್ವರೂಪಿಯಾದ ಈಶ್ವರನು ಆಕಾಶದ ಗುಣ ಶಬ್ದತನ್ಮಾತ್ರೆಯನ್ನು ಹೀರಿಕೊಂಡಾಗ ಆಕಾಶವು ಅಹಂಕಾರ ತತ್ತ್ವದಲ್ಲಿ ಲಯವಾಗುತ್ತದೆ. ಜೊತೆಗೆ ಇಂದ್ರಿಯಗಳು, ಮನ-ಬುದ್ಧಿಗಳು ಇವೆಲ್ಲವೂ ತಮ್ಮ-ತಮ್ಮ ಅಧಿಷ್ಠಾತೃ ದೇವತೆಗಳೊಂದಿಗೆ ಅಹಂಕಾರದಲ್ಲಿ ಲೀನವಾಗುತ್ತವೆ. ಮತ್ತೆ ಅಹಂಕಾರವೂ ಮೂಲಸ್ವರೂಪ ಮಹತ್ತತ್ತ್ವದಲ್ಲಿ ಲೀನವಾಗಿ ಹೋಗುತ್ತದೆ. ॥ ೧೫ ॥ ಈ ವಿಧದಿಂದ ಭಗವಂತನೇ ತ್ರಿಗುಣಮಯಿ ಮಾಯೆಯ ಮೂಲಕ ಈ ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಸಂಹಾರ ಮಾಡುತ್ತಾ ಇರುತ್ತಾನೆ. ಇದನ್ನು ನಾನು ವರ್ಣಿಸಿದೆ. ಈಗ ನೀನು ಏನನ್ನು ಕೇಳಲು ಬಯಸುವೆ. ॥ ೧೬ ॥

ಏಷಾ ಮಾಯಾ ಭಗವತಃ ಸರ್ಗಸ್ಥಿತ್ಯಂತಕಾರಿಣೀ ।
ತ್ರಿವರ್ಣಾ ವರ್ಣಿತಾಸ್ಮಾಭಿಃ ಕಿಂ ಭೂಯಃ ಶ್ರೋತುಮಿಚ್ಛಸಿ
॥ ೧೬ ॥

ರಾಜೋವಾಚ

ಯಶ್ಚೈತಾಮೈಶ್ವರೀಂ ಮಾಯಾಂ ದುಸ್ತರಾಮಕೃತಾತ್ಮಭಿಃ ।
ತರಂತ್ಯಂಜಃ ಸ್ಥೂಲಧಿಯೋ ಮಹರ್ಷ ಇದಮುಚ್ಯತಾಮ್
॥ ೧೭ ॥

ರಾಜಾ ನಿಮಿಯು ಕೇಳಿದನು – ಓ ಮಹರ್ಷಿಗಳೇ! ತಮ್ಮ ಮನವನ್ನು ವಶಪಡಿಸಿಕೊಂಡಿರದ ಜನರಿಗೆ ಭಗವಂತನ ಮಾಯೆಯನ್ನು ದಾಟುವುದು ತುಂಬಾ ಕಠಿಣವಾಗಿದೆ. ಆದ್ದರಿಂದ ಸಾಮಾನ್ಯ ಜನರೂ ಕೂಡ ಆಯಾಸವಿಲ್ಲದೆ ಈ ಮಾಯೆಯನ್ನು ದಾಟಬಲ್ಲಂತಹ ಯಾವುದಾದರೂ ಸರಳ ಉಪಾಯವನ್ನು ತಾವು ತಿಳಿಸಿರಿ. ॥ ೧೭ ॥

ಪ್ರಬುದ್ಧ ಉವಾಚ

ಕರ್ಮಾಣ್ಯಾರಭಮಾಣಾನಾಂ ದುಃಖಹತ್ಯೈ ಸುಖಾಯ ಚ ।
ಪಶ್ಯೇತ್ಪಾಕವಿಪರ್ಯಾಸಂ ಮಿಥುನೀಚಾರಿಣಾಂ ನೃಣಾಮ್
॥ ೧೮ ॥

ಈಗ ನಾಲ್ಕನೆಯವರಾದ ಶ್ರೀಪ್ರಬುದ್ಧ ಯೋಗೀಶ್ವರರು ಹೇಳುತ್ತಾರೆ – ಜನರು ಕಾಮನೆಗಳಿಂದ ಬಂಧಿತರಾಗಿ ಅನೇಕ ಪ್ರಕಾರದ ಕರ್ಮಗಳನ್ನು ಮಾಡುತ್ತಾ, ಇದರಿಂದ ತಮ್ಮ ಕಷ್ಟಗಳು ಇಲ್ಲವಾಗುವವು ಹಾಗೂ ಸುಖಿಯಾಗುವೆವು ಎಂದು ಯೋಚಿಸುತ್ತಾರೆ. ಆದರೆ ಅದರ ಪರಿಣಾಮ ವಿಪರೀತವೇ ಆಗುತ್ತದೆ. ಈ ಪ್ರಕಾರ ಜನರು ಕಾಮ್ಯ ಪ್ರವೃತ್ತಿಯಲ್ಲಿ ಸಿಕ್ಕಿಕೊಂಡಿರುವರು. ಅವರ ಆ ಕರ್ಮಗಳ ವಿಪರೀತ ಪರಿಣಾಮವನ್ನು ನೋಡಿ, ವಿಚಾರ ಕುಶಲರಾದವರು ಕಾಮ್ಯಕರ್ಮಗಳಿಂದ ನಿವೃತ್ತರಾಗಬೇಕು. ॥ ೧೮ ॥

ನಿತ್ಯಾರ್ತಿದೇನ ವಿತ್ತೇನ ದುರ್ಲಭೇನಾತ್ಮಮೃತ್ಯುನಾ ।
ಗೃಹಾಪತ್ಯಾಪ್ತಪಶುಭಿಃ ಕಾ ಪ್ರೀತಿಃ ಸಾಧಿತೈಶ್ಚಲೈಃ
॥ ೧೯ ॥

ಧನವು ನಿತ್ಯವೂ ದುಃಖ ಕೊಡುವಂತಹುದು. ಅನೇಕ ಕಷ್ಟಗಳಿಂದ ಕೂಡಿದೆ. ಅದನ್ನು ಗಳಿಸಲು ಅನೇಕ ಕಷ್ಟಗಳು ಇದ್ದೇ ಇವೆ. ದೊರಕಿದರೂ ಪಡೆದವರ ಮೃತ್ಯುವಿನ ಕಾರಣವೂ ಆಗುತ್ತದೆ. ಹೀಗೆಯೇ ಮನೆ, ಮಕ್ಕಳು, ನೆಂಟರು, ಪಶು, ಧನ ಮುಂತಾದವುಗಳೂ ಕೂಡ ಅನಿತ್ಯ ಮತ್ತು ನಾಶವುಳ್ಳದ್ದಾಗಿದೆ. ಇಂತಹ ನಾಶವುಳ್ಳ ಪದಾರ್ಥಗಳಿಂದ ಶಾಶ್ವತವಾದ ಶಾಂತಿಯು ಹೇಗೆ ದೊರೆಯಬಲ್ಲದು? ॥ ೧೯ ॥ ಇದೇ ಪ್ರಕಾರ ಈ ಸಕಾಮ ಅನುಷ್ಠಾನಗಳಿಂದ ಪಡೆದುಕೊಂಡ ಸ್ವರ್ಗಾದಿಗಳೂ ಅನಿತ್ಯ, ನಾಶವುಳ್ಳದ್ದಾಗಿವೆ ಎಂದೇ ತಿಳಿಯಬೇಕು. ಏಕೆಂದರೆ, ಇಲ್ಲಿಯ ರಾಜರಲ್ಲಿ ಬೇರೆ ರಾಜರ ಕುರಿತು ಇರುವ ಮತ್ಸರದಂತೆ, ಅಲ್ಲಿಯೂ ಕೂಡ ಪರಸ್ಪರ ಸ್ಪರ್ಧೆಯ ಭಾವನೆ, ಈರ್ಷಾ-ದ್ವೇಷದ ಭಾವ ಇರುತ್ತದೆ. ಆದ್ದರಿಂದ ಇಂತಹ ರಾಗ-ದ್ವೇಷದ ವಾತಾವರಣದಲ್ಲಿ ಸುಖ-ಶಾಂತಿ ಹೇಗೆ ಸಿಗಬಲ್ಲದು? ॥ ೨೦ ॥ ಆದ್ದರಿಂದ ಸರ್ವೋತ್ತಮ ಶ್ರೇಯೋಪ್ರಾಪ್ತಿಯ ಜಿಜ್ಞಾಸುವು ಶಬ್ದ ಬ್ರಹ್ಮನಲ್ಲಿ (ವೇದಾದಿಗಳಲ್ಲಿ) ನಿಷ್ಣಾತನಾಗಿದ್ದು ಪರಬ್ರಹ್ಮ ಪರಮಾತ್ಮನಲ್ಲೇ ಶಾಂತಿಯ ಆಶ್ರಯ ಪಡೆದಂತಹ ಸದ್ಗುರುವನ್ನು ಶರಣು ಹೋಗಬೇಕು. ॥ ೨೧ ॥ ಆ ಸದ್ಗುರುವು ತನ್ನ

ಏವಂ ಲೋಕಂ ಪರಂ ವಿದ್ಯಾನ್ನಶ್ವರಂ ಕರ್ಮನಿರ್ಮಿತಮ್ ।
ಸತುಲ್ಯಾತಿಶಯಧ್ವಂಸಂ ಯಥಾ ಮಂಡಲವರ್ತಿನಾಮ್
॥ ೨೦ ॥

ತಸ್ಮಾದ್ಗುರುಂ ಪ್ರಪದ್ಯೇತ ಜಿಜ್ಞಾಸುಃ ಶ್ರೇಯ ಉತ್ತಮಮ್ ।
ಶಾಬ್ದೇ ಪರೇ ಚ ನಿಷ್ಣಾತಂ ಬ್ರಹ್ಮಣ್ಯುಪಶಮಾಶ್ರಯಮ್
॥ ೨೧ ॥

ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇದ್ ಗುರ್ವಾತ್ಮದೈವತಃ ।
ಅಮಾಯಯಾನುವೃತ್ತ್ಯಾ ಯೈಸ್ತುಷ್ಯೇದಾತ್ಮಾऽऽತ್ಮದೋ ಹರಿಃ
॥ ೨೨ ॥

ಸರ್ವತೋ ಮನಸೋऽಸಂಗ-
ಮಾದೌ ಸಂಗಂ ಚ ಸಾಧುಷು ।
ದಯಾಂ ಮೈತ್ರೀಂ ಪ್ರಶ್ರಯಂ ಚ
ಭೂತೇಷ್ವದ್ಧಾ ಯಥೋಚಿತಮ್ ॥ ೨೩ ॥

ಶೌಚಂ ತಪಸ್ತಿತಿಕ್ಷಾಂ ಚ ಮೌನಂ ಸ್ವಾಧ್ಯಾಯಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾಂ ಚ ಸಮತ್ವಂ ದ್ವಂದ್ವಸಂಜ್ಞಯೋಃ
॥ ೨೪ ॥

ಸರ್ವತ್ರಾತ್ಮೇಶ್ವರಾನ್ವೀಕ್ಷಾಂ ಕೈವಲ್ಯಮನಿಕೇತತಾಮ್ ।
ವಿವಿಕ್ತಚೀರವಸನಂ ಸಂತೋಷಂ ಯೇನ ಕೇನಚಿತ್
॥ ೨೫ ॥

ಶ್ರದ್ಧಾಂ ಭಾಗವತೇ ಶಾಸ್ತ್ರೇऽನಿಂದಾಮನ್ಯತ್ರ ಚಾಪಿ ಹಿ ।
ಮನೋವಾಕ್ಕರ್ಮದಂಡಂ ಚ ಸತ್ಯಂ ಶಮದಮಾವಪಿ
॥ ೨೬ ॥

ಶ್ರವಣಂ ಕೀರ್ತನಂ ಧ್ಯಾನಂ ಹರೇರದ್ಭುತಕರ್ಮಣಃ ।
ಜನ್ಮಕರ್ಮಗುಣಾನಾಂ ಚ ತದರ್ಥೇऽಖಿಲಚೇಷ್ಟಿತಮ್
॥ ೨೭ ॥

ಇಷ್ಟಂ ದತ್ತಂ ತಪೋ ಜಪ್ತಂ ವೃತ್ತಂ ಯಚ್ಚಾತ್ಮನಃ ಪ್ರಿಯಮ್ ।
ದಾರಾನ್ಸುತಾನ್ ಗೃಹಾನ್ ಪ್ರಾಣಾನ್ಯತ್ಪರಸ್ಮೈ ನಿವೇದನಮ್
॥ ೨೮ ॥

ಏವಂ ಕೃಷ್ಣಾತ್ಮನಾಥೇಷು ಮನುಷ್ಯೇಷು ಚ ಸೌಹೃದಮ್ ।
ಪರಿಚರ್ಯಾಂ ಚೋಭಯತ್ರ ಮಹತ್ಸು ನೃಷು ಸಾಧುಷು
॥ ೨೯ ॥

ಪರಸ್ಪರಾನುಕಥನಂ ಪಾವನಂ ಭಗವದ್ಯಶಃ ।
ಮಿಥೋ ರತಿರ್ಮಿಥಸ್ತುಷ್ಟಿರ್ನಿವೃತ್ತಿರ್ಮಿಥ ಆತ್ಮನಃ
॥ ೩೦ ॥

ಪ್ರಿಯ ಆತ್ಮಾ, ಇಷ್ಟದೈವವೆಂದು ತಿಳಿಯಬೇಕು. ಅವರ ಬಳಿಯಲ್ಲಿದ್ದು ಭಾಗವತ ಧರ್ಮದ ಉಪದೇಶವನ್ನು ಪಡೆಯಬೇಕು. ನಮ್ಮ ಪ್ರತಿಯೊಂದು ಕ್ರಿಯೆಯ ಮೂಲಕ ನಿಷ್ಕಪಟ ಭಾವದಿಂದ, ಸರಳ ಬುದ್ಧಿಯಿಂದ ಅವರ ಸೇವೆ ಮಾಡಬೇಕು. ಹೀಗೆ ಮಾಡುವುದರಿಂದ ಭಗವಂತನು ಬಹಳ ಬೇಗ ಒಲಿಯುವನು ; ಭಗವಂತನು ಕೃಪಾಮೂರ್ತಿಯಾಗಿದ್ದಾನೆ. ಭಕ್ತರ ಮೇಲೆ ಕೃಪೆದೋರಲು ಸಂದರ್ಭ ನೋಡುತ್ತಿರುತ್ತಾನೆ. ಹೆಚ್ಚೇನು, ಅವನು ಭಕ್ತರಿಗೆ ತನ್ನನ್ನೇ ಕೊಟ್ಟು ಕೊಳ್ಳುವನು. ॥ ೨೨ ॥ ಮೊಟ್ಟಮೊದಲಿಗೆ ಎಲ್ಲ ಕಡೆಗಳಿಂದ, ಅಂತರಮನಸ್ಸಿನಿಂದ ಪೂರ್ಣ ಅನಾಸಕ್ತನಾಗಬೇಕು. ಸಾಧು ಸಂತರಲ್ಲಿ ಪ್ರೇಮವಿಡಬೇಕು. ಯಥಾಯೋಗ್ಯ ರೀತಿಯಿಂದ ಸಾಮಾನ್ಯ ಪ್ರಾಣಿಗಳಲ್ಲಿ ಪ್ರೀತಿ-ದಯೆ ; ಸಮಾನರಲ್ಲಿ ಮಿತ್ರತೆ, ಹಿರಿಯರಲ್ಲಿ ಗೌರವ-ವಿನಮ್ರತೆ ಇರಬೇಕು. ॥ ೨೩ ॥ ಒಳ-ಹೊರಗಿನ ಶುದ್ಧಿ ಸ್ವಧರ್ಮಾಚರಣರೂಪೀ ತಪಸ್ಸು ಸಹಿಷ್ಣುತೆ, ಭಗವತ್ ಸ್ವರೂಪದ ಮನನ, ಸತ್‌ಶಾಸ್ತ್ರಗಳ ಸ್ವಾಧ್ಯಾಯ, ನಾಮಜಪ, ಸರಳತೆ, ಬ್ರಹ್ಮಚರ್ಯೆ, ಅಹಿಂಸಾ, ಚಳಿ-ಸೆಕೆ, ಸುಖ-ದುಃಖಾದಿ ದ್ವಂದ್ವಗಳಲ್ಲಿ ಹರ್ಷ-ಶೋಕದಿಂದ ರಹಿತನಾಗಿರಬೇಕು. ॥ ೨೪ ॥ ಒಂದೇ ಆತ್ಮವು ಸರ್ವತ್ರವ್ಯಾಪ್ತವಾಗಿದೆ ಎಂಬ ಭಾವದಿಂದ ಆತ್ಮನ ಅಸ್ತಿತ್ವವನ್ನು ಎಲ್ಲಕಡೆ ನೋಡುವುದು, ಏಕಾಂತ ಪವಿತ್ರಸ್ಥಳದಲ್ಲಿ ಇರುವುದು, ಮನೆಯ ಕುರಿತು ಮಮತೆ ಇಲ್ಲದಿರುವುದು, ಸಾದಾ ಸರಳ ಉಡುಪು ಧರಿಸುವುದು, ಸಂನ್ಯಾಸಿಯಾಗಿದ್ದರೆ ವಲ್ಕಲ ಉಡುವುದು, ದೊರೆತುದರಲ್ಲಿ ಸಂತುಷ್ಟನಾಗಿರಬೇಕು. ॥ ೨೫ ॥ ಭಗವತ್ ಪ್ರಾಪ್ತಿಯನ್ನು ತಿಳಿಸುವ ಶಾಸ್ತ್ರಗಳಲ್ಲಿ ಶ್ರದ್ಧೆ, ಯಾವುದೇ ಬೇರೆ ಶಾಸ್ತ್ರವನ್ನು ನಿಂದಿಸದಿರುವುದು; ಮನ, ವಾಣೀ, ಶರೀರದ ಸಂಯಮವಿಡುವುದು, ಸತ್ಯವಾಗಿ ನುಡಿಯುವುದು, ಶಮ-ಮನೋನಿಗ್ರಹ, ದಮ-ಇಂದ್ರಿಯನಿಗ್ರಹವಿರಬೇಕು. ॥ ೨೬ ॥ ಅದ್ಭುತ ಕರ್ಮಿ ಯಾದ ಶ್ರೀಹರಿಯ ಜನ್ಮ-ಕರ್ಮ ಹಾಗೂ ಗುಣ-ಲೀಲೆಗಳನ್ನು ಶ್ರವಣ, ಕೀರ್ತನೆ, ಧ್ಯಾನ ಮಾಡುತ್ತಾ, ಆವನಿಗಾಗಿಯೇ ಎಲ್ಲಕ್ರಿಯೆಗಳನ್ನು ಮಾಡಬೇಕು. ಜಪ, ಯಜ್ಞ, ದಾನ, ಸದಾಚಾರ ಇವುಗಳಲ್ಲದೆ ಬೇರೆ ತನಗೆ ಪ್ರಿಯವಾದ ಪದಾರ್ಥಗಳೆಲ್ಲವನ್ನು, ಅಂದರೆ ತನ್ನ ಪತ್ನೀ, ಪುತ್ರ, ಮನೆ, ಪ್ರಾಣಗಳನ್ನೂ ಹೀಗೆ ಎಲ್ಲವನ್ನು ಭಗವಂತನಿಗೆ ಅರ್ಪಿಸಬೇಕು. ॥ ೨೭-೨೯ ॥ ಶ್ರೀಕೃಷ್ಣನೇ ತಮ್ಮ ಆತ್ಮನಾಗಿರುವ ಮನುಷ್ಯರಲ್ಲಿ ನಾವು ಸೌಹಾರ್ದವನ್ನು ಸ್ಥಾಪಿಸಬೇಕು. ಸಂತ-ಮಹಾತ್ಮರನ್ನು ಸೇವಿಸಬೇಕು. ಹಾಗೆಯೇ ಸಾಮಾನ್ಯ ಜನರ ಕೂಡ ಸೇವೆ ಮಾಡಬೇಕು. ಅದರಲ್ಲಿಯೂ ಎಲ್ಲಾದರೂ ದೈವೀ ಆಪತ್ತು ಬಂದಾಗ, ಅದರಲ್ಲಿ ತೊಂದರೆಗೊಳಗಾದ ಜನರಿಗೆ ತುಂಬಾ ಶ್ರದ್ಧೆ, ಪ್ರೇಮದಿಂದ ನಿಷ್ಕಾಮಭಾವದಿಂದ ಸೇವೆಮಾಡಬೇಕು. ಭಗವಂತನ ಪರಮಪಾವನ ಯಶಗಳ ಸಂಬಂಧದಲ್ಲೇ ಪರಸ್ಪರ ಮಾತಾಡಬೇಕು. ಇಂತಹ ಸಾಧಕರನ್ನು ಸೇರಿಸಿ, ಅವರಲ್ಲಿ ಪ್ರೇಮವಿಡುವುದು, ಅವರೊಂದಿಗೆ ಎಲ್ಲ ರೀತಿಯಿಂದ ಪ್ರಸನ್ನನಾಗಿರುವುದು, ಪ್ರಪಂಚದಿಂದ ನಿವೃತ್ತನಾಗಿ ಪರಸ್ಪರ ಆಧ್ಯಾತ್ಮಿಕ ಶಾಂತಿಯನ್ನು ಅನುಭವಿಸಬೇಕು. ॥ ೨೯-೩೦ ॥

ಸ್ಮರಂತಃ ಸ್ಮಾರಯಂತಶ್ಚ ಮಿಥೋಽಘೌಘಹರಂ ಹರಿಮ್ ।
ಭಕ್ತ್ಯಾ ಸಂಜಾತಯಾ ಭಕ್ತ್ಯಾ ಬಿಭ್ರತ್ಯುತ್ಪುಲಕಾಂ ತನುಮ್
॥ ೩೧ ॥

ಕ್ವಚಿದ್ರುದಂತ್ಯಚ್ಯುತಚಿಂತಯಾ ಕ್ವಚಿ-
ದ್ಹಸಂತಿ ನಂದಂತಿ ವದಂತ್ಯಲೌಕಿಕಾಃ ।
ನೃತ್ಯಂತಿ ಗಾಯಂತ್ಯನುಶೀಲಯಂತ್ಯಜಂ
ಭವಂತಿ ತೂಷ್ಣೀಂ ಪರಮೇತ್ಯ ನಿರ್ವೃತಾಃ ॥ ೩೨ ॥

ಇತಿ ಭಾಗವತಾನ್ ಧರ್ಮಾನ್ ಶಿಕ್ಷನ್ಭಕ್ತ್ಯಾ ತದುತ್ಥಯಾ ।
ನಾರಾಯಣಪರೋ ಮಾಯಾಮಂಜಸ್ತರತಿ ದುಸ್ತರಾಮ್
॥ ೩೩ ॥

ರಾಜೋವಾಚ

ನಾರಾಯಣಾಭಿಧಾನಸ್ಯ ಬ್ರಹ್ಮಣಃ ಪರಮಾತ್ಮನಃ ।
ನಿಷ್ಠಾಮರ್ಹಥ ನೋ ವಕ್ತುಂ ಯೂಯಂ ಹಿ ಬ್ರಹ್ಮವಿತ್ತಮಾಃ
॥ ೩೪ ॥

ಪಿಪ್ಪಲಾಯನ ಉವಾಚ

ಸ್ಥಿತ್ಯುದ್ಭವಪ್ರಲಯಹೇತುರಹೇತುರಸ್ಯ
ಯತ್ ಸ್ವಪ್ನಜಾಗರಸುಷುಪ್ತಿಷು ಸದ್ಬಹಿಶ್ಚ ।
ದೇಹೇಂದ್ರಿಯಾಸುಹೃದಯಾನಿ ಚರಂತಿ ಯೇನ
ಸಂಜೀವಿತಾನಿ ತದವೇಹಿ ಪರಂ ನರೇಂದ್ರ ॥ ೩೫ ॥

ನೈತನ್ಮನೋ ವಿಶತಿ ವಾಗುತ ಚಕ್ಷುರಾತ್ಮಾ
ಪ್ರಾಣೇಂದ್ರಿಯಾಣಿ ಚ ಯಥಾನಲಮರ್ಚಿಷಃ ಸ್ವಾಃ ।
ಶಬ್ದೋಽಪಿ ಬೋಧಕನಿಷೇಧತಯಾಽಽತ್ಮಮೂಲ-
ಮರ್ಥೋಕ್ತಮಾಹ ಯದೃತೇ ನ ನಿಷೇಧಸಿದ್ಧಿಃ ॥ ೩೬ ॥

ರಾಜನೇ ! ಶ್ರೀಹರಿಯು ಪಾಪರಾಶಿಗಳನ್ನು ಕ್ಷಣಮಾತ್ರದಲ್ಲಿ ಭಸ್ಮಮಾಡಿಬಿಡುತ್ತಾನೆ. ಆದ್ದರಿಂದ ಸತತವಾಗಿ ಅವನನ್ನೇ ಸ್ಮರಿಸಬೇಕು ಮತ್ತು ಇತರರಿಂದಲೂ ಸ್ಮರಣೆ ಮಾಡಿಸಬೇಕು. ಈ ಪ್ರಕಾರದ ಸಾಧನ ಭಕ್ತಿಯ ಅನುಷ್ಠಾನ ಮಾಡುತ್ತಾ-ಮಾಡುತ್ತಾ ಪ್ರೇಮ ಭಕ್ತಿಯ, ಸಾಧ್ಯಭಕ್ತಿಯ ಉದಯವಾಗುತ್ತದೆ. ಈ ಭಕ್ತಿಯಿಂದ ಅವನ ಶರೀರ ಪ್ರೇಮ ಪುಳಕಿತವಾಗುತ್ತಾ ಇರುತ್ತದೆ. ॥ ೩೧ ॥ ಭಗವಂತನ ಇಂತಹ ಭಕ್ತರು ಕೆಲವೊಮ್ಮೆ 'ಆಯ್ಯೋ ! ಇನ್ನೂ ಭಗವಾನ್ ಅಚ್ಯುತನ ದರ್ಶನವಾಗಲಿಲ್ಲವಲ್ಲ!' ಎಂದು ಅಳುತ್ತಾರೆ ; ಕೆಲವೊಮ್ಮೆ ನಗುತ್ತಾರೆ; ಕೆಲವೊಮ್ಮೆ ಆನಂದಿತರಾಗಿ, ಲೋಕೋತ್ತರ ಮಾತುಗಳನ್ನು ಆಡುತ್ತಿರುತ್ತಾರೆ; ಕೆಲವೊಮ್ಮೆ ಕುಣಿಯುತ್ತಾರೆ, ಹಾಡುತ್ತಾರೆ; ಕೆಲವೊಮ್ಮೆ ಪರಮಾತ್ಮನ ಲೀಲೆಗಳ ಅನುಕರಣ ಮಾಡುತ್ತಾರೆ; ಕೆಲವೊಮ್ಮೆ ಸುಮ್ಮನೆ ಇದ್ದುಬಿಡುತ್ತಾರೆ. ಹೀಗೆ ಮಾಡುತ್ತಾ-ಮಾಡುತ್ತಾ ಕೊನೆಗೆ ಅವರು ಪರಮಾತ್ಮನನ್ನು ಪಡೆದು ಪರಮಾನಂದವನ್ನು ಹೊಂದುತ್ತಾರೆ. (ಗೋಪಿಯರು ಭಗವಂತನ ಪ್ರೇಮದಲ್ಲಿ ಮುಳುಗಿರುತ್ತಿದ್ದರೋ ಹಾಗೆ.) ಈ ರೀತಿ ಭಾಗವತ ಧರ್ಮದ ಶಿಕ್ಷಣದಿಂದ ಸಂಪನ್ನರಾಗಿ ಅವರು ಅದರಿಂದ ಉಂಟಾದ ಭಕ್ತಿಯಿಂದ ನಾರಾಯಣ ಪರಾಯಣರಾಗುತ್ತಾರೆ. ಆ ಭಕ್ತಿಯ ಮಹಿಮೆಯಿಂದ ಈ ದುಸ್ತರ ಮಾಯೆಯನ್ನು ಸುಲಭವಾಗಿ ಪಾರಾಗಿ ಹೋಗುತ್ತಾರೆ. (ಇದು ಭಗವಂತನ ಭಕ್ತಿಯ ಮಹಿಮೆಯಾಗಿದೆ.) ॥ ೩೨-೩೩ ॥

ರಾಜಾ ನಿಮಿಯು ಕೇಳಿದನು – ಮಹರ್ಷಿಗಳೇ ! ನೀವೆಲ್ಲ ಪರಮಾತ್ಮನ ನಿಜವಾದ ಸ್ವರೂಪವನ್ನು ಅರಿತವರಲ್ಲಿ ಸರ್ವ ಶ್ರೇಷ್ಠರಾಗಿರುವಿರಿ. ಪರಬ್ರಹ್ಮ ಪರಮಾತ್ಮನನ್ನು ನಾರಾಯಣನ ಹೆಸರಿನಿಂದ ವರ್ಣಿಸಲಾಗಿದೆ. ಅವನ ಸ್ವರೂಪವನ್ನು ನನಗೆ ತಿಳಿಸುವವರಾಗಿರಿ. ॥ ೩೪ ॥

ಐದನೆಯವರಾದ ಶ್ರೀಪಿಪ್ಪಲಾಯನ ಯೋಗೀಶ್ವರರು ಹೇಳಿದರು – ರಾಜನೇ ! ಪರಮಪ್ರಭು ಈ ವಿಶ್ವದ ಉತ್ಪತ್ತಿ, ಸ್ಥಿತಿ, ಪ್ರಳಯದ ಕಾರಣನಾಗಿರುವನು, ಆದರೆ ಅವನಿಗೆ ಯಾವ ಕಾರಣವೂ ಇಲ್ಲ. ಅವನೇ ಜಾಗ್ರತ್, ಸ್ವಪ್ನ , ಸುಷುಪ್ತಿ ಮೂರೂ ಅವಸ್ಥೆಗಳಲ್ಲಿ ಸಾಕ್ಷಿರೂಪದಿಂದ ಇರುತ್ತಾನೆ ಹಾಗೂ ಒಳಗೂ ಹೊರಗೂ ತುಂಬಿರುವನು. ಅವನ ಕಾರಣದಿಂದಲೇ ಈ ದೇಹ, ಇಂದ್ರಿಯಗಳು, ಪ್ರಾಣ, ಹೃದಯ ಉಜ್ಜೀವಿತವಾಗುತ್ತದೆ. ಅವನ ಅಸ್ತಿತ್ವದಿಂದಲೇ ಇವು ತಮ್ಮ-ತಮ್ಮ ಕೆಲಸ ಮಾಡುತ್ತವೆ. ಅವನನ್ನೇ ನೀನು ಪರಮ ಸತ್ಯ ತತ್ತ್ವ ನಾರಾಯಣನೆಂದು ತಿಳಿ. ॥ ೩೫ ॥ ಅಗ್ನಿಯ ಜ್ವಾಲೆಗಳು ಅಗ್ನಿಯಿಂದಲೇ ಉತ್ಪನ್ನವಾಗುತ್ತವೆ, ಆದರೆ ತಮ್ಮ ಸ್ವರೂಪ ಅಗ್ನಿಯನ್ನು ಇವು ಪ್ರಕಾಶಿಸಲಾರವು. ಹಾಗೆಯೇ ವಾಣೀ, ನೇತ್ರ, ಪ್ರಾಣ, ಇಂದ್ರಿಯಗಳು, ಅಂತಃಕರಣ ಇವೆಲ್ಲದರ ಮೂಲ ಆಧಾರ ಮತ್ತು ಪ್ರಕಾಶಕ ಏಕಮಾತ್ರ ಪರಮಾತ್ಮನೇ ಆಗಿರುವನು, ಆದರೆ ಇವೆಲ್ಲವು ತಮ್ಮ ಮೂಲ ಸ್ವರೂಪವನ್ನು ವರ್ಣಿಸಲು ಅಸಮರ್ಥವಾಗಿವೆ. ವೇದಗಳೂ ಕೂಡ ತಮ್ಮ ಕಾರಣಸ್ವರೂಪೀ ಪರಮಾತ್ಮತತ್ತ್ವವನ್ನು ಆದರ ಬೋಧ ಮಾಡಿಸುವ ಸಾಧಕರಿಗೆ ತಾತ್ಪರ್ಯರೂಪದಿಂದ 'ನೇತಿ-ನೇತಿ' ಹೀಗೆ

ಸತ್ತ್ವಂ ರಜಸ್ತಮ ಇತಿ ತ್ರಿವೃದೇಕಮಾದೌ
ಸೂತ್ರಂ ಮಹಾನಹಮಿತಿ ಪ್ರವದಂತಿ ಜೀವಮ್ ।

ಜ್ಞಾನಕ್ರಿಯಾರ್ಥಫಲರೂಪತಯೋರುಶಕ್ತಿ
ಬ್ರಹ್ಮೈವ ಭಾತಿ ಸದಸಚ್ಚ ತಯೋಃ ಪರಂ ಯತ್ ॥ ೩೭ ॥

ನಾತ್ಮಾ ಜಜಾನ ನ ಮರಿಷ್ಯತಿ ನೈಧತೇಽಸೌ
ನ ಕ್ಷೀಯತೇ ಸವನವಿದ್ವ್ಯಭಿಚಾರಿಣಾಂ ಹಿ ।

ಸರ್ವತ್ರ ಶಶ್ವದನಪಾಯ್ಯುಪಲಬ್ಧಿಮಾತ್ರಂ
ಪ್ರಾಣೋ ಯಥೇಂದ್ರಿಯಬಲೇನ ವಿಕಲ್ಪಿತಂ ಸತ್ ॥ ೩೮ ॥

ಅಂಡೇಷು ಪೇಶಿಷು ತರುಷ್ವವಿನಿಶ್ಚಿತೇಷು
ಪ್ರಾಣೋ ಹಿ ಜೀವಮುಪಧಾವತಿ ತತ್ರ ತತ್ರ ।

ಸನ್ನೇ ಯದಿಂದ್ರಿಯಗಣೇಽಹಮಿ ಚ ಪ್ರಸುಪ್ತೇ
ಕೂಟಸ್ಥ ಆಶಯಮೃತೇ ತದನುಸ್ಮೃತಿರ್ನಃ ॥ ೩೯ ॥

ಯರ್ಹ್ಯಬ್ಜನಾಭಚರಣೈಷಣಯೋರುಭಕ್ತ್ಯಾ
ಚೇತೋಮಲಾನಿ ವಿಧಮೇದ್ಗುಣಕರ್ಮಜಾನಿ ।

ತಸ್ಮಿನ್ವಿಶುದ್ಧ ಉಪಲಭ್ಯತ ಆತ್ಮತತ್ತ್ವಂ
ಸಾಕ್ಷಾದ್ಯಥಾಮಲದೃಶೋಃ ಸವಿತೃಪ್ರಕಾಶಃ ॥ ೪೦ ॥

ನಿಷೇಧಾತ್ಮಕ ವಚನಗಳಿಂದಲೇ ನಿರೂಪಿಸುತ್ತವೆ. ಏಕೆಂದರೆ, ಪರಮಾತ್ಮತತ್ತ್ವದ ಸತ್ತೆಯಿಲ್ಲದೆ ನಿಷೇಧವೂ ಕೂಡ ಸಿದ್ಧವಾಗಲಾರದು. ಎಲ್ಲವನ್ನು ನಿಷೇಧ ಮಾಡುತ್ತಾ-ಮಾಡುತ್ತಾ ಕೊನೆಗೆ ಉಳಿಯುವ ತತ್ತ್ವವನ್ನೇ ಪರಮತತ್ತ್ವ 'ನಾರಾಯಣ'ನೆಂದು ತಿಳಿ. ॥ ೩೬ ॥ ಸೃಷ್ಟಿಯ ಆದಿಯಲ್ಲಿ ಏಕಮಾತ್ರ ಬ್ರಹ್ಮವೇ ಇತ್ತು. ಆವನಿಂದಲೇ ಸತ್ತ್ವ, ರಜ, ತಮ ಹೀಗೆ ತ್ರಿಗುಣಾತ್ಮಿಕಾ ಮೂಲಪ್ರಕೃತಿ ಉಂಟಾಯಿತು. ಪ್ರಕೃತಿಯಲ್ಲಿ ಕ್ಷೋಭೆ ಉಂಟಾದಾಗ ಮಹತ್ತತ್ತ್ವ ಉತ್ಪನ್ನವಾಯಿತು. ಅದರಿಂದಲೇ ಸೂತ್ರಾತ್ಮಾ ಹಿರಣ್ಯಗರ್ಭನ ಉತ್ಪತ್ತಿಯಾಯಿತು. ಮತ್ತೆ ಅಹಂಕಾರದಿಂದಲೇ ಮನ ಹಾಗೂ ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು, ಪ್ರಾಣ, ಇಂದ್ರಿಯಗಳು ಮತ್ತು ವಿಷಯಗಳು ಹುಟ್ಟಿಕೊಂಡವು. ಬಳಿಕ ಆ ಪರಮಾತ್ಮನೇ ಜೀವ ರೂಪದಿಂದ ಇವೆಲ್ಲ ತತ್ತ್ವಗಳಲ್ಲಿ ಪ್ರವೇಶಿಸಿದನು. ಈ ಪ್ರಕಾರ ಅವೆಲ್ಲ ರೂಪದಲ್ಲಿ ಏಕಮಾತ್ರ ಆ ಅನಂತಶಕ್ತಿಸ್ವರೂಪ ಪರಬ್ರಹ್ಮ ಪರಮಾತ್ಮನೇ ಪ್ರಕಾಶಿತನಾಗುತ್ತಿರುವನು. ಹೀಗೆ ಸತ್-ಅಸತ್ ಅರ್ಥಾತ್ ಕಾರ್ಯ-ಕಾರಣವೆರಡರಲ್ಲಿಯೂ ಏಕಮಾತ್ರ ಬ್ರಹ್ಮನೇ ಇರುವನು. ಇದರಿಂದ ಆಚೆ ಇರುವವನು ಆ ಬ್ರಹ್ಮನೇ ಆಗಿರುವನು. ॥ ೩೭ ॥ ಆ ಪರಬ್ರಹ್ಮಸ್ವರೂಪೀ ಆತ್ಮನು ಹುಟ್ಟುವುದಿಲ್ಲ, ಸಾಯುವುದಿಲ್ಲ, ವೃದ್ಧಿಯನ್ನು ಹೊಂದುವುದಿಲ್ಲ, ಇದೇ ಪ್ರಕಾರ ಅವನು ಕ್ಷೀಣನೂ ಆಗುವುದಿಲ್ಲ. ಅರ್ಥಾತ್ – ಆತ್ಮನು ಷಡ್ ಭಾವ ವಿಕಾರಗಳಿಂದ ರಹಿತನಾಗಿರುವನು. ಪರಿವರ್ತನ ಶೀಲ ಎಲ್ಲ ವಸ್ತುಗಳ ಭೂತ, ಭವಿಷ್ಯ, ವರ್ತಮಾನ ಎಲ್ಲ ಅವಸ್ಥೆಗಳನ್ನು ಆತ್ಮನು ತಿಳಿಯುವವನಾಗಿದ್ದು, ಸರ್ವವ್ಯಾಪಿಯೂ, ಅವಿನಾಶಿಯೂ, ಜ್ಞಾನಸ್ವರೂಪನೂ ಆಗಿರುವನು. ಪ್ರಾಣವಾದರೋ ಒಂದೇ ಯಾಗಿದ್ದು ಸ್ಥಾನಭೇದದಿಂದ ಅದರ ಅನೇಕ ಹೆಸರುಗಳಾಗುವಂತೆ, ಒಂದೇ ಜ್ಞಾನವು ಇಂದ್ರಿಯಗಳ ಭೇದದ ಕಾರಣದಿಂದ ಬೇರೆ ಬೇರೆ ಹೆಸರುಗಳಿಂದ ತಿಳಿಯಲಾಗುತ್ತದೆ. ಅರ್ಥಾತ್ ಇಂದ್ರಿಯಗಳ ಭೇದದಿಂದ ನೋಡುವುದು, ಕೇಳುವುದು ಮುಂತಾದ ಕ್ರಿಯೆಗಳ ಹೆಸರು ಬೇರೆ-ಬೇರೆಯಾಗುತ್ತವೆ. ಹಾಗೆಯೇ ಒಂದೇ ಆತ್ಮನ ಸತ್ತೆಯನ್ನು ವಿವಿಧ ರೀತಿಯಿಂದ ತಿಳಿಯಲ್ಪಡುತ್ತದೆ. ಅಂಡಜ, ಜರಾಯುಜ, ಉದ್ಭಿಜ್ಜ, ಸ್ವೇದಜ ಈ ನಾಲ್ಕು ಪ್ರಕಾರದ ಜೀವಿಗಳಿವೆ. ಎಲ್ಲ ಜೀವಿಗಳಲ್ಲಿ ಪ್ರಾಣವು ಅವುಗಳ ಜೊತೆ-ಜೊತೆಗೆ ಹೋಗುತ್ತದೆ. ಜೀವಿಯು ಪ್ರಗಾಢನಿದ್ದೆಯಲ್ಲಿ ಮಲಗಿದ್ದಾಗ ಇಂದ್ರಿಯಗಳ ಸಹಿತ ಅಹಂಕಾರವೂ ನಿಶ್ಚೇಷ್ಟಿತವಾಗುತ್ತದೆ. ಆದರೆ ಸಾಕ್ಷಿರೂಪದಿಂದ ಆತ್ಮನು ನಿರ್ವಿಕಾರನಾಗಿ ಸ್ಥಿರವಾಗಿರುತ್ತಾನೆ. ಆ ಆತ್ಮನ ಸತ್ತೆಯಿಂದಲೇ ಮಲಗಿ ಎದ್ದ ಬಳಿಕ 'ನಾನು ಗಾಢವಾದ ನಿದ್ದೆಯಲ್ಲಿ ಮಲಗಿದ್ದೆ' ಎಂಬ ಸ್ಮೃತಿ ಇರುತ್ತದೆ. ಈ ಸ್ಮೃತಿಯೇ ಸುಷುಪ್ತಾವಸ್ಥೆಯಲ್ಲಿ ಆತ್ಮನು ಇರುವುದನ್ನು ಸಿದ್ಧಪಡಿಸುತ್ತದೆ. ॥ ೩೮-೩೯ ॥ ಭಗವಾನ್ ಕಮಲನಾಭನ ಚರಣಗಳಲ್ಲಿ ತೀವ್ರವಾದ ಭಕ್ತಿಯನ್ನಿರಿಸಿದಾಗ, ಆ ಭಕ್ತಿಯೇ ಗುಣ-ಕರ್ಮಗಳಿಂದ ಉತ್ಪನ್ನವಾದ ಚಿತ್ತದ ಎಲ್ಲ ರೀತಿಯ ಮಲ, ವಿಕ್ಷೇಪ, ಆವರಣ ದೋಷಗಳನ್ನು ತೊಳೆದುಬಿಡುತ್ತದೆ. ಈ ವಿಧವಾಗಿ ಚಿತ್ತಶುದ್ಧಿಯಾದ ಬಳಿಕ ಆತ್ಮತತ್ತ್ವದ ಸಾಕ್ಷಾತ್ಕಾರವು ತಾನಾಗಿ ಆಗುತ್ತದೆ. ॥ ೪೦ ॥

ರಾಜೋವಾಚ

ಕರ್ಮಯೋಗಂ ವದತ ನಃ ಪುರುಷೋ ಯೇನ ಸಂಸ್ಕೃತಃ ।
ವಿಧೂಯೇಹಾಶು ಕರ್ಮಾಣಿ ನೈಷ್ಕರ್ಮ್ಯಂ ವಿಂದತೇ ಪರಮ್
॥ ೪೧ ॥

ರಾಜಾ ನಿಮಿಯು ಪ್ರಶ್ನಿಸಿದನು – ಯೋಗೀಶ್ವರರೇ! ಯಾವುದರ ಆಚರಣೆಯಿಂದ ಮನುಷ್ಯನು ಪರಮ ನೈಷ್ಕರ್ಮ್ಯ ಸಿದ್ಧಿಯನ್ನು ಪಡೆದುಕೊಳ್ಳುವನೋ, ತನ್ನ ಎಲ್ಲ ಪ್ರಕಾರದ ಕರ್ಮಗಳನ್ನು ಬೇಗನೇ ತೊಳೆದುಬಿಡುತ್ತಾನೋ, ಅರ್ಥಾತ್ ಯಾವ ಕರ್ಮಯೋಗದ ಆಚರಣೆಯಿಂದ ಮನುಷ್ಯನು ಕರ್ಮಬಂಧನದಿಂದ ಮುಕ್ತನಾಗಿ ಪರಮಶಾಂತಿಯನ್ನು ಪಡೆಯುವನೋ ಅಂತಹ ಕರ್ಮಯೋಗವನ್ನು ಈಗ ನನಗೆ ವರ್ಣಿಸಿ ಹೇಳಿರಿ. ॥ ೪೧ ॥

ಏವಂ ಪ್ರಶ್ನಮೃಷೀನ್ ಪೂರ್ವಮಪೃಚ್ಛಂ ಪಿತುರಂತಿಕೇ ।
ನಾಬ್ರುವನ್ ಬ್ರಹ್ಮಣಃ ಪುತ್ರಾಸ್ತತ್ರ ಕಾರಣಮುಚ್ಯತಾಮ್
॥ ೪೨ ॥

ಒಮ್ಮೆ ಇದೇ ಪ್ರಶ್ನೆಯನ್ನು ನಾನು ನನ್ನ ತಂದೆಯವರ ಮುಂದೆ ಬ್ರಹ್ಮಮಾನಸಪುತ್ರರಾದ ಸನಕಾದಿ ಋಷಿಗಳಲ್ಲಿ ಮಾಡಿದ್ದೆ. ಆದರೆ ಅವರು ಸರ್ವಜ್ಞರಾಗಿದ್ದರೂ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಇದರ ಕಾರಣವೇನಿತ್ತು ? ದಯಮಾಡಿ ನನಗೆ ತಿಳಿಸಿರಿ. ॥ ೪೨ ॥

ಆವಿರ್ಹೋತ್ರ ಉವಾಚ

ಕರ್ಮಾಕರ್ಮವಿಕರ್ಮೇತಿ ವೇದವಾದೋ ನ ಲೌಕಿಕಃ ।
ವೇದಸ್ಯ ಚೇಶ್ವರಾತ್ಮತ್ವಾತ್ ತತ್ರ ಮುಹ್ಯಂತಿ ಸೂರಯಃ
॥ ೪೩ ॥

ಈಗ ಆರನೆಯವರಾದ ಆವಿರ್ಹೋತ್ರ ಯೋಗೀಶ್ವರರು ಹೇಳುತ್ತಾರೆ – ಕರ್ಮ (ಶಾಸ್ತ್ರವಿಹಿತ ಕರ್ಮ) ಅಕರ್ಮ (ನಿಷಿದ್ಧ ಕರ್ಮ), ವಿಕರ್ಮ (ವಿಹಿತ ಕರ್ಮದ ಉಲ್ಲಂಘನೆ) ಈ ಮೂರರ ವಿಧಾನ ವೇದಗಳ ಮೂಲಕ ಮಾಡಲಾಗಿದೆ; ಜನರಿಂದಲ್ಲ. ವೇದಗಳು ಪರಮಾತ್ಮನ ಸ್ವರೂಪವಾಗಿವೆ. ಆದರೆ ವೇದವಾಣಿಯಲ್ಲಿ ವಿದ್ವಾಂಸರೂ ಮೋಹಿತರಾಗುತ್ತಾರೆ. ಏಕೆಂದರೆ, ವೇದದ ವಾಣಿ ಪರೋಕ್ಷವಾದಾತ್ಮಕವಾಗಿದೆ. (ಶಬ್ದಾರ್ಥ ಬೇರೆಯಾಗಿದ್ದು, ತಾತ್ಪರ್ಯ ಬೇರೆಯಾಗಿರುವುದನ್ನು ಪರೋಕ್ಷವಾದ ಎಂದು ಹೇಳುತ್ತಾರೆ.) ರೋಗ ನಿವೃತ್ತಿಗಾಗಿ ಔಷಧಿಯನ್ನು ಮಿಠಾಯಿಯೊಳಗಿಟ್ಟು ತಿನ್ನಿಸುವಂತೆ, ಆ ಕರ್ಮಗಳ ಮೂಲಕ ಕರ್ಮಬಂಧನದಿಂದ ಮುಕ್ತರಾಗಲಿ ಎಂದು ವೇದಗಳು ಅಜ್ಞಾನಿಗಳನ್ನು ಅನುಶಾಸಿತವಾಗಿಸಲು ಕರ್ಮಗಳ ವಿಧಾನ ಮಾಡುತ್ತವೆ.* ॥ ೪೩.-೪೪ ॥ ಸ್ವತಃ ಅಜ್ಞಾನಿಯಾಗಿದ್ದು, ಅಜಿತೇಂದ್ರಿಯನಾಗಿದ್ದು, ವೇದವಿಹಿತ ಕರ್ಮಗಳನ್ನು ಆಚರಿಸದವನು ವಿಹಿತ ಕರ್ಮಗಳ ಉಲ್ಲಂಘನೆಯಿಂದ ಪಾಪಕ್ಕೆ ಭಾಗಿಯಾಗುತ್ತಾನೆ. ತತ್‌ಫಲವಾಗಿ ಸತ್ತಬಳಿಕ ಮೃತ್ಯುವನ್ನೇ ಪಡೆಯುತ್ತಾರೆ. ಅರ್ಥಾತ್ ಜನ್ಮ-ಮರಣದ ಚಕ್ರದಲ್ಲಿ ಬಿದ್ದಿರುತ್ತಾನೆ, ಮುಕ್ತನಾಗುವುದಿಲ್ಲ. ॥ ೪೫ ॥ ವೇದವಿಹಿತ ಕರ್ಮಗಳನ್ನು ಮಾಡುತ್ತಾ ಭಗವಂತನಿಗೆ ಅರ್ಪಿಸುತ್ತಾ, ಅನಾಸಕ್ತಭಾವದಿಂದ ಕರ್ಮಮಾಡುವ ವ್ಯಕ್ತಿಯು ನೈಷ್ಕರ್ಮ್ಯರೂಪೀ ಪರಮ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ವೇದಗಳಲ್ಲಿ ಸ್ವರ್ಗಾದಿರೂಪೀ ಫಲದ ವರ್ಣನೆಯೂ ಇದೆ. ಅದರ ತಾತ್ಪರ್ಯ – ಫಲದ ಸತ್ಯತೆಯಲ್ಲಿರದೆ ವೈದಿಕ ಕರ್ಮಗಳಲ್ಲಿ ಅಭಿರುಚಿ ಉಂಟಾಗಿಸಲೆಂದೇ ಆಗಿದೆ. ॥ ೪೬ ॥

ಪರೋಕ್ಷವಾದೋ ವೇದೋಽಯಂ ಬಾಲಾನಾಮನುಶಾಸನಮ್ ।
ಕರ್ಮಮೋಕ್ಷಾಯ ಕರ್ಮಾಣಿ ವಿಧತ್ತೇ ಹ್ಯಗದಂ ಯಥಾ
॥ ೪೪ ॥

ಯ ಆಶು ಹೃದಯಗ್ರಂಥಿಂ ನಿರ್ಜಿಹೀರ್ಷುಃ ಪರಾತ್ಮನಃ ।
ವಿಧಿನೋಪಚರೇದ್ದೇವಂ ತಂತ್ರೋಕ್ತೇನ ಚ ಕೇಶವಮ್
॥ ೪೬ ॥

ರಾಜನೇ! ಯಾರು ಪರಬ್ರಹ್ಮಸ್ವರೂಪೀ ಆತ್ಮನ ವಿಷಯದಲ್ಲಿರುವ ಅಜ್ಞಾನದ ಗ್ರಂಥಿಯನ್ನು ಪೂರ್ಣವಾಗಿ ಕತ್ತರಿಸಲು ಬಯಸುತ್ತಾನೋ, ಅವನು ವೈದಿಕ ಹಾಗೂ ಆಗಮ ಎರಡೂ ಪದ್ಧತಿಯಿಂದ ಭಗವಂತನ ಆರಾಧನೆ ಮಾಡಬೇಕು. ॥ ೪೬ ॥

ನಾಚರೇದ್ಯಸ್ತು ವೇದೋಕ್ತಂ ಸ್ವಯಮಜ್ಞೋಽಜಿತೇಂದ್ರಿಯಃ ।
ವಿಕರ್ಮಭಿರ್ಹ್ಯಧರ್ಮೇಣ ಮೃತ್ಯೋರ್ಮೃತ್ಯುಮುಪೈತಿ ಸಃ
॥ ೪೫ ॥

ವೇದೋಕ್ತಮೇವ ಕುರ್ವಾಣೋ ನಿಸ್ಸಂಗೋಽರ್ಪಿತಮೀಶ್ವರೇ ।
ನೈಷ್ಕರ್ಮ್ಯಾಂ ಲಭತೇ ಸಿದ್ಧಿಂ ರೋಚನಾರ್ಥಾ ಫಲಶ್ರುತಿಃ
॥ ೪೬ ॥

* ಸಕಾಮ ಕರ್ಮಗಳ ಅನುಷ್ಠಾನದಲ್ಲಿ ಆಸ್ಥೆ ಇರುವವರು ಫಲಾಕಾಂಕ್ಷೆಯಿಂದ ಯಜ್ಞಾದಿ ಅನುಷ್ಠಾನ ಮಾಡುತ್ತಾರೆ. ಇದರ ಫಲವಾಗಿ ಸ್ವರ್ಗಾದಿ ಲೋಕಗಳ ಪ್ರಾಪ್ತಿಯೂ ಆಗುತ್ತದೆ. ಅದರಿಂದ ಅವರಿಗೆ ವೇದವಾಣಿಯಲ್ಲಿ ಆಸ್ಥೆ ದೃಢವಾಗುತ್ತದೆ. ಹೀಗೆ ಮಾಡುತ್ತಾ-ಮಾಡುತ್ತಾ ಭಗವತ್‌ಕೃಪೆಯಿಂದ ಎಂದಾದರೂ ಅವರಿಗೆ ಪರಮಾತ್ಮ ತತ್ತ್ವದ ಜಿಜ್ಞಾಸೆಯೂ ಕೂಡ ಉಂಟಾದರೆ ಅವರು ಸಾರ್ಥಕರಾಗುತ್ತಾರೆ.

ಲಬ್ಧಾನುಗ್ರಹ ಆಚಾರ್ಯಾತ್ತೇನ ಸಂದರ್ಶಿತಾಗಮಃ ।
ಮಹಾಪುರುಷಮಭ್ಯರ್ಚೇನ್ಮೂರ್ತ್ಯಾಭಿಮತಯಾऽऽತ್ಮನಃ
॥ ೪೮ ॥

ಶುಚಿಃ ಸಮ್ಮುಖಮಾಸೀನಃ ಪ್ರಾಣಸಂಯಮನಾದಿಭಿಃ ।
ಪಿಂಡಂ ವಿಶೋಧ್ಯ ಸಂನ್ಯಾಸಕೃತರಕ್ಷೋऽರ್ಚಯೇದ್ಧರಿಮ್
॥ ೪೯ ॥

ಅರ್ಚಾದೌ ಹೃದಯೇ ಚಾಪಿ ಯಥಾಲಬ್ಧೋಪಚಾರಕೈಃ ।
ದ್ರವ್ಯಕ್ಷಿತ್ಯಾತ್ಮಲಿಂಗಾನಿ ನಿಷ್ಪಾದ್ಯ ಪ್ರೋಕ್ಷ್ಯ ಚಾಸನಮ್
॥ ೫೦ ॥

ಪಾದ್ಯಾದೀನುಪಕಲ್ಪ್ಯಾಥ ಸನ್ನಿಧಾಪ್ಯ ಸಮಾಹಿತಃ ।
ಹೃದಾದಿಭಿಃ ಕೃತನ್ಯಾಸೋ ಮೂಲಮಂತ್ರೇಣ ಚಾರ್ಚಯೇತ್
॥ ೫೧ ॥

ಸಾಂಗೋಪಾಂಗಾಂ ಸಪಾರ್ಷದಾಂ
ತಾಂ ತಾಂ ಮೂರ್ತಿಂ ಸ್ವಮಂತ್ರತಃ ।
ಪಾದ್ಯಾರ್ಘ್ಯಾಚಮನೀಯಾದ್ಯೈಃ
ಸ್ನಾನವಾಸೋವಿಭೂಷಣೈ
॥ ೫೨ ॥

ಗಂಧಮಾಲ್ಯಾಕ್ಷತ ಸ್ರಗ್ಧೂಪದೀಪೋಪಹಾರಕೈಃ ।
ಸಾಂಗಂ ಸಂಪೂಜ್ಯ ವಿಧಿವತ್ಸ್ತೋತ್ರೈಃ ಸ್ತುತ್ವಾನಮೇದ್ಧರಿಮ್
॥ ೫೩ ॥

ಆತ್ಮಾನಂ ತನ್ಮಯಂ ಧ್ಯಾಯನ್ಮೂರ್ತಿಂ ಸಂಪೂಜಯೇದ್ಧರೇಃ ।
ಶೇಷಾಮಾಧಾಯ ಶಿರಸಿ ಸ್ವಧಾಮ್ನ್ಯುದ್ವಾಸ್ಯ ಸತ್ಕೃತಮ್
॥ ೫೪ ॥

ಏವಮಗ್ನ್ಯರ್ಕತೋಯಾದಾವತಿಥೌ ಹೃದಯೇ ಚ ಯಃ ।
ಯಜತೀಶ್ವರಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ
॥ ೫೫ ॥

ಮೊದಲಿಗೆ ಸೇವಾದಿಗಳ ಮೂಲಕ ಗುರುಗಳಿಂದ ದೀಕ್ಷೆಯನ್ನು ಪಡೆದು, ಮತ್ತೆ ಅವರಿಂದ ಉಪಾಸನಾ ವಿಧಿಯನ್ನು ಕಲಿಯಬೇಕು. ನಮಗೆ ಪ್ರಿಯವಾದ, ಇಷ್ಟವಾದ ಭಗವಂತನ ಮೂರ್ತಿಯ ಮೂಲಕ ಭಗವಾನ್ ಪುರುಷೋತ್ತಮನನ್ನು ಪೂಜಿಸಬೇಕು. ॥೪೮॥ ಸ್ನಾನಾದಿಗಳಿಂದ ಶರೀರವನ್ನು ಮತ್ತು ಸಂತೋಷಾದಿಗಳಿಂದ ಅಂತಃಕರಣವನ್ನು ಶುದ್ಧಮಾಡಬೇಕು. ಇದಾದ ಬಳಿಕ ಭಗವಂತನ ಮೂರ್ತಿಯ ಮುಂದೆ ಕುಳಿತುಕೊಂಡು ಪ್ರಾಣಾಯಾಮಾದಿಗಳಿಂದ ಭೂತಶುದ್ಧಿ-ನಾಡೀಶೋಧನ ಮಾಡಬೇಕು. ಅನಂತರ ವಿಧಿಪೂರ್ವಕ ಮಂತ್ರ, ದೇವತೆ ಇವುಗಳ ನ್ಯಾಸದಿಂದ ಶರೀರ ರಕ್ಷೆಯನ್ನು ಮಾಡಿಕೊಂಡು ಭಗವಂತನನ್ನು ಪೂಜಿಸಬೇಕು. ॥೪೯॥ ಮೊದಲಿಗೆ ಭಗವಂತನನ್ನು ಹೃದಯದಲ್ಲಿ ಧ್ಯಾನಿಸಿ ಮತ್ತೆ ಅರ್ಚಾವಿಗ್ರಹದಲ್ಲಿ ಆವಾಹಿಸಬೇಕು. ಸಮಯಕ್ಕನುಸಾರ ಲಭ್ಯವಾದ ಎಲ್ಲ ಸಾಮಗ್ರಿಗಳನ್ನು ಶುದ್ಧ ಹಾಗೂ ಪವಿತ್ರಗೊಳಿಸಿ, ನೆಲವನ್ನು ತೊಳೆದು, ಸ್ವತಃ ಸ್ನಾನಾದಿಗಳಿಂದ ಶುದ್ಧನಾಗಿ ಪೂಜಿಸುವ ಭಗವಂತನ ಮೂರ್ತಿ, ಪ್ರತಿಮೆಯನ್ನೂ ಕೂಡ ಮೊದಲೇ ಸಿದ್ಧವಾಗಿಡಬೇಕು. ಎಲ್ಲ ವಸ್ತುಗಳನ್ನು ಮೊದಲೇ ಸಿದ್ಧಪಡಿಸಿ, ಆಸನವನ್ನೂ ಶುದ್ಧಮಾಡಬೇಕು. ಪಾದ್ಯ, ಅರ್ಘ್ಯ, ಧೂಪ, ದೀಪ, ನೈವೇದ್ಯ ಮುಂತಾದುವನ್ನೂ ಮುಂದುಗಡೆ ಸಿದ್ಧಪಡಿಸಬೇಕು. ಮತ್ತೆ ಹೃದಯಾದಿನ್ಯಾಸ ಅಂಗನ್ಯಾಸ, ಕರನ್ಯಾಸಮಾಡಿ ಮೂಲ ಮಂತ್ರದಿಂದ ಭಗವಂತನನ್ನು ಪೂಜಿಸಬೇಕು. ॥ ೫೦-೫೧ ॥ ತಮ್ಮ-ತಮ್ಮ ಉಪಾಸ್ಯದೇವರ ಶ್ರೀವಿಗ್ರಹದ ಹೃದಯಾದಿ ಅಂಗ, ಆಯುಧಾದಿ ಉಪಾಂಗಗಳನ್ನೂ ಮತ್ತು ಪಾರ್ಷದರ ಸಹಿತ ಅವನ ಮೂಲಮಂತ್ರದಿಂದ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಸ್ನಾನ, ವಸ್ತ್ರ ಆಭೂಷಣ, ಗಂಧ, ಪುಷ್ಪ, ದಧಿ, ಅಕ್ಷತೆಯಿಂದ * ತಿಲಕಗೈದು, ಧೂಪ, ದೀಪ, ನೈವೇದ್ಯ ಮುಂತಾದುವನ್ನೂ ವಿಧವತ್ತಾಗಿ ಪೂಜಿಸಿ, ಮತ್ತೆ ಸ್ತೋತ್ರಗಳಿಂದ ಸ್ತುತಿಮಾಡಿ ಪರಿವಾರಸಹಿತ ಭಗವಾನ್ ಶ್ರೀಹರಿಯನ್ನು ನಮಸ್ಕರಿಸ ಬೇಕು. ॥ ೫೨-೫೩ ॥ ತನ್ನನ್ನು ಭಗವನ್ಮಯನೆಂದು ಧ್ಯಾನಮಾಡುತ್ತಾ ಭಗವಂತನ ಮೂರ್ತಿಯನ್ನು ಪೂಜಿಸಬೇಕು. ಪುಷ್ಪ ಪ್ರಸಾದವನ್ನು ತನ್ನ ತಲೆಯಲ್ಲಿ ಧರಿಸಿ, ಆದರದಿಂದ ಭಗವದ್ವಿಗ್ರಹವನ್ನು ಅದರ ಸ್ಥಾನವಾದ ಸಿಂಹಾಸನದಲ್ಲಿ ಸ್ಥಾಪಿಸಿ ಪೂಜೆಯನ್ನು ಮುಗಿಸ ಬೇಕು. ॥ ೫೪ ॥ ಈ ಪ್ರಕಾರ ಅಗ್ನಿ, ಸೂರ್ಯ, ಜಲ, ಅತಿಥಿ ಮತ್ತು ತನ್ನ ಹೃದಯದಲ್ಲಿ ಆತ್ಮರೂಪದಿಂದ ಶ್ರೀಹರಿಯ ಪೂಜೆ ಮಾಡುವವನು ಬೇಗನೆ ಮುಕ್ತನಾಗಿ ಹೋಗುತ್ತಾನೆ. ॥ ೫೫ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ತೃತೀಯೋऽಧ್ಯಾಯಃ ॥ ೩ ॥

* ಭಗವಾನ್ ವಿಷ್ಣುವಿನ ಪೂಜೆಯಲ್ಲಿ ಅಕ್ಷತೆಗಳ ಪ್ರಯೋಗ ಕೇವಲ ತಿಲಕಾಲಂಕಾರದಲ್ಲಿ ಮಾತ್ರ ಮಾಡಬೇಕು. ಪೂಜೆಯಲ್ಲಿ ಮಾಡಬಾರದು. ''ನಾಕ್ಷತೈರರ್ಚಯೇದ್ ವಿಷ್ಣುಂ ನ ಕೇತಕ್ಯಾ ಮಹೇಶ್ವರಮ್''

ನಾಲ್ಕನೆಯ ಅಧ್ಯಾಯ

ಭಗವಂತನ ಅವತಾರಗಳ ವರ್ಣನೆ

ರಾಜೋವಾಚ

ಯಾನಿ ಯಾನೀಹ ಕರ್ಮಾಣಿ ಯೈರ್ಯೈಃ ಸ್ವೇಚ್ಛಂದಜನ್ಮಭಿಃ ।
ಚಕ್ರೇ ಕರೋತಿ ಕರ್ತಾ ವಾ ಹರಿಸ್ತಾನಿ ಬ್ರುವಂತು ನಃ ॥ ೧ ॥

ರಾಜಾ ನಿಮಿಯು ಕೇಳಿದನು – ಯೋಗೀಶ್ವರರೇ ! ಭಗವಂತನು ತನ್ನ ಭಕ್ತರ ಭಕ್ತಿಗೆ ವಶೀಭೂತನಾಗಿ ತನ್ನ ಇಚ್ಛಾನುಸಾರವಾಗಿ ಅನೇಕ ಅವತಾರಗಳನ್ನು ಎತ್ತಿ, ನಾನಾ ಪ್ರಕಾರದ ಲೀಲೆಗಳನ್ನು ಮಾಡುತ್ತಾನೆ. ಇಷ್ಟರವರೆಗೆ ಭಗವಂತನು ಎತ್ತಿದ, ಈಗ ಇರುವ, ಮುಂದೆ ಎತ್ತಲಿರುವ ಅವತಾರಗಳ ಲೀಲೆಗಳನ್ನು ದಯವಿಟ್ಟು ವರ್ಣಿಸಿರಿ. ॥ ೧ ॥

ದ್ರುಮಿಲ ಉವಾಚ

ಯೋ ವಾ ಅನಂತಸ್ಯ ಗುಣಾನನಂತಾ-
ನನುಕ್ರಮಿಷ್ಯನ್ ಸ ತು ಬಾಲಬುದ್ಧಿಃ ।
ರಜಾಂಸಿ ಭೂಮೇರ್ಗಣಯೇತ್ ಕಥಂಚಿತ್
ಕಾಲೇನ ನೈವಾಖಿಲಶಕ್ತಿಧಾಮ್ನಃ ॥ ೨ ॥

ಏಳನೆಯವರಾದ ದ್ರುಮಿಲ ಯೋಗೀಶ್ವರರು ಹೇಳಿದರು – ರಾಜನೇ ! ಭಗವಂತನು ಅನಂತನು. ಅವನ ಗುಣಗಳೂ ಅನಂತ. ಅಂತಹ ಭಗವಂತನ ಅನಂತ ಕಲ್ಯಾಣಗುಣಗಳನ್ನು ಯಥಾಕ್ರಮದಿಂದ ಪೂರ್ಣವಾಗಿ ಯಾರೂ ವರ್ಣಿಸಲಾರರು. ಭಗವಂತನ ಗುಣಗಳನ್ನು ಪೂರ್ಣವಾಗಿ ವರ್ಣಿಸಬಲ್ಲೆ ಎಂದು ಯಾರಾದರೂ ಯೋಚಿಸಿದರೆ ಅವನು ಅಲ್ಪ ಬುದ್ಧಿಯವನೇ ಆಗಿರುವನು. ಭೂಮಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸುವುದು ಅಸಂಭವವೇ. ಕದಾಚಿತ್ ಅದನ್ನಾದರೂ ಯಾರಾದರೂ ಎಣಿಸಬಹುದು. ಆದರೆ ಸಮಸ್ತ ಶಕ್ತಿಗಳ ಆಶ್ರಯಸ್ವರೂಪೀ ಭಗವಂತನ ಅನಂತ ಗುಣಗಳ ಅಂತವನ್ನು ಯಾರೂ ಮುಟ್ಟಲಾರರು. ॥ ೨ ॥ ಭಗವಂತನೇ ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಈ ಪಂಚ ಭೂತಗಳನ್ನು ತಾನೇ-ತನ್ನಿಂದ-ತನ್ನಲ್ಲೇ ಸೃಷ್ಟಿಸಿದನು. ಇವುಗಳ ಮೂಲಕ ವಿರಾಟ್ ಬ್ರಹ್ಮಾಂಡವನ್ನು ನಿರ್ಮಿಸಿ, ಲೀಲೆಯಿಂದ ತನ್ನ ಅಂಶ ಅಂತರ್ಯಾಮಿ ರೂಪದಿಂದ ಅದರಲ್ಲಿ ಪ್ರವೇಶಿಸಿದನು. ಆ ಆದಿದೇವ ನಾರಾಯಣನನ್ನೇ ಪುರುಷನೆಂದು ಹೇಳಲಾಗಿದೆ. ॥ ೩ ॥ ಈ ತ್ರಿಭುವನಗಳ ರಚನೆ ಭಗವಂತನದೇ ಶರೀರವಾಗಿದೆ. ಅವನ ಶಕ್ತಿಯಿಂದಲೇ ಸಮಸ್ತ ಪ್ರಾಣಿಗಳ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಉಂಟಾಗಿವೆ. ಅವನೇ ಎಲ್ಲ ಪ್ರಾಣಿಗಳಲ್ಲಿ ಅಂತರ್ಯಾಮಿ ರೂಪದಿಂದ ಸ್ಥಿತನಾಗಿರುವನು. ಅವನು ಇರುವುದರಿಂದಲೇ ಎಲ್ಲರಲ್ಲಿ ಜ್ಞಾನಶಕ್ತಿಯ ಸಂಚಾರವಾಗುತ್ತದೆ. ಅವನೇ ಪ್ರಾಣರೂಪದಿಂದ ಎಲ್ಲರಲ್ಲಿ ನೆಲೆಸಿರುವನು. ಅವನ ಶಕ್ತಿ ಯಿಂದಲೇ ಎಲ್ಲರಿಗೆ ಶಾರೀರಿಕ ಬಲ, ಮಾನಸಿಕ ಶಕ್ತಿ ಪ್ರಾಪ್ತ ವಾಗುತ್ತದೆ ಹಾಗೂ ಕ್ರಿಯೆಗಳನ್ನು ಮಾಡುವ ಶಕ್ತಿಯೂ ದೊರೆಯುತ್ತದೆ. ಆ ಆದಿಕರ್ತಾ ಭಗವಾನ್ ನಾರಾಯಣನೇ ಸತ್ತ್ವಾದಿ ಮೂರುಗುಣಗಳಿಂದ ಪ್ರಪಂಚದ ಉತ್ಪತ್ತಿ, ಸ್ಥಿತಿ, ಪ್ರಳಯ ಮಾಡುತ್ತಾ ಇರುತ್ತಾನೆ. ಇದೆಲ್ಲವೂ ಅವನ ಲೀಲಾವಿಲಾಸವೇ ಆಗಿದೆ. ॥ ೪ ॥ ಆ ಆದಿಪುರುಷ ನಾರಾಯಣನೇ ಮೊಟ್ಟಮೊದಲು ವಿಶ್ವದ ಸೃಷ್ಟಿಗಾಗಿ ರಜೋಗುಣದ ಮೂಲಕ ಚತುರ್ಮುಖ ಬ್ರಹ್ಮನಾದನು. ಯಜ್ಞಗಳ ಅಧಿಪತಿ ಆ ಭಗವಾನ್ ನಾರಾಯಣನೇ ಸತ್ತ್ವಗುಣವನ್ನು ಸ್ವೀಕರಿಸಿ ಕೊಂಡು ಬ್ರಾಹ್ಮಣರನ್ನು, ಧರ್ಮವನ್ನು ರಕ್ಷಿಸುವುದಕ್ಕಾಗಿ ಹಾಗೂ ವಿಶ್ವದ ಪಾಲನೆಗಾಗಿ ವಿಷ್ಣುರೂಪನಾದನು. ಅದೇ ಆದಿಪುರುಷ ನಾರಾಯಣನು ತಮೋಗುಣದಿಂದ ರುದ್ರರೂಪನಾಗಿ ಇದನ್ನು ಸಂಹಾರ ಮಾಡುತ್ತಾನೆ. ಈ ವಿಧವಾಗಿ ಈ ಪ್ರಪಂಚದ ಉತ್ಪತ್ತಿ, ಸ್ಥಿತಿ, ಸಂಹಾರ ಮೂರೂ ಅವನಿಂದಲೇ ಆಗುತ್ತಾ ಇರುತ್ತವೆ. ॥ ೫ ॥

ಭೂತೈರ್ಯದಾ ಪಂಚಭಿರಾತ್ಮಸೃಷ್ಟೈಃ
ಪುರಂ ವಿರಾಜಂ ವಿರಚಯ್ಯ ತಸ್ಮಿನ್ ।
ಸ್ವಾಂಶೇನ ವಿಷ್ಟಃ ಪುರುಷಾಭಿಧಾನ-
ಮವಾಪ ನಾರಾಯಣ ಆದಿದೇವಃ ॥ ೩ ॥

ಯತ್ಕಾಯ ಏಷ ಭುವನತ್ರಯಸನ್ನಿವೇಶೋ
ಯಸ್ಯೇಂದ್ರಿಯೈಸ್ತನುಭೃತಾಮುಭಯೇಂದ್ರಿಯಾಣಿ ।
ಜ್ಞಾನಂ ಸ್ವತಃ ಶ್ವಸನತೋ ಬಲಮೋಜ ಈಹಾ
ಸತ್ತ್ವಾದಿಭಿಃ ಸ್ಥಿತಿಲಯೋದ್ಭವ ಆದಿಕರ್ತಾ ॥ ೪ ॥

ಆದಾವಭೂಚ್ಛತಧೃತೀ ರಜಸಾಸ್ಯ ಸರ್ಗೇ
ವಿಷ್ಣುಃ ಸ್ಥಿತೌ ಕ್ರತುಪತಿರ್ದ್ವಿಜಧರ್ಮಸೇತುಃ ।
ರುದ್ರೋಽಪ್ಯಯಾಯ ತಮಸಾ ಪುರುಷಃ ಸ ಆದ್ಯ
ಇತ್ಯುದ್ಭವಸ್ಥಿತಿಲಯಾಃ ಸತತಂ ಪ್ರಜಾಸು ॥ ೫ ॥

ಧರ್ಮಸ್ಯ ದಕ್ಷದುಹಿತರ್ಯಜನಿಷ್ಟ ಮೂರ್ತ್ಯಾಂ
ನಾರಾಯಣೋ ನರ ಋಷಿಪ್ರವರಃ ಪ್ರಶಾಂತಃ ।

ನೈಷ್ಕರ್ಮ್ಯಲಕ್ಷಣಮುವಾಚ ಚಚಾರ ಕರ್ಮ
ಯೋಽದ್ಯಾಪಿ ಚಾಸ್ತ ಋಷಿವರ್ಯನಿಷೇವಿತಾಂಘ್ರಿಃ ॥ ೬ ॥

ಇಂದ್ರೋ ವಿಶಂಕ್ಯ ಮಮ ಧಾಮ ಜಿಘೃಕ್ಷತೀತಿ
ಕಾಮಂ ನ್ಯಯುಂಕ್ತ ಸಗಣಂ ಸ ಬದರ್ಯುಪಾಖ್ಯಮ್ ।

ಗತ್ವಾಪ್ಸರೋಗಣವಸಂತಸುಮಂದವಾತೈಃ
ಸ್ತ್ರೀಪ್ರೇಕ್ಷಣೇಷುಭಿರವಿಧ್ಯದತನ್ಮಹಿಜ್ಞಃ ॥ ೭ ॥

ವಿಜ್ಞಾಯ ಶಕ್ರಕೃತಮಕ್ರಮಮಾದಿದೇವಃ
ಪ್ರಾಹ ಪ್ರಹಸ್ಯ ಗತವಿಸ್ಮಯ ಏಜಮಾನಾನ್ ।

ಮಾ ಭೈಷ್ಟಭೋ ಮದನ ಮಾರುತ ದೇವವಧ್ವೋ
ಗೃಹ್ಣೀತ ನೋ ಬಲಿಮಶೂನ್ಯಮಿಮಂ ಕುರುಧ್ವಮ್ ॥ ೮ ॥

ಇತ್ಥಂ ಬ್ರುವತ್ಯಭಯದೇ ನರದೇವ ದೇವಾಃ
ಸವ್ರೀಡನಮ್ರಶಿರಸಃ ಸಘೃಣಂ ತಮೂಚುಃ ।

ನೈತದ್ವಿಭೋ ತ್ವಯಿ ಪರೇಽವಿಕೃತೇ ವಿಚಿತ್ರಂ
ಸ್ವಾರಾಮಧೀರನಿಕರಾನತಪಾದಪದ್ಮೇ ॥ ೯ ॥

ತ್ವಾಂ ಸೇವತಾಂ ಸುರಕೃತಾ ಬಹವೋಽಂತರಾಯಾಃ
ಸ್ವೌಕೋ ವಿಲಂಘ್ಯ ಪರಮಂ ವ್ರಜತಾಂ ಪದಂ ತೇ ।

ನಾನ್ಯಸ್ಯ ಬರ್ಹಿಷಿ ಬಲೀನ್ ದದತಃ ಸ್ವಭಾಗಾನ್-
ಧತ್ತೇ ಪದಂ ತ್ವಮವಿತಾ ಯದಿ ವಿಘ್ನಮೂರ್ಧ್ನಿ ॥ ೧೦ ॥

ದಕ್ಷ ಪ್ರಜಾಪತಿಯ ಮಗಳೂ, ಧರ್ಮನ ಪತ್ನಿಯೂ ಆದ ಮೂರ್ತಿ ಎಂಬಾಕೆಯಲ್ಲಿ ಋಷಿಶ್ರೇಷ್ಠ ನರ-ನಾರಾಯಣನಾಗಿ ಅವನೇ ಅವತರಿಸಿದನು. ಆ ಅವತಾರದಲ್ಲಿ ಅವನು ಕರ್ಮ ಬಂಧನದಿಂದ ಬಿಡಿಸಿ, ನೈಷ್ಕರ್ಮ್ಯಸ್ಥಿತಿಯನ್ನು ಪ್ರಾಪ್ತಮಾಡಿ ಕೊಳ್ಳುವ, ಆತ್ಮತತ್ತ್ವದ ಸಾಕ್ಷಾತ್ಕಾರ ಮಾಡಿಸುವ ಭಗವದ್ ಆರಾಧನಾರೂಪೀ ಕರ್ಮದ ಉಪದೇಶವನ್ನು ನೀಡಿದನು. ಅವನು ಸ್ವತಃ ಆ ವಿಧಿಯಿಂದ ಕರ್ಮಗಳನ್ನು ಆಚರಿಸಿ, ಇಂದೂ ಕೂಡ ಲೋಕಕಲ್ಯಾಣದ ಭಾವನೆಯಿಂದ ಬದರಿಕಾಶ್ರಮದಲ್ಲಿ ನರ ನಾರಾಯಣ ರೂಪದಿಂದ ವಿರಾಜಮಾನನಾಗಿದ್ದಾನೆ. ದೊಡ್ಡ ದೊಡ್ಡ ಋಷಿ ಮುನಿಗಳು ಅವನ ಚರಣಕಮಲಗಳನ್ನು ಸೇವಿಸುತ್ತಾ ಇದ್ದಾರೆ. ॥ ೬ ॥ ಒಮ್ಮೆ ನರ-ನಾರಾಯಣರ ಘೋರ ತಪಸ್ಸನ್ನು ನೋಡಿ ಇವರು ನನ್ನ ಸ್ವರ್ಗವನ್ನು ಕಸಿದುಕೊಳ್ಳಲು ಬಯಸುತ್ತಿರುವರೋ ಎಂದು ಇಂದ್ರನ ಮನಸ್ಸಿನಲ್ಲಿ ಸಂದೇಹ ಉಂಟಾಯಿತು. ಅವನು ಅವರ ತಪಸ್ಸಿನಲ್ಲಿ ವಿಘ್ನವನ್ನೊಡ್ಡಲು ಮನ್ಮಥನನ್ನು ಅವನ ಸೇನೆಯೊಂದಿಗೆ ಬದರಿಕಾಶ್ರಮಕ್ಕೆ ಕಳಿಸಿದನು. ಮನ್ಮಥನಿಗೆ ಅವರ ಮಹಿಮೆಯ ಜ್ಞಾನವಿರಲಿಲ್ಲ. ಆದ್ದರಿಂದ ಅವನು ತನ್ನ ಸೇನೆಯೊಂದಿಗೆ ಅರ್ಥಾತ್ ಅಪ್ಸರೆಯರನ್ನೊಳಗೊಂಡು, ವಸಂತ, ಮಂದ-ಸುಗಂಧ ವಾಯುವಿನೊಂದಿಗೆ ಹೋಗಿ ಸ್ತ್ರೀಯರ ಕಟಾಕ್ಷ ಬಾಣಗಳಿಂದ ಅವರನ್ನು ಘಾಸಿ ಮಾಡತೊಡಗಿದನು. ॥ ೭ ॥ ಭಗವಾನ್ ನಾರಾಯಣನು ಇದೆಲ್ಲ ಕೃತ್ಯ ಇಂದ್ರನದೇ ಆಗಿದೆ ಎಂದು ತಿಳಿದುಕೊಂಡನು. ಅವರ ಮುಂದೆ ಕಾಮದೇವನ ಸೇನೆ ಅವರ ಪ್ರಭಾವವನ್ನು ನೋಡಿ ಭಯದಿಂದ ನಡುಗಿಹೋಯಿತು. ನರ-ನಾರಾಯಣರು ವಿಸ್ಮಿತರಾಗದೆ ಮಂದಹಾಸ ಸೂಸುತ್ತಾ, ಅಭಯವನ್ನಿತ್ತು ಇಂತೆಂದರು – ಎಲೈ ಮದನನೇ! ಮಾರುತ ಮತ್ತು ಅಪ್ಸರೆಯರೇ! ನೀವು ಹೆದರಬೇಡಿರಿ. ನಮ್ಮ ಆಶ್ರಮಕ್ಕೆ ನೀವು ಬಂದಿರುವಿರಿ. ನಮ್ಮ ಆತಿಥ್ಯವನ್ನು ಸ್ವೀಕರಿಸಿರಿ. ಈ ಆಶ್ರಮವನ್ನು ಅತಿಥಿರಹಿತನನ್ನಾಗಿಸಬೇಡಿ. ॥ ೮ ॥ ರಾಜನೇ! ನರ-ನಾರಾಯಣ ಋಷಿಗಳು ಅವರಿಗೆ ಅಭಯದಾನವನ್ನಿತ್ತು ನುಡಿದಾಗ ಕಾಮದೇವ ಮುಂತಾದವರ ತಲೆ ನಾಚಿಕೆಯಿಂದ ತಗ್ಗಿತು. ಮದನನು ದಯಾಳು ಭಗವಾನ್ ನಾರಾಯಣನಲ್ಲಿ ಹೇಳಿದನು – ಪ್ರಭೋ! ನೀನು ಪರಬ್ರಹ್ಮ ಸ್ವರೂಪನಾಗಿರುವೆ, ನಿರ್ವಿಕಾರನಾಗಿರುವೆ. ಆದರಿಂದ ಇದೇನು ಆಶ್ಚರ್ಯದ ಮಾತಲ್ಲ. ದೊಡ್ಡ-ದೊಡ್ಡ ಆತ್ಮಾರಾಮರಾದ ಧೀರಪುರುಷರು ನಿರಂತರ ನಿನ್ನ ಚರಣಕಮಲಗಳಲ್ಲಿ ವಂದಿಸುತ್ತಿರುತ್ತಾರೆ. ॥ ೯ ॥ ಯಾವ ಜನರು ದೇವತೆಗಳ ಆರಾಧನೆಯ ನಿಮಿತ್ತ ಯಜ್ಞಾದಿಗಳಲ್ಲಿ ದೇವತೆಗಳ ಹೆಸರಿನಲ್ಲಿ ಅವರಿಗೆ ಹವಿರ್ಭಾಗ ಅರ್ಪಿಸುತ್ತಾರೋ, ಆವರ ಸಾಧನೆಯಲ್ಲಾದರೋ ದೇವತೆಗಳು ವಿಘ್ನವನ್ನೊಡ್ಡುವುದಿಲ್ಲ. ಆದರೆ ಪ್ರಭೋ! ನಿನ್ನ ಭಕ್ತರು ನಿನ್ನನ್ನು ಆರಾಧಿಸುವಾಗ ಅವರ ಭಕ್ತಿಯಲ್ಲಿ ದೇವತೆಗಳು ಅನೇಕ ವಿಘ್ನಗಳನ್ನು ಉಂಟುಮಾಡುತ್ತಾರೆ. ಆವರು ಯೋಚಿಸುತ್ತಾರೆ – 'ಈ ಭಕ್ತನು ನಮ್ಮಗಳ ಸ್ವರ್ಗವನ್ನು ದಾಟಿ ಪರಮಪದಕ್ಕೆ ಹೋಗುತ್ತಿರುವನು.' ಆದರೆ ನಿನ್ನ ಭಕ್ತರನ್ನು ನೀನೇ ರಕ್ಷಿಸುತ್ತಿರುವೆ. ಆವರ ವಿಘ್ನಗಳ ಮೇಲೆ ನೀನೇ ಕಾಲನ್ನು ಇಟ್ಟಿರುವೆ. ಆದ್ದರಿಂದ ನಿನ್ನಿಂದ ರಕ್ಷಿತರಾದ ಭಕ್ತರು ನಿನ್ನ ಧಾಮಕ್ಕೆ ಹೊರಟುಹೋಗುತ್ತಾರೆ. ॥ ೧೦ ॥

ಕುತ್ಪೃಟ್ತ್ರಿಕಾಲಗುಣಮಾರುತಜೈಹ್ವ್ಯಶೈಶ್ನ್ಯ-
ನಸ್ಮಾನಪಾರಜಲಧೀನತಿತೀರ್ಯ ಕೇಚಿತ್ ।
ಕ್ರೋಧಸ್ಯ ಯಾಂತಿ ವಿಫಲಸ್ಯ ವಶಂ ಪದೇ ಗೋ-
ರ್ಮಜ್ಜಂತಿ ದುಶ್ಚರತಪಶ್ಚ ವೃಥೋತ್ಸೃಜಂತಿ ॥ ೧೧ ॥

ಕೆಲವರು ಸಹಿಸಲು ತುಂಬಾ ಕಷ್ಟವಾದ – ಹಸಿವು, ಬಾಯಾರಿಕೆ, ಚಳಿ, ಸೆಕೆ, ಮಳೆ, ಚಂಡಮಾರುತದಂತಹ ಕಷ್ಟಗಳನ್ನು ಹಾಗೂ ರಸನೇಂದ್ರಿಯ, ಜನನೇಂದ್ರಿಯಗಳ ವೇಗವನ್ನು ಸಹಿಸಿಕೊಳ್ಳುತ್ತಾರೆ. ಈ ಪ್ರಕಾರ ಅವರು ಅಪಾರ ಸಮುದ್ರದಂತಹ ವೇಗಗಳನ್ನಾದರೋ ದಾಟಿಹೋಗುತ್ತಾರೆ. ಆದರೆ ಕ್ರೋಧಕ್ಕೆ ವಶೀಭೂತರಾಗಿ ಸಾಮಾನ್ಯ ಗೋಷ್ಪಾದದಷ್ಟು ನೀರಿನಲ್ಲಿ ಮುಳುಗಿ ಹೋಗುತ್ತಾರೆ. ಈ ವಿಧವಾಗಿ ತಮ್ಮ ಕಠಿಣ ತಪಸ್ಸನ್ನು ವ್ಯರ್ಥವಾಗಿ ಕಳೆದುಕೊಳ್ಳುತ್ತಾರೆ. ॥ ೧೧ ॥ ಮನ್ಮಥ, ವಸಂತನೇ ಮೊದಲಾದವರು ಭಗವಂತನನ್ನು ಸ್ತುತಿಸಿದಾಗ, ಸರ್ವಶಕ್ತಿವಂತ ಭಗವಂತನು ತನ್ನ ಯೋಗಮಾಯೆಯಿಂದ ಅವರ ಎದುರಿಗೇ ಸರ್ವಾಲಂಕಾರ ಭೂಷಿತರಾದ ಅದ್ಭುತ ರೂಪಲಾವಣ್ಯಯುಕ್ತ ಅನೇಕ ರಮಣಿಯರನ್ನು ಪ್ರಕಟಿಸಿ ತೋರಿಸಿದನು. ಅವರೆಲ್ಲರೂ ಭಗವಂತನನ್ನು ಸೇವಿಸುತ್ತಿದ್ದರು. ॥ ೧೨ ॥ ದೇವರಾಜ ಇಂದ್ರನ ಅನುಚರರು ಆ ಲಕ್ಷ್ಮೀದೇವಿಗೆ ಸಮಾನರಾದ ರೂಪವತಿ ಸ್ತ್ರೀಯರನ್ನು ನೋಡಿದಾಗ, ಅವರ ಅಪಾರ ಸೌಂದರ್ಯದ ಮುಂದೆ ಇವರೆಲ್ಲರ ಕಾಂತಿಯು ಮಸಕಾಯಿತು. ಅವರ ಶರೀರದಲ್ಲಿ ಹೊರಸೂಸುತ್ತಿದ್ದ ದಿವ್ಯಗಂಧದಿಂದ ಎಲ್ಲರೂ ಮೋಹಿತರಾದರು. ॥ ೧೩ ॥ ಅವರು ವಿನಮ್ರರಾಗಿ ತಲೆಬಾಗಿದರು. ಆಗ ದೇವಾಧಿದೇವ ಭಗವಂತನು ನಗುತ್ತಾ – 'ನಿಮಗೆ ಅನುರೂಪರಾದ ಇವರಲ್ಲಿ ಯಾರನ್ನಾದರೂ ಒಬ್ಬರನ್ನು ನೀವು ತೆಗೆದುಕೊಳ್ಳಿ, ಅವಳು ನಿಮ್ಮ ಸ್ವರ್ಗಲೋಕದ ಶೋಭೆಯನ್ನು ಹೆಚ್ಚಿಸುವಳು' ಎಂದು ಹೇಳಿದನು. ॥ ೧೪ ॥ ದೇವೇಂದ್ರನ ಅನುಚರರು 'ಹಾಗೇ ಆಗಲೀ' ಎಂದು ಹೇಳುತ್ತಾ ಭಗವಂತನ ಆದೇಶವನ್ನು ಸ್ವೀಕರಿಸಿ, ಅವನನ್ನು ನಮಸ್ಕರಿಸಿ, ಸ್ತ್ರೀಯರಲ್ಲಿ ಶ್ರೇಷ್ಠಳಾದ ಊರ್ವಶೀ ಅಪ್ಸರೆಯನ್ನು ಪಡೆದು ಸ್ವರ್ಗಕ್ಕೆ ತೆರಳಿದರು. ॥ ೧೫ ॥ ಸ್ವರ್ಗವನ್ನು ಸೇರಿ ದೇವತೆಗಳು ತುಂಬಿದ ಸಭೆಯಲ್ಲಿ ಕಾಮನು ಭಗವಾನ್ ನರ-ನಾರಾಯಣರ ಬಲ, ಮಹಿಮೆಯನ್ನು ವರ್ಣಿಸಿದನು. ಇಂದ್ರನು ತಾನು ಗೈದುದನ್ನು ನೆನೆದು ಭಯಭೀತನಾದನು ಹಾಗೂ ಭಗವಂತನ ಮಹಿಮೆಯನ್ನು ನೋಡಿ ವಿಸ್ಮಿತನಾದನು. ॥ ೧೬ ॥

ಇತಿ ಪ್ರಗೃಣತಾಂ ತೇಷಾಂ ಸ್ತ್ರಿಯೋಽತ್ಯದ್ಭುತದರ್ಶನಾಃ ।
ದರ್ಶಯಾಮಾಸ ಶುಶ್ರೂಷಾಂ ಸ್ವರ್ಚಿತಾಃ ಕುರ್ವತೀರ್ವಿಭುಃ
॥ ೧೨ ॥

ತೇ ದೇವಾನುಚರಾ ದೃಷ್ಟ್ವಾ ಸ್ತ್ರಿಯಃ ಶ್ರೀರಿವ ರೂಪಿಣೀಃ ।
ಗಂಧೇನ ಮುಮುಹುಸ್ತಾಸಾಂ ರೂಪೌದಾರ್ಯಹತಶ್ರಿಯಃ
॥ ೧೩ ॥

ತಾನಾಹ ದೇವದೇವೇಶಃ ಪ್ರಣತಾನ್ಪ್ರಹಸನ್ನಿವ ।
ಆಸಾಮೇಕತಮಾಂ ವೃಙ್ಧ್ವಂ ಸವರ್ಣಾಂ ಸ್ವರ್ಗಭೂಷಣಾಮ್
॥ ೧೪ ॥

ಓಮಿತ್ಯಾದೇಶಮಾದಾಯ ನತ್ವಾ ತಂ ಸುರವಂದಿನಃ ।
ಊರ್ವಶೀಮಪ್ಸರಃಶ್ರೇಷ್ಠಾಂ ಪುರಸ್ಕೃತ್ಯ ದಿವಂ ಯಯುಃ
॥ ೧೫ ॥

ಇಂದ್ರಾಯಾನಮ್ಯ ಸದಸಿ ಶೃಣ್ವತಾಂ ತ್ರಿದಿವೌಕಸಾಮ್ ।
ಊಚುರ್ನಾರಾಯಣಬಲಂ ಶಕ್ರಸ್ತತ್ರಾಸ ವಿಸ್ಮಿತಃ
॥ ೧೬ ॥

ಹಂಸಸ್ವರೂಪ್ಯವದದಚ್ಯುತ ಆತ್ಮಯೋಗಂ
ದತ್ತಃ ಕುಮಾರ ಋಷಭೋ ಭಗವಾನ್ ಪಿತಾ ನಃ ।
ವಿಷ್ಣುಃ ಶಿವಾಯ ಜಗತಾಂ ಕಲಯಾವತೀರ್ಣ-
ಸ್ತೇನಾಹೃತಾ ಮಧುಭಿದಾ ಶ್ರುತಯೋ ಹಯಾಸ್ಯೇ ॥ ೧೭ ॥

ಭಗವಾನ್ ನಾರಾಯಣನೇ ಹಂಸರೂಪನಾಗಿ ಆತ್ಮಯೋಗವನ್ನು ಉಪದೇಶಿಸಿದನು. ಅವನೇ ದತ್ತಾತ್ರೇಯ, ಸನತ್ಕುಮಾರ ಮತ್ತು ನಮ್ಮ ತೀರ್ಥರೂಪರಾದ ಋಷಭದೇವರ ರೂಪದಿಂದ ಆತ್ಮಯೋಗವನ್ನು ಕುರಿತು ಉಪದೇಶಿಸಿದನು. ಅದೇ ಭಗವಂತನು ಜಗತ್ತಿನ ಕಲ್ಯಾಣಕ್ಕಾಗಿ ತನ್ನ ಅಂಶದಿಂದ ಅವತರಿಸುತ್ತಾನೆ. ಅವನೇ ಹಯಗ್ರೀವನಾಗಿ ಅವತರಿಸಿ, ಮಧು-ಕೈಟಭರೆಂಬ ಅಸುರರನ್ನು ಸಂಹರಿಸಿ, ಅವರಿಂದ ಕದಿಯಲ್ಪಟ್ಟ ವೇದಗಳನ್ನು ಉದ್ಧರಿಸಿದನು. ॥ ೧೭ ॥ ಜಲಪ್ರಳಯದ ಸಮಯ ಮತ್ಸ್ಯಾವತಾರ ತಳೆದು ಅವನೇ ಸತ್ಯವ್ರತ ಮನುವನ್ನು, ಪೃಥ್ವಿಯನ್ನು ಮತ್ತು ಔಷಧಿಗಳನ್ನು ರಕ್ಷಿಸಿದನು. ವರಾಹ ಅವತಾರವನ್ನೆತ್ತಿ ಹಿರಣ್ಯಾಕ್ಷನನ್ನು ವಧಿಸಿ, ರಸಾತಲದಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ಉದ್ಧರಿಸಿದನು. ಕೂರ್ಮಾವತಾರದಲ್ಲಿ ಸಮುದ್ರಮಂಥನದ ಸಮಯ ಮಂದರಾಚಲವನ್ನು ತನ್ನ ಬೆನ್ನಮೇಲೆ ಹೊತ್ತು ಸುರರನ್ನು ಕಾಪಾಡಿದನು. ಅವನೇ ಮಕರಿಯನ್ನು ತರಿದು ಪೀಡಿತನಾದ ಗಜೇಂದ್ರನನ್ನು ಬಿಡಿಸಿದನು. ॥ ೧೮ ॥

ಗುಪ್ತೋಽಪ್ಯಯೇ ಮನುರಿಲೌಷಧಯಶ್ಚ ಮಾತ್ಸ್ಯೇ
ಕ್ರೌಡೇ ಹತೋ ದಿತಿಜ ಉದ್ಧರತಾಂಭಸಃ ಕ್ಷ್ಮಾಮ್ ।
ಕೌರ್ಮೇ ಧೃತೋಽದ್ರಿರಮೃತೋನ್ಮಥನೇ ಸ್ವಪೃಷ್ಠೇ
ಗ್ರಾಹಾತ್ ಪ್ರಪನ್ನಮಿಭರಾಜಮಮುಂಚದಾರ್ತಮ್ ॥ ೧೯ ॥

ಸಂಸ್ತುನ್ವತೋಽಬ್ಧಿಪತಿತಾನ್ ಶ್ರಮಣಾನೃಷೀಂಶ್ಚ
ಶಕ್ರಂ ಚ ವೃತ್ರವಧತಸ್ತಮಸಿ ಪ್ರವಿಷ್ಟಮ್ ।

ದೇವಸ್ತ್ರಿಯೋಽಸುರಗೃಹೇ ಪಿಹಿತಾ ಅನಾಥಾ
ಜಘ್ನೇಽಸುರೇಂದ್ರಮಭಯಾಯ ಸತಾಂ ನೃಸಿಂಹೇ ॥ ೧೯ ॥

ದೇವಾಸುರೇ ಯುಧಿ ಚ ದೈತ್ಯಪತೀನ್ಸುರಾರ್ಥೇ
ಹತ್ವಾಂತರೇಷು ಭುವನಾನ್ಯದಧಾತ್ಕಲಾಭಿಃ ।

ಭೂತ್ವಾಥ ವಾಮನ ಇಮಾಮಹರದ್ಬಲೇಃ ಕ್ಷ್ಮಾಂ
ಯಾಚ್ಞಾಚ್ಛಲೇನ ಸಮದಾದದಿತೇಃ ಸುತೇಭ್ಯಃ ॥ ೨೦ ॥

ನಿಃಕ್ಷತ್ರಿಯಾಮಕೃತ ಗಾಂ ಚ ತ್ರಿಃ ಸಪ್ತಕೃತ್ವೋ
ರಾಮಸ್ತು ಹೈಹಯಕುಲಾಪ್ಯಯಭಾರ್ಗವಾಗ್ನಿಃ ।

ಸೋಽಬ್ಧಿಂ ಬಬಂಧ ದಶವಕ್ತ್ರಮಹನ್ಸಲಂಕಂ
ಸೀತಾಪತಿರ್ಜಯತಿ ಲೋಕಮಲಘ್ನಕೀರ್ತಿಃ ॥ ೨೧ ॥

ಭೂಮೇರ್ಭರಾವತರಣಾಯ ಯದುಷ್ವಜನ್ಮಾ
ಜಾತಃ ಕರಿಷ್ಯತಿ ಸುರೈರಪಿ ದುಷ್ಕರಾಣಿ ।

ವಾದೈರ್ವಿಮೋಹಯತಿ ಯಜ್ಞಕೃತೋಽತದರ್ಹಾನ್
ಶೂದ್ರಾನ್ಕಲೌ ಕ್ಷಿತಿಭುಜೋ ನ್ಯಹನಿಷ್ಯದಂತೇ ॥ ೨೨ ॥

ಏವಂವಿಧಾನಿ ಕರ್ಮಾಣಿ ಜನ್ಮಾನಿ ಚ ಜಗತ್ಪತೇಃ ।
ಭೂರೀಣಿ ಭೂರಿಯಶಸೋ ವರ್ಣಿತಾನಿ ಮಹಾಭುಜ
॥ ೨೩ ॥

ಹಿಂದಿನಕಾಲದ ಮಾತು – ವಾಲಖಿಲ್ಯ ಋಷಿಗಳು ತಪಸ್ಸು ಮಾಡುತ್ತಾ-ಮಾಡುತ್ತಾ ಅತ್ಯಂತ ದುರ್ಬಲರಾಗಿದ್ದರು. ಅವರು ಕಶ್ಯಪರಿಗಾಗಿ ಸಮಿಧೆಗಳನ್ನು ತರುತ್ತಿರುವಾಗ ಹಸುವಿನ ಕಾಲಿನಷ್ಟು ಹೊಂಡದಲ್ಲಿ ಬಿದ್ದುಬಿಟ್ಟರು. ಅವರಿಗೆ ಸಮುದ್ರದಲ್ಲೇ ಮುಳುಗಿದಂತಾಯಿತು. ಅವರು ಭಗವಂತನನ್ನು ಸ್ತುತಿಸಿದಾಗ, ಅವನು ಅವರನ್ನು ಉದ್ಧರಿಸಿದನು. ವೃತ್ರಾಸುರನನ್ನು ಕೊಂದ ಕಾರಣ ಇಂದ್ರನಿಗೆ ಬ್ರಹ್ಮಹತ್ಯೆ ತಗುಲಿತ್ತು. ಅವನು ಅದರ ಭಯದಿಂದ ಓಡಿಹೋಗಿ ಅಡಗಿದ್ದರೆ ಭಗವಂತನು ಆ ಬ್ರಹ್ಮಹತ್ಯೆಯಿಂದ ಇಂದ್ರನನ್ನು ರಕ್ಷಿಸಿದ್ದನು. ದೇವತೆಗಳ ಹೆಂಡಿರನ್ನು ಹಿರಣ್ಯಕಶಿಪು ಸೆರೆಯಲ್ಲಿಟ್ಟಿದ್ದನು. ಆಗ ಭಗವಂತನು ನರಸಿಂಹರೂಪದಿಂದ ಅವನನ್ನು ಕೊಂದು ಅಸುರನಿಂದ ಬಿಡಿಸಿ, ಪ್ರಹ್ಲಾದಾದಿ ಸಂತರನ್ನು ನಿರ್ಭಯರನ್ನಾಗಿಸಿದನು. ॥ ೧೯ ॥ ಭಗವಂತನೇ ದೇವತೆಗಳನ್ನು ರಕ್ಷಿಸಲಿಕ್ಕಾಗಿ ದೇವಾಸುರ ಸಂಗ್ರಾಮದಲ್ಲಿ ದೈತ್ಯಪತಿಗಳನ್ನು ವಧಿಸಿದನು. ಬೇರೆ-ಬೇರೆ ಮನ್ವಂತರಗಳಲ್ಲಿ ತನ್ನ ಶಕ್ತಿಯಿಂದ ಅನೇಕ ಅಂಶಾವತಾರಗಳನ್ನು ಧರಿಸಿ, ತ್ರಿಭುವನವನ್ನು ರಕ್ಷಿಸಿದನು. ಮತ್ತೆ ವಾಮನ ಅವತಾರದ ಮೂಲಕ ಬೇಡುವ ನೆಪದಿಂದ ದೇವತೆಗಳ ಸಂಪತ್ತನ್ನು ಬಲಿಯಿಂದ ಪಡೆದು ಅವರಿಗೆ ಕೊಡಿಸಿದನು. ॥ ೨೦ ॥ ಪರಶುರಾಮಾವತಾರ ವನ್ನು ಎತ್ತಿ ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ನಿಃಕ್ಷತ್ರಿಯವಾಗಿಸಿದನು. ಇಂತಹ ಭಾರ್ಗವರಾಮನು ಹೈಹಯ ಕುಲವನ್ನು ನಾಶಗೊಳಿಸಲು ಅಗ್ನಿಸ್ವರೂಪನಾಗಿದ್ದನು. ಅವನೇ ರಾಮಾವತಾರದಲ್ಲಿ ಸಮುದ್ರಕ್ಕೆ ಸೇತುವೆಯನ್ನು ಬಿಗಿದು ದಶ ಮುಖ ರಾವಣನನ್ನು ಅವನ ಸೇನೆಸಹಿತ ಸಂಹರಿಸಿದನು. ಶೋಕ ಮತ್ತು ಭಯವನ್ನು ನಾಶಗೊಳಿಸುವಂತಹ ಪವಿತ್ರ ಕೀರ್ತಿಯುಳ್ಳ ಸೀತಾಪತಿ ಶ್ರೀರಾಮನಿಗೆ ಜಯವಾಗಲಿ. ॥ ೨೧ ॥ ಎಲೈ ರಾಜನೇ! ಅಜನ್ಮಾ ಆಗಿದ್ದರೂ ಭಗವಂತನು ಭೂಭಾರವನ್ನು ಹರಿಸಲೋಸುಗ ಯದುವಂಶದಲ್ಲಿ ಅವತರಿಸಿ, ದೊಡ್ಡ-ದೊಡ್ಡ ದೇವತೆಗಳಿಂದಲೂ ಮಾಡಲಾಗದ ಅಲೌಕಿಕ ಕಾರ್ಯಗಳನ್ನು ಮಾಡುವನು. ಮುಂದೆ ಬುದ್ಧನಾಗಿ ಅವತರಿಸುವನು. ಯಜ್ಞದ ಅನಧಿಕಾರಿಗಳು ಯಜ್ಞಮಾಡುವುದನ್ನು ನೋಡಿ, ಅವರನ್ನು ಅನೇಕ ಪ್ರಕಾರದ ವಾದಗಳಿಂದ ಮೋಹಿತಗೊಳಿಸುವನು. ಕಲಿಯುಗದ ಕೊನೆಯಲ್ಲಿ ಕಲ್ಕಿಯಾಗಿ ಅವತರಿಸಿ ಶೂದ್ರರಾಜರನ್ನು ವಧಿಸುವನು. ॥ ೨೨ ॥ ಮಹಾಬಾಹುವಾದ ವಿದೇಹರಾಜನೇ! ಭಗವಂತನ ಕೀರ್ತಿ ಅನಂತ. ಮಹಾತ್ಮರು ಜಗತ್ಪತಿ ಭಗವಂತನ ಇಂತಹ ಅನೇಕ ಜನ್ಮ ಮತ್ತು ಕರ್ಮಗಳನ್ನು ಬಹಳ ವಿಧವಾಗಿ ವರ್ಣಿಸಿರುವರು. (ಇದನ್ನು ನಾನು ತುಂಬಾ ಸಂಕ್ಷೇಪವಾಗಿ ಭಗವಂತನ ಕೆಲವು ಲೀಲೆಗಳನ್ನು ಮಾತ್ರ ವರ್ಣಿಸಿರುವೆನು. ಭಗವಂತನು ಅನಂತ, ಅವನ ಜನ್ಮ-ಕರ್ಮಗಳೂ ಅನಂತ.) ॥ ೨೩. ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ
ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಭಕ್ತಿಹೀನ ಪುರುಷರ ಗತಿ ಮತ್ತು ಭಗವಂತನ ಪೂಜಾವಿಧಾನದ ವರ್ಣನೆ

ರಾಜೋವಾಚ

ಭಗವಂತಂ ಹರಿಂ ಪ್ರಾಯೋ ನ ಭಜಂತ್ಯಾತ್ಮವಿತ್ತಮಾಃ ।
ತೇಷಾಮಶಾಂತಕಾಮಾನಾಂ ಕಾ ನಿಷ್ಠಾವಿಜಿತಾತ್ಮನಾಮ್
॥ ೧ ॥

ರಾಜಾ ನಿಮಿಯು ಕೇಳಿದನು – ಆತ್ಮ ತತ್ತ್ವವನ್ನು ಅರಿತಿರುವ ಯೋಗೀಶ್ವರರೇ ! ತಮ್ಮ ಇಂದ್ರಿಯಗಳನ್ನು ಜಯಿಸದವರು, ಜೊತೆ-ಜೊತೆಗೆ ಚಿತ್ತವೂ ಭೋಗಗಳ ಲಾಲಸೆಯಿಂದ ಅಶಾಂತವಾಗಿರುವ ಜನರು ಪ್ರಾಯಶಃ ಭಗವಂತನನ್ನು ಭಜಿಸುವುದಿಲ್ಲ, ಇಂತಹವರ ಗತಿ ಏನಾಗುತ್ತದೆ ? ॥ ೧ ॥

ಚಮಸ ಉವಾಚ

ಮುಖಬಾಹೂರುಪಾದೇಭ್ಯಃ ಪುರುಷಸ್ಯಾಶ್ರಮೈಃ ಸಹ ।
ಚತ್ವಾರೋ ಜಜ್ಞಿರೇ ವರ್ಣಾ ಗುಣೈರ್ವಿಪ್ರಾದಯಃ ಪೃಥಕ್
॥ ೨ ॥

ಎಂಟನೆಯವರಾದ ಶ್ರೀಚಮಸ ಯೋಗೀಶ್ವರರು ಹೇಳುತ್ತಾರೆ – ರಾಜನೇ ! ವಿರಾಟ್‌ಪುರುಷ ಪರಮಾತ್ಮನ ಮುಖ, ಬಾಹು, ಊರು, ಚರಣಗಳಿಂದ ನಾಲ್ಕೂ ವರ್ಣ ಮತ್ತು ಆಶ್ರಮಗಳ ಉತ್ಪತ್ತಿಯು ಅವರವರ ಗುಣ ಹಾಗೂ ಕರ್ಮಗಳನುಸಾರ ಆಗಿದೆ. ಭಗವಂತನ ಮುಖದಿಂದ ಸತ್ತ್ವಪ್ರಧಾನ ಬ್ರಾಹ್ಮಣರ, ಬಾಹುಗಳಿಂದ ಸತ್ತ್ವ-ರಜ ಮಿಶ್ರಿತ ಕ್ಷತ್ರಿಯರ, ತೊಡೆಯಿಂದ ರಜೋಗುಣ-ತಮೋಗುಣ ಮಿಶ್ರಿತ ವೈಶ್ಯರ, ಚರಣಗಳಿಂದ ತಮೋಗುಣ ಪ್ರಧಾನ ಶೂದ್ರರ ಉತ್ಪತ್ತಿಯಾಯಿತು. ಹೀಗೆಯೇ ಹೃದಯ, ಜಂಘೆ, ವಕ್ಷಃಸ್ಥಳ, ಶಿರ ಇವುಗಳಿಂದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಆಶ್ರಮಗಳು ಉಂಟಾದುವು. ಈ ಪ್ರಕಾರ ವರ್ಣಾಶ್ರಮದ ವಿಭಾಗದಿಂದ ಇಡೀ ವಿಶ್ವವು ಭಗವಂತನಿಂದಲೇ ಉಂಟಾಗಿದೆ. ॥ ೨ ॥ ಈ ನಾಲ್ಕೂ ವರ್ಣಗಳಲ್ಲಿನ ಜನರು ಪರಾತ್ಪರ ಪರಮಾತ್ಮನನ್ನು ಭಜಿಸದವರು, ಅವನನ್ನು ಆದರಿಸದವರು ತಮ್ಮ ಸ್ಥಾನದಿಂದ ಭ್ರಷ್ಟರಾಗಿ ಅಧೋಗತಿಯನ್ನು ಪಡೆಯುತ್ತಾರೆ. ॥ ೩ ॥

ಯ ಏಷಾಂ ಪುರುಷಂ ಸಾಕ್ಷಾದಾತ್ಮಪ್ರಭವಮೀಶ್ವರಮ್ ।
ನ ಭಜಂತ್ಯವಜಾನಂತಿ ಸ್ಥಾನಾದ್ಭ್ರಷ್ಟಾಃ ಪತಂತ್ಯಧಃ
॥ ೩ ॥

ದೂರೇಹರಿಕಥಾಃ ಕೇಚಿದ್ದೂರೇಚಾಚ್ಯುತಕೀರ್ತನಾಃ ।
ಸ್ತ್ರಿಯಃ ಶೂದ್ರಾದಯಶ್ಚೈವ ತೇऽನುಕಂಪ್ಯಾ ಭವಾದೃಶಾಮ್
॥ ೪ ॥

ಇಂತಹ ಭಗವಂತನ ಹರಿಕಥಾ ಸತ್ಸಂಗಾದಿಗಳಿಂದ ದೂರವಿರುವ ಜನರೆಲ್ಲರೂ, ಭಗವಂತನ ಸಂಕೀರ್ತನಾದಿಗಳಿಂದ ದೂರವಾದ ಸ್ತ್ರೀ-ಶೂದ್ರಾದಿಗಳು ನಿಮ್ಮಂತಹ ಭಗವತ್‌ಭಕ್ತರ ಕೃಪಾಪಾತ್ರರಾಗಿದ್ದಾರೆ. ॥ ೪ ॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರುಗಳು ದ್ವಿಜಾತಿಗಳಾಗಿದ್ದಾರೆ. ಆದ್ದರಿಂದ ವೇದಾಧ್ಯಯನಾದಿ ಸಂಸ್ಕಾರಗಳಿಂದ ಸುಸಂಪನ್ನರಾದ ಕಾರಣ ಭಗವತ್‌ಸನ್ನಿಧಾನ ಪಡೆಯಲು ವಿಶೇಷವಾಗಿ ಯೋಗ್ಯತೆ ಇರುವವರು. ಇಂತಹ ಸೌಲಭ್ಯ ಅವರಿಗೆ ದೊರಕಿದರೂ ಕೂಡ ಅವರಲ್ಲಿನ ಕೆಲವರು ಅಜ್ಞಾನಕ್ಕೆ ವಶೀಭೂತರಾಗಿ, ವೇದಗಳಲ್ಲಿ ವರ್ಣಿಸಿದ ಸಕಾಮಕರ್ಮಗಳ ಅನುಷ್ಠಾನ ಮತ್ತು ಅವುಗಳ ಫಲಗಳಲ್ಲಿ ಮೋಹಿತರಾಗಿರುತ್ತಾರೆ. ॥ ೫ ॥ ಅಂತಹ ಜನರು ಕರ್ಮಗಳ ರಹಸ್ಯವನ್ನಾದರೋ ತಿಳಿಯುವುದೇ ಇಲ್ಲ, ಬದಲಿಗೆ ಗರ್ವಿತರೂ ಹಾಗೂ ಮೂರ್ಖರಾಗಿರುತ್ತಾರೆ ಹಾಗೂ ತಮ್ಮನ್ನು ಪಂಡಿತರೆಂದೇ ತಿಳಿದಿರುತ್ತಾರೆ. ಇಂತಹ ಉದ್ದಟ, ಮೂರ್ಖಜನರು ಹೇಳುವ ಪುಷ್ಟಿತ ಮಧುರವಾಣಿಯನ್ನು ಕೇಳಿ, ಅಜ್ಞಾನಿಗಳು ಮತ್ತರಾಗಿ ಉಬ್ಬಿಹೋಗುತ್ತಾರೆ. ॥ ೬ ॥ ಇಂತಹ ಜನರು ರಜೋಗುಣದಿಂದ ತುಂಬಿರುತ್ತಾರೆ. ಅವರ ಸಂಕಲ್ಪಗಳೂ ಭಯಾನಕವಾಗಿರುತ್ತವೆ. ಅವರ ಕಾಮನೆಗಳು ಎಂದೂ ಕೊನೆಗೊಳ್ಳುವುದಿಲ್ಲ, ಇವರು ಬಹಳ ಕ್ರೋಧಿಗಳಾಗಿದ್ದು, ದಂಭಾಚಾರದಿಂದ ಕೂಡಿರುತ್ತಾರೆ. ಈ ಉನ್ಮತ್ತ, ಪಾಪಕರ್ಮಿಗಳಾದರೋ ಭಗವಂತನ ಭಕ್ತರ ಉಪಹಾಸವನ್ನೇ ಮಾಡುತ್ತಾರೆ. ॥ ೭ ॥

ವಿಪ್ರೋ ರಾಜನ್ಯವೈಶ್ಯೌ ಚ ಹರೇಃ ಪ್ರಾಪ್ತಾಃ ಪದಾಂತಿಕಮ್ ।
ಶ್ರೌತೇನ ಜನ್ಮನಾಥಾಪಿ ಮುಹ್ಯಂತ್ಯಾಮ್ನಾಯವಾದಿನಃ
॥ ೫ ॥

ಕರ್ಮಣ್ಯಕೋವಿದಾಃ ಸ್ತಬ್ಧಾ ಮೂರ್ಖಾಃ ಪಂಡಿತಮಾನಿನಃ ।
ವದಂತಿ ಚಾಟುಕಾನ್ಮೂಢಾ ಯಯಾ ಮಾಧ್ವ್ಯಾ ಗಿರೋತ್ಸುಕಾಃ
॥ ೬ ॥

ರಜಸಾ ಘೋರಸಂಕಲ್ಪಾಃ ಕಾಮುಕಾ ಅಹಿಮನ್ಯವಃ ।
ದಾಂಭಿಕಾ ಮಾನಿನಃ ಪಾಪಾ ವಿಹಸಂತ್ಯಚ್ಯುತಪ್ರಿಯಾನ್
॥ ೭ ॥

ವದಂತಿ ತೇಽನ್ಯೋನ್ಯಮುಪಾಸಿತಸ್ತ್ರಿಯೋ
ಗೃಹೇಷು ಮೈಥುನ್ಯಪರೇಷು ಚಾಶಿಷಃ ।
ಯಜಂತ್ಯಸೃಷ್ಟಾನ್ನವಿಧಾನದಕ್ಷಿಣಂ
ವೃತೈಃ ಪಶೂನತದ್ವಿದಃ ॥ ೮ ॥

ಶ್ರಿಯಾ ವಿಭೂತ್ಯಾಭಿಜನೇನ ವಿದ್ಯಯಾ
ತ್ಯಾಗೇನ ರೂಪೇಣ ಬಲೇನ ಕರ್ಮಣಾ ।
ಜಾತಸ್ಮಯೇನಾಂಧಧಿಯಃ ಸಹೇಶ್ವರಾನ್
ಸತೋಽವಮನ್ಯಂತಿ ಹರಿಪ್ರಿಯಾನ್ ಖಿಲಾಃ ॥ ೯ ॥

ಸರ್ವೇಷು ಶಶ್ವತ್ತನುಭೃತ್ಸ್ವವಸ್ಥಿತಂ
ಯಥಾ ಖಮಾತ್ಮಾನಮಭೀಷ್ಟಮೀಶ್ವರಮ್ ।
ವೇದೋಪಗೀತಂ ಚ ನ ಶೃಣ್ವತೇಽಬುಧಾ
ಮನೋರಥಾನಾಂ ಪ್ರವದಂತಿ ವಾರ್ತಯಾ ॥ ೧೦ ॥

ಲೋಕೇ ವ್ಯವಾಯಾಮಿಷಮದ್ಯಸೇವಾ
ನಿತ್ಯಾಸ್ತು ಜಂತೋರ್ನ ಹಿ ತತ್ರ ಚೋದನಾ ।
ವ್ಯವಸ್ಥಿತಿಸ್ತೇಷು ವಿವಾಹಯಜ್ಞ-
ಸುರಾಗ್ರಹೈರಾಸು ನಿವೃತ್ತಿರಿಷ್ಟಾ ॥ ೧೧ ॥

ಧನಂ ಚ ಧರ್ಮೈಕಫಲಂ ಯತೋ ವೈ
ಜ್ಞಾನಂ ಸವಿಜ್ಞಾನಮನುಪ್ರಶಾಂತಿ ।
ಗೃಹೇಷು ಯುಂಜಂತಿ ಕಲೇವರಸ್ಯ
ಮೃತ್ಯುಂ ನ ಪಶ್ಯಂತಿ ದುರಂತವೀರ್ಯಮ್ ॥ ೧೨ ॥

ಯದ್ ಘ್ರಾಣಭಕ್ಷೋ ವಿಹಿತಃ ಸುರಾಯಾ-
ಸ್ತಥಾ ಪಶೋರಾಲಭನಂ ನ ಹಿಂಸಾ ।
ಏವಂ ವ್ಯವಾಯಃ ಪ್ರಜಯಾ ನ ರತ್ಯಾ
ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಮ್ ॥ ೧೩ ॥

ಇಂತಹ ಸ್ತ್ರೀಪರಾಯಣರಾದ ಜನರು ಪರಸ್ಪರ ಮನೆವಾರ್ತೆ ಹಾಗೂ ವ್ಯರ್ಥ ಸಾಂಸಾರಿಕ ಚರ್ಚೆಯಲ್ಲಿ ತಮ್ಮ ಅಮೂಲ್ಯ ಸಮಯವನ್ನು ನಾಶಮಾಡಿಕೊಳ್ಳುತ್ತಾರೆ. ಸ್ತ್ರೀ ಸಹವಾಸದಲ್ಲೇ ಅವರಿಗೆ ಸುಖವೆಲ್ಲವೂ ಸೀಮಿತವಾಗಿರುತ್ತದೆ. ಈ ಅಜ್ಞಾನೀ ಜನರು ಅನ್ನದಾನವಿಲ್ಲದೆ, ದಕ್ಷಿಣೆಯಿಲ್ಲದೆ ಅವಿಧಿಪೂರ್ವಕ ಯಜ್ಞ ಮಾಡುತ್ತಿರುತ್ತಾರೆ. ತನ್ನ ಜೀವನ ನಿರ್ವಹಣೆಯ ವೃತ್ತಿಯಾಗಿ ಪಶುಗಳನ್ನು ಕೊಂದು ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸುತ್ತಾರೆ. ಇಂತಹ ಜನರಿಗೆ ಯಜ್ಞಾನುಷ್ಠಾನದ ಹೆಸರಿನಲ್ಲಿ ಪಶುಹಿಂಸೆಯ ಮೂಲಕ ಗಳಿಸುವ ಪಾಪದ ಮೂಟೆಯ ಅರಿವೂ ಇರುವುದಿಲ್ಲ ॥ ೮ ॥ ಇಂತಹ ದುಷ್ಟ ಜನರು ಧನ-ವೈಭವ, ಕುಲೀನತೆ, ವಿದ್ಯೆ, ದಾನ, ಸೌಂದರ್ಯ, ಬಲ, ಕರ್ಮ ಮುಂತಾದವುಗಳಿಂದ ಗರ್ವ, ಅಭಿಮಾನದಲ್ಲಿ ಮುಳುಗಿರುತ್ತಾರೆ. ಅದರಿಂದ ಮದಾಂಧರಾಗಿ ಭಗವಂತನ, ಭಗವಂತನ ಪ್ರಿಯ ಭಕ್ತರ, ಸಂತ-ಮಹಾತ್ಮರ ನಿಂದೆ ಮಾಡುತ್ತಾ ಇರುತ್ತಾರೆ. ॥ ೯ ॥ ಆಕಾಶವು ಸಮಾನವಾಗಿ ಸರ್ವತ್ರ ವ್ಯಾಪ್ತವಿರುವಂತೆಯೇ ಪರಮಾತ್ಮನು ಎಲ್ಲ ದೇಹಧಾರಿಗಳ ಒಳ-ಹೊರಗೆ ಎಲ್ಲೆಡೆ ಪರಿಪೂರ್ಣನಾಗಿದ್ದಾನೆ. ವೇದಗಳೂ ಕೂಡ ಇದನ್ನು ಅನೇಕ ಬಾರಿ ವರ್ಣಿಸಿವೆ. ಆದರೆ ಆ ಅಜ್ಞಾನಿಗಳು ಇವೆಲ್ಲ ಮಾತುಗಳನ್ನು ಕೇಳುವುದೇ ಇಲ್ಲ. ಇದಕ್ಕೆ ವಿಪರೀತವಾಗಿ ಅನೇಕ ವಿಧದ ಮನೋರಥಗಳ ವ್ಯರ್ಥಮಾತುಗಳನ್ನು ತಮ್ಮ-ತಮ್ಮಲ್ಲಿ ಆಡುತ್ತಾ ಕೇಳುತ್ತಾ ಇರುತ್ತಾರೆ. ॥ ೧೦ ॥ ಜೀವಿಗಳಲ್ಲಿ ಮೈಥುನ, ಮಾಂಸ, ಮದ್ಯ ಇವುಗಳ ಸೇವನೆಯ ಕಡೆಗೆ ಸ್ವಾಭಾವಿಕವಾಗಿಯೇ ಪ್ರವೃತ್ತಿ ಇರುತ್ತದೆ. ಇವು ಮೂರೂ ಪತನವಾಗಿಸುವಂತಹುದು. ವಿವಾಹದ ಬಳಿಕ ಋತುಕಾಲದಲ್ಲಿ ಸ್ತ್ರೀ ಸಹವಾಸ ಮತ್ತು ಸೌತ್ರಾಮಣಿ ಯಜ್ಞದಲ್ಲಿ ಸುರೆಯನ್ನು ಕೇವಲ ಮೂಸಿಬಿಡುವ ವಿಧಾನವನ್ನು ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಇವೆಲ್ಲದರಲ್ಲಿ ಈ ವಸ್ತುಗಳಿಂದ ದೂರ ಉಳಿಯಲೆಂದೇ ಶಾಸ್ತ್ರಗಳ ಅಭಿಪ್ರಾಯವಾಗಿದೆ. ಜನರ ಲೌಲ್ಯ ಪ್ರವೃತ್ತಿಯನ್ನು ಮರ್ಯಾದಿತವಾಗಿ ಇಡಲೆಂದೇ ಶಾಸ್ತ್ರಗಳು ಅವುಗಳ ಸೇವನೆಗೆ ಒಂದು ಸೀಮೆಯನ್ನು ವಿಧಿಸಿವೆ. ॥ ೧೧ ॥ ಧನವನ್ನು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸುವುದೇ ಎಲ್ಲಕ್ಕಿಂತ ಒಳ್ಳೆಯ ಉಪಾಯವಾಗಿದೆ. ಏಕೆಂದರೆ, ಧರ್ಮದಿಂದ ಜ್ಞಾನ ಪ್ರಾಪ್ತವಾಗುತ್ತದೆ. ಜ್ಞಾನದಿಂದ ಪರಮಾತ್ಮನ ಪ್ರಾಪ್ತಿ ಹಾಗೂ ಪರಮ ಶಾಂತಿ ಪ್ರಾಪ್ತವಾಗುತ್ತದೆ. ಆದರೆ ಧನವನ್ನು ಕೇವಲ ತನ್ನ ಮನೆಗಾಗಿ ಹಾಗೂ ಸಂಸಾರಕ್ಕಾಗಿ ಖರ್ಚುಮಾಡುವ ಜನರು ಈ ಶರೀರವನ್ನು ನಾಶಗೊಳಿಸುವಂತಹ ಕರಾಳ ಕಾಲವನ್ನು ನೋಡುವುದಿಲ್ಲ ॥ ೧೨ ॥ ಸೌತ್ರಾಮಣಿಯಜ್ಞದಲ್ಲಿ ಸುರೆಯನ್ನು ಆಘ್ರಾಣಿಸುವ ವಿಧಾನ ಮಾತ್ರ ಹೇಳಲಾಗಿದೆ. (ಅದನ್ನು ಕುಡಿಯಲು ಇಲ್ಲ) ಯಜ್ಞದಲ್ಲಿ ಪಶುವನ್ನು ಸ್ಪರ್ಶಿಸುವ ವಿಧಾನ ಮಾತ್ರವಿದೆ, (ಅದನ್ನು ಕೊಲ್ಲುವುದಕ್ಕಾಗಿ ಇಲ್ಲ) ಹಾಗೆಯೇ ಮೈಥುನವೂ ಸಂತತಿ ಪರಂಪರೆಯನ್ನು ಬೆಳೆಸಲಿಕ್ಕಾಗಿಯೇ ವಿಧಿಸಿದೆ ; ರತಿಸುಖಕ್ಕಾಗಿ ಅಲ್ಲ. ಇಂತಹ ವಿಶುದ್ಧ ಧರ್ಮವನ್ನು ಅಜ್ಞಾನಿಗಳು ತಿಳಿಯುವುದಿಲ್ಲ ॥ ೧೩ ॥

ಯೇ ತ್ವನೇವಂವಿದೋಽಸಂತಃ ಸ್ತಬ್ಧಾಃ ಸದಭಿಮಾನಿನಃ ।
ಪಶೂಂದ್ರುಹ್ಯಂತಿ ವಿಸ್ರಬ್ಧಾಃ ಪ್ರೇತ್ಯ ಖಾದಂತಿ ತೇ ಚ ತಾನ್
॥ ೧೪ ॥

ದ್ವಿಷಂತಃ ಪರಕಾಯೇಷು ಸ್ವಾತ್ಮಾನಂ ಹರಿಮೀಶ್ವರಮ್ ।
ಮೃತಕೇ ಸಾನುಬಂಧೇಽಸ್ಮಿನ್ ಬದ್ಧಸ್ನೇಹಾಃ ಪತಂತ್ಯಧಃ
॥ ೧೫ ॥

ಯೇ ಕೈವಲ್ಯಮಸಂಪ್ರಾಪ್ತಾ ಯೇ ಚಾತೀತಾಶ್ಚ ಮೂಢತಾಮ್ ।
ತ್ರೈವರ್ಗಿಕಾ ಹ್ಯಕ್ಷಣಿಕಾ ಆತ್ಮಾನಂ ಘಾತಯಂತಿ ತೇ
॥ ೧೬ ॥

ಏತ ಆತ್ಮಹನೋಽಶಾಂತಾ ಅಜ್ಞಾನೇ ಜ್ಞಾನಮಾನಿನಃ ।
ಸೀದಂತ್ಯಕೃತಕೃತ್ಯಾ ವೈ ಕಾಲಧ್ವಸ್ತಮನೋರಥಾಃ
॥ ೧೭ ॥

ಹಿತ್ವಾತ್ಮಾಯಾಸರಚಿತಾ ಗೃಹಾಪತ್ಯಸುಹೃಚ್ಛ್ರಿಯಃ ।
ತಮೋ ವಿಶಂತ್ಯನಿಚ್ಛಂತೋ ವಾಸುದೇವಪರಾಙ್ಮುಖಾಃ
॥ ೧೮ ॥

ರಾಜೋವಾಚ

ಕಸ್ಮಿನ್ಕಾಲೇ ಸ ಭಗವಾನ್ ಕಿಂ ವರ್ಣಃ ಕೀದೃಶೋ ನೃಭಿಃ ।
ನಾಮ್ನಾ ವಾ ಕೇನ ವಿಧಿನಾ ಪೂಜ್ಯತೇ ತದಿಹೋಚ್ಯತಾಮ್
॥ ೧೯ ॥

ಕರಭಾಜನ ಉವಾಚ

ಕೃತಂ ತ್ರೇತಾ ದ್ವಾಪರಂ ಚ ಕಲಿರಿತ್ಯೇಷು ಕೇಶವಃ ।
ನಾನಾವರ್ಣಾಭಿಧಾಕಾರೋ ನಾನೈವ ವಿಧಿನೇಜ್ಯತೇ
॥ ೨೦ ॥

ಕೃತೇ ಶುಕ್ಲಶ್ಚತುರ್ಬಾಹುರ್ಜಟಿಲೋ ವಲ್ಕಲಾಂಬರಃ ।
ಕೃಷ್ಣಾಜಿನೋಪವೀತಾಕ್ಷಾನ್ ಬಿಭ್ರದ್ ದಂಡಕಮಂಡಲೂ
॥ ೨೧ ॥

ಇಂತಹ ವಿಶುದ್ಧ ಧರ್ಮವನ್ನು ತಿಳಿಯದ ಗರ್ವಿಷ್ಠರಾದ ಜನರು ತಮ್ಮದೇ ಮಾತಿನಲ್ಲಿ ಹಟತೊಟ್ಟು ತಮ್ಮದೇ ಮಾತಿನಲ್ಲಿ ಶ್ರದ್ಧೆಯಿರಿಸಿಕೊಂಡು ಮೂಕಪಶುಗಳ ಹತ್ಯೆ ಮಾಡುತ್ತಿರುತ್ತಾರೆ. ಸತ್ತಬಳಿಕ ಆ ಪಶುಗಳೇ ಈ ಕೊಲ್ಲುವವರನ್ನು ತಿಂದುಬಿಡುತ್ತವೆ. ॥ ೧೪ ॥ ಇಂತಹ ಜನರು ಈ ಮರಣಧರ್ಮಿ ಶರೀರದಲ್ಲೇ ಹಾಗೂ ತಮ್ಮ ಪರಿವಾರದಲ್ಲೇ ತಮ್ಮ ಮಮತೆಯನ್ನು ಇಟ್ಟುಕೊಳ್ಳುತ್ತಾರೆ. ಅವರು ಬೇರೆ ಜನರೊಂದಿಗೆ ದ್ವೇಷಮಾಡುತ್ತಾರೆ. ಭಗವಾನ್ ಶ್ರೀಹರಿಯೇ ಎಲ್ಲರ ಆತ್ಮಾ ಆಗಿದ್ದಾನೆ, ಈ ಮಾತನ್ನು ಅವರು ಯೋಚಿಸುವುದೇ ಇಲ್ಲ. ॥ ೧೫ ॥ ಇಂತಹ ಮೂರ್ಖರಿಗೆ ಮೋಕ್ಷದ ಪ್ರಾಪ್ತಿಯಾದರೋ ದೂರವುಳಿಯಿತು, ಅವರು ಮೂರ್ಖತೆಯ ಸೀಮೆಯನ್ನು ದಾಟಿದ ಮಹಾ ಮೂರ್ಖರು, ಅರ್ಥಾತ್ ವಜ್ರಮೂಢರು. ಈ ಜನರು ವೇದವಾದರೂಪೀ ಕ್ಷಣಭಂಗುರವಾದ, ನಾಶವುಳ್ಳ ಧರ್ಮ, ಅರ್ಥ, ಕಾಮ ಈ ಮೂರನ್ನೇ ಪುರುಷಾರ್ಥಗಳೆಂದು ಭಾವಿಸುತ್ತಾರೆ. ಈ ವಿಧವಾಗಿ ಕಾಮ್ಯಕರ್ಮಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡ ಜನರು ತಮ್ಮ ಆತ್ಮನನ್ನೇ ಕೊಲ್ಲುವವರಾಗಿದ್ದಾರೆ. ॥ ೧೬ ॥ ಈ ಪ್ರಕಾರ ಆತ್ಮಘಾತಿ ಜನರಿಗೆ ಎಂದೂ ಶಾಂತಿ ದೊರೆಯುವುದಿಲ್ಲ, ಇವರು ಅಜ್ಞಾನವನ್ನೇ ಜ್ಞಾನವೆಂದು ತಿಳಿದಿರುವರು. ಮನುಷ್ಯ ಶರೀರವು ಪರಮಾತ್ಮನ ಪ್ರಾಪ್ತಿಗಾಗಿಯೇ ದೊರೆತಿದೆ. ಆದರೆ ಇವರು ಇಂತಹ ಅಮೂಲ್ಯ ಜೀವನವನ್ನು ಪಡೆದುಕೊಂಡಿದ್ದರೂ ಪರಮ ಲಾಭದಿಂದ ವಂಚಿತರೇ ಆಗಿರುತ್ತಾರೆ ಹಾಗೂ ಕಷ್ಟಗಳನ್ನು ಭೋಗಿಸುತ್ತಲೇ ಇರುತ್ತಾರೆ. ಅವರ ಮನೋರಥಗಳು ಎಂದೂ ಪೂರ್ಣಗೊಳ್ಳುವುದಿಲ್ಲ ॥ ೧೭ ॥ ಇಂತಹ ಜನರು ಭಗವಂತನ ಭಕ್ತಿಯಿಂದ ಪೂರ್ಣವಾಗಿ ವಿಮುಖರಾಗಿರುತ್ತಾರೆ. ಇವರು ಬಹಳ ಕಷ್ಟಪಟ್ಟು ಭಾರೀ ಪರಿಶ್ರಮದಿಂದ ಗಳಿಸಿದ ಮನೆ, ಪುತ್ರ, ಸ್ನೇಹಿತರು, ಧನ-ಸಂಪತ್ತು ಇವನ್ನು ಬಯಸದೆಯೇ ಬಿಟ್ಟುಹೋಗಬೇಕಾಗುತ್ತದೆ ಹಾಗೂ ನರಕಭಾಜನರಾಗಬೇಕಾಗುತ್ತದೆ. (ಈ ಪ್ರಕಾರ ಭಗವಂತನ ಭಜನೆ ಮಾಡದವರ ಗತಿಯ ಕುರಿತು ನೀನು ಕೇಳಿದ್ದನ್ನು ನಾನು ಹೇಳಿರುವೆ.) ॥ ೧೮ ॥

ರಾಜಾ ನಿಮಿಯು ಕೇಳಿದನು – ಯೋಗೀಶ್ವರರೇ ! ಭಗವಂತನು ಯಾವಾಗ ಯಾವ ಬಣ್ಣವನ್ನು ಹೆಸರನ್ನು, ಆಕಾರವನ್ನು ಸ್ವೀಕರಿಸುತ್ತಾನೆ ? ಮನುಷ್ಯರು ಯಾವ ಹೆಸರುಗಳಿಂದ ಹಾಗೂ ಯಾವ ವಿಧಿಯಿಂದ ಅವನನ್ನು ಉಪಾಸಿಸುತ್ತಾರೆ ? ದಯವಿಟ್ಟು ನೀವು ತಿಳಿಸುವವರಾಗಿರಿ. ॥ ೧೯ ॥

ಒಂಭತ್ತನೆಯವರಾದ ಕರಭಾಜನ ಯೋಗೀಶ್ವರರು ಹೇಳುತ್ತಾರೆ – ರಾಜನೇ ! ಕೃತ, ತ್ರೇತಾ, ದ್ವಾಪರ, ಕಲಿ ಈ ನಾಲ್ಕೂ ಯುಗಗಳಲ್ಲಿ ಭಗವಾನ್ ಕೇಶವನ ಅನೇಕ ಬಣ್ಣ, ಹೆಸರು, ಆಕಾರಗಳಿರುತ್ತವೆ ಹಾಗೂ ಅನೇಕ ವಿಧದಿಂದ ಅವನ ಪೂಜೆ ಮಾಡಲಾಗುತ್ತದೆ. ॥ ೨೦ ॥ ಕೃತಯುಗದಲ್ಲಿ ಭಗವಂತನ ಶ್ರೀವಿಗ್ರಹದ ಬಣ್ಣ ಶ್ವೇತವಾಗಿರುತ್ತದೆ. ಅವನಿಗೆ ನಾಲ್ಕು ಭುಜಗಳಿದ್ದು ತಲೆಯಮೇಲೆ ಜಟೆ ಇರುತ್ತದೆ. ಅವನು ವಲ್ಕಲವನ್ನು ಧರಿಸಿರುತ್ತಾನೆ. ಕೃಷ್ಣಮೃಗ ಚರ್ಮ, ಯಜ್ಞೋಪವೀತ, ರುದ್ರಾಕ್ಷಮಾಲೆ, ದಂಡ, ಕಮಂಡಲು ಧರಿಸಿರುತ್ತಾನೆ. ॥ ೨೧ ॥

ಮನುಷ್ಯಾಸ್ತು ತದಾ ಶಾಂತಾ ನಿರ್ವೈರಾಃ ಸುಹೃದಃ ಸಮಾಃ ।
ಯಜಂತಿ ತಪಸಾ ದೇವಂ ಶಮೇನ ಚ ದಮೇನ ಚ
॥ ೨೨ ॥

ಹಂಸಃಸುಪರ್ಣೋ ವೈಕುಂಠೋ
ಧರ್ಮೋ ಯೋಗೇಶ್ವರೋಽಮಲಃ ।
ಈಶ್ವರಃ ಪುರುಷೋಽವ್ಯಕ್ತಃ
ಪರಮಾತ್ಮೇತಿ ಗೀಯತೇ ॥ ೨೩ ॥

ತ್ರೇತಾಯಾಂ ರಕ್ತವರ್ಣೋಽಸೌ ಚತುರ್ಬಾಹುಸ್ತ್ರಿಮೇಖಲಃ ।
ಹಿರಣ್ಯಕೇಶಸ್ತ್ರಯ್ಯಾತ್ಮಾ ಸ್ರುಕ್ಸ್ರುವಾದ್ಯುಪಲಕ್ಷಣಃ
॥ ೨೪ ॥

ತಂ ತದಾ ಮನುಜಾ ದೇವಂ ಸರ್ವದೇವಮಯಂ ಹರಿಮ್ ।
ಯಜಂತಿ ವಿದ್ಯಯಾ ತ್ರಯ್ಯಾ ಧರ್ಮಿಷ್ಠಾ ಬ್ರಹ್ಮವಾದಿನಃ
॥ ೨೫ ॥

ವಿಷ್ಣುರ್ಯಜ್ಞಃ ಪೃಶ್ನಿಗರ್ಭಃ ಸರ್ವದೇವ ಉರುಕ್ರಮಃ ।
ವೃಷಾಕಪಿರ್ಜಯಂತಶ್ಚ ಉರುಗಾಯ ಇತೀಯ್ಯತೇ
॥ ೨೬ ॥

ದ್ವಾಪರೇ ಭಗವಾನ್ ಶ್ಯಾಮಃ ಪೀತವಾಸಾ ನಿಜಾಯುಧಃ ।
ಶ್ರೀವತ್ಸಾದಿಭಿರಂಕೈಶ್ಚ ಲಕ್ಷಣೈರುಪಲಕ್ಷಿತಃ
॥ ೨೭ ॥

ತಂ ತದಾ ಪುರುಷಂ ಮರ್ತ್ಯಾ ಮಹಾರಾಜೋಪಲಕ್ಷಣಮ್ ।
ಯಜಂತಿ ವೇದತಂತ್ರಾಭ್ಯಾಂ ಪರಂ ಜಿಜ್ಞಾಸವೋ ನೃಪ
॥ ೨೮ ॥

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ತುಭ್ಯಂ ಭಗವತೇ ನಮಃ
॥ ೨೯ ॥

ನಾರಾಯಣಾಯ ಋಷಯೇ ಪುರುಷಾಯ ಮಹಾತ್ಮನೇ ।
ವಿಶ್ವೇಶ್ವರಾಯ ವಿಶ್ವಾಯ ಸರ್ವಭೂತಾತ್ಮನೇ ನಮಃ
॥ ೩೦ ॥

ಇತಿ ದ್ವಾಪರ ಉರ್ವೀಶ ಸ್ತುವಂತಿ ಜಗದೀಶ್ವರಮ್ ।
ನಾನಾತಂತ್ರ ವಿಧಾನೇನ ಕಲಾವಪಿ ಯಥಾ ಶೃಣು
॥ ೩೧ ॥

ಕೃತಯುಗದಲ್ಲಿ ಮನುಷ್ಯರು ತುಂಬಾ ಶಾಂತರೂ, ಪರಸ್ಪರ ವೈರರಹಿತರೂ, ಎಲ್ಲರ ಹಿತೈಷಿಗಳೂ, ಸಮದರ್ಶಿಗಳೂ ಆಗಿರುತ್ತಾರೆ. ಅವರು ಇಂದ್ರಿಯ-ಮನವನ್ನು ವಶದಲ್ಲಿರಿಸಿಕೊಂಡು ಧ್ಯಾನರೂಪೀ ತಪಸ್ಸಿನಿಂದ ಪರಮಾತ್ಮನನ್ನು ಆರಾಸುತ್ತಾರೆ. ॥ ೨೨ ॥ ಅವರು ಪರಮಾತ್ಮನನ್ನು ಹಂಸ, ಸುಪರ್ಣ, ವೈಕುಂಠ, ಧರ್ಮ, ಯೋಗೇಶ್ವರ, ಅಮಲ, ಈಶ್ವರ, ಪುರುಷ, ಅವ್ಯಕ್ತ ಈ ಹೆಸರುಗಳಿಂದ ಭಗವಂತನ ಗುಣ-ಲೀಲೆಗಳನ್ನು ಕೊಂಡಾಡುತ್ತಾರೆ. ॥ ೨೩. ॥ ರಾಜನೇ! ತ್ರೇತಾಯುಗದಲ್ಲಿ ಭಗವಂತನ ಶ್ರೀವಿಗ್ರಹದ ಬಣ್ಣ ಕೆಂಪಾಗಿರುತ್ತದೆ. ನಾಲ್ಕು ಭುಜಗಳಿದ್ದು ಕಟಿ ಭಾಗದಲ್ಲಿ ಮೂರು ಮೇಖಲೆಗಳಿರುತ್ತವೆ. ಅವನ ಕೇಶಗಳು ಭಂಗಾರ ವರ್ಣದ್ದಾಗಿರುತ್ತವೆ. ಅವನು ವೇದ ಪ್ರತಿಪಾದಿತ ಯಜ್ಞದ ರೂಪದಲ್ಲಿದ್ದು ಸ್ರುಕ್, ಸ್ರುವೇ ಮುಂತಾದ ಯಜ್ಞಪಾತ್ರೆಗಳನ್ನು ಧರಿಸಿರುತ್ತಾನೆ. ॥ ೨೪ ॥ ಈ ಯುಗದಲ್ಲಿ ಮನುಷ್ಯರು ತಮ್ಮ ಧರ್ಮದಲ್ಲಿ ನಿಷ್ಠೆಯುಳ್ಳವರಾಗಿದ್ದು, ವೇದಗಳ ಅಧ್ಯಯನ, ಅಧ್ಯಾಪನೆಯಲ್ಲಿ ತುಂಬಾ ಪ್ರವೀಣರಾಗಿರುತ್ತಾರೆ. ಅವರು ಋಗ್ವೇದ, ಯಜುರ್ವೇದ, ಸಾಮವೇದರೂಪೀ ವೇದತ್ರಯಿಯ ಮೂಲಕ ಸರ್ವದೇವ ಸ್ವರೂಪ ದೇವಾಧಿದೇವ ಭಗವಾನ್ ಶ್ರೀಹರಿಯನ್ನು ಆರಾಧಿಸುತ್ತಾರೆ. ॥ ೨೫ ॥ ಈ ತ್ರೇತಾಯುಗದಲ್ಲಿ ಹೆಚ್ಚಿನ ಜನರು ಭಗವಂತನನ್ನು ವಿಷ್ಣು, ಯಜ್ಞ, ಪೃಶ್ನಿಗರ್ಭ, ಸರ್ವದೇವ, ಉರುಕ್ರಮ, ವೃಷಾಕಪಿ, ಜಯಂತ, ಉರುಗಾಯ ಮುಂತಾದ ನಾಮಗಳಿಂದ ಕರೆದು, ಅವನ ಗುಣ-ಲೀಲಾದಿಗಳನ್ನು ಕೀರ್ತಿಸುತ್ತಾರೆ. ॥ ೨೬ ॥ ರಾಜನೇ! ದ್ವಾಪರ ಯುಗದಲ್ಲಿ ಭಗವಂತನ ಶ್ರೀವಿಗ್ರಹದ ಬಣ್ಣ ಶ್ಯಾಮಲವಾಗಿರುತ್ತದೆ. ಅವನು ಪೀತಾಂಬರ, ಶಂಖ, ಚಕ್ರ, ಗದಾ, ಪದ್ಮ ಮುಂತಾದ ಆಯುಧಗಳನ್ನು ಧರಿಸುತ್ತಾನೆ. ವಕ್ಷಸ್ಥಳದಲ್ಲಿ ಶ್ರೀವತ್ಸದ ಚಿಹ್ನೆ, ಭೃಗುಲಾಂಛನ, ಕೌಸ್ತುಭಮಣಿ ಮುಂತಾದ ಲಕ್ಷಣಗಳಿಂದ ಲಕ್ಷಿತನಾಗಿರುತ್ತಾನೆ. ॥ ೨೭ ॥ ಆಗ ಜಿಜ್ಞಾಸು ಜನರು ಮಹಾರಾಜರ ಚಿಹ್ನೆಗಳಾದ ಛತ್ರ, ಚಾಮರಾದಿಗಳಿಂದ ಯುಕ್ತ ಪರಮಪುರುಷ ಭಗವಂತನನ್ನು ವೈದಿಕ, ಆಗಮವಿಧಿಗಳಿಂದ ಆರಾಸುತ್ತಾರೆ.॥ ೨೮॥ ಅವರು ಭಗವಂತನನ್ನು ಈ ವಿಧವಾಗಿ ಸ್ತುತಿಸುತ್ತಾರೆ – "ಹೇ ಜ್ಞಾನಸ್ವರೂಪ ಭಗವಾನ್ ವಾಸುದೇವಾ! ಕ್ರಿಯಾಶಕ್ತಿರೂಪೀ ಸಂಕರ್ಷಣಾ! ನಾವು ನಿನಗೆ ಪದೇ-ಪದೇ ನಮಸ್ಕರಿಸುತ್ತೇವೆ. ಭಗವಾನ್ ಪ್ರದ್ಯುಮ್ನ ಮತ್ತು ಅನಿರುದ್ಧ ರೂಪದಲ್ಲಿರುವ ನಿನಗೆ ನಾವು ವಂದಿಸುತ್ತೇವೆ. ನಾರಾಯಣ ಋಷಿಯೇ! ಮಹಾತ್ಮಾ ನರನೇ! ವಿಶ್ವೇಶ್ವರ, ವಿಶ್ವರೂಪೀ, ಭಗವಾನ್ ಸರ್ವಭೂತಾತ್ಮಾ! ನಾವು ನಮಸ್ಕರಿಸುತ್ತೇವೆ. ॥ ೨೯-೩೦ ॥ ರಾಜನೇ! ದ್ವಾಪರ ಯುಗದಲ್ಲಿ ಜನರು ಈ ಪ್ರಕಾರ ಜಗದೀಶ್ವರ ಭಗವಂತನನ್ನು ಸ್ತುತಿಸುತ್ತಾರೆ. ಹೀಗೆಯೇ ಕಲಿಯುಗದಲ್ಲಿಯೂ ಅನೇಕ ಆಗಮೋಕ್ತ ರೀತಿಯಿಂದ ಭಗವಂತನನ್ನು ಹೇಗೆ ಪೂಜಿಸುತ್ತಾರೋ ಆದರ ವರ್ಣನೆಯನ್ನು ಕೇಳು. ॥ ೩೧ ॥

ಕೃಷ್ಣವರ್ಣಂ ತ್ವಿಷಾಕೃಷ್ಣಂ ಸಾಂಗೋಪಾಂಗಾಸ್ತ್ರಪಾರ್ಷದಮ್ ।
ಯಜ್ಞೈಃ ಸಂಕೀರ್ತನಪ್ರಾಯೈರ್ಯಜಂತಿ ಹಿ ಸುಮೇಧಸಃ
॥ ೩೨ ॥

ಕಲಿಯುಗದಲ್ಲಿ ಭಗವಂತನ ಬಣ್ಣವಾದರೋ ಕೃಷ್ಣವಾಗಿರುತ್ತದೆ, ಆದರೆ ಆ ಕೃಷ್ಣವರ್ಣವು ಇಂದ್ರನೀಲಕಾಂತಿಯಂತೆ ಉಜ್ವಲವಾಗಿರುತ್ತದೆ. ಅರ್ಥಾತ್ – ಬಹಳ ಮನೋಹರ ರೂಪ ಅವನದಾಗಿರುತ್ತದೆ. ಎಲ್ಲರನ್ನು ತನ್ನತ್ತ ಸೆಳೆದುಕೊಂಡು ಆನಂದಿತರನ್ನಾಗಿಸುತ್ತಾನೆ. ಅವನು ಹೃದಯಾದಿ ಅಂಗ, ಕೌಸ್ತುಭಾದಿ ಉಪಾಂಗಗಳಿಂದಲೂ, ಸುದರ್ಶನಾದಿ ಅಸ್ತ್ರ, ಸುನಂದಾದಿ ಪಾರ್ಷದರಿಂದಲೂ ಕೂಡಿಕೊಂಡಿರುತ್ತಾನೆ. ಈ ಯುಗದಲ್ಲಿ ಶ್ರೇಷ್ಠ ಬುದ್ಧಿ ಸಂಪನ್ನರಾದ ಜನರು ಅವನ ನಾಮ, ಗುಣ, ಲೀಲೆ ಮುಂತಾದವುಗಳು ಪ್ರಧಾನವಿರುವ ಸಂಕೀರ್ತನ ಯಜ್ಞದ ಮೂಲಕ ಅವನನ್ನು ಆರಾಧಿಸುತ್ತಾರೆ. ॥ ೩೨ ॥

ಧ್ಯೇಯಂ ಸದಾ ಪರಿಭವಘ್ನಮಭೀಷ್ಟದೋಹಂ
ತೀರ್ಥಾಸ್ಪದಂ ಶಿವವಿರಿಂಚಿನುತಂ ಶರಣ್ಯಮ್ ।
ಭೃತ್ಯಾರ್ತಿಹಂ ಪ್ರಣತಪಾಲ ಭವಾಬ್ಧಿಪೋತಂ
ವಂದೇ ಮಹಾಪುರುಷ ತೇ ಚರಣಾರವಿಂದಮ್ ॥ ೩೩ ॥

ಅವರು ಈ ವಿಧವಾಗಿ ಭಗವಂತನನ್ನು ಸ್ತುತಿಸುತ್ತಾರೆ – ಓ ಶರಣಾಗತವತ್ಸಲ ಪ್ರಭೋ! ಮಹಾಪುರುಷನೇ! ನಿನ್ನ ಚರಣಾರವಿಂದಗಳಲ್ಲಿ ಪದೇ-ಪದೇ ನಾವು ನಮಸ್ಕರಿಸುತ್ತೇವೆ. ನಿನ್ನ ಚರಣಕಮಲಗಳು ಸದಾಕಾಲ ಧ್ಯಾನಿಸಲು ಯೋಗ್ಯವಾಗಿವೆ. ಅವು ಧ್ಯಾನ ಮಾಡುವವರ ಎಲ್ಲ ಪ್ರಕಾರದ ಸಂಕಟಗಳನ್ನು ಇಲ್ಲವಾಗಿಸುವಂತಹುಗಳು. ಭಕ್ತರಿಗೆ ಅಭೀಷ್ಟಪ್ರದವಾಗಿವೆ. ತೀರ್ಥಸ್ವರೂಪವಾಗಿವೆ. ಶಿವ, ಬ್ರಹ್ಮಾದಿ ದೇವತೆಗಳು ಅನವರತ ಇವನನ್ನು ವಂದಿಸುತ್ತಿರುತ್ತಾರೆ. ಶರಣಾಗಲು ಯೋಗ್ಯವಾಗಿದ್ದು ಭಕ್ತರ ಎಲ್ಲ ವಿಘ್ನ-ಬಾಧೆಗಳನ್ನು ಕಳೆಯುವಂತಹವುಗಳು. ಸಂಸಾರಸಾಗರವನ್ನು ದಾಟಿಹೋಗಲು ದೋಣಿಯಂತಿವೆ. ಇಂತಹ ನಿನ್ನ ಚರಣಕಮಲಗಳಿಗೆ ಪುನಃ-ಪುನಃ ವಂದಿಸುತ್ತೇವೆ. ॥ ೩೩ ॥ ಓ ಧರ್ಮಪಾಲಕಾ! ಮಹಾಪುರುಷನೇ! ನಾವು ನಿನ್ನ ಚರಣಕಮಲಗಳಲ್ಲಿ ಅನಂತ ಪ್ರಣಾಮಗಳನ್ನು ಮಾಡುತ್ತೇವೆ. ದೇವತೆಗಳೂ ಕೂಡ ಆಶಿಸುತ್ತಿರುವ ಅಯೋಧ್ಯೆಯ ರಾಜ್ಯಲಕ್ಷ್ಮಿಯನ್ನು ತ್ಯಾಗಮಾಡುವುದು ಬೇರೆಯವರಿಗೆ ತುಂಬು ಕಠಿಣವೇ ಆಗಿದೆ. ಆದರೆ ಪಿತೃವಾಕ್ಯ ಪರಿಪಾಲನೆಗಾಗಿ ಅದನ್ನು ಬಿಟ್ಟು ವನಕ್ಕೆ ನಡೆದ ಚರಣಕಮಲಗಳಿಗೆ, ಪ್ರಿಯ ಪತ್ನೀ ಸೀತೆಗಾಗಿ ಮಾಯಾಮೃಗದ ಹಿಂದೆ ಓಡಿದ ಚರಣಾರವಿಂದಗಳಿಗೆ ನಾವು ಕೋಟಿ-ಕೋಟಿ ಪ್ರಣಾಮ ಸಲ್ಲಿಸುತ್ತೇವೆ. ॥ ೩೪ ॥

ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಂ
ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಮ್ ।
ಮಾಯಾಮೃಗಂ ದಯಿತಯೇಪ್ಸಿತಮನ್ವಧಾವದ್
ವಂದೇ ಮಹಾಪುರುಷ ತೇ ಚರಣಾರವಿಂದಮ್ ॥ ೩೪ ॥

ಏವಂ ಯುಗಾನುರೂಪಾಭ್ಯಾಂ ಭಗವಾನ್ ಯುಗವರ್ತಿಭಿಃ ।
ಮನುಜೈರಿಜ್ಯತೇ ರಾಜನ್ ಶ್ರೇಯಸಾಮೀಶ್ವರೋ ಹರಿಃ
॥ ೩೫ ॥

ರಾಜನೇ! ಈ ವಿಧವಾಗಿ ವಿಭಿನ್ನ ಯುಗದ ಜನರು ತಮ್ಮ-ತಮ್ಮ ಯುಗಕ್ಕನುರೂಪವಾಗಿ ನಾಮ ಮತ್ತು ರೂಪಗಳ ಮೂಲಕ ಬೇರೆ-ಬೇರೆ ಪ್ರಕಾರದಿಂದ ಭಗವಂತನನ್ನು ಆರಾಧಿಸುತ್ತಾರೆ. ಧರ್ಮ, ಅರ್ಥ, ಕಾಮ, ಮೋಕ್ಷ ಮೊದಲಾದ ಎಲ್ಲ ಪುರುಷಾರ್ಥಗಳ ಏಕಮಾತ್ರ ಸ್ವಾಮಿಯಾದರೋ ಭಗವಾನ್ ಶ್ರೀಹರಿಯೇ ಆಗಿರುವನು ಇದರಲ್ಲಿ ಸಂದೇಹವೇ ಇಲ್ಲ. ॥ ೩೫ ॥

ಕಲಿಂ ಸಭಾಜಯಂತ್ಯಾರ್ಯಾ ಗುಣಜ್ಞಾಃ ಸಾರಭಾಗಿನಃ ।
ಯತ್ರ ಸಂಕೀರ್ತನೇನೈವ ಸರ್ವಃ ಸ್ವಾರ್ಥೋಽಭಿಲಭ್ಯತೇ
॥ ೩೬ ॥

ಯುಗಗಳ ಗುಣಗಳನ್ನು ಬಲ್ಲವರು, ಸಾರಗ್ರಾಹಿಗಳು ಕಲಿಯುಗವನ್ನು ತುಂಬಾ ಪ್ರಶಂಸಿಸುತ್ತಾರೆ. ಕಾರಣ ಈ ಕಲಿಯುಗದಲ್ಲಿ ಕೇವಲ ಭಗವಂತನ ನಾಮಸಂಕೀರ್ತನದಿಂದಲೇ ಎಲ್ಲ ಪ್ರಕಾರದ ಸ್ವಾರ್ಥ ಮತ್ತು ಪರಮಾರ್ಥ ಲಭಿಸುತ್ತದೆ. ॥ ೩೬ ॥

ನ ಹ್ಯತಃ ಪರಮೋ ಲಾಭೋ ದೇಹಿನಾಂ ಭ್ರಾಮ್ಯತಾಮಿಹ ।
ಯತೋ ವಿಂದೇತ ಪರಮಾಂ ಶಾಂತಿಂ ನಶ್ಯತಿ ಸಂಸೃತಿಃ
॥ ೩೭ ॥

ದೇಹಾಭಿಮಾನಿ ಜೀವರು ಈ ಸಂಸಾರಚಕ್ರದಲ್ಲಿ ಸುತ್ತುತ್ತಾ ಇರುತ್ತಾರೆ. ಅವರಿಗಾಗಿ ಭಗವಂತನ ನಾಮ ಸಂಕೀರ್ತನೆಯಂತಹ ಸರಳ ಸಾಧನೆಯಿದೆ. ಇದರಿಂದ ಪರಮ ಶಾಂತಿಯು ಸಿಗುತ್ತದೆ ಹಾಗೂ ಎಂದೆಂದಿಗೂ ಜನ್ಮ-ಮರಣಗಳ ಪರಿಭ್ರಮಣೆ ಮುಗಿದು ಹೋಗುತ್ತದೆ. ಮನುಷ್ಯನಿಗೆ ಇದರಿಂದ ಮಿಗಿಲಾದ ಇನ್ನೊಂದು ಲಾಭವು ಇಲ್ಲವೇ ಇಲ್ಲ. ॥ ೩೭ ॥

ಕೃತಾದಿಷು ಪ್ರಜಾ ರಾಜನ್ ಕಲಾವಿಚ್ಛಂತಿ ಸಂಭವಮ್ ।
ಕಲೌ ಖಲು ಭವಿಷ್ಯಂತಿ ನಾರಾಯಣಪರಾಯಣಾಃ
॥ ೩೮ ॥

ಕ್ವಚಿತ್ ಕ್ವಚಿನ್ಮಹಾರಾಜ ದ್ರವಿಡೇಷು ಚ ಭೂರಿಶಃ ।
ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಪಯಸ್ವಿನೀ
॥ ೩೯ ॥

ಕಾವೇರೀ ಚ ಮಹಾಪುಣ್ಯಾ ಪ್ರತೀಚೀ ಚ ಮಹಾನದೀ ।
ಯೇ ಪಿಬಂತಿ ಜಲಂ ತಾಸಾಂ ಮನುಜಾ ಮನುಜೇಶ್ವರ ।
ಪ್ರಾಯೋ ಭಕ್ತಾ ಭಗವತಿ ವಾಸುದೇವೇಽಮಲಾಶಯಾಃ
॥ ೪೦ ॥

ದೇವರ್ಷಿಭೂತಾಪ್ತನೃಣಾಂ ಪಿತೃಣಾಂ
ನ ಕಿಂಕರೋ ನಾಯಮೃಣೀ ಚ ರಾಜನ್ ।
ಸರ್ವಾತ್ಮನಾ ಯಃ ಶರಣಂ ಶರಣ್ಯಂ
ಗತೋ ಮುಕುಂದಂ ಪರಿಹೃತ್ಯ ಕರ್ತಮ್ ॥ ೪೧ ॥

ಸ್ವಪಾದಮೂಲಂ ಭಜತಃ ಪ್ರಿಯಸ್ಯ
ತ್ಯಕ್ತಾನ್ಯಭಾವಸ್ಯ ಹರಿಃ ಪರೇಶಃ ।
ವಿಕರ್ಮ ಯಚ್ಚೋತ್ಪತಿತಂ ಕಥಂಚಿದ್
ಧುನೋತಿ ಸರ್ವಂ ಹೃದಿ ಸನ್ನಿವಿಷ್ಟಃ ॥ ೪೨ ॥

ನಾರದ ಉವಾಚ

ಧರ್ಮಾನ್ಭಾಗವತಾನಿತ್ಥಂ ಶ್ರುತ್ವಾಥ ಮಿಥಿಲೇಶ್ವರಃ ।
ಜಾಯಂತೇಯಾನ್ ಮುನೀನ್ಪ್ರೀತಃ ಸೋಪಾಧ್ಯಾಯೋ ಹ್ಯಪೂಜಯತ್
॥ ೪೩ ॥

ತತೋಽಂತರ್ದಧಿರೇ ಸಿದ್ಧಾಃ ಸರ್ವಲೋಕಸ್ಯ ಪಶ್ಯತಃ ।
ರಾಜಾ ಧರ್ಮಾನುಪಾತಿಷ್ಠನ್ನವಾಪ ಪರಮಾಂ ಗತಿಮ್
॥ ೪೪ ॥

ತ್ವಮಪ್ಯೇತಾನ್ಮಹಾಭಾಗ ಧರ್ಮಾನ್ಭಾಗವತಾನ್ ಶ್ರುತಾನ್ ।
ಆಸ್ಥಿತಃ ಶ್ರದ್ಧಯಾ ಯುಕ್ತೋ ನಿಃಸಂಗೋ ಯಾಸ್ಯಸೇ ಪರಮ್
॥ ೪೫ ॥

ರಾಜನೇ ! ಕೃತಯುಗವೇ ಮೊದಲಾದ ಯುಗಗಳಲ್ಲಿ ಹುಟ್ಟಿದ ಜನರೂ ಕೂಡ ಈ ಕಲಿಯುಗದಲ್ಲಿ ಜನ್ಮತಳೆಯಲು ಆಶಿಸುತ್ತಾರೆ. ಏಕೆಂದರೆ, ಕಲಿಯುಗದಲ್ಲಿ ಅಲ್ಲಲ್ಲಿ ಭಗವಾನ್ ನಾರಾಯಣನ ಶರಣಾಗತರು ಮತ್ತು ಅವನ ಆಶ್ರಿತರಾದ ಅನೇಕ ಭಕ್ತರು ಉಂಟಾಗುವರು. ॥ ೩೮ ॥ ಎಲ್ಲೆ ರಾಜನೇ ! ಕಲಿಯುಗದಲ್ಲಿ ದ್ರವಿಡದೇಶದಲ್ಲಿ (ದಕ್ಷಿಣಭಾರತದಲ್ಲಿ) ಅನೇಕ ಭಕ್ತರಾಗುವರು. ತಾಮ್ರಪರ್ಣಿ, ಕೃತಮಾಲಾ, ಪಯಸ್ವಿನೀ, ಪರಮಪವಿತ್ರ ಕಾವೇರಿ, ಮಹಾನದಿ ಹಾಗೂ ಪ್ರತಿಚೀ ಮೊದಲಾದ ನದಿಗಳು ಹರಿಯುವಲ್ಲೆಲ್ಲ ಭಕ್ತರು ಹುಟ್ಟುವರು. ರಾಜನೇ ! ಈ ಪವಿತ್ರ ನದಿಗಳ ನೀರನ್ನು ಕುಡಿದವರ ಅಂತಃಕರಣ ಶುದ್ಧವಾಗಿ ಅವರು ಭಗವಾನ್ ವಾಸುದೇವನ ಪರಮ ಭಕ್ತರಾಗುವರು. ॥ ೩೯-೪೦ ॥

ಶರಣಾಗಲು ಏಕಮಾತ್ರ ಭಗವಂತನೇ ಯೋಗ್ಯನಾಗಿದ್ದಾನೆ. ಪೂರ್ಣರೂಪದಿಂದ ಭಗವಂತನಿಗೆ ಶರಣಾದ ಭಕ್ತನು ದೇವತೆಗಳು, ಋಷಿಗಳು, ಪಿತೃಗಳು, ಕುಟುಂಬಿಗಳು, ಅತಿಥಿಗಳು ಹೀಗೆ ಇವರೆಲ್ಲರ ಋಣದಿಂದ ಮುಕ್ತನಾಗುತ್ತಾನೆ. ಅವನು ಇವರಲ್ಲಿ ಯಾರ ಕಿಂಕರನೂ ಆಗಿರುವುದಿಲ್ಲ. ಅವನು ಎಲ್ಲ ಕರ್ಮವಾಸನೆಗಳಿಂದ, ಕರ್ಮಬಂಧನದಿಂದ ಪೂರ್ಣವಾಗಿ ಮುಕ್ತನಾಗಿ, ಮುಕ್ತಿಯ ಮತ್ತು ಪ್ರೇಮದ ದಾತ್ರ ಭಗವಂತನನ್ನು ಪಡೆದು ಕೊಳ್ಳುತ್ತಾನೆ. ॥ ೪೧ ॥ ಭಗವಂತನ ಅನನ್ಯ ಶರಣಾಗತಿಯನ್ನು ಪಡೆದ ಭಕ್ತರಿಂದ ಪಾಪಕರ್ಮಗಳಾದರೋ ಆಗುವುದೇ ಇಲ್ಲ. ಕದಾಚಿತ್ ಯಾವುದಾದರೂ ಪಾಪಕರ್ಮ, ನಿಷಿದ್ಧಕರ್ಮ ನಡೆದು ಹೋದರೂ, ಎಲ್ಲರ ಹೃದಯದಲ್ಲಿ ವಿರಾಜಮಾನನಾದ ಸರ್ವೇಶ್ವರ ಭಗವಾನ್ ಶ್ರೀಹರಿಯು ಸ್ವತಃ ಅವನ ಹೃದಯದ ಪಾಪಗಳನ್ನು ಮತ್ತು ಪಾಪವಾಸನೆಗಳನ್ನು ತೊಳೆದು ಅವನನ್ನು ಶುದ್ಧವಾಗಿಸುತ್ತಾನೆ. ॥ ೪೨ ॥*

ನಾರದರು ಹೇಳುತ್ತಾರೆ – ವಸುದೇವನೇ ! ಮಿಥಿಲಾಧೀಶ ರಾಜಾ ನಿಮಿಯು ಒಂಭತ್ತು ಯೋಗೀಶ್ವರರಿಂದ ಈ ವಿಧವಾಗಿ ಭಾಗವತಧರ್ಮಗಳ ವರ್ಣನೆಯನ್ನು ಕೇಳಿ ಬಹಳ ಆನಂದಿತನಾದನು. ಅವನು ತನ್ನ ಋತ್ವಿಜರು ಮತ್ತು ಆಚಾರ್ಯರೊಂದಿಗೆ ಋಷಭನಂದನ ** ನವಯೋಗೀಶ್ವರರನ್ನು ಭಕ್ತಿಯಿಂದ ಪೂಜಿಸಿದನು. ॥ ೪೩ ॥ ಇದಾದ ಬಳಿಕ ಎಲ್ಲರೂ ನೋಡುತ್ತಿರುವಂತೆಯೇ ಆ ಸಿದ್ಧರು ಅಂತರ್ಧಾನರಾದರು. ವಿದೇಹರಾಜಾ ನಿಮಿಯು ಅವರಿಂದ ಕೇಳಿದ ಭಾಗವತ ಧರ್ಮಗಳನ್ನು ಆಚರಿಸುತ್ತಾ, ಪರಮಗತಿಯನ್ನು ಪಡೆದು ಕೊಂಡನು. ॥ ೪೪ ॥ ಮಹಾಭಾಗ್ಯವಂತನಾದ ವಸುದೇವನೇ ! ನಾನು ನಿನ್ನ ಮುಂದೆಯೂ ಭಾಗವತ ಧರ್ಮಗಳನ್ನು ವರ್ಣಿಸಿರುವೆನು. ನೀನೂ ಕೂಡ ಶ್ರದ್ಧೆಯಿಂದ ಇವುಗಳನ್ನು ಆಚರಿಸಿದರೆ ಕೊನೆಗೆ ಎಲ್ಲ ಆಸಕ್ತಿಗಳಿಂದ ಬಿಡುಗಡೆಹೊಂದಿ ಪರಮಪದವನ್ನು ಪಡೆದುಕೊಳ್ಳಬಲ್ಲೆ. ॥ ೪೫ ॥

* (ಈ ಪ್ರಕಾರ ನವಯೋಗೀಶ್ವರರ ಪ್ರಕರಣವು ಶರಣಾಗತಿಯಿಂದ ಪ್ರಾರಂಭವಾಗಿ, ಪರ್ಯವಸಾನವೂ ಶರಣಾಗತಿಯಲ್ಲೇ ಆಗಿದೆ. ಅತ್ಯಂತಿಕ ಶ್ರೇಯಸ್ಸನ್ನು ಪಡೆಯಲು ಶರಣಾಗತಿಯೇ ಸರ್ವೋತ್ಕೃಷ್ಟ ಸಾಧನೆಯಾಗಿದೆ.)

** ಈ ಯೋಗೀಶ್ವರರ ತಾಯಿಯ ಹೆಸರು ಜಯಂತಿ ಎಂದಿದ್ದು ತಂದೆ ಭಗವಾನ್ ಋಷಭದೇವರಾಗಿದ್ದಾರೆ. ಅದಕ್ಕಾಗಿ ಶ್ಲೋಕದಲ್ಲಿ 'ಜಾಯಂತೇಯಾನ್' ಎಂಬ ಶಬ್ದದಿಂದ ಇವರ ತಾಯಿ ಜಯಂತಿಯೆಂದು ತಿಳಿದುಕೊಳ್ಳಬೇಕು.

ಯುವಯೋಃ ಖಲು ದಂಪತ್ಯೋರ್ಯಶಸಾ ಪೂರಿತಂ ಜಗತ್ ।
ಪುತ್ರತಾಮಗಮದ್ಯದ್ವಾಂ ಭಗವಾನೀಶ್ವರೋ ಹರಿಃ
॥ ೪೬ ॥

ದರ್ಶನಾಲಿಂಗನಾಲಾಪೈಃ ಶಯನಾಸನಭೋಜನೈಃ ।
ಆತ್ಮಾ ವಾಂ ಪಾವಿತಃ ಕೃಷ್ಣೇ ಪುತ್ರಸ್ನೇಹಂ ಪ್ರಕುರ್ವತೋಃ
॥ ೪೭ ॥

ವೈರೇಣ ಯಂ ನೃಪತಯಃ ಶಿಶುಪಾಲಪೌಂಡ್ರ-
ಶಾಲ್ವಾದಯೋ ಗತಿವಿಲಾಸವಿಲೋಕನಾದ್ಯೈಃ ।
ಧ್ಯಾಯಂತ ಆಕೃತಧಿಯಃ ಶಯನಾಸನಾದೌ
ತತ್ಸಾಮ್ಯಮಾಪುರನುರಕ್ತಧಿಯಾಂ ಪುನಃ ಕಿಮ್ ॥ ೪೮ ॥

ಮಾऽಪತ್ಯಬುದ್ಧಿಮಕೃಥಾಃ ಕೃಷ್ಣೇ ಸರ್ವಾತ್ಮನೀಶ್ವರೇ ।
ಮಾಯಾಮನುಷ್ಯಭಾವೇನ ಗೂಢೈಶ್ವರ್ಯೇ ಪರೇऽವ್ಯಯೇ
॥ ೪೯ ॥

ಭೂಭಾರಾಸುರರಾಜನ್ಯಹಂತವೇ ಗುಪ್ತಯೇ ಸತಾಮ್ ।
ಅವತೀರ್ಣಸ್ಯ ನಿರ್ವೃತ್ಯೈ ಯಶೋ ಲೋಕೇ ವಿತನ್ಯತೇ
॥ ೫೦ ॥

ಶ್ರೀಶುಕ ಉವಾಚ

ಏತಚ್ಛ್ರುತ್ವಾ ಮಹಾಭಾಗೋ ವಸುದೇವೋऽತಿವಿಸ್ಮಿತಃ ।
ದೇವಕೀ ಚ ಮಹಾಭಾಗಾ ಜಹತುರ್ಮೋಹಮಾತ್ಮನಃ
॥ ೫೧ ॥

ಇತಿಹಾಸಮಿಮಂ ಪುಣ್ಯಂ ಧಾರಯೇದ್ಯಃ ಸಮಾಹಿತಃ ।
ಸ ವಿಧೂಯೇಹ ಶಮಲಂ ಬ್ರಹ್ಮಭೂಯಾಯ ಕಲ್ಪತೇ
॥ ೫೨ ॥

ವಸುದೇವನೇ ! ನಿನ್ನ ಮತ್ತು ದೇವಕಿಯ ಕೀರ್ತಿಯಿಂದಲಾದರೋ ಇಡೀ ವಿಶ್ವವೇ ತುಂಬಿಹೋಗಿದೆ. ಏಕೆಂದರೆ, ಸರ್ವಶಕ್ತಿವಂತ ಭಗವಾನ್ ಶ್ರೀಕೃಷ್ಣನು ನಿಮ್ಮ ಪುತ್ರನಾಗಿ ಅವತರಿಸಿರುವನು. ॥ ೪೬ ॥ ನೀವುಗಳೆಲ್ಲ ಭಗವಂತನ ದರ್ಶನ, ಆಲಿಂಗನ ಹಾಗೂ ಮಾತು-ಕತೆಗಳಿಂದ, ಅವನನ್ನು ಮಲಗಿಸುವುದು, ಆಡಿಸುವುದು ಇವುಗಳ ಮೂಲಕ ವಾತ್ಸಲ್ಯಸ್ನೇಹಗೈದು ನಿಮ್ಮ ಹೃದಯವನ್ನು ಪವಿತ್ರವಾಗಿಸಿಕೊಂಡಿರುವಿರಿ. ಇದರಿಂದ ನೀವು ಪರಮ ಪವಿತ್ರರಾಗಿ ಹೋಗಿದ್ದೀರಿ. ॥ ೪೭ ॥ ವಸುದೇವನೇ ! ಶಿಶುಪಾಲ, ಪೌಂಡ್ರಕ, ಶಾಲ್ವ ಮುಂತಾದ ರಾಜರಾದರೋ ವೈರಭಾವದಿಂದ ಶ್ರೀಕೃಷ್ಣನ ನಡೆ-ನುಡಿ, ಲೀಲಾವಿಲಾಸ, ನೋಟ ಮಾಟ ಮುಂತಾದವುಗಳನ್ನು ಸ್ಮರಿಸಿದ್ದರು. ಅದೂ ಕೂಡ ನಿಯಮಾನುಸಾರವಲ್ಲ, ಮಲಗುವಾಗ, ಕುಳಿತಿರುವಾಗ, ಓಡಾಡುವಾಗ ಸ್ವಾಭಾವಿಕವಾಗಿಯೇ ಇತ್ತು. ಆದರೂ ಕೂಡ ಅವರ ಚಿತ್ತವೃತ್ತಿ ಶ್ರೀಕೃಷ್ಣಾಕಾರವಾಯಿತು ಹಾಗೂ ಸಾರೂಪ್ಯ ಮುಕ್ತಿಯ ಅಧಿಕಾರಿಗಳಾದರು. ಹಾಗಿರುವಾಗ ಪ್ರೇಮಭಾವದಿಂದ, ಅನುರಾಗಪೂರ್ವಕ ಶ್ರೀಕೃಷ್ಣನನ್ನು ಚಿಂತಿಸುವವರಿಗೆ ಶ್ರೀಕೃಷ್ಣನ ಪ್ರಾಪ್ತಿಯಾಗುವುದರಲ್ಲಿ ಸಂದೇಹವೇನಿದೆ ? ॥ ೪೮ ॥ ವಸುದೇವಾ ! ನೀನು ಶ್ರೀಕೃಷ್ಣನನ್ನು ಕೇವಲ ನಿನ್ನ ಪುತ್ರನೆಂದೇ ತಿಳಿಯಬೇಡ. ಅವನು ಸರ್ವಾತ್ಮಾ ಸರ್ವೇಶ್ವರ, ಕಾರಣಾತೀತ, ಅವಿನಾಶಿಯಾಗಿದ್ದಾನೆ. ಅವನು ಲೀಲೆಗಾಗಿ ಮನುಷ್ಯರೂಪದಿಂದ ಪ್ರಕಟನಾಗಿ, ತನ್ನ ಐಶ್ವರ್ಯವನ್ನು ಅಡಗಿಸಿಟ್ಟಿರುವನು. ॥ ೪೯ ॥ ಅವನು ಪೃಥ್ವಿಯ ಭಾರರೂಪೀ ರಾಜವೇಷಧಾರೀ ಅಸುರರನ್ನು ನಾಶಗೊಳಿಸಲು ಮತ್ತು ಸಂತರನ್ನು ರಕ್ಷಿಸಲು, ಜೀವಿಗಳಿಗೆ ಪರಮ ಶಾಂತಿ, ಮುಕ್ತಿ ಕೊಡಲೋಸುಗವೇ ಅವತರಿಸಿರುವನು. ಅದಕ್ಕಾಗಿಯೇ ಜಗತ್ತಿನಲ್ಲಿ ಅವನ ಕೀರ್ತಿಯು ಹಾಡಲ್ಪಡುತ್ತಿದೆ. ॥ ೫೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ ! ನಾರದರ ಬಾಯಿಂದ ಇದೆಲ್ಲವನ್ನು ಕೇಳಿ ಪರಮಭಾಗ್ಯವಂತ ವಸುದೇವನು ಮತ್ತು ಪರಮಭಾಗ್ಯವತಿ ದೇವಕಿಗೆ ಭಾರೀ ವಿಸ್ಮಯವಾಯಿತು. ಅವರಲ್ಲಿದ್ದ ಅಲ್ಪ-ಸ್ವಲ್ಪ ಮಾಯಾ-ಮೋಹ ಶೇಷವನ್ನು ಅವರು ತಕ್ಷಣ ತ್ಯಜಿಸಿದರು. ॥ ೫೧ ॥ ರಾಜನೇ ಈ ಪರಮ ಪವಿತ್ರ ಇತಿಹಾಸವನ್ನು ಧರಿಸುವವನು ತನ್ನ ಎಲ್ಲ ಶೋಕ-ಮೋಹಗಳನ್ನು ದೂರಗೈದು ಬ್ರಹ್ಮಪದವನ್ನು ಪಡೆದುಕೊಳ್ಳುವನು. ॥ ೫೨ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪಂಚಮೋऽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ದೇವತೆಗಳು ಶ್ರೀಕೃಷ್ಣನನ್ನು ತನ್ನ ಪರಮಪದಕ್ಕೆ ಹಿಂದಿರುಗಲು ಪ್ರಾರ್ಥಿಸಿದುದು ; ಯಾದವರು ಪ್ರಭಾಸ ಕ್ಷೇತ್ರಕ್ಕೆ ಹೊರಡಲು ಸಿದ್ಧರಾಗುತ್ತಿರುವುದನ್ನು ನೋಡಿ, ಉದ್ಧವನು ಶ್ರೀಕೃಷ್ಣನ ಬಳಿಗೆ ಹೋದುದು

ಶ್ರೀಶುಕ ಉವಾಚ

ಅಥ ಬ್ರಹ್ಮಾಽತ್ಮಜೈರ್ದೇವೈಃ ಪ್ರಜೇಶೈರಾವೃತೋಽಭ್ಯಗಾತ್ ।
ಭವಶ್ಚ ಭೂತಭವ್ಯೇಶೋ ಯಯೌ ಭೂತಗಣೈರ್ವೃತಃ
॥ ೧ ॥

ಇಂದ್ರೋ ಮರುದ್ಭಿರ್ಭಗವಾನಾದಿತ್ಯಾ ವಸವೋಽಶ್ವಿನೌ ।
ಋಭವೋಽಂಗಿರಸೋ ರುದ್ರಾ ವಿಶ್ವೇ ಸಾಧ್ಯಾಶ್ಚ ದೇವತಾಃ
॥ ೨ ॥

ಗಂಧರ್ವಾಪ್ಸರಸೋ ನಾಗಾಃ ಸಿದ್ಧಚಾರಣಗುಹ್ಯಕಾಃ ।
ಋಷಯಃ ಪಿತರಶ್ಚೈವ ಸವಿದ್ಯಾಧರಕಿನ್ನರಾಃ
॥ ೩ ॥

ದ್ವಾರಕಾಮುಪಸಂಜಗ್ಮುಃ ಸರ್ವೇ ಕೃಷ್ಣದಿದೃಕ್ಷವಃ ।
ವಪುಷಾ ಯೇನ ಭಗವಾನ್ ನರಲೋಕಮನೋರಮಃ ।
ಯಶೋ ವಿತೇನೇ ಲೋಕೇಷು ಸರ್ವಲೋಕಮಲಾಪಹಮ್
॥ ೪ ॥

ತಸ್ಯಾಂ ವಿಭ್ರಾಜಮಾನಾಯಾಂ ಸಮೃದ್ಧಾಯಾಂ ಮಹರ್ದ್ಧಿಭಿಃ ।
ವ್ಯಚಕ್ಷತಾವಿತೃಪ್ತಾಕ್ಷಾಃ ಕೃಷ್ಣಮದ್ಭುತದರ್ಶನಮ್
॥ ೫ ॥

ಸ್ವರ್ಗೋದ್ಯಾನೋಪಗೈರ್ಮಾಲ್ಯೈಶ್ಛಾದಯಂತೋ ಯದೂತ್ತಮಮ್ ।
ಗೀರ್ಭಿಶ್ಚಿತ್ರಪದಾರ್ಥಾಭಿಸ್ತುಷ್ಟುವುರ್ಜಗದೀಶ್ವರಮ್
॥ ೬ ॥

ದೇವಾ ಊಚುಃ

ನತಾಃ ಸ್ಮ ತೇ ನಾಥ ಪದಾರವಿಂದಂ
ಬುದ್ಧೀಂದ್ರಿಯಪ್ರಾಣಮನೋವಚೋಭಿಃ ।
ಯಚ್ಚಿಂತ್ಯತೇಽಂತರ್ಹೃದಿ ಭಾವಯುಕ್ತೈ-
ರ್ಮುಮುಕ್ಷುಭಿಃ ಕರ್ಮಮಯೋರುಪಾಶಾತ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತರಾಜನೇ ! ಮಹರ್ಷಿಗಳಾದ ನಾರದರು ವಸುದೇವನಿಗೆ ಭಾಗವತಧರ್ಮವನ್ನು ಉಪದೇಶಿಸಿ ಹೊರಟುಹೋದ ಬಳಿಕ, ಒಮ್ಮೆ ಬ್ರಹ್ಮದೇವರು ಭಗವಾನ್ ಶ್ರೀಕೃಷ್ಣನನ್ನು ದರ್ಶಿಸುವ ಇಚ್ಛೆಯಿಂದ ದ್ವಾರಕೆಗೆ ಬಂದರು. ಅವರೊಂದಿಗೆ ಅವರ ಪುತ್ರರಾದ ಸನಕಾದಿಗಳು, ಬೇರೆ ದೇವತೆಗಳೂ, ಪ್ರಜಾಪತಿಗಳೂ ಇದ್ದರು. ಶಂಕರನೂ ಭೂತಗಣಗಳೊಂದಿಗೆ ಬಂದರು. ಮರುದ್ಗಣರೊಡನೆ ದೇವರಾಜ ಇಂದ್ರನೂ ಆಗಮಿಸಿದನು. ಇಂದ್ರನನ್ನು ಅನುಸರಿಸಿ ದ್ವಾದಶ ಆದಿತ್ಯರೂ, ಅಷ್ಟವಸುಗಳೂ, ಅಶ್ವಿನೀ ದೇವತೆಗಳೂ, ಋಭು, ಆಂಗೀರಸ ವಂಶಜ ಋಷಿಗಳೂ, ಏಕಾದಶ ರುದ್ರರೂ, ವಿಶ್ವೇದೇವತೆಗಳೂ, ಸಾಧ್ಯದೇವತೆಗಳೂ, ಗಂಧರ್ವಾಪ್ಸರೆಯರೂ, ನಾಗರೂ, ಸಿದ್ಧರೂ, ಚಾರಣರೂ, ಗುಹ್ಯಕರೂ, ಋಷಿಗಳೂ, ಪಿತೃಗಳೂ, ವಿದ್ಯಾಧರ-ಕಿನ್ನರರೂ ಶ್ರೀಕೃಷ್ಣನನ್ನು ಸಂದರ್ಶಿಸಲು ದ್ವಾರಕೆಗೆ ಬಂದರು. ಭಗವಂತನ ಶ್ಯಾಮಸುಂದರ ವಿಗ್ರಹ ಶ್ರೀಕೃಷ್ಣನ ಸ್ವರೂಪವು ಎಲ್ಲರ ಮನಸ್ಸನ್ನು ಆನಂದಿತವಾಗಿಸುವಂತಹುದು. ಶ್ರೀಕೃಷ್ಣಾವತಾರದ ಮೂಲಕ ಗೈದ ಲೀಲೆಗಳನ್ನು ಗಾಯನ, ಶ್ರವಣ, ವರ್ಣನೆ ಮಾಡುವುದರಿಂದ ಎಲ್ಲ ಪಾಪರಾಶಿಗಳು ಸುಟ್ಟುಹೋಗುವಂತಹ ಮಂಗಲಮಯ ಕೀರ್ತಿಯನ್ನು ವಿಸ್ತರಿಸಿದನು. ॥ ೧-೪ ॥ ಸರ್ವಸಂಪತ್ತಿನಿಂದಲೂ ಸಮೃದ್ಧವಾಗಿ, ಲೋಕೋತ್ತರವಾದ ಪ್ರಕಾಶದಿಂದ ಬೆಳಗುತ್ತಿರುವ ದ್ವಾರಕಾಪಟ್ಟಣದಲ್ಲಿ ಅದ್ಭುತದರ್ಶನನಾದ ಶ್ರೀಕೃಷ್ಣನನ್ನು ಎಷ್ಟು ನೋಡಿದರೂ ತೃಪ್ತಿಹೊಂದದ ಕಣ್ಣುಗಳಿಂದ ಬ್ರಹ್ಮಾದಿದೇವತೆಗಳು ನೋಡುತ್ತಿದ್ದರು. ॥ ೫ ॥ ಶ್ರೀಕೃಷ್ಣನ ದಿವ್ಯ ದರ್ಶನದಿಂದ ಆನಂದತುಂದಿಲರಾದ ಅವರು ಸ್ವರ್ಗದ ಉದ್ಯಾನವಾದ ನಂದನವನದಿಂದಲೂ, ಚೈತ್ರರಥವನದಿಂದಲೂ ತಂದಿರುವ ದಿವ್ಯವಾದ ಪುಷ್ಪಮಾಲಿಕೆಗಳಿಂದ ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನನ್ನು ನಾನಾ ವಿಧವಾಗಿ ಅಲಂಕರಿಸಿ, ಸುಂದರ ಸ್ತೋತ್ರಗಳಿಂದ ಹಾಗೂ ಅರ್ಥವತ್ತಾದ ಸವಿಮಾತುಗಳ ಮೂಲಕ ಭಗವಂತನನ್ನು ಸ್ತುತಿಸತೊಡಗಿದರು. ॥ ೬ ॥

ದೇವತೆಗಳು ಇಂತೆಂದರು – ಸ್ವಾಮಿಯೇ ! ನಾವೆಲ್ಲರೂ ನಿನ್ನ ಚರಣಕಮಲಗಳಲ್ಲಿ ವಂದಿಸಿಕೊಳ್ಳುವೆವು. ಕರ್ಮಗಳೆಂಬ ಮಹಾಪಾಶಗಳಿಂದ ಬಿಡಿಸಿಕೊಳ್ಳುವ ಸಲುವಾಗಿ ಮೋಕ್ಷವನ್ನು ಬಯಸುವ ಜನರು ಭಕ್ತಿಭಾವದಿಂದ ಯಾವ ನಿನ್ನ ದಿವ್ಯ ಪಾದಾರವಿಂದಗಳನ್ನು ತಮ್ಮ ಹೃದಯದಲ್ಲಿ ಚಿಂತಿಸುವರೋ ಅಂತಹ ನಿನ್ನ ಚರಣ

ತ್ವಮಾಯಯಾತ್ರಿಗುಣಯಾऽऽತ್ಮದುರ್ವಿಭಾವ್ಯಂ
ವ್ಯಕ್ತಂ ಸೃಜಸ್ಯವಸಿ ಲುಂಪಸಿ ತದ್ಗುಣಸ್ಥಃ ।

ನೈತೈರ್ಭವಾನಜಿತ ಕರ್ಮಭಿರಜ್ಯತೇ ವೈ
ಯತ್ಸ್ವೇಸುಖೇऽವ್ಯವಹಿತೇऽಭಿರತೋऽನವದ್ಯಃ ॥ ೮ ॥

ಶುದ್ಧಿರ್ನ್ಣಾಂ ನ ತು ತಥೇಡ್ಯ ದುರಾಶಯಾನಾಂ
ವಿದ್ಯಾಶ್ರುತಾಧ್ಯಯನದಾನತಪಃ ಕ್ರಿಯಾಭಿಃ ।

ಸತ್ತ್ವಾತ್ಮನಾಮೃಷಭ ತೇ ಯಶಸಿ ಪ್ರವೃದ್ಧ-
ಸಚ್ಛ್ರದ್ದಯಾ ಶ್ರವಣಸಂಭೃತಯಾ ಯಥಾ ಸ್ಯಾತ್ ॥ ೯ ॥

ಸ್ಯಾನ್ನಸ್ತವಾಂಘ್ರಿರಶುಭಾಶಯಧೂಮಕೇತುಃ
ಕ್ಷೇಮಾಯ ಯೋ ಮುನಿಭಿರಾರ್ದ್ರಹೃದೋऽಭ್ಯಮಾನಃ ।

ಯಃ ಸಾತ್ವತೈಃ ಸಮವಿಭೂತಯ ಆತ್ಮವದ್ಭಿ-
ರ್ವ್ಯೂಹೇऽರ್ಚಿತಃ ಸವನಶಃ ಸ್ವರತಿಕ್ರಮಾಯ ॥ ೧೦ ॥

ಯಶ್ಚಿಂತ್ಯತೇ ಪ್ರಯತಪಾಣಿಭಿರಧ್ವರಾಗ್ನೌ
ತ್ರಯ್ಯಾ ನಿರುಕ್ತವಿಧಿನೇಶ ಹವಿರ್ಗೃಹೀತ್ವಾ ।

ಅಧ್ಯಾತ್ಮಯೋಗ ಉತ ಯೋಗಿಭಿರಾತ್ಮಮಾಯಾಂ
ಜಿಜ್ಞಾಸುಭಿಃ ಪರಮಭಾಗವತೈಃ ಪರೀಷ್ಟಃ ॥ ೧೧ ॥

ಕಮಲಗಳಿಗೆ ನಾವು ಬುದ್ಧಿ, ಇಂದ್ರಿಯ, ಪ್ರಾಣ, ಮನಸ್ಸು ಮಾತು ಇವುಗಳ ಮೂಲಕ ನಿನಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ. * ॥ ೭ ॥ ಓ ಭಗವಂತಾ ! ನಿನ್ನ ತ್ರಿಗುಣಮಯ ಮಾಯೆಯನ್ನು ತಿಳಿದುಕೊಳ್ಳುವುದು ತುಂಬಾ ಕಠಿಣವು. ಇಂತಹ ಮಾಯೆಯ ಮೂಲಕ ನಿನ್ನಲ್ಲೇ ನೀನು ಈ ದೃಶ್ಯಜಗತ್ತನ್ನು ಲೀಲೆಯಿಂದಲೇ ರಜೋಗುಣದಿಂದ ನಿರ್ಮಿಸಿರುವೆ. ಸತ್ತ್ವಗುಣದಿಂದ ಪಾಲಿಸುತ್ತಿರುವೆ. ತಮೋಗುಣದಿಂದ ಸಂಹಾರವನ್ನೂ ಮಾಡುವೆ. ಇದೆಲ್ಲವನ್ನು ಮಾಡುತ್ತಿದ್ದರೂ ನೀನು ಇವುಗಳೊಂದಿಗೆ ಲಿಪ್ತನಾಗುವುದಿಲ್ಲ, ನೀನು ನಿನ್ನ ಅಖಂಡ ಆನಂದದಲ್ಲಿ ಮಗ್ನನಾಗಿರುವೆ. ನಿನ್ನೊಳಗೆ ಮಾಯೆಯ ಯಾವುದೇ ವ್ಯವಧಾನವಿಲ್ಲ, ನೀನು ನಿರಂಜನನಾಗಿದ್ದು ನಿನ್ನ ಅಖಂಡ ಸ್ವರೂಪ ಪರಮಾನಂದದಲ್ಲಿ ಮುಳುಗಿರುವೆ. ॥ ೮ ॥ ಸ್ತುತಿಸಲು ಯೋಗ್ಯನಾದ ಓ ಪರಮಾತ್ಮನೇ ! ಅಂತಃಕರಣ ಶುದ್ಧವಿಲ್ಲದ ಜನರ ಚಿತ್ತಶುದ್ಧಿಯು ವಿದ್ಯಾಭ್ಯಾಸದಿಂದಾಗಲೀ, ವೇದಾಧ್ಯಯನದಿಂದಾಗಲೀ, ದಾನ, ತಪಸ್ಸು, ಯಜ್ಞಾದಿ ಕ್ರಿಯೆಗಳಿಂದಾಗಲೀ, ಆಗುವುದಿಲ್ಲ, ಆದರೆ ಓ ದೇವಶ್ರೇಷ್ಠನೇ ! ಶುದ್ಧ ಅಂತಃಕರಣವುಳ್ಳ ನಿನ್ನ ಭಕ್ತರು ನಿನ್ನ ಲೀಲಾಕಥೆಗಳನ್ನು, ಮಹಿಮೆಯನ್ನು, ಯಶಸ್ಸನ್ನು, ನಿನ್ನ ಕಲ್ಯಾಣ ಗುಣಗಳನ್ನು ವರ್ಣಿಸುತ್ತಾ, ಶ್ರವಣಿಸುತ್ತಾರೆ. ಈ ಶ್ರವಣದಿಂದ ಉಂಟಾದ ಶ್ರದ್ಧೆಯಿಂದ ಉತ್ಕಟಭಕ್ತಿ ಉಂಟಾಗುತ್ತದೆ. ಅದರಿಂದ ಅವರ ಅಂತಃಕರಣವು ತತ್‌ಕಾಲವೇ ಪವಿತ್ರವಾಗುತ್ತದೆ. ॥ ೯ ॥ ಓ ಪ್ರಭುವೇ ! ನಿನ್ನ ಚರಣಕಮಲಗಳು ನಮ್ಮ ಎಲ್ಲ ಅಮಂಗಳಗಳನ್ನು ಬೆಂಕಿಯಾಗಿ ಸುಟ್ಟು ನಾಶವಾಗಿಸಲಿ. ನಿನ್ನ ಇವೇ ಚರಣಕಮಲಗಳನ್ನು ನಿನ್ನ ಭಕ್ತರು ಪ್ರೇಮಮಗ್ನರಾಗಿ ತಮ್ಮ ಹೃದಯದಲ್ಲಿ ಧರಿಸುತ್ತಿರುವರು. ಇವು ನಮ್ಮ ಶ್ರೇಯಸ್ಸನ್ನು ವಿಸ್ತರಿಸುವಂತಾಗಲಿ. ಇಂದ್ರಿಯಗಳನ್ನು ವಶದಲ್ಲಿರಿಸಿಕೊಂಡಂತಹ ನಿನ್ನ ಭಕ್ತರು ನಿನ್ನ ಸಾಯುಜ್ಯವನ್ನು ಪಡೆಯುವುದಕ್ಕಾಗಿ ಮೂರೂ ಕಾಲಗಳಲ್ಲಿ ವಾಸುದೇವ - ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧರ ವ್ಯೂಹದಲ್ಲಿ ನಿನ್ನ ಇವೇ ಚರಣಕಮಲಗಳನ್ನು ಉಪಾಸಿಸುತ್ತಾ ಸ್ವರ್ಗವನ್ನು ಅತಿಕ್ರಮಿಸಿ ನಿನ್ನ ಧಾಮಕ್ಕೆ ತೆರಳುತ್ತಾರೆ. ॥ ೧೦ ॥ ನಿನ್ನ ಭಕ್ತರು ವೇದೋಕ್ತವಿಧಿಯಿಂದ ಪುರೋಡಾಷಾದಿ ಹವಿಸ್ಸನ್ನು ಮೂರು ವೇದಗಳ ಮಂತ್ರಗಳಿಂದಲೂ, ನಿರುಕ್ತದ ವಿಧಾನವನ್ನು ಅನುಸರಿಸಿ ಅಗ್ನಿಯಲ್ಲಿ ಹೋಮಮಾಡುವಾಗಲೂ ಇವೇ ಚರಣಕಮಲಗಳನ್ನು ಚಿಂತಿಸುವರು. ಜ್ಞಾನಮಾರ್ಗದ ಮೂಲಕ ಸಾಕ್ಷಾತ್ಕಾರ ಪಡೆಯಲು ಯೋಗಿಗಳು ಇವೇ ಚರಣಕಮಲಗಳನ್ನು ಧ್ಯಾನಿಸುವರು. ಹೀಗೆಯೇ ನಿನ್ನ ಮಾಯೆಯ ಸ್ವರೂಪವನ್ನು ತಿಳಿಯಬಯಸುವ

---

* ಇಲ್ಲಿ ಸಾಷ್ಟಾಂಗ ಪ್ರಣಾಮವನ್ನು ಹೇಳಿದ್ದಾರೆ –
ದೋರ್ಭ್ಯಾಂ ಪದ್ಭ್ಯಾಂ ಚ ಜಾನುಭ್ಯಾಮುರಸಾ ಶಿರಸಾ ದೃಶಾ । ಮನಸಾ ವಚಸಾ ಚೈವ ಪ್ರಣಾಮೋऽಷ್ಟಾಂಗ ಈರಿತಃ ॥
ಏಕಕಾಲದಲ್ಲಿ ಕೈಗಳಿಂದಲೂ, ಕಾಲುಗಳಿಂದಲೂ, ಮಂಡಿಗಳಿಂದಲೂ, ವಕ್ಷಸ್ಥಳದಿಂದಲೂ, ಶಿರಸ್ಸಿನಿಂದಲೂ, ಕಣ್ಣುಗಳಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಮಾಡುವ ನಮಸ್ಕಾರಕ್ಕೆ ಸಾಷ್ಟಾಂಗನಮಸ್ಕಾರವೆಂದು ಹೇಳುತ್ತಾರೆ.
ಇಲ್ಲಿ ಭಗವಂತನ ಪಾದಾರವಿಂದಗಳಲ್ಲಿ ಮಾನಸಿಕ ಪ್ರಣಾಮ, ವಾಚಿಕ ಪ್ರಣಾಮ, ಕಾಯಿಕ ಪ್ರಣಾಮ ಎಂಬ ಮೂರು ಬಗೆಯ ಪ್ರಣಾಮ ಹೇಳಿದೆ. ಬುದ್ಧಿ ಶಬ್ದದಿಂದ ಮಾನಸಿಕ, ವಚಃಶಬ್ದದಿಂದ ವಾಚಿಕ ಮತ್ತು ಇಂದ್ರಿಯ, ಪ್ರಾಣ ಇವುಗಳಿಂದ ಕಾಯಿಕ ನಮಸ್ಕಾರವೂ ಹೇಳಲ್ಪಟ್ಟಿದೆ.

ಪರ್ಯುಷ್ಟಯಾ ತವ ವಿಭೋ ವನಮಾಲಯೇಯಂ
ಸಂಸ್ಪರ್ಧಿನೀ ಭಗವತೀ ಪ್ರತಿಪತ್ನಿವಚ್ಛ್ರೀಃ ।

ಯಃ ಸುಪ್ರಣೀತಮಮುಯಾರ್ಹಣಮಾದದನ್ನೋ
ಭೂಯಾತ್ಸದಾಂಘ್ರಿರಶುಭಾಶಯಧೂಮಕೇತುಃ
॥ ೧೨ ॥

ಕೇತುಸ್ತ್ರಿವಿಕ್ರಮಯುತಸ್ತ್ರಿಪತತ್ಪತಾಕೋ
ಯಸ್ತೇ ಭಯಾಭಯಕರೋಽಸುರದೇವಚಮ್ವೋಃ ।

ಸ್ವರ್ಗಾಯ ಸಾಧುಷು ಖಲೇಷ್ವಿತರಾಯ ಭೂಮನ್
ಪಾದಃ ಪುನಾತು ಭಗವನ್ ಭಜತಾಮಘಂ ನಃ
॥ ೧೩ ॥

ನಸ್ಯೋತಗಾವ ಇವ ಯಸ್ಯ ವಶೇ ಭವಂತಿ
ಬ್ರಹ್ಮಾದಯಸ್ತನುಭೃತೋ ಮಿಥುರರ್ದ್ಯಮಾನಾಃ ।

ಕಾಲಸ್ಯ ತೇ ಪ್ರಕೃತಿಪೂರುಷಯೋಃ ಪರಸ್ಯ
ಶಂ ನಸ್ತನೋತು ಚರಣಃ ಪುರುಷೋತ್ತಮಸ್ಯ
॥ ೧೪ ॥

ಜಿಜ್ಞಾಸುಭಕ್ತರೂ ಕೂಡ ನಿನ್ನ ಚರಣಗಳನ್ನೇ ನೆನೆಯುತ್ತಾರೆ. ಈ ವಿಧವಾಗಿ ನಿನ್ನ ಪ್ರೇಮಿಭಕ್ತರು ನಿನ್ನ ಚರಣಕಮಲಗಳನ್ನೇ ತಮ್ಮ ಸರ್ವೋತ್ಕೃಷ್ಟ ಪರಮ ಆರಾಧ್ಯವೆಂದು ತಿಳಿದು ಇವುಗಳನ್ನೇ ಉಪಾಸಿಸುತ್ತಾರೆ. ॥ ೧೧ ॥ ಓ ಪ್ರಭುವೇ! ನಿನ್ನ ಭಕ್ತರು ಪ್ರೇಮದಿಂದ ಅರ್ಪಿಸುವ ವನಮಾಲೆಯನ್ನು ನೀನು ತುಂಬಾ ಸಮ್ಮಾನದಿಂದ ಸ್ವೀಕರಿಸುತ್ತಿರುವೆ. ಭಕ್ತರ ಕುರಿತು ನಿನಗಿರುವ ವಿಲಕ್ಷಣಪ್ರೇಮದ ಪ್ರತ್ಯಕ್ಷ ಉದಾಹರಣೆ ಇದಾಗಿದೆ. ಸಾಕ್ಷಾತ್ ಭಗವತಿ ಲಕ್ಷ್ಮಿಯೂ ನಿನ್ನಲ್ಲಿ ಪ್ರೇಮವಿಟ್ಟಿರುವಳು. ಆದರೆ ನಿನ್ನ ವಕ್ಷಸ್ಥಳದಲ್ಲಿ ಸುತ್ತಲೂ ಹರಡಿಕೊಂಡಿರುವ ವನಮಾಲೆಯನ್ನು ನೋಡಿ ಹಾಗೂ ಭಕ್ತರ ಕುರಿತು ನಿನಗಿರುವ ವಿಶೇಷ ಪ್ರೇಮವನ್ನು ನೋಡಿ ಸವತಿಯಂತೆ ವನಮಾಲೆಯೊಂದಿಗೆ ಸ್ಪರ್ಧಿಸುತ್ತಿರುವಳು. ಆ ವನಮಾಲೆಯಲ್ಲಿ ತುಳಸಿಯೂ ಇರುತ್ತದೆ. ತುಳಸಿಯನ್ನು ಅರ್ಪಿಸುವುದರಿಂದ ನಿನ್ನ ಪೂಜೆಯು ಸಾಂಗವಾಗಿ ಪೂರ್ಣಗೊಂಡು, ನೀನು ಇನ್ನೂ ಹೆಚ್ಚು ಪ್ರಸನ್ನನಾಗುವೆ. ಅಂತಹ ವನಮಾಲೆಯಿಂದ ಸಮಲಂಕೃತವಾದ ನಿನ್ನ ಚರಣಕಮಲಗಳು ನಮ್ಮ ಎಲ್ಲ ವಿಷಯವಾಸನೆಗಳನ್ನು ಭಸ್ಮಮಾಡುವ ಅಗ್ನಿಯಂತಾಗಲಿ. ॥ ೧೨ ॥ ವಾಮನಾವತಾರದಲ್ಲಿ ದೈತ್ಯನಾದ ಬಲಿಯು ದಾನಮಾಡಿದ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಅಳೆಯುವಾಗ ಮೊದಲನೆಯ ಹೆಜ್ಜೆಯಿಂದ ಭೂಮಂಡಲವನ್ನೇ ವ್ಯಾಪಿಸಿ, ಎರಡನೆಯ ಹೆಜ್ಜೆಯು ವ್ಯೋಮವನ್ನು ಅತಿಕ್ರಮಿಸಿದಾಗ ಸತ್ಯಲೋಕವನ್ನೂ ವ್ಯಾಪಿಸಿದ ಆ ದಿವ್ಯಪಾದವು ದೊಡ್ಡದಾದ ವಿಜಯಧ್ವಜದಂತೆ ಕಂಗೊಳಿಸಿತು. ಆಗ ಬ್ರಹ್ಮದೇವರು ಆ ಪವಿತ್ರಪಾದವನ್ನು ತೊಳೆದು ಆ ಪಾದೋದಕವನ್ನು ತನ್ನ ಕಮಂಡಲುವಿನಲ್ಲಿರಿಸಿಕೊಂಡರು. ಅಲ್ಲಿಂದ ಹೊರಟ ಮೂರು ಪ್ರವಾಹಗಳು ಭಾಗೀರಥಿ ಗಂಗೆಯಾಗಿ ಹರಿದು ನಿನ್ನ ಕೀರ್ತಿ ಪತಾಕೆಯಂತೆ ಕಾಣುತ್ತಿದ್ದವು. ಇದನ್ನು ನೋಡಿ ಅಸುರ ಸೈನ್ಯವು ಭಯಗೊಂಡಿತು. ಭಕ್ತರು, ದೇವತೆಗಳು ನಿರ್ಭಯರಾದರು. ಹೇ ಪರಬ್ರಹ್ಮ ಸ್ವರೂಪಿಯೇ! ಅಂತಹ ನಿನ್ನ ಪಾದಕಮಲವು ಸಾಧು-ಸತ್ಪುರುಷರನ್ನು ಪರಮಧಾಮಕ್ಕೆ ಒಯ್ಯುವುದಕ್ಕೂ, ದುಷ್ಟರನ್ನು ಅಧೋಗತಿಗೆ ತಳ್ಳುವುದಕ್ಕೂ ಕಾರಣವಾಗಿದೆ. ಅಂತಹ ನಿನ್ನ ದಿವ್ಯ-ಸುಂದರ-ಪವಿತ್ರ ಪಾದಾರವಿಂದವು ಪ್ರಾರ್ಥಿಸುತ್ತಿರುವ ನಮ್ಮ ಪಾಪಗಳನ್ನು ಕಳೆದು ನಮ್ಮನ್ನು ಅನವರತವಾಗಿ ರಕ್ಷಿಸಲಿ. ॥ ೧೩ ॥ ಸತ್ತ್ವ-ರಜ-ತಮೋಗುಣಿಗಳಾದ ಬ್ರಹ್ಮನೇ ಮೊದಲಾದ ಸಮಸ್ತ ಶರೀರಧಾರೀ ಜೀವರು ಪರಸ್ಪರವಾಗಿ ಡಿಕ್ಕಿಹೊಡೆಯುತ್ತಿದ್ದರೂ ಮೂಗುದಾರವನ್ನು ಹಾಕಿದ ಎತ್ತು ಒಡೆಯನ ಹಿಡಿತದಲ್ಲಿರುವಂತೆ ಅವರೆಲ್ಲರೂ ನಿನ್ನ ವಶವರ್ತಿಗಳಾಗಿಯೇ ಇರುತ್ತಾರೆ. ನೀನು ಪ್ರಕೃತಿ ಮತ್ತು ಪುರುಷರಿಗಿಂತಲೂ ಮೀರಿದ ಕಾಲಸ್ವರೂಪವಾಗಿರುವೆ. ಅಂತಹ ಪುರುಷೋತ್ತಮ ಸ್ವರೂಪೀ ನಿನ್ನ ಚರಣಕಮಲಗಳು ನಮ್ಮ ಶ್ರೇಯಸ್ಸನ್ನು ವಿಸ್ತರಿಸಲಿ. ॥ ೧೪ ॥

ಅಸ್ಯಾಸಿ ಹೇತುರುದಯಸ್ಥಿತಿಸಂಯಮಾನಾ-
ಮವ್ಯಕ್ತಜೀವಮಹತಾಮಪಿ ಕಾಲಮಾಹುಃ ।
ಸೋಽಯಂ ತ್ರಿಣಾಭಿರಖಿಲಾಪಚಯೇ ಪ್ರವೃತ್ತಃ
ಕಾಲೋ ಗಭೀರರಯ ಉತ್ತಮಪೂರುಷಸ್ತ್ವಮ್ ॥ ೧೫ ॥

ನೀನೇ ಈ ಜಗತ್ತಿನ ಉತ್ಪತ್ತಿ , ಸ್ಥಿತಿ, ಸಂಹಾರ ಇವುಗಳ ಪರಮ ಕಾರಣನಾಗಿರುವೆ. ನೀನೇ ಅವ್ಯಕ್ತ (ಮೂಲಪ್ರಕೃತಿ), ಪುರುಷ , ಮಹತ್ತತ್ತ್ವ ಇವೆಲ್ಲದರ ನಿಯಾಮಕನಾಗಿರುವೆ. ಕಾಲಸ್ವರೂಪನೂ ನೀನೇ ಆಗಿರುವೆ. ಸಂವತ್ಸರ ರೂಪದಿಂದ ಶೀತಕಾಲ, ಬೇಸಿಗೆ ಕಾಲ, ಮಳೆಗಾಲ ಎಂಬ ಈ ಮೂರು ಋತುಗಳು ಮೂರು ಸುಳಿಗಳ ರೂಪದಲ್ಲಿ ನಿನ್ನ ಕಾಲಚಕ್ರ ವನ್ನು ಅತಿವೇಗವಾಗಿ ತಿರುಗಿಸುತ್ತಿವೆ. ಆ ಕಾಲವು ಎಲ್ಲರ ನಾಶ ಮಾಡುವುದರಲ್ಲಿ ವೇಗವಾಗಿ ತೊಡಗಿದೆ. ಹೀಗೆ ಇವೆಲ್ಲದರ ಶಾಸಕ ಉತ್ತರ ಪುರುಷನು ನೀನೇ ಆಗಿರುವೆ. ॥ ೧೫ ॥

ತ್ವತ್ತಃ ಪುಮಾನ್ಸಮಧಿಗಮ್ಯ ಯಯಾ ಸ್ವವೀರ್ಯಂ
ಧತ್ತೇ ಮಹಾಂತಮಿವ ಗರ್ಭಮಮೋಘವೀರ್ಯಃ ।
ಸೋಽಯಂ ತಯಾನುಗತ ಆತ್ಮನ ಆಂಡಕೋಶಂ
ಹೈಮಂ ಸಸರ್ಜ ಬಹಿರಾವರಣೈರುಪೇತಮ್ ॥ ೧೬ ॥

ಸೂತ್ರಾತ್ಮಾ ಹಿರಣ್ಯ ಗರ್ಭನು ನಿನ್ನಿಂದಲೇ ಶಕ್ತಿಯನ್ನು ಪಡೆದು ಅಮೋಘವೀರ್ಯನಾಗಿ ಮಾಯೆಯೊಡನೆ ಸೇರಿಕೊಂಡು ಜಗತ್ತಿನ ಗರ್ಭದಂತಿರುವ ಮಹತ್ತತ್ತ್ವವನ್ನು ಧರಿಸುವನು. ಮತ್ತೆ ಆ ಮಹತ್ತತ್ತ್ವವೇ (ಹಿರಣ್ಯಗರ್ಭ ಬ್ರಹ್ಮಾ) ತ್ರಿಗುಣಾತ್ಮಕವಾದ ಮಾಯೆಯನ್ನು ಅನುಸರಿಸಿ, ಪೃಥಿವಿ, ಜಲ, ತೇಜಸ್ಸು ವಾಯು, ಆಕಾಶ, ಅಹಂಕಾರ ಮತ್ತು ಮಹತ್ತತ್ತ್ವ ಇವುಗಳ ರೂಪವಾದ ಏಳು ಆವರಣಗಳಿಂದ ಕೂಡಿದ ಸುವರ್ಣಮಯವಾದ ಬ್ರಹ್ಮಾಂಡವನ್ನು ಸೃಷ್ಟಿಸಿತು. ಈ ವಿರಾಟ್ ಬ್ರಹ್ಮಾಂಡವು ನಿನ್ನಿಂದಲೇ ಪ್ರಕಟವಾಗಿದೆ. ॥ ೧೬ ॥ ನೀನೇ ಈ ಚರಾಚರ ಜಗತ್ತಿನ ಅಧೀಶ್ವರನಾಗಿರುವೆ. ಇಡೀ ಈ ಜಗತ್ತು ಮಾಯೆಯ ಗುಣಗಳಿಂದ ಮತ್ತು ಅವುಗಳ ವಿಕ್ರಿಯೆಯಿಂದಲೇ ಉಂಟಾಗಿದೆ. ಹೇ ಹೃಷೀಕೇಶಾ! ನೀನೇ ಎಲ್ಲ ಇಂದ್ರಿಯಗಳ ಒಡೆಯನಾಗಿದ್ದು, ಅವುಗಳ ವಿಷಯಗಳ ಭೋಕ್ತಾನೂ ನೀನೇ ಆಗಿರುವೆ. ಆದರೆ ನೀನಾದರೋ ಅವುಗಳನ್ನು ಭೋಗಿಸುತ್ತಿದ್ದರೂ ಅವುಗಳಲ್ಲಿ ಲಿಪ್ತನಾಗಿರುವುದಿಲ್ಲ. ಇದು ನಿನ್ನ ಆಶ್ಚರ್ಯವೇ ಆಗಿದೆ. ಆದರೆ ಬೇರೆಯವರು ಸ್ವತಃ ಆ ಭೋಗಗಳನ್ನು ತ್ಯಾಗ ಮಾಡಿಬಿಡುವರು. ಅವರು ತ್ಯಾಗಮಾಡಿದ ಬಳಿಕವೂ ಆ ವಿಷಯಗಳೊಂದಿಗೆ ಹೆದರುತ್ತಿರುತ್ತಾರೆ. ॥ ೧೭ ॥ ಹದಿನಾರು ಸಾವಿರ ರಾಣಿಯರು ನಿನ್ನ ಅಂತಃಪುರದಲ್ಲಿದ್ದು, ಅವರೆಲ್ಲರೂ ತಮ್ಮ-ತಮ್ಮ ಕಿರುನಗೆಯಿಂದಲೂ, ಕುಡಿಗಣ್ಣಿನ ನೋಟದಿಂದ, ಮನೋಹರ ಹಾವ-ಭಾವದಿಂದ ನಿನ್ನನ್ನು ನೋಡುತ್ತಿರುತ್ತಾರೆ. ಸುರತ ಮಂತ್ರದಲ್ಲಿ ಪ್ರವೀಣರಾದ ಅವರೆಲ್ಲರೂ ತಮ್ಮ ಕಾಮ ಬಾಣಗಳನ್ನು ನಿನ್ನ ಮೇಲೆ ಎಸೆಯುತ್ತಿರುತ್ತಾರೆ. ಆದರೆ ಅವರು ನಿನ್ನ ಇಂದ್ರಿಯಗಳನ್ನು ಅಸ್ಥಿರಗೊಳಿಸಲು ಸ್ವಲ್ಪವೂ ಸಮರ್ಥರಾಗಲಿಲ್ಲ. ॥ ೧೮ ॥ ಆದರೆ ನಿನ್ನ ಎರಡು ಪುಣ್ಯಮಯ ನದಿಗಳು ತ್ರಿಲೋಕಗಳ ಎಲ್ಲ ಪಾಪಗಳನ್ನು ತೊಳೆಯಲು ಪೂರ್ಣವಾಗಿ ಸಮರ್ಥವಾಗಿವೆ. ಒಂದು :– ನಿನ್ನ ಅಮೃತಮಯವಾದ ಲೀಲೆಗಳಿಂದ ಸಮೃದ್ಧವಾದ ಹರಿಕಥಾನದಿ. ಅದನ್ನು ನಿರಂತರ ಕಿವಿಗಳಿಂದ ಶ್ರವಣಿಸಿದರೆ ಹೃದಯ ನಿರ್ಮಲವಾಗುತ್ತದೆ. ಇನ್ನೊಂದು ನಿನ್ನ ಪಾದ ಪ್ರಕ್ಷಾಳನದಿಂದ ಹೊರಟ ಗಂಗಾನದಿ. ಅದರಲ್ಲಿ ಸ್ನಾನಮಾಡಿದರೆ ಜನರು ಪುನೀತರಾಗುತ್ತಾರೆ. ಹೀಗೆ ಇವೆರಡೂ ಪವಿತ್ರ ನದಿಗಳನ್ನು ಪುಣ್ಯಾತ್ಮರಾದ ಸಜ್ಜನರು ನಿರಂತರ ಸೇವಿಸುತ್ತಾ ಇರುತ್ತಾರೆ. ॥ ೧೯ ॥

ತತ್ತಸ್ಥುಷಶ್ಚ ಜಗತಶ್ಚ ಭವಾನಧೀಶೋ
ಯನ್ಮಾಯಯೋತ್ಥಗುಣವಿಕ್ರಿಯಯೋಪನೀತಾನ್ ।
ಅರ್ಥಾನ್ ಜುಷನ್ನಪಿ ಹೃಷೀಕಪತೇ ನ ಲಿಪ್ತೋ
ಯೇಽನ್ಯೇ ಸ್ವತಃ ಪರಿಹೃತಾದಪಿ ಬಿಭ್ಯತಿ ಸ್ಮ ॥ ೧೭ ॥

ಸ್ಮಾಯಾವಲೋಕಲವದರ್ಶಿತಭಾವಹಾರಿ-
ಭ್ರೂಮಂಡಲಪ್ರಹಿತಸೌರತಮಂತ್ರಶೌಂಡೈಃ ।
ಪತ್ನ್ಯಸ್ತು ಷೋಡಶಸಹಸ್ರಮನಂಗಬಾಣೈ-
ರ್ಯಸ್ಯೇಂದ್ರಿಯಂ ವಿಮಥಿತುಂ ಕರಣೈರ್ನ ವಿಭ್ಯುಃ ॥ ೧೮ ॥

ವಿಭ್ಯದ್ಭವಾಮೃತಕಥೋದವಹಾಸ್ತ್ರಿಲೋಕ್ಯಾಃ
ಪಾದಾವನೇಜಸರಿತಃ ಶಮಲಾನಿ ಹಂತುಮ್ ।
ಆನುಶ್ರವಂ ಶ್ರುತಿಭಿರಂಘ್ರಿಜಮಂಗಸಂಗೈ-
ಸ್ತೀರ್ಥದ್ವಯಂ ಶುಚಿಷದಸ್ತ ಉಪಸ್ಪೃಶಂತಿ ॥ ೧೯ ॥

ಶ್ರೀಶುಕ ಉವಾಚ

ಇತ್ಯಭಿಷ್ಟೂಯ ವಿಬುಧೈಃ ಸೇಶಃ ಶತಧೃತಿರ್ಹರಿಮ್ ।
ಅಭ್ಯಭಾಷತ ಗೋವಿಂದಂ ಪ್ರಣಮ್ಯಾಂಬರಮಾಶ್ರಿತ
॥ ೨೦ ॥

ಬ್ರಹ್ಮೋವಾಚ

ಭೂಮೇರ್ಭಾರಾವತಾರಾಯ ಪುರಾ ವಿಜ್ಞಾಪಿತಃ ಪ್ರಭೋ ।
ತ್ವಮಸ್ಮಾಭಿರಶೇಷಾತ್ಮಂಸ್ತತ್ತಥೈವೋಪಪಾದಿತಮ್
॥ ೨೧ ॥

ಧರ್ಮಶ್ಚ ಸ್ಥಾಪಿತಃ ಸತ್ಸು ಸತ್ಯಸಂಧೇಷು ವೈ ತ್ವಯಾ ।
ಕೀರ್ತಿಶ್ಚ ದಿಕ್ಷು ವಿಕ್ಷಿಪ್ತಾ ಸರ್ವಲೋಕಮಲಾಪಹಾ
॥ ೨೨ ॥

ಅವತೀರ್ಯ ಯದೋರ್ವಂಶೇ ಬಿಭ್ರದ್ರೂಪಮನುತ್ತಮಮ್ ।
ಕರ್ಮಾಣ್ಯುದ್ದಾಮವೃತ್ತಾನಿ ಹಿತಾಯ ಜಗತೋಽಕೃಥಾಃ
॥ ೨೩ ॥

ಯಾನಿ ತೇ ಚರಿತಾನೀಶ ಮನುಷ್ಯಾಃ ಸಾಧವಃ ಕಲೌ ।
ಶೃಣ್ವಂತಃ ಕೀರ್ತಯಂತಶ್ಚ ತರಿಷ್ಯಂತ್ಯಂಜಸಾ ತಮಃ
॥ ೨೪ ॥

ಯದುವಂಶೇಽವತೀರ್ಣಸ್ಯ ಭವತಃ ಪುರುಷೋತ್ತಮ ।
ಶರಚ್ಛತಂ ವ್ಯತೀಯಾಯ ಪಂಚವಿಂಶಾಧಿಕಂ ಪ್ರಭೋ
॥ ೨೫ ॥

ನಾಧುನಾ ತೇಽಖಿಲಾಧಾರ ದೇವಕಾರ್ಯಾವಶೇಷಿತಮ್ ।
ಕುಲಂ ಚ ವಿಪ್ರಶಾಪೇನ ನಷ್ಟಪ್ರಾಯಮಭೂದಿದಮ್
॥ ೨೬ ॥

ತತಃ ಸ್ವಧಾಮ ಪರಮಂ ವಿಶಸ್ವ ಯದಿ ಮನ್ಯಸೇ ।
ಸಲೋಕಾನ್ಲೋಕಪಾಲಾನ್ ನಃ ಪಾಹಿ ವೈಕುಂಠ ಕಿಂಕರಾನ್
॥ ೨೭ ॥

ಶ್ರೀಭಗವಾನುವಾಚ

ಅವಧಾರಿತಮೇತನ್ಮೇ ಯದಾತ್ಥ ವಿಬುಧೇಶ್ವರ ।
ಕೃತಂ ವಃ ಕಾರ್ಯಮಖಿಲಂ ಭೂಮೇರ್ಭಾರೋಽವತಾರಿತಃ
॥ ೨೮ ॥

ತದಿದಂ ಯಾದವಕುಲಂ ವೀರ್ಯಶೌರ್ಯಶ್ರಿಯೋದ್ಧತಮ್ ।
ಲೋಕಂ ಜಿಘೃಕ್ಷದ್ಧ್ರುದ್ಧಂ ಮೇ ವೇಲಯೇವ ಮಹಾರ್ಣವಃ
॥ ೨೯ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜಾ ! ಸಮಸ್ತ ದೇವತೆಗಳೂ, ಮತ್ತು ಭಗವಾನ್ ಶಂಕರನೊಂದಿಗೆ ಬ್ರಹ್ಮ ದೇವರು ಈ ವಿಧವಾಗಿ ಭಗವಂತನನ್ನು ಸ್ತುತಿಸಿದರು. ಬಳಿಕ ಅವರು ವಂದಿಸಿ ತಮ್ಮ ಸ್ವಧಾಮಕ್ಕೆ ಹಿಂದಿರುಗಲು ಸಿದ್ಧರಾಗಿ ಅಂತರಿಕ್ಷದಲ್ಲಿ ನಿಂತು ಭಗವಾನ್ ಗೋವಿಂದನನ್ನು ಕುರಿತು ಇಂತೆಂದರು – ॥ ೨೦ ॥

ಬ್ರಹ್ಮದೇವರು ಹೇಳಿದರು – "ಸರ್ವಾತ್ಮನಾದ ಪ್ರಭುವೇ ! ಈ ಮೊದಲು ನಾವು ನಿನ್ನಲ್ಲಿ ಭೂಭಾರಹರಣಕ್ಕಾಗಿ ಭುವಿಯಲ್ಲಿ ಅವತರಿಸಲು ಪ್ರಾರ್ಥಿಸಿದ್ದೆವು. ಅದನ್ನು ನೀನು ನಮ್ಮ ಪ್ರಾರ್ಥನೆಗನುಸಾರ ಯಥೋಚಿತವಾದ ರೀತಿಯಲ್ಲಿ ಪೂರ್ಣಗೊಳಿಸಿದೆ ॥ ೨೧ ॥ ಸತ್ಯಪರಾಯಣನಾದ ನೀನು ಸಾಧುಸತ್ಪುರುಷರ ಕಲ್ಯಾಣಾರ್ಥವಾಗಿ ಧರ್ಮವನ್ನು ಪುನಃ ನೆಲೆಗೊಳಿಸಿರುವೆ. ಸಮಸ್ತ ಲೋಕಗಳ ಪಾಪಗಳನ್ನು ಪರಿಹರಿಸುವ ನಿನ್ನ ಧವಳಕೀರ್ತಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಹರಡಿರುವೆ. ॥ ೨೨ ॥ ನೀನು ಈ ಸರ್ವೋತ್ತಮ ರೂಪವನ್ನು ಧರಿಸಿ ಯದುವಂಶದಲ್ಲಿ ಅವತರಿಸಿದೆ. ಜಗತ್ತಿನ ಹಿತಕ್ಕಾಗಿ ಉದಾರ ಪರಾಕ್ರಮವುಳ್ಳ ಅನೇಕ ಲೀಲೆಗಳನ್ನು ನಡೆಸಿದೆ. ॥ ೨೩ ॥ ಪ್ರಭುವೇ ! ಕಲಿಯುಗದಲ್ಲಿ ನಿನ್ನ ಈ ಲೀಲೆಗಳನ್ನು ಶ್ರವಣಿಸುವ, ಕೀರ್ತಿಸುವ, ಸಾಧುಸ್ವಭಾವವುಳ್ಳ ಮನುಷ್ಯರು ಬಹಳ ಸುಲಭವಾಗಿ ಅಜ್ಞಾನಾಂಧಕಾರವನ್ನು ದಾಟಿಬಿಡುತ್ತಾರೆ. ॥ ೨೪ ॥ ಪುರುಷೋತ್ತಮನೇ ! ಸರ್ವಶಕ್ತ ಪ್ರಭುವೇ ! ನೀನು ಯದುವಂಶದಲ್ಲಿ ಅವತರಿಸಿ ಒಂದುನೂರಇಪ್ಪತ್ತೈದು ವರ್ಷಗಳು ಕಳೆದುಹೋಗಿವೆ. ॥ ೨೫ ॥ ಸರ್ವಾಧಾರನೇ ! ಈಗ ದೇವತೆಗಳಾದ ನಮ್ಮ ಎಲ್ಲ ಕಾರ್ಯಗಳನ್ನು ಚೆನ್ನಾಗಿ ನೀನು ನಡೆಸಿಕೊಟ್ಟಿರುವೆ. ಈಗ ಯಾವುದೇ ಕಾರ್ಯವು ಬಾಕಿ ಉಳಿಯಲಿಲ್ಲ. ಬ್ರಾಹ್ಮಣರ ಶಾಪದ ಕಾರಣ ಈ ಯದುವಂಶವೂ ಕೂಡ ಒಂದು ರೀತಿಯಿಂದ ನಾಶವಾಗಿಯೇ ಹೋಗಿದೆ. ॥ ೨೬ ॥ ಆದುದರಿಂದ ಹೇ ವೈಕುಂಠನಾಥನೇ ! ನಿನಗೆ ಉಚಿತವೆನಿಸಿದರೆ ನಿನ್ನ ಪರಮಧಾಮಕ್ಕೆ ಹಿಂದಿರುಗುವವನಾಗು. ಅಲ್ಲಿ ನಿನ್ನ ಸೇವಕರಾದ ನಮ್ಮನ್ನೂ, ಲೋಕಪಾಲಕರನ್ನೂ ಮತ್ತು ನಮ್ಮ ಲೋಕಗಳನ್ನು ಪಾಲಿಸಿ ಪೋಷಿಸುವವನಾಗು." ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ದೇವತೆಗಳೊಡೆಯ ಬ್ರಹ್ಮನೇ ! ನೀನು ಹೇಳಿದುದನ್ನೇ ನಾನೂ ಕೂಡ ಮೊದಲೇ ನಿಶ್ಚಯ ಮಾಡಿರುವೆನು. ನಾನು ನಿಮ್ಮ ಕಾರ್ಯಗಳನ್ನೆಲ್ಲ ಪೂರೈಸಿ ಭೂಮಿಯ ಭಾರವನ್ನು ಇಳುಹಿಸಿರುವೆನು. ॥ ೨೮ ॥ ಆದರೆ ಒಂದು ಕಾರ್ಯ ಹಾಗೆಯೇ ಉಳಿದಿದೆ. ಈ ಯದುವಂಶೀಯರು ಬಲ-ವಿಕ್ರಮಗಳಿಂದಲೂ, ವೀರ್ಯ-ಶೌರ್ಯಾದಿಗಳಿಂದಲೂ, ಧನ-ಸಂಪತ್ತಿನಿಂದಲೂ ಉನ್ಮತ್ತರಾಗಿ ಬಿಟ್ಟಿದ್ದಾರೆ. ಲೋಕವನ್ನೇ ನುಂಗಿಹಾಕಬೇಕೆಂದಿರುವ ಅವರ ತವಕವನ್ನು ನಾನು ಕಡಲದಡವು ಕಡಲನ್ನು ತಡೆಹಿಡಿದಂತೆ ತಡೆ ಹಿಡಿದಿಟ್ಟಿರುವೆನು. ॥ ೨೯ ॥ ನಾನೇನಾದರೂ

ಯದ್ಯಸಂಹೃತ್ಯ ದೃಪ್ತಾನಾಂ ಯದೂನಾಂ ವಿಪುಲಂ ಕುಲಮ್ ।
ಗಂತಾಸ್ಮ್ಯನೇನ ಲೋಕೋ೭ಯಮುದ್ವೇಲೇನ ವಿನಂಕ್ಷ್ಯತಿ
॥ ೩೦ ॥

ಇದಾನೀಂ ನಾಶ ಆರಬ್ಧಃ ಕುಲಸ್ಯ ದ್ವಿಜಶಾಪತಃ ।
ಯಾಸ್ಯಾಮಿ ಭವನಂ ಬ್ರಹ್ಮನ್ನೇತದಂತೇ ತವಾನಘ
॥ ೩೧ ॥

ಶ್ರೀಶುಕ ಉವಾಚ

ಇತ್ಯುಕ್ತೋ ಲೋಕನಾಥೇನ ಸ್ವಯಂಭೂಃ ಪ್ರಣಿಪತ್ಯ ತಮ್ ।
ಸಹ ದೇವಗಣೈರ್ದೇವಃ ಸ್ವಧಾಮ ಸಮಪದ್ಯತ
॥ ೩೨ ॥

ಅಥ ತಸ್ಯಾಂ ಮಹೋತ್ಪಾತಾಂದ್ವಾರವತ್ಯಾನ್ ಸಮುತ್ಥಿತಾನ್ ।
ವಿಲೋಕ್ಯ ಭಗವಾನಾಹ ಯದುವೃದ್ಧಾನ್ಸಮಾಗತಾನ್
॥ ೩೩ ॥

ಶ್ರೀಭಗವಾನುವಾಚ

ಏತೇ ವೈ ಸುಮಹೋತ್ಪಾತಾ ವ್ಯುತ್ತಿಷ್ಠಂತೀಹ ಸರ್ವತಃ ।
ಶಾಪಶ್ಚ ನಃ ಕುಲಸ್ಯಾಸೀದ್ಬ್ರಹ್ಮಣೇಭ್ಯೋ ದುರತ್ಯಯಃ
॥ ೩೪ ॥

ನ ವಸ್ತವ್ಯಮಿಹಾಸ್ಮಾಭಿರ್ಜಿಜೀವಿಷುಭಿರಾರ್ಯಕಾಃ ।
ಪ್ರಭಾಸಂ ಸುಮಹತ್ಪುಣ್ಯಂ ಯಾಸ್ಯಾಮೋ೭ದ್ಯೈವ ಮಾ ಚಿರಮ್
॥ ೩೫ ॥

ಯತ್ರ ಸ್ನಾತ್ವಾದಕ್ಷಶಾಪಾದ್ಗೃಹೀತೋ ಯಕ್ಷ್ಮಣೋಡುರಾಟ್ ।
ವಿಮುಕ್ತಃ ಕಿಲ್ಬಿಷಾತ್ಸದ್ಯೋ ಭೇಜೇ ಭೂಯಃ ಕಲೋದಯಮ್
॥ ೩೬ ॥

ವಯಂ ಚ ತಸ್ಮಿನ್ನಾಪ್ಲುತ್ಯ ತರ್ಪಯಿತ್ವಾ ಪಿತೃನ್ಸುರಾನ್ ।
ಭೋಜಯಿತ್ವೋಶಿಜೋ ವಿಪ್ರಾನ್ ನಾನಾಗುಣವತಾಂಧಸಾ
॥ ೩೭ ॥

ತೇಷು ದಾನಾನಿ ಪಾತ್ರೇಷು ಶ್ರದ್ಧಯೋಪ್ತ್ವಾ ಮಹಾಂತಿ ವೈ ।
ವೃಜಿನಾನಿ ತರಿಷ್ಯಾಮೋ ದಾನೈರ್ನೌಭಿರಿವಾರ್ಣವಮ್
॥ ೩೮ ॥

ಶ್ರೀಶುಕ ಉವಾಚ

ಏವಂ ಭಗವತಾ೭೭ದಿಷ್ಟಾ ಯಾದವಾಃ ಕುಲನಂದನ ।
ಗಂತುಂ ಕೃತಧಿಯಸ್ತೀರ್ಥಂ ಸ್ಯಂದನಾನ್ಸಮಯೂಯುಜನ್
॥ ೩೯ ॥

ಮದಾಂಧರೂ, ಸ್ವೇಚ್ಛಾಚಾರಿಗಳೂ ಆದ ಯದುವಂಶೀಯರ ಈ ವಿಶಾಲ ವಂಶವನ್ನು ವಿನಾಶಗೊಳಿಸದೇ ಸ್ವಧಾಮವನ್ನು ಸೇರಿ ಕೊಂಡರೆ ಇವರು ಎಲ್ಲ ಲೋಕಮರ್ಯಾದೆಗಳನ್ನು ಉಲ್ಲಂಘಿಸಿ, ಹದ್ದುಮೀರಿ ನಡೆದು ಸಮಸ್ತ ಲೋಕಗಳನ್ನು ವಿನಾಶಗೊಳಿಸು ವರು. ॥ ೩೦ ॥ ಪುಣ್ಯಾತ್ಮನಾದ ಬ್ರಹ್ಮನೇ! ಈ ಬ್ರಾಹ್ಮಣರ ಶಾಪ ದಿಂದ ಈ ವಂಶದ ನಾಶ ಪ್ರಾರಂಭವಾಗಿಬಿಟ್ಟಿದೆ. ಇದರ ಅಂತ್ಯ ವಾಗುತ್ತಲೇ ನಾನು ನಿನ್ನ ಧಾಮದ ಮೂಲಕ ಸ್ವಧಾಮಕ್ಕೆ ತೆರಳು ವೆನು.'' ॥ ೩೧ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಅಖಿಲ ಲೋಕಾಧಿಪತಿ ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಲು, ಬ್ರಹ್ಮ ದೇವರು ಅವನಿಗೆ ವಂದಿಸಿ ದೇವತೆಗಳೊಂದಿಗೆ ತಮ್ಮ ಧಾಮಕ್ಕೆ ಹೊರಟುಹೋದರು. ॥ ೩೨ ॥ ಬ್ರಹ್ಮಾದಿಗಳು ಹೋರಟು ಹೋಗುತ್ತಲೇ ದ್ವಾರಕೆಯಲ್ಲಿ ದೊಡ್ಡ-ದೊಡ್ಡ ಉತ್ಪಾತಗಳೂ, ಅಪ ಶಕುನಗಳೂ ಕಾಣಿಸಿಕೊಂಡವು. ಇದನ್ನು ನೋಡಿ ಗಾಬರಿಗೊಂಡು ಕೆಲವು ಯದುವಂಶದ ಹಿರಿಯರು ಶ್ರೀಕೃಷ್ಣನ ಬಳಿಗೆ ಬಂದು ತಮ್ಮ ಆತಂಕವನ್ನು ತೋಡಿಕೊಂಡರು. ಆಗ ಭಗವಾನ್ ಶ್ರೀಕೃಷ್ಣನು ಅವರನ್ನು ಸಮಾಧಾನಪಡಿಸುತ್ತಾ ಇಂತೆಂದನು. ॥ ೩೩ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಹಿರಿಯರೇ! ನಿಮ್ಮ ಆತಂಕವು ಸಹಜವಾಗಿಯೇ ಇದೆ. ಇಂದು ದ್ವಾರಕೆಯಲ್ಲಿ ಎಲ್ಲಿ ನೋಡಿದಲ್ಲಿ ದೊಡ್ಡ-ದೊಡ್ಡ ಅಪಶಕುನಗಳೂ, ಉತ್ಪಾತಗಳೂ ವಿಶೇಷವಾಗಿ ಉಂಟಾಗುತ್ತಿವೆ. ಬ್ರಾಹ್ಮಣರು ನಮ್ಮ ವಂಶಕ್ಕೆ ಪರಿಹರಿಸಲು ಬಹಳ ಕಠಿಣವಾದ ಶಾಪವನ್ನು ಕೊಟ್ಟಿರುವುದು ನಿಮಗೆ ತಿಳಿದೇ ಇದೆ. ನಾವೆಲ್ಲ ನಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳ ಬೇಕಿದ್ದರೆ ನಾವು ಇಲ್ಲಿ ಇರದೆ, ಇಂದೇ ಪ್ರಭಾಸಕ್ಷೇತ್ರಕ್ಕೆ ಹೊರಡ ಬೇಕೆಂದು ನನಗನಿಸುತ್ತದೆ. ॥ ೩೪-೩೫ ॥ ಪ್ರಭಾಸ ಕ್ಷೇತ್ರದ ಮಹಿಮೆ ಬಹಳ ಪ್ರಸಿದ್ಧವಾಗಿದೆ. ದಕ್ಷ ಪ್ರಜಾಪತಿಯ ಶಾಪದಿಂದ ಚಂದ್ರನಿಗೆ ರಾಜಯಕ್ಷ್ಮಾ (ಕ್ಷಯ) ರೋಗವು ಆವರಿಸಿದ್ದಾಗ, ಚಂದ್ರನು ಪ್ರಭಾಸಕ್ಷೇತ್ರಕ್ಕೆ ಹೋಗಿ ಸ್ನಾನಮಾಡಿದನು. ಆಗಲೇ ಆ ಪಾಪಜನ್ಯ ರೋಗದಿಂದ ಬಿಡುಗಡೆ ಹೊಂದಿದನು. ಜೊತೆಗೆ ಅವನಿಗೆ ಕಲೆಗಳ ಅಭಿವೃದ್ಧಿಯು ಪ್ರಾಪ್ತವಾಯಿತು. ॥ ೩೬ ॥ ನಾವೂ ಕೂಡ ಪ್ರಭಾಸಕ್ಷೇತ್ರಕ್ಕೆ ಹೋಗಿ ಸ್ನಾನಮಾಡಿ, ದೇವತೆಗಳಿಗೆ, ಪಿತೃಗಳಿಗೆ ತರ್ಪಣವಿತ್ತು, ಜೊತೆಗೆ ನಾನಾಗುಣಗಳಿಂದ ಕೂಡಿದ ಪಕ್ವಾನ್ನಗಳನ್ನು ಮಾಡಿ ಶ್ರೇಷ್ಠ ಬ್ರಾಹ್ಮಣರಿಗೆ ಉಣಬಡಿಸೋಣ. ಅಲ್ಲಿ ನಾವು ಆ ಸತ್ಪಾತ್ರ ಬ್ರಾಹ್ಮಣರಿಗೆ ಶ್ರದ್ಧೆಯಿಂದ ಭಾರೀ ದಕ್ಷಿಣೆಗಳನ್ನು ಕೊಟ್ಟು ಅವರ ಮೂಲಕ, ಹಡಗಿನ ಮೂಲಕ ಸಮುದ್ರವನ್ನು ದಾಟುವಂತೆ ನಾವು ದೊಡ್ಡಸಂಕಟದಿಂದ ಪಾರಾಗಿ ಹೋಗೋಣ. ॥ ೩೭-೩೮ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಕುರುಕುಲನಂದನನೇ! ಭಗವಾನ್ ಶ್ರೀಕೃಷ್ಣನು ಈ ವಿಧವಾಗಿ ಆಜ್ಞೆಮಾಡಿದಾಗ ಯದು ವಂಶೀಯರು ಒಮ್ಮತದಿಂದ ಪ್ರಭಾಸಕ್ಷೇತ್ರಕ್ಕೆ ಹೋಗಲು ನಿಶ್ಚಯಿಸಿದರು. ಎಲ್ಲರೂ ತಮ್ಮ-ತಮ್ಮ ರಥಗಳನ್ನು ಸಜ್ಜುಗೊಳಿಸ ತೊಡಗಿದರು. ॥ ೩೯ ॥

ತನ್ನಿರೀಕ್ಷ್ಯೋದ್ಧವೋ ರಾಜನ್ ಶ್ರುತ್ವಾ ಭಗವತೋದಿತಮ್ ।
ದೃಷ್ಟ್ವಾರಿಷ್ಟಾನಿ ಘೋರಾಣಿ ನಿತ್ಯಂ ಕೃಷ್ಣಮನುವ್ರತಃ
॥ ೪೦ ॥

ವಿವಿಕ್ತ ಉಪಸಂಗಮ್ಯ ಜಗತಾಮೀಶ್ವರೇಶ್ವರಮ್ ।
ಪ್ರಣಮ್ಯ ಶಿರಸಾ ಪಾದೌ ಪ್ರಾಂಜಲಿಸ್ತಮಭಾಷತ
॥ ೪೧ ॥

ಉದ್ಧವ ಉವಾಚ

ದೇವದೇವೇಶ ಯೋಗೇಶ ಪುಣ್ಯಶ್ರವಣಕೀರ್ತನ ।
ಸಂಹೃತ್ಯೈತತ್ಕುಲಂ ನೂನಂ ಲೋಕಂ ಸಂತ್ಯಕ್ಷ್ಯತೇ ಭವಾನ್ ।
ವಿಪ್ರಶಾಪಂ ಸಮರ್ಥೋಽಪಿ ಪ್ರತ್ಯಹನ್ನ ಯದೀಶ್ವರಃ
॥ ೪೨ ॥

ನಾಹಂ ತವಾಂಘ್ರಿಕಮಲಂ ಕ್ಷಣಾರ್ಧಮಪಿ ಕೇಶವ ।
ತ್ಯಕ್ತುಂ ಸಮುತ್ಸಹೇ ನಾಥ ಸ್ವಧಾಮ ನಯ ಮಾಮಪಿ
॥ ೪೩ ॥

ತವ ವಿಕ್ರೀಡಿತಂ ಕೃಷ್ಣ ನೃಣಾಂ ಪರಮಮಂಗಲಮ್ ।
ಕರ್ಣಪೀಯೂಷಮಾಸ್ವಾದ್ಯ ತ್ಯಜತ್ಯನ್ಯಸ್ಪೃಹಾಂ ಜನಃ
॥ ೪೪ ॥

ಶಯ್ಯಾಸನಾಟನಸ್ಥಾನಸ್ನಾನಕ್ರೀಡಾಶನಾದಿಷು ।
ಕಥಂ ತ್ವಾಂ ಪ್ರಿಯಮಾತ್ಮಾನಂ ವಯಂ ಭಕ್ತಾಸ್ತ್ಯಜೇಮಹಿ
॥ ೪೫ ॥

ತ್ವಯೋಪಭುಕ್ತಸ್ರಗ್ಗಂಧವಾಸೋಽಲಂಕಾರಚರ್ಚಿತಾಃ ।
ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ
॥ ೪೬ ॥

ವಾತರಶನಾ ಯ ಋಷಯಃ ಶ್ರಮಣಾ ಊರ್ಧ್ವಮಂಥಿನಃ ।
ಬ್ರಹ್ಮಾಖ್ಯಂ ಧಾಮ ತೇ ಯಾಂತಿ ಶಾಂತಾಃ ಸಂನ್ಯಾಸಿನೋಽಮಲಾಃ
॥ ೪೭ ॥

ಪರೀಕ್ಷಿತನೇ! ಉದ್ಧವನು ಭಗವಾನ್ ಶ್ರೀಕೃಷ್ಣನ ಭಕ್ತನೂ, ಸೇವಕನೂ ಆಗಿದ್ದನು. ಅವನು ಯದುವಂಶೀಯರ ಯಾತ್ರೆಯ ಸಿದ್ಧತೆಯನ್ನು ನೋಡಿ, ಭಗವಂತನ ಆಜ್ಞೆಯನ್ನು ಕೇಳಿ, ಅತ್ಯಂತ ಘೋರ ಅಪಶಕುನಗಳನ್ನು ಗಮನಿಸಿದಾಗ ಉದ್ಧವನು ಜಗತ್ತಿನ ಏಕಮಾತ್ರ ಅಧೀಶ್ವರ ಭಗವಾನ್ ಶ್ರೀಕೃಷ್ಣನ ಏಕಾಂತವನ್ನು ಪ್ರವೇಶಿಸಿ ಅವನ ಚರಣಗಳಲ್ಲಿ ಶಿರಸ್ಸನ್ನಿಟ್ಟು ವಂದಿಸಿ, ಕೈಜೋಡಿಸಿ ಕೊಂಡು ಅವನಲ್ಲಿ ಪ್ರಾರ್ಥಿಸತೊಡಗಿದನು. ॥ ೪೦-೪೧ ॥

ಉದ್ಧವನಿಂತೆಂದನು – ಯೋಗೇಶ್ವರನೇ! ದೇವಾಧಿದೇವನೇ! ನಿನ್ನ ಲೀಲೆಗಳ ಶ್ರವಣ-ಕೀರ್ತನದಿಂದ ಜಗತ್ತು ಪವಿತ್ರವಾಗುತ್ತದೆ. ನೀನು ಸರ್ವಶಕ್ತ ಪರಮೇಶ್ವರನಾಗಿರುವೆ. ಬ್ರಾಹ್ಮಣರ ಶಾಪವನ್ನು ತೊಡೆದುಹಾಕುವಲ್ಲಿ ನೀನು ಸಮರ್ಥನಾಗಿದ್ದರೂ ಹಾಗೆ ಮಾಡಲಿಲ್ಲ. ಈಗ ನೀನು ಯದುವಂಶವನ್ನು ಸಂಹರಿಸಿ, ಇದನ್ನು ಕೊನೆಗಾಣಿಸಿ ನೀನು ಅವಶ್ಯವಾಗಿ ಈ ಲೋಕವನ್ನು ಪರಿತ್ಯಜಿಸುವೆ ಎಂದು ನಾನು ತಿಳಿದುಕೊಂಡೆ. ॥ ೪೨ ॥

ಓ ಶ್ಯಾಮಸುಂದರಾ! ಪ್ರಾಣನಾಥನೇ! ನಾನು ನಿನ್ನ ದಿವ್ಯವಾದ ಚರಣಕಮಲಗಳನ್ನು ಕ್ಷಣಾರ್ಧವೂ ಬಿಟ್ಟಿರಲಾರೆನು. ನನ್ನ ಜೀವನ ಸರ್ವಸ್ವವಾದ ಸ್ವಾಮಿಯೇ! ನೀನು ನನ್ನನ್ನೂ ನಿನ್ನ ಧಾಮಕ್ಕೆ ಕೊಂಡುಹೋಗಿಬಿಡು. ॥ ೪೩ ॥ ಪ್ರಿಯಕೃಷ್ಣಾ! ನಿನ್ನ ಒಂದೊಂದು ಲೀಲೆಯೂ ಮನುಷ್ಯರಿಗಾಗಿ ಪರಮ ಮಂಗಳದಾಯಕವಾಗಿದೆ. ಕಿವಿಗಳಿಗೆ ಅಮೃತಪ್ರಾಯವಾಗಿದೆ. ಒಮ್ಮೆ ಆ ಅಮೃತದ ಸವಿಯನ್ನು ಮೆದ್ದವನ ಮನಸ್ಸು ಮತ್ತೆ ಬೇರೆಡೆಗೆ ಹೋಗುವುದಿಲ್ಲ. ಸ್ವಾಮಿ! ನಾವಾದರೋ ಎದ್ದಾಗ-ಕೂತಾಗ, ಮಲಗಿ ಎದ್ದಾಗ, ಅಡ್ಡಾಡುವಾಗ ನಿನ್ನ ಜೊತೆಯಲ್ಲೇ ಇದ್ದವು. ನಾವು ನಿನ್ನೊಡನೆ ಸ್ನಾನಮಾಡಿದೆವು, ಆಟವಾಡಿದೆವು, ಊಟ ಮಾಡಿದೆವು, ಎಷ್ಟೊಂದು ಹೇಳಲೀ, ನಮ್ಮ ಎಲ್ಲ ಕ್ರಿಯೆಗಳು ನಿನ್ನೊಡನೇ ನಡೆಯುತ್ತಿತ್ತು. ನೀನು ನಮ್ಮ ಪ್ರಿಯತಮನಾಗಿರುವೆ. ಹೆಚ್ಚೇನು ನಮ್ಮ ಆತ್ಮನೇ ಆಗಿರುವೆ. ಇಂತಹ ಸ್ಥಿತಿಯಲ್ಲಿ ಪ್ರೇಮಿ ಭಕ್ತರಾದ ನಾವು ನಿನ್ನನ್ನು ಹೇಗೆ ಬಿಡಬಲ್ಲೆವು! ॥ ೪೪-೪೫ ॥ ನೀನು ಧರಿಸಿದ ವನಮಾಲೆಯನ್ನು ನಾವು ಪ್ರಸಾದರೂಪವಾಗಿ ಧರಿಸಿದೆವು. ನೀನು ಧರಿಸಿದ ಚಂದನಾದಿ ಅಲಂಕಾರಗಳನ್ನು ನಿನ್ನ ಪ್ರಸಾದವೆಂದು ಪಡೆದುಕೊಂಡೆವು. ನಾವು ನಿನ್ನ ಪ್ರಸಾದವನ್ನು ಪಡೆಯುವ ಸೇವಕರಾಗಿದ್ದೇವೆ. ಅದಕ್ಕಾಗಿ ನಾವು ನಿನ್ನ ಮಾಯೆಯ ಮೇಲೆ ಅವಶ್ಯವಾಗಿ ವಿಜಯವನ್ನು ಪಡೆದುಕೊಂಡೆವು. (ಆದ್ದರಿಂದ ಸ್ವಾಮಿ! ನಮಗೆ ನಿನ್ನ ಮಾಯೆಯ ಭಯವಿಲ್ಲ. ಭಯವಿರುವುದಾದರೆ ಕೇವಲ ನಿನ್ನ ವಿಯೋಗದ್ದು.) ॥ ೪೬ ॥ ದೊಡ್ಡ ದೊಡ್ಡ ಋಷಿ-ಮುನಿಗಳು ದಿಗಂಬರರಾಗಿದ್ದು, ಆಜೀವನ ನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಅಧ್ಯಾತ್ಮವಿದ್ಯೆಗಾಗಿ ಅತ್ಯಂತ ಪರಿಶ್ರಮ ಪಡುವರು. ಈ ವಿಧವಾಗಿ ಕಠಿಣ ಸಾಧನೆಯಿಂದ ಆ ಸಂನ್ಯಾಸಿಗಳ ಹೃದಯ ನಿರ್ಮಲವಾಗುತ್ತದೆ. ಆಗ ಎಲ್ಲಾದರೂ ಅವರು ಸಮಸ್ತ ವೃತ್ತಿಗಳ ಶಾಂತಿರೂಪೀ ನೈಷ್ಕರ್ಮ್ಯ ಅವಸ್ಥೆಯಲ್ಲಿ ಸ್ಥಿತರಾಗಿ ನಿನ್ನ ಬ್ರಹ್ಮನಾಮಕ ಧಾಮವನ್ನು ಪಡೆದುಕೊಳ್ಳುತ್ತಾರೆ. ॥ ೪೭ ॥

ವಯಂ ತ್ವಿಹ ಮಹಾಯೋಗಿನ್ ಭ್ರಮಂತಃ ಕರ್ಮವರ್ತ್ಮಸು ।
ತ್ವದ್ವಾರ್ತಯಾ ತರಿಷ್ಯಾಮಸ್ತಾವಕೈರ್ದುಸ್ತರಂ ತಮಃ
॥ ೪೮ ॥

ಸ್ಮರಂತಃ ಕೀರ್ತಯಂತಸ್ತೇ ಕೃತಾನಿ ಗದಿತಾನಿ ಚ ।
ಗತ್ಯುತ್ಸ್ಮಿತೇಕ್ಷಣಕ್ಷ್ವೇಲಿ ಯನ್ನೃಲೋಕವಿಡಂಬನಮ್
॥ ೪೯ ॥

ಶ್ರೀಶುಕ ಉವಾಚ

ಏವಂ ವಿಜ್ಞಾಪಿತೋ ರಾಜನ್ ಭಗವಾನ್ ದೇವಕೀಸುತಃ ।
ಏಕಾಂತಿನಂ ಪ್ರಿಯಂ ಭೃತ್ಯಮುದ್ಧವಂ ಸಮಭಾಷತ
॥ ೫೦ ॥

ಓ ಮಹಾಯೋಗಿಯೇ! ನಾವಾದರೋ ಕರ್ಮಮಾರ್ಗದಲ್ಲೇ ಅಲೆಯುತ್ತಿದ್ದೇವೆ. ಆದರೆ ನಾವು ನಿನ್ನ ಭಕ್ತರೊಡನೆ ನಿನ್ನ ಗುಣ-ಲೀಲೆಗಳನ್ನು ಚರ್ಚಿಸುತ್ತಾ, ಮನುಷ್ಯರಂತೆ ಲೀಲೆಗಳನ್ನು ಮಾಡುತ್ತಾ ನೀನು ಹೇಳಿದುದನ್ನು ಸ್ಮರಣ-ಕೀರ್ತನೆ ಮಾಡುತ್ತಾ ಇರುವೆವು. ಜೊತೆಗೆ ನಿನ್ನ ನಡೆ-ನಿಲುವು, ಮಂದಹಾಸ, ಓರೆನೋಟ, ಹಾಸ-ಪರಿಹಾಸಗಳ ಸ್ಮೃತಿಯಲ್ಲಿ ತಲ್ಲೀನವಾಗಿ ಹೋಗುವೆವು. ಕೇವಲ ಇದರಿಂದಲೇ ನಾವು ದುಸ್ತರವಾದ ಮಾಯೆಯನ್ನು ದಾಟಿಹೋಗುವೆವು. (ಅದಕ್ಕಾಗಿ ನಮಗೆ ಮಾಯೆಯನ್ನು ದಾಟಲು ಚಿಂತೆಯಿಲ್ಲ, ನಿನ್ನ ವಿರಹದ್ದೇ ಚಿಂತೆ ಇದೆ. ನೀನು ನಮ್ಮ ಕೈಬಿಡದೆ, ಜೊತೆಗೆ ಕರೆದುಕೊಂಡು ಹೋಗು.) ॥ ೪೮-೪೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಉದ್ಧವನು ದೇವಕಿನಂದನ ಭಗವಾನ್ ಶ್ರೀಕೃಷ್ಣನಲ್ಲಿ ಈ ಪ್ರಕಾರ ಪ್ರಾರ್ಥಿಸಿದಾಗ ಅವನು ತನ್ನ ಅನನ್ಯ ಪ್ರೇಮಿಯೂ, ಸಖನೂ, ಸೇವಕನೂ ಆದ ಉದ್ಧವನಲ್ಲಿ ಇಂತೆಂದನು – ॥ ೫೦ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಅವಧೂತೋಪಾಖ್ಯಾನ

ಪೃಥ್ವಿಯಿಂದ ಪಾರಿವಾಳದ ತನಕ ಎಂಟು ಗುರುಗಳ ಕಥೆ

ಶ್ರೀಭಗವಾನುವಾಚ

ಯದಾತ್ಥ ಮಾಂ ಮಹಾಭಾಗ ತಚ್ಚಿಕೀರ್ಷಿತಮೇವ ಮೇ ।
ಬ್ರಹ್ಮಾ ಭವೋ ಲೋಕಪಾಲಾಃ ಸ್ವರ್ವಾಸಂ ಮೇಽಭಿಕಾಂಕ್ಷಿಣಃ
॥ ೧ ॥

ಮಯಾ ನಿಷ್ಪಾದಿತಂ ಹ್ಯತ್ರ ದೇವಕಾರ್ಯಮಶೇಷತಃ ।
ಯದರ್ಥಮವತೀರ್ಣೋಽಹಮಂಶೇನ ಬ್ರಹ್ಮಣಾರ್ಥಿತಃ
॥ ೨ ॥

ಕುಲಂ ವೈ ಶಾಪನಿರ್ದಗ್ಧಂ ನಂಕ್ಷ್ಯತ್ಯನ್ಯೋನ್ಯ ವಿಗ್ರಹಾತ್ ।
ಸಮುದ್ರಃ ಸಪ್ತಮೇಽಹ್ನ್ಯೇತಾಂ ಪುರೀಂ ಚ ಪ್ಲಾವಯಿಷ್ಯತಿ
॥ ೩ ॥

ಯರ್ಹ್ಯೇವಾಯಂ ಮಯಾ ತ್ಯಕ್ತೋ
ಲೋಕೋಽಯಂ ನಷ್ಟಮಂಗಲಃ ।
ಭವಿಷ್ಯತ್ಯಚಿರಾತ್ ಸಾಧೋ
ಕಲಿನಾಪಿ ನಿರಾಕೃತಃ ॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಮಹಾಭಾಗ್ಯಶಾಲಿಯಾದ ಉದ್ಧವನೇ! ನೀನು ನನ್ನೊಡನೆ ಹೇಳಿದುದನ್ನೇ ನಾನು ಮಾಡಲು ಅಪೇಕ್ಷಿಸಿದ್ದೇನೆ. ಬ್ರಹ್ಮ, ರುದ್ರಾದಿ, ಇಂದ್ರನೇ ಮೊದಲಾದ ಲೋಕಪಾಲರೂ ಕೂಡ ನಾನು ಭೂಲೋಕವನ್ನು ತ್ಯಜಿಸಿ ಸ್ವಧಾಮದಲ್ಲಿ ವಾಸಿಸಬೇಕೆಂದು ಅಪೇಕ್ಷಿಸುತ್ತಿದ್ದಾರೆ. ॥ ೧ ॥ ಬ್ರಹ್ಮನ ಪ್ರಾರ್ಥನೆಯಂತೆ ನಾನು ನನ್ನ ಅಂಶ ಬಲರಾಮನೊಂದಿಗೆ ಭೂತಲದಲ್ಲಿ ಅವತರಿಸಿದ್ದೆ, ದೇವತೆಗಳ ಸಲುವಾಗಿ ಇದ್ದ ಎಲ್ಲ ಕಾರ್ಯಗಳನ್ನು ಮಾಡಿ ಮುಗಿಸಿದೆ. ॥ ೨ ॥ ನಮ್ಮ ಕುಲವು ಈಗಾಗಲೇ ಬ್ರಾಹ್ಮಣರ ಶಾಪದಿಂದ ದಗ್ಧವಾಗಿದ್ದು, ಪರಸ್ಪರ ಕಲಹದಿಂದ ಮತ್ತು ಯುದ್ಧದಿಂದ ವಿನಾಶ ಹೊಂದುತ್ತದೆ. ಇಂದಿನಿಂದ ಏಳನೆಯ ದಿನ ಸಮುದ್ರವು ಈ ದ್ವಾರಕಾಪುರಿಯನ್ನು ಮುಳುಗಿಸಿಬಿಡುತ್ತದೆ. ॥ ೩ ॥ ಪ್ರಿಯ ಉದ್ಧವನೇ! ಈ ಮರ್ತ್ಯಲೋಕವನ್ನು ನಾನು ಪರಿತ್ಯಜಿಸಿ ಹೊರಟುಹೋದೊಡನೆಯೇ ಇದರ ಎಲ್ಲ ಮಂಗಳಗಳೂ ನಾಶವಾಗಿ ಹೋಗುವವು ಮತ್ತು ಕೆಲವೇ ದಿನಗಳಲ್ಲಿ ಕಲಿಯುಗವು ಪೂರ್ಣವಾಗಿ ಆವರಿಸಿಬಿಡುವುದು. ॥ ೪ ॥

ನ ವಸ್ತವ್ಯಂ ತ್ವಯೈವೇಹ ಮಯಾ ತ್ಯಕ್ತೇ ಮಹೀತಲೇ ।
ಜನೋಽಧರ್ಮರುಚಿರ್ಭದ್ರ ಭವಿಷ್ಯತಿ ಕಲೌ ಯುಗೇ
॥ ೫ ॥

ಸಾಧು ಉದ್ಧವನೇ ! ನಾನು ಪೃಥ್ವಿಯನ್ನು ತ್ಯಜಿಸಿದ ಬಳಿಕ ನೀನೂ ಇಲ್ಲಿರಬಾರದು. ಏಕೆಂದರೆ ಕಲಿಯುಗದಲ್ಲಿ ಜನರು ಅಧರ್ಮದಲ್ಲಿಯೇ ಹೆಚ್ಚು ಅಭಿರುಚಿಯುಳ್ಳವರಾಗಿರುತ್ತಾರೆ. ಅಂತಹವರ ಮಧ್ಯದಲ್ಲಿ ನೀನು ಇರಬಾರದು. ॥ ೫ ॥

ತ್ವಂ ತು ಸರ್ವಂ ಪರಿತ್ಯಜ್ಯ ಸ್ನೇಹಂ ಸ್ವಜನಬಂಧುಷು ।
ಮಯ್ಯಾವೇಶ್ಯ ಮನಃ ಸಮ್ಯಕ್ ಸಮದೃಗ್ವಿಚರಸ್ವ ಗಾಮ್
॥ ೬ ॥

ಈಗ ನೀನಾದರೋ ನಿನ್ನ ಆತ್ಮೀಯ ಸ್ವಜನ ಬಂಧು-ಬಾಂಧವರಲ್ಲಿದ್ದ ಸ್ನೇಹಸಂಬಂಧವನ್ನು ತೊರೆದು, ನಿನ್ನ ಮನಸ್ಸನ್ನು ಅನನ್ಯಭಕ್ತಿಯಿಂದ ನನ್ನಲ್ಲಿ ತೊಡಗಿಸಿ, ಚರಾಚರ ಪ್ರಾಣಿಗಳನ್ನು ಸಮದೃಷ್ಟಿಯಿಂದ ನೋಡುತ್ತಾ ಭೂಮಿಯಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಿರು. ॥ ೬ ॥

ಯದಿದಂ ಮನಸಾ ವಾಚಾ ಚಕ್ಷುರ್ಭ್ಯಾಂ ಶ್ರವಣಾದಿಭಿಃ ।
ನಶ್ವರಂ ಗೃಹ್ಯಮಾಣಂ ಚ ವಿದ್ಧಿ ಮಾಯಾ ಮನೋಮಯಮ್
॥ ೭ ॥

ಈ ಜಗತ್ತಿನಲ್ಲಿ ಮನಸ್ಸಿನಿಂದ ಯೋಚಿಸಲಾಗುವ, ವಾಣಿಯಿಂದ ನುಡಿಯಲಾಗುವ, ಕಣ್ಣುಗಳಿಂದ ನೋಡಲಾಗುವ, ಕಿವಿಗಳಿಂದ ಕೇಳಲಾಗುವ, ಮೂಗಿನಿಂದ ಮೂಸುವ, ಚರ್ಮದಿಂದ ಸ್ಪರ್ಶಿಸುವ ಎಲ್ಲವೂ ನಾಶವುಳ್ಳದ್ದಾಗಿದೆ. ಸ್ವಪ್ನದಂತೆ ಮನೋವಿಲಾಸವಾಗಿದೆ. ಅದಕ್ಕಾಗಿ ಮಾಯಾಮಾತ್ರವಾಗಿದ್ದು ಮಿಥ್ಯೆಯಾಗಿದೆ ಎಂದು ತಿಳಿದುಕೊ. ॥ ೭ ॥

ಪುಂಸೋಽಯುಕ್ತಸ್ಯ ನಾನಾರ್ಥೋ ಭ್ರಮಃ ಸ ಗುಣದೋಷಭಾಕ್ ।
ಕರ್ಮಾಕರ್ಮವಿಕರ್ಮೇತಿ ಗುಣದೋಷಧಿಯೋ ಭಿದಾ
॥ ೮ ॥

ಚಂಚಲಚಿತ್ತವುಳ್ಳ ಅಸಂಯಮಿ ಮನುಷ್ಯನಿಗೆ ನಾನಾತ್ವದ ಭಾವನೆ ಉಂಟಾಗುತ್ತದೆ. ಇಂತಹ ಭ್ರಮೆ ಉಂಟಾದಬಳಿಕ ಇದು ಗುಣ, ಇದು ದೋಷ ಎಂಬೀ ಭೇದದೃಷ್ಟಿ ಉಂಟಾಗಿದ್ದು ತನ್ನಲ್ಲೇ ಕಲ್ಪಿಸಿಕೊಂಡದ್ದಾಗಿದೆ. ಇಂತಹ ಜನರಿಗಾಗಿಯೇ ಕರ್ಮ (ಶಾಸ್ತ್ರವಿಹಿತ ಕರ್ಮ), ಅಕರ್ಮ (ಶಾಸ್ತ್ರ ನಿಷಿದ್ಧಕರ್ಮ), ವಿಕರ್ಮ (ವಿಹಿತಕರ್ಮದ ತ್ಯಾಗ) – ಇವುಗಳ ವಿಷಯದಲ್ಲಿ ಪ್ರತಿಪಾದಿಸಲಾಗುತ್ತದೆ. ॥ ೮ ॥

ತಸ್ಮಾದ್ಯುಕ್ತೇಂದ್ರಿಯಗ್ರಾಮೋ ಯುಕ್ತಚಿತ್ತ ಇದಂ ಜಗತ್ ।
ಆತ್ಮನೀಕ್ಷಸ್ವ ವಿತತಮಾತ್ಮಾನಂ ಮಯ್ಯಧೀಶ್ವರೇ
॥ ೯ ॥

ಆದುದರಿಂದ ಎಲೈ ಉದ್ಧವನೇ ! ನೀನು ನಿನ್ನ ಇಂದ್ರಿಯಗಳನ್ನು, ಚಿತ್ತವನ್ನು ವಶಪಡಿಸಿಕೊಂಡು ಈ ಸಮಸ್ತ ವಿಶ್ವವನ್ನು ಆತ್ಮನಲ್ಲಿ ನೋಡು ಮತ್ತು ಆತ್ಮವನ್ನು ಅಧೀಶ್ವರನಾದ ನನ್ನಲ್ಲಿ ನೋಡು. ॥ ೯ ॥

ಜ್ಞಾನವಿಜ್ಞಾನಸಂಯುಕ್ತ ಆತ್ಮಭೂತಃ ಶರೀರಿಣಾಮ್ ।
ಆತ್ಮಾನುಭವತುಷ್ಟಾತ್ಮಾ ನಾಂತರಾಯೈರ್ವಿಹನ್ಯಸೇ
॥ ೧೦ ॥

ಎಲ್ಲರ ಆತ್ಮವು ನಾನೇ ಆಗಿದ್ದೇನೆ ಎಂದು ಅರಿತು ಎಲ್ಲ ದೇಹಧಾರಿಗಳಲ್ಲಿ ಆತ್ಮಭೂತನಾಗಿ ಹೋಗು. ತನ್ನ ಆತ್ಮಾನುಭವದಲ್ಲಿ ಆನಂದಮಗ್ನನಾಗಿ, ಜ್ಞಾನ ವಿಜ್ಞಾನದಿಂದ ಸಂಪನ್ನನಾಗಿರು. ಮತ್ತೆ ಯಾವುದೇ ವಿಘ್ನಗಳು ಬಂದರೂ ನೀನು ಪೀಡಿತನಾಗಲಾರೆ. ॥ ೧೦ ॥

ದೋಷಬುದ್ಧ್ಯೋಭಯಾತೀತೋ ನಿಷೇಧಾನ್ನ ನಿವರ್ತತೇ ।
ಗುಣಬುದ್ಧ್ಯಾ ಚ ವಿಹಿತಂ ನ ಕರೋತಿ ಯಥಾರ್ಭಕಃ
॥ ೧೧ ॥

ಗುಣ ಮತ್ತು ದೋಷ ಇವೆರಡರಿಂದ ಪೂರ್ಣವಾಗಿ ಅತೀತನಾಗು. ಮಗುವು ಗುಣಬುದ್ಧಿಯಿಂದ ವಿಹಿತಕರ್ಮವನ್ನು ಮಾಡುವುದಿಲ್ಲ, ದೋಷ ಬುದ್ಧಿಯಿಂದ ನಿಷಿದ್ಧದಿಂದ ನಿವೃತ್ತನಾಗುವುದಿಲ್ಲ, ಅರ್ಥಾತ್ ಮಗುವಿನಲ್ಲಿ ಗುಣಬುದ್ಧಿಯೂ ಇರುವುದಿಲ್ಲ ದೋಷಬುದ್ಧಿಯೂ ಇರುವುದಿಲ್ಲ, ಅದಾದರೋ ಪರಮಹಂಸನಂತೆ ಇರುತ್ತದೆ. ಹಾಗೆಯೇ ನೀನೂ ಗುಣ-ದೋಷಗಳಿಂದ ಅತೀತನಾಗು. ॥ ೧೧ ॥

ಸರ್ವಭೂತಸುಹೃಚ್ಚಾಂತೋ ಜ್ಞಾನವಿಜ್ಞಾನನಿಶ್ಚಯಃ ।
ಪಶ್ಯನ್ಮದಾತ್ಮಕಂ ವಿಶ್ವಂ ನ ವಿಪದ್ಯೇತ ವೈ ಪುನಃ
॥ ೧೨ ॥

ಯೋಗಿಯು ಸಮಸ್ತ ಪ್ರಾಣಿಗಳಲ್ಲಿ ಸುಹೃದ್‌ಭಾವವಿರಿಸಬೇಕು. ಚಿತ್ತದಲ್ಲಿ ಸದಾಕಾಲ ಶಾಂತಿಯಿದ್ದು ಏಕಮಾತ್ರ ಪರಮಾತ್ಮನ ಅನುಭವವು ದೃಢವಾಗಿ ಇರಬೇಕು. ಇಡೀ ವಿಶ್ವವು ನನ್ನದೇ ಸ್ವರೂಪವೆಂದು ತಿಳಿಯಬೇಕು. ಹೀಗಾದಾಗ ಮತ್ತೆ ಅವನು ಜನ್ಮ ಮರಣದ ಚಕ್ರದಲ್ಲಿ ಬೀಳುವುದಿಲ್ಲ. ॥ ೧೨ ॥

ಶ್ರೀಶುಕ ಉವಾಚ

ಇತ್ಯಾದಿಷ್ಟೋ ಭಗವತಾ ಮಹಾಭಾಗವತೋ ನೃಪ ।
ಉದ್ಧವಃ ಪ್ರಣಿಪತ್ಯಾಹ ತತ್ತ್ವಜಿಜ್ಞಾಸುರಚ್ಯುತಮ್
॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಹೀಗೆ ಆದೇಶಿಸಿದಾಗ ಪರಮಪ್ರೇಮೀ ಉದ್ಧವನು ಭಗವಂತನಿಗೆ ನಮಸ್ಕರಿಸುತ್ತಾ ತತ್ತ್ವಜ್ಞಾನ ಪ್ರಾಪ್ತಿಯ ಬಯಕೆಯಿಂದ ಇಂತು ಪ್ರಶ್ನಿಸಿದನು – ॥ ೧೩ ॥

ಉದ್ಧವ ಉವಾಚ

ಯೋಗೇಶ ಯೋಗವಿನ್ಯಾಸ ಯೋಗಾತ್ಮನ್ ಯೋಗಸಂಭವ ।
ನಿಃಶ್ರೇಯಸಾಯ ಮೇ ಪ್ರೋಕ್ತಸ್ತ್ಯಾಗಃ ಸಂನ್ಯಾಸಲಕ್ಷಣಃ
॥ ೧೪ ॥

ತ್ಯಾಗೋಽಯಂ ದುಷ್ಕರೋ ಭೂಮನ್ ಕಾಮಾನಾಂ ವಿಷಯಾತ್ಮಭಿಃ ।
ಸುತರಾಂ ತ್ವಯಿ ಸರ್ವಾತ್ಮನ್ನಭಕ್ತೈರಿತಿ ಮೇ ಮತಿಃ
॥ ೧೫ ॥

ಸೋಽಹಂ ಮಮಾಹಮಿತಿ ಮೂಢಮತಿರ್ವಿಗಾಢ-
ಸ್ತ್ವನ್ಮಾಯಯಾ ವಿರಚಿತಾತ್ಮನಿ ಸಾನುಬಂಧೇ ।
ತತ್ತ್ವಂಜಸಾ ನಿಗದಿತಂ ಭವತಾ ಯಥಾಹಂ
ಸಂಸಾಧಯಾಮಿ ಭಗವನ್ನನುಶಾಧಿ ಭೃತ್ಯಮ್ ॥ ೧೬ ॥

ಸತ್ಯಸ್ಯ ತೇ ಸ್ವದೃಶ ಆತ್ಮನ ಆತ್ಮನೋಽನ್ಯಂ
ವಕ್ತಾರಮೀಶ ವಿಬುಧೇಷ್ವಪಿ ನಾನುಚಕ್ಷೇ ।
ಸರ್ವೇ ವಿಮೋಹಿತಧಿಯಸ್ತವ ಮಾಯಯೇಮೇ
ಬ್ರಹ್ಮಾದಯಸ್ತನುಭೃತೋ ಬಹಿರರ್ಥಭಾವಾಃ ॥ ೧೭ ॥

ತಸ್ಮಾದ್ಭವಂತಮನವದ್ಯಮನಂತಪಾರಂ
ಸರ್ವಜ್ಞಮೀಶ್ವರಮಕುಂಠವಿಕುಂಠಧಿಷ್ಣ್ಯಮ್ ।
ನಿರ್ವಿಣ್ಣಧೀರಹಮು ಹ ವೃಜಿನಾಭಿತಪ್ತೋ
ನಾರಾಯಣಂ ನರಸಖಂ ಶರಣಂ ಪ್ರಪದ್ಯೇ ॥ ೧೮ ॥

ಶ್ರೀಭಗವಾನುವಾಚ

ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ ।
ಸಮುದ್ಧರಂತಿ ಹ್ಯಾತ್ಮಾನಮಾತ್ಮನ್ಯೇವಾಶುಭಾಶಯಾತ್
॥ ೧೯ ॥

ಆತ್ಮನೋ ಗುರುರಾತ್ಮೈವ ಪುರುಷಸ್ಯ ವಿಶೇಷತಃ ।
ಯತ್ಪ್ರತ್ಯಕ್ಷಾನುಮಾನಾಭ್ಯಾಂ ಶ್ರೇಯೋಽಸಾವನುವಿಂದತೇ
॥ ೨೦ ॥

ಪುರುಷತ್ವೇ ಚ ಮಾಂ ಧೀರಾಃ ಸಾಂಖ್ಯಯೋಗವಿಶಾರದಾಃ ।
ಆವಿಸ್ತರಾಂ ಪ್ರಪಶ್ಯಂತಿ ಸರ್ವಶಕ್ತ್ಯುಪಬೃಂಹಿತಮ್
॥ ೨೧ ॥

ಉದ್ಧವನಿಂತೆಂದನು – ಓ ಭಗವಂತಾ ! ನೀನೇ ಯೋಗದ ಒಡೆಯನಾಗಿರುವೆ. ಯೋಗವು ನಿನ್ನಲ್ಲೇ ಪ್ರತಿಷ್ಠಿತವಾಗಿದೆ. ನೀನು ಸಾಕ್ಷಾತ್ ಯೋಗದ ಸ್ವರೂಪವೇ ಆಗಿರುವೆ. ಯೋಗದ ಜನ್ಮ ಸ್ಥಾನವು ನೀನೇ ಆಗಿರುವೆ. ನೀನು ನನಗಾಗಿ ಪರಮ ಶ್ರೇಯಸ್ಸಿಗಾಗಿಯೇ ಸಂನ್ಯಾಸರೂಪೀ ತ್ಯಾಗದ ಲಕ್ಷಣವನ್ನು ಉಪದೇಶಿಸಿರುವೆ. ॥ ೧೪ ॥ ಅನೇಕ ಕಾಮನೆಗಳಲ್ಲಿ ಸಿಕ್ಕಿಕೊಂಡಿರುವ ವಿಷಯೀ ಜೀವರಿಗೆ ಈ ತ್ಯಾಗದ ತತ್ತ್ವವು ತಿಳಿಯಲು ಬಹು ಕಠಿಣವಾಗಿದೆ. ಮುಖ್ಯವಾಗಿ ನಿನ್ನ ಭಕ್ತಿಯಿಂದ ವಿಮುಖರಾದವರಿಗಂತೂ ಇನ್ನೂ ಕಷ್ಟವೇ ಆಗಿದೆ. ಇದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ. ॥ ೧೫ ॥ ಪ್ರಭುವೇ ! ನಾನೂ ಕೂಡ 'ನಾನು-ನನ್ನದು' ಎಂಬ ಸುಳಿಯಲ್ಲಿ ಸಿಕ್ಕಿಕೊಂಡಿರುವೆನು. ನನ್ನ ಬುದ್ಧಿಯೂ ನಿನ್ನದೇ ಮಾಯೆಯಿಂದ ನನ್ನ ಪರಿವಾರದ ಆಪ್ತಜನರ ಕುರಿತು ಅಹಂತೆ, ಮಮತೆಯಲ್ಲಿ ಮೂಢತೆಯಿಂದ ಬಿಡಲಾರದಷ್ಟು ಆಳವಾಗಿ ಬೇರೂರಿದೆ. ನೀನು ಈಗ ಪ್ರತಿಪಾದಿಸಿದ ಸಂನ್ಯಾಸ ತ್ಯಾಗದ ಧರ್ಮವನ್ನು ನಾನು ಹೇಗೆ ಸಹಜಭಾವದಿಂದ ಸಾಧನೆ ಮಾಡಬಲ್ಲೆ? ಎಂಬುದೇ ಯೋಚನೆಯಾಗಿದೆ. ಸೇವಕನಾದ ನನಗೆ ಸರಳ ರೀತಿಯಿಂದ ನೀನು ಉಪದೇಶಿಸುವ ಕೃಪೆಮಾಡಬೇಕು. ॥ ೧೬ ॥ ಪ್ರಭುವೇ ! ನೀನೇ ಸತ್ಯಸ್ವರೂಪನಾಗಿರುವೆ. ಎಲ್ಲರ ನೇತ್ರಸ್ವರೂಪ ಅರ್ಥಾತ್ ಪ್ರಕಾಶಕನೂ ನೀನೇ ಆಗಿರುವೆ. ಎಲ್ಲರ ಆತ್ಮವೂ ನೀನೇ ಆಗಿರುವೆ. ಇಂತಹ ನೀನಿರುವಾಗ ಈ ಆತ್ಮತತ್ತ್ವದ ವಿಷಯದಲ್ಲಿ ಪ್ರತಿಪಾದಿಸುವವರು ನಿನ್ನಿಂದ ಬೇರೆ ಯಾರನ್ನೂ ನಾನು ನೋಡುವುದಿಲ್ಲ, ಏಕೆಂದರೆ, ಬ್ರಹ್ಮನಿಂದ ಹಿಡಿದು ಇರುವವರೆಲ್ಲ ಜೀವರೂ ನಿನ್ನ ಮಾಯೆಯಿಂದ ಮೋಹಿತರಾಗಿರುವರು. ಆದ್ದರಿಂದ ಅವರು ಬಾಹ್ಯವಸ್ತುಗಳನ್ನೇ ಸತ್ಯವೆಂದು ಭಾವಿಸುತ್ತಾರೆ. ॥ ೧೭ ॥ ಪ್ರಭುವೇ ! ನರಸಖ ನಾರಾಯಣ ಸ್ವರೂಪಿಯಾದ ನಿನ್ನಲ್ಲಿ ನಾನು ಶರಣಾಗಿದ್ದೇನೆ. ನೀನು ನಿರಂಜನನಾಗಿರುವೆ, ನಿನಗೆ ಅಂತ್ಯ-ಪಾರಗಳಿಲ್ಲ, ನೀನು ಸರ್ವಜ್ಞನಾಗಿದ್ದು ಎಲ್ಲರ ನಿಯಾಮಕನಾಗಿರುವೆ. ಅವಿನಾಶೀ ವೈಕುಂಠವು ನಿನ್ನದೇ ಧಾಮವಾಗಿದೆ. ನಾನು ಸಂಸಾರದಿಂದ ದುಃಖಿತನಾಗಿ ಸಂತಪ್ತನಾಗಿರುವೆನು. (ನೀನು ನನಗೆ ಶ್ರೇಯಸ್ಸಿನ ಉಪದೇಶವನ್ನಿತ್ತು ನನ್ನನ್ನು ಉದ್ಧರಿಸು.) ॥ ೧೮ ॥

ಭಗವಂತನೆಂದನು – ಪ್ರಿಯ ಉದ್ಧವಾ ! ಪ್ರಾಯಶಃ ಈ ಪ್ರಪಂಚದ ವಾಸ್ತವಿಕ ಸ್ವರೂಪವನ್ನು ತಿಳಿಯಲು ಈ ಲೋಕವು ಅನಿತ್ಯವಾಗಿದೆ ಎಂದು ತಿಳಿದ ವಿದ್ವಾಂಸರಾದವರು ತಾವೇ ತಮ್ಮನ್ನು ಅಮಂಗಳಕರವಾದ ವಿಷಯವಾಸನೆಗಳಿಂದ ಉದ್ಧರಿಸಿಕೊಳ್ಳುತ್ತಾರೆ. ॥ ೧೯ ॥ ವಿಶೇಷವಾಗಿ ಮನುಷ್ಯನಿಗೆ ಅವನ ಆತ್ಮನೇ ಗುರುವಾಗಿದ್ದಾನೆ. ಅವನು ಪ್ರತ್ಯಕ್ಷಪ್ರಮಾಣದ ಮೂಲಕ ಹಾಗೂ ಅನುಮಾನ ಪ್ರಮಾಣದ ಮೂಲಕ ಸ್ವತಃ ತನ್ನ ಶ್ರೇಯಸ್ಸನ್ನು ಪಡೆಯಲು ಸಮರ್ಥನಾಗಿರುವನು. ॥ ೨೦ ॥ ಸಾಂಖ್ಯಶಾಸ್ತ್ರಮತ್ತು ಯೋಗಶಾಸ್ತ್ರಗಳಲ್ಲಿ ಪ್ರವೀಣರಾದ ಜ್ಞಾನಿಗಳು ಮನುಷ್ಯ ಯೋನಿಯಲ್ಲೇ ಸರ್ವಶಕ್ತಿ ಸಂಪನ್ನ ಪರಮಾತ್ಮನಾದ ನನ್ನನ್ನು ಅಪರೋಕ್ಷದಿಂದ ಹಾಗೂ ಸರ್ವವ್ಯಾಪಕ ವಿರಾಟ್ ಸಗುಣ ನಿರಾಕಾರ ರೂಪದಿಂದಲೂ ನನ್ನ ಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ॥ ೨೧ ॥

ಏಕದ್ವಿತ್ರಿಚತುಷ್ಪಾದೋ ಬಹುಪಾದಸ್ತಥಾಪದಃ ।
ಬಹ್ವ್ಯಃ ಸಂತಿ ಪುರಃ ಸೃಷ್ಟಾಸ್ತಾಸಾಂ ಮೇ ಪೌರುಷೀ ಪ್ರಿಯಾ
॥ ೨೨ ॥

ನಾನು ಒಂದು ಕಾಲಿನ ಪ್ರಾಣಿಗಳನ್ನು, ಎರಡು ಕಾಲಿನ, ಮೂರು ಕಾಲಿನ, ನಾಲ್ಕು ಕಾಲಿನ, ಅನೇಕ ಕಾಲುಗಳುಳ್ಳ ಮತ್ತು ಕಾಲಿಲ್ಲದ ಅನೇಕ ಪ್ರಕಾರದ ಯೋನಿಗಳನ್ನು ನಿರ್ಮಾಣ ಮಾಡಿರುವೆನು. ಆದರೆ ಇವೆಲ್ಲದರಲ್ಲಿ ದ್ವಿಪಾದಿಯಾದ ಮನುಷ್ಯ ಶರೀರವೇ ನನಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯವಾದುದು. ॥ ೨೨ ॥ ಭಗವಂತ ಹೇಳುತ್ತಾನೆ ನಾನಾದರೋ ಅಗ್ರಾಹ್ಯನಾಗಿದ್ದರೂ ಈ ಮನುಷ್ಯ ಶರೀರದ ಮೂಲಕವೇ ತಿಳಿಯಲ್ಪಡುವ ಕಾರಣಗಳಾದ ಹೇತುಗಳಿಂದ, ಗುಣಗಳಿಂದ, ಚಿಹ್ನೆಗಳಿಂದ, ಅನುಮಾನದಿಂದ ಈಶ್ವರನಾದ ನನ್ನನ್ನು ಹುಡುಕಿಕೊಳ್ಳುತ್ತಾರೆ. ॥ ೨೩. ॥ ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನ ಇತಿಹಾಸವನ್ನು ಹೇಳುತ್ತಿರುತ್ತಾರೆ. ಆ ಇತಿಹಾಸವು ಪರಮ ತೇಜಸ್ವೀ ಅವಧೂತ ದತ್ತಾತ್ರೇಯ* ಮತ್ತು ಯದುರಾಜನ ಸಂವಾದರೂಪದಲ್ಲಿದೆ. ॥ ೨೪ ॥ ಒಮ್ಮೆ ಧರ್ಮದ ಮರ್ಮಜ್ಞನಾದ ಯದುರಾಜನು ಓರ್ವ ತ್ರಿಕಾಲದರ್ಶಿ ತರುಣ ಅವಧೂತ ಬ್ರಾಹ್ಮಣನು ನಿರ್ಭಯನಾಗಿ ಸಂಚರಿಸುವುದನ್ನು ನೋಡಿದನು. ಆಗ ಆವನು ಆ ಅವಧೂತನಲ್ಲಿ ಪ್ರಶ್ನಿಸಿದನು – ॥ ೨೫ ॥

ಏಕದ್ವಿತ್ರಿಚತುಷ್ಪಾದೋ ಬಹುಪಾದಸ್ತಥಾಪದಃ ।
ಬಹ್ವ್ಯಃ ಸಂತಿ ಪುರಃ ಸೃಷ್ಟಾಸ್ತಾಸಾಂ ಮೇ ಪೌರುಷೀ ಪ್ರಿಯಾ
॥ ೨೨ ॥

ಅತ್ರ ಮಾಂ ಮಾರ್ಗಯಂತ್ಯದ್ಧಾ ಯುಕ್ತಾ ಹೇತುಭಿರೀಶ್ವರಮ್ ।
ಗೃಹ್ಯಮಾಣೈರ್ಗುಣೈರ್ಲಿಂಗೈರಗ್ರಾಹ್ಯಮನುಮಾನತಃ
॥ ೨೩. ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅವಧೂತಸ್ಯ ಸಂವಾದಂ ಯದೋರಮಿತತೇಜಸಃ
॥ ೨೪ ॥

ಅವಧೂತಂ ದ್ವಿಜಂ ಕಂಚಿಚ್ಚರಂತಮಕುತೋಭಯಮ್ ।
ಕವಿಂ ನಿರೀಕ್ಷ್ಯ ತರುಣಂ ಯದುಃ ಪಪ್ರಚ್ಛ ಧರ್ಮವಿತ್
॥ ೨೫ ॥

ಯದುರಾಜನು ಕೇಳಿದನು – ಬ್ರಾಹ್ಮಣ ಶ್ರೇಷ್ಠರೇ! ನೀವಾದರೋ ಯಾವ ಕರ್ಮವನ್ನೂ ಮಾಡುತ್ತಿಲ್ಲ ಆದರೂ ನಿಮಗೆ ಈ ಅತ್ಯಂತ ನೈಪುಣ್ಯ ಬುದ್ಧಿಯು ಹೇಗೆ ಬಂತು? ಅಂತಹ ಶ್ರೇಷ್ಠ ಬುದ್ಧಿಯನ್ನು ಆಶ್ರಯಿಸಿ ನೀವು ಪರಮವಿದ್ವಾಂಸರಾಗಿದ್ದರೂ ಬಾಲಕನಂತೆ ಪ್ರಪಂಚದಲ್ಲಿ ಅಲೆದಾಡುತ್ತಿರುವಿರಲ್ಲಾ! ॥ ೨೬ ॥ ಪ್ರಾಯಶಃ ಜನರು ಒಂದಲ್ಲ ಒಂದು ಕಾಮನೆಯಿಂದಲೇ ಧರ್ಮ, ಅರ್ಥ, ಕಾಮದಲ್ಲಿ ಹಾಗೂ ತತ್ತ್ವಜ್ಞಾನದ ಇಚ್ಛೆಯಲ್ಲಿ ಪ್ರವೃತ್ತರಾಗಿ ಅದರ ಬದಲು ಆಯುಸ್ಸು ಕೀರ್ತಿ, ಅಥವಾ ಧನ-ಸಂಪತ್ತು ಸಿಗಬಹುದು ಎಂದು ಯೋಚಿಸುವುದನ್ನು ನೋಡಲಾಗುತ್ತದೆ. ಆದರೆ ನಿಮ್ಮನ್ನು ನೋಡಿದರೆ – ನೀವು ಸಮರ್ಥರಾಗಿದ್ದು ಜ್ಞಾನೀ ಹಾಗೂ ದಕ್ಷರಾಗಿರುವಿರಿ. ಸುಂದರ ಶರೀರವೂ ಇದೆ. ಅಮೃತ ಭಾಷಿಗಳಾಗಿದ್ದೀರಿ. ಆದರೂ ನೀವು ಏನನ್ನೂ ಮಾಡುವುದಿಲ್ಲ, ಬಯಸುವುದಿಲ್ಲ, ಇಂತಹ ವಿದ್ವಾಂಸರಾಗಿದ್ದರೂ ನೀವು ಜಡನಂತೆ, ಉನ್ಮತ್ತನಂತೆ ಅವಧೂತನಂತೆ ಪ್ರಪಂಚದಲ್ಲಿ ಅಲೆದಾಡುತ್ತಿರುವಿರಿ. ॥ ೨೭-೨೮ ॥ ಬೇರೆ ಜನರಾದರೋ ಕಾಮ, ಕ್ರೋಧ, ಲೋಭರೂಪೀ ದಾವಾನಲದಲ್ಲಿ ಬೇಯುತ್ತಿರುವರು. ಆ ಅಗ್ನಿಯಿಂದ ರಕ್ಷಿಸಿಕೊಳ್ಳಲು ಯಾವುದೇ ದಾರಿ ಇಲ್ಲದಿದ್ದರೂ ನೀವಾದರೋ ಪೂರ್ಣವಾಗಿ ಮುಕ್ತರಾಗಿದ್ದೀರಿ. ಗಂಗೆಯ ನೀರಿನಲ್ಲಿ ನಿಂತ ಆನೆಗೆ ದಾವಾನಲದ ಶಾಖ ತಗಲದೆ ಶೀತಲತೆಯನ್ನೇ ಅನುಭವಿಸುತ್ತದೆ. ಹಾಗೆಯೇ ನೀವು ಈ ಪ್ರಪಂಚದ ಯಾವ ತಾಪವೂ ಇಲ್ಲದೆ ಸ್ವಸ್ಥರಾಗಿರುವಿರಲ್ಲ! ॥ ೨೯ ॥ ಬ್ರಾಹ್ಮಣೋತ್ತಮಾ! ನಿಮಗೆ ಈ ಪ್ರಪಂಚದಲ್ಲಿ ಯಾರ ಕುರಿತು ಕಿಂಚಿತ್ತಾದರೂ ಆಸಕ್ತಿಯಿಲ್ಲ, ನೀವು ನಿಮ್ಮ ಶುದ್ಧ ಸ್ವರೂಪದಲ್ಲಿಯೇ ಸದಾ ಸ್ಥಿತರಾಗಿರುವಿರಿ. ನಿಮ್ಮ ಈ ಅನಿರ್ವಚನೀಯ ಆನಂದದ ಕಾರಣವೇನು? ಇದನ್ನು ತಾವು ನನಗೆ ತಿಳಿಸುವ ಕೃಪೆಮಾಡಬೇಕು. ॥ ೩೦ ॥

ಯದುರುವಾಚ

ಕುತೋ ಬುದ್ಧಿರಿಯಂ ಬ್ರಹ್ಮನ್ನಕರ್ತುಃ ಸುವಿಶಾರದಾ ।
ಯಾಮಾಸಾದ್ಯ ಭವಾನ್ಲೋಕಂ ವಿದ್ವಾಂಶ್ಚರತಿ ಬಾಲವತ್
॥ ೨೬ ॥

ಪ್ರಾಯೋ ಧರ್ಮಾರ್ಥಕಾಮೇಷು ವಿವಿತ್ಸಾಯಾಂ ಚ ಮಾನವಾಃ ।
ಹೇತುನೈವ ಸಮೀಹಂತೇ ಆಯುಷೋ ಯಶಸಃ ಶ್ರಿಯಃ
॥ ೨೭ ॥

ತ್ವಂ ತು ಕಲ್ಪಃ ಕವಿರ್ದಕ್ಷಃ ಸುಭಗೋಽಮೃತಭಾಷಣಃ ।
ನ ಕರ್ತಾ ನೇಹಸೇ ಕಿಂಚಿಜ್ಜಡೋನ್ಮತ್ತಪಿಶಾಚವತ್
॥ ೨೮ ॥

ಜನೇಷು ದಹ್ಯಮಾನೇಷು ಕಾಮಲೋಭದವಾಗ್ನಿನಾ ।
ನ ತಪ್ಯಸೇಽಗ್ನಿನಾ ಮುಕ್ತೋ ಗಂಗಾಂಭಸ್ಥ ಇವ ದ್ವಿಪಃ
॥ ೨೯ ॥

ತ್ವಂ ಹಿ ನಃ ಪೃಚ್ಛತಾಂ ಬ್ರಹ್ಮನ್ನಾತ್ಮನ್ಯಾನಂದಕಾರಣಮ್ ।
ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ
॥ ೩೦ ॥

* ದತ್ತಾತ್ರೇಯನು ಸ್ವಯಂ ಭಗವಂತನ ಅವತಾರವಾಗಿದ್ದಾನೆ. ಅವನು ಜನರಿಗೆ ಪಾಠಹೇಳುವ ಉದ್ದೇಶದಿಂದಲೇ ಈ ಇಪ್ಪತ್ತನಾಲ್ಕು ಗುರುಗಳನ್ನು ಹೆಸರಿಸಿದ್ದಾನೆ. ಉದಾಹರಣೆಯಿಂದ ಉಪದೇಶವನ್ನು ಗ್ರಹಿಸಲು, ತಿಳಿಯಲು ಸುಲಭವಾಗುತ್ತದೆ. ಆದ್ದರಿಂದ ಸಾರವಾದ ಮಾತನ್ನು ಗ್ರಹಿಸಬೇಕು.

ಶ್ರೀಭಗವಾನುವಾಚ

ಯದುನೈವಂ ಮಹಾಭಾಗೋ ಬ್ರಹ್ಮಣ್ಯೇನ ಸುಮೇಧಸಾ ।
ಪೃಷ್ಟಃ ಸಭಾಜಿತಃ ಪ್ರಾಹ ಪ್ರಶ್ರಯಾವನತಂ ದ್ವಿಜಃ
॥ ೩೧ ॥

ಬ್ರಾಹ್ಮಣ ಉವಾಚ

ಸಂತಿ ಮೇ ಗುರವೋ ರಾಜನ್ ಬಹವೋ ಬುದ್ಧ್ಯುಪಾಶ್ರಿತಾಃ ।
ಯತೋ ಬುದ್ಧಿಮುಪಾದಾಯ ಮುಕ್ತೋಽಟಾಮೀಹ ತಾನ್ ಶೃಣು
॥ ೩೨ ॥

ಪೃಥಿವೀ ವಾಯುರಾಕಾಶಮಾಪೋಽಗ್ನಿಶ್ಚಂದ್ರಮಾ ರವಿಃ ।
ಕಪೋತೋಽಜಗರಃ ಸಿಂಧುಃ ಪತಂಗೋ ಮಧುಕೃದ್ಗಜಃ
॥ ೩೩ ॥

ಮಧುಹಾ ಹರಿಣೋ ಮೀನಃ ಪಿಂಗಲಾ ಕುರರೋಽರ್ಭಕಃ ।
ಕುಮಾರೀ ಶರಕೃತ್ಸರ್ಪ ಊರ್ಣನಾಭಿಃ ಸುಪೇಶಕೃತ್
॥ ೩೪ ॥

ಏತೇ ಮೇ ಗುರವೋ ರಾಜನ್ ಚತುರ್ವಿಂಶತಿರಾಶ್ರಿತಾಃ ।
ಶಿಕ್ಷಾ ವೃತ್ತಿಭಿರೇತೇಷಾಮನ್ವಶಿಕ್ಷಮಿಹಾತ್ಮನಃ
॥ ೩೫ ॥

ಯತೋ ಯದನುಶಿಕ್ಷಾಮಿ ಯಥಾ ವಾ ನಾಹುಷಾತ್ಮಜ ।
ತತ್ತಥಾ ಪುರುಷವ್ಯಾಘ್ರ ನಿಬೋಧ ಕಥಯಾಮಿ ತೇ
॥ ೩೬ ॥

ಭೂತೈರಾಕ್ರಮ್ಯಮಾಣೋಽಪಿ ಧೀರೋ ದೈವವಶಾನುಗೈಃ ।
ತದ್ವಿದ್ವಾನ್ನ ಚಲೇನ್ಮಾರ್ಗಾದನ್ವಶಿಕ್ಷಂ ಕ್ಷಿತೇರ್ವ್ರತಮ್
॥ ೩೭ ॥

ಶಶ್ವತ್ಪರಾರ್ಥಸರ್ವೇಹಃ ಪರಾರ್ಥೈಕಾಂತ ಸಂಭವಃ ।
ಸಾಧುಃ ಶಿಕ್ಷೇತ ಭೂಭೃತ್ತೋ ನಗಶಿಷ್ಯಃ ಪರಾತ್ಮತಾಮ್
॥ ೩೮ ॥

ಪ್ರಾಣವೃತ್ತ್ಯೈವ ಸಂತುಷ್ಯೇನ್ಮುನಿರ್ನೈವೇಂದ್ರಿಯಪ್ರಿಯೈಃ ।
ಜ್ಞಾನಂ ಯಥಾ ನ ನಶ್ಯೇತ ನಾವಕೀರ್ಯೇತ ವಾಙ್ಮನಃ
॥ ೩೯ ॥

ವಿಷಯೇಷ್ವಾವಿಷನ್ಯೋಗೀ ನಾನಾಧರ್ಮೇಷು ಸರ್ವತಃ ।
ಗುಣದೋಷವ್ಯಪೇತಾತ್ಮಾ ನ ವಿಷಜ್ಜೇತ ವಾಯುವತ್
॥ ೪೦ ॥

ಶ್ರೀಭಗವಂತನು ಹೇಳುತ್ತಾನೆ – ಉದ್ಧವನೇ! ಬ್ರಾಹ್ಮಣರನ್ನು ಆದರಿಸುವ ಪರಮ ಬುದ್ಧಿವಂತ ಮಹಾರಾಜಾ ಯದುವು ಬಹಳ ವಿನಮ್ರಭಾವದಿಂದ ನತಮಸ್ತಕನಾಗಿ ಮಹಾಭಾಗ್ಯಶಾಲೀ ಬ್ರಾಹ್ಮಣ ಶ್ರೇಷ್ಠ ಅವಧೂತ ದತ್ತಾತ್ರೇಯರನ್ನು ಹೀಗೆ ಸನ್ಮಾನಿಸಿದನು. ಅವನ ಪ್ರಶ್ನೆಗಳಿಗೆ ಅವಧೂತರು ಈ ಪ್ರಕಾರ ಉತ್ತರಿಸತೊಡಗಿದರು. ॥ ೩೧ ॥

ಶ್ರೀದತ್ತಾತ್ರೇಯರೂಪೀ ಬ್ರಾಹ್ಮಣರು ಇಂತೆಂದರು – ರಾಜನೇ! ನಾನು ನನ್ನ ಬುದ್ಧಿಯಿಂದ ಹಲವಾರು ಗುರುಗಳನ್ನು ಆಶ್ರಯಿಸಿದ್ದೇನೆ. ಅವರಿಂದ ಶಿಕ್ಷಣವನ್ನು ಪಡೆದು ನಾನು ಈ ಜಗತ್ತಿನಲ್ಲಿ ಮುಕ್ತಭಾವದಿಂದ ಸಂಚರಿಸುತ್ತಿದ್ದೇನೆ. ಆ ನನ್ನ ಗುರುಗಳ ಹೆಸರುಗಳನ್ನು ಹಾಗೂ ಅವರಿಂದ ಪಡೆದ ಶಿಕ್ಷಣವನ್ನು ಹೇಳುವೆನು ಕೇಳು. ॥ ೩೨ ॥ ಭೂಮಿ, ವಾಯು, ಆಕಾಶ, ಜಲ, ಅಗ್ನಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ಪತಂಗ, ದುಂಬಿ ಅಥವಾ ಜೇನುನೊಣ, ಆನೆ, ಜೇನು ತೆಗೆಯುವವನು, ಜಿಂಕೆ, ಮೀನು, ಪಿಂಗಳಾವೇಶ್ಯೆ, ಕುರರಪಕ್ಷಿ, ಮಗು, ಕುಮಾರೀ, ಬಾಣವನ್ನು ತಯಾರಿಸುವವನು, ಸರ್ಪ, ಜೇಡರಹುಳು, ಭೃಂಗ ಕೀಟ – ಇವರೇ ನನ್ನ ಇಪ್ಪತ್ತನಾಲ್ಕು ಮಂದಿ ಗುರುಗಳು. ॥೩೩-೩೪॥

ರಾಜನೇ! ನಾನು ಈ ಇಪ್ಪತ್ತನಾಲ್ಕು ಗುರುಗಳಿಂದ ಕಲಿತಿರುವ ವಿಷಯವನ್ನು ನಿನಗೆ ಹೇಳುತ್ತೇನೆ. ಎಲೈ ಪುರುಷ ಶ್ರೇಷ್ಠ ಯಯಾತಿನಂದನಾ! ನೀನು ಅದನ್ನು ಯಥಾವತ್ತಾಗಿ ಕೇಳು. ॥ ೩೫-೩೬ ॥

ಪೃಥ್ವಿಯ ದೃಷ್ಟಾಂತವನ್ನು ಕೊಡುತ್ತಾ ಹೇಳುತ್ತಾರೆ – ಜ್ಞಾನಿಯು ತನಗೆ ಬೇರೆಯವರು ಎಷ್ಟೇ ಕಷ್ಟಕೊಟ್ಟರೂ, ಅದೆಲ್ಲವೂ ಪ್ರಾರಬ್ಧಾನುಸಾರ ಪ್ರಾಪ್ತವಾದುದೆಂದು ತಿಳಿದು, ತನ್ನ ಸ್ವರೂಪದಿಂದ ಕಿಂಚಿತ್ತಾದರೂ ವಿಚಲಿತನಾಗಬಾರದು. ಇದನ್ನು ನಾನು ಪೃಥ್ವಿಯ ಕ್ಷಮಾಗುಣದಿಂದ ಕಲಿತೆ. ಪೃಥ್ವಿಯ ಸಮಸ್ತ ಕ್ರಿಯೆಗಳು ಪರೋಪಕಾರಕ್ಕಾಗಿಯೇ ಇರುತ್ತವೆ. ಪೃಥ್ವಿಯನ್ನು ಆಶ್ರಯಿಸಿದ ಪರ್ವತಗಳಿಂದ ಹಾಗೂ ವೃಕ್ಷಗಳಿಂದಲೂ ನಾನು ಪರೋಪಕಾರದ ಭಾವನೆಯನ್ನು ಕಲಿತೆನು. ॥ ೩೭-೩೮ ॥

(ವಾಯುವಿನ ಕುರಿತು ಹೇಳುವಾಗ–) ಮುನಿಯು ಪ್ರಾಣವೃತ್ತಿಯಲ್ಲೇ ಸಂತುಷ್ಟನಾಗಿರಬೇಕು. ಆರ್ಥಾತ್ – ಪ್ರಾಣಧಾರಣೆ ಆಗುವಷ್ಟೇ ಆಹಾರವನ್ನು ತೆಗೆದುಕೊಳ್ಳಬೇಕು, ಇಂದ್ರಿಯಗಳ ತೃಪ್ತಿಗಾಗಿ ಅಲ್ಲ, ಅದರಿಂದ ವಾಣಿ ಮತ್ತು ಮನಸ್ಸು ಅತ್ತ-ಇತ್ತ ಅಲೆದಾಡದಿರಲಿ. ತನ್ನ ಜ್ಞಾನವೂ ನಷ್ಟವಾಗದಿರಲಿ. ॥ ೩೯ ॥ ವಾಯುವು ಸರ್ವತ್ರ ಸಂಚರಿಸುತ್ತದೆ, ಆದರೆ ಯಾವುದರಲ್ಲಿಯೂ ಲಿಪ್ತವಾಗುವುದಿಲ್ಲ, ಗಂಧವನ್ನು ಗ್ರಹಿಸುತ್ತದೆ ಹಾಗೂ ಬಿಡುತ್ತದೆ. ಹಾಗೆಯೇ ಯೋಗಿಯು ಎಲ್ಲೆಡೆ ಸಂಚರಿಸುತ್ತಿದ್ದರೂ, ಅನೇಕ ಧರ್ಮಗಳ ವಿಷಯಗಳಿಂದ, ಅವುಗಳ ಗುಣ-ದೋಷಗಳಿಂದ ತನ್ನನ್ನು ಸರ್ವಥಾ ಬೇರೆಯಾಗಿಟ್ಟುಕೊಂಡು, ಅವುಗಳಲ್ಲಿ ಆಸಕ್ತನಾಗಬಾರದು. ॥ ೪೦ ॥

ಪಾರ್ಥಿವೇಷ್ವಿಹ ದೇಹೇಷು ಪ್ರವಿಷ್ಟಸ್ತದ್ಗುಣಾಶ್ರಯಃ ।
ಗುಣೈರ್ನ ಯುಜ್ಯತೇ ಯೋಗೀ ಗಂಧೈರ್ವಾಯುರಿವಾತ್ಮದೃಕ್
॥ ೪೧ ॥

ವಾಯುವು ಗಂಧವನ್ನು ಹೊತ್ತುಕೊಂಡು ಹೋಗುತ್ತದೆ, ಆದರೆ ಆದರ ಗುಣ-ದೋಷಗಳಲ್ಲಿ ಅದು ಅಸಂಗವಾಗಿಯೇ ಇರುತ್ತದೆ. ಹಾಗೆಯೇ ಆತ್ಮಜ್ಞಾನಿಯು ಎಲ್ಲೆಡೆ ವಿಚರಿಸುತ್ತಿದ್ದರೂ ಎಲ್ಲಿಯೂ ಗುಣ-ದೋಷಗಳಲ್ಲಿ ಸಿಕ್ಕಿಹಾಕಿಕೊಳ್ಳ ಬಾರದು. ಒಂದೇ ಆತ್ಮವು ಸರ್ವತ್ರ ಪರಿಪೂರ್ಣವಾಗಿದೆ. ಅದೇ ಆತ್ಮವು ಪಾರ್ಥಿವ ಶರೀರದಲ್ಲಿಯೂ ಇದೆ. ಆದರೆ ಆತ್ಮವು ಶರೀರದಲ್ಲಿದ್ದರೂ ನಿರ್ಲಿಪ್ತವಾಗಿರುವಂತೆ ಜ್ಞಾನಿಯೂ ಶರೀರದಲ್ಲಿ ಇದ್ದರೂ ಆದರ ಗುಣ-ದೋಷ ಗಳೊಂದಿಗೆ ತನ್ನನ್ನು ಒಂದಾಗಿಸ ಬಾರದು. ॥ ೪೧ ॥

ಅಂತರ್ಹಿತಶ್ಚ ಸ್ಥಿರಜಂಗಮೇಷು
ಬ್ರಹ್ಮಾತ್ಮಭಾವೇನ ಸಮನ್ವಯೇನ ।
ವ್ಯಾಪ್ಯವ್ಯವಚ್ಛೇದಮಸಂಗಮಾತ್ಮನೋ
ಮುನಿರ್ನಭಸ್ತ್ವಂ ವಿತತಸ್ಯ ಭಾವಯೇತ್ ॥ ೪೨ ॥

(ಈಗ ಆಕಾಶದ ಉದಾಹರಣೆಯನ್ನು ಎರಡು ಶ್ಲೋಕಗಳಲ್ಲಿ ತಿಳಿಸುತ್ತಾರೆ –) ಆಕಾಶವು ಎಲ್ಲ ಕಡೆಗಳಲ್ಲಿ ತುಂಬಿಕೊಂಡು, ಸರ್ವವ್ಯಾಪಕವಾಗಿದೆ. ಹಾಗೆಯೇ ಆ ಬ್ರಹ್ಮವು ಸ್ಥಾವರ ಜಂಗಮ ಎಲ್ಲ ಪ್ರಾಣಿಗಳಲ್ಲಿ ಸಮರೂಪದಿಂದ ಮತ್ತು ಅನ್ವಯರೂಪದಿಂದ ಸರ್ವವ್ಯಾಪಕವಾಗಿದೆ. ಅರ್ಥಾತ್ – ಹೊರಗೆ ಒಳಗೆ ಎಲ್ಲೆಡೆ ಪರಿಪೂರ್ಣವಾಗಿದೆ. ಆ ಬ್ರಹ್ಮವು ಅಖಂಡರೂಪದಿಂದಿದ್ದು ಅಸಂಗವಾಗಿದೆ. ಇಂತಹ ಆತ್ಮನ ಸರ್ವವ್ಯಾಪಕತೆಯ ಅನುಭವವನ್ನು ಮುನಿಯು ಆಕಾಶದ ದೃಷ್ಟಾಂತದಿಂದ ಕಲಿಯಬೇಕು. ॥ ೪೨ ॥

ತೇಜೋಽಬನ್ನಮಯೈರ್ಭಾವೈರ್ಮೇಘಾದ್ಯೈರ್ವಾಯುನೇರಿತೈಃ ।
ನ ಸ್ಪೃಶ್ಯತೇ ನಭಸ್ತದ್ವತ್ಕಾಲಸೃಷ್ಟೈರ್ಗುಣೈಃ ಪುಮಾನ್
॥ ೪೩ ॥

ವಾಯುವಿನಿಂದ ಪ್ರೇರಿತವಾದ ಮೋಡಗಳ ಸಮೂಹ ಆಕಾಶದಲ್ಲೇ ಇರುತ್ತದೆ, ಆದರೆ ಆಕಾಶವು ಅವುಗಳಿಂದ ನಿರ್ಲಿಪ್ತವಾಗಿರುತ್ತದೆ. ಹಾಗೆಯೇ ಕಾಲನ ಪ್ರೇರಣೆಯಿಂದ ಸತ್ತ್ವಾದಿ ಮೂರು ಗುಣಗಳ ಕಾರ್ಯರೂಪೀ ಈ ಅಗ್ನಿ, ಜಲ, ಪೃಥ್ವಿ (ಅನ್ನ) ರೂಪದಲ್ಲಿ ನಿರ್ಮಿತ ಶರೀರ ಇಂದ್ರಿಯಾದಿಗಳಿಂದ ಪುರುಷನಿಗೆ ಯಾವ ಸಂಬಂಧವೂ ಇಲ್ಲ ॥ ೪೩ ॥

ಸ್ವಚ್ಛಃ ಪ್ರಕೃತಿತಃ ಸ್ನಿಗ್ಧೋ ಮಾಧುರ್ಯಸ್ತೀರ್ಥಭೂರ್ನೃಣಾಮ್ ।
ಮುನಿಃ ಪುನಾತ್ಯಪಾಂ ಮಿತ್ರಮೀಕ್ಷೋಪಸ್ಪರ್ಶಕೀರ್ತನೈಃ
॥ ೪೪ ॥

(ಈಗ ಜಲದ ಉದಾಹರಣೆಯನ್ನು ಕೊಡುತ್ತಾ ಹೇಳುತ್ತಾರೆ –) ನೀರು ಸ್ವಭಾವತಃ ಸ್ವಚ್ಛವಾಗಿದೆ, ಪ್ರಿಯವಾಗಿದೆ, ತೀರ್ಥವಾಗಿರುವುದರಿಂದ ಮನುಷ್ಯರನ್ನು ಪವಿತ್ರವಾಗಿಸುತ್ತದೆ. ಹಾಗೆಯೇ ಮುನಿಯ ಸ್ವಭಾವವು ಕೂಡ ಸ್ವಚ್ಛವಾಗಿರುತ್ತದೆ. ಅವನು ಎಲ್ಲರಿಗೆ ಪ್ರಿಯನಾಗಿರುತ್ತಾನೆ. ತನ್ನ ದೃಷ್ಟಿಯ ಮೂಲಕ ಹಾಗೂ ಮಧುರವಾಣಿಯಿಂದ ಜನರನ್ನು ಪವಿತ್ರರಾಗಿಸುತ್ತಾನೆ. ಅದಕ್ಕಾಗಿ ಮುನಿಯು ಶುದ್ಧ ಸ್ನಿಗ್ಧ ಮಧುರ ಸ್ವಭಾವವನ್ನು ಹೊಂದಿರುತ್ತಾನೆ. ॥ ೪೪ ॥

ತೇಜಸ್ವೀ ತಪಸಾ ದೀಪ್ತೋ ದುರ್ಧರ್ಷೋದರಭಾಜನಃ ।
ಸರ್ವಭಕ್ಷೋಽಪಿ ಯುಕ್ತಾತ್ಮಾ ನಾದತ್ತೇ ಮಲಮಗ್ನಿವತ್
॥ ೪೫ ॥

ಅಗ್ನಿಯು ತೇಜಸ್ವಿಯೂ, ಜ್ಯೋತಿರ್ಮಯನೂ ಆಗಿದ್ದಾನೆ. ಅವನು ದುರಾಧರ್ಷನು ಅವನನ್ನು ಯಾರೂ ಎದುರಿಸಲಾರರು ಸಂಗ್ರಹ ಪರಿಗ್ರಹಕ್ಕಾಗಿ ಅವನು ಪಾತ್ರೆಯಿಲ್ಲ ಉದರವೇ ಅವನ ಪಾತ್ರೆಯು. ಸರ್ವಭಕ್ಷಕನಾಗಿದ್ದರೂ ಅಯಾ ವಸ್ತುಗಳ ಗುಣ ದೋಷಗಳಿಂದ ಲಿಪ್ತನಾಗುವುದಿಲ್ಲ ಹಾಗೆಯೇ ಮುನಿಯು ತಪಸ್ವಿ, ತೇಜಸ್ವಿ ಹಾಗೂ ಸರ್ವ ಭಾಷಿಯಾಗಿದ್ದರೂ ಅಯಾ ವಸ್ತುಗಳ ಗುಣದೋಷಗಳಿಂದ ಲಿಪ್ತನಾಗುವುದಿಲ್ಲ, ಸಂಗ್ರಹ, ಪರಿಗ್ರಹಗಳಿಂದ ದೂರವಿರಬೇಕು. ॥ ೪೫ ॥ ಅಗ್ನಿಯು ಕೆಲವೆಡೆ ಪ್ರಕಟವಾಗಿದ್ದು, ಕೆಲವೆಡೆ ಅಪ್ರಕಟವಾಗಿರುತ್ತದೆ ಹಾಗೂ ಅದರ ಉಪಾಸನೆಯೂ ಮಾಡಲಾಗುತ್ತದೆ. ಹಾಗೆಯೇ ಸಾಧುವು ಕೆಲವೆಡೆ ತನ್ನನ್ನು ಅಡಗಿಸಿಕೊಂಡು, ಕೆಲವೆಡೆ ಪ್ರಕಟಪಡಿಸುವನು. ಶ್ರೇಯೋಕಾಮಿಯಾದ ಪುರುಷರಿಗೆ ಅವನು ಉಪಾಸ್ಯನೂ ಆಗುತ್ತಾನೆ. ಅಗ್ನಿಯಂತೆ ಅವರು ಸರ್ವಭಕ್ಷಿಯಾಗಿದ್ದಾರೆ. ಇಂತಹ

ಕ್ವಚಿಚ್ಚನ್ನಃ ಕ್ವಚಿತ್ಸ್ಪಷ್ಟ ಉಪಾಸ್ಯಃ ಶ್ರೇಯ ಇಚ್ಛತಾಮ್ ।
ಭುಂಕ್ತೇ ಸರ್ವತ್ರ ದಾತ್ರ್ಯಣಾಂ ದಹನ್ಪಾಗುತ್ತರಾಶುಭಮ್
॥ ೪೬ ॥

ಮಹಾಪುರುಷರಾದ ಸಾಧುಗಳು ಅನ್ನವೇ ಮುಂತಾದುವನ್ನು ಕೊಡುವವರ ಭೂತ, ಭವಿಷ್ಯದ ಎಲ್ಲ ಅಮಂಗಳಗಳನ್ನು ನಾಶ ಮಾಡಿಬಿಡುತ್ತಾರೆ. ಅವರನ್ನು ಪವಿತ್ರರಾಗಿಸುತ್ತಾರೆ. (ಇಂತಹ ಪವಿತ್ರಾತ್ಮರಾದ ಮಹಾತ್ಮಾ ಸಾಧುಗಳಾದರೋ ಬೇರೆಯವರನ್ನು ಪವಿತ್ರರಾಗಿಸ ಲೆಂದೇ ಭಿಕ್ಷೆ ಸ್ವೀಕರಿಸುತ್ತಾರೆ.) ॥ ೪೬ ॥ ಅಗ್ನಿಯು ಎಲ್ಲ ಇಂಧನ (ಕಟ್ಟಿಗೆ)ಗಳಲ್ಲಿ ವ್ಯಾಪಕನಾಗಿರುತ್ತಾನೆ. ಸೌದೆಯ ಆಕಾರದಂತೆ ಅಗ್ನಿಯು ಕಂಡುಬರುತ್ತಾನೆ. ಹಾಗೆಯೇ ತನ್ನ ಮಾಯೆಯಿಂದ ಉಂಟಾದ ಸತ್-ಅಸತ್ (ವ್ಯಕ್ತ-ಅವ್ಯಕ್ತ) ಎಲ್ಲ ಚರಾಚರ ಪ್ರಾಣಿಗಳಲ್ಲಿ ಪ್ರವಿಷ್ಟನಾದ ಒಂದೇ ಆತ್ಮವು ಆಯಾಯಾ ರೂಪದಲ್ಲಿ ಕಂಡುಬರುತ್ತಾನೆ. ॥ ೪೭ ॥

ಸ್ವಮಾಯಯಾ ಸೃಷ್ಟಮಿದಂ ಸದಸಲ್ಲಕ್ಷಣಂ ವಿಭುಃ ।
ಪ್ರವಿಷ್ಟ ಈಯತೇ ತತ್ತತ್ಸ್ವರೂಪೋಽಗ್ನಿರಿವೈಧಸಿ
॥ ೪೭ ॥

ವಿಸರ್ಗಾದ್ಯಾಃ ಶ್ಮಶಾನಾಂತಾ ಭಾವಾ ದೇಹಸ್ಯ ನಾತ್ಮನಃ ।
ಕಲಾನಾಮಿವ ಚಂದ್ರಸ್ಯ ಕಾಲೇನಾವ್ಯಕ್ತವರ್ತ್ಮನಾ
॥ ೪೮ ॥

(ಈಗ ಚಂದ್ರನ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ -) ಕಾಲದ ವೇಗದ ಪ್ರಭಾವದಿಂದ ಚಂದ್ರನ ಕಲೆಗಳು ವೃದ್ಧಿ-ಕ್ಷಯವಾಗುತ್ತಾ ಇರುತ್ತವೆ. ಇದೇ ರೀತಿ ದೇಹವು ಉತ್ಪತ್ತಿಯಿಂದ ಹಿಡಿದು ಮೃತ್ಯುವಿನವರೆಗೆ ಆಗುವ ಅವಸ್ಥೆಗಳು ಗಮನಕ್ಕೆ ಬಾರದಿರುವ ಕಾಲದ ಪ್ರಭಾವದಿಂದ ಬದಲಾಗುತ್ತಾ ಇರುತ್ತವೆ. ಆತ್ಮನಿಗೆ ಅವುಗಳ ಯಾವ ಸಂಬಂಧವೂ ಇರುವುದಿಲ್ಲ. ಅಗ್ನಿಯ ಜ್ವಾಲೆಗಳು ಅಗ್ನಿಯಿಂದ ಹೊರಟು ಕಣ್ಮರೆಯಾಗುತ್ತವೆ. ಆದರೆ ಕಾಣುವುದಿಲ್ಲ; ಹಾಗೆಯೇ ಕಾಲದ ಪ್ರಚಂಡವೇಗದಿಂದ ಎಲ್ಲ ಪ್ರಾಣಿಗಳ ಉತ್ಪತ್ತಿ ಮತ್ತು ಮೃತ್ಯು ಸದಾಕಾಲ ಆಗುತ್ತಾ ಇರುತ್ತದೆ. ಆದರೆ ಅದು ಕಾಣುವುದಿಲ್ಲ ॥ ೪೮-೪೯ ॥

ಕಾಲೇನ ಹ್ಯೋಘವೇಗೇನ ಭೂತಾನಾಂ ಪ್ರಭವಾಪ್ಯಯೌ ।
ನಿತ್ಯಾವಪಿ ನ ದೃಶ್ಯೇತೇ ಆತ್ಮನೋಽಗ್ನೇರ್ಯಥಾರ್ಚಿಷಾಮ್
॥ ೪೯ ॥

(ಈಗ ಸೂರ್ಯನ ದೃಷ್ಟಾಂತಕ್ಕಾಗಿ ಎರಡು ಶ್ಲೋಕಗಳನ್ನು ಹೇಳುತ್ತಾರೆ -) 'ಗೋಪತಿಃ' ಸೂರ್ಯನು ತನ್ನ ಕಿರಣಗಳಿಂದ ಸಮಯಕ್ಕೆ ಸರಿಯಾಗಿ ನೀರನ್ನು ಗ್ರಹಿಸಿ, ಅದನ್ನು ಮಳೆಯಾಗಿ ಸುರಿಸುತ್ತಾನೆ. ಆದರೆ ಸೂರ್ಯನು ಎಲ್ಲಿಯೂ ಆಸಕ್ತನಾಗುವುದಿಲ್ಲ, ಹಾಗೆಯೇ ಯೋಗಿಯು ಗ್ರಹಿಸುವಾಗ ಮತ್ತು ತ್ಯಜಿಸುವಾಗ ಎಲ್ಲಿಯೂ ಆಸಕ್ತನಾಗಿರಬಾರದು. ॥ ೫೦ ॥ ಹಲವಾರು ಪಾತ್ರೆಗಳಲ್ಲಿ ನೀರನ್ನು ತುಂಬಿಟ್ಟು ನೋಡಿದರೆ, ಆ ಪಾತ್ರೆಗಳಲ್ಲಿ ಪ್ರತಿಫಲಿತನಾದ ಸೂರ್ಯನು ಅನೇಕನಾಗಿರುವಂತೆ ಕಾಣುತ್ತದೆ. ಆದರೆ ಇರುವ ಸೂರ್ಯನು ಒಬ್ಬನೇ. ಹಾಗೆಯೇ ಆತ್ಮವೂ ಒಂದೇ ಆಗಿದೆ, ಆದರೆ ಸ್ಥೂಲಬುದ್ಧಿಯುಳ್ಳವರಿಗೆ ನಾನಾತ್ವದ ಭಾವನೆಯ ಕಾರಣ ಒಂದೇ ಆತ್ಮದ ಸತ್ತೆಯ ಬೋಧವಾಗುವುದಿಲ್ಲ, ಆದ್ದರಿಂದ ಸೂರ್ಯನ ದೃಷ್ಟಾಂತದಿಂದ ಆತ್ಮನ ಅಖಂಡತೆಯನ್ನು ಅರಿತುಕೊಳ್ಳಬೇಕು. ॥ ೫೧ ॥

ಗುಣೈರ್ಗುಣಾನುಪಾದತ್ತೇ ಯಥಾಕಾಲಂ ವಿಮುಂಚತಿ ।
ನತೇಷು ಯುಜ್ಯತೇ ಯೋಗೀ ಗೋಭಿರ್ಗಾ ಇವ ಗೋಪತಿಃ
॥ ೫೦ ॥

ಬುಧ್ಯತೇ ಸ್ವೇನ ಭೇದೇನ ವ್ಯಕ್ತಿಸ್ಥ ಇವ ತದ್ಗತಃ ।
ಲಕ್ಷ್ಯತೇ ಸ್ಥೂಲಮತಿಭಿರಾತ್ಮಾ ಚಾವಸ್ಥಿತೋಽರ್ಕವತ್
॥ ೫೧ ॥

(ಈಗ ಪಾರಿವಾಳದ ಉದಾಹರಣೆಯನ್ನು ಕೊಡುತ್ತಾರೆ -) ರಾಜನೇ! ಎಲ್ಲಿಯೂ ಯಾರೊಡನೆಯೂ ಅತಿ ಸ್ನೇಹ ಅಥವಾ ಆಸಕ್ತಿ ಇಡಬಾರದು. ಇಲ್ಲದಿದ್ದರೆ ಅವನು ದೀನನಾಗಿ ಪಾರಿವಾಳದಂತೆ ಅತ್ಯಂತ ಕ್ಲೇಶವನ್ನು ಅನುಭವಿಸಬೇಕಾಗುವುದು. ॥ ೫೨ ॥ ರಾಜನೇ! ಒಂದಾನೊಂದು ಕಾಡಿನಲ್ಲಿ ಒಂದು ಪಾರಿವಾಳವು ವಾಸಿಸುತ್ತಿತ್ತು. ಅದು ಒಂದು ಮರದ ಮೇಲೆ ಗೂಡುಕಟ್ಟಿಕೊಂಡಿತ್ತು. ಅದು ತನ್ನ ಹೆಣ್ಣು ಪಾರಿವಾಳದೊಂದಿಗೆ ಅನೇಕ ವರ್ಷಗಳವರೆಗೆ ಅದೇ ಗೂಡಿನಲ್ಲಿ ವಾಸಿಸುತ್ತಿತ್ತು. ಆ ಪಾರಿವಾಳ ದಂಪತಿಗಳ ಹೃದಯದಲ್ಲಿ ನಿರಂತರ ಒಬ್ಬರ ಕುರಿತು ಮತ್ತೊಬ್ಬರ

ನಾತಿಸ್ನೇಹಃ ಪ್ರಸಂಗೋ ವಾ ಕರ್ತವ್ಯಃ ಕ್ವಾಪಿ ಕೇನಚಿತ್ ।
ಕುರ್ವನ್ದುಃಖೇತ ಸಂತಾಪಂ ಕಪೋತ ಇವ ದೀನಧೀಃ
॥ ೫೨ ॥

ಕಪೋತಃ ಕಶ್ಚನಾರಣ್ಯೇ ಕೃತನೀಡೋ ವನಸ್ಪತೌ ।
ಕಪೋತ್ಯಾ ಭಾರ್ಯಯಾ ಸಾರ್ಧಮುವಾಸ ಕತಿಚಿತ್ಸಮಾಃ
॥ ೫೩ ॥

ಕಪೋತೌ ಸ್ನೇಹಗುಣಿತಹೃದಯೌ ಗೃಹಧರ್ಮಿಣೌ ।
ದೃಷ್ಟಿಂ ದೃಷ್ಟ್ಯಾಂಗಮಂಗೇನ ಬುದ್ಧಿಂ ಬುದ್ಧ್ಯಾ ಬಬಂಧತುಃ
॥ ೫೪ ॥

ಶಯ್ಯಾಸನಾಟನಸ್ಥಾನವಾರ್ತಾಕ್ರೀಡಾಶನಾದಿಕಮ್ ।
ಮಿಥುನೀಭೂಯ ವಿಸ್ರಬ್ಧೌ ಚೇರತುರ್ವನರಾಜಿಷು
॥ ೫೫ ॥

ಯಂ ಯಂ ವಾಂಛತಿ ಸಾ ರಾಜನ್ ತರ್ಪಯಂತ್ಯನುಕಂಪಿತಾ ।
ತಂ ತಂ ಸಮನಯತ್ಕಾಮಂ ಕೃಚ್ಛ್ರೇಣಾಪ್ಯಜಿತೇಂದ್ರಿಯಃ
॥ ೫೬ ॥

ಕಪೋತೀ ಪ್ರಥಮಂ ಗರ್ಭಂ ಗೃಹ್ಣತೀ ಕಾಲ ಆಗತೇ ।
ಅಂಡಾನಿ ಸುಷುವೇ ನೀಡೇ ಸ್ವಪತ್ಯುಃ ಸನ್ನಿಧೌ ಸತೀ
॥ ೫೭ ॥

ತೇಷು ಕಾಲೇ ವ್ಯಜಾಯಂತ ರಚಿತಾವಯವಾ ಹರೇಃ ।
ಶಕ್ತಿಭಿರ್ದುರ್ವಿಭಾವ್ಯಾಭಿಃ ಕೋಮಲಾಂಗತನೂರುಹಾಃ
॥ ೫೮ ॥

ಪ್ರಜಾಃ ಪುಪುಷತುಃ ಪ್ರೀತೌ ದಂಪತೀ ಪುತ್ರವತ್ಸಲೌ ।
ಶೃಣ್ವಂತೌ ಕೂಜಿತಂ ತಾಸಾಂ ನಿರ್ವೃತೌ ಕಲಭಾಷಿತೈಃ
॥ ೫೯ ॥

ತಾಸಾಂ ಪತತ್ರೈಃ ಸುಸ್ಪರ್ಶೈಃ ಕೂಜಿತೈರ್ಮುಗ್ಧಚೇಷ್ಟಿತೈಃ ।
ಪ್ರತ್ಯುದ್ಗಮೈರದೀನಾನಾಂ ಪಿತರೌ ಮುದಮಾಪತುಃ
॥ ೬೦ ॥

ಸ್ನೇಹಾನುಬದ್ಧಹೃದಯಾವನ್ಯೋನ್ಯಂ ವಿಷ್ಣುಮಾಯಯಾ ।
ವಿಮೋಹಿತೌ ದೀನಧಿಯೌ ಶಿಶೂನ್ ಪುಪುಷತುಃ ಪ್ರಜಾಃ
॥ ೬೧ ॥

ಏಕದಾ ಜಗ್ಮತುಸ್ತಾಸಾಮನ್ನಾರ್ಥಂ ತೌ ಕುಟುಂಬಿನೌ ।
ಪರಿತಃ ಕಾನನೇ ತಸ್ಮಿನ್ನರ್ಥಿನೌ ಚೇರತುಶ್ಚಿರಮ್
॥ ೬೨ ॥

ದೃಷ್ಟ್ವಾ ತಾನ್ ಲುಬ್ಧಕಃ ಕಶ್ಚಿದ್ಯದೃಚ್ಛಾತೋ ವನೇಚರಃ ।
ಜಗೃಹೇ ಜಾಲಮಾತತ್ಯ ಚರತಃ ಸ್ವಾಲಯಾಂತಿಕೇ
॥ ೬೩ ॥

ಪ್ರೇಮ ಬೆಳೆಯುತ್ತಲೇ ಇತ್ತು. ಅವು ಪರಸ್ಪರ ದೃಷ್ಟಿಯಿಂದ ದೃಷ್ಟಿ, ಅಂಗದಿಂದ ಅಂಗ, ಬುದ್ಧಿಯಿಂದ ಬುದ್ಧಿ ಹೀಗೆ ಬಂಧಿತರಾಗಿ ಗೃಹಸ್ಥ ಧರ್ಮದಲ್ಲಿ ಆಸಕ್ತವಾಗಿದ್ದವು. ॥ ೫೩-೫೪ ॥

ಅವು ನಿಃಶಂಕವಾಗಿ ಅಲ್ಲಿಯ ವೃಕ್ಷ ಲತೆಗಳಲ್ಲಿ ಒಟ್ಟಿಗೆ ಮಲಗುವುದು, ಕುಳಿತುಕೊಳ್ಳುವುದು, ಅಡ್ಡಾಡುವುದು, ಮಾತು ಕತೆಯಾಡುವುದು, ಆಡುವುದು, ತಿನ್ನುಣ್ಣುವುದು, ವಾಸಿಸುವು ದಷ್ಟು ಒಬ್ಬರಿಗೆ ಮತ್ತೊಬ್ಬರಮೇಲೆ ವಿಶ್ವಾಸ ಉಂಟಾಗಿತ್ತು.॥ ೫೫ ॥ ರಾಜನೇ ! ಆ ಪಾರಿವಾಳವು ಹೆಣ್ಣು ಪಾರಿವಾಳವು ಏನನ್ನೂ ಬಯಸಿದರೂ ಭಾರೀ ಕಷ್ಟಪಟ್ಟು ಅದರ ಕಾಮನೆ ಪೂರ್ಣಮಾಡು ವಷ್ಟು ಅದಕ್ಕೆ ಪ್ರೇಮವಿತ್ತು. ಆ ಹೆಣ್ಣು ಪಾರಿವಾಳವು ಸುರ ತಾಲಾಪದಿಂದ ಪಾರಿವಾಳವನ್ನು ಸಂತೋಷಪಡಿಸುತ್ತಿತ್ತು.॥ ೫೬ ॥ ಸಮಯ ಒದಗಿದಾಗ ಹೆಣ್ಣು ಪಾರಿವಾಳವು ಗರ್ಭವತಿಯಾಗಿ, ಅದು ತನ್ನ ಪತಿಯೊಂದಿಗೆ ಅದೇ ಗೂಡಿನಲ್ಲಿ ಇದ್ದು ಮೊಟ್ಟೆಗಳನ್ನಿಟ್ಟಿತು. ಭಗವಂತನ ಅಚಿಂತ್ಯ ಶಕ್ತಿಯಿಂದ ಸಮಯಕ್ಕೆ ಸರಿಯಾಗಿ ಆ ಮೊಟ್ಟೆಗಳು ಒಡೆದು ಅದರಿಂದ ಕೈಕಾಲುಗಳಿದ್ದ ಮರಿಗಳು ಹೊರಟವು. ಅವುಗಳ ಪ್ರತಿಯೊಂದು ಅಂಗವು ಮತ್ತು ರೆಕ್ಕೆಗಳು ಅತ್ಯಂತ ಕೋಮಲವಾಗಿದ್ದವು. ॥ ೫೭-೫೮ ॥ ಈ ಪಾರಿವಾಳ ದಂಪತಿಗಳ ಕಣ್ಣು ತಮ್ಮ ಮರಿಗಳ ಮೇಲೆಯೇ ನೆಟ್ಟಿತ್ತು. ಅವು ತುಂಬಾ ಪ್ರೇಮ, ಆನಂದದಿಂದ ತನ್ನ ಮರಿಗಳ ಪಾಲನೆ-ಪೋಷಣೆ ಮಾಡುತ್ತಾ, ಅವುಗಳ ಸಿಹಿಯಾದ ಮಾತು, ಅವುಗಳ ಗುಟರ್-ಗುಟರ್ ಕೇಳಿ ಆನಂದಮಗ್ನರಾಗು ತ್ತಿದ್ದವು. ॥ ೫೯ ॥ ಈ ಪ್ರಕಾರ ಆನಂದದಲ್ಲಿ ಮುಳುಗಿ ಮರಿಗಳ ಸುಕೋಮಲ ರೆಕ್ಕೆಗಳನ್ನು ಮುಟ್ಟುತ್ತಾ, ಅವುಗಳ ಕಲರವ ಮತ್ತು ಮುಗ್ಧ ಚೇಷ್ಟೆಗಳನ್ನು ನೋಡ-ನೋಡುತ್ತಾ ಅವುಗಳಿಗೆ ಭಾರೀ ಸಂತೋಷವಾಗುತ್ತಿತ್ತು. ಅವು ನೆಗೆಯುತ್ತಾ-ನೆಗೆಯುತ್ತಾ ತಮ್ಮ ತಂದೆ-ತಾಯಿಗಳ ಬಳಿಗೆ ಬಂದಾಗ ಕಪೋತ-ಕಪೋತಿಯು ಸಂತೋಷಭರಿತರಾಗುತ್ತಿದ್ದವು. ॥ ೬೦ ॥ ರಾಜನೇ ! ಹೀಗೆ ಆ ಕಪೋತ ದಂಪತಿಯು ಭಗವಂತನ ಮಾಯೆಯಿಂದ ಮೋಹಿತ ರಾಗಿದ್ದವು. ಅವುಗಳ ಹೃದಯವು ಒಬ್ಬರು ಮತ್ತೊಬ್ಬರ ಸ್ನೇಹ ಬಂಧನದಲ್ಲಿ ಬಂಧಿತವಾಗಿತ್ತು. ಆ ಬಡಪಾಯಿ ಕಪೋತ ದಂಪತಿಗಳು ತಮ್ಮ ಎಳೆಯ ಮರಿಗಳ ಪಾಲನೆ-ಪೋಷಣೆಯಲ್ಲಿ ಜಗತ್ತು, ಲೋಕ-ಪರಲೋಕದ ನೆನಪು ಕೂಡ ಇರದಷ್ಟು ವ್ಯಗ್ರವಾಗಿದ್ದವು. ॥ ೬೧ ॥ ಒಂದು ದಿನ ಇಬ್ಬರೂ ಗಂಡು-ಹೆಣ್ಣು ತಮ್ಮ ಮರಿಗಳಿಗೆ ಆಹಾರವನ್ನು ತರಲು ಕಾಡಿಗೆ ಹೋಗಿದ್ದವು. ಏಕೆಂದರೆ ಈಗ ಅವರ ಕುಟುಂಬ ತುಂಬಾ ಬೆಳೆದುಹೋಗಿತ್ತು. ಅವು ಆಹಾರಕ್ಕಾಗಿ ಹೆಚ್ಚು ಹೊತ್ತು ಕಾಡಿನಲ್ಲಿ ಅಲೆಯುತ್ತಾ ಇದ್ದವು. ॥ ೬೨ ॥ ಇತ್ತ ಓರ್ವ ಬೇಡನು ತಿರುಗಾಡುತ್ತಾ ಸಂಯೋಗವಶದಿಂದ ಅವುಗಳ ಗೂಡಿನ ಕಡೆಗೆ ಬಂದು ತಲುಪಿದನು. ಅವನು ನೋಡಿದನು ಗೂಡಿನ ಸುತ್ತಲೂ ಪಾರಿವಾಳದ ಮರಿಗಳು ನೆಗೆಯುತ್ತಿದ್ದವು. ಅವನು ಬಲೆಬೀಸಿ ಅವನ್ನು ಹಿಡಿದುಕೊಂಡನು. ॥ ೬೩ ॥ ಕಪೋತ-ಕಪೋತಿಗಳು

ಕಪೋತಶ್ಚ ಕಪೋತೀ ಚ ಪ್ರಜಾಪೋಷೇ ಸದೋತ್ಸುಕೌ ।
ಗತೌ ಪೋಷಣಮಾದಾಯ ಸ್ವನೀಡಮುಪಜಗ್ಮತುಃ
॥ ೬೪ ॥

ಕಪೋತೀ ಸ್ವಾತ್ಮಜಾನ್ವೀಕ್ಷ್ಯ ಬಾಲಕಾನ್ ಜಾಲಸಂವೃತಾನ್ ।
ತಾನಭ್ಯಧಾವತ್ ಕ್ರೋಶಂತೀ ಕ್ರೋಶತೋ ಭೃಶದುಃಖಿತಾ
॥ ೬೫ ॥

ಸಾಸಕೃತ್ಸ್ನೇಹಗುಣಿತಾ ದೀನಚಿತ್ತಾಜಮಾಯಯಾ ।
ಸ್ವಯಂ ಚಾಬಧ್ಯತ ಶಿಚಾ ಬದ್ಧಾನ್ವೀಕ್ಷ್ಯಾಂತ್ಯಪಸ್ಮೃತಿಃ
॥ ೬೬ ॥

ಕಪೋತಶ್ಚಾತ್ಮಜಾನ್ಪಾದಾನಾತ್ಮನೋಽಪ್ಯಧಿಕಾನ್ಪ್ರಿಯಾನ್ ।
ಭಾರ್ಯಾಂ ಚಾತ್ಮಸಮಾಂ ದೀನೋ ವಿಲಲಾಪಾತಿದುಃಖಿತಃ
॥ ೬೭ ॥

ಅಹೋ ಮೇ ಪಶ್ಯತಾಪಾಯಮಲ್ಪಪುಣ್ಯಸ್ಯ ದುರ್ಮತೇಃ ।
ಅತೃಪ್ತಸ್ಯಾಕೃತಾರ್ಥಸ್ಯ ಗೃಹಸ್ತ್ರೈವರ್ಗಿಕೋ ಹತಃ
॥ ೬೮ ॥

ಅನುರೂಪಾನುಕೂಲಾ ಚ ಯಸ್ಯ ಮೇ ಪತಿದೇವತಾ ।
ಶೂನ್ಯೇ ಗೃಹೇ ಮಾಂ ಸಂತ್ಯಜ್ಯ ಪುತ್ರೈಃ ಸ್ವರ್ಯಾತಿ ಸಾಧುಭಿಃ
॥ ೬೯ ॥

ಸೋಽಹಂ ಶೂನ್ಯೇ ಗೃಹೇ ದೀನೋ ಮೃತದಾರೋ ಮೃತಪ್ರಜಃ ।
ಜಿಜೀವಿಷೇ ಕಿಮರ್ಥಂ ವಾ ವಿಧುರೋ ದುಃಖಜೀವಿತಃ
॥ ೭೦ ॥

ತಾಂಸ್ತಥೈವಾವೃತಾನ್ಶಿಗ್ಮಿರ್ಮೃತ್ಯುಗ್ರಸ್ತಾನ್ನಿಚೇಷ್ಟತಃ ।
ಸ್ವಯಂ ಚ ಕೃಪಣಃ ಶಿಕ್ಷು ಪಶ್ಯನ್ನಪ್ಯಬುಧೋಽಪತತ್
॥ ೭೧ ॥

ತಂ ಲಬ್ಧ್ವಾ ಲುಬ್ಧಕಃ ಕ್ರೂರಃ ಕಪೋತಂ ಗೃಹಮೇಧಿನಮ್ ।
ಕಪೋತಕಾನ್ ಕಪೋತೀಂ ಚ ಸಿದ್ಧಾರ್ಥಃ ಪ್ರಯಯೌ ಗೃಹಮ್
॥ ೭೨ ॥

ಮರಿಗಳಿಗೆ ಉಣಿಸಲು ಯಾವಾಗಲೂ ಉತ್ಸುಕರಾಗಿರುತ್ತಿದ್ದರು. ಈಗ ಅವುಗಳು ಆಹಾರ ಎತ್ತಿಕೊಂಡು ಗೂಡಿನ ಬಳಿಗೆ ಬಂದವು. ಕಪೋತಿ ನೋಡುತ್ತಾಳೆ – ಅವಳ ಹೃದಯದ ಹೋಳಾದ ಮುದ್ದಾದ ಮರಿಗಳು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿವೆ. ದುಃಖದಿಂದ ಚೆ-ಚೆ ಮಾಡುತ್ತಿವೆ. ಅವುಗಳನ್ನು ಇಂತಹ ಸ್ಥಿತಿಯಲ್ಲಿ ನೋಡಿದ ಕಪೋತಿಯ ದುಃಖಕ್ಕೆ ಸೀಮೆಯೇ ಇರಲಿಲ್ಲ. ಅವಳು ಅಳುತ್ತಾ-ಬೊಬ್ಬೆಯಿಡುತ್ತಾ ಮರಿಗಳ ಬಳಿಗೆ ಹೋದಳು. ॥ ೬೪-೬೫ ॥

ಭಗವಂತನ ಮಾಯೆಯಿಂದ ಅವರ ಚಿತ್ತವು ಅತ್ಯಂತ ದೀನ-ದುಃಖಿತವಾಗಿತ್ತು. ಅದರ ಸ್ಮೃತಿ ಲುಪ್ತವಾಗಿತ್ತು. ಸ್ನೇಹಪಾಶದಿಂದ ಬಂಧಿತಳಾದ ಕಾರಣ ಹಾಗೂ ತನ್ನ ಮರಿಗಳು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವುದನ್ನು ನೋಡಿ ಸ್ವತಃ ತಾನೂ ಹೋಗಿ ಬಲೆಯಲ್ಲಿ ಸಿಕ್ಕಿಕೊಂಡಳು. ॥ ೬೬ ॥ ಗಂಡು ಪಾರಿವಾಳ (ಕಪೋತ)ವು ತನ್ನ ಪ್ರಾಣಕ್ಕಿಂತ ಪ್ರಿಯರಾದ ಮರಿಗಳು ಬಲೆಯಲ್ಲಿ ಸಿಕ್ಕಿಕೊಂಡಿರುವವು ಹಾಗೂ ತನ್ನ ಪ್ರಾಣಪ್ರಿಯ ಪತ್ನಿಯೂ ಅದೇ ಸ್ಥಿತಿಯಲ್ಲಿರುವುದನ್ನು ನೋಡಿದಾಗ ಅದು ಅತ್ಯಂತ ದುಃಖಿತವಾಗಿ ವಿಲಪಿಸತೊಡಗಿತು. ನಿಜವಾಗಿಯೂ ಆಗ ಅದರ ಸ್ಥಿತಿ ಅತ್ಯಂತ ದಯನೀಯವಾಗಿತ್ತು. ॥ ೬೭॥ ಅದು ಯೋಚಿಸಿತು – "ನಾನು ನಿರ್ಭಾಗ್ಯನಾಗಿದ್ದೇನೆ, ದುರ್ಮತಿಯಾಗಿದ್ದೇನೆ. ಅಯ್ಯೋ! ನನ್ನ ದೆಲ್ಲವೂ ಸತ್ಯಾನಾಶವಾಯಿತು. ನೋಡು – ನನಗೆ ಇನ್ನೂ ತೃಪ್ತಿ ಆಗಿಲ್ಲ, ನನ್ನ ಆಸೆಗಳು ಪೂರ್ಣಗೊಂಡಿಲ್ಲ ಅಯ್ಯೋ! ಅಷ್ಟರೊಳಗೆ ನನ್ನ ಧರ್ಮ, ಅರ್ಥ, ಕಾಮದ ಮೂಲವಾದ ಈ ಗೃಹಸ್ಥಾಶ್ರಮವು ನಾಶವಾಯಿತಲ್ಲ! ॥ ೬೮ ॥ ಅಯ್ಯೋ! ನನ್ನ ಪ್ರಾಣವಲ್ಲಭೆ ನನ್ನನ್ನೇ ತನ್ನ ಇಷ್ಟದೇವರೆಂದು ತಿಳಿಯುತ್ತಿದ್ದಳು. ನನ್ನ ಪ್ರತಿಯೊಂದು ಮಾತನ್ನೂ ನಡೆಸುತ್ತಿದ್ದಳು. ನನ್ನ ಸಂಕೇತದಂತೆ ಕುಣಿಯುತ್ತಿದ್ದಳು. ಎಲ್ಲ ರೀತಿಯಿಂದಲೂ ನನಗೆ ಯೋಗ್ಯಳಾಗಿದ್ದಳು. ಇಂದು ಅವಳು ನನ್ನನ್ನು ಬರಿದಾದ ಮನೆಯಲ್ಲಿ ಬಿಟ್ಟು ನಮ್ಮ ಅಬೋಧ ಮರಿಗಳೊಂದಿಗೆ ಸ್ವರ್ಗಕ್ಕೆ ಹೋಗುತ್ತಿರುವಳಲ್ಲ! ॥ ೬೯ ॥ ನನ್ನ ಮಕ್ಕಳು ಸತ್ತುಹೋದುವು. ನನ್ನ ಹೆಂಡತಿ ಹೊರಟುಹೋದಳು. ಇನ್ನು ಈ ಸಂಸಾರದಲ್ಲಿ ನನಗೇನು ಕೆಲಸವಿದೆ. ದೀನನಾದ ನನ್ನ ವಿಧುರ ಜೀವನವು ದುಃಖಮಯವೇ ಆಗಿದೆ. ಈಗ ನಾನು ಈ ಶೂನ್ಯಪ್ರಾಯ ಮನೆಯಲ್ಲಿ ಯಾರಿಗಾಗಿ ಬದುಕಲಿ? ಅವರ ಜೊತೆಯಲ್ಲೇ ನಾನೂ ಹೋಗುವೆನು." ॥ ೭೦ ॥ ರಾಜನೇ! ಹೀಗೆ ಅವಿವೇಕಿಯಾದ ಆ ಕಪೋತವು ನಿರ್ಧರಿಸಿ – ಬಲೆಯಲ್ಲಿ ಸಿಕ್ಕಿಕೊಂಡು ಸಾವಿನ ದವಡೆಯಲ್ಲಿ ಸಿಲುಕಿ ಪತ್ನೀ-ಪುತ್ರರು ಒದ್ದಾಡುತ್ತಿರುವುದನ್ನು ನೋಡುತ್ತಿದ್ದರೂ ತಾನೂ ಹೋಗಿ ಬೇಡನ ಆ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿತು. ॥ ೭೧ ॥ ರಾಜನೇ! ಆ ಬೇಡನು ಬಹಳ ಕ್ರೂರಿಯಾಗಿದ್ದನು. ಗೃಹಸ್ಥಾಶ್ರಮಿ ಪಾರಿವಾಳದ ಪರಿವಾರ ಅನಾಯಾಸವಾಸವಾಗಿ ದೊರೆತುದರಿಂದ ಭಾರೀ ಸಂತೋಷವಾಯಿತು. ತನ್ನ ಕೆಲಸವಾಯಿತೆಂದು ತಿಳಿದು ಅವನು ಅವನ್ನು ಎತ್ತಿಕೊಂಡು ಹೊರಟುಹೋದನು. ॥ ೭೨ ॥

ಏವಂ ಕುಟುಂಬ್ಯಶಾಂತಾತ್ಮಾ ದ್ವಂದ್ವಾರಾಮಃ ಪತತ್ಯ್ರವತ್ ।
ಪುಷ್ಣನ್ ಕುಟುಂಬಂ ಕೃಪಣಃ ಸಾನುಬಂಧೋಽವಸೀದತಿ
॥ ೭೩ ॥

ಯಃ ಪ್ರಾಪ್ಯ ಮಾನುಷಂ ಲೋಕಂ ಮುಕ್ತಿದ್ವಾರಮಪಾವೃತಮ್ ।
ಗೃಹೇಷು ಖಗವತ್ ಸಕ್ತಸ್ತಮಾರೂಢಚ್ಯುತಂ ವಿದುಃ
॥ ೭೪ ॥

ಇದೇ ಪ್ರಕಾರ ಗೃಹಸ್ಥನು ವಿಷಯಗಳಲ್ಲೇ ಸುಖವನ್ನು ಅರಸುತ್ತಾ, ಚಿತ್ತಚಂಚಲನಾದವನು, ತನ್ನ ಪರಿವಾರವನ್ನು ಸಾಕುವುದರಲ್ಲೇ ತೊಡಗಿರುವವನು ಪಾರಿವಾಳ ದಂಪತಿಯಂತೆ ದೀನ ಅವಸ್ಥೆಯನ್ನು ಹೊಂದಿ, ಪರಿವಾರಸಹಿತ ಅವನ ಪತನ ವಾಗುತ್ತದೆ ಎಂಬುದೇ ಸಾರಾಂಶವಾಗಿದೆ. ॥ ೭೩ ॥ ಅದಕ್ಕಾಗಿ ದೊರೆತಿರುವ ಈ ಮನುಷ್ಯ ಶರೀರವು ತೆರೆದಿರುವ ಮುಕ್ತಿಯ ದ್ವಾರವಾಗಿದೆ ಎಂದು ತಿಳಿಯಬೇಕು. ಇದನ್ನು ಪಡೆದುಕೊಂಡರೂ ಮುಕ್ತಿಗಾಗಿ ಪ್ರಯತ್ನಿಸದಿರುವವನು, ಮನೆ-ಸಂಸಾರದಲ್ಲೇ ಕಪೋತದಂಪತಿಯಂತೆ ಆಸಕ್ತನಾಗಿರುವವನು ಶ್ರೇಯೋ ಮಾರ್ಗದ ನಿಚ್ಚಣಿಕೆಯಲ್ಲಿ ಏರಿ ಕೆಳಗೆ ಬಿದ್ದವನೆಂದೇ ತಿಳಿಯ ಬೇಕು. ಶಾಸ್ತ್ರದ ಭಾಷೆಯಲ್ಲಿ ಅವನನ್ನು "ಆರೂಢಚ್ಯುತ" ಎಂದು ಹೇಳುತ್ತಾರೆ. ॥ ೭೪ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಅವಧೂತೋಪಾಖ್ಯಾನ – ಹೆಬ್ಬಾವಿನಿಂದ ಪಿಂಗಳೆಯ ತನಕ ಒಂಭತ್ತು ಗುರುಗಳ ಕಥೆ

ಬ್ರಾಹ್ಮಣ ಉವಾಚ

ಸುಖಮೈಂದ್ರಿಯಕಂ ರಾಜನ್ ಸ್ವರ್ಗೇ ನರಕ ಏವ ಚ ।
ದೇಹಿನಾಂ ಯದ್ಯಥಾದುಃಖಂ ತಸ್ಮಾನ್ನೇಚ್ಛೇತ ತದ್ಬುಧಃ
॥ ೧ ॥

ಗ್ರಾಸಂ ಸುಮೃಷ್ಟಂ ವಿರಸಂ ಮಹಾಂತಂ ಸ್ತೋಕಮೇವ ವಾ ।
ಯದೃಚ್ಛಯೈವಾಪತಿತಂ ಗ್ರಸೇದಾಜಗರೋಽಕ್ರಿಯಃ
॥ ೨ ॥

ಶಯೀತಾಹಾನಿ ಭೂರೀಣಿ ನಿರಾಹಾರೋಽನುಪಕ್ರಮಃ ।
ಯದಿ ನೋಪನಮೇದ್ವಾಸೋ ಮಹಾಹಿರಿವ ದಿಷ್ಟಭುಕ್
॥ ೩ ॥

ಓಜಃಸಹೋಬಲಯುತಂ ಬಿಭ್ರದ್ದೇಹಮಕರ್ಮಕಮ್ ।
ಶಯಾನೋ ವೀತನಿದ್ರಶ್ಚ ನೇಹೇತೇಂದ್ರಿಯವಾನಪಿ
॥ ೪ ॥

ಮುನಿಃ ಪ್ರಸನ್ನಗಂಭೀರೋ ದುರ್ವಿಗಾಹ್ಯೋ ದುರತ್ಯಯಃ ।
ಅನಂತಪಾರೋ ಹ್ಯಕ್ಷೋಭ್ಯಃ ಸ್ತಿಮಿತೋದ ಇವಾರ್ಣವಃ
॥ ೫ ॥

ಅವಧೂತ ದತ್ತಾತ್ರೇಯರು ಹೇಳುತ್ತಾರೆ – ಎಲೈ ರಾಜನೇ! ಇಂದ್ರಿಯಗಳಿಂದ ದೊರೆಯುವ ಸುಖವು ಸ್ವರ್ಗದಲ್ಲಿ ಇರುವಂತೆ ನರಕದಲ್ಲಿಯೂ ಇದೆ. ಪ್ರಯತ್ನವಿಲ್ಲದೆ ದುಃಖಗಳು ಬರುವಂತೆ ಸುಖವೂ ಬರುತ್ತದೆ. ಆದ್ದರಿಂದ ಬುದ್ಧಿವಂತರು ಅದನ್ನು ಬಯಸಬಾರದು. ॥ ೧ ॥ (ಈಗ ಹೆಬ್ಬಾವಿನ ದೃಷ್ಟಾಂತದಿಂದ ಮೂರು ಶ್ಲೋಕಗಳನ್ನು ಹೇಳುತ್ತಾರೆ –) ಯೋಗಿಯು ತಾನೇ ತಾನಾಗಿ ದೊರೆತುದನ್ನು ತಿಂದು ಸಂತುಷ್ಟನಾಗಿರಬೇಕು. ಅದು ಬೇಕಾದರೆ ಮಧುರವಾಗಿರಲೀ, ನೀರಸವಾಗಿರಲೀ, ಹೆಚ್ಚಿರಲೀ, ಕಡಿಮೆಯಿರಲಿ ಹೆಬ್ಬಾವಿನಂತೆ ಜೀವನ – ನಿರ್ವಾಹಗೈದು ಉದಾಸೀನನಾಗಿರಬೇಕು. ॥ ೨ ॥ ಒಂದೊಮ್ಮೆ ಅನೇಕ ದಿನಗಳವರೆಗೆ ಭೋಜನ ಸಿಗದಿದ್ದರೂ ಅದಕ್ಕಾಗಿ ಪ್ರಯತ್ನಿಸಬಾರದು. ಪ್ರಾರಬ್ಧದ ಭೋಗವೆಂದು ತಿಳಿದು ಅಜಗರದಂತೆ ಬಿದ್ದುಕೊಂಡಿರ ಬೇಕು. ॥ ೩ ॥ ಓಜ (ಮನೋಬಲ) ಸಹ (ಇಂದ್ರಿಯಬಲ) ಬಲ (ಶಾರೀರಿಕಬಲ) ಇವು ಮೂರರಿಂದ ಕೂಡಿದ್ದರೂ, ಇಂದ್ರಿಯ ಗಳಲ್ಲಿ ಕಾರ್ಯವೆಸಗುವ ಕ್ಷಮತೆ ಇದ್ದರೂ ಮಲಗಿದಂತೆ ಇರಬೇಕು. ॥ ೪ ॥

(ಸಮುದ್ರದ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ –) ಮುನಿಯಾದವನು ಸಮುದ್ರದಂತೆ ಪ್ರಸನ್ನ ಮತ್ತು ಗಂಭೀರನಾಗಿರಬೇಕು. ಅವನ ಭಾವ ಅಗಾಧವಾಗಿರಬೇಕು. ಅವನು ಪ್ರಭಾವಶಾಲಿಯಾಗಿರುತ್ತಾನೆ. ಅವನನ್ನು ಅತಿಕ್ರಮಿಸಲು ಕಠಿಣವಾಗಿರುತ್ತದೆ. ಅವನನ್ನು ಕಾಮ, ಕ್ರೋಧ ಮುಂತಾದ ಯಾವ

ಸಮೃದ್ಧಕಾಮೋ ಹೀನೋ ವಾ ನಾರಾಯಣಪರೋ ಮುನಿಃ ।
ನೋತ್ಸರ್ಪೇತ ನ ಶುಷ್ಯೇತ ಸರಿದ್ಭಿರಿವ ಸಾಗರಃ
॥ ೬ ॥

ದೃಷ್ಟ್ವಾಸ್ತ್ರಿಯಂ ದೇವಮಾಯಾಂ ತದ್ಭಾವೈರಜಿತೇಂದ್ರಿಯಃ ।
ಪ್ರಲೋಭಿತಃ ಪತತ್ಯಂಧೇ ತಮಸ್ಯಗ್ನೌ ಪತಂಗವತ್
॥ ೭ ॥

ಯೋಷಿದ್ಧಿರಣ್ಯಾಭರಣಾಂಬರಾದಿ-
ದ್ರವ್ಯೇಷು ಮಾಯಾರಚಿತೇಷು ಮೂಢಃ ।
ಪ್ರಲೋಭಿತಾತ್ಮಾ ಹ್ಯುಪಭೋಗಬುದ್ಧ್ಯಾ
ಪತಂಗ ವನ್ನಶ್ಯತಿ ನಷ್ಟದೃಷ್ಟಿಃ ॥ ೮ ॥

ಸ್ತೋಕಂ ಸ್ತೋಕಂ ಗ್ರಸೇದ್ ಗ್ರಾಸಂ ದೇಹೋ ವರ್ತೇತ ಯಾವತಾ ।
ಗೃಹಾನಹಿಂಸನ್ನಾತಿಷ್ಠೇತ್ ವೃತ್ತಿಂ ಮಾಧುಕರೀಂ ಮುನಿಃ
॥ ೯ ॥

ಅಣುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯಃ ಕುಶಲೋ ನರಃ ।
ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ
॥ ೧೦ ॥

ಸಾಯಂತನಂ ಶ್ವಸ್ತನಂ ವಾ ನ ಸಂಗೃಹ್ಣೀತ ಭಿಕ್ಷಿತಮ್ ।
ಪಾಣಿಪಾತ್ರೋದರಾಮತ್ರೋ ಮಕ್ಷಿಕೇವ ನ ಸಂಗ್ರಹೀ
॥ ೧೧ ॥

ಸಾಯಂತನಂ ಶ್ವಸ್ತನಂ ವಾ ನ ಸಂಗೃಹ್ಣೀತ ಭಿಕ್ಷುಕಃ ।
ಮಕ್ಷಿಕಾ ಇವ ಸಂಗೃಹ್ಣನ್ ಸಹ ತೇನ ವಿನಶ್ಯತಿ
॥ ೧೨ ॥

ಶತ್ರುಗಳೂ ವಿಚಲಿತಗೊಳಿಸಲಾರವು. ನಿಶ್ಚಲ, ಪ್ರಶಾಂತ ಸಮುದ್ರದಂತೆ ಯಾವಾಗಲೂ ಇರುವ ಶಾಂತಿಯು ಅವನಲ್ಲಿ ಪ್ರತ್ಯಕ್ಷವಾಗಿರುತ್ತದೆ. ॥ ೫ ॥ ಸಮುದ್ರದಲ್ಲಿ ನದಿಗಳ ನೀರು ಬಂದು ಸೇರಿದರೂ ಸಮುದ್ರವು ತನ್ನ ಎಲ್ಲೆಯನ್ನು ಮೀರುವುದಿಲ್ಲ, ನೀರು ಬಾರದಿದ್ದರೂ ಒಣಗುವುದಿಲ್ಲ. ಹೀಗೆಯೇ ಮುನಿಯೂ ಕೂಡ ಸಮೃದ್ಧಿಯಿಂದ ಕೂಡಿದ್ದರೂ ಉಬ್ಬುವುದಿಲ್ಲ, ಸಮೃದ್ಧಿಹೀನನಾದರೂ ಕುಗ್ಗುವುದಿಲ್ಲ, ಸಮುದ್ರದಂತೆ ಎರಡೂ ಸ್ಥಿತಿಯಲ್ಲಿ ಒಂದೇ ರೀತಿಯಾಗಿರುತ್ತಾನೆ. ॥ ೬ ॥

(ಈಗ ಪತಂಗದ (ದೀಪದಹುಳು) ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ.) ದೀಪದ ಹುಳವು ಬೆಂಕಿಗೆ ಆಕರ್ಷಿತನಾಗಿ ಬೆಂಕಿಯಲ್ಲಿ ಬಿದ್ದು ಸಾಯುವಂತೆಯೇ ಅಜಿತೇಂದ್ರಿಯ (ಇಂದ್ರಿಯಗಳ ಗುಲಾಮ) ವ್ಯಕ್ತಿಯು ದೇವಮಾಯಾರೂಪೀ ಸ್ತ್ರೀಯನ್ನು ನೋಡಿ, ಅವಳ ಮೋಹದಲ್ಲಿ ಮೋಸಹೋಗಿ ಅಂಧಕಾರಮಯ ನರಕದಲ್ಲಿ ಬೀಳುತ್ತಾನೆ. ॥ ೭ ॥ ಕಾಮಿನಿ, ಕಾಂಚನ, ಆಭೂಷಣ, ವಸ್ತ್ರ ಮುಂತಾದ ಇರುವ ಎಲ್ಲ ದ್ರವ್ಯಗಳು ಮಾಯಾನಿರ್ಮಿತವಾಗಿವೆ. ಮೂಢಬುದ್ಧಿ ಮನುಷ್ಯನು ಉಪಭೋಗ ಬುದ್ಧಿಯಿಂದ ಅವುಗಳಲ್ಲಿ ಆಸಕ್ತನಾಗಿ ತನ್ನ ವಿವೇಕವನ್ನು ಕಳೆದುಕೊಳ್ಳುತ್ತಾನೆ. ದೀಪದ ಹುಳುವಿನಂತೆ ಸ್ವತಃ ಅವುಗಳಲ್ಲಿ ಬಿದ್ದು ತನ್ನ ನಾಶವನ್ನು ಮಾಡಿಕೊಳ್ಳುತ್ತಾನೆ. ॥ ೮ ॥

(ಈಗ ಭ್ರಮರ (ದುಂಬಿ)ದ ಉದಾಹರಣೆಯನ್ನು ಎರಡು ಶ್ಲೋಕಗಳಲ್ಲಿ ಕೊಡುತ್ತಾರೆ –) ಭ್ರಮರವು ಹೂವುಗಳ ಮೇಲೆ ಹಾರಾಡುತ್ತಾ ಪರಾಗವನ್ನು ಗ್ರಹಿಸುವಂತೆ ಮುನಿಯಾದವನು ಅನೇಕ ಮನೆಗಳಿಂದ ಸ್ವಲ್ಪ-ಸ್ವಲ್ಪ ಅನ್ನವನ್ನು ಬೇಡಿ ತರಬೇಕು. * ಆದರಿಂದ ಶರೀರನಿರ್ವಾಹವೂ ನಡೆದು, ಯಾರಿಗೂ ಕೊಡಲು ಕಷ್ಟವಾಗುವುದಿಲ್ಲ. ಈ ಪ್ರಕಾರ ಮಧುಕರೀ ವೃತ್ತಿಯನ್ನು ಆಶ್ರಯಿಸಬೇಕು. ॥ ೯ ॥ ದುಂಬಿಯು ಹೂವುಗಳಿಂದ ಸಾರ-ರಸ ಗ್ರಹಿಸುವಂತೆ ಕುಶಲನಾದ ಮನುಷ್ಯನು ಎಲ್ಲ ಹಿರಿಯ-ಕಿರಿಯ ಶಾಸ್ತ್ರಗಳಿಂದ ಸಾರವಾದ ಮಾತನ್ನು ತೆಗೆದುಕೊಳ್ಳಬೇಕು. (ವಿವಾದದಿಂದ ದೂರವುಳಿಯಬೇಕು.) ॥ ೧೦ ॥

(ಈಗ ಜೇನುನೋಣದ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ತಿಳಿಸುತ್ತಾರೆ–) ಸಂನ್ಯಾಸಿಯಾದವನು ಸಂಜೆಗಾಗಿ ಅಥವಾ ಮರುದಿನಕ್ಕಾಗಿ ಭಿಕ್ಷೆಯನ್ನು ಉಳಿಸಿಡಬಾರದು. ಭಿಕ್ಷೆಯ ಪಾತ್ರದ ಸ್ಥಾನದಲ್ಲಿ ಕೇವಲ ಕೈ ಮತ್ತು ಇಡುವುದಕ್ಕಾಗಿ ಹೊಟ್ಟೆಯೇ ಇರಬೇಕು. ಏಕೆಂದರೆ, ಜೇನುನೋಣವು ಜೇನನ್ನು ಸಂಗ್ರಹಿಸಿದರೆ ಜೇನಿನ ಜೊತೆಗೆ ಅದರ ಜೀವನವು ಆಪತ್ತಿಗೆ ಗುರಿಯಾಗುವುದನ್ನು ಪ್ರತ್ಯಕ್ಷವಾಗಿ ನೋಡಲಾಗುತ್ತದೆ. ಇದನ್ನು ಅರಿತುಕೊಂಡು ಸಂನ್ಯಾಸಿಯು ಯಾವುದೇ ರೀತಿಯ ಸಂಗ್ರಹಮಾಡಬಾರದು. ॥ ೧೧-೧೨ ॥

* ಇಲ್ಲದಿದ್ದರೆ ಒಂದೇ ಕಮಲದ ಗಂಧದಲ್ಲಿ ಆಸಕ್ತವಾದ ಭ್ರಮರವು ರಾತ್ರಿಯಲ್ಲಿ ಮುಚ್ಚಿಕೊಂಡ ಆ ಕಮಲದಲ್ಲಿ ಸಿಕ್ಕಿಕೊಂಡು ಸತ್ತುಹೋಗುವಂತೆ, ಸ್ವಾದವಾಸನೆಯಿಂದ ಒಂದೇ ಮನೆಯಲ್ಲಿ ಅನ್ನ ತಿನ್ನುವುದರಿಂದ ಸಾಂಸರ್ಗಿಕ ಮೋಹದಲ್ಲಿ ಸಿಕ್ಕಿಕೊಂಡು ಯತಿಯು ಭ್ರಷ್ಟನಾಗಿ ಹೋಗುವನು.

ಪದಾಪಿ ಯುವತೀಂ ಭಿಕ್ಷುರ್ನ ಸ್ಪೃಶೇದ್ದಾರವೀಮಪಿ ।
ಸ್ಪೃಶನ್ ಕರೀವ ಬದ್ಧ್ಯೇತ ಕರಿಣ್ಯಾ ಅಂಗಸಂಗತಃ
॥ ೧೩ ॥

(ಈಗ ಆನೆಯ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ–) ಸಂನ್ಯಾಸಿಯಾದವನು ಎಲ್ಲಿಯವರೆಗೆಂದರೆ ಮರದಿಂದ ಮಾಡಿದ ಸ್ತ್ರೀಯನ್ನೂ ಕೂಡ ಕಾಲಿನಿಂದಲೂ ಮುಟ್ಟಬಾರದು. ಇಲ್ಲದಿದ್ದರೆ ಹೆಣ್ಣಾನೆಯಲ್ಲಿ ಆಸಕ್ತವಾದ ಗಂಡಾನೆಯು ಖೆಡ್ಡಾದಲ್ಲಿ ಬಿದ್ದು ಬಂಧಿತವಾಗುವಂತೆ * ಅವನೂ ಮೋಸ ಹೋಗುತ್ತಾನೆ. ॥ ೧೩ ॥

ನಾಧಿಗಚ್ಛೇತ್ ಸ್ತ್ರಿಯಂ ಪ್ರಾಜ್ಞಃ ಕರ್ಹಿಚಿನ್ಮೃತ್ಯುಮಾತ್ಮನಃ ।
ಬಲಾಧಿಕೈಃ ಸ ಹನ್ಯೇತ ಗಜೈರನ್ಯೈರ್ಗಜೋ ಯಥಾ
॥ ೧೪ ॥

ಕದಾಚಿತ್ ಸ್ತ್ರೀಯ ರೂಪದಲ್ಲಿ ತನ್ನ ಮೃತ್ಯುವೂ ಕೂಡ ಆಗಬಹುದು, ಅದಕ್ಕಾಗಿ ವಿವೇಕಿಯಾದ ಪುರುಷನು ಅವಳ ಬಳಿಗೆ ಹೋಗಬಾರದು. ಏಕೆಂದರೆ ಹೆಣ್ಣಾನೆಯಲ್ಲಿ ಆಸಕ್ತವಾದ ಗಂಡಾನೆಯು ಬೇರೆ ಬಲಿಷ್ಠ ಆನೆಗಳಿಂದ ಕೊಲ್ಲಲ್ಪಡುತ್ತದೆ. ಹಾಗೆಯೇ ಅವನೂ ಮೃತ್ಯುವಿಗೆ ತುತ್ತಾಗುತ್ತಾನೆ. ॥ ೧೪ ॥

ನ ದೇಯ ನೋಪಭೋಗ್ಯಂ ಚ ಲುಬ್ಧೈರ್ಯದ್ದುಃಖಸಂಚಿತಮ್ ।
ಭುಂಕ್ತೇ ತದಪಿ ತಚ್ಚಾನ್ಯೋ ಮಧುಹೇವಾರ್ಥವಿನ್ಮಧು
॥ ೧೫ ॥

(ಈಗ ಜೇನು ತೆಗೆಯುವವನ ದೃಷ್ಟಾಂತವನ್ನು ಕೊಡುತ್ತಾರೆ –) ಲೋಭಿ ಮನುಷ್ಯನು ಕೂಡಿಟ್ಟ ಧನವನ್ನು ಬೇರೆ ಯಾರಿಗೂ ದಾನ ಮಾಡುವುದಿಲ್ಲ ತಾನೂ ಭೋಗಿಸುವುದೂ ಇಲ್ಲ. ಅವನ ಧನವನ್ನು ಬೇರೆ ಯಾರೋ ಭೋಗಿಸುತ್ತಾನೆ. ಜೇನು ತೆಗೆಯುವವನ ಬಳಿ ಜೇನಿದೆ ಎಂದು ತಿಳಿದಾಗ ಬೇರೆಯವರು ಏನಾದರೂ ಉಪಾಯ ಮಾಡಿ ಅವನಿಂದ ತೆಗೆದುಕೊಳ್ಳುತ್ತಾರೆ. ಅವನು ಜೇನಿನ ಉಪಭೋಗದಿಂದ ವಂಚಿತನೇ ಆಗಿರುತ್ತಾನೆ. ॥ ೧೫ ॥

ಸುದುಃಖೋಪಾರ್ಜಿತೈರ್ವಿತ್ತೈರಾಶಾಸಾನಾಂ ಗೃಹಾಶಿಷಃ ।
ಮಧುಹೇವಾಗ್ರತೋ ಭುಂಕ್ತೇ ಯತಿರ್ವೈ ಗೃಹಮೇಧಿನಾಮ್
॥ ೧೬ ॥

ಭೋಗದ ಕಾಮನೆಯುಳ್ಳವರು ಕೇವಲ ತಮ್ಮ ಸುಖಭೋಗದ ಆಸೆಯಿಂದ ಬಹಳ ಕಷ್ಟಪಟ್ಟು ಧನವನ್ನು ಗಳಿಸುತ್ತಾರೆ. ಅವರ ಮನೆಯಲ್ಲಿ ಸಿದ್ಧವಾದ ಅನ್ನವನ್ನು – ಜೇನುತೆಗೆಯವವನ ಜೇನನ್ನು ಬೇರೆ ಜನರೇ ಉಪಭೋಗಿಸುವಂತೆ ಸಂನ್ಯಾಸಿಗಳು ಅವರಿಂದ ಮೊದಲೇ ಊಟಮಾಡುತ್ತಾರೆ. (ಧಾರ್ಮಿಕ ಭಾವನೆಯುಳ್ಳವರಾದರೋ ಎಲ್ಲ ಧನವು ಜನತಾಜನಾರ್ದನದ್ದಾಗಿದೆ ಎಂಬ ಭಾವನೆಯನ್ನಿರಿಸಿ ಅದನ್ನು ಸದ್ವಿನಿಯೋಗ ಮಾಡಿಯೇ ಮಾಡುತ್ತಾರೆ.) ॥ ೧೬ ॥

ಗ್ರಾಮ್ಯಗೀತಂ ನ ಶೃಣುಯಾದ್ಯತಿರ್ವನಚರಃ ಕ್ವಚಿತ್ ।
ಶಿಕ್ಷೇತ ಹರಿಣಾದ್ಬದ್ಧಾನ್ಮೃಗಯೋರ್ಗೀತಮೋಹಿತಾತ್
॥ ೧೭ ॥

ವನವಾಸೀ ಸಂನ್ಯಾಸಿಯು ಎಂದೂ ವಿಷಯ-ಸಂಬಂಧೀ ಗ್ರಾಮ್ಯಗೀತೆಗಳನ್ನು ಕೇಳಬಾರದು. ವ್ಯಾಧನ ಹಾಡಿನಿಂದ ಮೋಹಿತವಾಗಿ ಬಂಧಿತವಾಗುವ ಜಿಂಕೆಯಿಂದ ಈ ಪಾಠವನ್ನು ಸಂನ್ಯಾಸಿಯು ಕಲಿತುಕೊಳ್ಳಬೇಕು. ಇದನ್ನು ನಾನು ಜಿಂಕೆಯಿಂದ ಕಲಿತುಕೊಂಡೆ. ॥ ೧೭ ॥ ಜಿಂಕೆಯ ಗರ್ಭದಲ್ಲಿ ಹುಟ್ಟಿದ ಋಷ್ಯಶೃಂಗ ಮುನಿಯು ಸ್ತ್ರೀಯರ ಹಾಡು-ಕುಣಿತಗಳನ್ನು ನೋಡಿ ಕೇಳಿ ಅವರಿಗೆ ವಶನಾಗಿ, ಅವರ ಕೈಗೊಂಬೆಯಾದುದು ನಿನಗೆ ತಿಳಿದೇ ಇದೆ. ॥ ೧೮ ॥

ನೃತ್ಯವಾದಿತ್ರಗೀತಾನಿ ಜುಷನ್ ಗ್ರಾಮ್ಯಾಣಿ ಯೋಷಿತಾಮ್ ।
ಆಸಾಂ ಕ್ರೀಡನಕೋ ವಶ್ಯ ಋಷ್ಯಶೃಂಗೋ ಮೃಗೀಸುತಃ
॥ ೧೮ ॥

* ಕಾಡಾನೆಗಳನ್ನು ಹಿಡಿಯಲು ಮಾಡಿದ ಕಂದಕಕ್ಕೆ ಖೆಡ್ಡಾ ಎಂದು ಹೇಳುತ್ತಾರೆ. ಕಂದಕವನ್ನು ಆಳವಾಗಿ ತೋಡಿ, ಅದನ್ನು ಬಿದಿರು ಹುಲ್ಲಿನಿಂದ ಮುಚ್ಚಿ ಅದರ ಮೇಲೆ ಮರದಿಂದ ಮಾಡಿದ ಹೆಣ್ಣಾನೆಯನ್ನು ನಿಲ್ಲಿಸಿಡುತ್ತಾರೆ. ಅದನ್ನು ದೂರದಿಂದ ನೋಡಿದ ಗಂಡುಸಲಗ ಮರದ ಆನೆಯನ್ನು ನಿಜಆನೆಯೆಂದೇ ಭ್ರಮಿಸಿ ಬಂದು ಖೆಡ್ಡದಲ್ಲಿ ಬಿದ್ದು ಪರಾಧೀನವಾಗುತ್ತದೆ. ಅದಕ್ಕಾಗಿಯೇ ಸಂನ್ಯಾಸಿಯು ಮರದ ಹೆಣ್ಣು ಬೊಂಬೆಯನ್ನೂ ಮುಟ್ಟಬಾರದೆಂದು ತಿಳಿಸಲಾಗಿದೆ.

ಜಿಹ್ವಯಾತಿಪ್ರಮಾಥಿನ್ಯಾ ಜನೋ ರಸವಿಮೋಹಿತಃ।
ಮೃತ್ಯುಮೃಚ್ಛತ್ಯಸದ್ಬುದ್ಧಿರ್ಮೀನಸ್ತು ಬಡಿಶೈರ್ಯಥಾ
॥ ೧೯ ॥

ಇಂದ್ರಿಯಾಣಿ ಜಯಂತ್ಯಾಶು ನಿರಾಹಾರಾ ಮನೀಷಿಣಃ।
ವರ್ಜಯಿತ್ವಾ ತು ರಸನಂ ತನ್ನಿರನ್ನಸ್ಯ ವರ್ಧತೇ
॥ ೨೦ ॥

ತಾವಜ್ಜಿತೇಂದ್ರಿಯೋ ನ ಸ್ಯಾದ್ವಿಜಿತಾನ್ಯೇಂದ್ರಿಯಃ ಪುಮಾನ್।
ನ ಜಯೇದ್ರಸನಂ ಯಾವಜ್ಜಿತಂ ಸರ್ವಂ ಜಿತೇ ರಸೇ
॥ ೨೧ ॥

ಪಿಂಗಲಾ ನಾಮ ವೇಶ್ಯಾSSಸೀದ್ವಿದೇಹನಗರೇ ಪುರಾ।
ತಸ್ಯಾ ಮೇ ಶಿಕ್ಷಿತಂ ಕಿಂಚಿನ್ನಿಬೋಧ ನೃಪನಂದನ
॥ ೨೨ ॥

ಸಾ ಸ್ವೈರಿಣ್ಯೇಕದಾ ಕಾಂತಂ ಸಂಕೇತ ಉಪನೇಷ್ಯತೀ।
ಅಭೂತ್ಕಾಲೇ ಬಹಿರ್ದ್ವಾರಿ ಬಿಭ್ರತೀ ರೂಪಮುತ್ತಮಮ್
॥ ೨೩ ॥

ಮಾರ್ಗ ಆಗಚ್ಛತೋ ವೀಕ್ಷ್ಯ ಪುರುಷಾನ್ ಪುರುಷರ್ಷಭ।
ತಾನ್ಮುಲ್ಕದಾನಿತ್ಥತಃ ಕಾಂತಾನ್ ಮೇನೇSರ್ಥಕಾಮುಕಾ
॥ ೨೪ ॥

ಆಗತೇಷ್ವಪಯಾತೇಷು ಸಾ ಸಂಕೇತೋಪಜೀವಿನೀ।
ಅನ್ಯಸ್ಮೋ ವಿತ್ತವಾನ್ಕೋSಪಿ ಮಾಮುಪೈಷ್ಯತಿ ಭೂರಿದಃ
॥ ೨೫ ॥

ಏವಂ ದುರಾಶಯಾ ಧ್ವಸ್ತನಿದ್ರಾ ದ್ವಾರ್ಯವಲಂಬತೀ।
ನಿರ್ಗಚ್ಛಂತೀ ಪ್ರವಿಶತೀ ನಿಶೀಥಂ ಸಮಪದ್ಯತ
॥ ೨೬ ॥

ತಸ್ಯಾ ವಿತ್ತಾಶಯಾ ಶುಷ್ಯದ್ವಕ್ತ್ರಾಯಾ ದೀನಚೇತಸಃ।
ನಿರ್ವೇದಃ ಪರಮೋ ಜಜ್ಞೇ ಚಿಂತಾಹೇತುಃ ಸುಖಾವಹಃ
॥ ೨೭ ॥

ಈಗ ನಾನು ನಿನಗೆ ಮೀನಿನಿಂದ ಕಲಿತ ಪಾಠವನ್ನು ತಿಳಿಸುತ್ತೇನೆ. ಗಾಳದ ತುದಿಯಲ್ಲಿದ್ದ ಮಾಂಸದ ತುಂಡಿನ ಆಸೆಯಿಂದ ತನ್ನ ಪ್ರಾಣವನ್ನೇ ಕಳೆದುಕೊಳ್ಳುವಂತೆ, ಜಿಹ್ವಾಚಾಪಲ್ಯಕ್ಕೆ ಸಿಲುಕಿದ ದುರ್ಬುದ್ಧಿಯುಳ್ಳ ಮನುಷ್ಯನು ಮನಸ್ಸನ್ನು ಮಥಿಸಿ ವ್ಯಾಕುಲಗೊಳಿಸುವ ತನ್ನ ಜಿಹ್ವೆಗೆ ವಶನಾಗಿ ಹೋಗುತ್ತಾನೆ ಹಾಗೂ ಸತ್ತುಹೋಗುತ್ತಾನೆ. ॥ ೧೯ ॥ ವಿವೇಕಿ ಪುರುಷನು ಭೋಜನವನ್ನು ನಿಲ್ಲಿಸಿ, ಬೇರೆ ಇಂದ್ರಿಯಗಳ ಮೇಲೆ ಬೇಗನೆ ವಿಜಯವನ್ನು ಪಡೆದುಕೊಳ್ಳುತ್ತಾನೆ. ಆದರೆ ಇದರಿಂದ ಅವನ ರಸನೇಂದ್ರಿಯ (ನಾಲಿಗೆ) ವಶವಾಗುವುದಿಲ್ಲ. ಅದಾದರೋ ಊಟ ನಿಲ್ಲಿಸುವುದರಿಂದ ಇನ್ನೂ ಪ್ರಬಲವಾಗುತ್ತದೆ. ॥ ೨೦ ॥ ಮನುಷ್ಯನು ಎಲ್ಲ ಇಂದ್ರಿಯಗಳ ಮೇಲೆ ವಿಜಯಪಡೆದ ಬಳಿಕವೂ ರಸನೇಂದ್ರಿಯವನ್ನು ತನ್ನ ವಶಪಡಿಸಿಕೊಳ್ಳುವ ತನಕ ಅವನು ಜಿತೇಂದ್ರಿಯನಾಗಲಾರನು. ರಸನೇಂದ್ರಿಯವನ್ನು ವಶಪಡಿಸಿ ಕೊಂಡಾಗಲಂತೂ ಎಲ್ಲ ಇಂದ್ರಿಯಗಳನ್ನು ವಶವಾದಂತೆಯೇ ಸರಿ. ॥ ೨೧ ॥

ಎಲೈ ರಾಜನೇ! ಹಿಂದಿನಕಾಲದಲ್ಲಿ ವಿದೇಹನಗರ ಮಿಥಿಲೆಯಲ್ಲಿ ಓರ್ವ ಪಿಂಗಳಾ ಹೆಸರಿನ ವೇಶ್ಯೆ ಇರುತ್ತಿದ್ದಳು. ಅವಳಿಂದ ಕೆಲವನ್ನು ನಾನು ಕಲಿತುಕೊಂಡಿರುವುದನ್ನು ನಿನಗೆ ಹೇಳುತ್ತೇನೆ. ಮನಸ್ಸಿಟ್ಟು ಕೇಳು. ॥ ೨೨ ॥ ಅವಳು ಸ್ವೇಚ್ಛಾಚಾರಿಣಿಯಾಗಿದ್ದು ರೂಪವತಿಯೂ ಆಗಿದ್ದಳು. ಒಂದು ದಿನ ರಾತ್ರೆ ಯಾರೋ ಪುರುಷನನ್ನು ತನ್ನ ರಮಣಸ್ಥಾನಕ್ಕೆ ಬರಮಾಡಿಕೊಳ್ಳಲು ತುಂಬಾ ಉತ್ತಮ ವಸ್ತ್ರಾಭೂಷಣಗಳಿಂದ ಅಲಂಕರಿಸಿಕೊಂಡು ಅವಳು ಬಹಳ ಹೊತ್ತು ತನ್ನ ಮನೆಯ ಹೊರಬಾಗಿಲಲ್ಲಿ ನಿಂತಿದ್ದಳು. ॥ ೨೩. ॥ ಎಲೈ ಪುರುಷಶ್ರೇಷ್ಠ! ಧನದ ಕಾಮನೆಯುಳ್ಳ ಅರ್ಥಲೋಲುಪ ಕಾಮಿನಿಯು ಯಾರೇ ಪುರುಷನು ಅತ್ತಕಡೆಯಿಂದ ಬರುವುದನ್ನು ಕಂಡರೆ, ಇವನು ಯಾರೋ ಶ್ರೀಮಂತನಿರುವನು, ನನಗೆ ಹಣವನ್ನು ಕೊಟ್ಟು ಉಪಭೋಗಿಸಲೆಂದೇ ಈ ಕಡೆ ಬರುತ್ತಿರುವನು ಎಂದು ಯೋಚಿಸುತ್ತಿದ್ದಳು. ॥ ೨೪ ॥

ಆ ಸಂಕೇತೋಪಜೀವಿಯಾದ ವೇಶ್ಯೆಯು ಪುನಃ ಯಾರಾದರೂ ವಿಟಪುರುಷರನ್ನು ನೋಡುತ್ತಲೇ, ಇವನು ನನ್ನ ಬಳಿಗೆ ಬರುತ್ತಿರುವನು. ನಾನು ಬಯಸಿದಷ್ಟು ಹಣವನ್ನು ಕೊಡುವನು ಎಂದು ಯೋಚಿಸುತ್ತಾಳೆ. ಆದರೆ ಅವನು ಮುಂದಕ್ಕೆ ಹೋದಾಗ, ಈಗಲಂತೂ ಖಂಡಿತವಾಗಿ ಯಾರಾದರೂ ನನಗೆ ಹೇರಳ ಧನವನ್ನು ಕೊಡುವ ಶ್ರೀಮಂತನು ಬಂದೇ ಬರುವನು ಎಂದು ಎಣಿಸಿದಳು. ॥ ೨೫ ॥ ಅವಳ ಮನಸ್ಸಿನ ಈ ದುರಾಸೆ ಬೆಳೆಯುತ್ತಲೇ ಇತ್ತು. ಅವಳು ಬಹಳ ಹೊತ್ತು ಬಾಗಿಲಲ್ಲಿ ನಿಂತೇ ಇದ್ದಳು. ನಿದ್ದೆಯು ದೂರವಾಯಿತು. ಅವಳು ಒಮ್ಮೆ ಒಳಗೂ ಒಮ್ಮೆ ಹೊರಗೂ ಅಲೆಯುತ್ತಿದ್ದಳು. ಹೀಗೆ ಅರ್ಧರಾತ್ರಿ ಕಳೆದು ಹೋಯಿತು. ॥ ೨೬ ॥

ರಾಜನೇ! ನಿಜವಾಗಿಯೂ ಧನದ ಆಸೆಯು ತುಂಬಾ ಕೆಟ್ಟದು. ಶ್ರೀಮಂತರ ದಾರಿ ನೋಡಿ-ನೋಡಿ ಅವಳ ಬಾಯಿ ಒಣಗಿತು, ಚಿತ್ತ ವ್ಯಾಕುಲವಾಯಿತು. ಈಗ ಅವಳಿಗೆ ಈ ವೃತ್ತಿಯಲ್ಲಿ ವೈರಾಗ್ಯ ಉಂಟಾಯಿತು. ಅದರಲ್ಲಿ ದುಃಖ ಬುದ್ಧಿ ಉಂಟಾಯಿತು. ಆ ವಿರಾಗವೇ ಅವಳಿಗೆ ಸುಖಕ್ಕೆ ಕಾರಣವಾಯಿತು. ॥ ೨೭ ॥

ತಸ್ಯಾ ನಿರ್ವಿಣ್ಣಚಿತ್ತಾಯಾ ಗೀತಂ ಶೃಣು ಯಥಾ ಮಮ ।
ನಿರ್ವೇದ ಆಶಾಪಾಶಾನಾಂ ಪುರುಷಸ್ಯ ಯಥಾ ಹ್ಯಸಿಃ
॥ ೨೮ ॥

ಪಿಂಗಳೆಯ ಚಿತ್ತದಲ್ಲಿ ಈ ಪ್ರಕಾರ ವೈರಾಗ್ಯದ ಭಾವನೆ ಜಾಗ್ರತವಾದಾಗ ಅವಳು ಈ ಗೀತೆಯನ್ನು ಹಾಡಿದಳು. ಅದನ್ನು ಕೇಳು – "ವೈರಾಗ್ಯವೇ ಆಶಾರೂಪೀ ಉರುಳನ್ನು ಕತ್ತರಿಸುವಂತಹ ಹರಿತವಾದ ಖಡ್ಗವಾಗಿದೆ." ವೈರಾಗ್ಯವಿಲ್ಲದೆ ಮನುಷ್ಯನ ದುಃಖದ ನಿವೃತ್ತಿ ಆಗುವುದಿಲ್ಲ ॥ ೨೮ ॥ ಪ್ರಿಯರಾಜನೇ! ಯಾರಿಗೆ ವೈರಾಗ್ಯ ಉಂಟಾಗಲಿಲ್ಲವೋ, ಈ ಜಂಜಾಟದಿಂದ ನಿರಾಸಕ್ತನಾಗುವುದಿಲ್ಲವೋ ಆ ಅಜ್ಞಾನಿ ಪುರುಷನು ಮಮತೆಯನ್ನು ಬಿಡಲು ಇಚ್ಛಿಸುವುದಿಲ್ಲ, ಹಾಗೆಯೇ ಈ ಶರೀರಾದಿ ಬಂಧನಗಳನ್ನು ತೊರೆಯಲು ಬಯಸುವುದಿಲ್ಲ ॥ ೨೯ ॥

ನ ಹ್ಯಂಗಾಜಾತನಿರ್ವೇದೋ ದೇಹಬಂಧಂ ಜಿಹಾಸತಿ ।
ಯಥಾ ವಿಜ್ಞಾನರಹಿತೋ ಮನುಜೋ ಮಮತಾಂ ನೃಪ
॥ ೨೯ ॥

ಪಿಂಗಲೋವಾಚ

ಅಹೋ ಮೇ ಮೋಹವಿತತಿಂ ಪಶ್ಯತಾವಿಜಿತಾತ್ಮನಃ ।
ಯಾ ಕಾಂತಾದಸತಃ ಕಾಮಂ ಕಾಮಯೇ ಯೇನ ಬಾಲಿಶಾ
॥ ೩೦ ॥

ಪಿಂಗಳೆಯು ಈ ಗೀತೆಯನ್ನು ಹಾಡಿದಳು – ಅಯ್ಯೋ! ನಾನು ಇಂದ್ರಿಯಗಳಿಗೆ ಅಧೀನನಾದೆಯಲ್ಲ! ಇದು ಬಹು ದುಃಖದ ಮಾತಾಗಿದೆ. ನನ್ನ ಮೂರ್ಖತೆಯನ್ನು, ನನ್ನ ಮೋಹದ ವಿಸ್ತಾರವಾದರೋ ನೋಡಿ! ನನ್ನ ಕಾಂತನಲ್ಲದ ಜನರೊಂದಿಗೆ ನಾನು ಕಾಮನೆ ಮಾಡಿದೆನಲ್ಲ! ॥ ೩೦ ॥ ನನ್ನ ಪರಮ ಕಾಂತನಾದರೋ ಶಾಶ್ವತವಾಗಿ ನನ್ನ ಬಳಿಯೇ ಇರುವನು. ಅವನು ಪರಮಾನಂದ ಸ್ವರೂಪನೂ, ಸುಖಪ್ರದಾತನೂ, ಲಕ್ಷ್ಮೀಪತಿಯೂ ಆಗಿರುವ ಕಾರಣದಿಂದ ಧನವನ್ನೂ ಕೊಡುವವನಾಗಿರುವನು. ನನ್ನ ಹೃದಯದಲ್ಲೇ ವಿರಾಜಮಾನನಾದ ಇಂತಹ ಪ್ರಭುವು ಇರುವಾಗ ಅವನನ್ನು ಬಿಟ್ಟು, ಯಥೇಷ್ಟ ಭೋಗವನ್ನು ಸಂಪಾದಿಸಲು ಅಸಮರ್ಥರೂ, ದುಃಖ, ಭಯ, ಆಧಿ-ವ್ಯಾಧಿ, ಶೋಕ, ಮೋಹ ಇವನ್ನು ಕೊಡುವವರೂ ಆದ ಜನರನ್ನು ನಾನು ಸೇವಿಸಿದೆನಲ್ಲ! ಆದ್ದರಿಂದ ನಾನು ಮೂರ್ಖಳಾಗಿದ್ದೇನೆ. ॥ ೩೧ ॥ ನಾನು ಅತ್ಯಂತ ನಿಂದನೀಯ ಆಜೀವಿಕೆಯಾದ ವೇಶ್ಯಾವೃತ್ತಿಯನ್ನು ಆಶ್ರಯಿಸಿದೆ. ವ್ಯರ್ಥವಾಗಿ ನನ್ನ ಶರೀರವನ್ನೂ, ಮನವನ್ನೂ ಮಾರಿಬಿಟ್ಟೆ. ಲಂಪಟರೂ, ಲೋಭಿಗಳೂ, ನಿಂದನೀಯರೂ ಆದ ಮನುಷ್ಯರು ಇದನ್ನು ಕೊಂಡುಕೊಂಡರು. ನಾನು ಇದೇ ಶರೀರದಿಂದ ಧನ ಮತ್ತು ರತಿಸುಖವನ್ನು ಬಯಸಿದೆನಲ್ಲ! ಇದು ಎಂತಹ ದುಃಖದ ಮಾತಾಗಿದೆ. ನನಗೆ ಧಿಕ್ಕಾರವಿರಲಿ! ॥ ೩೨ ॥

ಸಂತಂ ಸಮೀಪೇ ರಮಣಂ ರತಿಪ್ರದಂ
ವಿತ್ತಪ್ರದಂ ನಿತ್ಯಮಿಮಂ ವಿಹಾಯ ।
ಅಕಾಮದಂ ದುಃಖಭಯಾಧಿಶೋಕ-
ಮೋಹಪ್ರದಂ ತುಚ್ಛಮಹಂ ಭಜೇಽಜ್ಞಾ ॥ ೩೧ ॥

ಅಹೋ ಮಯಾऽऽತ್ಮಾ ಪರಿತಾಪಿತೋ ವೃಥಾ
ಸಾಂಕೇತ್ಯವೃತ್ತ್ಯಾತಿವಿಗರ್ಹ್ಯವಾರ್ತಯಾ ।
ಸ್ತ್ರೈಣಾನ್ನರಾದ್ಯಾರ್ಥತೃಪೋऽನುಶೋಚ್ಯಾತ್
ಕ್ರೀತೇನ ವಿತ್ತಂ ರತಿಮಾತ್ಮನೇಚ್ಛತೀ ॥ ೩೨ ॥

ಕಂಬಗಳನ್ನು ನೆಟ್ಟು ಮನೆಯನ್ನು ನಿಲ್ಲಿಸುವಂತೆ ಬೆನ್ನು ಹುರಿ, ಎಲುಬುಗಳಿಂದ ಈ ಶರೀರವೆಂಬ ಮನೆಯು ನಿರ್ಮಾಣಗೊಂಡಿದೆ. ಇದನ್ನು ನಖ, ಚರ್ಮ, ರೋಮಗಳಿಂದ ಮುಚ್ಚಲಾಗಿದೆ. ಇದಕ್ಕೆ ಇರುವ ಒಂಭತ್ತು ಬಾಗಿಲುಗಳಿಂದ ಯಾವಾಗಲೂ ಮಲ-ಮೂತ್ರ ಮುಂತಾದವುಗಳು ಒಸರುತ್ತಿರುತ್ತವೆ. ಇಂತಹ ಅಸ್ಥಿಪಂಜರವಾದ, ನಿಂದ್ಯವಾದ ಶರೀರವನ್ನೇ ಪ್ರಿಯವೆಂದು ತಿಳಿದು ಸೇವಿಸುವ ಸ್ತ್ರೀಯು ನಾನಲ್ಲದೆ ಬೇರೆ ಯಾರು ಇರಬಲ್ಲಳು ? ॥ ೩೩ ॥ ಇದಾದರೋ ವಿದೇಹಿಗಳ ನಗರವಾಗಿದೆ. ಆದರೆ ಇದರಲ್ಲಿ ನಾನೊಬ್ಬಳೇ ಎಲ್ಲರಿಗಿಂತ ಮೂರ್ಖಳೂ, ದುಷ್ಟಳೂ ಆಗಿರುವೆನು. ಏಕೆಂದರೆ, ನಾನೊಬ್ಬಳೇ ಆತ್ಮದಾನೀ, ಅವಿನಾಶೀ ಹಾಗೂ ಪರಮ ಪ್ರಿಯತಮ ಪರಮಾತ್ಮನನ್ನು ಬಿಟ್ಟು ಬೇರೆ ಪುರುಷರ ಅಭಿಲಾಷೆ ಮಾಡುತ್ತಿರುವೆನಲ್ಲ! ॥ ೩೪ ॥

ಯದಸ್ಥಿಭಿರ್ನಿರ್ಮಿತವಂಶವಂಶ್ಯ-
ಸ್ಥೂಣಂ ತ್ವಚಾ ರೋಮನಖೈಃ ಪಿನದ್ಧಮ್ ।
ಕ್ಷರನ್ನವದ್ವಾರಮಗಾರಮೇತದ್
ವಿಣ್ಮೂತ್ರಪೂರ್ಣಂ ಮದುಪೈತಿ ಕಾನ್ಯಾ ॥ ೩೩ ॥

ವಿದೇಹಾನಾಂ ಪುರೇ ಹ್ಯಸ್ಮಿನ್ನಹಮೇಕೈವ ಮೂಢಧೀಃ ।
ಯಾನ್ಯಮಿಚ್ಛಂತ್ಯಸತ್ಯಸ್ಮಾದಾತ್ಮದಾತ್ಕಾಮಮಚ್ಯುತಾತ್
॥ ೩೪ ॥

ಸುಹೃತ್ ಪ್ರೇಷ್ಠತಮೋ ನಾಥ ಆತ್ಮಾ ಚಾಯಂ ಶರೀರಿಣಾಮ್ ।
ತಂ ವಿಕ್ರೀಯಾತ್ಮನೈವಾಹಂ ರಮೇಽನೇನ ಯಥಾ ರಮಾ
॥ ೩೫ ॥

ಕಿಯತ್ ಪ್ರಿಯಂ ತೇ ವ್ಯಭಜನ್ ಕಾಮಾ ಯೇ ಕಾಮದಾ ನರಾಃ ।
ಆದ್ಯಂತವಂತೋ ಭಾರ್ಯಾಯಾ ದೇವಾ ವಾ ಕಾಲವಿದ್ರುತಾಃ
॥ ೩೬ ॥

ನೂನಂ ಮೇ ಭಗವಾನ್ ಪ್ರೀತೋ
ವಿಷ್ಣುಃ ಕೇನಾಪಿ ಕರ್ಮಣಾ ।
ನಿರ್ವೇದೋಽಯಂ ದುರಾಶಾಯಾ
ಯನ್ಮೇ ಜಾತಃ ಸುಖಾವಹಃ ॥ ೩೭ ॥

ಮೈವಂ ಸ್ಯುರ್ಮಂದಭಾಗ್ಯಾಯಾಃ ಕ್ಲೇಶಾ ನಿರ್ವೇದಹೇತವಃ ।
ಯೇನಾನುಬಂಧಂ ನಿರ್ಹೃತ್ಯ ಪುರುಷಃ ಶಮಮೃಚ್ಛತಿ
॥ ೩೮ ॥

ತೇನೋಪಕೃತಮಾದಾಯ ಶಿರಸಾ ಗ್ರಾಮ್ಯಸಂಗತಾಃ ।
ತ್ಯಕ್ತ್ವಾ ದುರಾಶಾಃ ಶರಣಂ ವ್ರಜಾಮಿ ತಮಧೀಶ್ವರಮ್
॥ ೩೯ ॥

ಸಂತುಷ್ಟಾ ಶ್ರದ್ದಧತ್ಯೇತದ್ಯಥಾಲಾಭೇನ ಜೀವತೀ ।
ವಿಹರಾಮ್ಯಮುನೈವಾಹಮಾತ್ಮನಾ ರಮಣೇನ ವೈ
॥ ೪೦ ॥

ಸಂಸಾರಕೂಪೇ ಪತಿತಂ ವಿಷಯೈರ್ಮುಷಿತೇಕ್ಷಣಮ್ ।
ಗ್ರಸ್ತಂ ಕಾಲಾಹಿನಾಽಽತ್ಮಾನಂ ಕೋಽನ್ಯಸ್ತ್ರಾತುಮಧೀಶ್ವರಃ
॥ ೪೧ ॥

ಅತ್ಯೈವ ಹ್ಯಾತ್ಮನೋ ಗೋಪ್ತಾ ನಿರ್ವಿದ್ಯೇತ ಯದಾಖಿಲಾತ್ ।
ಅಪ್ರಮತ್ತ ಇದಂ ಪಶ್ಯೇದ್ ಗ್ರಸ್ತಂ ಕಾಲಾಹಿನಾ ಜಗತ್
॥ ೪೨ ॥

ಬ್ರಾಹ್ಮಣ ಉವಾಚ

ಏವಂ ವ್ಯವಸಿತಮತಿರ್ದುರಾಶಾಂ ಕಾಂತತರ್ಷಜಾಮ್ ।
ಛಿತ್ತ್ವೋಪಶಮಮಾಸ್ಥಾಯ ಶಯ್ಯಾಮುಪವಿವೇಶ ಸಾ
॥ ೪೩ ॥

ನನ್ನ ಹೃದಯದಲ್ಲಿ ವಿರಾಜಮಾನನಾದ ಪ್ರಭುವೇ ಸಮಸ್ತ ಪ್ರಾಣಿಗಳ ಹಿತೈಷಿಯೂ, ಸುಹೃದನೂ, ಪ್ರಿಯತಮನೂ, ಒಡೆಯನೂ, ಆತ್ಮನೂ ಆಗಿರುವನು. ಈಗ ನಾನು ನನ್ನನ್ನೇ ಕೊಟ್ಟು ಕೊಂಡು ಅವನನ್ನು ಕೊಂಡುಕೊಳ್ಳುವೆನು. ಅವನೊಡನೆ ಲಕ್ಷ್ಮೀ ದೇವಿಯು ವಿಹರಿಸುವಂತೆ ನಾನೂ ವಿಹರಿಸುವೆನು. ॥ ೩೫ ॥ ಆದಿ ಮತ್ತು ಅಂತ್ಯವುಳ್ಳ ನಶ್ವರವಾದ ಕಾಮೋಪಭೋಗಗಳಾಗಲೀ, ಆ ಕಾಮೋಪಭೋಗಗಳನ್ನು ಒದಗಿಸಿಕೊಡುವ ಪುರುಷರಾಗಲೀ, ಕಾಲದಿಂದ ನಷ್ಟರಾಗಿ ಹೋಗುವ ದೇವತೆಗಳಾಗಲೀ, ತಮ್ಮ ಭಾರ್ಯೆಯರಿಗೆ ಯಾವ ಸಂತೋಷವನ್ನು ನೀಡಬಲ್ಲರು ? ಪರಮಾತ್ಮನು ದಯಪಾಲಿಸುವ ಆತ್ಮಸುಖದ ಮುಂದೆ ಮನುಷ್ಯರು ಅಥವಾ ದೇವತೆಗಳು ತಮ್ಮ ಭಾರ್ಯೆಯರಿಗೆ ಕೊಡುವ ಸುಖವು ಅತಿ ತುಚ್ಛವಾದುದು. ॥ ೩೬ ॥ ನನ್ನ ಯಾವುದೋ ಶುಭಕರ್ಮದಿಂದ ಭಗವಾನ್ ವಿಷ್ಣುವು ಅವಶ್ಯವಾಗಿ ನನ್ನ ಮೇಲೆ ಪ್ರಸನ್ನನಾಗಿರುವನು. ಅದಕ್ಕಾಗಿಯೇ ದುರಾಸೆಯಿಂದ ನನಗೆ ಈ ವಿಧವಾದ ವೈರಾಗ್ಯ ಉಂಟಾಯಿತು. ನನ್ನ ಈ ವೈರಾಗ್ಯವು ಅವಶ್ಯವಾಗಿ ಸುಖ ಕೊಡುವಂತಹುದಾದೀತು. ॥ ೩೭ ॥ ನನಗೆ ದುಃಖ ಉಂಟಾಯಿತು, ಇದೇ ನನಗೆ ವೈರಾಗ್ಯಕ್ಕೆ ಕಾರಣವಾಯಿತು. ಆದ್ದರಿಂದ ನಾನು ಭಾಗ್ಯಹೀನಳಲ್ಲ. ಏಕೆಂದರೆ, ಇದೇ ವೈರಾಗ್ಯದಿಂದ ಮನುಷ್ಯನು ತನ್ನ ಬಂಧನಗಳನ್ನು ಕಳಕೊಂಡು ಪರಮಶಾಂತಿಯನ್ನು ಪಡೆಯುತ್ತಾನೆ. ॥ ೩೮ ॥ ಈಗ ನಾನು ಆ ಭಗವಂತನ ಈ ಮಹೋಪಕಾರವನ್ನು ಆದರಪೂರ್ವಕ ತಲೆಬಾಗಿ ಸ್ವೀಕರಿಸುತ್ತೇನೆ. ಇನ್ನು ವಿಷಯಭೋಗಗಳ ದುರಾಸೆಯನ್ನು ಬಿಟ್ಟು ಆ ಜಗದೀಶ್ವರನಿಗೇ ಶರಣುಹೋಗುವೆನು. ॥ ೩೯ ॥ ಇನ್ನು ಮುಂದೆ ನಾನು ಪ್ರಾರಬ್ಧಕ್ಕನುಸಾರ ದೊರೆತುದರಲ್ಲೇ ಜೀವನ ನಿರ್ವಾಹ ಮಾಡುವೆನು. ಬಹಳ ಸಂತೋಷ ಮತ್ತು ಶ್ರದ್ಧೆಯಿಂದೊಡಗೂಡಿ ಇರುವೆನು. ಇನ್ನು ನಾನು ಯಾವುದೇ ಬೇರೆ ಪುರುಷರತ್ತ ಕಣ್ಣೆತ್ತಿಯೂ ನೋಡದೆ, ನನ್ನ ಹೃದಯೇಶ್ವರ, ಆತ್ಮಸ್ವರೂಪೀ ಪ್ರಭುವಿನೊಂದಿಗೆ ವಿಹರಿಸುವೆನು. ॥ ೪೦ ॥ ಈ ಜೀವಿಯು ಸಂಸಾರ ಕೂಪದಲ್ಲಿ ಬಿದ್ದಿರುವುದು. ವಿಷಯಗಳು ಇವನನ್ನು ಕುರುಡಾಗಿಸಿವೆ. ಕಾಲರೂಪೀ ಅಜಗರವು ಇವನನ್ನು ತನ್ನ ಬಾಯಲ್ಲಿ ಕಚ್ಚಿಕೊಂಡಿದೆ. ಈಗ ಭಗವಂತನನ್ನು ಬಿಟ್ಟು ಇವನನ್ನು ರಕ್ಷಿಸುವವರು ಬೇರೆ ಯಾರು ಸಮರ್ಥರಾಗಿರುವರು ? ॥ ೪೧ ॥ ಜೀವಿಯು ಸಮಸ್ತ ವಿಷಯಗಳಿಂದ ವಿರಕ್ತನಾದಾಗ ಅವನು ಸ್ವತಃ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ. ಅದಕ್ಕಾಗಿ ಇಡೀ ಜಗತ್ತು ಕಾಲರೂಪೀ ಅಜಗರಕ್ಕೆ ತುತ್ತಾಗಿದೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸುತ್ತಿರಬೇಕು. ॥ ೪೨ ॥

ಅವಧೂತ ದತ್ತಾತ್ರೇಯರು ಹೇಳುತ್ತಾರೆ – ರಾಜನೇ! ಪಿಂಗಳೆ ವೇಶ್ಯೆಯು ಹೀಗೆ ನಿಶ್ಚಯಿಸಿಕೊಂಡು ತನ್ನ ಪ್ರಿಯ ಶ್ರೀಮಂತರ ದುರಾಸೆಯನ್ನು, ವಿಟರನ್ನು ಸೇರುವ ಲಾಲಸೆಯನ್ನು

ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಮ್ ।
ಯಥಾ ಸಂಛಿದ್ಯ ಕಾಂತಾಶಾಂ ಸುಖಂ ಸುಷ್ವಾಪ ಪಿಂಗಲಾ
॥ ೪೪ ॥

ಪರಿತ್ಯಜಿಸಿ, ಶಾಂತಭಾವದಿಂದ ಹೋಗಿ ತನ್ನ ಹಾಸಿಗೆಯಲ್ಲಿ ಮಲಗಿ ಕೊಂಡಳು. ॥ ೪೩. ॥ ನಿಜವಾಗಿಯೂ ಆಸೆಯೇ ಎಲ್ಲಕ್ಕಿಂತ ದೊಡ್ಡ ದುಃಖವಾಗಿದೆ, ನಿರಾಸೆಯೇ ಎಲ್ಲಕ್ಕಿಂತ ಭಾರೀ ಸುಖವಾಗಿದೆ. ಏಕೆಂದರೆ, ಪಿಂಗಳೆವೇಶ್ಯೆಯು ಪುರುಷರ ಆಸೆಯನ್ನು ತೊರೆದಾಗಲೇ ಅವಳು ಸುಖವಾಗಿ ಮಲಗಲು ಸಾಧ್ಯವಾಯಿತು. ॥ ೪೪ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಅಷ್ಟಮೋऽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಅವಧೂತೋಪಾಖ್ಯಾನ– ಕುರರಪಕ್ಷಿಯಿಂದ ಹಿಡಿದು ಭೃಂಗದವರೆಗಿನ ಏಳು ಗುರುಗಳ ಕಥೆ

ಬ್ರಾಹ್ಮಣ ಉವಾಚ

ಪರಿಗ್ರಹೋ ಹಿ ದುಃಖಾಯ ಯದ್ಯತ್ಪ್ರಿಯತಮಂ ನೃಣಾಮ್ ।
ಅನಂತಂ ಸುಖಮಾಪ್ನೋತಿ ತದ್ವಿದ್ವಾನ್ ಯಸ್ತ್ವಕಿಂಚನಃ
॥ ೧ ॥

ಬ್ರಾಹ್ಮಣಶ್ರೇಷ್ಠರಾದ ಅವಧೂತ ದತ್ತಾತ್ರೇಯರು ಹೇಳುತ್ತಾರೆ – ರಾಜನೇ ! ಮನುಷ್ಯನಿಗೆ ಪ್ರಿಯವೆನಿಸಿದ ವಸ್ತು, ಪದಾರ್ಥಗಳನ್ನೇ ಪರಿಗ್ರಹ, ಸಂಗ್ರಹಮಾಡುತ್ತಾನೆ. ಅವೇ ಅವನ ದುಃಖಕ್ಕೆ ಕಾರಣ ವಾಗುತ್ತವೆ. ಆದರೆ ಅಕಿಂಚನನೂ, ಅಪರಿಗ್ರಹನೂ ಆದ ವಿದ್ವಾಂಸನು ಆನಂದವನ್ನು ಅನುಭವಿಸುತ್ತಾನೆ. ಆದ್ದರಿಂದ ಶ್ರೇಯೋಕಾಮಿ ಮನುಷ್ಯನು ಸಂಗ್ರಹದಿಂದ ದೂರವುಳಿಯ ಬೇಕು. ॥ ೧ ॥

ಸಾಮಿಷಂ ಕುರರಂ ಜಘ್ನುರ್ಬಲಿನೋ ಯೇ ನಿರಾಮಿಷಾಃ ।
ತದಾಮಿಷಂ ಪರಿತ್ಯಜ್ಯ ಸ ಸುಖಂ ಸಮವಿಂದತ
॥ ೨ ॥

(ಕುರರಪಕ್ಷಿಯ ದೃಷ್ಟಾಂತವನ್ನು ಕೊಟ್ಟು ಹೇಳುತ್ತಾರೆ –) ಯಾವುದೋ ಕುರರ ಪಕ್ಷಿಗೆ ಎಲ್ಲೋ ಒಂದು ಮಾಂಸದ ತುಂಡು ಸಿಕ್ಕಿತು. ಅದನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಹಾರುವಾಗ ಅದನ್ನು ನೋಡಿ ಬೇರೆ ಮಾಂಸದ ಲೋಭಿಪಕ್ಷಿಗಳು ಅದನ್ನು ಆಕ್ರಮಿಸಿ ಪೀಡಿಸತೊಡಗಿದವು. ಆಗ ಆ ಪಕ್ಷಿಯು ಮಾಂಸದ ತುಂಡನ್ನು ಎಸೆದುಬಿಡಲು ಆಕ್ರಮಣದಿಂದ ಪಾರಾಗಿ ಸುಖಿಯಾಯಿತು. ಇದರಿಂದ ಸಂಗ್ರಹಿಸುವುದನ್ನು ಆಪತ್ತಿನ ಮೂಲವೆಂಬುದನ್ನು ತಿಳಿಯಬೇಕು. ॥ ೨ ॥

ನ ಮೇ ಮಾನಾವಮಾನೌ ಸ್ತೋ ನ ಚಿಂತಾ ಗೇಹಪುತ್ರಿಣಾಮ್ ।
ಆತ್ಮಕ್ರೀಡ ಆತ್ಮರತಿರ್ವಿಚರಾಮೀಹ ಬಾಲವತ್
॥ ೩ ॥

(ಬಾಲಕನ (ಮಗು) ಉದಾಹರಣೆಯಿಂದ ತಿಳಿಸುತ್ತಿದ್ದಾರೆ –) ಸಣ್ಣ ಬಾಲಕನು ತಾನೇ-ತನ್ನಲ್ಲಿ ರಮಮಾಣವಾಗಿದ್ದು, ನಿಶ್ಚಿಂತ ವಾಗಿರುತ್ತಾನೆ. ಹಾಗೆಯೇ ನಾನೂ ನನ್ನ ಆತ್ಮಾನಂದದಲ್ಲಿ ಮಗ್ನ ನಾಗಿರುತ್ತೇನೆ. ಮಾನ ಬರಲೀ, ಅಪಮಾನವಾಗಲೀ, ಅದರ ಪರಿಣಾಮ ನನ್ನ ಮೇಲೆ ಏನೂ ಆಗುವುದಿಲ್ಲ ಹಾಗೂ ಮನೆ ಪರಿವಾರ ಚಿಂತೆಯೂ ನನಗಿಲ್ಲ. ಪ್ರಪಂಚದಲ್ಲಿ ಇಬ್ಬರೇ ಚಿಂತೆ ಯಿಂದ ಮುಕ್ತರಾಗಿದ್ದಾರೆ. ಒಂದು ಮುಗ್ಧ ಮಗು, ಇನ್ನೊಬ್ಬ ಗುಣಾತೀತ ಯೋಗಿ. ಇವರಿಬ್ಬರೂ ಪರಮ ಆನಂದದಲ್ಲಿ ಮಗ್ನರಾಗಿರುತ್ತಾರೆ. ॥ ೩-೪ ॥

ದ್ವಾವೇವ ಚಿಂತಯಾ ಮುಕ್ತೌ
ಪರಮಾನಂದ ಆಪ್ಲುತೌ ।
ಯೋ ವಿಮುಗ್ಧೋ ಜಡೋ ಬಾಲೋ
ಯೋ ಗುಣೇಭ್ಯಃ ಪರಂ ಗತಃ ॥ ೪ ॥

ಕ್ವಚಿತ್ ಕುಮಾರೀ ತ್ವಾತ್ಮಾನಂ ವೃಣಾನಾನ್ ಗೃಹಮಾಗತಾನ್ ।
ಸ್ವಯಂ ತಾನರ್ಹಯಾಮಾಸ ಕ್ವಾಪಿ ಯಾತೇಷು ಬಂಧುಷು
॥ ೫ ॥

ತೇಷಾಮಭ್ಯವಹಾರಾರ್ಥಂ ಶಾಲೀನ್ಪ್ರಹಸಿ ಪಾರ್ಥಿವ ।
ಅವಘ್ನಂತ್ಯಾಃ ಪ್ರಕೋಷ್ಠಸ್ಥಾಶ್ಚಕ್ರುಃ ಶಂಖಾಃ ಸ್ವನಂ ಮಹತ್
॥ ೬ ॥

ಸಾ ತಜ್ಜುಗುಪ್ಸಿತಂ ಮತ್ವಾ ಮಹತೀ ವ್ರೀಡಿತಾ ತತಃ ।
ಬಭಂಜೈಕೈಕಶಃ ಶಂಖಾನ್ ದ್ವೌ ದ್ವೌ ಪಾಣ್ಯೋರಶೇಷಯತ್
॥ ೭ ॥

ಉಭಯೋರಪ್ಯಭೂದ್ಘೋಷೋ ಹ್ಯವಘ್ನಂತ್ಯಾಃ ಸ್ಮ ಶಂಖಯೋಃ ।
ತತ್ರಾಪ್ಯೇಕಂ ನಿರಭಿದದೇ ಕಸ್ಮಾನ್ನಾಭವದ್ಧ್ವನಿಃ
॥ ೮ ॥

ಅನ್ವಶಿಕ್ಷಮಿಮಂ ತಸ್ಯಾ ಉಪದೇಶಮರಿಂದಮ ।
ಲೋಕಾನನುಚರನ್ನೇತಾನ್ ಲೋಕತತ್ತ್ವವಿವಿತ್ಸಯಾ
॥ ೯ ॥

ವಾಸೇ ಬಹೂನಾಂ ಕಲಹೋ ಭವೇದ್ವಾರ್ತಾ ದ್ವಯೋರಪಿ ।
ಏಕ ಏವ ಚರೇತ್ತಸ್ಮಾತ್ ಕುಮಾರ್ಯಾ ಇವ ಕಂಕಣಃ
॥ ೧೦ ॥

ಮನ ಏಕತ್ರ ಸಂಯುಂಜ್ಯಾಜ್ಜಿತಶ್ವಾಸೋ ಜಿತಾಸನಃ ।
ವೈರಾಗ್ಯಾಭ್ಯಾಸಯೋಗೇನ ಧ್ರಿಯಮಾಣಮತಂದ್ರಿತಃ
॥ ೧೧ ॥

ಯಸ್ಮಿನ್ ಮನೋ ಲಬ್ಧಪದಂ ಯದೇತ-
ಚ್ಛನೈಃ ಶನೈರ್ಮುಂಚತಿ ಕರ್ಮರೇಣೂನ್ ।
ಸತ್ತ್ವೇನ ವೃದ್ಧೇನ ರಜಸ್ತಮಶ್ಚ
ವಿಧೂಯ ನಿರ್ವಾಣಮುಪೈತ್ಯನಿಂಧನಮ್ ॥ ೧೨ ॥

ತದೈವಮಾತ್ಮನ್ಯವರುದ್ಧಚಿತ್ತೋ
ನ ವೇದ ಕಿಂಚಿದ್ಬಹಿರಂತರಂ ವಾ ।
ಯಥೇಷುಕಾರೋ ನೃಪತಿಂ ವ್ರಜಂತ-
ಮಿಷೌ ಗತಾತ್ಮಾ ನ ದದರ್ಶ ಪಾರ್ಶ್ವೇ ॥ ೧೩ ॥

(ಈಗ ಕುಮಾರಿಯೊಬ್ಬಳ ಉದಾಹರಣೆಯನ್ನು ತಿಳಿಸುತ್ತಾರೆ –) ಒಮ್ಮೆ ಕುಮಾರಿಯೋರ್ವಳ ಮನೆಗೆ ಕನ್ಯಾವರಣಕ್ಕಾಗಿ ಕೆಲವರು ಬಂದರು. ಅಂದು ಉಳಿದ ಮನೆಯವರೆಲ್ಲರೂ ಎಲ್ಲೋ ಹೊರಗೆ ಹೋಗಿದ್ದರು. ಅದಕ್ಕಾಗಿ ಅವಳು ಸ್ವತಃ ಅವರ ಆದರ-ಆತಿಥ್ಯ ಮಾಡಬೇಕಾಗಿ ಬಂತು. ॥ ೫ ॥

ರಾಜನೇ! ಬಂದ ಅತಿಥಿಗಳಿಗೆ ಭೋಜನಕ್ಕಾಗಿ ಅವಳು ಮನೆಯೊಳಗೆ ಏಕಾಂತದಲ್ಲಿ ಭತ್ತ ಕುಟ್ಟುತ್ತಿದ್ದಳು. ಆಗ ಅವಳು ತೊಟ್ಟುಕೊಂಡಿದ್ದ ಶಂಖದ ಬಳೆಗಳು ಒಂದಕ್ಕೊಂದು ತಗುಲಿ ಶಬ್ದಮಾಡತೊಡಗಿದವು. ಈ ಶಬ್ದವನ್ನು ನಿಂದಿತವೆಂದು ತಿಳಿದು ಕುಮಾರಿಗೆ ತ್ರುಂಬಾ ನಾಚಿಕೆಯಾಯಿತು.* ಅವಳು ಒಂದೊಂದಾಗಿ ಬಳೆಗಳನ್ನು ಒಡೆದು ಹಾಕಿ ಕೊನೆಗೆ ಎರಡೆರಡು ಬಳೆಗಳು ಉಳಿದವು. ॥ ೬-೭ ॥ ಅವಳು ಪುನಃ ಭತ್ತ ಕುಟ್ಟಲು ಪ್ರಾರಂಭಿಸಿದಳು. ಆದರೆ ಆ ಎರಡೆರಡು ಬಳೆಗಳೂ ಸದ್ದು ಮಾಡುತ್ತಿದ್ದವು. ಕೊನೆಗೆ ಅದರಲ್ಲಿ ಒಂದೊಂದನ್ನು ಒಡೆದುಹಾಕಿ ಕೇವಲ ಒಂದೊಂದೇ ಬಳೆ ಉಳಿಯಿತು. ಆಗ ಯಾವ ಸದ್ದೂ ಉಂಟಾಗುತ್ತಿರಲಿಲ್ಲ ॥ ೮ ॥ ಶತ್ರುಸೂದನಾ! ಆಗಲೇ ವ್ಯವಹಾರವನ್ನು ತಿಳಿಯುವ ಇಚ್ಛೆಯಿಂದ ನಾನೂ ಅಲ್ಲಿಗೆ ತಲುಪಿದೆ. ಆಗ ನಾನು ಅವಳಿಂದ ಈ ಶಿಕ್ಷಣವನ್ನು ಪಡೆದುಕೊಂಡೆ. ಅನೇಕ ಜನರು ಒಟ್ಟಿಗೆ ಒಂದೆಡೆ ಇದ್ದರೆ ಕಲಹ ಉಂಟಾಗುತ್ತದೆ. ಇಬ್ಬರು ಜೊತೆಯಲ್ಲಿದ್ದರೂ ವ್ಯರ್ಥವಾದ ಮಾತುಗಳು ನಡೆಯುತ್ತವೆ. ಅದಕ್ಕಾಗಿ ಆ ಹೆಣ್ಣುಮಗಳ ಬಳೆಗಳಂತೆ ಒಬ್ಬನೇ ಸಂಚರಿಸಬೇಕು. ॥ ೯-೧೦ ॥

ರಾಜನೇ! ಆಸನ ಮತ್ತು ಪ್ರಾಣಾಯಾಮದ ಮೂಲಕ ಶ್ವಾಸವನ್ನು ಗೆದ್ದು ವೈರಾಗ್ಯ ಹಾಗೂ ಅಭ್ಯಾಸದಿಂದ ತನ್ನ ಮನವನ್ನು ವಶಪಡಿಸಿಕೊಳ್ಳಬೇಕು. ಮತ್ತೆ ಬಹಳ ಜಾಗರೂಕತೆಯಿಂದ ಅದನ್ನು ಒಂದು ಗುರಿಯಲ್ಲಿ ನೆಲೆಗೊಳಿಸಬೇಕು. ಇದನ್ನು ನಾನು ಬಾಣವನ್ನು ತಯಾರಿಸುವವನಿಂದ ಕಲಿತೆನು. ॥ ೧೧ ॥ ಪರಮಾನಂದ ಸ್ವರೂಪೀ ಪರಮಾತ್ಮನಲ್ಲಿ ಮನಸ್ಸು ಸ್ಥಿರವಾದಾಗ ಅದು ಕ್ರಮವಾಗಿ ಕರ್ಮವಾಸನೆಯ ಧೂಳನ್ನು ತೊಳೆದುಬಿಡುತ್ತದೆ. ಸತ್ತ್ವಗುಣದ ವೃದ್ಧಿಯಾಗುತ್ತದೆ. ರಜೋಗುಣ ಮತ್ತು ತಮೋಗುಣ ಇವುಗಳ ವೃತ್ತಿಗಳನ್ನು ತ್ಯಾಗಗೈದು ಮನಸ್ಸು – ಕಟ್ಟಿಗೆ ಇಲ್ಲದ ಅಗ್ನಿಯು ಶಾಂತವಾಗುವಂತೆ ಶಾಂತವಾಗುತ್ತದೆ. ॥ ೧೨ ॥ ಈ ವಿಧವಾಗಿ ಚಿತ್ತವು ತನ್ನ ಆತ್ಮನಲ್ಲೇ ಸ್ಥಿರ-ನಿರುದ್ಧನಾದವನಿಗೆ ಒಳ-ಹೊರಗೆ ಎಲ್ಲಿಯೂ ಯಾವುದೇ ಪದಾರ್ಥದ ಎಚ್ಚರವಿರುವುದಿಲ್ಲ. ಓರ್ವ ಕಮ್ಮಾರನು ಬಾಣವನ್ನು ತಯಾರಿಸುತ್ತಿದ್ದನು. ಅವನ ಬಳಿಯಿಂದಲೇ ಭೇರಿ, ನಗಾರಿ, ಕಹಳೆ ಮುಂತಾದ ವಾದ್ಯಗಳೊಂದಿಗೆ ರಾಜನ ಮೆರವಣಿಗೆ ಹೊರಟಿತ್ತು. ಆದರೆ ಅವನಿಗೆ ಇದರ ಅರಿವೇ ಇರದಷ್ಟು ತನ್ನ ಕಾಯಕದಲ್ಲಿ ತನ್ಮಯನಾಗಿ ಹೋಗಿದ್ದನು. ಇದನ್ನು ನಾನು ನೋಡಿದೆ. ॥ ೧೩ ॥

ಸರ್ಪದಿಂದ ನಾನು ಕಲಿತುದು – ಮುನಿಯಾದವನು ಒಬ್ಬಂಟಿಗನಾಗಿರಬೇಕು. (ಮಂಡಳಿ ಕಟ್ಟಿಕೊಳ್ಳಬಾರದು.) ಇರುವ ಜಾಗದಲ್ಲಿ ಮಮತೆ ಇರಬಾರದು. ಎಚ್ಚರಿಕೆಯಿಂದಿರಬೇಕು.

* ಏಕೆಂದರೆ, ಅದರಿಂದ ಅವಳು ಸ್ವತಃ ಭತ್ತಕುಟ್ಟುವುದು, ಅವರ ದರಿದ್ರತೆಯನ್ನು ಪ್ರದರ್ಶಿಸುತ್ತಿತ್ತು.

ಏಕಚಾರ್ಯನಿಕೇತಃ ಸ್ಯಾದಪ್ರಮತ್ತೋ ಗುಹಾಶಯಃ।
ಅಲಕ್ಷ್ಯಮಾಣ ಆಚಾರೈರ್ಮುನಿರೇಕೋಽಲ್ಪಭಾಷಣಃ
॥ ೧೪ ॥

ಏಕಾಂತದಲ್ಲಿ ಅಥವಾ ಗುಹೆಯಲ್ಲಿ ವಾಸಿಸಬೇಕು. ತನ್ನ ಆಚಾರ-ವ್ಯವಹಾರದಿಂದ ತನ್ನನ್ನು ಯಾರ ಮುಂದೆಯೂ ಪ್ರಕಟಿಸಬಾರದು. ಮಿತಭಾಷಿಯಾಗಿರಬೇಕು. ॥ ೧೪ ॥

ಗೃಹಾರಂಭೋಽತಿದುಃಖಾಯ ವಿಫಲಶ್ಚಾಧ್ರುವಾತ್ಮನಃ।
ಸರ್ಪಃ ಪರಕೃತಂ ವೇಶ್ಮ ಪ್ರವಿಶ್ಯ ಸುಖಮೇಧತೇ
॥ ೧೫ ॥

ಈ ಅನಿತ್ಯ ಶರೀರಕ್ಕಾಗಿ ಇಷ್ಟು ಕಷ್ಟಪಟ್ಟು ಮನೆಕಟ್ಟುವದು ವ್ಯರ್ಥವಾಗಿದೆ. ಇಲಿಯು ಮಾಡಿದ ಬಿಲದಲ್ಲೇ ಹಾವು ಹಾಯಾಗಿ ವಾಸಿಸುತ್ತದೆ. ಹಾಗೆಯೇ ಎಲ್ಲಾದರೂ ಇದ್ದು ತನ್ನ ನಿರ್ವಾಹವನ್ನು ಮಾಡಿಕೊಳ್ಳಬೇಕು. ॥ ೧೫ ॥

ಏಕೋ ನಾರಾಯಣಸ್ತಸ್ಯ ದೇವಃ ಪೂರ್ವಸೃಷ್ಟಂ ಸ್ವಮಾಯಯಾ।
ಸಂಹೃತ್ಯ ಕಾಲಕಲಯಾ ಕಲ್ಪಾಂತ ಇದಮೀಶ್ವರಃ
॥ ೧೬ ॥

(ಈಗ ಜೇಡರಹುಳುವಿನ ದೃಷ್ಟಾಂತದಿಂದ ತಿಳಿಸುತ್ತಾರೆ –) ಅದ್ವಿತೀಯನಾದ, ದೇವದೇವನಾದ ನಾರಾಯಣನೇ ತನ್ನ ಮಾಯೆಯಿಂದ ವಿಶ್ವವನ್ನು ನಿರ್ಮಿಸುತ್ತಾನೆ. ಅವನೇ ಕಲ್ಪದ ಕೊನೆಯಲ್ಲಿ ತನ್ನ ಕಾಲಶಕ್ತಿಯ ಮೂಲಕ ಇದರ ಉಪಸಂಹಾರವನ್ನು ಮಾಡುತ್ತಾನೆ. ॥ ೧೬ ॥

ಏಕ ಏವಾದ್ವಿತೀಯೋಽಭೂದಾತ್ಮಾಧಾರೋಽಖಿಲಾಶ್ರಯಃ।
ಕಾಲೇನಾತ್ಮಾನುಭಾವೇನ ಸಾಮ್ಯಂ ನೀತಾಸು ಶಕ್ತಿಷು।
ಸತ್ತ್ವಾದಿಷ್ವಾದಿಪುರುಷಃ ಪ್ರಧಾನಪುರುಷೇಶ್ವರಃ
॥ ೧೭ ॥

ಆ ಪರಮಾತ್ಮನು ಓರ್ವನೇ ಆಗಿದ್ದಾನೆ. (ಅವನಲ್ಲಿ ಸಜಾತೀಯ ಜೀವ ಮುಂತಾದ ಭೇದಗಳಿಲ್ಲ) ಅದ್ವಿತೀಯನಾಗಿದ್ದಾನೆ. (ವಿಜಾತೀಯ ಪ್ರಧಾನಾದಿ ಭೇದದಿಂದ ರಹಿತನಾಗಿದ್ದಾನೆ.) ಹಾಗೂ (ನಿರುಪಾಧಿಕನಾಗಿದ್ದಾನೆ.) ಆದ್ದರಿಂದ ಸ್ವಗತಭೇದರಹಿತನಾಗಿದ್ದಾನೆ. ಈ ಪ್ರಕಾರ ಆ ಪರಮಾತ್ಮನು ಅಖಂಡರೂಪದಿಂದ ಸ್ವಯಂ ತಾನೇ ತಾನಾಗಿದ್ದಾನೆ. ಆ ಭಗವಾನ್ ಆದಿನಾರಾಯಣನೇ ಪ್ರಕೃತಿ-ಪುರುಷರ ನಿಯಾಮಕನಾಗಿದ್ದಾನೆ. ಅವನು ತನ್ನ ಕಾಲಶಕ್ತಿಯ ಮೂಲಕ ಈ ಸತ್ತ್ವಾದಿ ಶಕ್ತಿಗಳನ್ನು ಸಾಮ್ಯಾವಸ್ಥೆಗೆ ಒಯ್ದಾಗ ಏಕಮಾತ್ರ ಪರಮಾತ್ಮನೇ ಶೇಷವಾಗಿ ಇರುತ್ತಾನೆ. ॥ ೧೭ ॥

ಪರಾವರಾಣಾಂ ಪರಮ ಆಸ್ತೇ ಕೈವಲ್ಯಸಂಜ್ಞಿತಃ।
ಕೇವಲಾನುಭವಾನಂದಸಂದೋಹೋ ನಿರುಪಾಧಿಕಃ
॥ ೧೮ ॥

ಅವನು ಪರಮ ಶ್ರೇಷ್ಠನಾಗಿದ್ದು, ಪರಾ ಮತ್ತು ಅಪರಾ ಇವೆರಡೂ ಪ್ರಕೃತಿಗಳಿಂದ ಅತೀತನಾಗಿದ್ದಾನೆ. ಅವನನ್ನು ಕೈವಲ್ಯನೆಂದೂ ಹೇಳಲಾಗುತ್ತದೆ. ಅವನು ಕೇವಲಸ್ವರೂಪನೂ, ಅನುಭವ ಸ್ವರೂಪನೂ, ಆನಂದ ಪುಂಜನೂ ಆಗಿರುವನು. ಅಲ್ಲಿ ಪ್ರಕೃತಿಯ ಯಾವ ಉಪಾಧಿಯೂ ಇಲ್ಲ. ॥ ೧೮ ॥

ಕೇವಲಾತ್ಮಾನುಭಾವೇನ ಸ್ವಮಾಯಾಂ ತ್ರಿಗುಣಾತ್ಮಿಕಾಮ್।
ಸಂಕ್ಷೋಭಯನ್ಸೃಜತ್ಯಾದೌ ತಯಾ ಸೂತ್ರಮರಿಂದಮ
॥ ೧೯ ॥

ಅವನು ಕೇವಲ ತನ್ನ ಸಾಮರ್ಥ್ಯದಿಂದಲೇ ತನ್ನ ತ್ರಿಗುಣಾತ್ಮಿಕಾ ಮಾಯೆಯಲ್ಲಿ ಕ್ಷೋಭೆ ಉಂಟುಮಾಡುತ್ತಾನೆ. ಹೇ ಶತ್ರುಸೂದನಾ! ಆ ಮಾಯೆಯ ಮೂಲಕ ಮೊಟ್ಟಮೊದಲು ಕ್ರಿಯಾಶಕ್ತಿ ಪ್ರಧಾನನಾದ ಸೂತ್ರಾತ್ಮನನ್ನು ರಚಿಸುತ್ತಾನೆ. ॥ ೧೯ ॥

ತಾಮಾಹುಸ್ತ್ರಿಗುಣವ್ಯಕ್ತಿಂ ಸೃಜಂತೀಂ ವಿಶ್ವತೋಮುಖಮ್।
ಯಸ್ಮಿನ್ ಪ್ರೋತಮಿದಂ ವಿಶ್ವಂ ಯೇನ ಸಂಸರತೇ ಪುಮಾನ್
॥ ೨೦ ॥

ಆ ಕ್ರಿಯಾಶಕ್ತಿ ಪ್ರಧಾನ ಸೂತ್ರಾತ್ಮನೇ ತ್ರಿಗುಣಾತ್ಮಿಕಾ ಶಕ್ತಿಯನ್ನು ಮತ್ತು ಮೂರೂ ಗುಣಗಳನ್ನು ಅಭಿವ್ಯಕ್ತಗೊಳಿಸುತ್ತಾನೆ. ಹೀಗೆ ಅವನೇ ಇಡೀ ವಿಶ್ವವನ್ನು ನಿರ್ಮಿಸುತ್ತಾನೆ. ಈ ಎಲ್ಲ ವಿಶ್ವದಲ್ಲಿ ವ್ಯಾಪ್ತವಾಗಿರುವವನು ಅವನೇ. ಆದರೆ ಪುರುಷನು ಅದರಲ್ಲಿ ಅಹಂ ಬುದ್ಧಿಯಿಂದ ಅಲೆಯುತ್ತಾನೆ. ॥ ೨೦ ॥

ಯಥೋರ್ಣನಾಭಿರ್ಹೃದಯಾದೂರ್ಣಾಂ ಸಂತತ್ಯ ವಕ್ತ್ರತಃ।
ತಯಾ ವಿಹೃತ್ಯ ಭೂಯಸ್ತಾಂ ಗ್ರಸತ್ಯೇವಂ ಮಹೇಶ್ವರಃ
॥ ೨೧ ॥

ಜೇಡರಹುಳುವು ಹೃದಯದಿಂದ ಹೊರಬಂದ ನೂಲೆಳೆಯನ್ನು ಬಾಯಿಂದ ಹರಡಿ ಬಲೆಯನ್ನು ಕಟ್ಟಿ, ಅದರಲ್ಲೇ ಸ್ವೇಚ್ಛೆಯಿಂದ ವಿಹರಿಸುತ್ತಿದ್ದು ಕಡೆಗೆ ತಾನೇ ಅದನ್ನು ನುಂಗಿಬಿಡುತ್ತದೆ. ಹಾಗೆಯೇ ಪರಮೇಶ್ವರನೂ ಈ ಜಗತ್ತನ್ನು ತನ್ನಿಂದಲೇ ಸೃಷ್ಟಿಸಿ, ಅದರಲ್ಲಿ ಜೀವರೂಪದಿಂದ ವಿಹರಿಸುತ್ತಾ ಕೊನೆಗೆ ಅದನ್ನು ತನ್ನಲ್ಲೇ ಲೀನಗೊಳಿಸಿಕೊಳ್ಳುತ್ತಾನೆ. ಇದರಿಂದ ಮೊತ್ತವಾಗಿ ಈ ವಿಶ್ವವು ಪರಮಾತ್ಮನದೇ ಸ್ವರೂಪವಾಗಿದೆ ಎಂದು ತಿಳಿಯಬೇಕು. ॥ ೨೧ ॥

ಯತ್ರ ಯತ್ರ ಮನೋ ದೇಹೀ ಧಾರಯೇತ್ಸಕಲಂ ಧಿಯಾ ।
ಸ್ನೇಹಾದ್ವೇಷಾದ್ಭಯಾದ್ವಾಪಿ ಯಾತಿ ತತ್ತತ್ಸರೂಪತಾಮ್
॥ ೨೨ ॥

ರಾಜನೇ ! ಪ್ರಾಣಿಯು ಸ್ನೇಹದಿಂದಾಗಲೀ, ದ್ವೇಷದಿಂದಾಗಲೀ ಅಥವಾ ಭಯದಿಂದಾಗಲೀ ತಿಳಿದು - ತಿಳಿದು ಏಕಾಗ್ರವಾಗಿ ತನ್ನ ಮನಸ್ಸನ್ನು ಯಾವುದರಲ್ಲಾದರೂ ತೊಡಗಿಸಿದರೆ, ಅದಕ್ಕೆ ಅದೇ ವಸ್ತುವಿನ ಸ್ವರೂಪ ಪ್ರಾಪ್ತವಾಗುತ್ತದೆ. ಇದನ್ನು ನಾನು ಭೃಂಗೀ (ಕಣಜದ) ಹುಳುವಿನಿಂದ ಕಲಿತುಕೊಂಡೆನು. ॥ ೨೨ ॥

ಕೀಟಃ ಪೇಶಸ್ಕೃತಂ ಧ್ಯಾಯನ್ ಕುಡ್ಯಾಂ ತೇನ ಪ್ರವೇಶಿತಃ ।
ಯಾತಿ ತತ್ಸಾತ್ಮತಾಂ ರಾಜನ್ ಪೂರ್ವರೂಪಮಸಂತ್ಯಜನ್
॥ ೨೩ ॥

ಕಣಜದ ಹುಳುವು ಯಾವುದೋ ಹುಳವನ್ನು ತಂದು ಅದನ್ನು ಮಣ್ಣಿನ ಗೂಡಿನಲ್ಲಿ ಮುಚ್ಚಿಡುತ್ತದೆ. ಹೊರಗಿನಿಂದ ತಾನು ಬಂದು ಪದೇ-ಪದೇ ಅದನ್ನು ಭೂಂ-ಭೂಂ ಮಾಡುತ್ತಾ ಹೆದರಿಸುತ್ತದೆ. ಒಳಗಿರುವ ಹುಳುವು ಕಣಜದ ಭಯದಿಂದ ಅದನ್ನೇ ಚಿಂತಿಸುತ್ತಾ ತನ್ನ ಹಿಂದಿನ ಶರೀರವನ್ನು ಬಿಡದೆ ತದ್ರೂಪವಾಗುತ್ತದೆ. ಅಂದರೆ ಕಣಜದ ಹುಳುವೇ ಆಗುತ್ತದೆ.* ಹೀಗೆಯೇ ಹೇಗೆಬೇಕಾದರೂ ಇರಲಿ ಪರಮಾತ್ಮನನ್ನು ಸತತ ಚಿಂತಿಸುವುದರಿಂದ ಮನುಷ್ಯನೂ ಅವಶ್ಯವಾಗಿ ಪರಮಾತ್ಮಸ್ವರೂಪನೇ ಆಗುವನು. ॥ ೨೩ ॥

ಏವಂ ಗುರುಭ್ಯ ಏತೇಭ್ಯ ಏಷಾ ಮೇ ಶಿಕ್ಷಿತಾ ಮತಿಃ ।
ಸ್ವಾತ್ಮೋಪಶಿಕ್ಷಿತಾಂ ಬುದ್ಧಿಂ ಶೃಣು ಮೇ ವದತಃ ಪ್ರಭೋ
॥ ೨೪ ॥

ರಾಜನೇ ! ಈ ಪ್ರಕಾರ ನಾನು ಇಷ್ಟು ಗುರುಗಳಿಂದ ಈ ಶಿಕ್ಷಣವನ್ನು ಗ್ರಹಿಸಿದೆ. ಈಗ ನಾನು ನನ್ನ ಶರೀರದಿಂದ ಕಲಿತಿರುವುದನ್ನು ನಿನಗೆ ತಿಳಿಸುತ್ತೇನೆ. ಮನಗೊಟ್ಟು ಕೇಳು. ॥ ೨೪ ॥

ದೇಹೋ ಗುರುರ್ಮಮ ವಿರಕ್ತಿವಿವೇಕಹೇತು-
ರ್ಬಿಭ್ರತ್ ಸ್ಮ ಸತ್ತ್ವನಿಧನಂ ಸತತಾರ್ತ್ಯುದರ್ಕಮ್ ।
ತತ್ತ್ವಾನ್ಯನೇನ ವಿಮೃಶಾಮಿ ಯಥಾ ತಥಾಪಿ
ಪಾರಕ್ಯಮಿತ್ಯವಸಿತೋ ವಿಚರಾಮ್ಯಸಂಗಃ ॥ ೨೫ ॥

ಈ ದೇಹವೂ ನನ್ನ ಗುರುವಾಗಿದೆ. ಇದು ನನಗೆ ವೈರಾಗ್ಯ ಮತ್ತು ವಿವೇಕವನ್ನು ಉಪದೇಶಿಸುತ್ತದೆ. ದೇಹವು ಜನ್ಮ-ಮರಣಶೀಲವಾಗಿದೆ ಎಂಬುದು ಪ್ರಸಿದ್ಧವೇ ಆಗಿದೆ. ಪರಿಣಾಮದಲ್ಲಿ ಇದರೊಂದಿಗೆ ನಿರಂತರ ದುಃಖವೇ ಅಂಟಿಕೊಂಡಿದೆ. ಆದರೆ ಈ ದೇಹದಿಂದಲೇ ನಾನು ಪರಮಾತ್ಮ ತತ್ತ್ವವನ್ನು ಚಿಂತಿಸುತ್ತೇನೆ, ಇದೇ ಇದರ ದೊಡ್ಡ ಲಾಭವಾಗಿದೆ. ಈ ದೇಹವನ್ನು ಒಂದು ದಿನ ನರಿ-ನಾಯಿಗಳು ತಿಂದುಬಿಡುವುವು ಇದು ನಿಶ್ಚಯವಾಗಿದೆ. ಆದ್ದರಿಂದ ಇದು ನಮ್ಮದಲ್ಲ, ಬೇರೆಯವರದೇ ಆಗಿದೆ. ಅದಕ್ಕಾಗಿ ನಾನು ದೇಹದಿಂದಲೂ ಅಸಂಗನಾಗಿ ಸಂಚರಿಸುತ್ತೇನೆ. ॥ ೨೫ ॥

ಜಾಯಾತ್ಮಜಾರ್ಥಪಶುಭೃತ್ಯಗೃಹಾಪ್ತವರ್ಗಾನ್
ಪುಷ್ಣಾತಿ ಯತ್ಪ್ರಿಯಚಿಕೀರ್ಷುತಯಾ ವಿತನ್ವನ್ ।
ಸ್ವಾಂತೇ ಸಕೃಚ್ಚ್ರಮವರುದ್ಧಧನಃ ಸ ದೇಹಃ
ಸೃಷ್ಟಾಪ್ಯಸ್ಯ ಬೀಜಮವಸೀದತಿ ವೃಕ್ಷಧರ್ಮಾ ॥ ೨೬ ॥

ಮನುಷ್ಯನು ಪತ್ನೀ-ಪುತ್ರ, ಧನ-ಸಂಪತ್ತು, ಪಶು, ಸೇವಕರು, ಮನೆ, ಸಂಬಂಧಿಗಳು, ಇವುಗಳನ್ನು ಬೆಳೆಸುತ್ತಾ , ಅವುಗಳಿಂದ ಸುಖ ಪಡೆಯುವ ಇಚ್ಛೆಯಿಂದ ಅವರ ಲಾಲನೆ-ಪೋಷಣೆ ಮಾಡುತ್ತಾನೆ. ತುಂಬಾ ಕಷ್ಟಪಟ್ಟು ಧನವನ್ನು ಗಳಿಸುತ್ತಾನೆ. ಬೀಜವನ್ನಿತ್ತು ವೃಕ್ಷವು ನಾಶವಾಗುವಂತೆ ಕೊನೆಗೆ ಅವನು ಮುಂದಿನ ಜನ್ಮಕ್ಕಾಗಿ ಕರ್ಮ ಬೀಜವನ್ನು ನಿರ್ಮಿಸಿಕೊಂಡು ಮೃತ್ಯುಮುಖನಾಗುತ್ತಾನೆ. ಈ ವಿಧವಾಗಿ ದೇಹವು ನಾಶವಾದ ಬಳಿಕವೂ ಅವನ ದುಃಖಗಳ ಕೊನೆಯಾಗುವುದಿಲ್ಲ, ಜನ್ಮ-ಮರಣದ ಚಕ್ರದಲ್ಲಿ ಸುತ್ತುತ್ತಾ ಇರುತ್ತಾನೆ. ॥ ೨೬ ॥

ಜಿಹ್ವೈಕತೋಽಮುಮಪಕರ್ಷತಿ ಕರ್ಹಿ ತರ್ಷಾ
ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।
ಘ್ರಾಣೋಽನ್ಯತಶ್ಚಪಲದೃಕ್ ಕ್ವಚಕರ್ಮಶಕ್ತಿ-
ರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನಂತಿ ॥ ೨೭ ॥

ಮನೆಯ ಯಜಮಾನನನ್ನು ಅವನ ಅನೇಕ ಸವತಿಯರು ತಮ್ಮ-ತಮ್ಮ ಕಡೆಗೆ ಸೆಳೆದುಕೊಂಡು ಹರಿದು ಹಂಚಿ ಹಾಕಿಬಿಡುವಂತೆ, ದೇಹಾಭಿಮಾನೀ ಜೀವಿಯನ್ನು ಒಂದು ಕಡೆಯಿಂದ ಅವನನ್ನು ನಾಲಿಗೆ ಸೆಳೆದರೆ, ಕೆಲವೊಮ್ಮೆ ಬಾಯಾರಿಕೆ ಕಂಗೆಡಿಸುತ್ತದೆ. ಕೆಲವೊಮ್ಮೆ ಜನನೇಂದ್ರಿಯವು ಸಂಭೋಗಕ್ಕಾಗಿ ವ್ಯಾಕುಲಗೊಳಿಸುತ್ತದೆ. ಹಾಗೆಯೇ ಚರ್ಮ, ಉದರ, ಕಿವಿ ಇವು ತಮ್ಮ-ತಮ್ಮ ವಿಷಯಗಳತ್ತ ಸೆಳೆಯುತ್ತವೆ. ಮೂಗೂ ಪರಿಮಳದತ್ತ

* ಅದೇ ಶರೀರದಿಂದ ಚಿಂತಿಸಿದ ಸ್ವರೂಪವೇ ಪ್ರಾಪ್ತವಾಗುವುದಾದರೆ ಬೇರೆ ಶರೀರದಿಂದ ಹೇಳುವುದೇನಿದೆ ? ಅದಕ್ಕಾಗಿ ಮನುಷ್ಯನು ಬೇರೆ ವಸ್ತುಗಳ ಚಿಂತನೆಮಾಡದೆ ಭಗವತ್ಪ್ರಾಪ್ತಿಯ ಉದ್ದೇಶದಿಂದ ಕೇವಲ ಪರಮಾತ್ಮನನ್ನೇ ಚಿಂತಿಸುತ್ತಿರಬೇಕು.

ಸೃಷ್ಟ್ವಾ ಪುರಾಣಿ ವಿವಿಧಾನ್ಯಜಯಾಽಽತ್ಮಶಕ್ತ್ಯಾ
ವೃಕ್ಷಾನ್ಸರೀಸೃಪಪಶೂನ್ ಖಗದಂಶಮತ್ಸ್ಯಾನ್ ।
ತೈಸ್ತೈರತುಷ್ಟಹೃದಯಃ ಪುರುಷಂ ವಿಧಾಯ
ಬ್ರಹ್ಮಾವಲೋಕಧಿಷಣಂ ಮುದಮಾಪ ದೇವಃ ॥ ೨೮ ॥

ಲಬ್ಧ್ವಾ ಸುದುರ್ಲಭಮಿದಂ ಬಹುಸಂಭವಾಂತೇ
ಮಾನುಷ್ಯಮರ್ಥದಮನಿತ್ಯಮಪೀಹ ಧೀರಃ ।
ತೂರ್ಣಂ ಯತೇತ ನ ಪತೇದನುಮೃತ್ಯು ಯಾವ-
ನ್ನಿಃಶ್ರೇಯಸಾಯ ವಿಷಯಃ ಖಲು ಸರ್ವತಃ ಸ್ಯಾತ್ ॥ ೨೯ ॥

ಏವಂ ಸಂಜಾತವೈರಾಗ್ಯೋ ವಿಜ್ಞಾನಾಲೋಕ ಆತ್ಮನಿ ।
ವಿಚರಾಮಿ ಮಹೀಮೇತಾಂ ಮುಕ್ತಸಂಗೋಽನಹಂಕೃತಿಃ
॥ ೩೦ ॥

ನ ಹ್ಯೇಕಸ್ಮಾತ್ ಗುರೋರ್ಜ್ಞಾನಂ ಸುಸ್ಥಿರಂ ಸ್ಯಾತ್ಸುಪುಷ್ಕಲಮ್ ।
ಬ್ರಹ್ಮೈತದದ್ವಿತೀಯಂ ವೈ ಗೀಯತೇ ಬಹುಧರ್ಷಿಭಿಃ
॥ ೩೧ ॥

ಶ್ರೀಭಗವಾನುವಾಚ

ಇತ್ಯುಕ್ತ್ವಾ ಸ ಯದುಂ ವಿಪ್ರಸ್ತಮಾಮಂತ್ರ್ಯಗಭೀರಧೀಃ ।
ವಂದಿತೋಽಭ್ಯರ್ಚಿತೋ ರಾಜ್ಞಾಯಯೌ ಪ್ರೀತೋ ಯಥಾಗತಮ್
॥ ೩೨ ॥

ಅವಧೂತವಚಃ ಶ್ರುತ್ವಾ ಪೂರ್ವೇಷಾಂ ನಃ ಸ ಪೂರ್ವಜಃ ।
ಸರ್ವಸಂಗವಿನಿರ್ಮುಕ್ತಃ ಸಮಚಿತ್ತೋ ಬಭೂವ ಹ
॥ ೩೩ ॥

ಸೆಳೆದರೆ, ಚಂಚಲನೇತ್ರಗಳು ಸುಂದರರೂಪವನ್ನು ನೋಡಲು ಆಕರ್ಷಿಸುತ್ತವೆ. ಹೀಗೆ ಕರ್ಮೇಂದ್ರಿಯ – ಜ್ಞಾನೇಂದ್ರಿಯಗಳು ಈ ದೇಹಾಭಿಮಾನಿ ಜೀವಿಯನ್ನು ತಮ್ಮ-ತಮ್ಮ ವಿಷಯಗಳ ಕಡೆಗೆ ಆಕರ್ಷಿಸಿ ಅವನನ್ನು ಕಂಗೆಡಿಸುತ್ತವೆ. ॥ ೨೭ ॥ ಭಗವಂತನು ತನ್ನ ಅಚಿಂತ್ಯ ಶಕ್ತಿ ಮಾಯೆಯಿಂದ ವೃಕ್ಷ, ಸರೀಸೃಪ, ಪಶು, ಪಕ್ಷಿ, ನೊಣ, ಮೀನು ಮುಂತಾದ ಅನೇಕ ಪ್ರಕಾರದ ಯೋನಿಗಳನ್ನು ರಚಿಸಿದನು. ಆದರೆ ಅದರಿಂದ ಅವನಿಗೆ ಸಂತೋಷವಾಗಲಿಲ್ಲ. ಕೊನೆಗೆ ಅವನು ಮನುಷ್ಯಶರೀರವನ್ನು ಸೃಷ್ಟಿಸಿದನು. ಇದು ಬ್ರಹ್ಮಸಾಕ್ಷಾತ್ಕಾರ ಮಾಡಬಹುದಾದ ಬುದ್ಧಿಯಿಂದ ಕೂಡಿದೆ. ಇದನ್ನು ರಚಿಸಿ ಅವನಿಗೆ ಬಹಳ ಆನಂದವಾಯಿತು. ॥ ೨೮ ॥ ಈ ಮನುಷ್ಯಶರೀರವು ಅತ್ಯಂತ ದುರ್ಲಭವಾಗಿದೆ. ಅನೇಕ ಜನ್ಮಗಳ ಬಳಿಕ ಭಗವಂತನ ಅಸೀಮಕೃಪೆಯಿಂದ ಪ್ರಾಪ್ತವಾಗಿದೆ. ಇದರಿಂದ ಪರಮ ಪುರುಷಾರ್ಥಸ್ವರೂಪೀ ಪರಮಾತ್ಮನ ಪ್ರಾಪ್ತಿಯಾಗ ಬಲ್ಲದು. ಜೊತೆಗೆ ಇದು ಅನಿತ್ಯವೂ ಆಗಿದೆ. ಇಂತಹ ಅಮೂಲ್ಯ ಮನುಷ್ಯಜೀವನವನ್ನು ಪಡೆದ ಬಳಿಕ ಶರೀರವನ್ನು ಮೃತ್ಯವು ಬಂದು ನುಂಗಿಬಿಡುವ ಮೊದಲೇ ಭಗವತ್ಪ್ರಾಪ್ತಿರೂಪೀ ತನ್ನ ಪರಮ ಶ್ರೇಯಸ್ಸನ್ನು ಮಾಡಿಕೊಳ್ಳುವುದರಲ್ಲೇ ಮನುಷ್ಯತ್ವ ವಿದೆ ಎಂದು ಬುದ್ಧಿವಂತರು ತಿಳಿಯಬೇಕು. ಏಕೆಂದರೆ, ವಿಷಯ ಭೋಗಗಳಾದರೋ ಎಲ್ಲ ಯೋನಿಗಳಲ್ಲಿಯೂ ಸಿಗುತ್ತವೆ. ಅದರಲ್ಲಿ ತಮ್ಮ ಅಮೂಲ್ಯ ಸಮಯವನ್ನು ಕಳೆಯ ಬಾರದು. ॥ ೨೯ ॥

ಎಲೈ ರಾಜನೇ! ಈ ವಿಧವಾಗಿ ನನಗೆ ವೈರಾಗ್ಯ ಉಂಟಾ ಯಿತು. ಅಂತಃಕರಣದಲ್ಲಿ ವಿಜ್ಞಾನದ ಪ್ರಕಾಶ ಹರಡಿಕೊಂಡಿತು. ಈಗ ನಾನು ಅಹಂಕಾರವನ್ನು ಬಿಟ್ಟು ಈ ಭೂತಲದಲ್ಲಿ ಸ್ವಚ್ಛಂದ ವಾಗಿ ವಿಚರಿಸುತ್ತೇನೆ. ॥ ೩೦ ॥ ಈ ಪ್ರಕಾರ ಒಬ್ಬನೇ ಗುರುವಿನಿಂದ ಪಡೆಯುವ ಜ್ಞಾನವು ಸುಸ್ಥಿರವೂ, ಪುಷ್ಕಳ ವಿಚಾರವುಳ್ಳದ್ದೂ ಆಗಿರುವುದಿಲ್ಲ. ಇದೆಲ್ಲವನ್ನು ನಾನು ನಿನಗೆ ಅರುಹಿದೆನು. ಒಂದೇ ಅದ್ವಿತೀಯ ಬ್ರಹ್ಮನ ಕುರಿತು ಋಷಿಗಳು ಅನೇಕ ರೀತಿಯಿಂದ ವರ್ಣಿಸಿರುವರು. ॥ ೩೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ಆಳವಾದ ಬುದ್ಧಿಯುಳ್ಳ ಅವಧೂತ ದತ್ತಾತ್ರೇಯರು ಯದು ರಾಜನಿಗೆ ಹೀಗೆ ಉಪದೇಶಿಸಿದರು. ಯದುವು ಅವರನ್ನು ಪೂಜಿಸಿ, ವಂದಿಸಿಕೊಂಡನು. ದತ್ತಾತ್ರೇಯರು ಅವನಿಂದ ಬೀಳ್ಕೊಂಡು ತುಂಬಾ ಸಂತೋಷವಾಗಿ ತಮ್ಮ ಇಚ್ಛಾನುಸಾರ ದಯಮಾಡಿಸಿ ದರು. ನಮ್ಮ ಪೂರ್ವಜರ ಪೂರ್ವಜನೂ ಆದ ಯದುರಾಜರು ಅವಧೂತ ದತ್ತಾತ್ರೇಯರ ಈ ಮಾತುಗಳನ್ನು ಆಲಿಸಿ ಸಮಸ್ತ ಆಸಕ್ತಿಗಳಿಂದ ಬಿಡುಗಡೆಹೊಂದಿ ಸಮದರ್ಶಿಗಳಾದರು. (ಹೀಗೆಯೇ ನೀನೂ ಕೂಡ ಸಮಸ್ತ ಆಸಕ್ತಿಗಳನ್ನು ಪರಿತ್ಯಜಿಸಿ ಸಮದರ್ಶಿಯಾಗಬೇಕು.) ॥ ೩೨-೩೩ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಅಸಾರವಾದ ಲೌಕಿಕ ಮತ್ತು ಪಾರಲೌಕಿಕವಾದ ಭೋಗಗಳ ನಿರೂಪಣೆ

ಶ್ರೀಭಗವಾನುವಾಚ

ಮಯೋದಿತೇಷ್ವವಹಿತಃ ಸ್ವಧರ್ಮೇಷು ಮದಾಶ್ರಯಃ ।
ವರ್ಣಾಶ್ರಮಕುಲಾಚಾರಮಕಾಮಾತ್ಮಾ ಸಮಾಚರೇತ್
॥ ೧ ॥

ಅನಿವ್ಹೇತ ವಿಶುದ್ಧಾತ್ಮಾ ದೇಹಿನಾಂ ವಿಷಯಾತ್ಮನಾಮ್ ।
ಗುಣೇಷು ತತ್ತ್ವಧ್ಯಾನೇನ ಸರ್ವಾರಂಭವಿಪರ್ಯಯಮ್
॥ ೨ ॥

ಸುಪ್ತಸ್ಯ ವಿಷಯಾಲೋಕೋ ಧ್ಯಾಯತೋ ವಾ ಮನೋರಥಃ ।
ನಾನಾತ್ಮಕತ್ವಾದ್ವಿಫಲಸ್ತಥಾ ಭೇದಾತ್ಮಧೀರ್ಗುಣೈಃ
॥ ೩ ॥

ನಿವೃತ್ತಂ ಕರ್ಮ ಸೇವೇತ ಪ್ರವೃತ್ತಂ ಮತ್ಪರಸ್ತ್ಯಜೇತ್ ।
ಜಿಜ್ಞಾಸಾಯಾಂ ಸಂಪ್ರವೃತ್ತೋ ನಾದ್ರಿಯೇತ್ಕರ್ಮಚೋದನಾಮ್
॥ ೪ ॥

ಯಮಾನಭೀಕ್ಷ್ಣಂ ಸೇವೇತ ನಿಯಮಾನ್ಮತ್ಪರಃ ಕ್ವಚಿತ್ ।
ಮದಭಿಜ್ಞಂ ಗುರುಂ ಶಾಂತಮುಪಾಸೀತ ಮದಾತ್ಮಕಮ್
॥ ೫ ॥

ಅಮಾನ್ಯಮತ್ಸರೋ ದಕ್ಷೋ ನಿರ್ಮಮೋ ದೃಢಸೌಹೃದಃ ।
ಅಸತ್ವರೋಽರ್ಥಜಿಜ್ಞಾಸುರನಸೂಯುರಮೋಘವಾಕ್
॥ ೬ ॥

ಜಾಯಾಪತ್ಯಗೃಹಕ್ಷೇತ್ರಸ್ವಜನದ್ರವಿಣಾದಿಷು ।
ಉದಾಸೀನಃ ಸಮಂ ಪಶ್ಯನ್ಸರ್ವೇಷ್ವರ್ಥಮಿವಾತ್ಮನಃ
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಸಾಧಕನಾದವನು ಎಲ್ಲ ರೀತಿಯಿಂದ ನನಗೆ ಶರಣಾಗಿ, ನನ್ನಿಂದ ಉಪದಿಷ್ಟವಾದ ಧರ್ಮಗಳನ್ನು ಜಾಗರೂಕತೆಯಿಂದ ಪಾಲನೆ ಮಾಡಬೇಕು. ನಿಷ್ಕಾಮ ಭಾವದಿಂದ ತಮ್ಮ ವರ್ಣ-ಆಶ್ರಮ ಹಾಗೂ ಕುಲಕ್ಕನುಸಾರ ಸದಾಚಾರವನ್ನು ಅನುಷ್ಠಾನ ಮಾಡ ಬೇಕು. ॥ ೧ ॥ ವಿಷಯಗಳಲ್ಲಿ ಮುಳುಗಿದ ಚಿತ್ತವುಳ್ಳ ಸಂಸಾರೀ ಜನರ ಎಲ್ಲ ಕರ್ಮಗಳ ಪರಿಣಾಮವು ವಿಪರೀತವೇ ಆಗುತ್ತದೆ. ಈ ಮಾತನ್ನು ಆಳವಾಗಿ ತಿಳಿದುಕೊಂಡು ಶುದ್ಧ ಅಂತಃಕರಣನಾಗಿ ಸಂಸಾರದಿಂದ ವಿಮುಖನಾಗಬೇಕು. ॥ ೨ ॥ ಮಲಗಿದ ಮನುಷ್ಯನು ಸ್ವಪ್ನಾವಸ್ಥೆಯಲಿ ವಿಷಯಗಳನ್ನು ಕಂಡು, ಎಚ್ಚರಗೊಂಡಾಗ ಅವನಿಗೆ ಅವುಗಳ ಮಿಥ್ಯತ್ವ ತಿಳಿದುಬರುತ್ತದೆ. ಹಾಗೆಯೇ ಜಾಗ್ರತ್ ಅವಸ್ಥೆಯಲ್ಲಿಯೂ ಮನಸ್ಸಿನಿಂದ ಮಾಡುವ ಸಂಕಲ್ಪ-ವಿಕಲ್ಪಗಳೆ ಲ್ಲವೂ ಮಿಥ್ಯೆಯೇ ಆಗಿದೆ. ಈ ನಾನಾತ್ವದ ಭ್ರಮೆಯು ಅಜ್ಞಾನದ ಕಾರಣದಿಂದಲೇ ಇದೆ. ॥ ೩ ॥ ಮನುಷ್ಯನು ನಿಷ್ಕಾಮ ಕರ್ಮವನ್ನು ಆಚರಿಸಬೇಕು. ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿಬಿಡ ಬೇಕು. ಸಕಾಮ ಕರ್ಮವನ್ನು ಎಂದೂ ಮಾಡಬಾರದು. ಆತ್ಮ ಜ್ಞಾನದ ಉತ್ಕಟ ಇಚ್ಛೆ ಇದ್ದರೆ ಕರ್ಮಸಂಬಂಧೀ ವಿಧಾನವನ್ನು ಆದರಿಸಬಾರದು. ॥ ೪ ॥ ಯಮಗಳನ್ನು ಅಂದರೆ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಇವನ್ನು ಪೂರ್ಣ ರೂಪದಿಂದ ಪಾಲಿಸಲಿ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ ಈ ನಿಯಮಗಳನ್ನೂ ಕೂಡ ಯಥಾಸಾಧ್ಯ ಪಾಲಿಸಲಿ. ಪರಮಾತ್ಮನಾದ ನನ್ನನ್ನು ತಿಳಿದಿರುವ ಶಾಂತಸ್ವರೂಪೀ ಗುರುವಿನ ಬಳಿಗೆ ಹೋಗಿ, ಗುರುವನ್ನು ನನ್ನ ಸ್ವರೂಪವೆಂದೇ ತಿಳಿಯಲಿ. ಯಾವ ರೀತಿಯ ಅಭಿಮಾನವನ್ನೂ ಪಡದಿರಲಿ. ಯಾವುದೇ ಮತ್ಸರದ ಭಾವ ಇರಿಸದಿರಲಿ. ಎಲ್ಲ ವಿಧದಿಂದ ಕುಶಲನಾಗಲಿ. ಮಮತಾ ರಹಿತನಾಗಲಿ. ಗುರುವಿನಲ್ಲಿ ಮತ್ತು ನನ್ನಲ್ಲಿ ಹೃತ್ಪೂರ್ವಕವಾಗಿ ಅನುರಾಗವಿರಲಿ. ತತ್ತ್ವದ ಜಿಜ್ಞಾಸುವಿನಲ್ಲಿ ಯಾವುದೇ ಬೇಸರಿಕೆ ಇರದಿರಲಿ. ಯಾರೊಂ ದಿಗೂ ದೋಷದೃಷ್ಟಿ ಇರದಿರಲಿ. ವ್ಯರ್ಥ ಹಾಗೂ ಅಸತ್ಯ ಭಾಷಣ ದಿಂದ ದೂರವಿರಲಿ. ॥ ೫-೬ ॥ ಈ ಪ್ರಕಾರ ಅಭ್ಯಾಸ ಮಾಡುತ್ತಾ ಮಾಡುತ್ತಾ ಸಮತೆಯಲ್ಲಿ ಅವನ ಸ್ಥಿತಿ ಉಂಟಾದಾಗ ಪತ್ನೀ ಪುತ್ರ, ಮನೆ, ಭೂಮಿ, ಬಂಧು-ಬಾಂಧವರು, ಧನ ಮುಂತಾದವುಗಳಲ್ಲಿ ಎಲ್ಲಿಯೂ ಅವನಿಗೆ ಆಸಕ್ತಿಯು ಉಳಿಯುವುದಿಲ್ಲ, ಮತ್ತೆ ಅವನು ತನ್ನ ಪದಾರ್ಥದಂತೆಯೇ ಎಲ್ಲದರಲ್ಲಿ ಸಮಭಾವವನ್ನಿಡುತ್ತಾ, ಎಲ್ಲರಿಂದ ಪೂರ್ಣವಾಗಿ ಉದಾಸೀನನಾಗಿ ಹೋಗುತ್ತಾನೆ. ॥ ೭ ॥

ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ದೇಹಾದಾತ್ಮೇಕ್ಷಿತಾ ಸ್ವದೃಕ್ ।
ಯಥಾಗ್ನಿರ್ದಾರುಣೋ ದಾಹ್ಯಾದ್ದಾಹಕೋಽನ್ಯಃ ಪ್ರಕಾಶಕಃ
॥ ೮ ॥

ನಿರೋಧೋತ್ಪತ್ತ್ಯಣುಬೃಹನ್ನಾನಾತ್ವಂ ತತ್ಕೃತಾನ್ಗುಣಾನ್ ।
ಅಂತಃಪ್ರವಿಷ್ಟ ಆಧತ್ತ ಏವಂ ದೇಹಗುಣಾನ್ ಪರಃ
॥ ೯ ॥

ಯೋಽಸೌ ಗುಣೈರ್ವಿರಚಿತೋ
ದೇಹೋಽಯಂ ಪುರುಷಸ್ಯ ಹಿ ।
ಸಂಸಾರಸ್ತನ್ನಿಬಂಧೋಽಯಂ
ಪುಂಸೋ ವಿದ್ಯಾಚ್ಛಿದಾತ್ಮನಃ ॥ ೧೦ ॥

ತಸ್ಮಾಜ್ಜಿಜ್ಞಾಸಯಾಽಽತ್ಮಾನಮಾತ್ಮಸ್ಥಂ ಕೇವಲಂ ಪರಮ್ ।
ಸಂಗಮ್ಯ ನಿರಸೇದೇತದ್ವಸ್ತುಬುದ್ಧಿಂ ಯಥಾಕ್ರಮಮ್
॥ ೧೧ ॥

ಆಚಾರ್ಯೋಽರಣಿರಾದ್ಯಃ ಸ್ಯಾದಂತೇವಾಸ್ಯುತ್ತರಾರಣಿಃ ।
ತತ್ಸಂಧಾನಂ ಪ್ರವಚನಂ ವಿದ್ಯಾಸಂಧಿಃ ಸುಖಾವಹಃ
॥ ೧೨ ॥

ವೈಶಾರದೀ ಸಾತಿವಿಶುದ್ಧಬುದ್ಧಿ-
ರ್ಧುನೋತಿ ಮಾಯಾಂ ಗುಣಸಂಪ್ರಸೂತಾಮ್ ।
ಗುಣಾಂಶ್ಚ ಸಂದಹ್ಯ ಯದಾತ್ಮಮೇತತ್
ಸ್ವಯಂ ಚ ಶಾಮ್ಯತ್ಯಸಮಿದ್ಯಥಾಗ್ನಿಃ ॥ ೧೩ ॥

ಅಥೈಷಾಂ ಕರ್ಮಕರ್ತೄಣಾಂ
ಭೋಕ್ತೄಣಾಂ ಸುಖದುಃಖಯೋಃ ।
ನಾನಾತ್ವಮಥ ನಿತ್ಯತ್ವಂ
ಲೋಕಕಾಲಾಗಮಾತ್ಮನಾಮ್ ॥ ೧೪ ॥

ಆತ್ಮವು ಸ್ವಯಂ ಪ್ರಕಾಶಸ್ವರೂಪವಾಗಿದ್ದು, ಎಲ್ಲರ ಸಾಕ್ಷಿಯಾಗಿದೆ. ಸ್ಥೂಲ ಮತ್ತು ಸೂಕ್ಷ್ಮ ಇವೆರಡೂ ದೇಹಗಳಿಂದ ಖಂಡಿತವಾಗಿ ಭಿನ್ನನಾಗಿದ್ದಾನೆ. ಉರಿಯುವ ಕಟ್ಟಿಗೆಗಿಂತ ಅದನ್ನು ಸುಡುತ್ತಿರುವ ಅಗ್ನಿಯು ಭಿನ್ನವೇ ಆಗಿದೆ. ಹಾಗೆಯೇ ಇವೆಲ್ಲ ಶರೀರಗಳನ್ನು ಪ್ರಕಾಶಿಸುವ ಆತ್ಮನೂ ಕೂಡ ಈ ಶರೀರಗಳಿಂದ ಭಿನ್ನವಾಗಿದೆ. ॥ ೮॥ ಕಟ್ಟಿಗೆಯ ಸಂಬಂಧದ ಕಾರಣ ಅಗ್ನಿಯು ಕಟ್ಟಿಗೆಯ ಆಕಾರಕ್ಕನುಸಾರ ಚಿಕ್ಕದಾಗಿ ದೊಡ್ಡದಾಗಿ ಕಾಣುತ್ತದೆ. ಕಟ್ಟಿಗೆಯು ಪೂರ್ಣವಾಗಿ ಸುಟ್ಟುಹೋದಾಗ ಅಗ್ನಿಯು ಶಾಂತವಾಗುವುದು ಮತ್ತು ಉರಿದಾಗ ಕಾಣಿಸಿಕೊಳ್ಳುವುದು ಮುಂತಾಗಿ ಕಂಡುಬರುತ್ತದೆ. ಆದರೆ ವಾಸ್ತವವಾಗಿ ಕಟ್ಟಿಗೆಯಿಂದ ಅಗ್ನಿಯು ಬೇರೆಯೇ ಆಗಿದೆ. ಹೀಗೆಯೇ ಆತ್ಮನೂ ಕೂಡ ದೇಹದ ಗುಣಗಳನ್ನು ಧರಿಸಿದಾಗ ದೇಹದ ವಿಕಾರಗಳು ಅದರಲ್ಲಿ ಆರೋಪಿತವಾಗುತ್ತದೆ. ॥ ೯ ॥

ಪುರುಷನ ಈ ಶರೀರವು ತ್ರಿಗುಣಗಳ ರಚನೆಯಾಗಿದೆ. ಈ ಗುಣಗಳಲ್ಲಿ ಅಹಂತೆ-ಮಮತೆಯ ಕಾರಣವೇ ಅವನು ಬಂಧಿತನಾಗಿದ್ದಾನೆ. ಅದು ಆತ್ಮನ ಜ್ಞಾನವನ್ನು ಮುಚ್ಚಿಬಿಡುತ್ತದೆ. ॥ ೧೦ ॥ ಆದ್ದರಿಂದ ತತ್ತ್ವವನ್ನು ತಿಳಿಯುವ ಇಚ್ಛೆಯನ್ನಿರಿಸಿಕೊಳ್ಳಬೇಕು. ಅದರಿಂದ ಆತ್ಮಸ್ವರೂಪದ ಬೋಧವಾಗುತ್ತದೆ. ಈ ಆತ್ಮನು ತನ್ನಲ್ಲೇ ಸ್ಥಿತನಾಗಿದ್ದಾನೆ, ಕೇವಲನಾಗಿದ್ದಾನೆ, ಶ್ರೇಷ್ಠನಾಗಿದ್ದಾನೆ. ಇದನ್ನು ಅರಿತುಕೊಂಡ ಬಳಿಕ ಅನಾತ್ಮ ಪದಾರ್ಥಗಳಲ್ಲಿ ಇರುವ ಸತ್ಯತೆಯ ಬುದ್ಧಿಯು ಕ್ರಮಶಃ ದೂರವಾಗುತ್ತಾ ಹೋಗುತ್ತದೆ. ॥ ೧೧ ॥

ಈ ವಿದ್ಯೆಯ ಜ್ಞಾನವನ್ನು ಪಡೆಯಲು ಗುರುವನ್ನೇ ಆಶ್ರಯಿಸಬೇಕು. ಅವರ ಬಳಿ ವಾಸಿಸಬೇಕು. ಅರಣಿಯನ್ನು ಕಡೆದು ಯಜ್ಞೇಶ್ವರನನ್ನು ಪ್ರಕಟಗೊಳಿಸುವಂತೆ ಇಲ್ಲಿಯೂ ಆಚಾರ್ಯನೇ ಅಧರಾರಣಿ, (ಕೆಳಗಿನದು) ಶಿಷ್ಯನೇ ಉತ್ತರಾರಣಿ (ಮೇಲಿನದು). ಆಚಾರ್ಯರ ಪ್ರವಚನವೇ ಅದರ ಮಂಥನದಂಡ. ಅದರಿಂದ ವಿದ್ಯಾರೂಪೀ ಅಗ್ನಿಯು ಪ್ರಕಟಗೊಳ್ಳುತ್ತದೆ. ಅದು ಅಜ್ಞಾನವನ್ನು ನಾಶಮಾಡಿ, ಪರಮಾನಂದವನ್ನು ಕರುಣಿಸುತ್ತದೆ. ॥ ೧೨ ॥ ಈ ಪ್ರಕಾರ ಅಭ್ಯಾಸಮಾಡುತ್ತಾ-ಮಾಡುತ್ತಾ ಬುದ್ಧಿಯು ಸೂಕ್ಷ್ಮವಾದಾಗ ಅತ್ಯಂತ ಶುದ್ಧವಾದ ಆ ಬುದ್ಧಿಯು ಮಾಯೆಯಿಂದ ಉಂಟಾಗುವ ಎಲ್ಲ ಗುಣಗಳನ್ನು ಭಸ್ಮಮಾಡಿಬಿಡುತ್ತದೆ. ಗುಣಗಳು ಭಸ್ಮವಾದಾಗ ಗುಣಗಳಿಂದ ಉಂಟಾದ ಈ ವಿಶ್ವವು ಅವನಿಗೆ ಉಳಿಯುವುದಿಲ್ಲ, ಅಗ್ನಿಯು ಇಂಧನಗಳನ್ನು ಭಸ್ಮಮಾಡಿ ಶಾಂತವಾಗುವಂತೆ, ಗುಣಗಳನ್ನು ಸುಟ್ಟು ಮತ್ತೆ ಆ ಬುದ್ಧಿಯು ಶಾಂತವಾಗುತ್ತದೆ. * ॥ ೧೩ ॥

ಕರ್ಮ ಮಾಡುವವರಲ್ಲಿ ಭಿನ್ನತೆ ಇದೆ ಎಂದು ಕದಾಚಿತ್ ಒಪ್ಪಿಕೊಂಡರೆ, ಅದಕ್ಕನುಸಾರ ಅವರ ಸುಖ-ದುಃಖಾದಿ ಫಲಗಳಲ್ಲಿಯೂ ಭಿನ್ನತೆ ಇದೆ ಹಾಗೂ ಅವರ ಕರ್ಮಗಳನುಸಾರ ಅವರ ಫಲಸ್ವರೂಪ ಸಿಗಬಹುದಾದ ಲೋಕ, ಅವುಗಳ ಭೋಗದ ಸಮಯ, ಆಯಾ ಕರ್ಮಗಳನ್ನು ವಿಧಾನ ಮಾಡುವ ಶಾಸ್ತ್ರಗಳು,

* ಸ್ವಯಂಪ್ರಕಾಶ ಜ್ಞಾನಸ್ವರೂಪೀ ಆತ್ಮನು ನಿತ್ಯನೂ, ಏಕನೂ ಆಗಿದ್ದಾನೆ ಎಂಬುದು ಸ್ಪಷ್ಟವಾಯಿತು. ಕರ್ತೃತ್ವ, ಭೋಕ್ತೃತ್ವ ಮುಂತಾದ ಧರ್ಮಗಳು ದೇಹಾಭಿಮಾನದ ಕಾರಣವಾಗಿವೆ. ಆತ್ಮನಲ್ಲದೆ ಇರುವದೆಲ್ಲವೂ ಅನಿತ್ಯವೂ, ಮಾಯಾಮಯವಾಗಿವೆ. ಆದಕ್ಕಾಗಿ ಆತ್ಮಜ್ಞಾನ ಉಂಟಾಗುತ್ತಲೇ ಸಮಸ್ತ ವಿಪತ್ತುಗಳಿಂದ ಮುಕ್ತಿ ದೊರೆಯುತ್ತದೆ.

ಮನ್ಯಸೇ ಸರ್ವಭಾವಾನಾಂ ಸಂಸ್ಥಾ ಹ್ಯುತ್ಪತ್ತಿಕೀ ಯಥಾ ।
ತತ್ತದಾಕೃತಿಭೇದೇನ ಜಾಯತೇ ಭಿದ್ಯತೇ ಚ ಧೀಃ
॥ ೧೫ ॥

ಏವಮಪ್ಯಂಗ ಸರ್ವೇಷಾಂ ದೇಹಿನಾಂ ದೇಹಯೋಗತಃ ।
ಕಾಲಾವಯವತಃ ಸಂತಿ ಭಾವಾ ಜನ್ಮಾದಯೋಽಸಕೃತ್
॥ ೧೬ ॥

ಅತ್ರಾಪಿ ಕರ್ಮಣಾಂ ಕರ್ತು-
ರಸ್ವಾತಂತ್ರ್ಯಂ ಚ ಲಕ್ಷ್ಯತೇ ।
ಭೋಕ್ತುಶ್ಚ ದುಃಖಿಸುಖಿಯೋಃ
ಕೋ ನ್ವರ್ಥೋ ವಿವಶಂ ಭಜೇತ್ ॥ ೧೭ ॥

ನ ದೇಹಿನಾಂ ಸುಖಂ ಕಿಂಚಿದ್ವಿದ್ಯತೇ ವಿದುಷಾಮಪಿ ।
ತಥಾ ಚ ದುಃಖಂ ಮೂಢಾನಾಂ ವೃಥಾಹಂಕರಣಂ ಪರಮ್
॥ ೧೮ ॥

ಯದಿ ಪ್ರಾಪ್ತಿಂ ವಿಘಾತಂ ಚ ಜಾನಂತಿ ಸುಖದುಃಖಿಯೋಃ ।
ತೇಽಪ್ಯದ್ಧಾ ನ ವಿದುರ್ಯೋಗಂ ಮೃತ್ಯುರ್ನ ಪ್ರಭವೇದ್ಯಥಾ
॥ ೧೯ ॥

ಕೋ ನ್ವರ್ಥಃ ಸುಖಿಯತ್ಯೇನಂ ಕಾಮೋ ವಾ ಮೃತ್ಯುರಂತಿಕೇ ।
ಆಘಾತಂ ನೀಯಮಾನಸ್ಯ ವಧ್ಯಸ್ಯೇವ ನ ತುಷ್ಟಿದಃ
॥ ೨೦ ॥

ಶ್ರುತಂ ಚ ದೃಷ್ಟವದ್ದುಷ್ಟಂ ಸ್ಪರ್ಧಾಸೂಯಾತ್ಯಯವ್ಯಯೈಃ ।
ಬಹ್ವಂತರಾಯಕಾಮತ್ವಾತ್ ಕೃಷಿವಚ್ಚಾಪಿ ನಿಷ್ಫಲಮ್
॥ ೨೧ ॥

ಅಂತರಾಯೈರವಿಹತೋ ಯದಿ ಧರ್ಮಃ ಸ್ವನುಷ್ಠಿತಃ ।
ತೇನಾಪಿ ನಿರ್ಜಿತಂ ಸ್ಥಾನಂ ಯಥಾ ಗಚ್ಛತಿ ತಚ್ಛೃಣು
॥ ೨೨ ॥

ಇಷ್ಟ್ವೇಹ ದೇವತಾ ಯಜ್ಞೈಃ ಸ್ವರ್ಲೋಕಂ ಯಾತಿ ಯಾಜ್ಞಿಕಃ ।
ಭುಂಜೀತ ದೇವವತ್ತತ್ರ ಭೋಗಾನ್ ದಿವ್ಯಾನ್ ನಿಜಾರ್ಜಿತಾನ್
॥ ೨೩ ॥

ಆದರಿಂದ ದೊರೆಯುವ ಶರೀರ ಇವೆಲ್ಲವೂ ಭಿನ್ನ-ಭಿನ್ನವಾಗಿವೆ. ಈ ಭಿನ್ನತೆಗೆ ಮಾನ್ಯತೆ ಕೊಟ್ಟರೆ ಹಾಗೂ ಎಲ್ಲ ವಸ್ತು, ಪ್ರಾಣಿ, ಪದಾರ್ಥ, ಪ್ರವಾಹರೂಪದಿಂದ ಉತ್ಪನ್ನವಾಗುತ್ತವೆ ಮತ್ತು ನಾಶವಾಗುತ್ತವೆ ಎಂದು ಒಪ್ಪಿಕೊಂಡರೆ ಇದರಿಂದ ಬುದ್ಧಿಯಲ್ಲಿ ನಾನಾತ್ವದ ಭ್ರಮೆಯೇ ಉಪಸ್ಥಿತವಾಗುತ್ತದೆ. ಏಕೆಂದರೆ, ಮನುಷ್ಯನು ಯಾವ ರೀತಿಯ ಸತ್ತ್ವಾದಿ ದೇವತೆಗಳನ್ನು ಆರಾಧಿಸುತ್ತಾನೋ, ಅವರ ಆಕೃತಿಗನುಸಾರ ಸತ್ತ್ವಾದಿ ಗುಣಗಳ ತಾರತಮ್ಯದಿಂದ ಅವನ ಬುದ್ಧಿಯೂ ಅಂತಹ ಗುಣಗಳಿಂದಲೇ ಕೂಡಿರುತ್ತದೆ. ಆದರೆ ಇವೆಲ್ಲವೂ ದೇಹಾಭಿಮಾನೀ ಜೀವರಿಗೆ ದೇಹದೊಂದಿಗೆ ಸಂಬಂಧ ಬೆಳೆಸುವುದೇ ಆಗಿದೆ. ಕಾಲದ ಪ್ರವಾಹದಿಂದ ಎಲ್ಲ ಪ್ರಾಣಿ, ಪದಾರ್ಥಗಳು ಪ್ರತಿಕ್ಷಣ ವಿನಾಶದತ್ತ ಸಾಗುತ್ತಿವೆ. ಕರ್ಮಮಾಡುವ ಜೀವಿಯೂ ಸ್ವತಂತ್ರನಲ್ಲ, ಅವನು ಸುಖ-ದುಃಖದ ಭೋಗದಲ್ಲಿಯೂ ಪರತಂತ್ರನಾಗಿದ್ದಾನೆ. ಪರತಂತ್ರನಲ್ಲದಿದ್ದರೆ ವಿವಶನಾಗಿ ಯಾರು ದುಃಖವನ್ನು ಅನುಭವಿಸಲು ಬಯಸುವನು? ಎಲ್ಲರೂ ಸುಖವನ್ನೇ ಬಯಸುವರು. ॥ ೧೪-೧೭ ॥ ವಿದ್ವಾಂಸನಾದರೂ ಕೂಡಾ ಸುಖಿಯಾಗಿಲ್ಲ ಎಂಬುದನ್ನು ನೋಡಲಾಗುತ್ತದೆ. ಹಾಗೆಯೇ ಮೂಢರಾವರೂ ಕೂಡ ದುಃಖಿಗಳಾಗಿಲ್ಲ, ಇಂತಹ ಸ್ಥಿತಿಯಲ್ಲಿ ಅಹಂಕಾರ ಮಾಡುವುದು ವ್ಯರ್ಥವಾಗಿದೆ. ಸುಖ-ದುಃಖದ ಪ್ರಾಪ್ತಿ ಹಾಗೂ ಅದರ ನಾಶ ಹೇಗಾದೀತು ಎಂದು ತಿಳಿದುಕೊಂಡರೂ ಮೃತ್ಯುವನ್ನು ಎಂದು ಬಂದೀತು ಎಂಬುದಂತೂ ತಿಳಿಯಲಾಗುವುದಿಲ್ಲ, ಮೃತ್ಯುವು ಹೇಗೆ ಪರಿಹರಿಸಬಹುದು, ಇದೂ ಕೂಡ ಯಾರು ತಿಳಿಯಲಾರರು. ॥ ೧೮-೧೯ ॥ ಯಾರಿಗಾದರೂ ನೇಣುತಿಕ್ಕಿಯಾಗಿ ಸಾಯುವವನೆಂದಾದರೆ ಅವನಿಗೆ ಯಾವುದೇ ಭೋಗ-ಸಾಮಗ್ರಿಯು ಸಂತುಷ್ಟಪಡಿಸಲಾರದು. ಹಾಗೆಯೇ ಮೃತ್ಯುವಾದರೋ ಪ್ರತಿಯೋರ್ವ ಮನುಷ್ಯನ ತಲೆಯ ಮೇಲೆ ಕುಣಿಯುತ್ತಿದೆ ಎಂದಾದರೆ ಯಾವ ವಸ್ತುವೂ ಈ ಮರಣಧರ್ಮಿಯನ್ನು ಹೇಗೆ ಸುಖಿಯಾಗಿಸಬಲ್ಲವು? ॥ ೨೦ ॥

ಈ ಲೋಕದಂತೆಯೇ ಪರಲೋಕಗಳೂ ದೋಷಯುಕ್ತವೇ ಆಗಿವೆ. ಅಲ್ಲಿಯೂ ಸ್ಪರ್ಧೆ, ಅಸೂಯೆ, ನಿಧಾನವಾಗಿ ಕ್ಷೀಣವಾಗುವುದು ಮತ್ತು ನಾಶವಾಗುವುದು ಇವೆಲ್ಲವೂ ಇವೆ. ಪುಣ್ಯವು ಮುಗಿದಾಗ ಅಲ್ಲಿಂದಲೂ ಪತನವಿದ್ದೇ ಇದೆ. ರೈತನು ಪೈರನ್ನು ಬೆಳೆಸುತ್ತಾನೆ, ಆದರೆ ಅದು ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಈತಿಬಾಧೆಗಳಿಂದ ನಾಶವಾಗಿ ಹೋಗುತ್ತದೆ. ಹಾಗೆಯೇ ಸ್ವರ್ಗಾದಿ ಕಾಮನೆಯಿಂದ ಮನುಷ್ಯನು ಮಾಡುವ ಪ್ರಯಾಸಗಳಲ್ಲಿಯೂ ಅನೇಕ ರೀತಿಯ ವಿಘ್ನಗಳು ಎದುರಾಗುತ್ತವೆ. ಆದರಿಂದ ಅವೂ ನಾಶವಾಗುತ್ತವೆ. ॥ ೨೧ ॥ ಒಂದೊಮ್ಮೆ ನಿರ್ವಿಘ್ನತೆಯಿಂದ ಚೆನ್ನಾಗಿ ಯಜ್ಞಾದಿ ಅನುಷ್ಠಾನವು ಸಾಂಗವಾಗಿ ನಡೆದು, ಅವನು ಊರ್ಧ್ವಲೋಕವನ್ನು ಪಡೆದುಕೊಂಡರೂ ಅವನ ಮುಂದಿನ ಗತಿಯ ಮಾತನ್ನು ಕೇಳು. ॥ ೨೨ ॥ ಯಜ್ಞ ಮಾಡುವ ಮನುಷ್ಯನು ಯಜ್ಞದ ಮೂಲಕ ದೇವತೆಗಳನ್ನು ಆರಾಧಿಸಿ ಸ್ವರ್ಗಕ್ಕೆ ಹೋಗುತ್ತಾನೆ ಮತ್ತು ಅಲ್ಲಿ ತನ್ನ ಪುಣ್ಯಕರ್ಮಗಳ ಮೂಲಕ ಗಳಿಸಿದ ದಿವ್ಯ ಭೋಗಗಳನ್ನು ದೇವತೆಗಳಂತೆ ಭೋಗಿಸುತ್ತಾನೆ. ॥ ೨೩ ॥ ಅವನಿಗೆ ಅವನ ಪುಣ್ಯಗಳನುಸಾರ

ಸ್ವಪುಣ್ಯೋಪಚಿತೇ ಶುಭ್ರೇ ವಿಮಾನ ಉಪಗೀಯತೇ ।
ಗಂಧರ್ವೈರ್ವಿಹರನ್ ಮಧ್ಯೇ ದೇವೀನಾಂ ಹೃದ್ಯವೇಷಧೃಕ್
॥ ೨೪ ॥

ಸ್ತ್ರೀಭಿಃ ಕಾಮಗಯಾನೇನ ಕಿಂಕಿಣೀಜಾಲಮಾಲಿನಾ ।
ಕ್ರೀಡನ್ ನ ವೇದಾತ್ಮಪಾತಂ ಸುರಾಕ್ರೀಡೇಷು ನಿರ್ವೃತಃ
॥ ೨೫ ॥

ತಾವತ್ಪ್ರಮೋದತೇ ಸ್ವರ್ಗೇ ಯಾವತ್ಪುಣ್ಯಂ ಸಮಾಪ್ಯತೇ ।
ಕ್ಷೀಣಪುಣ್ಯಃ ಪತತ್ಯರ್ವಾಗನಿಚ್ಛನ್ ಕಾಲಚಾಲಿತಃ
॥ ೨೬ ॥

ಯದ್ಯಧರ್ಮರತಃ ಸಂಗಾದಸತಾಂ ವಾಜಿತೇಂದ್ರಿಯಃ ।
ಕಾಮಾತ್ಮಾ ಕೃಪಣೋ ಲುಬ್ಧಃ ಸ್ತ್ರೈಣೋ ಭೂತವಿಹಿಂಸಕಃ
॥ ೨೭ ॥

ಪಶೂನವಿಧಿನಾऽऽಲಭ್ಯ ಪ್ರೇತಭೂತಗಣಾನ್ಯಜನ್ ।
ನರಕಾನವಶೋ ಜಂತುರ್ಗತ್ವಾ ಯಾತ್ಯುಲ್ಬಣಂ ತಮಃ
॥ ೨೮ ॥

ಕರ್ಮಾಣಿ ದುಃಖೋದರ್ಕಾಣಿ ಕುರ್ವನ್ದೇಹೇನ ತೈಃ ಪುನಃ ।
ದೇಹಮಾಭಜತೇ ತತ್ರ ಕಿಂ ಸುಖಂ ಮರ್ತ್ಯಧರ್ಮಿಣಃ
॥ ೨೯ ॥

ಲೋಕಾನಾಂ ಲೋಕಪಾಲಾನಾಂ ಮದ್ಭಯಂ ಕಲ್ಪಜೀವಿನಾಮ್ ।
ಬ್ರಹ್ಮಣೋऽಪಿ ಭಯಂ ಮತ್ತೋ ದ್ವಿಪರಾರ್ಧಪರಾಯುಷಃ
॥ ೩೦ ॥

ಗುಣಾಃ ಸೃಜಂತಿ ಕರ್ಮಾಣಿ ಗುಣೋऽನುಸೃಜತೇ ಗುಣಾನ್ ।
ಜೀವಸ್ತು ಗುಣಸಂಯುಕ್ತೋ ಭುಂಕ್ತೇ ಕರ್ಮಫಲಾನ್ಯಸೌ
॥ ೩೧ ॥

ಯಾವತ್ ಸ್ಯಾದ್ಗುಣವೈಷಮ್ಯಂ ತಾವನ್ನಾನಾತ್ವಮಾತ್ಮನಃ ।
ನಾನಾತ್ವಮಾತ್ಮನೋ ಯಾವತ್ತಾವತ್ತಂತ್ರ್ಯಂ ತದೈವ ಹಿ
॥ ೩೨ ॥

ಒಂದು ಹೊಳೆಯುವ ವಿಮಾನ ದೊರೆಯುತ್ತದೆ ಮತ್ತು ಅದರ ಮೂಲಕ ಸುರ-ಸುಂದರಿಯರೊಂದಿಗೆ ವಿಹರಿಸುತ್ತಾನೆ. ಗಂಧರ್ವರು ಅವನ ಗುಣಗಳನ್ನು ಗಾನಮಾಡುತ್ತಾರೆ. ಅವನ ರೂಪ ಲಾವಣ್ಯವನ್ನು ನೋಡಿ ಬೇರೆಯವರ ಮನಸ್ಸು ಆಕರ್ಷಿತವಾಗುತ್ತದೆ. ॥ ೨೪ ॥ ಅವನ ವಿಮಾನವು ಅವನು ಬಯಸಿದಲ್ಲಿಗೆ ಕೊಂಡು ಹೋಗುತ್ತದೆ. ಅದರ ಘಂಟೆಗಳ ಧ್ವನಿಗಳು ಎಲ್ಲ ದಿಕ್ಕುಗಳನ್ನು ಪ್ರತಿಧ್ವನಿಸುತ್ತವೆ. ಅವನು ಅಪ್ಸರೆಯರೊಂದಿಗೆ ನಂದನವನ ಮುಂತಾದ ದೇವತೆಗಳ ವಿಹಾರ ಸ್ಥಳಗಳಲ್ಲಿ ಕ್ರೀಡಿಸುತ್ತಾ ಇರುವಾಗ ಅವನಿಗೆ ಈಗ ನನ್ನ ಪುಣ್ಯವು ಮುಗಿದುಹೋದೀತು ಹಾಗೂ ನಾನು ಇಲ್ಲಿಂದ ತಳ್ಳಲ್ಪಡುವೆನೆಂಬ ಮಾತಿನ ಅರಿವು ಕೂಡ ಇರದಷ್ಟು ಮೈಮರೆಯುತ್ತಾನೆ. ॥ ೨೫ ॥ ಅವನ ಪುಣ್ಯಗಳು ಶೇಷವಾಗಿರುವತನಕ ಅವನು ಸ್ವರ್ಗದಲ್ಲಿ ಸಂತೋಷಪಡುತ್ತಾನೆ. ಪುಣ್ಯವೂ ಕ್ಷೀಣವಾಗುತ್ತಲೇ ಇಚ್ಛೆ ಇಲ್ಲದಿದ್ದರೂ ಅವನನ್ನು ಕಾಲದಮೂಲಕ ಕೆಳಗೆ ತಳ್ಳಲ್ಪಡುತ್ತಾನೆ. ॥ ೨೬ ॥

ಯಾವನಾದರೂ ಮನುಷ್ಯನು ದುಷ್ಟರ ಸಂಗತಿಯಲ್ಲಿ ಬಿದ್ದು ಅಧರ್ಮಪರಾಯಣನಾದರೆ, ತನ್ನ ಇಂದ್ರಿಯಗಳಿಗೆ ವಶನಾದರೆ, ಸ್ವಚ್ಛಂದವಾಗಿ ವಿಹರಿಸತೊಡಗಿದರೆ, ಲೋಭಿಯಾದರೆ, ಲಂಪಟನಾದರೆ, ಪ್ರಾಣಿಗಳನ್ನು ಸತಾಯಿಸುತ್ತಿದ್ದರೆ. ವಿಧಿ-ವಿರುದ್ಧ ಪಶುಬಲಿಯನ್ನಿತ್ತು ಭೂತ-ಪ್ರೇತಗಳ ಉಪಾಸನೆಯಲ್ಲಿ ತೊಡಗಿದರೆ, ಅವನು ಪರಮಶನಾಗಿ ಘೋರ ಅಂಧಕಾರಪೂರ್ಣ ನರಕಕ್ಕೆ ಹೋಗಬೇಕಾಗುತ್ತದೆ. ॥ ೨೭-೨೮ ॥ ಸಕಾಮ ಕರ್ಮಗಳೆಲ್ಲದರ ಫಲವು ದುಃಖವೇ ಆಗಿದೆ. ಶರೀರದಲ್ಲಿ ಅಹಂತೆ-ಮಮತೆಯನ್ನಿಟ್ಟು ಅದರಲ್ಲೇ ತೊಡಗಿರುವ ಜೀವಿಗೆ ಜನ್ಮ-ಮರಣದ ಚಕ್ರದಿಂದ ಬಿಡುಗಡೆ ಸಿಗುವುದಿಲ್ಲ. ಇಂತಹ ಸ್ಥಿತಿಯಲ್ಲಿ ಮೃತ್ಯುಧರ್ಮಿಯಾದ ಜೀವಿಗೆ ಆ ಸಕಾಮ ಕರ್ಮಗಳಿಂದ ಯಾವ ಸುಖ ಸಿಗಬಹುದು? ಲೋಕ ಮತ್ತು ಲೋಕಪಾಲರ ಆಯುಸ್ಸು ಕೂಡ ಕೇವಲ ಒಂದು ಕಲ್ಪವೇ ಆಗಿದೆ. ಅವರೂ ಕೂಡ ನನಗೆ ಭಯಪಡುವಾಗ, ಬೇರೆಯವರ ಮಾತೇನಿದೆ? ಸ್ವಯಂ ಬ್ರಹ್ಮನ ಆಯುಸ್ಸು ಎರಡು ಪರಾರ್ಧವಾಗಿದೆ. ಇಷ್ಟು ದೀರ್ಘವಾದ ಆಯುಸ್ಸಿದ್ದರೂ ಅವನೂ ಕೂಡ ನನಗೆ ಭಯಪಡುತ್ತಾನೆ. ॥ ೨೯-೩೦ ॥ ಸತ್ತ್ವಾದಿ ಗುಣಗಳು ಇಂದ್ರಿಯಗಳನ್ನು ಅವುಗಳ ಕರ್ಮಗಳಲ್ಲಿ ಪ್ರೇರೇಪಿಸುತ್ತವೆ ಮತ್ತು ಇಂದ್ರಿಯಗಳು ಕರ್ಮಮಾಡುತ್ತವೆ. ಜೀವಿಯು ಅಜ್ಞಾನವಶನಾಗಿ ಸತ್ತ್ವ, ರಜ, ತಮ ಗುಣಗಳನ್ನು ಹಾಗೂ ಇಂದ್ರಿಯಗಳನ್ನು ತನ್ನ ಸ್ವರೂಪವೆಂದು ತಿಳಿದುಕೊಳ್ಳುತ್ತಾನೆ. ಅವುಗಳು ಮಾಡಿದ ಕರ್ಮಗಳೊಂದಿಗೆ ಸಂಬಂಧ ಬೆಳೆಸಿ ಸುಖ-ದುಃಖಗಳನ್ನು ಭೋಗಿಸತೊಡಗುತ್ತಾನೆ. ಗುಣಗಳ ವಿಷಮತೆ ಇರುವತನಕ ಅರ್ಥಾತ್ – ಶರೀರಾದಿಗಳಲ್ಲಿ ನಾನು-ನನ್ನದೆಂಬ ಅಭಿಮಾನವಿರುವತನಕ ಆತ್ಮನ ಏಕತ್ವದ ಅನುಭೂತಿ ಉಂಟಾಗುವುದಿಲ್ಲ. ನಾನಾತ್ವದ ಭ್ರಮೆ ಅಳಿಯುವುದಿಲ್ಲ. ಈ ಅಜ್ಞಾನಮೂಲ ಭ್ರಮದ ನಿವೃತ್ತಿ ಆಗುವವರೆಗೆ ಅವನು ಪರತಂತ್ರನೇ ಆಗಿರುವನು. ॥ ೩೧-೩೨ ॥

ಯಾವದಸ್ಯಾಸ್ವತಂತ್ರತ್ವಂ ತಾವದೀಶ್ವರತೋ ಭಯಮ್ ।
ಯ ಏತತ್ಸಮುಪಾಸೀರಂಸ್ತೇ ಮುಹ್ಯಂತಿ ಶುಚಾರ್ಪಿತಾಃ
॥ ೩೩ ॥

ಪರತಂತ್ರತೆ ಇರುವ ತನಕ ಈಶ್ವರನಿಂದ ಭಯವಿದ್ದೇ ಇರುತ್ತದೆ. ಈ ಪ್ರಕಾರದ ಗುಣ-ಧರ್ಮಗಳಲ್ಲಿ ಬಿದ್ದುಕೊಂಡಿರುವವನಿಗೆ ಶೋಕ ಮತ್ತು ಮೋಹದ ಪ್ರಾಪ್ತಿ ಆಗುತ್ತಾ ಇರುತ್ತದೆ. ॥ ೩೩ ॥ ಪ್ರಿಯ ಉದ್ಧವನೇ! ಮಾಯೆಯ ಗುಣಗಳಲ್ಲಿ ಕ್ಷೋಭೆ ಉಂಟಾದಾಗ ಅವುಗಳ ವ್ಯಾವಹಾರಿಕ ಸತ್ತೆಯು ಅನೇಕವಾಗಿ ಕಂಡುಬರುತ್ತದೆ. ಕಾಲ, ಆತ್ಮಾ, ಆಗಮ (ವೇದ), ಲೋಕ, ಸ್ವಭಾವ ಮತ್ತು ಧರ್ಮ ಇವೆಲ್ಲವೂ ನಾನೇ ಆಗಿದ್ದೇನೆ. (ಹೀಗೆ ಇವೆಲ್ಲದರಲ್ಲಿ ನಾನಾತ್ವದ ಭಾವನೆಯನ್ನಿರಿಸದೆ ಇವೆಲ್ಲದರ ರೂಪದಲ್ಲಿ ಓರ್ವ ಪರಮಾತ್ಮನಾದ ನನ್ನನ್ನೇ ನೋಡಬೇಕು.) ॥ ೩೪ ॥

ಕಾಲ ಆತ್ಮಾऽऽಗಮೋ ಲೋಕಃ ಸ್ವಭಾವೋ ಧರ್ಮ ಏವ ಚ ।
ಇತಿ ಮಾಂ ಬಹುಧಾ ಪ್ರಾಹುರ್ಗುಣವ್ಯತಿಕರೇ ಸತಿ
॥ ೩೪ ॥

ಉದ್ಧವ ಉವಾಚ

ಗುಣೇಷು ವರ್ತಮಾನೋऽಪಿ ದೇಹಜೇಷ್ವನಪಾವೃತಃ ।
ಗುಣೈರ್ನ ಬದ್ಧ್ಯತೇ ದೇಹೀ ಬದ್ಧ್ಯತೇ ವಾ ಕಥಂ ವಿಭೋ
॥ ೩೫ ॥

ಉದ್ಧವನು ಕೇಳಿದನು – ಭಗವಂತಾ! ಈ ಜೀವಿಯು ದೇಹದಿಂದ ಉಂಟಾಗುವ ಗುಣಗಳಲ್ಲಿ ಇದ್ದರೂ ಕೂಡ ಅವುಗಳಿಂದ ಮುಕ್ತಜೀವನ ಹೇಗೆ ನಡೆಸುತ್ತಾನೆ ಮತ್ತು ಆ ಗುಣಗಳಿಂದ ಹೇಗೆ ಬಂಧಿತನಾಗುವುದಿಲ್ಲ? ಹಾಗೆಯೇ ಬೇರೆಯವನು ಗುಣಗಳಿಂದ ಬದ್ಧನಾಗುತ್ತಾನೆ. ಇದು ಏಕೆ? ॥ ೩೫ ॥ ಬದ್ಧ ಅಥವಾ ಮುಕ್ತ ಪುರುಷನು ಹೇಗೆ ವರ್ತಿಸುತ್ತಾನೆ, ಅವನು ಹೇಗೆ ವಿಹರಿಸುತ್ತಾನೆ, ಅವನನ್ನು ಯಾವ ಲಕ್ಷಣಗಳಿಂದ ಗುರುತಿಸಲಾಗುತ್ತದೆ, ಹೇಗೆ ಊಟಮಾಡುತ್ತಾನೆ ಮತ್ತು ಹೇಗೆ ಮಲತ್ಯಾಗ ಇತ್ಯಾದಿ ಮಾಡುತ್ತಾನೆ, ಹೇಗೆ ಮಲಗುತ್ತಾನೆ, ಹೇಗೆ ಕುಳಿತುಕೊಳ್ಳುತ್ತಾನೆ ಹಾಗೂ ಹೇಗೆ ನಡೆಯುತ್ತಾನೆ? ॥ ೩೬ ॥ ಹೇ ಅಚ್ಯುತಾ! ಪ್ರಶ್ನೆಯ ಮರ್ಮವನ್ನು ತಿಳಿಯುವುದರಲ್ಲಿ ನೀನು ಶ್ರೇಷ್ಠನಾಗಿರುವೆ. ಅದಕ್ಕಾಗಿ ನೀನು ನನ್ನ ಪ್ರಶ್ನೆಗಳ ಉತ್ತರವನ್ನು ಕೊಡುವವನಾಗು. ಒಂದೇ ಆತ್ಮನು ನಿತ್ಯಬದ್ಧನೂ ಆಗಿದ್ದಾನೆ ಮತ್ತು ನಿತ್ಯಮುಕ್ತನೂ ಆಗಿದ್ದಾನೆ. ಈ ಮಾತಿನ ಕುರಿತು ನನಗೆ ಭ್ರಮೆ ಉಂಟಾಗುತ್ತಿದೆ. ॥ ೩೭ ॥

ಕಥಂ ವರ್ತೇತ ವಿಹರೇತ್ಕೈರ್ವಾ ಜ್ಞಾಯೇತ ಲಕ್ಷಣೈಃ ।
ಕಿಂ ಭುಂಜೀತೋತ ವಿಸೃಜೇಚ್ಛಯೀತಾಸೀತ ಯಾತಿ ವಾ
॥ ೩೬ ॥

ಏತದಚ್ಯುತ ಮೇ ಬ್ರೂಹಿ ಪ್ರಶ್ನಂ ಪ್ರಶ್ನವಿದಾಂ ವರ ।
ನಿತ್ಯಮುಕ್ತೋ ನಿತ್ಯಬದ್ಧ ಏಕ ಏವೇತಿ ಮೇ ಭ್ರಮಃ
॥ ೩೭ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ
ಭಗವದುದ್ಧವ ಸಂವಾದೇ ದಶಮೋऽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಬದ್ಧ, ಮುಕ್ತ ಮತ್ತು ಭಕ್ತಜನರ ಲಕ್ಷಣಗಳು

ಶ್ರೀಭಗವಾನುವಾಚ

ಬದ್ಧೋ ಮುಕ್ತ ಇತಿ ವ್ಯಾಖ್ಯಾ
ಗುಣತೋ ಮೇ ನ ವಸ್ತುತಃ ।

ಗುಣಸ್ಯ ಮಾಯಾಮೂಲತ್ವಾನ್ನ
ಮೇ ಮೋಕ್ಷೌ ನ ಬಂಧನಮ್ ॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ಬದ್ಧ ಅಥವಾ ಮುಕ್ತನೆಂದು ಹೇಳುವುದು ಗುಣಗಳನ್ನು ಪರಿಗಣಿಸಿಯೇ ಆಗಿದೆ. ವಸ್ತುತಃ ನನ್ನ ಸ್ವರೂಪದಲ್ಲಿ ಅರ್ಥಾತ್ ಆತ್ಮನಲ್ಲಿ ಇವೆರಡು ಇಲ್ಲವೇ ಇಲ್ಲ. ಗುಣಗಳು ಮಾಯಾಮೂಲಕವಾಗಿವೆ. ಆತ್ಮಸ್ವರೂಪದಲ್ಲಿ ಬಂಧನವಾಗಲಿ, ಮೋಕ್ಷವಾಗಲಿ ಇಲ್ಲ. ॥ ೧ ॥ ಶೋಕ, ಮೋಹ, ಸುಖ, ದುಃಖ, ದೇಹಪ್ರಾಪ್ತಿ ಇವೆಲ್ಲವೂ ಮಾಯೆಯ ಕಾರಣದಿಂದಲೇ ಇದೆ.

ಶೋಕಮೋಹೌ ಸುಖಂ ದುಃಖಂ ದೇಹಾಪತ್ತಿಶ್ಚ ಮಾಯಯಾ ।
ಸ್ವಪ್ನೋ ಯಥಾऽऽತ್ಮನಃ ಖ್ಯಾತಿಃ ಸಂಸೃತಿರ್ನ ತು ವಾಸ್ತವೀ
॥ ೨ ॥

ವಿದ್ಯಾವಿದ್ಯೇ ಮಮ ತನೂ ವಿದ್ಧ್ಯುದ್ಧವ ಶರೀರಿಣಾಮ್ ।
ಮೋಕ್ಷಬಂಧಕರೀ ಆದ್ಯೇ ಮಾಯಯಾ ಮೇ ವಿನಿರ್ಮಿತೇ
॥ ೩ ॥

ಏಕಸ್ಯೈವ ಮಮಾಂಶಸ್ಯ ಜೀವಸ್ಯೈವ ಮಹಾಮತೇ ।
ಬಂಧೋऽಸ್ಯಾವಿದ್ಯಯಾನಾದಿರ್ವಿದ್ಯಯಾ ಚ ತಥೇತರಃ
॥ ೪ ॥

ಅಥ ಬದ್ಧಸ್ಯ ಮುಕ್ತಸ್ಯ ವೈಲಕ್ಷಣ್ಯಂ ವದಾಮಿ ತೇ ।
ವಿರುದ್ಧಧರ್ಮಿಣೋಸ್ತಾತ ಸ್ಥಿತಯೋರೇಕಧರ್ಮಿಣಿ
॥ ೫ ॥

ಸುಪರ್ಣಾವೇತೌ ಸದೃಶೌ ಸಖಾಯೌ
ಯದೃಚ್ಛಯೈತೌ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನ-
ಮನ್ಯೋ ನಿರನ್ನೋऽಪಿ ಬಲೇನ ಭೂಯಾನ್ ॥ ೬ ॥

ಆತ್ಮಾನಮನ್ಯಂ ಚ ಸ ವೇದ ವಿದ್ವಾ-
ನಪಿಪ್ಪಲಾದೋ ನ ತು ಪಿಪ್ಪಲಾದಃ ।
ಯೋऽವಿದ್ಯಯಾ ಯುಕ್ ಸ ತು ನಿತ್ಯಬದ್ಧೋ
ವಿದ್ಯಾಮಯೋ ಯಃ ಸ ತು ನಿತ್ಯಮುಕ್ತಃ ॥ ೭ ॥

ದೇಹಸ್ಥೋऽಪಿ ನ ದೇಹಸ್ಥೋ ವಿದ್ವಾನ್ ಸ್ವಪ್ನಾದ್ಯಥೋತ್ಥಿತಃ ।
ಅದೇಹಸ್ಥೋऽಪಿ ದೇಹಸ್ಥಃ ಕುಮತಿಃ ಸ್ವಪ್ನದೃಗ್ಯಥಾ
॥ ೮ ॥

ಇಂದ್ರಿಯೈರಿಂದ್ರಿಯಾರ್ಥೇಷು ಗುಣೈರಪಿ ಗುಣೇಷು ಚ ।
ಗೃಹ್ಯಮಾಣೇಷ್ವಹಂಕುರ್ಯಾನ್ನ ವಿದ್ವಾನ್ ಯಸ್ತ್ವವಿಕ್ರಿಯಃ
॥ ೯ ॥

ಆತ್ಮನಿಗಾಗಿ ಸಂಸೃತಿಯ ಮಾತು ಹೇಳುವುದು ಯಥಾರ್ಥವಲ್ಲ ಸ್ವಪ್ನದ ಮಾತಿನಂತೆ ಇದೆ. ಅರ್ಥಾತ್ – ಸ್ವಪ್ನವು ಮಿಥ್ಯೆಯಾಗಿರುವಂತೆ ಆತ್ಮನಿಗಾಗಿ ಸಂಸೃತಿ ಹೇಳುವುದು ಮಿಥ್ಯೆಯೇ ಆಗಿದೆ. ॥ ೨ ॥ ಎಲೈ ಉದ್ಧವಾ ! ವಿದ್ಯೆ ಮತ್ತು ಅವಿದ್ಯೆ ಇವೆರಡೂ ನನ್ನದೇ ಶಕ್ತಿಗಳಾಗಿವೆ. ಅದು ಶರೀರಧಾರಿಗಳಿಗೆ ಕ್ರಮಶಃ ಮೋಕ್ಷ ಹಾಗೂ ಬಂಧನಗಳನ್ನು ಕೊಡುವುದಾಗಿದೆ. ಇವೆರಡೂ ಅನಾದಿಯಾಗಿದ್ದು ನನ್ನ ಮಾಯೆಯಿಂದ ರಚಿತವಾಗಿವೆ. ॥ ೩ ॥ ಬುದ್ಧಿವಂತನೇ ! ಈ ಜೀವಿಯು ಏಕಮಾತ್ರ ನನ್ನದೇ ಅಂಶವಾಗಿದ್ದಾನೆ. ಅನಾದಿ ಅವಿದ್ಯೆಯು ಜೀವಿಯನ್ನು ಬಂಧಿಸುತ್ತದೆ, ಎರಡನೆಯದಾದ ನನ್ನ ವಿದ್ಯಾಶಕ್ತಿಯಿಂದ ಮೋಕ್ಷ ಉಂಟಾಗುತ್ತದೆ. ॥ ೪ ॥ ಬದ್ಧ ಮತ್ತು ಮುಕ್ತ ಎರಡರಲ್ಲಿರುವ ಪ್ರಭೇದವನ್ನು ಈಗ ನಾನು ನಿನಗೆ ಹೇಳುತ್ತೇನೆ. ಪ್ರಿಯ ಉದ್ಧವನೇ ! ಜೀವವು ನನ್ನದೇ ಸ್ವರೂಪವಾದ್ದರಿಂದ ವಾಸ್ತವವಾಗಿ ಆತ್ಮಾ ಮತ್ತು ಜೀವ ಇವೆರಡೂ ಒಂದೇ ಆಗಿದೆ. ಆದರೂ ಇವೆರಡರಲ್ಲಿ ಇರುವ ಪರಸ್ಪರ ಭೇದವನ್ನು ಕೇಳು. ನಾನು ಶಾಸಕ (ಆಳುವವನು)ನಾಗಿದ್ದೇನೆ, ಜೀವಿಯು ಶಾಸಿತಾ (ಆಳಲ್ಪಡುವವನು) ಆಗಿದ್ದಾನೆ. ನಾನು ಆನಂದಸ್ವರೂಪನಾಗಿದ್ದೇನೆ, ಜೀವಿಯು ಶೋಕ-ಮೋಹದಿಂದ ಗ್ರಸಿತನಾಗಿ ಸುಖೀ-ದುಃಖೀಯಾಗುತ್ತಾನೆ. ॥ ೫ ॥ ಈ ಶರೀರರೂಪೀ ವೃಕ್ಷದಲ್ಲಿ ಗೂಡು ಕಟ್ಟಿಕೊಂಡು ಜೊತೆಗೆ ವಾಸಿಸುವ ಇವೆರಡು ಪಕ್ಷಿಗಳಾಗಿವೆ. ಇಬ್ಬರೂ ಮಿತ್ರರಾಗಿದ್ದು, ಸಮಾನ ಧರ್ಮಿಗಳಾಗಿವೆ. ಇವೆರಡರಲ್ಲಿ ಒಂದಾದರೋ ಈ ಶರೀರದ ಮೂಲಕ ಗೈದ ಕರ್ಮಗಳ ಫಲವನ್ನು ಉಪಭೋಗಿಸುತ್ತದೆ. ಆದರೆ ಅದು ಅವನ್ನು ಉಪಭೋಗಿಸಿಯೂ ಕ್ಷೀಣವಾಗುತ್ತದೆ. ಆದರೆ ಇನ್ನೊಂದು ಪಕ್ಷಿಯು ಆ ಫಲಗಳನ್ನು ಉಪಭೋಗಿಸುವುದಿಲ್ಲ, ಆದರೂ ಅದು ಸಾಕಷ್ಟು ಬಲಶಾಲಿಯಾಗಿದೆ. ॥ ೬ ॥ ಫಲವನ್ನು ಉಪಭೋಗಿಸದಿರುವವನು ತನ್ನನ್ನೂ ತಿಳಿಯುತ್ತಾನೆ ಹಾಗೂ ತನ್ನ ಸಖನಾದ ಇನ್ನೊಂದು ಜೀವವನ್ನೂ ತಿಳಿಯುತ್ತಾನೆ. ಆದರೆ ಭೋಗಗಳನ್ನು ಉಪಭೋಗಿಸುವವನು ತನ್ನನ್ನೂ ತಿಳಿಯುವುದಿಲ್ಲ, ತನ್ನ ಸಖನಾದ ಆತ್ಮಸ್ವರೂಪವನ್ನೂ ತಿಳಿಯುವುದಿಲ್ಲ, ಈ ವಿಧವಾಗಿ ಅವಿದ್ಯೆಯಲ್ಲಿ ತೊಡಗಿರುವವನು ನಿತ್ಯಬದ್ಧನಾಗಿದ್ದಾನೆ ಮತ್ತು ತನ್ನ ನಿಜಸ್ವರೂಪವನ್ನು ಅರಿಯುವವನು ನಿತ್ಯಮುಕ್ತನಾಗಿದ್ದಾನೆ. ॥ ೭ ॥ ತನ್ನ ಆತ್ಮಸ್ವರೂಪವನ್ನು ಅರಿತುಕೊಂಡವನು ಈ ದೇಹದಲ್ಲಿ ಇದ್ದರೂ ದೇಹದ ಗುಣ ಧರ್ಮಗಳಿಂದ ಅತೀತನಾಗಿದ್ದಾನೆ. ಏಕೆಂದರೆ, ಸ್ವಪ್ನ ಪ್ರಪಂಚವು ಮಿಥ್ಯೆಯಾಗಿರುವಂತೆ ಈ ಪ್ರಪಂಚವೆಲ್ಲವೂ ಮಾಯಾಮಯವಾಗಿದ್ದು ಮಿಥ್ಯೆಯೇ ಆಗಿದೆ ಎಂದು ಅವನು ತಿಳಿದಿರುವನು. ಆದರೆ ಆತ್ಮನಿಗೆ ಶರೀರದೊಂದಿಗೆ ಯಾವ ಸಂಬಂಧವೂ ಇರದಿದ್ದರೂ ಅಜ್ಞಾನಿಯು ಸ್ವಪ್ನದ ಪ್ರಪಂಚವನ್ನು ನೋಡಿ ಸುಖಿ-ದುಃಖಿಯಾಗುವಂತೆ ಈ ಜಗತ್ತನ್ನೂ ಸತ್ಯವೆಂದು ತಿಳಿದು ಸುಖೀ-ದುಃಖಿಯಾಗುತ್ತಾ ಇರುತ್ತಾನೆ. ॥ ೮ ॥ ಇಂದ್ರಿಯಗಳೂ ಕೂಡ ತ್ರಿಗುಣಗಳ ವಿಕಾರವಾಗಿವೆ. ಮತ್ತು ಈ ವಿಷಯ ಭೋಗಗಳೂ ತ್ರಿಗುಣಗಳದ್ದೇ ವಿಕಾರವಾಗಿವೆ. ಹೀಗೆ ಗುಣಗಳ ಮೂಲಕ ಗುಣಗಳ ವ್ಯವಹಾರ ಪರಸ್ಪರ ನಡೆಯುತ್ತಾ ಇರುತ್ತದೆ. ವಿದ್ವಾಂಸನು ತನ್ನ ಆತ್ಮಸ್ವರೂಪದಲ್ಲಿ ಸ್ಥಿತನಾದ್ದರಿಂದ ಇವುಗಳಿಂದ ಪೂರ್ಣವಾಗಿ ನಿರ್ವಿಕಾರಿಯಾಗಿರುತ್ತಾನೆ ಹಾಗೂ ನಾನು ಏನನ್ನೂ ಮಾಡುವುದಿಲ್ಲ ಎಂದು ತಿಳಿಯುತ್ತಾನೆ. ॥ ೯ ॥

ದೈವಾಧೀನೇ ಶರೀರೇಽಸ್ಮಿನ್ ಗುಣಭಾವ್ಯೇನ ಕರ್ಮಣಾ ।
ವರ್ತಮಾನೋಽಬುಧಸ್ತತ್ರ ಕರ್ತಾಸ್ಮೀತಿ ನಿಬದ್ಧ್ಯತೇ
॥ ೧೦ ॥

ಈ ಶರೀರವಾದರೋ ಪ್ರಾರಬ್ಧಕ್ಕಧೀನವಾಗಿದೆ. ಇಂದ್ರಿಯಗಳಿಂದ ಕರ್ಮಗಳು ಮಾಡಲ್ಪಡುತ್ತವೆ ಅವುಗಳ ಪ್ರೇರಕವು ಮನಸ್ಸಾಗಿದೆ. ಹೀಗೆ ಈ ಮನ ಮತ್ತು ಇಂದ್ರಿಯಗಳು ಎರಡೂ ಗುಣಗಳ ಕಾರ್ಯವೇ ಆಗಿದೆ. ವಾಸ್ತವವಾಗಿ ಗುಣಗಳೇ ಗುಣಗಳಲ್ಲಿ ವರ್ತಿಸುತ್ತವೆ. ಆದರೆ ಅಜ್ಞಾನಿಯು 'ನಾನು ಕರ್ತಾ ಆಗಿದ್ದೇನೆ' ಹೀಗೆ ತಿಳಿದು ಬಂಧಿತನಾಗುತ್ತಾನೆ. ॥ ೧೦ ॥

ಏವಂ ವಿರಕ್ತಃ ಶಯನೇ ಆಸನಾಟನಮಜ್ಜನೇ ।
ದರ್ಶನಸ್ಪರ್ಶನಘ್ರಾಣಭೋಜನಶ್ರವಣಾದಿಷು
॥ ೧೧ ॥

ಆದರೆ ವಿರಕ್ತಜ್ಞಾನಿಯು ಮಲಗುವುದು, ಕುಳಿತುಕೊಳ್ಳುವುದು, ತಿರುಗಾಡುವುದು, ಸ್ನಾನಮಾಡುವುದು, ನೋಡುವುದು, ಮುಟ್ಟುವುದು, ಮೂಸುವುದು, ತಿನ್ನುವುದು, ಕೇಳುವುದು ಮುಂತಾದ ಕ್ರಿಯೆಗಳನ್ನು ಮಾಡುತ್ತಿದ್ದರೂ ತನ್ನನ್ನು ಕರ್ತಾ ಭೋಕ್ತಾ ಎಂದು ತಿಳಿಯುವುದಿಲ್ಲ. ಅವನು ಪ್ರಕೃತಿಯಲ್ಲಿ ನೆಲೆಸಿಯೂ ಅದರಿಂದ ಪೂರ್ಣ ಅಸಂಗನಾಗಿದ್ದಾನೆ. ಅರ್ಥಾತ್ – ಅವನು ಆ ಕರ್ಮಗಳಿಂದ ಲಿಪ್ತನಾಗುವುದಿಲ್ಲ. ಆಕಾಶ, ಸೂರ್ಯ, ವಾಯು ಇವು ಯಾರ ಗುಣದೋಷಗಳನ್ನು ಗ್ರಹಿಸುವುದಿಲ್ಲ, ಎಲ್ಲಿಯೂ ಲಿಪ್ತವಾಗುವುದಿಲ್ಲ. ಹಾಗೆಯೇ ಜ್ಞಾನಿಯು ಪೂರ್ಣವಾಗಿ ನಿರ್ಲಿಪ್ತನಾಗಿರುತ್ತಾನೆ. ಹೀಗೆ ವೈರಾಗ್ಯದಿಂದ ತೀಕ್ಷ್ಣವಾದ ದೃಷ್ಟಿಯುಳ್ಳವನ ಎಲ್ಲ ಸಂಶಯಗಳು ದೂರವಾಗುತ್ತವೆ. ಸ್ವಪ್ನದಿಂದ ಎಚ್ಚೆತ್ತಮೇಲೆ ಸ್ವಪ್ನದ ಸೃಷ್ಟಿಯು ಕಣ್ಮರೆಯಾಗುವಂತೆ ವಿವೇಕ ಜ್ಞಾನದ ಮೂಲಕ ಅವನ ಎಲ್ಲ ನಾನಾತ್ವದ ಭ್ರಮೆಯು ದೂರವಾಗುತ್ತದೆ. ॥ ೧೧-೧೩ ॥ ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳ ಸಂಕಲ್ಪಗಳಿಂದ ಪೂರ್ಣವಾಗಿ ನಿವೃತ್ತವಾದವನು, ಪ್ರಾಪಂಚಿಕ ಕರ್ಮಗಳನ್ನು ಮಾಡುವ ಪರಂಪರೆ ನಾಶವಾದವನು ದೇಹದಲ್ಲಿ ಸ್ಥಿತನಾಗಿದ್ದರೂ ಅದರ ಗುಣಗಳಿಂದ ಸರ್ವಥಾ ಅತೀತನಾಗಿರುತ್ತಾನೆ ಅರ್ಥಾತ್ ಅವನು ಗುಣಾತೀತ ಅವಸ್ಥೆಯನ್ನು ಪಡೆದುಕೊಳ್ಳುತ್ತಾನೆ. ॥ ೧೪ ॥

ನ ತಥಾ ಬಧ್ಯತೇ ವಿದ್ವಾಂಸ್ತತ್ರ ತತ್ರಾದಯನ್ಗುಣಾನ್ ।
ಪ್ರಕೃತಿಸ್ಥೋಽಪ್ಯಸಂಸಕ್ತೋ ಯಥಾ ಖಂ ಸವಿತಾನಿಲಃ
॥ ೧೨ ॥

ವೈಶಾರದ್ಯೇಕ್ಷಯಾಸಂಗಶಿತಯಾ ಛಿನ್ನಸಂಶಯಃ ।
ಪ್ರತಿಬುದ್ಧ ಇವ ಸ್ವಪ್ನಾನ್ನಾನಾತ್ವಾದ್ವಿನಿವರ್ತತೇ
॥ ೧೩ ॥

ಯಸ್ಯ ಸ್ಯುರ್ವೀತಸಂಕಲ್ಪಾಃ ಪ್ರಾಣೇಂದ್ರಿಯಮನೋಧಿಯಾಮ್ ।
ವೃತ್ತಯಃ ಸ ವಿನಿರ್ಮುಕ್ತೋ ದೇಹಸ್ಥೋಽಪಿ ಹಿ ತದ್ಗುಣೈಃ
॥ ೧೪ ॥

ಆ ತತ್ತ್ವಜ್ಞಮುಕ್ತ ಪುರುಷನ ಶರೀರಕ್ಕೆ ಬೇಕಾದರೆ ಹಿಂಸಕರು ಸತಾಯಿಸಿ ದುಃಖಿಕೊಟ್ಟರೂ, ಬೇಕಾದರೆ ಎಂದಾದರೂ, ಯಾರಾದರೂ ದೈವಯೋಗದಿಂದ ಪೂಜಿಸಿದರೆ, ಅವನು ಸತಾಯಿಸುವುದರಿಂದ ದುಃಖಿಯೂ, ಪೂಜೆಯಿಂದ ಸುಖಿಯೂ ಆಗುವುದಿಲ್ಲ. ॥ ೧೫ ॥ ಮುನಿಯಾದವನು ತನ್ನನ್ನು ಬೇಕಾದರೆ ಸ್ತುತಿಸಲಿ, ನಿಂದಿಸಲಿ, ಅವರನ್ನು ಒಳ್ಳೆಯವರೆಂದಾಗಲೀ, ಕೆಟ್ಟವರೆಂದಾಗಲೀ ಹೇಳುವುದಿಲ್ಲ. ಎಲ್ಲೆಡೆ ಸಮದೃಷ್ಟಿಯಿದ್ದು ಓರ್ವ ಪರಮಾತ್ಮನದೇ ಭಾವನೆವಿರಿಸಬೇಕು. ಯಾರಾದರೂ ಗುಣದೋಷಗಳ ವಿಷಯದಲ್ಲಿ ಚರ್ಚಿಸುತ್ತಿದ್ದರೆ ಅದರಿಂದ ದೂರವುಳಿಯಬೇಕು. ॥ ೧೬ ॥ ಹೀಗೆ ಮುನಿಯಾದವನು ತನ್ನ ಆತ್ಮನಲ್ಲೇ ತನ್ಮಯನಾಗಿರಲಿ. ಈ ರೀತಿಯಿಂದ ಪ್ರಕೃತಿಯಲ್ಲಿ ಸ್ಥಿತನಾಗಿದ್ದರೂ ಅವನು ಯಾರಿಗಾಗಿಯೂ ಒಳ್ಳೆಯದಾಗಲೀ, ಕೆಟ್ಟದಾಗಲಿ ಮಾತನಾಡದಿರಲಿ, ಹೇಳದಿರಲಿ, ಚಿಂತಿಸದಿರಲಿ, ಜಡನಂತೆ ವರ್ತಿಸಲಿ. ತನ್ನ ಗೂಢಭಾವವನ್ನು ಯಾರಲ್ಲಿಯೂ ಪ್ರಕಟಿಸದಿರಲಿ. ॥ ೧೭ ॥

ಯಸ್ಯಾತ್ಮಾ ಹಿಂಸ್ಯತೇ ಹಿಂಸ್ರೈರ್ಯೇನ ಕಿಂಚಿದ್ಯದೃಚ್ಛಯಾ ।
ಅರ್ಚ್ಯತೇ ವಾ ಕ್ವಚಿತ್ತತ್ರ ನ ವ್ಯತಿಕ್ರಿಯತೇ ಬುಧಃ
॥ ೧೫ ॥

ನ ಸ್ತುವೀತ ನ ನಿಂದೇತ ಕುರ್ವತಃ ಸಾಧ್ವಸಾಧು ವಾ ।
ವದತೋ ಗುಣದೋಷಾಭ್ಯಾಂ ವರ್ಜಿತಃ ಸಮದೃಙ್ಮುನಿಃ
॥ ೧೬ ॥

ನ ಕುರ್ಯಾನ್ನ ವದೇತ್ಕಿಂಚಿನ್ನ ಧ್ಯಾಯೇತ್ ಸಾಧ್ವಸಾಧು ವಾ ।
ಆತ್ಮಾರಾಮೋಽನಯಾ ವೃತ್ತ್ಯಾ ವಿಚರೇಜ್ಜಡವನ್ಮುನಿಃ
॥ ೧೭ ॥

ಶಬ್ದಬ್ರಹ್ಮಣಿ ನಿಷ್ಣಾತೋ ನ ನಿಷ್ಣಾಯಾತ್ಪರೇ ಯದಿ।
ಶ್ರಮಸ್ತಸ್ಯ ಶ್ರಮಫಲೋ ಹ್ಯಧೇನುಮಿವ ರಕ್ಷತಃ
॥ ೧೮ ॥

ಗಾಂ ದುಗ್ಧದೋಹಾಮಸತೀಂ ಚ ಭಾರ್ಯಾಂ
ದೇಹಂ ಪರಾಧೀನಮಸತ್ಪ್ರಜಾಂ ಚ ।
ವಿತ್ತಂ ತ್ವತೀರ್ಥೀಕೃತಮಂಗ ವಾಚಂ
ಹೀನಾಂ ಮಯಾ ರಕ್ಷತಿ ದುಃಖದುಃಖೀ ॥ ೧೯ ॥

ಯಸ್ಯಾಂ ನ ಮೇ ಪಾವನಮಂಗ ಕರ್ಮ
ಸ್ಥಿತ್ಯುದ್ಭವಪ್ರಾಣನಿರೋಧಮಸ್ಯ ।
ಲೀಲಾವತಾರೇಪ್ಸಿತಜನ್ಮ ವಾ ಸ್ಯಾದ್
ವಂಧ್ಯಾಂ ಗಿರಂ ತಾಂ ಬಿಭೃಯಾನ್ನ ಧೀರಃ ॥ ೨೦ ॥

ಏವಂ ಜಿಜ್ಞಾಸಯಾಪೋಹ್ಯ ನಾನಾತ್ವಭ್ರಮಮಾತ್ಮನಿ।
ಉಪಾರಮೇತ ವಿರಜಂ ಮನೋ ಮಯ್ಯರ್ಪ್ಯ ಸರ್ವಗೇ
॥ ೨೧ ॥

ಯದ್ಯನೀಶೋ ಧಾರಯಿತುಂ ಮನೋ ಬ್ರಹ್ಮಣಿ ನಿಶ್ಚಲಮ್ ।
ಮಯಿ ಸರ್ವಾಣಿ ಕರ್ಮಾಣಿ ನಿರಪೇಕ್ಷಃ ಸಮಾಚರ
॥ ೨೨ ॥

ಶ್ರದ್ಧಾಲುರ್ಮೇ ಕಥಾಃ ಶೃಣ್ವನ್ ಸುಭದ್ರಾ ಲೋಕಪಾವನೀಃ।
ಗಾಯನ್ನನುಸ್ಮರನ್ಕರ್ಮ ಜನ್ಮ ಚಾಭಿನಯನ್ಮುಹುಃ
॥ ೨೩ ॥

ಮದರ್ಥೇ ಧರ್ಮಕಾಮಾರ್ಥಾನಾಚರನ್ಮದಪಾಶ್ರಯಃ।
ಲಭತೇ ನಿಶ್ಚಲಾಂ ಭಕ್ತಿಂ ಮಯ್ಯುದ್ಧವ ಸನಾತನೇ
॥ ೨೪ ॥

ಸತ್ಸಂಗಲಬ್ಧಯಾ ಭಕ್ತ್ಯಾ ಮಯಿ ಮಾಂ ಸ ಉಪಾಸಿತಾ।
ಸ ವೈ ಮೇ ದರ್ಶಿತಂ ಸದ್ಭಿರಂಜಸಾ ವಿಂದತೇ ಪದಮ್
॥ ೨೫ ॥

ಉದ್ಧವ ಉವಾಚ

ಸಾಧುಸ್ತವೋತ್ತಮಶ್ಲೋಕ ಮತಃ ಕೀದೃಗ್ವಿಧಃ ಪ್ರಭೋ।
ಭಕ್ತಿಸ್ತ್ವಯ್ಯುಪಯುಜ್ಯೇತ ಕೀದೃಶೀ ಸದ್ಭಿರಾದೃತಾ
॥ ೨೬ ॥

ಏತನ್ಮೇ ಪುರುಷಾಧ್ಯಕ್ಷ ಲೋಕಾಧ್ಯಕ್ಷ ಜಗತ್ಪ್ರಭೋ।
ಪ್ರಣತಾಯಾನುರಕ್ತಾಯ ಪ್ರಪನ್ನಾಯ ಚ ಕಥ್ಯತಾಮ್
॥ ೨೭ ॥

ಆದರೆ ಪ್ರಿಯ ಉದ್ಧವನೇ! ವೇದದಲ್ಲಿ ಪಾರಂಗತನಾದ ವಿದ್ವಾಂಸನು ಪರಬ್ರಹ್ಮನ ಅನುಭವವು ಆಗದಿದ್ದರೆ, ಆವನ ಪರಿಶ್ರಮವು ಹಾಲುಕೊಡದ ಹಸುವನ್ನು ಸಾಕಿದಂತೆ ಇದೆ ಎಂದು ತಿಳಿಯಬೇಕು. ಅರ್ಥಾತ್ – ವ್ಯರ್ಥವೇ ಆಗಿದೆ. ॥ ೧೮ ॥

ಎಲೈ ಉದ್ಧವನೇ! ಹಾಲುಕೊಡದ ಹಸು, ಕುಲಟೆಯಾದ ಪತ್ನೀ, ಪರಾಧೀನದೇಹ, ದುಷ್ಟ ಸಂತತಿ,ಸತ್ಪಾತ್ರಕ್ಕೆ ದಾನಕೊಡದ ಧನ, ಭಗವಂತನ ನಾಮ-ರೂಪ-ಲೀಲೆ-ಧಾಮ ಮುಂತಾದ ಭಗವತ್ಸಂಬಂಧೀ ಚರ್ಚೆಯಿಲ್ಲದ ವಾಣೀ, ಇವುಗಳನ್ನು ಆಶ್ರಯಿಸಿದವನಿಗಾದರೋ ದುಃಖದ ಮೇಲೆ ದುಃಖವನ್ನೇ ಭೋಗಿಸಬೇಕಾಗುತ್ತದೆ. ॥ ೧೯॥ ನನ್ನ ಪವಿತ್ರ ಕರ್ಮಗಳ ಉಲ್ಲೇಖವಿಲ್ಲದ ವಾಣೀ, ಈ ಜಗತ್ತಿನ ಉತ್ಪತ್ತಿ , ಸ್ಥಿತಿ, ಸಂಹಾರಗೈವ ಭಗವಂತನ ಶಕ್ತಿಯ ನಿರೂಪಣೆಯಿಲ್ಲದ ವಾಣಿಯು, ಭಗವಂತನ ಬೇರೆ-ಬೇರೆ ಅವತಾರಗಳ, ಅವುಗಳ ಪವಿತ್ರಗುಣಗಳ, ಯಶೋಗಾನದ ವರ್ಣನೆ ಇಲ್ಲದಿರುವ ವಾಣಿಯು ವಂಧ್ಯೆಯೇ ಆಗಿದೆ. ಇಂತಹ ವಾಣಿಯನ್ನು ಜ್ಞಾನಿಗಳು ಆದರಿಸಬಾರದು. ॥ ೨೦ ॥

ಹೀಗೆ ತತ್ತ್ವದ ಜಿಜ್ಞಾಸೆಯಿಂದ ಜಗತ್ತಿನಲ್ಲಿ ಎಲ್ಲೆಡೆ ಓರ್ವ ಬ್ರಹ್ಮವನ್ನೇ ನೋಡಲಿ, ಆತ್ಮನಲ್ಲಿರುವ ನಾನಾತ್ವದ ಭ್ರಮೆಯು ಪೂರ್ಣವಾಗಿ ದೂರಾಗಿಸಲಿ, ಈ ಪ್ರಕಾರ ಶುದ್ಧವಾದ ಮನಸ್ಸನ್ನು ಸರ್ವವ್ಯಾಪೀ ಪರಮಾತ್ಮನಾದ ನನ್ನಲ್ಲಿ ತೊಡಗಿಸಲಿ, ಉಳಿದೆಲ್ಲದರಲ್ಲಿಯೂ ಉಪರಾಮನಾಗಲಿ. ॥ ೨೧ ॥ ಈ ವಿಧವಾಗಿ ಪರಮಾತ್ಮನಾದ ನನ್ನಲ್ಲಿ ನಿಶ್ಚಲರೂಪದಿಂದ ಮನಸ್ಸನ್ನು ತೊಡಗಿಸಲು ಅಸಮರ್ಥನಾದರೆ, ಮಾಡುವ ಎಲ್ಲ ಕ್ರಿಯೆಗಳನ್ನು ನಿರಪೇಕ್ಷನಾಗಿ ನನಗಾಗಿಯೇ ಮಾಡಲಿ. ॥ ೨೨ ॥ ಲೋಕಗಳನ್ನು ಪವಿತ್ರಗೊಳಿಸುವ ನನ್ನ ಶ್ರೇಯಸ್ಕರವಾದ ಕಥೆಗಳನ್ನು ಶ್ರದ್ಧಾಳುವಾದವನು ಶ್ರವಣಿಸಲಿ, ಕೀರ್ತಿಸಲಿ ಹಾಗೂ ಸ್ಮರಿಸಲಿ. ಹಾಗೆಯೇ ನನ್ನ ಅವತಾರದ (ರಾಮನವಮಿ, ಕೃಷ್ಣ-ಜನ್ಮಾಷ್ಟಮಿ ಮುಂತಾದ) ಲೀಲೆಗಳನ್ನು ಅಭಿನಯಿಸಲಿ. ॥ ೨೩ ॥ ಎಲೈ ಉದ್ಧವಾ! ಈ ಪ್ರಕಾರ ನನಗೆ ಶರಣಾಗಿ, ನನಗಾಗಿಯೇ ಧರ್ಮ, ಅರ್ಥ, ಕಾಮ ಇವುಗಳನ್ನು ಆಚರಿಸುತ್ತಿರುವ ನನ್ನ ಅನನ್ಯ ಪ್ರೇಮಿ ಭಕ್ತನು ಸನಾತನ ಪರಮಾತ್ಮನಾದ ನನ್ನಲ್ಲಿ ನಿಶ್ಚಲ ಭಕ್ತಿಯನ್ನು ಪಡೆದುಕೊಳ್ಳುತ್ತಾನೆ. ॥ ೨೪ ॥

ಸತ್ಸಂಗದಿಂದ ಭಕ್ತಿಯು ಪ್ರಾಪ್ತವಾಗುತ್ತದೆ. ಮತ್ತೆ ಅವನು ನನ್ನನ್ನು ಉಪಾಸಿಸುತ್ತಾನೆ. ಸಂತರು ಹೇಳಿದ ಮಾರ್ಗದಿಂದ ನಡೆದು ಅವನು ಸುಲಭವಾಗಿ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೨೫ ॥

ಉದ್ಧವನು ಕೇಳಿದನು – ಪವಿತ್ರಕೀರ್ತಿಯುಳ್ಳ ಭಗವಂತನೇ! ನಿನ್ನ ಅಭಿಪ್ರಾಯದಲ್ಲಿ ಸಂತರ ಲಕ್ಷಣಗಳು ಯಾವುವು? ಸಂತಜನರು ಆದರಿಸುತ್ತಿರುವ ನಿನ್ನ ಕುರಿತಾದ ಭಕ್ತಿಯನ್ನು ಹೇಗೆ ಮಾಡಬೇಕು? ನೀನು ದಯಮಾಡಿ ತಿಳಿಸುವವನಾಗು. ॥ ೨೬ ॥ ಭಗವಂತನೇ! ನೀನೇ ಬ್ರಹ್ಮಾದಿ ಶ್ರೇಷ್ಠ ದೇವತೆಗಳಿಗೆ, ಸತ್ಯಾದಿ ಲೋಕಗಳಿಗೆ, ಚರಾಚರ ಜಗತ್ತಿಗೆ ಒಡೆಯನಾಗಿರುವೆ. ನಾನು ವಿನೀತ, ಪ್ರೇಮಿ, ಶರಣಾಗತನಾದ ನಿನ್ನ ಭಕ್ತನಾಗಿರುವೆನು. ನೀನು ನನಗೆ ಭಕ್ತಿ ಹಾಗೂ ಭಕ್ತರ ರಹಸ್ಯವನ್ನು ಹೇಳುವವನಾಗು. ॥ ೨೭ ॥

ತ್ವಂ ಬ್ರಹ್ಮ ಪರಮಂ ವ್ಯೋಮ ಪುರುಷಃ ಪ್ರಕೃತೇಃ ಪರಃ ।
ಅವತೀರ್ಣೋಽಸಿ ಭಗವನ್ ಸ್ವೇಚ್ಛೋಪಾತ್ತಪೃಥಗ್ವಪುಃ
॥ ೨೮ ॥

ಪರಮಾತ್ಮಾ! ನೀನು ಪ್ರಕೃತಿಗಿಂತ ಅತೀತನಾದ ಪುರುಷೋತ್ತಮ. ಹಾಗೂ ಚಿದಾಕಾಶಸ್ವರೂಪೀ ಬ್ರಹ್ಮನಾಗಿರುವೆ ಎಂಬುದನ್ನು ನಾನು ಬಲ್ಲೆನು. ನಿನ್ನಿಂದ ಭಿನ್ನವಾದುದು ಯಾವುದೂ ಇಲ್ಲ, ಆದರೂ ನೀನು ಲೀಲೆಗಾಗಿ ಸ್ವೇಚ್ಛೆಯಿಂದಲೇ ಈ ಬೇರೆಯಾದ ಕೃಷ್ಣರೂಪದಿಂದ ಅವತರಿಸಿರುವೆ. ಆದ್ದರಿಂದ ವಾಸ್ತವವಾಗಿ ನೀನೇ ಭಕ್ತಿ ಮತ್ತು ಭಕ್ತರ ರಹಸ್ಯವನ್ನು ತಿಳಿಸಬಲ್ಲೆ. ॥ ೨೮॥

ಶ್ರೀಭಗವಾನುವಾಚ

ಭಗವಾನ್ ಶ್ರೀಕೃಷ್ಣನೆಂದನು – ಪ್ರಿಯ ಉದ್ಧವನೇ! ನನ್ನ ಭಕ್ತನು ಕೃಪೆಯಮೂರ್ತಿಯಾಗಿರುತ್ತಾನೆ. ಅವನು ಯಾವುದೇ ಪ್ರಾಣಿಯಲ್ಲಿ ವೈರಭಾವವಿರಿಸುವುದಿಲ್ಲ ಹಾಗೂ ಭಾರೀ ದೊಡ್ಡ ದುಃಖವನ್ನೂ ಕೂಡ ಸಂತೋಷವಾಗಿ ಸಹಿಸುತ್ತಾನೆ. ಸತ್ಯವೇ ಅವನ ಜೀವನದ ಜೀವಾಳವಾಗಿದೆ. ಅವನ ಮನಸ್ಸಿನಲ್ಲಿ ಯಾವ ವಿಧವಾದ ಪಾಪವಾಸನೆಯು ಎಂದೂ ಉಂಟಾಗುವುದಿಲ್ಲ. ಅವನು ಸಮದರ್ಶಿಯಾಗಿದ್ದು, ಎಲ್ಲರ ಒಳಿತನ್ನೇ ಮಾಡುವವನಾಗಿರುತ್ತಾನೆ. ॥ ೨೯ ॥ ಅವನ ಬುದ್ಧಿಯು ಕಾಮನೆಗಳಿಂದ ಕಲುಷಿತವಾಗುವುದಿಲ್ಲ. ಅವನು ಸಂಯಮಿಯೂ, ಮೃದು ಸ್ವಭಾವದವನೂ, ಪವಿತ್ರನೂ ಆಗಿರುತ್ತಾನೆ. ಸಂಗ್ರಹ-ಪರಿಗ್ರಹಗಳಿಂದ ಪೂರ್ಣವಾಗಿ ದೂರವಾಗಿರುತ್ತಾನೆ. ಯಾವುದೇ ವಸ್ತುವಿಗಾಗಿ ಅವನು ಪ್ರಯತ್ನಿಸುವುದಿಲ್ಲ ಮಿತವಾಗಿ ಭೋಜನಮಾಡುತ್ತಾನೆ ಹಾಗೂ ಶಾಂತವಾಗಿರುತ್ತಾನೆ. ಅವನ ಬುದ್ಧಿಯು ಸ್ಥಿರವಾಗಿರುತ್ತದೆ. ಅವನಿಗೆ ಕೇವಲ ನನ್ನ ಭರವಸೆಯೇ ಇರುತ್ತದೆ ಹಾಗೂ ಆತ್ಮತತ್ತ್ವದ ಚಿಂತನೆಯಲ್ಲೇ ಸದಾಕಾಲ ತೊಡಗಿರುತ್ತಾನೆ. ॥ ೩೦॥ ಅವನು ಪೂರ್ಣವಾಗಿ ಎಚ್ಚರಿಕೆಯಿಂದಿರುತ್ತಾನೆ. ಗಂಭೀರಸ್ವಭಾವವಿದ್ದು ಧೈರ್ಯಶಾಲಿಯಾಗಿರುತ್ತಾನೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಈ ಆರು ಅವಗುಣಗಳನ್ನು ಗೆದ್ದಿರುತ್ತಾನೆ. ಅವನು ಸ್ವತಃ ಎಂದೂ, ಯಾರಿಂದಲೂ, ಯಾವ ಪ್ರಕಾರದ ಸನ್ಮಾನವನ್ನು ಬಯಸುವುದಿಲ್ಲ, ಆದರೆ ಬೇರೆಯವರನ್ನು ಸನ್ಮಾನಿಸುತ್ತಾನೆ. ಸಮರ್ಥನಾಗಿದ್ದು ನನ್ನ ಕುರಿತಾದ ವಿಷಯವನ್ನು ಬೇರೆಯವರಿಗೆ ತಿಳಿಸಿಹೇಳಲು ತುಂಬಾ ನಿಪುಣನಾಗಿರುತ್ತಾನೆ. ಎಲ್ಲರೊಂದಿಗೆ ಮಿತ್ರತೆಯ ವ್ಯವಹಾರ ಮಾಡುತ್ತಾನೆ. ಅವನ ಹೃದಯದಲ್ಲಿ ಕರುಣೆ ತುಂಬಿರುತ್ತದೆ. ನನ್ನ ತತ್ತ್ವದ ಯಥಾರ್ಥಜ್ಞಾನ ಅವನಿಗಿರುತ್ತದೆ. ॥ ೩೧ ॥

ನನ್ನ ಭಕ್ತನು ಗುಣ ಯಾವುದು, ದೋಷ ಯಾವುದು ಎಂಬುದನ್ನು ತಿಳಿದಿರುತ್ತಾನೆ. ಅವನ ಅಂತಃಕರಣವು ಶುದ್ಧವಾಗಿರುತ್ತದೆ. ಅವನಲ್ಲಿ ಭಕ್ತಿಯ ಪ್ರವಾಹ ನಿರಂತರ ಹೆಚ್ಚುತ್ತಲೇ ಇರುತ್ತದೆ, ಆಗ ಅವನು ನನ್ನಿಂದ ನಿರ್ದೇಶಿಸಲ್ಪಟ್ಟ ಕರ್ಮಗಳನ್ನು ಕೂಡ ಭಕ್ತಿಯಲ್ಲಿ ಬಾಧಕವೆಂದು ತಿಳಿದು ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿ, ಅವನು ಎಲ್ಲ ರೀತಿಯ ಕರ್ಮಗಳಿಂದ ಉಪರಾಮನಾಗಿ, ಅನನ್ಯ ಭಾವದಿಂದ ಶರಣಾಗತನಾಗುತ್ತಾನೆ. ಭಕ್ತಿಯಲ್ಲೇ ಮುಳುಗಿರುವ ಇಂತಹ ಭಕ್ತನು ಬಹಳ ಶ್ರೇಷ್ಠನಾಗಿದ್ದಾನೆ.* ॥ ೩೨ ॥ ನಾನು (ಭಗವಂತನು) ಯಾರು, ಎಷ್ಟು ದೊಡ್ಡವನಾಗಿದ್ದೇನೆ, ಹೇಗಿದ್ದೇನೆ, ಎಂಬುದನ್ನು ತಿಳಿಯಲಿ, ತಿಳಿಯದಿರಲಿ; ಆದರೆ ಅನನ್ಯ ಭಾವದಿಂದ ನನ್ನನ್ನು ಭಜಿಸುವವನೇ ನನ್ನ ಅಭಿಪ್ರಾಯದಲ್ಲಿ ನನ್ನ ಪರಮಭಕ್ತನಾಗಿದ್ದಾನೆ. ॥ ೩೩. ॥

ಕೃಪಾಲುರಕೃತದ್ರೋಹಸ್ತಿತಿಕ್ಷುಃ ಸರ್ವದೇಹಿನಾಮ್ ।
ಸತ್ಯಸಾರೋಽನವದ್ಯಾತ್ಮಾ ಸಮಃ ಸರ್ವೋಪಕಾರಕಃ
॥ ೨೯ ॥

ಕಾಮೈರಹತಧೀರ್ದಾಂತೋ ಮೃದುಃ ಶುಚಿರಕಿಂಚನಃ ।
ಅನೀಹೋ ಮಿತಭುಕ್ ಶಾಂತಃ ಸ್ಥಿರೋ ಮಚ್ಶರಣೋ ಮುನಿಃ
॥ ೩೦ ॥

ಅಪ್ರಮತ್ತೋ ಗಭೀರಾತ್ಮಾ ಧೃತಿಮಾನ್ ಜಿತಷಡ್ಗುಣಃ ।
ಅಮಾನೀ ಮಾನದಃ ಕಲ್ಪೋ ಮೈತ್ರಃ ಕಾರುಣಿಕಃ ಕವಿಃ
॥ ೩೧ ॥

ಆಜ್ಞಾಯೈವಂ ಗುಣಾನ್ ದೋಷಾನ್ ಮಯಾಽಽದಿಷ್ಟಾನಪಿ ಸ್ವಕಾನ್ ।
ಧರ್ಮಾನ್ ಸಂತ್ಯಜ್ಯ ಯಃ ಸರ್ವಾನ್ ಮಾಂ ಭಜೇತ ಸ ಸತ್ತಮಃ
॥ ೩೨ ॥

ಜ್ಞಾತ್ವಾಜ್ಞಾತ್ವಾಥ ಯೇ ವೈ ಮಾಂ ಯಾವಾನ್ಯಶ್ಚಾಸ್ಮಿ ಯಾದೃಶಃ ।
ಭಜಂತ್ಯನನ್ಯಭಾವೇನ ತೇ ಮೇ ಭಕ್ತತಮಾ ಮತಾಃ
॥ ೩೩ ॥

* ಗೀತೆ ೧೮/೬೬ರಲ್ಲಿ ಭಗವದ್ಗೀತೆಯ ಉಪಸಂಹಾರವನ್ನು ಭಗವಂತನು ಶರಣಾಗತಿಯಲ್ಲೇ ಮಾಡಿರುವನು.

ಮಲ್ಲಿಂಗ ಮದ್ಭಕ್ತಜನದರ್ಶನಸ್ಪರ್ಶನಾರ್ಚನಮ್ ।
ಪರಿಚರ್ಯಾ ಸ್ತುತಿಃ ಪ್ರಹ್ವಗುಣಕರ್ಮಾನುಕೀರ್ತನಮ್
॥ ೩೪ ॥

ಮತ್ಕಥಾಶ್ರವಣೇ ಶ್ರದ್ಧಾ ಮದನುಧ್ಯಾನಮುದ್ಧವ ।
ಸರ್ವಲಾಭೋಪಹರಣಂ ದಾಸ್ಯೇನಾತ್ಮನಿವೇದನಮ್
॥ ೩೫ ॥

ಮಜ್ಜನ್ಮ ಕರ್ಮಕಥನಂ ಮಮ ಪರ್ವಾನುಮೋದನಮ್ ।
ಗೀತತಾಂಡವವಾದಿತ್ರಗೋಷ್ಠೀಭಿರ್ಮದ್ಗೃಹೋತ್ಸವಃ
॥ ೩೬ ॥

ಯಾತ್ರಾ ಬಲಿವಿಧಾನಂ ಚ ಸರ್ವವಾರ್ಷಿಕಪರ್ವಸು ।
ವೈದಿಕೀ ತಾಂತ್ರಿಕೀ ದೀಕ್ಷಾ ಮದೀಯವ್ರತಧಾರಣಮ್
॥ ೩೭ ॥

ಮಮಾರ್ಚಾಸ್ಥಾಪನೇ ಶ್ರದ್ಧಾ ಸ್ವತಃ ಸಂಹತ್ಯ ಚೋದ್ಯಮಃ ।
ಉದ್ಯಾನೋಪವನಾಕ್ರೀಡಪುರಮಂದಿರಕರ್ಮಣಿ
॥ ೩೮ ॥

ಸಮ್ಮಾರ್ಜನೋಪಲೇಪಾಭ್ಯಾಂ ಸೇಕಮಂಡಲವರ್ತನೈಃ ।
ಗೃಹಶುಶ್ರೂಷಣಂ ಮಹ್ಯಂ ದಾಸವದ್ಯದಮಾಯಯಾ
॥ ೩೯ ॥

ಅಮಾನಿತ್ವಮದಂಭಿತ್ವಂ ಕೃತಸ್ಯಾಪರಿಕೀರ್ತನಮ್ ।
ಅಪಿ ದೀಪಾವಲೋಕಂ ಮೇ ನೋಪಯುಂಜ್ಯಾನ್ನಿವೇದಿತಮ್
॥ ೪೦ ॥

ಯದ್ಯದಿಷ್ಟತಮಂ ಲೋಕೇ ಯಚ್ಚಾತಿಪ್ರಿಯಮಾತ್ಮನಃ ।
ತತ್ತನ್ನಿವೇದಯೇನ್ಮಹ್ಯಂ ತದಾನಂತ್ಯಾಯ ಕಲ್ಪತೇ
॥ ೪೧ ॥

ಸೂರ್ಯೋಽಗ್ನಿರ್ಬ್ರಾಹ್ಮಣೋ ಗಾವೋ ವೈಷ್ಣವಃ ಖಂ ಮರುಜ್ಜಲಮ್ ।
ಭೂರಾತ್ಮಾ ಸರ್ವಭೂತಾನಿ ಭದ್ರ ಪೂಜಾಪದಾನಿ ಮೇ
॥ ೪೨ ॥

ಸೂರ್ಯೇ ತು ವಿದ್ಯಯಾ ತ್ರಯ್ಯಾ ಹವಿಷಾಗ್ನೌ ಯಜೇತ ಮಾಮ್ ।
ಆತಿಥ್ಯೇನ ತು ವಿಪ್ರಾಗ್ರ್ಯೇ ಗೋಷ್ವಂಗ ಯವಸಾದಿನಾ
॥ ೪೩ ॥

ಪ್ರಿಯ ಉದ್ಧವನೇ ! ಭಕ್ತರಾದವರು ನನ್ನ ಮೂರ್ತಿ ಮತ್ತು ನನ್ನ ಭಕ್ತರ ದರ್ಶನ, ಸ್ಪರ್ಶ, ಪೂಜೆ, ಸೇವೆ, ಶುಶ್ರೂಷೆ, ಸ್ತುತಿ ಮತ್ತು ನಮಸ್ಕಾರ ಮುಂತಾದುವನ್ನು ಮಾಡುತ್ತಾ, ನನ್ನ ಗುಣ-ಕರ್ಮಗಳನ್ನು ಕೀರ್ತಿಸಲಿ. ॥ ೩೪ ॥ ನನ್ನ ಕಥಾಶ್ರವಣದಲ್ಲಿ ಶ್ರದ್ಧೆಯಿದ್ದು ನಿರಂತರ ನನ್ನನ್ನು ಧ್ಯಾನಿಸುತ್ತಿರಲಿ. ದೊರೆತುದೆಲ್ಲವನ್ನು ನನಗೆ ಅರ್ಪಿಸುತ್ತಾ, ದಾಸ್ಯಭಾವದಿಂದ ನನ್ನಲ್ಲಿ ಆತ್ಮನಿವೇದನ ಮಾಡಲಿ ॥ ೩೫ ॥ ನನ್ನ ದಿವ್ಯವಾದ ಜನ್ಮ-ಕರ್ಮಗಳನ್ನು ಚರ್ಚಿಸುತ್ತಿರಲಿ. ಜನ್ಮಾಷ್ಟಮಿ, ರಾಮನವಮಿ ಮುಂತಾದ ಪರ್ವಗಳಲ್ಲಿ ಉತ್ಸವವನ್ನಾಚರಿಸುತ್ತಾ, ಸಂಗೀತ, ನೃತ್ಯ, ವಾದ್ಯಗೋಷ್ಠಿ ಇವುಗಳಿಂದ ಸೇವೆ ನಡೆಸಲಿ. ಸಮಾಜಬಾಂಧವರಿಂದೊಡಗೂಡಿ ನನ್ನ ಮಂದಿರದಲ್ಲಿ ಮಹೋತ್ಸವವನ್ನು ಏರ್ಪಡಿಸಲಿ. ॥ ೩೬ ॥ ವಾರ್ಷಿಕ ಹಬ್ಬ-ಹರಿದಿನಗಳಲ್ಲಿ ನನ್ನ ಕ್ಷೇತ್ರಗಳ ಯಾತ್ರೆ ಮಾಡಲಿ, ಮೆರವಣಿಗೆ ಹೊರಡಿಸಲಿ, ವಿವಿಧ ವಸ್ತು, ಉಪಚಾರಗಳಿಂದ ನನ್ನ ಪೂಜೆ ಮಾಡಲಿ, ವೈದಿಕ ಅಥವಾ ತಾಂತ್ರಿಕ ಪದ್ಧತಿಯಿಂದ ದೀಕ್ಷೆಯನ್ನು ಕೈಗೊಂಡು, ನನ್ನ ವ್ರತಗಳನ್ನು ಪಾಲಿಸುತ್ತಿರಲಿ. ॥ ೩೭ ॥ ಮಂದಿರಗಳಲ್ಲಿ ನನ್ನ ಮೂರ್ತಿಗಳ ಸ್ಥಾಪನೆಯಲ್ಲಿ ಶ್ರದ್ಧೆಯಿರಲಿ. ಒಂದು ವೇಳೆ ಈ ಕಾರ್ಯವು ಒಬ್ಬನಿಂದಾಗದಿದ್ದರೆ, ಬೇರೆಯವರನ್ನು ಸೇರಿಸಿಕೊಂಡು ಉದ್ಯೋಗಮಾಡಲಿ. ನನಗಾಗಿ ಹೂದೋಟ, ಉದ್ಯಾನಗಳು, ಕ್ರೀಡಾಮಂದಿರ, ನಗರ ಹಾಗೂ ದೇವಸ್ಥಾನಗಳನ್ನು ನಿರ್ಮಿಸಲಿ. ॥ ೩೮ ॥ ಸೇವಕನಂತೆ ಭಕ್ತಿಶ್ರದ್ಧೆಯಿಂದೊಡಗೂಡಿ ನಿಷ್ಕಪಟಭಾವದಿಂದ ನನ್ನ ಮಂದಿರದ ಕೈಂಕರ್ಯ ಕೈಗೊಳ್ಳಲಿ. ಗುಡಿಸುವುದು, ಸಾರಿಸುವುದು, ರಂಗೋಲಿಯಿಡುವುದು ಮುಂತಾದುವನ್ನು ಮಾಡುತ್ತಾ, ಬಣ್ಣ-ಬಣ್ಣದ ಮಂಡಲಗಳನ್ನು ಅಲಂಕರಿಸಲಿ. ॥ ೩೯ ॥ ಅಭಿಮಾನ, ದಂಭಾಚಾರ ಇಲ್ಲದಿರಲಿ, ಜೊತೆಗೆ ತನ್ನ ಶುಭಕರ್ಮಗಳ ಬಗ್ಗೆ 'ನಾನು ಇದನ್ನು ಮಾಡಿದೆ' ಎಂದು ಹೇಳಬಾರದು. ಬೇರೆ ದೇವರಿಗೆ ತೋರಿಸಿದ ದೀಪ (ಆರತಿ)ವನ್ನು ನನ್ನ ಪೂಜೆಯಲ್ಲಿ ಉಪಯೋಗಿಸಬಾರದು. ಅರ್ಥಾತ್ ಬೇರೆಯೇ ದೀಪವನ್ನು ನನಗಾಗಿ ಬೆಳಗಿಸಬೇಕು. ॥ ೪೦ ॥ ಪ್ರಪಂಚದಲ್ಲಿ ತನಗೆ ಎಲ್ಲಕ್ಕಿಂತ ಪ್ರಿಯವಾದ, ಅಭೀಷ್ಟವಾಗಿ ಕಂಡುಬರುವ ವಸ್ತುವನ್ನು ನನಗೆ ಸಮರ್ಪಿಸಲಿ. ಹೀಗೆ ಮಾಡುವುದರಿಂದ ಆ ವಸ್ತುಗಳು ಅನಂತಫಲವನ್ನು ಕೊಡುವವು. ॥ ೪೧ ॥

ಪುಣ್ಯಾತ್ಮನಾದ ಉದ್ಧವನೇ ! ಸೂರ್ಯ, ಅಗ್ನಿ, ಬ್ರಾಹ್ಮಣ, ಗೋವು, ವೈಷ್ಣವ, ಆಕಾಶ, ವಾಯು, ಜಲ, ಪೃಥ್ವಿ, ಆತ್ಮಾ ಮತ್ತು ಸಮಸ್ತ ಪ್ರಾಣಿಗಳು ಇವೆಲ್ಲವೂ ನನ್ನ ಪೂಜಾಸ್ಥಾನಗಳಾಗಿವೆ. ॥ ೪೨ ॥ ಪ್ರಿಯ ಉದ್ಧವಾ ! ಋಗ್ವೇದ, ಯಜುರ್ವೇದ, ಸಾಮವೇದಗಳ ಮಂತ್ರಗಳಿಂದ ಸೂರ್ಯನಲ್ಲಿ ನನ್ನನ್ನು ಪೂಜಿಸಬೇಕು. ಹವನದ ಮೂಲಕ ಅಗ್ನಿಯಲ್ಲಿ, ಆತಿಥಿಯ ಮೂಲಕ ಶ್ರೇಷ್ಠಬ್ರಾಹ್ಮಣನಲ್ಲಿ, ಹಚ್ಚ-ಹಸಿರಾದ ಹುಲ್ಲಿನ ಮೂಲಕ ಗೋವಿನಲ್ಲಿ ನನ್ನನ್ನು ಪೂಜಿಸಬೇಕು. ॥ ೪೩ ॥

ವೈಷ್ಣವೇ ಬಂಧುಸತ್ಕೃತ್ಯಾ ಹೃದಿ ಖೇ ಧ್ಯಾನನಿಷ್ಠಯಾ ।
ವಾಯೌ ಮುಖ್ಯಧಿಯಾ ತೋಯೇ ದ್ರವ್ಯೈಸ್ತೋಯಪುರಸ್ಕೃತೈಃ
॥ ೪೪ ॥

ವಿಷ್ಣುಭಕ್ತನನ್ನು ತನ್ನ ಸೋದರನಂತೆ ತಿಳಿದು ಅವನ ಆದರ-ಸತ್ಕಾರ ಮಾಡಬೇಕು. ನಿರಂತರ ಧ್ಯಾನದಲ್ಲೇ ತೊಡಗಿದ್ದು ಹೃದಯಾಕಾಶದಲ್ಲಿ ನನ್ನನ್ನು ಪೂಜಿಸಬೇಕು. ಮುಖ್ಯಪ್ರಾಣನೆಂದು ತಿಳಿದು ವಾಯುವಿನಲ್ಲಿ ಮತ್ತು ಪುಷ್ಪಾದಿ ಸಾಮಗ್ರಿಗಳಿಂದ ನೀರಿನಲ್ಲಿ ನಾರಾಯಣನಾದ ನನ್ನನ್ನು ಆರಾಧಿಸಬೇಕು. ॥ ೪೪ ॥

ಸ್ಥಂಡಿಲೇ ಮಂತ್ರಹೃದಯೈರ್ಭೋಗೈರಾತ್ಮಾನಮಾತ್ಮನಿ ।
ಕ್ಷೇತ್ರಜ್ಞಂ ಸರ್ವಭೂತೇಷು ಸಮತ್ವೇನ ಯಜೇತ ಮಾಮ್
॥ ೪೫ ॥

ರಹಸ್ಯಮಯ ಮಂತ್ರಗಳಿಂದ ವೇದೀ (ಸ್ಥಂಡಿಲ)ಯಲ್ಲಿ ಪೂಜಿಸಬೇಕು. ಭೋಗಪದಾರ್ಥಗಳನ್ನು ತನ್ನೊಳಗೇ ವಿರಾಜಮಾನನಾದ ಸರ್ವಭೂತಾತ್ಮಾ ಪ್ರಭುವೇ ಭೋಜನ ಮಾಡುತ್ತಿದ್ದಾನೆ. (**ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹ ಮಾಶ್ರಿತಃ**) ಎಂದು ಭಾವಿಸಿ ಊಟಮಾಡಬೇಕು. ಎಲ್ಲ ಪ್ರಾಣಿಗಳಲ್ಲಿಯೂ ಓರ್ವನೇ ಕ್ಷೇತ್ರಜ್ಞ ಆತ್ಮನು ಸಮಭಾವದಿಂದ ವ್ಯಾಪ್ತನಾಗಿದ್ದಾನೆ ಹೀಗೆ ತಿಳಿದು ಎಲ್ಲ ಪ್ರಾಣಿಗಳನ್ನು ನನ್ನ ಸ್ವರೂಪವೆಂದೇ ಅರಿತು ಅವರೊಂದಿಗೆ ತುಂಬು ಪ್ರೇಮ ಪೂರ್ಣವಾಗಿ ವ್ಯವಹರಿಸುತ್ತಾ ಪೂಜಿಸಬೇಕು. ॥ ೪೫ ॥

ಧಿಷ್ಣ್ಯೇಷ್ವೇಷ್ವಿತಿ ಮದ್ರೂಪಂ ಶಂಖಚಕ್ರಗದಾಂಬುಜೈಃ ।
ಯುಕ್ತಂ ಚತುರ್ಭುಜಂ ಶಾಂತಂ ಧ್ಯಾಯನ್ನರ್ಚೇತ್ ಸಮಾಹಿತಃ
॥ ೪೬ ॥

ಇವೆಲ್ಲ ಸ್ಥಳಗಳಲ್ಲಿ ನನ್ನದೇ ಭಾವನೆಗೈದು ಧ್ಯಾನಮಾಡಬೇಕು. ಶಂಖ, ಚಕ್ರ, ಗದೆ, ಪದ್ಮ ಇವುಗಳನ್ನು ಧರಿಸಿದ ಚತುರ್ಭುಜ ಭಗವಾನ್ ವಿಷ್ಣುವು ನನ್ನ ಮುಂದೆ ವಿರಾಜಮಾನನಾಗಿದ್ದಾನೆ. ಅವನು ಸಂಪೂರ್ಣ ಶಾಂತಮೂರ್ತಿಯಾಗಿದ್ದಾನೆ. ಹೀಗೆ ಎಚ್ಚರಿಕೆಯಿಂದ ಭಗವಂತನನ್ನು ಮಾನಸಿಕ ರೀತಿಯಿಂದ ಪೂಜಿಸಬೇಕು. ॥ ೪೬ ॥

ಇಷ್ಟಾಪೂರ್ತೇನ ಮಾಮೇವಂ ಯೋ ಯಜೇತ ಸಮಾಹಿತಃ ।
ಲಭತೇ ಮಯಿ ಸದ್ಭಕ್ತಿಂ ಮತ್ಸ್ಮೃತಿಃ ಸಾಧುಸೇವಯಾ
॥ ೪೭ ॥

ಈ ಪ್ರಕಾರ ಏಕಾಗ್ರ ಚಿತ್ತದಿಂದ ಯಜ್ಞ-ಯಾಗಾದಿ 'ಇಷ್ಟ'ವೆಂದೂ ಮತ್ತು ಸಮಾಜದ ಉಪಯೋಗಕ್ಕಾಗಿ ಬರುವ ಧರ್ಮಶಾಲೆಗಳನ್ನು ಕಟ್ಟಿಸುವುದು, ಕೆರೆ-ಬಾವಿಗಳನ್ನು ನಿರ್ಮಿಸುವುದು ಮುಂತಾದ 'ಪೂರ್ತ'ವೆಂದೂ ಇದೆಲ್ಲವನ್ನು ನನ್ನ ಪೂಜೆಯೆಂದೇ ತಿಳಿದು ಮಾಡುವ ಮನುಷ್ಯನಿಗೆ ನನ್ನ ಶ್ರೇಷ್ಠ ಭಕ್ತಿಯು ಪ್ರಾಪ್ತವಾಗುತ್ತದೆ. ಸಂತ ಪುರುಷರ ಸೇವೆ ಮಾಡುವುದರಿಂದ ನನ್ನ ಸ್ವರೂಪದ ಜ್ಞಾನವೂ ಉಂಟಾಗುತ್ತದೆ. ॥ ೪೭ ॥

ಪ್ರಾಯೇಣ ಭಕ್ತಿಯೋಗೇನ ಸತ್ಸಂಗೇನ ವಿನೋದ್ಧವ ।
ನೋಪಾಯೋ ವಿದ್ಯತೇ ಸಧ್ರ್ಯಙ್ ಪ್ರಾಯಣಂ ಹಿ ಸತಾಮಹಮ್
॥ ೪೮ ॥

ಪ್ರಿಯ ಉದ್ಧವನೇ ! ಸತ್ಸಂಗ ಮತ್ತು ಭಕ್ತಿಯೋಗ – ಇವೆರಡರ ಸಾಧನೆಗಳ ಅನುಷ್ಠಾನ ಮಾಡುತ್ತಾ ಇರಬೇಕೆಂಬುದೇ ನನ್ನ ನಿಶ್ಚಯವಾಗಿದೆ. ಪ್ರಾಯಶಃ ಇವೆರಡಲ್ಲದೆ ಸಂಸಾರ ಸಾಗರದಿಂದ ಪಾರಾಗಲು ಬೇರೆ ಯಾವ ಉಪಾಯವೂ ಇಲ್ಲ, ಏಕೆಂದರೆ ಸಂತ-ಮಹಾತ್ಮರ ಶ್ರೇಷ್ಠ ಆಶ್ರಯಸ್ಥಾನ ನಾನೇ ಆಗಿರುವೆನು. ॥ ೪೮ ॥

ಅಥೈತತ್ ಪರಮಂ ಗುಹ್ಯಂ ಶೃಣ್ವತೋ ಯದುನಂದನ ।
ಸುಗೋಪ್ಯಮಪಿ ವಕ್ಷ್ಯಾಮಿ ತ್ವಂ ಮೇ ಭೃತ್ಯಃ ಸುಹೃತ್ಸಖಾ
॥ ೪೯ ॥

ಎಲೈ ಉದ್ಧವನೇ ! ಈಗ ನಾನು ನಿನಗೆ ಇನ್ನೊಂದು ಅತ್ಯಂತ ಗೋಪ್ಯವಾದ, ಪರಮ ರಹಸ್ಯವಾದ ಮಾತನ್ನು ಹೇಳುವೆನು. ಏಕೆಂದರೆ ನೀನು ನನ್ನ ಪ್ರಿಯಸೇವಕನೂ, ಹಿತೈಷಿಯೂ, ಸುಹೃದನೂ, ಪ್ರೇಮಿಯೂ, ಸಖನೂ ಆಗಿರುವೆ. ಜೊತೆಗೆ ಕೇಳುವ ಇಚ್ಛುಕನೂ ಆಗಿರುವೆ. ॥ ೪೯ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಸತ್ಸಂಗದ ಮಹಿಮೆ ಮತ್ತು ಕರ್ಮ ಹಾಗೂ ಕರ್ಮತ್ಯಾಗದ ವಿಧಾನ

ಶ್ರೀಭಗವಾನುವಾಚ

ನ ರೋಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಏವ ಚ ।
ನ ಸ್ವಾಧ್ಯಾಯಸ್ತಪಸ್ತ್ಯಾಗೋ ನೇಷ್ಟಾಪೂರ್ತಂ ನ ದಕ್ಷಿಣಾ ॥ ೧ ॥

ವ್ರತಾನಿ ಯಜ್ಞಶ್ಛಂದಾಂಸಿ ತೀರ್ಥಾನಿ ನಿಯಮಾ ಯಮಾಃ ।
ಯಥಾವರುಂಧೇ ಸತ್ಸಂಗಃ ಸರ್ವಸಂಗಾಪಹೋ ಹಿ ಮಾಮ್ ॥ ೨ ॥

ಸತ್ಸಂಗೇನ ಹಿ ದೈತೇಯಾ ಯಾತುಧಾನಾ ಮೃಗಾಃ ಖಗಾಃ ।
ಗಂಧರ್ವಾಪ್ಸರಸೋ ನಾಗಾಃ ಸಿದ್ಧಾಶ್ಚಾರಣಗುಹ್ಯಕಾಃ ॥ ೩ ॥

ವಿದ್ಯಾಧರಾ ಮನುಷ್ಯೇಷು ವೈಶ್ಯಾಃ ಶೂದ್ರಾಃ ಸ್ತ್ರಿಯೋಽಂತ್ಯಜಾಃ ।
ರಜಸ್ತಮಃಪ್ರಕೃತಯಸ್ತಸ್ಮಿಂಸ್ತಸ್ಮಿನ್ ಯುಗೇಽನಘ ॥ ೪ ॥

ಬಹವೋ ಮತ್ಪದಂ ಪ್ರಾಪ್ತಾ ಸ್ತ್ವಷ್ಟ್ರಕಾಯಾಧವಾದಯಃ ।
ವೃಷಪರ್ವಾ ಬಲಿರ್ಬಾಣೋ ಮಯಶ್ಚಾಥ ವಿಭೀಷಣಃ ॥ ೫ ॥

ಸುಗ್ರೀವೋ ಹನುಮಾನೃಕ್ಷೋ ಗಜೋ ಗೃಧ್ರೋ ವಣಿಕ್ಪಥಃ ।
ವ್ಯಾಧಃ ಕುಬ್ಜಾವ್ರಜೇ ಗೋಪ್ಯೋ ಯಜ್ಞಪತ್ನ್ಯಸ್ತಥಾಪರೇ ॥ ೬ ॥

ತೇ ನಾಧೀತಶ್ರುತಿಗಣಾ ನೋಪಾಸಿತಮಹತ್ತಮಾಃ ।
ಅವ್ರತಾತಪ್ತತಪಸಃ ಸತ್ಸಂಗಾನ್ಮಾಮುಪಾಗತಾಃ ॥ ೭ ॥

ಕೇವಲೇನ ಹಿ ಭಾವೇನ
ಗೋಪ್ಯೋ ಗಾವೋ ನಗಾ ಮೃಗಾಃ ।
ಯೇಽನ್ಯೇ ಮೂಢಧಿಯೋ ನಾಗಾಃ
ಸಿದ್ಧಾ ಮಾಮೀಯುರಂಜಸಾ ॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಸತ್ಸಂಗದ ಮಹಿಮೆಯು ತುಂಬಾ ಅದ್ಭುತವಾಗಿದೆ. ಇದು ಬಹಳ ಶ್ರೇಷ್ಠ ಸಾಧನೆಯಾಗಿದೆ. ನನ್ನ ಭಕ್ತನು ಸತ್ಸಂಗದಿಂದ ನನ್ನನ್ನು ಪಡೆದುಕೊಳ್ಳುವಂತೆ, ಬೇರೆ ಯಾವ ಸಾಧನೆಯಿಂದಲೂ ಇಲ್ಲ. ಸತ್ಸಂಗಸಾಧನೆಯಿಂದ ನನ್ನ ಪ್ರಾಪ್ತಿಯೂ ಸುಲಭವಾಗಿ ಆಗುವಂತೆ-ಯೋಗ, ಸಾಂಖ್ಯ, ಧರ್ಮ, ಸ್ವಾಧ್ಯಾಯ, ತಪಸ್ಸು, ತ್ಯಾಗ, ಇಷ್ಟಾಪೂರ್ತ, ದಕ್ಷಿಣಾ, ವ್ರತ, ಯಜ್ಞ, ವೇದಗಳ ರಹಸ್ಯಮಯ ಮಂತ್ರ, ತೀರ್ಥ, ನಿಯಮ, ಯಮ ಮುಂತಾದ ಸಾಧನೆಗಳಿಂದ ನನ್ನ ಪ್ರಾಪ್ತಿಯು ಬೇಗನೆ ಆಗಲಾರದು. ಏಕೆಂದರೆ, ಸತ್ಸಂಗದಿಂದ ಎಲ್ಲ ರೀತಿಯ ಆಸಕ್ತಿಯೂ ನಾಶವಾಗಿ ಹೋಗುತ್ತದೆ. ಆಸಕ್ತಿಯು ನಾಶವಾಗುವುದರಿಂದ ನನ್ನಲ್ಲಿ ಅವನ ಭಕ್ತಿಯು ಬೆಳೆಯುತ್ತದೆ ಮತ್ತು ಅವನು ಸಹಜವಾಗಿಯೇ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೧-೨॥ ಪುಣ್ಯಾತ್ಮನಾದ ಉದ್ಧವನೇ ! ಪ್ರತಿಯೊಂದು ಯುಗದಲ್ಲಿಯೂ ಸತ್ಸಂಗದ ಮೂಲಕವೇ ದೈತ್ಯರು-ರಾಕ್ಷಸರು, ಪಶು-ಪಕ್ಷಿಗಳು, ಗಂಧರ್ವ-ಅಪ್ಸರೆಯರು, ನಾಗ-ಸಿದ್ಧರು, ಚಾರಣ-ಗುಹ್ಯಕರು, ವಿದ್ಯಾಧರರು ಮುಂತಾದ ವರೆಲ್ಲರೂ ನನ್ನನ್ನು ಪಡೆದುಕೊಂಡಿರುವರು. ಮನುಷ್ಯರಲ್ಲಿ ವೈಶ್ಯರು, ಶೂದ್ರರು, ಸ್ತ್ರೀಯರು, ಅಂತ್ಯಜರು ಮುಂತಾದ ರಜೋಗುಣೀ, ತಮೋಗುಣೀ, ಪ್ರಕೃತಿಯ ಬಹಳಷ್ಟು ಜೀವರು ನನ್ನ ಪರಮ ಪದವನ್ನು ಪಡೆದುಕೊಂಡಿರುವರು. ವೃತ್ರಾಸುರ, ಪ್ರಹ್ಲಾದ, ವೃಷಪರ್ವಾ, ಬಲಿ, ಬಾಣಾಸುರ, ಮಯದಾನವ, ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತರು, ಗಜೇಂದ್ರ, ಜಟಾಯು, ತುಲಾಧಾರವೈಶ್ಯ, ಧರ್ಮವ್ಯಾಧ, ಕುಬ್ಜೆ, ವ್ರಜದ ಗೋಪಿಯರು, ಯಜ್ಞಪತ್ನಿಯರು, ಹಾಗೂ ಬೇರೆ ಜನರೂ ಕೂಡ ಸತ್ಸಂಗದ ಪ್ರಭಾವದಿಂದಲೇ ನನ್ನನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ॥ ೩-೬ ॥ ಅವರಾದರೋ ವೇದಗಳನ್ನು ಅಧ್ಯಯನ ಮಾಡಿರಲಿಲ್ಲ, ವಿಧಿಪೂರ್ವಕ ಮಹಾಪುರುಷರ ಉಪಾಸನೆ ಮಾಡಿರಲಿಲ್ಲ, ಹೀಗೆ ಅವರು ಯಾವುದೇ ವ್ರತ, ತಪಸ್ಸು ಇವುಗಳನ್ನೂ ಮಾಡಿರಲಿಲ್ಲ, ಕೇವಲ ಸತ್ಸಂಗದ ಪ್ರಭಾವದಿಂದಲೇ ಅವರು ನನ್ನನ್ನು ಪಡೆದುಕೊಂಡರು. ॥ ೭ ॥ ಗೋಪಿಯರು, ಹಸುಗಳು, ಯಮಳಾರ್ಜುನ ಮುಂತಾದ ವೃಕ್ಷಗಳು, ವ್ರಜದ ಜಿಂಕೆಗಳು ಮುಂತಾದ ಪಶುಗಳು, ಇವರೆಲ್ಲರು ಭಾವನೆಯ ಮೂಲಕವೇ ನನ್ನನ್ನು ಪಡೆದುಕೊಂಡರು. ಇದಲ್ಲದೆ ಕಾಲಿಯಸರ್ಪದಂತಹ ಮೂಢಬುದ್ಧಿಯೂ ನನ್ನನ್ನು ಹೊಂದಿದನು. ಇಂತಹವರು ಅನೇಕರು ಆಗಿ ಹೋಗಿದ್ದಾರೆ. ಅವರು ಕೇವಲ ಪ್ರೇಮಪೂರ್ಣ ಭಾವದ ಮೂಲಕವೇ ಆಯಾಸವಿಲ್ಲದೆ ನನ್ನನ್ನು ಪಡೆದು ಕೃತಕೃತ್ಯರಾದರು. ॥ ೮ ॥ ಉದ್ಧವನೇ ! ದೊಡ್ಡ-ದೊಡ್ಡ ಪ್ರಯತ್ನಶೀಲ ಸಾಧಕರು ಯೋಗ, ಸಾಂಖ್ಯ, ದಾನ, ವ್ರತ, ತಪಸ್ಸು ಯಜ್ಞ,

ಯಂ ನ ಯೋಗೇನ ಸಾಂಖ್ಯೇನ ದಾನವ್ರತತಪೋಽಧ್ವರೈಃ ।
ವ್ಯಾಖ್ಯಾಸ್ವಾಧ್ಯಾಯಸಂನ್ಯಾಸೈಃ ಪ್ರಾಪ್ನುಯಾದ್ಯತ್ನವಾನಪಿ
॥ ೯ ॥

ರಾಮೇಣ ಸಾರ್ಧಂ ಮಥುರಾಂ ಪ್ರಣೀತೇ
ಶಾಫಲ್ಕಿನಾ ಮಯ್ಯನುರಕ್ತಚಿತ್ತಾಃ ।
ವಿಗಾಢಭಾವೇನ ನ ಮೇ ವಿಯೋಗ-
ತೀವ್ರಾಧಯೋಽನ್ಯಂ ದದೃಶುಃ ಸುಖಾಯ ॥ ೧೦ ॥

ತಾಸ್ತಾಃ ಕ್ಷಪಾಃ ಪ್ರೇಷ್ಠ ತಮೇನ ನೀತಾ
ಮಯೈವ ವೃಂದಾವನಗೋಚರೇಣ ।
ಕ್ಷಣಾರ್ಧವತ್ತಾಃ ಪುನರಂಗ ತಾಸಾಂ
ಹೀನಾ ಮಯಾ ಕಲ್ಪಸಮಾ ಬಭೂವುಃ ॥ ೧೧ ॥

ತಾ ನಾವಿದನ್ಮಯ್ಯನುಷಂಗಬದ್ಧ-
ಧಿಯಃ ಸ್ವಮಾತ್ಮಾನಮದಸ್ತಥೇದಮ್ ।
ಯಥಾ ಸಮಾಧೌ ಮುನಯೋಽಬ್ಧಿತೋಯೇ
ನದ್ಯಃ ಪ್ರವಿಷ್ಟಾ ಇವ ನಾಮರೂಪೇ ॥ ೧೨ ॥

ಮತ್ಕಾಮಾ ರಮಣಂ ಜಾರಮಸ್ವರೂಪವಿದೋಽಬಲಾಃ ।
ಬ್ರಹ್ಮ ಮಾಂ ಪರಮಂ ಪ್ರಾಪುಃ ಸಂಗಾಚ್ಛತಸಹಸ್ರಶಃ
॥ ೧೩ ॥

ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್ ।
ಪ್ರವೃತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ
॥ ೧೪ ॥

ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ ।
ಯಾಹಿ ಸರ್ವಾತ್ಮಭಾವೇನ ಮಯಾ ಸ್ಯಾ ಹ್ಯಕುತೋಭಯಃ
॥ ೧೫ ॥

ಉದ್ಧವ ಉವಾಚ

ಸಂಶಯಃ ಶೃಣ್ವತೋ ವಾಚಂ ತವ ಯೋಗೇಶ್ವರೇಶ್ವರ ।
ನ ನಿವರ್ತತ ಆತ್ಮಸ್ಥೋ ಯೇನ ಭ್ರಾಮ್ಯತಿ ಮೇ ಮನಃ
॥ ೧೬ ॥

ಶ್ರುತಿಗಳ ವ್ಯಾಖ್ಯೆ, ಸ್ವಾಧ್ಯಾಯ, ಸಂನ್ಯಾಸ ಮುಂತಾದ ಸಾಧನೆಗಳಿಂದ ನನ್ನನ್ನು ಪಡೆಯಲಾಗಲಿಲ್ಲ, ಆದರೆ ಸತ್ಸಂಗದಿಂದ ಲಾದರೋ ನಾನು ಅತ್ಯಂತ ಸುಲಭನಾಗುತ್ತೇನೆ. ಉದ್ಧವಾ! ಅಕ್ರೂರನು ಅಣ್ಣ ಬಲರಾಮನೊಂದಿಗೆ ನನ್ನನ್ನು ವ್ರಜದಿಂದ ಮಥುರೆಗೆ ಯಾವಾಗ ಕರೆತಂದನೋ, ಆಗ ಗೋಪಿಯರ ಹೃದಯ ಗಾಢವಾದ ಪ್ರೇಮದ ಕಾರಣ ನನ್ನಲ್ಲಿಯೇ ಅನುರಕ್ತ ವಾಗಿತ್ತು. ನನ್ನ ವಿಯೋಗದ ತೀವ್ರ ವ್ಯಾಧಿಯಿಂದ ನಾನಲ್ಲದೆ ಅವರಿಗೆ ಬೇರೆ ಯಾವ ವಸ್ತುವು ಸುಖಕಾರಕವಾಗದಷ್ಟು ವ್ಯಾಕುಲ ರಾಗಿದ್ದರು. ॥ ೯-೧೦ ॥ ನಾನೊಬ್ಬನೇ ಅವರ ಏಕಮಾತ್ರ ಪ್ರಿಯತಮನಾಗಿರುವೆನು ಎಂಬುದನ್ನು ನೀನು ತಿಳಿದಿರುವೆ. ನಾನು ವೃಂದಾವನದಲ್ಲಿದ್ದಾಗ ಅವರು ಅನೇಕ ರಾತ್ರಿಗಳು, ಮಹಾರಾಸದ ರಾತ್ರಿಗಳು ನನ್ನೊಡನೆ ಕ್ಷಣಾರ್ಧದಂತೆ ಕಳೆದಿದ್ದರು. ಆದರೆ ಪ್ರಿಯ ಉದ್ಧವಾ! ನನ್ನ ಹೊರತು ಅದೇ ರಾತ್ರಿಗಳು ಅವರಿಗೆ ಒಂದೊಂದು ಕಲ್ಪಕ್ಕೆ ಸಮಾನವಾಗುತ್ತಿತ್ತು. ॥ ೧೧ ॥ ಆ ಗೋಪಿಯರಿಗೆ ನನ್ನಲ್ಲಿ ಎಂತಹ ನಿಶ್ಚಲವಾದ ಪ್ರೇಮವಿತ್ತೆಂದರೆ, ಅವರ ಬುದ್ಧಿ ನನ್ನಲ್ಲಿ ಸ್ಥಿರವಾಗಿ ಹೋಗಿತ್ತು. ಅವರಿಗೆ ನಾನಲ್ಲದೆ ಬೇರೆ ಏನೂ ಸ್ಮೃತಿಯಲ್ಲಿ ಇರುತ್ತಿರಲಿಲ್ಲ, ಅವರ ಭಾವನೆ ನನ್ನಲ್ಲಿ ಗಾಢವಾಗಿ ಆವಿಷ್ಟವಾಗಿ ಹೋಗಿತ್ತು. ಅವರಿಗೆ 'ಇದು ನನ್ನ ಶರೀರವೋ ಅಥವಾ ಅದೋ' ಇದೂ ಕೂಡ ತಿಳಿಯದಷ್ಟು ಪ್ರಗಾಢ ಭಕ್ತಿ ಅವರದಾಗಿತ್ತು. ಮುನಿಗಳು ಸಮಾಧಿಯಲ್ಲಿ ಎಲ್ಲವನ್ನು ಮರೆತು ಭಗವಂತ ನೊಂದಿಗೇ ಒಂದಾಗುವಂತೆ, ನದಿಗಳು ಸಮುದ್ರವನ್ನು ಸೇರಿ ತಮ್ಮ ನಾಮ-ರೂಪಗಳನ್ನು ಕಳೆದುಕೊಳ್ಳುವಂತೆ ಆ ಗೋಪಿಯರೂ ಕೂಡ ನನ್ನಲ್ಲಿ ಏಕೀಭಾವದಿಂದ ಸ್ಥಿತರಾಗಿದ್ದರು. ॥ ೧೨ ॥ ಉದ್ಧವನೇ! ಆ ಗೋಪಿಯರಲ್ಲಿ ಅನೇಕರು ನನ್ನ ವಾಸ್ತವಿಕ ಸ್ವರೂಪವನ್ನು ತಿಳಿಯದವರೂ ಇದ್ದರು. ಅವರು ಕೇವಲ ನನ್ನನ್ನು ಪ್ರಿಯತಮ ನೆಂದೇ ತಿಳಿಯುತ್ತಿದ್ದರು. ಜಾರಭಾವದಿಂದ ನನ್ನೊಡನೆ ಸೇರುವ ಆಕಾಂಕ್ಷೆ ಹೊಂದಿದ್ದರು. ಆ ಸಾಧನಹೀನ ಸಾವಿರಾರು ಅಬಲೆ ಯರು ಕೇವಲ ಸಂಗದ ಪ್ರಭಾವದಿಂದಲೇ ಪರಬ್ರಹ್ಮ ಪರಮಾತ್ಮ ನಾದ ನನ್ನನ್ನು ಪಡೆದುಕೊಂಡರು. ॥ ೧೩ ॥ ಆದ್ದರಿಂದ ಎಲೈ ಉದ್ಧವಾ! ನೀನು ನಿವೃತ್ತಿ ಅಥವಾ ಪ್ರವೃತ್ತಿ ಹಾಗೂ ಇಹ-ಪರ ಸಂಬಂಧೀ ಎಲ್ಲ ಕರ್ಮಗಳನ್ನು ತ್ಯಜಿಸಿ, ಸಮಸ್ತ ಪ್ರಾಣಿಗಳ ಆತ್ಮ ಸ್ವರೂಪೀ ಏಕಮಾತ್ರ ಪರಮಾತ್ಮನಾದ ನನ್ನನ್ನೇ ಅನನ್ಯ ಭಾವದಿಂದ ಶರಣಾಗು. ಮತ್ತೆ ನಿನಗೆ ಯಾವುದೇ ಭಯ ಇರಲಾ ರದು. ॥ ೧೪-೧೫ ॥

ಉದ್ಧವನೆಂದನು – ಓ ಯೋಗೇಶ್ವರರಿಗೂ ಈಶ್ವರನೇ! ನಿನ್ನ ಅಮೃತಪೂರ್ಣ ವಾಣಿಯನ್ನು ಕೇಳುತ್ತಿದ್ದರೂ ನನಗೆ ತೃಪ್ತಿಯಾಗು ತ್ತಿಲ್ಲ, ಆದರೆ ಇನ್ನೂ ನನ್ನೊಳಗಿನ ಸಂಶಯ ನಿವೃತ್ತವಾಗಲಿಲ್ಲ, ಕರ್ಮಮಾಡಬೇಕೇ ಅಥವಾ ಬೇಡವೇ ಈ ವಿಷಯದಲ್ಲಿ ನನ್ನ ಬುದ್ಧಿಯು ಭ್ರಮಿತವಾಗಿದೆ. ಆದ್ದರಿಂದ ನನಗೆ ದಯಾಮಾಡಿ ಚೆನ್ನಾಗಿ ತಿಳಿಸಿಹೇಳು. ॥ ೧೬ ॥

ಶ್ರೀಭಗವಾನುವಾಚ

ಸ ಏಷ ಜೀವೋ ವಿವರಪ್ರಸೂತಿಃ
ಪ್ರಾಣೇನ ಘೋಷೇಣ ಗುಹಾಂ ಪ್ರವಿಷ್ಟಃ ।

ಮನೋಮಯಂ ಸೂಕ್ಷ್ಮಮುಪೇತ್ಯ ರೂಪಂ
ಮಾತ್ರಾ ಸ್ವರೋ ವರ್ಣ ಇತಿ ಸ್ಥವಿಷ್ಠಃ ॥ ೧೭ ॥

ಯಥಾನಲಃ ಖೇಽನಿಲಬಂಧುರೂಷ್ಮಾ
ಬಲೇನ ದಾರುಣ್ಯಧಿಮಥ್ಯಮಾನಃ ।

ಅಣುಃ ಪ್ರಜಾತೋ ಹವಿಷಾ ಸಮಿಧ್ಯತೇ
ತಥೈವ ಮೇ ವ್ಯಕ್ತಿರಿಯಂ ಹಿ ವಾಣೀ ॥ ೧೮ ॥

ಏವಂ ಗದಿಃ ಕರ್ಮ ಗತಿರ್ವಿಸರ್ಗೋ
ಘ್ರಾಣೋ ರಸೋ ದೃಕ್ ಸ್ಪರ್ಶಃ ಶ್ರುತಿಶ್ಚ ।

ಸಂಕಲ್ಪವಿಜ್ಞಾನಮಥಾಭಿಮಾನಃ
ಸೂತ್ರಂ ರಜಃಸತ್ತ್ವತಮೋವಿಕಾರಃ ॥ ೧೯ ॥

ಅಯಂ ಹಿ ಜೀವಸ್ತ್ರಿವೃದಬ್ಜಯೋನಿ-
ರವ್ಯಕ್ತ ಏಕೋ ವಯಸಾ ಸ ಆದ್ಯಃ ।

ವಿಶ್ಲಿಷ್ಟಶಕ್ತಿರ್ಬಹುಧೇವ ಭಾತಿ
ಬೀಜಾನಿ ಯೋನಿಂ ಪ್ರತಿಪದ್ಯ ಯದ್ವತ್ ॥ ೨೦ ॥

ಶ್ರೀಭಗವಂತನು ಹೇಳುತ್ತಾನೆ – ಪ್ರಿಯ ಉದ್ಧವಾ! ಏಕಮಾತ್ರ ಪರಮೇಶ್ವರನೇ ವಿಶ್ವದ ರೂಪದಲ್ಲಿದ್ದಾನೆ. "ಜೀವಯತಿ ಇತಿ ಜೀವಃ" ಅರ್ಥಾತ್ – ಪರಮಾತ್ಮನೇ ಎಲ್ಲರಿಗೆ ಚೇತನಾ ಶಕ್ತಿಯನ್ನು ಮತ್ತು ಜೀವನಶಕ್ತಿಯನ್ನು ಕರುಣಿಸುತ್ತಾನೆ. ಆದ್ದರಿಂದ ಜೀವರೂಪದಿಂದ ಪರಮಾತ್ಮನೇ ಇದ್ದಾನೆ. ಆ ಪರಮೇಶ್ವರನೇ ಮೊದಲಿಗೆ ಅನಾಹತ ನಾದಸ್ವರೂಪ ಪರಾವಾಣೀ ಹೆಸರಿನ ಪ್ರಾಣದೊಂದಿಗೆ ಮೂಲಾಧಾರ ಚಕ್ರದಲ್ಲಿ ಪ್ರವೇಶಿಸುತ್ತಾನೆ. ಮತ್ತೆ ಮನೋಮಯ ರೂಪವನ್ನು ಮನಸ್ಸಿನಿಂದ ಗ್ರಹಿಸಿ ಮಣಿಪೂರಕ ಚಕ್ರದಲ್ಲಿ ಪಶ್ಯಂತಿ ಹೆಸರಿನ ವಾಣಿಯ ಸೂಕ್ಷ್ಮರೂಪವನ್ನು ಧರಿಸುತ್ತಾನೆ. ಹಾಗೆಯೇ ಕಂಠದೇಶದಲ್ಲಿ ಸ್ಥಿತ ವಿಶುದ್ಧ ಹೆಸರಿನ ಚಕ್ರದಲ್ಲಿ ಬಂದು ಮಧ್ಯಮಾ ಹೆಸರಿನ ರೂಪವನ್ನು ಧರಿಸುತ್ತಾನೆ. ಅನಂತರ ಬಾಯಿಗೆ ಬಂದು ಅಕಾರಾದಿ ಮಾತ್ರಾ, ಸ್ವರ, ವರ್ಣ ಮುಂತಾದ ರೂಪಗಳಲ್ಲಿ ವೈಖರೀ ಹೆಸರಿನಿಂದ ವಾಣಿಯ ಸ್ಥೂಲ ರೂಪವನ್ನು ಧರಿಸುತ್ತಾನೆ. ಈ ಪ್ರಕಾರ ಶಬ್ದಬ್ರಹ್ಮನ ರೂಪದಲ್ಲಿ ಪರಮಾತ್ಮನದೇ ಅಭಿವ್ಯಕ್ತಿ ಎಂದು ತಿಳಿಯಬೇಕು. ॥ ೧೭ ॥ ಆಕಾಶದಲ್ಲಿ ಅಗ್ನಿಯು ಊಷ್ಮಾ ಅಥವಾ ವಿದ್ಯುತ್ತಿನ ರೂಪದಲ್ಲಿ ಸ್ಥಿತವಾಗಿರುತ್ತದೆ. ಅದೇ ಅಗ್ನಿಯು ಬಲಪೂರ್ವಕ ಕಡೆಗೋಲಿನಿಂದ ಅರಣಿಯನ್ನು ಕಡೆದಾಗ ಸಣ್ಣ-ಸಣ್ಣ ಕಿಡಿಗಳಾಗಿ ಪ್ರಕಟವಾಗುತ್ತದೆ. ಆದರೆ ಆ ಅಗ್ನಿಯು ಹವಿರ್ದ್ರವ್ಯವನ್ನು ಪಡೆದಾಗ ಪ್ರಜ್ವಲಿತವಾಗಿ ಪ್ರಚಂಡರೂಪವನ್ನು ಪಡೆಯುತ್ತದೆ. ಹೀಗೆಯೇ ಈ ವಾಣಿಯೂ ಕೂಡ ಸೂಕ್ಷ್ಮರೂಪದಿಂದ ಸ್ಥೂಲರೂಪದಲ್ಲಿ ಪ್ರಕಟವಾಗುತ್ತದೆ. ಈ ಪ್ರಕಾರ ಶಬ್ದಬ್ರಹ್ಮನ ರೂಪದಲ್ಲಿ ನನ್ನದೇ ಅಭಿವ್ಯಕ್ತಿಯಾಗಿದೆ. ॥ ೧೮ ॥ ಇದೇ ರೀತಿ ಬೇರೆ ಕ್ರಿಯೆಗಳ ಕುರಿತು ತಿಳಿದುಕೋ. ಅವೆಲ್ಲ ನನ್ನದೇ ಅಭಿವ್ಯಕ್ತಿಯಾಗಿವೆ. ಮಾತಾಡುವುದು, ಕರ್ಮಮಾಡುವುದು, ನಡೆಯುವುದು, ಮಲ-ಮೂತ್ರ ವಿಸರ್ಜಿಸುವುದು, ಮೂಸುವುದು, ರುಚಿ ತೆಗೆದುಕೊಳ್ಳುವುದು, ನೋಡುವುದು, ಸ್ಪರ್ಶಿಸುವುದು, ಕೇಳುವುದು ಮನಸಿನ ಮೂಲಕ ಸಂಕಲ್ಪ-ವಿಕಲ್ಪಗೈಯ್ಯುವುದು, ಬುದ್ಧಿಯಿಂದ ಅರಿಯುವುದು, ಅಭಿಮಾನಪಡುವುದು, ಮುಂತಾದ ಎಲ್ಲ ಕ್ರಿಯೆಗಳೂ, ಮಹತ್ತತ್ತ್ವ ಹಾಗೂ ಸತ್ತ್ವ, ರಜ, ತಮ ಮೊದಲಾದ ಮೂರೂ ಗುಣಗಳ ವಿಕಾರಗಳೂ, ಇದಲ್ಲದೆ ಇರುವ ಈ ದೃಶ್ಯಪ್ರಪಂಚ ಎಲ್ಲವೂ ನನ್ನದೇ ಅಭಿವ್ಯಕ್ತಿ ಎಂದು ತಿಳಿ. ಇವೆಲ್ಲ ರೂಪಗಳಲ್ಲಿ ಪರಮಾತ್ಮನಾದ ನಾನೇ ಪ್ರಕಾಶಿತನಾಗುತ್ತಿದ್ದೇನೆ. ॥ ೧೯ ॥ ಪರಮಾತ್ಮನೇ ತ್ರಿಗುಣಮಯ ಬ್ರಹ್ಮಾಂಡರೂಪೀ, ಕಮಲವನ್ನು ಉಂಟುಮಾಡುವವನು. ಆ ನಾರಾಯಣನು ಅವ್ಯಕ್ತನೂ ಆಗಿದ್ದಾನೆ ಮತ್ತು ಎಲ್ಲ ರೂಪಗಳಲ್ಲಿ ವಿಭಕ್ತನಾಗಿಯೂ ಏಕಮಾತ್ರ ಅವನೇ ಆಗಿದ್ದಾನೆ. ಪುರಾಣಪುರುಷನೂ, ಎಲ್ಲರ ಆದಿಯೂ ಆಗಿದ್ದಾನೆ. ಅವನೇ ಅನೇಕ ಶಕ್ತಿಗಳಲ್ಲಿ ತನ್ನನ್ನು ವಿಭಜಿಸಿಕೊಂಡು ಅನೇಕ ರೂಪಗಳನ್ನು ಧರಿಸಿರುವನು. ಅವನು ಆಯಾಯಾ ರೂಪಗಳಲ್ಲಿ ಪ್ರಕಾಶಿತನಾಗುತ್ತಿದ್ದಾನೆ. ಬೀಜವನ್ನು ನೆಲದಲ್ಲಿ ನೆಟ್ಟರೆ ಅದು ಅನೇಕ ರೂಪವಾಗಿ ಅಭಿವ್ಯಕ್ತವಾಗುವಂತೆ, ಪರಮಾತ್ಮನ ಉಜ್ಜೀವನೀ ಶಕ್ತಿಯನ್ನು ಪಡೆದು ಈ ಸಮಸ್ತ ವಿಶ್ವವು ಅನೇಕ ರೂಪಗಳಲ್ಲಿ

ಯಸ್ಮಿನ್ನಿದಂ ಪ್ರೋತಮಶೇಷಮೋತಂ
ಪಟೋ ಯಥಾ ತಂತುವಿತಾನಸಂಸ್ಥಃ ।
ಯ ಏಷ ಸಂಸಾರತರುಃ ಪುರಾಣಃ
ಕರ್ಮಾತ್ಮಕಃ ಪುಷ್ಪಫಲೇ ಪ್ರಸೂತೇ ॥ ೨೦ ॥

ಪ್ರಕಟವಾಗಿದೆ. ಇದೆಲ್ಲವೂ ಆ ಪರಮಾತ್ಮನದೇ ಅಭಿವ್ಯಕ್ತಿಯಾಗಿದೆ. ಬಟ್ಟೆಯಲ್ಲಿ ನೂಲು ಓತಪ್ರೋತವಾಗಿರುವಂತೆ ಈ ವಿಶ್ವದಲ್ಲಿ ಏಕಮಾತ್ರ ಪರಮಾತ್ಮನೇ ಓತಪ್ರೋತನಾಗಿದ್ದಾನೆ. ಅವನೇ ತುಂಬಿರುವನು. ಈ ಪ್ರಪಂಚರೂಪೀ ವೃಕ್ಷವು ಪುರಾತನವಾಗಿದೆ. ಕರ್ಮದ ಪರಂಪರೆ ಎಂದಿನಿಂದಲೋ ನಡೆದುಕೊಂಡು ಬಂದಿದೆ. ಆದ್ದರಿಂದ ಕರ್ಮರೂಪವು ಅವನೇ ಆಗಿದ್ದಾನೆ. ಆಗಿದೆ, ಆ ಕರ್ಮವೇ ಪುಷ್ಪ ಮತ್ತು ಫಲವನ್ನು ಉತ್ಪನ್ನ ಮಾಡುತ್ತದೆ. ॥ ೨೦-೨೧ ॥

ದ್ವೇ ಅಸ್ಯ ಬೀಜೇ ಶತಮೂಲಸ್ತ್ರಿನಾಲಃ
ಪಂಚಸ್ಕಂಧಃ ಪಂಚರಸಪ್ರಸೂತಿಃ ।
ದಶೈಕಶಾಖೋ ದ್ವಿಸುಪರ್ಣನೀಡ-
ಸ್ತ್ರಿವಲ್ಕಲೋ ದ್ವಿಫಲೋಽರ್ಕಂ ಪ್ರವಿಷ್ಟಃ ॥ ೨೨ ॥

ಈ ಪ್ರಪಂಚ ವೃಕ್ಷಕ್ಕೆ ಪಾಪ ಮತ್ತು ಪುಣ್ಯರೂಪೀ ಎರಡು ಬೀಜಗಳಿವೆ. ನೂರಾರು ವಾಸನೆಗಳೇ ಇದರ ಬೇರು ಆಗಿದೆ. ಮೂರು ಗುಣಗಳೇ ಇದರ ಕಾಂಡವಾಗಿದೆ. ಪಂಚಮಹಾಭೂತಗಳೇ ದಪ್ಪವಾದ ಐದು ಶಾಖೆಗಳಿವೆ. ಅದರಲ್ಲಿ ಐದು ಪ್ರಕಾರದ (ಶಬ್ದ, ಸ್ಪರ್ಶ, ರೂಪ, ರಸ, ಗಂಧ) ರಸಗಳು ಹೊರಡುತ್ತವೆ. ಹತ್ತು ಇಂದ್ರಿಯಗಳು ಮತ್ತು ಒಂದು ಮನಸ್ಸೇ ಟೊಂಗೆಗಳು. ಒಂದು ಜೀವ ಮತ್ತೊಂದು ಈಶ್ವರ ಈ ವೃಕ್ಷದಲ್ಲಿ ಗೂಡುಕಟ್ಟಿಕೊಂಡು ವಾಸಿಸುತ್ತಾರೆ. ವಾತ, ಪಿತ್ತ , ಕಫ ಇವು ಮೂರು ಇದರ ಸಿಪ್ಪೆಗಳಾಗಿವೆ. ಸುಖ-ದುಃಖ ಇವೆರಡು ಫಲಗಳಾಗಿವೆ. ಇಂತಹ ಈ ಪ್ರಪಂಚವೃಕ್ಷವು ಸೂರ್ಯಮಂಡಲದವರೆಗೆ ಹಬ್ಬಿದೆ.

ಅದಂತಿ ಚೈಕಂ ಫಲಮಸ್ಯ ಗೃಧ್ರಾ
ಗ್ರಾಮೇಚರಾ ಏಕಮರಣ್ಯವಾಸಾಃ ।
ಹಂಸಾ ಯ ಏಕಂ ಬಹುರೂಪಮಿಜ್ಯೈ-
ರ್ಮಾಯಾಮಯಂ ವೇದ ಸ ವೇದ ವೇದಮ್ ॥ ೨೩ ॥

ಅವಿದ್ಯೆಗೆ ಮಹತ್ತ್ವವನ್ನಿತ್ತು ವಿಷಯಲೋಲುಪರಾದರೋ ಇದರ ದುಃಖರೂಪೀ ಫಲವನ್ನು ಉಣ್ಣುವರು. ಆದರೆ ವಿದ್ಯೆಗೆ ಮಹತ್ತ್ವವನ್ನೀಯುವವರು ಪವಿತ್ರಾತ್ಮರು ಇದರ ಸುಖರೂಪೀ ಫಲವನ್ನು ಮೆಲ್ಲುವರು. ಇಂತಹ ಪರಮಹಂಸ ಶ್ರೇಷ್ಠ ಮಹಾತ್ಮರು ಆ ಅದ್ವಿತೀಯ ಬ್ರಹ್ಮನನ್ನೇ ಅನೇಕ ರೂಪಗಳಲ್ಲಿ ನೋಡುತ್ತಾರೆ. ವಾಸ್ತವವಾಗಿ ವೇದದ ಈ ತಾತ್ಪರ್ಯವನ್ನು ತಿಳಿದವರೇ ಸರಿಯಾಗಿ ಅರಿತವರಾಗಿದ್ದಾರೆ. ॥ ೨೨-೨೩ ॥ ಎಲೈ ಉದ್ಧವನೇ ! ಈ ಪ್ರಕಾರ ಸದ್ಗುರುವಿನ ಉಪಾಸನೆಯಿಂದ ಹಾಗೂ ಅನನ್ಯ ಭಕ್ತಿಯಿಂದ ನೀನು ಜ್ಞಾನ ಸಂಪನ್ನನಾದಾಗ ಮತ್ತೆ ಎಚ್ಚರಿಕೆಯಿಂದ ಜ್ಞಾನರೂಪೀ ಹರಿತವಾದ ಖಡ್ಗದಿಂದ ನಿನ್ನ ಜೀವಭಾವವನ್ನು ತ್ಯಾಗ ಮಾಡುವೆ ಮತ್ತು ಆತ್ಮಸ್ವರೂಪವನ್ನು ಅರಿತುಕೊಂಡು ಆ ಅಸ್ತ್ರವನ್ನೂ ತ್ಯಾಗಗೈದು ಶಾಶ್ವತವಾಗಿ ನಿನ್ನ ಅಖಂಡಸ್ವರೂಪದಲ್ಲಿ ಸ್ಥಿತನಾಗುವೆ. ॥ ೨೪ ॥

ಏವಂ ಗುರೂಪಾಸನಯೈಕಭಕ್ತ್ಯಾ
ವಿದ್ಯಾಕುಠಾರೇಣ ಶಿತೇನ ಧೀರಃ ।
ವಿವೃಶ್ಚ್ಯ ಜೀವಾಶಯಮಪ್ರಮತ್ತಃ
ಸಂಪದ್ಯ ಚಾತ್ಮಾನಮಥ ತ್ಯಜಾಸ್ತ್ರಮ್ ॥ ೨೪ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ದ್ವಾದಶೋಽಧ್ಯಾಯಃ॥ ೧೨ ॥

ಹದಿಮೂರನೆಯ ಅಧ್ಯಾಯ

ಹಂಸರೂಪದಿಂದ ಸನಕಾದಿಗಳಿಗೆ ಮಾಡಿದ ಉಪದೇಶದ ವರ್ಣನೆ

ಶ್ರೀಭಗವಾನುವಾಚ

ಸತ್ತ್ವಂ ರಜಸ್ತಮ ಇತಿ ಗುಣಾ ಬುದ್ಧೇರ್ನ ಚಾತ್ಮನಃ।
ಸತ್ತ್ವೇನಾನ್ಯತಮೌ ಹನ್ಯಾತ್ತತ್ತ್ವಂ ಸತ್ತ್ವೇನ ಚೈವ ಹಿ
॥ ೧ ॥

ಸತ್ತ್ವಾದ್ಧರ್ಮೋ ಭವೇದ್ವೃದ್ಧಾತ್ಪುಂಸೋ ಮದ್ಭಕ್ತಿಲಕ್ಷಣಃ।
ಸಾತ್ತ್ವಿಕೋಪಾಸಯಾ ಸತ್ತ್ವಂ ತತೋ ಧರ್ಮಃ ಪ್ರವರ್ತತೇ
॥ ೨ ॥

ಧರ್ಮೋ ರಜಸ್ತಮೋ ಹನ್ಯಾತ್ತತ್ತ್ವವೃದ್ಧಿರನುತ್ತಮಃ।
ಆಶು ನಶ್ಯತಿ ತನ್ಮೂಲೋ ಹ್ಯಧರ್ಮ ಉಭಯೇ ಹತೇ
॥ ೩ ॥

ಆಗಮೋಽಪಃ ಪ್ರಜಾ ದೇಶಃ ಕಾಲಃ ಕರ್ಮ ಚ ಜನ್ಮ ಚ।
ಧ್ಯಾನಂ ಮಂತ್ರೋಽಥ ಸಂಸ್ಕಾರೋ ದಶೈತೇ ಗುಣಹೇತವಃ
॥ ೪ ॥

ತತ್ತತ್ ಸಾತ್ತ್ವಿಕಮೇವೈಷಾಂ ಯದ್ಯದ್ವೃದ್ಧಾಃ ಪ್ರಚಕ್ಷತೇ।
ನಿಂದಂತಿ ತಾಮಸಂ ತತ್ತದ್ರಾಜಸಂ ತದುಪೇಕ್ಷಿತಮ್
॥ ೫ ॥

ಸಾತ್ತ್ವಿಕಾನ್ಯೇವ ಸೇವೇತ ಪುಮಾನ್ ಸತ್ತ್ವವಿವೃದ್ಧಯೇ।
ತತೋ ಧರ್ಮಸ್ತತೋ ಜ್ಞಾನಂ ಯಾವತ್ ಸ್ಮೃತಿರಪೋಹನಮ್
॥ ೬ ॥

ವೇಣುಸಂಘರ್ಷಜೋ ವಹ್ನಿರ್ದಗ್ಧ್ವಾ ಶಾಮ್ಯತಿ ತದ್ವನಮ್।
ಏವಂ ಗುಣವ್ಯತ್ಯಯಜೋ ದೇಹಃ ಶಾಮ್ಯತಿ ತತ್ಕ್ರಿಯಃ
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವಾ! ಸತ್ತ್ವ, ರಜ, ತಮ, ಈ ಮೂರೂ ಗುಣಗಳು ಬುದ್ಧಿಯದಾಗಿವೆ, ಆತ್ಮನದಲ್ಲ. ಸತ್ತ್ವಗುಣದ ಮೂಲಕ ರಜ ಮತ್ತು ತಮೋಗುಣಗಳನ್ನು ನಾಶಮಾಡಿ, ಮತ್ತೆ ಅಂತಃಕರಣದ ಶುದ್ಧಿಯಾದ ಬಳಿಕ ಸತ್ತ್ವಗುಣವನ್ನು ತ್ಯಜಿಸಿ, ಗುಣಾತೀತನಾಗಬೇಕು. ॥ ೧॥ ಪುರುಷನು ಸತ್ತ್ವಗುಣ ಸಂಪನ್ನನಾದಾಗ ಭಗವತ್ಪ್ರಾಪ್ತಿಯನ್ನು ಮಾಡಿಸುವ ಧರ್ಮದ ವೃದ್ಧಿಯಾಗುತ್ತದೆ. ಸಾತ್ತ್ವಿಕ ಪದಾರ್ಥಗಳನ್ನೇ ಸೇವಿಸುವುದರಿಂದ ಕ್ರಮಶಃ ಸತ್ತ್ವಗುಣವು ಬೆಳೆಯುತ್ತದೆ. ತತ್ಫಲವಾಗಿ ಧರ್ಮದಲ್ಲಿ ಪ್ರವೃತ್ತಿ ಬೆಳೆಯುತ್ತದೆ. ॥ ೨॥ ಸತ್ತ್ವಗುಣವು ಚೆನ್ನಾಗಿ ಬೆಳೆದಾಗ ರಜ ಮತ್ತು ತಮ ಇವೆರಡನ್ನು ಅದು ಪೂರ್ಣವಾಗಿ ನಾಶಮಾಡಿಬಿಡುತ್ತದೆ. ಅಧರ್ಮವು ರಜ ಹಾಗೂ ತಮದ ಮೂಲವಾಗಿದೆ, ಮತ್ತೆ ಆ ಅಧರ್ಮವೂ ಕೂಡಲೇ ನಾಶವಾಗಿಬಿಡುತ್ತದೆ. ಈ ಪ್ರಕಾರ ಪುರುಷನು ಪೂರ್ಣರೂಪದಿಂದ ಶುದ್ಧನಾಗುತ್ತಾನೆ. ॥ ೩. ॥ ಗುಣಗಳ ವೃದ್ಧಿಗಾಗಿ ಈ ಹತ್ತು ಕಾರಣಗಳನ್ನು ಹೇಳಲಾಗಿವೆ. (೧) ಶಾಸ್ತ್ರ, (೨) ಜಲ, (೩) ಪ್ರಜೆ 'ಸಂತತಿ', (೪) ದೇಶ, (೫) ಕಾಲ, (೬) ಕರ್ಮ, (೭) ಜನ್ಮ, (೮) ಧ್ಯಾನ, (೯) ಮಂತ್ರ, (೧೦) ಸಂಸ್ಕಾರ. ಈ ಹತ್ತು ವಸ್ತುಗಳು ಸಾತ್ತ್ವಿಕವಾಗಿದ್ದರೆ ಸತ್ತ್ವಗುಣವನ್ನು, ರಾಜಸವಾಗಿದ್ದರೆ ರಜೋಗುಣವನ್ನು, ತಾಮಸವಾಗಿದ್ದರೆ ತಮೋಗುಣವನ್ನು ವೃದ್ಧಿಪಡಿಸುವುದಾಗಿದೆ. ॥ ೪ ॥ ಈಗ ಗುಣಗಳನ್ನು ಹೇಗೆ ಗುರುತಿಸಬೇಕು ; ಅದಕ್ಕಾಗಿ ಹೇಳುತ್ತಾರೆ – ಯಾರ ಕುರಿತು ಶ್ರೇಷ್ಠ ಜನರು ಪ್ರಶಂಸಿಸುತ್ತಾರೋ ಅವರನ್ನು ಸಾತ್ತ್ವಿಕರೆಂದೂ, ಯಾರನ್ನು ಉಪೇಕ್ಷಿಸುತ್ತಾರೋ ಅವರನ್ನು ರಾಜಸರೆಂದೂ, ಯಾರನ್ನು ನಿಂದಿಸುವರೋ ಅವರನ್ನು ತಾಮಸರೆಂದೂ ತಿಳಿಯಬೇಕು. ॥ ೫ ॥

ಸತ್ತ್ವಗುಣದ ವೃದ್ಧಿಗಾಗಿ ಸಾತ್ತ್ವಿಕ ವಸ್ತುಗಳನ್ನೇ ಸೇವಿಸಬೇಕು. ಅದರಿಂದ ಧರ್ಮ, ಜ್ಞಾನದ ವೃದ್ಧಿಯಾದೀತು. ತನ್ನ ಸ್ವರೂಪದ ಸ್ಮೃತಿ ಉಂಟಾದೀತು, ಎಲ್ಲ ರೀತಿಯ ಸಂಶಯಗಳು ನಾಶವಾಗುವವು. ಭಗವತ್ತತ್ತ್ವದ ಜ್ಞಾನ ಉಂಟಾಗುವವರೆಗೆ ಹೀಗೆ ಮಾಡುತ್ತಾ ಇರಬೇಕು. ॥ ೬ ॥ ಬಿದಿರುಗಳ ಘರ್ಷಣೆಯಿಂದ ಉಂಟಾದ ಬೆಂಕಿಯು ಬಿದಿರಿನ ವನವನ್ನೇ ಸುಟ್ಟು ಸ್ವಯಂ ಶಾಂತವಾಗುತ್ತದೆಯೋ ಹಾಗೆಯೇ ಮನುಷ್ಯನಲ್ಲಿ ಶಾಸ್ತ್ರವಿಚಾರದಿಂದ ಉತ್ಪನ್ನವಾದ ಜ್ಞಾನಾಗ್ನಿಯು ಶರೀರವು ಉಂಟಾಗುವ ಕಾರಣಗಳಾದ ತ್ರಿಗುಣಗಳನ್ನು ನಾಶಮಾಡಿ ಬಿಡುತ್ತದೆ. ಬಳಿಕ ಅದೂ ಸ್ವತಃ ಶಾಂತವಾಗುತ್ತದೆ. ॥ ೭ ॥

ಉದ್ಧವ ಉವಾಚ

ವಿದಂತಿ ಮರ್ತ್ಯಾಃ ಪ್ರಾಯೇಣ ವಿಷಯಾನ್ ಪದಮಾಪದಾಮ್ ।
ತಥಾಪಿ ಭುಂಜತೇ ಕೃಷ್ಣ ತತ್ಕಥಂ ಶ್ವಖಿರಾಜವತ್
॥ ೮ ॥

ಉದ್ಧವನು ಕೇಳಿದನು – ಭಗವಂತಾ ! ವಿಷಯಗಳು ವಿಪತ್ತುಗಳ ಮನೆಯಾಗಿದೆ ಎಂದು ಪ್ರಾಯಶಃ ಎಲ್ಲ ಮನುಷ್ಯರು ಇದನ್ನು ತಿಳಿಯುತ್ತಾರೆ. ಆದರೂ ಕೂಡ ಅವರು ನಾಯಿ, ಕತ್ತೆ, ಕುರಿಗಳಂತೆ ದುಃಖವನ್ನು ಸಹಿಸುತ್ತಲೂ ಅವನ್ನು ಭೋಗಿಸುತ್ತಾರೆ. ಇದರ ಕಾರಣವೇನು ? ॥ ೮ ॥

ಶ್ರೀಭಗವಾನುವಾಚ

ಅಹಮಿತ್ಯನ್ಯಥಾಬುದ್ಧಿಃ ಪ್ರಮತ್ತಸ್ಯ ಯಥಾ ಹೃದಿ ।
ಉತ್ಸರ್ಪತಿ ರಜೋ ಘೋರಂ ತತೋ ವೈಕಾರಿಕಂ ಮನಃ
॥ ೯ ॥

ರಜೋಯುಕ್ತಸ್ಯ ಮನಸಃ ಸಂಕಲ್ಪಃ ಸವಿಕಲ್ಪಕಃ ।
ತತಃ ಕಾಮೋ ಗುಣಧ್ಯಾನಾದ್ದುಸ್ಸಹಃ ಸ್ಯಾದ್ಧಿ ದುರ್ಮತೇಃ
॥ ೧೦ ॥

ಕರೋತಿ ಕಾಮವಶಗಃ ಕರ್ಮಾಣ್ಯವಿಜಿತೇಂದ್ರಿಯಃ ।
ದುಃಖೋದರ್ಕಾಣಿ ಸಂಪಶ್ಯನ್ ರಜೋವೇಗವಿಮೋಹಿತಃ
॥ ೧೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಅಜ್ಞಾನಿಗಳು ತಮ್ಮ ಹೃದಯದಲ್ಲಿ 'ನಾನು-ನನ್ನದು' ಈ ಮಿಥ್ಯಾ ಅಭಿನಿವೇಶ (ಅಭಿಮಾನ) ತಳೆದಿರುತ್ತಾರೆ, ಇದೇ ಇವರ ದುಃಖದ ಕಾರಣವಾಗಿದೆ. ವಾಸ್ತವವಾಗಿ ಮನಸ್ಸು ಸ್ವರೂಪತಃ ಸತ್ತ್ವಗುಣ ವಿಶಿಷ್ಟವಾಗಿದೆ. ಅದ್ದರಿಂದ ಸ್ವರೂಪತಃ ಶುದ್ಧವಾಗಿದ್ದರೂ ಅಹಂತೆ, ಮಮತೆಯ ಕಾರಣ ಅದನ್ನು ಘೋರ ರಜೋಗುಣವು ಆವರಿಸಿ ಬಿಡುತ್ತದೆ. ॥ ೯ ॥ ಮತ್ತೆ ರಜೋಗುಣದ ಮೂಲಕ ಆವೃತವಾದ ಮನಸ್ಸು ಅನೇಕ ರೀತಿಯ ಸಂಕಲ್ಪ-ವಿಕಲ್ಪಗಳನ್ನು ಮಾಡತೊಡಗುತ್ತದೆ. ನಿರಂತರ ಆ ಗುಣಗಳದ್ದೇ ಚಿಂತನೆ ಆಗುತ್ತದೆ. ಈ ಪ್ರಕಾರ ದೂಷಿತ ಬುದ್ಧಿಯುಳ್ಳವನು ತನ್ನ ಇಂದ್ರಿಯಗಳ ಮೇಲಿನ ಹತೋಟಿಯನ್ನು ಕಳೆದುಕೊಳ್ಳುತ್ತಾನೆ. ಕಾಮನೆಗಳಿಗೆ ವಶೀಭೂತನಾಗಿ, ರಜೋಗುಣದ ವೇಗದಿಂದ ಮೋಹಿತನಾದವನು ಪರಿಣಾಮದಲ್ಲಿ ದುಃಖವೇ-ದುಃಖವಿರುವ ಕರ್ಮಗಳಲ್ಲಿ ಸಿಕ್ಕಿಕೊಳ್ಳುತ್ತಾನೆ. ॥ ೧೦-೧೧ ॥ ವಿದ್ವಾಂಸರ ಬುದ್ಧಿಯೂ ರಜೋಗುಣ, ತಮೋಗುಣಗಳಿಂದ ವಿಕ್ಷಿಪ್ತವಾಗುತ್ತದೆ. ಆದರೆ ಅವನು ಎಚ್ಚರಿಕೆಯಿಂದ ಮನಸ್ಸನ್ನು ಪರಮಾತ್ಮನಲ್ಲಿ ತೊಡಗಿಸಿ, ಆ ಕರ್ಮಗಳ ಕುರಿತು ದೋಷದೃಷ್ಟಿಯನ್ನಿಟ್ಟು ಅವುಗಳಲ್ಲಿ ಆಸಕ್ತನಾಗುವುದಿಲ್ಲ ॥ ೧೨ ॥ ಆದ್ದರಿಂದ ಎಲೈ ಉದ್ಧವಾ ! ಶ್ರೇಯಸ್ಸನ್ನು ಬಯಸುವವನು ಎಚ್ಚರವಾಗಿರಬೇಕು, ಕ್ರಮಾನುಸಾರ ಅಭ್ಯಾಸದ ಮೂಲಕ ಮನಸ್ಸನ್ನು ನನ್ನಲ್ಲಿ ತೊಡಗಿಸಬೇಕು. ಸಾಧನೆಯಲ್ಲಿ ಬೇಸರಿಸಬಾರದು. ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಾ ಇರಬೇಕು. ಪ್ರಾಣ ಮತ್ತು ಆಸನಗಳ ಮೇಲೆ ಹತೋಟಿ ಸಾಧಿಸಬೇಕು. ಎಲ್ಲ ವಿಷಯಗಳಿಂದ ಮನಸ್ಸನ್ನು ಚೆನ್ನಾಗಿ ಸೆಳೆದುಕೊಂಡಾಗ ಆ ನಿರ್ವಿಷಯವಾದ ಮನಸ್ಸು ನನ್ನಲ್ಲಿ ದೃಢವಾಗಿ ಸ್ಥಿರವಾಗಿ ಹೋಗುತ್ತದೆ. ಈ ಯೋಗವನ್ನು ನಾನೇ ಬ್ರಹ್ಮದೇವನ ಸಾನ್ನಿಧ್ಯದಲ್ಲಿ ಸನಕಾದಿಗಳಿಗೆ ಹೇಳಿದ್ದೆ ॥ ೧೩-೧೪ ॥

ಅಪ್ರಮತ್ತೋಽನುಯುಂಜೀತ ಮನೋ ಮಯ್ಯರ್ಪಯನ್ ಶನೈಃ ।
ಅನಿರ್ವಿಣ್ಣೋ ಯಥಾಕಾಲಂ ಜಿತಶ್ವಾಸೋ ಜಿತಾಸನಃ
॥ ೧೩ ॥

ಏತಾವಾನ್ ಯೋಗ ಆದಿಷ್ಟೋ ಮಚ್ಛಿಷ್ಯೈಃ ಸನಕಾದಿಭಿಃ ।
ಸರ್ವತೋ ಮನ ಆಕೃಷ್ಯ ಮಯ್ಯದ್ಧಾಽಽವೇಶ್ಯತೇ ಯಥಾ
॥ ೧೪ ॥

ಉದ್ಧವ ಉವಾಚ

ಯದಾ ತ್ವಂ ಸನಕಾದಿಭ್ಯೋ ಯೇನ ರೂಪೇಣ ಕೇಶವ ।
ಯೋಗಮಾದಿಷ್ಟವಾನೇತದ್ ರೂಪಮಿಚ್ಛಾಮಿ ವೇದಿತುಮ್
॥ ೧೫ ॥

ಉದ್ಧವನು ಕೇಳಿದನು – ಕೇಶವಾ ! ನೀನು ಈ ಯೋಗವನ್ನು ಸನಕಾದಿಗಳಿಗೆ ಎಂದು, ಯಾವ ವಿಧದಿಂದ ಉಪದೇಶಿಸಿದ್ದೆ ಅದನ್ನು ವಿವರವಾಗಿ ಕೇಳಲು ನಾನು ಬಯಸುತ್ತೇನೆ. ॥ ೧೫ ॥

ಶ್ರೀಭಗವಾನುವಾಚ

ಪುತ್ರಾ ಹಿರಣ್ಯಗರ್ಭಸ್ಯ ಮಾನಸಾಃ ಸನಕಾದಯಃ ।
ಪಪ್ರಚ್ಛುಃ ಪಿತರಂ ಸೂಕ್ಷ್ಮಾಂ ಯೋಗಸ್ಯೈಕಾಂತಿಕೀಂ ಗತಿಮ್
॥ ೧೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ ! ಸನಕಾದಿಗಳು ಬ್ರಹ್ಮನ ಮಾನಸಪುತ್ರರಾಗಿದ್ದಾರೆ. ಅವರು ಒಮ್ಮೆ ತಮ್ಮ ತಂದೆಯ ಬಳಿ ಯೋಗದ ಸೂಕ್ಷ್ಮ ಮತ್ತು ಅಂತಿಮ ಸೀಮೆಯ ಕುರಿತು ಪ್ರಶ್ನಿಸಿದರು. ಆ ಪ್ರಶ್ನೆ ಹೀಗಿತ್ತು – ॥ ೧೬ ॥

ಸನಕಾದಯ ಊಚುಃ

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಭೋ ।
ಕಥಮನ್ಯೋನ್ಯಸಂತ್ಯಾಗೋ ಮುಮುಕ್ಷೋರತಿತಿತೀರ್ಷೋಃ
॥ ೧೭ ॥

ಶ್ರೀಭಗವಾನುವಾಚ

ಏವಂ ಪೃಷ್ಟೋ ಮಹಾದೇವಃ ಸ್ವಯಂಭೂರ್ಭೂತಭಾವನಃ ।
ಧ್ಯಾಯಮಾನಃ ಪ್ರಶ್ನಬೀಜಂ ನಾಭ್ಯಪದ್ಯತ ಕರ್ಮಧೀಃ
॥ ೧೮ ॥

ಸ ಮಾಮಚಿಂತಯದ್ದೇವಃ ಪ್ರಶ್ನಪಾರತಿತೀರ್ಷಯಾ ।
ತಸ್ಯಾಹಂ ಹಂಸರೂಪೇಣ ಸಕಾಶಮಗಮಂ ತದಾ
॥ ೧೯ ॥

ದೃಷ್ಟ್ವಾ ಮಾಂ ತ ಉಪವ್ರಜ್ಯ ಕೃತ್ವಾ ಪಾದಾಭಿವಂದನಮ್ ।
ಬ್ರಹ್ಮಾಣಮಗ್ರತಃ ಕೃತ್ವಾ ಪಪ್ರಚ್ಛುಃ ಕೋ ಭವಾನಿತಿ
॥ ೨೦ ॥

ಇತ್ಯಹಂ ಮುನಿಭಿಃ ಪೃಷ್ಟಸ್ತತ್ತ್ವಜಿಜ್ಞಾಸುಭಿಸ್ತದಾ ।
ಯದವೋಚಮಹಂ ತೇಭ್ಯಸ್ತದುದ್ಧವ ನಿಬೋಧ ಮೇ
॥ ೨೧ ॥

ವಸ್ತುನೋ ಯದ್ಯನಾನಾತ್ವಮಾತ್ಮನಃ ಪ್ರಶ್ನ ಈದೃಶಃ ।
ಕಥಂ ಘಟೇತ ವೋ ವಿಪ್ರಾ ವಕ್ತುರ್ವಾ ಮೇ ಕ ಆಶ್ರಯಃ
॥ ೨೨ ॥

ಪಂಚಾತ್ಮಕೇಷು ಭೂತೇಷು ಸಮಾನೇಷು ಚ ವಸ್ತುತಃ ।
ಕೋ ಭವಾನಿತಿ ವಃ ಪ್ರಶ್ನೋ ವಾಚಾರಂಭೋ ಹ್ಯನರ್ಥಕಃ
॥ ೨೩ ॥

ಮನಸಾ ವಚಸಾ ದೃಷ್ಟ್ಯಾ ಗೃಹ್ಯತೇಽನ್ಯೈರಪೀಂದ್ರಿಯೈಃ ।
ಅಹಮೇವ ನ ಮತ್ತೋಽನ್ಯದಿತಿ ಬುಧ್ಯಧ್ವಮಂಜಸಾ
॥ ೨೪ ॥

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಜಾಃ ।
ಜೀವಸ್ಯ ದೇಹ ಉಭಯಂ ಗುಣಾಶ್ಚೇತೋ ಮದಾತ್ಮನಃ
॥ ೨೫ ॥

ಸನಕಾದಿಗಳು ಬ್ರಹ್ಮದೇವರಲ್ಲಿ ಕೇಳಿದರು – ಅಪ್ಪಾ! ಸ್ವಭಾವತಃ ಚಿತ್ತವು ವಿಷಯಗಳಲ್ಲಿ ಆಸಕ್ತವಾಗಿ ಅವುಗಳಲ್ಲಿ ಸೇರಿ ಕೊಳ್ಳುತ್ತದೆ ಮತ್ತು ಚಿಂತನದಿಂದ ಗುಣಗಳು ಚಿತ್ತದಲ್ಲಿ ಸೇರಿ ಕೊಂಡು ಬಿಡುತ್ತವೆ. ಹೀಗೆ ಗುಣಗಳು ಮತ್ತು ವಿಷಯಗಳು ಪರಸ್ಪರ ಒಂದರೊಳಗೊಂದು ಬೇರ್ಪಡಿಸುವುದು ಹೇಗೆ ? ॥ ೧೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ ! ಸನಕಾದಿಗಳು ಲೋಕಪಿತಾಮಹ ದೇವಶಿರೋಮಣಿ ಭೂತಭಾವನ ಸ್ವಯಂಭೂ ಬ್ರಹ್ಮದೇವರ ಬಳಿ ಈ ರೀತಿಯಾಗಿ ಪ್ರಶ್ನಿಸಿದರು. ಆದರೆ ಬ್ರಹ್ಮದೇವರ ಬುದ್ಧಿಯು ಕರ್ಮಗಳಲ್ಲೇ ತೊಡಗಿದ್ದರಿಂದ ಅವರು ಆ ಪ್ರಶ್ನೆಯ ಬೀಜವನ್ನು ತಿಳಿಯದೆ ಹೋದರು ಮತ್ತು ಯಾವ ಉತ್ತರವನ್ನು ಕೊಡದಾದರು. ॥ ೧೮ ॥ ಪ್ರಶ್ನೆಯ ಅಭಿಪ್ರಾಯವನ್ನು ಅರಿಯಲು ಬ್ರಹ್ಮದೇವರು ನನ್ನನ್ನು ಸ್ಮರಿಸಿದರು. ಆಗ ನಾನು ಹಂಸರೂಪದಿಂದ ಅವರ ಮುಂದೆ ಪ್ರಕಟನಾದೆ. ॥ ೧೯ ॥ ಆಗ ಆ ಸನಕಾದಿಗಳು ನನ್ನನ್ನು ನೋಡಿ ಬ್ರಹ್ಮನನ್ನು ಮುಂದೆ ಮಾಡಿಕೊಂಡು ನನ್ನ ಬಳಿಗೆ ಬಂದು ನಮಸ್ಕರಿಸಿ "ನೀವು ಯಾರು?" ಎಂದು ಕೇಳತೊಡಗಿದರು – ಎಲೈ ಉದ್ಧವನೇ ! ಆ ಸನಕಾದಿ ಮುನಿಗಳು ತತ್ತ್ವದ ವಿಷಯದಲ್ಲಿ ತಿಳಿಯಲೆಂದೇ ಬಂದಿದ್ದರು. ಆದ್ದರಿಂದ ನಾನು ಅವರಿಗೆ ಏನು ಹೇಳಿದೆನೋ ಅದನ್ನು ಕೇಳು – ॥ ೨೦-೨೧ ॥ ವಿಪ್ರೋತ್ತಮರೇ ! ಆತ್ಮನ ವಿಷಯದಲ್ಲಿ ನಿಮ್ಮಗಳ ಈ ಪ್ರಶ್ನೆ ಇದ್ದರೆ, ಆತ್ಮನಾದರೋ ಒಂದೇ ಆಗಿದೆ. ನಿಮ್ಮಲ್ಲಿರುವ ಆತ್ಮನೇ ನನ್ನಲ್ಲಿಯೂ ಇದ್ದಾನೆ. ಆತ್ಮನಲ್ಲದೆ ಬೇರೆ ವಸ್ತುವು ಇಲ್ಲವೇ ಇಲ್ಲ. ಹೀಗಿರುವಾಗ ನಾನು ಉತ್ತರ ಕೊಡಲಿಕ್ಕಾಗಿ ಮಾತಾಡಿದರೆ ಯಾವುದರ ಆಧಾರವನ್ನು ಪಡೆದು ಮಾತಾಡಲೀ ? ॥ ೨೨ ॥

ಪಂಚಭೂತಾತ್ಮಕ ತತ್ತ್ವವು ಎಲ್ಲ ಪ್ರಾಣಿಗಳಲ್ಲಿ ಸಮಾನವಾಗಿದೆ, ಆದ್ದರಿಂದ ನೀವು "ಕೋ ಭವಾನ್" ಎಂದು ಪ್ರಶ್ನಿಸಿದುದು ಕೇವಲ ವಾಣಿಯ ವ್ಯವಹಾರವಾಗಿದೆ. ತಾತ್ತ್ವಿಕ ಅರ್ಥದಿಂದ ರಹಿತವಾಗಿದೆ. ॥ ೨೩ ॥ ಮನಸ್ಸಿನಿಂದ, ವಾಣಿಯಿಂದ, ದೃಷ್ಟಿಯಿಂದ ಅಥವಾ ಬೇರೆ ಇಂದ್ರಿಯಗಳಿಂದ ಏನೆಲ್ಲ ನೋಡಲು ಕೇಳಲು, ಚಿಂತಿಸಲು ಬರುತ್ತದೋ, ಅದೆಲ್ಲ "ನಾನೇ ಆಗಿದ್ದೇನೆ, ನಾನಲ್ಲದೆ ಬೇರೆ ಏನೂ ಇಲ್ಲ" ಎಂದು ನೀವು ನಿಶ್ಚಯವಾಗಿ ಅರಿತುಕೊಳ್ಳಿರಿ. ॥ ೨೪ ॥ ಮಕ್ಕಳಿರಾ ! ವಾಸ್ತವಿಕ ರೂಪದಿಂದ ಜೀವಿಯು ನನ್ನದೇ ಸ್ವರೂಪವಾಗಿದ್ದಾನೆ, ಆದರೆ ಅತೀವ ಆಸಕ್ತಿಯ ಕಾರಣ ಚಿತ್ತವು ಗುಣಗಳಲ್ಲಿ ಪ್ರವೇಶಿಸಿ, ಅವುಗಳ ಸತತ ಚಿಂತನೆಯಿಂದ ಆ ಗುಣಗಳು ಚಿತ್ತದಲ್ಲಿ ಆಳವಾಗಿ ಹೊಕ್ಕವು. ಹೀಗೆ ಈ ಗುಣಮಯ ಮತ್ತು ಚಿತ್ತಮಯ ಎರಡೂ ದೇಹಗಳು ಜೀವಿಯ ಉಪಾಧಿಯಾಗಿದೆ. (ಗುಣಗಳಿಂದ ಉಂಟಾದ ಸ್ಥೂಲಶರೀರ ಹಾಗೂ ಚಿತ್ತದಿಂದ ಉಂಟಾದ ಸೂಕ್ಷ್ಮಶರೀರವಾಗಿದೆ.) ಅನಾತ್ಮ ಪದಾರ್ಥಗಳಲ್ಲಿ ಆಸಕ್ತಿಯನ್ನಿರಿಸಿ ಜೀವಿಯು ಕರ್ಮಗಳಲ್ಲಿ ಸಿಕ್ಕಿಕೊಳ್ಳುವನು. ವಾಸನಾಮಯ ಕಾರಣಶರೀರವನ್ನು ನಿರ್ಮಿಸಿಕೊಳ್ಳುವನು. ಇದೆಲ್ಲವೂ ಅಜ್ಞಾನದ ಕಾರಣವೇ ಆಗಿದೆ. ॥ ೨೫ ॥

ಗುಣೇಷು ಚಾವಿಶಚ್ಚಿತ್ತಮಭೀಕ್ಷ್ಣಂ ಗುಣಸೇವಯಾ ।
ಗುಣಾಶ್ಚ ಚಿತ್ತಪ್ರಭವಾ ಮದ್ರೂಪ ಉಭಯಂ ತ್ಯಜೇತ್
॥ ೨೬ ॥

ಮೇಲಿಂದ-ಮೇಲೆ ವಿಷಯಗಳನ್ನು ಸೇವಿಸುತ್ತಾ ಇರುವುದರಿಂದ ಚಿತ್ತವು ಆ ವಿಷಯಗಳಲ್ಲಿ ಸೇರಿಕೊಳ್ಳುವುದು. ಈ ವಿಷಯಗಳು ಚಿತ್ತವು ಸಂಕಲ್ಪ-ವಿಕಲ್ಪ ಮಾಡುವುದರಿಂದಲೇ ಉತ್ಪನ್ನವಾಗುತ್ತವೆ. ಸಾಧಕನು ಮದ್ರೂಪನಾಗಿ ಚಿತ್ತವು ಅಲೆಯುವುದನ್ನು ಹಾಗೂ ವಿಷಯಗಳ ಚಿಂತನೆಯನ್ನು ಬಿಟ್ಟುಬಿಡಬೇಕು. ॥ ೨೬ ॥ ಜಾಗ್ರತ್, ಸ್ವಪ್ನ, ಸುಷುಪ್ತಿ ಇವು ಮೂರು ಕ್ರಮಶಃ ಸಾತ್ತ್ವಿಕ, ರಾಜಸ, ತಾಮಸ ಮೂರೂ ಗುಣಗಳ ಕಾರಣ ಬುದ್ಧಿಯದೇ ವೃತ್ತಿಗಳಾಗಿವೆ. ಜೀವಿಯು ಇವೆಲ್ಲವುಗಳ ಸಾಕ್ಷಿಯಾಗಿದ್ದಾನೆ. ಅವನು ಮೂರೂ ಅವಸ್ಥೆಗಳಿಂದ ಅತೀತನಾಗಿದ್ದಾನೆ. ಹೀಗೆ ಸಿದ್ಧಾಂತರೂಪದಿಂದ ತಿಳಿಯಲಾಗಿದೆ. ॥ ೨೭ ॥

ಜಾಗ್ರತ್ಸ್ವಪ್ನಃ ಸುಷುಪ್ತಂ ಚ ಗುಣತೋ ಬುದ್ಧಿವೃತ್ತಯಃ ।
ತಾಸಾಂ ವಿಲಕ್ಷಣೋ ಜೀವಃ ಸಾಕ್ಷಿತ್ವೇನ ವಿನಿಶ್ಚಿತಃ
॥ ೨೭ ॥

ಈ ಚಿತ್ತವೇ ಸಂಕಲ್ಪ-ವಿಕಲ್ಪಗಳ ಮೂಲಕ ಅನೇಕ ವೃತ್ತಿಗಳನ್ನು ಉಂಟುಮಾಡಿ ಆತ್ಮನನ್ನು ಮೂರೂ ಗುಣಗಳಲ್ಲಿ ಅಲೆಯುವಂತೆ ಮಾಡುತ್ತದೆ. ಇದೇ ಆತ್ಮನ ಬಂಧನವಾಗಿದೆ. ಆದ್ದರಿಂದ ಸಾಧಕನು ತುರೀಯ ಅವಸ್ಥೆಯಲ್ಲಿ ಸ್ಥಿತನಾಗಿ ಗುಣ ಮತ್ತು ಚಿತ್ತ ಎರಡನ್ನೂ ತ್ಯಜಿಸಬೇಕು. ॥ ೨೮ ॥

ಯರ್ಹಿ ಸಂಸೃತಿಬಂಧೋಽಯಮಾತ್ಮನೋ ಗುಣವೃತ್ತಿದಃ ।
ಮಯಿ ತುರ್ಯೇ ಸ್ಥಿತೋ ಜಹ್ಯಾತ್ತ್ಯಾಗಸ್ತದ್ಗುಣಚೇತಸಾಮ್
॥ ೨೮ ॥

"ನಾನು-ನನ್ನದು" ಹೀಗೆ ಅಹಂಕಾರ ಪಡುವುದರಿಂದಲೇ ಬಂಧನವಾಗುತ್ತದೆ. ಅದು ಆತ್ಮನನ್ನು ತಾತ್ತ್ವಿಕ ಅರ್ಥದಿಂದ ವಿಪರೀತವಾಗಿಸುತ್ತದೆ. ವಿದ್ವಾಂಸನು ಇವುಗಳಿಂದ ವಿರಕ್ತನಾಗಿ ಪ್ರಾಪಂಚಿಕ ಚಿಂತೆಯನ್ನು ಬಿಟ್ಟುಬಿಡಬೇಕು. ತನ್ನ ತುರೀಯ ಸ್ವರೂಪದಲ್ಲಿ ಸ್ಥಿತನಾಗಿರಬೇಕು. ॥ ೨೯ ॥

ಅಹಂಕಾರಕೃತಂ ಬಂಧಮಾತ್ಮನೋಽರ್ಥವಿಪರ್ಯಯಮ್ ।
ವಿದ್ವಾನ್ ನಿರ್ವಿದ್ಯ ಸಂಸಾರಚಿಂತಾಂ ತುರ್ಯೇ ಸ್ಥಿತಸ್ತ್ಯಜೇತ್
॥ ೨೯ ॥

ಈ ನಾನಾತ್ವದ ಭ್ರಮೆಯನ್ನು ಯುಕ್ತಿಗಳ ಮೂಲಕ ಮನುಷ್ಯನು ನಾಶಮಾಡುವ ತನಕ ಅವನು ಎಚ್ಚರವಾಗಿದ್ದರೂ ಅಜ್ಞಾನ ನಿದ್ದೆಯಲ್ಲಿ ಮಲಗಿಯೇ ಇರುತ್ತಾನೆ. ಸ್ವಪ್ನಪ್ರಪಂಚದಲ್ಲಿ ಅಜ್ಞಾನಿಯು ಸುಖೀ-ದುಃಖಿಯಾಗುವಂತೆ, ಅವನು ಜಾಗ್ರತ್‌ನಲ್ಲಿಯೂ ಪ್ರಪಂಚದ ಅಸ್ತಿತ್ವವನ್ನು ಸ್ವೀಕರಿಸಿ ಸುಖೀ-ದುಃಖಿಯಾಗುತ್ತಾ ಇರುತ್ತಾನೆ. ॥ ೩೦ ॥ ನಿಜವಾಗಿ ಆತ್ಮನ ಹೊರತು ಬೇರೆ ಯಾವುದಕ್ಕೂ ಅಸ್ತಿತ್ವವಿಲ್ಲ. ಸ್ವಪ್ನನೋಡುವವನ ಎಲ್ಲ ಕ್ರಿಯೆಗಳು ಮಿಥ್ಯೆಯಾಗಿರುವಂತೆ, ಅಜ್ಞಾನಿಯ ಎಲ್ಲ ಕ್ರಿಯೆಗಳು – ಅವುಗಳ ಕಾರಣ ಮತ್ತು ಅವುಗಳಲ್ಲಿ ಭೇದಬುದ್ಧಿ – ಇವೆಲ್ಲವೂ ಮಿಥ್ಯೆಯೇ ಆಗಿದೆ. (ಜ್ಞಾನ ಉಂಟಾದಾಗಲೇ ಈ ನಾನಾತ್ವದ ಭ್ರಮೆಯು ಹೊರಟುಹೋಗುತ್ತದೆ.) ॥ ೩೧ ॥

ಯಾವನ್ನಾನಾರ್ಥಧೀಃ ಪುಂಸೋ ನ ನಿವರ್ತೇತ ಯುಕ್ತಿಭಿಃ ।
ಜಾಗರ್ತ್ಯಪಿ ಸ್ವಪನ್ನಜ್ಞಃ ಸ್ವಪ್ನೇ ಜಾಗರಣಂ ಯಥಾ
॥ ೩೦ ॥

ಬಾಹ್ಯವಿಷಯಗಳೆಲ್ಲ ಪ್ರತಿಕ್ಷಣ ಪರಿವರ್ತನಶೀಲವಾಗಿವೆ. ಇಂತಹ ನಾಶವುಳ್ಳ, ಕ್ಷಣಭಂಗುರವಾದ ವಿಷಯಗಳನ್ನು ಇಂದ್ರಿಯಗಳ ಮೂಲಕ ಜಾಗ್ರದವಸ್ಥೆಯಲ್ಲಿ ಉಪಭೋಗಿಸುವವನೇ ಸ್ವಪ್ನಾವಸ್ಥೆಯಲ್ಲಿಯೂ ಅವನ್ನು ಭೋಗಿಸುತ್ತಿರುತ್ತಾನೆ, ಆದರೆ ಗಾಢವಾದ ನಿದ್ದೆಯಲ್ಲಿ ಇವೆಲ್ಲವೂ ಅಳಿದುಹೋಗುತ್ತವೆ. ಹೀಗೆ ಈ ಮೂರೂ ಅವಸ್ಥೆಗಳನ್ನು ಅನುಭವಿಸುವ ಸಾಕ್ಷಿ ಚೇತನ ಆತ್ಮನು ಒಂದೇ ಆಗಿದ್ದಾನೆ. ಅವನು ಮೂರೂ ಅವಸ್ಥೆಗಳನ್ನು ಅರಿಯುವವನಾಗಿದ್ದಾನೆ. ಮೂರು ಗುಣಗಳ ವೃತ್ತಿಗಳನ್ನು ನೋಡುವವನಾಗಿದ್ದಾನೆ. ॥ ೩೨ ॥ ಈ ಮನಸ್ಸಿನ ಮೂರು ಅವಸ್ಥೆಗಳು ಗುಣಗಳ ಕಾರಣದಿಂದಲೇ ಉಂಟಾಗಿವೆ. ಅದು ನನ್ನ ಮಾಯೆಯ ಮೂಲಕ ನನ್ನಲ್ಲೇ ಕಲ್ಪಿತವಾಗಿವೆ. ಈ ಅವಸ್ಥೆಗಳು 'ನಾನು-ನನ್ನದು' ಎಂಬ ಭಾವನೆಯಿಂದಲೇ ಉಂಟಾಗಿವೆ ಹೀಗೆ ವಿಚಾರಗೈದು ಈ ಎಲ್ಲ

ಅಸತ್ತ್ವಾದಾತ್ಮನೋಽನ್ಯೇಷಾಂ ಭಾವಾನಾಂ ತತ್ಕೃತಾ ಭಿದಾ ।
ಗತಯೋ ಹೇತವಶ್ಚಾಸ್ಯ ಮೃಷಾ ಸ್ವಪ್ನದೃಶೋ ಯಥಾ
॥ ೩೧ ॥

ಯೋ ಜಾಗರೇ ಬಹಿರನಕ್ಷಣಧರ್ಮಿಣೋಽರ್ಥಾನ್
ಭುಂಕ್ತೇ ಸಮಸ್ತಕರಣೈರ್ಹೃದಿ ತತ್ಸದೃಕ್ಷಾನ್ ।
ಸ್ವಪ್ನೇ ಸುಷುಪ್ತ ಉಪಸಂಹರತೇ ಸ ಏಕಃ
ಸ್ಮೃತ್ಯನ್ವಯಾತ್ತ್ರಿ ಗುಣವೃತ್ತಿದೃಗಿಂದ್ರಿಯೇಶಃ ॥ ೩೨ ॥

ಏವಂ ವಿಮೃಶ್ಯ ಗುಣತೋ ಮನಸಸ್ತ್ಯಮಸ್ಥಾ
ಮನ್ಮಾಯಯಾ ಮಯಿ ಕೃತಾ ಇತಿ ನಿಶ್ಚಿತಾರ್ಥಾಃ ।
ಸಂಛಿದ್ಯ ಹಾರ್ದಮನುಮಾನಸದುಕ್ತಿತೀಕ್ಷ್ಣ-
ಜ್ಞಾನಾಸಿನಾ ಭಜತ ಮಾಖಿಲಸಂಶಯಾಧಿಮ್ ॥ ೩೨ ॥

ಸಂಶಯಗಳ ಆಧಾರಸ್ವರೂಪ ಅಹಂಭಾವವನ್ನು ಅನುಮಾನ ಪ್ರಮಾಣದ ಮೂಲಕ, ಸಂತರವಾಣಿಗಳ ಮೂಲಕ, ಹರಿತವಾದ ಜ್ಞಾನರೂಪೀ ಖಡ್ಗದಿಂದ ಚೆನ್ನಾಗಿ ಕತ್ತರಿಸಿ, ತನ್ನ ಹೃದಯದಲ್ಲೇ ಸ್ಥಿತನಾದ ಪರಮಾತ್ಮನಾದ ನನ್ನನ್ನು ಭಜಿಸಬೇಕು. ॥ ೩೨ ॥

ಈಕ್ಷೇತ ವಿಭ್ರಮಮಿದಂ ಮನಸೋ ವಿಲಾಸಂ
ದೃಷ್ಟಂ ವಿನಷ್ಟಮತಿಲೋಲಮಲಾತಚಕ್ರಮ್ ।
ವಿಜ್ಞಾನಮೇಕಮುರುಧೇವ ವಿಭಾತಿ ಮಾಯಾ
ಸ್ವಪ್ನಸ್ತ್ರಿಧಾ ಗುಣವಿಸರ್ಗಕೃತೋ ವಿಕಲ್ಪಃ ॥ ೩೩ ॥

ಕಂಡುಬರುವ ಈ ಪ್ರಪಂಚವೆಲ್ಲವೂ ಮನಸ್ಸಿನ ವಿಲಾಸಮಾತ್ರವಾಗಿದೆ, ಭ್ರಮೆಯಾಗಿದೆ, ಅತಿ ಚಂಚಲವಾಗಿದೆ. ಇದರ ಗತಿಯನ್ನು ಯಾರೂ ತಿಳಿಯಲಾರದಷ್ಟು ವೇಗವಾಗಿ ಇದು ಚಕ್ರದಂತೆ ಸುತ್ತುತ್ತಾ ಇದೆ. ಇದು ನಾಶವುಳ್ಳದ್ದು, ಕ್ಷಣಭಂಗುರವಾಗಿದೆ. ವಿಜ್ಞಾನ ಅರ್ಥಾತ್ ಏಕಮಾತ್ರ ಪರಮಾತ್ಮನೇ ಸಗುಣ- ನಿರಾಕಾರರೂಪದಿಂದ ಅನೇಕ ರೂಪಗಳಾಗಿ ಪ್ರಕಾಶಿಸುತ್ತಿರುವನು, ಆದರೆ ಅವನು ಕಂಡು ಬರುವುದಿಲ್ಲ. ಅವನ ಮಾಯೆಯೇ ಅನೇಕ ರೂಪಗಳನ್ನು ಧರಿಸಿ ಕೊಂಡು ಕಾಣುತ್ತಿದ್ದಾಳೆ. ಆ ಮಾಯೆಯು ಸ್ವಪ್ನದಂತೆ ಮಿಥ್ಯೆಯೇ ಆಗಿದೆ. ಮೂರೂ ಗುಣಗಳ ಸೃಷ್ಟಿಯ ಕಾರಣದಿಂದಲೇ ಈ ಭೇದ-ಭ್ರಮೆ ಉಂಟಾಗುತ್ತದೆ. ಅದು ಅಜ್ಞಾನದಿಂದಲೇ ಕಲ್ಪಿತ ವಾಗಿದೆ. ॥ ೩೪ ॥ ಸಾಧಕನು ತೃಷ್ಣಾರಹಿತನಾಗಿ ವಿಷಯಗಳಿಂದ ದೃಷ್ಟಿಯನ್ನು ತೊಡೆದು ಅಂತರ್ಮುಖಿ ಯಾಗಬೇಕು. ಪೂರ್ಣವಾಗಿ ಉಪರಮನಾಗಬೇಕು. ತನ್ನ ಆತ್ಮಾನಂದದಲ್ಲೇ ಮಗ್ನನಾಗಿದ್ದು ಯಾವುದೇ ಕಾಮನೆಯನ್ನು ಮಾಡಬಾರದು. ಏನಾದರೂ ಕಂಡುಬಂದರೆ ಇದು ನಿಜವಲ್ಲ ಮಾಯೆಯಾಗಿದೆ, ಇದರಿಂದ ನನಗೇನು ಮಾಡುವುದಿದೆ? ಎಂದು ಅರಿತುಕೊಂಡು, ಅದರ ಕಡೆಯಿಂದ ಮುಖ ತಿರುಗಿಸಿಕೊಂಡರೆ ಭ್ರಮೆ ಆಗಲಾರದು. ಶಾರೀರಿಕ ವ್ಯವಹಾರದ ಸಂಸ್ಕಾರವಾದರೋ ಅವನ ಶರೀರವಿರುವ ತನಕ ಇದ್ದೀತು. ॥ ೩೫ ॥ ಸ್ವಸ್ವರೂಪವನ್ನು ಪಡೆದುಕೊಂಡ ಇಂತಹ ಸಿದ್ಧನಿಗೆ ಈ ನಶ್ವರದೇಹ ಕುಳಿತಿದೆ, ಅಥವಾ ನಿಂತಿದೆ ಎಂಬುದು ಅರಿವಿರುವುದಿಲ್ಲ, ಶರೀರದ ಮೇಲೆ ವಸ್ತ್ರವಿದೆ ಅಥವಾ ಇಲ್ಲ ಎಂಬುದೂ ತಿಳಿಯುವುದಿಲ್ಲ, ಮದಿರೆಯಿಂದ ಮದಮತ್ತನಾದ ವನಿಗೆ ತಮೋಗುಣದ ಪ್ರಭಾವದಿಂದ ಏನೂ ತಿಳಿಯುವುದಿಲ್ಲ, ಆದರೆ ಜ್ಞಾನಿಗಾದರೋ ತನ್ನ ತುರೀಯ ಶುದ್ಧಸ್ವರೂಪದಲ್ಲೇ ಸ್ಥಿತಿ ಇರುತ್ತದೆ. ಇದರಿಂದ ಅವನಿಗೆ ಜಗತ್ತಿನ ಯಾವ ಎಚ್ಚರವೂ ಇರುವುದಿಲ್ಲ. ॥ ೩೬ ॥

ದೃಷ್ಟಿಂ ತತಃ ಪ್ರತಿನಿವರ್ತ್ಯ ನಿವೃತ್ತತೃಷ್ಣ-
ಸ್ತೂಷ್ಣೀಂ ಭವೇನ್ನಿಜಸುಖಾನುಭವೋ ನಿರೀಹಃ ।
ಸಂದೃಶ್ಯತೇ ಕ್ವಚ ಯದೀದಮವಸ್ತುಬುದ್ಧ್ಯಾ
ತ್ಯಕ್ತಂ ಭ್ರಮಾಯ ನ ಭವೇತ್ ಸ್ಮೃತಿರಾನಿಪಾತಾತ್ ॥ ೩೫ ॥

ದೇಹಂ ಚ ನಶ್ವರಮವಸ್ಥಿತಮುತ್ಥಿತಂ ವಾ
ಸಿದ್ಧೋ ನ ಪಶ್ಯತಿ ಯತೋಽಧ್ಯಗಮತ್ ಸ್ವರೂಪಮ್ ।
ದೈವಾದಪೇತಮುತ ದೈವವಶಾದುಪೇತಂ
ವಾಸೋ ಯಥಾ ಪರಿಕೃತಂ ಮದಿರಾಮದಾಂಧಃ ॥ ೩೬ ॥

ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್
ಸ್ಾರಂಭಕಂ ಪ್ರತಿಸಮೀಕ್ಷತ ಏವ ಸಾಸುಃ ।
ತಂ ಸಪ್ರಪಂಚಮಧಿರೂಢಸಮಾಧಿಯೋಗಃ
ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತುಃ ॥ ೩೭ ॥

ದೇಹವು ಪ್ರಾರಬ್ಧಕ್ಕಧೀನವಾದ ಕಾರಣ ಶರೀರವನ್ನು ದೊರಕಿಸುವ ಕರ್ಮವು ಶೇಷವಾಗಿರುವ ತನಕ ಇವನು ಪ್ರಾಣಗಳ ಸಹಿತ ಬಿದ್ದುಹೋಗಲು ನಿರೀಕ್ಷಿಸುತ್ತಾನೆ. ಸಮಾಧಿಯಲ್ಲಿ ಅವನ ಸ್ಥಿತಿ ದೃಢವಾಗಿ ಇರುತ್ತದೆ, ಮತ್ತೆ ಅವನು ಪ್ರಪಂಚದಿಂದ ಅರ್ಥಾತ್ ಗುಣಗಳ ಕಾರ್ಯರೂಪೀ ದೇಹವನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಅವನು ವಾಸ್ತವಿಕ ಪರಮಾತ್ಮತತ್ತ್ವವನ್ನು ತಿಳಿದುಕೊಂಡಿರುವನು. ಸ್ವಪ್ನದಿಂದ ಎಚ್ಚೆತ್ತವನು ಸ್ವಪ್ನದ ಮಾತನ್ನು ಸ್ವೀಕರಿಸದಂತೆ ಮತ್ತೆ ಅವನು ಈ ಅಜ್ಞಾನವನ್ನು ಸ್ವೀಕರಿಸುವುದಿಲ್ಲ. ಅವನ ಸ್ಥಿತಿ ಪರಮಾತ್ಮನಲ್ಲಿ ದೃಢವಾಗಿ ಆಗಿರುತ್ತದೆ. ॥ ೩೭ ॥

ಮಯ್ಯೆತದುಕ್ತಂ ವೋ ವಿಪ್ರಾ ಗುಹ್ಯಂ ಯತ್ಸಾಂಖ್ಯಯೋಗಯೋಃ।
ಜಾನೀತ ಮಾಽಽಗತಂ ಯಜ್ಞಂ ಯುಷ್ಮದ್ಧರ್ಮವಿವಕ್ಷಯಾ
॥ ೩೮ ॥

ಅಹಂ ಯೋಗಸ್ಯ ಸಾಂಖ್ಯಸ್ಯ ಸತ್ಯಸ್ಯರ್ತಸ್ಯ ತೇಜಸಃ।
ಪರಾಯಣಂ ದ್ವಿಜಶ್ರೇಷ್ಠಾಃ ಶ್ರಿಯಃ ಕೀರ್ತೇರ್ದಮಸ್ಯ ಚ
॥ ೩೯ ॥

ಮಾಂ ಭಜಂತಿ ಗುಣಾಃ ಸರ್ವೇ ನಿರ್ಗುಣಂ ನಿರಪೇಕ್ಷಕಮ್ ।
ಸುಹೃದಂ ಪ್ರಿಯಮಾತ್ಮಾನಂ ಸಾಮ್ಯಾಸಂಗಾದಯೋಽಗುಣಾಃ
॥ ೪೦ ॥

ಇತಿ ಮೇ ಛಿನ್ನಸಂದೇಹಾ ಮುನಯಃ ಸನಕಾದಯಃ।
ಸಭಾಜಯಿತ್ವಾ ಪರಯಾ ಭಕ್ತ್ಯಾಗೃಣತ ಸಂಸ್ತವೈಃ
॥ ೪೧ ॥

ತೈರಹಂ ಪೂಜಿತಃ ಸಮ್ಯಕ್ ಸಂಸ್ತುತಃ ಪರಮರ್ಷಿಭಿಃ।
ಪ್ರತ್ಯೇಯಾಯ ಸ್ವಕಂ ಧಾಮ ಪಶ್ಯತಃ ಪರಮೇಷ್ಠಿನಃ
॥ ೪೨ ॥

ಎಲೈ ಬ್ರಾಹ್ಮಣರೇ! ನಾನು ಸಾಂಖ್ಯ ಮತ್ತು ಯೋಗದ ವಿಷಯದಲ್ಲಿ ಶಾಸ್ತ್ರಗಳಲ್ಲಿ ತಿಳಿಸಿದ ಮಾತನ್ನು ನಿಮ್ಮಗಳಿಗೆ ಹೇಳಿರುವೆನು. ನೀವುಗಳು ಮೋಕ್ಷಧರ್ಮದ ವಿಷಯದಲ್ಲಿ ಅರಿಯಲು ಬಯಸಿದ್ದೀರಿ. ಅದನ್ನು ನಾನು ನಿಮಗೆ ಹೇಳಿದೆ. ಯಜ್ಞಸ್ವರೂಪೀ ಭಗವಂತನಾದ ಸ್ವಯಂ ನಾನೇ ಹಂಸರೂಪದಿಂದ ನಿಮ್ಮಗಳಿಗೆ ಉಪದೇಶಿಸಲು ಬಂದಿರುವೆನು. ಹೀಗೆ ನೀವೆಲ್ಲ ತಿಳಿಯಿರಿ. ॥ ೩೮॥ ಎಲೈ ಶ್ರೇಷ್ಠ ಬ್ರಾಹ್ಮಣರಿರಾ! ಯೋಗ, ಸಾಂಖ್ಯ, ಸತ್ಯ, ಋತ, ತೇಜ, ಶ್ರೀ, ಕೀರ್ತಿ, ದಮ – ಇವೆಲ್ಲದರ ಆಶ್ರಯಸ್ಥಾನ ನಾನೇ ಆಗಿದ್ದೇನೆ. ॥ ೩೯ ॥ ಸಮತೆ ಹಾಗೂ ಅನಾಸಕ್ತಿ ಮುಂತಾದ ಇರುವ ಶ್ರೇಷ್ಠ ಗುಣಗಳೆಲ್ಲವೂ ನಿರ್ಗುಣನೂ, ನಿರಪೇಕ್ಷನೂ, ಎಲ್ಲರ ಹೇತುರಹಿತ ಸುಹೃದನೂ, ಎಲ್ಲರ ಪ್ರಿಯನೂ, ಪರಮಾತ್ಮನಾದ ನನ್ನನ್ನು ಭಜಿಸುತ್ತವೆ. ಇವೆಲ್ಲ ಗುಣಗಳು ನನ್ನಲ್ಲೇ ನಿತ್ಯವಾಸವಾಗಿರುವುವು. ॥ ೪೦ ॥ ಈ ರೀತಿ ಸನಕಾದಿ ಮುನಿಗಳ ಸಂದೇಹವನ್ನು ದೂರಗೊಳಿಸಿ ಅವರಿಗೆ ನಾನು ಉಪದೇಶ ಮಾಡಿದೆ. ಅವರು ಬಹಳ ಸಂತೋಷಗೊಂಡು ಪ್ರೇಮಮಗ್ನರಾಗಿ ಸ್ತುತಿಸತೊಡಗಿದರು. ॥ ೪೧ ॥

ಈ ಪ್ರಕಾರ ಆ ಸನಕಾದಿ ಋಷಿಗಳು ಮಾಡಿದ ಸ್ತುತಿಯಿಂದ, ಪೂಜೆಯಿಂದ ನಾನು ಬಹಳ ಸಮ್ಮಾನಿತನಾಗಿ, ಬ್ರಹ್ಮದೇವರು, ಋಷಿಗಳು ನೋಡು-ನೋಡುತ್ತಿರುವಂತೆ ನಾನು ನನ್ನ ಧಾಮಕ್ಕೆ ಹೊರಟುಹೋದೆನು. ॥ ೪೨ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ತ್ರಯೋದಶೋಽಧ್ಯಾಯಃ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಭಕ್ತಿಯೋಗದ ಮಹಿಮೆ ಹಾಗೂ ಧ್ಯಾನವಿಧಿಯ ವರ್ಣನೆ

ಉದ್ಧವ ಉವಾಚ

ವದಂತಿ ಕೃಷ್ಣ ಶ್ರೇಯಾಂಸಿ ಬಹೂನಿ ಬ್ರಹ್ಮವಾದಿನಃ।
ತೇಷಾಂ ವಿಕಲ್ಪಪ್ರಾಧಾನ್ಯಮುತಾಹೋ ಏಕಮುಖ್ಯತಾ
॥ ೧ ॥

ಭವತೋದಾಹೃತಃ ಸ್ವಾಮಿನ್ ಭಕ್ತಿಯೋಗೋಽನಪೇಕ್ಷಿತಃ।
ನಿರಸ್ಯ ಸರ್ವತಃ ಸಂಗಂ ಯೇನ ತ್ವಯ್ಯಾವಿಶೇನ್ಮನಃ
॥ ೨ ॥

ಉದ್ಧವನು ಕೇಳಿದನು – ಶ್ರೀಕೃಷ್ಣಾ! ಬ್ರಹ್ಮವಾದಿ ಮಹಾತ್ಮರು ಆತ್ಮಕಲ್ಯಾಣಕ್ಕಾಗಿ ಧ್ಯಾನ, ಯೋಗ, ಭಕ್ತಿ, ಕರ್ಮ, ಸಾಂಖ್ಯ ಮುಂತಾದ ಅನೇಕ ಸಾಧನೆಗಳನ್ನು ಹೇಳಿರುವರು. ಇವೆಲ್ಲವೂ ಮುಖ್ಯವಾಗಿವೆಯೋ? ಅಥವಾ ಇವುಗಳಲ್ಲಿ ಯಾವುದಾದರೊಂದು ಮುಖ್ಯವಾಗಿದೆಯೇ? ॥ ೧ ॥ ಸ್ವಾಮೀ! ನೀನು ಈಗ ಭಕ್ತಿಯೋಗವನ್ನು ನಿರಪೇಕ್ಷ ಮತ್ತು ಸ್ವತಂತ್ರ ಸಾಧನೆಯೆಂದು ತಿಳಿಸಿರುವಿ. ಭಕ್ತಿಯ ಮೂಲಕ ಎಲ್ಲ ರೀತಿಯ ಆಸಕ್ತಿ ಅಳಿದು ಹೋಗಿ, ಮನಸ್ಸು ನಿನ್ನಲ್ಲಿ ತೊಡಗಿ ತದ್ರೂಪವಾಗುತ್ತದೆ ಎಂದು ಹೇಳಿದ್ದೀಯೇ. ॥ ೨ ॥

ಶ್ರೀಭಗವಾನುವಾಚ

ಕಾಲೇನ ನಷ್ಟಾ ಪ್ರಲಯೇ
ವಾಣೀಯಂ ವೇದಸಂಜ್ಞಿತಾ ।
ಮಯಾಽಽದೌ ಬ್ರಹ್ಮಣೇ ಪ್ರೋಕ್ತಾ
ಧರ್ಮೋ ಯಸ್ಯಾಂ ಮದಾತ್ಮಕಃ ॥ ೩ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ಈ ವೇದವಾಣಿಯು ಕಾಲದ ಮೂಲಕ ಪ್ರಳಯದ ಸಮಯದಲ್ಲಿ ಲುಪ್ತವಾಗಿ ಹೋಗಿತ್ತು. ಮತ್ತೆ ಸೃಷ್ಟಿಯ ಸಮಯ ಬಂದಾಗ ನಾನೇ ನನ್ನ ಸಂಕಲ್ಪದಿಂದಲೇ ವೇದದ ಜ್ಞಾನವನ್ನು ಬ್ರಹ್ಮನಿಗೆ ಕರುಣಿಸಿದೆ. ವೇದದಲ್ಲಿ ನನ್ನ ಭಾಗವತ ಧರ್ಮದ್ದೇ ನಿರೂಪಣೆ ಮಾಡಲಾಗಿದೆ. ॥ ೩ ॥

ತೇನ ಪ್ರೋಕ್ತಾ ಚ ಪುತ್ರಾಯ ಮನವೇ ಪೂರ್ವಜಾಯ ಸಾ ।
ತತೋ ಭೃಗ್ವಾದಯೋऽಗೃಹ್ಣನ್ಸಪ್ತ ಬ್ರಹ್ಮಮಹರ್ಷಯಃ
॥ ೪ ॥

ತೇಭ್ಯಃ ಪಿತೃಭ್ಯಸ್ತತ್ಪುತ್ರಾ ದೇವದಾನವಗುಹ್ಯಕಾಃ ।
ಮನುಷ್ಯಾಃ ಸಿದ್ಧಗಂಧರ್ವಾಃ ಸವಿದ್ಯಾಧರಚಾರಣಾಃ
॥ ೫ ॥

ಕಿಂದೇವಾಃ ಕಿನರಾ ನಾಗಾ ರಕ್ಷಃಕಿಂಪುರುಷಾದಯಃ ।
ಬಹ್ವ್ಯಸ್ತೇಷಾಂ ಪ್ರಕೃತಯೋ ರಜಃಸತ್ತ್ವತಮೋಭುವಃ
॥ ೬ ॥

ಯಾಭಿರ್ಭೂತಾನಿ ಭಿದ್ಯಂತೇ ಭೂತಾನಾಂ ಮತಯಸ್ತಥಾ ।
ಯಥಾಪ್ರಕೃತಿ ಸರ್ವೇಷಾಂ ಚಿತ್ಯಾ ವಾಚಃ ಸ್ರವಂತಿ ಹಿ
॥ ೭ ॥

ಏವಂ ಪ್ರಕೃತಿವೈಚಿತ್ರ್ಯಾದ್ಭಿದ್ಯಂತೇ ಮತಯೋ ನೃಣಾಮ್ ।
ಪಾರಂಪರ್ಯೇಣ ಕೇಷಾಂಚಿತ್ಪಾಖಂಡಮತಯೋऽಪರೇ
॥ ೮ ॥

ಮನ್ಮಾಯಾಮೋಹಿತಧಿಯಃ ಪುರುಷಾಃ ಪುರುಷರ್ಷಭ ।
ಶ್ರೇಯೋ ವದಂತ್ಯನೇಕಾಂತಂ ಯಥಾಕರ್ಮ ಯಥಾರುಚಿ
॥ ೯ ॥

ಧರ್ಮಮೇಕೇ ಯಶಶ್ಚಾನ್ಯೇ ಕಾಮಂ ಸತ್ಯಂ ದಮಂ ಶಮಮ್ ।
ಅನ್ಯೇ ವದಂತಿ ಸ್ವಾರ್ಥಂ ವಾ ಐಶ್ವರ್ಯಂ ತ್ಯಾಗಭೋಜನಮ್
॥ ೧೦ ॥

ಕೇಚಿದ್ಯಜ್ಞ ತಪೋದಾನಂ ವ್ರತಾನಿ ನಿಯಮಾನ್ಯಮಾನ್ ।
ಆದ್ಯಂತವಂತ ಏವೈಷಾಂ ಲೋಕಾಃ ಕರ್ಮವಿನಿರ್ಮಿತಾಃ ।
ದುಃಖೋದರ್ಕಾಸ್ತಮೋನಿಷ್ಠಾಃ ಕ್ಷುದ್ರಾನಂದಾಃ ಶುಚಾರ್ಪಿತಾಃ
॥ ೧೧ ॥

ಮಯ್ಯರ್ಪಿತಾತ್ಮನಃ ಸಭ್ಯ ನಿರಪೇಕ್ಷಸ್ಯ ಸರ್ವತಃ ।
ಮಯಾऽऽತ್ಮನಾ ಸುಖಂ ಯತ್ತತ್ಕುತಃ ಸ್ಯಾದ್ವಿಷಯಾತ್ಮನಾಮ್
॥ ೧೨ ॥

ಬ್ರಹ್ಮನು ತನ್ನ ಜೇಷ್ಠಪುತ್ರನಾದ ಸ್ವಾಯಂಭುವ ಮನುವಿಗೆ ಈ ವೇದದ ಜ್ಞಾನವನ್ನು ಕೊಟ್ಟನು. ಅವನಿಂದ ಮತ್ತೆ ಭೃಗುವೇ ಮುಂತಾದ ಸಪ್ತಬ್ರಹ್ಮರ್ಷಿಗಳು ಗ್ರಹಣಮಾಡಿದರು. ॥ ೪ ॥ ಆ ಸಪ್ತ ಮಹರ್ಷಿಗಳಿಂದ ಅವರ ಪುತ್ರರೂ ಹಾಗೂ ಬೇರೆ ದೇವತೆಗಳು, ದಾನವರು, ಗುಹ್ಯಕ, ಮನುಷ್ಯ, ಸಿದ್ಧ ಗಂಧರ್ವ, ವಿದ್ಯಾಧರ, ಚಾರಣ, ಕಿಂದೇವ [೧], ಕಿನ್ನರ [೨], ನಾಗ, ರಾಕ್ಷಸ, ಕಿಂಪುರುಷ [೩] ಮುಂತಾದ ಅನೇಕರು ವೇದದ ಜ್ಞಾನವನ್ನು ಪಡೆದರು. ಅವರೆಲ್ಲರೂ ಸಾತ್ತ್ವಿಕ, ರಾಜಸ, ತಾಮಸ ಹೀಗೆ ಬೇರೆ-ಬೇರೆ ಪ್ರಕೃತಿಯಿಂದ ಉತ್ಪನ್ನರಾದವರು. ॥ ೫-೬ ॥ ಅವರವರ ಪ್ರಕೃತಿ ಹಾಗೂ ಬುದ್ಧಿಯ ಭೇದದಿಂದ ಪರಸ್ಪರ ಕೆಲವು ರೀತಿಯ ಭೇದಗಳು ತಲೆದೋರಿದವು. ಅವೇ ಭೇದಗಳು ಪರಂಪರೆಯಿಂದ ನಡೆಯುತ್ತಾ ಬಂದವು. ಕೆಲವು ಪಾಖಂಡಿಗಳು ತಮ್ಮದೇ ಬೇರೆಯಾದ ಮತವನ್ನು ಕಲ್ಪಿಸಿಕೊಂಡರು. ॥ ೭ ॥ ಎಲೈ ಪುರುಷಶ್ರೇಷ್ಠ ಉದ್ಧವನೇ! ಅವರೆಲ್ಲರ ಬುದ್ಧಿಯು ನನ್ನ ಮಾಯೆಯ ಕಾರಣ ಮೋಹಗ್ರಸ್ತವಾದ್ದರಿಂದ ಎಂತಹ ಕರ್ಮದಲ್ಲಿ ಹೇಗೆ ರುಚಿ ಉಂಟಾಯಿತೋ ಅದನ್ನೇ ಶ್ರೇಯದ ಸಾಧನೆ ಎಂದು ಹೇಳತೊಡಗಿದರು. ಆವರಲ್ಲಿ ಕೆಲವರಾದರೋ ಕರ್ಮವನ್ನು ಹಾಗೂ ಕೆಲವರು ಕೀರ್ತಿಯನ್ನು ಶ್ರೇಯದ ಸಾಧನೆಯೆಂದು ಹೇಳಿದರೆ, ಬೇರೆಯವರು ಕಾಮ, ಸತ್ಯ, ದಮ, ಶಮ ಮುಂತಾದವುಗಳನ್ನು, ಹಾಗೆಯೇ ಕೆಲವರು ಸ್ವಾರ್ಥ ಹಾಗೂ ಐಶ್ವರ್ಯವನ್ನೇ ಶ್ರೇಯದ ಸಾಧನೆ ಎಂದು ಹೇಳುತ್ತಾರೆ. ಕೆಲವರು ಭೋಗಗಳ ತ್ಯಾಗವನ್ನೇ ಶ್ರೇಯದ ಸಾಧನೆ ಎಂದು ಹೇಳುತ್ತಾರೆ. ॥ ೮-೧೦ ॥ ಕೆಲವರು ಯಜ್ಞ, ದಾನ, ತಪಸ್ಸು ವ್ರತ, ನಿಯಮ, ಯಮ ಮುಂತಾದವುಗಳನ್ನು ಶ್ರೇಯದ ಸಾಧನೆಯೆಂದು ಹೇಳುತ್ತಾರೆ. ಪ್ರಿಯ ಉದ್ಧವನೇ! ಈ ಜನರು ಹೇಳಿದ ಕರ್ಮಗಳನುಸಾರ ಅವರಿಗೆ ದೊರಯುವ ಲೋಕಗಳೆಲ್ಲವೂ ಅವರ ಕರ್ಮಗಳ ಆಧಾರದಿಂದಲೇ ಇವೆ. ಅವುಗಳ ಸುಖವು ಬಹಳ ಅಲ್ಪವಾದುದು. ಸುಖದ ಸಮಯ ಮುಗಿಯುತ್ತಲೇ ಅವರು ಆ ಲೋಕದಿಂದ ತಳ್ಳಲ್ಪಡುತ್ತಾರೆ ಇದರಿಂದ ಶೋಕಗ್ರಸ್ತರಾಗಿ, ತಮೋಗುಣದಿಂದ ಮುಚ್ಚಿಹೋಗುತ್ತಾರೆ. ಪರಿಣಾಮವಾಗಿ ದುಃಖವೇ ಭೋಗಿಸ ಬೇಕಾಗುತ್ತದೆ. ॥ ೧೧ ॥

ಸಾಧು ಉದ್ಧವನೇ! ಪೂರ್ಣರೂಪದಿಂದ ತನ್ನನ್ನು ನನಗೆ ಅರ್ಪಿಸಿಕೊಂಡವನಿಗೆ, ಎಲ್ಲ ರೀತಿಯಿಂದ ನಿರಪೇಕ್ಷನಾದವನಿಗೆ, ನನ್ನಲ್ಲೇ ರಮಮಾಣನಾದವನಿಗೆ ಪ್ರಾಪ್ತವಾಗುವ ಸುಖವು ವಿಷಯೀ ಜೀವರಿಗೆ ಹೇಗೆ ದೊರೆಯಬಲ್ಲದು ? ॥ ೧೨ ॥

---

೧ ಶ್ರಮ ಮತ್ತು ಬೆವರೇ ಮುಂತಾದ ದುರ್ಗಂಧದಿಂದ ರಹಿತರಾದ ಕಾರಣ, ಅವರ ವಿಷಯದಲ್ಲಿ 'ಇವರು ದೇವತೆಗಳೋ, ಮನುಷ್ಯರೋ' ಹೀಗೆ ಸಂದೇಹ ಉಂಟಾಗುತ್ತದೆ. ಇವರು ದ್ವೀಪಾಂತರನಿವಾಸಿ ಮನುಷ್ಯರು.

೨ ಮುಖ ಮತ್ತು ಶರೀರದ ಆಕೃತಿಯಿಂದ ಕೆಲ-ಕೆಲವರು ಮನುಷ್ಯರಂತಿರುವ ಪ್ರಾಣಿಗಳು.

೩ ಕೆಲ-ಕೆಲವು ಪುರುಷರಂತೆ ಕಂಡುಬರುವ ವಾನರಾದಿಗಳು.

ಅಕಿಂಚನಸ್ಯ ದಾಂತಸ್ಯ ಶಾಂತಸ್ಯ ಸಮಚೇತಸಃ ।
ಮಯಾ ಸಂತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ
॥ ೧೩ ॥

ಅಕಿಂಚನನೂ, ಇಂದ್ರಿಯ ವಿಜಯಿಯೂ, ಶಾಂತನೂ, ಸಮ ಚಿತ್ತನೂ, ನನ್ನಲ್ಲೇ ಸದಾಕಾಲ ಸಂತುಷ್ಟಿಯಿರುವವನೂ ಆದ ನನ್ನ ಭಕ್ತನಿಗಾಗಿ ಎಲ್ಲ ದಿಕ್ಕುಗಳು ಆನಂದದಿಂದ ತುಂಬಿರು ತ್ತವೆ. ॥ ೧೩. ॥ ಇಂತಹ ನನ್ನ ಸಂತೋಷೀ ಭಕ್ತನು ಬ್ರಹ್ಮನ ಪದವಿ ಯನ್ನಾಗಲೀ, ಇಂದ್ರನ ಸ್ವರ್ಗದ ಆಧಿಪತ್ಯವನ್ನಾಗಲೀ, ಸಮಸ್ತ ಭೂಮಂಡಲದ ರಾಜ್ಯವೇ ದೊರಕಲೀ, ರಸಾತಲದ ಒಡೆತನವೇ ಇರಲಿ, ಇವಾವುದನ್ನೂ ಬಯಸುವುದಿಲ್ಲ. ಅವನಿಗೆ ಯೋಗ ಸಿದ್ಧಿಯ ಇಚ್ಛೆಯಾಗಲೀ, ಮೋಕ್ಷದ ಬಯಕೆಯಾಗಲಿ ಇರುವು ದಿಲ್ಲ. ಅವನಾದರೋ ಪೂರ್ಣವಾಗಿ ನನ್ನಲ್ಲಿ ಸಮರ್ಪಿತನಾಗಿ ಹೋಗಿದ್ದಾನೆ. ಆದ್ದರಿಂದ ಅವನಿಗೆ ನಾನಲ್ಲದೆ ಬೇರೆ ಏನೂ ಬೇಕಾಗುವುದಿಲ್ಲ. ॥ ೧೪ ॥

ನ ಪಾರಮೇಷ್ಠ್ಯಂ ನ ಮಹೇಂದ್ರಧಿಷ್ಣ್ಯಂ
ನ ಸಾರ್ವಭೌಮಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ಮಯ್ಯರ್ಪಿತಾತ್ಮೇಚ್ಛತಿ ಮದ್ ವಿನಾನ್ಯತ್ ॥ ೧೪ ॥

ಉದ್ಧವಾ ! ನನಗೆ ನಿನ್ನಂತಹ ಪ್ರೇಮೀ ಭಕ್ತರು ಪ್ರಿಯತಮವಾದಪ್ಪು, ನನ್ನ ಪುತ್ರ ಬ್ರಹ್ಮಾ, ಆತ್ಮಾ ಶಂಕರ, ಸ್ವಂತ ಸಹೋದರ ಬಲರಾಮದೇವರು, ಅರ್ಧಾಂಗಿನಿಯಾದ ಲಕ್ಷ್ಮೀದೇವಿ ಮತ್ತು ನನ್ನ ಆತ್ಮವೂ ಕೂಡ ಪ್ರಿಯವಾಗಿಲ್ಲ. ॥ ೧೫॥ ಯಾರಿಗೆ ಯಾವುದರ ಅಪೇಕ್ಷೆಯೂ ಇಲ್ಲವೋ, ಜಗತ್ತಿನ ಚಿಂತನೆಯಿಂದ ಉಪರತನಾಗಿ ನನ್ನ ಮನನ-ಚಿಂತನೆಯಲ್ಲಿ ತಲ್ಲೀನನಾಗಿರುವನೋ ಮತ್ತು ರಾಗ- ದ್ವೇಷವಿರಿಸದೇ ಎಲ್ಲರ ಕುರಿತು ಸಮದೃಷ್ಟಿಯನ್ನಿರಿಸುವನೋ, ಅಂತಹ ಮಹಾತ್ಮನ ಹಿಂದೆ-ಹಿಂದೆ ನಾನು ಅವನ ಚರಣಗಳ ಧೂಳಿಯು ಹಾರಿ ನನ್ನ ಮೇಲೆ ಬೀಳಲಿ, ಇದರಿಂದ ನನ್ನೊಳಗೆ ಸ್ಥಿತವಿರುವ ಎಲ್ಲ ಲೋಕಗಳ ಸಹಿತ ನಾನು ಪವಿತ್ರನಾಗುವೆನು ಎಂದು ಯೋಚಿಸುತ್ತಾ ನಿರಂತರ ತಿರುಗಾಡುತ್ತಿರುತ್ತೇನೆ. ॥ ೧೬ ॥ ನನ್ನ ನಿಷ್ಕಿಂಚನ ಭಕ್ತನ ಚಿತ್ತವು ಸದಾಕಾಲ ನನ್ನಲ್ಲೇ ಅನುರಕ್ತವಾಗಿರುತ್ತದೆ. ಇಂತಹ ಆ ಮಹಾಪುರುಷರು ಬಹಳ ಶಾಂತಪ್ರಕೃತಿಯವರಾಗಿರುತ್ತಾರೆ. ಎಲ್ಲ ಜೀವಿಗಳ ಕುರಿತು ಅವರಲ್ಲಿ ಹೇತುರಹಿತ ಸೌಹಾರ್ದವಿರುತ್ತದೆ. ಕಾಮನೆಗಳಿಂದ ಅವರ ಬುದ್ಧಿಯು ದೂಷಿತವಾಗುವುದಿಲ್ಲ. ಈ ರೀತಿಯ ಸಂತರು ಅನುಭವಿಸುವ ಏಕಾಂತಿಕ ಸುಖವನ್ನು ಬೇರೆ ಯಾರೂ ತಿಳಿಯಲಾರರು. ॥ ೧೭ ॥

ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಂಕರಃ ।
ನ ಚ ಸಂಕರ್ಷಣೋ ನ ಶ್ರೀರ್ನೈವಾತ್ಮಾ ಚ ಯಥಾ ಭವಾನ್
॥ ೧೫ ॥

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶನಮ್ ।
ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂಘ್ರಿರೇಣುಭಿಃ
॥ ೧೬ ॥

ನಿಷ್ಕಿಂಚನಾ ಮಯ್ಯನುರಕ್ತಚೇತಸಃ
ಶಾಂತಾ ಮಹಾಂತೋಽಖಿಲಜೀವವತ್ಸಲಾಃ ।
ಕಾಮೈರನಾಲಬ್ಧಧಿಯೋ ಜುಷಂತಿ ಯತ್
ತನ್ನೈರಪೇಕ್ಷ್ಯಂ ನ ವಿದುಃ ಸುಖಂ ಮಮ ॥ ೧೭ ॥

ಉದ್ಧವನೇ ! ನನ್ನ ಭಕ್ತನು ಜಿತೇಂದ್ರಿಯನಾಗದಿದ್ದರೂ ನನ್ನ ಪ್ರೀತಿಯು ಬೆಳೆಯುತ್ತಾ ಭಕ್ತಿಯ ಪ್ರಭಾವದಿಂದ ಅವನ ವಿಷಯ ವಾಸನೆ ದೂರವಾಗುತ್ತಾ ಹೋಗುತ್ತದೆ. ಎಂದಾದರೂ ಅವನನ್ನು ವಿಷಯಗಳು ಆದುಮಿದರೂ ಅವನು ಆವುಗಳಿಂದ ಬಾಧಿ ತನಾಗುವುದಿಲ್ಲ. (ಏಕೆಂದರೆ, ನಾನು ಅವನನ್ನು ರಕ್ಷಿಸು ತ್ತೇನೆ.) ॥ ೧೮ ॥ ಪ್ರಚಂಡ ಅಗ್ನಿಯು ಎಲ್ಲ ಉರುವಲನ್ನು ಭಸ್ಮಮಾಡಿ ಬಿಡುವಂತೆಯೇ ನನ್ನ ಭಕ್ತನೂ ಕೂಡ ಸಮಸ್ತ ಪಾಪರಾಶಿಗಳನ್ನು ಪೂರ್ಣವಾಗಿ ಸುಟ್ಟುಬಿಡುತ್ತಾನೆ. ॥ ೧೯ ॥ ಎಲೈ ಉದ್ಧವನೇ ! ಸರಳತೆಯಿಂದ ಬೆಳೆದಿರುವ ಭಕ್ತಿಯಮೂಲಕ ನಾನು ಸುಲಭವಾಗಿ ಪ್ರಾಪ್ತನಾಗುವಂತೆ, ಯೋಗ-ಸಾಧನೆ, ಸಾಂಖ್ಯ, ಧರ್ಮಾಚರಣೆ, ಸ್ವಾಧ್ಯಾಯ, ತಪಸ್ಸು, ತ್ಯಾಗ, ಇವು ಗಳೆಲ್ಲವೂ ನನ್ನ ಪ್ರಾಪ್ತಿಯ ಸರಳ ಸಾಧನೆಗಳಲ್ಲ. ॥ ೨೦ ॥

ಬಾಧ್ಯಮಾನೋಽಪಿ ಮದ್ಭಕ್ತೋ ವಿಷಯೈರಜಿತೇಂದ್ರಿಯಃ ।
ಪ್ರಾಯಃ ಪ್ರಗಲ್ಭಯಾ ಭಕ್ತ್ಯಾ ವಿಷಯೈರ್ನಾಭಿಭೂಯತೇ
॥ ೧೮ ॥

ಯಥಾಗ್ನಿಃ ಸುಸಮೃದ್ಧಾರ್ಚಿಃ ಕರೋತ್ಯೇಧಾಂಸಿ ಭಸ್ಮಸಾತ್ ।
ತಥಾ ಮದ್ವಿಷಯಾ ಭಕ್ತಿರುದ್ಧವೈನಾಂಸಿ ಕೃತ್ಸ್ನಶಃ
॥ ೧೯ ॥

ನ ಸಾಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಉದ್ಧವ ।
ನ ಸ್ವಾಧ್ಯಾಯಸ್ತಪಸ್ತ್ಯಾಗೋ ಯಥಾ ಭಕ್ತಿರ್ಮಮೋರ್ಜಿತಾ
॥ ೨೦ ॥

ಭಕ್ತ್ಯಾಹಮೇಕಯಾ ಗ್ರಾಹ್ಯಃ ಶ್ರದ್ಧಯಾಽಽತ್ಮಾ ಪ್ರಿಯಃ ಸತಾಮ್ ।
ಭಕ್ತಿಃ ಪುನಾತಿ ಮನ್ನಿಷ್ಠಾ ಶ್ವಪಾಕಾನಪಿ ಸಂಭವಾತ್
॥ ೨೧ ॥

ಧರ್ಮಃ ಸತ್ಯದಯೋಪೇತೋ ವಿದ್ಯಾ ವಾ ತಪಸಾನ್ವಿತಾ ।
ಮದ್ಭಕ್ತ್ಯಾಪೇತಮಾತ್ಮಾನಂ ನ ಸಮ್ಯಕ್ ಪ್ರಪುನಾತಿ ಹಿ
॥ ೨೨ ॥

ಕಥಂ ವಿನಾ ರೋಮಹರ್ಷಂ ದ್ರವತಾ ಚೇತಸಾ ವಿನಾ ।
ವಿನಾಽಽನಂದಾಶ್ರುಕಲಯಾ ಶುದ್ಧ್ಯೇದ್ಭಕ್ತ್ಯಾ ವಿನಾಽಽಶಯಃ
॥ ೨೩ ॥

ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ
ರುದತ್ಯಭೀಕ್ಷ್ಣಂ ಹಸತಿ ಕ್ವಚಿಚ್ಚ ।
ವಿಲಜ್ಜ ಉದ್ಗಾಯತಿ ನೃತ್ಯತೇ ಚ
ಮದ್ಭಕ್ತಿಯುಕ್ತೋ ಭುವನಂ ಪುನಾತಿ ॥ ೨೪ ॥

ಯಥಾಗ್ನಿನಾ ಹೇಮಮಲಂ ಜಹಾತಿ
ಧ್ಮಾತಂ ಪುನಃ ಸ್ವಂ ಭಜತೇ ಚ ರೂಪಮ್ ।
ಆತ್ಮಾ ಚ ಕರ್ಮಾನುಶಯಂ ವಿಧೂಯ
ಮದ್ಭಕ್ತಿಯೋಗೇನ ಭಜತ್ಯಥೋ ಮಾಮ್ ॥ ೨೫ ॥

ಯಥಾ ಯಥಾಽಽತ್ಮಾ ಪರಿಮೃಜ್ಯತೇಽಸೌ
ಮತ್ಪುಣ್ಯಗಾಥಾಶ್ರವಣಾಭಿಧಾನೈಃ ।
ತಥಾ ತಥಾ ಪಶ್ಯತಿ ವಸ್ತು ಸೂಕ್ಷ್ಮಂ
ಚಕ್ಷುರ್ಯಥೈವಾಂಜನಸಂಪ್ರಯುಕ್ತಮ್ ॥ ೨೬ ॥

ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ ।
ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ
॥ ೨೭ ॥

ತಸ್ಮಾದಸದಭಿಧ್ಯಾನಂ ಯಥಾ ಸ್ವಪ್ನಮನೋರಥಮ್ ।
ಹಿತ್ವಾ ಮಯಿ ಸಮಾಧತ್ಸ್ವ ಮನೋ ಮದ್ಭಾವಭಾವಿತಮ್
॥ ೨೮ ॥

ಸ್ತ್ರೀಣಾಂ ಸ್ತ್ರೀಸಂಗಿನಾಂ ಸಂಗಂ ತ್ಯಕ್ತ್ವಾ ದೂರತ ಆತ್ಮವಾನ್ ।
ಕ್ಷೇಮೇ ವಿವಿಕ್ತ ಆಸೀನಶ್ಚಿಂತಯೇನ್ಮಾಮತಂದ್ರಿತಃ
॥ ೨೯ ॥

ನ ತಥಾಸ್ಯ ಭವೇತ್ ಕ್ಲೇಶೋ ಬಂಧಶ್ಚಾನ್ಯಪ್ರಸಂಗತಃ ।
ಯೋಷಿತ್ಸಂಗಾದ್ಯಥಾ ಪುಂಸೋ ಯಥಾತತ್ಸಂಗಿಸಂಗತಃ
॥ ೩೦ ॥

ನಾನು ಸಂತರಿಗೆ ಪ್ರಿಯನಾಗಿರುವೆನು, ಅವರ ಆತ್ಮನೇ ಆಗಿದ್ದೇನೆ. ಏಕಮಾತ್ರ ಶ್ರದ್ಧಾ-ಭಕ್ತಿಯಿಂದಲೇ ನಾನು ಅವರಿಗೆ ದೊರೆಯುತ್ತೇನೆ. ಒಂದು ವೇಳೆ ಜನ್ಮತಃ ಚಾಂಡಾಲನೇ ಆಗಿದ್ದರೂ ನನ್ನ ಕುರಿತು ಮಾಡಿದ ಭಕ್ತಿಯಿಂದ ಅವನು ಶುದ್ಧ ಪವಿತ್ರನಾಗಿ ಹೋಗುತ್ತಾನೆ. ॥ ೨೧ ॥ ಯಾರಾದರೂ ಸತ್ಯ, ದಯೆಯಿಂದ ಕೂಡಿ ಧರ್ಮವನ್ನು ಪಾಲಿಸಿದ್ದರೂ, ಅಥವಾ ಯಾರಾದರೂ ತಪಸ್ಸಿನಿಂದೊಡಗೂಡಿ ವಿದ್ಯಾಭ್ಯಾಸ ಮಾಡಿದ್ದರೂ ಅವರು ನನ್ನ ಭಕ್ತಿಯಿಂದ ರಹಿತರಾಗಿದ್ದರೆ, ಇಂತಹ ಧರ್ಮ, ಸ್ವಾಧ್ಯಾಯಗಳು ಆ ವ್ಯಕ್ತಿಯನ್ನು ಪವಿತ್ರವಾಗಿಸಲಾರವು. ॥ ೨೨ ॥ ಭಕ್ತಿಯನ್ನು ಮಾಡುತ್ತಾ ಇರುವಾಗ ಶರೀರ ಪುಳಕಿತವಾಗುವುದಿಲ್ಲವೋ, ಚಿತ್ತವು ದ್ರವಿಸುವುದಿಲ್ಲವೋ, ಆನಂದದ ಕಣ್ಣೀರು ಒಸರುವುದಿಲ್ಲವೋ ಅಲ್ಲಿಯವರೆಗೆ ಅವನ ಅಂತಃಕರಣ ಪೂರ್ಣವಾಗಿ ಶುದ್ಧವಾಗ ಲಾರದು. ॥ ೨೩ ॥ ಆದರೆ ಭಕ್ತಿಯ ಪ್ರವಾಹ ಬೆಳೆದಾಗ ಅವನ ವಾಣಿಯು ಗದ್ಗದವಾಗುತ್ತದೆ, ಚಿತ್ತದ್ರವಿತವಾಗುತ್ತದೆ. ಕೆಲವೊಮ್ಮೆ (ಓ ಪ್ರಭುವೇ ನೀನೆಲ್ಲಿ ಹೋದೆ) ಎಂಬ ಉದ್ಗಾರವೆತ್ತುತ್ತಾ ಅಳುತ್ತಿದ್ದರೆ, ಕೆಲವೊಮ್ಮೆ ನಗುತ್ತಾನೆ. ನಾಚಿಕೆಬಿಟ್ಟು ಕೆಲವೊಮ್ಮೆ ಗಟ್ಟಿಯಾಗಿ ಹಾಡಿದರೆ, ಕೆಲವೊಮ್ಮೆ ನರ್ತಿಸುತ್ತಾನೆ. ಇಂತಹ ನನ್ನ ಭಕ್ತನು ಇಡೀ ಜಗತ್ತನ್ನೇ ಪವಿತ್ರವಾಗಿಸುತ್ತಾನೆ. ॥ ೨೪ ॥ ಚಿನ್ನವು ಬೆಂಕಿಯಲ್ಲಿ ಕಾಯಿಸಿದಾಗ ತನ್ನ ಎಲ್ಲ ಕೊಳೆಯನ್ನು ಬಿಟ್ಟು ಶುದ್ಧವಾಗಿ, ತನ್ನ ನಿಜರೂಪದಿಂದ ಹೊಳೆಯತೊಡಗುತ್ತದೆ. ಹಾಗೆಯೇ ಮನುಷ್ಯನು ನನ್ನ ಭಕ್ತಿಯನ್ನು ಮಾಡಿದಾಗ, ಆ ಭಕ್ತಿಯೋಗದ ಮೂಲಕ ತನ್ನ ಕರ್ಮವಾಸನೆಗಳನ್ನು ನಾಶಮಾಡಿ, ತನ್ನ ನಿಜಸ್ವರೂಪ ಪರಮಾತ್ಮನಾದ ನನ್ನನ್ನು ಪಡೆದು ಕೊಳ್ಳು ತ್ತಾನೆ. ॥ ೨೫ ॥ ಉದ್ಧವನೇ! ನನ್ನ ಪರಮಪಾವನ ಲೀಲಾ-ಕಥೆಗಳ ಶ್ರವಣ-ಕೀರ್ತನೆಯಿಂದ ಚಿತ್ತದ ಕೊಳೆಯು ತೊಳೆದು ಹೋಗು ತ್ತಿರುವಂತೆ, ಕಣ್ಣಿಗೆ ಅಂಜನವನ್ನು ಹಾಕಿದಾಗ ಅದೃಶ್ಯವಸ್ತುವೂ ಕಾಣುವಂತೆ ಅವನಿಗೆ ಸೂಕ್ಷ್ಮವಸ್ತುವಿನ ವಾಸ್ತವಿಕ ತತ್ತ್ವದ ದರ್ಶನವು ಆಗತೊಡಗುತ್ತದೆ. ॥ ೨೬ ॥

ನಿರಂತರ ವಿಷಯಗಳ ಚಿಂತನೆ ಮಾಡುವ ಮನುಷ್ಯನ ಚಿತ್ತವು ವಿಷಯಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ ಮತ್ತು ನನ್ನನ್ನೇ ಸ್ಮರಿಸುವವನ ಚಿತ್ತವು ನನ್ನಲ್ಲೇ ತಲ್ಲೀನವಾಗುತ್ತದೆ. ॥ ೨೭ ॥ ಅಸತ್ ವಸ್ತುಗಳ ಚಿಂತನೆಯು ಸ್ವಪ್ನಮನೋರಥದಂತೆ ಮಿಥ್ಯೆಯೇ ಆಗಿದೆ. ಆದ್ದರಿಂದ ಅವುಗಳ ಚಿಂತನೆಯನ್ನು ಬಿಟ್ಟು ನನ್ನನ್ನೇ ಚಿಂತಿಸಬೇಕು. ನನ್ನಲ್ಲೇ ಮನಸ್ಸನ್ನು ತೊಡಗಿಸಬೇಕು. ॥ ೨೮ ॥ ಪ್ರಿಯ ಉದ್ಧವಾ! ಸ್ತ್ರೀಯರ ಸಂಗದಿಂದ ಹಾಗೂ ಸ್ತ್ರೀ-ಸಂಗಿಗಳ ಸಂಗದಿಂದ ಕ್ಲೇಶಗಳ ಪರಂಪರೆಯೇ ಬೆಳೆಯುತ್ತಿರುವಂತೆ ಬೇರೆ ಯಾರ ಸಂಗ ದಿಂದಲೂ ಬೆಳೆಯುವುದಿಲ್ಲ. ಆದ್ದರಿಂದ ಸಾಧಕರು ತನ್ನ ಇಂದ್ರಿಯ ಗಳನ್ನು ವಶಪಡಿಸಿಕೊಂಡು, ಸ್ತ್ರೀಯರ ಮತ್ತು ಲಂಪಟರ ಸಂಗವನ್ನು ದೂರದಿಂದಲೇ ತ್ಯಜಿಸಬೇಕು. ಏಕಾಂತ ಪವಿತ್ರದೇಶದಲ್ಲಿ ಕುಳಿತು ಕೊಂಡು ಎಚ್ಚರಿಕೆಯಿಂದ ನನ್ನನ್ನು ಚಿಂತಿಸಬೇಕು. ॥ ೨೯-೩೦ ॥

ಉದ್ಧವ ಉವಾಚ

ಯಥಾ ತ್ವಾಮರವಿಂದಾಕ್ಷ ಯಾದೃಶಂ ವಾ ಯದಾತ್ಮಕಮ್ ।
ಧ್ಯಾಯೇನ್ಮುಮುಕ್ಷುರೇತನ್ಮೇ ಧ್ಯಾನಂ ತ್ವಂ ವಕ್ತುಮರ್ಹಸಿ
॥ ೩.೧ ॥

ಶ್ರೀಭಗವಾನುವಾಚ

ಸಮ ಆಸನ ಆಸೀನಃ ಸಮಕಾಯೋ ಯಥಾಸುಖಮ್ ।
ಹಸ್ತಾವುತ್ಸಂಗ ಆಧಾಯ ಸ್ವನಾಸಾಗ್ರಕೃತೇಕ್ಷಣಃ
॥ ೩.೨ ॥

ಪ್ರಾಣಸ್ಯ ಶೋಧಯೇನ್ಮಾರ್ಗಂ ಪೂರಕುಂಭಕರೇಚಕೈಃ ।
ವಿಪರ್ಯಯೇಣಾಪಿ ಶನೈರಭ್ಯಸೇನ್ನಿರ್ಜಿತೇಂದ್ರಿಯಃ
॥ ೩.೩ ॥

ಹೃದ್ಯವಿಚ್ಛಿನ್ನಮೋಂಕಾರಂ ಘಂಟಾನಾದಂ ವಿಸೋರ್ಣವತ್ ।
ಪ್ರಾಕೇನೋದೀರ್ಯ ತತ್ರಾಥ ಪುನಃ ಸಂವೇಶಯೇತ್ ಸ್ವರಮ್
॥ ೩.೪ ॥

ಏವಂ ಪ್ರಣವಸಂಯುಕ್ತಂ ಪ್ರಾಣಮೇವ ಸಮಭ್ಯಸೇತ್ ।
ದಶಕೃತ್ವಸ್ತ್ರಿಷವಣಂ ಮಾಸಾದರ್ವಾಗ್ಜಿತಾನಿಲಃ
॥ ೩.೫ ॥

ಹೃತ್ಪುಂಡರೀಕಮಂತಃಸ್ಥಮೂರ್ಧ್ವನಾಲಮಧೋಮುಖಮ್ ।
ಧ್ಯಾತ್ವೋರ್ಧ್ವಮುಖಮುನ್ನಿದ್ರಮಷ್ಟಪತ್ರಂ ಸಕರ್ಣಿಕಮ್
॥ ೩.೬ ॥

ಕರ್ಣಿಕಾಯಾಂ ನ್ಯಸೇತ್ಸೂರ್ಯಸೋಮಾಗ್ನೀನುತ್ತರೋತ್ತರಮ್ ।
ವಹ್ನಿ ಮಧ್ಯೇ ಸ್ಮರೇದ್ರೂಪಂ ಮಮೈತದ್ಧ್ಯಾನಮಂಗಲಮ್
॥ ೩.೭ ॥

ಸಮಂ ಪ್ರಶಾಂತಂ ಸುಮುಖಂ ದೀರ್ಘಚಾರುಚತುರ್ಭುಜಮ್ ।
ಸುಚಾರುಸುಂದರಗ್ರೀವಂ ಸುಕಪೋಲಂ ಶುಚಿಸ್ಮಿತಮ್
॥ ೩.೮ ॥

ಸಮಾನಕರ್ಣವಿನ್ಯಸ್ತಸ್ಫುರನ್ಮಕರಕುಂಡಲಮ್ ।
ಹೇಮಾಂಬರಂ ಘನಶ್ಯಾಮಂ ಶ್ರೀವತ್ಸಶ್ರೀನಿಕೇತನಮ್
॥ ೩.೯ ॥

ಉದ್ಧವನು ಕೇಳಿದನು – ಕಮಲನಯನ ಶ್ಯಾಮಸುಂದರಾ ! ಮುಮುಕ್ಷುವು ನಿನ್ನನ್ನು ಹೇಗೆ ಧ್ಯಾನಿಸಬೇಕು ? ಯಾವ ರೂಪದಿಂದ ಹಾಗೂ ನಿನ್ನ ಯಾವ ಸ್ವರೂಪದ ಧ್ಯಾನ ಮಾಡಬೇಕು ? ಅದನ್ನು ತಿಳಿಸುವ ಕೃಪೆಮಾಡು. ॥ ೩.೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ ! ತುಂಬಾ ಎತ್ತರವಲ್ಲದ, ತುಂಬಾ ತಗ್ಗಿಲ್ಲದ ಆಸನದಲ್ಲಿ ಶರೀರವನ್ನು ನೆಟ್ಟಗೆ ಇಟ್ಟುಕೊಂಡು ಕುಳಿತುಕೊಳ್ಳಬೇಕು. ಕೈಗಳನ್ನು ತನ್ನ ತೊಡೆಗಳಲ್ಲಿಟ್ಟುಕೊಂಡು, ದೃಷ್ಟಿಯು ನಾಸಿಕಾಗ್ರದಲ್ಲಿರಿಸಬೇಕು. ॥ ೩.೨ ॥ ಆನಂತರ ಪೂರಕ, ಕುಂಭಕ, ರೇಚಕ ಮತ್ತು ರೇಚಕ, ಕುಂಭಕ, ಪೂರಕ ಹೀಗೆ ಪ್ರಾಣಾಯಾಮಗಳ ಮೂಲಕ ನಾಡೀ ಶೋಧನ ಮಾಡಬೇಕು. ಪ್ರಾಣಾಯಾಮದ ಅಭ್ಯಾಸವನ್ನು ಮೆಲ್ಲ-ಮೆಲ್ಲನೆ ಬೆಳಸಬೇಕು. ಜೊತೆ-ಜೊತೆಗೆ ಇಂದ್ರಿಯಗಳನ್ನು ಗೆಲ್ಲುವ ಅಭ್ಯಾಸವನ್ನೂ ಮಾಡಬೇಕು. ॥ ೩.೩ ॥ ಹೃದಯದಲ್ಲಿ ಕಮಲನಾಳಗತ ತೆಳ್ಳನೆಯ ನೂಲಿನಂತೆ ಅವಿಚ್ಛಿನ್ನವಾಗಿ ಓಂಕಾರದ ಚಿಂತನೆ ಮಾಡಬೇಕು, ಪ್ರಾಣದ ಮೂಲಕ ಅದನ್ನು ಮೇಲಕ್ಕೆ ಒಯ್ದು ಅದರಲ್ಲಿ ಘಂಟಾನಾದದಂತೆ ಸ್ವರವನ್ನು ಸ್ಥಿರಗೊಳಿಸಬೇಕು. ಆ ಸ್ವರವೂ ತೈಲಧಾರೆಯಂತೆ ಅಖಂಡವಾಗಿರಬೇಕು. ಈ ಪ್ರಕಾರ ಪ್ರತಿದಿನ ಮೂರುಬಾರಿ ಹತ್ತತ್ತು ಬಾರಿ ಓಂಕಾರ ಸಹಿತ ಪ್ರಾಣಾಯಾಮವನ್ನು ಅಭ್ಯಸಿಸಬೇಕು. ಹೀಗೆ ಮಾಡುವುದರಿಂದ ಒಂದು ತಿಂಗಳೊಳಗೆ ಪ್ರಾಣವಾಯುವು ವಶವಾಗುತ್ತದೆ. ॥ ೩.೪-೩.೫ ॥ ಇದಾದ ಬಳಿಕ ಹೃದಯವು ಒಂದು ಕಮಲವಾಗಿದೆ, ಅದು ಶರೀರದ ಒಳಗೆ ಅದರ ತೊಟ್ಟು ಮೇಲಕ್ಕೆದ್ದು ಮುಖವು ಕೆಳಮುಖವಾಗಿರುವಂತೆ ಚಿಂತಿಸಬೇಕು. ಮತ್ತೆ ಅದನ್ನು ಮೇಲ್ಮುಖವಾಗಿಸಬೇಕು. ಅರಳಿದ, ಅದಕ್ಕೆ ಎಂಟು ಎಸಳುಗಳಿದ್ದು ಅದರ ಮಧ್ಯಭಾಗದಲ್ಲಿ ಹಳದಿಯಾದ ಅತ್ಯಂತ ಕೋಮಲವಾದ ಕರ್ಣಿಕೆ (ಪೀಠ) ಇದೆ. ॥ ೩.೬ ॥ ಆ ಕರ್ಣಿಕೆಯಲ್ಲಿ ಕ್ರಮಶಃ ಸೂರ್ಯ, ಚಂದ್ರ ಮತ್ತು ಅಗ್ನಿ ಇವುಗಳನ್ನು ನ್ಯಾಸಮಾಡಬೇಕು. ಅನಂತರ ಅಗ್ನಿಯೊಳಗೆ ಧ್ಯಾನಕ್ಕಾಗಿ ಬಹಳ ಮಂಗಳಮಯವಾದ ನನ್ನ ಸ್ವರೂಪವನ್ನು ಸ್ಮರಿಸಬೇಕು. ॥ ೩.೭ ॥

ಆ ಸ್ವರೂಪವು – ಎಲ್ಲ ಅವಯವಗಳು ಸಮಾನರೂಪದಿಂದಿವೆ. ಎಲ್ಲ ಅವಯವಗಳು ಸುಪುಷ್ಟವಾಗಿದ್ದು ಸುಂದರವಾಗಿವೆ. ರೋಮ-ರೋಮಗಳಲ್ಲಿ ಶಾಂತಿಯು ಒಸರುತ್ತಿದೆ. ಮುಖ ಕಮಲವು ಅತ್ಯಂತ ಪ್ರಫುಲ್ಲಿತವಾಗಿದ್ದು ಅಂದವಾಗಿದೆ. ಮೊಣಕಾಲು ಮುಟ್ಟುವ ದೀರ್ಘವಾದ ನಾಲ್ಕು ಮನೋಹರ ಭುಜಗಳಿವೆ. ತುಂಬಾ ಅಂದವಾದ ಕಂಠವು ಮನೋಹರವಾಗಿದೆ. ಮರಕತ ಮಣಿಯಂತೆ ಸ್ನಿಗ್ಧವಾದ ಗಲ್ಲಗಳಿವೆ. ಮುಖದಲ್ಲಿ ಮಂದಮಧುರ ಮುಗುಳ್ನಗೆಯು ಶೋಭಿಸುತ್ತಿದೆ. ಎರಡೂ ಕಿವಿಗಳು ಸಮಾನವಾಗಿದ್ದು, ಅವುಗಳಲ್ಲಿ ಮಕರಾಕಾರದ ದಿವ್ಯ ಕುಂಡಲಗಳು ಓಲಾಡುತ್ತಿವೆ. ಮಳೆಗಾಲದ ಮೋಡದಂತೆ ಶ್ಯಾಮಲ ಶರೀರದ ಮೇಲೆ ಪೀತಾಂಬರವು ಕಂಗೊಳಿಸುತ್ತಿದೆ. ವಕ್ಷಃಸ್ಥಳದಲ್ಲಿ ಒಂದೆಡೆ ಶ್ರೀವತ್ಸಲಾಂಛನವಿದ್ದು, ಮತ್ತೊಂದೆಡೆ ಶ್ರೀಲಕ್ಷ್ಮೀದೇವಿಯು ವಿರಾಜಮಾನಳಾಗಿದ್ದಾಳೆ. ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು

ಶಂಖಚಕ್ರಗದಾಪದ್ಮವನಮಾಲಾವಿಭೂಷಿತಮ್ ।
ನೂಪುರೈರ್ವಿಲಸತ್ಪಾದಂ ಕೌಸ್ತುಭಪ್ರಭಯಾ ಯುತಮ್
॥ ೪೦ ॥

ದ್ಯುಮತ್ಕಿರೀಟಕಟಕಕಟಿಸೂತ್ರಾಂಗದಾಯುತಮ್ ।
ಸರ್ವಾಂಗ ಸುಂದರಂ ಹೃದ್ಯಂ ಪ್ರಸಾದಸುಮುಖೇಕ್ಷಣಮ್ ।
ಸುಕುಮಾರಮಭಿಧ್ಯಾಯೇತ್ ಸರ್ವಾಂಗೇಷು ಮನೋ ದಧತ್
॥ ೪೧ ॥

ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ಮನಸಾऽऽಕೃಷ್ಯ ತನ್ಮನಃ ।
ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ
॥ ೪೨ ॥

ತತ್ಸರ್ವವ್ಯಾಪಕಂ ಚಿತ್ತಮಾಕೃಷ್ಯೈಕತ್ರ ಧಾರಯೇತ್ ।
ನಾನ್ಯಾನಿ ಚಿಂತಯೇದ್ಭೂಯಃ ಸುಸ್ಮಿತಂ ಭಾವಯೇನ್ಮುಖಮ್
॥ ೪೩ ॥

ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ ।
ತಚ್ಚ ತ್ಯಕ್ತ್ವಾಮದಾರೋಹೋ ನ ಕಿಂಚಿದಪಿ ಚಿಂತಯೇತ್
॥ ೪೪ ॥

ಏವಂ ಸಮಾಹಿತಮತಿರ್ಮಾಮೇವಾತ್ಮಾನಮಾತ್ಮನಿ ।
ವಿಚಷ್ಟೇ ಮಯಿ ಸರ್ವಾತ್ಮನ್ ಜ್ಯೋತಿರ್ಜ್ಯೋತಿಷಿ ಸಂಯುತಮ್
॥ ೪೫ ॥

ಧ್ಯಾನೇನೇತ್ಥಂ ಸುತೀವ್ರೇಣ ಯುಂಜತೋ ಯೋಗಿನೋ ಮನಃ ।
ಸಂಯಾಸ್ಯತ್ಯಾಶು ನಿರ್ವಾಣಂ ದ್ರವ್ಯಜ್ಞಾನಕ್ರಿಯಾಭ್ರಮಃ
॥ ೪೬ ॥

ಧರಿಸಿಕೊಂಡಿರುವನು. ಕೊರಳಲ್ಲಿ ವನಮಾಲೆ ಶೋಭಿಸುತ್ತಿದೆ. ಚರಣಗಳಲ್ಲಿ ನೂಪುರಗಳಿದ್ದು ಕತ್ತಿನಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿದೆ. ತಮ್ಮ ಸ್ಥಾನಗಳಲ್ಲಿ ಮಿಂಚುತ್ತಿರುವ ಕಿರೀಟ ಕಂಕಣಗಳು, ಭುಜಕೀರ್ತಿಗಳು, ಓಡ್ಯಾಣಗಳು ಶೋಭಾಯಮಾನವಾಗಿವೆ. ಎಲ್ಲವೂ ಹೃದಯಂಗಮವಾಗಿದೆ. ಅಂದವಾದ ಮುಖವು ಮತ್ತು ಕೃಪಾಪೂರ್ಣ ನೋಟದಿಂದ ನಾಲ್ಕೂಕಡೆ ಕೃಪಾಪ್ರಸಾದವನ್ನು ವರ್ಷಿಸುತ್ತಿದೆ. ಉದ್ಧವನೇ ! ನನ್ನ ಈ ಸುಕುಮಾರರೂಪವನ್ನು ಧ್ಯಾನಿಸಬೇಕು ಹಾಗೂ ತನ್ನ ಮನಸ್ಸನ್ನು ಒಂದೊಂದೇ ಅಂಗದಲ್ಲಿ ಸ್ಥಿರವಾಗಿಸಬೇಕು. ॥ ೩೮-೪೧ ॥

ಬುದ್ಧಿವಂತನಾದ ಮನುಷ್ಯನು ಮನಸ್ಸಿನ ಮೂಲಕ ಇಂದ್ರಿಯಗಳನ್ನು ಅವುಗಳ ವಿಷಯಗಳಿಂದ ಸೆಳೆದುಕೊಂಡು, ಆ ಮನಸ್ಸನ್ನು ಬುದ್ಧಿರೂಪೀ ಸಾರಥಿಯ ಸಹಾಯದಿಂದ ನನ್ನಲ್ಲೇ ತೊಡಗಿಸಬೇಕು. ॥ ೪೨ ॥ ಇಡೀ ಶರೀರದ ಧ್ಯಾನ ಉಂಟಾದಾಗ ತನ್ನ ಚಿತ್ತವನ್ನು ಸೆಳೆದುಕೊಂಡು ಒಂದೇ ಸ್ಥಾನದಲ್ಲಿ ಸ್ಥಿರಗೊಳಿಸಬೇಕು. ಬೇರೆ ಅಂಗಗಳ ಚಿಂತನೆಮಾಡದೆ ಕೇವಲ ಮಂದ-ಮಂದ ಮುಗುಳ್ನಗೆಯ ಪ್ರಭೆಯಿಂದ ಕೂಡಿದ ನನ್ನ ಮುಖಾರವಿಂದದಲ್ಲಿ ದೃಷ್ಟಿಯನ್ನು ನೆಲೆಗೊಳಿಸಬೇಕು. ॥ ೪೩ ॥ ಚಿತ್ತವು ಮುಖಾರವಿಂದದಲ್ಲಿ ನೆಲೆಗೊಂಡಾಗ ಅದನ್ನು ಅಲ್ಲಿಂದ ತೊಡೆದು ಆಕಾಶದಲ್ಲಿ ಸ್ಥಿರಗೊಳಿಸಬೇಕು. ಅನಂತರ ಆಕಾಶದ ಚಿಂತನೆಯನ್ನೂ ತ್ಯಜಿಸಿ ನನ್ನ ಸ್ವರೂಪದಲ್ಲೇ ಆರೂಢನಾಗಬೇಕು. ಮತ್ತೆ ನಾನಲ್ಲದೆ ಬೇರೆ ಯಾವ ವಸ್ತುವನ್ನೂ ಚಿಂತಿಸಬಾರದು. ॥ ೪೪ ॥ ಈ ಪ್ರಕಾರ ಚಿತ್ತವು ಒಂದೆಡೆ ಸೇರಿದಾಗ, ಒಂದು ಜ್ಯೋತಿಯು ಇನ್ನೊಂದು ಜ್ಯೋತಿಯನ್ನು ಸೇರಿ ಒಂದಾಗುವಂತೆ ತನ್ನಲ್ಲಿ ನನ್ನನ್ನು ಮತ್ತು ಸರ್ವಾತ್ಮನಾದ ನನ್ನಲ್ಲಿ ತನ್ನನ್ನು ಅನುಭವಿಸತೊಡಗುವನು. ಹೀಗೆ ಅವನು ನನ್ನಲ್ಲಿ ಏಕೀಭಾವದಿಂದ ಸ್ಥಿತನಾಗಿ ಹೋಗುತ್ತಾನೆ. ॥ ೪೫ ॥ ಈ ವಿಧವಾಗಿ ತೀವ್ರವಾದ ಧ್ಯಾನಯೋಗದ ಮೂಲಕ ನನ್ನಲ್ಲಿಯೇ ತನ್ನ ಚಿತ್ತವನ್ನು ತೊಡಗಿಸಿದ ಯೋಗಿಯಲ್ಲಿ ದ್ರವ್ಯ, ಜ್ಞಾನ, ಕ್ರಿಯೆ ಇವುಗಳ ಕುರಿತಾದ ನಾನಾತ್ವದ ಭ್ರಮೆ ಅಳಿದುಹೋಗುತ್ತದೆ. ಅರ್ಥಾತ್ – ಎಲ್ಲ ಪದಾರ್ಥಗಳ ರೂಪದಲ್ಲಿ ಓರ್ವ ಪರಮಾತ್ಮನ ಸತ್ತೆಯೇ ಕಂಡುಬರುತ್ತದೆ. ಅವನ ಜ್ಞಾನದಲ್ಲಿ ಏಕಮಾತ್ರ ಪರಮಾತ್ಮನೇ ಉಳಿದುಬಿಡುತ್ತಾನೆ. ಅವನ ಎಲ್ಲ ಕ್ರಿಯೆಗಳೂ ಪರಮಾತ್ಮನಿಗಾಗಿಯೇ ಆಗುತ್ತವೆ. ಹೀಗೆ ಅವನಿಗೆ ಎಲ್ಲೆಡೆ ಪರಮಾತ್ಮನದೇ ಸ್ವರೂಪ ಕಂಡುಬರಲು ತೊಡಗುತ್ತದೆ. ಬಳಿಕ ಅವನಿಗೆ ಆಗಲೇ ಮೋಕ್ಷದ ಪ್ರಾಪ್ತಿಯಾಗುತ್ತದೆ. ॥ ೪೬ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಚತುರ್ದಶೋऽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಬೇರೆ-ಬೇರೆ ಸಿದ್ಧಿಗಳ ಹೆಸರುಗಳು ಮತ್ತು ಅವುಗಳ ಲಕ್ಷಣ

ಶ್ರೀಭಗವಾನುವಾಚ

ಜಿತೇಂದ್ರಿಯಸ್ಯ ಯುಕ್ತಸ್ಯ ಜಿತಶ್ವಾಸಸ್ಯ ಯೋಗಿನಃ ।
ಮಯಿ ಧಾರಯತಶ್ಚೇತ ಉಪತಿಷ್ಠಂತಿ ಸಿದ್ಧಯಃ
॥ ೧ ॥

ಉದ್ಧವ ಉವಾಚ

ಕಯಾ ಧಾರಣಯಾ ಕಾಸ್ವಿತ್ ಕಥಂಸ್ವಿತ್ ಸಿದ್ಧಿರಚ್ಯುತ ।
ಕತಿ ವಾ ಸಿದ್ಧಯೋ ಬ್ರೂಹಿ ಯೋಗಿನಾಂ ಸಿದ್ಧಿದೋ ಭವಾನ್
॥ ೨ ॥

ಶ್ರೀಭಗವಾನುವಾಚ

ಸಿದ್ಧಯೋಽಷ್ಟಾದಶೇ ಪ್ರೋಕ್ತಾ ಧಾರಣಾಯೋಗಪಾರಗೈಃ ।
ತಾಸಾಮಷ್ಟೌ ಮತ್ಪ್ರಧಾನಾ ದಶೈವ ಗುಣಹೇತವಃ
॥ ೩ ॥

ಅಣಿಮಾ ಮಹಿಮಾ ಮೂರ್ತೇರ್ಲಘಿಮಾ ಪ್ರಾಪ್ತಿರಿಂದ್ರಿಯೈಃ ।
ಪ್ರಾಕಾಮ್ಯಂ ಶ್ರುತದೃಷ್ಟೇಷು ಶಕ್ತಿಪ್ರೇರಣಮೀಶಿತಾ
॥ ೪ ॥

ಗುಣೇಷ್ವಸಂಗೋ ವಶಿತಾ ಯತ್ಕಾಮಸ್ತದವಸ್ಯತಿ ।
ಏತಾ ಮೇ ಸಿದ್ಧಯಃ ಸೌಮ್ಯ ಅಷ್ಟಾವೌತ್ಪತ್ತಿಕಾ ಮತಾಃ
॥ ೫ ॥

ಅನೂರ್ಮಿಮತ್ತ್ವಂ ದೇಹೇಽಸ್ಮಿನ್ ದೂರಶ್ರವಣದರ್ಶನಮ್ ।
ಮನೋಜವಃ ಕಾಮರೂಪಂ ಪರಕಾಯಪ್ರವೇಶನಮ್
॥ ೬ ॥

ಸ್ವಚ್ಛಂದಮೃತ್ಯುರ್ದೇವಾನಾಂ ಸಹಕ್ರೀಡಾನುದರ್ಶನಮ್ ।
ಯಥಾಸಂಕಲ್ಪಸಂಸಿದ್ಧಿರಾಜ್ಞಾಪ್ರತಿಹತಾಗತಿಃ
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ಸಾಧಕನು ಇಂದ್ರಿಯ, ಪ್ರಾಣ, ಮನಸ್ಸನ್ನು ತನ್ನ ವಶಪಡಿಸಿಕೊಂಡು ತನ್ನ ಚಿತ್ತವನ್ನು ನನ್ನಲ್ಲಿ ತೊಡಗಿಸಿ, ನನ್ನ ಧಾರಣೆಯನ್ನು ಮಾಡತೊಡಗಿದಾಗ ಅವನ ಎದುರಿಗೆ ಅನೇಕ ಸಿದ್ಧಿಗಳು ಉಪಸ್ಥಿತವಾಗುತ್ತವೆ. ॥ ೧ ॥

ಉದ್ಧವನು ಕೇಳಿದನು – ಓ ಅಚ್ಯುತಾ! ಯಾವ ಧಾರಣೆಯಿಂದ ಯಾವ ವಿಧವಾದ ಸಿದ್ಧಿಯು ಪ್ರಾಪ್ತವಾಗುತ್ತದೆ ಮತ್ತು ಅವುಗಳ ಸಂಖ್ಯೆ ಎಷ್ಟು? ನೀನೇ ಯೋಗಿಗಳಿಗೆ ಸಿದ್ಧಿಗಳನ್ನು ಕೊಡುವವನು. ಆದ್ದರಿಂದ ಇವುಗಳನ್ನು ವರ್ಣಿಸುವವನಾಗು.॥೨॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ಧಾರಣಾಯೋಗದ ಪಾರಂಗತ ಯೋಗಿಗಳು ಹದಿನೆಂಟು ಪ್ರಕಾರದ ಸಿದ್ಧಿಗಳನ್ನು ತಿಳಿಸಿರುತ್ತಾರೆ. ಅವುಗಳಲ್ಲಿ ಎಂಟು ಸಿದ್ಧಿಗಳಾದರೋ ಪ್ರಧಾನವಾಗಿ ನನ್ನಲ್ಲೇ ಇರುತ್ತವೆ ಹಾಗೂ ಹತ್ತು ಸತ್ತ್ವಗುಣದ ವಿಕಾಸದಿಂದಲೂ ದೊರೆಯುತ್ತವೆ. ॥ ೩॥ ಅವುಗಳಲ್ಲಿ 'ಅಣಿಮಾ', 'ಮಹಿಮಾ', 'ಲಘಿಮಾ' ಈ ಮೂರು ಸಿದ್ಧಿಗಳಾದರೋ ಶರೀರದ್ದಾಗಿವೆ. ಬಯಸಿದೆಲ್ಲವೂ ದೊರೆಯುವುದು ಇದು 'ಪ್ರಾಪ್ತಿ' ಎಂಬ ಇಂದ್ರಿಯಗಳ ಒಂದು ಸಿದ್ಧಿಯಾಗಿದೆ. ಲೌಕಿಕ ಮತ್ತು ಪಾರಲೌಕಿಕ ಪದಾರ್ಥಗಳನ್ನು ಇಚ್ಛಾನುಸಾರ ಅನುಭವಿಸುವ ಸಿದ್ಧಿಯು 'ಪ್ರಾಕಾಮ್ಯ'ವಾಗಿದೆ. ಮಾಯೆ ಹಾಗೂ ಅದರ ಕಾರ್ಯಗಳನ್ನು ಇಚ್ಛಾನುಸಾರ ಸಂಚಾಲಿತಗೊಳಿಸುವುದು 'ಈಶಿತಾ' ಹೆಸರಿನ ಸಿದ್ಧಿಯಾಗಿದೆ. ॥ ೪ ॥ ವಿಷಯಗಳಲ್ಲಿದ್ದರೂ ಅವುಗಳಲ್ಲಿ ಆಸಕ್ತನಾಗದಿರುವುದು 'ವಶಿತಾ' ಆಗಿದೆ ಮತ್ತು ಯಾವು-ಯಾವುದನ್ನು ಕಾಮಿಸುವನೋ ಅದರ ಸೀಮೆಯತನಕ ಮುಟ್ಟುವುದೇ 'ಕಾಮಾವಸಾಯಿತಾ' ಎಂಬ ಎಂಟನೆಯ ಸಿದ್ಧಿಯಾಗಿದೆ. ಈ ಎಂಟೂ ಸಿದ್ಧಿಗಳು ನನ್ನಲ್ಲಿ ಸ್ವಭಾವತಃ ಇರುತ್ತವೆ. (ಇವನ್ನು ನಾನು ಯಾರಿಗೆ ಕೊಡುವೆನೋ ಅವನಿಗೆ ಅಂಶತಃ ಪ್ರಾಪ್ತವಾಗುತ್ತವೆ.) ॥ ೫ ॥ ಇವಲ್ಲದೆ ಬೇರೆ ಕೆಲವು ಸಿದ್ಧಿಗಳು ಇವೆ. ಶರೀರದಲ್ಲಿ ಹಸಿವು-ಬಾಯಾರಿಕೆ, ಕಾಮ-ಕ್ರೋಧ ಮುಂತಾದ ವೇಗಗಳು ಉಂಟಾಗದಿರುವುದು, ಬಹಳ ದೂರದ ವಸ್ತುವನ್ನು ನೋಡುವುದು, ತುಂಬಾ ದೂರದ ಮಾತನ್ನು ಕೇಳುವುದು, ಮನಸ್ಸಿನೊಂದಿಗೇ ಶರೀರದಿಂದ ಆ ಜಾಗಕ್ಕೆ ತಲುಪುವುದು, ಇಚ್ಛಿಸಿದ ರೂಪವನ್ನು ಧರಿಸುವುದು, ಬೇರೆಯವರ ಶರೀರದಲ್ಲಿ ಪ್ರವೇಶಿಸುವುದು, ಇಚ್ಛಿಸಿದಾಗ ಶರೀರವನ್ನು ಬಿಡುವುದು, ಅಪ್ಸರೆಯರೊಂದಿಗೆ ನಡೆಯುವ ದೇವತೆಗಳ ಕ್ರೀಡೆಗಳನ್ನು ದರ್ಶಿಸುವುದು, ಎಣಿಸಿದ ಸಂಕಲ್ಪದ ಸಿದ್ಧಿ ಎಲ್ಲ ಕಡೆಗಳಲ್ಲಿ ಎಲ್ಲರ ಮೂಲಕ ವಿರೋಧವಿಲ್ಲದೆ ಆಜ್ಞಾಪಾಲನೆ – ಈ ಹತ್ತು ಸಿದ್ಧಿಗಳು ಸತ್ತ್ವ ಗುಣದ ವಿಶೇಷ ವಿಕಾಸದಿಂದ ಉಂಟಾಗುತ್ತವೆ. ॥ ೬-೭ ॥

ತ್ರಿಕಾಲಜ್ಞತ್ವಮದ್ವಂದ್ವಂ ಪರಚಿತ್ತಾದ್ಯಭಿಜ್ಞತಾ ।
ಅಗ್ನ್ಯರ್ಕಾಂಬುವಿಷಾದೀನಾಂ ಪ್ರತಿಷ್ಟಂಭೋಽಪರಾಜಯಃ
॥ ೮ ॥

ಏತಾಶ್ಚೋದ್ದೇಶತಃ ಪ್ರೋಕ್ತಾ ಯೋಗಧಾರಣಸಿದ್ಧಯಃ ।
ಯಯಾ ಧಾರಣಯಾ ಯಾ ಸ್ಯಾದ್ಯಥಾ ವಾ ಸ್ಯಾನ್ನಿಬೋಧ ಮೇ
॥ ೯ ॥

ಭೂತಸೂಕ್ಷ್ಮಾತ್ಮನಿ ಮಯಿ ತನ್ಮಾತ್ರಂ ಧಾರಯೇನ್ಮನಃ ।
ಅಣಿಮಾನಮವಾಪ್ನೋತಿ ತನ್ಮಾತ್ರೋಪಾಸಕೋ ಮಮ
॥ ೧೦ ॥

ಮಹತ್ಯಾತ್ಮನ್ಮಯಿ ಪರೇ ಯಥಾಸಂಸ್ಥಂ ಮನೋ ದಧತ್ ।
ಮಹಿಮಾನಮವಾಪ್ನೋತಿ ಭೂತಾನಾಂ ಚ ಪೃಥಕ್ ಪೃಥಕ್
॥ ೧೧ ॥

ಪರಮಾಣುಮಯೇ ಚಿತ್ತಂ ಭೂತಾನಾಂ ಮಯಿ ರಂಜಯನ್ ।
ಕಾಲಸೂಕ್ಷ್ಮಾರ್ಥತಾಂ ಯೋಗೀ ಲಘಿಮಾನಮವಾಪ್ನುಯಾತ್
॥ ೧೨ ॥

ಧಾರಯನ್ ಮಯ್ಯಹಂತತ್ತ್ವೇ ಮನೋ ವೈಕಾರಿಕೇಽಖಿಲಮ್ ।
ಸರ್ವೇಂದ್ರಿಯಾಣಾಮಾತ್ಮತ್ವಂ ಪ್ರಾಪ್ತಿಂ ಪ್ರಾಪ್ನೋತಿ ಮನ್ಮನಾಃ
॥ ೧೩ ॥

ಮಹತ್ಯಾತ್ಮನಿ ಯಃ ಸೂತ್ರೇ ಧಾರಯೇನ್ಮಯಿ ಮಾನಸಮ್ ।
ಪ್ರಾಕಾಮ್ಯಂ ಪಾರಮೇಷ್ಠ್ಯಂ ಮೇ ವಿಂದತೇಽವ್ಯಕ್ತಜನ್ಮನಃ
॥ ೧೪ ॥

ಭೂತ, ಭವಿಷ್ಯ, ವರ್ತಮಾನದ ಮಾತನ್ನು ತಿಳಿದುಕೊಳ್ಳುವುದು, ಶೀತ-ಉಷ್ಣ, ಸುಖ-ದುಃಖ, ರಾಗ-ದ್ವೇಷ ಮುಂತಾದ ದ್ವಂದ್ವಗಳಿಗೆ ವಶನಾಗದಿರುವುದು, ಬೇರೆಯವರ ಮನಸ್ಸಿನ ಮಾತನ್ನು ಅರಿತುಕೊಳ್ಳುವುದು, ಅಗ್ನಿ, ಸೂರ್ಯ, ಜಲ, ವಿಷ ಮುಂತಾದವುಗಳ ಶಕ್ತಿಯನ್ನು ಸ್ತಂಭಿತಗೊಳಿಸುವುದು, ಯಾರಿಂದಲೂ ಸೋಲದಿರುವುದು – ಈ ಐದು ಸಿದ್ಧಿಗಳೂ ಕೂಡ ಯೋಗಿಗಳಿಗೆ ದೊರೆಯುತ್ತವೆ. ॥ ೮ ॥ ಪ್ರಿಯ ಉದ್ಧವನೇ! ಯೋಗ-ಧಾರಣೆ ಮಾಡುವುದರಿಂದ ಪ್ರಾಪ್ತವಾಗುವ ಸಿದ್ಧಿಗಳನ್ನು ನಾನು ನಾಮ ನಿರ್ದೇಶದೊಂದಿಗೆ ವರ್ಣಿಸಿದೆ. ಈಗ ಯಾವ ಧಾರಣೆಯಿಂದ ಯಾವ ಸಿದ್ಧಿಯು ಪ್ರಾಪ್ತವಾಗುತ್ತದೆ ಎಂಬುದನ್ನು ಹೇಳುತ್ತೇನೆ, ಕೇಳು. ॥ ೯ ॥*

ಪ್ರಿಯ ಉದ್ಧವಾ! ಪಂಚಮಹಾಭೂತಗಳ ಸೂಕ್ಷ್ಮರೂಪವನ್ನು ತನ್ಮಾತ್ರೆ ಎಂದು ಹೇಳುತ್ತಾರೆ. ಅದು ನನ್ನದೇ ಶರೀರವಾಗಿದೆ. ನನ್ನ ಈ ಪಂಚತನ್ಮಾತ್ರೆಗಳಲ್ಲಿ ತನ್ನ ಮನಸ್ಸನ್ನು ಧಾರಣೆ ಮಾಡಿಕೊಂಡ ಸಾಧಕನಿಗೆ 'ಅಣಿಮಾ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ॥ ೧೦ ॥ ಈ ಮಹತ್ತತ್ತ್ವದ ರೂಪದಲ್ಲಿ ನಾನೇ ಪ್ರಕಾಶಿತನಾಗಿದ್ದೇನೆ. ಹೇಗೆ ಸಾಧ್ಯವೋ ಹಾಗೆ ತನ್ನ ಮನಸ್ಸನ್ನು ನನ್ನ ಈ ಮಹತ್ತತ್ತ್ವರೂಪೀ ಪರಮಾತ್ಮನಲ್ಲಿ ಧಾರಣೆ ಮಾಡುವವನಿಗೆ 'ಮಹಿಮಾ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಹಾಗೆಯೇ ಒಂದೊಂದು ಮಹಾಭೂತದ ತನ್ಮಾತ್ರೆಯಲ್ಲಿ ಮನಸ್ಸನ್ನು ಧಾರಣೆ ಗೈದರೂ ಕೂಡ ಅವನಿಗೆ ಮಹಿಮೆ ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ॥ ೧೧ ॥ ವಾಯುವೇ ಮುಂತಾದ ನಾಲ್ಕೂ ಭೂತಗಳೊಳಗೆ ಪರಮಾಣುರೂಪದಿಂದ ಆಕಾಶವು ಎಲ್ಲೆಡೆ ತುಂಬಿದೆ. ಹಾಗೆಯೇ ನಾನು ಸರ್ವತ್ರ ಪರಿಪೂರ್ಣನಾಗಿದ್ದೇನೆ. ಯೋಗಿಯು ತನ್ನ ಚಿತ್ತವನ್ನು ನನ್ನಲ್ಲಿ ತೊಡಗಿಸುತ್ತಾ ನನ್ನಲ್ಲಿ ಏಕತೆಯನ್ನು ಪಡೆದುಕೊಳ್ಳುವವನಿಗೆ 'ಲಘಿಮಾ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಕಾಲದ ಸೂಕ್ಷ್ಮಕ್ಕಿಂತ ಸೂಕ್ಷ್ಮಪರಮಾಣು ಆಗುವ ಸಾಮರ್ಥ್ಯವು ದೊರೆಯುತ್ತದೆ. ॥ ೧೨ ॥ ಮನಸ್ಸು ಎಲ್ಲ ಇಂದ್ರಿಯಗಳ ಒಡೆಯವಾಗಿದೆ. ಇದು ಅಹಂತತ್ತ್ವದ ಸತ್ತ್ವಗುಣರೂಪೀ ವಿಕಾರದಿಂದ ಉಂಟಾಗಿದೆ. ಯೋಗಿಯು ನನ್ನ ಸ್ವರೂಪಭೂತ ಸಾತ್ತ್ವಿಕ ಅಹಂಕಾರದಲ್ಲಿ ತನ್ನ ಮನಸ್ಸನ್ನು ಏಕಾಗ್ರಗೊಳಿಸಿದರೆ, ಅವನು ಎಲ್ಲ ಇಂದ್ರಿಯಗಳ ಒಡೆತನವನ್ನು ಪಡೆಯುತ್ತಾನೆ. ಹೀಗೆ ಮನಸ್ಸನ್ನು ನನ್ನಲ್ಲಿ ತೊಡಗಿಸುವ ಭಕ್ತನು 'ಪ್ರಾಪ್ತಿ' ಎಂಬ ಸಿದ್ಧಿಯನ್ನು ಪಡೆಯುತ್ತಾನೆ. ॥ ೧೩. ॥ ಅವ್ಯಕ್ತಜನ್ಮಾನನ್ನಿಂದಲೇ ಬ್ರಹ್ಮಾಂಡದ ನಿರ್ಮಾಣವಾಗಿದೆ. ಮಹತತ್ತ್ವದ ಅಭಿಮಾನಿಯಾದ ಸೂತ್ರಾತ್ಮಾ ಹಿರಣ್ಯಗರ್ಭದಲ್ಲಿ ಮನಸ್ಸನ್ನು ಧಾರಣೆಗೈದರೆ ಅವನಿಗೆ 'ಪ್ರಾಕಾಮ್ಯ' ಸಿದ್ಧಿಯು ಪ್ರಾಪ್ತವಾಗುತ್ತದೆ. ಅವನು ಇಡೀ ಬ್ರಹ್ಮಾಂಡದ ಒಡೆಯನಾಗುತ್ತಾನೆ. ಪಾರಮೇಷ್ಠ್ಯತ್ವವನ್ನು ಪಡೆದುಕೊಳ್ಳುತ್ತಾನೆ. ॥ ೧೪ ॥

* ಈ ಸಮಸ್ತ ವಿಶ್ವದಲ್ಲಿರುವುದೆಲ್ಲವೂ ಪರಮಾತ್ಮನ ಯಾವುದೋ ಒಂದು ಅಂಶದ ಅಭಿವ್ಯಕ್ತಿಯೇ ಆಗಿದೆ. ಇದರ ಹೊರಗೆ-ಒಳಗೆ ಎಲ್ಲೆಡೆ ಅವನೇ ವ್ಯಾಪ್ತನಾಗಿದ್ದಾನೆ. ಅವನು ಯಾವ ತತ್ತ್ವದ ಮೂಲಕ ಈ ವಿಶ್ವವನ್ನು ನಿರ್ಮಿಸಿರುವನೋ, ಆಯಾಯಾ ಸಮಷ್ಟಿತತ್ತ್ವದಲ್ಲಿ ಸಾಧಕನು ತನ್ನನ್ನು ವಿಕಾರ ಮಾಡಿಕೊಂಡಾಗ, ಅದಕ್ಕನುಸಾರ ಆ ಶಕ್ತಿಯನ್ನು ಪಡೆದುಕೊಳ್ಳುವನು. ಇದಕ್ಕೆ ಸಿದ್ಧಿಗಳು ಎಂದು ಹೇಳುತ್ತಾರೆ. ಪರಮಾತ್ಮತತ್ತ್ವವನ್ನು ಪಡೆದ ಮಹಾಪುರುಷನಿಗಾಗಿ ಈ ಸಿದ್ಧಿಗಳ ಯಾವ ಮಹತ್ವವೂ ಇರುವುದಿಲ್ಲ.

ವಿಷ್ಣೌ ತ್ಯಧೀಶ್ವರೇ ಚಿತ್ತಂ ಧಾರಯೇತ್ಕಾಲವಿಗ್ರಹೇ ।
ಸ ಈಶಿತ್ವಮವಾಪ್ನೋತಿ ಕ್ಷೇತ್ರಕ್ಷೇತ್ರಜ್ಞಚೋದನಾಮ್
॥ ೧೫ ॥

ತ್ರಿಲೋಕಗಳ ಆಧಾರನು ನಾನೇ ಆಗಿರುವೆನು. ತ್ರಿಗುಣಮಯ ಮಾಯೆಯ ಒಡೆಯ ನಾನೇ ಆಗಿದ್ದೇನೆ. ಸಮಸ್ತ ಬ್ರಹ್ಮಾಂಡವನ್ನು ನಾಶಗೊಳಿಸುವ ಸಮರ್ಥಕಾಲವೂ ನನ್ನದೇ ವಿಗ್ರಹವಾಗಿದೆ. ಕ್ಷೇತ್ರ (ಶರೀರ) ಮತ್ತು ಕ್ಷೇತ್ರಜ್ಞ (ಜೀವಾತ್ಮಾ) ಇವೆರಡರ ಪ್ರೇರಕ ಪುರುಷೋತ್ತಮನು ನಾನೇ ಆಗಿದ್ದೇನೆ. ನನ್ನ ಈ ವಿಷ್ಣುಸ್ವರೂಪದಲ್ಲಿ ಚಿತ್ತವನ್ನು ಧಾರಣೆಮಾಡಿದರೆ ಅವನಿಗೆ 'ಈಶಿತ್ವ' ಎಂಬ ಸಿದ್ಧಿಯು ಪ್ರಾಪ್ತವಾಗಿ ಹೋಗುತ್ತದೆ. ಅವನಿಗೂ ಕೂಡ ಮತ್ತೆ ನನ್ನಂತೆಯೇ ಜೀವಿಗಳನ್ನು ಇಚ್ಛಾನುಸಾರ ಪ್ರೇರಿತಗೊಳಿಸುವ ಸಾಮರ್ಥ್ಯ ದೊರೆಯುತ್ತದೆ. ॥ ೧೫ ॥ "ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇಟೇರಣಾ ॥" ಈ ಆರು ಐಶ್ವರ್ಯಗಳಿಂದ ಭಗವಂತನು ಕೂಡಿರುವನು. ಈ ಭಗವಂತನೇ ನಾರಾಯಣನಾಗಿರುವನು. ತುರೀಯ ಸ್ಥಿತಿಯಲ್ಲಿರುವ ನನ್ನ ಈ ನಾರಾಯಣ ಸ್ವರೂಪದಲ್ಲಿ ಮನಸ್ಸನ್ನು

ನಾರಾಯಣೇ ತುರೀಯಾಖ್ಯೇ ಭಗವಚ್ಛಬ್ದಶಬ್ದಿತೇ ।
ಮನೋ ಮಯ್ಯಾದಧದ್ಯೋಗೀ ಮದ್ಧರ್ಮಾ ವಶಿತಾಮಿಯಾತ್
॥ ೧೬ ॥

ಧಾರಣೆಗೈದು ಸ್ಥಿತನಾದ ಯೋಗಿಯು ಮದ್ಧರ್ಮಾ ಆಗಿಬಿಡುತ್ತಾನೆ. ಅರ್ಥಾತ್ – ನನ್ನ ಗುಣಗಳು ಅವನಲ್ಲಿ ಬಂದುಬಿಡುತ್ತವೆ. ಇಂತಹ ಯೋಗಿಯು 'ವಶಿತಾ' ಎಂಬ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ॥ ೧೬ ॥ ಸ್ವಚ್ಛವಾದ ಮನಸ್ಸಿನಿಂದ ನಿರ್ಗುಣ ಬ್ರಹ್ಮವಾದ ನನ್ನಲ್ಲಿ ತೊಡಗಿರುವ ಯೋಗಿಯು ನನ್ನ ಆ ನಿರ್ಗುಣ ನಿರಾಕಾರ ರೂಪವನ್ನು ಉಪಾಸನೆಗೈದು ಪರಮಾನಂದವನ್ನು ಪಡೆಯುತ್ತಾನೆ. ಅವನಿಗೆ ಯಾವ ರೀತಿಯ ಕಾಮನೆಯೂ ಇರುವುದಿಲ್ಲ, ಇದನ್ನು 'ಕಾಮಾವಸಾಯಿತಾ' ಸಿದ್ಧಿ ಎಂದು ಹೇಳುತ್ತಾರೆ. ॥ ೧೭ ॥ ಶ್ವೇತದ್ವೀಪದ ಸ್ವಾಮಿ ನಾನೇ ಆಗಿದ್ದೇನೆ. ಧರ್ಮವು ನನ್ನದೇ ಸ್ವರೂಪವಾಗಿದೆ. ಇಂತಹ ನನ್ನ ವಿಶುದ್ಧ ಸ್ವರೂಪದಲ್ಲಿ ತನ್ನ ಮನಸ್ಸನ್ನು ಸ್ಥಿರಗೊಳಿಸುವವನು ಹಸಿವು, ತೃಷೆ, ಕಾಮ, ಕ್ರೋಧ, ಶೋಕ, ಮೋಹ ಇವುಗಳಿಂದ ಪೀಡಿತನಾಗುವುದಿಲ್ಲ. ಅವನಿಗೆ ಶುದ್ಧಸ್ವರೂಪ ಪರಮಾತ್ಮನಾದ ನನ್ನ ಪ್ರಾಪ್ತಿಯು ಉಂಟಾಗುತ್ತದೆ. ॥ ೧೮ ॥ ನಾನೇ ಸಮಷ್ಟಿ-ಪ್ರಾಣಸ್ವರೂಪೀ ಆಕಾಶಾತ್ಮಾ ಆಗಿದ್ದೇನೆ. ನನ್ನ ಈ ಸ್ವರೂಪದಲ್ಲಿ ಮನಸ್ಸಿನ ಮೂಲಕ ಅನಾಹತನಾದವನ್ನು ಚಿಂತಿಸುವವನು 'ದೂರಶ್ರವಣ' ಎಂಬ ಸಿದ್ಧಿಯಿಂದ ಸಂಪನ್ನನಾಗಿರುತ್ತಾನೆ. ಈ ಧಾರಣೆಯಿಂದ ಯೋಗಿಯು ಆಕಾಶದಲ್ಲಿ ಉಪಲಬ್ಧವಾಗುವ ವಿವಿಧ ಪ್ರಾಣಿಗಳ ಮಾತುಗಳನ್ನು ಕೇಳಿ-ತಿಳಿಯಬಲ್ಲನು. ॥ ೧೯ ॥ ಯಾವ ಯೋಗಿಯು ಕಣ್ಣುಗಳನ್ನು ಸೂರ್ಯನಲ್ಲಿ ಹಾಗೂ ಸೂರ್ಯನನ್ನು ಕಣ್ಣುಗಳಲ್ಲಿ ಸಂಯುಕ್ತಗೊಳಿಸುವನೋ ಮತ್ತು ಎರಡರ ಸಂಯೋಗದಲ್ಲಿ ಮನಸ್ಸಿನಲ್ಲೇ ನನ್ನನ್ನು ಧ್ಯಾನಿಸುವನೋ, ಅವನ ದೃಷ್ಟಿ ಸೂಕ್ಷ್ಮವಾಗಿ ಹೋಗುತ್ತದೆ. ಅವನಿಗೆ 'ದೂರದರ್ಶನ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಅವನು ಇಡೀ ಪ್ರಪಂಚವನ್ನು ನೋಡಬಲ್ಲನು. ॥ ೨೦ ॥ ಮನಸ್ಸು ಮತ್ತು ಶರೀರವನ್ನು ಪ್ರಾಣವಾಯು ಸಹಿತ ನನ್ನೊಡನೆ ಸಂಯುಕ್ತಗೊಳಿಸಿ, ನನ್ನ ಧಾರಣೆ ಮಾಡಿದರೆ ಇದರಿಂದ 'ಮನೋಜವ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಇದರ ಪ್ರಭಾವದಿಂದ ಆ ಯೋಗಿಯು ಎಲ್ಲಿಗಾದರೂ ಹೋಗುವ ಸಂಕಲ್ಪಮಾಡಿದರೆ, ಅಲ್ಲಿಗೆ ಅವನ ಶರೀರವು ಆಗಲೇ ತಲುಪುತ್ತದೆ. ॥ ೨೧ ॥

ನಿರ್ಗುಣೇ ಬ್ರಹ್ಮಣಿ ಮಯಿ ಧಾರಯನ್ ವಿಶದಂ ಮನಃ ।
ಪರಮಾನಂದಮಾಪ್ನೋತಿ ಯತ್ರ ಕಾಮೋಽವಸೀಯತೇ
॥ ೧೭ ॥

ಶ್ವೇತದ್ವೀಪಪತೌ ಚಿತ್ತಂ ಶುದ್ಧೇ ಧರ್ಮಮಯೇ ಮಯಿ ।
ಧಾರಯನ್ ಶ್ವೇತತಾಂ ಯಾತಿ ಷಡೂರ್ಮಿರಹಿತೋ ನರಃ
॥ ೧೮ ॥

ಮಯ್ಯಾಕಾಶಾತ್ಮನಿ ಪ್ರಾಣೇ ಮನಸಾ ಘೋಷಮುದ್ವಹನ್ ।
ತತ್ರೋಪಲಬ್ಧಾಭೂತಾನಾಂ ಹಂಸೋ ವಾಚಃ ಶೃಣೋತ್ಯಸೌ
॥ ೧೯ ॥

ಚಕ್ಷುಸ್ತ್ವಷ್ಟರಿ ಸಂಯೋಜ್ಯ ತ್ವಷ್ಟಾರಮಪಿ ಚಕ್ಷುಷಿ ।
ಮಾಂ ತತ್ರ ಮನಸಾ ಧ್ಯಾಯನ್ವಿಶ್ವಂ ಪಶ್ಯತಿ ಸೂಕ್ಷ್ಮದೃಕ್
॥ ೨೦ ॥

ಮನೋ ಮಯಿ ಸುಸಂಯೋಜ್ಯ ದೇಹಂ ತದನು ವಾಯುನಾ ।
ಮದ್ಧಾರಣಾನುಭಾವೇನ ತತ್ರಾತ್ಮಾ ಯತ್ರ ವೈ ಮನಃ
॥ ೨೧ ॥

ಯದಾ ಮನ ಉಪಾದಾಯ ಯದ್ಯದ್ರೂಪಂ ಬುಭೂಷತಿ ।
ತತ್ತದ್ಭವೇನ್ಮನೋರೂಪಂ ಮದ್ಯೋಗಬಲಮಾಶ್ರಯಃ
॥ ೨೨ ॥

ಯಾವಾಗ ಯೋಗಿಯು ಮನಸ್ಸನ್ನು ಉಪಾದಾನ ಕಾರಣವನ್ನಾಗಿಸಿ ಯಾರದಾದರೂ ರೂಪವನ್ನು ಧರಿಸಲು ಬಯಸಿದರೆ ತನ್ನ ಮನಸ್ಸಿಗನುಕೂಲವಾಗಿ ಅಂತಹುದೇ ರೂಪವನ್ನು ಧರಿಸಿಕೊಳ್ಳುವನು. ಇದರ ಕಾರಣ – ಅವನು ತನ್ನ ಚಿತ್ತವನ್ನು ನನ್ನೊಂದಿಗೆ ಸೇರಿಸಿರುವನು. ॥ ೨೨ ॥

ಪರಕಾಯಂ ವಿಶನ್ ಸಿದ್ಧ ಆತ್ಮಾನಂ ತತ್ರ ಭಾವಯೇತ್ ।
ಪಿಂಡಂ ಹಿತ್ವಾ ವಿಶೇತ್ಪ್ರಾಣೋ ವಾಯುಭೂತಃ ಷಡಂಘ್ರಿವತ್
॥ ೨೩ ॥

ಇನ್ನೊಂದು ಶರೀರದಲ್ಲಿ ಪ್ರವೇಶಿಸಲು ಬಯಸುವ ಯೋಗಿಯು ನಾನು ಅದೇ ಶರೀರದಲ್ಲಿದ್ದೇನೆ ಹೀಗೆ ಭಾವಿಸಬೇಕು. ಹೀಗೆ ಮಾಡುವುದರಿಂದ ಅವನ ಪ್ರಾಣವು ವಾಯುರೂಪವನ್ನು ಧರಿಸಿ ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹಾರುವ ದುಂಬಿಯಂತೆ ಅವನು ತನ್ನ ಶರೀರವನ್ನು ಬಿಟ್ಟು ಇನ್ನೊಂದು ಶರೀರದಲ್ಲಿ ಪ್ರವೇಶಿಸುತ್ತಾನೆ. ॥ ೨೩ ॥

ಪಾಷ್ಣ್ಯಾSSಪೀಡ್ಯ ಗುದಂ ಪ್ರಾಣಂ ಹೃದುರಃಕಂಠಮೂರ್ಧಸು ।
ಆರೋಪ್ಯ ಬ್ರಹ್ಮರಂಧ್ರೇಣ ಬ್ರಹ್ಮ ನೀತ್ವೋತ್ಸೃಜೇತ್ತನುಮ್
॥ ೨೪ ॥

ಯೋಗಿಗೆ ಶರೀರವನ್ನು ಪರಿತ್ಯಾಗ ಮಾಡಬೇಕೆಂದಾಗ ಹಿಮ್ಮಡಿಯಿಂದ ಗುದದ್ವಾರವನ್ನು ಒತ್ತಿ ಪ್ರಾಣವಾಯುವನ್ನು ಕ್ರಮವಾಗಿ ಹೃದಯ, ವಕ್ಷಸ್ಥಲ, ಕಂಠ, ಮಸ್ತಕಕ್ಕೆ ಕೊಂಡುಹೋಗಬೇಕು. ಮತ್ತೆ ಬ್ರಹ್ಮರಂಧ್ರದ ಮೂಲಕ ಅದನ್ನು ಬ್ರಹ್ಮನಲ್ಲಿ ಲೀನಗೊಳಿಸಿ ಶರೀರವನ್ನು ತ್ಯಜಿಸಿ ಬಿಡುತ್ತಾನೆ. ॥ ೨೪ ॥

ವಿಹರಿಷ್ಯನ್ಸುರಾಕ್ರೀಡೇ ಮತ್ಸ್ಥಂ ಸತ್ತ್ವಂ ವಿಭಾವಯೇತ್ ।
ವಿಮಾನೇನೋಪತಿಷ್ಠಂತಿ ಸತ್ತ್ವವೃತ್ತೀಃ ಸುರಸ್ತ್ರಿಯಃ
॥ ೨೫ ॥

ಅವನಿಗೆ ದೇವತೆಗಳ ವಿಹಾರಸ್ಥಳಗಳಲ್ಲಿ ಕ್ರೀಡಿಸಲು ಇಚ್ಛೆ ಉಂಟಾದರೆ, ನನ್ನ ಶುದ್ಧ ಸತ್ತ್ವಗುಣಮಯ ಸ್ವರೂಪವನ್ನು ಭಾವಿಸಬೇಕು ಹೀಗೆ ಮಾಡುವುದರಿಂದ ನನ್ನ ಸತ್ತ್ವರ್ಗುಣ ಅಂಶರೂಪೀ ಸುರ-ಸುಂದರಿಯರು ವಿಮಾನವನ್ನು ಹತ್ತಿ ಅವನ ಬಳಿಗೆ ಬಂದು ತಲುಪುತ್ತಾರೆ. ॥ ೨೫ ॥

ಯಥಾ ಸಂಕಲ್ಪಯೇದ್ಬುದ್ಧ್ಯಾ ಯದಾ ವಾ ಮತ್ಪರಃ ಪುಮಾನ್ ।
ಮಯಿ ಸತ್ಯೇ ಮನೋ ಯುಂಜನ್ ತಥಾ ತತ್ಸಮುಪಾಶ್ನುತೇ
॥ ೨೬ ॥

ನನ್ನ ಪರಾಯಣನಾದ ಯೋಗಿಯು ಸತ್ಯಸಂಕಲ್ಪರೂಪೀ ನನ್ನಲ್ಲಿ ತನ್ನ ಚಿತ್ತವನ್ನು ಸ್ಥಿರಗೊಳಿಸಿದರೆ ಅವನಿಗೆ ಸಂಕಲ್ಪ ಸಿದ್ಧಿ ಉಂಟಾಗುತ್ತದೆ. ಮನಸ್ಸಲ್ಲಿ ಯಾವಾಗ ಎಂತಹ ಸಂಕಲ್ಪ ಮಾಡುವನೋ, ಆಗಲೇ ಅವನ ಆ ಸಂಕಲ್ಪವು ಸಿದ್ಧವಾಗಿ ಹೋಗುತ್ತದೆ. ॥ ೨೬ ॥

ಯೋ ವೈ ಮದ್ಭಾವಮಾಪನ್ನ ಈಶಿತುರ್ವಶಿತುಃ ಪುಮಾನ್ ।
ಕುತಶ್ಚಿನ್ನ ವಿಹನ್ಯೇತ ತಸ್ಯ ಚಾಜ್ಞಾ ಯಥಾ ಮಮ
॥ ೨೭ ॥

ನಾನು 'ಈಶಿತ್ವ' ಮತ್ತು 'ವಶಿತ್ವ' ಎಂಬ ಎರಡೂ ಸಿದ್ಧಿಗಳ ಒಡೆಯನಾಗಿದ್ದೇನೆ. ಅದಕ್ಕಾಗಿ ಎಂದೂ ಯಾರೂ ನನ್ನ ಆಜ್ಞೆಯನ್ನು ಉಲ್ಲಂಘಿಸಲಾರರು ಹಾಗೂ ಎಲ್ಲರೂ ನನ್ನ ಶಾಸನವನ್ನೇ ಒಪ್ಪಿಕೊಳ್ಳುವರು. ನನ್ನ ಆ ರೂಪವನ್ನು ಚಿಂತಿಸುತ್ತಾ ಅದೇ ಭಾವನೆಯಿಂದ ಯುಕ್ತನಾದವನು ನನ್ನಂತೆಯೇ ಅವನ ಆಜ್ಞೆಯನ್ನು ಯಾರೂ ಉಲ್ಲಂಘಿಸಲಾರರು. ॥ ೨೭ ॥

ಮದ್ಭಕ್ತ್ಯಾ ಶುದ್ಧಸತ್ತ್ವಸ್ಯ ಯೋಗಿನೋ ಧಾರಣಾವಿದಃ ।
ತಸ್ಯ ತ್ರೈಕಾಲಿಕೀ ಬುದ್ಧಿರ್ಜನ್ಮಮೃತ್ಯೂಪಬೃಂಹಿತಾ
॥ ೨೮ ॥

ನನ್ನ ಧಾರಣೆಯನ್ನು ಮಾಡುತ್ತಾ-ಮಾಡುತ್ತಾ , ನನ್ನ ಭಕ್ತಿಯ ಪ್ರಭಾವದಿಂದ ಶುದ್ಧವಾದ ಯೋಗಿಯ ಬುದ್ಧಿಯು ಜನ್ಮ-ಮೃತ್ಯು ಮುಂತಾದ ಅದೃಷ್ಟ ವಿಷಯಗಳನ್ನು ತಿಳಿದುಕೊಳ್ಳುತ್ತದೆ. ಇನ್ನೇನು ಭೂತ, ಭವಿಷ್ಯತ್ತು , ವರ್ತಮಾನ ಇವುಗಳ ಎಲ್ಲ ಮಾತುಗಳು ಅವನ ಅರಿವಿಗೆ ಬರುತ್ತವೆ. ॥ ೨೮ ॥

ಅಗ್ನ್ಯಾದಿಭಿರ್ನ ಹನ್ಯೇತ ಮುನೇರ್ಯೋಗಮಯಂ ವಪುಃ ।
ಮದ್ಯೋಗಶಾಂತಚಿತ್ತಸ್ಯ ಯಾದಸಾಮುದಕಂ ಯಥಾ
॥ ೨೯ ॥

ನೀರಿನಲ್ಲಿರುವ ಪ್ರಾಣಿಗಳು ನೀರಿನಿಂದಾಗಿ ನಾಶವಾಗುವುದಿಲ್ಲವೋ ಹಾಗೆಯೇ ನನ್ನಲ್ಲೇ ಏಕೀಭಾವದಿಂದ ಸ್ಥಿರವಾದ ಚಿತ್ತವುಳ್ಳ ಯೋಗಿಯ ಯೋಗಮಯ ಶರೀರವನ್ನು ಅಗ್ನಿ, ಜಲ ಮುಂತಾದ ಯಾವ ವಸ್ತುಗಳೂ ನಾಶಮಾಡಲಾರವು. ॥ ೨೯ ॥

ಮದ್ವಿಭೂತೀರಭಿಧ್ಯಾಯನ್ ಶ್ರೀವತ್ಸಾಸ್ತ್ರವಿಭೂಷಿತಾಃ ।
ಧ್ವಜಾತಪತ್ರವ್ಯಜನೈಃ ಸ ಭವೇದಪರಾಜಿತಃ
॥ ೩೦ ॥

ಶ್ರೀವತ್ಸ ಮುಂತಾದ ಚಿಹ್ನೆಗಳಿಂದ ಕೂಡಿದ, ಶಂಖ, ಚಕ್ರ, ಗದಾ, ಪದ್ಮ ಮುಂತಾದ ಆಯುಧಗಳಿಂದ ವಿಭೂಷಿತವಾದ, ಧ್ವಜ, ಛತ್ರ, ಚಾಮರ ಮುಂತಾದವುಗಳಿಂದ ಸಂಪನ್ನವಾದ ನನ್ನ ಅವತಾರಗಳನ್ನು ಧ್ಯಾನಿಸುವ ಪುರುಷನು ಅಜೇಯನಾಗುತ್ತಾನೆ. ॥ ೩೦ ॥

ಉಪಾಸಕಸ್ಯ ಮಾಮೇವಂ ಯೋಗಧಾರಣಯಾ ಮುನೇಃ ।
ಸಿದ್ಧಯಃ ಪೂರ್ವಕಥಿತಾ ಉಪತಿಷ್ಠಂತ್ಯಶೇಷತಃ
॥ ೩೧ ॥

ನನ್ನ ಉಪಾಸನೆಯನ್ನು ಮಾಡುತ್ತಾ, ಯೋಗಧಾರಣೆಯ ಮೂಲಕ ನನ್ನನ್ನೇ ಚಿಂತಿಸುವ ವಿಚಾರಶೀಲ ಪುರುಷನ ಮುಂದೆ ಈ ಸಿದ್ಧಿಗಳು ಎಲ್ಲ ರೀತಿಯಿಂದ ಬಂದು ಆಣಿಯಾಗುತ್ತವೆ. ಇದನ್ನು ನಾನು ನಿನಗೆ ವರ್ಣಿಸಿರುವೆನು. ॥ ೩೧ ॥

ಜಿತೇಂದ್ರಿಯಸ್ಯ ದಾಂತಸ್ಯ ಜಿತಶ್ವಾಸಾತ್ಮನೋ ಮುನೇಃ ।
ಮದ್ಧಾರಣಾಂ ಧಾರಯತಃ ಕಾ ಸಾ ಸಿದ್ಧಿಃ ಸುದುರ್ಲಭಾ
॥ ೩೨ ॥

ಪ್ರಿಯ ಉದ್ಧವನೇ! ಯಾರು ತನ್ನ ಪ್ರಾಣ, ಮನಸ್ಸು, ಇಂದ್ರಿಯಗಳ ಮೇಲೆ ವಿಜಯ ಸಾಧಿಸಿರುವನೋ ಯಾರು ಸಂಯಮಿಯಾಗಿರುವನೋ, ನನ್ನದೇ ಸ್ವರೂಪವನ್ನು ಧರಿಸಿರುವನೋ ಅವನಿಗಾಗಿ ಇಂತಹ ಯಾವ ಸಿದ್ಧಿಗಳು ದುರ್ಲಭವಲ್ಲ, ಅವನಿಗಾದರೋ ಎಲ್ಲ ಸಿದ್ಧಿಗಳು ಪ್ರಾಪ್ತವೇ ಇರುತ್ತವೆ. ॥ ೩೨ ॥

ಅಂತರಾಯಾನ್ ವದಂತ್ಯೇತಾ ಯುಂಜತೋ ಯೋಗಮುತ್ತಮಮ್ ।
ಮಯಾ ಸಂಪದ್ಯ ಮಾನಸ್ಯ ಕಾಲಕ್ಷಪಣಹೇತವಃ
॥ ೩೩ ॥

ಭಕ್ತಿಯೋಗ ಅಥವಾ ಜ್ಞಾನ ಯೋಗಾದಿ ಉತ್ತಮ ಯೋಗಗಳ ಅಭ್ಯಾಸ ಮಾಡುತ್ತಿರುವ ಜನರಿಗೆ, ನನ್ನಲ್ಲಿ ಒಂದಾಗಿರುವವರಿಗೆ ಈ ಸಿದ್ಧಿಗಳು ಪ್ರಾಪ್ತವಾಗುವುದು ಒಂದು ವಿಘ್ನವೇ ಆಗಿದೆ. ಏಕೆಂದರೆ, ಇವೆಲ್ಲವೂ ಭಗವಂತನ ಬಳಿಗೆ ಹೋಗಲು ವಿಳಂಬಮಾಡುತ್ತವೆ ಎಂದು ಶ್ರೇಷ್ಠ ಪುರುಷರು ಹೇಳುತ್ತಾರೆ. ॥ ೩೩ ॥

ಜನ್ಮೌಷಧಿತಪೋಮಂತ್ರೈರ್ಯಾವತೀರಿಹ ಸಿದ್ಧಯಃ ।
ಯೋಗೇನಾಪ್ನೋತಿ ತಾಃ ಸರ್ವಾ
ನಾನ್ಯೈರ್ಯೋಗಗತಿಂ ವ್ರಜೇತ್
॥ ೩೪ ॥

ಜನ್ಮ, ಔಷಧಿ, ತಪಸ್ಸು, ಮಂತ್ರಾದಿಗಳ ಮೂಲಕ ಪ್ರಾಪ್ತವಾಗುವ ಸಿದ್ಧಿಗಳೆಲ್ಲವೂ ಯೋಗದ ಮೂಲಕ ದೊರೆಯುವವು. ಆದರೆ ಭಗವಂತನ ಪ್ರಾಪ್ತಿಯು ಏಕಮಾತ್ರ ಭಗವಂತನಲ್ಲಿ ಚಿತ್ತವನ್ನು ತೊಡಗಿಸುವುದರಿಂದಲೇ ಪ್ರಾಪ್ತಿಯಾಗುತ್ತದೆ. ॥ ೩೪ ॥

ಸರ್ವಾಸಾಮಪಿ ಸಿದ್ಧೀನಾಂ ಹೇತುಃ ಪತಿರಹಂ ಪ್ರಭುಃ ।
ಅಹಂ ಯೋಗಸ್ಯ ಸಾಂಖ್ಯಸ್ಯ ಧರ್ಮಸ್ಯ ಬ್ರಹ್ಮವಾದಿನಾಮ್
॥ ೩೫ ॥

ಬ್ರಹ್ಮವಾದಿಗಳು ಯೋಗ, ಸಾಂಖ್ಯ, ಧರ್ಮ ಮುಂತಾದ ಅನೇಕ ಸಾಧನೆಗಳನ್ನು ಹೇಳಿರುವರು. ಅವುಗಳ ಹಾಗೂ ಸಮಸ್ತಸಿದ್ಧಿಗಳ ಏಕಮಾತ್ರ ಹೇತು ಸ್ವಾಮಿ ಮತ್ತು ಒಡೆಯ ನಾನೇ ಆಗಿದ್ದೇನೆ. ॥ ೩೫ ॥

ಅಹಮಾತ್ಮಾಽಽಂತರೋ ಬಾಹ್ಯೋಽನಾವೃತಃ ಸರ್ವದೇಹಿನಾಮ್ ।
ಯಥಾ ಭೂತಾನಿ ಭೂತೇಷು ಬಹಿರಂತಃ ಸ್ವಯಂ ತಥಾ
॥ ೩೬ ॥

ಎಲ್ಲ ಪ್ರಾಣಿಗಳ ಒಳ-ಹೊರಗೆ, ಸರ್ವತ್ರ ಸೂಕ್ಷ್ಮ ಪಂಚ-ಮಹಾಭೂತಗಳು ಇರುವಂತೆಯೇ, ನಾನು ಸಮಸ್ತ ಪ್ರಾಣಿಗಳ ಒಳಗೆ ದೃಷ್ಟಾರೂಪದಿಂದ ಮತ್ತು ಹೊರಗೆ ದೃಶ್ಯರೂಪದಿಂದ ಸ್ಥಿತನಾಗಿದ್ದೇನೆ. ನನ್ನಲ್ಲಿ ಒಳ-ಹೊರಗೆ ಭೇದವೇ ಇಲ್ಲ. ಏಕೆಂದರೆ, ನಾನು ನಿರಾವರಣ, ಒಂದೇ – ಅದ್ವಿತೀಯ ಆತ್ಮಾ ಸರ್ವವ್ಯಾಪಕನಾಗಿದ್ದೇನೆ. ॥ ೩೬ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಭಗವಂತನ ವಿಭೂತಿಗಳ ವರ್ಣನೆ

ಉದ್ಧವ ಉವಾಚ

ತ್ವಂ ಬ್ರಹ್ಮ ಪರಮಂ ಸಾಕ್ಷಾದನಾದ್ಯಂತಮಪಾವೃತಮ್ ।
ಸರ್ವೇಷಾಮಪಿ ಭಾವಾನಾಂ ತ್ರಾಣಸ್ಥಿತ್ಯಪ್ಯಯೋದ್ಭವಃ
॥ ೧ ॥

ಉದ್ಧವನೆಂದನು – ಓ ಭಗವಂತನೇ! ನೀನು ಸ್ವತಃ ಭಗವಂತನಾಗಿರುವೆ. ನಿನಗೆ ಆದಿಯಾಗಲೀ, ಅಂತ್ಯವಾಗಲೀ ಇಲ್ಲ. ನೀನು ಆವರಣರಹಿತ, ಅದ್ವಿತೀಯ ತತ್ತ್ವನಾಗಿರುವೆ. ಸಮಸ್ತ ಪ್ರಾಣಿಗಳ ಮತ್ತು ಪದಾರ್ಥಗಳ ಉತ್ಪತ್ತಿ, ಸ್ಥಿತಿ, ರಕ್ಷಣೆ ಪ್ರಳಯದ ಕಾರಣವೂ ನೀನೇ ಆಗಿರುವೆ. ನೀನು ಉಚ್ಚ-ನೀಚ ಎಲ್ಲ ಪ್ರಾಣಿಗಳಲ್ಲಿ ಸ್ಥಿತನಾಗಿರುವೆ. ಆದರೆ ತಮ್ಮ ಮನಸ್ಸನ್ನು ವಶಪಡಿಸಿಕೊಳ್ಳದ ಜನರು ನಿನ್ನನ್ನು ಅರಿಯಲಾರರು. ಆದರೆ ನಿನ್ನ ವಿಷಯದಲ್ಲಿ ಯಥಾರ್ಥವಾಗಿ ತಿಳಿದವರೇ ನಿನ್ನ ಉಪಾಸನೆಯನ್ನು ಮಾಡುತ್ತಾರೆ. ॥ ೧-೨ ॥

ಉಚ್ಚಾವಚೇಷು ಭೂತೇಷು ದುರ್ಜ್ಞೇಯಮಕೃತಾತ್ಮಭಿಃ ।
ಉಪಾಸತೇ ತ್ವಾಂ ಭಗವನ್ ಯಾಥಾತಥ್ಯೇನ ಬ್ರಾಹ್ಮಣಾಃ
॥ ೨ ॥

ಯೇಷು ಯೇಷು ಚ ಭಾವೇಷು ಭಕ್ತ್ಯಾ ತ್ವಾಂ ಪರಮರ್ಷಯಃ ।
ಉಪಾಸೀನಾಃ ಪ್ರಪದ್ಯಂತೇ ಸಂಸಿದ್ಧಿಂ ತದ್ವದಸ್ವ ಮೇ
॥ ೩ ॥

ಗೂಢಶ್ಚರಸಿ ಭೂತಾತ್ಮಾ ಭೂತಾನಾಂ ಭೂತಭಾವನ ।
ನ ತ್ವಾಂ ಪಶ್ಯಂತಿ ಭೂತಾನಿ ಪಶ್ಯಂತಂ ಮೋಹಿತಾನಿ ತೇ
॥ ೪ ॥

ಯಾಃ ಕಾಶ್ಚ ಭೂಮೌ ದಿವಿ ವೈ ರಸಾಯಾಂ
ವಿಭೂತಯೋ ದಿಕ್ಷು ಮಹಾವಿಭೂತೇ ।
ತಾ ಮಹ್ಯಮಾಖ್ಯಾಹ್ಯನುಭಾವಿತಾಸ್ತೇ
ನಮಾಮಿ ತೇ ತೀರ್ಥಪದಾಂಘ್ರಿಪದ್ಮಮ್ ॥ ೫ ॥

ಶ್ರೀಭಗವಾನುವಾಚ

ಏವಮೇತದಹಂ ಪೃಷ್ಟಃ ಪ್ರಶ್ನಂ ಪ್ರಶ್ನವಿದಾಂ ವರ ।
ಯುಯುತ್ಸುನಾ ವಿನಶನೇ ಸಪತ್ನೈರರ್ಜುನೇನ ವೈ
॥ ೬ ॥

ಜ್ಞಾತ್ವಾಜ್ಞಾತಿವಧಂ ಗರ್ಹ್ಯಮಧರ್ಮಂ ರಾಜ್ಯ ಹೇತುಕಮ್ ।
ತತೋ ನಿವೃತ್ತೋ ಹಂತಾಹಂ ಹತೋಽಯಮಿತಿ ಲೌಕಿಕಃ
॥ ೭ ॥

ಸ ತದಾ ಪುರುಷವ್ಯಾಘ್ರೋ ಯುಕ್ತ್ಯಾ ಮೇ ಪ್ರತಿಬೋಧಿತಃ ।
ಅಭ್ಯಭಾಷತ ಮಾಮೇವಂ ಯಥಾ ತ್ವಂ ರಣಮೂರ್ಧನಿ
॥ ೮ ॥

ಅಹಮಾತ್ಮೋದ್ಧವಾಮೀಷಾಂ ಭೂತಾನಾಂ ಸುಹೃದೀಶ್ವರಃ ।
ಅಹಂ ಸರ್ವಾಣಿ ಭೂತಾನಿ ತೇಷಾಂ ಸ್ಥಿತ್ಯುದ್ಭವಾಪ್ಯಯಃ
॥ ೯ ॥

ಅಹಂ ಗತಿರ್ಗತಿಮತಾಂ ಕಾಲಃ ಕಲಯತಾಮಹಮ್ ।
ಗುಣಾನಾಂ ಚಾಪ್ಯಹಂ ಸಾಮ್ಯಂ ಗುಣಿನ್ಯೌತ್ಪತ್ತಿಕೋ ಗುಣಃ
॥ ೧೦ ॥

ಗುಣಿನಾಮಪ್ಯಹಂ ಸೂತ್ರಂ ಮಹತಾಂ ಚ ಮಹಾನಹಮ್ ।
ಸೂಕ್ಷ್ಮಾಣಾಮಪ್ಯಹಂ ಜೀವೋ ದುರ್ಜಯಾನಾಮಹಂ ಮನಃ
॥ ೧೧ ॥

ಹಿರಣ್ಯಗರ್ಭೋ ವೇದಾನಾಂ ಮಂತ್ರಾಣಾಂ ಪ್ರಣವಸ್ತ್ರಿವೃತ್ ।
ಅಕ್ಷರಾಣಾಮಕಾರೋಽಸ್ಮಿ ಪದಾನಿಚ್ಛಂದಸಾಮಹಮ್
॥ ೧೨ ॥

ದೊಡ್ಡ-ದೊಡ್ಡ ಋಷಿ-ಮಹರ್ಷಿಗಳು ನಿನ್ನ ಯಾವ ರೂಪಗಳನ್ನು ಮತ್ತು ವಿಭೂತಿಗಳನ್ನು ಪರಮ ಭಕ್ತಿಯಿಂದ ಉಪಾಸಿಸಿ ಸಿದ್ಧಿಯನ್ನು ಪಡೆಯುತ್ತಾರೋ ಅವನ್ನು ನೀನು ನನಗೆ ಹೇಳುವ ಕೃಪೆಮಾಡು. ॥ ೩ ॥ ಸಮಸ್ತ ಪ್ರಾಣಿಗಳ ಜೀವನದಾತೃವಾದ ಪ್ರಭುವೇ! ನೀನು ಸಮಸ್ತ ಪ್ರಾಣಿಗಳ ಅಂತರಾತ್ಮನಾಗಿರುವೆ. ನೀನು ಅವುಗಳಲ್ಲಿ ನಿನ್ನನ್ನು ಗುಪ್ತವಾಗಿರಿಸಿಕೊಂಡು ಲೀಲೆಮಾಡುತ್ತಿರುವೆ. ನೀನಾದರೋ ಎಲ್ಲರನ್ನು ನೋಡುತ್ತೀಯೆ, ಆದರೆ ಜಗತ್ತಿನ ಪ್ರಾಣಿಗಳು ನಿನ್ನ ಮಾಯೆಯಿಂದ ಮೋಹಿತರಾಗಿ ನಿನ್ನನ್ನು ನೋಡಲಾರರು. ॥ ೪ ॥ ಅಚಿಂತ್ಯ ಐಶ್ವರ್ಯ ಸಂಪನ್ನ ಪ್ರಭೋ! ಪೃಥಿವಿ, ಸ್ವರ್ಗ, ಪಾತಾಳ ಹಾಗೂ ದಶದಿಕ್ಕುಗಳಲ್ಲಿ ನಿನ್ನ ಪ್ರಭಾವದಿಂದ ಕೂಡಿದ ಯಾವ-ಯಾವ ವಿಭೂತಿಗಳು ಇವೆಯೋ, ಅವನ್ನು ನೀನು ದಯಾಮಾಡಿ ನನಗೆ ವರ್ಣಿಸಿ ಹೇಳು. ಸ್ವಾಮಿ! ಸಮಸ್ತ ತೀರ್ಥಗಳನ್ನು ಕೂಡ ತೀರ್ಥವಾಗಿಸುವ ನಿನ್ನ ಈ ಚರಣ ಕಮಲಗಳನ್ನು ನಾನು ವಂದಿಸುತ್ತೇನೆ. ॥ ೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ನೀನು ಪ್ರಶ್ನೆಯ ಮರ್ಮವನ್ನು ತಿಳಿಯುವವರಲ್ಲಿ ಶ್ರೇಷ್ಠನಾಗಿರುವೆ. ಕುರುಕ್ಷೇತ್ರದಲ್ಲಿ ಕೌರವ-ಪಾಂಡವರಿಗೆ ಯುದ್ಧವು ಸನ್ನದ್ಧವಾದಾಗ ಶತ್ರುಗಳೊಡನೆ ಯುದ್ಧಕ್ಕಾಗಿ ತತ್ಪರನಾದ ಅರ್ಜುನನು ನನ್ನಲ್ಲಿ ಹೀಗೆಯೇ ಪ್ರಶ್ನಿಸಿದ್ದನು. ॥ ೬ ॥

ಕುಟುಂಬದವರನ್ನು ರಾಜ್ಯಕ್ಕಾಗಿ ಕೊಲ್ಲುವುದು ಬಹಳ ನಿಂದನೀಯವೂ, ಅಧರ್ಮವೂ ಆಗಿದೆ ಎಂಬ ಧೋರಣೆ ಅರ್ಜುನನ ಮನಸ್ಸಿನಲ್ಲಿ ಉಂಟಾಗಿತ್ತು. ಸಾಧಾರಣ ಜನರಂತೆ 'ನಾನು ಕೊಲ್ಲುವವನೂ, ಇವರೆಲ್ಲ ಸಾಯುವವರಾಗಿದ್ದಾರೆ' ಹೀಗೆ ಯೋಚಿಸುತ್ತಾ ಅವನು ಯುದ್ಧದಿಂದ ನಿವೃತ್ತನಾಗಲು ಬಯಸಿದ್ದನು. ॥ ೭ ॥ ಆಗ ನಾನು ರಣಭೂಮಿಯಲ್ಲಿ ಬಹಳಷ್ಟು ಯುಕ್ತಿಗಳಿಂದ ವೀರವರ ಅರ್ಜುನನಿಗೆ ತಿಳಿಸಿಹೇಳಿದ್ದೆ. ಆಗಲೂ ಅರ್ಜುನನು ನೀನು ನನ್ನಲ್ಲಿ ಪ್ರಶ್ನಿಸಿದಂತೆ ಪ್ರಶ್ನಿಸಿದ್ದನು. ॥ ೮ ॥ ಎಲೈ ಉದ್ಧವನೇ! ನಾನು ಸಮಸ್ತ ಪ್ರಾಣಿಗಳ ಆತ್ಮಾ, ಹಿತೈಷಿ, ಸುಹೃದ್, ಈಶ್ವರ – ನಿಯಾಮಕನಾಗಿದ್ದೇನೆ. ನಾನೇ ಈ ಸಮಸ್ತ ಪ್ರಾಣಿ-ಪದಾರ್ಥಗಳ ರೂಪದಲ್ಲಿದ್ದೇನೆ. ಇವುಗಳ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯದ ಕಾರಣನೂ ನಾನೇ ಆಗಿದ್ದೇನೆ. ॥ ೯ ॥ ಗತಿಶೀಲ ಪದಾರ್ಥಗಳ ಗತಿಯು ನಾನೇ ಆಗಿದ್ದೇನೆ. ಗಣನೆ ಮಾಡುವವರಲ್ಲಿ ಕಾಲವು, ಗುಣಗಳ ಸಾಮ್ಯಾವಸ್ಥಾ ಪ್ರಕೃತಿ, ಗುಣಿಗಳ ನೈಸರ್ಗಿಕ ಗುಣಗಳು ನಾನೇ ಆಗಿದ್ದೇನೆ. ॥ ೧೦ ॥ ಗುಣಗಳಲ್ಲಿ ಕ್ಷೋಭೆ ಉಂಟಾಗಿ ಕ್ರಿಯಾಶಕ್ತಿ ಪ್ರಧಾನ ಸೂತ್ರಾತ್ಮಾ, ಜ್ಞಾನಶಕ್ತಿ ಪ್ರಧಾನ ಮಹತ್ತತ್ತ್ವ, ಸೂಕ್ಷ್ಮಜೀವಿಗಳಲ್ಲಿಯೂ ಕೂಡ ಜೀವರೂಪದಿಂದ ನಾನೇ ಆಗಿರುವೆನು. ಕಷ್ಟವಾಗಿ ವಶಕ್ಕೆ ಬರುವಂತಹ ಮನಸ್ಸೂ ನಾನೇ ಆಗಿದ್ದೇನೆ. ॥ ೧೧ ॥ ವೇದಗಳ ಅಭಿವ್ಯಕ್ತಿಸ್ಥಾನ ಹಿರಣ್ಯಗರ್ಭನೂ, ಮಂತ್ರಗಳಲ್ಲಿ 'ಅ, ಉ, ಮ' ಈ ಮೂರು ಮಾತ್ರೆಗಳಿಂದ ಕೂಡಿದ ಪ್ರಣವವೂ, ಅಕ್ಷರದಲ್ಲಿ ಅಕಾರವೂ, ಛಂದಸ್ಸುಗಳಲ್ಲಿ ತ್ರಿಪದಾ ಗಾಯತ್ರಿಯೂ ನಾನೇ ಆಗಿದ್ದೇನೆ. ॥ ೧೨ ॥

ಇಂದ್ರೋಽಹಂ ಸರ್ವದೇವಾನಾಂ ವಸೂನಾಮಸ್ಮಿ ಹವ್ಯವಾಟ್ ।
ಆದಿತ್ಯಾನಾಮಹಂ ವಿಷ್ಣೂ ರುದ್ರಾಣಾಂ ನೀಲಲೋಹಿತಃ
॥ ೧೩ ॥
ಬ್ರಹ್ಮರ್ಷೀಣಾಂ ಭೃಗುರಹಂ ರಾಜರ್ಷೀಣಾಮಹಂ ಮನುಃ ।
ದೇವರ್ಷೀಣಾಂ ನಾರದೋಽಹಂ ಹವಿರ್ಧಾನ್ಯಸ್ಮಿ ಧೇನುಷು
॥ ೧೪ ॥
ಸಿದ್ಧೇಶ್ವರಾಣಾಂ ಕಪಿಲಃ ಸುಪರ್ಣೋಽಹಂ ಪತತ್ರಿಣಾಮ್ ।
ಪ್ರಜಾಪತೀನಾಂ ದಕ್ಷೋಽಹಂ ಪಿತೄಣಾಮಹಮರ್ಯಮಾ
॥ ೧೫ ॥
ಮಾಂ ವಿದ್ಧ್ಯುದ್ಧವ ದೈತ್ಯಾನಾಂ ಪ್ರಹ್ಲಾದಮಸುರೇಶ್ವರಮ್ ।
ಸೋಮಂ ನಕ್ಷತ್ರೌಷಧೀನಾಂ ಧನೇಶಂ ಯಕ್ಷರಕ್ಷಸಾಮ್
॥ ೧೬ ॥
ಐರಾವತಂ ಗಜೇಂದ್ರಾಣಾಂ ಯಾದಸಾಂ ವರುಣಂ ಪ್ರಭುಮ್ ।
ತಪತಾಂ ದ್ಯುಮತಾಂ ಸೂರ್ಯಂ ಮನುಷ್ಯಾಣಾಂ ಚ ಭೂಪತಿಮ್
॥ ೧೭ ॥
ಉಚ್ಚೈಃಶ್ರವಾಸ್ತುರಂಗಾಣಾಂ ಧಾತೂನಾಮಸ್ಮಿ ಕಾಂಚನಮ್ ।
ಯಮಃ ಸಂಯಮತಾಂ ಚಾಹಂ ಸರ್ಪಾಣಾಮಸ್ಮಿ ವಾಸುಕಿಃ
॥ ೧೮ ॥
ನಾಗೇಂದ್ರಾಣಾಮನಂತೋಽಹಂ ಮೃಗೇಂದ್ರಃ ಶೃಂಗಿದಂಷ್ಟ್ರಿಣಾಮ್ ।
ಆಶ್ರಮಾಣಾಮಹಂ ತುರ್ಯೋ ವರ್ಣಾನಾಂ ಪ್ರಥಮೋಽನಘ
॥ ೧೯ ॥
ತೀರ್ಥಾನಾಂ ಸ್ರೋತಸಾಂ ಗಂಗಾ ಸಮುದ್ರಃ ಸರಸಾಮಹಮ್ ।
ಆಯುಧಾನಾಂ ಧನುರಹಂ ತ್ರಿಪುರಘ್ನೋ ಧನುಷ್ಮತಾಮ್
॥ ೨೦ ॥
ಧಿಷ್ಣ್ಯಾನಾಮಸ್ಮ್ಯಹಂ ಮೇರುರ್ಗಹನಾನಾಂ ಹಿಮಾಲಯಃ ।
ವನಸ್ಪತೀನಾಮಶ್ವತ್ಥ ಓಷಧೀನಾಮಹಂ ಯವಃ
॥ ೨೧ ॥
ಪುರೋಧಸಾಂ ವಸಿಷ್ಠೋಽಹಂ ಬ್ರಹ್ಮಿಷ್ಠಾನಾಂ ಬೃಹಸ್ಪತಿಃ ।
ಸ್ಕಂದೋಽಹಂ ಸರ್ವಸೇನಾನ್ಯಾಮಗ್ರಣ್ಯಾಂ ಭಗವಾನಜಃ
॥ ೨೨ ॥
ಯಜ್ಞಾನಾಂ ಬ್ರಹ್ಮಯಜ್ಞೋಽಹಂ ವ್ರತಾನಾಮವಿಹಿಂಸನಮ್ ।
ವಾಯ್ವಗ್ನ್ಯರ್ಕಾಂಬುವಾಗಾತ್ಮಾ ಶುಚೀನಾಮಪ್ಯಹಂ ಶುಚಿಃ
॥ ೨೩ ॥
ಯೋಗಾನಾಮಾತ್ಮಸಂರೋಧೋ ಮಂತ್ರೋಽಸ್ಮಿ ವಿಜಿಗೀಷತಾಮ್ ।
ಆನ್ವೀಕ್ಷಿಕೀ ಕೌಶಲಾನಾಂ ವಿಕಲ್ಪಃ ಖ್ಯಾತಿವಾದಿನಾಮ್
॥ ೨೪ ॥
ಸ್ತ್ರೀಣಾಂ ತು ಶತರೂಪಾಹಂ ಪುಂಸಾಂ ಸ್ವಾಯಂಭುವೋ ಮನುಃ ।
ನಾರಾಯಣೋ ಮುನೀನಾಂ ಚ ಕುಮಾರೋ ಬ್ರಹ್ಮಚಾರಿಣಾಮ್
॥ ೨೫ ॥

ಸಮಸ್ತ ದೇವತೆಗಳಲ್ಲಿ ಇಂದ್ರನೂ, ಎಂಟು ವಸುಗಳಲ್ಲಿ ಅಗ್ನಿಯೂ, ದ್ವಾದಶಾದಿತ್ಯರಲ್ಲಿ ವಿಷ್ಣುವೂ, ಏಕಾದಶ ರುದ್ರರಲ್ಲಿ ನೀಲಲೋಹಿತ ಹೆಸರಿನ ರುದ್ರನು ನಾನೇ ಆಗಿದ್ದೇನೆ. ಬ್ರಹ್ಮರ್ಷಿಗಳಲ್ಲಿ ಭೃಗು, ರಾಜರ್ಷಿಗಳಲ್ಲಿ ಮನು, ದೇವರ್ಷಿಗಳಲ್ಲಿ ನಾರದ, ಹಸುಗಳಲ್ಲಿ ಕಾಮಧೇನು ನಾನೇ ಆಗಿರುವೆನು. ॥ ೧೩.-೧೪॥ ಸಿದ್ಧೇಶ್ವರರಲ್ಲಿ ಕಪಿಲನೂ, ಪಕ್ಷಿಗಳಲ್ಲಿ ಗರುಡನೂ, ಪ್ರಜಾಪತಿಗಳಲ್ಲಿ ದಕ್ಷಪ್ರಜಾಪತಿಯೂ, ಪಿತೃಗಳಲ್ಲಿ ಅರ್ಯಮಾ ನಾನಾಗಿದ್ದೇನೆ. ॥ ೧೫ ॥ ಪ್ರಿಯ ಉದ್ಧವಾ! ನಾನು ದೈತ್ಯರಲ್ಲಿ ದೈತ್ಯರಾಜ ಪ್ರಹ್ಲಾದನು, ನಕ್ಷತ್ರಗಳ ಅಧಿಪತಿ, ವನಸ್ಪತಿಗಳನ್ನು ಪುಷ್ಪಗೊಳಿಸುವ ಚಂದ್ರನು, ಯಕ್ಷ-ರಾಕ್ಷಸರಲ್ಲಿ ಧನಪತಿ ಕುಬೇರನು ನಾನೇ ಆಗಿದ್ದೇನೆ. ॥ ೧೬ ॥ ಗಜೇಂದ್ರರಲ್ಲಿ ಐರಾವತವೂ, ಜಲಚರಗಳ ಅಧಿಪತಿ ವರುಣ, ಬೆಳಗುವವರಲ್ಲಿ ಪ್ರಕಾಶಕೊಡುವಂತಹ ಸೂರ್ಯನೂ, ಮನುಷ್ಯರಲ್ಲಿ ರಾಜನೂ ನಾನೇ ಆಗಿದ್ದೇನೆ. ॥ ೧೭ ॥ ಕುದುರೆಗಳಲ್ಲಿ ಉಚ್ಚೈಶ್ರವಸ್ಸು, ಧಾತುಗಳಲ್ಲಿ ಚಿನ್ನ, ದಂಡಧಾರಿಗಳಲ್ಲಿ ಯಮ, ಸರ್ಪಗಳಲ್ಲಿ ವಾಸುಕಿ ನಾನೇ ಆಗಿರುವೆನು. ॥ ೧೮ ॥ ಪುಣ್ಯಾತ್ಮಾ ಉದ್ಧವನೇ! ನಾನೇ ನಾಗರಾಜರಲ್ಲಿ ಆದಿಶೇಷನೂ, ಕೊಂಬು ಮತ್ತು ದಾಡೆಗಳುಳ್ಳ ಪ್ರಾಣಿಗಳಲ್ಲಿ ಅವರ ರಾಜನಾದ ಸಿಂಹನೂ, ಆಶ್ರಮಗಳಲ್ಲಿ ಸಂನ್ಯಾಸವೂ, ವರ್ಣಗಳಲ್ಲಿ ಬ್ರಾಹ್ಮಣನೂ ಆಗಿದ್ದೇನೆ. ॥ ೧೯ ॥ ತೀರ್ಥಗಳಲ್ಲಿ ಹಾಗೂ ನದಿಗಳಲ್ಲಿ ಗಂಗೆಯೂ, ಜಲಾಶಯಗಳಲ್ಲಿ ಸಮುದ್ರವೂ, ಅಸ್ತ್ರ-ಶಸ್ತ್ರಗಳಲ್ಲಿ ಧನುಸ್ಸೂ, ಧನುರ್ಧಾರಿಗಳಲ್ಲಿ ತ್ರಿಪುರಾರೀ ಶಂಕರನೂ ನಾನೇ ಆಗಿರುವೆನು. ॥ ೨೦ ॥

ನಿವಾಸಸ್ಥಾನಗಳಲ್ಲಿ ಸುಮೇರುವೂ, ದುರ್ಗಮ ಸ್ಥಾನಗಳಲ್ಲಿ ಹಿಮಾಲಯವೂ, ವನಸ್ಪತಿಗಳಲ್ಲಿ ಅರಳೀಮರವೂ, ಧಾನ್ಯಗಳಲ್ಲಿ ಜವೆಯೂ ನಾನೇ ಆಗಿದ್ದೇನೆ. ॥ ೨೧ ॥ ಪುರೋಹಿತರಲ್ಲಿ ವಸಿಷ್ಠನೂ, ವೇದವೇತ್ತರಲ್ಲಿ ಬೃಹಸ್ಪತಿಯೂ, ಎಲ್ಲ ಸೇನಾಪತಿಗಳಲ್ಲಿ ಸ್ಕಂದನೂ, ಸನ್ಮಾರ್ಗ ಪ್ರವರ್ತಕರಲ್ಲಿ ಭಗವಾನ್ ಬ್ರಹ್ಮನೂ ನಾನೇ ಆಗಿರುವೆನು. ॥ ೨೨ ॥ ಪಂಚ ಮಹಾಯಜ್ಞಗಳಲ್ಲಿ ಬ್ರಹ್ಮಯಜ್ಞ (ಸ್ವಾಧ್ಯಾಯಯಜ್ಞ)ವೂ, ವ್ರತಗಳಲ್ಲಿ ಅಹಿಂಸಾವ್ರತವೂ, ಶುದ್ಧ ಮಾಡುವ ಪದಾರ್ಥಗಳಲ್ಲಿ ನಿತ್ಯಶುದ್ಧ ವಾಯುವೂ ಹಾಗೂ ಅಗ್ನಿ, ಸೂರ್ಯ, ಜಲ, ವಾಣಿ ಮತ್ತು ಆತ್ಮಾ ನಾನೇ ಆಗಿರುವೆನು. ॥ ೨೩ ॥ ಯೋಗಗಳಲ್ಲಿ ಮನೋನಿರೋಧರೂಪೀ ಸಮಾಧಿಯೋಗವೂ, ಗೆಲ್ಲುವ ಇಚ್ಛೆಯುಳ್ಳವರಲ್ಲಿ ಗುಪ್ತವಾಗಿಡುವಂತಹ ಮಂತ್ರಾಲೋಚನೆಯೂ, ಆತ್ಮಾನಾತ್ಮ ವಿವೇಕದ ಚರ್ಚೆಯಲ್ಲಿ ಬ್ರಹ್ಮವಿದ್ಯೆಯೂ ನಾನೇ ಆಗಿದ್ದೇನೆ. ತತ್ತ್ವಗಳ ನಿರ್ಣಯ ಮಾಡಲಾಗುವ ವಾದ-ವಿವಾದರೂಪೀ ವಿಕಲ್ಪವೂ ನಾನೇ. (ಏಕೆಂದರೆ ಇಂದಿನವರೆಗೆ ಯಾವುದೇ ತತ್ತ್ವಗಳ ವಿಷಯದಲ್ಲಿ ತತ್ತ್ವಗಳ ಸಂಖ್ಯೆ ಇಷ್ಟೇ ಇದೆ ಎಂಬುದು ನಿರ್ಣಯ ಮಾಡಲಾಗಲಿಲ್ಲ.) ಸ್ತ್ರೀಯರಲ್ಲಿ ಮನುಪತ್ನೀ ಶತರೂಪಾ, ಪುರುಷರಲ್ಲಿ ಸ್ವಾಯಂಭುವ ಮನು, ಮುನೀಶ್ವರರಲ್ಲಿ ನಾರಾಯಣ, ಬ್ರಹ್ಮಚಾರಿಗಳಲ್ಲಿ ಸನತ್ಕುಮಾರರು ನಾನೇ ಆಗಿದ್ದೇನೆ. ॥ ೨೪-೨೫ ॥

ಧರ್ಮಾಣಾಮಸ್ಮಿ ಸಂನ್ಯಾಸಃ ಕ್ಷೇಮಾಣಾಮಬಹಿರ್ಮತಿಃ ।
ಗುಹ್ಯಾನಾಂ ಸೂನೃತಂ ಮೌನಂ ಮಿಥುನಾನಾಮಜಸ್ತ್ವಹಮ್
॥ ೨೬ ॥

ಸಂವತ್ಸರೋಽಸ್ಮ್ಯನಿಮಿಷಾಮೃತೂನಾಂ ಮಧುಮಾಧವೌ ।
ಮಾಸಾನಾಂ ಮಾರ್ಗಶೀರ್ಷೋಽಹಂ ನಕ್ಷತ್ರಾಣಾಂ ತಥಾಭಿಜಿತ್
॥ ೨೭ ॥

ಅಹಂ ಯುಗಾನಾಂ ಚ ಕೃತಂ ಧೀರಾಣಾಂ ದೇವಲೋಽಸಿತಃ ।
ದ್ವೈಪಾಯನೋಽಸ್ಮಿ ವ್ಯಾಸಾನಾಂ ಕವೀನಾಂ ಕಾವ್ಯ ಆತ್ಮವಾನ್
॥ ೨೮ ॥

ವಾಸುದೇವೋ ಭಗವತಾಂ ತ್ವಂ ತು ಭಾಗವತೇಷ್ವಹಮ್ ।
ಕಿಂಪುರುಷಾಣಾಂ ಹನುಮಾನ್ವಿದ್ಯಾಧ್ರಾಣಾಂ ಸುದರ್ಶನಃ
॥ ೨೯ ॥

ರತ್ನಾನಾಂ ಪದ್ಮರಾಗೋಽಸ್ಮಿ ಪದ್ಮಕೋಶಃ ಸುಪೇಶಸಾಮ್ ।
ಕುಶೋಽಸ್ಮಿ ದರ್ಭಜಾತೀನಾಂ ಗವ್ಯಮಾಜ್ಯಂ ಹವಿಃಷ್ವಹಮ್
॥ ೩೦ ॥

ವ್ಯವಸಾಯಿನಾಮಹಂ ಲಕ್ಷ್ಮೀಃ ಕಿತವಾನಾಂ ಛಲಗ್ರಹಃ ।
ತಿತಿಕ್ಷಾಸ್ಮಿ ತಿತಿಕ್ಷೂಣಾಂ ಸತ್ತ್ವಂ ಸತ್ತ್ವವತಾಮಹಮ್
॥ ೩೧ ॥

ಓಜಃ ಸಹೋ ಬಲವತಾಂ ಕರ್ಮಾಹಂ ವಿದ್ಧಿ ಸಾತ್ವತಾಮ್ ।
ಸಾತ್ವತಾಂ ನವಮೂರ್ತೀನಾಮಾದಿಮೂರ್ತಿರಹಂ ಪರಾ
॥ ೩೨ ॥

ವಿಶ್ವಾವಸುಃ ಪೂರ್ವಚಿತ್ತಿರ್ಗಂಧರ್ವಾಪ್ಸರಸಾಮಹಮ್ ।
ಭೂಧರಾಣಾಮಹಂ ಸ್ಥೈರ್ಯಂ ಗಂಧಮಾತ್ರಮಹಂ ಭುವಃ
॥ ೩೩ ॥

ಅಪಾಂ ರಸಶ್ಚ ಪರಮಸ್ತೇಜಿಷ್ಠಾನಾಂ ವಿಭಾವಸುಃ ।
ಪ್ರಭಾ ಸೂರ್ಯೇಂದುತಾರಾಣಾಂ ಶಬ್ದೋಽಹಂ ನಭಸಃ ಪರಃ
॥ ೩೪ ॥

ಬ್ರಹ್ಮಣ್ಯಾನಾಂ ಬಲಿರಹಂ ವೀರಾಣಾಮಹಮರ್ಜುನಃ ।
ಭೂತಾನಾಂ ಸ್ಥಿತಿರುತ್ಪತ್ತಿರಹಂ ವೈ ಪ್ರತಿಸಂಕ್ರಮಃ
॥ ೩೫ ॥

ಗತ್ಯುಕ್ಷ್ಮೃತ್ಸರ್ಗೋಪಾದಾನಮಾನಂದಸ್ಪರ್ಶಲಕ್ಷಣಮ್ ।
ಆಸ್ವಾದಶ್ರುತ್ಯವಘ್ರಾಣಮಹಂ ಸರ್ವೇಂದ್ರಿಯೇಂದ್ರಿಯಮ್
॥ ೩೬ ॥

ಧರ್ಮಗಳಲ್ಲಿ ಸಂನ್ಯಾಸ ಧರ್ಮವು ಶ್ರೇಯಸ್ಕಾಮೀ ಪುರುಷರ ಅಂತರ್ಮುಖೀ ವೃತ್ತಿಯೂ, ಯಾವುದೇ ಮಾತನ್ನು ಗೋಪನೀಯವಾಗಿಡುವುದಕ್ಕಾಗಿ ಮಧುರವಾಣೀ ಮತ್ತು ಮೌನ ನಾನೇ ಆಗಿದ್ದೇನೆ. ಯಾರ ಶರೀರದ ಎರಡು ಭಾಗಗಳಿಂದ ಸ್ತ್ರೀ-ಪುರುಷರ ಮೊದಲನೆಯ ಜೋಡಿಯು ಉತ್ಪನ್ನವಾಯಿತೋ ಆ ಬ್ರಹ್ಮದೇವರು ನಾನೇ ಆಗಿದ್ದೇನೆ. ॥ ೨೬ ॥ ಸದಾಕಾಲವೂ ಎಚ್ಚರವಾಗಿರುವವರಲ್ಲಿ ಸಂವತ್ಸರರೂಪೀ ಕಾಲವು ನಾನೇ. ಋತುಗಳಲ್ಲಿ ವಸಂತನೂ, ತಿಂಗಳುಗಳಲ್ಲಿ ಮಾರ್ಗಶೀರ್ಷವೂ, ನಕ್ಷತ್ರಗಳಲ್ಲಿ ಅಭಿಜಿತ್ ನಾನೇ ಆಗಿದ್ದೇನೆ. ॥ ೨೭ ॥ ಯುಗಗಳಲ್ಲಿ ಕೃತಯುಗವೂ, ವಿವೇಕಿಗಳಲ್ಲಿ ದೇವರ್ಷಿ ದೇವಲ ಮತ್ತು ಅಸಿತನೂ, ವ್ಯಾಸರಲ್ಲಿ ಶ್ರೀಕೃಷ್ಣದ್ವೈಪಾಯನ ವ್ಯಾಸ ಹಾಗೂ ಕವಿಗಳಲ್ಲಿ ಮನಸ್ವೀ ಶುಕ್ರಾಚಾರ್ಯರೂ ನಾನೇ ಆಗಿರುವೆನು. ॥ ೨೮॥ ಷಡ್‌ಗುಣೈಶ್ವರ್ಯಗಳಲ್ಲಿ ಭಗವಾನ್ ವಾಸುದೇವನು ನಾನೇ. ನನ್ನ ಪ್ರೇಮಿ ಭಕ್ತರಲ್ಲಿ ನೀನು (ಉದ್ಧವ), ಕಿಂಪುರುಷರಲ್ಲಿ ಹನುಮಂತನೂ, ವಿದ್ಯಾಧರರಲ್ಲಿ ಸುದರ್ಶನವೂ (ಅವನು ಅಜಗರ ರೂಪದಿಂದ ನಂದರಾಜನನ್ನು ನುಂಗಿದ್ದನು ಮತ್ತೆ ಭಗವಂತನ ಪಾದಸ್ಪರ್ಶದಿಂದ ಮುಕ್ತನಾಗಿದ್ದನು.) ನಾನೇ ಆಗಿದ್ದೇನೆ. ॥ ೨೯ ॥ ರತ್ನಗಳಲ್ಲಿ ಪದ್ಮರಾಗ (ಕೆಂಪು)ವೂ, ಸುಂದರ ವಸ್ತುಗಳಲ್ಲಿ ಕಮಲದ ಮೊಗ್ಗು, ತೃಣಗಳಲ್ಲಿ ಕುಶ, ಹವಿಸ್ಸುಗಳಲ್ಲಿ ಹಸುವಿನ ತುಪ್ಪ ನಾನೇ ಆಗಿದ್ದೇನೆ. ॥ ೩೦ ॥ ವ್ಯಾಪಾರಿಗಳಲ್ಲಿ ಇರುವ ಲಕ್ಷ್ಮೀಯೂ, ಛಲ-ಕಪಟಮಾಡುವವರಲ್ಲಿ ದ್ಯೂತ ಕ್ರೀಡೆಯೂ, ತಿತಿಕ್ಷುಗಳ ತಿತಿಕ್ಷೆಯೂ, ಸಾತ್ತ್ವಿಕರಲ್ಲಿರುವ ಸತ್ತ್ವ ಗುಣವೂ ನಾನೇ ಆಗಿರುವೆನು. ॥ ೩೧ ॥ ಬಲಿಷ್ಠರಲ್ಲಿ ಉತ್ಸಾಹ ಪರಾಕ್ರಮವೂ, ಭಗವದ್ಭಕ್ತರಲ್ಲಿ ಭಕ್ತಿಯುಕ್ತ ನಿಷ್ಕಾಮಕರ್ಮವೂ, ವೈಷ್ಣವರಲ್ಲಿ ವಾಸುದೇವ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ, ಹಯಗ್ರೀವ, ವರಾಹ, ನೃಸಿಂಹ ಮತ್ತು ಬ್ರಹ್ಮಾ – ಈ ಒಂಭತ್ತು ಮೂರ್ತಿಗಳಲ್ಲಿ ಮೊದಲನೆಯದಾದ ಶ್ರೇಷ್ಠ ವಾಸುದೇವ ಮೂರ್ತಿಯೂ ನಾನೇ ಆಗಿದ್ದೇನೆ. ॥ ೩೨ ॥ ಗಂಧರ್ವರಲ್ಲಿ ವಿಶ್ವಾವಸು, ಅಪ್ಸರೆಯರಲ್ಲಿ ಬ್ರಹ್ಮನ ಆಸ್ಥಾನದ ಅಪ್ಸರೆ ಪೂರ್ವಚಿತ್ತಿ, ಪರ್ವತಗಳಲ್ಲಿ ಸ್ಥಿರತೆ, ಪೃಥ್ವಿಯಲ್ಲಿ ಶುದ್ಧಗಂಧ ತನ್ಮಾತ್ರೆಯ ಗುಣ ಶಬ್ದ ನಾನೇ ಆಗಿದ್ದೇನೆ. ॥ ೩೩ ॥ ಜಲದಲ್ಲಿ ರಸವೂ, ತೇಜಸ್ವೀ ಅಗ್ನಿ ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿ ಪ್ರಭೆನಾನಾಗಿದ್ದೇನೆ. ಆಕಾಶದಲ್ಲಿ ಅದರ ಏಕಮಾತ್ರ ಗುಣವಾದ ಶಬ್ದವು ನಾನೇ ಆಗಿದ್ದೇನೆ. ॥ ೩೪ ॥ ಉದ್ಧವನೇ ! ಬ್ರಾಹ್ಮಣಭಕ್ತರಲ್ಲಿ ಬಲಿ, ವೀರರಲ್ಲಿ ಅರ್ಜುನ, ಪ್ರಾಣಿಗಳಲ್ಲಿ ಅವರ ಉತ್ಪತ್ತಿ, ಸ್ಥಿತಿಯೂ, ಕೊನೆಗೆ ಅವರೆಲ್ಲ ನನ್ನ ಮೂಲಸ್ಥಾನದಲ್ಲಿ (ಪ್ರಳಯದಲ್ಲಿ) ಬಂದು ಸೇರುವ ವಿಧಾನವೂ ನಾನೇ ಆಗಿದ್ದೇನೆ. ॥ ೩೫ ॥ ನಾನೇ ಕಾಲುಗಳಿಂದ ನಡೆಯುವ ಶಕ್ತಿ, ಪಾಣಿಯಿಂದ ಮಾತಾಡುವ ಶಕ್ತಿ , ವಾಯುವಿನಲ್ಲಿ ಮಲತ್ಯಾಗದ ಶಕ್ತಿ , ಕೈಗಳಲ್ಲಿ ಹಿಡಿಯುವ ಶಕ್ತಿ , ಜನನೇಂದ್ರಿಯದಲ್ಲಿ ಆನಂದೋಪಭೋಗದ ಶಕ್ತಿ , ತ್ವಚೆಯಲ್ಲಿ ಸ್ಪರ್ಶದ, ನೇತ್ರಗಳಲ್ಲಿ ದರ್ಶನದ, ರಸನೆಯಲ್ಲಿ ರುಚಿಯಾಗುವ, ಕಿವಿಗಳಲ್ಲಿ ಶ್ರವಣದ, ಮೂಗಿನಲ್ಲಿ ಮೂಸುವ ಶಕ್ತಿಯೂ ಸಮಸ್ತ ಇಂದ್ರಿಯಗಳ ಇಂದ್ರಿಯಶಕ್ತಿಯೂ ನಾನೇ ಆಗಿದ್ದೇನೆ. ಪೃಥ್ವೀ, ವಾಯು, ಆಕಾಶ,

ಪೃಥಿವೀ ವಾಯುರಾಕಾಶ ಆಪೋ ಜ್ಯೋತಿರಹಂ ಮಹಾನ್ ।
ವಿಕಾರಃ ಪುರುಷೋಽವ್ಯಕ್ತಂ ರಜಃ ಸತ್ತ್ವಂ ತಮಃ ಪರಮ್
॥ ೩೭ ॥

ಅಹಮೇತತ್ಪಸಂಖ್ಯಾನಂ ಜ್ಞಾನಂ ತತ್ತ್ವವಿನಿಶ್ಚಯಃ ।
ಮಯೀಶ್ವರೇಣ ಜೀವೇನ ಗುಣೇನ ಗುಣಿನಾ ವಿನಾ ।
ಸರ್ವಾತ್ಮನಾಪಿ ಸರ್ವೇಣ ನ ಭಾವೋ ವಿದ್ಯತೇ ಕ್ವಚಿತ್
॥ ೩೮ ॥

ಸಂಖ್ಯಾನಂ ಪರಮಾಣೂನಾಂ ಕಾಲೇನ ಕ್ರಿಯತೇ ಮಯಾ ।
ನ ತಥಾ ಮೇ ವಿಭೂತೀನಾಂ ಸೃಜತೋಽಂಡಾನಿ ಕೋಟಿಶಃ
॥ ೩೯ ॥

ತೇಜಃ ಶ್ರೀಃ ಕೀರ್ತಿರೈಶ್ವರ್ಯಂ ಹ್ರೀಸ್ತ್ಯಾಗಃ ಸೌಭಗಂ ಭಗಃ ।
ವೀರ್ಯಂ ತಿತಿಕ್ಷಾ ವಿಜ್ಞಾನಂ ಯತ್ರ ಯತ್ರ ಸ ಮೇಽಂಶಕಃ
॥ ೪೦ ॥

ಏತಾಸ್ತೇ ಕೀರ್ತಿತಾಃ ಸರ್ವಾಃ ಸಂಕ್ಷೇಪೇಣ ವಿಭೂತಯಃ ।
ಮನೋವಿಕಾರಾ ಏವೈತೇ ಯಥಾ ವಾಚಾಭಿಧೀಯತೇ
॥ ೪೧ ॥

ವಾಚಂ ಯಚ್ಛ ಮನೋ ಯಚ್ಛ ಪ್ರಾಣಾನ್ಯಚ್ಛೇಂದ್ರಿಯಾಣಿ ಚ ।
ಆತ್ಮಾನಮಾತ್ಮನಾ ಯಚ್ಛ ನ ಭೂಯಃ ಕಲ್ಪಸೇಽಧ್ವನೇ
॥ ೪೨ ॥

ಯೋ ವೈ ವಾಙ್ಮನಸೀ ಸಮ್ಯಗಸಂಯಚ್ಛನ್ ಧಿಯಾ ಯತಿಃ ।
ತಸ್ಯ ವ್ರತಂ ತಪೋಜ್ಞಾನಂ ಸ್ರವತ್ಯಾಮಘಟಾಂಬುವತ್
॥ ೪೩ ॥

ತಸ್ಮಾನ್ಮನೋವಚಃ ಪ್ರಾಣಾನ್ ನಿಯಚ್ಛೇನ್ಮತ್ಪರಾಯಣಃ ।
ಮದ್ಭಕ್ತಿಯುಕ್ತಯಾ ಬುದ್ಧ್ಯಾ ತತಃ ಪರಿಸಮಾಪ್ಯತೇ
॥ ೪೪ ॥

ಜಲ, ತೇಜ, ಅಹಂಕಾರ, ಮಹತ್ತತ್ತ್ವ, ಪಂಚಮಹಾಭೂತಗಳು, ಜೀವ, ಅವ್ಯಕ್ತ , ಪ್ರಕೃತಿ, ಸತ್ತ್ವ, ರಜ, ತಮ ಇವೆಲ್ಲ ವಿಕಾರಗಳು ಮತ್ತು ಇವುಗಳಿಂದ ಅತೀತವಾಗಿರುವ ಪರಬ್ರಹ್ಮ ಇವೆಲ್ಲವೂ ನಾನೇ ಆಗಿರುವೆನು. ॥ ೩೬-೩೭॥ ಈ ತತ್ತ್ವಗಳ ಗಣನೆ, ಲಕ್ಷಣಗಳ ಮೂಲಕ ಅವುಗಳ ಜ್ಞಾನ, ತತ್ತ್ವಜ್ಞಾನರೂಪೀ ಅದರ ಫಲವೂ ನಾನೇ ಆಗಿದ್ದೇನೆ. ನಾನೇ ಈಶ್ವರನೂ, ಜೀವವೂ, ಗುಣವೂ, ಗುಣಿಯೂ, ಎಲ್ಲರ ಆತ್ಮನೂ, ಸರ್ವರೂಪನೂ ಆಗಿರುವೆನು. ನಾನಲ್ಲದೆ ಬೇರೆ ಯಾವುದೇ ಪದಾರ್ಥ ಎಲ್ಲಿಯೂ ಇಲ್ಲ. ॥ ೩೮ ॥ ಒಂದೊಮ್ಮೆ ಎಣಿಸತೊಡಗಿದರೆ, ಪರಮಾಣುಗಳ ಎಣಿಕೆ ಕದಾಚಿತ್ ಆಗಬಹುದು; ಆದರೆ ನನ್ನ ವಿಭೂತಿಗಳ ಎಣಿಕೆ ಸಾಧ್ಯವಾಗದು. ಏಕೆಂದರೆ, ನಾನು ರಚಿಸಿದ ಕೋಟಿ-ಕೋಟಿ ಬ್ರಹ್ಮಾಂಡಗಳ ಎಣಿಕೆಯೇ ಆಗದಿದ್ದಾಗ, ನನ್ನ ವಿಭೂತಿಗಳ ಗಣನೆಯಾದರೂ ಹೇಗಾಗಬಲ್ಲದು ? ॥ ೩೯ ॥ ಯಾವುದರಲ್ಲೇ ಆಗಲೀ ತೇಜ, ಶ್ರೀ, ಕೀರ್ತಿ, ಐಶ್ವರ್ಯ, ಲಜ್ಜೆ, ತ್ಯಾಗ, ಸೌಂದರ್ಯ, ಸೌಭಾಗ್ಯ, ಪರಾಕ್ರಮ, ತಿತಿಕ್ಷೆ, ವಿಜ್ಞಾನ ಮುಂತಾದ ಇರುವ ಶ್ರೇಷ್ಠಗುಣಗಳೆಲ್ಲ ನನ್ನ ಅಂಶವೇ ಆಗಿದೆ ಎಂದು ತಿಳಿದುಕೊ. ॥ ೪೦ ॥

ಉದ್ಧವನೇ ! ನಿನ್ನ ಪ್ರಶ್ನೆಗನುಸಾರ ನಾನು ಸಂಕ್ಷೇಪವಾಗಿ ವಿಭೂತಿಗಳನ್ನು ವರ್ಣಿಸಿರುವೆನು. ಇವೆಲ್ಲವೂ ಪರಮಾರ್ಥವಸ್ತು ಆಗಿರದೆ ಮನೋವಿಕಾರಮಾತ್ರವಾಗಿವೆ. ಏಕೆಂದರೆ, ಮನಸ್ಸಿನಿಂದ ಯೋಚಿಸಿದ, ವಾಣಿಯಿಂದ ಹೇಳಲಾದ ಯಾವುದೇ ವಸ್ತುವೂ ಪರಮಾರ್ಥ (ವಾಸ್ತವಿಕ) ವಾಗಿರುವುದಿಲ್ಲ, ಅದರ ಒಂದು ಕಲ್ಪನೆಯೇ ಆಗಿರುತ್ತದೆ. ॥ ೪೧ ॥ ಅದ್ದರಿಂದ ನೀನು ವಾಣಿಯನ್ನು ವಶಪಡಿಸಿಕೋ. ಮನಸ್ಸಿನ ಸಂಕಲ್ಪ - ವಿಕಲ್ಪಗಳನ್ನು ನಿಲ್ಲಿಸಿಬಿಡು. ಪ್ರಾಣಗಳನ್ನು ವಶಪಡಿಸಿಕೊಂಡು, ಇಂದ್ರಿಯಗಳನ್ನು ದಮನ ಮಾಡು. ಸಾತ್ತ್ವಿಕ ಬುದ್ಧಿಯಮೂಲಕ ಪ್ರಪಂಚಾಭಿಮುಖೀ ಬುದ್ಧಿಯನ್ನು ಶಾಂತಗೊಳಿಸು. ಮತ್ತೆ ನಿನಗೆ ಸಂಸಾರದ ಜನ್ಮ-ಮರಣ ರೂಪೀ ದುಃಖಿಮಯ ಮಾರ್ಗದಲ್ಲಿ ಅಲೆಯಬೇಕಾಗುವುದಿಲ್ಲ. ॥ ೪೨ ॥ ಬುದ್ಧಿಯ ಮೂಲಕ ವಾಣಿ ಮತ್ತು ಮನಸ್ಸನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲಾರದ ಸಾಧಕನ ವ್ರತ, ತಪಸ್ಸು, ಜ್ಞಾನ ಇವುಗಳು ಹಸಿಗಡಿಗೆಯಲ್ಲಿ ತುಂಬಿಟ್ಟ ನೀರಿನಂತೆ, ಕ್ಷೀಣವಾಗುತ್ತದೆ. ॥ ೪೩ ॥ ಅದಕ್ಕಾಗಿ ನನ್ನ ಪ್ರೇಮೀ ಭಕ್ತನು ನನ್ನಲ್ಲಿ ಪರಾಯಣನಾಗಿ ಭಕ್ತಿಯುಕ್ತ ಬುದ್ಧಿಯಿಂದ ವಾಣೀ, ಮನಸ್ಸು, ಪ್ರಾಣಗಳನ್ನು ಸಂಯಮ ಮಾಡಬೇಕು. ಹೀಗೆ ಮಾಡುವುದರಿಂದ ಮತ್ತೆ ಅವನಿಗೆ ಮಾಡಲು ಯಾವುದೇ ಬಾಕಿ ಇರುವುದಿಲ್ಲ, ಅವನು ಕೃತ್ಯಕೃತ್ಯನಾಗಿ ಹೋಗುತ್ತಾನೆ. ॥ ೪೪ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಷೋಡಶೋಽಧ್ಯಾಯಃ॥ ೧೬ ॥

ಹದಿನೇಳನೆಯ ಅಧ್ಯಾಯ

ವರ್ಣಾಶ್ರಮ ಧರ್ಮದ ನಿರೂಪಣೆ

ಉದ್ಧವ ಉವಾಚ

ಯಸ್ತ್ವಯಾಭಿಹಿತಃ ಪೂರ್ವಂ ಧರ್ಮಸ್ತ್ವದ್ಭಕ್ತಿಲಕ್ಷಣಃ ।
ವರ್ಣಾಶ್ರಮಾಚಾರವತಾಂ ಸರ್ವೇಷಾಂ ದ್ವಿಪದಾಮಪಿ
॥ ೧ ॥

ಯಥಾನುಷ್ಠೀಯಮಾನೇನ ತ್ವಯಿ ಭಕ್ತಿರ್ನೃಣಾಂ ಭವೇತ್ ।
ಸ್ವಧರ್ಮೇಣಾರವಿಂದಾಕ್ಷ ತತ್ಸಮಾಖ್ಯಾತುಮರ್ಹಸಿ
॥ ೨ ॥

ಪುರಾ ಕಿಲ ಮಹಾಬಾಹೋ ಧರ್ಮಂ ಪರಮಕಂ ಪ್ರಭೋ ।
ಯತ್ತೇನ ಹಂಸರೂಪೇಣ ಬ್ರಹ್ಮಣೇऽಭ್ಯಾತ್ಥ ಮಾಧವ
॥ ೩ ॥

ಸ ಇದಾನೀಂ ಸುಮಹತಾ ಕಾಲೇನಾಮಿತ್ರಕರ್ಶನ ।
ನ ಪ್ರಾಯೋ ಭವಿತಾ ಮರ್ತ್ಯಲೋಕೇ ಪ್ರಾಗನುಶಾಸಿತಃ
॥ ೪ ॥

ವಕ್ತಾ ಕರ್ತಾವಿತಾ ನಾನ್ಯೋ ಧರ್ಮಸ್ಯಾಚ್ಯುತ ತೇ ಭುವಿ ।
ಸಭಾಯಾಮಪಿ ವೈರಿಂಚ್ಯಾಂ ಯತ್ರ ಮೂರ್ತಿಧರಾಃ ಕಲಾಃ
॥ ೫ ॥

ಕರ್ತ್ರಾವಿತ್ರಾ ಪ್ರವಕ್ತ್ರಾ ಚ ಭವತಾ ಮಧುಸೂದನ ।
ತ್ಯಕ್ತೇ ಮಹೀತಲೇ ದೇವ ವಿನಷ್ಟಂ ಕಃ ಪ್ರವಕ್ಷ್ಯತಿ
॥ ೬ ॥

ತತ್ತ್ವಂ ನಃ ಸರ್ವಧರ್ಮಜ್ಞ ಧರ್ಮಸ್ತ್ವದ್ಭಕ್ತಿಲಕ್ಷಣಃ ।
ಯಥಾ ಯಸ್ಯ ವಿಧೀಯೇತ ತಥಾ ವರ್ಣಯ ಮೇ ಪ್ರಭೋ
॥ ೭ ॥

ಶ್ರೀಶುಕ ಉವಾಚ

ಇತ್ಥಂ ಸ್ವಭೃತ್ಯಮುಖ್ಯೇನ ಪೃಷ್ಟಃ ಸ ಭಗವಾನ್ ಹರಿಃ ।
ಪ್ರೀತಃ ಕ್ಷೇಮಾಯ ಮರ್ತ್ಯಾನಾಂ ಧರ್ಮಾನಾಹ ಸನಾತನಾನ್
॥ ೮ ॥

ಶ್ರೀಭಗವಾನುವಾಚ

ಧರ್ಮ್ಯ ಏಷ ತವ ಪ್ರಶ್ನೋ ನೈಃಶ್ರೇಯಸಕರೋ ನೃಣಾಮ್ ।
ವರ್ಣಾಶ್ರಮಾಚಾರವತಾಂ ತಮುದ್ಧವ ನಿಬೋಧ ಮೇ
॥ ೯ ॥

ಆದೌ ಕೃತಯುಗೇ ವರ್ಣೋ ನೃಣಾಂ ಹಂಸ ಇತಿ ಸ್ಮೃತಃ ।
ಕೃತಕೃತ್ಯಾಃ ಪ್ರಜಾ ಜಾತ್ಯಾ ತಸ್ಮಾತ್ ಕೃತಯುಗಂ ವಿದುಃ
॥ ೧೦ ॥

ಉದ್ಧವನು ಕೇಳಿದನು – ಕಮಲನಯನ ಶ್ರೀಕೃಷ್ಣಾ! ಈಗ ನೀನು ಧರ್ಮದ ವಿಷಯದಲ್ಲಿ ನಿರೂಪಿಸಿದೆ. ಅದರಿಂದ ನಿನ್ನ ಭಕ್ತಿಯು ಪ್ರಾಪ್ತವಾಗುತ್ತದೆ. ಅದು ಎಲ್ಲ ವರ್ಣ ಆಶ್ರಮದ ಮನುಷ್ಯರಿಗೆ ದೊರೆಯಬಲ್ಲದು. ತಮ್ಮ-ತಮ್ಮ ಧರ್ಮದ ಅನುಷ್ಠಾನವನ್ನು ಮಾಡುತ್ತಾ ಮನುಷ್ಯನು ನಿನ್ನ ಭಕ್ತಿಯನ್ನು ಸಹಜವಾಗಿ ಹೇಗೆ ಪಡೆಯಬಲ್ಲನು ಎಂಬುದನ್ನು ತಿಳಿಸುವ ಕೃಪೆ ಮಾಡಬೇಕು. ॥ ೧-೨ ॥ ಮಹಾಬಾಹು ಮಾಧವಾ! ಸ್ವಾಮೀ! ಮೊದಲು ನೀನು ಹಂಸರೂಪದಿಂದ ಅವತರಿಸಿ ಬ್ರಹ್ಮದೇವರಿಗೆ ಪರಮಧರ್ಮವನ್ನು ಉಪದೇಶಿಸಿರುವೆ. ॥ ೩ ॥ ಶತ್ರುಮರ್ದನಾ! ಅನೇಕ ಕಾಲವು ಕಳೆದುಹೋದ ಕಾರಣ ಅದು ಈಗ ಮರ್ತ್ಯ ಲೋಕದಲ್ಲಿ ಪ್ರಾಯಶಃ ಇಲ್ಲವೆಂದೇ ಆಗಿದೆ. ಏಕೆಂದರೆ, ನೀನು ಅದನ್ನು ಉಪದೇಶಿಸಿ ಬಹಳ ದಿನಗಳು ಕಳೆದುಹೋದುವು. ॥ ೪ ॥ ಅಚ್ಯುತಾ! ಈ ಪೃಥ್ವಿಯಲ್ಲಾಗಲೀ, ಸಮಸ್ತ ವೇದಗಳು ಮೂರ್ತಿಮಂತವಾಗಿ ವಿರಾಜಿಸುತ್ತಿರುವ ಚತುರ್ಮುಖ ಬ್ರಹ್ಮನ ಆ ಸಭೆಯಲ್ಲಾಗಲೀ, ನಿನ್ನ ಈ ಧರ್ಮದ ಪ್ರವಚನ, ಪ್ರವರ್ತನ ಅಥವಾ ಸಂರಕ್ಷಣ ಮಾಡಬಲ್ಲವರು ನೀನಲ್ಲದೆ ಬೇರೆ ಯಾರೂ ಇಲ್ಲ ॥ ೫ ॥ ಓ ಮಧುಸೂದನಾ! ನೀನೇ ಈ ಧರ್ಮದ ಪ್ರವರ್ತಕ, ರಕ್ಷಕ ಮತ್ತು ಉಪದೇಶಕನಾಗಿರುವೆ. ಓ ಪರಮಾತ್ಮಾ! ನೀನು ಈ ಮಹೀತಲದಿಂದ ನಿನ್ನ ಲೀಲೆಯನ್ನು ಸಂವರಣಮಾಡಿಕೊಂಡಾಗ ಈ ಧರ್ಮದ ಲೋಪವೇ ಆಗಿ ಹೋದೀತು. ಹಾಗಿರುವಾಗ ಅದನ್ನು ಯಾರು ಹೇಳುವರು? ॥ ೬ ॥ ಆದ್ದರಿಂದ ಓ ಸರ್ವಧರ್ಮದ ಜ್ಞಾತೃವಾದ ಪ್ರಭೋ! ನಿನ್ನ ಭಕ್ತಿಯು ಪ್ರಾಪ್ತವಾಗಿಸುವ, ಆ ಧರ್ಮವನ್ನು ನೀನು ವರ್ಣಿಸು. ಯಾರಿಗಾಗಿ ಅದರ ಯಾವ ವಿಧಾನವಾಗಿದೆ, ಅದನ್ನೂ ತಿಳಿಸುವವನಾಗು. ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಕ್ತಶಿರೋಮಣಿ ಉದ್ಧವನು ಈ ವಿಧವಾಗಿ ಪ್ರಶ್ನಿಸಿದಾಗ ಭಗವಾನ್ ಶ್ರೀಕೃಷ್ಣನು ಅತ್ಯಂತ ಪ್ರಸನ್ನನಾಗಿ ಪ್ರಾಣಿಗಳ ಶ್ರೇಯಸ್ಸಿಗಾಗಿ ಸನಾತನ ಧರ್ಮವನ್ನು ಉಪದೇಶಿಸಿದನು. ॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ನಿನ್ನ ಪ್ರಶ್ನೆಯು ಧರ್ಮಮಯವಾಗಿದೆ. ಏಕೆಂದರೆ, ಇದು ಎಲ್ಲ ವರ್ಣಾಶ್ರಮಧರ್ಮಿ ಮನುಷ್ಯರಿಗೆ ಪರಮ ಶ್ರೇಯಸ್ಕರ ಮೋಕ್ಷವನ್ನು ಕೊಡುವುದಾಗಿದೆ. ಮನಸ್ಸು ಕೊಟ್ಟು ಕೇಳು. ॥ ೯ ॥

ಈ ಕಲ್ಪದ ಪ್ರಾರಂಭದ ಕೃತಯುಗದಲ್ಲಿ ಎಲ್ಲ ಜನರೂ ಹುಟ್ಟಿದಂದಿನಿಂದಲೇ ಕೃತಕೃತ್ಯರಾಗಿರುತ್ತಿದ್ದರು. ಆಗ ಎಲ್ಲರ ವರ್ಣವು ಹಂಸವೆಂದೇ ಇತ್ತು. ಅದಕ್ಕಾಗಿ ಅದರ ಹೆಸರೂ ಕೂಡ ಕೃತಯುಗವೆಂದಾಯಿತು. ॥ ೧೦ ॥ ಆಗ ಕೇವಲ ಪ್ರಣವವೇ ವೇದವಾಗಿತ್ತು.

ವೇದಃ ಪ್ರಣವ ಏವಾಗ್ರೇ ಧರ್ಮೋಽಹಂ ವೃಷರೂಪಧೃಕ್ ।
ಉಪಾಸತೇ ತಪೋನಿಷ್ಠಾ ಹಂಸಂ ಮಾಂ ಮುಕ್ತಕಿಲ್ಬಿಷಾಃ
॥ ೧೧ ॥

ತ್ರೇತಾಮುಖೇ ಮಹಾಭಾಗ ಪ್ರಾಣಾನ್ಮೇ ಹೃದಯಾತ್ತ್ರಯೀ ।
ವಿದ್ಯಾ ಪ್ರಾದುರಭೂತ್ತಸ್ಯಾ ಅಹಮಾಸಂ ತ್ರಿವೃನ್ಮಖಃ
॥ ೧೨ ॥

ವಿಪ್ರಕ್ಷತ್ರಿಯವಿಟ್ಶೂದ್ರಾ ಮುಖಬಾಹೂರುಪಾದಜಾಃ ।
ವೈರಾಜಾತ್ ಪುರುಷಾಜ್ಜಾತಾ ಯ ಆತ್ಮಾಚಾರಲಕ್ಷಣಾಃ
॥ ೧೩ ॥

ಗೃಹಾಶ್ರಮೋ ಜಘನತೋ ಬ್ರಹ್ಮಚರ್ಯಂ ಹೃದೋ ಮಮ ।
ವಕ್ಷಃಸ್ಥಾನಾದ್ವನೇ ವಾಸೋ ನ್ಯಾಸಃ ಶೀರ್ಷಣಿ ಸಂಸ್ಥಿತಃ
॥ ೧೪ ॥

ವರ್ಣಾನಾಮಾಶ್ರಮಾಣಾಂ ಚ ಜನ್ಮಭೂಮ್ಯನುಸಾರಿಣೀಃ ।
ಆಸನ್ ಪ್ರಕೃತಯೋ ನೃಣಾಂ ನೀಚೈರ್ನೀಚೋತ್ತಮೋತ್ತಮಾಃ
॥ ೧೫ ॥

ಶಮೋ ದಮಸ್ತಪಃ ಶೌಚಂ ಸಂತೋಷಃ ಕ್ಷಾಂತಿರಾರ್ಜವಮ್ ।
ಮದ್ಭಕ್ತಿಶ್ಚ ದಯಾ ಸತ್ಯಂ ಬ್ರಹ್ಮಪ್ರಕೃತಯಸ್ತ್ವಮಾಃ
॥ ೧೬ ॥

ತೇಜೋ ಬಲಂ ಧೃತಿಃ ಶೌರ್ಯಂ ತಿತಿಕ್ಷೌದಾರ್ಯಮುದ್ಯಮಃ ।
ಸ್ಥೈರ್ಯಂ ಬ್ರಹ್ಮಣ್ಯತೈಶ್ವರ್ಯಂ ಕ್ಷತ್ರಪ್ರಕೃತಯಸ್ತ್ವಮಾಃ
॥ ೧೭ ॥

ಆಸ್ತಿಕ್ಯಂ ದಾನನಿಷ್ಠಾ ಚ ಅದಂಭೋ ಬ್ರಹ್ಮಸೇವನಮ್ ।
ಅತುಷ್ಟಿರರ್ಥೋಪಚಯೈರ್ವೈಶ್ಯಪ್ರಕೃತಯಸ್ತ್ವಮಾಃ
॥ ೧೮ ॥

ಶುಶ್ರೂಷಣಂ ದ್ವಿಜಗವಾಂ ದೇವಾನಾಂ ಚಾಪ್ಯಮಾಯಯಾ ।
ತತ್ರ ಲಬ್ಧೇನ ಸಂತೋಷಃ ಶೂದ್ರಪ್ರಕೃತಯಸ್ತ್ವಮಾಃ
॥ ೧೯ ॥

ಅಶೌಚಮನೃತಂ ಸ್ತೇಯಂ ನಾಸ್ತಿಕ್ಯಂ ಶುಷ್ಕವಿಗ್ರಹಃ ।
ಕಾಮಃ ಕ್ರೋಧಶ್ಚ ತರ್ಷಶ್ಚ ಸ್ವಭಾವೋಽಂತೇವಸಾಯಿನಾಮ್
॥ ೨೦ ॥

ತಪಸ್ಸು, ಶೌಚ, ದಯಾ, ಸತ್ಯ ಎಂಬ ನಾಲ್ಕು ಚರಣಗಳಿಂದ ಯುಕ್ತವಾದ ಧರ್ಮವು ವೃಷರೂಪಿಯಾಗಿ ನಾನೇ ಆಗಿದ್ದೆ. ಆಗ ನಿಷ್ಠಾಪರರೂ, ಪರಮ ತಪಸ್ವಿಗಳೂ ಆದ ಭಕ್ತಜನರು ಹಂಸ ಸ್ವರೂಪಿಯೂ, ಶುದ್ಧ ಪರಮಾತ್ಮನೂ ಆದ ನನ್ನನ್ನು ಉಪಾಸಿಸುತ್ತಿದ್ದರು. ॥ ೧೧ ॥ ಪರಮ ಭಾಗ್ಯಶಾಲಿಯಾದ ಉದ್ಧವನೇ! ಕೃತಯುಗದ ಬಳಿಕ ತ್ರೇತಾಯುಗದ ಪ್ರಾರಂಭದಲ್ಲಿ ನನ್ನ ಹೃದಯದಿಂದ ಪ್ರಾಣಗಳ ಮೂಲಕ ಋಗ್ವೇದ, ಸಾಮವೇದ, ಯಜುರ್ವೇದರೂಪೀ ತ್ರಯೀ ವಿದ್ಯೆ ಪ್ರಕಟವಾಯಿತು ಮತ್ತು ಆ ತ್ರಯೀ ವಿದ್ಯೆಯಿಂದ ಹೋತಾ, ಅಧ್ವರ್ಯು, ಉದ್ಗಾತಾ ಇವರ ಕರ್ಮ ರೂಪೀ ಮೂರು ಭೇದಗಳುಳ್ಳ ಯಜ್ಞದ ರೂಪದಲ್ಲಿ ನಾನೇ ಪ್ರಕಟನಾದೆ. ॥ ೧೨ ॥ ವಿರಾಟ್‌ಪುರುಷನ ಮುಖದಿಂದ ಬ್ರಾಹ್ಮಣರು, ಭುಜದಿಂದ ಕ್ಷತ್ರಿಯರು, ತೊಡೆಯಿಂದ ವೈಶ್ಯರು, ಚರಣಗಳಿಂದ ಶೂದ್ರರ ಉತ್ಪತ್ತಿಯಾಯಿತು. ಅವರ ಸ್ವಭಾವಕ್ಕನುಸಾರ ಹಾಗೂ ಆಚರಣಗಳಿಂದ ಅವರ ಪರಿಚಯವಾಗುತ್ತದೆ. ॥ ೧೩. ॥ ಉದ್ಧವನೇ! ವಿರಾಟ್‌ಪುರುಷನಾದ ನನ್ನ ತೊಡೆಯಿಂದ ಗೃಹಸ್ಥಾಶ್ರಮವು, ಹೃದಯದಿಂದ ಬ್ರಹ್ಮಚರ್ಯಾಶ್ರಮವೂ, ವಕ್ಷಸ್ಥಳದಿಂದ ವಾನಪ್ರಸ್ಥಾಶ್ರಮವೂ, ಮಸ್ತಕದಿಂದ ಸಂನ್ಯಾಸಾಶ್ರಮವೂ ಉಂಟಾಯಿತು. ॥ ೧೪ ॥

ಈ ವರ್ಣ ಮತ್ತು ಆಶ್ರಮಗಳ ಪುರುಷರ ಸ್ವಭಾವವೂ ಇವರ ಜನ್ಮಸ್ಥಾನಕ್ಕನುಸಾರವೇ ಉತ್ತಮ, ಮಧ್ಯಮ, ಅಧಮ ವೆಂದಾಯಿತು. ಅರ್ಥಾತ್ – ಉತ್ತಮ ಸ್ಥಾನದಿಂದ ಉತ್ಪನ್ನವಾಗುವ ವರ್ಣ ಮತ್ತು ಆಶ್ರಮಗಳ ಸ್ವಭಾವವು ಉತ್ತಮವಾಯಿತು. ಅಧಮ ಸ್ಥಾನದಿಂದ ಉತ್ಪನ್ನರಾದವರ ಸ್ವಭಾವ ಅಧಮವಾಯಿತು. ॥ ೧೫ ॥ ಶಮ, ದಮ, ತಪಸ್ಸು, ಪವಿತ್ರತೆ, ಸಂತೋಷ, ಕ್ಷಮಾಶೀಲತೆ, ಸರಳತೆ, ನನ್ನ ಭಕ್ತಿ , ದಯೆ ಮತ್ತು ಸತ್ಯ – ಇವು ಬ್ರಾಹ್ಮಣವರ್ಣದ ಸ್ವಭಾವವಾಗಿದೆ. ॥ ೧೬ ॥ ತೇಜ, ಬಲ, ಧೈರ್ಯ, ಶೌರ್ಯ, ಸಹನಶೀಲತೆ, ಉದಾರತೆ, ಉದ್ಯೋಗಶೀಲತೆ, ಸ್ಥಿರತೆ, ಬ್ರಾಹ್ಮಣಭಕ್ತಿ , ಐಶ್ವರ್ಯ – ಇವು ಕ್ಷತ್ರಿಯ ಧರ್ಮದ ಸ್ವಾಭಾವಿಕ ಸ್ವಭಾವವಾಗಿವೆ. ॥ ೧೭॥ ಆಸ್ತಿಕತೆ, ದಾನಶೀಲತೆ, ದಂಭಹೀನತೆ, ಬ್ರಾಹ್ಮಣರ ಸೇವೆಮಾಡುವುದು ಮತ್ತು ಧನಸಂಚಯದಿಂದ ಸಂತುಷ್ಟನಾಗುವುದು – ಇವು ವೈಶ್ಯವರ್ಣದ ಸ್ವಭಾವವಾಗಿದೆ. ॥ ೧೮ ॥ ಬ್ರಾಹ್ಮಣ, ಗೋವು ಮತ್ತು ದೇವತೆಗಳ ಸೇವೆಯನ್ನು ನಿಷ್ಕಪಟವಾಗಿ ಮಾಡುವುದು ಹಾಗೂ ಆದರಿಂದ ಏನು ಸಿಗುವುದೋ ಅದರಲ್ಲಿ ಸಂತುಷ್ಟನಾಗಿರುವುದು – ಇವು ಶೂದ್ರವರ್ಣದ ಸ್ವಭಾವವಾಗಿದೆ. ॥ ೧೯ ॥ ಅಪವಿತ್ರತೆ, ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ಈಶ್ವರ ಮತ್ತು ಪರಲೋಕದ ಪರಿವೆ ಇಲ್ಲದಿರುವುದು, ಸುಳ್ಳು-ಪಳ್ಳು ಜಗಳ ಕಾದುವುದು, ಕಾಮ, ಕ್ರೋಧ, ತೃಷ್ಣೆಯ ವಶವಾಗುವುದು – ಇವು ಅಂತ್ಯಜರ ಸ್ವಭಾವವಾಗಿದೆ. ॥ ೨೦ ॥

ಅಹಿಂಸಾ ಸತ್ಯಮಸ್ತೇಯಮಕಾಮಕ್ರೋಧಲೋಭತಾ ।
ಭೂತಪ್ರಿಯಹಿತೇಹಾ ಚ ಧರ್ಮೋಽಯಂ ಸಾರ್ವವರ್ಣಿಕಃ
॥ ೨೧ ॥

ದ್ವಿತೀಯಂ ಪ್ರಾಪ್ಯಾನುಪೂರ್ವ್ಯಾಜ್ಜನ್ಮೋಪನಯನಂ ದ್ವಿಜಃ ।
ವಸನ್ ಗುರುಕುಲೇ ದಾಂತೋ ಬ್ರಹ್ಮಾಧೀಯೀತ ಚಾಹುತಃ
॥ ೨೨ ॥

ಮೇಖಲಾಜಿನದಂಡಾಕ್ಷಬ್ರಹ್ಮಸೂತ್ರಕಮಂಡಲೂನ್ ।
ಜಟಿಲೋಽಧೌತದದ್ವಾಸೋಽರಕ್ತಪೀಠಃ ಕುಶಾನ್ ದಧತ್
॥ ೨೩ ॥

ಸ್ನಾನಭೋಜನಹೋಮೇಷು ಜಪೋಚ್ಚಾರೇ ಚ ವಾಗ್ಯತಃ ।
ನಚ್ಛಿಂದ್ಯಾನ್ನಖರೋಮಾಣಿ ಕಕ್ಷೋಪಸ್ಥಗತಾನ್ಯಪಿ
॥ ೨೪ ॥

ರೇತೋ ನಾವಕಿರೇಜ್ಜಾತು ಬ್ರಹ್ಮವ್ರತಧರಃ ಸ್ವಯಮ್ ।
ಅವಕೀರ್ಣೇಽವಗಾಹ್ಯಾಪ್ಸು ಯತಾಸುಸ್ತ್ರಿಪದೀಂ ಜಪೇತ್
॥ ೨೫ ॥

ಅಗ್ನ್ಯರ್ಕಾಚಾರ್ಯಗೋವಿಪ್ರಗುರುವೃದ್ಧಸುರಾನ್ಶುಚಿಃ ।
ಸಮಾಹಿತ ಉಪಾಸೀತ ಸಂಧ್ಯೇ ಚ ಯತವಾಗ್ಜಪನ್
॥ ೨೬ ॥

ಆಚಾರ್ಯಂ ಮಾಂ ವಿಜಾನೀಯಾನ್ನಾವಮನ್ಯೇತ ಕರ್ಹಿಚಿತ್ ।
ನ ಮರ್ತ್ಯಬುದ್ಧ್ಯಾಸೂಯೇತ ಸರ್ವದೇವಮಯೋ ಗುರುಃ
॥ ೨೭ ॥

ಸಾಯಂ ಪ್ರಾತರುಪಾನೀಯ ಭೈಕ್ಷ್ಯಂ ತಸ್ಮೈ ನಿವೇದಯೇತ್ ।
ಯಚ್ಚಾನ್ಯದಪ್ಯನುಜ್ಞಾತಮುಪಯುಂಜೀತ ಸಂಯತಃ
॥ ೨೮ ॥

ಶುಶ್ರೂಷಮಾಣ ಆಚಾರ್ಯಂ ಸದೋಪಾಸೀತ ನೀಚವತ್ ।
ಯಾನಶಯ್ಯಾಸನಸ್ಥಾನೈರ್ನಾತಿದೂರೇ ಕೃತಾಂಜಲಿಃ
॥ ೨೯ ॥

ಉದ್ಧವನೇ ! ನಾಲ್ಕೂ ವರ್ಣಗಳಿಗೆ ಮತ್ತು ನಾಲ್ಕೂ ಆಶ್ರಮಗಳಿಗೆ – ಮನ, ವಾಣಿ ಮತ್ತು ಶರೀರದಿಂದ ಯಾರನ್ನೂ ಹಿಂಸಿಸದಿರುವುದು, ಸತ್ಯದಲ್ಲಿ ದೃಢವಾಗಿರುವುದು, ಕಳ್ಳತನ ಮಾಡದಿರುವುದು, ಕಾಮ, ಕ್ರೋಧ, ಲೋಭದಿಂದ ಬದುಕುಳಿದು, ಸಮಸ್ತ ಪ್ರಾಣಿಗಳ ಪ್ರಸನ್ನತೆ, ಅವರ ಒಳಿತು ಆಗುವಂತಹ ಕೆಲಸಗಳನ್ನೇ ಮಾಡುವುದು – ಇವು ಸಾಧಾರಣ ಧರ್ಮಗಳಾಗಿವೆ. ॥ ೨೧ ॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರು ಗರ್ಭಾಧಾನಾದಿ ಸಂಸ್ಕಾರಗಳ ಕ್ರಮದಿಂದ ಉಪನಯನ ಸಂಸ್ಕಾರರೂಪೀ ದ್ವಿತೀಯ ಜನ್ಮವನ್ನು ಪಡೆದು ಗುರುಕುಲದಲ್ಲಿ ಇದ್ದು, ತಮ್ಮ ಇಂದ್ರಿಯಗಳನ್ನು ವಶದಲ್ಲಿರಿಸಿ ಕೊಳ್ಳಬೇಕು. ಆಚಾರ್ಯರಿಂದ ವೇದಾಧ್ಯಯನ ಗೈದು, ಅದರ ಅರ್ಥವನ್ನೂ ವಿಚಾರಮಾಡಬೇಕು. ॥ ೨೨ ॥ ಮೇಖಲೆ, ಮೃಗಚರ್ಮ, ವರ್ಣಕ್ಕನುಸಾರ ದಂಡ, ರುದ್ರಾಕ್ಷದ ಮಾಲೆ, ಯಜ್ಞೋಪವೀತ ಮತ್ತು ಕಮಂಡಲು ಧರಿಸಬೇಕು. ತಲೆಯಲ್ಲಿ ಶಿಖೆ ಇರಿಸಿಕೊಳ್ಳಬೇಕು. ದಂತಧಾವನ ಮತ್ತು ಬಟ್ಟೆ ತೊಳೆಯುವ ಹವ್ಯಾಸವಿರಬಾರದು. ಬಣ್ಣ-ಬಣ್ಣದ ಆಸನದಲ್ಲಿ ಕುಳಿತುಕೊಳ್ಳಬಾರದು. ಕುಶವನ್ನು ಧರಿಸಿಕೊಳ್ಳಬೇಕು. ॥ ೨೩ ॥ ಸ್ನಾನ, ಭೋಜನ, ಹವನ, ಜಪ ಹಾಗೂ ಮಲ-ಮೂತ್ರದ ಸಮಯದಲ್ಲಿ ಮೌನವಾಗಿರಬೇಕು. ಕಕ್ಷ ಮತ್ತು ಗುಹ್ಯೇಂದ್ರಿಯದ ಕೂದಲುಗಳನ್ನು ಮತ್ತು ಉಗುರುಗಳನ್ನು ಎಂದೂ ಕತ್ತರಿಸಬಾರದು.॥ ೨೪ ॥ ಪೂರ್ಣರೂಪದಿಂದ ಬ್ರಹ್ಮಚರ್ಯವನ್ನು ಪಾಲಿಸಬೇಕು. ಸ್ವತಃ ವೀರ್ಯಪಾತವನ್ನು ಎಂದೂ ಮಾಡಿಕೊಳ್ಳಬಾರದು. ಸ್ವಪ್ನಾದಿಗಳಲ್ಲಿ ವೀರ್ಯಸ್ಖಲನವಾದರೆ ನೀರಿನಲ್ಲಿ ಸ್ನಾನಮಾಡಿ, ಪ್ರಾಣಾಯಾಮ ಮಾಡಿ, ಗಾಯತ್ರಿಯನ್ನು ಜಪಿಸಬೇಕು. ॥ ೨೫ ॥ ಬ್ರಹ್ಮಚಾರಿಯು ಪವಿತ್ರತೆಯಿಂದ ಏಕಾಗ್ರಚಿತ್ತನಾಗಿ ಅಗ್ನಿ, ಸೂರ್ಯ, ಆಚಾರ್ಯ, ಗೋವು, ಬ್ರಾಹ್ಮಣ, ಗುರು, ಹಿರಿಯರು ಹಾಗೂ ದೇವತೆಗಳನ್ನು ಉಪಾಸಿಸಬೇಕು. ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮೌನವಾಗಿದ್ದು ಸಂಧ್ಯೋ ಪಾಸನೆ ಮಾಡಿ ಗಾಯತ್ರಿಜಪವನ್ನು ಮಾಡಬೇಕು. ॥ ೨೬ ॥ ಆಚಾರ್ಯರನ್ನು ನನ್ನ ಸ್ವರೂಪವೆಂದೇ ತಿಳಿದು, ಎಂದೂ ಅವರ ತಿರಸ್ಕಾರ ಮಾಡಬಾರದು. ಅವರನ್ನು ಸಾಮಾನ್ಯ ಮನುಷ್ಯನೆಂದು ತಿಳಿದು ದೋಷದೃಷ್ಟಿ ಇರಿಸಬಾರದು. ಏಕೆಂದರೆ ಗುರುವು ಸರ್ವದೇವಮಯನಾಗಿರುವನು. ॥ ೨೭ ॥ ಸಾಯಂಕಾಲ ಮತ್ತು ಪ್ರಾತಃಕಾಲ ಎರಡೂ ಹೊತ್ತು ಭಿಕ್ಷೆಯಲ್ಲಿ ದೊರೆತುದನ್ನು ತಂದು ಗುರುಗಳ ಮುಂದಿರಿಸಿ, ಇನ್ನೇನಾದರೂ ಇದ್ದರೂ ಅದನ್ನೂ ಗುರುಗಳಿಗೆ ನಿವೇದಿಸಬೇಕು. ಅವರ ಅಪ್ಪಣೆಯ ಬಳಿಕವೇ ಅದನ್ನು ಉಪಯೋಗಿಸಬೇಕು. ॥ ೨೮ ॥ ಆಚಾರ್ಯರು ನಡೆದು ಹೋಗುತ್ತಿದ್ದರೆ, ಅವರ ಹಿಂದೆ-ಹಿಂದೆ ನಡೆಯಬೇಕು. ಅವರು ಮಲಗಿದ ಬಳಿಕವೇ ತುಂಬಾ ಎಚ್ಚರಿಕೆಯಿಂದ ಅವರಿಂದ ಸ್ವಲ್ಪ ದೂರದಲ್ಲಿ ಮಲಗಬೇಕು. ಅವರು ಬಳಲಿದ್ದರೆ ಹತ್ತಿರ ಕುಳಿತು ಪಾದಸೇವೆ (ಕಾಲು ಒತ್ತುವುದು) ಮಾಡಬೇಕು. ಅವರು ಕುಳಿತಿದ್ದರೆ ಅವರ ಆದೇಶವನ್ನು ನಿರೀಕ್ಷಿಸುತ್ತಾ ಕೈ ಜೋಡಿಸಿಕೊಂಡು ಹತ್ತಿರದಲ್ಲೇ ನಿಂತಿರಬೇಕು. ಹೀಗೆ ಅತ್ಯಂತ ನಮ್ರನಾಗಿ ಸೇವೆ-ಶುಶ್ರೂಷೆಗಳಿಂದ ಸದಾಕಾಲ ಆಚಾರ್ಯರ ಆಜ್ಞೆಯಲ್ಲಿ ತತ್ಪರನಾಗಿರಬೇಕು. ॥ ೨೯ ॥

ಏವಂವೃತ್ತೋ ಗುರುಕುಲೇ ವಸೇದ್ಭೋಗವಿವರ್ಜಿತಃ ।
ವಿದ್ಯಾ ಸಮಾಪ್ಯತೇ ಯಾವದ್ಬಿಭ್ರದ್ವ್ರತಮಖಂಡಿತಮ್
॥ ೩೦ ॥

ವಿದ್ಯಾಧ್ಯಯನವು ಸಮಾಪ್ತವಾಗುವ ತನಕ ಎಲ್ಲ ರೀತಿಯ ಭೋಗಗಳಿಂದ ದೂರವಿದ್ದು ಇದೇ ಪ್ರಕಾರ ಗುರುಕುಲದಲ್ಲಿ ವಾಸಿಸಬೇಕು. ಎಂದಿಗೂ ತನ್ನ ಬ್ರಹ್ಮಚರ್ಯವನ್ನು ಭಂಗಗೊಳಿಸ ಬಾರದು. ॥ ೩೦ ॥

ಯದ್ಯಸೌ ಛಂದಸಾಂ ಲೋಕಮಾರೋಕ್ಷ್ಯನ್ ಬ್ರಹ್ಮವಿಷ್ಟಪಮ್ ।
ಗುರವೇ ವಿನ್ಯಸೇದ್ದೇಹಂ ಸ್ವಾಧ್ಯಾಯಾರ್ಥಂ ಬೃಹದ್ವ್ರತಃ
॥ ೩೧ ॥

ಬ್ರಹ್ಮಚಾರಿಯು ಮೂರ್ತಿಮಂತ ವೇದಗಳ ನಿವಾಸಸ್ಥಾನವಾದ ಬ್ರಹ್ಮಲೋಕಕ್ಕೆ ಹೋಗಲು ಬಯಸಿದರೆ, ಅವನು ಆಜೀವನ ಬ್ರಹ್ಮಚರ್ಯವ್ರತವನ್ನು ಕೈಗೊಳ್ಳಬೇಕು ಹಾಗೂ ವೇದಗಳ ಸ್ವಾಧ್ಯಾಯಕ್ಕಾಗಿ ತನ್ನ ಇಡೀ ಜೀವನವನ್ನು ಆಚಾರ್ಯರ ಸೇವೆಯಲ್ಲೇ ಸಮರ್ಪಿಸಿ ಕೊಳ್ಳಬೇಕು. ॥ ೩೧ ॥ ಇಂತಹ ಬ್ರಹ್ಮಚಾರಿಯು ನಿಜವಾಗಿಯೂ ಬ್ರಹ್ಮತೇಜದಿಂದ ಸಂಪನ್ನನಾಗಿ, ಅವನ ಎಲ್ಲ ಪಾಪಗಳು ನಾಶವಾಗಿ ಹೋಗುತ್ತವೆ. ಅವನು ಅಗ್ನಿ, ಗುರು, ತನ್ನ ಶರೀರ ಮತ್ತು ಸಮಸ್ತ ಪ್ರಾಣಿಗಳಲ್ಲಿ ನನ್ನನ್ನೇ ಉಪಾಸಿಸಬೇಕು. ನನ್ನ ಹಾಗೂ ಎಲ್ಲರ ಹೃದಯದಲ್ಲಿ ಒಂದೇ ಪರಮಾತ್ಮನು ವಿರಾಜಮಾನನಾಗಿದ್ದಾನೆ ಎಂದು ಭಾವಿಸಬೇಕು. ॥ ೩೨ ॥

ಅಗ್ನೌ ಗುರಾವಾತ್ಮನಿ ಚ ಸರ್ವಭೂತೇಷು ಮಾಂ ಪರಮ್ ।
ಅಪೃಥಗ್ಧೀರುಪಾಸೀತ ಬ್ರಹ್ಮವರ್ಚಸ್ಯಕಲ್ಮಷಃ
॥ ೩೨ ॥

ಸ್ತ್ರೀಣಾಂ ನಿರೀಕ್ಷಣಸ್ಪರ್ಶಸಂಲಾಪಕ್ಷ್ವೇಲನಾದಿಕಮ್ ।
ಪ್ರಾಣಿನೋ ಮಿಥುನೀಭೂತಾನಗೃಹಸ್ಥೋಽಗ್ರತಸ್ತ್ಯಜೇತ್
॥ ೩೩ ॥

ಬ್ರಹ್ಮಚಾರೀ, ವಾನಪ್ರಸ್ಥ, ಸಂನ್ಯಾಸಿಗಳು ಸ್ತ್ರೀಯರನ್ನು ನೋಡುವುದು, ಸ್ಪರ್ಶಿಸುವುದು, ಅವರೊಂದಿಗೆ ಮಾತು-ಕತೆಯಾಡುವುದು, ಹಾಸ್ಯ-ವಿನೋದ ಮುಂತಾದವುಗಳಿಂದ ದೂರವುಳಿಯಬೇಕು. ಮೈಥುನದಲ್ಲಿ ತೊಡಗಿರುವ ಪ್ರಾಣಿಗಳ ಕಡೆಗೆ ಕಣ್ಣೆತ್ತಿಯೂ ನೋಡಬಾರದು. ॥ ೩೩ ॥ ಪ್ರಿಯ ಉದ್ಧವನೇ! ಶೌಚ, ಆಚಮನ, ಸ್ನಾನ, ಸಂಧ್ಯೋಪಾಸನೆ, ಸರಳತೆ, ತೀರ್ಥಸೇವನೆ, ಜಪ, ಸಮಸ್ತ ಪ್ರಾಣಿಗಳಲ್ಲಿ ನನ್ನನ್ನೇ ನೋಡುವುದು, ಮನ, ವಾಣೀ, ಶರೀರದ ಸಂಯಮ – ಇವು ಬ್ರಹ್ಮಚಾರೀ, ಗೃಹಸ್ಥ ವಾನಪ್ರಸ್ಥ ಸಂನ್ಯಾಸಿ ಎಲ್ಲರಿಗಾಗಿ ಒಂದೇ ನಿಯಮಗಳಾಗಿವೆ. ಅಸ್ಪೃಶ್ಯರನ್ನು ಮುಟ್ಟದಿರುವುದು, ಅಭಕ್ಷ ವಸ್ತುಗಳನ್ನು ತಿನ್ನದಿರುವುದು, ಯಾರೊಂದಿಗೆ ಮಾತಾಡಬಾರದೋ ಅವರೊಂದಿಗೆ ಮಾತಾಡದೇ ಇರುವುದು, ಈ ನಿಯಮಗಳೂ ಕೂಡ ಎಲ್ಲರಿಗಾಗಿಯೇ ಇವೆ. ॥ ೩೪-೩೫ ॥ ನೈಷ್ಠಿಕ ಬ್ರಹ್ಮಚಾರೀ ಬ್ರಾಹ್ಮಣನು ಈ ನಿಯಮಗಳನ್ನು ಪಾಲಿಸುವುದರಿಂದ ಅಗ್ನಿಯಂತೆ ತೇಜಸ್ವೀಯಾಗುತ್ತಾನೆ. ತೀವ್ರ ತಪಸ್ಸಿನ ಕಾರಣ ಅವನ ಕರ್ಮ-ಸಂಸ್ಕಾರಗಳು ಭಸ್ಮವಾಗಿ ಹೋಗುತ್ತವೆ. ಅಂತಃಕರಣ ಶುದ್ಧವಾಗುತ್ತದೆ. ಅವನು ನನ್ನ ಭಕ್ತನಾಗಿ ನನ್ನನ್ನೇ ಪಡೆದುಕೊಳ್ಳುತ್ತಾನೆ. ॥ ೩೬ ॥

ಶೌಚಮಾಚಮನಂ ಸ್ನಾನಂ ಸಂಧ್ಯೋಪಾಸನಮಾರ್ಜವಮ್ ।
ತೀರ್ಥಸೇವಾ ಜಪೋಽಸ್ಪೃಶ್ಯಾಭಕ್ಷ್ಯಸಂಭಾಷ್ಯವರ್ಜನಮ್
॥ ೩೪ ॥

ಸರ್ವಾಶ್ರಮಪ್ರಯುಕ್ತೋಽಯಂ ನಿಯಮಃ ಕುಲನಂದನ ।
ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯಸಂಯಮಃ
॥ ೩೫ ॥

ಏವಂ ಬೃಹದ್ವ್ರತಧರೋ ಬ್ರಾಹ್ಮಣೋಽಗ್ನಿರಿವ ಜ್ವಲನ್ ।
ಮದ್ಭಕ್ತಸ್ತೀವ್ರತಪಸಾ ದಗ್ಧಕರ್ಮಾಶಯೋಽಮಲಃ
॥ ೩೬ ॥

ಪ್ರಿಯ ಉದ್ಧವನೇ! ಬ್ರಹ್ಮಚಾರಿಯು ಗೃಹಸ್ಥಾಶ್ರಮದಲ್ಲಿ ಪ್ರವೇಶಿಸಲು ಬಯಸಿದರೆ ವಿಧಿಪೂರ್ವಕ ವೇದಾಧ್ಯಯನವನ್ನು ಮುಗಿಸಿ, ಆಚಾರ್ಯರಿಗೆ ದಕ್ಷಿಣೆಯನ್ನಿತ್ತು, ಅವರ ಅನುಮತಿ ಪಡೆದು ಸಮಾವರ್ತನ ಸಂಸ್ಕಾರ ಮಾಡಿಕೊಂಡು, ಸ್ನಾತಕನಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು. ॥ ೩೭ ॥ ಬ್ರಹ್ಮಚಾರಿಯು ಬ್ರಹ್ಮಚರ್ಯಾಶ್ರಮದ ಬಳಿಕ ಬೇಕಾದರೆ ಗೃಹಸ್ಥ ಅಥವಾ ವಾನಪ್ರಸ್ಥ ಆಶ್ರಮವನ್ನು ಪ್ರವೇಶಿಸಲಿ. ಬ್ರಾಹ್ಮಣನಾಗಿದ್ದರೆ ಸಂನ್ಯಾಸವನ್ನು ಸ್ವೀಕರಿಸಲಿ, ಅಥವಾ ಕ್ರಮವಾಗಿ ಒಂದು ಆಶ್ರಮದಿಂದ ಮತ್ತೊಂದು ಆಶ್ರಮವನ್ನೂ ಪ್ರವೇಶಿಸಲಿ. ನನ್ನ ಪರಾಯಣನಾದ ಭಕ್ತನು ಎಂದೂ ಆಶ್ರಮವಿಲ್ಲದೆ ಇರಬಾರದು. ಮನಬಂದಂತೆ ಆಶ್ರಮ ಬದಲಾವಣೆ ಮಾಡುವ ಉಚ್ಛೃಂಖಲ ಪ್ರವೃತ್ತಿಯೂ ಸಲ್ಲದು. ॥ ೩೮ ॥

ಅಥಾನಂತರಮಾವೇಕ್ಷ್ಯನ್ ಯಥಾ ಜಿಜ್ಞಾಸಿತಾಗಮಃ ।
ಗುರವೇ ದಕ್ಷಿಣಾಂ ದತ್ತ್ವಾ ಸ್ನಾಯಾದ್ಗುರ್ವನುಮೋದಿತಃ
॥ ೩೭ ॥

ಗೃಹಂ ವನಂ ವೋಪವಿಶೇತ್ ಪ್ರವ್ರಜೇದ್ವಾದ್ವಿಜೋತ್ತಮಃ ।
ಆಶ್ರಮಾದಾಶ್ರಮಂ ಗಚ್ಛೇನ್ನಾನ್ಯಥಾ ಮತ್ಪರಶ್ಚರೇತ್
॥ ೩೮ ॥

ಗೃಹಾರ್ಥೀ ಸದೃಶೀಂ ಭಾರ್ಯಾಮುದ್ವಹೇದಜುಗುಪ್ಸಿತಾಮ್ ।
ಯವೀಯಸೀಂ ತು ವಯಸಾ ತಾಂ ಸವರ್ಣಾಮನುಕ್ರಮಾತ್
॥ ೩೯ ॥

ಪ್ರಿಯ ಉದ್ಧವನೇ ! ಬ್ರಹ್ಮಚಾರಿಯು ಬ್ರಹ್ಮಚರ್ಯಾಶ್ರಮದ ಬಳಿಕ ಗೃಹಸ್ಥಾಶ್ರಮವನ್ನು ಸ್ವೀಕರಿಸುವುದಿದ್ದರೆ, ತನಗೆ ಅನುರೂಪ ಹಾಗೂ ಶಾಸ್ತ್ರೋಕ್ತ ಲಕ್ಷಣಗಳಿಂದ ಕೂಡಿದ ಕುಲೀನ ಕನ್ಯೆಯೊಂದಿಗೆ ವಿವಾಹಿತನಾಗಬೇಕು. ಅವಳು ತನ್ನ ವಯಸ್ಸಿನಿಂದ ಕಿರಿಯವಳು ಮತ್ತು ತನ್ನ ವರ್ಣದವಳೇ ಆಗಿರಬೇಕು. ॥ ೩೯ ॥

ಇಜ್ಯಾಧ್ಯಯನದಾನಾನಿ ಸರ್ವೇಷಾಂ ಚ ದ್ವಿಜನ್ಮನಾಮ್ ।
ಪ್ರತಿಗ್ರಹೋಽಧ್ಯಾಪನಂ ಚ ಬ್ರಾಹ್ಮಣಸ್ಯೈವ ಯಾಜನಮ್
॥ ೪೦ ॥

ಯಜ್ಞ-ಯಾಗಾದಿ ಮಾಡುವುದು, ಅಧ್ಯಯನ, ದಾನಮಾಡುವ ಅಧಿಕಾರ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಸಮಾನವಾಗಿ ಇದೆ. ಆದರೆ ದಾನ ಪಡೆಯುವುದು, ಕಲಿಸುವುದು, ಯಜ್ಞಮಾಡಿಸುವ ಅಧಿಕಾರ ಕೇವಲ ಬ್ರಾಹ್ಮಣರಿಗೇ ಇದೆ. ॥ ೪೦ ॥

ಪ್ರತಿಗ್ರಹಂ ಮನ್ಯಮಾನಸ್ತಪಸ್ತೇಜೋಯಶೋನುದಮ್ ।
ಅನ್ಯಾಭ್ಯಾಮೇವ ಜೀವೇತ ಶಿಲೈರ್ವಾ ದೋಷದೃಕ್ ತಯೋಃ
॥ ೪೧ ॥

ಬ್ರಾಹ್ಮಣನು ಈ ಮೂರು ವೃತ್ತಿಗಳಲ್ಲಿ ಪ್ರತಿಗ್ರಹ ಅರ್ಥಾತ್ – ದಾನ ಪಡೆಯುವ ವೃತ್ತಿಯು ತಪಸ್ಸು, ತೇಜ, ಕೀರ್ತಿ ಇವುಗಳನ್ನು ನಾಶಮಾಡುವುದೆಂದು ತಿಳಿದಿದ್ದರೆ, ಅವನು ಕಲಿಸುವುದು, ಯಜ್ಞಮಾಡಿಸುವ ಮೂಲಕವೇ ತನ್ನ ಜೀವನನಿರ್ವಾಹ ಮಾಡಲಿ. ಈ ಎರಡರಲ್ಲಿಯೂ ದೋಷದೃಷ್ಟಿ – ಪರಾವಲಂಬನೆ, ದೀನತೆ ಮುಂತಾದ ದೋಷಗಳು ಕಂಡುಬಂದರೆ, ಪೈರು ಕತ್ತರಿಸಿದ ಬಳಿಕ ಹೊಲದಲ್ಲಿ ಬಿದ್ದಿರುವ ಧಾನ್ಯವನ್ನು ಹೆಕ್ಕಿತಂದು ತನ್ನ ಜೀವನನಿರ್ವಾಹ ಮಾಡಲಿ. ॥ ೪೧ ॥

ಬ್ರಾಹ್ಮಣಸ್ಯ ಹಿ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ।
ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನಂತಸುಖಾಯ ಚ
॥ ೪೨ ॥

ಉದ್ಧವನೇ ! ಬ್ರಾಹ್ಮಣನ ಶರೀರವು ಅತ್ಯಂತ ದುರ್ಲಭವಾಗಿದೆ. ಇದು ತುಚ್ಛವಾದ ಭೋಗಗಳನ್ನು ಭೋಗಿಸಲಿಕ್ಕಾಗಿ ದೊರೆತುದಲ್ಲ. ಜೀವನವಿಡೀ ಕಠಿಣ ತಪಸ್ಸನ್ನಾಚರಿಸುತ್ತಾ ಕೊನೆಗೆ ಅನಂತ ಆನಂದಸ್ವರೂಪೀ ಮೋಕ್ಷವನ್ನು ಪಡೆಯಲೆಂದೇ ಇದೆ. ॥ ೪೨ ॥

ಶಿಲೋಂಛವೃತ್ತ್ಯಾ ಪರಿತುಷ್ಟಚಿತ್ತೋ
ಧರ್ಮಂ ಮಹಾಂತಂ ವಿರಜಂ ಜುಷಾಣಃ ।
ಮಯ್ಯರ್ಪಿತಾತ್ಮಾ ಗೃಹ ಏವ ತಿಷ್ಠ-
ನ್ನಾತಿಪ್ರಸಕ್ತಃ ಸಮುಪೈತಿ ಶಾಂತಿಮ್ ॥ ೪೩ ॥

ಬ್ರಾಹ್ಮಣನಾದವನು ಮನೆಯಲ್ಲೇ ಇದ್ದು ತನ್ನ ಮಹಾನ್ ಧರ್ಮವನ್ನು ನಿಷ್ಕಾಮವಾಗಿ ಆಚರಿಸುತ್ತಾ , ಹೊಲದಲ್ಲಿ ಬಿದ್ದಿರುವ ಕಾಳುಗಳನ್ನು ಅಥವಾ ಮಂಡಿಯಲ್ಲಿ ಬಿದ್ದಿರುವ ಕಾಳುಗಳನ್ನು ಹೆಕ್ಕಿತಂದು ಸಂತೋಷವಾಗಿ ತನ್ನ ಜೀವನ ನಿರ್ವಾಹ ಮಾಡುವವನು, ಜೊತೆಗೆ ತನ್ನ ಶರೀರ, ಪ್ರಾಣ, ಅಂತಃಕರಣ ಮತ್ತು ಆತ್ಮವನ್ನು ನನ್ನಲ್ಲಿ ಸಮರ್ಪಿಸುವವನು, ಎಲ್ಲಿಯೂ ಆಸಕ್ತಿಯನ್ನಿಡದವನು ಸಂನ್ಯಾಸ ಸ್ವೀಕರಿಸದೆಯೇ ಪರಮ ಶಾಂತಿ ಸ್ವರೂಪೀ ಪರಮಪದವನ್ನು ಪಡೆದುಕೊಳ್ಳುತ್ತಾನೆ. ॥ ೪೩.॥

ಸಮುದ್ಧರಂತಿ ಯೇ ವಿಪ್ರಂ ಸೀದಂತಂ ಮತ್ಪರಾಯಣಮ್ ।
ತಾನುದ್ಧರಿಷ್ಯೇ ನಚಿರಾದಾಪದ್ಭ್ಯೋ ನೌರಿವಾರ್ಣವಾತ್
॥ ೪೪ ॥

ವಿಪತ್ತಿ ನಲ್ಲಿ ಬಿದ್ದು ಕಷ್ಟಪಡುವ ನನ್ನ ಭಕ್ತ ಬ್ರಾಹ್ಮಣನನ್ನು ವಿಪತ್ತಿನಿಂದ ಕಾಪಾಡುವವನನ್ನು ನಾನು ಶೀಘ್ರವಾಗಿ, ಸಮುದ್ರದಲ್ಲಿ ಮುಳುಗುವ ಪ್ರಾಣಿಯನ್ನು ದೋಣಿಯು ಪಾರಾಗಿಸುವಂತೆ, ಅವನನ್ನು ಎಲ್ಲ ವಿಪತ್ತುಗಳಿಂದ ಪಾರಾಗಿಸುತ್ತೇನೆ. ॥ ೪೪ ॥

ಸರ್ವಾಃ ಸಮುದ್ಧರೇದ್ರಾಜಾ ಪಿತೇವ ವ್ಯಸನಾತ್ಪ್ರಜಾಃ ।
ಆತ್ಮಾನಮಾತ್ಮನಾ ಧೀರೋ ಯಥಾ ಗಜಪತಿರ್ಗಜಾನ್
॥ ೪೫ ॥

ರಾಜನಾದವನು ತಂದೆಯಂತೆ, ಗಜರಾಜನು ಬೇರೆ ಆನೆಗಳನ್ನು ರಕ್ಷಿಸುವಂತೆ ಎಲ್ಲ ಪ್ರಜೆಗಳನ್ನು ಕಷ್ಟದಿಂದ ಉದ್ಧಾರಗೈದು, ಅವರನ್ನು ರಕ್ಷಿಸಬೇಕು. ಧೀರನಾಗಿ ಸ್ವಯಂ ತಾನೇ-ತನ್ನನ್ನು ಉದ್ಧರಿಸಿಕೊಳ್ಳಬೇಕು. ॥ ೪೫ ॥

ಏವಂವಿಧೋ ನರಪತಿರ್ವಿಮಾನೇನಾರ್ಕವರ್ಚಸಾ ।
ವಿಧೂಯೇಹಾಶುಭಂ ಕೃತ್ಸ್ನಮಿಂದ್ರೇಣ ಸಹ ಮೋದತೇ
॥ ೪೬ ॥

ಈ ವಿಧವಾಗಿ ಪ್ರಜೆಗಳನ್ನು ರಕ್ಷಿಸುವವನು ಎಲ್ಲ ಪಾಪಗಳಿಂದ ಮುಕ್ತನಾಗಿ ಅಂತ್ಯದಲ್ಲಿ ಸೂರ್ಯನಂತಿರುವ ತೇಜಸ್ವೀ ವಿಮಾನದಲ್ಲಿ ಆರೂಢನಾಗಿ ಸ್ವರ್ಗಲೋಕಕ್ಕೆ ಹೋಗುತ್ತಾನೆ ಮತ್ತು ಇಂದ್ರನೊಡನೆ ಸುಖವನ್ನು ಭೋಗಿಸುತ್ತಾನೆ. ॥ ೪೬ ॥

ಸೀದನ್ವಿಪ್ರೋ ವಣಿಗ್ವೃತ್ತ್ಯಾ ಪಣ್ಯೈರೇವಾಪದಂ ತರೇತ್ ।
ಖಡ್ಗೇನ ವಾऽऽಪದಾಕ್ರಾಂತೋ ನ ಶ್ವವೃತ್ತ್ಯಾ ಕಥಂಚನ
॥ ೪೭ ॥

ಬ್ರಾಹ್ಮಣನಾದವನು ಅಧ್ಯಾಪನ ಅಥವಾ ಯಜ್ಞ-ಯಾಗಾದಿಗಳಿಂದ ಜೀವನ ನಿರ್ವಾಹ ನಡೆಯದಿದ್ದರೆ, ವೈಶ್ಯವೃತ್ತಿಯನ್ನು ಅವಲಂಬಿಸಬೇಕು. ಅದೂ ಕೂಡ ವಿಪತ್ತು ದೂರವಾಗುವವರೆಗೆ ಮಾತ್ರ. ಇನ್ನೂ ದೊಡ್ಡ ಆಪತ್ತನ್ನು ಇದಿರಿಸಬೇಕಾದಾಗ ಖಡ್ಗವನ್ನೆತ್ತಿ ಕ್ಷತ್ರಿಯ ವೃತ್ತಿಯಿಂದಲೂ ತನ್ನ ನಿರ್ವಾಹಮಾಡಿಕೊಳ್ಳಬಹುದು. ಆದರೆ ಯಾವುದೇ ಪರಿಸ್ಥಿತಿ ಯಲ್ಲಿಯೂ 'ಶ್ವಾನವೃತ್ತಿ' ಅಂದರೆ ನೀಚರ ಸೇವೆ ಎಂದೂ ಮಾಡಬಾರದು. ॥ ೪೭ ॥ ಹೀಗೆಯೇ ಕ್ಷತ್ರಿಯನಾದವನು ಪ್ರಜಾಪಾಲನಾದಿಗಳಿಂದ ಜೀವನ ನಿರ್ವಾಹ ನಡೆಯದಿದ್ದರೆ ವೈಶ್ಯವೃತ್ತಿಯ ವ್ಯಾಪಾರಾದಿಗಳನ್ನು ಮಾಡಬೇಕು. ಬಹಳ ದೊಡ್ಡ ಆಪತ್ತು ಬಂದೊದಗಿದಾಗ ಬೇಟೆಯಿಂದ ಅಥವಾ ವಿದ್ಯಾರ್ಥಿಗಳಿಗೆ ಕಲಿಸಿ ತನ್ನ ಆಪತ್ತನ್ನು ದೂರಮಾಡಿ ಕೊಳ್ಳಬೇಕು. ಆದರೆ 'ಶ್ವಾನವೃತ್ತಿ' ನೀಚರ ಸೇವೆ ಎಂದೂ ಮಾಡ ಬಾರದು. ॥ ೪೮ ॥ ವೈಶ್ಯರೂ ಕೂಡ ಆಪತ್ತಿನ ಸಮಯದಲ್ಲಿ ಶೂದ್ರರ ವೃತ್ತಿ ಸೇವೆಯ ಮೂಲಕ ತಮ್ಮ ಜೀವನನಿರ್ವಾಹ ಮಾಡಿಕೊಳ್ಳಬೇಕು. ಶೂದ್ರರೂ ಕೂಡ ಚಾಪೆ ಹೆಣೆಯುವುದು ಮುಂತಾದ ಕ್ರಿಯೆಗಳಿಂದ ತಮ್ಮ ಜೀವನ ನಡೆಸಬೇಕು. ಆದರೆ ಉದ್ಧವಾ ! ಇವೆಲ್ಲ ಮಾತುಗಳು ಆಪತ್ಕಾಲಕ್ಕಾಗಿ ಇವೆ. ಕಷ್ಟದಿಂದ ಮುಕ್ತನಾಗುವವರೆಗೆ ಮಾತ್ರ ಇಂತಹ ಕೆಲಸ ಮಾಡಬೇಕು. ಆದರೆ ಆಪತ್ತಿನ ಸಮಯ ಕಳೆದುಹೋದಮೇಲೆ ಕೆಳಗಿನ ವರ್ಣಗಳ ವೃತ್ತಿಯನ್ನು ಅವಲಂಬಿಸಿ ಜೀವನ ನಡೆಸುವ ಲೋಭವಿರಿಸಿಕೊಳ್ಳ ಬಾರದು. ॥ ೪೯ ॥ ಗೃಹಸ್ಥನ ಧರ್ಮವನ್ನು ತಿಳಿಸುವಾಗ ಹೇಳುತ್ತಾರೆ – ಗೃಹಸ್ಥನಾದವನು ವೇದಾಧ್ಯಯನರೂಪೀ ಬ್ರಹ್ಮಯಜ್ಞ, ತರ್ಪಣರೂಪೀ ಪಿತೃಯಜ್ಞ, ಹವನರೂಪೀ ದೇವಯಜ್ಞ, ಕಾಕ ಬಲಿ ಮುಂತಾದ ಭೂತಯಜ್ಞ, ಅನ್ನದಾನರೂಪೀ ಅತಿಥಿಯಜ್ಞ ಇವುಗಳ ಮೂಲಕ ನನ್ನ ಸ್ವರೂಪಭೂತ ಋಷಿಗಳು, ದೇವತೆಗಳು, ಪಿತೃಗಳು, ಮನುಷ್ಯರು ಹಾಗೂ ಬೇರೆ ಸಮಸ್ತ ಪ್ರಾಣಿಗಳು ಇವುಗಳಲ್ಲಿ ನನ್ನ ಭಾವನೆಯನ್ನೇ ಇರಿಸಿ ಯಥಾಶಕ್ತಿ ಪ್ರತಿದಿನವೂ ಪೂಜಿಸಬೇಕು. ॥ ೫೦ ॥ ಗೃಹಸ್ಥನು ಅನಾಯಾಸವಾಗಿ ದೊರಕಿದ ಅಥವಾ ಶಾಸ್ತ್ರಸಮ್ಮತ ರೀತಿಯಿಂದ ಗಳಿಸಿದ ಶುದ್ಧ ಧನದಿಂದ ತನ್ನ ಭೃತ್ಯರನ್ನು, ಆಶ್ರಿತರನ್ನು ಯಾವುದೇ ವಿಧದಿಂದ ಕಷ್ಟಕೊಡದೆ, ಆರ್ಥಾತ್ ಅವರನ್ನು ಸಂತುಷ್ಟಗೊಳಿಸಿಯೇ ನ್ಯಾಯ ಮತ್ತು ವಿಧ್ಯುಕ್ತವಾಗಿಯೇ ಯಜ್ಞಮಾಡಬೇಕು. ॥ ೫೧ ॥

ಪ್ರಿಯ ಉದ್ಧವನೇ ! ಗೃಹಸ್ಥನು ಕುಟುಂಬದಲ್ಲಿ ಆಸಕ್ತನಾಗ ಬಾರದು. ಕುಟುಂಬಿಯಾದರೂ ಭಜನೆಯಲ್ಲಿ ಪ್ರಮಾದ ಮಾಡ ಬಾರದು. ಈ ಲೋಕದ ಸಮಸ್ತ ವಸ್ತುಗಳು ನಾಶವುಳ್ಳವುಗಳಂತೆ ಸ್ವರ್ಗಾದಿ ಪರಲೋಕದ ಭೋಗಗಳೂ ನಾಶಯುಕ್ತವೇ ಆಗಿವೆ ಎಂದು ಬುದ್ಧಿವಂತನಾದವನು ಆರಿತುಕೊಳ್ಳಬೇಕು. ॥ ೫೨ ॥

ವೈಶ್ಯವೃತ್ತ್ಯಾತು ರಾಜನ್ಯೋ ಜೀವೇನ್ಮೃಗಯಯಾऽऽಪದಿ ।
ಚರೇದ್ವಾ ವಿಪ್ರರೂಪೇಣ ನ ಶ್ವವೃತ್ತ್ಯಾ ಕಥಂಚನ
॥ ೪೮ ॥

ಶೂದ್ರವೃತ್ತಿಂ ಭಜೇದ್ವೈಶ್ಯಃ ಶೂದ್ರಃ ಕಾರುಕಟಕ್ರಿಯಾಮ್ ।
ಕೃಚ್ಛ್ರಾನ್ಮುಕ್ತೋ ನ ಗರ್ಹ್ಯೇಣ ವೃತ್ತಿಂ ಲಿಪ್ಸೇತ ಕರ್ಮಣಾ
॥ ೪೯ ॥

ವೇದಾಧ್ಯಾಯಸ್ವಧಾಸ್ವಾಹಾಬಲ್ಯನ್ನಾದ್ಯೈರ್ಯಥೋದಯಮ್ ।
ದೇವರ್ಷಿಪಿತೃಭೂತಾನಿ ಮದ್ರೂಪಾಣ್ಯನ್ವಹಂ ಯಜೇತ್
॥ ೫೦ ॥

ಯದೃಚ್ಛಯೋಪಪನ್ನೇನ ಶುಕ್ಲೇನೋಪಾರ್ಜಿತೇನ ವಾ ।
ಧನೇನಾಪೀಡಯನ್ಭೃತ್ಯಾನ್ ನ್ಯಾಯೇನೈವಾಹರೇತ್ಕ್ರತೂನ್
॥ ೫೧ ॥

ಕುಟುಂಬೇಷು ನ ಸಜ್ಜೇತ ನ ಪ್ರಮಾದ್ಯೇತ್ ಕುಟುಂಬ್ಯಪಿ ।
ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್
॥ ೫೨ ॥

ಪುತ್ರದಾರಾಪ್ತಬಂಧೂನಾಂ ಸಂಗಮಃ ಪಾಂಥಸಂಗಮಃ ।
ಅನುದೇಹಂ ವಿಯಂತ್ಯೇತೇ ಸ್ವಪ್ನೋ ನಿದ್ರಾನುಗೋ ಯಥಾ
॥ ೫೩ ॥

ಈ ಪತ್ನೀ, ಪುತ್ರರ, ಬಂಧು- ಬಾಂಧವರ, ಗುರುಹಿರಿಯರ ಕೂಡು ವಿಕೆಯೂ, ಯಾತ್ರೆಯಲ್ಲಿ ವಿವಿಧ ಯಾತ್ರಿಗಳು ಒಂದಾಗಿ, ಅಗಲುವಂತೆ ಇದೆ. ನಿದ್ದೆಯಲ್ಲಿ ಬರುವ ಸ್ವಪ್ನವು ಬೇರೆ-ಬೇರೆಯಾಗಿರುವಂತೆಯೇ ಪ್ರತಿಯೊಂದು ದೇಹದಲ್ಲಿ ಒಂದುಗೂಡುವ – ಅಗಲುವ ವ್ಯಕ್ತಿಗಳೂ ಬೇರೆ - ಬೇರೆಯಾಗಿಯೇ ಇರುತ್ತಾರೆ.*॥ ೫೩ ॥

ಇತ್ಥಂ ಪರಿಮೃಶನ್ಮುಕ್ತೋ ಗೃಹೇಷ್ವತಿಥಿವದ್ವಸನ್ ।
ನ ಗೃಹೈರನುಬಧ್ಯೇತ ನಿರ್ಮಮೋ ನಿರಹಂಕೃತಃ
॥ ೫೪ ॥

ಗೃಹಸ್ಥನಾದವನು ಹೀಗೆ ವಿಚಾರಮಾಡಿ ಮನೆ ಸಂಸಾರದಲ್ಲಿ ಸಿಕ್ಕಿಕೊಳ್ಳಬಾರದು. ಅದರಲ್ಲಿ ಯಾರೋ ಅತಿಥಿಯು ವಾಸಿಸುತ್ತಿರುವಂತೆ ಅನಾಸಕ್ತ ಭಾವದಿಂದ ಇರಬೇಕು. ಶರೀರ ಮುಂತಾದವುಗಳಲ್ಲಿ ಅಹಂಕಾರ ಮತ್ತು ಮನೆಯೇ ಮುಂತಾದವುಗಳಲ್ಲಿ ಮಮತೆ ಇಡದಿದ್ದರೆ ಅವನು ಗೃಹಸ್ಥಾಶ್ರಮದಲ್ಲಿ ಬಂಧಿತನಾಗಲಾರನು. ॥ ೫೪ ॥

ಕರ್ಮಭಿರ್ಗೃಹಮೇಧೀಯೈರಿಷ್ಟ್ವಾಮಾಮೇವ ಭಕ್ತಿಮಾನ್ ।
ತಿಷ್ಠೇದ್ವನಂ ವೋಪವಿಶೇತ್ ಪ್ರಜಾವಾನ್ವಾ ಪರಿವ್ರಜೇತ್
॥ ೫೫ ॥

ನನ್ನ ಭಕ್ತನು ಮಕ್ಕಳೊಂದಿಗನಾಗಿದ್ದರೆ ಗೃಹಸ್ಥೋಚಿತ ಶಾಸ್ತ್ರೋಕ್ತ ಪವಿತ್ರ ಕರ್ಮಗಳ ಮೂಲಕ ನನ್ನ ಆರಾಧನೆ ಮಾಡುತ್ತಾ ಮನೆಯಲ್ಲಿ ಇರಲಿ. ಇಲ್ಲದಿದ್ದರೆ ವಾನಪ್ರಸ್ಥ ಆಶ್ರಮ ಕೈಗೊಳ್ಳಲಿ ಅಥವಾ ಸಂನ್ಯಾಸಾಶ್ರಮವನ್ನು ಸ್ವೀಕರಿಸಲಿ. ॥ ೫೫ ॥ ಪ್ರಿಯ ಉದ್ಧವನೇ ! ಮನೆ-ಸಂಸಾರದಲ್ಲೇ ಆಸಕ್ತನಾಗಿ, ಪತ್ನೀ, ಪುತ್ರ, ಧನ ಇವುಗಳ ಕಾಮನೆಗಳಲ್ಲಿ ಸಿಕ್ಕಿಕೊಂಡು ಅಯ್ಯೋ-ಮುರ್ಯೋ ಎಂದು ಪಾಡು ಪಡುತ್ತಾ ಇರುವ ಜನರು, ಮೂಢತೆಯಿಂದ ಸ್ತ್ರೀಲಂಪಟ ಮತ್ತು ಕೃಪಣರಾಗಿ ನಾನು-ನನ್ನದು ಎಂಬ ಹೊಂಡದಲ್ಲಿ ಬಿದ್ದು ಬಂಧಿತರಾಗುತ್ತಾರೆ. ॥ ೫೬ ॥

ಯಸ್ತ್ವಾಸಕ್ತಮತಿರ್ಗೇಹೇ ಪುತ್ರವಿತ್ತೈಷಣಾತುರಃ ।
ಸ್ತ್ರೈಣಃ ಕೃಪಣಧೀರ್ಮೂಢೋ ಮಮಾಹಮಿತಿ ಬಧ್ಯತೇ
॥ ೫೬ ॥

ಅಹೋ ಮೇ ಪಿತರೌ ವೃದ್ಧೌ ಭಾರ್ಯಾ ಬಾಲಾತ್ಮಜಾಽಽತ್ಮಜಾಃ ।
ಅನಾಥಾ ಮಾಮೃತೇ ದೀನಾಃ ಕಥಂ ಜೀವಂತಿ ದುಃಖಿತಾಃ
॥ ೫೭ ॥

ಅವರು ಅಯ್ಯೋ ! ಶಿವನೇ ! ನನ್ನ ತಂದೆ-ತಾಯಿಯರು ಮುದುಕರಾದರು. ಪತ್ನೀ-ಮಕ್ಕಳು ಇನ್ನು ಸಣ್ಣ-ಸಣ್ಣವರಾಗಿದ್ದಾರೆ. ನಾನಿಲ್ಲದಿದ್ದರೆ ಇವರು ದೀನರೂ, ದುಃಖಿಗಳೂ, ಅನಾಥರಾಗುವರು. ಮತ್ತೆ ಇವರ ಜೀವನ ಹೇಗೆ ನಡೆಯಬಹುದು ? ಎಂದು ಯೋಚಿಸುತ್ತಾ ಇರುತ್ತಾರೆ. ॥ ೫೭ ॥ ಈ ವಿಧವಾದ ಸಂಸಾರದ ಮಮತೆಯಿಂದ ವಿಕ್ಷಿಪ್ತವಾದ ಚಿತ್ತವುಳ್ಳ ಆ ಮೂಢ ಬುದ್ಧಿಯು ವಿಷಯಭೋಗಗಳಿಂದ ಎಂದೂ ತೃಪ್ತನಾಗುವುದಿಲ್ಲ. ಅದರಲ್ಲೇ ಸಿಕ್ಕಿಹಾಕಿಕೊಂಡು ತನ್ನ ಜೀವನವನ್ನು ಕಳೆದುಕೊಳ್ಳುವನು. ಸತ್ತಮೇಲೆ ಘೋರ ಅಂಧಕಾರಮಯ ನರಕಕ್ಕೆ ಹೋಗುತ್ತಾನೆ. ॥ ೫೮ ॥

ಏವಂ ಗೃಹಾಶಯಾಕ್ಷಿಪ್ತಹೃದಯೋ ಮೂಢಧೀರಯಮ್ ।
ಅತೃಪ್ತಸ್ತಾನನುಧ್ಯಾಯನ್ಮೃತೋಽಂಧಂ ವಿಶತೇ ತಮಃ
॥ ೫೮ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ
ಸಪ್ತದಶೋಽಧ್ಯಾಯಃ ॥ ೧೭ ॥

* 'ವಿಯಂತಿ – ವಿವಿಧಾಃ ಯಂತಿ' ಅರ್ಥಾತ್ ಎಲ್ಲ ಬಂಧು-ಬಾಂಧವರು ಬೇರೆ-ಬೇರೆಯೇ ಆಗಿರುತ್ತಾರೆ. ತನ್ನ ಶಾಶ್ವತ ಸಂಬಂಧವಾದರೋ ಪರಮಪಿತಾ ಪರಮೇಶ್ವರನೊಂದಿಗೆ ಇದೆ, ಲೌಕಿಕ ಸಂಬಂಧಗಳಾದರೋ ಮಾಡಿಕೊಂಡದ್ದು ಎಂದು ದೃಢವಾದ ಧಾರಣೆ ಮಾಡಿಕೊಳ್ಳಬೇಕು. ಆದ್ದರಿಂದ ತಮ್ಮ-ತಮ್ಮ ಅಧಿಕಾರಕ್ಕನುಸಾರ ಎಲ್ಲರ ಸೇವೆ ಮಾಡಬೇಕು. ಅವರಲ್ಲಿ ಆಸಕ್ತಿಯನ್ನಿರಿಸಿ ಮೋಸಹೋಗಬಾರದು.

ಹದಿನೆಂಟನೆಯ ಅಧ್ಯಾಯ

ವಾನಪ್ರಸ್ಥ ಮತ್ತು ಸಂನ್ಯಾಸಿಯ ಧರ್ಮ

ಶ್ರೀಭಗವಾನುವಾಚ

ವನಂ ವಿವಿಕ್ಷುಃ ಪುತ್ರೇಷು ಭಾರ್ಯಾಂ ನ್ಯಸ್ಯ ಸಹೈವ ವಾ ।
ವನ ಏವ ವಸೇಚ್ಛಾಂತಸ್ತೃತೀಯಂ ಭಾಗಮಾಯುಷಃ
॥ ೧ ॥

ಕಂದಮೂಲಫಲೈರ್ವನ್ಯೈರ್ಮೇಧ್ಯೈರ್ವೃತ್ತಿಂ ಪ್ರಕಲ್ಪಯೇತ್ ।
ವಸೀತ ವಲ್ಕಲಂ ವಾಸಸ್ತೃಣಪರ್ಣಾಜಿನಾನಿ ಚ
॥ ೨ ॥

ಕೇಶರೋಮನಖಶ್ಮಶ್ರುಮಲಾನಿ ಬಿಭೃಯಾದ್ದತಃ ।
ನ ಧಾವೇದಪ್ಸು ಮಜ್ಜೇತ ತ್ರಿಕಾಲಂ ಸ್ಥಂಡಿಲೇಶಯಃ
॥ ೩ ॥

ಗ್ರೀಷ್ಮೇ ತಪ್ಯೇತ ಪಂಚಾಗ್ನೀನ್ ವರ್ಷಾಸ್ವಾಸಾರಷಾಡ್ಜಲೇ ।
ಆಕಂಠಮಗ್ನಃ ಶಿಶಿರೇ ಏವಂವೃತ್ತಸ್ತಪಶ್ಚರೇತ್
॥ ೪ ॥

ಅಗ್ನಿಪಕ್ವಂ ಸಮಶ್ನೀಯಾತ್ಕಾಲಪಕ್ವಮಥಾಪಿ ವಾ ।
ಉಲೂಖಲಾಶ್ಮಕುಟ್ಟೋ ವಾ ದಂತೋಲೂಖಲ ಏವ ವಾ
॥ ೫ ॥

ಸ್ವಯಂ ಸಂಚಿನುಯಾತ್ಸರ್ವಮಾತ್ಮನೋ ವೃತ್ತಿಕಾರಣಮ್ ।
ದೇಶಕಾಲಬಲಾಭಿಜ್ಞೋ ನಾದದೀತಾನ್ಯದಾऽऽಹೃತಮ್
॥ ೬ ॥

ವನ್ಯೈಶ್ಚರುಪುರೋಡಾಶೈರ್ನಿರ್ವಪೇತ್ಕಾಲಚೋದಿತಾನ್ ।
ನ ತು ಶ್ರೌತೇನ ಪಶುನಾ ಮಾಂ ಯಜೇತ ವನಾಶ್ರಮೀ
॥ ೭ ॥

ಅಗ್ನಿಹೋತ್ರಂ ಚ ದರ್ಶಶ್ಚ ಪೂರ್ಣಮಾಸಶ್ಚ ಪೂರ್ವವತ್ ।
ಚಾತುರ್ಮಾಸ್ಯಾನಿ ಚ ಮುನೇರಾಮ್ನಾತಾನಿ ಚ ನೈಗಮೈಃ
॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಗೃಹಸ್ಥನಾದ ಮನುಷ್ಯನು ವಾನಪ್ರಸ್ಥ ಆಶ್ರಮವನ್ನು ಕೈಗೊಳ್ಳಲು ಬಯಸಿದರೆ, ತನ್ನ ಪತ್ನಿಯನ್ನು ಪುತ್ರರಿಗೆ ಒಪ್ಪಿಸಬೇಕು, ಅಥವಾ ತನ್ನೊಂದಿಗೆ ಕರೆದುಕೊಳ್ಳಲಿ. ಮತ್ತೆ ಶಾಂತಚಿತ್ತದಿಂದ ತನ್ನ ಆಯುಸ್ಸಿನ ಮೂರನೆಯ ಭಾಗವನ್ನು ಕಾಡಿನಲ್ಲೇ ಇದ್ದು ಕಳೆಯಲಿ. ॥ ೧ ॥ ಅವನು ಕಾಡಿನ ಪವಿತ್ರ ಕಂದ-ಮೂಲ, ಫಲಗಳಿಂದಲೇ ಶರೀರ ನಿರ್ವಾಹ ಮಾಡಬೇಕು. ಬಟ್ಟೆಯ ಬದಲಿಗೆ ಮರದ ತೊಗಟೆ (ವಲ್ಕಲ)ಗಳನ್ನು ಧರಿಸಬೇಕು. ಹುಲ್ಲು, ಎಲೆ, ಮರದ ತೊಗಟೆಗಳನ್ನೇ ಉಪಯೋಗಿಸಬೇಕು. ॥ ೨ ॥ ಕೂದಲು, ರೋಮ, ಉಗುರು, ಗಡ್ಡ-ಮೀಸೆ ಮುಂತಾದ ಶರೀರದ ಮಲವನ್ನು ತೆಗೆಯಬಾರದು. ಹಲ್ಲು ಉಜ್ಜಬಾರದು. ನೀರಿನಲ್ಲಿ ಮುಳುಗಿ ತ್ರಿಕಾಲ ಸ್ನಾನ ಮಾಡಬೇಕು. ನೆಲದಲ್ಲೇ ಮಲಗಬೇಕು. ॥ ೩ ॥ ಗ್ರೀಷ್ಮ ಋತು (ಬೇಸಿಗೆ)ವಿನಲ್ಲಿ ಪಂಚಾಗ್ನಿಯ ನಡುವೆ ಇದ್ದು, ವರ್ಷಾಋತು (ಮಳೆಗಾಲ)ವಿನಲ್ಲಿ ತೆರೆದ ಬಯಲಲ್ಲಿ ನಿಂತು ಮಳೆಯನ್ನು ಸಹಿಸಬೇಕು. ಚಳಿಗಾಲದಲ್ಲಿ ಕತ್ತಿನವರೆಗೆ ನೀರಿನಲ್ಲಿ ಮುಳುಗಿರಬೇಕು. ಈ ಪ್ರಕಾರ ಘೋರ ತಪಸ್ಯಾಮಯ ಜೀವನ ನಡೆಸಬೇಕು. ॥ ೪ ॥ ಬೆಂಕಿಯಲ್ಲಿ ಬೆಂದ ಅನ್ನವನ್ನು ಅಥವಾ ಹಣ್ಣಾದ, ಬೆಳೆದ ಕಂದ ಮೂಲ, ಫಲಗಳಿಂದ ತನ್ನ ನಿರ್ವಾಹಮಾಡಿಕೊಳ್ಳಬೇಕು. ಅದನ್ನು ಕುಟ್ಟಬೇಕಾದ ಆವಶ್ಯಕತೆ ಕಂಡರೆ ಒರಳಲ್ಲಿ ಅಥವಾ ಕಲ್ಲಿನ ಮೇಲೆ ಕುಟ್ಟಿಕೊಳ್ಳಬೇಕು. ಇಲ್ಲವೇ ಹಲ್ಲಿನಿಂದ ಅಗಿದೇ ತಿಂದುಬಿಡ ಬೇಕು. ॥ ೫ ॥ ತನ್ನ ಉದರಪೂರ್ತಿಗಾಗಿ ಉಪಯೋಗೀ ಎಲ್ಲ ಸಾಮಗ್ರಿಗಳನ್ನು ಸ್ವತಃ ತಂದುಕೊಳ್ಳಬೇಕು. ದೇಶ-ಕಾಲ ಮತ್ತು ತನ್ನ ಶಾರೀರಿಕ ಸಾಮರ್ಥ್ಯವನ್ನು ನೋಡಿಕೊಂಡು ಬೇರೆಯವರು ತಂದಿರುವುದನ್ನು ಉಪಯೋಗಿಸಬಾರದು. * ॥ ೬ ॥ ವಾನ ಪ್ರಸ್ಥಿಯು ವನ್ಯವಸ್ತುಗಳಿಂದಲೇ ಪುರೋಡಾಶ ಮುಂತಾದ ಹವಿಷ್ಯಾನ್ನ ವನ್ನು ಸಿದ್ಧಗೊಳಿಸಬೇಕು. ಅದರಿಂದಲೇ ಸಮಯಾನುಸಾರ ಯಾವ ಸಮಯಕ್ಕೆ ಯಾವುದನ್ನು ಹೇಳಲಾಗಿದೆಯೋ ಆ ಆಗ್ರಾಯಣ ಇಷ್ಟಿ ಮುಂತಾದ ವೈದಿಕ ಯಜ್ಞಗಳನ್ನು ಮಾಡಬೇಕು. ಪಶುಬಲಿ ಯಿಂದ ನನ್ನ ಯಜನವನ್ನು ಎಂದೂ ಮಾಡಬಾರದು. ॥ ೭ ॥ ವಾನಪ್ರಸ್ಥಾಶ್ರಮಿಯು ವೇದವಿಹಿತ ಅಗ್ನಿಹೋತ್ರ, ಅಮಾವಾಸ್ಯಾ, ಪೌರ್ಣಮಿ ಹಾಗೂ ಚಾತುರ್ಮಾಸ್ಯ ಮೊದಲಾದವುಗಳಲ್ಲಿ ಶಾಸ್ತ್ರವಿಧಿಯಂತೆ ಯಜ್ಞ-ಯಾಗಾದಿಗಳನ್ನು ಗೃಹಸ್ಥಾಶ್ರಮದಲ್ಲಿ ಮಾಡಿದಂತೆ ವಾನಪ್ರಸ್ಥಿಯೂ ಮಾಡಬೇಕು. ಅವೆಲ್ಲವುಗಳ ಮೂಲಕ ನನ್ನನ್ನೇ ಪೂಜಿಸಬೇಕು. ॥ ೮ ॥

* ಅರ್ಥಾತ್ – ಇಂತಹ ಪದಾರ್ಥ ಎಲ್ಲಿಂದ ತರಬೇಕು, ಯಾವಾಗ ತರಬೇಕು, ಯಾವು-ಯಾವುದು ತನಗೆ ಅನುಕೂಲವಾಗಿದೆ ಎಂದು ಮುನಿಯು ಅರಿತುಕೊಂಡು ಸ್ವತಃ ಹೊಸ-ಹೊಸ ಕಂದ-ಮೂಲ-ಫಲಗಳನ್ನು ಸಂಗ್ರಹಿಸಬೇಕು. ದೇಶ-ಕಾಲವನ್ನು ತಿಳಿಯದ ಬೇರೆ ಜನರಿಂದ ತಂದಿರುವ ಅಥವಾ ಕಾಲಾಂತರದಲ್ಲಿ ಸಂಗ್ರಹಿಸಿದ ಪದಾರ್ಥಗಳ ಸೇವನೆಯಿಂದ ವ್ಯಾಧಿಯಿಂದಾಗಿ ತಪಸ್ಸಿನಲ್ಲಿ ವಿಘ್ನ ಉಂಟಾಗುವ ಆಶಂಕೆ ಇದೆ.

ಏವಂ ಚೀರ್ಣೇನ ತಪಸಾ ಮುನಿರ್ಧಮನಿಸಂತತಃ ।
ಮಾಂ ತಪೋಮಯಮಾರಾಧ್ಯ ಋಷಿಲೋಕಾದುಪೈತಿ ಮಾಮ್
॥ ೯ ॥

ಯಸ್ತ್ವೇತತ್ಕೃಚ್ಛ್ರತಶ್ಚೀರ್ಣಂ ತಪೋ ನಿಃಶ್ರೇಯಸಂ ಮಹತ್ ।
ಕಾಮಾಯಾಲ್ಪೀಯಸೇ ಯುಂಜ್ಯಾದ್ಬಾಲಿಶಃ ಕೋಽಪರಸ್ತತಃ
॥ ೧೦ ॥

ಯದಾಸೌ ನಿಯಮೇಽಕಲ್ಪೋ ಜರಯಾ ಜಾತವೇಪಥುಃ ।
ಆತ್ಮನ್ಯಗ್ನೀನ್ಸಮಾರೋಪ್ಯ ಮಚ್ಚಿತ್ತೋಽಗ್ನಿಂ ಸಮಾವಿಶೇತ್
॥ ೧೧ ॥

ಯದಾ ಕರ್ಮವಿಪಾಕೇಷು ಲೋಕೇಷು ನಿರಯಾತ್ಮಸು ।
ವಿರಾಗೋ ಜಾಯತೇ ಸಮ್ಯಙ್ನ್ಯಸ್ತಾಗ್ನಿಃ ಪ್ರವ್ರಜೇತ್ತತಃ
॥ ೧೨ ॥

ಇಷ್ಟ್ವಾ ಯಥೋಪದೇಶಂ ಮಾಂ ದತ್ತ್ವಾ ಸರ್ವಸ್ವಮೃತ್ವಿಜೇ ।
ಅಗ್ನೀನ್ಸ್ವಪ್ರಾಣ ಆವೇಶ್ಯ ನಿರಪೇಕ್ಷಃ ಪರಿವ್ರಜೇತ್
॥ ೧೩ ॥

ವಿಪ್ರಸ್ಯ ವೈ ಸಂನ್ಯಸತೋ ದೇವಾ ದಾರಾದಿರೂಪಿಣಃ ।
ವಿಘ್ನಾನ್ ಕುರ್ವಂತ್ಯಯಂ ಹ್ಯಸ್ಮಾನಾಕ್ರಮ್ಯ ಸಮಿಯಾತ್ಪರಮ್
॥ ೧೪ ॥

ಬಿಭೃಯಾಚ್ಛೇನ್ಮುನಿರ್ವಾಸಃ ಕೌಪೀನಾಚ್ಛಾದನಂ ಪರಮ್ ।
ತ್ಯಕ್ತಂ ನ ದಂಡಪಾತ್ರಾಭ್ಯಾಮನ್ಯತ್ಕಿಂಚಿದನಾಪದಿ
॥ ೧೫ ॥

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್ ।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್
॥ ೧೬ ॥

ಈ ಪ್ರಕಾರ ತಪಸ್ಸನ್ನು ಆಚರಿಸುತ್ತಾ ಶರೀರವು ಶುಷ್ಕಪ್ರಾಯವಾದಾಗ ಆ ಮುನಿಯು ತಪೋಮೂರ್ತಿಸ್ವರೂಪೀ ಪರಮಾತ್ಮನಾದ ನನ್ನ ಆರಾಧನೆಯ ಫಲಸ್ವರೂಪ ಋಷಿಗಳಿಗೆ ಪ್ರಾಪ್ತವಾಗುವ ಲೋಕಕ್ಕೆ ಹೋಗುತ್ತಾನೆ. ಅರ್ಥಾತ್ – ಮಹರ್ಲೋಕಕ್ಕೆ ಹೋಗಿ ಮತ್ತೆ ನನ್ನ ಲೋಕಕ್ಕೆ ಬರುತ್ತಾನೆ. ॥ ೯ ॥ ಪ್ರಿಯ ಉದ್ಧವಾ ! ಬಹಳ ಕಷ್ಟದಿಂದ ಮಾಡಿರುವ ಮತ್ತು ಮೋಕ್ಷವನ್ನು ಕೊಡುವಂತಹ ಮಹಾನ್ ತಪಸ್ಸನ್ನು ಸ್ವರ್ಗ, ಬ್ರಹ್ಮಲೋಕ ಮುಂತಾದ ಸಣ್ಣ-ಪುಟ್ಟ ಫಲಗಳ ಪ್ರಾಪ್ತಿಗಾಗಿ ಮಾಡುವ ಮನುಷ್ಯನಿಗಿಂತ ಮಿಗಿಲಾದ ಮೂರ್ಖನು ಯಾರಿರಬಹುದು ? ಅದಕ್ಕಾಗಿ ತಪಸ್ಸಿನ ಅನುಷ್ಠಾನವನ್ನು ನಿಷ್ಕಾಮ ಭಾವದಿಂದಲೇ ಮಾಡಬೇಕು. ॥ ೧೦ ॥

ಪ್ರೀತಿಯ ಉದ್ಧವನೇ ! ವಾನಪ್ರಸ್ಥಿಯು ತನ್ನ ಆಶ್ರಮೋಚಿತ ನಿಯಮಗಳನ್ನು ಪಾಲಿಸಲು ಅಸಮರ್ಥನಾದರೆ, ವೃದ್ಧಾಪ್ಯದ ಕಾರಣ ಶರೀರವು ನಡುಗಲು ತೊಡಗಿದರೆ, ಯಜ್ಞಾಗ್ನಿಗಳನ್ನು ಭಾವನೆಯಿಂದ ತನ್ನ ಅಂತಃಕರಣದಲ್ಲಿ ಆರೋಪಿಸಿಕೊಂಡು, ತನ್ನ ಮನಸ್ಸನ್ನು ನನ್ನಲ್ಲಿ ತೊಡಗಿಸಿ ಅಗ್ನಿಪ್ರವೇಶಮಾಡಲಿ. (ವಿರಕ್ತನಲ್ಲದವನಿಗೆ ಮಾತ್ರ ಈ ವಿಧಾನವಿದೆ.) ॥ ೧೧ ॥ ಕರ್ಮಗಳ ಫಲಸ್ವರೂಪ ಪ್ರಾಪ್ತವಾಗುವ ಲೋಕಗಳೆಲ್ಲ ನರಕದಂತೆ ದುಃಖ ಪೂರ್ಣವಾಗಿವೆ. ಇಂತಹ ಪೂರ್ಣವೈರಾಗ್ಯ ಉಂಟಾದರೆ ವಿಧಿ ಪೂರ್ವಕ ಅಗ್ನಿಗಳನ್ನು ತ್ಯಜಿಸಿ ಸಂನ್ಯಾಸ ಸ್ವೀಕರಿಸಲಿ. ॥ ೧೨ ॥ ವಾನಪ್ರಸ್ಥಿಯು ಸಂನ್ಯಾಸಿಯಾಗಲು ಬಯಸಿದರೆ ಮೊದಲಿಗೆ ಅವನು ವೈದಿಕವಿಧಾನಕ್ಕನುಸಾರ ಎಂಟೂ ಪ್ರಕಾರದ ಶ್ರಾದ್ಧಗಳನ್ನು ಮತ್ತು ಪ್ರಾಜಾಪತ್ಯ ಯಜ್ಞದಿಂದ ನನ್ನನ್ನು ಆರಾಧಿಸಲಿ. ಇದಾದ ಬಳಿಕ ತನ್ನ ಸರ್ವಸ್ವವನ್ನು ಋತ್ವಿಜರಿಗೆ ಕೊಡಲಿ. ಯಜ್ಞಾಗ್ನಿಗಳನ್ನು ತನ್ನ ಪ್ರಾಣಗಳಲ್ಲಿ ಲೀನಗೊಳಿಸಿಕೊಳ್ಳಲಿ. ಮತ್ತೆ ಯಾವುದೇ ಸ್ಥಾನ, ವಸ್ತು, ವ್ಯಕ್ತಿಗಳ ಅಪೇಕ್ಷೆಯನ್ನಿಡದೆ ಸಂನ್ಯಾಸಿಯಾಗಲಿ. ॥ ೧೩. ॥ ಉದ್ಧವನೇ ! ಬ್ರಾಹ್ಮಣನು ಸಂನ್ಯಾಸವನ್ನು ಕೈಗೊಳ್ಳಲು ತೊಡಗಿದಾಗ ದೇವತೆಗಳು ಪತ್ನೀ, ಪುತ್ರಾದಿ ನೆಂಟರಿಷ್ಟರ ರೂಪವನ್ನು ಧರಿಸಿ ಅವನ ಸಂನ್ಯಾಸಗ್ರಹಣದಲ್ಲಿ ವಿಘ್ನವನ್ನು ತಂದೊಡ್ಡುವರು. ಅವರೆಲ್ಲರೂ ಅರೇ ! ಇವನಾದರೋ ನಮ್ಮಗಳ ಅವಹೇಳನಗೈದು, ನಮ್ಮನ್ನು ಮೀರಿ ಪರಮಾತ್ಮನನ್ನು ಪಡೆಯಲು ಹೋಗುತ್ತಿರುವನಲ್ಲ ! ಎಂದು ಯೋಚಿಸುತ್ತಾರೆ. ॥ ೧೪ ॥

ಸಂನ್ಯಾಸಿಯು ವಸ್ತ್ರವನ್ನು ತೊಟ್ಟುಕೊಳ್ಳಬೇಕೆಂದರೆ ಕೇವಲ ಲಂಗೋಟಿಯನ್ನು ಉಡಬೇಕು ಮತ್ತು ಹೆಚ್ಚೆಂದರೆ ಲಂಗೋಟಿಯನ್ನು ಮುಚ್ಚುವಷ್ಟು ಸಣ್ಣ ತುಂಡುಬಟ್ಟೆಯನ್ನು ಸುತ್ತಿಕೊಳ್ಳಲಿ. ಅವನು ಎಲ್ಲವನ್ನು ತ್ಯಜಿಸಿರುವನು ; ಆದ್ದರಿಂದ ಯಾವುದೇ ಆಪತ್ತು ಬರದಿದ್ದರೆ ಅವನು ಆಶ್ರಮೋಚಿತ ದಂಡ, ಕಮಂಡಲು ಬಿಟ್ಟು ಬೇರೆ ಯಾವ ವಸ್ತುವನ್ನೂ ತನ್ನ ಬಳಿ ಇರಿಸಿಕೊಳ್ಳಬಾರದು. ॥ ೧೫ ॥ ನಡೆಯುವಾಗ ಕಾಲಕೆಳಗೆ ಯಾವ ಜೀವಿಯು ಸಿಕ್ಕಿಕೊಳ್ಳದಿರುವಂತೆ ನೋಡಿಕೊಂಡು ನಡೆಯಬೇಕು. ನೀರನ್ನು ಗಾಳಿಸಿ ಕುಡಿಯಬೇಕು. ಸತ್ಯದಿಂದ ಪವಿತ್ರವಾದ ವಾಣಿಯನ್ನೇ ಮಾತನಾಡಬೇಕು. ಮನಸ್ಸಿಗೆ ಪವಿತ್ರವೆನಿಸಿದಂತೆ ಆಚರಿಸಬೇಕು. ॥ ೧೬ ॥

ಮೌನಾನೀಹಾನಿಲಾಯಾಮಾ ದಂಡಾ ವಾಗ್ದೇಹಚೇತಸಾಮ್ ।
ನ ಹ್ಯೇತೇ ಯಸ್ಯ ಸಂತ್ಯಂಗ ವೇಣುಭಿರ್ನ ಭವೇದ್ಯತಿಃ
॥ ೧೭ ॥

ವಾಣಿಗಾಗಿ ಮೌನ, ಶರೀರಕ್ಕಾಗಿ ನಿಶ್ಚೇಷ್ಟಸ್ಥಿತಿ, ಮನಸ್ಸಿಗಾಗಿ ಪ್ರಾಣಾಯಾಮ ಇವು ದಂಡಗಳಾಗಿವೆ. ಈ ಮೂರು ದಂಡಗಳು ಇಲ್ಲದವನು ಕೇವಲ ಬಿದಿರಿನ ದಂಡದಿಂದ ದಂಡೀಸ್ವಾಮಿ ಆಗುವುದಿಲ್ಲ ॥ ೧೭ ॥ ಸಂನ್ಯಾಸಿಯು ನಿಂದಿತ ಅಥವಾ ಪತಿತರನ್ನು ಬಿಟ್ಟು ನಾಲ್ಕೂ ವರ್ಣದವರಿಂದ ಭಿಕ್ಷೆ ಪಡೆಯಬೇಕು. ಮೊದಲು ನಿಶ್ಚಿತಪಡಿಸಿದ ಕೇವಲ ಏಳು ಮನೆಗಳಿಂದ ಭಿಕ್ಷೆ ಪಡೆಯಬೇಕು. ಭಿಕ್ಷೆಯಲ್ಲಿ ಸಿಕ್ಕಿದಷ್ಟರಲ್ಲೇ ಸಂತೋಷ ಪಡಬೇಕು. ॥ ೧೮ ॥ ಈ ಪ್ರಕಾರ ಭಿಕ್ಷೆಯನ್ನು ಎತ್ತಿ ಗ್ರಾಮದಿಂದ ಹೊರಗೆ ಜಲಾಶಯದ ಬಳಿಗೆ ಹೋಗಿ, ಅಲ್ಲಿ ಕೈ, ಕಾಲು ತೊಳೆದು ನೀರಿನಿಂದ ಭಿಕ್ಷೆಯನ್ನು ಪವಿತ್ರಗೊಳಿಸಿಕೊಳ್ಳಬೇಕು. ಮತ್ತೆ ಶಾಸ್ತ್ರೋಕ್ತಪದ್ಧತಿಯಿಂದ ಯಾರಿಗೆ ಭಿಕ್ಷೆಯ ಭಾಗವನ್ನು ಕೊಡಬೇಕೋ ಅವರಿಗೆ ಸಲ್ಲಿಸಿ, ಉಳಿದಿರುವುದನ್ನು ಮೌನವಾಗಿ ತಿನ್ನಬೇಕು ಮತ್ತೊಂದು ಸಮಯಕ್ಕೆ ಉಳಿಸಿಡಬಾರದು, ಎಸೆಯಲೂಬಾರದು. ಹಾಗೂ ಹೆಚ್ಚಿಗೆ ಬೇಡಿಕೊಂಡು ತರಬಾರದು. ॥ ೧೯ ॥ ಸಂನ್ಯಾಸಿಯು ಪೃಥಿವಿಯಲ್ಲಿ ಒಬ್ಬಂಟಿಗನಾಗಿಯೇ ಸಂಚರಿಸ ಬೇಕು. ಎಂದೂ ಯಾವುದರ ಮೇಲೂ ಆಸಕ್ತಿ ಇಡಬಾರದು. ಇಂದ್ರಿಯಗಳನ್ನು ವಶದಲ್ಲಿರಿಸಿ ಕೊಳ್ಳಬೇಕು. ತಾನೇ-ತನ್ನಲ್ಲಿ ಸಂತೋಷವಾಗಿರಬೇಕು. ಆತ್ಮ-ಪ್ರೇಮ ದಲ್ಲಿ ತನ್ಮಯನಾಗಿದ್ದು, ಅತಿ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಧೈರ್ಯಗೆಡಬಾರದು ಮತ್ತು ಸರ್ವತ್ರ ಸಮಾನರೂಪದಿಂದ ಸ್ಥಿತನಾದ ಪರಮಾತ್ಮನನ್ನು ಅನುಭವಿಸುತ್ತಾ ಇರಬೇಕು. ॥ ೨೦ ॥ ಸಂನ್ಯಾಸಿಯು ನಿರ್ಜನ ಮತ್ತು ನಿರ್ಭಯ ಪವಿತ್ರ ಏಕಾಂತಸ್ಥಾನದಲ್ಲಿ ಇರಬೇಕು. ಅವನ ಹೃದಯ ನಿರಂತರ ನನ್ನ ಭಾವನೆಯಿಂದ ವಿಶುದ್ಧ ವಾಗಿರಬೇಕು. ಅವನು ತನ್ನನ್ನು ನನ್ನಿಂದ ಅಭಿನ್ನ ಹಾಗೂ ಅದ್ವಿತೀಯ, ಅಖಂಡರೂಪದಲ್ಲಿ ಚಿಂತಿಸುತ್ತಿರಬೇಕು. ॥ ೨೧ ॥ ಅವನು ತನ್ನ ಜ್ಞಾನನಿಷ್ಠೆಯಿಂದ ಚಿತ್ತದ ಬಂಧನ ಹಾಗೂ ಮೋಕ್ಷವನ್ನು ಕುರಿತು ವಿಚಾರಮಾಡಬೇಕು. ಇಂದ್ರಿಯಗಳು ವಿಷಯಗಳಿಗಾಗಿ ವಿಕ್ಷಿಪ್ತ ವಾಗುವುದು – ಚಂಚಲವಾಗುವುದು, ಬಂಧನವಾಗಿದೆ. ಅವು ಗಳನ್ನು ಸಂಯಮದಲ್ಲಿರಿಸುವುದೇ ಮೋಕ್ಷವಾಗಿದೆ ಎಂದು ನಿಶ್ಚಯಿಸಿ ಕೊಳ್ಳಬೇಕು. ॥ ೨೨ ॥ ಅದಕ್ಕಾಗಿ ಸಂನ್ಯಾಸಿಯು ಮನ ಹಾಗೂ ಐದೂ ಜ್ಞಾನೇಂದ್ರಿಯಗಳನ್ನು ಗೆದ್ದುಕೊಳ್ಳಬೇಕು. ಭೋಗಗಳ ಕ್ಷುದ್ರತೆಯನ್ನು ಅರಿತುಕೊಂಡು, ಅವುಗಳಿಂದ ಸರ್ವಥಾ ವಿಮುಖ ನಾಗಬೇಕು. ತಾನೇ-ತನ್ನಲ್ಲಿ ಆನಂದವನ್ನು ಅನುಭವಿಸಬೇಕು. ಹೀಗೆ ಅವನು ನನ್ನ ಭಾವನೆಯಿಂದ ತುಂಬಿಕೊಂಡು ಪೃಥಿವಿಯಲ್ಲಿ ವಿಚರಿಸುತ್ತಿರಬೇಕು. ॥ ೨೩. ॥ ಪವಿತ್ರದೇಶ, ನದೀ, ಪರ್ವತ, ವನ, ಆಶ್ರಮಗಳಿಂದ ಪೂರ್ಣವಾದ ಪೃಥ್ವಿಯಲ್ಲಿ ಎಲ್ಲಿಯೂ ಮಮತೆ ಯನ್ನಿಡದೆ ತಿರುಗಾಡುತ್ತಾ ಇರಬೇಕು. ನಗರ, ಗ್ರಾಮ, ಗೋವಳರ ಹಟ್ಟಿ ಮೊದಲಾದವುಗಳಿಗೆ ಕೇವಲ ಭಿಕ್ಷೆಗಾಗಿ ಮಾತ್ರ ಹೋಗ ಬೇಕು. ॥ ೨೪ ॥ ಭಿಕ್ಷೆಯೂ ಹೆಚ್ಚಾಗಿ ವಾನಪ್ರಸ್ಥಿಗಳ ಆಶ್ರಮ ಗಳಿಂದಲೇ ಸ್ವೀಕರಿಸಬೇಕು; ಏಕೆಂದರೆ, ವಾನಪ್ರಸ್ಥಿಯಲ್ಲಿ ಶಿಲಾಂಧ ವಾಗಿರುವುದರಿಂದ ಪವಿತ್ರವಾಗುತ್ತದೆ. ಅದನ್ನು ತಿನ್ನುವುದರಿಂದ ಬೇಗನೇ ಮೋಹ ನಷ್ಟವಾಗುತ್ತದೆ. ಆದರಿಂದ ಚಿತ್ತಶುದ್ಧಿಯು ಶೀಘ್ರವಾಗಿ ಆಗುತ್ತದೆ. ॥ ೨೫ ॥

ಭಿಕ್ಷಾಂ ಚತುರ್ಷು ವರ್ಣೇಷು ವಿಗರ್ಹ್ಯಾನ್ವರ್ಜಯಂಶ್ಚರೇತ್ ।
ಸಪ್ತಾಗಾರಾನ್ಅಸಂಕ್ಲೃಪ್ತಾಂಸ್ತುಷ್ಯೇಲ್ಲಬ್ಧೇನ ತಾವತಾ
॥ ೧೪ ॥

ಬಹಿರ್ಜಲಾಶಯಂ ಗತ್ವಾ ತತ್ರೋಪಸ್ಪೃಶ್ಯ ವಾಗ್ಯತಃ ।
ವಿಭಜ್ಯ ಪಾವಿತಂ ಶೇಷಂ ಭುಂಜೀತಾಶೇಷಮಾಹೃತಮ್
॥ ೧೯ ॥

ಏಕಶ್ಚರೇನ್ಮಹೀಮೇತಾಂ ನಿಸ್ಸಂಗಃ ಸಂಯತೇಂದ್ರಿಯಃ ।
ಆತ್ಮಕ್ರೀಡ ಆತ್ಮರತ ಆತ್ಮವಾನ್ ಸಮದರ್ಶನಃ
॥ ೨೦ ॥

ವಿವಿಕ್ತಕ್ಷೇಮಶರಣೋ ಮದ್ಭಾವವಿಮಲಾಶಯಃ ।
ಆತ್ಮಾನಂ ಚಿಂತಯೇದೇಕಮಭೇದೇನ ಮಯಾ ಮುನಿಃ
॥ ೨೧ ॥

ಅನ್ವೀಕ್ಷೇತಾತ್ಮನೋ ಬಂಧಂ ಮೋಕ್ಷಂ ಚ ಜ್ಞಾನನಿಷ್ಠಯಾ ।
ಬಂಧ ಇಂದ್ರಿಯವಿಕ್ಷೇಪೋ ಮೋಕ್ಷ ಏಷಾಂ ಚ ಸಂಯಮಃ
॥ ೨೨ ॥

ತಸ್ಮಾನ್ನಿಯಮ್ಯ ಷಡ್ವರ್ಗಂ ಮದ್ಭಾವೇನ ಚರೇನ್ಮುನಿಃ ।
ವಿರಕ್ತಃ ಕ್ಷುಲ್ಲಕಾಮೇಭ್ಯೋ ಲಬ್ಧ್ವಾತ್ಮನಿ ಸುಖಂ ಮಹತ್
॥ ೨೩. ॥

ಪುರಗ್ರಾಮವ್ರಜಾನ್ ಸಾರ್ಥಾನ್ಭಿಕ್ಷಾರ್ಥಂ ಪ್ರವಿಶಂಶ್ಚರೇತ್ ।
ಪುಣ್ಯದೇಶಸರಿಚ್ಛೈಲವನಾಶ್ರಮವತೀಂ ಮಹೀಮ್
॥ ೨೪ ॥

ವಾನಪ್ರಸ್ಥಾಶ್ರಮಪದೇಷ್ವಭೀಕ್ಷ್ಣಂ ಭೈಕ್ಷ್ಯಮಾಚರೇತ್ ।
ಸಂಸಿಧ್ಯತ್ಯಾಶ್ವಸಂಮೋಹಃ ಶುದ್ಧಸತ್ತ್ವಃ ಶಿಲಾಂಧಸಾ
॥ ೨೫ ॥

ನೈತದ್ವಸ್ತುತಯಾ ಪಶ್ಯೇದ್ದೃಶ್ಯಮಾನಂ ವಿನಶ್ಯತಿ ।
ಅಸಕ್ತಚಿತ್ತೋ ವಿರಮೇದಿಹಾಮುತ್ರ ಚಿಕೀರ್ಷಿತಾತ್
॥ ೨೬ ॥

ವಿಚಾರವಂತ ಸಂನ್ಯಾಸಿಯು ದೃಶ್ಯಮಾನ ಜಗತ್ತನ್ನು ಎಂದಿಗೂ ಸತ್ಯವಾಗಿ ತಿಳಿಯಬಾರದು. ಏಕೆಂದರೆ, ಇದಾದರೋ ಪ್ರತ್ಯಕ್ಷವಾಗಿ ನಾಶವುಳ್ಳದ್ದಾಗಿದೆ. ಎಲ್ಲಿಯೂ ಆಸಕ್ತಿ ಇಡಬಾರದು. ಏನಾದರೂ ಮಾಡುವ ಇಚ್ಛೆ ಉಂಟಾದರೆ ಅದನ್ನೂ ಬಿಟ್ಟುಬಿಡಬೇಕು. ॥ ೨೬ ॥

ಯದೇತದಾತ್ಮನಿ ಜಗನ್ಮನೋವಾಕ್ ಪ್ರಾಣಸಂಹತಮ್ ।
ಸರ್ವಂ ಮಾಯೇತಿ ತರ್ಕೇಣ ಸ್ವಸ್ಥಸ್ತ್ಯಕ್ತ್ವಾ ನ ತತ್ಸ್ಮರೇತ್
॥ ೨೭ ॥

ಆತ್ಮನಲ್ಲಿರುವ – ಮನ, ವಾಣೀ ಮತ್ತು ಪ್ರಾಣಗಳ ಸಂಘಾತರೂಪೀ ಈ ಜಗತ್ತೆಲ್ಲವೂ ಪೂರ್ಣವಾಗಿ ಮಾಯಾಮಯವಾಗಿದೆ ಎಂದು ಸಂನ್ಯಾಸಿಯು ವಿಚಾರಮಾಡಬೇಕು. ಈ ತರ್ಕದಿಂದ ಇದನ್ನು ನಿರಾಕರಣಮಾಡಿ ಅರ್ಥಾತ್ – ಇದನ್ನು ತ್ಯಜಿಸಿ, ಆತ್ಮಸ್ವರೂಪದಲ್ಲಿ ಸ್ಥಿತನಾಗಿ, ಮತ್ತೆ ಎಂದಿಗೂ ಅದನ್ನು ಸ್ಮರಿಸಬಾರದು. ॥ ೨೭ ॥

ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾನಪೇಕ್ಷಕಃ ।
ಸಲಿಂಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ
॥ ೨೮ ॥

ಜ್ಞಾನನಿಷ್ಠ ವಿರಕ್ತ ಸಂನ್ಯಾಸಿ ಮತ್ತು ಯಾವ ಅಪೇಕ್ಷೆಯೂ ಇಲ್ಲದಿರುವ, ನನ್ನನ್ನೇ ಆಶ್ರಯಿಸಿದ ನನ್ನ ಭಕ್ತನಿಗಾಗಿ ಚಿಹ್ನೆ ಅಥವಾ ಆಶ್ರಮದ ಯಾವ ಆವಶ್ಯಕತೆಯೂ ಇಲ್ಲ. ಇವರು ವೇದಶಾಸ್ತ್ರಗಳ ವಿಧಿ-ನಿಷೇಧಗಳಿಂದ ಅತೀತರಾಗಿ ಸ್ವಚ್ಛಂದವಾಗಿ ವಿಚರಿಸಬೇಕು. ॥ ೨೮ ॥

ಬುಧೋ ಬಾಲಕವತ್ಕ್ರೀಡೇತ್ಕುಶಲೋ ಜಡವಚ್ಚರೇತ್ ।
ವದೇದುನ್ಮತ್ತವದ್ವಿದ್ವಾನ್ ಗೋಚರ್ಯಾಂ ನೈಗಮಶ್ಚರೇತ್
॥ ೨೯ ॥

ನನ್ನ ಅವಧೂತ ಭಕ್ತನು ಬುದ್ಧಿವಂತನಾಗಿದ್ದರೂ ಬಾಲಕರಂತೆ ಆಟವಾಡಲಿ. ನಿಪುಣನಾಗಿದ್ದರೂ ಜಡನಂತೆಯೇ ವರ್ತಿಸಲಿ. ವಿದ್ವಾಂಸನಾಗಿದ್ದರೂ ಹುಚ್ಚನಂತೆ ಮಾತು-ಕತೆಯಾಡಲಿ. ಸಮಸ್ತ ವೇದ-ವಿಧಿಗಳನ್ನು ಅರಿತಿದ್ದರೂ ಪಶುವೃತ್ತಿಯಿಂದ, ಅರ್ಥಾತ್ – ಅನಿಯತ ಆಚಾರ ಮಾಡುವವನಂತೆ ಇರಬೇಕು. ॥ ೨೯ ॥

ವೇದವಾದರತೋ ನ ಸ್ಯಾನ್ನ ಪಾಖಂಡೀ ನ ಹೈತುಕಃ ।
ಶುಷ್ಕವಾದವಿವಾದೇ ನ ಕಂಚಿತ್ಪಕ್ಷಂ ಸಮಾಶ್ರಯೇತ್
॥ ೩೦ ॥

ಅವನು ವೇದಗಳ ಕರ್ಮಕಾಂಡ ಭಾಗದ ವ್ಯಾಖ್ಯೆಯಲ್ಲಿ ತೊಡಗಬಾರದು. ವೇದವನ್ನು ನಿಂದಿಸುವ ಪಾಖಂಡ (ನಾಸ್ತಿಕ)ನೂ ಆಗಿರಬಾರದು. ತರ್ಕ-ವಿತರ್ಕದಿಂದ ದೂರವುಳಿಯಬೇಕು. ನಿಷ್ಪಯೋಜಕವಾದ ವಿವಾದಗಳಲ್ಲಿ ಯಾವುದೇ ಪಕ್ಷವನ್ನು ವಹಿಸಿಕೊಳ್ಳ ಬಾರದು. ॥ ೩೦ ॥

ನೋದ್ವಿಜೇತ ಜನಾದ್ಧೀರೋ ಜನಂ ಚೋದ್ವೇಜಯೇನ್ನತು ।
ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ ।
ದೇಹಮುದ್ದಿಶ್ಯ ಪಶುವದ್ ವೈರಂ ಕುರ್ಯಾನ್ನ ಕೇನಚಿತ್
॥ ೩೧ ॥

ಧೀರನಾದ ನನ್ನ ಪರಮಹಂಸ ಭಕ್ತನು ಜನರ ಆಚರಣೆಗಳಿಂದ ಉದ್ವಿಗ್ನನಾಗುವುದಿಲ್ಲ, ತನ್ನ ಆಚರಣೆಯಿಂದ ಯಾವ ಪ್ರಾಣಿಯನ್ನು ಉದ್ವಿಗ್ನಗೊಳಿಸುವುದಿಲ್ಲ. ತನ್ನ ಕುರಿತು ಯಾರಾದರೂ ನಿಂದಿಸಿದರೆ ಸಂತೋಷವಾಗಿ ಸಹಿಸುತ್ತಾನೆ. ಯಾರ ಅಪಮಾನವನ್ನೂ ಮಾಡುವುದಿಲ್ಲ. ದೇಹದ ಸಲುವಾಗಿ ಪಶುಗಳಂತೆ ಯಾರೊಡನೆಯೂ ದ್ವೇಷ ಕಟ್ಟಿಕೊಳ್ಳುವುದಿಲ್ಲ. ॥ ೩೧ ॥

ಏಕ ಏವ ಪರೋ ಹ್ಯಾತ್ಮಾ ಭೂತೇಷ್ವಾತ್ಮನ್ಯವಸ್ಥಿತಃ ।
ಯಥೇನ್ದುರುದಪಾತ್ರೇಷು ಭೂತಾನ್ಯೇಕಾತ್ಮಕಾನಿ ಚ
॥ ೩೨ ॥

ನೀರು ತುಂಬಿಟ್ಟ ವಿಭಿನ್ನ ಪಾತ್ರೆಗಳಲ್ಲಿ ಚಂದ್ರನು ಬೇರೆ-ಬೇರೆಯಾಗಿ ಪ್ರತಿಬಿಂಬಿಸುವಂತೆ, ಒಬ್ಬನೇ ಪರಮಾತ್ಮನು ಸಮಸ್ತ ಪ್ರಾಣಿಗಳಲ್ಲಿ ಮತ್ತು ತನ್ನಲ್ಲಿಯೂ ಸ್ಥಿತನಾಗಿದ್ದಾನೆ. ಎಲ್ಲರ ಆತ್ಮನಾದರೋ ಒಂದೇ ಆಗಿದೆ. ಎಲ್ಲ ಪ್ರಾಣಿಗಳ ಶರೀರವೂ ಕೂಡ ಒಂದೇ ರೀತಿಯ ಪಂಚಭೂತಗಳಿಂದ ಉಂಟಾಗಿದೆ. ಆದ್ದರಿಂದ ಅವುಗಳಲ್ಲಿರುವ ಪ್ರಾಣವೂ ಒಂದೇ ಆಗಿದೆ ಎಂಬ ತತ್ತ್ವವನ್ನು ನನ್ನ ಪರಮಹಂಸಭಕ್ತನು ಚೆನ್ನಾಗಿ ತಿಳಿದಿರುತ್ತಾನೆ. (ಇಂತಹ ಅವಸ್ಥೆಯಲ್ಲಿ ಯಾರೊಂದಿಗಾದರೂ ವೈರ-ವಿರೋಧ ಮಾಡಿದರೆ ತನ್ನೊಂದಿಗೆ ವೈರ-ವಿರೋಧಮಾಡಿದಂತೆ.) ॥ ೩೨ ॥

ಅಲಬ್ಧ್ವಾ ನ ವಿಷೀದೇತ ಕಾಲೇ ಕಾಲೇಽಶನಂ ಕ್ವಚಿತ್ ।
ಲಬ್ಧ್ವಾ ನ ಹೃಷ್ಯೇದ್ಧೃತಿಮಾನುಭಯಂ ದೈವತಂತ್ರಿತಮ್
॥ ೩೩ ॥

ಪ್ರಿಯ ಉದ್ಧವಾ! ಧೈರ್ಯಶಾಲಿಯಾದ ಸಂನ್ಯಾಸಿಯು ಎಂದಾದರೂ ಒಂದುದಿನ ಭಿಕ್ಷೆಯು ದೊರೆಯದಿದ್ದರೆ ವಿಷಾದಿಸಬಾರದು. ಕಾಲ-ಕಾಲಕ್ಕೆ ಸರಿಯಾಗಿ ಸಿಗುತ್ತಿದ್ದರೆ ಹರ್ಷಿತನಾಗಬಾರದು. ಭಿಕ್ಷೆ ದೊರೆಯುವುದು ದೊರಕದಿರುವುದು ಎರಡೂ ಪ್ರಾರಬ್ಧಕ್ಕಧೀನವೆಂದು ಭಾವಿಸಬೇಕು. ॥ ೩೩ ॥

ಆಹಾರಾರ್ಥಂ ಸಮೀಹೇತ ಯುಕ್ತಂ ತತ್ ಪ್ರಾಣಧಾರಣಮ್ ।
ತತ್ತ್ವಂ ವಿಮೃಶ್ಯತೇ ತೇನ ತದ್ವಿಜ್ಞಾಯ ವಿಮುಚ್ಯತೇ
॥ ೩೪ ॥

ಯದೃಚ್ಛಯೋಪಪನ್ನಾನ್ನಮದ್ಯಾಚ್ಛ್ರೇಷ್ಠ ಮುತಾಪರಮ್ ।
ತಥಾ ವಾಸಸ್ತಥಾ ಶಯ್ಯಾಂ ಪ್ರಾಪ್ತಂ ಪ್ರಾಪ್ತಂ ಭಜೇನ್ಮುನಿಃ
॥ ೩೫ ॥

ಶೌಚಮಾಚಮನಂ ಸ್ನಾನಂ ನ ತು ಚೋದನಯಾ ಚರೇತ್ ।
ಅನ್ಯಾಂಶ್ಚ ನಿಯಮಾನ್ ಜ್ಞಾನೀ ಯಥಾಹಂ ಲೀಲಯೇಶ್ವರಃ
॥ ೩೬ ॥

ನ ಹಿ ತಸ್ಯ ವಿಕಲ್ಪಾಖ್ಯಾ ಯಾ ಚ ಮದ್ವೀಕ್ಷಯಾ ಹತಾ ।
ಆದೇಹಾಂತಾತ್ ಕ್ವಚಿತ್ ಖ್ಯಾತಿಸ್ತತಃ ಸಂಪದ್ಯತೇ ಮಯಾ
॥ ೩೭ ॥

ದುಃಖೋದರ್ಕೇಷು ಕಾಮೇಷು ಜಾತನಿರ್ವೇದ ಆತ್ಮವಾನ್ ।
ಅಜಿಜ್ಞಾಸಿತಮದ್ಧರ್ಮೋ ಗುರುಂ ಮುನಿಮುಪಾವ್ರಜೇತ್
॥ ೩೮ ॥

ತಾವತ್ಪರಿಚರೇದ್ಭಕ್ತಃ ಶ್ರದ್ಧಾವಾನನಸೂಯಕಃ ।
ಯಾವದ್ಬ್ರಹ್ಮ ವಿಜಾನೀಯಾನ್ಮಾಮೇವ ಗುರುಮಾದೃತಃ
॥ ೩೯ ॥

ಯಸ್ತ್ವಸಂಯತಷಡ್ವರ್ಗಃ ಪ್ರಚಂಡೇಂದ್ರಿಯಸಾರಥಿಃ ।
ಜ್ಞಾನವೈರಾಗ್ಯರಹಿತಸ್ತ್ರಿದಂಡಮುಪಜೀವತಿ
॥ ೪೦ ॥

ಸುರಾನಾತ್ಮಾನಮಾತ್ಮಸ್ಥಂ ನಿಹ್ನುತೇ ಮಾಂ ಚ ಧರ್ಮಹಾ ।
ಅವಿಪಕ್ವಕಷಾಯೋಽಸ್ಮಾದಮುಷ್ಮಾಚ್ಚ ವಿಹೀಯತೇ
॥ ೪೧ ॥

ಸಂನ್ಯಾಸಿಯಾದವನು ಭಿಕ್ಷೆಯನ್ನು ಅವಶ್ಯವಾಗಿ ಬೇಡಲೇ ಬೇಕು. ಹೀಗೆ ಮಾಡುವುದು ಉಚಿತವೂ ಆಗಿದೆ. ಏಕೆಂದರೆ, ಭಿಕ್ಷೆಯಿಂದಲೇ ಪ್ರಾಣಗಳ ರಕ್ಷಣೆಯಾಗುತ್ತದೆ. ಪ್ರಾಣಗಳು ಉಳಿಯುವುದರಿಂದಲೇ ತತ್ತ್ವದ ವಿಚಾರವಾಗುತ್ತದೆ. ತತ್ತ್ವವಿಚಾರದಿಂದ ತತ್ತ್ವಜ್ಞಾನ ಉಂಟಾಗಿ ಮುಕ್ತಿ ದೊರೆಯುತ್ತದೆ. ॥ ೩೪ ॥ ಸಂನ್ಯಾಸಿಗೆ ಪ್ರಾರಬ್ಧಕ್ಕನುಸಾರ ದೊರೆಯುವ ಭಿಕ್ಷೆಯು ಒಳ್ಳೆದಾಗಲಿ-ಕೆಟ್ಟದಾಗಲೀ ಅದರಿಂದಲೇ ಹೊಟ್ಟೆತುಂಬಿಸಿಕೊಳ್ಳಬೇಕು. ವಸ್ತ್ರ ಮತ್ತು ಹಾಸಿಗೆಯೂ ಕೂಡ ಹೇಗೆ ದೊರೆಯುವುದೋ ಅದರಿಂದಲೇ ನಿರ್ವಾಹ ಮಾಡಬೇಕು. ಅದರಲ್ಲಿ ಒಳ್ಳೆಯದು ಕೆಟ್ಟದು ಎಂಬುದನ್ನು ಕಲ್ಪಿಸಬಾರದು. ॥ ೩೫ ॥ ಪ್ರಪಂಚದಲ್ಲಿ ಈಶ್ವರನಾದ ನನಗೆ ಮಾಡಬೇಕಾದ ಯಾವ ಕರ್ತವ್ಯವೂ ಇಲ್ಲದಿದ್ದರೂ ಲೋಕಸಂಗ್ರಹಾರ್ಥ ಲೀಲೆಯಿಂದಲೇ ಶೌಚಾಚಮನ ಸ್ನಾನಗಳನ್ನು ಶಾಸ್ತ್ರೋಕ್ತವಾಗಿ ನಾನು ಮಾಡುವಂತೆ, ಜ್ಞಾನಿಯೂ ಶೌಚಾಚಮನ ಸ್ನಾನಾದಿ ನಿಯಮಗಳನ್ನು ಲೋಕ ಸಂಗ್ರಹಾರ್ಥವಾಗಿ ಪಾಲಿಸಬೇಕು. ಶಾಸ್ತ್ರವು ಹೇಳಿದೆ ಎಂಬ ಕಾರಣದಿಂದ ಅದಕ್ಕೆ ಅಂಟಿಕೊಂಡು ಕರ್ಮಮಾಡುವ ಅವಶ್ಯಕತೆ ನನ್ನಂತೆ ಜ್ಞಾನಿಗೂ ಇರುವುದಿಲ್ಲ ॥ ೩೬ ॥ ಜ್ಞಾನಿಯಾದವನು ಏಕಮಾತ್ರ ಭಗವಂತನನ್ನೇ ಎಲ್ಲೆಡೆ ನೋಡುತ್ತಾನೆ. ಆದ್ದರಿಂದ ಭಗವಂತನು ಇದ್ದಾನೆ ಅಥವಾ ಇಲ್ಲ ಎಂಬ ಭೇದದ ಪ್ರತೀತಿಯೂ ಅವನಿಗಿರುವುದಿಲ್ಲ. ಶರೀರ ಬಿದ್ದುಹೋಗುವ ಮೊದಲು ಎಂದಾದರೂ ಶಾರೀರಿಕ ಕಷ್ಟದಿಂದಾಗಿ ಕೆಲಸಮಯ ಭೇದದ ಪ್ರತೀತಿ ಉಂಟಾದರೂ ಮರಣಾನಂತರ ಅವನು ನನ್ನನ್ನೇ ಸೇರುತ್ತಾನೆ. ॥ ೩೭ ॥

ಉದ್ಧವನೇ ! ಜಿತೇಂದ್ರಿಯ ಪುರುಷನಿಗೆ ಸಾಂಸಾರಿಕ ವಿಷಯ ಭೋಗಗಳ ಫಲವು ದುಃಖವೇ ಆಗಿದೆ ಎಂಬ ನಿಶ್ಚಯವಾದಾಗ, ಅವನು ವಿರಕ್ತನಾಗುವನು. ಅವನು ನನ್ನ ಪ್ರಾಪ್ತಿಯ ಸಾಧನೆಗಳನ್ನು ತಿಳಿಯದಿದ್ದರೆ, ಭಗವಚ್ಚಿಂತನದಲ್ಲಿ ತನ್ಮಯನಾದ ಬ್ರಹ್ಮನಿಷ್ಠ ಸದ್ಗುರುವಿನಲ್ಲಿ ಶರಣುಹೋಗಬೇಕು. ॥ ೩೮ ॥ ಅವನು ಗುರುವಿನಲ್ಲಿ ದೃಢಭಕ್ತಿಗೈದು, ಶ್ರದ್ಧೆಯಿಡಬೇಕು ಮತ್ತು ಅವರಲ್ಲಿ ಎಂದೂ ದೋಷದೃಷ್ಟಿ ಇರಿಸಬಾರದು. ಬ್ರಹ್ಮಜ್ಞಾನ ಆಗುವವರೆಗೆ ತುಂಬಾ ಆದರದಿಂದ ನನ್ನನ್ನೇ ಗುರುವಿನ ರೂಪದಲ್ಲಿ ಅರಿತುಕೊಂಡು ಅವರನ್ನು ಸೇವಿಸಬೇಕು. ॥ ೩೯॥ ಆದರೆ ಐದು ಇಂದ್ರಿಯಗಳು ಮತ್ತು ಮನಸ್ಸು ಈ ಅರರ ಮೇಲೆ ವಿಜಯವನ್ನು ಪಡೆಯದವನು, ಇಂದ್ರಿಯರೂಪೀ ಕುದುರೆಗಳು, ಬುದ್ಧಿರೂಪೀ ಸಾರಥಿಯೂ ಕೆಟ್ಟುಹೋಗಿರುವವನು, ಹೃದಯದಲ್ಲಿ ಜ್ಞಾನ-ವೈರಾಗ್ಯವಿಲ್ಲದವನು, ತ್ರಿದಂಡಿ ಸಂನ್ಯಾಸಿಯ ವೇಷ ತೊಟ್ಟುಕೊಂಡು ಹೊಟ್ಟೆಹೊರೆಯುತ್ತಿದ್ದರೆ, ಅವನು ಸಂನ್ಯಾಸ ಧರ್ಮವನ್ನು ನಾಶಮಾಡುತ್ತಿದ್ದಾನೆ ಹಾಗೂ ತನ್ನ ಹೃದಯದಲ್ಲಿದ್ದ ನನ್ನನ್ನು ಮೋಸಗೊಳಿಸುವ ಚೇಷ್ಟೆ ಮಾಡುತ್ತಾನಷ್ಟೆ. ಇನ್ನೂ ಆ ವೇಷಮಾತ್ರದ ಸಂನ್ಯಾಸಿಯ ವಾಸನೆಗಳು ಕ್ಷೀಣವಾಗಲಿಲ್ಲ; ಅದರಿಂದ ಅವನು ಈ ಲೋಕ ಮತ್ತು ಪರಲೋಕ ಎರಡರಿಂದಲೂ ವಂಚಿತನಾಗಿ ಭ್ರಷ್ಟನಾಗುತ್ತಾನೆ. ॥ ೪೦-೪೧ ॥

ಭಿಕ್ಷೋರ್ಧರ್ಮಃ ಶಮೋऽಹಿಂಸಾ ತಪ ಈಕ್ಷಾ ವನೌಕಸಃ ।
ಗೃಹಿಣೋ ಭೂತರಕ್ಷೇಜ್ಯಾ ದ್ವಿಜಸ್ಯಾಚಾರ್ಯಸೇವನಮ್
॥ ೪೨ ॥

ಬ್ರಹ್ಮಚರ್ಯಂ ತಪಃ ಶೌಚಂ ಸಂತೋಷೋ ಭೂತಸೌಹೃದಮ್ ।
ಗೃಹಸ್ಥಸ್ಯಾಪ್ಯೃತೌ ಗಂತುಃ ಸರ್ವೇಷಾಂ ಮದುಪಾಸನಮ್
॥ ೪೩ ॥

ಇತಿ ಮಾಂ ಯಃ ಸ್ವಧರ್ಮೇಣ ಭಜನ್ನಿತ್ಯಮನನ್ಯಭಾಕ್ ।
ಸರ್ವಭೂತೇಷು ಮದ್ಭಾವೋ ಮದ್ ಭಕ್ತಿಂ ವಿಂದತೇ ದೃಢಾಮ್
॥ ೪೪ ॥

ಭಕ್ತ್ಯೋದ್ಧವಾನಪಾಯಿನ್ಯಾ ಸರ್ವಲೋಕಮಹೇಶ್ವರಮ್ ।
ಸರ್ವೋತ್ಪತ್ತ್ಯಪ್ಯಯಂ ಬ್ರಹ್ಮ ಕಾರಣಂ ಮೋಪಯಾತಿ ಸಃ
॥ ೪೫ ॥

ಇತಿ ಸ್ವಧರ್ಮನಿರ್ಧೂತಸತ್ತ್ವೋ ನಿರ್ಜ್ಞಾತಮದ್ಗತಿಃ ।
ಜ್ಞಾನವಿಜ್ಞಾನಸಂಪನ್ನೋ ನಚಿರಾತ್ಸಮುಪೈತಿ ಮಾಮ್
॥ ೪೬ ॥

ವರ್ಣಾಶ್ರಮವತಾಂ ಧರ್ಮ ಏಷ ಆಚಾರಲಕ್ಷಣಃ ।
ಸ ಏವ ಮದ್ಭಕ್ತಿಯುತೋ ನಿಃಶ್ರೇಯಸಕರಃ ಪರಃ
॥ ೪೭ ॥

ಏತತ್ತೇऽಭಿಹಿತಂ ಸಾಧೋ
ಭವಾನ್ ಪೃಚ್ಛತಿ ಯಚ್ಚ ಮಾಮ್ ।
ಯಥಾ ಸ್ವಧರ್ಮಸಂಯುಕ್ತೋ
ಭಕ್ತೋ ಮಾಂ ಸಮಿಯಾತ್ಪರಮ್ ॥ ೪೮ ॥

ಶಾಂತಿ ಮತ್ತು ಅಹಿಂಸೆ ಇವು ಸಂನ್ಯಾಸಿಯ ಮುಖ್ಯ ಧರ್ಮಗಳು. ತಪಸ್ಸು ಹಾಗೂ ಭಗವದ್ಭಾವ ವಾನಪ್ರಸ್ಥಿಯ ಮುಖ್ಯ ಧರ್ಮಗಳು. ಪ್ರಾಣಿಗಳ ರಕ್ಷಣೆ, ಯಜ್ಞ-ಯಾಗ ಮಾಡುವುದು, ಇವು ಗೃಹಸ್ಥನ ಮುಖ್ಯ ಧರ್ಮಗಳಾದರೆ, ಬ್ರಹ್ಮಚಾರಿಯ ಮುಖ್ಯ ಧರ್ಮ ಆಚಾರ್ಯರ ಸೇವೆ ಆಗಿದೆ. ॥ ೪೨ ॥ ಗೃಹಸ್ಥನು ಋತು ಕಾಲದಲ್ಲಿ ಮಾತ್ರವೇ ಭಾರ್ಯೆಯೊಡನೆ ಸಮಾಗಮಮಾಡಲಿ. ಅವನಿಗಾಗಿಯೂ ಬ್ರಹ್ಮಚರ್ಯ, ತಪಸ್ಸು, ಶೌಚ, ಸಂತೋಷ, ಸಮಸ್ತಪ್ರಾಣಿಗಳಲ್ಲಿ ಪ್ರೇಮಭಾವ ಇವು ಮುಖ್ಯ ಧರ್ಮಗಳಾಗಿವೆ. ನನ್ನ ಉಪಾಸನೆಯಾದರೋ ಎಲ್ಲರೂ ಮಾಡಬೇಕು. ॥ ೪೩ ॥ ಈ ವಿಧವಾಗಿ ಅನನ್ಯ ಭಾವದಿಂದ ತನ್ನ ವರ್ಣಾಶ್ರಮದ ಮೂಲಕ ನನ್ನ ಸೇವೆಯಲ್ಲಿ ತೊಡಗಿದ್ದು ಸಮಸ್ತ ಪ್ರಾಣಿಗಳಲ್ಲಿ ನನ್ನ ಭಾವನೆ ಇರಿಸುವ ಮನುಷ್ಯನಿಗೆ ನನ್ನ ಅವಿಚಲ ಭಕ್ತಿಯು ಪ್ರಾಪ್ತವಾಗುತ್ತದೆ. ॥ ೪೪ ॥ ಉದ್ಧವನೇ ! ನಾನೇ ಸಮಸ್ತ ಲೋಕಗಳ ಏಕಮಾತ್ರ ಸ್ವಾಮಿಯೂ, ಎಲ್ಲರ ಉತ್ಪತ್ತಿ, ಪ್ರಳಯದ ಪರಮ ಕಾರಣ ಬ್ರಹ್ಮನೂ ಆಗಿರುವೆನು. ನಿತ್ಯ-ನಿರಂತರ ಅಖಂಡ ಭಕ್ತಿಯಿಂದ ಅವನು ನನ್ನನ್ನೇ ಪಡೆದುಕೊಳ್ಳುವನು. ॥ ೪೫ ॥ ಈ ಪ್ರಕಾರ ಆ ಗೃಹಸ್ಥನು ತನ್ನ ಧರ್ಮಪಾಲನೆಯಿಂದ ಅಂತಃಕರಣವನ್ನು ಚೆನ್ನಾಗಿ ಶುದ್ಧಮಾಡಿಕೊಂಡು ನನ್ನ ಐಶ್ವರ್ಯ-ಸ್ವರೂಪವನ್ನು ತಿಳಿದುಕೊಳ್ಳುವನು ಹಾಗೂ ಜ್ಞಾನ-ವಿಜ್ಞಾನದಿಂದ ಸಂಪನ್ನನಾಗಿ ಬೇಗನೇ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೪೬ ॥ ನಾನು ನಿನಗೆ ಈ ಸದಾಚಾರರೂಪೀ ವರ್ಣಾಶ್ರಮಿಗಳ ಧರ್ಮವನ್ನು ಹೇಳಿರುವೆನು. ಈ ಧರ್ಮಾನುಷ್ಠಾನದಲ್ಲಿ ನನ್ನ ಭಕ್ತಿಯಿಂದಲೂ ಸಂಪನ್ನನಾದರೆ ಇದರಿಂದ ಆಯಾಸವಿಲ್ಲದೆಯೇ ಪರಮ ಶ್ರೇಯಸ್ಕರವಾದ ಮೋಕ್ಷದ ಪ್ರಾಪ್ತಿಯಾಗಿ ಹೋಗುತ್ತದೆ. ॥ ೪೭ ॥ ಸಾಧು ಶಿರೋಮಣಿ ಉದ್ಧವಾ ! ನೀನು ನನ್ನಲ್ಲಿ ಪ್ರಶ್ನಿಸಿದುದರ ಉತ್ತರವನ್ನು ನಾನು ಕೊಟ್ಟಿರುವೆನು. ತನ್ನ ಧರ್ಮವನ್ನು ಪಾಲಿಸುವ ಭಕ್ತನು ಪರಬ್ರಹ್ಮಸ್ವರೂಪೀ ನನ್ನನ್ನು ಹೇಗೆ ಪಡೆದುಕೊಳ್ಳುತ್ತಾನೆ ಎಂಬುದನ್ನೂ ಹೇಳಿರುವೆನು. ॥ ೪೮ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಅಷ್ಟಾದಶೋऽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಜ್ಞಾನ, ಭಕ್ತಿ , ಯಮ, ನಿಯಮ ಮುಂತಾದ ಸಾಧನೆಗಳ ವರ್ಣನೆ

ಶ್ರೀಭಗವಾನುವಾಚ

ಯೋ ವಿದ್ಯಾಶ್ರುತಸಂಪನ್ನ
ಆತ್ಮವಾನ್ ನಾನುಮಾನಿಕಃ ।
ಮಾಯಾಮಾತ್ರಮಿದಂ ಜ್ಞಾತ್ವಾ
ಜ್ಞಾನಂ ಚ ಮಯಿ ಸಂನ್ಯಸೇತ್ ॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಎಲೈ ಉದ್ಧವನೇ ! ಉಪನಿಷದಾದಿ ಶಾಸ್ತ್ರಗಳ ಶ್ರವಣ, ಮನನ, ನಿದಿಧ್ಯಾಸನದ ಮೂಲಕ ಆತ್ಮಸಾಕ್ಷಾತ್ಕಾರ ಪಡೆದಿರುವವನು, ಶ್ರೋತ್ರಿಯ ಹಾಗೂ ಬ್ರಹ್ಮನಿಷ್ಠನಾಗಿರುವವನು, ನಿಶ್ಚಯವು ಕೇವಲ ಯುಕ್ತಿಗಳಿಂದ ಮತ್ತು ಅನುಮಾನದಿಂದ ಪ್ರತ್ಯಕ್ಷವಾಗಿ ಇದೆಲ್ಲವೂ ಮಾಯಾಮಯವಾಗಿದೆ ಎಂಬ ಅನುಭವವನ್ನು ಪಡೆದಿರುವವನು ಪಡೆದ ಜ್ಞಾನವನ್ನೂ ನನ್ನಲ್ಲೇ ಲೀನಗೊಳಿಸಲಿ. ॥ ೧ ॥

ಜ್ಞಾನಿನಸ್ತ್ವಹಮೇವೇಷ್ಟಃ ಸ್ವಾರ್ಥೋ ಹೇತುಶ್ಚ ಸಂಮತಃ ।
ಸ್ವರ್ಗಶ್ಚೈವಾಪವರ್ಗಶ್ಚ ನಾನ್ಯೋಽರ್ಥೋ ಮದೃತೇ ಪ್ರಿಯಃ
॥ ೨ ॥

ಜ್ಞಾನವಿಜ್ಞಾನಸಂಸಿದ್ಧಾಃ ಪದಂ ಶ್ರೇಷ್ಠಂ ವಿದುರ್ಮಮ ।
ಜ್ಞಾನೀ ಪ್ರಿಯತಮೋಽತೋ ಮೇ ಜ್ಞಾನೇನಾಸೌ ಬಿಭರ್ತಿ ಮಾಮ್
॥ ೩ ॥

ತಪಸ್ತೀರ್ಥಂ ಜಪೋ ದಾನಂ ಪವಿತ್ರಾಣೀತರಾಣಿ ಚ ।
ನಾಲಂ ಕುರ್ವಂತಿ ತಾಂ ಸಿದ್ಧಿಂ ಯಾ ಜ್ಞಾನಕಲಯಾ ಕೃತಾ
॥ ೪ ॥

ತಸ್ಮಾಜ್ಜ್ಞಾನೇನ ಸಹಿತಂ ಜ್ಞಾತ್ವಾ ಸ್ವಾತ್ಮಾನಮುದ್ಧವ ।
ಜ್ಞಾನವಿಜ್ಞಾನಸಂಪನ್ನೋ ಭಜ ಮಾಂ ಭಕ್ತಿಭಾವಿತಃ
॥ ೫ ॥

ಜ್ಞಾನವಿಜ್ಞಾನಯಜ್ಞೇನ ಮಾಮಿಷ್ಟ್ವಾಽಽತ್ಮಾನಮಾತ್ಮನಿ ।
ಸರ್ವಯಜ್ಞಪತಿಂ ಮಾಂ ವೈ ಸಂಸಿದ್ಧಿಂ ಮುನಯೋಽಗಮನ್
॥ ೬ ॥

ತ್ವಯ್ಯುದ್ಧವಾಶ್ರಯೇತಿ ಯಸ್ತ್ರಿವಿಧೋ ವಿಕಾರೋ
ಮಾಯಾಂತರಾಽಽಪತತಿ ನಾದ್ಯಪವರ್ಗಯೋರ್ಯತ್ ।
ಜನ್ಮಾದಯೋಽಸ್ಯ ಯದಮೀ ತವ ತಸ್ಯ ಕಿಂ ಸ್ಯು-
ರಾದ್ಯಂತಯೋರ್ಯದಸತೋಽಸ್ತಿ ತದೇವ ಮಧ್ಯೇ
॥ ೭ ॥

ಉದ್ಧವ ಉವಾಚ

ಜ್ಞಾನಂ ವಿಶುದ್ಧಂ ವಿಪುಲಂ ಯದೈತದ್
ವೈರಾಗ್ಯವಿಜ್ಞಾನಯುತಂ ಪುರಾಣಮ್ ।
ಆಖ್ಯಾಹಿ ವಿಶ್ವೇಶ್ವರ ವಿಶ್ವಮೂರ್ತೇ
ತ್ವದ್ಭಕ್ತಿಯೋಗಂ ಚ ಮಹದ್ವಿಮೃಗ್ಯಮ್ ॥ ೮ ॥

ತಾಪತ್ರಯೇಣಾಭಿಹತಸ್ಯ ಘೋರೇ
ಸಂತಪ್ಯಮಾನಸ್ಯ ಭವಾಧ್ವನೀಶ ।
ಪಶ್ಯಾಮಿ ನಾನ್ಯಚ್ಚರಣಂ ತವಾಂಘ್ರಿ-
ದ್ವಂದ್ವಾತಪತ್ರಾದಮೃತಾಭಿವರ್ಷಾತ್
॥ ೯ ॥

ದಷ್ಟಂ ಜನಂ ಸಂಪತಿತಂ ಬಿಲೇಽಸ್ಮಿನ್
ಕಾಲಾಹಿನಾ ಕ್ಷುದ್ರಸುಖೋರುತರ್ಷಮ್ ।
ಸಮುದ್ಧರೈನಂ ಕೃಪಯಾಽಽಪವರ್ಗ್ಯೈಃ
ವಚೋಭಿರಾಸಿಂಚ ಮಹಾನುಭಾವ ॥ ೧೦ ॥

ಜ್ಞಾನಿಗೆ ಅಭೀಷ್ಟವಸ್ತುವು ನಾನೇ ಆಗಿದ್ದೇನೆ. ಅವನ ಸಾಧನೆ ಸಾಧ್ಯ, ಸ್ವರ್ಗ ಮತ್ತು ಅಪವರ್ಗ (ಮೋಕ್ಷ)ವೂ ನಾನೇ ಆಗಿದ್ದೇನೆ. ನಾನಲ್ಲದೆ ಬೇರೆ ಯಾವ ಪದಾರ್ಥವನ್ನು ಅವನು ಪ್ರೇಮಿಸುವುದಿಲ್ಲ. ॥ ೨ ॥ ಜ್ಞಾನ-ವಿಜ್ಞಾನದಿಂದ ಸಂಪನ್ನನಾದ ಸಿದ್ಧ ಪುರುಷನೇ ನನ್ನ ವಾಸ್ತವಿಕ ಸ್ವರೂಪವನ್ನು ಪರಮಪದವನ್ನು ಅರಿಯುತ್ತಾನೆ. ಅದಕ್ಕಾಗಿ ಜ್ಞಾನಿಯು ನನಗೆ ಪ್ರಿಯನಾಗಿದ್ದಾನೆ. ಉದ್ಧವನೇ ! ಜ್ಞಾನಿಯು ತನ್ನ ಜ್ಞಾನದಿಂದ ನಿರಂತರವಾಗಿ ನನ್ನನ್ನು ತನ್ನ ಅಂತಃಕರಣದಲ್ಲಿ ಧರಿಸಿಕೊಂಡಿರುತ್ತಾನೆ. ॥ ೩ ॥ ಜ್ಞಾನದ ಒಂದು ಕಲೆಯಿಂದ ದೊರೆಯಬಹುದಾದ ಸಿದ್ಧಿಯು, ತಪಸ್ಸು, ತೀರ್ಥಯಾತ್ರೆ, ಜಪ, ದಾನ, ಅಥವಾ ಬೇರೆ ಪವಿತ್ರ ಕ್ರಿಯಾಕಲಾಪಗಳಿಂದ ಸಿಗಲಾರದು. ॥ ೪ ॥

ಅದಕ್ಕಾಗಿ ಪ್ರೀತಿಯ ಉದ್ಧವನೇ ! ನೀನು ಜ್ಞಾನದ ಸಹಿತ ನಿನ್ನ ಆತ್ಮಸ್ವರೂಪವನ್ನು ಅರಿತುಕೋ. ಮತ್ತೆ ಜ್ಞಾನ-ವಿಜ್ಞಾನದಿಂದ ಸಂಪನ್ನನಾಗಿ ಭಕ್ತಿಭಾವದಿಂದ ನನ್ನ ಭಜನೆಮಾಡು. ॥ ೫ ॥ ದೊಡ್ಡ ದೊಡ್ಡ ಋಷಿ-ಮುನಿಗಳು ಜ್ಞಾನ-ವಿಜ್ಞಾನರೂಪೀ ಯಜ್ಞದ ಮೂಲಕ ತಮ್ಮ ಅಂತಃಕರಣದಲ್ಲೇ ಸ್ಥಿತನಾದ ಸಮಸ್ತ ಯಜ್ಞಗಳಿಗೂ ಅಧಿಪತಿಯೂ, ಆತ್ಮಸ್ವರೂಪನೂ ಆದ ನನ್ನನ್ನು ಆರಾಧಿಸಿ ಸಿದ್ಧಿಯನ್ನು ಪಡೆದುಕೊಂಡಿರುವರು. ॥ ೬ ॥ ಎಲೈ ಉದ್ಧವನೇ ! ದೇಹ, ಇಂದ್ರಿಯ, ಅಂತಃಕರಣದ ರೂಪದಿಂದ ಯಾವ ತ್ರಿಗುಣಾತ್ಮಿಕಾ ಪ್ರಕೃತಿಯ ವಿಕಾರರೂಪೀ ಶರೀರವಿದೆಯೋ, ಇದನ್ನೇ ನೀನು ಆಶ್ರಯಿಸಿರುವೆ. ಇದು ಅಜ್ಞಾನದ ಕಾರಣವೇ ಆಗಿದೆ. ಮಾಯೆಯಿಂದ ಆವೃತವಾದ್ದರಿಂದಲೇ ಇದರ ಪ್ರತೀತಿಯಾಗುತ್ತಿದೆ. ಇದು ಹುಟ್ಟುವ ಮೊದಲು ಅವ್ಯಕ್ತವಾಗಿತ್ತು, ಸತ್ತ ಬಳಿಕವೂ ಅವ್ಯಕ್ತವಾಗುತ್ತದೆ. ಕೇವಲ ನಡುವಿನಲ್ಲಿ ಮಾಯೆಯ ಕಾರಣದಿಂದ ಕಾಣುತ್ತಿದೆ. ಜನ್ಮ ಮುಂತಾದ ಆರು ವಿಕಾರಗಳು ಇದಕ್ಕೆ ಆಗುತ್ತವೆ. ಇಂತಹ ನಾಶವುಳ್ಳ ಶರೀರದೊಂದಿಗೆ ನಿನಗೆ ಯಾವ ಸಂಬಂಧವಿದೆ. ಅದು ಆದಿಯಲ್ಲಿ ಅಸತ್ತಾಗಿದೆ, ಅಂತ್ಯದಲ್ಲಿಯೂ ಅಸತ್ತಾಗಿದೆ, ಆದ್ದರಿಂದ ಮಧ್ಯದಲ್ಲಿಯೂ ಅಸತ್ತಾಗಿಯೇ ಇದೆ. ॥ ೭ ॥

ಉದ್ಧವನೆಂದನು – ಓ ವಿಶ್ವೇಶ್ವರಾ ! ವಿಶ್ವಮೂರ್ತೇ ! ಈಗ ನೀನು ವರ್ಣಿಸಿದ ಜ್ಞಾನವು ವಿಶುದ್ಧ, ವಿಪುಲ, ಸನಾತನವಾಗಿದೆ ; ವೈರಾಗ್ಯ, ವಿಜ್ಞಾನದಿಂದ ಯುಕ್ತವಾಗಿದೆ. ಈಗ ನೀನು ದಯಮಾಡಿ ಬ್ರಹ್ಮಾದಿ ದೇವತೆಗಳೂ ಹುಡುಕುತ್ತಿರುವ ಭಕ್ತಿಯೋಗದ ವಿಷಯದಲ್ಲಿ ಹೇಳು. ॥ ೮ ॥ ನನ್ನ ಸ್ವಾಮಿಯೇ ! ನಾನು ಈ ಭವಸಾಗರದಲ್ಲಿ ಮೂರೂ ತಾಪಗಳಿಗೆ ತುತ್ತಾಗಿ ಅತ್ಯಂತ ಪೀಡಿತನಾಗಿರುವೆನು. ಈ ಸಂಕಟದಿಂದ ಪಾರಾಗಲು ನಿನ್ನ ಈ ಅಮೃತವರ್ಷಿಸುವಂತಹ ಶರಣಾಗತರಿಗೆ ಅಭಯ ಕೊಡುವಂತಹ ಚರಣಯುಗಳಗಳಲ್ಲಿ ಶರಣಾಗುವ ಹೊರತು ನನಗೆ ಬೇರೆ ಯಾವ ಉಪಾಯವೂ ಕಾಣುವುದಿಲ್ಲ. ॥ ೯ ॥ ಮಹಾನುಭಾವಾ ! ನಿನ್ನ ಈ ಸೇವಕನು ಕತ್ತಲೆಯ ಮಡುವಿನಲ್ಲಿ ಬಿದ್ದಿರುವನು, ಕಾಲರೂಪೀ ಸರ್ಪವು ಇವನನ್ನು ಕಚ್ಚಿಕೊಂಡಿರುವುದು. ಆದರೂ ವಿಷಯಗಳ ಕ್ಷುದ್ರ ಸುಖ-ಭೋಗಗಳ ತೀವ್ರ ತೃಷ್ಣೆಯು ಇಂಗುವುದಿಲ್ಲ, ಬೆಳೆಯುತ್ತಲೇ ಹೋಗುತ್ತಿದೆ. ನೀನು ದಯಮಾಡಿ ಇವನನ್ನು ಉದ್ಧರಿಸು. ಇದರಿಂದ ಮುಕ್ತಗೊಳಿಸುವಂತಹ ವಾಣಿಯಿಂದ ಅಮೃತ ಸಿಂಚನ ಮಾಡು. ॥ ೧೦ ॥

ಶ್ರೀಭಗವಾನುವಾಚ

ಇತ್ಥಮೇತತ್ ಪುರಾ ರಾಜಾ ಭೀಷ್ಮಂ ಧರ್ಮಭೃತಾಂ ವರಮ್ ।
ಅಜಾತಶತ್ರುಃ ಪಪ್ರಚ್ಛ ಸರ್ವೇಷಾಂ ನೋऽನುಶೃಣ್ವತಾಮ್
॥ ೧೧ ॥

ನಿವೃತ್ತೇ ಭಾರತೇ ಯುದ್ಧೇ ಸುಹೃನ್ನಿಧನವಿಹ್ವಲಃ ।
ಶ್ರುತ್ವಾ ಧರ್ಮಾನ್ಬಹೂನ್ಪಶ್ಚಾನ್ಮೋಕ್ಷಧರ್ಮಾನಪೃಚ್ಛತ
॥ ೧೨ ॥

ತಾನಹಂ ತೇऽಭಿಧಾಸ್ಯಾಮಿ ದೇವವ್ರತಮುಖಾಚ್ಛ್ರುತಾನ್ ।
ಜ್ಞಾನವೈರಾಗ್ಯವಿಜ್ಞಾನಶ್ರದ್ಧಾಭಕ್ತ್ಯುಪಬೃಂಹಿತಾನ್
॥ ೧೩ ॥

ನವೈಕಾದಶ ಪಂಚ ತ್ರೀನ್ಭಾವಾನ್ಭೂತೇಷು ಯೇನ ವೈ ।
ಈಕ್ಷೇತಾಥೈಕಮಪ್ಯೇಷು ತಜ್ಜ್ಞಾನಂ ಮಮ ನಿಶ್ಚಿತಮ್
॥ ೧೪ ॥

ಏತದೇವ ಹಿ ವಿಜ್ಞಾನಂ ನ ತಥೈಕೇನ ಯೇನ ಯತ್ ।
ಸ್ಥಿತ್ಯುತ್ಪ್ಯಪ್ಯಯಾನ್ ಪಶ್ಯೇದ್ಭಾವಾನಾಂ ತ್ರಿಗುಣಾತ್ಮನಾಮ್
॥ ೧೫ ॥

ಆದಾವಂತೇ ಚ ಮಧ್ಯೇ ಚ ಸೃಜ್ಯಾತ್ಸೃಜ್ಯಂ ಯದನ್ವಿಯಾತ್ ।
ಪುನಸ್ತತ್ಪ್ರತಿಸಂಕ್ರಾಮೇ ಯಚ್ಛಿಷ್ಯೇತ ತದೇವ ಸತ್
॥ ೧೬ ॥

ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್ ।
ಪ್ರಮಾಣೇಷ್ವನವಸ್ಥಾನಾದ್ವಿಕಲ್ಪಾತ್ ಸ ವಿರಜ್ಯತೇ
॥ ೧೭ ॥

ಕರ್ಮಣಾಂ ಪರಿಣಾಮಿತ್ವಾದಾವಿರಿಂಚಾದಮಂಗಲಮ್ ।
ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್
॥ ೧೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ ! ನೀನು ನನ್ನಲ್ಲಿ ಪ್ರಶ್ನಿಸಿದಂತೆಯೇ ಧರ್ಮರಾಜ ಯುಧಿಷ್ಠಿರನು ಧಾರ್ಮಿಕ ಶಿರೋಮಣಿ ಭೀಷ್ಮಪಿತಾಮಹರಲ್ಲಿ ಪ್ರಶ್ನೆಮಾಡಿದ್ದನು. ಆಗ ನಾವೆಲ್ಲರೂ ಅಲ್ಲಿ ಉಪಸ್ಥಿತರಾಗಿದ್ದೆವು. ॥ ೧೧ ॥ ಮಹಾಭಾರತ ಯುದ್ಧವು ಮುಗಿದು, ಧರ್ಮರಾಜಾ ಯುಧಿಷ್ಠಿರನು ತನ್ನ ಸ್ವಜನ-ಸಂಬಂಧಿಗಳ ಸಂಹಾರದಿಂದಾಗಿ ಶೋಕವಿಹ್ವಲನಾಗಿದ್ದಾಗ, ಅವನು ಭೀಷ್ಮಪಿತಾಮಹರಲ್ಲಿ ಅನೇಕ ಧರ್ಮಗಳ ವಿವರಣೆಯನ್ನು ಕೇಳಿದ ಬಳಿಕ, ಮೋಕ್ಷ ಸಾಧನೆಗಳ ಕುರಿತು ಪ್ರಶ್ನಿಸಿದ್ದನು. ॥ ೧೨ ॥ ಆಗ ಭೀಷ್ಮಪಿತಾಮಹರ ಮುಖದಿಂದ ಕೇಳಿದ ಮೋಕ್ಷಧರ್ಮವನ್ನು ನಾನು ನಿನಗೆ ಹೇಳುವೆನು. ಏಕೆಂದರೆ ಅದು ಜ್ಞಾನ, ವೈರಾಗ್ಯ, ವಿಜ್ಞಾನ, ಶ್ರದ್ಧೆ ಭಕ್ತಿ ಇವುಗಳ ಭಾವಗಳಿಂದ ಪರಿಪೂರ್ಣವಾಗಿದೆ. ॥ ೧೩ ॥ ಉದ್ಧವನೇ ! ಪ್ರಕೃತಿ, ಪುರುಷ, ಮಹತ್ತತ್ತ್ವ, ಅಹಂಕಾರ, ಪಂಚತನ್ಮಾತ್ರೆಗಳು ಹೀಗೆ ಈ ಒಂಭತ್ತು ; ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು ಹೀಗೆ ಹನ್ನೊಂದು ; ಪಂಚಮಹಾಭೂತಗಳು ಹಾಗೂ ತ್ರಿಗುಣಗಳು ಹೀಗೆ ಎಂಟು. ಒಟ್ಟಿಗೆ ಈ ಇಪ್ಪತ್ತೆಂಟು ತತ್ತ್ವಗಳು ಬ್ರಹ್ಮನಿಂದ ಹಿಡಿದು ತೃಣದವರೆಗಿನ ಎಲ್ಲ ಕಾರ್ಯಗಳಲ್ಲಿ ನೋಡಲಾಗುವುದೇ ಜ್ಞಾನವಾಗಿದೆ. ಈ ಇಪ್ಪತ್ತೆಂಟು ತತ್ತ್ವಗಳಲ್ಲಿ ಅನುಗತನಾದ ಪರಮಾತ್ಮ ತತ್ತ್ವವನ್ನು ನೋಡುವುದೇ ವಿಜ್ಞಾನವಾಗಿದೆ ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ. ॥ ೧೪ ॥ ಈ ಇಪ್ಪತ್ತೆಂಟು ತತ್ತ್ವಗಳು ಉತ್ಪತ್ತಿ , ಸ್ಥಿತಿ ಮತ್ತು ನಾಶವುಳ್ಳವುಗಳು. ತ್ರಿಗುಣಾತ್ಮಿಕಾ ಮಾಯೆಯ ಕಾರ್ಯವಾಗಿದೆ. ಈ ಭಾವಗಳಿಂದಲೇ ಭಗವಂತನು ಪ್ರಪಂಚದ ಉತ್ಪತ್ತಿ , ಸ್ಥಿತಿ, ಸಂಹಾರ ರೂಪೀ ಲೀಲೆಮಾಡುತ್ತಾನೆ. ಇದರೆಲ್ಲದರಲ್ಲಿ ಅನುಗತನಾದ ಪರಮಾತ್ಮತತ್ತ್ವವು ಶಾಶ್ವತವಾಗಿದೆ. ಹೀಗೆ ಕೇವಲ ಒಂದೇ ತತ್ತ್ವವು ಅನುಭವದಲ್ಲಿ ಉಳಿದಾಗ, ಅದನ್ನು ವಿಜ್ಞಾನವೆಂದು ಹೇಳುತ್ತಾರೆ. ॥ ೧೫ ॥ ಈ ಪ್ರಕಾರ ಓರ್ವ ಪರಮಾತ್ಮನೇ ಆದಿ, ಮಧ್ಯ ಮತ್ತು ಅಂತ್ಯದಲ್ಲಿಯೂ ಇದ್ದಾನೆ. ಅವನು ತನ್ನಲ್ಲಿಯೇ ಈ ವಿಶ್ವವನ್ನು ಸೃಷ್ಟಿಸಿದನು ಹಾಗೂ ಅವನೇ ಇದರಲ್ಲಿ ಅನುಗತನಾದನು, ಅಂದರೆ ಸೇರಿಕೊಂಡನು. ಮತ್ತೆ ಪ್ರಳಯಮಾಡುವಾಗ ಅವನೇ ಪುನಃ ಇದನ್ನು ತನ್ನಲ್ಲೇ ಲೀನಗೊಳಿಸಿಕೊಳ್ಳುವನು. ಹೀಗೆ ಶೇಷವಾಗಿ ಉಳಿಯುವುದೇ ಸತ್ ತತ್ತ್ವವಾಗಿದೆ. ॥ ೧೬ ॥ ಶ್ರುತಿ (ವೇದ) ಪ್ರಮಾಣದಿಂದ, ಪ್ರತ್ಯಕ್ಷ ಪ್ರಮಾಣದಿಂದ, ಐತಿಹ್ಯ (ಮಹಾಪುರುಷರ ವಚನ)ದಿಂದ ಮತ್ತು ಅನುಮಾನ ಪ್ರಮಾಣದಿಂದ ಭೇದಬುದ್ಧಿಯ ಅಸ್ತಿತ್ವವು ಯಾವುದೇ ರೀತಿಯಿಂದ ಸಿದ್ಧವಾಗುವುದಿಲ್ಲ. ಆದ್ದರಿಂದ ವಿವೇಕಿಯು ಭೇದಬುದ್ಧಿಯಿಂದ ರಹಿತನಾಗಿರುತ್ತಾನೆ. ಅರ್ಥಾತ್ ಅವನ ಜ್ಞಾನದಲ್ಲಿ ಓರ್ವ ಪರಮಾತ್ಮನಲ್ಲದೆ ಬೇರೆ ಏನೂ ಇರುವುದಿಲ್ಲ. ॥ ೧೭ ॥ ಈ ಲೋಕದ ಭೋಗಗಳಿಗೆ ನಾಶವಿರುವಂತೆ, ಯಜ್ಞಾದಿ ಅನುಷ್ಠಾನದ ಫಲಸ್ವರೂಪವಾಗಿ ದೊರೆಯುವ ಸ್ವರ್ಗಾದಿ ಬ್ರಹ್ಮಲೋಕದ ವರೆಗಿನ ಎಲ್ಲ ಸುಖಗಳು ಅಮಂಗಲ, ದುಃಖದಾಯಕ ಹಾಗೂ ನಾಶವುಳ್ಳವುಗಳೆಂದು ವಿದ್ವಾಂಸನಾದವನು ನೋಡಬೇಕು.॥೧೮॥

ಭಕ್ತಿಯೋಗಃ ಪುರೈವೋಕ್ತಃ ಪ್ರೀಯಮಾಣಾಯ ತೇಽನಘ ।
ಪುನಶ್ಚ ಕಥಯಿಷ್ಯಾಮಿ ಮದ್ಭಕ್ತೇಃ ಕಾರಣಂ ಪರಮ್
॥ ೧೯ ॥

ಶ್ರದ್ಧಾಮೃತಕಥಾಯಾಂ ಮೇ ಶಶ್ವನ್ಮದನುಕೀರ್ತನಮ್ ।
ಪರಿನಿಷ್ಠಾ ಚ ಪೂಜಾಯಾಂ ಸ್ತುತಿಭಿಃ ಸ್ತವನಂ ಮಮ
॥ ೨೦ ॥

ಆದರಃ ಪರಿಚರ್ಯಾಯಾಂ ಸರ್ವಾಂಗೈರಭಿವಂದನಮ್ ।
ಮದ್ಭಕ್ತಪೂಜಾಭ್ಯಧಿಕಾ ಸರ್ವಭೂತೇಷು ಮನ್ಮತಿಃ
॥ ೨೧ ॥

ಮದರ್ಥೇಷ್ವಂಗಚೇಷ್ಟಾ ಚ ವಚಸಾ ಮದ್ಗುಣೇರಣಮ್ ।
ಮಯ್ಯರ್ಪಣಂ ಚ ಮನಸಃ ಸರ್ವಕಾಮವಿವರ್ಜನಮ್
॥ ೨೨ ॥

ಮದರ್ಥೇಽರ್ಥಪರಿತ್ಯಾಗೋ ಭೋಗಸ್ಯ ಚ ಸುಖಸ್ಯ ಚ ।
ಇಷ್ಟಂ ದತ್ತಂ ಹುತಂ ಜಪ್ತಂ ಮದರ್ಥಂ ಯದ್ವ್ರತಂ ತಪಃ
॥ ೨೩ ॥

ಏವಂ ಧರ್ಮೈರ್ಮನುಷ್ಯಾಣಾಮುದ್ಧವಾತ್ಮನಿವೇದಿನಾಮ್ ।
ಮಯಿ ಸಂಜಾಯತೇ ಭಕ್ತಿಃ ಕೋಽನ್ಯೋಽರ್ಥೋಽಸ್ಯಾವಶಿಷ್ಯತೇ
॥ ೨೪ ॥

ಯದಾತ್ಮನ್ಯರ್ಪಿತಂ ಚಿತ್ತಂ ಶಾಂತಂ ಸತ್ತ್ವೋಪಬೃಂಹಿತಮ್ ।
ಧರ್ಮಂ ಜ್ಞಾನಂ ಸವೈರಾಗ್ಯಮೈಶ್ವರ್ಯಂ ಚಾಭಿಪದ್ಯತೇ
॥ ೨೫ ॥

ಯದರ್ಪಿತಂ ತದ್ವಿಕಲ್ಪೇ ಇಂದ್ರಿಯೈಃ ಪರಿಧಾವತಿ ।
ರಜಸ್ವಲಂ ಚಾಸನ್ನಿಷ್ಠಂ ಚಿತ್ತಂ ವಿದ್ಧಿ ವಿಪರ್ಯಯಮ್
॥ ೨೬ ॥

ಧರ್ಮೋ ಮದ್ಭಕ್ತಿಕೃತ್ ಪ್ರೋಕ್ತೋ ಜ್ಞಾನಂ ಚೈಕಾತ್ಮ್ಯದರ್ಶನಮ್ ।
ಗುಣೇಷ್ವಸಂಗೋ ವೈರಾಗ್ಯಮೈಶ್ವರ್ಯಂ ಚಾಣಿಮಾದಯಃ
॥ ೨೭ ॥

ಉದ್ಧವ ಉವಾಚ

ಯಮಃ ಕತಿವಿಧಃ ಪ್ರೋಕ್ತೋ ನಿಯಮೋ ವಾರಿಕರ್ಶನ ।
ಕಃ ಶಮಃ ಕೋ ದಮಃ ಕೃಷ್ಣ ಕಾ ತಿತಿಕ್ಷಾ ಧೃತಿಃ ಪ್ರಭೋ
॥ ೨೮ ॥

ಕಿಂ ದಾನಂ ಕಿಂ ತಪಃ ಶೌರ್ಯಂ ಕಿಂ ಸತ್ಯಮೃತಮುಚ್ಯತೇ ।
ಕಸ್ತ್ಯಾಗಃ ಕಿಂ ಧನಂ ಚೇಷ್ಟಂ ಕೋ ಯಜ್ಞಃ ಕಾ ಚ ದಕ್ಷಿಣಾ
॥ ೨೯ ॥

ಪುಂಸಃ ಕಿಂಸ್ವಿದ್ ಬಲಂ ಶ್ರೀಮನ್ ಭಗೋ ಲಾಭಶ್ಚ ಕೇಶವ ।
ಕಾ ವಿದ್ಯಾ ಹ್ರೀಃ ಪರಾ ಕಾ ಶ್ರೀಃ ಕಿಂ ಸುಖಂ ದುಃಖಮೇವ ಚ
॥ ೩೦ ॥

ಪುಣ್ಯಾತ್ಮನಾದ ಉದ್ಧವನೇ ! ಭಕ್ತಿಯೋಗದ ವರ್ಣನೆಯನ್ನು ನಾನು ನಿನಗೆ ಮೊದಲೇ ಮಾಡಿರುವೆನು. ಆದರೆ ಅದರಲ್ಲಿ ನಿನಗೆ ಬಹಳ ಪ್ರೀತಿ ಇದೆ, ಅದಕ್ಕಾಗಿ ನಾನು ನಿನಗೆ ಪುನಃ ಭಕ್ತಿಯು ಪ್ರಾಪ್ತವಾಗುವ ಶ್ರೇಷ್ಠ ಸಾಧನೆಗಳನ್ನು ಹೇಳುತ್ತೇನೆ. ॥ ೧೯ ॥ ನನ್ನ ಭಕ್ತಿಯನ್ನು ಪಡೆಯಲು ಬಯಸುವವನು ನನ್ನ ಅಮೃತಮಯ ಕಥೆಗಳಲ್ಲಿ ಶ್ರದ್ಧೆಯನ್ನಿಡಬೇಕು. ನಿರಂತರ ನನ್ನ ಗುಣ-ಲೀಲೆ, ನಾಮಗಳನ್ನು ಸಂಕೀರ್ತನೆ ಮಾಡಬೇಕು. ನನ್ನ ಪೂಜೆಯಲ್ಲಿ ಅತ್ಯಂತ ನಿಷ್ಠೆಯಿದ್ದು ಸ್ತೋತ್ರಗಳ ಮೂಲಕ ನನ್ನನ್ನು ಸ್ತುತಿಸ ಬೇಕು. ॥ ೨೦ ॥ ನನ್ನ ಸೇವೆ-ಪೂಜೆಯಲ್ಲಿ ಶ್ರದ್ಧೆ ಮತ್ತು ಪ್ರೇಮ ವಿರಲಿ. ನನ್ನಿದಿರಿಗೆ ಸಾಷ್ಟಾಂಗ ಮಲಗಿ ನಮಸ್ಕರಿಸಲಿ. ನನ್ನ ಭಕ್ತರನ್ನು ನನ್ನ ಪೂಜೆಗಿಂತ ಮಿಗಿಲಾಗಿ ಪೂಜಿಸಲಿ ಮತ್ತು ಸಮಸ್ತ ಪ್ರಾಣಿ ಗಳಲ್ಲಿ ನನ್ನನ್ನೇ ನೋಡಲಿ. ॥ ೨೧ ॥ ತನ್ನ ಎಲ್ಲ ವ್ಯವಹಾರಗಳನ್ನು ಕೇವಲ ನನ್ನದೇ ಸೇವೆಯೆಂದು ಮಾಡಲಿ. ವಾಣಿಯಿಂದ ನನ್ನದೇ ಗುಣಗಳನ್ನು ಹಾಡಲಿ. ತನ್ನ ಮನಸ್ಸನ್ನು ನನ್ನಲ್ಲೇ ಅರ್ಪಿಸಲಿ ಹಾಗೂ ಎಲ್ಲ ಕಾಮನೆಗಳನ್ನು ಬಿಟ್ಟುಬಿಡಲಿ. ॥ ೨೨ ॥ ನನಗಾಗಿ ಧನ, ಭೋಗ, ಸುಖ ಇವುಗಳನ್ನು ಪರಿತ್ಯಾಗಮಾಡಲಿ. ಯಜ್ಞ, ದಾನ, ಹವನ, ಜಪ, ವ್ರತ, ತಪಸ್ಸು ಮುಂತಾದುವೆಲ್ಲವನ್ನು ನನಗಾಗಿಯೇ ಮಾಡಲಿ. ॥ ೨೩ ॥ ಉದ್ಧವನೇ ! ಈ ಧರ್ಮಗಳನ್ನು ಪಾಲಿಸು ವವನ ಹೃದಯದಲ್ಲಿ ನನ್ನ ಪ್ರೇಮಮಯ ಭಕ್ತಿಯ ಉದಯ ವಾಗುತ್ತದೆ. ನನ್ನ ಭಕ್ತಿಯು ಪ್ರಾಪ್ತವಾದವನಿಗೆ ಬೇರೆ ಯಾವ ವಸ್ತುವಿನ ಪ್ರಾಪ್ತಿಯು ಬಾಕಿ ಉಳಿಯುವುದಿಲ್ಲ. ॥ ೨೪ ॥ ಈ ಪ್ರಕಾರ ಧರ್ಮಗಳನ್ನು ಪಾಲಿಸುವುದರಿಂದ ಚಿತ್ತದಲ್ಲಿ ಸತ್ತ್ವ ಗುಣದ ವೃದ್ಧಿಯಾಗಿ ಅವನು ಶಾಂತನಾಗಿ ತನ್ನ ಆತ್ಮವನ್ನು ಏಕಮಾತ್ರ ನನ್ನಲ್ಲೇ ತೊಡಗಿಸುತ್ತಾನೆ. ಆಗ ಸಾಧಕನಿಗೆ ಭಕ್ತಿ , ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಇವುಗಳು ತಾನಾಗಿಯೇ ಪ್ರಾಪ್ತವಾಗು ತ್ತವೆ. ॥ ೨೫ ॥ ಮನಸ್ಸು ನಾನಾವಿಧವಾದ ಕಲ್ಪನೆ ಮಾಡತೊಡಗಿ ದಾಗ ಅವನ ಇಂದ್ರಿಯಗಳು ಅತ್ತ-ಇತ್ತ ಓಡುತ್ತವೆ. ಚಿತ್ತವು ಸ್ಥಿರ ವಾಗುವುದಿಲ್ಲ ಅವನ ಚಿತ್ತ ರಜೋಗುಣದಿಂದ ವ್ಯಾಪ್ತವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಭಕ್ತಿ, ಜ್ಞಾನ, ಧರ್ಮ, ವೈರಾಗ್ಯ, ಐಶ್ವರ್ಯ ಇವುಗಳು ಅವನಿಂದ ದೂರವಾಗುತ್ತವೆ. ॥ ೨೬ ॥ ಉದ್ಧವಾ ! ನನ್ನ ಭಕ್ತಿಯು ಯಾವುದರಿಂದ ಉಂಟಾಗುತ್ತದೋ, ಅದೇ ಧರ್ಮ ವಾಗಿದೆ. ಯಾವುದರಿಂದ ಬ್ರಹ್ಮ ಮತ್ತು ಆತ್ಮದ ಏಕತೆಯ ಸಾಕ್ಷಾತ್ಕಾರವಾಗುವುದೋ ಅದೇ ಜ್ಞಾನವಾಗಿದೆ. ವಿಷಯಗಳಿಂದ ಅಸಂಗ-ನಿರ್ಲೇಪನಾಗುವುದೇ ವೈರಾಗ್ಯವಾಗಿದೆ ಮತ್ತು ಅಣಿ ಮಾದಿ ಸಿದ್ಧಿಗಳೇ ಐಶ್ವರ್ಯವಾಗಿದೆ. ॥ ೨೭ ॥

ಉದ್ಧವನೆಂದನು – ಅರಿಸೂದನಾ ! ಯಮ ಮತ್ತು ನಿಯಮ ಗಳು ಎಷ್ಟು ಪ್ರಕಾರದ್ದಾಗಿವೆ ? ಶ್ರೀಕೃಷ್ಣಾ ! ಶಮ ಎಂದರೇನು ? ದಮ ಎಂದರೇನು ? ಸ್ವಾಮಿ ! ತಿತಿಕ್ಷಾ ಮತ್ತು ಧೈರ್ಯಯಾವುದು ? ॥೨೮॥ ದಾನ, ತಪಸ್ಸು ಶೌರ್ಯ, ಸತ್ಯ, ಋತ ಇವುಗಳ ಸ್ವರೂಪ ವನ್ನೂ ನೀನು ನನಗೆ ತಿಳಿಸು. ತ್ಯಾಗ ಎಂದರೇನು ? ಅಭೀಷ್ಟ ಧನವು ಯಾವುದು ? ಯಜ್ಞ ಯಾವುದಕ್ಕೆ ಹೇಳುತ್ತಾರೆ ? ದಕ್ಷಿಣೆ ಯಾವ ವಸ್ತು ಆಗಿದೆ ? ಓ ಕೇಶವಾ ! ಪುರುಷನ ನಿಜವಾದ ಬಲವು ಯಾವುದು ? ಭಗ ಯಾವುದಕ್ಕೆ ಹೇಳುತ್ತಾರೆ ? ಲಾಭವೆಂದರೆ ಯಾವ ವಸ್ತುವಾಗಿದೆ ? ಉತ್ತಮ ವಿದ್ಯೆ, ಲಜ್ಜೆ, ಶ್ರೀ, ಸುಖ ಮತ್ತು ದುಃಖ ಇವುಗಳ್ಯಾವುವು ? ॥ ೨೯-೩೦ ॥

ಕಃ ಪಂಡಿತಃ ಕಶ್ಚ ಮೂರ್ಖಃ ಕಃ ಪಂಥಾ ಉತ್ಪಥಶ್ಚ ಕಃ ।
ಕಃ ಸ್ವರ್ಗೋ ನರಕಃ ಕಃ ಸ್ವಿತ್ಕೋ ಬಂಧುರುತ ಕಿಂ ಗೃಹಮ್
॥ ೩೧ ॥

ಕ ಆಢ್ಯಃ ಕೋ ದರಿದ್ರೋ ವಾ ಕೃಪಣಃ ಕಃ ಕ ಈಶ್ವರಃ ।
ಏತಾನ್ ಪ್ರಶ್ನಾನ್ ಮಮ ಬ್ರೂಹಿ ವಿಪರೀತಾಂಶ್ಚ ಸತ್ತಮ
॥ ೩೨ ॥

ಪಂಡಿತ ಮತ್ತು ಮೂರ್ಖರ ಲಕ್ಷಣಗಳೇನು ? ಸುಮಾರ್ಗ ಹಾಗೂ ಕುಮಾರ್ಗ ಇವುಗಳ ಲಕ್ಷಣಗಳೇನು ? ಸ್ವರ್ಗ ಮತ್ತು ನರಕಗಳು ಯಾವುವು ? ಬಂಧು-ಬಾಂಧವರು ಯಾರು ? ಮನೆ ಯಾವುದು ? ಶ್ರೀಮಂತ ಮತ್ತು ದರಿದ್ರ ಎಂದು ಯಾರನ್ನು ಹೇಳುತ್ತಾರೆ ? ಲೋಭಿಯು ಯಾರು ? ಈಶ್ವರನೆಂದು ಯಾರನ್ನು ಹೇಳುತ್ತಾರೆ ? ಭಕ್ತವತ್ಸಲ ಪ್ರಭುವೇ ! ನೀನು ನನ್ನ ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವವನಾಗು. ಹಾಗೆಯೇ ಇವುಗಳ ವಿರೋಧೀ ಭಾವಗಳನ್ನೂ ಕೂಡ ವ್ಯಾಖ್ಯಾನಿಸು. ॥ ೩೧-೩೨ ॥

ಶ್ರೀಭಗವಾನುವಾಚ

ಅಹಿಂಸಾ ಸತ್ಯಮಸ್ತೇಯಮಸಂಗೋ ಹ್ರೀರಸಂಚಯಃ ।
ಆಸ್ತಿಕ್ಯಂ ಬ್ರಹ್ಮಚರ್ಯಂ ಚ ಮೌನಂ ಸ್ಥೈರ್ಯಂ ಕ್ಷಮಾಭಯಮ್
॥ ೩೩ ॥

ಶೌಚಂ ಜಪಸ್ತಪೋ ಹೋಮಃ ಶ್ರದ್ಧಾತಿಥ್ಯಂ ಮದರ್ಚನಮ್ ।
ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್
॥ ೩೪ ॥

ಏತೇ ಯಮಾಃ ಸನಿಯಮಾ ಉಭಯೋರ್ದ್ವಾದಶ ಸ್ಮೃತಾಃ ।
ಪುಂಸಾಮುಪಾಸಿತಾಸ್ತಾತ ಯಥಾಕಾಮಂ ದುಹಂತಿ ಹಿ
॥ ೩೫ ॥

ಶಮೋ ಮನ್ನಿಷ್ಠತಾ ಬುದ್ಧೇರ್ದಮ ಇಂದ್ರಿಯಸಂಯಮಃ ।
ತಿತಿಕ್ಷಾ ದುಃಖಸಮ್ಮರ್ಷೋ ಜಿಹ್ವೋಪಸ್ಥಜಯೋ ಧೃತಿಃ
॥ ೩೬ ॥

ದಂಡನ್ಯಾಸಃ ಪರಂ ದಾನಂ ಕಾಮತ್ಯಾಗಸ್ತಪಃ ಸ್ಮೃತಮ್ ।
ಸ್ವಭಾವವಿಜಯಃ ಶೌರ್ಯಂ ಸತ್ಯಂ ಚ ಸಮದರ್ಶನಮ್
॥ ೩೭ ॥

ಋತಂ ಚ ಸೂನೃತಾ ವಾಣೀ ಕವಿಭಿಃ ಪರಿಕೀರ್ತಿತಾ ।
ಕರ್ಮಸ್ವಸಂಗಮಃ ಶೌಚಂ ತ್ಯಾಗಃ ಸಂನ್ಯಾಸ ಉಚ್ಯತೇ
॥ ೩೮ ॥

ಧರ್ಮ ಇಷ್ಟಂ ಧನಂ ನೃಣಾಂ ಯಜ್ಞೋಽಹಂ ಭಗವತ್ತಮಃ ।
ದಕ್ಷಿಣಾ ಜ್ಞಾನಸಂದೇಶಃ ಪ್ರಾಣಾಯಾಮಃ ಪರಂ ಬಲಮ್
॥ ೩೯ ॥

ಭಗೋ ಮ ಐಶ್ವರೋ ಭಾವೋ ಲಾಭೋ ಮದ್ಭಕ್ತಿರುತ್ತಮಃ ।
ವಿದ್ಯಾಽಽತ್ಮನಿ ಭಿದಾಬಾಧೋ ಜುಗುಪ್ಸಾ ಹ್ರೀರಕರ್ಮಸು
॥ ೪೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಹಿಂಸಾ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವುದು), ಅಸಂಗತೆ, ಲಜ್ಜೆ, ಅಸಂಚಯ (ಅವಶ್ಯಕತೆಗಿಂತ ಹೆಚ್ಚು ಧನವನ್ನು ಸಂಗ್ರಹಿಸ ದಿರುವುದು), ಆಸ್ತಿಕತೆ, ಬ್ರಹ್ಮಚರ್ಯ, ಮೌನ, ಸ್ಥಿರತೆ, ಕ್ಷಮೆ ಮತ್ತು ಅಭಯ ಇವು ಹನ್ನೆರಡು 'ಯಮ'ಗಳಾಗಿವೆ. ನಿಯಮಗಳ ಸಂಖ್ಯೆಯೂ ಹನ್ನೆರಡಿವೆ :– ಶೌಚ (ಒಳ-ಹೊರಗಿನ ಪವಿತ್ರತೆ), ಜಪ, ತಪಸ್ಸು, ಹವನ, ಶ್ರದ್ಧಾ, ಅತಿಥಿಸೇವೆ, ನನ್ನ ಪೂಜೆ, ತೀರ್ಥ ಯಾತ್ರೆ, ಪರೋಪಕಾರ ಸಂತೋಷ ಮತ್ತು ಗುರುಸೇವೆ; ಈ ಪ್ರಕಾರ 'ಯಮ' ಮತ್ತು 'ನಿಯಮ' ಎರಡರ ಸಂಖ್ಯೆಯೂ ಹನ್ನೆರಡು ಹನ್ನೆರಡಾಗಿದೆ. ಇವು ಸಕಾಮ ಮತ್ತು ನಿಷ್ಕಾಮ ಎರಡೂ ವಿಧದ ಸಾಧಕರಿಗೆ ಉಪಯೋಗಿಯಾಗಿವೆ. ಉದ್ಧವನೇ ! ಇವನ್ನು ಪಾಲಿಸುವ ಪುರುಷನಿಗೆ ಈ ಯಮ-ನಿಯಮಗಳು ಅವನ ಇಚ್ಛಾನುಸಾರ ಅವನಿಗೆ ಭೋಗ ಹಾಗೂ ಮೋಕ್ಷವನ್ನು ಪ್ರದಾನ ಮಾಡುತ್ತವೆ. ॥ ೩೩-೩೫ ॥ ಬುದ್ಧಿಯನ್ನು ನನ್ನಲ್ಲಿ ತೊಡಗಿಸು ವುದೇ 'ಶಮ'ವಾಗಿದೆ. ಇಂದ್ರಿಯಗಳ ಸಂಯಮದ ಹೆಸರು 'ದಮ'ವಾಗಿದೆ. ದುಃಖಗಳನ್ನು ಸಹಿಸುವುದು 'ತಿತಿಕ್ಷೆ', ಜಿಹ್ವೆ ಮತ್ತು ಜನನೇಂದ್ರಿಯದ ಮೇಲೆ ವಿಜಯ ಪಡೆಯುವುದೇ 'ಧೈರ್ಯ'ವಾಗಿದೆ. ॥ ೩೬ ॥ ಯಾರನ್ನೂ ದಂಡಿಸದೆ, ಎಲ್ಲರಿಗೆ ಅಭಯನೀಡುವುದೇ 'ದಾನ'ವಾಗಿದೆ. ಕಾಮನೆಗಳನ್ನು ತ್ಯಜಿಸು ವುದೇ 'ತಪಸ್ಸು' ಆಗಿದೆ. ತನ್ನ ವಾಸನೆಗಳನ್ನು ಗೆಲ್ಲುವುದೇ 'ಶೌರ್ಯ'ವಾಗಿದೆ. ಎಲ್ಲೆಡೆ ಸಮತ್ವರೂಪೀ, ಸತ್ಯಸ್ವರೂಪೀ ಪರಮಾತ್ಮನನ್ನು ದರ್ಶಿಸುವುದೇ 'ಸತ್ಯ'ವಾಗಿದೆ. ॥ ೩೭ ॥ ಹೀಗೆಯೇ ಸತ್ಯ ಮತ್ತು ಮಧುರ ಭಾಷಣವನ್ನೇ 'ಋತ 'ವೆಂದು ಮಹಾತ್ಮರು ಹೇಳುತ್ತಾರೆ. ಕರ್ಮಗಳಲ್ಲಿ ಆಸಕ್ತನಾಗದಿರುವುದೇ 'ಶೌಚ'ವಾಗಿದೆ. ಕಾಮನೆಗಳ ತ್ಯಾಗವೇ ನಿಜವಾದ ಸಂನ್ಯಾಸ ವಾಗಿದೆ. ॥ ೩೮ ॥ ಧರ್ಮವೇ ಮನುಷ್ಯರ ಅಭೀಷ್ಟ 'ಧನ'ವಾಗಿದೆ. ಪರಮೇಶ್ವರನಾದ ನಾನೇ 'ಯಜ್ಞ'ನಾಗಿದ್ದೇನೆ. ಜ್ಞಾನವನ್ನು ಉಪದೇಶಿಸುವುದೇ 'ದಕ್ಷಿಣೆ 'ಯಾಗಿದೆ. ಪ್ರಾಣಾಯಾಮವೇ ಶ್ರೇಷ್ಠ 'ಬಲ'ವಾಗಿದೆ. ॥ ೩೯ ॥ ನನ್ನ ಐಶ್ವರ್ಯವೇ 'ಭಗ'ವಾಗಿದೆ. ನನ್ನ ಶ್ರೇಷ್ಠ ಭಕ್ತಿಯೇ ಉತ್ತಮ 'ಲಾಭ'ವಾಗಿದೆ. ಬ್ರಹ್ಮ ಮತ್ತು ಆತ್ಮದ ಭೇದ ಅಳಿದುಹೋಗುವಂತಹುದೇ ನಿಜವಾದ 'ವಿದ್ಯೆ'ಯಾಗಿದೆ. ಪಾಪಮಾಡಲು ಜುಗುಪ್ಸೆ ಪಡುವುದೇ 'ಲಜ್ಜೆ'ಯಾಗಿದೆ. ॥ ೪೦ ॥

ಶ್ರೀರ್ಗುಣಾ ನೈರಪೇಕ್ಷ್ಯಾದ್ಯಾಃ ಸುಖಂ ದುಃಖಸುಖಾತ್ಯಯಃ ।
ದುಃಖಂ ಕಾಮಸುಖಾಪೇಕ್ಷಾ ಪಂಡಿತೋ ಬಂಧಮೋಕ್ಷವಿತ್
॥ ೪೧ ॥

ಮೂರ್ಖೋ ದೇಹಾದ್ಯಹಂಬುದ್ಧಿಃ ಪಂಥಾ ಮನ್ನಿಗಮಃ ಸ್ಮೃತಃ ।
ಉತ್ಪಥಶ್ಚಿತ್ತವಿಕ್ಷೇಪಃ ಸ್ವರ್ಗಃ ಸತ್ತ್ವಗುಣೋದಯಃ
॥ ೪೨ ॥

ನರಕಸ್ತಮಉನ್ನಾಹೋ ಬಂಧುರ್ಗುರುರಹಂ ಸಖೇ ।
ಗೃಹಂ ಶರೀರಂ ಮಾನುಷ್ಯಂ ಗುಣಾಢ್ಯೋ ಹ್ಯಾಢ್ಯ ಉಚ್ಯತೇ
॥ ೪೩ ॥

ದರಿದ್ರೋ ಯಸ್ತ್ವಸಂತುಷ್ಟಃ ಕೃಪಣೋ ಯೋಽಜಿತೇಂದ್ರಿಯಃ ।
ಗುಣೇಷ್ವಸಕ್ತಧೀರೀಶೋ ಗುಣಸಂಗೋ ವಿಪರ್ಯಯಃ
॥ ೪೪ ॥

ಏತ ಉದ್ಧವ ತೇ ಪ್ರಶ್ನಾಃ ಸರ್ವೇ ಸಾಧು ನಿರೂಪಿತಾಃ ।
ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ ।
ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ
॥ ೪೫ ॥

ಶರೀರಾದಿಗಳಲ್ಲಿ ನಾನು-ನನ್ನದು ಇರುವವನೇ 'ಮೂರ್ಖ' ನಾಗಿದ್ದಾನೆ. ಸಂಸಾರದಿಂದ ನಿವೃತ್ತಿಗೊಳಿಸಿ, ನನ್ನನ್ನು ಪ್ರಾಪ್ತಿಮಾಡಿ ಕೊಡುವುದೇ ನಿಜವಾದ 'ಸುಮಾರ್ಗ', ಚಿತ್ತದ ಬಹಿರ್ಮುಖತೆಯೇ 'ಕುಮಾರ್ಗ'ವಾಗಿದೆ. ಸಖನೇ ! ಸತ್ತ್ವಗುಣದ ವೃದ್ಧಿಯೇ 'ಸ್ವರ್ಗ' ಮತ್ತು ತಮೋಗುಣದ ಹೆಚ್ಚಳವೇ 'ನರಕ'ವಾಗಿದೆ. ಗುರುವೇ ನಿಜವಾದ 'ಬಂಧು'ವಾಗಿದ್ದು ಆ ಗುರುವು ನಾನೇ ಆಗಿದ್ದೇನೆ. ಈ ಮನುಷ್ಯ ಶರೀರವೇ ನಿಜವಾದ 'ಮನೆ'ಯಾಗಿದೆ. ಗುಣಗಳಿಂದ ಸಂಪನ್ನನಾಗಿದ್ದು ಗುಣಗಳ ಭಂಡಾರವೇ ಬಳಿಯಲ್ಲಿ ಇರುವವನೇ ನಿಜವಾದ 'ಶ್ರೀಮಂತ'ನಾಗಿದ್ದಾನೆ. ॥ ೪೨-೪೩ ॥ ಯಾರ ಚಿತ್ತದಲ್ಲಿ ಅಸಂತೋಷವಿದ್ದು ಅಭಾವದ ಬೋಧವಿರುವವನೇ 'ದರಿದ್ರ'ನು. ಜಿತೇಂದ್ರಿಯನಲ್ಲದವನೇ 'ಕೃಪಣ'ನು. ಚಿತ್ತವೃತ್ತಿಯು ವಿಷಯಗಳಲ್ಲಿ ಆಸಕ್ತನಾಗದವನೇ ಈಶ್ವರನಾಗಿದ್ದಾನೆ. ಇದಕ್ಕೆ ವಿಪರೀತವಾಗಿ ವಿಷಯಗಳಲ್ಲಿ ಆಸಕ್ತನಾದವನು ಸರ್ವಥಾ 'ಅಸಮರ್ಥ'ನು. ॥ ೪೪ ॥ ಪ್ರಿಯ ಉದ್ಧವನೇ ! ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನಾನು ನೀಡಿರುವೆನು. ಇವುಗಳನ್ನು ತಿಳಿದುಕೊಳ್ಳುವುದು ಮೋಕ್ಷಮಾರ್ಗಕ್ಕೆ ಸಹಾಯಕವಾಗಿದೆ. ನಾನು ನಿನಗೆ ಗುಣ ಮತ್ತು ದೋಷಗಳ ಲಕ್ಷಣಗಳು ಬೇರೆ-ಬೇರೆಯಾಗಿ ಎಷ್ಟೊಂದು ಹೇಳಲಿ ? ಎಲ್ಲದರ ಸಾರಾಂಶವಿಷ್ಟೇ – ಗುಣ ಮತ್ತು ದೋಷಗಳಲ್ಲಿ ದೃಷ್ಟಿ ಹರಿಸುವುದೇ ದೊಡ್ಡ ದೋಷವಾಗಿದೆ. ಗುಣ-ದೋಷಗಳ ಕಡೆಗೆ ದೃಷ್ಟಿಹೋಗದೆ ತನ್ನ ಶಾಂತ ನಿಃಸಂಕಲ್ಪ ಸ್ವರೂಪದಲ್ಲಿ ಸ್ಥಿತನಾಗಿರುವುದೇ ಎಲ್ಲಕ್ಕಿಂತ ದೊಡ್ಡ ಗುಣವಾಗಿದೆ. ॥ ೪೫ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ

ಉದ್ಧವ ಉವಾಚ

ವಿಧಿಶ್ಚ ಪ್ರತಿಷೇಧಶ್ಚ ನಿಗಮೋ ಹೀಶ್ವರಸ್ಯ ತೇ ।
ಅವೇಕ್ಷತೇಽರವಿಂದಾಕ್ಷ ಗುಣಂ ದೋಷಂ ಚ ಕರ್ಮಣಾಮ್
॥ ೧ ॥

ವರ್ಣಾಶ್ರಮವಿಕಲ್ಪಂ ಚ ಪ್ರತಿಲೋಮಾನುಲೋಮಜಮ್ ।
ದ್ರವ್ಯದೇಶವಯಃಕಾಲಾನ್ಸ್ವರ್ಗಂ ನರಕಮೇವ ಚ
॥ ೨ ॥

ಗುಣದೋಷಭಿದಾದೃಷ್ಟಿಮಂತರೇಣ ವಚಸ್ತವ ।
ನಿಃಶ್ರೇಯಸಂ ಕಥಂ ನೃಣಾಂ ನಿಷೇಧವಿಧಿಲಕ್ಷಣಮ್
॥ ೩ ॥

ಉದ್ಧವನು ಹೇಳಿದನು – ಅರವಿಂದಾಕ್ಷನೇ ! ವೇದಗಳೇ ನಿನ್ನ ಆಜ್ಞಾರೂಪಿ ವಾಣಿಯಾಗಿದೆ. ವಿಧಿ ಮತ್ತು ನಿಷೇಧಗಳನ್ನು ನಿರ್ಣಯಿಸಲು ಹಾಗೂ ಕರ್ಮಗಳ ಗುಣದೋಷಗಳೂ ಕೂಡ ಈ ವೇದ ವಾಣಿಯನ್ನೇ ಆಧರಿಸಿದೆ. ॥ ೧ ॥ ವರ್ಣಾಶ್ರಮ ಭೇದ, ಪ್ರತಿಲೋಮ ಮತ್ತು ಅನುಲೋಮ ರೂಪಿ ವರ್ಣ ಸಂಕರ ಕರ್ಮಗಳ ಉಪಯುಕ್ತ ಹಾಗೂ ಅನುಪಯುಕ್ತ ದ್ರವ್ಯ, ದೇಶ, ಆಯು, ಕಾಲ, ಸ್ವರ್ಗ, ನರಕ ಇವುಗಳ ಭೇದಗಳ ಅರಿವು ವೇದಗಳಿಂದಲೇ ಆಗುವುದು. ॥ ೨ ॥ ಈ ಪ್ರಕಾರ ವಿಧಿನಿಷೇಧದ ಲಕ್ಷಣಗಳನ್ನು ಹೇಳುವ ನಿನ್ನದೇ ವೇದವಾಣಿಯಲ್ಲಿ ಗುಣ-ದೋಷಗಳ ಕುರಿತು ಕೂಡ ಹೇಳಲಾಗಿದೆ. ಹಾಗಿರುವಾಗ ಗುಣ-ದೋಷಗಳನ್ನು ಮನುಷ್ಯನು ತಿಳಿಯದಿರುವವರೆಗೆ ಅವನ ಶ್ರೇಯಸ್ಸಾದರೂ ಹೇಗಾಗಬಹುದು ? ॥ ೩ ॥ ಓ ಸರ್ವಶಕ್ತಿವಂತ

ಪಿತೃದೇವಮನುಷ್ಯಾಣಾಂ ವೇದಶ್ಚಕ್ಷುಸ್ತವೇಶ್ವರ ।
ಶ್ರೇಯಸ್ತ್ವನುಪಲಬ್ಧೇऽರ್ಥೇ ಸಾಧ್ಯಸಾಧನಯೋರಪಿ
॥ ೪ ॥

ನಾದ ಪರಮೇಶ್ವರನೇ ! ನಿನ್ನ ವೇದಗಳೇ – ಪಿತೃಗಳು, ದೇವತೆಗಳು, ಮನುಷ್ಯರು ಇವರಿಗೆ ಶ್ರೇಯಸ್ಸಿನ ಮಾರ್ಗವನ್ನು ತೋರಿಸುವ ಕಣ್ಣುಗಳಾಗಿವೆ. ಈ ನೇತ್ರಗಳನ್ನು ಕಾಣದವನು ಶ್ರೇಯಸ್ಸು ಎಂದರೇನು ? ಸಾಧ್ಯ ಯಾವುದು, ಸಾಧನೆ ಯಾವುದು ? ಇವನ್ನು ನೋಡಲಾರನು. ॥ ೪ ॥

ಗುಣದೋಷಭಿದಾದೃಷ್ಟಿರ್ನಿಗಮಾತ್ತೇ ನ ಹಿ ಸ್ವತಃ ।
ನಿಗಮೇನಾಪವಾದಶ್ಚ ಭಿದಾಯಾ ಇತಿ ಹ ಭ್ರಮಃ
॥ ೫ ॥

ಗುಣ-ದೋಷಗಳ ಭೇದಗಳು ಕೂಡ ನಿನ್ನ ವೇದವಾಣಿಯ ಮೂಲಕವೇ ನಿರ್ಣಯ ಮಾಡಲಾಗಿದೆ. ಇದು ಯಾರ ಕಲ್ಪನೆಯೂ ಅಲ್ಲ. ಇದು ತನ್ನಿಂದ ತಾನೇ ಉಂಟಾಗದೆ, ವೇದದಿಂದಲೇ ಗುಣ-ದೋಷಗಳ ದೃಷ್ಟಿ ಉಂಟಾಗಿದೆ. ಇದರಿಂದ ನನಗೆ ಭ್ರಮೆ ಆಗುತ್ತಾ ಇದೆ. ॥ ೫ ॥

ಶ್ರೀಭಗವಾನುವಾಚ

ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ ।
ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋऽನ್ಯೋऽಸ್ತಿ ಕುತ್ರಚಿತ್
॥ ೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ ! ನಾನೇ ವೇದಗಳಲ್ಲಿ ಮತ್ತು ಬೇರೆಡೆಗಳಲ್ಲಿಯೂ ಮನುಷ್ಯರ ಶ್ರೇಯಸ್ಸಿಗಾಗಿ ಅಧಿಕಾರ ಭೇದದಿಂದ ಜ್ಞಾನ, ಕರ್ಮ, ಭಕ್ತಿಗಳೆಂಬ ಮೂರು ಪ್ರಕಾರದ ಯೋಗಗಳನ್ನು ಉಪದೇಶಿಸಿರುವೆನು. ಇವುಗಳಲ್ಲದೆ ಮನುಷ್ಯನ ಪರಮ ಶ್ರೇಯಸ್ಸಿಗೆ ಬೇರೆ ಯಾವ ಉಪಾಯವೂ ಇಲ್ಲ. ॥ ೬ ॥ ಉದ್ಧವನೇ ! ಕರ್ಮಗಳು ಮತ್ತು ಅವುಗಳ ಫಲದಿಂದ ವಿರಕ್ತರಾದವರು, ಅವನ್ನು ತ್ಯಜಿಸಿದ ಜನರು ಜ್ಞಾನಯೋಗದ ಅಧಿಕಾರಿಗಳಾಗಿದ್ದಾರೆ. ಇದಕ್ಕೆ ವಿಪರೀತವಾಗಿ ಯಾರಿಗೆ ಚಿತ್ತದಲ್ಲಿ ಕರ್ಮಗಳು ಮತ್ತು ಅವುಗಳ ಫಲದಿಂದ ವೈರಾಗ್ಯ ಉಂಟಾಗಿಲ್ಲವೋ, ಅವುಗಳಲ್ಲಿ ದುಃಖಬುದ್ಧಿಯು ಉಂಟಾಗಲಿಲ್ಲವೋ ಆ ಸಕಾಮ ವ್ಯಕ್ತಿಯು ಕರ್ಮಯೋಗದ ಅಧಿಕಾರಿಯು. ॥ ೭ ॥ ಯಾರು ಅತ್ಯಂತ ವಿರಕ್ತನಲ್ಲವೋ, ಅತ್ಯಂತ ಆಸಕ್ತನಲ್ಲವೋ, ಹಾಗೂ ಯಾವುದೋ ಪೂರ್ವಜನ್ಮದ ಶುಭ ಕರ್ಮಗಳಿಂದ ಸೌಭಾಗ್ಯವಶ ನನ್ನ ಲೀಲೆ-ಕಥೆಗಳಲ್ಲಿ ಶ್ರದ್ಧೆ ಉಂಟಾಗಿದೆಯೋ ಅವರು ಭಕ್ತಿಯೋಗದ ಅಧಿಕಾರಿಗಳು. ಅವರಿಗೆ ಭಕ್ತಿಯೋಗದಿಂದಲೇ ಸಿದ್ಧಿ ದೊರೆಯಬಲ್ಲದು. ॥ ೮ ॥ ಕರ್ಮದ ಸಂಬಂಧವಾಗಿ ಇರುವ ವಿಧಿ-ನಿಷೇಧಗಳನುಸಾರ ಕರ್ಮಮಯ ಜಗತ್ತು ಮತ್ತು ಅದರಿಂದ ದೊರೆಯುವ ಸ್ವರ್ಗಾದಿ ಸುಖಿಗಳಲ್ಲಿ ವೈರಾಗ್ಯ ಉಂಟಾಗುವವರೆಗೆ ಅಥವಾ ನನ್ನ ಲೀಲೆ ಕಥೆಗಳ ಶ್ರವಣ ಕೀರ್ತನಾದಿಗಳಲ್ಲಿ ಶ್ರದ್ಧೆ ಉಂಟಾಗುವವರೆಗೆ ಕರ್ಮಗಳನ್ನು ಮಾಡುತ್ತಾ ಇರಬೇಕು. ॥ ೯ ॥ ಉದ್ಧವನೇ ! ಹೀಗೆ ತನ್ನ ವರ್ಣ, ಆಶ್ರಮಕ್ಕೆ ಅನುಕೂಲ ಧರ್ಮದಲ್ಲಿ ಸ್ಥಿತನಾಗಿದ್ದು, ಯಜ್ಞಗಳ ಮೂಲಕ ಯಾವುದೇ ಆಸೆ-ಕಾಮನೆಯಿಲ್ಲದೆ ನನ್ನನ್ನು ಆರಾಧಿಸುತ್ತಿದ್ದು, ನಿಷಿದ್ಧ ಕರ್ಮಗಳಿಂದ ದೂರವಿರಬೇಕು. ಕೇವಲ ವಿಹಿತ ಕರ್ಮಗಳನ್ನೇ ಆಚರಿಸಿದರೆ ಅವನಿಗೆ ಸ್ವರ್ಗ ಅಥವಾ ನರಕಕ್ಕೆ ಹೋಗಬೇಕಾಗುವುದಿಲ್ಲ. ॥ ೧೦ ॥ ತನ್ನ ಧರ್ಮದಲ್ಲಿ ನಿಷ್ಠೆಯುಳ್ಳ ಪುರುಷನ ಪಾಪಗಳು ಉಳಿಯುವುದಿಲ್ಲ. ಅವನು ಪವಿತ್ರನಾಗಿ ಹೋಗುತ್ತಾನೆ. ಅವನು ಈ ಲೋಕದಲ್ಲಿ ವ್ಯವಹಾರ ಮಾಡುತ್ತಾ ವಿಶುದ್ಧ ಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಅವನಿಗೆ ಆಯಾಸವಿಲ್ಲದೆಯೇ ನನ್ನ ಭಕ್ತಿಯು ಪ್ರಾಪ್ತವಾಗುತ್ತದೆ. ॥ ೧೧ ॥ ಈ ಮನುಷ್ಯ ಶರೀರವು ಅತ್ಯಂತ ದುರ್ಲಭವಾಗಿದೆ. ಸ್ವರ್ಗದ ದೇವತೆಗಳೂ ಇದನ್ನು ಬಯಸುತ್ತಾರೆ ಹಾಗೂ ನರಕದ ಜನರೂ ಕೂಡ ಇದಕ್ಕೆ ಆಸೆಪಡುತ್ತಾರೆ. ಜ್ಞಾನಮಾರ್ಗ ಮತ್ತು ಭಕ್ತಿ ಮಾರ್ಗದ ಸಾಧಕರೂ ಮನುಷ್ಯಶರೀರವನ್ನು ಇಚ್ಛಿಸುತ್ತಾರೆ. ಏಕೆಂದರೆ ಸ್ವರ್ಗ ಅಥವಾ ನರಕಗಳಲ್ಲಿ ಭಗವತ್ಪ್ರಾಪ್ತಿಯಾಗಲಾರದು. ಆದರೆ ಮನುಷ್ಯ ಶರೀರದಲ್ಲಿ ಆಗಬಲ್ಲದು. ॥ ೧೨ ॥

ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು ।
ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್
॥ ೭ ॥

ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್ ।
ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋऽಸ್ಯ ಸಿದ್ಧಿದಃ
॥ ೮ ॥

ತಾವತ್ ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ ।
ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ
॥ ೯ ॥

ಸ್ವಧರ್ಮಸ್ಥೋ ಯಜನ್ಯಜ್ಞೈರನಾಶೀಃ ಕಾಮ ಉದ್ಧವ ।
ನ ಯಾತಿ ಸ್ವರ್ಗನರಕೌ ಯದ್ಯನ್ಯನ್ನ ಸಮಾಚರೇತ್
॥ ೧೦ ॥

ಅಸ್ಮಿಂಲ್ಲೋಕೇ ವರ್ತಮಾನಃ ಸ್ವಧರ್ಮಸ್ಥೋऽನಘಃ ಶುಚಿಃ ।
ಜ್ಞಾನಂ ವಿಶುದ್ಧಮಾಪ್ನೋತಿ ಮದ್ಭಕ್ತಿಂ ವಾ ಯದೃಚ್ಛಯಾ
॥ ೧೧ ॥

ಸ್ವರ್ಗಿಣೋऽಪ್ಯೇತಮಿಚ್ಛಂತಿ ಲೋಕಂ ನಿರಯಿಣಸ್ತಥಾ ।
ಸಾಧಕಂ ಜ್ಞಾನಭಕ್ತಿಭ್ಯಾಮುಭಯಂ ತದಸಾಧಕಮ್
॥ ೧೨ ॥

ನ ನರಃ ಸ್ವರ್ಗತಿಂ ಕಾಂಕ್ಷೇನ್ನಾರಕೀಂ ವಾ ವಿಚಕ್ಷಣಃ ।
ನೇಮಂ ಲೋಕಂ ಚ ಕಾಂಕ್ಷೇತ ದೇಹಾವೇಶಾತ್ಪ್ರಮಾದ್ಯತಿ
॥ ೧೩ ॥

ವಿಚಾರಕುಶಲ ಪುರುಷನು ಸ್ವರ್ಗದ, ನರಕದ, ಅಥವಾ ಈ ಲೋಕದ ಯಾವುದೇ ಕಾಮನೆ ಮಾಡಬಾರದು. ಏಕೆಂದರೆ, ದೇಹದಲ್ಲೇ ಅಹಂಬುದ್ಧಿ ಉಂಟಾಗಿ, ಅದರಿಂದ ಪ್ರಮಾದವಾಗುತ್ತದೆ, ಪತನವಾಗುತ್ತದೆ. ॥ ೧೩. ॥ ಆದ್ದರಿಂದ ಎಚ್ಚರಗೊಂಡು ವಿವೇಕದ ಮೂಲಕ ಈ ಶರೀರವು ಮರಣಧರ್ಮಿಯಾಗಿದ್ದರೂ, ಇದು ಪರಮಾತ್ಮನ ಪ್ರಾಪ್ತಿಮಾಡಿಕೊಡುವಂತಹುದು ಎಂದು ತಿಳಿದುಕೊಳ್ಳಬೇಕು. ಹೀಗೆ ನಿಶ್ಚಿತ ವಿಚಾರಗೈದು ಮೃತ್ಯುವಿಗೆ ಮೊದಲೇ ಆತ್ಮ ಕಲ್ಯಾಣಕ್ಕಾಗಿ ಪ್ರಯತ್ನಿಸಬೇಕು. ॥ ೧೪ ॥

ಏತದ್ವಿದ್ವಾನ್ ಪುರಾ ಮೃತ್ಯೋರಭವಾಯ ಘಟೇತ ಸಃ ।
ಅಪ್ರಮತ್ತ ಇದಂ ಜ್ಞಾತ್ವಾ ಮರ್ತ್ಯಮಪ್ಯರ್ಥಸಿದ್ಧಿದಮ್
॥ ೧೪ ॥

ಈ ಶರೀರವು ಒಂದು ವೃಕ್ಷವಾಗಿದೆ. ಇದರಲ್ಲಿ ಗೂಡುಕಟ್ಟಿಕೊಂಡು ಜೀವರೂಪೀ ಪಕ್ಷಿಯು ವಾಸಿಸುತ್ತಿದೆ. ಈ ಮರವನ್ನು ಯಮನ ದೂತರು ಪ್ರತಿಕ್ಷಣ ಕತ್ತರಿಸುತ್ತಿರುವರು. ಮುರಿದುಬಿದ್ದ ಮರವನ್ನು ಪಕ್ಷಿಯು ಬಿಟ್ಟು ಹಾರಿಹೋಗುವಂತೆ, ಈ ಮನುಷ್ಯಶರೀರವನ್ನು ಕಾಲನು ಹಗಲು ರಾತ್ರೆಗಳ ಮೂಲಕ ವೇಗವಾಗಿ ಕತ್ತರಿಸಲು ತೊಡಗಿರುವನು. ಕಾಲನ ಈ ಕೃತ್ಯವನ್ನು ನೋಡಿ ಭಯದಿಂದ ಕಂಪಿತನಾಗಿ, ಕಾಮನಾಶೂನ್ಯನಾಗುವ ಮನುಷ್ಯನೇ ಪರಮಾತ್ಮತತ್ತ್ವವನ್ನು ಅರಿತುಕೊಂಡು ಶಾಂತಾತ್ಮನಾಗಿ, ಮೋಕ್ಷವನ್ನು ಪಡೆದುಕೊಳ್ಳುವನು.॥ ೧೫–೧೬ ॥ ಈ ಮನುಷ್ಯಶರೀರವು ಅತ್ಯಂತ ದುರ್ಲಭವಾಗಿದ್ದರೂ ಭಗವಂತನ ಅಸೀಮ ಅನುಕಂಪದಿಂದ ಇದು ಸುಲಭವಾಗಿದೆ. ಸಂಸಾರ ಸಾಗರವನ್ನು ದಾಟಲು ಮಾನವಶರೀರವು ದೃಢವಾದ ಒಂದು ನೌಕೆಯಾಗಿದೆ. ಸದ್ಗುರುವೇ ಇದರ ಕರ್ಣಧಾರ (ಅಂಬಿಗ). ಭಗವಂತನು ಹೇಳುತ್ತಾನೆ – ನಾನೇ ಅನುಕೂಲವಾದ ವಾಯುವಾಗಿ ಇದನ್ನು ನಡೆಸುತ್ತೇನೆ. ಭಗವಂತನ ಇಷ್ಟೊಂದು ಕರುಣೆ ಇದ್ದರೂ ಕೂಡ ಈ ಸಂಸಾರಸಾಗರವನ್ನು ದಾಟದವನು ಸ್ವತಃ ತನ್ನ ಆತ್ಮವನ್ನು ಕೊಲ್ಲುವವನೆಂದು ತಿಳಿಯಬೇಕು. ॥ ೧೭ ॥

ಭಿದ್ಯಮಾನಂ ಯಮೈರೇತೈಃ ಕೃತನೀಡಂ ವನಸ್ಪತಿಮ್ ।
ಖಗಃ ಸ್ವಕೇತಮುತ್ಸೃಜ್ಯ ಕ್ಷೇಮಂ ಯಾತಿ ಹ್ಯಲಂಪಟಃ
॥ ೧೫ ॥

ಅಹೋರಾತ್ರೈಶ್ಛಿದ್ಯಮಾನಂ ಬುದ್ಧ್ವಾ ऽऽಯುರ್ಭಯವೇಪಥುಃ ।
ಮುಕ್ತಸಂಗಃ ಪರಂ ಬುದ್ಧ್ವಾ ನಿರೀಹ ಉಪಶಾಮ್ಯತಿ
॥ ೧೬ ॥

ನೃದೇಹಮಾದ್ಯಂ ಸುಲಭಂ ಸುದುರ್ಲಭಂ
ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।
ಮಯಾನುಕೂಲೇನ ನಭಸ್ವತೇರಿತಂ
ಪುಮಾನ್ ಭವಾಬ್ಧಿಂ ನ ತರೇತ್ಸ ಆತ್ಮಹಾ ॥ ೧೭ ॥

ಪ್ರಿಯ ಉದ್ಧವನೇ! ಕರ್ಮಗಳಲ್ಲಿ ದುಃಖವನ್ನು ಅನುಭವಿಸುತ್ತಾ ಅವುಗಳಿಂದ ವಿರಕ್ತನಾದಾಗ ಮನುಷ್ಯನು ಜಿತೇಂದ್ರಿಯನಾಗಿ ಯೋಗದಲ್ಲಿ ಸ್ಥಿತನಾಗಬೇಕು. ಅಭ್ಯಾಸ ಮತ್ತು ಆತ್ಮಾನುಸಂಧಾನದಿಂದ ತನ್ನ ಮನಸ್ಸಲ್ಲಿ ಪರಮಾತ್ಮನಾದ ನನ್ನನ್ನು ನಿಶ್ಚಲರೂಪದಿಂದ ಧರಿಸಿಕೊಳ್ಳಬೇಕು. ॥ ೧೮ ॥ ಮನಸ್ಸನ್ನು ಸ್ಥಿರಗೊಳಿಸುವಾಗ ಅದು ಚಂಚಲವಾಗಿ ಅತ್ತ-ಇತ್ತ ಅಲೆಯತೊಡಗಿದಾಗ ಕೂಡಲೇ ತುಂಬಾ ಜಾಗರೂಕತೆಯಿಂದ ಅದನ್ನು ಒಲಿಸಿ-ಒಪ್ಪಿಸಿ, ಹಿಂದಕ್ಕೆ ಎಳೆದುತಂದು ತನ್ನ ವಶದಲ್ಲಿ ಇರಿಸಿಕೊಳ್ಳಬೇಕು. ॥ ೧೯ ॥ ಇಂದ್ರಿಯಗಳನ್ನು ಮತ್ತು ಪ್ರಾಣಗಳನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕು. ಮನವನ್ನು ಒಂದು ಕ್ಷಣವಾದರೂ ಸ್ವತಂತ್ರವಾಗಿ ಬಿಡಬಾರದು. ಅದರ ಪ್ರತಿಯೊಂದು ಸ್ಥಿತಿ-ಗತಿಗಳನ್ನು ನೋಡುತ್ತಾ ಇರಬೇಕು. ಈ ಪ್ರಕಾರ ಸತ್ತ್ವಸಂಪನ್ನ ಬುದ್ಧಿಯಿಂದ ನಿಧಾನವಾಗಿ ಮನಸ್ಸನ್ನು ತನ್ನ ವಶದಲ್ಲಿ ಇರಿಸಿಕೊಳ್ಳಬೇಕು. ॥ ೨೦ ॥ ಉಚ್ಛೃಂಖಲವಾದ ಕುದುರೆಯನ್ನು ಪಳಗಿಸುವ ಆವಶ್ಯಕತೆ ಇರುತ್ತದೆ. ಅದನ್ನು ವಶಪಡಿಸಿದಂತೆ ಮನಸ್ಸಿನ ಭಾವಗಳನ್ನು ಅರಿತುಕೊಂಡು ಅದನ್ನು ವಶಪಡಿಸಿಕೊಳ್ಳಬೇಕು. ಮನಸ್ಸು ಪೂರ್ಣವಾಗಿ ವಶವಾದಾಗಲೇ ಪರಮಯೋಗಿಯಾಗುವನು. ॥ ೨೧ ॥

ಯದಾ ऽऽರಂಭೇಷು ನಿರ್ವಿಣ್ಣೋ ವಿರಕ್ತಃ ಸಂಯತೇಂದ್ರಿಯಃ ।
ಅಭ್ಯಾಸೇನಾತ್ಮನೋ ಯೋಗೀ ಧಾರಯೇದಚಲಂ ಮನಃ
॥ ೧೮ ॥

ಧಾರ್ಯಮಾಣಂ ಮನೋ ಯರ್ಹಿ ಭ್ರಾಮ್ಯದಾಶ್ವನವಸ್ಥಿತಮ್ ।
ಅತಂದ್ರಿತೋ ऽನುರೋಧೇನ ಮಾರ್ಗೇಣಾತ್ಮವಶಂ ನಯೇತ್
॥ ೧೯ ॥

ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇಂದ್ರಿಯಃ ।
ಸತ್ತ್ವಸಂಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್
॥ ೨೦ ॥

ಏಷ ವೈ ಪರಮೋ ಯೋಗೋ ಮನಸಃ ಸಂಗ್ರಹಃ ಸ್ಮೃತಃ ।
ಹೃದಯಜ್ಞತ್ವಮನ್ವಿಚ್ಛನ್ ದಮ್ಯಸ್ yೇವಾರ್ವತೋ ಮುಹುಃ
॥ ೨೧ ॥

ಸಾಂಖ್ಯೇನ ಸರ್ವಭಾವಾನಾಂ ಪ್ರತಿಲೋಮಾನುಲೋಮತಃ ।
ಭವಾಪ್ಯಯಾವನುಧ್ಯಾಯೇನ್ಮನೋ ಯಾವತ್ಪ್ರಸೀದತಿ
॥ ೨೨ ॥

ನಿರ್ವಿಣ್ಣಸ್ಯ ವಿರಕ್ತಸ್ಯ ಪುರುಷಸ್ಯೋಕ್ತವೇದಿನಃ ।
ಮನಸ್ತ್ಯಜತಿ ದೌರಾತ್ಮ್ಯಂ ಚಿಂತಿತಸ್ಯಾನುಚಿಂತಯಾ
॥ ೨೩ ॥

ಯಮಾದಿಭಿರ್ಯೋಗಪಥೈರಾನ್ವೀಕ್ಷಿಕ್ಯಾ ಚ ವಿದ್ಯಯಾ ।
ಮಮಾರ್ಚೋಪಾಸನಾಭಿರ್ವಾ ನಾನ್ಯೈರ್ಯೋಗಂ ಸ್ಮರೇನ್ಮನಃ
॥ ೨೪ ॥

ಯದಿ ಕುರ್ಯಾತ್ ಪ್ರಮಾದೇನ ಯೋಗೀ ಕರ್ಮ ವಿಗರ್ಹಿತಮ್ ।
ಯೋಗೇನೈವ ದಹೇದಂಹೋ ನಾನ್ಯತ್ತತ್ರ ಕದಾಚನ
॥ ೨೫ ॥

ಸ್ವೇ ಸ್ವೇऽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ ।
ಕರ್ಮಣಾಂ ಜಾತ್ಯಶುದ್ಧಾನಾಮನೇನ ನಿಯಮಃ ಕೃತಃ ।
ಗುಣದೋಷವಿಧಾನೇನ ಸಂಗಾನಾಂ ತ್ಯಾಜನೇಚ್ಛಯಾ
॥ ೨೬ ॥

ಜಾತಶ್ರದ್ಧೋ ಮತ್ಕಥಾಸು ನಿರ್ವಿಣ್ಣಃ ಸರ್ವಕರ್ಮಸು ।
ವೇದ ದುಃಖಾತ್ಮಕಾನ್ ಕಾಮಾನ್ಪರಿತ್ಯಾಗೇऽಪ್ಯನೀಶ್ವರಃ
॥ ೨೭ ॥

ತತೋ ಭಜೇತ ಮಾಂ ಪ್ರೀತಃ ಶ್ರದ್ಧಾಲುರ್ದೃಢನಿಶ್ಚಯಃ ।
ಜುಷಮಾಣಶ್ಚತಾನ್ಕಾಮಾನ್ ದುಃಖೋದರ್ಕಾಂಶ್ಚಗರ್ಹಯನ್
॥ ೨೮ ॥

ಪ್ರೋಕ್ತೇನ ಭಕ್ತಿಯೋಗೇನ ಭಜತೋ ಮಾಸಕೃನ್ಮುನೇಃ ।
ಕಾಮಾ ಹೃದಯ್ಯಾ ನಶ್ಯಂತಿ ಸರ್ವೇ ಮಯಿ ಹೃದಿ ಸ್ಥಿತೇ
॥ ೨೯ ॥

ಸಾಂಖ್ಯಶಾಸ್ತ್ರದಲ್ಲಿ ತಿಳಿಸಿದ ಕ್ರಮಕ್ಕನುಸಾರವೇ ಪ್ರಕೃತಿಯಿಂದ ಹಿಡಿದು ಶರೀರದವರೆಗಿನ ಸೃಷ್ಟಿಯನ್ನು ಚಿಂತಿಸಬೇಕು. ಶರೀರಾದಿಗಳ ಪ್ರಕೃತಿಯಲ್ಲಿ ಲಯವಾಗುವ ಕ್ರಮವನ್ನು ಹೇಳಿದಂತೆ ಲಯ-ಚಿಂತನೆ ಮಾಡಬೇಕು. ಮನಸ್ಸು ಶಾಂತ-ಸ್ಥಿರವಾಗುವವರೆಗೆ ಈ ಕ್ರಮವನ್ನು ನಡೆಸುತ್ತಾ ಇರಬೇಕು. ॥ ೨೨ ॥ ಸಂಸಾರದಿಂದ ವಿರಕ್ತನಾದವನು, ಸಾಂಸಾರಿಕ ಪದಾರ್ಥಗಳಲ್ಲಿ ದುಃಖಬುದ್ಧಿ ಉಂಟಾದವನು ತನ್ನ ಗುರುಹಿರಿಯರ ಉಪದೇಶಗಳನ್ನು ಚೆನ್ನಾಗಿ ತಿಳಿದುಕೊಂಡು, ಪದೇ-ಪದೇ ತನ್ನ ಸ್ವರೂಪದ ಚಿಂತನೆಯಲ್ಲೇ ಮುಳುಗಿರುತ್ತಾನೆ. ಈ ಅಭ್ಯಾಸದಿಂದ ಬಹುಬೇಗನೇ ಅವನ ಮನಸ್ಸು ಚಂಚಲತೆಯನ್ನು ಬಿಟ್ಟುಬಿಡುತ್ತದೆ. ॥ ೨೩ ॥ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಮುಂತಾದ ಯೋಗಮಾರ್ಗಗಳಿಂದ, ಆತ್ಮವಿದ್ಯೆಯಿಂದ ಹಾಗೂ ನನ್ನ ಪರಾಭಕ್ತಿಯಿಂದ, ನನ್ನ ಉಪಾಸನೆಯಿಂದ, ಭಕ್ತಿಯೋಗದಿಂದ ಮನಸ್ಸು ಪರಮಾತ್ಮನ ಚಿಂತನೆ ಮಾಡತೊಡಗುತ್ತದೆ. ಇದಲ್ಲದೆ ಬೇರೆ ಯಾವ ಉಪಾಯವೂ ಇಲ್ಲ. ॥ ೨೪ ॥

ಎಲೈ ಉದ್ಧವನೇ! ಯೋಗಿಯಾದರೋ ಎಂದೂ ನಿಂದಿತ ಕೆಲಸವನ್ನು ಮಾಡುವುದೇ ಇಲ್ಲ. ಆದರೆ ಒಂದೊಮ್ಮೆ ಎಲ್ಲಾದರೂ ಅವನಿಂದ ಪ್ರಮಾದವಶದಿಂದ ಯಾವುದಾದರೂ ಅಪರಾಧ ನಡೆದುಹೋದರೂ, ಯೋಗದ ಮೂಲಕವೇ ಆ ಪಾಪವನ್ನು ಸುಟ್ಟುಬಿಡುತ್ತಾನೆ. ಬೇರೆ ಯಾವ ಕರ್ಮವನ್ನು ಅದಕ್ಕಾಗಿ ಮಾಡದಿರಲಿ. ॥ ೨೫ ॥ ತಮ್ಮ-ತಮ್ಮ ಅಧಿಕಾರಕ್ಕನುಸಾರ ಆಚರಿಸುವುದೇ ಗುಣವಾಗಿದೆ. ಬೇರೆಯವರ ಕರ್ಮಗಳನ್ನು ಆಚರಿಸುವುದು ದೋಷವಾಗಿದೆ. ಏಕೆಂದರೆ, ಕರ್ಮಗಳು ಸ್ವಭಾವತಃ ಅಶುದ್ಧವಾಗಿಯೇ ಇರುತ್ತವೆ. ಕರ್ಮಗಳ ಆಸಕ್ತಿಯನ್ನು ತ್ಯಾಗ ಮಾಡಲೆಂದೇ ಅವುಗಳಲ್ಲಿ ಗುಣ-ದೋಷಗಳ ವಿಧಾನಗೈದು, ಅವನ್ನು ನಿಯಮನ ಮಾಡಲಾಗಿದೆ. ॥ ೨೬ ॥

ನನ್ನ ಕಥೆಯಲ್ಲಿ ಶ್ರದ್ಧೆಯಿರಲಿ. ಎಲ್ಲ ಕರ್ಮಗಳಲ್ಲಿ ವೈರಾಗ್ಯ ತಳೆಯಲಿ. ಕರ್ಮಗಳನ್ನು ತ್ಯಜಿಸಲು ಅಸಮರ್ಥನಾಗಿದ್ದರೂ ಕೂಡ ಕರ್ಮಗಳು ದುಃಖಾತ್ಮಕವೆಂದು ತಿಳಿದುಕೊಂಡು. ಅವುಗಳಿಂದ ವಿರಕ್ತನಾಗಲು ಪ್ರಯತ್ನಿಸಲಿ. ಹೀಗೆ ಬುದ್ಧಿಯಲ್ಲಿ ನನ್ನ ನಿಶ್ಚಯವನ್ನು ದೃಢಗೊಳಿಸಿ, ಶ್ರದ್ಧಾ-ಪ್ರೇಮದಿಂದ ನನ್ನನ್ನು ಭಜಿಸಲಿ. ಕಾಮನೆಗಳನ್ನು ನಾಶಪಡಿಸಲಾಗದಿದ್ದರೆ, ಸಂಸ್ಕಾರವಶನಾಗಿ ಅವುಗಳನ್ನು ಸೇವಿಸುತ್ತಾ, ಅವನ್ನು ನಿಂದ್ಯವೆಂದು ತಿಳಿದು, ಪರಿಣಾಮದಲ್ಲಿ ಇವು ದುಃಖಪ್ರದವೇ ಆಗಿದೆ ಎಂದು ಯೋಚಿಸಲಿ. ಹೀಗೆ ಮಾಡುವುದರಿಂದ ಸಹಜವಾಗಿಯೇ ಆ ಕರ್ಮಗಳಿಂದ ವಿರಕ್ತಿ ಉಂಟಾದೀತು. ॥ ೨೭-೨೮ ॥ ಈ ಪ್ರಕಾರ ನಾನು ತಿಳಿಸಿದಂತಹ ಭಕ್ತಿಯೋಗದಿಂದ ನಿರಂತರ ನನ್ನನ್ನು ಭಜಿಸುವುದರಿಂದ ನಾನು ಆ ಸಾಧಕನ ಹೃದಯದಲ್ಲಿ ಬಂದು ನೆಲೆಸುತ್ತೇನೆ. ನಾನು ವಿರಾಜಮಾನನಾಗುತ್ತಲೇ ಅವನ ಹೃದಯದ ಎಲ್ಲ ವಾಸನೆಗಳು ತಮ್ಮ ಸಂಸ್ಕಾರಗಳೊಡನೆ ನಾಶವಾಗಿ ಹೋಗುತ್ತವೆ. ॥ ೨೯ ॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇऽಖಿಲಾತ್ಮನಿ
॥ ೩೦ ॥

ತಸ್ಮಾನ್ಮದ್ ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ ।
ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ
॥ ೩೧ ॥

ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್ ।
ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ
॥ ೩೨ ॥

ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇऽಂಜಸಾ ।
ಸ್ವರ್ಗಾಪವರ್ಗಂ ಮದ್ಧಾಮ ಕಥಂಚಿದ್ಯದಿ ವಾಂಛತಿ
॥ ೩೩ ॥

ನ ಕಿಂಚಿತ್ಸಾಧವೋ ಧೀರಾ ಭಕ್ತಾ ಹ್ಯೇಕಾಂತಿನೋ ಮಮ ।
ವಾಂಛಂತ್ಯಪಿ ಮಯಾ ದತ್ತಂ ಕೈವಲ್ಯಮಪುನರ್ಭವಮ್
॥ ೩೪ ॥

ನೈರಪೇಕ್ಷ್ಯಂ ಪರಂ ಪ್ರಾಹುರ್ನಿಃಶ್ರೇಯಸಮನಲ್ಪಕಮ್ ।
ತಸ್ಮಾನ್ನಿರಾಶಿಷೋ ಭಕ್ತಿರ್ನಿರಪೇಕ್ಷಸ್ಯ ಮೇ ಭವೇತ್
॥ ೩೫ ॥

ನ ಮಯ್ಯೇಕಾಂತಭಕ್ತಾನಾಂ ಗುಣದೋಷೋದ್ಭವಾ ಗುಣಾಃ ।
ಸಾಧೂನಾಂ ಸಮಚಿತ್ತಾನಾಂ ಬುದ್ಧೇಃ ಪರಮುಪೇಯುಷಾಮ್
॥ ೩೬ ॥

ಏವಮೇತಾನ್ಯಯಾऽऽದಿಷ್ಟಾನನುತಿಷ್ಠಂತಿ ಮೇ ಪಥಃ ।
ಕ್ಷೇಮಂ ವಿಂದಂತಿ ಮತ್ಸ್ಥಾನಂ ಯದ್ಬ್ರಹ್ಮ ಪರಮಂ ವಿದುಃ
॥ ೩೭ ॥

ಹೀಗೆ ಅವನಿಗೆ ಸರ್ವಾತ್ಮಕನಾದ ನನ್ನ ಸಾಕ್ಷಾತ್ಕಾರವಾಗುತ್ತಲೇ ಅವನ ಹೃದಯದ ಚಿಜ್ಜಡಗ್ರಂಥಿಯು ಬಿಚ್ಚಲ್ಪಡುತ್ತದೆ. ಅವನ ಎಲ್ಲ ಸಂಶಯಗಳು ಛಿನ್ನ-ಭಿನ್ನವಾಗುತ್ತವೆ ಹಾಗೂ ಕರ್ಮವಾಸನೆಯು ಸರ್ವಥಾ ಕ್ಷೀಣವಾಗುತ್ತದೆ. ॥ ೩೦ ॥ ಇದರಿಂದ ನನ್ನ ಭಕ್ತಿಯಿಂದ ಕೂಡಿದ ಯೋಗಿಯು ನನ್ನ ಚಿಂತನೆಯಲ್ಲೇ ಮಗ್ನನಾಗಿದ್ದು ಅವನಿಗಾಗಿ ಜ್ಞಾನ ಅಥವಾ ವೈರಾಗ್ಯದ ಆವಶ್ಯಕತೆ ಇರುವುದಿಲ್ಲ. ಅವನ ಶ್ರೇಯಸ್ಸಾದರೋ ಪ್ರಾಯಶಃ ನನ್ನ ಭಕ್ತಿಯಿಂದಲೇ ಆಗಿ ಹೋಗುತ್ತದೆ. ॥ ೩೧ ॥ ಕರ್ಮ, ತಪಸ್ಸು, ಜ್ಞಾನ, ವೈರಾಗ್ಯ, ಯೋಗಾಭ್ಯಾಸ, ದಾನ, ಧರ್ಮ ಹಾಗೂ ಇನ್ನಿತರ ಶ್ರೇಯಸ್ಸಿನ ಸಾಧನೆಗಳಿಂದ ದೊರೆಯುವುದೆಲ್ಲವೂ, ನನ್ನ ಭಕ್ತನಿಗೆ ನನ್ನ ಭಕ್ತಿಯೋಗದ ಪ್ರಭಾವದಿಂದಲೇ ದೊರೆಯುತ್ತದೆ. ಸ್ವರ್ಗ, ಮೋಕ್ಷ ಅಥವಾ ನನ್ನ ಧಾಮವನ್ನು ಬಯಸುವ ನನ್ನ ಭಕ್ತನು ಅಯಾಸವಿಲ್ಲದೆ ಪಡೆದುಕೊಳ್ಳುತ್ತಾನೆ. ॥ ೩೨-೩೩॥ ನನ್ನ ಅನನ್ಯ ಪ್ರೇಮಿ ಹಾಗೂ ಧೈರ್ಯವುಳ್ಳ ಸಾಧು-ಭಕ್ತರು ಸ್ವತಃ ತಾನಾದರೋ ಏನನ್ನೂ ಬಯಸುವುದಿಲ್ಲ. ಒಂದೊಮ್ಮೆ ನಾನೇ ಕೈವಲ್ಯ-ಮೋಕ್ಷವನ್ನು ಕೊಟ್ಟರೂ ಅವರು ಅದನ್ನು ಪಡೆಯಲು ಇಚ್ಛಿಸುವುದಿಲ್ಲ. ॥ ೩೪ ॥ ಏನನ್ನೂ ಇಚ್ಛಿಸದಿರುವುದು ಪರಮ ಶ್ರೇಯಸ್ಸಿಗಾಗಿ, ಎಲ್ಲಕ್ಕಿಂತ ದೊಡ್ಡ ಸಾಧನೆಯಾಗಿದೆ. ಆದ್ದರಿಂದ ಯಾವುದೇ ಕಾಮನೆ ಇಲ್ಲದವನಿಗೆ, ಯಾವ ಅಪೇಕ್ಷೆಯೂ ಇಲ್ಲದವನಿಗೇ ನನ್ನಲ್ಲಿ ಭಕ್ತಿಯು ಉಂಟಾಗುತ್ತದೆ. ॥ ೩೫ ॥ ಬುದ್ಧಿಯಿಂದ ಅತೀತನಾದ ಪರಮಾತ್ಮ ತತ್ತ್ವವನ್ನು ಪಡೆದ ನನ್ನ ಅನನ್ಯ ಪ್ರೇಮೀ ಭಕ್ತರಿಗೆ, ಆ ಸಮದರ್ಶಿ ಮಹಾತ್ಮರಿಗೆ ಈ ವಿಧಿ-ನಿಷೇಧದಿಂದ ಉಂಟಾಗುವ ಪುಣ್ಯ-ಪಾಪಗಳಿಂದ ಯಾವುದೇ ಸಂಬಂಧವೂ ಇರುವುದಿಲ್ಲ. ॥ ೩೬ ॥ ಈ ಪ್ರಕಾರ ನಾನು ಹೇಳಿರುವ ಜ್ಞಾನ, ಭಕ್ತಿ, ಕರ್ಮಯೋಗಗಳ ಆಶ್ರಯಪಡೆದ ಜನರು ನನ್ನ ಪರಮ ಶ್ರೇಯಸ್ಕರವಾದ ಧಾಮವನ್ನು ಪಡೆದುಕೊಳ್ಳುತ್ತಾರೆ. ಏಕೆಂದರೆ, ಅವರು ಪರಬ್ರಹ್ಮ ತತ್ತ್ವವನ್ನು ತಿಳಿದುಕೊಂಡಿರುವರು. ॥ ೩೭ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ವಿಂಶೋऽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಗುಣ-ದೋಷ ವ್ಯವಸ್ಥೆಗಳ ಸ್ವರೂಪ ಮತ್ತು ಅವುಗಳ ರಹಸ್ಯ

ಶ್ರೀಭಗವಾನುವಾಚ

ಯ ಏತಾನ್ ಮತ್ಪಥೋ ಹಿತ್ವಾ ಭಕ್ತಿಜ್ಞಾನಕ್ರಿಯಾತ್ಮಕಾನ್ ।
ಕ್ಷುದ್ರಾನ್ಕಾಮಾಂಶ್ಚಲೈಃ ಪ್ರಾಣೈರ್ಜುಷಂತಃ ಸಂಸರಂತಿ ತೇ
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ನನ್ನ ಪ್ರಾಪ್ತಿಗಾಗಿ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗಗಳೆಂಬ ಮೂರುಮಾರ್ಗಗಳಿವೆ. ಇವನ್ನು ಬಿಟ್ಟು ಚಂಚಲ ಇಂದ್ರಿಯಗಳ ಮೂಲಕ ಕ್ಷುದ್ರವಾದ ಭೋಗಗಳನ್ನು ಭೋಗಿಸುತ್ತಿರುವವರು ಪದೇ-ಪದೇ ಜನ್ಮ-ಮೃತ್ಯುರೂಪೀ ಸಂಸಾರದಲ್ಲಿ ಸುತ್ತುತ್ತಾ ಇರುತ್ತಾರೆ. ॥ ೧ ॥

ಸ್ವೇ ಸ್ವೇऽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ ।
ವಿಪರ್ಯಯಸ್ತು ದೋಷಃ ಸ್ಯಾದುಭಯೋರೇಷ ನಿಶ್ಚಯಃ
॥ ೨ ॥

ತಮ್ಮ-ತಮ್ಮ ಅಧಿಕಾರಕ್ಕನುಸಾರ ಧರ್ಮದಲ್ಲಿ ದೃಢನಿಷ್ಠೆ ಇರುವುದೇ ಗುಣವಾಗಿದೆ; ಇದಕ್ಕೆ ವಿಪರೀತವಾಗಿ ಅನಧಿಕಾರ ಚೇಷ್ಟೆಯನ್ನು ದೋಷವೆಂದು ಹೇಳಲಾಗಿದೆ. ತಾತ್ಪರ್ಯ – ಈ ಗುಣ-ದೋಷಗಳ ವ್ಯವಸ್ಥೆಯನ್ನು ಅಧಿಕಾರಕ್ಕನುಸಾರವೇ ಮಾಡ ಲಾಗುತ್ತದೆ; ಯಾವುದೇ ವಸ್ತುವಿಗನುಸಾರವಲ್ಲ. ಆದ್ದರಿಂದ ಸ್ವಧರ್ಮವನ್ನು ಪಾಲಿಸಬೇಕು. ॥ ೨ ॥ ಎಲ್ಲ ವಸ್ತುಗಳು ತಾತ್ತ್ವಿಕ ರೂಪದಿಂದ ಸಮಾನವೇ ಆಗಿವೆ. ಆದರೆ ದ್ರವ್ಯದ ಗುಣ-ದೋಷ, ಶುಭ ಅಥವಾ ಅಶುಭ ಇವುಗಳ ವಿಷಯದಲ್ಲಿ ಆ ವಸ್ತುವಿನ ನಿರ್ಣಯಮಾಡಿಯೇ ಶುದ್ಧಿ-ಅಶುದ್ಧಿಯ ವಿಷಯವಾಗಿ ಹೇಳಲಾಗು ತ್ತದೆ. ॥ ೩ ॥ ಪುಣ್ಯಾತ್ಮನಾದ ಉದ್ಧವನೇ! ಈ ಶುದ್ಧಿ ಅಶುದ್ಧಿಯ ನಿರ್ಣಯವು ಧರ್ಮದಿಂದಾಗಿಯೇ ಆಗುತ್ತದೆ. ವ್ಯವಹಾರ ಮತ್ತು ಶರೀರನಿರ್ವಾಹಕ್ಕಾಗಿಯೇ ಇದರ ವ್ಯವಸ್ಥೆ ಹೇಳಲಾಗಿದೆ. ಧರ್ಮದ ಮರ್ಯಾದೆಯನ್ನು ಪಾಲಿಸಲಿಕ್ಕಾಗಿ ನಾನೇ ಈ ಧರ್ಮದ ಆಚಾರವನ್ನು ಹೇಳಿರುವೆನು. ॥ ೪ ॥ ಪೃಥ್ವಿ, ಜಲ, ತೇಜ, ವಾಯು, ಆಕಾಶ ಈ ಪಂಚಭೂತಗಳೇ ಬ್ರಹ್ಮನಿಂದ ಹಿಡಿದು ಪರ್ವತ-ವೃಕ್ಷಗಳವರೆಗೆ ಎಲ್ಲ ಪ್ರಾಣಿಗಳ ಶರೀರಗಳ ಮೂಲ ಕಾರಣವಾಗಿವೆ. ಈ ರೀತಿ ಅವೆಲ್ಲವೂ ಶರೀರದ ದೃಷ್ಟಿಯಿಂದ ಸಮಾನವೇ ಆಗಿವೆ. ಎಲ್ಲರ ಆತ್ಮವೂ ಒಂದೇ ಆಗಿದೆ; ಆದ್ದರಿಂದ ಆತ್ಮನ ದೃಷ್ಟಿಯಿಂದಲೂ ಸಮಾನವಾಗಿವೆ. ॥ ೫ ॥ ಎಲೈ ಉದ್ಧವನೇ! ಪಂಚ - ಭೂತಗಳಾದರೋ ಎಲ್ಲದರಲ್ಲಿ ಸಮಾನವಾಗಿವೆ. ವೇದ ಗಳು ಅವುಗಳ ನಾಮ-ರೂಪಗಳನ್ನು ಬೇರೆ-ಬೇರೆಯಾಗಿ ಹೇಳುತ್ತವೆ. ಅವೆಲ್ಲವುಗಳಲ್ಲಿ ಸಜಾತೀಯ-ವಿಜಾತೀಯ, ಸ್ವಗತ ಭೇದಗಳನ್ನು ರಚಿಸಲಾಗಿದೆ. ಅವುಗಳ ಬೇರೆ-ಬೇರೆ ನಾಮ ರೂಪಗಳನ್ನು ಹೇಳಿರುವುದು ಆ ವಸ್ತುಗಳ ವ್ಯವಹಾರಕ್ಕಾಗಿಯೇ ಆಗಿದೆ. ॥ ೬॥ ಸಾಧುಶ್ರೇಷ್ಠ ಉದ್ಧವನೇ! ದೇಶ, ಕಾಲ ಮುಂತಾ ದವುಗಳ ವಿಷಯದಲ್ಲಿ ಮತ್ತು ಪದಾರ್ಥಗಳ ವಿಷಯದಲ್ಲಿ ಹೇಳ ಲಾದ ಗುಣ-ದೋಷಗಳ ವಿಧಾನವು ಕರ್ಮಗಳು ನಿಯಮಿತ ವಾಗಿ ನಡೆಯಲೆಂದೇ ಇದೆ. ॥ ೭ ॥ ಕೃಷ್ಣಸಾರ ಮೃಗವು ಇಲ್ಲ ದಿರುವ ಮತ್ತು ಬ್ರಾಹ್ಮಣಭಕ್ತರು ವಾಸಿಸದ ದೇಶವು ಅಪವಿತ್ರ ವಾಗಿದೆ. ಕೃಷ್ಣಸಾರ ಮೃಗವಿದ್ದರೂ, ಸಂತಪುರುಷರು ವಾಸಿಸುವಷ್ಟು ಪ್ರದೇಶವನ್ನು ಬಿಟ್ಟು ಕೀಕಟದೇಶವು ಅಪವಿತ್ರವಾಗಿದೆ. ಇದಲ್ಲದೆ ಸಜ್ಜನರು ಇರದ, ಬರಡುಭೂಮಿಯೂ ಅಪವಿತ್ರವೇ ಆಗಿದೆ.॥ ೮॥ ಕರ್ಮಮಾಡಲು ಯೋಗ್ಯ ಸಾಮಗ್ರಿ ದೊರೆಯಬಹುದಾದ ಹಾಗೂ ಕರ್ಮವೂ ಆಗಬಹುದಾದ ಸಮಯವೇ ಪವಿತ್ರ ವಾದುದು. ಇದಕ್ಕೆ ವಿಪರೀತವಾಗಿ ಕರ್ಮಮಾಡುವ ಸಾಮಗ್ರಿಯು ದೊರೆಯದಿದ್ದಾಗ, ಹಾಗೆಯೇ ಆಗಂತುಕ ದೋಷಗಳಿಂದ ಅಥವಾ ಸ್ವಾಭಾವಿಕ ದೋಷದ ಕಾರಣ, ಕರ್ಮವು ನಡೆಯ ದಿರುವ ಸಮಯವು ಅಶುದ್ಧವಾದುದು. ॥ ೯ ॥ ಪದಾರ್ಥಗಳ ಶುದ್ಧಿ-ಅಶುದ್ಧಿಯ ನಿರ್ಣಯವು, ದ್ರವ್ಯ, ವಚನ, ಸಂಸ್ಕಾರ, ಕಾಲ ಹೆಚ್ಚಾಗಿರುವುದು ಹಾಗೂ ಕಡಿಮೆ ಇರುವುದು ಇದರಿಂದಲೂ ಆಗುತ್ತದೆ. (ಹೇಗೆಂದರೆ ಯಾವುದಾದರೂ ಪಾತ್ರೆಯು ನೀರಿನಿಂದ ಶುದ್ಧಿಗೊಳಿಸಿದರೂ ಮೂತ್ರಾದಿಗಳಿಂದ ಅಶುದ್ಧವಾಗುತ್ತದೆ. ಯಾವುದೇ ವಸ್ತುವಿನ ಶುದ್ಧಿ ಅಥವಾ ಅಶುದ್ಧಿಯಲ್ಲಿ ಶಂಕೆ ಉಂಟಾದರೆ

ಶುದ್ಧ್ಯಶುದ್ಧೀ ವಿಧೀಯೇತೇ ಸಮಾನೇಷ್ವಪಿ ವಸ್ತುಷು ।
ದ್ರವ್ಯಸ್ಯ ವಿಚಿಕಿತ್ಸಾರ್ಥಂ ಗುಣದೋಷೌ ಶುಭಾಶುಭೌ
॥ ೩ ॥

ಧರ್ಮಾರ್ಥಂ ವ್ಯವಹಾರಾರ್ಥಂ ಯಾತ್ರಾರ್ಥಮಿತಿ ಚಾನಘ ।
ದರ್ಶಿತೋऽಯಂ ಮಯಾऽऽಚಾರೋ
ಧರ್ಮಮುದ್ವಹತಾಂ ಧುರಮ್
॥ ೪ ॥

ಭೂಮ್ಯಂಬ್ವಗ್ನ್ಯನಿಲಾಕಾಶಾ ಭೂತಾನಾಂ ಪಂಚ ಧಾತವಃ ।
ಆಬ್ರಹ್ಮಸ್ಥಾವರಾದೀನಾಂ ಶಾರೀರಾ ಆತ್ಮಸಂಯುತಾಃ
॥ ೫ ॥

ವೇದೇನ ನಾಮರೂಪಾಣಿ ವಿಷಮಾಣಿ ಸಮೇಷ್ವಪಿ ।
ಧಾತುಷೂದ್ಧವ ಕಲ್ಪ್ಯಂತೇ ಏತೇಷಾಂ ಸಾರ್ಥಸಿದ್ಧಯೇ
॥ ೬ ॥

ದೇಶಕಾಲಾದಿಭಾವಾನಾಂ ವಸ್ತೂನಾಂಮಮ ಸತ್ತಮ ।
ಗುಣದೋಷೌ ವಿಧೀಯೇತೇ ನಿಯಮಾರ್ಥಂ ಹಿ ಕರ್ಮಣಾಮ್
॥ ೭ ॥

ಅಕೃಷ್ಣಸಾರೋ ದೇಶಾನಾಮಬ್ರಹ್ಮಣ್ಯೋऽಶುಚಿರ್ಭವೇತ್ ।
ಕೃಷ್ಣಸಾರೋऽಪ್ಯಸೌ ವೀರಕೀಕಟಾಸಂಸ್ಕೃತೇರಿಣಮ್
॥ ೮ ॥

ಕರ್ಮಣ್ಯೋ ಗುಣವಾನ್ಕಾಲೋ ದ್ರವ್ಯತಃ ಸ್ವತ ಏವ ವಾ ।
ಯತೋ ನಿವರ್ತತೇ ಕರ್ಮ ಸ ದೋಷೋऽಕರ್ಮಕಃ ಸ್ಮೃತಃ
॥ ೯ ॥

ದ್ರವ್ಯಸ್ಯ ಶುದ್ಧ್ಯಶುದ್ಧೀ ಚ ದ್ರವ್ಯೇಣ ವಚನೇನ ಚ।
ಸಂಸ್ಕಾರೇಣಾಥ ಕಾಲೇನ ಮಹತ್ತ್ವಾಲ್ಪತಯಾಥವಾ
॥ ೧೦ ॥

ಬ್ರಾಹ್ಮಣರ ವಚನದಿಂದ ಅದು ಶುದ್ಧವಾಗುತ್ತದೆ. ಇಲ್ಲದಿದ್ದರೆ ಅಶುದ್ಧವಾಗಿರುತ್ತದೆ. ಪುಷ್ಪಾದಿಗಳು ನೀರು ಚಿಮುಕಿಸುವುದರಿಂದ ಶುದ್ಧ ಮತ್ತು ಮೂಸುವುದರಿಂದ ಅಶುದ್ಧವಾಗುತ್ತವೆ. ಅಗಲೇ ಬೇಯಿಸಿದ ಅನ್ನವು ಶುದ್ಧ ಹಾಗೂ ತಂಗಳಾದುದು ಅಶುದ್ಧವೆಂದು ತಿಳಿಯಲಾಗುತ್ತದೆ. ದೊಡ್ಡ ಸರೋವರ, ನದಿ ಇವುಗಳ ನೀರು ಶುದ್ಧ ಮತ್ತು ಸಣ್ಣ ಹೊಂಡದ ನೀರು ಅಶುದ್ಧ. ಹೀಗೆಯೇ ಬೇರೆ ವಸ್ತುಗಳನ್ನು ತಿಳಿದುಕೊಳ್ಳಬೇಕು.) ॥ ೧೦ ॥ ಶಕ್ತ, ಅಶಕ್ತ (ಅಸಮರ್ಥ, ಬಾಲಕ, ವೃದ್ಧ ರೋಗಿ ಮುಂತಾದವರು), ಬುದ್ಧಿ ಮತ್ತು ವೈಭವಕ್ಕನುಸಾರವೂ ಪವಿತ್ರತೆ, ಅಪವಿತ್ರತೆಯ ವ್ಯವಸ್ಥೆ ಯಾಗುತ್ತದೆ. ಅದರಲ್ಲಿಯೂ ಸ್ಥಾನ ಮತ್ತು ಉಪಯೋಗ ಮಾಡು ವವನ ಆಯುಸ್ಸಿನ ವಿಚಾರಮಾಡುತ್ತಾ ಅಶುದ್ಧ ವಸ್ತುಗಳ ವ್ಯವಹಾರದ ದೋಷವೂ ಸರಿಯಾಗಿ ಗುರುತಿಸಲಾಗುತ್ತದೆ. (ಶ್ರೀಮಂತ-ದರಿದ್ರ, ಬಲಿಷ್ಠ-ನಿರ್ಬಲ, ಬುದ್ಧಿವಂತ-ಮೂರ್ಖ, ಉಪದ್ರವದಿಂದ ಕೂಡಿದ ಮತ್ತು ಸುಖಕರವಾದ ದೇಶ, ತರುಣ-ವೃದ್ಧಾವಸ್ಥೆ ಇವುಗಳ ಭೇದದಿಂದ ಶುದ್ಧಿ ಹಾಗೂ ಅಶುದ್ಧಿಯ ವ್ಯವಸ್ಥೆಯಲ್ಲಿ ವ್ಯತ್ಯಾಸವಿರುತ್ತದೆ.) ॥ ೧೧ ॥ ಧಾನ್ಯ ಗಳು, ಮರದಪಾತ್ರೆ, ಆನೆಯದಂತ, ನೂಲು, ಜೇನು, ಉಪ್ಪು ಎಣ್ಣೆ ತುಪ್ಪ ಮುಂತಾದ ರಸವಸ್ತುಗಳು, ಚಿನ್ನ, ಪಾದರಸ ಮೊದ ಲಾದ ತೈಜಸ ಪದಾರ್ಥಗಳು, ಹುಲಿ, ಜಿಂಕೆ ಇವುಗಳ ಚರ್ಮ, ಮಣ್ಣಿನ ಗಡಿಗೆಯೇ ಮುಂತಾದವುಗಳು ಸಮಯಾನುಸಾರ ತಾನಾಗಿಯೇ ಗಾಳಿ ತಾಗುವುದರಿಂದ, ಬೆಂಕಿಯಲ್ಲಿ ಸುಟ್ಟಾಗ, ಮಣ್ಣಿನಿಂದ ತಿಕ್ಕುವುದರಿಂದ, ನೀರಿನಿಂದ ತೊಳೆಯುವುದರಿಂದ ಶುದ್ಧವಾಗುತ್ತವೆ. ದೇಶ, ಕಾಲ ಹಾಗೂ ಅವಸ್ಥೆಗನುಸಾರ ಕೆಲವೊಮ್ಮೆ ನೀರು, ಮಣ್ಣು ಮುಂತಾದ ಶೋಧಕ ಸಾಮಗ್ರಿಯ ಸಂಯೋಗ ದಿಂದ ಶುದ್ಧ ಮಾಡಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಒಂದೊಂದ ರಿಂದಲೇ ಶುದ್ಧವಾಗುತ್ತವೆ. ॥ ೧೨ ॥ ಯಾವುದೇ ವಸ್ತುವಿನಲ್ಲಿ ಯಾವುದಾದರೂ ಅಶುದ್ಧ ಪದಾರ್ಥ ತಗುಲಿದರೆ, ಸುಲಿಯುವು ದರಿಂದ ಅಥವಾ ಮಣ್ಣು ಮುಂತಾದವುಗಳಿಂದ ತಿಕ್ಕುವುದರಿಂದ, ಆ ಪದಾರ್ಥದ ವಾಸನೆ, ಲೇಪ ಹೊರಟುಹೋಗಿ ಆ ವಸ್ತುವು ತನ್ನ ಹಿಂದಿನರೂಪವನ್ನು ಪಡೆದಾಗ ಅದನ್ನು ಶುದ್ಧವೆಂದು ತಿಳಿಯ ಬೇಕು. ॥ ೧೩. ॥ ಸ್ನಾನ, ದಾನ, ತಪಸ್ಸು, ವಯಸ್ಸು, ಸಾಮರ್ಥ್ಯ, ಸಂಸ್ಕಾರ, ಕರ್ಮ ಮತ್ತು ನನ್ನ ಸ್ಮರಣೆಯಿಂದ ಚಿತ್ತದ ಶುದ್ಧಿ ಯಾಗುತ್ತದೆ. ಇವುಗಳ ಮೂಲಕ ಶುದ್ಧರಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರುಗಳು ವಿಹಿತ ಕರ್ಮಗಳನ್ನು ಆಚರಿಸಬೇಕು. ॥ ೧೪॥ ಗುರುಮುಖದಿಂದ ಕೇಳಿ ಚೆನ್ನಾಗಿ ಹೃದಯಂಗಮ ಮಾಡಿ ಕೊಂಡಾಗ ಮಂತ್ರದ ಮತ್ತು ನನಗೆ ಸಮರ್ಪಿಸುವುದರಿಂದ ಕರ್ಮದ ಶುದ್ಧಿಯಾಗುತ್ತದೆ. ಉದ್ಧವನೇ! ಹೀಗೆ ದೇಶ, ಕಾಲ, ಪದಾರ್ಥ, ಕರ್ತಾ, ಮಂತ್ರ ಮತ್ತು ಕರ್ಮ ಈ ಆರು ಶುದ್ಧವಾಗುವುದರಿಂದ ಧರ್ಮವು ಶುದ್ಧವಾಗುತ್ತದೆ. ಅಶುದ್ಧ ವಾದಾಗ ಅಧರ್ಮವೂ ಆಗುತ್ತದೆ. ॥ ೧೫ ॥

ಶಕ್ಯಾಶಕ್ಯಾಥವಾ ಬುದ್ಧ್ಯಾ ಸಮೃದ್ಧ್ಯಾ ಚ ಯದಾತ್ಮನೇ।
ಅಘಂ ಕುರ್ವಂತಿ ಹಿ ಯಥಾ ದೇಶಾವಸ್ಥಾನುಸಾರತಃ
॥ ೧೧ ॥

ಧಾನ್ಯದಾರ್ವಸ್ಥಿತಂತೂನಾಂ ರಸತೈಜಸಚರ್ಮಣಾಮ್।
ಕಾಲವಾಯ್ವಗ್ನಿಮೃತ್ತೋಯೈಃ ಪಾರ್ಥಿವಾನಾಂ ಯುತಾಯುತೈಃ
॥ ೧೨ ॥

ಅಮೇಧ್ಯಲಿಪ್ತಂ ಯದ್ಯೇನ ಗಂಧಂ ಲೇಪಂ ವ್ಯಪೋಹತಿ।
ಭಜತೇ ಪ್ರಕೃತಿಂ ತಸ್ಯ ತಚ್ಛೌಚಂ ತಾವದಿಷ್ಯತೇ
॥ ೧೩. ॥

ಸ್ನಾನದಾನತಪೋಽವಸ್ಥಾವೀರ್ಯಸಂಸ್ಕಾರಕರ್ಮಭಿಃ।
ಮತ್ ಸ್ಮೃತ್ಯಾ ಚಾತ್ಮನಃ ಶೌಚಂ ಶುದ್ಧಃ ಕರ್ಮಾಚರೇದ್ದ್ವಿಜಃ
॥ ೧೪ ॥

ಮಂತ್ರಸ್ಯ ಚ ಪರಿಜ್ಞಾನಂ ಕರ್ಮಶುದ್ಧಿರ್ಮದರ್ಪಣಮ್।
ಧರ್ಮಃ ಸಂಪದ್ಯತೇ ಷಡ್ಭಿರಧರ್ಮಸ್ತು ವಿಪರ್ಯಯಃ
॥ ೧೫ ॥

ಕ್ವಚಿದ್ಗುಣೋಽಪಿ ದೋಷಃ ಸ್ಯಾದ್ದೋಷೋಽಪಿ ವಿಧಿನಾ ಗುಣಃ ।
ಗುಣದೋಷಾರ್ಥನಿಯಮಸ್ತದ್ಭಿದಾಮೇವ ಬಾಧತೇ
॥ ೧೬ ॥

ಒಂದೇ ವಸ್ತುವು ಗುಣವಾಗಿದ್ದರೂ ವಿಧಿಯು ನಿಷೇಧ ಮಾಡಿದ್ದರೆ ಆ ವಿಧಿವಾಕ್ಯ ಕ್ಕನುಸಾರ ಗುಣವೂ ದೋಷವಾಗುತ್ತದೆ. ಈ ಪ್ರಕಾರ ವಸ್ತುವಿನ ಗುಣ-ದೋಷಗಳ ವಿಷಯದಲ್ಲಿ ನಿಯಮಗಳನ್ನು ನಿರ್ಧರಿಸ ಲಾಗಿದೆ. ಆ ನಿಯಮಗಳನ್ನು ಯಾರು ಯಾವುದನ್ನು ಪಾಲಿಸಬೇಕು ಅಥವಾ ಯಾರು ಯಾವುದನ್ನು ಪಾಲಿಸಬಾರದು ಹೀಗೆ ಮಾಡಿರುವ ಭೇದವು ವರ್ಣವ್ಯವಸ್ಥೆಯನ್ನು ಸ್ಥಿರವಾಗಿಡಲೆಂದೇ ಆಗಿದೆ. ಆದ್ದರಿಂದಲೇ ಅವುಗಳಲ್ಲಿನ ಗುಣ-ದೋಷ ಭೇದವನ್ನು ಕಲ್ಪಿಸಲಾಗಿದೆ. ॥ ೧೬ ॥

ಸಮಾನಕರ್ಮಾಚರಣಂ ಪತಿತಾನಾಂ ನ ಪಾತಕಮ್ ।
ಔತ್ಪತ್ತಿಕೋ ಗುಣಃ ಸಂಗೋ ನ ಶಯಾನಃ ಪತತ್ಯಧಃ
॥ ೧೭ ॥

ಪತಿತರಿಗೆ ಪಾಪದ ಆಚರಣೆಯು ಯಾವ ದೋಷವೂ ಇಲ್ಲ, ಅವರು ಮೊದಲಿನಿಂದಲೇ ಪಾತಕಿಗಳಾಗಿದ್ದಾರೆ. ಅವರು ಇನ್ನೂ ಪಾಪ ಮಾಡಿದರೆ ಅವರಿಗೆ ಪಾಪ ತಗಲುವುದಿಲ್ಲ. ಏಕೆಂದರೆ, ಗುಣ (ಪಾಪ)ಗಳಲ್ಲಿ ಆಸಕ್ತವಾಗುವುದಾದರೋ ಅವರ ಸ್ವಾಭಾವಿಕ ಪ್ರವೃತ್ತಿಯೇ ಆಗಿದೆ. ನೆಲದ ಮೇಲೆ ಮಲಗಿದವನಿಗೆ ಕೆಳಗೆ ಬೀಳುವ ಭಯವಿಲ್ಲ. ॥ ೧೭ ॥

ಯತೋ ಯತೋ ನಿವರ್ತೇತ ವಿಮುಚ್ಯೇತ ತತಸ್ತತಃ ।
ಏಷ ಧರ್ಮೋ ನೃಣಾಂ ಕ್ಷೇಮಃ ಶೋಕಮೋಹಭಯಾಪಹಃ
॥ ೧೮ ॥

ಯಾವ-ಯಾವ ಗುಣ-ದೋಷಗಳಿಂದ ಮನುಷ್ಯನ ಚಿತ್ತವು ಉಪರತವಾಗುತ್ತಾ ಹೋಗುತ್ತದೆಯೋ, ಆಯಾಯಾ ವಸ್ತುಗಳ ಬಂಧನದಿಂದ ಅವನು ಮುಕ್ತನಾಗುತ್ತಾ ಹೋಗುತ್ತಾನೆ. ಮನುಷ್ಯರಿಗಾಗಿ ಈ ನಿವೃತ್ತಿರೂಪೀ ಧರ್ಮವೇ ಪರಮ ಶ್ರೇಯಸ್ಸಿನ ಸಾಧನೆಯಾಗಿದೆ. ಏಕೆಂದರೆ, ಇದೇ ಶೋಕ, ಭಯ, ಮೋಹ ಇವುಗಳನ್ನು ಇಲ್ಲವಾಗಿಸುವಂತಹುದು. ॥ ೧೮ ॥

ವಿಷಯೇಷು ಗುಣಾಧ್ಯಾಸಾತ್ ಪುಂಸಃ ಸಂಗಸ್ತತೋ ಭವೇತ್ ।
ಸಂಗಾತ್ತತ್ರ ಭವೇತ್ಕಾಮಃ ಕಾಮಾದೇವ ಕಲಿರ್ನೃಣಾಮ್
॥ ೧೯ ॥

ಉದ್ಧವನೇ ! ವಿಷಯಗಳಲ್ಲಿ ಗುಣಗಳನ್ನು ಆರೋಪಿಸುವುದರಿಂದ ಆ ವಸ್ತುವಿನ ಕುರಿತು ಆಸಕ್ತಿ ಉಂಟಾಗುತ್ತದೆ. ಆಸಕ್ತಿ ಉಂಟಾದಾಗ ಅದನ್ನು ಪಡೆಯುವ ಕಾಮನೆ ಹುಟ್ಟುತ್ತದೆ. ಈ ಕಾಮನೆಯ ಪೂರ್ತಿಯಲ್ಲಿ ಯಾವುದಾದರೂ ಅಡ್ಡಿ ಇದಿರಾದರೆ ಜನರಲ್ಲಿ ಪರಸ್ಪರ ಕಲಹವಾಗತೊಡಗುತ್ತದೆ. ॥ ೧೯ ॥

ಕಲೇರ್ದುರ್ವಿಷಹಃ ಕ್ರೋಧಸ್ತಮಸ್ತಮನುವರ್ತತೇ ।
ತಮಸಾ ಗ್ರಸ್ಯತೇ ಪುಂಸಶ್ಚೇತನಾ ವ್ಯಾಪಿನೀ ದ್ರುತಮ್
॥ ೨೦ ॥

ಕಲಹದಿಂದ ಅಸಹ್ಯವಾದ ಕ್ರೋಧವು ಉಂಟಾಗುತ್ತದೆ ಮತ್ತು ಕ್ರೋಧ ಬಂದಾಗ ತನ್ನ ಹಿತ-ಅಹಿತದ ಎಚ್ಚರವಿರುವುದಿಲ್ಲ. ಅಜ್ಞಾನ ಆವರಿಸಿಬಿಡುತ್ತದೆ. ಈ ಅಜ್ಞಾನದಿಂದ ಮನುಷ್ಯನಲ್ಲಿ ಕಾರ್ಯಾಕಾರ್ಯವನ್ನು ನಿರ್ಣಯಿಸುವ ಚೇತನಾಶಕ್ತಿಯು ಲುಪ್ತವಾಗುತ್ತದೆ. ॥ ೨೦ ॥

ತಯಾ ವಿರಹಿತಃ ಸಾಧೋ ಜಂತುಃ ಶೂನ್ಯಾಯ ಕಲ್ಪತೇ ।
ತತೋಽಸ್ಯ ಸ್ವಾರ್ಥವಿಭ್ರಂಶೋ ಮೂರ್ಚ್ಛಿತಸ್ಯ ಮೃತಸ್ಯ ಚ
॥ ೨೧ ॥

ಸಾಧುವೇ ! ಚೇತನಾಶಕ್ತಿಯು ಅರ್ಥಾತ್ ಸ್ಮೃತಿಯು ಲುಪ್ತವಾದಾಗ ಮನುಷ್ಯನಲ್ಲಿ ಮನುಷ್ಯತ್ವ ಉಳಿಯುವುದಿಲ್ಲ, ಪಶುತ್ವ ಬಂದುಬಿಡುತ್ತದೆ ಹಾಗೂ ಅವನು ಶೂನ್ಯದಂತೆ ಅಸ್ತಿತ್ವಹೀನನಾಗುತ್ತಾನೆ. ಆಗ ಅವನ ಸ್ಥಿತಿಯು ಮೂರ್ಛಿತ ಅಥವಾ ಹೆಣದಂತಾಗುತ್ತದೆ. ಇಂತಹ ಸ್ಥಿತಿಯಲ್ಲಿ ಅವನ ಸ್ವಾರ್ಥವೂ ಕೈಗೂಡುವುದಿಲ್ಲ, ಪರಮಾರ್ಥವೂ ಇಲ್ಲ. ॥ ೨೧ ॥

ವಿಷಯಾಭಿನಿವೇಶೇನ ನಾತ್ಮಾನಂ ವೇದ ನಾಪರಮ್ ।
ವೃಕ್ಷಜೀವಿಕಯಾ ಜೀವನ್ವ್ಯರ್ಥಂ ಭಸ್ತ್ರೇವ ಯಃ ಶ್ವಸನ್
॥ ೨೨ ॥

ವಿಷಯಗಳನ್ನು ಚಿಂತಿಸುತ್ತಾ-ಚಿಂತಿಸುತ್ತಾ ಅವನು ವಿಷಯರೂಪನಾಗುತ್ತಾನೆ. ಅವನ ಜೀವನವು ವೃಕ್ಷದಂತೆ ಜಡವಾಗುತ್ತದೆ. ಕಮ್ಮಾರನ ಕುಲುಮೆಯಂತೆ ಅವನ ಶರೀರದಲ್ಲಿ ವ್ಯರ್ಥವಾಗಿ ಶ್ವಾಸ ನಡೆಯುತ್ತಾ ಇರುತ್ತದೆ. ಅವನಿಗೆ ತನ್ನದಾಗಲೀ, ಬೇರೆಯವರದಾಗಲೀ ಜ್ಞಾನವಿರುವುದಿಲ್ಲ. ಅವನು ಸರ್ವಥಾ ಆತ್ಮವಂಚಿತನಾಗುತ್ತಾನೆ. ॥ ೨೨ ॥

ಫಲಶ್ರುತಿರಿಯಂ ನೃಣಾಂ ನ ಶ್ರೇಯೋ ರೋಚನಂ ಪರಮ್ ।
ಶ್ರೇಯೋವಿವಕ್ಷಯಾ ಪ್ರೋಕ್ತಂ ಯಥಾ ಭೈಷಜ್ಯರೋಚನಮ್
॥ ೨೩ ॥

ಸವಿಮಾತುಗಳನ್ನಾಡಿ ಮಕ್ಕಳಿಗೆ ಕಹಿ ಔಷಧಿ ಕುಡಿಸುವಂತೆ, ವೇದಗಳಲ್ಲಿರುವ ಫಲಶ್ರುತಿಯು ವಾಸ್ತವವಾಗಿ ಶ್ರೇಯಸ್ಕರವಲ್ಲ, ಕೇವಲ ವೇದಗಳಲ್ಲಿ ಅಭಿರುಚಿಯನ್ನು ಉಂಟುಮಾಡಲೆಂದೇ ಇವೆ. ಆದ್ದರಿಂದ ವೈದಿಕ ಕರ್ಮಗಳಲ್ಲಿ ಅಭಿರುಚಿ ಉಂಟಾಗಿ ಅವನು ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳಬಲ್ಲನು. ॥ ೨೩. ॥ ಕರ್ಮಗಳಲ್ಲಿ, ಪ್ರಾಣಗಳಲ್ಲಿ, ತನ್ನ ಹತ್ತಿರದ ನೆಂಟರಲ್ಲಿ ಮನುಷ್ಯನ ಮನಸ್ಸು ಸ್ವಾಭಾವಿಕವಾಗಿಯೇ ಆಸಕ್ತವಾಗಿರುತ್ತದೆ. ಇದು ಅವನನ್ನು ಪತನವಾಗಿಸುವಂತಹುದು. ಹೀಗೆ ಈ ಮನುಷ್ಯನು ಜನ್ಮ-ಜನ್ಮಾಂತರದ ಸಂಸ್ಕಾರಗಳಿಗೆ ವಶೀಭೂತನಾಗಿ ತನ್ನ ಸ್ವಾರ್ಥದಿಂದ ಭ್ರಷ್ಟನಾಗಿರುವನು. ಪರಮಾರ್ಥಪಥದಿಂದ ಪತಿತನಾದ ಪ್ರಾಣಿಯು ಇನ್ನೂ ಹೆಚ್ಚು ಅಂಧಕಾರದಲ್ಲಿ ಹೋಗುತ್ತಿದ್ದಾನೆ. ಇದನ್ನು ನೋಡಿ ವೇದವಾಣಿ ಅಥವಾ ಯಾವುದೇ ವಿದ್ವಾಂಸನು ಅವನನ್ನು ಮತ್ತೂ ಹೆಚ್ಚಿನ ಕುಮಾರ್ಗದಲ್ಲಿ ಅಲೆಯಲು ಏಕೆ ಪ್ರವೃತ್ತವಾಗಿಸೀತು ? ವೇದವಾದರೋ ಜ್ಞಾನಭಂಡಾರವಾಗಿದೆ. ಆದ್ದರಿಂದ ವೇದವು ಕುಮಾರ್ಗದಿಂದ ತೊಲಗಿಸಿ, ವೈದಿಕ ಕರ್ಮಗಳಲ್ಲಿ ಫಲಶ್ರುತಿಯ ಮಾತನ್ನು ಹೇಳಿ, ಅವನಲ್ಲಿ ರುಚಿಯನ್ನುಂಟುಮಾಡಿ ಸನ್ಮಾರ್ಗಕ್ಕೆ ಹಚ್ಚುವ ಪ್ರೇರಣೆಯನ್ನು ನೀಡುತ್ತದೆ. ॥ ೨೪-೨೫ ॥ ದೂಷಿತ ಬುದ್ಧಿಯ ಜನರು (ಕರ್ಮವಾದಿಗಳು) ವೇದಗಳ ಈ ಅಭಿಪ್ರಾಯವನ್ನು ತಿಳಿಯದೆ ಕರ್ಮಾಸಕ್ತಿವಶರಾಗಿ ಪುಷ್ಪಗಳಂತೆ ಆಕರ್ಷಕವಾಗಿ ಸ್ವರ್ಗಾದಿ ಲೋಕಗಳನ್ನು ವರ್ಣಿಸುತ್ತಾ, ಕೇಳುತ್ತಾ ಇರುತ್ತಾರೆ. ಅವನ್ನೇ ಪರಮ ಫಲವೆಂದು ತಿಳಿದು ದಾರಿತಪ್ಪುತ್ತಾರೆ. ಆದರೆ ವೇದಗಳನ್ನು ತಿಳಿದ ಜನರು ಶ್ರುತಿಗಳ ಇಂತಹ ತಾತ್ಪರ್ಯವನ್ನು ಹೇಳುವುದಿಲ್ಲ. ॥ ೨೬॥ ವಿಷಯವಾಸನೆಯಲ್ಲಿ ಸಿಕ್ಕಿಬಿದ್ದ ದೀನ-ಹೀನ, ಲೋಭೀ ಪುರುಷರು ಬಣ್ಣ-ಬಣ್ಣದ ಹೂವುಗಳಂತೆ ಸ್ವರ್ಗಾದಿ ಲೋಕಗಳನ್ನೇ ಎಲ್ಲವೂ ಎಂದು ತಿಳಿದುಕೊಳ್ಳುತ್ತಾರೆ. ಅಗ್ನಿಯ ಮೂಲಕ ಸಿದ್ಧವಾಗುವ ಯಜ್ಞ-ಯಾಗಾದಿ ಕರ್ಮಗಳಲ್ಲೇ ಮೋಹಿತರಾಗಿ ದೇವಲೋಕ, ಪಿತೃಲೋಕ ಮುಂತಾದವುಗಳಿಗೆ ಹೋಗುತ್ತಾರೆ. ಬೇರೆಡೆ ಅಲೆಯುವುದರಿಂದ ಅವರು ತಮ್ಮ ನಿಜಧಾಮವಾದ ಪರಮಪದವನ್ನು ಹೊಂದುವುದಿಲ್ಲ. ॥ ೨೭ ॥ ಪ್ರಿಯ ಉದ್ಧವನೇ ! ಪರಮಾತ್ಮನಿಂದ ಈ ವಿಶ್ವವು ಉತ್ಪನ್ನವಾಗಿದೆ. ಆ ಪರಮಪಿತಾ ಪರಮಾತ್ಮನಾದರೋ ಅವರ ಹೃದಯದಲ್ಲೇ ವಿರಾಜಮಾನನಾಗಿದ್ದಾನೆ. ಆದರೆ ಅವರು ಕರ್ಮಮಾರ್ಗದ ಶಸ್ತ್ರವನ್ನು ಹಿಡಿದೇ ನಡೆಯುತ್ತಾರೆ. ಇಂತಹ ಪ್ರಾಣಪೋಷಣೆಯಲ್ಲೇ ತೊಡಗಿರುವ ಜನರ ಕಣ್ಣುಗಳಲ್ಲಿ ಪ್ರಾಯಶಃ ಕತ್ತಲೆಯೇ ಆವರಿಸಿರುತ್ತದೆ. ॥ ೨೮ ॥ ಇದೇ ಕಾರಣದಿಂದ ಅವರು ನನ್ನನ್ನು ತಿಳಿಯದೇ ಹೋಗುತ್ತಾರೆ ಹಾಗೂ ನನ್ನ ಪರೋಕ್ಷ ಮತವನ್ನೂ ಕೂಡ ತಿಳಿಯದೆ ಹೋಗುವರು. ಬುದ್ಧಿಯಲ್ಲಿ ವಿಷಯಗಳೇ ನುಸುಳಿದ್ದರಿಂದ ಹಿಂಸೆಯಲ್ಲೇ ಅವರಿಗೆ ಆಸಕ್ತಿ ಇರುತ್ತದೆ. ಆ ಹಿಂಸಾವೃತ್ತಿಯನ್ನು ತಡೆಯುವುದಕ್ಕಾಗಿಯೇ, ಅವರ ಈ ಉಚ್ಛೃಂಖಿಲ ಪ್ರವೃತ್ತಿ ಒಂದು ಸೀಮೆಯೊಳಗೆ ಬಂಧಿಸಿರಲಿ ಎಂದೇ ಯಜ್ಞದ ವಿಧಾನವನ್ನು ಮಾಡಲಾಗಿದೆ. ॥ ೨೯ ॥

ಉತ್ಪತ್ತ್ಯೈವ ಹಿ ಕಾಮೇಷು ಪ್ರಾಣೇಷು ಸ್ವಜನೇಷು ಚ ।
ಆಸಕ್ತಮನಸೋ ಮರ್ತ್ಯಾ ಆತ್ಮನೋಽನರ್ಥಹೇತುಷು
॥ ೨೪ ॥

ನ ತಾನವಿದುಷಃ ಸ್ವಾರ್ಥಂ ಭ್ರಾಮ್ಯತೋ ವೃಜಿನಾಧ್ವನಿ ।
ಕಥಂ ಯುಂಜ್ಯಾತ್ ಪುನಸ್ತೇಷು ತಾಂಸ್ತಮೋ ವಿಶತೋ ಬುಧಃ
॥ ೨೫ ॥

ಏವಂ ವ್ಯವಸಿತಂ ಕೇಚಿದವಿಜ್ಞಾಯ ಕುಬುದ್ಧಯಃ ।
ಫಲಶ್ರುತಿಂ ಕುಸುಮಿತಾಂ ನ ವೇದಜ್ಞಾ ವದಂತಿ ಹಿ
॥ ೨೬ ॥

ಕಾಮಿನಃ ಕೃಪಣಾ ಲುಬ್ಧಾಃ ಪುಷ್ಪೇಷು ಫಲಬುದ್ಧಯಃ ।
ಅಗ್ನಿಮುಗ್ಧಾ ಧೂಮತಾಂತಾಃ ಸ್ವರ್ಗಂ ಲೋಕಂ ನ ವಿದಂತಿ ತೇ
॥ ೨೭ ॥

ನ ತೇ ಮಾಮಂಗ ಜಾನಂತಿ ಹೃದಿಸ್ಥಂ ಯ ಇದಂ ಯತಃ ।
ಉಕ್ಥಶಸ್ತ್ರಾ ಹ್ಯಸುತೃಪೋ ಯಥಾ ನೀಹಾರಚಕ್ಷುಷಃ
॥ ೨೮ ॥

ತೇ ಮೇ ಮತಮವಿಜ್ಞಾಯ ಪರೋಕ್ಷಂ ವಿಷಯಾತ್ಮಕಾಃ ।
ಹಿಂಸಾಯಾಂ ಯದಿ ರಾಗಃ ಸ್ಯಾದ್ಯಜ್ಞ ಏವ ನ ಚೋದನಾ
॥ ೨೯ ॥

ಹಿಂಸಾವಿಹಾರಾ ಹ್ಯಾಲಬ್ಧೈಃ ಪಶುಭಿಃ ಸ್ವಸುಖೇಚ್ಛಯಾ ।
ಯಜಂತೇ ದೇವತಾ ಯಜ್ಞೈಃ ಪಿತೃಭೂತಪತೀನ್ ಖಲಾಃ
॥ ೩೦ ॥

ಈ ಪ್ರಕಾರ ಆ ಪಾಮರ ವಿಷಯಲೋಲುಪರು ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸಲಿಕ್ಕಾಗಿ ಯಜ್ಞಗಳ ಮೂಲಕ, ದೇವತೆಗಳನ್ನು, ಪಿತೃಗಳನ್ನು ಮತ್ತು ಭೂತಪತಿಗಳನ್ನು ಒಲಿಸಿಕೊಳ್ಳಲು ಯಜನದ ದಂಭಾಚಾರವನ್ನು ಮಾಡುತ್ತಾ, ಮುಗ್ಧ ಮೂಕಪಶುಗಳನ್ನು ಹತ್ಯೆ ಮಾಡುತ್ತಾರೆ. ॥ ೩೦ ॥

ಸ್ವಪ್ನೋಪಮಮಮುಂ ಲೋಕಮಸಂತಂ ಶ್ರವಣಪ್ರಿಯಮ್ ।
ಆಶಿಷೋ ಹೃದಿ ಸಂಕಲ್ಪ್ಯ ತ್ಯಜಂತ್ಯರ್ಥಾನ್ಯಥಾ ವಣಿಕ್
॥ ೩೧ ॥

ಎಲೈ ಉದ್ಧವನೇ! ಕೇಳಿಬರುವ ಸ್ವರ್ಗಾದಿ ಲೋಕಗಳ ಸುಖಭೋಗ, ಐಶ್ವರ್ಯಗಳು ಉಂಟಾಗದಿದ್ದರೂ ಕರ್ಣಪ್ರಿಯವಾಗಿವೆ. ವ್ಯಾಪಾರಿಯು ಲಾಭದ ಆಸೆಯಿಂದ ತನ್ನ ಮೂಲ ಭಂಡವಾಳವನ್ನು ಕಳೆದುಕೊಳ್ಳುವಂತೆ ಆ ಭೋಗಗಳ ಆಸೆಯನ್ನಿರಿಸಿ ಅದಕ್ಕಾಗಿ ತನ್ನ ನಿಜವಾದ ದ್ರವ್ಯವನ್ನು ಆ ಕರ್ಮಠರು ಕಳೆದುಕೊಳ್ಳುತ್ತಾರೆ. ॥ ೩೧ ॥

ರಜಃಸತ್ತ್ವತಮೋನಿಷ್ಠಾ ರಜಃಸತ್ತ್ವತಮೋಜುಷಃ ।
ಉಪಾಸತ ಇಂದ್ರಮುಖ್ಯಾನ್ ದೇವಾದೀನ್ ನ ತಥೈವ ಮಾಮ್
॥ ೩೨ ॥

ರಜಮಿಶ್ರಿತ ಸತ್ತ್ವಗುಣಿಗಳು ಮತ್ತು ತಮೋಗುಣ ಪ್ರಕೃತಿಯ ಜನರು ಈ ರೀತಿಯ ರಜಮಿಶ್ರಿತ ಸತ್ತ್ವ ಗುಣ ಮತ್ತು ತಮೋಗುಣಗಳನ್ನು ಸೇವಿಸುತ್ತಾ, ಆ ಸಾಮಗ್ರಿಗಳ ಮೂಲಕ ಇಂದ್ರಾದಿ ದೇವತೆಗಳನ್ನು ಉಪಾಸಿಸುತ್ತಾರೆ. ಆದರೆ ಅವರು ನನ್ನ ಉಪಾಸನೆಯನ್ನು ಮಾಡುವುದಿಲ್ಲ. ॥ ೩೨ ॥ ಅವರು ಈ ಪ್ರಕಾರ ಕಲ್ಪನೆ ಮಾಡುತ್ತಿರುತ್ತಾರೆ – 'ನಾವುಗಳು ಈ ಲೋಕದಲ್ಲಿ ಯಜ್ಞಗಳ ಮೂಲಕ ದೇವತೆಗಳನ್ನು ತೃಪ್ತಿಪಡಿಸಿ ಸ್ವರ್ಗಕ್ಕೆ ಹೋಗುವೆವು. ಅಲ್ಲಿ ದಿವ್ಯ ಭೋಗ-ಆನಂದವನ್ನು ಅನುಭವಿಸುವೆವು. ಅನಂತರ ಪುನಃ ನಮ್ಮ ಜನ್ಮವಾದಾಗ ನಾವು ದೊಡ್ಡ ಕುಲೀನ ಪರಿವಾರದಲ್ಲಿ ಹುಟ್ಟುವೆವು. ನಮ್ಮ ದೊಡ್ಡ ದೊಡ್ಡ ಆರಮನೆಗಳಿರುವುವು, ನಮ್ಮ ಕುಟುಂಬ ತುಂಬಾ ಸುಖೀಯಾಗಿದ್ದು ದೊಡ್ಡದಾಗಿರಬಹುದು.' ಹೀಗೆ ನೋಡಲು ಮಾತ್ರ ಸುಂದರ, ಮಧುರವಾಣಿಯಿಂದ ಅವರ ಚಿತ್ತವು ಕುಬ್ಜವಾಗುತ್ತದೆ. ಅದರಲ್ಲೇ ಮೋಹಿತರಾಗಿರುತ್ತಾರೆ. ಆ ಮದಾಂಧರಿಗೆ ನನ್ನ ಸಂಬಂಧವಾದ ಮಾತು ಕೂಡ ಒಳ್ಳೆಯದೆನಿಸುವುದಿಲ್ಲ॥ ೩೩.–೩೪ ॥

ಇಷ್ಟ್ವೇಹ ದೇವತಾ ಯಜ್ಞೈರ್ಗತ್ವಾ ರಂಸ್ಯಾಮಹೇ ದಿವಿ ।
ತಸ್ಯಾಂತ ಇಹ ಭೂಯಾಸ್ಮ ಮಹಾಶಾಲಾ ಮಹಾಕುಲಾಃ
॥ ೩೩ ॥

ಏವಂ ಪುಷ್ಪಿತಯಾ ವಾಚಾ ವ್ಯಾಕ್ಷಿಪ್ತಮನಸಾಂ ನೃಣಾಮ್ ।
ಮಾನಿನಾಂ ಚಾತಿಸ್ತಬ್ಧಾನಾಂ ಮದ್ವಾರ್ತಾಪಿ ನ ರೋಚತೇ
॥ ೩೪ ॥

ಎಲೈ ಉದ್ಧವನೇ! ವೇದಗಳಲ್ಲಿ ಕರ್ಮಕಾಂಡ, ಉಪಾಸನಾ ಕಾಂಡ, ಜ್ಞಾನಕಾಂಡ ಎಂಬ ಮೂರು ಕಾಂಡಗಳಿವೆ. ಈ ಮೂರರಲ್ಲಿಯೂ ಪ್ರತಿಪಾದಿತ ವಿಷಯವು ಬ್ರಹ್ಮ ಮತ್ತು ಆತ್ಮನ ಏಕತೆಯಾಗಿದೆ. ಎಲ್ಲ ಮಂತ್ರಗಳು ಮತ್ತು ಮಂತ್ರದ್ರಷ್ಟಾರ ಋಷಿಗಳು ಈ ವಿಷಯವನ್ನು ತೆರೆದುಹೇಳದೆ ಗುಪ್ತಭಾವದಿಂದ ಹೇಳುತ್ತಾರೆ. ನನಗೂ ಕೂಡ ಈ ಮಾತನ್ನು ಗುಪ್ತರೂಪದಿಂದ ಹೇಳುವುದೇ ಅಭೀಷ್ಟವಾಗಿದೆ.* (ಏಕೆಂದರೆ ಗುಪ್ತವಾಗಿಡುವುದರಿಂದಲೇ ಸೃಷ್ಟಿಯೂ ನಡೆಯಬಲ್ಲದು.) ॥ ೩೫ ॥ ವೇದಗಳ ಹೆಸರು ಶಬ್ದ ಬ್ರಹ್ಮವಾಗಿದೆ. ಅವು ನನ್ನ ಮೂರ್ತಿಯಾಗಿವೆ. ಇದರಿಂದ ಅವುಗಳ ರಹಸ್ಯವನ್ನು ತಿಳಿಯುವುದು ಅತ್ಯಂತ ಕಠಿಣವಾಗಿದೆ. ಆ ಶಬ್ದ ಬ್ರಹ್ಮವು ಪರಾ, ಪಶ್ಯಂತಿ, ಮಧ್ಯಮಾವಾಣಿಗಳ ರೂಪದಲ್ಲಿ ಪ್ರಾಣ, ಮನ, ಇಂದ್ರಿಯಮಯವಾಗಿದೆ. ಸಮುದ್ರದಂತೆ ಸೀಮಾರಹಿತ, ಗಂಭೀರವಾಗಿದೆ. ಅದರ ಆಳ ತಿಳಿಯುವುದು ಅತ್ಯಂತ ಕಠಿಣವಾಗಿದೆ. ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಅವುಗಳ ತಾತ್ಪರ್ಯವನ್ನು ಸರಿಯಾಗಿ ನಿರ್ಣಯ ಮಾಡಲಾರರು. ॥ ೩೬ ॥

ವೇದಾ ಬ್ರಹ್ಮಾತ್ಮವಿಷಯಾಸ್ತ್ರಿಕಾಂಡವಿಷಯಾ ಇಮೇ ।
ಪರೋಕ್ಷವಾದಾ ಋಷಯಃ ಪರೋಕ್ಷಂ ಮಮ ಚ ಪ್ರಿಯಮ್
॥ ೩೫ ॥

ಶಬ್ದಬ್ರಹ್ಮ ಸುದುರ್ಬೋಧಂ ಪ್ರಾಣೇಂದ್ರಿಯಮನೋಮಯಮ್ ।
ಅನಂತಪಾರಂ ಗಂಭೀರಂ ದುರ್ವಿಗಾಹ್ಯಂ ಸಮುದ್ರವತ್
॥ ೩೬ ॥

* ಏಕೆಂದರೆ, ಎಲ್ಲ ಜನರು ಇದರ ಅಧಿಕಾರಿಗಳಲ್ಲ, ಅಂತಃಕರಣ ಶುದ್ಧವಾದ ಮೇಲೆಯೇ ಈ ಮಾತು ಅರಿವಿಗೆ ಬರುತ್ತದೆ.

ಮಯೋಪಬೃಂಹಿತಂ ಭೂಮ್ನಾ ಬ್ರಹ್ಮಾನಂತಶಕ್ತಿನಾ ।
ಭೂತೇಷು ಘೋಷರೂಪೇಣ ಬಿಸೇಷೂರ್ಣೇವ ಲಕ್ಷ್ಯತೇ
॥ ೩೭ ॥

ಯಘೋರ್ಣಾಭಿರ್ಹೃದಯಾದೂರ್ಣಾಮುದ್ನಮತೇ ಮುಖಾತ್ ।
ಆಕಾಶಾದ್ಘೋಷವಾನ್ಪ್ರಾಣೋ ಮನಸಾ ಸ್ಪರ್ಶರೂಪಿಣಾ
॥ ೩೮ ॥

ಛಂದೋಮಯೋಽಮೃತಮಯಃ ಸಹಸ್ರಪದವೀಂ ಪ್ರಭುಃ ।
ಓಂಕಾರಾದ್ವ್ಯಂಜಿತಸ್ಪರ್ಶಸ್ವರೋಷ್ಮಾಂತಃಸ್ಥಭೂಷಿತಾಮ್
॥ ೩೯ ॥

ವಿಚಿತ್ರಭಾಷಾವಿತತಾಂ ಛಂದೋಭಿಶ್ಚತುರುತ್ತರೈಃ ।
ಅನಂತಪಾರಾಂ ಬೃಹತೀಂ ಸೃಜತ್ಯಾಕ್ಷಿಪತೇ ಸ್ವಯಮ್
॥ ೪೦ ॥

ಗಾಯತ್ರುಷ್ಣಿಗನುಷ್ಟುಪ್ ಚ ಬೃಹತೀ ಪಂಕ್ತಿರೇವ ಚ ।
ತ್ರಿಷ್ಟುಬ್ಜಗತ್ಯತಿಚ್ಛಂದೋ ಹ್ಯತ್ಯಷ್ಟ್ಯತಿಜಗದ್ವಿರಾಟ್
॥ ೪೧ ॥

ಕಿಂ ವಿಧತ್ತೇ ಕಿಮಾಚಷ್ಟೇ ಕಿಮನೂದ್ಯ ವಿಕಲ್ಪಯೇತ್ ।
ಇತ್ಯಸ್ಯಾ ಹೃದಯಂ ಲೋಕೇ ನಾನ್ಯೋ ಮದ್ವೇದ ಕಶ್ಚನ
॥ ೪೨ ॥

ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಪೋಹ್ಯತೇ ತ್ವಹಮ್ ।
ಏತಾವಾನ್ ಸರ್ವವೇದಾರ್ಥಃ ಶಬ್ದ ಆಸ್ಥಾಯ ಮಾಂ ಭಿದಾಮ್ ।
ಮಾಯಾಮಾತ್ರಮನೂದ್ಯಾಂತೇ ಪ್ರತಿಷಿಧ್ಯ ಪ್ರಸೀದತಿ
॥ ೪೩ ॥

ಉದ್ಧವನೇ ! ನಾನು ಅನಂತಶಕ್ತಿಸಂಪನ್ನ ಹಾಗೂ ಸ್ವಯಂ ಅನಂತ ಬ್ರಹ್ಮನಾಗಿದ್ದೇನೆ. ನಾನೇ ವೇದವಾಣಿಯನ್ನು ವಿಸ್ತರಿಸಿರುವೆನು. ಕಮಲದ ದಂಟಿನಲ್ಲಿ ತೆಳ್ಳನೆಯ ಸೂಕ್ಷ್ಮದಾರವಿರುವಂತೆ ಈ ವೇದ ವಾಣಿಯು ಪ್ರಾಣಿಗಳ ಅಂತಃಕರಣದಲ್ಲಿ ಅನಾಹತ ನಾದದ ರೂಪದಲ್ಲಿ ಪ್ರಕಟವಾಗುತ್ತದೆ. ॥ ೩೭ ॥ ಪ್ರತಿಯೋರ್ವ ಪ್ರಾಣಿಯ ಹೃದಯಾಕಾಶದಲ್ಲಿ ಅನಾಹತನಾದ ರೂಪದಲ್ಲಿ ಘೋಷಯುಕ್ತ ಪ್ರಾಣದ ಅಭಿವ್ಯಕ್ತಿಯು ಅನಾಹತನಾದದ ರೂಪದಲ್ಲಿ ಪ್ರಕಟ ವಾಗುತ್ತದೆ. ಅದು ಪ್ರಾಣ, ಮನಸ್ಸಿನ ಮೂಲಕ ಸ್ಪರ್ಶ ಆದಿ ವರ್ಣಗಳ ರೂಪದಲ್ಲಿ ಹೊರಗೆ ಬರುತ್ತದೆ. 'ಅ' ದಿಂದ 'ಮ'ವರೆಗೆ ಎಲ್ಲ ವಾಣಿಗಳು ಓಂಕಾರದಿಂದಲೇ ಉತ್ಪನ್ನವಾಗಿವೆ. ಸ್ಥಾನಭೇದ ದಿಂದ ಸ್ಪರ್ಶ, ಸ್ವರ, ಊಷ್ಮ, ಅಂತಸ್ಥಃ ಹೀಗೆ ಅವುಗಳ ಹೆಸರಾ ದುವು. ಜೇಡವು ತನ್ನ ಬಾಯಿಂದಲೇ ಬಲೆಯನ್ನು ನೆಯ್ದು ಮತ್ತೆ ನುಂಗಿಬಿಡುವಂತೆ ವೇದಮಯ ಪ್ರಭುವಾದ ನಾನು ಓಂಕಾರ ದಿಂದಲೇ ಸಾವಿರಾರು ಪ್ರಕಾರದ ಬೃಹತೀವಾಣಿಯನ್ನು ಉತ್ಪನ್ನ ಮಾಡುತ್ತೇನೆ ಹಾಗೂ ನನ್ನಲ್ಲೇ ಲೀನಗೊಳಿಸಿಕೊಳ್ಳುತ್ತೇನೆ. ಹೀಗೆ ವಾಣಿಯು ನನ್ನದೇ ಸ್ವರೂಪವಾಗಿದೆ. ಆ ವಾಣಿಯು ಹೃದ್‌ಗತ ಸೂಕ್ಷ್ಮ ಓಂಕಾರದ ಮೂಲಕ ಅಭಿವ್ಯಕ್ತ ಸ್ಪರ್ಶ ('ಕ'ದಿಂದ ಹಿಡಿದು 'ಮ' ವರೆಗೆ ೨೫), ಸ್ವರ ('ಅ' ದಿಂದ 'ಔ' ವರೆಗೆ ೯), ಊಷ್ಮಾ (ಶ, ಷ, ಸ, ಹ), ಅಂತಸ್ಥ (ಯ, ರ, ಲ, ವ) – ಈ ವರ್ಣಗಳಿಂದ ವಿಭೂಷಿತವಾಗಿವೆ. ಅವುಗಳಲ್ಲಿ ಉತ್ತರೋತ್ತರ ನಾಲ್ಕು-ನಾಲ್ಕು ವರ್ಣಗಳು ಹೆಚ್ಚುತ್ತಾ ಅನೇಕ ಛಂದಸ್ಸುಗಳು ಇವೆ. ಅವುಗಳ ಮೂಲಕ ವಿಚಿತ್ರ ಭಾಷೆಯ ರೂಪದಲ್ಲಿ ಅದು ವಿಸ್ತೃತ ವಾಗಿದೆ. ॥ ೩೮-೪೦ ॥ ನಾಲ್ಕು-ನಾಲ್ಕು ವರ್ಣಗಳು ಹೆಚ್ಚುತ್ತಾ ಅನೇಕ ಛಂದಸ್ಸುಗಳಾಗುತ್ತವೆ. ಅವು ಹೀಗಿವೆ – ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತೀ, ತ್ರಿಷ್ಟುಪ್, ಜಗತೀ, ಅತಿಚ್ಛಂದ, ಅತ್ಯಷ್ಟಿ, ಅತಿಜಗತಿ ಮತ್ತು ವಿರಾಟ್. ॥ ೪೧ ॥ ಆ ವೇದ ವಾಣಿಯು ಕರ್ಮಕಾಂಡದಲ್ಲಿ ಯಾವ ವಿಧಾನಮಾಡು ತ್ತದೆ, ಉಪಾಸನಾ ಕಾಂಡದಲ್ಲಿ ಯಾವ ದೇವತೆಗಳನ್ನು ವರ್ಣಿಸು ತ್ತದೆ, ಜ್ಞಾನಕಾಂಡದಲ್ಲಿ ಯಾವ ಪ್ರತೀತಿಗಳನ್ನು ಅನುವಾದಿಸುತ್ತಾ, ಯಾವುದನ್ನು ನಿಷೇಧ ಮಾಡುತ್ತದೆ. ಇದರ ರಹಸ್ಯ ನಾನಲ್ಲದೆ ಬೇರೆ ಯಾರೂ ತಿಳಿಯಲಾರರು. ॥ ೪೨ ॥ ವೇದವು ಯಜ್ಞಾದಿ ಗಳ ಮೂಲಕ ನನ್ನನ್ನೇ ವರ್ಣಿಸುತ್ತವೆ. ಉಪಾಸನಾಕಾಂಡದಲ್ಲಿ ನನ್ನನ್ನೇ ಮುಖ್ಯಾರ್ಥದಲ್ಲಿ ದೇವತೆಗಳನ್ನು ವರ್ಣಿಸುತ್ತದೆ ; ಜ್ಞಾನ ಕಾಂಡದ ಮೂಲಕ ನನ್ನಿಂದ ಬೇರೆಯಾದ ವಸ್ತುವನ್ನು ವರ್ಣಿಸುತ್ತಾ 'ನೇತಿ-ನೇತಿ' ವಾಕ್ಯಗಳ ಮೂಲಕ ಬೇರೆಯದನ್ನು ನಿಷೇಧವನ್ನೂ ಮಾಡುತ್ತದೆ. ಈ ಪ್ರಕಾರ ವೇದವು ನನ್ನನ್ನೇ ಮುಂದಿರಿಸಿಕೊಂಡು ನನ್ನಲ್ಲೇ ಭೇದವನ್ನು ಆರೋಪಿಸುತ್ತದೆ, ಇದೆಲ್ಲವೂ ಮಾಯೆಯೇ ಆಗಿದೆ. ಕೊನೆಯಲ್ಲಿ "ಸರ್ವಂ ಖಲ್ವಿದಂ ಬ್ರಹ್ಮ" ಎಂದೇ ಹೇಳಿ ವೇದವು ಸಂತೋಷಪಡುತ್ತದೆ. ॥ ೪೩. ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ತತ್ತ್ವಗಳ ಸಂಖ್ಯೆ ಮತ್ತು ಪ್ರಕೃತಿ ಪುರುಷರ ವಿಶ್ಲೇಷಣೆ

ಉದ್ಧವ ಉವಾಚ

ಕತಿ ತತ್ತ್ವಾನಿ ವಿಶ್ವೇಶ ಸಂಖ್ಯಾತಾನ್ಯೃಷಿಭಿಃ ಪ್ರಭೋ।
ನವೈಕಾದಶ ಪಂಚ ತ್ರೀಣ್ಯಾತ್ಥ ತ್ವಮಿಹ ಶುಶ್ರುಮ
॥ ೧ ॥

ಕೇಚಿತ್ ಷಡ್ವಿಂಶತಿಂ ಪ್ರಾಹುರಪರೇ ಪಂಚವಿಂಶತಿಮ್।
ಸಪ್ತೈಕೇ ನವ ಷಟ್ಕೇಚಿಚ್ಚತ್ವಾರ್ಯೇಕಾದಶಾಪರೇ
॥ ೨ ॥

ಕೇಚಿತ್ ಸಪ್ತದಶ ಪ್ರಾಹುಃ ಷೋಡಶೈಕೇ ತ್ರಯೋದಶ।
ಏತಾವತ್ತ್ವಂ ಹಿ ಸಂಖ್ಯಾನಾಮೃಷಯೋ ಯದ್ವಿವಕ್ಷಯಾ।
ಗಾಯಂತಿ ಪೃಥಗಾಯುಷ್ಮನ್ನಿದಂ ನೋ ವಕ್ತುಮರ್ಹಸಿ
॥ ೩ ॥

ಉದ್ಧವನು ಕೇಳಿದನು – ಸ್ವಾಮಿ! ವಿಶ್ವೇಶ್ವರಾ! ಋಷಿಗಳು ತತ್ತ್ವಗಳ ಸಂಖ್ಯೆಯನ್ನು ಎಷ್ಟು ತಿಳಿಸಿರುವರು? ನೀನಾದರೋ ಈಗ (ಹತ್ತೊಂಭತ್ತನೆಯ ಅಧ್ಯಾಯದಲ್ಲಿ) ಒಂಭತ್ತು, ಹನ್ನೊಂದು, ಐದು ಮತ್ತು ಮೂರು ಅರ್ಥಾತ್ – ಒಟ್ಟಿಗೆ ಇಪ್ಪತ್ತೆಂಟು ತತ್ತ್ವಗಳನ್ನು ಎಣಿಸಿರುವೆ. ಇದಾದರೋ ನಾನು ಕೇಳಿಯೇ ಇದ್ದೇನೆ. ಆದರೆ ಕೆಲವರು ಇಪ್ಪತ್ತಾರು ತತ್ತ್ವಗಳನ್ನು ಹೇಳುತ್ತಾರೆ; ಕೆಲವರು ಇಪ್ಪತ್ತೈದು; ಕೆಲವರು ಏಳು, ಒಂಭತ್ತು ಅಥವಾ ಆರು ಸ್ವೀಕರಿಸುತ್ತಾರೆ. ಕೆಲವರು ನಾಲ್ಕೆಂದು ಹೇಳಿದರೆ ಕೆಲವರು ಹನ್ನೊಂದು. ॥೧-೨॥ ಹೀಗೆಯೇ ಕೆಲ-ಕೆಲ ಋಷಿ-ಮುನಿಗಳ ಮತದಲ್ಲಿ ಅವುಗಳ ಸಂಖ್ಯೆ ಹದಿನೇಳು ಇದೆ, ಕೆಲವರು ಹದಿನಾರು, ಕೆಲವರು ಹದಿಮೂರು ಎಂದು ಹೇಳುತ್ತಾರೆ. ಸನಾತನ ಶ್ರೀಕೃಷ್ಣಾ! ಋಷಿ-ಮುನಿಗಳು ಇಷ್ಟು ಭಿನ್ನವಾದ ಸಂಖ್ಯೆಯನ್ನು ಯಾವ ಅಭಿಪ್ರಾಯದಿಂದ ತಿಳಿಸುತ್ತಾರೆ? ನೀನು ದಯವಿಟ್ಟು ನನಗೆ ತಿಳಿಸುವವನಾಗು. ॥ ೩ ॥

ಶ್ರೀಭಗವಾನುವಾಚ

ಯುಕ್ತಂ ಚ ಸಂತಿ ಸರ್ವತ್ರ ಭಾಷಂತೇ ಬ್ರಾಹ್ಮಣಾ ಯಥಾ।
ಮಾಯಾಂ ಮದೀಯಾಮುದ್ಗೃಹ್ಯ
ವದತಾಂ ಕಿಂ ನು ದುರ್ಘಟಮ್
॥ ೪ ॥

ನೈತದೇವಂ ಯಥಾऽऽತ್ಥ ತ್ವಂ ಯದಹಂ ವಚ್ಮಿ ತತ್ತಥಾ।
ಏವಂ ವಿವದತಾಂ ಹೇತುಂ ಶಕ್ತಯೋ ಮೇ ದುರತ್ಯಯಾಃ
॥ ೫ ॥

ಯಾಸಾಂ ವ್ಯತಿಕರಾದಾಸೀದ್ವಿಕಲ್ಪೋ ವದತಾಂ ಪದಮ್।
ಪ್ರಾಪ್ತೇ ಶಮದಮೇऽಪ್ಯೇತಿ ವಾದಸ್ತಮನುಶಾಮ್ಯತಿ
॥ ೬ ॥

ಪರಸ್ಪರಾನುಪ್ರವೇಶಾತ್ ತತ್ತ್ವಾನಾಂ ಪುರುಷರ್ಷಭ।
ಪೌರ್ವಾಪರ್ಯಪ್ರಸಂಖ್ಯಾನಂ ಯಥಾ ವಕ್ತುರ್ವಿವಕ್ಷಿತಮ್
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ! ವೇದಜ್ಞ ಬ್ರಾಹ್ಮಣರು ಈ ವಿಷಯದಲ್ಲಿ ಹೇಳಿದುದೆಲ್ಲವೂ ಸರಿಯಾಗಿಯೇ ಇದೆ. ಏಕೆಂದರೆ, ಎಲ್ಲ ತತ್ತ್ವಗಳು ಎಲ್ಲದರಲ್ಲಿ ಅಂತರ್ಭೂತವಾಗಿವೆ. ನನ್ನ ಮಾಯೆಯನ್ನು ಸ್ವೀಕರಿಸಿಕೊಂಡು ಏನು ಹೇಳುವುದು ಅಸಂಭವವಿದೆ? ॥ ೪ ॥ 'ನೀನು ಹೇಳಿರುವುದು ಸರಿಯಲ್ಲ, ನಾನು ಹೇಳುತ್ತಿರುವುದೇ ಯಥಾರ್ಥವಾಗಿದೆ' – ಈ ಪ್ರಕಾರ ಜಗತ್ತಿನ ಕಾರಣದ ಸಂಬಂಧದಲ್ಲಿ ವಿವಾದ ಏಕೆ ಆಗುತ್ತದೆ ಎಂದರೆ – ನನ್ನ ಶಕ್ತಿಗಳು ಸತ್ತ್ವ, ರಜ ಮುಂತಾದ ಗುಣಗಳು ಮತ್ತು ಅವುಗಳ ವೃತ್ತಿಗಳ ರಹಸ್ಯವನ್ನು ಜನರು ತಿಳಿಯುವುದಿಲ್ಲ. ಅದಕ್ಕಾಗಿ ಅವರು ತಮ್ಮ-ತಮ್ಮ ಭಾವಕ್ಕನುಸಾರ ವಾದ-ವಿವಾದ ಮಾಡುತ್ತಾ ಇರುತ್ತಾರೆ. ॥ ೫॥ ಸತ್ತ್ವಾದಿ ಗುಣಗಳ ಕ್ಷೋಭದಿಂದಲೇ ಈ ವಿವಿಧ ಕಲ್ಪನಾರೂಪೀ ಪ್ರಪಂಚವು – ಯಾವ ವಸ್ತು ಇಲ್ಲದೆ ಕೇವಲ ನಾಮಮಾತ್ರವಿದೆಯೋ, ಅದು ಎದ್ದು ನಿಂತಿದೆ. ಇದೇ ವಾದ-ವಿವಾದ ಮಾಡುವವರ ವಿವಾದದ ವಿಷಯವಾಗಿದೆ. ಇಂದ್ರಿಯಗಳು ತನ್ನ ವಶವಾದಾಗ, ಚಿತ್ತವು ಶಾಂತವಾದಾಗ ಅವರ ಭೇದಬುದ್ಧಿಯೂ ದೂರಾಗುತ್ತದೆ ಹಾಗೂ ವಿವಾದವೂ ಮುಗಿದು ಹೋಗುತ್ತದೆ. ॥ ೬ ॥ ಪುರುಷಶ್ರೇಷ್ಠನೇ! ತತ್ತ್ವಗಳು ಒಂದು ಮತ್ತೊಂದರಲ್ಲಿ ಅನುಪ್ರವೇಶವಾಗಿವೆ. ಅದಕ್ಕಾಗಿ ಪ್ರವಚನಕಾರನು ತಿಳಿಸಲು ಬಯಸುವ ಸಂಖ್ಯೆಗನುಸಾರವಾಗಿ ಕಾರಣಗಳನ್ನು ಕಾರ್ಯದಲ್ಲಿ ಅಥವಾ ಕಾರ್ಯವನ್ನು ಕಾರಣಗಳಲ್ಲಿ ಬೆರೆಸಿ ತಾನು ಬಯಸಿದ ಸಂಖ್ಯೆಯನ್ನು ಸಿದ್ಧಗೊಳಿಸಿ ಕೊಳ್ಳುತ್ತಾನೆ. ॥ ೭ ॥

ಏಕಸ್ಮಿನ್ನಪಿ ದೃಶ್ಯಂತೇ ಪ್ರವಿಷ್ಟಾನೀತರಾಣಿ ಚ ।
ಪೂರ್ವಸ್ಮಿನ್ ವಾಪರಸ್ಮಿನ್ ವಾ ತತ್ತ್ವೇ ತತ್ತ್ವಾನಿ ಸರ್ವಶಃ
॥ ೮ ॥

ಒಂದೇ ಕಾರಣರೂಪೀ ತತ್ತ್ವದಲ್ಲಿ ಅಥವಾ ಕಾರ್ಯರೂಪೀ ತತ್ತ್ವದಲ್ಲಿ ಪೂರ್ಣವಾಗಿ ಬೇರೆ ತತ್ತ್ವವು ಬೆರೆತಂತೆ ಕಾಣುತ್ತದೆ. ॥ ೮ ॥ ಇವನ್ನು ಎಣಿಸಲು ಬಯಸುವವರು ಯಾವ ಕಾರ್ಯವನ್ನು ಯಾವ ಕಾರಣದಲ್ಲಿ ಅಥವಾ ಯಾವ ಕಾರಣವನ್ನು ಯಾವ ಕಾರ್ಯದಲ್ಲಿ ಅಂತರ್ಭೂತಗೈದು ತತ್ತ್ವಗಳ ಎಷ್ಟು ಸಂಖ್ಯೆ ಸ್ವೀಕರಿಸಲಾಗಿದೆಯೋ ಅವುಗಳ ಪ್ರತಿಪಾದನೆ ಯುಕ್ತಿಸಂಗತವಾದ ಕಾರಣ ಅವರು ಹೇಳುವುದೆಲ್ಲವನ್ನು ಸ್ವೀಕರಿಸುತ್ತಾರೆ. ಯುಕ್ತಿಯಿಂದ ಎಲ್ಲ ಮಾತುಗಳು ಸಿದ್ಧವಾಗುತ್ತವೆ. ಆದ್ದರಿಂದ ನಿಜವಾಗಿವೆ. ॥ ೯ ॥

ಪೌರ್ವಾಪರ್ಯಮತೋಽಮೀಷಾಂ ಪ್ರಸಂಖ್ಯಾನಮಭೀಪ್ಸತಾಮ್ ।
ಯಥಾ ವಿವಿಕ್ತಂ ಯದ್ವಕ್ತ್ರಂ ಗೃಹ್ಣೀಮೋ ಯುಕ್ತಿಸಂಭವಾತ್
॥ ೯ ॥

ಅನಾದ್ಯವಿದ್ಯಾಯುಕ್ತಸ್ಯ ಪುರುಷಸ್ಯಾತ್ಮವೇದನಮ್ ।
ಸ್ವತೋ ನ ಸಂಭವಾದನ್ಯಸ್ತತ್ತ್ವಜ್ಞೋ ಜ್ಞಾನದೋ ಭವೇತ್
॥ ೧೦ ॥

ಉದ್ಧವನೇ ! ಇಪ್ಪತ್ತಾರು ಸಂಖ್ಯೆಯನ್ನು ಸ್ವೀಕರಿಸಿದ ಜನರು ಹೀಗೆ ಹೇಳುತ್ತಾರೆ – ಜೀವಿಯು ಅನಾದಿಕಾಲದಿಂದ ಅವಿದ್ಯೆಯಿಂದ ಗ್ರಸ್ತನಾಗಿದ್ದಾನೆ. ಅವನು ಸ್ವಯಂ ತನ್ನನ್ನು ತಿಳಿಯಲಾರನು. ಅವನಿಗೆ ಆತ್ಮಜ್ಞಾನ ಮಾಡಿಸಲು ಬೇರೆ ಯಾರಾದರೂ ಸರ್ವಜ್ಞನ ಅವಶ್ಯಕತೆ ಇದೆ. (ಅದಕ್ಕಾಗಿ ಪ್ರಕೃತಿಯ ಕಾರ್ಯ ಕಾರಣರೂಪೀ ಇಪ್ಪತ್ತನಾಲ್ಕು ತತ್ತ್ವ, ಇಪ್ಪತ್ತೈದನೆಯ ಪುರುಷ ಮತ್ತು ಇಪ್ಪತ್ತಾರನೆಯ ಈಶ್ವರ – ಹೀಗೆ ಒಟ್ಟಿಗೆ ಇಪ್ಪತ್ತಾರು ತತ್ತ್ವಗಳನ್ನು ಸ್ವೀಕರಿಸಬೇಕು.) ॥ ೧೦ ॥ ಇಪ್ಪತ್ತೈದು ತತ್ತ್ವಗಳನ್ನು ಒಪ್ಪುವವರು ಹೇಳುತ್ತಾರೆ – ಈ ಶರೀರದಲ್ಲಿ ಜೀವ ಮತ್ತು ಈಶ್ವರನಲ್ಲಿ ಅಣುಮಾತ್ರವೂ ಭೇದವಿಲ್ಲ ಆದ್ದರಿಂದ ಅವುಗಳಲ್ಲಿ ಭೇದದ ಕಲ್ಪನೆ ವ್ಯರ್ಥವಾಗಿದೆ. ಉಳಿಯಿತು ಜ್ಞಾನದ ಮಾತು, ಆ ಜ್ಞಾನ ಪ್ರಕೃತಿಯ ಗುಣವಾಗಿದೆ. (ಆದ್ದರಿಂದ ಅವರು ಜ್ಞಾನವನ್ನು ಬೇರೆಯಾಗಿ ಸ್ವೀಕರಿಸುವುದಿಲ್ಲ. ಈ ಪ್ರಕಾರ ೨೪ ಜಡ ತತ್ತ್ವಗಳು ಮತ್ತು ಒಂದು ಚೇತನ ಪುರುಷ ಸೇರಿ ೨೫ ತತ್ತ್ವಗಳಾದವು.)॥ ೧೧ ॥ ಮೂರೂ ಗುಣಗಳ ಸಾಮ್ಯಾವಸ್ಥೆಯೇ ಪ್ರಕೃತಿಯ ಸ್ವರೂಪವಾಗಿದೆ. ಅದಕ್ಕಾಗಿ ಸತ್ತ್ವ, ರಜ ಮುಂತಾದ ಗುಣಗಳು ಆತ್ಮನದಲ್ಲ, ಪ್ರಕೃತಿಯದ್ದೇ ಆಗಿವೆ. ಇವುಗಳ ಮೂಲಕ ಜಗತ್ತಿನ ಸ್ಥಿತಿ, ಉತ್ಪತ್ತಿ, ಪ್ರಳಯ ಆಗುತ್ತಾ ಇರುತ್ತವೆ. ಆದಕ್ಕಾಗಿ ಜ್ಞಾನವು ಆತ್ಮನ ಗುಣವಲ್ಲ, ಪ್ರಕೃತಿಯದೇ ಗುಣವೆಂದು ಸಿದ್ಧವಾಗುತ್ತದೆ. ॥ ೧೨ ॥ ಈ ಪ್ರಸಂಗದಲ್ಲಿ ಸತ್ತ್ವಗುಣವೇ ಜ್ಞಾನವಾಗಿದೆ, ರಜೋಗುಣ ಕರ್ಮವಾಗಿದೆ, ತಮೋಗುಣವೇ ಅಜ್ಞಾನವೆಂದು ಹೇಳಲಾಗುತ್ತದೆ. ಗುಣಗಳಲ್ಲಿ ಕ್ಷೋಭೆಯನ್ನುಂಟುಮಾಡುವ ಈಶ್ವರನೇ ಕಾಲನಾಗಿದ್ದಾನೆ ಮತ್ತು ಸೂತ್ರ ಅರ್ಥಾತ್ ಮಹತ್ತತ್ತ್ವವೇ ಸ್ವಭಾವವಾಗಿದೆ. (ಅದಕ್ಕಾಗಿ ೨೫ ಮತ್ತು ೨೬ ತತ್ತ್ವಗಳ ಎರಡೂ ಸಂಖ್ಯೆಗಳು ಯುಕ್ತಿಸಂಗತವಾಗಿವೆ.) ॥ ೧೩ ॥

ಪೌರುಷೇಶ್ವರಯೋರತ್ರ ನ ವೈಲಕ್ಷಣ್ಯಮಣ್ವಪಿ ।
ತದನ್ಯಕಲ್ಪನಾಪಾರ್ಥಾ ಜ್ಞಾನಂ ಚ ಪ್ರಕೃತೇರ್ಗುಣಃ
॥ ೧೧ ॥

ಪ್ರಕೃತಿರ್ಗುಣಸಾಮ್ಯಂ ವೈ ಪ್ರಕೃತೇರ್ನಾತ್ಮನೋ ಗುಣಾಃ ।
ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯಂತಹೇತವಃ
॥ ೧೨ ॥

ಸತ್ತ್ವಂ ಜ್ಞಾನಂ ರಜಃ ಕರ್ಮ ತಮೋಽಜ್ಞಾನಮಿಹೋಚ್ಯತೇ ।
ಗುಣವ್ಯತಿಕರಃ ಕಾಲಃ ಸ್ವಭಾವಃ ಸೂತ್ರಮೇವ ಚ
॥ ೧೩ ॥

ಪುರುಷಃ ಪ್ರಕೃತಿರ್ವ್ಯಕ್ತಮಹಂಕಾರೋ ನಭೋಽನಿಲಃ ।
ಜ್ಯೋತಿರಾಪಃ ಕ್ಷಿತಿರಿತಿ ತತ್ತ್ವಾನ್ಯುಕ್ತಾನಿ ಮೇ ನವ
॥ ೧೪ ॥

ಶ್ರೋತ್ರಂ ತ್ವಗ್ದರ್ಶನಂ ಘ್ರಾಣೋ ಜಿಹ್ವೇತಿ ಜ್ಞಾನಶಕ್ತಯಃ ।
ವಾಕ್ಪಾಣ್ಯುಪಸ್ಥಪಾಯ್ವಂಘ್ರಿಕರ್ಮಾಣ್ಯಂಗೋಭಯಂ ಮನಃ
॥ ೧೫ ॥

ಉದ್ಧವನೇ ! ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ತೇಜ, ಜಲ, ಪೃಥ್ವಿ ಈ ಒಂಭತ್ತು ತತ್ತ್ವಗಳನ್ನು ನಾನು ಮೊದಲೇ ಎಣಿಸಿದ್ದೆ. ಶ್ರೋತ್ರ, ತ್ವಚಾ, ಚಕ್ಷು, ನಾಸಿಕಾ, ರಸನಾ ಈ ಐದು ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಈ ಐದು ಕರ್ಮೇಂದ್ರಿಯಗಳು. ಮನಸ್ಸು ಇದು ಜ್ಞಾನೇಂದ್ರಿಯ, ಕರ್ಮೇಂದ್ರಿಯ ಎರಡೂ ಆಗಿದೆ. ಈ ಒಟ್ಟಿಗೆ ಹನ್ನೊಂದು ಇಂದ್ರಿಯಗಳು ಹಾಗೂ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವು ಜ್ಞಾನೇಂದ್ರಿಯಗಳ ವಿಷಯಗಳು, ಈ ಪ್ರಕಾರ

ಶಬ್ದಃ ಸ್ಪರ್ಶೋ ರಸೋ ಗಂಧೋ ರೂಪಂ ಚೇತ್ಯರ್ಥಜಾತಯಃ ।
ಗತ್ಯುಕ್ತ್ಯುತ್ಸರ್ಗಶಿಲ್ಪಾನಿ ಕರ್ಮಾಯತನಸಿದ್ಧಯಃ
॥ ೧೬ ॥

ಸರ್ಗಾದೌ ಪ್ರಕೃತಿರ್ಹ್ಯಸ್ಯ ಕಾರ್ಯಕಾರಣರೂಪಿಣೀ ।
ಸತ್ತ್ವಾದಿಭಿರ್ಗುಣೈರ್ಧತ್ತೇ ಪುರುಷೋಽವ್ಯಕ್ತ ಈಕ್ಷತೇ
॥ ೧೭ ॥

ವ್ಯಕ್ತಾದಯೋ ವಿಕುರ್ವಾಣಾ ಧಾತವಃ ಪುರುಷೇಕ್ಷಯಾ ।
ಲಬ್ಧವೀರ್ಯಾಃ ಸೃಜಂತ್ಯಂಡಂ ಸಂಹತಾಃ ಪ್ರಕೃತೇರ್ಬಲಾತ್
॥ ೧೮ ॥

ಸಪ್ತೈವ ಧಾತವ ಇತಿ ತತ್ರಾರ್ಥಾಃ ಪಂಚ ಖಾದಯಃ ।
ಜ್ಞಾನಮಾತ್ಮೋಭಯಾಧಾರಸ್ತತೋ ದೇಹೇಂದ್ರಿಯಾಸವಃ
॥ ೧೯ ॥

ಷಡಿತ್ಯತ್ರಾಪಿ ಭೂತಾನಿ ಪಂಚ ಷಷ್ಠಃ ಪರಃ ಪುಮಾನ್ ।
ತೈರ್ಯುಕ್ತ ಆತ್ಮಸಂಭೂತೈಃ ಸೃಷ್ಟ್ವೇದಂ ಸಮುಪಾವಿಶತ್
॥ ೨೦ ॥

ಚತ್ವಾರ್ಯೇವೇತಿ ತತ್ರಾಪಿ ತೇಜ ಆಪೋಽನ್ನಮಾತ್ಮನಃ ।
ಜಾತಾನಿ ತೈರಿದಂ ಜಾತಂ ಜನ್ಮಾವಯವಿನಃ ಖಲು
॥ ೨೧ ॥

ಸಂಖ್ಯಾನೇ ಸಪ್ತದಶಕೇ ಭೂತಮಾತ್ರೇಂದ್ರಿಯಾಣಿ ಚ ।
ಪಂಚ ಪಂಚೈಕಮನಸಾ ಆತ್ಮಾ ಸಪ್ತದಶಃ ಸ್ಮೃತಃ
॥ ೨೨ ॥

ಮೂರು, ಒಂಭತ್ತು, ಹನ್ನೊಂದು, ಐದು ಎಲ್ಲ ಸೇರಿ ಇಪ್ಪತ್ತೆಂಟು ತತ್ತ್ವಗಳಾಗುತ್ತವೆ. ಕರ್ಮೇಂದ್ರಿಯಗಳ ಮೂಲಕ ನಡೆಯುವ ಕರ್ಮ – ನಡೆಯುವುದು, ಮಾತನಾಡುವುದು, ಮಲ-ಮೂತ್ರ ತ್ಯಜಿಸುವುದು, ಕೆಲಸಮಾಡುವುದು ಇವುಗಳಿಂದ ತತ್ತ್ವದ ಸಂಖ್ಯೆ ಬೆಳೆಯುವುದಿಲ್ಲ, ಇವನ್ನು ಕರ್ಮೇಂದ್ರಿಯ ಸ್ವರೂಪವೆಂದೇ ತಿಳಿಯಬೇಕು. ॥ ೧೪-೧೬ ॥ ಸೃಷ್ಟಿಯ ಪ್ರಾರಂಭದಲ್ಲಿ ಕಾರ್ಯ (ಹನ್ನೊಂದು ಇಂದ್ರಿಯ ಮತ್ತು ಪಂಚಭೂತಗಳು) ಮತ್ತು ಕಾರಣ (ಮಹತ್ತತ್ತ್ವಾದಿ)ದ ರೂಪದಲ್ಲಿ ಪ್ರಕೃತಿಯೇ ಇರುತ್ತದೆ. ಅದೇ ಪ್ರಕೃತಿಯು ಸತ್ತ್ವಗುಣ, ರಜೋಗುಣ, ತಮೋಗುಣಗಳ ಸಹಾಯದಿಂದ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರ ಸಂಬಂಧೀ ಅವಸ್ಥೆಗಳನ್ನು ಧರಿಸುತ್ತದೆ. ಅವ್ಯಕ್ತ ಪುರುಷನಾದರೋ ಪ್ರಕೃತಿ ಹಾಗೂ ಅದರ ಅವಸ್ಥೆಗಳ ಕೇವಲ ಸಾಕ್ಷಿಮಾತ್ರ ಆಗಿರುತ್ತಾನೆ. ॥ ೧೭ ॥ ಮಹತ್ತತ್ತ್ವಾದಿ ಪ್ರಕೃತಿಯ ಎಷ್ಟು ವಿಕಾರಗಳು ಉಂಟಾಗುತ್ತವೋ ಅವು ಪುರುಷನ ವೀಕ್ಷಣದಿಂದ ಶಕ್ತಿಯನ್ನು ಪಡೆದುಕೊಂಡು ಪರಸ್ಪರ ಬೆರೆತುಹೋಗುತ್ತವೆ. ಬಳಿಕ ಪ್ರಕೃತಿಯ ಆಶ್ರಯ ಪಡೆದು ಅದರ ಬಲದಿಂದಲೇ ಬ್ರಹ್ಮಾಂಡದ ಸೃಷ್ಟಿಯಾಗುತ್ತದೆ. ಅರ್ಥಾತ್ – ಈಶ್ವರನ ವೀಕ್ಷಣದಿಂದಲೇ ಪ್ರಕೃತಿಯು ಎಲ್ಲ ಕಾರ್ಯಗಳನ್ನು ಮಾಡುತ್ತದೆ. ॥ ೧೮ ॥

ಎಲೈ ಉದ್ಧವನೇ ! ತತ್ತ್ವಗಳ ಸಂಖ್ಯೆ ಏಳು ಎಂದು ಸ್ವೀಕರಿಸುವವರ ವಿಚಾರದಲ್ಲಿ ಆಕಾಶ, ವಾಯು, ತೇಜ, ಜಲ, ಪೃಥ್ವಿ ಈ ಐದು ಭೂತಗಳು, ಆರನೇಯದು ಜೀವ, ಏಳನೆಯದು ಪರಮಾತ್ಮಾ ಅದು ಸಾಕ್ಷೀ ಜೀವ ಮತ್ತು ಸಾಕ್ಷ್ಯ ಜಗತ್ತು ಎರಡರ ಅಧಿಷ್ಠಾನವಾಗಿದೆ. ಇವೇ ತತ್ತ್ವಗಳಾಗಿವೆ. ದೇಹ, ಇಂದ್ರಿಯ ಹಾಗೂ ಪ್ರಾಣಾದಿಗಳ ಉತ್ಪತ್ತಿಯಾದರೋ ಪಂಚ-ಭೂತಗಳಿಂದಲೇ ಆಗಿದೆ. (ಅದಕ್ಕಾಗಿ ಅವರು ಇವನ್ನು ಬೇರೆಯಾಗಿ ಎಣಿಸುವುದಿಲ್ಲ) ॥ ೧೯ ॥ ಕೇವಲ ಆರು ತತ್ತ್ವಗಳನ್ನು ಸ್ವೀಕರಿಸುವವರು ಹೇಳುತ್ತಾರೆ – ಐದು ಭೂತಗಳು ಮತ್ತು ಆರನೆಯ ಪರಮ ಪುರುಷ ಪರಮಾತ್ಮನು. ಆ ಪರಮಾತ್ಮನು ತಾನು ರಚಿಸಿದ ಪಂಚ ಭೂತಗಳಿಂದ ಕೂಡಿಕೊಂಡು ದೇಹಾದಿಗಳನ್ನು ಸೃಷ್ಟಿಸುತ್ತಾನೆ ಹಾಗೂ ಅದರಲ್ಲಿ ಜೀವರೂಪದಿಂದ ಪ್ರವೇಶಿಸುತ್ತಾನೆ. (ಈ ಮತದನುಸಾರ ಜೀವಿಯು ಪರಮಾತ್ಮನಲ್ಲಿ, ಶರೀರಾದಿಗಳು ಪಂಚಭೂತಗಳಲ್ಲಿ ಸಮಾವೇಶವಾಗುತ್ತದೆ.) ॥ ೨೦ ॥ ಕಾರಣದ ರೂಪದಲ್ಲಿ ನಾಲ್ಕೇ ತತ್ತ್ವಗಳನ್ನೂ ಸ್ವೀಕರಿಸುವ ಜನರು ಹೇಳುತ್ತಾರೆ – ಆತ್ಮನಿಂದ ತೇಜ, ಜಲ ಮತ್ತು ಪೃಥ್ವಿಯ ಉತ್ಪತ್ತಿಯಾಯಿತು. ಜಗತ್ತಿನಲ್ಲಿರುವ ಎಲ್ಲ ಪದಾರ್ಥಗಳು ಇವುಗಳಿಂದಲೇ ಉತ್ಪನ್ನವಾಗುತ್ತವೆ. ಅವರು ಎಲ್ಲ ಕಾರ್ಯಗಳನ್ನು ಇವುಗಳಲ್ಲೇ ಸಮಾವೇಶ ಮಾಡಿಕೊಳ್ಳುವರು. ॥ ೨೧ ॥ ತತ್ತ್ವಗಳ ಸಂಖ್ಯೆ ಹದಿನೇಳು ಎಂದು ಹೇಳುವವರು ಈ ಪ್ರಕಾರ ಎಣಿಸುತ್ತಾರೆ – ಐದು ಭೂತಗಳು, ಐದು ತನ್ಮಾತ್ರೆಗಳು, ಐದು ಜ್ಞಾನೇಂದ್ರಿಯಗಳು, ಒಂದು ಮನಸ್ಸು, ಒಂದು ಆತ್ಮಾ. ॥ ೨೨ ॥

ತದ್ವತ್ ಷೋಡಶಸಂಖ್ಯಾನೇ ಆತ್ಮೈವ ಮನ ಉಚ್ಯತೇ ।
ಭೂತೇಂದ್ರಿಯಾಣಿ ಪಂಚೈವ ಮನ ಆತ್ಮಾ ತ್ರಯೋದಶ
॥ ೨೩ ॥

ಏಕಾದಶತ್ವ ಆತ್ಮಾಸೌ ಮಹಾಭೂತೇಂದ್ರಿಯಾಣಿ ಚ ।
ಅಷ್ಟೌ ಪ್ರಕೃತಯಶ್ಚೈವ ಪುರುಷಶ್ಚ ನವೇತ್ಯಥ
॥ ೨೪ ॥

ಇತಿ ನಾನಾಪ್ರಸಂಖ್ಯಾನಂ ತತ್ತ್ವಾನಾಮೃಷಿಭಿಃ ಕೃತಮ್ ।
ಸರ್ವಂ ನ್ಯಾಯ್ಯಂ ಯುಕ್ತಿಮತ್ತ್ವಾದ್ವಿದುಷಾಂ ಕಿಮಶೋಭನಮ್
॥ ೨೫ ॥

ಉದ್ಧವ ಉವಾಚ

ಪ್ರಕೃತಿಃ ಪುರುಷಶ್ಚೋಭೌ ಯದ್ಯಪ್ಯಾತ್ಮವಿಲಕ್ಷಣೌ ।
ಅನ್ಯೋನ್ಯಾಪಾಶ್ರಯಾತ್ ಕೃಷ್ಣದೃಶ್ಯತೇ ನ ಭಿದಾ ತಯೋಃ
॥ ೨೬ ॥

ಪ್ರಕೃತೌ ಲಕ್ಷ್ಯತೇ ಹ್ಯಾತ್ಮಾ ಪ್ರಕೃತಿಶ್ಚ ತಥಾऽऽತ್ಮನಿ ।
ಏವಂ ಮೇ ಪುಂಡರೀಕಾಕ್ಷ ಮಹಾಂತಂ ಸಂಶಯಂ ಹೃದಿ ।
ಛೇತ್ತುಮರ್ಹಸಿ ಸರ್ವಜ್ಞ ವಚೋಭಿರ್ನಯನೈಪುಣ್ಯೈಃ
॥ ೨೭ ॥

ತ್ವತ್ತೋ ಜ್ಞಾನಂ ಹಿ ಜೀವಾನಾಂ ಪ್ರಮೋಷಸ್ತೇऽತ್ರ ಶಕ್ತಿತಃ ।
ತ್ವಮೇವ ಹ್ಯಾತ್ಮಮಾಯಾಯಾ ಗತಿಂ ವೇತ್ಥ ನ ಚಾಪರಃ
॥ ೨೮ ॥

ಶ್ರೀಭಗವಾನುವಾಚ

ಪ್ರಕೃತಿಃ ಪುರುಷಶ್ಚೇತಿ ವಿಕಲ್ಪಃ ಪುರುಷರ್ಷಭ ।
ಏಷ ವೈಕಾರಿಕಃ ಸರ್ಗೋ ಗುಣವ್ಯತಿಕರಾತ್ಮಕಃ
॥ ೨೯ ॥

ಮಮಾಂಗ ಮಾಯಾ ಗುಣಮಯ್ಯನೇಕಧಾ
ವಿಕಲ್ಪಬುದ್ಧೀಶ್ಚ ಗುಣೈರ್ವಿಧತ್ತೇ ।
ವೈಕಾರಿಕಸ್ತ್ರಿವಿಧೋऽಧ್ಯಾತ್ಮಮೇಕ-
ಮಥಾಧಿದೈವಮಧಿಭೂತಮನ್ಯತ್
॥ ೩೦ ॥

ತತ್ತ್ವಗಳ ಸಂಖ್ಯೆ ಹದಿನಾರು ಎಂದು ಹೇಳುವವರ ಗಣನೆಯೂ ಇದೇ ಪ್ರಕಾರವಾಗಿದೆ. ಆತ್ಮನಲ್ಲೇ ಮನಸ್ಸನ್ನೂ ಸಮಾವೇಶಮಾಡುತ್ತಾರೆ, ಅಂತರ ಇಷ್ಟೇ ಆಗಿದೆ. ಹೀಗೆ ಅವರ ತತ್ತ್ವ ಸಂಖ್ಯೆಯು ಹದಿನಾರೇ ಉಳಿಯುತ್ತದೆ. ಹದಿಮೂರು ತತ್ತ್ವವನ್ನು ಒಪ್ಪಿಕೊಳ್ಳುವವರು ಹೇಳುತ್ತಾರೆ – ಆಕಾಶಾದಿ ಪಂಚಭೂತಗಳು, ಶ್ರೋತ್ರಾದಿ ಐದು ಜ್ಞಾನೇಂದ್ರಿಯಗಳು, ಒಂದು ಮನಸ್ಸು ಒಂದು ಜೀವಾತ್ಮಾ ಮತ್ತು ಪರಮಾತ್ಮಾ – ಹೀಗೆ ಹದಿಮೂರು ತತ್ತ್ವಗಳು. ॥ ೨೩ ॥ ಹನ್ನೊಂದು ತತ್ತ್ವಗಳನ್ನು ಒಪ್ಪುವವರು ಐದು ಭೂತಗಳು, ಐದು ಜ್ಞಾನೇಂದ್ರಿಯಗಳು ಹಾಗೂ ಇವಲ್ಲದೆ ಒಂದು ಆತ್ಮನ ಅಸ್ತಿತ್ವವನ್ನು ಸ್ವೀಕರಿಸಿರುವರು. ಒಂಭತ್ತು ತತ್ತ್ವಗಳನ್ನು ಒಪ್ಪುವವರು ಆಕಾಶಾದಿ ಪಂಚಭೂತಗಳು, ಮನ, ಬುದ್ಧಿ, ಅಹಂಕಾರ ಈ ಎಂಟು ಪ್ರಕೃತಿಗಳು ಮತ್ತು ಒಂಭತ್ತನೆಯ ಪುರುಷ ಇವುಗಳನ್ನು ತತ್ತ್ವಗಳೆಂದು ತಿಳಿಯುವರು. ॥ ೨೪ ॥ ಉದ್ಧವನೇ ! ಈ ಪ್ರಕಾರ ಋಷಿ-ಮುನಿಗಳು ಬೇರೆ-ಬೇರೆ ರೀತಿಯಿಂದ ತತ್ತ್ವಗಳನ್ನು ಎಣಿಸಿರುವರು. ಎಲ್ಲರೂ ಹೇಳುವುದೂ ಉಚಿತವೇ ಆಗಿದೆ. ಏಕೆಂದರೆ, ಎಲ್ಲರ ಸಂಖ್ಯೆಯು ಯುಕ್ತಿಯುಕ್ತವೇ ಆಗಿದೆ. ತತ್ತ್ವ ಜ್ಞಾನಿಗಳಾದ ಜನರಿಗೆ ಯಾವುದೇ ಮತದಲ್ಲಿ ಕೆಟ್ಟದು ಕಾಣುವುದಿಲ್ಲ. ಅವರಿಗಾದರೋ ಎಲ್ಲವೂ ಸರಿಯಾಗಿಯೇ ಇದೆ.॥ ೨೫॥

ಉದ್ಧವನು ಕೇಳಿದನು – ಶ್ಯಾಮಸುಂದರಾ ! ಸ್ವರೂಪತಃ ಪ್ರಕೃತಿ ಮತ್ತು ಪುರುಷರಿಬ್ಬರೂ ಒಂದು ಮತ್ತೊಂದರಲ್ಲಿ ಸರ್ವಥಾ ಭಿನ್ನವಾಗಿದ್ದರೂ, ಅವುಗಳ ಭೇದವು ಸಾಧಾರಣವಾಗಿ ತಿಳಿಯದಷ್ಟು ಪರಸ್ಪರ ಸೇರಿಕೊಂಡಿದೆ. ಪ್ರಕೃತಿಯಲ್ಲಿ ಪುರುಷ ಮತ್ತು ಪುರುಷನಲ್ಲಿ ಪ್ರಕೃತಿ ಅಭಿನ್ನದಂತೆ ಕಂಡುಬರುತ್ತದೆ. ಇವುಗಳ ಭಿನ್ನತೆ ಹೇಗೆ ಸ್ಪಷ್ಟವಾದೀತು ? ॥ ೨೬ ॥ ಕಮಲನಯನ ಶ್ರೀಕೃಷ್ಣಾ ! ಹೀಗೆ ನನ್ನ ಹೃದಯದಲ್ಲಿ ಇವುಗಳ ಭಿನ್ನತೆ ಮತ್ತು ಅಭಿನ್ನತೆಯ ಕುರಿತು ಬಹಳ ದೊಡ್ಡ ಸಂದೇಹವಿದೆ. ನೀನಾದರೋ ಸರ್ವಜ್ಞನಾಗಿರುವೆ. ನಿನ್ನ ಯುಕ್ತಿಯುಕ್ತ ವಾಣಿಯಿಂದ ನನ್ನ ಸಂದೇಹವನ್ನೂ ನಿವಾರಿಸುವವನಾಗು. ॥ ೨೭ ॥ ಓ ಭಗವಂತಾ ! ನಿನ್ನ ಕೃಪೆಯಿಂದಲೇ ನಿನ್ನ ವಿದ್ಯಾಶಕ್ತಿಯ ಮೂಲಕ ಜೀವಿಗಳಿಗೆ ಜ್ಞಾನ ಉಂಟಾಗುತ್ತದೆ. ನಿನ್ನದೇ ಅವಿದ್ಯಾಶಕ್ತಿಯಿಂದ ಅವರ ಜ್ಞಾನದ ಲೋಪವಾಗುತ್ತದೆ. ನಿನ್ನ ಆತ್ಮಸ್ವರೂಪಿಣೀ ಮಾಯೆಯ ವಿಚಿತ್ರಗತಿಯನ್ನು ನೀನೇ ತಿಳಿಯುತ್ತಿರುವೆ. ಬೇರೆ ಯಾರೂ ಅರಿಯರು. ಆದ್ದರಿಂದ ನೀನೇ ನನ್ನ ಸಂದೇಹವನ್ನು ಇಲ್ಲವಾಗಿಸಲು ಸಮರ್ಥನಾಗಿರುವೆ. ॥ ೨೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ ! ಪ್ರಕೃತಿ ಮತ್ತು ಪುರುಷ ಅರ್ಥಾತ್ ಶರೀರ ಹಾಗೂ ಆತ್ಮಾ – ಇವೆರಡರಲ್ಲಿ ಅತ್ಯಂತ ಭೇದವಿದೆ. ಈ ಸೃಷ್ಟಿಯೂ ವಿಕಾರಗಳಿಂದ ಕೂಡಿದೆ. ಗುಣಗಳ ಕ್ಷೋಭೆಯಿಂದಲೇ ಸೃಷ್ಟಿಯು ಉತ್ಪನ್ನವಾಗುತ್ತದೆ. ॥ ೨೯ ॥ ಪ್ರಿಯ ಮಿತ್ರನೇ ! ನನ್ನ ಮಾಯೆಯು ತ್ರಿಗುಣಾತ್ಮಿಕವಾಗಿದೆ. ಅದೇ ತನ್ನ ಸತ್ತ್ವ, ರಜ ಮುಂತಾದ ಗುಣಗಳಿಂದ ಅನೇಕ ಪ್ರಕಾರದ ಭೇದ ವೃತ್ತಿಗಳನ್ನು ಉಂಟುಮಾಡುತ್ತದೆ. ಇದರ ವಿಸ್ತಾರ ಅಸೀಮವಾಗಿದ್ದರೂ ಕೂಡ ಈ ವಿಕಾರಾತ್ಮಕವಾದ ಸೃಷ್ಟಿಯನ್ನು ಮೂರು ಭಾಗವಾಗಿ ಹಂಚಬಹುದು. ಅಧ್ಯಾತ್ಮ, ಅಧಿದೈವ, ಅಧಿಭೂತ – ಇವೇ ಆ ಮೂರು ಭಾಗಗಳಾಗಿವೆ. ॥ ೩೦ ॥

ದೃಗ್ರೂಪಮಾರ್ಕಂ ವಪುರತ್ರ ರಂಧ್ರೇ
ಪರಸ್ಪರಂ ಸಿಧ್ಯತಿ ಯಃ ಸ್ವತಃ ಖೇ ।
ಆತ್ಮಾ ಯದೇಷಾಮಪರೋ ಯ ಆದ್ಯಃ
ಸ್ವಯಾನುಭೂತ್ಯಾಖಿಲಸಿದ್ಧಸಿದ್ಧಿಃ
ಏವಂ ತ್ವಗಾದಿ ಶ್ರವಣಾದಿ ಚಕ್ಷು-
ರ್ಜಿಹ್ವಾದಿ ನಾಸಾದಿ ಚ ಚಿತ್ತಯುಕ್ತಮ್ ॥ ೩೧ ॥

ಯೋಽಸೌ ಗುಣಕ್ಷೋಭಕೃತೋ ವಿಕಾರಃ
ಪ್ರಧಾನಮೂಲಾನ್ಮಹತಃ ಪ್ರಸೂತಃ ।
ಅಹಂ ತ್ರಿವೃನ್ಮೋಹವಿಕಲ್ಪಹೇತು-
ರ್ವೈಕಾರಿಕಸ್ತಾಮಸ ಐಂದ್ರಿಯಶ್ಚ ॥ ೩೨ ॥

ಆತ್ಮಾಪರಿಜ್ಞಾನಮಯೋ ವಿವಾದೋ
ಹ್ಯಸ್ತೀತಿ ನಾಸ್ತೀತಿ ಭಿದಾರ್ಥನಿಷ್ಠಃ ।
ವ್ಯರ್ಥೋಽಪಿ ನೈವೋಪರಮೇತ ಪುಂಸಾಂ
ಮತ್ತಃ ಪರಾವೃತ್ತಧಿಯಾಂ ಸ್ವಲೋಕಾತ್ ॥ ೩೩ ॥

ಉದ್ಧವ ಉವಾಚ

ತ್ವತ್ತಃ ಪರಾವೃತ್ತಧಿಯಃ ಸ್ವಕೃತೈಃ ಕರ್ಮಭಿಃ ಪ್ರಭೋ ।
ಉಚ್ಚಾವಚಾನ್ಯಥಾ ದೇಹಾನ್ ಗೃಹ್ಣಂತಿ ವಿಸೃಜಂತಿ ಚ
॥ ೩೪ ॥

ಉದಾಹರಣೆಗಾಗಿ – ನೇತ್ರೇಂದ್ರಿಯ ಅಧ್ಯಾತ್ಮವಾಗಿದೆ, ಅದರ ವಿಷಯರೂಪವು ಅಧಿಭೂತವಾಗಿದೆ. ನೇತ್ರಗೋಲಕದಲ್ಲಿ ಸ್ಥಿತ ಸೂರ್ಯದೇವತೆಯ ಅಂಶ ಅಧಿದೈವವಾಗಿದೆ. ಇವು ಮೂರೂ ಪರಸ್ಪರ ಒಂದು ಇನ್ನೊಂದರ ಆಶ್ರಯದಿಂದ ಸಿದ್ಧವಾಗುತ್ತವೆ. ಅದಕ್ಕಾಗಿ ಅಧ್ಯಾತ್ಮ, ಅಧಿದೈವ, ಅಧಿಭೂತ ಇವು ಮೂರೂ ಪರಸ್ಪರ ಒಂದು ಮತ್ತೊಂದರಿಂದ ಸಹಾಯ ಬಯಸುತ್ತವೆ. ಆದರೆ ಆಕಾಶದಲ್ಲಿರುವ ಸೂರ್ಯಮಂಡಲ ಇವು ಮೂರರಿಂದಲೂ ಮುಕ್ತವಾಗಿದೆ. ಏಕೆಂದರೆ ಅದು ಸ್ವತಃಸಿದ್ಧವಾಗಿದೆ. ಹೀಗೆಯೇ ಆತ್ಮನು ಮೇಲೆ ಹೇಳಿದ ಮೂರೂ ಭೇದಗಳ ಮೂಲಕಾರಣ, ಅವುಗಳ ಸಾಕ್ಷಿ ಮತ್ತು ಅವುಗಳಿಂದ ಅತೀತನಾಗಿದ್ದಾನೆ. ಅವನೇ ತನ್ನ ಸ್ವಯಂಸಿದ್ಧ ಪ್ರಕಾಶದಿಂದ ಸಮಸ್ತ ಪದಾರ್ಥಗಳನ್ನು ಸಿದ್ಧಪಡಿಸುತ್ತಾನೆ. ಅವನಿಂದಲೇ ಎಲ್ಲರ ಪ್ರಕಾಶವಾಗುತ್ತದೆ. ಅವನ ಅಸ್ತಿತ್ವದಿಂದಲೇ ಬೇರೆಯದಕ್ಕೆ ಅಸ್ತಿತ್ವವಿದೆ. ಹೇಗೆ ಚಕ್ಷುವಿನ ಮೂರು ಭೇದಗಳು ತಿಳಿಸಲಾಗಿದೆಯೋ, ಹಾಗೆಯೇ ತ್ವಚಾ, ಶ್ರೋತ್ರ, ಜಿಹ್ವೆ, ನಾಸಿಕಾ ಮತ್ತು ಚಿತ್ತ ಇವುಗಳದ್ದೂ ಮೂರು-ಮೂರು ಭೇದಗಳಿವೆ. * ॥ ೩೧ ॥ ಪ್ರಕೃತಿಯಿಂದ ಮಹತ್ತತ್ತ್ವ ಉಂಟಾಗುತ್ತದೆ ಮತ್ತು ಮಹತ್ತತ್ತ್ವದಿಂದ ಅಹಂಕಾರ ಉಂಟಾಗುತ್ತದೆ. ಈ ಪ್ರಕಾರ ಈ ಅಹಂಕಾರವು ಗುಣಗಳ ಕ್ಷೋಭದಿಂದ ಉಂಟಾಗಿದ್ದ ಪ್ರಕೃತಿಯ ಒಂದು ವಿಕಾರವಾಗಿದೆ. ಅಹಂಕಾರದ ಮೂರು ಭೇದಗಳಿವೆ – (೧) ವೈಕಾರಿಕ-ಸತ್ತ್ವಗುಣ ವಿಶಿಷ್ಟ ಮನ ಹಾಗೂ ಇಂದ್ರಿಯಗಳ ದೇವತೆಗಳು, (೨) ತೈಜಸ ಹತ್ತು ಇಂದ್ರಿಯಗಳು, (೩) ತಾಮಸ-ಪಂಚಮಹಾಭೂತ ಹಾಗೂ ಐದು ಅವುಗಳ ವಿಷಯಗಳು. ಹೀಗೆ ಈ ಅಹಂಕಾರವೇ ಅಜ್ಞಾನ ಮತ್ತು ಸೃಷ್ಟಿಯ ವಿವಿಧತೆಯ ಮೂಲಕಾರಣವಾಗಿದೆ. ॥ ೩೨ ॥ ಆತ್ಮನು ಜ್ಞಾನ ಸ್ವರೂಪನಾಗಿದ್ದಾನೆ ; ಅವನಿಗೆ ಈ ಪದಾರ್ಥಗಳೊಂದಿಗೆ ಯಾವ ಸಂಬಂಧವೂ ಇಲ್ಲ. ಅಸ್ತಿ (ಇದೆ) ನಾಸ್ತಿ (ಇಲ್ಲ) ಸುಗುಣ, ನಿರ್ಗುಣ, ಭಾವ-ಅಭಾವ, ಸತ್ಯ-ಮಿಥ್ಯಾ ಇವೆಲ್ಲವೂ ಭೇದ ದೃಷ್ಟಿಯೇ ಆಗಿದೆ. ಇದು ಸರ್ವಥಾ ವ್ಯರ್ಥವಾಗಿದೆ. ಜ್ಞಾನ ಸ್ವರೂಪೀ ಪರಮಾತ್ಮನಾದ ನನ್ನಿಂದ ವಿಮುಖರಾದ ಜನರು ಈ ವಿವಾದದಿಂದ ಮುಕ್ತರಾಗಲಾರರು. ॥ ೩೩ ॥

ಉದ್ಧವನು ಕೇಳಿದನು – ಭಗವಂತಾ ! ನಿನ್ನಿಂದ ವಿಮುಖರಾದ ಜೀವಿಗಳು ತಾವು ಮಾಡಿದ ಪಾಪ-ಪುಣ್ಯಗಳ ಫಲವಾಗಿ ಉಚ್ಚ-ನೀಚ ಯೋನಿಗಳಲ್ಲಿ ಹುಟ್ಟುತ್ತಾ-ಸಾಯುತ್ತಾ ಇರುತ್ತಾರೆ. ಈಗ ಪ್ರಶ್ನೆಯೆಂದರೆ – ವ್ಯಾಪಕ ಆತ್ಮನು ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ಹೋಗುವುದು, ಅಕರ್ತನು ಕರ್ಮ ಮಾಡುವುದು, ನಿತ್ಯವಸ್ತುವಿಗೆ ಜನ್ಮ-ಮರಣವಾಗುವುದು, ಇದು ಹೇಗೆ ಸಂಭವಿಸುತ್ತದೆ ? ॥ ೩೪ ॥

---

* ಹೇಗೆಂದರೆ – ತ್ವಚಾ, ಸ್ಪರ್ಶ, ವಾಯು ; ಶ್ರವಣ, ಶಬ್ದ ದಿಕ್ಕುಗಳು ; ಜಿಹ್ವೆ, ರಸ, ವರುಣ ; ನಾಸಿಕಾ, ಗಂಧ, ಅಶ್ವಿನೀಕುಮಾರರು ; ಚಿತ್ತ, ಚಿತ್ತದ ವಿಷಯ, ವಾಸುದೇವ ; ಮನಸ್ಸು, ಮನಸ್ಸಿನ ವಿಷಯ, ಚಂದ್ರ ; ಅಹಂಕಾರ, ಅಹಂಕಾರದ ವಿಷಯ, ರುದ್ರ ; ಬುದ್ಧಿ ತಿಳಿಯುವ ವಿಷಯ, ಬ್ರಹ್ಮಾ ; ಇವೆಲ್ಲ ತ್ರಿವಿಧ ತತ್ತ್ವಗಳಿಂದ ಆತ್ಮನಿಗೆ ಯಾವ ಸಂಬಂಧವೂ ಇಲ್ಲ.

ತನ್ಮಮಾಖ್ಯಾಹಿ ಗೋವಿಂದ ದುರ್ವಿಭಾವ್ಯಮನಾತ್ಮಭಿಃ ।
ನ ಹ್ಯೇತತ್ ಪ್ರಾಯಶೋ ಲೋಕೇ ವಿದ್ವಾಂಸಃ ಸಂತಿ ವಂಚಿತಾಃ
॥ ೩೫ ॥

ಗೋವಿಂದಾ ! ಆತ್ಮಜ್ಞಾನ ರಹಿತರಾದವರು ಈ ವಿಷಯವನ್ನು ಸರಿಯಾಗಿ ಯೋಚಿಸಲಾರರು ಮತ್ತು ಈ ವಿಷಯ ತಿಳಿದ ವಿದ್ವಾಂಸರು ಪ್ರಪಂಚದಲ್ಲಿ ಪ್ರಾಯಶಃ ಸಿಗುವುದಿಲ್ಲ, ಏಕೆಂದರೆ, ಎಲ್ಲ ಜನರು ನಿನ್ನ ಮಾಯೆಯಿಂದ ಭ್ರಾಂತಿಯಲ್ಲಿ ಬಿದ್ದಿರುವರು. ಅದಕ್ಕಾಗಿ ನೀನೇ ದಯಮಾಡಿ ಈ ರಹಸ್ಯವನ್ನು ನನಗೆ ತಿಳಿಸು. ॥ ೩೫ ॥

ಶ್ರೀಭಗವಾನುವಾಚ

ಮನಃ ಕರ್ಮಮಯಂ ನೃಣಾಮ್-
ಇಂದ್ರಿಯೈಃ ಪಂಚಭಿರ್ಯುತಮ್ ।
ಲೋಕಾಲ್ಲೋಕಂ ಪ್ರಯಾತ್ಯನ್ಯ
ಆತ್ಮಾ ತದನುವರ್ತತೇ ॥ ೩೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ ! ಮನುಷ್ಯರ ಮನಸ್ಸು ಕರ್ಮ-ಸಂಸ್ಕಾರಗಳ ಪುಂಜವಾಗಿದೆ. ಆ ಸಂಸ್ಕಾರಗಳನುಸಾರ ಭೋಗಗಳನ್ನು ಪಡೆಯಲು ಅದರ ಜೊತೆ ಐದು ಇಂದ್ರಿಯಗಳೂ ತೊಡಗಿವೆ. ಇದರ ಹೆಸರೇ ಲಿಂಗ ಶರೀರ. ಅದೇ ಕರ್ಮಗಳನುಸಾರ ಒಂದು ಶರೀರದಿಂದ ಮತ್ತೊಂದು ಶರೀರದಲ್ಲಿ, ಒಂದು ಲೋಕದಿಂದ ಇನ್ನೊಂದು ಲೋಕಕ್ಕೆ ಹೋಗುತ್ತಾ-ಬರುತ್ತಾ ಇರುತ್ತದೆ. ಆತ್ಮನು ಈ ಲಿಂಗಶರೀರದಿಂದ ಸರ್ವಥಾ ಬೇರೆಯಾಗಿದ್ದಾನೆ. ಆತ್ಮನು ಸರ್ವವ್ಯಾಪಿಯಾಗಿದ್ದಾನೆ. ಆದ್ದರಿಂದ ಅವನ ಗಮನಾಗಮನ ಆಗುವುದಿಲ್ಲ, ಆದರೆ ಅವನು ತನ್ನನ್ನು ಲಿಂಗಶರೀರವೆಂದೇ ತಿಳಿದಾಗ, ಅದರಲ್ಲೇ ಅಹಂಕಾರಪಟ್ಟಾಗ, ಅವನೂ ಕೂಡ ಬಂದು-ಹೋದಂತೆ ಕಂಡುಬರತೊಡಗುತ್ತಾನೆ. ॥ ೩೬ ॥ ಮನಸ್ಸು ಕರ್ಮಗಳ ಅಧೀನವಾಗಿದೆ. ಅದು ಈ ಲೋಕ ಅಥವಾ ಪರಲೋಕ ಸಂಬಂಧೀ ವಿಷಯಗಳನ್ನು ಸತತ ಚಿಂತಿಸುತ್ತಾ ಇರುತ್ತದೆ. ಹೊಸ ವಿಷಯ ಬಂದಾಗ ಮೊದಲಿನದನ್ನು ಮರೆಯುತ್ತಾ ಹೋಗುತ್ತದೆ ಹಾಗೂ ಹೊಸದರಲ್ಲಿ ತೊಡಗುತ್ತದೆ. ಹೀಗೆ ಹಿಂದಿನ ವಿಷಯಗಳ ಸ್ಮೃತಿಯೂ ಕೂಡ ಶಾಂತವಾಗುತ್ತಾ ಇರುತ್ತದೆ. ॥ ೩೭ ॥

ಧ್ಯಾಯನ್ಮನೋಽನು ವಿಷಯಾನ್ ದೃಷ್ಟಾನ್ ವಾನುಶ್ರುತಾನಥ ।
ಉದ್ಯತ್ಸೀದತ್ಕರ್ಮತಂತ್ರಂ ಸ್ಮೃತಿಸ್ತದನು ಶಾಮ್ಯತಿ
॥ ೩೭ ॥

ವಿಷಯಾಭಿನಿವೇಶೇನ ನಾತ್ಮಾನಂ ಯತ್ಸ್ಮರೇತ್ ಪುನಃ ।
ಜಂತೋರ್ವೈ ಕಸ್ಯಚಿದ್ದೇತೋರ್ಮೃತ್ಯುರತ್ಯಂತವಿಸ್ಮೃತಿಃ
॥ ೩೮ ॥

ಹೀಗೆಯೇ ಹೊಸ-ಹೊಸ ವಿಷಯಗಳಲ್ಲಿ ಆಸಕ್ತಿಯನ್ನಿಡುತ್ತಾ, ಅದರಿಂದ ಹಿಂದಿನದನ್ನು ಮರೆಯುತ್ತಾ, ಹೊಸ-ಹೊಸದರ ಚಿಂತನೆ ನಡೆಯುತ್ತದೆ. ಹೀಗೆಯೇ ಯಾವುದೇ ಕಾರಣದಿಂದ ಮನುಷ್ಯನಿಗೆ ತನ್ನ ಹಿಂದಿನ ಶರೀರದ ಸ್ಮರಣೆ ಏನೂ ಉಳಿಯುವುದಿಲ್ಲ, ತನ್ನ ಹಿಂದಿನ ಶರೀರದ ಕುರಿತು ಪೂರ್ಣವಾಗಿ ವಿಸ್ಮೃತಿ ಉಂಟಾಗುತ್ತದೆ. ಇದೇ ಅವನ ಮೃತ್ಯುವಾಗಿದೆ. ॥ ೩೮ ॥

ಜನ್ಮ ತ್ವಾತ್ಮತಯಾ ಪುಂಸಃ ಸರ್ವಭಾವೇನ ಭೂರಿದ ।
ವಿಷಯಸ್ವೀಕೃತಿಂ ಪ್ರಾಹುರ್ಯಥಾ ಸ್ವಪ್ನಮನೋರಥಃ
॥ ೩೯ ॥

ಉದಾರನಾದ ಉದ್ಧವನೇ ! ಮನುಷ್ಯನು ಈ ದೇಹವೇ ನಾನಾಗಿದ್ದೇನೆ, ಇದು ನನ್ನದಾಗಿದೆ, ಹೀಗೆ ತಿಳಿದುಕೊಂಡು ಹೊಸ ಶರೀರವನ್ನು ಸ್ವೀಕರಿಸುವುದೇ ಅವನ ಜನ್ಮವಾಗಿದೆ. ಈ ಹೊಸ ಶರೀರವನ್ನು ಸ್ವೀಕರಿಸಿ, ಸ್ವಪ್ನದಲ್ಲಿ ಮನೋರಥಗಳನ್ನು ಮಾಡುತ್ತಾ-ಮಾಡುತ್ತಾ ಕೆಲವೊಮ್ಮೆ ಸುಖಿವಾಗುತ್ತದೆ, ಕೆಲವೊಮ್ಮೆ ದುಃಖಿವಾಗುತ್ತದೆ. ಹೀಗೆಯೇ ಈ ಶರೀರದಲ್ಲಿ ಅವನು ಸುಖೀ-ದುಃಖೀ ಆಗುತ್ತಾ ಇರುತ್ತಾನೆ. ॥ ೩೯ ॥ ಸ್ವಪ್ನದಲ್ಲಿ ಹೊಸ-ಹೊಸ ಮನೋರಥಗಳು ಬರುವಂತೆ ಜೀವಿಯೂ ಕೂಡ ಪದೇ-ಪದೇ ಹುಟ್ಟುತ್ತಾ ಸಾಯುತ್ತಾ ಇರುತ್ತಾನೆ. ಇದೂ ಕೂಡ ಸ್ವಪ್ನದಂತೆ ಮಿಥ್ಯೆಯೇ ಆಗಿದೆ. ಆದರೂ ಹೊಸ ಶರೀರವನ್ನು ಸ್ವೀಕರಿಸುವುದರಿಂದ ನಾನು ಮೊದಲು ಇರಲಿಲ್ಲ, ಈಗ ಹೊಸದಾಗಿಯೇ ಹುಟ್ಟಿರುವೆನು ಎಂದು ಅವನು ತಿಳಿಯುತ್ತಾನೆ. ಅವನು ತನ್ನ ಹಿಂದಿನ ಶರೀರವನ್ನು ಪೂರ್ಣವಾಗಿ ಮರೆತುಹೋಗುತ್ತಾನೆ. ॥ ೪೦ ॥

ಸ್ವಪ್ನಂ ಮನೋರಥಂ ಚೇತ್ಥಂ ಪ್ರಾಕ್ತನಂ ನ ಸ್ಮರತ್ಯಸೌ ।
ತತ್ರ ಪೂರ್ವಮಿವಾತ್ಮಾನಮಪೂರ್ವಂ ಚಾನುಪಶ್ಯತಿ
॥ ೪೦ ॥

ಇಂದ್ರಿಯಾಯನಸೃಷ್ಟ್ಯೇದಂ ತ್ರೈವಿಧ್ಯಂ ಭಾತಿ ವಸ್ತುನಿ।
ಬಹಿರಂತರ್ಭಿದಾಹೇತುರ್ಜನೋಽಸಜ್ಜನಕೃದ್ಯಥಾ
॥ ೪೧ ॥

ನಿತ್ಯದಾ ಹ್ಯಂಗ ಭೂತಾನಿ ಭವಂತಿ ನ ಭವಂತಿ ಚ।
ಕಾಲೇನಾಲಕ್ಷ್ಯವೇಗೇನ ಸೂಕ್ಷ್ಮತ್ವಾತ್ತನ್ನ ದೃಶ್ಯತೇ
॥ ೪೨ ॥

ಯಥಾರ್ಚಿಷಾಂ ಸ್ರೋತಸಾಂ ಚ ಫಲಾನಾಂ ವಾ ವನಸ್ಪತೇಃ।
ತಥೈವ ಸರ್ವಭೂತಾನಾಂ ವಯೋಽವಸ್ಥಾದಯಃ ಕೃತಾಃ
॥ ೪೩ ॥

ಸೋಽಯಂ ದೀಪೋಽರ್ಚಿಷಾಂ
ಯದ್ವತ್ಸ್ರೋತಸಾಂ ತದಿದಂ ಜಲಮ್।
ಸೋಽಯಂ ಪುಮಾನಿತಿ ನೃಣಾಂ
ಮೃಷಾಗೀರ್ಧೀರ್ಮೃಷಾಯುಷಾಮ್ ॥ ೪೪ ॥

ಮಾ ಸ್ವಸ್ಯ ಕರ್ಮಬೀಜೇನ
ಜಾಯತೇ ಸೋಽಪ್ಯಯಂ ಪುಮಾನ್।
ಮ್ರಿಯತೇ ವಾಮರೋ ಭ್ರಾಂತ್ಯಾ
ಯಥಾಗ್ನಿರ್ದಾರುಸಂಯುತಃ ॥ ೪೫ ॥

ನಿಷೇಕಗರ್ಭಜನ್ಮಾನಿ ಬಾಲ್ಯಕೌಮಾರಯೌವನಮ್।
ವಯೋಮಧ್ಯಂ ಜರಾ ಮೃತ್ಯುರಿತ್ಯವಸ್ಥಾಸ್ತನೋರ್ನವ
॥ ೪೬ ॥

ಏತಾ ಮನೋರಥಮಯೀರ್ಹ್ಯನ್ಯಸ್ಯೋಚ್ಚಾವಚಾಸ್ತನೂಃ।
ಗುಣಸಂಗಾದುಪಾದತ್ತೇ ಕ್ವಚಿತ್ಕಶ್ಚಿಜ್ಜಹಾತಿ ಚ
॥ ೪೭ ॥

ಆತ್ಮನು ಒಂದೇ ಆಗಿದ್ದು ಅದ್ವಿತೀಯ, ಅಖಂಡನಾಗಿದ್ದಾನೆ. ಇದರಲ್ಲಿ ಯಾವುದೇ ಒಳಗಿನ-ಹೊರಗಿನ ಭೇದವಿಲ್ಲ. ಆತ್ಮನಿಗೆ ಜನ್ಮ-ಮೃತ್ಯುಗಳಿಲ್ಲ. ಆದರೆ ಮನಸ್ಸೇ ಈ ಭೇದಬುದ್ಧಿಯ ಮೂಲ ಕಾರಣವಾಗಿದೆ. ಮನಸ್ಸಿನ ಆಶ್ರಯದಲ್ಲೇ ಇಂದ್ರಿಯಗಳು ಇರುತ್ತವೆ. ಮನಸ್ಸೇ ನಾನಾ ಪ್ರಕಾರದ ಕಲ್ಪನೆ ಮಾಡುತ್ತದೆ. ಅದರಿಂದಲೇ ಜನ್ಮ, ಸ್ಥಿತಿ ಮತ್ತು ಮೃತ್ಯುವಿನ ಭಾಸ ಆತ್ಮನಲ್ಲಾಗುತ್ತದೆ. ಯಾವುದಾದರೂ ಕುಟುಂಬದಲ್ಲಿ ಕೆಟ್ಟಮಗ ಹುಟ್ಟಿದರೆ ಪರಿವಾರದಲ್ಲಿ ಭೇದಬುದ್ಧಿ ಉಂಟುಮಾಡಿ ಇಡೀ ಮನೆಯನ್ನು ಉದ್ವಸ್ತ ಮಾಡಿಬಿಡುವಂತೆ ಮನಸ್ಸಿನ ಸ್ಥಿತಿಯಾಗಿದೆ. ಇದು ಸತ್ತ್ವಗುಣ ವಿಶಿಷ್ಟವಾಗಿದ್ದರೂ ನಾನಾ ಪ್ರಕಾರದ ಸಂಕಲ್ಪ-ವಿಕಲ್ಪಗಳನ್ನು ಮಾಡುತ್ತಾ ಇಂದ್ರಿಯಗಳನ್ನು ಕ್ಷುಬ್ಧಗೊಳಿಸಿ, ಜೀವಿಯನ್ನು ಅಲೆಸುತ್ತಾ ಇರುತ್ತದೆ. ॥ ೪೧ ॥ ಪ್ರಿಯ ಉದ್ಧವನೇ! ಕಾಲದ ಗತಿಯು ಕಾಣಲಾರದಷ್ಟು ಸೂಕ್ಷ್ಮವಾಗಿದೆ. ಅದರ ಮೂಲಕ ಪ್ರತಿಕ್ಷಣವೂ ಶರೀರಗಳ ಉತ್ಪತ್ತಿ ಮತ್ತು ನಾಶ ಆಗುತ್ತಾ ಇರುತ್ತದೆ. ಸೂಕ್ಷ್ಮತೆಯ ಕಾರಣದಿಂದಾಗಿ ಪ್ರತಿಕ್ಷಣ ಆಗುವ ಜನ್ಮ-ಮರಣಗಳು ಕಂಡುಬರುವುದಿಲ್ಲ. ॥ ೪೨ ॥ ಕಾಲನ ಪ್ರಭಾವದಿಂದ ದೀಪದ ಜ್ಯೋತಿ, ನದಿಗಳ ಪ್ರವಾಹ, ವೃಕ್ಷದ ಫಲಗಳ ವಿಶೇಷ-ವಿಶೇಷ ಅವಸ್ಥೆ ಇವುಗಳು ಬದಲಾಗುತ್ತಿರುವಂತೆ, ಸಮಸ್ತ ಪ್ರಾಣಿಗಳ ಶರೀರಗಳ ಆಯುಸ್ಸು, ಅವಸ್ಥೆ ಮುಂತಾದವುಗಳೂ ಕೂಡ ಬದಲಾಗುತ್ತಾ ಇರುತ್ತವೆ. ॥ ೪೩ ॥ ಇದು ಅದೇ ಜ್ಯೋತಿಗಳ ದೀಪವಾಗಿದೆ, ಈ ಪ್ರವಾಹದ ನೀರು ಅದೇ ಆಗಿದೆ – ಎಂದು ತಿಳಿಯುವುದು ಮತ್ತು ಹೇಳುವುದು ಮಿಥ್ಯೆಯಾಗಿರುವಂತೆ, ವಿಷಯ ಚಿಂತನೆಯಲ್ಲಿ ವ್ಯರ್ಥವಾಗಿ ಆಯುಸ್ಸನ್ನು ಕಳೆಯುವ ಅವಿವೇಕಿ ಪುರುಷನು ಅವನೇ ಆಗಿದ್ದಾನೆ ಎಂದು ಹೇಳುವುದು, ತಿಳಿಯುವುದು ಸರ್ವಥಾ ಮಿಥ್ಯೆಯಾಗಿದೆ. ॥ ೪೪ ॥ ಅದೇ ಈ ಆತ್ಮನು ವಾಸ್ತವವಾಗಿಯಾದರೋ ತನ್ನ ಕರ್ಮಬೀಜದಿಂದ ಹುಟ್ಟುವುದಿಲ್ಲ, ಸಾಯುವುದಿಲ್ಲ. ಆದರೆ ಹುಟ್ಟುವುದು ಮತ್ತು ಸಾಯುವುದು ಇವೆರಡೂ ಭ್ರಾಂತಿಯಿಂದಲೇ ತಿಳಿಯಲಾಗುತ್ತದೆ., ಕಟ್ಟಿಗೆಯ ಸಂಯೋಗದಿಂದ ಅಗ್ನಿಯು ಉರಿಯುವಂತೆ ಮತ್ತು ಶಾಂತವಾಗುವಂತೆ ಕಂಡುಬರುತ್ತದೆ, ಆದರೆ ಅಗ್ನಿಯಾದರೋ ವ್ಯಾಪಕವೇ ಆಗಿದೆ. ಕಟ್ಟಿಗೆಗಳು ಉರಿಯುವುದರಿಂದ ಶಾಂತವಾಗುವುದರಿಂದ ಅಗ್ನಿತತ್ತ್ವದಲ್ಲಿ ಯಾವ ವ್ಯತ್ಯಾಸವೂ ಬೀಳುವುದಿಲ್ಲ; ಸರಿಯಾಗಿ ಹಾಗೆಯೇ ಆತ್ಮನಾದರೋ ಅಮರನಾಗಿದ್ದಾನೆ. ॥ ೪೫ ॥ ಉದ್ಧವನೇ! ಗರ್ಭಾಧಾನ, ಗರ್ಭವೃದ್ಧಿ, ಜನ್ಮ, ಬಾಲ್ಯ, ಕೌಮಾರ್ಯ, ತಾರುಣ್ಯ, ಪ್ರೌಢ, ಮುಪ್ಪು ಮತ್ತು ಸಾವು ಇವು ಒಂಭತ್ತು ಶರೀರದ ಅವಸ್ಥೆಗಳಾಗಿವೆ. ॥ ೪೬ ॥ ಈ ಶರೀರವು ಜೀವನಿಂದ ಭಿನ್ನವಾಗಿದೆ ಮತ್ತು ಈ ಉಚ್ಚ-ನೀಚ ಅವಸ್ಥೆಗಳು ಅವನ ಮನೋಕಲ್ಪನೆಯೇ ಆಗಿದೆ ; ಆದರೆ ಅವನು ಅಜ್ಞಾನವಶನಾಗಿ ಗುಣಗಳ ಸಂಗದಿಂದ ಇವುಗಳನ್ನು ತನ್ನವು ಎಂದು ತಿಳಿದುಕೊಂಡು ಅಲೆಯತೊಡಗುತ್ತಾನೆ. ಯಾರಿಗಾದರೂ ವಿವೇಕ ಉಂಟಾದರೆ ಇವುಗಳನ್ನು ಬಿಟ್ಟುಬಿಡುತ್ತಾನೆ. ॥ ೪೭ ॥

ಆತ್ಮನಃ ಪಿತೃಪುತ್ರಾಭ್ಯಾಮನುಮೇಯೌ ಭವಾಪ್ಯಯೌ ।
ನ ಭವಾಪ್ಯಯವಸ್ತೂನಾಮಭಿಜ್ಞೋ ದ್ವಯಲಕ್ಷಣಃ
॥ ೪೮ ॥

ತಂದೆಯು ಪುತ್ರನ ಮರಣದಿಂದ ಹಾಗೂ ಪುತ್ರನು ತಂದೆಯ ಮೃತ್ಯುವಿನಿಂದ ತಮ್ಮ ಜನ್ಮ-ಮೃತ್ಯುವಿನ ಅನುಮಾನ ಮಾಡಿಕೊಳ್ಳ ಬೇಕು. ಜನ್ಮ ಮತ್ತು ಮೃತ್ಯು ಯಾವ ವಸ್ತುಗಳಲ್ಲಿ ಇದೆಯೋ ಅವೆರಡನ್ನೂ ಅರಿಯುವ ಆತ್ಮನು ಜನ್ಮ-ಮೃತ್ಯು ಇವೆರಡೂ ಲಕ್ಷಣಗಳಿಂದ ಸರ್ವಥಾ ಬೇರೆಯೇ ಆಗಿದ್ದಾನೆ. ॥ ೪೮ ॥ ವೃಕ್ಷದ ಬೀಜ ಮತ್ತು ಪರಿಣಾಮಗಳನ್ನು ನೋಡಿ ವಿದ್ವಾಂಸನು ಅದರ ಹುಟ್ಟು-ವಿನಾಶವನ್ನು ನೋಡುತ್ತಾನೆ. ಇವೆರಡನ್ನು ನೋಡುವವ ನಾದರೋ ವಿಲಕ್ಷಣನೇ ಆಗಿದ್ದಾನೆ. ಅವನು ಬೇರೆಯೇ ಆಗಿದ್ದಾನೆ. ಹೀಗೆಯೇ ಶರೀರದ ಜನ್ಮ-ಮೃತ್ಯು ನೋಡುವವನು ಶರೀರದಿಂದ ಬೇರೆಯಾಗಿದ್ದಾನೆ, ಅವನೇ ಆತ್ಮನಾಗಿದ್ದಾನೆ. ಅವನ ಜನ್ಮ-ನಾಶ ವಾಗುವುದಿಲ್ಲ॥ ೪೯ ॥ ಅಜ್ಞಾನೀ ಪುರುಷನು ಹೀಗೆ ಪ್ರಕೃತಿ ಮತ್ತು ಆತ್ಮವನ್ನು ತಾತ್ತ್ವಿಕರೂಪದಿಂದ ವಿವೇಚಿಸುವುದಿಲ್ಲ, ಅವನು ಆತ್ಮವನ್ನು ಪ್ರಕೃತಿಯಿಂದ ತತ್ತ್ವತಃ ಬೇರೆಯಾಗಿ ಅನುಭವ ಪಡೆಯುವುದಿಲ್ಲ ಮತ್ತು ವಿಷಯ ಭೋಗದಲ್ಲೇ ನಿಜ ಸುಖವನ್ನು ತಿಳಿಯತೊಡಗುತ್ತಾ, ಅದರಲ್ಲೇ ಮೋಹಿತನಾಗುತ್ತಾನೆ. ಇದರಿಂದಲೇ ಅವರಿಗೆ ಜನ್ಮ-ಮೃತ್ಯುರೂಪೀ ಸಂಸಾರದಲ್ಲಿ ಅಲೆಯಬೇಕಾಗುತ್ತದೆ. ॥ ೫೦ ॥ ಅವಿವೇಕಿ ಜೀವಿಯು ತನ್ನ ಕರ್ಮಗಳನುಸಾರ ಜನ್ಮ-ಮೃತ್ಯುವಿನ ಚಕ್ರದಲ್ಲಿ ಅಲೆಯತೊಡಗಿದ್ದಾಗ ಸಾತ್ತ್ವಿಕ ಕರ್ಮಗಳ ಆಸಕ್ತಿಯಿಂದ ಋಷಿಲೋಕ, ದೇವಲೋಕವನ್ನೂ, ರಾಜಸಿಕ ಕರ್ಮಗಳ ಆಸಕ್ತಿಯಿಂದ ಮನುಷ್ಯ ಮತ್ತು ಅಸುರಯೋನಿಯನ್ನು, ತಾಮಸೀ ಕರ್ಮಗಳ ಆಸಕ್ತಿಯಿಂದ ಭೂತ-ಪ್ರೇತ ಹಾಗೂ ಪಶು-ಪಕ್ಷಿಗಳ ಯೋನಿಗಳನ್ನು ಅವನು ಹೊಂದುತ್ತಾನೆ. ॥ ೫೧ ॥ ಮನುಷ್ಯನು ಯಾರಾದರೂ ಹಾಡುತ್ತಾ ಕುಣಿಯುತ್ತಿರುವುದನ್ನು ನೋಡಿದಾಗ, ಅವನು ಸ್ವತಃ ಅದನ್ನು ಅನುಕರಣೆ ಮಾಡುತ್ತಾ ಅಲಾಪಿಸತೊಡಗುತ್ತಾನೆ,. ಹಾಗೆಯೇ ಜೀವಿಯು ಬುದ್ಧಿಯ ಗುಣಗಳನ್ನು ನೋಡಿದಾಗ ಸ್ವತಃ ನಿಷ್ಕ್ರಿಯನಾಗಿದ್ದರೂ ಅದನ್ನು ಅನುಕರಣೆಮಾಡಲು ಬಾಧ್ಯನಾಗುತ್ತಾನೆ. ॥ ೫೨ ॥ ಹೊಳೆ, ಕೆರೆ ಮುಂತಾದವುಗಳ ನೀರು ಅಲ್ಲಾಡಿದಾಗ ತಟದಲ್ಲಿದ್ದ ವೃಕ್ಷಗಳ ಪ್ರತಿಬಿಂಬವು ಅಲ್ಲಾಡಿದ ಹಾಗೆ ಕಾಣುವಂತೆ, ಗಿರ-ಗಿರನೆ ತಿರುಗುವಾಗ ತನ್ನೊಂದಿಗೆ ಭೂಮಿಯು ತಿರುಗಿದಂತೆಯೇ ಕಂಡುಬರುವಂತೆ, ಮನಸ್ಸಿನ ಮೂಲಕ ಯೋಚಿಸಿದ್ದನ್ನು ಹಾಗೂ ಸ್ವಪ್ನದಲ್ಲಿ ನೋಡಲಾದ ಪದಾರ್ಥಗಳು ಸರ್ವಥಾ ಮಿಥ್ಯೆಯೇ ಆಗಿದೆ. ಹಾಗೆಯೇ ಎಲ್ಲೆ ದಾಶಾರ್ಹನೇ! ಆತ್ಮನ ವಿಷಯಾನುಭವರೂಪೀ ಸಂಸಾರವೂ ಸರ್ವಥಾ ಅಸತ್ಯವಾಗಿದೆ. ಆತ್ಮನಾದರೋ ನಿತ್ಯ, ಶುದ್ಧ-ಬುದ್ಧ-ಮುಕ್ತನೇ ಆಗಿದ್ದಾನೆ. ॥ ೫೩.-೫೪ ॥ ವಿಷಯಗಳು ಸತ್ಯವಾಗಿರದಿದ್ದರೂ ಅವುಗಳನ್ನು ಚಿಂತಿಸುತ್ತಾ ಇರುವ ಜೀವಿಯ ಸ್ವಪ್ನದಲ್ಲಿ ಪ್ರಾಪ್ತವಾದ ಅನರ್ಥ ಪರಂಪರೆಯು ಎಚ್ಚರವಾಗದೆ ನಿವೃತ್ತವಾಗದಿರುವಂತೆ ಜನ್ಮ ಮೃತ್ಯುರೂಪೀ ಚಕ್ರವು ಎಂದೂ ನಿವೃತ್ತವಾಗುವುದಿಲ್ಲ ॥ ೫೫ ॥ ಪ್ರಿಯ ಉದ್ಧವನೇ! ಅದಕ್ಕಾಗಿ ಈ ದುಷ್ಪ (ಎಂದಿಗೂ ತೃಪ್ತವಾಗದಿರುವ) ಇಂದ್ರಿಯಗಳಿಂದ ವಿಷಯಗಳನ್ನು ಭೋಗಿಸಬೇಡ. ಅಜ್ಞಾನದ ಕಾರಣವೇ ಆತ್ಮನಲ್ಲಿ ಭ್ರಮೆಯಿಂದ ಭೇದಬುದ್ಧಿ ಉಂಟಾಗಿದೆ. ಅದನ್ನು ನೋಡಿ ದೂರಗೊಳಿಸು. ॥ ೫೬ ॥

ತರೋಬೀಜವಿಪಾಕಾಭ್ಯಾಂ ಯೋ ವಿದ್ವಾನ್ಜನ್ಮಸಂಯಮೌ ।
ತರೋರ್ವಿಲಕ್ಷಣೋ ದ್ರಷ್ಟಾವಿವಂ ದ್ರಷ್ಟಾತನೋಃ ಪೃಥಕ್
॥ ೪೯ ॥

ಪ್ರಕೃತೇರೇವಮಾತ್ಮಾನಮವಿವಿಚ್ಯಾಬುಧಃ ಪುಮಾನ್ ।
ತತ್ತ್ವೇನ ಸ್ಪರ್ಶಸಮ್ಮೂಢಃ ಸಂಸಾರಂ ಪ್ರತಿಪದ್ಯತೇ
॥ ೫೦ ॥

ಸತ್ತ್ವಸಂಗಾದೃಷೀನ್ದೇವಾನ್ ರಜಸಾಸುರಮಾನುಷಾನ್ ।
ತಮಸಾ ಭೂತತಿರ್ಯಕ್ತ್ವಂ ಭ್ರಾಮಿತೋ ಯಾತಿ ಕರ್ಮಭಿಃ
॥ ೫೧ ॥

ನೃತ್ಯತೋ ಗಾಯತಃ ಪಶ್ಯನ್ಯಥೈವಾನುಕರೋತಿ ತಾನ್ ।
ಏವಂ ಬುದ್ಧಿಗುಣಾನ್ ಪಶ್ಯನ್ನನೀಹೋಽಪ್ಯನುಕಾರ್ಯತೇ
॥ ೫೨ ॥

ಯಥಾಂಭಸಾ ಪ್ರಚಲತಾ ತರವೋಽಪಿ ಚಲಾ ಇವ ।
ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಭ್ರಮತೀವ ಭೂಃ
॥ ೫೩ ॥

ಯಥಾ ಮನೋರಥಧಿಯೋ ವಿಷಯಾನುಭವೋ ಮೃಷಾ ।
ಸ್ವಪ್ನದೃಷ್ಟಾಶ್ಚ ದಾಶಾರ್ಹ ತಥಾ ಸಂಸಾರ ಆತ್ಮನಃ
॥ ೫೪ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ
॥ ೫೫ ॥

ತಸ್ಮಾದುದ್ಧವ ಮಾ ಭುಂಕ್ಷ್ವ ವಿಷಯಾನಸದಿಂದ್ರಿಯೈಃ ।
ಆತ್ಮಗ್ರಹಣನಿರ್ಭಾತಂ ಪಶ್ಯ ವೈಕಲ್ಪಿಕಂ ಭ್ರಮಮ್
॥ ೫೬ ॥

ಕ್ಷಿಪ್ತೋಽವಮಾನಿತೋಽಸದ್ಭಿಃ
ಪ್ರಲಬ್ಧೋಽಸೂಯಿತೋಽಥವಾ ।
ತಾಡಿತಃ ಸನ್ನಿಬದ್ಧೋ ವಾ
ವೃತ್ಯಾ ವಾ ಪರಿಹಾಪಿತಃ ॥ ೫೭ ॥

ನಿಷ್ಠಿತೋ ಮೂತ್ರಿತೋ ವಾಜ್ಭಿರ್ಬಹುಧೈವಂ ಪ್ರಕಂಪಿತಃ ।
ಶ್ರೇಯಸ್ಕಾಮಃ ಕೃಚ್ಛ್ರಗತ ಆತ್ಮನಾಽಽತ್ಮಾನಮುದ್ಧರೇತ್
॥ ೫೮ ॥

ಅಸಾಧುವಾದ ಪುರುಷನು ಕತ್ತುಹಿಡಿದು ಹೊರಗೆ ದಬ್ಬಲಿ, ಮಾತಿನಿಂದ ಅವಮಾನಿಸಲಿ, ಉಪಹಾಸ್ಯಮಾಡಲಿ, ನಿಂದಿಸಲಿ, ಹೊಡೆಯಲಿ, ಬಡೆಯಲಿ, ಕಟ್ಟಿಹಾಕಲಿ, ಜೀವನನಿರ್ವಾಹ ಕಿತ್ತು ಕೊಳ್ಳಲಿ, ಮೈಮೇಲೆ ಉಗುಳಲಿ, ಮೂತ್ರ ವಿಸರ್ಜಿಸಲಿ, ಅನೇಕ ರೀತಿಯಿಂದ ವಿಚಲಿತಗೊಳಿಸಲಿ, ನಿಷ್ಠೆಯಿಂದ ಅಲ್ಲಾಡಿಸಲು ಪ್ರಯತ್ನಿಸಲಿ, ಬೇರೆಯವರ ಯಾವುದೇ ಉಪದ್ರವದಿಂದ ಕುಬ್ಜ ನಾಗಬಾರದು. ಏಕೆಂದರೆ ಅವರಾದರೋ ಬಡಪಾಯಿ ಅಜ್ಞಾನಿ ಗಳಾಗಿದ್ದಾರೆ ; ಅವರಿಗೆ ಪರಮಾರ್ಥದ ಅರಿವೇ ಇಲ್ಲ. ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಎಲ್ಲ ಕಠಿಣತೆಗಳನ್ನು ತನ್ನ ವಿವೇಕ-ಬುದ್ಧಿಯ ಮೂಲಕ, ಹೊರಗಿನ ಯಾವುದೇ ಸಾಧನೆ ಯನ್ನು ಅವಲಂಬಿಸದೆ, ತನ್ನನ್ನು ಕಾಪಾಡಿಕೊಳ್ಳಬೇಕು. ವಸ್ತುತಃ ಆತ್ಮದೃಷ್ಟಿಯೇ ಸಮಸ್ತ ವಿಪತ್ತುಗಳಿಂದ ಪಾರಾಗಿಸುವ ಏಕಮಾತ್ರ ಸಾಧನೆಯಾಗಿದೆ. ॥ ೫೭-೫೮ ॥

ಉದ್ಧವ ಉವಾಚ

ಯಥೈವಮನುಬುಧ್ಯೇಯಂ ವದ ನೋ ವದತಾಂ ವರ ।
ಸುದುಸ್ಸಹಮಿಮಂ ಮನ್ಯೇ ಆತ್ಮನ್ಯಸದತಿಕ್ರಮಮ್
॥ ೫೯ ॥

ವಿದುಷಾಮಪಿ ವಿಶ್ವಾತ್ಮನ್ ಪ್ರಕೃತಿರ್ಹಿ ಬಲೀಯಸೀ ।
ಋತೇ ತ್ವದ್ಧರ್ಮನಿರತಾನ್ ಶಾಂತಾಂಸ್ತೇ ಚರಣಾಲಯಾನ್
॥ ೬೦ ॥

ಉದ್ಧವನು ಕೇಳಿದನು – ಭಗವಂತಾ ! ನೀನು ಸಮಸ್ತ ವಕ್ತಾಗಳಲ್ಲಿ ಶ್ರೇಷ್ಠನಾಗಿರುವೆ. ಶಿರೋಮಣಿಯಾಗಿರುವೆ. ನಾನು ಈ ದುರ್ಜನರು ಮಾಡಿದ ತಿರಸ್ಕಾರವನ್ನು ಮನಸ್ಸಿನಲ್ಲಿ ಅತ್ಯಂತ ಅಸಹ್ಯ ವೆಂದು ತಿಳಿಯುತ್ತೇನೆ. ಆದ್ದರಿಂದ ನಾನು ಇದನ್ನು ತಿಳಿಯುವಂತೆ, ನಿನ್ನ ಉಪದೇಶವನ್ನು ಜೀವನದಲ್ಲಿ ಧರಿಸಿಕೊಳ್ಳುವಂತೆ ನನಗೆ ಉಪದೇಶಿಸು. ॥ ೫೯ ॥ ವಿಶ್ವಾತ್ಮನೇ ! ಪ್ರಕೃತಿಯಾದರೋ ಬಹಳ ಬಲಿಷ್ಠವಾಗಿದೆ. ಅದು ವಿದ್ವಾಂಸರನ್ನೂ ಕೂಡ ಕುಬ್ಜಮಾಡಿ ಬಿಡುತ್ತದೆ. ನಿನ್ನ ಚರಣಗಳಲ್ಲಿ ಶರಣಾದವರು ಮಾತ್ರ ಈ ಪ್ರಕೃತಿ ಯಿಂದ ಬಿಡುಗಡೆ ಹೊಂದಬಲ್ಲರು. ಅವರು ಸದಾಕಾಲ ನಿನ್ನದೇ ಭಾಗವತಧರ್ಮದಲ್ಲಿ ತೊಡಗಿದ್ದಾರೆ, ಶಾಂತರಾಗಿದ್ದಾರೆ. ಅವರಲ್ಲಿ ಊರ್ಮಿಗಳಿಲ್ಲ. ಸುಖ-ದುಃಖರೂಪೀ ದ್ವಂದ್ವಗಳಿಲ್ಲ. ಆದ್ದ ರಿಂದ ಇಂತಹ ಶರಣಾಗತ ಭಕ್ತರೇ ಈ ಪ್ರಪಂಚದಿಂದ ಬಾಧಿ ತರಾಗುವುದಿಲ್ಲ. ॥ ೬೦ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಓರ್ವ ತಿತಿಕ್ಷು ಬ್ರಾಹ್ಮಣನ ಇತಿಹಾಸ (ಭಿಕ್ಷುಗೀತೆ)

ಶ್ರೀಶುಕ ಉವಾಚ

ಸ ಏವಮಾಶಂಸಿತ ಉದ್ಧವೇನ
ಭಾಗವತಮುಖ್ಯೇನ ದಾಶಾರ್ಹಮುಖ್ಯಃ ।
ಸಭಾಜಯನ್ ಭೃತ್ಯವಚೋ ಮುಕುಂದ-
ಸ್ತಮಾಬಭಾಷೇ ಶ್ರವಣೀಯವೀರ್ಯಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ನಿಜವಾಗಿ ಭಗವಂತನ ಲೀಲಾಕಥೆಯೇ ಶ್ರವಣಿಸಲು ಯೋಗ್ಯ ವಾಗಿದೆ. ಅದೇ ಪ್ರೇಮ ಮತ್ತು ಮುಕ್ತಿಯನ್ನು ಕೊಡುವಂತಹುದು. ಶ್ರೀಕೃಷ್ಣನ ಪರಮಪ್ರೇಮೀ ಉದ್ಧವನು ಈ ವಿಧವಾಗಿ ಪ್ರಾರ್ಥನೆ ಮಾಡಿದಾಗ, ಯದುವಂಶ ಶಿರೋಮಣಿ ಶ್ರೀಭಗವಂತನು ಅವನ ಪ್ರಶ್ನೆಯನ್ನು ಪ್ರಶಂಸಿಸುತ್ತಾ ಅವನಲ್ಲಿ ಹೀಗೆಂದನು. ॥ ೧ ॥

ಶ್ರೀಭಗವಾನುವಾಚ

ಬಾರ್ಹಸ್ಪತ್ಯ ಸ ವೈ ನಾತ್ರ ಸಾಧುರ್ವೈ ದುರ್ಜನೇರಿತೈಃ।
ದುರುಕ್ತೈರ್ಭಿನ್ನಮಾತ್ಮಾನಂ ಯಃ ಸಮಾಧಾತುಮೀಶ್ವರಃ
॥ ೨ ॥

ನ ತಥಾ ತಪ್ಯತೇ ವಿದ್ಧಃ ಪುಮಾನ್ ಬಾಣೈಃ ಸುಮರ್ಮಗೈಃ।
ಯಥಾ ತುದಂತಿ ಮರ್ಮಸ್ಥಾ ಹ್ಯಸತಾಂ ಪರುಷೇಷವಃ
॥ ೩ ॥

ಕಥಯಂತಿ ಮಹತ್ಪುಣ್ಯಮಿತಿಹಾಸಮಿಹೋದ್ಧವ।
ತಮಹಂ ವರ್ಣಯಿಷ್ಯಾಮಿ ನಿಬೋಧ ಸುಸಮಾಹಿತಃ
॥ ೪ ॥

ಕೇನಚಿದ್ಬಿಕ್ಷುಣಾ ಗೀತಂ ಪರಿಭೂತೇನ ದುರ್ಜನೈಃ।
ಸ್ಮರತಾ ಧೃತಿಯುಕ್ತೇನ ವಿಪಾಕಂ ನಿಜಕರ್ಮಣಾಮ್
॥ ೫ ॥

ಅವಂತಿಷು ದ್ವಿಜಃ ಕಶ್ಚಿದಾಸೀದಾಢ್ಯತಮಃ ಶ್ರಿಯಾ।
ವಾರ್ತಾವೃತ್ತಿಃ ಕದರ್ಯಸ್ತು ಕಾಮೀ ಲುಬ್ಧೋऽತಿಕೋಪನಃ
॥ ೬ ॥

ಜ್ಞಾತಯೋऽತಿಥಯಸ್ತಸ್ಯ ವಾಚ್ಯಾತ್ರೇಣಾಪಿ ನಾರ್ಚಿತಾಃ।
ಶೂನ್ಯಾವಸಥ ಆತ್ಮಾಪಿ ಕಾಲೇ ಕಾಮೈರನರ್ಚಿತಃ
॥ ೭ ॥

ದುಶ್ಶೀಲಸ್ಯ ಕದರ್ಯಸ್ಯ ದ್ರುಹ್ಯಂತೇ ಪುತ್ರಬಾಂಧವಾಃ।
ದಾರಾ ದುಹಿತರೋ ಭೃತ್ಯಾ ವಿಷಣ್ಣಾ ನಾಚರನ್ ಪ್ರಿಯಮ್
॥ ೮ ॥

ತಸ್ಯೈವಂ ಯಕ್ಷವಿತ್ತಸ್ಯ ಚ್ಯುತಸ್ಯೋಭಯಲೋಕತಃ।
ಧರ್ಮಕಾಮವಿಹೀನಸ್ಯ ಚುಕ್ರುಧುಃ ಪಂಚಭಾಗಿನಃ
॥ ೯ ॥

ತದವಧ್ಯಾನವಿಸ್ರಸ್ತಪುಣ್ಯಸ್ಕಂಧಸ್ಯ ಭೂರಿದ।
ಅರ್ಥೋऽಪ್ಯಗಚ್ಛನ್ನಿಧನಂ ಬಹ್ವಾಯಾಸಪರಿಶ್ರಮಃ
॥ ೧೦ ॥

ಜ್ಞಾತಯೋ ಜಗೃಹುಃ ಕಿಂಚಿತ್ ಕಿಂಚಿದ್ದಸ್ಯವ ಉದ್ಧವ।
ದೈವತಃ ಕಾಲತಃ ಕಿಂಚಿದ್ಬ್ರಹ್ಮಬಂಧೋರ್ನೃಪಾರ್ಥಿವಾತ್
॥ ೧೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ದೇವಗುರು ಬೃಹಸ್ಪತಿಯ ಶಿಷ್ಯನಾದ ಉದ್ಧವನೇ! ಈ ಪ್ರಪಂಚದಲ್ಲಿ ಪ್ರಾಯಶಃ ದುರ್ಜನರ ಕಟುವಾಣಿಗೆ ಗುರಿಯಾದರೂ ತನ್ನ ಹೃದಯವನ್ನು ಕಾಯ್ದುಕೊಳ್ಳುವಂತಹ ಸಂತ ಪುರುಷರು ಸಿಗಲಾರರು. ॥ ೨ ॥ ಮನುಷ್ಯನ ಹೃದಯವು ದುಷ್ಟಜನರ ಮರ್ಮಾಂತಕ ಹಾಗೂ ಕಠೋರ ವಾಗ್ಬಾಣಗಳಿಂದ ಪೀಡಿತವಾದಷ್ಟು, ಮರ್ಮಭೇದೀ ಬಾಣಗಳು ಚುಚ್ಚಿದಾಗಲೂ ಆಗುವುದಿಲ್ಲ. ॥ ೩ ॥ ಉದ್ಧವನೇ! ಈ ವಿಷಯದಲ್ಲಿ ಮಹಾತ್ಮರು ಒಂದು ಬಹಳ ಪವಿತ್ರ, ಪ್ರಾಚೀನ ಇತಿಹಾಸವನ್ನು ಹೇಳುತ್ತಿರುತ್ತಾರೆ. ನಾನು ಅದನ್ನೇ ನಿನಗೆ ಹೇಳುವೆನು. ದತ್ತಚಿತ್ತನಾಗಿ ಅದನ್ನು ಕೇಳು. ॥ ೪ ॥ ಓರ್ವ ಸಂನ್ಯಾಸಿಯನ್ನು ದುಷ್ಟರು ತುಂಬಾ ಸತಾಯಿಸಿದರು. ಆಗಲೂ ಅವನು ಧೈರ್ಯಗೆಡಲಿಲ್ಲ. ಅವನ್ನು ತನ್ನ ಪೂರ್ವಜನ್ಮದ ಕರ್ಮಗಳ ಫಲವೆಂದು ತಿಳಿದುಕೊಂಡು ತನ್ನ ಮಾನಸಿಕ ಕೆಲವು ಉದ್ಗಾರಗಳನ್ನು ಪ್ರಕಟಿಸಿದ್ದನು. ಅದರದ್ದೇ ಈ ಇತಿಹಾಸದಲ್ಲಿ ವರ್ಣನೆ ಇದೆ. ॥ ೫ ॥

ಹಿಂದಿನಕಾಲದಲ್ಲಿ ಉಜ್ಜೈನಿಯಲ್ಲಿ ಓರ್ವ ಬ್ರಾಹ್ಮಣನು ವಾಸಿಸುತ್ತಿದ್ದನು. ಅವನು ಕೃಷಿ-ವ್ಯಾಪಾರಾದಿಗಳನ್ನು ಮಾಡಿ ಬಹಳಷ್ಟು ಧನ-ಸಂಪತ್ತನ್ನು ಗಳಿಸಿದನು. ಅವನು ತುಂಬಾ ಕೃಪಣನೂ, ಕಾಮಿಯೂ, ಲೋಭಿಯೂ ಆಗಿದ್ದನು. ಕ್ರೋಧವಾದರೋ ಅವನಿಗೆ ಮಾತು ಮಾತಿಗೆ ಬರುತ್ತಿತ್ತು. ॥ ೬ ॥ ಅವನು ತನ್ನ ಜಾತಿ-ಬಂಧುಗಳನ್ನು, ಅತಿಥಿಗಳನ್ನು ಎಂದೂ ಸಿಹಿಮಾತುಗಳಿಂದಲೂ ಸಂತೋಷಪಡಿಸಲಿಲ್ಲ. ಊಟಕ್ಕಿಕ್ಕುವುದಂತೂ ದೂರವೇ ಉಳಿಯಿತು. ಅವನು ಧರ್ಮ-ಕರ್ಮದಿಂದ ಶೂನ್ಯವಾದ ಮನೆಯಲ್ಲಿ ಇದ್ದುಕೊಂಡು, ತಾನು ಸ್ವತಃ ತನ್ನ ಧನ-ಸಂಪತ್ತಿನಿಂದ ತನ್ನ ಶರೀರಕ್ಕೂ ಸುಖ ನೀಡಲಿಲ್ಲ. ॥ ೭ ॥ ಅವನ ಲೋಭ ಮತ್ತು ಕೆಟ್ಟ ಸ್ವಭಾವದಿಂದಾಗಿ ಅವನ ಮಕ್ಕಳು, ಬಂಧು-ಬಾಂಧವರು, ಆಳು-ಕಾಳುಗಳು, ಹೆಂಡತಿಯೇ ಮುಂತಾದವರು ದುಃಖಿಗಳಾಗಿದ್ದು ಮನಸ್ಸಿನಲ್ಲೇ ಅವನ ಅನಿಷ್ಟವನ್ನು ಚಿಂತಿಸುತ್ತಿದ್ದರು. ಯಾರೂ ಅವನ ಮನಸ್ಸಿಗೆ ಪ್ರಿಯವಾಗುವ ವ್ಯವಹಾರ ಮಾಡುತ್ತಿರಲಿಲ್ಲ. ॥ ೮ ॥ ಅವನು ಲೋಕ-ಪರಲೋಕ ಎರಡರಿಂದಲೂ ಪತಿತನಾಗಿದ್ದನು. ಯಕ್ಷರಂತೆ ಧನವನ್ನು ಕಾಯುತ್ತಿದ್ದನು. ಆ ಧನದಿಂದ ಅವನಾದರೋ ಧರ್ಮವನ್ನು ಮಾಡುತ್ತಿರಲಿಲ್ಲ, ಭೋಗವನ್ನೂ ಭೋಗಿಸುತ್ತಿರಲಿಲ್ಲ. ಅನೇಕ ದಿನಗಳವರೆಗೆ ಈ ಪ್ರಕಾರ ಜೀವನ ನಡೆಸಿದ್ದರಿಂದ ಪಂಚ-ಮಹಾಯಜ್ಞಗಳ ಭಾಗಿಯಾದ ದೇವತೆಗಳು ಕ್ರುದ್ಧರಾದರು. ॥ ೯ ॥ ಉದಾರನಾದ ಉದ್ಧವನೇ! ಅವನ ಪೂರ್ವ ಪುಣ್ಯದ ಆಸರೆಯಿಂದ ಇಷ್ಟರವರೆಗೆ ನೆಲೆಸಿದ್ದ ಧನವು ಪಂಚಮಹಾಯಜ್ಞದ ಭಾಗಿಗಳ ತಿರಸ್ಕಾರದಿಂದ ಹೊರಟುಹೋಗಲು ತೊಡಗಿತು. ಅವನು ಬಹಳ ಉದ್ಯೋಗ-ಪರಿಶ್ರಮದಿಂದ ಗಳಿಸಿದ ಧನವು, ಅವನ ಕಣ್ಣುಮುಂದೆಯೇ ನಾಶವಾಗಿ ಹೋಯಿತು. ॥ ೧೦ ॥ ಆ ಅಧಮ ಬ್ರಾಹ್ಮಣನ ಸ್ವಲ್ಪ ಧನವನ್ನು ಅವನ ಕುಟುಂಬಿಗಳು ಕಸಿದು ಕೊಂಡರು. ಕೆಲವನ್ನು ಕಳ್ಳರು ಕದ್ದುಕೊಂಡು ಹೋದರು. ಕೆಲವು ಬೆಂಕಿಯೇ ಮುಂತಾದ ದೈವೀಕೋಪದಿಂದ ನಷ್ಟವಾಯಿತು. ಕೆಲವು ಸಮಯದ ಪ್ರಭಾವದಿಂದ ನಾಶಹೊಂದಿತು. ಕೆಲವನ್ನು ಸಾಧಾರಣ ಮನುಷ್ಯರು ಎತ್ತಿಹಾಕಿದರು. ಅಳಿದುಳಿದ ಧನವನ್ನು ಕರದರೂಪದಲ್ಲಿ, ದಂಡದ ರೂಪದಲ್ಲಿ ಶಾಸಕರು ಎತ್ತಿಕೊಂಡು ಹೋದರು. ॥ ೧೧ ॥

ಸ ಏವಂ ದ್ರವಿಣೇ ನಷ್ಟೇ ಧರ್ಮಕಾಮವಿವರ್ಜಿತಃ।
ಉಪೇಕ್ಷಿತಶ್ಚ ಸ್ವಜನೈಶ್ಚಿಂತಾಮಾಪ ದುರತ್ಯಯಾಮ್
॥ ೧೨ ॥

ತಸ್ಯೈವಂ ಧ್ಯಾಯತೋ ದೀರ್ಘಂ ನಷ್ಟರಾಯಸ್ತಪಸ್ವಿನಃ।
ಖಿದ್ಯತೋ ಬಾಷ್ಪಕಂಠಸ್ಯ ನಿರ್ವೇದಃ ಸುಮಹಾನಭೂತ್
॥ ೧೩ ॥

ಸ ಚಾಹೇದಮಹೋ ಕಷ್ಟಂ ವೃಥಾऽऽತ್ಮಾ ಮೇऽನುತಾಪಿತಃ।
ನ ಧರ್ಮಾಯ ನ ಕಾಮಾಯ ಯಸ್ಯಾರ್ಥಾಯಾಸ ಈದೃಶಃ
॥ ೧೪ ॥

ಪ್ರಾಯೇಣಾರ್ಥಾಃ ಕದರ್ಯಾಣಾಂ ನ ಸುಖಾಯ ಕದಾಚನ।
ಇಹ ಚಾತ್ಮೋಪತಾಪಾಯ ಮೃತಸ್ಯ ನರಕಾಯ ಚ
॥ ೧೫ ॥

ಯಶೋ ಯಶಸ್ವಿನಾಂ ಶುದ್ಧಂ ಶ್ಲಾಘ್ಯಾ ಯೇ ಗುಣಿನಾಂ ಗುಣಾಃ।
ಲೋಭಃ ಸ್ವಲ್ಪೋऽಪಿ ತಾನ್ಹಂತಿ ಶ್ವಿತ್ರೋ ರೂಪಮಿವೇಪ್ಸಿತಮ್
॥ ೧೬ ॥

ಅರ್ಥಸ್ಯ ಸಾಧನೇ ಸಿದ್ಧೇ ಉತ್ಕರ್ಷೇ ರಕ್ಷಣೇ ವ್ಯಯೇ।
ನಾಶೋಪಭೋಗ ಆಯಾಸಸ್ತ್ರಾಸಶ್ಚಿಂತಾ ಭ್ರಮೋ ನೃಣಾಮ್
॥ ೧೭ ॥

ಸ್ತೇಯಂ ಹಿಂಸಾನೃತಂ ದಂಭಃ ಕಾಮಃ ಕ್ರೋಧಃ ಸ್ಮಯೋ ಮದಃ।
ಭೇದೋ ವೈರಮವಿಶ್ವಾಸಃ ಸಂಸ್ಪರ್ಧಾ ವ್ಯಸನಾನಿ ಚ
॥ ೧೮ ॥

ಏತೇ ಪಂಚದಶಾನರ್ಥಾ ಹ್ಯರ್ಥಮೂಲಾ ಮತಾ ನೃಣಾಮ್।
ತಸ್ಮಾದನರ್ಥಮರ್ಥಾಖ್ಯಂ ಶ್ರೇಯೋऽರ್ಥೀ ದೂರತಸ್ತ್ಯಜೇತ್
॥ ೧೯ ॥

ಭಿದ್ಯಂತೇ ಭ್ರಾತರೋ ದಾರಾಃ ಪಿತರಃ ಸುಹೃದಸ್ತಥಾ।
ಏಕಾಸ್ನಿಗ್ಧಾಃ ಕಾಕಿಣೀನಾ ಸದ್ಯಃ ಸರ್ವೇऽರಯಃ ಕೃತಾಃ
॥ ೨೦ ॥

ಅರ್ಥೇನಾಲ್ಪೀಯಸಾ ಹ್ಯೇತೇ ಸಂರಬ್ಧಾ ದೀಪ್ತಮನ್ಯವಃ।
ತ್ಯಜಂತ್ಯಾಶು ಸ್ಪೃಧೋ ಘ್ನಂತಿ ಸಹಸೋತ್ಸೃಜ್ಯ ಸೌಹೃದಮ್
॥ ೨೧ ॥

ಉದ್ಧವನೇ! ಹೀಗೆ ಅವನ ಎಲ್ಲ ಸಂಪತ್ತು ಹೊರಟು ಹೋಯಿತು. ಅವನು ಧರ್ಮವನ್ನೂ ಗಳಿಸಲಿಲ್ಲ, ಭೋಗವನ್ನೂ ಭೋಗಿಸಲಿಲ್ಲ. ಇತ್ತ ಅವನ ನೆಂಟರಿಷ್ಟರೂ ಕೂಡ ಅವನತ್ತ ಮುಖಮುರಿದರು. ಈಗ ಅವನಿಗೆ ಭಾರೀ ಭಯಾನಕ ಚಿಂತೆಯು ಆವರಿಸಿತು. ॥ ೧೨ ॥ ಧನದ ನಾಶದಿಂದ ಅವನ ಹೃದಯದಲ್ಲಿ ಬಹಳ ಉರಿ ಉಂಟಾಯಿತು. ಅವನ ಮನಸ್ಸು ದುಗುಡದಿಂದ ತುಂಬಿತು. ಕಣ್ಣೀರಿನ ಕಾರಣದಿಂದ ಗಂಟಲು ಕಟ್ಟಿಹೋಯಿತು. ಆದರೆ ಈ ಪ್ರಕಾರ ಚಿಂತಿಸುತ್ತಾ-ಚಿಂತಿಸುತ್ತಲೇ ಅವನ ಮನಸ್ಸಿನಲ್ಲಿ ಸಂಸಾರದ ಕುರಿತು ಮಹಾನ್ ದುಃಖಬುದ್ಧಿ ಮತ್ತು ಉತ್ಕಟ ವೈರಾಗ್ಯದ ಉದಯವಾಯಿತು. ॥ ೧೩. ॥

ಈಗ ಆ ಬ್ರಾಹ್ಮಣನು ಮನಸ್ಸಿನಲ್ಲೇ ಅಂದುಕೊಂಡನು – ಅಯ್ಯೋ! ಶಿವನೇ! ನಾನು ಇಷ್ಟು ದಿನಗಳವರೆಗೆ ನನ್ನನ್ನು ವ್ಯರ್ಥವಾಗಿ ಸತಾಯಿಸಿಕೊಂಡೆ. ಇದು ಬಹಳ ದುಃಖದ ಮಾತಾಗಿದೆ. ಯಾವ ಧನಕ್ಕಾಗಿ ನಾನು ಕಠಿಣ ಪರಿಶ್ರಮ ಮಾಡಿದೆನೋ, ಆ ಧನವು ಧರ್ಮಕಾರ್ಯದಲ್ಲಾಗಲೀ, ಸುಖಭೋಗದಲ್ಲಾಗಲೀ ಉಪಯೋಗವಾಗಲೇ ಇಲ್ಲವಲ್ಲ! ॥ ೧೪ ॥ ಪ್ರಾಯಶಃ ಲೋಭೀ ಮನುಷ್ಯನಿಗೆ ಧನದಿಂದ ಎಂದೂ ಸುಖ ಸಿಗುವುದಿಲ್ಲ ಎಂಬುದನ್ನು ನೋಡಲಾಗುತ್ತದೆ. ಈ ಲೋಕದಲ್ಲಾದರೋ ಅವರು ಧನವನ್ನು ಗಳಿಸುವುದರಲ್ಲಿ ಮತ್ತು ಅದರ ರಕ್ಷಣೆಯ ಚಿಂತೆಯಿಂದ ಸುಡುತ್ತಿರುತ್ತಾರೆ. ಧರ್ಮವನ್ನು ಮಾಡದಿರುವುದರಿಂದ ಸತ್ತ ಬಳಿಕ ನರಕಕ್ಕೆ ಹೋಗುತ್ತಾರೆ. ॥ ೧೫ ॥ ಸ್ವಲ್ಪವೇ ತೊನ್ನು ಸರ್ವಾಂಗ ಸುಂದರ ಸ್ವರೂಪವನ್ನು ಕೆಡಿಸುವಂತೆ, ಸ್ವಲ್ಪವಾದ ಲೋಭವೂ ಕೂಡ ಯಶಸ್ವಿಗಳ ಶುದ್ಧಕೀರ್ತಿಯನ್ನು ಹಾಗೂ ಗುಣಿಗಳ ಪ್ರಶಂಸನೀಯ ಗುಣಗಳನ್ನು ನಾಶಮಾಡಿಬಿಡುತ್ತದೆ. ॥ ೧೬ ॥ ಧನವನ್ನು ಗಳಿಸುವುದರಲ್ಲಿ, ಗಳಿಸಿದ ಬಳಿಕ ಅದನ್ನು ಬೆಳೆಸುವುದರಲ್ಲಿ, ಕಾಪಾಡುವುದರಲ್ಲಿ, ವ್ಯಯಮಾಡುವುದರಲ್ಲಿ, ಅದರ ನಾಶದಲ್ಲಿ, ಉಪಭೋಗದಲ್ಲಿ ಎಲ್ಲಿ ನೋಡಿದರೂ ನಿರಂತರ ಪರಿಶ್ರಮ, ಭಯ, ಚಿಂತೆ, ಭ್ರಮೆ ಇವುಗಳನ್ನು ಎದುರಿಸಬೇಕಾಗುತ್ತದೆ.॥೧೭॥ ಕಳ್ಳತನ, ಹಿಂಸೆ, ಸುಳ್ಳು ಮಾತನಾಡುವುದು, ದಂಭ, ಕಾಮ, ಕ್ರೋಧ, ಗರ್ವ, ಅಹಂಕಾರ, ಭೇದಬುದ್ಧಿ, ವೈರ, ಅವಿಶ್ವಾಸ, ಸ್ಪರ್ಧಾ, ಲಂಪಟತೆ, ಜೂಜು, ಹೆಂಡ – ಈ ಹದಿನೈದು ಅನರ್ಥಗಳು ಮನುಷ್ಯನಲ್ಲಿ ಧನದ ಕಾರಣದಿಂದಲೇ ಪರಿಗಣಿಸಲಾಗಿದೆ. ಅದಕ್ಕಾಗಿ ಶ್ರೇಯಸ್ಕಾಮಿ ಪುರುಷನು ಸ್ವಾರ್ಥ ಹಾಗೂ ಪರಮಾರ್ಥದ ವಿರೋಧೀ ಅರ್ಥನಾಮಧಾರೀ ಅನರ್ಥವನ್ನು ದೂರದಿಂದಲೇ ಬಿಟ್ಟುಬಿಡಬೇಕು. ॥ ೧೮-೧೯ ॥ ಅಣ್ಣ-ತಮ್ಮಂದಿರು, ಪತ್ನೀ-ಪುತ್ರರು, ತಂದೆ-ತಾಯಿ, ಬಂಧು-ಬಾಂಧವರು, ಸ್ನೇಹ ಸಂಬಂಧದಿಂದ ಬಂಧಿತರಾಗಿ ಪೂರ್ಣವಾಗಿ ಒಂದಾಗಿಯೇ ಇರುತ್ತಾರೆ. ಆದರೆ ಧನದ ಕಾರಣದಿಂದ ಎಲ್ಲರೂ ಕೂಡಲೇ ಒಬ್ಬರು ಮತ್ತೊಬ್ಬರ ಶತ್ರುಗಳಾಗಿ ಹರಿದು-ಹಂಚಿಹೋಗುತ್ತಾರೆ. ॥ ೨೦ ॥ ಈ ಜನರು ಸ್ವಲ್ಪವೇ ಧನಕ್ಕಾಗಿಯೂ ಕ್ಷುಬ್ಧ ಮತ್ತು ಕ್ರುದ್ಧರಾಗುತ್ತಾರೆ. ನೋಡು-ನೋಡುತ್ತಿರುವಂತೆ ಸೌಹಾರ್ದ - ಸಂಬಂಧವನ್ನು ಬಿಟ್ಟುಬಿಡುತ್ತಾರೆ. ಪರಸ್ಪರ ಸ್ಪರ್ಧೆಯಲ್ಲಿ ತೊಡಗುತ್ತಾರೆ. ಒಬ್ಬರು-ಮತ್ತೊಬ್ಬರ ಸರ್ವನಾಶಮಾಡಿ ಪ್ರಾಣತೆಗೆಯುವಷ್ಟು ಮುಂದುವರಿಯುತ್ತಾರೆ. ॥ ೨೧ ॥

ಲಬ್ಧ್ವಾಜನ್ಮಾಮರಪ್ರಾರ್ಥ್ಯಂ ಮಾನುಷ್ಯಂ ತದ್ವಿಜಾಗ್ರ್ಯತಾಮ್ ।
ತದನಾದೃತ್ಯ ಯೇ ಸ್ವಾರ್ಥಂ ಘ್ನಂತಿ ಯಾಂತ್ಯಶುಭಾಂ ಗತಿಮ್
॥ ೨೨ ॥

ದೇವತೆಗಳೂ ಬಯಸುವ ಮನುಷ್ಯಜನ್ಮವನ್ನು, ಅದರಲ್ಲಿಯೂ ಬ್ರಾಹ್ಮಣಶರೀರವನ್ನು ಪಡೆದುಕೊಂಡು ಅದರ ಅನಾದರ ಮಾಡುವವರು, ತನ್ನ ನಿಜವಾದ ಸ್ವಾರ್ಥ-ಪರಮಾರ್ಥವನ್ನು ನಾಶಮಾಡುವವರು ಅಶುಭಗತಿಯನ್ನು ಪಡೆಯುತ್ತಾರೆ. ॥ ೨೨ ॥ ಈ ಮನುಷ್ಯ ಶರೀರವು ಮೋಕ್ಷ ಮತ್ತು ಸ್ವರ್ಗದ ದ್ವಾರವಾಗಿದೆ. ಇವನ್ನು ಪಡೆದಿದ್ದರೂ ಅನರ್ಥಗಳ ತವರಾದ ಧನದ ಮೋಸದಲ್ಲಿ ಯಾವ ಬುದ್ಧಿವಂತ ಮನುಷ್ಯನು ತಾನೇ ಸಿಕ್ಕಿಕೊಳ್ಳುವನು ? ॥ ೨೩. ॥ ಯಾವ ಮನುಷ್ಯನು ದೇವತೆಗಳು, ಋಷಿಗಳು, ಪಿತೃಗಳು, ಪ್ರಾಣಿಗಳು, ಜ್ಞಾತಿ-ಬಾಂಧವರು, ಕುಟುಂಬಿಗಳು ಹಾಗೂ ಧನದ ಇನ್ನಿತರ ಪಾಲುದಾರರು ಇವರಿಗೆಲ್ಲ ಅವರ ಪಾಲನ್ನು ಕೊಟ್ಟು ಸಂತೋಷಪಡಿಸುವುದಿಲ್ಲವೋ ಮತ್ತು ತಾನೂ ಅದನ್ನು ಉಪಭೋಗಿಸುವುದಿಲ್ಲವೋ ಅವನು ಯಕ್ಷನಂತೆ ಧನವನ್ನು ಕಾಯುವ ಕೃಪಣನಾಗಿ, ಅವಶ್ಯವಾಗಿ ಅಧೋಗತಿಯನ್ನು ಪಡೆಯುತ್ತಾನೆ. ॥ ೨೪ ॥ ನಾನು ನನ್ನ ಕರ್ತವ್ಯದಿಂದ ಚ್ಯುತನಾಗಿದ್ದೇನೆ. ನಾನು ಪ್ರಮಾದದಲ್ಲಿ ಆಯುಸ್ಸನ್ನು, ಧನವನ್ನು, ಬಲವನ್ನು, ಪೌರುಷವನ್ನು ಕಳೆದುಕೊಂಡೆ. ವಿವೇಕೀ ಜನರು ಯಾವ ಸಾಧನೆಗಳಿಂದ ಮೋಕ್ಷವನ್ನೂ ಕೂಡ ಪಡೆದುಕೊಳ್ಳುವರೋ, ಅವನ್ನೂ ನಾನು ಧನಗಳಿಸುವ ವ್ಯರ್ಥವಾದ ಪ್ರಯತ್ನದಲ್ಲಿ ಕಳಕೊಂಡುಬಿಟ್ಟೆ ಈಗ ವೃದ್ಧಾಪ್ಯದಲ್ಲಿ ಯಾವ ಸಾಧನೆ ಮಾಡಲೀ ? ಎಂದು ಆ ಬ್ರಾಹ್ಮಣನು ಪಶ್ಚಾತ್ತಾಪಪಟ್ಟನು. ॥ ೨೫ ॥ ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಧನದ ವ್ಯರ್ಥ ತೃಷ್ಣೆಯಿಂದ ನಿರಂತರ ಏಕೆ ದುಃಖಿಗಳಾಗಿ ಇರುತ್ತಾರೆ ? ಎಂಬುದು ನನಗೆ ತಿಳಿದಿರಲಿಲ್ಲ, ಏನೇ ಇರಲಿ, ಅವಶ್ಯವಾಗಿ ಈ ಪ್ರಪಂಚವು ಯಾರದೋ ಮಾಯೆಯಿಂದ ಅತ್ಯಂತ ಮೋಹಿತವಾಗುತ್ತಿದೆ. ॥ ೨೬ ॥

ಸ್ವರ್ಗಾಪವರ್ಗಯೋರ್ದ್ವಾರಂ ಪ್ರಾಪ್ಯ ಲೋಕಮಿಮಂ ಪುಮಾನ್ ।
ದ್ರವಿಣೇ ಕೋಽನುಷಜ್ಜೇತ ಮರ್ತ್ಯೋಽನರ್ಥಸ್ಯ ಧಾಮನಿ
॥ ೨೩. ॥

ದೇವರ್ಷಿಪಿತೃಭೂತಾನಿ ಜ್ಞಾತೀನ್ ಬಂಧೂಂಶ್ಚ ಭಾಗಿನಃ ।
ಅಸಂವಿಭಜ್ಯ ಚಾತ್ಮಾನಂ ಯಕ್ಷವಿತ್ತಃ ಪತತ್ಯಧಃ
॥ ೨೪ ॥

ವ್ಯರ್ಥಯಾರ್ಥೇಹಯಾ ವಿತ್ತಂ ಪ್ರಮತ್ತಸ್ಯ ವಯೋ ಬಲಮ್ ।
ಕುಶಲಾ ಯೇನ ಸಿಧ್ಯಂತಿ ಜರಠಃ ಕಿಂ ನು ಸಾಧಯೇ
॥ ೨೫ ॥

ಕಸ್ಮಾತ್ ಸಂಕ್ಲಿಶ್ಯತೇ ವಿದ್ವಾನ್ ವ್ಯರ್ಥಯಾರ್ಥೇಹಯಾಸಕೃತ್ ।
ಕಸ್ಯಚಿನ್ಮಾಯಯಾ ನೂನಂ ಲೋಕೋಽಯಂ ಸುವಿಮೋಹಿತಃ
॥ ೨೬ ॥

ಈ ಮನುಷ್ಯಶರೀರವು ಕಾಲನ ವಿಕರಾಳ ಹಿಡಿತದಲ್ಲಿ ಸಿಕ್ಕಿಕೊಂಡಿರುವುದು. ಇವನಿಗೆ ಧನದಿಂದಾಗಲೀ, ಧನವನ್ನು ಕೊಡುವ ದೇವತೆಗಳಿಂದಾಗಲೀ, ಜನರಿಂದಾಗಲೀ, ಭೋಗವಾಸನೆಯಿಂದಾಗಲೀ, ಆದನ್ನು ಪೂರ್ಣಗೊಳಿಸುವುದರಿಂದಾಗಲೀ, ಪದೇ-ಪದೇ ಜನ್ಮ-ಮೃತ್ಯುವಿನ ಚಕ್ರದಲ್ಲಿ ಕೆಡಹುವ ಸಕಾಮ ಕರ್ಮಗಳಿಂದಾಗಲೀ ಏನು ಲಾಭವಿದೆ ? ॥ ೨೭ ॥ ಸರ್ವದೇವ ಸ್ವರೂಪೀ ಭಗವಂತನು ನನ್ನ ಮೇಲೆ ಪ್ರಸನ್ನನಾಗಿರುವನು, ಇದರಲ್ಲಿ ಸಂದೇಹವೇ ಇಲ್ಲ, ಆದ್ದರಿಂದ ಅವನೇ ನನ್ನನ್ನು ಈ ಸ್ಥಿತಿಗೆ ತಂದು, ಜಗತ್ತಿನ ಕುರಿತು ನನಗೆ ಈ ದುಃಖಬುದ್ಧಿ ವೈರಾಗ್ಯವನ್ನು ಕೊಟ್ಟಿರುವನು. ವಾಸ್ತವವಾಗಿ ವೈರಾಗ್ಯವೇ ಈ ಸಂಸಾರಸಾಗರದಿಂದ ಪಾರಾಗಲು ದೋಣಿಯಂತೆ ಇದೆ. ॥ ೨೮ ॥ ನನ್ನ ಆಯುಸ್ಸು ಬಾಕಿ ಉಳಿದಿದ್ದರೆ, ನಾನು ಆತ್ಮಲಾಭದಲ್ಲೇ ಸಂತುಷ್ಟನಾಗಿದ್ದು ನನ್ನ ಪರಮಾರ್ಥದ ಸಂಬಂಧದಲ್ಲಿ ಜಾಗರೂಕನಾಗುವೆನು. ಈಗ ಉಳಿದಿರುವ ಸಮಯದಲ್ಲಿ ನನ್ನ ಶರೀರವನ್ನು ತಪಸ್ಸಿನ ಮೂಲಕ ಒಣಗಿಸಿಬಿಡುವೆನು. ಈಗ ನಾನು ಬೇರೆ ಏನನ್ನೂ ಬಯಸದೆ ಇದನ್ನೇ ಸಾಧಿಸುವ ಈ ಸ್ಥಿತಿಗೆ ತಲುಪಿರುವೆನು.॥ ೨೯ ॥ ಮೂರು ಲೋಕಗಳ ಒಡೆಯ ಹಾಗೂ ದೇವತೆಗಳೆಲ್ಲರೂ ನನ್ನ ಈ ಸಂಕಲ್ಪವನ್ನು ಅನುಮೋದಿಸಲಿ. ಈಗ ನಿರಾಶನಾಗುವ ಯಾವುದೇ ಮಾತಿಲ್ಲ, ಏಕೆಂದರೆ, ಖಟ್ವಾಂಗರಾಜನು ಕೇವಲ ಎರಡೇ ಗಳಿಗೆಯಲ್ಲಿ ಭಗವದ್ಧಾಮವನ್ನು ಪಡೆದುಕೊಂಡು ಬಿಟ್ಟಿದ್ದನು.॥೩೦॥

ಸ್ವರ್ಗಾಪವರ್ಗಯೋರ್ದ್ವಾರಂ ಪ್ರಾಪ್ಯ ಲೋಕಮಿಮಂ ಪುಮಾನ್ ।
ದ್ರವಿಣೇ ಕೋಽನುಷಜ್ಜೇತ ಮರ್ತ್ಯೋಽನರ್ಥಸ್ಯ ಧಾಮನಿ
॥ ೨೩. ॥

ದೇವರ್ಷಿಪಿತೃಭೂತಾನಿ ಜ್ಞಾತೀನ್ ಬಂಧೂಂಶ್ಚ ಭಾಗಿನಃ ।
ಅಸಂವಿಭಜ್ಯ ಚಾತ್ಮಾನಂ ಯಕ್ಷವಿತ್ತಃ ಪತತ್ಯಧಃ
॥ ೨೪ ॥

ವ್ಯರ್ಥಯಾರ್ಥೇಹಯಾ ವಿತ್ತಂ ಪ್ರಮತ್ತಸ್ಯ ವಯೋ ಬಲಮ್ ।
ಕುಶಲಾ ಯೇನ ಸಿಧ್ಯಂತಿ ಜರಠಃ ಕಿಂ ನು ಸಾಧಯೇ
॥ ೨೫ ॥

ಕಸ್ಮಾತ್ ಸಂಕ್ಲಿಶ್ಯತೇ ವಿದ್ವಾನ್ ವ್ಯರ್ಥಯಾರ್ಥೇಹಯಾಸಕೃತ್ ।
ಕಸ್ಯಚಿನ್ಮಾಯಯಾ ನೂನಂ ಲೋಕೋಽಯಂ ಸುವಿಮೋಹಿತಃ
॥ ೨೬ ॥

ಕಿಂ ಧನೈರ್ಧನದೈರ್ವಾ ಕಿಂ ಕಾಮೈರ್ವಾ ಕಾಮದೈರುತ ।
ಮೃತ್ಯುನಾ ಗ್ರಸ್ಯಮಾನಸ್ಯ ಕರ್ಮಭಿರ್ವೋತ ಜನ್ಮಭಿಃ
॥ ೨೭ ॥

ನೂನಂ ಮೇ ಭಗವಾಂಸ್ತುಷ್ಟಃ ಸರ್ವದೇವಮಯೋ ಹರಿಃ ।
ಯೇನ ನೀತೋ ದಶಾಮೇತಾಂ ನಿರ್ವೇದಶ್ಚಾತ್ಮನಃ ಪ್ಲವಃ
॥ ೨೮ ॥

ಸೋಽಹಂ ಕಾಲಾವಶೇಷೇಣ ಶೋಷಯಿಷ್ಯೇಽಂಗಮಾತ್ಮನಃ ।
ಅಪ್ರಮತ್ತೋಽಖಿಲಸ್ವಾರ್ಥೇ ಯದಿ ಸ್ಯಾತ್ಸಿದ್ಧ ಆತ್ಮನಿ
॥ ೨೯ ॥

ತತ್ರ ಮಾಮನುಮೋದೇರನ್ ದೇವಾಶ್ಚ ಭುವನೇಶ್ವರಾಃ ।
ಮುಹೂರ್ತೇನ ಬ್ರಹ್ಮಲೋಕಂ ಖಟ್ವಾಂಗಃ ಸಮಸಾಧಯತ್
॥ ೩೦ ॥

ಶ್ರೀಭಗವಾನುವಾಚ

ಇತ್ಯಭಿಪ್ರೇತ್ಯ ಮನಸಾ ಹ್ಯಾವಂತ್ಯೋ ದ್ವಿಜಸತ್ತಮಃ ।
ಉನ್ಮುಚ್ಯ ಹೃದಯಗ್ರಂಥೀನ್ ಶಾಂತೋ ಭಿಕ್ಷುರಭೂನ್ಮುನಿಃ
॥ ೩.೧ ॥

ಸ ಚಚಾರ ಮಹೀಮೇತಾಂ ಸಂಯತಾತ್ಮೇಂದ್ರಿಯಾನಿಲಃ ।
ಭಿಕ್ಷಾರ್ಥಂ ನಗರಗ್ರಾಮಾನಸಂಗೋಽಲಕ್ಷಿತೋಽವಿಶತ್
॥ ೩.೨ ॥

ತಂ ವೈ ಪ್ರವಯಸಂ ಭಿಕ್ಷುಮವಧೂತಮಸಜ್ಜನಾಃ ।
ದೃಷ್ಟ್ವಾ ಪರ್ಯಭವನ್ಭದ್ರ ಬಹ್ವೀಭಿಃ ಪರಿಭೂತಿಭಿಃ
॥ ೩.೩. ॥

ಕೇಚಿತ್ತ್ರಿವೇಣುಂ ಜಗೃಹುರೇಕೇ ಪಾತ್ರಂ ಕಮಂಡಲುಮ್ ।
ಪೀಠಂ ಚೈಕೇಽಕ್ಷಸೂತ್ರಂ ಚ ಕಂಥಾಂ ಚೀರಾಣಿ ಕೇಚನ
॥ ೩.೪ ॥

ಪ್ರದಾಯ ಚ ಪುನಸ್ತಾನಿ ದರ್ಶಿತಾನ್ಯಾದದುರ್ಮುನೇಃ ।
ಅನ್ನಂ ಚ ಭೈಕ್ಷ್ಯ ಸಂಪನ್ನಂ ಭುಂಜಾನಸ್ಯ ಸರಿತ್ತಟೇ
॥ ೩.೫ ॥

ಮೂತ್ರಯಂತಿ ಚ ಪಾಪಿಷ್ಠಾಃ ಷ್ಠೀವಂತ್ಯಸ್ಯ ಚ ಮೂರ್ಧನಿ ।
ಯತವಾಚಂ ವಾಚಯಂತಿ ತಾಡಯಂತಿ ನ ವಕ್ತಿ ಚೇತ್
॥ ೩.೬ ॥

ತರ್ಜಯಂತ್ಯಪರೇ ವಾಗ್ಭಿಃ ಸ್ತೇನೋಽಯಮಿತಿ ವಾದಿನಃ ।
ಬಧ್ನಂತಿ ರಜ್ಜ್ವಾ ತಂ ಕೇಚಿದ್ಬಧ್ಯತಾಂ ಬಧ್ಯತಾಮಿತಿ
॥ ೩.೭ ॥

ಕ್ಷಿಪನ್ತ್ಯೇಕೇಽವಜಾನಂತ ಏಷ ಧರ್ಮಧ್ವಜಃ ಶಠಃ ।
ಕ್ಷೀಣವಿತ್ತ ಇಮಾಂ ವೃತ್ತಿಮಗ್ರಹೀತ್ಸ್ವಜನೋಜ್ಝಿತಃ
॥ ೩.೮ ॥

ಅಹೋ ಏಷ ಮಹಾಸಾರೋ ಧೃತಿಮಾನ್ ಗಿರಿರಾಡಿವ ।
ಮೌನೇನ ಸಾಧಯತ್ಯರ್ಥಂ ಬಕವದ್ದೃಢನಿಶ್ಚಯಃ
॥ ೩.೯ ॥

ಇತ್ಯೇಕೇ ವಿಹಸಂತ್ಯೇನಮೇಕೇ ದುರ್ವಾತಯಂತಿ ಚ ।
ತಂ ಬಬಂಧುರ್ನಿರುರುಧುರ್ಯಥಾ ಕ್ರೀಡನಕಂ ದ್ವಿಜಮ್
॥ ೪೦ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ! ಆ ಉಜ್ಜೈನಿಯ ನಿವಾಸಿ ಬ್ರಾಹ್ಮಣನು 'ನಾನು ಮತ್ತು ನನ್ನದು ಎಂಬ ಗಂಟನ್ನು ಬಿಚ್ಚಿಬಿಟ್ಟಿರುವೆನು' ಎಂದು ಮನಸ್ಸಿನಲ್ಲೇ ನಿಶ್ಚಯಿಸಿದನು. ಆನಂತರ ಅವನು ಶಾಂತವಾಗಿ, ಮೌನೀ ಸಂನ್ಯಾಸಿಯಾಗಿ ಹೋದನು. ॥ ೩.೧ ॥ ಈಗ ಅವನ ಚಿತ್ತದಲ್ಲಿ ಯಾವುದೇ ಸ್ಥಾನ, ವಸ್ತು, ವ್ಯಕ್ತಿಯ ಕುರಿತು ಆಸಕ್ತಿ ಉಳಿಯಲಿಲ್ಲ. ಅವನು ತನ್ನ ಮನ, ಇಂದ್ರಿಯ, ಪ್ರಾಣಗಳನ್ನು ವಶಪಡಿಸಿಕೊಂಡನು. ಅವನು ಪೃಥ್ವಿಯಲ್ಲಿ ಸ್ವಚ್ಛಂದವಾಗಿ ವಿಚರಿಸತೊಡಗಿದನು. ಅವನು ಭಿಕ್ಷೆಗಾಗಿ ಊರು-ನಗರಕ್ಕೆ ಅವಶ್ಯವಾಗಿ ಹೋಗುತ್ತಿದ್ದನು. ಆದರೆ ಯಾರೂ ಅವನನ್ನು ಗುರುತಿಸದಂತೆ ಇರುತ್ತಿದ್ದನು. ॥ ೩.೨ ॥ ಎಲೈ ಉದ್ಧವನೇ! ಆ ಅವಧೂತ ಸಂನ್ಯಾಸಿಯು ತುಂಬಾ ಮುದುಕನಾಗಿದ್ದನು. ದುಷ್ಟರು ಅವನನ್ನು ನೋಡುತ್ತಲೇ ಹರಿಹಾಯ್ದು ಬೀಳುತ್ತಿದ್ದರು. ಅನೇಕ ರೀತಿಯಿಂದ ಅವನ ತಿರಸ್ಕಾರಮಾಡುತ್ತಾ ಸತಾಯಿಸುತ್ತಿದ್ದರು. ॥ ೩.೩. ॥ ಕೆಲವರು ಅವನ ದಂಡವನ್ನು ಕಿತ್ತುಕೊಂಡರೆ, ಕೆಲವರು ಭಿಕ್ಷಾಪಾತ್ರೆಯನ್ನು ಎತ್ತಿಕೊಂಡು ಹೋಗುತ್ತಿದ್ದರು. ಕೆಲವರು ಕಮಂಡಲು ಎತ್ತಿಹಾಕುತ್ತಿದ್ದರೆ, ಕೆಲವರು ಆಸನ, ರುದ್ರಾಕ್ಷಿಮಾಲೆ, ಕಂಥಾ (ಚಿಂದಿಬಟ್ಟೆಗಳಿಂದ ಮಾಡಿದ ಕೌದಿ) ತೆಗೆದುಕೊಂಡು ಓಡಿಹೋಗುತ್ತಿದ್ದರು. ಕೆಲವರಾದರೋ ಅವನ ಲಂಗೋಟಿ, ವಸ್ತ್ರವನ್ನೂ ಅತ್ತ-ಇತ್ತ ಎಸೆದುಬಿಡುತ್ತಿದ್ದರು. ॥ ೩.೪ ॥ ಕೆಲ-ಕೆಲವರು ಆ ವಸ್ತುಗಳನ್ನು ಕೊಟ್ಟು ಕೆಲವರು ಕರುಣೆತೋರಿಸಿ ಮತ್ತೆ ಕಿತ್ತುಕೊಳ್ಳುತ್ತಿದ್ದರು. ಆ ಅವಧೂತನು ಮಧುಕರಿಯನ್ನು ಬೇಡಿತಂದು, ನದೀತೀರದಲ್ಲಿ ಅದನ್ನು ತಿನ್ನಲು ಕುಳಿತರೆ, ಪಾಪೀ ಜನರು ಕೆಲವೊಮ್ಮೆ ಅವನ ತಲೆಯಮೇಲೆ ಮೂತ್ರವಿಸರ್ಜನೆ ಮಾಡಿಬಿಡುತ್ತಿದ್ದರೆ, ಕೆಲವರು ಉಗುಳಿಬಿಡುತ್ತಿದ್ದರು. ಆ ಜನರು ಆ ಮೌನೀ ಅವಧೂತನನ್ನು ಅನೇಕ ರೀತಿಯಿಂದ ಮಾತನಾಡುವಂತೆ ಕಾಡುತ್ತಿದ್ದರು. ಮಾತನಾಡದಿದ್ದಾಗ ಬಡಿಯುತ್ತಿದ್ದರು. ॥ ೩.೫-೩.೬ ॥ ಕೆಲವರು ಅವನನ್ನು ಕಳ್ಳನೆಂದು ಗದರಿಸಿ-ಬೆದರಿಸುತ್ತಿದ್ದರು. ಕೆಲವರು 'ಇವನನ್ನು ಕಟ್ಟಿಹಾಕಿ' ಎಂದು ಹೇಳುತ್ತಾ ಮತ್ತೆ ಅವನನ್ನು ಹಗ್ಗದಿಂದ ಕಟ್ಟಿಹಾಕುತ್ತಿದ್ದರು. ॥ ೩.೭ ॥ ಕೆಲವರು ಅವನನ್ನು ತಿರಸ್ಕರಿಸುತ್ತಾ – 'ನೋಡಿ-ನೋಡಿ! ಈಗ ಈ ಲೋಭಿಯು ಧರ್ಮದ ಸೋಗು ಹಾಕಿಕೊಂಡಿರುವನು. ಧನ-ಸಂಪತ್ತೆಲ್ಲ ಹೋಯಿತು. ಪತ್ನೀ-ಪುತ್ರರು ಮನೆಯಿಂದ ಹೊರಗೆ ಹಾಕಿದರು. ಈಗ ಇವನು ಭಿಕ್ಷೆಎತ್ತುವ ವೃತ್ತಿಯನ್ನು ತನ್ನದಾಗಿಸಿಕೊಂಡಿರುವನು. ಆಹಾ! ನೋಡಿರಲ್ಲ! ಈ ಧಡಿಯ ಭಿಕ್ಷುಕ ಧೈರ್ಯದಲ್ಲಿ ದೊಡ್ಡ ಪರ್ವತದಂತೆ ಇದ್ದಾನೆ. ಇವನು ಮೌನವಾಗಿದ್ದು ತನ್ನ ಕೆಲಸವನ್ನು ಸಾಧಿಸಿಕೊಳ್ಳಲು ಬಯಸುತ್ತಿರುವನು. ನಿಜವಾಗಿಯೂ ಇವನು ಬಕಪಕ್ಷಿಗಿಂತಲೂ ಮಿಗಿಲಾದ ವಂಚಕ ಮತ್ತು ದೃಢನಿಶ್ಚಯಿಯಾಗಿದ್ದಾನೆ' ಎಂದು ಗಳಹುತ್ತಿದ್ದರು. ॥ ೩.೮-೩.೯ ॥ ಕೆಲವರು ಆ ಅವಧೂತನನ್ನು ಪರಿಹಾಸ್ಯ ಮಾಡಿದರೆ, ಕೆಲವರು ಅವನ ಮೇಲೆ ಅಧೋವಾಯು ಬಿಡುತ್ತಿದ್ದರು. ಸಾಕುಪಕ್ಷಿಗಳಾದ ಗಿಳಿ, ಮೈನಾ ಹಕ್ಕಿಗಳನ್ನು ಜನರು ಬಂಧಿಸಿ ಪಂಜರದಲ್ಲಿ ಕೂಡಿಹಾಕುವಂತೆ, ಅವನನ್ನು ಬಂಧಿಸಿ, ಮನೆಗಳಲ್ಲಿ ಕೂಡಿಹಾಕುತ್ತಿದ್ದರು. ॥ ೪೦ ॥

ಏವಂ ಸ ಭೌತಿಕಂ ದುಃಖಂ ದೈವಿಕಂ ದೈಹಿಕಂ ಚ ಯತ್ ।
ಭೋಕ್ತವ್ಯಮಾತ್ಮನೋ ದಿಷ್ಟಂ ಪ್ರಾಪ್ತಂ ಪ್ರಾಪ್ತಮಬುಧ್ಯತ ॥ ೪೧ ॥

ಪರಿಭೂತ ಇಮಾಂ ಗಾಥಾಮಗಾಯತ ನರಾಧಮೈಃ ।
ಪಾತಯದ್ಭಿಃ ಸ್ವಧರ್ಮಸ್ಥೋ ಧೃತಿಮಾಸ್ಥಾಯ ಸಾತ್ತ್ವಿಕೀಮ್ ॥ ೪೨ ॥

ದ್ವಿಜ ಉವಾಚ

ನಾಯಂ ಜನೋ ಮೇ ಸುಖದುಃಖಹೇತು-
ರ್ನ ದೇವತಾऽऽತ್ಮಾ ಗ್ರಹಕರ್ಮಕಾಲಾಃ ।
ಮನಃ ಪರಂ ಕಾರಣಮಾಮನಂತಿ
ಸಂಸಾರಚಕ್ರಂ ಪರಿವರ್ತಯೇದ್ ಯತ್ ॥ ೪೩ ॥

ಮನೋ ಗುಣಾನ್ ವೈ ಸೃಜತೇ ಬಲೀಯ-
ಸ್ತತಶ್ಚ ಕರ್ಮಾಣಿ ವಿಲಕ್ಷಣಾನಿ ।
ಶುಕ್ಲಾನಿ ಕೃಷ್ಣಾನ್ಯಥ ಲೋಹಿತಾನಿ
ತೇಭ್ಯಃ ಸವರ್ಣಾಃ ಸೃತಯೋ ಭವಂತಿ ॥ ೪೪ ॥

ಅನೀಹ ಆತ್ಮಾ ಮನಸಾ ಸಮೀಹತಾ
ಹಿರಣ್ಮಯೋ ಮತ್ಸಖ ಉದ್ವಿಚಷ್ಟೇ ।
ಮನಃ ಸ್ವಲಿಂಗಂ ಪರಿಗೃಹ್ಯ ಕಾಮಾನ್
ಜುಷನ್ ನಿಬದ್ಧೋ ಗುಣಸಂಗತೋऽಸೌ ॥ ೪೫ ॥

ದಾನಂ ಸ್ವಧರ್ಮೋ ನಿಯಮೋ ಯಮಶ್ಚ
ಶ್ರುತಂ ಚ ಕರ್ಮಾಣಿ ಚ ಸದ್ವ್ರತಾನಿ ।
ಸರ್ವೇ ಮನೋನಿಗ್ರಹಲಕ್ಷಣಾಂತಾಃ
ಪರೋ ಹಿ ಯೋಗೋ ಮನಸಃ ಸಮಾಧಿಃ ॥ ೪೬ ॥

ಆದರೆ ಅವನು ಬಾಯಿಮುಚ್ಚಿಕೊಂಡು ಎಲ್ಲವನ್ನೂ ಸಹಿಸುತ್ತಿದ್ದನು. ಅವನಿಗೆ ಕೆಲವೊಮ್ಮೆ ಜ್ವರಾದಿಗಳ ಕಾರಣ ದೈಹಿಕಪೀಡೆ ಸಹಿಸ ಬೇಕಾಗುತ್ತಿತ್ತು. ಕೆಲವೊಮ್ಮೆ ಚಳಿ-ಸೆಕೆ ಮುಂತಾದ ದೈವೀ ಕಷ್ಟಗಳನ್ನು ಅನುಭವಿಸಬೇಕಾಗುತ್ತಿತ್ತು. ಕೆಲವೊಮ್ಮೆ ದುರ್ಜನರು ಅಪಮಾನಾದಿಗಳಿಂದ ಅವನಿಗೆ ಭೌತಿಕಕಷ್ಟ ಕೊಡುತ್ತಿದ್ದರು. ಆದರೆ ಸಂನ್ಯಾಸಿಯ ಮನಸ್ಸಿನಲ್ಲಿ ಇವುಗಳ ಯಾವ ವಿಕಾರಗಳೂ ಆಗುತ್ತಿರಲಿಲ್ಲ. ಇವೆಲ್ಲವೂ ನನ್ನ ಹಿಂದಿನಜನ್ಮದ ಕರ್ಮಗಳ ಫಲ ವಾಗಿದೆ, ಇದನ್ನು ನಾನು ಅವಶ್ಯವಾಗಿ ಭೋಗಿಸಲೇಬೇಕಾಗುವುದು ಎಂದು ತಿಳಿಯುತ್ತಿದ್ದನು. ॥ ೪೧ ॥ ನೀಚ ಜನರು ಅನೇಕ ರೀತಿಯ ತಿರಸ್ಕಾರಗೈದು ಅವನನ್ನು ಅವನ ಧರ್ಮದಿಂದ ಪತನವಾಗಿಸಲು ಪ್ರಯತ್ನಿಸುತ್ತಿದ್ದರೂ, ಅವನು ಭಾರೀ ದೃಢತೆಯಿಂದ ತನ್ನ ಧರ್ಮ ದಲ್ಲಿ ಸ್ಥಿರವಾಗಿರುತ್ತಿದ್ದನು. ಅವನು ಸಾತ್ತ್ವಿಕ ಧೃತಿಯ * ಆಶ್ರಯ ಪಡೆದು ಗೀತೆಯೊಂದನ್ನು ಹೀಗೆ ಹಾಡಿದನು – ॥ ೪೨ ॥

ಬ್ರಾಹ್ಮಣನೆಂದನು – ನನ್ನ ಸುಖ ಅಥವಾ ದುಃಖದ ಕಾರಣರು ಈ ಮನುಷ್ಯರಾಗಲೀ, ದೇವತೆಗಳಾಗಲೀ, ಶರೀರವಾಗಲೀ, ಗ್ರಹಗಳಾಗಲೀ, ಕರ್ಮವಾಗಲೀ, ಕಾಲವಾಗಲೀ, ಯಾವುದೂ ಅಲ್ಲ, ಶ್ರುತಿಗಳು, ಮಹಾತ್ಮರು ಮನಸ್ಸನ್ನೇ ಇದರ ಪರಮ ಕಾರಣವೆಂದು ಹೇಳುತ್ತಾರೆ. ಮನಸ್ಸೇ ಈ ಸಂಸಾರಚಕ್ರದಲ್ಲಿ ಜೀವಿಯನ್ನು ಆಲೆಸುತ್ತದೆ. ॥ ೪೩ ॥ ನಿಜವಾಗಿಯೂ ಈ ಮನಸ್ಸು ಬಹಳ ಬಲಿಷ್ಠವಾಗಿದೆ. ಇದೇ ವಿಷಯಗಳನ್ನು, ಅವುಗಳ ಕಾರಣ ಗುಣಗಳನ್ನು, ಅವುಗಳೊಂದಿಗೆ ಸಂಬಂಧವಿರಿಸುವ ವೃತ್ತಿಗಳನ್ನು ಸೃಷ್ಟಿಸಿದೆ. ಆ ವೃತ್ತಿಗಳ ಅನುಸಾರವೇ ಸಾತ್ತ್ವಿಕ, ರಾಜಸ, ತಾಮಸ ಹೀಗೆ ಅನೇಕ ಪ್ರಕಾರದ ಕರ್ಮಗಳು ನಡೆಯುತ್ತವೆ. ಕರ್ಮಗಳನುಸಾರವೇ ಜೀವಿಯ ವಿವಿಧ ಗತಿಗಳಾಗುತ್ತವೆ. ॥ ೪೪ ॥ ಮನಸ್ಸಿನ ವೃತ್ತಿಗಳ ಮೂಲಕವೇ ಕರ್ಮ ಪರಂಪರೆ ಉಂಟಾಗುತ್ತದೆ. ಆತ್ಮನಾದರೋ ನಿಷ್ಕ್ರಿಯನಾಗಿ, ಕರ್ಮಗಳ ಸಂಗದಿಂದ ರಹಿತನಾಗಿ ದ್ದಾನೆ. ಹಿರಣ್ಮಯ ಅರ್ಥಾತ್ – ವಿಜ್ಞಾನಸ್ವರೂಪಿ ಯಾಗಿದ್ದು, ಜೀವಿಯ ಸಖನಾಗಿರುವನು. ಸಾಕ್ಷಿರೂಪದಿಂದ ಎಚ್ಚರವಾಗಿದ್ದು ಜೀವಿಯನ್ನು ನೋಡುತ್ತಿರುತ್ತಾನೆ. ಆದರೆ ಜೀವಿಯು ಅಹಂಭಾವದಿಂದ ಮನಸ್ಸನ್ನು ಜೊತೆಯಾಗಿಸಿಕೊಂಡು ತನ್ನಲ್ಲಿಯೇ ಅನೇಕ ಪ್ರಕಾರದ ಗುಣವೃತ್ತಿಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಅವುಗಳಲ್ಲಿ ಆಸಕ್ತನಾಗಿ ಸ್ವಯಂ ಬಂಧಿತನಾಗುತ್ತಾನೆ. ಈ ವಿಧವಾಗಿ ಮನಸ್ಸಿಗೆ ವಶೀಭೂತನಾಗಿ ಜೀವಿಯು ಅಲೆಯುತ್ತಾ ಇರುತ್ತಾನೆ. ॥ ೪೫ ॥ ದಾನ ಕೊಡುವುದು, ಸ್ವಧರ್ಮವನ್ನು ಪಾಲಿಸುವುದು, ಯಮ-ನಿಯಮಗಳನ್ನು ಪಾಲಿಸುವುದು, ವೇದಾಧ್ಯಯನ, ಒಳ್ಳೆಯ ವ್ರತಗಳನ್ನು ಪಾಲಿಸುವುದು, ವೇದ ಗಳಲ್ಲಿ ಹೇಳಿರುವ ಸತ್ಕರ್ಮಗಳು – ಹೀಗೆ ಇವೆಲ್ಲವೂ ಶುಭ ಕರ್ಮಗಳು. ಇವುಗಳಿಂದ ಮನಸ್ಸನ್ನು ವಶಪಡಿಸಲಾಗುತ್ತದೆ. ಇವೆಲ್ಲವನ್ನೂ ಮನಸ್ಸಿನ ನಿಗ್ರಹವಾಗುವ ತನಕ ಮಾಡಲೇ ಬೇಕು. ಆದರೆ ಮನಸ್ಸಿನ ಏಕಾಕಾರ ವೃತ್ತಿಯನ್ನು ಭಗವಂತನಲ್ಲಿ ತೊಡಗಿಸು ವುದು ಪರಮ ಯೋಗವಾಗಿದೆ. ಮನಸ್ಸಿನ ಈ ಪ್ರಕಾರದ ಸಮಾಧಿ ಸ್ಥಿತಿ ಉಂಟಾದಮೇಲೆ ಬೇರೆ ಯಾವುದರ ಅವಶ್ಯಕತೆಯು ಉಳಿಯುವುದಿಲ್ಲ. ॥ ೪೬ ॥ ಯಾರ ಮನಸ್ಸು ಸುಸಂಯತವಾಗಿ

* ಸಾತ್ತ್ವಿಕ ಧೃತಿಯ ಲಕ್ಷಣ ಗೀತೆ ೧೮/೩೩ರಲ್ಲಿ ನೋಡಬೇಕು.

ಸಮಾಹಿತಂ ಯಸ್ಯ ಮನಃ ಪ್ರಶಾಂತಂ
ದಾನಾದಿಭಿಃ ಕಿಂ ವದ ತಸ್ಯ ಕೃತ್ಯಮ್ ।
ಅಸಂಯತಂ ಯಸ್ಯ ಮನೋವಿನಶ್ಯದ್
ದಾನಾದಿಭಿಶ್ಚೇದಪರಂ ಕಿಮೇಭಿಃ ॥ ೪೭ ॥

ಮನೋವಶೇऽನ್ಯೇ ಹ್ಯಭವನ್ ಸ್ಮ ದೇವಾ
ಮನಶ್ಚ ನಾನ್ಯಸ್ಯ ವಶಂ ಸಮೇತಿ ।
ಭೀಷ್ಮೋ ಹಿ ದೇವಃ ಸಹಸಃ ಸಹೀಯಾನ್
ಯುಂಜ್ಯಾದ್ವಶೇ ತಂ ಸ ಹಿ ದೇವದೇವಃ ॥ ೪೮ ॥

ತಂ ದುರ್ಜಯಂ ಶತ್ರುಮಸಹ್ಯವೇಗ-
ಮರುಂತುದಂ ತನ್ನ ವಿಜಿತ್ಯ ಕೇಚಿತ್ ।
ಕುರ್ವಂತ್ಯಸದ್ವಿಗ್ರಹಮತ್ರ ಮರ್ತ್ಯೈ-
ರ್ಮಿತ್ರಾಣ್ಯುದಾಸೀನರಿಪೂನ್ ವಿಮೂಢಾಃ ॥ ೪೯ ॥

ದೇಹಂ ಮನೋಮಾತ್ರಮಿಮಂ ಗೃಹೀತ್ವಾ
ಮಮಾಹಮಿತ್ಯಂಧಧಿಯೋ ಮನುಷ್ಯಾಃ ।
ಏಷೋऽಹಮನ್ಯೋऽಯಮಿತಿ ಭ್ರಮೇಣ
ದುರಂತಪಾರೇ ತಮಸಿ ಭ್ರಮಂತಿ ॥ ೫೦ ॥

ಜನಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಶ್ಚಾತ್ರ ಹ ಭೌಮಯೋಸ್ತತ್ ।
ಜಿಹ್ವಾಂ ಕ್ವಚಿತ್ ಸಂದಶತಿ ಸ್ವದದ್ಭಿ-
ತದ್ವೇದನಾಯಾಂ ಕತಮಾಯ ಕುಪ್ಯೇತ್ ॥ ೫೧ ॥

ದುಃಖಸ್ಯ ಹೇತುರ್ಯದಿ ದೇವತಾಸ್ತು
ಕಿಮಾತ್ಮನಸ್ತತ್ರ ವಿಕಾರಯೋಸ್ತತ್ ।
ಯದಂಗಮಂಗೇನ ನಿಹನ್ಯತೇ ಕ್ವಚಿತ್
ಕ್ರುಧ್ಯೇತ ಕಸ್ಮೈ ಪುರುಷಃ ಸ್ವದೇಹೇ ॥ ೫೨ ॥

ಆತ್ಮಾ ಯದಿ ಸ್ಯಾತ್ಸುಖದುಃಖಹೇತುಃ
ಕಿಮನ್ಯತಸ್ತತ್ರ ನಿಜಸ್ವಭಾವಃ ।
ನ ಹ್ಯಾತ್ಮನೋऽನ್ಯದ್ಯದಿ ತನ್ಮೃಷಾ ಸ್ಯಾತ್
ಕ್ರುಧ್ಯೇತ ಕಸ್ಮಾನ್ನ ಸುಖಂ ನ ದುಃಖಮ್ ॥ ೫೩ ॥

ಪೂರ್ಣಶಾಂತವಾಗಿದೆಯೋ, ಅವನಿಗಾಗಿ ದಾನಾದಿ ಯಾವುದೇ ಕೃತ್ಯಗಳೂ ಕೂಡ ಬಾಕಿ ಉಳಿಯುವುದಿಲ್ಲ. ಯಾರ ಮನಸ್ಸು ವಶವಾಗಿಲ್ಲವೋ, ಅತ್ತ-ಇತ್ತ ಅಲೆಯುತ್ತಿದೆಯೋ, ಅವನಿಗೆ ದಾನಾದಿ ಕರ್ಮಗಳಿಂದಲೂ ಏನು ಲಾಭ ? ॥ ೪೭ ॥ ಮನಸ್ಸು ತನ್ನ ವಶವಾದಮೇಲೆ ಬೇರೆ ಇಂದ್ರಿಯಗಳ ದೇವತೆಗಳೂ ವಶರಾಗುತ್ತಾರೆ. ಇಂದ್ರಿಯಗಳು ಮನಸ್ಸನ್ನು ವಶಪಡಿಸಿ ಕೊಳ್ಳಲಾರವು. ಏಕೆಂದರೆ, ಮನಸ್ಸು ಬಲಿಷ್ಠರಲ್ಲಿ ಬಲಿಷ್ಠವಾಗಿದೆ. ಈ ಮನಸ್ಸಿನ ಮೇಲೆ ಹತೋಟಿ ಪಡೆಯುವವನು ದೇವತೆಗಳಿಗೂ ದೇವನಾಗುತ್ತಾನೆ. ॥ ೪೮ ॥ ನಿಜವಾಗಿಯೂ ಮನಸ್ಸು ಬಹು ದೊಡ್ಡ ಶತ್ರುವಾಗಿದೆ. ಇದರ ಆಕ್ರಮಣ ಅಸಹ್ಯವಾಗಿದೆ. ಇದು ಹೊರಗಿನ ಶರೀರವನ್ನೇ ಅಲ್ಲ, ಹೃದಯಾದಿ ಮರ್ಮಸ್ಥಾನಗಳನ್ನೂ ಭೇದಿಸುತ್ತದೆ. ಇದನ್ನು ಗೆಲ್ಲುವುದು ತುಂಬಾ ಕಠಿಣವಾಗಿದೆ. ಮನುಷ್ಯನು ಮೊಟ್ಟಮೊದಲಿಗೆ ಈ ಶತ್ರುವಿನ ಮೇಲೆ ವಿಜಯವನ್ನು ಪಡೆಯಬೇಕು. ಆದರೆ ಮೂರ್ಖಜನರು ಇದನ್ನು ಗೆಲ್ಲುವ ಪ್ರಯತ್ನವನ್ನೇ ಮಾಡುವುದಿಲ್ಲ, ಬೇರೆ ಮನುಷ್ಯರೊಂದಿಗೆ ಸುಳ್ಳು-ಸುಳ್ಳೇ ಜಗಳಕಾದು, ಈ ಜಗತ್ತಿನ ಜನರನ್ನೇ ಮಿತ್ರ-ಶತ್ರು – ಉದಾಸೀನರಾಗಿಸಿಕೊಳ್ಳುವರು. ॥ ೪೯ ॥ ಸಾಧಾರಣವಾಗಿ ಮನುಷ್ಯರ ಬುದ್ಧಿಯು ಕುರುಡಾಗಿರುತ್ತದೆ. ಅದರಿಂದಲೇ ಅವರು ಈ ಮನಃಕಲ್ಪಿತ ಶರೀರವನ್ನು 'ನಾನು-ನನ್ನದು' ಎಂದು ತಿಳಿದುಕೊಳ್ಳುತ್ತಾರೆ. ಮತ್ತೆ 'ಇದು ನಾನಾಗಿದ್ದೇನೆ – ಇದು ಬೇರೆಯಾಗಿದೆ' ಎಂಬ ಭ್ರಮೆಯ ಉರುಳಿನಲ್ಲಿ ಸಿಕ್ಕಿಹಾಕಿ ಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಅವರು ಈ ಅನಂತ ಅಜ್ಞಾನಾಂಧಕಾರದಲ್ಲೇ ಅಲೆಯುತ್ತಾ ಇರುತ್ತಾರೆ. ॥ ೫೦ ॥ ಮನುಷ್ಯನೇ ಸುಖ-ದುಃಖಗಳಿಗೆ ಕಾರಣನಾಗಿದ್ದಾನೆ ಎಂದು ಒಪ್ಪಿಕೊಂಡರೂ ಅದರಲ್ಲಿ ಆತ್ಮನ ಸಂಬಂಧವೇನಿದೆ ? ಏಕೆಂದರೆ ಸುಖ-ದುಃಖಗಳನ್ನು ಕೊಡುವುದು ಮೃಣ್ಮಯಶರೀರವೇ ಆಗಿದೆ. ಭೋಗಿಸುವವನೂ ಮಣ್ಣಿನ ಶರೀರವೇ. ಎಂದಾದರೂ ಊಟದ ಸಮಯ ತನ್ನ ಹಲ್ಲುಗಳಿಂದಲೇ ತನ್ನ ನಾಲಿಗೆಯನ್ನು ಕಚ್ಚಿಕೊಂಡು ನೋವು ಉಂಟಾದರೆ ಮನುಷ್ಯನು ಯಾರ ಮೇಲೆ ಸಿಟ್ಟು ಮಾಡುವನು ? ॥ ೫೧ ॥ ದುಃಖವನ್ನು ಕೊಡುವುದರಲ್ಲಿ ದೇವತೆಗಳನ್ನು ಕಾರಣವೆಂದು ಒಪ್ಪಿಕೊಂಡರೆ, ಅದರಲ್ಲಿ ಆತ್ಮನ ಸಂಬಂಧವೇನಿದೆ ? ಏಕೆಂದರೆ, ಎಲ್ಲರ ಶರೀರಗಳಲ್ಲಿ ಇಂದ್ರಿಯಾಭಿಮಾನಿ ದೇವತೆಗಳು ಒಂದೇ ಆಗಿವೆ. ಇಂದ್ರಿಯದ ದೇವತೆಯು ಇನ್ನೊಂದು ಇಂದ್ರಿಯದ ದೇವತೆಗೆ ಕಷ್ಟಕೊಟ್ಟರೆ ಇದರಿಂದ ಆತ್ಮನ ಹಾನಿ ಏನಾಯಿತು ? ತನ್ನದೇ ಒಂದು ಅವಯವ ಇನ್ನೊಂದು ಅವಯವಕ್ಕೆ ತೊಂದರೆ ಕೊಟ್ಟರೆ ಯಾರಮೇಲೆ ಸಿಟ್ಟಾಗುವುದು ? ॥ ೫೨ ॥ ಆತ್ಮನನ್ನೇ ಸುಖ-ದುಃಖದ ಕಾರಣವೆಂದು ಒಪ್ಪಿಕೊಂಡರೆ ಬೇರೆಯವರಿಂದ ಅವನಿಗೆ ಏನು ಸಂಬಂಧವಿದೆ ? ಏಕೆಂದರೆ ಆತ್ಮನಾದರೋ ತನ್ನ ಸ್ವರೂಪವೇ ಆಗಿದೆ. ಆತ್ಮವಲ್ಲದೆ ಬೇರೆ ಏನೂ ಇಲ್ಲವೇ ಇಲ್ಲ. ಕಂಡುಬರುವುದೆಲ್ಲವೂ ಮಿಥ್ಯೆಯೇ ಆಗಿದೆ. ಆತ್ಮನು ಆನಂದ ಸ್ವರೂಪನಾಗಿದ್ದಾನೆ. ಅಲ್ಲಿ ಸುಖ-ದುಃಖ ಎರಡೂ ಇಲ್ಲ. ಹಾಗಾದರೆ ಸಿಟ್ಟು ಯಾರಮೇಲೆ ಮಾಡುವುದು ? ॥ ೫೩ ॥

ಗ್ರಹಾ ನಿಮಿತ್ತಂ ಸುಖದುಃಖಯೋಶ್ಚೇತ್
ಕಿಮಾತ್ಮನೋಽಜಸ್ಯ ಜನಸ್ಯ ತೇ ವೈ ।
ಗ್ರಹೈರ್ಗ್ರಹಸ್ಯೈವ ವದಂತಿ ಪೀಡಾಂ
ಕುರ್ಧ್ಯೇತ ಕಸ್ಮೈ ಪುರುಷಸ್ತತೋಽನ್ಯಃ ॥ ೫೪ ॥

ಸುಖ-ದುಃಖಗಳನ್ನು ಕೊಡುವವರು ಗ್ರಹಗಳು ಎಂದು ಒಪ್ಪಿಕೊಂಡರೆ, ಅಜನ್ಮಾ ಆತ್ಮನಿಗೆ ಸುಖ-ದುಃಖಗಳನ್ನು ಕೊಡಲು ಅವು ಕಾರಣವಾಗಲಾರರು. ಏಕೆಂದರೆ, ಹುಟ್ಟಿದವನಿಗೇ ಗ್ರಹಗಳು ಪೀಡೆ ಕೊಡಬಲ್ಲರು. ಆತ್ಮನು ಶಾಶ್ವತನಾಗಿದ್ದಾನೆ. ಶರೀರ ನಾಶವುಳ್ಳದ್ದಾಗಿದೆ. ಆದ್ದರಿಂದ ಗ್ರಹಗಳ ಪ್ರಭಾವ ಶರೀರದ ಮೇಲೆಯೇ ಬೀಳಬಲ್ಲದು. ಆತ್ಮನಿಗೆ ಅದರೊಂದಿಗೆ ಯಾವ ಸಂಬಂಧವೂ ಇಲ್ಲ, ಹಾಗಾದರೆ ಕ್ರೋಧ ಯಾರ ಮೇಲೆ ಮಾಡುವುದು ? ॥ ೫೪ ॥

ಕರ್ಮಾಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಸ್ತದ್ಧಿ ಜಡಾಜಡತ್ವೇ ।
ದೇಹಸ್ತ್ವಚಿತ್ ಪುರುಷೋಽಯಂ ಸುಪರ್ಣಃ
ಕುರ್ಧ್ಯೇತ ಕಸ್ಮೈ ನ ಹಿ ಕರ್ಮಮೂಲಮ್ ॥ ೫೫ ॥

ಕರ್ಮಗಳನ್ನೇ ಸುಖ-ದುಃಖದ ಕಾರಣವೆಂದು ಒಪ್ಪಿಕೊಂಡರೆ, ಅವುಗಳೊಂದಿಗೆ ಆತ್ಮನ ಸಂಬಂಧ ಏನಿದೆ ? ಏಕೆಂದರೆ ಆತ್ಮನು ಸಾಕ್ಷಿಯಾಗಿದ್ದಾನೆ, ಶುದ್ಧ ಜ್ಞಾನ ಸ್ವರೂಪನಾಗಿದ್ದಾನೆ. ಜಡ ಮತ್ತು ಚೇತನಗಳು ಸೇರದೇ ಕರ್ಮ ಸಂಭವವಿಲ್ಲ ಅವನು ಕರ್ಮಗಳಿಂದ ಸರ್ವಥಾ ನಿರ್ಲಿಪ್ತನಾಗಿರುವನು. ದೇಹವು ಜಡವಾಗಿರುವುದರಿಂದ ಏನೂ ಮಾಡುವುದಿಲ್ಲ ಅದೇ ರೀತಿ ಆತ್ಮ ಚೇತನವಾಗಿದೆ. ಆದ್ದರಿಂದ ಕರ್ಮಗಳ ಸಂಬಂಧವಿಲ್ಲ.ಹೀಗೆ ಕರ್ಮಮೂಲಕ ಸುಖ-ದುಃಖಗಳು ಮತ್ತು ಆತ್ಮನಿಗೆ ಯಾವ ಸಂಬಂಧವಿದೆ ? ಹಾಗೂ ಅವನು ಯಾರಮೇಲೆ ಸಿಟ್ಟುಮಾಡುವುದು? ॥ ೫೫ ॥

ಕಾಲಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಸ್ತತ್ರ ತದಾತ್ಮಕೋಽಸೌ ।
ನಾಗ್ನೇರ್ಹಿ ತಾಪೋ ನ ಹಿಮಸ್ಯ ತತ್ ಸ್ಯಾತ್
ಕುರ್ಧ್ಯೇತ ಕಸ್ಮೈ ನ ಪರಸ್ಯ ದ್ವಂದ್ವಮ್ ॥ ೫೬ ॥

ಕಾಲವನ್ನು ಸುಖ-ದುಃಖವನ್ನು ಕೊಡುವವನೆಂದು ಒಪ್ಪಿಕೊಂಡರೆ ಕಾಲ ಮತ್ತು ಆತ್ಮಾ ಒಂದೇ ಆಗಿದೆ. ಈ ರೀತಿ ಆತ್ಮನಿಂದ ಆತ್ಮನಿಗೆ ಕಷ್ಟವಾಗುವುದಿಲ್ಲ, ಅಗ್ನಿಗೆ ಅಗ್ನಿಯಿಂದ ತಾಪವಾಗುವುದಿಲ್ಲ, ಮಂಜುಗಡ್ಡೆಯಿಂದ ಮಂಜುಗಡ್ಡೆಗೆ ಶೀತಲತೆ ಬಾಧಿಸದು. ಹಾಗೆಯೇ ಆತ್ಮನಿಗೂ ಸುಖ-ದುಃಖಾದಿ ದ್ವಂದ್ವಗಳು ಇಲ್ಲ, ಇಂತಹ ಸ್ಥಿತಿಯಲ್ಲಿ ಸಿಟ್ಟು ಯಾರಮೇಲೆ ಮಾಡುವುದು ? ॥ ೫೬ ॥

ನ ಕೇನಚಿತ್ ಕ್ವಾಪಿ ಕಥಂಚನಾಸ್ಯ
ದ್ವಂದ್ವೋಪರಾಗಃ ಪರತಃ ಪರಸ್ಯ ।
ಯಥಾಹಮಃ ಸಂಸೃತಿರೂಪಿಣಃ ಸ್ಯಾ-
ದೇವಂ ಪ್ರಬುದ್ಧೋ ನ ಬಿಭೇತಿ ಭೂತೈಃ ॥ ೫೭ ॥

ಪ್ರಕೃತಿಯಿಂದಲೂ ಅತೀತನಾದ ಆತ್ಮನಿಗೆ ಯಾರಿಂದಲೂ, ಯಾವರೀತಿಯಿಂದಲೂ ದ್ವಂದ್ವಗಳ ಸ್ಪರ್ಶವಾಗುವುದಿಲ್ಲ, ಇರುವ ಈ ಅಹಂಕಾರವೇ ಸಂಸೃತಿ (ಸಂಸಾರ)ರೂಪವಾಗಿದೆ. ಅದರಿಂದಲೇ ದ್ವಂದ್ವಗಳು ಉಂಟಾಗುತ್ತವೆ. ಈ ದ್ವಂದ್ವಗಳಿಂದ ಜನ್ಮ ಮೃತ್ಯು ಉಂಟಾಗುತ್ತದೆ. ಆದರೆ ಆತ್ಮಾ ಈ ದ್ವಂದ್ವಗಳಿಂದ ಮುಕ್ತವಾಗಿದೆ. ಹೀಗೆ ತಿಳಿದುಕೊಂಡ ಯೋಗಿಯು ಯಾವ ಪ್ರಾಣಿಗೂ ಹೆದರುವುದಿಲ್ಲ. ॥ ೫೭ ॥

ಏತಾಂ ಸ ಆಸ್ಥಾಯ ಪರಾತ್ಮನಿಷ್ಠಾ-
ಮಧ್ಯಾಸಿತಾಂ ಪೂರ್ವತಮೈರ್ಮಹರ್ಷಿಭಿಃ ।
ಅಹಂ ತರಿಷ್ಯಾಮಿ ದುರಂತಪಾರಂ
ತಮೋ ಮುಕುಂದಾಂಘ್ರಿನಿಷೇವಯೈವ ॥ ೫೮ ॥

ಹಿಂದೆ ಮಹರ್ಷಿಗಳು ಆಶ್ರಯಿಸಿದ ಅಧ್ಯಾತ್ಮ-ನಿಷ್ಠೆಯನ್ನೇ ನಾನೂ ಆಶ್ರಯ ಪಡೆಯುವೆನು. ಈ ಪ್ರಕಾರ ಭಗವಾನ್ ಮುಕುಂದನ ಚರಣಕಮಲಗಳ ಸೇವೆಯ ಪ್ರಭಾವದಿಂದ ಈ ಅಜ್ಞಾನರೂಪೀ ಅಗಾಧ ಸಂಸಾರಸಾಗರವನ್ನು ದಾಟಿ ಹೋಗುವೆನು. ॥ ೫೮ ॥

ಶ್ರೀಭಗವಾನುವಾಚ

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಎಲೈ ಉದ್ಧವನೇ ! ಆ ಅವಧೂತ ಬ್ರಾಹ್ಮಣನು ನಷ್ಟವಾಗಿ ಹೋದ ಧನದ ಕ್ಲೇಶವನ್ನೂ ಪೂರ್ಣವಾಗಿ ಕಳೆದುಕೊಂಡನು. ಈಗ ಅವನು ಪ್ರಪಂಚದಿಂದ ವಿರಕ್ತನಾಗಿದ್ದು ಸಂನ್ಯಾಸಿಯಾಗಿ ಭೂಮಿಯಲ್ಲಿ ಸ್ವಚ್ಛಂದವಾಗಿ ವಿಚರಿಸುತ್ತಿದ್ದನು. ದುಷ್ಟರು ಅವನನ್ನು ಬಹಳವಾಗಿ ಕಾಡಿದರೂ ಅವನು ತನ್ನ ಧರ್ಮದಿಂದ ವಿಚಲಿತನಾಗದೇ ಅಚಲವಾಗಿದ್ದನು. ಆಗ ಆ ಮೌನೀ ಅವಧೂತನು ಮನಸ್ಸಿನಲ್ಲೇ ಈ ಮೇಲಿನ ಗೀತೆಯನ್ನು ಹಾಡಿದ್ದನು. ॥ ೫೯ ॥

ನಿರ್ವಿದ್ಯ ನಷ್ಟದ್ರವಿಣೋ ಗತಕ್ಲಮಃ
ಪ್ರವ್ರಜ್ಯ ಗಾಂ ಪರ್ಯಟಮಾನ ಇತ್ಥಮ್ ।
ನಿರಾಕೃತೋಽಸದ್ಭಿರಪಿ ಸ್ವಧರ್ಮಾ-
ದಕಂಪಿತೋಽಮುಂ ಮುನಿರಾಹ ಗಾಥಾಮ್ ॥ ೫೯ ॥

ಸುಖದುಃಖಪ್ರದೋ ನಾನ್ಯಃ ಪುರುಷಸ್ಯಾತ್ಮವಿಭ್ರಮಃ ।
ಮಿತ್ರೋದಾಸೀನರಿಪವಃ ಸಂಸಾರಸ್ತಮಸಃ ಕೃತಃ
॥ ೬೦ ॥

ತಸ್ಮಾತ್ ಸರ್ವಾತ್ಮನಾ ತಾತ ನಿಗೃಹಾಣ ಮನೋ ಧಿಯಾ ।
ಮಯ್ಯಾವೇಶಿತಯಾ ಯುಕ್ತ ಏತಾವಾನ್ಯೋಗಸಂಗ್ರಹಃ
॥ ೬೧ ॥

ಯ ಏತಾಂ ಭಿಕ್ಷುಣಾ ಗೀತಾಂ ಬ್ರಹ್ಮನಿಷ್ಠಾಂ ಸಮಾಹಿತಃ ।
ಧಾರಯನ್ ಶ್ರಾವಯನ್ ಶೃಣ್ವನ್ ದ್ವಂದ್ವೈರ್ನೈವಾಭಿಭೂಯತೇ
॥ ೬೨ ॥

ಉದ್ಧವನೇ ! ಈ ಪ್ರಪಂಚದಲ್ಲಿ ಮನುಷ್ಯನಿಗೆ ಬೇರೆ ಯಾರೂ ಸುಖ-ದುಃಖಗಳನ್ನು ಕೊಡುವುದಿಲ್ಲ. ಇದಾದರೋ ಅವನ ಚಿತ್ತದ ಭ್ರಮೆಮಾತ್ರವಾಗಿದೆ. ಈ ಇಡೀ ಪ್ರಪಂಚ ಮತ್ತು ಇದರೊಳಗಿನ ಮಿತ್ರ, ಉದಾಸೀನ, ಶತ್ರು ಈ ಭೇದಗಳು ಅಜ್ಞಾನ ಕಲ್ಪಿತವಾಗಿವೆ. ॥ ೬೦ ॥ ಆದಕ್ಕಾಗಿ ಪ್ರಿಯ ಉದ್ಧವನೇ ! ನಿನ್ನ ವೃತ್ತಿಗಳನ್ನು ನನ್ನಲ್ಲಿ ತನ್ಮಯಗೊಳಿಸು ಹಾಗೂ ನಿನ್ನ ಶಕ್ತಿಯೆಲ್ಲವನ್ನು ತೊಡಗಿಸಿ ಮನಸ್ಸನ್ನು ವಶಪಡಿಸಿಕೋ. ಮತ್ತೆ ನನ್ನಲ್ಲೇ ನಿತ್ಯ ಯುಕ್ತನಾಗಿ ಸ್ಥಿತನಾಗಿ ಬಿಡು, ಸಾಕು. ಎಲ್ಲ ಯೋಗಸಾಧನೆಯ ಸಾರ-ಸಂಗ್ರಹ ಇದೇ ಆಗಿದೆ. ॥ ೬೧ ॥ ಈ ಭಿಕ್ಷು (ಸಂನ್ಯಾಸಿಯ) ಗೀತೆಯು ಮೂರ್ತಿಮಂತ ಬ್ರಹ್ಮಜ್ಞಾನ ನಿಷ್ಠೆಯೇ ಆಗಿದೆ. ಇದನ್ನು ಏಕಾಗ್ರಚಿತ್ತದಿಂದ ಕೇಳಿ, ಹೇಳಿ, ಧಾರಣೆಮಾಡುವವನು ಎಂದೂ ದುಃಖಾದಿ ದ್ವಂದ್ವಗಳಿಗೆ ವಶನಾಗಲಾರನು. ॥ ೬೨ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಸಾಂಖ್ಯಯೋಗ

ಶ್ರೀಭಗವಾನುವಾಚ

ಅಥ ತೇ ಸಂಪ್ರವಕ್ಷ್ಯಾಮಿ ಸಾಂಖ್ಯಂ ಪೂರ್ವೈರ್ವಿನಿಶ್ಚಿತಮ್ ।
ಯದ್ವಿಜ್ಞಾಯ ಪುಮಾನ್ಸದ್ಯೋ ಜಹ್ಯಾದ್ವೈಕಲ್ಪಿಕಂ ಭ್ರಮಮ್
॥ ೧ ॥

ಆಸೀಜ್ಜ್ಞಾನಮಥೋ ಹ್ಯರ್ಥ ಏಕಮೇವಾವಿಕಲ್ಪಿತಮ್ ।
ಯದಾ ವಿವೇಕನಿಪುಣಾ ಆದೌ ಕೃತಯುಗೇऽಯುಗೇ
॥ ೨ ॥

ತನ್ಮಾಯಾಫಲರೂಪೇಣ ಕೇವಲಂ ನಿರ್ವಿಕಲ್ಪಿತಮ್ ।
ವಾಙ್ಮನೋऽಗೋಚರಂ ಸತ್ಯಂ ದ್ವಿಧಾ ಸಮಭವದ್ಬೃಹತ್
॥ ೩ ॥

ತಯೋರೇಕತರೋ ಹ್ಯರ್ಥಃ ಪ್ರಕೃತಿಃ ಸೋಭಯಾತ್ಮಿಕಾ ।
ಜ್ಞಾನಂ ತ್ವನ್ಯತಮೋ ಭಾವಃ ಪುರುಷಃ ಸೋऽಭಿಧೀಯತೇ
॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಈಗ ನಿನಗೆ ಸಾಂಖ್ಯಶಾಸ್ತ್ರದ ನಿರ್ಣಯವನ್ನು ಹೇಳುವೆನು. ಹಿಂದಿನಕಾಲದ ದೊಡ್ಡ-ದೊಡ್ಡ ಋಷಿ-ಮುನಿಗಳು ಇದನ್ನು ನಿಶ್ಚಯಿಸಿರುವರು. ಜೀವಿಯು ಇದನ್ನು ಚೆನ್ನಾಗಿ ತಿಳಿದುಕೊಂಡರೆ, ಅವನು ವೈಕಲ್ಪಿಕ ಭ್ರಮೆಯನ್ನು ತತ್ಕಾಲವೇ ತ್ಯಜಿಸಿಬಿಡುವನು. ಒಂದು ಬ್ರಹ್ಮನಲ್ಲದೆ ಬೇರೆ ಏನೂ ಇಲ್ಲವೇ ಇಲ್ಲ ಎಂಬುದು ಅವನ ಅರಿವಿಗೆ ಬರುತ್ತದೆ. ॥ ೧ ॥ ಕಲ್ಪದ ಪ್ರಾರಂಭದಲ್ಲಿ ಯುಗವೇ ಇಲ್ಲದಿದ್ದಾಗ ಜ್ಞಾನ-ಜ್ಞೇಯ (ವಸ್ತುಪದಾರ್ಥ) ಹೀಗೆ ಯಾವ ಭೇದವೂ ಇರಲಿಲ್ಲ. ಕೇವಲ ಒಂದೇ ತತ್ತ್ವವು ಅವಿಭಾಜಿತವಾಗಿತ್ತು. ಬಳಿಕ ಕೃತಯುಗವು ಬಂದಾಗ ವಿವೇಕ ನಿಪುಣರಾದ ಜನರು ಬಂದರು. ಆಗ ಎಲ್ಲರಲ್ಲಿಯೂ ಬ್ರಹ್ಮದೃಷ್ಟಿಯೇ ಇತ್ತು. ಅವರು ಎಲ್ಲರನ್ನೂ ಅಭೇದರೂಪವಾಗಿ ಓರ್ವ ಪರಮಾತ್ಮನ ಸ್ವರೂಪವೆಂದೇ ತಿಳಿಯುತ್ತಿದ್ದರು. ॥ ೨ ॥ ಬ್ರಹ್ಮನಲ್ಲಿ ಯಾವ ಪ್ರಕಾರದ ವಿಕಲ್ಪವೂ ಇಲ್ಲ; ಅದು ಕೇವಲ – ಅದ್ವಿತೀಯ ಸತ್ಯವಾಗಿದೆ. ಮನಸ್ಸು ವಾಣಿಯ ಗತಿಯು ಅದರಲ್ಲಿಲ್ಲ. ಆ ಬೃಹತ್ ಸತ್ಯಸ್ವರೂಪೀ ಬ್ರಹ್ಮವೇ ಮಾಯೆ ಮತ್ತು ಅದರಲ್ಲಿ ಪ್ರತಿಬಿಂಬಿತ ಜೀವಿಯ ರೂಪದಲ್ಲಿ – ದೃಶ್ಯ ಮತ್ತು ದೃಷ್ಟಾನ ರೂಪದಲ್ಲಿ – ಎರಡು ಭಾಗವಾಗಿ ವಿಭಕ್ತನಂತೇ ಆದನು. ॥ ೩ ॥ ಅದರಲ್ಲಿ ಒಂದು ವಸ್ತುವನ್ನು ಪ್ರಕೃತಿ ಎಂದು ಹೇಳುತ್ತಾರೆ. ಅದೇ ಜಗತ್ತಿನಲ್ಲಿ ಕಾರ್ಯ ಮತ್ತು ಕಾರಣದ ರೂಪವನ್ನು ಧರಿಸಿತು. ಈ ಪ್ರಕಾರ ಕಾರ್ಯ ಮತ್ತು ಕಾರಣರೂಪವನ್ನು ಧರಿಸುವುದರಿಂದ ಪ್ರಕೃತಿಯು ಉಭಯಾತ್ಮಿಕೆಯಾಯಿತು. ಎರಡನೆಯ ವಸ್ತುವು ಚೇತನ ಜೀವಾತ್ಮ.

ತಮೋ ರಜಃ ಸತ್ತ್ವಮಿತಿ ಪ್ರಕೃತೇರಭವನ್ಗುಣಾಃ ।
ಮಯಾ ಪ್ರಕ್ಷೋಭ್ಯಮಾಣಾಯಾಃ ಪುರುಷಾನುಮತೇನ ಚ
॥ ೫ ॥

ತೇಭ್ಯಃ ಸಮಭವತ್ಸೂತ್ರಂ ಮಹಾನ್ಸೂತ್ರೇಣ ಸಂಯುತಃ ।
ತತೋ ವಿಕುರ್ವತೋ ಜಾತೋऽಹಂಕಾರೋ ಯೋ ವಿಮೋಹನಃ
॥ ೬ ॥

ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿವೃತ್ ।
ತನ್ಮಾತ್ರೇಂದ್ರಿಯಮನಸಾಂ ಕಾರಣಂ ಚಿದಚಿನ್ಮಯಃ
॥ ೭ ॥

ಅರ್ಥಸ್ತನ್ಮಾತ್ರಿಕಾಜ್ಜಜ್ಞೇ ತಾಮಸಾದಿಂದ್ರಿಯಾಣಿ ಚ ।
ತೈಜಸಾದ್ದೇವತಾ ಆಸನ್ನೇಕಾದಶ ಚ ವೈಕೃತಾತ್
॥ ೮ ॥

ಮಯಾ ಸಂಚೋದಿತಾ ಭಾವಾಃ ಸರ್ವೇ ಸಂಹತ್ಯಕಾರಿಣಃ ।
ಅಂಡಮುತ್ಪಾದಯಾಮಾಸುರ್ಮಮಾಯತನಮುತ್ತಮಮ್
॥ ೯ ॥

ತಸ್ಮಿನ್ನಹಂ ಸಮಭವಮಂಡೇ ಸಲಿಲಸಂಸ್ಥಿತೌ ।
ಮಮ ನಾಭ್ಯಾಮಭೂತ್ಪದ್ಮಂ ವಿಶ್ವಾಖ್ಯಂ ತತ್ರ ಚಾತ್ಮಭೂಃ
॥ ೧೦ ॥

ಸೋऽಸೃಜತ್ತಪಸಾ ಯುಕ್ತೋ ರಜಸಾ ಮದನುಗ್ರಹಾತ್ ।
ಲೋಕಾನ್ಸಪಾಲಾನ್ ವಿಶ್ವಾತ್ಮಾ ಭೂರ್ಭುವಃಸ್ವರಿತಿ ತ್ರಿಧಾ
॥ ೧೧ ॥

ದೇವಾನಾಮೋಕ ಆಸೀತ್ಸ್ವರ್ಭೂತಾನಾಂ ಚ ಭುವಃ ಪದಮ್ ।
ಮರ್ತ್ಯಾದೀನಾಂ ಚ ಭೂರ್ಲೋಕಃ ಸಿದ್ಧಾನಾಂ ತ್ರಿತಯಾತ್ಪರಮ್
॥ ೧೨ ॥

ಅಧೋऽಸುರಾಣಾಂ ನಾಗಾನಾಂ ಭೂಮೇರೋಕೋऽಸೃಜತ್ಪ್ರಭುಃ ।
ತ್ರಿಲೋಕ್ಯಾಂ ಗತಯಃ ಸರ್ವಾಃ ಕರ್ಮಣಾಂ ತ್ರಿಗುಣಾತ್ಮನಾಮ್
॥ ೧೩ ॥

ಯೋಗಸ್ಯ ತಪಸಶ್ಚೈವ ನ್ಯಾಸಸ್ಯ ಗತಯೋऽಮಲಾಃ ।
ಮಹರ್ಜನಸ್ತಪಃ ಸತ್ಯಂ ಭಕ್ತಿಯೋಗಸ್ಯ ಮದ್ಗತಿಃ
॥ ೧೪ ॥

ಅದು ಜ್ಞಾನಸ್ವರೂಪನಾಗಿದ್ದು ಅವನನ್ನು ಪುರುಷನೆಂದು ಹೇಳುತ್ತಾರೆ. ॥ ೪ ॥ ಉದ್ಧವನೇ! ನಾನೇ ಜೀವಿಗಳ ಶುಭ-ಅಶುಭ ಕರ್ಮಗಳನುಸಾರವಾಗಿ ಪ್ರಕೃತಿಯನ್ನು ಕ್ಷುಬ್ಧಗೊಳಿಸಿದೆ. ಆಗ ಅದರಿಂದ ಸತ್ತ್ವ, ರಜ, ತಮ ಈ ಮೂರು ಗುಣಗಳು ಪ್ರಕಟವಾದುವು. ॥ ೫ ॥ ಅವುಗಳಿಂದ ಕ್ರಿಯಾ-ಶಕ್ತಿಪ್ರಧಾನ ಸೂತ್ರ ಮತ್ತು ಜ್ಞಾನಶಕ್ತಿಪ್ರಧಾನ ಮಹತ್ತತ್ತ್ವ ಪ್ರಕಟವಾಯಿತು. ಅವೆರಡೂ ಪರಸ್ಪರ ಕೂಡಿಕೊಂಡೇ ಇರುತ್ತವೆ. ಮಹತ್ತತ್ತ್ವದಲ್ಲಿ ವಿಕಾರ ಉಂಟಾದಾಗ ಅಹಂಕಾರ ವ್ಯಕ್ತವಾಯಿತು. ಈ ಅಹಂಕಾರವೇ ಜೀವಿಗಳನ್ನು ಮೋಹದಲ್ಲಿ ಕೆಡಹುವಂತಹುದು. ॥ ೬ ॥ ಆ ಅಹಂಕಾರವು ಸಾತ್ತ್ವಿಕ, ರಾಜಸ, ತಾಮಸ ಎಂಬ ಮೂರು ಪ್ರಕಾರದಿಂದಿದೆ. ಅಹಂಕಾರವೇ ಪಂಚತನ್ಮಾತ್ರೆಗಳು, ಇಂದ್ರಿಯಗಳು, ಮನಸ್ಸು ಇವುಗಳ ಕಾರಣವಾಗಿದೆ. ಅದು ಜಡ-ಚೇತನ ಉಭಯಾತ್ಮಕವಾಗಿದೆ. ಈ ಅಹಂಕಾರವು ಕಾರ್ಯವೂ, ಕಾರಣವೂ ಆಗಿದೆ. ॥ ೭ ॥ ತಾಮಸ ಅಹಂಕಾರದಿಂದ ಪಂಚತನ್ಮಾತ್ರೆಗಳು ಮತ್ತು ಅವುಗಳಿಂದ ಪಂಚಭೂತಗಳ ಉತ್ಪತ್ತಿಯಾಯಿತು. ರಾಜಸ ಅಹಂಕಾರದಿಂದ ಇಂದ್ರಿಯಗಳು ಮತ್ತು ಸಾತ್ತ್ವಿಕ ಅಹಂಕಾರದಿಂದ ಇಂದ್ರಿಯಗಳ ಅಧಿಷ್ಠಾತೃ ಹನ್ನೊಂದು ದೇವತೆಗಳು ಪ್ರಕಟಗೊಂಡವು. ॥ ೮ ॥ ಇವೆಲ್ಲ ಪದಾರ್ಥಗಳು ನನ್ನ ಪ್ರೇರಣೆಯಿಂದ ಒಂದಾಗಿ ಪರಸ್ಪರ ಸೇರಿಕೊಂಡವು. ಇವುಗಳೇ ಈ ಬ್ರಹ್ಮಾಂಡರೂಪೀ ಅಂಡವನ್ನು ಉತ್ಪನ್ನಮಾಡಿದವು. ಈ ಬ್ರಹ್ಮಾಂಡವು ನನ್ನ ಉತ್ತಮ ನಿವಾಸವಾಗಿದೆ. ॥ ೯॥ ಈ ಅಂಡವು ನೀರಿನಲ್ಲಿ ಸ್ಥಿತವಾದಾಗ ನಾನೇ ನಾರಾಯಣರೂಪದಿಂದ ಇದರಲ್ಲಿ ವಿರಾಜಮಾನನಾದೆ. ನನ್ನ ನಾಭಿಯಿಂದ ವಿಶ್ವಕಮಲದ ಉತ್ಪತ್ತಿಯಾಯಿತು. ಅದರ ಮೇಲೆ ಬ್ರಹ್ಮನ ಆವಿರ್ಭಾವ ವಾಯಿತು. ॥ ೧೦ ॥ ವಿಶ್ವಸೃಷ್ಟಾ ಬ್ರಹ್ಮನು ಬಹಳ ದೊಡ್ಡ ತಪಸ್ಸು ಮಾಡಿದನು. ಅನಂತರ ನನ್ನ ಕೃಪಾಪ್ರಸಾದವನ್ನು ಪಡೆದು, ರಜೋಗುಣದ ಮೂಲಕ ಭೂಃ, ಭುವಃ, ಸ್ವಃ, ಅರ್ಥಾತ್ - ಪೃಥ್ವಿ, ಅಂತರಿಕ್ಷ, ಸ್ವರ್ಗ ಈ ಮೂರು ಲೋಕಗಳ ಹಾಗೂ ಇವುಗಳ ಲೋಕಪಾಲಕರನ್ನು ರಚಿಸಿದನು. ॥ ೧೧ ॥ ದೇವತೆಗಳ ನಿವಾಸಕ್ಕಾಗಿ ಸ್ವರ್ಲೋಕವನ್ನೂ ಭೂತ-ಪ್ರೇತಾದಿಗಳಿಗಾಗಿ ಭುವರ್ಲೋಕ (ಅಂತರಿಕ್ಷ)ವನ್ನೂ ಮನುಷ್ಯಾದಿಗಳಿಗಾಗಿ ಭೂರ್ಲೋಕ (ಪೃಥಿವಿ)ಯನ್ನೂ ನಿಶ್ಚಯಿಸಿದನು. ಈ ಮೂರು ಲೋಕಗಳ ಮೇಲೆ ಮಹರ್ಲೋಕ, ತಪೋಲೋಕ ಮುಂತಾದವುಗಳು ಸಿದ್ಧರ ನಿವಾಸಸ್ಥಾನಗಳಾದವು.॥ ೧೨॥ ಸೃಷ್ಟಿಕಾರ್ಯದಲ್ಲಿ ಸಮರ್ಥರಾದ ಬ್ರಹ್ಮದೇವರು ಆಸುರ ಮತ್ತು ನಾಗಗಳಿಗಾಗಿ ಪೃಥ್ವಿಯ ಕೆಳಗೆ ಅತಲ, ವಿತಲ, ಸುತಲ ಮುಂತಾದ ಏಳು ಪಾತಾಳಗಳನ್ನು ನಿರ್ಮಿಸಿದರು. ಸ್ವರ್ಗ, ಮರ್ತ್ಯ, ಅಂತರಿಕ್ಷ ಈ ಮೂರು ಲೋಕಗಳಲ್ಲಿ ತ್ರಿಗುಣಾತ್ಮಿಕ ಕರ್ಮಗಳನುಸಾರ ವಿವಿಧಗತಿಗಳು ಪ್ರಾಪ್ತವಾಗುತ್ತವೆ. ॥ ೧೩ ॥ ಯೋಗ, ತಪಸ್ಸು, ಸಂನ್ಯಾಸದ ಮೂಲಕ ಮಹರ್ಲೋಕ, ಜನೋಲೋಕ, ತಪೋಲೋಕ ಮತ್ತು ಸತ್ಯಲೋಕರೂಪೀ ಉತ್ತಮ ಗತಿಯು ದೊರೆಯುತ್ತದೆ. ಹಾಗೆಯೇ ಭಕ್ತಿಯೋಗದಿಂದ ನನ್ನ ಪರಮಧಾಮವು ದೊರೆಯುತ್ತದೆ. ॥ ೧೪ ॥

ಮಯಾ ಕಾಲಾತ್ಮನಾ ಧಾತ್ರಾ ಕರ್ಮಯುಕ್ತಮಿದಂ ಜಗತ್ ।
ಗುಣಪ್ರವಾಹ ಏತಸ್ಮಿನ್ನುನ್ಮಜ್ಜತಿ ನಿಮಜ್ಜತಿ
॥ ೧೫ ॥

ಅಣುರ್ಬೃಹತ್ ಕೃಶಃ ಸ್ಥೂಲೋ ಯೋ ಯೋ ಭಾವಃ ಪ್ರಸಿಧ್ಯತಿ ।
ಸರ್ವೋಽಪ್ಯುಭಯಸಂಯುಕ್ತಃ ಪ್ರಕೃತ್ಯಾ ಪುರುಷೇಣ ಚ
॥ ೧೬ ॥

ಯಸ್ತು ಯಸ್ಯಾದಿರಂತಶ್ಚ ಸ ವೈ ಮಧ್ಯಂ ಚ ತಸ್ಯ ಸನ್ ।
ವಿಕಾರೋ ವ್ಯವಹಾರಾರ್ಥೋ ಯಥಾ ತೈಜಸಪಾರ್ಥಿವಾಃ
॥ ೧೭ ॥

ಯದುಪಾದಾಯ ಪೂರ್ವಸ್ತು ಭಾವೋ ವಿಕುರುತೇಽಪರಮ್ ।
ಆದಿರಂತೋ ಯದಾ ಯಸ್ಯ ತತ್ಸತ್ಯಮಭಿಧೀಯತೇ
॥ ೧೮ ॥

ಪ್ರಕೃತಿರ್ಹ್ಯಸ್ಯೋಪಾದಾನಮಾಧಾರಃ ಪುರುಷಃ ಪರಃ ।
ಸತೋಽಭಿವ್ಯಂಜಕಃ ಕಾಲೋ ಬ್ರಹ್ಮತತ್ತ್ರಿತಯಂ ತ್ವಹಮ್
॥ ೧೯ ॥

ಸರ್ಗಃ ಪ್ರವರ್ತತೇ ತಾವತ್ ಪೌರ್ವಾಪರ್ಯೇಣ ನಿತ್ಯಶಃ ।
ಮಹಾನ್ಗುಣವಿಸರ್ಗಾರ್ಥಃ ಸ್ಥಿತ್ಯಂತೋ ಯಾವದೀಕ್ಷಣಮ್
॥ ೨೦ ॥

ವಿರಾಣ್ಮಯಾಽಽಸಾದ್ಯಮಾನೋ ಲೋಕಕಲ್ಪವಿಕಲ್ಪಕಃ ।
ಪಂಚತ್ವಾಯ ವಿಶೇಷಾಯ ಕಲ್ಪತೇ ಭುವನೈಃ ಸಹ
॥ ೨೧ ॥

ಅನ್ನೇ ಪ್ರಲೀಯತೇ ಮರ್ತ್ಯಮನ್ನಂ ಧಾನಾಸು ಲೀಯತೇ ।
ಧಾನಾ ಭೂಮೌ ಪ್ರಲೀಯಂತೇ ಭೂಮಿರ್ಗಂಧೇ ಪ್ರಲೀಯತೇ
॥ ೨೨ ॥

ಅಪ್ಸು ಪ್ರಲೀಯತೇ ಗಂಧ ಆಪಶ್ಚ ಸ್ವಗುಣೇ ರಸೇ ।
ಲೀಯತೇ ಜ್ಯೋತಿಷಿ ರಸೋ ಜ್ಯೋತೀ ರೂಪೇ ಪ್ರಲೀಯತೇ
॥ ೨೩ ॥

ರೂಪಂ ವಾಯೌ ಸ ಚ ಸ್ಪರ್ಶೇ ಲೀಯತೇ ಸೋಽಪಿ ಚಾಂಬರೇ ।
ಅಂಬರಂ ಶಬ್ದತನ್ಮಾತ್ರ ಇಂದ್ರಿಯಾಣಿ ಸ್ವಯೋನಿಷು
॥ ೨೪ ॥

ಈ ಇಡೀ ಜಗತ್ತು ಕರ್ಮ ಮತ್ತು ಅವುಗಳ ಸಂಸ್ಕಾರಗಳಿಂದ ಯುಕ್ತವಾಗಿದೆ. ನಾನೇ ಕಾಲರೂಪದಿಂದ ಕರ್ಮಗಳನುಸಾರ ಅವುಗಳ ಫಲದ ವಿಧಾನವನ್ನು ಮಾಡುತ್ತೇನೆ. ಈ ಗುಣಪ್ರವಾಹದಲ್ಲಿ ಬಿದ್ದು ಜೀವಿಯು ಕೆಲವೊಮ್ಮೆ ಮುಳುಗುತ್ತಾನೆ, ಕೆಲವೊಮ್ಮೆ ಮೇಲಕ್ಕೆ ಬರುತ್ತಾನೆ – ಕೆಲವೊಮ್ಮೆ ಅಧೋಗತಿಯಾದರೆ, ಕೆಲವೊಮ್ಮೆ ಅವನಿಗೆ ಪುಣ್ಯವಶದಿಂದ ಉಚ್ಚಗತಿಯು ದೊರೆಯುತ್ತದೆ. ॥ ೧೫ ॥ ಜಗತ್ತಿನಲ್ಲಿ ಚಿಕ್ಕದು-ದೊಡ್ಡದು, ತೆಳ್ಳನೆಯ ದಪ್ಪನೆಯ, ಎಷ್ಟು ಪದಾರ್ಥಗಳು ಉಂಟಾಗುತ್ತವೋ ಅವೆಲ್ಲವೂ ಪ್ರಕೃತಿ-ಪುರುಷರ ಸಂಯೋಗದಿಂದಲೇ ಉಂಟಾಗುತ್ತವೆ. ॥ ೧೬ ॥

ಆದಿ ಮತ್ತು ಅಂತ್ಯದಲ್ಲಿರುವುದೇ ಮಧ್ಯದಲ್ಲಿಯೂ ಇದೆ; ಅದೇ ಸತ್ಯವಾಗಿದೆ. ವಿಕಾರವಾದರೋ ಕೇವಲ ವ್ಯವಹಾರಕ್ಕಾಗಿ ಮಾಡಿದ ಕಲ್ಪನೆಮಾತ್ರವಾಗಿದೆ. ಕಂಕಣ-ಕುಂಡಲಗಳು ಚಿನ್ನದ ವಿಕಾರಗಳು. ಮಡಿಕೆ-ಕುಡಿಕೆ ಮಣ್ಣಿನ ವಿಕಾರಗಳು. ಮೊದಲು ಚಿನ್ನ ಮತ್ತು ಮಣ್ಣೇ ಆಗಿದ್ದವು. ಕೊನೆಗೂ ಚಿನ್ನ-ಮಣ್ಣು ಆಗಿಯೇ ಉಳಿಯುವವು. ಆದ್ದರಿಂದ ನಡುವಿನಲ್ಲಿಯೂ ಚಿನ್ನ, ಮಣ್ಣೇ ಆಗಿವೆ. ಪೂರ್ವವರ್ತಿ ಕಾರಣ (ಮಹತ್ತತ್ತ್ವಾದಿ)ವೂ ಯಾವ ಪರಮ ಕಾರಣವನ್ನು ಉಪಾದಾನವಾಗಿಸಿಕೊಂಡು ಅಪರ (ಅಹಂಕಾರಾದಿ) ಕಾರ್ಯ-ವರ್ಗವನ್ನು ಸೃಷ್ಟಿಸುತ್ತದೆಯೋ ಅದೇ ಅವುಗಳಿಗಿಂತಲೂ ಪರಮಸತ್ಯವಾಗಿದೆ. ತಾತ್ಪರ್ಯ – ಯಾವುದೇ ಕಾರ್ಯದ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಇರುವುದೋ ಅದೇ ಸತ್ಯವಾಗಿದೆ. ॥ ೧೭-೧೮ ॥ ಈ ಪ್ರಪಂಚದ ಉಪಾದನ ಕಾರಣ ಪ್ರಕೃತಿಯಾಗಿದೆ, ಆಧಾರ ಪುರುಷ (ಜೀವಾತ್ಮಾ) ಆಗಿದ್ದಾನೆ, ಇದನ್ನು ಪ್ರಕಟಪಡಿಸುವವನು ಕಾಲವಾಗಿದೆ. ಈ ತ್ರಿವಿಧತೆ ವಸ್ತುತಃ ಬ್ರಹ್ಮಸ್ವರೂಪವೇ ಆಗಿದೆ ಆ ಶುದ್ಧಬ್ರಹ್ಮನು ನಾನೇ ಆಗಿದ್ದೇನೆ. ॥ ೧೯ ॥ ಪರಮಾತ್ಮನ ಈಕ್ಷಣ ಶಕ್ತಿಯು ತನ್ನ ಕೆಲಸ ಮಾಡುತ್ತಿರುವವರೆಗೆ, ಅವನ ಪಾಲನ ಪ್ರವೃತ್ತಿ ನಡೆಯುತ್ತಾ ಇರುವವರೆಗೆ, ಜೀವಿಗಳ ಕರ್ಮಭೋಗಗಳಿಗಾಗಿ ಕಾರಣವು – ಕಾರ್ಯರೂಪದಿಂದ ಅಥವಾ ಪಿತಾ-ಪುತ್ರಾದಿರೂಪದಿಂದ ಈ ಸೃಷ್ಟಿಚಕ್ರವು ನಿರಂತರ ನಡೆಯುತ್ತಾ ಇರುತ್ತದೆ. ॥ ೨೦ ॥ ಈ ವಿರಾಟವೇ ವಿವಿಧ ಲೋಕಗಳ ಸೃಷ್ಟಿ ಸ್ಥಿತಿ, ಸಂಹಾರದ ಲೀಲಾಭೂಮಿಯಾಗಿದೆ. ನಾನು ಪ್ರಳಯದ ಸಂಕಲ್ಪಮಾಡಿದಾಗ, ಕಾಲರೂಪದಿಂದ ಇದರಲ್ಲಿ ಪ್ರವೇಶಿಸುತ್ತೇನೆ. ಆಗ ಇದು ಭವನಗಳೊಂದಿಗೆ ವಿನಾಶಕ್ಕೆ ಯೋಗ್ಯವಾಗುತ್ತದೆ. ॥ ೨೧ ॥ ಅದರ ಲೀನವಾಗುವ ಪ್ರಕ್ರಿಯೆ ಹೀಗಿದೆ – ಪ್ರಾಣಿಗಳ ಶರೀರವು ಅನ್ನದಲ್ಲಿ, ಅನ್ನವು ಬೀಜದಲ್ಲಿ, ಬೀಜವು ಭೂಮಿಯಲ್ಲಿ, ಭೂಮಿಯು ಗಂಧ ತನ್ಮಾತ್ರೆಯಲ್ಲಿ ಲೀನವಾಗಿ ಹೋಗುತ್ತದೆ. ॥ ೨೨ ॥ ಗಂಧವು ಜಲದಲ್ಲಿ, ಜಲವು ತನ್ನ ಗುಣ ರಸದಲ್ಲಿ, ರಸವು ತೇಜದಲ್ಲಿ, ತೇಜವು ರೂಪದಲ್ಲಿ ಲೀನವಾಗಿ ಹೋಗುತ್ತದೆ. ॥ ೨೩ ॥ ರೂಪವು ವಾಯುವಿನಲ್ಲಿ, ವಾಯು ಸ್ಪರ್ಶದಲ್ಲಿ, ಸ್ಪರ್ಶ ಆಕಾಶದಲ್ಲಿ, ಆಕಾಶವು ಶಬ್ದ ತನ್ಮಾತ್ರೆಯಲ್ಲಿ ಲೀನವಾಗುತ್ತದೆ. ಇಂದ್ರಿಯಗಳು ತಮ್ಮ-ತಮ್ಮ ಕಾರಣ ದೇವತೆಗಳಲ್ಲಿ ಮತ್ತು ಕೊನೆಗೆ ರಾಜಸ ಅಹಂಕಾರದಲ್ಲಿ ಸೇರಿ ಹೋಗುತ್ತವೆ. ॥ ೨೪ ॥

ಯೋನಿರ್ವೈಕಾರಿಕೇ ಸೌಮ್ಯ ಲೀಯತೇ ಮನಸೀಶ್ವರೇ ।
ಶಬ್ದೋ ಭೂತಾದಿಮಪ್ಯೇತಿ ಭೂತಾದಿರ್ಮಹತಿ ಪ್ರಭುಃ
॥ ೨೫ ॥

ಸೌಮ್ಯನೇ ! ರಾಜಸ ಅಹಂಕಾರವು ತನ್ನ ನಿಯಂತಾ ಸಾತ್ತ್ವಿಕ ಅಹಂಕಾರರೂಪೀ ಮನಸ್ಸಿನಲ್ಲಿ ಶಬ್ದತನ್ಮಾತ್ರೆ ಪಂಚಭೂತಗಳ ಕಾರಣ ತಾಮಸ ಅಹಂಕಾರದಲ್ಲಿ ಹಾಗೂ ಇಡೀ ಜಗತ್ತನ್ನು ಮೋಹಿತಗೊಳಿಸಲು ಸಮರ್ಥವಾದ ತ್ರಿವಿಧ ಅಹಂಕಾರವು ಮಹತ್ತತ್ತ್ವದಲ್ಲಿ ಲೀನವಾಗುತ್ತದೆ. ॥ ೨೫ ॥ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಪ್ರಧಾನ ಮಹತ್ತತ್ತ್ವವು ತನ್ನ ಕಾರಣ ಗುಣಗಳಲ್ಲಿ ಲೀನವಾಗುತ್ತದೆ. ಗುಣಗಳು ಅವ್ಯಕ್ತ ಪ್ರಕೃತಿಯಲ್ಲಿ ಹಾಗೂ ಪ್ರಕೃತಿಯು ತನ್ನ ಪ್ರೇರಕ ಅವಿನಾಶೀ ಕಾಲನಲ್ಲಿ ಲೀನವಾಗಿ ಹೋಗುತ್ತದೆ. ॥ ೨೬ ॥ ಕಾಲವು ಮಾಯಾಮಯ (ವಿದ್ಯಾಮಯ) ಜೀವನಲ್ಲಿ ಮತ್ತು ಜೀವನು ಅಜನ್ಮಾ ಆತ್ಮನಾದ ನನ್ನಲ್ಲಿ ಲೀನವಾಗಿ ಹೋಗುತ್ತಾನೆ. ಆತ್ಮವು ಯಾವುದರಲ್ಲಿಯೂ ಲೀನವಾಗುವುದಿಲ್ಲ. ಅವನು ಉಪಾಧಿರಹಿತ ತನ್ನ ಸ್ವರೂಪದಲ್ಲೇ ಸ್ಥಿತವಾಗಿರುತ್ತದೆ. ಅವನು ಜಗತ್ತಿನ ಸೃಷ್ಟಿ ಹಾಗೂ ಲಯದ ಅಧಿಷ್ಠಾನ ಮತ್ತು ಅವಧಿಯಾಗಿದ್ದಾನೆ. ॥ ೨೭ ॥ ಉದ್ಧವನೇ ! ಈ ಪ್ರಕಾರ ವಿವೇಕ ದೃಷ್ಟಿಯಿಂದ ನೋಡುವವನ ಚಿತ್ತದಲ್ಲಿ ಈ ಪ್ರಪಂಚದ ಭ್ರಮೆ ಎಂದಿಗೂ ಆಗಲಾರದು. ಒಂದೊಮ್ಮೆ ಅದರ ಸ್ಫೂರ್ತಿ ಉಂಟಾದರೂ ಅದು ಹೆಚ್ಚು ಸಮಯದವರೆಗೆ ಹೇಗೆ ನಿಲ್ಲಬಲ್ಲದು ? ಸೂರ್ಯೋದಯವಾದ ಬಳಿಕವೂ ಆಕಾಶದಲ್ಲಿ ಅಂಧಕಾರವು ಇರಬಲ್ಲುದೇ ? ॥ ೨೮ ॥ ಎಲೈ ಉದ್ಧವನೇ ! ನಾನು ಕಾರ್ಯ ಮತ್ತು ಕಾರಣ ಇವೆರಡರ ಸಾಕ್ಷಿಯಾಗಿದ್ದೇನೆ. ನಾನು ನಿನಗೆ ಸೃಷ್ಟಿಯಿಂದ ಪ್ರಳಯದ ಮತ್ತು ಪ್ರಳಯದಿಂದ ಸೃಷ್ಟಿವರೆಗಿನ ಸಾಂಖ್ಯವಿಧಿಯನ್ನು ತಿಳಿಸಿಹೇಳಿದೆ. ಇದರಿಂದ ಸಂದೇಹದ ಗ್ರಂಥಿಯು ಬಿಚ್ಚಲ್ಪಟ್ಟು, ಪುರುಷನು ತನ್ನ ಸ್ವರೂಪದಲ್ಲಿ ಸ್ಥಿತನಾಗಿ ಹೋಗುತ್ತಾನೆ. ॥ ೨೯ ॥

ಸ ಲೀಯತೇ ಮಹಾನ್ಸ್ವೇಷು ಗುಣೇಷು ಗುಣವತ್ತಮಃ ।
ತೇऽವ್ಯಕ್ತೇ ಸಂಪ್ರಲೀಯಂತೇ ತತ್ಕಾಲೇ ಲೀಯತೇऽವ್ಯಯೇ
॥ ೨೬ ॥

ಕಾಲೋ ಮಾಯಾಮಯೇ ಜೀವೇ ಜೀವ ಆತ್ಮನಿ ಮಯ್ಯಜೇ ।
ಆತ್ಮಾ ಕೇವಲ ಆತ್ಮಸ್ಥೋ ವಿಕಲ್ಪಾಪಾಯಲಕ್ಷಣಃ
॥ ೨೭ ॥

ಏವಮನ್ವೀಕ್ಷಮಾಣಸ್ಯ ಕಥಂ ವೈಕಲ್ಪಿಕೋ ಭ್ರಮಃ ।
ಮನಸೋ ಹೃದಿ ತಿಷ್ಠೇತ ವ್ಯೋಮ್ನೋ ವಾರ್ಕೋದಯೇ ತಮಃ
॥ ೨೮ ॥

ಏಷ ಸಾಂಖ್ಯ ವಿಧಿಃ ಪ್ರೋಕ್ತಃ ಸಂಶಯಗ್ರಂಥಿ ಭೇದನಃ ।
ಪ್ರತಿಲೋಮಾನುಲೋಮಾಭ್ಯಾಂ ಪರಾವರದೃಶಾ ಮಯಾ
॥ ೨೯ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಚತುರ್ವಿಂಶೋऽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ಮೂರೂ ಗುಣವೃತ್ತಿಗಳ ನಿರೂಪಣೆ

ಶ್ರೀಭಗವಾನುವಾಚ

ಗುಣಾನಾಮಸಮಿಶ್ರಾಣಾಂ ಪುಮಾನ್ ಯೇನ ಯಥಾ ಭವೇತ್ ।
ತನ್ಮೇ ಪುರುಷವರ್ಯೇದಮುಪಧಾರಯ ಶಂಸತಃ
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪುರುಷಪುಂಗವ ಉದ್ಧವನೇ ! ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಪ್ರ-ಪ್ರತ್ಯೇಕ ಗುಣಗಳು ಪ್ರಕಾಶಬೀರುತ್ತವೆ. ಅವುಗಳ ಕಾರಣದಿಂದ ಪ್ರಾಣಿಗಳ ಸ್ವಭಾವ ದಲ್ಲಿಯೂ ಭೇದಗಳು ಉಂಟಾಗುತ್ತವೆ. ಯಾವ ಗುಣದಿಂದ ಯಾವ-ಯಾವ ಸ್ವಭಾವಗಳು ಉಂಟಾಗುತ್ತವೆ ಎಂಬುದನ್ನು ನಾನು ಈಗ ತಿಳಿಸುತ್ತೇನೆ. ಮನಸ್ಸಿಟ್ಟು ಕೇಳು. ॥ ೧ ॥

ಶಮೋ ದಮಸ್ತಿತಿಕ್ಷೇಕ್ಷಾ ತಪಃ ಸತ್ಯಂ ದಯಾ ಸ್ಮೃತಿಃ ।
ತುಷ್ಟಿಸ್ತ್ಯಾಗೋऽಸ್ಪೃಹಾ ಶ್ರದ್ಧಾ ಹ್ರೀರ್ದಯಾದಿಃಸ್ವನಿರ್ವೃತಿಃ
॥ ೨ ॥

ಶಮ (ಮನಸ್ಸಿನ ಸಂಯಮ), ದಮ (ಇಂದ್ರಿಯನಿಗ್ರಹ), ತಿತಿಕ್ಷಾ (ಸಹಿಷ್ಣುತೆ), ವಿವೇಕ, ತಪಸ್ಸು, ಸತ್ಯ, ದಯೆ, ಸ್ಮೃತಿ, ಸಂತೋಷ, ತ್ಯಾಗ, ವಿಷಯಗಳ ಕುರಿತು ಅನಿಚ್ಛೆ, ಶ್ರದ್ಧೆ, ಲಜ್ಜೆ (ಪಾಪಮಾಡು

ಕಾಮ ಈಹಾ ಮದಸ್ತೃಷ್ಣಾ ಸ್ತಂಭ ಆಶೀರ್ಭಿದಾ ಸುಖಿಮ್ ।
ಮದೋತ್ಸಾಹೋ ಯಶಃ ಪ್ರೀತಿರ್ಹಾಸ್ಯಂ ವೀರ್ಯಂ ಬಲೋದ್ಯಮಃ
॥ ೩ ॥

ಕ್ರೋಧೋ ಲೋಭೋಽನೃತಂ ಹಿಂಸಾ ಯಾಚ್ಞಾ ದಂಭಃ ಕ್ಲಮಃ ಕಲಿಃ ।
ಶೋಕಮೋಹೌ ವಿಷಾದಾರ್ತಿ ನಿದ್ರಾಽಽಶಾ ಭೀರನುದ್ಯಮಃ
॥ ೪ ॥

ಸತ್ತ್ವಸ್ಯ ರಜಸಶ್ಚೈತಾಸ್ತಮಸಶ್ಚಾನುಪೂರ್ವಶಃ ।
ವೃತ್ತಯೋ ವರ್ಣಿತಪ್ರಾಯಾಃ ಸನ್ನಿಪಾತಮಥೋ ಶೃಣು
॥ ೫ ॥

ಸನ್ನಿಪಾತಸ್ತ್ವಹಮಿತಿ ಮಮೇತ್ಯುದ್ಧವ ಯಾ ಮತಿಃ ।
ವ್ಯವಹಾರಃ ಸನ್ನಿಪಾತೋ ಮನೋಮಾತ್ರೇಂದ್ರಿಯಾಸುಭಿಃ
॥ ೬ ॥

ಧರ್ಮೇ ಚಾರ್ಥೇ ಚ ಕಾಮೇ ಚ ಯದಾಸೌ ಪರಿನಿಷ್ಠಿತಃ ।
ಗುಣಾನಾಂ ಸನ್ನಿಕರ್ಷೋಽಯಂ ಶ್ರದ್ಧಾರತಿಧನಾವಹಃ
॥ ೭ ॥

ಪ್ರವೃತ್ತಿಲಕ್ಷಣೇ ನಿಷ್ಠಾ ಪುಮಾನ್ಯರ್ಹಿ ಗೃಹಾಶ್ರಮೇ ।
ಸ್ವಧರ್ಮೇ ಚಾನುತಿಷ್ಠೇತ ಗುಣಾನಾಂ ಸಮಿತಿರ್ಹಿ ಸಾ
॥ ೮ ॥

ಪುರುಷಂ ಸತ್ತ್ವಸಂಯುಕ್ತಮನುಮೀಯಾಚ್ಛಮಾದಿಭಿಃ ।
ಕಾಮಾದಿಭೀ ರಜೋಯುಕ್ತಂ ಕ್ರೋಧಾದ್ಯೈಸ್ತಮಸಾ ಯುತಮ್
॥ ೯ ॥

ಯದಾ ಭಜತಿ ಮಾಂ ಭಕ್ತ್ಯಾ ನಿರಪೇಕ್ಷಃ ಸ್ವಕರ್ಮಭಿಃ ।
ತಂ ಸತ್ತ್ವಪ್ರಕೃತಿಂ ವಿದ್ಯಾತ್ಪುರುಷಂ ಸ್ತ್ರಿಯಮೇವ ವಾ
॥ ೧೦ ॥

ಯದಾ ಆಶಿಷ ಆಶಾಸ್ಯ ಮಾಂ ಭಜೇತ ಸ್ವಕರ್ಮಭಿಃ ।
ತಂ ರಜಃಪ್ರಕೃತಿಂ ವಿದ್ಯಾದ್ಹಿಂಸಾಮಾಶಾಸ್ಯ ತಾಮಸಮ್
॥ ೧೧ ॥

ಸತ್ತ್ವಂ ರಜಸ್ತಮ ಇತಿ ಗುಣಾ ಜೀವಸ್ಯ ನೈವ ಮೇ ।
ಚಿತ್ತಜಾ ಯೈಸ್ತು ಭೂತಾನಾಂ ಸಜ್ಜಮಾನೋ ನಿಬಧ್ಯತೇ
॥ ೧೨ ॥

ವುದರಲ್ಲಿ ಸ್ವಾಭಾವಿಕ ಸಂಕೋಚ), ಅತೃಪ್ತಿ, ದಾನ, ವಿನಯ, ಸರಳತೆ ಮುಂತಾದವುಗಳು ಸತ್ತ್ವಗುಣದ ವೃತ್ತಿಗಳು. ॥ ೨ ॥ ಇಚ್ಛೆ, ಪ್ರಯತ್ನ ಮದ, ತೃಷ್ಣೆ (ತೃಪ್ತಿಯಿಲ್ಲದಿರುವುದು) ಗರ್ವ, ಧನಕ್ಕಾಗಿ ದೇವತೆಗಳಲ್ಲಿ ಪ್ರಾರ್ಥನೆ, ಭೇದಬುದ್ಧಿ ವಿಷಯಭೋಗ, ಯುದ್ಧಾದಿಗಳಲ್ಲಿ ಮದಜನಿತ ಉತ್ಸಾಹ, ತನ್ನ ಕೀರ್ತಿಯಲ್ಲಿ ಪ್ರೀತಿ, ಹಾಸ್ಯ, ಪರಾಕ್ರಮ, ಹಠದಿಂದ ಉದ್ಯೋಗಮಾಡುವ ಪ್ರವೃತ್ತಿ – ಇವು ರಜೋಗುಣದ ವೃತ್ತಿಗಳು. ॥ ೩ ॥ ಕ್ರೋಧ (ಅಸಹಿಷ್ಣುತೆ), ಲೋಭ, ಸುಳ್ಳುಹೇಳುವುದು, ಹಿಂಸೆ, ಯಾಚನೆ, ಡಂಭಾಚಾರ, ಶ್ರಮ, ಕಲಹ, ಶೋಕ, ಮೋಹ, ವಿಷಾದ, ದೀನತೆ, ನಿದ್ದೆ, ಆಸೆ, ಭಯ, ಅಕರ್ಮಣ್ಯತೆ – ಇವು ತಮೋಗುಣದ ವೃತ್ತಿಗಳು. ॥ ೪ ॥ ಈ ಕ್ರಮದಿಂದ ಸತ್ತ್ವಗುಣ, ರಜೋಗುಣ, ತಮೋಗುಣ ಇವುಗಳು ಅಧಿಕಾಂಶವಿರುವ ವ್ಯಕ್ತಿಗಳ ವೃತ್ತಿಗಳನ್ನು ಬೇರೆ-ಬೇರೆಯಾಗಿ ವರ್ಣಿಸಿರುವೆನು. ಈಗ ಅವುಗಳ ಬೆರಕೆಯಿಂದ ಆಗುವ ವೃತ್ತಿಗಳ ವರ್ಣನೆಯನ್ನು ಕೇಳು. ॥ ೫ ॥ ಉದ್ಧವನೇ ! ಮೂರೂ ಗುಣಗಳ ಮಿಶ್ರಣದಿಂದಲೇ 'ನಾನು' ಮತ್ತು 'ನನ್ನದು' ಎಂಬ ಬುದ್ಧಿಯು ಉತ್ಪನ್ನವಾಗುತ್ತದೆ. ಮನಸ್ಸು, ಶಬ್ದಾದಿ ವಿಷಯಗಳು, ಇಂದ್ರಿಯಗಳು ಮತ್ತು ಪ್ರಾಣಗಳು ಇವುಗಳ ಕಾರಣದಿಂದ ವೃತ್ತಿಗಳ ವ್ಯವಹಾರ ನಡೆಯುತ್ತದೆ. ಸಾತ್ತ್ವಿಕ, ರಾಜಸ, ತಾಮಸ ಮೂರೂ ಗುಣಗಳ ಮಿಶ್ರಣದಿಂದಲೇ ಕ್ರಿಯೆಗಳು ನಡೆಯುತ್ತವೆ. ॥ ೬ ॥ ಮನುಷ್ಯನು ಧರ್ಮ, ಅರ್ಥ, ಕಾಮರೂಪೀ ಪುರುಷಾರ್ಥಗಳನ್ನು ಸಾಧಿಸಲು ತೊಡಗಿದಾಗ, ಅವನಿಗೆ ಮೂರೂ ಗುಣಗಳ ಆವಶ್ಯಕತೆ ಬೀಳುತ್ತದೆ. ಆಗ ಅವನಿಗೆ ಸತ್ತ್ವಗುಣದಿಂದ ಶ್ರದ್ಧೆ, ರಜೋಗುಣದಿಂದ ಆಸಕ್ತಿ, ತಮೋಗುಣದಿಂದ ಧನದ ಪ್ರಾಪ್ತಿಯಾಗುತ್ತದೆ. ಇದೂ ಕೂಡ ಗುಣಗಳ ಮಿಶ್ರಣವೇ ಆಗಿದೆ. ॥ ೭ ॥ ಮನುಷ್ಯನು ಸಕಾಮ ಕರ್ಮದ ಅನುಷ್ಠಾನ ಮಾಡುವಾಗ ಅಥವಾ ಅವನು ಗೃಹಸ್ಥಾಶ್ರಮದಲ್ಲಿ ನಿಷ್ಠೆ ಇರಿಸುತ್ತಾ ತನ್ನ ಕರ್ಮಗಳನ್ನು ಪಾಲಿಸುವಾಗಲೂ ಅವನಲ್ಲಿ ಮೂರೂ ಗುಣಗಳ ಸಮ್ಮಿಶ್ರಣವಿದೆ ಎಂದು ತಿಳಿಯಬೇಕು. ॥ ೮ ॥

ಮಾನಸಿಕ ಶಾಂತಿ, ಜಿತೇಂದ್ರಿಯತೆ ಮೊದಲಾದ ಗುಣಗಳಿಂದ ಸತ್ತ್ವಗುಣೀ ಮನುಷ್ಯನ, ಕಾಮನೆ ಮೊದಲಾದವುಗಳಿಂದ ರಜೋಗುಣಿ ವ್ಯಕ್ತಿಯ ಕ್ರೋಧ, ಹಿಂಸೆ ಮುಂತಾದ ಗುಣಗಳಿಂದ ತಮೋಗುಣಿಯ ಪರಿಚಯವಾಗುತ್ತದೆ. ॥ ೯ ॥ ಪುರುಷರಿರಲೀ, ಸ್ತ್ರೀಯಾಗಿರಲೀ ಅವರು ನಿಷ್ಕಾಮರಾಗಿ ತಮ್ಮ ನಿತ್ಯ ನೈಮಿತ್ತಿಕ ಕರ್ಮಗಳ ಮೂಲಕ ನನ್ನನ್ನು ಆರಾಧಿಸುತ್ತಿದ್ದರೆ ಅವರನ್ನು ಸತ್ತ್ವಗುಣಿಗಳು ಎಂದು ತಿಳಿಯಬೇಕು. ॥ ೧೦ ॥ ಸಕಾಮಭಾವದಿಂದ ತನ್ನ ಕರ್ಮಗಳ ಮೂಲಕ ನನ್ನ ಭಜನೆ-ಪೂಜೆ ಮಾಡುವವನು ರಜೋಗುಣಿಯಾಗಿದ್ದಾನೆ. ತನ್ನ ಶತ್ರುವಿನ ಮೃತ್ಯುಗಾಗಿ, ಹಿಂಸಾಯುಕ್ತ ನನ್ನ ಭಜನೆ-ಪೂಜೆ ಮಾಡುವವನು ತಮೋಗುಣೀ ಎಂದು ತಿಳಿಯಬೇಕು. ॥ ೧೧ ॥ ಸತ್ತ್ವ, ರಜ, ತಮ ಈ ಮೂರೂ ಗುಣಗಳು ಜೀವಿಯದಾಗಿವೆ. ಪರಮಾತ್ಮನಾದ ನನ್ನವುಗಳಲ್ಲ. ಇವು ಪ್ರಾಣಿಗಳ ಚಿತ್ತದಲ್ಲಿ ಹುಟ್ಟುತ್ತವೆ. ಈ ಗುಣಗಳ ಕಾರಣದಿಂದಲೇ ಶರೀರ, ಧನಾದಿಗಳಲ್ಲಿ ಆಸಕ್ತನಾಗಿ ಜೀವಿಯು ಸ್ವಯಂ ಬಂಧಿತನಾಗುತ್ತಾನೆ. ॥ ೧೨ ॥

ಯದೇತರೌ ಜಯೇತ್ಸ್ತ್ವಂ ಭಾಸ್ವರಂ ವಿಶದಂ ಶಿವಮ್ ।
ತದಾ ಸುಖೇನ ಯುಜ್ಯೇತ ಧರ್ಮಜ್ಞಾನಾದಿಭಿಃ ಪುಮಾನ್
॥ ೧೩ ॥

ಯದಾ ಜಯೇತ್ತಮಃ ಸತ್ತ್ವಂ ರಜಃ ಸಂಗಂ ಭಿದಾ ಚಲಮ್ ।
ತದಾ ದುಃಖೇನ ಯುಜ್ಯೇತ ಕರ್ಮಣಾ ಯಶಸಾ ಶ್ರಿಯಾ
॥ ೧೪ ॥

ಯದಾ ಜಯೇದ್ರಜಃ ಸತ್ತ್ವಂ ತಮೋ ಮೂಢಂ ಲಯಂ ಜಡಮ್ ।
ಯುಜ್ಯೇತ ಶೋಕಮೋಹಾಭ್ಯಾಂ ನಿದ್ರಯಾ ಹಿಂಸಯಾऽಶಯಾ
॥ ೧೫ ॥

ಯದಾ ಚಿತ್ತಂ ಪ್ರಸೀದೇತ ಇಂದ್ರಿಯಾಣಾಂ ಚ ನಿರ್ವೃತಿಃ ।
ದೇಹೇऽಭಯಂ ಮನೋऽಸಂಗಂ ತತ್ಸತ್ತ್ವಂ ವಿದ್ಧಿ ಮತ್ಪದಮ್
॥ ೧೬ ॥

ವಿಕುರ್ವನ್ಕ್ರಿಯಯಾ ಚಾಧೀರನಿರ್ವೃತ್ತಿಶ್ಚ ಚೇತಸಾಮ್ ।
ಗಾತ್ರಾಸ್ವಾಸ್ಥ್ಯಂ ಮನೋ ಭ್ರಾಂತಂ ರಜ ಏತೈರ್ನಿಶಾಮಯ
॥ ೧೭ ॥

ಸೀದಚ್ಚಿತ್ತಂ ವಿಲೀಯೇತ ಚೇತಸೋ ಗ್ರಹಣೇऽಕ್ಷಮಮ್ ।
ಮನೋ ನಷ್ಟಂ ತಮೋ ಗ್ಲಾನಿಸ್ತಮಸ್ತದುಪಧಾರಯ
॥ ೧೮ ॥

ಏಧಮಾನೇ ಗುಣೇ ಸತ್ತ್ವೇ ದೇವಾನಾಂ ಬಲಮೇಧತೇ ।
ಅಸುರಾಣಾಂ ಚ ರಜಸಿ ತಮಸ್ಯುದ್ಧವ ರಕ್ಷಸಾಮ್
॥ ೧೯ ॥

ಸತ್ತ್ವಾಜ್ಜಾಗರಣಂ ವಿದ್ಯಾದ್ರಜಸಾ ಸ್ವಪ್ನಮಾದಿಶೇತ್ ।
ಪ್ರಸ್ವಾಪಂ ತಮಸಾ ಜಂತೋಸ್ತುರೀಯಂ ತ್ರಿಷು ಸಂತತಮ್
॥ ೨೦ ॥

ಉಪರ್ಯುಪರಿ ಗಚ್ಛಂತಿ ಸತ್ತ್ವೇನ ಬ್ರಾಹ್ಮಣಾ ಜನಾಃ ।
ತಮಸಾಧೋऽಥ ಆಮುಖ್ಯಾದ್ ರಜಸಾಂತರಚಾರಿಣಃ
॥ ೨೧ ॥

ಸತ್ತ್ವಗುಣವು ಪ್ರಕಾಶಕ, ನಿರ್ಮಲ ಮತ್ತು ಶಾಂತವಾಗಿದೆ. ಅದು ರಜೋಗುಣ, ತಮೋಗುಣಗಳನ್ನು ಅದುಮಿ ಬೆಳೆದಾಗ ಪುರುಷನು ಸುಖಿ, ಧರ್ಮ, ಜ್ಞಾನ ಮುಂತಾದುವನ್ನು ಪಡೆದು ಕೊಳ್ಳುತ್ತಾನೆ. ॥ ೧೩ ॥ ರಜೋಗುಣವು ಭೇದಬುದ್ಧಿಯ ಕಾರಣವಾಗಿದೆ. ಆಸಕ್ತಿ ಮತ್ತು ಪ್ರವೃತ್ತಿ ಅದರ ಸ್ವಭಾವವಾಗಿದೆ. ತಮೋಗುಣ ಮತ್ತು ಸತ್ತ್ವಗುಣಗಳನ್ನು ಅದುಮಿ ರಜೋಗುಣವು ಬೆಳೆದಾಗ ಮನುಷ್ಯನು ದುಃಖ, ಕರ್ಮ, ಕೀರ್ತಿ, ಲಕ್ಷ್ಮೀ (ಸಂಪತ್ತು) ಇವುಗಳಿಂದ ಸಂಪನ್ನನಾಗುತ್ತಾನೆ. ॥ ೧೪ ॥ ತಮೋಗುಣದ ಸ್ವರೂಪವು ಅಜ್ಞಾನವಾಗಿದೆ. ಆಲಸ್ಯ, ಬುದ್ಧಿಯ ಮೂಢತೆ ಅದರ ಸ್ವಭಾವವಾಗಿದೆ. ಆ ತಮೋಗುಣವು ಬೆಳೆದು ಸತ್ತ್ವಗುಣ ಮತ್ತು ರಜೋಗುಣಗಳನ್ನು ಅದುಮಿಬಿಡುತ್ತದೋ ಆಗ ಪ್ರಾಣಿಯು ಬಗೆ-ಬಗೆಯ ಆಸೆಗಳನ್ನು ಮಾಡುತ್ತಾನೆ. ಶೋಕ-ಮೋಹದಲ್ಲಿ ಬೀಳುವನು. ಹಿಂಸಿಸಲು ತೊಡಗುವನು. ಅಥವಾ ನಿದ್ರಾ-ಆಲಸ್ಯಕ್ಕೆ ವಶೀಭೂತನಾಗಿ ಮಲಗಿಕೊಂಡೇ ಇರುವನು. ॥ ೧೫ ॥ ಚಿತ್ತವು ಪ್ರಸನ್ನವಾದಾಗ, ಇಂದ್ರಿಯಗಳು ಶಾಂತವಾದಾಗ, ದೇಹವು ನಿರ್ಭಯವಾದಾಗ, ಮನಸ್ಸಿನಲ್ಲಿ ಆಸಕ್ತಿಯು ಉಳಿಯದಿದ್ದಾಗ, ಸತ್ತ್ವಗುಣವು ವೃದ್ಧಿಯಾಗಿದೆ ಎಂದು ತಿಳಿಯಬೇಕು. ಸತ್ತ್ವಗುಣವು ನನ್ನ ಪ್ರಾಪ್ತಿಯ ಸಾಧನೆಯಾಗಿದೆ. ॥ ೧೬ ॥ ಕೆಲಸ ಮಾಡುತ್ತಾ-ಮಾಡುತ್ತಾ ಜೀವಿಯ ಬುದ್ಧಿಯು ಚಂಚಲವಾದಾಗ; ಜ್ಞಾನೇಂದ್ರಿಯಗಳು ಅಸಂತುಷ್ಟರಾಗಿ, ಕರ್ಮೇಂದ್ರಿಯಗಳು ವಿಕಾರದಿಂದ ಕೂಡಿದರೆ; ಮನಸ್ಸು ಭ್ರಾಂತವಾಗಿ, ಶರೀರವು ಅಸ್ವಸ್ಥವಾದಾಗ ರಜೋಗುಣದ ವೇಗವು ಹೆಚ್ಚುತ್ತಿದೆ ಎಂದು ತಿಳಿಯಬೇಕು. ॥ ೧೭ ॥ ಚಿತ್ತವು ಜ್ಞಾನೇಂದ್ರಿಯಗಳ ಮೂಲಕ ಶಬ್ದಾದಿ ವಿಷಯಗಳನ್ನು ಸರಿಯಾಗಿ ಅರಿಯಲು ಅಸಮರ್ಥವಾದಾಗ ಮತ್ತು ಖಿನ್ನವಾಗಿ ಲೀನವಾಗತೊಡಗಿದಾಗ, ಮನಸ್ಸು ಬರಿದಾಗಿ, ಅಜ್ಞಾನ, ವಿಷಾದಗಳು ಹೆಚ್ಚಿದಾಗ, ತಮೋಗುಣವು ಹೆಚ್ಚಿರುವುದನ್ನು ತಿಳಿಯಬೇಕು. ॥ ೧೮ ॥

ಉದ್ಧವನೇ! ಸತ್ತ್ವಗುಣವು ವೃದ್ಧಿಯಾದಾಗ ದೇವತೆಗಳ, ರಜೋಗುಣ ಬೆಳೆದಾಗ ಅಸುರರ, ತಮೋಗುಣವು ಹೆಚ್ಚಿದಾಗ ರಾಕ್ಷಸರ ಬಲವು ಹೆಚ್ಚುತ್ತದೆ. (ವೃತ್ತಿಗಳಲ್ಲಿಯೂ ಕ್ರಮಶಃ ಸತ್ತ್ವಾದಿ ಗುಣಗಳ ಹೆಚ್ಚಳ ಉಂಟಾದಾಗ ದೇವತ್ವ, ಅಸುರತ್ವ, ರಾಕ್ಷಸತ್ವ ಪ್ರಧಾನವಾದ ನಿವೃತ್ತಿ, ಪ್ರವೃತ್ತಿ, ಮೋಹದ ಪ್ರಧಾನತೆ ಉಂಟಾಗುತ್ತದೆ.) ॥ ೧೯ ॥ ಸತ್ತ್ವಗುಣದಿಂದ ಜಾಗ್ರತ್-ಅವಸ್ಥೆ, ರಜೋಗುಣದಿಂದ ಸ್ವಪ್ನಾವಸ್ಥೆ ತಮೋಗುಣದಿಂದ ಸುಷುಪ್ತಿ-ಅವಸ್ಥೆ ಉಂಟಾಗುತ್ತವೆ. ಈ ಮೂರರಲ್ಲಿಯೂ ತುರೀಯವು ಸಮಾನವಾಗಿ ವ್ಯಾಪಿಸಿರುತ್ತದೆ. ಅದೇ ಶುದ್ಧ, ಏಕರಸ ಆತ್ಮನಾಗಿದ್ದಾನೆ. ॥ ೨೦ ॥ ವೇದಗಳ ಅಭ್ಯಾಸದಲ್ಲಿ ತತ್ಪರರಾದ ಬ್ರಾಹ್ಮಣರು ಸತ್ತ್ವಗುಣದ ಮೂಲಕ ಉತ್ತರೋತ್ತರ ಮೇಲಿನ ಲೋಕಗಳಿಗೆ ಹೋಗುತ್ತಾರೆ. ತಮೋಗುಣದಿಂದ ಜೀವಿಗಳಿಗೆ ವೃಕ್ಷಾದಿಗಳ ವರೆಗಿನ ಅಧೋಗತಿ ಪ್ರಾಪ್ತವಾಗುತ್ತದೆ. ರಜೋಗುಣದಿಂದ ಮನುಷ್ಯ ಶರೀರವು ದೊರೆಯುತ್ತದೆ. ॥ ೨೧ ॥

ಸತ್ತ್ವೇ ಪ್ರಲೀನಾಃ ಸ್ವರ್ಯಾಂತಿ ನರಲೋಕಂ ರಜೋಲಯಾಃ ।
ತಮೋಲಯಾಸ್ತು ನಿರಯಂ ಯಾಂತಿ ಮಾಮೇವ ನಿರ್ಗುಣಾಃ
॥ ೨೨ ॥

ಮದರ್ಪಣಂ ನಿಷ್ಫಲಂ ವಾ ಸಾತ್ತ್ವಿಕಂ ನಿಜಕರ್ಮ ತತ್ ।
ರಾಜಸಂ ಫಲಸಂಕಲ್ಪಂ ಹಿಂಸಾಪ್ರಾಯಾದಿ ತಾಮಸಮ್
॥ ೨೩ ॥

ಕೈವಲ್ಯಂ ಸಾತ್ತ್ವಿಕಂ ಜ್ಞಾನಂ ರಜೋ ವೈಕಲ್ಪಿಕಂ ಚ ಯತ್ ।
ಪ್ರಾಕೃತಂ ತಾಮಸಂ ಜ್ಞಾನಂ ಮನ್ನಿಷ್ಠಂ ನಿರ್ಗುಣಂ ಸ್ಮೃತಮ್
॥ ೨೪ ॥

ವನಂ ತು ಸಾತ್ತ್ವಿಕೋ ವಾಸೋ ಗ್ರಾಮೋ ರಾಜಸ ಉಚ್ಯತೇ ।
ತಾಮಸಂ ದ್ಯೂತಸದನಂ ಮನ್ನಿಕೇತಂ ತು ನಿರ್ಗುಣಮ್
॥ ೨೫ ॥

ಸಾತ್ತ್ವಿಕಃ ಕಾರಕೋಽಸಂಗೀ ರಾಗಾಂಧೋ ರಾಜಸಃ ಸ್ಮೃತಃ ।
ತಾಮಸಃ ಸ್ಮೃತಿವಿಭ್ರಷ್ಟೋ ನಿರ್ಗುಣೋ ಮದಪಾಶ್ರಯಃ
॥ ೨೬ ॥

ಸಾತ್ತ್ವಿಕ್ಯಾಧ್ಯಾತ್ಮಿಕೀ ಶ್ರದ್ಧಾ ಕರ್ಮಶ್ರದ್ಧಾ ತು ರಾಜಸೀ ।
ತಾಮಸ್ಯಧರ್ಮೇ ಯಾ ಶ್ರದ್ಧಾ ಮತ್ಸೇವಾಯಾಂ ತು ನಿರ್ಗುಣಾ
॥ ೨೭ ॥

ಪಥ್ಯಂ ಪೂತಮನಾಯಸ್ತ ಮಾಹಾರ್ಯಂ ಸಾತ್ತ್ವಿಕಂ ಸ್ಮೃತಮ್ ।
ರಾಜಸಂ ಚೇಂದ್ರಿಯಪ್ರೇಷ್ಠಂ ತಾಮಸಂ ಚಾರ್ತಿದಾಶುಚಿ
॥ ೨೮ ॥

ಸಾತ್ತ್ವಿಕಂ ಸುಖಮಾತ್ಮೋತ್ಥಂ ವಿಷಯೋತ್ಥಂ ತು ರಾಜಸಮ್ ।
ತಾಮಸಂ ಮೋಹದೈನ್ಯೋತ್ಥಂ ನಿರ್ಗುಣಂ ಮದಪಾಶ್ರಯಮ್
॥ ೨೯ ॥

ದ್ರವ್ಯಂ ದೇಶಃ ಫಲಂ ಕಾಲೋ ಜ್ಞಾನಂ ಕರ್ಮ ಚ ಕಾರಕಃ ।
ಶ್ರದ್ಧಾವಸ್ಥಾಽಽಕೃತಿರ್ನಿಷ್ಠಾ ತ್ರೈಗುಣ್ಯಃ ಸರ್ವ ಏವ ಹಿ
॥ ೩೦ ॥

ಸತ್ತ್ವಗುಣವು, ವೃದ್ಧಿಯಾದಾಗ ಮೃತ್ಯು ಸಂಭವಿಸಿದರೆ ಅವನು ಸ್ವರ್ಗವನ್ನು ಪಡೆದುಕೊಳ್ಳುತ್ತಾನೆ, ರಜೋಗುಣವು ಹೆಚ್ಚಿದಾಗ ಮೃತ್ಯುವಾದರೆ ಅವನಿಗೆ ಮನುಷ್ಯಲೋಕ ದೊರೆಯುತ್ತದೆ. ತಮೋಗುಣವು ಬೆಳೆದಾಗ ಸತ್ತರೆ ಅವನಿಗೆ ನರಕದ ಪ್ರಾಪ್ತಿಯಾಗುತ್ತದೆ. ಆದರೆ ತ್ರಿಗುಣಾತೀತ-ಜೀವನ್ಮುಕ್ತ ಪುರುಷನಿಗೆ ನನ್ನ ಪ್ರಾಪ್ತಿಯೇ ಆಗುತ್ತದೆ. ॥ ೨೨ ॥ ತನ್ನ ಸ್ವಧರ್ಮವನ್ನು ಭಗವದರ್ಪಣ ಭಾವದಿಂದ ಅಥವಾ ನಿಷ್ಕಾಮಭಾವದಿಂದ ಮಾಡಿದಾಗ ಅದು ಸಾತ್ತ್ವಿಕವಾಗುತ್ತದೆ. ಯಾವುದೇ ಕರ್ಮಾನುಷ್ಠಾನದಲ್ಲಿ ಫಲದ ಕಾಮನೆ ಇದ್ದಾಗ ಅದು ರಾಜಸವಾಗುತ್ತದೆ. ಯಾವುದೇ ಕರ್ಮದಲ್ಲಿ ಯಾರನ್ನಾದರೂ ಸತಾಯಿಸುವ ಅಥವಾ ತೋರಿಕೆಯ ಭಾವವಿದ್ದರೆ ಅದು ತಾಮಸಿಕವಾಗುತ್ತದೆ. ॥ ೨೩ ॥ ಶುದ್ಧ ಆತ್ಮನ ಜ್ಞಾನವು ಸಾತ್ತ್ವಿಕಜ್ಞಾನವಾಗಿದೆ. ತನ್ನನ್ನು ಕರ್ತಾ-ಭೋಕ್ತಾ ಎಂದು ತಿಳಿಯುವ ಜ್ಞಾನವು ರಾಜಸವಾಗಿದೆ. ಏಕಮಾತ್ರ ತನ್ನ ಶರೀರವನ್ನೇ ಆತ್ಮನೆಂದು ತಿಳಿಯುವುದು ತಾಮಸಿಕವಾಗಿದೆ. ಈ ಮೂರರಿಂದಲೂ ವಿಲಕ್ಷಣವಾದ ನನ್ನ ಸ್ವರೂಪದ ನಿಜವಾದ ಜ್ಞಾನ ಗುಣಾತೀತವಾಗಿದೆ. ॥ ೨೪ ॥ ಏಕಾಂತ ಪವಿತ್ರದೇಶದಲ್ಲಿ ವಾಸಿಸುವುದು ಸಾತ್ತ್ವಿಕವಾಗಿದೆ. ಗೃಹಾಸಕ್ತಿ ಇರುವುದು ರಾಜಸವಾಗಿದೆ ಮತ್ತು ಜೂಜು ಮದ್ಯಪಾನಾದಿಗಳಲ್ಲಿ ಆಸಕ್ತನಾಗುವುದು ತಾಮಸಿಕವಾಗಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ನನ್ನ ಮಂದಿರದಲ್ಲಿ ವಾಸಿಸುವುದು ನಿರ್ಗುಣ ನಿವಾಸವಾಗಿದೆ. ॥ ೨೫ ॥ ಅನಾಸಕ್ತಭಾವದಿಂದ ಕರ್ಮ ಮಾಡುವವನು ಸಾತ್ತ್ವಿಕನು; ರಾಗಾಂಧನಾಗಿ ಕರ್ಮಮಾಡುವವನು ರಾಜಸಿಯು; ಪೂರ್ವಾಪರ ವಿಚಾರರಹಿತನಾಗಿ ಕರ್ಮ ಮಾಡುವವನು ತಾಮಸಿಕನಾಗಿದ್ದಾನೆ. ಇವುಗಳನ್ನು ಬಿಟ್ಟು ಕೇವಲ ನನಗೆ ಶರಣಾಗಿ, ಅಹಂಕಾರವಿಲ್ಲದೆ ಕರ್ಮಮಾಡುವವನು ನಿರ್ಗುಣನಾಗಿದ್ದಾನೆ. ॥ ೨೬ ॥ ಆತ್ಮವಿಷಯಕ ಶ್ರದ್ಧೆಯು ಸಾತ್ತ್ವಿಕವಾಗಿದೆ, ಕರ್ಮವಿಷಯಕ ಶ್ರದ್ಧೆಯು ರಾಜಸವಾಗಿದೆ. ಅಧರ್ಮದಲ್ಲಿರುವ ಶ್ರದ್ಧೆಯು ತಾಮಸವಾಗಿದೆ. ನನ್ನ ಸೇವೆಯಲ್ಲೇ ಇರುವ ಶ್ರದ್ಧೆಯು ನಿರ್ಗುಣವಾಗಿದೆ. ॥ ೨೭ ॥

ಆರೋಗ್ಯದಾಯಕ, ಪವಿತ್ರ ಮತ್ತು ಅನಾಯಾಸವಾಗಿ ದೊರೆಯುವ ಭೋಜನವು ಸಾತ್ತ್ವಿಕವಾಗಿದೆ. ನಾಲಿಗೆಗೆ ರುಚಿಯಾದ, ಸ್ವಾದಿಷ್ಟದೃಷ್ಟಿಯಿಂದ ಕೂಡಿದ ಆಹಾರವು ರಾಜಸವಾಗಿದೆ. ದುಃಖಿಮಯ, ಅಪವಿತ್ರ ಊಟವು ತಾಮಸವಾಗಿದೆ. ॥ ೨೮ ॥ ಅಂತರ್ಮುಖತೆಯಿಂದ, ಆತ್ಮಚಿಂತನೆಯಿಂದ ದೊರೆಯುವ ಸುಖವು ಸಾತ್ತ್ವಿಕವಾಗಿದೆ. ಬಹಿರ್ಮುಖತೆಯಿಂದ, ವಿಷಯಗಳಿಂದ ಸಿಗುವ ಸುಖವು ರಾಜಸವಾಗಿದೆ. ಅಜ್ಞಾನ, ದೀನತೆಯಿಂದ ಆಗುವ ಸುಖವು ತಾಮಸವಾಗಿದೆ. ನನ್ನನ್ನು ಆಶ್ರಯಿಸಿದಾಗ ಉಂಟಾಗುವ ಸುಖವು ಗುಣಾತೀತ, ಅಪ್ರಾಕೃತವಾಗಿದೆ. ॥ ೨೯ ॥

ಉದ್ಧವನೇ! ದ್ರವ್ಯ (ವಸ್ತು), ದೇಶ (ಸ್ಥಾನ), ಫಲ, ಕಾಲ, ಜ್ಞಾನ, ಕರ್ಮ, ಕರ್ತಾ, ಶ್ರದ್ಧೆ, ಅವಸ್ಥೆ, ದೇವ-ಮನುಷ್ಯ-ತಿರ್ಯಗಾದಿ ಶರೀರ ಮತ್ತು ನಿಷ್ಠೆ – ಇವೆಲ್ಲವೂ ತ್ರಿಗುಣಾತ್ಮಕವೇ ಆಗಿವೆ. ॥ ೩೦ ॥ ಪುರುಷಶ್ರೇಷ್ಠನೇ! ಪುರುಷ ಮತ್ತು ಪ್ರಕೃತಿಯ

ಸರ್ವೇ ಗುಣಮಯಾ ಭಾವಾಃ ಪುರುಷಾವ್ಯಕ್ತಧಿಷ್ಠಿತಾಃ ।
ದೃಷ್ಟಂ ಶ್ರುತಮನುಧ್ಯಾತಂ ಬುದ್ಧ್ಯಾ ವಾ ಪುರುಷರ್ಷಭ
॥ ೩೧ ॥

ಏತಾಃ ಸಂಸೃತಯಃ ಪುಂಸೋ ಗುಣಕರ್ಮನಿಬಂಧನಾಃ ।
ಯೇನೇಮೇ ನಿರ್ಜಿತಾಃ ಸೌಮ್ಯ ಗುಣಾ ಜೀವೇನ ಚಿತ್ತಜಾಃ ।
ಭಕ್ತಿಯೋಗೇನ ಮನ್ನಿಷ್ಠೋ ಮದ್ಭಾವಾಯ ಪ್ರಪದ್ಯತೇ
॥ ೩೨ ॥

ತಸ್ಮಾದ್ದೇಹಮಿಮಂ ಲಬ್ಧ್ವಾ ಜ್ಞಾನವಿಜ್ಞಾನಸಂಭವಮ್ ।
ಗುಣಸಂಗಂ ವಿನಿರ್ಧೂಯ ಮಾಂ ಭಜಂತು ವಿಚಕ್ಷಣಾಃ
॥ ೩೩ ॥

ನಿಸ್ಸಂಗೋ ಮಾಂ ಭಜೇದ್ವಿದ್ವಾನಪ್ರಮತ್ತೋ ಜಿತೇಂದ್ರಿಯಃ ।
ರಜಸ್ತಮಶ್ಚಾಭಿಜಯೇತ್ಸತ್ತ್ವ ಸಂಸೇವಯಾ ಮುನಿಃ
॥ ೩೪ ॥

ಸತ್ತ್ವಂ ಚಾಭಿಜಯೇದ್ಯುಕ್ತೋನೈರಪೇಕ್ಷ್ಯೇಣ ಶಾಂತಧೀಃ ।
ಸಂಪದ್ಯತೇ ಗುಣೈರ್ಮುಕ್ತೋ ಜೀವೋ ಜೀವಂ ವಿಹಾಯ ಮಾಮ್
॥ ೩೫ ॥

ಜೀವೋ ಜೀವವಿನಿರ್ಮುಕ್ತೋ ಗುಣೈಶ್ಚಾಶಯಸಂಭವೈಃ ।
ಮಯ್ಯೇವ ಬ್ರಹ್ಮಣಾ ಪೂರ್ಣೋ ನ ಬಹಿರ್ನಾಂತರಶ್ಚರೇತ್
॥ ೩೬ ॥

ಆಶ್ರಿತವಾಗಿರುವ ಎಲ್ಲ ಭಾವಗಳು ಗುಣಮಯವೇ ಆಗಿವೆ. ಅವು ಬೇಕಾದರೆ ನೇತ್ರಾದಿ ಇಂದ್ರಿಯಗಳಿಂದ ಅನುಭವಿಸಿದುದಾಗಲೀ, ಅಥವಾ ಶಾಸ್ತ್ರಗಳ ಮೂಲಕ ಲೋಕ-ಲೋಕಾಂತರದ ಸಂಬಂಧವಾಗಿ ಕೇಳಿದುದಾಗಲೀ, ಇಲ್ಲವೇ ಬುದ್ಧಿಯಿಂದ ಯೋಚಿಸಿ, ವಿಚಾರಮಾಡಿದುದಾಗಲೀ ಎಲ್ಲವೂ ತ್ರಿಗುಣಾತ್ಮಕವೇ ಆಗಿವೆ. ॥ ೩೧ ॥ ಜೀವಿಗಳಿಗೆ ದೊರೆಯುವ ಯೋನಿಗಳು ಅಥವಾ ಗತಿಗಳೆಲ್ಲವೂ ಅವನ ಗುಣ-ಕರ್ಮಗಳ ಅನುಸಾರವೇ ಇರುತ್ತವೆ. ಎಲೈ ಸೌಮ್ಯ! ಎಲ್ಲ ಗುಣಗಳು ಚಿತ್ತದೊಂದಿಗೆ ಸಂಬಂಧವಿರಿಸುತ್ತವೆ. ಅವುಗಳ ಮೇಲೆ ವಿಜಯ ಸಾಧಿಸಿದ ಜೀವಿಯು ಭಕ್ತಿಯೋಗದ ಮೂಲಕ ನನ್ನಲ್ಲೇ ಸ್ಥಿತನಾಗಿ, ಕೊನೆಯಲ್ಲಿ ನನ್ನ ಸ್ವರೂಪವನ್ನೇ ಪಡೆದುಕೊಳ್ಳುವನು. ॥ ೩೨ ॥ ಈ ಮನುಷ್ಯ ಶರೀರವು ಬಹಳ ದುರ್ಲಭವಾಗಿದೆ. ಇದೇ ಶರೀರದಲ್ಲಿ ತತ್ತ್ವ ಜ್ಞಾನ ಮತ್ತು ಅದರಲ್ಲಿ ನಿಷ್ಠಾರೂಪೀ ವಿಜ್ಞಾನವನ್ನು ಪಡೆಯುವ ಸಂಭವವಿದೆ. ಅದಕ್ಕಾಗಿ ಇದನ್ನು ಪಡೆದ ಬುದ್ಧಿವಂತನಾದ ಮನುಷ್ಯನು ಗುಣಗಳ ಆಸಕ್ತಿಯನ್ನು ತೊಡೆದು ನನ್ನನ್ನೇ ಭಜಿಸಬೇಕು. ॥ ೩೩ ॥ ವಿಚಾರಶೀಲ ಪುರುಷನು ತುಂಬಾ ಎಚ್ಚರಿಕೆಯಿಂದ ಸತ್ತ್ವಗುಣದ ಸೇವನೆಯಿಂದ ರಜೋಗುಣ, ತಮೋಗುಣಗಳನ್ನು ಗೆದ್ದುಕೊಳ್ಳಬೇಕು. ಇಂದ್ರಿಯಗಳನ್ನು ವಶಪಡಿಸಿಕೊಂಡು, ನನ್ನ ಸ್ವರೂಪವನ್ನು ಅರಿತುಕೊಂಡು, ನನ್ನ ಭಜನೆಯಲ್ಲಿ ತೊಡಗಬೇಕು. ಆಸಕ್ತಿಯು ಲೇಶಮಾತ್ರವೂ ಇರಬಾರದು. ॥ ೩೪ ॥ ಧ್ಯಾನಯೋಗದ ಮೂಲಕ ಚಿತ್ತವೃತ್ತಿಗಳನ್ನು ಶಾಂತ ಗೊಳಿಸಿಕೊಂಡು, ನಿರಪೇಕ್ಷತೆಯಿಂದ ಸತ್ತ್ವಗುಣದ ವಿಜಯ ಸಾಧಿಸಿಕೊಳ್ಳಬೇಕು. ಹೀಗೆ ಗುಣಗಳಿಂದ ಮುಕ್ತನಾದ ಜೀವಿಯು ತನ್ನ ಜೀವಭಾವವನ್ನು ಬಿಟ್ಟು, ನನ್ನಲ್ಲಿ ಒಂದಾಗಿಹೋಗುತ್ತಾನೆ.॥ ೩೫ ॥ ಜೀವಭಾವದಿಂದ ಮುಕ್ತನಾದ ಜೀವಿಯು ಅಂತಃಕರಣದಲ್ಲಿ ಉತ್ಪನ್ನವಾಗುವ ಗುಣಗಳಿಂದ ಮುಕ್ತನಾಗಿ, ಪರಿಪೂರ್ಣನಾದ ನನ್ನೊಂದಿಗೆ ಏಕೀಭಾವವನ್ನು ಪಡೆದುಕೊಂಡು, ನನ್ನಲ್ಲಿಯೇ ಸೇರಿಹೋಗುತ್ತಾನೆ. ಮತ್ತೆ ಅವನಿಗೆ ಪುನರ್ಜನ್ಮ ಇರುವುದಿಲ್ಲ. ॥ ೩೬ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ಪುರೂರವನ ವೈರಾಗ್ಯೋಕ್ತಿ

ಶ್ರೀಭಗವಾನುವಾಚ

ಮಲ್ಲಕ್ಷಣಮಿಮಂ ಕಾಯಂ ಲಬ್ಧ್ವಾ ಮದ್ಧರ್ಮ ಆಸ್ಥಿತಃ ।
ಆನಂದಂ ಪರಮಾಮತ್ಮಾನಮಾತ್ಮಸ್ಥಂ ಸಮುಪೈತಿ ಮಾಮ್
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಎಲೈ ಉದ್ಧವನೇ! ಈ ಮನುಷ್ಯಶರೀರವು ನನ್ನ ಸ್ವರೂಪಜ್ಞಾನದ ಮತ್ತು ನನ್ನ ಪ್ರಾಪ್ತಿಯ ಮುಖ್ಯಸಾಧನವಾಗಿದೆ. ಇದನ್ನು ಪಡೆದ ಯಾವ ಮನುಷ್ಯನು ನಿಜವಾದ ಪ್ರೇಮದಿಂದ ನನ್ನ ಭಕ್ತಿ ಮಾಡುವನೋ, ಅವನು ಅಂತಃಕರಣದಲ್ಲಿ ಸ್ಥಿತನಾದ ಆನಂದಸ್ವರೂಪೀ ಪರಮಾತ್ಮನಾದ ನನ್ನನ್ನು ಪಡೆದುಕೊಳ್ಳುವನು. ॥ ೧ ॥

ಗುಣಮಯ್ಯಾ ಜೀವಯೋನ್ಯಾ ವಿಮುಕ್ತೋ ಜ್ಞಾನನಿಷ್ಠಯಾ ।
ಗುಣೇಷು ಮಾಯಾಮಾತ್ರೇಷು ದೃಶ್ಯಮಾನೇಷ್ವವಸ್ತುತಃ ।
ವರ್ತಮಾನೋಽಪಿ ನ ಪುಮಾನ್ ಯುಜ್ಯತೇಽವಸ್ತುಭಿರ್ಗುಣೈಃ
॥ ೨ ॥

ಜೀವಿಗಳ ಎಲ್ಲ ಯೋನಿಗಳು, ಎಲ್ಲ ಗತಿಗಳು ತ್ರಿಗುಣ ಮಯವಾಗಿವೆ. ಜೀವಿಯು ಜ್ಞಾನನಿಷ್ಠೆಯ ಮೂಲಕ ಅವುಗಳಿಂದ ಎಂದೆಂದಿಗೂ ಮುಕ್ತನಾಗಿ ಹೋಗುತ್ತಾನೆ. ಕಂಡುಬರುವ ಸತ್ತ್ವ, ರಜ ಮುಂತಾದ ಗುಣಗಳು ವಾಸ್ತವಿಕವಾಗಿಲ್ಲ, ಮಾಯಾಮಾತ್ರ ವಾಗಿವೆ. ಜ್ಞಾನ ಉಂಟಾದ ಬಳಿಕ ಪುರುಷನು ಅವುಗಳ ನಡುವೆ ಇದ್ದರೂ ಕೂಡ, ಅವುಗಳ ಮೂಲಕ ವ್ಯವಹರಿಸುತ್ತಿದ್ದರೂ ಕೂಡ, ಅವುಗಳಿಂದ ಬಂಧಿತನಾಗುವುದಿಲ್ಲ, ಏಕೆಂದರೆ, ಆ ಗುಣಗಳ ವಾಸ್ತವಿಕ ಅಸ್ತಿತ್ವವೇ ಇರುವುದಿಲ್ಲ ॥ ೨ ॥ ವಿಷಯಗಳ ಸೇವನೆ ಮತ್ತು ಉದರ ಪೋಷಣೆಯಲ್ಲೇ ತೊಡಗಿರುವ ಅಸತ್ ಪುರುಷರ ಸಂಗವನ್ನು ಎಂದೂ ಮಾಡಬಾರದು. ಸಾಮಾನ್ಯವಾಗಿ ಇದರ ಕುರಿತು ಜನರು ಲಕ್ಷ್ಯವಿಡಬೇಕು; ಏಕೆಂದರೆ, ಅವರನ್ನು ಅನುಸರಿಸುವವರಿಗೆ – 'ಕುರುಡನ ಆಸರೆಯಿಂದ ನಡೆಯುವ ಕುರುಡನಂತೆ' ದುರ್ದಶೆ ಉಂಟಾಗುತ್ತದೆ. ಅವನಿಗಾದರೋ ಘೋರ ಅಂಧಕಾರದಲ್ಲಿ ಅಲೆಯಬೇಕಾಗುತ್ತದೆ ॥ ೩ ॥ ಉದ್ಧವನೇ! ಹಿಂದೆ ಪರಮ ಯಶಸ್ವೀ ಸಾಮ್ರಾಟ ಇಲಾನಂದನ ಪುರೂರವನು ಊರ್ವಶಿಯ ವಿರಹದಿಂದ ಅತ್ಯಂತ ವ್ಯಾಕುಲನಾಗಿದ್ದನು. ಮತ್ತೆ ಶೋಕ ದೂರವಾದಾಗ ಅವನಲ್ಲಿ ಪ್ರಬಲವಾದ ವೈರಾಗ್ಯವು ಉದಿಸಿತು. ಆಗ ಅವನು ಅನುಭವಸಿದ್ಧವಾದ ಈ ಗಾಥೆಯನ್ನು ಹಾಡಿದನು. ॥ ೪ ॥ ತನ್ನನ್ನು ಅಗಲಿ ಓಡಿಹೋಗುತ್ತಿರುವ ಊರ್ವಶಿಯ ಹಿಂದೆ ರಾಜಾ ಪುರೂರವನು ವಿವಸ್ತ್ರನಾಗಿ ಹುಚ್ಚನಂತೆ ಅತ್ಯಂತ ವಿಹ್ವಲನಾಗಿ ಓಡುತ್ತಾ ಹೀಗೆ ಹೇಳ ತೊಡಗಿದನು – 'ದೇವೀ! ನಿಷ್ಠುರ ಹೃದಯಳೇ! ಸ್ವಲ್ಪ ಹೊತ್ತಾ ದರೂ ನಿಂತುಕೋ. ಓಡಿಹೋಗಬೇಡ. ॥ ೫ ॥ ಊರ್ವಶಿಯು ರಾಜನ ಚಿತ್ತವನ್ನು ಸಂಪೂರ್ಣವಾಗಿ ಅಪಹರಿಸಿಬಿಟ್ಟಿದ್ದಳು. ಅವ ಳೊಂದಿಗಿನ ಕಾಮೋಪಭೋಗದಿಂದ ಅವನಿಗೆ ತೃಪ್ತಿಯೇ ಆಗಿರಲಿಲ್ಲ, ಅವನು ಕ್ಷುದ್ರವಾದ ವಿಷಯಸೇವನೆಯಲ್ಲಿ ಅವನಿಗೆ ಎಷ್ಟೋ ವರ್ಷಗಳ ರಾತ್ರಿಗಳು ಬಂದು ಹೋದುದರ ಅರಿವೇ ಇಲ್ಲದಷ್ಟು ಮುಳುಗಿಹೋಗಿದ್ದನು. ಈಗ ಊರ್ವಶಿಯು ಬಿಟ್ಟು ಹೋದಾಗ ವಿವೇಕ ಉಂಟಾಗಿ, ಮನಸ್ಸಿನಲ್ಲೇ ಹೀಗೆ ಅಂದು ಕೊಂಡನು. ॥ ೬ ॥

ಸಂಗಂ ನ ಕುರ್ಯಾದಸತಾಂ ಶಿಶ್ನೋದರತೃಪಾಂ ಕ್ವಚಿತ್ ।
ತಸ್ಯಾನುಗಸ್ತಮಸ್ಯಂಧೇ ಪತತ್ಯಂಧಾನುಗಾಂಧವತ್
॥ ೩ ॥

ಐಲಃ ಸಮ್ರಾಡಿಮಾಂ ಗಾಥಾಮಗಾಯತ ಬೃಹಚ್ಛ್ರವಾಃ ।
ಊರ್ವಶೀವಿರಹಾನ್ಮುಹ್ಯನ್ನಿರ್ವಿಣ್ಣಃ ಶೋಕಸಂಯಮೇ
॥ ೪ ॥

ತ್ಯಕ್ತ್ವಾಽऽತ್ಮಾನಂ ವ್ರಜಂತೀಂ ತಾಂ ನಗ್ನ ಉನ್ಮತ್ತವನ್ನೃಪಃ ।
ವಿಲಪನ್ನನ್ವಗಾಜ್ಜಾಯೇ ಘೋರೇ ತಿಷ್ಠೇತಿ ವಿಕ್ಲವಃ
॥ ೫ ॥

ಕಾಮಾನತೃಪ್ತೋಽನುಜುಷನ್ ಕ್ಷುಲ್ಲಕಾನ್ವರ್ಷಯಾಮಿನೀಃ ।
ನ ವೇದ ಯಾಂತೀರ್ನಾಯಾಂತೀರುರ್ವಶ್ಯಾಕೃಷ್ಟಚೇತನಃ
॥ ೬ ॥

ಐಲ ಉವಾಚ

ಅಹೋ ಮೇ ಮೋಹವಿಸ್ತಾರಃ ಕಾಮಕಶ್ಮಲಚೇತಸಃ ।
ದೇವ್ಯಾ ಗೃಹೀತಕಂಠಸ್ಯ ನಾಯುಃಖಿಂಡಾ ಇಮೇ ಸ್ಮೃತಾಃ
॥ ೭ ॥

ನಾಹಂ ವೇದಾಭಿನಿರ್ಮುಕ್ತಸೂರ್ಯೋ ವಾಭ್ಯುದಿತೋಽಮುಯಾ ।
ಮುಷಿತೋ ವರ್ಷಪೂಗಾನಾಂ ಬತಾಹಾನಿ ಗತಾನ್ಯುತ
॥ ೮ ॥

ಪುರೂರವನು ಹೇಳಿದನು – ಅಯ್ಯೋ ಶಿವನೇ! ನನ್ನ ಮೂಢತೆಯನ್ನಾದರೋ ನೋಡಬಾರದೇ! ಕಾಮವಾಸನೆಯು ನನ್ನ ಚಿತ್ತವನ್ನು ಎಷ್ಟು ಕಲುಷಿತಗೊಳಿಸಿತು! ಊರ್ವಶಿಯು ತನ್ನ ಬಾಹುಗಳಿಂದ ನನ್ನ ಕತ್ತನ್ನು ಅಪ್ಪಿಕೊಂಡಳು, ಅದರಿಂದ ನಾನು ಆಯುಸ್ಸಿನ ಎಷ್ಟು ವರ್ಷಗಳನ್ನು ಕಳೆದುಕೊಂಡೆ! ಅಯ್ಯೋ! ವಿಸ್ಮೃತಿಗೂ ಒಂದು ಮೇರೆ ಇರುತ್ತದಲ್ಲ! ॥ ೭ ॥ ಅಯ್ಯಯ್ಯೋ! ಇವಳು ನನ್ನನ್ನು ಬರಿದಾಗಿಸಿದಳು. ಸೂರ್ಯ ಹುಟ್ಟಿದನೋ, ಮುಳುಗಿದನೋ ಎಂಬುದನ್ನೂ ನಾನು ಅರಿಯದೆ ಹೋದೆ. ಅನೇಕ ವರ್ಷಗಳ ದಿನಗಳ ಮೇಲೆ ದಿನಗಳು ಸಂದುಹೋದುವು. ಆದರೆ ನನ್ನ ಅರಿವಿಗೆ ಬರಲಿಲ್ಲ, ಎಂತಹ ದುಃಖದ ಮಾತಾಗಿದೆ ಇದು! ॥ ೮ ॥ ಅಯ್ಯೋ! ಆಶ್ಚರ್ಯವೇ! ನನ್ನ ಮನಸ್ಸಿನಲ್ಲಿ ಎಷ್ಟು

ಆಹೋ ಮೇ ಆತ್ಮಸಮ್ಮೋಹೋ ಯೇನಾತ್ಮಾ ಯೋಷಿತಾಂ ಕೃತಃ ।
ಕ್ರೀಡಾಮೃಗಶ್ಚಕ್ರವರ್ತೀ ನರದೇವಶಿಖಾಮಣಿಃ
॥ ೯ ॥

ಸಪರಿಚ್ಛದಮಾತ್ಮಾನಂ ಹಿತ್ವಾ ತೃಣಮಿವೇಶ್ವರಮ್ ।
ಯಾಂತೀಂ ಸ್ತ್ರಿಯಂ ಚಾನ್ವಗಮಂ ನಗ್ನ ಉನ್ಮತ್ತವದ್ರುದನ್
॥ ೧೦ ॥

ಕುತಸ್ತತ್ಸ್ಯಾನುಭಾವಃ ಸ್ಯಾತ್ತೇಜ ಈಶತ್ವಮೇವ ವಾ ।
ಯೋಽನ್ವಗಚ್ಛಂ ಸ್ತ್ರಿಯಂ ಯಾಂತೀಂ ಖರವತ್ಪಾದತಾಡಿತಃ
॥ ೧೧ ॥

ಕಿಂ ವಿದ್ಯಯಾ ಕಿಂ ತಪಸಾ ಕಿಂ ತ್ಯಾಗೇನ ಶ್ರುತೇನ ವಾ ।
ಕಿಂ ವಿವಿಕ್ತೇನ ಮೌನೇನ ಸ್ತ್ರೀಭಿರ್ಯಸ್ಯ ಮನೋ ಹೃತಮ್
॥ ೧೨ ॥

ಸ್ವಾರ್ಥಸ್ಯಾಕೋವಿದಂ ಧಿಙ್ಮಾಂ
ಮೂರ್ಖಂ ಪಂಡಿತಮಾನಿನಮ್ ।
ಯೋಽಹಮೀಶ್ವರತಾಂ ಪ್ರಾಪ್ಯ
ಸ್ತ್ರೀಭಿರ್ಗೋಽಖರವಜ್ಜಿತಃ
॥ ೧೩ ॥

ಸೇವತೋ ವರ್ಷಪೂಗಾನ್ಮೇ ಉರ್ವಶ್ಯಾ ಅಧರಾಸವಮ್ ।
ನ ತೃಪ್ಯತ್ಯಾತ್ಮಭೂಃ ಕಾಮೋ ವಹ್ನಿರಾಹುತಿಭಿರ್ಯಥಾ
॥ ೧೪ ॥

ಪುಂಶ್ಚಲ್ಯಾಪಹೃತಂ ಚಿತ್ತಂ ಕೋ ನ್ವನ್ಯೋ ಮೋಚಿತುಂ ಪ್ರಭುಃ ।
ಆತ್ಮಾರಾಮೇಶ್ವರಮೃತೇ ಭಗವಂತಮಧೋಕ್ಷಜಮ್
॥ ೧೫ ॥

ಬೋಧಿತಸ್ಯಾಪಿ ದೇವ್ಯಾ ಮೇ ಸೂಕ್ತವಾಕ್ಯೇನ ದುರ್ಮತೇಃ ।
ಮನೋಗತೋ ಮಹಾಮೋಹೋ ನಾಪಯಾತ್ಯಜಿತಾತ್ಮನಃ
॥ ೧೬ ॥

ಕಿಮೇತಯಾ ನೋಽಪಕೃತಂ ರಜ್ಜ್ವಾ ಸರ್ಪಚೇತಸಃ ।
ರಜ್ಜುಸ್ವರೂಪಾವಿದುಷೋ ಯೋಽಹಂ ಯದಜಿತೇಂದ್ರಿಯಃ
॥ ೧೭ ॥

ಕ್ವಾಯಂ ಮಲೀಮಸಃಕಾಯೋ
ದೌರ್ಗಂಧ್ಯಾದ್ಯಾತ್ಮಕೋಽಶುಚಿಃ ।
ಕ್ವ ಗುಣಾಃ ಸೌಮನಸ್ಯಾದ್ಯಾ
ಹ್ಯಧ್ಯಾಸೋಽವಿದ್ಯಯಾ ಕೃತಃ ॥ ೧೮ ॥

ಮೋಹ ಬೆಳೆದುಹೋಯಿತು. ಅವಳು ನರಶ್ರೇಷ್ಠ ಚಕ್ರವರ್ತಿ ಶಿಖಾಮಣಿ ಸಾಮ್ರಾಟ ಪುರೂರವನಾದ ನನ್ನನ್ನು ಸ್ತ್ರೀಯರ ಕ್ರೀಡಾಮೃಗ (ಆಟಿಕೆ)ವನ್ನಾಗಿಸಿಬಿಟ್ಟಳು. ॥ ೯ ॥ ನೋಡು! ನಾನು ಪ್ರಜೆಯನ್ನು ಮರ್ಯಾದೆಯಲ್ಲಿ ಇರಿಸುವಂತಹ ಸಾಮ್ರಾಟ ನಾಗಿದ್ದೇನೆ. ಅವಳು ನನ್ನನ್ನು ಮತ್ತು ನನ್ನ ರಾಜ್ಯವನ್ನು ಹುಲ್ಲಿನ ಕಡ್ಡಿಯಂತೆ ತಿರಸ್ಕರಿಸಿ ಹೊರಟುಹೋದಳು. ನಾನು ಹುಚ್ಚನಂತೆ ಬತ್ತಲೆಯಾಗಿ ಅಳುತ್ತಾ, ಗೋಳಾಡುತ್ತಾ ಅವಳ ಹಿಂದೆ ಓಡುತ್ತಿರುವೆನಲ್ಲ! ಅಯ್ಯೋ! ಇದೊಂದು ಜೀವನವೇ! ॥ ೧೦ ॥ ಹೆಣ್ಣು ಕತ್ತೆಯು ಹಿಂದಿನಿಂದ ಒದೆಯುತ್ತಿದ್ದರೂ ಅದನ್ನು ಲೆಕ್ಕಿಸದೆ ಅದರ ಹಿಂದೆಯೇ ಹೋಗುವ ಗಂಡುಕತ್ತೆಯಂತೆ ನಾನೂ ಈ ಹೆಂಗಸಿನ ಹಿಂದೆ ಓಡುತ್ತಿರುವೆನಲ್ಲ! ಮತ್ತೆ ನನ್ನಲ್ಲಿ ಪ್ರಭಾವ, ತೇಜ ಮತ್ತು ಸ್ವಾಮಿತ್ವ ಹೇಗೆ ತಾನೇ ಇರಬಲ್ಲದು? ॥ ೧೧ ॥ ಯಾವನ ಮನಸ್ಸನ್ನು ಸ್ತ್ರೀಯು ಅಪಹರಿಸುತ್ತಾಳೋ ಅವನಿಗೆ ಎಷ್ಟು ವಿದ್ಯೆ ಇದ್ದರೇನು ವ್ಯರ್ಥವೇ. ಅವನಿಗೆ ತಪಸ್ಸು, ತ್ಯಾಗ, ಶಾಸ್ತ್ರಾಭ್ಯಾಸ ದಿಂದಲೂ ಯಾವುದೇ ಲಾಭವಿಲ್ಲ, ಅವನ ಏಕಾಂತವಾಸ, ಮೌನ ಇವುಗಳೂ ನಿಷ್ಫಲವೇ. ॥ ೧೨ ॥ ನನ್ನ ಲಾಭ-ಹಾನಿಯನ್ನೇ ಅರಿಯದ ನಾನು ನನ್ನನ್ನು ಬಹುದೊಡ್ಡ ಪಂಡಿತನೆಂದು ತಿಳಿಯು ತ್ತಿದ್ದೇನೆ. ನನ್ನಂತಹ ಮೂರ್ಖನಿಗೆ ಧಿಕ್ಕಾರವಿರಲಿ. ಅಯ್ಯೋ! ಶಿವನೇ! ನಾನು ಚಕ್ರವರ್ತಿ ಸಾಮ್ರಾಟನಾಗಿದ್ದರೂ ಕತ್ತೆ, ಎತ್ತು ಗಳಂತೆ ಸ್ತ್ರೀಯಳ ಬಲೆಯಲ್ಲಿ ಸಿಕ್ಕಿಹೋದೆನಲ್ಲ! ॥ ೧೩ ॥ ನಾನು ಅನೇಕ ವರ್ಷಗಳವರೆಗೆ ಊರ್ವಶಿಯ ಅಧರಾಮೃತವನ್ನು ಕುಡಿ ಯುತ್ತಾ ಇದ್ದೆ, ಆದರೆ ನನ್ನ ಕಾಮವಾಸನೆ ತೃಪ್ತವಾಗಲಿಲ್ಲ, ತುಪ್ಪದ ಆಹುತಿಯಿಂದ ಅಗ್ನಿಯು ತೃಪ್ತವಾಗುವುದಿಲ್ಲ, ಹಾಗೆಯೇ ನನ್ನಲ್ಲಿ ಉತ್ಪನ್ನವಾದ ಕಾಮವು ತೃಪ್ತವಾಗುವುದಿಲ್ಲ ॥ ೧೪ ॥ ಆ ಕುಲಟೆಯು ನನ್ನ ಚಿತ್ತವನ್ನು ಅಪಹರಿಸಿಬಿಟ್ಟಿರುವಳು. ಅವಳ ಉರುಳಿನಿಂದ ನನ್ನ ಮನಸ್ಸನ್ನು ಬಿಡಿಸಲು ಆತ್ಮಾರಾಮನೂ, ಜೀವನ್ಮುಕ್ತರ ಸ್ವಾಮಿಯೂ ಆದ ಇಂದ್ರಿಯಾತೀತ ಭಗವಂತನನ್ನು ಬಿಟ್ಟು ಬೇರೆ ಯಾರಿ ದ್ದಾರೆ? ॥ ೧೫ ॥ ಊರ್ವಶಿಯಾದರೋ ನನಗೆ ವೈದಿಕ ಸೂಕ್ತ ದಿಂದ ಯಥಾರ್ಥವಾದ ಮಾತನ್ನು ಹೇಳಿದ್ದಳು. ಆದರೆ ನನ್ನ ಮನಸ್ಸಿನ ಆ ಭಯಂಕರ ಮೋಹವು ಅಳಿದುಹೋಗದಿದ್ದಾಗ, ನನ್ನ ಬುದ್ಧಿಯು ಪೂರ್ಣವಾಗಿ ಕೆಟ್ಟುಹೋಗಿತ್ತು. ನನ್ನ ಇಂದ್ರಿಯ ಗಳೇ ನನ್ನ ಕೈಮೀರಿ ಹೋಗಿದ್ದಾಗ ನಾನು ಹೇಗೆ ತಿಳಿದು ಕೊಳ್ಳಬಲ್ಲೆ? ॥ ೧೬ ॥ ಹಗ್ಗವನ್ನು ಸರ್ಪವೆಂದು ತಿಳಿದು ಅದರಲ್ಲಿ ಸರ್ಪದ ಕಲ್ಪನೆ ಮಾಡಿ, ದುಃಖಿತನಾದವನಿಗೆ, ಆ ಹಗ್ಗವು ಏನು ತಾನೇ ಮಾಡಬಲ್ಲದು? ಸ್ವತಃ ನಾನೇ ಅಜಿತೇಂದ್ರಿಯನಾದ ಕಾರಣ ಅಪರಾಧಿ ನಾನೇ ಆಗಿದ್ದೇನೆ. ॥ ೧೭ ॥ ದುರ್ಗಂಧದಿಂದ ತುಂಬಿಕೊಂಡಿರುವ ಮಲಿನವೂ, ಅಪವಿತ್ರವೂ ಆಗಿರುವ ಈ ದೇಹವೆಲ್ಲಿ? ಕೋಮಲತೆ, ಪವಿತ್ರತೆ, ಸುಗಂಧವೇ ಮುಂತಾದ ಪುಷ್ಪಗಳಂತಿರುವ ಗುಣವೆಲ್ಲಿ? ಆದರೆ ನಾನೇ ಅಜ್ಞಾನವಶನಾಗಿ ಕುರೂಪದಲ್ಲಿ ಸುಂದರತೆಯ ಆರೋಪಮಾಡಿದೆ, ಇದು ನನ್ನ ಮೂಢತೆಯೇ ಆಗಿದೆ. ॥ ೧೮ ॥ ಈ ಶರೀರವು ಜನ್ಮದಾತರಾದ

ಪಿತ್ರೋಃ ಕಿಂ ಸ್ವಂ ನು ಭಾರ್ಯಾಯಾಃ
ಸ್ವಾಮಿನೋಽಗ್ನೇಃ ಶ್ವಗೃಧ್ರ್ಯಯೋಃ ।
ಕಿಮಾತ್ಮನಃ ಕಿಂ ಸುಹೃದಾಮಿತಿ
ಯೋ ನಾವಸೀಯತೇ ॥ ೧೯ ॥

ತಸ್ಮಿನ್ ಕಲೇವರೇಽಮೇಧ್ಯೇ ತುಚ್ಛನಿಷ್ಠೇ ವಿಷಜ್ಜತೇ ।
ಅಹೋ ಸುಭದ್ರಂ ಸುನಸಂ ಸುಸ್ಮಿತಂ ಚ ಮುಖಂ ಸ್ತ್ರಿಯಃ
॥ ೨೦ ॥

ತ್ವಙ್ಮಾಂಸರುಧಿರಸ್ನಾಯುಮೇದೋಮಜ್ಜಾಸ್ಥಿಸಂಹತೌ ।
ವಿಣ್ಮೂತ್ರಪೂಯೇ ರಮತಾಂ ಕೃಮೀಣಾಂ ಕಿಯದಂತರಮ್
॥ ೨೧ ॥

ಅಥಾಪಿ ನೋಪಸಜ್ಜೇತ ಸ್ತ್ರೀಷು ಸ್ತ್ರೈಣೇಷು ಚಾರ್ಥವಿತ್ ।
ವಿಷಯೇಂದ್ರಿಯಸಂಯೋಗಾನ್ಮನಃ ಕ್ಷುಭ್ಯತಿ ನಾನ್ಯಥಾ
॥ ೨೨ ॥

ಅದೃಷ್ಟಾದಶ್ರುತಾದ್ಭಾವಾನ್ ನ ಭಾವ ಉಪಜಾಯತೇ ।
ಅಸಂಪ್ರಯುಂಜತಃ ಪ್ರಾಣಾನ್ ಶಾಮ್ಯತಿ ಸ್ತಿಮಿತಂ ಮನಃ
॥ ೨೩ ॥

ತಸ್ಮಾತ್ ಸಂಗೋ ನ ಕರ್ತವ್ಯಃ
ಸ್ತ್ರೀಷು ಸ್ತ್ರೈಣೇಷು ಚೇಂದ್ರಿಯೈಃ ।
ವಿದುಷಾಂ ಚಾಪ್ಯವಿಶ್ರಬ್ಧಃ
ಷಡ್ವರ್ಗಃ ಕಿಮು ಮಾದೃಶಾಮ್ ॥ ೨೪ ॥

ಶ್ರೀಭಗವಾನುವಾಚ

ಏವಂ ಪ್ರಗಾಯನ್ ನೃಪದೇವದೇವಃ
ಸ ಉರ್ವಶೀಲೋಕಮಥೋ ವಿಹಾಯ ।
ಆತ್ಮಾನಮಾತ್ಮನ್ಯವಗಮ್ಯ ಮಾಂ ವೈ
ಉಪಾರಮಜ್ಜ್ಞಾನವಿಧೂತಮೋಹಃ ॥ ೨೫ ॥

ತತೋ ದುಸ್ಸಂಗ ಮುತ್ಸೃಜ್ಯ ಸತ್ಸು ಸಜ್ಜೇತ ಬುದ್ಧಿಮಾನ್ ।
ಸಂತ ಏತಸ್ಯ ಚ್ಛಿಂದಂತಿ ಮನೋವ್ಯಾಸಂಗಮುಕ್ತಿಭಿಃ
॥ ೨೬ ॥

ಸಂತೋಽನಪೇಕ್ಷಾ ಮಚ್ಚಿತ್ತಾಃ ಪ್ರಶಾಂತಾಃ ಸಮದರ್ಶಿನಃ ।
ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ನಿಷ್ಪರಿಗ್ರಹಾಃ
॥ ೨೭ ॥

ತಂದೆ-ತಾಯಿಯರಿಗೆ ಸೇರಿದ್ದೇ ? ವಿವಾಹಿತ ಪತ್ನಿಗೆ ಸೇರಿದ್ದೇ ? ಅನ್ನವನ್ನಿಟ್ಟು ಸಾಕಿದ ಒಡೆಯನಿಗೆ ಸೇರಿದ್ದೇ ? ಕೊನೆಗೆ ಬೆಂಕಿಗೆ ಸೇರಿದ್ದೇ ? ನರಿ-ನಾಯಿಗಳಿಗೆ ಸೇರಿದ್ದೇ ? ಇದನ್ನು ನನ್ನದೆಂದು ಹೇಳಲೇ ? ಸುಹೃದ್ ಸಂಬಂಧಿಗಳದ್ದೆಂದು ಹೇಳಲೇ ? ತುಂಬಾ ವಿಚಾರಮಾಡಿದಾಗ ಇದು ಯಾರದೂ ಅಲ್ಲ ಎಂಬುದೇ ನಿಶ್ಚಯವಾಗುತ್ತದೆ. ॥ ೧೯ ॥ ಈ ಶರೀರವು ಖಂಡಿತವಾಗಿ ಅಪವಿತ್ರವಾಗಿದ್ದು ಸ್ವರೂಪತಃ ತುಚ್ಛವಾಗಿದೆ. ಇಂತಹ ಶರೀರದಲ್ಲಿ ಆಸಕ್ತಿಯನ್ನಿರಿಸಿ 'ಆಹಾ ! ಈ ಸ್ತ್ರೀಯ ಮುಖ, ಮೂಗು, ನಗು ಎಷ್ಟು ಸುಂದರವಾಗಿದೆ' ಎಂದು ಹೇಳತೊಡಗುತ್ತಾನೆ. ॥ ೨೦ ॥ ಈ ಶರೀರವು ಚರ್ಮ, ಮಾಂಸ, ಮಜ್ಜೆ ರಕ್ತ, ಸ್ನಾಯು, ಮೇದಸ್ಸು ಎಲುಬುಗಳ ರಾಶಿಯಾಗಿದೆ. ಮಲ-ಮೂತ್ರ, ಕೀವುಗಳಿಂದ ತುಂಬಿಕೊಂಡಿದೆ. ಮನುಷ್ಯನು ಇದರಲ್ಲಿ ರಮಿಸಿದರೆ ಮಲ ಮೂತ್ರದ ಕ್ರಿಮಿಗಳಿಗೂ ಇವನಿಗೂ ಅಂತರವೇನಿದೆ ? ॥ ೨೧ ॥ ಅದಕ್ಕಾಗಿ ತನ್ನ ಒಳಿತನ್ನು ಬಯಸುವ ವಿವೇಕಿ ಮನುಷ್ಯನು ಸ್ತ್ರೀಯರ ಹಾಗೂ ಸ್ತ್ರೀಲಂಪಟರ ಸಂಗವನ್ನು ಎಂದಿಗೂ ಮಾಡಬಾರದು. ವಿಷಯ ಮತ್ತು ಇಂದ್ರಿಯಗಳ ಸಂಯೋಗದಿಂದಲೇ ಮನಸ್ಸಿನಲ್ಲಿ ವಿಕಾರ ಉಂಟಾಗುತ್ತದೆ. ಅದು ಬಿಟ್ಟು ವಿಕಾರಕ್ಕೆ ಬೇರೆ ಯಾವ ಅವಕಾಶವೂ ಇಲ್ಲ. ॥ ೨೨ ॥ ಎಂದೂ ನೋಡದೆ, ಕೇಳದೆ ಇರುವ ವಸ್ತುವಿನ ಕುರಿತು ಮನಸ್ಸಿನಲ್ಲಿ ವಿಕಾರ ಉಂಟಾಗುವುದಿಲ್ಲ. ವಿಷಯಗಳೊಂದಿಗೆ ಇಂದ್ರಿಯಗಳ ಸಂಯೋಗವು ಆಗದಂತೆ ನೋಡುವವನ ಮನಸ್ಸು ತಾನಾಗಿ ನಿಶ್ಚಲವಾಗಿ ಶಾಂತವಾಗುತ್ತದೆ. ಆದ್ದರಿಂದ ಮಾತು, ಕಿವಿ, ಮನಸ್ಸೇ ಮೊದಲಾದ ಇಂದ್ರಿಯಗಳಿಂದ ಸ್ತ್ರೀಯರ, ಸ್ತ್ರೀಲಂಪಟರ ಸಂಗ ಎಂದೂ ಮಾಡಬಾರದು. ನನ್ನಂತಹ ಜನರ ಮಾತಾದರೂ ಏನು, ದೊಡ್ಡ-ದೊಡ್ಡ ವಿದ್ವಾಂಸರಿಗೂ ಕೂಡ ತಮ್ಮ ಇಂದ್ರಿಯಗಳು ಮತ್ತು ಮನಸ್ಸು ನಂಬಲರ್ಹವಾದುವುಗಳಲ್ಲ. ॥ ೨೩-೨೪ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ ! ರಾಜ ರಾಜೇಶ್ವರ ಪುರೂರವನ ಮನಸ್ಸಿನಲ್ಲಿ ಈ ರೀತಿಯ ಉದ್ಗಾರಗಳು ಏಳುತ್ತಿದ್ದಾಗ, ಅವನು ಊರ್ವಶಿಯ ಕಡೆಯಿಂದ ತನ್ನ ಮನಸ್ಸನ್ನು ಪೂರ್ಣವಾಗಿ ವಿಮುಖಗೊಳಿಸಿದನು. ಈಗ ಜ್ಞಾನೋದಯವಾದ ಕಾರಣ ಅವನ ಮೋಹವು ತೊಲಗಿತು. ಅವನು ತನ್ನ ಹೃದಯದಲ್ಲೇ ಆತ್ಮಸ್ವರೂಪನಾದ ನನ್ನ ಸಾಕ್ಷಾತ್ಕಾರಮಾಡಿಕೊಂಡನು ಹಾಗೂ ಶಾಂತಭಾವದಿಂದ ಸ್ಥಿತನಾದನು. ॥ ೨೫ ॥ ಆದಕ್ಕಾಗಿ ಬುದ್ಧಿವಂತರಾದ ಮನುಷ್ಯರು ಪುರೂರವನಂತೆ ಕುಸಂಗವನ್ನು ಬಿಟ್ಟು, ಸತ್ಪುರುಷರ ಸಂಗವನ್ನು ಮಾಡಬೇಕು. ಸಂತ ಮಹಾತ್ಮರು ತಮ್ಮ ಸದುಪದೇಶದಿಂದ ಅವನ ಮನಸ್ಸಿನ ಆಸಕ್ತಿಯನ್ನು ಇಲ್ಲವಾಗಿಸುತ್ತಾರೆ. ಸಂತ ಪುರುಷರಿಗೆ ಎಂದೂ ಯಾವುದೇ ವಸ್ತುವಿನ ಅಪೇಕ್ಷೆ ಇರುವುದಿಲ್ಲ. ಅವರ ಚಿತ್ತ ನನ್ನಲ್ಲೇ ತೊಡಗಿರುತ್ತದೆ. ಅವರ ಹೃದಯದಲ್ಲಿ ಶಾಂತಿಯ ಅಗಾಧ ಸಮುದ್ರವೇ ಉಕ್ಕುತ್ತಿರುತ್ತದೆ. ಅವರು ಯಾವಾಗಲೂ ಎಲ್ಲೆಡೆ, ಎಲ್ಲದರಲ್ಲಿ ಸಮರೂಪದಿಂದ ಸ್ಥಿತನಾದ ಭಗವಂತನನ್ನೇ ದರ್ಶಿಸುತ್ತಿರುತ್ತಾರೆ. ಅವರಲ್ಲಿ ಮಮತೆ, ಅಹಂಕಾರವು ಲೇಶಮಾತ್ರವೂ ಇರುವುದಿಲ್ಲ. ಅವರು ಚಳಿ-ಸೆಕೆ, ಸುಖ- ದುಃಖಾದಿ ದ್ವಂದ್ವಗಳಲ್ಲಿ ಏಕರಸವಾಗಿರುತ್ತಾರೆ. ಯಾವ ಪ್ರಕಾರದ ಪ್ರತಿಗ್ರಹವನ್ನೂ ಇರಿಸಿಕೊಳ್ಳುವುದಿಲ್ಲ. ॥ ೨೬-೨೭ ॥

ತೇಷು ನಿತ್ಯಂ ಮಹಾಭಾಗ ಮಹಾಭಾಗೇಷು ಮತ್ಕಥಾಃ ।
ಸಂಭವಂತಿ ಹಿತಾ ನ್ಯೃಣಾಂ ಜುಷತಾಂ ಪ್ರಪುನಂತ್ಯಘಮ್
॥ ೨೮ ॥

ತಾ ಯೇ ಶೃಣ್ವಂತಿ ಗಾಯಂತಿ ಹ್ಯನುಮೋದಂತಿ ಚಾದೃತಾಃ ।
ಮತ್ಪರಾಃ ಶ್ರದ್ದಧಾನಾಶ್ಚ ಭಕ್ತಿಂ ವಿಂದಂತಿ ತೇ ಮಯಿ
॥ ೨೯ ॥

ಭಕ್ತಿಂ ಲಬ್ಧವತಃ ಸಾಧೋಃ ಕಿಮನ್ಯದವಶಿಷ್ಯತೇ ।
ಮಯ್ಯನಂತಗುಣೇ ಬ್ರಹ್ಮಣ್ಯಾನಂದಾನುಭವಾತ್ಮನಿ
॥ ೩೦ ॥

ಯಥೋಪಶ್ರಯಮಾಣಸ್ಯ ಭಗವಂತಂ ವಿಭಾವಸುಮ್ ।
ಶೀತಂ ಭಯಂ ತಮೋಽಪ್ಯೇತಿ ಸಾಧೂನ್ಸಂಸೇವತಸ್ತಥಾ
॥ ೩೧ ॥

ನಿಮಜ್ಜ್ಯೋನ್ಮಜ್ಜತಾಂ ಘೋರೇ ಭವಾಬ್ಧೌ ಪರಮಾಯನಮ್ ।
ಸಂತೋ ಬ್ರಹ್ಮವಿದಃ ಶಾಂತಾ ನೌರ್ದೃಢೇವಾಪ್ಸು ಮಜ್ಜತಾಮ್
॥ ೩೨ ॥

ಅನ್ನಂ ಹಿ ಪ್ರಾಣಿನಾಂ ಪ್ರಾಣ ಆರ್ತಾನಾಂ ಶರಣಂ ತ್ವಹಮ್ ।
ಧರ್ಮೋ ವಿತ್ತಂ ನೃಣಾಂ ಪ್ರೇತ್ಯ ಸಂತೋಽರ್ವಾಗ್ ಬಿಭ್ಯತೋಽರಣಮ್
॥ ೩೩ ॥

ಸಂತೋ ದಿಶಂತಿ ಚಕ್ಷೂಂಷಿ ಬಹಿರರ್ಕಃ ಸಮುತ್ಥಿತಃ ।
ದೇವತಾ ಬಾಂಧವಾಃ ಸಂತಃ ಸಂತ ಆತ್ಮಾಹಮೇವ ಚ
॥ ೩೪ ॥

ವೈತಸೇನಸ್ತತೋಽಪ್ಯೇವಮುರ್ವಶ್ಯಾ ಲೋಕನಿಃಸ್ಪೃಹಃ ।
ಮುಕ್ತಸಂಗೋ ಮಹೀಮೇತಾಮಾತ್ಮಾರಾಮಶ್ಚಚಾರ ಹ
॥ ೩೫ ॥

ಮಹಾ ಭಾಗ್ಯಶಾಲೀ ಉದ್ಧವನೇ ! ಸಂತರ ಸೌಭಾಗ್ಯದ ಮಹಿಮೆಯನ್ನು ಯಾರು ಹೊಗಳಬಲ್ಲರು ? ಅವರು ನಡೆಸುವ ನನ್ನ ಕಥೆಗಳು ಮನುಷ್ಯರಿಗಾಗಿ ಪರಮ ಹಿತಕರವಾಗಿವೆ. ಅವರನ್ನು ಸೇವಿಸುವವನ ಎಲ್ಲ ಪಾಪಗಳು ತೊಳೆದುಹೋಗುತ್ತವೆ. ॥ ೨೮ ॥ ಯಾರು ಆದರ, ಶ್ರದ್ಧೆಯಿಂದ ನನ್ನ ಲೀಲಾ-ಕಥೆಗಳನ್ನು ಶ್ರವಣಿಸುತ್ತಾ, ಕೀರ್ತಿಸುತ್ತಾ, ಅನುಮೋದಿಸುವರೋ ಅವರು ನನ್ನ ಪರಾಯಣರಾಗಿ ಹೋಗುತ್ತಾರೆ ಮತ್ತು ನನ್ನ ಅನನ್ಯ ಪ್ರೇಮಮಯ ಭಕ್ತಿಯನ್ನು ಪಡೆದುಕೊಳ್ಳುವರು. ॥ ೨೯ ॥ ಎಲೈ ಉದ್ಧವನೇ ! ನಾನೇ ಅನಂತ, ಅಚಿಂತ್ಯ ಕಲ್ಯಾಣಮಯ ಗುಣಗಳ ಆಶ್ರಯನಾಗಿರುವೆನು. ನಾನು ಕೇವಲ ಆನಂದಾನುಭವಸ್ವರೂಪೀ ಎಲ್ಲರ ಆತ್ಮಾ ಸಾಕ್ಷಾತ್ ಪರಬ್ರಹ್ಮನಾಗಿರುವೆನು. ನನ್ನ ಭಕ್ತಿಯು ದೊರಕಿದವನೇ ಸಂತನಾಗಿಹೋದನು. ಈಗ ಅವನಿಗೆ ಪಡೆಯುವುದು ಯಾವುದೂ ಬಾಕಿ ಉಳಿಯಲಿಲ್ಲ. ॥ ೩೦ ॥ ಅಂತಹ ಸತ್ಪುರುಷರಲ್ಲಿ ಶರಣಾದವರ ಕರ್ಮಜಡತೆ, ಸಂಸಾರಭಯ, ಅಜ್ಞಾನ, ಮುಂತಾದವುಗಳು ಸರ್ವಥಾ ನಿವೃತ್ತವಾಗಿ ಹೋಗುತ್ತವೆ. ಅಗ್ನಿಯನ್ನು ಆಶ್ರಯಿಸಿದವನಿಗೆ ಛಳಿಯಾಗಲೀ, ಅಂಧಕಾರವಾಗಲಿ ಇವುಗಳ ದುಃಖಿವು ಆಗಬಲ್ಲುದೇ ? ॥ ೩೧ ॥ ನೀರಿನಲ್ಲಿ ಮುಳುಗಿದವನಿಗೆ ದೃಢವಾದ ನೌಕೆಯು ಆಶ್ರಯವಿರುವಂತೆ ಈ ಘೋರ ಸಂಸಾರ ಸಾಗರದಲ್ಲಿ ಮುಳುಗಿದವರಿಗೆ ಬ್ರಹ್ಮವೇತ್ತರಾದ, ಶಾಂತ ಸಂತರೇ ಏಕಮಾತ್ರ ಪರಮಾಶ್ರಯರಾಗಿದ್ದಾರೆ. ॥ ೩೨ ॥ ಅನ್ನದಿಂದ ಪ್ರಾಣಿಗಳ ಪ್ರಾಣಗಳು ರಕ್ಷಿಸಲ್ಪಡುವಂತೆ, ದೀನ-ದುಃಖಿಗಳ ಪರಮ ರಕ್ಷಕನು ನಾನೇ ಆಗಿರುವಂತೆ, ಪರಲೋಕದಲ್ಲಿ ಮನುಷ್ಯರಿಗೆ ಏಕಮಾತ್ರ ಧರ್ಮವು ರಕ್ಷಕವಾಗಿರುವಂತೆ, ಸಂಸಾರದಲ್ಲಿ ಭಯ ಭೀತರಾದವರಿಗೆ ಸಂತರೇ ಪರಮ ಧನ, ಪ್ರಾಣ ಮತ್ತು ಪರಮಾಶ್ರಯರಾಗಿದ್ದಾರೆ. ॥ ೩೩. ॥ ಸೂರ್ಯನು ಉದಯಿಸಿ ಜನರ ಕಣ್ಣುಗಳಿಗೆ ಪ್ರಕಾಶ ಕೊಡುವಂತೆ, ಸಂತ ಪುರುಷರು ತನ್ನನ್ನು ಹಾಗೂ ಭಗವಂತನನ್ನು ನೋಡಲಿಕ್ಕಾಗಿ ಅಂತರ್ದೃಷ್ಟಿಯನ್ನು ಕೊಡುತ್ತಾರೆ. ಸಂತರು ಅನುಗ್ರಹಶೀಲ ದೇವತೆಗಳಾಗಿದ್ದಾರೆ. ಸಂತರು ನನ್ನ ಸುಹೃದ್, ಹಿತೈಷಿಗಳಾಗಿದ್ದಾರೆ. ಸಂತರೇ ನನ್ನ ಪ್ರಿಯತಮ ಆತ್ಮಾ ಆಗಿದ್ದಾರೆ. ಹೆಚ್ಚೇನು ಹೇಳಲಿ ? ಸ್ವಯಂ ನಾನೇ ಸಂತರ ರೂಪದಲ್ಲಿ ವಿದ್ಯಮಾನನಾಗಿದ್ದೇನೆ. ॥ ೩೪ ॥ ಪ್ರಿಯ ಉದ್ಧವನೇ ! ಆತ್ಮ ಸಾಕ್ಷಾತ್ಕಾರವಾಗುತ್ತಲೇ ಇಲಾನಂದನ ಪುರೂರವನಿಗೆ ಊರ್ವಶಿಯ ಕಡೆಗಿನ ಸ್ಪೃಹೆಯು ಉಳಿಯಲಿಲ್ಲ. ಅವನ ಎಲ್ಲ ಆಸಕ್ತಿಗಳು ಇಲ್ಲವಾದುವು. ಅವನು ಆತ್ಮಾರಾಮನಾಗಿ ಸ್ವಚ್ಛಂದವಾಗಿ ಈ ಪೃಥ್ವಿಯಲ್ಲಿ ಸಂಚರಿಸತೊಡಗಿದನು. ॥ ೩೫ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಷಡ್ವಿಂಶೋಽಧ್ಯಾಯಃ ॥ ೨೬ ॥

ಇಪ್ಪತ್ತೇಳನೆಯ ಅಧ್ಯಾಯ

ಭಗವಂತನ ಪೂಜಾ ವಿಧಾನ ವರ್ಣನೆ

ಉದ್ಧವ ಉವಾಚ

ಕ್ರಿಯಾಯೋಗಂ ಸಮಾಚಕ್ಷ್ವ ಭವದಾರಾಧನಂ ಪ್ರಭೋ ।
ಯಸ್ಮಾತ್ತ್ವಾಂ ಯೇ ಯಥಾರ್ಚಂತಿ ಸಾತ್ವತಾಃ ಸಾತ್ವತರ್ಷಭ
॥ ೧ ॥

ಏತದ್ವದಂತಿ ಮುನಯೋ ಮುಹುರ್ನಿಃಶ್ರೇಯಸಂ ನೃಣಾಮ್ ।
ನಾರದೋ ಭಗವಾನ್ ವ್ಯಾಸ ಆಚಾರ್ಯೋಽಂಗಿರಸಃ ಸುತಃ
॥ ೨ ॥

ನಿಸ್ಸೃತಂ ತೇ ಮುಖಾಂಭೋಜಾದ್ಯದಾಹ ಭಗವಾನಜಃ ।
ಪುತ್ರೇಭ್ಯೋ ಭೃಗುಮುಖ್ಯೇಭ್ಯೋ ದೇವ್ಯೈ ಚ ಭಗವಾನ್ ಭವಃ
॥ ೩ ॥

ಏತದ್ವೈ ಸರ್ವವರ್ಣಾನಾಮಾಶ್ರಮಾಣಾಂ ಚ ಸಮ್ಮತಮ್ ।
ಶ್ರೇಯಸಾಮುತ್ತಮಂ ಮನ್ಯೇ ಸ್ತ್ರೀಶೂದ್ರಾಣಾಂ ಚ ಮಾನದ
॥ ೪ ॥

ಏತತ್ಕಮಲಪತ್ರಾಕ್ಷ ಕರ್ಮಬಂಧವಿಮೋಚನಮ್ ।
ಭಕ್ತಾಯ ಚಾನುರಕ್ತಾಯ ಬ್ರೂಹಿ ವಿಶ್ವೇಶ್ವರೇಶ್ವರ
॥ ೫ ॥

ಶ್ರೀಭಗವಾನುವಾಚ

ನ ಹ್ಯಂತೋಽನಂತಪಾರಸ್ಯ ಕರ್ಮಕಾಂಡಸ್ಯ ಚೋದ್ಧವ ।
ಸಂಕ್ಷಿಪ್ತಂ ವರ್ಣಯಿಷ್ಯಾಮಿ ಯಥಾವದನುಪೂರ್ವಶಃ
॥ ೬ ॥

ವೈದಿಕಸ್ತಾಂತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮಖಃ ।
ತ್ರಯಾಣಾಮೀಪ್ಸಿತೇನೈವ ವಿಧಿನಾ ಮಾಂ ಸಮರ್ಚಯೇತ್
॥ ೭ ॥

ಯದಾ ಸ್ವನಿಗಮೇನೋಕ್ತಂ ದ್ವಿಜತ್ವಂ ಪ್ರಾಪ್ಯ ಪೂರುಷಃ ।
ಯಥಾ ಯಜೇತ ಮಾಂ ಭಕ್ತ್ಯಾ ಶ್ರದ್ಧಯಾ ತನ್ನಿಬೋಧ ಮೇ
॥ ೮ ॥

ಅರ್ಚಾಯಾಂ ಸ್ಥಂಡಿಲೇಽಗ್ನೌ ವಾ
ಸೂರ್ಯೇ ವಾಪ್ಸು ಹೃದಿ ದ್ವಿಜೇ ।
ದ್ರವ್ಯೇಣ ಭಕ್ತಿಯುಕ್ತೋಽರ್ಚೇತ್
ಸ್ವಗುರುಂ ಮಾಮಮಾಯಯಾ ॥ ೯ ॥

ಉದ್ಧವನು ಕೇಳಿದನು – ಭಕ್ತವತ್ಸಲ ಕೃಷ್ಣಾ! ಯಾವ ಕ್ರಿಯಾಯೋಗವನ್ನು ಆಶ್ರಯಿಸಿ ಭಕ್ತಜನರು ಯಾವ ಪ್ರಕಾರದಿಂದ, ಯಾವ ಉದ್ದೇಶಕ್ಕಾಗಿ, ನಿನ್ನನ್ನು ಆರಾಧಿಸುತ್ತಾರೆ? ನೀನು ನಿನ್ನ ಆರಾಧನಾರೂಪವಾದ ಆ ಕ್ರಿಯಾಯೋಗವನ್ನು ವರ್ಣಿಸುವ ಕೃಪೆಮಾಡು. ॥ ೧ ॥ ದೇವರ್ಷಿಗಳಾದ ನಾರದರು, ಭಗವಾನ್ ವೇದವ್ಯಾಸರು, ಆಚಾರ್ಯ ಬೃಹಸ್ಪತಿಯರು ಮುಂತಾದ ದೊಡ್ಡ ದೊಡ್ಡ ಋಷಿ-ಮುನಿಗಳು – 'ಕ್ರಿಯಾಯೋಗದ ಮೂಲಕ ನಿನ್ನ ಆರಾಧನೆಯು ಮನುಷ್ಯರ ಪರಮ ಶ್ರೇಯಸ್ಸಿನ ಸಾಧನೆಯಾಗಿದೆ' ಎಂದು ಪದೇ-ಪದೇ ಹೇಳುತ್ತಾರೆ. ॥ ೨ ॥ ಈ ಪೂಜಾವಿಧಾನವು ಮೊಟ್ಟಮೊದಲು ನಿನ್ನ ಮುಖಾರವಿಂದದಿಂದಲೇ ಹೊರಟಿತ್ತು. ಇದನ್ನು ಬ್ರಹ್ಮದೇವರು ನಿನ್ನಿಂದ ಗ್ರಹಿಸಿ, ತನ್ನ ಪುತ್ರ ಭೃಗು ಮುಂತಾದ ಮಹರ್ಷಿಗಳಿಗೆ ಹಾಗೂ ಭಗವಾನ್ ಶಂಕರನು ತನ್ನ ಅರ್ಧಾಂಗಿನೀ ಭಗವತೀ ಪಾರ್ವತಿಗೆ ಉಪದೇಶಿಸಿದ್ದರು. ॥ ೩ ॥ ಮರ್ಯಾದಾರಕ್ಷಕ ಪ್ರಭೋ! ಈ ಪೂಜಾಪದ್ಧತಿಯು ಬ್ರಾಹ್ಮಣ ಕ್ಷತ್ರಿಯ ಮುಂತಾದ ವರ್ಣಗಳಿಗೆ, ಬ್ರಹ್ಮಚಾರೀ-ಗೃಹಸ್ಥ ಮುಂತಾದ ಆಶ್ರಮಿಗಳಿಗೆ ಪರಮ ಶ್ರೇಯಸ್ಕರವಾಗಿದೆ. ಸ್ತ್ರೀ ಶೂದ್ರಾದಿಗಳಿಗಾಗಿಯೂ ಇದು ಎಲ್ಲಕ್ಕಿಂತ ಶ್ರೇಷ್ಠಸಾಧನ ಪದ್ಧತಿಯಾಗಿದೆ ಎಂದು ನಾನು ತಿಳಿಯುತ್ತೇನೆ. ॥ ೪ ॥ ಕಮಲನಯನ ಶ್ಯಾಮಸುಂದರಾ! ನೀನು ಶಂಕರಾದಿ ಜಗದೀಶ್ವರರಿಗೂ ಈಶ್ವರನಾಗಿರುವೆ. ನಾನು ನಿನ್ನ ಚರಣಗಳ ಪ್ರೇಮೀ ಭಕ್ತನಾಗಿದ್ದೇನೆ. ನೀನು ದಯಮಾಡಿ ನನಗೆ ಕರ್ಮಬಂಧನದಿಂದ ಬಿಡುಗಡೆಗೊಳಿಸುವ ಈ ವಿಧಿಯನ್ನು ತಿಳಿಸುವವನಾಗು. ॥ ೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಎಲೈ ಉದ್ಧವನೇ! ಕರ್ಮಕಾಂಡವು ಸೀಮೆಯೇ ಇಲ್ಲದಷ್ಟು ವಿಸ್ತಾರವಾಗಿದೆ. ಅದಕ್ಕಾಗಿ ನಾನು ಸ್ವಲ್ಪದರಲ್ಲಿ ಪೂರ್ವಾಪರಕ್ರಮದಿಂದ ವರ್ಣಿಸುವೆನು. ॥ ೬ ॥ ನನ್ನ ಪೂಜೆಯಲ್ಲಿ ವೈದಿಕ, ತಾಂತ್ರಿಕ ಮತ್ತು ಮಿಶ್ರಿತ ಎಂಬ ಮೂರು ವಿಧಿಗಳಿವೆ. ಈ ಮೂರರಲ್ಲಿನ ಯಾವ ವಿಧಿಯು ನನ್ನ ಭಕ್ತನಿಗೆ ಅನುಕೂಲವಾಗಿದೆಯೋ, ಅದೇ ವಿಧಿಯಿಂದ ನನ್ನನ್ನು ಆರಾಧಿಸಬೇಕು. ॥ ೭ ॥ ಮೊದಲಿಗೆ ತನ್ನ ಅಧಿಕಾರಾನುಸಾರವಾಗಿ ಶಾಸ್ತ್ರೋಕ್ತ ವಿಧಿಯಿಂದ ಸಮಯಕ್ಕೆ ಸರಿಯಾಗಿ ಉಪನಯನ ಸಂಸ್ಕಾರದ ಮೂಲಕ ದ್ವಿಜತ್ವವನ್ನು ಪಡೆದು, ಮತ್ತೆ ಶ್ರದ್ಧೆ, ಭಕ್ತಿಯಿಂದೊಡಗೂಡಿ ಅವನು ಯಾವ ವಿಧಿಯಿಂದ ನನ್ನನ್ನು ಪೂಜಿಸಬೇಕೆಂಬುದನ್ನು ನಿನಗೆ ತಿಳಿಸುತ್ತೇನೆ. ॥ ೮ ॥ ಭಕ್ತಿಪೂರ್ವಕ ನಿಷ್ಕಪಟ ಭಾವದಿಂದ ನನ್ನ ಪ್ರತೀಕದಲ್ಲಾಗಲೀ, ವೇದಿಯಲ್ಲಾಗಲೀ, ಅಗ್ನಿಯಲ್ಲಾಗಲೀ, ನೀರಿನಲ್ಲಾಗಲೀ, ಹೃದಯದಲ್ಲಾಗಲೀ, ಅಥವಾ ಜ್ಞಾನಿಯಾದ ಬ್ರಾಹ್ಮಣನಲ್ಲಾಗಲೀ ಆತ್ಮಗುರುವಾದ ನನ್ನನ್ನು ಆವಾಹನೆಮಾಡಿ ಆರಾಧನೆಮಾಡಬೇಕು. ॥ ೯ ॥

ಪೂರ್ವಂ ಸ್ನಾನಂ ಪ್ರಕುರ್ವೀತ ಧೌತದಂತೋಽಂಗಶುದ್ಧಯೇ ।
ಉಭಯೈರಪಿ ಚ ಸ್ನಾನಂ ಮಂತ್ರೈರ್ಮ್ಯಾದ್ ಗ್ರಹಣಾದಿನಾ
॥ ೧೦ ॥

ಉಪಾಸಕನಾದವನು ಪ್ರಾತಃಕಾಲದಲ್ಲಿ ಹಲ್ಲುಗಳನ್ನುಜ್ಜಿಕೊಂಡು, ಶರೀರ ಶುದ್ಧಿಗಾಗಿ ಸ್ನಾನ ಮಾಡಬೇಕು. ಮತ್ತೆ ವೈದಿಕ ಮತ್ತು ತಾಂತ್ರಿಕಗಳೆಂಬ ಎರಡೂ ಪ್ರಕಾರದ ಮಂತ್ರಗಳಿಂದ ಮೃತ್ತಿಕಾಸ್ನಾನ ಮಾಡಬೇಕು. ॥ ೧೦ ॥ ಇದಾದ ಬಳಿಕ ವೇದೋಕ್ತ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮಾಡಬೇಕು. ಅನಂತರ ನನ್ನ ಆರಾಧನೆಗಾಗಿಯೇ ದೃಢವಾದ ಸಂಕಲ್ಪವನ್ನು ಗೈದು, ವೈದಿಕ ಹಾಗೂ ತಾಂತ್ರಿಕವಿಧಿಗಳಿಂದ ಕರ್ಮಬಂಧನದಿಂದ ಬಿಡಿಸುವಂತಹ ನನ್ನ ಪೂಜೆಯನ್ನು ಮಾಡಬೇಕು. ॥ ೧೧ ॥ ನನ್ನ ಪ್ರತಿಮೆಗಳಲ್ಲಿ (೧) ಕಲ್ಲಿನದು, (೨) ಮರದ್ದು (೩.) ಧಾತುಗಳದ್ದು (೪) ಮಣ್ಣು- ಅಥವಾ ಗಂಧದ್ದು (೫) ಚಿತ್ರರೂಪದಲ್ಲಿ ಬರೆದುದು, (೬) ಮಳಲಿನದ್ದು (೭) ಮನೋಮಯ ಮತ್ತು (೮) ಮಣಿಮಯ – ಹೀಗೆ ಎಂಟು ಪ್ರಕಾರಗಳಾಗಿವೆ. ॥ ೧೨ ॥ ಚಲ ಮತ್ತು ಅಚಲ ಭೇದದಿಂದ ಒಂದು ಮೂರ್ತಿಯು ಅಚಲವಾಗಿ ಮಂದಿರದಲ್ಲಿ ಪ್ರತಿಷ್ಠಿತವಾಗಿದ್ದು, ಇನ್ನೊಂದು ರಥೋತ್ಸವಾದಿಗಳಿಗೆ ಉತ್ಸವಮೂರ್ತಿಯಾಗಿರುತ್ತದೆ. ಇಂತಹ ಎರಡು ಪ್ರಕಾರದ ಪ್ರತಿಮೆಗಳಲ್ಲಿಯೂ ಭಗವಂತನಾದ ನನ್ನ ಸನ್ನಿಧಾನವಿರುತ್ತದೆ. ಉದ್ಧವನೇ ! ಅಚಲ ಪ್ರತಿಮೆಯ ಪೂಜೆಯಲ್ಲಿ ಪ್ರತಿದಿನ ಆವಾಹನೆ, ವಿಸರ್ಜನೆ ಇರುವುದಿಲ್ಲ. ॥ ೧೩. ॥ ಚಲ ಪ್ರತಿಮೆಯ ಸಂಬಂಧದಲ್ಲಿ ಆವಾಹನೆ ಮಾಡುವುದೂ, ಮಾಡದಿರುವುದೂ ವಿಕಲ್ಪವಿದೆ. (ಚರಮೂರ್ತಿಯಾದ ಸಾಲಿಗ್ರಾಮದಲ್ಲಿ ಆವಾಹನೆ-ವಿಸರ್ಜನೆಗಳಿಲ್ಲ.) ಆದರೆ ಮಳಲಮೂರ್ತಿಯಲ್ಲಾದರೋ ಪ್ರತಿದಿನ ಆಹಾವನೆ-ವಿಸರ್ಜನೆಮಾಡಬೇಕು. ಮಣ್ಣಿನ, ಗಂಧದ, ಚಿತ್ರ ಪಟ ಮುಂತಾದ ಪ್ರತಿಮೆಗಳಿಗೆ ಸ್ನಾನಮಾಡಿಸದೆ, ಕೇವಲ ಪ್ರೋಕ್ಷಣೆ ಮಾಡಬೇಕು. ಆದರೆ ಉಳಿದ ಎಲ್ಲ ಪ್ರತಿಮೆಗಳಿಗೆ ಸ್ನಾನ ಮಾಡಿಸಬೇಕು. ॥ ೧೪ ॥

ಸಂಧ್ಯೋಪಾಸ್ತ್ಯಾದಿಕರ್ಮಾಣಿ ವೇದೇನಾऽಚೋದಿತಾನಿ ಮೇ ।
ಪೂಜಾಂ ತೈಃ ಕಲ್ಪಯೇತ್ ಸಮ್ಯಕ್ ಸಂಕಲ್ಪಃ ಕರ್ಮಪಾವನೀಮ್
॥ ೧೧ ॥

ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।
ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ
॥ ೧೨ ॥

ಚಲಾಚಲೇತಿ ದ್ವಿವಿಧಾ ಪ್ರತಿಷ್ಠಾ ಜೀವಮಂದಿರಮ್ ।
ಉದ್ವಾಸಾವಾಹನೇ ನ ಸ್ತಃ ಸ್ಥಿರಾಯಾಮುದ್ಧವಾರ್ಚನೇ
॥ ೧೩. ॥

ಅಸ್ಥಿರಾಯಾಂ ವಿಕಲ್ಪಃ ಸ್ಯಾತ್ಸ್ಥಂಡಿಲೇ ತು ಭವೇದ್ದ್ವಯಮ್ ।
ಸ್ನಪನಂ ತ್ವವಿಲೇಪ್ಯಾಯಾಮನ್ಯತ್ರ ಪರಿಮಾರ್ಜನಮ್
॥ ೧೪ ॥

ಚಿತ್ರ ಪಟ ಮುಂತಾದ ಪ್ರತಿಮೆಗಳಿಗೆ ಸ್ನಾನಮಾಡಿಸದೆ, ಕೇವಲ ಪ್ರೋಕ್ಷಣೆ ಮಾಡಬೇಕು. ಆದರೆ ಉಳಿದ ಎಲ್ಲ ಪ್ರತಿಮೆಗಳಿಗೆ ಸ್ನಾನ ಮಾಡಿಸಬೇಕು. ॥ ೧೪ ॥

ದ್ರವ್ಯೈಃ ಪ್ರಸಿದ್ಧೈರ್ಮದ್ಯಾಗಃ ಪ್ರತಿಮಾದಿಷ್ವಮಾಯಿನಃ ।
ಭಕ್ತಸ್ಯ ಚ ಯಥಾಲಬ್ಧೈರ್ಹೃದಿ ಭಾವೇನ ಚೈವ ಹಿ
॥ ೧೫ ॥

ವಿಧಿಗನುಗುಣವಾಗಿ ವಿಶೇಷ ಪೂಜಾಸಾಮಗ್ರಿಗಳಿಂದ ಪ್ರತಿಮಾದಿಗಳಲ್ಲಿ ನನ್ನ ಪೂಜೆ ಮಾಡಬೇಕು. ಆದರೆ ನಿಷ್ಕಾಮಭಕ್ತನು ಸುಲಭವಾಗಿ ದೊರೆಯುವ (ಪತ್ರ, ಪುಷ್ಪ, ಜಲ, ಫಲ) ಸಾಮಗ್ರಿಗಳಿಂದಲೇ ನನ್ನ ಪೂಜೆ ಮಾಡಲಿ. ಅಥವಾ ಹೃದಯದಲ್ಲಿ ನನ್ನನ್ನು ಧ್ಯಾನಿಸುತ್ತಾ ಮಾನಸಿಕ ಪೂಜೆಯನ್ನೂ ಮಾಡಬಹುದು. ॥ ೧೫ ॥ ಎಲೈ ಉದ್ಧವನೇ! ಸ್ನಾನ, ವಸ್ತ್ರ, ಆಭೂಷಣಾದಿಗಳಾದರೋ ಕಲ್ಲಿನ ಅಥವಾ ಧಾತುವಿನ ಪ್ರತಿಮೆಯ ಪೂಜೆಯಲ್ಲಿ ವಿನಿಯೋಗಿಸಬೇಕು. ಮಳಲುಮಯ ಮೂರ್ತಿ ಅಥವಾ ಮಣ್ಣಿನ ವೇದಿಕೆಯಲ್ಲಿ ಪೂಜೆ ಮಾಡುವುದಿದ್ದರೆ, ಅವುಗಳಲ್ಲಿ ಮಂತ್ರಗಳ ಮೂಲಕ ತತ್ತ್ವನ್ಯಾಸಮಾಡಿ, ಪ್ರಧಾನ ದೇವತೆಗಳನ್ನು ಸ್ಥಾಪಿಸಿ ಪೂಜಿಸಬೇಕು. ಅಗ್ನಿಯಲ್ಲಿ ಘೃತಮಿಶ್ರಿತ ಹವನ ಸಾಮಗ್ರಿಗಳಿಂದ ಆಹುತಿಗಳನ್ನಿತ್ತು ಪೂಜಿಸಬೇಕು. ॥ ೧೬ ॥ ಸೂರ್ಯನನ್ನೇ ನನ್ನ ಪ್ರತೀಕವಾಗಿಸಿಕೊಂಡು ಮಾಡಲಾಗುವ ಪೂಜೆ-ಉಪಾಸನೆಯಲ್ಲಿ ಪ್ರಧಾನವಾಗಿ ಅರ್ಘ್ಯದಾನ ಮತ್ತು ಉಪಸ್ಥಾನ, ನಮಸ್ಕಾರವಿರಬೇಕು. ನೀರಿನಲ್ಲಿ ತರ್ಪಣಾದಿಗಳಿಂದ ನನ್ನ ಉಪಾಸನೆ ಮಾಡಬೇಕು. ಯಾರಾದರೂ ನನ್ನ ಭಕ್ತನು ಶ್ರದ್ಧೆಯಿಂದ, ಹೃತ್ಪೂರ್ವಕವಾಗಿ ನೀರನ್ನು ಅರ್ಪಿಸಿದರೂ ನಾನು ಅದನ್ನು ತುಂಬಾ ಪ್ರೇಮದಿಂದ ಸ್ವೀಕರಿಸುತ್ತೇನೆ. ॥೧೭॥

ಸ್ನಾನಾಲಂಕರಣಂ ಪ್ರೇಷ್ಠಮರ್ಚಾಯಾಮೇವ ತೂದ್ಧವ ।
ಸ್ಥಂಡಿಲೇ ತತ್ತ್ವವಿನ್ಯಾಸೋ ವಹ್ನಾವಾಜ್ಯಪ್ಲುತಂ ಹವಿಃ
॥ ೧೬ ॥

ಸೂರ್ಯೇ ಚಾಭ್ಯರ್ಹಣಂ ಪ್ರೇಷ್ಠಂ ಸಲಿಲೇ ಸಲಿಲಾದಿಭಿಃ ।
ಶ್ರದ್ಧಯೋಪಾಹೃತಂ ಪ್ರೇಷ್ಠಂ ಭಕ್ತೇನ ಮಮ ವಾರ್ಯಪಿ
॥ ೧೭ ॥

ಭೂರ್ಯಪ್ಯಭಕ್ತೋಪಹೃತಂ ನ ಮೇ ತೋಷಾಯ ಕಲ್ಪತೇ ।
ಗಂಧೋ ಧೂಪಃ ಸುಮನಸೋ ದೀಪೋಽನ್ನಾದ್ಯಂ ಚ ಕಿಂ ಪುನಃ
॥ ೧೮ ॥

ಭಕ್ತಿಯಿಲ್ಲದವನು ನನಗೆ ಅನೇಕ ಸಾಮಗ್ರಿಗಳನ್ನು ನಿವೇದನೆ ಮಾಡಿದರೂ ಅದರಿಂದ ನಾನು ಸಂತುಷ್ಟನಾಗುವುದಿಲ್ಲ. ಆದರೆ ನನ್ನ ಭಕ್ತನು ನನಗೆ ಶ್ರದ್ಧಾಭಕ್ತಿಪೂರ್ವಕವಾಗಿ ನೀರನ್ನೇ ನಿವೇದನೆಗೈದರೂ ಅದರಿಂದ ನಾನು ಸಂತುಷ್ಟನಾಗುತ್ತೇನೆ. ಮತ್ತೆ ಪುಷ್ಪ, ಧೂಪ, ದೀಪ, ನೈವೇದ್ಯ ಮುಂತಾದ ಸಾಮಗ್ರಿಗಳಿಂದ ನನ್ನನ್ನು ಪೂಜಿಸಿದರೆ ಅವನಿಗಾಗಿ ಹೇಳುವುದೇನಿದೆ ? ॥ ೧೮ ॥

ಶುಚಿಃ ಸಂಭೃತಸಂಭಾರಃ ಪ್ರಾಗ್ದರ್ಭೈಃ ಕಲ್ಪಿತಾಸನಃ ।
ಆಸೀನಃ ಪ್ರಾಗುದಗ್ವಾರ್ಚೇದರ್ಚಾಯಾಮಥ ಸಮ್ಮುಖಃ
॥ ೧೯ ॥

ಉಪಾಸಕನು ಮೊದಲಿಗೆ ಪೂಜೆಯ ಸಾಮಗ್ರಿಗಳನ್ನು ಅಣಿಗೊಳಿಸಿಕೊಳ್ಳಬೇಕು. ಮತ್ತೆ ಪೂರ್ವಾಗ್ರವಾಗಿ ಆಸನಕ್ಕಾಗಿ ದರ್ಭೆಗಳನ್ನು ಹಾಸಿಕೊಂಡು, ಪೂರ್ವ ಅಥವಾ ಉತ್ತರದ ಕಡೆಗೆ ಮುಖ ಮಾಡಿ ಪವಿತ್ರತೆಯಿಂದ ಆ ದರ್ಭಾಸನದಲ್ಲಿ ಕುಳಿತುಕೊಳ್ಳಬೇಕು. ಪ್ರತಿಮೆ ಅಚಲವಾಗಿದ್ದರೆ ಅದರ ಎದುರಿನಲ್ಲೇ ಕುಳಿತುಕೊಂಡು ಪೂಜೆಯನ್ನು ಪ್ರಾರಂಭಿಸಬೇಕು. ॥ ೧೯ ॥ ಮೊದಲಿಗೆ ವಿಧಿಪೂರ್ವಕ ಅಂಗನ್ಯಾಸ ಮತ್ತು ಕರನ್ಯಾಸಗಳನ್ನು ಮಾಡಿಕೊಂಡು, ಬಳಿಕ ಮೂರ್ತಿಯಲ್ಲಿ ಮಂತ್ರನ್ಯಾಸ (ತತ್ತ್ವನ್ಯಾಸ) ಮಾಡಬೇಕು. ದೇವರ ಮೇಲೆ ಹಿಂದೆ ಸಮರ್ಪಿಸಿದ ನಿರ್ಮಾಲ್ಯವನ್ನು ಕೈಯಿಂದ ತೆಗೆದು, ಚೆನ್ನಾಗಿ ಒರೆಸಿಡಬೇಕು. ಮತ್ತೆ ತುಂಬಿದ ಕಲಶ, ಪ್ರೋಕ್ಷಣಪಾತ್ರೆ, ಶಂಖ, ಗಂಟೆ ಇವುಗಳನ್ನು ಗಂಧಾಕ್ಷತೆಗಳಿಂದ ಪೂಜೆ ಮಾಡಬೇಕು. ॥ ೨೦ ॥ ಅನಂತರ ಪ್ರೋಕ್ಷಣಪಾತ್ರೆಯ ನೀರಿನಿಂದ ಪೂಜಾದ್ರವ್ಯಗಳನ್ನು ಮತ್ತು ತನ್ನ ಶರೀರವನ್ನು ಪ್ರೋಕ್ಷಿಸಿಕೊಳ್ಳಬೇಕು. ಪಾದ್ಯ, ಅರ್ಘ್ಯ, ಆಚಮನಗಳಿಗಾಗಿ ಮೂರು ಸಣ್ಣ ಪಾತ್ರೆಗಳಲ್ಲಿ ಕಲಶೋದಕವನ್ನು ತುಂಬಿ, ಪೂಜಾ ಪದ್ಧತಿಯಂತೆ ಸಾಮಗ್ರಿಗಳನ್ನು ಹಾಕಿ ಸಂಸ್ಕರಿಸಬೇಕು. (ಪಾದ್ಯಪಾತ್ರದಲ್ಲಿ – ಶ್ಯಾಮಾಕ, ದೂರ್ವೆ, ಕಮಲ, ವಿಷ್ಣುಕ್ರಾಂತ, ಗಂಧ, ತುಲಸೀದಳ ಇವುಗಳನ್ನೂ; ಅರ್ಘ್ಯಪಾತ್ರೆಯಲ್ಲಿ – ಗಂಧ, ಪುಷ್ಪ, ಅಕ್ಷತೆ, ಯವ, ಕುಶ, ಎಳ್ಳು, ಬಿಳಿಸಾಸಿವೆ, ಗರಿಕೆ ಇವುಗಳನ್ನೂ; ಆಚಮನ ಪಾತ್ರೆಯಲ್ಲಿ – ಜಾಜಿಹೂವು, ಲವಂಗ, ಕಂಕೋಲ ಇವುಗಳನ್ನೂ ಹಾಕಬೇಕು.) ॥ ೨೧ ॥ ಇದಾದ ಬಳಿಕ ಪೂಜಕನು ಪಾತ್ರೆಗಳಲ್ಲಿ ಕ್ರಮವಾಗಿ ಹೃದಯಮಂತ್ರ, ಶಿರೋಮಂತ್ರ, ಶಿಖಾಮಂತ್ರ ಇವುಗಳಿಂದ ಅಭಿಮಂತ್ರಿಸಿ, ಕೊನೆಗೆ ಈ ಮೂರೂ ಪಾತ್ರೆಗಳನ್ನು ಗಾಯತ್ರೀಮಂತ್ರದಿಂದ ಅಭಿಮಂತ್ರಿಸಬೇಕು. ॥ ೨೨ ॥ ಮತ್ತೆ ಪ್ರಾಣಾಯಾಮದಿಂದ ಪ್ರಾಣವಾಯುವನ್ನು ಮತ್ತು ಭಾವನೆಯ ಮೂಲಕ ಶರೀರಸ್ಥ ಅಗ್ನಿಯನ್ನು ಶುದ್ಧಗೊಳಿಸಿ, ಹೃದಯಕಮಲದಲ್ಲಿ ಪರಮಸೂಕ್ಷ್ಮ ಮತ್ತು ಶ್ರೇಷ್ಠವಾದ ದೀಪಶಿಖೆಯಂತಿರುವ ನನ್ನ ಜೀವಕಲೆಯನ್ನು ಧ್ಯಾನಿಸಬೇಕು. ದೊಡ್ಡ-ದೊಡ್ಡ ಸಿದ್ಧ-ಋಷಿ ಮುನಿಗಳು ಓಂಕಾರದ ಅಕಾರ, ಉಕಾರ, ಮಕಾರ, ಬಿಂದು, ನಾದ – ಈ ಐದು ಕಲೆಗಳ ಕೊನೆಯಲ್ಲಿ ಆ ಜೀವಕಲೆಯನ್ನು ಧ್ಯಾನಿಸುತ್ತಾರೆ. ॥ ೨೩ ॥ ಭಗವಂತನ ತೇಜೋಮಯ ಅಂಶವು ನನ್ನ ಹೃದಯದಲ್ಲಿದೆ, ಆ ಜೀವಕಲೆಯು ಆತ್ಮಸ್ವರೂಪವಾಗಿದೆ ಎಂದು ಪೂಜಕನು ಭಾವಿಸಬೇಕು. ಅವನ ತೇಜದಿಂದ ಇಡೀ ಅಂತಃಕರಣ ಮತ್ತು ಶರೀರ ತುಂಬಿಹೋದಾಗ ಮಾನಸಿಕ ಉಪಚಾರಗಳಿಂದ ಮನಸ್ಸಿನಲ್ಲೇ ಅವನನ್ನು ಪೂಜಿಸಬೇಕು. ತದನಂತರ ತನ್ಮಯನಾಗಿ ನನ್ನನ್ನು ಆವಾಹಿಸಿ ಪ್ರತಿಮಾದಿಗಳಲ್ಲಿ ಸ್ಥಾಪಿಸಬೇಕು. ಮತ್ತೆ ಅಂಗನ್ಯಾಸಮಾಡಿ ಮಂತ್ರಗಳ ಮೂಲಕ ನನ್ನ ಪೂಜೆ ಮಾಡಬೇಕು. ॥ ೨೪ ॥

ಕೃತನ್ಯಾಸಃ ಕೃತನ್ಯಾಸಾಂ ಮದರ್ಚಾಂ ಪಾಣಿನಾಽಮೃಜೇತ್ ।
ಕಲಶಂ ಪ್ರೋಕ್ಷಣೀಯಂ ಚ ಯಥಾವದುಪಸಾಧಯೇತ್
॥ ೨೦ ॥

ತದದ್ಭಿರ್ದೇವಯಜನಂ ದ್ರವ್ಯಾಣ್ಯಾತ್ಮಾನಮೇವ ಚ ।
ಪ್ರೋಕ್ಷ್ಯ ಪಾತ್ರಾಣಿ ತ್ರೀಣ್ಯದ್ಭಿಸ್ತೈಸ್ತೈರ್ದ್ರವ್ಯೈಶ್ಚ ಸಾಧಯೇತ್
॥ ೨೧ ॥

ಪಾದ್ಯಾರ್ಘ್ಯಾಚಮನೀಯಾರ್ಥಂ ತ್ರೀಣಿ ಪಾತ್ರಾಣಿ ದೈಶಿಕಃ ।
ಹೃದಾ ಶೀರ್ಷ್ಣಾಥ ಶಿಖಯಾ ಗಾಯತ್ರ್ಯಾ ಚಾಭಿಮಂತ್ರಯೇತ್
॥ ೨೨ ॥

ಪಿಂಡೇ ವಾಯ್ವಗ್ನಿ ಸಂಶುದ್ಧೇ ಹೃತ್ಪದ್ಮಸ್ಥಾಂ ಪರಾಂ ಮಮ ।
ಅಣ್ವೀಂ ಜೀವಕಲಾಂ ಧ್ಯಾಯೇನ್ನಾದಾಂತೇ ಸಿದ್ಧಭಾವಿತಾಮ್
॥ ೨೩ ॥

ತಯಾಽಽತ್ಮಭೂತಯಾ ಪಿಂಡೇ ವ್ಯಾಪ್ತೇ ಸಂಪೂಜ್ಯ ತನ್ಮಯಃ ।
ಆವಾಹ್ಯಾರ್ಚಾದಿಷು ಸ್ಥಾಪ್ಯನ್ಯಸ್ತಾಂಗಂ ಮಾಂ ಪ್ರಪೂಜಯೇತ್
॥ ೨೪ ॥

ಪಾದ್ಯೋಪಸ್ಪರ್ಶಾರ್ಹಣಾದೀನ್ ಉಪಚಾರಾನ್ ಪ್ರಕಲ್ಪಯೇತ್ ।
ಧರ್ಮಾದಿಭಿಶ್ಚ ನವಭಿಃ ಕಲ್ಪಯಿತ್ವಾಽಽಸನಂ ಮಮ
॥ ೨೫ ॥

ಪದ್ಮಮಷ್ಟದಲಂ ತತ್ರ ಕರ್ಣಿಕಾಕೇಸರೋಜ್ಜ್ವಲಮ್ ।
ಉಭಾಭ್ಯಾಂ ವೇದತಂತ್ರಾಭ್ಯಾಂ ಮಹ್ಯಂ ತೂಭಯಸಿದ್ಧಯೇ
॥ ೨೬ ॥

ಸುದರ್ಶನಂ ಪಾಂಚಜನ್ಯಂ ಗದಾಸೀಷುಧನುರ್ಹಲಾನ್ ।
ಮುಸಲಂ ಕೌಸ್ತುಭಂ ಮಾಲಾಂ ಶ್ರೀವತ್ಸಂ ಚಾನುಪೂಜಯೇತ್
॥ ೨೭ ॥

ನಂದಂ ಸುನಂದಂ ಗರುಡಂ ಪ್ರಚಂಡಂ ಚಂಡಮೇವ ಚ ।
ಮಹಾಬಲಂ ಬಲಂ ಚೈವ ಕುಮುದಂ ಕುಮುದೇಕ್ಷಣಮ್
॥ ೨೮ ॥

ದುರ್ಗಾಂ ವಿನಾಯಕಂ ವ್ಯಾಸಂ ವಿಷ್ವಕ್ಸೇನಂ ಗುರೂನ್ಸುರಾನ್ ।
ಸ್ವೇ ಸ್ವೇ ಸ್ಥಾನೇ ತ್ವಭಿಮುಖಾನ್ ಪೂಜಯೇತ್ ಪ್ರೋಕ್ಷಣಾದಿಭಿಃ
॥ ೨೯ ॥

ಚಂದನೋಶೀರಕರ್ಪೂರಕುಂಕುಮಾಗುರುವಾಸಿತೈಃ ।
ಸಲಿಲೈಃ ಸ್ನಾಪಯೇನ್ಮಂತ್ರೈರ್ನಿತ್ಯದಾ ವಿಭವೇ ಸತಿ
॥ ೩೦ ॥

ಸ್ವರ್ಣಘರ್ಮಾನುವಾಕೇನ ಮಹಾಪುರುಷವಿದ್ಯಯಾ ।
ಪೌರುಷೇಣಾಪಿ ಸೂಕ್ತೇನ ಸಾಮಭೀ ರಾಜನಾದಿಭಿಃ
॥ ೩೧ ॥

ವಸ್ತ್ರೋಪವೀತಾಭರಣಪತ್ರಸ್ರಗ್ಗಂಧಲೇಪನೈಃ ।
ಅಲಂಕುರ್ವೀತ ಸಪ್ರೇಮ ಮದ್ಭಕ್ತೋ ಮಾಂ ಯಥೋಚಿತಮ್
॥ ೩೨ ॥

ಎಲೈ ಉದ್ಧವನೇ ! ನನ್ನ ಸಿಂಹಾಸನ (ಪೀಠ) ದಲ್ಲಿ ಧರ್ಮವೇ ಆದಿ ಗುಣಗಳನ್ನು ಮತ್ತು ವಿಮಲಾ ಮೊದಲಾದ ನವಶಕ್ತಿಗಳನ್ನು ಕಲ್ಪಿಸಿ ಆವಾಹಿಸಬೇಕು. ಅಂದರೆ ಪೀಠದ ನಾಲ್ಕೂ ಮೂಲೆಗಳಲ್ಲಿ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಈ ನಾಲ್ಕು ಕಾಲುಗಳಿವೆ. ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಎಂಬ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದಂಡಗಳಿವೆ. ಸತ್ತ್ವ, ರಜ, ತಮ ಎಂಬ ಮೂರು ಮೆಟ್ಟಲುಗಳಿಂದ ಕೂಡಿದ ಪೀಠವಿದೆ. ಅದರ ಮೇಲೆ ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ, ಅನುಗ್ರಹಾ ಎಂಬ ನವಶಕ್ತಿಗಳು ವಿರಾಜಮಾನವಾಗಿವೆ. ಆ ಪೀಠದಲ್ಲಿ ಒಂದು ಅಷ್ಟದಳ ಕಮಲವಿದೆ. ಅದರ ಕರ್ಣಿಕಾ ಅತ್ಯಂತ ಪ್ರಕಾಶಮಾನವಾಗಿದೆ ಮತ್ತು ಹಳದಿ ಬಣ್ಣದ ಕೇಸರಗಳ ಪ್ರಭೆ ಅಲೌಕಿಕವಾಗಿದೆ. ಆಸನದ ಸಂಬಂಧವಾಗಿ ಹೀಗೆ ಭಾವನೆ ಮಾಡಿ, ಪಾದ್ಯ, ಅರ್ಘ್ಯ, ಆಚಮನ ಮುಂತಾದ ಉಪಚಾರಗಳನ್ನು ಅರ್ಪಿಸಬೇಕು. ಬಳಿಕ ಭೋಗ ಮತ್ತು ಮೋಕ್ಷದ ಸಿದ್ಧಿಗಾಗಿ ವೈದಿಕ ಹಾಗೂ ತಾಂತ್ರಿಕ ವಿಧಿಯಿಂದ ನನ್ನನ್ನು ಪೂಜಿಸಬೇಕು. ॥ ೨೫-೨೬ ॥

ಸುದರ್ಶನ ಚಕ್ರ, ಪಾಂಚಜನ್ಯ ಶಂಖ ಕೌಮೋದಕೀ ಗದೆ, ಖಡ್ಗ ಬಾಣ, ಧನುಸ್ಸು ಹಲ, ಮುಸಲ ಎಂಬ ಎಂಟು ಆಯುಧಗಳನ್ನು ಎಂಟು ದಿಕ್ಕುಗಳಲ್ಲಿಯೂ ಪೂಜಿಸಬೇಕು. ಕೌಸ್ತುಭಮಣಿ, ವೈಜಯಂತೀಮಾಲೆ, ಶ್ರೀವತ್ಸಲಾಂಛನ ವಕ್ಷಸ್ಥಳದ ಯಥಾಸ್ಥಾನದಲ್ಲಿ ಪೂಜಿಸಬೇಕು. ॥ ೨೭ ॥ ನಂದ, ಸುನಂದ, ಪ್ರಚಂಡ, ಚಂಡ, ಮಹಾಬಲ, ಬಲ, ಕುಮುದ, ಕುಮುದೇಕ್ಷಣ – ಈ ಎಂಟು ಮಂದಿ ನನ್ನ ಪಾರ್ಷದರನ್ನು ಎಂಟುದಿಕ್ಕುಗಳಲ್ಲಿ ಸ್ಥಾಪಿಸಿ ಪೂಜಿಸಬೇಕು. ಗರುಡನನ್ನು ಇದಿರುಗಡೆಯಲ್ಲಿ ಸ್ಥಾಪಿಸಿ ಪೂಜಿಸಬೇಕು. ಬಳಿಕ ದುರ್ಗೆ, ವಿನಾಯಕ, ವ್ಯಾಸ, ವಿಷ್ವಕ್ಸೇನರನ್ನು ನಾಲ್ಕೂ ಮೂಲೆಗಳಲ್ಲಿ ಸ್ಥಾಪಿಸಿ ಪೂಜಿಸಬೇಕು. ಬಲಭಾಗದಲ್ಲಿ ಗುರುವನ್ನು, ಪೂರ್ವಾದಿ ಎಂಟು ದಿಕ್ಕುಗಳಲ್ಲಿ ಇಂದ್ರಾದಿ ಅಷ್ಟ-ದಿಕ್ಪಾಲಕರನ್ನು ಸ್ಥಾಪಿಸಿ, ಪ್ರೋಕ್ಷಣಾ, ಪಾದ್ಯ, ಅರ್ಘ್ಯಪ್ರದಾನಾದಿ ಕ್ರಮಗಳಿಂದ ಪೂಜೆ ಮಾಡಬೇಕು. ॥ ೨೮-೨೯ ॥

ಪ್ರಿಯ ಉದ್ಧವನೇ ! ಸಾಮರ್ಥ್ಯ, ವೈಭವಗಳಿದ್ದರೆ ಪ್ರತಿದಿನವೂ ಚಂದನ, ಲಾವಂಚ, ಪಚ್ಚಕರ್ಪೂರ, ಕುಂಕುಮಕೇಸರಿ, ಅಗರು ಮುಂತಾದ ಸುಗಂಧ ದ್ರವ್ಯಗಳಿಂದ ಸುವಾಸಿತ ಜಲದಿಂದ ನನಗೆ ಅಭಿಷೇಕ ಮಾಡಬೇಕು. **'ಸುವರ್ಣಂ ಘರ್ಮಂ ಪರಿವೇದ ವೇನಮ್'** ಸ್ವರ್ಣ ಘರ್ಮಾನುವಾಕದಿಂದಲೂ, **'ಜಿತಂತೇ ಪುಂಡರೀಕಾಕ್ಷ'** ಎಂಬ ಮಹಾಪುರುಷವಿದ್ಯೆಯಿಂದಲೂ, ಪುರುಷ ಸೂಕ್ತದಿಂದಲೂ, **'ಇಂದ್ರಂ ನ ರೋನೇ ಮಧಿತಾ ಹವಂತ'** ಮುಂತಾದ ರಾಜನಾದಿ ಸಾಮಗಾನದಿಂದಲೂ ನನಗೆ ಅಭಿಷೇಕ ಮಾಡಬೇಕು. ॥ ೩೦-೩೧ ॥ ನನ್ನ ಭಕ್ತನು – ವಸ್ತ್ರ, ಯಜ್ಞೋಪವೀತ, ಆಭೂಷಣ, ಪತ್ರ, ಪುಷ್ಪಮಾಲೆ, ಗಂಧ, ಚಂದನಾದಿಗಳಿಂದ ಪ್ರೇಮಪೂರ್ವಕ ಯಥಾಮತ್ ನನ್ನನ್ನು ಶೃಂಗರಿಸಲಿ. ॥ ೩೨ ॥

ಪಾದ್ಯಮಾಚಮನೀಯಂ ಚ ಗಂಧಂ ಸುಮನಸೋಽಕ್ಷತಾನ್ ।
ಧೂಪದೀಪೋಪಹಾರ್ಯಾಣಿ ದದ್ಯಾನ್ಮೇ ಶ್ರದ್ಧಯಾರ್ಚಕಃ
॥ ೩೩ ॥

ಪೂಜಕನು ಶ್ರದ್ಧೆಯಿಂದ ನನಗೆ ಪಾದ್ಯ, ಆಚಮನ, ಚಂದನ, ಪುಷ್ಪ, ಅಕ್ಷತೆ, ಧೂಪ, ದೀಪ, ಮುಂತಾದ ಉಪಚಾರಗಳನ್ನು ಸಮರ್ಪಿಸಲಿ. ॥ ೩೩ ॥

ಗುಡಪಾಯಸಸರ್ಪೀಂಷಿ ಶಷ್ಕುಲ್ಯಾಪೂಪಮೋದಕಾನ್ ।
ಸಂಯಾವದಧಿಸೂಪಾಂಶ್ಚ ನೈವೇದ್ಯಂ ಸತಿ ಕಲ್ಪಯೇತ್
॥ ೩೪ ॥

ಅನುಕೂಲಕ್ಕೆ ತಕ್ಕಂತೆ ಬೆಲ್ಲ-ಪಾಯಸ, ತುಪ್ಪ, ಚಕ್ಕುಲಿ, ಅಪೂಪ (ವಡೆ), ಎರೆಯಪ್ಪ, ಅತಿರಸ, ಸಿಹಿಕಡಬು, ಲಾಡು, ಮೊಸರು, ತೊವ್ವೆ ಮೊದಲಾದ ನಾನಾ ವ್ಯಂಜನಗಳನ್ನು ನೈವೇದ್ಯಮಾಡಲಿ. ॥ ೩೪ ॥ ನನ್ನ ಶ್ರೀವಿಗ್ರಹಕ್ಕೆ ದಂತಧಾವನ, ಎಣ್ಣೆಮಜ್ಜನ, ಅಂಗಗಳನ್ನು ಒತ್ತುವಿಕೆ, ಪಂಚಾಮೃತಾಭಿಷೇಕ, ಸುಗಂಧದ್ರವ್ಯಗಳ ಲೇಪನಮಾಡಿ, ಅಲಂಕಾರ, ಕನ್ನಡಿಸೇವೆ, ಅನ್ನಭಕ್ಷ್ಯಗಳ ನೈವೇದ್ಯ ಇತ್ಯಾದಿಗಳನ್ನು ಪ್ರತಿನಿತ್ಯವೂ ಮಾಡಬೇಕು. ನೃತ್ಯ-ಗೀತಾದಿ ಸೇವೆಯನ್ನು ನಿತ್ಯವೂ ಮಾಡ ಬಹುದು, ಸೌಕರ್ಯವಿಲ್ಲದಿದ್ದರೆ ಪರ್ವದಿವಸಗಳಲ್ಲಾದರೂ ಮಾಡಬೇಕು. ಜೊತೆಗೆ ಭಗವನ್ನಾಮ ಸಂಕೀರ್ತನೆ, ಹರಿಕಥೆಗಳನ್ನೂ ಏರ್ಪಡಿಸಬೇಕು. ॥ ೩೫ ॥

ಅಭ್ಯಂಗೋನ್ಮರ್ದನಾದರ್ಶದಂತಧಾವಾಭಿಷೇಚನಮ್ ।
ಅನ್ನಾದ್ಯಗೀತನೃತ್ಯಾದಿ ಪರ್ವಣಿ ಸ್ಯುರುತಾನ್ವಹಮ್
॥ ೩೫ ॥

ವಿಧಿನಾ ವಿಹಿತೇ ಕುಂಡೇ ಮೇಖಲಾಗರ್ತವೇದಿಭಿಃ ।
ಅಗ್ನಿಮಾಧಾಯ ಪರಿತಃ ಸಮೂಹೇತ್ಪಾಣಿನೋದಿತಮ್
॥ ೩೬ ॥

ಉದ್ಧವನೇ ! ಪೂಜಕನು ತನ್ನ ಗೃಹ್ಯೋಕ್ತವಿಧಿಯಿಂದ ನಿರ್ಮಿತವಾದ ಮೇಖಲೇ, ಗರ್ತ, ವೇದಿ ಇವುಗಳಿಂದ ಕೂಡಿದ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿ, ಪ್ರಜ್ವಲನಗೊಳಿಸಬೇಕು. ಸುತ್ತಲೂ ಕೈಯಿಂದ ನೀರನ್ನು ಪ್ರೋಕ್ಷಿಸಿ ಅದನ್ನು ಪರಿಸಮೂಹನ ಮಾಡಬೇಕು. ॥ ೩೬ ॥ ಬಳಿಕ ಹೋಮಕುಂಡದ ನಾಲ್ಕೂ ಕಡೆಗಳಲ್ಲಿಯೂ ಪರಿಸ್ತರಣವನ್ನು ಹಾಸಿ, ಪ್ರೋಕ್ಷಣಪಾತ್ರೆಯಲ್ಲಿರುವ ಜಲದಿಂದ ಸುತ್ತಲೂ ಪ್ರೋಕ್ಷಿಸಿ, ಸ್ವಗೃಹ್ಯೋಕ್ತವಿಧಿಯಿಂದ, ಸಮಿತ್ ಪ್ರಕ್ಷೇಪಾದಿ ವಿಧಿಯಿಂದ ಆನ್ವಾಧಾನ ಕರ್ಮವನ್ನು ಮಾಡಿ, ಅಗ್ನಿಗೆ ಉತ್ತರದಲ್ಲಿ ಹೋಮಕ್ಕೆ ಉಪಯುಕ್ತವಾದ ದ್ರವ್ಯಗಳನ್ನಿಟ್ಟು ಪ್ರೋಕ್ಷಣೀಪಾತ್ರೆಯ ಜಲದಿಂದ ಪ್ರೋಕ್ಷಿಸಬೇಕು. ಅನಂತರ ಆ ಅಗ್ನಿಯಲ್ಲಿ ನನ್ನನ್ನು ಧ್ಯಾನಿಸಬೇಕು. ॥ ೩೭ ॥ ಪುಟಕ್ಕೆ ಹಾಕಿದ ಭಂಗಾರದ ಹೊಂಬಣ್ಣದಿಂದ ಬೆಳಗುವ ಶರೀರದಿಂದ ಕೂಡಿರುವ, ಶಂಖ, ಚಕ್ರ, ಗದೆ, ಪದ್ಮ ಇವುಗಳಿಂದ ಸಮಲಂಕೃತವಾದ ನಾಲ್ಕು ಭುಜಗಳಿಂದ ಶೋಭಾಯಮಾನವಾದ, ಶಾಂತವಾದ ಮುಖಭಾವದಿಂದಿರುವ, ಕಮಲದ ಕೇಸರದಂತೆ ನವುರಾಗಿರುವ ಪೀತಾಂಬರವನ್ನು ಉಟ್ಟಿರುವ, ಕಿರೀಟ, ಕಂಕಣ, ಕಟಿಸೂತ್ರ, ಭುಜಕೀರ್ತಿಗಳಿಂದ ಕಂಗೊಳಿಸುತ್ತಿರುವ, ವಕ್ಷಃಸ್ಥಳದಲ್ಲಿ ಶ್ರೀವತ್ಸ ಲಾಂಛನವನ್ನೂ, ಕೌಸ್ತುಭಮಣಿಯನ್ನೂ, ವನಮಾಲೆಯನ್ನೂ ಧರಿಸಿರುವ, ನನ್ನ ದಿವ್ಯ ಮಂಗಳ ವಿಗ್ರಹವನ್ನು ಧ್ಯಾನಿಸಬೇಕು. ॥ ೩೮-೩೯ ॥ ಅಗ್ನಿಯಲ್ಲಿ ನನ್ನ ಈ ಮೂರ್ತಿಯನ್ನು ಧ್ಯಾನಿಸಿ ಪೂಜಿಸಬೇಕು. ಬಳಿಕ ಒಣಗಿದ ಸಮಿಧೆಗಳನ್ನು ತುಪ್ಪದಲ್ಲಿ ಅದ್ದಿ ಆಹುತಿಯನ್ನು ಕೊಡಬೇಕು. ಆಜ್ಯ ಭಾಗ ಮತ್ತು ಆಘಾರವೆಂಬ ಎರಡು ಆಹುತಿಗಳಿಂದ ಹವನ ಮಾಡಬೇಕು. ಬಳಿಕ ತುಪ್ಪದಲ್ಲಿ ಅದ್ದಿ ಬೇರೆ ಹವನ ದ್ರವ್ಯದಿಂದ ಆಹುತಿಗಳನ್ನು ಕೊಡಬೇಕು. ॥ ೪೦ ॥ ಇದಾದ ಬಳಿಕ ತನ್ನ ಇಷ್ಟಮಂತ್ರದಿಂದ ಅಥವಾ **'ಓಂ ನಮೋ ನಾರಾಯಣಾಯ'** ಈ ಅಷ್ಟಾಕ್ಷರ ಮಂತ್ರದಿಂದ, ಮತ್ತು ಪುರುಷಸೂಕ್ತದ ಹದಿನಾರು ಮಂತ್ರಗಳಿಂದ ಹವನ ಮಾಡಬೇಕು. ಬುದ್ಧಿವಂತನಾದವನು ಧರ್ಮಾದಿ ದೇವತೆಗಳಿಗೂ ವಿಧಿಪೂರ್ವಕ ಮಂತ್ರಗಳಿಂದ ಆಹುತಿಯನ್ನು ನೀಡಿ ಕೊನೆಯಲ್ಲಿ ಸ್ವಿಷ್ಟಕೃತ್ ಆಹುತಿಯನ್ನು ಕೊಡಬೇಕು. ॥ ೪೧ ॥

ಪರಿಸ್ತೀರ್ಯಾಥ ಪರ್ಯುಕ್ಷ್ಯೇದನ್ವಾಧಾಯ ಯಥಾವಿಧಿ ।
ಪ್ರೋಕ್ಷಣ್ಯಾಽಽಸಾದ್ಯ ದ್ರವ್ಯಾಣಿ ಪ್ರೋಕ್ಷ್ಯಾಗ್ನೌ ಭಾವಯೇತಮಾಮ್
॥ ೩೭ ॥

ತಪ್ತಜಾಂಬೂನದಪ್ರಖ್ಯಂ ಶಂಖಚಕ್ರಗದಾಂಬುಜೈಃ ।
ಲಸಚ್ಚತುರ್ಭುಜಂ ಶಾಂತಂ ಪದ್ಮಕಿಂಜಲ್ಕವಾಸಸಮ್
॥ ೩೮ ॥

ಸ್ಫುರತ್ಕಿರೀಟಕಟಕಕಟಿಸೂತ್ರವರಾಂಗದಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಂ ವನಮಾಲಿನಮ್
॥ ೩೯ ॥

ಧ್ಯಾಯನ್ನಭ್ಯರ್ಚ್ಯ ದಾರೂಣಿ ಹವಿಷಾಭಿಘೃತಾನಿ ಚ ।
ಪ್ರಾಸ್ಯಾಜ್ಯಭಾಗಾವಾಘಾರೌ ದತ್ತ್ವಾ ಚಾಜ್ಯಪ್ಲುತಂ ಹವಿಃ
॥ ೪೦ ॥

ಜುಹುಯಾನ್ಮೂಲಮಂತ್ರೇಣ ಷೋಡಶರ್ಚಾವದಾನತಃ ।
ಧರ್ಮಾದಿಭ್ಯೋ ಯಥಾನ್ಯಾಯಂ ಮಂತ್ರೈಃ ಸ್ವಿಷ್ಟಕೃತಂ ಬುಧಃ
॥ ೪೧ ॥

ಅಭ್ಯರ್ಚ್ಯಾಥ ನಮಸ್ಕೃತ್ಯ ಪಾರ್ಷದೇಭ್ಯೋ ಬಲಿಂ ಹರೇತ್ ।
ಮೂಲಮಂತ್ರಂ ಜಪೇದ್ಬ್ರಹ್ಮ ಸ್ಮರನ್ನಾರಾಯಣಾತ್ಮಕಮ್
॥ ೪೨ ॥

ಹೀಗೆ ಅಗ್ನಿಯಲ್ಲಿ ಅಂತರ್ಯಾಮಿಯಾಗಿ ಸ್ಥಿತನಾದ ಭಗವಂತನ ಪೂಜೆಮಾಡಿ, ಅವನಿಗೆ ನಮಸ್ಕರಿಸಬೇಕು. ನಂದ, ಸುನಂದ ಮುಂತಾದ ಪಾರ್ಷದರಿಗೆ ಎಂಟೂದಿಕ್ಕುಗಳಲ್ಲಿ ಹವನಾಂಗ ಪಾಯಸಬಲಿಯನ್ನು ಅರ್ಪಿಸಬೇಕು. ಬಳಿಕ ಪ್ರತಿಮೆಯ ಮುಂದೆ ಕುಳಿತು ಪರಬ್ರಹ್ಮಸ್ವರೂಪೀ ಭಗವಾನ್ ನಾರಾಯಣನನ್ನು ಸ್ಮರಿಸಬೇಕು ಮತ್ತು ಭಗವತ್ಸ್ವರೂಪ ಮೂಲಮಂತ್ರ **'ಓಂ ನಮೋ ನಾರಾಯಣಾಯ'** ಇದರ ಜಪಮಾಡಬೇಕು. ॥ ೪೨ ॥ ಇದಾದ ನಂತರ ಭಗವಂತನಿಗೆ ಹಸ್ತಪ್ರಕ್ಷಾಳನ, ಮುಖಪ್ರಕ್ಷಾಳನ, ಆಚಮನವನ್ನು ನೀಡಿ, ಅವನ ಪ್ರಸಾದವನ್ನು ವಿಷ್ವಕ್ಸೇನನಿಗೆ ಅರ್ಪಿಸಬೇಕು. ಬಳಿಕ ತನ್ನ ಇಷ್ಟದೇವರಿಗೆ ಮುಖವಾಸಕ್ಕಾಗಿ ಸುಗಂಧಿತ ತಾಂಬೂಲವನ್ನು ಅರ್ಪಿಸಿ, ಮಂತ್ರಪುಷ್ಪವನ್ನು ಸಮರ್ಪಿಸಬೇಕು. ॥ ೪೩. ॥

ದತ್ತ್ವಾಽಽಚಮನಮುಚ್ಛೇಷಂ ವಿಷ್ವಕ್ಸೇನಾಯ ಕಲ್ಪಯೇತ್ ।
ಮುಖವಾಸಂ ಸುರಭಿಮತ್ತಾಂಬೂಲಾದ್ಯಮಥಾರ್ಹಯೇತ್
॥ ೪೩. ॥

ನನ್ನ ಲೀಲೆಗಳನ್ನು ಹಾಡುತ್ತಾ, ಅವನ್ನು ವರ್ಣಿಸಬೇಕು. ನನ್ನ ಲೀಲೆಗಳನ್ನು ಅಭಿನಯದ ಮೂಲಕ ತೋರಿಸಬೇಕು. ಪ್ರೇಮೋನ್ಮತ್ತನಾಗಿ ನರ್ತಿಸಬೇಕು. ನನ್ನ ಲೀಲಾ-ಕಥೆಗಳನ್ನು ಸ್ವತಃ ಕೇಳುತ್ತಾ, ಇತರರಿಗೂ ಹೇಳಬೇಕು. ಆನಂದಪರವಶನಾಗಿ ಹೀಗೆ ನನ್ನ ಶ್ರೀವಿಗ್ರಹದಲ್ಲೇ ತನ್ಮಯನಾಗಿ ಮುಹೂರ್ತಕಾಲವನ್ನು ಕ್ಷಣದಂತೆ ಕಳೆಯಬೇಕು. ॥ ೪೪ ॥

ಉಪಗಾಯನ್ನೃಣನ್ ನೃತ್ಯನ್ ಕರ್ಮಾಣ್ಯಭಿನಯನ್ ಮಮ ।
ಮತ್ಕಥಾಃ ಶ್ರಾವಯನ್ ಶೃಣ್ವನ್ ಮುಹೂರ್ತಂ ಕ್ಷಣಿಕೋ ಭವೇತ್
॥ ೪೪ ॥

ಪ್ರಾಚೀನ ಋಷಿ-ಮುನಿಗಳಿಂದ ರಚಿಸಲ್ಪಟ್ಟ ಮತ್ತು ಪ್ರಾಕೃತ ಭಕ್ತರಿಂದ ಹಾಡಲ್ಪಟ್ಟ ಚಿಕ್ಕ-ದೊಡ್ಡ ಸ್ತೋತ್ರಗಳಿಂದ ನನ್ನನ್ನು ಸ್ತುತಿಸಿ, 'ಭಗವಂತಾ ! ನನ್ನ ಮೇಲೆ ಪ್ರಸನ್ನನಾಗು, ನನಗೆ ನಿನ್ನ ಕೃಪಾಪ್ರಸಾದವನ್ನು ಕರುಣಿಸು' ಎಂದು ಪ್ರಾರ್ಥಿಸಬೇಕು. ಬಳಿಕ ದಂಡವತ್ ಸಾಷ್ಟಾಂಗ ಪ್ರಣಾಮ ಮಾಡಬೇಕು. ॥ ೪೫ ॥

ಸ್ತವೈರುಚ್ಚಾವಚೈಃ ಸ್ತೋತ್ರೈಃ ಪೌರಾಣೈಃ ಪ್ರಾಕೃತೈರಪಿ ।
ಸ್ತುತ್ವಾ ಪ್ರಸೀದ ಭಗವನ್ನಿತಿ ವಂದೇತ ದಂಡವತ್
॥ ೪೫ ॥

ಅರ್ಚಕನು ತನ್ನ ಶಿರಸ್ಸನ್ನು ನನ್ನ ಪಾದಗಳ ಮೇಲಿರಿಸಿಕೊಂಡು, ಬಲಗೈಯಿಂದ ನನ್ನ ಬಲಕಾಲನ್ನು, ಎಡಕೈಯಿಂದ ಎಡಕಾಲನ್ನು ಭದ್ರವಾಗಿ ಹಿಡಿದುಕೊಂಡು - 'ಭಗವಂತಾ ! ಈ ಸಂಸಾರಸಾಗರದಲ್ಲಿ ನಾನು ಮುಳುಗುತ್ತಿದ್ದೇನೆ. ಮೃತ್ಯುರೂಪೀ ಗ್ರಹವು ನನ್ನ ಬೆನ್ನುಬಿದ್ದಿದೆ, ನಾನು ಭಯಗೊಂಡು ನಿನ್ನಲ್ಲಿ ಶರಣಾಗಿದ್ದೇನೆ. ಓ ಪ್ರಭುವೇ ! ನೀನು ನನ್ನನ್ನು ಕಾಪಾಡು' ಎಂದು ಪ್ರಾರ್ಥಿಸಿಕೊಳ್ಳಬೇಕು. ॥ ೪೬ ॥

ಶಿರೋ ಮತ್ಪಾದಯೋಃ ಕೃತ್ವಾ ಬಾಹುಭ್ಯಾಂ ಚ ಪರಸ್ಪರಮ್ ।
ಪ್ರಪನ್ನಂ ಪಾಹಿ ಮಾಮೀಶ ಭೀತಂ ಮೃತ್ಯುಗ್ರಹಾರ್ಣವಾತ್
॥ ೪೬ ॥

ಹೀಗೆ ದೈನ್ಯದಿಂದ ಪ್ರಾರ್ಥನೆಯನ್ನು ಸಲ್ಲಿಸಿ, ನನಗೆ ಸಮರ್ಪಿತವಾದ ಪುಷ್ಪಮಾಲಿಕೆಯನ್ನು ನಾನೇ ಕೈಯಾರೆ ಕೊಟ್ಟ ಪ್ರಸಾದವೆಂದು ತಿಳಿದು ಕಣ್ಣಿಗೊತ್ತಿಗೊಂಡು, ತಲೆಯಮೇಲೆ ಹೊತ್ತುಕೊಳ್ಳಬೇಕು. ವಿಸರ್ಜನೆ ಮಾಡಬೇಕಿದ್ದರೆ, ಶ್ರೀವಿಗ್ರಹದಲ್ಲಿರುವ ದಿವ್ಯಜ್ಯೋತಿಯು ಹೊರಬರುತ್ತಿರುವುದೆಂದೂ ತನ್ನ (ಭಕ್ತನ) ಹೃತ್ಕಮಲದಲ್ಲಿರುವ ಜ್ಯೋತಿಯೊಡನೆ ಲೀನವಾಗುತ್ತಿರುವುದೆಂದೂ ಭಾವಿಸಿಕೊಂಡು, ವಿಸರ್ಜನ ಮಂತ್ರವನ್ನು ಹೇಳಬೇಕು. ॥ ೪೭ ॥

ಇತಿ ಶೇಷಾಂ ಮಯಾ ದತ್ತಾಂ ಶಿರಸ್ಯಾಧಾಯ ಸಾದರಮ್ ।
ಉದ್ವಾಸಯೇಚ್ಚೇದುದ್ವಾಸ್ಯಂ ಜ್ಯೋತಿರ್ಜ್ಯೋತಿಷಿ ತತ್ಪುನಃ
॥ ೪೭ ॥

ಉದ್ಧವನೇ ! ನನ್ನ ಅರ್ಚನೆಗೆ ಹೇಳಿರುವ ಹಲವಾರು ಪ್ರತಿಮೆಗಳಲ್ಲಿ ಯಾವ ಪ್ರತಿಮೆಯಲ್ಲಿ ಯಾವಾಗ ಪೂಜೆಮಾಡಲು ಶ್ರದ್ಧೆ ಉಂಟಾಗುವುದೋ ಆಗಲೇ ಆ ಪ್ರತಿಮೆಯಲ್ಲಿ ನನ್ನನ್ನು ಅರ್ಚಿಸಬೇಕು. ಪ್ರತಿಮೆಗಳಲ್ಲಿ ಯಾವುದೇ ತಾರತಮ್ಯವಿಲ್ಲ, ಸರ್ವಾತ್ಮನಾದ ನಾನು ಸಕಲ ಪ್ರಾಣಿಗಳಲ್ಲಿಯೂ, ಸಕಲ ಪ್ರಾಣಿಗಳ ಹೃದಯದಲ್ಲಿಯೂ ಸರ್ವದಾ ನೆಲೆಸಿರುತ್ತೇನೆ. ॥ ೪೮ ॥

ಅರ್ಚಾದಿಷು ಯದಾ ಯತ್ರ ಶ್ರದ್ಧಾ ಮಾಂ ತತ್ರ ಚಾರ್ಚಯೇತ್ ।
ಸರ್ವಭೂತೇಷ್ವಾತ್ಮನಿ ಚ ಸರ್ವಾತ್ಮಾಹಮವಸ್ಥಿತಃ
॥ ೪೮ ॥

ಏವಂ ಕ್ರಿಯಾಯೋಗಪಥೈಃ ಪುಮಾನ್ ವೈದಿಕತಾಂತ್ರಿಕೈಃ।
ಅರ್ಚನ್ನುಭಯತಃ ಸಿದ್ಧಿಂ ಮತ್ತೋ ವಿಂದತ್ಯಭೀಪ್ಸಿತಾಮ್
॥ ೪೯ ॥

ಮದರ್ಚಾಂ ಸಂಪ್ರತಿಷ್ಠಾಪ್ಯ ಮಂದಿರಂ ಕಾರಯೇದ್ದೃಢಮ್।
ಪುಷ್ಪೋದ್ಯಾನಾನಿ ರಮ್ಯಾಣಿ ಪೂಜಾಯಾತ್ರೋತ್ಸವಾಶ್ರಿತಾನ್
॥ ೫೦ ॥

ಪೂಜಾದೀನಾಂ ಪ್ರವಾಹಾರ್ಥಂ ಮಹಾಪರ್ವಸ್ವಥಾನ್ವಹಮ್।
ಕ್ಷೇತ್ರಾಪಣಪುರಗ್ರಾಮಾನ್ ದತ್ತ್ವಾ ಮತ್ಸಾರ್ಷ್ಟಿತಾಮಿಯಾತ್
॥ ೫೧ ॥

ಪ್ರತಿಷ್ಠಯಾ ಸಾರ್ವಭೌಮಂ ಸದ್ಮನಾ ಭುವನತ್ರಯಮ್।
ಪೂಜಾದಿನಾ ಬ್ರಹ್ಮಲೋಕಂ ತ್ರಿಭಿರ್ಮತ್ಸಾಮ್ಯತಾಮಿಯಾತ್
॥ ೫೨ ॥

ಮಾಮೇವ ನೈರಪೇಕ್ಷ್ಯೇಣ ಭಕ್ತಿಯೋಗೇನ ವಿಂದತಿ।
ಭಕ್ತಿಯೋಗಂ ಸ ಲಭತೇ ಏವಂ ಯಃ ಪೂಜಯೇತ ಮಾಮ್
॥ ೫೩ ॥

ಯಃ ಸ್ವದತ್ತಾಂ ಪರೈರ್ದತ್ತಾಂ ಹರೇತ ಸುರವಿಪ್ರಯೋಃ।
ವೃತ್ತಿಂ ಸ ಜಾಯತೇ ವಿಡ್ಭುಗ್ವರ್ಷಾಣಾಮಯುತಾಯುತಮ್
॥ ೫೪ ॥

ಕರ್ತುಶ್ಚ ಸಾರಥೇರ್ಹೇತೋರನುಮೋದಿತುರೇವ ಚ।
ಕರ್ಮಣಾಂ ಭಾಗಿನಃ ಪ್ರೇತ್ಯ ಭೂಯೋ ಭೂಯಸಿ ತತ್ಫಲಮ್
॥ ೫೫ ॥

ಎಲೈ ಉದ್ಧವಾ! ಈ ಪ್ರಕಾರ ವೈದಿಕ, ತಾಂತ್ರಿಕ ಕ್ರಿಯಾಯೋಗದ ಮೂಲಕ ನನ್ನನ್ನು ಪೂಜಿಸುವ ಮನುಷ್ಯನು ಈ ಲೋಕ ಮತ್ತು ಪರಲೋಕದಲ್ಲಿ ನನ್ನಿಂದ ಅಭೀಷ್ಟವನ್ನು ಪಡೆದು ಕೊಳ್ಳುತ್ತಾನೆ. ॥ ೪೯ ॥ ಉಪಾಸಕನು ಸಮರ್ಥನಾಗಿದ್ದರೆ ನನ್ನ ಸುಂದರ, ಸುದೃಢವಾದ ಮಂದಿರವನ್ನು ಕಟ್ಟಿ ಅದರಲ್ಲಿ ನನ್ನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಿ. ಸುತ್ತಲೂ ರಮ್ಯವಾದ ಉದ್ಯಾನವನಗಳನ್ನು ನಿರ್ಮಿಸಲಿ. ನಿತ್ಯಪೂಜೆ, ನಿತ್ಯೋತ್ಸವ, ರಥೋತ್ಸವಗಳಿಗೆ ಬೇಕಾದ ವ್ಯವಸ್ಥೆಮಾಡಲಿ. ॥ ೫೦ ॥ ನನ್ನ ನಿತ್ಯಪೂಜೆ, ಪರ್ವದಿವಸಗಳಲ್ಲಿ ವಿಶೇಷಪೂಜೆ, ನಿತ್ಯೋತ್ಸವ-ರಥೋತ್ಸವಗಳು ಅವಿಚ್ಛಿನ್ನವಾಗಿ ನಡೆದುಕೊಂಡು ಹೋಗಲು ಶ್ರೀಮಂತರಾದ ಭಕ್ತರು ಹೊಲ-ಗದ್ದೆಗಳನ್ನೂ, ಅಂಗಡಿಗಳನ್ನು, ಗ್ರಾಮ-ಪಟ್ಟಣಗಳನ್ನು ಉಂಬಳಿಯಾಗಿ ಕೊಡಬೇಕು. ಇದರಿಂದ ಅವರಿಗೆ ನನ್ನ ಸಮಾನವಾದ ಐಶ್ವರ್ಯವು ನನ್ನ ಅನುಗ್ರಹದಿಂದ ದೊರೆಯುತ್ತದೆ. ॥ ೫೧ ॥ ನನ್ನ ವಿಗ್ರಹ ಪ್ರತಿಷ್ಠಾಪನೆಯಿಂದ ಪೃಥ್ವಿಯ ಏಕಚ್ಛತ್ರ ರಾಜ್ಯ, ಮಂದಿರ, ನಿರ್ಮಾಣದಿಂದ ತ್ರೈಲೋಕ್ಯದ ರಾಜ್ಯ, ಪೂಜಾದಿಗಳ ವ್ಯವಸ್ಥೆ ಮಾಡಿದವರಿಗೆ ಬ್ರಹ್ಮಲೋಕ ಮತ್ತು ಮೂರನ್ನೂ ಮಾಡಿದಾಗ ನನ್ನ ಸಾರೂಪ್ಯವನ್ನು ಪಡೆದು ಕೊಳ್ಳುವನು. ॥ ೫೨ ॥ ನಿಷ್ಕಾಮಭಾವದಿಂದ ನನ್ನ ಪೂಜೆ ಮಾಡುವವನಿಗೆ ನನ್ನ ಭಕ್ತಿಯೋಗವು ಪ್ರಾಪ್ತವಾಗುತ್ತದೆ. ಆ ನಿರಪೇಕ್ಷ ಭಕ್ತಿಯೋಗದ ಮೂಲಕ ಅವನು ಸ್ವಯಂ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೫೩ ॥ ದೇವ-ಬ್ರಾಹ್ಮಣರಿಗೆ ತಾನು ಕೊಟ್ಟ ಉಂಬಳಿಯನ್ನಾಗಲೀ, ಇತರರು ಕೊಟ್ಟ ಉಂಬಳಿಯನ್ನಾಗಲೀ ಅಪಹರಿಸುವವನು ಕೋಟ್ಯಂತರ ವರ್ಷಗಳವರೆಗೆ ಅಮೇಧ್ಯದಲ್ಲಿನ ಕ್ರಿಮಿಯಾಗುತ್ತಾನೆ. ॥ ೫೪ ॥ ಇಂತಹ ಪಾಪಿಷ್ಠವಾದ, ಹೇಯವಾದ ಕೆಲಸಕ್ಕೆ ಸಹಾಯ ಮಾಡುವವರು, ಪ್ರೇರಕರೂ, ಅನುಮೋದಕರೂ ಇವರಿಗೂ ಇದೇ ವಿಧವಾದ ದುಷ್ಫಲವು ದೊರೆಯುತ್ತದೆ. ಇವರ ಕೈವಾಡ ಹೆಚ್ಚಿದ್ದರೆ ಅವರಿಗೆ ಫಲವೂ ಹೆಚ್ಚೇ ಸಿಗುತ್ತದೆ. ॥ ೫೫ ॥

ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೨೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಸಪ್ತವಿಂಶೋಽಧ್ಯಾಯಃ॥ ೨೭ ॥

ಇಪ್ಪತ್ತೆಂಟನೆಯ ಅಧ್ಯಾಯ

ಪರಮಾರ್ಥ ನಿರೂಪಣೆ

ಶ್ರೀಭಗವಾನುವಾಚ

ಪರಸ್ವಭಾವಕರ್ಮಾಣಿ ನ ಪ್ರಶಂಸೇನ್ನ ಗರ್ಹಯೇತ್।
ವಿಶ್ವಮೇಕಾತ್ಮಕಂ ಪಶ್ಯನ್ ಪ್ರಕೃತ್ಯಾ ಪುರುಷೇಣ ಚ
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ! ಬೇರೆಯವರ ಸ್ವಭಾವದ ಅಥವಾ ಅವರ ಕರ್ಮಗಳ ಬಗ್ಗೆ ಚರ್ಚೆ ಎಂದೂ ಮಾಡಬಾರದು. ಅವರನ್ನು ಹೊಗಳುವುದಾಗಲೀ, ತೆಗಳುವುದಾಗಲೀ ಮಾಡಬಾರದು. ಸಮಸ್ತ ವಿಶ್ವದಲ್ಲಿ ಒಂದೇ ಆತ್ಮನು ಒಳಗೆ-ಹೊರಗೆ ವ್ಯಾಪ್ತನಾಗಿದ್ದಾನೆ. ಪ್ರಕೃತಿ-ಪುರುಷರಿಂದ ಉಂಟಾದ ಈ ವಿಶ್ವದಲ್ಲಿ ಒಂದೇ ಆತ್ಮನಸತ್ತೆಯನ್ನು ನೋಡಬೇಕು. ॥ ೧ ॥

ಪರಸ್ವಭಾವಕರ್ಮಾಣಿ ಯಃ ಪ್ರಶಂಸತಿ ನಿಂದತಿ ।
ಸ ಆಶು ಭ್ರಶ್ಯತೇ ಸ್ವಾರ್ಥಾದಸತ್ಯಭಿನಿವೇಶತಃ
॥ ೨ ॥

ಬೇರೆಯವರ ಸ್ವಭಾವ ಮತ್ತು ಕರ್ಮದ ನಿಂದೆ-ಸ್ತುತಿ ಮಾಡುವ ವ್ಯಕ್ತಿಯು ಬೇಗನೇ ಅಸತ್ತಿನಲ್ಲಿ ಆಗ್ರಹವಿರಿಸಿ, ತನ್ನ ಉನ್ನತಿಯ ಮಾರ್ಗದಿಂದ ಭ್ರಷ್ಟನಾಗಿ ಪತಿತನಾಗುತ್ತಾನೆ. ॥ ೨ ॥

ತೈಜಸೇ ನಿದ್ರಯಾऽऽಪನ್ನೇ ಪಿಂಡಸ್ಥೋ ನಷ್ಟಚೇತನಃ ।
ಮಾಯಾಂ ಪ್ರಾಪ್ನೋತಿ ಮೃತ್ಯುಂ ವಾ ತದ್ಜ್ಞಾನಾರ್ಥದೃಕ್ ಪುಮಾನ್
॥ ೩ ॥

ನಿದ್ರಾವಸ್ಥೆಯಲ್ಲಿ ಇಂದ್ರಿಯಗಳು ಮಲಗಿಬಿಡುತ್ತವೆ. ದೇಹದಲ್ಲಿರುವ ಜೀವಿಯು ಆಗ ಜ್ಞಾನಶೂನ್ಯನಾಗುತ್ತಾನೆ. ಹೀಗೆ ನಿದ್ರಾವಸ್ಥೆಯಲ್ಲಿ ಎಂದಾದರೂ ಈ ಮನುಷ್ಯನು ಮಾಯೆ (ಸ್ವಪ್ನ)ಯನ್ನು ನೋಡುತ್ತಾನೆ. ಅಥವಾ ಸುಷುಪ್ತಿ ಅವಸ್ಥೆಯಲ್ಲಿ ಗಾಢನಿದ್ದೆಯಲ್ಲಿ ಪೂರ್ಣ ಜ್ಞಾನಶೂನ್ಯನಾಗುತ್ತಾನೆ. ಹಾಗೆಯೇ ಜಾಗ್ರತ್ ಅವಸ್ಥೆಯಲ್ಲಿಯೂ ಅನೇಕ ಪ್ರಕಾರದ ಪದಾರ್ಥಗಳನ್ನು ಚಿಂತಿಸುತ್ತಾನೆ ಮತ್ತು ನೋಡುತ್ತಾ ಇರುತ್ತಾನೆ. ಆದರೆ ಇದೆಲ್ಲವೂ ಮಿಥ್ಯೆಯೇ ಆಗಿದೆ. ಸತ್ಯ ವಸ್ತು ಏಕಮಾತ್ರ ಪರಮಾತ್ಮ ತತ್ತ್ವವೇ ಆಗಿದೆ. ॥ ೩ ॥

ಕಿಂ ಭದ್ರಂ ಕಿಮಭದ್ರಂ ವಾ ದ್ವೈತಸ್ಯಾವಸ್ತುನಃ ಕಿಯತ್ ।
ವಾಚೋದಿತಂ ತದನೃತಂ ಮನಸಾ ಧ್ಯಾತಮೇವ ಚ
॥ ೪ ॥

ಯಥಾರ್ಥದಲ್ಲಿ ಇಲ್ಲವೇ ಇಲ್ಲದ ವಸ್ತುವಿನ ಬಗ್ಗೆ ಏನು ಒಳ್ಳೆಯದು ಹೇಳಬಹುದು, ಏನು ಕೆಟ್ಟದೆಂದು ಹೇಳಬಹುದು ? ಇದೆಲ್ಲವೂ ಕೇವಲ ವಾಣಿಯ ವಿಲಾಸಮಾತ್ರವಾಗಿದೆ, ಆದ್ದರಿಂದ ಮಿಥ್ಯೆಯಾಗಿದೆ. ಹೀಗೆಯೇ ಮನಸ್ಸಿನಿಂದ ಈ ಅಸತ್ ಪದಾರ್ಥಗಳನ್ನು ಚಿಂತಿಸುವುದೂ ವ್ಯರ್ಥವೇ ಆಗಿದೆ. ॥ ೪ ॥

ಛಾಯಾಪ್ರತ್ಯಾಹ್ವಯಾಭಾಸಾ ಹ್ಯಸಂತೋऽಪ್ಯರ್ಥಕಾರಿಣಃ ।
ಏವಂ ದೇಹಾದಯೋ ಭಾವಾ ಯಚ್ಚಂತ್ಯಾಮೃತ್ಯುತೋ ಭಯಮ್
॥ ೫ ॥

ಛಾಯೆ, ಪ್ರತಿಧ್ವನಿ ಮತ್ತು ಆಭಾಸ ಇವು ಮೂರೂ ನಿಜವಲ್ಲದಿದ್ದರೂ ತಮ್ಮ-ತಮ್ಮ ಕಾರ್ಯಗಳನ್ನಾದರೋ ಮಾಡಿಯೇ ಮಾಡುತ್ತವೆ. (ಛಾಯೆ (ನೆರಳು)ಯಲ್ಲಿ ಕುಳಿತಿರುತ್ತಾರೆ ಮತ್ತು ಅದನ್ನು ಒಪ್ಪಿಕೊಂಡು ಕಾರ್ಯವನ್ನೂ ಮಾಡುತ್ತಾರೆ. ಪ್ರತಿಧ್ವನಿಯಾದರೆ 'ಇದೇನಾಯಿತು ?' ಎಂದು ಗಾಬರಿಗೊಳ್ಳುವನು. ಹಗ್ಗದಲ್ಲಿ ಸರ್ಪದ ಭ್ರಮೆಯಿಂದ ಭಯವಾಗುತ್ತದೆ. ಇವೆಲ್ಲವೂ ತಮ್ಮ-ತಮ್ಮ ಕಾರ್ಯ ಮಾಡುತ್ತಿದ್ದರೂ ಇವು ಮೂರೂ ಮಿಥ್ಯೆಯಾಗಿದೆ.) ಹೀಗೆಯೇ ದೇಹಾದಿ ಪದಾರ್ಥಗಳೆಲ್ಲವೂ ಮಿಥ್ಯೆಯೇ ಆಗಿವೆ. ಆದರೂ ಪ್ರಾಣಿಗಳಿಗೆ ಸಾಯುವವರೆಗೆ ಭಯ, ದುಃಖಿಗಳಾದರೋ ಕೊಡುತ್ತಲೇ ಇರುತ್ತವೆ. ॥ ೫ ॥

ಆತ್ಮೈವ ತದಿದಂ ವಿಶ್ವಂ ಸೃಜ್ಯತೇ ಸೃಜತಿ ಪ್ರಭುಃ ।
ತ್ರಾಯತೇ ತ್ರಾತಿ ವಿಶ್ವಾತ್ಮಾ ಹ್ರಿಯತೇ ಹರತೀಶ್ವರಃ
॥ ೬ ॥

ಸಮಸ್ತ ವಿಶ್ವದ ಆತ್ಮನಾದರೋ ಒಬ್ಬನೇ ಆಗಿದ್ದಾನೆ. ಆ ಆತ್ಮನೇ ಬ್ರಹ್ಮಾ ಆಗಿ ತನ್ನಿಂದಲೇ ತನ್ನನ್ನು (ವಿಶ್ವವಾಗಿ) ನಿರ್ಮಿಸಿಕೊಳ್ಳುವನು. ಆ ಸ್ವಯಂ ವಿಷ್ಣು ರೂಪದಿಂದ ತನ್ನನ್ನೇ ರಕ್ಷಿಸಿಕೊಳ್ಳುವನು. ಪ್ರಳಯಕಾಲದಲ್ಲಿ ರುದ್ರರೂಪದಿಂದ ತನ್ನಿಂದ ಸೃಷ್ಟಿಸಲ್ಪಟ್ಟ ವಿಶ್ವವನ್ನು ಸಂಹಾರ ಮಾಡುತ್ತಾನೆ. ॥ ೬ ॥

ತಸ್ಮಾನ್ನಹ್ಯಾತ್ಮನೋऽನ್ಯಸ್ಮಾದನ್ಯೋ ಭಾವೋ ನಿರೂಪಿತಃ ।
ನಿರೂಪಿತೇಯಂ ತ್ರಿವಿಧಾ ನಿರ್ಮೂಲಾ ಭಾತಿರಾತ್ಮನಿ ।
ಇದಂ ಗುಣಮಯಂ ವಿದ್ಧಿ ತ್ರಿವಿಧಂ ಮಾಯಯಾ ಕೃತಮ್
॥ ೭ ॥

ಈ ಪ್ರಕಾರ ಆತ್ಮನಲ್ಲದೆ ಬೇರೆ ಯಾವ ವಸ್ತುವೂ ಕೂಡ ಇರುವುದು ಸಿದ್ಧವಾಗುವುದಿಲ್ಲ. ಆತ್ಮನಿಂದ ಭಿನ್ನವಾದ ಇನ್ನೊಂದು ಭಾವ ಕಂಡುಬರುವುದರ ಯಾವ ಕಾರಣವೂ ಇಲ್ಲ. ಆದರೆ ಇಲ್ಲದೆಯೇ ಯಾವುದು ಆತ್ಮನಲ್ಲಿ ಮೂರು ಪ್ರಕಾರದಿಂದ ಭಾಸಮಾನವಾಗುತ್ತದೋ ಅದನ್ನು ನೀನು ತ್ರಿಗುಣಾತ್ಮಿಕಾ ಮಾಯೆಯ ಕಾರ್ಯವೆಂದೇ ತಿಳಿ. ॥ ೭ ॥

ಏತದ್ವಿದ್ವಾನ್ ಮದುದಿತಂ ಜ್ಞಾನವಿಜ್ಞಾನನೈಪುಣಮ್ ।
ನ ನಿಂದತಿ ನ ಚ ಸ್ತೌತಿ ಲೋಕೇ ಚರತಿ ಸೂರ್ಯವತ್
॥ ೮ ॥

ಉದ್ಧವನೇ ! ಜ್ಞಾನ-ವಿಜ್ಞಾನದಿಂದ ಕೂಡಿದ ಈ ಉಪದೇಶವನ್ನು ನಾನು ನಿನಗೆ ಹೇಳಿರುವೆನು. ಇದನ್ನು ತಿಳಿದುಕೊಂಡು ವಿದ್ವಾಂಸನು ಯಾರನ್ನೂ ನಿಂದಿಸುವುದಿಲ್ಲ, ಸ್ತುತಿಸುವುದಿಲ್ಲ, ಇಂತಹ ಮಹಾಪುರುಷರು ಸೂರ್ಯನಂತೆ ಎಲ್ಲೆಡೆ ಜ್ಞಾನದ ಪ್ರಕಾಶವನ್ನು ಹರಡುತ್ತಾ ವಿಚರಿಸುತ್ತಿರುತ್ತಾರೆ. ॥ ೮ ॥ ಪ್ರತ್ಯಕ್ಷ ಪ್ರಮಾಣದಿಂದ, ಅನುಮಾನ

ಪ್ರತ್ಯಕ್ಷೇಣಾನುಮಾನೇನ ನಿಗಮೇನಾತ್ಮ ಸಂವಿದಾ ।
ಆದ್ಯಂತವದಸಜ್ಜ್ಞಾತ್ವಾ ನಿಸ್ಸಂಗೋ ವಿಚರೇದಿಹ
॥ ೯ ॥

ಪ್ರಮಾಣದಿಂದ, ಶಾಸ್ತ್ರ ಮತ್ತು ಮಹಾಪುರುಷರ ವಚನಗಳಿಂದ ಹಾಗೂ ಆತ್ಮಾನುಭೂತಿಯಿಂದ – 'ಕಂಡುಬರುವ ಅಸತ್ ಪದಾರ್ಥಗಳೆಲ್ಲವೂ ಆದಿ-ಅಂತ್ಯಗಳಿಂದ ಕೂಡಿದೆ ಅರ್ಥಾತ್ ನಾಶವುಳ್ಳದ್ದಾಗಿದೆ' ಎಂದು ಸ್ಪಷ್ಟವಾಗಿ ತಿಳಿದುಕೋ. ಅದರಿಂದ ಅನಾಸಕ್ತನಾಗಿ ಪ್ರಪಂಚದಲ್ಲಿ ವಿಚರಿಸುತ್ತಿರು. ॥ ೯ ॥

ಉದ್ಧವ ಉವಾಚ

ನೈವಾತ್ಮನೋ ನ ದೇಹಸ್ಯ ಸಂಸೃತಿರ್ದೃಷ್ಟ್ಯದೃಶ್ಯಯೋಃ ।
ಅನಾತ್ಮಸ್ವದೃಶೋರೀಶ ಕಸ್ಯ ಸ್ಯಾದುಪಲಭ್ಯತೇ
॥ ೧೦ ॥

ಉದ್ಧವನು ಕೇಳಿದನು – ಭಗವಂತಾ! ಆತ್ಮನು ದ್ರಷ್ಟಾ ಸಾಕ್ಷಿಯಾಗಿದ್ದು, ಸ್ವಯಂಪ್ರಕಾಶವಾಗಿದ್ದಾನೆ ಅವನು ಏನನ್ನೂ ಮಾಡುವುದಿಲ್ಲ, ದೇಹವೂ ಕೂಡ ದೃಶ್ಯವಾಗಿದ್ದು, ಜಡವಾದ್ದರಿಂದ ಅದೂ ಕೂಡ ಪ್ರಪಂಚವನ್ನು ಮಾಡಲಾರದು. ಇಂತಹ ಸ್ಥಿತಿಯಲ್ಲಿ ಈ ಸಂಸೃತಿ (ಹುಟ್ಟು-ಸಾವು) ಯಾರಿಗಾಗುತ್ತದೆ ? ॥ ೧೦ ॥

ಆತ್ಮಾವ್ಯಯೋಽಗುಣಃ ಶುದ್ಧಃ ಸ್ವಯಂಜ್ಯೋತಿರನಾವೃತಃ ।
ಅಗ್ನಿವದ್ದಾರುವದಚಿದ್ದೇಹಃ ಕಸ್ಯೇಹ ಸಂಸೃತಿಃ
॥ ೧೧ ॥

ಆತ್ಮನು ಅವಿನಾಶೀ, ನಿರ್ಗುಣ, ಶುದ್ಧ, ಸ್ವಯಂಜ್ಯೋತಿ ಮತ್ತು ಒಳ-ಹೊರಗೆ ಎಲ್ಲೆಡೆ ಪರಿಪೂರ್ಣನಾಗಿದ್ದು ಅಗ್ನಿಯಂತೆ ಜ್ಯೋತಿರ್ಮಯವಾಗಿದ್ದಾನೆ. ಆದರೆ ಶರೀರವು ಕಾಷ್ಠದಂತೆ ಅಚೇತನವಾಗಿದೆ. ಇಂತಹ ಸ್ಥಿತಿಯಲ್ಲಿ ಜನ್ಮ-ಮೃತ್ಯುವಿನಲ್ಲಿ ಆಲೆಯುವವನು ಯಾರು ? ॥ ೧೧ ॥

ಶ್ರೀಭಗವಾನುವಾಚ

ಯಾವದ್ದೇಹೇಂದ್ರಿಯ ಪ್ರಾಣೈರಾತ್ಮನಃ ಸಂನಿಕರ್ಷಣಮ್ ।
ಸಂಸಾರಃ ಫಲವಾಂಸ್ತಾವದಪಾರ್ಥೋಽಪ್ಯವಿವೇಕಿನಃ
॥ ೧೨ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ದೇಹ, ಇಂದ್ರಿಯ, ಪ್ರಾಣಗಳೊಂದಿಗೆ ಆತ್ಮನ ಸಂಬಂಧವಿರುವ ತನಕ ಅಜ್ಞಾನಿಗೆ ಈ ಪ್ರಪಂಚವು ಅಸತ್ಯವಾಗಿದ್ದರೂ ಸತ್ಯದಂತೆ ಕಾಣುತ್ತದೆ. ॥ ೧೨ ॥ ಸ್ವಪ್ನದಲ್ಲಿ ನಾನಾ ಪ್ರಕಾರದ ಅನರ್ಥಗಳು ಆಗದಿದ್ದರೂ ಕಂಡುಬರುತ್ತವೆ. ಅದರಿಂದ ಅವನು ದುಃಖಿಯೂ ಆಗುತ್ತಾನೆ. ಆದರೆ ಎಚ್ಚರಗೊಂಡಾಗ ಅವೆಲ್ಲ ಅನರ್ಥಗಳು ದೂರವಾಗುತ್ತವೆ. ಹಾಗೆಯೇ ಜಾಗ್ರತದಲ್ಲಿಯೂ ವಿಷಯಗಳು ಮಿಥ್ಯೆಯೇ ಆಗಿದ್ದರೂ ಆ ವಿಷಯಗಳ ನಿರಂತರ ಚಿಂತನೆ ಮಾಡುತ್ತಿರುವುದರಿಂದ ಪ್ರಪಂಚದಲ್ಲಿ ಆಲೆಯುವುದು ನಿಲ್ಲುವುದಿಲ್ಲ. ॥ ೧೩ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ
॥ ೧೩ ॥

ಮನುಷ್ಯನು ಸ್ವಪ್ನವನ್ನು ನೋಡುತ್ತಾ ಇರುವಾಗ, ನಿದ್ದೆಯಿಂದ ಎಚ್ಚರವಾಗುವ ಮೊದಲು ದೊಡ್ಡ-ದೊಡ್ಡ ವಿಪತ್ತುಗಳನ್ನು ಎದುರಿಸಬೇಕಾಗುತ್ತದೆ. ಆದರೆ ನಿದ್ದೆಯಿಂದ ಎಚ್ಚರಗೊಂಡಾಗ ಸ್ವಪ್ನದ ವಿಪತ್ತುಗಳಾಗಲೀ, ಅವುಗಳ ಕಾರಣದಿಂದ ಉಂಟಾಗುವ ಮೋಹವೇ ಮುಂತಾದ ವಿಕಾರಗಳಾಗಲೀ, ಇರುವುದಿಲ್ಲ. ॥ ೧೪ ॥

ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ ।
ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ
॥ ೧೪ ॥

ಉದ್ಧವನೇ! ಇದೇ ರೀತಿ ನಾನು ನನ್ನದು ಎಂಬ ಭಾವನೆ ಇರುವವರೆಗೆ ಶೋಕ, ಹರ್ಷ, ಭಯ, ಕ್ರೋಧ, ಲೋಭ, ಮೋಹ, ಸ್ಪೃಹೆ ಮುಂತಾದ ಭಾವಗಳು ಹಾಗೂ ಜನ್ಮ-ಮೃತ್ಯುವಿನ ದುಃಖ ಜೀವನಿಗೆ ಭೋಗಿಸಬೇಕಾಗುತ್ತದೆ. ಇವೆಲ್ಲವೂ ದೇಹಾಭಿಮಾನದಿಂದಲೇ ಇವೆಯೇ ಹೊರತು ಆತ್ಮನಿಗೆ ಇದರೊಂದಿಗೆ ಯಾವ ಸಂಬಂಧವೂ ಇಲ್ಲ. ॥ ೧೫ ॥ ಎಲೈ ಉದ್ಧವನೇ ! ದೇಹ, ಇಂದ್ರಿಯಗಳು, ಪ್ರಾಣ ಮತ್ತು ಮನಸ್ಸಿನಲ್ಲಿ ಸ್ಥಿತನಾದ ಆತ್ಮನೇ ಗುಣ ಹಾಗೂ ಕರ್ಮಗಳಿಂದ ಉಂಟಾದ ಲಿಂಗಶರೀರದಲ್ಲಿ ಅಹಂಭಾವಪಟ್ಟಾಗ ಅವನೇ ಜೀವನೆಂದು ಹೇಳಲ್ಪಡುತ್ತಾನೆ. ಆಗ ಅವನು ತನ್ನ ಸ್ವರೂಪದಿಂದ ವಿಮುಖನಾಗಿ, ಜಡ ಪದಾರ್ಥಗಳಲ್ಲಿ ಅಹಂತೆ, ಮಮತೆಗೈದು ಬದ್ಧನಾಗುತ್ತಾನೆ. ಮತ್ತೆ ಕಾಲದ ಮೂಲಕ ಪ್ರೇರಿತನಾಗಿ ಸಂಸಾರದಲ್ಲಿ ಆಲೆಯುತ್ತಾ ಇರುತ್ತಾನೆ. ವಾಸ್ತವದಲ್ಲಾದರೋ ಈ ಜೀವಿಯು ಸೂಕ್ಷ್ಮಾತಿಸೂಕ್ಷ್ಮ ಆತ್ಮನದೇ ಮೂರ್ತಿಯಾಗಿದೆ. ಈ ಪ್ರಕಾರ ಈ ಆತ್ಮನನ್ನು ಸೂತ್ರಾತ್ಮಾ, ಮಹತ್ತತ್ತ್ವ ಹಾಗೂ ಇನ್ನೂ ಅನೇಕ ಹೆಸರುಗಳಿಂದ ಹೇಳಲಾಗಿದೆ. ॥ ೧೬ ॥ ಈ ಅಹಂಕಾರವೇ

ಶೋಕಹರ್ಷಭಯಕ್ರೋಧಲೋಭಮೋಹಸ್ಪೃಹಾದಯಃ ।
ಅಹಂಕಾರಸ್ಯ ದೃಶ್ಯಂತೇ ಜನ್ಮಮೃತ್ಯುಶ್ಚ ನಾತ್ಮನಃ
॥ ೧೫ ॥

ದೇಹೇಂದ್ರಿಯಪ್ರಾಣಮನೋಽಭಿಮಾನೋ
ಜೀವೋಽಂತರಾತ್ಮಾ ಗುಣಕರ್ಮಮೂರ್ತಿಃ ।
ಸೂತ್ರಂ ಮಹಾನಿತ್ಯುರುಧೇವ ಗೀತಃ
ಸಂಸಾರ ಆಧಾವತಿ ಕಾಲತಂತ್ರಃ ॥ ೧೬ ॥

ಅಮೂಲಮೇತದ್ಬಹುರೂಪರೂಪಿತಂ
ಮನೋ ವಚಃ ಪ್ರಾಣಶರೀರಕರ್ಮ ।

ಜ್ಞಾನಾಸಿನೋಪಾಸನಯಾ ಶಿತೇನ-
ಚ್ಛಿತ್ತ್ವಾ ಮುನಿರ್ಗಾಂ ವಿಚರತ್ಯತೃಷ್ಣಃ ॥ ೧೭ ॥

ಜ್ಞಾನಂ ವಿವೇಕೋ ನಿಗಮಸ್ತಪಶ್ಚ
ಪ್ರತ್ಯಕ್ಷಮೈತಿಹ್ಯಮಥಾನುಮಾನಮ್ ।

ಆದ್ಯಂತಯೋರಸ್ಯ ಯದೇವ ಕೇವಲಂ
ಕಾಲಶ್ಚ ಹೇತುಶ್ಚ ತದೇವ ಮಧ್ಯೇ ॥ ೧೮ ॥

ಯಥಾ ಹಿರಣ್ಯಂ ಸ್ವಕೃತಂ ಪುರಸ್ತಾತ್
ಪಶ್ಚಾಚ್ಚ ಸರ್ವಸ್ಯ ಹಿರಣ್ಮಯಸ್ಯ ।

ತದೇವ ಮಧ್ಯೇ ವ್ಯವಹಾರ್ಯಮಾಣಂ
ನಾನಾಪದೇಶೈರಹಮಸ್ಯ ತದ್ವತ್ ॥ ೧೯ ॥

ವಿಜ್ಞಾನಮೇತತ್ತ್ರಿಯವಸ್ಥಮಂಗ
ಗುಣತ್ರಯಂ ಕಾರಣಕಾರ್ಯಕರ್ತೃ ।

ಸಮನ್ವಯೇನ ವ್ಯತಿರೇಕತಶ್ಚ
ಯೇನೈವ ತುರ್ಯೇಣ ತದೇವ ಸತ್ಯಮ್ ॥ ೨೦ ॥

ಮನ, ವಾಣೀ, ಪ್ರಾಣ, ಶರೀರ ಮತ್ತು ಕರ್ಮ ಮುಂತಾದ ಅನೇಕ ರೂಪಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಯಾವುದೇ ಮೂಲವು ಇಲ್ಲದ್ದರಿಂದ ಮಿಥ್ಯೆಯೇ ಆಗಿದೆ. ಜೀವಿಯು ಸ್ವಯಂ ಇವುಗಳಲ್ಲಿ ಅಹಂಭಾವ ಮಾಡಿದಕಾರಣ ಬದ್ಧನಾಗಿದ್ದಾನೆ. ಇದರಿಂದ ಮುಕ್ತನಾಗಲು ಎಲ್ಲ ರೀತಿಯಿಂದ ತೃಷ್ಣಾರಹಿತನಾಗಿ, ಉಪಾಸನೆಯ ಮೂಲಕ ಜ್ಞಾನರೂಪೀ ತೀಕ್ಷ್ಣಖಡ್ಗದಿಂದ ಅತ್ಮನನ್ನು ಬಂಧಿಸುವ ಅಹಂಕಾರವನ್ನು ಸಮೂಲವಾಗಿ ಕತ್ತರಿಸಿ, ಭಗವತ್ಸ್ವರೂಪವನ್ನು ಮನನಮಾಡುತ್ತಾ, ಸ್ವಚ್ಛಂದವಾಗಿ ವಿಚರಿಸುವುದೇ ಉಪಾಯವಾಗಿದೆ. ॥ ೧೭ ॥ ಅತ್ಮಾ-ಅನಾತ್ಮದ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳುವುದೇ ಜ್ಞಾನವಾಗಿದೆ. ಈ ವಿವೇಕವು ಉಂಟಾದಾಗ ದ್ವೈತದ ಅಸ್ತಿತ್ವವು ಇರುವುದಿಲ್ಲ. ಆದ್ದರಿಂದ ಅತ್ಮಚಿಂತನೆಯಿಂದ ಹೃದಯವನ್ನು ಶುದ್ಧಗೊಳಿಸಬೇಕು. ಪ್ರತ್ಯಕ್ಷಪ್ರಮಾಣದಿಂದ, ಮಹಾಪುರುಷರ ವಚನಗಳಿಂದ, ಶಾಸ್ತ್ರಪ್ರಮಾಣದಿಂದ ಮತ್ತು ಅನುಮಾನ ಪ್ರಮಾಣದಿಂದ ಒಂದೇ ಅತ್ಮತತ್ತ್ವವನ್ನು ಎಲ್ಲೆಡೆಗಳಲ್ಲಿ ನೋಡಬೇಕು. ಅವನೇ ಈ ಜಗತ್ತಿನ ಆದಿ ಮತ್ತು ಅಂತ್ಯದಲ್ಲಿರುವನು. ನಡುವಿನಲ್ಲಿಯೂ ಅವನೇ ಇದ್ದಾನೆ ಎಂದು ನಿಶ್ಚಯಿಸಬೇಕು. ಅವನನ್ನೇ ಕಾಲನೆಂದೂ ಹೇತು ಎಂದೂ ಹೇಳುತ್ತಾರೆ. ಈ ಪ್ರಕಾರ ಚಿಂತನೆಯಿಂದ ಓರ್ವ ಪರಮಾತ್ಮನನ್ನೇ ಸರ್ವತ್ರ ನೋಡಬೇಕು. ॥ ೧೮ ॥

ಉದ್ಧವನೇ! ಚಿನ್ನದಿಂದ ಕಂಕಣ, ಕುಂಡಲಾದಿ ಅನೇಕ ಆಭರಣಗಳು ಆಗುತ್ತವೆ. ಆದರೆ ಒಡವೆಗಳು ಆಗದಿದ್ದಾಗಲೂ ಅದು ಚಿನ್ನವೇ ಇತ್ತು. ಒಡವೆಗಳು ಕರಗಿ ಇಲ್ಲವಾದಾಗಲೂ ಚಿನ್ನವೇ ಆಗಿ ಉಳಿಯುವುದು. ನಡುವಿನಲ್ಲಿ ಅದಕ್ಕೆ ಕಂಕಣ-ಕುಂಡಲಾದಿ ಅನೇಕ ಹೆಸರುಗಳನ್ನಿಟ್ಟು ವ್ಯವಹರಿಸುತ್ತಾರೆ. ಆಗಲೂ ಅದು ಚಿನ್ನವೇ ಆಗಿದೆ. ಸರಿಯಾಗಿ ಹಾಗೆಯೇ ಜಗತ್ತಿನ ಆದಿ, ಅಂತ್ಯ ಮತ್ತು ಮಧ್ಯದಲ್ಲಿಯೂ ನಾನೇ ಇದ್ದೇನೆ. ವಾಸ್ತವವಾಗಿ ನಾನೇ ಸತ್ಯತತ್ತ್ವನಾಗಿದ್ದೇನೆ. ॥ ೧೯ ॥ ಪ್ರಿಯ ಉದ್ಧವನೇ! ಈ ವಿಶ್ವವು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿಂದ ಕೂಡಿದೆ. ಸತ್ತ್ವ, ರಜ, ತಮ ಹೀಗೆ ಮೂರುಗುಣಗಳಿಂದ ಉಂಟಾಗಿದೆ. ಅಧ್ಯಾತ್ಮ (ಇಂದ್ರಿಯಗಳು – ಕರಣ), ಅಧಿಭೂತ (ಪೃಥ್ವಿ ಆದಿಕಾರ್ಯ), ಅಧಿದೈವ (ಕರ್ತಾ) ಈ ರೀತಿಯ ಮೂರು ಭೇದಗಳಿಂದ ಯುಕ್ತವಾಗಿದೆ. ಈ ತ್ರಿವಿಧತೆಯಿಂದ ಯುಕ್ತವಾದ ಈ ಜಗತ್ತು ಅಧಿಷ್ಠಾನದಲ್ಲಿ ಪರಮಾತ್ಮನ ಸತ್ತೆ ಇರುವ ಕಾರಣವೇ ಸತ್ಯದಂತೆ ಕಂಡುಬರುತ್ತದೆ. ಅನ್ವಯರೂಪದಿಂದ ಎಲ್ಲದರಲ್ಲಿ ಪರಮಾತ್ಮನೇ ಅನುಸ್ಯೂತನಾಗಿದ್ದಾನೆ ಮತ್ತು ವ್ಯತಿರೇಕರೂಪದಿಂದ ಅರ್ಥಾತ್ ನೇತಿ-ನೇತಿಯ ಮೂಲಕ ಇವೆಲ್ಲದನ್ನು ನಿರಾಕರಣೆ ಮಾಡಿದಾಗ ಏಕಮಾತ್ರ ಪರಮಾತ್ಮನೇ ಶೇಷವಾಗಿ ಉಳಿಯುತ್ತಾನೆ. ನಾಲ್ಕನೆಯವನಿಂದಲೇ ಇದೆಲ್ಲವೂ ಇದೆ, ಅದೇ ಸತ್ಯತತ್ತ್ವವಾಗಿದೆ. ಆ ತುರೀಯ ತತ್ತ್ವದ ಜ್ಞಾನ ಉಂಟಾದಮೇಲೆ ಎಲ್ಲ ತ್ರಿವಿಧತೆ ಮುಗಿದುಹೋಗುತ್ತದೆ. ॥ ೨೦ ॥ ಮೊದಲೂ

ನ ಯತ್ ಪುರಸ್ತಾದುತ ಯನ್ನ ಪಶ್ಚಾ-
ನ್ಮಧ್ಯೇ ಚ ತನ್ನ ವ್ಯಪದೇಶಮಾತ್ರಮ್ ।
ಭೂತಂ ಪ್ರಸಿದ್ಧಂ ಚ ಪರೇಣ ಯದ್ಯತ್
ತದೇವ ತತ್ಸ್ಯಾದಿತಿ ಮೇ ಮನೀಷಾ ॥ ೨೧ ॥

ಅವಿದ್ಯಮಾನೋಽಪ್ಯವಭಾಸತೇ ಯೋ
ವೈಕಾರಿಕೋ ರಾಜಸಸರ್ಗ ಏಷಃ ।
ಬ್ರಹ್ಮ ಸ್ವಯಂಜ್ಯೋತಿರತೋ ವಿಭಾತಿ
ಬ್ರಹ್ಮೇಂದ್ರಿಯಾರ್ಥಾತ್ಮವಿಕಾರಚಿತ್ರಮ್ ॥ ೨೨ ॥

ಏವಂ ಸ್ಫುಟಂ ಬ್ರಹ್ಮವಿವೇಕಹೇತುಭಿಃ
ಪರಾಪವಾದೇನ ವಿಶಾರದೇನ ।
ಛಿತ್ತ್ವಾಽಽತ್ಮಸಂದೇಹಮುಪಾರಮೇತ
ಸ್ವಾನಂದತುಷ್ಟೋಽಖಿಲಕಾಮುಕೇಭ್ಯಃ ॥ ೨೩ ॥

ನಾತ್ಮಾ ವಪುಃ ಪಾರ್ಥಿವಮಿಂದ್ರಿಯಾಣಿ
ದೇವಾ ಹ್ಯಸುರ್ವಾಯುಜಲಂ ಹುತಾಶಃ ।
ಮನೋಽನ್ನಮಾತ್ರಂ ಧಿಷಣಾ ಚ ಸತ್ತ್ವ-
ಮಹಂಕೃತಿಃ ಖಂ ಕ್ಷಿತಿರರ್ಥಸಾಮ್ಯಮ್ ॥ ೨೪ ॥

ಸಮಾಹಿತೈಃ ಕಃ ಕರಣೈರ್ಗುಣಾತ್ಮಭಿ-
ರ್ಗುಣೋ ಭವೇನ್ಮತ್ಸುವಿವಿಕ್ತಧಾಮ್ನಃ ।
ವಿಕ್ಷಿಪ್ಯಮಾಣೈರುತ ಕಿಂ ನು ದೂಷಣಂ
ಘನೈರುಪೇತೈರ್ವಿಗತೈ ರವೇಃ ಕಿಮ್ ॥ ೨೫ ॥

ಯಥಾ ನಭೋ ವಾಯ್ವನಲಾಂಬುಭೂಗುಣೈ-
ರ್ಗತಾಗತೈರ್ವರ್ತುಗುಣೈರ್ನ ಸಜ್ಜತೇ ।
ತಥಾಕ್ಷರಂ ಸತ್ತ್ವರಜಸ್ತಮೋಮಲೈ-
ರಹಂಮತೇಃ ಸಂಸೃತಿಹೇತುಭಿಃ ಪರಮ್ ॥ ೨೬ ॥

ಇಲ್ಲದುದು, ನಂತರವೂ ಇಲ್ಲವಾಗುವ ಈ ಜಗತ್ತು ನಡುವಿನಲ್ಲಿಯೂ ಇಲ್ಲ; ಇದು ಕೇವಲ ವಾಣಿಯ ವಿಲಾಸವಾಗಿದೆ. ಇದರಲ್ಲಿ ವಾಸ್ತವವಾದರೋ ಪರಮಾತ್ಮನೇ ಒಳ-ಹೊರಗೆ ಓತ ಪ್ರೋತವಾಗಿದ್ದಾನೆ. ಅವನಿಂದಲೇ ಭೂತಕಾಲದಲ್ಲಿ ಇದರ ಉತ್ಪತ್ತಿಯಾಗಿತ್ತು. ಇದರ ವ್ಯವಹಾರವೂ ಅವನಿಂದಲೇ ನಡೆಯುತ್ತಿದೆ. ಈ ಪ್ರಕಾರ ಸಮಸ್ತ ವ್ಯವಹಾರವೂ ಅವನ ಮೂಲಕವೇ ಅವನಲ್ಲೇ ಆಗುತ್ತಿವೆ. ಅದೇ ಪರಮಾರ್ಥ ಸತ್ತೆಯಾಗಿದೆ ಎಂಬುದೇ ನನ್ನ ದೃಢನಿಶ್ಚಯವಾಗಿದೆ. ॥ ೨೧ ॥ ಈ ವಿಕಾರಮಯ ರಾಜಸ ಸೃಷ್ಟಿಯು ಇಲ್ಲದೆಯೂ ಕಂಡುಬರುತ್ತದೆ. ಇದು ಸ್ವಯಂಪ್ರಕಾಶ ಬ್ರಹ್ಮವೇ ಆಗಿದೆ. ಅದಕ್ಕಾಗಿ ಇಂದ್ರಿಯಗಳು, ವಿಷಯ, ಮನಸ್ಸು ಪಂಚಭೂತಾದಿ ಚಿತ್ರ-ವಿಚಿತ್ರ ಎಷ್ಟು ನಾಮರೂಪಗಳಿವೆಯೋ, ಅವುಗಳ ರೂಪದಲ್ಲಿ ಬ್ರಹ್ಮವೇ ಕಂಡುಬರುತ್ತಿದ್ದಾನೆ. ॥ ೨೨ ॥ ಹೀಗೆ ಬ್ರಹ್ಮವಿಚಾರ ಮಾಡುವವರು ಎಲ್ಲ ಶ್ರವಣ, ಮನನ, ನಿಧಿಧ್ಯಾಸನ ಮತ್ತು ಸ್ವಾನುಭೂತಿ ಸಾಧನೆಗಳ ಮೂಲಕ ಕೌಶಲ್ಯದಿಂದ ಬೇರೆ ವಸ್ತುವನ್ನು ಪೂರ್ಣವಾಗಿ ನಿರಾಕರಣಮಾಡಿ, ಬ್ರಹ್ಮಜ್ಞಾನಿ ಗುರುದೇವರ ಉಪದೇಶದ ಮೂಲಕ ಆತ್ಮನ ವಿಷಯದಲ್ಲಿ ದೃಢನಿಶ್ಚಯಮಾಡಿಕೊಂಡು ಎಲ್ಲ ರೀತಿಯ ಕಾಮನೆಗಳನ್ನು ತ್ಯಜಿಸಿ, ಉಪರಾಮನಾಗಬೇಕು, ಆತ್ಮಾನಂದದಲ್ಲಿ ಮಗ್ನನಾಗಬೇಕು. ॥ ೨೩ ॥ ಈ ಪಾರ್ಥಿವ ಶರೀರವು ಆತ್ಮನಲ್ಲ, ಹೀಗೆಯೇ ಇಂದ್ರಿಯಗಳ ದೇವತೆಗಳು, ಪ್ರಾಣ, ವಾಯು, ಜಲ, ಅಗ್ನಿ, ಮನ ಇವು ಯಾವುವೂ ಆತ್ಮನಲ್ಲ, ಏಕೆಂದರೆ ಇವುಗಳ ಧಾರಣೆ ಪೋಷಣೆಯು ಶರೀರದಂತೆ ಅನ್ನದಿಂದಲೇ ಆಗುತ್ತದೆ. ಬುದ್ಧಿ, ಚಿತ್ತ, ಅಹಂಕಾರ, ಆಕಾಶ, ಪೃಥ್ವಿ, ಶಬ್ದಾದಿ ವಿಷಯಗಳು ಮತ್ತು ಗುಣಗಳ ಸಾಮ್ಯಾವಸ್ಥೆಯಾದ ಈ ಪ್ರಕೃತಿ ಇವೆಲ್ಲವೂ ಆತ್ಮನಲ್ಲ. (ಹೀಗೆ ಅನಾತ್ಮವಸ್ತುಗಳನ್ನು ನೇತಿ-ನೇತಿ ವಚನಗಳಿಂದ ನಿರಾಕರಣ ಮಾಡಬೇಕು) ॥ ೨೪ ॥ ಪ್ರಿಯ ಉದ್ಧವನೇ! ಆಕಾಶದಲ್ಲಿ ಮೋಡಗಳು ಬರುತ್ತವೆ, ಹೋಗುತ್ತವೆ, ಅದರಿಂದ ಸೂರ್ಯನಿಗೆ ಏನು ಹಾನಿಯಿದೆ? ಹಾಗೆಯೇ ನನ್ನ ಸ್ವರೂಪದ ಜ್ಞಾನ ಚೆನ್ನಾಗಿ ಉಂಟಾದವನ ಮುಂದೆ ಮೂರೂ ಗುಣಗಳ ವೇಗ ಬರಲಿ, ಹೋಗಲಿ, ಅವನಿಗೆ ಅದರಿಂದ ಯಾವುದೇ ಹಾನಿ-ಲಾಭವಿಲ್ಲ, ಅವು ಅವನ ಮೇಲೆ ಯಾವುದೇ ಪ್ರಭಾವ ಬೀರಲಾರವು. ಏಕೆಂದರೆ ಅವನಾದರೋ ತನ್ನ ಜ್ಞಾನದಲ್ಲಿ ದೃಢನಿಶ್ಚಯಪೂರ್ವಕ ಅಚಲಸ್ಥಿತನಾಗಿರುತ್ತಾನೆ. ॥ ೨೫ ॥ ಆಕಾಶವನ್ನು ಗಾಳಿಯು ಒಣಗಿಸಲಾರದು, ಬೆಂಕಿ ಸುಡಲಾರದು, ನೀರು ತೋಯಿಸಲಾರದು, ಧೂಳು-ಹೊಗೆ ಮಲಿನವಾಗಿಸದು, ಋತುಗಳ ಗುಣ ಸೆಕೆ-ಚಳಿ ಮುಂತಾದವುಗಳಿಂದ ಪ್ರಭಾವಿತವಾಗಿಸಲಾರದು. ಏಕೆಂದರೆ ಇವೆಲ್ಲವು ಬಂದುಹೋಗುವ ಕ್ಷಣಿಕ ಭಾವಗಳಾಗಿವೆ. ಆಕಾಶವು ಇವೆಲ್ಲದರ ಅಧಿಷ್ಠಾನವಾಗಿದೆ. ಹಾಗೆಯೇ ಸತ್ತ್ವಗುಣ, ರಜೋಗುಣ, ತಮೋಗುಣಗಳ ವೃತ್ತಿಗಳೆಲ್ಲವೂ ಹಾಗೂ ಕರ್ಮಗಳೆಲ್ಲವೂ ಅವಿನಾಶೀ ಆತ್ಮನನ್ನು ಸ್ಪರ್ಶಿಸಲಾರವು. ಆವನಾದರೋ ಇವುಗಳಿಂದ ಸರ್ವಥಾ ಅತೀತನಾಗಿದ್ದಾನೆ. ಇವುಗಳಲ್ಲಿ ಅಹಂಕಾರ ಪಡುವ ಜೀವಿಯೇ ಪ್ರಪಂಚದಲ್ಲಿ ಅಲೆಯುತ್ತಿರುತ್ತಾನೆ. ॥ ೨೬ ॥

ತಥಾಪಿ ಸಂಗಃ ಪರಿವರ್ಜನೀಯೋ
ಗುಣೇಷು ಮಾಯಾರಚಿತೇಷು ತಾವತ್ ।
ಮದ್ಭಕ್ತಿಯೋಗೇನ ದೃಢೇನ ಯಾವದ್
ರಜೋ ನಿರಸ್ಯೇತ ಮನಃ ಕಷಾಯಃ ॥ ೨೭ ॥

ಉದ್ಧವನೇ! ಹೀಗಾದರೂ ಕೂಡ ನನ್ನ ಸುದೃಢ ಭಕ್ತಿಯೋಗದ ಮೂಲಕ ಮನಸ್ಸಿನ ರಜೋಗುಣರೂಪೀ ಮಲವು ಪೂರ್ಣವಾಗಿ ಹೊರಟುಹೋಗುವವರೆಗೆ, ಈ ಮಾಯಾನಿರ್ಮಿತಗುಣಗಳು ಮತ್ತು ಅವುಗಳ ಕಾರ್ಯಗಳ ಸಂಗವನ್ನು ಪೂರ್ಣವಾಗಿ ತ್ಯಜಿಸಿ ಬಿಡಬೇಕು. ॥ ೨೭ ॥ ಉದ್ಧವನೇ! ಚೆನ್ನಾಗಿ ಚಿಕಿತ್ಸೆ ಮಾಡದಿದ್ದಾಗ ರೋಗವು ಸಮೂಲವಾಗಿ ನಾಶವಾಗದೆ, ಅದು ಮೇಲಿಂದ ಮೇಲೆ ಉದ್ರೇಕಗೊಂಡು ಮನುಷ್ಯನನ್ನು ಸತಾಯಿಸುತ್ತಾ ಇರುತ್ತದೆ. ಹಾಗೆಯೇ ಮನಸ್ಸಿನ ವಾಸನೆಗಳು ಮತ್ತು ಕರ್ಮಗಳ ಸಂಸ್ಕಾರಗಳು ಅಳಿದುಹೋಗುವುದಿಲ್ಲವೋ, ಅದು ಪತ್ನೀ-ಪುತ್ರಾದಿಗಳಲ್ಲಿ ಆಸಕ್ತವಾಗಿದೆಯೋ, ಇಂತಹ ಅರ್ಧಂಬರ್ಧ ಯೋಗಿಗೆ ಈ ಕರ್ಮ-ವಾಸನೆಗಳು ಪೀಡಿಸುತ್ತಾ ಇರುತ್ತವೆ. ॥ ೨೮ ॥ ದೇವತೆಗಳ ಮೂಲಕ ಪ್ರೇರಿತನಾಗಿ ಅಥವಾ ಯಾರೇ ಮನುಷ್ಯನು ಒಡ್ಡಿದ ವಿಘ್ನಗಳಿಂದ ಕದಾಚಿತ್ ಯೋಗಿಯು ಯೋಗಭ್ರಷ್ಟನಾಗಿ ಹೋದರೆ, ಅವನು ಪೂರ್ವಾಭ್ಯಾಸದ ಕಾರಣ ಪುನಃ ಯೋಗಾಭ್ಯಾಸದಲ್ಲೇ ತೊಡಗುತ್ತಾನೆ. ಕರ್ಮಾದಿಗಳಲ್ಲಿ ಅವನ ಪ್ರವೃತ್ತಿ ಇರುವುದಿಲ್ಲ ॥ ೨೯ ॥ ಉದ್ಧವನೇ! ಜೀವಿಯು ಸಂಸ್ಕಾರಾದಿಗಳಿಂದ ಪ್ರೇರಿತನಾಗಿ ಹುಟ್ಟಿನಿಂದ ಸಾಯುವವರೆಗೆ ಕರ್ಮದಲ್ಲೇ ತೊಡಗಿರುತ್ತಾನೆ. ಅವುಗಳಲ್ಲಿ ಇಷ್ಟ-ಅನಿಷ್ಟ ಬುದ್ಧಿಯನ್ನಿರಿಸಿ ಹರ್ಷ-ವಿಷಾದ ಮುಂತಾದ ವಿಕಾರಗಳನ್ನು ಪಡೆಯುತ್ತಾನೆ. ಆದರೆ ತತ್ತ್ವದ ಸಾಕ್ಷಾತ್ಕಾರಮಾಡಿಕೊಂಡವನು ಪ್ರಕೃತಿಯಲ್ಲಿ ಸ್ಥಿತನಾಗಿದ್ದರೂ, ಪೂರ್ವ ಸಂಸ್ಕಾರಾನುಸಾರ ಅವನಿಂದ ಕರ್ಮಗಳು ಆಗುತ್ತಿದ್ದರೂ ಕೂಡ ಹರ್ಷ-ಶೋಕಾದಿ ವಿಕಾರಗಳಿಂದ ಕೂಡಿರುವುದಿಲ್ಲ, ಏಕೆಂದರೆ, ಆನಂದಸ್ವರೂಪೀ ಆತ್ಮನ ಸಾಕ್ಷಾತ್ಕಾರದಿಂದ ಅವನ ಸಂಸಾರಸಂಬಂಧೀ ಎಲ್ಲ ಆಸೆ-ತೃಷ್ಣೆಗಳು ಮೊದಲೇ ನಾಶವಾಗಿ ಹೋಗಿದ್ದವು. ॥ ೩೦ ॥ ತನ್ನ ಸ್ವರೂಪದಲ್ಲಿ ಸ್ಥಿತನಾದವನಿಗೆ – ತನ್ನ ಶರೀರ ನಿಂತಿದೆಯೋ, ಕುಳಿತಿದೆಯೋ, ನಡೆಯುತ್ತಿದೆಯೋ, ಮಲಗಿದೆಯೋ, ಮಲ-ಮೂತ್ರ ವಿಸರ್ಜಿಸುತ್ತಿದೆಯೋ, ಊಟ ಮಾಡುತ್ತಿದೆಯೋ, ಅಥವಾ ಯಾವುದಾದರೂ ಸ್ವಾಭಾವಿಕ ಕರ್ಮಮಾಡುತ್ತಿದೆಯೋ ಎಂಬುದರ ಅರಿವು ಕೂಡ ಇರುವುದಿಲ್ಲ, ಏಕೆಂದರೆ, ಅವನ ವೃತ್ತಿಗಳಾದರೋ ಆತ್ಮಸ್ವರೂಪದಲ್ಲಿ ಸ್ಥಿತವಾಗಿ ಬ್ರಹ್ಮಾಕಾರವಾಗಿರುತ್ತವೆ. ॥ ೩೧ ॥ ಜ್ಞಾನೀ ಪುರುಷನ ದೃಷ್ಟಿಯಲ್ಲಿ ಆಸತ್ತಾದ ಇಂದ್ರಿಯಗಳ ವಿವಿಧ ಬಾಹ್ಯವಿಷಯಗಳು ಬಂದರೂ ಕೂಡ ಅವನು ಅದನ್ನು ತನ್ನ ಆತ್ಮನಿಂದ ಭಿನ್ನವಾಗಿ ತಿಳಿಯುವುದಿಲ್ಲ, ಮತ್ತು ಆತ್ಮನಿಗಿಂತ ಬೇರೆ ಸತ್ತೆಯನ್ನು ಸ್ವೀಕರಿಸುವುದೇ ಇಲ್ಲ, ಏಕೆಂದರೆ ಯುಕ್ತಿಗಳಿಂದ, ಪ್ರಮಾಣಗಳಿಂದ, ಸ್ವಾನುಭೂತಿಯಿಂದ ಅವುಗಳ ಸ್ವತಂತ್ರ ಸತ್ತೆ ಸಿದ್ಧವಾಗುವುದಿಲ್ಲ. ನಿದ್ದೆಯಿಂದ ಎದ್ದಮೇಲೆ ಸ್ವಪ್ನದಲ್ಲಿ ಕಂಡ ಮತ್ತು ಎಚ್ಚರವಾದಾಗ ತಿರೋಹಿತವಾದ ಪದಾರ್ಥಗಳನ್ನು ಯಾರೂ ಸತ್ಯವೆಂದು ತಿಳಿಯುವುದಿಲ್ಲ, ಹಾಗೆಯೇ ಜ್ಞಾನೀ ಪುರುಷನೂ ಕೂಡ ತನ್ನಿಂದ ಭಿನ್ನವಾಗಿ ಕಂಡುಬರುವ ಪದಾರ್ಥಗಳನ್ನು ಸತ್ಯವೆಂದು ತಿಳಿಯುವುದಿಲ್ಲ. ॥ ೩೨ ॥

ಯಥಾऽऽಮಯೋऽಸಾಧುಚಿಕಿತ್ಸಿತೋ ನೃಣಾಂ
ಪುನಃ ಪುನಃ ಸಂತುದತಿ ಪ್ರರೋಹನ್ ।
ಏವಂ ಮನೋऽಪಕ್ವಕಷಾಯಕರ್ಮ
ಕುಯೋಗಿನಂ ವಿಧ್ಯತಿ ಸರ್ವಸಂಗಮ್ ॥ ೨೮ ॥

ಕುಯೋಗಿನೋ ಯೇ ವಿಹಿತಾಂತರಾಯೈ-
ರ್ಮನುಷ್ಯಭೂತೈಸ್ತ್ರಿದಶೋಪಸೃಷ್ಟೈಃ ।
ತೇ ಪ್ರಾಕ್ತನಾಭ್ಯಾಸಬಲೇನ ಭೂಯೋ
ಯುಂಜಂತಿ ಯೋಗಂ ನ ತು ಕರ್ಮತಂತ್ರಮ್ ॥ ೨೯ ॥

ಕರೋತಿ ಕರ್ಮ ಕ್ರಿಯತೇ ಚ ಜಂತುಃ
ಕೇನಾಪ್ಯಸೌ ಚೋದಿತ ಆನಿಪಾತಾತ್ ।
ನ ತತ್ರ ವಿದ್ವಾನ್ಪ್ರಕೃತೌ ಸ್ಥಿತೋऽಪಿ
ನಿವೃತ್ತತೃಷ್ಣಃ ಸ್ವಸುಖಾನುಭೂತ್ಯಾ ॥ ೩೦ ॥

ತಿಷ್ಠಂತಮಾಸೀನಮುತ ವ್ರಜಂತಂ
ಶಯಾನಮುಕ್ಷಂತಮದಂತಮನ್ನಮ್ ।
ಸ್ವಭಾವಮನ್ಯತ್ಕಿಮಪೀಹಮಾನ-
ಮಾತ್ಮಾನಮಾತ್ಮಸ್ಥಮತಿರ್ನ ವೇದ ॥ ೩೧ ॥

ಯದಿ ಸ್ಮ ಪಶ್ಯತ್ಯಸದಿಂದ್ರಿಯಾರ್ಥಂ
ನಾನಾನುಮಾನೇನ ವಿರುದ್ಧಮನ್ಯತ್ ।
ನ ಮನ್ಯತೇ ವಸ್ತುತಯಾ ಮನೀಷೀ
ಸ್ವಾಪ್ನಂ ಯಥೋತ್ಥಾಯ ತಿರೋದಧಾನಮ್ ॥ ೩೨ ॥

ಪೂರ್ವಂ ಗೃಹೀತಂ ಗುಣಕರ್ಮಚಿತ್ರ-
ಮಜ್ಞಾನಮಾತ್ಮನ್ಯವಿವಿಕ್ತಮಂಗ ।
ನಿವರ್ತತೇ ತತ್ತುನರೀಕ್ಷಯೈವ
ನ ಗೃಹ್ಯತೇ ನಾಪಿ ವಿಸೃಜ್ಯ ಆತ್ಮಾ ॥ ೩೨॥

ಯಥಾ ಹಿ ಭಾನೋರುದಯೋ ನೃಚಕ್ಷುಷಾಂ
ತಮೋ ನಿಹನ್ಯಾನ್ನ ತು ಸದ್ವಿಧತ್ತೇ ।
ಏವಂ ಸಮೀಕ್ಷಾ ನಿಪುಣಾ ಸತೀ ಮೇ
ಹನ್ಯಾತ್ತಮಿಸ್ರಂ ಪುರುಷಸ್ಯ ಬುದ್ಧೇಃ ॥ ೩೪ ॥

ಏಷ ಸ್ವಯಂಜ್ಯೋತಿರಜೋऽಪ್ರಮೇಯೋ
ಮಹಾನುಭೂತಿಃ ಸಕಲಾನುಭೂತಿಃ ।
ಏಕೋऽದ್ವಿತೀಯೋ ವಚಸಾಂ ವಿರಾಮೇ
ಯೇನೇಷಿತಾ ವಾಗಸವಶ್ಚರಂತಿ ॥ ೩೫ ॥

ಏತಾವಾನಾತ್ಮಸಂಮೋಹೋ ಯದ್ವಿಕಲ್ಪಸ್ತು ಕೇವಲೇ ।
ಆತ್ಮನ್ಯೃತೇ ಸ್ವಮಾತ್ಮಾನಮವಲಂಬೋ ನ ಯಸ್ಯ ಹಿ
॥ ೩೬ ॥

ಯನ್ನಾಮಾಕೃತಿಭಿರ್ಗ್ರಾಹ್ಯಂ ಪಂಚವರ್ಣಮಬಾಧಿತಮ್ ।
ವ್ಯರ್ಥೇನಾಪ್ಯರ್ಥವಾದೋऽಯಂ ದ್ವಯಂ ಪಂಡಿತಮಾನಿನಾಮ್
॥ ೩೭ ॥

ಯೋಗಿನೋऽಪಕ್ವಯೋಗಸ್ಯ ಯುಂಜತಃ ಕಾಯ ಉತ್ಪಾತೈಃ ।
ಉಪಸರ್ಗೈರ್ವಿಹನ್ಯೇತ ತತ್ರಾಯಂ ವಿಹಿತೋ ವಿಧಿಃ
॥ ೩೮ ॥

ಯೋಗಧಾರಣಯಾ ಕಾಂಶ್ಚಿದಾಸನೈರ್ಧಾರಣಾನ್ವಿತೈಃ ।
ತಪೋಮಂತ್ರೌಷಧೈಃ ಕಾಂಶ್ಚಿದುಪಸರ್ಗಾನ್ವಿನಿರ್ದಹೇತ್
॥ ೩೯ ॥

ಕಾಂಶ್ಚಿನ್ಮಮಾನುಧ್ಯಾನೇನ ನಾಮಸಂಕೀರ್ತನಾದಿಭಿಃ ।
ಯೋಗೇಶ್ವರಾನುವೃತ್ತ್ಯಾ ವಾ ಹನ್ಯಾದಶುಭದಾನ್ಯಸೈಃ
॥ ೪೦ ॥

ಪ್ರಿಯ ಉದ್ಧವನೇ ! ಅನೇಕ ಪ್ರಕಾರದ ಗುಣ, ಕರ್ಮಗಳಿಂದ ಕೂಡಿದ ಈ ದೇಹ, ಇಂದ್ರಿಯಗಳು, ಪದಾರ್ಥ ಮುಂತಾದವುಗಳಲ್ಲಿ ಮೊದಲು ಅಜ್ಞಾನದ ಕಾರಣ ಇವೆಲ್ಲವೂ ಆತ್ಮನಿಂದ ಬೇರೆಯಲ್ಲವೆಂದು ಕಂಡುಬರುತ್ತಿತ್ತು. ಆದರೆ ಜ್ಞಾನದಿಂದ ಅವುಗಳ ನಶ್ವರತೆಯ ಅರಿವು ಉಂಟಾದಾಗ, ಹಾಗೂ ಆ ಭ್ರಮೆಯು ಸಂಪೂರ್ಣ ನಿವೃತ್ತಿ ಆಗಿಹೋದಾಗ, ಅವನ ಜ್ಞಾನದಲ್ಲಿ ಏಕಮಾತ್ರ ಆತ್ಮತತ್ತ್ವವೇ ಇರುತ್ತದೆ. ಅವನು ಸ್ವತಃ ಆತ್ಮಸ್ವರೂಪವೇ ಆಗಿ ಹೋಗುತ್ತಾನೆ. ಈ ಸ್ಥಿತಿಯಲ್ಲಿ ಗ್ರಹಿಸುವುದು, ತ್ಯಜಿಸುವುದು ಏನು ಉಳಿಯುವುದಿಲ್ಲ. ॥ ೩೩ ॥ ಸೂರ್ಯನು ಉದಿಸಿದಾಗ ಮನುಷ್ಯರ ಅಂಧಕಾರವನ್ನು ದೂರಮಾಡುತ್ತಾನೆ. ಅವನು ಯಾವುದೇ ಹೊಸತನ್ನು ನಿರ್ಮಿಸುವುದಿಲ್ಲ, ಅದೇ ರೀತಿ ನನ್ನ ಪೂರ್ಣಜ್ಞಾನವಾದ ಮನುಷ್ಯನ ಬುದ್ಧಿಯ ಅಜ್ಞಾನ ದೂರವಾಗುತ್ತದೆ. ॥ ೩೪ ॥ ಈ ಆತ್ಮನು ಸ್ವಯಂಜ್ಯೋತಿ, ಅಜನ್ಮಾ, ಅಪ್ರಮೇಯಸ್ವರೂಪೀ, ಮಹಾನುಭೂತಿ ಸ್ವರೂಪವಾಗಿದೆ. ಎಲ್ಲ ಅನುಭೂತಿಗಳು ಅದರಲ್ಲೇ ಆಗುತ್ತವೆ. ಈ ಆತ್ಮನು ಏಕನಾಗಿದ್ದು, ಅದ್ವಿತೀಯನಾಗಿದ್ದಾನೆ. ವಾಣಿಯ ವಿರಾಮವಾದಮೇಲೆ ಏಕ ಮಾತ್ರ ಅವನೇ ಉಳಿಯುತ್ತಾನೆ. ಅವನ ಇಚ್ಛೆಯಿಂದಲೇ ವಾಣೀ ಮತ್ತು ಪ್ರಾಣಗಳು ತಮ್ಮ-ತಮ್ಮ ಕಾರ್ಯಮಾಡುತ್ತವೆ. ॥ ೩೫ ॥

ಉದ್ಧವನೇ ! ಅದ್ವಿತೀಯ ಅಖಂಡ ಆತ್ಮತತ್ತ್ವದಲ್ಲಿ ಭೇದ ಭ್ರಮೆಯ ಕಲ್ಪನೆಯೇ ಅಜ್ಞಾನವಾಗಿದೆ. ಜೀವಿಯು ಪ್ರಕೃತಿಯೊಂದಿಗೆ ಅಹಂಭಾವವಿರಿಸಿಯೇ ಭೇದವನ್ನು ಕಲ್ಪಿಸುತ್ತಾನೆ. ಈ ಭ್ರಮೆಯ ಮತ್ತು ಅಜ್ಞಾನದ ಸ್ವತಂತ್ರ ಸತ್ತೆಯೇ ಇಲ್ಲ, ಆದರೆ ಇವು ಕಂಡುಬಂದರೆ ಆತ್ಮನ ಅಧಿಷ್ಠಾನದಿಂದಲೇ ಕಾಣುತ್ತವೆ. ಆದ್ದರಿಂದ ಎಲ್ಲವೂ ಆತ್ಮನೇ ಆಗಿದ್ದಾನೆ. ॥ ೩೬ ॥ ಅನೇಕರು ತಮ್ಮನ್ನು ಪಂಡಿತರೆಂದು ತಿಳಿಯುತ್ತಾರೆ. ಆದರೆ ವಾಸ್ತವವಾಗಿ ಪಂಡಿತರಲ್ಲ, ಇಂತಹ ಜನರು ನಾಮ-ರೂಪ ಮತ್ತು ಇಂದ್ರಿಯಗಳಿಂದ ಗ್ರಹಿಸಲಾಗುವ ಈ ಪಂಚಭೂತಾತ್ಮಕ ದ್ವೈತ ಜಗತ್ತು ಸತ್ಯವಾಗಿದೆ ಎಂದು ಸ್ವೀಕರಿಸುತ್ತಾರೆ. ಆದರೆ ಹೀಗೆ ಹೇಳುವುದು ಅವರ ಶಬ್ದಾಡಂಬರಮಾತ್ರವಾಗಿದೆ. ॥ ೩೭ ॥

ಉದ್ಧವನೇ ! ಯೋಗಸಾಧನೆಯು ಪೂರ್ಣವಾಗುವ ಮೊದಲೇ ಯಾರಾದರೂ ಸಾಧಕನ ಶರೀರವು ರೋಗಾದಿ ಉಪದ್ರವಗಳಿಂದ ಪೀಡಿತವಾದರೆ ಅವನು ಈ ಉಪಾಯಗಳನ್ನು ಆಶ್ರಯಿಸಬೇಕು. ॥ ೩೮ ॥ ಸೆಕೆ-ಚಳಿ ಮುಂತಾದುವನ್ನು ಚಂದ್ರ-ಸೂರ್ಯರನ್ನು ಧಾರಣೆಯ ಮೂಲಕ, ವಾತಾದಿ ರೋಗಗಳನ್ನು ಪ್ರಾಣಾಯಾಮ ಆದಿಯೋಗ ಧಾರಣಾಯುಕ್ತ ಆಸನಗಳ ಮೂಲಕ, ಗ್ರಹ-ಸರ್ಪಾದಿಕೃತ ವಿಘ್ನಗಳನ್ನು ತಪಸ್ಸು, ತಂತ್ರ ಹಾಗೂ ಔಷಧಿಗಳ ಮೂಲಕ ನಾಶಮಾಡಿಬಿಡಬೇಕು. ॥ ೩೯ ॥ ಕಾಮ ಕ್ರೋಧಾದಿ ವಿಘ್ನಗಳನ್ನು ನನ್ನ ಚಿಂತನೆ, ನಾಮಸಂಕೀರ್ತನೆ ಮೊದಲಾದುವುಗಳಿಂದ ನಾಶಮಾಡಬೇಕು. ಪತನದತ್ತ ಕೊಂಡು ಹೋಗುವ ದಂಭ-ಮದ ಮುಂತಾದ ವಿಘ್ನಗಳನ್ನು ನಿಧಾನವಾಗಿ ಮಹಾಪುರುಷರ ಸೇವೆಯಿಂದ ದೂರಗೊಳಿಸ ಬೇಕು. ॥ ೪೦ ॥

ಕೇಚಿದ್ದೇಹಮಿಮಂ ಧೀರಾಃ ಸುಕಲ್ಪಂ ವಯಸಿ ಸ್ಥಿರಮ್ ।
ವಿಧಾಯ ವಿವಿಧೋಪಾಯೈರಥ ಯುಂಜಂತಿ ಸಿದ್ಧಯೇ
॥ ೪೧ ॥

ಕೆಲ-ಕೆಲವು ಮನಸ್ವೀ ಯೋಗಿಗಳು ವಿವಿಧ ಉಪಾಯಗಳಿಂದ ಈ ಶರೀರವನ್ನು ಸುದೃಢ ಮತ್ತು ತರುಣವಾಗಿಯೇ ಸ್ಥಿರಗೊಳಿಸಿ ಮತ್ತೆ ಅಣಿಮಾದಿ ಸಿದ್ಧಿಗಳಿಗಾಗಿ ಯೋಗಸಾಧನೆಮಾಡುತ್ತಾರೆ. ಆದರೆ ಬುದ್ಧಿವಂತರಾದವರು ಇಂತಹ ವಿಚಾರವನ್ನು ಸಮರ್ಥಿಸುವುದಿಲ್ಲ.

ನಹಿ ತತ್ಕುಶಲಾದೃತ್ಯಂ ತದಾಯಾಸೋ ಹ್ಯಪಾರ್ಥಕಃ ।
ಅಂತವತ್ತ್ವಾಚ್ಛರೀರಸ್ಯ ಫಲಸ್ಯೇವ ವನಸ್ಪತೇಃ
॥ ೪೨ ॥

ಏಕೆಂದರೆ ಇದಾದರೋ ಒಂದು ವ್ಯರ್ಥ ಪ್ರಯಾಸವೇ ಆಗಿದೆ. ವೃಕ್ಷಗಳಲ್ಲಿ ಬಿಟ್ಟ ಫಲದಂತೆಯೇ ಈ ಶರೀರದ ನಾಶವು ಅವಶ್ಯಂಭಾವಿಯಾಗಿದೆ. ॥ ೪೧-೪೨ ॥ ಒಂದೊಮ್ಮೆ ಬಹಳ ದಿನಗಳವರೆಗೆ ನಿರಂತರ, ಆದರಪೂರ್ವಕವಾಗಿ ಯೋಗಸಾಧನೆ ಮಾಡುತ್ತಿರುವಾಗ ಶರೀರವು ಸುದೃಢವೂ ಆಗಬಹುದು. ಆಗಲೂ ಬುದ್ಧಿವಂತರಾದವರು ತಮ್ಮ ಸಾಧನೆಯನ್ನು ಬಿಟ್ಟು ಅದರಲ್ಲೇ ಸಂತೋಷಪಡಬಾರದು. ಅವರಾದರೋ ಸದಾಕಾಲವೂ ನನ್ನ ಪ್ರಾಪ್ತಿಗಾಗಿಯೇ ತೊಡಗಿರಬೇಕು. ॥ ೪೩. ॥ ನನ್ನನ್ನು ಆಶ್ರಯಿಸಿ, ನನ್ನಿಂದ ಹೇಳಲ್ಪಟ್ಟ ಯೋಗಸಾಧನೆಯಲ್ಲಿ ತೊಡಗಿರುವ ಸಾಧಕನಿಗೆ ಯಾವುದೇ ವಿಘ್ನಗಳು ಕದಲಿಸಲಾರವು. ಅವನ ಕಾಮನೆಗಳೆಲ್ಲ ನಾಶವಾಗಿ ಹೋಗುತ್ತವೆ ಮತ್ತು ಅವನು ಆತ್ಮಾನಂದದ ಅನುಭೂತಿಯಲ್ಲಿ ಮುಳುಗಿಹೋಗುತ್ತಾನೆ. ॥ ೪೪ ॥

ಯೋಗಂ ನಿಷೇವತೋ ನಿತ್ಯಂ ಕಾಯಶ್ಚೇತ್ಕಲ್ಪತಾಮಿಯಾತ್ ।
ತಚ್ಛ್ರದ್ದಧ್ಯಾನ್ನ ಮತಿಮಾನ್ ಯೋಗಮುತ್ಸೃಜ್ಯ ಮತ್ಪರಃ
॥ ೪೩ ॥

ಯೋಗಚರ್ಯಾಮಿಮಾಂ ಯೋಗೀ ವಿಚರನ್ಮದಪಾಶ್ರಯಃ ।
ನಾಂತರಾಯೈರ್ವಿಹನ್ಯೇತ ನಿಃಸ್ಪೃಹಃ ಸ್ವಸುಖಾನುಭೂಃ
॥ ೪೪ ॥

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೨೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಅಷ್ಟಾವಿಂಶೋಽಧ್ಯಾಯಃ ॥ ೨೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ಭಾಗವತಧರ್ಮಗಳ ನಿರೂಪಣೆ ಮತ್ತು ಉದ್ಧವನು ಬದರಿಕಾಶ್ರಮಕ್ಕೆ ಹೋದುದು

ಉದ್ಧವ ಉವಾಚ

ಸುದುಶ್ಚರಾಮಿಮಾಂ ಮನ್ಯೇ ಯೋಗಚರ್ಯಾಮನಾತ್ಮನಃ ।
ಯಥಾಂಜಸಾ ಪುಮಾನ್ ಸಿದ್ಧ್ಯೇತ್ ತನ್ಮೇ ಬ್ರೂಹ್ಯಂಜಸಾಚ್ಯುತ
॥ ೧ ॥

ಉದ್ಧವನು ಕೇಳಿದನು – ಅಚ್ಯುತಾ ! ತನ್ನ ಮನಸ್ಸನ್ನು ವಶಪಡಿಸಿಕೊಳ್ಳಲಾರದವನಿಗೆ ನೀನು ಅರುಹಿದ ಈ ಯೋಗ ಸಾಧನೆಯು ಬಹಳ ಕಠಿಣವೆಂದೇ ನಾನು ತಿಳಿಯುತ್ತೇನೆ. ಆದ್ದರಿಂದ ಈಗ ನೀನು – ಮನುಷ್ಯನು ಅಯಾಸವಿಲ್ಲದೆ ಪರಮಪದವನ್ನು ಪಡೆಯುವಂತಹ ಸರಳ-ಸುಲಭ ಸಾಧನೆಯನ್ನು ತಿಳಿಸುವವನಾಗು. ॥ ೧ ॥ ಕಮಲನಯನಾ ! ನಿನ್ನನ್ನು ಪಡೆಯುವುದಕ್ಕಾಗಿ ಹೆಚ್ಚಿನ ಯೋಗಿಗಳು ತಮ್ಮ ಮನಸ್ಸನ್ನು ಏಕಾಗ್ರಮಾಡಲು ತೊಡಗಿದಾಗ, ಅವರು ಪದೇ-ಪದೇ ಪ್ರಯತ್ನಮಾಡಿದರೂ ಮನಸ್ಸನ್ನು ವಶಪಡಿಸಲು ಸಫಲರಾಗುವುದಿಲ್ಲ, ಕೊನೆಗೆ ಸೋತು ಹೋಗುತ್ತಾರೆ. ಈ ಪ್ರಕಾರ ನಿನ್ನ ಪ್ರಾಪ್ತಿಯನ್ನು ಮಾಡಿಕೊಳ್ಳದ ಕಾರಣ ದುಃಖವನ್ನು ಭೋಗಿಸುತ್ತಾ ಇರುತ್ತಾರೆ. ಇದು ನಿನಗೆ ತಿಳಿದೇ ಇದೆ. ಇಂತಹ ದುಃಖಗಳಿಂದ ಮುಕ್ತವಾಗಲು ಯಾವ ಉಪಾಯವಿದೆ ? ಎಂಬುದನ್ನು ತಿಳಿಸುವ ಕೃಪೆ ಮಾಡಬೇಕು. ॥ ೨ ॥ ಓ ಕಮಲನಯನಾ ! ಓ ವಿಶ್ವೇಶ್ವರಾ ! ನಿನ್ನ ಚರಣ

ಪ್ರಾಯಶಃ ಪುಂಡರೀಕಾಕ್ಷ ಯುಂಜಂತೋ ಯೋಗಿನೋ ಮನಃ ।
ವಿಷೀದಂತ್ಯಸಮಾಧಾನಾನ್ ಮನೋನಿಗ್ರಹಕರ್ಶಿತಾಃ
॥ ೨ ॥

ಅಥಾತ ಆನಂದದುಘಂ ಪದಾಂಬುಜಂ
ಹಂಸಾಃ ಶ್ರಯೇರನ್ನರವಿಂದಲೋಚನ ।
ಸುಖಂ ನು ವಿಶ್ವೇಶ್ವರ ಯೋಗಕರ್ಮಭಿ-
ಸ್ತ್ವನ್ಮಾಯಯಾಮೀ ವಿಹತಾ ನ ಮಾನಿನಃ ॥ ೩ ॥

ಕಮಲಗಳು ಆನಂದವನ್ನು ವರ್ಷಿಸುವಂತಹವುಗಳು. ನಿನ್ನ ಅನನ್ಯ ಪ್ರೇಮೀ ಭಕ್ತರು ಆನಂದದಿಂದ ಈ ಚರಣಕಮಲಗಳಲ್ಲಿ ಶರಣಾಗುತ್ತಾರೆ. ಆದರೆ ನಿನ್ನ ಮಾಯೆಯಿಂದ ಮಣ್ಣುಗೂಡಿದ ಬುದ್ಧಿಯುಳ್ಳ ಜನರು ಯೋಗ ಮತ್ತು ಕರ್ಮಗಳಿಂದ ತಮ್ಮನ್ನು ಶ್ರೇಷ್ಠರೆಂದು ತಿಳಿದುಕೊಂಡು ಇವನ್ನು ಆಶ್ರಯಿಸುವುದಿಲ್ಲ. ॥ ೩ ॥

ಕಿಂ ಚಿತ್ರಮಚ್ಯುತ ತವೈತದಶೇಷಬಂಧೋ
ದಾಸೇಷ್ವನನ್ಯಶರಣೇಷು ಯದಾತ್ಮಸಾತ್ತ್ವಮ್ ।
ಯೋಽರೋಚಯತ್ಸಹಮೃಗೈಃ ಸ್ವಯಮೀಶ್ವರಾಣಾಂ
ಶ್ರೀಮತ್ಕಿರೀಟತಟಪೀಡಿತಪಾದಪೀಠಃ ॥ ೪ ॥

ಓ ಅಚ್ಯುತಾ ! ನೀನು ಸರ್ವಜಗತ್ತಿನ ಹಿತೈಷಿ, ಸುಹೃದನಾಗಿರುವೆ. ನೀನು ನಿನ್ನ ಅನನ್ಯ ಶರಣಾಗತ ಭಕ್ತರನ್ನು ಆತ್ಮಸಾತ್ ಮಾಡಿಕೊಳ್ಳುವೆ. ಅವರಿಗೆ ನಿನ್ನ ಸ್ವರೂಪವನ್ನೇ ಕೊಟ್ಟುಬಿಡುವೆ. ಎಲ್ಲಿಯವರೆಗೆಂದರೆ – ತೊಂಡರಿಗೆ ತೊಂಡನಾಗುವೆ. (ಬಲಿಯ ಭಕ್ತಿಗೊಲಿದು ಅವನ ದ್ವಾರಪಾಲನಾದೆ, ನರಸಿಂಹ ಮೆಹತಾಗೆ ನೀನು ಏನೇನು ಮಾಡಲಿಲ್ಲ? ಇತ್ಯಾದಿ) ನೀನು ಎಲ್ಲ ಲೋಕಪಾಲರ ಅಧೀಶ್ವರನಾಗಿರುವೆ. ಬ್ರಹ್ಮಾದಿ ಲೋಕೇಶ್ವರರು ಸದಾಕಾಲ ನಿನಗೆ ಭಕ್ತಿಪೂರ್ವಕ ನಮಸ್ಕರಿಸುತ್ತಿರುತ್ತಾರೆ. ಅವರು ನಿನ್ನ ಚರಣಕಮಲಗಳನ್ನಿಡುವ ಪೀಠಕ್ಕೆ ತಮ್ಮ ಕಿರೀಟಾಗ್ರದಿಂದ ಶ್ರದ್ಧಾ ಪ್ರೇಮಸಹಿತ ಸಾಷ್ಟಾಂಗ ನಮಸ್ಕಾರ ಸಲ್ಲಿಸುತ್ತಾರೆ. ಇಷ್ಟು ಮಹಿಮಾಯುಕ್ತನಾಗಿದ್ದರೂ ನೀನು ರಾಮಾವತಾರದಲ್ಲಿ ಪ್ರೇಮಕ್ಕೆ ಪರವಶನಾಗಿ ವಾನರರೊಂದಿಗೆ ಮಿತ್ರತೆಯಿಂದ ವ್ಯವಹರಿಸಿದೆ. ಇದೇನೋ ನಿನಗಾಗಿ ಆಶ್ಚರ್ಯದ ಮಾತಲ್ಲ, ಏಕೆಂದರೆ ನಿನಗಾದರೋ ಭಕ್ತಿಯೇ ಪ್ರಿಯವಾಗಿದೆ. ॥ ೪ ॥ ಓ ಸ್ವಾಮಿ ! ನೀನು ಎಲ್ಲರ ಪ್ರಿಯತಮ ಪ್ರಭು ಮತ್ತು ಆತ್ಮಾ ಆಗಿರುವೆ. ನೀನು ನಿನ್ನ ಅನನ್ಯ ಶರಣಾಗತರಿಗೆ ಎಲ್ಲವನ್ನೂ ಕೊಟ್ಟುಬಿಡುವೆ. ನೀನು ನಿನ್ನ ಭಕ್ತರಿಗಾಗಿ ಏನೇನು ಅದ್ಭುತಕಾರ್ಯ ಮಾಡಿರುವೆಯೋ, ಅವನ್ನು ತಿಳಿದಿರುವವರು ಯಾವುದೇ ಭೌತಿಕ ಸುಖಕ್ಕಾಗಿ ಯಾರು ನಿನ್ನ ಉಪಾಸನೆ ಮಾಡುವರು? ಏಕೆಂದರೆ, ಈ ಭೌತಿಕ ಸುಖಗಳಾದರೋ ನಿನ್ನ ವಿಸ್ಮೃತಿಯಲ್ಲಿ ಕೆಡಹುವಂತಹವುಗಳು. ನಾವಾದರೋ ನಿನ್ನ ಚರಣಕಮಲ ರಜದ ಅನನ್ಯ ಉಪಾಸಕರಾಗಿದ್ದೇವೆ. ಆದ್ದರಿಂದ ನಮಗಾಗಿ ದುರ್ಲಭವೇನಿದೆ? ॥ ೫ ॥ ಓ ಜಗದೀಶಾ ! ನೀನು ಮಾಡಿರುವ ಉಪಕಾರಗಳೂ ಪದೇ-ಪದೇ ನಮ್ಮ ಮನಸ್ಸಿನಲ್ಲಿ ಸ್ಮರಣೆಗೆ ಬರುತ್ತವೆ. ಈ ದೇವದುರ್ಲಭವಾದ ಮನುಷ್ಯಶರೀರವು ಕೇವಲ ನಿನ್ನ ಕೃಪೆಯಿಂದಲೇ ದೊರೆತಿದೆ. ನಿನ್ನ ಈ ಅಪಾರ ಅನುಕಂಪವನ್ನು ಮೇಲಿಂದಮೇಲೆ ನೆನೆಯುತ್ತಿರುವಾಗ ನಮ್ಮ ಹೃದಯದಲ್ಲಿ ಪರಮಾನಂದದ ನೆರೆಯೇ ಬರುತ್ತದೆ. ನಿನ್ನ ಕೃಪೆಯು ಊಹಿಸಲೂ ಸಾಧ್ಯವಾಗದಷ್ಟು ಅಪಾರವಾಗಿದೆ. ಒಂದೊಮ್ಮೆ ಬ್ರಹ್ಮನ ಆಯುಸ್ಸೇ ಸಿಕ್ಕಿದರೂ ನಾವು ನಿನ್ನ ಉಪಕಾರದ ಋಣವನ್ನು ತೀರಿಸಲಾರೆವು. ಮನುಷ್ಯನ ಹೊರಗೆ-ಒಳಗೆ ಇರುವ ಅಶುಭಗಳನ್ನು ನಿರ್ಮೂಲನಗೊಳಿಸಲು ಹೊರಗಿನಿಂದ ಸದ್ಗುರುರೂಪದಿಂದ ನೀನೇ ಜ್ಞಾನೋಪದೇಶವನ್ನು ಕೊಡುತ್ತಿರುವೆ. ಅಂತರ್ಯಾಮಿಯಾಗಿ ಅಂತರಾತ್ಮರೂಪದಿಂದ ಪ್ರಕಟನಾಗಿ ಅಜ್ಞಾನವನ್ನೂ ನೀನೇ ಕಳೆಯುವೆ. ॥ ೬ ॥

ತಂ ತ್ವಾಖಿಲಾತ್ಮದಯಿತೇಶ್ವರಮಾಶ್ರಿತಾನಾಂ
ಸರ್ವಾರ್ಥದಂ ಸ್ವಕೃತವಿದ್ವಿಸೃಜೇತ ಕೋ ನು ।
ಕೋವಾ ಭಜೇತ್ಕಿಮಪಿ ವಿಸ್ಮೃತಯೇಽನು ಭೂತ್ಯೈ
ಕಿಂ ವಾ ಭವೇನ್ನ ತವ ಪಾದರಜೋಜುಷಾಂ ನಃ ॥ ೫ ॥

ಕಿಂ ಚಿತ್ರಮಚ್ಯುತ ತವೈತದಶೇಷಬಂಧೋ
ದಾಸೇಷ್ವನನ್ಯಶರಣೇಷು ಯದಾತ್ಮಸಾತ್ತ್ವಮ್ ।
ಯೋಽರೋಚಯತ್ಸಹಮೃಗೈಃ ಸ್ವಯಮೀಶ್ವರಾಣಾಂ
ಶ್ರೀಮತ್ಕಿರೀಟತಟಪೀಡಿತಪಾದಪೀಠಃ ॥ ೪ ॥

ನೈವೋಪಯಂತ್ಯಪಚಿತಿಂ ಕವಯಸ್ತವೇಶ
ಬ್ರಹ್ಮಾಯುಷಾಪಿ ಕೃತಮದ್ಧಮುದಃ ಸ್ಮರಂತಃ ।
ಯೋಽಂತರ್ಬಹಸ್ತನುಭೃತಾಮಶುಭಂ ವಿಧುನ್ವ-
ನ್ನಾಚಾರ್ಯಚೈತ್ಯವಪುಷಾ ಸ್ವಗತಿಂ ವ್ಯನಕ್ತಿ ॥ ೬ ॥

ಕಮಲಗಳು ಆನಂದವನ್ನು ವರ್ಷಿಸುವಂತಹವುಗಳು. ನಿನ್ನ ಅನನ್ಯ ಪ್ರೇಮೀ ಭಕ್ತರು ಆನಂದದಿಂದ ಈ ಚರಣಕಮಲಗಳಲ್ಲಿ ಶರಣಾಗುತ್ತಾರೆ. ಆದರೆ ನಿನ್ನ ಮಾಯೆಯಿಂದ ಮಣ್ಣುಗೂಡಿದ ಬುದ್ಧಿಯುಳ್ಳ ಜನರು ಯೋಗ ಮತ್ತು ಕರ್ಮಗಳಿಂದ ತಮ್ಮನ್ನು ಶ್ರೇಷ್ಠರೆಂದು ತಿಳಿದುಕೊಂಡು ಇವನ್ನು ಆಶ್ರಯಿಸುವುದಿಲ್ಲ. ॥ ೩ ॥

ಓ ಅಚ್ಯುತಾ ! ನೀನು ಸರ್ವಜಗತ್ತಿನ ಹಿತೈಷಿ, ಸುಹೃದನಾಗಿರುವೆ. ನೀನು ನಿನ್ನ ಅನನ್ಯ ಶರಣಾಗತ ಭಕ್ತರನ್ನು ಆತ್ಮಸಾತ್ ಮಾಡಿಕೊಳ್ಳುವೆ. ಅವರಿಗೆ ನಿನ್ನ ಸ್ವರೂಪವನ್ನೇ ಕೊಟ್ಟುಬಿಡುವೆ. ಎಲ್ಲಿಯವರೆಗೆಂದರೆ – ತೊಂಡರಿಗೆ ತೊಂಡನಾಗುವೆ. (ಬಲಿಯ ಭಕ್ತಿಗೊಲಿದು ಅವನ ದ್ವಾರಪಾಲನಾದೆ, ನರಸಿಂಹ ಮೆಹತಾಗೆ ನೀನು ಏನೇನು ಮಾಡಲಿಲ್ಲ? ಇತ್ಯಾದಿ) ನೀನು ಎಲ್ಲ ಲೋಕಪಾಲರ ಅಧೀಶ್ವರನಾಗಿರುವೆ. ಬ್ರಹ್ಮಾದಿ ಲೋಕೇಶ್ವರರು ಸದಾಕಾಲ ನಿನಗೆ ಭಕ್ತಿಪೂರ್ವಕ ನಮಸ್ಕರಿಸುತ್ತಿರುತ್ತಾರೆ. ಅವರು ನಿನ್ನ ಚರಣಕಮಲಗಳನ್ನಿಡುವ ಪೀಠಕ್ಕೆ ತಮ್ಮ ಕಿರೀಟಾಗ್ರದಿಂದ ಶ್ರದ್ಧಾ ಪ್ರೇಮಸಹಿತ ಸಾಷ್ಟಾಂಗ ನಮಸ್ಕಾರ ಸಲ್ಲಿಸುತ್ತಾರೆ. ಇಷ್ಟು ಮಹಿಮಾಯುಕ್ತನಾಗಿದ್ದರೂ ನೀನು ರಾಮಾವತಾರದಲ್ಲಿ ಪ್ರೇಮಕ್ಕೆ ಪರವಶನಾಗಿ ವಾನರರೊಂದಿಗೆ ಮಿತ್ರತೆಯಿಂದ ವ್ಯವಹರಿಸಿದೆ. ಇದೇನೋ ನಿನಗಾಗಿ ಆಶ್ಚರ್ಯದ ಮಾತಲ್ಲ, ಏಕೆಂದರೆ ನಿನಗಾದರೋ ಭಕ್ತಿಯೇ ಪ್ರಿಯವಾಗಿದೆ. ॥ ೪ ॥

ಶ್ರೀಶುಕ ಉವಾಚ

ಇತ್ಯುದ್ಧವೇನಾತ್ಯನುರಕ್ತಚೇತಸಾ
ಪೃಷ್ಟೋ ಜಗತ್ಕ್ರೀಡನಕಃ ಸ್ವಶಕ್ತಿಭಿಃ ।
ಗೃಹೀತಮೂರ್ತಿತ್ರಯ ಈಶ್ವರೇಶ್ವರೋ
ಜಗಾದ ಸಪ್ರೇಮ ಮನೋಹರಸ್ಮಿತಃ ॥ ೭ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಬ್ರಹ್ಮಾದಿದೇವತೆಗಳಿಗೂ ಒಡೆಯನಾಗಿದ್ದಾನೆ. ಅವನೇ ತನ್ನ ಶಕ್ತಿಯಾದ ತ್ರಿಗುಣಗಳಿಂದ ಬ್ರಹ್ಮಾ ವಿಷ್ಣು ಮಹೇಶ್ವರ

ಶ್ರೀಭಗವಾನುವಾಚ

ಹಂತ ತೇ ಕಥಯಿಷ್ಯಾಮಿ ಮಮ ಧರ್ಮಾನ್ ಸುಮಂಗಲಾನ್ ।
ಯಾನ್ ಶ್ರದ್ಧಯಾಽಽಚರನ್ಮರ್ತ್ಯೋ ಮೃತ್ಯುಂ ಜಯತಿ ದುರ್ಜಯಮ್
॥ ೮ ॥

ಕುರ್ಯಾತ್ ಸರ್ವಾಣಿ ಕರ್ಮಾಣಿ ಮದರ್ಥಂ ಶನಕೈಃ ಸ್ಮರನ್ ।
ಮಯ್ಯರ್ಪಿತಮನಶ್ಚಿತ್ತೋ ಮದ್ಧರ್ಮಾತ್ಮಮನೋರತಿಃ
॥ ೯ ॥

ದೇಶಾನ್ಪುಣ್ಯಾನಾಶ್ರಯೇತ ಮದ್ಭಕ್ತೈಃ ಸಾಧುಭಿಃ ಶ್ರಿತಾನ್ ।
ದೇವಾಸುರಮನುಷ್ಯೇಷು ಮದ್ಭಕ್ತಾಚರಿತಾನಿ ಚ
॥ ೧೦ ॥

ಪೃಥಕ್ ಸತ್ರೇಣ ವಾ ಮಹ್ಯಂ ಪರ್ವಯಾತ್ರಾಮಹೋತ್ಸವಾನ್ ।
ಕಾರಯೇದ್ಗೀತನೃತ್ಯಾದ್ಯೈರ್ಮಹಾರಾಜವಿಭೂತಿಭಿಃ
॥ ೧೧ ॥

ಮಾಮೇವ ಸರ್ವಭೂತೇಷು ಬಹಿರಂತರಪಾವೃತಮ್ ।
ಈಕ್ಷೇತಾತ್ಮನಿ ಚಾತ್ಮಾನಂ ಯಥಾ ಖಮಮಲಾಶಯಃ
॥ ೧೨ ॥

ಇತಿ ಸರ್ವಾಣಿ ಭೂತಾನಿ ಮದ್ಭಾವೇನ ಮಹಾದ್ಯುತೇ ।
ಸಭಾಜಯನ್ಮನ್ಯಮಾನೋ ಜ್ಞಾನಂ ಕೇವಲಮಾಶ್ರಿತಃ
॥ ೧೩ ॥

ಬ್ರಾಹ್ಮಣೇ ಪುಲ್ಕಸೇ ಸ್ತೇನೇ ಬ್ರಹ್ಮಣ್ಯೇಽರ್ಕೇ ಸ್ಫುಲಿಂಗಕೇ ।
ಅಕ್ರೂರೇ ಕ್ರೂರಕೇ ಚೈವ ಸಮದೃಕ್ ಪಂಡಿತೋ ಮತಃ
॥ ೧೪ ॥

ನರೇಷ್ವಭೀಕ್ಷ್ಣಂ ಮದ್ಭಾವಂ ಪುಂಸೋ ಭಾವಯತೋಽಚಿರಾತ್ ।
ಸ್ಪರ್ಧಾಸೂಯಾತಿರಸ್ಕಾರಾಃ ಸಾಹಂಕಾರಾ ವಿಯಂತಿ ಹಿ
॥ ೧೫ ॥

ವಿಸೃಜ್ಯ ಸ್ಮಯಮಾನಾನ್ ಸ್ವಾನ್ ದೃಶಂ ವ್ರೀಡಾಂ ಚ ದೈಹಿಕೀಮ್ ।
ಪ್ರಣಮೇದ್ದಂಡವದ್ಭೂಮಾವಾಶ್ವಚಾಂಡಾಲಗೋಖರಮ್
॥ ೧೬ ॥

ರೂಪಗಳನ್ನು ಧರಿಸುತ್ತಾನೆ. ಈ ಜಗತ್ತು ಅವನ ಆಟ (ಲೀಲೆ) ಯಾಗಿದೆ. ಉದ್ಧವನು ಅನುರಾಗತುಂಬಿದ ಚಿತ್ತದಿಂದ ಹೀಗೆ ಪ್ರಶ್ನಿಸಿದಾಗ ಅವನು ಮಂದ-ಮಂದವಾಗಿ ಮುಗುಳ್ನಕ್ಕು ಬಹು ಪ್ರೇಮದಿಂದ ಹೇಳಲು ಪ್ರಾರಂಭಿಸಿದನು – ॥ ೭ ॥

ಶ್ರೀಭಗವಂತನು ಹೇಳಿದನು – ಪ್ರಿಯ ಉದ್ಧವನೇ! ನಿನ್ನ ಅನುರಾಗತುಂಬಿದ ವಾಣಿಯಿಂದ ನನಗೆ ತುಂಬಾ ಆನಂದ ವಾಯಿತು. ನಾನು ನಿನಗೆ ನನ್ನ ಮಂಗಲಮಯ ಭಾಗವತಧರ್ಮ ಗಳನ್ನು ಅರುಹುವೆನು. ಇವನ್ನು ಶ್ರದ್ಧೆಯಿಂದ ಆಚರಿಸಿದ ಮನುಷ್ಯನು ಸಂಸಾರರೂಪೀ ದುರ್ಜಯ ಮೃತ್ಯುವನ್ನು ಅಯಾಸ ವಿಲ್ಲದೆ ಗೆಲ್ಲಬಲ್ಲನು. ॥ ೮ ॥ ಉದ್ಧವನೇ! ನನ್ನ ಭಕ್ತನು ತನ್ನ ಎಲ್ಲ ಕರ್ಮಗಳನ್ನು ನನಗಾಗಿಯೇ ಮಾಡಬೇಕು. ಅವನ್ನು ಮಾಡುತ್ತಿರು ವಾಗ ನನ್ನ ಸ್ಮರಣೆಯ ಅಭ್ಯಾಸವನ್ನು ಕ್ರಮವಾಗಿ ಬೆಳೆಸಬೇಕು. ಕೆಲವೇ ದಿನಗಳಲ್ಲಿ ಅವನ ಮನಸ್ಸು-ಚಿತ್ತಗಳು ನನ್ನಲ್ಲಿ ಸಮರ್ಪಿತ ವಾಗುತ್ತವೆ. ಅವನ ಮನ ಆತ್ಮಗಳು ನನ್ನ ಧರ್ಮದಲ್ಲೇ ರಮಿಸಿ ಹೋಗುವವು. ॥ ೯ ॥ ನನ್ನ ಸಾಧುಭಕ್ತರು ವಾಸಿಸಿದ ಸ್ಥಾನಗಳಲ್ಲಿ ವಾಸಮಾಡಬೇಕು. ನನ್ನ ಅನನ್ಯ ಭಕ್ತರಾದ ದೇವತೆಗಳು, ಅಸುರರು, ಮನುಷ್ಯರು ಆಚರಿಸಿದ ಆಚರಣೆಗಳನ್ನು ಅನುಸರಿಸ ಬೇಕು. ॥ ೧೦ ॥ ಪರ್ವದಿನಗಳಲ್ಲಿ (ರಾಮನವಮಿ, ಕೃಷ್ಣಾಷ್ಟಮಿ) ಎಲ್ಲರೊಂದಿಗೆ ಸೇರಿ ಅಥವಾ ಒಂಟಿಯಾಗಿ ಮಹಾರಾಜೋಚಿತ ವೈಭವದಿಂದ ನೃತ್ಯ, ಗಾಯನ, ವಾದ್ಯ ಮುಂತಾದವುಗಳಿಂದ ನನ್ನ ಉತ್ಸವಗಳನ್ನು ನಡೆಸಬೇಕು. ॥ ೧೧ ॥ ಶುದ್ಧಾಂತಃಕರಣರಾದವರು ಆಕಾಶದಂತೆ ಒಳ-ಹೊರಗೆ ಪರಿಪೂರ್ಣ ಮತ್ತು ನಿರಾವರಣ ಪರಮಾತ್ಮನಾದ ನನ್ನನ್ನೇ ಸಮಸ್ತ ಪ್ರಾಣಿಗಳಲ್ಲಿ ಹಾಗೂ ತನ್ನ ಹೃದಯದಲ್ಲಿ ಸ್ಥಿತನಾಗಿದ್ದಾನೆ ಎಂದು ನೋಡಬೇಕು. ॥ ೧೨ ॥ ನಿರ್ಮಲ ಬುದ್ಧಿಯುಳ್ಳ ಉದ್ಧವನೇ! ಯಾವ ಸಾಧಕನು ಕೇವಲ ಈ ಜ್ಞಾನದೃಷ್ಟಿಯನ್ನು ಆಶ್ರಯಿಸಿ ಸಮಸ್ತ ಪ್ರಾಣಿ-ಪದಾರ್ಥ ಗಳಲ್ಲಿ ನನ್ನನ್ನು ದರ್ಶಿಸುತ್ತಾನೋ, ಅವನ್ನು ನನ್ನದೇ ಸ್ವರೂಪವೆಂದು ತಿಳಿದು ಅವುಗಳನ್ನು ಸತ್ಕರಿಸುತ್ತಾನೋ, ಬ್ರಾಹ್ಮಣ ಮತ್ತು ಚಾಂಡಾಲನಲ್ಲಿ, ಕಳ್ಳ ಹಾಗೂ ಬ್ರಾಹ್ಮಣ-ಭಕ್ತರಲ್ಲಿ, ಸೂರ್ಯ ಮತ್ತು ಬೆಂಕಿಯ ಕಿಡಿಯಲ್ಲಿ, ಕೃಪಾಳು ಹಾಗೂ ಕ್ರೂರನಲ್ಲಿ ಸರ್ವತ್ರ ಸಮಾನದೃಷ್ಟಿಯನ್ನು ಇರಿಸುತ್ತಾನೋ, ಅವನೇ ನಿಜವಾದ ಜ್ಞಾನಿ ಎಂದು ತಿಳಿಯಬೇಕು. ॥ ೧೩-೧೪ ॥ ಹೀಗೆ ನಿರಂತರ ಎಲ್ಲ ನರ-ನಾರಿಯರಲ್ಲಿ ನನ್ನ ಭಾವನೆಯನ್ನೇ ಇರಿಸಿದಾಗ ಸ್ವಲ್ಪ ದಿನಗಳಲ್ಲೇ ಸಾಧಕನ ಚಿತ್ತದಿಂದ ಸ್ಪರ್ಧೆ, ಈರ್ಷೆ, ತಿರಸ್ಕಾರ, ಅಹಂಕಾರ ಮುಂತಾದ ದೋಷಗಳು ದೂರವಾಗುತ್ತವೆ. ॥ ೧೫ ॥ ತನ್ನ ಜನರೇ ಅಪಹಾಸ್ಯಮಾಡಿದರೂ ಅದನ್ನು ಪರಿಗಣಿಸಬಾರದು. ಲೋಕ-ಲಜ್ಜೆಯನ್ನು ಬಿಟ್ಟು ನಾಯಿ, ಚಾಂಡಾಲ, ಹಸು, ಕತ್ತೆ ಹಾಗೂ ತನ್ನಲ್ಲಿಯೂ ಕೂಡ ದೈಹಿಕದೃಷ್ಟಿಯನ್ನು ತೊರೆದು ಎಲ್ಲದರಲ್ಲಿ ಓರ್ವ ಪರಮಾತ್ಮನೇ ವಿರಾಜಮಾನನಾಗಿದ್ದಾನೆ ಎಂಬ ಭಾವನೆಯಿಂದ ಎಲ್ಲರಿಗೆ ಸಾಷ್ಟಾಂಗ ನಮಸ್ಕಾರ ಮಾಡ ಬೇಕು. ॥ ೧೬ ॥ ಸಮಸ್ತ ಪ್ರಾಣಿಗಳಲ್ಲಿ ನನ್ನ ಭಾವನೆ-

ಯಾವತ್ಸರ್ವೇಷು ಭೂತೇಷು ಮದ್ಭಾವೋ ನೋಪಜಾಯತೇ ।
ತಾವದೇವಮುಪಾಸೀತ ವಾಙ್ಮನಃಕಾಯವೃತ್ತಿಭಿಃ
॥ ೧೭ ॥

ಸರ್ವಂ ಬ್ರಹ್ಮಾತ್ಮಕಂ ತಸ್ಯ ವಿದ್ಯಯಾವಿಕಲ್ಪಿತಮನೀಷಯಾ ।
ಪರಿಪಶ್ಯನ್ನುಪರಮೇತ್ಸರ್ವತೋ ಮುಕ್ತಸಂಶಯಃ
॥ ೧೮ ॥

ಅಯಂ ಹಿ ಸರ್ವಕಲ್ಪಾನಾಂ ಸಧ್ರೀಚೀನೋ ಮತೋ ಮಮ ।
ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯವೃತ್ತಿಭಿಃ
॥ ೧೯ ॥

ನ ಹ್ಯಂಗೋಪಕ್ರಮೇ ಧ್ವಂಸೋ ಮದ್ಧರ್ಮಸ್ಯೋದ್ಧವಾಣ್ವಪಿ ।
ಮಯಾ ವ್ಯವಸಿತಃ ಸಮ್ಯಙ್ನಿರ್ಗುಣತ್ವಾದನಾಶಿಷಃ
॥ ೨೦ ॥

ಯೋ ಯೋ ಮಯಿ ಪರೇ ಧರ್ಮಃ ಕಲ್ಪ್ಯತೇ ನಿಷ್ಫಲಾಯ ಚೇತ್ ।
ತದಾಯಾಸೋ ನಿರರ್ಥಃ ಸ್ಯಾದ್ಭಯಾದೇರಿವ ಸತ್ತಮ
॥ ೨೧ ॥

ಏಷಾ ಬುದ್ಧಿಮತಾಂ ಬುದ್ಧಿರ್ಮನೀಷಾ ಚ ಮನೀಷಿಣಾಮ್ ।
ಯತ್ಸತ್ಯಮನೃತೇನೇಹ ಮರ್ತ್ಯೇನಾಪ್ನೋತಿ ಮಾಮೃತಮ್
॥ ೨೨ ॥

ಏಷ ತೇಽಭಿಹಿತಃ ಕೃತ್ಸ್ನೋ ಬ್ರಹ್ಮವಾದಸ್ಯ ಸಂಗ್ರಹಃ ।
ಸಮಾಸವ್ಯಾಸವಿಧಿನಾ ದೇವಾನಾಮಪಿ ದುರ್ಗಮಃ
॥ ೨೩ ॥

ಅಭೀಕ್ಷ್ಣಶಸ್ತೇ ಗದಿತಂ ಜ್ಞಾನಂ ವಿಸ್ಪಷ್ಟಯುಕ್ತಿಮತ್ ।
ಏತದ್ವಿಜ್ಞಾಯ ಮುಚ್ಯೇತ ಪುರುಷೋ ನಷ್ಟಸಂಶಯಃ
॥ ೨೪ ॥

ಸುವಿವಿಕ್ತಂ ತವ ಪ್ರಶ್ನಂ ಮಯ್ಯೇತದಪಿ ಧಾರಯೇತ್ ।
ಸನಾತನಂ ಬ್ರಹ್ಮಗುಹ್ಯಂ ಪರಂ ಬ್ರಹ್ಮಾಧಿಗಚ್ಛತಿ
॥ ೨೫ ॥

ಯ ಏತನ್ಮಮ ಭಕ್ತೇಷು ಸಂಪ್ರದದ್ಯಾತ್ಸುಪುಷ್ಕಲಮ್ ।
ತಸ್ಯಾಹಂ ಬ್ರಹ್ಮದಾಯಸ್ಯ ದದಾಮ್ಯಾತ್ಮಾನಮಾತ್ಮನಾ
॥ ೨೬ ॥

ಯ ಏತತ್ಸಮಧೀಯೀತ ಪವಿತ್ರಂ ಪರಮಂ ಶುಚಿ ।
ಸ ಪೂಯೇತಾಹರಹರ್ಮಾಂ ಜ್ಞಾನದೀಪೇನ ದರ್ಶಯನ್
॥ ೨೭ ॥

ಭಗವದ್ಭಾವನೆ ಉಂಟಾಗುವ ತನಕ ಈ ಪ್ರಕಾರದಿಂದ ಮನಸ್ಸು ವಾಣೀ, ಶರೀರದ ಎಲ್ಲ ಸಂಕಲ್ಪ ಮತ್ತು ಕರ್ಮಗಳ ಮೂಲಕ ನನ್ನ ಉಪಾಸನೆಮಾಡುತ್ತಾ ಇರಬೇಕು. ॥ ೧೭ ॥ ಉದ್ಧವನೇ! ಈ ಪ್ರಕಾರ ಸರ್ವತ್ರ ಆತ್ಮಬುದ್ಧಿ-ಬ್ರಹ್ಮಬುದ್ಧಿಯ ಅಭ್ಯಾಸ ಮಾಡಿದಾಗ ಕೆಲವೇ ದಿನಗಳಲ್ಲಿ ಅವನಿಗೆ ಜ್ಞಾನವುಂಟಾಗಿ ಎಲ್ಲವೂ ಬ್ರಹ್ಮಸ್ವರೂಪವಾಗಿ ಕಂಡುಬರಲು ತೊಡಗುತ್ತದೆ. ಇಂತಹ ದೃಷ್ಟಿ ಉಂಟಾದಮೇಲೆ ಎಲ್ಲ ಸಂಶಯಗಳು ತಾನಾಗಿಯೇ ನಿವೃತ್ತವಾಗುತ್ತವೆ. ಹೀಗೆ ಅವನು ನನ್ನ ಸಾಕ್ಷಾತ್ಕಾರಪಡೆದು ಪ್ರಪಂಚದಿಂದ ಉಪರಾಮನಾಗುತ್ತಾನೆ. ॥ ೧೮ ॥ ನನ್ನ ಪ್ರಾಪ್ತಿಯ ಸಾಧನೆಗಳಲ್ಲಿ ಸಮಸ್ತ ಪ್ರಾಣಿ-ಪದಾರ್ಥಗಳಲ್ಲಿ ಮನ - ವಾಣಿ - ಶರೀರದ ಸಮಸ್ತ ವೃತ್ತಿಗಳಿಂದ ನನ್ನನ್ನೇ ಭಾವಿಸುವುದೇ ಎಲ್ಲಕ್ಕಿಂತ ಶ್ರೇಷ್ಠ ಸಾಧನೆಯಾಗಿದೆ. ॥ ೧೯ ॥ ಉದ್ಧವನೇ! ಇದೇ ನನ್ನ ಭಾಗವತಧರ್ಮವಾಗಿದೆ. ಇದನ್ನು ಒಮ್ಮೆ ಪ್ರಾರಂಭಿಸಿದ ಬಳಿಕ ಮತ್ತೆ ಯಾವುದೇ ವಿಘ್ನಬಾಧೆಗಳಿಂದ ಇದರಲ್ಲಿ ಕಿಂಚಿತ್ತಾದರೂ ಅಂತರ ಬೀಳುವುದಿಲ್ಲ. ಏಕೆಂದರೆ ಈ ಧರ್ಮವು ನಿಷ್ಕಾಮವಾಗಿದೆ ಮತ್ತು ಇದು ನಿರ್ಗುಣವಾದ್ದರಿಂದ ಸರ್ವೋತ್ತಮವೆಂದು ಸ್ವತಃ ನಾನೇ ನಿಶ್ಚಯಿಸಿರುವೆನು. ॥ ೨೦ ॥ ಈ ಧರ್ಮದ ಸಾಧಕನು ಭಯ- ಶೋಕಾದಿ ಅವಸ್ಥೆಗಳಲ್ಲಿ ಆಗುವ ಭಾವನೆಯನ್ನು ಮತ್ತು ಅಳುವುದು, ಬಡಬಡಿಸುವುದು, ಓಡುವುದು ಮುಂತಾದ ನಿರರ್ಥಕ ಕರ್ಮಗಳನ್ನೂ, ನಿಷ್ಕಾಮ ಭಾವದಿಂದ ನನಗೆ ಅರ್ಪಿಸಿದರೆ, ಅವುಗಳು ಕೂಡ ನನಗೆ ಅರ್ಪಿಸಿದ ಕಾರಣ ಧರ್ಮಗಳಾಗುವಷ್ಟು ಈ ಭಾಗವತ ಧರ್ಮವು ಸರಳ ಸಾಧನೆಯಾಗಿದೆ. ॥ ೨೧ ॥ ವಿನಾಶಿಯೂ, ಅಸತ್ಯವೂ ಆದ ಈ ಶರೀರದ ಮೂಲಕವೇ ಅಮೃತಸ್ವರೂಪನೂ, ಸತ್ಯಸ್ವರೂಪನೂ ಆದ ಪರಮಾತ್ಮನಾದ ನನ್ನನ್ನು ಪಡೆದುಕೊಳ್ಳುವುದೇ ಬುದ್ಧಿವಂತರಲ್ಲಿರುವ ವಿವೇಕ ಮತ್ತು ಆತ್ಮಜ್ಞಾನಿಗಳ ಜ್ಞಾನವಾಗಿದೆ. ॥ ೨೨ ॥

ಉದ್ಧವನೇ! ಸಮಸ್ತ ಬ್ರಹ್ಮವಿದ್ಯೆಯ ಈ ರಹಸ್ಯವನ್ನು ನಾನು ನಿನಗೆ ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ತಿಳಿಸಿರುವೆನು. ಈ ರಹಸ್ಯವನ್ನು ತಿಳಿಯುವುದು ದೇವತೆಗಳಿಗೂ ಅತ್ಯಂತ ಕಠಿಣವಾಗಿದೆ. ॥ ೨೩ ॥ ನಾನು ಪದೇ-ಪದೇ ವರ್ಣಿಸಿದ ಸುಸ್ಪಷ್ಟ - ಯುಕ್ತಿಯುಕ್ತವಾಗಿ ಜ್ಞಾನದ ಮರ್ಮವನ್ನು ತಿಳಿದುಕೊಳ್ಳುವವನ ಹೃದಯದ ಸಂಶಯಗ್ರಂಥಿಗಳು ಛಿನ್ನ-ಭಿನ್ನವಾಗಿ, ಅವನು ಮುಕ್ತನಾಗುತ್ತಾನೆ. ॥ ೨೪ ॥ ನಾನು ನಿನ್ನ ಪ್ರಶ್ನೆಗೆ ಚೆನ್ನಾಗಿ ಉತ್ತರಿಸಿದೆ. ನಮ್ಮ ಈ ಪ್ರಶ್ನೋತ್ತರವನ್ನು ವಿಚಾರಪೂರ್ವಕ ಧರಿಸಿಕೊಳ್ಳುವವನು ವೇದಗಳ ಪರಮರಹಸ್ಯವಾದ ಸನಾತನ ಪರಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ॥ ೨೫ ॥ ನನ್ನ ಭಕ್ತರಿಗೆ ಇದನ್ನು ಚೆನ್ನಾಗಿ ಸ್ಪಷ್ಟಪಡಿಸುವವನಿಗೆ, ಆ ಜ್ಞಾನದಾತೃವಿಗೆ ನಾನು ಪ್ರಸನ್ನ ಮನಸ್ಸಿನಿಂದ ನನ್ನ ಸ್ವರೂಪವನ್ನೇ ಕೊಟ್ಟುಬಿಡುತ್ತೇನೆ. ಅವನನ್ನು ಆತ್ಮಜ್ಞಾನಿಯಾಗಿಸುತ್ತೇನೆ. ॥ ೨೬ ॥ ಎಲೈ ಉದ್ಧವನೇ! ನಿನ್ನ ಮತ್ತು ನನ್ನ ಈ ಸಂವಾದವು ಸ್ವಯಂ ಪರಮ ಪವಿತ್ರವೇ ಆಗಿದೆ, ಬೇರೆಯವರನ್ನೂ ಪವಿತ್ರವಾಗಿಸುವಂತಹುದು. ಪ್ರತಿದಿನವು ಇದನ್ನು ಪಾರಾಯಣ ಮಾಡುವವನು, ಬೇರೆಯವರಿಗೆ ತಿಳಿಸುವವನು ಈ ಜ್ಞಾನದೀಪದ ಮೂಲಕ ಬೇರೆಯವರಿಗೆ ನನ್ನ ದರ್ಶನ ಮಾಡಿಸಿದ್ದರಿಂದ ಪವಿತ್ರನಾಗಿ ಹೋಗುವನು. ॥ ೨೭ ॥

ಯ ಏತಚ್ಛ್ರದ್ಧಯಾ ನಿತ್ಯಮವ್ಯಗ್ರಃ ಶೃಣುಯಾನ್ನರಃ ।
ಮಯಿ ಭಕ್ತಿಂ ಪರಾಂ ಕುರ್ವನ್ಕರ್ಮಭಿರ್ನ ಸ ಬಧ್ಯತೇ
॥ ೨೮ ॥

ಅಪ್ಯುದ್ಧವ ತ್ವಯಾ ಬ್ರಹ್ಮ ಸಖೇ ಸಮವಧಾರಿತಮ್ ।
ಅಪಿ ತೇ ವಿಗತೋ ಮೋಹಃ ಶೋಕಶ್ಚಾಸೌ ಮನೋಭವಃ
॥ ೨೯ ॥

ನೈತತ್ತ್ವಯಾ ದಾಂಭಿಕಾಯ ನಾಸ್ತಿಕಾಯ ಶಠಾಯ ಚ ।
ಅಶುಶ್ರೂಷೋರಭಕ್ತಾಯ ದುರ್ವಿನೀತಾಯ ದೀಯತಾಮ್
॥ ೩೦ ॥

ಏತೈರ್ದೋಷೈರ್ವಿಹೀನಾಯ ಬ್ರಹ್ಮಣ್ಯಾಯ ಪ್ರಿಯಾಯ ಚ ।
ಸಾಧವೇ ಶುಚಯೇ ಬ್ರೂಯಾದ್ ಭಕ್ತಿಃ ಸ್ಯಾಚ್ಛೂದ್ರಯೋಷಿತಾಮ್
॥ ೩೧ ॥

ನೈತದ್ವಿಜ್ಞಾಯ ಜಿಜ್ಞಾಸೋರ್ಜ್ಞಾತವ್ಯಮವಶಿಷ್ಯತೇ ।
ಪೀತ್ವಾ ಪೀಯೂಷಮಮೃತಂ ಪಾತವ್ಯಂ ನಾವಶಿಷ್ಯತೇ
॥ ೩೨ ॥

ಜ್ಞಾನೇ ಕರ್ಮಣಿ ಯೋಗೇ ಚ ವಾರ್ತಾಯಾಂ ದಂಡಧಾರಣೇ ।
ಯಾವಾನರ್ಥೋ ನೃಣಾಂ ತಾತ ತಾವಾಂಸ್ತೇಽಹಂ ಚತುರ್ವಿಧಃ
॥ ೩೩ ॥

ಮರ್ತ್ಯೋ ಯದಾ ತ್ಯಕ್ತಸಮಸ್ತಕರ್ಮಾ
ನಿವೇದಿತಾತ್ಮಾ ವಿಚಿಕೀರ್ಷಿತೋ ಮೇ ।
ತದಾಮೃತತ್ವಂ ಪ್ರತಿಪದ್ಯಮಾನೋ
ಮಯಾಽಽತ್ಮಭೂಯಾಯ ಚ ಕಲ್ಪತೇ ವೈ ॥ ೩೪ ॥

ಶ್ರೀಶುಕ ಉವಾಚ

ಸ ಏವಮಾದರ್ಶಿತಯೋಗಮಾರ್ಗ
ಸ್ತದೋತ್ತಮಶ್ಲೋಕವಚೋ ನಿಶಮ್ಯ ।
ಬದ್ಧಾಂಜಲಿಃ ಪ್ರೀತ್ಯುಪರುದ್ಧಕಂಠೋ
ನ ಕಿಂಚಿದೂಚೇಽಶ್ರುಪರಿಪ್ಲುತಾಕ್ಷಃ ॥ ೩೫ ॥

ವಿಷ್ಟಭ್ಯ ಚಿತ್ತಂ ಪ್ರಣಯಾವಘೂರ್ಣಂ
ಧೈರ್ಯೇಣ ರಾಜನ್ಪ್ರಕೃತಿಂ ಮನ್ಯಮಾನಃ ।
ಕೃತಾಂಜಲಿಃ ಪ್ರಾಹ ಯದುಪ್ರವೀರಂ
ಶೀರ್ಷ್ಣಾ ಸ್ಪೃಶಂಸ್ತಚ್ಚರಣಾರವಿಂದಮ್ ॥ ೩೬ ॥

ಉದ್ಧವ ಉವಾಚ

ವಿದ್ರಾವಿತೋ ಮೋಹಮಹಾಂಧಕಾರೋ
ಯ ಆಶ್ರಿತೋ ಮೇ ತವ ಸಂನಿಧಾನಾತ್ ।
ವಿಭಾವಸೋಃ ಕಿಂ ನು ಸಮೀಪಗಸ್ಯ
ಶೀತಂ ತಮೋ ಭೀಃ ಪ್ರಭವಂತ್ಯಜಾದ್ಯ ॥ ೩೭ ॥

ಇದನ್ನು ಏಕಾಗ್ರಚಿತ್ತದಿಂದ, ಶ್ರದ್ಧಾಭಕ್ತಿಯಿಂದ ಕೇಳುವವನಿಗೆ ನನ್ನ ಪರಾಭಕ್ತಿಯು ಪ್ರಾಪ್ತವಾಗಿ, ಅವನು ಕರ್ಮಬಂಧನದಿಂದ ಮುಕ್ತನಾಗುವನು. ॥ ೨೮ ॥ ಪ್ರಿಯಮಿತ್ರಾ! ನೀನು ಚೆನ್ನಾಗಿ ಬ್ರಹ್ಮಸ್ವರೂಪವನ್ನು ತಿಳಿದುಕೊಂಡೆಯಲ್ಲ? ನಿನ್ನ ಚಿತ್ತದ ಮೋಹ ಹಾಗೂ ಶೋಕವಾದರೋ ದೂರವಾಯಿತಲ್ಲ? ॥ ೨೯ ॥ ನೀನು ಇದನ್ನು ದಾಂಭಿಕ, ನಾಸ್ತಿಕ, ಶ್ರದ್ಧೆಯಿಲ್ಲದ ಭಕ್ತಿಹೀನ, ಉದ್ಧಟ ಇಂತಹ ಜನರಿಗೆ ಎಂದಿಗೂ ಹೇಳಬಾರದು. ॥ ೩೦ ॥ ಈ ದೋಷಗಳಿಂದ ರಹಿತನೂ, ಬ್ರಾಹ್ಮಣಭಕ್ತನೂ, ಪ್ರೇಮಿಯೂ, ಸಾಧು ಸ್ವಭಾವನೂ, ಶುದ್ಧ ಚರಿತ್ರನೂ ಆದವರಿಗೆ ಈ ಪ್ರಸಂಗವನ್ನು ಹೇಳಬೇಕು. ಶೂದ್ರರು, ಸ್ತ್ರೀಯರು, ನನ್ನಲ್ಲಿ ಭಕ್ತಿಯನ್ನಿಡುವ ವರಾದರೆ ಅವರಿಗೂ ಇದನ್ನು ಉಪದೇಶಿಸಬೇಕು. ॥ ೩೧ ॥ ದಿವ್ಯ ಅಮೃತಪಾನ ಮಾಡಿದಮೇಲೆ ಏನನ್ನೂ ಕುಡಿಯುವುದೂ ಬಾಕಿ ಇರದಂತೆ, ಇದನ್ನು ಅರಿತುಕೊಂಡ ಮೇಲೆ ಜಿಜ್ಞಾಸುವಿಗೆ ಬೇರೆ ಏನನ್ನೂ ತಿಳಿಯುವುದು ಬಾಕಿ ಇರುವುದಿಲ್ಲ ॥ ೩೨ ॥ ಪ್ರಿಯ ಉದ್ಧವನೇ! ಮನುಷ್ಯರಿಗೆ ಜ್ಞಾನ, ಕರ್ಮ, ಯೋಗ, ವಾಣಿಜ್ಯ, ದಂಡನೀತಿ ಇವುಗಳಿಂದ ಕ್ರಮವಾಗಿ ಮೋಕ್ಷ, ಧರ್ಮ, ಕಾಮ, ಅರ್ಥರೂಪೀ ಫಲಗಳು ದೊರೆಯುತ್ತವೆ. ಆದರೆ ನಿನ್ನಂತಹ ಅನನ್ಯ ಭಕ್ತರಿಗೆ ಆ ನಾಲ್ಕು ವಿಧದ ಫಲವೂ ನಾನೇ ಆಗಿದ್ದೇನೆ. ॥ ೩೩ ॥ ಮನುಷ್ಯನು ಎಲ್ಲ ಕರ್ಮಗಳನ್ನು ನನ್ನಲ್ಲಿ ಅರ್ಪಿಸಿ, ನನ್ನಲ್ಲಿ ಅನನ್ಯ ಶರಣಾದಾಗ, ಎಲ್ಲ ಕ್ರಿಯಾಕಲಾಪಗಳನ್ನು ನನಗಾಗಿಯೇ ಮಾಡಿದಾಗ, ಅವನ ಎಲ್ಲ ವ್ಯವಹಾರಗಳು ನನ್ನೊಂದಿಗೆ ಆಗುತ್ತವೆ. ಅವನು ನನಗೆ ತುಂಬಾ ಪ್ರಿಯನಾಗುತ್ತಾನೆ. ಮತ್ತೆ ನಾನೂ ಕೂಡ ಅವನಿಗಾಗಿ ಏನೇನು ಮಾಡಲಿ ಎಂದು ಯೋಚಿಸುತ್ತಾ ಇರುತ್ತೇನೆ. ಅವನಿಗೆ ಪ್ರಿಯವಾದುದನ್ನು ಮಾಡಲು ನನಗೆ ಪ್ರಬಲ ಉತ್ಕಂಠತೆ ಇರುತ್ತದೆ. ಇಂತಹ ನನ್ನ ಭಕ್ತನು ಅಮೃತತ್ತ್ವವನ್ನು ಪಡೆದುಕೊಂಡು, ನನ್ನ ಸ್ವರೂಪವೇ ಆಗುತ್ತಾನೆ. ॥ ೩೪ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿತನೇ! ಈಗ ಉದ್ಧವನು ಯೋಗಮಾರ್ಗದ ಪೂರ್ಣ ಉಪದೇಶವನ್ನು ಪಡೆದುಕೊಂಡನು. ಭಗವಾನ್ ಶ್ರೀಕೃಷ್ಣನ ಮಾತನ್ನು ಕೇಳಿ ಅವನ ಕಣ್ಣುಗಳಲ್ಲಿ ನೀರು ತುಂಬಿಬಂತು. ಪ್ರೇಮೋದ್ರೇಕದಿಂದ ಕಂಠ ಉಮ್ಮಳಿಸಿತು. ವಾಣಿಯಿಂದ ಏನನ್ನೂ ಮಾತನಾಡಲಾರದೆ ಮೌನವಾಗಿ ಕೈ ಜೋಡಿಸಿಕೊಂಡು ನಿಂತುಕೊಂಡನು. ॥ ೩೫ ॥ ಅವನ ಚಿತ್ತವು ಪ್ರೇಮಪರವಶವಾಗಿ ವಿಹ್ವಲವಾಗಿತ್ತು. ಅವನು ಧೈರ್ಯದಿಂದ ತಡೆದುಕೊಂಡು, ತನ್ನನ್ನು ಅತ್ಯಂತ ಭಾಗ್ಯಶಾಲಿಯೆಂದು ಅನುಭವಿಸುತ್ತಾ, ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಶಿರವನ್ನಿಟ್ಟು ವಂದಿಸಿಕೊಂಡನು ಹಾಗೂ ಕೈಜೋಡಿಸಿ ಅವನಲ್ಲಿ ಹೀಗೆ ಪ್ರಾರ್ಥಿಸಿದನು. ॥ ೩೬ ॥

ಉದ್ಧವನು ಹೇಳಿದನು – ಬ್ರಹ್ಮನಿಗೂ ಆದಿಯಾದವನೇ! ನಾನು ಆಶ್ರಯಿಸಿದ್ದ ಮಹಾನ್ ಮೋಹರೂಪೀ ಅಂಧಕಾರವು ನಿನ್ನ ಜ್ಞಾನದ ಪ್ರಕಾಶದಿಂದ ದೂರವಾಯಿತು. ನಿನ್ನ ಬಳಿಗೆ ಬರುತ್ತಲೇ ಅದು ಎಂದೆಂದಿಗೂ ಓಡಿಹೋಯಿತು. ಬೆಂಕಿಯಬಳಿ ಸಾರಿದವನಿಗೆ ಚಳಿ, ಅಂಧಕಾರ ಮತ್ತು ಅದರಿಂದ ಉಂಟಾಗುವ ಭಯವು ನಿಲ್ಲಬಲ್ಲುದೇನು? ॥ ೩೭ ॥

ಪ್ರತ್ಯರ್ಪಿತೋ ಮೇ ಭವತಾನುಕಂಪಿನಾ
ಭೃತ್ಯಾಯ ವಿಜ್ಞಾನಮಯಃ ಪ್ರದೀಪಃ ।
ಹಿತ್ವಾ ಕೃತಜ್ಞಸ್ತವ ಪಾದಮೂಲಂ
ಕೋಽನ್ಯತ್ಸಮೀಯಾಚ್ಛರಣಂ ತ್ವದೀಯಮ್ ॥ ೩೮ ॥

ವೃಕ್ಣಶ್ಚ ಮೇ ಸುದೃಢಃ ಸ್ನೇಹಪಾಶೋ
ದಾಶಾರ್ಹವೃಷ್ಣ್ಯಂಧಕಸಾತ್ತ್ವತೇಷು ।
ಪ್ರಸಾರಿತಃ ಸೃಷ್ಟಿವಿವೃದ್ಧಯೇ ತ್ವಯಾ
ಸ್ವಮಾಯಯಾ ಹ್ಯಾತ್ಮಸುಬೋಧಹೇತಿನಾ ॥ ೩೯ ॥

ನಮೋಽಸ್ತು ತೇ ಮಹಾಯೋಗಿನ್ಪ್ರಪನ್ನಮನುಶಾಧಿ ಮಾಮ್ ।
ಯಥಾ ತ್ವಚ್ಚರಣಾಂಭೋಜೇ ರತಿಃ ಸ್ಯಾದನಪಾಯಿನೀ
॥ ೪೦ ॥

ಶ್ರೀಭಗವಾನುವಾಚ

ಗಚ್ಛೋದ್ಧವ ಮಯಾಽಽದಿಷ್ಟೋ
ಬದರ್ಯಾಖ್ಯಂ ಮಮಾಶ್ರಮಮ್ ।
ತತ್ರ ಮತ್ಪಾದತೀರ್ಥೋದೇ
ಸ್ನಾನೋಪಸ್ಪರ್ಶನೈಃ ಶುಚಿಃ ॥ ೪೧ ॥

ಈಕ್ಷಯಾಲಕನಂದಾಯಾ ವಿಧೂತಾಶೇಷಕಲ್ಮಷಃ ।
ವಸಾನೋ ವಲ್ಕಲಾನ್ಯಂಗ ವನ್ಯಭುಕ್ ಸುಖನಿಃಸ್ಪೃಹಃ
॥ ೪೨ ॥

ತಿತಿಕ್ಷುರ್ದ್ವಂದ್ವಮಾತ್ರಾಣಾಂ ಸುಶೀಲಃ ಸಂಯತೇಂದ್ರಿಯಃ ।
ಶಾಂತಃ ಸಮಾಹಿತಧಿಯಾ ಜ್ಞಾನವಿಜ್ಞಾನಸಂಯುತಃ
॥ ೪೩ ॥

ಮತ್ತೋಽನುಶಿಕ್ಷಿತಂ ಯತ್ತೇ ವಿವಿಕ್ತಮನುಭಾವಯನ್ ।
ಮಯ್ಯಾವೇಶಿತವಾಕ್ಚಿತ್ತೋ ಮದ್ಧರ್ಮನಿರತೋ ಭವ ।
ಅತಿವ್ರಜ್ಯ ಗತೀಸ್ತಿಸ್ರೋ ಮಾಮೇಷ್ಯಸಿ ತತಃ ಪರಮ್
॥ ೪೪ ॥

ಶ್ರೀಶುಕ ಉವಾಚ

ಸ ಏವಮುಕ್ತೋ ಹರಿಮೇಧಸೋದ್ಧವಃ
ಪ್ರದಕ್ಷಿಣಂ ತಂ ಪರಿಸೃತ್ಯ ಪಾದಯೋಃ ।
ಶಿರೋ ನಿಧಾಯಾಶ್ರುಕಲಾಭಿರಾರ್ದ್ರಧೀ-
ರ್ನ್ಯಷಿಂಚದದ್ವಂದ್ವಪರೋಽಪ್ಯಪಕ್ರಮೇ ॥ ೪೫ ॥

ಭಗವಂತಾ ! ನೀನು ದಯಾರ್ದ್ರನಾಗಿ ಸೇವಕನಾದ ನನಗೆ ವಿಜ್ಞಾನರೂಪೀ ದೀಪದ ಪ್ರಕಾಶವನ್ನು ಪ್ರದಾನಮಾಡಿದೆ. ನೀನು ನನ್ನಮೇಲೆ ಮಹಾನ್ ಅನುಗ್ರಹವನ್ನು ವರ್ಷಿಸಿದೆ. ನಿನ್ನ ಉಪಕಾರಗಳನ್ನು, ನಿನ್ನ ಮಹಾನ್‌ಕೃಪೆಯನ್ನು ಅನುಭವಿಸಿದವನು ಮತ್ತೆ ನಿನ್ನ ಈ ಚರಣಕಮಲಗಳನ್ನು ಬಿಟ್ಟು ಬೇರೆಯವರಿಗೆ ಶರಣಾಗುವವನು ಯಾರು ತಾನೇ ಇರುವನು ? ॥ ೩೮ ॥ ನೀನೇ ನಿನ್ನ ಮೋಹರೂಪೀ ಮಾಯೆಯಿಂದ ನನ್ನನ್ನು ಮೊದಲು ತನ್ನ ಸೃಷ್ಟಿಯನ್ನು ವೃದ್ಧಿಗೊಳಿಸಲು ದಾಶಾರ್ಹ, ವೃಷ್ಣಿ, ಅಂಧಕ, ಸಾತ್ವತವಂಶೀ ಯಾದವರೊಂದಿಗೆ ಸುದೃಢವಾದ ಸ್ನೇಹಪಾಶದಿಂದ ಕಟ್ಟಿದ್ದೆ ಇಂದು ನೀನೇ ಆತ್ಮಬೋಧದ ಹರಿತವಾದ ಖಡ್ಗದಿಂದ ನನ್ನ ಆ ಬಂಧನವನ್ನು ಅನಾಯಾಸವಾಗಿ ಕತ್ತರಿಸಿ ಬಿಟ್ಟಿರುವೆ. ॥ ೩೯ ॥ ಮಹಾಯೋಗೇಶ್ವರಾ ! ನಿನಗೆ ನನ್ನ ನಮಸ್ಕಾರಗಳು. ಈಗ ನೀನು ನಿನ್ನ ಚರಣಕಮಲಗಳಲ್ಲಿ ಅನನ್ಯ ಭಕ್ತಿಯು ಉಂಟಾಗುವಂತೆ ಕೃಪೆ ಮಾಡಿ ಶರಣಾಗತನಾದ ನನಗೆ ಆಜ್ಞೆಯನ್ನು ದಯಪಾಲಿಸು. ॥ ೪೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ ! ಈಗ ನೀನು ನನ್ನ ಆಪ್ಪಣೆಯಂತೆ ಬದರಿಕಾಶ್ರಮಕ್ಕೆ ಹೋಗು. ಅದು ನನ್ನದೇ ಆಶ್ರಮವಾಗಿದೆ. ಅಲ್ಲಿ ನನ್ನ ಚರಣಕಮಲಗಳನ್ನು ತೊಳೆದ ಗಂಗಾಜಲವನ್ನು ಸ್ನಾನ-ಪಾನಾದಿಗಳ ಮೂಲಕ ಸೇವಿಸುತ್ತಾ ನೀನು ಪವಿತ್ರನಾಗು. ॥ ೪೧ ॥ ಅಲಕನಂದೆಯ ದರ್ಶನಮಾತ್ರದಿಂದಲೇ ನಿನ್ನ ಪಾಪಗಳೆಲ್ಲ ನಾಶವಾಗುವವು. ಪ್ರಿಯ ಉದ್ಧವನೇ ! ಅಲ್ಲಿ ನೀನು ವಲ್ಕಲವನ್ನುಟ್ಟು, ಕಾಡಿನ ಕಂದ-ಮೂಲ-ಫಲಗಳನ್ನು ತಿನ್ನುತ್ತಾ, ಯಾವುದೇ ಭೋಗದ ಅಪೇಕ್ಷೆಯನ್ನಿಡದೆ ನಿಃಸ್ಪೃಹ ವೃತ್ತಿಯಿಂದ ನೀನೇ ನಿನ್ನಲ್ಲಿ ಆನಂದವಾಗಿರು. ॥ ೪೨ ॥ ಚಳಿ-ಸೆಕೆ, ಸುಖ-ದುಃಖ, ಏನೆಲ್ಲ ಇದಿರಾಗುತ್ತದೋ ಅದರಲ್ಲಿ ಸಮನಾಗಿದ್ದು ಸಹಿಸು. ಸ್ವಭಾವವು ಸೌಮ್ಯವಾಗಿರಲಿ. ಇಂದ್ರಿಯಗಳು ವಶದಲ್ಲಿರಲಿ. ಚಿತ್ತವು ಶಾಂತವಾಗಿದ್ದು, ಬುದ್ಧಿಸಮಾಹಿತವಾಗಿರಲಿ. ನೀನು ಸ್ವಯಂ ನನ್ನ ಸ್ವರೂಪ ಜ್ಞಾನದಲ್ಲಿ ಅನುಭವದಲ್ಲಿ ಮುಳುಗಿರು. ॥ ೪೩ ॥ ನಾನು ನಿನಗೆ ಮಾಡಿದ ಉಪದೇಶವನ್ನು ಏಕಾಂತದಲ್ಲಿ ವಿಚಾರಪೂರ್ವಕ ಅನುಭವಿಸುತ್ತಿರು. ನಿನ್ನ ವಾಣಿ ಮತ್ತು ಚಿತ್ತವನ್ನು ನನ್ನಲ್ಲಿಯೇ ತೊಡಗಿಸಿಡಬೇಕು. ನಾನು ಹೇಳಿದ ಭಾಗವತಧರ್ಮದಲ್ಲಿ ಪ್ರೇಮದಿಂದ ನಿರತನಾಗಿರು. ಕೊನೆಗೆ ನೀನು ತ್ರಿಗುಣ ಮತ್ತು ಅವುಗಳ ಸಂಬಂಧವಿರಿಸುವ ಗತಿಗಳನ್ನು ದಾಟಿ, ಅದರಿಂದ ಅಚೆಗಿರುವ ನನ್ನ ಪರಮಾರ್ಥಸ್ವರೂಪದಲ್ಲಿ ಸೇರಿಹೋಗುವೆ. ॥ ೪೪ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಸ್ವರೂಪದ ಜ್ಞಾನವು ಪ್ರಪಂಚದ ಭೇದ-ಭ್ರಮೆಗಳನ್ನು ಛಿನ್ನ-ಭಿನ್ನವಾಗಿಸುತ್ತದೆ. ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಹೀಗೆ ಉಪದೇಶಮಾಡಿದಾಗ, ಅವನು ಭಗವಂತನಿಗೆ ಪ್ರದಕ್ಷಿಣೆಮಾಡಿ, ಅವನ ಚರಣಗಳಲ್ಲಿ ಶಿರವನ್ನಿಟ್ಟನು. ಉದ್ಧವನು ಸಂಯೋಗ-ವಿಯೋಗದಿಂದ ಉಂಟಾಗುವ ಸುಖ-ದುಃಖಗಳ ದ್ವಂದ್ವಗಳಿಂದ ಮೀರಿದ್ದನು. ಏಕೆಂದರೆ, ಅವನು ಭಗವಂತನ

ಸುದುಸ್ತ್ಯಜಸ್ನೇಹವಿಯೋಗಕಾತರೋ
ನ ಶಕ್ನುವಂಸ್ತಂ ಪರಿಹಾತುಮಾತುರಃ ।
ಕೃಚ್ಛ್ರಂ ಯಯೌ ಮೂರ್ಧನಿ ಭರ್ತೃಪಾದುಕೇ
ಬಿಭ್ರನ್ನಮಸ್ಕೃತ್ಯ ಯಯೌ ಪುನಃ ಪುನಃ ॥ ೪೬ ॥

ತತಸ್ತಮಂತರ್ಹೃದಿ ಸಂನಿವೇಶ್ಯ
ಗತೋ ಮಹಾಭಾಗವತೋ ವಿಶಾಲಾಮ್ ।
ಯಥೋಪದಿಷ್ಟಾಂ ಜಗದೇಕಬಂಧುನಾ
ತಪಃ ಸಮಾಸ್ಥಾಯ ಹರೇರಗಾದ್ಗತಿಮ್ ॥ ೪೭ ॥

ಯ ಏತದಾನಂದ ಸಮುದ್ರಸಂಭೃತಂ
ಜ್ಞಾನಾಮೃತಂ ಭಾಗವತಾಯ ಭಾಷಿತಮ್ ।
ಕೃಷ್ಣೇನ ಯೋಗೇಶ್ವರಸೇವಿತಾಂಘ್ರಿಣಾ
ಸಚ್ಛ್ರದ್ಧಯಾऽऽಸೇವ್ಯ ಜಗದ್ವಿಮುಚ್ಯತೇ ॥ ೪೮ ॥

ಭವಭಯಮಪಹಂತುಂ ಜ್ಞಾನವಿಜ್ಞಾನಸಾರಂ
ನಿಗಮಕೃದುಪಜಹ್ರೇ ಭೃಂಗವದ್ವೇದಸಾರಮ್ ।
ಅಮೃತಮುದಧಿತಶ್ಚಾಪಾಯಯದ್ ಭೃತ್ಯವರ್ಗಾನ್
ಪುರುಷಮೃಷಭಮಾದ್ಯಂ ಕೃಷ್ಣಸಂಜ್ಞಂ ನತೋऽಸ್ಮಿ
॥ ೪೯ ॥

ಚರಣಗಳಲ್ಲಿ ಶರಣಾಗಿದ್ದನು. ಮತ್ತೆ ಅವನು ಅಲ್ಲಿಂದ ಹೊರಡುವಾಗ ಅವನ ಚಿತ್ತವು ಪ್ರೇಮಾವೇಶದಿಂದ ತುಂಬಿ ಹೋಗಿತ್ತು. ಅವನು ಕಣ್ಣುಗಳಿಂದ ಹರಿಯುವ ಪ್ರೇಮಾಶ್ರುಗಳಿಂದ ಭಗವಂತನ ಚರಣಕಮಲಗಳನ್ನು ತೊಳೆದುಬಿಟ್ಟನು. ॥ ೪೫ ॥ ಪರೀಕ್ಷಿತನೇ! ಉದ್ಧವನು ಭಗವಂತನ ಚರಣಕಮಲಗಳನ್ನು ಬಿಟ್ಟು ದೂರ ಹೋಗಲು ಬಯಸುತ್ತಿರಲಿಲ್ಲ. ಆದರೆ ಭಗವಂತನ ಆಜ್ಞೆಯೇ ಹಾಗಿತ್ತು. ಆದ್ದರಿಂದ ಅವನ ವಿಯೋಗದಿಂದ ಕಾತರನಾಗಿ ಬಹು ಕಷ್ಟದಿಂದ ಹೋಗಲೇಬೇಕಾಯಿತು. ಹೊರಡುವಾಗ ಅವನು ಭಗವಂತನ ಚರಣಪಾದುಕೆಗಳನ್ನು ತನ್ನ ಶಿರದಲ್ಲಿ ಹೊತ್ತುಕೊಂಡು, ಪದೇ – ಪದೇ ವಂದಿಸುತ್ತಾ ಅಲ್ಲಿಂದ ಹೊರಟು ಹೋದನು. ॥ ೪೬ ॥ ಭಗವಂತನ ಪರಮಪ್ರೇಮಿ ಉದ್ಧವನು ಹೃದಯದಲ್ಲಿ ಅವನ ದಿವ್ಯಸ್ವರೂಪವನ್ನು ಧರಿಸಿಕೊಂಡು ಬದರಿಕಾಶ್ರಮವನ್ನು ತಲುಪಿದನು. ಅಲ್ಲಿ ಅವನು ತಪೋಮಯ ಜೀವನವನ್ನು ಕಳೆಯುತ್ತಾ, ಜಗತ್ತಿನ ಏಕಮಾತ್ರ ಹಿತೈಷಿ ಭಗವಾನ್ ಶ್ರೀಕೃಷ್ಣನ ಉಪದೇಶದಂತೆ, ಅವನ ಸ್ವರೂಪಭೂತ ಪರಮಗತಿಯನ್ನು ಪಡೆದುಕೊಂಡನು.॥ ೪೭ ॥ ಭಗವಾನ್ ಶಂಕರನೇ ಆದಿ ಯೋಗೇಶ್ವರರೂ ಕೂಡ ಸಚ್ಚಿದಾನಂದಸ್ವರೂಪೀ ಭಗವಾನ್ ಶ್ರೀಕೃಷ್ಣನ ಚರಣಗಳ ಸೇವೆ ಮಾಡುತ್ತಾರೆ. ಅವನು ಸ್ವತಃ ತನ್ನ ಶ್ರೀಮುಖದಿಂದ ಪರಮಪ್ರೇಮಿ ಭಕ್ತ ಉದ್ಧವನಿಗಾಗಿ ಈ ಜ್ಞಾನಾಮೃತವನ್ನು ಉಪದೇಶಿಸಿದನು. ಇದು ಜ್ಞಾನಾಮೃತರೂಪೀ ಮಹಾಸಾಗರದ ಸಾರವಾಗಿದೆ. ಶ್ರದ್ಧೆಯೊಂದಿಗೆ ಇದನ್ನು ಸೇವಿಸುವವನು ಮುಕ್ತನಾಗಿಯೇ ಹೋಗುತ್ತಾನೆ. ಆವನ ಸಂಗದಿಂದ ಇಡೀ ಜಗತ್ತು ಮುಕ್ತವಾಗಿ ಹೋಗುತ್ತದೆ. ॥ ೪೮ ॥ ಪರೀಕ್ಷಿತನೇ! ಭ್ರಮರವು ವಿಭಿನ್ನ ಪುಷ್ಪಗಳಿಂದ ಸಾರವಾದ ಮಧುವನ್ನು ಸಂಗ್ರಹಿಸುವಂತೆ, ಸ್ವಯಂ ವೇದಗಳನ್ನು ಪ್ರಕಾಶಗೊಳಿಸುವ ಭಗವಾನ್ ಶ್ರೀಕೃಷ್ಣನು ಭಕ್ತರನ್ನು ಸಂಸಾರಸಾಗರದಿಂದ ಮುಕ್ತಗೊಳಿಸಲು ಈ ಜ್ಞಾನ-ವಿಜ್ಞಾನದ ಸಾರವನ್ನು ಅಮೃತರೂಪೀ ಸಾಗರದಿಂದ ತೆಗೆದು ತನ್ನ ಸೇವಕರಿಗಾಗಿ ಕೊಟ್ಟನು. ಇಂತಹ ಆ ಭಗವಾನ್ ಶ್ರೀಕೃಷ್ಣನೇ ಪುರುಷೋತ್ತಮನಾಗಿದ್ದಾನೆ, ಶ್ರೇಷ್ಠನಾಗಿದ್ದಾನೆ, ಆದಿನಾರಾಯಣನಾಗಿದ್ದಾನೆ ಹಾಗೂ ಇಡೀ ಜಗತ್ತಿನ ಮೂಲಕಾರಣನಾಗಿದ್ದಾನೆ. ಅವನಿಗೆ ನಾನು ಪದೇ-ಪದೇ ವಂದಿಸುತ್ತೇನೆ. ॥ ೪೯ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕೋನತ್ರಿಂಶೋऽಧ್ಯಾಯಃ ॥ ೨೯ ॥

ಮೂವತ್ತನೆಯ ಅಧ್ಯಾಯ

ಯದುಕುಲದ ಸಂಹಾರ

ರಾಜೋವಾಚ

ತತೋ ಮಹಾಭಾಗವತ ಉದ್ಧವೇ ನಿರ್ಗತೇ ವನಮ್ ।
ದ್ವಾರವತ್ಯಾಂ ಕಿಮಕರೋದ್ಭಗವಾನ್ ಭೂತಭಾವನಃ
॥ ೧ ॥

ಪರೀಕ್ಷಿತರಾಜನು ಕೇಳಿದನು – ಪೂಜ್ಯರೇ! ಮಹಾಭಾಗವತ ಉದ್ಧವನು ಬದರಿಕಾಶ್ರಮಕ್ಕೆ ಹೊರಟುಹೋದ ಬಳಿಕ ಸಮಸ್ತ ಪ್ರಾಣಿಗಳ ಆತ್ಮಸ್ವರೂಪೀ ಭಗವಾನ್ ಶ್ರೀಕೃಷ್ಣನು ದ್ವಾರಕೆಯಲ್ಲಿ ಯಾವ-ಯಾವ ಲೀಲೆಗಳನ್ನು ಮಾಡಿದನು ? ॥ ೧ ॥

ಬ್ರಹ್ಮಶಾಪೋಪಸಂಸೃಷ್ಟೇ ಸ್ವಕುಲೇ ಯಾದವರ್ಷಭಃ ।
ಪ್ರೇಯಸೀಂ ಸರ್ವನೇತ್ರಾಣಾಂ ತನುಂ ಸ ಕಥಮತ್ಯಜತ್
॥ ೨ ॥

ಪ್ರತ್ಯಾಕೃಷ್ಟಂ ನಯನಮಬಲಾ ಯತ್ರ ಲಗ್ನಂ ನ ಶೇಕುಃ
ಕರ್ಣಾವಿಷ್ಟಂ ನ ಸರತಿ ತತೋ ಯತ್ಸತಾಮಾತ್ಮಲಗ್ನಮ್ ।
ಯಚ್ಛ್ರೀರ್ವಾಚಾಂ ಜನಯತಿ ರತಿಂ ಕಿಂ ನು ಮಾನಂ ಕವೀನಾಂ
ದೃಷ್ಟ್ವಾ ಜಿಹ್ಮೋನ್ಯರ್ಧಿ ರಥಗತಂ ಯಚ್ಚತತ್ಯಾಮ್ಯಮೀಯುಃ
॥ ೩ ॥

ಋಷಿರುವಾಚ

ದಿವಿ ಭುವ್ಯಂತರಿಕ್ಷೇ ಚ ಮಹೋತ್ಪಾತಾನ್ ಸಮುತ್ಥಿತಾನ್ ।
ದೃಷ್ಟ್ವಾSSಸೀನಾನ್ಸುಧರ್ಮಾಯಾಂ
ಕೃಷ್ಣಃ ಪ್ರಾಹ ಯದೂನಿದಮ್
॥ ೪ ॥

ಏತೇ ಘೋರಾ ಮಹೋತ್ಪಾತಾ
ದ್ವಾರ್ವತ್ಯಾಂ ಯಮಕೇತವಃ ।
ಮುಹೂರ್ತಮಪಿ ನ ಸ್ಥೇಯ-
ಮತ್ರ ನೋ ಯದುಪುಂಗವಾಃ ॥ ೫ ॥

ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಶಂಖೋದ್ಧಾರಂ ವ್ರಜನ್ತ್ವಿತಃ ।
ವಯಂ ಪ್ರಭಾಸಂ ಯಾಸ್ಯಾಮೋ ಯತ್ರ ಪ್ರತ್ಯಕ್ಸರಸ್ವತೀ
॥ ೬ ॥

ತತ್ರಾಭಿಷಿಚ್ಯ ಶುಚಯ ಉಪೋಷ್ಯ ಸುಸಮಾಹಿತಾಃ ।
ದೇವತಾಃ ಪೂಜಯಿಷ್ಯಾಮಃ ಸ್ನಪನಾಲೇಪನಾರ್ಹಣೈಃ
॥ ೭ ॥

ಬ್ರಾಹ್ಮಣಾಂಸ್ತು ಮಹಾಭಾಗಾನ್ಕೃತಸ್ವ್ಯಯನಾ ವಯಮ್ ।
ಗೋಭೂಹಿರಣ್ಯವಾಸೋಭಿರ್ಗಜಾಶ್ವರಥವೇಶ್ಮಭಿಃ
॥ ೮ ॥

ವಿಧಿರೇಷ ಹ್ಯರಿಷ್ಟಘ್ನೋ ಮಂಗಲಾಯನಮುತ್ತಮಮ್ ।
ದೇವದ್ವಿಜಗವಾಂ ಪೂಜಾ ಭೂತೇಷು ಪರಮೋ ಭವಃ
॥ ೯ ॥

ಸ್ವಾಮಿ ! ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನು ತನ್ನ ಕುಲವು ಶಾಪಗ್ರಸ್ತವಾದಾಗ ಸಮಸ್ತರ ಕಣ್ಣುಗಳಿಗೆ 'ಆನಂದಕರವಾಗಿದ್ದ ತನ್ನ ದಿವ್ಯ ಶ್ರೀವಿಗ್ರಹದ ಲೀಲೆಯನ್ನು ಹೇಗೆ ಉಪಸಂಹಾರ ಮಾಡಿದನು ? ॥ ೨ ॥ ಭಗವಾನ್ ಶ್ರೀಕೃಷ್ಣನ ಆ ಸ್ವರೂಪದಲ್ಲಿ ವ್ರಜಾಂಗನೆಯರ ಕಣ್ಣುಗಳು ಒಮ್ಮೆ ನೆಟ್ಟುಬಿಟ್ಟರೆ ಅಲ್ಲಿಂದ ಅವನ್ನು ಕೀಳುವುದಕ್ಕೆ ಅವರು ಅಸಮರ್ಥರಾಗುತ್ತಿದ್ದರು, ಅಷ್ಟೊಂದು ಸುಂದರವಾಗಿತ್ತು ಆ ಶ್ರೀವಿಗ್ರಹ. ಭಕ್ತರು, ರುಕ್ಮಿಣೀ, ಯಜ್ಞಪತ್ನಿಯರು (ಭಾಗ ೧೦/೨೩./೨೩.) ಮುಂತಾದವರು ಕವಿಗಳ ಮೂಲಕ ಭಗವಂತನ ಆ ದಿವ್ಯರೂಪ ಸೌಂದರ್ಯವನ್ನು ವರ್ಣನೆಯನ್ನು ಕೇಳಿದಾಗ ಆ ರೂಪಮಾಧುರಿಯು ಅವರ ಚಿತ್ತದಿಂದ ಯಾವ ರೀತಿಯಿಂದಲೂ ವಿಸ್ಮೃತವಾಗುತ್ತಿರಲಿಲ್ಲ. ಭಗವಂತನ ಅದೇ ಶ್ರೀವಿಗ್ರಹದ ಶೋಭೆಯ ಕುರಿತು ಕವಿಗಳು ವರ್ಣಿಸುತ್ತಾ-ವರ್ಣಿಸುತ್ತಾ ಅವರಿಗೆ ತೃಪ್ತಿಯೇ ಆಗದಷ್ಟು ಅದರಲ್ಲಿ ಅನುರಾಗ ಬೆಳೆದುಹೋಯಿತು. ಅಷ್ಟೇ ಅಲ್ಲ ಅದರಿಂದ ಆ ಕವಿಗಳೂ ಗೌರವಕ್ಕೆ ಪಾತ್ರರಾದರು. ಅರ್ಜುನನ ರಥದಲ್ಲಿ ಸಾರಥಿಯಾಗಿ ಕುಳಿತಿರುವ ಆ ಶ್ರೀಕೃಷ್ಣನ ಅದೇ ರೂಪಮಾಧುರಿಯನ್ನು ನೋಡುತ್ತಾ-ನೋಡುತ್ತಾ ಮಹಾಭಾರತಯುದ್ಧದಲ್ಲಿ ಪ್ರಾಣಗಳನ್ನು ತ್ಯಜಿಸಿದವರು ಅವನ ಸಾರೂಪ್ಯವನ್ನು ಪಡೆದರು. ಭಗವಂತನ ಅಂತಹ ಆ ಮುಗ್ಧಮನೋಹರ ಸ್ವರೂಪವನ್ನು ಅವನು ಹೇಗೆ ತ್ಯಜಿಸಿದನು. ॥ ೩ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಆಕಾಶ, ಪೃಥಿವಿ, ಅಂತರಿಕ್ಷಗಳಲ್ಲಿ ದೊಡ್ಡ-ದೊಡ್ಡ ಉತ್ಪಾತ-ಅಪಶಕುನಗಳು ಆಗುತ್ತಿರುವುದನ್ನು ನೋಡಿದಾಗ, ಭಗವಾನ್ ಶ್ರೀಕೃಷ್ಣನು ಸುಧರ್ಮಸಭೆಯಲ್ಲಿ ಉಪಸ್ಥಿತ ಎಲ್ಲ ಯದುವಂಶೀಯರಲ್ಲಿ ಹೀಗೆ ಹೇಳಿದನು – ॥ ೪ ॥ ಶ್ರೇಷ್ಠ ಯದುವಂಶೀಯರೇ ! ದ್ವಾರಕೆಯಲ್ಲಿ ದೊಡ್ಡ-ದೊಡ್ಡ ಭಯಂಕರ ಉತ್ಪಾತಗಳು ನಡೆಯುವುದನ್ನು ನೀವೆಲ್ಲ ನೋಡುತ್ತಿದ್ದೀರಿ. ಇವು ಸಾಕ್ಷಾತ್ ಯಮರಾಜನ ಧ್ವಜದಂತೆ ನಮ್ಮ ಮಹಾನ್ ಅನಿಷ್ಟದ ಸೂಚಕಗಳಾಗಿವೆ. ಇನ್ನು ನಾವು ಇಲ್ಲಿ ಒಂದು ಮುಹೂರ್ತವೂ ನಿಲ್ಲಬಾರದು. ॥ ೫ ॥ ಸ್ತ್ರೀಯರು, ಮಕ್ಕಳು, ಮುದುಕರು ಇಲ್ಲಿಂದ ಶಂಖೋದ್ಧಾರಕ್ಷೇತ್ರಕ್ಕೆ ಹೊರಟು ಹೋಗಲಿ. ನಾವೆಲ್ಲರೂ ಪ್ರಭಾಸಕ್ಷೇತ್ರಕ್ಕೆ ಹೋಗೋಣ. ಅಲ್ಲಿ ಸರಸ್ವತಿ ನದಿಯು ಪಶ್ಚಿಮದ ಕಡೆಗೆ ಹರಿದು ಸಮುದ್ರಕ್ಕೆ ಸೇರುತ್ತದೆ ಎಂಬುದು ನೀವೆಲ್ಲರೂ ತಿಳಿದಿದ್ದೀರಿ. ॥ ೬ ॥ ಅಲ್ಲಿ ನಾವೆಲ್ಲರೂ ಸ್ನಾನಮಾಡಿ ಪವಿತ್ರರಾಗಿ ಉಪವಾಸ ಮಾಡುವೆವು. ಏಕಾಗ್ರಚಿತ್ತದಿಂದ ಸ್ನಾನ ಮತ್ತು ಚಂದನಾದಿ ಸಾಮಗ್ರಿಗಳಿಂದ ದೇವತೆಗಳನ್ನು ಪೂಜಿಸೋಣ. ॥ ೭ ॥ ಅಲ್ಲಿ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿದ ಬಳಿಕ ನಾವೆಲ್ಲರೂ ಗೋ, ಭೂಮಿ, ಸ್ವರ್ಣ, ವಸ್ತ್ರ, ಆನೆ, ಕುದುರೆ, ರಥ, ಮನೆಯೇ ಮುಂತಾದುವನ್ನು ದಾನಮಾಡಿ ಬ್ರಾಹ್ಮಣರನ್ನು ಸತ್ಕರಿಸುವೆವು. ॥ ೮ ॥ ಈ ವಿಧಿಯು ಎಲ್ಲ ರೀತಿಯ ಅಮಂಗಳವನ್ನು ನಾಶಮಾಡುವಂತಹುದು ಮತ್ತು ಪರಮ ಮಂಗಲದ ಜನನಿಯಾಗಿದೆ. ಶ್ರೇಷ್ಠ ಯದುವಂಶೀಯರೇ ! ದೇವತೆ, ಬ್ರಾಹ್ಮಣ, ಗೋವು ಇವುಗಳ ಪೂಜೆಯೇ ಪ್ರಾಣಿಗಳ ಜನ್ಮದ ಪರಮ ಲಾಭವಾಗಿದೆ. ॥ ೯ ॥

ಇತಿ ಸರ್ವೇ ಸಮಾಕರ್ಣ್ಯ ಯದುವೃದ್ಧಾ ಮಧುದ್ವಿಷಃ ।
ತಥೇತಿ ನೌಭಿರುತ್ತೀರ್ಯ ಪ್ರಭಾಸಂ ಪ್ರಯಯೂ ರಥೈಃ
॥ ೧೦ ॥

ತಸ್ಮಿನ್ಭಗವತಾऽऽದಿಷ್ಟಂ ಯದುದೇವೇನ ಯಾದವಾಃ ।
ಚಕ್ರುಃ ಪರಮಯಾ ಭಕ್ತ್ಯಾ ಸರ್ವಶ್ರೇಯೋಪಬೃಂಹಿತಮ್
॥ ೧೧ ॥

ತತಸ್ತಸ್ಮಿನ್ಮಹಾಪಾನಂ ಪಪುರ್ಮೈರೇಯಕಂ ಮಧು ।
ದಿಷ್ಟವಿಭ್ರಂಶಿತಧಿಯೋ ಯದ್ದೃವೈರ್ಭ್ರಶ್ಯತೇ ಮತಿಃ
॥ ೧೨ ॥

ಮಹಾಪಾನಾಭಿಮತ್ತಾನಾಂ ವೀರಾಣಾಂ ದೃಪ್ತಚೇತಸಾಮ್ ।
ಕೃಷ್ಣಮಾಯಾವಿಮೂಢಾನಾಂ ಸಂಘರ್ಷಃ ಸುಮಹಾನಭೂತ್
॥ ೧೩ ॥

ಯುಯುಧುಃ ಕ್ರೋಧಸಂರಬ್ಧಾ ವೇಲಾಯಾಮಾತತಾಯಿನಃ ।
ಧನುರ್ಭಿರಸಿಭಿರ್ಭಲ್ಲೈರ್ಗದಾಭಿಸ್ತೋಮರರ್ಷ್ಟಿಭಿಃ
॥ ೧೪ ॥

ಪತತ್ಪತಾಕೈ ರಥಕುಂಜರಾದಿಭಿಃ
ಖರೋಷ್ಟ್ರಗೋಭಿರ್ಮಹಿಷೈರ್ನರೈರಪಿ ।
ಮಿಥಃ ಸಮೇತ್ಯಾಶ್ವತರೈಃ ಸುದುರ್ಮದಾ
ನ್ಯಹನ್ಯಮಾನೈರ್ದದೃಶೇ ದ್ವಿಧಾ ವನೇ ॥ ೧೫ ॥

ಪ್ರದ್ಯುಮ್ನಸಾಂಬೌ ಯುಧಿ ರೂಢಮತ್ಸರಾ-
ವಕ್ರೂರಭೋಜಾವನಿರುದ್ಧಸಾತ್ಯಕೀ ।
ಸುಭದ್ರಸಂಗ್ರಾಮಜಿತೌ ಸುದಾರುಣೌ
ಗದೌ ಸುಮಿತ್ರಾಸುರಥೌ ಸಮೀಯತುಃ ॥ ೧೬ ॥

ಅನ್ಯೇ ಚ ಯೇ ವೈ ನಿಶಠೋಲ್ಮುಕಾದಯಃ
ಸಹಸ್ರಜಿಚ್ಛತಜಿದ್ಭಾನುಮುಖ್ಯಾಃ ।
ಅನ್ಯೋನ್ಯಮಾಸಾದ್ಯ ಮದಾಂಧಕಾರಿತಾ
ಜಘ್ನುರ್ಮುಕುಂದೇನ ವಿಮೋಹಿತಾ ಭೃಶಮ್ ॥ ೧೭ ॥

ದಾಶಾರ್ಹವೃಷ್ಣ್ಯಂಧಕಭೋಜಸಾತ್ವತಾ
ಮಧ್ವರ್ಬುದಾ ಮಾಥುರಶೂರಸೇನಾಃ ।
ವಿಸರ್ಜನಾಃ ಕುಕುರಾಃ ಕುಂತಯಶ್ಚ
ಮಿಥಸ್ತತಸ್ತೇऽಥ ವಿಸೃಜ್ಯ ಸೌಹೃದಮ್ ॥ ೧೮ ॥

ಪರೀಕ್ಷಿತನೇ! ಎಲ್ಲ ವೃದ್ಧ ಯದುವಂಶೀಯರು ಭಗವಾನ್ ಶ್ರೀಕೃಷ್ಣನ ಮಾತನ್ನು ಕೇಳಿ 'ಹಾಗೆಯೇ ಆಗಲಿ' ಎಂದು ಹೇಳಿ ಅದನ್ನು ಅನುಮೋದಿಸಿದರು. ಕೂಡಲೇ ನಾವೆಗಳಿಂದ ಸಮುದ್ರವನ್ನು ದಾಟಿ ರಥಗಳಲ್ಲಿ ಪ್ರಭಾಸಕ್ಷೇತ್ರದ ಯಾತ್ರೆಯನ್ನು ಕೈಗೊಂಡರು. ॥ ೧೦ ॥ ಅಲ್ಲಿಗೆ ತಲುಪಿ ಯಾದವರು ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಆದೇಶಾನುಸಾರ ಬಹು ಶ್ರದ್ಧೆ ಮತ್ತು ಭಕ್ತಿಯಿಂದ ಶಾಂತಿಪಾಠಾದಿಗಳನ್ನು ಗೈದು, ಎಲ್ಲ ರೀತಿಯ ಮಂಗಲ ಕೃತ್ಯಗಳನ್ನು ಮಾಡಿದರು. ॥ ೧೧ ॥ ಇದೆಲ್ಲವನ್ನು ಅವರೇನೋ ಮಾಡಿದರು, ಆದರೆ ದೈವವು ಅವರ ಬುದ್ಧಿಯನ್ನು ಅಪಹರಿಸಿತ್ತು. - ಆದ್ದರಿಂದ ಅವರು ಮೈರೇಯಕವೆಂಬ ಮದಿರೆಯನ್ನು ಪಾನಮಾಡತೊಡಗಿದರು. ಅದರ ಮತ್ತಿನಿಂದ ಬುದ್ಧಿಯು ಭ್ರಷ್ಟವಾಗುತ್ತದೆ. ಅದು ಕುಡಿಯುವಾಗ ಸಿಹಿಯಾಗಿರುತ್ತದೆ, ಆದರೆ ಪರಿಣಾಮದಲ್ಲಿ ಸರ್ವನಾಶ ಮಾಡುವಂತಹುದು.॥ ೧೨ ॥ ಆ ತೀವ್ರವಾದ ಮದಿರಾಪಾನದಿಂದ ಎಲ್ಲರೂ ಉನ್ಮತ್ತರಾದರು. ಅವರು ಗರ್ವದಿಂದ ಪರಸ್ಪರ ಜಗಳ ಕಾಯಲು ತೊಡಗಿದರು. ನಿಜವಾಗಿಯಾದರೋ ಅವರೆಲ್ಲರೂ ಶ್ರೀಕೃಷ್ಣನ ಮಾಯೆಯಿಂದ ಮೂಢರಾಗಿದ್ದರು. ॥ ೧೩ ॥ ಆಗ ಅವರೆಲ್ಲರೂ ಸಿಟ್ಟುಗೊಂಡು ಒಬ್ಬರು ಮತ್ತೊಬ್ಬರ ಮೇಲೆ ಆಕ್ರಮಣಕ್ಕೆ ತೊಡಗಿದರು. ಧನುಷ್ಯ ಬಾಣ, ಖಡ್ಗ, ಈಟಿ, ಗದೆ, ತೋಮರ, ಋಷ್ಟಿ ಮುಂತಾದ ಅಸ್ತ್ರ ಶಸ್ತ್ರಗಳಿಂದ ಅಲ್ಲೇ ಸಮುದ್ರತಟದಲ್ಲಿ ಪರಸ್ಪರ ಆಕ್ರಮಣ ಮಾಡಿದರು. ॥ ೧೪ ॥ ಮದೋನ್ಮತ್ತರಾದ ಯದುವಂಶೀಯರು ಆನೆ, ಕುದುರೆ, ಕತ್ತೆ, ಒಂಟೆ, ಹೇಸರಕತ್ತೆ, ಎತ್ತು, ಕೋಣ ಮತ್ತು ಮನುಷ್ಯರನ್ನೇ ವಾಹನವಾಗಿಸಿಕೊಂಡು ಒಬ್ಬರು ಮತ್ತೊಬ್ಬರನ್ನು ಬಾಣಗಳಿಂದ ಘಾಸಿಗೊಳಿಸಿದರು. ಅವನ ಕಾಳಗ ಕಾಡಾನೆಗಳು ಒಂದು ಮತ್ತೊಂದನ್ನು ದಂತದಿಂದ ತಿವಿಯುವಂತೆ ಇತ್ತು ಎಲ್ಲ ವಾಹನಗಳ ಮೇಲೆ ಧ್ವಜಗಳು ಹಾರಾಡುತ್ತಿದ್ದವು. ಕಾಲಾಳುಗಳೂ ಪರಸ್ಪರ ಕಾದುತ್ತಿದ್ದರು. ॥ ೧೫ ॥ ಪ್ರದ್ಯುಮ್ನನು ಸಾಂಬನೊಂದಿಗೆ, ಅಕ್ರೂರನು ಭೋಜನೊಂದಿಗೆ, ಅನಿರುದ್ಧನು-ಸಾತ್ಯಕಿಯೊಂದಿಗೆ, ಸುಭದ್ರನು ಸಂಗ್ರಾಮಜಿತನೊಂದಿಗೆ, ಶ್ರೀಕೃಷ್ಣನ ತಮ್ಮ ಗದನು ಅದೇ ಹೆಸರಿನ ಅವರ ಪುತ್ರನೊಂದಿಗೆ, ಸುಮಿತ್ರನು ಸುರಥನೊಂದಿಗೆ ಯುದ್ಧಮಾಡತೊಡಗಿದರು. ಅವರೆಲ್ಲರೂ ಭಯಂಕರ ಯೋಧರಾಗಿದ್ದರು. ಕ್ರೋಧದಿಂದ ಒಬ್ಬರು ಮತ್ತೊಬ್ಬರ ನಾಶ ಮಾಡಲು ಹವಣಿಸುತ್ತಿದ್ದರು. ॥ ೧೬ ॥ ಇವರಲ್ಲದೆ ನಿಶಠ, ಉಲ್ಮುಖ, ಸಹಸ್ರಜಿತ್, ಶತಜಿತ್, ಭಾನು ಮುಂತಾದ ಯಾದವರೂ ಪರಸ್ಪರ ಯುದ್ಧದಲ್ಲಿ ತೊಡಗಿದರು ಭಗವಾನ್ ಶ್ರೀಕೃಷ್ಣನ ಮಾಯೆಯಿಂದ ಅವರು ಅತ್ಯಂತ ಮೋಹಿತರಾಗಿದ್ದರು. ಇತ್ತ ಮದಿರೆಯ ಮತ್ತಿನಿಂದ ಅವರು ಕುರುಡಾಗಿದ್ದರು. ॥ ೧೭ ॥ ದಾಶಾರ್ಹ, ವೃಷ್ಣಿ, ಅಂಧಕ, ಭೋಜ, ಸಾತ್ವತ, ಮಧು, ಅರ್ಬುದ, ಮಾಥುರ, ಶೂರಸೇನ, ವಿಸರ್ಜನ, ಕುಕುರ, ಕುಂತಿ ಮುಂತಾದ ವಂಶಜರು ಸೌಹಾರ್ದ, ಪ್ರೇಮವನ್ನು ಮರೆತು ಪರಸ್ಪರ ಕಡಿದಾಡಲು ತೊಡಗಿದರು. ॥ ೧೮ ॥

ಪುತ್ರಾ ಅಯುಧ್ಯನ್ ಪಿತೃಭಿರ್ಭ್ರಾತೃಭಿಶ್ಚ
ಸ್ವಸ್ರೀಯದೌಹಿತ್ರಪಿತೃವ್ಯಮಾತುಲೈಃ ।
ಮಿತ್ರಾಣಿ ಮಿತ್ರೈಃ ಸುಹೃದಃ ಸುಹೃದ್ಭಿ-
ರ್ಜ್ಞಾತೀಂಸ್ತ್ವಹನ್ಜ್ಞಾತಯ ಏವ ಮೂಢಾಃ ॥ ೧೯ ॥

ಶರೇಷು ಕ್ಷೀಯಮಾಣೇಷು ಭಜ್ಯಮಾನೇಷು ಧನ್ವಸು ।
ಶಸ್ತ್ರೇಷು ಕ್ಷೀಯಮಾಣೇಷು ಮುಷ್ಟಿಭಿರ್ದಹ್ರುರೇರಕಾಃ
॥ ೨೦ ॥

ತಾ ವಜ್ರಕಲ್ಪಾಹ್ಯಭವನ್ಪರಿಘಾ ಮುಷ್ಟಿನಾ ಧೃತಾಃ ।
ಜಘ್ನುರ್ದ್ವಿಷಸ್ತೈಃ ಕೃಷ್ಣೇನ ವಾರ್ಯಮಾಣಾಸ್ತು ತಂ ಚ ತೇ
॥ ೨೧ ॥

ಪ್ರತ್ಯನೀಕಂ ಮನ್ಯಮಾನಾ ಬಲಭದ್ರಂ ಚ ಮೋಹಿತಾಃ ।
ಹಂತುಂ ಕೃತಧಿಯೋ ರಾಜನ್ನಾಪನ್ನಾ ಆತತಾಯಿನಃ
॥ ೨೨ ॥

ಅಥ ತಾವಪಿ ಸಂಕ್ರುದ್ಧಾವುದ್ಯಮ್ಯ ಕುರುನಂದನ ।
ಏರಕಾಮುಷ್ಟಿಪರಿಘೌ ಚರಂತೌ ಜಘ್ನತುರ್ಯುಧಿ
॥ ೨೩ ॥

ಬ್ರಹ್ಮಶಾಪೋಪಸೃಷ್ಟಾನಾಂ ಕೃಷ್ಣಮಾಯಾವೃತಾತ್ಮನಾಮ್ ।
ಸ್ಪರ್ಧಾಕ್ರೋಧಃ ಕ್ಷಯಂ ನಿನ್ಯೇ ವೈಣವೋಽಗ್ನಿರ್ಯಥಾ ವನಮ್
॥ ೨೪ ॥

ಏವಂ ನಷ್ಟೇಷು ಸರ್ವೇಷು ಕುಲೇಷು ಸ್ವೇಷು ಕೇಶವಃ ।
ಅವತಾರಿತೋ ಭುವೋ ಭಾರ ಇತಿ ಮೇನೇಽವಶೇಷಿತಃ
॥ ೨೫ ॥

ರಾಮಃ ಸಮುದ್ರವೇಲಾಯಾಂ ಯೋಗಮಾಸ್ಥಾಯ ಪೌರುಷಮ್ ।
ತತ್ಯಾಜ ಲೋಕಂ ಮಾನುಷ್ಯಂ ಸಂಯೋಜ್ಯಾತ್ಮಾನಮಾತ್ಮನಿ
॥ ೨೬ ॥

ರಾಮನಿರ್ಯಾಣಮಾಲೋಕ್ಯ ಭಗವಾನ್ ದೇವಕೀಸುತಃ ।
ನಿಷಸಾದ ಧರೋಪಸ್ಥೇ ತೂಷ್ಣೀಮಾಸಾದ್ಯ ಪಿಪ್ಪಲಮ್
॥ ೨೭ ॥

ಬಿಭ್ರಚ್ಚತುರ್ಭುಜಂ ರೂಪಂ ಭ್ರಾಜಿಷ್ಣು ಪ್ರಭಯಾ ಸ್ವಯಾ ।
ದಿಶೋ ವಿತಿಮಿರಾಃ ಕುರ್ವನ್ವಿಧೂಮ ಇವ ಪಾವಕಃ
॥ ೨೮ ॥

ಶ್ರೀವತ್ಸಾಂಕಂ ಘನಶ್ಯಾಮಂ ತಪ್ತಹಾಟಕವರ್ಚಸಮ್ ।
ಕೌಶೇಯಾಂಬರಯುಗ್ಮೇನ ಪರಿವೀತಂ ಸುಮಂಗಲಮ್
॥ ೨೯ ॥

ಮೂಢತೆಯಿಂದ ಮಗನು ತಂದೆಯ, ಸಹೋದರ ಸೋದರನ, ಅಳಿಯ ಮಾವನ, ಮೊಮ್ಮಗ ಅಜ್ಜನ, ಮಿತ್ರನು ಮಿತ್ರನ, ಸುಹೃದ್ ಸುಹೃದನ, ಸೋದರಳಿಯ ಸೋದರಮಾವನ ಹಾಗೂ ಒಂದೇ ಗೋತ್ರದವರು ಪರಸ್ಪರ ರಕ್ತಹರಿಸತೊಡಗಿದರು. ॥ ೧೯ ॥

ಕೊನೆಗೆ ಅವರ ಬಾಣಗಳು ಮುಗಿದಾಗ, ಧನುಸ್ಸುಗಳು ಮುರಿದಾಗ, ಶಸ್ತ್ರಾಸ್ತ್ರಗಳು ನಷ್ಟ-ಭ್ರಷ್ಟವಾದಾಗ ಅವರೆಲ್ಲರೂ ತಮ್ಮ ಕೈಗಳಿಂದ ಸಮುದ್ರತಟದಲ್ಲಿ ಬೆಳೆದ ಏರಕಾ ಎಂಬ ಹುಲ್ಲನ್ನು ಕೀಳಲು ತೊಡಗಿದರು. ಆ ಹುಲ್ಲು ಋಷಿಗಳ ಶಾಪದಿಂದ ಉತ್ಪನ್ನವಾದ ಕಬ್ಬಿಣದ ಒನಕೆಯ ಚೂರ್ಣದಿಂದ ಹುಟ್ಟಿತ್ತು. ॥ ೨೦ ॥ ಎಲೈ ರಾಜನೇ! ಆ ಹುಲ್ಲನ್ನು ಅವರು ಕೈಗೆತ್ತಿಕೊಳ್ಳುತ್ತಲೇ ಅದು ಪರಿಘದಂತೆ ಶಕ್ತಿಶಾಲಿಯಾಯಿತು. ಆಗ ಅವರು ರೋಷಾವಿಷ್ಟರಾಗಿ ಆ ಹುಲ್ಲಿನಿಂದಲೇ ವಿಪಕ್ಷಿಯರನ್ನು ಪ್ರಹರಿಸತೊಡಗಿದರು. ಭಗವಾನ್ ಶ್ರೀಕೃಷ್ಣನು ಅವರನ್ನು ತಡೆದರೂ ಅವರು ಅವನನ್ನು ಮತ್ತು ಬಲರಾಮನನ್ನು ತಮ್ಮ ಶತ್ರುಗಳೆಂದೇ ಭಾವಿಸಿದರು. ಆ ಆತತಾಯಿಗಳು ಕೃಷ್ಣ ಬಲರಾಮರನ್ನೇ ಹೊಡೆಯುವಷ್ಟು ಅವರ ಬುದ್ಧಿ ಮೂಢವಾಗಿತ್ತು. ॥ ೨೧-೨೨ ॥ ಕುರುನಂದನಾ! ಈಗ ಭಗವಾನ್ ಶ್ರೀಕೃಷ್ಣ ಬಲರಾಮರೂ ಕ್ರೋಧಗೊಂಡು ಯುದ್ಧ ಭೂಮಿಯಲ್ಲಿ ಅತ್ತ-ಇತ್ತ ಹೋಗುತ್ತಾ ಏರಕಾರೂಪೀ ಪರಿಘವನ್ನು ಕೈಯಲ್ಲೆತ್ತಿಕೊಂಡು ಅವರೆಲ್ಲರನ್ನು ಯುದ್ಧದಲ್ಲಿ ಕೊಲ್ಲತೊಡಗಿದರು. ॥ ೨೩ ॥ ಬಿದಿರಿನ ಘರ್ಷಣೆಯಿಂದ ಉಂಟಾದ ಬೆಂಕಿಯು ಬಿದಿರಮೇಳೆಯನ್ನೇ ಸುಡುವಂತೆ, ಬ್ರಹ್ಮಶಾಪದಿಂದ ಗ್ರಸ್ತರಾದ ಮತ್ತು ಶ್ರೀಕೃಷ್ಣನ ಮಾಯೆಯಿಂದ ಮೋಹಿತರಾದ ಯದುವಂಶೀಯರ ಸ್ಪರ್ಧಾಮೂಲಕ ಕ್ರೋಧವೇ ಅವರನ್ನು ನಾಶಮಾಡಿ ಬಿಟ್ಟಿತು. ॥ ೨೪ ॥ ಸಮಸ್ತ ಯದುವಂಶೀಯರ ಸಂಹಾರವಾಗಿ ಹೋದುದನ್ನು ನೋಡಿ 'ಈಗ ಅಳಿದುಳಿದ ಪೃಥ್ವಿಯ ಭಾರವೂ ತಗ್ಗಿ ಹೋಯಿತು' ಎಂದು ಭಗವಾನ್ ಶ್ರೀಕೃಷ್ಣನು ಯೋಚಿಸಿದನು.

ಪರೀಕ್ಷಿತನೇ! ಬಲರಾಮದೇವರು ಸಮುದ್ರತಟದಲ್ಲಿ ಕುಳಿತುಕೊಂಡು ಏಕಾಗ್ರಚಿತ್ತದಿಂದ ಪರಮಾತ್ಮನ ಚಿಂತನೆಮಾಡುತ್ತಾ ತನ್ನ ಆತ್ಮನನ್ನು ಆತ್ಮಸ್ವರೂಪದಲ್ಲಿ ಸ್ಥಿರಗೊಳಿಸಿದನು ಹಾಗೂ ಈ ಭೂಲೋಕವನ್ನು ಬಿಟ್ಟು ಹೊರಟುಹೋದನು. ॥ ೨೬ ॥ ಭಗವಾನ್ ಶ್ರೀಕೃಷ್ಣನು ತನ್ನ ಅಣ್ಣ ಬಲರಾಮನು ಪರಮಪದದಲ್ಲಿ ಲೀನವಾದನು ಎಂದು ನೋಡಿದಾಗ, ಅವನೂ ಕೂಡ ಒಂದು ಅರಳಿ ಮರದ ಕೆಳಗೆ ಹೋಗಿ ಮೌನಧರಿಸಿ ನೆಲದ ಮೇಲೆಯೇ ಕುಳಿತು ಬಿಟ್ಟನು. ॥ ೨೭ ॥ ಭಗವಾನ್ ಶ್ರೀಕೃಷ್ಣನು ಆಗ ತನ್ನ ಅಂಗಕಾಂತಿಯಿಂದ ದೇದೀಪ್ಯಮಾನ ಚತುರ್ಭುಜರೂಪವನ್ನು ಧರಿಸಿದ್ದನು ಮತ್ತು ಧೂಮರಹಿತ ಅಗ್ನಿಯಂತೆ ಎಲ್ಲ ದಿಕ್ಕುಗಳನ್ನು ಪ್ರಕಾಶಿಸುತ್ತಿದ್ದನು. ॥ ೨೮ ॥ ವರ್ಷಾಕಾಲದ ಮೇಘದಂತೆ ಶ್ಯಾಮಲ ಶರೀರದಿಂದ ಕಾದ ಚಿನ್ನದಂತೆ ಜ್ಯೋತಿಯು ಹೊರಸೂಸುತ್ತಿತ್ತು. ವಕ್ಷಸ್ಥಳದಲ್ಲಿ ಶ್ರೀವತ್ಸಲಾಂಛನ ಶೋಭಿಸುತ್ತಿತ್ತು. ಅವನು ರೇಷ್ಮೆ ಪೀತಾಂಬರದ ಧೋತಿ ಮತ್ತು ಶಲ್ಯವನ್ನು ಧರಿಸಿದ್ದನು. ಅವನ ಆ ಸ್ವರೂಪವು ತುಂಬಾ ಮಂಗಲಮಯವಾಗಿತ್ತು. ॥ ೨೯ ॥

ಸುಂದರಸ್ಮಿತವಕ್ತ್ರಾಬ್ಜಂ ನೀಲಕುಂತಲಮಂಡಿತಮ್ ।
ಪುಂಡರೀಕಾಭಿರಾಮಾಕ್ಷಂ ಸ್ಫುರನ್ಮಕರಕುಂಡಲಮ್
॥ ೩೦ ॥

ಕಟಿಸೂತ್ರಬ್ರಹ್ಮಸೂತ್ರಕಿರೀಟಕಟಕಾಂಗದೈಃ ।
ಹಾರನೂಪುರಮುದ್ರಾಭಿಃ ಕೌಸ್ತುಭೇನ ವಿರಾಜಿತಮ್
॥ ೩೧ ॥

ವನಮಾಲಾಪರೀತಾಂಗಂ ಮೂರ್ತಿಮದ್ಭಿರ್ನಿಜಾಯುಧೈಃ ।
ಕೃತ್ವೋರೌ ದಕ್ಷಿಣೇ ಪಾದಮಾಸೀನಂ ಪಂಕಜಾರುಣಮ್
॥ ೩೨ ॥

ಮುಸಲಾವಶೇಷಾಯಃಖಿಂಡಕೃತೇಷುರ್ಲುಬ್ಧಕೋ ಜರಾ ।
ಮೃಗಾಸ್ಯಾಕಾರಂ ತಚ್ಚರಣಂ ವಿವ್ಯಾಧ ಮೃಗಶಂಕಯಾ
॥ ೩೩ ॥

ಚತುರ್ಭುಜಂ ತಂ ಪುರುಷಂ ದೃಷ್ಟ್ವಾ ಸ ಕೃತಕಿಲ್ಬಿಷಃ ।
ಭೀತಃ ಪಪಾತ ಶಿರಸಾ ಪಾದಯೋರಸುರದ್ವಿಷಃ
॥ ೩೪ ॥

ಅಜಾನತಾ ಕೃತಮಿದಂ ಪಾಪೇನ ಮಧುಸೂದನ ।
ಕ್ಷಂತುಮರ್ಹಸಿ ಪಾಪಸ್ಯ ಉತ್ತಮಶ್ಲೋಕ ಮೇಽನಘ
॥ ೩೫ ॥

ಯಸ್ಯಾನುಸ್ಮರಣಂ ನೃಣಾಮಜ್ಞಾನಧ್ವಾಂತನಾಶನಮ್ ।
ವದಂತಿ ತಸ್ಯ ತೇ ವಿಷ್ಣೋ ಮಯಾಸಾಧು ಕೃತಂ ಪ್ರಭೋ
॥ ೩೬ ॥

ತನ್ಮಾಽಽಶು ಜಹಿ ವೈಕುಂಠ ಪಾಪ್ಮಾನಂ ಮೃಗಲುಬ್ಧಕಮ್ ।
ಯಥಾ ಪುನರಹಂ ತ್ವೇವಂ ನ ಕುರ್ಯಾಂ ಸದತಿಕ್ರಮಮ್
॥ ೩೭ ॥

ಯಸ್ಯಾತ್ಮಯೋಗರಚಿತಂ ನ ವಿದುರ್ವಿರಿಂಚೋ
ರುದ್ರಾದಯೋಽಸ್ಯ ತನಯಾಃ ಪತಯೋ ಗಿರಾಂ ಯೇ ।
ತ್ವನ್ಮಾಯಯಾ ಪಿಹಿತದೃಷ್ಟಯ ಏತದಂಜಃ
ಕಿಂ ತಸ್ಯ ತೇ ವಯಮಸದ್ಗತಯೋ ಗೃಣೀಮಃ ॥ ೩೮ ॥

ಮುಖದಲ್ಲಿ ಸುಂದರ ಹಾಸ್ಯ, ಕಪೋಲಗಳಲ್ಲಿ ಕಪಾದ ಮುಂಗುರುಳು ಲಾಸ್ಯವಾಡುತ್ತಿದ್ದವು. ಅವನ ನೇತ್ರಗಳು ಕಮಲದಂತೆ ಸುಂದರ ಹಾಗೂ ಸುಕುಮಾರವಾಗಿದ್ದವು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು ಓಲಾಡುತ್ತಿದ್ದು ಅವನು ಬಹಳ ಅಂದವಾಗಿ ಕಾಣುತ್ತಿದ್ದನು. ॥ ೩೦ ॥ ಸೊಂಟದಲ್ಲಿ ಉಡಿದಾರದಿಂದಲೂ, ಹೆಗಲಲ್ಲಿ ಯಜ್ಞೋಪವೀತದಿಂದಲೂ, ತಲೆಯ ಮೇಲಿನ ಕಿರೀಟದಿಂದಲೂ, ಕರಕಂಕಣಗಳಿಂದಲೂ, ತೋಳುಗಳಲ್ಲಿ ಬಾಜೂ-ಬಂದಿಗಳಿಂದಲೂ, ವಕ್ಷಸ್ಥಳದಲ್ಲಿ ಹಾರಗಳಿಂದಲೂ, ಚರಣಗಳಲ್ಲಿ ನೂಪುರಗಳಿಂದಲೂ, ಬೆರಳುಗಳಲ್ಲಿ ಉಂಗುರಗಳಿಂದಲೂ, ಕತ್ತಿನಲ್ಲಿ ಕೌಸ್ತುಭಮಣಿಯಿಂದಲೂ ಶೋಭಿಸುತ್ತಿದ್ದನು. ॥ ೩೧ ॥ ಮಂಡಿಯವರೆಗೆ ವನ ಮಾಲೆಯು ಓಲಾಡುತ್ತಿತ್ತು. ಶಂಖ, ಚಕ್ರ, ಗದೆ ಮುಂತಾದ ಆಯುಧಗಳು ಮೂರ್ತಿವತ್ತಾಗಿ ಪ್ರಭುವನ್ನು ಸೇವಿಸುತ್ತಿದ್ದವು. ಆಗ ಭಗವಂತನು ಬಲ ತೊಡೆಯ ಮೇಲೆ ಎಡ ಕಾಲನ್ನಿಟ್ಟುಕೊಂಡು ಕುಳಿತಿದ್ದನು. ಅವನ ಅಂಗಾಲುಗಳು ಕೆಂಪಾದ ಕಮಲದಂತೆ ಹೊಳೆಯುತ್ತಿದ್ದವು. ॥ ೩೨ ॥

ಪರೀಕ್ಷಿತನೇ! ಜರಾ ಎಂಬ ವ್ಯಾಧನು ಉಳಿದಿದ್ದ ಕಬ್ಬಿಣದ ಒನಕೆಯ ತುಂಡನ್ನು ತನ್ನ ಬಾಣದ ಅಲುಗನ್ನಾಗಿಸಿಕೊಂಡಿದ್ದನು. ಅವನಿಗೆ ದೂರದಿಂದ ಭಗವಂತನ ಕೆಂಪಾದ ಪಾದ ಪದ್ಮವು ಜಿಂಕೆಯ ಮುಖದಂತೆ ಕಂಡುಬಂತು. ಅವನು ಅದನ್ನು ನಿಜವಾದ ಮೃಗವೆಂದೇ ತಿಳಿದು ಅದೇ ಬಾಣವನ್ನು ಪ್ರಯೋಗಿಸಿದನು. ॥ ೩೩ ॥ ಮೃಗವನ್ನರಸುತ್ತಾ ಅವನು ಬಳಿಗೆ ಬಂದಾಗ ನೋಡಿದನು – ಅರೇ! ಇವನಾದರೋ ಚತುರ್ಭುಜ ಸ್ವಯಂ ಭಗವಂತನಾಗಿದ್ದಾನಲ್ಲ! ಈಗಲಾದರೋ ಅಪರಾಧ ನಡೆದು ಹೋಯಿತು. ಇದಕ್ಕಾಗಿ ಭಯದಿಂದ ನಡುಗುತ್ತಾ, ಅಸುರರನ್ನು ನಾಶಗೊಳಿಸುವ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ತಲೆಯನ್ನಿಟ್ಟು ಹೊರಳಾಡುತ್ತಾ ಕ್ಷಮೆಕೇಳ ತೊಡಗಿದನು. ॥ ೩೪ ॥ ಬೇಡನು ಬೇಡಿಕೊಂಡನು ಓ ಮಧುಸೂದನಾ! ನಾನು ತಿಳಿಯದೆ ಈ ಪಾಪ ಮಾಡಿರುವೆನು. ನಿಜವಾಗಿ ನಾನು ದೊಡ್ಡ ಪಾಪಿಯಾಗಿದ್ದೇನೆ. ಆದರೆ ನೀನು ಪರಮ ಯಶಸ್ವೀ ಮತ್ತು ನಿರ್ವಿಕಾರನಾಗಿರುವೆ. ನೀನು ದಯಮಾಡಿ ನನ್ನ ಅಪಾರಾಧವನ್ನು ಕ್ಷಮಿಸು. ॥ ೩೫ ॥ ಸರ್ವವ್ಯಾಪಕ ಸರ್ವಶಕ್ತಿವಂತನಾದ ಪ್ರಭುವೇ! ನಿನ್ನ ಸ್ಮರಣಮಾತ್ರದಿಂದ ಮನುಷ್ಯರ ಅಜ್ಞಾನಾಂಧಕಾರವು ನಾಶವಾಗುತ್ತದೆ ಎಂದು ಮಹಾತ್ಮರು ಹೇಳುತ್ತಾರೆ. ನಾನು ಸ್ವಯಂ ನಿನಗೇ ಅನಿಷ್ಟಮಾಡಿದೆ ಇದು ತುಂಬಾ ದುಃಖಿದ ಮಾತಾಗಿದೆ. ॥ ೩೬ ॥ ವೈಕುಂಠನಾಥಾ! ನಾನು ನಿರಪರಾಧಿಯಾದ ಜಿಂಕೆಗಳನ್ನು ಕೊಲ್ಲುವಂತಹ ಮಹಾಪಾಪಿಯಾಗಿದ್ದೇನೆ. ನೀನು ಈಗಲೇ ನನ್ನನ್ನು ಕೊಂದುಬಿಡು. ಏಕೆಂದರೆ, ಸತ್ತು ಹೋದರೆ ನಾನು ಎಂದೂ ನಿನ್ನಂತಹ ಮಹಾಪುರುಷರಿಗೆ ಅಪರಾಧ ಮಾಡಲಾರೆನು. ॥ ೩೭ ॥ ನಿನ್ನ ಯೋಗಮಾಯೆಯಿಂದ ರಚಿತವಾದ ಈ ವಿಶ್ವದ ಕುರಿತು ಬ್ರಹ್ಮರುದ್ರಾದಿಗಳೂ ಹಾಗೂ ವಾಣಿಯ ಅಧಿಷ್ಠಾತಾ ಬೃಹಸ್ಪತಿ ಮುಂತಾದವರೂ ಸರಿಯಾಗಿ ತಿಳಿಯಲಾರರು. ಏಕೆಂದರೆ, ಅವರ ದೃಷ್ಟಿಯು ನಿನ್ನ ಮಾಯೆಯಿಂದ ಮುಚ್ಚಿಹೋಗಿದೆ. ಮತ್ತೆ ನಾವಾದರೋ ಪಾಪಯೋನಿಗಳು. ಅದರ ಕುರಿತು ಏನು ವರ್ಣಿಸ ಬಲ್ಲೆವು ? ॥ ೩೮ ॥

ಶ್ರೀಭಗವಾನುವಾಚ

ಮಾ ಭೈರ್ಜರೇ ತ್ವಮುತ್ತಿಷ್ಠ ಕಾಮ ಏಷ ಕೃತೋ ಹಿ ಮೇ ।
ಯಾಹಿ ತ್ವಂ ಮದನುಜ್ಞಾತಃ ಸ್ವರ್ಗಂ ಸುಕೃತಿನಾಂ ಪದಮ್
॥ ೩೯ ॥

ಶ್ರೀಶುಕ ಉವಾಚ

ಇತ್ಯಾದಿಷ್ಟೋ ಭಗವತಾ ಕೃಷ್ಣೇನೇಚ್ಛಾಶರೀರಿಣಾ ।
ತ್ರಿಃ ಪರಿಕ್ರಮ್ಯ ತಂ ನತ್ವಾ ವಿಮಾನೇನ ದಿವಂ ಯಯೌ
॥ ೪೦ ॥

ದಾರುಕಃ ಕೃಷ್ಣಪದವೀಮನ್ವಿಚ್ಛನ್ನಧಿಗಮ್ಯ ತಾಮ್ ।
ವಾಯುಂ ತುಲಸಿಕಾಮೋದಮಾಘ್ರಾಯಾಭಿಮುಖಂ ಯಯೌ
॥ ೪೧ ॥

ತಂ ತತ್ರ ತಿಗ್ಮದ್ಯುಭಿರಾಯುಧೈರ್ವೃತಂ
ಹ್ಯಶ್ವತ್ಥಮೂಲೇ ಕೃತಕೇತನಂ ಪತಿಮ್ ।
ಸ್ನೇಹಪ್ಲುತಾತ್ಮಾ ನಿಪಪಾತ ಪಾದಯೋಃ
ರಥಾದವಪ್ಲುತ್ಯ ಸಬಾಷ್ಪಲೋಚನಃ ॥ ೪೨ ॥

ಅಪಶ್ಯತಸ್ತ್ವಚ್ಚರಣಾಂಬುಜಂ ಪ್ರಭೋ
ದೃಷ್ಟಿಃ ಪ್ರನಷ್ಟಾ ತಮಸಿ ಪ್ರವಿಷ್ಟಾ ।
ದಿಶೋ ನ ಜಾನೇ ನ ಲಭೇ ಚ ಶಾಂತಿಂ
ಯಥಾ ನಿಶಾಯಾಮುಡುಪೇ ಪ್ರನಷ್ಟೇ ॥ ೪೩ ॥

ಇತಿ ಬ್ರುವತಿ ಸೂತೇ ವೈ ರಥೋ ಗರುಡಲಾಂಛನಃ ।
ಖಮುತ್ಪಪಾತ ರಾಜೇಂದ್ರ ಸಾಶ್ವಧ್ವಜ ಉದೀಕ್ಷತಃ
॥ ೪೪ ॥

ತಮನ್ವಗಚ್ಛನ್ ದಿವ್ಯಾನಿ ವಿಷ್ಣುಪ್ರಹರಣಾನಿ ಚ ।
ತೇನಾತಿವಿಸ್ಮಿತಾತ್ಮಾನಂ ಸೂತಮಾಹ ಜನಾರ್ದನಃ
॥ ೪೫ ॥

ಗಚ್ಛ ದ್ವಾರವತೀಂ ಸೂತ ಜ್ಞಾತೀನಾಂ ನಿಧನಂ ಮಿಥಃ ।
ಸಂಕರ್ಷಣಸ್ಯ ನಿರ್ಯಾಣಂ ಬಂಧುಭ್ಯೋ ಬ್ರೂಹಿ ಮದ್ದಶಾಮ್
॥ ೪೬ ॥

ದ್ವಾರಕಾಯಾಂ ಚ ನ ಸ್ಥೇಯಂ ಭವದ್ಭಿಶ್ಚ ಸ್ವಬಂಧುಭಿಃ ।
ಮಯಾ ತ್ಯಕ್ತಾಂ ಯದುಪುರೀಂ ಸಮುದ್ರಃ ಪ್ಲಾವಯಿಷ್ಯತಿ
॥ ೪೭ ॥

ಸ್ವಂ ಸ್ವಂ ಪರಿಗ್ರಹಂ ಸರ್ವೇ ಆದಾಯ ಪಿತರೌ ಚ ನಃ ।
ಅರ್ಜುನೇನಾವಿತಾಃ ಸರ್ವೇ ಇಂದ್ರಪ್ರಸ್ಥಂ ಗಮಿಷ್ಯಥ
॥ ೪೮ ॥

ತ್ವಂ ತು ಮದ್ಧರ್ಮಮಾಸ್ಥಾಯ ಜ್ಞಾನನಿಷ್ಠ ಉಪೇಕ್ಷಕಃ ।
ಮನ್ಮಾಯಾರಚನಾಮೇತಾಂ ವಿಜ್ಞಾಯೋಪಶಮಂ ವ್ರಜ
॥ ೪೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಜರಾವ್ಯಾಧನೇ! ಹೆದರ ಬೇಡ, ಮೇಲೇಳು. ನೀನು ನನಗೆ ಇಷ್ಟವಾದುದನ್ನೇ ಮಾಡಿರುವೆ. ನನ್ನ ಆಜ್ಞೆಯಿಂದ ನೀನು ದೊಡ್ಡ-ದೊಡ್ಡ ಪುಣ್ಯಾತ್ಮರಿಗೆ ದೊರಕುವಂತಹ ಸ್ವರ್ಗಕ್ಕೆ ಹೋಗಿ ವಾಸಿಸು. ॥ ೩೯ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ತನ್ನ ಇಚ್ಛೆಯಿಂದಲೇ ಶರೀರವನ್ನು ಧರಿಸಿದ್ದನು. ಅವನು ಜರಾವ್ಯಾಧನಿಗೆ ಹೀಗೆ ಅಪ್ಪಣೆ ಮಾಡಿದಾಗ ಅವನು ಭಗವಂತನಿಗೆ ಮೂರು ಪ್ರದಕ್ಷಿಣೆ ಬಂದು, ನಮಸ್ಕರಿಸಿ, ವಿಮಾನವನ್ನು ಹತ್ತಿ ದಿವ್ಯಲೋಕಕ್ಕೆ ಹೊರಟು ಹೋದನು. ॥ ೪೦ ॥ ಭಗವಾನ್ ಶ್ರೀಕೃಷ್ಣನ ಸಾರಥಿ ದಾರುಕನು ಅವನನ್ನು ಹುಡುಕುತ್ತಾ, ಅವನು ಧರಿಸಿದ ತುಲಸೀಮಾಲೆಯ ಪರಿಮಳದ ಓಘವನ್ನು ಹಿಡಿದು, ಶ್ರೀಕೃಷ್ಣನಿರುವ ಸ್ಥಳವನ್ನು ಗುರುತಿಸಿ ಅಲ್ಲಿಗೆ ಬಂದು ಸೇರಿದನು. ॥ ೪೧ ॥ ದಾರುಕನು ಅಲ್ಲಿಗೆ ಹೋಗಿ ನೋಡಿದನು – ಭಗವಾನ್ ಶ್ರೀಕೃಷ್ಣನು ಅರಳೀಮರದ ಕೆಳಗೆ ಕುಳಿತಿರುವನು. ಸಹಿಸಲಸಾಧ್ಯವಾದ ತೇಜಸ್ಸಿನಿಂದ ಕೂಡಿದ ಆಯುಧಗಳು ಮೂರ್ತಿಮಂತರಾಗಿ ಅವನ ಸೇವೆಯಲ್ಲಿ ನಿರತವಾಗಿವೆ. ಅವನನ್ನು ನೋಡಿ ದಾರುಕನ ಹೃದಯದಲ್ಲಿ ಪ್ರೇಮದ ನೆರೆಯೇ ಬಂದಂತಾಯಿತು. ಕಣ್ಣುಗಳಿಂದ ಅಶ್ರುಗಳು ಧಾರಾಕಾರವಾಗಿ ಹರಿದವು. ರಥದಿಂದ ಹಾರಿ ಭಗವಂತನ ಚರಣದಲ್ಲಿ ಕುಸಿದು ಬಿದ್ದನು. ॥ ೪೨ ॥ ದಾರುಕನು ಭಗವಂತನಲ್ಲಿ – ಸ್ವಾಮಿ ! ರಾತ್ರಿಯಲ್ಲಿ ಚಂದ್ರನು ಮರೆಯಾದಾಗ ದಿಕ್ಕುಗಳ ಅರಿವು ಆಗದೆ, ಅಂಧಕಾರದಿಂದ ಏನೂ ಕಾಣದಂತೆಯೇ ನಿನ್ನ ಈ ಚರಣ ಕಮಲಗಳನ್ನು ನೋಡದೆ ನನಗೆ ಎಲ್ಲೆಡೆಗಳಲ್ಲಿ ಕತ್ತಲೆಯೇ ಕಂಡು ಬರುತ್ತದೆ. ನನಗೆ ದಿಕ್ಕುಗಳ ಜ್ಞಾನವಿಲ್ಲ, ಹೃದಯದಲ್ಲಿ ಶಾಂತಿಯೂ ಇಲ್ಲ ಎಂದು ಪ್ರಾರ್ಥಿಸಿದನು. ॥ ೪೩ ॥ ಪರೀಕ್ಷಿತನೇ ! ದಾರುಕನು ಹೀಗೆ ಹೇಳುತ್ತಿರುವಂತೆ ಅವನ ಇದಿರಿಲ್ಲೇ ಭಗವಂತನ ಗರುಡ ಧ್ವಜ ರಥವು, ಪತಾಕೆ, ಕುದುರೆಗಳೊಂದಿಗೆ ಆಕಾಶಕ್ಕೆ ಹಾರಿ ಹೋಯಿತು. ॥ ೪೪ ॥ ಅದರ ಬೆನ್ನಲ್ಲೇ ಭಗವಂತನ ದಿವ್ಯ ಆಯುಧಗಳೂ ಹೊರಟುಹೋದವು. ಇದೆಲ್ಲವನ್ನು ನೋಡಿದಾಗ ದಾರುಕನಿಗೆ ಆಶ್ಚರ್ಯದ ಸೀಮೆಯೇ ಉಳಿಯಲಿಲ್ಲ, ಆಗ ಭಗವಂತನು ಅವನಲ್ಲಿ ಹೇಳಿದನು. ॥ ೪೫ ॥ ದಾರುಕನೇ ! ಈಗ ನೀನು ದ್ವಾರಕೆಗೆ ಹೊರಟುಹೋಗು. ಅಲ್ಲಿ ಯದವಂಶೀಯರ ಪಾರಸ್ಪರಿಕ ಸಂಹಾರ, ಅಣ್ಣ ಬಲರಾಮನ ಪರಮಗತಿ ಮತ್ತು ನನ್ನ ಸ್ವಧಾಮಗಮನದ ವಾರ್ತೆಯನ್ನು ಎಲ್ಲರಿಗೆ ಹೇಳು. ॥ ೪೬ ॥ ಈಗ ನೀವೆಲ್ಲರೂ ನಿಮ್ಮ-ನಿಮ್ಮ ಪರಿವಾರಗಳೊಂದಿಗೆ ದ್ವಾರಕೆಯಲ್ಲಿ ಇರಬಾರದು. ನಾನು ಇಲ್ಲದಿರುವುದರಿಂದ ಸಮುದ್ರವು ಆ ನಗರಿಯನ್ನು ಮುಳುಗಿಸಿಬಿಡುತ್ತದೆ. ॥ ೪೭ ॥ ಎಲ್ಲ ಜನರು ತಮ್ಮ-ತಮ್ಮ ಧನ-ಸಂಪತ್ತು, ಕುಟುಂಬಸಹಿತ, ನನ್ನ ತಂದೆ-ತಾಯಿಯರನ್ನು ಕರಕೊಂಡು ಅರ್ಜುನನ ಸಂರಕ್ಷಣೆಯಲ್ಲಿ ಇಂದ್ರಪ್ರಸ್ಥಕ್ಕೆ ಹೋಗಿರಿ. ॥ ೪೮ ॥ ದಾರುಕನೇ ! ನೀನು ನನ್ನ ಮೂಲಕ ಉಪದೇಶಿಸಲ್ಪಟ್ಟ ಭಾಗವತ ಧರ್ಮವನ್ನು ಆಶ್ರಯಿಸು. ಜ್ಞಾನನಿಷ್ಠನಾಗಿ, ಎಲ್ಲವುಗಳಿಂದ ನಿರಪೇಕ್ಷನಾಗು. ಈ ದೃಶ್ಯವನ್ನು ನನ್ನ ಮಾಯೆಯ ರಚನೆ ಎಂದು ತಿಳಿದು ಶಾಂತನಾಗು. ॥ ೪೯ ॥

ಇತ್ಯುಕ್ತಸ್ತಂ ಪರಿಕ್ರಮ್ಯ ನಮಸ್ಕೃತ್ಯ ಪುನಃ ಪುನಃ ।
ತತ್ಪಾದೌ ಶೀರ್ಷ್ಣ್ಯುಪಾಧಾಯ ದುರ್ಮನಾಃ ಪ್ರಯಯೌ ಪುರೀಮ್
॥ ೫೦ ॥

ಭಗವಂತನ ಈ ಆದೇಶವನ್ನು ಪಡೆದು ದಾರುಕನು ಭಗವಂತನಿಗೆ ಪ್ರದಕ್ಷಿಣೆಮಾಡಿ, ಅವನ ಚರಣಕಮಲಗಳಲ್ಲಿ ತನ್ನ ಶಿರಸ್ಸನ್ನಿಟ್ಟು ಪದೇ-ಪದೇ ನಮಸ್ಕರಿಸಿದನು. ಅನಂತರ ಖಿನ್ನವಾದ ಮನಸ್ಸಿನಿಂದ ದ್ವಾರಕೆಗೆ ಹೊರಟುಹೋದನು. ॥ ೫೦ ॥

ಮೂವತ್ತನೆಯ ಅಧ್ಯಾಯವು ಮುಗಿಯಿತು. ॥ ೩೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ತ್ರಿಂಶೋಽಧ್ಯಾಯಃ॥ ೩೦ ॥

ಮೂವತ್ತೊಂದನೆಯ ಅಧ್ಯಾಯ

ಶ್ರೀಭಗವಂತನ ಸ್ವಧಾಮಗಮನ

ಶ್ರೀಶುಕ ಉವಾಚ

ಅಥ ತತ್ರಾಗಮದ್ಬ್ರಹ್ಮಾ ಭವಾನ್ಯಾ ಚ ಸಮಂ ಭವಃ ।
ಮಹೇಂದ್ರಪ್ರಮುಖಾ ದೇವಾ ಮುನಯಃ ಸಪ್ರಜೇಶ್ವರಾಃ
॥ ೧ ॥

ಪಿತರಃ ಸಿದ್ಧಗಂಧರ್ವಾ ವಿದ್ಯಾಧರಮಹೋರಗಾಃ ।
ಚಾರಣಾ ಯಕ್ಷರಕ್ಷಾಂಸಿ ಕಿನ್ನರಾಪ್ಸರಸೋ ದ್ವಿಜಾಃ
॥ ೨ ॥

ದ್ರಷ್ಟುಕಾಮಾ ಭಗವತೋ ನಿರ್ಯಾಣಂ ಪರಮೋತ್ಸುಕಾಃ ।
ಗಾಯಂತಶ್ಚ ಗೃಣಂತಶ್ಚ ಶೌರೇಃ ಕರ್ಮಾಣಿ ಜನ್ಮ ಚ
॥ ೩ ॥

ವವೃಷುಃ ಪುಷ್ಪವರ್ಷಾಣಿ ವಿಮಾನಾವಲಿಭಿರ್ನಭಃ ।
ಕುರ್ವಂತಃ ಸಂಕುಲಂ ರಾಜನ್ಯೋಗೇಶ್ವರ ಪರಮಯಾ ಯುತಾಃ
॥ ೪ ॥

ಭಗವಾನಿತ್ಥಮಾತ್ಮಾನಂ ಪ್ರೇಕ್ಷ್ಯ ವಿಭೂತೀರಾತ್ಮನೋ ವಿಭುಃ ।
ಸಂಯೋಜ್ಯಾತ್ಮನಿ ಚಾತ್ಮಾನಂ ಪದ್ಮನೇತ್ರೇ ನ್ಯಮೀಲಯತ್
॥ ೫ ॥

ಲೋಕಾಭಿರಾಮಾಂ ಸ್ವತನುಂ ಧಾರಣಾಧ್ಯಾನಮಂಗಲಮ್ ।
ಯೋಗಧಾರಣಯಾಗ್ನೇಯ್ಯಾದಗ್ಧ್ವಾ ಧಾಮಾವಿಶತ್ಸ್ವಕಮ್
॥ ೬ ॥

ದಿವಿ ದುಂದುಭಯೋ ನೇದುಃ ಪೇತುಃ ಸುಮನಸಶ್ಚ ಖಾತ್ ।
ಸತ್ಯಂ ಧರ್ಮೋ ಧೃತಿರ್ಭೂಮೇಃ ಕೀರ್ತಿಃ ಶ್ರೀಶ್ಚಾನ್ವತಂ ಯಯುಃ
॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತರಾಜನೇ ! ದಾರುಕನು ಹೊರಟುಹೋದ ಮೇಲೆ ಬ್ರಹ್ಮದೇವರು, ಶಿವ ಪಾರ್ವತಿಯರು, ಇಂದ್ರಾದಿಲೋಕಪಾಲರು, ಮರೀಚಿ ಆದಿ ಪ್ರಜಾಪತಿಗಳು, ದೊಡ್ಡ-ದೊಡ್ಡ ಋಷಿ-ಮುನಿಗಳು, ಸಿದ್ಧರು, ಪಿತೃಗಳು, ಗಂಧರ್ವರು, ವಿದ್ಯಾಧರರು, ನಾಗರು, ಚಾರಣರು, ಯಕ್ಷ-ರಾಕ್ಷಸರು, ಕಿನ್ನರರು ; ಅಪ್ಸರೆಯರು, ಗರುಡ ಆದಿ ಪಕ್ಷಿಗಳು ಹಾಗೂ ಮೈತ್ರೇಯರೇ ಆದಿ ಬ್ರಾಹ್ಮಣರು ಭಗವಾನ್ ಶ್ರೀಕೃಷ್ಣನ ಪರಮಧಾಮ ಪ್ರಸ್ಥಾನವನ್ನು ನೋಡಲು ತುಂಬಾ ಉತ್ಸುಕತೆಯಿಂದ ಅಲ್ಲಿಗೆ ಬಂದರು. ಅವರೆಲ್ಲರೂ ಭಗವಾನ್ ಶ್ರೀಕೃಷ್ಣನ ಜನ್ಮ ಮತ್ತು ಲೀಲೆಗಳನ್ನು ಹಾಡುತ್ತಾ, ವರ್ಣಿಸುತ್ತಿದ್ದರು. ಅವರ ವಿಮಾನಗಳಿಂದ ಆಕಾಶವಿಡೀ ತುಂಬಿಹೋಗಿತ್ತು. ಅವರು ತುಂಬುಭಕ್ತಿಯಿಂದ ಭಗವಂತನ ಮೇಲೆ ಪುಷ್ಪವೃಷ್ಟಿ ಮಾಡುತ್ತಿದ್ದರು. ॥ ೧-೪ ॥

ಸರ್ವವ್ಯಾಪಕ ಭಗವಾನ್ ಶ್ರೀಕೃಷ್ಣನು ತನ್ನದೇ ವಿಭೂತಿಸ್ವರೂಪ ಲೋಕಪಿತಾಮಹ ಬ್ರಹ್ಮನನ್ನು ಮತ್ತು ಬೇರೆ ದೇವತೆಗಳನ್ನು, ಋಷಿ-ಮುನೀಶ್ವರರನ್ನು ನೋಡಿ ತನ್ನ ಆತ್ಮಸ್ವರೂಪದಲ್ಲಿ ಸ್ಥಿತನಾಗಿ, ಕಮಲದಂತಿರುವ ಕಣ್ಣುಗಳನ್ನು ಮುಚ್ಚಿಕೊಂಡನು. ॥ ೫ ॥

ಭಗವಂತನ ಮಂಗಲಮಯ ಶ್ರೀವಿಗ್ರಹವು ಉಪಾಸಕರಿಗಾಗಿ ಧಾರಣೆ ಮತ್ತು ಧ್ಯಾನದ ಪರಮ ಮಂಗಲಮಯ ಆಶ್ರಯವಾಗಿದೆ. ಸಮಸ್ತ ಲೋಕಗಳ ಆಶ್ರಯವೂ ಆಗಿದೆ ಹಾಗೂ ಅವುಗಳಿಗೆ ಆನಂದವನ್ನು ಪ್ರದಾನಮಾಡುವುದಾಗಿದೆ. ಆದ್ದರಿಂದ ಭಗವಂತನು ತನ್ನ ಆ ಮಂಗಲಮಯ ವಿಗ್ರಹವನ್ನು ಯೋಗಧಾರಣೆಯ ಅಗ್ನಿಯಿಂದ ಸುಡದೆಯೇ ಸಶರೀರವಾಗಿ ತನ್ನ ಧಾಮಕ್ಕೆ ತೆರಳಿದನು. ॥ ೬ ॥ ಆಗ ಸ್ವರ್ಗದಲ್ಲಿ ದೇವ ದುಂದುಭಿಗಳು ಮೊಳಗಿದವು. ಆಕಾಶದಿಂದ ಪುಷ್ಪವೃಷ್ಟಿ ಆಗತೊಡಗಿತು. ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಹಿಂದೆ-ಹಿಂದೆಯೇ ಭೂಮಿಯಿಂದ ಸತ್ಯ, ಧರ್ಮ, ಧೃತಿ, ಕೀರ್ತಿ ಮತ್ತು ಶ್ರೀದೇವಿ ಹೊರಟುಹೋದರು. ॥ ೭ ॥

ದೇವಾದಯೋ ಬ್ರಹ್ಮಮುಖ್ಯಾ ನ ವಿಶಂತಂ ಸ್ವಧಾಮನಿ ।
ಅವಿಜ್ಞಾತಗತಿಂ ಕೃಷ್ಣಂ ದದೃಶುಶ್ಚಾತಿವಿಸ್ಮಿತಾಃ
॥ ೮ ॥

ಭಗವಾನ್ ಶ್ರೀಕೃಷ್ಣನ ಗತಿಯು ಮನ, ವಚನಗಳಿಗೆ ಅತೀತವಾಗಿದೆ. ಆದರಿಂದಲೇ ಭಗವಂತನು ತನ್ನ ಧಾಮಕ್ಕೆ ಪ್ರವೇಶಿಸುವಾಗ ಬ್ರಹ್ಮಾದಿ ದೇವತೆಗಳಿಂದಲೂ ಕೂಡ ಅದನ್ನು ನೋಡಲಾಗಲಿಲ್ಲ. ಈ ಘಟನೆಯಿಂದ ಅವರಿಗೆ ಭಾರೀ ಆಶ್ಚರ್ಯವಾಯಿತು. ॥ ೮ ॥

ಸೌದಾಮನ್ಯಾ ಯಥಾ�ऽऽಕಾಶೇ ಯಾಂತ್ಯಾ ಹಿತ್ವಾಭ್ರಮಂಡಲಮ್ ।
ಗತಿರ್ನ ಲಕ್ಷ್ಯತೇ ಮರ್ತ್ಯೈಸ್ತಥಾ ಕೃಷ್ಣಸ್ಯ ದೈವತೈಃ
॥ ೯ ॥

ಆಕಾಶದಲ್ಲಿ ಮಿಂಚು ಮೋಡಗಳಲ್ಲಿ ಕಾಣಿಸಿಕೊಂಡು ಕೂಡಲೇ ಆಕಾಶದಲ್ಲೇ ವಿಲೀನವಾಗಿ ಹೋಗುತ್ತದೆ. ಅದನ್ನು ಯಾವ ಮನುಷ್ಯನಿಂದಲೂ ನೋಡಲಾಗುವುದಿಲ್ಲ. ಹಾಗೆಯೇ ಭಗವಾನ್ ಶ್ರೀಕೃಷ್ಣನ ಸ್ವಧಾಮಗಮನದ ಲೀಲೆಯನ್ನು ನೋಡಲು ಅಲ್ಲಿ ನೆರೆದ ದೊಡ್ಡ-ದೊಡ್ಡ ದೇವತೆಗಳು ಋಷಿಗಳು ಮುನಿಗಳು ಯಾರಿಂದಲೂ ನೋಡಲಾಗಲಿಲ್ಲ. ॥ ೯ ॥

ಬ್ರಹ್ಮರುದ್ರಾದಯಸ್ತೇ ತು ದೃಷ್ಟ್ವಾ ಯೋಗಗತಿಂ ಹರೇಃ ।
ವಿಸ್ಮಿತಾಸ್ತಾಂ ಪ್ರಶಂಸಂತಃ ಸ್ವಂ ಸ್ವಂ ಲೋಕಂ ಯಯುಸ್ತದಾ
॥ ೧೦ ॥

ಬ್ರಹ್ಮಾ, ಭಗವಾನ್ ಶಂಕರ ಮುಂತಾದ ದೇವತೆಗಳು ಭಗವಂತನ ಈ ಪರಮಯೋಗಮಯ ಗತಿಯನ್ನು ನೋಡಿ ಬಹು ವಿಸ್ಮಯಗೊಂಡು ಅವನನ್ನು ಸ್ತುತಿಸುತ್ತಾ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ॥ ೧೦ ॥

ರಾಜನ್ ಪರಸ್ಯ ತನುಭೃಜ್ಜನನಾಪ್ಯಯೇಹಾ
ಮಾಯಾವಿಡಂಬನಮವೇಹಿ ಯಥಾ ನಟಸ್ಯ ।

ಪರೀಕ್ಷಿತನೇ! ನಟನಾದವನು ಅನೇಕ ವಿಧದ ಭೂಮಿಕೆಗಳನ್ನು ಧರಿಸಿದರೂ ಅವೆಲ್ಲವುಗಳಿಂದ ನಿರ್ಲೇಪನಾಗಿಯೇ ಇರುವಂತೆ ಭಗವಂತನು ಮನುಷ್ಯರಂತೆ ಅವತರಿಸುವುದು, ಮತ್ತೆ ಅದನ್ನು ತಿರೋಹಿತಗೊಳಿಸುವುದು, ನಾನಾ ರೀತಿಯ ಲೀಲೆಗಳನ್ನು ನಡೆಸುವುದು, ಇದೆಲ್ಲವೂ ಅವನ ಮಾಯಾವಿಲಾಸ ಮಾತ್ರವಾಗಿದೆ – ಅಭಿನಯಮಾತ್ರವಾಗಿದೆ. ಅವನು ಸ್ವತಃ ಈ ಜಗತ್ತನ್ನು ಸೃಷ್ಟಿಸಿ, ಇದರಲ್ಲಿ ಪ್ರವೇಶಿಸಿ ವಿಹರಿಸುತ್ತಾನೆ. ಕೊನೆಗೆ ಸಂಹಾರ ಲೀಲೆಗಳನ್ನು ಗೈದು ಎಲ್ಲದರಿಂದಲೂ ಉಪರತನಾಗಿ ತನ್ನ ಅನಂತ ಮಹಿಮಾಮಯ ಸ್ವರೂಪದಲ್ಲೇ ಸ್ಥಿತನಾಗಿರುತ್ತಾನೆ. ॥೧೧॥

ಸೃಷ್ಟ್ವಾऽऽತ್ಮನೇದಮನುವಿಶ್ಯ ವಿಹೃತ್ಯ ಚಾಂತೇ
ಸಂಹೃತ್ಯ ಚಾತ್ಮಮಹಿಮೋಪರತಃ ಸ ಆಸ್ತೇ ॥ ೧೧ ॥

ಮರ್ತ್ಯೇನ ಯೋ ಗುರುಸುತಂ ಯಮಲೋಕನೀತಂ
ತ್ವಾಂ ಚಾನಯಚ್ಛರಣದಃ ಪರಮಾಸ್ತ್ರದಗ್ಧಮ್ ।

ಜಿಗ್ಯೇऽಂತಕಾಂತಕಮಪೀಶಮಸಾವನೀಶಃ
ಕಿಂ ಸ್ವಾವನೇ ಸ್ವರನಯನ್ಮೃಗಯುಂ ಸದೇಹಮ್ ॥ ೧೨ ॥

ಪ್ರಿಯ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಯಮಪುರಕ್ಕೆ ಹೋಗಿ ಗುರುಪುತ್ರರನ್ನು ಮರ್ತ್ಯಶರೀರದಿಂದಲೇ ತಂದನು. ಬ್ರಹ್ಮಾಸ್ತ್ರದಿಂದ ನಿನ್ನ ಶರೀರವು ಸುಟ್ಟುಹೋದಾಗ ಅದನ್ನು ಅವನು ಜೀವಂತವಾಗಿಸಿದನು. ಅವನು ಕಾಲಕ್ಕೂ ಮಹಾಕಾಲನಾದ ಶಂಕರನನ್ನು ಯುದ್ಧದಲ್ಲಿ ಗೆದ್ದುಕೊಂಡನು. ಜರಾವ್ಯಾಧನು ಇಷ್ಟೊಂದು ಭಯಂಕರವಾದ ಅಪರಾಧಮಾಡಿದರೂ, ಅವನ ಅಪರಾಧವನ್ನು ಕ್ಷಮಿಸಿ ಅವನನ್ನು ಸಶರೀರದಿಂದ ಸ್ವರ್ಗಕ್ಕೆ ಕಳಿಸಿಬಿಟ್ಟನು. ಹಾಗಿರುವಾಗ ಸರ್ವಸಮರ್ಥ ಪ್ರಭು ಶ್ರೀಕೃಷ್ಣನು ತನ್ನ ಶರೀರವನ್ನು ಇಲ್ಲಿ ಇರಿಸಲಾರನೇನು? ಅವಶ್ಯವಾಗಿ ಇರಿಸುತ್ತಿದ್ದನು. ಇದರಲ್ಲಿ ಆಶ್ಚರ್ಯವೇನಿದೆ? ॥ ೧೨ ॥

ತಥಾಪ್ಯ ಶೇಷಸ್ಥಿತಿಸಂಭವಾಪ್ಯಯೇ-
ಷ್ವನನ್ಯಹೇತುರ್ಯದಶೇಷಶಕ್ತಿಧೃಕ್ ।

ನೈಚ್ಛತ್ಪ್ರಣೇತುಂ ವಪುರತ್ರ ಶೇಷಿತಂ
ಮರ್ತ್ಯೇನ ಕಿಂ ಸ್ವಪ್ನಗತಿಂ ಪ್ರದರ್ಶಯನ್ ॥ ೧೩ ॥

ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರಗಳ ನಿರಪೇಕ್ಷ ಕಾರಣನಾಗಿದ್ದಾನೆ. ಸಮಸ್ತ ಶಕ್ತಿಗಳನ್ನು ಧರಿಸುವಂತಹವನು. ಹಾಗಿರುವಾಗ ತನ್ನ ಶರೀರವನ್ನು ಇರಿಸುವುದು ಅವನಿಗೆ ಅಶಕ್ಯವಾಗಿತ್ತೆ? ಭಗವಂತನು ಸಮಸ್ತ ಯಾದವರ ಸಂಹಾರವಾದ ಬಳಿಕ ತನ್ನ ಶರೀರವನ್ನು ಇರಿಸಿಕೊಳ್ಳಲು ಇಚ್ಛಿಸಲಿಲ್ಲ. (ಇಷ್ಟೊಂದು ವಿಶಾಲ ದ್ವಾರಕೆಯ ಐಶ್ವರ್ಯದ ಕಡೆಗೆ ಹಾಗೂ ತನ್ನ ಕುಟುಂಬದ ಕಡೆಗೆ ಪೂರ್ಣ ಅನಾಸಕ್ತನಾಗಿ ತನ್ನ ದಿವ್ಯಧಾಮಕ್ಕೆ ಹೊರಟುಹೋದನು.) ಮನುಷ್ಯಶರೀರದ ಮೂಲಕ ಯೋಗಿಯು ಹೇಗೆ ದಿವ್ಯಧಾಮದ ಯಾತ್ರೆ ಮಾಡಬೇಕು? ಈ ಆಚರಣೆಯನ್ನು ಕಲಿಸಲಿಕ್ಕಾಗಿ

ಯ ಏತಾಂ ಪ್ರಾತರುತ್ಥಾಯ ಕೃಷ್ಣಸ್ಯ ಪದವೀಂ ಪರಾಮ್ ।
ಪ್ರಯತಃ ಕೀರ್ತಯೇದ್ಭಕ್ತ್ಯಾ ತಾಮೇವಾಪ್ನೋತ್ಯನುತ್ತಮಾಮ್
॥ ೧೪ ॥

ದಾರುಕೋ ದ್ವಾರಕಾಮೇತ್ಯ ವಸುದೇವೋಗ್ರಸೇನಯೋಃ ।
ಪತಿತ್ವಾ ಚರಣಾವಸ್ರೈರ್ಯ್ಯಷಿಂಚತ್ಕೃಷ್ಣವಿಚ್ಯುತಃ
॥ ೧೫ ॥

ಕಥಯಾಮಾಸ ನಿಧನಂ ವೃಷ್ಣೀನಾಂ ಕೃತ್ಸ್ನಶೋ ನೃಪ ।
ತಚ್ಛ್ರುತ್ವೋದ್ವಿಗ್ನ ಹೃದಯಾ ಜನಾಃ ಶೋಕವಿಮೂರ್ಛಿತಾಃ
॥ ೧೬ ॥

ತತ್ರ ಸ್ಮ ತ್ವರಿತಾ ಜಗ್ಮುಃ ಕೃಷ್ಣವಿಶ್ಲೇಷವಿಹ್ವಲಾಃ ।
ವ್ಯಸವಃ ಶೇರತೇ ಯತ್ರ ಜ್ಞಾತಯೋ ಘ್ನಂತ ಆನನಮ್
॥ ೧೭ ॥

ದೇವಕೀ ರೋಹಿಣೀ ಚೈವ ವಸುದೇವಸ್ತಥಾ ಸುತೌ ।
ಕೃಷ್ಣರಾಮಾವಪಶ್ಯಂತಃ ಶೋಕಾರ್ತಾ ವಿಜಹುಃ ಸ್ಮೃತಿಮ್
॥ ೧೮ ॥

ಪ್ರಾಣಾಂಶ್ಚ ವಿಜಹುಸ್ತತ್ರ ಭಗವದ್ವಿರಹಾತುರಾಃ ।
ಉಪಗುಹ್ಯ ಪತೀಂಸ್ತಾತ ಚಿತಾಮಾರುರುಹುಃ ಸ್ತ್ರಿಯಃ
॥ ೧೯ ॥

ರಾಮಪತ್ನ್ಯಶ್ಚ ತದ್ದೇಹಮುಪಗುಹ್ಯಾಗ್ನಿ ಮಾವಿಶನ್ ।
ವಸುದೇವಪತ್ನ್ಯಸ್ತದ್ಭ್ರಾತ್ರಂ ಪ್ರದ್ಯುಮ್ನಾದೀನ್ಹರೇಃ ಸ್ನುಷಾಃ ।
ಕೃಷ್ಣಪತ್ನ್ಯೋಽವಿಶನ್ನಗ್ನಿಂ ರುಕ್ಮಿಣ್ಯಾದ್ಯಾಸ್ತದಾತ್ಮಿಕಾಃ
॥ ೨೦ ॥

ಅರ್ಜುನಃ ಪ್ರೇಯಸಃ ಸಖ್ಯುಃ ಕೃಷ್ಣಸ್ಯ ವಿರಹಾತುರಃ ।
ಆತ್ಮಾನಂ ಸಾಂತ್ವಯಾಮಾಸ ಕೃಷ್ಣಗೀತೈಃ ಸದುಕ್ತಿಭಿಃ
॥ ೨೧ ॥

ಬಂಧೂನಾಂ ನಷ್ಟಗೋತ್ರಾಣಾಮರ್ಜುನಃ ಸಾಂಪರಾಯಿಕಮ್ ।
ಹತಾನಾಂ ಕಾರಯಾಮಾಸ ಯಥಾವದನುಪೂರ್ವಶಃ
॥ ೨೨ ॥

ದ್ವಾರಕಾಂ ಹರಿಣಾ ತ್ಯಕ್ತಾಂ ಸಮುದ್ರೋಽಪ್ಲಾವಯತ್ ಕ್ಷಣಾತ್ ।
ವರ್ಜಯಿತ್ವಾ ಮಹಾರಾಜ ಶ್ರೀಮದ್ಭಗವದಾಲಯಮ್
॥ ೨೩ ॥

ಭಗವಂತನು ಹೀಗೆ ಮಾಡಿರಬಹುದೇ ? ಅರ್ಥಾತ್ ಯೋಗಿಯು ಸಿದ್ಧಿಗಳ ಮೂಲಕ ತನ್ನ ಶರೀರವನ್ನು ಉಳಿಸಿಕೊಳ್ಳಲು ಹಾಗೂ ಸಂಸಾರದಲ್ಲಿ, ಮನೆಯಲ್ಲಿ, ಕುಟುಂಬದಲ್ಲಿ ರಮಮಾಣನಾಗಲು ಇಚ್ಛಿಸಬಾರದು. ಪೂರ್ಣವಾಗಿ ಅನಾಸಕ್ತನಾಗಿ ತನ್ನ ದಿವ್ಯಧಾಮ (ಪರಮಪದ)ದ ಯಾತ್ರೆಯನ್ನು ಕೈಗೊಳ್ಳಬೇಕು. ॥ ೧೩. ॥ ಪ್ರಾತಃ ಕಾಲ ಎದ್ದು ಭಗವಾನ್ ಶ್ರೀಕೃಷ್ಣನ ಪರಮಧಾಮಗಮನದ ಈ ಕಥೆಯನ್ನು ಏಕಾಗ್ರಚಿತ್ತದಿಂದ, ಭಕ್ತಿಯೊಂದಿಗೆ ಕೀರ್ತಿಸುವವನಿಗೆ ಭಗವಂತನ ಆ ಸರ್ವಶ್ರೇಷ್ಠ ಪರಮಪದ ಪ್ರಾಪ್ತಿಯಾವಾಗುವುದು. ॥ ೧೪ ॥

ಇತ್ತ ದಾರುಕನು ಭಗವಾನ್ ಶ್ರೀಕೃಷ್ಣನ ವಿರಹದಿಂದ ವ್ಯಾಕುಲನಾಗಿ ದ್ವಾರಕೆಗೆ ಬಂದನು ಮತ್ತು ವಸುದೇವನ ಹಾಗೂ ಉಗ್ರಸೇನನ ಚರಣಗಳಲ್ಲಿ ಬಿದ್ದು, ಅವನ್ನು ಕಣ್ಣೀರಿನಿಂದ ತೊಳೆದನು. ॥ ೧೫ ॥ ಪರೀಕ್ಷಿತನೇ ! ಅವನು ತನ್ನನ್ನು ಸಾವರಿಸಿಕೊಂಡು ಯದುವಂಶೀಯರ ವಿನಾಶದ ಎಲ್ಲಾ ವಿವರವನ್ನು ತಿಳಿಸಿದನು. ಅದನ್ನು ಕೇಳಿ ಜನರು ತುಂಬಾ ದುಃಖಿತರಾದರು ಮತ್ತು ಶೋಕದಿಂದ ಮೂರ್ಛಿತರಾದರು. ॥ ೧೬ ॥ ಭಗವಾನ್ ಶ್ರೀಕೃಷ್ಣನ ವಿಯೋಗದಿಂದ ವಿಹ್ವಲರಾಗಿ ಆ ಜನರು ತಲೆಚಚ್ಚಿಕೊಳ್ಳುತ್ತಾ, ಅವರ ಬಂಧು-ಬಾಂಧವರು ನಿಷ್ಪ್ರಾಣರಾಗಿ ಬಿದ್ದಲ್ಲಿಗೆ ಕೂಡಲೇ ತಲುಪಿದರು. ॥ ೧೭ ॥

ದೇವಕಿ, ರೋಹಿಣೀ ಮತ್ತು ವಸುದೇವನು ತಮ್ಮ ಪ್ರಿಯ ಪುತ್ರ ಶ್ರೀಕೃಷ್ಣ-ಬಲರಾಮರನ್ನು ಕಾಣದೆ ಶೋಕದಿಂದ ಪೀಡಿತರಾಗಿ ಎಚ್ಚರತಪ್ಪಿದರು. ॥ ೧೮ ॥ ಅವರು ಭಗವದ್ವಿರಹದಿಂದ ವ್ಯಾಕುಲರಾಗಿ ಅಲ್ಲೇ ತಮ್ಮ ಪ್ರಾಣಗಳನ್ನು ಬಿಟ್ಟು ಬಿಟ್ಟರು. ಸ್ತ್ರೀಯರು ತಮ್ಮ-ತಮ್ಮ ಪತಿಗಳ ಶವಗಳನ್ನು ಗುರುತಿಸಿ, ಅವನ್ನು ಹೃದಯಕ್ಕೆ ಒತ್ತಿಕೊಂಡು, ಅವರೊಂದಿಗೆ ಚಿತೆಯನ್ನೇರಿ ಭಸ್ಮವಾಗಿ ಹೋದರು. ॥ ೧೯ ॥ ಬಲರಾಮನ ಪತ್ನಿಯರು. ಅವನ ಶರೀರವನ್ನು, ವಸುದೇವನ ಪತ್ನಿಯರು ಅವನ ಶವವನ್ನು, ಭಗವಂತನ ಸೊಸೆಯರು ತಮ್ಮ ಪತಿಗಳ ಶವದೊಂದಿಗೆ ಅಗ್ನಿಪ್ರವೇಶ ಮಾಡಿದರು. ರುಕ್ಮಿಣಿಯೇ ಮೊದಲಾದ ಭಗವಾನ್ ಶ್ರೀಕೃಷ್ಣನ ಪಟ್ಟ ಮಹಿಷಿಯರು ಜಗತ್ಪತಿಯ ಧ್ಯಾನದಲ್ಲಿ ಮಗ್ನರಾಗಿ ಅಗ್ನಿಪ್ರವೇಶ ಮಾಡಿದರು. ॥ ೨೦ ॥

ಪರೀಕ್ಷಿತನೇ ! ಅರ್ಜುನನು ತನ್ನ ಪರಮ ಪ್ರಿಯತಮನೂ, ಸಖನೂ ಆದ ಭಗವಾನ್ ಶ್ರೀಕೃಷ್ಣನ ವಿರಹದಿಂದ ಮೊದಲಿಗೆನೋ ಅತ್ಯಂತ ವ್ಯಾಕುಲನಾದನು. ಮತ್ತೆ ಅವನು ಶ್ರೀಕೃಷ್ಣನ ಗೀತೋಕ್ತ ಸದುಪದೇಶಗಳನ್ನು ಸ್ಮರಿಸುತ್ತಾ ತನ್ನ ಮನಸ್ಸನ್ನು ಸಮಾಧಾನಗೊಳಿಸಿದನು. ॥ ೨೧ ॥ ಯದುವಂಶದ ಮೃತ ವ್ಯಕ್ತಿಗಳಲ್ಲಿ ಪಿಂಡ ಕೊಡಲು ಯಾರೂ ಇಲ್ಲದ್ದರಿಂದ ಶ್ರಾದ್ಧಾದಿಗಳನ್ನು ಅರ್ಜುನನೇ ಕ್ರಮವಾಗಿ, ವಿಧಿಪೂರ್ವಕವಾಗಿ ಮಾಡಿಸಿದನು. ॥ ೨೨ ॥ ಮಹಾರಾಜನೇ ! ಭಗವಂತನು ಇಲ್ಲದಿದ್ದಾಗ ಸಮುದ್ರವು ಏಕಮಾತ್ರ ಭಗವಾನ್ ಶ್ರೀಕೃಷ್ಣನ ಅರಮನೆಯನ್ನು ಬಿಟ್ಟು ಒಂದೇ ಕ್ಷಣದಲ್ಲಿ ಇಡೀ ದ್ವಾರಕೆಯನ್ನು ಮುಳುಗಿಸಿಬಿಟ್ಟಿತು. ॥ ೨೩ ॥

ನಿತ್ಯಂ ಸಂನಿಹಿತಸ್ತತ್ರ ಭಗವಾನ್ ಮಧುಸೂದನಃ ।
ಸ್ಮೃತ್ಯಾಶೇಷಾಶುಭಹರಂ ಸರ್ವಮಂಗಲಮಂಗಲಮ್
॥ ೨೪ ॥

ಸ್ತ್ರೀಬಾಲವೃದ್ಧಾನಾದಾಯ ಹತಶೇಷಾನ್ ಧನಂಜಯಃ ।
ಇಂದ್ರಪ್ರಸ್ಥಂ ಸಮಾವೇಶ್ಯ ವಜ್ರಂ ತತ್ರಾಭ್ಯಷೇಚಯತ್
॥ ೨೫ ॥

ಶ್ರುತ್ವಾ ಸುಹೃದ್ವಧಂ ರಾಜನ್ನರ್ಜುನಾತ್ತೇ ಪಿತಾಮಹಾಃ ।
ತ್ವಾಂ ತು ವಂಶಧರಂ ಕೃತ್ವಾಜಗ್ಮುಃ ಸರ್ವೇ ಮಹಾಪಥಮ್
॥ ೨೬ ॥

ಯ ಏತದ್ದೇವದೇವಸ್ಯ ವಿಷ್ಣೋಃ ಕರ್ಮಾಣಿ ಜನ್ಮ ಚ ।
ಕೀರ್ತಯೇಚ್ಛ್ರದ್ಧಯಾ ಮರ್ತ್ಯಃ ಸರ್ವಪಾಪೈಃ ಪ್ರಮುಚ್ಯತೇ
॥ ೨೭ ॥

ಇತ್ಥಂ ಹರೇರ್ಭಗವತೋ ರುಚಿರಾವತಾರ-
ವೀರ್ಯಾಣಿ ಬಾಲಚರಿತಾನಿ ಚ ಶಂತಮಾನಿ ।
ಅನ್ಯತ್ರ ಚೇಹ ಚ ಶ್ರುತಾನಿ ಗೃಣನ್ಮನುಷ್ಯೋ
ಭಕ್ತಿಂ ಪರಾಂ ಪರಮಹಂಸಗತೌ ಲಭೇತ ॥ ೨೮ ॥

ಭಗವಾನ್ ಶ್ರೀಕೃಷ್ಣನು ಅಲ್ಲಿ ಈಗಲೂ ಸದಾ-ಸರ್ವದಾ ವಾಸಿಸುತ್ತಿರುವನು. ಆ ಸ್ಥಾನದ ಸ್ಮರಣೆಮಾತ್ರದಿಂದಲೇ ಎಲ್ಲ ಪಾಪ ತಾಪಗಳು ನಾಶವಾಗಿ, ಎಲ್ಲ ಮಂಗಲಗಳಿಗೂ ಮಂಗಲ ಉಂಟಾಗುವುದು. ॥ ೨೪ ॥ ಪ್ರಿಯ ಪರೀಕ್ಷಿತನೇ! ಪಿಂಡ ದಾನಾದಿಗಳ ಬಳಿಕ ಅಲ್ಲಿ ಉಳಿದಿದ್ದ ಸ್ತ್ರೀಯರೂ, ಬಾಲಕರು, ವೃದ್ಧರೇ ಮುಂತಾದವರನ್ನು ಕರೆದುಕೊಂಡು ಅರ್ಜುನನು ಇಂದ್ರ ಪ್ರಸ್ಥಕ್ಕೆ ಬಂದನು. ಅಲ್ಲಿ ಎಲ್ಲರಿಗೂ ಯಥಾಯೋಗ್ಯ ವಸತಿ ಏರ್ಪಡಿಸಿ ಮಥುರೆಯಲ್ಲಿ ಅನಿರುದ್ಧನ ಪುತ್ರ ವಜ್ರನಾಭನಿಗೆ ರಾಜ್ಯಾಭಿಷೇಕ ಮಾಡಿದನು. ॥ ೨೫ ॥ ರಾಜನೇ! ನಿನ್ನ ಪಿತಾಮಹನಾದ ಯುಧಿಷ್ಠಿರ ಮೊದಲಾದ ಪಾಂಡವರಿಗೆ ಯದುವಂಶೀಯರ ಸಂಹಾರವಾಯಿತು ಎಂಬುದು ಅರ್ಜುನನಿಂದಲೇ ತಿಳಿಯಿತು. ಆಗ ಅವರು ತನ್ನ ವಂಶಧರ ನಿನ್ನನ್ನು ರಾಜ್ಯಕ್ಕೆ ಪಟ್ಟಾಭಿಷೇಕಗೈದು ಹಿಮಾಲಯದ ವೀರಯಾತ್ರೆಯನ್ನು ಕೈಗೊಂಡರು. ॥ ೨೬ ॥

ನಾನು ನಿನಗೆ ದೇವತೆಗಳಿಗೂ ಆರಾಧ್ಯನಾದ ಭಗವಾನ್ ಶ್ರೀಕೃಷ್ಣನ ಜನ್ಮಲೀಲೆ ಮತ್ತು ಕರ್ಮಲೀಲೆಗಳನ್ನು ಹೇಳಿದೆ. ಶ್ರದ್ಧೆಯಿಂದೊಡಗೂಡಿ ಇದನ್ನು ಕೀರ್ತಿಸುವ ಮನುಷ್ಯನು ಸಮಸ್ತ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ. ॥ ೨೭ ॥ ಪರೀಕ್ಷಿತನೇ! ಈ ಪ್ರಕಾರ ಭಕ್ತಭಯಹಾರಿ ನಿಖಿಲ ಸೌಂದರ್ಯ-ಮಾಧುರ್ಯ ನಿಧಿ ಶ್ರೀಕೃಷ್ಣಚಂದ್ರನ ಅವತಾರ ಸಂಬಂಧೀ ರುಚಿರ ಪರಾಕ್ರಮ ಮತ್ತು ಈ ಶ್ರೀಮದ್ಭಾಗವತಮಹಾಪುರಾಣದಲ್ಲಿ ಹಾಗೂ ಬೇರೆ ಪುರಾಣಗಳಲ್ಲಿ ವರ್ಣಿತ ಪರಮಾನಂದಮಯ ಬಾಲಲೀಲೆ, ಕೈಶೋರಲೀಲೆ ಮುಂತಾದವುಗಳನ್ನು ಸಂಕೀರ್ತನೆ ಮಾಡುವ ಮನುಷ್ಯನಿಗೆ ಪರಮಹಂಸ ಮುನೀಂದ್ರರ ಅಂತಿಮ ಪ್ರಾಪ್ತವ್ಯವಾದ ಶ್ರೀಕೃಷ್ಣನ ಚರಣಗಳಲ್ಲಿ ಪರಾಭಕ್ತಿಯು ಪ್ರಾಪ್ತವಾಗುತ್ತದೆ.॥ ೨೮ ॥

ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕತ್ರಿಂಶೋಽಧ್ಯಾಯಃ ॥ ೩೧ ॥

ಹನ್ನೊಂದನೆಯ ಸ್ಕಂಧವು ಸಂಪೂರ್ಣವಾಯಿತು.

ಹರಿಃಓಂ ತತ್ಸತ್ - ಹರಿಃಓಂ ತತ್ಸತ್

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದ್ವಾದಶಃ ಸ್ಕಂಧಃ

ಮೊದಲನೆಯ ಅಧ್ಯಾಯ

ಕಲಿಯುಗದ ರಾಜವಂಶಗಳ ವರ್ಣನೆ

ರಾಜೋವಾಚ

ಸ್ವಧಾಮಾನುಗತೇ ಕೃಷ್ಣೇ ಯದುವಂಶವಿಭೂಷಣೇ ।
ಕಸ್ಯ ವಂಶೋಽಭವತ್ಪ್ರಥ್ಯಾಮೇತದಾಚಕ್ಷ್ವ ಮೇ ಮುನೇ
॥ ೧ ॥

ಶ್ರೀಶುಕ ಉವಾಚ

ಯೋಽನ್ತ್ಯಃ ಪುರಂಜಯೋ ನಾಮ ಭಾವ್ಯೋ ಬಾರ್ಹದ್ರಥೋ ನೃಪ ।
ತಸ್ಯಾಮಾತ್ಯಸ್ತು ಶುನಕೋ ಹತ್ವಾ ಸ್ವಾಮಿನಮಾತ್ಮಜಮ್
॥ ೨ ॥

ಪ್ರದ್ಯೋತಸಂಜ್ಞಂ ರಾಜಾನಂ ಕರ್ತಾ ಯತ್ಪಾಲಕಃ ಸುತಃ ।
ವಿಶಾಖಯೂಪಸ್ತತ್ಪುತ್ರೋ ಭವಿತಾ ರಾಜಕಸ್ತತಃ
॥ ೩ ॥

ನಂದಿವರ್ಧನಸ್ತತ್ಪುತ್ರಃ ಪಂಚ ಪ್ರದ್ಯೋತನಾ ಇಮೇ ।
ಅಷ್ಟತ್ರಿಂಶೋತ್ತರಶತಂ ಭೋಕ್ಷ್ಯಂತಿ ಪೃಥಿವೀಂ ನೃಪಾಃ
॥ ೪ ॥

ಶಿಶುನಾಗಸ್ತತೋ ಭಾವ್ಯಃ ಕಾಕವರ್ಣಸ್ತು ತತ್ಸುತಃ ।
ಕ್ಷೇಮಧರ್ಮಾ ತಸ್ಯ ಸುತಃ ಕ್ಷೇತ್ರಜ್ಞಃ ಕ್ಷೇಮಧರ್ಮಜಃ
॥ ೫ ॥

ವಿಧಿಸಾರಃ ಸುತಸ್ತಸ್ಯಾಜಾತಶತ್ರುರ್ಭವಿಷ್ಯತಿ ।
ದರ್ಭಕಸ್ತತ್ಸುತೋ ಭಾವೀ ದರ್ಭಕಸ್ಯಾಜಯಃ ಸ್ಮೃತಃ
॥ ೬ ॥

ನಂದಿವರ್ಧನ ಆಜೇಯೋ ಮಹಾನಂದಿಃ ಸುತಸ್ತತಃ ।
ಶಿಶುನಾಗಾ ದಶೈವೈತೇ ಷಷ್ಟ್ಯುತ್ತರಶತತ್ರಯಮ್
॥ ೭ ॥

ಸಮಾ ಭೋಕ್ಷ್ಯಂತಿ ಪೃಥಿವೀಂ ಕುರುಶ್ರೇಷ್ಠ ಕಲೌ ನೃಪಾಃ ।
ಮಹಾನಂದಿಸುತೋ ರಾಜನ್ ಶೂದ್ರೀಗರ್ಭೋದ್ಭವೋ ಬಲೀ
॥ ೮ ॥

ಮಹಾಪದ್ಮಪತಿಃ ಕಶ್ಚಿನ್ನಂದಃ ಕ್ಷತ್ರವಿನಾಶಕೃತ್ ।
ತತೋ ನೃಪಾ ಭವಿಷ್ಯಂತಿ ಶೂದ್ರಪ್ರಾಯಾಸ್ತ್ವಧಾರ್ಮಿಕಾಃ
॥ ೯ ॥

ಪರೀಕ್ಷಿದ್ರಾಜನು ಕೇಳಿದನು – ಮಹಾಮುನಿಗಳೇ ! ಯದುವಂಶ ಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಸ್ವಧಾಮಕ್ಕೆ ತೆರಳಿದ ಬಳಿಕ ಈ ಭೂಮಿಯಲ್ಲಿ ಯಾವ ರಾಜವಂಶದವರು ರಾಜ್ಯವಾಳಿದರು ? ಈಗ ಯಾರು ಆಳುತ್ತಿರುವರು ? ತಾವು ದಯಮಾಡಿ ತಿಳಿಸಿರಿ. ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ ! ಜರಾಸಂಧನ ತಂದೆಯಾದ ಬೃಹದ್ರಥನ ವಂಶದಲ್ಲಿ ಪುರಂಜಯ ಅಥವಾ ರಿಪುಂಜಯ ಎನ್ನುವವನು ಕಡೆಯ ರಾಜನಾಗುವನು ಎಂದು ನಾನು ಹಿಂದೆ ಒಂಭತ್ತನೇ ಸ್ಕಂಧದಲ್ಲಿ ತಿಳಿಸಿದ್ದೆ. ಅವನಿಗೆ ಶುನಕನೆಂಬ ಮಂತ್ರಿಯಾಗುವನು. ಅವನು ತನ್ನ ಒಡೆಯನನ್ನು ಕೊಂದು ತನ್ನ ಪುತ್ರನಾದ ಪ್ರದ್ಯೋತನನ್ನು ಸಿಂಹಾಸನದಲ್ಲಿ ಕೂರಿಸುವನು. ಪ್ರದ್ಯೋತನಿಗೆ ಪಾಲಕನೆಂಬ ಪುತ್ರನೂ, ಪಾಲಕನಿಗೆ ವಿಶಾಖಯೂಪನೂ, ವಿಶಾಖಯೂಪನಿಗೆ ರಾಜಕ ಹಾಗೂ ರಾಜಕನಿಗೆ ನಂದಿವರ್ಧನನೆಂಬ ಪುತ್ರನು ಹುಟ್ಟುವನು. ಪ್ರದ್ಯೋತವಂಶದಲ್ಲಿ ಇವರೇ ಐದು ಮಂದಿ ರಾಜರಾಗುವರು. ಇವರೆಲ್ಲರೂ ಪ್ರದ್ಯೋತರೆಂದೇ ಕರೆಸಿಕೊಳ್ಳುವರು. ಇವರು ನೂರು ಮೂವತ್ತೆಂಟು ವರ್ಷಗಳವರೆಗೆ ಧರೆಯ ರಾಜತ್ವವನ್ನು ಅನುಭವಿಸುವರು. ॥ ೨-೪ ॥

ಆನಂತರ ಶಿಶುನಾಗನೆಂಬುವನು ರಾಜನಾಗುವನು. ಅವನ ಪುತ್ರನು ಕಾಕವರ್ಣ, ಅವನಿಗೆ ಕ್ಷೇಮಧರ್ಮನೆಂಬ ಪುತ್ರನೂ, ಅವನಿಗೆ ಕ್ಷೇತ್ರಜ್ಞನೆಂಬ ಪುತ್ರನು ಹುಟ್ಟುವನು. ॥ ೫ ॥ ಕ್ಷೇತ್ರಜ್ಞನಿಗೆ ವಿಧಿಸಾರನೂ, ಅವನಿಗೆ ಅಜಾತಶತ್ರುವೂ, ಅಜಾತಶತ್ರುವಿಗೆ ದರ್ಭಕನೂ, ಅವನಿಗೆ ಅಜಯನೆಂಬ ಪುತ್ರ ಜನಿಸುವನು. ॥ ೬ ॥ ಅಜಯನಿಂದ ನಂದಿವರ್ಧನನೂ, ಅವನಿಂದ ಮಹಾನಂದಿಯು ಹುಟ್ಟುವನು. ಈ ಶಿಶುನಾಗವಂಶದಲ್ಲಿ ಈ ಹತ್ತು ರಾಜರು ಕಲಿಯುಗದಲ್ಲಿ ಮುನ್ನೂರ ಅರವತ್ತು ವರ್ಷಗಳವರೆಗೆ ಭೂಮಿಯಲ್ಲಿ ರಾಜ್ಯವಾಳುವರು. ಮಹಾನಂದಿಯ ಶೂದ್ರಪತ್ನಿಯಲ್ಲಿ ನಂದನೆಂಬ ಪುತ್ರನು ಹುಟ್ಟುವನು. ಈ ಮಹಾಬಲಿಷ್ಠನಾದ ನಂದನು ಮಹಾಪದ್ಮವೆಂಬ ನಿಧಿಗೆ ಅಧಿಕಾರಿಯಾಗುವನು. ಅದರಿಂದ ಜನರು ಇವನಿಗೆ 'ಮಹಾಪದ್ಮ' ಎಂದೂ ಹೇಳುವರು. ಈತನು ಕ್ಷತ್ರಿಯರಾಜರ ನಾಶಕ್ಕೆ ಕಾರಣನಾಗುವನು. ಆಲ್ಲಿಂದ ಮುಂದಿನ ರಾಜರು ಪ್ರಾಯಶಃ ಶೂದ್ರರೂ, ಅಧಾರ್ಮಿಕರೇ ಆಗುವರು. ॥ ೭-೯ ॥

ಸ ಏಕಚ್ಛತ್ರಾಂ ಪೃಥಿವೀಮನುಲ್ಲಂಘಿತಶಾಸನಃ ।
ಶಾಸಿಷ್ಯತಿ ಮಹಾಪದ್ಮೋ ದ್ವಿತೀಯ ಇವ ಭಾರ್ಗವಃ
॥ ೧೦ ॥

ತಸ್ಯ ಚಾಷ್ಟೌ ಭವಿಷ್ಯಂತಿ ಸುಮಾಲ್ಯಪ್ರಮುಖಾಃ ಸುತಾಃ ।
ಯ ಇಮಾಂ ಭೋಕ್ಷ್ಯಂತಿ ಮಹೀಂ ರಾಜಾನಃ ಶತಂ ಸಮಾಃ
॥ ೧೧ ॥

ನವ ನಂದಾನ್ ದ್ವಿಜಃ ಕಶ್ಚಿತ್ತತ್ಪ್ರಸೂನಾನುದ್ಧರಿಷ್ಯತಿ ।
ತೇಷಾಮಭಾವೇ ಜಗತೀಂ ಮೌರ್ಯಾ ಭೋಕ್ಷ್ಯಂತಿ ವೈ ಕಲೌ
॥ ೧೨ ॥

ಸ ಏವ ಚಂದ್ರಗುಪ್ತಂ ವೈ ದ್ವಿಜೋ ರಾಜ್ಯೇಽಭಿಷೇಕ್ಷ್ಯತಿ ।
ತತ್ಸುತೋ ವಾರಿಸಾರಸ್ತು ತತಶ್ಚಾಶೋಕವರ್ಧನಃ
॥ ೧೩ ॥

ಸುಯಶಾ ಭವಿತಾ ತಸ್ಯ ಸಂಗತಃ ಸುಯತಃಸುತಃ ।
ಶಾಲಿಶೂಕಸ್ತತಸ್ತಸ್ಯ ಸೋಮಶರ್ಮಾ ಭವಿಷ್ಯತಿ
॥ ೧೪ ॥

ಶತಧನ್ವಾ ತತಸ್ತಸ್ಯ ಭವಿತಾ ತದ್ಬೃಹದ್ರಥಃ ।
ಮೌರ್ಯಾ ಹ್ಯೇತೇ ದಶ ನೃಪಾಃ ಸಪ್ತತ್ರಿಂಶಚ್ಛತೋತ್ತರಮ್ ।
ಸಮಾ ಭೋಕ್ಷ್ಯಂತಿ ಪೃಥಿವೀಂ ಕಲೌ ಕುರುಕುಲೋದ್ವಹ
॥ ೧೫ ॥

ಹತ್ವಾ ಬೃಹದ್ರಥಂ ಮೌರ್ಯಂ ತಸ್ಯ ಸೇನಾಪತಿಃ ಕಲೌ ।
ಪುಷ್ಯಮಿತ್ರಸ್ತು ಶುಂಗಾಹ್ವಃ ಸ್ವಯಂ ರಾಜ್ಯಂ ಕರಿಷ್ಯತಿ ।
ಅಗ್ನಿಮಿತ್ರಸ್ತತಸ್ತಸ್ಮಾತ್ ಸುಜ್ಯೇಷ್ಠೋಽಥ ಭವಿಷ್ಯತಿ
॥ ೧೬ ॥

ವಸುಮಿತ್ರೋ ಭದ್ರಕಶ್ಚ ಪುಲಿಂದೋ ಭವಿತಾ ತತಃ ।
ತತೋ ಘೋಷಃ ಸುತಸ್ತಸ್ಮಾದ್ವಜ್ರಮಿತ್ರೋ ಭವಿಷ್ಯತಿ
॥ ೧೭ ॥

ತತೋ ಭಾಗವತಸ್ತಸ್ಮಾದ್ದೇವಭೂತಿರಿತಿ ಶ್ರುತಃ ।
ಶುಂಗಾ ದಶೈತೇ ಭೋಕ್ಷ್ಯಂತಿ ಭೂಮಿಂ ವರ್ಷಶತಾಧಿಕಮ್
॥ ೧೮ ॥

ತತಃ ಕಣ್ವಾನಿಯಂ ಭೂಮಿರ್ಯಾಸ್ಯತ್ಯಲ್ಪಗುಣಾನ್ನೃಪ ।
ಶುಂಗಂ ಹತ್ವಾ ದೇವಭೂತಿಂ ಕಣ್ವೋಽಮಾತ್ಯಸ್ತು ಕಾಮಿನಮ್
॥ ೧೯ ॥

ಸ್ವಯಂ ಕರಿಷ್ಯತೇ ರಾಜ್ಯಂ ವಸುದೇವೋ ಮಹಾಮತಿಃ ।
ತಸ್ಯ ಪುತ್ರಸ್ತು ಭೂಮಿತ್ರಸ್ತಸ್ಯ ನಾರಾಯಣಃ ಸುತಃ ।
ನಾರಾಯಣಸ್ಯ ಭವಿತಾ ಸುಶರ್ಮಾ ನಾಮ ವಿಶ್ರುತಃ
॥ ೨೦ ॥

ಮಹಾಪದ್ಮನು ಭೂಮಿಯಲ್ಲಿ ಏಕಚ್ಛತ್ರಾಧಿಪತಿಯಾಗುವನು. ಅವನ ಶಾಸನವನ್ನು ಯಾರೂ ಮೀರಲಾರರು. ಕ್ಷತ್ರಿಯರ ವಿನಾಶಕ್ಕೆ ಕಾರಣವಾದ ಇವನು ಇನ್ನೊಬ್ಬ ಪರಶುರಾಮನೆಂದೇ ತಿಳಿಯಬೇಕು. ॥ ೧೦ ॥ ಇವನಿಗೆ ಸುಮಾಲ್ಯರೇ ಮೊದಲಾದ ಎಂಟು ಮಂದಿ ಪುತ್ರರಾಗುವರು. ಅವರೆಲ್ಲರೂ ರಾಜರಾಗಿ ನೂರುವರ್ಷಗಳ ಕಾಲ ಭೂಮಿಯನ್ನು ಅನುಭವಿಸುವರು. ॥ ೧೧ ॥ ಕೌಟಿಲ್ಯ ವಾತ್ಸ್ಯಾಯನ ಅಥವಾ ಚಾಣಕ್ಯನೆಂದು ಪ್ರಸಿದ್ಧನಾದ ಒಬ್ಬ ಬ್ರಾಹ್ಮಣನು ವಿಶ್ವವಿಖ್ಯಾತ ನಂದ ಮತ್ತು ಅವನ ಸಮಾಲ್ಯರೇ ಮುಂತಾದ ಎಂಟು ಪುತ್ರರನ್ನು ನಾಶಮಾಡುವನು. ಅವರು ಅಳಿದುಹೋದಮೇಲೆ ಕಲಿಯುಗದಲ್ಲಿ ಮೌರ್ಯವಂಶದ ರಾಜರು ಭೂಮಿಯನ್ನು ಆಳುವರು. ॥ ೧೨ ॥ ಚಾಣಕ್ಯನು ಮೊಟ್ಟ ಮೊದಲಿಗೆ ಚಂದ್ರಗುಪ್ತ ಮೌರ್ಯನನ್ನು ರಾಜನಾಗಿ ಪಟ್ಟಾಭಿಷೇಕ ಮಾಡುವನು. ಚಂದ್ರಗುಪ್ತನ ಪುತ್ರ ವಾರಿಸಾರನಾಗುವನು ಮತ್ತು ವಾರಿಸಾರನಿಗೆ ಅಶೋಕ ವರ್ಧನನು ಜನಿಸುವನು. ॥ ೧೩. ॥ ಅಶೋಕವರ್ಧನನಿಗೆ ಸುಯಶನೆಂಬ ಪುತ್ರನಾಗುವನು. ಅವನಿಗೆ ಸಂಗತ, ಸಂಗತನಿಗೆ ಶಾಲಿಶೂಕ ಮತ್ತು ಶಾಲಿಶೂಕನಿಗೆ ಸೋಮ ಶರ್ಮಾ ಆಗುವನು. ॥ ೧೪ ॥ ಸೋಮಶರ್ಮನಿಗೆ ಶತಧನ್ವಾ, ಶತಧನ್ವನಿಗೆ ಬೃಹದ್ರಥ ಪುತ್ರನಾಗುವನು. ಕುರುವಂಶ ವಿಭೂಷಿತ ಪರೀಕ್ಷಿತನೇ ! ಮೌರ್ಯವಂಶದ ಈ ಹತ್ತು ಮಂದಿ* ರಾಜರು ಕಲಿಯುಗದಲ್ಲಿ ಒಂದುನೂರ ಮೂವತ್ತೇಳು ವರ್ಷಗಳ ಕಾಲ ರಾಜ್ಯವನ್ನಾಳುವರು. ಬೃಹದ್ರಥನಿಗೆ ಪುಷ್ಯಮಿತ್ರಶುಂಗನೆಂಬುವನು ಸೇನಾಪತಿ. ಅವನು ತನ್ನ ಒಡೆಯನನ್ನು ಕೊಂದು ತಾನೇ ರಾಜನಾಗುವನು. ಪುಷ್ಯಮಿತ್ರನಿಗೆ ಅಗ್ನಿಮಿತ್ರ ಹಾಗೂ ಅಗ್ನಿಮಿತ್ರನಿಗೆ ಸುಜ್ಯೇಷ್ಠನಾಗುವನು. ॥ ೧೫-೧೬ ॥ ಸುಜ್ಯೇಷ್ಠನಿಗೆ ವಸುಮಿತ್ರ, ವಸುಮಿತ್ರನಿಗೆ ಭದ್ರಕ ಮತ್ತು ಭದ್ರಕನಿಗೆ ಪುಲಿಂದ, ಪುಲಿಂದಕನಿಗೆ ಘೋಷ, ಘೋಷನಿಗೆ ವಜ್ರಮಿತ್ರನು ಮಗನಾಗುವನು. ॥ ೧೭ ॥ ವಜ್ರಮಿತ್ರನಿಗೆ ಭಾಗವತ, ಭಾಗವತನ ಪುತ್ರ ದೇವಭೂತಿ ಎಂಬುವನು. ಶುಂಗವಂಶದ ಈ ಹತ್ತುಮಂದಿ ರಾಜರು ನೂರಹನ್ನೆರಡು ವರ್ಷಗಳವರೆಗೆ ಪೃಥ್ವಿಯನ್ನು ಪಾಲಿಸುವರು. ॥ ೧೮ ॥

ಪರೀಕ್ಷಿತನೇ ! ಶುಂಗವಂಶೀಯರಾಜರ ತರುವಾಯ ಈ ಭೂಮಿಯನ್ನು ಕಣ್ವವಂಶೀಯ ರಾಜರು ಆಳುವರು. ಇವರು ತಮ್ಮ ಹಿಂದಿನ ರಾಜರಿಗಿಂತ ಗುಣಮಟ್ಟದಲ್ಲಿ ಅಲ್ಪರಾಗುವರು. ಶುಂಗ ವಂಶದ ಕೊನೆಯ ರಾಜನಾದ ದೇವಭೂತಿಯು ಅತ್ಯಂತ ವಿಷಯಲಂಪಟನಾಗುವನು. ಅವನನ್ನು ಕೊಂದು ಮಹಾಮತಿಯಾದ ಮಂತ್ರಿ ಕಣ್ವವಂಶೀಯ ವಸುದೇವನು ರಾಜ್ಯವನ್ನು ಪಡೆಯುವನು. ಆ ವಸುದೇವನಿಗೆ ಭೂಮಿತ್ರನೂ, ಭೂಮಿತ್ರನಿಗೆ ನಾರಾಯಣನೆಂಬುವನೂ, ಅವನಿಗೆ ಅತ್ಯಂತ ಯಶಸ್ವಿಯಾದ ಸುಶರ್ಮಾ ಎಂಬ ಪುತ್ರನಾಗುವನು. ॥ ೧೯-೨೦ ॥ ಕಣ್ವವಂಶದ ಈ ನಾಲ್ವರು

* ಮೌರ್ಯರಾಜರ ಸಂಖ್ಯೆ ಚಂದ್ರಗುಪ್ತನನ್ನು ಸೇರಿಸಿ ಒಂಭತ್ತೇ ಆಗುವುದು. ಆದರೆ ವಿಷ್ಣುಪುರಾಣಾದಿಗಳಲ್ಲಿ ಚಂದ್ರಗುಪ್ತನಿಂದ ಐದನೆಯವನಾದ ದಶರಥ ಎಂಬ ಮೌರ್ಯವಂಶೀರಾಜನ ಉಲ್ಲೇಖ ದೊರೆಯುತ್ತದೆ. ಅವನನ್ನು ಸೇರಿಸಿ ಇಲ್ಲಿ ಹತ್ತುಮಂದಿ ಎಂದು ತಿಳಿಯಬೇಕು.

ಕಾಣ್ವಾಯನಾ ಇಮೇ ಭೂಮಿಂ ಚತ್ವಾರಿಂಶಚ್ಚ ಪಂಚ ಚ ।
ಶತಾನಿ ತ್ರೀಣಿ ಭೋಕ್ಷ್ಯಂತಿ ವರ್ಷಾಣಾಂ ಚ ಕಲೌ ಯುಗೇ
॥ ೨೧ ॥

ಹತ್ವಾ ಕಾಣ್ವಂ ಸುಶರ್ಮಾಣಂ ತದ್ಭೃತ್ಯೋ ವೃಷಲೋ ಬಲೀ ।
ಗಾಂ ಭೋಕ್ಷ್ಯತ್ಯಂಧ್ರ ಜಾತೀಯಃ ಕಂಚಿತ್ಕಾಲಮಸತ್ತಮಃ
॥ ೨೨ ॥

ಕೃಷ್ಣನಾಮಾಥ ತದ್ಭ್ರಾತಾ ಭವಿತಾ ಪೃಥಿವೀಪತಿಃ ।
ಶ್ರೀಶಾಂತಕರ್ಣಸ್ತತ್ಪುತ್ರಃ ಪೌರ್ಣಮಾಸಸ್ತು ತತ್ಸುತಃ
॥ ೨೩ ॥

ಲಂಬೋದರಸ್ತು ತತ್ಪುತ್ರಸ್ತಸ್ಮಾಚ್ಚಿಬಿಲಕೋ ನೃಪಃ ।
ಮೇಘಸ್ವಾತಿಶ್ಚಿಬಿಲಕಾದಟಮಾನಸ್ತು ತಸ್ಯ ಚ
॥ ೨೪ ॥

ಅನಿಷ್ಟಕರ್ಮಾ ಹಾಲೇಯಸ್ತಲಕಸ್ತಸ್ಯ ಚಾತ್ಮಜಃ ।
ಪುರೀಷಭೀರುಸ್ತತ್ಪುತ್ರಸ್ತತೋ ರಾಜಾ ಸುನಂದನಃ
॥ ೨೫ ॥

ಚಕೋರೋ ಬಹವೋ ಯತ್ರ ಶಿವಸ್ವಾತಿರರಿಂದಮಃ ।
ತಸ್ಯಾಪಿ ಗೋಮತೀಪುತ್ರಃ ಪುರೀಮಾನ್ಭವಿತಾ ತತಃ
॥ ೨೬ ॥

ಮೇದಃಶಿರಾಃ ಶಿವಸ್ಕಂಧೋ ಯಜ್ಞಶ್ರೀಸ್ತತ್ಸುತಸ್ತತಃ ।
ವಿಜಯಸ್ತತ್ಸುತೋ ಭಾವ್ಯಶ್ಚಂದ್ರವಿಜ್ಞಃ ಸಲೋಮಧಿಃ
॥ ೨೭ ॥

ಏತೇ ತ್ರಿಂಶನ್ನೃಪತಯಶ್ಚತ್ವಾರ್ಯಬ್ದಶತಾನಿ ಚ ।
ಷಟ್ಪಂಚಾಶಚ್ಚ ಪೃಥಿವೀಂ ಭೋಕ್ಷ್ಯಂತಿ ಕುರುನಂದನ
॥ ೨೮ ॥

ಸಪ್ತಾಭೀರಾ ಆವಭೃತ್ಯಾ ದಶ ಗರ್ದಭಿನೋ ನೃಪಾಃ ।
ಕಂಕಾಃ ಷೋಡಶ ಭೂಪಾಲಾ ಭವಿಷ್ಯಂತ್ಯತಿಲೋಲುಪಾಃ
॥ ೨೯ ॥

ತತೋಽಷ್ಟೌ ಯವನಾ ಭಾವ್ಯಾಶ್ಚತುರ್ದಶ ತುರುಷ್ಕಕಾಃ ।
ಭೂಯೋ ದಶ ಗುರುಂಡಾಶ್ಚ ಮೌನಾ ಏಕಾದಶೈವ ತು
॥ ೩೦ ॥

ಏತೇ ಭೋಕ್ಷ್ಯಂತಿ ಪೃಥಿವೀಂ ದಶವರ್ಷಶತಾನಿ ಚ ।
ನವಾಧಿಕಾಂ ಚ ನವತಿಂ ಮೌನಾ ಏಕಾದಶ ಕ್ಷಿತಿಮ್
॥ ೩೧ ॥

ಭೋಕ್ಷ್ಯಂತ್ಯಬ್ದಶತಾನ್ಯಂಗ ತ್ರೀಣಿ ತೈಃ ಸಂಸ್ಥಿತೇ ತತಃ ।
ಕಿಲಕಿಲಾಯಾಂ ನೃಪತಯೋ ಭೂತನಂದೋಽಥ ವಂಗಿರಿಃ
॥ ೩೨ ॥

ಶಿಶುನಂದಿಶ್ಚ ತದ್ ಭ್ರಾತಾ ಯಶೋನಂದಿಃ ಪ್ರವೀರಕಃ ।
ಇತ್ಯೇತೇ ವೈ ವರ್ಷಶತಂ ಭವಿಷ್ಯಂತ್ಯಧಿಕಾನಿ ಷಟ್
॥ ೩೩ ॥

ತೇಷಾಂ ತ್ರಯೋದಶ ಸುತಾ ಭವಿತಾರಶ್ಚ ಬಾಹ್ಲಿಕಾಃ ।
ಪುಷ್ಯಮಿತ್ರೋಽಥ ರಾಜನ್ಯೋ ದುರ್ಮಿತ್ರೋಽಸ್ಯ ತಥೈವ ಚ
॥ ೩೪ ॥

ಕಾಣ್ವಾಯನರೆಂದು ಖ್ಯಾತರಾಗಿ ಕಲಿಯುಗದ ಮೂನ್ನೂರ ನಲವತ್ತೈದು ವರ್ಷಗಳವರೆಗೆ ಭೂಮಿಯನ್ನು ಆಳುವರು. ॥ ೨೧ ॥ ಪ್ರಿಯ ಪರೀಕ್ಷಿತನೇ! ಕಣ್ವವಂಶೀ ಸುಶರ್ಮನಿಗೆ ಬಲಿ ಎಂಬ ಶೂದ್ರ ಸೇವಕನಿರುವನು. ಅವನು ಆಂಧ್ರಜಾತಿಯವನಾಗಿದ್ದು ಬಹಳ ದುಷ್ಟನಾಗಿದ್ದನು. ಅವನು ಸುಶರ್ಮನನ್ನು ಕೊಂದು ಕೆಲವು ಕಾಲ ತಾನೇ ರಾಜನಾಗುವನು. ॥ ೨೨ ॥ ಅನಂತರ ಅವನ ತಮ್ಮ ಕೃಷ್ಣ ನೆಂಬುವನು ರಾಜನಾಗುವನು. ಕೃಷ್ಣನ ಪುತ್ರ ಶ್ರೀಶಾಂತಕರ್ಣನು. ಅವನಿಗೆ ಪೌರ್ಣಮಾಸ ಪುತ್ರನಾಗುವನು. ॥ ೨೩. ॥ ಪೌರ್ಣಮಾಸನಿಗೆ ಲಂಬೋದರ, ಲಂಬೋದರನಿಗೆ ಚಿಬಿಲಕ, ಚಿಬಿಲಕನಿಗೆ ಮೇಘಸ್ವಾತಿ, ಮೇಘಸ್ವಾತಿಯಿಂದ ಅಟಮಾನೂ, ಅವನಿಗೆ ಅನಿಷ್ಟಕರ್ಮನೂ, ಅನಿಷ್ಟಕರ್ಮನಿಂದ ಹಾಲೇಯ, ಅವನಿಂದ ತಲಕ, ತಲಕನಿಂದ ಪುರೀಷಭೀರು. ಪುರೀಷಭೀರುವಿಗೆ ರಾಜಾಸುನಂದನು ಪುತ್ರನಾಗುವನು. ॥ ೨೪-೨೫ ॥ ಪರೀಕ್ಷಿತನೇ! ಸುನಂದನಿಗೆ ಚಕೋರ, ಚಕೋರನಿಗೆ ಎಂಟು ಮಂದಿ ಪುತ್ರರಾಗುವರು. ಅವರು 'ಬಹು' ಎಂದು ಹೇಳಲ್ಪಡುವರು. ಇವರೆಲ್ಲರಲ್ಲಿ ಕಿರಿಯವನಾದ ಅತ್ಯಂತ ವೀರನೂ, ಶತ್ರುಗಳನ್ನು ದಮನ ಮಾಡುವವನೂ ಆದ ಶಿವಸ್ವಾತಿಗೆ ಗೋಮತಿಪುತ್ರನೆಂಬುವನೂ, ಅವನಿಗೆ ಪುರೀಮಂತ ಎಂಬ ಪುತ್ರನಾಗುವನು. ॥ ೨೬ ॥ ಪುರೀಮಂತನಿಗೆ ಮೇದಶ್ಶಿರ, ಮೇದಶ್ಶಿರನಿಗೆ ಶಿವಸ್ಕಂಧನೂ, ಶಿವಸ್ಕಂಧನಿಗೆ ಯಜ್ಞಶ್ರೀಯು, ಅವನಿಗೆ ವಿಜಯನೂ, ವಿಜಯನಿಗೆ ಚಂದ್ರವಿಜ್ಞ ಮತ್ತು ಲೋಮಧಿ ಎಂಬ ಇಬ್ಬರು ಪುತ್ರರಾಗುವರು. ॥ ೨೭ ॥ ಪರೀಕ್ಷಿತನೇ! ಈ ಮೂವತ್ತುಮಂದಿ ರಾಜರು ನಾಲ್ಕುನೂರು ಐವತ್ತಾರು ವರ್ಷಗಳವರೆಗೆ ಪೃಥಿವಿಯ ಆಳ್ವಿಕೆಯನ್ನು ಅನುಭವಿಸುವರು. ॥ ೨೮ ॥

ಇವರ ನಂತರ ಆವಭೃತಿನಗರದ ಏಳು ಮಂದಿ ಆಭೀರ ರಾಜರೂ, ಹತ್ತುಮಂದಿ ಗರ್ದಭಿರಾಜರೂ, ಹದಿನಾರು ಕಂಕರೆಂಬರಾಜರೂ ಭೂಮಿಯನ್ನಾಳುವರು. ಇವರೆಲ್ಲರೂ ಕಡು ಲೋಭಿಗಳಾಗುವರು. ॥ ೨೯ ॥ ಇವರಾದ ಮೇಲೆ ಎಂಟುಮಂದಿ ಯವನರೂ, ಹದಿನಾಲ್ಕು ಮಂದಿ ತುರ್ಕರೂ ರಾಜ್ಯವಾಳುವರು. ಮತ್ತೆ ಹತ್ತು ಮಂದಿ ಗುರುಂಡರೂ, ಹನ್ನೊಂದು ಮಂದಿ ಮೌನರೂ ನರಪತಿಗಳಾಗುವರು. ॥ ೩೦॥ ಮೌನರಲ್ಲದೆ ಇವರೆಲ್ಲರೂ ಒಂದು ಸಾವಿರದ ತೊಂಭತ್ತೊಂಭತ್ತು ವರ್ಷಗಳು ಭೂಮಿಯನ್ನಾಳುವರು. ಹನ್ನೊಂದು ಮಂದಿ ಮೌನರು ಮುನ್ನೂರು ವರ್ಷಗಳವರೆಗೆ ಪೃಥಿವಿಯನ್ನು ಆಳುವರು. ಇವರ ಆಳ್ವಿಕೆಯು ಮುಗಿದುಹೋದಾಗ ಕಿಲಕಿಲಾ ಎಂಬ ನಗರದಲ್ಲಿ ಭೂತನಂದನೆಂಬ ರಾಜನಾಗುವನು. ಭೂತನಂದನನಿಗೆ ವಂಗಿರನೂ, ಅವನ ಸೋದರರಾದ ಶಿಶುನಂದಿ ಹಾಗೂ ಯಶೋನಂದಿ ಮತ್ತು ಪ್ರವೀರಕ ಇವರು ಒಂದು ನೂರಆರು ವರ್ಷಗಳವರೆಗೆ ರಾಜ್ಯವಾಳುವರು. ॥ ೩೧-೩೩ ॥ ಇವರಿಗೆ ಹದಿಮೂರು ಮಂದಿ ಪುತ್ರರಾಗುವರು. ಇವರೆಲ್ಲರಿಗೂ ಬಾಹ್ಲಿಕರೆಂದು ಹೆಸರು. ಇವರ ನಂತರ ಪುಷ್ಯಮಿತ್ರನೆಂಬ ಕ್ಷತ್ರಿಯನೂ ಮತ್ತು ಅವನ ಪುತ್ರನಾದ ದುರ್ಮಿತ್ರನೂ ರಾಜರಾಗುವರು. ॥ ೩೪ ॥

ಏಕಕಾಲಾ ಇಮೇ ಭೂಪಾಃ ಸಪ್ತಾಂಧ್ರಾಃ ಸಪ್ತ ಕೋಸಲಾಃ ।
ವಿದೂರಪತಯೋ ಭಾವ್ಯಾ ನಿಷಧಾಸ್ತತ ಏವ ಹಿ
॥ ೩೫ ॥

ಪರೀಕ್ಷಿತನೇ ! ಬಾಹ್ಲಿಕವಂಶದ ರಾಜರು ಒಟ್ಟಿಗೆ ಬೇರೆ-ಬೇರೆ ಪ್ರಾಂತಗಳಲ್ಲಿ ರಾಜ್ಯವನ್ನಾಳುವರು. ಅವರಲ್ಲಿ ಏಳು ಮಂದಿ ಆಂಧ್ರ ದೇಶದ, ಏಳು ಮಂದಿ ಕೋಸಲದೇಶದ, ಕೆಲವರು ವಿದೂರ ಭೂಮಿಗೂ, ಮತ್ತೆ ಕೆಲವರು ನಿಷಧದೇಶಕ್ಕೆ ಶಾಸಕರಾಗುವರು. ॥ ೩೫॥

ಮಾಗಧಾನಾಂ ತು ಭವಿತಾ ವಿಶ್ವಸ್ಫೂರ್ಜಿಃ ಪುರಂಜಯಃ ।
ಕರಿಷ್ಯತ್ಯಪರೋ ವರ್ಣಾನ್ಪುಲಿಂದ ಯದುಮದ್ರಕಾನ್
॥ ೩೬ ॥

ಅನಂತರ ವಿಶ್ವಸ್ಫೂರ್ಜಿ ಎಂಬುವನು ಮಗಧ ದೇಶಕ್ಕೆ ರಾಜನಾಗುವನು. ಇವನು ಹಿಂದಿನ ಪುರಂಜಯನಲ್ಲದೆ ಎರಡನೇ ಪುರಂಜಯನೆಂದು ಕರೆಯಲ್ಪಡುವನು. ಇವನು ಬ್ರಾಹ್ಮಣರೇ ಆದ ಉಚ್ಚವರ್ಣಿಯರನ್ನು ಪುಲಿಂದ, ಯದು, ಮದ್ರ ಮುಂತಾದ ಮ್ಲೆಚ್ಛಸದೃಶರನ್ನಾಗಿ ಮಾಡುವನು. ॥ ೩೬ ॥

ಪ್ರಜಾಶ್ಚಾಬ್ರಹ್ಮಭೂಯಿಷ್ಠಾಃ ಸ್ಥಾಪಯಿಷ್ಯತಿ ದುರ್ಮತಿಃ ।
ವೀರ್ಯವಾನ್ ಕ್ಷತ್ರಮುತ್ಸಾದ್ಯ ಪದ್ಮವತ್ಯಾಂ ಸ ವೈ ಪುರಿ ।
ಅನುಗಂಗಾಮಾಪ್ರಯಾಗಂ ಗುಪ್ತಾಂ ಭೋಕ್ಷ್ಯತಿ ಮೇದಿನೀಮ್
॥ ೩೭ ॥

ಇವನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರನ್ನು ನಾಶಪಡಿಸಿ ಶೂದ್ರಪ್ರಾಯ ಜನರನ್ನು ರಕ್ಷಿಸುವಂತಹ ದುಷ್ಟಬುದ್ಧಿಯಾಗುವನು. ಇವನು ಬಲ- ವಿಕ್ರಮದಿಂದ ಕ್ಷತ್ರಿಯರನ್ನು ನಿರ್ಮೂಲಗೊಳಿಸಿ, ಪದ್ಮಾವತಿ ಪುರವನ್ನು ರಾಜಧಾನಿಯನ್ನಾಗಿಸಿಕೊಂಡು ಹರಿದ್ವಾರದಿಂದ ಪ್ರಯಾಗದ ವರೆಗಿನ ಸುರಕ್ಷಿತವಾದ ಭೂಮಿಯನ್ನು ಆಳುವನು. ॥ ೩೭ ॥

ಸೌರಾಷ್ಟ್ರಾವಂತ್ಯಾಭೀರಾಶ್ಚ ಶೂರಾ ಅರ್ಬುದಮಾಲವಾಃ ।
ವ್ರಾತ್ಯಾ ದ್ವಿಜಾ ಭವಿಷ್ಯಂತಿ ಶೂದ್ರಪ್ರಾಯಾ ಜನಾಧಿಪಾಃ
॥ ೩೮ ॥

ಪರೀಕ್ಷಿತನೇ ! ಕಲಿಯುಗವು ಬಂದು ಹೋದಾಗಲೆಲ್ಲ ಸೌರಾಷ್ಟ್ರ, ಅವಂತಿ, ಆಭೀರ, ಶೂರ, ಅರ್ಬುದ ಮತ್ತು ಮಾಲವ ದೇಶಗಳ ಬ್ರಾಹ್ಮಣರು ಸಂಸ್ಕಾರಶೂನ್ಯರಾಗುವರು ಹಾಗೂ ರಾಜರು ಶೂದ್ರರಂತಾಗುವರು. ॥ ೩೮ ॥ ಸಿಂಧುನದಿಯ ತೀರ, ಚಂದ್ರಭಾಗಾ ನದಿಯ ದಡೆದ ಪ್ರದೇಶ, ಕೌಂತಿ ಮತ್ತು ಕಾಶ್ಮೀರ ಮಂಡಲಗಳಲ್ಲಿ ಸಾಮಾನ್ಯವಾಗಿ ಶೂದ್ರರಂತೆ ಸಂಸ್ಕಾರ ಮತ್ತು ಬ್ರಹ್ಮತೇಜದಿಂದ ರಹಿತರಾಗಿ ಹೆಸರಿಗಷ್ಟೇ ಬ್ರಾಹ್ಮಣರೂ ಮತ್ತು ಮ್ಲೇಚ್ಛರೂ ರಾಜ್ಯವನ್ನಾಳುವರು. ॥ ೩೯ ॥

ಸಿಂಧೋಸ್ತಟಂ ಚಂದ್ರಭಾಗಾಂ ಕೌಂತೀಂ ಕಾಶ್ಮೀರಮಂಡಲಮ್ ।
ಭೋಕ್ಷ್ಯಂತಿ ಶೂದ್ರಾ ವ್ರಾತ್ಯಾದ್ಯಾ ಮ್ಲೇಚ್ಛಾಶ್ಚಾಬ್ರಹ್ಮವರ್ಚಸಃ
॥ ೩೯ ॥

ಪರೀಕ್ಷಿತನೇ ! ಇವರೆಲ್ಲ ರಾಜರೂ ಆಚಾರ-ವಿಚಾರಗಳಲ್ಲಿ ಮ್ಲೇಚ್ಛರಂತಾಗುವರು. ಇವರೆಲ್ಲರೂ ಏಕಕಾಲದಲ್ಲಿ ಬೇರೆ-ಬೇರೆ ಪ್ರಾಂತಗಳಲ್ಲಿ ಅಳ್ವಿಕೆ ನಡೆಸುವರು. ಅಧರ್ಮ-ಅಸತ್ಯಗಳಲ್ಲಿ ನಿರತರಾಗಿದ್ದು ಅಲ್ಪವಾದ ದಾನಕೊಡುವವರಾಗುವರು. ಸಣ್ಣ-ಪುಟ್ಟ ಮಾತುಗಳಿಗೂ ಸಿಟ್ಟಿನಿಂದ ಉರಿದು ಬೀಳುವರು. ॥ ೪೦ ॥

ತುಲ್ಯಕಾಲಾ ಇಮೇ ರಾಜನ್ಮ್ಲೇಚ್ಛಪ್ರಾಯಾಶ್ಚ ಭೂಭೃತಃ ।
ಏತೇऽಧರ್ಮಾನೃತಪರಾಃ ಫಲ್ಗುದಾಸ್ತೀವ್ರಮನ್ಯವಃ
॥ ೪೦ ॥

ದುಷ್ಟರಾದ ಇವರು ಸ್ತ್ರೀಯರು, ಮಕ್ಕಳು, ಗೋವು, ಬ್ರಾಹ್ಮಣ ಇವರನ್ನು ಕೊಲ್ಲುವುದರಲ್ಲಿ ಹಿಂದೆ ಸರಿಯಲಾರರು. ಮತ್ತೊಬ್ಬರ ಹಣ, ಹೆಂಡಿರನ್ನು ಅಪಹರಿಸುವುದರಲ್ಲಿ ಸದಾ ಉತ್ಸುಕರಾಗಿರುವರು. ಇವರು ಬೇಗ-ಬೇಗನೆ ಹುಟ್ಟಿ-ಸಾಯುತ್ತಾ ಇರುತ್ತಾರೆ. ಇವರಿಗೆ ಶಕ್ತಿಯೂ ಕಡಿಮೆ, ಆಯುಸ್ಸೂ ಕಡಿಮೆ. ॥ ೪೧ ॥

ಸ್ತ್ರೀಬಾಲಗೋದ್ವಿಜಘ್ನಾಶ್ಚ ಪರದಾರಧನಾದೃತಾಃ ।
ಉದಿತಾಸ್ತಮಿತಪ್ರಾಯಾ ಅಲ್ಪಸತ್ತ್ವಾಲ್ಪಕಾಯುಷಃ
॥ ೪೧ ॥

ಇವರು ರಜೋಗುಣ-ತಮೋಗುಣಗಳಿಂದ ಕುರುಡಾಗಿ ಸಂಸ್ಕಾರ ಹೀನರಾಗಿರುತ್ತಾರೆ. ಕರ್ತವ್ಯ ಕರ್ಮಗಳನ್ನು ತೊರೆಯುವರು. ರಾಜವೇಷದಲ್ಲಿ ಮ್ಲೇಚ್ಛರೇ ಆಗಿದ್ದು, ಪ್ರಜೆಗಳ ರಕ್ತವನ್ನು ಹೀರುವರು. ॥ ೪೨ ॥ ಇಂತಹ ಜನರ ಶಾಸನ ಕಾಲದಲ್ಲಿ ದೇಶದ ಪ್ರಜೆಗಳು ಅಂತಹದೇ ಸ್ವಭಾವ, ಆಚರಣೆ ಮತ್ತು ಮಾತುಗಳು ಹೆಚ್ಚಾಗುವುವು. ರಾಜರೆನಿಸಿದವರು ಪ್ರಜೆಗಳನ್ನು ಶೋಷಣೆ ಮಾಡುವುದಲ್ಲದೆ ತಾವೂ ಪರಸ್ಪರ ಹಿಂಸಕರಾಗಿ ಕೊನೆಗೆ ಎಲ್ಲರೂ ನಾಶವಾಗುವರು. ॥ ೪೩ ॥

ಅಸಂಸ್ಕೃತಾಃ ಕ್ರಿಯಾಹೀನಾ ರಜಸಾ ತಮಸಾऽऽವೃತಾಃ ।
ಪ್ರಜಾಸ್ತೇ ಭಕ್ಷಯಿಷ್ಯಂತಿ ಮ್ಲೇಚ್ಛಾ ರಾಜನ್ಯರೂಪಿಣಃ
॥ ೪೨ ॥

ತನ್ನಾಥಾಸ್ತೇ ಜನಪದಾಸ್ತಚ್ಛೀಲಾಚಾರವಾದಿನಃ ।
ಅನ್ಯೋನ್ಯತೋ ರಾಜಭಿಶ್ಚ ಕ್ಷಯಂ ಯಾಸ್ಯಂತಿ ಪೀಡಿತಾಃ
॥ ೪೩ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ಪ್ರಥಮೋऽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಕಲಿಯುಗದ ಧರ್ಮಗಳು

ಶ್ರೀಶುಕ ಉವಾಚ

ತತಶ್ಚಾನುದಿನಂ ಧರ್ಮಃ ಸತ್ಯಂ ಶೌಚಂ ಕ್ಷಮಾ ದಯಾ ।
ಕಾಲೇನ ಬಲಿನಾ ರಾಜನ್ ನಂಕ್ಷ್ಯತ್ಯಾಯುರ್ಬಲಂ ಸ್ಮೃತಿಃ
॥ ೧ ॥

ವಿತ್ತಮೇವ ಕಲೌ ನೃಣಾಂ ಜನ್ಮಾಚಾರಗುಣೋದಯಃ ।
ಧರ್ಮನ್ಯಾಯವ್ಯವಸ್ಥಾಯಾಂ ಕಾರಣಂ ಬಲಮೇವ ಹಿ
॥ ೨ ॥

ದಾಂಪತ್ಯೇಽಭಿರುಚಿರ್ಹೇತುರ್ಮಾಯೈವ ವ್ಯಾವಹಾರಿಕೇ ।
ಸ್ತ್ರೀತ್ವೇ ಪುಂಸ್ತ್ವೇ ಚ ಹಿ ರತಿರ್ವಿಪ್ರತ್ವೇ ಸೂತ್ರಮೇವ ಹಿ
॥ ೩ ॥

ಲಿಂಗಮೇವಾಶ್ರಮಖ್ಯಾತಾವನ್ಯೋನ್ಯಾಪತ್ತಿಕಾರಣಮ್ ।
ಅವೃತ್ತ್ಯಾ ನ್ಯಾಯದೌರ್ಬಲ್ಯಂ ಪಾಂಡಿತ್ಯೇ ಚಾಪಲಂ ವಚಃ
॥ ೪ ॥

ಅನಾಢ್ಯತೈವಾಸಾಧುತ್ವೇ ಸಾಧುತ್ವೇ ದಂಭ ಏವ ತು ।
ಸ್ವೀಕಾರ ಏವ ಚೋದ್ವಾಹೇ ಸ್ನಾನಮೇವ ಪ್ರಸಾಧನಮ್
॥ ೫ ॥

ದೂರೇ ವಾರ್ಯಯನಂ ತೀರ್ಥಂ ಲಾವಣ್ಯಂ ಕೇಶಧಾರಣಮ್ ।
ಉದರಂಭರತಾ ಸ್ವಾರ್ಥಃ ಸತ್ಯತ್ವೇ ಧಾರ್ಷ್ಟ್ಯಮೇವ ಹಿ
॥ ೬ ॥

ದಾಕ್ಷ್ಯಂ ಕುಟುಂಬಭರಣಂ ಯಶೋಽರ್ಥೇ ಧರ್ಮಸೇವನಮ್ ।
ಏವಂ ಪ್ರಜಾಭಿರ್ದುಷ್ಪಾಭಿರಾಕೀರ್ಣೇ ಕ್ಷಿತಿಮಂಡಲೇ
॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಕಾಲವು ತುಂಬಾ ಬಲಶಾಲಿಯಾದುದು. ಕಲಿಯುಗವು ನಡೆಯುತ್ತಿರುವಂತೆಯೇ ಕ್ರಮೇಣ ಧರ್ಮ, ಸತ್ಯ, ಪವಿತ್ರತೆ, ಕ್ಷಮೆ, ದಯೆ, ಜನರ ಆಯುಸ್ಸು, ಬಲ ಮತ್ತು ಸ್ಮರಣಶಕ್ತಿ ಇವೆಲ್ಲವೂ ಲೋಪ ಹೊಂದುತ್ತಾ ಹೋಗುವವು. ॥ ೧ ॥ ಕಲಿಯುಗದಲ್ಲಿ ಹಣವಿರುವವನನ್ನೇ ಜನರು ಕುಲೀನ, ಸದಾಚಾರಿ, ಸದ್ಗುಣಿಯೆಂದು ತಿಳಿಯುವರು. ಬಲಿಷ್ಠನಾದವನೇ ಧರ್ಮ ಮತ್ತು ನ್ಯಾಯದ ವ್ಯವಸ್ಥೆಯನ್ನು ತನಗೆ ಅನುಕೂಲವಾಗಿ ಮಾಡಿಕೊಳ್ಳುವನು. ॥ ೨ ॥ ವಿವಾಹ ಸಂಬಂಧದಲ್ಲಿ ಕುಲ-ಶೀಲ-ಯೋಗ್ಯತೆ ಮುಂತಾದವುಗಳಿಗೆ ಬೆಲೆ ಕೊಡದೆ ಯುವಕ-ಯುವತಿಯರು ಪರಸ್ಪರ ಅಭಿರುಚಿಯಿಂದಲೇ ಸಂಬಂಧಗಳು ಏರ್ಪಡುವವು. ಛಲ-ಕಪಟಗಳೇ ವ್ಯವಹಾರ ನಿಪುಣತೆ ಎನಿಸುವುದು. ಸ್ತ್ರೀ-ಪುರುಷರ ಗುಣ ಮಟ್ಟದಲ್ಲಿ ಶೀಲ-ಸಂಯಮಗಳಿರದೆ ರತಿಕೌಶಲವೇ ಇರುವುದು. ಬ್ರಾಹ್ಮಣ ಪರಿಚಯವು ಗುಣ-ಸ್ವಭಾವದಿಂದ ಆಗದೆ ಕೇವಲ ಜನಿವಾರದಿಂದಲೇ ಆಗುವುದು. ॥ ೩ ॥ ಬಟ್ಟೆ, ದಂಡ, ಕಮಂಡಲು ಇವುಗಳೇ ಬ್ರಹ್ಮಚರ್ಯೆ, ಸಂನ್ಯಾಸವೇ ಮೊದಲಾದ ಆಶ್ರಮಗಳ ಗುರುತಾಗುವುದು. ಒಬ್ಬರು ಮತ್ತೊಬ್ಬರ ಚಿಹ್ನೆಗಳನ್ನು ಧರಿಸುವುದೇ ಬೇರೊಂದು ಆಶ್ರಮದಲ್ಲಿ ಪ್ರವೇಶದ ಸ್ವರೂಪವಾಗುವುದು. ಲಂಚ-ಕೊಡಲು, ಹಣವನ್ನು ಖರ್ಚುಮಾಡಲು ಅಸಮರ್ಥನಾದವನಿಗೆ ನ್ಯಾಯಲಯದಲ್ಲಿ ಸರಿಯಾದ ನ್ಯಾಯ ಸಿಗಲಾರದು. ನಡೆ-ನುಡಿಗಳಲ್ಲಿ ನಿಪುಣನಾದವನೇ ದೊಡ್ಡ ಪಂಡಿತನೆಂದು ತಿಳಿಯಲಾಗುವುದು. ॥ ೪ ॥ ಬಡವನಾಗುವುದೇ ಅಸಾಧುತೆಯ-ದೋಷಿಯಾಗುವ ಗುರುತಾಗಬಹುದು. ದಾಂಭಿಕತೆ-ಪಾಖಂಡತೆ ಹೆಚ್ಚು ತೋರುವವನ್ನೇ ದೊಡ್ಡ ಸಾಧುವೆಂದು ತಿಳಿಯುವರು. ವಿವಾಹಕ್ಕೆ ಪರಸ್ಪರ ಒಪ್ಪಿಗೆಯೇ ಸಾಕಾದೀತು. ಶಾಸ್ತ್ರೀಯ ವಿಧಿ-ವಿಧಾನದ ಸಂಸ್ಕಾರಾದಿಗಳ ಯಾವ ಆವಶ್ಯಕತೆಯೂ ಬೇಕಾಗುವುದಿಲ್ಲ ಚೆನ್ನಾಗಿ ಕೂದಲನ್ನು ಬಾಚಿ ಸ್ವಚ್ಛವಾದ ಬಟ್ಟೆಗಳನ್ನು ತೊಡುವುದೇ ಸ್ನಾನವೆಂದು ತಿಳಿಯುವರು. ॥ ೫ ॥ ದೂರದಲ್ಲಿರುವ ಕುಂಡವನ್ನೇ ತೀರ್ಥವೆಂದು ತಿಳಿಯುವರು. ಬಳಿಯಲ್ಲಿರುವ ಗಂಗೆ-ಗೋಮತಿ, ತಂದೆ-ತಾಯಿ ಇವುಗಳನ್ನು ಉಪೇಕ್ಷಿಸುವರು. ತಲೆಯಲ್ಲಿ ಉದ್ದ-ಉದ್ದ ಕೂದಲು ಬೆಳೆಸುವುದೇ ಶರೀರದ ಸೌಂದರ್ಯ ಚಿಹ್ನೆಯೆಂದು ತಿಳಿಯುವರು. ತನ್ನ ಹೊಟ್ಟೆ ತುಂಬಿಸಿಕೊಳ್ಳುವುದೇ ಎಲ್ಲಕ್ಕಿಂತ ದೊಡ್ಡ ಪುರುಷಾರ್ಥವೆಂದಾದೀತು. ಎಷ್ಟು ಉದ್ಧಟತನದಿಂದ ಮಾತನಾಡುವನೋ ಅಷ್ಟೇ ದೊಡ್ಡ ಸತ್ಯಸಂಧನೆನಿಸುವನು. ॥ ೬ ॥ ತನ್ನ ಕುಟುಂಬವನ್ನು ಸಾಕುವುದೇ ಮನುಷ್ಯನ ಯೋಗ್ಯತೆ-ಚತುರತೆಯ ದೊಡ್ಡ ಲಕ್ಷಣವಾಗುವುದು. ಕೀರ್ತಿಗಾಗಿ ಧರ್ಮವನ್ನು ಆಚರಿಸಲಾಗುವುದು. ಹೀಗೆ ಇಡೀ ಪೃಥಿವಿಯಲ್ಲಿ ದುಷ್ಟರು ತುಂಬಿಹೋದಾಗ ಬ್ರಾಹ್ಮಣ,

ಬ್ರಹ್ಮವಿಟ್‌ಕ್ಷತ್ರಶೂದ್ರಾಣಾಂ ಯೋ ಬಲೀ ಭವಿತಾ ನೃಪಃ ।
ಪ್ರಜಾ ಹಿ ಲುಬ್ಧೈ ರಾಜನ್ಯೈರ್ನಿರ್ಘೃಣೈರ್ದಸ್ಯುಧರ್ಮಭಿಃ
॥ ೮ ॥

ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಲ್ಲಿ ಹೆಚ್ಚು ಬಲಶಾಲಿಯಾದವನೇ ರಾಜನಾಗುವನು. ಆಗಿನ ರಾಜರು ನೀಚರೂ, ನಿರ್ದಯರೂ, ಕ್ರೂರಿಗಳೂ ಕಡುಲೋಭಿಗಳೂ, ಕಸಿದುಕೊಳ್ಳುವ ಮತ್ತು ಲೂಟಿ ದರೋಡೆ ಮಾಡುವವರಾಗುವರು. ಇವರು ಪ್ರಜೆಗಳ ಹಣ ಹೆಂಡಿರನ್ನು ಕಿತ್ತುಕೊಳ್ಳುವರು. ಇವರಿಗೆ ಹೆದರಿದ ಪ್ರಜೆಗಳು ಬೆಟ್ಟ ಕಾಡುಗಳಿಗೆ ಓಡಿ ಹೋಗುವರು. ಆ ಸಮಯದಲ್ಲಿ ಪ್ರಜೆಯು ಗೆಡ್ಡೆ-ಗೆಣಸು, ಮಾಂಸ, ಜೇನು, ಹಣ್ಣು ಹೂವು, ಬೀಜ ಮುಂತಾದವುಗಳನ್ನು ತಿಂದುಕೊಂಡು ಹೊಟ್ಟೆಹೊರೆಯುವರು. ॥ ೭-೯ ॥

ಅಚ್ಛಿನ್ನದಾರದ್ರವಿಣಾ ಯಾಸ್ಯಂತಿ ಗಿರಿಕಾನನಮ್ ।
ಶಾಕಮೂಲಾಮಿಷಕ್ಷೌದ್ರಫಲಪುಷ್ಪಾಷ್ಟಿಭೋಜನಾಃ
॥ ೯ ॥

ಅನಾವೃಷ್ಟ್ಯಾ ವಿನಂಕ್ಷ್ಯಂತಿ ದುರ್ಭಿಕ್ಷಕರಪೀಡಿತಾಃ ।
ಶೀತವಾತಾತಪಪ್ರಾವೃಡ್ಹಿಮೈರನ್ಯೋನ್ಯತಃ ಪ್ರಜಾಃ
॥ ೧೦ ॥

ಮಳೆಯೇ ಬಾರದೆ ಕ್ಷಾಮ ತಲೆದೋರಿತು. ಆಗಲೂ ಮೇಲಿಂದ ಮೇಲೆ ಕಂದಾಯ ಹೇರಲಾಗುವುದು. ಕೆಲವೊಮ್ಮೆ ಮೈಸುಡುವ ಸೆಕೆ ಉಂಟಾದೀತು. ಕೆಲವೊಮ್ಮೆ ಪ್ರಾಣಾಂತಕವಾದ ಜಲಪ್ರವಾಹ ಬಂದೀತು. ಇಂತಹ ಉತ್ಪಾತಗಳಿಂದ, ಪರಸ್ಪರ ಸಂಘರ್ಷದಿಂದ ಪ್ರಜೆಯು ಅತ್ಯಂತ ಪೀಡಿತವಾಗಿ ನಾಶವಾಗಿ ಹೋಗುವುದು. ॥ ೧೦ ॥ ಜನರು ಹಸಿವು-ಬಾಯಾರಿಕೆಗಳಿಂದ ಕಂಗೆಟ್ಟು ನಾನಾ ರೀತಿಯ ಚಿಂತೆಗಳಿಂದ ದುಃಖಿತರಾಗಿ, ನಾನಾ ರೋಗಗಳಿಗೆ ತುತ್ತಾಗುವರು. ಕಲಿಯುಗದಲ್ಲಿ ಮನುಷ್ಯರ ಪರಮಾಯುಸ್ಸು ಕೇವಲ ಇಪ್ಪತ್ತು ಅಥವಾ ಮೂವತ್ತು ವರ್ಷಗಳಿರುವುದು. ॥ ೧೧ ॥

ಕ್ಷುತ್ಪಡ್ಭ್ಯಾಂ ವ್ಯಾಧಿಭಿಶ್ಚೈವ ಸಂತಪ್ಸ್ಯಂತೇ ಚ ಚಿಂತಯಾ ।
ತ್ರಿಂಶದ್ವಿಂಶತಿವರ್ಷಾಣಿ ಪರಮಾಯುಃ ಕಲೌ ನೃಣಾಮ್
॥ ೧೧ ॥

ಕ್ಷೀಯಮಾಣೇಷು ದೇಹೇಷು ದೇಹಿನಾಂ ಕಲಿದೋಷತಃ ।
ವರ್ಣಾಶ್ರಮವತಾಂ ಧರ್ಮೇ ನಷ್ಟೇ ವೇದಪಥೇ ನೃಣಾಮ್
॥ ೧೨ ॥

ಪರೀಕ್ಷಿತನೇ! ಕಲಿಯದೋಷದಿಂದ ಪ್ರಾಣಿಗಳ ಶರೀರಗಳು ಸಣ್ಣದಾಗಿಯೂ, ಕ್ಷೀಣವಾಗಿಯೂ, ರೋಗಗ್ರಸ್ತವಾಗಿರುವವು. ವರ್ಣಾಶ್ರಮಗಳ ಧರ್ಮವನ್ನು ಹೇಳುವ ವೇದ ಮಾರ್ಗವು ನಷ್ಟಪ್ರಾಯವಾಗುವುದು. ॥ ೧೨ ॥ ಧರ್ಮದಲ್ಲಿ ಪಾಖಂಡತನವೇ ಪ್ರಧಾನವಾದೀತು. ರಾಜ-ಮಹರಾಜರು ದರೋಡೆಕೋರರಾಗುವರು. ಜನರು ಕಳ್ಳತನ, ಸುಳ್ಳು, ನಿರಪರಾಧಿಗಳ ಹಿಂಸೆ ಮುಂತಾದ ಅನೇಕ ವಿಧದ ಕೆಟ್ಟಕೆಲಸಗಳಿಂದ ಜೀವನ ನಡೆಸುವರು. ॥ ೧೩ ॥ ನಾಲ್ಕು ವರ್ಣದ ಜನರು ಶೂದ್ರರಂತೆ ಆಗಿ ಹೋಗುವರು. ಹಸುಗಳು ಕುರಿಗಳಂತೆ ಸಣ್ಣ-ಸಣ್ಣದಾಗಿ ಕಡಿಮೆ ಹಾಲು ಕೊಡುವವು. ವಾನಪ್ರಸ್ಥರು ಮತ್ತು ಸಂನ್ಯಾಸಿ ಮುಂತಾದ ವಿರಕ್ತ ಆಶ್ರಮದವರೂ ಕೂಡ ಮನೆ-ಮಠಕಟ್ಟಿಕೊಂಡು ಗೃಹಸ್ಥರಂತೆ ವ್ಯಾಪಾರ ಮಾಡುವರು. ವಿವಾಹ ಸಂಬಂಧವಿರುವವರೇ ತಮ್ಮ ಸಂಬಂಧಿಗಳೆಂದು ತಿಳಿಯುವರು. ॥ ೧೪ ॥ ಭತ್ತ, ಗೋಧಿ ಮುಂತಾದ ಗಿಡಗಳು ಕಡುಚಿಕ್ಕದಾಗಿ ಬಿಡುವವು. ವೃಕ್ಷಗಳಲ್ಲಿ ಹೆಚ್ಚಿನವು ಶಮಿಯಂತೆ ಸಣ್ಣದಾಗಿ, ಮುಳ್ಳುಗಿಡಗಳೇ ಉಳಿಯುವವು. ಮೋಡಗಳಲ್ಲಿ ಮಿಂಚು ಬಳ್ಳಿಗಳು ಹೆಚ್ಚಾಗಿ ಕಾಣಿಸಿಕೊಂಡು ಮಳೆ ಕಡಿಮೆ ಬೀಳುವುದು. ಗೃಹಸ್ಥರ ಮನೆಗಳು ಅತಿಥಿ-ಸತ್ಕಾರ ಅಥವಾ ವೇದಧ್ವನಿರಹಿತವಾದ ಕಾರಣ ಅಥವಾ ಜನಸಂಖ್ಯೆಯು ಕಡಿಮೆಯಾಗಿ ಶೂನ್ಯವಾಗುವವು. ॥ ೧೫ ॥ ಪರೀಕ್ಷಿತನೇ! ಕಲಿಯುಗವು ಮುಗಿಯುತ್ತಿರುವಂತೆ ಮನುಷ್ಯರ ಸ್ವಭಾವಗಳು ಕತ್ತೆಗಳಂತೆ ಆಗುವವು. ಜನರು ಸಂಸಾರದ ಹೊರೆಯನ್ನು ಹೊರುವ ವಿಷಯಿಗಳಾಗಿ ಹೋಗುವರು. ಇಂತಹ ಸ್ಥಿತಿಯಲ್ಲಿ ಧರ್ಮವನ್ನು ರಕ್ಷಿಸಲಿಕ್ಕಾಗಿ, ಭಗವಂತನು ಸತ್ವಗುಣವನ್ನು ಸ್ವೀಕರಿಸಿ ಅವತರಿಸುವನು. ॥ ೧೬ ॥

ಪಾಖಂಡಪ್ರಚುರೇ ಧರ್ಮೇ ದಸ್ಯುಪ್ರಾಯೇಷು ರಾಜಸು ।
ಚೌರ್ಯಾನೃತವೃಥಾಹಿಂಸಾನಾನಾವೃತ್ತಿಷು ವೈ ನೃಷು
॥ ೧೩ ॥

ಶೂದ್ರಪ್ರಾಯೇಷು ವರ್ಣೇಷು ಚ್ಛಾಗಪ್ರಾಯಾಸು ಧೇನುಷು ।
ಗೃಹಪ್ರಾಯೇಷ್ವಾಶ್ರಮೇಷು ಯೌನಪ್ರಾಯೇಷು ಬಂಧುಷು
॥ ೧೪ ॥

ಅಣುಪ್ರಾಯಾಸ್ವೋಷಧೀಷು ಶಮೀಪ್ರಾಯೇಷು ಸ್ಥಾಸ್ನುಷು ।
ವಿದ್ಯುತ್ಪ್ರಾಯೇಷು ಮೇಘೇಷು ಶೂನ್ಯಪ್ರಾಯೇಷು ಸದ್ಮಸು
॥ ೧೫ ॥

ಇತ್ಥಂ ಕಲೌ ಗತಪ್ರಾಯೇ ಜನೇ ತು ಖರಧರ್ಮಿಣಿ ।
ಧರ್ಮತ್ರಾಣಾಯ ಸತ್ತ್ವೇನ ಭಗವಾನವತರಿಷ್ಯತಿ
॥ ೧೬ ॥

ಚರಾಚರಗುರೋರ್ವಿಷ್ಣೋರೀಶ್ವರಸ್ಯಾಖಿಲಾತ್ಮನಃ ।
ಧರ್ಮತ್ರಾಣಾಯ ಸಾಧೂನಾಂ ಜನ್ಮಕರ್ಮಾಪನುತ್ತಯೇ
॥ ೧೭ ॥

ಶಂಭಲಗ್ರಾಮಮುಖ್ಯಸ್ಯ ಬ್ರಾಹ್ಮಣಸ್ಯ ಮಹಾತ್ಮನಃ ।
ಭವನೇ ವಿಷ್ಣು ಯಶಸಃ ಕಲ್ಕಿಃ ಪ್ರಾದುರ್ಭವಿಷ್ಯತಿ
॥ ೧೮ ॥

ಅಶ್ವಮಾಶುಗಮಾರುಹ್ಯ ದೇವದತ್ತಂ ಜಗತ್ಪತಿಃ ।
ಅಸಿನಾಸಾಧುದಮನಮಷ್ಟೈಶ್ವರ್ಯಗುಣಾನ್ವಿತಃ
॥ ೧೯ ॥

ವಿಚರನ್ನಾಶುನಾ ಕ್ಷೋಣ್ಯಾಂ ಹಯೇನಾಪ್ರತಿಮದ್ಯುತಿಃ ।
ನೃಪಲಿಂಗಚ್ಛದೋ ದಸ್ಯೂನ್ಕೋಟಿಶೋ ನಿಹನಿಷ್ಯತಿ
॥ ೨೦ ॥

ಅಥ ತೇಷಾಂ ಭವಿಷ್ಯಂತಿ ಮನಾಂಸಿ ವಿಶದಾನಿ ವೈ ।
ವಾಸುದೇವಾಂಗರಾಗಾತಿಪುಣ್ಯಗಂಧಾನಿಲಸ್ಪೃಶಾಮ್ ।
ಪೌರಜಾನಪದಾನಾಂ ವೈ ಹತೇಷ್ವಖಿಲದಸ್ಯುಷು
॥ ೨೧ ॥

ತೇಷಾಂ ಪ್ರಜಾವಿಸರ್ಗಶ್ಚ ಸ್ಥವಿಷ್ಠಃ ಸಂಭವಿಷ್ಯತಿ ।
ವಾಸುದೇವೇ ಭಗವತಿ ಸತ್ತ್ವಮೂರ್ತೌ ಹೃದಿ ಸ್ಥಿತೇ
॥ ೨೨ ॥

ಯದಾವತೀರ್ಣೋ ಭಗವಾನ್ ಕಲ್ಕಿರ್ಧರ್ಮಪತಿರ್ಹರಿಃ ।
ಕೃತಂ ಭವಿಷ್ಯತಿ ತದಾ ಪ್ರಜಾಸೂತಿಶ್ಚ ಸಾತ್ತ್ವಿಕೀ
॥ ೨೩ ॥

ಯದಾಚಂದ್ರಶ್ಚ ಸೂರ್ಯಶ್ಚ ತಥಾ ತಿಷ್ಯಬೃಹಸ್ಪತೀ ।
ಏಕರಾಶೌ ಸಮೇಷ್ಯಂತಿ ತದಾ ಭವತಿ ತತ್ ಕೃತಮ್
॥ ೨೪ ॥

ಯೇಽತೀತಾ ವರ್ತಮಾನಾ ಯೇ ಭವಿಷ್ಯಂತಿ ಚ ಪಾರ್ಥಿವಾಃ ।
ತೇ ತ ಉದ್ದೇಶತಃ ಪ್ರೋಕ್ತಾ ವಂಶೀಯಾಃ ಸೋಮಸೂರ್ಯಯೋಃ
॥ ೨೫ ॥

ಆರಭ್ಯ ಭವತೋ ಜನ್ಮ ಯಾವನ್ನಂದಾಭಿಷೇಚನಮ್ ।
ಏತದ್ವರ್ಷಸಹಸ್ರಂ ತು ಶತಂ ಪಂಚದಶೋತ್ತರಮ್
॥ ೨೬ ॥

ಪ್ರಿಯಪರೀಕ್ಷಿತನೇ ! ಸರ್ವವ್ಯಾಪಕ ಭಗವಾನ್ ವಿಷ್ಣುವು ಸರ್ವ ಶಕ್ತನಾಗಿರುವನು. ಅವನು ಸರ್ವಸ್ವರೂಪನಾಗಿದ್ದರೂ ಚರಾಚರ ಜಗತ್ತಿಗೆ ನಿಜವಾದ ಸದ್ಗುರುವಾಗಿದ್ದಾನೆ. ಅವನು ಸಾಧು-ಸತ್ಪುರುಷರ ಧರ್ಮವನ್ನು ರಕ್ಷಿಸಲಿಕ್ಕಾಗಿ, ಅವರ ಕರ್ಮಬಂಧವನ್ನು ತುಂಡರಿಸಿ ಅವರನ್ನು ಜನ್ಮ-ಮೃತ್ಯುವಿನ ಚಕ್ರದಿಂದ ಬಿಡಿಸಲೆಂದೇ ಅವತರಿಸಿರುವನು. ॥ ೧೭ ॥ ಆ ದಿನಗಳಲ್ಲಿ ಶಂಬಲಗ್ರಾಮದಲ್ಲಿ ವಿಷ್ಣುಯಶನೆಂಬ ಬ್ರಾಹ್ಮಣನೋರ್ವನು ಇರುವನು. ಅವನು ಉದಾರ ಹೃದಯಿಯೂ, ಭಕ್ತಿಭಾವ ಸಂಪನ್ನನಾಗುವನು. ಅವನ ಮನೆಯಲ್ಲಿ ಭಗವಂತನು ಕಲ್ಕಿಯಾಗಿ ಅವತರಿಸುವನು. ॥ ೧೮ ॥ ಅಷ್ಟಸಿದ್ಧಿಗಳ ಹಾಗೂ ಸಮಸ್ತ ಸದ್ಗುಣಗಳ ಏಕಮಾತ್ರ ಆಶ್ರಯನು ಭಗವಂತನೇ ಆಗಿರುವನು. ಸಮಸ್ತ ಚರಾಚರ ಜಗತ್ತಿನ ರಕ್ಷಕನೂ, ಸ್ವಾಮಿಯೂ ಆಗಿದ್ದಾನೆ. ಅವನು ದೇವದತ್ತವೆಂಬ ಶೀಘ್ರಗಾಮಿಯಾದ ಕುದುರೆಯನ್ನೇರಿ ಖಡ್ಗದಿಂದ ದುಷ್ಟರನ್ನು ತರಿದು ಬಿಡುವನು. ॥ ೧೯ ॥ ಅವನ ರೋಮ-ರೋಮಗಳಲ್ಲಿ ಅತುಲ ತೇಜವು ಹೊರಹೊಮ್ಮುವುದು. ಅವನು ತನ್ನ ಮಹಾವೇಗಶಾಲಿಯಾದ ಕುದುರೆಯನ್ನೇರಿ ಪೃಥಿವಿಯಲ್ಲಿ ಎಲ್ಲೆಡೆ ಸಂಚರಿಸಿ, ರಾಜರವೇಷದಲ್ಲಿ ಅಡಗಿಕೊಂಡಿದ್ದ ಕೋಟಿ-ಕೋಟಿ ದಸ್ಯುಗಳನ್ನು ಸಂಹರಿಸುವನು. ॥ ೨೦ ॥

ಪ್ರಿಯಪರೀಕ್ಷಿತನೇ ! ಸಮಸ್ತ ದಸ್ಯುಗಳ ಸಂಹಾರವಾದಾಗ ನಗರದ ಮತ್ತು ದೇಶದ ಸಮಸ್ತ ಪ್ರಜೆಗಳ ಹೃದಯ ಪವಿತ್ರತೆಯಿಂದ ತುಂಬಿ ಹೋದೀತು. ಏಕೆಂದರೆ, ಕಲ್ಕಿ ಭಗವಂತನ ಶರೀರಕ್ಕೆ ಹಚ್ಚಿದ ಅಂಗರಾಗದ ಸ್ಪರ್ಶವನ್ನು ಪಡೆದ ಅತ್ಯಂತ ಪವಿತ್ರವಾದ ವಾಯುವು ಅವರನ್ನು ಸ್ಪರ್ಶಿಸುವುದರಿಂದ ಅವರು ಭಗವಂತನ ಶ್ರೀವಿಗ್ರಹದ ದಿವ್ಯ ಸುಗಂಧವನ್ನು ಪಡೆದುಕೊಳ್ಳುವರು. ॥ ೨೧ ॥ ಅವರ ಪವಿತ್ರ ಹೃದಯಗಳಲ್ಲಿ ಸತ್ತ್ವಮೂರ್ತಿಯಾದ ಭಗವಾನ್ ವಾಸುದೇವನು ವಿರಾಜಮಾನಾಗುವನು. ಮತ್ತೆ ಅವರ ಸಂತಾನಗಳು ಮೊದಲಿನಂತೆ ಹೃಷ್ಟ-ಪುಷ್ಟರೂ ಬಲಿಷ್ಠರೂ ಆಗುವರು.॥ ೨೨ ॥ ಪ್ರಜೆಯ ನಯನಮನೋಹರ ಹರಿಯೇ ಧರ್ಮದ ರಕ್ಷಕನು ಸ್ವಾಮಿಯೂ ಆಗಿರುವನು. ಅಂತಹ ಭಗವಂತನು ಕಲ್ಕಿಯಾಗಿ ಅವತರಿಸಿದಾಗಲೇ ಕೃತಯುಗದ ಪ್ರಾರಂಭವಾಗುವುದು ಹಾಗೂ ಪ್ರಜೆಯ ಸಂತಾನ-ಪರಂಪರೆಯು ತಾನಾಗಿಯೇ ಸತ್ತ್ವಗುಣದಿಂದ ಯುಕ್ತರಾಗುವರು. ॥ ೨೩. ॥ ಚಂದ್ರ, ಸೂರ್ಯ ಮತ್ತು ಬೃಹಸ್ಪತಿಯು ಒಂದೇ ಸಮಯದಲ್ಲಿ ಒಟ್ಟಿಗೆ ಪುಷ್ಯನಕ್ಷತ್ರದ ಪ್ರಥಮ ಚರಣದಲ್ಲಿ ಒಂದೇ ರಾಶಿಯಲ್ಲಿ ಪ್ರವೇಶಿಸಿದಾಗಲೇ ಕೃತಯುಗದ ಪ್ರಾರಂಭವಾಗುತ್ತದೆ. ॥ ೨೪ ॥

ಪರೀಕ್ಷಿತನೇ ! ಚಂದ್ರವಂಶ ಮತ್ತು ಸೂರ್ಯವಂಶದಲ್ಲಿ ಆಗಿಹೋದ ರಾಜರ ಕುರಿತು, ಮುಂದೆ ಆಗುವವರ ಕುರಿತು ಎಲ್ಲವನ್ನು ಸಂಕ್ಷೇಪವಾಗಿ ನಾನು ನಿನಗೆ ವರ್ಣಿಸಿರುವೆನು. ॥ ೨೫ ॥ ನಿನ್ನ ಜನ್ಮದಿಂದ ಹಿಡಿದು ನಂದರಾಜನ ಪಟ್ಟಾಭಿಷೇಕದವರೆಗೆ ಒಂದು ಸಾವಿರದ ನೂರಹದಿನೈದು ವರ್ಷಗಳ ಸಮಯ ತಗಲುವುದು. ॥ ೨೬ ॥

ಸಪ್ತರ್ಷೀಣಾಂ ತು ಯೌ ಪೂರ್ವೌ ದೃಶ್ಯೇತೇ ಉದಿತೌ ದಿವಿ ।
ತಯೋಸ್ತು ಮಧ್ಯೇ ನಕ್ಷತ್ರಂ ದೃಶ್ಯತೇ ಯತ್ಸಮಂ ನಿಶಿ
॥ ೨೭ ॥

ತೇನೈತ ಋಷಯೋ ಯುಕ್ತಾಸ್ತಿಷ್ಠಂತ್ಯಬ್ದಶತಂ ನೃಣಾಮ್ ।
ತೇ ತ್ವದೀಯೇ ದ್ವಿಜಾಃ ಕಾಲೇ ಅಧುನಾ ಚಾಶ್ರಿತಾ ಮಘಾಃ
॥ ೨೮ ॥

ವಿಷ್ಣೋರ್ಭಗವತೋ ಭಾನುಃ ಕೃಷ್ಣಾಖ್ಯೋಽಸೌ ದಿವಂ ಗತಃ ।
ತದಾವಿಶತ್ಕಲಿರ್ಲೋಕಂ ಪಾಪೇ ಯದ್ರಮತೇ ಜನಃ
॥ ೨೯ ॥

ಯಾವತ್ಸ ಪಾದಪದ್ಮಾಭ್ಯಾಂ ಸ್ಪೃಶನ್ನಾಸ್ತೇ ರಮಾಪತಿಃ ।
ತಾವತ್ಕಲಿರ್ವೈ ಪೃಥಿವೀಂ ಪರಾಕ್ರಾಂತುಂ ನ ಚಾಶಕತ್
॥ ೩೦ ॥

ಯದಾ ದೇವರ್ಷಯಃ ಸಪ್ತ ಮಘಾಸು ವಿಚರಂತಿ ಹಿ ।
ತದಾ ಪ್ರವೃತ್ತಸ್ತು ಕಲಿರ್ದ್ವಾದಶಾಬ್ದಶತಾತ್ಮಕಃ
॥ ೩೧ ॥

ಯದಾ ಮಘಾಭ್ಯೋ ಯಾಸ್ಯಂತಿ ಪೂರ್ವಾಷಾಢಾಂ ಮಹರ್ಷಯಃ ।
ತದಾ ನಂದಾತ್ಪಭೃತ್ಯೇಷ ಕಲಿರ್ವೃದ್ಧಿಂ ಗಮಿಷ್ಯತಿ
॥ ೩೨ ॥

ಯಸ್ಮಿನ್ಕೃಷ್ಣೋ ದಿವಂ ಯಾತಸ್ತಸ್ಮಿನ್ನೇವ ತದಾಹನಿ ।
ಪ್ರತಿಪನ್ನಂ ಕಲಿಯುಗಮಿತಿ ಪ್ರಾಹುಃ ಪುರಾವಿದಃ
॥ ೩೩ ॥

ದಿವ್ಯಾಬ್ದಾನಾಂ ಸಹಸ್ರಾಂತೇ ಚತುರ್ಥೇ ತು ಪುನಃ ಕೃತಮ್ ।
ಭವಿಷ್ಯತಿ ಯದಾ ನೃಣಾಂ ಮನ ಆತ್ಮಪ್ರಕಾಶಕಮ್
॥ ೩೪ ॥

ಇತ್ಯೇಷ ಮಾನವೋ ವಂಶೋ ಯಥಾ ಸಂಖ್ಯಾಯತೇ ಭುವಿ ।
ತಥಾ ವಿಟ್ಶೂದ್ರ ವಿಪ್ರಾಣಾಂ ತಾಸ್ತಾ ಜ್ಞೇಯಾ ಯುಗೇ ಯುಗೇ
॥ ೩೫ ॥

ಏತೇಷಾಂ ನಾಮಲಿಂಗಾನಾಂ ಪುರುಷಾಣಾಂ ಮಹಾತ್ಮನಾಮ್ ।
ಕಥಾಮಾತ್ರಾವಶಿಷ್ಟಾನಾಂ ಕೀರ್ತಿರೇವ ಸ್ಥಿತಾ ಭುವಿ
॥ ೩೬ ॥

ದೇವಾಪಿಃ ಶಂತನೋರ್ಭ್ರಾತಾ ಮರುಶ್ಚೇಕ್ಷ್ವಾಕುವಂಶಜಃ ।
ಕಲಾಪಗ್ರಾಮ ಆಸಾತೇ ಮಹಾಯೋಗಬಲಾನ್ವಿತೌ
॥ ೩೭ ॥

ಆಕಾಶದಲ್ಲಿ ಸಪ್ತರ್ಷಿಯರ ಉದಯವಾದ ಸಮಯದಲ್ಲಿ ಮೊದಲಿಗೆ ಅವರಲ್ಲಿ ಎರಡೇ ನಕ್ಷತ್ರಗಳು ಕಂಡುಬರುತ್ತವೆ. ಅವುಗಳ ಮಧ್ಯದಲ್ಲಿ ದಕ್ಷಿಣೋತ್ತರ ರೇಖೆಯ ಸಮಭಾಗದಲ್ಲಿ ಅಶ್ವಿನಿಯೇ ಮೊದಲಾದ ನಕ್ಷತ್ರಗಳಲ್ಲಿನ ಒಂದೇ ನಕ್ಷತ್ರವು ಕಂಡು ಬರುತ್ತದೆ. ॥ ೨೭ ॥ ಆ ನಕ್ಷತ್ರದೊಂದಿಗೆ ಸಪ್ತರ್ಷಿಗಳು ಮನುಷ್ಯ ಮಾನದ ಒಂದುನೂರು ವರ್ಷಗಳವರೆಗೆ ಇರುತ್ತಾರೆ. ಅವರು ನಿನ್ನ ಜನ್ಮ ಸಮಯದಲ್ಲಿ ಹಾಗೂ ಈಗಲೂ ಮಘಾನಕ್ಷತ್ರದಲ್ಲೇ ಇದ್ದಾರೆ. ॥ ೨೮॥

ಭಗವಂತನು ಶ್ರೀಕೃಷ್ಣನೆಂಬ ಹೆಸರಿನಿಂದ ಅವತರಿಸಿ ದಿವ್ಯ ಲೀಲೆಗಳನ್ನು ನಡೆಸಿ ತನ್ನ ಪರಮ ದಿವ್ಯಧಾಮಕ್ಕೆ ಹೊರಟುಹೋದ ಬಳಿಕ ಕಲಿಯು ಈ ಲೋಕವನ್ನು ಆಕ್ರಮಿಸಿದನು. ಅದರಿಂದಲೇ ಮನುಷ್ಯರ ಮತಿ-ಗತಿ ಪಾಪದ ಕಡೆಗೆ ವಾಲಿತು. ॥ ೨೯ ॥ ಲಕ್ಷ್ಮೀಪತಿಯಾದ ಭಗವಾನ್ ಶ್ರೀಕೃಷ್ಣನು ತನ್ನ ಚರಣಕಮಲಗಳಿಂದ ಭೂಮಿಯನ್ನು ಸ್ಪರ್ಶಿಸುತ್ತಿದ್ದವರೆಗೆ ಕಲಿಯುಗವು ಪೃಥಿವಿಯಲ್ಲಿ ತನ್ನ ಕಾಲನ್ನು ಊರದಾದನು. ॥ ೩೦ ॥ ಪರೀಕ್ಷಿತನೇ ! ಸಪ್ತರ್ಷಿಗಳು ಮಘಾನಕ್ಷತ್ರದಲ್ಲಿ ಸಂಚರಿಸುವ ಸಮಯದಲ್ಲೇ ಕಲಿಯುಗದ ಪ್ರಾರಂಭವಾಗುತ್ತದೆ. ಕಲಿಯುಗದ ಅವಧಿ ದೇವತೆಗಳ ವರ್ಷಗಣನೆಯಂತೆ ಹನ್ನೆರಡುನೂರು ವರ್ಷಗಳು ಅಂದರೆ, ಮನುಷ್ಯರ ಗಣನೆಯಂತೆ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರ್ಷಗಳು. ॥ ೩೧ ॥ ಸಪ್ತರ್ಷಿಗಳು ಮಘಾನಕ್ಷತ್ರದಿಂದ ಪೂರ್ವಾಷಾಢಾ ನಕ್ಷತ್ರಕ್ಕೆ ಹೋದಾಗ ನಂದರಾಜನ ರಾಜ್ಯವಿರುವುದು. ಆಗಿನಿಂದಲೇ ಕಲಿಯುಗದ ವೃದ್ಧಿ ಪ್ರಾರಂಭವಾಗುವುದು. ॥ ೩೨ ॥ ಭಗವಾನ್ ಶ್ರೀಕೃಷ್ಣನು ತನ್ನ ಪರಮಧಾಮಕ್ಕೆ ಪ್ರಯಾಣ ಮಾಡಿದ ದಿನವೇ ಕಲಿಯುಗದ ಪ್ರಾರಂಭವಾಯಿತೆಂದು ಪುರಾತತ್ತ್ವವನ್ನು ಬಲ್ಲವರು ಹೇಳುತ್ತಾರೆ. ॥ ೩೩ ॥ ಪರೀಕ್ಷಿತನೆ ! ದೇವತೆಗಳ ವರ್ಷಗಣನೆಯಂತೆ ಒಂದು ಸಾವಿರ ವರ್ಷಗಳು ಕಳೆದುಹೋದಾಗ ಕಲಿಯುಗದ ಕೊನೆಯ ದಿನಗಳಲ್ಲಿ ಪುನಃ ಭಗವಾನ್ ಕಲ್ಕಿಯ ಕೃಪೆಯಿಂದ ಮನುಷ್ಯರ ಮನಸ್ಸುಗಳಲ್ಲಿ ಸಾತ್ತ್ವಿಕತೆಯ ಸಂಚಾರವಾಗುವುದು. ಜನರು ತಮ್ಮ ವಾಸ್ತವಿಕ ಸ್ವರೂಪವನ್ನು ತಿಳಿದುಕೊಳ್ಳುವರು ಹಾಗೂ ಆಗಿನಿಂದಲೇ ಕೃತಯುಗದ ಪ್ರಾರಂಭವೂ ಆಗುವುದು. ॥ ೩೪॥

ಪರೀಕ್ಷಿತನೇ ! ನಾನಾದರೋ ನಿನಗೆ ಕೇವಲ ಮನುವಂಶವನ್ನೇ ಸಂಕ್ಷೇಪವಾಗಿ ವರ್ಣಿಸಿರುವೆನು. ಮನುವಂಶದ ಗಣನೆಯಾಗುವಂತೆಯೇ ಪ್ರತಿಯೊಂದು ಬ್ರಾಹ್ಮಣ, ವೈಶ್ಯ, ಶೂದ್ರರ ವಂಶ ಪರಂಪರೆಯನ್ನು ಭಾವಿಸಬೇಕು. ॥ ೩೫ ॥ ರಾಜನೇ ! ಯಾವ ಪುರುಷರ ಮತ್ತು ಮಹಾತ್ಮರ ಕುರಿತು ನಾನು ನಿನಗೆ ವರ್ಣಿಸಿರುವೆನೋ, ಅವರನ್ನು ಕೇವಲ ಹೆಸರಿನಿಂದಲೇ ಈಗ ಗುರುತಿಸಲಾಗುತ್ತದೆ. ಈಗ ಅವರಿಲ್ಲ ಕೇವಲ ಅವರ ಕಥೆಗಳು ಉಳಿದುಕೊಂಡಿವೆ. ಈಗ ಅವರ ಕೀರ್ತಿಯೇ ಪೃಥಿವಿಯಲ್ಲಿ ಅಲ್ಲಲ್ಲಿ ಕೇಳಲು ಬರುತ್ತದೆ. ॥ ೩೬ ॥ ಭೀಷ್ಮಪಿತಾಮಹರ ತಂದೆ ರಾಜಾಶಂತನುವಿನ ತಮ್ಮ ದೇವಾಪಿಯು ಮತ್ತು ಇಕ್ಷ್ವಾಕುವಂಶದ ಮರು ಎಂಬುವರು ಈ ಸಮಯದಲ್ಲಿ ಕಲಾಪಗ್ರಾಮದಲ್ಲಿ ನೆಲೆಸಿರುವರು. ಅವರು ಬಹಳ ದೊಡ್ಡ ಯೋಗಬಲದಿಂದ ಕೂಡಿರುವರು. ॥ ೩೭ ॥

ತಾವಿಹೈತ್ಯ ಕಲೇರಂತೇ ವಾಸುದೇವಾನುಶಿಕ್ಷಿತೌ ।
ವರ್ಣಾಶ್ರಮಯುತಂ ಧರ್ಮಂ ಪೂರ್ವವತ್ಪ್ರಥಯಿಷ್ಯತಃ
॥ ೩೮ ॥

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಮ್ ।
ಅನೇನ ಕ್ರಮಯೋಗೇನ ಭುವಿ ಪ್ರಾಣೇಷು ವರ್ತತೇ
॥ ೩೯ ॥

ರಾಜನ್ನೇತೇ ಮಯಾ ಪ್ರೋಕ್ತಾ ನರದೇವಾಸ್ತಥಾಪರೇ ।
ಭೂಮೌ ಮಮತ್ವಂ ಕೃತ್ವಾಂತೇ ಹಿತ್ವೇಮಾಂ ನಿಧನಂ ಗತಾಃ
॥ ೪೦ ॥

ಕೃಮಿವಿಡ್ಭಸ್ಮಸಂಜ್ಞಾಂತೇ ರಾಜನಾಮ್ನೋಽಪಿ ಯಸ್ಯ ಚ ।
ಭೂತಧ್ರುಕ್ ತತ್ ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ
॥ ೪೧ ॥

ಕಥಂ ಸೇಯಮಖಂಡಾ ಭೂಃ ಪೂರ್ವೈರ್ಮೇ ಪುರುಷೈರ್ಧೃತಾ ।
ಮತ್ಪುತ್ರಸ್ಯ ಚ ಪೌತ್ರಸ್ಯ ಮತ್ಪೂರ್ವಾ ವಂಶಜಸ್ಯ ವಾ
॥ ೪೨ ॥

ತೇಜೋಽಬನ್ನಮಯಂ ಕಾಯಂ ಗೃಹೀತ್ವಾಽಽತ್ಮತಯಾ ಬುಧಾಃ ।
ಮಹೀಂ ಮಮತಯಾ ಚೋಭೌ ಹಿತ್ವಾಂತೇಽದರ್ಶನಂ ಗತಾಃ
॥ ೪೩ ॥

ಯೇ ಯೇ ಭೂಪತಯೋ ರಾಜನ್ ಭುಂಜಂತಿ ಭುವಮೋಜಸಾ ।
ಕಾಲೇನ ತೇ ಕೃತಾಃ ಸರ್ವೇ ಕಥಾಮಾತ್ರಾಃ ಕಥಾಸು ಚ
॥ ೪೪ ॥

ಕಲಿಯುಗದ ಕೊನೆಯಲ್ಲಿ ಭಗವಾನ್ ಕಲ್ಕಿಯ ಅಪ್ಪಣೆಯಂತೆ ಅವರು ಪುನಃ ಇಲ್ಲಿಗೆ ಬಂದು ಮೊದಲಿನಂತೆ ವರ್ಣಾಶ್ರಮ ಧರ್ಮವನ್ನು ವಿಸ್ತಾರಗೊಳಿಸುವರು. ॥೩೮॥ ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂಬ ಈ ನಾಲ್ಕುಯುಗಗಳು ಹಿಂದಿನ ಕ್ರಮದಂತೆ ತಮ್ಮ-ತಮ್ಮ ಸಮಯದಲ್ಲಿ ಪೃಥಿವಿಯಲ್ಲಿನ ಪ್ರಾಣಿಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಾ ಇರುವವು. ॥ ೩೯ ॥ ಪರೀಕ್ಷಿತನೇ ! ನಾನು ನಿನಗೆ ವರ್ಣಿಸಿದ ರಾಜರೆಲ್ಲರೂ ಹಾಗೂ ಇವರಲ್ಲದೆ ಇತರ ರಾಜರೂ ಕೂಡ ಈ ಪೃಥಿವಿಯನ್ನು ನನ್ನದು-ನನ್ನದು ಎಂದು ಹೇಳುತ್ತಲೇ ಇದ್ದರು. ಆದರೆ ಕೊನೆಗೆ ಸತ್ತು ಮಣ್ಣುಪಾಲಾದರು. ॥ ೪೦ ॥ ಈ ಶರೀರವನ್ನು ಯಾರೇ ರಾಜರೆಂದು ಹೇಳಲಿ; ಆದರೆ ಕೊನೆಯಲ್ಲಿ ಇದು ಕ್ರಿಮಿಗಳ ರಾಶಿ ಅಥವಾ ಬೂದಿಯಾಗಿಯೇ ಪರಿಣತವಾಗುವುದು. ಬೂದಿಯಾಗಿಯೇ ಇರುವುದು. ಇದೇ ಶರೀರಕ್ಕಾಗಿ ಅಥವಾ ಇದರ ಸಂಬಂಧಿಗಳಿಗಾಗಿ ಯಾವುದೇ ಪ್ರಾಣಿಯನ್ನು ಹಿಂಸಿಸುವವರು ತಮ್ಮ ಸ್ವಾರ್ಥವಾಗಲೀ, ಪರಮಾರ್ಥವಾಗಲೀ ಅರಿತವರಲ್ಲ, ಏಕೆಂದರೆ, ಪ್ರಾಣಿಗಳನ್ನು ಹಿಂಸಿಸುವುದು ನರಕದ ದ್ವಾರವೇ ಆಗಿದೆ. ॥ ೪೧ ॥ ನನ್ನ ತಾತ-ಮುತ್ತಾತಂದಿರು ಈ ಅಖಂಡ ಭೂಮಂಡಲಕ್ಕೆ ಶಾಸಕರಾಗಿದ್ದರು. ಈಗ ಇದು ನನ್ನ ಅಧೀನದಲ್ಲಿದೆ. ನಾನು ಸತ್ತ ಬಳಿಕ ನನ್ನ ಮಕ್ಕಳು-ಮೊಮ್ಮಕ್ಕಳು, ನನ್ನ ವಂಶದವರು ಹೀಗೆ ಇದನ್ನು ಅನುಭವಿಸುವರು ಎಂದು ಆ ಜನರು ಯೋಚಿಸುತ್ತಲೇ ಇರುವರು. ॥ ೪೨ ॥ ಅಂತಹ ಆ ಮೂರ್ಖರು ಬೆಂಕಿ, ನೀರು, ಮಣ್ಣಿನ ಈ ಶರೀರವನ್ನು ತನ್ನದೆಂದು ತಿಳಿದುಕೊಂಡು, ದುರಭಿಮಾನದಿಂದ ಈ ಪೃಥಿವಿಯು ನನ್ನದಾಗಿದೆ ಎಂದು ಜಂಭಕೊಚ್ಚಿಕೊಳ್ಳುವರು. ಕೊನೆಗೆ ಈ ಶರೀರ ಮತ್ತು ಪೃಥಿವಿಯನ್ನು ಬಿಟ್ಟು ಅವರು ಅದೃಶ್ಯರಾಗಿ ಹೋಗುವರು. ॥ ೪೩ ॥ ಪ್ರಿಯ ಪರೀಕ್ಷಿತನೇ ! ಯಾವ ಯಾವ ರಾಜರು ಬಹಳ ಉತ್ಸಾಹದಿಂದ ಮತ್ತು ಬಲ-ಪೌರುಷದಿಂದ ಈ ಭೂಮಿಯನ್ನು ಅನುಭವಿಸಿದರೋ ಅವರೆಲ್ಲರನ್ನೂ ಕಾಲವು ತನ್ನ ವಿಕರಾಳ ಮುಖದಿಂದ ನುಂಗಿಹಾಕಿತು. ಈಗ ಕೇವಲ ಇತಿಹಾಸದಲ್ಲಿ ಅವರ ಕಥೆಮಾತ್ರ ಉಳಿದುಕೊಂಡಿದೆ. ॥ ೪೪ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಕಲಿಯುಗಧರ್ಮ ಮತ್ತು ಕಲಿಯುಗದ ದೋಷಗಳಿಂದ ಪಾರಾಗುವ ಉಪಾಯ – ನಾಮಸಂಕೀರ್ತನೆ

ಶ್ರೀಶುಕ ಉವಾಚ

ದೃಷ್ಟ್ವಾಽಽತ್ಮನಿ ಜಯೇ ವ್ಯಗ್ರಾನ್ ನೃಪಾನ್ ಹಸತಿ ಭೂರಿಯಮ್ ।
ಅಹೋ ಮಾ ವಿಜಿಗೀಷಂತಿ ಮೃತ್ಯೋಃ ಕ್ರೀಡನಕಾ ನೃಪಾಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ರಾಜರುಗಳು ತನ್ನ ಮೇಲೆ ವಿಜಯ ಸಾಧಿಸಲು ಹಾತೊರೆಯುತ್ತಿರುವುದನ್ನು ನೋಡಿ ಭೂದೇವಿಯು - 'ಎಂತಹ ಮೂರ್ಖರು ಇವರು ? ತಾವೇ ಮೃತ್ಯುವಿನ ಬೊಂಬೆಯಾಗಿರುವಾಗ ನನ್ನನ್ನು ಜಯಿಸಬೇಕೆಂದು ಹವಣಿಸುತ್ತಿದ್ದಾರಲ್ಲ! ಎಂದು ನಗುತ್ತಾಳೆ. ॥ ೧ ॥

ಕಾಮ ಏಷ ನರೇಂದ್ರಾಣಾಂ ಮೋಘಃ ಸ್ಯಾದ್ವಿದುಷಾಮಪಿ ।
ಯೇನ ಫೇನೋಪಮೇ ಪಿಂಡೇ ಯೇಽತಿವಿಶ್ರಂಭಿತಾ ನೃಪಾಃ
॥ ೨ ॥

ಪೂರ್ವಂ ನಿರ್ಜಿತ್ಯ ಷಡ್ವರ್ಗಂ ಜೇಷ್ಯಾಮೋ ರಾಜಮಂತ್ರಿಣಃ ।
ತತಃ ಸಚಿವಪೌರಾಪ್ತಕರೀಂದ್ರಾನಸ್ಯ ಕಂಟಕಾನ್
॥ ೩ ॥

ಏವಂ ಕ್ರಮೇಣ ಜೇಷ್ಯಾಮಃ ಪೃಥ್ವೀಂ ಸಾಗರಮೇಖಲಾಮ್ ।
ಇತ್ಯಾಶಾಬದ್ಧಹೃದಯಾ ನ ಪಶ್ಯಂತ್ಯಂತಿಕೇಽಂತಕಮ್
॥ ೪ ॥

ಸಮುದ್ರಾವರಣಾಂ ಜೇತ್ವಾ ಮಾಂ ವಿಶಂತ್ಯಬ್ಧಿಮೋಜಸಾ ।
ಕಿಯದಾತ್ಮಜಯಸ್ಯೈತನ್ಮುಕ್ತಿರಾತ್ಮಜಯೇ ಫಲಮ್
॥ ೫ ॥

ಯಾಂ ವಿಸೃಜ್ಯೈವ ಮನವಸ್ತತ್ಸುತಾಶ್ಚ ಕುರೂದ್ವಹ ।
ಗತಾ ಯಥಾಗತಂ ಯುದ್ಧೇ ತಾಂ ಮಾಂ ಜೇಷ್ಯಂತ್ಯಬುದ್ಧಯಃ
॥ ೬ ॥

ಮತ್ಕೃತೇ ಪಿತೃಪುತ್ರಾಣಾಂ ಭ್ರಾತೃಣಾಂ ಚಾಪಿ ವಿಗ್ರಹಃ ।
ಜಾಯತೇ ಹ್ಯಸತಾಂ ರಾಜ್ಯೇ ಮಮತಾಬದ್ಧಚೇತಸಾಮ್
॥ ೭ ॥

ಮಮೈವೇಯಂ ಮಹೀ ಕೃತ್ಸ್ನಾ ನ ತೇ ಮೂಢೇತಿ ವಾದಿನಃ ।
ಸ್ಪರ್ಧಮಾನಾ ಮಿಥೋ ಘ್ನಂತಿ ಮ್ರಿಯಂತೇ ಮತ್ಕೃತೇ ನೃಪಾಃ
॥ ೮ ॥

ಪೃಥುಃ ಪುರೂರವಾ ಗಾಧಿರ್ನಹುಷೋ ಭರತೋಽರ್ಜುನಃ ।
ಮಾಂಧಾತಾ ಸಗರೋ ರಾಮಃ ಖಟ್ವಾಂಗೋ ಧುಂದುಹಾ ರಘುಃ
॥ ೯ ॥

ತೃಣಬಿಂದುರ್ಯಯಾತಿಶ್ಚ ಶರ್ಯಾತಿಃ ಶಂತನುರ್ಗಯಃ ।
ಭಗೀರಥಃ ಕುವಲಯಾಶ್ವಃ ಕಕುತ್ಸ್ಥೋ ನೈಷಧೋ ನೃಗಃ
॥ ೧೦ ॥

ತಾವು ಒಂದಲ್ಲ ಒಂದು ದಿನ ಸಾವನ್ನು ಅಪ್ಪಲೇಬೇಕು ಎಂದು ತಿಳಿದಿದ್ದರೂ ಈ ರಾಜರು ನನ್ನನ್ನು ಜಯಿಸಬೇಕೆಂದು ವ್ಯರ್ಥವಾಗಿ ಬಯಸುತ್ತಿದ್ದಾರಲ್ಲ! ನಿಜವಾಗಿ ಕಾಮನೆಗಳಿಂದ ಕುರುಡರಾದ ಇವರು ನೀರಮೇಲಣ ಗುಳ್ಳೆಯಂತೆ ಕ್ಷಣಭಂಗುರವಾದ ಶರೀರದ ಮೇಲೆ ವಿಶ್ವಾಸವಿರಿಸಿ ಮೋಸಹೋಗುತ್ತಿದ್ದಾರಲ್ಲ! ॥ ೨ ॥ ಅವರು ಯೋಚಿಸುತ್ತಾರೆ – ನಾವು ಮೊದಲು ಮನಸ್ಸು ಸಹಿತ ಐದು ಇಂದ್ರಿಯಗಳನ್ನು ವಶಪಡಿಸಿಕೊಳ್ಳುವೆವು. ಏಕೆಂದರೆ, ಇವನ್ನು ಗೆದ್ದುಕೊಳ್ಳದೆ ಹೊರಗಿನ ಶತ್ರುಗಳನ್ನು ಗೆಲ್ಲುವುದು ಕಷ್ಟವಾಗಿದೆ. ಅನಂತರ ನಮ್ಮ ಶತ್ರುಗಳನ್ನು, ಮಂತ್ರಿ-ಅಮಾತ್ಯರನ್ನು, ನಾಗರಿಕರನ್ನು, ಮುಖಂಡರನ್ನು, ಸೈನ್ಯವನ್ನು ವಶಪಡಿಸಿಕೊಳ್ಳುವೆವು. ನಮ್ಮ ವಿಜಯದ ಹಾದಿಯಲ್ಲಿ ಮುಳ್ಳಾಗುವವರನ್ನು ನಾವು ಜಯಿಸಿ ಬಿಡಬಹುದು. ॥ ೩ ॥ ಹೀಗೆ ನಿಧಾನವಾಗಿ ಇಡೀ ಪೃಥ್ವಿಯೇ ನಮ್ಮ ಕೈವಶವಾಗಬಹುದು. ಮತ್ತೆ ಸಮುದ್ರವೇ ಕಂದಕದಂತೆ ನಮಗೆ ಉಪಯೋಗವಾಗಬಹುದು. ಇಂತಹ ಅನೇಕ ಆಸೆಗಳನ್ನು ಮನಸ್ಸಿನಲ್ಲಿರಿಸಿಕೊಳ್ಳುವರು. ಆದರೆ ಅವರ ತಲೆಯ ಮೇಲೆ ಮೃತ್ಯುವೇ ಕೂತಿದೆ ಎಂಬುದು ಸ್ವಲ್ಪವೂ ತೋಚುವುದಿಲ್ಲ ॥ ೪ ॥ ಇಷ್ಟೇ ಅಲ್ಲ, ಒಂದು ದ್ವೀಪವು ಕೈವಶವಾದರೆ ಮತ್ತೊಂದು ದ್ವೀಪವನ್ನು ಗೆದ್ದುಕೊಳ್ಳಲು ಬಹಳ ಸಕ್ತಿ, ಉತ್ಸಾಹದಿಂದ ಸಮುದ್ರ ಯಾತ್ರೆಯನ್ನು ಮಾಡುತ್ತಾರೆ. ತನ್ನ ಮನಸ್ಸು, ಇಂದ್ರಿಯಗಳನ್ನು ವಶಪಡಿಸಿಕೊಂಡು ಜನರು ಮುಕ್ತಿಯನ್ನು ಪಡೆಯ ಬಹುದಾಗಿದೆ. ಆದರೆ ಇವರು ಅವುಗಳನ್ನು ವಶಪಡಿಸಿಕೊಂಡರೂ ಅಲ್ಪವಾದ ಭೂಭಾಗವನ್ನು ಪಡೆದುಕೊಳ್ಳುತ್ತಾರೆ. ಇಷ್ಟು ಪರಿಶ್ರಮದ ಮತ್ತು ಆತ್ಮಸಂಯದ ಫಲವು ಎಷ್ಟು ತುಚ್ಛವಾಗಿದೆ ?" ॥ ೫ ॥ ಪರೀಕ್ಷಿತನೇ ! ಪೃಥಿವಿಯು ಹೇಳುತ್ತಾಳೆ – "ದೊಡ್ಡ-ದೊಡ್ಡ ಮನುಗಳು, ಅವರ ವೀರಪುತ್ರರು ನನ್ನನ್ನು ಬಿಟ್ಟು ಎಲ್ಲಿಂದ ಬಂದಿದ್ದರೋ ಆಲ್ಲಿಗೆ ಬರಿಗೈಯಿಂದ ಹೊರಟುಹೋದರು. ನನ್ನನ್ನು ತಮ್ಮೊಂದಿಗೆ ಕೊಂಡೊಯ್ಯಲಾಗಲಿಲ್ಲ. ಈಗ ಈ ಮೂರ್ಖರಾಜರು ನನ್ನನ್ನು ಯುದ್ಧದಲ್ಲಿ ಗೆದ್ದು ವಶಪಡಿಸಿಕೊಳ್ಳಲು ಬಯಸುತ್ತಿದ್ದಾರೆ. ॥ ೬ ॥ ಈ ಪೃಥಿವಿಯು ನನ್ನದಾಗಿದೆ ಎಂಬ ದುರಾಗ್ರಹವು ಯಾರ ಚಿತ್ತದಲ್ಲಿ ದೃಢಮೂಲವಾಗಿದೆಯೋ ಅಂತಹ ದುಷ್ಟರ ರಾಜ್ಯದಲ್ಲಿ ನನಗಾಗಿ ತಂದೆ-ಮಕ್ಕಳು, ಅಣ್ಣ-ತಮ್ಮಂದಿರು ಪರಸ್ಪರ ಕಾದಾಡುತ್ತಾರೆ. ॥ ೭ ॥ ಅವರು ಒಬ್ಬರು ಮತ್ತೊಬ್ಬರಿಗೆ – ಎಲೈ ಮೂರ್ಖನೇ ! ಈ ಇಡೀ ಪೃಥಿವಿಯು ನನ್ನದಾಗಿದೆ, ನಿನ್ನದಲ್ಲ, ಹೀಗೆ ರಾಜರು ಹೇಳುತ್ತಾ ಇರುತ್ತಾರೆ. ಹೀಗೆ ಪರಸ್ಪರ ಸ್ಪರ್ಧಿಸುತ್ತಾ ನನಗಾಗಿ ಒಬ್ಬರು ಮತ್ತೊಬ್ಬರನ್ನು ಕೊಲ್ಲುತ್ತಾ ತಾವು ಸತ್ತುಹೋಗುವರು. ॥ ೮ ॥ ಪೃಥು, ಪುರೂರವ, ಗಾಧಿ, ನಹುಷ, ಭರತ, ಸಹಸ್ರಾರ್ಜುನ, ಮಾಂಧಾತಾ, ಸಗರ, ರಾಮ, ಖಟ್ವಾಂಗ, ಧುಂಧುಮಾರ, ರಘು, ತೃಣಬಿಂದು, ಯಯಾತಿ, ಶರ್ಯಾತಿ, ಶಂತನು, ಗಯ, ಭಗೀರಥ, ಕುವಲಯಾಶ್ವ, ಕಕುಸ್ಥ ನಳ, ನೃಗ, ಹಿರಣ್ಯಕಶಿಪು, ವೃತ್ರಾಸುರ, ಲೋಕದ್ರೋಹಿರಾವಣ, ನಮೂಚಿ, ಶಂಬರ, ಭೌಮಾಸುರ, ಹಿರಣ್ಯಾಕ್ಷ, ತಾರಕಾಸುರ ಮತ್ತು ಅನೇಕ

ಹಿರಣ್ಯಕಶಿಪುರ್ವ್ಯತ್ರೋ ರಾವಣೋ ಲೋಕರಾವಣಃ ।
ನಮುಚಿಃ ಶಂಬರೋ ಭೌಮೋ ಹಿರಣ್ಯಾಕ್ಷೋಽಥ ತಾರಕಃ
॥ ೧೧ ॥

ಅನ್ಯೇ ಚ ಬಹವೋ ದೈತ್ಯಾ ರಾಜಾನೋ ಯೇ ಮಹೇಶ್ವರಾಃ ।
ಸರ್ವೇ ಸರ್ವವಿದಃ ಶೂರಾಃ ಸರ್ವೇ ಸರ್ವಜಿತೋಽಜಿತಾಃ
॥ ೧೨ ॥

ಮಮತಾಂ ಮಯ್ಯವರ್ತಂತ ಕೃತ್ವೋಚ್ಚೈರ್ಮರ್ತ್ಯಧರ್ಮಿಣಃ ।
ಕಥಾವಶೇಷಾಃ ಕಾಲೇನ ಹ್ಯಕೃತಾರ್ಥಾಃ ಕೃತಾ ವಿಭೋ
॥ ೧೩ ॥

ಕಥಾ ಇಮಾಸ್ತೇ ಕಥಿತಾ ಮಹೀಯಸಾಂ
ವಿತಾಯ ಲೋಕೇಷು ಯಶಃ ಪರೇಯುಷಾಮ್ ।
ವಿಜ್ಞಾನವೈರಾಗ್ಯವಿವಕ್ಷಯಾ ವಿಭೋ
ವಚೋವಿಭೂತೀರ್ನ ತು ಪಾರಮಾರ್ಥ್ಯಮ್ ॥ ೧೪ ॥

ಯಸ್ಯೋತ್ತಮಶ್ಲೋಕಗುಣಾನುವಾದಃ
ಸಂಗೀಯತೇಽಭೀಕ್ಷ್ಣಮಮಂಗಲಘ್ನಃ ।
ತಮೇವ ನಿತ್ಯಂ ಶೃಣುಯಾದಭೀಕ್ಷ್ಣಂ
ಕೃಷ್ಣೇಽಮಲಾಂ ಭಕ್ತಿಮಭೀಪ್ಸಮಾನಃ ॥ ೧೫ ॥

ರಾಜೋವಾಚ

ಕೇನೋಪಾಯೇನ ಭಗವನ್ಕಲೇರ್ದೋಷಾನ್ಕಲೌ ಜನಾಃ ।
ವಿಧಮಿಷ್ಯಂತ್ಯುಪಚಿತಾಂಸ್ತನ್ಮೇ ಬ್ರೂಹಿ ಯಥಾ ಮುನೇ
॥ ೧೬ ॥

ಯುಗಾನಿ ಯುಗಧರ್ಮಾಂಶ್ಚ ಮಾನಂ ಪ್ರಲಯಕಲ್ಪಯೋಃ ।
ಕಾಲಸ್ಯೇಶ್ವರರೂಪಸ್ಯ ಗತಿಂ ವಿಷ್ಣೋರ್ಮಹಾತ್ಮನಃ
॥ ೧೭ ॥

ಶ್ರೀಶುಕ ಉವಾಚ

ಕೃತೇ ಪ್ರವರ್ತತೇ ಧರ್ಮಶ್ಚತುಷ್ಪಾತ್ತಜ್ಜನೈರ್ಧೃತಃ ।
ಸತ್ಯಂ ದಯಾ ತಪೋ ದಾನಮಿತಿ ಪಾದಾ ವಿಭೋರ್ನೃಪ
॥ ೧೮ ॥

ಸಂತುಷ್ಟಾಃ ಕರುಣಾ ಮೈತ್ರಾಃ ಶಾಂತಾ ದಾಂತಾಸ್ತಿತಿಕ್ಷವಃ ।
ಆತ್ಮಾರಾಮಾಃ ಸಮದೃಶಃ ಪ್ರಾಯಶಃ ಶ್ರಮಣಾ ಜನಾಃ
॥ ೧೯ ॥

ದೈತ್ಯರು, ಶಕ್ತಿಶಾಲಿಯಾದ ರಾಜರು ಆಗಿ ಹೋದರು. ಇವರೆಲ್ಲರೂ ಎಲ್ಲವನ್ನೂ ಆರಿತಿದ್ದರು. ಶೂರರಾಗಿದ್ದರು. ಎಲ್ಲರೂ ದಿಗ್ವಿಜಯದಲ್ಲಿ ಇತರರನ್ನು ಸೋಲಿಸಿದರು, ಇತರರು ಇವರನ್ನು ಗೆಲ್ಲಲಾಗಲಿಲ್ಲ; ಆದರೆ ಎಲ್ಲರೂ ಮೃತ್ಯುವಿಗೆ ತುತ್ತಾದರು. ರಾಜನೇ! ಅವರು ತಮ್ಮ ಅಂತಃಕರಣದಲ್ಲಿ ನನ್ನ (ಪೃಥಿವಿ) ಕುರಿತು ಮಮತೆಯನ್ನಿಟ್ಟಿದ್ದರು ಹಾಗೂ 'ಈ ಪೃಥಿವಿಯು ನನ್ನದಾಗಿದೆ' ಎಂದು ಭಾವಿಸಿದ್ದರು. ಆದರೆ ವಿಕರಾಳವಾದ ಕಾಲನು ಅವರ ಲಾಲಸೆಯನ್ನು ಪೂರ್ಣವಾಗಲು ಬಿಡಲಿಲ್ಲ. ಈಗ ಅವರ ಬಲ-ಪೌರುಷ, ಶರೀರ ಮುಂತಾದವುಗಳು ಯಾವುದೂ ಉಳಿಯದೇ ಕೇವಲ ಅವರ ಕಥೆ ಮಾತ್ರ ಉಳಿದುಕೊಂಡಿದೆ. ॥ ೯-೧೩ ॥

ಪರೀಕ್ಷಿತನೇ! ಜಗತ್ತಿನಲ್ಲಿ ದೊಡ್ಡ-ದೊಡ್ಡ ಪ್ರತಾಪಿಗಳಾದ ಮಹಾಪುರುಷರು ಆಗಿದ್ದಾರೆ. ಅವರು ಲೋಕಗಳಲ್ಲಿ ತಮ್ಮ ಕೀರ್ತಿಯನ್ನು ವಿಸ್ತರಿಸಿ ಇಲ್ಲಿಂದ ಹೊರಟುಹೋದರು. ನಾನು ನಿನಗೆ ಜ್ಞಾನ ಮತ್ತು ವೈರಾಗ್ಯದ ಉಪದೇಶವನ್ನು ಕೊಡಲೆಂದೇ ಅವರ ಕಥೆಗಳನ್ನು ಹೇಳಿರುವೆನು. ಇದೆಲ್ಲವೂ ವಾಣಿಯ ವಿಲಾಸವಾಗಿದೆ. ಇದರಲ್ಲಿ ಪಾರಮಾರ್ಥಿಕ ಸತ್ಯವು ಸ್ವಲ್ಪವೂ ಇಲ್ಲ ॥ ೧೪ ॥ ಭಗವಾನ್ ಶ್ರೀಕೃಷ್ಣನ ಗುಣಾನುವಾದವೇ ಸಮಸ್ತ ಅಮಂಗಳವನ್ನು ನಾಶಮಾಡುವಂತಹುದು. ದೊಡ್ಡ-ದೊಡ್ಡ ಮಹಾತ್ಮರೂ ಅದನ್ನೇ ಗಾಯನಮಾಡುತ್ತಾ ಇರುತ್ತಾರೆ. ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಅನನ್ಯ ಪ್ರೇಮಮಯ ಭಕ್ತಿಯ ಬಯಕೆಯಿರುವವರು ನಿತ್ಯ-ನಿರಂತರ ಭಗವಂತನ ದಿವ್ಯ ಗುಣಾನುವಾದವನ್ನೇ ಶ್ರವಣಿಸುತ್ತಾ ಇರಬೇಕು. ॥ ೧೫ ॥

ಪರೀಕ್ಷಿದ್ರಾಜನು ಕೇಳಿದನು - ಮಹಾತ್ಮರೇ! ನನಗಾದರೋ ಕಲಿಯುಗದಲ್ಲಿ ರಾಶಿ-ರಾಶಿಯಾಗಿ ದೋಷಗಳೇ ಕಂಡುಬರುತ್ತವೆ. ಹಾಗಿರುವಾಗ ಜನರು ಯಾವ ಉಪಾಯದಿಂದ ಆ ದೋಷಗಳನ್ನು ನಾಶಪಡಿಸಬಲ್ಲರು? ಇದಲ್ಲದೆ ಯುಗಗಳ ಸ್ವರೂಪ, ಅವುಗಳ ಧರ್ಮ, ಕಲ್ಪದಸ್ಥಿತಿ, ಪ್ರಳಯದ ಪರಿಮಾಣ ಹಾಗೂ ಸರ್ವವ್ಯಾಪಕ, ಸರ್ವಶಕ್ತನಾದ ಭಗವಂತನ ಕಾಲಸ್ವರೂಪವನ್ನು ನಿರೂಪಣೆ ಮಾಡಿರಿ. ॥ ೧೬-೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಕೃತಯುಗದಲ್ಲಿ ಧರ್ಮಕ್ಕೆ ನಾಲ್ಕು ಚರಣಗಳಿರುತ್ತವೆ. ಸತ್ಯ, ದಯೆ, ತಪಸ್ಸು, ದಾನ - ಇವೇ ಆ ನಾಲ್ಕು ಪಾದಗಳು. ಆ ಸಮಯದಲ್ಲಿ ಜನರು ಪೂರ್ಣನಿಷ್ಠೆಯಿಂದ ತಮ್ಮ-ತಮ್ಮ ಧರ್ಮವನ್ನು ಪಾಲಿಸುತ್ತಾರೆ. ಧರ್ಮವು ಸಾಕ್ಷಾತ್ ಭಗವಂತನ ಸ್ವರೂಪವಾಗಿದೆ. ॥ ೧೮ ॥ ಕೃತಯುಗದ ಜನರು ಬಹಳ ಸಂತೋಷಿಗಳೂ, ದಯಾಳುಗಳೂ ಆಗಿರುತ್ತಾರೆ. ಅವರು ಎಲ್ಲರೊಂದಿಗೆ ಮೈತ್ರಿಯ ವ್ಯವಹಾರಮಾಡುತ್ತಾ ಶಾಂತರಾಗಿರುತ್ತಾರೆ. ಮನಸ್ಸು-ಇಂದ್ರಿಯಗಳು ಅವರ ವಶದಲ್ಲಿರುತ್ತವೆ. ಸುಖ-ದುಃಖಾದಿ ದ್ವಂದ್ವಗಳನ್ನು ಅವರು ಸಮವಾಗಿ ಸಹಿಸುತ್ತಾರೆ. ಹೆಚ್ಚಿನವರು ಸಮದರ್ಶಿಯೂ, ಆತ್ಮಾರಾಮರೂ ಆಗಿರುತ್ತಾರೆ. ಉಳಿದ ಜನರು ಸ್ವಸ್ವರೂಪ ಸ್ಥಿತಿಗಾಗಿ ಅಭ್ಯಾಸದಲ್ಲಿ ತತ್ಪರರಾಗಿರುತ್ತಾರೆ. ॥ ೧೯ ॥

ತ್ರೇತಾಯಾಂ ಧರ್ಮಪಾದಾನಾಂ ತುರ್ಯಾಂಶೋ ಹೀಯತೇ ಶನೈಃ ।
ಅಧರ್ಮಪಾದೈರನೃತಹಿಂಸಾಸಂತೋಷವಿಗ್ರಹೈಃ
॥ ೨೦ ॥

ತದಾ ಕ್ರಿಯಾತಪೋನಿಷ್ಠಾ ನಾತಿಹಿಂಸ್ರಾ ನ ಲಂಪಟಾಃ ।
ತ್ರೈವರ್ಗಿಕಾಸ್ತ್ರಯೀವೃದ್ಧಾ ವರ್ಣಾ ಬ್ರಹ್ಮೋತ್ತರಾ ನೃಪ
॥ ೨೧ ॥

ತಪಃಸತ್ಯದಯಾದಾನೇಷ್ವರ್ಧಂ ಹ್ರಸತಿ ದ್ವಾಪರೇ ।
ಹಿಂಸಾತುಷ್ಟ್ಯನೃತದ್ವೇಷೈರ್ಧರ್ಮಸ್ಯಾಧರ್ಮಲಕ್ಷಣೈಃ
॥ ೨೨ ॥

ಯಶಸ್ವಿನೋ ಮಹಾಶಾಲಾಃ ಸ್ವಾಧ್ಯಾಯಾಧ್ಯಯನೇ ರತಾಃ ।
ಆಢ್ಯಾಃ ಕುಟುಂಬಿನೋ ಹೃಷ್ಟಾ ವರ್ಣಾಃ ಕ್ಷತ್ರದ್ವಿಜೋತ್ತರಾಃ
॥ ೨೩ ॥

ಕಲೌ ತು ಧರ್ಮಹೇತೂನಾಂ
ತುರ್ಯಾಂಶೋಽಧರ್ಮಹೇತುಭಿಃ ।
ಏಧಮಾನೈಃ ಕ್ಷೀಯಮಾಣೋ
ಹ್ಯಂತೇ ಸೋಽಪಿ ವಿನಂಕ್ಷ್ಯತಿ ॥ ೨೪ ॥

ತಸ್ಮಿಂಲ್ಲುಬ್ಧಾ ದುರಾಚಾರಾ ನಿರ್ದಯಾಃ ಶುಷ್ಕವೈರಿಣಃ ।
ದುರ್ಭಗಾ ಭೂರಿತರ್ಷಾಶ್ಚ ಶೂದ್ರದಾಸೋತ್ತರಾಃ ಪ್ರಜಾಃ
॥ ೨೫ ॥

ಸತ್ತ್ವಂ ರಜಸ್ತಮ ಇತಿ ದೃಶ್ಯಂತೇ ಪುರುಷೇ ಗುಣಾಃ ।
ಕಾಲಸಂಚೋದಿತಾಸ್ತೇ ವೈ ಪರಿವರ್ತಂತ ಆತ್ಮನಿ
॥ ೨೬ ॥

ಪ್ರಭವಂತಿ ಯದಾ ಸತ್ತ್ವೇ ಮನೋಬುದ್ಧೀಂದ್ರಿಯಾಣಿ ಚ ।
ತದಾ ಕೃತಯುಗಂ ವಿದ್ಯಾಜ್ಜ್ಞಾನೇ ತಪಸಿ ಯದ್ರುಚಿಃ
॥ ೨೭ ॥

ಯದಾ ಧರ್ಮಾರ್ಥಕಾಮೇಷು ಭಕ್ತಿರ್ಭವತಿ ದೇಹಿನಾಮ್ ।
ತದಾ ತ್ರೇತಾ ರಜೋವೃತ್ತಿರಿತಿ ಜಾನೀಹಿ ಬುದ್ಧಿಮನ್
॥ ೨೮ ॥

ಪರೀಕ್ಷಿತನೇ! ಧರ್ಮದಂತೆ ಅಧರ್ಮಕ್ಕೂ – ಅಸತ್ಯ, ಹಿಂಸೆ, ಅಸಂತೋಷ, ಕಲಹ ಎಂಬ ನಾಲ್ಕು ಚರಣಗಳಿರುತ್ತವೆ. ತ್ರೇತಾಯುಗದಲ್ಲಿ ಇವುಗಳ ಪ್ರಭಾವದಿಂದ ನಿಧಾನವಾಗಿ ಧರ್ಮದ ಸತ್ಯವೇ ಮುಂತಾದ ಚರಣಗಳು ನಾಲ್ಕನೆಯ ಒಂದಂಶ ಕ್ಷೀಣವಾಗುತ್ತವೆ. ॥ ೨೦ ॥ ರಾಜೇಂದ್ರನೇ ! ಆ ಸಮಯದಲ್ಲಿ ವರ್ಣಗಳಲ್ಲಿ ಬ್ರಾಹ್ಮಣರ ಪ್ರಧಾನತೆ ಅಚ್ಚಳಿಯದೆ ಇರುತ್ತದೆ. ಜನರಲ್ಲಿ ಹಿಂಸೆ ಮತ್ತು ವಿಷಯಲಂಪಟತೆಯ ಅಭಾವವಿರುತ್ತದೆ. ಸಮಸ್ತರೂ ಕರ್ಮಕಾಂಡ ಹಾಗೂ ತಪಸ್ಸಿನಲ್ಲಿ ನಿಷ್ಠರಾಗಿರುತ್ತಾರೆ. ಧರ್ಮ, ಅರ್ಥ ಹಾಗೂ ಕಾಮವೆಂಬ ತ್ರಿವರ್ಗವನ್ನು ಸೇವಿಸುತ್ತಿರುತ್ತಾರೆ. ಹೆಚ್ಚಿನ ಜನರು ಕರ್ಮಪ್ರತಿಪಾದಕವಾದ ವೇದಗಳಲ್ಲಿ ನಿಷ್ಣಾತರಾಗಿರುತ್ತಾರೆ. ॥ ೨೧॥ ದ್ವಾಪರಯುಗದಲ್ಲಿ ಹಿಂಸೆ, ಅಸಂತೋಷ, ಸುಳ್ಳು, ದ್ವೇಷ – ಈ ಅಧರ್ಮದ ಚರಣಗಳು ವೃದ್ಧಿಹೊಂದುವವು. ಇದರಿಂದಾಗಿ ಧರ್ಮದ – ತಪಸ್ಸು ಸತ್ಯ, ದಯೆ, ದಾನಗಳೆಂಬ ನಾಲ್ಕು ಚರಣಗಳು ಅರ್ಧಭಾಗ ಕ್ಷೀಣವಾಗುತ್ತವೆ. ॥ ೨೨ ॥ ಆ ಸಮಯದ ಜನರು ಬಹಳ ಯಶಸ್ವಿಗಳೂ, ಕರ್ಮಕಾಂಡಿಗಳೂ, ವೇದಗಳ ಅಧ್ಯಯನ-ಅಧ್ಯಾಪನೆಯಲ್ಲಿ ತತ್ಪರರಾಗಿರುತ್ತಾರೆ. ದೊಡ್ಡ-ದೊಡ್ಡ ಕುಟುಂಬಗಳಿದ್ದು ಶ್ರೀಮಂತರೂ ಸುಖಿಗಳೂ ಆಗಿರುತ್ತಾರೆ. ಆಗ ವರ್ಣಗಳಲ್ಲಿ ಕ್ಷತ್ರಿಯರು ಮತ್ತು ಬ್ರಾಹ್ಮಣರು ಪ್ರಧಾನರಾಗಿರುತ್ತಾರೆ. ॥ ೨೩. ॥ ಕಲಿಯುಗದಲ್ಲಾದರೋ ಅಧರ್ಮದ ನಾಲ್ಕು ಚರಣಗಳೂ ಬಹಳ ಬೆಳೆದು ಹೋಗುತ್ತವೆ. ಅದರಿಂದಾಗಿ ಧರ್ಮದ ನಾಲ್ಕೂ ಚರಣಗಳೂ ಕ್ಷೀಣಿಸತೊಡಗುತ್ತವೆ. ಅವುಗಳಲ್ಲಿ ನಾಲ್ಕನೆಯ ಒಂದಂಶ ಮಾತ್ರ ಉಳಿಯುತ್ತವೆ. ಕೊನೆಯಲ್ಲಿ ಆ ನಾಲ್ಕನೆಯ ಒಂದಂಶವೂ ಲುಪ್ತವಾಗುತ್ತದೆ. ॥ ೨೪ ॥ ಕಲಿಯುಗದಲ್ಲಿ ಜನರು ಲೋಭಿಗಳೂ, ದುರಾಚಾರಿಗಳೂ, ಕಠೋರ ಹೃದಯರೂ ಆಗಿರುತ್ತಾರೆ. ವಿನಾಕಾರಣ ವೈರವನ್ನು ಬೆಳೆಸಿಕೊಳ್ಳುವರು. ತೃಷ್ಣೆ-ಲಾಲಸೆಗಳ ಪ್ರವಾಹದಲ್ಲಿ ಕೊಚ್ಚಿಹೋಗಿರುತ್ತಾರೆ. ಆ ಸಮಯದ ದುರ್ಭಾಗ್ಯರಾದ ಜನರಲ್ಲಿ ಶೂದ್ರರೂ, ಬೆಸ್ತರೂ ಪ್ರಧಾನತೆಯನ್ನು ಹೊಂದಿರುತ್ತಾರೆ. ॥ ೨೫ ॥

ಎಲ್ಲ ಪ್ರಾಣಿಗಳಲ್ಲಿ ಸತ್ತ್ವ, ರಜ, ತಮಗಳೆಂಬ ಮೂರು ಗುಣಗಳು ಇರುತ್ತವೆ. ಕಾಲನ ಪ್ರೇರಣೆಯಿಂದ ಸಮಯಕ್ಕನುಸಾರವಾಗಿ ಶರೀರ, ಪ್ರಾಣ ಮತ್ತು ಮನಸ್ಸುಗಳಲ್ಲಿ ಅವು ಹೆಚ್ಚು-ಕಡಿಮೆ ಆಗುತ್ತಿರುತ್ತವೆ. ॥ ೨೬ ॥ ಮನಸ್ಸು ಬುದ್ಧಿ ಇಂದ್ರಿಯಗಳು ಸತ್ತ್ವ ಗುಣದಲ್ಲಿ ನೆಲೆಸಿ ತಮ್ಮ-ತಮ್ಮ ಕಾರ್ಯಗಳನ್ನು ಮಾಡಲು ತೊಡಗಿದಾಗ ಕೃತಯುಗವೆಂದು ತಿಳಿಯಬೇಕು. ಸತ್ತ್ವಗುಣದ ಪ್ರಧಾನತೆಯಿದ್ದ ಸಮಯದಲ್ಲಿ ಮನುಷ್ಯನು ಜ್ಞಾನ, ತಪಸ್ಸುಗಳಲ್ಲಿ ಹೆಚ್ಚಿನ ಪ್ರೇಮವನ್ನಿರಿಸುವರು. ॥ ೨೭ ॥ ಬುದ್ಧಿವಂತನಾದ ರಾಜನೇ! ಮನುಷ್ಯರ ಪ್ರವೃತ್ತಿ ಮತ್ತು ಅಭಿರುಚಿಯು ಧರ್ಮ, ಅರ್ಥ ಹಾಗೂ ಲೌಕಿಕ-ಪಾರಲೌಕಿಕ ಸುಖಭೋಗಗಳ ಕಡೆಗೆ ಉಂಟಾದಾಗ, ಶರೀರ-ಮನಸ್ಸು-ಇಂದ್ರಿಯಗಳು ರಜೋಗುಣದಲ್ಲಿ ನೆಲೆಸಿ ಕಾರ್ಯಮಾಡಲು ತೊಡಗಿದಾಗ ಆ ಸಮಯದಲ್ಲಿ ತ್ರೇತಾಯುಗವು ಕೆಲಸಮಾಡುತ್ತಿದೆ ಎಂದು ತಿಳಿಯಬೇಕು. ॥ ೨೮ ॥

ಯದಾ ಲೋಭಸ್ತ್ವಸಂತೋಷೋ ಮಾನೋ ದಂಭೋಽಥ ಮತ್ಸರಃ ।
ಕರ್ಮಣಾಂ ಚಾಪಿ ಕಾಮ್ಯಾನಾಂ ದ್ವಾಪರಂ ತದ್ರಜಸ್ತಮಃ
॥ ೨೯ ॥

ಲೋಭ ಅಸಂತೋಷ, ಅಭಿಮಾನ, ದಾಂಭಿಕತೆ, ಮತ್ಸರ ಮುಂತಾದ ದೋಷಗಳು ತಾಂಡವವಾಡತೊಡಗಿದಾಗ, ಮನುಷ್ಯರು ಉತ್ಸಾಹದಿಂದ ಮತ್ತು ಅಭಿರುಚಿಯೊಂದಿಗೆ ಸಕಾಮ ಕರ್ಮಗಳಲ್ಲಿ ತೊಡಗಿದಾಗ ದ್ವಾಪರಯುಗ ನಡೆಯುತ್ತಿದೆ ಎಂದು ತಿಳಿಯಬೇಕು. ದ್ವಾಪರಯುಗದಲ್ಲಿ ರಜೋಗುಣ-ತಮೋಗುಣಗಳ ಮಿಶ್ರಣದ ಪ್ರಧಾನತೆ ಇರುತ್ತದೆ. ॥ ೨೯ ॥ ಸುಳ್ಳು-ಕಪಟ, ನಿದ್ರಾ, ತಂದ್ರಾ, ಹಿಂಸೆ-ವಿಶಾದ, ಶೋಕ-ಮೋಹ, ಭಯ ಮತ್ತು ದೈನ್ಯ ಇವುಗಳ ಪ್ರಧಾನತೆ ಉಂಟಾದಾಗ ಅದನ್ನು ತಮೋಗುಣ ಪ್ರಧಾನವಾದ ಕಲಿಯುಗವೆಂದು ತಿಳಿಯಬೇಕು. ॥ ೩೦ ॥ ಕಲಿಯುಗದ ರಾಜ್ಯನಡೆದಾಗ ಜನರು ದೃಷ್ಟಿ ಕ್ಷುದ್ರವಾಗುತ್ತದೆ. ಹೆಚ್ಚಿನ ಜನರು ನಿರ್ಧನರಾಗಿದ್ದರೂ ಹೆಚ್ಚು ತಿನ್ನುವವರಾಗುತ್ತಾರೆ. ಮಂದ ಭಾಗ್ಯರಾಗಿದ್ದರೂ ಮನಸ್ಸಿನಲ್ಲಿ ದೊಡ್ಡ-ದೊಡ್ಡ ಕಾಮನೆಗಳಿರುತ್ತವೆ. ಸ್ತ್ರೀಯರಲ್ಲಿ ದುಷ್ಟತೆ ಮತ್ತು ಕುಟಿಲತೆ ವೃದ್ಧಿಹೊಂದುತ್ತದೆ. ॥ ೩೧ ॥ ದೇಶದಲ್ಲೆಲ್ಲ ಕಳ್ಳ-ಕಾಕರ ಹಾವಳಿ ಹೆಚ್ಚುತ್ತದೆ. ಪಾಷಂಡಿಗಳ ಸಂಖ್ಯೆಯು ಹೆಚ್ಚಿ ಅವರು ವೇದ-ಶಾಸ್ತ್ರಗಳಿಗೆ ಅಪಾರ್ಥವನ್ನು ಮಾಡುತ್ತಾ ಅವುಗಳಿಗೆ ಕಳಂಕವನ್ನು ತರುವರು. ರಾಜರೆನಿಸಿದವರು ಪ್ರಜೆಯ ಸಂಪಾದನೆಯನ್ನು ಕಸಿದುಕೊಂಡು ಅವರ ಪ್ರಾಣಗಳನ್ನು ಹೀರುವರು. ಬ್ರಾಹ್ಮಣರೆನಿಸಿಕೊಂಡರೂ ಕೂಡ ಶಿಶ್ನೋದರ ಪರಾಯಣರಾಗುವರು. ॥ ೩೨ ॥ ಬ್ರಹ್ಮಚಾರಿಗಳು ಬ್ರಹ್ಮಚರ್ಯ ವ್ರತದಿಂದ ರಹಿತರಾಗಿ ಅಪವಿತ್ರರಾಗುತ್ತಾರೆ. ಗೃಹಸ್ಥರಾದವರು ಬೇರೆಯವರಿಗೆ ಭಿಕ್ಷೆಯನ್ನು ನೀಡದೆ ತಾವೇ ಸ್ವತಃ ಭಿಕ್ಷೆಬೇಡುವರು. ವಾನಪ್ರಸ್ಥಿಗಳು ನಗರಗಳಲ್ಲಿ ಬಂದು ನೆಲೆಸುವರು. ಸಂನ್ಯಾಸಿಗಳು ಅತ್ಯಂತ ಲೋಭಿಗಳಾಗಿ ಧನಪಿಶಾಚಿಗಳಾಗುವರು. ॥ ೩೩ ॥ ಸ್ತ್ರೀಯರ ಗಾತ್ರವೇನೋ ಸಣ್ಣದಾಗಿದ್ದರೂ ಹಸಿವೆ ಹೆಚ್ಚಿರುತ್ತದೆ. ಅವರಿಗೆ ಬಹಳ ಸಂತಾನಗಳಾಗುತ್ತವೆ. ಅವರು ಮರ್ಯಾದೆಯನ್ನು ಉಲ್ಲಂಘಿಸಿ, ಆವರಿಗೆ ಭೂಷಣಪ್ರಾಯವಾದ ಲಜ್ಜೆಯನ್ನು ತೊರೆಯುತ್ತಾರೆ. ಯಾವಾಗಲೂ ಕಟುವಾದ ಮಾತುಗಳನ್ನೇ ಆಡುತ್ತಾರೆ. ಕಳ್ಳತನ, ಕಪಟಗಳಲ್ಲಿ ನಿಪುಣೆಯರಾಗುತ್ತಾರೆ. ಹೆಚ್ಚಾದ ಮಹಾಸಾಹಸಿಗಳಾಗುತ್ತಾರೆ. ॥ ೩೪ ॥ ವ್ಯಾಪಾರಿಗಳ ಮನಸ್ಸು ಕ್ಷುದ್ರವಾಗಿರುತ್ತದೆ. ಕಾಸು ಕವಡೆಯನ್ನು ಬಿಡದೆ ಸಂಗ್ರಹಿಸುವ ಕಡುಲೋಭಿಗಳೂ, ಕಪಟಿಗಳೂ ಆಗುವರು. ಆಪತ್ಕಾಲವಿಲ್ಲದಿದ್ದರೂ ನಿಂದ್ಯವಾದ ವ್ಯಾಪಾರದಲ್ಲಿ ತೊಡಗುತ್ತಾರೆ. ॥ ೩೫ ॥ ಸೇವಕರು ತಮ್ಮ ಧಣಿಯು ಸರ್ವಶ್ರೇಷ್ಠನಾಗಿದ್ದರೂ ಆತನಲ್ಲಿ ಸಂಪತ್ತು ಕಡಿಮೆಯಾಯಿತೆಂದರೆ ಆತನನ್ನು ಬಿಟ್ಟು ಓಡಿಹೋಗುತ್ತಾರೆ. ಧಣಿಗಳೂ ಕೂಡ ಸೇವಕನು ಎಷ್ಟೇ ಸ್ವಾಮಿಭಕ್ತನಾಗಿದ್ದರೂ, ಹಳಬನಾಗಿದ್ದರೂ ಅವನು ಕಷ್ಟದಲ್ಲಿ ಸಿಲುಕಿದಾಗ ಆತನನ್ನು ಓಡಿಸಿಬಿಡುತ್ತಾರೆ. ಹಸುಗಳು ಹಾಲು ಕೊಡದಿರುವಾಗ ಅವನ್ನು ತೊರೆದುಬಿಡುವುದಕ್ಕೂ ಅಳುಕುವುದಿಲ್ಲ. ॥ ೩೬ ॥

ಪ್ರಿಯ ಪರೀಕ್ಷಿತನೇ! ಕಲಿಯುಗದ ಮನುಷ್ಯರು ಅತ್ಯಂತ ವಿಷಯಲಂಪಟರಾಗುತ್ತಾರೆ. ಅವರು ಕಾಮವಾಸನೆಯನ್ನು ತೃಪ್ತಿ

ಯದಾ ಮಾಯಾನೃತಂ ತಂದ್ರಾ ನಿದ್ರಾ ಹಿಂಸಾ ವಿಷಾದನಮ್ ।
ಶೋಕೋ ಮೋಹೋ ಭಯಂ ದೈನ್ಯಂ ಸ ಕಲಿಸ್ತಾಮಸಃ ಸ್ಮೃತಃ
॥ ೩೦ ॥

ಯಸ್ಮಾತ್ ಕ್ಷುದ್ರದೃಶೋ ಮರ್ತ್ಯಾಃ ಕ್ಷುದ್ರಭಾಗ್ಯಾ ಮಹಾಶನಾಃ ।
ಕಾಮಿನೋ ವಿತ್ತಹೀನಾಶ್ಚ ಸ್ವೈರಿಣ್ಯಶ್ಚ ಸ್ತ್ರಿಯೋಽಸತೀಃ
॥ ೩೧ ॥

ದಸ್ಯ್ವುತ್ಕೃಷ್ಟಾ ಜನಪದಾ ವೇದಾಃ ಪಾಖಂಡದೂಷಿತಾಃ ।
ರಾಜಾನಶ್ಚ ಪ್ರಜಾಭಕ್ಷಾಃ ಶಿಶ್ನೋದರಪರಾ ದ್ವಿಜಾಃ
॥ ೩೨ ॥

ಅವ್ರತಾ ವಟವೋಽಶೌಚಾ ಭಿಕ್ಷವಶ್ಚ ಕುಟುಂಬಿನಃ ।
ತಪಸ್ವಿನೋ ಗ್ರಾಮವಾಸಾ ನ್ಯಾಸಿನೋಽತ್ಯರ್ಥಲೋಲುಪಾಃ
॥ ೩೩ ॥

ಹ್ರಸ್ವಕಾಯಾ ಮಹಾಹಾರಾ ಭೂರ್ಯಪತ್ಯಾ ಗತಹ್ರಿಯಃ ।
ಶಶ್ವತ್ಕಟುಕಭಾಷಿಣ್ಯಶ್ಚೌರ್ಯಮಾಯೋರುಸಾಹಸಾಃ
॥ ೩೪ ॥

ಪಣಯಿಷ್ಯಂತಿ ವೈ ಕ್ಷುದ್ರಾಃ ಕಿರಾಟಾಃ ಕೂಟಕಾರಿಣಃ ।
ಅನಾಪದ್ಯಪಿ ಮಂಸ್ಯಂತೇ ವಾರ್ತಾಂ ಸಾಧುಜುಗುಪ್ಸಿತಾಮ್
॥ ೩೫ ॥

ಪತಿಂ ತ್ಯಕ್ಷ್ಯಂತಿ ನಿರ್ದ್ರವ್ಯಂ ಭೃತ್ಯಾ ಅಪ್ಯಖಿಲೋತ್ತಮಮ್ ।
ಭೃತ್ಯಂ ವಿಪನ್ನಂ ಪತಯಃ ಕೌಲಂ ಗಾಶ್ಚಾಪಯಸ್ವಿನೀಃ
॥ ೩೬ ॥

ಪಿತೃಭ್ರಾತೃಸುಹೃಜ್ಜ್ಞಾತೀನ್ ಹಿತ್ವಾ ಸೌರತಸೌಹೃದಾಃ ।
ನನಾನ್ದೃಶ್ಯಾಲಸಂವಾದಾ ದೀನಾಃ ಸ್ತ್ರೈಣಾಃ ಕಲೌ ನರಾಃ
॥ ೩೭ ॥

ಗೊಳಿಸಲೆಂದೇ ಮದುವೆಯಾಗುತ್ತಾರೆ. ಅವರು ವಿಷಯವಾಸನೆಗಳಿಗೆ ತುತ್ತಾಗಿ ತಂದೆ-ತಾಯಿ, ಅಣ್ಣ-ತಮ್ಮ ಮತ್ತು ಮಿತ್ರರನ್ನು ಬಿಟ್ಟು ಕೇವಲ ಭಾವಮೈದ, ನಾದಿನಿಯರ ಸಲಹೆಯಂತೆ ನಡೆಯುತ್ತಾರೆ. ॥ ೩೭ ॥

ಶೂದ್ರಾಃ ಪ್ರತಿಗ್ರಹೀಷ್ಯಂತಿ ತಪೋವೇಷೋಪಜೀವಿನಃ ।
ಧರ್ಮಂ ವಕ್ಷ್ಯಂತ್ಯಧರ್ಮಜ್ಞಾ ಅಧಿರುಹ್ಯೋತ್ತಮಾಸನಮ್
॥ ೩೮ ॥

ಶೂದ್ರರು ತಪಸ್ವಿಗಳ ವೇಷವನ್ನು ತೊಟ್ಟುಕೊಂಡು ಹೊಟ್ಟೆಹೊರೆಯುತ್ತಾರೆ. ಇತರರಿಂದ ದಾನ ಪಡೆಯುವರು. ಧರ್ಮದ ಕೊಂಚವೂ ಜ್ಞಾನವಿಲ್ಲದಿದ್ದರೂ ಎತ್ತರವಾದ ಸಿಂಹಾಸನದಲ್ಲಿ ಕುಳಿತು ಧರ್ಮವನ್ನು ಬೋಧಿಸುತ್ತಾರೆ. ॥ ೩೮ ॥

ನಿತ್ಯಮುದ್ವಿಗ್ನಮನಸೋ ದುರ್ಭಿಕ್ಷಕರಕರ್ಶಿತಾಃ ।
ನಿರನ್ನೇ ಭೂತಲೇ ರಾಜನ್ ಅನಾವೃಷ್ಟಿಭಯಾತುರಾಃ
॥ ೩೯ ॥

ಪ್ರಿಯ ಪರೀಕ್ಷಿತನೇ ! ಕಲಿಯುಗದ ಪ್ರಜೆಗಳು ಬರಗಾಲದಿಂದ ಅತ್ಯಂತ ಭಯಗೊಂಡು, ಕಳವಳಕ್ಕೆ ಈಡಾಗುವರು. ಒಂದು ಕಡೆಯಿಂದ ಕ್ಷಾಮದ ಬೇಗೆ, ಮತ್ತೊಂದು ಕಡೆ ಕಂದಾಯದ ಹೊರೆ. ಪ್ರಜೆಗಳ ಶರೀರದಲ್ಲಿ ಕೇವಲ ಅಸ್ಥಿಪಂಜರವಿದ್ದು, ಮನಸ್ಸಿನಲ್ಲಿ ಕೇವಲ ಉದ್ವೇಗಮಾತ್ರ ಉಳಿದಿರುತ್ತದೆ. ಜೀವ ಉಳಿಯಲಿಕ್ಕಾಗಿ, ಗಂಜಿ ಸಿಗುವುದೂ ದುಸ್ತರವೇ ಆಗಿದೆ. ॥ ೩೯ ॥

ವಾಸೋಽನ್ನಪಾನಶಯನವ್ಯವಾಯಸ್ನಾನಭೂಷಣೈಃ ।
ಹೀನಾಃ ಪಿಶಾಚಸಂದರ್ಶಾ ಭವಿಷ್ಯಂತಿ ಕಲೌ ಪ್ರಜಾಃ
॥ ೪೦ ॥

ಕಲಿಯುಗದ ಪ್ರಜೆಯು ಮೈಮುಚ್ಚಿಕೊಳ್ಳಲು ಬಟ್ಟೆ, ಹೊಟ್ಟೆ ತುಂಬಿಸಿಕೊಳ್ಳಲು ಹಿಟ್ಟು, ಕುಡಿಯಲು ನೀರು, ಮಲಗಲಿಕ್ಕಾಗಿ ಎರಡಡಿ ಜಾಗ ಇವುಗಳಿಂದ ವಂಚಿತರಾಗಿರುತ್ತಾರೆ. ಅವರಿಗೆ ದಾಂಪತ್ಯ ಜೀವನ, ಸ್ನಾನ, ತೊಡಲು ಆಭರಣಗಳೂ ದೊರೆಯದೆ ಹೋಗುತ್ತವೆ. ಜನರ ಆಕೃತಿ, ಪ್ರಕೃತಿ, ಚೇಷ್ಟೆಗಳು ಪಿಶಾಚಿಗಳಂತಿರುತ್ತವೆ. ॥ ೪೦ ॥

ಕಲೌ ಕಾಕಿಣಿಕೇಽಪ್ಯರ್ಥೇ ವಿಗೃಹ್ಯ ತ್ಯಕ್ತಸೌಹೃದಾಃ ।
ತ್ಯಕ್ಷ್ಯಂತಿ ಚ ಪ್ರಿಯಾನ್ ಪ್ರಾಣಾನ್ ಹನಿಷ್ಯಂತಿ ಸ್ವಕಾನಪಿ
॥ ೪೧ ॥

ಕಲಿಯುಗದಲ್ಲಿ ಮನುಷ್ಯರು ಒಂದು ಕವಡೆಗೋಸ್ಕರವಾಗಿಯೂ ಕಲಹಪಾಡುತ್ತಾ, ಸ್ನೇಹ-ಸೌಹಾರ್ದಗಳನ್ನು ತೊರೆದು ತಮಗೆ ಪ್ರಿಯವಾಗಿರುವ ಪ್ರಾಣಗಳನ್ನು ಕಳೆದುಕೊಳ್ಳುತ್ತಾರೆ. ತಮ್ಮ ಸ್ವಂತ ನೆಂಟರಿಷ್ಟರನ್ನು ಕೊಲೆ ಮಾಡಿಬಿಡುತ್ತಾರೆ. ॥ ೪೧ ॥

ನ ರಕ್ಷಿಷ್ಯಂತಿ ಮನುಜಾಃ ಸ್ಥವಿರೌ ಪಿತರಾವಪಿ ।
ಪುತ್ರಾನ್ಸ್ವಾರ್ಥಕುಶಲಾನ್ ಕ್ಷುದ್ರಾಃ ಶಿಶ್ನೋದರಂಬರಾಃ
॥ ೪೨ ॥

ಪರೀಕ್ಷಿತನೇ ! ಕಲಿಯುಗದ ಕ್ಷುದ್ರಪ್ರಾಣಿಗಳು ಕೇವಲ ಕಾಮವಾಸನೆಯ ಪೂರ್ತಿಗಾಗಿ ಮತ್ತು ಹೊಟ್ಟೆ ತುಂಬಿಸಿಕೊಳ್ಳುವುದರಲ್ಲೇ ತೊಡಗಿರುತ್ತಾರೆ. ಮಕ್ಕಳಾದವರು ಮುದುಕರಾದ ತಂದೆ ತಾಯಂದಿರನ್ನು ಸಾಕದೆ ಉಪೇಕ್ಷಿಸುತ್ತಾರೆ. ತಂದೆಯು ನಿಪುಣನೂ, ಎಲ್ಲ ಕರ್ಮಗಳಲ್ಲಿಯೂ ಯೋಗ್ಯನಾದ ಪುತ್ರನನ್ನು ಲೆಕ್ಕಿಸದೆ ಅವನನ್ನು ಬೇರೆಯಾಗಿಸಿಬಿಡುತ್ತಾನೆ. ॥ ೪೨ ॥

ಕಲೌ ನ ರಾಜನ್ ಜಗತಾಂ ಪರಂ ಗುರುಂ
ತ್ರಿಲೋಕನಾಥಾನತಪಾದಪಂಕಜಮ್ ।
ಪ್ರಾಯೇಣ ಮರ್ತ್ಯಾ ಭಗವಂತಮಚ್ಯುತಂ
ಯಕ್ಷ್ಯಂತಿ ಪಾಖಂಡ ವಿಭಿನ್ನಚೇತಸಃ ॥ ೪೩ ॥

ಪರೀಕ್ಷಿತನೇ ! ಭಗವಂತನೇ ಚರಾಚರ ಜಗತ್ತಿಗೆ ಪರಮಪಿತನೂ, ಪರಮ ಗುರುವೂ ಆಗಿದ್ದಾನೆ. ಬ್ರಹ್ಮರುದ್ರೇಂದ್ರಾದಿ ತ್ರಿಲೋಕಾಧಿಪತಿಗಳೂ ಕೂಡ ಅವನ ಚರಣಕಮಲಗಳಲ್ಲಿ ತಮ್ಮ ಶಿರವನ್ನು ಬಾಗಿ ಸರ್ವಸ್ವವನ್ನೂ ಸಮರ್ಪಿಸುತ್ತಾರೆ. ಅವನ ಐಶ್ವರ್ಯವು ಅನಂತವಾಗಿದೆ. ಏಕರಸನಾಗಿದ್ದು ಸ್ವಸ್ವರೂಪದಲ್ಲಿ ಸ್ಥಿತನಾಗಿರುವನು. ಆದರೆ ಕಲಿಯುಗದ ಜನರು ಪಾಷಂಡಿಗಳ ಕಾರಣದಿಂದ ಮೂಢರಾಗಿ ತಮ್ಮ ಕರ್ಮ ಮತ್ತು ಭಾವನೆಗಳಿಂದ ಭಗವಂತನ ಪೂಜೆಯಿಂದ ವಿಮುಖರಾಗಿ ಅಲೆಯುತ್ತಾ ಇರುತ್ತಾರೆ. ॥ ೪೩ ॥

ಯನ್ನಾಮಧೇಯಂ ಮ್ರಿಯಮಾಣ ಆತುರಃ
ಪತನ್ ಸ್ಖಲನ್ವಾ ವಿವಶೋ ಗೃಣನ್ಪುಮಾನ್ ।
ವಿಮುಕ್ತಕರ್ಮಾರ್ಗಲ ಉತ್ತಮಾಂ ಗತಿಂ
ಪ್ರಾಪ್ನೋತಿ ಯಕ್ಷ್ಯಂತಿ ನ ತಂ ಕಲೌ ಜನಾಃ ॥ ೪೪ ॥

ಮನುಷ್ಯನು ಸಾಯುವ ಆತುರ ಸಮಯದಲ್ಲಾಗಲೀ, ಮುಗ್ಗರಿಸಿ ಬೀಳುವಾಗ ಆಗಲೀ, ವಿವಶನಾಗಿ ಆಗಲೀ ಭಗವಂತನ ಯಾವುದೇ ನಾಮವನ್ನು ಉಚ್ಚರಿಸಿದರೂ ಅವನ ಸಮಸ್ತ ಕರ್ಮಬಂಧನಗಳು ಛಿನ್ನ-ಭಿನ್ನವಾಗಿ ಹೋಗುವುವು. ಅವನಿಗೆ ಉತ್ತಮೋತ್ತಮ ಗತಿಯು ಪ್ರಾಪ್ತವಾಗುತ್ತದೆ. ಆದರೆ ಅಯ್ಯೋ ! ಕಲಿಯುಗವೇ ! ಕಲಿಯುಗದಿಂದ ಪ್ರಭಾವಿತರಾದ ಜನರು ಭಗವಂತನ ಆರಾಧನೆಯಿಂದ ವಿಮುಖರಾಗುತ್ತಾರೆ. ॥ ೪೪ ॥

ಪುಂಸಾಂ ಕಲಿಕೃತಾನ್ ದೋಷಾನ್ ದ್ರವ್ಯದೇಶಾತ್ಮಸಂಭವಾನ್ ।
ಸರ್ವಾನ್ ಹರತಿ ಚಿತ್ತಸ್ಥೋ ಭಗವಾನ್ ಪುರುಷೋತ್ತಮಃ
॥ ೪೫ ॥

ಶ್ರುತಃ ಸಂಕೀರ್ತಿತೋ ಧ್ಯಾತಃ ಪೂಜಿತಶ್ಚಾದೃತೋಽಪಿ ವಾ ।
ನೃಣಾಂ ಧುನೋತಿ ಭಗವಾನ್ ಹೃತ್ಸ್ಥೋ ಜನ್ಮಾಯುತಾಶುಭಮ್
॥ ೪೬ ॥

ಯಥಾ ಹೇಮ್ನಿ ಸ್ಥಿತೋ ವಹ್ನಿರ್ದುರ್ವರ್ಣಂ ಹಂತಿ ಧಾತುಜಮ್ ।
ಏವಮಾತ್ಮಗತೋ ವಿಷ್ಣುರ್ಯೋಗಿನಾಮಶುಭಾಶಯಮ್
॥ ೪೭ ॥

ವಿದ್ಯಾತಪಃ ಪ್ರಾಣನಿರೋಧಮೈತ್ರೀ-
ತೀರ್ಥಾಭಿಷೇಕವ್ರತದಾನಜಪ್ಯೈಃ ।
ನಾತ್ಯಂತಶುದ್ಧಿಂ ಲಭತೇಽಂತರಾತ್ಮಾ
ಯಥಾ ಹೃದಿಸ್ಥೇ ಭಗವತ್ಯನಂತೇ ॥ ೪೮ ॥

ತಸ್ಮಾತ್ಸರ್ವಾತ್ಮನಾ ರಾಜನ್ ಹೃದಿಸ್ಥಂ ಕುರು ಕೇಶವಮ್ ।
ಮ್ರಿಯಮಾಣೋ ಹ್ಯವಹಿತಸ್ತತೋ ಯಾಸಿ ಪರಾಂ ಗತಿಮ್
॥ ೪೯ ॥

ಮ್ರಿಯಮಾಣೈರಭಿಧ್ಯೇಯೋ ಭಗವಾನ್ ಪರಮೇಶ್ವರಃ ।
ಆತ್ಮಭಾವಂ ನಯತ್ಯಂಗ ಸರ್ವಾತ್ಮಾ ಸರ್ವಸಂಶ್ರಯಃ
॥ ೫೦ ॥

ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋ ಮಹಾನ್ಗುಣಃ ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗಃ ಪರಂ ವ್ರಜೇತ್
॥ ೫೧ ॥

ಕೃತೇ ಯದ್ಧ್ಯಾಯತೋ ವಿಷ್ಣುಂ ತ್ರೇತಾಯಾಂ ಯಜತೋ ಮಖೈಃ ।
ದ್ವಾಪರೇ ಪರಿಚರ್ಯಾಯಾಂ ಕಲೌ ತದ್ಧರಿಕೀರ್ತನಾತ್
॥ ೫೨ ॥

ಪರೀಕ್ಷಿತನೇ ! ಕಲಿಯುಗದಲ್ಲಿ ಅನೇಕ ದೋಷಗಳಿವೆ. ಎಲ್ಲ ವಸ್ತುಗಳೂ ದೂಷಿತವಾಗಿ ಹೋಗುತ್ತವೆ. ಪವಿತ್ರಸ್ಥಾನಗಳಲ್ಲಿ ಕೂಡ ದೋಷಗಳೇ ಪ್ರಧಾನವಾಗಿರುತ್ತವೆ. ಎಲ್ಲ ದೋಷಗಳ ಮೂಲ ಸೆಲೆ ಅಂತಃಕರಣವೇ ಆಗಿದೆ. ಆದರೆ ಭಗವಾನ್ ಪುರುಷೋತ್ತಮನು ಹೃದಯದಲ್ಲಿ ಬಂದು ವಿರಾಜಿಸಿದಾಗ ಅವನ ಸನ್ನಿಧಿಮಾತ್ರ ದಿಂದಲೇ ಸಮಸ್ತ ದೋಷಗಳು ನಾಶವಾಗಿ ಹೋಗುತ್ತವೆ. ॥ ೪೫ ॥ ಭಗವಂತನ ರೂಪ, ಗುಣ, ಲೀಲೆ, ಧಾಮ ಮತ್ತು ನಾಮದ ಶ್ರವಣ, ಸಂಕೀರ್ತನೆಯಿಂದ, ಧ್ಯಾನ, ಪೂಜೆಯಿಂದ ಅವನು ಮನುಷ್ಯರ ಹೃದಯದಲ್ಲಿ ಆದರದಿಂದ ಬಂದು ನೆಲೆಸುತ್ತಾನೆ ಮತ್ತು ಒಂದೆರಡು ಜನ್ಮಗಳ ಪಾಪಗಳ ಮಾತೇನು, ಸಾವಿರಾರು ಜನ್ಮಗಳ ರಾಶಿ-ರಾಶಿ ಪಾಪಗಳನ್ನೂ ಕೂಡ ಕ್ಷಣಾರ್ಧದಲ್ಲಿ ಸುಟ್ಟು ಬೂದಿಯಾಗಿಸಿ ಬಿಡುತ್ತಾನೆ. ॥ ೪೬ ॥ ಚಿನ್ನವನ್ನು ಅಗ್ನಿಯಲ್ಲಿರಿಸಿದಾಗ ಆ ಲೋಹದಲ್ಲಿ ಸೇರಿಕೊಂಡ ಕೊಳೆಯನ್ನು ಅಗ್ನಿಯು ನಾಶ ಪಡಿಸಿದಂತೆಯೇ ಸಾಧಕರ ಹೃದಯದಲ್ಲಿ ನೆಲೆಸಿದ ಭಗವಾನ್ ವಿಷ್ಣುವು ಅವರ ಅಶುಭಸಂಸ್ಕಾರಗಳನ್ನು ಪೂರ್ಣವಾಗಿ ಧ್ವಂಸ ಮಾಡಿಬಿಡುವನು. ॥ ೪೭ ॥ ಪರೀಕ್ಷಿತನೇ ! ಭಗವಂತನಾದ ಪುರುಷೋತ್ತಮನು ಹೃದಯದಲ್ಲಿ ವಿರಾಜಮಾನನಾದಾಗ ಮನುಷ್ಯನ ಅಂತಃಕರಣವು ಶುದ್ಧವಾಗುವಂತೆ, ವಿದ್ಯೆ, ತಪಸ್ಸು ಪ್ರಾಣಾಯಾಮ, ಸಮಸ್ತ ಪ್ರಾಣಿಗಳಲ್ಲಿ ಮೈತ್ರಿಭಾವ, ತೀರ್ಥಸ್ನಾನ, ವ್ರತ, ದಾನ ಮತ್ತು ಜಪಾದಿ ಯಾವುದೇ ಸಾಧನೆಗಳಿಂದ ಶುದ್ಧ ಆಗುವುದಿಲ್ಲ. ॥ ೪೮ ॥

ಪರೀಕ್ಷಿತನೇ ! ಈಗ ನಿನ್ನ ಮೃತ್ಯುವಿನ ಸಮಯವು ಸನ್ನಿಹಿತವಾಗಿದೆ. ಈಗ ಸಾವಧಾನವಾಗಿರು. ಪೂರ್ಣಶಕ್ತಿಯಿಂದ ಮತ್ತು ಅಂತಃಕರಣದ ಸಮಸ್ತ ವೃತ್ತಿಗಳಿಂದ ಭಗವಾನ್ ಶ್ರೀಕೃಷ್ಣನನ್ನು ನಿನ್ನ ಹೃದಯ ಸಿಂಹಾಸನದ ಮೇಲೆ ಕುಳ್ಳಿರಿಸಿಕೋ. ಹೀಗೆ ಮಾಡುವುದರಿಂದ ಅವಶ್ಯವಾಗಿ ನೀನು ಪರಮಗತಿಯನ್ನು ಪಡೆದು ಕೊಳ್ಳುವೆ. ಮೃತ್ಯುವಿನ ಬಳಿಗೆ ತಲುಪಿದ ಜನರು ಎಲ್ಲ ವಿಧದಿಂದ ಪರಮ ಐಶ್ವರ್ಯಶಾಲಿ ಭಗವಂತನನ್ನೇ ಧ್ಯಾನಿಸಬೇಕು. ಪ್ರಿಯ ಪರೀಕ್ಷಿತನೇ ! ಎಲ್ಲರ ಪರಮಾಶ್ರಯನೂ, ಸರ್ವಾತ್ಮನೂ ಆದ ಭಗವಂತನು ತನ್ನನ್ನು ಧ್ಯಾನಿಸುವವನನ್ನು ತನ್ನ ಸ್ವರೂಪದಲ್ಲಿ ಲೀನಗೊಳಿಸಿಕೊಳ್ಳುವನು. ಅವನನ್ನು ತನ್ನ ಸ್ವರೂಪದಂತೆ ಮಾಡಿಕೊಳ್ಳುವನು. ॥ ೫೦ ॥ ಪರೀಕ್ಷಿತನೇ ! ಈ ಕಲಿಯುಗವು ದೋಷಗಳ ಭಂಡಾರವಾಗಿದೆ. ಆದರೆ ಇದರಲ್ಲಿ ಒಂದು ಮಹಾನ್ ಗುಣವಿದೆ. ಕಲಿಯುಗದಲ್ಲಿ ಕೇವಲ ಭಗವಾನ್ ಶ್ರೀಕೃಷ್ಣನ ಸಂಕೀರ್ತನೆ ಮಾಡುವ ಮಾತ್ರದಿಂದಲೇ ಎಲ್ಲ ಆಸಕ್ತಿಗಳು ಬಿಟ್ಟುಹೋಗಿ ಪರಮಾತ್ಮನ ಪ್ರಾಪ್ತಿಯಾಗುವುದು. ॥ ೫೧ ॥ ಕೃತ ಯುಗದಲ್ಲಿ ಭಗವಂತನ ಧ್ಯಾನ ಮಾಡುವುದರಿಂದ, ತ್ರೇತಾ ಯುಗದಲ್ಲಿ ದೊಡ್ಡ-ದೊಡ್ಡ ಯಜ್ಞಗಳಿಂದ ಅವನನ್ನು ಆರಾಧಿಸುವುದರಿಂದ, ದ್ವಾಪರದಲ್ಲಿ ವಿಧಿವತ್ತಾಗಿ ಪೂಜೆ ಮಾಡುವುದರಿಂದ ಸಿಗಬಹುದಾದ ಫಲವು ಕಲಿಯುಗದಲ್ಲಿ ಕೇವಲ ಭಗವನ್ನಾಮ ಕೀರ್ತನೆಯಿಂದದೊರೆಯುತ್ತದೆ. ॥೫೨॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ನಾಲ್ಕು ಪ್ರಕಾರದ ಪ್ರಳಯಗಳು

ಶ್ರೀಶುಕ ಉವಾಚ

ಕಾಲಸ್ತೇ ಪರಮಾಣ್ವಾದಿರ್ದ್ವಿಪರಾರ್ಧಾವಧಿರ್ನೃಪ।
ಕಥಿತೋ ಯುಗಮಾನಂ ಚ ಶೃಣು ಕಲ್ಪಲಯಾವಪಿ
॥ ೧ ॥

ಚತುರ್ಯುಗಸಹಸ್ರಂ ಚ ಬ್ರಹ್ಮಣೋ ದಿನಮುಚ್ಯತೇ।
ಸ ಕಲ್ಪೋ ಯತ್ರ ಮನವಶ್ಚತುರ್ದಶ ವಿಶಾಂಪತೇ
॥ ೨ ॥

ತದಂತೇ ಪ್ರಲಯಸ್ತಾವಾನ್ ಬ್ರಾಹ್ಮೀ ರಾತ್ರಿರುದಾಹೃತಾ।
ತ್ರಯೋ ಲೋಕಾ ಇಮೇ ತತ್ರ ಕಲ್ಪಂತೇ ಪ್ರಲಯಾಯ ಹಿ
॥ ೩ ॥

ಏಷ ನೈಮಿತ್ತಿಕಃ ಪ್ರೋಕ್ತಃ ಪ್ರಲಯೋ ಯತ್ರ ವಿಶ್ವಸೃಕ್।
ಶೇತೇಽನಂತಾಸನೋ ವಿಶ್ವಮಾತ್ಮಸಾತ್ಕೃತ್ಯ ಚಾತ್ಮಭೂಃ
॥ ೪ ॥

ದ್ವಿಪರಾರ್ಧೇ ತ್ವತಿಕ್ರಾಂತೇ ಬ್ರಹ್ಮಣಃ ಪರಮೇಷ್ಠಿ ನಃ।
ತದಾ ಪ್ರಕೃತಯಃ ಸಪ್ತ ಕಲ್ಪಂತೇ ಪ್ರಲಯಾಯ ವೈ
॥ ೫ ॥

ಏಷ ಪ್ರಾಕೃತಿಕೋ ರಾಜನ್ ಪ್ರಲಯೋ ಯತ್ರ ಲೀಯತೇ।
ಅಂಡಕೋಶಸ್ತು ಸಂಘಾತೋ ವಿಘಾತ ಉಪಸಾದಿತೇ
॥ ೬ ॥

ಪರ್ಜನ್ಯಃ ಶತವರ್ಷಾಣಿ ಭೂಮೌ ರಾಜನ್ ನ ವರ್ಷತಿ।
ತದಾ ನಿರನ್ನೇ ಹ್ಯನ್ಯೋನ್ಯಂ ಭಕ್ಷಮಾಣಾಃ ಕ್ಷುಧಾರ್ದಿತಾಃ
॥ ೭ ॥

ಕ್ಷಯಂ ಯಾಸ್ಯಂತಿ ಶನಕೈಃ ಕಾಲೇನೋಪದ್ರುತಾಃ ಪ್ರಜಾಃ।
ಸಾಮುದ್ರಂ ದೈಹಿಕಂ ಭೌಮಂ ರಸಂ ಸಾಂವರ್ತಕೋ ರವಿಃ
॥ ೮ ॥

ರಶ್ಮಿಭಿಃ ಪಿಬತೇ ಘೋರೈಃ ಸರ್ವಂ ನೈವ ವಿಮುಂಚತಿ।
ತತಃ ಸಂವರ್ತಕೋ ವಹ್ನಿಃ ಸಂಕರ್ಷಣಮುಖೋತ್ಥಿತಃ
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಪರಮಾಣುವಿನಿಂದ ಹಿಡಿದು ದ್ವಿಪರಾರ್ಧವರೆಗಿನ ಕಾಲದ ಸ್ವರೂಪವನ್ನು ಮತ್ತು ಒಂದೊಂದು ಯುಗದ ಪರಿಮಾಣಗಳನ್ನು ನಾನು ಹಿಂದೆ ಮೂರನೆಯ ಸ್ಕಂಧದಲ್ಲಿ ಹೇಳಿಬಿಟ್ಟಿರುವೆನು. ಈಗ ಕಲ್ಪದಸ್ಥಿತಿ ಹಾಗೂ ಅದರ ಪ್ರಳಯದ ವರ್ಣನೆಯನ್ನು ಕೇಳು.॥ ೧॥ ರಾಜೇಂದ್ರನೇ! ಒಂದು ಸಾವಿರ ಚತುರ್ಯುಗಗಳ ಅವಧಿಯು ಬ್ರಹ್ಮದೇವರಿಗೆ ಒಂದು ದಿನವಾಗುತ್ತದೆ. ಬ್ರಹ್ಮನ ಈ ದಿನವನ್ನೇ ಕಲ್ಪವೆಂದು ಹೇಳುತ್ತಾರೆ. ಒಂದು ಕಲ್ಪದಲ್ಲಿ ಹದಿನಾಲ್ಕು ಮನುಗಳು ಆಗಿ ಹೋಗುತ್ತಾರೆ. ॥ ೨ ॥ ಕಲ್ಪಾಂತ್ಯದಲ್ಲಿ ಅಷ್ಟೇ ಸಮಯದವರೆಗೆ ಪ್ರಳಯವೂ ಇರುತ್ತದೆ. ಪ್ರಳಯವನ್ನೇ ಬ್ರಹ್ಮನ ರಾತ್ರಿ ಎಂದೂ ಹೇಳುತ್ತಾರೆ. ಆ ಸಮಯದಲ್ಲಿ ಈ ಮೂರು ಲೋಕಗಳೂ ಲೀನವಾಗುತ್ತವೆ, ಅವುಗಳ ಪ್ರಳಯವಾಗುತ್ತದೆ. ॥ ೩ ॥ ಇದಕ್ಕೆ ನೈಮಿತ್ತಿಕ ಪ್ರಳಯವೆಂದು ಹೇಳುತ್ತಾರೆ. ಈ ಪ್ರಳಯದ ಸಂದರ್ಭದಲ್ಲಿ ಇಡೀ ವಿಶ್ವವನ್ನು ತನ್ನೊಳಗೆ ಅಡಗಿಸಿಕೊಂಡು ಬ್ರಹ್ಮದೇವರು ಹಾಗೂ ಶೇಷಶಾಯಿ ಭಗವಾನ್ ನಾರಾಯಣನೂ ಶಯನ ಮಾಡುತ್ತಾರೆ. ॥ ೪ ॥ ಹೀಗೆ ರಾತ್ರಿಯ ಬಳಿಕ ಹಗಲು, ಹಗಲಿನ ಬಳಿಕ ರಾತ್ರೆ ಆಗುತ್ತಾಗುತ್ತಾ ಬ್ರಹ್ಮದೇವರ ಮಾನದಿಂದ ನೂರು ವರ್ಷದ ಮತ್ತು ಮನುಷ್ಯರ ದೃಷ್ಟಿಯಲ್ಲಿ ಎರಡು ಪರಾರ್ಧಗಳ ಆಯುಸ್ಸು ಮುಗಿದಾಗ ಮಹತತ್ತ್ವ, ಅಹಂಕಾರ, ಪಂಚತನ್ಮಾತ್ರೆಗಳು – ಈ ಏಳು ಪ್ರಕೃತಿಗಳು ತಮಗೆ ಕಾರಣವಾದ ಮೂಲ ಪ್ರಕೃತಿಯಲ್ಲಿ ಲೀನ ಹೊಂದುವವು. ॥ ೫ ॥ ರಾಜೇಂದ್ರನೇ! ಇದಕ್ಕೆ ಪ್ರಾಕೃತಿಕ ಪ್ರಳಯವೆಂದು ಹೇಳುತ್ತಾರೆ. ಈ ಪ್ರಳಯದಲ್ಲಿ ಪ್ರಳಯದ ಕಾರಣ ಒದಗಿದಾಗ ಪಂಚ-ಭೂತಗಳ ಮಿಶ್ರಣದಿಂದ ಉಂಟಾದ ಬ್ರಹ್ಮಾಂಡವು ತನ್ನ ಸ್ಥೂಲರೂಪವನ್ನು ಬಿಟ್ಟು ಕಾರಣ ರೂಪದಲ್ಲಿ ನೆಲೆಸುತ್ತದೆ, ಸೇರಿಹೋಗುತ್ತದೆ. ॥ ೬ ॥ ಪರೀಕ್ಷಿತನೇ! ಪ್ರಳಯದ ಸಮಯವು ಬಂದಾಗ ನೂರು ವರ್ಷಗಳವರೆಗೆ ಮೇಘಗಳು ಮಳೆಸುರಿಸುವುದಿಲ್ಲ, ಯಾರಿಗೂ ಅನ್ನ ಸಿಗುವುದಿಲ್ಲ, ಆ ಸಮಯದಲ್ಲಿ ಜನರು ಹಸಿವು-ಬಾಯಾರಿಕೆಗಳಿಂದ ಕಂಗೆಟ್ಟು ಒಬ್ಬರನ್ನೊಬ್ಬರು ತಿನ್ನತೊಡಗುವರು. ॥ ೭ ॥ ಹೀಗೆ ಕಾಲದ ಉಪದ್ರವದಿಂದ ಪೀಡಿತವಾಗಿ ಎಲ್ಲ ಪ್ರಜೆಯು ನಿಧಾನವಾಗಿ ಕ್ಷೀಣಿಸಿ ಬಿಡುತ್ತದೆ. ಪ್ರಳಯಕಾಲದ ಸಾಂವರ್ತಕ ಸೂರ್ಯನು ತನ್ನ ಪ್ರಚಂಡ ಕಿರಣಗಳಿಂದ ಸಮುದ್ರ, ಪ್ರಾಣಿಗಳ ಶರೀರಗಳು, ಪೃಥಿವಿಯ ಸಮಸ್ತ ರಸವನ್ನು ಒಣಗಿಸಿಬಿಡುತ್ತಾನೆ. ಮತ್ತೆ ಎಂದಿನಂತೆ ಪೃಥಿವಿಯಲ್ಲಿ ಮಳೆಗರೆಯುವುದಿಲ್ಲ, ಆ ಸಮಯದಲ್ಲಿ ಸಂಕರ್ಷಣ ಭಗವಂತನ ಮುಖದಿಂದ ಪ್ರಳಯಕಾಲದ ಸಂವರ್ತಕವೆಂಬ ಅಗ್ನಿಯು ಪ್ರಕಟವಾಗುತ್ತದೆ. ॥ ೮-೯ ॥ ವಾಯುವಿನ ವೇಗ

ದಹತ್ಯನಿಲವೇಗೋತ್ಥಃ ಶೂನ್ಯಾನ್ ಭೂವಿವರಾನಥ ।
ಉಪರ್ಯಧಃ ಸಮಂತಾಚ್ಚ ಶಿಖಾಭಿರ್ವಹ್ನಿ ಸೂರ್ಯಯೋಃ
॥ ೧೦ ॥

ದಹ್ಯಮಾನಂ ವಿಭಾತ್ಯಂಡಂ ದಗ್ಧಗೋಮಯಪಿಂಡವತ್ ।
ತತಃ ಪ್ರಚಂಡಪವನೋ ವರ್ಷಾಣಾಮಧಿಕಂ ಶತಮ್
॥ ೧೧ ॥

ಪರಃ ಸಾಂವರ್ತಕೋ ವಾತಿ ಧೂಮ್ರಂ ಖಂ ರಜಸಾऽऽವೃತಮ್ ।
ತತೋ ಮೇಘಕುಲಾನ್ಯಂಗ ಚಿತ್ರವರ್ಣಾನ್ಯನೇಕಶಃ
॥ ೧೨ ॥

ಶತಂ ವರ್ಷಾಣಿ ವರ್ಷಂತಿ ನದಂತಿ ರಭಸಸ್ವನೈಃ ।
ತತ ಏಕೋದಕಂ ವಿಶ್ವಂ ಬ್ರಹ್ಮಾಂಡವಿವರಾಂತರಮ್
॥ ೧೩ ॥

ತದಾ ಭೂಮೇರ್ಗಂಧಗುಣಂ ಗ್ರಸಂತ್ಯಾಪ ಉದಪ್ಲವೇ ।
ಗ್ರಸ್ತಗಂಧಾ ತು ಪೃಥಿವೀ ಪ್ರಲಯಾಯ ಕಲ್ಪತೇ
॥ ೧೪ ॥

ಅಪಾಂ ರಸಮಥೋ ತೇಜಸ್ತಾ ಲೀಯಂತೇऽಥ ನೀರಸಾಃ ।
ಗ್ರಸತೇ ತೇಜಸೋ ರೂಪಂ ವಾಯುಸ್ತದ್ರಹಿತಂ ತದಾ
॥ ೧೫ ॥

ಲೀಯತೇ ಚಾನಿಲೇ ತೇಜೋ ವಾಯೋಃ ಖಂ ಗ್ರಸತೇ ಗುಣಮ್ ।
ಸ ವೈ ವಿಶತಿ ಖಂ ರಾಜಂಸ್ತತಶ್ಚ ನಭಸೋ ಗುಣಮ್
॥ ೧೬ ॥

ಶಬ್ದಂ ಗ್ರಸತಿ ಭೂತಾದಿರ್ನಭಸ್ತಮನು ಲೀಯತೇ ।
ತೈಜಸಶ್ಚೇಂದ್ರಿಯಾಣ್ಯಂಗ ದೇವಾನ್ವೈಕಾರಿಕೋ ಗುಣೈಃ
॥ ೧೭ ॥

ಮಹಾನ್ ಗ್ರಸತ್ಯಹಂಕಾರಂ ಗುಣಾಃ ಸತ್ತ್ವಾದಯಶ್ಚ ತಮ್ ।
ಗ್ರಸತೇऽವ್ಯಾಕೃತಂ ರಾಜನ್ ಗುಣಾನ್ಕಾಲೇನ ಚೋದಿತಮ್
॥ ೧೮ ॥

ನ ತಸ್ಯ ಕಾಲಾವಯವೈಃ ಪರಿಣಾಮಾದಯೋ ಗುಣಾಃ ।
ಅನಾದ್ಯನಂತಮವ್ಯಕ್ತಂ ನಿತ್ಯಂ ಕಾರಣಮವ್ಯಯಮ್
॥ ೧೯ ॥

ದಿಂದ ಅದು ಇನ್ನೂ ಹೆಚ್ಚುವುದು. ತಲ-ಅತಲ ಮೊದಲಾದ ಕೆಳಗಿನ ಏಳೂ ಲೋಕಗಳನ್ನು ಭಸ್ಮವಾಗಿಮಾಡಿಬಿಡುತ್ತದೆ. ಆಲ್ಲಿಯ ಪ್ರಾಣಿಗಳಾದರೋ ಮೊದಲೇ ಸತ್ತಿರುತ್ತಾರೆ. ಕೆಳಗಿನಿಂದ ಅಗ್ನಿಯ ಭೀಕರ ಜ್ವಾಲೆಗಳು ಮತ್ತು ಮೇಲಿನಿಂದ ಸೂರ್ಯನ ಪ್ರಚಂಡ ಬಿಸಿಲು – ಇವುಗಳಿಂದ ಕೆಳಗೆ-ಮೆಲೆ ನಾಲ್ಕೂ ಕಡೆಯಿಂದ ಈ ಬ್ರಹ್ಮಾಂಡವು ಉರಿಯತೊಡಗಿ ಸುಟ್ಟ ಬೆರಣಿಯಂತೆ ಆಗಿ ಬಿಡುವುದು. ಬಳಿಕ ಪ್ರಳಯ ಕಾಲದ ಅತ್ಯಂತ ಪ್ರಚಂಡವಾದ ಸಾಂವರ್ತಕ ವಾಯುವು ನೂರಾರು ವರ್ಷಗಳವರೆಗೆ ಬೀಸುತ್ತದೆ. ಆ ಸಮಯದಲ್ಲಿ ಆಕಾಶವು ಹೊಗೆಯಿಂದ ಮತ್ತು ಧೂಳಿನಿಂದ ತುಂಬಿರುತ್ತದೆ. ಅನಂತರ ಬಣ್ಣ-ಬಣ್ಣದ ಅಸಂಖ್ಯ ಮೋಡಗಳು ಆಕಾಶದಲ್ಲಿ ಕವಿದುಕೊಂಡು ಭೀಕರ ಗರ್ಜನೆಯೊಡನೆ ಭಯಂಕರವಾಗಿ ನೂರಾರು ವರ್ಷಗಳವರೆಗೆ ಮಳೆಯನ್ನು ಕರೆಯುವವು. ಆ ಸಮಯದಲ್ಲಿ ಬ್ರಹ್ಮಾಂಡದೊಳಗೆ ಇರುವ ಎಲ್ಲ ಪ್ರಪಂಚವು ಒಂದು ಸಮುದ್ರದಂತಾಗಿ ಜಲಮಯವಾಗಿಬಿಡುವುದು. ॥ ೧೦-೧೩ ॥

ಹೀಗೆ ಜಲಪ್ರಳಯವಾದಾಗ ಜಲವು ಪೃಥಿವಿಯ ವಿಶೇಷಗುಣವಾದ ಗಂಧವನ್ನು ಸೆಳೆದು ತನ್ನಲ್ಲಿ ಲಯಗೊಳಿಸಿಕೊಳ್ಳುವುದು. ಗಂಧಗುಣವು ಜಲದಲ್ಲಿ ಲೀನವಾದಾಗ ಭೂಮಿಯು ಪ್ರಳಯವಾಗುತ್ತದೆ. ಅದು ಜಲದಲ್ಲಿ ಬೆರೆತು ಜಲರೂಪವೇ ಆಗುತ್ತದೆ. ॥ ೧೪ ॥ ರಾಜೇಂದ್ರನೇ! ಬಳಿಕ ಜಲದ ಗುಣವಾದ ರಸವನ್ನು ತೇಜಸ್ತತ್ತ್ವವು ಹೀರಿಕೊಂಡು ಜಲವು ನೀರಸವಾಗಿ ತೇಜಸ್ಸಿನಲ್ಲಿ ಸೇರಿಕೊಳ್ಳುವುದು. ಮತ್ತೆ ವಾಯುವು ತೇಜಸ್ಸಿನ ಗುಣವಾದ ರೂಪವನ್ನು ನುಂಗಿಹಾಕಿ ತೇಜವು ರೂಪರಹಿತವಾಗಿ ವಾಯುವಿನಲ್ಲಿ ಲೀನವಾಗುತ್ತದೆ. ಆಕಾಶವು ವಾಯುವಿನ ಗುಣವಾದ ಸ್ಪರ್ಶವನ್ನು ತನ್ನೊಳಗೆ ಸೇರಿಸಿಕೊಂಡು, ವಾಯುವು ಸ್ಪರ್ಶರಹಿತವಾಗಿ ಆಕಾಶದಲ್ಲಿ ಶಾಂತವಾಗುತ್ತದೆ. ಅನಂತರ ತಾಮಸ ಅಹಂಕಾರವು ಆಕಾಶದ ಗುಣವಾದ ಶಬ್ದವನ್ನು ಕಬಳಿಸಿ ಆಕಾಶವು ಶಬ್ದಹೀನವಾಗಿ ತಾಮಸಾಹಂಕಾರದಲ್ಲಿ ಲೀನವಾಗಿ ಹೋಗುವುದು. ಹೀಗೆಯೇ ತೈಜಸಾಹಂಕಾರವು ಇಂದ್ರಿಯಗಳ ಮತ್ತು ವೈಕಾರಿಕ ಅಹಂಕಾರವು ಇಂದ್ರಿಯಗಳ ಅಧಿಷ್ಠಾತೃದೇವತೆಗಳೂ, ಮತ್ತು ಇಂದ್ರಿಯಗಳ ವೃತ್ತಿಗಳನ್ನೂ ತನ್ನಲ್ಲಿ ಲೀನಗೊಳಿಸಿ ಕೊಳ್ಳುವುದು. ॥ ೧೫-೧೭ ॥ ಅದಾದ ಬಳಿಕ ಮಹತ್ತತ್ತ್ವವು ಅಹಂಕಾರವನ್ನೂ, ಸತ್ತ್ವಾದಿಗುಣಗಳು ಮಹತ್ತತ್ತ್ವವನ್ನೂ ನುಂಗಿಹಾಕುವುದು. ಪರೀಕ್ಷಿತನೇ! ಇದೆಲ್ಲವು ಕಾಲದ ಮಹಿಮೆಯಾಗಿದೆ. ಅದರ ಪ್ರೇರಣೆಯಿಂದಲೇ ಅವ್ಯಕ್ತ ಪ್ರಕೃತಿಯು ಗುಣಗಳನ್ನು ತನ್ನಲ್ಲಿ ಲೀನಗೊಳಿಸಿಕೊಳ್ಳುವುದು. ಆಗ ಕೇವಲ ಪ್ರಕೃತಿಯೇ ಉಳಿದುಬಿಡುತ್ತದೆ. ॥ ೧೮ ॥ ಅದೇ ಚರಾಚರ ಜಗತ್ತಿನ ಮೂಲಕಾರಣವಾಗಿದೆ. ಅದು ಅವ್ಯಕ್ತವೂ, ಅನಾದಿಯೂ, ಅನಂತವೂ, ನಿತ್ಯವೂ, ಅವಿನಾಶಿಯೂ ಆಗಿದೆ. ತನ್ನ ಕಾರ್ಯಗಳನ್ನು ಲೀನಗೊಳಿಸಿಕೊಂಡು ಪ್ರಳಯಕಾಲದಲ್ಲಿ ಸಾಮ್ಯಾವಸ್ಥೆಯನ್ನು ಪಡೆದಾಗ ಕಾಲದ ಅವಯವ ವರ್ಷ, ಮಾಸ, ಹಗಲು-ರಾತ್ರಿ, ಕ್ಷಣ ಮುಂತಾದವುಗಳ ಕಾರಣವಾದ ಅದರಲ್ಲಿ ಪರಿಣಾಮ, ಕ್ಷಯ, ವೃದ್ಧಿ ಮುಂತಾದ ಯಾವ ವಿಧದ ವಿಕಾರಗಳೂ ಉಂಟಾಗುವುದಿಲ್ಲ. ॥ ೧೯ ॥

ನ ಯತ್ರ ವಾಚೋ ನ ಮನೋ ನ ಸತ್ತ್ವಂ
ತಮೋ ರಜೋ ವಾ ಮಹದಾದಯೋಽಮೀ ।
ನ ಪ್ರಾಣಬುದ್ಧೀಂದ್ರಿಯದೇವತಾ ವಾ
ನ ಸಂನಿವೇಶಃ ಖಲು ಲೋಕಕಲ್ಪಃ ॥ ೨೦ ॥

ನ ಸ್ವಪ್ನ ಜಾಗ್ರನ್ನ ಚ ತತ್ ಸುಷುಪ್ತಂ
ನ ಖಂ ಜಲಂ ಭೂರನಿಲೋಽಗ್ನಿರರ್ಕಃ ।
ಸಂಸುಪ್ತವಚ್ಛೂನ್ಯವದಪ್ರತರ್ಕ್ಯಂ
ತನ್ಮೂಲಭೂತಂ ಪದಮಾಮನಂತಿ ॥ ೨೧ ॥

ಲಯಃ ಪ್ರಾಕೃತಿಕೋ ಹ್ಯೇಷ ಪುರುಷಾವ್ಯಕ್ತಯೋರ್ಯದಾ ।
ಶಕ್ತಯಃ ಸಂಪ್ರಲೀಯಂತೇ ವಿವಶಾಃ ಕಾಲವಿದ್ರುತಾಃ
॥ ೨೨ ॥

ಬುದ್ಧೀಂದ್ರಿಯಾರ್ಥರೂಪೇಣ ಜ್ಞಾನಂ ಭಾತಿ ತದಾಶ್ರಯಮ್ ।
ದೃಶ್ಯತ್ವಾವ್ಯತಿರೇಕಾಭ್ಯಾಮಾದ್ಯಂತವದವಸ್ತು ಯತ್
॥ ೨೩ ॥

ದೀಪಶ್ಚಕ್ಷುಶ್ಚ ರೂಪಂ ಚ ಜ್ಯೋತಿಷೋ ನ ಪೃಥಗ್ಭವೇತ್ ।
ಏವಂ ಧೀಃ ಖಾನಿ ಮಾತ್ರಾಶ್ಚ ನ ಸ್ಯುರನ್ಯತಮಾದೃತಾತ್
॥ ೨೪ ॥

ಬುದ್ಧೇರ್ಜಾಗರಣಂ ಸ್ವಪ್ನಃ ಸುಷುಪ್ತಿರಿತಿ ಚೋಚ್ಯತೇ ।
ಮಾಯಾಮಾತ್ರಮಿದಂ ರಾಜನ್ ನಾನಾತ್ವಂ ಪ್ರತ್ಯಗಾತ್ಮನಿ
॥ ೨೫ ॥

ಯಥಾ ಜಲಧರಾ ವ್ಯೋಮ್ನಿ ಭವಂತಿ ನ ಭವಂತಿ ಚ ।
ಬ್ರಹ್ಮಣೇದಂ ತಥಾ ವಿಶ್ವಮವಯವ್ಯುದಯಾಪ್ಯಯಾತ್
॥ ೨೬ ॥

ಸತ್ಯಂ ಹ್ಯವಯವಃ ಪ್ರೋಕ್ತಃ ಸರ್ವಾವಯವಿನಾಮಿಹ ।
ವಿನಾರ್ಥೇನ ಪ್ರತೀಯೇರನ್ನಟಸ್ಯೇವಾಂಗ ತಂತವಃ
॥ ೨೭ ॥

ಆ ಸಮಯದಲ್ಲಿ ಪ್ರಕೃತಿಯಲ್ಲಿ ಸ್ಥೂಲ ಅಥವಾ ಸೂಕ್ಷ್ಮರೂಪದಿಂದಲೂ ವಾಣಿ, ಮನಸ್ಸು, ಸತ್ವಗುಣ, ರಜೋಗುಣ, ತಮೋಗುಣ, ಮಹತ್ತತ್ವವೇ ಮೊದಲಾದ ವಿಕಾರಗಳು, ಪ್ರಾಣ, ಬುದ್ಧಿ ಇಂದ್ರಿಯಗಳು ಮತ್ತು ಅವುಗಳ ದೇವತೆಗಳು ಯಾವುದೂ ಇರುವುದಿಲ್ಲ, ಸೃಷ್ಟಿಯ ಸಮಯದಲ್ಲಿರುವ ಲೋಕಗಳ ಕಲ್ಪನೆ ಹಾಗೂ ಅವುಗಳ ಸ್ಥಿತಿಯೂ ಇರುವುದಿಲ್ಲ ॥ ೨೦ ॥ ಆಗ ಸ್ವಪ್ನ, ಜಾಗ್ರತಿ, ಸುಷುಪ್ತಿ – ಈ ಮೂರು ಅವಸ್ಥೆಗಳೂ ಇರುವುದಿಲ್ಲ, ಆಕಾಶ, ಜಲ, ಪೃಥಿವಿ, ವಾಯು, ಅಗ್ನಿ, ಸೂರ್ಯ ಇವುಗಳೂ ಇರುವುದಿಲ್ಲ, ಎಲ್ಲವೂ ಮಲಗಿರುವ ಶೂನ್ಯದಂತೆ ಇರುತ್ತದೆ. ಆ ಅವಸ್ಥೆಯನ್ನು ತರ್ಕದಿಂದ ಊಹಿಸುವುದಕ್ಕೂ ಅಸಂಭವವೇ. ಆ ಅವ್ಯಕ್ತವನ್ನೇ ಜಗತ್ತಿನ ಮೂಲಕಾರಣ ತತ್ತ್ವವೆಂದು ಹೇಳುತ್ತಾರೆ. ॥ ೨೧ ॥ ಈ ಅವಸ್ಥೆಯನ್ನು 'ಪ್ರಾಕೃತ ಪ್ರಳಯ'ವೆಂದು ಹೇಳುತ್ತಾರೆ. ಆ ಸಮಯದಲ್ಲಿ ಪುರುಷ ಮತ್ತು ಪ್ರಕೃತಿ ಇವೆರೆಡರ ಶಕ್ತಿಗಳೂ ಕಾಲದ ಪ್ರಭಾವದಿಂದ ಕ್ಷೀಣವಾಗುತ್ತವೆ ಹಾಗೂ ವಿವಶರಾಗಿ ತಮ್ಮ ಮೂಲ ಸ್ವರೂಪದಲ್ಲಿ ಲೀನವಾಗಿಹೋಗುತ್ತಾರೆ. ॥ ೨೨ ॥

ಪರೀಕ್ಷಿತನೇ! (ಈಗ ನಿನಗೆ ಆತ್ಯಂತಿಕ ಪ್ರಳಯ ಅಂದರೆ ಮೋಕ್ಷದ ಸ್ವರೂಪವನ್ನು ತಿಳಿಸುತ್ತೇನೆ ; ಕೇಳು.) ಬುದ್ಧಿ ಇಂದ್ರಿಯಗಳು ಮತ್ತು ಅವುಗಳ ವಿಷಯಗಳೆಲ್ಲಕ್ಕೂ ಆಶ್ರಯ, ಅಧಿಷ್ಠಾನನಾಗಿರುವ ಜ್ಞಾನಸ್ವರೂಪನಾದ ಪರಮಾತ್ಮನೇ ಇರುತ್ತಾನೆ. ಇವುಗಳಿಗೆ ಆದಿ ಮತ್ತು ಅಂತ್ಯಗಳುಂಟು. ಆದುದರಿಂದ ಅವು ಸತ್ಯವಸ್ತುಗಳಲ್ಲ ಮಿಥ್ಯೆಯೇ ಆಗಿವೆ. ಇವುಗಳಿಗೆ ಧಾರಕನಾದ ಪರಮಾತ್ಮನೊಬ್ಬನೇ ಸತ್ಯವಸ್ತು. ॥ ೨೩. ॥ ದೀಪ, ಕಣ್ಣು ಮತ್ತು ಕಾಣುವ ರೂಪ ಇವು ಮೂರು ತೇಜಸ್ಸಿನಿಂದ ಭಿನ್ನವಾಗಿಲ್ಲ, ಹಾಗೆಯೆ ಬುದ್ಧಿ ಇಂದ್ರಿಯಗಳು ಹಾಗೂ ಅವುಗಳ ವಿಷಯ ತನ್ಮಾತ್ರೆಗಳೂ ತನ್ನ ಅಧಿಷ್ಠಾನಸ್ವರೂಪ ಬ್ರಹ್ಮನಿಂದ ಬೇರೆಯಾಗಿಲ್ಲ, ಹೀಗಿದ್ದರೂ ಅದು ಇವುಗಳಿಂದ ಸರ್ವಥಾ ಭಿನ್ನವಾಗಿದೆ. (ರಜ್ಜು ರೂಪೀ ಅಧಿಷ್ಠಾನದಲ್ಲಿ ಅಧ್ಯಸ್ತವಾದ ಸರ್ಪವು ತನ್ನ ಅಧಿಷ್ಠಾನದಿಂದ ಪೃಥಕ್ಕಾಗಿಲ್ಲ, ಆದರೂ ಅಧ್ಯಸ್ತ ಸರ್ಪದಿಂದ ಅಧಿಷ್ಠಾನಕ್ಕೆ ಯಾವ ಸಂಬಂಧವೂ ಇಲ್ಲ.) ॥ ೨೪ ॥ ಪರೀಕ್ಷಿತನೇ! ಜಾಗ್ರತ್, ಸ್ವಪ್ನ ಸುಷುಪ್ತಿ ಈ ಮೂರು ಅವಸ್ಥೆಗಳು ಬುದ್ಧಿಯದಾಗಿದೆ. ಆದ್ದರಿಂದ ಇವುಗಳ ಕಾರಣ ಅಂತರಾತ್ಮನಲ್ಲಿ ಪ್ರತೀತವಾಗುವ ವಿಶ್ವ, ತೈಜಸ, ಪ್ರಾಜ್ಞರೂಪವಾದ ನಾನಾತ್ವವು ಕೇವಲ ಮಾಯಾಮಾತ್ರವಾಗಿದೆ. ಬುದ್ಧಿಗತ ನಾನಾತ್ವದ ಏಕಮಾತ್ರ ಸತ್ಯನಾದ ಆತ್ಮನಿಗೆ ಯಾವ ಸಂಬಂಧವೂ ಇಲ್ಲ ॥ ೨೫ ॥ ಈ ವಿಶ್ವವು ಉತ್ಪತ್ತಿ ಮತ್ತು ಪ್ರಳಯಗಳಿಂದ ಗ್ರಸ್ತವಾಗಿದೆ. ಅದಕ್ಕಾಗಿ ಅನೇಕ ಅವಯವಗಳ ಸಮೂಹವೇ ಈ ವಿಶ್ವವಾಗಿದೆ. ಆದ್ದರಿಂದ ಆಕಾಶದಲ್ಲಿ ಕೆಲವೊಮ್ಮೆ ಮೋಡಗಳು ಇರುತ್ತವೆ ಕೆಲವೊಮ್ಮೆ ಇರುವುದಿಲ್ಲ, ಹಾಗೆಯೇ ಇದು ಕೆಲವೊಮ್ಮೆ ಪರಬ್ರಹ್ಮನಲ್ಲಿ ಇರುತ್ತದೆ ಕೆಲವೊಮ್ಮೆ ಇರುವುದಿಲ್ಲ ॥ ೨೬ ॥ ಪರೀಕ್ಷಿತನೇ! ಜಗತ್ತಿನ ವ್ಯವಹಾರಗಳಲ್ಲಿ ಇರುವ ಅವಯವೀ ಪದಾರ್ಥಗಳು ಇಲ್ಲದಿದ್ದರೂ ಅವುಗಳ ಭಿನ್ನ-ಭಿನ್ನ ಅವಯವಗಳು ಸತ್ಯವಾಗಿರಬಲ್ಲವು. ಏಕೆಂದರೆ ಅವುಗಳು ಕಾರಣವಾಗಿದೆ – ಬಟ್ಟೆಯು ಇಲ್ಲದಿದ್ದರೂ ಅದರ ಕಾರಣರೂಪವಾದ ನೂಲಿನ ಅಸ್ತಿತ್ವವು ಇರುವಂತೆಯೇ ಕಾರ್ಯರೂಪವಾದ ಜಗತ್ತಿನ ಅಭಾವದಲ್ಲಿಯೂ ಈ ಜಗತ್ತಿನ ಕಾರಣರೂಪವಾದ ಅವಯವಗಳ ಸ್ಥಿತಿ ಇರಬಲ್ಲದು. ॥ ೨೭ ॥

ಯತ್ ಸಾಮಾನ್ಯವಿಶೇಷಾಭ್ಯಾಮುಪಲಭ್ಯೇತ ಸ ಭ್ರಮಃ ।
ಅನ್ಯೋನ್ಯಾಪಾಶ್ರಯಾತ್ಸರ್ವಮಾದ್ಯಂತವದವಸ್ತು ಯತ್
॥ ೨೮ ॥

ವಿಕಾರಃ ಖ್ಯಾಯಮಾನೋಽಪಿ ಪ್ರತ್ಯಗಾತ್ಮಾನಮಂತರಾ ।
ನ ನಿರೂಪ್ಯೋಽಸ್ತ್ಯಣುರಪಿ ಸ್ಯಾಚ್ಚೇಚ್ಚಿತ್ತಮ ಆತ್ಮವತ್
॥ ೨೯ ॥

ನಹಿ ಸತ್ಯಸ್ಯ ನಾನಾತ್ವಮವಿದ್ವಾನ್ಯದಿ ಮನ್ಯತೇ ।
ನಾನಾತ್ವಂ ಛಿದ್ರಯೋರ್ಯದ್ವಜ್ಜ್ಯೋತಿಷೋರ್ವಾತಯೋರಿವ
॥ ೩೦ ॥

ಯಥಾ ಹಿರಣ್ಯಂ ಬಹುಧಾ ಸಮೀಯತೇ
ನೃಭಿಃ ಕ್ರಿಯಾಭಿರ್ವ್ಯವಹಾರವರ್ತ್ಮಸು ।
ಏವಂ ವಚೋಭಿರ್ಭಗವಾನಧೋಕ್ಷಜೋ
ವ್ಯಾಖ್ಯಾಯತೇ ಲೌಕಿಕವೈದಿಕೈರ್ಜನೈಃ ॥ ೩೧ ॥

ಯಥಾ ಘನೋಽರ್ಕಪ್ರಭವೋಽರ್ಕದರ್ಶಿತೋ
ಹ್ಯರ್ಕಾಂಶಭೂತಸ್ಯ ಚ ಚಕ್ಷುಷಸ್ತಮಃ ।
ಏವಂ ತ್ವಹಂ ಬ್ರಹ್ಮಗುಣಸ್ತದೀಕ್ಷಿತೋ
ಬ್ರಹ್ಮಾಂಶಕಸ್ಯಾತ್ಮನ ಆತ್ಮಬಂಧನಃ ॥ ೩೨ ॥

ಘನೋ ಯದಾರ್ಕಪ್ರಭವೋ ವಿದೀರ್ಯತೇ
ಚಕ್ಷುಃ ಸ್ವರೂಪಂ ರವಿಮೀಕ್ಷತೇ ತದಾ ।
ಯದಾ ಹ್ಯಹಂಕಾರ ಉಪಾಧಿರಾತ್ಮನೋ
ಜಿಜ್ಞಾಸಯಾ ನಶ್ಯತಿ ತರ್ಹ್ಯನುಸ್ಮರೇತ್ ॥ ೩೩ ॥

ಆದರೆ ಬ್ರಹ್ಮವಸ್ತುವಿನಲ್ಲಿ ಈ ಕಾರ್ಯ-ಕಾರಣಭಾವಗಳೂ ವಾಸ್ತವಿಕವಾಗಿರುವುದಿಲ್ಲ ಏಕೆಂದರೆ, ಕಾರಣವಾದರೋ ಸಾಮಾನ್ಯ ವಸ್ತುವಾಗಿದೆ ಮತ್ತು ಕಾರ್ಯವು ವಿಶೇಷವಸ್ತುವಾಗಿದೆ. ಹೀಗೆ ಕಂಡುಬರುವ ಭೇದವೂ ಕೇವಲ ಭ್ರಮೆಯಾಗಿದೆ. ಸಾಮಾನ್ಯ ಮತ್ತು ವಿಶೇಷ ಭಾವಗಳು ಆಪೇಕ್ಷಿಕವಾಗಿವೆ, ಅನ್ಯೋನ್ಯಾಶ್ರಯ ವಾಗಿರುವುದೇ ಇದರ ಕಾರಣವಾಗಿದೆ. ವಿಶೇಷವಿಲ್ಲದೆ ಸಾಮಾನ್ಯ ಹಾಗೂ ಸಾಮಾನ್ಯವಿಲ್ಲದೆ ವಿಶೇಷದ ಸ್ಥಿತಿ ಇರಲಾರದು. ಕಾರ್ಯ ಮತ್ತು ಕಾರಣದ ಭಾವಗಳಲ್ಲಿ ಆದಿ-ಅಂತ್ಯವೆರಡೂ ಕಂಡು ಬರುತ್ತವೆ. ಆದ್ದರಿಂದಲೂ ಅವು ಸ್ವಪ್ನದ ಭೇದ-ಭಾವಗಳಂತೆ ಸರ್ವಥಾ ವಸ್ತುಗಳೇ ಅಲ್ಲ. ॥ ೨೮ ॥ ಈ ಪ್ರಪಂಚರೂಪವಾದ ವಿಕಾರವು ಸ್ವಪ್ನದ ವಿಕಾರದಂತೆ ಕಂಡುಬರುತ್ತಿದ್ದರೂ ಇದು ತನ್ನ ಅಧಿಷ್ಠಾನವಾದ ಬ್ರಹ್ಮಸ್ವರೂಪ ಆತ್ಮನಿಂದ ಭಿನ್ನವಾಗಿಲ್ಲವೆನ್ನು ವುದರಲ್ಲಿ ಸಂದೇಹವೇ ಇಲ್ಲ. ಯಾರೇ ಆಗಲೀ ಆತ್ಮನಿಂದ ಭಿನ್ನ ರೂಪದಲ್ಲಿ ಅಣುಮಾತ್ರವು ಇದನ್ನು ನಿರೂಪಿಸಲಾರರು. ಆತ್ಮನಿಂದ ಬೇರೆಯಾದ ಇದರ ಅಸ್ತಿತ್ವನ್ನು ಒಪ್ಪಿಕೊಂಡರೆ ಚಿದ್ರೂಪವಾದ ಆತ್ಮನಂತೆ ಇದೂ ಕೂಡ ಸ್ವಯಂ ಪ್ರಕಾಶವಾದೀತು. ಇಂತಹ ಸ್ಥಿತಿಯಲ್ಲಿ ಅದು ಆತ್ಮನಂತೆಯೇ ಏಕರೂಪವೆಂದು ಸಿದ್ಧ ವಾದೀತು. ॥ ೨೯ ॥ ಆದರೆ ಪರಮಾರ್ಥ ಸತ್ಯವಸ್ತುವಿನಲ್ಲಿ ನಾನಾ ತ್ವವು ಇಲ್ಲವೆಂಬುದೇ ಸರ್ವಥಾ ನಿಶ್ಚಿತವಾಗಿದೆ. ಯಾವನಾದರು ಅಜ್ಞಾನಿಯು ಪರಮಾರ್ಥ ಸತ್ಯತತ್ತ್ವದಲ್ಲಿ ನಾನಾತ್ವವನ್ನು ಸ್ವೀಕರಿಸಿದರೆ - ಘಟಾಕಾಶ ಮತ್ತು ಮಹಾಕಾಶ, ಆಕಾಶದಲ್ಲಿರುವ ಸೂರ್ಯ ಹಾಗೂ ಜಲದಲ್ಲಿ ಪ್ರತಿಬಿಂಬಿತ ಸೂರ್ಯ, ಹೊರಗಿನ ವಾಯು ಮತ್ತು ಒಳಗಿನ ವಾಯು ಇವುಗಳಲ್ಲಿ ಭೇದವೆಣಿಸಿ ದಂತೆಯೇ ಆಗುವುದು. ॥ ೩೦ ॥

ವ್ಯವಹಾರದಲ್ಲಿ ಮನುಷ್ಯನು ಒಂದೇ ಚಿನ್ನವನ್ನು ಕಂಕಣ, ಕುಂಡಲ, ಕಡ ಮುಂತಾದ ಅನೇಕರೂಪದಲ್ಲಿ, ಒಡವೆಗಳಾಗಿಸಿ ಬೇರೆ-ಬೇರೆ ರೂಪದಲ್ಲಿ ಕಂಡುಬರುವಂತೆಯೇ ವ್ಯವಹಾರದಲ್ಲಿ ನಿಪುಣರಾದ ವಿದ್ವಾಂಸರು ಲೌಕಿಕ ಮತ್ತು ವೈದಿಕ ವಾಣಿಯ ಮೂಲಕ ಇಂದ್ರಿಯಾತೀತ ಆತ್ಮಸ್ವರೂಪನಾದ ಭಗವಂತನನ್ನೂ ಅನೇಕ ರೂಪಗಳಲ್ಲಿ ವರ್ಣಿಸುತ್ತಾರೆ. ॥ ೩೧ ॥ ಮೋಡಗಳು ಸೂರ್ಯನಿಂದ ಉತ್ಪನ್ನವಾಗುತ್ತವೆ ಮತ್ತು ಸೂರ್ಯನಿಂದಲೇ ಪ್ರಕಾಶಿಸುತ್ತವೆ. ಹೀಗಿದ್ದರೂ ಅವು ಸೂರ್ಯನ ಅಂಶವಾದ ಕಣ್ಣು ಗಳಿಗೆ ಸೂರ್ಯನದರ್ಶನದಲ್ಲಿ ಬಾಧಕವಾಗುತ್ತವೆ. ಹೀಗೆಯೇ ಅಹಂಕಾರವು ಬ್ರಹ್ಮವಸ್ತುವಿನಿಂದಲೇ ಉತ್ಪನ್ನವಾಗಿ ಬ್ರಹ್ಮನಿಂದಲೇ ಪ್ರಕಾಶಿತವಾಗುತ್ತದೆ. ಆದರೂ ಬ್ರಹ್ಮನ ಅಂಶನಾದ ಜೀವನಿಗೆ ಬ್ರಹ್ಮಸ್ವರೂಪದ ಸಾಕ್ಷಾತ್ಕಾರದಲ್ಲಿ ಬಾಧಕವಾಗಿ ಇರುತ್ತದೆ. ॥೩೨॥ ಸೂರ್ಯನಿಂದ ಪ್ರಕಟವಾಗುವ ಮೋಡವು ಚಲ್ಲಾಪಿಲ್ಲಿಯಾದಾಗ ಕಣ್ಣುಗಳು ತನ್ನ ಸ್ವರೂಪನಾದ ಸೂರ್ಯನನ್ನು ದರ್ಶಿಸಲು ಸಮರ್ಥವಾಗುವಂತೆಯೇ ಜೀವಿಯ ಹೃದಯದಲ್ಲಿ ಜಿಜ್ಞಾಸೆಯು ಜಾಗ್ರತವಾದಾಗ ಆತ್ಮನ ಉಪಾಧಿಯಾದ ಅಹಂಕಾರವು ನಾಶವಾಗಿಬಿಡುತ್ತದೆ ಹಾಗೂ ಜೀವಿಗೆ ತನ್ನ ಸ್ವರೂಪದ ಸಾಕ್ಷಾತ್ಕಾರ ಉಂಟಾಗುತ್ತದೆ. ॥ ೩೩ ॥

ಯದ್ಯೈವಮೇತೇನ ವಿವೇಕಹೇತಿನಾ
ಮಾಯಾಮಯಾಹಂಕರಣಾತ್ಮಬಂಧನಮ್ ।
ಛಿತ್ತ್ವಾಚ್ಯುತಾತ್ಮಾನುಭವೋಽವತಿಷ್ಠತೇ
ತಮಾಹುರಾತ್ಯಂತಿಕಮಂಗ ಸಂಪ್ಲವಮ್ ॥ ೩೪ ॥

ಪ್ರಿಯ ಪರೀಕ್ಷಿತನೇ! ಜೀವನು ವಿವೇಕ ಖಡ್ಗದಿಂದ ಮಾಯಾಮಯ ಅಹಂಕಾರದ ಬಂಧನವನ್ನು ತುಂಡರಿಸಿದಾಗ ಅವನು ತನ್ನ ಏಕರಸ ಆತ್ಮಸ್ವರೂಪದ ಸಾಕ್ಷಾತ್ಕಾರದಲ್ಲಿ ಸ್ಥಿತನಾಗುತ್ತಾನೆ. ಆತ್ಮನ ಈ ಮಾಯಾಮುಕ್ತ ವಾಸ್ತವಿಕ ಸ್ಥಿತಿಯೇ ಆತ್ಯಂತಿಕ ಪ್ರಳಯವೆಂದು ಹೇಳಲಾಗುತ್ತದೆ. ॥ ೩೪ ॥

ನಿತ್ಯದಾ ಸರ್ವಭೂತಾನಾಂ ಬ್ರಹ್ಮಾದೀನಾಂ ಪರಂತಪ।
ಉತ್ಪತ್ತಿಪ್ರಲಯಾವೇಕೇ ಸೂಕ್ಷ್ಮಜ್ಞಾಃ ಸಂಪ್ರಚಕ್ಷತೇ
॥ ೩೫ ॥

ಎಲೈ ಪರಂತಪನೇ! ಚತುರ್ಮುಖ ಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯವರೆಗಿನ ಎಲ್ಲ ಪ್ರಾಣಿ-ಪದಾರ್ಥಗಳು ನಿರಂತರವಾಗಿ ಹುಟ್ಟುತ್ತಾ-ಸಾಯುತ್ತಾ ಇರುತ್ತವೆ. ಅರ್ಥಾತ್ ನಿತ್ಯರೂಪದಿಂದ ಉತ್ಪತ್ತಿ ಹಾಗೂ ಪ್ರಳಯವಾಗುತ್ತಾ ಇರುತ್ತವೆ. ॥ ೩೫ ॥

ಕಾಲಸ್ರೋತೋಜವೇನಾಶು ಹ್ರಿಯಮಾಣಸ್ಯ ನಿತ್ಯದಾ।
ಪರಿಣಾಮಿನಾಮವಸ್ಥಾಸ್ತಾ ಜನ್ಮಪ್ರಲಯಹೇತವಃ
॥ ೩೬ ॥

ಪ್ರಪಂಚದ ಪರಿಣಾಮಶೀಲವಾದ ನದಿಯ ಪ್ರವಾಹ ಮತ್ತು ದೀಪಶಿಖೆ ಮುಂತಾದ ಪದಾರ್ಥಗಳು ಕ್ಷಣ-ಕ್ಷಣಕ್ಕೂ ಬದಲಾಗುತ್ತಾ ಇರುತ್ತವೆ. ಅವುಗಳ ಬದಲಾಗುವ ಸ್ಥಿತಿಯನ್ನು ಕಂಡು ದೇಹಾದಿಗಳೂ ಕೂಡ ಕಾಲರೂಪ ಪ್ರವಾಹದ ವೇಗದಲ್ಲಿ ಬದಲಾಗುತ್ತಾ ಇರುತ್ತವೆ ಎಂಬುದು ನಿಶ್ಚಯವಾಗುತ್ತದೆ. ಆದಕ್ಕಾಗಿ ಕ್ಷಣ-ಕ್ಷಣದಲ್ಲಿ ಅವುಗಳ ಉತ್ಪತ್ತಿ-ಪ್ರಳಯ ಆಗುತ್ತಾ ಇರುತ್ತದೆ ॥ ೩೬ ॥

ಅನಾದ್ಯಂತವತಾನೇನ ಕಾಲೇನೇಶ್ವರಮೂರ್ತಿನಾ।
ಅವಸ್ಥಾ ನೈವ ದೃಶ್ಯಂತೇ ವಿಯತಿ ಜ್ಯೋತಿಷಾಮಿವ
॥ ೩೭ ॥

ಆಕಾಶದಲ್ಲಿ ನಕ್ಷತ್ರಗಳು ಸದಾ ಚಲಿಸುತ್ತಿದ್ದರೂ ಅವುಗಳ ಗತಿಯು ನಮಗೆ ಸ್ಪಷ್ಟವಾಗಿ ತಿಳಿಯುವುದಿಲ್ಲ, ಹಾಗೆಯೇ ಭಗವಂತನ ಸ್ವರೂಪಭೂತ ಅನಾದಿ-ಅನಂತ ಕಾಲದ ಕಾರಣದಿಂದ ಪ್ರಾಣಿಗಳ ಪ್ರತಿಕ್ಷಣವಾಗುವ ಉತ್ಪತ್ತಿ-ಪ್ರಳಯಗಳೂ ನಮ್ಮ ದೃಷ್ಟಿಗೆ ಗೋಚರಿಸುವುದಿಲ್ಲ ॥ ೩೭ ॥

ನಿತ್ಯೋ ನೈಮಿತ್ತಿಕಶ್ಚೈವ ತಥಾ ಪ್ರಾಕೃತಿಕೋ ಲಯಃ।
ಆತ್ಯಂತಿಕಶ್ಚ ಕಥಿತಃ ಕಾಲಸ್ಯ ಗತಿರೀದೃಶೀ
॥ ೩೮ ॥

ಪರೀಕ್ಷಿತನೇ! ನಾನು ನಿನಗೆ ನಿತ್ಯಪ್ರಳಯ, ನೈಮಿತ್ತಿಕಪ್ರಳಯ, ಪ್ರಾಕೃತಿಕಪ್ರಳಯ ಮತ್ತು ಆತ್ಯಂತಿಕ ಪ್ರಳಯ – ಎಂಬ ನಾಲ್ಕು ಪ್ರಕಾರದ ಪ್ರಳಯಗಳನ್ನು ವರ್ಣಿಸಿ ಹೇಳಿರುವೆನು. ಕಾಲದ ಸೂಕ್ಷ್ಮವಾದ ಗತಿಯು ಹೀಗೆ ಇರುವುದು. ॥ ೩೮ ॥

ಏತಾಃ ಕುರುಶ್ರೇಷ್ಠ ಜಗದ್ವಿಧಾತು-
ರ್ನಾರಾಯಣಸ್ಯಾಖಿಲಸತ್ತ್ವಧಾಮ್ನಃ ।
ಲೀಲಾಕಥಾಸ್ತೇ ಕಥಿತಾಃ ಸಮಾಸತಃ
ಕಾರ್ತ್ಸ್ನ್ಯೇನ ನಾಜೋಽಪ್ಯಭಿಧಾತುಮೀಶಃ ॥ ೩೯ ॥

ಎಲೈ ಕುರುಶ್ರೇಷ್ಠನೇ! ಜಗತ್ತಿನ ಸೃಷ್ಟಿಕರ್ತನೂ, ಸಮಸ್ತ ಪ್ರಾಣಿಗಳಿಗೂ, ಶಕ್ತಿಗಳಿಗೂ ಆಶ್ರಯನಾಗಿರುವ ಭಗವಾನ್ ನಾರಾಯಣನ ಲೀಲಾ ಚರಿತ್ರೆಗಳನ್ನು ನಿನಗೆ ಸಂಕ್ಷೇಪವಾಗಿ ಹೇಳಿರುವೆನು. ಭಗವಂತನ ಲೀಲಾ ಕಥೆಗಳನ್ನು ಸಂಪೂರ್ಣವಾಗಿ ವರ್ಣಿಸಲು ಬ್ರಹ್ಮದೇವರಿಂದಲೂ ಶಕ್ಯವಾಗಲಾರದು. ॥ ೩೯॥

ಸಂಸಾರಸಿಂಧುಮತಿದುಸ್ತರಮುತ್ತಿತೀರ್ಷೋ-
ರ್ನಾನ್ಯಃ ಪ್ಲವೋ ಭಗವತಃ ಪುರುಷೋತ್ತಮಸ್ಯ ।
ಲೀಲಾಕಥಾರಸನಿಷೇವಣಮಂತರೇಣ
ಪುಂಸೋ ಭವೇದ್ವಿವಿಧದುಃಖದವಾರ್ದಿತಸ್ಯ ॥ ೪೦ ॥

ಅತ್ಯಂತ ದುಸ್ತರವಾದ ಸಂಸಾರ ಸಾಗರದಿಂದ ಪಾರಾಗಲು ಬಯಸುವವನಿಗೆ ಅಥವಾ ಅನೇಕ ಪ್ರಕಾರದ ದುಃಖದಾವಾನಲದಿಂದ ಬೆಂದು ಹೋಗಿರುವವನಿಗಾಗಿ ಭಗವಾನ್ ಪುರುಷೋತ್ತಮನ ಲೀಲಾಕಥಾರೂಪವಾದ ರಸವನ್ನು ಸೇವಿಸುವುದಲ್ಲದೆ ಬೇರೆ ಯಾವ ಸಾಧನೆಯೂ, ನೌಕೆಯೂ ಇರುವುದಿಲ್ಲ ಇಂತಹ ಲೀಲಾಕಥೆಗಳನ್ನು ರಸಾಯನವನ್ನು ಸೇವಿಸುವುದರಿಂದಲೇ ತನ್ನ ಮನೋರಥವು ಕೈಗೂಡುವುದು. ॥ ೪೦ ॥

ಪುರಾಣಸಂಹಿತಾಮೇತಾಮೃಷಿರ್ನಾರಾಯಣೋಽವ್ಯಯಃ।
ನಾರದಾಯ ಪುರಾ ಪ್ರಾಹ ಕೃಷ್ಣದ್ವೈಪಾಯನಾಯ ಸಃ
॥ ೪೧ ॥

ನಾನು ನಿನಗೆ ಹೇಳಿದ ಈ ಶ್ರೀಮದ್ಭಾಗವತವೆಂಬ ಪುರಾಣಸಂಹಿತೆಯನ್ನು ಸನಾತನ ಋಷಿಗಳಾದ ನರ-ನಾರಾಯಣರು ಮೊದಲಿಗೆ ದೇವಋಷಿ ನಾರದರಿಗೆ ಹೇಳಿದ್ದರು. ಮತ್ತೆ ನಾರದರು ನಮ್ಮ ತೀರ್ಥರೂಪರಾದ ಕೃಷ್ಣದ್ವೈಪಾಯನರಿಗೆ ಉಪದೇಶ ಮಾಡಿದರು. ॥ ೪೧ ॥

ಸ ವೈ ಮಹ್ಯಂ ಮಹಾರಾಜ ಭಗವಾನ್ ಬಾದರಾಯಣಃ ।
ಇಮಾಂ ಭಾಗವತೀಂ ಪ್ರೀತಃ ಸಂಹಿತಾಂ ವೇದಸಮ್ಮಿತಾಮ್
॥ ೪೨ ॥

ಏತಾಂ ವಕ್ಷ್ಯತ್ಯಸೌ ಸೂತ ಋಷಿಭ್ಯೋ ನೈಮಿಷಾಲಯೇ ।
ದೀರ್ಘಸತ್ರೇ ಕುರುಶ್ರೇಷ್ಠ ಸಂಪೃಷ್ಟಃ ಶೌನಕಾದಿಭಿಃ
॥ ೪೩ ॥

ಮಹಾರಾಜ ! ಅಂತಹ ಬದರೀವನ ವಿಹಾರಿಗಳಾದ ಭಗವಾನ್ ಶ್ರೀಕೃಷ್ಣದ್ವೈಪಾಯನರು ಪ್ರಸನ್ನರಾಗಿ ಈ ವೇದತುಲ್ಯ ಶ್ರೀಮದ್ಭಾಗವತ ಸಂಹಿತೆಯನ್ನು ನನಗೆ ಉಪದೇಶಿಸಿದರು. ॥ ೪೨ ॥ ಕುರುಶ್ರೇಷ್ಠನೇ ! ಮುಂದೆ ನೈಮಿಷಾರಣ್ಯದಲ್ಲಿ ಒಂದು ದೊಡ್ಡ ಸತ್ರಯಾಗವು ನಡೆಯುತ್ತಿರುವಾಗ ಶೌನಕಾದಿ ಋಷಿಗಳ ಪ್ರಾರ್ಥನೆಯ ಮೇರೆಗೆ ಸೂತಪುರಾಣಿಕರು ಅವರಿಗೆ ಈ ಸಂಹಿತೆಯನ್ನು ಉಪದೇಶ ಮಾಡುವರು. ॥ ೪೩ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಶ್ರೀಶುಕಮುನಿಗಳ ಕಟ್ಟಕಡೆಯ ಉಪದೇಶ

ಶ್ರೀಶುಕ ಉವಾಚ

ಅತ್ರಾನುವರ್ಣ್ಯತೇಽಭೀಕ್ಷ್ಣಂ ವಿಶ್ವಾತ್ಮಾ ಭಗವಾನ್ ಹರಿಃ ।
ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಃ ಕ್ರೋಧಸಮುದ್ಭವಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಈ ಶ್ರೀಮದ್ಭಾಗವತ ಮಹಾಪುರಾಣದಲ್ಲಿ ಪದೋಪದಿಗೆ ಎಲ್ಲೆಡೆ ವಿಶ್ವಾತ್ಮನಾದ ಭಗವಾನ್ ಶ್ರೀಹರಿಯ ಸಂಕೀರ್ತನೆಯೇ ನಡೆದಿದೆ. ಬ್ರಹ್ಮ-ರುದ್ರಾದಿಗಳೂ ಶ್ರೀಹರಿಯಿಂದ ಬೇರೆಯಲ್ಲ, ಅವನದೇ ಪ್ರಸಾದಲೀಲೆಯ ಮತ್ತು ಕ್ರೋಧಲೀಲೆಯ ಅಭಿವ್ಯಕ್ತಿಯಾಗಿದೆ. ॥ ೧ ॥

ತ್ವಂ ತು ರಾಜನ್ಮರಿಷ್ಯೇತಿ ಪಶುಬುದ್ಧಿಮಿಮಾಂ ಜಹಿ ।
ನ ಜಾತಃ ಪ್ರಾಗಭೂತೋಽದ್ಯ ದೇಹವತ್ತ್ವಂ ನ ನಂಕ್ಷ್ಯಸಿ
॥ ೨ ॥

ರಾಜೇಂದ್ರನೇ ! 'ನಾನು ಸಾಯುವೆ' ಎಂಬ ಪಶುತುಲ್ಯ ಅವಿವೇಕ ಪೂರ್ಣವಾದ ಧಾರಣೆಯನ್ನು ನೀನು ಬಿಟ್ಟು ಬಿಡು. ಶರೀರವು ಮೊದಲಿಗೆ ಇರಲಿಲ್ಲ ಹಾಗೂ ಈಗ ಹುಟ್ಟಿದೆ, ಮತ್ತೆ ಪುನಃ ನಾಶವಾದೀತು. ಹಾಗೆಯೇ ನೀನು ಮೊದಲು ಇರಲಿಲ್ಲ, ನೀನು ಹುಟ್ಟಿರುವೆ, ನೀನು ಸತ್ತು ಹೋಗುವೆ ಎಂಬ ಮಾತೂ ಇಲ್ಲ. ॥ ೨ ॥

ನ ಭವಿಷ್ಯಸಿ ಭೂತ್ವಾ ತ್ವಂ ಪುತ್ರಪೌತ್ರಾದಿರೂಪವಾನ್ ।
ಬೀಜಾಂಕುರವದ್ದೇಹಾದೇರ್ವ್ಯತಿರಿಕ್ತೋ ಯಥಾನಲಃ
॥ ೩ ॥

ಬೀಜದಿಂದ ವೃಕ್ಷ, ವೃಕ್ಷದಿಂದ ಬೀಜ ಉತ್ಪತ್ತಿಯಾಗುತ್ತಿರುವಂತೆಯೇ ಒಂದು ದೇಹದಿಂದ ಮತ್ತೊಂದು ದೇಹ, ಮತ್ತೊಂದು ದೇಹದಿಂದ ಇನ್ನೊಂದು ದೇಹ ಉತ್ಪತ್ತಿಯಾಗುತ್ತದೆ. ಆದರೆ ನೀನಾದರೋ ಯಾವುದರಿಂದಲೂ ಉತ್ಪನ್ನನಾದವನಲ್ಲ, ಮುಂದೆಯೂ ಪುತ್ರ-ಪೌತ್ರಗಳ ಶರೀರರೂಪದಿಂದ ಉತ್ಪನ್ನವಾಗಲಾರೆ. ಅಯ್ಯಾ ! ಬೆಂಕಿಯು ಕಟ್ಟಿಗೆಯಿಂದ ಸರ್ವಥಾ ಬೇರೆಯಾಗಿರುವಂತೆ, ಕಟ್ಟಿಗೆಯ ಉತ್ಪತ್ತಿ-ವಿನಾಶದಿಂದ ಹೊರತಾಗಿರುವಂತೆಯೇ ನೀನೂ ಶರೀರಾದಿಗಳಿಂದ ಪೂರ್ಣವಾಗಿ ಬೇರೆಯಾಗಿರುವೆ. ॥ ೩ ॥

ಸ್ವಪ್ನೇ ಯಥಾ ಶಿರಶ್ಛೇದಂ ಪಂಚತ್ವಾದ್ಯಾತ್ಮನಃ ಸ್ವಯಮ್ ।
ಯಸ್ಮಾತ್ ಪಶ್ಯತಿ ದೇಹಸ್ಯ ತತ ಆತ್ಮಾ ಹ್ಯಜೋಽಮರಃ
॥ ೪ ॥

ಸ್ವಪ್ನದಲ್ಲಿ ನನ್ನ ತಲೆಯು ತುಂಡಾಗಿ ನಾನು ಸತ್ತುಹೋಗಿ ನನ್ನನ್ನು ಜನರು ಸ್ಮಶಾನದಲ್ಲಿ ಸುಟ್ಟುಹಾಕಿದರು ಎಂದು ಕಾಣುತ್ತದೆ. ಆದರೆ ಇವೆಲ್ಲವೂ ಶರೀರದ ಅವಸ್ಥೆಗಳೇ ಕಂಡುಬರುತ್ತವೆ, ಆತ್ಮನದಲ್ಲ. ನೋಡುವವನು ಆ ಅವಸ್ಥೆಗಳಿಂದ ಪೂರ್ಣವಾಗಿ ಅತೀತನಾಗಿದ್ದು ಜನ್ಮ-ಮೃತ್ಯು ರಹಿತ ಶುದ್ಧ-ಬುದ್ಧ ಪರಮತತ್ತ್ವಸ್ವರೂಪನಾಗಿ ಇರುವನು. ॥ ೪ ॥ ಘಟವು ಒಡೆದು ಹೋದಾಗ ಆಕಾಶವು ಮೊದಲಿದ್ದಂತೆ ಅಖಂಡವಾಗಿರುತ್ತದೆ. ಆದರೆ ಘಟಾಕಾಶದ ನಿವೃತ್ತಿ ಉಂಟಾದ್ದರಿಂದ ಅದು ಮಹಾಕಾಶದಲ್ಲಿ ಸೇರಿಹೋಯಿತು ಎಂದು ಜನರಿಗೆ ಕಂಡುಬರುತ್ತದೆ. ವಾಸ್ತವವಾಗಿ ಅದು ಸೇರಿಕೊಂಡೇ ಇತ್ತು. ಹಾಗೆಯೇ ದೇಹವು ಬಿದ್ದುಹೋದಾಗ ಜೀವನು

ಘಟೇ ಭಿನ್ನೇ ಯಥಾಽಽಕಾಶ ಆಕಾಶಃ ಸ್ಯಾದ್ಯಥಾ ಪುರಾ ।
ಏವಂ ದೇಹೇ ಮೃತೇ ಜೀವೋ ಬ್ರಹ್ಮ ಸಂಪದ್ಯತೇ ಪುನಃ
॥ ೫ ॥

ಮನಃ ಸೃಜತಿ ವೈ ದೇಹಾನ್ ಗುಣಾನ್ ಕರ್ಮಾಣಿ ಚಾತ್ಮನಃ ।
ತನ್ಮನಃ ಸೃಜತೇ ಮಾಯಾ ತತೋ ಜೀವಸ್ಯ ಸಂಸೃತಿಃ
॥ ೬ ॥

ಸ್ನೇಹಾಧಿಷ್ಠಾನಮರ್ಯಗ್ನಿ ಸಂಯೋಗೋ ಯಾವದೀಯತೇ ।
ತತೋ ದೀಪಸ್ಯ ದೀಪತ್ವಮೇವಂ ದೇಹಕೃತೋ ಭವಃ ।
ರಜಸ್ತತ್ತ್ವತಮೋವೃತ್ತ್ಯಾ ಜಾಯತೇಽಥ ವಿನಶ್ಯತಿ
॥ ೭ ॥

ನ ತತ್ರಾತ್ಮಾ ಸ್ವಯಂಜ್ಯೋತಿರ್ಯೋ ವ್ಯಕ್ತಾವ್ಯಕ್ತಯೋಃ ಪರಃ ।
ಆಕಾಶ ಇವ ಚಾಧಾರೋ ಧ್ರುವೋಽನಂತೋಽಪಮಸ್ತತಃ
॥ ೮ ॥

ಏವಮಾತ್ಮಾನಮಾತ್ಮಸ್ಥಮಾತ್ಮನ್ಯೇವಾಮೃತ ಪ್ರಭೋ ।
ಬುದ್ಧ್ಯಾನುಮಾನಗರ್ಭಿಣ್ಯಾ ವಾಸುದೇವಾನುಚಿಂತಯಾ
॥ ೯ ॥

ಚೋದಿತೋ ವಿಪ್ರವಾಕ್ಯೇನ ನ ತ್ವಾಂ ಧಕ್ಷ್ಯತಿ ತಕ್ಷಕಃ ।
ಮೃತ್ಯವೋ ನೋಪಧಕ್ಷ್ಯಂತಿ ಮೃತ್ಯೂನಾಂ ಮೃತ್ಯುಮೀಶ್ವರಮ್
॥ ೧೦ ॥

ಅಹಂ ಬ್ರಹ್ಮ ಪರಂ ಧಾಮ ಬ್ರಹ್ಮಾಹಂ ಪರಮಂ ಪದಮ್ ।
ಏವಂ ಸಮೀಕ್ಷನ್ನಾತ್ಮಾನಮಾತ್ಮನ್ಯಾಧಾಯ ನಿಷ್ಕಲೇ
॥ ೧೧ ॥

ದಶಂತಂ ತಕ್ಷಕಂ ಪಾದೇ ಲೇಲಿಹಾನಂ ವಿಷಾನನೈಃ ।
ನ ದ್ರಕ್ಷ್ಯಸಿ ಶರೀರಂ ಚ ವಿಶ್ವಂ ಚ ಪೃಥಗಾತ್ಮನಃ
॥ ೧೨ ॥

ಏತತ್ತೇ ಕಥಿತಂ ತಾತ ಯಥಾऽऽತ್ಮಾ ಪೃಷ್ಟವಾನ್ ನೃಪ ।
ಹರೇರ್ವಿಶ್ವಾತ್ಮನಶ್ಚೇಷ್ಟಾಂ ಕಿಂ ಭೂಯಃ ಶ್ರೋತುಮಿಚ್ಛಸಿ
॥ ೧೩ ॥

ಬ್ರಹ್ಮನಾಗಿ ಬಿಟ್ಟನು ಎಂದು ಕಂಡುಬರುತ್ತದೆ. ವಾಸ್ತವವಾಗಿ ಆವನು ಬ್ರಹ್ಮನಾಗಿಯೇ ಇದ್ದನು. ॥ ೫ ॥ ಮನಸ್ಸೇ ಆತ್ಮನಿಗಾಗಿ ಶರೀರ, ವಿಷಯ ಮತ್ತು ಕರ್ಮಗಳನ್ನು ಕಲ್ಪಿಸಿಕೊಳ್ಳುತ್ತದೆ. ಆ ಮನಸ್ಸನ್ನು ಮಾಯೆ (ಅವಿದ್ಯೆ) ಸೃಷ್ಟಿಸುತ್ತದೆ. ವಾಸ್ತವವಾಗಿ ಮಾಯೆಯೇ ಸಂಸಾರ ಚಕ್ರದಲ್ಲಿ ಬೀಳುವ ಕಾರಣವಾಗಿದೆ. ॥ ೬ ॥ ಎಣ್ಣೆ ಎಣ್ಣೆಯಿಡುವ ಪಾತ್ರೆ, ಬತ್ತಿ ಮತ್ತು ಬೆಂಕಿ ಇವುಗಳ ಸಂಯೋಗ ವಿರುವತನಕ ದೀಪವು ಉರಿಯುತ್ತಾ ಇರುತ್ತದೆ. ಹಾಗೆಯೇ ಅವನಂತಿರುವ ಆತ್ಮನ ಸಂಬಂಧವು ಕರ್ಮ, ಮನಸ್ಸು ಶರೀರ ಮತ್ತು ಅದರಲ್ಲಿ ವಾಸಿಸುವ ಚೈತನ್ಯಾಧ್ಯಾಸದೊಂದಿಗೆ ಇರುವ ತನಕ ಅವನಿಗೆ ಜನ್ಮ-ಮೃತ್ಯುಗಳ ಸಂಸಾರಚಕ್ರದಲ್ಲಿ ಅಲೆಯುತ್ತಾ ಇರಬೇಕಾಗುತ್ತದೆ ಮತ್ತು ತ್ರಿಗುಣಗಳ ವೃತ್ತಿಗಳಿಂದ ಅವನಿಗೆ ಉತ್ಪತ್ತಿ, ಸ್ಥಿತಿ, ನಾಶ ಇವುಗಳಿಗೆ ತುತ್ತಾಗಬೇಕಾಗುತ್ತದೆ. ॥ ೭ ॥ ಆದರೆ ದೀಪ ಆರಿಹೋದರೂ ತತ್ತ್ವರೂಪವಾದ ತೇಜಸ್ಸು ನಾಶ ವಾಗುವುದಿಲ್ಲ, ಹಾಗೆಯೇ ಪ್ರಪಂಚದ ನಾಶ ವಾದರೂ ಸ್ವಯಂ ಪ್ರಕಾಶ ಆತ್ಮನ ನಾಶವಾಗುವುದಿಲ್ಲ, ಏಕೆಂದರೆ, ಅದು ಕಾರ್ಯ ಕಾರಣಗಳಿಂದ, ವ್ಯಕ್ತ- ಅವ್ಯಕ್ತಗಳಿಂದ ಅತೀತ ವಾಗಿದೆ. ಅದು ಆಕಾಶದಂತೆ ಎಲ್ಲರ ಆಧಾರವೂ, ನಿತ್ಯವೂ, ನಿಶ್ಚಲವೂ, ಅನಂತವೂ ಆಗಿದೆ. ನಿಜವಾಗಿ ಆತ್ಮನ ಉಪಮೆ ಆತ್ಮನೇ ಆಗಿದ್ದಾನೆ. ॥ ೮ ॥

ಎಲೈ ರಾಜನೇ! ನೀನು ನಿನ್ನ ವಿಶುದ್ಧವೂ, ವಿವೇಕಪೂರ್ಣವೂ ಆದ ಬುದ್ಧಿಯನ್ನು ಪರಮಾತ್ಮನ ಚಿಂತನೆಯಿಂದ ತುಂಬಿಕೊಂಡು ತಾನೇ-ತನ್ನೊಳಗೆ ಸ್ಥಿತನಾಗಿ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೋ. ॥ ೯ ॥ ನೋಡು! ನೀನು ಮೃತ್ಯುಗಳಿಗೂ ಮೃತ್ಯು ವಾಗಿರುವೆ. ನೀನು ಸ್ವತಃ ಈಶ್ವರನಾಗಿರುವೆ. ಬ್ರಾಹ್ಮಣನ ಶಾಪ ದಿಂದ ಪ್ರೇರಿತನಾದ ತಕ್ಷಕನೂ ನಿನ್ನನ್ನು ಭಸ್ಮಮಾಡಲಾರನು. ಅಯ್ಯಾ! ತಕ್ಷಕನ ಮಾತೇನು, ಸಾಕ್ಷಾತ್ ಮೃತ್ಯುವೂ ಹಾಗೂ ಮೃತ್ಯುಗಳ ಸಮೂಹಗಳೂ ಕೂಡ ನಿನ್ನ ಬಳಿಯಲ್ಲಿ ಸುಳಿಯಲಾರವು. ॥ ೧೦ ॥ 'ನಾನೇ ಸರ್ವಾಧಿಷ್ಠಾನ ಪರಬ್ರಹ್ಮನಾಗಿರುವೆ' ಹೀಗೆ ನೀನು ಅನು ಸಂಧಾನಮಾಡು. ಸರ್ವಾಧಿಷ್ಠಾನ ಬ್ರಹ್ಮನು ನಾನೇ ಆಗಿದ್ದೇನೆ ಹೀಗೆ ನೀನು ನಿನ್ನ ವಾಸ್ತವಿಕವಾದ ಏಕರಸ ಅಖಂಡ ಸ್ವರೂಪದಲ್ಲಿ ಸ್ಥಿತನಾಗಿಬಿಡು. ॥ ೧೧ ॥ ಆ ಸಮಯದಲ್ಲಿ ತನ್ನ ವಿಷದ ನಾಲಗೆ ಯನ್ನು ಚಾಚುತ್ತಾ, ನಾಲಗೆಗಳಿಂದ ತುಟಿಯನ್ನು ಸವರುತ್ತಾ ತಕ್ಷಕನು ಬಂದು ನಿನ್ನ ಕಾಲಿಗೆ ಕಚ್ಚಿದರೂ ನಿನಗೆ ಅದಾವುದೂ ತಿಳಿಯದು. ನೀನು ನಿನ್ನ ಆತ್ಮಸ್ವರೂಪದಲ್ಲಿ ನೆಲೆಸಿ ಈ ಶರೀರವನ್ನು, ಹೆಚ್ಚೇನು ಈ ಇಡೀ ವಿಶ್ವವನ್ನೂ ಕೂಡ ನಿನ್ನಿಂದ ಬೇರೆಯಾಗಿ ನೋಡಲಾರೆ. ಅರ್ಥಾತ್ ನೀನು ಬ್ರಹ್ಮ ಸ್ವರೂಪನಾಗಿ ಬಿಡುವೆ. ॥ ೧೨ ॥ ಆತ್ಮ ಸ್ವರೂಪನಾದ ರಾಜನೇ! ವಿಶ್ವಾತ್ಮನಾದ ಭಗವಂತನ ಲೀಲೆಗಳ ಕುರಿತು ನೀನು ಪ್ರಶ್ನಿಸಿದಂತೆ ನಾನು ಅದರ ಉತ್ತರವನ್ನು ಕೊಟ್ಟಿರುವೆನು. ಈಗ ಇನ್ನೇನು ಕೇಳಲು ಬಯಸುವೆ ? ॥ ೧೩ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ಬ್ರಹ್ಮೋಪದೇಶೋ ನಾಮ ಪಂಚಮೋऽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಪರೀಕ್ಷಿತನು ಪರಮಗತಿಯನ್ನು ಪಡೆದುದು, ಜನಮೇಜಯನ ಸರ್ಪಯಾಗ ಮತ್ತು ವೇದಗಳ ಶಾಖಾಭೇದಗಳು

ಸೂತ ಉವಾಚ

ಏತನ್ನಿಶಮ್ಯ ಮುನಿನಾಭಿಹಿತಂ ಪರೀಕ್ಷಿ-
ದ್ದ್ವ್ಯಾಸಾತ್ಮಜೇನ ನಿಖಿಲಾತ್ಮದೃಶಾ ಸಮೇನ ।
ತತ್ಪಾದಮೂಲಮುಪಸೃತ್ಯ ನತೇನ ಮೂರ್ಧ್ನಾ
ಬದ್ಧಾಂಜಲಿಸ್ತಮಿದಮಾಹ ಸ ವಿಷ್ಣುರಾತಃ ॥ ೧ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ ! ವ್ಯಾಸನಂದನ ಶ್ರೀಶುಕಮುನಿಗಳು ಸಮಸ್ತ ಚರಾಚರ ಜಗತ್ತನ್ನು ತನ್ನ ಆತ್ಮನ ರೂಪದಲ್ಲಿ ಅನುಭವಿಸುತ್ತಾ, ವ್ಯವಹಾರದಲ್ಲಿ ಎಲ್ಲರ ಕುರಿತು ಸಮದೃಷ್ಟಿಯನ್ನಿರಿಸುವರು. ಭಗವಂತನಲ್ಲಿ ಶರಣಾಗತನೂ, ಅವನಿಂದ ರಕ್ಷಿತನಾದ ರಾಜರ್ಷಿ ಪರೀಕ್ಷಿತನು ಅವರ ಸಮಗ್ರ ಉಪದೇಶವನ್ನು ಮನಸ್ಸಿಟ್ಟು ಶ್ರವಣಿಸಿದನು. ಈಗ ಅವನು ತಲೆ ತಗ್ಗಿಸಿಕೊಂಡು ಅವರ ಚರಣಗಳ ಬಳಿಗೆ ಸಾರಿ ಅಂಜಲಿ ಬದ್ಧನಾಗಿ ಅವರಲ್ಲಿ ಇಂತು ಪ್ರಾರ್ಥಿಸಿದನು. ॥ ೧ ॥

ರಾಜೋವಾಚ

ಸಿದ್ಧೋಽಸ್ಮ್ಯನುಗೃಹೀತೋಽಸ್ಮಿ ಭವತಾ ಕರುಣಾತ್ಮನಾ ।
ಶ್ರಾವಿತೋ ಯಚ್ಚ ಮೇ ಸಾಕ್ಷಾದನಾದಿನಿಧನೋ ಹರಿಃ
॥ ೨ ॥

ಪರೀಕ್ಷಿದ್ರಾಜನು ಹೇಳಿದನು – ಮಹಾತ್ಮರೇ ! ಕರುಣಾಸಿಂಧುಗಳಾದ ತಾವು ನನ್ನ ಮೇಲೆ ಕೃಪೆದೋರಿ ಅನಾದಿ ಅನಂತನೂ, ಏಕರಸನೂ, ಸತ್ಯಸ್ವರೂಪನೂ ಆದ ಭಗವಾನ್ ಶ್ರೀಹರಿಯ ಸ್ವರೂಪ ಮತ್ತು ಲೀಲೆಗಳನ್ನು ನನಗೆ ವರ್ಣಿಸಿ ಹೇಳಿದಿರಿ. ಈಗ ತಮ್ಮ ಕೃಪೆಯಿಂದ ನನ್ನ ಮೇಲೆ ಪರಮಾನುಗ್ರಹವಾಯಿತು. ನಾನು ಕೃತಕೃತ್ಯನಾದೆನು. ॥ ೨ ॥ ಪ್ರಪಂಚದ ಪ್ರಾಣಿಗಳು ತಮ್ಮ ಸ್ವಾರ್ಥ ಮತ್ತು ಪರಮಾರ್ಥದ ಜ್ಞಾನದಿಂದ ಶೂನ್ಯರಾಗಿ ಅನೇಕ ವಿಧವಾದ ದುಃಖದಾವಾನಲದಿಂದ ಬೇಯುತ್ತಿರುವರು. ಅಂತಹವರ ಮೇಲೆ ಭಗವನ್ಮಯ ಮಹಾತ್ಮರ ಅನುಗ್ರಹವಾಗುವುದು ಇದೇನೋ ಹೊಸದಲ್ಲ ಅಥವಾ ಆಶ್ಚರ್ಯವೂ ಇಲ್ಲ ಇದಾದರೋ ಅವರಿಗೆ ಸ್ವಾಭಾವಿಕವೇ ಆಗಿದೆ. ॥ ೩ ॥

ನಾತ್ಯದ್ಭುತಮಹಂ ಮನ್ಯೇ ಮಹತಾಮಚ್ಯುತಾತ್ಮನಾಮ್ ।
ಅಜ್ಞೇಷು ತಾಪತಪ್ತೇಷು ಭೂತೇಷು ಯದನುಗ್ರಹಃ
॥ ೩ ॥

ಪುರಾಣಸಂಹಿತಾಮೇತಾಮಶ್ರೌಷ್ಮ ಭವತೋ ವಯಮ್ ।
ಯಸ್ಯಾಂ ಖಿಲೋತ್ತಮಶ್ಲೋಕೋ ಭಗವಾನನುವರ್ಣ್ಯತೇ
॥ ೪ ॥

ನಾನು ಮತ್ತು ನನ್ನೊಂದಿಗೆ ಇನ್ನೂ ಅನೇಕ ಜನರು ತಮ್ಮ ಮುಖಾರವಿಂದದಿಂದ ಈ ಶ್ರೀಮದ್ಭಾಗವತ ಮಹಾಪುರಾಣವನ್ನು ಶ್ರವಣಿಸಿದೆವು. ಈ ಪುರಾಣದಲ್ಲಿ ಹೆಜ್ಜೆ-ಹೆಜ್ಜೆಗೆ-ದೊಡ್ಡ-ದೊಡ್ಡ ಆತ್ಮಾರಾಮರಾದ ಮಹಾತ್ಮರು ಹಾಡುತ್ತಾ ರಮಿಸುತ್ತಿರುವ ಭಗವಾನ್ ಶ್ರೀಹರಿಯ ಸ್ವರೂಪ ಮತ್ತು ಲೀಲೆಗಳ ವರ್ಣನೆಯಿದೆ. ॥ ೪ ॥

ಭಗವನ್ಸ್ತಕ್ಷಕಾದಿಭ್ಯೋ ಮೃತ್ಯುಭ್ಯೋ ನ ಬಿಭೇಮ್ಯಹಮ್ ।
ಪ್ರವಿಷ್ಟೋ ಬ್ರಹ್ಮ ನಿರ್ವಾಣಮಭಯಂ ದರ್ಶಿತಂ ತ್ವಯಾ
॥ ೫ ॥

ಓ ಭಗವಂತರೇ ! ತಾವು ನನಗೆ ಅಭಯಪದದ, ಬ್ರಹ್ಮ ಮತ್ತು ಆತ್ಮನ ಏಕತೆಯ ಸಾಕ್ಷಾತ್ಕಾರವನ್ನು ಮಾಡಿಸಿದಿರಿ. ಈಗ ನಾನು ಪರಮಶಾಂತಿ ಸ್ವರೂಪ ಪರಬ್ರಹ್ಮನಲ್ಲಿ ನೆಲೆಸಿರುವೆನು. ಈಗ ನನಗೆ ತಕ್ಷಕನೇ ಆದಿಯಾಗಿ ಯಾವುದೇ ಮೃತ್ಯುವಿನಿಂದ ಅಥವಾ ಗುಂಪು-ಗುಂಪಾದ ಮೃತ್ಯುಗಳಿಂದಲೂ ಭಯವಿಲ್ಲ. ನಾನು ಅಭಯನಾಗಿರುವೆನು. ॥ ೫ ॥ ಬ್ರಹ್ಮರ್ಷಿ ಶ್ರೇಷ್ಠರೇ ! ಇನ್ನು ನಾನು ಮಾತನ್ನು ನಿಲ್ಲಿಸಿ ಮೌನವಹಿಸಿ, ಕಾಮ ಸಂಸ್ಕಾರಗಳಿಂದ ರಹಿತವಾದ ಚಿತ್ತವನ್ನು ಇಂದ್ರಿಯಾತೀತ ಪರಮಾತ್ಮನ ಸ್ವರೂಪದಲ್ಲಿ ವಿಲೀನಗೊಳಿಸಿ ನನ್ನ ಪ್ರಾಣಗಳನ್ನು ತೊರೆದು ಬಿಡುವೆನು. ಇದಕ್ಕೆ ಅನುಮತಿಯನ್ನು ಅನುಗ್ರಹಿಸಿರಿ. ॥ ೬ ॥ ತಾವು ಉಪದೇಶಿಸಿದ ಜ್ಞಾನ ಮತ್ತು ವಿಜ್ಞಾನಗಳಲ್ಲಿ ನೆಲೆಸಿದ್ದರಿಂದ ನನ್ನ ಅಜ್ಞಾನವೆಲ್ಲವೂ ತೊಲಗಿ ಹೋಯಿತು. ಅತ್ಯಂತ ಕಲ್ಯಾಣಮಯವಾದ ಭಗವಂತನ ಪದವನ್ನು ತಾವು ನನಗೆ ತೋರಿಸಿಕೊಟ್ಟಿರುವಿರಿ. ॥ ೭ ॥

ಅನುಜಾನೀಹಿ ಮಾಂ ಬ್ರಹ್ಮನ್ವಾಚಂ ಯಚ್ಛಾಮ್ಯಧೋಕ್ಷಜೇ ।
ಮುಕ್ತಕಾಮಾಶಯಂ ಚೇತಃ ಪ್ರವೇಶ್ಯ ವಿಸೃಜಾಮ್ಯಸೂನ್
॥ ೬ ॥

ಅಜ್ಞಾನಂ ಚ ನಿರಸ್ತಂ ಮೇ ಜ್ಞಾನವಿಜ್ಞಾನನಿಷ್ಠಯಾ ।
ಭವತಾ ದರ್ಶಿತಂ ಕ್ಷೇಮಂ ಪರಂ ಭಗವತಃ ಪದಮ್
॥ ೭ ॥

ಸೂತ ಉವಾಚ

ಇತ್ಯುಕ್ತಸ್ತಮನುಜ್ಞಾಪ್ಯ ಭಗವಾನ್ ಬಾದರಾಯಣಿಃ ।
ಜಗಾಮ ಭಿಕ್ಷುಭಿಃ ಸಾಕಂ ನರದೇವೇನ ಪೂಜಿತಃ
॥ ೮ ॥

ಪರೀಕ್ಷಿದಪಿ ರಾಜರ್ಷಿರಾತ್ಮನ್ಯಾತ್ಮಾನಮಾತ್ಮನಾ ।
ಸಮಾಧಾಯ ಪರಂ ದಧ್ಯಾವಸ್ಪಂದಾಸುರ್ಯಥಾ ತರುಃ
॥ ೯ ॥

ಪ್ರಾಕ್ಕೂಲೇ ಬರ್ಹಿಷ್ಯಾಸೀನೋ ಗಂಗಾಕೂಲ ಉದಙ್ಮುಖಿಃ ।
ಬ್ರಹ್ಮಭೂತೋ ಮಹಾಯೋಗೀ ನಿಸ್ಸಂಗಶ್ಚಿನ್ನ ಸಂಶಯಃ
॥ ೧೦ ॥

ತಕ್ಷಕಃ ಪ್ರಹಿತೋ ವಿಪ್ರಾಃ ಕ್ರುದ್ಧೇನ ದ್ವಿಜಸೂನುನಾ ।
ಹಂತುಕಾಮೋ ನೃಪಂ ಗಚ್ಛನ್ ದದರ್ಶ ಪಥಿ ಕಶ್ಯಪಮ್
॥ ೧೧ ॥

ತಂ ತರ್ಪಯಿತ್ವಾ ದ್ರವಿಣೈರ್ನಿವರ್ತ್ಯ ವಿಷಹಾರಿಣಮ್ ।
ದ್ವಿಜರೂಪಪ್ರತಿಚ್ಛನ್ನಃ ಕಾಮರೂಪೋಽದಶನ್ನೃಪಮ್
॥ ೧೨ ॥

ಬ್ರಹ್ಮಭೂತಸ್ಯ ರಾಜರ್ಷೇರ್ದೇಹೋಽಹಿಗರಲಾಗ್ನಿನಾ ।
ಬಭೂವ ಭಸ್ಮಸಾತ್ಸದ್ಯಃ ಪಶ್ಯತಾಂ ಸರ್ವದೇಹಿನಾಮ್
॥ ೧೩ ॥

ಹಾಹಾಕಾರೋ ಮಹಾನಾಸೀದ್ಭುವಿ ಖೇ ದಿಕ್ಷು ಸರ್ವತಃ ।
ವಿಸ್ಮಿತಾ ಹ್ಯಭವನ್ಸರ್ವೇ ದೇವಾಸುರನರಾದಯಃ
॥ ೧೪ ॥

ದೇವದುಂದುಭಯೋ ನೇದುರ್ಗಂಧರ್ವಾಪ್ಸರಸೋ ಜಗುಃ ।
ವವೃಷುಃ ಪುಷ್ಪವರ್ಷಾಣಿ ವಿಬುಧಾಃ ಸಾಧುವಾದಿನಃ
॥ ೧೫ ॥

ಜನಮೇಜಯಃ ಸ್ವಪಿತರಂ ಶ್ರುತ್ವಾ ತಕ್ಷಕಭಕ್ಷಿತಮ್ ।
ಯಥಾಜುಹಾವ ಸಂಕ್ರುದ್ಧೋ ನಾಗಾನ್ಸತ್ರೇ ಸಹ ದ್ವಿಜೈಃ
॥ ೧೬ ॥

ಸರ್ಪಸತ್ರೇ ಸಮಿದ್ಧಾಗ್ನೌ ದಹ್ಯಮಾನಾನ್ಮಹೋರಗಾನ್ ।
ದೃಷ್ಟ್ವೇಂದ್ರಂ ಭಯಸಂವಿಗ್ನಸ್ತಕ್ಷಕಃ ಶರಣಂ ಯಯೌ
॥ ೧೭ ॥

ಅಪಶ್ಯಂಸ್ತಕ್ಷಕಂ ತತ್ರ ರಾಜಾ ಪಾರಿಕ್ಷಿತೋ ದ್ವಿಜಾನ್ ।
ಉವಾಚ ತಕ್ಷಕಃ ಕಸ್ಮಾನ್ನ ದಹ್ಯೇತೋರಗಾಧಮಃ
॥ ೧೮ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಹೀಗೆ ಅರಿಕೆಮಾಡಿಕೊಂಡು ಆ ರಾಜ ಶ್ರೇಷ್ಠನು ಶ್ರೀಶುಕಮಹಾಮುನಿಯನ್ನು ಪ್ರೇಮದಿಂದ ಪೂಜಿಸಿದನು. ಅವರು ರಾಜನಿಂದ ಬೀಳ್ಕೊಂಡು ಜೊತೆಯಲ್ಲಿ ಬಂದ ತ್ಯಾಗೀಮಹಾತ್ಮರು, ಸಂನ್ಯಾಸಿಗಳೊಂದಿಗೆ ಅಲ್ಲಿಂದ ಹೊರಟು ಹೋದರು. ॥ ೮ ॥ ರಾಜರ್ಷಿ ಪರೀಕ್ಷಿತನೂ ಕೂಡ ತನ್ನ ಅಂತರಾತ್ಮನನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ ಧ್ಯಾನಮಗ್ನನಾದನು. ಪ್ರಾಣವೃತ್ತಿಯನ್ನು ನಿಲ್ಲಿಸಿ ಮರದ ದಿಮ್ಮಿಯಂತೆ ನಿಶ್ಚೇಷ್ಟನಾದನು. ॥ ೯ ॥ ಅವನು ಗಂಗಾನದಿಯ ತೀರದಲ್ಲಿ ಪೂರ್ವಾಗ್ರವಾದ ದರ್ಭೆಗಳ ಮೇಲೆ ಉತ್ತರಾಭಿಮುಖಿನಾಗಿ ಕುಳಿತುಕೊಂಡಿದ್ದನು. ಸರ್ವಸಂಗರಹಿತನಾಗಿ ಎಲ್ಲ ಸಂಶಯಗಳನ್ನು ಕಳೆದುಕೊಂಡಿದ್ದ ಆ ಮಹಾಯೋಗಿಯು ಬ್ರಹ್ಮಸ್ವರೂಪದಲ್ಲಿ ಪ್ರತಿಷ್ಠಿತನಾಗಿಬಿಟ್ಟನು. ॥ ೧೦ ॥

ಶೌನಕಾದಿ ಋಷಿಗಳಿರಾ ! ಕ್ರೋಧದಿಂದ ಶಾಪಕೊಟ್ಟಿದ್ದ ಮುನಿಕುಮಾರ ಶೃಂಗಿಯಿಂದ ಪ್ರೇರಿತನಾದ ತಕ್ಷಕನು ರಾಜರ್ಷಿ ಪರೀಕ್ಷಿತನನ್ನು ಕೊಂದುಹಾಕುವ ಉದ್ದೇಶದಿಂದ ಅತನ ಬಳಿಗೆ ಬರುತ್ತಿರುವಾಗ ದಾರಿಯಲ್ಲಿ ಕಶ್ಯಪನೆಂಬ ಬ್ರಾಹ್ಮಣನನ್ನು ನೋಡಿದನು.॥ ೧೧ ॥ ಆ ಬ್ರಾಹ್ಮಣನಾದರೋ ಸರ್ಪವಿಷವನ್ನು ಹೋಗಲಾಡಿಸುವ ಚಿಕಿತ್ಸೆಯಲ್ಲಿ ಅತ್ಯಂತ ನಿಪುಣನಾಗಿದ್ದನು. ತಕ್ಷಕನು ಅವನಿಗೆ ತುಂಬಾ ಹಣವನ್ನು ಕೊಟ್ಟು ಆತನು ರಾಜನ ಬಳಿಗೆ ಬರದಂತೆ ಹಿಂದಿರುಗಿಸಿಬಿಟ್ಟನು. ಇಷ್ಟಬಂದ ರೂಪವನ್ನು ಧರಿಸುವ ಸಾಮರ್ಥ್ಯವುಳ್ಳ ಆ ಸರ್ಪವು ಬ್ರಾಹ್ಮಣನ ವೇಷದಲ್ಲಿ ಅಡಗಿಕೊಂಡು ಪರೀಕ್ಷಿದ್ರಾಜನ ಬಳಿಗೆ ಬಂದು ಕಚ್ಚಿಬಿಟ್ಟಿತು. ॥ ೧೨ ॥ ರಾಜರ್ಷಿ ಪರೀಕ್ಷಿತನು ತಕ್ಷಕನು ಕಚ್ಚುವ ಮೊದಲೇ ಪರಬ್ರಹ್ಮನಲ್ಲಿ ಸ್ಥಿತನಾಗಿದ್ದನು. ಈಗ ತಕ್ಷಕನ ವಿಷಾಗ್ನಿಯಿಂದ ಅವನ ಶರೀರವು ಎಲ್ಲರೂ ನೋಡುತ್ತಿರುವಂತೆ ಸುಟ್ಟು ಬೂದಿಯಾಯಿತು. ॥ ೧೩. ॥ ಆಗ ಭೂಮಿ, ಆಕಾಶ ಮತ್ತು ಎಲ್ಲ ದಿಕ್ಕುಗಳಲ್ಲಿ ಗಟ್ಟಿಯಾದ ಹಾಹಾಕಾರವು ಕೇಳಿಬಂತು. ದೇವತೆಗಳು, ಅಸುರರು, ಮನುಷ್ಯರು ಮೊದಲಾದ ಎಲ್ಲರೂ ಪರೀಕ್ಷಿತನ ಈ ಪರಗತಿಯನ್ನು ನೋಡಿ ವಿಸ್ಮಿತರಾದರು. ॥ ೧೪ ॥ ದೇವದುಂದುಭಿಗಳು ತಾವಾಗಿ ಮೊಳಗಿದವು. ಗಂಧರ್ವಾಪ್ಸರೆಯರು ಹಾಡತೊಡಗಿದರು. ದೇವತೆಗಳು ಸಾಧು-ಸಾಧು ಭಲೇ ! ಭಲೇ ! ಎಂದು ಹೊಗಳುತ್ತಾ ಪುಷ್ಪವೃಷ್ಟಿಯನ್ನು ಸುರಿಸಿದರು.॥ ೧೫ ॥

ತನ್ನ ತಂದೆಯನ್ನು ತಕ್ಷಕನು ಕಚ್ಚಿಕೊಂದನೆಂಬುದನ್ನು ಕೇಳಿ ಪರೀಕ್ಷಿತಪುತ್ರನಾದ ಜನಮೇಜಯನಿಗೆ ಮಿತಿಮೀರಿದ ಕೋಪವುಂಟಾಯಿತು. ಅವನು ಬ್ರಾಹ್ಮಣರೊಂದಿಗೆ ವಿಧಿಪೂರ್ವಕ ಸರ್ಪಗಳನ್ನು ಅಗ್ನಿಕುಂಡದಲ್ಲಿ ಹವನ ಮಾಡತೊಡಗಿದನು. ॥ ೧೬ ॥ ಜನಮೇಜಯನ ಸರ್ಪಯಾಗದ ಪ್ರಜ್ವಲಿತ ಅಗ್ನಿಯಲ್ಲಿ ದೊಡ್ಡ-ದೊಡ್ಡ ಮಹಾಸರ್ಪಗಳು ಭಸ್ಮವಾಗುವುದನ್ನು ಕಂಡ ತಕ್ಷಕನು ಅತ್ಯಂತ ಭಯಗೊಂಡು ದೇವೇಂದ್ರನಲ್ಲಿ ಶರಣಾದನು. ॥ ೧೭ ॥ ಬಹಳಷ್ಟು ಸರ್ಪಗಳು ಭಸ್ಮವಾದರೂ ತಕ್ಷಕನು ಬಾರದಿರುವುದನ್ನು ನೋಡಿ ಜನಮೇಜಯರಾಜನು – 'ಬ್ರಾಹ್ಮಣಶ್ರೇಷ್ಠರೇ ! ಸರ್ವಾಧಮನಾದ ತಕ್ಷಕನು ಇನ್ನೂ ಅಗ್ನಿಯಲ್ಲಿ ಬಿದ್ದು ಏಕೆ ಭಸ್ಮವಾಗುತ್ತಿಲ್ಲ?' ಎಂದು ಕೇಳಿದನು. ॥ ೧೮ ॥

ತಂ ಗೋಪಾಯತಿ ರಾಜೇಂದ್ರ ಶಕ್ರಃ ಶರಣಮಾಗತಮ್ ।
ತೇನ ಸಂಸ್ತಂಭಿತಃ ಸರ್ಪಸ್ತಸ್ಮಾನ್ನಾಗ್ನೌ ಪತತ್ಯಸೌ
॥ ೧೯ ॥

ಪಾರಿಕ್ಷಿತ ಇತಿ ಶ್ರುತ್ವಾ ಪ್ರಾಹರ್ತ್ವಿಜ ಉದಾರಧೀಃ ।
ಸಹೇಂದ್ರಸ್ತಕ್ಷಕೋ ವಿಪ್ರಾ ನಾಗ್ನೌ ಕಿಮಿತಿ ಪಾತ್ಯತೇ
॥ ೨೦ ॥

ತಚ್ಛ್ರುತ್ವಾ ತ್ವಾSSಜುಹುವುರ್ವಿಪ್ರಾಃ ಸಹೇಂದ್ರಂ ತಕ್ಷಕಂ ಮಖೇ ।
ತಕ್ಷಕಾಶು ಪತಸ್ವೇಹ ಸಹೇಂದ್ರೇಣ ಮರುತ್ವತಾ
॥ ೨೧ ॥

ಇತಿ ಬ್ರಹ್ಮೋದಿತಾಕ್ಷೇಪೈಃ ಸ್ಥಾನಾದಿಂದ್ರಃ ಪ್ರಚಾಲಿತಃ ।
ಬಭೂವ ಸಂಭ್ರಾಂತಮತಿಃ ಸವಿಮಾನಃ ಸತಕ್ಷಕಃ
॥ ೨೨ ॥

ತಂ ಪತಂತಂ ವಿಮಾನೇನ ಸಹತಕ್ಷಕಮಂಬರಾತ್ ।
ವಿಲೋಕ್ಯಾಂಗಿರಸಃ ಪ್ರಾಹ ರಾಜಾನಂ ತಂ ಬೃಹಸ್ಪತಿಃ
॥ ೨೩ ॥

ನೈಷ ತ್ವಯಾ ಮನುಷ್ಯೇಂದ್ರ ವಧಮರ್ಹತಿ ಸರ್ಪರಾಟ್ ।
ಅನೇನ ಪೀತಮಮೃತಮಥ ವಾ ಅಜರಾಮರಃ
॥ ೨೪ ॥

ಜೀವಿತಂ ಮರಣಂ ಜಂತೋರ್ಗತಿಃ ಸ್ವೇನೈವ ಕರ್ಮಣಾ ।
ರಾಜಂಸ್ತತೋSನ್ಯೋ ನಾನ್ಯಸ್ಯ ಪ್ರದಾತಾ ಸುಖದುಃಖಯೋಃ
॥ ೨೫ ॥

ಸರ್ಪಚೌರಾಗ್ನಿ ವಿದ್ಯುದ್ಭ್ಯಃ ಕ್ಷುತ್ಪ್ರಡಾಧ್ಯಾದಿಭಿರ್ನೃಪ ।
ಪಂಚತ್ವಮೃಚ್ಛತೇ ಜಂತುರ್ಭುಂಕ್ತ ಆರಬ್ಧ ಕರ್ಮ ತತ್
॥ ೨೬ ॥

ತಸ್ಮಾತ್ತತ್ರಮಿದಂ ರಾಜನ್ ಸಂಸ್ತೀಯೇತಾಭಿಚಾರಿಕಮ್ ।
ಸರ್ಪಾ ಅನಾಗಸೋ ದಗ್ಧಾ ಜನ್ಯೈರ್ದಿಷ್ಟಂ ಹಿ ಭುಜ್ಯತೇ
॥ ೨೭ ॥

ಸೂತ ಉವಾಚ

ಇತ್ಯುಕ್ತಃ ಸ ತಥೇತ್ಯಾಹ ಮಹರ್ಷೇರ್ಮಾನಯನ್ವಚಃ ।
ಸರ್ಪಸತ್ರಾದುಪರತಃ ಪೂಜಯಾಮಾಸ ವಾಕ್ಪತಿಮ್
॥ ೨೮ ॥

ಬ್ರಾಹ್ಮಣರೆಂದರು – ರಾಜೇಂದ್ರನೇ! ತಕ್ಷಕನು ಈಗ ಇಂದ್ರನಲ್ಲಿ ಶರಣಾಗಿದ್ದಾನೆ. ಆದ್ದರಿಂದ ದೇವೇಂದ್ರನು ಅವನನ್ನು ರಕ್ಷಿಸುತ್ತಿರುವನು. ಅವನೇ ತಕ್ಷಕನನ್ನು ತಡೆದು ಹಿಡಿದಿರುವುದರಿಂದ ಅವನು ಬೆಂಕಿಯಲ್ಲಿ ಬಂದು ಬೀಳುತ್ತಿಲ್ಲ. ॥ ೧೯ ॥ ಪರೀಕ್ಷಿತನಂದನ ಜನಮೇಜಯನು ಅತ್ಯಂತ ಬುದ್ಧಿವಂತನೂ, ವೀರನೂ ಆಗಿದ್ದನು. ಅವನು ಬ್ರಾಹ್ಮಣರ ಮಾತನ್ನು ಕೇಳಿ ಋತ್ವಿಜರಲ್ಲಿ ಹೇಳಿದನು – ವಿಪ್ರೋತ್ತಮರೇ ! ನೀವು ಇಂದ್ರನ ಸಹಿತ ತಕ್ಷಕನನ್ನು ಏಕೆ ಅಗ್ನಿಯಲ್ಲಿ ಬೀಳಿಸುವುದಿಲ್ಲ? ॥ ೨೦ ॥ ಜನಮೇಜಯನ ಮಾತನ್ನು ಕೇಳಿ 'ಎಲೈ ತಕ್ಷಕನೇ! ನೀನು ಮರುದ್ಗಣರ ಸಹಚರನಾದ ಇಂದ್ರನೊಂದಿಗೆ ಈ ಅಗ್ನಿಯಲ್ಲಿ ಬಂದು ಬೀಳುವವನಾಗು' ಎಂದು ಬ್ರಾಹ್ಮಣರು ಆ ಯಜ್ಞದಲ್ಲಿ ಇಂದ್ರನೊಂದಿಗೆ ತಕ್ಷಕನನ್ನು ಅಗ್ನಿಕುಂಡಕ್ಕೆ ಆಹ್ವಾನಿಸಿದರು. ॥ ೨೧ ॥ ಬ್ರಾಹ್ಮಣರು ಹೀಗೆ ಆಕರ್ಷಣಮಂತ್ರವನ್ನು ಪಠಿಸಿದಾಗ ದೇವೇಂದ್ರನು ತನ್ನ ಸ್ಥಾನದಿಂದ ವಿಚಲಿತನಾದನು. ತಕ್ಷಕನೊಂದಿಗೆ ವಿಮಾನದಲ್ಲಿ ಕುಳಿತ ಇಂದ್ರನು ಗಾಬರಿಗೊಂಡನು. ಅವನ ವಿಮಾನವು ತಲೆಕೆಳಗಾಗಿ ಗಿರ-ಗಿರನೆ ಸುತ್ತತೊಡಗಿತು. ॥ ೨೨ ॥ ಆಕಾಶದಿಂದ ದೇವೇಂದ್ರನ ವಿಮಾನವು ತಕ್ಷಕನೊಂದಿಗೆ ಅಗ್ನಿಕುಂಡಕ್ಕೆ ಬೀಳುತ್ತಿರುವುದನ್ನು ಕಂಡು ಅಂಗೀರಸರ ಪುತ್ರ ಬೃಹಸ್ಪತಿಗಳು ಜನಮೇಜಯ ರಾಜನಲ್ಲಿ ಹೇಳಿದರು – ॥ ೨೩ ॥ ಎಲೈ ರಾಜನೇ ! ಸರ್ಪರಾಜನಾದ ತಕ್ಷಕನನ್ನು ಕೊಂದು ಹಾಕುವುದು ನಿನಗೆ ಯೋಗ್ಯವಾದ ಕೆಲಸವಲ್ಲ. ಇದು ಅಮೃತ ಕುಡಿದಿದೆ. ಆದಕ್ಕಾಗಿ ಅದು ಅಜರವೂ ಅಮರವೂ ಆಗಿದೆ. ॥ ೨೪ ॥ ರಾಜೇಂದ್ರನೇ ! ಜಗತ್ತಿನ ಪ್ರಾಣಿಗಳು ತಮ್ಮ ತಮ್ಮ ಕರ್ಮಕ್ಕನುಸಾರವೇ ಜೀವನ, ಮರಣ ಹಾಗೂ ಮರಣೋತ್ತರ ಗತಿಯನ್ನು ಪಡೆಯುತ್ತಾರೆ. ಕರ್ಮವಲ್ಲದೆ ಬೇರೆ ಯಾರೂ ಯಾರಿಗೂ ಸುಖ-ದುಃಖಗಳನ್ನು ಕೊಡಲಾರರು. ॥ ೨೫ ॥ ಜನಮೇಜಯನೇ ! ಅನೇಕ ಜನರ ಸಾವು ಹಾವು, ಬೆಂಕಿ, ಸಿಡಿಲು ಮುಂತಾದವುಗಳಿಂದ ಹಾಗೂ ಹಸಿವು-ಬಾಯಾರಿಕೆಗಳಿಂದ, ರೋಗಾದಿನಿಮಿತ್ತವಾಗಿ ಆಗುತ್ತಾ ಇರುತ್ತದೆ. ಆದರೆ ಇದು ಹೇಳಲಿಕ್ಕಾಗಿ ಮಾತ್ರವಾಗಿದೆ. ನಿಜವಾಗಿಯಾದರೋ ಎಲ್ಲ ಪ್ರಾಣಿಗಳು ತಮ್ಮ ಪ್ರಾರಬ್ಧಕರ್ಮವನ್ನೇ ಅನುಭವಿಸುತ್ತಾರೆ. ॥ ೨೬॥ ರಾಜನೇ ! ನೀನು ಬಹಳಷ್ಟು ನಿರಪರಾಧಿ ಹಾವುಗಳನ್ನು ಸುಟ್ಟು ಬಿಟ್ಟೆ. ಈ ಅಭಿಚಾರ ಯಜ್ಞದ ಫಲವು ಕೇವಲ ಪ್ರಾಣಿಗಳ ಹಿಂಸೆಯೇ ಆಗಿದೆ. ಆದಕ್ಕಾಗಿ ಇದನ್ನು ನಿಲ್ಲಿಸಿಬಿಡು. ಏಕೆಂದರೆ, ಜಗತ್ತಿನ ಸಮಸ್ತ ಪ್ರಾಣಿಗಳು ತಮ್ಮ-ತಮ್ಮ ಪ್ರಾರಬ್ಧಕರ್ಮಗಳನ್ನೇ ಭೋಗಿಸುತ್ತಾ ಇರುವರು. ॥ ೨೭ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ ! ಮಹರ್ಷಿ ಬೃಹಸ್ಪತಿಗಳ ಮಾತನ್ನು ಸಮ್ಮಾನಿಸುತ್ತಾ ಜನಮೇಜಯನು 'ತಮ್ಮ ಆಪ್ತಣೆಯನ್ನು ಶಿರಸಾವಹಿಸುವೆನು' ಎಂದು ಹೇಳಿ ಸರ್ಪಯಾಗವನ್ನು ನಿಲ್ಲಿಸಿಬಿಟ್ಟನು ಹಾಗೂ ದೇವಗುರು ಬೃಹಸ್ಪತ್ಯಾಚಾರ್ಯರನ್ನು ವಿಧ್ಯುಕ್ತವಾಗಿ ಪೂಜಿಸಿದನು. ॥ ೨೮ ॥

ಸೈಷಾ ವಿಷ್ಣೋರ್ಮಹಾಮಾಯಾಬಾಧ್ಯಯಾಲಕ್ಷಣಾ ಯಯಾ ।
ಮುಹ್ಯಂತ್ಯಸ್ಯೈವಾತ್ಮಭೂತಾ ಭೂತೇಷು ಗುಣವೃತ್ತಿಭಿಃ
॥ ೨೯ ॥

ಋಷಿಗಳೇ ! (ಯಾವುದರಿಂದ ವಿದ್ವಾನ್ ಬ್ರಾಹ್ಮಣನಿಗೆ ಕ್ರೋಧ ಬಂತೋ, ರಾಜನಿಗೆ ಶಪಿಸಿದನೋ, ಮೃತ್ಯು ಸಂಭವಿಸಿತೋ, ಜನಮೇಜಯನಿಗೆ ಸಿಟ್ಟು ಬಂದು ಸರ್ಪಯಾಗ ಮಾಡಿ ಸರ್ಪಗಳು ಕೊಲ್ಲಲ್ಪಟ್ಟವೋ) ಇದೆಲ್ಲವೂ ಆ ಭಗವಂತನ ವಿಷ್ಣು ಮಾಯೆಯೇ ಆಗಿದೆ. ಇದು ಅನಿರ್ವಚನೀಯವಾದ್ದರಿಂದ ಭಗವಂತನ ಸ್ವರೂಪಭೂತನಾದ ಜೀವನು ಕ್ರೋಧಾದಿಗುಣ ವೃತ್ತಿಗಳಿಂದ ಶರೀರದಲ್ಲಿ ಮೋಹಿತನಾಗಿ ಹೋಗುತ್ತಾನೆ. ಒಬ್ಬರು ಮತ್ತೊಬ್ಬರಿಗೆ ದುಃಖವನ್ನು ಕೊಡುತ್ತಾ, ಅನುಭವಿಸುತ್ತಾ ಇರುತ್ತಾರೆ. ತಮ್ಮ ಸ್ವಪ್ರಯತ್ನದಿಂದ ಇವನ್ನು ನಿವೃತ್ತಗೊಳಿಸಲಾರನು. ॥ ೨೯ ॥ (ಭಗವಾನ್ ವಿಷ್ಣುವಿನ ಸ್ವರೂಪವನ್ನು ನಿಶ್ಚಯಿಸಿಕೊಂಡು ಅವನ ಭಜನೆ ಮಾಡುವುದರಿಂದಲೇ ಮಾಯೆಯಿಂದ ನಿವೃತ್ತಿಯಾಗುತ್ತದೆ. ಅದಕ್ಕಾಗಿ ಅದರ ಸ್ವರೂಪದ ನಿರೂಪಣೆಯನ್ನು ಕೇಳು –) 'ಈ ಮಾಯೆಯು ಕಪಟವುಳ್ಳದ್ದು, ದಂಭಾಚಾರವುಳ್ಳದ್ದು.' ಆತ್ಮಜ್ಞರು ಆತ್ಮಚರ್ಚೆಮಾಡಲು ತೊಡಗಿದಾಗ ಅದು ಭಯಗೊಂಡಂತೆ ಮೋಹಾದಿಗಳನ್ನು ಉಂಟುಮಾಡುವುದಿಲ್ಲ. ಆದರೆ ಸಾಂಸಾರಿಕ ಜನರಿಗೆ ಈ ಮಾಯೆಯು ತುಂಬಾ ತೊಂದರೆ ಉಂಟುಮಾಡುತ್ತದೆ. ಮಾಯೆಯ ವಿಷಯದಲ್ಲಿ ಮತಭೇದವಿದ್ದರೂ ಮಾಯಾಪತಿ ಪರಮಾತ್ಮನಲ್ಲಿ ಮತಭೇದಗಳಿಲ್ಲ. ಮಾಯೆಯು ಪರಮಾತ್ಮನ ಮುಂದೆ ಹೆದರಿಕೊಂಡೇ ಇರುತ್ತದೆ. ಆ ಭಗವಂತನಲ್ಲಿ ಸಂಕಲ್ಪ – ವಿಕಲ್ಪಗಳನ್ನು ಉಂಟುಮಾಡುವ ಮನಸ್ಸು ಇರುವುದಿಲ್ಲ. ॥ ೩೦ ॥ ಆತ್ಮ ಸ್ವರೂಪದಲ್ಲಿ ಕರ್ಮ, ಅದರ ಸಾಮಗ್ರಿ ಮತ್ತು ಅವುಗಳಿಂದ ಸಾಧ್ಯವಾಗುವ ಕರ್ಮಫಲ ಇವು ಯಾವುದೂ ಇಲ್ಲ. – ಆತ್ಮಸ್ವರೂಪನಾದ ಪರಮಾತ್ಮನ ನಿಷೇಧ ಎಂದಿಗೂ ಆಗುವುದಿಲ್ಲ, ವಿರೋಧಿಸಲೂ ಆಗುವುದಿಲ್ಲ. ಆತನು ಯಾರನ್ನು ವಿರೋಧಿಸುವುದಿಲ್ಲ. ಅಂತಹ ಪರಮಪದದ ಸ್ವರೂಪವನ್ನು ಅರಿತ ಮುನಿಯು ಮನಸ್ಸಿನಲ್ಲಿ ಏಳುವ ಅಹಂಕಾರವೇ ಮುಂತಾದ ತರಂಗಗಳನ್ನು ನಿಷೇಧಿಸಿ ತನ್ನ ಆತ್ಮಸ್ವರೂಪದಲ್ಲಿ ವಿಹರಿಸುವನು. ॥ ೩೧ ॥ ಮುಮುಕ್ಷುವೂ, ವಿಚಾರಶೀಲನೂ ಆದ ಪುರುಷನು ಪರಮಪದವಲ್ಲದೆ ಇತರ ವಸ್ತುಗಳನ್ನು ಪರಿತ್ಯಜಿಸಿ, 'ನೇತಿ–ನೇತಿ'ಯ ಮೂಲಕ ಅವುಗಳನ್ನು ನಿಷೇಧಮಾಡಿ, ಯಾವುದರ ಎಂದಿಗೂ ನಿಷೇಧವಾಗುವುದಿಲ್ಲವೋ, ತ್ಯಜಿಸಲಾಗುವುದಿಲ್ಲವೋ ಆ ಭಗವಾನ್ ವಿಷ್ಣುವಿನ ಪರಮಪದವನ್ನು ಪಡೆದುಕೊಳ್ಳುವನು. ಈ ಮಾತು ಎಲ್ಲ ಮಹಾತ್ಮರು ಹಾಗೂ ಶ್ರುತಿಗಳು ಒಮ್ಮತವಾಗಿ ಸ್ವೀಕರಿಸಿದ್ದಾರೆ. ತನ್ನ ಚಿತ್ತವನ್ನು ಏಕಾಗ್ರಗೊಳಿಸುವವರು ಅಂತಃಕರಣದ ಅಶುದ್ಧಿಗಳನ್ನು, ಅನಾತ್ಮಭಾವಗಳನ್ನು ಎಂದೆಂದಿಗೂ ಇಲ್ಲವಾಗಿಸಿಕೊಂಡು ಅನನ್ಯ ಭಕ್ತಿಭಾವದಿಂದ ಕೂಡಿದ ಹೃದಯದಿಂದ ಆ ಪರಮಪದವನ್ನು ಆಲಿಂಗಿಸಿಕೊಳ್ಳುವರು ಹಾಗೂ ಅದರಲ್ಲೇ ಒಂದಾಗಿ ಹೋಗುವರು. ॥ ೩೨ ॥ ವಿಷ್ಣುಭಗವಂತನ ಇದೇ ವಾಸ್ತವಿಕ ಸ್ವರೂಪವಾಗಿದೆ. ಇದೇ ಅವನ ಪರಮಪದವಾಗಿದೆ. ಯಾರ ಅಂತಃಕರಣದಲ್ಲಿ ಶರೀರದ ಕುರಿತು ಅಹಂಭಾವವಿಲ್ಲವೋ, ಅದರ ಸಂಬಂಧವಾದ ಗೃಹಾದಿ ಪದಾರ್ಥಗಳಲ್ಲಿ ಮಮತೆಯಿಲ್ಲವೋ ಅವರಿಗೆ ಇದರ ಪ್ರಾಪ್ತಿಯಾಗುತ್ತದೆ. ನಿಜವಾಗಿ ಜಗತ್ತಿನ ವಸ್ತುಗಳಲ್ಲಿ ನಾನು ನನ್ನದು ಇದೇ ದೊಡ್ಡ ತಪ್ಪು ಆಗಿದೆ. ॥ ೩೩ ॥

ನ ಯತ್ರ ದಂಭೀತ್ಯಭಯಾ ವಿರಾಜಿತಾ
ಮಾಯಾऽऽತ್ಮವಾದೇऽಸಕೃದಾತ್ಮವಾದಿಭಿಃ ।
ನ ಯದ್ವಿವಾದೋ ವಿವಿಧಸ್ತದಾಶ್ರಯೋ
ಮನಶ್ಚ ಸಂಕಲ್ಪವಿಕಲ್ಪವೃತ್ತಿ ಯತ್ ॥ ೩೦ ॥

ನ ಯತ್ರ ಸೃಜ್ಯಂ ಸೃಜತೋಭಯೋಃ ಪರಂ
ಶ್ರೇಯಶ್ಚ ಜೀವಸ್ಯ ಭರನ್ನಿತಸ್ತ್ವಹಮ್ ।
ತದೇತದುತ್ತಾದಿತಬಾಧ್ಯಬಾಧಕಂ
ನಿಷಿಧ್ಯ ಚೋರ್ಮೀನ್ನಿರಮೇತ್ತ್ಯಯಂ ಮುನಿಃ ॥ ೩೧ ॥

ಪರಂ ಪದಂ ವೈಷ್ಣವಮಾಮನಂತಿ ತದ್
ಯನ್ನೇತಿ ನೇತೀತ್ಯತದುತ್ಸಿಸೃಕ್ಷವಃ ।
ವಿಸೃಜ್ಯ ದೌರಾತ್ಮ್ಯಮನನ್ಯಸೌಹೃದಾ
ಹೃದೋಪಗುಹ್ಯಾವಸಿತಂ ಸಮಾಹಿತೈಃ ॥ ೩೨ ॥

ತ ಏತದಧಿಗಚ್ಛಂತಿ ವಿಷ್ಣೋರ್ಯತ್ಪರಮಂ ಪದಮ್ ।
ಅಹಂ ಮಮೇತಿ ದೌರ್ಜನ್ಯಂ ನ ಯೇಷಾಂ ದೇಹಗೇಹಜಮ್
॥ ೩೩ ॥

ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ ।
ನ ಚೇಮಂ ದೇಹಮಾಶ್ರಿತ್ಯ ವೈರಂ ಕುರ್ವೀತ ಕೇನಚಿತ್
॥ ೩.೪ ॥

ನಮೋ ಭಗವತೇ ತಸ್ಮೈ ಕೃಷ್ಣಾಯಾಕುಂಠಮೇಧಸೇ ।
ಯತ್ಪಾದಾಂಬುರುಹಧ್ಯಾನಾತ್ಸಂಹಿತಾಮಧ್ಯಗಾಮಿಮಾಮ್
॥ ೩.೫ ॥

ಶೌನಕ ಉವಾಚ

ಪೈಲಾದಿಭಿರ್ವ್ಯಾಸಶಿಷ್ಯೈರ್ವೇದಾಚಾರ್ಯೈರ್ಮಹಾತ್ಮಭಿಃ ।
ವೇದಾಶ್ಚ ಕತಿಧಾ ವ್ಯಸ್ತಾ ಏತತ್ಸೌಮ್ಯಾಭಿಧೇಹಿ ನಃ
॥ ೩.೬ ॥

ಸೂತ ಉವಾಚ

ಸಮಾಹಿತಾತ್ಮನೋ ಬ್ರಹ್ಮನ್ ಬ್ರಹ್ಮಣಃ ಪರಮೇಷ್ಠಿನಃ ।
ಹೃದ್ಯಾಕಾಶಾದಭೂನ್ನಾದೋ ವೃತ್ತಿರೋಧಾದ್ವಿಭಾವ್ಯತೇ
॥ ೩.೭ ॥

ಯದುಪಾಸನಯಾ ಬ್ರಹ್ಮನ್ಯೋಗಿನೋ ಮಲಮಾತ್ಮನಃ ।
ದ್ರವ್ಯಕ್ರಿಯಾಕಾರಕಾಖ್ಯಂ ಧೂತ್ವಾ ಯಾಂತ್ಯಪುನರ್ಭವಮ್
॥ ೩.೮ ॥

ತತೋಽಭೂತ್ತ್ರಿವೃದೋಂಕಾರೋ ಯೋಽವ್ಯಕ್ತಪ್ರಭವಃ ಸ್ವರಾಟ್ ।
ಯತ್ತಲ್ಲಿಂಗಂ ಭಗವತೋ ಬ್ರಹ್ಮಣಃ ಪರಮಾತ್ಮನಃ
॥ ೩.೯ ॥

ಶೃಣೋತಿ ಯ ಇಮಂ ಸ್ಫೋಟಂ ಸುಪ್ತಶ್ರೋತ್ರೇ ಚ ಶೂನ್ಯದೃಕ್ ।
ಯೇನ ವಾಗ್ವ್ಯಜ್ಯತೇ ಯಸ್ಯ ವ್ಯಕ್ತಿರಾಕಾಶ ಆತ್ಮನಃ
॥ ೪೦ ॥

ಶೌನಕಾದಿಗಳೇ ! ಈ ಪರಮ ಪದದ ಬಯಕೆ ಇರುವವರು ಇತರರ ಕಟುವಚನಗಳನ್ನು ಸಹಿಸಿಕೊಳ್ಳಬೇಕು. ಬೇರೆ ಯಾರ ಅಪಮಾನವನ್ನು ಮಾಡಬಾರದು. ಈ ಕ್ಷಣಭಂಗುರವಾದ ಶರೀರದಲ್ಲಿ ಅಹಂತೆ-ಮಮತೆಯಿಂದಾಗಿ ಯಾವುದೇ ಪ್ರಾಣಿಯಲ್ಲಿ ವೈರಭಾವವಿರಿಸಬಾರದು. ॥ ೩.೪ ॥ ಅನಂತ ಜ್ಞಾನಸಂಪನ್ನನಾದ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಧ್ಯಾನದಿಂದಲೇ ನಾನು ಈ ಶ್ರೀಮದ್ಭಾಗವತ ಮಹಾಪುರಾಣವನ್ನು ಅಧ್ಯಯನ ಮಾಡಿದೆ. ನಾನೀಗ ಅವನಿಗೆ ನಮಸ್ಕಾರಮಾಡಿ ಈ ಪುರಾಣವನ್ನು ಮುಗಿಸುತ್ತೇನೆ. ॥ ೩.೫ ॥

ಶೌನಕರು ಕೇಳಿದರು - ಸಾಧುಶಿರೋಮಣಿಗಳಾದ ಸೂತರೇ ! ವೇದವ್ಯಾಸರ ಶಿಷ್ಯರಾದ ಪೈಲರೇ ಮುಂತಾದ ಮಹರ್ಷಿಗಳು ದೊಡ್ಡ ಮಹಾತ್ಮರೂ ವೇದಗಳ ಆಚಾರ್ಯರೂ ಆಗಿದ್ದರು. ಅವರು ಎಷ್ಟು ಪ್ರಕಾರದಿಂದ ವೇದಗಳನ್ನು ವಿಭಜಿಸಿದರು ? ಇದನ್ನು ದಯಮಾಡಿ ನಮಗೆ ಹೇಳಿರಿ. ॥ ೩.೬ ॥

ಸೂತಪುರಾಣಿಕರು ಹೇಳಿದರು - ಮಹರ್ಷಿಗಳೇ ! ಪರಮೇಷ್ಠಿ ಬ್ರಹ್ಮದೇವರು ಹಿಂದಿನ ಸೃಷ್ಟಿಯ ಜ್ಞಾನವನ್ನು ಸಂಪಾದಿಸಲಿಕ್ಕಾಗಿ ಏಕಾಗ್ರಚಿತ್ತರಾದಾಗ ಅವರ ಹೃದಯಾಕಾಶದಿಂದ ಕಂಠ, ತಾಲು ಮುಂತಾದ ಸ್ಥಾನಗಳ ಸಂಘರ್ಷದಿಂದರಹಿತವಾದ ಒಂದು ಅತ್ಯಂತ ವಿಲಕ್ಷಣವಾದ ಅನಾಹತನಾದವು ಪ್ರಕಟಗೊಂಡಿತು. ಜೀವಿಯು ತನ್ನ ಮನೋವೃತ್ತಿಗಳನ್ನು ತಡೆದುಕೊಂಡಾಗ ಆ ಅನಾಹತ ನಾದವನ್ನು ಅನುಭವಿಸುತ್ತಾನೆ. ॥ ೩.೭ ॥ ಶೌನಕರೇ ! ಮಹಾ-ಮಹಾಯೋಗಿಗಳು ಅದೇ ಅನಾಹತವನ್ನು ಉಪಾಸಿಸುತ್ತಾರೆ. ಅದರ ಪ್ರಭಾವದಿಂದ ಅಂತಃಕರಣದ ದ್ರವ್ಯ (ಅಧಿಭೂತ), ಕ್ರಿಯೆ (ಅಧ್ಯಾತ್ಮ) ಮತ್ತು ಕಾರಕ (ಅಧಿದೈವ) ರೂಪವಾದ ಮಲವನ್ನು ನಾಶಪಡಿಸಿಕೊಂಡು ಅವರು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರವಿಲ್ಲದ ಪರಮಗತಿರೂಪವಾದ ಮೋಕ್ಷವನ್ನು ಪಡೆದುಕೊಳ್ಳುವರು. ॥ ೩.೮ ॥ ಅದೇ ಅನಾಹತ ನಾದದಿಂದ 'ಅ'ಕಾರ, 'ಉ'ಕಾರ ಮತ್ತು 'ಮ'ಕಾರರೂಪವಾದ ಮೂರು ಮಾತ್ರೆಗಳಿಂದ ಕೂಡಿದ ಓಂಕಾರವು ಪ್ರಕಟವಾಯಿತು. ಈ ಓಂಕಾರದ ಶಕ್ತಿಯಿಂದಲೇ ಪ್ರಕೃತಿಯು ಅವ್ಯಕ್ತದಿಂದ ವ್ಯಕ್ತರೂಪದಲ್ಲಿ ಪರಿಣತವಾಗುತ್ತದೆ. ಓಂಕಾರವು ಸ್ವಯಂ ಅವ್ಯಕ್ತವೂ, ಅನಾದಿಯೂ ಆಗಿದೆ. ಪರಮಾತ್ಮ ಸ್ವರೂಪವಿರುವುದರಿಂದ ಸ್ವಯಂಪ್ರಕಾಶವೂ ಆಗಿದೆ. ಯಾವ ಪರಮವಸ್ತುವನ್ನು ಭಗವಂತ, ಬ್ರಹ್ಮ ಅಥವಾ ಪರಮಾತ್ಮನೆಂದೇ ಹೇಳಲಾಗುತ್ತದೋ ಅವನ ಸ್ವರೂಪದ ಬೋಧವೂ ಓಂಕಾರದ ಮೂಲಕವೇ ಆಗುವುದು. ॥ ೩.೯ ॥ ಶ್ರವಣೇಂದ್ರೀಯ ಶಕ್ತಿಯು ಲುಪ್ತವಾದಾಗಲೂ ಈ ಓಂಕಾರವನ್ನು - ಸಮಸ್ತ ಅರ್ಥಗಳನ್ನು ಪ್ರಕಾಶಿತಗೊಳಿಸುವ ಸ್ಫೋಟ ತತ್ತ್ವವನ್ನು ಯಾರು ಕೇಳುವನೋ ಮತ್ತು ಸುಷುಪ್ತಿ ಹಾಗೂ ಸಮಾಧಿ ಅವಸ್ಥೆಯಲ್ಲಿ ಎಲ್ಲದರ ಅಭಾವವನ್ನು ತಿಳಿಯುವನೋ ಅದೇ ಪರಮಾತ್ಮನ ವಿಶುದ್ಧ ಸ್ವರೂಪವಾಗಿದೆ. ಆ ಓಂಕಾರವೇ ಪರಮಾತ್ಮನಿಂದ ಹೃದಯಾಕಾಶದಲ್ಲಿ ಪ್ರಕಟವಾಗಿ ವೇದ ರೂಪವಾದ ವಾಣಿಯನ್ನು ಪ್ರಕಟಗೊಳಿಸುತ್ತದೆ. ॥ ೪೦ ॥

ಸ್ವಧಾಮ್ನೋ ಬ್ರಹ್ಮಣಃ ಸಾಕ್ಷಾದ್ವಾಚಕಃ ಪರಮಾತ್ಮನಃ ।
ಸ ಸರ್ವಮಂತ್ರೋಪನಿಷದ್ವೇದಬೀಜಂ ಸನಾತನಮ್
॥ ೪೧ ॥

ತಸ್ಯ ಹ್ಯಾಸಂಸ್ತ್ರಯೋ ವರ್ಣಾ ಅಕಾರಾದ್ಯಾ ಭೃಗೂದ್ವಹ ।
ಧಾರ್ಯಂತೇ ಯೈಸ್ತ್ರಯೋ ಭಾವಾ ಗುಣನಾಮಾರ್ಥವೃತ್ತಯಃ
॥ ೪೨ ॥

ತತೋಽಕ್ಷರಸಮಾಮ್ನಾಯಮಸೃಜದ್ಭಗವಾನಜಃ ।
ಅಂತಃಸ್ಥೋಷ್ಮಸ್ವರಸ್ಪರ್ಶಹ್ರಸ್ವದೀರ್ಘಾದಿಲಕ್ಷಣಮ್
॥ ೪೩ ॥

ತೇನಾಸೌ ಚತುರೋ ವೇದಾಂಶ್ಚತುರ್ಭಿರ್ವದನೈರ್ವಿಭುಃ ।
ಸವ್ಯಾಹೃತಿಕಾನೋಂಕಾರಾಂಶ್ಚಾತುಹೋರ್ತ್ರವಿವಕ್ಷಯಾ
॥ ೪೪ ॥

ಪುತ್ರಾನಧ್ಯಾಪಯತ್ತಾಂಸ್ತು ಬ್ರಹ್ಮರ್ಷೀನ್ ಬ್ರಹ್ಮಕೋವಿದಾನ್ ।
ತೇ ತು ಧರ್ಮೋಪದೇಷ್ಟಾರಃ ಸ್ವಪುತ್ರೇಭ್ಯಃ ಸಮಾದಿಶನ್
॥ ೪೫ ॥

ತೇ ಪರಂಪರಯಾ ಪ್ರಾಪ್ತಾಸ್ತತ್ತಚ್ಛಿಷ್ಯೈರ್ಧೃತವ್ರತೈಃ ।
ಚತುರ್ಯುಗೇಷ್ವಥ ವ್ಯಸ್ತಾ ದ್ವಾಪರಾದೌ ಮಹರ್ಷಿಭಿಃ
॥ ೪೬ ॥

ಕ್ಷೀಣಾಯುಷಃ ಕ್ಷೀಣಸತ್ತ್ವಾನ್ ದುರ್ಮೇಧಾನ್ವೀಕ್ಷ್ಯ ಕಾಲತಃ ।
ವೇದಾನ್ ಬ್ರಹ್ಮರ್ಷಯೋ ವ್ಯಸ್ಯನ್ ಹೃದಿಸ್ಥಾಚ್ಯುತಚೋದಿತಾಃ
॥ ೪೭ ॥

ಅಸ್ಮಿನ್ನಪ್ಯಂತರೇ ಬ್ರಹ್ಮನ್ ಭಗವಾನ್ ಲೋಕಭಾವನಃ ।
ಬ್ರಹ್ಮೇಶಾದ್ಯೈರ್ಲೋಕಪಾಲೈರ್ಯಾಚಿತೋ ಧರ್ಮಗುಪ್ತಯೇ
॥ ೪೮ ॥

ಪರಾಶರಾತ್ಸತ್ಯವತ್ಯಾಮಂಶಾಂಶಕಲಯಾ ವಿಭುಃ ।
ಅವತೀರ್ಣೋ ಮಹಾಭಾಗ ವೇದಂ ಚಕ್ರೇ ಚತುರ್ವಿಧಮ್
॥ ೪೯ ॥

ಋಗಥರ್ವಯಜುಃಸಾಮ್ನಾಂ ರಾಶೀನುದ್ಧೃತ್ಯ ವರ್ಗಶಃ ।
ಚತಸ್ರಃ ಸಂಹಿತಾಶ್ಚಕ್ರೇ ಮಂತ್ರೈರ್ಮಣಿಗಣಾ ಇವ
॥ ೫೦ ॥

ತಾಸಾಂ ಸ ಚತುರಃ ಶಿಷ್ಯಾನುಪಾಹೂಯ ಮಹಾಮತಿಃ ।
ಏಕೈಕಾಂ ಸಂಹಿತಾಂ ಬ್ರಹ್ಮನ್ನೇಕೈಕಸ್ಮೈ ದದೌ ವಿಭುಃ
॥ ೫೧ ॥

ಓಂಕಾರವು ತನ್ನ ಆಶ್ರಯನಾದ ಪರಮಾತ್ಮ ಪರಬ್ರಹ್ಮನ ಸಾಕ್ಷಾತ್ ವಾಚಕವಾಗಿದೆ. ಓಂಕಾರವೇ ಸಮಸ್ತ ಮಂತ್ರ, ಉಪನಿಷತ್ ಮತ್ತು ವೇದಗಳ ಸನಾತನ ಬೀಜವಾಗಿದೆ. ॥ ೪೧ ॥

ಶೌನಕರೇ ! ಓಂಕಾರದಲ್ಲಿ 'ಅ' 'ಉ' 'ಮ' ಎಂಬ ಮೂರು ವರ್ಣಗಳಿವೆ. ಇದೇ ಮೂರು ವರ್ಣಗಳು ಸತ್ತ್ವ, ರಜ, ತಮ ಎಂಬ ತ್ರಿಗುಣಗಳು, ಋಕ್, ಯಜುಃ, ಸಾಮ ಎಂಬ ಮೂರು ಹೆಸರುಗಳು, ಭೂಃ ಭುವಃ, ಸ್ವಃ ಈ ಮೂರು ಅರ್ಥಗಳು, ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ವೃತ್ತಿಗಳು ಈ ಮೂರು ಮೂರು ಸಂಖ್ಯೆಯುಳ್ಳ ಭಾವಗಳನ್ನು ಧರಿಸುತ್ತದೆ. ॥೪೨॥ ಅನಂತರ ಭಗವಾನ್ ಬ್ರಹ್ಮದೇವರು ಓಂಕಾರದಿಂದಲೇ ಅಂತಸ್ಥ (ಯ, ರ, ಲ, ವ) ಊಷ್ಮ (ಶ, ಷ, ಸ, ಹ) ಸ್ವರ (ಅ ದಿಂದ ಔ ವರೆಗೆ), ಸ್ಪರ್ಶ (ಕ ದಿಂದ ಮ ವರೆಗೆ) ಮತ್ತು ಹ್ರಸ್ವ-ದೀರ್ಘ ಮುಂತಾದ ಲಕ್ಷಣಗಳುಳ್ಳ ವರ್ಣಮಾಲೆಯನ್ನು ರಚಿಸಿದರು.॥೪೩॥ ಅದೇ ವರ್ಣಮಾಲೆಯ ಮೂಲಕ ತನ್ನ ನಾಲ್ಕು ಮುಖಗಳಿಂದ ಹೋತಾ, ಅಧ್ವರ್ಯು, ಉದ್ಗಾತೃ, ಬ್ರಹ್ಮಾ ಎಂಬ ನಾಲ್ಕು ಮಂದಿ ಋತ್ವಿಜರ ಕರ್ಮಗಳನ್ನು ತಿಳಿಸುವುದಕ್ಕಾಗಿ ಓಂಕಾರ ಮತ್ತು ವ್ಯಾಹೃತಿಗಳೊಂದಿಗೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ – ಈ ನಾಲ್ಕು ವೇದಗಳನ್ನು ಪ್ರಕಟಿಸಿದರು. ತನ್ನ ಪುತ್ರರಾದ ಮಹರ್ಷಿ ಮರೀಚಿಯೇ ಮೊದಲಾದವರು ವೇದಾಧ್ಯಯನದಲ್ಲಿ ಕುಶಲರೆಂದು ತಿಳಿದು ಅವರಿಗೆ ವೇದಗಳನ್ನು ಉಪದೇಶಿಸಿದರು. ಅವರೆಲ್ಲರೂ ಧರ್ಮವನ್ನು ಉಪದೇಶ ಮಾಡುವುದರಲ್ಲಿ ನಿಪುಣರಾದಾಗ ಅವರು ತಮ್ಮ ಪುತ್ರರಿಗೆ ವೇದಗಳನ್ನು ಅಧ್ಯಯನ ಮಾಡಿಸಿದರು. ॥ ೪೪-೪೫ ॥ ಅನಂತರ ಅವರೇ ನೈಷ್ಠಿಕ ಬ್ರಹ್ಮಚಾರಿಗಳಾದ ತಮ್ಮ ಶಿಷ್ಯ-ಪ್ರಶಿಷ್ಯರ ಮೂಲಕ ನಾಲ್ಕು ಯುಗಗಳಲ್ಲಿಯೂ ಸಂಪ್ರದಾಯ ಪರಂಪರೆಯಿಂದ ವೇದಗಳು ರಕ್ಷಿಸಲ್ಪಟ್ಟವು. ದ್ವಾಪರ ಯುಗದ ಅಂತ್ಯದಲ್ಲಿ ಮಹರ್ಷಿಗಳು ಈ ವೇದಗಳನ್ನು ವಿಭಾಗಮಾಡಿದರು. ॥ ೪೬ ॥ ಕಾಲದ ಪ್ರಭಾವದಿಂದ ಜನರ ಆಯುಸ್ಸು, ಶಕ್ತಿ , ಬುದ್ಧಿ ಕ್ಷೀಣಿಸಿರುವುದನ್ನು ನೋಡಿದ ಬ್ರಹರ್ಷಿಗಳು ಹೃದಯದಲ್ಲಿ ಬೆಳಗುತ್ತಿದ್ದ ಪರಮಾತ್ಮನ ಪ್ರೇರಣೆಯಿಂದ ವೇದಗಳನ್ನು ಅನೇಕ ವಿಭಾಗ ಮಾಡಿದರು.॥ ೪೭ ॥

ಮಹಾನುಭಾವರಾದ ಶೌನಕರೇ ! ಈ ವೈವಸ್ವತ ಮನ್ವಂತರದಲ್ಲಿಯೂ ಬ್ರಹ್ಮ ರುದ್ರಾದಿ ಲೋಕಪಾಲಕರ ಪ್ರಾರ್ಥನೆಯಂತೆ ವಿಶ್ವಕರ್ತನಾದ ಭಗವಂತನು ಧರ್ಮರಕ್ಷಣೆಗಾಗಿ ಪರಾಶರ ಮಹರ್ಷಿಯಿಂದ ಸತ್ಯವತಿ ದೇವಿಯ ಗರ್ಭದಿಂದ ತನ್ನ ಅಂಶಾಂಶ ಕಲಾರೂಪದಿಂದ ಕೃಷ್ಣದ್ವೈಪಾಯನರ ರೂಪದಲ್ಲಿ ಅವತರಿಸಿ ಈ ಯುಗದಲ್ಲಿ ವೇದಗಳನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿದರು. ॥ ೪೮-೪೯ ॥ ಮಣಿಗಳ ಸಮೂಹದಿಂದ ಬೇರೆ-ಬೇರೆ ಜಾತಿಯ ಮಣಿಗಳನ್ನು ವಿಂಗಡಿಸುವಂತೆಯೇ ಮಹಾಮತಿಗಳಾದ ಭಗವಾನ್ ವೇದವ್ಯಾಸರು ಮಂತ್ರಸಮುದಾಯವನ್ನು ಬೇರೆ-ಬೇರೆ ಪ್ರಕರಣಗಳಗನು ಸಾರವಾಗಿ ಮಂತ್ರಗಳನ್ನು ಸಂಗ್ರಹಿಸಿ ಅವುಗಳಿಂದ ಋಕ್, ಯಜುಃ, ಸಾಮ, ಅಥರ್ವಗಳೆಂಬ ನಾಲ್ಕು ಸಂಹಿತೆಗಳನ್ನು ರಚಿಸಿದರು ಹಾಗೂ ತನ್ನ ನಾಲ್ಕು ಶಿಷ್ಯರನ್ನು ಕರೆದು ಪ್ರತಿಯೊಬ್ಬನಿಗೆ ಒಂದೊಂದು ಸಂಹಿತೆಯನ್ನು ಉಪದೇಶಿಸಿದರು. ॥ ೫೦-೫೧ ॥

ಪೈಲಾಯ ಸಂಹಿತಾಮಾದ್ಯಾಂ ಬಹ್ವೃಚಾಖ್ಯಾಮುವಾಚ ಹ ।
ವೈಶಂಪಾಯನಸಂಜ್ಞಾಯ ನಿಗದಾಖ್ಯಂ ಯಜುರ್ಗಣಮ್
॥ ೫೨ ॥

ಸಾಮ್ನಾಂ ಜೈಮಿನಯೇ ಪ್ರಾಹ ತಥಾ ಛಂದೋಗಸಂಹಿತಾಮ್ ।
ಅಥರ್ವಾಂಗಿರಸೀಂ ನಾಮ ಸ್ವಶಿಷ್ಯಾಯ ಸುಮಂತವೇ
॥ ೫೩ ॥

ಪೈಲಃ ಸ್ವಸಂಹಿತಾಮೂಚೇ ಇಂದ್ರಪ್ರಮಿತಯೇ ಮುನಿಃ ।
ಬಾಷ್ಕಲಾಯ ಚ ಸೋಽಪ್ಯಾಹ ಶಿಷ್ಯೇಭ್ಯಃ ಸಂಹಿತಾಂ ಸ್ವಕಾಮ್
॥ ೫೪ ॥

ಚತುರ್ಧಾ ವ್ಯಸ್ಯ ಬೋಧ್ಯಾಯ ಯಾಜ್ಞವಲ್ಕ್ಯಾಯ ಭಾರ್ಗವ ।
ಪರಾಶರಾಯಾಗ್ನಿಮಿತ್ರೇ ಇಂದ್ರಪ್ರಮಿತಿರಾತ್ಮವಾನ್
॥ ೫೫ ॥

ಅಧ್ಯಾಪಯತ್ ಸಂಹಿತಾಂ ಸ್ವಾಂ ಮಾಂಡೂಕೇಯಮೃಷಿಂ ಕವಿಮ್ ।
ತಸ್ಯ ಶಿಷ್ಯೋ ದೇವಮಿತ್ರಃ ಸೌಭರ್ಯಾದಿಭ್ಯ ಊಚಿವಾನ್
॥ ೫೬ ॥

ಶಾಕಲ್ಯಸ್ತತ್ಸುತಃ ಸ್ವಾಂ ತು ಪಂಚಧಾ ವ್ಯಸ್ಯ ಸಂಹಿತಾಮ್ ।
ವಾತ್ಸ್ಯಮುದ್ಗಲಶಾಲೀಯಗೋಖಿಲ್ಯಶಿಶಿರೇಷ್ವಧಾತ್
॥ ೫೭ ॥

ಜಾತೂಕರ್ಣ್ಯಶ್ಚ ತಚ್ಛಿಷ್ಯಃ ಸ ನಿರುಕ್ತಾಂ ಸ್ವಸಂಹಿತಾಮ್ ।
ಬಲಾಕಪೈಜವೈತಾಲವಿರಜೇಭ್ಯೋ ದದೌ ಮುನಿಃ
॥ ೫೮ ॥

ಬಾಷ್ಕಲಿಃ ಪ್ರತಿಶಾಖಾಭ್ಯೋ ವಾಲಖಿಲ್ಯಾಖ್ಯಸಂಹಿತಾಮ್ ।
ಚಕ್ರೇ ಬಾಲಾಯನಿರ್ಭಜ್ಯಃ ಕಾಸಾರಶ್ಚೈವ ತಾಂ ದಧುಃ
॥ ೫೯ ॥

ಬಹ್ವೃಚಾಃ ಸಂಹಿತಾ ಹ್ಯೇತಾ ಏಭಿರ್ಬ್ರಹ್ಮರ್ಷಿಭಿರ್ಧೃತಾಃ ।
ಶ್ರುತ್ವೈತಚ್ಛಂದಸಾಂ ವ್ಯಾಸಂ ಸರ್ವಪಾಪೈಃ ಪ್ರಮುಚ್ಯತೇ
॥ ೬೦ ॥

ವೈಶಂಪಾಯನಶಿಷ್ಯಾ ವೈ ಚರಕಾಧ್ವರ್ಯವೋಽಭವನ್ ।
ಯಚ್ಚೇರುರ್ಬ್ರಹ್ಮಹತ್ಯಾಂಹಃಕ್ಷಪಣಂ ಸ್ವಗುರೋರ್ವ್ರತಮ್
॥ ೬೧ ॥

ಯಾಜ್ಞವಲ್ಕ್ಯಶ್ಚ ತಚ್ಛಿಷ್ಯ ಆಹಾಹೋ ಭಗವನ್ಕಿಯತ್ ।
ಚರಿತೇನಾಲ್ಪಸಾರಾಣಾಂ ಚರಿಷ್ಯೇಽಹಂ ಸುದುಶ್ಚರಮ್
॥ ೬೨ ॥

ಅವರು 'ಬಹ್ವೃಚ'ವೆಂಬ ಋಗ್ವೇದ ಸಂಹಿತೆಯನ್ನು ಪೈಲನಿಗೂ, 'ನಿಗದ' ಎಂಬ ಎರಡನೆಯ ಯಜುಃ ಸಂಹಿತೆಯನ್ನು ವೈಶಂಪಾಯನನಿಗೂ, ಸಾಮಶ್ರುತಿಗಳ 'ಛಂದೋಗ' ಸಂಹಿತೆಯನ್ನು ಜೈಮಿನಿಗೂ, 'ಅಥರ್ವಾಂಗಿರಸ' ಸಂಹಿತೆಯನ್ನು ಸುಮಂತುವಿಗೂ ಅಧ್ಯಯನ ಮಾಡಿಸಿದರು. ॥ ೫೨-೫೩. ॥ ಶೌನಕರೇ ! ಪೈಲ ಮುನಿಯು ತನ್ನ ಸಂಹಿತೆಯನ್ನು ಎರಡು ವಿಭಾಗ ಮಾಡಿ ಒಂದನ್ನು ಇಂದ್ರಪ್ರಮಿತಿಗೂ, ಮತ್ತೊಂದನ್ನು ಬಾಷ್ಕಲ ನಿಗೂ ಅಧ್ಯಯನ ಮಾಡಿಸಿದರು. ಬಾಷ್ಕಲನೂ ತನ್ನ ಶಾಖೆಯನ್ನು ನಾಲ್ಕು, ವಿಭಾಗ ಮಾಡಿ ಅವನ್ನು ಬೇರೆ-ಬೇರೆಯಾಗಿ ತನ್ನ ಶಿಷ್ಯರಾದ ಬೋಧ್ಯ, ಯಾಜ್ಞವಲ್ಕ್ಯ, ಪರಾಶರ ಮತ್ತು ಅಗ್ನಿಮಿತ್ರ ಇವರಿಗೆ ಅಧ್ಯಯನ ಮಾಡಿಸಿದರು. ಪರಮಸಂಯಮಿಯಾದ ಇಂದ್ರಪ್ರಮಿತಿಯು ಪ್ರತಿಭಾಶಾಲಿ ಮಾಂಡೂಕೇಯ ಋಷಿಗೆ ತನ್ನ ಸಂಹಿತೆಯನ್ನು ಅಧ್ಯಯನ ಮಾಡಿಸಿದರು. ಮಾಂಡೂಕೇಯನ ಶಿಷ್ಯನಾದ ದೇವಮಿತ್ರನು ಸೌಭರಿ ಮೊದಲಾದ ಋಷಿಗಳಿಗೆ ವೇದವನ್ನು ಅಧ್ಯಯನ ಮಾಡಿಸಿದನು. ॥ ೫೪-೫೬ ॥ ಮಾಂಡೂ ಕೇಯನ ಪುತ್ರನಾದ ಶಾಕಲ್ಯನು ತನ್ನ ಸಂಹಿತೆಯನ್ನು ಐದು ವಿಭಾಗಮಾಡಿ ಅದನ್ನು ವಾತ್ಸ್ಯ, ಮುದ್ಗಲ, ಶಾಲೀಯ, ಗೋಖಿಲ್ಯ ಮತ್ತು ಶಿಶಿರ ಎಂಬ ಶಿಷ್ಯರಿಗೆ ಹೇಳಿಕೊಟ್ಟನು. ॥ ೫೭ ॥ ಶಾಕಲ್ಯನ ಇನ್ನೋರ್ವ ಶಿಷ್ಯನಾದ ಜಾತೂಕರ್ಣ್ಯ ಎಂಬ ಮುನಿಯು ತನ್ನ ಸಂಹಿತೆಯನ್ನು ಮೂರು ವಿಭಾಗಮಾಡಿ ಅದರ ಸಂಬಂಧೀ ನಿರುಕ್ತದೊಂದಿಗೆ ತನ್ನ ಶಿಷ್ಯರಾದ ಬಲಾಕ, ಪೈಜ, ವೈತಾಲ ಮತ್ತು ವಿರಜ ಎಂಬುವರಿಗೆ ಹೇಳಿಕೊಟ್ಟನು. ॥ ೫೮ ॥ ಬಾಷ್ಕಲನ ಪುತ್ರ ನಾದ ಬಾಷ್ಕಲಿಯು ಎಲ್ಲ ಶಾಖೆಗಳಿಂದ ಒಂದು 'ವಾಲಖಿಲ್ಯ' ಎಂಬ ಶಾಖೆಯನ್ನು ರಚಿಸಿದರು. ಅದನ್ನು ಬಾಲಾಯನಿ, ಭಜ್ಯ ಹಾಗೂ ಕಾಸಾರನು ಅಧ್ಯಯನ ಮಾಡಿದರು. ॥ ೫೯ ॥ ಈ ಮಹರ್ಷಿಗಳ ಪೂರ್ವೋಕ್ತ ಸಂಪ್ರದಾಯದಂತೆ ಋಗ್ವೇದ ಸಂಬಂಧಿ ಬಹ್ವೃಚ ಶಾಖೆಯನ್ನು ಧರಿಸಿಕೊಂಡರು. ಈ ವೇದಗಳ ವಿಭಾಜನದ ಇತಿಹಾಸವನ್ನು ಶ್ರವಣಿಸುವ ಮನುಷ್ಯನು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದುವನು. ॥ ೬೦ ॥

ಶೌನಕರೇ ! ವೈಶಂಪಾಯನರಿಗೆ ಚರಕಾಧ್ವರ್ಯು ಎಂಬ ಕೆಲವು ಶಿಷ್ಯರಿದ್ದರು. ಇವರು ತಮ್ಮ ಗುರುಗಳ ಬ್ರಹ್ಮಹತ್ಯಾ ಜನಿತ ಪಾಪದ ಪ್ರಾಯಶ್ಚಿತ್ತಕ್ಕಾಗಿ ಒಂದು ವ್ರತಾನುಷ್ಠಾನ ಮಾಡಿದರು. ಅದರಿಂದ ಅವರಿಗೆ ಚರಕಾಧ್ವರ್ಯು ಎಂಬ ನಾಮಧೇಯ ವಾಯಿತು. ॥ ೬೧ ॥ ವೈಶಂಪಾಯನರ ಓರ್ವ ಶಿಷ್ಯನಾದ ಯಾಜ್ಞ ವಲ್ಕ್ಯಮುನಿಗಳು ತಮ್ಮ ಗುರುಗಳಿಗೆ ಹೇಳಿದರು - ಭಗವಾನ್ ಆಚಾರ್ಯರೇ ! ಈ ಚರಕಾಧ್ವರ್ಯು ಬ್ರಾಹ್ಮಣರು ಅಲ್ಪಶಕ್ತಿ ಯುಳ್ಳವರು. ಇವರ ವ್ರತಪಾಲನೆಯಿಂದ ಲಾಭವು ಅಷ್ಟಕಷ್ಟೆ. ನಾನು ತಮ್ಮ ಪ್ರಾಯಶ್ಚಿತ್ತಕ್ಕಾಗಿ, ಅತ್ಯಂತ ಕಠಿಣವಾದ ತಪಸ್ಸನ್ನು ಮಾಡುವೆನು. ॥ ೬೨ ॥ ಯಾಜ್ಞವಲ್ಕ್ಯರ ಈ ಮಾತನ್ನು ಕೇಳಿದ ವೈಶಂಪಾಯನರಿಗೆ ಸಿಟ್ಟು ಬಂದು ಹೇಳಿದರು - ಸಾಕು, ಸಾಕು ! ಸುಮ್ಮನಿರು ! ಬ್ರಾಹ್ಮಣರನ್ನು ಅಪಮಾನ ಮಾಡುವ ನಿನ್ನಂತಹ

ಇತ್ಯುಕ್ತೋ ಗುರುರಪ್ಯಾಹ ಕುಪಿತೋ ಯಾಹ್ಯಲಂ ತ್ವಯಾ ।
ವಿಪ್ರಾವಮಂತ್ರಾ ಶಿಷ್ಯೇಣ ಮದಧೀತಂ ತ್ಯಜಾಶ್ವಿತಿ
॥ ೬೩ ॥

ದೇವರಾತಸುತಃ ಸೋಽಪಿ ಚ್ಛರ್ದಿತ್ವಾ ಯಜುಷಾಂ ಗಣಮ್ ।
ತತೋ ಗತೋಽಥ ಮುನಯೋ ದದೃಶುಸ್ತಾನ್ಯಜುರ್ಗಣಾನ್
॥ ೬೪ ॥

ಯಜೂಂಷಿ ತಿತ್ತಿರಾ ಭೂತ್ವಾ ತಲ್ಲೋಲುಪತಯಾऽऽದದುಃ ।
ತೈತ್ತಿರೀಯಾ ಇತಿ ಯಜುಃಶಾಖಾ ಆಸನ್ಸುಮೇಧಸಾಮ್
॥ ೬೫ ॥

ಯಾಜ್ಞವಲ್ಕ್ಯಸ್ತತೋ ಬ್ರಹ್ಮನ್ಛಂದಾಂಸ್ಯಧಿಗವೇಷಯನ್ ।
ಗುರೋರವಿದ್ಯಮಾನಾನಿ ಸೂಪತಸ್ಥೇऽರ್ಕಮೀಶ್ವರಮ್
॥ ೬೬ ॥

ಯಾಜ್ಞವಲ್ಕ್ಯ ಉವಾಚ

ಓಂ ನಮೋ ಭಗವತೇ ಆದಿತ್ಯಾಯಾಖಿಲಜಗತಾಮಾತ್ಮಸ್ವರೂಪೇಣ ಕಾಲಸ್ವರೂಪೇಣ ಚತುರ್ವಿಧಭೂತನಿಕಾಯಾನಾಂ ಬ್ರಹ್ಮಾದಿಸ್ತಂಬಪರ್ಯಂತಾನಾಮಂತರ್ಹೃದಯೇಷು ಬಹಿರಪಿ ಚಾಕಾಶ ಇವೋಪಾಧಿನಾವ್ಯವಧೀಯಮಾನೋ ಭವಾನೇಕ ಏವ ಕ್ಷಣಲವನಿಮೇಷಾವಯವೋಪಚಿತಸಂವತ್ಸರಗಣೇನಾಪಾಮಾದಾನವಿಸರ್ಗಾಭ್ಯಾಮಿಮಾಂ ಲೋಕಯಾತ್ರಾಮನುವಹತಿ ॥ ೬೭ ॥

ಯದು ಹ ವಾವ ವಿಬುಧರ್ಷಭ ಸವಿತರದಸ್ತಪತ್ಯನುಸವನಮಹರಹರಾಮ್ನಾಯವಿಧಿನೋಪತಿಷ್ಠಮಾನಾನಾಮಖಿಲದುರಿತವೃಜಿನಬೀಜಾವಭರ್ಜನ, ಭಗವತಃ ಸಮಭಿಧೀಮಹಿ ತಪನಮಂಡಲಮ್ ॥ ೬೮ ॥

ಯ ಇಹ ವಾವ ಸ್ಥಿರಚರನಿಕರಾಣಾಂ ನಿಜನಿಕೇತನಾನಾಂ ಮನಇಂದ್ರಿಯಾಸುಗಣಾನಾತ್ಮನಃ ಸ್ವಯಮಾತ್ಮಾಂತರ್ಯಾಮೀ ಪ್ರಚೋದಯತಿ ॥ ೬೯ ॥

ಶಿಷ್ಯರ ಆವಶ್ಯಕತೆ ನನಗಿಲ್ಲ ನೋಡು; ಇಂದಿನವರೆಗೆ ನನ್ನಿಂದ ಅಧ್ಯಯನ ಮಾಡಿದ್ದೆಲ್ಲವನ್ನು ಈಗಿಂದೀಗಲೇ ತ್ಯಾಗಮಾಡಿ ಇಲ್ಲಿಂದ ಹೊರಟುಹೋಗು. ॥ ೬೩. ॥ ದೇವರಾತರ ಪುತ್ರರಾದ ಯಾಜ್ಞವಲ್ಕ್ಯರು ಗುರುಗಳು ಹೀಗೆ ಆಪ್ಪಣೆ ಕೊಡುತ್ತಲೇ ಅವರಿಂದ ಕಲಿತ ಯಜುರ್ವೇದವನ್ನು ವಾಂತಿಮಾಡಿ ಅಲ್ಲಿಂದ ಹೊರಟು ಹೋದರು. ಯಾಜ್ಞವಲ್ಕ್ಯರಿಂದ ವಾಂತಿ ಮಾಡಿದ ಯಜುರ್ವೇದದ ಮಂತ್ರಸಮೂಹವನ್ನು ಕಂಡು ಕೆಲವು ಋಷಿಗಳಿಗೆ ಅದನ್ನು ಗ್ರಹಿಸಬೇಕೆಂಬ ಆಸೆಯುಂಟಾಯಿತು. ಆದರೆ ಬ್ರಾಹ್ಮಣರಾಗಿದ್ದು ವಮನಮಾಡಿದ ಮಂತ್ರಗಳನ್ನು ಹೇಗೆ ಗ್ರಹಿಸುವುದು ಎಂದು ಯೋಚಿಸಿ ಅವರು ತಿತ್ತರಿಪಕ್ಷಿಗಳಾಗಿ ಆ ಸಂಹಿತೆಯನ್ನು ಸೇವಿಸಿದರು. ಇದರಿಂದ ಯಜುರ್ವೇದದ ಪರಮ ರಮಣೀಯವಾದ ಆ ಶಾಖೆಯು ತೈತ್ತರೀಯ ಎಂಬುದಾಗಿ ಪ್ರಸಿದ್ಧವಾಯಿತು. ॥ ೬೪-೬೫ ॥ ಶೌನಕರೇ! ಆಗ ಯಾಜ್ಞವಲ್ಕ್ಯರು ನನ್ನ ಗುರುಗಳ ಬಳಿಯೂ ಇಲ್ಲದಂತಹ ಶ್ರುತಿಗಳನ್ನು ಪಡೆದುಕೊಳ್ಳಬೇಕೆಂದು ಯೋಚಿಸಿದರು. ಅದಕ್ಕೆ ಅವರು ಸೂರ್ಯನಾರಾಯಣನ ಉಪಸ್ಥಾನ ಮಾಡತೊಡಗಿದರು.॥೬೬॥

ಯಾಜ್ಞವಲ್ಕ್ಯರು ಹೀಗೆ ಸ್ತೋತ್ರಮಾಡುತ್ತಾರೆ - ಓಂಕಾರ ಸ್ವರೂಪನಾದ ಭಗವಂತನಾದ ಆದಿತ್ಯನಿಗೆ ನಮಸ್ಕಾರ ಮಾಡುತ್ತೇನೆ. ನೀನು ಸಂಪೂರ್ಣ ಜಗತ್ತಿಗೆ ಆತ್ಮನೂ, ಕಾಲಸ್ವರೂಪನೂ ಆಗಿರುವೆ. ಬ್ರಹ್ಮನಿಂದ ಹಿಡಿದು ತೃಣದವರೆಗೆ ಇರುವ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜ ಎಂಬ ನಾಲ್ಕು ಪ್ರಕಾರ ಪ್ರಾಣಿಗಳೆಲ್ಲರ ಹೃದಯಾಕಾಶದಲ್ಲಿ ಮತ್ತು ಹೊರಗೆ ಆಕಾಶದಂತೆ ವ್ಯಾಪಿಸಿಕೊಂಡಿದ್ದರೂ ನೀನು ಉಪಾಧಿಗಳ ಧರ್ಮಗಳಿಂದ ಅಸಂಗನಾಗಿರುವ ಅದ್ವಿತೀಯ ಭಗವಂತನಾಗಿರುವೆ. ನೀನೇ ಕ್ಷಣ, ಲವ, ನಿಮೇಷ ಮುಂತಾದ ಅವಯವಗಳಿಂದ ಸಂಘಟಿತ ಸಂವತ್ಸರಗಳ ಮೂಲಕ ಹಾಗೂ ನೀರಿನ ಆಕರ್ಷಣ-ವಿಕರ್ಷಣ, ಆದಾನ-ಪ್ರದಾನದ ಮೂಲಕ ಸಮಸ್ತ ಲೋಕಗಳ ಜೀವನ ಯಾತ್ರೆಯನ್ನು ನಡೆಸುತ್ತಿರುವೆ. ॥ ೬೭ ॥ ಪ್ರಭುವೇ! ನೀನು ಸಮಸ್ತ ದೇವತೆಗಳಲ್ಲಿ ಶ್ರೇಷ್ಠನಾಗಿರುವೆ. ಪ್ರತಿನಿತ್ಯ ಮೂರು ಹೊತ್ತುಗಳಲ್ಲಿ ವೇದವಿಧಿಯಿಂದ ನಿನ್ನನ್ನು ಉಪಾಸನೆ ಮಾಡುವವರ ಸಮಸ್ತ ಪಾಪಗಳನ್ನೂ, ದುಃಖಿಗಳನ್ನೂ ಬೀಜಸಹಿತ ನೀನು ಭಸ್ಮ ಮಾಡಿಬಿಡುತ್ತೀಯೆ. ಸೂರ್ಯದೇವನೇ! ನೀನೇ ಎಲ್ಲ ಸೃಷ್ಟಿಯ ಮೂಲಕಾರಣನೂ, ಸಮಸ್ತ ಐಶ್ವರ್ಯಗಳ ಒಡೆಯನೂ ಆಗಿರುವೆ. ಆದಕ್ಕಾಗಿ ನಾನು ನಿನ್ನ ಈ ತೇಜೋಮಯ ಮಂಡಲವನ್ನು ಪೂರ್ಣ ಏಕಾಗ್ರತೆಯಿಂದ ಧ್ಯಾನಿಸುತ್ತೇನೆ. ॥ ೬೮ ॥ ನೀನೇ ಎಲ್ಲರ ಆತ್ಮನೂ, ಅಂತರ್ಯಾಮಿಯೂ ಆಗಿರುವೆ. ಜಗತ್ತಿನಲ್ಲಿರುವ ಚರಾಚರಪ್ರಾಣಿಗಳೆಲ್ಲವೂ ನಿನ್ನಲ್ಲೇ ಆಶ್ರಿತರಾಗಿರುವರು. ನೀನೇ ಅವರ ಅಚೇತನವಾದ ಮನಸ್ಸಿಗೂ, ಇಂದ್ರಿಯಗಳಿಗೂ, ಪ್ರಾಣಗಳಿಗೂ ಪ್ರೇರಕನಾಗಿರುವೆ.* ॥ ೬೯ ॥

---

* ೬೭, ೬೮, ೬೯ ಈ ಮೂರೂ ವಾಕ್ಯಗಳಿಂದ ಗಾಯತ್ರೀ ಮಂತ್ರದ 'ತತ್ಸವಿತುರ್ವರೇಣ್ಯಮ್' 'ಭರ್ಗೋದೇವಸ್ಯ ಧೀಮಹಿ' 'ಧಿಯೋ ಯೋ ನಃ ಪ್ರಚೋದಯಾತ್' ಈ ಮೂರು ಚರಣಗಳ ವ್ಯಾಖ್ಯೆ ಮಾಡುತ್ತಾ ಭಗವಾನ್ ಸೂರ್ಯನನ್ನು ಸ್ತುತಿಸಲಾಗಿದೆ.

ಯ ಏವೇಮಂ ಲೋಕಮತಿಕರಾಲವದನಾಂಧಕಾರ-
ಸಂಜ್ಞಾಜಗರಗ್ರಹಗಿಲಿತಂ ಮೃತಕಮಿವ ವಿಚೇತನಮವ-
ಲೋಕ್ಯಾನುಕಂಪಯಾ ಪರಮಕಾರುಣಿಕ ಈಕ್ಷಯೈ-
ವೋತ್ಥಾಪ್ಯಾಹರಹರನುಸವನಂ ಶ್ರೇಯಸಿ ಸ್ವಧರ್ಮಾ-
ಖ್ಯಾತ್ಮವಸ್ಥಾನೇ ಪ್ರವರ್ತಯತ್ಯವನಿಪತಿರಿವಾಸಾಧೂನಾಂ
ಭಯಮುದೀರಯನ್ನಟತಿ ॥ ೭೦ ॥

ಪರಿತ ಆಶಾಪಾಲೈಸ್ತತ್ರ ತತ್ರ ಕಮಲಕೋಶಾಂಜಲಿ-
ಭಿರುಪಹೃತಾರ್ಹಣಃ ॥ ೭೧ ॥

ಅಥ ಹ ಭಗವಂಸ್ತವ ಚರಣನಲಿನಯುಗಲಂ ತ್ರಿಭುವನ-
ಗುರುಭಿರ್ವಂದಿತಮಹಮಯಾತಯಾಮಯಜುಃಕಾಮ
ಉಪಸರಾಮೀತಿ ॥ ೭೨ ॥

ಸೂತ ಉವಾಚ

ಏವಂ ಸ್ತುತಃ ಸ ಭಗವಾನ್ ವಾಜಿರೂಪಧರೋ ಹರಿಃ ।
ಯಜೂಂಷ್ಯಯಾತಯಾಮಾನಿ ಮುನಯೇಽದಾತ್ಪ್ರಸಾದಿತಃ
॥ ೭೩ ॥

ಯಜುರ್ಭಿರಕರೋಚ್ಛಾಖಾ ದಶಪಂಚ ಶತೈರ್ವಿಭುಃ ।
ಜಗೃಹುರ್ವಾಜಸನ್ಯಸ್ತಾಃ ಕಾಣ್ವಮಾಧ್ಯಂದಿನಾದಯಃ
॥ ೭೪ ॥

ಜೈಮಿನೇಃ ಸಾಮಗಸ್ಯಾಸೀತ್ಸುಮಂತುಸ್ತನಯೋ ಮುನಿಃ ।
ಸುನ್ವಾಂಸ್ತು ತತ್ಸುತಸ್ತಾಭ್ಯಾಮೇಕೈಕಾಂ ಪ್ರಾಹ ಸಂಹಿತಾಮ್
॥ ೭೫ ॥

ಸುಕರ್ಮಾ ಚಾಪಿ ತಚ್ಛಿಷ್ಯಃ ಸಾಮವೇದತರೋರ್ಮಹಾನ್ ।
ಸಹಸ್ರಸಂಹಿತಾಭೇದಂ ಚಕ್ರೇ ಸಾಮ್ನಾಂ ತತೋ ದ್ವಿಜಃ
॥ ೭೬ ॥

ಹಿರಣ್ಯನಾಭಃ ಕೌಸಲ್ಯಃ ಪೌಷ್ಯಂಜಿಶ್ಚ ಸುಕರ್ಮಣಃ ।
ಶಿಷ್ಯೌ ಜಗೃಹತುಶ್ಚಾನ್ಯ ಆವಂತ್ಯೋ ಬ್ರಹ್ಮವಿತ್ತಮಃ
॥ ೭೭ ॥

ಉದೀಚ್ಯಾಃ ಸಾಮಗಾಃ ಶಿಷ್ಯಾ ಆಸನ್ ಪಂಚಶತಾನಿ ವೈ ।
ಪೌಷ್ಯಂಜ್ಯಾವಂತ್ಯಯೋಶ್ಚಾಪಿ ತಾಂಶ್ಚ ಪ್ರಾಚ್ಯಾನ್ಪ್ರಚಕ್ಷತೇ
॥ ೭೮ ॥

ಈ ಲೋಕವು ಪ್ರತಿದಿನವೂ ಕಗ್ಗತ್ತಲೆಯೆಂಬ ಹೆಬ್ಬಾವಿನ ವಿಕರಾಳ ಬಾಯಿಗೆ ಸಿಲುಕಿ ಅಚೇತನವಾಗಿ ಶವದಂತೆ ಆಗಿಬಿಡುವುದು. ಪರಮ ಕರುಣಾಸ್ವರೂಪನಾದ ನೀನು ಅದರ ಮೇಲೆ ಕೃಪೆದೋರಿ ಇದನ್ನು ದೃಷ್ಟಿಮಾತ್ರದಿಂದ ಸಚೇತನವಾಗಿಸಿ ಬಿಡುತ್ತೀಯೆ. ಸಮಯ-ಸಮಯದಲ್ಲಿ ಪರಮಕಲ್ಯಾಣ ಸಾಧನವಾದ ಧರ್ಮಾನುಷ್ಠಾನದಲ್ಲಿ ತೊಡಗಿಸಿ ಆತ್ಮಾಭಿಮುಖವಾಗಿಸುವೆ. ರಾಜನಾದವನು ದುಷ್ಟರನ್ನು ಭಯಪಡಿಸುತ್ತಾ ತನ್ನ ರಾಜ್ಯದಲ್ಲಿ ಸಂಚರಿಸುವಂತೆಯೇ ನೀನೂ ಚೋರರು-ಜಾರರು ಮುಂತಾದ ದುಷ್ಟರನ್ನು ಭಯಪಡಿಸುತ್ತಾ ಸಂಚಾರಮಾಡುತ್ತಿರುವೆ. ॥ ೭೦ ॥ ನಾಲ್ಕೂ ದಿಕ್ಕುಗಳಲ್ಲಿಯೂ ಎಲ್ಲ ದಿಕ್ಪಾಲಕರು ತಮ್ಮ-ತಮ್ಮ ಸ್ಥಾನದಲ್ಲಿ ಕಮಲದ ಮೊಗ್ಗಿನಂತಿರುವ ತಮ್ಮ ಅಂಜಲಿಗಳಿಂದ ನಿನಗೆ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ॥ ೭೧ ॥ ಭಗವಂತನೇ ! ನಿನ್ನ ಎರಡು ಆಡಿದಾವರೆಗಳೂ ಮೂರು ಲೋಕಗಳಿಗೂ ಗುರುಗಳಂತೆ ಇರುವ ಮಹಾತ್ಮರಿಂದ ವಂದಿತವಾಗಿವೆ. ನನಗೆ ಇಲ್ಲಿಯವರೆಗೆ ಯಾರಿಗೂ ದೊರೆಯದಿರುವ ಯಜುರ್ವೇದವು ದೊರೆಯಲಿ. ಅದಕ್ಕಾಗಿ ನಾನು ನಿನ್ನ ಚರಣಕಮಲ ಯುಗಳಗಳಲ್ಲಿ ಶರಣು ಬಂದಿರುವೆನು. ॥ ೭೨ ॥

ಸೂತಪುರಾಣಿಕರು ಹೇಳುತ್ತಾರೆ - ಶೌನಕಾದಿ ಋಷಿಗಳಿರಾ ! ಯಾಜ್ಞವಲ್ಕ್ಯ ಮುನಿಗಳು ಭಗವಾನ್ ಸೂರ್ಯನನ್ನು ಈ ಪ್ರಕಾರವಾಗಿ ಸ್ತುತಿಸಿದಾಗ, ಅವನು ಪ್ರಸನ್ನನಾಗಿ ಅವರೆದುರಿಗೆ ಅಶ್ವರೂಪದಿಂದ ಪ್ರಕಟನಾಗಿ ಅವನಿಗೆ ಯಜುರ್ವೇದ ಮಂತ್ರಗಳನ್ನು ಉಪದೇಶಿಸಿದನು. ಅವು ಅಂದಿನವರೆಗೆ ಯಾರಿಗೂ ದೊರೆತಿರಲಿಲ್ಲ ॥ ೭೩. ॥ ಅನಂತರ ಯಾಜ್ಞವಲ್ಕ್ಯ ಮುನಿಗಳು ಯಜುರ್ವೇದದ ಅಸಂಖ್ಯ ಮಂತ್ರಗಳಿಂದ ಅದರ ಹದಿನೈದು ಶಾಖೆಗಳನ್ನು ರಚಿಸಿದರು. ಅವು ವಾಜಸನೇಯ ಶಾಖೆಯೆಂದು ಪ್ರಸಿದ್ಧವಾಗಿದೆ. ಅವನ್ನು ಕಣ್ವ, ಮಾಧ್ಯಂದಿನ ಮೊದಲಾದ ಋಷಿಗಳು ಗ್ರಹಣಮಾಡಿದರು. ॥ ೭೪ ॥

ಮಹರ್ಷಿಗಳಾದ ಶ್ರೀಕೃಷ್ಣದ್ವೈಪಾಯನರು ಜೈಮಿನಿ ಮುನಿಗೆ ಸಾಮಸಂಹಿತೆಯನ್ನು ಅಧ್ಯಯನ ಮಾಡಿಸಿದ್ದರೆಂದು ನಾನು ಮೊದಲು ನಿಮಗೆ ಹೇಳಿದ್ದೆ. ಅವನು ಪುತ್ರನಾದ ಸುಮಂತುವಿಗೆ, ಪೌತ್ರನಾದ ಸುನ್ವಂತರಿಗೆ ಒಂದೊಂದು ಸಂಹಿತೆಯನ್ನು ಹೇಳಿಕೊಟ್ಟನು. ॥ ೭೫ ॥ ಜೈಮಿನಿ ಮುನಿಗಳಿಗೆ ಓರ್ವ ಮಹಾಪುರುಷನಾದ ಸುಕರ್ಮಾ ಎಂಬ ಶಿಷ್ಯನಿದ್ದನು. ಒಂದು ಮರಕ್ಕೆ ಅನೇಕ ಕೊಂಬೆಗಳಿರುವಂತೆಯೇ ಸುಕರ್ಮನು ಸಾಮವೇದಕ್ಕೆ ಒಂದು ಸಾವಿರ ಸಂಹಿತೆಗಳನ್ನು ರಚಿಸಿದನು. ॥ ೭೬ ॥ ಸುಕರ್ಮನ ಶಿಷ್ಯರಾದ ಕೋಸಲದೇಶನಿವಾಸಿ ಹಿರಣ್ಯನಾಭ, ಪೌಷ್ಯಂಜಿ ಮತ್ತು ಬ್ರಹ್ಮವೇತ್ತರಲ್ಲಿ ಶ್ರೇಷ್ಠರಾದ ಆವಂತ್ಯರು ಆ ಶಾಖೆಗಳನ್ನು ಗ್ರಹಿಸಿದರು. ॥ ೭೭ ॥ ಪೌಷ್ಯಂಜಿ ಮತ್ತು ಆವಂತ್ಯರಿಗೆ ಐದುನೂರು ಶಿಷ್ಯರಿದ್ದರು. ಅವರು ಉತ್ತರ ದೇಶನಿವಾಸಿಗಳಾದ್ದರಿಂದ ಔದೀಚ್ಯ ಸಾಮವೇದಿಗಳೆನಿಸಿದರು. ಇವರನ್ನು ಪ್ರಾಚ್ಯ ಸಾಮವೇದಿಗಳೆಂದೂ ಹೇಳುತ್ತಾರೆ. ಅವರು ಒಂದೊಂದು ಸಂಹಿತೆಯನ್ನು ಅಧ್ಯಯನ ಮಾಡಿದರು. ॥ ೭೮ ॥

ಲೌಗಾಕ್ಷಿರ್ಮಾಂಗಲಿಃ ಕುಲ್ಯಃ ಕುಸೀದಃ ಕುಕ್ಷಿರೇವ ಚ।
ಪೌಷ್ಯಂಜಿಶಿಷ್ಯಾ ಜಗೃಹುಃ ಸಂಹಿತಾಸ್ತೇ ಶತಂ ಶತಮ್
॥ ೭೯ ॥

ಕೃತೋ ಹಿರಣ್ಯನಾಭಸ್ಯ ಚತುರ್ವಿಂಶತಿಸಂಹಿತಾಃ।
ಶಿಷ್ಯ ಊಚೇ ಸ್ವಶಿಷ್ಯೇಭ್ಯಃ ಶೇಷಾ ಆವಂತ್ಯ ಆತ್ಮವಾನ್
॥ ೮೦ ॥

ಪೌಷ್ಯಂಜಿಗೆ ಲೌಗಾಕ್ಷಿ, ಮಾಂಗಲಿ, ಕುಲ್ಯ, ಕುಸೀದ ಮತ್ತು ಕುಕ್ಷಿ ಮೊದಲಾದ ಇನ್ನೂ ಶಿಷ್ಯರಿದ್ದರು. ಇವರಲ್ಲಿ ಪ್ರತಿಯೊಬ್ಬನೂ ನೂರು-ನೂರು ಸಂಹಿತೆಗಳನ್ನು ಅಧ್ಯಯನ ಮಾಡಿದರು. ॥ ೭೯॥ ಹಿರಣ್ಯನಾಭನ ಶಿಷ್ಯನಾದ ಕೃತನು ತಮ್ಮ ಶಿಷ್ಯರಿಗೆ ಇಪ್ಪತ್ತನಾಲ್ಕು ಸಂಹಿತೆಗಳನ್ನು ಹೇಳಿಕೊಟ್ಟನು. ಉಳಿದ ಸಂಹಿತೆಗಳನ್ನು ಪರಮಸಂಯಮಿ ಆವಂತ್ಯನು ತಮ್ಮ ಶಿಷ್ಯರಿಗೆ ಕೊಟ್ಟನು. ಈ ಪ್ರಕಾರ ಸಾಮವೇದದ ವಿಸ್ತಾರವಾಯಿತು. ॥ ೮೦॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ
ವೇದಶಾಖಾಪ್ರಣಯನಂ ನಾಮ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಅಥರ್ವವೇದದ ಶಾಖೆಗಳು ಮತ್ತು ಪುರಾಣಗಳ ಲಕ್ಷಣ

ಸೂತ ಉವಾಚ

ಅಥರ್ವವಿತ್ಸುಮಂತುಶ್ಚ ಶಿಷ್ಯಮಧ್ಯಾಪಯತ್ ಸ್ವಕಾಮ್।
ಸಂಹಿತಾಂ ಸೋಽಪಿ ಪಥ್ಯಾಯ ವೇದದರ್ಶಾಯ ಚೋಕ್ತವಾನ್
॥ ೧ ॥

ಶೌಕ್ಲಾಯನಿರ್ಬ್ರಹ್ಮಬಲಿರ್ಮೋದೋಷಃ ಪಿಪ್ಪಲಾಯನಿಃ।
ವೇದದರ್ಶಸ್ಯ ಶಿಷ್ಯಾಸ್ತೇ ಪಥ್ಯಶಿಷ್ಯಾನಥೋ ಶೃಣು
॥ ೨ ॥

ಕುಮುದಃ ಶುನಕೋ ಬ್ರಹ್ಮನ್ ಜಾಜಲಿಶ್ಚಾಥರ್ವವಿತ್।
ಬಭ್ರುಃ ಶಿಷ್ಯೋಽಥಾಂಗಿರಸಃ ಸೈಂಧವಾಯನ ಏವ ಚ।
ಅಧೀಯೇತಾಂ ಸಂಹಿತೇ ದ್ವೇ ಸಾವರ್ಣ್ಯಾದ್ಯಾಸ್ತಥಾಪರೇ
॥ ೩ ॥

ನಕ್ಷತ್ರಕಲ್ಪಃ ಶಾಂತಿಶ್ಚ ಕಶ್ಯಪಾಂಗಿರಸಾದಯಃ।
ಏತೇ ಆಥರ್ವಣಾಚಾರ್ಯಾಃ ಶೃಣು ಪೌರಾಣಿಕಾನ್ಮುನೇ
॥ ೪ ॥

ತ್ರಯ್ಯಾರುಣಿಃ ಕಶ್ಯಪಶ್ಚ ಸಾವರ್ಣಿರಕೃತವ್ರಣಃ।
ವೈಶಂಪಾಯನಹಾರೀತೌ ಷಡ್ವೈ ಪೌರಾಣಿಕಾ ಇಮೇ
॥ ೫ ॥

ಅಧೀಯಂತ ವ್ಯಾಸಶಿಷ್ಯಾತ್ಸಂಹಿತಾಂ ಮತ್ಪಿತುರ್ಮುಖಾತ್।
ಏಕೈಕಾಮಹಮೇತೇಷಾಂ ಶಿಷ್ಯಃ ಸರ್ವಾಃ ಸಮಧ್ಯಗಾಮ್
॥ ೬ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಅಥರ್ವವೇದವನ್ನು ಸುಮಂತುವು ಅಧ್ಯಯನ ಮಾಡಿದ್ದನು ಎಂದು ಹೇಳಿದ್ದೆನಷ್ಟೆ ಅವನು ಅಥರ್ವ ಸಂಹಿತೆಯನ್ನು ತನ್ನ ಶಿಷ್ಯನಾದ ಕಬಂಧನಿಗೆ ಹೇಳಿಕೊಟ್ಟರು. ಕಬಂಧಕನು ಆ ಸಂಹಿತೆಯನ್ನು ಎರಡು ಭಾಗಗಳಾಗಿಸಿ ಪಥ್ಯ ಮತ್ತು ವೇದದರ್ಶರಿಗೆ ಅದನ್ನು ಅಧ್ಯಯನ ಮಾಡಿಸಿದನು. ॥ ೧ ॥ ವೇದದರ್ಶನಿಗೆ ಶೌಕ್ಲಾಯನಿ, ಬ್ರಹ್ಮಬಲಿ, ಮೊದೋಷ ಮತ್ತು ಪಿಪ್ಪಲಾಯನಿ ಎಂಬ ನಾಲ್ಕು ಶಿಷ್ಯರಿದ್ದರು. ಈಗ ಪಥ್ಯರ ಶಿಷ್ಯರ ಹೆಸರನ್ನು ಕೇಳಿರಿ. ॥ ೨ ॥ ಶೌನಕರೇ! ಪಥ್ಯನಿಗೆ ಕುಮುದ, ಶುನಕ, ಅಥರ್ವವೇತ್ತಾ ಜಾಜಲಿ ಎಂಬ ಮೂವರು ಶಿಷ್ಯರಿದ್ದರು. ಆಂಗಿರಸ ಗೋತ್ರೋತ್ಪನ್ನ ಶುನಕನಿಗೆ ಬಭ್ರು ಮತ್ತು ಸೈಂಧವಾಯನರೆಂಬ ಇಬ್ಬರು ಶಿಷ್ಯರಿದ್ದರು, ಅವರು ಎರಡು ಸಂಹಿತೆಗಳನ್ನು ಅಧ್ಯಯನ ಮಾಡಿದರು. ಅಥರ್ವವೇದದ ಆಚಾರ್ಯರಲ್ಲಿ ಇವರಲ್ಲದೆ ಸೈಂಧವಾಯನಾದಿಗಳ ಶಿಷ್ಯರು ಸಾವರ್ಣ್ಯ ಮುಂತಾದವರು ಹಾಗೂ ನಕ್ಷತ್ರಕಲ್ಪ ಶಾಂತಿ, ಕಶ್ಯಪ ಆಂಗೀರಸ ಮೊದಲಾದ ಅನೇಕ ವಿದ್ವಾಂಸರು ಇನ್ನೂ ಆಗಿ ಹೋಗಿರುವರು. ಈಗ ನಾನು ಪೌರಾಣಿಕರ ಕುರಿತು ಹೇಳುವೆನು ಕೇಳಿರಿ. ॥ ೩-೪ ॥

ಶೌನಕರೇ! ತ್ರಯ್ಯಾರುಣಿ, ಕಶ್ಯಪ, ಸಾವರ್ಣಿ, ಅಕೃತವ್ರಣ, ವೈಶಂಪಾಯನ ಮತ್ತು ಹಾರೀತ ಈ ಆರು ಮಂದಿ ಪುರಾಣಗಳ ಪ್ರಸಿದ್ಧ ಆಚಾರ್ಯರು. ॥ ೫ ॥ ಇವರೆಲ್ಲರೂ ನನ್ನ ತಂದೆಯಿಂದ ಒಂದೊಂದು ಪುರಾಣಸಂಹಿತೆಯನ್ನು ಅಧ್ಯಯನ ಮಾಡಿದ್ದರು. ನನ್ನ ತಂದೆಯಾದರೋ ಸಾಕ್ಷಾತ್ ಮಹರ್ಷಿ ವೇದವ್ಯಾಸರಿಂದ ಆ ಎಲ್ಲ ಸಂಹಿತೆಗಳನ್ನು ಅಧ್ಯಯನ ಮಾಡಿದ್ದರು. ನಾನು ಆ ಆರು ಆಚಾರ್ಯರಿಂದ ಎಲ್ಲ ಸಂಹಿತೆಗಳನ್ನು ಅಧ್ಯಯನ ಮಾಡಿದೆನು.॥ ೬ ॥

ಕಶ್ಯಪೋಽಹಂ ಚ ಸಾವರ್ಣೀ ರಾಮಶಿಷ್ಯೋಽಕೃತವ್ರಣಃ ।
ಅಧೀಮಹಿ ವ್ಯಾಸಶಿಷ್ಯಾಚ್ಚತಸ್ರೋ ಮೂಲಸಂಹಿತಾಃ
॥ ೭ ॥

ಪುರಾಣಲಕ್ಷಣಂ ಬ್ರಹ್ಮನ್ ಬ್ರಹ್ಮರ್ಷಿಭಿರ್ನಿರೂಪಿತಮ್ ।
ಶೃಣುಷ್ವ ಬುದ್ಧಿಮಾಶ್ರಿತ್ಯ ವೇದಶಾಸ್ತ್ರಾನುಸಾರತಃ
॥ ೮ ॥

ಸರ್ಗೋಽಸ್ಯಾಥ ವಿಸರ್ಗಶ್ಚ ವೃತ್ತೀ ರಕ್ಷಾಂತರಾಣಿ ಚ ।
ವಂಶೋ ವಂಶಾನುಚರಿತಂ ಸಂಸ್ಥಾ ಹೇತುರಪಾಶ್ರಯಃ
॥ ೯ ॥

ದಶಭಿರ್ಲಕ್ಷಣೈರ್ಯುಕ್ತಂ ಪುರಾಣಂ ತದ್ವಿದೋ ವಿದುಃ ।
ಕೇಚಿತ್ ಪಂಚವಿಧಂ ಬ್ರಹ್ಮನ್ಮಹದಲ್ಪವ್ಯವಸ್ಥಯಾ
॥ ೧೦ ॥

ಅವ್ಯಾಕೃತಗುಣಕ್ಷೋಭಾನ್ಮಹತಸ್ತ್ರಿವೃತೋಽಹಮಃ ।
ಭೂತಮಾತ್ರೇಂದ್ರಿಯಾರ್ಥಾನಾಂ ಸಂಭವಃ ಸರ್ಗ ಉಚ್ಯತೇ
॥ ೧೧ ॥

ಪುರುಷಾನುಗೃಹೀತಾನಾಮ್ ಏತೇಷಾಂ ವಾಸನಾಮಯಃ ।
ವಿಸರ್ಗೋಽಯಂ ಸಮಾಹಾರೋ ಬೀಜಾದ್ಬೀಜಂ ಚರಾಚರಮ್
॥ ೧೨ ॥

ವೃತ್ತಿರ್ಭೂತಾನಿ ಭೂತಾನಾಂ ಚರಾಣಾಮಚರಾಣಿ ಚ ।
ಕೃತಾ ಸ್ವೇನ ನೃಣಾಂ ತತ್ರ ಕಾಮಾಚ್ಚೋದನಯಾಪಿ ವಾ
॥ ೧೩ ॥

ರಕ್ಷಾಚ್ಯುತಾವತಾರೇಹಾ ವಿಶ್ವಸ್ಯಾನು ಯುಗೇ ಯುಗೇ ।
ತಿರ್ಯಙ್ಮರ್ತ್ಯರ್ಷಿದೇವೇಷು ಹನ್ಯಂತೇ ಯೈಸ್ತ್ರಯೀದ್ವಿಷಃ
॥ ೧೪ ॥

ಮನ್ವಂತರಂ ಮನುರ್ದೇವಾ ಮನುಪುತ್ರಾಃ ಸುರೇಶ್ವರಃ ।
ಋಷಯೋಽಂಶಾವತಾರಶ್ಚ ಹರೇಃ ಷಡ್ವಿಧಮುಚ್ಯತೇ
॥ ೧೫ ॥

ಆ ಆರು ಸಂಹಿತೆಗಳಲ್ಲದೆ ಇನ್ನೂ ನಾಲ್ಕು ಮೂಲ ಸಂಹಿತೆಗಳಿದ್ದವು. ಅವನ್ನೂ ಕೂಡ ಕಶ್ಯಪ, ಸಾವರ್ಣಿ, ಪರಶುರಾಮರಶಿಷ್ಯ ಅಕೃತವ್ರಣ ಅವರೆಲ್ಲರೊಂದಿಗೆ ನಾನು ವೇದವ್ಯಾಸರ ಶಿಷ್ಯರು ನನ್ನ ತಂದೆಯವರೂ ಆದ ರೋಮಹರ್ಷಣರಿಂದ ಅಧ್ಯಯನ ಮಾಡಿದ್ದೆ. ॥ ೭ ॥

ಶೌನಕಾದಿಗಳೇ ! ಮಹರ್ಷಿಗಳು ವೇದ, ಶಾಸ್ತ್ರಗಳಿಗೆ ಅನುಗುಣವಾಗಿ ಪುರಾಣಗಳ ಲಕ್ಷಣಗಳನ್ನು ಹೇಳಿರುವರು. ಈಗ ನೀವೆಲ್ಲ ಸಾವಧಾನವಾಗಿ ಅವುಗಳ ವರ್ಣನೆಯನ್ನು ಕೇಳಿರಿ. ॥ ೮ ॥ ಶೌನಕರೇ ! ಸರ್ಗ, ವಿಸರ್ಗ, ವೃತ್ತಿ, ರಕ್ಷಣೆ, ಮನ್ವಂತರ, ವಂಶ, ವಂಶಾನುಚರಿತ, ಸಂಸ್ಥೆ (ಪ್ರಳಯ) ಹೇತು (ಊತಿ) ಮತ್ತು ಅಪಾಶ್ರಯಗಳೆಂಬ ಪುರಾಣಗಳ ಹತ್ತು ಲಕ್ಷಣಗಳನ್ನು ಪೌರಾಣಿಕರಾದ ವಿದ್ವಾಂಸರು ಹೇಳಿರುವರು. ಕೆಲ-ಕೆಲವು ಆಚಾರ್ಯರು ಪುರಾಣಗಳ ಐದೇ ಲಕ್ಷಣಗಳನ್ನು ತಿಳಿಸುತ್ತಾರೆ. ಎರಡೂ ಸರಿಯಾಗಿಯೇ ಇದೆ. ಏಕೆಂದರೆ, ದೊಡ್ಡ ಪುರಾಣಗಳಲ್ಲಿ ದಶಲಕ್ಷಣಗಳಿರುತ್ತವೆ. ಸಣ್ಣ ಪುರಾಣಗಳಲ್ಲಿ ಐದು. ವಿಸ್ತಾರಮಾಡಿ ಹತ್ತು ಲಕ್ಷಣ ಹೇಳುತ್ತಾರೆ, ಸಂಕ್ಷೇಪದಲ್ಲಿ ಐದು. ॥ ೯-೧೦ ॥ (ಈಗ ಇವುಗಳ ಲಕ್ಷಣಗಳನ್ನು ಕೇಳಿರಿ) ಮೂಲಪ್ರಕೃತಿಯಲ್ಲಿ ಲೀನವಾದ ಗುಣಗಳು ಕ್ಷುಬ್ಧವಾದಾಗ ಮಹತ್ತತ್ವದ ಉತ್ಪತ್ತಿಯಾಗುತ್ತದೆ. ಮಹತ್ತತ್ವದಿಂದ ತಾಮಸ, ರಾಜಸ ಮತ್ತು ವೈಕಾರಿಕ (ಸಾತ್ವಿಕ)ವೆಂಬ ಮೂರು ಅಹಂಕಾರಗಳು ಉಂಟಾಗುತ್ತವೆ. ತ್ರಿವಿಧ ಅಹಂಕಾರಗಳಿಂದಲೇ ಪಂಚತನ್ಮಾತ್ರೆಗಳು, ಇಂದ್ರಿಯಗಳು ಮತ್ತು ವಿಷಯಗಳ ಉತ್ಪತ್ತಿಯಾಗುತ್ತವೆ. ಈ ಉತ್ಪತ್ತಿಯ ಕ್ರಮವನ್ನೇ 'ಸರ್ಗ' ಎಂದು ಹೇಳುತ್ತಾರೆ. ॥ ೧೧ ॥ ಪರಮೇಶ್ವರನ ಅನುಗ್ರಹದಿಂದ ಸೃಷ್ಟಿಯ ಸಾಮರ್ಥ್ಯವನ್ನು ಪಡೆದು ಮಹತ್ತತ್ತ್ವಾದಿ ಜೀವಿಗಳ ಪೂರ್ವಕರ್ಮಗಳನುಸಾರವಾಗಿ ಒಳ್ಳೆಯ-ಕೆಟ್ಟ ವಾಸನೆಗಳ ಪ್ರಧಾನತೆಯಿಂದ ಬೀಜದಿಂದ ಬೀಜವು ಹುಟ್ಟುವಂತೆ ಈ ಚರಾಚರ ಶರೀರಾತ್ಮಕ ಜೀವಿಯ ಉಪಾಧಿಗಳ ಸೃಷ್ಟಿಯನ್ನೇ ವಿಸರ್ಗ ಎಂದು ಹೇಳುತ್ತಾರೆ. ॥ ೧೨ ॥ ಚರ ಪ್ರಾಣಿಗಳ, ಅಚರ ಪದಾರ್ಥಗಳ ಜೀವನ ನಿರ್ವಾಹದ ಸಾಮಗ್ರಿಯು 'ವೃತ್ತಿ'ಯಾಗಿದೆ. ಚರ ಪ್ರಾಣಿಗಳ ದುಗ್ಧಾದಿಗಳು ಜೀವನೋಪಾಯ ಸಾಮಗ್ರಿಯೇ. ಇವುಗಳಲ್ಲಿ ಕೆಲವನ್ನು ಮನುಷ್ಯರು ಸ್ವಾಭಾವಿಕ ಕಾಮನೆಗಳಿಂದ ನಿಶ್ಚಿತಪಡಿಸಿಕೊಂಡರು. ಕೆಲವನ್ನು ಶಾಸ್ತ್ರದ ಆಜ್ಞೆಯಂತೆ ನಿಶ್ಚಿತಪಡಿಸಿದರು. ॥ ೧೩ ॥ ಭಗವಂತನು ಯುಗ-ಯುಗಗಳಲ್ಲಿ ಪಶು-ಪಕ್ಷಿ, ಮನುಷ್ಯ, ಋಷಿ, ದೇವತೆ ಮುಂತಾದ ರೂಪಗಳಲ್ಲಿ ಅವತರಿಸಿ ಅನೇಕ ಲೀಲೆಗಳನ್ನು ಮಾಡುವನು. ಈ ಅವತಾರಗಳಲ್ಲಿ ಅವನು ವೇದಧರ್ಮದ ವಿರೋಧಿಗಳನ್ನು ಸಂಹರಿಸುತ್ತಾನೆ. ಅವನ ಈ ಅವತಾರ ಲೀಲೆಗಳು ವಿಶ್ವದ ರಕ್ಷಣೆಗಾಗಿಯೇ ಇರುತ್ತವೆ. ಅದಕ್ಕಾಗಿ ಇದನ್ನು 'ರಕ್ಷೆ' ಎಂಬು ಹೇಳುತ್ತಾರೆ. ॥ ೧೪ ॥ ಮನುಗಳು, ದೇವತೆಗಳು, ಮನುಪುತ್ರರು, ಇಂದ್ರ, ಸಪ್ತರ್ಷಿಗಳು ಮತ್ತು ಭಗವಂತನ ಅಂಶಾವತಾರಗಳು - ಈ ಆರು ವಿಶೇಷತೆಯಿಂದ ಕೂಡಿದ ಸಮಯಕ್ಕೆ 'ಮನ್ವಂತರ'ವೆಂದು ಹೇಳುತ್ತಾರೆ. ॥ ೧೫ ॥

ರಾಜ್ಞಾಂ ಬ್ರಹ್ಮಪ್ರಸೂತಾನಾಂ ವಂಶಸ್ತ್ರೈಕಾಲಿಕೋऽನ್ವಯಃ ।
ವಂಶಾನುಚರಿತಂ ತೇಷಾಂ ವೃತ್ತಂ ವಂಶಧರಾಶ್ಚ ಯೇ
॥ ೧೬ ॥

ಬ್ರಹ್ಮದೇವರಿಂದ ಆದ ರಾಜರ ಸೃಷ್ಟಿ, ಅವರ ಭೂತ, ಭವಿಷ್ಯ, ವರ್ತಮಾನ ಕಾಲದ ಸಂತಾನ ಪರಂಪರೆಯನ್ನು 'ವಂಶ' ಎಂದು ಹೇಳುತ್ತಾರೆ. ಆ ರಾಜರ ಮತ್ತು ಅವರ ವಂಶದವರ ಚರಿತ್ರೆಗಳನ್ನು 'ವಂಶಾನುಚರಿತ' ಎಂದು ಹೇಳುತ್ತಾರೆ. ॥ ೧೬ ॥

ನೈಮಿತ್ತಿಕಃ ಪ್ರಾಕೃತಿಕೋ ನಿತ್ಯ ಆತ್ಯಂತಿಕೋ ಲಯಃ ।
ಸಂಸ್ಥೇತಿ ಕವಿಭಿಃ ಪ್ರೋಕ್ತಾ ಚತುರ್ಧಾಸ್ಯ ಸ್ವಭಾವತಃ
॥ ೧೭ ॥

ಈ ವಿಶ್ವ ಬ್ರಹ್ಮಾಂಡವು ಸ್ವಾಭಾವಿಕವಾಗಿಯೇ ಪ್ರಳಯವಾಗುತ್ತದೆ. ಆ ಪ್ರಳಯಗಳಲ್ಲಿ ನೈಮಿತ್ತಿಕ, ಪ್ರಾಕೃತಿಕ, ನಿತ್ಯ, ಆತ್ಯಂತಿಕ ಎಂಬ ನಾಲ್ಕು ಭೇದಗಳಿವೆ. ತತ್ತ್ವಜ್ಞರಾದ ವಿದ್ವಾಂಸರು ಇದನ್ನು 'ಸಂಸ್ಥಾ' ಎಂದು ಹೇಳಿರುವರು. ॥ ೧೭ ॥

ಹೇತುರ್ಜೀವೋऽಸ್ಯ ಸರ್ಗಾದೇರವಿದ್ಯಾ ಕರ್ಮಕಾರಕಃ ।
ಯಂ ಚಾನುಶಯಿನಂ ಪ್ರಾಹುರವ್ಯಾಕೃತಮುತಾಪರೇ
॥ ೧೮ ॥

ಸರ್ಗ-ವಿಸರ್ಗ ಮುಂತಾದವುಗಳಿಗೆ ಕಾರಣವಾದ ಜೀವನನ್ನೇ ಪುರಾಣಲಕ್ಷಣಗಳಲ್ಲಿ 'ಹೇತು' ಎನಿಸುತ್ತದೆ. ಅಜ್ಞಾನವಶದಿಂದ ಅನೇಕ ಕರ್ಮಕಲಾಪಗಳಲ್ಲಿ ಸಿಕ್ಕಿ ಅಲೆದಾಡುತ್ತಿರುವ ಜೀವವೇ ಈ ಪ್ರಪಂಚ ಸೃಷ್ಟಿಗೆ ಹೇತು (ಕಾರಣ)ವಾಗಿದೆ. ಜೀವಾತ್ಮರಿಗೆ ಕರ್ಮಫಲಗಳನ್ನು ಅನುಭವಿಸಲಿಕ್ಕಾಗಿಯೇ ಪ್ರಪಂಚದ ಸೃಷ್ಟಿಯಾಗಿದೆ. (ಸೃಷ್ಟಿಗೆ ಮುಂಚೆ ಜೀವಿಗಳಿಗೆ ದೇವ-ಮನುಷ್ಯಾದಿ ನಾಮರೂಪ ವಿಭಾಗವಿರುವುದಿಲ್ಲ, ಅವು ತಾವು ಹಿಂದೆ ಅನುಭವಿಸಿ ಮಿಕ್ಕಿರುವ ಕರ್ಮವಾಸನೆಯಿಂದ ಮಾತ್ರ ಕೂಡಿರುತ್ತವೆ. ಹಾಗೆ ಕರ್ಮವಾಸನೆಗಳಿಂದ ಕೂಡಿದ ಜೀವವೇ ಸೃಷ್ಟಿಗೆ ಕಾರಣವಾಗುವುದರಿಂದ ಜೀವಗಳು ಹೇತು ಎನಿಸುತ್ತವೆ.) ಇಂತಹ ಜೀವನನ್ನೇ ಕೆಲವರು 'ಅನುಶಯಿ' ಎಂದೂ, ಕೆಲವರು 'ಅವ್ಯಾಕೃತ' ಎಂದೂ ಕರೆಯುತ್ತಾರೆ. ಪ್ರಕೃತಿಯಲ್ಲಿ ಶಯನ ಮಾಡುವ ಚೈತನ್ಯವಾಗಿರುವುದರಿಂದ ಈತನು ಅನುಶಯಿ. ನಾಮರೂಪಗಳಿಗೆ ಒಳಪಡದೇ ಪ್ರಕೃತಿಯಲ್ಲಿ ಬೆರೆತಿರುವಾಗ ಈತನೇ 'ಅವ್ಯಾಕೃತ' ಎನಿಸುತ್ತಾನೆ. ॥ ೧೮ ॥

ವ್ಯತಿರೇಕಾನ್ವಯೋ ಯಸ್ಯ ಜಾಗ್ರತ್ಸ್ವಪ್ನಸುಷುಪ್ತಿಷು ।
ಮಾಯಾಮಯೇಷು ತದ್ಬ್ರಹ್ಮ ಜೀವವೃತ್ತಿಷ್ವಪಾಶ್ರಯಃ
॥ ೧೯ ॥

ಜೀವಿಯ ವೃತ್ತಿಗಳಲ್ಲಿ ಜಾಗ್ರತ, ಸ್ವಪ್ನ ಸುಷುಪ್ತಿಗಳೆಂಬ ಮೂರು ವಿಭಾಗಗಳಿವೆ. ಯಾರು ಈ ಅವಸ್ಥೆಗಳಲ್ಲಿ ಇವುಗಳ ಅಭಿಮಾನಿ ವಿಶ್ವ, ತೈಜಸ, ಪ್ರಾಜ್ಞ ಈ ರೂಪಗಳಿಂದ ಮಾಯೆಯಿಂದ ಕಂಡುಬರುವನೋ, ಈ ಅವಸ್ಥೆಗಳಿಂದ ಪರನಾದ ತುರೀಯತತ್ತ್ವದ ರೂಪದಲ್ಲಿಯೂ ಲಕ್ಷಿತನಾಗುವನೋ ಆ ಬ್ರಹ್ಮ ವಸ್ತುವನ್ನೇ ಇಲ್ಲಿ 'ಅಪಾಶ್ರಯ'ವೆಂದು ಹೇಳಲಾಗಿದೆ. ॥ ೧೯ ॥

ಪದಾರ್ಥೇಷು ಯಥಾ ದ್ರವ್ಯಂ ಸನ್ಮಾತ್ರಂ ರೂಪನಾಮಸು ।
ಬೀಜಾದಿಪಂಚತಾಂತಾಸು ಹ್ಯವಸ್ಥಾಸು ಯುತಾಯುತಮ್
॥ ೨೦ ॥

ಯಾವ ಪ್ರಕಾರ ಬೀಜದಿಂದ ಹಿಡಿದು ನಾಶದವರೆಗೆ (ಉತ್ಪತ್ತಿಯಿಂದ ನಾಶದವರೆಗೆ) ಎಲ್ಲ ಅವಸ್ಥೆಗಳಲ್ಲಿ ನಾನಾ ರೂಪಗಳಲ್ಲಿ ಸತ್‌ರೂಪೀ ದ್ರವ್ಯವೇ ಇದೆಯೋ, ಹಾಗೆಯೇ ಈ ವಿಶ್ವದ ಸೃಷ್ಟಿಯಿಂದ ಪ್ರಳಯದವರೆಗಿನ ಎಲ್ಲ ಅವಸ್ಥೆಗಳಲ್ಲಿ ಪರಮಾತ್ಮ ತತ್ತ್ವವೇ ಇರುವುದು ಮತ್ತು ಅದರಿಂದ ಅತೀತವೂ ಆಗಿರುವುದು. ಅದನ್ನೇ ಆಶ್ರಯ ತತ್ತ್ವವೆಂದು ಹೇಳುತ್ತಾರೆ. ॥ ೨೦ ॥

ವಿರಮೇತ ಯದಾ ಚಿತ್ತಂ ಹಿತ್ವಾ ವೃತ್ತಿತ್ರಯಂ ಸ್ವಯಮ್ ।
ಯೋಗೇನ ವಾ ತದಾऽऽತ್ಮಾನಂ ವೇದೇಹಾಯಾ ನಿವರ್ತತೇ
॥ ೨೧ ॥

ಚಿತ್ತವು ಅತ್ಯವಿಚಾರದ ಅಥವಾ ಯೋಗಾಭ್ಯಾಸದ ಮೂಲಕ ತ್ರಿಗುಣ ಸಂಬಂಧಿ ವ್ಯಾವಹಾರಿಕ ವೃತ್ತಿಗಳನ್ನು ಮತ್ತು ಜಾಗ್ರತ್, ಸ್ವಪ್ನ ಮುಂತಾದ ಸ್ವಾಭಾವಿಕ ವೃತ್ತಿಗಳನ್ನು ತ್ಯಾಗಮಾಡಿ ಉಪರಾಮವಾದಾಗ ಶಾಂತವೃತ್ತಿಯಲ್ಲಿ 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳಿಂದ ಆತ್ಮಜ್ಞಾನದ ಉದಯವಾಗುತ್ತದೆ. ಆ ಸಮಯದಲ್ಲಿ ಆತ್ಮವೇತ್ತನಾದ ಪುರುಷನು ಅಜ್ಞಾನಜನಿತ ಕರ್ಮವಾಸನೆ ಹಾಗೂ ಕರ್ಮ ಪ್ರವೃತ್ತಿಗಳಿಂದ ನಿವೃತ್ತನಾಗಿ ಹೋಗುತ್ತಾನೆ. ॥ ೨೧ ॥

ಏವಂ ಲಕ್ಷಣಲಕ್ಷ್ಯಾಣಿ ಪುರಾಣಾನಿ ಪುರಾವಿದಃ ।
ಮುನಯೋಽಷ್ಟಾದಶ ಪ್ರಾಹುಃ ಕ್ಷುಲ್ಲಕಾನಿ ಮಹಾಂತಿ ಚ
॥ ೨೨ ॥

ಬ್ರಾಹ್ಮಂ ಪಾದ್ಮಂ ವೈಷ್ಣವಂ ಚ ಶೈವಂ ಲೈಂಗಂ ಸಗಾರುಡಮ್ ।
ನಾರದೀಯಂ ಭಾಗವತಮಾಗ್ನೇಯಂ ಸ್ಕಾಂದಸಂಜ್ಞಿತಮ್
॥ ೨೩ ॥

ಭವಿಷ್ಯಂ ಬ್ರಹ್ಮವೈವರ್ತಂ ಮಾರ್ಕಂಡೇಯಂ ಸವಾಮನಮ್ ।
ವಾರಾಹಂ ಮಾತ್ಸ್ಯಂ ಕೌರ್ಮಂ ಚ ಬ್ರಹ್ಮಾಂಡಾಖ್ಯಮಿತಿ ತ್ರಿಷಟ್
॥ ೨೪ ॥

ಬ್ರಹ್ಮನ್ನಿದಂ ಸಮಾಖ್ಯಾತಂ ಶಾಖಾಪ್ರಣಯನಂ ಮುನೇಃ ।
ಶಿಷ್ಯಶಿಷ್ಯಪ್ರಶಿಷ್ಯಾಣಾಂ ಬ್ರಹ್ಮತೇಜೋವಿವರ್ಧನಮ್
॥ ೨೫ ॥

ಶೌನಕಾದಿ ಋಷಿಗಳೇ ! ಪುರಾತತ್ತ್ವವನ್ನು ಬಲ್ಲ ವಿದ್ವಾಂಸರು ಇದೇ ಲಕ್ಷಣಗಳಿಂದ ಪುರಾಣಗಳ ಪರಿಚಯವನ್ನು ಹೇಳಿರುವರು. ಇಂತಹ ಲಕ್ಷಣಗಳಿಂದ ಕೂಡಿದ ಸಣ್ಣ-ದೊಡ್ಡ ಹದಿನೆಂಟು ಪುರಾಣಗಳಿವೆ. ॥ ೨೨ ॥ ಅವುಗಳ ಹೆಸರು ಇಂತಿವೆ - ಬ್ರಹ್ಮಪುರಾಣ, ಪದ್ಮಪುರಾಣ, ವಿಷ್ಣುಪುರಾಣ, ಶಿವಪುರಾಣ, ಲಿಂಗಪುರಾಣ, ಗರುಡಪುರಾಣ, ನಾರದಪುರಾಣ, ಭಾಗವತ ಪುರಾಣ, ಅಗ್ನಿಪುರಾಣ, ಸ್ಕಂದಪುರಾಣ, ಭವಿಷ್ಯಪುರಾಣ, ಬ್ರಹ್ಮ ವೈವರ್ತಪುರಾಣ, ಮಾರ್ಕಂಡೇಯ ಪುರಾಣ, ವಾಮನಪುರಾಣ, ವರಾಹಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ, ಬ್ರಹ್ಮಾಂಡ ಪುರಾಣ - ಹೀಗೆ ಇವು ಹದಿನೆಂಟು. ॥ ೨೩-೨೪ ॥ ಶೌನಕರೇ ! ವೇದವ್ಯಾಸರ ಶಿಷ್ಯಪರಂಪರೆಯವರು ಹೇಗೆ ವೇದಸಂಹಿತೆಗಳನ್ನು ಹಾಗೂ ಪುರಾಣ ಸಂಹಿತೆಗಳನ್ನು ಅಧ್ಯಯನ-ಅಧ್ಯಾಪನ, ವಿಭಾಜನ ಮಾಡಿರುವರೋ ಅದನ್ನು ನಾನು ನಿಮಗೆ ತಿಳಿಸಿರುವೆನು. ಈ ಪ್ರಸಂಗವನ್ನು ಕೇಳುವವರಿಗೆ, ಓದುವವರಿಗೆ ಬ್ರಹ್ಮತೇಜದ ಅಭಿವೃದ್ಧಿಯಾಗುತ್ತದೆ. ॥ ೨೫ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಮಾರ್ಕಂಡೇಯರ ತಪಸ್ಸು ಮತ್ತು ವರಪ್ರಾಪ್ತಿ

ಶೌನಕ ಉವಾಚ

ಸೂತ ಜೀವ ಚಿರಂ ಸಾಧೋ ವದ ನೋ ವದತಾಂ ವರ ।
ತಮಸ್ಯಪಾರೇ ಭ್ರಮತಾಂ ನೃಣಾಂ ತ್ವಂ ಪಾರದರ್ಶನಃ
॥ ೧ ॥

ಆಹುಶ್ಚಿರಾಯುಷಮೃಷಿಂ ಮೃಕಂಡುತನಯಂ ಜನಾಃ ।
ಯಃ ಕಲ್ಪಾಂತೇ ಉರ್ವರಿತೋ ಯೇನ ಗ್ರಸ್ತಮಿದಂ ಜಗತ್
॥ ೨ ॥

ಸ ವಾ ಅಸ್ಮತ್ಕುಲೋತ್ಪನ್ನಃ ಕಲ್ಪೇಽಸ್ಮಿನ್ಭಾರ್ಗವರ್ಷಭಃ ।
ನೈವಾಧುನಾಪಿ ಭೂತಾನಾಂ ಸಂಪ್ಲವಃ ಕೋಽಪಿ ಜಾಯತೇ
॥ ೩ ॥

ಏಕ ಏವಾರ್ಣವೇ ಭ್ರಾಮ್ಯನ್ ದದರ್ಶ ಪುರುಷಂ ಕಿಲ ।
ವಟಪತ್ರಪುಟೇ ತೋಕಂ ಶಯಾನಂ ತ್ವೇಕಮದ್ಭುತಮ್
॥ ೪ ॥

ಶೌನಕರು ಕೇಳಿದರು – ಸಾಧುಶಿರೋಮಣಿಗಳಾದ ಸೂತರೇ ! ನೀವು ಚಿರಕಾಲ ಬಾಳಿರಿ. ವಾಗ್ಮಿಗಳಲ್ಲಿ ವರಿಷ್ಠರಾದವರು ನೀವು. ಅಪಾರವಾದ ಅಜ್ಞಾನಾಂಧಕಾರದಲ್ಲಿ ಅಲೆಯುತ್ತಿರುವ ಜನರನ್ನು ಪಾರುಗಾಣಿಸಿ ಪರಮಾತ್ಮನ ದರ್ಶನಮಾಡಿಸುವ ಮಹಾನುಭಾವರು ನೀವು. ದಯಮಾಡಿ ನನ್ನ ಇದೊಂದು ಪ್ರಶ್ನೆಗೆ ಉತ್ತರವನ್ನು ನೀಡಿರಿ. ॥ ೧ ॥ ಮೃಕಂಡುವಿನ ಪುತ್ರ ಮಾರ್ಕಂಡೇಯ ಮಹರ್ಷಿಯು ಚಿರಂಜೀವಿಗಳೂ, ಜಗತ್ತನ್ನೆಲ್ಲ ನುಂಗಿ ಹಾಕುವ ಪ್ರಳಯಕಾಲದಲ್ಲಿಯೂ ಅವರು ಜೀವಿತರಾಗಿದ್ದರೆಂದೂ ಜನರು ಹೇಳುತ್ತಾರೆ. ॥ ೨ ॥ ಆದರೆ ಸೂತಪುರಾಣಿಕರೇ ! ಅವರಾದರೋ ಇದೇ ಕಲ್ಪದಲ್ಲಿ ನಮ್ಮ ವಂಶದಲ್ಲೇ ಹುಟ್ಟಿದ ಓರ್ವ ಶ್ರೇಷ್ಠ ಭೃಗು ವಂಶಿಯರಾಗಿದ್ದಾರೆ. ಈ ಕಲ್ಪದಲ್ಲಿ ಇಲ್ಲಿಯವರೆಗೆ ಯಾವ ಪ್ರಳಯವೂ ಆಗಿಲ್ಲವೆಂಬುದು ನಮಗೆ ಗೊತ್ತಿದೆ. ॥ ೩ ॥ ಹೀಗಿರುವಾಗ ಸಮಸ್ತ ಭೂಮಂಡಲವು ಪ್ರಳಯ ಸಮುದ್ರದಲ್ಲಿ ಮುಳುಗಿ ಹೋಗಿದ್ದಾಗ ಮಾರ್ಕಂಡೇಯರು ಅದರಲ್ಲಿ ಮುಳುಗದೆ ಇದ್ದರು ಮತ್ತು ಆಕ್ಷಯವಟ ಪತ್ರದ ಮೇಲೆ ಮಲಗಿದ ಶಿಶುರೂಪಿ ಬಾಲ ಮುಕುಂದನನ್ನು ದರ್ಶಿಸಿದ್ದರು. ಇವೆರಡೂ ಹೇಗೆ ಸತ್ಯವಾಗ ಬಲ್ಲದು ? ॥ ೪ ॥

ಏಷ ನಃ ಸಂಶಯೋ ಭೂಯಾನ್ಸೂತ ಕೌತೂಹಲಂ ಯತಃ ।
ತಂ ನಶ್ಛಿಂಧಿ ಮಹಾಯೋಗಿನ್ಪುರಾಣೇಷ್ವಪಿ ಸಮ್ಮತಃ
॥ ೫ ॥

ಸೂತ ಉವಾಚ

ಪ್ರಶ್ನಸ್ತ್ವಯಾ ಮಹರ್ಷೇऽಯಂ ಕೃತೋ ಲೋಕಭ್ರಮಾಪಹಃ ।
ನಾರಾಯಣಕಥಾ ಯತ್ರ ಗೀತಾ ಕಲಿಮಲಾಪಹಾ
॥ ೬ ॥

ಪ್ರಾಪ್ತದ್ವಿಜಾತಿಸಂಸ್ಕಾರೋ ಮಾರ್ಕಂಡೇಯಃ ಪಿತುಃ ಕ್ರಮಾತ್ ।
ಛಂದಾಂಸ್ಯಧೀತ್ಯ ಧರ್ಮೇಣ ತಪಸ್ಸ್ವಾಧ್ಯಾಯಸಂಯುತಃ
॥ ೭ ॥

ಬೃಹದ್ವ್ರತಧರಃ ಶಾಂತೋ ಜಟಿಲೋ ವಲ್ಕಲಾಂಬರಃ ।
ಬಿಭ್ರತ್ಕಮಂಡಲುಂ ದಂಡಮುಪವೀತಂ ಸಮೇಖಿಲಮ್
॥ ೮ ॥

ಕೃಷ್ಣಾಜಿನಂ ಸಾಕ್ಷಸೂತ್ರಂ ಕುಶಾಂಶ್ಚ ನಿಯಮರ್ದ್ಧಯೇ ।
ಅಗ್ನ್ಯರ್ಕಗುರುವಿಪ್ರಾತ್ಮಸ್ವರ್ಚಯನ್ಸಂಧ್ಯ ಯೋರ್ಹರಿಮ್
॥ ೯ ॥

ಸಾಯಂ ಪ್ರಾತಃ ಸ ಗುರವೇ ಭೈಕ್ಷ್ಯಮಾಹೃತ್ಯ ವಾಗ್ಯತಃ ।
ಬುಭುಜೇ ಗುರ್ವನುಜ್ಞಾತಃ ಸಕೃನ್ನೋ ಚೇದುಪೋಷಿತಃ
॥ ೧೦ ॥

ಏವಂ ತಪಸ್ಸ್ವಾಧ್ಯಾಯಪರೋ ವರ್ಷಾಣಾಮಯುತಾಯುತಮ್ ।
ಆರಾಧಯನ್ ಹೃಷೀಕೇಶಂ ಜಿಗ್ಯೇ ಮೃತ್ಯುಂ ಸುದುರ್ಜಯಮ್
॥ ೧೧ ॥

ಬ್ರಹ್ಮಾ ಭೃಗುರ್ಭವೋ ದಕ್ಷೋ ಬ್ರಹ್ಮಪುತ್ರಾಶ್ಚ ಯೇऽಪರೇ ।
ನೃದೇವಪಿತೃಭೂತಾನಿ ತೇನಾಸನ್ನತಿವಿಸ್ಮಿತಾಃ
॥ ೧೨ ॥

ಇತ್ಥಂ ಬೃಹದ್ವ್ರತಧರಸ್ತಪಸ್ಸ್ವಾಧ್ಯಾಯಸಂಯಮೈಃ ।
ದಧ್ಯಾವಧೋಕ್ಷಜಂ ಯೋಗೀ ಧ್ವಸ್ತಕ್ಲೇಶಾಂತರಾತ್ಮನಾ
॥ ೧೩ ॥

ತಸ್ಯೈವಂ ಯುಂಜತಶ್ಚಿತ್ತಂ ಮಹಾಯೋಗೇನ ಯೋಗಿನಃ ।
ವ್ಯತೀಯಾಯ ಮಹಾನ್ಕಾಲೋ ಮನ್ವಂತರಷಡಾತ್ಮಕಃ
॥ ೧೪ ॥

ನಮ್ಮ ಮನಸ್ಸಿನಲ್ಲಿ ಇದೊಂದು ದೊಡ್ಡ ಸಂದೇಹ ಉಂಟಾಗಿದೆ. ಇದನ್ನು ತಿಳಿಯಬೇಕೆಂಬ ಉತ್ಕಂಠತೆಯೂ ಇದೆ. ನೀವು ಮಹಾಯೋಗಿಗಳೂ, ಪೌರಾಣಿಕರಲ್ಲಿ ಅಗ್ರಗಣ್ಯರೂ ಆಗಿರುವಿರಿ. ಕೃಪೆಯಿಟ್ಟು ನಮ್ಮ ಸಂದೇಹವನ್ನು ನಿವಾರಿಸಿರಿ. ॥ ೫ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ ! ನೀವು ತುಂಬಾ ಚೆನ್ನಾದ ಪ್ರಶ್ನೆಯನ್ನೇ ಕೇಳಿರುವಿರಿ ಇದರಿಂದ ಜನರ ಭ್ರಮೆಯು ಹೊರಟುಹೋದೀತು. ಅದಕ್ಕಿಂತಲೂ ಹೆಚ್ಚಿಂದರೆ ಕಲಿಮಲವನ್ನು ತೊಳೆದುಹಾಕುವ ಶ್ರೀಮನ್ನಾರಾಯಣನ ಕಥೆಯೂ ಇದರಲ್ಲಿ ಹಾಡಲ್ಪಟ್ಟಿದೆ. ಆ ಪವಿತ್ರ ಚರಿತ್ರವನ್ನು ಹೇಳುವೆನು, ಕೇಳಿರಿ. ॥ ೬ ॥ ಶೌನಕರೇ ! ಮೃಕಂಡ ಋಷಿಯು ತನ್ನ ಪುತ್ರನಾದ ಮಾರ್ಕಂಡೇಯನ ಎಲ್ಲ ಸಂಸ್ಕಾರಗಳನ್ನು ಸಮಯಕ್ಕೆ ಸರಿಯಾಗಿ ಮಾಡಿದರು. ಮಾರ್ಕಂಡೇಯನು ವಿಧಿವತ್ತಾಗಿ ವೇದಗಳ ಅಧ್ಯಯನವನ್ನು ಮಾಡಿದ ತಪಸ್ಸು ಮತ್ತು ಸ್ವಾಧ್ಯಾಯದಿಂದ ಸಂಪನ್ನನಾಗಿದ್ದನು. ॥ ೭ ॥ ಅವರು ಆಜೀವನ, ಬ್ರಹ್ಮಚರ್ಯದ ವ್ರತವನ್ನು ಕೈಗೊಂಡಿದ್ದು, ಶಾಂತಭಾವದಿಂದ ಇರುತ್ತಿದ್ದರು. ತಲೆಯಲ್ಲಿ ಜಟೆಗಳಿದ್ದು, ನಾರುಮಡಿಯನ್ನೇ ಉಡುತ್ತಿದ್ದರು. ಶರೀರದಲ್ಲಿ ಯಜ್ಞೋಪವೀತ ಮತ್ತು ಮೇಖಲೆಯು ಶೋಭಿಸುತ್ತಿತ್ತು. ॥ ೮ ॥ ಕೃಷ್ಣಮೃಗಚರ್ಮ, ರುದ್ರಾಕ್ಷಮಾಲೆ, ದರ್ಭೆ ಮತ್ತು ಕೈಯಲ್ಲಿ ದಂಡ ಮತ್ತು ಕಮಂಡಲು ಇವೇ ಅವರ ಭಂಡವಾಳವಾಗಿತ್ತು. ಇದೆಲ್ಲವನ್ನು ಅವರು ತನ್ನ ಆಜೀವ ಬ್ರಹ್ಮಚರ್ಯವ್ರತದ ಪೂರ್ಣತೆಗೆ ಧರಿಸಿದ್ದರು. ಅವರು ಸಾಯಂಪ್ರಾತಃಗಳಲ್ಲಿ ಅಗ್ನಿಹೋತ್ರ, ಸೂರ್ಯೋಪಸ್ಥಾನ, ಗುರುವಂದನೆ, ಬ್ರಾಹ್ಮಣ ಸತ್ಕಾರ, ಮಾನಸಪೂಜೆ ಮಾಡುತ್ತಾ, 'ನಾನು ಪರಮಾತ್ಮನ ಸ್ವರೂಪನಾಗಿದ್ದೇನೆ' ಎಂದು ಭಾವಿಸಿಕೊಂಡು ಶ್ರೀಹರಿಯನ್ನು ಆರಾಧಿಸುತ್ತಿದ್ದರು. ॥ ೯ ॥ ಸಾಯಂಪ್ರಾತಃಕಾಲಗಳಲ್ಲಿ ಭೀಕ್ಷೆ ಬೇಡಿ ತಂದು ಗುರುಗಳ ಚರಣಗಳಲ್ಲಿ ಅರ್ಪಿಸುತ್ತಿದ್ದು ಮೌನವಾಗಿರುತ್ತಿದ್ದರು. ಗುರುಗಳು ಅಪ್ಪಣೆನೀಡಿದರೆ ಒಂದು ಹೊತ್ತು ಊಟ ಮಾಡುವರು ; ಇಲ್ಲದಿದ್ದರೆ ಉಪವಾಸವೇ ಇರುತ್ತಿದ್ದರು. ॥ ೧೦ ॥ ಮಾರ್ಕಂಡೇಯನು ಹೀಗೆ ತಪಸ್ಸು-ಸ್ವಾಧ್ಯಾಯದಲ್ಲಿ ತತ್ಪರನಾಗಿದ್ದು ಲಕ್ಷ-ಲಕ್ಷ ವರ್ಷಗಳವರೆಗೆ ಭಗವಂತನನ್ನು ಆರಾಧಿಸಿದನು. ಹೀಗೆ ದೊಡ್ಡ-ದೊಡ್ಡ ಯೋಗಿಗಳಿಗೂ ಅತ್ಯಂತ ಕಠಿಣವಾದ ಆ ಮೃತ್ಯುವನ್ನು ಗೆದ್ದುಕೊಂಡಿದ್ದನು. ॥ ೧೧ ॥ ಮಾರ್ಕಂಡೇಯನ ಮೃತ್ಯುವಿಜಯವನ್ನು ಕಂಡು ಬ್ರಹ್ಮದೇವರು, ಭೃಗುಗಳು, ರುದ್ರದೇವರು, ದಕ್ಷಪ್ರಜಾಪತಿ, ಬ್ರಹ್ಮಮಾನಸ ಪುತ್ರರು, ಮನುಷ್ಯರು, ದೇವತೆಗಳು, ಪಿತೃಗಳು ಮತ್ತು ಇತರ ಎಲ್ಲ ಪ್ರಾಣಿಗಳೂ ಅತ್ಯಂತ ವಿಸ್ಮಿತರಾದರು. ॥ ೧೨ ॥ ಆಜೀವನ ಬ್ರಹ್ಮಚರ್ಯವ್ರತವನ್ನು ಕೈಗೊಂಡ ಯೋಗಿ ಮಾರ್ಕಂಡೇಯರು ಹೀಗೆ ತಪಸ್ಸು, ಸ್ವಾಧ್ಯಾಯ, ಸಂಯಮ, ಮೊದಲಾದವುಗಳ ಮೂಲಕ ಅವಿದ್ಯೆಯೇ ಮುಂತಾದ ಎಲ್ಲ ಕ್ಲೇಶಗಳನ್ನು ಇಲ್ಲವಾಗಿಸಿ, ಶುದ್ಧಾಂತಕರಣರಾಗಿ ಇಂದ್ರಿಯಾತೀತ ಪರಮಾತ್ಮನನ್ನು ಧ್ಯಾನಿಸತೊಡಗಿದರು. ॥ ೧೩ ॥ ಯೋಗಿಯಾದ ಮಾರ್ಕಂಡೇಯರು ಮಹಾಯೋಗದ ಮೂಲಕ ತನ್ನ ಚಿತ್ತವನ್ನು ಭಗವಂತನ ಸ್ವರೂಪದಲ್ಲಿ ತೊಡಗಿಸಿದ್ದರು. ಹೀಗೆ ಸಾಧನೆ ಮಾಡುತ್ತಾ-ಮಾಡುತ್ತಾ ಆರು ಮನ್ವಂತರಗಳ ಮಹಾಕಾಲವು ಕಳೆದು ಹೋಯಿತು. ॥ ೧೪ ॥

ಏತತ್ ಪುರಂದರೋ ಜ್ಞಾತ್ವಾ ಸಪ್ತಮೇಽಸ್ಮಿನ್ಕಿಲಾಂತರೇ ।
ತಪೋವಿಶಂಕಿತೋ ಬ್ರಹ್ಮನ್ನಾರೇಭೇ ತದ್ವಿಘಾತನಮ್
॥ ೧೫ ॥

ಬ್ರಾಹ್ಮಣ ಶ್ರೇಷ್ಠನೇ! ಈ ಏಳನೆಯ ಮನ್ವಂತರದಲ್ಲಿ ಇಂದ್ರನಿಗೆ ಇದರ ಸುಳಿವು ಸಿಕ್ಕಿದಾಗ ಅವನು ಮಾರ್ಕಂಡೇಯನ ತಪಸ್ಸಿನಿಂದ ಶಂಕಿತನಾಗಿ ಭಯಗೊಂಡನು. ಅದಕ್ಕಾಗಿ ಅವನು ತಪಸ್ಸಿನಲ್ಲಿ ವಿಘ್ನವನ್ನೊಡ್ಡಲು ಪ್ರಾರಂಭಿಸಿದನು. ॥ ೧೫ ॥

ಗಂಧರ್ವಾಪ್ಸರಸಃ ಕಾಮಂ ವಸಂತಮಲಯಾನಿಲೌ ।
ಮುನಯೇ ಪ್ರೇಷಯಾಮಾಸ ರಜಸ್ತೋಕಮದೌ ತಥಾ
॥ ೧೬ ॥

ಶೌನಕರೇ! ಇಂದ್ರನು ಮಾರ್ಕಂಡೇಯನ ತಪೋಭಂಗವನ್ನು ಮಾಡಲಿಕ್ಕಾಗಿ ಅವನ ಆಶ್ರಮಕ್ಕೆ ಗಂಧರ್ವರನ್ನೂ ಅಪ್ಸರೆಯನ್ನು, ಮನ್ಮಥನನ್ನು, ವಸಂತ, ಮಲಯಾನಿಲ, ಲೋಭ ಮತ್ತು ಮದ ಗಳನ್ನು ಕಳಿಸಿದನು. ॥ ೧೬ ॥ ಇಂದ್ರನ ಆಣತಿಯಂತೆ ಅವರೆಲ್ಲರೂ ಮಹರ್ಷಿಯ ಆಶ್ರಮದ ಸಮೀಪಕ್ಕೆ ಬಂದರು. ಮಾರ್ಕಂಡೇಯನ ಆಶ್ರಮವು ಹಿಮಾಲಯದ ಉತ್ತರಪಾರ್ಶ್ವದಲ್ಲಿತ್ತು. ಅಲ್ಲಿ ಪುಷ್ಪ ಭದ್ರಾ ಎಂಬ ನದಿಯು ಹರಿಯುತ್ತಿತ್ತು. ಅದರ ಪಕ್ಕದಲ್ಲೇ ಚಿತ್ರಾ ಎಂಬ ಒಂದು ಬಂಡೆ ಇತ್ತು. ॥ ೧೭ ॥ ಶೌನಕರೇ! ಮಾರ್ಕಂಡೇಯನ ಆಶ್ರಮವು ಅತ್ಯಂತ ಪವಿತ್ರವಾಗಿದೆ. ಸುತ್ತಲೂ ಹಸಿರಾದದಟ್ಟವಾಗಿ ಪವಿತ್ರ ವೃಕ್ಷಗಳ ಸಾಲುಗಳಿದ್ದು ಅವುಗಳಲ್ಲಿ ಬಳ್ಳಿಗಳು ಸುತ್ತಿಕೊಂಡಿದ್ದವು. ಅಂತಹ ವೃಕ್ಷಗಳ ಗುಂಪುಗಳಲ್ಲಿ ಪುಣ್ಯಾತ್ಮರಾದ ಋಷಿಗಳು ವಾಸಿಸುತ್ತಿದ್ದರು. ಅತ್ಯಂತ ಪವಿತ್ರ ಹಾಗೂ ನಿರ್ಮಲ ಜಲದಿಂದ ತುಂಬಿರುವ ಜಲಾಶಯಗಳು ಎಲ್ಲ ಋತುಗಳಲ್ಲಿಯೂ ಒಂದೇರೀತಿಯಾಗಿದ್ದವು. ॥ ೧೮ ॥ ಕೆಲವೆಡೆ ಮತ್ತ ಭೃಂಗಗಳು ಗುಂಜಾರವದ ಸಂಗೀತದಿಂದ ಜನರ ಮನಸ್ಸನ್ನು ಆಕರ್ಷಿಸುತ್ತಿದ್ದರೆ, ಕೆಲವೆಡೆ ಕೋಗಿಲೆಗಳು ಪಂಚಮದ ಇಂಚರ ದಿಂದ ಕುಹೂ ಕುಹೂ ಅನ್ನುತ್ತಿದ್ದರೆ, ಕೆಲವೆಡೆ ಮತ್ತಮಯೂರಗಳು ಗರಿಕೆದರಿ ಜಾಗರವಾಡುತ್ತಿದ್ದವು. ಕೆಲವೆಡೆ ಪಕ್ಷಿ ಸಂಕುಲಗಳು ಒಟ್ಟಾಗಿ ವಿಹರಿಸುತ್ತಿದ್ದವು. ॥ ೧೯ ॥ ಮಾರ್ಕಂಡೇಯನ ಇಂತಹ ಪವಿತ್ರ ಆಶ್ರಮಕ್ಕೆ ಇಂದ್ರನಿಂದ ಕಳುಹಲ್ಪಟ್ಟ ವಾಯುವು ಪ್ರವೇಶಿ ಸಿತು. ಶೀತಲವಾದ ಝರಿಗಳ ತುಂತುರುಗಳನ್ನು ಹೊತ್ತು, ಸುವಾಸನೆ ತುಂಬಿದ ಕುಸುಮಗಳನ್ನು ಅಲಿಂಗಿಸಿದ ತಂಗಾಳಿಯು ಕಾಮಭಾವವನ್ನು ಉತ್ತೇಜಿಸುತ್ತಾ ಮಂದ-ಮಂದವಾಗಿ ಬೀಸ ತೊಡಗಿತು. ॥ ೨೦ ॥ ಕಾಮದೇವನ ಪ್ರಿಯಸಖನಾದ ವಸಂತನೂ ಅಲ್ಲಿ ತನ್ನ ಮಾಯೆಯನ್ನು ಹರಡಿದನು. ಆಗ ಸಂಧ್ಯಾಸಮಯ. ಆಕಾಶದಲ್ಲಿ ಆಗ ತಾನೇ ಮೂಡಿದ ಚಂದ್ರಮನು ತನ್ನ ಮನೋಹರ ಕಿರಣಗಳನ್ನು ಪಸರಿಸಿದನು. ಸಾವಿರಾರು ಕೊಂಬೆಗಳಿಂದ ಕೂಡಿದ ಮರಗಳು ಬಳ್ಳಿಗಳ ಆಲಿಂಗನದ ಆನಂದದಿಂದ ನೆಲದವರೆಗೆ ಬಾಗಿದ್ದವು. ನವಪಲ್ಲವಗಳಿಂದಲೂ, ಪುಷ್ಪಗುಚ್ಛದಿಂದಲೂ ಫಲ ಗಳಿಂದಲೂ ವೃಕ್ಷಗಳು ಅತ್ಯಂತ ಶೋಭಾಯಮಾನವಾಗಿ ದ್ದವು. ॥ ೨೧ ॥ ವಸಂತನ ಸಾಮ್ರಾಜ್ಯವನ್ನು ನೋಡಿ ಮನ್ಮಥನೂ ಅಲ್ಲಿಗೆ ಪ್ರವೇಶಿಸಿದನು. ಅವನೊಡನೆ ವಾದ್ಯಗಳನ್ನು ನುಡಿಸುತ್ತಾ, ಹಾಡುತ್ತಾ ಗಂಧರ್ವರ ಗುಂಪುಗಳು ಅವನನ್ನು ಹಿಂಗಾಲಿಸು ತ್ತಿದ್ದರು. ಸುತ್ತಲೂ ಅನೇಕ ಸ್ವರ್ಗೀಯ ಅಪ್ಸರೆಯರು ನಡೆಯು ತ್ತಿದ್ದು ಓರ್ವ ಮದನನೇ ಎಲ್ಲರಿಗೆ ನಾಯಕನಾಗಿದ್ದನು. ಅವನ ಕೈಯಲ್ಲಿ ಸಮ್ಮೋಹನವೇ ಮುಂತಾದ ಬಾಣಗಳನ್ನು ಹೂಡಲ್ಪಟ್ಟ ಪುಷ್ಪಧನುಸ್ಸು ಕಂಗೊಳಿಸುತ್ತಿತ್ತು. ॥ ೨೨ ॥

ತೇ ವೈ ತದಾಶ್ರಮಂ ಜಗ್ಮುರ್ಹಿಮಾದ್ರೇಃ ಪಾರ್ಶ್ವ ಉತ್ತರೇ ।
ಪುಷ್ಪಭದ್ರಾ ನದೀ ಯತ್ರ ಚಿತ್ರಾಖ್ಯಾ ಚ ಶಿಲಾ ವಿಭೋ
॥ ೧೭ ॥

ತದಾಶ್ರಮಪದಂ ಪುಣ್ಯಂ ಪುಣ್ಯದ್ರುಮಲತಾಂಚಿತಮ್ ।
ಪುಣ್ಯದ್ವಿಜಕುಲಾಕೀರ್ಣಂ ಪುಣ್ಯಾಮಲಜಲಾಶಯಮ್
॥ ೧೮ ॥

ಮತ್ತಭ್ರಮರಸಂಗೀತಂ ಮತ್ತಕೋಕಿಲಕೂಜಿತಮ್ ।
ಮತ್ತಬರ್ಹಿನಟಾಟೋಪಂ ಮತ್ತದ್ವಿಜಕುಲಾಕುಲಮ್
॥ ೧೯ ॥

ವಾಯುಃ ಪ್ರವಿಷ್ಟ ಆದಾಯ ಹಿಮನಿರ್ಝರಶೀಕರಾನ್ ।
ಸುಮನೋಭಿಃ ಪರಿಷ್ವಕ್ತೋ ವವಾವುತ್ತಂಭಯನ್ಸ್ಮರಮ್
॥ ೨೦ ॥

ಉದ್ಯಚ್ಚಂದ್ರನಿಶಾವಕ್ತ್ರಃ ಪ್ರವಾಲಸ್ತಬಕಾಲಿಭಿಃ ।
ಗೋಪದ್ರುಮಲತಾಜಾಲೈಸ್ತತ್ರಾಸೀತ್ ಕುಸುಮಾಕರಃ
॥ ೨೧ ॥

ಅಸ್ತೋಯಮಾನೋ ಗಂಧರ್ವೈರ್ಗೀತವಾದಿತ್ರಯೂಥಕೈಃ ।
ಅದೃಶ್ಯತಾತ್ತಚಾಪೇಷುಃ ಸ್ವಃ ಸ್ತ್ರೀಯೂಥಪತಿಃ ಸ್ಮರಃ
॥ ೨೨ ॥

ಹುತ್ವಾಗ್ನಿಂ ಸಮುಪಾಸೀನಂ ದದೃಶುಃ ಶಕ್ರಕಿಂಕರಾಃ ।
ಮೀಲಿತಾಕ್ಷಂ ದುರಾಧರ್ಷಂ ಮೂರ್ತಿಮಂತಮಿವಾನಲಮ್
॥ ೨೩ ॥

ನನೃತುಸ್ತಸ್ಯ ಪುರತಃ ಸ್ತ್ರಿಯೋಽಥೋ ಗಾಯಕಾ ಜಗುಃ ।
ಮೃದಂಗವೀಣಾಪಣವೈರ್ವಾದ್ಯಂ ಚಕ್ರುರ್ಮನೋರಮಮ್
॥ ೨೪ ॥

ಸಂದಧೇಽಸ್ತ್ರಂ ಸ್ವಧನುಷಿ ಕಾಮಃ ಪಂಚಮುಖಂ ತದಾ ।
ಮಧುರ್ಮನೋ ರಜಸ್ತೋಕ ಇಂದ್ರಭೃತ್ಯಾ ವ್ಯಕಂಪಯನ್
॥ ೨೫ ॥

ಕ್ರೀಡಂತ್ಯಾಃ ಪುಂಜಿಕಸ್ಥಲ್ಯಾಃ ಕಂದುಕೈಃ ಸ್ತನಗೌರವಾತ್ ।
ಭೃಶಮುದ್ವಿಗ್ನಮಧ್ಯಾಯಾಃ ಕೇಶವಿಸ್ರಂಸಿತಸ್ರಜಃ
॥ ೨೬ ॥

ಇತಸ್ತತೋ ಭ್ರಮದ್ದೃಷ್ಟೇಶ್ಚಲಂತ್ಯಾ ಅನುಕಂದುಕಮ್ ।
ವಾಯುರ್ಜಹಾರ ತದ್ವಾಸಃ ಸೂಕ್ಷ್ಮಂ ತ್ರುಟಿತಮೇಖಲಮ್
॥ ೨೭ ॥

ವಿಸಸರ್ಜ ತದಾ ಬಾಣಂ ಮತ್ವಾ ತಂ ಸ್ವಜಿತಂ ಸ್ಮರಃ ।
ಸರ್ವಂ ತತ್ಪ್ರಾಭವನ್ಮೋಘಮನೀಶಸ್ಯ ಯಥೋದ್ಯಮಃ
॥ ೨೮ ॥

ತ ಇತ್ಥಮಪಕುರ್ವಂತೋ ಮುನೇಸ್ತತ್ತೇಜಸಾ ಮುನೇ ।
ದಹ್ಯಮಾನಾ ನಿವವೃತುಃ ಪ್ರಬೋಧ್ಯಾಹಿಮಿವಾರ್ಭಕಾಃ
॥ ೨೯ ॥

ಇತೀಂದ್ರಾನುಚರೈರ್ಬ್ರಹ್ಮನ್ ಧರ್ಷಿತೋಽಪಿ ಮಹಾಮುನಿಃ ।
ಯನ್ನಾಗಾದಹಮೋ ಭಾವಂ ನ ತಚ್ಚಿತ್ರಂ ಮಹತ್ಸು ಹಿ
॥ ೩೦ ॥

ಆ ಸಮಯದಲ್ಲಿ ಮಾರ್ಕಂಡೇಯ ಮುನಿಗಳು ಅಗ್ನಿಹೋತ್ರವನ್ನು ಮುಗಿಸಿ ಭಗವಂತನ ಉಪಾಸನೆ ಮಾಡುತ್ತಿದ್ದರು. ಕಣ್ಣುಗಳನ್ನು ಮುಚ್ಚಿಕೊಂಡು, ಸಾಕ್ಷಾತ್ ಅಗ್ನಿದೇವನೇ ಮೂರ್ತೀಭವಿಸಿ ಕುಳಿತಿರುವರೋ ಎಂಬಂತೆ ತೇಜಸ್ವಿಯಾಗಿದ್ದರು. ಇವರನ್ನು ಪರಾಜಿತಗೊಳಿಸುವುದು ಬಹಳ ಕಷ್ಟವೇ ಆಗಿತ್ತು. ಇಂದ್ರನ ಆಜ್ಞಾಕಾರಿಗಳಾದ ಸೇವಕರು ಮಾರ್ಕಂಡೇಯ ಮುನಿಯನ್ನು ಈ ಸ್ಥಿತಿಯಲ್ಲಿ ನೋಡಿದರು. ॥ ೨೩ ॥ ಆಗ ಅಪ್ಸರೆಯರು ಅವನೆದುರಿಗೆ ನರ್ತಿಸತೊಡಗಿದರು. ಕೆಲವು ಗಂಧರ್ವರು ಇಂಪಾಗಿ ಹಾಡತೊಡಗಿದರೆ, ಕೆಲವರು ಮೃದಂಗ, ವೀಣೆ ಮೊದಲಾದ ವಾದ್ಯಗಳನ್ನು ಮನಮೋಹಕವಾಗಿ ನುಡಿಸತೊಡಗಿದರು. ॥ ೨೪॥ ಶೌನಕರೇ! ಈಗ ಕಾಮದೇವನು ತನ್ನ ಪುಷ್ಪಧನುಸ್ಸಿಗೆ – ಶೋಷಣ, ದೀಪನ, ಸಮ್ಮೋಹನ, ತಾಪನ ಮತ್ತು ಉನ್ಮಾದ ಎಂಬ ಪಂಚಬಾಣಗಳನ್ನು ಹೂಡಿದನು. ಅವನು ಗುರಿಯಿಡಬೇಕೆಂದಿರುವಾಗ ಇಂದ್ರನ ಸೇವಕ ವಸಂತ ಮತ್ತು ಲೋಭ ಇವರು ಮಾರ್ಕಂಡೇಯ ಮುನಿಯ ಮನಸ್ಸನ್ನು ವಿಚಲಿತಗೊಳಿಸಲು ಪ್ರಯತ್ನಶೀಲರಾದರು. ॥ ೨೫ ॥ ಮುನಿಯ ಮುಂದೆಯೇ ಪುಂಜಿಕಸ್ಥಲಿ ಎಂಬ ಸುಂದರಿಯಾದ ಅಪ್ಸರೆಯು ಚೆಂಡಾಟವಾಡುತ್ತಿದ್ದಳು. ಸ್ತನಗಳ ಭಾರದಿಂದ ಆಕೆಯ ನಡುವು ಬಳಕುತ್ತಿತ್ತು. ಮುಡಿಯಲ್ಲಿದ್ದ ಸುಂದರವಾದ ಹೂವುಗಳು ಉದುರಿ ನೆಲಕ್ಕೆ ಬೀಳುತ್ತಿದ್ದವು. ॥ ೨೬ ॥ ಕೆಲವೊಮ್ಮೆ ಓರೆನೋಟದಿಂದ ಅತ್ತ-ಇತ್ತ ದೃಷ್ಟಿ ಹರಿಸುತ್ತಿದ್ದಳು. ಆಕೆಯ ಕಣ್ಣು ದೃಷ್ಟಿಯು ಕೆಲವೊಮ್ಮೆ ಚೆಂಡಿನ ಕಡೆಗೆ ಆಕಾಶದತ್ತವೂ, ಕೆಲವೊಮ್ಮೆ ನೆಲದ ಕಡೆಗೂ, ಕೆಲವೊಮ್ಮೆ ಕೈಗಳ ಕಡೆಗೂ ಹರಿಯುತ್ತಿತ್ತು. ಅವಳು ಹಾವಭಾವಗಳಿಂದ ಚೆಂಡಿನ ಕಡೆಗೆ ಓಡುವಾಗ ಆಕೆಯ ನಡು ಪಟ್ಟಿಯು ಜಾರಿಬಿತ್ತು. ವಾಯುವು ಆಕೆಯ ತೆಳ್ಳಗಿನ ಸೀರೆಯನ್ನು ಶರೀರದಿಂದ ಬೇರ್ಪಡಿದನು. ॥ ೨೭ ॥ ತನಗೆ ಅನುಕೂಲವಾದ ಸಂದರ್ಭವನ್ನು ಗಮನಿಸಿದ ಕಾಮದೇವನು 'ಈಗ ಮಾರ್ಕಂಡೇಯ ಮುನಿಯನ್ನು ನಾನು ಗೆದ್ದುಬಿಟ್ಟೆ' ಎಂದು ಯೋಚಿಸಿ ಅವನ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಆದರೆ ಅವೆಲ್ಲವೂ ವಿಫಲವಾಯಿತು. ಮಾರ್ಕಂಡೇಯ ಮುನಿಯ ಮೇಲಿನ ಅವನ ಉದ್ಯೋಗವು – ಅಸಮರ್ಥರ ಮತ್ತು ನಿರ್ಭಾಗ್ಯರ ಪ್ರಯತ್ನಗಳು ವಿಫಲವಾಗುವಂತೆ, ವಿಫಲವಾಯಿತು. ॥ ೨೮ ॥ ಶೌನಕರೇ! ಮಾರ್ಕಂಡೇಯ ಮುನಿಗಳು ಅಪರಿಮಿತ ತೇಜಸ್ವಿಯಾಗಿದ್ದರು. ಕಾಮ, ವಸಂತ ಇವರೆಲ್ಲ ಅವರ ತಪಸ್ಸನ್ನು ಕೆಡಿಸಲು ಬಂದಿದ್ದರು, ಆದರೆ ಈಗ ಅವನ ತೇಜಸ್ಸಿನಿಂದ ಉರಿಯತೊಡಗಿದರು. ಸಣ್ಣ ಮಕ್ಕಳು ಹಾವನ್ನು ಎಚ್ಚರಿಸಿ ಓಡಿಹೋಗುವಂತೆಯೇ ಅವರು ಓಡಿ ಹೋದರು. ॥ ೨೯ ॥ ಶೌನಕರೇ! ಇಂದ್ರನ ಸೇವಕರು ಹೀಗೆ ಮಾರ್ಕಂಡೇಯರನ್ನು ಪರಾಜಿತಗೊಳಿಸಲು ಬಯಸಿದರು. ಆದರೆ ಅವರು ಎಳ್ಳಷ್ಟೂ ವಿಚಲಿತರಾಗಲಿಲ್ಲ. ಇಷ್ಟೇ ಅಲ್ಲ; ಅವರ ಮನಸ್ಸಿನಲ್ಲಿ ಇದರ ಕುರಿತು ಸ್ವಲ್ಪವೂ ಅಹಂಕಾರದ ಭಾವ ಉಂಟಾಗಲಿಲ್ಲ. ಮಹಾಪುರುಷರಿಗೆ ಇದೇನೂ ಆಶ್ಚರ್ಯದ ಮಾತಲ್ಲ ಎಂಬುದು ನಿಜವಾಗಿದೆ. ॥ ೩೦ ॥

ದೃಷ್ಟ್ವಾನಿಸ್ತೇಜಸಂ ಕಾಮಂ ಸಗಣಂ ಭಗವಾನ್ ಸ್ವರಾಟ್ ।
ಶ್ರುತ್ವಾನುಭಾವಂ ಬ್ರಹ್ಮರ್ಷೇರ್ವಿಸ್ಮಯಂ ಸಮಗಾತ್ಪರಮ್
॥ ೩.೧ ॥

ತಸ್ಯೈವಂ ಯುಂಜತಶ್ಚಿತ್ತಂ ತಪಸ್ಸ್ವಾಧ್ಯಾಯಸಂಯಮೈಃ ।
ಅನುಗ್ರಹಾಯಾವಿರಾಸೀನ್ನರನಾರಾಯಣೋ ಹರಿಃ
॥ ೩.೨ ॥

ತೌ ಶುಕ್ಲಕೃಷ್ಣೌ ನವಕಂಜಲೋಚನೌ
ಚತುರ್ಭುಜೌ ರೌರವವಲ್ಕಲಾಂಬರೌ ।
ಪವಿತ್ರಪಾಣೀ ಉಪವೀತಕಂ ತ್ರಿವೃತ್
ಕಮಂಡಲುಂ ದಂಡಮೃಜುಂ ಚ ವೈಣವಮ್ ॥ ೩.೩ ॥

ಪದ್ಮಾಕ್ಷಮಾಲಾಮುತ ಜಂತುಮಾರ್ಜನಂ
ವೇದಂ ಚ ಸಾಕ್ಷಾತ್ತಪ ಏವ ರೂಪಿಣೌ ।
ತಪತ್ತಡಿದ್ವರ್ಣಪಿಶಂಗರೋಚಿಷಾ
ಪ್ರಾಂಶೂ ದಧಾನೌ ವಿಬುಧರ್ಷಭಾರ್ಚಿತೌ ॥ ೩.೪ ॥

ತೇ ವೈ ಭಗವತೋ ರೂಪೇ ನರನಾರಾಯಣಾವೃಷೀ ।
ದೃಷ್ಟ್ವೋತ್ಥಾಯಾದರೇಣೋಚ್ಚೈರ್ನಾಮಾಂಗೇನ ದಂಡವತ್
॥ ೩.೫ ॥

ಸ ತತ್ಸಂದರ್ಶನಾನಂದನಿರ್ವೃತಾತ್ಮೇಂದ್ರಿಯಾಶಯಃ ।
ಹೃಷ್ಟರೋಮಾಶ್ರುಪೂರ್ಣಾಕ್ಷೋ ನ ಸೇಹೇ ತಾವುದೀಕ್ಷಿತುಮ್
॥ ೩.೬ ॥

ಉತ್ಥಾಯ ಪ್ರಾಂಜಲಿಃ ಪ್ರಹ್ವ ಔತ್ಸುಕ್ಯಾದಾಶ್ಲಿಷನ್ನಿವ ।
ನಮೋ ನಮ ಇತೀಶಾನೌ ಬಭಾಷೇ ಗದ್ಗದಾಕ್ಷರಃ
॥ ೩.೭ ॥

ತಯೋರಾಸನಮಾದಾಯ ಪಾದಯೋರವನಿಜ್ಯ ಚ ।
ಅರ್ಹಣೇನಾನುಲೇಪೇನ ಧೂಪಮಾಲ್ಯೈರಪೂಜಯತ್
॥ ೩.೮ ॥

ಸುಖಮಾಸನಮಾಸೀನೌ ಪ್ರಸಾದಾಭಿಮುಖೌ ಮುನೀ ।
ಪುನರಾನಮ್ಯ ಪಾದಾಭ್ಯಾಂ ಗರಿಷ್ಠಾವಿದಮಬ್ರವೀತ್
॥ ೩.೯ ॥

ಕಾಮದೇವನು ತನ್ನ ಸೈನ್ಯದೊಂದಿಗೆ ನಿಸ್ತೇಜ-ಹತಪ್ರಭನಾಗಿ ಮರಳಿದನು ಎಂದು ನೋಡಿದ ದೇವೇಂದ್ರನು - ಬ್ರಹ್ಮರ್ಷಿ ಮಾರ್ಕಂಡೇಯನು ಪರಮಪ್ರಭಾವಶಾಲಿಯಾಗಿರುವನೆಂದು ತಿಳಿದಾಗ ಅವನಿಗೆ ಅತ್ಯಂತ ಆಶ್ಚರ್ಯವಾಯಿತು. ॥ ೩.೧ ॥

ಶೌನಕರೇ! ಮಾರ್ಕಂಡೇಯ ಮುನಿಗಳು ತಪಸ್ಸು, ಸ್ವಾಧ್ಯಾಯ, ಧಾರಣೆ, ಧ್ಯಾನ ಮತ್ತು ಸಮಾಧಿಯ ಮೂಲಕ ಭಗವಂತನಲ್ಲಿ ಚಿತ್ತವನ್ನು ತೊಡಗಿಸಲು ಪ್ರಯತ್ನ ಮಾಡುತ್ತಲೇ ಇದ್ದರು. ಆಗ ಅವರ ಮೇಲೆ ಕೃಪಾವರ್ಷವನ್ನು ಗರೆಯಲೆಂದೇ ಮುನಿಜನ ನಯನವಿಹಾರಿ ನರೋತ್ತಮ ನರ ಮತ್ತು ಭಗವಾನ್ ನಾರಾಯಣರು ಪ್ರಕಟರಾದರು. ॥ ೩.೨ ॥ ಅವರಿಬ್ಬರಲ್ಲಿ ಒಬ್ಬನ ಶರೀರವು ಬಿಳಿಯಬಣ್ಣ, ಮತ್ತೊಬ್ಬನದು ಶ್ಯಾಮಲ ವರ್ಣ. ಇಬ್ಬರ ಕಣ್ಣುಗಳು ಅಗತಾನೇ ಅರಳಿದ ಕಮಲದಂತೆ ಕೋಮಲವೂ, ವಿಶಾಲವೂ ಆಗಿದ್ದವು. ಇಬ್ಬರಿಗೂ ಚತುರ್ಭುಜರಾಗಿದ್ದು ಒಬ್ಬನು ಮೃಗಚರ್ಮವನ್ನು ಮತ್ತೊಬ್ಬನು ವಲ್ಕಲವನ್ನು ಧರಿಸಿದ್ದರು. ಕರಗಳಲ್ಲಿ ದರ್ಭೆಗಳನ್ನು ಹಿಡಿದಿದ್ದು ಕಂಠದಲ್ಲಿ ತ್ರಿಸೂತ್ರ ಯಜ್ಞೋಪವೀತ ಶೋಭಿಸುತ್ತಿತ್ತು. ಅವರು ಕಮಂಡಲು ಮತ್ತು ಋಜುವಾದ ಬಿದಿರಿನ ದಂಡವನ್ನು ಧರಿಸಿದ್ದರು. ॥ ೩.೩ ॥ ಹಾಗೆಯೇ ಪದ್ಮಾಕ್ಷಮಣಿ ಮಾಲೆಯನ್ನೂ ಮೈಗೆ ಮುತ್ತುವ ಕ್ರಿಮಿ ಕೀಟಗಳನ್ನು ಓಡಿಸಲು ವಸ್ತ್ರವನ್ನೂ ಧರಿಸಿದ್ದರು. ಬ್ರಹ್ಮೇಂದ್ರಾದಿಗಳಿಗೆ ಪೂಜ್ಯರಾದ ಭಗವಾನ್ ನರ- ನಾರಾಯಣರು ಎತ್ತರವಾದ ಆಕೃತಿಯವರಾಗಿದ್ದರು ಹಾಗೂ ವೇದವನ್ನು ಧರಿಸಿಕೊಂಡಿದ್ದರು. ಅವರ ಶರೀರದಿಂದ ಮಿಂಚಿನಂತೆ ಹೊಳೆಯುವ ಹಳದಿಯಾದ ಬಣ್ಣದ ಕಾಂತಿಯು ಹೊರಸೂಸುತ್ತಿತ್ತು. ನರ-ನಾರಾಯಣ ಋಷಿಗಳು ದಯಮಾಡಿಸಿದನ್ನು ನೋಡಿ ಮಾರ್ಕಂಡೇಯರು ಅತ್ಯಂತ ಆದರಭಾವದಿಂದ ಎದ್ದುನಿಂತು ದೀರ್ಘದಂಡ ಪ್ರಣಾಮಮಾಡಿದರು. ॥ ೩೫ ॥ ಭಗವಂತನ ದಿವ್ಯ ದರ್ಶನದಿಂದ ಉಕ್ಕಿಬಂದ ಪರಮಾನಂದದಿಂದ ಆ ಮುನೀಂದ್ರರ ಆತ್ಮ, ಇಂದ್ರಿಯಗಳು, ಅಂತಃಕರಣಗಳೆಲ್ಲ ಶಾಂತಿ ಸಂತೃಪ್ತಿಗಳಿಂದ ತುಂಬಿಹೋಯಿತು. ದೇಹವು ಆನಂದದಿಂದ ನವಿರೆದ್ದು ಕಣ್ಣುಗಳಲ್ಲಿ ಆನಂದ ಬಾಷ್ಪಗಳು ತುಂಬಿಕೊಳ್ಳಲು ಅವರನ್ನು ನೋಡಲೂ ಅಸಾಧ್ಯವಾಯಿತು. ॥ ೩.೬ ॥ ಆನಂತರ ಅವರು ಕೈ ಜೋಡಿಸಿಕೊಂಡು ಎದ್ದು ನಿಂತರು. ಅವರ ಶರೀರವು ಭಗವಂತನ ಮುಂದೆ ಬಾಗಿತ್ತು. ಭಗವಂತನನ್ನು ಹೃದಯದಲ್ಲೇ ಆಲಿಂಗಿಸಿಕೊಳ್ಳುವರೋ ಎಂಬಂತೆ ಅವರ ಉತ್ಸುಕತೆ ಹೆಚ್ಚಾಗಿತ್ತು. ಅವರ ಕಂಠವು ಗದ್ಗದವಾಗಿ ಮಾತನಾಡಲೂ ಆಗದೆ ಕೇವಲ 'ನಮೋ ನಮಃ' ಇಷ್ಟನ್ನು ಬಹು ಕಷ್ಟದಿಂದ ನುಡಿದರು. ॥ ೩.೭ ॥ ಆನಂತರ ಅವರಿಬ್ಬರನ್ನೂ ಆಸನದಲ್ಲಿ ಕುಳ್ಳಿರಿಸಿ ಅತ್ಯಂತ ಭಕ್ತಿಯಿಂದ ಚರಣಗಳನ್ನು ತೊಳೆದು, ಅರ್ಘ್ಯ, ಚಂದನ, ಧೂಪ, ಮಾಲೆ ಮುಂತಾದವುಗಳಿಂದ ಅವರನ್ನು ಪೂಜಿಸತೊಡಗಿದನು. ॥ ೩.೮ ॥ ಭಗವಾನ್ ನರ-ನಾರಾಯಣರು ಸುಖಾಸೀನರಾಗಿ ಕುಳಿತು, ಮಾರ್ಕಂಡೇಯರ ಮೇಲೆ ಕೃಪಾಪ್ರಸಾದದ ಮಳೆಯನ್ನೇ ಸುರಿಸುತ್ತಿದ್ದರು. ಪೂಜಾನಂತರ ಮಾರ್ಕಂಡೇಯ ಮುನಿಯು ಆ ಸರ್ವಶ್ರೇಷ್ಠ ಮುನಿವೇಷಧಾರಿ ನರ-ನಾರಾಯಣರ ಚರಣಕಮಲಗಳಲ್ಲಿ ನಮಸ್ಕರಿಸಿ, ವಿನಯದಿಂದ ಹೀಗೆ ಸ್ತುತಿಸತೊಡಗಿದರು. ॥ ೩.೯ ॥

ಮಾರ್ಕಂಡೇಯ ಉವಾಚ

ಕಿಂವರ್ಣಯೇತವವಿಭೋ ಯದುದೀರಿತೋಽಸುಃ
ಸಂಸ್ಪಂದತೇ ತಮನು ವಾಙ್ಮನಇಂದ್ರಿಯಾಣಿ ।
ಸ್ಪಂದಂತಿ ವೈ ತನುಭೃತಾಮಜಶರ್ವಯೋಶ್ಚ
ಸ್ವಸ್ಯಾಪ್ಯಥಾಪಿ ಭಜತಾಮಸಿ ಭಾವಬಂಧುಃ ॥ ೪೦ ॥

ಮೂರ್ತೀ ಇಮೇ ಭಗವತೋ ಭಗವಂಸ್ತ್ರಿಲೋಕ್ಯಾಃ
ಕ್ಷೇಮಾಯ ತಾಪವಿರಮಾಯ ಚ ಮೃತ್ಯುಜಿತ್ಯೈ ।
ನಾನಾ ಬಿಭರ್ಷ್ಯವಿತುಮನ್ಯತನೂರ್ಯಥೇದಂ
ಸೃಷ್ಟ್ವಾಪುನರ್ಗ್ರಸಸಿ ಸರ್ವಮಿವೋರ್ಣನಾಭಿಃ ॥ ೪೧ ॥

ತಸ್ಯಾವಿತುಃ ಸ್ಥಿರಚರೇಶಿತುರಂಘ್ರಿಮೂಲಂ
ಯತ್ಸ್ವಂ ನ ಕರ್ಮಗುಣಕಾಲರುಜಃ ಸ್ಪೃಶಂತಿ ।
ಯದ್ವೈ ಸ್ತುವಂತಿ ನಿಗಮಂತಿ ಯಜಂತ್ಯಭೀಕ್ಷ್ಣಂ
ಧ್ಯಾಯಂತಿ ವೇದಹೃದಯಾ ಮುನಯಸ್ತದಾಪ್ತ್ಯೈ ॥ ೪೨ ॥

ನಾನ್ಯಂತವಾಂಘ್ರ್ಯುಪನಯಾದಪವರ್ಗಮೂರ್ತೇಃ
ಕ್ಷೇಮಂ ಜನಸ್ಯ ಪರಿತೋಭಿಯ ಈಶ ವಿದ್ಮಃ ।
ಬ್ರಹ್ಮಾ ಬಿಭೇತ್ಯಲಮತೋ ದ್ವಿಪರಾರ್ಧಧಿಷ್ಣ್ಯಃ
ಕಾಲಸ್ಯ ತೇ ಕಿಮುತ ತತ್ಕೃತಭೌತಿಕಾನಾಮ್ ॥ ೪೩ ॥

ತದ್ವೈ ಭಜಾಮ್ಯೃತಧಿಯಸ್ತವ ಪಾದಮೂಲಂ
ಹಿತ್ವೇದಮಾತ್ಮಚ್ಛದಿ ಚಾತ್ಮಗುರೋಃ ಪರಸ್ಯ ।
ದೇಹಾದ್ಯಪಾರ್ಥಮಸದಂತ್ಯಮಭಿಜ್ಞಮಾತ್ರಂ
ವಿಂದೇತ ತೇ ತರ್ಹಿ ಸರ್ವಮನೀಹಿತಾರ್ಥಮ್ ॥ ೪೪ ॥

ಮಾರ್ಕಂಡೇಯ ಮುನಿಗಳು ಹೇಳಿದರು - ಪ್ರಭೋ! ನಿನ್ನನ್ನು ಹೇಗೆ ವರ್ಣಿಸಲಿ! ಹೇಗೆ ಸ್ತುತಿಸಲಿ! ಎಲ್ಲ ಜೀವರಿಗೂ ಹಾಗೂ ಬ್ರಹ್ಮ-ರುದ್ರರಿಗೂ ಕೂಡ ಪ್ರಾಣ ವ್ಯಾಪಾರ ನಡೆಯುವುದು ನಿನ್ನ ಪ್ರೇರಣೆಯಿಂದಲೇ. ಪ್ರಾಣವನ್ನೇ ಅನುಸರಿಸಿ ಎಲ್ಲರ ಮಾತು, ಮನಸ್ಸು ಇಂದ್ರಿಯಗಳು ಕೆಲಸ ಮಾಡುವುದು ಆ ನಿನ್ನ ಪ್ರೇರಣೆಯಿಂದಲೇ. ಹೀಗೆ ಸರ್ವನಿಯಾಮಕನಾಗಿ, ಸರ್ವ ಸ್ವತಂತ್ರನಾಗಿದ್ದರೂ ಕೂಡ ನೀನು ನಿನ್ನನ್ನು ಭಜಿಸುವ ಭಕ್ತರ ಪ್ರೇಮಬಂಧನಕ್ಕೆ ಕಟ್ಟು ಬಿದ್ದಿರುವೆಯಲ್ಲ! ॥ ೪೦ ॥ ಪ್ರಭೋ! ನೀನು ಕೇವಲ ವಿಶ್ವದ ರಕ್ಷಣೆಗಾಗಿಯೇ ಮತ್ಸ್ಯ-ಕೂರ್ಮ ಮೊದಲಾದ ಅನೇಕ ಅವತಾರಗಳನ್ನು ಧರಿಸಿದಂತೆಯೇ ನೀನು ಈ ಎರಡೂ ರೂಪಗಳನ್ನು ತ್ರೈಲೋಕ್ಯದ ಕಲ್ಯಾಣಕ್ಕಾಗಿ, ಆದರ ದುಃಖ-ನಿವೃತ್ತಿಗಾಗಿಯೇ ಮತ್ತು ವಿಶ್ವದ ಪ್ರಾಣಿಗಳು ಮೃತ್ಯುವನ್ನು ಗೆದ್ದುಕೊಳ್ಳಲೆಂದೇ ಸ್ವೀಕರಿಸಿದ್ದೀಯೆ. ನೀನು ರಕ್ಷಣೆಯನ್ನು ಮಾಡಿಯೇ ಮಾಡುವೆ. ಜೇಡರ ಹುಳದಂತೆ ನೀನು ಈ ವಿಶ್ವವನ್ನು ನಿನ್ನಲ್ಲೇ ಪ್ರಕಟಗೊಳಿಸಿ, ಕೊನೆಗೆ ತನ್ನಲ್ಲೇ ಲೀನಮಾಡಿ ಕೊಳ್ಳುವೆ. ॥ ೪೧ ॥ ನೀನು ಚರಾಚರ ಜಗತ್ತಿನ ನಿಯಾಮಕನಾಗಿರುವೆ. ನಾನು ನಿನ್ನ ಚರಣಕಮಲಗಳಿಗೆ ನಮಸ್ಕರಿಸುತ್ತೇನೆ. ನಿನ್ನ ಚರಣಕಮಲಗಳಲ್ಲಿ ಶರಣಾಗತನಾದವನಿಗೆ ಕರ್ಮ, ಗುಣ ಮತ್ತು ಕಾಲಜನಿತ ಕ್ಲೇಶಗಳು ಸ್ಪರ್ಶಿಸಲಾರವು. ವೇದದ ಮರ್ಮಜ್ಞರಾದ ಋಷಿ-ಮುನಿಗಳು ನಿನ್ನ ಪ್ರಾಪ್ತಿಗಾಗಿ ನಿರಂತರವಾಗಿ ನಿನ್ನ ಸ್ತುತಿ, ವಂದನೆ, ಪೂಜೆ ಮತ್ತು ಧ್ಯಾನಮಾಡುತ್ತಾ ಇರುತ್ತಾರೆ. ॥ ೪೨ ॥ ಪ್ರಭೋ! ಜೀವಿಯ ಸುತ್ತಲೂ ಭಯವೇ ತಾಂಡವವಾಡುತ್ತಿದೆ. ಉಳಿದವರ ಮಾತೇನು; ಸಾಕ್ಷಾತ್ ಬ್ರಹ್ಮನೂ ಕೂಡ ನಿನ್ನ ಕಾಲಸ್ವರೂಪದಿಂದ ಅತ್ಯಂತ ಭಯಪಡುತ್ತಿರುವನು. ಏಕೆಂದರೆ, ಆವನ ಆಯುಸ್ಸೂ ಕೂಡ ಕೇವಲ ಎರಡು ಪರಾರ್ಧಕ್ಕೆ ಸೀಮಿತವಾಗಿದೆಯಲ್ಲ! ಹೀಗಿರುವಾಗ ಆವನಿಂದ ನಿರ್ಮಿತವಾದ ಭೌತಿಕ ಶರೀರವುಳ್ಳ ಪ್ರಾಣಿಗಳ ಸಂಬಂಧವಾಗಿ ಹೇಳುವುದೇ ನಿದೆ? ಇಂತಹ ಸ್ಥಿತಿಯಲ್ಲಿ ಮೋಕ್ಷಸ್ವರೂಪನಾದ ನಿನ್ನ ಚರಣ ಕಮಲಗಳಲ್ಲಿ ಶರಣಾಗುವುದಲ್ಲದೆ ಬೇರೆ ಯಾವುದೇ ಪರಮ ಕಲ್ಯಾಣದ, ಸುಖ-ಶಾಂತಿಯ ಉಪಾಯ ನಮ್ಮ ಅರಿವಿಗೆ ಬರುವುದಿಲ್ಲ. ॥ ೪೩ ॥ ಭಗವಂತನೇ! ನೀನು ಸಮಸ್ತ ಜೀವರ ಪರಮಗುರುವೂ, ಸರ್ವಶ್ರೇಷ್ಠನೂ, ಸತ್ಯಜ್ಞಾನಸ್ವರೂಪನೂ ಆಗಿರುವೆ. ಆದಕ್ಕಾಗಿ ಆತ್ಮಸ್ವರೂಪವನ್ನು ಮುಚ್ಚಿಬಿಡುವ ದೇಹ-ಗೇಹ ಮೊದಲಾದ ನಿಷ್ಫಲ, ಅಸತ್ಯ, ನಾಶವುಳ್ಳ ಮತ್ತು ಕೇವಲ ಪ್ರತೀತಿ ಮಾತ್ರವಾಗಿರುವ ಪದಾರ್ಥಗಳನ್ನು ತ್ಯಜಿಸಿ ನಾನು ನಿನ್ನ ಚರಣಕಮಲಗಳಲ್ಲಿ ಶರಣಾಗಿದ್ದೇನೆ. ಯಾವುದೇ ಪ್ರಾಣಿಯೂ ನಿನ್ನಲ್ಲಿ ಶರಣಾಗತನಾದರೆ ಆವನು ಅದರಿಂದ ತನ್ನ ಎಲ್ಲ ಅಭೀಷ್ಟವಾದ ಪದಾರ್ಥಗಳನ್ನು ಪಡೆದುಕೊಳ್ಳುವನು. ॥ ೪೪ ॥ ಜೀವನ ಪರಮಸುಹೃದನಾದ ಪ್ರಭೋ! ಸತ್ತ್ವ, ರಜ, ತಮ - ಈ ಮೂರು ಗುಣಗಳೂ ನಿನ್ನ ಮೂರ್ತಿಯೇ ಆಗಿದ್ದು ಇವುಗಳ ಮೂಲಕ ನೀನು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ ಮುಂತಾದ ಅನೇಕ ಮಾಯಾಮಯ ಲೀಲೆಗಳನ್ನು ಮಾಡುತ್ತಿದ್ದರೂ, ನಿನ್ನ ಸತ್ತ್ವಗುಣ

ಸತ್ತ್ವಂ ರಜಸ್ತಮ ಇತೀಶ ತವಾತ್ಮಬಂಧೋ
ಮಾಯಾಮಯಾಃ ಸ್ಥಿತಿಲಯೋದಯಹೇತವೋಽಸ್ಯ ।
ಲೀಲಾ ಧೃತಾ ಯದಪಿ ಸತ್ತ್ವಮಯೀ ಪ್ರಶಾಂತ್ಯೈ
ನಾನ್ಯೇ ನೃಣಾಂ ವ್ಯಸನಮೋಹಭಿಯಶ್ಚ ಯಾಭ್ಯಾಮ್
॥ ೪೫ ॥

ಮಯಮೂರ್ತಿಯೇ ಜೀವಿಗಳಿಗೆ ಶಾಂತಿಯನ್ನು ಕರುಣಿಸುತ್ತದೆ. ರಜೋಗುಣೀ ಮತ್ತು ತಮೋಗುಣೀ ಮೂರ್ತಿಗಳಿಂದ ಜೀವರಿಗೆ ಶಾಂತಿ ಸಿಗಲಾರದು. ಅವರಿಂದಲಾದರೋ ದುಃಖ, ಮೋಹ, ಭಯ ಇವುಗಳ ವೃದ್ಧಿಯೇ ಆಗುವುದು. ॥ ೪೫ ॥ ಭಗವಂತನೇ ! ಆದುದರಿಂದ ಶ್ರೇಯಸ್ಸನ್ನು ಬಯಸುವ ವಿವೇಕಿಗಳು ನಿನಗೂ ಮತ್ತು ನಿನ್ನ ಭಕ್ತರಿಗೂ ಪ್ರಿಯವಾದ ಶುದ್ಧಸಾತ್ವಿಕ ನರ-ನಾರಾಯಣರೂಪವನ್ನೇ ಭಜಿಸುತ್ತಾರೆ. ಪಾಂಚರಾತ್ರ ಸಿದ್ಧಾಂತವನ್ನು ಬಲ್ಲ ಸಾತ್ವತರು ನಿನ್ನ ವಿಶುದ್ಧ ಸತ್ತ್ವಮಯವಾದ ಆ ಪರಮಪುರುಷ ಸ್ವರೂಪವನ್ನೇ ಬಯಸುತ್ತಾರೆ. ಅದರ ಉಪಾಸನೆಯಿಂದಲೆ ಅಭಯಪ್ರದವಾದ ವೈಕುಂಠಧಾಮವು ದೊರೆಯುವುದು. ಆತ್ಮಸುಖವು ದೊರೆಯುವುದು. ರಜೋಗುಣ-ತಮೋಗುಣ ಮೂರ್ತಿಗಳ ಉಪಾಸನೆಯಿಂದಲ್ಲ. ॥ ೪೬ ॥

ತಸ್ಮಾತ್ತವೇಹ ಭಗವನ್ನಥ ತಾವಕಾನಾಂ
ಶುಕ್ಲಾಂ ತನುಂ ಸ್ವದಯಿತಾಂ ಕುಶಲಾ ಭಜಂತಿ ।
ಯತ್ ಸಾತ್ವತಾಃ ಪುರುಷರೂಪಮುಶಂತಿ ಸತ್ತ್ವಂ
ಲೋಕೋ ಯತೋಽಭಯಮುತಾತ್ಮಸುಖಂ ನ ಚಾನ್ಯತ್
॥ ೪೬ ॥

ಭಗವಂತನೇ ! ಆದುದರಿಂದ ಮಹಾಪುರುಷನೂ, ವಿಶ್ವರೂಪಿಯೂ, ವಿಶ್ವಕ್ಕೆಲ್ಲ ಗುರುವೂ, ಪರದೇವತೆಯೂ, ಶುದ್ಧಹಂಸ ಸ್ವರೂಪಿಯೂ, ಮಹಾಮೌನಿಯೂ, ವೇದಾಚಾರ್ಯನೂ, ನಾರಾಯಣ ಮಹರ್ಷಿ ಮತ್ತು ನರಮಹರ್ಷಿರೂಪಿಯೂ ಆದ ನಿನಗೆ ನಮಸ್ಕಾರವು. ॥ ೪೭ ॥ ಜಗದ್ಗುರುವೇ ! ನೀನು ಎಲ್ಲ ಜೀವರ ಇಂದ್ರಿಯಗಳಲ್ಲಿಯೂ ಅವುಗಳ ವಿಷಯಗಳಲ್ಲೂ, ಪ್ರಾಣಗಳಲ್ಲೂ ಹಾಗೂ ಹೃದಯದಲ್ಲೂ ವಾಸವಾಗಿದ್ದರೂ ನಿನ್ನ ಮಾಯೆಯಿಂದ ಮೋಹಗೊಂಡ ಬುದ್ಧಿಯುಳ್ಳ ಜೀವರು ನಿನ್ನನ್ನು ತಿಳಿದುಕೊಳ್ಳಲಾರರು. ಲೋಕಗುರುವಾದ ನೀನು ಉಪದೇಶ ಮಾಡಿದ ಜ್ಞಾನಭಂಡಾರರೂಪವಾದ ವೇದದಲ್ಲಿ ವಿಶ್ವಾಸವುಳ್ಳವರಾಗಿ, ಅದರ ಅನುಷ್ಠಾನದಿಂದ ಶುದ್ಧರಾದಾಗ ತಾನೇ ಅವರು ನಿನ್ನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಮರ್ಥರಾಗುತ್ತಾರೆ. ॥ ೪೮ ॥

ತಸ್ಮೈ ನಮೋ ಭಗವತೇ ಪುರುಷಾಯ ಭೂಮ್ನೇ
ವಿಶ್ವಾಯ ವಿಶ್ವಗುರವೇ ಪರದೇವತಾಯೈ ।
ನಾರಾಯಣಾಯ ಋಷಯೇ ಚ ನರೋತ್ತಮಾಯ
ಹಂಸಾಯ ಸಂಯತಗಿರೇ ನಿಗಮೇಶ್ವರಾಯ
॥ ೪೭ ॥

ಯಂ ವೈ ನ ವೇದ ವಿತಥಾಕ್ಷಪಥೈರ್ಭ್ರಮದ್ಧೀಃ
ಸಂತಂ ಸ್ವಿದೇಷ್ವಸುಷು ಹೃದ್ಯಪಿ ದೃಕ್ಪಥೇಷು ।
ತನ್ಮಾಯಯಾಽಽವೃತಮತಿಃ ಸ ಉ ಏವ ಸಾಕ್ಷಾ-
ದಾದ್ಯಸ್ತವಾಖಿಲಗುರೋರುಪಸಾದ್ಯ ವೇದಮ್
॥ ೪೮ ॥

ಮಹಾಪುರುಷನಾದ ಪ್ರಭೋ ! ನಿನ್ನ ಸ್ವರೂಪದ ರಹಸ್ಯವನ್ನು ಪ್ರಕಟಗೊಳಿಸುವ, ನಿನ್ನ ಸಾಕ್ಷಾತ್ಕಾರ ಮಾಡಿಸುವಂತಹ ಜ್ಞಾನವು ಪೂರ್ಣರೂಪದಿಂದ ವೇದದರ್ಶನದಲ್ಲಿ ನಿಹಿತವಾಗಿದೆ. ಬ್ರಹ್ಮದೇವರೇ ಮುಂತಾದ ಮಹಾಜ್ಞಾನಿಗಳೂ ಕೂಡ ಪ್ರಾಕೃತತಂತ್ರಗಳಲ್ಲಿ ಆಸಕ್ತರಾದರೆ ಎಷ್ಟೇ ಪ್ರಯತ್ನಪಟ್ಟರೂ ನಿನ್ನ ತತ್ತ್ವದ ವಿಷಯದಲ್ಲಿ ಮೋಹಕ್ಕೆ ಒಳಗಾಗುತ್ತಾರೆ. ಬೇರೆ-ಬೇರೆ ಮತವುಳ್ಳವರು ನಿನ್ನ ಕುರಿತುಹೇಗೆ ಯೋಚಿಸುತ್ತಾರೋ, ಹಾಗೆಯೇ ಶೀಲ-ಸ್ವಭಾವಗಳನ್ನು ಮತ್ತು ರೂಪಗಳನ್ನು ಧರಿಸಿ ಅವರ ಮುಂದೆ ಪ್ರಕಟನಾಗುವ ಲೀಲಾವಿಹಾರಿಯು ನೀನೇ ಆಗಿರುವೆ. ವಾಸ್ತವವಾಗಿ ದೇಹವೇ ಮೊದಲಾದ ಸಮಸ್ತ ಉಪಾಧಿಗಳಲ್ಲಿ ಅಡಗಿರುವ ವಿಶುದ್ಧ ವಿಜ್ಞಾನಮಯನೂ, ಪುರುಷೋತ್ತಮನೂ ಆದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೪೯ ॥

ಯದ್ದರ್ಶನಂ ನಿಗಮ ಆತ್ಮರಹಃಪ್ರಕಾಶಂ
ಮುಹ್ಯಂತಿ ಯತ್ರ ಕವಯೋಽಜಪರಾ ಯತಂತಃ ।
ತಂ ಸರ್ವವಾದವಿಷಯಪ್ರತಿರೂಪಶೀಲಂ
ವಂದೇ ಮಹಾಪುರುಷಮಾತ್ಮನಿಗೂಢಬೋಧಮ್
॥ ೪೯ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ಅಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಮಾರ್ಕಂಡೇಯರು ಭಗವಂತನ ಮಾಯೆಯನ್ನು ದರ್ಶಿಸಿದುದು

ಸೂತ ಉವಾಚ

ಸಂಸ್ತುತೋ ಭಗವಾನಿತ್ಥಂ ಮಾರ್ಕಂಡೇಯೇನ ಧೀಮತಾ ।
ನಾರಾಯಣೋ ನರಸಖಿಃ ಪ್ರೀತ ಆಹ ಭೃಗೂದ್ವಹಮ್
॥ ೧ ॥

ಶ್ರೀಭಗವಾನುವಾಚ

ಭೋ ಭೋ ಬ್ರಹ್ಮರ್ಷಿವರ್ಯಾಸಿ ಸಿದ್ಧ ಆತ್ಮಸಮಾಧಿನಾ ।
ಮಯಿ ಭಕ್ತ್ಯಾನಪಾಯಿನ್ಯಾ ತಪಃಸ್ವಾಧ್ಯಾಯಸಂಯಮೈಃ
॥ ೨ ॥

ವಯಂ ತೇ ಪರಿತುಷ್ಟಾಃ ಸ್ಮ ತ್ವದ್ಬೃಹದ್ವ್ರತಚರ್ಯಯಾ ।
ವರಂ ಪ್ರತೀಚ್ಛ ಭದ್ರಂ ತೇ ವರದೇಶಾದಭೀಪ್ಸಿತಮ್
॥ ೩ ॥

ಋಷಿರುವಾಚ

ಜಿತಂ ತೇ ದೇವದೇವೇಶ ಪ್ರಪನ್ನಾರ್ತಿಹರಾಚ್ಯುತ ।
ವರೇಣ್ಯೈತಾವತಾಲಂ ನೋ ಯದ್ದಭಾನ್ಸ್ವಮದೃಶ್ಯತ
॥ ೪ ॥

ಗೃಹೀತ್ವಾಜ್ಞಾದಯೋ ಯಸ್ಯ ಶ್ರೀಮತ್ಪಾದಾಬ್ಜದರ್ಶನಮ್ ।
ಮನಸಾ ಯೋಗಪಕ್ವೇನ ಸ ಭವಾನ್ ಮೇಽಕ್ಷಗೋಚರಃ
॥ ೫ ॥

ಅಥಾಪ್ಯಂಬುಜಪತ್ರಾಕ್ಷ ಪುಣ್ಯಶ್ಲೋಕಶಿಖಾಮಣೇ ।
ಪ್ರಕ್ಷ್ಯೇ ಮಾಯಾಂ ಯಯಾ ಲೋಕಃ ಸಪಾಲೋ ವೇದ ಸದ್ಬಿದಾಮ್
॥ ೬ ॥

ಸೂತ ಉವಾಚ

ಇತೀಡಿತೋಽರ್ಚಿತಃ ಕಾಮಮೃಷಿಣಾ ಭಗವಾನ್ಮುನೇ ।
ತಥೇತಿ ಸ ಸ್ಮಯನ್ಪ್ಯಾಗಾದ್ಬದರ್ಯಾಶ್ರಮಮೀಶ್ವರಃ
॥ ೭ ॥

ತಮೇವ ಚಿಂತಯನ್ನರ್ಥಮೃಷಿಃ ಸ್ವಾಶ್ರಮ ಏ ಸಃ ।
ಪಪನ್ನಗ್ನ್ಯರ್ಕಸೋಮಾಂಬುಭೂವಾಯುವಿಯದಾತ್ಮಸು
॥ ೮ ॥

ಧ್ಯಾಯನ್ಸರ್ವತ್ರ ಚ ಹರಿಂ ಭಾವದ್ರವ್ಯೈರಪೂಜಯತ್ ।
ಕ್ವಚಿತ್ ಪೂಜಾಂ ವಿಸಸ್ಮಾರ ಪ್ರೇಮಪ್ರಸರಸಂಪ್ಲುತಃ
॥ ೯ ॥

ಸೂತಪುರಾಣಿಕರು ಹೇಳುತ್ತಾರೆ – ಜ್ಞಾನಸಂಪನ್ನರಾದ ಮಾರ್ಕಂಡೇಯರು ಹೀಗೆ ಸ್ತುತಿಸಿದಾಗ ಭಗವಾನ್ ನರ-ನಾರಾಯಣರು ಪ್ರಸನ್ನರಾಗಿ ಮುನಿಗೆ ಹೀಗೆಂದರು. ॥ ೧ ॥

ಶ್ರೀಭಗವಾನ್ ನಾರಾಯಣನು ಹೇಳಿದನು – ಸನ್ಮಾನ್ಯ ಬ್ರಹ್ಮರ್ಷಿ ಶಿರೋಮಣಿಯೇ! ನೀನು ಚಿತ್ತದ ಏಕಾಗ್ರತೆ, ತಪಸ್ಸು ಸ್ವಾಧ್ಯಾಯ, ಸಂಯಮ ಮತ್ತು ನನ್ನ ಅನನ್ಯ ಭಕ್ತಿಯಿಂದ ಸಿದ್ಧನೆನಿಸಿರುವೆ. ॥ ೨ ॥ ನಿನ್ನ ಈ ಆಜೀವನ ಬ್ರಹ್ಮಚರ್ಯನಿಷ್ಠೆಯನ್ನು ನೋಡಿ ನಾವು ನಿನ್ನ ಮೇಲೆ ಬಹಳ ಪ್ರಸನ್ನರಾಗಿರುವೆವು. ನಿನಗೆ ಮಂಗಳವಾಗಲಿ! ಸಮಸ್ತ ವರಕೊಡುವವರಿಗೆಲ್ಲ ಸ್ವಾಮಿಯಾದ ನಮ್ಮಿಂದ ನಿನಗೆ ಅಭೀಷ್ಟವಾದ ವರವನ್ನು ಕೇಳಿಕೊ. ॥ ೩ ॥

ಮಾರ್ಕಂಡೇಯ ಮುನಿಗಳು ಹೇಳಿದರು – ದೇವ ದೇವ! ಶರಣಾಗತ ಭಯಹಾರಿಯಾದ ಅಚ್ಯುತನೇ! ನಿನಗೆ ಜಯವಾಗಲಿ, ಜಯವಾಗಲಿ. ನೀನು ಕೃಪೆಗೈದು ನಿನ್ನ ಮನೋಹರ ಸ್ವರೂಪದ ದರ್ಶನ ಕೊಟ್ಟಿರುವೆಯಲ್ಲ ಇದೇ ವರವು ನನಗೆ ಸಾಕು. ॥ ೪ ॥ ಬ್ರಹ್ಮರುದ್ರರೇ ಮೊದಲಾದ ಮಹಾದೇವತೆಗಳು ಯೋಗಸಾಧನೆಯಿಂದ ಏಕಾಗ್ರವಾದ ಮನಸ್ಸಿನಿಂದ ನಿನ್ನ ಪರಮಸುಂದರ ಶ್ರೀಚರಣಾರವಿಂದಗಳನ್ನು ದರ್ಶನ ಪಡೆದು ಕೃತಾರ್ಥರಾಗುವರಲ್ಲ! ॥ ೫ ॥ ಪುಣ್ಯಶ್ಲೋಕ ಶಿರೋಮಣಿಯೇ! ಪುಂಡರೀಕಾಕ್ಷನೇ! ಹೀಗಿದ್ದರೂ ನಿನ್ನ ಆಜ್ಞೆಯಂತೆ ನಾನು ವರವನ್ನು ಬೇಡುತ್ತೇನೆ. ಯಾವುದರಿಂದ ಮೋಹಿತರಾಗಿ ಎಲ್ಲ ಲೋಕಪಾಲರು ಅದ್ವಿತೀಯ ಬ್ರಹ್ಮನಲ್ಲಿ ಅನೇಕ ಪ್ರಕಾರದ ಭೇದ-ವಿಭೇದಗಳನ್ನು ನೋಡುತ್ತಾರೋ ಅಂತಹ ನಿನ್ನ ವೈಷ್ಣವೀಮಾಯೆಯನ್ನು ನೋಡಬೇಕೆಂದು ಬಯಸುತ್ತಿದ್ದೇನೆ. ॥ ೬ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ಮಾರ್ಕಂಡೇಯರು ಈ ಪ್ರಕಾರವಾಗಿ ಭಗವಾನ್ ನರ-ನಾರಾಯಣರನ್ನು ಸ್ತುತಿಸಿ ಪೂಜಿಸಿ ಅವರ ಇಚ್ಛೆಗನುಸಾರವಾದ ವರವನ್ನು ಕೇಳಿದಾಗ, ಅವರು ಮುಗುಳ್ನಕ್ಕು – 'ಸರಿ, ಹಾಗೆಯೇ ಆಗಲಿ!' ಎಂದು ಹೇಳಿ ತಮ್ಮ ಬದರಿಕಾಶ್ರಮಕ್ಕೆ ಹೊರಟು ಹೋದರು. ॥೭॥ ಮಾರ್ಕಂಡೇಯರು ತಮ್ಮ ಆಶ್ರಮದಲ್ಲೇ ಇದ್ದುಕೊಂಡು 'ನನಗೆ ಮಾಯೆಯ ದರ್ಶನ ಎಂದಾಗುವುದು?' ಎಂದು ನಿರಂತರವಾಗಿ ಚಿಂತಿಸುತ್ತಿದ್ದರು. ಅವರು ಅಗ್ನಿ, ಸೂರ್ಯ, ಚಂದ್ರ, ಜಲ, ಪೃಥಿವಿ, ವಾಯು, ಆಕಾಶ, ಅಂತಃಕರಣದಲ್ಲಿ ಹಾಗೂ ಸರ್ವತ್ರ ಭಗವಂತನನ್ನೇ ದರ್ಶಿಸುತ್ತಾ ಮಾನಸ ಪೂಜೆಯನ್ನು ಮಾಡುತ್ತಿದ್ದರು. ಕೆಲಪೊಮ್ಮೆ ಪ್ರೇಮಪ್ರವಾಹದಲ್ಲಿ ಮುಳುಗಿ ಈಗ ಎಲ್ಲಿ ಹೇಗೆ ಭಗವಂತನನ್ನು ಪೂಜಿಸಲಿ ಎಂಬುದನ್ನು ಮರೆತುಬಿಡುತ್ತಿದ್ದರು. ॥ ೮-೯ ॥

ತಸ್ಯೈಕದಾ ಭೃಗುಶ್ರೇಷ್ಠ ಪುಷ್ಪಭದ್ರಾತಟೇ ಮುನೇಃ ।
ಉಪಾಸೀನಸ್ಯ ಸಂಧ್ಯಾಯಾಂ ಬ್ರಹ್ಮನ್ವಾಯುರಭೂನ್ಮಹಾನ್ ॥ ೧೦ ॥

ತಂ ಚಂಡಶಬ್ದಂ ಸಮುದೀರಯಂತಂ
ಬಲಾಹಕಾ ಅನ್ವಭವನ್ಕರಾಲಾಃ ।
ಅಕ್ಷಸ್ಥವಿಷ್ಮಾ ಮುಮುಚುಸ್ತಡಿದ್ಭಿಃ
ಸ್ವನಂತ ಉಚ್ಚೈರಭಿವರ್ಷಧಾರಾಃ ॥ ೧೧ ॥

ತತೋ ವ್ಯದೃಶ್ಯಂತ ಚತುಸ್ಸಮುದ್ರಾಃ
ಸಮಂತತಃ ಕ್ಷ್ಮಾತಲಮಾಗ್ರಸಂತಃ ।
ಸಮೀರವೇಗೋರ್ಮಿಭಿರುಗ್ರನಕ್ರ-
ಮಹಾಭಯಾವರ್ತಗಭೀರಘೋಷಾಃ ॥ ೧೨ ॥

ಅಂತರ್ಬಹಿಶ್ಚಾದ್ಭಿರತಿದ್ಯುಭಿಃ ಖರೈಃ
ಶತಹ್ರದಾಭೀರುಪತಾಪಿತಂ ಜಗತ್ ।
ಚತುರ್ವಿಧಂ ವೀಕ್ಷ್ಯ ಸಹಾತ್ಮನಾ ಮುನಿ-
ರ್ಜಲಾಪ್ಲುತಾಂ ಕ್ಷ್ಮಾಂ ವಿಮನಾಃ ಸಮತ್ರಸತ್ ॥ ೧೩ ॥

ತಸ್ಯೈವಮುದ್ವೀಕ್ಷತ ಊರ್ಮಿಭೀಷಣಃ
ಪ್ರಭಂಜನಾಘೂರ್ಣಿತವಾರ್ಮಹಾರ್ಣವಃ ।
ಆಪೂರ್ಯಮಾಣೋ ವರಷದ್ಭಿರಂಬುದೈಃ
ಕ್ಷ್ಮಾಮಪ್ಯಧಾದ್ವೀಪವರ್ಷಾದ್ರಿಭಿಃ ಸಮಮ್ ॥ ೧೪ ॥

ಸಕ್ಷ್ಮಾಂತರಿಕ್ಷಂ ಸದಿವಂ ಸಭಾಗಣಂ
ತ್ರೈಲೋಕ್ಯಮಾಸೀತ್ಸಹ ದಿಗ್ಭಿರಾಪ್ಲುತಮ್ ।
ಸ ಏಕ ಏವೋರ್ವರಿತೋ ಮಹಾಮುನಿ-
ರ್ಬಭ್ರಾಮ ವಿಕ್ಷಿಪ್ಯ ಜಟಾ ಜಡಾಂಧವತ್ ॥ ೧೫ ॥

ಕ್ಷುತ್ತೃಟ್ಪರೀತೋ ಮಕರೈಸ್ತಿಮಿಂಗಿಲೈ-
ರುಪದ್ರುತೋ ವೀಚಿನಭಸ್ವತಾ ಹತಃ ।
ತಮಸ್ಯಪಾರೇ ಪತಿತೋ ಭ್ರಮನ್ದಿಶೋ
ನ ವೇದ ಖಂ ಗಾಂ ಚ ಪರಿಶ್ರಮೇಷಿತಃ ॥ ೧೬ ॥

ಎಲೈ ಭೃಗುಶ್ರೇಷ್ಠನಾದ ಶೌನಕನೇ! ಒಂದು ದಿನ ಸಂಧ್ಯಾ ಸಮಯದಲ್ಲಿ ಪುಷ್ಪಭದ್ರಾನದಿಯ ತೀರದಲ್ಲಿ ಮಾರ್ಕಂಡೇಯ ಮುನಿಗಳು ಭಗವಂತನ ಉಪಾಸನೆಯಲ್ಲಿ ತನ್ಮಯರಾಗಿದ್ದಾಗ ಒಮ್ಮಿಂದೊಮ್ಮೆಗೆ ಭಯಂಕರವಾದ ಚಂಡಮಾರುತ ಬೀಸ ತೊಡಗಿತು. ॥ ೧೦ ॥ ಆಗ ಚಂಡಮಾರುತದಿಂದಾಗಿ ಭೀಕರವಾದ ಶಬ್ದವಾಗುತ್ತಿದ್ದಾಗ ಆಕಾಶದಲ್ಲಿ ಕಾರ್ಮೋಡಗಳು ಕವಿದವು. ಕೋಲ್ಮಿಂಚುಗಳು ಕಾಣಿಸಿಕೊಂಡು ಭಯಂಕರವಾದ ಮೇಘ ಗರ್ಜನೆಯೊಂದಿಗೆ ರಥದ ನೊಗದಷ್ಟು ದಪ್ಪವಾದ ಜಲಧಾರೆಗಳು ಸುರಿಯತೊಡಗಿದವು. ॥೧೧॥ ಇಷ್ಟೇ ಅಲ್ಲ, ನಾಲ್ಕೂ ಕಡೆಗಳಿಂದ ಭೂಮಿಯನ್ನು ನುಂಗಿಹಾಕುವ ಉಕ್ಕೇರಿದ ಕಡಲುಗಳು ಮಾರ್ಕಂಡೇಯರಿಗೆ ಕಾಣಿಸಿಕೊಂಡವು. ಬಿರುಗಾಳಿಯು ವೇಗ ದಿಂದ ಸಮುದ್ರದಲ್ಲಿ ದೊಡ್ಡ-ದೊಡ್ಡ ಅಲೆಗಳು ಉದ್ಭವಿಸಿ ಉಬ್ಬಿ ಬರತೊಡಗಿದವು. ಅವುಗಳಲ್ಲಿ ಭೀಕರವಾದ ಮೊಸಳೆಗಳೂ, ಭಯಂಕರವಾದ ಸುಳಿಗಳೂ, ಭೀಕರವಾದ ಭೋರ್ಗರೆತಗಳೂ ಗೋಚರಿಸಿದವು. ॥ ೧೨ ॥ ಆಗ ಒಳಗೆ-ಹೊರಗೆ ಎಲ್ಲೆಡೆ ನೀರೇ ನೀರು ಕಂಡು ಬರುತ್ತಿತ್ತು. ಆ ಜಲರಾಶಿಯಲ್ಲಿ ಪೃಥಿವಿಯೇ ಅಲ್ಲ, ಸ್ವರ್ಗವು ಮುಳುಗಿ ಹೋಗುವಂತೆ ಅನಿಸುತ್ತಿತ್ತು. ಮೇಲಿಂದ ಅತ್ಯಂತ ವೇಗವಾಗಿ ಚಂಡಮಾರುತ ಬೀಸುತ್ತಿದ್ದು, ಗುಡುಗು ಸಿಡಿಲು ಬಡಿಯುತ್ತಿತ್ತು. ಅದರಿಂದ ಸಮಸ್ತ ಜಗತ್ತು ಕಂಗೆಟ್ಟಿತು. ಈ ಜಲ-ಪ್ರಳಯದಿಂದ ಇಡೀ ಪೃಥಿವಿಯು ಮುಳುಗಿಹೋಯಿತು. ಉದ್ಭಿಜ್ಜ, ಸ್ವೇದಜ, ಅಂಡಜ, ಜರಾಯುಜ ಎಂಬ ನಾಲ್ಕು ಪ್ರಕಾರದ ಜೀವಿಗಳು ಹಾಗೂ ಸ್ವತಃ ಅವರೂ ತಳಮಳಗೊಂಡರು. ಮಾರ್ಕಂಡೇಯರು ಈ ಭೀಕರ ದೃಶ್ಯವನ್ನು ನೋಡಿ ಅತ್ಯಂತ ಭಯಗೊಂಡರು. ॥ ೧೩.॥ ಅವರ ಇದಿರಿಗೇ ಪ್ರಳಯ ಸಮುದ್ರ ದಲ್ಲಿ ಭಯಂಕರ ಅಲೆಗಳು ಏಳುತ್ತಿದ್ದವು. ಚಂಡಮಾರುತವು ನೀರನ್ನು ಅಲ್ಲೋಲಕಲ್ಲೋಲ ಮಾಡುತ್ತಿತ್ತು. ಪ್ರಳಯಕಾಲದ ಮೇಘಗಳು ನೀರನ್ನು ಸುರಿಸಿ ಸಮುದ್ರವನ್ನು ತುಂಬುತ್ತಿದ್ದವು. ದ್ವೀಪ, ವರ್ಷ ಮತ್ತು ಪರ್ವತಗಳ ಸಹಿತ ಇಡೀ ಪೃಥಿವಿಯನ್ನು ಸಮುದ್ರವು ಮುಳುಗಿಸಿ ಬಿಟ್ಟಿರುವುದನ್ನು ಅವರು ನೋಡಿ ದರು. ॥ ೧೪ ॥ ಭೂಮಿ, ಅಂತರಿಕ್ಷ, ಸ್ವರ್ಗ, ಜ್ಯೋತಿರ್ಮಂಡಲ (ಗ್ರಹ, ನಕ್ಷತ್ರಗಳೊಂದಿಗೆ) ಮತ್ತು ದಿಕ್ಕುಗಳ ಸಹಿತ ಮೂರು ಲೋಕಗಳೂ ನೀರಿನಲ್ಲಿ ಮುಳುಗಿಹೋದುವು. ಆ ಸಮಯದಲ್ಲಿ ಏಕಮಾತ್ರ ಮಹಾಮುನಿ ಮಾರ್ಕಂಡೇಯರು ಉಳಿದಿದ್ದರು. ಆ ಸಮಯದಲ್ಲಿ ಅವರು ಹುಚ್ಚರಂತಾಗಿ, ಕುರುಡರಂತೆ ಜಟೆಗಳನ್ನು ಕೆದರಿಕೊಂಡು ಅಲ್ಲಿಂದಿಲ್ಲಿಗೆ ಓಡುತ್ತಾ ತನ್ನ ಪ್ರಾಣಗಳನ್ನು ಉಳಿಸಿ ಕೊಳ್ಳಲು ಹೆಣಗಾಡುತ್ತಿದ್ದರು. ॥ ೧೫ ॥ ಹಸಿವು-ಬಾಯಾರಿಕೆ ಗಳಿಂದ ಕಂಗೆಟ್ಟ ಅವರ ಕಡೆಗೆ ಕೆಲವು ಕಡೆಗಳಿಂದ ಮೊಸಳೆಗಳು, ಕೆಲವು ಕಡೆಗಳಿಂದ ದೊಡ್ಡ-ದೊಡ್ಡ ಮೀನು, ತಿಮಿಂಗಲಗಳು ನುಗ್ಗಿ ಬರುತ್ತಿದ್ದವು. ಕೆಲವು ಕಡೆಗಳಿಂದ ಗಾಳಿಯ ಹೊಡೆತ ಬೀಳುತ್ತಿದ್ದರೆ, ಕೆಲವು ಕಡೆಗಳಿಂದ ನುಗ್ಗಿದ ಅಲೆಗಳ ಏಟುಗಳಿಂದ ಗಾಯ ಗೊಂಡರು. ಹೀಗೆ ಅಲ್ಲಿ-ಇಲ್ಲಿ ಅಲೆಯುತ್ತಾ ಅವರು ಅಪಾರ ಅಜ್ಞಾನಾಂಧಕಾರದಲ್ಲಿ ಮುಳುಗಿದರು. ಅವರಿಗೆ ಭೂಮ್ಯಾಕಾಶದ ಜ್ಞಾನವೂ ಇರದೇ ಬಳಲಿ ಬೆಂಡಾಗಿ ಎಚ್ಚರದಪ್ಪಿದರು. ॥ ೧೬ ॥

ಕ್ವಚಿದ್ಗತ್ತೋ ಮಹಾವರ್ತೇ ತರಲೈಸ್ತಾಡಿತಃ ಕ್ವಚಿತ್ ।
ಯಾದೋಭಿರ್ಭಕ್ಷ್ಯತೇ ಕ್ವಾಪಿ ಸ್ವಯಮನ್ಯೋನ್ಯಘಾತಿಭಿಃ
॥ ೧೭ ॥

ಅವರು ಕೆಲವೊಮ್ಮೆ ಭಾರೀ ಸುಳಿಯಲ್ಲಿ ಸಿಕ್ಕಿಕೊಂಡರೆ, ಕೆಲವೊಮ್ಮೆ ತರಂಗಗಳ ಏಟಿನಿಂದ ಕಂಗಾಲಾಗುತ್ತಿದ್ದರು. ಕೆಲವೊಮ್ಮೆ ಜಲ ಜಂತುಗಳು ಪರಸ್ಪರ ಕಾದಾಡುತ್ತಿದ್ದಾಗ ಇವರು ಆಕಸ್ಮಾತ್ತಾಗಿ ಅವುಗಳ ನಡುವೆ ಸಿಕ್ಕಿಹಾಕಿಕೊಳ್ಳುತ್ತಿದ್ದರು. ॥ ೧೭ ॥ ಕೆಲವೊಮ್ಮೆ ಶೋಕಗ್ರಸ್ತರಾದರೆ, ಕೆಲವೊಮ್ಮೆ ಮೋಹಗ್ರಸ್ತರಾಗುತ್ತಿದ್ದರು. ಕೆಲ ವೊಮ್ಮೆ ದುಃಖವೇ ದುಃಖಗಳು ಎದುರಾಗುತ್ತಿದ್ದವು. ಕೆಲವೊಮ್ಮೆ ಸ್ವಲ್ಪವೂ ಸುಖಸಿಗದೆ ಹೋಗುತ್ತಿತ್ತು. ಕೆಲವೊಮ್ಮೆ ಭಯಗೊಂಡು ಸತ್ತಂತಾಗಿ ನಾನಾ ವಿಧದ ರೋಗ-ರುಜಿನಗಳು ಕಾಡುತ್ತಿ ದ್ದವು. ॥ ೧೮ ॥ ಹೀಗೆ ಮಾರ್ಕಂಡೇಯ ಮುನಿಯು ಭಗವಾನ್ ವಿಷ್ಣುವಿನ ಮಾಯೆಯಿಂದ ಮೋಹಿತರಾಗಿದ್ದರು. ಆ ಪ್ರಳಯ ಸಮುದ್ರದಲ್ಲಿ ಅಲೆಯುತ್ತಾ-ಅಲೆಯುತ್ತಾ ನೂರಾರು ಸಾವಿರ, ಲಕ್ಷ ಕೋಟ್ಯಾಂತರ ವರ್ಷಗಳೇ ಕಳೆದುಹೋದುವು. ॥ ೧೯ ॥

ಕ್ವಚಿತ್ಕ್ವಚಿನ್ಮಹಾಕಂ ಕ್ವಚಿನ್ಮೋಹಂ ಕ್ವಚಿದ್ದುಃಖಂ ಸುಖಂ ಭಯಮ್ ।
ಕ್ವಚಿನ್ಮೃತ್ಯುಮವಾಪ್ನೋತಿ ವ್ಯಾಧ್ಯಾದಿಭಿರುತಾರ್ದಿತಃ
॥ ೧೮ ॥

ಅಯುತಾಯುತವರ್ಷಾಣಾಂ ಸಹಸ್ರಾಣಿ ಶತಾನಿ ಚ ।
ವ್ಯತೀಯುರ್ಭ್ರಮತಸ್ತಸ್ಮಿನ್ ವಿಷ್ಣುಮಾಯಾವೃತಾತ್ಮನಃ
॥ ೧೯ ॥

ಸೌನಕರೇ! ಮಾರ್ಕಂಡೇಯ ಮುನಿಗಳು ಹೀಗೆ ಪ್ರಳಯ ಜಲದಲ್ಲಿ ಬಹಳ ಸಮಯದವರೆಗೆ ಅಲೆಯುತ್ತಲೇ ಇದ್ದರು. ಒಮ್ಮೆ ಅವರಿಗೆ ಭೂಮಂಡಲದ ಒಂದು ದಿಣ್ಣೆಯ ಮೇಲೆ ಹಸಿರಾದ ಎಲೆಗಳಿಂದಲೂ, ಕೆಂಪಾದ ಹಣ್ಣುಗಳಿಂದ ಶೋಭಿಸುತ್ತಿರುವ ಒಂದು ಸಣ್ಣ ಆಲದ ಮರವು ಕಾಣಿಸಿತು. ॥ ೨೦ ॥ ಆ ಆಲದ ಮರದ ಈಶಾನ್ಯದ ಮೂಲೆಯಲ್ಲಿ ಒಂದು ಕೊಂಬೆಯಲ್ಲಿ ಎಲೆಗಳ ದೊನ್ನೆಯೊಂದರಲ್ಲಿ ಚೆಲುವಾದ ಒಂದು ಹಸುಗೂಸು ಮಲಗಿರು ವುದನ್ನು ಅವರು ನೋಡಿದರು. ಆ ಶಿಶುವಿನ ಶರೀರದಿಂದ ಉಜ್ವಲವಾದ ಕಾಂತಿಯು ಹೊರಹೊಮ್ಮುತ್ತಿದ್ದು ಅದರ ಸುತ್ತಲಿನ ಅಂಧಕಾರವು ಮಾಯವಾಗಿತ್ತು. ॥ ೨೧ ॥ ಆ ಶಿಶುವು ಮರಕತ ಮಣಿಯಂತೆ ಶ್ಯಾಮಲವರ್ಣವಾಗಿದ್ದು ಮುಖಕಮಲದಿಂದ ಸೌಂದರ್ಯಸಂಪತ್ತು ಪಸರಿಸಿತ್ತು. ಶಂಖವನ್ನು ಹೋಲುವ ಸಿರಿಕಂಠ, ವಿಶಾಲವಾದ ವಕ್ಷಸ್ಥಳ, ಗಿಳಿಯ ಕೊಕ್ಕಿನಂತೆ ಸುಂದರ ವಾದ ಮೂಗು, ಮನೋಹರವಾದ ಹುಬ್ಬುಗಳಿಂದ ಕಂಗೊಳಿಸು ತ್ತಿತ್ತು. ॥ ೨೨ ॥ ಗುಂಗುರು- ಗುಂಗುರಾದ ಕಪ್ಪಾದ ಕೇಶರಾಶಿಯು ಗಲ್ಲ-ಹಣೆಯ ಮೇಲೆ ನರ್ತಿಸುತ್ತಿದ್ದವು. ಕೆಲವೊಮ್ಮೆ ಉಸಿರಾಟದ ಗಾಳಿಯಿಂದ ಅಲುಗಾಡುತ್ತಿದ್ದವು. ಶಂಖದಂತೆ ತಿರುವುಗಳಿದ್ದ ಕಿವಿಗಳಲ್ಲಿ ದಾಳಿಂಬೆಯ ಕೆಂಪಾದ ಹೂವುಗಳು ಶೋಭಿಸುತ್ತಿದ್ದವು. ಪವಳದಂತಿರುವ ಕೆಂಪಾದ ತುಟಿಗಳ ಕಾಂತಿಯಿಂದ ಅಮೃತದಂತೆ ಬೆಳ್ಳಗಿರುವ ಮುಳ್ನಗು ರಂಗೇರಿತ್ತು. ॥ ೨೩ ॥ ತಾವರೆಯ ಒಳ ಭಾಗದಂತೆ ಕೆಂಪಾದ ಕಡೆಗಣ್ಣುಗಳು, ಹೃದ್ಯವಾದ ಹುಸಿನಗೆ ಮತ್ತು ನೋಟಗಳು, ಸುಂದರವಾದ ಸುಳಿ ಹೊಕ್ಕಳು, ತ್ರಿವಳಿಗಳಿಂದ ಕೂಡಿದ ಅರಳಿ ಎಲೆಯಂತೆ ಇದ್ದ ತೆಳುವಾದ ಉದರವು ಉಸಿರಾಟದಿಂದ ಅಲಗುತ್ತಿತ್ತು. ॥ ೨೪ ॥ ಆ ಶಿಶುವು ಕಮನೀಯ ಕೋಮಲವಾದ ಬೆರಳುಗಳಿಂದ ಒಪ್ಪುತ್ತಿದ್ದ ಎರಡೂ ಕರಕಮಲ ಗಳಿಂದ ಒಂದು ಚರಣವನ್ನು ಎತ್ತಿಹಿಡಿದು ಆ ಕಾಲಿನ ಹೆಬ್ಬೆರಳನ್ನು ಬಾಯಲ್ಲಿಟ್ಟುಕೊಂಡು ಚಪ್ಪರಿಸುತ್ತಿತ್ತು. ಈ ದಿವ್ಯ ದೃಶ್ಯವನ್ನು ಕಂಡು ಮಾರ್ಕಂಡೇಯ ಮುನಿಗಳು ಅಚ್ಚರಿಯಿಂದ ಬೆಕ್ಕಸಬೆರ ಗಾದರು. ॥ ೨೫ ॥

ಸ ಕದಾಚಿದ್ವಮನ್ತಸ್ಮಿನ್ ಪೃಥಿವ್ಯಾಃ ಕಕುದಿ ದ್ವಿಜಃ ।
ನ್ಯಗ್ರೋಧಪೋತಂ ದದೃಶೇ ಫಲಪಲ್ಲವಶೋಭಿತಮ್
॥ ೨೦ ॥

ತ್ರ್ಯಗುತ್ತರಸ್ಯಾಂ ಶಾಖಾಯಾಂ ತಸ್ಯಾಪಿ ದದೃಶೇ ಶಿಶುಮ್ ।
ಶಯಾನಂ ಪರ್ಣಪುಟಕೇ ಗ್ರಸಂತಂ ಪ್ರಭಯಾ ತಮಃ
॥ ೨೧ ॥

ಮಹಾಮರಕತಶ್ಯಾಮಂ ಶ್ರೀಮದ್ವದನಪಂಕಜಮ್ ।
ಕಂಬುಗ್ರೀವಂ ಮಹೋರಸ್ಕಂ ಸುನಾಸಂ ಸುಂದರಭ್ರುವಮ್
॥ ೨೨ ॥

ಶ್ಯಾಮೈಜದಲಕಾಭಾತಂ ಕಂಬುಶ್ರೀಕರ್ಣದಾಡಿಮಮ್ ।
ವಿದ್ರುಮಾಧರಭಾಸೇಷಚ್ಛೋಣಾಯಿತಸುಧಾಸ್ಮಿತಮ್
॥ ೨೩ ॥

ಪದ್ಮಗರ್ಭಾರುಣಾಪಾಂಗಂ ಹೃದ್ಯಹಾಸಾವಲೋಕನಮ್ ।
ಶ್ಯಾಮೈಜದ್ದಲಿಸಂವಿಗ್ನನಿಮ್ನನಾಭಿದಲೋದರಮ್
॥ ೨೪ ॥

ಚಾರ್ವಙ್ಗುಲಿಭ್ಯಾಂ ಪಾಣಿಭ್ಯಾಮುನ್ನೀಯ ಚರಣಾಂಬುಜಮ್ ।
ಮುಖೇ ನಿಧಾಯ ವಿಪ್ರೇಂದ್ರೋ ಧಯಂತಂ ವೀಕ್ಷ್ಯ ವಿಸ್ಮಿತಃ
॥ ೨೫ ॥

ತದ್ದರ್ಶನಾದ್ವೀತಪರಿಶ್ರಮೋ ಮುದಾ
ಪ್ರೋತ್ಫುಲ್ಲಹೃತ್ಪದ್ಮವಿಲೋಚನಾಂಬುಜಃ ।
ಪ್ರಹೃಷ್ಟರೋಮಾದ್ಭುತಭಾವಶಂಕಿತಃ
ಪ್ರಷ್ಟುಂ ಪುರಸ್ತಂ ಪ್ರಸಸಾರ ಬಾಲಕಮ್ ॥ ೨೬ ॥

ತಾವಚ್ಛಿಶೋರ್ವೈ ಶ್ವಸಿತೇನ ಭಾರ್ಗವಃ
ಸೋಽಂತಶ್ಶರೀರಂ ಮಶಕೋ ಯಥಾವಿಶತ್ ।
ತತ್ರಾಪ್ಯದೋ ನ್ಯಸ್ತಮಚಷ್ಟ ಕೃತ್ಸ್ನಶೋ
ಯಥಾ ಪುರಾ ಮುಹ್ಯದತೀವ ವಿಸ್ಮಿತಃ ॥ ೨೭ ॥

ಖಂ ರೋದಸೀ ಭಗಣಾನದ್ರಿಸಾಗರಾನ್
ದ್ವೀಪಾನ್ ಸವರ್ಷಾನ್ಕಕುಭಃ ಸುರಾಸುರಾನ್ ।
ವನಾನಿ ದೇಶಾನ್ಸರಿತಃ ಪುರಾಕರಾನ್-
ಖೇಟಾನ್ ವ್ರಜಾನಾಶ್ರಮವರ್ಣವೃತ್ತಯಃ ॥ ೨೮ ॥

ಮಹಾಂತಿ ಭೂತಾನ್ಯಥ ಭೌತಿಕಾನ್ಯಸೌ
ಕಾಲಂ ಚ ನಾನಾಯುಗಕಲ್ಪಕಲ್ಪನಮ್ ।
ಯತ್ಕಿಂಚಿದನ್ಯದ್ವ್ಯವಹಾರಕಾರಣಂ
ದದರ್ಶ ವಿಶ್ವಂ ಸದಿವಾವಭಾಸಿತಮ್ ॥ ೨೯ ॥

ಹಿಮಾಲಯಂ ಪುಷ್ಪವಹಾಂ ಚ ತಾಂ ನದೀಂ
ನಿಜಾಶ್ರಮಂ ತತ್ರ ಋಷೀನಪಶ್ಯತ್ ।
ವಿಶ್ವಂ ವಿಪಶ್ಯನ್ ಶ್ವಸಿತಾಚ್ಛಿಶೋರ್ವೈ
ಬಹಿರ್ನಿರಸ್ತೋ ನ್ಯಪತಲ್ಲಯಾಬ್ಧೌ ॥ ೩೦ ॥

ತಸ್ಮಿನ್ ಪೃಥಿವ್ಯಾಃ ಕಕುದಿ ಪ್ರರೂಢಂ
ವಟಂ ಚ ತತ್ಪರ್ಣಪುಟೇ ಶಯಾನಮ್ ।
ತೋಕಂ ಚ ತತ್ಪ್ರೇಮಸುಧಾಸ್ಮಿತೇನ
ನಿರೀಕ್ಷಿತೋಽಪಾಂಗನಿರೀಕ್ಷಣೇನ ॥ ೩೧ ॥

ಅಥ ತಂ ಬಾಲಕಂ ವೀಕ್ಷ್ಯ ನೇತ್ರಾಭ್ಯಾಂ ಧಿಷ್ಠಿತಂ ಹೃದಿ ।
ಅಭ್ಯಯಾದತಿಸಂಕ್ಲಿಷ್ಟಃ ಪರಿಷ್ವಕ್ತುಮಧೋಕ್ಷಜಮ್ ॥ ೩೨ ॥

ಶೌನಕರೇ ! ಆ ದಿವ್ಯ ಶಿಶುವನ್ನು ದರ್ಶಿಸುತ್ತಲೇ ಮಾರ್ಕಂಡೇಯನ ಬಳಲಿಕೆಯೆಲ್ಲ ಮಾಯವಾಯಿತು. ಪರಮಾನಂದದಿಂದ ಅವರ ಹೃದಯಕಮಲ ಮತ್ತು ನೇತ್ರಕಮಲಗಳು ಅರಳಿಕೊಂಡವು. ದೇಹವೆಲ್ಲ ರೋಮಾಂಚಿತವಾಯಿತು. ಪರಮಾದ್ಭುತವಾದ ಆ ಎಳೆಗೂಸಿನ ಅಮೃತಮಯಭಾವವನ್ನು ನೋಡಿ ಅವರ ಮನಸ್ಸಿನಲ್ಲಿ – 'ಈ ಮಗು ಯಾರು ?' ಎಂಬ ಅನೇಕ ಶಂಕೆಗಳು ಉಂಟಾಗಿ, ಆ ಶಿಶುವಿನ ಬಳಿಯೇ ಕೇಳಿಬಿಡೋಣವೆಂದು ಮುಂದೆ ಸರಿದರು. ॥ ೨೬ ॥ ಮಾರ್ಕಂಡೇಯರು ಇನ್ನೇನು ಅದರ ಸಮೀಪಕ್ಕೆ ತಲುಪುವಷ್ಟರಲ್ಲಿ ಅದರ ಉಸಿರಿನೊಂದಿಗೆ ಮುನಿಯು ಸೊಳ್ಳೆಯಂತೆ ಅದರ ಶರೀರದೊಳಗೆ ಸೆಳೆಯಲ್ಪಟ್ಟರು. ಶಿಶುವಿನ ಹೊಟ್ಟೆಯೊಳಗೆ ಸೇರಿದ ಅವರು ಅಲ್ಲಿ ಪ್ರಳಯಕ್ಕೆ ಮೊದಲಿದ್ದಂತಹ ಸಮಗ್ರ ಸೃಷ್ಟಿಯನ್ನು ನೋಡಿದರು. ಈ ವಿಚಿತ್ರ ದೃಶ್ಯವನ್ನು ನೋಡಿದ ಅವರು ಆಶ್ಚರ್ಯಚಕಿತರಾದರು. ಮೋಹವಶದಿಂದ ಯಾವುದನ್ನೂ ಯೋಚಿಸದಾದರು. ॥ ೨೭ ॥ ಅವರು ಆ ಶಿಶುವಿನ ಉದರದಲ್ಲಿ ಆಕಾಶ, ಅಂತರಿಕ್ಷ, ಜ್ಯೋತಿಮಂಡಲ, ಪರ್ವತ, ಸಮುದ್ರ, ದ್ವೀಪ, ವರ್ಷ, ದಿಕ್ಕುಗಳು, ದೇವತೆಗಳು, ದೈತ್ಯರು, ವನ, ದೇಶ, ನದಿಗಳು, ನಗರ, ಗಣಿಗಳು, ರೈತರ ಊರುಗಳು, ಗೊಲ್ಲರು ವಾಸಿಸುವ ಕೇರಿಗಳು, ಆಶ್ರಮಗಳು, ವರ್ಣಗಳು, ಅವರ ಆಚಾರ-ವ್ಯವಹಾರ, ಪಂಚಮಹಾಭೂತಗಳು, ಭೂತಗಳಿಂದ ಉಂಟಾದ ಪ್ರಾಣಿಗಳ ಶರೀರಗಳು ಹಾಗೂ ಪದಾರ್ಥಗಳು, ಅನೇಕಯುಗಗಳು, ಕಲ್ಪಗಳ ಭೇದಗಳಿಂದ ಕೂಡಿದ ಕಾಲ ಮುಂತಾದವೆಲ್ಲವನ್ನೂ ನೋಡಿದರು. ಕೇವಲ ಇಷ್ಟೇ ಅಲ್ಲ ; ಯಾವ ದೇಶ, ವಸ್ತು, ಕಾಲಗಳ ಮೂಲಕ ಜಗತ್ತಿನ ವ್ಯವಹಾರಗಳು ನಡೆಯುತ್ತಿವೆಯೋ ಅದೆಲ್ಲವನ್ನೂ ಕಂಡರು. ಹೆಚ್ಚೇನು ಹೇಳಲಿ? ಸಮಸ್ತ ವಿಶ್ವವು ಸತ್ಯವಾಗಿ ಇರುವಂತೆ ಅವರಿಗೆ ಅಲ್ಲಿ ಕಂಡು ಬಂತು. ॥ ೨೮-೨೯ ॥ ಹಿಮಾಲಯ ಪರ್ವತ, ಪುಷ್ಪಭದ್ರಾನದಿ, ಅದರ ದಡದಲ್ಲಿರುವ ತನ್ನ ಆಶ್ರಮ ಮತ್ತು ವಾಸಿಸುವ ಋಷಿಗಳನ್ನು ಕೂಡ ಮಾರ್ಕಂಡೇಯರು ಪ್ರತ್ಯಕ್ಷವಾಗಿ ಕಂಡರು. ಹೀಗೆ ಸಮಸ್ತ ವಿಶ್ವವನ್ನು ನೋಡು-ನೋಡುತ್ತಾ ಇರುವಾಗಲೇ ಆ ದಿವ್ಯ ಶಿಶುವಿನ ಶ್ವಾಸದ ಮೂಲಕ ಹೊರಗೆ ಬಂದು ಪುನಃ ಪ್ರಳಯದ ಸಮುದ್ರದಲ್ಲಿ ಬಿದ್ದರು. ॥ ೩೦ ॥ ಮತ್ತೆ ಅವರು ಸಮುದ್ರದ ಮಧ್ಯದ ದಿಣ್ಣೆಯಲ್ಲಿದ್ದ ಅದೇ ಆಲದ ಮರ ಮೊದಲಿದ್ದಂತೆ ಇರುವುದನ್ನು ಹಾಗೂ ಅದರ ಎಲೆಯ ಮೇಲೆ ಮಲಗಿದ್ದ ಶಿಶುವನ್ನು ನೋಡಿದರು. ಅದರ ತುಟಿಗಳಲ್ಲಿ ಪ್ರೇಮಾಮೃತದಿಂದ ತುಂಬಿದ ಮಂದವಾದ ಮುಗುಳ್ನಗೆ ಇದ್ದು, ತನ್ನ ಪ್ರೇಮಪೂರ್ಣ ನೋಟದಿಂದ ಅದು ಮಾರ್ಕಂಡೇಯನ ಕಡೆಗೆ ನೋಡುತ್ತಿತ್ತು. ॥ ೩೧ ॥ ಈಗ ಮಾರ್ಕಂಡೇಯ ಮುನಿಯು ಶಿಶುರೂಪದಿಂದ ಕ್ರೀಡಿಸುತ್ತಿದ್ದ ಕಣ್ಣುಗಳ ಮೂಲಕ ಮೊದಲೇ ಹೃದಯದಲ್ಲಿ ವಿರಾಜಮಾನನಾಗಿದ್ದ ಇಂದ್ರಿಯಾತೀತನಾದ ಭಗವಂತನನ್ನು ಆಲಿಂಗಿಸಿಕೊಳ್ಳಲು ಅತ್ಯಂತ ಪರಿಶ್ರಮದಿಂದ ಮುಂದಕ್ಕೆ ಸರಿದರು. ॥ ೩೨ ॥

ತಾವತ್ ಸ ಭಗವಾನ್ ಸಾಕ್ಷಾತ್
ಯೋಗಾಧೀಶೋ ಗುಹಾಶಯಃ ।
ಅಂತರ್ದಧ ಋಷೇಃ ಸದ್ಯೋ
ಯಥೇಹಾನೀಶನಿರ್ಮಿತಾ ॥ ೩೫ ॥

ತಮನ್ವಥ ವಟೋ ಬ್ರಹ್ಮನ್ ಸಲಿಲಂ ಲೋಕಸಂಪ್ಲವಃ ।
ತಿರೋಧಾಯಿ ಕ್ಷಣಾದಸ್ಯ ಸ್ವಾಶ್ರಮೇ ಪೂರ್ವವತ್ಸ್ಥಿತಃ
॥ ೩೪ ॥

ಆದರೆ ಶೌನಕರೇ! ಭಗವಂತನು ಕೇವಲ ಯೋಗಿಗಳಿಗೇ ಅಲ್ಲ, ಸಾಕ್ಷಾತ್ ಯೋಗಕ್ಕೂ, ಸ್ವಾಮಿ ಮತ್ತು ಎಲ್ಲರ ಹೃದಯಗಳಲ್ಲಿ ವಾಸವಾಗಿರುವನು. ಈಗ ಮಾರ್ಕಂಡೇಯ ಮುನಿಗಳು ಅವನ ಬಳಿಗೆ ತಲುಪುವಷ್ಟರಲ್ಲಿ ಕೂಡಲೇ ಅಂತರ್ಧಾನ ಹೊಂದಿದನು. ಮಹರ್ಷಿಗಳ ಉದ್ದೇಶವು ದುರದೃಷ್ಟಶಾಲಿಯಾದ ದರಿದ್ರನ ಪ್ರಯತ್ನದಂತೆ ವ್ಯರ್ಥವಾಗಿ ಬಿಟ್ಟಿತು. ॥ ೩೫. ॥ ಶೌನಕರೇ! ಆ ಶಿಶುವು ಅಂತರ್ಧಾನವಾಗುತ್ತಲೇ ಆ ಆಲದಮರ ಹಾಗೂ ಪ್ರಳಯದ ದೃಶ್ಯ, ನೀರು ಅದೃಶ್ಯವಾಗಿ ಬಿಟ್ಟಿತು. ಮಾರ್ಕಂಡೇಯ ತಾನು ಮೊದಲಿನಂತೆ ತನ್ನ ಆಶ್ರಮದಲ್ಲಿ ಕುಳಿತಿರುವಂತೆ ಗೋಚರಿಸಿತು. ॥ ೩೪ ॥

ಒಂಬತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ
ಮಾಯಾದರ್ಶನಂ ನಾಮ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಮಾರ್ಕಂಡೇಯರಿಗೆ ಭಗವಾನ್ ಶಂಕರನ ವರದಾನ

ಸೂತ ಉವಾಚ

ಸ ಏವಮನುಭೂಯೇದಂ ನಾರಾಯಣವಿನಿರ್ಮಿತಮ್ ।
ವೈಭವಂ ಯೋಗಮಾಯಾಯಾಸ್ತಮೇವ ಶರಣಂ ಯಯೌ
॥ ೧ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಆ ಮಾರ್ಕಂಡೇಯ ಮುನಿಗಳು ನಾರಾಯಣನು ತೋರಿದ ಮಾಯಾಪ್ರಭಾವವನ್ನು ಹೀಗೆ ಅನುಭವಿಸಿ, ಆ ಮಾಯೆಯನ್ನು ದಾಟಲು ಮಾಯಾಧಿಪತಿಯಾದ ಭಗವಂತನಲ್ಲಿ ಶರಣಾಗುವುದು. ಒಂದೇ ಉಪಾಯವೆಂದರಿತು, ಆತನಲ್ಲಿ ಶರಣಾದರು. ॥ ೧ ॥

ಮಾರ್ಕಂಡೇಯ ಉವಾಚ

ಪ್ರಪನ್ನೋಽಸ್ಮ್ಯಂಘ್ರಿಮೂಲಂ ತೇ ಪ್ರಪನ್ನಾಭಯದಂ ಹರೇ ।
ಯನ್ಮಾಯಯಾಪಿ ವಿಬುಧಾ ಮುಹ್ಯಂತಿ ಜ್ಞಾನಕಾಶಯಾ
॥ ೨ ॥

ಮಾರ್ಕಂಡೇಯರು ಹೇಳಿದರು – ಪ್ರಭೋ! ನಿನ್ನ ಮಾಯೆಯು ವಾಸ್ತವವಾಗಿ ಪ್ರತೀತಿಮಾತ್ರವಾಗಿದ್ದರೂ ಸತ್ಯ ಜ್ಞಾನದಂತೆ ಪ್ರಕಾಶಿತವಾಗುತ್ತದೆ ಮತ್ತು ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಅದರ ಆಟದಲ್ಲಿ ಮೋಹಿತರಾಗುತ್ತಾರೆ. ನಿನ್ನ ಶ್ರೀಚರಣ ಕಮಲಗಳೇ ಶರಣಾಗತರಿಗೆ ಎಲ್ಲ ವಿಧದಿಂದ ಅಭಯಪ್ರದಾನ ಮಾಡುತ್ತಿವೆ. ಅದಕ್ಕಾಗಿ ನಾನೂ ಅವುಗಳಿಗೆ ಶರಣಾಗುತ್ತೇನೆ. ॥ ೨ ॥

ಸೂತ ಉವಾಚ

ತಮೇವಂ ನಿಭೃತಾತ್ಮಾನಂ ವೃಷೇಣ ದಿವಿ ಪರ್ಯಟನ್ ।
ರುದ್ರಾಣ್ಯಾ ಭಗವಾನ್ ರುದ್ರೋ ದದರ್ಶ ಸ್ವಗಣೈರ್ವೃತಃ
॥ ೩ ॥

ಅಥೋಮಾ ತಮೃಷಿಂ ವೀಕ್ಷ್ಯ ಗಿರಿಶಂ ಸಮಭಾಷತ ।
ಪಶ್ಯೇಮಂ ಭಗವನ್ನಿಭ್ರಂ ನಿಭೃತಾತ್ಮೇಂದ್ರಿಯಾಶಯಮ್
॥ ೪ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಆ ಮಾರ್ಕಂಡೇಯ ಮುನಿಗಳು ನಾರಾಯಣನು ತೋರಿದ ಮಾಯಾಪ್ರಭಾವವನ್ನು ಹೀಗೆ ಅನುಭವಿಸಿ, ಆ ಮಾಯೆಯನ್ನು ದಾಟಲು ಮಾಯಾಧಿಪತಿಯಾದ ಭಗವಂತನಲ್ಲಿ ಶರಣಾಗುವುದು. ಒಂದೇ ಉಪಾಯವೆಂದರಿತು, ಆತನಲ್ಲಿ ಶರಣಾದರು. ॥ ೧ ॥

ಮಾರ್ಕಂಡೇಯರು ಹೇಳಿದರು – ಪ್ರಭೋ! ನಿನ್ನ ಮಾಯೆಯು ವಾಸ್ತವವಾಗಿ ಪ್ರತೀತಿಮಾತ್ರವಾಗಿದ್ದರೂ ಸತ್ಯ ಜ್ಞಾನದಂತೆ ಪ್ರಕಾಶಿತವಾಗುತ್ತದೆ ಮತ್ತು ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಅದರ ಆಟದಲ್ಲಿ ಮೋಹಿತರಾಗುತ್ತಾರೆ. ನಿನ್ನ ಶ್ರೀಚರಣ ಕಮಲಗಳೇ ಶರಣಾಗತರಿಗೆ ಎಲ್ಲ ವಿಧದಿಂದ ಅಭಯಪ್ರದಾನ ಮಾಡುತ್ತಿವೆ. ಅದಕ್ಕಾಗಿ ನಾನೂ ಅವುಗಳಿಗೆ ಶರಣಾಗುತ್ತೇನೆ. ॥ ೨ ॥

ಸೂತಪುರಾಣಿಕರು ಹೇಳುತ್ತಾರೆ – ಮಾರ್ಕಂಡೇಯರು ಹೀಗೆ ಶರಣಾಗತಿಯ ಭಾವದಲ್ಲಿ ತನ್ಮಯರಾಗಿದ್ದಾಗ ಭಗವಾನ್ ಶಂಕರನು ಭಗವತಿ ಪಾರ್ವತಿಯೊಂದಿಗೆ ನಂದಿಯಮೇಲೆ ಕುಳಿತುಕೊಂಡು ಆಕಾಶಮಾರ್ಗವಾಗಿ ಸಂಚರಿಸುತ್ತಾ ಆ ದಾರಿಯಿಂದ ಹೋಗುತ್ತಿರುವಾಗ ಮಾರ್ಕಂಡೇಯರನ್ನು ಆ ಸ್ಥಿತಿಯಲ್ಲಿ ನೋಡಿದನು. ಅವನೊಂದಿಗೆ ಬಹಳಷ್ಟು ಗಣಗಳೂ ಸುತ್ತುವರೆದಿದ್ದರು. ॥ ೩ ॥ ಭಗವತಿ ಪಾರ್ವತಿಯು ಮಾರ್ಕಂಡೇಯ ಮುನಿಯ ಧ್ಯಾನಸ್ಥಿತಿಯನ್ನು ನೋಡಿದಾಗ ಅಕೆಯ ಹೃದಯ ವಾತ್ಸಲ್ಯದಿಂದ ತುಂಬಿಬಂತು. ಅಕೆಯು ಶಂಕರನಲ್ಲಿ ಹೇಳಿದಳು – ಸ್ವಾಮಿ, ಭಗವಂತನೇ! ಸ್ವಲ್ಪ ಈ ಬ್ರಾಹ್ಮಣನ ಕಡೆಗೆ ನೋಡಿರಲ್ಲ!

ನಿಭೃತೋದರುಷವ್ರಾತಂ ವಾತಾಪಾಯೇ ಯಥಾರ್ಣವಮ್ ।
ಕುರ್ವಸ್ಯ ತಪಸಃ ಸಾಕ್ಷಾತ್ ಸಂಸಿದ್ದಿಂ ಸಿದ್ದಿದೋ ಭವಾನ್
॥ ೫ ॥

ಶ್ರೀಭಗವಾನುವಾಚ

ನೈವೇಚ್ಛತ್ಯಾಶಿಷಃ ಕ್ವಾಪಿ ಬ್ರಹ್ಮರ್ಷಿರ್ಮೋಕ್ಷಮಪ್ಯುತ ।
ಭಕ್ತಿಂ ಪರಾಂ ಭಗವತಿ ಲಬ್ಧವಾನುರುಷೇऽವ್ಯಯೇ
॥ ೬ ॥

ಅಥಾಪಿ ಸಂವದಿಷ್ಯಾಮೋ ಭವಾನ್ಯೇತೇನ ಸಾಧುನಾ ।
ಅಯಂ ಹಿ ಪರಮೋ ಲಾಭೋ ನೃಣಾಂ ಸಾಧುಸಮಾಗಮಃ
॥ ೭ ॥

ಸೂತ ಉವಾಚ

ಇತ್ಯುಕ್ತ್ವಾತಮುಪೇಯಾಯ ಭಗವಾನ್ ಸ ಸತಾಂ ಗತಿಃ ।
ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವದೇಹಿನಾಮ್
॥ ೮ ॥

ತಯೋರಾಗಮನಂ ಸಾಕ್ಷಾದೀಶಯೋರ್ಜಗದಾತ್ಮನೋಃ ।
ನ ವೇದ ರುದ್ಧಧೀವೃತ್ತಿರಾತ್ಮಾನಂ ವಿಶ್ವಮೇವ ಚ
॥ ೯ ॥

ಭಗವಾನ್ಸ್ತದಭಿಜ್ಞಾಯ ಗಿರೀಶೋ ಯೋಗಮಾಯಯಾ ।
ಆವಿಶತ್ತದ್ಗುಹಾಕಾಶಂ ವಾಯುಶ್ಛಿದ್ರಮಿವೇಶ್ವರಃ
॥ ೧೦ ॥

ಆತ್ಮನ್ಯಪಿ ಶಿವಂ ಪ್ರಾಪ್ತಂ ತಡಿತ್ಪಿಂಗಜಟಾಧರಮ್ ।
ತ್ರ್ಯಕ್ಷಂ ದಶಭುಜಂ ಪ್ರಾಂಶುಮುದ್ಯಂತಮಿವ ಭಾಸ್ಕರಮ್
॥ ೧೧ ॥

ವ್ಯಾಘ್ರಚರ್ಮಾಂಬರಧರಂ ಶೂಲಖಟ್ವಾಂಗ ಚರ್ಮಭಿಃ ।
ಅಕ್ಷಮಾಲಾಡಮರುಕಕಪಾಲಾಸಿಧನುಃ ಸಹ
॥ ೧೨ ॥

ಚಂಡಮಾರುತವು ಶಾಂತವಾದಾಗ ಸಮುದ್ರದ ಅಲೆಗಳು ಮತ್ತು ಮೀನುಗಳು ಶಾಂತವಾಗಿ ಗಂಭೀರವಾಗುವಂತೆಯೇ ಈ ಬ್ರಾಹ್ಮಣನ ಶರೀರ, ಇಂದ್ರಿಯಗಳು ಮತ್ತು ಅಂತಃಕರಣಗಳು ಶಾಂತವಾಗಿ ಬಿಟ್ಟಿವೆ. ಸಮಸ್ತ ಸಿದ್ಧಿಗಳನ್ನು ಕೊಡುವವರು ತಾವೇ ಆಗಿರುವಿರಲ್ಲ. ಅದಕ್ಕಾಗಿ ಕೃಪೆಗೈದು ನೀವು ಈ ಬ್ರಾಹ್ಮಣನ ತಪಸ್ಸಿನ ಪ್ರತ್ಯಕ್ಷ ಫಲವನ್ನು ಕೊಟ್ಟುಬಿಡಿರಿ. ॥ ೪-೫ ॥

ಭಗವಾನ್ ಶಂಕರನು ಹೇಳಿದನು – ದೇವಿ ! ಈ ಮಹರ್ಷಿಯು ಲೋಕ ಅಥವಾ ಪರಲೋಕದ ಯಾವುದೇ ವಸ್ತುವನ್ನು ಬಯಸುವುದಿಲ್ಲ, ಇಷ್ಟೇ ಅಲ್ಲ, ಇವರ ಮನಸ್ಸಿನಲ್ಲಿ ಮೋಕ್ಷದ ಇಚ್ಛೆಯೂ ಎಂದಿಗೂ ಉಂಟಾಗುವುದಿಲ್ಲ, ಏಕೆಂದರೆ, ಅವಿನಾಶಿಯಾದ ಭಗವಂತನ ಚರಣಕಮಲಗಳಲ್ಲಿ ಇವರು ಪರಾಭಕ್ತಿಯನ್ನು ಪಡೆದು ಕೊಂಡಿರುವರು. ॥ ೬ ॥ ಪ್ರಿಯೇ ! ಇವರಿಗೆ ನಮ್ಮ ಯಾವುದೇ ಅವಶ್ಯಕತೆ ಇಲ್ಲದಿದ್ದರೂ ನಾನು ಇವರೊಂದಿಗೆ ಮಾತನಾಡುವೆನು. ಏಕೆಂದರೆ, ಇವರು ಮಹಾತ್ಮರಾಗಿದ್ದಾರೆ. ಎಲ್ಲ ಜೀವರಿಗೆ ಸಂತ-ಸತ್ಪುರುಷರ ಸಮಾಗಮವೇ ಎಲ್ಲಕ್ಕಿಂತ ಮಿಗಿಲಾದ ಲಾಭದ ವಸ್ತುವಾಗಿದೆ. ॥ ೭ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ ! ಭಗವಾನ್ ಶಂಕರನು ಸಮಸ್ತ ವಿದ್ಯೆಗಳ ಪ್ರವರ್ತಕನೂ, ಸಮಸ್ತ ಪ್ರಾಣಿಗಳ ಹೃದಯಗಳಲ್ಲಿ ವಿರಾಜಮಾನನಾದ ಅಂತರ್ಯಾಮಿ ಪ್ರಭುವಾಗಿರುವನು. ಜಗತ್ತಿನಲ್ಲಿ ಇರುವ ಎಲ್ಲ ಸಂತರಿಗೆ ಏಕಮಾತ್ರ ಆಶ್ರಯವೂ, ಆದರ್ಶನೂ ಅವನೇ ಆಗಿರುವನು. ಭಗವತಿ ಪಾರ್ವತಿಯಲ್ಲಿ ಹೀಗೆ ಹೇಳಿ ಭಗವಾನ್ ಶಂಕರನು ಮಾರ್ಕಂಡೇಯರ ಬಳಿಗೆ ಬಂದನು. ॥ ೮ ॥ ಆ ಸಮಯದಲ್ಲಿ ಮಾರ್ಕಂಡೇಯ ಮುನಿಯ ಸಮಸ್ತ ಮನೋವೃತ್ತಿಗಳು ಭಗವದ್ಭಾವದಲ್ಲಿ ತನ್ಮಯವಾಗಿದ್ದವು. ಆವರಿಗೆ ತನ್ನ ಶರೀರ ಮತ್ತು ಜಗತ್ತಿನ ಕುರಿತು ಯಾವ ಪ್ರಜ್ಞೆಯೂ ಇರಲಿಲ್ಲ. ಆದುದರಿಂದ ಆವರು ತನ್ನ ಇದಿರಿಗೆ ಸಮಸ್ತ ವಿಶ್ವದ ಆತ್ಮನಾದ ಸಾಕ್ಷಾತ್ ಭಗವಾನ್ ಗೌರೀಶಂಕರನು ದಯಮಾಡಿಸಿರುವನು ಎಂಬುದನ್ನೂ ತಿಳಿಯದೇ ಹೋದರು. ॥ ೯ ॥ ಶೌನಕರೇ ! ಮಾರ್ಕಂಡೇಯ ಮುನಿಯು ಈಗ ಯಾವ ಸ್ಥಿತಿಯಲ್ಲಿರುವನು ಎಂಬ ಸಂಗತಿ ಸರ್ವಶಕ್ತನಾದ ಭಗವಾನ್ ಕೈಲಾಸಪತಿಗೆ ತಿಳಿಯದೆ ಇರಲಿಲ್ಲ. ಆದಕ್ಕಾಗಿ ವಾಯುವು ಆಕಾಶದಲ್ಲಿ ಅನಾಯಾಸವಾಗಿ ಪ್ರವೇಶಿಸುವಂತೆ ಶಿವನು ತನ್ನ ಯೋಗಮಾಯೆಯಿಂದ ಮುನಿಯ ಹೃದಯಾಕಾಶದಲ್ಲಿ ಪ್ರವೇಶಿಸಿದನು. ॥ ೧೦ ॥ ತನ್ನ ಹೃದಯದಲ್ಲಾದರೋ ಭಗವಾನ್ ಶಂಕರನ ದರ್ಶನವಾಗುತ್ತಿರುವುದನ್ನು ಮಾರ್ಕಂಡೇಯರು ನೋಡಿದರು. ಪರಶಿವನ ತಲೆಯಲ್ಲಿ ವಿದ್ಯುತ್ತಿನಂತೆ ಹೊಳೆಯುವ ಪಿಂಗಳ ಜಟೆಗಳು ಶೋಭಿಸುತ್ತಿವೆ. ಮೂರು ನೇತ್ರಗಳಿದ್ದು, ಹತ್ತು ಭುಜಗಳಿಂದ ಕೂಡಿದ ದೀರ್ಘವಾದ ಶರೀರವು ಉದಯಕಾಲದ ಸೂರ್ಯನಂತೆ, ತೇಜದಿಂದ ಕೂಡಿದೆ. ॥ ೧೧ ॥ ಶರೀರದ ಮೇಲೆ ವ್ಯಾಘ್ರಾಂಬರ ಧರಿಸಿದ್ದು, ಕೈಗಳಲ್ಲಿ ಶೂಲ, ಖಟ್ವಾಂಗ, ಕತ್ತಿ-ಗುರಾಣಿ, ರುದ್ರಾಕ್ಷಮಾಲೆ, ಡಮರು, ಕಪಾಲ ಮತ್ತು ಧನುಸ್ಸುಗಳನ್ನು ಧರಿಸಿರುವನು. ॥ ೧೨ ॥

ಬಿಭ್ರಾಣಂ ಸಹಸಾ ಭಾತಂ ವಿಚಕ್ಷ್ಯ ಹೃದಿ ವಿಸ್ಮಿತಃ।
ಕಿಮಿದಂ ಕುತ ಏವೇತಿ ಸಮಾಧೇರ್ವಿರತೋ ಮುನಿಃ
॥ ೧೩ ॥

ನೇತ್ರೇ ಉನ್ಮೀಲ್ಯ ದದೃಶೇ ಸಗಣಂ ಸೋಮಯಾऽऽಗತಮ್ ।
ರುದ್ರಂ ತ್ರಿಲೋಕೈಕಗುರುಂ ನನಾಮ ಶಿರಸಾ ಮುನಿಃ
॥ ೧೪ ॥

ತಸ್ಮೈ ಸಪರ್ಯಾಂ ವ್ಯದಧಾತ್ಸಗಣಾಯ ಸಹೋಮಯಾ ।
ಸ್ವಾಗತಾಸನಪಾದ್ಯಾರ್ಘ್ಯಗಂಧಸ್ರಗ್ಧೂಪದೀಪಕೈಃ
॥ ೧೫ ॥

ಅಥ ಚಾತ್ಮಾನುಭಾವೇನ ಪೂರ್ಣಕಾಮಸ್ಯ ತೇ ವಿಭೋ ।
ಕರವಾಮ ಕಿಮೀಶಾನ ಯೇನೇದಂ ನಿರ್ವೃತಂ ಜಗತ್
॥ ೧೬ ॥

ನಮಃ ಶಿವಾಯ ಶಾಂತಾಯ ಸತ್ತ್ವಾಯ ಪ್ರಮೃಡಾಯ ಚ ।
ರಜೋಜುಷೇऽಪ್ಯಘೋರಾಯ ನಮಸ್ತುಭ್ಯಂ ತಮೋಜುಷೇ
॥ ೧೭ ॥

ತನ್ನ ಹೃದಯದಲ್ಲಿ ಅಕಸ್ಮಾತ್ತಾಗಿ ಭಗವಾನ್ ಶಂಕರನ ಈ ರೂಪವನ್ನು ನೋಡಿದ ಮಾರ್ಕಂಡೇಯರಿಗೆ – 'ಇದೇನು ನಾನು ನೋಡುತ್ತಿರುವುದು? ಶಿವನು ಎಲ್ಲಿಂದ ಬಂದನು ? ಎಂಬುದಾಗಿ ಆಶ್ಚರ್ಯಚಕಿತನಾಗಿ ಸಮಾಧಿಯಿಂದ ಬಹಿರ್ಮುಖರಾದರು. ॥ ೧೩ ॥ ಕಣ್ಣು ತೆರೆದು ನೋಡಿದಾಗ ತ್ರಿಲೋಕಗಳಿಗೂ ಏಕಮಾತ್ರ ಗುರುಸ್ವರೂಪನಾದ ಭಗವಾನ್ ಪರಶಿವನು ಪಾರ್ವತಿ ಹಾಗೂ ತನ್ನ ಗಣಗಳೊಂದಿಗೆ ಆಗಮಿಸಿರುವನು. ಅವರು ಭಕ್ತಿಯಿಂದ ಅವರ ಚರಣಗಳಲ್ಲಿ ಮಸ್ತಕವನ್ನಿಟ್ಟು ನಮಸ್ಕರಿಸಿದರು. ॥ ೧೪ ॥ ಅನಂತರ ಮಾರ್ಕಂಡೇಯ ಸ್ವಾಗತ, ಆಸನ, ಪಾದ್ಯ, ಅರ್ಘ್ಯ, ಗಂಧಮಾಲ್ಯಾದಿಗಳಿಂದ ಪುಷ್ಪ, ಧೂಪ, ದೀಪ ಮೊದಲಾದ ಉಪಚಾರಗಳಿಂದ ಭಗವಾನ್ ಶಂಕರನನ್ನು, ಪಾರ್ವತಿಯನ್ನು, ಶಿವಗಣಗಳನ್ನೂ ಪೂಜಿಸಿದನು. ॥ ೧೫ ॥ ಬಳಿಕ ವಂದಿಸಿಕೊಂಡು ಮುನಿಯು ಹೇಳಿದನು – ಸರ್ವವ್ಯಾಪಕನೂ, ಸರ್ವಶಕ್ತನೂ ಆದ ಪ್ರಭುವೇ ! ನೀನು ನಿನ್ನ ಆತ್ಮಾನುಭೂತಿ ಮತ್ತು ಮಹಿಮೆಯಿಂದ ಪೂರ್ಣಕಾಮನಾಗಿರುವೆ. ನಿನ್ನ ಶಾಂತಿ-ಸುಖದಿಂದಲೇ ಸಮಸ್ತ ಜಗತ್ತಿನಲ್ಲಿ ಸುಖ-ಶಾಂತಿಯನ್ನು ವಿಸ್ತಾರಗೊಳಿಸುತ್ತಿರುವೆ. ಇಂತಹ ಸ್ಥಿತಿಯಲ್ಲಿ ನಾನು ನಿನಗೆ ಯಾವ ಸೇವೆ ಮಾಡಲಿ ? ॥ ೧೬ ॥ ನಿನ್ನ ತ್ರಿಗುಣಾತೀತ ಸದಾಶಿವ ಸ್ವರೂಪಕ್ಕೆ ಹಾಗೂ ಸತ್ತ್ವಗುಣದಿಂದ ಕೂಡಿದ ಶಾಂತಸ್ವರೂಪಕ್ಕೆ ನಾನು ನಮಸ್ಕರಿಸುತ್ತೇನೆ. ನಿನ್ನ ರಜೋಗುಣದಿಂದ ಕೂಡಿದ ಸರ್ವ ಪ್ರವರ್ತಕ ಸ್ವರೂಪ ಹಾಗೂ ತಮೋಗುಣದಿಂದ ಕೂಡಿದ ಅಘೋರ ಸ್ವರೂಪವನ್ನು ವಂದಿಸುತ್ತೇನೆ. ॥ ೧೭ ॥

ಸೂತ ಉವಾಚ

ಏವಂ ಸ್ತುತಃ ಸ ಭಗವಾನಾದಿದೇವಃ ಸತಾಂ ಗತಿಃ।
ಪರಿತುಷ್ಟಃ ಪ್ರಸನ್ನಾತ್ಮಾ ಪ್ರಹಸಂಸ್ತಮಭಾಷತ
॥ ೧೮ ॥

ಶ್ರೀಭಗವಾನುವಾಚ

ವರಂ ವೃಣೀಷ್ವ ನಃ ಕಾಮಂ ವರದೇಶಾ ವಯಂ ತ್ರಯಃ।
ಅಮೋಘಂ ದರ್ಶನಂ ಯೇಷಾಂ ಮರ್ತ್ಯೋ ಯದ್ವಿಂದತೇऽಮೃತಮ್
॥ ೧೯ ॥

ಬ್ರಾಹ್ಮಣಾಃ ಸಾಧವಃ ಶಾಂತಾ ನಿಸ್ಸಂಗಾ ಭೂತವತ್ಸಲಾಃ।
ಏಕಾಂತಭಕ್ತಾ ಅಸ್ಮಾಕಂ ನಿರ್ವೈರಾಃ ಸಮದರ್ಶಿನಃ
॥ ೨೦ ॥

ಸಲೋಕಾ ಲೋಕಪಾಲಾಸ್ತಾನ್ವಂದಂತ್ಯರ್ಚಂತ್ಯುಪಾಸತೇ।
ಅಹಂ ಚ ಭಗವಾನ್ ಬ್ರಹ್ಮಾ ಸ್ವಯಂ ಚ ಹರಿರೀಶ್ವರಃ
॥ ೨೧ ॥

ಸೂತಪುರಾಣಿಕರು ಹೇಳಿದರು – ಶೌನಕರೇ ! ಸಂತರ ಪರಮಾಶ್ರಯನಾದ ದೇವಾಧಿದೇವ ಭಗವಾನ್ ಶಂಕರನನ್ನು ಮಾರ್ಕಂಡೇಯರು ಹೀಗೆ ಸ್ತುತಿಸಿದಾಗ ಅವನು ಮುನಿಯ ಮೇಲೆ ಅತ್ಯಂತ ಸಂತುಷ್ಟನಾಗಿ ಪ್ರಸನ್ನ ಚಿತ್ತದಿಂದ ಮುಗುಳುನಗುತ್ತಾ ಇಂತೆಂದನು. ॥ ೧೮ ॥

ಭಗವಾನ್ ಶಂಕರನು ಹೇಳಿದನು – ಮಾರ್ಕಂಡೇಯರೇ! ಬ್ರಹ್ಮಾ, ವಿಷ್ಣು ಮತ್ತು ನಾನು–ನಾವು ಮೂವರೂ ವರವನ್ನು ಕೊಡುವವರ ಸ್ವಾಮಿಗಳಾಗಿದ್ದೇವೆ. ನಮ್ಮ ದರ್ಶನವು ಎಂದಿಗೂ ವ್ಯರ್ಥವಾಗುವುದಿಲ್ಲ. ನಮ್ಮಿಂದಲೇ ಮರಣಧರ್ಮವುಳ್ಳ ಮನುಷ್ಯರು ಅಮೃತತ್ತ್ವವನ್ನು ಪಡೆದುಕೊಳ್ಳುವರು. ಆದ್ದರಿಂದ ನಿಮಗೆ ಇಚ್ಛಿತವಿರುವ ವರವನ್ನು ನನ್ನಿಂದ ಕೇಳಿಕೊಳ್ಳಿರಿ. ॥ ೧೯ ॥ ಬ್ರಾಹ್ಮಣರು ಸ್ವಭಾವದಿಂದಲೇ ಪರೋಪಕಾರಿಗಳೂ, ಶಾಂತಚಿತ್ತರೂ, ಅನಾಸಕ್ತರೂ ಆಗಿರುತ್ತಾರೆ. ಅವರು ಯಾರೊಂದಿಗೂ ವೈರವನ್ನು ಇಟ್ಟುಕೊಳ್ಳುವುದಿಲ್ಲ. ಸಮದರ್ಶಿಗಳಾಗಿದ್ದರೂ ಪ್ರಾಣಿಗಳ ಕಷ್ಟವನ್ನು ನೋಡಿ ಅದರ ನಿವಾರಣೆಗಾಗಿ ಹೃತ್ಪೂರ್ವಕವಾಗಿ ತೊಡಗುತ್ತಾರೆ. ಅವರು ನಮ್ಮ ಅನನ್ಯ ಪ್ರೇಮಿಗಳೂ ಭಕ್ತರೂ ಆಗಿರುವುದೇ ಅವರ ವಿಶೇಷತೆಯಾಗಿದೆ. ॥ ೨೦ ॥ ಸಮಸ್ತ ಲೋಕಗಳು ಮತ್ತು ಲೋಕಪಾಲಕರು ಇಂತಹ ಬ್ರಾಹ್ಮಣರನ್ನು ವಂದಿಸುತ್ತಾ, ಪೂಜೆ- ಉಪಾಸನೆ ಮಾಡುತ್ತಾ ಇರುತ್ತಾರೆ. ಕೇವಲ ಅವರಷ್ಟೇ ಅಲ್ಲ ನಾನು, ಭಗವಾನ್ ಬ್ರಹ್ಮದೇವರು, ಸಾಕ್ಷಾತ್ ಜಗದೊಡೆಯ ವಿಷ್ಣುವೂ ಕೂಡ ಅವರ ಸೇವೆಯಲ್ಲಿ ತೊಡಗಿರುತ್ತೇವೆ. ॥ ೨೧ ॥

ನ ತೇ ಮಯ್ಯಚ್ಯುತೇಽಜೇ ಚ ಭಿದಾಮಣ್ವಪಿ ಚಕ್ಷತೇ ।
ನಾತ್ಮನಶ್ಚ ಜನಸ್ಯಾಪಿ ತದ್ಯುಷ್ಮಾನ್ವಯಮೀಮಹಿ
॥ ೨೨ ॥

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾಶ್ಚೇತನೋಜ್ಝಿತಾಃ ।
ತೇ ಪುನಂತ್ಯುರುಕಾಲೇನ ಯೂಯಂ ದರ್ಶನಮಾತ್ರತಃ
॥ ೨೩ ॥

ಬ್ರಾಹ್ಮಣೇಭ್ಯೋ ನಮಸ್ಯಾಮೋ ಯೇಽಸ್ಯರೂಪಂ ತ್ರಯೀಮಯಮ್ ।
ಬಿಭ್ರತ್ಯಾತ್ಮ ಸಮಾಧಾನತಪಸ್ಸ್ವಾಧ್ಯಾಯಸಂಯಮೈಃ
॥ ೨೪ ॥

ಶ್ರವಣಾದ್ದರ್ಶನಾದ್ಯಾಪಿ ಮಹಾಪಾತಕಿನೋಽಪಿ ವಃ ।
ಶುಧ್ಯೇರನ್ನಂತ್ಯಜಾಶ್ಚಾಪಿ ಕಿಮು ಸಂಭಾಷಣಾದಿಭಿಃ
॥ ೨೫ ॥

ಸೂತ ಉವಾಚ

ಇತಿ ಚಂದ್ರಲಲಾಮಸ್ಯ ಧರ್ಮಗುಹ್ಯೋಪಬೃಂಹಿತಮ್ ।
ವಚೋಽಮೃತಾಯನಮೃಷಿರ್ನಾತೃಪ್ಯತ್ಕರ್ಣಯೋಃ ಪಿಬನ್
॥ ೨೬ ॥

ಸ ಚಿರಂ ಮಾಯಯಾ ವಿಷ್ಣೋರ್ಭ್ರಾಮಿತಃ ಕರ್ಶಿತೋ ಭೃಶಮ್ ।
ಶಿವವಾಗಮೃತಧ್ವಸ್ತಕ್ಲೇಶಪುಂಜಸ್ತಮಬ್ರವೀತ್
॥ ೨೭ ॥

ಋಷಿರುವಾಚ

ಅಹೋ ಈಶ್ವರಲೀಲೇಯಂ ದುರ್ವಿಭಾವ್ಯಾ ಶರೀರಿಣಾಮ್ ।
ಯನ್ನ ಮಂತೀಶಿತವ್ಯಾನಿ ಸ್ತುವಂತಿ ಜಗದೀಶ್ವರಾಃ
॥ ೨೮ ॥

ಧರ್ಮಂ ಗ್ರಾಹಯಿತುಂ ಪ್ರಾಯಃ ಪ್ರವಕ್ತಾರಶ್ಚ ದೇಹಿನಾಮ್ ।
ಆಚರಂತ್ಯನುಮೋದಂತೇ ಕ್ರಿಯಮಾಣಂ ಸ್ತುವಂತಿ ಚ
॥ ೨೯ ॥

ನೈತಾವತಾ ಭಗವತಃ ಸ್ವಮಾಯಾಮಯವೃತ್ತಿಭಿಃ ।
ನ ದುಷ್ಯೇತಾನುಭಾವಸ್ತೈರ್ಮಾಯಿನಃ ಕುಹಕಂ ಯಥಾ
॥ ೩೦ ॥

ಇಂತಹ ಶಾಂತರಾದ ಮಹಾಪುರುಷರು ನನ್ನಲ್ಲಿ, ವಿಷ್ಣು ಭಗವಂತನಲ್ಲಿ, ಬ್ರಹ್ಮದೇವರಲ್ಲಿ, ತಮ್ಮಲ್ಲಿ, ಸರ್ವಥಾ ಏಕರಸವಾದ ಆತ್ಮನನ್ನೇ ದರ್ಶಿಸುತ್ತಾ ಇರುತ್ತಾರೆ. ಅದಕ್ಕಾಗಿ ನಾವು ನಿಮ್ಮಂತಹ ಮಹಾತ್ಮರ ಸ್ತುತಿ-ಸೇವೆ ಮಾಡುತ್ತೇವೆ. ॥ ೨೨ ॥ ಮಾರ್ಕಂಡೇಯನೇ! ಕೇವಲ ಜಲಮಯ ತೀರ್ಥವೇ ತೀರ್ಥವಾಗುವುದಿಲ್ಲ, ಕೇವಲ ಜಡಮೂರ್ತಿಗಳೇ ದೇವತೆ ಗಳಾಗುವುದಿಲ್ಲ, ಎಲ್ಲಕ್ಕಿಂತ ಶ್ರೇಷ್ಠವಾದ ತೀರ್ಥ ಮತ್ತು ದೇವತೆ ನಿಮ್ಮಂತಹ ಸಂತರೇ ಆಗಿರುತ್ತಾರೆ. ಏಕೆಂದರೆ, ಆ ತೀರ್ಥ ಹಾಗೂ ದೇವತೆಗಳು ಬಹಳ ದಿನಗಳಲ್ಲಿ ಪವಿತ್ರವಾಗಿಸುತ್ತವೆ. ಆದರೆ ನಿಮ್ಮಂತಹವರು ದರ್ಶನ ಮಾತ್ರದಿಂದಲೇ ಪವಿತ್ರರಾಗಿಸಿ ಬಿಡುತ್ತೀರಿ. ॥ ೨೩ ॥ ನಾವಾದರೋ ಬ್ರಾಹ್ಮಣರನ್ನೇ ನಮಸ್ಕರಿಸು ತ್ತೇವೆ. ಏಕೆಂದರೆ, ಅವರು ಚಿತ್ತದ ಏಕಾಗ್ರತೆ, ತಪಸ್ಸು, ಸ್ವಾಧ್ಯಾಯ, ಧಾರಣೆ, ಧ್ಯಾನ ಮತ್ತು ಸಮಾಧಿಯ ಮೂಲಕ ನಮ್ಮ ವೇದಮಯ ಶರೀರವನ್ನು ಧರಿಸುತ್ತಾರೆ. ॥ ೨೪ ॥ ಮಾರ್ಕಂಡೇಯರೇ! ಮಹಾಪಾಪಿಗಳೂ, ಅಂತ್ಯಜರೂ ಕೂಡ ನಿಮ್ಮಂತಹ ಮಹಾಪುರುಷರ ಚರಿತ್ರ ಶ್ರವಣದಿಂದ ಹಾಗೂ ದರ್ಶನದಿಂದಲೇ ಶುದ್ಧರಾಗಿ ಹೋಗು ತ್ತಾರೆ. ಹೀಗಿರುವಾಗ ನಿಮ್ಮೊಡನೆ ಸಂಭಾಷಣೆ ಮತ್ತು ಸಹವಾಸ ದಿಂದ ಶುದ್ಧವಾಗುವುದರಲ್ಲಿ ಹೇಳುವುದೇನಿದೆ? ॥ ೨೫ ॥

ಸೂತಪುರಾಣಿಗಳು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಚಂದ್ರಶೇಖರ ಭಗವಾನ್ ಶಂಕರನ ಒಂದೊಂದು ಮಾತು ಧರ್ಮದ ರಹಸ್ಯದಿಂದ ಪರಿಪೂರ್ಣವಾಗಿತ್ತು. ಒಂದೊಂದು ಅಕ್ಷರದಲ್ಲಿಯೂ ಅಮೃತದ ಸಮುದ್ರವೇ ತುಂಬಿತ್ತು. ಮಾರ್ಕಂಡೇಯ ಮುನಿಗಳು ತಮ್ಮ ಕಿವಿಗಳ ಮೂಲಕ ತನ್ಮಯತೆಯಿಂದ ಅದನ್ನು ಪಾನ ಮಾಡುತ್ತಿದ್ದರೂ ಅವರಿಗೆ ತೃಪ್ತಿಯೇ ಆಗಲಿಲ್ಲ ॥ ೨೬ ॥ ಅವರು ಬಹಳಕಾಲದಿಂದ ವಿಷ್ಣುಭಗವಂತನ ಮಾಯೆಯಿಂದ ಅಲೆಯುತ್ತಾ, ಬಹಳ ದಣಿದಿದ್ದರು. ಭಗವಾನ್ ಶಿವನ ಶ್ರೇಯಸ್ಕರ ಅಮೃತಮಯ ವಾಣಿಯನ್ನು ಪಾನಮಾಡಿ ಅವರ ಎಲ್ಲ ಕ್ಲೇಶಗಳು ಕಳೆದು ಹೋದುವು. ಅವರು ಭಗವಾನ್ ಶಂಕರನಲ್ಲಿ ಇಂತೆಂದರು. ॥ ೨೭ ॥

ಮಾರ್ಕಂಡೇಯರು ಹೇಳಿದರು – ಸ್ವಾಮಿ! ನಿಜವಾಗಿಯೂ ಸರ್ವಶಕ್ತನಾದ ಭಗವಂತನ ಲೀಲೆಗಳು ಎಲ್ಲ ಪ್ರಾಣಿಗಳ ಅರಿವಿಗೆ ಬರುವಂತಹುದಲ್ಲ, ಈ ಸಮಸ್ತ ಜಗತ್ತಿನ ಸ್ವಾಮಿಗಳಾಗಿದ್ದರೂ, ತಮ್ಮ ಅಧೀನದಲ್ಲಿರುವ ನಮ್ಮಂತಹ ಜೀವರನ್ನು ತಾವುಗಳು ವಂದಿಸಿ, ಸ್ತುತಿಸುತ್ತಿರುವಿರಲ್ಲ! ॥ ೨೮ ॥ ಧರ್ಮಪ್ರವಚನಕಾರರು ಪ್ರಾಯಶಃ ಪ್ರಾಣಿಗಳಿಗೆ ಧರ್ಮದ ರಹಸ್ಯವನ್ನು ಮತ್ತು ಸ್ವರೂಪ ವನ್ನು ತಿಳಿಸಲಿಕ್ಕಾಗಿಯೇ ಅದನ್ನು ಆಚರಿಸಿ, ಅನುಮೋದಿಸುತ್ತಾರೆ. ಯಾರಾದರೂ ಧರ್ಮವನ್ನು ಆಚರಿಸುತ್ತಿದ್ದರೆ ಅವನನ್ನು ಪ್ರಶಂಸೆ ಮಾಡುತ್ತಾರೆ. ॥ ೨೯ ॥ ಇಂದ್ರಜಾಲಿಕನು ಅನೇಕ ಆಟಗಳನ್ನು ಜನರಿಗೆ ತೋರಿಸುತ್ತಾನೆ ಆದರೆ ಆ ಆಟಗಳಿಂದ ಅವನ ಪ್ರಭಾವ ದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ, ಹಾಗೆಯೇ ನೀವು ನಿಮ್ಮ ಸ್ವಜನಮೋಹಿನೀ ಮಾಯೆಯ ವೃತ್ತಿಗಳನ್ನು ಸ್ವೀಕರಿಸಿ ಯಾರ ನ್ನಾದರೂ ವಂದಿಸಿ, ಸ್ತುತಿಸಿದರೆ ನಿಮ್ಮ ಮಹಿಮೆಯಲ್ಲಿ ಯಾವುದೇ ಕೊರತೆ ಉಂಟಾಗುವುದಿಲ್ಲ ॥ ೩೦ ॥

ಸೃಷ್ಟ್ವೇದಂ ಮನಸಾ ವಿಶ್ವಮಾತ್ಮನಾನುಪ್ರವಿಶ್ಯ ಯಃ ।
ಗುಣೈಃ ಕುರ್ವದ್ಭಿರಾಭಾತಿ ಕರ್ತೇವ ಸ್ವಪ್ನದೃಗ್ಯಥಾ ॥ ೩೧ ॥

ತಸ್ಮೈ ನಮೋ ಭಗವತೇ ತ್ರಿಗುಣಾಯ ಗುಣಾತ್ಮನೇ ।
ಕೇವಲಾಯಾದ್ವಿತೀಯಾಯ ಗುರವೇ ಬ್ರಹ್ಮಮೂರ್ತಯೇ ॥ ೩೨ ॥

ಕಂ ವೃಣೇ ನು ಪರಂ ಭೂಮನ್ವರಂ ತ್ವದ್ವರದರ್ಶನಾತ್ ।
ಯದ್ದರ್ಶನಾತ್ಪೂರ್ಣಕಾಮಃ ಸತ್ಯಕಾಮಃ ಪುಮಾನ್ಭವೇತ್ ॥ ೩೩ ॥

ವರಮೇಕಂ ವೃಣೇಽಥಾಪಿ ಪೂರ್ಣಾತ್ಕಾಮಾಭಿವರ್ಷಣಾತ್ ।
ಭಗವತ್ಯಚ್ಯುತಾಂ ಭಕ್ತಿಂ ತತ್ಪರೇಷು ತಥಾ ತ್ವಯಿ ॥ ೩೪ ॥

ಸೂತ ಉವಾಚ

ಇತ್ಯರ್ಚಿತೋಽಭಿಷ್ಟುತಶ್ಚ ಮುನಿನಾ ಸೂಕ್ತಯಾ ಗಿರಾ ।
ತಮಾಹ ಭಗವಾನ್ ಶರ್ವಃ ಶರ್ವಯಾ ಚಾಭಿನಂದಿತಃ ॥ ೩೫ ॥

ಕಾಮೋ ಮಹರ್ಷೇ ಸರ್ವೋಽಯಂ ಭಕ್ತಿಮಾಂಸ್ತ್ವಮಧೋಕ್ಷಜೇ ।
ಆಕಲ್ಪಾಂತಾದ್ಯಶಃ ಪುಣ್ಯಮಜರಾಮರತಾ ತಥಾ ॥ ೩೬ ॥

ಜ್ಞಾನಂ ತ್ರೈಕಾಲಿಕಂ ಬ್ರಹ್ಮನ್ ವಿಜ್ಞಾನಂ ಚ ವಿರಕ್ತಿಮತ್ ।
ಬ್ರಹ್ಮವರ್ಚಸ್ವಿನೋ ಭೂಯಾತ್ಪುರಾಣಾಚಾರ್ಯತಾಸ್ತು ತೇ ॥ ೩೭ ॥

ಸೂತ ಉವಾಚ

ಏವಂ ವರಾನ್ ಸ ಮುನಯೇ ದತ್ತ್ವಾಗಾತ್ಸ್ವರ್ಗಿಣಾಂ ಗಣೈಃ ।
ದೇವ್ಯೈ ತತ್ಕರ್ಮ ಕಥಯನ್ನನುಭೂತಂ ಪುರಾಮುನಾ ॥ ೩೮ ॥

ಸೋಽಪ್ಯವಾಪ್ತಮಹಾಯೋಗಮಹಿಮಾ ಭಾರ್ಗವೋತ್ತಮಃ ।
ವಿಚರತ್ಯಧುನಾಪ್ಯದ್ಧಾ ಹರಾವೇಕಾಂತತಾಂ ಗತಃ ॥ ೩೯ ॥

ಅನುವರ್ಣಿತಮೇತತ್ತೇ ಮಾರ್ಕಂಡೇಯಸ್ಯ ಧೀಮತಃ ।
ಅನುಭೂತಂ ಭಗವತೋ ಮಾಯಾವೈಭವಮದ್ಭುತಮ್ ॥ ೪೦ ॥

ತಾವು ಸ್ವಪ್ನದೃಷ್ಟಾನಂತೆ ತಮ್ಮ ಮನಸ್ಸಿನಿಂದಲೇ ಸಮಸ್ತ ವಿಶ್ವವನ್ನು ಸೃಷ್ಟಿಮಾಡಿರುವಿರಿ. ಆದರಲ್ಲಿ ಸ್ವತಃ ಪ್ರವೇಶಿಸಿ ಕರ್ತಾ ಅಲ್ಲದಿದ್ದರೂ ಕರ್ಮಮಾಡುವವರ ಗುಣಗಳ ಮೂಲಕ ಕರ್ತೃವಿನಂತೆ ಕಂಡುಬರುವಿರಿ. ॥ ೩೧ ॥ ಭಗವಂತನೇ ! ನೀನು ತ್ರಿಗುಣ ಸ್ವರೂಪನಾಗಿದ್ದರೂ ಅವುಗಳಿಂದ ಅತೀತನಾಗಿದ್ದು ಅವುಗಳ ಆತ್ಮರೂಪದಿಂದ ಸ್ಥಿತನಾಗಿರುವೆ. ನೀನೇ ಸಮಸ್ತ ಜ್ಞಾನದ ಮೂಲನೂ, ನಿರಂಜನನೂ, ಅದ್ವೀತಿಯನೂ, ಬ್ರಹ್ಮಸ್ವರೂಪನು ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೩೨ ॥ ಅನಂತನೇ! ನಿನ್ನ ಶ್ರೇಷ್ಠವಾದ ದರ್ಶನಕ್ಕಿಂತ ಮಿಗಿಲಾದ ವರದಾನವನ್ನು ಬೇಡಿಕೊಳ್ಳುವ ವಸ್ತು ಯಾವುದಿದೆ ? ಮನುಷ್ಯನು ನಿನ್ನ ದರ್ಶನದಿಂದಲೇ ಪೂರ್ಣಕಾಮನೂ ಮತ್ತು ಸತ್ಯಸಂಕಲ್ಪನೂ ಆಗಿಹೋಗುವನು. ॥ ೩೩ ॥ ನೀನು ಸ್ವತಃ ಪರಿಪೂರ್ಣನಾಗಿರುವೆ. ನಿನ್ನ ಭಕ್ತರ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವವನಾಗಿರುವೆ. ಆದಕ್ಕಾಗಿ ನಾನು ನಿನ್ನ ದರ್ಶನಪಡೆದಿದ್ದರೂ ಒಂದು ವರವನ್ನು ಕೇಳುವೆನು. ಭಗವಂತನಲ್ಲಿ, ಅವನ ಶರಣಾಗತ ಭಕ್ತರಲ್ಲಿ ಹಾಗೂ ನಿನ್ನಲ್ಲಿ ನನಗೆ ಅವಿಚಲವಾದ ಭಕ್ತಿಯು ಸದಾಕಾಲ ಇದ್ದುಕೊಂಡಿರಲಿ, ಇಷ್ಟೇ ಸಾಕು. ॥ ೩೪ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ ! ಮಾರ್ಕಂಡೇಯ ಮುನಿಗಳು ಸುಮಧುರ ವಾಣಿಯಿಂದ ಹೀಗೆ ಭಗವಾನ್ ಶಂಕರನ ಸ್ತುತಿ–ಪೂಜೆ ಮಾಡಿದಾಗ ಶಿವನು ಭಗವತಿ ಪಾರ್ವತಿಯ ಪ್ರೇರಣೆಯಿಂದ ಹೀಗೆಂದನು – ॥ ೩೫ ॥ ಮಹರ್ಷಿಗಳೇ ! ನಿಮ್ಮ ಎಲ್ಲ ಕಾಮನೆಗಳು ಪೂರ್ಣವಾಗಲೀ. ಇಂದ್ರಿಯಾತೀತ ಪರಮಾತ್ಮನಲ್ಲಿ ನಿನಗೆ ಅನನ್ಯ ಭಕ್ತಿಯು ಸದಾಕಾಲ ಇದ್ದುಕೊಂಡಿರಲಿ. ಕಲ್ಪದವರೆಗೆ ನಿನ್ನ ಪವಿತ್ರಕೀರ್ತಿಯು ಹರಡಿಕೊಂಡು, ನೀನು ಅಜರ–ಅಮರನಾಗಿಹೋಗು. ॥ ೩೬ ॥ ಬ್ರಾಹ್ಮಣಶ್ರೇಷ್ಠನೇ ! ನಿನ್ನ ಬ್ರಹ್ಮತೇಜವು ಅಕ್ಷುಣ್ಣವಾಗಿರಲಿ. ನಿನಗೆ ಭೂತ, ಭವಿಷ್ಯ, ವರ್ತಮಾನಗಳೆಂಬ ಸರ್ವಕಾಲಗಳ ಜ್ಞಾನವೂ ಉಂಟಾಗಲಿ, ವೈರಾಗ್ಯದಿಂದ ಕೂಡಿದ ಸ್ವರೂಪಸ್ಥಿತಿಯು ಉಂಟಾಗಲಿ. ನಿನಗೆ ಪುರಾಣದ ಆಚಾರ್ಯತ್ವ ಪದವಿಯು ದೊರೆಯಲಿ. ॥ ೩೭ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ ! ಹೀಗೆ ಮುಕ್ಕಣ್ಣನಾದ ಭಗವಾನ್ ಶಂಕರನು ಮಾರ್ಕಂಡೇಯ ಮುನಿಗೆ ವರವನ್ನು ಕೊಟ್ಟು, ಭಗವತಿಪಾರ್ವತಿಗೆ ಮಾರ್ಕಂಡೇಯ ಮುನಿಯ ತಪಸ್ಸು, ಅವರ ಪ್ರಳಯಸಂಬಂಧಿ ಅನುಭವಗಳನ್ನು ವರ್ಣಿಸುತ್ತಾ ಅಲ್ಲಿಂದ ಹೊರಟುಹೋದನು. ॥ ೩೮ ॥ ಭೃಗುವಂಶ ಶಿರೋಮಣಿ ಮಾರ್ಕಂಡೇಯ ಮುನಿಗಳಿಗೆ ಅವರ ಮಹಾಯೋಗದ ಪರಮಫಲವು ಪ್ರಾಪ್ತವಾಗಿತ್ತು. ಅವರು ಭಗವಂತನ ಅನನ್ಯ ಪ್ರೇಮಿಗಳಾದರು. ಈಗಲೂ ಅವರು ಭಕ್ತಿಭಾವತುಂಬಿದ ಹೃದಯದಿಂದ ಭೂಮಿಯಲ್ಲಿ ಸಂಚರಿಸುತ್ತಿರುವರು. ॥ ೩೯ ॥ ಪರಮಜ್ಞಾನಸಂಪನ್ನ ಮಾರ್ಕಂಡೇಯ ಮುನಿಯು ಭಗವಂತನ ಯೋಗಮಾಯೆಯ ಅದ್ಭುತ ಲೀಲೆಯನ್ನು ಹೇಗೆ ಅನುಭವಿಸಿದ್ದರು ? ಎಂಬುದನ್ನು ನಾನು ನಿಮಗೆಲ್ಲ ತಿಳಿಸಿರುವೆನು. ॥ ೪೦ ॥

ಏತತ್ ಕೇಚಿದವಿದ್ವಾಂಸೋ ಮಾಯಾಸಂಸೃತಿಮಾತ್ಮನಃ ।
ಅನಾದ್ಯಾವರ್ತಿತಂ ನೃಣಾಂ ಕಾದಾಚಿತ್ಕಂ ಪ್ರಚಕ್ಷತೇ
॥ ೪೧ ॥

ಶೌನಕರೇ! ಇದಾದರೋ ಮಾರ್ಕಂಡೇಯರು ಅನೇಕ ಕಲ್ಪಗಳ ಸೃಷ್ಟಿ ಪ್ರಳಯಗಳ ಅನುಭವವನ್ನು ಭಗವಂತನ ಮಾಯೆಯ ವೈಭವವೇ ಆಗಿತ್ತು. ತಾತ್ಕಾಲಿಕವಾಗಿತ್ತು ಮತ್ತು ಅವರಿಗಾಗಿಯೇ ಇತ್ತು. ಸರ್ವಸಾಧಾರಣರಿಗಾಗಿ ಅಲ್ಲ. ಕೆಲವರು ಈ ಮಾಯೆಯ ರಚನೆಯನ್ನು ಅರಿಯದೆ ಅನಾದಿಕಾಲದಿಂದ ಆಗಾಗ ಆಗುವಂತಹ ಸೃಷ್ಟಿ-ಪ್ರಳಯಗಳೇ ಇವು ಎಂದು ಹೇಳುತ್ತಾರೆ. (ಅದಕ್ಕಾಗಿ ನೀವುಗಳು ಇದೇ ಕಲ್ಪದ ನಮ್ಮ ಪೂರ್ವಜರಾದ ಮಾರ್ಕಂಡೇಯರ ಆಯುಸ್ಸು ಇಷ್ಟು ದೀರ್ಘವಾಗಿ ಹೇಗಾಯಿತೆಂದು ಶಂಕೆ ಪಡಬಾರದು.) ॥ ೪೧ ॥

ಯ ಏವಮೇತದ್ ಭೃಗುವರ್ಯ ವರ್ಣಿತಂ
ರಥಾಂಗಪಾಣೇರನುಭಾವಭಾವಿತಮ್ ।
ಸಂಶ್ರಾವಯೇತ್ ಸಂಶೃಣುಯಾದು ತಾವುಭೌ
ತಯೋರ್ನ ಕರ್ಮಾಶಯಸಂಸೃತಿರ್ಭವೇತ್ ॥ ೪೨ ॥

ಭೃಗುವಂಶ ಶಿರೋಮಣಿಗಳೇ! ನಾನು ನಿಮಗೆ ಹೇಳಿದ ಮಾರ್ಕಂಡೇಯರ ಚರಿತ್ರೆಯು ಭಗವಾನ್ ಚಕ್ರಪಾಣಿಯ ಪ್ರಭಾವ-ಮಹಿಮೆಗಳಿಂದ ತುಂಬಿ ತುಳುಕ್ತಿದೆ. ಇದನ್ನು ಶ್ರವಣ-ಕೀರ್ತನೆ ಮಾಡುವವರಿಬ್ಬರೂ ಕರ್ಮವಾಸನೆಗಳ ಕಾರಣದಿಂದ ಉಂಟಾಗುವ ಜನ್ಮ-ಮರಣಗಳ ಚಕ್ರದಿಂದ ಬಿಡುಗಡೆ ಹೊಂದುವರು. ॥ ೪೨ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ದಶಮೋऽಧ್ಯಾಯಃ॥ ೧೦ ॥

ಹನ್ನೊಂದನೆಯ ಅಧ್ಯಾಯ

ಭಗವಂತನ ಅಂಗ, ಉಪಾಂಗ ಮತ್ತು ಆಯುಧಗಳ ರಹಸ್ಯ ಹಾಗೂ ಬೇರೆ-ಬೇರೆ ಸೂರ್ಯಗಣಗಳ ವರ್ಣನೆ

ಶೌನಕ ಉವಾಚ

ಅಥೇಮಮರ್ಥಂ ಪೃಚ್ಛಾಮೋ ಭವಂತಂ ಬಹುವಿತ್ತಮಮ್ ।
ಸಮಸ್ತತಂತ್ರರಾದ್ಧಾಂತೇ ಭವಾನ್ಭಾಗವತತತ್ತ್ವವಿತ್
॥ ೧ ॥

ಶೌನಕರು ಕೇಳಿದರು – ಸೂತಪುರಾಣಿಕರೇ! ನೀವು ಭಗವಂತನ ಪರಮಭಕ್ತರೂ ಮತ್ತು ವಿಷಯಗಳನ್ನು ಬಲ್ಲ ಶಿರೋಮಣಿಗಳೂ ಆಗಿರುವಿರಿ. ನಾವುಗಳು ಸಮಸ್ತ ಶಾಸ್ತ್ರಗಳ ಸಿದ್ಧಾಂತದ ಕುರಿತು ತಮ್ಮಲ್ಲಿ ಒಂದು ವಿಶೇಷವಾದ ಪ್ರಶ್ನೆಯನ್ನು ಕೇಳಬೇಕೆಂದಿದ್ದೇವೆ. ಏಕೆಂದರೆ, ನೀವು ಅವುಗಳ ಮರ್ಮಜ್ಞರಾಗಿರುವಿರಿ. ॥ ೧ ॥ ನಾವು ಕ್ರಿಯಾಯೋಗದ ಯಥಾರ್ಥ ಜ್ಞಾನವನ್ನು ಪಡೆಯಲು ಬಯಸುತ್ತಿರುವೆವು. ಏಕೆಂದರೆ, ಅದನ್ನು ಕುಶಲತೆಯಿಂದ ಸರಿಯಾಗಿ ಆಚರಿಸಿದರೆ ಮರಣಧರ್ಮವುಳ್ಳ ಮನುಷ್ಯನು ಅಮರತ್ವವನ್ನು ಪಡೆದುಕೊಳ್ಳುವನು. ಆದ್ದರಿಂದ

ತಾಂತ್ರಿಕಾಃ ಪರಿಚರ್ಯಾಯಾಂ ಕೇವಲಸ್ಯ ಶ್ರಿಯಃ ಪತೇಃ ।
ಅಂಗೋಪಾಂಗಾಯುಧಾಕಲ್ಪಂ ಕಲ್ಪಯಂತಿ ಯಥಾ ಚ ಯೈಃ
॥ ೨ ॥

ತಾವು ಪಾಂಚರಾತ್ರಾದಿ ವಿಧಿಯನ್ನು ಅರಿತಿರುವ ಜನರು ಕೈವಲ್ಯ ಸ್ವರೂಪನಾದ ಶ್ರೀಲಕ್ಷ್ಮೀಪತಿಯಾದ ಭಗವಂತನನ್ನು ಆರಾಧಿಸುವಾಗ ಯಾವ-ಯಾವ ತತ್ತ್ವಗಳಿಂದ ಅವರ ಚರಣಾದಿ ಅಂಗಗಳು, ಗರುಡಾದಿ ಉಪಾಂಗಗಳು, ಸುದರ್ಶನಾದ ಆಯುಧಗಳನ್ನು, ಕೌಸ್ತುಭಾದಿ ಆಭೂಷಣಗಳನ್ನು ಕಲ್ಪಿಸಿಕೊಳ್ಳಬೇಕು? ಎಂಬುದನ್ನು ತಿಳಿಸಿರಿ. ಭಗವಂತನು ನಿಮಗೆ ಮಂಗಳವನ್ನು ಉಂಟುಮಾಡಲಿ. ॥ ೨-೩ ॥

ತನ್ನೋ ವರ್ಣಯ ಭದ್ರಂ ತೇ
ಕ್ರಿಯಾಯೋಗಂ ಬುಭುತ್ಸತಾಮ್ ।
ಯೇನ ಕ್ರಿಯಾನೈಪುಣೇನ
ಮರ್ತ್ಯೋ ಯಾಯಾದಮರ್ತ್ಯತಾಮ್ ॥ ೩ ॥

ಸೂತ ಉವಾಚ

ನಮಸ್ಕೃತ್ಯ ಗುರೂನ್ ವಕ್ಷ್ಯೇ ವಿಭೂತೀರ್ವೈಷ್ಣವೀರಪಿ ।
ಯಾಃ ಪ್ರೋಕ್ತಾ ವೇದತಂತ್ರಾಭ್ಯಾಮಾಚಾರ್ಯೈಃ ಪದ್ಮಜಾದಿಭಿಃ
॥ ೪ ॥

ಮಾಯಾದ್ಯೈರ್ನವಭಿಸ್ತತ್ತ್ವೈಃ ಸ ವಿಕಾರಮಯೋ ವಿರಾಟ್ ।
ನಿರ್ಮಿತೋ ದೃಶ್ಯತೇ ಯತ್ರ ಸಚಿತ್ಕೇ ಭುವನತ್ರಯಮ್
॥ ೫ ॥

ಏತದ್ ವೈ ಪೌರುಷಂ ರೂಪಂ ಭೂಃ
ಪಾದೌ ದ್ಯೌಃ ಶಿರೋ ನಭಃ ।
ನಾಭಿಃ ಸೂರ್ಯೋಽಕ್ಷಿಣೀ ನಾಸೇ
ವಾಯುಃ ಕರ್ಣೌ ದಿಶಃ ಪ್ರಭೋಃ ॥ ೬ ॥

ಪ್ರಜಾಪತಿಃ ಪ್ರಜನನಮಪಾನೋ ಮೃತ್ಯುರೀಶಿತುಃ ।
ತದ್ಬಾಹವೋ ಲೋಕಪಾಲಾ ಮನಶ್ಚಂದ್ರೋ ಭ್ರುವೌ ಯಮಃ
॥ ೭ ॥

ಲಜ್ಜೋತ್ತರೋಽಧರೋ ಲೋಭೋ
ದಂತಾ ಜ್ಯೋತ್ಸ್ನಾ ಸ್ಮಯೋ ಭ್ರಮಃ ।
ರೋಮಾಣಿ ಭೂರುಹಾ ಭೂಮ್ನೋ
ಮೇಘಾಃ ಪುರುಷಮೂರ್ಧಜಾಃ ॥ ೮ ॥

ಯಾವಾನಯಂ ವೈ ಪುರುಷೋ ಯಾವತ್ಯಾ ಸಂಸ್ಥಯಾ ಮಿತಃ ।
ತಾವಾನಸಾವಪಿ ಮಹಾಪುರುಷೋ ಲೋಕಸಂಸ್ಥಯಾ
॥ ೯ ॥

ಕೌಸ್ತುಭವ್ಯಪದೇಶೇನ ಸ್ವಾತ್ಮಜ್ಯೋತಿರ್ಬಿಭರ್ತ್ಯಜಃ ।
ತಚ್ ಪ್ರಭಾ ವ್ಯಾಪಿನೀ ಸಾಕ್ಷಾತ್ ಶ್ರೀವತ್ಸಮುರಸಾ ವಿಭುಃ
॥ ೧೦ ॥

ಸ್ವಮಾಯಾಂ ವನಮಾಲಾಖ್ಯಾಂ ನಾನಾಗುಣಮಯೀಂ ದಧತ್ ।
ವಾಸಶ್ಚಕ್ರೇಽಮಯಂ ಪೀತಂ ಬ್ರಹ್ಮಸೂತ್ರಂ ತ್ರಿವೃತ್ಪ್ಲವಮ್
॥ ೧೧ ॥

ಬಿಭರ್ತಿ ಸಾಂಖ್ಯಂ ಯೋಗಂ ಚ ದೇವೋ ಮಕರಕುಂಡಲೇ ।
ಮೌಲಿಂ ಪದಂ ಪಾರಮೇಷ್ಠ್ಯಂ ಸರ್ವಲೋಕಾಭಯಂಕರಮ್
॥ ೧೨ ॥

ಅವ್ಯಾಕೃತಮನಂತಾಖ್ಯಮಾಸನಂ ಯದಧಿಷ್ಠಿತಃ ।
ಧರ್ಮಜ್ಞಾನಾದಿಭಿರ್ಯುಕ್ತಂ ಸತ್ತ್ವಂ ಪದ್ಮಮಿಹೋಚ್ಯತೇ
॥ ೧೩ ॥

ಓಜಸ್ಸಹೋಬಲಯುತಂ ಮುಖ್ಯತತ್ತ್ವಂ ಗದಾಂ ದಧತ್ ।
ಅಪಾಂ ತತ್ತ್ವಂ ದರವರಂ ತೇಜಸ್ತತ್ತ್ವಂ ಸುದರ್ಶನಮ್
॥ ೧೪ ॥

ನಭೋನಿಭಂ ನಭಸ್ತತ್ತ್ವಮಸಿಂ ಚರ್ಮ ತಮೋಮಯಮ್ ।
ಕಾಲರೂಪಂ ಧನುಃ ಶಾರ್ಙ್ಗಂ ತಥಾ ಕರ್ಮಮಯೇಷುಧಿಮ್
॥ ೧೫ ॥

ಸೂತಪುರಾಣಿಕರು ಹೇಳಿದರು – ಶೌನಕಾದಿಗಳೇ ! ಬ್ರಹ್ಮಾದಿ ಆಚಾರ್ಯರು, ವೇದಗಳು ಮತ್ತು ಪಾಂಚರಾತ್ರವೇ ಮುಂತಾದ ಆಗಮ ಗ್ರಂಥಗಳು ವರ್ಣಿಸಿದ ಭಗವಂತನ ವಿಭೂತಿಗಳನ್ನು ಶ್ರೀಸದ್ಗುರುಗಳ ಚರಣಗಳಿಗೆ ನಮಸ್ಕರಿಸಿ ನಿಮಗೆ ಹೇಳುತ್ತೇನೆ. ॥ ೪ ॥ ಭಗವಂತನ ವಿರಾಟ್‌ರೂಪದಲ್ಲಿ ಕಂಡುಬರುವ ಚೇತನಾಧಿಷ್ಠಿತ ತ್ರಿಲೋಕಗಳು – ಪ್ರಕೃತಿ, ಸೂತ್ರಾತ್ಮ, ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳು ಈ ಒಂಭತ್ತು ತತ್ತ್ವಗಳೊಂದಿಗೂ, ಹನ್ನೊಂದು ಇಂದ್ರಿಯಗಳು ಮತ್ತು ಪಂಚ ಭೂತಗಳು – ಈ ಹದಿನಾರು ವಿಕಾರಗಳಿಂದಲೂ ಉಂಟಾಗಿದೆ.॥೫॥ ಇದು ಭಗವಂತನದೇ ಪುರುಷರೂಪವಾಗಿದೆ. ಪೃಥಿವಿಯೇ ಇದರ ಚರಣಗಳು, ಸ್ವರ್ಗವೇ ಮಸ್ತಕ, ಅಂತರಿಕ್ಷವೇ ನಾಭಿಯು, ಸೂರ್ಯನೇ ನೇತ್ರಗಳು, ವಾಯುವೇ ಮೂಗು, ದಿಶೆಗಳೇ ಕಿವಿಗಳಾಗಿವೆ. ॥ ೬ ॥ ಪ್ರಜಾಪತಿಯೇ ಲಿಂಗ, ಮೃತ್ಯುವೇ ಗುದ, ಲೋಕಪಾಲಕರೇ ಭುಜಗಳು, ಚಂದ್ರನೇ ಮನಸ್ಸು ಯಮನೇ ಹುಬ್ಬುಗಳಾಗಿವೆ. ॥ ೭ ॥ ಲಜ್ಜೆಯೇ ಮೇಲ್ದುಟಿಯು, ಲೋಭವೇ ಕೆಳತುಟಿಯು, ಚಂದ್ರನ ಬೆಳದಿಂಗಳೇ ಹಲ್ಲುಗಳು, ಭ್ರಮೆಯೇ ಮುಗುಳ್ನಗೆಯು, ವೃಕ್ಷಗಳೇ ರೋಮಗಳು, ಮೋಡಗಳೇ ವಿರಾಟ ಪುರುಷನ ತಲೆಯ ಮೇಲಿನ ಕೂದಲುಗಳಾಗಿವೆ. ॥ ೮ ॥ ಶೌನಕರೇ ! ಇನ್ನು ಅವನ ದೇಹದ ಪ್ರಮಾಣವನ್ನು ಹೇಳುವುದಾದರೆ ವ್ಯಷ್ಟಿ ಪುರುಷನಿಗೆ ಆಯಾ ಅವಯವಗಳಿಗೆ ತಕ್ಕಂತೆ ಎಷ್ಟು ಪ್ರಮಾಣವಿದೆಯೋ ಈ ಸಮಷ್ಟಿಪುರುಷನಿಗೂ ತನ್ನ ಆಯಾ ಅವಯವಗಳಿಗೆ ತಕ್ಕಂತೆ ಅಷ್ಟೇ ಪ್ರಮಾಣವಿರುವುದು. ॥ ೯ ॥ ಸಾಕ್ಷಾತ್ ಭಗವಂತನು ಹುಟ್ಟಿಲ್ಲದವನು. ಅವನು ಕೌಸ್ತುಭಮಣಿಯ ನೆಪದಿಂದ ಜೀವ-ಚೈತನ್ಯರೂಪವಾದ ಆತ್ಮಜ್ಯೋತಿಯನ್ನೇ ಧರಿಸಿರುವನು. ಅವನ ಸರ್ವವ್ಯಾಪಿನಿ ಪ್ರಭೆಯನ್ನೇ ವಕ್ಷಃಸ್ಥಳದಲ್ಲಿ ಶ್ರೀವತ್ಸರೂಪದಿಂದ ಧರಿಸಿರುವನು. ॥ ೧೦ ॥ ಅವನು ತನ್ನ ಸತ್ತ್ವ, ಮುಂತಾದ ಗುಣಗಳುಳ್ಳ ಮಾಯೆಯನ್ನೇ ವನಮಾಲೆಯ ರೂಪದಿಂದ, ಛಂದಗಳನ್ನೇ ಪೀತಾಂಬರರೂಪದಲ್ಲಿ, ಅ+ಉ+ಮ್ ಈ ಮೂರು ಮಾತ್ರೆಗಳ ಪ್ರಣವವನ್ನೇ ಯಜ್ಞೋಪವೀತರೂಪದಲ್ಲಿ ಧರಿಸಿರುವನು. ॥ ೧೧ ॥ ದೇವಾಧಿದೇವನಾದ ಭಗವಂತನು ಸಾಂಖ್ಯ ಮತ್ತು ಯೋಗರೂಪವಾದ ಮಕರಕುಂಡಲಗಳನ್ನು ಹಾಗೂ ಎಲ್ಲ ಲೋಕಗಳಿಗೆ ಅಭಯವನ್ನು ನೀಡುವಂತಹ ಬ್ರಹ್ಮಲೋಕವನ್ನೇ ಮುಕುಟವನ್ನಾಗಿ ಧರಿಸಿರುವನು. ॥ ೧೨ ॥ ಮೂಲ ಪ್ರಕೃತಿಯೇ ಅವನು ವಿರಾಜಮಾನನಾಗುವ ಶಯ್ಯೆಯು, ಧರ್ಮಜ್ಞಾನಾದಿಗಳಿಂದ ಕೂಡಿದ ಸತ್ತ್ವಗುಣವೇ ಅವನ ನಾಭಿಕಮಲರೂಪದಿಂದ ವರ್ಣಿತವಾಗಿದೆ. ॥ ೧೩. ॥ ಅವನು ಮನ, ಇಂದ್ರಿಯ ಮತ್ತು ಶರೀರ ಸಂಬಂಧಿ ಶಕ್ತಿಗಳಿಂದ ಕೂಡಿದ ಪ್ರಾಣತತ್ತ್ವರೂಪವಾದ ಕೌಮೋದಕೀಗದೆಯನ್ನು, ಜಲತತ್ತ್ವರೂಪವಾದ ಪಾಂಚಜನ್ಯ ಶಂಖವನ್ನು, ತೇಜಸ್ತತ್ತ್ವರೂಪವಾದ ಸುದರ್ಶನವನ್ನು ಧರಿಸಿರುವನು. ॥ ೧೪ ॥ ಆಕಾಶದಂತೆ ನಿರ್ಮಲ ಆಕಾಶ ಸ್ವರೂಪ ಖಡ್ಗವನ್ನು, ತಮೋಮಯ ಅಜ್ಞಾನರೂಪಿಯಾದ ಗುರಾಣಿಯನ್ನು, ಕಾಲಸ್ವರೂಪ ಶಾರ್ಙ್ಗಧನುಸ್ಸು ಮತ್ತು ಕರ್ಮಗಳದ್ದೇ ಬತ್ತಳಿಕೆಯನ್ನು ಧರಿಸಿರುವನು. ॥ ೧೫ ॥

ಇಂದ್ರಿಯಾಣಿ ಶರಾನಾಹುರಾಕೂತೀರಸ್ಯ ಸ್ಯಂದನಮ್ ।
ತನ್ಮಾತ್ರಾಣ್ಯಸ್ಯಾಭಿವ್ಯಕ್ತಿಂ ಮುದ್ರಯಾರ್ಥಕ್ರಿಯಾತ್ಮತಾಮ್
॥ ೧೬ ॥

ಇಂದ್ರಿಯಗಳನ್ನು ಭಗವಂತನ ಬಾಣಗಳ ರೂಪದಲ್ಲಿ ಹೇಳಲಾಗಿದೆ. ಕ್ರಿಯಾಶಕ್ತಿಯಿಂದ ಕೂಡಿದ ಮನಸ್ಸೇ ರಥವು. ತನ್ಮಾತ್ರೆಗಳೇ ರಥದ ಹೊರಗಿನ ಭಾಗ. ವರಮುದ್ರೆ, ಅಭಯ ಮುದ್ರೆಯೇ ಮುಂತಾದ ಅವನ ಮುದ್ರೆಗಳು ಕ್ರಿಯಾಶೀಲತೆಯಾಗಿವೆ. ॥ ೧೬ ॥

ಮಂಡಲಂ ದೇವಯಜನಂ ದೀಕ್ಷಾ ಸಂಸ್ಕಾರ ಆತ್ಮನಃ ।
ಪರಿಚರ್ಯಾ ಭಗವತ ಆತ್ಮನೋ ದುರಿತಕ್ಷಯಃ
॥ ೧೭ ॥

ಸೂರ್ಯಮಂಡಲ ಅಥವಾ ಅಗ್ನಿಮಂಡಲವೇ ಭಗವಂತನ ಪೂಜೆಯ ಸ್ಥಾನವಾಗಿದೆ. ಅಂತಃಕರಣದ ಶುದ್ಧಿಯೇ ಮಂತ್ರದೀಕ್ಷೆ. ತನ್ನ ಸರ್ವಪಾಪಗಳನ್ನು ನಾಶಪಡಿಸುವುದೇ ಭಗವಂತನ ಪೂಜೆ. ॥ ೧೭ ॥

ಭಗವಾನ್ ಭಗಶಬ್ದಾರ್ಥಂ ಲೀಲಾಕಮಲಮುದ್ವಹನ್ ।
ಧರ್ಮಂ ಯಶಶ್ಚ ಭಗವಾನ್ಶ್ಚಾಮರವ್ಯಜನೇಽಭಜತ್
॥ ೧೮ ॥

ಬ್ರಾಹ್ಮಣರೇ! ಭಗವಂತನು ಕರಕಮಲದಲ್ಲಿ - ಸಮಗ್ರ ಐಶ್ವರ್ಯ, ಧರ್ಮ, ಯಶ, ಲಕ್ಷ್ಮೀ, ಜ್ಞಾನ ಮತ್ತು ವೈರಾಗ್ಯ ಈ ಆರು ಪದಾರ್ಥವೇ ಧರಿಸಿರುವ ಲೀಲಾಕಮಲವು, ಧರ್ಮ ಮತ್ತು ಯಶವನ್ನು ಕ್ರಮಶಃ ಚಾಮರಗಳು, ಬೀಸಣಿಗೆ ಮತ್ತು ನಿರ್ಭಯ ಧಾಮವಾದ ವೈಕುಂಠವೇ ಆತನ ಛತ್ರವು. ಅಂತರ್ಯಾಮಿ ಪರಮಾತ್ಮನನ್ನು ಹೊತ್ತಿರುವ ಗರುಡನೇ ಮೂರು ವೇದಗಳು. ॥ ೧೮-೧೯ ॥ ಆತ್ಮಸ್ವರೂಪನಾದ ಭಗವಂತನಿಂದ ಎಂದಿಗೂ ಅಗಲದಿರುವ ಆತ್ಮಶಕ್ತಿಯೇ ಮಹಾಲಕ್ಷ್ಮಿಯು. ಭಗವಂತನ ಪಾರ್ಷದರಾದ ವಿಶ್ವವಿಖ್ಯಾತ ವಿಷ್ವಕ್ಸೇನರೇ ಪಾಂಚರಾತ್ರಾದಿ ಆಗಮಗಳು. ಭಗವಂತನ ಸ್ವಾಭಾವಿಕ ಸಿದ್ಧಿಗಳಾದ ಅಣಿಮಾ, ಮಹಿಮಾ ಮೊದಲಾದ ಅಷ್ಟಸಿದ್ಧಿಗಳನ್ನೇ ನಂದ-ಸುನಂದಾದಿ ಎಂಟು ದ್ವಾರಪಾಲಕರೆಂದು ಹೇಳುತ್ತಾರೆ. ॥ ೨೦ ॥

ಆತಪತ್ರಂ ತು ವೈಕುಂಠಂ ದ್ವಿಜಾ ಧಾಮಾಕುತೋಭಯಮ್ ।
ತ್ರಿವೃದ್ವೇದಃ ಸುಪರ್ಣಾಖ್ಯೋ ಯಜ್ಞಂ ವಹತಿ ಪೂರುಷಮ್
॥ ೧೯ ॥

ಅನಪಾಯಿನೀ ಭಗವತೀ ಶ್ರೀಃ ಸಾಕ್ಷಾದಾತ್ಮನೋ ಹರೇಃ ।
ವಿಷ್ವಕ್ಸೇನಸ್ತಂತ್ರಮೂರ್ತಿರ್ವಿದಿತಃ ಪಾರ್ಷದಾಧಿಪಃ ।
ನಂದಾದಯೋಽಷ್ಟೌದ್ವಾಃಸ್ಥಾಶ್ಚತೇಽಣಿಮಾದ್ಯಾ ಹರೇರ್ಗುಣಾಃ
॥ ೨೦ ॥

ಶೌನಕರೇ! ಸಾಕ್ಷಾತ್ ಭಗವಂತನೇ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧ ಎಂಬ ನಾಲ್ಕು ಮೂರ್ತಿಗಳಾಗಿ ನೆಲೆಸಿರುವನು. ಆದಕ್ಕಾಗಿ ಅವನನ್ನು ಚತುರ್ವ್ಯೂಹರೂಪದಿಂದ ಹೇಳಲಾಗುತ್ತದೆ. ॥ ೨೧ ॥ ಅವನೇ ಜಾಗ್ರದವಸ್ಥೆಯ ಅಭಿಮಾನಿ 'ವಿಶ್ವ'ನಾಗಿ ಶಬ್ದ ಸ್ಪರ್ಶ ಮೊದಲಾದ ಬಾಹ್ಯ ವಿಷಯಗಳನ್ನು ಗ್ರಹಿಸುತ್ತಾನೆ. ಅವನೇ ಸ್ವಪ್ನಾವಸ್ಥೆಯ ಅಭಿಮಾನಿ 'ತೈಜಸ'ನಾಗಿ ಬಾಹ್ಯ ವಿಷಯಗಳಿಲ್ಲದೆಯೇ ಮನಸ್ಸಿನಲ್ಲೇ ಅನೇಕ ವಿಷಯಗಳನ್ನು ನೋಡುತ್ತಾ ಗ್ರಹಿಸುತ್ತಾ ಇರುತ್ತಾನೆ. ಅವನೇ ಸುಷುಪ್ತಿ - ಅವಸ್ಥೆಯ ಅಭಿಮಾನಿ 'ಪ್ರಾಜ್ಞ'ನಾಗಿ ವಿಷಯ ಮತ್ತು ಮನಸ್ಸಿನ ಸಂಸ್ಕಾರಗಳಿಂದ ಕೂಡಿ ಅಜ್ಞಾನದಿಂದ ಮುಚ್ಚಿಹೋಗುತ್ತಾನೆ. ಅವನೇ ಎಲ್ಲರ ಸಾಕ್ಷಿ 'ತುರೀಯ'ನಾಗಿ ಸಮಸ್ತ ಜ್ಞಾನಗಳ ಅಧಿಷ್ಠಾನನಾಗಿ ಇರುತ್ತಾನೆ. ॥ ೨೨ ॥ ಹೀಗೆ ಅಂಗ-ಉಪಾಂಗ, ಆಯುಧ, ಭೂಷಣಗಳಿಂದ ಕೂಡಿ ಹಾಗೂ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧ ಈ ನಾಲ್ಕು ಮೂರ್ತಿಗಳ ರೂಪದಲ್ಲಿ ಪ್ರಕಟನಾಗಿ ಸರ್ವಶಕ್ತನಾದ ಭಗವಾನ್ ಶ್ರೀಹರಿಯೆ ಕ್ರಮಶಃ ವಿಶ್ವ, ತೈಜಸ, ಪ್ರಾಜ್ಞ, ತುರೀಯ ರೂಪಗಳಿಂದ ಪ್ರಕಾಶಿತನಾಗುತ್ತಾನೆ. ॥ ೨೩. ॥

ವಾಸುದೇವಃ ಸಂಕರ್ಷಣಃ ಪ್ರದ್ಯುಮ್ನಃ ಪುರುಷಃ ಸ್ವಯಮ್ ।
ಅನಿರುದ್ಧ ಇತಿ ಬ್ರಹ್ಮನ್ಮೂರ್ತಿವ್ಯೂಹೋಽಭಿಧೀಯತೇ
॥ ೨೧ ॥

ಸ ವಿಶ್ವಸ್ಯೈಜಸಃ ಪ್ರಾಜ್ಞಸ್ತುರೀಯ ಇತಿ ವೃತ್ತಿಭಿಃ ।
ಅರ್ಥೇಂದ್ರಿಯಾಶಯಜ್ಞಾನೈರ್ಭಗವಾನ್ ಪರಿಭಾವ್ಯತೇ
॥ ೨೨ ॥

ಅಂಗೋಪಾಂಗಾಯುಧಾಕಲ್ಪೈರ್ಭಗವಾನ್ತಚ್ಚತುಷ್ಟಯಮ್ ।
ಬಿಭರ್ತಿ ಸ್ಮ ಚತುರ್ಮೂರ್ತಿರ್ಭಗವಾನ್ ಹರಿರೀಶ್ವರಃ
॥ ೨೩ ॥

ಶೌನಕರೇ! ಸರ್ವಸ್ವರೂಪನಾದ ಭಗವಂತನೇ ವೇದಗಳ ಮೂಲಕಾರಣನಾಗಿದ್ದಾನೆ. ಅವನು ಸ್ವಯಂಪ್ರಕಾಶ ಹಾಗೂ ತನ್ನ ಮಹಿಮೆಯಿಂದ ಪರಿಪೂರ್ಣನಾಗಿದ್ದಾನೆ. ತನ್ನ ಮಾಯೆಯಿಂದ ಬ್ರಹ್ಮಾದಿ ರೂಪಗಳಿಂದ ಹಾಗೂ ನಾಮಗಳಿಂದ ಈ ವಿಶ್ವದ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ನಡೆಸುತ್ತಾ ಇರುತ್ತಾನೆ. ಇವೆಲ್ಲ ಕರ್ಮ

ದ್ವಿಜಋಷಭ ಸ ಏಷ ಬ್ರಹ್ಮಯೋನಿಃ ಸ್ವಯಂದೃಕ್
ಸ್ವಮಹಿಮಪರಿಪೂರ್ಣೋ ಮಾಯಯಾ ಚ ಸ್ವಯೈತತ್ ।
ಸೃಜತಿ ಹರತಿ ಪಾತೀತ್ಯಾಖ್ಯಯಾನಾವೃತಾಕ್ಷೋ
ವಿವೃತ ಇವ ನಿರುಕ್ತಸ್ತತ್ಪರೈರಾತ್ಮಲಭ್ಯಃ ॥ ೨೪ ॥

ಶ್ರೀಕೃಷ್ಣ ಕೃಷ್ಣಸಖ ವೃಷ್ಣ್ಯೃಷಭಾವನಿಧ್ರುಕ್
ರಾಜನ್ಯವಂಶದಹನಾನಪವರ್ಗವೀರ್ಯ ।
ಗೋವಿಂದ ಗೋಪವನಿತಾವ್ರಜಭೃತ್ಯಗೀತ-
ತೀರ್ಥಶ್ರವಃ ಶ್ರವಣಮಂಗಲ ಪಾಹಿ ಭೃತ್ಯಾನ್ ॥ ೨೫ ॥

ಯ ಇದಂ ಕಲ್ಯ ಉತ್ಥಾಯ ಮಹಾಪುರುಷಲಕ್ಷಣಮ್ ।
ತಚ್ಚಿತ್ತಃ ಪ್ರಯತೋ ಜಪ್ತ್ವಾ ಬ್ರಹ್ಮ ವೇದ ಗುಹಾಶಯಮ್
॥ ೨೬ ॥

ಶೌನಕ ಉವಾಚ

ಶುಕೋ ಯದಾಹ ಭಗವಾನ್ ವಿಷ್ಣುರಾತಾಯ ಶೃಣ್ವತೇ ।
ಸೌರೋ ಗಣೋ ಮಾಸಿ ಮಾಸಿ ನಾನಾ ವಸತಿ ಸಪ್ತಕಃ
॥ ೨೭ ॥

ತೇಷಾಂ ನಾಮಾನಿ ಕರ್ಮಾಣಿ ಸಂಯುಕ್ತಾನಾಮಧೀಶ್ವರೈಃ ।
ಬ್ರೂಹಿ ನಃ ಶ್ರದ್ದಧಾನಾನಾಂ ವ್ಯೂಹಂ ಸೂರ್ಯಾತ್ಮನೋ ಹರೇಃ
॥ ೨೮ ॥

ಸೂತ ಉವಾಚ

ಅನಾದ್ಯವಿದ್ಯಯಾ ವಿಷ್ಣೋರಾತ್ಮನಃ ಸರ್ವದೇಹಿನಾಮ್ ।
ನಿರ್ಮಿತೋ ಲೋಕತಂತ್ರೋಽಯಂ ಲೋಕೇಷು ಪರಿವರ್ತತೇ
॥ ೨೯ ॥

ಏಕ ಏವ ಹಿ ಲೋಕಾನಾಂ ಸೂರ್ಯ ಆತ್ಮಾಽಽದಿಕೃದ್ಹರಿಃ ।
ಸರ್ವವೇದಕ್ರಿಯಾಮೂಲಮೃಷಿಭಿರ್ಬಹುಧೋದಿತಃ
॥ ೩೦ ॥

ಕಾಲೋ ದೇಶಃ ಕ್ರಿಯಾ ಕರ್ತಾ ಕರಣಂ ಕಾರ್ಯಮಾಗಮಃ ।
ದ್ರವ್ಯಂ ಫಲಮಿತಿ ಬ್ರಹ್ಮನ್ ನವಧೋಕ್ತೋಽಜಯಾ ಹರಿಃ
॥ ೩೧ ॥

ಗಳಿಂದ, ನಾಮಗಳಿಂದ ಅವನ ಜ್ಞಾನವು ಎಂದೂ ಮುಚ್ಚಿ ಹೋಗುವುದಿಲ್ಲ. ಶಾಸ್ತ್ರಗಳಲ್ಲಿ ಭಿನ್ನ-ಭಿನ್ನ ನಾಮಗಳಿಂದ ಅವನು ವರ್ಣಿತನಾಗಿದ್ದರೂ ಅವಶ್ಯವಾಗಿ ಅವನು ತನ್ನ ಭಕ್ತರಿಗೆ ಆತ್ಮ ಸ್ವರೂಪದಿಂದಲೇ ಪ್ರಾಪ್ತನಾಗುತ್ತಾನೆ. ॥ ೨೪ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ನೀನು ಅರ್ಜುನ ಸಖನಾಗಿರುವೆ. ನೀನು ಯದುವಂಶಶಿರೋಮಣಿಯ ರೂಪದಲ್ಲಿ ಅವತರಿಸಿ ಪೃಥಿವಿಯ ದ್ರೋಹಿರಾಜರನ್ನು ಭಸ್ಮಮಾಡಿದೆ. ನಿನ್ನ ಪರಾಕ್ರಮವು ಯಾವಾಗಲೂ ಏಕರಸವೇ ಆಗಿರುತ್ತದೆ. ವ್ರಜದ ಗೋಪಿಯರು ಮತ್ತು ನಾರದಾದಿ ಪ್ರೇಮಿಭಕ್ತರು ನಿರಂತರವಾಗಿ ನಿನ್ನ ಪವಿತ್ರ ಕೀರ್ತಿಯನ್ನು ಗಾಯನ ಮಾಡುತ್ತಾ ಇರುತ್ತಾರೆ. ಗೋವಿಂದನೇ! ನಿನ್ನ ನಾಮ-ಗುಣಗಳ, ಲೀಲೆಗಳ ಶ್ರವಣದಿಂದಲೇ ಜೀವಿಯ ಮಂಗಲವಾಗುತ್ತದೆ. ನಾವೆಲ್ಲರೂ ನಿನ್ನ ಸೇವಕರಾಗಿದ್ದು ನೀನು ದಯಮಾಡಿ ನಮ್ಮನ್ನು ರಕ್ಷಿಸು. ॥ ೨೫ ॥

ಪುರುಷೋತ್ತಮ ಭಗವಂತನ ಚಿಹ್ನೆಗಳಾದ ಅಂಗ, ಉಪಾಂಗ, ಆಯುಧಾದಿಗಳ ಈ ವರ್ಣನೆಯನ್ನು ಭಗವಂತನಲ್ಲಿ ನೆಟ್ಟ ಮನಸ್ಸಿನಿಂದ, ಪವಿತ್ರನಾಗಿ, ಪ್ರಾತಃಕಾಲದಲ್ಲಿ ಪಠಿಸುವವನಿಗೆ ಎಲ್ಲರ ಹೃದಯದಲ್ಲಿ ನೆಲೆಸಿರುವ ಬ್ರಹ್ಮಸ್ವರೂಪ ಪರಮಾತ್ಮನ ಜ್ಞಾನವು ಉಂಟಾಗುವುದು. ॥ ೨೬ ॥

ಶೌನಕರು ಕೇಳಿದರು - ಸೂತಪುರಾಣಿಕರೇ! ಪೂಜ್ಯರಾದ ಶ್ರೀಶುಕಮಹಾಮುನಿಗಳು ಶ್ರೀಮದ್ಭಾಗವತದ ಕಥೆಯನ್ನು ಪರೀಕ್ಷಿದ್ರಾಜನಿಗೆ ಹೇಳುವಾಗ ಪಂಚಮಸ್ಕಂಧದಲ್ಲಿ ಋಷಿಗಳು, ಗಂಧರ್ವರು, ನಾಗರು, ಅಪ್ಸರೆಯರು, ಯಕ್ಷರು, ರಾಕ್ಷಸರು ಮತ್ತು ದೇವತೆಗಳು ಇವರುಗಳ ಒಂದು ಸೌರಗಣವಿರುತ್ತದೆ ಮತ್ತು ಈ ಏಳು ಪ್ರತಿತಿಂಗಳಲ್ಲಿಯೂ ಬದಲಾಗುತ್ತಾ ಇರುತ್ತಾರೆ ಎಂದು ಹೇಳಿದ್ದರು. ಈ ಹನ್ನೆರಡು ಗಣಗಳು ತಮ್ಮ ಸ್ವಾಮಿಯಾದ ದ್ವಾದಶಾದಿತ್ಯರೊಂದಿಗೆ ಇದ್ದು ಯಾವ ಕೆಲಸ ಮಾಡುತ್ತಾರೆ? ಮತ್ತು ಅವರ ಅಂತರ್ಗತ ವ್ಯಕ್ತಿಗಳ ಹೆಸರುಗಳೇನು? ಸೂರ್ಯನ ರೂಪದಲ್ಲಿ ಸಾಕ್ಷಾತ್ ಭಗವಂತನೇ ಇರುವನು. ಅದಕ್ಕಾಗಿ ಅವುಗಳ ವಿಭಾಗವನ್ನು ಶ್ರದ್ಧಾಳುಗಳಾದ ನಾವು ಕೇಳಲು ಬಯಸುತ್ತಿದ್ದೇವೆ. ದಯಮಾಡಿ ಹೇಳಿರಿ. ॥ ೨೭-೨೮ ॥

ಸೂತಪುರಾಣಿಕರು ಹೇಳತೊಡಗಿದರು - ಸಮಸ್ತ ಪ್ರಾಣಿಗಳ ಆತ್ಮನು ಭಗವಾನ್ ವಿಷ್ಣುವೇ ಆಗಿರುವನು. ಅನಾದಿ ಅವಿದ್ಯೆಯಿಂದ ಸಮಸ್ತ ಲೋಕಗಳ ವ್ಯವಹಾರ-ಪ್ರವರ್ತಕ ಪ್ರಾಕೃತ ಸೂರ್ಯಮಂಡಲ ನಿರ್ಮಾಣವಾಗಿದೆ. ಅದೇ ಲೋಕಗಳಲ್ಲಿ ಭ್ರಮಣ ಮಾಡುತ್ತಿದೆ. ॥ ೨೯ ॥ ನಿಜವಾಗಿ ಸಮಸ್ತ ಲೋಕಗಳ ಆತ್ಮನಾದ, ಆದಿಕರ್ತನಾದ ಏಕಮಾತ್ರ ಶ್ರೀಹರಿಯೇ ಅಂತರ್ಯಾಮಿಯ ರೂಪದಿಂದ ಸೂರ್ಯನಾಗಿರುವನು. ಅವನು ಒಬ್ಬನೇ ಆಗಿದ್ದರೂ ಋಷಿಗಳು ಅವನನ್ನು ಅನೇಕ ರೂಪಗಳಲ್ಲಿ ವರ್ಣಿಸಿರುವರು. ಅವನೇ ಸಮಸ್ತ ವೈದಿಕ ಕ್ರಿಯೆಗಳ ಮೂಲ ಕಾರಣನಾಗಿದ್ದಾನೆ. ॥ ೩೦ ॥ ಶೌನಕರೇ! ಭಗವಂತ ನೋರ್ವನೇ ಮಾಯೆಯಿಂದ ಕಾಲ, ದೇಶ, ಯಜ್ಞಾದಿಕ್ರಿಯೆಗಳು, ಕರ್ತಾ, ಸ್ರುವೆ ಮೊದಲಾದ ಕರಣಗಳು, ಯಾಗಾದಿಕರ್ಮಗಳು, ವೇದ ಮಂತ್ರ, ಎಳ್ಳು ಮುಂತಾದ ಹವನ ದ್ರವ್ಯಗಳು ಮತ್ತು ಫಲ ರೂಪದಲ್ಲಿ ಒಂಭತ್ತು ರೀತಿಯಿಂದ ಹೇಳಲ್ಪಡುತ್ತಾನೆ. ॥ ೩೧ ॥

ಮಧ್ವಾದಿಷು ದ್ವಾದಶಸು ಭಗವಾನ್ ಕಾಲರೂಪಧೃಕ್ ।
ಲೋಕತಂತ್ರಾಯ ಚರತಿ ಪೃಥಗ್ದ್ವಾದಶಭಿರ್ಗಣೈಃ
॥ ೩೨ ॥

ಧಾತಾ ಕೃತಸ್ಥಲೀ ಹೇತಿರ್ವಾಸುಕೀ ರಥಕೃನ್ಮುನೇ ।
ಪುಲಸ್ತ್ಯಸ್ತುಂಬುರುರಿತಿ ಮಧುಮಾಸಂ ನಯಂತ್ಯಮೀ
॥ ೩೩ ॥

ಅರ್ಯಮಾ ಪುಲಹೋಽಥೌಜಾಃ ಪ್ರಹೇತಿಃ ಪುಂಜಿಕಸ್ಥಲೀ ।
ನಾರದಃ ಕಚ್ಛನೀರಶ್ಚ ನಯಂತ್ಯೇತೇ ಸ್ಮ ಮಾಧವಮ್
॥ ೩೪ ॥

ಮಿತ್ರೋಽತ್ರಿಃ ಪೌರುಷೇಯೋಽಥ ತಕ್ಷಕೋ ಮೇನಕಾ ಹಹಾಃ ।
ರಥಸ್ವನ ಇತಿ ಹ್ಯೇತೇ ಶುಕ್ರಮಾಸಂ ನಯಂತ್ಯಮೀ
॥ ೩೫ ॥

ವಸಿಷ್ಠೋ ವರುಣೋ ರಂಭಾ ಸಹಜನ್ಯಸ್ತಥಾ ಹುಹೂಃ ।
ಶುಕ್ರಶ್ಚಿತ್ರಸ್ವನಶ್ಚೈವ ಶುಚಿಮಾಸಂ ನಯಂತ್ಯಮೀ
॥ ೩೬ ॥

ಇಂದ್ರೋ ವಿಶ್ವಾವಸುಃ ಶ್ರೋತಾ ಏಲಾಪತ್ರಸ್ತಥಾಂಗಿರಾಃ ।
ಪ್ರಮ್ಲೋಚಾ ರಾಕ್ಷಸೋ ವರ್ಯೋ ನಭೋಮಾಸಂ ನಯಂತ್ಯಮೀ
॥ ೩೭ ॥

ವಿವಸ್ವಾನುಗ್ರಸೇನಶ್ಚ ವ್ಯಾಘ್ರ ಆಸಾರಣೋ ಭೃಗುಃ ।
ಅನುಮ್ಲೋಚಾ ಶಂಖಪಾಲೋ ನಭಸ್ಯಾಖ್ಯಂ ನಯಂತ್ಯಮೀ
॥ ೩೮ ॥

ಪೂಷಾ ಧನಂಜಯೋ ವಾತಃ ಸುಷೇಣಃ ಸುರುಚಿಸ್ತಥಾ ।
ಘೃತಾಚೀ ಗೌತಮಶ್ಚೇತಿ ತಪೋಮಾಸಂ ನಯಂತ್ಯಮೀ
॥ ೩೯ ॥

ಕ್ರತುರ್ವರ್ಚಾ ಭರದ್ವಾಜಃ ಪರ್ಜನ್ಯಃ ಸೇನಜಿತ್ತಥಾ ।
ವಿಶ್ವ ಐರಾವತಶ್ಚೈವ ತಪಸ್ಯಾಖ್ಯಂ ನಯಂತ್ಯಮೀ
॥ ೪೦ ॥

ಅಥಾಂಶುಃ ಕಶ್ಯಪಸ್ತಾರ್ಕ್ಷ್ಯ ಋತಸೇನಸ್ತಥೋರ್ವಶೀ ।
ವಿದ್ಯುಚ್ಛತ್ರುರ್ಮಹಾಶಂಖಃ ಸಹೋಮಾಸಂ ನಯಂತ್ಯಮೀ
॥ ೪೧ ॥

ಭಗಃ ಸ್ಫೂರ್ಜೋಽರಿಷ್ಟನೇಮಿರೂರ್ಣಾ ಆಯುಶ್ಚ ಪಂಚಮಃ ।
ಕರ್ಕೋಟಕಃ ಪೂರ್ವಚಿತ್ತಿಃ ಪುಷ್ಯಮಾಸಂ ನಯಂತ್ಯಮೀ
॥ ೪೨ ॥

ತ್ವಷ್ಟಾ ಋಚೀಕತನಯಃ ಕಂಬಲಶ್ಚ ತಿಲೋತ್ತಮಾ ।
ಬ್ರಹ್ಮಾಪೇತೋಽಥ ಶತಜಿದ್ಧೃತರಾಷ್ಟ್ರ ಇಷಂಭರಾಃ
॥ ೪೩ ॥

ವಿಷ್ಣುರಶ್ವತರೋ ರಂಭಾ ಸೂರ್ಯವರ್ಚಾಶ್ಚ ಸತ್ಯಜಿತ್ ।
ವಿಶ್ವಾಮಿತ್ರೋ ಮಖಾಪೇತ ಊರ್ಜಮಾಸಂ ನಯಂತ್ಯಮೀ
॥ ೪೪ ॥

ಕಾಲರೂಪಧಾರಿಯಾದ ಭಗವಾನ್ ಸೂರ್ಯನು ಜನರ ವ್ಯವಹಾರಗಳನ್ನು ಸರಿಯಾಗಿ ನಡೆಸಲಿಕ್ಕಾಗಿ ಚೈತ್ರವೇ ಮೊದಲಾದ ಹನ್ನೆರಡು ತಿಂಗಳಲ್ಲಿ ತನ್ನ ಬೇರೆ-ಬೇರೆ ಹನ್ನೆರಡು ಗಣಗಳೊಂದಿಗೆ ಸುತ್ತುತ್ತಾ ಇರುತ್ತಾನೆ. ॥ ೩೨ ॥

ಶೌನಕರೇ! ಧಾತಾ ಹೆಸರಿನ ಸೂರ್ಯ, ಕೃತಸ್ಥಲೀ ಅಪ್ಸರೆ, ಹೇತಿ ರಾಕ್ಷಸ, ವಾಸುಕೀ ಸರ್ಪ, ರಥಕೃತ್ ಯಕ್ಷ, ಪುಲ್ತಸ್ಯಋಷಿ ಮತ್ತು ತುಂಬುರು ಗಂಧರ್ವ - ಇವರುಗಳು ಚೈತ್ರ ತಿಂಗಳಲ್ಲಿ ತಮ್ಮ-ತಮ್ಮ ಕಾರ್ಯಗಳನ್ನು ನಡೆಸುತ್ತಾರೆ. ॥ ೩೩ ॥ ಅರ್ಯಮಾ ಎಂಬ ಸೂರ್ಯ, ಪುಲಹಋಷಿ, ಆಥೌಜಾಯಕ್ಷ, ಪ್ರಹೇತಿ ರಾಕ್ಷಸ, ಪುಂಜಿಕಸ್ಥಲೀ ಅಪ್ಸರೆ, ನಾರದಗಂಧರ್ವ, ಕಚ್ಛನೀರ ಸರ್ಪ ಇವರುಗಳು ವೈಶಾಖಮಾಸದಲ್ಲಿ ಕಾರ್ಯಗಳನ್ನು ನಿರ್ವಹಿಸುತ್ತಾರೆ. ॥ ೩೪ ॥ ಮಿತ್ರನೆಂಬ ಸೂರ್ಯ, ಅತ್ರಿಋಷಿ, ಪೌರುಷೇಯ ರಾಕ್ಷಸ, ತಕ್ಷಕ ಸರ್ಪ, ಮೇನಕಾ ಅಪ್ಸರೆ, ಹಾಹಾಗಂಧರ್ವ, ರಥಸ್ವನ ಯಕ್ಷ ಇವರು ಜ್ಯೇಷ್ಠಮಾಸದ ಕಾರ್ಯನಿರ್ವಾಹಕರು. ॥ ೩೫ ॥ ಆಷಾಢದಲ್ಲಿ ವರುಣನೆಂಬ ಸೂರ್ಯನೊಂದಿಗೆ ವಸಿಷ್ಠ ಋಷಿ, ರಂಬೆ ಅಪ್ಸರೆ, ಸಹಜನ್ಯಯಕ್ಷ ಹೂಹೂ ಗಂಧರ್ವ, ಶುಕ್ರನಾಗ, ಚಿತ್ರಸ್ವನ ರಾಕ್ಷಸ ಇವರು ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ. ॥ ೩೬ ॥ ಶ್ರಾವಣಮಾಸದಲ್ಲಿ ಇಂದ್ರನೆಂಬ ಸೂರ್ಯ, ವಿಶ್ವಾವಸು ಗಂಧರ್ವ, ಶ್ರೋತಾಯಕ್ಷ, ಏಲಾಪತ್ರನಾಗ, ಅಂಗಿರಾಋಷಿ, ಪ್ರಮ್ಲೋಚಾ ಅಪ್ಸರೆ, ವರ್ಯನೆಂಬ ರಾಕ್ಷಸ ಇವರು ಕಾರ್ಯವನ್ನು ಮಾಡುತ್ತಾರೆ. ॥ ೩೭ ॥ ಭಾದ್ರಪದ ಮಾಸದ ಸೂರ್ಯನ ಹೆಸರು ವಿವಸ್ವಾನ್. ಅವನೊಂದಿಗೆ ಉಗ್ರಸೇನ ಗಂಧರ್ವ, ವ್ಯಾಘ್ರರಾಕ್ಷಸ, ಆಸಾರಣಯಕ್ಷ, ಭೃಗು ಋಷಿ, ಅನುಮ್ಲೋಚಾ ಅಪ್ಸರೆ, ಶಂಖಪಾಲನಾಗ ಇವರುಗಳು ಇರುತ್ತಾರೆ. ॥ ೩೮ ॥ ಶೌನಕರೇ! ಮಾಘಮಾಸದಲ್ಲಿ ಪೂಷಾ ಎಂಬ ಸೂರ್ಯನೊಂದಿಗೆ ಧನಂಜಯನಾಗ, ವಾತರಾಕ್ಷಸ, ಸುಷೇಣ ಗಂಧರ್ವ, ಸುರುಚಿಯಕ್ಷ, ಘೃತಾಚಿ ಅಪ್ಸರೆ, ಗೌತಮ ಋಷಿ ಇವರುಗಳು ಇರುತ್ತಾರೆ. ॥ ೩೯ ॥ ಫಾಲ್ಗುಣಮಾಸದಲ್ಲಿ ಪರ್ಜನ್ಯನೆಂಬ ಸೂರ್ಯನೊಂದಿಗೆ ಕ್ರತುಯಕ್ಷ, ವರ್ಚಾ ರಾಕ್ಷಸ, ಭರದ್ವಾಜ ಋಷಿ, ಸೇನಜಿತ್ ಅಪ್ಸರೆ, ವಿಶ್ವಗಂಧರ್ವ, ಐರಾವತ ಸರ್ಪ - ಇವರು ಇರುತ್ತಾರೆ. ॥ ೪೦ ॥ ಮಾರ್ಗಶಿರಮಾಸದಲ್ಲಿ ಅಂಶು ಎಂಬ ಸೂರ್ಯನೊಂದಿಗೆ ಕಶ್ಯಪ ಋಷಿ, ತಾರ್ಕ್ಷ್ಯಯಕ್ಷ, ಋತಸೇನ ಗಂಧರ್ವ, ಊರ್ವಶೀ ಅಪ್ಸರೆ, ವಿದ್ಯುಚ್ಛತ್ರುರಾಕ್ಷಸ, ಮಹಾಶಂಖನಾಗ ಇವರು ಇರುತ್ತಾರೆ. ॥ ೪೧ ॥ ಪೌಷಮಾಸದಲ್ಲಿ ಭಗನೆಂಬ ಸೂರ್ಯನೊಡನೆ ಸ್ಫೂರ್ಜರಾಕ್ಷಸ, ಅರಿಷ್ಟನೇಮಿ ಗಂಧರ್ವ, ಊರ್ಣಾಯಕ್ಷ, ಆಯುಋಷಿ, ಪೂರ್ವಚಿತ್ತಿ ಅಪ್ಸರೆ, ಕಾರ್ಕೋಟಕನಾಗ ಇವರು ಇರುತ್ತಾರೆ. ॥ ೪೨ ॥ ಆಶ್ವಿನ ಮಾಸದಲ್ಲಿ ತ್ವಷ್ಟಾಸೂರ್ಯನು, ಜಮದಗ್ನಿ ಋಷಿ, ಕಂಬಲನಾಗ, ತಿಲೋತ್ತಮೆ ಅಪ್ಸರೆ, ಬ್ರಹ್ಮಾಪೇತರಾಕ್ಷಸ, ಶತಜಿತ್‌ಯಕ್ಷ ಧೃತರಾಷ್ಟ್ರ ಗಂಧರ್ವ ಇವರ ಕಾರ್ಯಕಾಲವಿರುತ್ತದೆ. ॥ ೪೩ ॥ ಕಾರ್ತಿಕದಲ್ಲಿ ವಿಷ್ಣು ಎಂಬ ಸೂರ್ಯ, ಅಶ್ವತರನಾಗ, ರಂಭೆ ಅಪ್ಸರೆ, ಸೂರ್ಯವರ್ಚಾ ಗಂಧರ್ವ, ಸತ್ಯಜಿತ್‌ಯಕ್ಷ, ವಿಶ್ವಾಮಿತ್ರ ಋಷಿ, ಮಖಾಪೇತರಾಕ್ಷಸ ಇವರು ತಮ್ಮ ಕಾರ್ಯವನ್ನು ನಡೆಸುತ್ತಾರೆ. ॥೪೪॥

ಏತಾ ಭಗವತೋ ವಿಷ್ಣೋರಾದಿತ್ಯಸ್ಯ ವಿಭೂತಯಃ ।
ಸ್ಮರತಾಂ ಸಂಧ್ಯಯೋರ್ನೃಣಾಂ ಹರಂತ್ಯಂಹೋ ದಿನೇ ದಿನೇ
॥ ೪೫ ॥

ದ್ವಾದಶಸ್ವಪಿ ಮಾಸೇಷು ದೇವೋಽಸೌ ಷಡ್ಭಿರಸ್ಯ ವೈ ।
ಚರನ್ ಸಮಂತಾತ್ತನುತೇ ಪರತ್ರೇಹ ಚ ಸನ್ಮತಿಮ್
॥ ೪೬ ॥

ಸಾಮರ್ಗ್ಯಜುರ್ಭಿಸ್ತಲ್ಲಿಂಗೈರ್ಋಷಯಃ ಸಂಸ್ತುವಂತ್ಯಮುಮ್ ।
ಗಂಧರ್ವಾಸ್ತಂ ಪ್ರಗಾಯಂತಿ ನೃತ್ಯಂತ್ಯಪ್ಸರಸೋಽಗ್ರತಃ
॥ ೪೭ ॥

ಉನ್ನಹ್ಯಂತಿ ರಥಂ ನಾಗಾ ಗ್ರಾಮಣ್ಯೋ ರಥಯೋಜಕಾಃ ।
ಚೋದಯಂತಿ ರಥಂ ಪೃಷ್ಠೇ ನೈರ್ಋತಾ ಬಲಶಾಲಿನಃ
॥ ೪೮ ॥

ಪಾಲಖಿಲ್ಯಾಃ ಸಹಸ್ರಾಣಿ ಷಷ್ಟಿರ್ಬ್ರಹ್ಮರ್ಷಯೋಽಮಲಾಃ ।
ಪುರತೋಽಭಿಮುಖಂ ಯಾಂತಿ ಸ್ತುವಂತಿ ಸ್ತುತಿಭಿರ್ವಿಭುಮ್
॥ ೪೯ ॥

ಏವಂ ಹ್ಯನಾದಿನಿಧನೋ ಭಗವಾನ್ ಹರಿರೀಶ್ವರಃ ।
ಕಲ್ಪೇ ಕಲ್ಪೇ ಸ್ವಮಾತ್ಮಾನಂ ವ್ಯೂಹ್ಯ ಲೋಕಾನವತ್ಯಜಃ
॥ ೫೦ ॥

ಶೌನಕರೇ ! ಇವರೆಲ್ಲ ಸೂರ್ಯರೂಪಗಳು ಭಗವಂತನ ವಿಭೂತಿಗಳಾಗಿವೆ. ಇವನ್ನು ಪ್ರತಿದಿನವು ಸಾಯಂ-ಪ್ರಾತಃ ಕಾಲಗಳಲ್ಲಿ ಸ್ಮರಿಸುವ ಜನರ ಎಲ್ಲ ಪಾಪಗಳೂ ನಾಶವಾಗುತ್ತವೆ. ॥ ೪೫ ॥ ಈ ಸೂರ್ಯರು ತಮ್ಮ ಆರು ಗಣಗಳೊಂದಿಗೆ ಹನ್ನೆರಡು ತಿಂಗಳು ಎಲ್ಲೆಡೆ ಸಂಚರಿಸುತ್ತಾ ಇರುವರು ಮತ್ತು ಈ ಲೋಕ-ಪರಲೋಕಗಳಲ್ಲಿ ವಿವೇಕಬುದ್ಧಿಯನ್ನು ವಿಸ್ತರಿಸುತ್ತಾ ಇರುತ್ತಾರೆ. ॥ ೪೬ ॥ ಸೂರ್ಯಭಗವಂತನ ಗಣಗಳಲ್ಲಿ ಋಷಿಗಳು ಋಗ್ವೇದ, ಯಜುರ್ವೇದ ಸಾಮವೇದ ಇವುಗಳ ಸೂರ್ಯ ಸಂಬಂಧವಾದ ಮಂತ್ರಗಳಿಂದ ಅವನನ್ನು ಸ್ತುತಿಸುತ್ತಾ ಇರುತ್ತಾರೆ. ಗಂಧರ್ವರು ಅವನ ಕೀರ್ತಿಯನ್ನು ಹಾಡುತ್ತಾರೆ. ಅಪ್ಸರೆಯರು ನೃತ್ಯವಾಡುತ್ತಾ ಮುಂದೆ-ಮುಂದೆ ಹೋಗುತ್ತಿರುತ್ತಾರೆ. ॥ ೪೭ ॥ ನಾಗಗಳು ಹಗ್ಗದಂತೆ ಅವರ ರಥವನ್ನು ಬಿಗಿದು ಕೊಂಡಿರುತ್ತವೆ. ಯಕ್ಷರು ರಥವನ್ನು ಸಿಂಗರಿಸುತ್ತಾರೆ. ಬಲಿಷ್ಠರಾದ ರಾಕ್ಷಸರು ರಥವನ್ನು ಹಿಂದಿನಿಂದ ನೂಕೂತ್ತಿರುತ್ತಾರೆ. ॥ ೪೮ ॥ ಇವರಲ್ಲದೆ ವಾಲಖಿಲ್ಯರೆಂಬ ಅರವತ್ತು ಸಾವಿರ ನಿರ್ಮಲ ಸ್ವಭಾವದ ಬ್ರಹ್ಮರ್ಷಿಗಳು ಸೂರ್ಯನಕಡೆಗೆ ಮುಖಮಾಡಿ ಅವನನ್ನು ಸ್ತುತಿಸುತ್ತಾ ಹಿಮ್ಮುಖವಾಗಿ ನಡೆಯುತ್ತಾ ಇರುತ್ತಾರೆ. ॥ ೪೯ ॥ ಹೀಗೆ ಅನಾದಿಯೂ, ಅನಂತನೂ, ಅಜನೂ ಆದ ಭಗವಾನ್ ಶ್ರೀಹರಿಯೇ ಕಲ್ಪ-ಕಲ್ಪಾಂತರಗಳಲ್ಲಿ ಅನೇಕ ರೂಪಗಳನ್ನಾಗಿ ವಿಭಾಗಿಸಿಕೊಂಡು ಲೋಕಗಳನ್ನು ಪಾಲಿಸಿ- ಪೋಷಿಸುತ್ತಾನೆ.॥ ೫೦ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ
ಆದಿತ್ಯವ್ಯೂಹವಿವರಣಂ ನಾಮ ಏಕಾದಶೋಽಧ್ಯಾಯಃ॥ ೧೧ ॥

ಹನ್ನೆರಡನೆಯ ಅಧ್ಯಾಯ

ಶ್ರೀಮದ್ಭಾಗವತದ ಸಂಕ್ಷಿಪ್ತ ವಿಷಯಸೂಚಿ

ಸೂತ ಉವಾಚ

ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ಧರ್ಮಾನ್ವಕ್ಷ್ಯೇ ಸನಾತನಾನ್
॥ ೧ ॥

ಏತದ್ವಃ ಕಥಿತಂ ವಿಪ್ರಾ ವಿಷ್ಣೋಶ್ಚರಿತಮದ್ಭುತಮ್ ।
ಭವದ್ಭ್ಯೋ ಯದಹಂ ಪೃಷ್ಟೋ ನರಾಣಾಂ ಪುರುಷೋಚಿತಮ್
॥ ೨ ॥

ಅತ್ರ ಸಂಕೀರ್ತಿತಃ ಸಾಕ್ಷಾತ್ ಸರ್ವಪಾಪಹರೋ ಹರಿಃ ।
ನಾರಾಯಣೋ ಹೃಷೀಕೇಶೋ ಭಗವಾನ್ ಸಾತ್ವತಾಂ ಪತಿಃ
॥ ೩ ॥

ಸೂತಪುರಾಣಿಕರು ಹೇಳುತ್ತಾರೆ – ಭಗವದ್ಭಕ್ತಿರೂಪವಾದ ಮಹಾಧರ್ಮಕ್ಕೆ ನಮಸ್ಕಾರವು. ವಿಶ್ವವಿಧಾತನಾದ ಭಗವಾನ್ ಶ್ರೀಕೃಷ್ಣನಿಗೆ ನಮಸ್ಕರವು. ಈಗ ನಾನು ಬ್ರಾಹ್ಮಣರಿಗೆ ನಮಸ್ಕಾರಮಾಡಿ ಶ್ರೀಮದ್ಭಾಗವತದಲ್ಲಿ ಹೇಳಿರುವ ಸನಾತನ ಧರ್ಮಗಳ ವಿಷಯಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ. ॥ ೧ ॥ ಶೌನಕಾದಿ ಋಷಿಗಳಿರಾ! ನೀವುಗಳು ನನ್ನಲ್ಲಿ ಕೇಳಿದ ಪ್ರಶ್ನೆಗನುಸಾರವಾಗಿ ನಾನು ಭಗವಾನ್ ವಿಷ್ಣುವಿನ ಅದ್ಭುತ ಚರಿತ್ರೆಯನ್ನು ನಿರೂಪಿಸಿದೆನು. ಇದು ಎಲ್ಲ ಮನುಷ್ಯರಿಗಾಗಿ ಶ್ರವಣಿಸಲು ಯೋಗ್ಯವಾಗಿದೆ. ॥ ೨ ॥ ಈ ಶ್ರೀಮದ್ಭಾಗವತದಲ್ಲಿ ಸರ್ವಪಾಪಹಾರಿಯಾದ ಸಾಕ್ಷಾತ್ ಭಗವಾನ್ ಶ್ರೀಹರಿಯ ಸಂಕೀರ್ತನೆಯೇ ನಡೆದಿದೆ. ಆ ಯದುಪತಿಯು ಎಲ್ಲರ ಹೃದಯದಲ್ಲಿ ವಿರಾಜಿಸುತ್ತಿರುವನು ಎಲ್ಲರ ಇಂದ್ರಿಯಗಳ ಸ್ವಾಮಿಯೂ, ಪ್ರೇಮಿಭಕ್ತರ ಜೀವನಧನನೂ ಆಗಿರುವನು. ॥ ೩ ॥

ಅತ್ರ ಬ್ರಹ್ಮ ಪರಂ ಗುಹ್ಯಂ ಜಗತಃ ಪ್ರಭವಾಪ್ಯಯಮ್ ।
ಜ್ಞಾನಂ ಚ ತದುಪಾಖ್ಯಾನಂ ಪ್ರೋಕ್ತಂ ವಿಜ್ಞಾನಸಂಯುತಮ್
॥ ೪ ॥

ಭಕ್ತಿಯೋಗಃ ಸಮಾಖ್ಯಾತೋ ವೈರಾಗ್ಯಂ ಚ ತದಾಶ್ರಯಮ್ ।
ಪಾರೀಕ್ಷಿತಮುಪಾಖ್ಯಾನಂ ನಾರದಾಖ್ಯಾನಮೇವ ಚ
॥ ೫ ॥

ಪ್ರಾಯೋಪವೇಶೋ ರಾಜರ್ಷೇರ್ವಿಪ್ರಶಾಪಾತ್ಪರೀಕ್ಷಿತಃ ।
ಶುಕಸ್ಯ ಬ್ರಹ್ಮರ್ಷಭಸ್ಯ ಸಂವಾದಶ್ಚ ಪರೀಕ್ಷಿತಃ
॥ ೬ ॥

ಯೋಗಧಾರಣಯೋತ್ಕ್ರಾಂತಿಃ ಸಂವಾದೋ ನಾರದಾಜಯೋಃ ।
ಅವತಾರಾನುಗೀತಂ ಚ ಸರ್ಗಃ ಪ್ರಾಧಾನಿಕೋಽಗ್ರತಃ
॥ ೭ ॥

ವಿದುರೋದ್ಧವಸಂವಾದಃ ಕೃತ್ಸ್ನಶ್ಚ ಮೈತ್ರೇಯಯೋಸ್ತತಃ ।
ಪುರಾಣಸಂಹಿತಾಪ್ರಶ್ನೋ ಮಹಾಪುರುಷಸಂಸ್ಥಿತಿಃ
॥ ೮ ॥

ತತಃ ಪ್ರಾಕೃತಿಕಃ ಸರ್ಗಃ ಸಪ್ತ ವೈಕೃತಿಕಾಶ್ಚ ಯೇ ।
ತತೋ ಬ್ರಹ್ಮಾಂಡಸಂಭೂತಿರ್ವೈರಾಜಃ ಪುರುಷೋ ಯತಃ
॥ ೯ ॥

ಕಾಲಸ್ಯ ಸ್ಥೂಲಸೂಕ್ಷ್ಮಸ್ಯ ಗತಿಃ ಪದ್ಮಸಮುದ್ಭವಃ ।
ಭುವ ಉದ್ಧರಣೇಽಂಭೋಧೇರ್ಹಿರಣ್ಯಾಕ್ಷವಧೋ ಯಥಾ
॥ ೧೦ ॥

ಊರ್ಧ್ವತಿರ್ಯಗವಾಕ್ಸರ್ಗೋ ರುದ್ರಸರ್ಗಸ್ತಥೈವ ಚ ।
ಅರ್ಧನಾರೀನರಸ್ಯಾಥ ಯತಃ ಸ್ವಾಯಂಭುವೋ ಮನುಃ
॥ ೧೧ ॥

ಶತರೂಪಾ ಚ ಯಾ ಸ್ತ್ರೀಣಾಮಾದ್ಯಾ ಪ್ರಕೃತಿರುತ್ತಮಾ ।
ಸಂತಾನೋ ಧರ್ಮಪತ್ನೀನಾಂ ಕರ್ದಮಸ್ಯ ಪ್ರಜಾಪತೇಃ
॥ ೧೨ ॥

ಅವತಾರೋ ಭಗವತಃ ಕಪಿಲಸ್ಯ ಮಹಾತ್ಮನಃ ।
ದೇವಹೂತ್ಯಾಶ್ಚ ಸಂವಾದಃ ಕಪಿಲೇನ ಚ ಧೀಮತಾ
॥ ೧೩ ॥

ನವಬ್ರಹ್ಮ ಸಮುತ್ಪತ್ತಿರ್ದಕ್ಷಯಜ್ಞ ವಿನಾಶನಮ್ ।
ಧ್ರುವಸ್ಯ ಚರಿತಂ ಪಶ್ಚಾತ್ಪೃಥೋಃ ಪ್ರಾಚೀನಬರ್ಹಿಷಃ
॥ ೧೪ ॥

ನಾರದಸ್ಯ ಚ ಸಂವಾದಸ್ತತಃ ಪ್ರೈಯವ್ರತಂ ದ್ವಿಜಾಃ ।
ನಾಭೇಸ್ತತೋಽನುಚರಿತಮೃಷಭಸ್ಯ ಭರತಸ್ಯ ಚ
॥ ೧೫ ॥

ಈ ಶ್ರೀಮದ್ಭಾಗವತ ಪುರಾಣದಲ್ಲಿ ಪರಮಗುಹ್ಯವಾದ ಬ್ರಹ್ಮತತ್ತ್ವದ ವರ್ಣನೆಯೇ ನಡೆದಿದೆ. ಆ ಪರಬ್ರಹ್ಮನಲ್ಲೇ ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯಗಳ ಪ್ರತೀತಿಯಾಗುತ್ತದೆ. ಇದರಲ್ಲಿ ಅದೇ ಪರಮತತ್ತ್ವದ ಜ್ಞಾನ-ವಿಜ್ಞಾನವನ್ನೂ, ಅವನನ್ನು ಪಡೆಯುವ ಸಾಧನೆಯನ್ನು ನಿರೂಪಣೆಮಾಡಿದ್ದೇನೆ. ॥ ೪ ॥

ಶೌನಕರೇ! ಈ ಮಹಾಪುರಾಣದ ಪ್ರಥಮ ಸ್ಕಂಧದಲ್ಲಿ ಭಕ್ತಿಯೋಗವು ಚೆನ್ನಾಗಿ ನಿರೂಪಿತವಾಗಿದೆ. ಜೊತೆಗೆ ಭಕ್ತಿಯೋಗದಿಂದ ಉತ್ಪನ್ನವಾಗುವ ವೈರಾಗ್ಯವನ್ನು ವರ್ಣಿಸಲಾಗಿದೆ. ಪರೀಕ್ಷಿತನ ಕಥೆ ಮತ್ತು ವ್ಯಾಸ-ನಾರದರ ಸಂವಾದದ ಪ್ರಸಂಗದಿಂದ ನಾರದರ ಚರಿತ್ರವನ್ನೂ ಹೇಳಲಾಗಿದೆ. ॥ ೫ ॥ ರಾಜರ್ಷಿಯಾದ ಪರೀಕ್ಷಿತನು ಬ್ರಾಹ್ಮಣನ ಶಾಪದಿಂದಾಗಿ ಗಂಗಾತೀರದಲ್ಲಿ ಉಪವಾಸವ್ರತವನ್ನು ಕೈಗೊಂಡು ಹೇಗೆ ಕುಳಿತುಕೊಂಡನು ಮತ್ತು ಋಷಿಶ್ರೇಷ್ಠರಾದ ಶ್ರೀಶುಕಮಹಾಮುನಿಗಳೊಡನೆ ಅವರ ಸಂವಾದವು ಹೇಗೆ ಪ್ರಾರಂಭವಾಯಿತು? ಈ ಕಥೆಯೂ ಮೊದಲನೇ ಸ್ಕಂದದಲ್ಲೇ ಇದೆ. ॥ ೬ ॥

ಯೋಗಧಾರಣೆಯ ಮೂಲಕ ಶರೀರ ತ್ಯಾಗದ ವಿಧಾನ, ಬ್ರಹ್ಮದೇವರು - ನಾರದರ ಸಂವಾದ, ಭಗವಂತನ ಅವತಾರಗಳ ಸಂಕ್ಷಿಪ್ತ ನಿರೂಪಣೆ, ಮಹತ್ತತ್ತ್ವವೇ ಮೊದಲಾದವುಗಳ ಕ್ರಮದಿಂದ ಪ್ರಾಕೃತಸೃಷ್ಟಿಯ ಉತ್ಪತ್ತಿ ಮುಂದಾದ ವಿಷಯಗಳ ವರ್ಣನೆ ಎರಡನೆಯ ಸ್ಕಂಧದಲ್ಲಿ ಇದೆ. ॥ ೭ ॥

ಮೂರನೆ ಸ್ಕಂಧದಲ್ಲಿ ಮೊಟ್ಟಮೊದಲಿಗೆ ವಿದುರ-ಉದ್ಧವರ ಹಾಗೂ ಬಳಿಕ ವಿದುರ-ಮೈತ್ರೇಯರ ಸಮಾಗಮ ಮತ್ತು ಸಂವಾದದ ಪ್ರಸಂಗವಿದೆ. ಅನಂತರ ಪುರಾಣಸಂಹಿತೆಯ ವಿಷಯದಲ್ಲಿ ಪ್ರಶ್ನೆಯಿದೆ. ಮತ್ತೆ ಪ್ರಳಯಕಾಲದಲ್ಲಿ ಪರಮಾತ್ಮನು ಹೇಗೆ ಸ್ಥಿತನಾಗಿರುತ್ತಾನೆ ಇದರ ನಿರೂಪಣೆಯಿದೆ. ॥ ೮ ॥ ಗುಣಗಳ ಕ್ಷೋಭದಿಂದ ಪ್ರಾಕೃತಿಕ ಸೃಷ್ಟಿ ಮತ್ತು ಮಹತ್ತತ್ತ್ವವೇ ಮೊದಲಾದ ಏಳು ಪ್ರಕೃತಿ-ವಿಕೃತಿಗಳ ಮೂಲಕ ಕಾರ್ಯಸೃಷ್ಟಿಯ ವರ್ಣನೆಯಿದೆ. ಅನಂತರ ಬ್ರಹ್ಮಾಂಡದ ಉತ್ಪತ್ತಿ, ಆದರಲ್ಲಿ ವಿರಾಟ್ ಪುರುಷನ ಸ್ಥಿತಿಯ ಸ್ವರೂಪವನ್ನು ಹೇಳಲಾಗಿದೆ. ॥ ೯ ॥ ಬಳಿಕ ಸ್ಥೂಲ-ಸೂಕ್ಷ್ಮಕಾಲದ ಸ್ವರೂಪ, ಲೋಕ ಕಮಲದ ಉತ್ಪತ್ತಿ, ಪ್ರಳಯ, ಸಮುದ್ರದಿಂದ ಭೂದೇವಿಯನ್ನು ಉದ್ಧರಿಸುವಾಗ ವರಾಹಭಗವಂತನ ಮೂಲಕ ಹಿರಣ್ಯಾಕ್ಷನವಧೆ; ದೇವತೆಗಳು, ಪಶು-ಪಕ್ಷಿ ಮನುಷ್ಯರ ಸೃಷ್ಟಿ ಹಾಗೂ ರುದ್ರರ ಉತ್ಪತ್ತಿಯ ಪ್ರಸಂಗವಿದೆ. ಇದಾದ ಬಳಿಕ ಸ್ವಾಯಂಭುವ ಮನು ಮತ್ತು ಸ್ತ್ರೀಯರಲ್ಲಿ ಅತ್ಯಂತ ಉತ್ತಮ ಆದ್ಯಾ ಪ್ರಕೃತಿ ಎನಿಸಿದ ಶತರೂಪಾ ಇವರ ಅರ್ಧ ನರ-ನಾರಿಯ ಸ್ವರೂಪದ ವಿವೇಚನೆಯಿದೆ. ಕರ್ದಮ ಪ್ರಜಾಪತಿಯ ಚರಿತ್ರೆ, ಅವರಲ್ಲಿ ಮುನಿಪತ್ನಿಯರ ಜನ್ಮ, ಮಹಾತ್ಮಾ ಭಗವಾನ್ ಕಪಿಲರ ಅವತಾರ, ಮತ್ತೆ ಕಪಿಲರ ಮತ್ತು ಅವರ ತಾಯಿಯಾದ ದೇವಹೂತಿಯರ ಸಂವಾದ ಪ್ರಸಂಗವಿದೆ. ॥ ೧೦-೧೩. ॥

ನಾಲ್ಕನೆಯ ಸ್ಕಂಧದಲ್ಲಿ ಮರೀಚಿಯೇ ಮೊದಲಾದ ಒಂಭತ್ತು ಪ್ರಜಾಪತಿಗಳ ಉತ್ಪತ್ತಿ, ದಕ್ಷಯಜ್ಞದ ವಿಧ್ವಂಸ, ರಾಜರ್ಷಿ ಧ್ರುವ ಹಾಗೂ ಪೃಥುಚಕ್ರವರ್ತಿಯ ಚರಿತ್ರೆ, ಪ್ರಾಚೀನಬರ್ಹಿ-ನಾರದರ

ದ್ವೀಪವರ್ಷಸಮುದ್ರಾಣಾಂ ಗಿರಿನದ್ಯುಪವರ್ಣನಮ್ ।
ಜ್ಯೋತಿಶ್ಚಕ್ರಸ್ಯ ಸಂಸ್ಥಾನಂ ಪಾತಾಲನರಕಸ್ಥಿತಿಃ
॥ ೧೬ ॥

ದಕ್ಷಜನ್ಮ ಪ್ರಚೇತೋಭ್ಯಸ್ತತ್ಪುತ್ರೀಣಾಂ ಚ ಸಂತತಿಃ ।
ಯತೋ ದೇವಾಸುರನರಾಸ್ತಿರ್ಯಙ್ ನಗಖಗಾದಯಃ
॥ ೧೭ ॥

ತ್ವಾಷ್ಟ್ರಸ್ಯ ಜನ್ಮ ನಿಧನಂ ಪುತ್ರಯೋಶ್ಚ ದಿತೇರ್ದ್ವಿಜಾಃ ।
ದೈತ್ಯೇಶ್ವರಸ್ಯ ಚರಿತಂ ಪ್ರಹ್ಲಾದಸ್ಯ ಮಹಾತ್ಮನಃ
॥ ೧೮ ॥

ಮನ್ವಂತರಾನುಕಥನಂ ಗಜೇಂದ್ರಸ್ಯ ವಿಮೋಕ್ಷಣಮ್ ।
ಮನ್ವಂತರಾವತಾರಾಶ್ಚ ವಿಷ್ಣೋರ್ಹಯಶಿರಾದಯಃ
॥ ೧೯ ॥

ಕೌರ್ಮಂ ಧಾನ್ವಂತರಂ ಮಾತ್ಸ್ಯಂ ವಾಮನಂ ಚ ಜಗತ್ಪತೇಃ ।
ಕ್ಷೀರೋದಮಥನಂ ತದ್ವದಮೃತಾರ್ಥೇ ದಿವೌಕಸಾಮ್
॥ ೨೦ ॥

ದೇವಾಸುರಮಹಾಯುದ್ಧಂ ರಾಜವಂಶಾನುಕೀರ್ತನಮ್ ।
ಇಕ್ಷ್ವಾಕುಜನ್ಮ ತದ್ವಂಶಃ ಸುದ್ಯುಮ್ನಸ್ಯ ಮಹಾತ್ಮನಃ
॥ ೨೧ ॥

ಇಲೋಪಾಖ್ಯಾನಮತ್ರೋಕ್ತಂ ತಾರೋಪಾಖ್ಯಾನಮೇವ ಚ ।
ಸೂರ್ಯವಂಶಾನುಕಥನಂ ಶಶಾದಾದ್ಯಾ ನೃಗಾದಯಃ
॥ ೨೨ ॥

ಸೌಕನ್ಯಂ ಚಾಥ ಶರ್ಯಾತೇಃ ಕಕುತ್ಸ್ಥಸ್ಯ ಚ ಧೀಮತಃ ।
ಖಟ್ವಾಂಗಸ್ಯ ಚ ಮಾಂಧಾತುಃ ಸೌಭರೇಃ ಸಗರಸ್ಯ ಚ
॥ ೨೩ ॥

ರಾಮಸ್ಯ ಕೋಸಲೇಂದ್ರಸ್ಯ ಚರಿತಂ ಕಿಲ್ಬಿಷಾಪಹಮ್ ।
ನಿಮೇರಂಗಪರಿತ್ಯಾಗೋ ಜನಕಾನಾಂ ಚ ಸಂಭವಃ
॥ ೨೪ ॥

ರಾಮಸ್ಯ ಭಾರ್ಗವೇಂದ್ರಸ್ಯ ನಿಃಕ್ಷತ್ರಕರಣಂ ಭುವಃ ।
ಐಲಸ್ಯ ಸೋಮವಂಶಸ್ಯ ಯಯಾತೇರ್ನಹುಷಸ್ಯ ಚ
॥ ೨೫ ॥

ದೌಷ್ಮಂತೇರ್ಭರತಸ್ಯಾಪಿ ಶಂತನೋಸ್ತತ್ಸುತಸ್ಯ ಚ ।
ಯಯಾತೇರ್ಜ್ಯೇಷ್ಠಪುತ್ರಸ್ಯ ಯದೋರ್ವಂಶೋಽನುಕೀರ್ತಿತಃ
॥ ೨೬ ॥

ಯತ್ರಾವತೀರ್ಣೋ ಭಗವಾನ್ ಕೃಷ್ಣಾಖ್ಯೋ ಜಗದೀಶ್ವರಃ ।
ವಸುದೇವಗೃಹೇ ಜನ್ಮ ತತೋ ವೃದ್ಧಿಶ್ಚ ಗೋಕುಲೇ
॥ ೨೭ ॥

ತಸ್ಯ ಕರ್ಮಾಣ್ಯಪಾರಾಣಿ ಕೀರ್ತಿತಾನ್ಯಸುರದ್ವಿಷಃ ।
ಪೂತನಾಸುಪಯಃಪಾನಂ ಶಕಟೋಚ್ಚಾಟನಂ ಶಿಶೋಃ
॥ ೨೮ ॥

ಸಂವಾದದ ವರ್ಣನೆಯಿದೆ. ಐದನೆಯ ಸ್ಕಂಧದಲ್ಲಿ ಪ್ರಿಯವ್ರತನ ಉಪಾಖ್ಯಾನ, ನಾಭಿ, ಋಷಭ ಮತ್ತು ಭರತರ ಚರಿತ್ರೆ ; ದ್ವೀಪ, ವರ್ಷ, ಸಮುದ್ರ, ಪರ್ವತ, ನದಿಗಳ ವರ್ಣನೆ ; ಜ್ಯೋತಿಶ್ಚಕ್ರದ ವಿಸ್ತಾರ ಹಾಗೂ ಪಾತಾಳ ಮತ್ತು ನರಕಗಳ ಸ್ಥಿತಿಯನ್ನು ನಿರೂಪಿಸಲಾಗಿದೆ. ॥ ೧೪-೧೬ ॥

ಶೌನಕಾದಿ ಋಷಿಗಳಿರಾ ! ಆರನೆಯ ಸ್ಕಂಧದಲ್ಲಿ - ಪ್ರಚೇತಸರಿಂದ ದಕ್ಷನ ಉತ್ಪತ್ತಿ, ದಕ್ಷನ ಪುತ್ರಿಯರ ಸಂತಾನ ದೇವತೆಗಳು, ಅಸುರರು, ಮನುಷ್ಯರು, ಪಶು-ಪಕ್ಷಿ, ಪರ್ವತ ಮುಂತಾದವರ ಜನ್ಮ-ಕರ್ಮ, ವೃತ್ರಾಸುರನ ಉತ್ಪತ್ತಿ ಮತ್ತು ಅವನ ಪರಮಗತಿ ಇವೆಲ್ಲ ವಿಷಯಗಳು ಬಂದಿದೆ. ಏಳನೆಯ ಸ್ಕಂಧದಲ್ಲಿ ಮುಖ್ಯವಾಗಿ ದೈತ್ಯರಾಜ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರ ಜನ್ಮ-ಕರ್ಮ ಹಾಗೂ ದೈತ್ಯತಿರೋಮಣಿ ಮಹಾತ್ಮಾ ಪ್ರಹ್ಲಾದನ ಅತ್ಯುತ್ತಮವಾದ ಚರಿತ್ರೆಯನ್ನು ನಿರೂಪಣೆ ಮಾಡಲಾಗಿದೆ. ॥ ೧೭-೧೮ ॥

ಎಂಟನೆಯ ಸ್ಕಂಧದಲ್ಲಿ ಮನ್ವಂತರಗಳ ಕಥೆ, ಗಜೇಂದ್ರ ಮೋಕ್ಷ ಬೇರೆ-ಬೇರೆ ಮನ್ವಂತರಗಳಲ್ಲಿ ಆಗುವ ಕೂರ್ಮ, ಮತ್ಸ್ಯ, ವಾಮನ, ಧನ್ವಂತರಿ, ಹಯಗ್ರೀವ ಮೊದಲಾದ ಜಗದೀಶ್ವರ ಭಗವಾನ್ ವಿಷ್ಣುವಿನ ಅವತಾರಗಳು, ಅಮೃತ ಪ್ರಾಪ್ತಿಗಾಗಿ ದೇವ-ದಾನವರಿಂದ ಸಮುದ್ರಮಂಥನ, ದೇವಾಸುರ ಸಂಗ್ರಾಮ ಮೊದಲಾದ ವಿಷಯಗಳ ವರ್ಣನೆಯಿದೆ. ಒಂಭತ್ತನೆಯ ಸ್ಕಂಧದಲ್ಲಿ ಮುಖ್ಯವಾಗಿ ರಾಜರ ವಂಶಗಳ ವರ್ಣನೆಯಿದೆ. ಇಕ್ಷ್ವಾಕುವಿನ ಜನ್ಮ-ಕರ್ಮ, ವಂಶ-ವಿಸ್ತಾರ ; ಮಹಾತ್ಮ ಸುದ್ಯುಮ್ನ ಇಲಾ ಮತ್ತು ತಾರೆಯ ಉಪಾಖ್ಯಾನ, ಇದೆಲ್ಲವನ್ನು ವರ್ಣಿಸಲಾಗಿದೆ. ಸೂರ್ಯವಂಶದ ವೃತ್ತಾಂತ, ಶಶಾದ ಮತ್ತು ನೃಗ ಮೊದಲಾದ ರಾಜರ ವರ್ಣನೆ, ಸುಕನ್ಯಾ ಚರಿತ್ರೆ; ಶರ್ಯಾತಿ, ಖಟ್ವಾಂಗ, ಮಾಂಧಾತ, ಸೌಭರಿ, ಸಗರ, ಬುದ್ಧಿವಂತನಾದ ಕಕುತ್ಸ್ಥ, ಕೋಸಲೇಂದ್ರ ಭಗವಾನ್ ಶ್ರೀರಾಮನ ಸರ್ವಪಾಪಹಾರಿಯಾದ ಚರಿತ್ರದ ವರ್ಣನೆಯೂ ಇದೇ ಸ್ಕಂಧದಲ್ಲಿದೆ. ಅನಂತರ ನಿಮಿಯ ದೇಹತ್ಯಾಗ, ಜನಕರ ಉತ್ಪತ್ತಿಯನ್ನೂ ವರ್ಣಿಸಲಾಗಿದೆ. ॥ ೧೯-೨೪ ॥ ಭೃಗುವಂಶ ಶಿರೋಮಣಿ ಪರಶುರಾಮರ ಕ್ಷತ್ರಿಯ ಸಂಹಾರ, ಚಂದ್ರವಂಶೀ ರಾಜರಾದ ಪುರೂರವ, ಯಯಾತಿ, ನಹುಷ, ದುಷ್ಯಂತ ನಂದನ ಭರತ, ಶಂತನು ಮತ್ತು ಅವನ ಪುತ್ರ ಭೀಷ್ಮಾದಿಗಳ ಸಂಕ್ಷಿಪ್ತ ಕಥೆಗಳೂ ಕೂಡ ಒಂಭತ್ತನೆಯ ಸ್ಕಂಧದಲ್ಲೇ ಇವೆ. ಕೊನೆಗೆ ಯಯಾತಿಯ ಹಿರಿಯ ಮಗ ಯದುವಿನ ವಂಶವಿಸ್ತಾರವನ್ನೂ ಹೇಳಲಾಗಿದೆ. ॥ ೨೫-೨೬ ॥

ಶೌನಕಾದಿ ಋಷಿಗಳಿರಾ! ಇದೇ ಯದುವಂಶದಲ್ಲಿ ಜಗತ್ಪತಿಯಾದ ಭಗವಾನ್ ಶ್ರೀಕೃಷ್ಣನು ಅವತಾರವನ್ನು ಎತ್ತಿದನು. ಅವನು ಅನೇಕ ಅಸುರರನ್ನು ಸಂಹರಿಸಿದನು. ಅವನ ಲೀಲೆಗಳಿಗೆ ಅಂತ್ಯ-ಪಾರವೇ ಇಲ್ಲ, ಹೀಗಿದ್ದರೂ ದಶಮಸ್ಕಂಧದಲ್ಲಿ ಅವನ್ನು ಸ್ವಲ್ಪ ಕೀರ್ತಿಸಲಾಗಿದೆ. ವಸುದೇವನ ಪತ್ನಿಯಾದ ದೇವಕಿಯ ಗರ್ಭದಿಂದ ಅವನು ಅವತರಿಸಿದನು. ಗೋಕುಲದಲ್ಲಿ ನಂದರಾಜನ ಮನೆಗೆ ಹೋಗಿ ಬೆಳೆದನು. ಪೂತನೆಯ ಪ್ರಾಣಗಳನ್ನು ಹಾಲಿನೊಂದಿಗೆ ಕುಡಿದುಬಿಟ್ಟನು. ಬಾಲ್ಯದಲ್ಲೇ ಶಕಟ (ಬಂಡಿ)ನನ್ನು ಒದ್ದು ಮುರಿದು ಹಾಕಿದನು. ॥ ೨೭-೨೮ ॥

ತೃಣಾವರ್ತಸ್ಯ ನಿಷ್ಪೇಷಸ್ತಥೈವ ಬಕವತ್ಸಯೋಃ ।
ಧೇನುಕಸ್ಯ ಸಹಭ್ರಾತುಃ ಪ್ರಲಂಬಸ್ಯ ಚ ಸಂಕ್ಷಯಃ
॥ ೨೯ ॥

ಗೋಪಾನಾಂ ಚ ಪರಿತ್ರಾಣಂ ದಾವಾಗ್ನೇಃ ಪರಿಸರ್ಪತಃ ।
ದಮನಂ ಕಾಲಿಯಸ್ಯಾಹೇರ್ಮಹಾಹೇರ್ನಂದಮೋಕ್ಷಣಮ್
॥ ೩೦ ॥

ವ್ರತಚರ್ಯಾ ತು ಕನ್ಯಾನಾಂ ಯತ್ರ ತುಷ್ಟೋಽಚ್ಯುತೋ ವ್ರತೈಃ ।
ಪ್ರಸಾದೋ ಯಜ್ಞಪತ್ನೀಭ್ಯೋ ವಿಪ್ರಾಣಾಂ ಚಾನುತಾಪನಮ್
॥ ೩೧ ॥

ಗೋವರ್ಧನೋದ್ಧಾರಣಂ ಚ ಶಕ್ರಸ್ಯ ಸುರಭೇರಥ ।
ಯಜ್ಞಾಭಿಷೇಕಂ ಕೃಷ್ಣಸ್ಯ ಸ್ತ್ರೀಭಿಃ ಕ್ರೀಡಾ ಚ ರಾತ್ರಿಷು
॥ ೩೨ ॥

ಶಂಖಿಚೂಡಸ್ಯ ದುರ್ಬುದ್ಧೇರ್ವಧೋಽರಿಷ್ಟಸ್ಯ ಕೇಶಿನಃ ।
ಅಕ್ರೂರಾಗಮನಂ ಪಶ್ಚಾತ್ಪ್ರಸ್ಥಾನಂ ರಾಮಕೃಷ್ಣಯೋಃ
॥ ೩೩ ॥

* ವ್ರಜಸ್ತ್ರೀಣಾಂ ವಿಲಾಪಶ್ಚ ಮಥುರಾಲೋಕನಂ ತತಃ ।
ಗಜಮುಷ್ಟಿಕಚಾಣೂರಕಂಸಾದೀನಾಂ ಚ ಯೋ ವಧಃ
॥ ೩೪ ॥

ಮೃತಸ್ಯಾನಯನಂ ಸೂನೋಃ ಪುನಃ ಸಾಂದೀಪನೇರ್ಗುರೋಃ ।
ಮಥುರಾಯಾಂ ನಿವಸತಾ ಯದುಚಕ್ರಸ್ಯ ಯತ್ಪ್ರಿಯಮ್ ।
ಕೃತಮುದ್ಧವರಾಮಾಭ್ಯಾಂ ಯುತೇನ ಹರಿಣಾ ದ್ವಿಜಾಃ
॥ ೩೫ ॥

ಜರಾಸಂಧ ಸಮಾನೀತಸೈನ್ಯಸ್ಯ ಬಹುಶೋ ವಧಃ ।
ಘಾತನಂ ಯವನೇಂದ್ರಸ್ಯ ಕುಶಸ್ಥಲ್ಯಾ ನಿವೇಶನಮ್
॥ ೩೬ ॥

ಆದಾನಂ ಪಾರಿಜಾತಸ್ಯ ಸುಧರ್ಮಾಯಾಃ ಸುರಾಲಯಾತ್ ।
ರುಕ್ಮಿಣ್ಯಾ ಹರಣಂ ಯುದ್ಧೇ ಪ್ರಮಥ್ಯ ದ್ವಿಷತೋ ಹರೇಃ
॥ ೩೭ ॥

ಹರಸ್ಯ ಜೃಂಭಣಂ ಯುದ್ಧೇ ಬಾಣಸ್ಯ ಭುಜಕೃಂತನಮ್ ।
ಪ್ರಾಗ್ಜ್ಯೋತಿಷಪತಿಂ ಹತ್ವಾ ಕನ್ಯಾನಾಂ ಹರಣಂ ಚ ಯತ್
॥ ೩೮ ॥

ಚೈದ್ಯಪೌಂಡ್ರಕಸಾಲ್ವಾನಾಂ ದಂತವಕ್ತ್ರಸ್ಯ ದುರ್ಮತೇಃ ।
ಶಂಬರೋ ದ್ವಿವಿದಃ ಪೀತೋ ಮುರಃ ಪಂಚಜನಾದಯಃ
॥ ೩೯ ॥

ತೃಣಾವರ್ತ, ಬಕಾಸುರ, ವತ್ಸಾಸುರರನ್ನು ನುಚ್ಚುನೂರಾಗಿಸಿದನು. ಪರಿವಾರ ಸಹಿತ ಧೇನುಕಾಸುರ, ಪ್ರಲಂಬಾಸುರರನ್ನು ಕೊಂದು ಹಾಕಿದನು. ॥ ೨೯ ॥ ದಾವಾನಲದಲ್ಲಿ ಸಿಲುಕಿದ ಗೋಪಾಲರನ್ನು ರಕ್ಷಿಸಿದನು. ಕಾಳಿಯ ನಾಗನನ್ನು ದಮನ ಮಾಡಿ, ಅಜಗರದಿಂದ ನಂದರಾಜನನ್ನು ಬಿಡಿಸಿದನು. ॥ ೩೦ ॥ ಗೋಪಿಯರು ಭಗವಂತನನ್ನು ಪತಿಯರೂಪದಿಂದ ಪಡೆಯಲು ವ್ರತ ಮಾಡಿದುದು, ಮತ್ತೆ ಶ್ರೀಕೃಷ್ಣನು ಪ್ರಸನ್ನನಾಗಿ ಅವರಿಗೆ ಅಭೀಷ್ಟ ವರವನ್ನು ಕೊಟ್ಟಿದ್ದು. ಯಜ್ಞಪತ್ನಿಯರ ಮೇಲೆ ಭಗವಂತನ ಕೃಪೆ, ಅವರ ಪತಿಗಳಾದ ಬ್ರಾಹ್ಮಣರಿಗೆ ಆದ ಪಶ್ಚಾತ್ತಾಪ ॥ ೩೧ ॥ ಆನಂತರ ಗೋವರ್ಧನೋದ್ಧರಣದ ಲೀಲೆ ಮಾಡಿದ ಆನಂತರ, ಇಂದ್ರ ಮತ್ತು ಕಾಮಧೇನುಗಳು ಬಂದು ಭಗವಂತನಿಗೆ ಯಜ್ಞಾಭಿಷೇಕ ಮಾಡಿದರು. ಶರದ್ಋತುವಿನ ರಾತ್ರಿಯಲ್ಲಿ ವ್ರಜದ ಸುಂದರ ಗೋಪಿಕೆಯರೊಡನೆ ರಾಸಲೀಲೆಯಾಡಿದನು. ॥ ೩೨ ॥ ದುಷ್ಟನಾದ ಶಂಖಿಚೂಡ, ಅರಿಷ್ಟ ಮತ್ತು ಕೇಶಿಯ ಸಂಹಾರದ ಲೀಲೆ ನಡೆಯಿತು. ಬಳಿಕ ಅಕ್ರೂರನು ಮಥುರೆಯಿಂದ ವೃಂದಾವನಕ್ಕೆ ಬಂದು, ಅವನೊಂದಿಗೆ ಭಗವಾನ್ ಶ್ರೀಕೃಷ್ಣ-ಬಲರಾಮರು ಮಥುರೆಗೆ ಪ್ರಯಾಣ. ॥ ೩೩ ॥ ಆ ಪ್ರಸಂಗದಲ್ಲಿ ವ್ರಜಯುವತಿಯರು ಮಾಡಿದ ವಿಲಾಪದ ವರ್ಣನೆಯಿದೆ. ಶ್ರೀಕೃಷ್ಣ-ಬಲರಾಮರು ಮಥುರೆಗೆ ಹೋಗಿ ನಗರದ ಸೌಂದರ್ಯವನ್ನು ನೋಡಿ,ಕುವಲಯಾಪೀಡ ಆನೆಯನ್ನು ಮುಷ್ಟಿಕ ಚಾಣೂರ ಹಾಗೂ ಕಂಸಾದಿಗಳ ಸಂಹಾರ ಮಾಡಿದನು. ॥ ೩೪ ॥ ಸಾಂದೀಪನಿ ಗುರುಗಳ ಬಳಿ ವಿದ್ಯಾಧ್ಯಯನ ಮಾಡಿ ಅವರ ಸತ್ತು ಹೋದ ಮಗನನ್ನು ಮರಳಿ ತಂದು ಕೊಟ್ಟನು. ಶೌನಕಾದಿ ಋಷಿಗಳಿರಾ! ಭಗವಾನ್ ಶ್ರೀಕೃಷ್ಣನು ಮಥುರೆಯಲ್ಲಿ ವಾಸಿಸುತ್ತಿರುವಾಗ ಅವನು ಉದ್ಧವ, ಬಲರಾಮರೊಂದಿಗೆ ಎಲ್ಲ ವಿಧದಿಂದ ಯಾದವರ ಪ್ರಿಯವನ್ನೂ, ಹಿತವನ್ನೂ ಮಾಡಿದನು. ॥ ೩೫ ॥ ಜರಾಸಂಧನು ಅನೇಕ ಸಲ ದೊಡ್ಡ ಸೈನ್ಯವನ್ನು ಕೂಡಿಕೊಂಡು ಯುದ್ಧಕ್ಕೆ ಬಂದಾಗ ಭಗವಂತನು ಅವರನ್ನು ಉದ್ಧರಿಸಿ ಪೃಥಿವಿಯ ಭಾರವನ್ನು ಇಳಿಸಿದನು. ಕಾಲಯವನನ್ನು ಮುಚುಕುಂದನಿಂದ ಭಸ್ಮವಾಗಿಸಿದನು. ದ್ವಾರಕಾಪುರಿಯನ್ನು ನಿರ್ಮಿಸಿ ಒಂದೇ ರಾತ್ರಿಯಲ್ಲಿ ಎಲ್ಲರನ್ನು ಅಲ್ಲಿಗೆ ಸಾಗಿಸಿಬಿಟ್ಟನು. ॥ ೩೬॥ ದೇವಲೋಕದಿಂದ ಪಾರಿಜಾತಕಲ್ಪವೃಕ್ಷವನ್ನು ಮತ್ತು ಸುಧರ್ಮಸಭೆಯನ್ನು ದ್ವಾರಕೆಗೆ ತಂದದ್ದು, ಶತ್ರು ಸೈನ್ಯವನ್ನು ಪರಾಜಯಗೊಳಿಸಿ ರುಕ್ಮಿಣಿಯನ್ನು ಅಪಹರಿಸಿ ತಂದನು. ॥ ೩೭ ॥ ಬಾಣಾಸುರನೊಡನೆ ನಡೆದ ಯುದ್ಧದ ಪ್ರಸಂಗದಲ್ಲಿ ಮಹಾದೇವನ ಮೇಲೆ ಜೃಂಭಣಾಸ್ತ್ರವನ್ನು ಬಿಟ್ಟು ಅವನನ್ನು ಆಕಳಿಸುವಂತೆ ಮಾಡಿ, ಬಾಣಾಸುರನ ಭುಜಗಳನ್ನು ಕತ್ತರಿಸಿ ಹಾಕಿದನು. ಪ್ರಾಗ್ಜ್ಯೋತಿಷಪುರದ ನರಕಾಸುರನನ್ನು ಸಂಹರಿಸಿ, ಅವನ ಸೆರೆಯಲ್ಲಿದ್ದ ಹದಿನಾರುಸಾವಿರ ರಾಜಕನ್ಯೆಯರನ್ನು ಕರೆತಂದು ಪಾಣಿಗ್ರಹಣ ಮಾಡಿದನು. ॥ ೩೮ ॥ ಶಿಶುಪಾಲ, ಪೌಂಡ್ರಕ, ಶಾಲ್ವ, ದುಷ್ಟನಾದ ದಂತವಕ್ತ್ರ, ಶಂಬರಾಸುರ, ದ್ವಿವಿದ, ಪೀಠ, ಮುರ, ಪಂಚಜನರೇ ಮೊದಲಾದವರ ಬಲ-ಪೌರುಷ ಮತ್ತು ಅಂತಹ ಅತಿಶಯ

ಮಾಹಾತ್ಮ್ಯಂ ಚ ವಧಸ್ತೇಷಾಂ ವಾರಾಣಸ್ಯಾಶ್ಚ ದಾಹನಮ್ ।
ಭಾರಾವತರಣಂ ಭೂಮೇರ್ನಿಮಿತ್ತೀಕೃತ್ಯ ಪಾಂಡವಾನ್
॥ ೪೦ ॥

ವಿಪ್ರಶಾಪಾಪದೇಶೇನ ಸಂಹಾರಃ ಸ್ವಕುಲಸ್ಯ ಚ ।
ಉದ್ಧವಸ್ಯ ಚ ಸಂವಾದೋ ವಾಸುದೇವಸ್ಯ ಚಾದ್ಭುತಃ
॥ ೪೧ ॥

ಯತ್ರಾತ್ಮವಿದ್ಯಾ ಹ್ಯಖಿಲಾ ಪ್ರೋಕ್ತಾ ಧರ್ಮವಿನಿರ್ಣಯಃ ।
ತತೋ ಮರ್ತ್ಯಪರಿತ್ಯಾಗ ಆತ್ಮಯೋಗಾನುಭಾವತಃ
॥ ೪೨ ॥

ಯುಗಲಕ್ಷಣವೃತ್ತಿಶ್ಚ ಕಲೌ ನೃಣಾಮುಪಪ್ಲವಃ ।
ಚತುರ್ವಿಧಶ್ಚ ಪ್ರಲಯ ಉತ್ಪತ್ತಿಸ್ತ್ರಿವಿಧಾ ತಥಾ
॥ ೪೩ ॥

ದೇಹತ್ಯಾಗಶ್ಚ ರಾಜರ್ಷೇರ್ವಿಷ್ಣುರಾತಸ್ಯ ಧೀಮತಃ ।
ಶಾಖಾಪ್ರಣಯನಮೃಷೇರ್ಮಾರ್ಕಂಡೇಯಸ್ಯ ಸತ್ಕಥಾ ।
ಮಹಾಪುರುಷವಿನ್ಯಾಸಃ ಸೂರ್ಯಸ್ಯ ಜಗದಾತ್ಮನಃ
॥ ೪೪ ॥

ಇತಿ ಚೋಕ್ತಂ ದ್ವಿಜಶ್ರೇಷ್ಠಾ ಯತ್ಪೃಷ್ಟೋಽಹಮಿಹಾಸ್ಮಿವಃ ।
ಲೀಲಾವತಾರಕರ್ಮಾಣಿ ಕೀರ್ತಿತಾನೀಹ ಸರ್ವಶಃ
॥ ೪೫ ॥

ಪತಿತಃ ಸ್ಖಲಿತಶ್ಚಾರ್ತಃ ಕ್ಷುತ್ತ್ರಾಟ್ಚ ವಾ ವಿವಶೋ ಬ್ರುವನ್ ।
ಹರಯೇ ನಮ ಇತ್ಯುಚ್ಚೈರ್ಮುಚ್ಯತೇ ಸರ್ವಪಾತಕಾತ್
॥ ೪೬ ॥

ಸಂಕೀರ್ತ್ಯಮಾನೋ ಭಗವಾನನಂತಃ
ಶ್ರುತಾನುಭಾವೋ ವ್ಯಸನಂ ಹಿ ಪುಂಸಾಮ್ ।
ಪ್ರವಿಶ್ಯ ಚಿತ್ತಂ ವಿಧುನೋತ್ಯಶೇಷಂ
ಯಥಾ ತಮೋಽರ್ಕೋಭ್ರಮಿವಾತಿವಾತಃ ॥ ೪೭ ॥

ಮೃಷಾಗಿರಸ್ತಾ ಹ್ಯಸತೀರಸತ್ಕಥಾ
ನ ಕಥ್ಯತೇ ಯದ್ಭಗವಾನಧೋಕ್ಷಜಃ ।
ತದೇವ ಸತ್ಯಂ ತದುಹೈವ ಮಂಗಲಂ
ತದೇವ ಪುಣ್ಯಂ ಭಗವದ್ಗುಣೋದಯಮ್ ॥ ೪೮ ॥

ಬಲಶಾಲಿಗಳನ್ನೂ ಭಗವಂತನು ಸಂಹರಿಸಿದ್ದು, ತನ್ನ ಸುದರ್ಶನ ಚಕ್ರದಿಂದ ಕಾಶೀನಗರವನ್ನು ಸುಟ್ಟುಹಾಕಿದ್ದು, ಮತ್ತೆ ಮಹಾಭಾರತ ಯುದ್ಧದಲ್ಲಿ ಪಾಂಡವರನ್ನು ನಿಮಿತ್ತವಾಗಿಸಿ ಭೂಭಾರವನ್ನು ಬಹು ಮಟ್ಟಿಗೆ ಪರಿಹರಿಸಿದುದು, ಎಂಬಿಷ್ಟು ವಿಷಯಗಳು ಹತ್ತನೆಯ ಸ್ಕಂಧದಲ್ಲಿ ವರ್ಣಿತವಾಗಿದೆ. ॥ ೩೯-೪೦ ॥

ಶೌನಕಾದಿ ಋಷಿಗಳಿರಾ! ಹನ್ನೊಂದನೆಯ ಸ್ಕಂಧದಲ್ಲಿ ಭಗವಂತನು ಬ್ರಾಹ್ಮಣರ ಶಾಪವನ್ನು ನೆಪವನ್ನಾಗಿ ಮಾಡಿಕೊಂಡು ಯದುವಂಶವನ್ನು ಸಂಹಾರಮಾಡಿದ ಪ್ರಸಂಗ ವರ್ಣಿತವಾಗಿದೆ ಮತ್ತು ಭಗವಾನ್ ಶ್ರೀಕೃಷ್ಣ ಹಾಗೂ ಉದ್ಧವರ ಪರಮಾದ್ಭುತವಾದ ಸಂವಾದವೂ ಇದೇ ಸ್ಕಂಧದಲ್ಲಿದೆ. ॥ ೪೧ ॥ ಅದರಲ್ಲಿ ಸಮಗ್ರ ಆತ್ಮಜ್ಞಾನ ಮತ್ತು ಧರ್ಮ-ನಿರ್ಣಯದ ನಿರೂಪಣೆ ಆಗಿದೆ. ಕೊನೆಗೆ ಭಗವಾನ್ ಶ್ರೀಕೃಷ್ಣನು ತನ್ನ ಆತ್ಮಯೋಗದ ಪ್ರಭಾವದಿಂದ ಯಾವ ಪ್ರಕಾರ ಮರ್ತ್ಯಲೋಕವನ್ನು ಪರಿತ್ಯಜಿಸಿದನು ಎಂಬುದನ್ನೂ ಇದರಲ್ಲಿ ಹೇಳಲಾಗಿದೆ. ॥ ೪೨ ॥ ಕಡೆಯದಾದ ಹನ್ನೆರಡನೆಯ ಸ್ಕಂಧದಲ್ಲಿ ಯುಗಗಳ ಲಕ್ಷಣಗಳನ್ನು, ಆಯಾ ಯುಗಗಳಲ್ಲಿ ವಾಸಿಸುವ ಜನರ ವ್ಯವಹಾರಗಳನ್ನು ವರ್ಣನೆ ಮಾಡಿದೆ. ಕಲಿಯುಗದಲ್ಲಿ ಮನುಷ್ಯರ ಗತಿ-ವೃತ್ತಿಗಳು ಹೇಗಿರುತ್ತವೆ? ಎಂಬುದನ್ನೂ ವಿವರಿಸಿ ನಾಲ್ಕು ಬಗೆಯ ಪ್ರಳಯ ಮತ್ತು ಮೂರು ಬಗೆಯ ಉತ್ಪತ್ತಿಯ ವರ್ಣನೆಯನ್ನು ಇದರಲ್ಲಿ ಕಾಣುತ್ತೇವೆ.॥೪೩॥ ಅನಂತರ ಪರಮಜ್ಞಾನಿ ರಾಜರ್ಷಿ ಪರೀಕ್ಷಿತನ ಶರೀರತ್ಯಾಗದ ವಿಷಯವನ್ನೂ ಹೇಳಲಾಗಿದೆ. ಮತ್ತೆ ವೇದಗಳ ಶಾಖೆಗಳ ವಿಭಜನೆಯ ಪ್ರಸಂಗವೂ ಬಂದಿದೆ. ಮಾರ್ಕಂಡೇಯರ ಸುಂದರ ಕಥೆ, ಭಗವಂತನ ಆಂಗ-ಉಪಾಂಗಗಳ ಸ್ವರೂಪ ಕಥನ ಮತ್ತು ಕಟ್ಟಕಡೆಗೆ ವಿಶ್ವಾತ್ಮನಾದ ಭಗವಾನ್ ಸೂರ್ಯನ ಗಣಗಳ ವರ್ಣನೆ ಮಾಡಲಾಗಿದೆ. ॥ ೪೪ ॥

ಶೌನಕಾದಿಗಳೇ! ಈ ಸತ್ಸಂಗದ ಸಂದರ್ಭದಲ್ಲಿ ನೀವುಗಳು ಕೇಳಿದುದನ್ನು ನಾನು ವರ್ಣಿಸಿರುವೆನು. ಮುಖ್ಯವಾಗಿ ಶ್ರೀಹರಿಯ ಅವತಾರ-ಲೀಲಾ ಚರಿತ್ರೆಗಳೆಲ್ಲವನ್ನೂ ಸಂಪೂರ್ಣವಾಗಿ ಕೀರ್ತಿಸಿರುವೆನು. ॥ ೪೫ ॥ ಮನುಷ್ಯನು ಅಕಸ್ಮಾತ್ತಾಗಿ ಬಿದ್ದಾಗಲೀ, ಜಾರಿ ಮುಗ್ಗರಿಸಿದಾಗಲೀ, ದುಃಖಿಸುವಾಗಲೀ, ಸೀನುವಾಗ ಆಗಲೀ, ಮೈಮರೆತಾಗಲೀ ಗಟ್ಟಿಯಾಗಿ 'ಹರಯೇನಮಃ' ಎಂದು ಕೂಗಿದಾಗ, ಆವನು ಸಮಸ್ತ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ. ॥ ೪೬ ॥ ಭಗವಂತನಾದ ಅನಂತನ ನಾಮ-ರೂಪ-ಗುಣ ಮಹಿಮಾದಿಗಳನ್ನು ಯಾರು ಕೀರ್ತನೆ ಮಾಡುತ್ತಾರೋ, ಅಥವಾ ಶ್ರವಣಿಸುತ್ತಾನೋ ಅವರ ಹೃದಯವನ್ನು ಭಗವಂತನು ಹೊಕ್ಕು ಅವರ ಸಮಸ್ತ ವ್ಯಸನಗಳನ್ನು ಇಲ್ಲವಾಗಿಸುತ್ತಾನೆ. ಸೂರ್ಯನು ಕತ್ತಲೆಯನ್ನೂ, ಬಿರುಗಾಳಿಯು ಮೋಡಗಳನ್ನು ಓಡಿಸಿಬಿಡುವಂತೆಯೇ ಭಗವಂತನು ಅವರ ಎಲ್ಲ ದುಃಖಿಗಳನ್ನು ಧ್ವಂಸಮಾಡಿಬಿಡುತ್ತಾನೆ. ॥ ೪೭ ॥ ಭಗವಂತನಾದ ಅಧೋಕ್ಷಜನನ್ನು (ಇಂದ್ರಿಯಾತೀತನಾದ ನಾರಾಯಣನನ್ನು) ಕೊಂಡಾಡದೆ ಇರುವ ವಾಣಿಯು ಎಷ್ಟೇ ಸುಂದರವಾಗಿದ್ದರೂ, ಭಾವಪೂರ್ಣವಾಗಿದ್ದರೂ, ಉತ್ತಮ ವಿಷಯಗಳು ಪ್ರತಿಪಾದಿತವಾಗಿದ್ದರೂ ನಿರ

ತದೇವ ರಮ್ಯಂ ರುಚಿರಂ ನವಂ ನವಂ
ತದೇವ ಶಶ್ವನ್ಮನಸೋ ಮಹೋತ್ಸವಮ್ ।
ತದೇವ ಶೋಕಾರ್ಣವಶೋಷಣಂ ನೃಣಾಂ
ಯದುತ್ತಮಶ್ಲೋಕಯಶೋಽನುಗೀಯತೇ ॥ ೪೯ ॥

ನ ತದ್ವಚಶ್ಚಿತ್ರಪದಂ ಹರೇರ್ಯಶೋ
ಜಗತ್ಪವಿತ್ರಂ ಪ್ರಗೃಣೀತ ಕರ್ಹಿಚಿತ್ ।
ತದ್ಧ್ವಾಂಕ್ಷತೀರ್ಥಂ ನ ತು ಹಂಸಸೇವಿತಂ
ಯತ್ರಾಚ್ಯುತಸ್ತತ್ರ ಹಿ ಸಾಧವೋಽಮಲಾಃ ॥ ೫೦ ॥

ಸ ವಾಗ್ವಿಸರ್ಗೋ ಜನತಾಘಸಂಪ್ಲವೋ
ಯಸ್ಮಿನ್ಪ್ರತಿಶ್ಲೋಕಮಬದ್ಧವತ್ಯಪಿ ।
ನಾಮಾನ್ಯನಂತಸ್ಯ ಯಶೋಽಂಕಿತಾನಿ ಯತ್
ಶೃಣ್ವಂತಿ ಗಾಯಂತಿ ಗೃಣಂತಿ ಸಾಧವಃ ॥ ೫೧ ॥

ನೈಷ್ಕರ್ಮ್ಯಮಪ್ಯಚ್ಯುತಭಾವವರ್ಜಿತಂ
ನ ಶೋಭತೇ ಜ್ಞಾನಮಲಂ ನಿರಂಜನಮ್ ।
ಕುತಃ ಪುನಃ ಶಶ್ವದಭದ್ರಮೀಶ್ವರೇ
ನ ಹ್ಯರ್ಪಿತಂ ಕರ್ಮ ಯದಪ್ಯನುತ್ತಮಮ್ ॥ ೫೨ ॥

ಯಶಃಶ್ರಿಯಾಮೇವ ಪರಿಶ್ರಮಃ ಪರೋ
ವರ್ಣಾಶ್ರಮಾಚಾರತಪಃಶ್ರುತಾದಿಷು ।
ಅವಿಸ್ಮೃತಿಃ ಶ್ರೀಧರಪಾದಪದ್ಮಯೋ-
ರ್ಗುಣಾನುವಾದಶ್ರವಣಾದಿಭಿರ್ಹರೇಃ ॥ ೫೩ ॥

ಅವಿಸ್ಮೃತಿಃ ಕೃಷ್ಣಪದಾರವಿಂದಯೋಃ
ಕ್ಷಿನೋತ್ಯಭದ್ರಾಣಿ ಶಮಂ ತನೋತಿ ಚ ।
ಸತ್ತ್ವಸ್ಯ ಶುದ್ಧಿಂ ಪರಮಾತ್ಮಭಕ್ತಿಂ
ಜ್ಞಾನಂ ಚ ವಿಜ್ಞಾನವಿರಾಗಯುಕ್ತಮ್ ॥ ೫೪ ॥

ರ್ಥಕವು, ಸಾರಹೀನವು, ಅಸದ್ವಿಷಯವಾಣಿಯಾಗಿದೆ. ಭಗವಂತನ ಗುಣಗಳಿಂದ ಪರಿಪೂರ್ಣವಾದ ವಾಣಿಯೇ ಸತ್ಯವೂ ಪವಿತ್ರವೂ, ಮಂಗಳಮಯವೂ ಆಗಿದೆ. ॥ ೪೮ ॥ ಯಾವ ವಚನದ ಮೂಲಕ ಭಗವಂತನ ಪರಮಪವಿತ್ರ ಕೀರ್ತಿಯು ಹಾಡಲ್ಪಡುತ್ತದೋ ಅದೇ ರಮಣೀಯವೂ, ರುಚಿಕರವೂ, ನಿತ್ಯ ನೂತನವೂ ಆದ ವಾಣಿಯು. ಅದು ನಿತ್ಯನಿರಂತರ ಮನಸ್ಸಿಗೆ ಆನಂದವನ್ನುಂಟು ಮಾಡುವ ವಾಣಿಯು. ಮನುಷ್ಯರ ಶೋಕ ಕಡಲನ್ನು ಶೋಷಣ ಮಾಡುವ ವಾಣಿಯು. ॥ ೪೯ ॥ ಜಗತ್ತನ್ನು ಪಾವನಗೊಳಿಸುವ ಶ್ರೀಹರಿಯ ಕೀರ್ತಿಯನ್ನು ಕೊಂಡಾಡದೇ ಇರುವ ಕಾವ್ಯವು (ರಸಭಾವಾಲಂಕಾರಾದಿಗಳಿಂದ ತುಂಬಿದ್ದರೂ) ಎಷ್ಟೇ ವಿಚಿತ್ರಪದಗಳಿಂದ ಅಲಂಕೃತವಾಗಿದ್ದರೂ ಕಾಗೆಗಳು ಮುಳುಗುವ ಕೆಸರು ನೀರಿಗೆ ಸಮಾನವಾದುದು. ಹಂಸಪಕ್ಷಿಗಳಿಂದಲೂ, ಪರಮಹಂಸ ಭಕ್ತರಿಂದಲೂ ಸೇವಿತವಾದ ತೀರ್ಥಕ್ಕೆ ಸದೃಶವಾಗಲಾರದು. ಜ್ಞಾನಿಗಳು ಅದನ್ನು ಮುಟ್ಟುವುದೂ ಇಲ್ಲ. ಆಚ್ಯುತನ ಕಥೆ ನಡೆಯುವಲ್ಲೇ ನಿರ್ಮಲಮನಸ್ಕರಾದ ಸಾಧು ಸಂತರು ರಮಿಸುವರು. ॥ ೫೦ ॥ ಯಾವುದಾದರೂ ಕಾವ್ಯದಲ್ಲಿ ಪ್ರತಿಯೊಂದು ಶ್ಲೋಕದಲ್ಲಿ ಸುಂದರರಚನೆ ಇರದೆ, ವ್ಯಾಕರಣ ದೃಷ್ಟಿಯಿಂದ ಕಾವ್ಯದೋಷಗಳಿದ್ದು ಅದರಲ್ಲಿ ಶ್ರೀಭಗವಂತನ ನಾಮಗಳಿಂದ ಅಂಕಿತವಾಗಿದ್ದರೆ, ಅದು ಸರ್ವಜನರ ಪಾಪಗಳನ್ನು ಪರಿಹರಿಸುತ್ತದೆ. ಸತ್ಪುರುಷರು ಆ ಭಗವನ್ಮಯವಾದ ವಾಣಿಯನ್ನೇ ಹಾಡುತ್ತಾರೆ ಮತ್ತು ಕೇಳುತ್ತಾರೆ. ॥ ೫೧ ॥ ಮೋಕ್ಷಪ್ರಾಪ್ತಿಗೆ ಕಾರಣವಾದ ಶುದ್ಧಜ್ಞಾನವೂ ಕೂಡ, ಭಗವದ್ಭಕ್ತಿರಹಿತವಾಗಿದ್ದರೆ ಚೆನ್ನಾಗಿ ಶೋಭಿಸಲಾರದು. ಹಾಗೆಯೇ ಭಗವಂತನಲ್ಲಿ ಭಕ್ತಿಯಿಲ್ಲದ ಜ್ಞಾನವೂ ಕೂಡ ಶೋಭಿಸುವುದಿಲ್ಲ. ಭಗವಂತನಿಗೆ ಅರ್ಪಿಸದೇ ಇರುವ ಕರ್ಮವು ಎಷ್ಟೇ ಉತ್ತಮವಾಗಿದ್ದರೂ ಅಮಂಗಲವೂ ದುಃಖಕರವೂ ಆಗಿದೆ. ॥ ೫೨ ॥ ವರ್ಣಾಶ್ರಮಗಳಿಗೆ ಅನುಕೂಲವಾದ ಆಚಾರಧರ್ಮಗಳು, ತಪಸ್ಸು, ಅಧ್ಯಯನ, ಇವುಗಳಿಗಾಗಿ ಪಡುವ ಶ್ರಮಕ್ಕೆ ಪ್ರತಿಫಲವಾದರೂ ಏನು? ಕೀರ್ತಿ ಮತ್ತು ಸಂಪತ್ತು. ಇವು ಕ್ಷಣಭಂಗುರವಾದವುಗಳು. ಆದರೆ ಭಗವಂತನ ಗುಣ, ಲೀಲೆ, ದಿವ್ಯನಾಮಗಳ ಶ್ರವಣ ಕೀರ್ತನೆ ಮಾಡಿದರೆ ಅವನ ಅಡಿದಾವರೆಗಳಲ್ಲಿ ನಿಶ್ಚಲವಾದ ಸ್ಮೃತಿಯು ಉಂಟಾಗುವುದು. ॥ ೫೩. ॥ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ನಿಶ್ಚಲವಾದ ಸ್ಮೃತಿಯು ಸಮಸ್ತ ಪಾಪ-ತಾಪ, ಅಮಂಗಳಗಳನ್ನು ನಾಶಮಾಡಿಬಿಡುತ್ತದೆ. ಪರಮಶಾಂತಿಯ ವಿಸ್ತಾರ ಮಾಡುತ್ತದೆ. ಅದರ ಮೂಲಕ ಅಂತಃಕರಣವು ಶುದ್ಧವಾಗುತ್ತದೆ. ಭಗವಂತನ ಭಕ್ತಿಯೂ ಪರಮ ವೈರಾಗ್ಯದಿಂದ ಕೂಡಿದ ಭಗವಂತನ ಸ್ವರೂಪಜ್ಞಾನವು, ಅನುಭವವೂ ಪ್ರಾಪ್ತವಾಗುತ್ತದೆ. ॥ ೫.೪ ॥ ಶೌನಕಾದಿ ಋಷಿಗಳೇ! ನೀವೆಲ್ಲರೂ ಅತ್ಯಂತ ಭಾಗ್ಯವಂತರು! ಧನ್ಯರೂ ಆಗಿರುವಿರಿ. ಏಕೆಂದರೆ, ನೀವೆಲ್ಲರೂ ಅತ್ಯಂತ ಪ್ರೇಮದಿಂದ ನಿರಂತರವಾಗಿ ತಮ್ಮ ಹೃದಯದಲ್ಲಿ ಸರ್ವಾಂತರ್ಯಾಮಿಯೂ, ಸರ್ವಾತ್ಮನೂ, ಸರ್ವಶಕ್ತಿವಂತನೂ, ಆದಿದೇವನೂ, ಎಲ್ಲರ ಪರಮಾರಾಧ್ಯನೂ ಹಾಗೂ ಸ್ವಯಂ ಇತರ

ಯೂಯಂ ದ್ವಿಜಾಗ್ರ್ಯಾ ಬತ ಭೂರಿಭಾಗಾ
ಯಚ್ಛಶ್ವದಾತ್ಮನ್ಯಖಿಲಾತ್ಮಭೂತಮ್ ।
ನಾರಾಯಣಂ ದೇವಮದೇವಮೀಶಮ್
ಅಜಸ್ರಭಾವಾ ಭಜತಾವಿವೇಶ್ಯ ॥ ೫೫ ॥

ಅಹಂ ಚ ಸಂಸ್ಮಾರಿತ ಆತ್ಮತತ್ತ್ವಂ
ಶ್ರುತಂ ಪುರಾ ಮೇ ಪರಮರ್ಷಿವಕ್ತ್ರಾತ್ ।
ಪ್ರಾಯೋಪವೇಶೇ ನೃಪತೇಃ ಪರೀಕ್ಷಿತಃ
ಸದಸ್ಯೃಷೀಣಾಂ ಮಹತಾಂ ಚ ಶೃಣ್ವತಾಮ್ ॥ ೫೬ ॥

ಏತದ್ವಃ ಕಥಿತಂ ವಿಪ್ರಾಃ ಕಥನೀಯೋರುಕರ್ಮಣಃ ।
ಮಾಹಾತ್ಮ್ಯಂ ವಾಸುದೇವಸ್ಯ ಸರ್ವಾಶುಭವಿನಾಶನಮ್
॥ ೫೭ ॥

ಯ ಏವಂ ಶ್ರಾವಯೇನ್ನಿತ್ಯಂ ಯಾಮಕ್ಷಣಮನನ್ಯಧೀಃ ।
ಶ್ರದ್ದಾವಾನ್ಯೋಽನುಶೃಣುಯಾತ್ಪುನಾತ್ಯಾತ್ಮಾನಮೇವ ಸಃ
॥ ೫೮ ॥

ದ್ವಾದಶ್ಯಾಮೇಕಾದಶ್ಯಾಂ ವಾ ಶೃಣ್ವನ್ನಾಯುಷ್ಯವಾನ್ ಭವೇತ್ ।
ಪತತ್ಯನಶ್ನನ್ ಪ್ರಯತಸ್ತತೋ ಭವತ್ಯಪಾತಕೀ
॥ ೫೯ ॥

ಪುಷ್ಕರೇ ಮಥುರಾಯಾಂ ಚ ದ್ವಾರವತ್ಯಾಂ ಯತಾತ್ಮವಾನ್ ।
ಉಪೋಷ್ಯ ಸಂಹಿತಾಮೇತಾಂ ಪಠಿತ್ವಾ ಮುಚ್ಯತೇ ಭಯಾತ್
॥ ೬೦ ॥

ದೇವತಾ ಮುನಯಃ ಸಿದ್ಧಾಃ ಪಿತರೋ ಮನವೋ ನೃಪಾಃ ।
ಯಚ್ಛಂತಿ ಕಾಮಾನ್ಶೃಣತಃ ಶೃಣ್ವತೋ ಯಸ್ಯ ಕೀರ್ತನಾತ್
॥ ೬೧ ॥

ಋಚೋ ಯಜೂಂಷಿ ಸಾಮಾನಿ ದ್ವಿಜೋಽಧೀತ್ಯಾನುವಿಂದತೇ ।
ಮಧುಕುಲ್ಯಾಃ ಘೃತಕುಲ್ಯಾಃ ಪಯಃಕುಲ್ಯಾಶ್ಚ ತತ್ಫಲಮ್
॥ ೬೨ ॥

ಪುರಾಣಸಂಹಿತಾಮೇತಾಮಧೀತ್ಯ ಪ್ರಯತೋ ದ್ವಿಜಃ ।
ಪ್ರೋಕ್ತಂ ಭಗವತಾ ಯತ್ತು ತತ್ಪದಂ ಪರಮಂ ವ್ರಜೇತ್
॥ ೬೩ ॥

ಆರಾಧ್ಯದೇವರಿಂದರಹಿತನಾದ ನಾರಾಯಣ ಭಗವಂತನನ್ನು ಸ್ಥಾಪಿಸಿಕೊಂಡು ಭಜಿಸುತ್ತಾ ಇರುವಿರಿ. ॥ ೫೫ ॥ ರಾಜರ್ಷಿ ಪರೀಕ್ಷಿತನು ಉಪವಾಸದಿಂದ ದೊಡ್ಡ-ದೊಡ್ಡ ಋಷಿಗಳು ತುಂಬಿದ ಸಭೆಯಲ್ಲಿ ಎಲ್ಲರೆದುರಿಗೆ ಶ್ರೀಶುಕಮಹಾಮುನಿಗಳಿಂದ ಶ್ರೀಮದ್ಭಾಗವತದ ಕಥೆಯನ್ನು ಕೇಳುತ್ತಿರುವಾಗ ನಾನೂ ಅಲ್ಲೇ ಕುಳಿತುಕೊಂಡು ಆ ಪರಮ ಮಹರ್ಷಿಗಳ ಮುಖದಿಂದ ಈ ಆತ್ಮತತ್ತ್ವವನ್ನು ಶ್ರವಣಿಸಿದೆನು. ನೀವುಗಳು ಅದನ್ನು ಸ್ಮರಣೆಗೆ ತಂದುಕೊಟ್ಟು ನನ್ನ ಮೇಲೆ ಮಹತ್ಕೃಪೆಯನ್ನು ಮಾಡಿರುವಿರಿ. ॥ ೫೬ ॥

ಶೌನಕಾದಿ ಋಷಿಗಳಿರಾ! ಭಗವಾನ್ ವಾಸುದೇವನ ಒಂದೊಂದು ಲೀಲೆಯೂ ಸದಾಕಾಲವೂ ಶ್ರವಣ-ಕೀರ್ತನೆ ಮಾಡಲು ಯೋಗ್ಯವಾದುದು. ನಾನು ಈ ಪ್ರಸಂಗದಲ್ಲಿ ಎಲ್ಲ ಅಶುಭ ಸಂಸ್ಕಾರಗಳನ್ನು ತೊಳೆದುಬಿಡುವ ಅವುಗಳ ಮಹಿಮೆಯನ್ನೇ ವರ್ಣಿಸಿರುವೆನು. ॥ ೫೭ ॥ ಏಕಾಗ್ರಚಿತ್ತದಿಂದ ಒಂದು ಜಾವ ಅಥವಾ ಒಂದು ಕ್ಷಣವಾದರೂ ಪ್ರತಿದಿನ ಶ್ರೀಮದ್ಭಾಗವತವನ್ನು ಕೀರ್ತಿಸುವವನು, ಶ್ರದ್ಧೆಯಿಂದ ಶ್ರವಣಿಸುವವನು ಖಂಡಿತವಾಗಿ ಶರೀರ ಸಹಿತ ತನ್ನ ಅಂತಃಕರಣವನ್ನು ಪವಿತ್ರವಾಗಿಸಿಕೊಳ್ಳುವನು. ॥ ೫೮ ॥ ದ್ವಾದಶೀ ಅಥವಾ ಏಕಾದಶಿಯ ದಿನ ಇದನ್ನು ಶ್ರವಣಿಸುವವನು ದೀರ್ಘಾಯುವಾಗುತ್ತಾನೆ. ಸಂಯಮ ಪೂರ್ವಕ ಉಪವಾಸವಿದ್ದು ಇದನ್ನು ಪಠಿಸಿದರೆ ಅವರ ಹಿಂದಿನ ಪಾಪಗಳು ನಾಶವಾಗುವುದರ ಜೊತೆಗೆ, ಪಾಪದ ಪ್ರವೃತ್ತಿಯೂ ನಾಶವಾಗಿ ಹೋಗುತ್ತದೆ. ॥ ೫೯ ॥ ಇಂದ್ರಿಯಗಳನ್ನು ಮತ್ತು ಅಂತಃಕರಣವನ್ನು ವಶಪಡಿಸಿಕೊಂಡು, ಉಪವಾಸದಿಂದಿದ್ದು, ಪುಷ್ಕರ, ಮಥುರೆ ಅಥವಾ ದ್ವಾರಕೆಯಲ್ಲಿ ಈ ಪುರಾಣಸಂಹಿತೆಯನ್ನು ಪಾರಾಯಣೆ ಮಾಡುವವನು ಎಲ್ಲ ಭಯಗಳಿಂದ ಬಿಡುಗಡೆ ಹೊಂದುವನು. ॥ ೬೦ ॥ ಯಾರು ಇದನ್ನು ಕೇಳುವನೋ, ಅಥವಾ ಉಚ್ಚಾರಿಸುವನೋ, ಅವನು ಮಾಡುವ ಕೀರ್ತನೆಯಿಂದ ದೇವತೆಗಳು, ಮುನಿಗಳು, ಸಿದ್ಧರು, ಪಿತೃಗಳು, ಮನುಗಳು ಮತ್ತು ರಾಜರು ಸಂತುಷ್ಟರಾಗುತ್ತಾರೆ ಹಾಗೂ ಅವನ ಅಭಿಲಾಷೆಗಳು ಪೂರ್ಣಗೊಳ್ಳುವವು. ॥ ೬೧ ॥ ಋಗ್ವೇದವನ್ನು ಯಜುರ್ವೇದವನ್ನು ಸಾಮವೇದವನ್ನು ಪಾರಾಯಣೆ ಮಾಡುವ ಬ್ರಾಹ್ಮಣನಿಗೆ ಮಧುಕುಲ್ಯಾ, ಘೃತಕುಲ್ಯಾ, ಪಯಃ ಕುಲ್ಯಾ (ಜೇನು, ತುಪ್ಪ, ಹಾಲಿನ ನದಿಗಳು ಅರ್ಥಾತ್ ಎಲ್ಲ ರೀತಿಯ ಸುಖ-ಸಮೃದ್ಧಿ) ಇವುಗಳು ಪ್ರಾಪ್ತವಾಗುತ್ತವೆ. ಅದೇ ಫಲವು ಶ್ರೀಮದ್ಭಾಗವತ ಪಾರಾಯಣೆಯಿಂದ ದೊರೆಯುತ್ತದೆ. ॥ ೬೨॥ ಸಂಯಮಪೂರ್ಣವಾಗಿ ಈ ಪುರಾಣಸಂಹಿತೆಯನ್ನು ಅಧ್ಯಯನ ಮಾಡುವ ದ್ವಿಜನಿಗೆ ಸಾಕ್ಷಾತ್ ಭಗವಂತನೇ ವರ್ಣಿಸಿದ ಪರಮ ಪದವು ಪ್ರಾಪ್ತವಾಗುತ್ತದೆ. ॥ ೬೩. ॥ ಇದರ ಅಧ್ಯಯನದಿಂದ ಬ್ರಾಹ್ಮಣನಿಗೆ ಋತಂಭರಾ ಪ್ರಜ್ಞೆ (ತತ್ತ್ವಜ್ಞಾನವನ್ನು ಪ್ರಾಪ್ತವಾಗಿರುವ ಬುದ್ಧಿ)ಯು ಪ್ರಾಪ್ತಿಯಾಗುತ್ತದೆ. ಕ್ಷತ್ರಿಯರಿಗೆ ಸಮುದ್ರಾಂತದ

ವಿಪ್ರೋಽಧೀತ್ಯಾಪ್ನುಯಾತ್ತಜ್ಜ್ಞಾಂ ರಾಜನ್ಯೋದಧಿಮೇಖಿಲಾಮ್ ।
ವೈಶ್ಯೋ ನಿಧಿಪತಿತ್ವಂ ಚ ಶೂದ್ರಃ ಶುದ್ಧ್ಯೇತ ಪಾತಕಾತ್
॥ ೬೪ ॥

ಭೂಮಂಡಲದ ರಾಜ್ಯದ ಪ್ರಾಪ್ತಿಯಾಗುತ್ತದೆ. ವೈಶ್ಯರಿಗೆ ಕುಬೇರನ ಪದವು ದೊರೆಯುತ್ತದೆ. ಶೂದ್ರರು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದುವರು. ॥ ೬೪ ॥

ಕಲಿಮಲಸಂಹತಿಕಾಲನೋಽಖಿಲೇಶೋ
ಹರಿರಿತರತ್ರ ನ ಗೀಯತೇ ಹ್ಯಭೀಕ್ಷ್ಣಮ್ ।
ಇಹ ತು ಪುನರ್ಭಗವಾನಶೇಷಮೂರ್ತಿಃ
ಪರಿಪಠಿತೋಽನುಪದಂ ಕಥಾಪ್ರಸಂಗೈಃ ॥ ೬೫ ॥

ಭಗವಂತನೇ ಎಲ್ಲರ ಸ್ವಾಮಿಯಾಗಿರುವನು ಮತ್ತು ಕಲಿಯುಗದ ಮಲಸಮೂಹಗಳನ್ನು ಧ್ವಂಸಮಾಡುವವನು. ಅವನನ್ನು ವರ್ಣಿಸುವ ಬಹಳಷ್ಟು ಪುರಾಣಗಳಿದ್ದರೂ ಅವುಗಳಲ್ಲಿ ಸರ್ವತ್ರ ಹಾಗೂ ನಿರಂತರ ಭಗವಂತನ ವರ್ಣನೆ ಸಿಗುವುದಿಲ್ಲ. ಶ್ರೀಮದ್ಭಾಗವತದಲ್ಲಾದರೋ ಪ್ರತಿಯೊಂದು ಕಥೆಯಲ್ಲಿಯೂ ಹೆಜ್ಜೆ-ಹೆಜ್ಜೆಗೆ ಸರ್ವಸ್ವರೂಪನಾದ ಭಗವಂತನನ್ನೇ ವರ್ಣಿಸಲಾಗಿದೆ. ॥ ೬೫ ॥

ತಮಹಮಜಮನಂತಮಾತ್ಮತತ್ತ್ವಂ
ಜಗದುದಯಸ್ಥಿತಿಸಂಯಮಾತ್ಮಶಕ್ತಿಮ್ ।
ದ್ಯುಪತಿಭಿರಜಶಕ್ರಶಂಕರಾದ್ಯೈ-
ರ್ದುರವಸಿತಸ್ತವಮಚ್ಯುತಂ ನತೋಽಸ್ಮಿ ॥ ೬೬ ॥

ಭಗವಂತನು ಜನ್ಮ-ಮೃತ್ಯು ಮುಂತಾದ ವಿಕಾರಗಳಿಂದರಹಿತನೂ, ದೇಶಕಾಲಾದಿಗಳಿಂದ ಅತೀತನೂ, ಸ್ವಯಂ ಆತ್ಮತತ್ತ್ವವೂ ಆಗಿರುವನು. ಜಗತ್ತಿನ ಉತ್ಪತ್ತಿ , ಸ್ಥಿತಿ, ಪ್ರಳಯಗಳನ್ನು ಮಾಡುವ ಶಕ್ತಿಗಳೂ ಕೂಡ ಅವನ ಸ್ವರೂಪಭೂತವೇ ಆಗಿದ್ದು ಭಿನ್ನವಾಗಿಲ್ಲ. ಬ್ರಹ್ಮಾ, ಶಂಕರ, ಇಂದ್ರ ಮೊದಲಾದ ಲೋಕಪಾಲಕರೂ ಕೂಡ ಅವನನ್ನು ಸ್ತುತಿಸುತ್ತಿದ್ದರೂ ಯಾರ ಅಂತವನ್ನು ಕಾಣಲಾರರೋ, ಅಂತಹ ಏಕರಸ ಸಚ್ಚಿದಾನಂದ ಸ್ವರೂಪ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೬೬ ॥

ಉಪಚಿತನವಶಕ್ತಿಭಿಃ ಸ್ವ ಆತ್ಮ-
ನ್ಯುಪರಚಿತಸ್ಥಿರಜಂಗಮಾಲಯಾಯ ।
ಭಗವತ ಉಪಲಬ್ಧಿಮಾತ್ರಧಾಮ್ನೇ
ಸುರಋಷಭಾಯ ನಮಃ ಸನಾತನಾಯ ॥ ೬೭ ॥

ಯಾರು ತನ್ನ ಸ್ವರೂಪದಲ್ಲೇ ಪ್ರಕೃತಿಯೇ ಮುಂತಾದ ಒಂಭತ್ತು ಶಕ್ತಿಗಳ ಸಂಕಲ್ಪಮಾಡಿ ಈ ಚರಾಚರ ಜಗತ್ತಿನ ಸೃಷ್ಟಿಯನ್ನು ಮಾಡಿರುವನೋ, ಯಾರು ಇದರ ಅಧಿಷ್ಠಾನ ರೂಪದಿಂದ ನೆಲೆಸಿರುವನೋ, ಯಾರ ಪರಮ ಪದವು ಕೇವಲ ಅನುಭೂತಿಸ್ವರೂಪವಾಗಿದೆಯೋ, ಅಂತಹ ದೇವತೆಗಳ ಆರಾಧ್ಯ ದೇವನಾದ ಸನಾತನ ಭಗವಂತನ ಚರಣಗಳಲ್ಲಿ ನಾನು ನಮಸ್ಕರಿಸುತ್ತಿದ್ದೇನೆ. ॥ ೬೭ ॥

ಸ್ವಸುಖನಿಭೃತಚೇತಾಸ್ತದ್ವ್ಯುದಸ್ತಾನ್ಯಭಾವೋ-
ಽಪ್ಯಜಿತರುಚಿರಲೀಲಾಕೃಷ್ಟಸಾರಸ್ತದೀಯಮ್ ।
ವ್ಯತನುತ ಕೃಪಯಾ ಯಸ್ತತ್ತ್ವದೀಪಂ ಪುರಾಣಂ
ತಮಖಿಲವೃಜಿನಘ್ನಂ ವ್ಯಾಸಸೂನುಂ ನತೋಽಸ್ಮಿ ॥ ೬೮ ॥

ಶ್ರೀಶುಕಮಹಾಮುನಿಗಳು ತನ್ನ ಆತ್ಮಾನಂದದಲ್ಲೇ ಮುಳುಗಿದ್ದರು. ಇಂತಹ ಅಖಂಡ ಅದ್ವೈತಸ್ಥಿತಿಯಿಂದ ಅವರ ಭೇದ ದೃಷ್ಟಿಯು ಸರ್ವಥಾ ನಿವೃತ್ತವಾಗಿತ್ತು. ಹೀಗಿದ್ದರೂ ಮುರಲಿ ಮನೋಹರ ಶ್ಯಾಮಸುಂದರನ ಮಧುರ, ಮಂಗಲಮಯ, ಮನೋಹರ ಲೀಲೆಗಳು ಅವರ ವೃತ್ತಿಗಳನ್ನು ತನ್ನತ್ತ ಆಕರ್ಷಿಸಿಕೊಂಡಿದ್ದವು ಮತ್ತು ಅವರು ಜಗತ್ತಿನ ಪ್ರಾಣಿಗಳ ಮೇಲೆ ಕೃಪೆ ಮಾಡಲು ಭಗವತ್ತತ್ತ್ವಗಳನ್ನು ಪ್ರಕಾಶಿತಗೊಳಿಸುವ ಈ ಮಹಾ ಪುರಾಣವನ್ನು ವಿಸ್ತಾರ ಗೊಳಿಸಿದರು. ಅಂತಹ ಸರ್ವಪಾಪಹಾರೀ ವ್ಯಾಸನಂದನ ಭಗವಾನ್ ಶ್ರೀಶುಕಮಹಾಮುನಿಯ ಚರಣಗಳಲ್ಲಿ ನಾನು ನಮಸ್ಕರಿಸುತ್ತೇನೆ. ॥ ೬೮ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ
ದ್ವಾದಶ ಸ್ಕಂಧಾರ್ಥ ನಿರೂಪಣಂ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಪುರಾಣಗಳ ಶ್ಲೋಕಸಂಖ್ಯೆ ಮತ್ತು ಶ್ರೀಮದ್ಭಾಗವತದ ಮಹಿಮೆ

ಸೂತ ಉವಾಚ

ಯಂ ಬ್ರಹ್ಮಾ ವರುಣೇಂದ್ರರುದ್ರಮರುತಃ
ಸ್ತುನ್ವಂತಿ ದಿವ್ಯೈಃ ಸ್ತವೈ-
ರ್ವೇದೈಃ ಸಾಂಗಪದಕ್ರಮೋಪನಿಷದೈ-
ರ್ಗಾಯಂತಿ ಯಂ ಸಾಮಗಾಃ।
ಧ್ಯಾನಾವಸ್ಥಿತತದ್ಗತೇನ ಮನಸಾ
ಪಶ್ಯಂತಿ ಯಂ ಯೋಗಿನೋ
ಯಸ್ಯಾಂತಂ ನ ವಿದುಃ ಸುರಾಸುರಗಣಾ
ದೇವಾಯ ತಸ್ಮೈ ನಮಃ ॥ ೧ ॥

ಪೃಷ್ಠೇ ಭ್ರಾಮ್ಯದಮಂದಮಂದರಗಿರಿ-
ಗ್ರಾವಾಗ್ರಕಂಡೂಯನಾ-
ನ್ನಿದ್ರಾಲೋಃ ಕಮಠಾಕೃತೇರ್ಭಗವತಃ
ಶ್ವಾಸಾನಿಲಾಃ ಪಾಂತು ವಃ।
ಯತ್ಸಂಸ್ಕಾರಕಲಾನುವರ್ತನವಶಾದ್
ವೇ ಲಾನಿಭೇನಾಂಭಸಾಂ
ಯಾತಾಯಾತಮತಂದ್ರಿತಂ ಜಲನಿಧ-
ರ್ನಾದ್ಯಾಪಿ ವಿಶ್ರಾಮ್ಯತಿ ॥ ೨ ॥

ಪುರಾಣಸಂಖ್ಯಾಸಂಭೂತಿಮಸ್ಯ ವಾಚ್ಯಪ್ರಯೋಜನೇ।
ದಾನಂ ದಾನಸ್ಯ ಮಾಹಾತ್ಮ್ಯಂ ಪಾಠಾದೇಶ್ಚ ನಿಬೋಧತ ॥ ೩ ॥

ಬ್ರಾಹ್ಮಂ ದಶಸಹಸ್ರಾಣಿ ಪಾದ್ಮಂ ಪಂಚೋನಷಷ್ಟಿ ಚ।
ಶ್ರೀವೈಷ್ಣವಂ ತ್ರಯೋವಿಂಶಚ್ಚತುರ್ವಿಂಶತಿ ಶೈವಕಮ್ ॥ ೪ ॥

ದಶಾಷ್ಟೌ ಶ್ರೀಭಾಗವತಂ ನಾರದಂ ಪಂಚವಿಂಶತಿಃ।
ಮಾರ್ಕಂಡಂ ನವ ವಾಹ್ನಂ ಚ ದಶಪಂಚ ಚತುಃಶತಮ್ ॥ ೫ ॥

ಚತುರ್ದಶ ಭವಿಷ್ಯಂ ಸ್ಯಾತ್ತಥಾ ಪಂಚಶತಾನಿ ಚ।
ದಶಾಷ್ಟೌ ಬ್ರಹ್ಮವೈವರ್ತಂ ಲಿಂಗಮೇಕಾದಶೈವ ತು ॥ ೬ ॥

ಸೂತಪುರಾಣಿಕರು ಹೇಳುತ್ತಾರೆ – ಬ್ರಹ್ಮಾ, ವರುಣ, ಇಂದ್ರ, ರುದ್ರ ಮತ್ತು ಮರುದ್ಗಣ ದಿವ್ಯ ಸ್ತುತಿಗಳಿಂದ ಯಾರ ಗುಣ-ಗಾನದಲ್ಲಿ ಮಗ್ನರಾಗಿರುತ್ತಾರೋ, ಸಾಮ-ಸಂಗೀತದ ಮರ್ಮಜ್ಞರಾದ ಋಷಿ-ಮುನಿಗಳು ಅಂಗ, ಪದ, ಕ್ರಮ ಹಾಗೂ ಉಪನಿಷದ್ಗಳೊಂದಿಗೆ ವೇದಗಳ ಮೂಲಕ ಯಾರ ಗಾನಮಾಡುತ್ತಿರುವರೋ, ಯೋಗಿಗಳು ಧ್ಯಾನದ ಮೂಲಕ ನಿಶ್ಚಲ ಹಾಗೂ ತಲ್ಲೀನ ಮನಸ್ಸಿನಿಂದ ಯಾರ ಭಾವಮಯ ದರ್ಶನ ಪಡೆಯುತ್ತಾ ಇರುತ್ತಾರೋ, ಆದರೆ ಇವೆಲ್ಲವನ್ನು ಮಾಡುತ್ತಿದ್ದರೂ ದೇವತೆಗಳು, ದೈತ್ಯರು ಮನುಷ್ಯರು ಹೀಗೆ ಯಾರೂ ಯಾರ ವಾಸ್ತವಿಕ ಸ್ವರೂಪವನ್ನು ಪೂರ್ಣವಾಗಿ ತಿಳಿಯಲಾರವೋ ಅಂತಹ ಸ್ವಯಂಪ್ರಕಾಶ ಪರಮಾತ್ಮನಿಗೆ ನಮಸ್ಕಾರವು. ॥ ೧ ॥ ಭಗವಂತನು ಕಚ್ಛಪರೂಪವನ್ನು ಧರಿಸಿದ್ದಾಗ ಮಂದರಾಚಲ ಕಡಗೋಲಿನಂತೆ ಆವನ ಬೆನ್ನಿನ ಮೇಲೆ ತಿರುಗುತ್ತಿರುವ ಸಮಯದಲ್ಲಿ ಮಂದರಾಚಲದ ಬಂಡೆಗಳ ತುದಿಯ ಸ್ಪರ್ಶದಿಂದ ಬೆನ್ನಿನ ನವೆಯು ಹೋಗಿ ಭಗವಂತನಿಗೆ ಸ್ವಲ್ಪ ಸುಖವುಂಟಾಯಿತು. ಅದೇ ಸಮಯದಲ್ಲಿ ಅವನು ನಿದ್ರಿಸಿದಾಗ ಶ್ವಾಸದಗತಿಯು ಸ್ವಲ್ಪ ಹೆಚ್ಚಿತ್ತು. ಆ ಉಸಿರಾಟದಿಂದ ಕಲಕಲ್ಪಟ್ಟ ಸಮುದ್ರವು ಆ ಸಂಸ್ಕಾರದಿಂದಲೋ ಎಂಬಂತೆ ಈಗಲೂ ಭರತ-ಇಳಿತ ಕ್ರಮದಲ್ಲಿ ಹಗಲು-ರಾತ್ರಿಯೂ ಹಿಂದಕ್ಕೂ, ಮುಂದಕ್ಕೂ ಸರಿಯುತ್ತಾ ಇದೆ. ಭಗವಂತನ ಅಂತಹ ಪರಮ ಪ್ರಭಾವಶಾಲಿ ಶ್ವಾಸವಾಯುವು ನಿಮ್ಮೆಲ್ಲರನ್ನು ರಕ್ಷಿಸಲಿ. ॥ ೨ ॥

ಶೌನಕಾದಿಗಳೇ! ಪುರಾಣಗಳ ಬೇರೆ-ಬೇರೆ ಶ್ಲೋಕಸಂಖ್ಯೆಯನ್ನು ಮೊತ್ತದ ಶ್ಲೋಕಸಂಖ್ಯೆಯನ್ನು ಶ್ರೀಮದ್ಭಾಗವತ ಪುರಾಣದ ಪ್ರತಿಪಾದ್ಯ ವಿಷಯವನ್ನೂ, ಅದರ ಪ್ರಯೋಜನವನ್ನು ಹೇಳುತ್ತೇನೆ. ಹಾಗೆಯೇ ಈ ಪುರಾಣವನ್ನು ದಾನಮಾಡುವ ಪದ್ಧತಿಯನ್ನು, ದಾನ-ಪಾಠಗಳ ಪದ್ಧತಿಯನ್ನು ಹೇಳುತ್ತೇನೆ, ಕೇಳಿರಿ. ॥ ೩ ॥ ಬ್ರಹ್ಮ ಪುರಾಣದಲ್ಲಿ ಹತ್ತುಸಾವಿರ ಶ್ಲೋಕಗಳೂ, ಪದ್ಮಪುರಾಣದಲ್ಲಿ ಐವತ್ತೈದು ಸಾವಿರ ಶ್ಲೋಕಗಳೂ, ಶ್ರೀವಿಷ್ಣು ಪುರಾಣದಲ್ಲಿ ಇಪ್ಪತ್ತಮೂರು ಸಾವಿರ ಶ್ಲೋಕಗಳೂ ಮತ್ತು ಶಿವಪುರಾಣದಲ್ಲಿ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳು ಕಂಡು ಬರುತ್ತವೆ. ॥ ೪ ॥ ಶ್ರೀಮದ್ಭಾಗವತದಲ್ಲಿ ಹದಿನೆಂಟುಸಾವಿರ, ನಾರದ ಪುರಾಣದಲ್ಲಿ ಇಪ್ಪತ್ತೈದು ಸಾವಿರ, ಮಾರ್ಕಂಡೇಯ ಪುರಾಣದಲ್ಲಿ ಒಂಭತ್ತು ಸಾವಿರ, ಅಗ್ನಿಪುರಾಣದಲ್ಲಿ ಹದಿನೈದು ಸಾವಿರದ ನಾಲ್ಕುನೂರು ಶ್ಲೋಕಗಳು ಇವೆ. ॥ ೫ ॥ ಭವಿಷ್ಯ ಪುರಾಣದ ಶ್ಲೋಕ ಸಂಖ್ಯೆಯು ಹದಿನಾಲ್ಕು ಸಾವಿರದ ಐದು ನೂರು ಇದೆ. ಬ್ರಹ್ಮವೈವರ್ತಪುರಾಣದಲ್ಲಿ ಹದಿನೆಂಟು ಸಾವಿರ ಮತ್ತು ಲಿಂಗಪುರಾಣದಲ್ಲಿ ಹನ್ನೊಂದು ಸಾವಿರ ಶ್ಲೋಕಗಳು ಇವೆ. ॥ ೬ ॥

ಚತುರ್ವಿಂಶತಿ ವಾರಾಹಮೇಕಾಶೀತಿಸಹಸ್ರಕಮ್ ।
ಸ್ಕಾಂಧಂ ಶತಂ ತಥಾ ಚೈಕಂ ವಾಮನಂ ದಶ ಕೀರ್ತಿತಮ್
॥ ೭ ॥

ಕೌರ್ಮಂ ಸಪ್ತದಶಾಖ್ಯಾತಂ ಮಾತ್ಸ್ಯಂ ತತ್ತು ಚತುರ್ದಶ ।
ಏಕೋನವಿಂಶತೌಪರ್ಣಂ ಬ್ರಹ್ಮಾಂಡಂ ದ್ವಾದಶೈವ ತು
॥ ೮ ॥

ಏವಂ ಪುರಾಣಸಂದೋಹಶ್ಚತುರ್ಲಕ್ಷ ಉದಾಹೃತಃ ।
ತತ್ರಾಷ್ಟಾದಶಸಾಹಸ್ರಂ ಶ್ರೀಭಾಗವತಮಿಷ್ಯತೇ
॥ ೯ ॥

ಇದಂ ಭಗವತಾ ಪೂರ್ವಂ ಬ್ರಹ್ಮಣೇ ನಾಭಿಪಂಕಜೇ ।
ಸ್ಥಿತಾಯ ಭವಭೀತಾಯ ಕಾರುಣ್ಯಾತ್ಸಂಪ್ರಕಾಶಿತಮ್
॥ ೧೦ ॥

ಆದಿಮಧ್ಯಾವಸಾನೇಷು ವೈರಾಗ್ಯಾಖ್ಯಾನಸಂಯುತಮ್ ।
ಹರಿಲೀಲಾಕಥಾವ್ರಾತಾಮೃತಾನಂದಿತಸತ್ಸುರಮ್
॥ ೧೧ ॥

ಸರ್ವವೇದಾಂತಸಾರಂ ಯದ್ಬ್ರಹ್ಮಾತ್ಮೈಕತ್ವ ಲಕ್ಷಣಮ್ ।
ವಸ್ತ್ವದ್ವಿತೀಯಂ ತನ್ನಿಷ್ಠಂ ಕೈವಲ್ಯೈಕಪ್ರಯೋಜನಮ್
॥ ೧೨ ॥

ಫ್ರೌಷ್ಠಪದ್ಯಾಂ ಪೌರ್ಣಮಾಸ್ಯಾಂ ಹೇಮಸಿಂಹಸಮನ್ವಿತಮ್ ।
ದದಾತಿ ಯೋ ಭಾಗವತಂ ಸ ಯಾತಿ ಪರಮಾಂ ಗತಿಮ್
॥ ೧೩ ॥

ರಾಜಂತೇ ತಾವದನ್ಯಾನಿ ಪುರಾಣಾನಿ ಸತಾಂ ಗಣೇ ।
ಯಾವನ್ನ ದೃಶ್ಯತೇ ಸಾಕ್ಷಾತ್ ಶ್ರೀಮದ್ಭಾಗವತಂ ಪರಮ್
॥ ೧೪ ॥

ಸರ್ವವೇದಾಂತಸಾರಂ ಹಿ ಶ್ರೀಭಾಗವತಮಿಷ್ಯತೇ ।
ತದ್ರಸಾಮೃತತೃಪ್ತಸ್ಯ ನಾನ್ಯತ್ರ ಸ್ಯಾದ್ರತಿಃ ಕ್ವಚಿತ್
॥ ೧೫ ॥

ನಿಮ್ನಗಾನಾಂ ಯಥಾ ಗಂಗಾ ದೇವಾನಾಮಚ್ಯುತೋ ಯಥಾ ।
ವೈಷ್ಣವಾನಾಂ ಯಥಾ ಶಂಭುಃ ಪುರಾಣಾನಾಮಿದಂ ತಥಾ
॥ ೧೬ ॥

ಕ್ಷೇತ್ರಾಣಾಂ ಚೈವ ಸರ್ವೇಷಾಂ ಯಥಾ ಕಾಶೀ ह्यನುತ್ತಮಾ ।
ತಥಾ ಪುರಾಣವ್ರಾತಾನಾಂ ಶ್ರೀಮದ್ಭಾಗವತಂ ದ್ವಿಜಾಃ
॥ ೧೭ ॥

ವರಾಹ ಪುರಾಣದಲ್ಲಿ ಇಪ್ಪತ್ತನಾಲ್ಕು ಸಾವಿರ, ಸ್ಕಂಧ ಪುರಾಣದ ಶ್ಲೋಕ ಸಂಖ್ಯೆಯು ಎಂಭತ್ತೊಂದು ಸಾವಿರದ ನೂರು, ವಾಮನ ಪುರಾಣದಲ್ಲಿ ಹತ್ತುಸಾವಿರ ಶ್ಲೋಕಗಳಿವೆ. ॥ ೭ ॥ ಕೂರ್ಮಪುರಾಣದಲ್ಲಿ ಹದಿನೇಳು ಸಾವಿರ ಶ್ಲೋಕಗಳು, ಮತ್ಸ್ಯ ಪುರಾಣದಲ್ಲಿ ಹದಿನಾಲ್ಕು ಸಾವಿರ ಶ್ಲೋಕಗಳು, ಗರುಡ ಪುರಾಣದಲ್ಲಿ ಹತ್ತೊಂಭತ್ತು ಸಾವಿರ ಮತ್ತು ಬ್ರಹ್ಮಾಂಡ ಪುರಾಣದಲ್ಲಿ ಹನ್ನೆರಡು ಸಾವಿರ ಶ್ಲೋಕಗಳು ಇವೆ. ॥ ೮ ॥ ಹೀಗೆ ಎಲ್ಲ ಪುರಾಣಗಳ ಒಟ್ಟು ಶ್ಲೋಕಸಂಖ್ಯೆಯು ನಾಲ್ಕು ಲಕ್ಷಗಳಾಗುತ್ತದೆ. ಇವುಗಳಲ್ಲೇ ಹಿಂದೆ ಹೇಳಿದಂತೆ ಶ್ರೀಮದ್ಭಾಗವತದ ಹದಿನೆಂಟು ಸಾವಿರ ಶ್ಲೋಕಗಳನ್ನೊಳಗೊಂಡಿದೆ. ॥ ೯ ॥

ಶೌನಕರೇ ! ಮೊಟ್ಟ-ಮೊದಲಿಗೆ ಭಗವಾನ್ ವಿಷ್ಣುವು ತನ್ನ ನಾಭಿಕಮಲದಲ್ಲಿದ್ದ ಸಂಸಾರದ ಭಯದಿಂದ ಭೀತವಾಗಿದ್ದ ಬ್ರಹ್ಮ ದೇವರ ಮೇಲೆ ದಯೆತೋರಿ ಈ ಶ್ರೀಮದ್ಭಾಗವತ ಪುರಾಣವನ್ನು ಪ್ರಕಾಶಪಡಿಸಿದನು. ॥ ೧೦ ॥ ಇದರ ಆದಿ, ಮಧ್ಯ, ಅಂತ್ಯಗಳಲ್ಲಿ ವೈರಾಗ್ಯವನ್ನುಂಟುಮಾಡುವಂತಹ ಅನೇಕ ಕಥೆಗಳು ಇವೆ. ಅವುಗಳು ಅಮೃತ ಸ್ವರೂಪವಾಗಿದ್ದು ಅವುಗಳ ಸೇವನೆಯಿಂದ ಸತ್ಪುರುಷರಿಗೆ ಮತ್ತು ದೇವತೆಗಳಿಗೆ ಮಹದಾನಂದವು ದೊರೆಯುತ್ತದೆ. ॥ ೧೧ ॥ ಸಮಸ್ತ ಉಪನಿಷತ್ತುಗಳ ಸಾರವು ಬ್ರಹ್ಮ ಮತ್ತು ಆತ್ಮನ ಏಕತ್ವರೂಪವಾದ ಅದ್ವಿತೀಯ ಸದ್ವಸ್ತುವೇ ಆಗಿದೆ ಎಂಬುದು ನಿಮಗೆ ತಿಳಿದೇ ಇದೆ. ಶ್ರೀಮದ್ಭಾವತದಲ್ಲಿ ಪ್ರತಿಪಾದ್ಯ ವಸ್ತುವೂ ಅದೇ ಆಗಿದೆ. ಮೋಕ್ಷಪ್ರಯೋಜನಕ್ಕಾಗಿಯೇ ಇದನ್ನು ರಚಿಸಲಾಗಿದೆ. ॥ ೧೨ ॥

ಭಾದ್ರಪದ ಮಾಸದ ಪೂರ್ಣಿಮೆಯಂದು ಶ್ರೀಮದ್ಭಾಗವತವನ್ನು ಸ್ವರ್ಣಸಿಂಹಾಸನದ ಮೇಲಿರಿಸಿ ಅದನ್ನು ದಾನ ಮಾಡುವವನಿಗೆ ಪರಮಗತಿಯು ಪ್ರಾಪ್ತವಾಗುತ್ತದೆ. ॥ ೧೩. ॥ ಸಂತರ ಸಭೆಯಲ್ಲಿ ಸರ್ವಶ್ರೇಷ್ಠವಾದ ಶ್ರೀಮದ್ಭಾಗವತದ ದರ್ಶನವಾಗುವವರೆಗೆ ಮಾತ್ರ ಇತರ ಪುರಾಣಗಳಿಗೆ ಶೋಭೆ ಇರುತ್ತದೆ. ॥ ೧೪ ॥ ಈ ಶ್ರೀಮದ್ಭಾಗವತವು ಸಮಸ್ತ ಉಪನಿಷತ್ತುಗಳ ಸಾರವಾಗಿದೆ. ಇದರ ರಸಾಮೃತವನ್ನು ಪಾನಮಾಡಿ ತೃಪ್ತಿಪಡೆದವನು ಬೇರಾವ ಪುರಾಣಗಳಲ್ಲಿಯೂ ರಮಿಸುವುದಿಲ್ಲ. ॥ ೧೫ ॥ ನದಿಗಳಲ್ಲಿ ಗಂಗೆಯು, ದೇವತೆಗಳಲ್ಲಿ ವಿಷ್ಣುವು, ವೈಷ್ಣವರಲ್ಲಿ ಶಂಕರನು ಸರ್ವಶ್ರೇಷ್ಠವಿರುವಂತೆಯೇ ಪುರಾಣಗಳಲ್ಲಿ ಶ್ರೀಮದ್ಭಾಗವತವು ಶ್ರೇಷ್ಠವಾಗಿದೆ. ॥ ೧೬ ॥ ಶೌನಕಾದಿ ಋಷಿಗಳಿರಾ ! ಸಕಲ ಕ್ಷೇತ್ರಗಳಲ್ಲಿ ಕಾಶಿಯೇ ಸರ್ವಶ್ರೇಷ್ಠವಿರುವಂತೆಯೇ ಪುರಾಣಗಳಲ್ಲಿ ಶ್ರೀಮದ್ಭಾಗವತದ ಸ್ಥಾನವು ಎತ್ತರವಾಗಿದೆ. ॥ ೧೭ ॥ ಈ ಶ್ರೀಮದ್ಭಾಗವತ ಪುರಾಣವು ಸರ್ವಥಾ ನಿರ್ದೋಷವಾಗಿದೆ. ಭಗವಂತನಿಗೆ ಪ್ರಿಯರಾದ ವೈಷ್ಣವ ಭಕ್ತರು ಇದನ್ನು ಬಹಳವಾಗಿ ಪ್ರೀತಿಸುತ್ತಾರೆ. ಈ ಪುರಾಣದಲ್ಲಿ ಜೀವನ್ಮುಕ್ತ ಪರಮಹಂಸರ ಸರ್ವಶ್ರೇಷ್ಠವೂ, ಅದ್ವೀತಿಯವೂ, ಆದ ಜ್ಞಾನವು ಹಾಡಲ್ಪಟ್ಟಿದೆ. ಈ ಗ್ರಂಥದ ನೈಷ್ಕರ್ಮ್ಯ ಅರ್ಥಾತ್ ಕರ್ಮಗಳ ಆತ್ಯಂತಿಕ ನಿವೃತ್ತಿಯು ಜ್ಞಾನ-ವೈರಾಗ್ಯ ಮತ್ತು ಭಕ್ತಿಯಿಂದ ಕೂಡಿದುದೇ ಎಲ್ಲಕ್ಕಿಂತ ಮಹತ್ತರವಾದ ವಿಲಕ್ಷಣತೆಯಾಗಿದೆ. ಇದನ್ನು ಶ್ರವಣ-ಕೀರ್ತನ-ಮನನ ಮಾಡ

ಶ್ರೀಮದ್ಭಾಗವತಂ ಪುರಾಣಮಮಲಂ ಯದ್ವೈಷ್ಣವಾನಾಂ ಪ್ರಿಯಂ
ಯಸ್ಮಿನ್ಪಾರಮಹಂಸ್ಯಮೇಕಮಮಲಂ ಜ್ಞಾನಂ ಪರಂ ಗೀಯತೇ ।
ತತ್ರ ಜ್ಞಾನವಿರಾಗಭಕ್ತಿಸಹಿತಂ ನೈಷ್ಕರ್ಮ್ಯಮಾವಿಷ್ಕೃತಂ
ತಚ್ಛೃಣ್ವನ್ವಿಪಠನ್ ವಿಚಾರಣಪರೋ ಭಕ್ತ್ಯಾ ವಿಮುಚ್ಯೇನ್ನರಃ
॥ ೧೮ ॥

ಕಸ್ಮೈ ಯೇನ ವಿಭಾಸಿತೋಽಯಮತುಲೋ ಜ್ಞಾನಪ್ರದೀಪಃ ಪುರಾ
ತದ್ರೂಪೇಣ ಚ ನಾರದಾಯ ಮುನಯೇ ಕೃಷ್ಣಾಯ ತದ್ರೂಪಿಣಾ ।
ಯೋಗೀಂದ್ರಾಯ ತದಾತ್ಮನಾಥ ಭಗವದ್ರಾತಾಯ ಕಾರುಣ್ಯತ-
ಸ್ತಚ್ಛುದ್ಧಂ ವಿಮಲಂ ವಿಶೋಕಮಮೃತಂ ಸತ್ಯಂ ಪರಂ ಧೀಮಹಿ
॥ ೧೯ ॥

ನಮಸ್ತಸ್ಮೈ ಭಗವತೇ ವಾಸುದೇವಾಯ ಸಾಕ್ಷಿಣೇ ।
ಯ ಇದಂ ಕೃಪಯಾ ಕಸ್ಮೈ ವ್ಯಾಚಚಕ್ಷೇ ಮುಮುಕ್ಷವೇ
॥ ೨೦ ॥

ಯೋಗೀಂದ್ರಾಯ ನಮಸ್ತಸ್ಮೈ ಶುಕಾಯ ಬ್ರಹ್ಮರೂಪಿಣೇ ।
ಸಂಸಾರಸರ್ಪದಷ್ಟಾರ್ಕ ಯೋ ವಿಷ್ಣುರಾತಮಮೂಮುಚತ್
॥ ೨೧ ॥

ಭವೇ ಭವೇ ಯಥಾ ಭಕ್ತಿಃ ಪಾದಯೋಸ್ತವ ಜಾಯತೇ ।
ತಥಾ ಕುರುಷ್ವ ದೇವೇಶ ನಾಥಸ್ತ್ವಂ ನೋ ಯತಃ ಪ್ರಭೋ
॥ ೨೨ ॥

ನಾಮಸಂಕೀರ್ತನಂ ಯಸ್ಯ ಸರ್ವಪಾಪಪ್ರಣಾಶನಮ್ ।
ಪ್ರಣಾಮೋ ದುಃಖಶಮನಸ್ತಂ ನಮಾಮಿ ಹರಿಂ ಪರಮ್
॥ ೨೩ ॥

ತೊಡಗುವವನಿಗೆ ಭಗವಂತನ ಭಕ್ತಿಯು ಉಂಟಾಗುತ್ತದೆ ಮತ್ತು ಅವನು ಮುಕ್ತನಾಗಿ ಹೋಗುತ್ತಾನೆ. ॥ ೧೮ ॥

ಈ ಶ್ರೀಮದ್ಭಾಗತವು ಭಗವತ್ತತ್ವಜ್ಞಾನದ ಒಂದು ಶ್ರೇಷ್ಠವಾದ ಪ್ರಕಾಶವಾಗಿದೆ. ಬೇರೆ ಯಾವ ಪುರಾಣದೊಂದಿಗೂ ಇದರ ತುಲನೆಯಾಗಲಾರದು. ಇದನ್ನು ಮೊಟ್ಟ-ಮೊದಲಿಗೆ ಸಾಕ್ಷಾತ್ ಶ್ರೀಮನ್ನಾರಾಯಣನು ಬ್ರಹ್ಮದೇವರಿಗಾಗಿ ಪ್ರಕಟಪಡಿಸಿದ್ದನು. ಮತ್ತೆ ಅವನೇ ಬ್ರಹ್ಮದೇವರ ರೂಪದಿಂದ ದೇವರ್ಷಿನಾರದರಿಗೆ ಉಪದೇಶಿಸಿದನು ಮತ್ತು ನಾರದರ ರೂಪದಿಂದ ಭಗವಾನ್ ಶ್ರೀಕೃಷ್ಣದ್ವೈಪಾಯನರಿಗೆ ಉಪದೇಶಿದನು. ಆನಂತರ ಅವನೇ ವ್ಯಾಸರೂಪದಿಂದ ಯೋಗಿಗಳಾದ ಶುಕಮುನಿಗೆ ಉಪದೇಶಿಸಿದನು. ಶುಕಮುನಿಯರೂಪದಿಂದ ಅತ್ಯಂತ ಕರುಣಾ ವಶನಾಗಿ ರಾಜರ್ಷಿ ಪರೀಕ್ಷಿತನಿಗೆ ಉಪದೇಶ ಮಾಡಿದನು. ಆ ಭಗವಂತನು ಪರಮಶುದ್ಧ ಹಾಗೂ ಮಾಯೆಯಿಂದ ರಹಿತನಾಗಿದ್ದಾನೆ. ಶೋಕ-ಮೃತ್ಯುಗಳು ಅವನ ಬಳಿಯಲ್ಲಿ ಸುಳಿಯುವುದಿಲ್ಲ. ಅಂತಹ ಪರಮ ಸತ್ಯಸ್ವರೂಪನಾದ ಪರಮೇಶ್ವರನನ್ನು ನಾವೆಲ್ಲರೂ ಧ್ಯಾನ ಮಾಡುತ್ತೇವೆ. ॥ ೧೯ ॥ ಮೋಕ್ಷವನ್ನು ಬಯಸುತ್ತಿದ್ದ ಬ್ರಹ್ಮದೇವರಿಗೆ ಪರಮ ಕರುಣೆಯಿಂದ ಈ ಶ್ರೀಮದ್ಭಾಗವತವನ್ನು ಉಪದೇಶ ಮಾಡಿದ ಆ ಸರ್ವಸಾಕ್ಷಿಯಾದ ಭಗವಾನ್ ವಾಸು ದೇವನಿಗೆ ನಾವು ನಮಸ್ಕರಿಸುತ್ತಿದ್ದೇವೆ. ॥ ೨೦ ॥ ಜೊತೆಗೆ ಈ ಶ್ರೀಮದ್ಭಾಗವತ ಮಹಾಪುರಾಣವನ್ನು ಹೇಳಿ ಸಂಸಾರ-ಸರ್ಪದಿಂದ ಕಚ್ಚಲ್ಪಟ್ಟ ರಾಜರ್ಷಿ ಪರೀಕ್ಷಿತನನ್ನು ಮುಕ್ತನನ್ನಾಗಿಸಿದ ಆ ಯೋಗಿರಾಜ ಬ್ರಹ್ಮಸ್ವರೂಪರಾದ ಶ್ರೀಶುಕಮಹಾ ಮುನಿಗಳಿಗೂ ನಾವು ನಮಸ್ಕರಿಸುತ್ತೇವೆ. ॥ ೨೧ ॥ ದೇವತೆಗಳ ಆರಾಧ್ಯನಾದ ಸರ್ವೇಶ್ವರನೇ! ನೀನೇ ನಮಗೆ ಏಕಮಾತ್ರ ಸ್ವಾಮಿಯೂ, ಸರ್ವಸ್ವವೂ ಆಗಿರುವೆ. ನಮ್ಮ ಪ್ರತ್ಯೇಕ ಜನ್ಮ ಗಳಲ್ಲಿಯೂ ನಿನ್ನ ಚರಣ ಕಮಲಗಳಲ್ಲಿ ನಮಗೆ ಅವಿಚಲವಾದ ಭಕ್ತಿಯು ಇರುವಂತೆ ನಮ್ಮ ಮೇಲೆ ಕೃಪೆಮಾಡು. ॥ ೨೨ ॥ ಯಾವ ಭಗವಂತನ ನಾಮಗಳ ಸಂಕೀರ್ತನೆಯು ಸಮಸ್ತ ಪಾಪಗಳನ್ನು ಸರ್ವಥಾ ನಾಶಮಾಡಿ ಬಿಡುತ್ತದೆಯೋ ಮತ್ತು ಯಾವನಿಗೆ ನಮಸ್ಕರಿಸುವುದರಿಂದ ಸರ್ವ ದುಃಖಿಗಳು ಶಮನ ಹೊಂದು ವುವೋ ಅಂತಹ ಪರಮ ಪುರುಷ ನಾದ ಶ್ರೀಹರಿಯನ್ನು ನಾನು ನಮಸ್ಕರಿಸುತ್ತೇನೆ. ॥ ೨೩ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ತ್ರಯೋದಶೋಽಧ್ಯಾಯಃ॥ ೧೩ ॥

ಹನ್ನೆರಡನೆಯ ಸ್ಕಂಧವು ಸಂಪೂರ್ಣವಾಯಿತು.

ತ್ವದೀಯಂ ವಸ್ತುಗೋವಿಂದ ತುಭ್ಯಮೇವ ಸಮರ್ಪಯೇ ।
ತೇನ ತ್ವದಂಘ್ರಿಕಮಲೇ ರತಿಂ ಮೇ ಯಚ್ಛ ಶಾಶ್ವತೀಮ್ ॥

ಶ್ರೀಮದ್ಭಾಗವತವು ಸಮಾಪ್ತವಾಯಿತು

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಾಹಾತ್ಮ್ಯಮ್

ಮೊದಲನೆಯ ಅಧ್ಯಾಯ

ಪರೀಕ್ಷಿದ್ರಾಜ ಮತ್ತು ವಜ್ರನಾಭರ ಸಮಾಗಮ, ಶಾಂಡಿಲ್ಯಮುನಿಯು ಭಗವಂತನ ಲೀಲೆಯ ರಹಸ್ಯವನ್ನೂ ಮತ್ತು ವ್ರಜಭೂಮಿಯ ಮಹತ್ತ್ವವನ್ನೂ ವರ್ಣಿಸಿದುದು

ವ್ಯಾಸ ಉವಾಚ

ಶ್ರೀಸಚ್ಚಿದಾನಂದಘನಸ್ವರೂಪಿಣೇ
ಕೃಷ್ಣಾಯ ಚಾನಂತಸುಖಾಭಿವರ್ಷಿಣೇ ।
ವಿಶ್ವೋದ್ಭವಸ್ಥಾನನಿರೋಧಹೇತವೇ
ನುಮೋ ವಯಂ ಭಕ್ತಿರಸಾಪ್ತಯೇಽನಿಶಮ್ ॥ ೧ ॥

ನೈಮಿಷೇ ಸೂತಮಾಸೀನಮಭಿವಾದ್ಯ ಮಹಾಮತಿಮ್ ।
ಕಥಾಮೃತರಸಾಸ್ವಾದಕುಶಲಾ ಋಷಯೋಽಬ್ರುವನ್
॥ ೨ ॥

ಋಷಯ ಊಚುಃ

ವಜ್ರಂ ಶ್ರೀಮಾಥುರೇ ದೇಶೇ ಸ್ವಪೌತ್ರಂ ಹಸ್ತಿನಾಪುರೇ ।
ಅಭಿಷಿಚ್ಯ ಗತೇ ರಾಜ್ಞಿ ತೌ ಕಥಂ ಕಿಂ ಚ ಚಕ್ರತುಃ
॥ ೩ ॥

ಸೂತ ಉವಾಚ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್
॥ ೪ ॥

ಮಹಾಪಥಂ ಗತೇ ರಾಜ್ಞಿ ಪರೀಕ್ಷಿತ್ ಪೃಥಿವೀಪತಿಃ ।
ಜಗಾಮ ಮಥುರಾಂ ವಿಪ್ರಾ ವಜ್ರನಾಭದಿದೃಕ್ಷಯಾ
॥ ೫ ॥

ಪಿತೃವ್ಯಮಾಗತಂ ಜ್ಞಾತ್ವಾ ವಜ್ರಃ ಪ್ರೇಮಪರಿಪ್ಲುತಃ ।
ಅಭಿಗಮ್ಯಾಭಿವಾದ್ಯಾಥ ನಿನಾಯ ನಿಜಮಂದಿರಮ್
॥ ೬ ॥

ಮಹರ್ಷಿ ವೇದವ್ಯಾಸರು ಹೇಳುತ್ತಾರೆ – "ನಿತ್ಯನಿರಂತರವಾದ ಭಕ್ತಿರಸಾನುಭವವನ್ನು ಪಡೆಯುವುದಕ್ಕಾಗಿ ನಾವು ಶ್ರೀಸಚ್ಚಿದಾನಂದಘನಸ್ವರೂಪಿಯೂ, ಅನಂತವಾದ ಆನಂದದ ಮಳೆಗರೆಯುವವನೂ ಮತ್ತು ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನೂ ಆಗಿರುವ ಶ್ರೀಕೃಷ್ಣಪರಮಾತ್ಮನನ್ನು ಸದಾಕಾಲ ನಮಸ್ಕರಿಸುತ್ತೇವೆ." ॥ ೧ ॥ ಶೌನಕಾದಿಮಹರ್ಷಿಗಳು ಶ್ರೀಭಗವಂತನ ಕಥೆಯ ರಸವನ್ನು ಸವಿಯುವುದರಲ್ಲಿ ಕುಶಲರು. ಈ ಸವಿಯನ್ನು ಪಡೆಯುವುದಕ್ಕಾಗಿ ಅವರು ನೈಮಿಷಾರಣ್ಯದಲ್ಲಿ ಕುಳಿತಿದ್ದ ಮಹಾತ್ಮರಾದ ಸೂತಪುರಾಣಿಕರ ಬಳಿಗೆ ಹೋಗಿ ಅವರಿಗೆ ನಮಸ್ಕಾರಮಾಡಿ ಹೀಗೆ ಪ್ರಶ್ನಿಸಿದರು – ॥ ೨ ॥

ಶೌನಕಾದಿ ಋಷಿಗಳು ಕೇಳಿದರು – "ಎಲೈ ಮಹಾತ್ಮರೇ! ಧರ್ಮರಾಜ ಯುಧಿಷ್ಠಿರನು ಅನಿರುದ್ಧನ ಪುತ್ರನಾದ ವಜ್ರನಾಭನನ್ನು ಶ್ರೀಮಥುರಾಮಂಡಲದಲ್ಲಿಯೂ ತನ್ನ ಮೊಮ್ಮಗನಾದ ಪರೀಕ್ಷಿತನನ್ನು ಹಸ್ತಿನಾವತಿಯಲ್ಲೂ ಪಟ್ಟದಲ್ಲಿ ಕುಳ್ಳಿರಿಸಿ ಮಹಾಪ್ರಸ್ಥಾನಮಾಡಿ ಹಿಮಾಲಯಕ್ಕೆ ಹೊರಟುಹೋದನಷ್ಟೇ! ಅನಂತರ ಮಹಾರಾಜವಜ್ರನಾಭನೂ, ಮಹಾರಾಜ ಪರೀಕ್ಷಿತನೂ ಏನೇನು ಕೆಲಸವನ್ನು ಮಾಡಿದರು? ಹೇಗೆ ಮಾಡಿದರು? ಎಂಬುದನ್ನು ತಿಳಿಸಿರಿ." ಮಹರ್ಷಿಗಳ ಪ್ರಶ್ನೆಗೆ ಉತ್ತರಿಸುತ್ತಾ ಸೂತಪುರಾಣಿಕರು ಹೀಗೆಂದರು – ॥ ೩ ॥

ಸೂತಪುರಾಣಿಕರು ಹೇಳುತ್ತಾರೆ – "ಭಗವಾನ್ ನಾರಾಯಣನನ್ನೂ ನರೋತ್ತಮನಾದ ನರಮಹರ್ಷಿಯನ್ನೂ ಶ್ರೀಸರಸ್ವತೀದೇವಿಯನ್ನೂ ಮಹರ್ಷಿ ವ್ಯಾಸರನ್ನೂ ನಮಸ್ಕರಿಸಿ ಶುದ್ಧಸತ್ತ್ವನಾಗಿ ಭಗವತ್ತತ್ತ್ವವನ್ನು ಪ್ರಕಾಶಪಡಿಸುವ ಇತಿಹಾಸ ಪುರಾಣರೂಪವಾದ 'ಜಯ' ಎಂಬುದನ್ನು ಹೇಳಬೇಕು. ॥ ೪ ॥ ಎಲೈ ಮಹರ್ಷಿಗಳೇ! ಧರ್ಮರಾಜನೇ ಮುಂತಾದವರು ಸ್ವರ್ಗಾರೋಹಣಕ್ಕಾಗಿ ಹೊರಟುಹೋದ ಬಳಿಕ ಪರೀಕ್ಷಿನ್ಮಹಾರಾಜನು ಒಂದು ದಿನ ವಜ್ರನಾಭನನ್ನು ಕಂಡು ಬರೋಣವೆಂದು ಮಥುರಾನಗರಿಗೆ ಹೋದನು. ॥ ೫ ॥ ತನ್ನ ತಂದೆ-ಚಿಕ್ಕಪ್ಪಂದಿರಿಗೆ ಸಮಾನನಾಗಿದ್ದ ಪರೀಕ್ಷಿತನು ಬಂದಿರುವನೆಂಬುದನ್ನು ಕೇಳಿ ವಜ್ರನಾಭನು ಪ್ರೀತಿತುಂಬಿದ ಮನಸ್ಸುಳ್ಳವನಾಗಿ ಆತನ ಬಳಿಗೆ ಹೋಗಿ ನಮಸ್ಕಾರಮಾಡಿ ಆತನನ್ನು ತನ್ನ ಅರಮನೆಗೆ ಕರೆದುಕೊಂಡು ಹೋದನು. ॥ ೬ ॥ ಮಹಾವೀರನಾದ ಪರೀಕ್ಷಿತನು

ಪರಿಷ್ವಜ್ಯ ಸ ತಂ ವೀರಃ ಕೃಷ್ಣೈಕಗತಮಾನಸಃ ।
ರೋಹಿಣ್ಯಾದ್ಯಾ ಹರೇಃ ಪತ್ನೀರ್ವವಂದಾಯತನಾಗತಃ
॥ ೭ ॥

ತಾಭಿಃ ಸಂಮಾನಿತೋಽತ್ಯರ್ಥಂ ಪರೀಕ್ಷಿತ್ ಪೃಥಿವೀಪತಿಃ ।
ವಿಶ್ರಾಂತಃ ಸುಖಮಾಸೀನೋ ವಜ್ರನಾಭಮುವಾಚ ಹ
॥ ೮ ॥

ಪರೀಕ್ಷಿದುವಾಚ

ತಾತ ತ್ವತ್ತಿತೃಭಿರ್ನೂನಮಸ್ಮತ್ತಿತೃಪಿತಾಮಹಾಃ ।
ಉದ್ಧೃತಾ ಭೂರಿದುಃಖೌಘಾದಹಂ ಚ ಪರಿರಕ್ಷಿತಃ
॥ ೯ ॥

ನ ಪಾರಯಾಮ್ಯಹಂ ತಾತ ಸಾಧು ಕೃತ್ಯೋಪಕಾರತಃ ।
ತ್ವನ್ಮತಃ ಪ್ರಾರ್ಥಯಾಮ್ಯಂಗ ಸುಖಂ ರಾಜ್ಯೇಽನುಯುಜ್ಯತಾಮ್
॥ ೧೦ ॥

ಕೋಶಸೈನ್ಯಾದಿಜಾ ಚಿಂತಾ ತಥಾರಿದಮನಾದಿಜಾ ।
ಮನಾಗಪಿ ನ ಕಾರ್ಯಾ ತೇ ಸುಸೇವ್ಯಾಃ ಕಿಂತು ಮಾತರಃ
॥ ೧೧ ॥

ನಿವೇದ್ಯ ಮಯಿ ಕರ್ತವ್ಯಂ ಸರ್ವಾಧಿಪರಿವರ್ಜನಮ್ ।
ಶ್ರುತ್ವೈತತ್ತ್ವರಮಪ್ರೀತೋ ವಜ್ರಸ್ತಂ ಪ್ರತ್ಯುವಾಚ ಹ
॥ ೧೨ ॥

ವಜ್ರನಾಭ ಉವಾಚ

ರಾಜನ್ನುಚಿತಮೇತತ್ತೇ ಯದಸ್ಮಾಸು ಪ್ರಭಾಷತೇ ।
ತ್ವತ್ಪಿತೋಪಕೃತಶ್ಚಾಹಂ ಧನುರ್ವಿದ್ಯಾಪ್ರದಾನತಃ
॥ ೧೩ ॥

ತಸ್ಮಾನ್ನಾಲ್ಪಾಪಿ ಮೇ ಚಿಂತಾ ಕ್ಷಾತ್ರಂ ದೃಢಮುಪೇಯುಷಃ ।
ಕಿಂತ್ವೇಕಾ ಪರಮಾ ಚಿಂತಾ ತತ್ರ ಕಿಂಚಿದ್ವಿಚಾರ್ಯತಾಮ್
॥ ೧೪ ॥

ಮಾಥುರೇ ತ್ವಭಿಷಿಕ್ತೋಽಪಿ ಸ್ಥಿತೋಽಹಂ ನಿರ್ಜನೇ ವನೇ ।
ಕ್ವ ಗತಾ ವೈ ಪ್ರಜಾತ್ರತ್ರಾ ಯತ್ರ ರಾಜ್ಯಂ ಪ್ರರೋಚತೇ
॥ ೧೫ ॥

ಅಸ್ತ್ಯತ್ರೋ ವಿಷ್ಣುರಾತಸ್ತು ನಂದಾದೀನಾಂ ಪುರೋಹಿತಮ್ ।
ಶಾಂಡಿಲ್ಯಮಾಜುಹಾವಾಶು ವಜ್ರಸಂದೇಹನುತ್ತಯೇ
॥ ೧೬ ॥

ಅತನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಅಂತಃಪುರಕ್ಕೆ ಹೋಗಿ ಅಲ್ಲಿ ರೋಹಿಣಿಯೇ ಮುಂತಾದ ಶ್ರೀಕೃಷ್ಣನ ಪತ್ನಿಯರಿಗೆ ನಮಸ್ಕಾರಮಾಡಿದನು. ॥ ೭ ॥ಅವರಿಂದ ತುಂಬಾ ಸಮ್ಮಾನಿಸಲ್ಪಟ್ಟ ಮಹಾರಾಜ ಪರೀಕ್ಷಿತನು ವಿಶ್ರಾಂತಿಪಡೆದು ಸುಖವಾಗಿ ಕುಳಿತಿದ್ದಾಗ ವಜ್ರನಾಭನಿಗೆ ಹೀಗೆಂದನು – ॥ ೮ ॥

ಪರೀಕ್ಷಿತ ಮಹಾರಾಜನು ಕೇಳಿದನು – "ಮಗೂ ವಜ್ರ ಕುಮಾರ! ನಿನ್ನ ತಂದೆ-ತಾತಂದಿರು ನನ್ನ ತಾತಂದಿರಿಗೆ ನಿಜವಾಗಿಯೂ ಎಷ್ಟು ಉಪಕಾರಮಾಡಿದರೆಂಬುದನ್ನು ವರ್ಣಿಸಲಾಗುವುದಿಲ್ಲ. ಅವರು ನನ್ನ ತಂದೆ-ತಾತಂದಿರನ್ನು ಮಹಾದುಃಖರಾಶಿಯಿಂದ ಮೇಲೆತ್ತಿದರು. ನನ್ನ ಪ್ರಾಣವನ್ನೂ ಕಾಪಾಡಿದರು. ॥ ೯ ॥ ಅವರು ಮಾಡಿದ ಉಪಕಾರಕ್ಕೆ ಬದಲಾಗಿ ನಾನು ಏನು ಮಾಡಿದರೂ ಸಾಲ ತೀರದು. ಆದುದರಿಂದ ನಾನು ನಿನ್ನಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ. ಅದನ್ನು ನಡೆಸಿಕೊಡು. ನೀನು ರಾಜ್ಯದಲ್ಲಿ ಸುಖವಾಗಿ ಜೀವನ ನಡೆಸುತ್ತಿರು. ॥ ೧೦ ॥ ಕೋಶ-ಸೈನ್ಯಾದಿಗಳನ್ನು ನೋಡಿಕೊಳ್ಳುವುದು ಮತ್ತು ಶತ್ರುಗಳನ್ನು ಅಡಗಿಸುವುದು – ಇವೇ ಮುಂತಾದ ಕಷ್ಟವಾದ ಕೆಲಸಗಳ ಬಗೆಗೆ ಸ್ವಲ್ಪವೂ ಚಿಂತಿಸಬೇಡ. ನಿನ್ನ ತಾಯಂದಿರ ಸೇವೆಯನ್ನು ಮಾಡುತ್ತಿರು. ॥ ೧೧ ॥ ಅಷ್ಟೇ ಸಾಕು. ರಾಜ್ಯ, ಕೋಶ, ಶತ್ರುಜಯಾದಿ ಕಾರ್ಯಗಳೆಲ್ಲವನ್ನೂ ನನಗೆ ಒಪ್ಪಿಸಿ ಯಾವ ಚಿಂತೆಯೂ ಇಲ್ಲದೇ ಸುಖವಾಗಿರು." ಪರೀಕ್ಷಿದ್ರಾಜನ ಈ ಪ್ರಿಯವಾದ ಮಾತುಗಳನ್ನು ಕೇಳಿ ತುಂಬಾ ಸಂತೋಷಗೊಂಡ ಮಹಾರಾಜ ವಜ್ರನಾಭನು ಪರೀಕ್ಷಿತರಾಜನಲ್ಲಿ ಇಂತೆಂದನು – ॥ ೧೨ ॥

ವಜ್ರನಾಭನು ಹೇಳಿದನು – "ಮಹಾರಾಜ! ನೀನು ಹೇಳಿದ ಮಾತು ನಿನ್ನ ಸೌಹಾರ್ದಕ್ಕೆ, ಸಾಮರ್ಥ್ಯಕ್ಕೆ, ಸೌಜನ್ಯ, ಬಂಧು ಪ್ರಿಯತೆಗಳಿಗೆ ಅನುಗುಣವಾಗಿಯೇ ಇದೆ. ನಿನ್ನ ತಂದೆಯೂ ಕೂಡ ನನಗೆ ಧನುರ್ವಿದ್ಯೆಯನ್ನು ಉಪದೇಶಮಾಡಿ ಪರಮೋಪಕಾರ ಮಾಡಿದ್ದಾನೆ. ॥ ೧೩ ॥ ಆತನ ಕೃಪೆಯಿಂದ ನನ್ನಲ್ಲಿ ಕ್ಷತ್ರಿಯೋಚಿತವಾದ ಶೌರ್ಯ-ಶಕ್ತಿಗಳು ತುಂಬಿವೆ. ಆದುದರಿಂದ ನನ್ನ ರಾಜ್ಯರಕ್ಷಣಾದಿಗಳ ಬಗೆಗೆ ನೀನು ಚಿಂತಿಸಬೇಕಾಗಿಲ್ಲ. ಆದರೆ ಒಂದೇ ಒಂದು ವಿಷಯದಲ್ಲಿ ನನಗೆ ಚಿಂತೆಯು ಕಾಡುತ್ತಿದೆ. ಅದನ್ನು ನೀನು ಗಮನಿಸಿ ಅದರ ಪರಿಹಾರಕ್ಕೆ ಸಹಾಯ ಮಾಡು. ॥ ೧೪ ॥ ನನಗೆ ಮಥುರಾಮಂಡಲದ ರಾಜ್ಯದಲ್ಲಿ ಪಟ್ಟಾಭಿಷೇಕವಾಗಿದ್ದರೂ ನಾನು ಒಂದು ನಿರ್ಜನವಾದ ಅರಣ್ಯದಲ್ಲಿ ವಾಸಮಾಡುತ್ತಿದ್ದೇನೆ. ಇಲ್ಲಿದ್ದ ಪ್ರಜೆಗಳು ಎಲ್ಲಿ ಹೋದರು? ಎಂಬುದೇ ನನಗೆ ತಿಳಿಯುತ್ತಿಲ್ಲ. ಪ್ರಜೆಗಳು ಇದ್ದರೆ ತಾನೇ ರಾಜ್ಯಾಧಿಪತ್ಯದ ಸುಖ!" ॥ ೧೫ ॥ ವಜ್ರನಾಭನ ಮಾತನ್ನು ಕೇಳಿದ ಪರೀಕ್ಷಿದ್ರಾಜನು ಆತನ ಸಂದೇಹವನ್ನು ಪರಿಹರಿಸಲು ಶಾಂಡಿಲ್ಯಮಹರ್ಷಿಗಳಿಗೆ ಹೇಳಿ ಕಳುಹಿಸಿದನು. ಈ ಶಾಂಡಿಲ್ಯರು ನಂದನೇ ಮುಂತಾದ ಗೋಪರಿಗೆ ಪುರೋಹಿತರಾಗಿದ್ದವರು. ॥ ೧೬ ॥

ಅಥೋಟಜಂ ವಿಹಾಯಾಶು ಶಾಂಡಿಲ್ಯಃ ಸಮುಪಾಗತಃ ।
ಪೂಜಿತೋ ವಜ್ರನಾಭೇನ ನಿಷಸಾದಾಸನೋತ್ತಮೇ
॥ ೧೭ ॥

ಉಪೋದ್ಘಾತಂ ವಿಷ್ಣುರಾತಶ್ಚಕಾರಾಶು ತತಸ್ತ್ವಸೌ ।
ಉವಾಚ ಪರಮಪ್ರೀತಸ್ತಾವುಭೌ ಪರಿಸಾಂತ್ವಯನ್
॥ ೧೮ ॥

ಶಾಂಡಿಲ್ಯ ಉವಾಚ

ಶೃಣುತಂ ದತ್ತಚಿತ್ತೌ ಮೇ ರಹಸ್ಯಂ ವ್ರಜಭೂಮಿಜಮ್ ।
ವ್ರಜನಂ ವ್ಯಾಪ್ತಿರಿತ್ಯುಕ್ತ್ವಾ ವ್ಯಾಪನಾದ್ವ್ರಜ ಉಚ್ಯತೇ
॥ ೧೯ ॥

ಗುಣಾತೀತಂ ಪರಂ ಬ್ರಹ್ಮ ವ್ಯಾಪಕಂ ವ್ರಜ ಉಚ್ಯತೇ ।
ಸದಾನಂದಂ ಪರಂ ಜ್ಯೋತಿರ್ಮುಕ್ತಾನಾಂ ಪದಮವ್ಯಯಮ್
॥ ೨೦ ॥

ತಸ್ಮಿನ್ನಂದಾತ್ಮಜಃ ಕೃಷ್ಣಃ ಸದಾನಂದಾಂಗವಿಗ್ರಹಃ ।
ಆತ್ಮಾರಾಮಶ್ಚಾಪ್ತಕಾಮಃ ಪ್ರೇಮಾಕ್ಷೈರನುಭೂಯತೇ
॥ ೨೧ ॥

ಆತ್ಮಾ ತು ರಾಧಿಕಾ ತಸ್ಯ ತಯೈವ ರಮಣಾದಸೌ ।
ಆತ್ಮಾರಾಮತಯಾ ಪ್ರಾಜ್ಞೈಃ ಪ್ರೋಚ್ಯತೇ ಗೂಢವೇದಿಭಿಃ
॥ ೨೨ ॥

ಕಾಮಾಸ್ತು ವಾಂಛಿತಾಸ್ತಸ್ಯ ಗಾವೋ ಗೋಪಾಶ್ಚ ಗೋಪಿಕಾಃ ।
ನಿತ್ಯಾಃ ಸರ್ವೇ ವಿಹಾರಾದ್ಯಾ ಆಪ್ತಕಾಮಸ್ತತಸ್ತ್ವಯಮ್
॥ ೨೩ ॥

ರಹಸ್ಯಂ ತ್ವಿದಮೇತಸ್ಯ ಪ್ರಕೃತೇಃ ಪರಮುಚ್ಯತೇ ।
ಪ್ರಕೃತ್ಯಾ ಖೇಲತಸ್ತಸ್ಯ ಲೀಲಾನ್ಯೈರನುಭೂಯತೇ
॥ ೨೪ ॥

ಸರ್ಗಸ್ಥಿತ್ಯಪ್ಯಯಾ ಯತ್ರ ರಜಃಸತ್ತ್ವತಮೋಗುಣೈಃ ।
ಲೀಲೈವಂ ದ್ವಿವಿಧಾ ತಸ್ಯ ವಾಸ್ತವೀ ವ್ಯಾವಹಾರಿಕೀ
॥ ೨೫ ॥

ಪರೀಕ್ಷಿತನ ಸಂದೇಶವನ್ನು ಕೇಳಿದೊಡನೆಯೇ ಅವರು ತಮ್ಮ ಪರ್ಣಶಾಲೆಯನ್ನು ಬಿಟ್ಟು ಅಲ್ಲಿಗೆ ದಯಮಾಡಿಸಿದರು. ವಜ್ರನಾಭಮಹಾರಾಜನು ಅವರನ್ನು ವಿಧಿಪೂರ್ವಕವಾಗಿ ಸತ್ಕರಿಸಿ ಉನ್ನತವಾದ ಆಸನದಲ್ಲಿ ಕುಳ್ಳಿರಿಸಿದನು. ॥ ೧೭ ॥ ಆಗ ವಿಷ್ಣುರಾತಮಹಾರಾಜ ಪರೀಕ್ಷಿತನು, ವಜ್ರನಾಭನು ಹೇಳಿದ ಮಾತನ್ನು ಅವರಲ್ಲಿ ನಿವೇದಿಸಿಕೊಂಡನು. ಮಹರ್ಷಿಗಳು ಅದನ್ನು ಕೇಳಿ ಪ್ರಸನ್ನತೆಯಿಂದ ಅವರಿಬ್ಬರನ್ನೂ ಸಮಾಧಾನಪಡಿಸುತ್ತಾ ಹೀಗೆಂದರು. ॥ ೧೮ ॥

ಶಾಂಡಿಲ್ಯರು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ ಮತ್ತು ವಜ್ರನಾಭನೇ! ನಿಮ್ಮ ಸಂದೇಹಪರಿಹಾರಕ್ಕಾಗಿ ನಾನು ನಿಮಗೆ ವ್ರಜಭೂಮಿಯ ರಹಸ್ಯವನ್ನು ಹೇಳುತ್ತೇನೆ. ಸಾವಧಾನವಾಗಿ ಕೇಳಿರಿ. 'ವ್ರಜ' ಎಂಬ ಶಬ್ದಕ್ಕೆ 'ವ್ಯಾಪ್ತಿ' ಎಂದರ್ಥ. ಇದರಂತೆ ಭಗವಂತನ ಲೀಲೆಗಳು ಇಲ್ಲಿ ವ್ಯಾಪಕವಾಗಿರುವುದರಿಂದ ಈ ಭೂಮಿಗೆ ವ್ರಜ – ಎಂದು ಹೆಸರು. ॥ ೧೯ ॥ ಎಲ್ಲವನ್ನೂ ವ್ಯಾಪಿಸಿರುವುದು ತ್ರಿಗುಣಾತೀತವಾದ ಪರಬ್ರಹ್ಮ. ಅದೇ 'ವ್ರಜ' ಎಂದೂ ಕರೆಯಲ್ಪಡುವುದು. ಅದು ಸದಾನಂದಮಯ ಪರಮಜ್ಯೋತಿರ್ಮಯ ಮತ್ತು ಅವಿನಾಶಿಯಾದ ತತ್ತ್ವವು. ಮುಕ್ತಪುರುಷರು ನೆಲೆಗೊಂಡಿರುವ ಸ್ಥಾನವು. ॥ ೨೦ ॥ ಅದರಿಂದಲೇ ಈ ಪರಬ್ರಹ್ಮ ಸ್ವರೂಪವಾದ ವ್ರಜಧಾಮದಲ್ಲಿ ಸದಾನಂದಸ್ವರೂಪನಾದ, ದಿವ್ಯ ಮಂಗಳವಿಗ್ರಹವುಳ್ಳ, ನಂದನಂದನ ಭಗವಾನ್ ಶ್ರೀಕೃಷ್ಣನು ನೆಲೆಗೊಂಡಿರುತ್ತಾನೆ. ಆತನು ಆಪ್ತಕಾಮನು. ಎಲ್ಲ ಕಾಮನೆಗಳೂ ಈಡೇರಿದವನು. ಪ್ರೇಮರಸದಲ್ಲಿ ಮುಳುಗಿರುವ ರಸಿಕ ಜನರು ಮಾತ್ರವೇ ಆತನಲ್ಲಿ ರಮಿಸಬಲ್ಲರು. ॥ ೨೧ ॥ ಶ್ರೀಕೃಷ್ಣನನ್ನು ಏಕೆ ಆತ್ಮಾರಾಮ ಎಂದು ಕರೆಯುತ್ತಾರೆ? ಎಂದರೆ – ರಾಧಾದೇವಿಯು ಶ್ರೀಕೃಷ್ಣನಿಗೆ ಆತ್ಮಾ ಎನಿಸುತ್ತಾಳೆ. ಆಕೆಯಲ್ಲಿ ಶ್ರೀಕೃಷ್ಣನು ರಮಿಸುವುದರಿಂದ ರಹಸ್ಯವನ್ನರಿತವರು ಆತನನ್ನು ಆತ್ಮಾರಾಮನೆನ್ನುತ್ತಾರೆ. ॥ ೨೨॥ ಹೀಗೆ ಆಪ್ತಕಾಮ ಎಂಬುದಕ್ಕೂ ವಿಶೇಷವಾದ ಅರ್ಥವಿದೆ. 'ಕಾಮ' ಎಂದರೆ ಅಭಿಲಾಷೆ. 'ವ್ರಜ'ದಲ್ಲಿ ಶ್ರೀಕೃಷ್ಣ ಪರಮಾತ್ಮನ ಅಭಿಲಾಷೆಗೆ ವಿಷಯವಾದ ಅನೇಕ ಪದಾರ್ಥಗಳಿವೆ. ಗೋವುಗಳು, ಗೋಪಬಾಲಕರು, ಗೋಪಿಯರು ಮತ್ತು ಅವರೊಡನೆ ವಿಹರಿಸುವಿಕೆ ಮುಂತಾದುವು. ಅವೆಲ್ಲವೂ ಸಂಪೂರ್ಣವಾಗಿ ಇಲ್ಲಿವೆ. ಆದ್ದರಿಂದಲೇ ಶ್ರೀಕೃಷ್ಣನನ್ನು ಆಪ್ತಕಾಮನೆಂದು ಕರೆಯಲಾಗಿದೆ. ॥ ೨೩ ॥ ಭಗವಂತನ ಈ ರಹಸ್ಯಲೀಲೆಯು ಪ್ರಕೃತಿಯನ್ನು ಮೀರಿರುವುದು. ಅವನು ಪ್ರಕೃತಿಯೊಡನೆ ಆಟವಾಡತೊಡಗಿದಾಗ ಇತರರೂ ಆತನ ಲೀಲೆಯನ್ನು ಅನುಭವಿಸುತ್ತಾರೆ. ॥ ೨೪ ॥ ಪ್ರಕೃತಿಯೊಡನೆ ಭಗವಂತನು ಆಡುವ ಲೀಲೆಯಲ್ಲಿಯೇ ರಜೋಗುಣ, ಸತ್ತ್ವಗುಣ ಮತ್ತು ತಮೋಗುಣಗಳ ಮೂಲಕ ಸೃಷ್ಟಿ-ಸ್ಥಿತಿ ಮತ್ತು ಲಯಗಳ ಪ್ರತೀತಿ ಉಂಟಾಗುತ್ತದೆ. ಹೀಗೆ ಗಮನಿಸಿದಾಗ ಭಗವಂತನ ಲೀಲೆಯಲ್ಲಿ ವಾಸ್ತವ ಲೀಲಾ ಮತ್ತು ವ್ಯಾವಹಾರಿಕಲೀಲಾ ಎಂದು ಎರಡು ಪ್ರಕಾರಗಳು ಕಂಡುಬರುತ್ತವೆ. ॥ ೨೫ ॥ ವಾಸ್ತವಲೀಲೆಯು ಸ್ವಾನುಭವದಿಂದ ತನಗೇ ತಿಳಿಯತಕ್ಕದ್ದು. ಅದನ್ನು ಸ್ವಯಂ ಭಗವಂತನು ಮತ್ತು ಆತನ ರಸಿಕರಾದ ಭಕ್ತಜನರು ಮಾತ್ರವೇ ತಿಳಿಯಬಲ್ಲರು. ಜೀವರು

ವಾಸ್ತವೀ ತತ್ಸ್ವಸಂವೇದ್ಯಾ ಜೀವಾನಾಂ ವ್ಯಾವಹಾರಿಕೀ ।
ಆದ್ಯಾಂ ವಿನಾ ದ್ವಿತೀಯಾ ನ ದ್ವಿತೀಯಾ ನಾದ್ಯಗಾ ಕ್ವಚಿತ್
॥ ೨೬ ॥

ಯುವಯೋರ್ಗೋಚರೇಯಂ ತು ತಲ್ಲೀಲಾ ವ್ಯಾವಹಾರಿಕೀ ।
ಯತ್ರ ಭೂರಾದಯೋ ಲೋಕಾ ಭುವಿ ಮಾಥುರಮಂಡಲಮ್
॥ ೨೭ ॥

ಅತ್ಯೈವ ವ್ರಜಭೂಮಿಃ ಸಾ ಯತ್ರ ತತ್ತ್ವಂ ಸುಗೋಪಿತಮ್ ।
ಭಾಸತೇ ಪ್ರೇಮಪೂರ್ಣಾನಾಂ ಕದಾಚಿದಪಿ ಸರ್ವತಃ
॥ ೨೮ ॥

ಕದಾಚಿ ದ್ದಾಪರಸ್ಯಾಂತೇ ರಹೋಲೀಲಾಧಿಕಾರಿಣಃ ।
ಸಮವೇತಾ ಯದಾತ್ರ ಸ್ಯುರ್ಯಥೇದಾನೀಂ ತದಾ ಹರಿಃ
॥ ೨೯ ॥

ಸ್ವೈಃ ಸಹಾವತರೇತ್ಸ್ವೇಷು ಸಮಾವೇತಾರ್ಥಮೀಪ್ಸಿತಾಃ ।
ತದಾ ದೇವಾದಯೋಽಪ್ಯನ್ಯೇಽವತರಂತಿ ಸಮಂತತಃ
॥ ೩೦ ॥

ಸರ್ವೇಷಾಂ ವಾಂಛಿತಂ ಕೃತ್ವಾ ಹರಿರಂತರ್ಹಿತೋಽಭವತ್ ।
ತೇನಾತ್ರ ತ್ರಿವಿಧಾ ಲೋಕಾಃ ಸ್ಥಿತಾಃ ಪೂರ್ವಂ ನ ಸಂಶಯಃ
॥ ೩೧ ॥

ನಿತ್ಯಾಸ್ತಲ್ಲಿಪ್ಸವಶ್ಚೈವ ದೇವಾದ್ಯಾಶ್ಚೇತಿ ಭೇದತಃ ।
ದೇವಾದ್ಯಾಸ್ತೇಷು ಕೃಷ್ಣೇನ ದ್ವಾರಕಾಂ ಪ್ರಾಪಿತಾಃ ಪುರಾ
॥ ೩೨ ॥

ಪುನರ್ಮೌಶಲಮಾರ್ಗೇಣ ಸ್ವಾಧಿಕಾರೇಷು ಚಾಪಿತಾಃ ।
ತಲ್ಲಿಪ್ಸೂಂಶ್ಚ ಸದಾ ಕೃಷ್ಣಃ ಪ್ರೇಮಾನಂದೈಕರೂಪಿಣಃ
॥ ೩೩ ॥

ಗಳ ಎದುರಿಗೆ ನಡೆಯುವ ಲೀಲೆಯೇ ವ್ಯಾವಹಾರಿಕಲೀಲೆ. ವಾಸ್ತವಿಕಲೀಲೆಯಿಲ್ಲದೆ ವ್ಯಾವಹಾರಿಕ ಲೀಲೆಯು ನಡೆಯಲಾರದು. ಆದರೆ ವ್ಯಾವಹಾರಿಕಲೀಲೆಯು ವಾಸ್ತವಿಕಲೀಲೆಯ ರಾಜ್ಯಕ್ಕೆ ಪ್ರವೇಶವನ್ನು ಮಾಡಲಾರದು. ॥ ೨೬ ॥ ನೀವಿಬ್ಬರೂ ನೋಡುತ್ತಿರುವ ಭಗವಂತನ ಲೀಲೆಯು ವ್ಯಾವಹಾರಿಕಲೀಲೆಯು. ಈ ಭೂಮಿ ಮತ್ತು ಸ್ವರ್ಗಲೋಕಗಳು ಈ ಲೀಲೆಯಲ್ಲೇ ಅಡಕವಾಗಿವೆ. ಈ ಭೂಮಿಯಲ್ಲಿಯೇ ಮಥುರಾಮಂಡಲವೂ ಸೇರಿದೆ. ॥ ೨೭ ॥ ಭಗವಂತನ ವಾಸ್ತವವಾದ ರಹಸ್ಯಲೀಲೆಯು ಗುಪ್ತರೂಪದಿಂದ ನಡೆಯುತ್ತಿರುವ ವ್ರಜಭೂಮಿಯು ಇಲ್ಲಿಯೇ ಇದೆ. ಪ್ರೇಮಪೂರ್ಣವಾದ ಹೃದಯವುಳ್ಳ ರಸಿಕಭಕ್ತರಿಗೆ ಕೆಲವು ವೇಳೆಗಳಲ್ಲಿ ಇದು ಎಲ್ಲೆಡೆಗಳಲ್ಲಿಯೂ ಕಾಣಿಸತೊಡಗುತ್ತದೆ. ॥ ೨೮ ॥ ಕೆಲವೊಮ್ಮೆ ಇಪ್ಪತ್ತೆಂಟನೆಯ ದ್ವಾಪರಯುಗದ ಕೊನೆಯಲ್ಲಿ ಭಗವಂತನ ರಹಸ್ಯಲೀಲೆಯನ್ನು ಅನುಭವಿಸಲು ಯೋಗ್ಯರಾದ ಭಕ್ತಜನರು ಒಂದೆಡೆ ಸೇರಿದಾಗ ತನ್ನ ಅಂತರಂಗಪ್ರೇಮಿಗಳೊಡನೆ ಅವತಾರ ಮಾಡಿ ಇಲ್ಲೇ ದರ್ಶನಕೊಡುತ್ತಾನೆ. ಇದೇ ಸಮಯದಲ್ಲೇ ಕೊಂಚ ಕಾಲದ ಹಿಂದೆ ಇಂತಹ ಸನ್ನಿವೇಶ ಒದಗಿತ್ತು. ರಹಸ್ಯಲೀಲೆಗೆ ಅಧಿಕಾರಿಗಳಾಗಿರುವ ಭಕ್ತಜನರೂ ಕೂಡ ಅಂತರಂಗಪರಿಕರಗಳೊಡನೆ ಒಂದುಗೂಡಿ ಲೀಲಾರಸವನ್ನು ಸವಿಯಲು ಶಕ್ತರಾಗುವಂತೆ ಮಾಡುವುದೇ ಆವನ ಅವತಾರದ ಪ್ರಯೋಜನವು. ಹೀಗೆ ಭಗವಂತನು ಅವತಾರವನ್ನು ಮಾಡಿದಾಗ ಆ ಭಗವಂತನಿಗೆ ಇಷ್ಟರಾದ ಆತನಲ್ಲಿ ಪ್ರೇಮಾತಿಶಯವುಳ್ಳ ದೇವತೆಗಳೂ ಮತ್ತು ಋಷಿಗಳೂ ಮುಂತಾದವರೂ ಕೂಡ ಎಲ್ಲ ಕಡೆಗಳಲ್ಲೂ ಅವತಾರ ಮಾಡುತ್ತಾರೆ. ॥ ೨೯-೩೦ ॥

ಈಗ ತಾನೇ ಕೊಂಚಕಾಲದ ಹಿಂದೆ ನಡೆದ ಅವತಾರದಲ್ಲಿ ಭಗವಂತನು ತನ್ನ ಪ್ರೇಮಿಗಳಾದ ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಿ ಈಗ ಅಂತರ್ಧಾನನಾಗಿಬಿಟ್ಟಿದ್ದಾನೆ. ಇಲ್ಲಿ ಮೊದಲು ಮೂರು ವರ್ಗಗಳಿಗೆ ಸೇರಿದ ಭಕ್ತಜನರೂ ಉಪಸ್ಥಿತರಾಗಿದ್ದರು ಎಂಬುದು ಇದರಿಂದ ನಿಶ್ಚಿತವಾಗುತ್ತದೆ. ಇದರಲ್ಲಿ ಯಾವ ಸಂದೇಹವೂ ಇಲ್ಲ. ॥ ೩೧ ॥ ಈ ಮೂರು ವರ್ಗಗಳಲ್ಲಿ ಮೊದಲನೆಯವರು ನಿತ್ಯರಾದ ಭಗವಂತನ ಅಂತರಂಗಪಾರ್ಷದರು. ಇವರು ಎಂದಿಗೂ ಭಗವಂತನನ್ನು ಅಗಲದೇ ಇರುವವರು. ಭಗವಂತನೊಬ್ಬನನ್ನೇ ಪಡೆಯುವ ಇಚ್ಛೆಯುಳ್ಳವರಾಗಿ ಆತನ ಅಂತರಂಗಲೀಲೆಯೊಳಗೆ ಪ್ರವೇಶ ಪಡೆಯಲು ಇಚ್ಛೆಯುಳ್ಳವರಾಗಿ ಆತನ ಅಂತರಂಗಲೀಲೆಯೊಳಗೆ ಪ್ರವೇಶ ಪಡೆಯಲು ಬಯಸುವವರು ಎರಡನೆಯ ಸಾಲಿನವರು. ಮೂರನೆಯ ವರ್ಗದಲ್ಲಿ ದೇವತೆಗಳೇ ಮುಂತಾದವರು ಸೇರುತ್ತಾರೆ. ಇವರಲ್ಲಿ ದೇವತೆಗಳೇ ಮುಂತಾದವರ ಅಂಶದಿಂದ ಅವತಾರಮಾಡಿದ್ದವರನ್ನು ಭಗವಂತನು ವ್ರಜಭೂಮಿಯಿಂದ ದೂರವಾಗಿಸಿ ಮೊದಲೇ ದ್ವಾರಕೆಗೆ ಕಳಿಸಿಬಿಟ್ಟಿರುವನು. ॥ ೩೨ ॥ ಅನಂತರ ಆ ಭಗವಂತನು ಬ್ರಾಹ್ಮಣರ ಶಾಪದಿಂದುಂಟಾದ ಒನಕೆಯನ್ನು ಒಂದು ನೆಪವನ್ನಾಗಿ ಮಾಡಿಕೊಂಡು ಯದುಕುಲದಲ್ಲಿ ಅವತಾರಮಾಡಿದ್ದ ದೇವತೆಗಳನ್ನು ಸ್ವರ್ಗಕ್ಕೆ ಕಳುಹಿಸಿ ಅವರವರ ಅಧಿಕಾರದಲ್ಲಿ ಮತ್ತೆ ನೆಲೆಗೊಳಿಸಿಬಿಟ್ಟನು ಮತ್ತು ಭಗವಂತನೊಬ್ಬನನ್ನೇ ಪಡೆಯಬೇಕೆಂಬ ಇಚ್ಛೆಯಿಂದ ತುಂಬಿದ್ದ ಭಕ್ತಶ್ರೇಷ್ಠರನ್ನು ಪ್ರೇಮಾನಂದಸ್ವರೂಪರನ್ನಾಗಿ ಮಾಡಿ

ವಿಧಾಯ ಸ್ವೀಯನಿತ್ಯೇಷು ಸಮಾವೇಶಿತವಾಂಸ್ತದಾ ।
ನಿತ್ಯಾಃ ಸರ್ವೇಽಪ್ಯಯೋಗ್ಯೇಷು ದರ್ಶನಾಭಾವತಾಂ ಗತಾಃ
॥ ೩೪ ॥

ವ್ಯಾವಹಾರಿಕಲೀಲಾಸ್ವಾಸ್ತತ್ರ ಯನ್ನಾಧಿಕಾರಿಣಃ ।
ಪಶ್ಯಂತ್ಯತ್ರಾಗತಾಸ್ತಸ್ಮಾನ್ನಿರ್ಜನತ್ವಂ ಸಮಂತತಃ
॥ ೩೫ ॥

ತಸ್ಮಾಚ್ಚಿಂತಾ ನ ತೇ ಕಾರ್ಯಾ ವಜ್ರನಾಭ ಮದಾಜ್ಞಯಾ ।
ವಾಸಯಾತ್ರ ಬಹೂನ್ ಗ್ರಾಮಾನ್ ಸಂಸಿದ್ಧಿಸ್ತೇ ಭವಿಷ್ಯತಿ
॥ ೩೬ ॥

ಕೃಷ್ಣಲೀಲಾನುಸಾರೇಣ ಕೃತ್ವಾ ನಾಮಾನಿ ಸರ್ವತಃ ।
ತ್ವಯಾ ವಾಸಯತಾ ಗ್ರಾಮಾನ್ ಸಂಸೇವ್ಯಾ ಭೂರಿಯಂ ಪರಾ
॥ ೩೭ ॥

ಗೋವರ್ಧನೇ ದೀರ್ಘಪುರೇ ಮಥುರಾಯಾಂ ಮಹಾವನೇ ।
ನಂದಿಗ್ರಾಮೇ ಬೃಹತ್ಸಾನೌ ಕಾರ್ಯಾ ರಾಜ್ಯಸ್ಥಿತಿಸ್ತ್ವಯಾ
॥ ೩೮ ॥

ನದ್ಯದ್ರಿದ್ರೋಣಿಕುಂಡಾದಿಕುಂಜಾನ್ ಸಂಸೇವತಸ್ತವ ।
ರಾಜ್ಯೇ ಪ್ರಜಾಃ ಸುಸಂಪನ್ನಾಸ್ತ್ವಂ ಚ ಪ್ರೀತೋ ಭವಿಷ್ಯಸಿ
॥ ೩೯ ॥

ಸಚ್ಚಿದಾನಂದಭೂರೇಷಾ ತ್ವಯಾ ಸೇವ್ಯಾ ಪ್ರಯತ್ನತಃ ।
ತವ ಕೃಷ್ಣಸ್ಥಲಾನ್ಯತ್ರ ಸ್ಫುರಂತು ಮದನುಗ್ರಹಾತ್
॥ ೪೦ ॥

ವಜ್ರ ಸಂಸೇವನಾದಸ್ಯ ಉದ್ಧವಸ್ತ್ವಾಂ ಮಿಲಿಷ್ಯತಿ ।
ತತೋ ರಹಸ್ಯಮೇತಸ್ಮಾತ್ತ್ವಾಪ್ಸ್ಯಸಿ ತ್ವಂ ಸಮಾತೃಕಃ
॥ ೪೧ ॥

ಏವ ಮುಕ್ತ್ವಾತು ಶಾಂಡಿಲ್ಯೋ ಗತಃ ಕೃಷ್ಣಮನುಸ್ಮರನ್ ।
ವಿಷ್ಣುರಾತೋಽಥ ವಜ್ರಶ್ಚ ಪರಾಂ ಪ್ರೀತಿಮವಾಪತುಃ
॥ ೪೨ ॥

ಎಂದೆಂದಿಗೂ ತನ್ನೊಡನೆ ಇರುವ ತನ್ನ ಅಂತರಂಗದ ಪಾರ್ಷದರೊಡನೆ ಸೇರಿಸಿಕೊಂಡುಬಿಟ್ಟನು. ಭಗವಂತನ ನಿತ್ಯಪಾರ್ಷದರು ಅಷ್ಟೇ ಗುಪ್ತವಾಗಿ ನಡೆಯುತ್ತಿರುವ ನಿತ್ಯಲೀಲೆಯಲ್ಲಿ ಸದಾ ಇರುತ್ತಿದ್ದರೂ ಅವರ ದರ್ಶನಕ್ಕೆ ಅಧಿಕಾರಿಗಳಲ್ಲದವರಿಗೆ ಕಣ್ಮರೆಯಾಗಿರುತ್ತಾರೆ. ॥ ೩೩-೩೪ ॥ ವ್ಯಾವಹಾರಿಕಲೀಲೆಯಲ್ಲೇ ಇರುವವರು ನಿತ್ಯಲೀಲೆಯ ದರ್ಶನವನ್ನು ಪಡೆಯಲು ಅಧಿಕೃತರಾಗಿಲ್ಲ, ಆದುದರಿಂದ ಅವರು ಇಲ್ಲಿಗೆ ಬಂದಾಗ ಇಲ್ಲಿ ಎಲ್ಲೆಲ್ಲಿಯೂ ಜನರಹಿತವಾದ ಅರಣ್ಯವನ್ನೇ ಶೂನ್ಯಪ್ರದೇಶವನ್ನೇ ಕಾಣುತ್ತಾರೆ. ವಾಸ್ತವಿಕಲೀಲೆಯಲ್ಲಿರುವ ಭಕ್ತಜನರಿಗೆ ಕಾಣಿಸುವುದಿಲ್ಲ. ॥ ೩೫ ॥

ಆದುದರಿಂದ, ವತ್ಸ ವಜ್ರನಾಭ! ಈ ಬಗೆಗೆ ನೀನು ಚಿಂತೆ ಪಡಬೇಡ. ನನ್ನ ಆಜ್ಞೆಯಂತೆ ಇಲ್ಲಿ ಜನಭರಿತವಾದ ಬಹಳಷ್ಟು ಗ್ರಾಮಗಳನ್ನು ನಿರ್ಮಾಣಮಾಡು. ಇದರಿಂದ ನಿಶ್ಚಯವಾಗಿಯೂ ನಿನ್ನ ಮನೋರಥಗಳು ಸಿದ್ಧಿಸುವುದು. ॥ ೩೬ ॥ ಭಗವಂತನಾದ ಶ್ರೀಕೃಷ್ಣನು ಎಲ್ಲೆಲ್ಲಿ ಯಾವ ಯಾವ ಲೀಲೆಗಳನ್ನು ಆಡಿದನೋ ಅದಕ್ಕನುಸಾರವಾಗಿ ಆಯಾ ಹೆಸರುಗಳನ್ನಿಟ್ಟು ಅನೇಕಗ್ರಾಮಗಳನ್ನು ಇಲ್ಲಿ ನಿರ್ಮಿಸಿ ದಿವ್ಯವಾದ ವ್ರಜಭೂಮಿಯನ್ನು ಚೆನ್ನಾಗಿ ಸೇವಿಸುತ್ತಿರು. ॥ ೩೭ ॥ ಇವುಗಳಲ್ಲಿ ಗೋವರ್ಧನ, ದೀರ್ಘಪುರ (ಡೀಗ್), ಮಥುರಾ, ಮಹಾವನ (ಗೋಕುಲ), ನಂದಿಗ್ರಾಮ (ನಂದಗಾವ್) ಮತ್ತು ಬೃಹತ್ಸಾನು (ಬರ್‌ಸಾನಾ) ಇತ್ಯಾದಿಗಳಲ್ಲಿ ನಿನ್ನ ವಾಸಸ್ಥಾನಗಳನ್ನು ಮಾಡಿಕೋ. ॥ ೩೮ ॥ ಆಯಾ ಜಾಗಗಳಲ್ಲಿರುತ್ತಾ ಭಗವಂತನ ಲೀಲಾಸ್ಥಾನಗಳಾದ ನದೀ, ಪರ್ವತ, ಕಣಿವೆ, ಸರೋವರ ಮತ್ತು ಕುಂಡ ಕುಂಜವನ (ಲತಾಗೃಹ), ಮುಂತಾದುವುಗಳನ್ನು ಸೇವಿಸುತ್ತಿರಬೇಕು. ಹೀಗೆ ಮಾಡಿದರೆ ನಿನ್ನ ರಾಜ್ಯದಲ್ಲಿ ಪ್ರಜೆಗಳು ತುಂಬಾ ಸಂಪನ್ನರಾಗುವರು ಮತ್ತು ನಿನಗೂ ತುಂಬಾ ಪ್ರಸನ್ನತೆಯುಂಟಾಗುವುದು. ॥ ೩೯ ॥ ಈ ಇಡೀ ವ್ರಜಭೂಮಿಯು ಸಚ್ಚಿದಾನಂದಮಯವಾದುದು. ಆದುದರಿಂದ ನೀನು ಪ್ರಯತ್ನಪೂರ್ವಕವಾಗಿ ಈ ಭೂಮಿಯನ್ನು ಸೇವಿಸುತ್ತಿರಬೇಕು. ಇದೋ! ನಾನು ಆಶೀರ್ವಾದ ಮಾಡುತ್ತೇನೆ. ಭಗವಂತನ ಲೀಲಾಸ್ಥಳಗಳೆಲ್ಲವನ್ನೂ ನೀನು ನನ್ನ ಕೃಪೆಯಿಂದ ನೋಡಲು ಸಮರ್ಥನಾಗುವೆ. ॥ ೪೦ ॥ ಮಗು ವಜ್ರನಾಭ! ಈ ವ್ರಜಭೂಮಿಯ ದರ್ಶನ, ಪೂಜನ ಮತ್ತು ಸೇವಿಸುತ್ತಿರುವುದರಿಂದ ನಿನಗೆ ಒಂದಲ್ಲ ಒಂದು ದಿನ ಮಹಾತ್ಮನಾದ ಉದ್ಧವನ ಸಮಾಗಮವೂ ಆಗುವುದು. ಮತ್ತೆ ನೀನು ನಿನ್ನ ತಾಯಂದಿರೊಡನೆ ಆತನಿಂದಲೇ ಈ ವ್ರಜಭೂಮಿಯ ಮತ್ತು ಶ್ರೀಭಗವಂತನ ಲೀಲಾರಹಸ್ಯವನ್ನು ತಿಳಿಯಲು ಸಮರ್ಥನಾಗುವೆ.'' ॥ ೪೧ ॥ ಮುನಿಶ್ರೇಷ್ಠರಾದ ಶಾಂಡಿಲ್ಯರು ಹೀಗೆ ಪರೀಕ್ಷಿದ್ರಾಜ ಮತ್ತು ವಜ್ರನಾಭ ಇಬ್ಬರಿಗೂ ತಿಳಿವಳಿಕೆಯನ್ನು ನೀಡಿ ಶ್ರೀಕೃಷ್ಣನನ್ನು ಸ್ಮರಿಸುತ್ತಾ ತಮ್ಮ ಆಶ್ರಮಕ್ಕೆ ಹೊರಟುಹೋದರು. ಅವರ ಮಾತುಗಳನ್ನು ಕೇಳಿ ಅವರಿಬ್ಬರೂ ನೃಪತಿಗಳೂ ಅತ್ಯಂತ ಸಂತುಷ್ಟರಾದರು. ॥ ೪೨ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ದ್ವಿತೀಯೇ ವೈಷ್ಣವಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಶಾಂಡಿಲ್ಯೋಪದಿಷ್ಟವ್ರಜಭೂಮಿಮಾಹಾತ್ಮ್ಯವರ್ಣನಂ ನಾಮ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಯಮುನಾ ಮತ್ತು ಶ್ರೀಕೃಷ್ಣಪತ್ನಿಯರ ಸಂವಾದ, ಕೀರ್ತನೋತ್ಸವದಲ್ಲಿ ಉದ್ಧವನು ಪ್ರಕಟವಾದುದು

ಋಷಯ ಊಚುಃ

ಶಾಂಡಿಲ್ಯೇ ತೌ ಸಮಾದಿಶ್ಯ ಪರಾವೃತ್ತೇ ಸ್ವಮಾಶ್ರಮಮ್ ।
ಕಿಂ ಕಥಂ ಚಕ್ರತುಸ್ತೌ ತು ರಾಜಾನೌ ಸೂತ ತದ್ವದ
॥ ೧ ॥

ಸೂತ ಉವಾಚ

ತತಸ್ತು ವಿಷ್ಣುರಾತೇನ ಶ್ರೇಣೀಮುಖ್ಯಾಃ ಸಹಸ್ರಶಃ ।
ಇಂದ್ರಪ್ರಸ್ಥಾತ್ಸಮಾನಾಯ್ಯ ಮಥುರಾಸ್ಥಾನಮಾಪಿತಾಃ
॥ ೨ ॥

ಮಾಥುರಾನ್ ಬ್ರಾಹ್ಮಣಾಂಸ್ತತ್ರ ವಾನರಾಂಶ್ಚ ಪುರಾತನಾನ್ ।
ವಿಜ್ಞಾಯ ಮಾನನೀಯತ್ವಂ ತೇಷು ಸ್ಥಾಪಿತವಾನ್ ಸ್ವರಾಟ್
॥ ೩ ॥

ವಜ್ರಸ್ತು ತತ್ಸಹಾಯೇನ ಶಾಂಡಿಲ್ಯಸ್ಯಾಪ್ಯನುಗ್ರಹಾತ್ ।
ಗೋವಿಂದಗೋಪಗೋಪೀನಾಂ ಲೀಲಾಸ್ಥಾನಾನ್ಯನುಕ್ರಮಾತ್
॥ ೪ ॥

ವಿಜ್ಞಾಯಾಭಿಧಯಾऽऽಸ್ಥಾಪ್ಯ ಗ್ರಾಮಾನಾವಾಸಯದ್ಬಹೂನ್ ।
ಕುಂಡಕೂಪಾದಿಪೂರ್ತೇನ ಶಿವಾದಿಸ್ಥಾಪನೇನ ಚ
॥ ೫ ॥

ಗೋವಿಂದಹರಿದೇವಾದಿಸ್ವರೂಪಾರೋಪಕೇಣ ಚ ।
ಕೃಷ್ಣೈಕಭಕ್ತಿಂ ಸ್ವೇ ರಾಜ್ಯೇ ತತಾನ ಚ ಮುಮೋದ ಹ
॥ ೬ ॥

ಪ್ರಜಾಸ್ತು ಮುದಿತಾಸ್ತಸ್ಯ ಕೃಷ್ಣಕೀರ್ತನತತ್ಪರಾಃ ।
ಪರಮಾನಂದಸಂಪನ್ನಾ ರಾಜ್ಯಂ ತಸ್ಯೈವ ತುಷ್ಟುವುಃ
॥ ೭ ॥

ಏಕದಾ ಕೃಷ್ಣಪತ್ನ್ಯಸ್ತು ಶ್ರೀಕೃಷ್ಣವಿರಹಾತುರಾಃ ।
ಕಾಲಿಂದೀಂ ಮುದಿತಾಂ ವೀಕ್ಷ್ಯ ಪಪ್ರಚ್ಛುರ್ಗತಮತ್ಸರಾಃ
॥ ೮ ॥

ಶೌನಕಾದಿಋಷಿಗಳು ಪ್ರಶ್ನಿಸುತ್ತಾರೆ – "ಸೂತಪುರಾಣಿಕರೇ ! ಶಾಂಡಿಲ್ಯಮಹರ್ಷಿಗಳು ಮಹಾರಾಜ ಪರೀಕ್ಷಿತನಿಗೂ ಮತ್ತು ವಜ್ರನಾಭನಿಗೂ ಸಂದೇಶನೀಡಿ ತಮ್ಮ ಆಶ್ರಮಕ್ಕೆ ಹಿಂದಿರುಗಿದ ಬಳಿಕ ಆ ರಾಜರು ಏನೇನು ಕಾರ್ಯಗಳನ್ನು ಮಾಡಿದರು ಮತ್ತು ಹೇಗೆ ಮಾಡಿದರು ? ಎಂಬುದನ್ನು ಹೇಳಿರಿ." ॥ ೧ ॥

ಸೂತಪುರಾಣಿಕರು ಹೇಳತೊಡಗಿದರು – "ಅನಂತರ ಮಹಾರಾಜ ಪರೀಕ್ಷಿತನು ಇಂದ್ರಪ್ರಸ್ಥದಿಂದ ಸಾವಿರಾರು ಮಂದಿ ದೊಡ್ಡ-ದೊಡ್ಡ ವ್ಯಾಪಾರಿಪ್ರಮುಖರನ್ನು ಕರೆಯಿಸಿ ಮಥುರಾ ನಗರಿಯಲ್ಲಿ ನೆಲೆಸುವಂತೆ ಮಾಡಿದನು. ॥ ೨ ॥ ಸಾರ್ವಭೌಮನು ಇವರನ್ನು ಮಾತ್ರವಲ್ಲದೆ ಮಾನನೀಯರಾದ ಮಥುರಾಮಂಡಲದ ಬ್ರಾಹ್ಮಣಶ್ರೇಷ್ಠರನ್ನೂ ಮತ್ತು ಪ್ರಾಚೀನರಾದ ವಾನರಶ್ರೇಷ್ಠರನ್ನೂ ಕರೆಯಿಸಿ, ಅವರನ್ನು ಆ ಮಥುರಾನಗರಿಯಲ್ಲಿ ನೆಲೆಗೊಳಿಸಿದನು. ॥ ೩ ॥ ಹೀಗೆ ವಜ್ರನಾಭನು ಪರೀಕ್ಷಿದ್ರಾಜನ ಸಹಾಯದಿಂದಲೂ ಮತ್ತು ಶಾಂಡಿಲ್ಯಮುನಿಗಳ ಅನುಗ್ರಹದಿಂದಲೂ ಭಗವಾನ್ ಶ್ರೀಕೃಷ್ಣನು ತನ್ನ ಪ್ರೇಮಿಗಳಾಗಿದ್ದ ಗೋಪ-ಗೋಪಿಯರೊಡನೆ ಲೀಲೆಗಳನ್ನು ನಡೆಸಿದ ಎಲ್ಲ ಸ್ಥಾನಗಳನ್ನೂ ಶೋಧನೆ ಮಾಡಿದನು. ಆ ಲೀಲಾಸ್ಥಾನಗಳು ಯಾವವು ? ಎಂಬುದನ್ನು ಖಚಿತಪಡಿಸಿಕೊಂಡು ಆಯಾ ಲೀಲೆಗನುಗುಣವಾಗಿ ಆಯಾಸ್ಥಾನಗಳಿಗೆ ಹೆಸರುಗಳನ್ನು ಕೊಟ್ಟು ಭಗವಂತನ ಲೀಲಾವಿಗ್ರಹಗಳನ್ನು ಅಲ್ಲಿ ಸ್ಥಾಪನೆಮಾಡಿದನು. ಅಲ್ಲಲ್ಲಿ ಅನೇಕ ಗ್ರಾಮಗಳನ್ನು ನೆಲೆಗೊಳಿಸಿ, ಲತಾಗೃಹಗಳನ್ನೂ, ಉದ್ಯಾನವನಗಳನ್ನೂ ಸ್ಥಾಪಿಸಿ ಶಿವನೇ ಮುಂತಾದ ದೇವತೆಗಳ ಪ್ರತಿಷ್ಠೆಯನ್ನೂ ಮಾಡಿಸಿದನು. ॥ ೪-೫ ॥ ಗೋವಿಂದದೇವ, ಹರಿದೇವ ಮುಂತಾದ ಹೆಸರುಗಳಿಂದ ಕೂಡಿದ ಶ್ರೀಕೃಷ್ಣಪರಮಾತ್ಮನ ವಿಗ್ರಹಗಳನ್ನೂ ಸ್ಥಾಪಿಸಿದನು. ಇಂತಹ ನಾನಾ ಶುಭಕರ್ಮಗಳ ಮೂಲಕ ವಜ್ರನಾಭಮಹಾರಾಜನು ತನ್ನ ರಾಜ್ಯದಲ್ಲಿ ಎಲ್ಲೆಡೆಗಳಲ್ಲೂ ಶ್ರೀಕೃಷ್ಣನೊಬ್ಬನಲ್ಲೇ ಏಕಾಂತಭಾವದಿಂದ ಕೂಡಿದ ಶ್ರೀಕೃಷ್ಣಭಕ್ತಿಯನ್ನು ಪ್ರಚುರಪಡಿಸಿ ಪರಮಾನಂದಿತನಾದನು. ॥ ೬ ॥ ಆತನ ಪ್ರಜೆಗಳಿಗೂ ಇದರಿಂದ ಪರಮಾನಂದವುಂಟಾಯಿತು. ಅವರು ಸದಾ ಭಗವಂತನ ಮಧುರವಾದ ನಾಮದ ಮತ್ತು ಲೀಲೆಗಳ ಸಂಕೀರ್ತನೆಯಲ್ಲಿ ಆಸಕ್ತರಾಗಿ ಪರಮಾನಂದಸಮುದ್ರದಲ್ಲಿ ಮುಳುಗಿದವರಾಗಿ ವಜ್ರನಾಭನ ರಾಜ್ಯಭಾರವನ್ನು ಕೊಂಡಾಡುತ್ತಿದ್ದರು. ॥ ೭ ॥ ಒಮ್ಮೆ ಪತಿಯ ವಿರಹದಿಂದ ವ್ಯಥೆಗೊಂಡಿದ್ದ ಬಹುಮಂದಿ ಕೃಷ್ಣಪತ್ನಿಯರು ಕಾಳಿಂದೀ (ಯಮುನಾ) ದೇವಿಯ ಬಳಿಗೆಹೋಗಿ ಆಕೆಯು ಮಾತ್ರ ಸಂತೋಷವಾಗಿಯೇ ಇರುವುದನ್ನು ಕಂಡು ಅಸೂಯೆಯಿಲ್ಲದ ಮನಸ್ಸಿನಿಂದ ಆಕೆಯನ್ನು ಪ್ರಶ್ನೆಮಾಡಿದರು. ॥ ೮ ॥

ಶ್ರೀಕೃಷ್ಣಪತ್ನ್ಯ ಊಚುಃ

ಯಥಾ ವಯಂ ಕೃಷ್ಣಪತ್ನ್ಯಸ್ತಥಾ ತ್ವಮಪಿ ಶೋಭನೇ।
ವಯಂ ವಿರಹದುಃಖಾರ್ತಾಸ್ತ್ವಾಂ ನ ಕಾಲಿಂದಿ ತದ್ವದ
॥ ೯ ॥

ತಚ್ಛ್ರುತ್ವಾಸ್ಮಯಮಾನಾ ಸಾ ಕಾಲಿಂದೀ ವಾಕ್ಯಮಬ್ರವೀತ್।
ಸಾಪತ್ನ್ಯಂ ವೀಕ್ಷ್ಯ ತತ್ತಾಸಾಂ ಕರುಣಾಪರಮಾನಸಾ
॥ ೧೦ ॥

ಕಾಲಿಂದ್ಯುವಾಚ

ಆತ್ಮಾರಾಮಸ್ಯ ಕೃಷ್ಣಸ್ಯ ಧ್ರುವಮಾತ್ಮಾಸ್ತಿ ರಾಧಿಕಾ।
ತಸ್ಯಾ ದಾಸ್ಯಪ್ರಭಾವೇಣ ವಿರಹೋಽಸ್ಮಾನ್ನ ಸಂಸ್ಪೃಶೇತ್
॥ ೧೧ ॥

ತಸ್ಯಾ ಏವಾಂಶವಿಸ್ತಾರಾಃ ಸರ್ವಾಃ ಶ್ರೀಕೃಷ್ಣನಾಯಿಕಾಃ।
ನಿತ್ಯಸಂಭೋಗ ಏವಾಸ್ತಿ ತಸ್ಯಾಃ ಸಾಮ್ಮುಖ್ಯಯೋಗತಃ
॥ ೧೨ ॥

ಸ ಏವ ಸಾ ಸ ಸೈವಾಸ್ತಿ ವಂಶೀ ತತ್ಪ್ರೇಮರೂಪಿಕಾ।
ಶ್ರೀಕೃಷ್ಣನಖಿಚಂದ್ರಾಲಿಸಂಗಾಚ್ಚಂದ್ರಾವಲೀ ಸ್ಮೃತಾ
॥ ೧೩ ॥

ರೂಪಾಂತರಮಗೃಹ್ಣಾನಾ ತಯೋಃ ಸೇವಾತಿಲಾಲಸಾ।
ರುಕ್ಮಿಣ್ಯಾದಿಸಮಾವೇಶೋ ಮಯಾತ್ಮೈವ ವಿಲೋಕಿತಃ
॥ ೧೪ ॥

ಯುಷ್ಮಾಕಮಪಿ ಕೃಷ್ಣೇನ ವಿರಹೋ ನೈವ ಸರ್ವತಃ।
ಕಿಂತು ಏವಂ ನ ಜಾನೀಥ ತಸ್ಮಾದ್ವ್ಯಾಕುಲತಾಮಿತಾಃ
॥ ೧೫ ॥

ಏವಮೇವಾತ್ರ ಗೋಪೀನಾಮಕ್ರೂರಾವಸರೇ ಪುರಾ।
ವಿರಹಾಭಾಸ ಏವಾಸೀದುದ್ಧವೇನ ಸಮಾಹಿತಃ
॥ ೧೬ ॥

ತೇನೈವ ಭವತೀನಾಂ ಚೇದ್ಭವೇದತ್ರ ಸಮಾಗಮಃ।
ತರ್ಹಿ ನಿತ್ಯಂ ಸ್ವಕಾಂತೇನ ವಿಹಾರಮಪಿ ಲಪ್ಸ್ಯಥ
॥ ೧೭ ॥

ಶ್ರೀಕೃಷ್ಣನ ಪತ್ನಿಯರು ಕೇಳಿದರು – "ಎಲೌ ಮಂಗಳಾಂಗಿಯೇ! ನಮ್ಮೆಲ್ಲರಂತೆಯೇ ನೀನೂ ಶ್ರೀಕೃಷ್ಣ ಧರ್ಮಪತ್ನಿಯು. ಆದರೆ ನಾವೆಲ್ಲರೂ ವಿರಹಾಗ್ನಿಯಲ್ಲಿ ಬೆಂದುಹೋಗುತ್ತಿರುವಾಗ ನೀನೊಬ್ಬಳು ಮಾತ್ರ ಸಂತೋಷವಾಗಿದ್ದೀಯಲ್ಲ? ಇದಕ್ಕೆ ಕಾರಣವೇನು? ಹೇಳಮ್ಮಾ!" ॥ ೯ ॥ **ಇದನ್ನು ಕೇಳಿ** ಕಾಳಿಂದೀದೇವಿಗೆ ನಗೆ ಬಂತು. ಆದರೂ ಆಕೆಯು **ಅವರೆಲ್ಲರೂ** ತನಗೆ ಸವತಿಯರಾಗಿದ್ದರೂ ಸಹೋದರಿಯರಂತೆ **ಭಾವಿಸಿ** ಕರುಣಾದ ಹೃದಯದಿಂದ ಅವರಿಗೆ ಉತ್ತರಿಸಿದಳು. ॥ ೧೦ ॥

ಯಮುನೆಯು ಹೇಳಿದಳು – "ರಾಧಿಕಾದೇವಿಯು ಆತ್ಮಾರಾಮನಾಗಿರುವ **ಶ್ರೀಕೃಷ್ಣಪರಮಾತ್ಮನಿ**ಗೆ ಆತ್ಮಭೂತಳಾಗಿದ್ದಾಳೆ. ನಾನು ದಾಸಿಯಂತೆ **ಆಕೆಯ** ಸೇವೆಯನ್ನು ಮಾಡುತ್ತಿದ್ದೇನೆ. ಅದರ ಪ್ರಭಾವದಿಂದಲೇ **ವಿರಹವು** ನನ್ನನ್ನು ಮುಟ್ಟುತ್ತಿಲ್ಲ. ॥ ೧೧ ॥ ಆ ಭಗವಂತನ ಪತ್ನಿಯರೆಲ್ಲರೂ ರಾಧಾದೇವಿಯ ಅಂಶದ ವಿಸ್ತಾರಗಳೇ ಆಗಿರುವರು. **ಶ್ರೀಕೃಷ್ಣಪರಮಾತ್ಮ**ನೂ ಮತ್ತು ಶ್ರೀರಾಧಾದೇವಿಯೂ ಸದಾ **ಪರಸ್ಪರ** ಎದುರುಬದುರಾಗಿರುತ್ತಾರೆ. ಪರಸ್ಪರ ನಿತ್ಯಸಂಯೋಗದಲ್ಲಿದ್ದಾರೆ. ಅದುವರಿಂದ ರಾಧಾಸ್ವರೂಪದಲ್ಲಿ ಅಂಶತಃ ಇರುವ ಎಲ್ಲ ಶ್ರೀಕೃಷ್ಣಪತ್ನಿಯರೂ ಶ್ರೀಕೃಷ್ಣನ ನಿತ್ಯ ಸಂಯೋಗದ ಭಾಗ್ಯವನ್ನು ಪಡೆದೇ ಇರುತ್ತಾರೆ. ॥ ೧೨ ॥ ಶ್ರೀಕೃಷ್ಣನೇ ರಾಧೆಯು ಮತ್ತು ರಾಧೆಯೇ ಶ್ರೀಕೃಷ್ಣನು. ಇವರಿಬ್ಬರ ಪ್ರೇಮವೇ ಕೊಳಲಿನ ರೂಪದಲ್ಲಿ ಬೆಳಗುತ್ತಿದೆ. ರಾಧೆಯ ಪ್ರೀತಿಯ ಗೆಳತಿಯಾದ ಚಂದ್ರಾವಳೀ ಎಂಬುವಳು ಶ್ರೀಕೃಷ್ಣನ ಚರಣ ನಖಿಗಳೆಂಬ ಚಂದ್ರನ ಸೇವೆಯಲ್ಲಿ ಮಿತಿಮೀರಿದ ಆಕಾಂಕ್ಷೆ-ಆಸಕ್ತಿಗಳನ್ನು ಹೊಂದಿರುವುದರಿಂದಲೇ ಚಂದ್ರಾವಲಿ ಎಂಬ ಹೆಸರಿನಿಂದ ಹೇಳಲ್ಪಡುವಳು. ॥ ೧೩ ॥ ಶ್ರೀರಾಧಾ ಮತ್ತು ಶ್ರೀಕೃಷ್ಣರ ಸೇವೆಯಲ್ಲೇ ಅವಳಿಗೆ ಹೆಚ್ಚಿನ ಪ್ರೀತಿ, ಆಸಕ್ತಿ ಇರುವುದರಿಂದ ಆಕೆಯು ಎಂದಿಗೂ ಬೇರೆ ಸ್ವರೂಪವನ್ನು ಧರಿಸುವುದಿಲ್ಲ. ನಾನು ಇಲ್ಲೇ ಶ್ರೀರಾಧಾದೇವಿಯಲ್ಲೇ ಶ್ರೀರುಕ್ಮಿಣಿ ಮುಂತಾದವರು ಸೇರಿಕೊಂಡಿರುವುದನ್ನು ನೋಡಿದ್ದೇನೆ. ॥ ೧೪ ॥ ನಿಮಗೂ ಕೂಡ ಶ್ರೀಕೃಷ್ಣನಿಂದ ಸರ್ವಾಂಶದಲ್ಲಿಯೂ ಅಗಲಿಕೆಯಾಗಿಲ್ಲ. ಆದರೆ ನೀವು ಈ ರಹಸ್ಯವನ್ನು ಈ ರೂಪದಲ್ಲಿ ಅರಿತಿಲ್ಲದಿರುವುದರಿಂದ ಹೀಗೆಲ್ಲಾ ಇಷ್ಟು ಕಳವಳಪಡುತ್ತಿದ್ದೀರಿ. ॥ ೧೫ ॥ ಹೀಗೆಯೇ ಈ ಹಿಂದೆ ಅಕ್ರೂರನು ಶ್ರೀಕೃಷ್ಣನನ್ನು ನಂದಗೋಕುಲದಿಂದ ಮಥುರೆಗೆ ಕರೆದುಕೊಂಡುಹೋಗಲು ಬಂದಾಗ ಗೋಪಿಯರಲ್ಲಿ ತೋರಿದ ಶ್ರೀಕೃಷ್ಣವಿರಹವೂ ಕೂಡ ವಾಸ್ತವಿಕವಾದ ವಿರಹವಾಗಿರಲಿಲ್ಲ. ವಿರಹದ ಆಭಾಸಮಾತ್ರವೇ ಆಗಿತ್ತು. ಈ ವಿಷಯವು ತಿಳಿಯುವವರೆಗೆ ಅವರು ಅಗಲಿಕೆಯ ಕಷ್ಟವನ್ನು ಅನುಭವಿಸುತ್ತಿದ್ದರು. ಆದರೆ ಮಹಾತ್ಮನಾದ ಉದ್ಧವನು ಬಂದು ಸಮಾಧಾನವನ್ನು ಹೇಳಿದೊಡನೆಯೇ ಮೇಲೆ ಹೇಳಿದ ರಹಸ್ಯ ಅವರ ಅರಿವಿಗೆ ಬಂದಿತು. ॥ ೧೬ ॥ ನಿಮಗೂ ಕೂಡ ಆ ಉದ್ಧವನ ಸಮಾಗಮದ ಭಾಗ್ಯವೇನಾದರೂ ಒದಗಿದರೆ ಆಗ ಪ್ರಿಯತಮನಾದ ಶ್ರೀಕೃಷ್ಣನ ನಿತ್ಯವಿಹಾರದ ಸುಖವನ್ನು ನೀವೂ ಅನುಭವಿಸುವಿರಿ." ॥ ೧೭ ॥

ಸೂತ ಉವಾಚ

ಏವಮುಕ್ತಾಸ್ತು ತಾಃ ಪತ್ನ್ಯಃ ಪ್ರಸನ್ನಾಂ ಪುನರಬ್ರುವನ್ ।
ಉದ್ಧವಾಲೋಕನೇನಾತ್ಮಪ್ರೇಷ್ಯಸಂಗಮಲಾಲಸಾಃ
॥ ೧೮ ॥

ಶ್ರೀಕೃಷ್ಣಪತ್ನ್ಯ ಊಚುಃ

ಧನ್ಯಾಸಿ ಸಖಿ ಕಾಂತೇನ ಯಸ್ಯಾ ನೈವಾಸ್ತಿ ವಿಚ್ಯುತಿಃ ।
ಯತಸ್ತೇ ಸ್ವಾರ್ಥಸಂಸಿದ್ಧಿಸ್ತಸ್ಯಾ ದಾಸ್ಯೋ ಭವೂವಿಮ
॥ ೧೯ ॥

ಪರಂತೂದ್ಧವಲಾಭೇ ಸ್ಯಾದಸ್ಮತ್ಸರ್ವಾರ್ಥಸಾಧನಮ್ ।
ತಥಾ ವದಸ್ವ ಕಾಲಿಂದಿ ತಲ್ಲಾಭೋಽಪಿ ಯಥಾ ಭವೇತ್
॥ ೨೦ ॥

ಸೂತ ಉವಾಚ

ಏವಮುಕ್ತಾ ತು ಕಾಲಿಂದೀ ಪ್ರತ್ಯುವಾಚಾಥ ತಾಸ್ತಥಾ ।
ಸ್ಮರಂತೀ ಕೃಷ್ಣಚಂದ್ರಸ್ಯ ಕಲಾಃ ಷೋಡಶರೂಪಿಣೀಃ
॥ ೨೧ ॥

ಸಾಧನಭೂಮಿರ್ಬದರೀ ವ್ರಜತಾ ಕೃಷ್ಣೇನ ಮಂತ್ರಿಣೇ ಪ್ರೋಕ್ತಾ ।
ತತ್ರಾಸ್ತೇ ಸ ತು ಸಾಕ್ಷಾತ್ ತದ್ವಯುನಂ ಗ್ರಾಹಯನ್ ಲ್ಲೋಕಾನ್
॥ ೨೨ ॥

ಫಲಭೂಮಿರ್ವ್ರಜಭೂಮಿಃ ದತ್ತಾ ತಸ್ಮೈಪುರೈವ ಸರಹಸ್ಯಮ್ ।
ಫಲಮಿಹ ತಿರೋಹಿತಂ ಸತ್ ತದಿಹೇದಾನೀಂ ಸ ಉದ್ಧವೋಽಲಕ್ಷ್ಯಃ
॥ ೨೩ ॥

ಗೋವರ್ಧನಗಿರಿನಿಕಟೇ ಸಖೀಸ್ಥಲೇ ತದ್ರಜಃಕಾಮಃ ।
ತತ್ರತ್ಯಾಂಕುರವಲ್ಲೀರೂಪೇಣಾಸ್ತೇ ಸ ಉದ್ಧವೋ ನೂನಮ್
॥ ೨೪ ॥

ಸೂತಪುರಾಣಿಕರು ಹೇಳುತ್ತಾರೆ – ಋಷಿವರ್ಯರೇ! ಕಾಳಿಂದೀದೇವಿಯು ಹೀಗೆ ತಿಳಿವಳಿಕೆ ನೀಡಲು ಆ ಕೃಷ್ಣಪತ್ನಿಯರ ಮನಸ್ಸಿನಲ್ಲಿ – 'ಯಾವುದಾದರೂ ಉಪಾಯದಿಂದ ಉದ್ಧವನ ದರ್ಶನವನ್ನು ಪಡೆಯಬೇಕು. ಇದರಿಂದ ನಮಗೆ ನಮ್ಮ ಪ್ರಿಯತಮನ ನಿತ್ಯಸಂಗಮದ ಸೌಭಾಗ್ಯವು ಸಿದ್ಧಿಸುವುದು. ಹೇಗಾದರೂ ಮಹಾತ್ಮನಾದ ಆ ಉದ್ಧವನ ದರ್ಶನವನ್ನು ಪಡೆಯಲೇಬೇಕು' – ಎಂಬ ದೃಢವಾದ ಆಸೆಯುಂಟಾಯಿತು. ಅವರು ಕಾಳಿಂದೀದೇವಿಗೆ ಹೀಗೆಂದರು. – ॥ ೧೮ ॥

ಶ್ರೀಕೃಷ್ಣನ ಪತ್ನಿಯರು ಹೇಳಿದರು – "ಸಖಿ! ನೀನು ಧನ್ಯಳು. ಕಡುಧನ್ಯಳು. ಏಕೆಂದರೆ ನೀನು ಎಂದಿಗೂ ಪ್ರಾಣನಾಥನ ಅಗಲಿಕೆಯ ದುಃಖವನ್ನು ಹೊಂದುವುದಿಲ್ಲ. ಯಾವ ರಾಧಾದೇವಿಯ ಕೃಪೆಯಿಂದ ನಿನ್ನ ಇಷ್ಟಾರ್ಥವು ಈಡೇರಿತೋ ಆ ದೇವಿಗೆ ನಾವೂ ಈಗ ದಾಸಿಯರಾಗುವೆವು. ॥ ೧೯ ॥ ಮಹಾತ್ಮನಾದ ಉದ್ಧವನ ಸಮಾಗಮವಾದರೆ ನಮ್ಮ ಎಲ್ಲ ಇಷ್ಟಾರ್ಥಗಳೂ ಈಡೇರುವುದೆಂದು ಈಗತಾನೇ ಹೇಳಿದೆಯಲ್ಲವೇ? ಆದುದರಿಂದ ದಯೆಯಿಟ್ಟು ಆ ಉದ್ಧವನು ಅತಿ ಶೀಘ್ರವಾಗಿ ನಮಗೆ ದೊರೆಯಲು ಯಾವುದಾದರೊಂದು ಉಪಾಯವನ್ನು ನಮಗೆ ತಿಳಿಸು." ॥ ೨೦ ॥

ಸೂತಪುರಾಣಿಕರು ಹೇಳುತ್ತಾರೆ – ಅವರ ಆ ಮಾತನ್ನು ಕೇಳಿ ಕಾಳಿಂದೀದೇವಿಯು ಶ್ರೀಕೃಷ್ಣಪರಮಾತ್ಮನ ಹದಿನಾರು ಕಲೆಗಳನ್ನೂ ಸ್ಮರಿಸುತ್ತಾ ಅವರಿಗೆ ಹೀಗೆಂದಳು – ॥ ೨೧ ॥ "ಗೆಳತಿಯರೇ! ಭಗವಾನ್ ಶ್ರೀಕೃಷ್ಣನು ತನ್ನ ಪರಂಧಾಮಕ್ಕೆ ತೆರಳಿದ ಸಂದರ್ಭದಲ್ಲಿ 'ಅಪ್ಪಾ ಉದ್ಧವಾ! ಬದರಿಕಾಶ್ರಮವು ಸಾಧನಾಭೂಮಿಯು. ಆದುದರಿಂದ ನೀನು ನಿನ್ನ ಸಾಧನೆಯನ್ನು ಪೂರ್ಣಗೊಳಿಸಿಕೊಳ್ಳಲು ಅಲ್ಲಿಗೆ ಹೋಗು' – ಎಂದು ತನ್ನ ಮಂತ್ರಿ ಉದ್ಧವನಿಗೆ ತಿಳಿಸಿದ್ದನು. ಭಗವಂತನ ಆಜ್ಞೆಯಂತೆ ಮಹಾತ್ಮನಾದ ಉದ್ಧವನು ತನ್ನ ಸಾಕ್ಷಾತ್‌ಸ್ವರೂಪದಿಂದ ಬದರಿಕಾಶ್ರಮದಲ್ಲಿ ಬೆಳಗುತ್ತಿದ್ದಾನೆ. ಅಲ್ಲಿಗೆ ತತ್ತ್ವಜಿಜ್ಞಾಸುಗಳು ಯಾರು ಹೋದರೂ ಅವರಿಗೆ ಭಗವಂತನು ತನಗೆ ಉಪದೇಶಿಸಿದ್ದ ಜ್ಞಾನವನ್ನು ಅವನು ಉಪದೇಶ ಮಾಡುತ್ತಿರುತ್ತಾನೆ. ॥ ೨೨ ॥ ವ್ರಜಭೂಮಿಯಾದರೋ ಸಾಧನೆಯ ಫಲರೂಪವಾದ ಭೂಮಿಯೇ ಆಗಿದೆ. ಇದನ್ನೂ ಕೂಡ ರಹಸ್ಯಗಳೊಡನೆ ಭಗವಂತನು ಮೊದಲೇ ಉದ್ಧವನಿಗೆ ತಿಳಿಸಿದ್ದನು. ಆದರೆ ಆ ಫಲಭೂಮಿಯು ಭಗವಂತನು ಅಂತರ್ಧಾನಹೊಂದಿದಾಗ ಆತ ಜೊತೆಯಲ್ಲಿ ತಾನೂ ಸ್ಥೂಲದೃಷ್ಟಿಗೆ ಮರೆಯಾಗಿಬಿಟ್ಟಿದೆ. ಆದ್ದರಿಂದ ಉದ್ಧವನೂ ಈಗ ಇಲ್ಲಿ ಪ್ರತ್ಯಕ್ಷನಾಗಿ ಕಾಣಲಾರನು. ॥ ೨೩ ॥ ಆದರೂ ಉದ್ಧವನ ದರ್ಶನವನ್ನು ಪಡೆಯಲು ಸಾಧ್ಯವಾಗುವ ಒಂದು ಸ್ಥಾನವಿದೆ. ಗೋವರ್ಧನಪರ್ವತದ ಬಳಿ ಗೋಪಿಕಾಸ್ತ್ರೀಯರೊಡನೆ ಭಗವಂತನು ಅವರೊಡನೆ ವಿಹರಿಸಿದ ಪವಿತ್ರವಾದ ಸ್ಥಳವಿದೆ. ಅಲ್ಲಿಯ ಬಳ್ಳಿ-ಚಿಗುರುಗಳ ರೂಪದಲ್ಲಿ ಉದ್ಧವನು ಅವಶ್ಯವಾಗಿಯೂ ಅಲ್ಲಿರುತ್ತಾನೆ. ಲತೆಗಳ ರೂಪದಲ್ಲಿ ಆತನು 'ಭಗವಂತನಿಗೆ ಪ್ರಿಯತಮೆಯರಾದ ಗೋಪಿಕಾಸ್ತ್ರೀಯರ ಪಾದಧೂಳಿಯು ತನ್ನ ಮೇಲೆ ಬೀಳಲಿ'– ಎಂಬ ಪವಿತ್ರವಾದ ಆಶಯದಿಂದ ಅಲ್ಲಿರುವನು. ॥ ೨೪ ॥

ಆತ್ಮೋತ್ಸವರೂಪತ್ವಂ ಹರಿಣಾ ತಸ್ಮೈ ಸಮರ್ಪಿತಂ ನಿಯತಮ್ ।
ತಸ್ಮಾತ್ತತ್ರ ಸ್ಥಿತ್ವಾ ಕುಸುಮಸರಃಪರಿಸರೇ ಸವಜ್ರಾಭಿಃ
॥ ೨೫ ॥

ವೀಣಾವೇಣುಮೃದಂಗೈಃ ಕೀರ್ತನಕಾವ್ಯಾದಿಸರಸಸಂಗೀತೈಃ ।
ಉತ್ಸವ ಆರಬ್ಧವ್ಯೋ ಹರಿರತಲೋಕಾನ್ ಸಮಾನಾಯ್ಯ
॥ ೨೬ ॥

ತತ್ರೋದ್ಧವಾವಲೋಕೋ ಭವಿತಾ ನಿಯತಂ ಮಹೋತ್ಸವೇ ವಿತತೇ ।
ಯೌಷ್ಮಾಕೀಣಾಮಭಿಮತಸಿದ್ಧಿಂ ಸವಿತಾ ಸ ಏವ ಸವಿತಾನಾಮ್
॥ ೨೭ ॥

ಸೂತ ಉವಾಚ

ಇತಿ ಶ್ರುತ್ವಾ ಪ್ರಸನ್ನಾಸ್ತಾಃ ಕಾಲಿಂದೀಮಭಿವಂದ್ಯ ತತ್ ।
ಕಥಯಾಮಾಸುರಾಗತ್ಯ ವಜ್ರಂ ಪ್ರತಿ ಪರೀಕ್ಷಿತಮ್
॥ ೨೮ ॥

ವಿಷ್ಣುರಾತಸ್ತು ತಚ್ಛ್ರುತ್ವಾ ಪ್ರಸನ್ನಸ್ತದ್ಯುತಸ್ತದಾ ।
ತತ್ಸೈವಾಗತ್ಯ ತತ್ಸರ್ವಂ ಕಾರಯಾಮಾಸ ಸತ್ವರಮ್
॥ ೨೯ ॥

ಗೋವರ್ಧನಾದದೂರೇಣ ವೃಂದಾರಣ್ಯೇ ಸಖೀಸ್ಥಲೇ ।
ಪ್ರವೃತ್ತಃ ಕುಸುಮಾಂಭೋಧೌ ಕೃಷ್ಣಸಂಕೀರ್ತನೋತ್ಸವಃ
॥ ೩೦ ॥

ವೃಷಭಾನುಸುತಾಕಾಂತವಿಹಾರೇ ಕೀರ್ತನಶ್ರಿಯಾ ।
ಸಾಕ್ಷಾದಿವ ಸಮಾವೃತ್ತೇ ಸರ್ವೇಽನನ್ಯದೃಶೋಽಭವನ್
॥ ೩೧ ॥

ತತಃ ಪಶ್ಯತ್ಸು ಸರ್ವೇಷು ತೃಣಗುಲ್ಮಲತಾಚಯಾತ್ ।
ಆಜಗಾಮೋದ್ಧವಃ ಸ್ರಗ್ವೀ ಶ್ಯಾಮಃ ಪೀತಾಂಬರಾವೃತಃ
॥ ೩೨ ॥

ಗುಂಜಾಮಾಲಾಧರೋ ಗಾಯನ್ವಲ್ಲವೀವಲ್ಲಭಂ ಮುಹುಃ ।
ತದಾಗಮನತೋ ರೇಜೇ ಭೃಶಂ ಸಂಕೀರ್ತನೋತ್ಸವಃ
॥ ೩೩ ॥

ಉದ್ಧವನ ವಿಷಯದಲ್ಲಿ ಮತ್ತೊಂದು ನಿಶ್ಚಿತವಾದ ವಿಷಯ ವಿದೆ. ಉದ್ಧವನಿಗೆ ಭಗವಂತನು ಉತ್ಸವಸ್ವರೂಪವನ್ನು ಕೊಟ್ಟಿರುವನು. ಭಗವಂತನ ಉತ್ಸವವೆಲ್ಲವೂ ಉದ್ಧವನ ಒಂದು ಅಂಗವಾಗುತ್ತವೆ. ಅವನು ಆ ಉತ್ಸವದಿಂದ ಎಂದಿಗೂ ಬೇರ್ಪಡುವುದಿಲ್ಲ. ಆದುದರಿಂದ ಈಗ ನೀವು ವಜ್ರನಾಭನನ್ನು ಜೊತೆಯಲ್ಲಿ ಕರೆದುಕೊಂಡು ಅಲ್ಲಿಗೆ ಹೋಗಿ ಕುಸುಮ ಸರೋವರದ ಬಳಿ ನಿಲ್ಲಿರಿ. ॥ ೨೫ ॥ ಭಗವದ್ಭಕ್ತರ ಮಂಡಲಿಯನ್ನು ಸೇರಿಸಿಕೊಂಡು ವೀಣೆ, ಕೊಳಲು ಮತ್ತು ಮೃದಂಗವೇ ಮುಂತಾದ ವಾದ್ಯಗಳೊಡನೆ ಭಗವಂತನ ನಾಮಗಳ ಮತ್ತು ಲೀಲೆಗಳ ಸಂಕೀರ್ತನೆ, ಭಗವಂತನಿಗೆ ಸಂಬಂಧಪಟ್ಟ ಕಾವ್ಯ-ಕಥೆಗಳ ಶ್ರವಣ ಮತ್ತು ಭಗವಂತನ ಗುಣಗಳ ಗಾನಗಳಿಂದ ಕೂಡಿದ ಸರಸಸಂಗೀತದಿಂದ ಉತ್ಸವವನ್ನು ಪ್ರಾರಂಭಿಸಿರಿ. ॥ ೨೬ ॥ ಹೀಗೆ ಆ ಮಹೋತ್ಸವವು ವಿಸ್ತರಿಸಲ್ಪಟ್ಟರೆ ನಿಶ್ಚಯವಾಗಿಯೂ ನಿಮಗೆ ಮಹಾತ್ಮನಾದ ಉದ್ಧವನ ದರ್ಶನವು ಅಲ್ಲಿ ಆಗುವುದು. ಅವನೇ ನಿಮ್ಮ ಮನೋರಥವನ್ನು ಚೆನ್ನಾಗಿ ಪೂರ್ಣಗೊಳಿಸುವನು.''* ॥ ೨೭ ॥

ಸೂತಪುರಾಣಿಕರು ಹೇಳುತ್ತಾರೆ – ''ಎಲೈ ಮುನಿಗಳೇ! ಯಮುನಾದೇವಿಯು ಹೇಳಿದ ಮಾತುಗಳನ್ನು ಕೇಳಿ ಶ್ರೀಕೃಷ್ಣನ ಪತ್ನಿಯರಿಗೆ ತುಂಬಾ ಸಂತೋಷವುಂಟಾಯಿತು. ಅವರು ಯಮುನಾದೇವಿಗೆ ನಮಸ್ಕಾರಮಾಡಿ ಅಲ್ಲಿಂದ ಹಿಂದಿರುಗಿ ವಜ್ರನಾಭನಿಗೂ ಪರೀಕ್ಷಿದ್ರಾಜನಿಗೂ ಆ ಎಲ್ಲ ಮಾತುಗಳನ್ನೂ ತಿಳಿಸಿದರು. ॥ ೨೮ ॥ ಇದನ್ನು ಕೇಳಿ ಸಂತುಷ್ಟನಾದ ಪರೀಕ್ಷಿದ್ರಾಜನು ವಜ್ರನಾಭನೊಡನೆಯೂ ಶ್ರೀಕೃಷ್ಣಪತ್ನಿಯರೊಡನೆಯೂ ಒಡನೆಯೇ ಆ ನಿರ್ದಿಷ್ಟ ಸ್ಥಳಕ್ಕೆ ಹೋಗಿ ಯಮುನಾದೇವಿಯು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು. ॥ ೨೯ ॥ ಗೋವರ್ಧನಪರ್ವತಕ್ಕೆ ಹತ್ತಿರದಲ್ಲಿರುವ ವೃಂದಾವನದ ಸಖೀವಿಹಾರಸ್ಥಳವಾದ ಕುಸುಮ ಸರೋವರ ಪ್ರದೇಶದಲ್ಲಿ ಶ್ರೀಕೃಷ್ಣಸಂಕೀರ್ತನೋತ್ಸವವು ಪ್ರಾರಂಭಿಸಲ್ಪಟ್ಟಿತು. ॥ ೩೦ ॥ ವೃಷಭಾನುಕುಮಾರಿಯಾದ ಭಗವತೀ ಶ್ರೀರಾಧಾದೇವಿ ಮತ್ತು ಭಗವಾನ್ ಶ್ರೀಕೃಷ್ಣರ ಆ ವಿಹಾರ ಭೂಮಿಯು ಸಂಕೀರ್ತನದ ಕಾಂತಿಯಿಂದ ಬೆಳಗಲು, ಅಲ್ಲಿದ್ದ ಭಕ್ತಜನರೆಲ್ಲರೂ ಏಕಾಗ್ರಚಿತ್ತರಾದರು. ಅವರ ಮನೋವೃತ್ತಿಯು ಆ ಉತ್ಸವದಲ್ಲಿಯೇ ನೆಟ್ಟುಕೊಂಡಿತು. ॥ ೩೧ ॥ ಆನಂತರ ಎಲ್ಲರೂ ನೋಡುತ್ತಿರುವಂತೆಯೇ ಅಲ್ಲಿನ ಹುಲ್ಲು-ಪೊದೆ ಬಳ್ಳಿಗಳ ಸಮೂಹದಿಂದ ಮಹಾತ್ಮನಾದ ಉದ್ಧವನು ಪ್ರಕಟಗೊಂಡು ಎಲ್ಲರ ಮುಂದೆಯೂ ಕಾಣಿಸಿಕೊಂಡನು. ಶ್ಯಾಮಲವರ್ಣದ ದೇಹ ಕಾಂತಿ, ಪೀತಾಂಬರದ ಉಡುಗೆ, ಕತ್ತಿನಲ್ಲಿ ವನಮಾಲೆ ಮತ್ತು ಗುಲಗಂಜಿಗಳ ಮಾಲೆಯಿಂದ ಅಲಂಕೃತನಾಗಿ ಬೆಳಗುತ್ತಿದ್ದ ಆ ಮಹಾಪುರುಷನ ಮುಖದಿಂದ ಗೋಪೀವಲ್ಲಭಗೋವಿಂದನ ಮಧುರ ಲೀಲೆಗಳ ಗಾನವು ಮತ್ತೆ-ಮತ್ತೆ ಹೊರಹೊಮ್ಮುತ್ತಿತ್ತು. ಉದ್ಧವನ ಆಗಮನದಿಂದ ಸಂಕೀರ್ತನೋತ್ಸವವು ಕಳೆಯೇರಿತು. ಸ್ಫಟಿಕಮಣಿಯಿಂದ ರಚಿತವಾದ ದಿವ್ಯಭವನದ ಉಪ್ಪರಿಗೆಯ ಮೇಲೆ ಬೆಳದಿಂಗಳು ಬಿದ್ದಾಗ ಅದರ ಕಾಂತಿಯು ಬಹುವಾಲು

* ಸಂಸ್ಕೃತಭಾಷೆಯಲ್ಲಿ ಉದ್ಧವ ಎನ್ನುವ ಶಬ್ದಕ್ಕೆ ಉತ್ಸವ ಎಂಬ ಅರ್ಥವೂ ಇದೆ, **'ಮಹ ಉದ್ಧವ ಉತ್ಸವಃ'** *(ಅಮರಕೋಶ)*

ಚಂದ್ರಿಕಾಗಮತೋ ಯದ್ವತ್ ಸ್ಫಾಟಿಕಾಟ್ಟಾಲಭೂಮಣಿಃ ।
ಅಥ ಸರ್ವೇ ಸುಖಾಂಭೋಧೌ ಮಗ್ನಾಃ ಸರ್ವಂ ವಿಸಸ್ಮರುಃ
॥ ೩.೪ ॥

ಕ್ಷಣೇನಾಗತವಿಜ್ಞಾನಾ ದೃಷ್ಟ್ವಾ ಶ್ರೀಕೃಷ್ಣರೂಪಿಣಮ್ ।
ಉದ್ಧವಂ ಪೂಜಯಾಂಚಕ್ರುಃ ಪ್ರತಿಲಬ್ಧ ಮನೋರಥಾಃ
॥ ೩.೫ ॥

ವೃದ್ಧಿಹೊಂದುವಂತೆ, ಉದ್ಧವನ ಆಗಮನದಿಂದ ಆ ಉತ್ಸವದ ಶೋಭೆಯೂ ಬಹುಗುಣವಾಗಿ ಹೆಚ್ಚಿತ್ತು. ಆಗ ಎಲ್ಲರೂ ಸುಖ ಸಮುದ್ರದಲ್ಲಿ ಮುಳುಗಿ ಎಲ್ಲವನ್ನೂ ಮರೆತು ಬಿಟ್ಟರು. ॥ ೩.೨-೩.೪ ॥ ಕೊಂಚ ಹೊತ್ತಿನನಂತರ ಪ್ರಜ್ಞೆಬಂದಾಗ ಶ್ರೀಕೃಷ್ಣರೂಪಿಯಾಗಿದ್ದ ಉದ್ಧವನನ್ನು ನೋಡಿ ಅವರ ಮನೋರಥವು ಈಡೇರಿತು. ಅವರು ಆತನನ್ನು ಚೆನ್ನಾಗಿ ಪೂಜಿಸಿದರು.'' ॥ ೩.೫ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ದ್ವಿತೀಯೇ ವೈಷ್ಣವಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಗೋವರ್ಧನಪರ್ವತಸಮೀಪೇ ಪರೀಕ್ಷಿದಾದೀನಾಮುದ್ಧವದರ್ಶನವರ್ಣನಂ ನಾಮ ದ್ವಿತೀಯೋಽಧ್ಯಾಯಃ॥ ೨ ॥

ಮೂರನೆಯ ಅಧ್ಯಾಯ

ಶ್ರೀಮದ್ಭಾಗವತದ ಪರಂಪರೆ, ಮಾಹಾತ್ಮ್ಯ
ಭಾಗವತಶ್ರವಣದಿಂದ ಭಗವದ್ಭಾವದ ಪ್ರಾಪ್ತಿ

ಸೂತ ಉವಾಚ

ಅಥೋದ್ಧವಸ್ತು ತಾನ್ ದೃಷ್ಟ್ವಾ ಕೃಷ್ಣಕೀರ್ತನತತ್ಪರಾನ್ ।
ಸತ್ಕೃತ್ಯಾಥ ಪರಿಷ್ವಜ್ಯ ಪರೀಕ್ಷಿತಮುವಾಚ ಹ
॥ ೧ ॥

ಸೂತ ಪುರಾಣಿಕರು ಹೇಳುತ್ತಾರೆ – ''ಅನಂತರ ಶ್ರೀಕೃಷ್ಣನ ಸಂಕೀರ್ತನೆಯಲ್ಲಿ ತತ್ಪರರಾಗಿದ್ದ ಅವರನ್ನು ಕಂಡು ಉದ್ಧವನಿಗೆ ಪರಮಾನಂದವಾಯಿತು. ಅವನು ಅವರೆಲ್ಲರನ್ನೂ ಸತ್ಕರಿಸಿ, ಪರೀಕ್ಷಿದ್ರಾಜನನ್ನು ಆಲಿಂಗಿಸಿಕೊಂಡನು. ॥ ೧ ॥

ಉದ್ಧವ ಉವಾಚ

ಧನ್ಯೋಽಸಿ ರಾಜನ್ಕೃಷ್ಣೈಕಭಕ್ತ್ಯಾ ಪೂರ್ಣೋಽಸಿ ನಿತ್ಯದಾ ।
ಯಸ್ತ್ವಂ ನಿಮಗ್ನಚಿತ್ತೋಽಸಿ ಕೃಷ್ಣಸಂಕೀರ್ತನೋತ್ಸವೇ
॥ ೨ ॥

ಉದ್ಧವನು ಹೇಳಿದನು – ನೃಪವರ್ಯ! ನೀನು ಧನ್ಯನಾದೆ. ಅನನ್ಯವೂ ಅನವರತವೂ ಆದ ಶ್ರೀಕೃಷ್ಣಭಕ್ತಿಯಿಂದ ಪೂರ್ಣನಾಗಿರುವೆ. ಏಕೆಂದರೆ, ಶ್ರೀಕೃಷ್ಣಸಂಕೀರ್ತನೆಯ ಮಹೋತ್ಸವದಲ್ಲಿ ನಿನ್ನ ಹೃದಯವು ಮುಳುಗಿಹೋಗಿದೆ. ॥ ೨ ॥ ಶ್ರೀಕೃಷ್ಣನ ಪತ್ನಿಯರ ಕುರಿತು ನಿನ್ನ ಭಕ್ತಿಯು ಹಾಗೂ ವಜ್ರನಾಭನ ಮೇಲೆ ನಿನಗೆ ಪ್ರೇಮವಿರುವುದು ಸೌಭಾಗ್ಯದ ಮಾತಾಗಿದೆ. ಅಯ್ಯಾ! ನೀನು ಮಾಡಿರುವುದೆಲ್ಲವೂ ನಿನಗೆ ಅನುರೂಪವೇ ಆಗಿದೆ. ಎಷ್ಟಾದರೂ ಶ್ರೀಕೃಷ್ಣನೇ ನಿನಗೆ ಶರೀರ-ವೈಭವಗಳನ್ನು ಕರುಣಿಸಿರುವನು. ಆದ್ದರಿಂದ ಅವನ ಮರಿಮಗನ ಮೇಲೆ ಪ್ರೇಮ ಉಂಟಾಗುವುದು ಸ್ವಾಭಾವಿಕವೇ ಆಗಿದೆ. ॥ ೩. ॥ ಸಮಸ್ತ ದ್ವಾರಕಾವಾಸಿಯರಲ್ಲಿ ಈ ಜನರು ಎಲ್ಲರಿಗಿಂತ ಹೆಚ್ಚು ಧನ್ಯರಾಗಿರುವರು; ಇದರಲ್ಲಿ ಸಂದೇಹವೇ ಇಲ್ಲ. ಇವರು ವ್ರಜದಲ್ಲಿ ವಾಸಿಸಲು ಭಗವಾನ್ ಶ್ರೀಕೃಷ್ಣನೇ ಅರ್ಜುನನಿಗೆ ಆಜ್ಞಾಪಿಸಿದ್ದನು. ॥ ೪ ॥ ಶ್ರೀಕೃಷ್ಣನು ಮನೋರೂಪೀ ಚಂದ್ರಮನಾದ ರಾಧೆಯ ಮುಖದ ಪ್ರಭಾರೂಪೀ ಬೆಳದಿಂಗಳಿಂದ ಕೂಡಿದ ಅವನ ಲೀಲಾಭೂಮಿಯಾದ ವೃಂದಾವನವನ್ನು ತನ್ನ ಕಿರಣಗಳಿಂದ ಶೋಭಿಸುತ್ತಾ ಇಲ್ಲೇ ಸದಾಕಾಲ ಪ್ರಕಾಶಿಸುತ್ತಿರುವನು. ॥ ೫ ॥ ಶ್ರೀಕೃಷ್ಣಚಂದ್ರನು ನಿತ್ಯ ಪರಿಪೂರ್ಣನಾಗಿರುವನು. ಪ್ರಾಕೃತ ಚಂದ್ರನಂತೆ ಅವನಲ್ಲಿ ವೃದ್ಧಿ-ಕ್ಷಯರೂಪೀ ವಿಕಾರಗಳು ಉಂಟಾಗುವುದಿಲ್ಲ. ಅವನ ಹದಿನಾರು ಕಲೆಗಳಿಂದ ಸಾವಿರಾರು ಚಿನ್ಮಯ ಕಿರಣಗಳು ಹೊರಡುತ್ತಾ ಇರುತ್ತವೆ. ಈ ಎಲ್ಲ ಕಲೆಗಳಿಂದ ಕೂಡಿದ, ನಿತ್ಯ ಪರಿಪೂರ್ಣನಾದ

ಕೃಷ್ಣಪತ್ನೀಷು ವಜ್ರೇ ಚ ದಿಷ್ಟ್ಯಾ ಪ್ರೀತಿಃ ಪ್ರವರ್ತಿತಾ ।
ತವೋಚಿತಮಿದಂ ತಾತ ಕೃಷ್ಣದತ್ತಾಂಗವೈಭವ
॥ ೩ ॥

ದ್ವಾರಕಾಸ್ಥೇಷು ಸರ್ವೇಷು ಧನ್ಯಾ ಏತೇ ನ ಸಂಶಯಃ ।
ಯೇಷಾಂ ವ್ರಜನಿವಾಸಾಯ ಪಾರ್ಥಮಾದಿಷ್ಟವಾನ್ ಪ್ರಭುಃ
॥ ೪ ॥

ಶ್ರೀಕೃಷ್ಣಸ್ಯ ಮನಶ್ಚಂದ್ರೋ ರಾಧಾಸ್ಯ ಪ್ರಭಯಾನ್ವಿತಃ ।
ತದ್ವಿಹಾರವನಂ ಗೋಭಿರ್ಮಂಡಯನ್ ರೋಚತೇ ಸದಾ
॥ ೫ ॥

ಕೃಷ್ಣಚಂದ್ರಃ ಸದಾ ಪೂರ್ಣಸ್ತಸ್ಯ ಷೋಡಶ ಯಾಃ ಕಲಾಃ ।
ಚಿತ್ಸಹಸ್ರಪ್ರಭಾಭಿನ್ನಾ ಅತ್ರಾಸ್ತೇ ತತ್ಸ್ವರೂಪತಾ
॥ ೬ ॥

ಏವಂ ವಜ್ರಸ್ತು ರಾಜೇಂದ್ರ ಪ್ರಪನ್ನಭಯಭಂಜಕಃ ।
ಶ್ರೀಕೃಷ್ಣದಕ್ಷಿಣೇ ಪಾದೇ ಸ್ಥಾನಮೇತಸ್ಯ ವರ್ತತೇ
॥ ೭ ॥

ಅವತಾರೇऽತ್ರ ಕೃಷ್ಣೇನ ಯೋಗಮಾಯಾತಿಭಾವಿತಾಃ ।
ತದ್ಬಲೇನಾತ್ಮವಿಸ್ಮೃತ್ಯಾ ಸೀದಂತ್ಯೇತೇ ನ ಸಂಶಯಃ
॥ ೮ ॥

ಋತೇ ಕೃಷ್ಣಪ್ರಕಾಶಂ ತು ಸ್ವಾತ್ಮಬೋಧೋ ನ ಕಸ್ಯಚಿತ್ ।
ತತ್ಪ್ರಕಾಶಸ್ತು ಜೀವಾನಾಂ ಮಾಯಯಾ ಪಿಹಿತಃ ಸದಾ
॥ ೯ ॥

ಅಷ್ಟಾವಿಂಶೇ ದ್ವಾಪರಾಂತೇ ಸ್ವಯಮೇವ ಯದಾ ಹರಿಃ ।
ಉತ್ಸಾರಯೇನ್ನಿಜಾಂ ಮಾಯಾಂ ತತ್ಪ್ರಕಾಶೋ ಭವೇತ್ತದಾ
॥ ೧೦ ॥

ಸ ತು ಕಾಲೋ ವ್ಯತಿಕ್ರಾಂತಸ್ತೇನೇದಮಪರಂ ಶೃಣು ।
ಅನ್ಯದಾ ತತ್ಪ್ರಕಾಶಸ್ತು ಶ್ರೀಮದ್ಭಾಗವತಾದ್ಭವೇತ್
॥ ೧೧ ॥

ಶ್ರೀಮದ್ಭಾಗವತಂ ಶಾಸ್ತ್ರಂ ಯತ್ರ ಭಾಗವತೈರ್ಯದಾ ।
ಕೀರ್ತ್ಯತೇ ಶ್ರೂಯತೇ ಚಾಪಿ ಶ್ರೀಕೃಷ್ಣಸ್ತತ್ರ ನಿಶ್ಚಿತಮ್
॥ ೧೨ ॥

ಶ್ರೀಮದ್ಭಾಗವತಂ ಯತ್ರ ಶ್ಲೋಕಂ ಶ್ಲೋಕಾರ್ಧಮೇವ ಚ ।
ತತ್ರಾಪಿ ಭಗವಾನ್ ಕೃಷ್ಣೋ ಬಲ್ಲವೀಭಿರ್ವಿರಾಜತೇ
॥ ೧೩ ॥

ಭಾರತೇ ಮಾನವಂ ಜನ್ಮ ಪ್ರಾಪ್ಯ ಭಾಗವತಂ ನ ಯೈಃ ।
ಶ್ರುತಂ ಪಾಪಪರಾಧೀನೈರಾತ್ಮಘಾತಸ್ತು ತೈಃ ಕೃತಃ
॥ ೧೪ ॥

ಶ್ರೀಮದ್ಭಾಗವತಂ ಶಾಸ್ತ್ರಂ ನಿತ್ಯಂ ಯೈಃ ಪರಿಸೇವಿತಮ್ ।
ಪಿತುರ್ಮಾತುಶ್ಚ ಭಾರ್ಯಾಯಾಃ ಕುಲಪಂಕ್ತಿಃ ಸುತಾರಿತಾ
॥ ೧೫ ॥

ವಿದ್ಯಾಪ್ರಕಾಶೋ ವಿಪ್ರಾಣಾಂ ರಾಜ್ಞಾಂ ಶತ್ರುಜಯೋ ವಿಶಾಮ್ ।
ಧನಂ ಸ್ವಾಸ್ಥ್ಯಂ ಚ ಶೂದ್ರಾಣಾಂ ಶ್ರೀಮದ್ಭಾಗವತಾದ್ಭವೇತ್
॥ ೧೬ ॥

ಯೋಷಿತಾಮಪರೇಷಾಂ ಚ ಸರ್ವವಾಂಛಿತಪೂರಣಮ್ ।
ಅತೋ ಭಾಗವತಂ ನಿತ್ಯಂ ಕೋ ನ ಸೇವೇತ ಭಾಗ್ಯವಾನ್
॥ ೧೭ ॥

ಅನೇಕಜನ್ಮಸಂಸಿದ್ಧಃ ಶ್ರೀಮದ್ಭಾಗವತಂ ಲಭೇತ್ ।
ಪ್ರಕಾಶೋ ಭಗವದ್ಭಕ್ತೇರುದ್ಭವಸ್ತತ್ರ ಜಾಯತೇ
॥ ೧೮ ॥

ಶ್ರೀಕೃಷ್ಣನು ಈ ವ್ರಜಭೂಮಿಯಲ್ಲಿ ಸದಾಕಾಲ ವಿರಾಜಿಸುತ್ತಿರುವನು. ಈ ಭೂಮಿಯಲ್ಲಿ ಮತ್ತು ಅವನ ಸ್ವರೂಪದಲ್ಲಿ ಯಾವ ಅಂತರವೂ ಇಲ್ಲ ॥ ೬ ॥ ಪರೀಕ್ಷಿದ್ರಾಜನೇ ! ಹೀಗೆ ವಿಚಾರಮಾಡಿದಾಗ ಎಲ್ಲ ವ್ರಜವಾಸಿಗಳು ಭಗವಂತನ ಅಂಗದಲ್ಲಿ ಸ್ಥಿತರಾಗಿದ್ದಾರೆ. ಶರಣಾಗತರ ಭಯವನ್ನು ದೂರಗೊಳಿಸುವ ಈ ವಜ್ರನಾಭನ ಸ್ಥಾನವು ಶ್ರೀಕೃಷ್ಣನ ಬಲಚರಣದಲ್ಲಿದೆ. ॥ ೭ ॥ ಈ ಅವತಾರದಲ್ಲಿ ಭಗವಾನ್ ಶ್ರೀಕೃಷ್ಣನು ಇವರೆಲ್ಲರನ್ನು ತನ್ನ ಯೋಗಮಾಯೆಯಿಂದ ಆವರಿಸಿರುವನು. ಅದರ ಪ್ರಭಾವದಿಂದಲೇ ಇವರು ತಮ್ಮ ಸ್ವರೂಪವನ್ನು ಮರೆತಿರುವರು. ಇದರಿಂದಲೇ ಸದಾ ದುಃಖಿತರಾಗಿರುವರು ; ಇದರಲ್ಲಿ ಸಂದೇಹವೇ ಇಲ್ಲ ॥ ೮ ॥ ಶ್ರೀಕೃಷ್ಣನ ಪ್ರಕಾಶವನ್ನು ಪಡೆಯದೆ ಯಾರಿಗೂ ತಮ್ಮ ಆತ್ಮಸ್ವರೂಪದ ಬೋಧ ಉಂಟಾಗುವುದಿಲ್ಲ. ಜೀವಿಗಳ ಅಂತಃಕರಣದಲ್ಲಿರುವ ಶ್ರೀಕೃಷ್ಣ ತತ್ತ್ವಪ್ರಕಾಶದ ಮೇಲೆ ಸದಾಕಾಲ ಮಾಯೆಯ ಪರದೆ ಬಿದ್ದಿರುತ್ತದೆ. ॥ ೯ ॥ ಇಪ್ಪತ್ತೆಂಟನೆಯ ದ್ವಾಪರಯುಗದ ಕೊನೆಯಲ್ಲಿ ಭಗವಾನ್ ಶ್ರೀಕೃಷ್ಣನು ಸಾಕ್ಷಾತ್ತಾಗಿ ಪ್ರಕಟಗೊಂಡು ತನ್ನ ಮಾಯೆಯ ಪರದೆಯನ್ನು ಸರಿಸಿದಾಗ ಜೀವಿಗಳಿಗೆ ಅವನ ಪ್ರಕಾಶವು ಪ್ರಾಪ್ತವಾಗುತ್ತದೆ. ॥ ೧೦ ॥ ಇಪ್ಪತ್ತೆಂಟನೆಯ ದ್ವಾಪರಯುಗವನ್ನು ಬಿಟ್ಟು ಬೇರೆ ಸಮಯದಲ್ಲಿ ಶ್ರೀಕೃಷ್ಣತತ್ತ್ವದ ಪ್ರಕಾಶವನ್ನು ಪಡೆಯಬೇಕಾದರೆ ಅದು ಶ್ರೀಮದ್ಭಾಗವತದ ಮೂಲಕವಾಗಿ ಮಾತ್ರವೇ ಸಾಧ್ಯವಾಗುವುದು. ॥ ೧೧ ॥ ಭಗವದ್ಭಕ್ತರು ಯಾವ ಸ್ಥಳ-ಸಮಯಗಳಲ್ಲಿ ಶ್ರೀಮದ್ಭಾಗವತ ಶಾಸ್ತ್ರದ ಸಂಕೀರ್ತನೆ, ಶ್ರವಣಗಳನ್ನು ಮಾಡುತ್ತಾರೆಯೋ ಆ ಸ್ಥಳ-ಸಮಯಗಳಲ್ಲಿ ಶ್ರೀಕೃಷ್ಣನು ನಿಶ್ಚಯವಾಗಿ ಇದ್ದೇ ಇರುವನು. ॥ ೧೨ ॥ ಶ್ರೀಮದ್ಭಾಗವತದ ಒಂದು ಶ್ಲೋಕವನ್ನಾಗಲೀ, ಅರ್ಧಶ್ಲೋಕವನ್ನಾಗಲೀ ಎಲ್ಲಿ ಶ್ರವಣ-ಸಂಕೀರ್ತನೆಗಳನ್ನು ಮಾಡುತ್ತಾರೆಯೋ ಆ ಸ್ಥಳದಲ್ಲಿಯೂ ಕೂಡ ಭಗವಂತನಾದ ಶ್ರೀಕೃಷ್ಣನು ಗೋಪೀಸಮೇತನಾಗಿ ಬೆಳಗುತ್ತಿರುವನು. ॥ ೧೩ ॥ ಪವಿತ್ರವಾದ ಭಾರತದೇಶದಲ್ಲಿ ಹುಟ್ಟಿ ಅದರಲ್ಲೂ ಮನುಷ್ಯಜನ್ಮವನ್ನು ಪಡೆದಿದ್ದರೂ ಕೂಡ ಪಾಪ ಪರಾಯಣನಾಗಿ ಶ್ರೀಮದ್ಭಾಗವತವನ್ನು ಕೇಳುವುದಿಲ್ಲವೋ ಅಂತಹವರು ತಮ್ಮ ಕೈಯಿಂದ ತಮ್ಮನ್ನು ತಾವೇ ಕೊಂದುಕೊಂಡಂತೆ ಆಗುತ್ತದೆ. ಆತ್ಮಹತ್ಯೆ ಮಾಡಿಕೊಂಡಂತೆ ಆಗುತ್ತದೆ. ॥ ೧೪ ॥ ಶ್ರೀಮದ್ಭಾಗವತ ಶಾಸ್ತ್ರವನ್ನು ಸದಾಕಾಲ ಸೇವಿಸುವವರು ತಮ್ಮ ತಂದೆಯನ್ನೂ, ತಾಯಿಯನ್ನೂ, ಪತ್ನಿಯನ್ನೂ ಮತ್ತು ಆ ಮೂವರ ಕುಲಗಳನ್ನೂ ಉದ್ಧಾರ ಮಾಡುತ್ತಾರೆ. ॥ ೧೫ ॥ ಶ್ರೀಮದ್ಭಾಗವತದ ಸೇವನೆಯಿಂದ ವಿಪ್ರರಿಗೆ ವಿದ್ಯೆಯು (ಜ್ಞಾನವು) ದೊರೆಯುತ್ತದೆ. ರಾಜರಿಗೆ ಶತ್ರುಗಳ ಮೇಲೆ ವಿಜಯವು ದೊರಕುತ್ತದೆ. ವೈಶ್ಯರು ಧನವನ್ನು ಗಳಿಸುತ್ತಾರೆ. ಶೂದ್ರರಿಗೆ ಆರೋಗ್ಯಲಾಭವಾಗುತ್ತದೆ. ॥ ೧೬ ॥ ಸ್ತ್ರೀಯರಿಗೂ ಮತ್ತು ಇತರರಿಗೂ ಅವರ ಮನಸ್ಸಿನ ಇಷ್ಟಾರ್ಥಗಳು ಸಿದ್ಧಿಸುತ್ತವೆ. ಆದುದರಿಂದ ಭಾಗ್ಯವಂತನಾದ ಯಾವನು ತಾನೇ ಭಾಗವತವನ್ನು ಸದಾ ಸೇವಿಸುವುದಿಲ್ಲ ? ॥ ೧೭ ॥ ಅನೇಕ ಜನ್ಮಗಳಲ್ಲಿ ಚೆನ್ನಾಗಿ ಸಿದ್ಧಿಯನ್ನು ಪಡೆದವನಿಗೆ ಮಾತ್ರವೇ ಶ್ರೀಮದ್ಭಾಗವತವು ದೊರೆಯುವುದು. ಆದರಿಂದ ಭಗವಂತನ ಪ್ರಕಾಶವು ಲಭಿಸುವುದು. ಭಗವದ್ಭಕ್ತಿಯು ಅಲ್ಲಿಯೇ ಉಂಟಾಗುವುದು. ॥ ೧೮ ॥

ಸಾಂಖ್ಯಾಯನಪ್ರಸಾದಾಪ್ತಂ ಶ್ರೀಮದ್ಭಾಗವತಂ ಪುರಾ ।
ಬೃಹಸ್ಪತಿರ್ದತ್ತವಾನ್ಮೇ ತೇನಾಹಂ ಕೃಷ್ಣವಲ್ಲಭಃ
॥ ೧೯ ॥

ಆಖ್ಯಾಯಿಕಾಂ ಚ ತೇನೋಕ್ತಾಂ ವಿಷ್ಣುರಾತ ನಿಬೋಧ ತಾಮ್ ।
ಜ್ಞಾಯತೇ ಸಂಪ್ರದಾಯೋಽಪಿ ಯತ್ರ ಭಾಗವತಶ್ರುತೇಃ
॥ ೨೦ ॥

ಬೃಹಸ್ಪತಿರುವಾಚ

ಈಕ್ಷಾಂಚಕ್ರೇ ಯದಾ ಕೃಷ್ಣೋ ಮಾಯಾಪುರುಷರೂಪಧೃತ್ ।
ಬ್ರಹ್ಮಾ ವಿಷ್ಣುಃ ಶಿವಶ್ಚಾಪಿ ರಜಃಸತ್ತ್ವ ತಮೋಗುಣೈಃ
॥ ೨೧ ॥

ಪುರುಷಾಸ್ತ್ರಯ ಉತ್ತಸ್ಥುರಧಿಕಾರಾಂಸ್ತದಾದಿಶತ್ ।
ಉತ್ಪತ್ತೌ ಪಾಲನೇ ಚೈವ ಸಂಹಾರೇ ಪ್ರಕ್ರಮೇಣ ತಾನ್
॥ ೨೨ ॥

ಬ್ರಹ್ಮಾ ತು ನಾಭಿಕಮಲಾದುತ್ಪನ್ನಸ್ತಂ ವ್ಯಜಿಜ್ಞಪತ್ ।

ಬ್ರಹ್ಮೋವಾಚ

ನಾರಾಯಣಾದಿಪುರುಷ ಪರಮಾತ್ಮನ್ನಮೋಽಸ್ತು ತೇ
॥ ೨೩ ॥

ತ್ವಯಾ ಸರ್ಗೇ ನಿಯುಕ್ತೋಽಸ್ಮಿ ಪಾಪಿಯಾನ್ ಮಾಂ ರಜೋಗುಣಃ ।
ತತ್ಪ್ರಸಕ್ತೌ ನೈವ ಬಾಧೇತ ತಥೈವ ಕೃಪಯಾ ಪ್ರಭೋ
॥ ೨೪ ॥

ಬೃಹಸ್ಪತಿರುವಾಚ

ಯದಾ ತು ಭಗವಾಂಸ್ತಸ್ಮೈ ಶ್ರೀಮದ್ಭಾಗವತಂ ಪುರಾ ।
ಉಪದಿಶ್ಯಾಬ್ರವೀದ್ಬ್ರಹ್ಮನ್ ಸೇವಸ್ಯೈನತ್ಸಪ್ತಾಹಂ ಸಿದ್ಧಯೇ
॥ ೨೫ ॥

ಬ್ರಹ್ಮಾ ತು ಪರಮಪ್ರೀತಸ್ತೇನ ಕೃಷ್ಣಾಪ್ತಯೇಽನಿಶಮ್ ।
ಸಪ್ತಾವರಣಭಂಗಾಯ ಸಪ್ತಾಹಂ ಸಮವರ್ತಯತ್
॥ ೨೬ ॥

ಶ್ರೀಭಾಗವತಸಪ್ತಾಹಸೇವನಾಪ್ತಮನೋರಥಃ ।
ಸೃಷ್ಟಿಂ ವಿತನುತೇ ನಿತ್ಯಂ ಸಸಪ್ತಾಹಃ ಪುನಃ ಪುನಃ
॥ ೨೭ ॥

ವಿಷ್ಣುರಪ್ಯರ್ಥಯಾಮಾಸ ಪುಮಾಂಸಂ ಸ್ವಾರ್ಥಸಿದ್ಧಯೇ ।
ಪ್ರಜಾನಾಂ ಪಾಲನೇ ಪುಂಸಾ ಯದನೇನಾಪಿ ಕಲ್ಪಿತಃ
॥ ೨೮ ॥

ಹಿಂದಿನ ಕಾಲದಲ್ಲಿ ಸಾಂಖ್ಯಾಯನ ಮುನಿಗಳ ಅನುಗ್ರಹದಿಂದ ಅದನ್ನು ಬೃಹಸ್ಪತ್ಯಾಚಾರ್ಯರು ಪಡೆದರು. ಬೃಹಸ್ಪತ್ಯಾಚಾರ್ಯರು ನನಗೆ ಅದನ್ನು ಅನುಗ್ರಹಿಸಿದರು. ಇದರಿಂದಲೇ ನಾನು ಶ್ರೀಕೃಷ್ಣನಿಗೆ ಪ್ರಿಯಮಿತ್ರನಾಗಲು ಸಾಧ್ಯವಾಯಿತು. ॥ ೧೯ ॥ ಎಲೈ ವಿಷ್ಣುರಾತನೇ! ಬೃಹಸ್ಪತ್ಯಾಚಾರ್ಯರು ನನಗೆ ಭಾಗವತಕ್ಕೆ ಸಂಬಂಧಪಟ್ಟ ಒಂದು ಆಖ್ಯಾಯಿಕೆಯನ್ನೂ ಹೇಳಿದ್ದರು. ಅದನ್ನು ಕೇಳು, ಮಹಾರಾಜ! ಆ ಆಖ್ಯಾಯಿಕೆಯಿಂದ ಭಾಗವತಶ್ರವಣದ ಸಂಪ್ರದಾಯದ ಕ್ರಮವೂ ನಮಗೆ ತಿಳಿಯುತ್ತದೆ. ॥ ೨೦ ॥

ಶ್ರೀಬೃಹಸ್ಪತ್ಯಾಚಾರ್ಯರು ಹೇಳುತ್ತಾರೆ – "ತನ್ನ ಮಾಯೆಯಿಂದ ಪುರುಷರೂಪವನ್ನು ತಾಳಿದ ಭಗವಾನ್ ಶ್ರೀಕೃಷ್ಣನು ಸೃಷ್ಟಿಯನ್ನು ಮಾಡಲು ಸಂಕಲ್ಪಿಸಿದಾಗ ಆತನ ದಿವ್ಯ ಮಂಗಳ ವಿಗ್ರಹದಿಂದ ಮೂವರು ಪುರುಷರು ಪ್ರಕಟಗೊಂಡರು. ಆ ಮೂವರಲ್ಲಿ ರಜೋಗುಣದ ಪ್ರಾಧಾನ್ಯದಿಂದ ಬ್ರಹ್ಮದೇವರೂ, ಸತ್ತ್ವಗುಣದ ಪ್ರಧಾನತೆಯಿಂದ ಮಹಾವಿಷ್ಣುವೂ ಮತ್ತು ತಮೋಗುಣದ ಪ್ರಾಧಾನ್ಯದಿಂದ ರುದ್ರದೇವರೂ ಪ್ರಕಟಗೊಂಡರು. ಪರಮಾತ್ಮನು ಈ ಮೂವರಿಗೆ ಕ್ರಮವಾಗಿ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳ ಅಧಿಕಾರವನ್ನು ಕೊಟ್ಟನು. ॥ ೨೧-೨೨ ॥ ಆಗ ಭಗವಂತನ ನಾಭಿಕಮಲದಿಂದ ಜನಿಸಿದ ಬ್ರಹ್ಮದೇವರು ಆತನಿಗೆ ತಮ್ಮ ಇಷ್ಟಾರ್ಥವನ್ನು ನಿವೇದಿಸಿಕೊಂಡರು.

ಬ್ರಹ್ಮದೇವರು ಹೇಳಿದರು – "ಓ ನಾರಾಯಣನೇ! ಆದಿಪುರುಷನೇ! ಪರಮಾತ್ಮನೇ! ನಿನಗೆ ನಮಸ್ಕಾರವು. ॥ ೨೩ ॥ ನೀನು ನನ್ನನ್ನು ಸೃಷ್ಟಿಕಾರ್ಯಮಾಡಲು ನೇಮಿಸಿದ್ದೀಯೆ. ಪಾಪಿಷ್ಠವಾದ ರಜೋಗುಣವು ನನಗೆ ನಿನ್ನ ಸ್ಮರಣೆಗೆ ಅಡ್ಡಿಯನ್ನು ಮಾಡದೇ ಇರುವಂತೆ ಅನುಗ್ರಹಮಾಡು." ॥ ೨೪ ॥

ಬೃಹಸ್ಪತಿಗಳು ಹೇಳುತ್ತಾರೆ – ಬ್ರಹ್ಮದೇವರು ಸೃಷ್ಟಿಗೆ ಮೊದಲು ಹೀಗೆ ಪ್ರಾರ್ಥನೆಮಾಡಲು ಶ್ರೀಭಗವಂತನು ಅವರಿಗೆ ಶ್ರೀಮದ್ಭಾಗವತವನ್ನು ಉಪದೇಶಮಾಡಿ – "ಬ್ರಹ್ಮನೇ! ಇದನ್ನು ಸೇವಿಸು. ಇದರಿಂದ ನಿನ್ನ ಇಷ್ಟಾರ್ಥ ಸಿದ್ಧಿಸುತ್ತದೆ" ಎಂದು ಆಣತಿಯಿತ್ತನು. ॥ ೨೫ ॥ ಭಾಗವತದ ಉಪದೇಶವನ್ನು ಪಡೆದು ಬ್ರಹ್ಮದೇವರಿಗೆ ತುಂಬಾ ಸಂತೋಷವುಂಟಾಯಿತು. ಅವರು ಶ್ರೀಕೃಷ್ಣನ ಪ್ರಾಪ್ತಿಗಾಗಿಯೂ ಮತ್ತು ಏಳು ಆವರಣಗಳನ್ನು ಭಂಜಿಸುವುದಕ್ಕಾಗಿಯೂ ಶ್ರೀಮದ್ಭಾಗವತದ ಸಪ್ತಾಹ ಪಾರಾಯಣವನ್ನು ಮಾಡಿದರು. ॥ ೨೬॥ ಸಪ್ತಾಹಯಜ್ಞದ ವಿಧಿಯಂತೆ ಏಳು ದಿನಗಳ ಕಾಲ ಶ್ರೀಮದ್ಭಾಗವತವನ್ನು ಸೇವಿಸಿದ್ದರಿಂದ ಬ್ರಹ್ಮದೇವರ ಎಲ್ಲ ಮನೋರಥಗಳೂ ಈಡೇರಿದುವು. ಇದರಿಂದ ಅವರು ಸದಾ ಭಗವತ್‌ಸ್ಮರಣಪೂರ್ವಕ ಸೃಷ್ಟಿಯನ್ನು ವಿಸ್ತಾರಪಡಿಸುತ್ತಾ ಮತ್ತೆ ಮತ್ತೆ ಸಪ್ತಾಹಯಜ್ಞದ ಅನುಷ್ಠಾನವನ್ನು ಮಾಡುತ್ತಿರುತ್ತಾರೆ. ॥ ೨೭ ॥ ಬ್ರಹ್ಮದೇವರಂತೆ ಮಹಾವಿಷ್ಣುವೂ ಕೂಡ ತನ್ನ ಇಷ್ಟಾರ್ಥದ ಸಿದ್ಧಿಗಾಗಿ ಆ ಪರಮಪುರುಷನಾದ ಪರಮಾತ್ಮನನ್ನು ಪ್ರಾರ್ಥನೆಮಾಡಿದನು. ಏಕೆಂದರೆ – ಆ ಪುರುಷೋತ್ತಮನೇ ವಿಷ್ಣುವನ್ನು ಪ್ರಜಾಪಾಲನ ರೂಪವಾದ ಕರ್ಮದಲ್ಲಿ ನೇಮಕಮಾಡಿದ್ದನು. ॥ ೨೮ ॥

ವಿಷ್ಣುರುವಾಚ

ಪ್ರಜಾನಾಂ ಪಾಲನಂ ದೇವ ಕರಿಷ್ಯಾಮಿ ಯಥೋಚಿತಮ್ ।
ಪ್ರವೃತ್ತ್ಯಾ ಚ ನಿವೃತ್ತ್ಯಾ ಚ ಕರ್ಮಜ್ಞಾನಪ್ರಯೋಜನಾತ್
॥ ೨೯ ॥

ಯದಾ ಯದೈವ ಕಾಲೇನ ಧರ್ಮಗ್ಲಾನಿರ್ಭವಿಷ್ಯತಿ ।
ಧರ್ಮಂ ಸಂಸ್ಥಾಪಯಿಷ್ಯಾಮಿ ಹ್ಯವತಾರೈಸ್ತದಾ ತದಾ
॥ ೩೦ ॥

ಭೋಗಾರ್ಥಿಭ್ಯಸ್ತು ಯಜ್ಞಾದಿಫಲಂ ದಾಸ್ಯಾಮಿ ನಿಶ್ಚಿತಮ್ ।
ಮೋಕ್ಷಾರ್ಥಿಭ್ಯೋ ವಿರಕ್ತೇಭ್ಯೋ ಮುಕ್ತಿಂ ಪಂಚವಿಧಾಂ ತಥಾ
॥ ೩೧ ॥

ಯೇಽಪಿ ಮೋಕ್ಷಂ ನ ವಾಂಛಂತಿ ತಾನ್ಕಥಂ ಪಾಲಯಾಮ್ಯಹಮ್ ।
ಆತ್ಮಾನಂ ಚ ಶ್ರಿಯಂ ಚಾಪಿ ಪಾಲಯಾಮಿ ಕಥಂ ವದ
॥ ೩೨ ॥

ತಸ್ಮಾ ಅಪಿ ಪುಮಾನಾದ್ಯಃ ಶ್ರೀಭಾಗವತಮಾದಿಶತ್ ।
ಉವಾಚ ಚ ಪಠಸ್ಯೇನತ್ತವ ಸರ್ವಾರ್ಥಸಿದ್ಧಯೇ
॥ ೩೩ ॥

ತತೋ ವಿಷ್ಣುಃ ಪ್ರಸನ್ನಾತ್ಮಾ ಪರಮಾರ್ಥಕಪಾಲನೇ ।
ಸಮರ್ಥೋಽಭೂಚ್ಛ್ರಿಯಾ ಮಾಸಿ ಮಾಸಿ ಭಾಗವತಂ ಸ್ಮರನ್
॥ ೩೪ ॥

ಯದಾ ವಿಷ್ಣುಃ ಸ್ವಯಂ ವಕ್ತಾ ಲಕ್ಷ್ಮೀಶ್ಚ ಶ್ರವಣೇ ರತಾ ।
ತದಾ ಭಾಗವತಶ್ರಾವೋ ಮಾಸೇನೈವ ಪುನಃ ಪುನಃ
॥ ೩೫ ॥

ಯದಾ ಲಕ್ಷ್ಮೀಃ ಸ್ವಯಂ ವಕ್ತ್ರೀ ವಿಷ್ಣುಶ್ಚ ಶ್ರವಣೇ ರತಃ ।
ಮಾಸದ್ವಯಂ ರಸಾಸ್ವಾದಸ್ತದಾತೀವ ಸುಶೋಭತೇ
॥ ೩೬ ॥

ಅಧಿಕಾರೇ ಸ್ಥಿತೋ ವಿಷ್ಣುರ್ಲಕ್ಷ್ಮೀರ್ನಿಶ್ಚಿಂತಮಾನಸಾ ।
ತೇನ ಭಾಗವತಾಸ್ವಾದಸ್ತಸ್ಯಾ ಭೂರಿ ಪ್ರಕಾಶತೇ
॥ ೩೭ ॥

ಅಥ ರುದ್ರೋಽಪಿ ತಂ ದೇವಂ ಸಂಹಾರಾಧಿಕೃತಃ ಪುರಾ ।
ಪುಮಾಂಸಂ ಪ್ರಾರ್ಥಯಾಮಾಸ ಸ್ವಸಾಮರ್ಥ್ಯವಿವೃದ್ಧಯೇ
॥ ೩೮ ॥

ರುದ್ರ ಉವಾಚ

ನಿತ್ಯೇ ನೈಮಿತ್ತಿಕೇ ಚೈವ ಸಂಹಾರೇ ಪ್ರಾಕೃತೇ ತಥಾ ।
ಶಕ್ತಯೋ ಮಮ ವಿದ್ಯಂತೇ ದೇವದೇವ ಮಮ ಪ್ರಭೋ
॥ ೩೯ ॥

ಆತ್ಯಂತಿಕೇ ತು ಸಂಹಾರೇ ಮಮ ಶಕ್ತಿರ್ನವಿದ್ಯತೇ ।
ಮಹದ್ದುಃಖಿಂ ಮಮೈತತ್ತು ತೇನ ತ್ವಾಂ ಪ್ರಾರ್ಥಯಾಮ್ಯಹಮ್
॥ ೪೦ ॥

ವಿಷ್ಣುವು ಪರಮಪುರುಷನಲ್ಲಿ ಪ್ರಾರ್ಥನೆಮಾಡುತ್ತಾನೆ – "ದೇವನೇ! ನಿನ್ನ ಆಜ್ಞೆಯಂತೆ ಕರ್ಮ ಮತ್ತು ಜ್ಞಾನಗಳನ್ನು ಸಾಧಿಸುವುದಕ್ಕಾಗಿ ಪ್ರವೃತ್ತಿ ಮತ್ತು ನಿವೃತ್ತಿಗಳ ಮೂಲಕ ಯಥೋಚಿತವಾದ ರೂಪದಿಂದ ಪ್ರಜೆಗಳನ್ನು ಪಾಲಿಸುತ್ತೇನೆ. ॥ ೨೯ ॥ ಕಾಲಕ್ರಮದಂತೆ ಧರ್ಮಕ್ಕೆ ಗ್ಲಾನಿಯುಂಟಾದಾಗಲೆಲ್ಲಾ ಅನೇಕ ಅವತಾರಗಳನ್ನೆತ್ತಿ ಮತ್ತೆ ಧರ್ಮವನ್ನು ಸ್ಥಾಪಿಸುತ್ತೇನೆ. ॥ ೩೦ ॥ ಯಾರು ಭೋಗವನ್ನು ಅಪೇಕ್ಷಿಸುತ್ತಾರೋ ಅವರಿಗೆ ಅವರು ಮಾಡಿದ ಯಜ್ಞಾದಿಕರ್ಮಗಳ ಫಲವನ್ನು ಅವಶ್ಯವಾಗಿ ಕೊಡುವೆನು. ಮೋಕ್ಷವನ್ನು ಬಯಸುವ ವಿರಕ್ತರಿಗೆ ಐದು ಬಗೆಯ ಮುಕ್ತಿಯನ್ನು ಅನುಗ್ರಹಿಸುವೆನು. ॥ ೩೧ ॥ ಆದರೆ ಯಾರು ಆ ಮೋಕ್ಷವನ್ನೂ ಬಯಸುವುದಿಲ್ಲವೋ ಅವರನ್ನು ಹೇಗೆ ಪಾಲಿಸಲಿ? ಇದಲ್ಲದೆ ನಾನು ನನ್ನ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಲಿ? ನನ್ನ ಲಕ್ಷ್ಮಿಯ ರಕ್ಷಣೆಯನ್ನು ಹೇಗೆ ಮಾಡಲಿ? ಇದಕ್ಕೆ ಉಪಾಯ ಯಾವುದು? ಎಂಬುದನ್ನು ತಿಳಿಸುವವನಾಗು." ॥ ೩೨ ॥

ಹೀಗೆ ಪ್ರಾರ್ಥಿಸಿದ ಆ ವಿಷ್ಣುವಿಗೂ ಕೂಡ ಆ ಆದಿಪುರುಷನು ಶ್ರೀಮದ್ಭಾಗವತದ ಸೇವನೆಯನ್ನೇ ಉಪಾಯವನ್ನಾಗಿ ಬೋಧಿಸಿದನು. ಅವನಿಗೆ ಶ್ರೀಮದ್ಭಾಗವತವನ್ನು ಉಪದೇಶಮಾಡಿ "ಇದನ್ನು ಪಠಿಸು. ನಿನ್ನ ಎಲ್ಲ ಇಷ್ಟಾರ್ಥಗಳೂ ಸಿದ್ಧಿಸುತ್ತವೆ" ಎಂದು ತಿಳಿಸಿದನು. ॥ ೩೩ ॥ ಈ ಉಪದೇಶದಿಂದ ವಿಷ್ಣುವಿನ ಮನಸ್ಸು ಪ್ರಸನ್ನವಾಗಿ ಅತನು ಪ್ರತಿಮಾಸದಲ್ಲೂ ಶ್ರೀಮದ್ಭಾಗವತವನ್ನು ಸ್ಮರಿಸುತ್ತಾ ಲಕ್ಷ್ಮೀದೇವಿಯೊಡನೆ ಕೂಡಿ ತನ್ನ ಕಾರ್ಯವನ್ನು ನಡೆಸಲು ಸಮರ್ಥನಾದನು. ॥ ೩೪ ॥ ವಿಷ್ಣುವು ಭಾಗವತದ ಪ್ರವಚನ ಮಾಡುವವನಾಗಿದ್ದು ಲಕ್ಷ್ಮೀದೇವಿಯು ಶ್ರೋತೃವಾಗಿದ್ದಾಗ ಭಾಗವತ ಶ್ರವಣವು ಒಂದು ತಿಂಗಳಿಗೇ ಮುಗಿಯುತ್ತದೆ. ॥ ೩೫ ॥ ಲಕ್ಷ್ಮೀದೇವಿಯೇ ಪ್ರವಚನಮಾಡುವವಳಾಗಿ ವಿಷ್ಣುವು ಅದರ ಶ್ರವಣದಲ್ಲಿ ಆಸಕ್ತನಾದಾಗ, ಎರಡು ತಿಂಗಳು ಪೂರ್ತಿ ಕಥೆಯ ರಸಾಸ್ವಾದನೆಯು ನಡೆದು ತುಂಬಾ ಶೋಭಿಸುತ್ತದೆ. ॥ ೩೬ ॥ ವಿಷ್ಣುವು ಅಧಿಕಾರದಲ್ಲಿರುವುದರಿಂದ ಅತನಿಗೆ ಜಗತ್ತನ್ನು ಪಾಲಿಸುವ ಚಿಂತೆಯೂ ಇರುತ್ತದೆ. ಆದರೆ ಲಕ್ಷ್ಮೀದೇವಿಗೆ ಈ ಚಿಂತೆ ಇಲ್ಲವಾದ್ದರಿಂದ ಆಕೆಯ ಹೃದಯವು ನೆಮ್ಮದಿಯಾಗಿರುತ್ತದೆ. ಆದುದರಿಂದ ಆಕೆಯ ಮುಖದಿಂದ ಬರುವ ಭಾಗವತದ ಕಥೆಯ ಪ್ರವಚನದಲ್ಲಿ ಹೆಚ್ಚು ರಸಾಸ್ವಾದದ ಪ್ರಕಾಶ ಕಂಡುಬರುವುದು. ಇದಾದನಂತರ ಭಗವಂತನಿಂದ ಹಿಂದೆ ಸಂಹಾರಕಾರ್ಯವನ್ನು ಮಾಡಲು ನೇಮಿಸಲ್ಪಟ್ಟ ರುದ್ರದೇವರೂ ಕೂಡ ತಮ್ಮ ಸಾಮರ್ಥ್ಯದ ಅಭಿವೃದ್ಧಿಗಾಗಿ ಆ ಪರಮಪುರುಷನನ್ನೇ ಪ್ರಾರ್ಥನೆಮಾಡಿದರು. ॥ ೩೭–೩೮ ॥

ರುದ್ರದೇವರು ಪ್ರಾರ್ಥನೆ ಮಾಡುತ್ತಾರೆ – "ಓ ಪ್ರಭುವೇ! ನನ್ನಲ್ಲಿ ನಿತ್ಯ-ನೈಮಿತ್ತಿಕ ಮತ್ತು ಪ್ರಾಕೃತವಾದ ಸಂಹಾರಕಾರ್ಯಗಳನ್ನು ಮಾಡುವ ಶಕ್ತಿಗಳಿವೆ. ಆದರೆ ಆತ್ಯಂತಿಕ ಸಂಹಾರವನ್ನು ಮಾಡುವ ಶಕ್ತಿ ಇಲ್ಲವಾಗಿದೆ. ಇದು ಬಹಳ ದುಃಖದ ವಿಷಯವಾಗಿದೆ. ನನ್ನ ಈ ಕೊರತೆಯನ್ನು ನೀಗಿಸಬೇಕೆಂದು ನಿನ್ನನ್ನು ಪ್ರಾರ್ಥಿಸುತ್ತೇನೆ." ॥ ೩೯–೪೦ ॥

ಬೃಹಸ್ಪತಿರುವಾಚ

ಶ್ರೀಮದ್ಭಾಗವತಂ ತಸ್ಮಾ ಅಪಿ ನಾರಾಯಣೋ ದದೌ ।
ಸ ತು ಸಂಸೇವನಾದಸ್ಯ ಜಿಗ್ಯೇ ಚಾಪಿ ತಮೋಗುಣಮ್
॥ ೪೧ ॥

ಕಥಾ ಭಾಗವತೀ ತೇನ ಸೇವಿತಾ ವರ್ಷಮಾತ್ರತಃ ।
ಲಯೇ ತ್ವಾತ್ಯಂತಿಕೇ ತೇನಾವಾಪ ಶಕ್ತಿಂ ಸದಾಶಿವಃ
॥ ೪೨ ॥

ಉದ್ಧವ ಉವಾಚ

ಶ್ರೀಭಾಗವತಮಾಹಾತ್ಮ್ಯ ಇಮಾಮಾಖ್ಯಾಯಿಕಾಂ ಗುರೋಃ ।
ಶ್ರುತ್ವಾಭಾಗವತಂ ಲಬ್ಧ್ವಾಮುಮುದೇऽಹಂ ಪ್ರಣಮ್ಯ ತಮ್
॥ ೪೩ ॥

ತತಸ್ತು ವೈಷ್ಣವೀಂ ರೀತಿಂ ಗೃಹೀತ್ವಾ ಮಾಸಮಾತ್ರತಃ ।
ಶ್ರೀಮದ್ಭಾಗವತಾಸ್ವಾದೋ ಮಯಾ ಸಮ್ಯಙ್ನಿಷೇವಿತಃ
॥ ೪೪ ॥

ತಾವತೈವ ಬಭೂವಾಹಂ ಕೃಷ್ಣಸ್ಯ ದಯಿತಃ ಸಖಾ ।
ಕೃಷ್ಣೇನಾಥ ನಿಯುಕ್ತೋऽಹಂ ವ್ರಜೇ ಸ್ವಪ್ರೇಯಸೀ ಗಣೇ
॥ ೪೫ ॥

ವಿರಹಾರ್ತ್ತಾಸು ಗೋಪೀಷು ಸ್ವಯಂ ನಿತ್ಯವಿಹಾರಿಣಾ ।
ಶ್ರೀಭಾಗವತಸಂದೇಶೋ ಮನ್ಮುಖೇನ ಪ್ರಯೋಜಿತಃ
॥ ೪೬ ॥

ತಂ ಯಥಾಮತಿ ಲಬ್ಧ್ವಾ ತಾ ಆಸನ್ವಿರಹವರ್ಜಿತಾಃ ।
ನಾಜ್ಞಾಸಿಷಂ ರಹಸ್ಯಂ ತಚ್ಚಮತ್ಕಾರಸ್ತು ಲೋಕಿತಃ
॥ ೪೭ ॥

ಸ್ವರ್ವಾಸಂ ಪ್ರಾರ್ಥ್ಯ ಕೃಷ್ಣಂ ಚ ಬ್ರಹ್ಮಾದ್ಯೇಷು ಗತೇಷು ಮೇ ।
ಶ್ರೀಮದ್ಭಾಗವತೇ ಕೃಷ್ಣಸ್ತದ್ರಹಸ್ಯಂ ಸ್ವಯಂ ದದೌ
॥ ೪೮ ॥

ಪುರತೋऽಶ್ವತ್ಥಮೂಲಸ್ಯ ಚಕಾರ ಮಯಿ ತದ್ದೃಢಮ್ ।
ತೇನಾತ್ರ ವ್ರಜವಲ್ಲೀಷು ವಸಾಮಿ ಬದರೀಂ ಗತಃ
॥ ೪೯ ॥

ತಸ್ಯಾನ್ನಾರದಕುಂಡೇತ್ರ ತಿಷ್ಠಾಮಿ ಸ್ವೇಚ್ಛಯಾ ಸದಾ ।
ಕೃಷ್ಣಪ್ರಕಾಶೋ ಭಕ್ತಾನಾಂ ಶ್ರೀಮದ್ಭಾಗವತಾದ್ಭವೇತ್
॥ ೫೦ ॥

ಬೃಹಸ್ಪತ್ಯಾಚಾರ್ಯರು ಹೇಳುತ್ತಾರೆ – ನಾರಾಯಣನು ಆ ರುದ್ರದೇವರಿಗೂ ಕೂಡ ಅವರ ಇಷ್ಟಾರ್ಥಸಿದ್ಧಿಗಾಗಿ ಶ್ರೀಮದ್ಭಾಗವತವನ್ನೇ ಉಪದೇಶಮಾಡಿದನು. ಅದನ್ನು ಸೇವಿಸಿದ್ದರಿಂದ ರುದ್ರದೇವರು ತಮೋಗುಣವನ್ನು ಜಯಿಸಿಬಿಟ್ಟರು. ಅವರು ಒಂದು ವರ್ಷದಲ್ಲಿ ಒಂದು ಪಾರಾಯಣ ಎಂಬ ಕ್ರಮದಲ್ಲಿ ಭಾಗವತದ ಕಥೆಯನ್ನು ಸೇವಿಸಿದರು. ಇದರಿಂದ ಅವರು ತಮೋಗುಣದ ಮೇಲೆ ಜಯವನ್ನು ಗಳಿಸಿ ಆತ್ಯಂತಿಕಸಂಹಾರದ (ಮೋಕ್ಷದ) ಶಕ್ತಿಯನ್ನೂ ಪಡೆದು ಕೊಂಡರು.'' ॥ ೪೧-೪೨ ॥

ಉದ್ಧವನು ಹೇಳುತ್ತಾನೆ – ''ಶ್ರೀಮದ್ಭಾಗವತದ ಮಾಹಾತ್ಮ್ಯಕ್ಕೆ ಸಂಬಂಧಪಟ್ಟ ಈ ಆಖ್ಯಾಯಿಕೆಯನ್ನು ನಾನು ನನ್ನ ಗುರು ಬೃಹಸ್ಪತ್ಯಾಚಾರ್ಯರಿಂದ ಕೇಳಿದೆನು. ಅವರಿಂದಲೇ ಶ್ರೀಮದ್ಭಾಗವತದ ಉಪದೇಶವನ್ನು ಪಡೆದು ಅವರ ಅಡಿದಾವರೆಗಳಿಗೆ ನಮಸ್ಕಾರ ಮಾಡಿ ನಾನೂ ಪರಮಾನಂದಭರಿತನಾದೆನು. ॥ ೪೩ ॥ ಆನಂತರ ಭಗವಂತನಾದ ಮಹಾವಿಷ್ಣುವಿನಂತೆ ನಾನೂ ಒಂದು ತಿಂಗಳಿನ ವರೆಗೆ ಶ್ರೀಮದ್ಭಾಗವತದ ಕಥಾಮೃತವನ್ನು ಸವಿದೆನು. ॥ ೪೪ ॥ ಇಷ್ಟರಿಂದಲೇ ನನಗೆ ಶ್ರೀಕೃಷ್ಣಪರಮಾತ್ಮನ ಪ್ರಿಯಮಿತ್ರನಾಗುವ ಭಾಗ್ಯ ದೊರೆಯಿತು. ಆನಂತರ ಭಗವಂತನು ನನ್ನನ್ನು ವ್ರಜದಲ್ಲಿ ತನ್ನ ಪ್ರಿಯತಮೆಯರಾದ ಗೋಪಿಯರ ಬಳಿಗೆ ಸಂದೇಶ ವಾಹಕನನ್ನಾಗಿ ನೇಮಿಸಿದನು. ॥ ೪೫ ॥ ಭಗವಂತನು ತನ್ನ ಲೀಲಾ ಪರಿಕರಗಳೊಂದಿಗೆ ಸದಾಕಾಲ ವಿಹರಿಸುತ್ತಿರುವುದರಿಂದ ಗೋಪಿಯರಿಗೆ ಶ್ರೀಕೃಷ್ಣನಿಂದ ಎಂದಿಗೂ ಅಗಲಿಕೆಯುಂಟಾಗುವುದಿಲ್ಲ, ಆದರೂ ಭ್ರಮೆಯಿಂದ ಶ್ರೀಕೃಷ್ಣನಿಂದ ತಮಗೆ ಅಗಲಿಕೆಯುಂಟಾಯಿತೆಂದು ತಿಳಿದು ವಿರಹವೇದನೆಯನ್ನು ಗೋಪಿಯರು ಅನುಭವಿಸುತ್ತಿದ್ದಾಗ ಭಗವಂತನು ಅವರನ್ನು ಕುರಿತು ಭಾಗವತದ ಸಂದೇಶವನ್ನು ನನ್ನ ಮೂಲಕ ಕಳುಹಿಸಿಕೊಟ್ಟನು. ॥ ೪೬ ॥ ಆ ಸಂದೇಶವನ್ನು ನನ್ನಿಂದ ಯಥಾಮತಿಯಾಗಿ ಗ್ರಹಿಸಿ, ಗೋಪಿಯರು ಒಡನೆಯೇ ವಿರಹವೇದನೆಯಿಂದ ಬಿಡುಗಡೆಹೊಂದಿದರು. ನಾನು ಭಾಗವತದ ರಹಸ್ಯವನ್ನು ತಿಳಿಯಲಾಗದಿದ್ದರೂ ಅದರ ಚಮತ್ಕಾರವನ್ನು ಕಣ್ಣಿನಿಂದಲೇ ಕಂಡೆನು. ॥ ೪೭ ॥ ಇದಾದ ಮೇಲೆ ಬಹಳ ಸಮಯದನಂತರ ಬ್ರಹ್ಮಾದಿದೇವತೆಗಳು ಭಗವಂತನ ಬಳಿಗೆ ಬಂದು ಆತನನ್ನು ಪರಮಪದಕ್ಕೆ ದಯಮಾಡಿಸಬೇಕೆಂದು ಪ್ರಾರ್ಥನೆಮಾಡಿ ಹೋದರು. ಆಗ ಪ್ರಭುವು ಅಶ್ವತ್ಥವೃಕ್ಷದ ಬುಡದಲ್ಲಿ ನಿಂತಿದ್ದ ನನಗೆ ಶ್ರೀಮದ್ಭಾಗವತ ವಿಷಯವಾದ ಆ ರಹಸ್ಯವನ್ನು ತಾನೇ ಉಪದೇಶಮಾಡಿ ನನ್ನ ಬುದ್ಧಿಯಲ್ಲಿ ಅದರ ದೃಢವಾದ ನಿಶ್ಚಯವು ಉಂಟಾಗುವಂತೆ ಮಾಡಿದನು. ಅದರ ಪ್ರಭಾವದಿಂದಲೇ ನಾನು ಬದರಿಕಾಶ್ರಮದಲ್ಲಿ ವಾಸವಾಗಿದ್ದರೂ ಇಲ್ಲಿ ವ್ರಜದ ಬಳ್ಳಿಗಳಲ್ಲಿಯೂ ವಾಸಮಾಡಲು ಸಾಧ್ಯವಾಗಿದೆ. ॥ ೪೮-೪೯ ॥ ಅದರ ಬಲದಿಂದಲೇ ಇಲ್ಲಿ ನಾರದಕುಂಡದಲ್ಲಿ ಸದಾ ಯಥೇಚ್ಛವಾಗಿ ಬೆಳಗುತ್ತಿರುತ್ತೇನೆ. ಭಗವಂತನ ಭಕ್ತರಿಗೆ ಶ್ರೀಮದ್ಭಾಗವತವನ್ನು ಸೇವಿಸುವುದರಿಂದ ಶ್ರೀಕೃಷ್ಣತತ್ತ್ವದ ಪ್ರಕಾಶವುಂಟಾಗುವುದು. ॥ ೫೦ ॥

ತದೇಷಾಮಪಿ ಕಾರ್ಯಾರ್ಥಂ ಶ್ರೀಮದ್ಭಾಗವತಂ ತ್ವಹಮ್ ।
ಪ್ರವಕ್ಷ್ಯಾಮಿ ಸಹಾಯೋಽತ್ರ ತ್ವಯೈವಾನುಷ್ಠಿತೋ ಭವೇತ್
॥ ೫೧ ॥

ಸೂತ ಉವಾಚ

ವಿಷ್ಣುರಾತಸ್ತು ಶ್ರುತ್ವಾ ತದುದ್ಧವಂ ಪ್ರಣತೋಽಬ್ರವೀತ್ ।

ಪರೀಕ್ಷಿದುವಾಚ

ಹರಿದಾಸ ತ್ವಯಾ ಕಾರ್ಯಂ ಶ್ರೀಭಾಗವತಕೀರ್ತನಮ್
॥ ೫೨ ॥

ಆಜ್ಞಾಪ್ಯೋಽಹಂ ಯಥಾ ಕಾರ್ಯಃ
ಸಹಾಯೋಽತ್ರ ಮಯಾ ತಥಾ ।

ಸೂತ ಉವಾಚ

ಶ್ರುತ್ವೈತದುದ್ಧವೋ ವಾಕ್ಯಮುವಾಚ ಪ್ರೀತಮಾನಸಃ
॥ ೫೩ ॥

ಉದ್ಧವ ಉವಾಚ

ಶ್ರೀಕೃಷ್ಣೇನ ಪರಿತ್ಯಕ್ತೇ ಭೂತಲೇ ಬಲವಾನ್ಕಲಿಃ ।
ಕರಿಷ್ಯತಿ ಪರಂ ವಿಘ್ನಂ ಸತ್ಕಾರ್ಯೇ ಸಮುಪಸ್ಥಿತೇ
॥ ೫೪ ॥

ತಸ್ಮಾದ್ದಿಗ್ವಿಜಯಂ ಯಾಹಿ ಕಲಿನಿಗ್ರಹಮಾಚರ ।
ಅಹಂ ತು ಮಾಸಮಾತ್ರೇಣ ವೈಷ್ಣವೀಂ ರೀತಿಮಾಸ್ಥಿತಃ
॥ ೫೫ ॥

ಶ್ರೀಮದ್ಭಾಗವತಾಸ್ವಾದಂ ಪ್ರಚಾರ್ಯ ತ್ವತ್ಸಹಾಯತಃ ।
ಏತಾನ್ ಸಂಪ್ರಾಪಯಿಷ್ಯಾಮಿ ನಿತ್ಯಧಾಮ್ನಿ ಮಧುದ್ವಿಷಃ
॥ ೫೬ ॥

ಸೂತ ಉವಾಚ

ಶ್ರುತ್ವೈವಂ ತದ್ಭಕ್ತೋ ರಾಜಾ ಮುದಿತಶ್ಚಿಂತಯಾಽತುರಃ ।
ತದಾ ವಿಜ್ಞಾಪಯಾಮಾಸ ಸ್ವಾಭಿಪ್ರಾಯಂ ತಮುದ್ಧವಮ್
॥ ೫೭ ॥

ಪರೀಕ್ಷಿದುವಾಚ

ಕಲಿಂ ತು ನಿಗ್ರಹಿಷ್ಯಾಮಿ ತಾತ ತೇ ವಚಸಿ ಸ್ಥಿತಃ ।
ಶ್ರೀಭಾಗವತಸಂಪ್ರಾಪ್ತಿಃ ಕಥಂ ಮಮ ಭವಿಷ್ಯತಿ
॥ ೫೮ ॥

ಅಹಂ ತು ಸಮನುಗ್ರಾಹ್ಯಸ್ತವ ಪಾದತಲೇ ಶ್ರಿತಃ ।

ಸೂತ ಉವಾಚ

ಶ್ರುತ್ವೈತದ್ವಚನಂ ಭೂಯೋಽಪ್ಯುದ್ಧವಸ್ತಮುವಾಚ ಹ
॥ ೫೯ ॥

ಉದ್ಧವ ಉವಾಚ

ರಾಜನ್ಶ್ಚಿಂತಾ ತು ತೇ ಕಾಪಿ ನೈವ ಕಾರ್ಯಾ ಕಥಂಚನ ।
ತವೈವ ಭಗವಚ್ಚಾಸ್ತ್ರೇ ಯತೋ ಮುಖ್ಯಾಧಿಕಾರಿತಾ
॥ ೬೦ ॥

ಆದುದರಿಂದ ನಾನು ಇಲ್ಲಿ ಇರುವ ಈ ಎಲ್ಲ ಭಕ್ತಜನರ ಕಾರ್ಯಸಿದ್ಧಿಗೋಸ್ಕರ ಶ್ರೀಮದ್ಭಾಗವತವನ್ನು ಪಾರಾಯಣಮಾಡುವೆನು. ಆದರೆ ಈ ಕೆಲಸದಲ್ಲಿ ನೀನೂ ನನಗೆ ಸಹಾಯ ಮಾಡಬೇಕು.'' ॥ ೫೧ ॥

ಸೂತಪುರಾಣಿಕರು ಹೇಳುತ್ತಾರೆ – ಇದನ್ನು ಕೇಳಿ ಪರೀಕ್ಷಿದ್ರಾಜನು ಉದ್ಧವನಿಗೆ ಪ್ರಣಾಮಮಾಡಿ, ಹೀಗೆ ವಿಜ್ಞಾಪಿಸಿದನು.

ಪರೀಕ್ಷಿತನು ಹೇಳಿದನು – ''ಓ ಹರಿದಾಸಶಿಖಾಮಣಿಯೇ! ನೀವು ಇಲ್ಲಿ ನಿಶ್ಚಿಂತರಾಗಿ ಶ್ರೀಮದ್ಭಾಗವತದ ಸಂಕೀರ್ತನೆಯನ್ನು ಮಾಡಿರಿ. ॥ ೫೨ ॥ ನಾನು ನಿಮಗೆ ಏನು ಸಹಾಯ ಮಾಡಬೇಕು? ಎಂಬುದನ್ನು ಆಜ್ಞಾಪಿಸಿರಿ.''

ಸೂತಪುರಾಣಿಕರು ಹೇಳುತ್ತಾರೆ – ಇದನ್ನು ಕೇಳಿ ಸಂತೋಷಗೊಂಡ ಉದ್ಧವನು ಪರೀಕ್ಷಿತ್ತಿಗೆ ಹೀಗೆಂದನು – ॥ ೫೩ ॥

ಉದ್ಧವನು ಹೇಳುತ್ತಾರೆ – ''ರಾಜೇಂದ್ರನೇ! ಶ್ರೀಕೃಷ್ಣನು ಈ ಭೂಮಿಯನ್ನು ತ್ಯಜಿಸಿಹೋದನಂತೆಯೇ ಮಹಾಬಲಶಾಲಿಯಾದ ಕಲಿಪುರುಷನು ಇಲ್ಲಿ ತನ್ನ ಪ್ರಭುತ್ವ, ಪರಾಕ್ರಮಗಳನ್ನು ಹರಡುತ್ತಿದ್ದಾನೆ. ನಾನು ಶ್ರೀಮದ್ಭಾಗವತ ಪಾರಾಯಣದ ಶುಭಕಾರ್ಯವನ್ನು ಆಚರಿಸತೊಡಗಿದಾಗ ಅವನು ಇದಕ್ಕೆ ಅವಶ್ಯವಾಗಿ ದೊಡ್ಡ ವಿಘ್ನವನ್ನುಂಟುಮಾಡುವನು. ॥ ೫೪ ॥ ಆದುದರಿಂದ ನೀನು ದಿಗ್ವಿಜಯಕ್ಕೆ ಹೊರಟು ಕಲಿಯನ್ನು ಗೆದ್ದು ವಶಪಡಿಸಿಕೋ. ಇತ್ತಕಡೆ ನಾನೂ ಕೂಡ ನಿನ್ನ ಸಹಾಯದಿಂದ ವೈಷ್ಣವೀರೀತಿಯನ್ನು ಹಿಡಿದು ಒಂದು ತಿಂಗಳ ಕಾಲ ಇಲ್ಲಿ ಶ್ರೀಮದ್ಭಾಗವತಕಥೆಯ ರಸದೂಟವನ್ನು ಮಾಡಿಸುವೆನು. ಈ ಕಥಾರಸವನ್ನು ಹರಿಯಿಸಿ ಈ ಶ್ರೋತೃಗಳೆಲ್ಲರನ್ನೂ ಭಗವಾನ್ ಮಧುಸೂದನನ ನಿತ್ಯವಾದ ಗೋಲೋಕಧಾಮಕ್ಕೆ ಒಯ್ಯುವೆನು.'' ॥ ೫೫-೫೬ ॥

ಸೂತಪುರಾಣಿಕರು ಹೇಳುತ್ತಾರೆ – ''ಈ ಮಾತನ್ನು ಕೇಳಿ ಪರೀಕ್ಷಿದ್ರಾಜನಿಗೆ ಸಂತೋಷವೇನೋ ಉಂಟಾಯಿತು. ಆದರೆ ತಾನು ಕಲಿಯನ್ನು ನಿಗ್ರಹಿಸುವ ಕಾರ್ಯಕ್ಕೆ ಹೋಗಿ ಶ್ರೀಮದ್ಭಾಗವತದ ಕಥೆಯ ರಸದೌತಣವನ್ನು ತಪ್ಪಿಸಿಕೊಳ್ಳಬೇಕಾಗುವುದಲ್ಲಾ! ಎಂದು ಕಳವಳಗೊಂಡು ಆತನು ಮಹಾತ್ಮನಾದ ಉದ್ಧವನಿಗೆ ತನ್ನ ಅಭಿಪ್ರಾಯವನ್ನು ವಿಜ್ಞಾಪಿಸಿದನು. ॥ ೫೭ ॥

ಪರೀಕ್ಷಿತರಾಜನು ಹೇಳಿದನು – ''ಮಹಾತ್ಮರೇ! ನಿಮ್ಮ ಆಜ್ಞೆಯಂತೆ ನಾನು ಕಲಿಯನ್ನು ಅವಶ್ಯವಾಗಿ ಗೆದ್ದು ವಶಪಡಿಸಿಕೊಳ್ಳುತ್ತೇನೆ. ಆದರೆ ನನಗೆ ಶ್ರೀಮದ್ಭಾಗವತವನ್ನು ಸವಿಯುವ ಭಾಗ್ಯ ಹೇಗೆ ದೊರೆಯುವುದು? ॥ ೫೮ ॥ ಆದ್ದರಿಂದ ನಾನು ನಿನ್ನ ಅಡಿದಾವರೆಗಳಲ್ಲಿ ಶರಣುಬಂದಿದ್ದೇನೆ, ಅನುಗ್ರಹಮಾಡು.''

ಸೂತಪುರಾಣಿಕರು ಹೇಳುತ್ತಾರೆ – ಈ ವಿಜ್ಞಾಪನೆಯನ್ನು ಕೇಳಿ ಉದ್ಧವನು ಅವನಲ್ಲಿ ಹೀಗೆಂದನು – ॥ ೫೯ ॥

ಉದ್ಧವನು ಹೇಳುತ್ತಾನೆ – ''ರಾಜೇಂದ್ರ! ನೀನು ಯಾವುದಕ್ಕೂ ಚಿಂತೆಪಡಬೇಡ. ಏಕೆಂದರೆ – ಭಗವಚ್ಛಾಸ್ತ್ರ ಶ್ರೀಮದ್ಭಾಗವತವನ್ನು ಗ್ರಹಿಸುವುದಕ್ಕೆ ನೀನೇ ಮುಖ್ಯನಾದ ಅಧಿಕಾರಿಯು. ಪರಮೋತ್ತಮ ಪಾತ್ರನು. ॥ ೬೦ ॥ ಲೋಕದಲ್ಲಿ ಮನುಷ್ಯರು ಬಗೆ-ಬಗೆಯ ಕರ್ಮ

ಏತಾವತ್ಕಾಲಪರ್ಯಂತಂ ಪ್ರಾಯೋ ಭಾಗವತಶ್ರುತೇಃ।
ವಾರ್ತಾಮಪಿ ನ ಜಾನಂತಿ ಮನುಷ್ಯಾಃ ಕರ್ಮತತ್ಪರಾಃ
॥ ೬೧ ॥

ತ್ವತ್ಪ್ರಸಾದೇನ ಬಹವೋ ಮನುಷ್ಯಾ ಭಾರತಾಜಿರೇ।
ಶ್ರೀಮದ್ಭಾಗವತಪ್ರಾಪ್ತೌ ಸುಖಂ ಪ್ರಾಪ್ಸ್ಯಂತಿ ಶಾಶ್ವತಮ್
॥ ೬೨ ॥

ನಂದನಂದನರೂಪಸ್ತು ಶ್ರೀಶುಕೋ ಭಗವಾನೃಷಿಃ।
ಶ್ರೀಮದ್ಭಾಗವತಂ ತುಭ್ಯಂ ಶ್ರಾವಯಿಷ್ಯತ್ಯಸಂಶಯಮ್
॥ ೬೩ ॥

ತೇನ ಪ್ರಾಪ್ಸ್ಯಸಿ ರಾಜನ್ಸ್ತ್ವಂ ನಿತ್ಯಂ ಧಾಮ ವ್ರಜೇಶಿತುಃ।
ಶ್ರೀಭಾಗವತಸಂಚಾರಸ್ತತೋ ಭುವಿ ಭವಿಷ್ಯತಿ
॥ ೬೪ ॥

ತಸ್ಮಾತ್ತ್ವಂ ಗಚ್ಛ ರಾಜೇಂದ್ರ ಕಲಿನಿಗ್ರಹಮಾಚರ।

ಸೂತ ಉವಾಚ

ಇತ್ಯುಕ್ತಸ್ತಂ ಪರಿಕ್ರಮ್ಯ ಗತೋ ರಾಜಾ ದಿಶಾಂ ಜಯೇ
॥ ೬೫ ॥

ವಜ್ರಸ್ತು ನಿಜರಾಜ್ಯೇಶಂ ಪ್ರತಿಬಾಹುಂ ವಿಧಾಯ ಚ।
ತತ್ರೈವ ಮಾತೃಭಿಃ ಸಾಕಂ ತಸ್ಥೌ ಭಾಗವತಾಶಯಾ
॥ ೬೬ ॥

ಅಥ ವೃಂದಾವನೇ ಮಾಸಂ ಗೋವರ್ಧನಸಮೀಪತಃ।
ಶ್ರೀಮದ್ಭಾಗವತಾಸ್ವಾದಸೂದ್ದವೇನ ಪ್ರವರ್ತಿತಃ
॥ ೬೭ ॥

ತಸ್ಮಿನ್ನಾಸ್ವಾದ್ಯಮಾನೇ ತು ಸಚ್ಚಿದಾನಂದರೂಪಿಣೇ।
ಪ್ರಚಕಾಶೇ ಹರೇರ್ಲೀಲಾ ಸರ್ವತಃ ಕೃಷ್ಣ ಏವ ಚ
॥ ೬೮ ॥

ಆತ್ಮಾನಂ ಚ ತದಂತಃಸ್ಥಂ ಸರ್ವೇಪಿ ದದೃಶುಸ್ತದಾ।
ವಜ್ರಸ್ತು ದಕ್ಷಿಣೇ ದೃಷ್ಟ್ವಾ ಕೃಷ್ಣಪಾದಸರೋರುಹೇ
॥ ೬೯ ॥

ಸ್ವಾತ್ಮಾನಂ ಕೃಷ್ಣವೈಧುರ್ಯಾನ್ಮುಕ್ತಸದ್ಭವ್ಯಶೋಭತ।
ತಾಶ್ಚ ತನ್ಮಾತರಃ ಕೃಷ್ಣೇ ರಾಸರಾತ್ರಿಪ್ರಕಾಶಿನಿ
॥ ೭೦ ॥

ಚಂದ್ರೇ ಕಲಾಪ್ರಭಾರೂಪಮಾತ್ಮಾನಂ ವೀಕ್ಷ್ಯ ವಿಸ್ಮಿತಾಃ।
ಸ್ವಪ್ರೇಷ್ಠವಿರಹವ್ಯಾಧಿವಿಮುಕ್ತಾಃ ಸ್ವಪದಂ ಯಯುಃ
॥ ೭೧ ॥

ಯೇಽನ್ಯೇ ಚ ತತ್ರ ತೇ ಸರ್ವೇ ನಿತ್ಯಲೀಲಾಂತರಂ ಗತಾಃ।
ವ್ಯಾವಹಾರಿಕಲೋಕೇಭ್ಯಃ ಸದ್ಯೋಽದರ್ಶನಮಾಗತಾಃ
॥ ೭೨ ॥

ಗಳಲ್ಲಿ ಆಸಕ್ತರಾಗಿ ಭಾಗವತಶ್ರವಣದ ಮಾತನ್ನೂ ಆರಿತಿಲ್ಲ. ॥ ೬೧ ॥ ಆದರೆ ನಿನ್ನ ಕಾರಣದಿಂದ, ನಿನ್ನ ಅನುಗ್ರಹದಿಂದ, ಈ ಭಾರತ ವರ್ಷದ ಬಹುಮಂದಿ ಜನರು ಶ್ರೀಮದ್ಭಾಗವತದ ಭಾಗ್ಯವನ್ನು ಪಡೆದು ಅದರಿಂದ ಶಾಶ್ವತವಾದ ಸುಖವನ್ನು ಅನುಭವಿಸುವರು. ॥ ೬೨ ॥ ಸಾಕ್ಷಾತ್ ಶ್ರೀಕೃಷ್ಣರೂಪಿಗಳಾದ ಭಗವಾನ್ ಶುಕಮಹರ್ಷಿಗಳೇ ನಿನಗೆ ಶ್ರೀಮದ್ಭಾಗವತ ಕಥೆಯನ್ನು ಉಪದೇಶಿಸುವರು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲರು. ॥ ೬೩. ॥ ರಾಜನೇ! ಈ ಕಥೆಯ ಶ್ರವಣದಿಂದ ನೀನು ವ್ರಜೇಶ್ವರನಾದ ಶ್ರೀಕೃಷ್ಣನ ನಿತ್ಯಧಾಮವನ್ನು ಹೊಂದುವೆ. ಅನಂತರ ಈ ಭೂಮಿಯಲ್ಲೆಲ್ಲಾ ಶ್ರೀಮದ್ಭಾಗವತದ ಕಥೆಯ ಪ್ರಚಾರವಾಗುವುದು.॥ ೬೪ ॥ ರಾಜೇಂದ್ರನೇ! ಆದುದರಿಂದ ನೀನು ಹೋಗಿ ಕಲಿಯನ್ನು ನಿಗ್ರಹಿಸು.''

ಸೂತಪುರಾಣಿಕರು ಹೇಳುತ್ತಾರೆ – ''ಮಹಾತ್ಮನಾದ ಉದ್ಧವನ ಈ ಮಾತನ್ನು ಕೇಳಿ ಪರೀಕ್ಷಿದ್ರಾಜನು ಆತನಿಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ದಿಗ್ವಿಜಯಕ್ಕಾಗಿ ಹೊರಟನು. ॥ ೬೫ ॥ ಇತ್ತಕಡೆ ವಜ್ರನಾಭನೂ ಕೂಡ ತನ್ನ ಪುತ್ರನಾದ ಪ್ರತಿಬಾಹುವಿಗೆ ತನ್ನ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ತನ್ನ ತಾಯಂದಿರೊಡನೆ ಉದ್ಧವನು ಪ್ರಕಟಗೊಂಡ ನಿರ್ದಿಷ್ಟಸ್ಥಾನಕ್ಕೆ ಹೋಗಿ, ಶ್ರೀಮದ್ಭಾಗವತದ ಕಥೆಯನ್ನು ಸೇವಿಸುವ ಇಚ್ಛೆಯಿಂದ ಅಲ್ಲಿಯೇ ಇರತೊಡಗಿದನು. ॥ ೬೬ ॥ ಅನಂತರ ಮಹಾತ್ಮನಾದ ಉದ್ಧವನು ವೃಂದಾವನದಲ್ಲಿ ಗೋವರ್ಧನಪರ್ವತದ ಬಳಿ ಒಂದು ತಿಂಗಳ ಕಾಲ ಶ್ರೀಮದ್ಭಾಗವತದ ಕಥಾಸುಧೆಯನ್ನು ಹರಿಯಿಸಿದನು. ॥ ೬೭ ॥ ಆ ರಸವನ್ನು ಸವಿಯುತ್ತಿರುವಾಗ ಭಕ್ತರಿಗೆ ಎಲ್ಲೆಡೆಯಲ್ಲಿಯೂ ಸಚ್ಚಿದಾನಂದಮಯಿಯಾದ ಶ್ರೀಹರಿಯ ಲೀಲೆಯು ಕಣ್ಣುಗಳಿಗೆ ಹಬ್ಬವಾಗಿ ಪ್ರಕಾಶಿಸತೊಡಗಿತು. ಎಲ್ಲೆಲ್ಲಿಯೂ ಶ್ರೀಕೃಷ್ಣನೇ ಕಾಣತೊಡಗಿದನು. ॥ ೬೮ ॥ ಆಗ ಎಲ್ಲರೂ ತಾವು ಶ್ರೀಕೃಷ್ಣನ ದೇಹದೊಳಗೇ ಇರುವುದನ್ನು ಕಂಡರು. ವಜ್ರನಾಭನು ತಾನು ಶ್ರೀಕೃಷ್ಣನ ಬಲಭಾಗದ ಅಡಿದಾವರೆಯಲ್ಲಿರುವುದನ್ನು ಕಂಡು ಆ ಭಗವಂತನ ಅಗಲಿಕೆಯಿಂದ ಉಂಟಾಗಿದ್ದ ದುಃಖವನ್ನು ನೀಗಿ ಪ್ರಸನ್ನತೆಯಿಂದ ಕಂಗೊಳಿಸಿದನು. ವಜ್ರನಾಭನ ರೋಹಿಣಿಯೇ ಮುಂತಾದ ತಾಯಂದಿರೂ ಕೂಡ ರಾಸಕ್ರೀಡೆಯ ರಾತ್ರಿಯಲ್ಲಿ ಪ್ರಕಾಶಿಸುತ್ತಿದ್ದ ಶ್ರೀಕೃಷ್ಣನೆಂಬ ಚಂದ್ರನ ದಿವ್ಯಮಂಗಳವಿಗ್ರಹದಲ್ಲಿ ತಾವೂ ಕಲೆಯ ಮತ್ತು ಪ್ರಭೆಯ ರೂಪದಲ್ಲಿರುವುದನ್ನು ಕಂಡು ಆನಂದ-ಆಶ್ಚರ್ಯಗಳಿಂದ ಬೆರಗಾದರು. ತಮ್ಮ ಪ್ರಾಣಪ್ರಿಯನಾದ ಭಗವಂತನ ವಿರಹವೇದನೆಯಿಂದ ಬಿಡುಗಡೆಹೊಂದಿ ಆ ಪರಮಾತ್ಮನ ಧಾಮವನ್ನು ಪ್ರವೇಶಿಸಿಬಿಟ್ಟರು. ॥ ೬೯-೭೧ ॥ ಇವರಲ್ಲದೆ ಅಲ್ಲಿದ್ದ ಇತರ ಶ್ರೋತೃಗಳೂ ಕೂಡ ಭಗವಂತನ ನಿತ್ಯವಾದ ಆಂತರಂಗಲೀಲೆಯಲ್ಲಿ ಸಮ್ಮಿಳಿತರಾಗಿ ಈ ಸ್ಥೂಲವಾದ ವ್ಯಾವಹಾರಿಕ ಜಗತ್ತಿನಿಂದ ಒಡನೆಯೇ ಕಣ್ಮರೆಯಾಗಿ ಬಿಟ್ಟರು. ॥ ೭೨ ॥ ಆ ಪ್ರೇಮೀಭಕ್ತರು ಗೋವರ್ಧನ ಪರ್ವತದ ಲತಾಗೃಹಗಳಲ್ಲಿಯೂ, ಪೊದೆಗಳಲ್ಲಿಯೂ, ವೃಂದಾವನದ ಕಾಮ್ಯವನವೇ ಮುಂತಾದ ಉದ್ಯಾನವನಗಳಲ್ಲಿಯೂ, ದಿವ್ಯವಾದ ಗೋವುಗಳಿಂದ ಕೂಡಿದ

ಗೋವರ್ಧನನಿಕುಂಜೇಷು ಗೋಷು ವೃಂದಾವನಾದಿಷು ।
ನಿತ್ಯಂ ಕೃಷ್ಣೇನ ಮೋದಂತೇ ದೃಶ್ಯಂತೇ ಪ್ರೇಮತತ್ಪರೈಃ
॥ ೭೩ ॥

ಶ್ರೀಕೃಷ್ಣನೊಡನೆ ಸಂಚರಿಸುತ್ತಾ ಸದಾ ಅನಂತವಾದ ಆನಂದವನ್ನು ಅನುಭವಿಸುತ್ತಿರುತ್ತಾರೆ. ಶ್ರೀಕೃಷ್ಣನ ಪ್ರೇಮದಲ್ಲಿ ಮುಳುಗಿರುವ ಭಾವುಕಭಕ್ತರಿಗೆ ಇಂದಿಗೂ ಇವರ ದರ್ಶನವೂ ಆಗುತ್ತಿರುವದು. ॥ ೭೩ ॥

ಸೂತ ಉವಾಚ

ಯ ಏತಾಂ ಭಗವತ್ಪ್ರಾಪ್ತಿಂ ಶೃಣುಯಾಚ್ಚಾಪಿ ಕೀರ್ತಯೇತ್ ।
ತಸ್ಯ ವೈ ಭಗವತ್ಪ್ರಾಪ್ತಿರ್ದುಃಖಹಾನಿಶ್ಚ ಜಾಯತೇ
॥ ೭೪ ॥

ಸೂತಪುರಾಣಿಕರು ಹೇಳುತ್ತಾರೆ – ಭಕ್ತರಾದ ವಜ್ರನಾಭನೇ ಮುಂತಾದವರು ಭಗವಂತನನ್ನು ಹೊಂದಿದ ಈ ಕಥೆಯನ್ನು ಶ್ರವಣ ಮಾಡುವವರೂ, ಸಂಕೀರ್ತನೆ ಮಾಡುವವರೂ ಶ್ರೀಭಗವಂತನ ಸಮಾಗಮವನ್ನು ಹೊಂದುವರು. ಎಂದಿಗೂ ಯಾವ ದುಃಖವೂ ಇಲ್ಲದೆ ಪರಮಸೌಖ್ಯವನ್ನು ಭಗವಂತನೊಡನೆ ಸೇರಿ ಅನುಭವಿಸುವರು.'' ॥ ೭೪ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ದ್ವಿತೀಯೇ ವೈಷ್ಣವಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಪರೀಕ್ಷಿದುದ್ಧವ ಸಂವಾದೇ ತೃತೀಯೋऽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಶ್ರೀಮದ್ಭಾಗವತದ ಸ್ವರೂಪ, ಪ್ರಮಾಣ, ಶ್ರೋತೃಗಳ ಮತ್ತು ಪ್ರವಚನಕಾರರ ಲಕ್ಷಣ, ಶ್ರವಣವಿಧಿ ಮತ್ತು ಮಾಹಾತ್ಮ್ಯ

ಋಷಯ ಊಚುಃ

ಸಾಧು ಸೂತ ಚಿರಂ ಜೀವ ಚಿರಮೇವಂ ಪ್ರಶಾಧಿ ನಃ ।
ಶ್ರೀಭಾಗವತಮಾಹಾತ್ಮ್ಯಮಪೂರ್ವಂ ತ್ವನ್ಮುಖಾಚ್ಛ್ರುತಮ್
॥ ೧ ॥

ತತ್ಸ್ವರೂಪಂ ಪ್ರಮಾಣಂ ಚ ವಿಧಿಂ ಚ ಶ್ರವಣೇ ವದ ।
ತದ್ಭಕ್ತುರ್ಲಕ್ಷಣಂ ಸೂತ ಶ್ರೋತುಶ್ಚಾಪಿ ವದಾಧುನಾ
॥ ೨ ॥

ಋಷಿಗಳು ಸೂತಪುರಾಣಿಕರಲ್ಲಿ ಪ್ರಾರ್ಥಿಸುತ್ತಾರೆ – ''ಸಾಧು-ಸಾಧು ಸೂತಪುರಾಣಿಕರೇ! ನೀವು ಚಿರಂಜೀವಿ ಯಾಗುವಿರಿ. ಹೀಗೆಯೇ ನಮಗೆ ಉಪದೇಶಾಮೃತವನ್ನು ನೀಡುತ್ತಾ ಇರಿ. ಇಂದು ನಿಮ್ಮಿಂದ ನಾವು ಅಪೂರ್ವವಾದ ಶ್ರೀಮದ್ಭಾಗವತ ಮಾಹಾತ್ಮ್ಯವನ್ನು ಕೇಳಿದೆವು. ॥ ೧ ॥ ಈಗ ನಮಗೆ ಶ್ರೀಮದ್ಭಾಗವತದ ಪ್ರಮಾಣವೇನು ? ಶ್ರವಣದ ವಿಧಿಯೇನು ? ಭಾಗವತದ ಪ್ರವಚನಕಾರನ ಮತ್ತು ಶ್ರೋತೃವಿನ ಲಕ್ಷಣಗಳೇನು ? ಎಂಬುದನ್ನು ತಿಳಿಸಿರಿ.'' ॥ ೨ ॥

ಸೂತ ಉವಾಚ

ಶ್ರೀಮದ್ಭಾಗವತಸ್ಯಾಥ ಶ್ರೀಮದ್ಭಗವತಃ ಸದಾ ।
ಸ್ವರೂಪಮೇಕಮೇವಾಸ್ತಿ ಸಚ್ಚಿದಾನಂದಲಕ್ಷಣಮ್
॥ ೩ ॥

ಶ್ರೀಕೃಷ್ಣಾಸಕ್ತಭಕ್ತಾನಾಂ ತನ್ಮಾಧುರ್ಯಪ್ರಕಾಶಕಮ್ ।
ಸಮುಜ್ಜೃಂಭತಿ ಯದ್ವಾಕ್ಯಂ ವಿದ್ಧಿ ಭಾಗವತಂ ಹಿ ತತ್
॥ ೪ ॥

ಜ್ಞಾನವಿಜ್ಞಾನಭಕ್ತ್ಯಂಗಚತುಷ್ಟಯಪರಂ ವಚಃ ।
ಮಾಯಾಮರ್ದನದಕ್ಷಂ ಚ ವಿದ್ಧಿ ಭಾಗವತಂ ಚ ತತ್
॥ ೫ ॥

ಸೂತಪುರಾಣಿಕರು ಹೇಳುತ್ತಾರೆ – ''ಎಲೈ ಋಷಿಗಳೇ! ಶ್ರೀಮದ್ಭಾಗವತದ ಮತ್ತು ಶ್ರೀಭಗವಂತನ ಸ್ವರೂಪವು ಒಂದೇ ಆಗಿದ್ದು – ಅದು ಸಚ್ಚಿದಾನಂದಮಯಸ್ವರೂಪವಾಗಿದೆ. ॥ ೩ ॥ ಭಗವಾನ್ ಶ್ರೀಕೃಷ್ಣನಲ್ಲಿ ಆಸಕ್ತಿಯುಳ್ಳ ಭಾವುಕರಾದ ಭಕ್ತರ ಹೃದಯದಲ್ಲಿ ಮಾಧುರ್ಯಭಾವವನ್ನು ಪ್ರಕಾಶಪಡಿಸುವ, ಆ ಮಾಧುರ್ಯರಸದ ಸವಿಯನ್ನು ಉಂಟುಮಾಡುವ, ಯಾವ ಯಾವ ವಾಕ್ಯಗಳುಂಟೋ ಅವೆಲ್ಲಾ ಭಾಗವತವೇ ಆಗಿದೆ. ॥ ೪ ॥ ಜ್ಞಾನ, ವಿಜ್ಞಾನ, ಭಕ್ತಿ ಮತ್ತು ಅವುಗಳಿಗೆ ಅಂಗವಾದ ಸಾಧನ ಚತುಷ್ಟಯವನ್ನು ಪ್ರಕಾಶಗೊಳಿಸುವ ಮತ್ತು ಮಾಯೆಯನ್ನು ಮರ್ದನಮಾಡುವ ಶಕ್ತಿಯುಳ್ಳ ವಾಕ್ಯಗಳನ್ನು ಭಾಗವತವೇ ಎಂದು ತಿಳಿಯಿರಿ. ॥ ೫ ॥

ಪ್ರಮಾಣಂ ತಸ್ಯ ಕೋ ವೇದ ಹ್ಯನಂತಸ್ಯಾಕ್ಷರಾತ್ಮನಃ।
ಬ್ರಹ್ಮಣೇ ಹರಿಣಾ ತದ್ದಿಕ್ಷತುಃ ಶ್ಲೋಕ್ಯಾ ಪ್ರದರ್ಶಿತಾ
॥ ೬ ॥

ತದಾನಂತ್ಯಾವಗಾಹೇನ ಸ್ವೇಪ್ಸಿತಾವಹನಕ್ಷಮಾಃ।
ತ ಏವ ಸಂತಿ ಭೋ ವಿಪ್ರಾ ಬ್ರಹ್ಮವಿಷ್ಣುಶಿವಾದಯಃ
॥ ೭ ॥

ಮಿತಬುದ್ಧ್ಯಾದಿವೃತ್ತೀನಾಂ ಮನುಷ್ಯಾಣಾಂ ಹಿತಾಯ ಚ।
ಪರೀಕ್ಷಿಚ್ಛುಕಸಂವಾದೋ ಯೋಽಸೌ ವ್ಯಾಸೇನ ಕೀರ್ತಿತಃ
॥ ೮ ॥

ಗ್ರಂಥೋಽಷ್ಟಾದಶಸಾಹಸ್ರೋ ಯೋಽಸೌ ಭಾಗವತಾಭಿದಃ।
ಕಲಿಗ್ರಾಹಗೃಹೀತಾನಾಂ ಸ ಏವ ಪರಮಾಶ್ರಯಃ
॥ ೯ ॥

ಶ್ರೋತಾರೋಽಥ ನಿರೂಪ್ಯಂತೇ ಶ್ರೀಮದ್ವಿಷ್ಣುಕಥಾಶ್ರಯಾಃ।
ಪ್ರವರಾ ಅವರಾಶ್ಚೇತಿ ಶ್ರೋತಾರೋ ದ್ವಿವಿಧಾ ಮತಾಃ
॥ ೧೦ ॥

ಪ್ರವರಾಶ್ಚಾತಕೋ ಹಂಸಃ ಶುಕೋ ಮೀನಾದಯಸ್ತಥಾ।
ಅವರಾ ವೃಕಭೂರುಂಡವೃಷೋಷ್ಟ್ರಾದ್ಯಾಃ ಪ್ರಕೀರ್ತಿತಾಃ
॥ ೧೧ ॥

ಅಖಿಲೋಪೇಕ್ಷಯಾ ಯಸ್ತು ಕೃಷ್ಣಶಾಸ್ತ್ರಶ್ರುತೌ ವ್ರತೀ।
ಸ ಚಾತಕೋ ಯಥಾಂಭೋದಮುಕ್ತೇ ಪಾಥಸಿ ಚಾತಕಃ
॥ ೧೨ ॥

ಹಂಸಃ ಸ್ಯಾತ್ಸಾರಮಾದತ್ತೇ ಯಃ ಶ್ರೋತಾ ವಿವಿಧಾತ್ ಶ್ರುತಾತ್।
ದುಗ್ಧೇನೈಕ್ಯಂ ಗತಾತ್ತೋಯಾದ್ ಯಥಾ ಹಂಸೋಽಮಲಂ ಪಯಃ
॥ ೧೩ ॥

ಶುಕಃ ಸುಷ್ಠು ಮಿತಂ ವಕ್ತಿ ವ್ಯಾಸಂ ಶ್ರೋತ್ಸ್ಯಂಶ್ಚ ಹರ್ಷಯನ್।
ಸುವಾಚಿತಃ ಶುಕೋ ಯದ್ವಚ್ಛಿಕ್ಷಕಂ ಪಾರ್ಶ್ವಗಾನಪಿ
॥ ೧೪ ॥

ಶ್ರೀಮದ್ಭಾಗವತವು ಅನಂತ ಅಕ್ಷರಸ್ವರೂಪವಾದುದು. ಇದರ ನಿಯತವಾದ ಪ್ರಮಾಣವು ಇಷ್ಟೇ ಎಂಬುದನ್ನು ಯಾರು ತಾನೇ ಬಲ್ಲರು ? ಹಿಂದೆ ಭಗವಂತನಾದ ಶ್ರೀಹರಿಯು ಬ್ರಹ್ಮದೇವರನ್ನು ಕುರಿತು ನಾಲ್ಕು ಶ್ಲೋಕಗಳ ಮೂಲಕ ಅದರ ದಿಗ್ದರ್ಶನವನ್ನು ಮಾತ್ರ ಮಾಡಿಸಿದನು. ॥ ೬ ॥ ವಿಪ್ರರೇ ! ನಾರಾಯಣನಿಂದ ಬ್ರಹ್ಮದೇವರಿಗೆ ಉಪದೇಶಿಸಲ್ಪಟ್ಟ (ಕೇವಲ ನಾಲ್ಕು ಶ್ಲೋಕಗಳುಳ್ಳ) ಈ ಚತುಃಶ್ಲೋಕೀ ಭಾಗವತದಿಂದ ಸಾಮಾನ್ಯಜೀವಿಗಳು ಲಾಭವನ್ನು ಪಡೆಯಲಾರರು. ಇದರ ಅಪಾರವಾದ ಗಾಂಭೀರ್ಯದಲ್ಲಿ ಮುಳುಗಿ ತಮ್ಮ ಇಷ್ಟಾರ್ಥವನ್ನು ಪಡೆಯುವ ಸಾಮರ್ಥ್ಯವು ಬ್ರಹ್ಮ ವಿಷ್ಣು, ರುದ್ರ ಮುಂತಾದವರಿಗೆ ಮಾತ್ರವೇ ಇರುವುದು. ॥ ೭ ॥ ಪರಿಮಿತವಾದ ಬುದ್ಧಿಯೇ ಮುಂತಾದ ವೃತ್ತಿಗಳುಳ್ಳ ಮನುಷ್ಯರ ಹಿತಸಾಧನೆಗೆ ಶ್ರೀವ್ಯಾಸಮಹರ್ಷಿಗಳು ಪರೀಕ್ಷಿದ್ರಾಜ ಮತ್ತು ಶುಕ ಮಹರ್ಷಿ ಇವರ ಸಂಭಾಷಣೆಯ ರೂಪದಲ್ಲಿ ಗಾನಮಾಡಿರುವ ಶ್ರೀಮದ್ಭಾಗವತ ಗ್ರಂಥವು ಮಾತ್ರವೇ ಸಮರ್ಥವಾಗುವುದು. ಅವರ ದೃಷ್ಟಿಯಿಂದ ಆದೇ ಶ್ರೀಮದ್ಭಾಗವತವು. ಈ ಗ್ರಂಥದ ಶ್ಲೋಕಸಂಖ್ಯೆಯೂ ಹದಿನೆಂಟುಸಾವಿರ. ಈ ಭವಸಾಗರದಲ್ಲಿ ಕಲಿಪುರುಷನೆಂಬ ಮೊಸಳೆಯ ಬಾಯಿಗೆ ಸಿಲುಕಿರುವ ಪ್ರಾಣಿಗಳಿಗೆ ಈ ಶ್ರೀಮದ್ಭಾಗವತವೇ ಸರ್ವೋತ್ತಮವಾದ ಆಶ್ರಯವು. ॥೮-೯॥

ಈಗ ಈ ಶ್ರೀಮದ್ವಿಷ್ಣುಕಥೆಯನ್ನು ಆಶ್ರಯಿಸಿರುವ ಶ್ರೋತೃಗಳ ಲಕ್ಷಣವನ್ನು ಹೇಳುತ್ತೇನೆ. ಪುರುಷಾರ್ಥಸಿದ್ಧಿಗಾಗಿ ಈ ಕಥಾಶ್ರವಣ ಮಾಡುವ ಶ್ರೋತೃಗಳಲ್ಲಿ ಪ್ರವರ (ಉತ್ತಮ) ಮತ್ತು ಅವರ (ಅಧಮ) ಎಂದು ಎರಡು ಭೇದಗಳು. ॥ ೧೦ ॥ ಪ್ರವರಶ್ರೋತೃಗಳಲ್ಲಿಯೂ ಚಾತಕ, ಹಂಸ, ಶುಕ ಮತ್ತು ಮೀನ ಮುಂತಾದ ಉಪಭೇದಗಳಿವೆ. ಹಾಗೆಯೇ ಅವರ ಶ್ರೋತೃಗಳಲ್ಲಿಯೂ ವೃಕ, ಭೂರುಂಡ, ವೃಷ ಮತ್ತು ಉಷ್ಟ್ರವೇ ಮೊದಲಾದ ನಾಲ್ಕು ಭೇದಗಳುಂಟು. ॥ ೧೧ ॥ ಚಾತಕಪಕ್ಷಿಯು ಬೇರೆ ಯಾವ ನೀರನ್ನೂ ಮುಟ್ಟದೆ ಮೋಡವು ಸುರಿಸುವ (ಭೂಮಿಯನ್ನು ಮುಟ್ಟದೇ ಇರುವ) ನೀರನ್ನು ಮಾತ್ರವೇ ಬಯಸುವಂತೆ ಯಾವ ಶ್ರೋತೃಗಳು ಉಳಿದುದೆಲ್ಲವನ್ನೂ ತೊರೆದು ಕೇವಲ ಶ್ರೀಕೃಷ್ಣನಿಗೆ ಸಂಬಂಧಪಟ್ಟ ಶಾಸ್ತ್ರಗಳಾದ ಶ್ರೀಮದ್ಭಾಗವತ ಮುಂತಾದುವುಗಳನ್ನು ಮಾತ್ರ ಕೇಳುವ ವ್ರತವನ್ನು ತೊಟ್ಟಿರುತ್ತಾರೆಯೋ ಅವರು ಚಾತಕ ಎಂಬ ಬಗೆಯ ಉತ್ತಮಶ್ರೋತೃಗಳು. ॥ ೧೨ ॥ ಹಂಸವು ಹೇಗೆ ನೀರು ಮಿಶ್ರವಾದ ಹಾಲಿನಿಂದ ನಿರ್ಮಲವಾದ ಹಾಲನ್ನು ಮಾತ್ರ ಪ್ರತ್ಯೇಕಿಸಿ ಸೇವಿಸಿ ಜಲಭಾಗವನ್ನು ಬಿಟ್ಟುಬಿಡುತ್ತದೆಯೋ ಹಾಗೆ ಯಾವ ಶ್ರೋತೃಗಳು ಅನೇಕ ಶಾಸ್ತ್ರಗಳನ್ನು ಕೇಳಿದರೂ ಅವುಗಳಲ್ಲಿ ಸಾರಭಾಗವಾದ ಶ್ರೀಕೃಷ್ಣಕಥೆಯನ್ನು ಮಾತ್ರ ಪ್ರತ್ಯೇಕಿಸಿ ಗ್ರಹಿಸುತ್ತಾರೆಯೋ ಅವರು ಉತ್ತಮಶ್ರೋತೃಗಳಲ್ಲಿ 'ಹಂಸ' ಎನಿಸುತ್ತಾರೆ. ॥ ೧೩ ॥ ಶುಕ ಎಂದರೆ ಗಿಳಿಯು. ಚೆನ್ನಾಗಿ ಶಿಕ್ಷಣಪಡೆದ ಶುಕವು ತನ್ನ ಮಧುರವಾಣಿಯಿಂದ ತನಗೆ ಶಿಕ್ಷಣವನ್ನು ಕೊಟ್ಟವನಿಗೂ ಮತ್ತು ಹತ್ತಿರದಲ್ಲಿರುವ ಶ್ರೋತೃಗಳಿಗೂ ಹೇಗೆ ಸಂತೋಷವನ್ನುಂಟು ಮಾಡುತ್ತದೆಯೋ ಹಾಗೆಯೇ ಯಾವ ಶ್ರೋತೃವು ಕಥೆ

ಶಬ್ದಂ ನಾನಿಮಿಷೋ ಜಾತು ಕರೋತ್ಯಾಸ್ವಾದಯನ್ ರಸಮ್ ।
ಶ್ರೋತಾಸ್ನಿಗ್ಧೋ ಭವೇನ್ಮೀನೋ ಮೀನಃ ಕ್ಷೀರನಿಧೌ ಯಥಾ
॥ ೧೫ ॥

ಯನ್ನು ಹೇಳುವ ವ್ಯಾಸರ ಬಾಯಿಂದ ಬರುವ ಉಪದೇಶವನ್ನು ಕೇಳಿ, ಅದನ್ನು ಸುಂದರವೂ ಪರಿಮಿತವೂ ಆದ ವಾಣಿಯಿಂದ ತಾನೂ ಹಾಗೆಯೇ ಇತರರಿಗೆ ಹೇಳುತ್ತಾನೆಯೋ, ಅದರಿಂದ ವ್ಯಾಸರೂ ಮತ್ತು ಇತರ ಶ್ರೋತೃಗಳಿಗೂ ಆನಂದವನ್ನುಂಟು ಮಾಡುತ್ತಾನೆಯೋ, ಅಂತಹ 'ಶುಕ' ಎಂದು ಕರೆಯುತ್ತಾರೆ. ॥ ೧೪ ॥ ಕ್ಷೀರಸಾಗರದಲ್ಲಿರುವ ಮೀನು ಹೇಗೆ ಯಾವ ಮಾತನ್ನೂ ಆಡದೆ ಎವೆಯಿಕ್ಕದ ಕಣ್ಣುಗಳಿಂದ ನೋಡುತ್ತಾ, ಸದಾ ಕಾಲವೂ ಕುಡಿಯುತ್ತಿರುತ್ತದೆಯೋ ಹಾಗೆಯೇ ಕಥಾಶ್ರವಣಮಾಡುವಾಗ ಎವೆಯಿಕ್ಕದೆ ಕಣ್ಣುಗಳಿಂದ ನೋಡುತ್ತಾ ಯಾವ ಮಾತನ್ನೂ ಆಡದೆ ನಿರಂತರವಾಗಿ ಕಥಾರಸವನ್ನು ಸವಿಯುತ್ತಾ ಇರುವ ಪ್ರೇಮಿಯಾದ ಶ್ರೋತೃವನ್ನು 'ಮೀನ' ಎಂದು ಕರೆಯುತ್ತಾರೆ. ॥ ೧೫ ॥

ಯಸ್ತುದನ್ ರಸಿಕಾನ್ ಶ್ರೋತೃನ್ ವಿರೌತ್ಯಜ್ಞೋ ವೃಕೋ ಹಿಸಃ ।
ವೇಣುಸ್ವನರಸಾಸಕ್ತಾನ್ ವೃಕೋಽರಣ್ಯೇ ಮೃಗಾನ್ ಯಥಾ
॥ ೧೬ ॥

ಇವರೆಲ್ಲಾ ಪ್ರವರ (ಉತ್ತಮ) ವರ್ಗದ ಶ್ರೋತೃಗಳು. ಇನ್ನು ಅವರ (ಅಧಮ) ವರ್ಗದ ಶ್ರೋತೃಗಳನ್ನು ನಿರೂಪಿಸುತ್ತೇನೆ. ಇವರಲ್ಲಿ ಮೊದಲನೆಯವರಿಗೆ 'ವೃಕ' ಎಂದು ಹೆಸರು. ವೃಕ ಎಂದರೆ ತೋಳ. ತೋಳವು ಅರಣ್ಯದಲ್ಲಿ ಕೊಳಲಿನಂತೆ ಮಧುರಧ್ವನಿ ಮಾಡುತ್ತಿರುವ ಸಾಧುಪ್ರಾಣಿಗಳನ್ನು ಹೆದರಿಸುವಂತಹ ಭಯಂಕರವಾದ ಗರ್ಜನೆಯನ್ನು ಮಾಡುವಂತೆ, ಯಾವ ಮೂರ್ಖರು (ಅಥವಾ ದುಷ್ಟರು) ಕಥಾಶ್ರವಣ ಆಗುತ್ತಿರುವಾಗ ಮಧ್ಯೇ ಮಧ್ಯೇ ಗಟ್ಟಿಯಾಗಿ ಮಾತನಾಡುತ್ತಾ ರಸಿಕರಾದ ಶ್ರೋತೃಗಳಿಗೆ ಉದ್ವೇಗವನ್ನುಂಟು ಮಾಡುತ್ತಾರೆಯೋ, ಅವರಿಗೆ 'ವೃಕ' ಎಂದು ಹೆಸರು. ॥ ೧೬ ॥ ಭೂರುಂಡ – ಎನ್ನುವುದು ಹಿಮಾಲಯದ ಶಿಖರದಲ್ಲಿರುವ ಒಂದು ಜಾತಿಯ ಪಕ್ಷಿ, ಅದು ಇತರರು ಹೇಳುವ ಒಳ್ಳೆಯ ವಾಕ್ಯಗಳನ್ನು ಕೇಳಿ ಅದನ್ನು ಹಾಗೆಯೇ ತಾನು ಹೇಳುತ್ತದೆ. ಆದರೆ ಅವರ ಉಪದೇಶದಂತೆ ತಾನು ನಡೆಯುವುದಿಲ್ಲ, ಅದರಿಂದ ತಾನು ಲಾಭಪಡೆಯುವುದಿಲ್ಲ, ಹಾಗೆಯೇ ಕಥಾಶ್ರವಣವಾಗುತ್ತಿರುವಾಗ ಯಾವನು ತಾನು ಉಪದೇಶದ ಮಾತುಗಳನ್ನು ಕೇಳಿ ಅದನ್ನು ಹಾಗೆಯೇ ಇತರರಿಗೆ ಉಪದೇಶಮಾಡುತ್ತಾ , ತಾನು ಮಾತ್ರ ಅದರಂತೆ ಅನುಷ್ಠಾನಮಾಡುವುದಿಲ್ಲವೋ ಅಂತಹ ಶ್ರೋತೃವನ್ನು 'ಭೂರುಂಡ' ಎನ್ನುತ್ತಾರೆ. ॥ ೧೭ ॥ ವೃಷ – ಎಂದರೆ ಎತ್ತು. ಎತ್ತಿನ ಮುಂದೆ ಸಿಹಿಯಾದ ದ್ರಾಕ್ಷಿಯಿರಲಿ ಅಥವಾ ಕಹಿಯಾದ ಮೇವು ಇರಲೀ ಎರಡನ್ನೂ ಒಂದೇ ಸಮನಾಗಿ ತಿಳಿದು ಅದು ತಿನ್ನುತ್ತದೆ. ಹಾಗೆಯೇ ಯಾವನು ಕಥಾಪ್ರವಚನದಲ್ಲಿ ಸಾರ, ಅಸಾರ – ಎಂದು ವಿವೇಚಿಸದೆ ಎಲ್ಲ ಮಾತುಗಳನ್ನೂ ಸೇವಿಸುತ್ತಾನೆಯೋ ಅಂತಹ ಕುರುಡುಬುದ್ಧಿಯ ಶ್ರೋತೃವು 'ವೃಷ' ಎನ್ನಿಸುತ್ತಾನೆ. ॥ ೧೮ ॥ ಉಷ್ಟ್ರ – ಎಂದರೆ ಒಂಟೆ. ರುಚಿಕರವಾದ ಎಳಸಾದ ಮಾವಿನ ಚಿಗುರು ಬಿಟ್ಟು ಕಹಿಯಾದ ಬೇವಿನ ಎಲೆಗಳನ್ನು ಮಾತ್ರ ತಿನ್ನುತ್ತದೆ. ಹಾಗೆಯೇ ಯಾವನು ಕಥಾ ಶ್ರವಣಪ್ರಸಂಗದಲ್ಲಿ ಮಧುರವಾದ ಸಾಂಸಾರಿಕ ಮಾತುಗಳಲ್ಲಿಯೇ ರಮಿಸುತ್ತಾನೆಯೋ ಅಂತಹ ಶ್ರೋತೃವನ್ನು 'ಉಷ್ಟ್ರ' ಎಂದು ಕರೆಯುತ್ತಾರೆ. ॥ ೧೯ ॥

ಸರ್ವಂ ಶ್ರುತಮುಪಾದತ್ತೇ ಸಾರಾಸಾರಾಂಧಧೀರ್ವೃಷಃ ।
ಸ್ವಾದುದ್ರಾಕ್ಷಾಂ ಖಲಿಂ ಚಾಪಿ ನಿರ್ವಿಶೇಷಂ ಯಥಾ ವೃಷಃ
॥ ೧೮ ॥

ಭೂರುಂಡಃ ಶಿಕ್ಷಯೇದನ್ಯಾನ್ ಚ್ಯುತ್ವಾ ನ ಸ್ವಯಮಾಚರೇತ್ ।
ಯಥಾ ಹಿಮವತಃ ಶೃಂಗೇ ಭೂರುಂಡಾಖ್ಯೋ ವಿಹಂಗಮಃ
॥ ೧೭ ॥

ಸ ಉಷ್ಟ್ರೋ ಮಧುರಂ ಮುಂಚನ್ ವಿಪರೀತೇ ರಮೇತ ಯಃ ।
ಯಥಾ ನಿಂಬಂ ಚರತ್ಯುಷ್ಟ್ರೋ ಹಿತ್ವಾಮ್ರಮಪಿ ತದ್ಯುತಮ್
॥ ೧೯ ॥

ಅನ್ಯೇಽಪಿ ಬಹವೋ ಭೇದಾ ದ್ವಯೋರ್ಭ್ರಂಗಖಿರಾದಯಃ।
ವಿಜ್ಞೇಯಾಸ್ತತ್ತದಾಚಾರ್ಯೈ ಸ್ತತತ್ಕೃತಿಸಂಭವೈಃ
॥ ೨೦ ॥

'ಪ್ರವರ' ಮತ್ತು 'ಅವರ' ಶ್ರೋತೃಗಳಲ್ಲಿ ಈಗ ಹೇಳಲ್ಪಟ್ಟಿರುವ ಭೇದಗಳಲ್ಲದೆ 'ಭ್ರಮರ' 'ಗರ್ದಭ' ಇವೇ ಮುಂತಾದ ಇನ್ನೂ ಅನೇಕ ಭೇದಗಳುಂಟು. ಅವುಗಳನ್ನು ಶ್ರೋತೃಗಳ ಸ್ವಾಭಾವಿಕವಾದ ಆಚಾರ-ವ್ಯವಹಾರಗಳಿಂದ ನಿರ್ಣಯಿಸಿಕೊಳ್ಳಬೇಕು.॥ ೨೦ ॥

ಯಃ ಸ್ಥಿತ್ವಾಭಿಮುಖಂ ಪ್ರಣಮ್ಯ ವಿಧಿವ-
ತ್ಯಕ್ತಾನ್ಯವಾದೋ ಹರೇಃ
ಲೀಲಾಃ ಶ್ರೋತುಮಭೀಪ್ಸತೇಽತಿ ನಿಪುಣೋ
ನಮ್ರೋಽಥ ಕೃಪ್ತಾಂಜಲಿಃ ।
ಶಿಷ್ಯೋ ವಿಶ್ವಸಿತೋಽನುಚಿಂತನಪರಃ
ಪ್ರಶ್ನೇಽನುರಕ್ತಃ ಶುಚಿಃ
ನಿತ್ಯಂ ಕೃಷ್ಣಜನಪ್ರಿಯೋ ನಿಗದಿತಃ
ಶ್ರೋತಾ ಸ ವೈ ವಕ್ತೃಭಿಃ
॥ ೨೧ ॥

ಶ್ರೀಮದ್ಭಾಗವತಪ್ರವಚನವು ನಡೆಯುವಾಗ ಯಾವನು ಪ್ರವಚನಕಾರನಿಗೆ ವಿಧಿಪೂರ್ವಕವಾಗಿ ಪ್ರಣಾಮಮಾಡಿ, ಆತನ ಮುಂದೆ ಕುಳಿತು, ಉಳಿದ ಸಾಂಸಾರಿಕವಾದ ಮಾತುಗಳನ್ನು ತೊರೆದು, ಕೇವಲ ಭಗವಂತನ ಲೀಲಾಕಥೆಗಳನ್ನು ಮಾತ್ರ ಕೇಳಲು ಬಯಸುತ್ತಾನೆಯೋ, ಕಥೆಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅತ್ಯಂತ ಕುಶಲನಾಗಿದ್ದಾನೆಯೋ, ನಮ್ರನಾಗಿ ಕೈಜೋಡಿಸಿಕೊಂಡು ಶಿಷ್ಯ ಭಾವದಿಂದ ಶ್ರದ್ಧಾ ವಿಶ್ವಾಸಯುಕ್ತನಾಗಿ ಉಪದೇಶವನ್ನು ಕೇಳುತ್ತಾನೆಯೋ, ಕೇಳಿದ್ದನ್ನು ಕುರಿತು ಚಿಂತನೆಯನ್ನು ಮಾಡುತ್ತಾ, ತಿಳಿಯದ ವಿಷಯಗಳನ್ನು ಕೇಳಿ ತಿಳಿಯುತ್ತಾ , ಪವಿತ್ರಭಾವದಿಂದ ಕೂಡಿ ಶ್ರೀಕೃಷ್ಣಭಕ್ತರಲ್ಲಿ ಸದಾ ಪ್ರೇಮವುಳ್ಳವನಾಗಿರುತ್ತಾನೆಯೋ ಅಂತಹ ಶ್ರೋತೃವನ್ನು ಮಾತ್ರವೇ ಪ್ರವಚನಕಾರರು 'ಉತ್ತಮವಾದ ಶ್ರೋತೃ' ಎಂದು ಕರೆಯುತ್ತಾರೆ. ॥ ೨೧ ॥

ಭಗವನ್ಮತಿರನಪೇಕ್ಷಃ ಸುಹೃದೋ
ದೀನೇಷು ಸಾನುಕಂಪೋ ಯಃ ।
ಬಹುಧಾ ಬೋಧನಚತುರೋ
ವಕ್ತಾ ಸಮ್ಮಾನಿತೋ ಮುನಿಭಿಃ ॥ ೨೨ ॥

ಈಗ ಪ್ರವಚನಕಾರನ ಲಕ್ಷಣವನ್ನು ಹೇಳುತ್ತೇನೆ – ಭಗವಂತನಲ್ಲಿ ಆಸಕ್ತವಾದ ಮತಿಯುಳ್ಳವನಾಗಿರಬೇಕು. ಭಗವಂತನನ್ನು ಬಿಟ್ಟು ಬೇರಾವುದನ್ನೂ ಅಪೇಕ್ಷಿಸಬಾರದು. ಸ್ನೇಹ-ಸೌಹಾರ್ದಗಳನ್ನು ಹೊಂದಿರಬೇಕು. ದೀನರ ವಿಷಯದಲ್ಲಿ ದಯಾಳುವಾಗಿರಬೇಕು. ಬಗೆ-ಬಗೆಯಾದ ಯುಕ್ತಿ ದೃಷ್ಟಾಂತ ಇತ್ಯಾದಿಗಳಿಂದ ತತ್ತ್ವವನ್ನು ಬೋಧಿಸುವುದರಲ್ಲಿ ಚತುರನಾಗಿರಬೇಕು. ಇಂತಹ ಲಕ್ಷಣಗಳಿಂದ ಕೂಡಿದ ಪ್ರವಚನಕಾರನನ್ನು ಮುನಿಗಳೂ ಕೂಡ ಗೌರವಿಸುತ್ತಾರೆ. ॥ ೨೨ ॥

ಅಥ ಭಾರತಭೂಸ್ಥಾನೇ ಶ್ರೀಭಾಗವತಸೇವನೇ।
ವಿಧಿಂ ಶೃಣುತ ಭೋ ವಿಪ್ರಾ ಯೇನ ಸ್ಯಾತ್ಸುಖಸಂತತಿಃ
॥ ೨೩. ॥

ಎಲೈ ವಿಪ್ರಶ್ರೇಷ್ಠರೇ! ಭಾರತವರ್ಷದ ಭೂಮಿಯಲ್ಲಿ ಶ್ರೀಮದ್ಭಾಗವತ ಕಥೆಯನ್ನು ಸೇವಿಸಲು ಅನುಸರಿಸಬೇಕಾಗಿರುವ ವಿಧಿಗಳು ಯಾವವು ? ಎಂಬುದನ್ನು ಈಗ ಹೇಳುತ್ತೇನೆ. ಈ ವಿಧಿಗಳನ್ನು ಪಾಲನೆಮಾಡಿದರೆ ಶ್ರೋತೃವಿಗೆ ಸುಖಪರಂಪರೆಗಳು ವೃದ್ಧಿಹೊಂದುವವು. ॥ ೨೩. ॥

ರಾಜಸಂ ಸಾತ್ತ್ವಿಕಂ ಚಾಪಿ ತಾಮಸಂ ನಿರ್ಗುಣಂ ತಥಾ।
ಚತುರ್ವಿಧಂ ತು ವಿಜ್ಞೇಯಂ ಶ್ರೀಭಾಗವತಸೇವನಮ್
॥ ೨೪ ॥

ಶ್ರೀಮದ್ಭಾಗವತದ ಸೇವನೆಯಲ್ಲಿ ಸಾತ್ತ್ವಿಕ, ರಾಜಸ, ತಾಮಸ ಮತ್ತು ನಿರ್ಗುಣ ಎಂದು ನಾಲ್ಕು ಬಗೆಗಳುಂಟು. ॥ ೨೪ ॥

ಸಪ್ತಾಹಂ ಯಜ್ಞವದ್ಭತ್ತು ಸಶ್ರಮಂ ಸತ್ವರಂ ಮುದಾ।
ಸೇವಿತಂ ರಾಜಸಂ ತತ್ತು ಬಹುಪೂಜಾದಿಶೋಭನಮ್
॥ ೨೫ ॥

ಯಜ್ಞದಲ್ಲಿ ಹೇಗೋ ಹಾಗೆ ವೈಭವದ ಸಿದ್ಧತೆಗಳಿಂದ ಕೂಡಿದ್ದು ಬಗೆ-ಬಗೆಯ ಪೂಜಾಸಾಮಗ್ರಿಗಳಿಂದ ಶೋಭಿಸುತ್ತಿರಬೇಕು. ಬಹಳ ಪರಿಶ್ರಮ ಉತ್ಸಾಹಗಳಿಂದ ಆಚರಿಸಲ್ಪಟ್ಟು ಏಳು ದಿವಸಗಳಲ್ಲಿ ಸಮಾಪ್ತಿಮಂಗಳವನ್ನು ಹೊಂದಬೇಕು. ಈ ವಿವರಣೆಗೆ ತಕ್ಕಂತೆ ಪ್ರಸನ್ನತೆಯಿಂದ ಮಾಡಲ್ಪಡುವ ಶ್ರೀಮದ್ಭಾಗವತ ಸೇವನೆಗೆ 'ರಾಜಸ' ಎಂದು ಹೆಸರು. ॥ ೨೫ ॥ ಯಾವ ಆತುರವೂ ಇಲ್ಲದೆ ನಿಧಾನವಾಗಿ ನಡೆಸುತ್ತಾ ಒಂದು ಅಥವಾ ಎರಡು ತಿಂಗಳಲ್ಲಿ ಕಥೆಯ ರಸವನ್ನು ಸವಿಯುತ್ತಾ ಯಾವ ಆಯಾಸವೂ ಇಲ್ಲದೆ ಸಂತೋಷವನ್ನು ವೃದ್ಧಿಪಡಿಸುತ್ತಾ ಮಾಡಲ್ಪಡುವ ಭಾಗವತ ಸೇವನೆಯು 'ಸಾತ್ತ್ವಿಕ' ಎನಿಸುತ್ತದೆ. ॥ ೨೬ ॥

ಮಾಸೇನ ಋತುನಾ ವಾಪಿ ಶ್ರವಣಂ ಸ್ವಾದಸಂಯುತಮ್ ।
ಸಾತ್ತ್ವಿಕಂ ಯದನಾಯಾಸಂ ಸಮಸ್ತಾನಂದವರ್ಧನಮ್
॥ ೨೬ ॥

ತಾಮಸಂ ಯತ್ತು ವರ್ಷೀಣ ಸಾಲಸಂ ಶ್ರದ್ಧಯಾ ಯುತಮ್ ।
ವಿಸ್ಮೃತಿಸ್ಮೃತಿಸಂಯುಕ್ತಂ ಸೇವನಂ ತಚ್ಚತಾಮಸಮ್
॥ ೨೭ ॥

ವರ್ಷಮಾಸದಿನಾನಾಂ ತು ವಿಮುಚ್ಯನಿಯಮಾಗ್ರಹಮ್ ।
ಸರ್ವದಾ ಪ್ರೇಮಭಕ್ತ್ಯೈವ ಸೇವನಂ ನಿರ್ಗುಣಂ ಮತಮ್
॥ ೨೮ ॥

ಪಾರೀಕ್ಷಿತೇಽಪಿ ಸಂವಾದೇ ನಿರ್ಗುಣಂ ತತ್ಕೀರ್ತಿತಮ್ ।
ತತ್ರ ಸಪ್ತದಿನಾಖ್ಯಾನಂ ತದಾಯುರ್ದಿನಸಂಖ್ಯಯಾ
॥ ೨೯ ॥

ಅನ್ಯತ್ರ ತ್ರಿಗುಣಂ ಚಾಪಿ ನಿರ್ಗುಣಂ ಚ ಯಥೇಚ್ಛಯಾ ।
ಯಥಾ ಕಥಂಚಿತ್ಕರ್ತವ್ಯಂ ಸೇವನಂ ಭಗವಚ್ಛ್ರುತೇಃ
॥ ೩೦ ॥

ಯೇ ಶ್ರೀಕೃಷ್ಣವಿಹಾರೈಕಭಜನಾಸ್ವಾದಲೋಲುಪಾಃ ।
ಮುಕ್ತಾವಪಿ ನಿರಾಕಾಂಕ್ಷಾಸ್ತೇಷಾಂ ಭಾಗವತಂ ಧನಮ್
॥ ೩೧ ॥

ಯೇಽಪಿ ಸಂಸಾರಸಂತಾಪನಿರ್ವಿಣ್ಣಾ ಮೋಕ್ಷಕಾಂಕ್ಷಿಣಃ ।
ತೇಷಾಂ ಭವೌಷಧಂ ಚೈತತ್ಕಲೌ ಸೇವ್ಯಂ ಪ್ರಯತ್ನತಃ
॥ ೩೨ ॥

ಯೇ ಚಾಪಿ ವಿಷಯಾರಾಮಾಃ ಸಾಂಸಾರಿಕಸುಖಸ್ಪೃಹಾಃ ।
ತೇಷಾಂ ತು ಕರ್ಮಮಾರ್ಗೇಣ ಯಾ ಸಿದ್ಧಿಃ ಸಾಧನಾ ಕಲೌ
॥ ೩೩ ॥

ಸಾಮರ್ಥ್ಯಧನವಿಜ್ಞಾನಾಭಾವಾದತ್ಯಂತದುರ್ಲಭಾ ।
ತಸ್ಮಾತ್ತೈರಪಿ ಸಂಸೇವ್ಯಾ ಶ್ರೀಮದ್ಭಾಗವತೀ ಕಥಾ
॥ ೩೪ ॥

ಧನಂ ಪುತ್ರಾಂಸ್ತಥಾ ದಾರಾನ್ ವಾಹನಾದಿ ಯತೋ ಗೃಹಾನ್ ।
ಅಸಾಪತ್ನ್ಯಂ ಚ ರಾಜ್ಯಂ ಚ ದದ್ಯಾದ್ಭಾಗವತೀ ಕಥಾ
॥ ೩೫ ॥

ಮಧ್ಯ-ಮಧ್ಯದಲ್ಲಿ ಮರೆವಿನಿಂದ ಕೆಲವು ವಿಷಯಗಳನ್ನು ಬಿಟ್ಟುಬಿಡುವುದು. ಮರೆತದ್ದು ನೆನಪಿಗೆ ಬಂದಾಗ ಅದನ್ನು ಮತ್ತೆ ಆರಂಭಿಸುವುದು – ಹೀಗೆ ಒಂದು ವರ್ಷಕಾಲದವರೆಗೆ ಆಲಸ್ಯ-ಅಶ್ರದ್ಧೆಗಳಿಂದ ನಡೆಸಲ್ಪಡುವ ಭಾಗವತಕಥಾಸೇವನೆಯನ್ನು 'ತಾಮಸ' ಎನ್ನುತ್ತಾರೆ. ಭಾಗವತಶ್ರವಣವನ್ನು ಮಾಡದೆಯೇ ಇರುವುದಕ್ಕಿಂತಲೂ ತಾಮಸರೂಪದಲ್ಲಾದರೂ ಮಾಡುವುದು ಒಳ್ಳೆಯದು. ॥ ೨೭ ॥ ವರ್ಷ, ತಿಂಗಳು, ದಿವಸ ಮುಂತಾದ ಕಾಲ ನಿಯಮದ ಆಗ್ರಹವಿಲ್ಲದೆ ಸದಾ ಭಕ್ತಿಯಿಂದಲೂ, ಪ್ರೇಮದಿಂದಲೂ ಶ್ರೀಮದ್ಭಾಗವತವನ್ನು ಶ್ರವಣಮಾಡುತ್ತಿರುವುದು 'ನಿರ್ಗುಣ' ಸೇವನೆ ಎಂದು ಕರೆಯಲ್ಪಡುತ್ತದೆ. ॥ ೨೮ ॥ ಪರೀಕ್ಷಿದ್ರಾಜ ಮತ್ತು ಶುಕಬ್ರಹ್ಮರ್ಷಿಗಳ ಸಂಭಾಷಣೆಯ ರೂಪದಲ್ಲಿ ನಡೆದ ಶ್ರೀಮದ್ಭಾಗವತಕಥಾಶ್ರವಣವು ಈ 'ನಿರ್ಗುಣ' ಎಂಬ ವರ್ಗಕ್ಕೆ ಸೇರಿದ್ದು. ಅದರಲ್ಲಿ ಏಳು ದಿವಸಗಳಲ್ಲಿ ಕಥಾಶ್ರವಣ ನಡೆಯಿತು – ಎಂಬ ಕಾಲನಿಯಮವು ಕೇಳಿಬರುತ್ತದೆಯಲ್ಲಾ! ಅದು ಹೇಗೆ 'ನಿರ್ಗುಣ'ವಾಗುವುದು? ಎಂದರೆ ರಾಜನ ಆಯುಸ್ಸಿನಲ್ಲಿ ಉಳಿಕೆಯ ದಿನಗಳು ಏಳೇ ಆಗಿದ್ದುದರಿಂದ ಆ ದಿನ ಸಂಖ್ಯೆಯು ಬಂದಿದೆಯೇ ಹೊರತು ಸಪ್ತಾಹಕಥಾನಿಯಮವನ್ನು ತಿಳಿಸುವುದಕ್ಕಾಗಿ ಅದು ಬಂದಿಲ್ಲ. ॥ ೨೯ ॥

ಭಾರತವರ್ಷವನ್ನು ಬಿಟ್ಟು ಇತರ ಸ್ಥಾನಗಳಲ್ಲಿಯೂ ತನ್ನ ಅಭಿರುಚಿಗೆ ತಕ್ಕಂತೆ ಸಾತ್ತ್ವಿಕ, ರಾಜಸ, ತಾಮಸ ಅಥವಾ ನಿರ್ಗುಣ ರೂಪವಾದ ಕಥಾಶ್ರವಣವನ್ನು ಮಾಡಬಹುದು. ಯಾವುದೇ ರೀತಿಯಲ್ಲಾದರೂ ಶ್ರೀಮದ್ಭಾಗವತದ ಶ್ರವಣವನ್ನು ಮಾಡುತ್ತಲೇ ಇರಬೇಕು – ಎಂದು ಇದರ ತಾತ್ಪರ್ಯ. ॥ ೩೦॥ ಶ್ರೀಕೃಷ್ಣ ಪರಮಾತ್ಮನ ಲೀಲಾಕಥೆಗಳ ಶ್ರವಣ-ಸಂಕೀರ್ತನ ಮತ್ತು ರಸಾಸ್ವಾದನೆಗಳಿಗಾಗಿಯೇ ಅತ್ಯಂತವಾಗಿ ಇಷ್ಟಪಡುತ್ತಾ ಮೋಕ್ಷವನ್ನೂ ಕೂಡ ಯಾರು ಬಯಸುವುದಿಲ್ಲವೋ ಅವರಿಗಾದರೋ ಶ್ರೀಮದ್ಭಾಗವತವೇ ಪರಮ ಧನವು. ॥ ೩೧॥ ಸಾಂಸಾರಿಕದುಃಖಿಗಳಿಗೆ ಹೆದರಿ ತಮ್ಮ ಮುಕ್ತಿಯನ್ನು ಬಯಸುವವರಿಗೆ ಇದು ಭವರೋಗದ ಔಷಧವೇ ಆಗಿದೆ. ಆದ್ದರಿಂದ ಈ ಕಲಿಕಾಲದಲ್ಲಿ ಇದನ್ನು ಪ್ರಯತ್ನಪೂರ್ವಕವಾಗಿ ಸೇವಿಸಬೇಕು. ॥ ೩೨ ॥ ಇದಲ್ಲದೆ ಯಾರು ಇಂದ್ರಿಯವಿಷಯಗಳಲ್ಲಿಯೇ ರಮಿಸುತ್ತಾ ಸಾಂಸಾರಿಕ ಸುಖಗಳನ್ನೇ ಸದಾ ಬಯಸುತ್ತಾರೋ ಅಂತಹವರೂ ಕೂಡ ಈ ಕಲಿಯುಗದಲ್ಲಿ ಎಲ್ಲ ರೀತಿಗಳಿಂದಲೂ ಶ್ರೀಮದ್ಭಾಗವತವನ್ನೇ ಸೇವಿಸುವುದು ಒಳ್ಳೆಯದು. ಏಕೆಂದರೆ ಈ ಯುಗದಲ್ಲಿ ಸ್ವರ್ಗಾದಿ ಪ್ರಾಕೃತಿಕ ಸುಖಗಳನ್ನು ಪಡೆಯಲು ಸಾಧನವಾದ ಯಜ್ಞಗಳನ್ನು ಆಚರಿಸುವುದಕ್ಕೆ ಬೇಕಾದ ಶಕ್ತಿ-ಸಾಮರ್ಥ್ಯಗಳೂ, ಐಶ್ವರ್ಯವೂ, ಶಾಸ್ತ್ರೀಯವಿಧಿ-ವಿಧಾನಗಳ ಜ್ಞಾನವೂ ಜನರಿಗೆ ಇರುವುದಿಲ್ಲವಾದ್ದರಿಂದ ಯಜ್ಞಾದಿಗಳಿಂದ ದೊರೆಯುವ ಸಿದ್ಧಿಯೂ ಅತ್ಯಂತ ದುರ್ಲಭವಾಗಿದೆ. ॥ ೩೩-೩೪ ॥ ಈ ಶ್ರೀಮದ್ಭಾಗವತದ ಕಥೆಯು ತನ್ನನ್ನು ಸಕಾಮರಾಗಿ ಸೇವಿಸುವವರಿಗೆ ಹಣ, ಹೆಂಡಿರು, ಮಕ್ಕಳು, ವಾಹನಾದಿಗಳನ್ನೂ, ಕೀರ್ತಿಯನ್ನೂ, ಮನೆಗಳನ್ನೂ, ನಿಷ್ಕಂಟಕವಾದ ರಾಜ್ಯವನ್ನೂ ಕೊಡುವುದು. ॥ ೩೫ ॥

ಇಹ ಲೋಕೇ ವರಾನ್ಭುಕ್ತ್ವಾ ಭೋಗಾನ್ವೈ ಮನಸೇಪ್ಸಿತಾನ್ ।
ಶ್ರೀಭಾಗವತಸಂಗೇನ ಯಾತ್ಯಂತೇ ಶ್ರೀಹರೇಃ ಪದಮ್
॥ ೩೬ ॥

ಹಾಗೆ ಸಕಾಮಭಾವದಿಂದ ಭಾಗವತವನ್ನು ಸೇವಿಸುವವರು ಇಹಲೋಕದಲ್ಲಿ ಮನಸ್ಸು ಅಪೇಕ್ಷಿಸುವ ಉತ್ತಮಭೋಗಗಳನ್ನು ಅನುಭವಿಸಿ ಶ್ರೀಮದ್ಭಾಗವತದ ಮತ್ತು ಭಾಗವತರ ಸಂಗದಿಂದ ಮರಣಾನಂತರ ಶ್ರೀಹರಿಯ ಪರಮಧಾಮವನ್ನು ಹೊಂದುವರು. ॥ ೩೬ ॥

ಯತ್ರ ಭಾಗವತೀ ವಾರ್ತಾ ಯೇ ಚ ತಚ್ಛ್ರವಣೇ ರತಾಃ ।
ತೇಷಾಂ ಸಂಸೇವನಂ ಕುರ್ಯಾದ್ದೇಹೇನ ಚ ಧನೇನ ಚ
॥ ೩೭ ॥

ಎಲ್ಲಿಯಾದರೂ ಶ್ರೀಮದ್ಭಾಗವತದ ಕಥೆಯನ್ನು ಕುರಿತ ವಾರ್ತೆಯು ನಡೆಯುತ್ತಿದ್ದರೆ, ಸಜ್ಜನರು ಆ ಕಥಾಶ್ರವಣದಲ್ಲಿ ಆಸಕ್ತರಾಗಿರುವುದು ಕಂಡುಬಂದರೆ, ಆ ಕಥಾಕಾರ್ಯಕ್ರಮಕ್ಕೂ ಮತ್ತು ಸಜ್ಜನರಿಗೂ ತನು-ಮನ-ಧನಗಳಿಂದ ಸೇವೆಯನ್ನು ಸಲ್ಲಿಸಬೇಕು.॥೩೭॥

ತದನುಗ್ರಹತೋಽಸ್ಯಾಪಿ ಶ್ರೀಭಾಗವತ ಸೇವನಮ್ ।
ಶ್ರೀಕೃಷ್ಣವ್ಯತಿರಿಕ್ತಂ ಯತ್ತತ್ಸರ್ವಂ ಧನಸಂಜ್ಞಿತಮ್
॥ ೩೮ ॥

ಅವರ ಅನುಗ್ರಹದಿಂದಲೂ ಭಾಗವತ ಸೇವನೆಯ ಪುಣ್ಯವು ದೊರೆಯುವುದು. ಲೋಕದಲ್ಲಿ ಜನರು ಶ್ರೀಕೃಷ್ಣ ಮತ್ತು ಧನ – ಎಂಬ ಎರಡನ್ನೇ ಬಯಸುತ್ತಾರೆ. ಇಲ್ಲಿ ಶ್ರೀಕೃಷ್ಣನನ್ನು ಬಿಟ್ಟು ಉಳಿದೆಲ್ಲಾ ಪದಾರ್ಥಗಳಿಗೂ 'ಧನ' ಎಂದು ಹೆಸರು. ॥ ೩೮ ॥

ಕೃಷ್ಣಾರ್ಥೀತಿ ಧನಾರ್ಥೀತಿ ಶ್ರೋತಾ ವಕ್ತಾ ದ್ವಿಧಾ ಮತಃ ।
ಯಥಾ ವಕ್ತಾ ತಥಾ ಶ್ರೋತಾ ತತ್ರ ಸೌಖ್ಯಂ ವಿವರ್ಧತೇ
॥ ೩೯ ॥

ಶ್ರೋತೃಗಳಲ್ಲಿ ಕೃಷ್ಣಾರ್ಥೀ (ಶ್ರೀಕೃಷ್ಣನನ್ನೇ ಪ್ರಯೋಜನವನ್ನಾಗಿ ಬಯಸುವವನು) ಮತ್ತು ಧನಾರ್ಥೀ (ಶ್ರೀಕೃಷ್ಣನನ್ನು ಬಿಟ್ಟು ಉಳಿದ ಪದಾರ್ಥಗಳನ್ನು ಪ್ರಯೋಜನವನ್ನಾಗಿ ಬಯಸುವವನು) ಎಂದು ಎರಡು ವಿಧಗಳು. ಹಾಗೆಯೇ ಪ್ರವಚನಕಾರರಲ್ಲೂ ಕೃಷ್ಣಾರ್ಥೀ ಮತ್ತು ಧನಾರ್ಥೀ ಎಂದು ಎರಡು ಬಗೆಗಳು. ॥ ೩೯॥ ಇವರಿಬ್ಬರೂ ವಿಪರೀತ ವಿಚಾರದವರಾದರೆ ಅಂದರೆ ; ಶ್ರೋತೃವು ಕೃಷ್ಣಾರ್ಥಿಯಾಗಿದ್ದು ಪ್ರವಚನಕಾರನು ಧನಾರ್ಥಿಯಾಗಿದ್ದರೆ ಅಥವಾ ಶ್ರೋತೃವು ಧನಾರ್ಥಿಯಾಗಿದ್ದು ಪ್ರವಚನಕಾರನು ಕೃಷ್ಣಾರ್ಥಿಯಾಗಿದ್ದರೆ ರಸಾಭಾಸವಾಗುವುದು. ಫಲಹಾನಿ ಯಾಗುವುದು. ಆದರೆ ಪ್ರವಚನಕಾರರು ಮತ್ತು ಶ್ರೋತೃಗಳು ಕೃಷ್ಣಾರ್ಥಿಗಳಾಗಿದ್ದರೆ ಅವರಿಗೆ ತಡವಾಗಿಯಾದರೂ ಸಿದ್ಧಿಯು ಅವಶ್ಯವಾಗಿ ದೊರೆಯುವುದು. ॥ ೪೦ ॥

ಉಭಯೋರ್ವೈಪರೀತ್ಯೇ ತು ರಸಾಭಾಸೇ ಫಲಚ್ಯುತಿಃ ।
ಕಿಂತು ಕೃಷ್ಣಾರ್ಥಿನಾಂ ಸಿದ್ಧಿರ್ವಿಲಂಬೇನಾಪಿ ಜಾಯತೇ
॥ ೪೦ ॥

ಆದರೆ ಧನಾರ್ಥಿಗೆ, ಕರ್ಮದ ಅನುಷ್ಠಾನವು ಸಂಪೂರ್ಣವಾಗಿ ವಿಧಿ-ವಿಧಾನಗಳಿಗೆ ಅನುಸಾರವಾಗಿದ್ದರೆ ಮಾತ್ರ ಸಿದ್ಧಿಯು ಸಿಕ್ಕುವುದು. (ಯಾವ ಕುಂದುಕೊರತೆಯೂ ಇಲ್ಲದೆ ವಿಧಿಪೂರ್ವಕವಾಗಿ ಅನುಷ್ಠಾನಮಾಡಿದರೆ ಮಾತ್ರವೇ ಕಾಮ್ಯಕರ್ಮವು ಸಿದ್ಧಿಸುವುದು.) ಕೃಷ್ಣಾರ್ಥಿಗಾದರೋ ಆತನು ಗುಣಹೀನನಾಗಿದ್ದರೂ, ಅನುಷ್ಠಾನದ ವಿಧಿಗಳಲ್ಲಿ ಕೆಲವು ಏರುಪೇರುಗಳಿದ್ದರೂ, ಆತನ ಹೃದಯದಲ್ಲಿ ಪ್ರೇಮವೊಂದಿದ್ದರೆ ಸಾಕು, ಅದೇ ಸರ್ವೋತ್ತಮ ವಿಧಿಯಾಗುವುದು. ॥ ೪೧ ॥

ಧನಾರ್ಥಿನಸ್ತು ಸಂಸಿದ್ಧಿರ್ವಿಧಿಸಂಪೂರ್ಣತಾವಶಾತ್ ।
ಕೃಷ್ಣಾರ್ಥಿನೋಽಗುಣಸ್ಯಾಪಿ ಹ್ರೇಮೈವ ವಿಧಿರುತ್ತಮಃ
॥ ೪೧ ॥

ಸಕಾಮರಾದ ಶ್ರೋತೃ ಮತ್ತು ಪ್ರವಚನಕಾರರು ಕಥೆಯು ಮುಗಿಯುವವರೆಗೆ ಅತ್ಯಂತ ಎಚ್ಚರಿಕೆಯಿಂದ ಎಲ್ಲ ವಿಧಿಗಳನ್ನೂ ಪಾಲಿಸಬೇಕು. ಶ್ರೋತೃಗಳು ಮತ್ತು ಪ್ರವಚನಕಾರರು ಪ್ರತಿದಿನವೂ ಪ್ರಾತಃಕಾಲದಲ್ಲಿ ಸ್ನಾನಮಾಡಿ ತಮ್ಮ ನಿತ್ಯಕರ್ಮಗಳನ್ನು ಮುಗಿಸಿಕೊಳ್ಳಬೇಕು. ಅನಂತರ ಭಗವಂತನ ಶ್ರೀಪಾದ ತೀರ್ಥವನ್ನು ಸೇವಿಸಿ ಶ್ರೀಮದ್ಭಾಗವತ ಗ್ರಂಥವನ್ನೂ ಮತ್ತು ಗುರುದೇವ ಶ್ರೀವ್ಯಾಸಮಹರ್ಷಿಗಳನ್ನೂ ಪೂಜಿಸಬೇಕು. ಇದಾದ ಮೇಲೆ ಅತ್ಯಂತ ಪ್ರಸನ್ನತೆಯಿಂದ ಶ್ರೀಮದ್ಭಾಗವತದ ಶ್ರವಣ-ಸಂಕೀರ್ತನೆಗಳನ್ನು ಮಾಡಬೇಕು. ॥ ೪೨-೪೩॥ ಕ್ಷೀರವನ್ನು ಅಥವಾ ಕ್ಷೀರಾನ್ನವನ್ನು ಮಾತ್ರ ಮೌನವಾಗಿಯೇ

ಆಪಮಾಪ್ತಿ ಸಕಾಮೇನ ಕರ್ತವ್ಯೋ ಽ ವಿಧಿಃ ಸ್ವಯಮ್ ।
ಸ್ನಾತೋ ನಿತ್ಯಕ್ರಿಯಾಂ ಕೃತ್ವಾ ಪ್ರಾಶ್ಯಪಾದೋದಕಂ ಹರೇಃ
॥ ೪೨ ॥

ಪುಸ್ತಕಂ ಚ ಗುರುಂ ಚೈವ ಪೂಜಯಿತ್ವೋಪಚಾರತಃ ।
ಬ್ರೂಯಾದ್ವಾ ಶೃಣು ಯಾದ್ವಾಪಿ ಶ್ರೀಮದ್ಭಾಗವತಂ ಮುದಾ
॥ ೪೩ ॥

ಪಯಸಾ ವಾ ಹವಿಷ್ಯೇಣ ಮೌನಂ ಭೋಜನಮಾಚರೇತ್ ।
ಬ್ರಹ್ಮಚರ್ಯಮಧಃ ಸುಪ್ತಿಂ ಕ್ರೋಧಲೋಭಾದಿವರ್ಜನಮ್
॥ ೪೪ ॥

ಕಥಾಂತೇ ಕೀರ್ತನಂ ನಿತ್ಯಂ ಸಮಾಪ್ತೌ ಜಾಗರಂ ಚರೇತ್ ।
ಬ್ರಾಹ್ಮಣಾನ್ ಭೋಜಯಿತ್ವಾತು ದಕ್ಷಿಣಾಭಿಃ ಪ್ರತೋಷಯೇತ್
॥ ೪೫ ॥

ಗುರವೇ ವಸ್ತ್ರಭೂಷಾದಿ ದತ್ತ್ವಾ ಗಾಂ ಚ ಸಮರ್ಪಯೇತ್ ।
ಏವಂ ಕೃತೇ ವಿಧಾನೇ ತು ಲಭತೇ ವಾಂಛಿತಂ ಫಲಮ್
॥ ೪೬ ॥

ದಾರಾಗಾರಸುತಾನ್ ರಾಜ್ಯಂ ಧನಾದಿ ಚ ಯದೀಪ್ಸಿತಮ್ ।
ಪರಂತು ಶೋಭತೇ ನಾತ್ರ ಸಕಾಮತ್ವಂ ವಿಡಂಬನಮ್
॥ ೪೭ ॥

ಕೃಷ್ಣಪ್ರಾಪ್ತಿಕರಂ ಶಶ್ವತ್ ಪ್ರೇಮಾನಂದಫಲಪ್ರದಮ್ ।
ಶ್ರೀಮದ್ಭಾಗವತಂ ಶಾಸ್ತ್ರಂ ಕಲೌ ಕೀರೇಣ ಭಾಷಿತಮ್
॥ ೪೮ ॥

ಸೇವಿಸಬೇಕು. ನಿತ್ಯವೂ ಬ್ರಹ್ಮಚರ್ಯನಿಯಮವನ್ನು ಪಾಲಿಸ ಬೇಕು. ನೆಲದ ಮೇಲೆಯೇ ಮಲಗಬೇಕು. ಕ್ರೋಧ-ಲೋಭಗಳೇ ಮುಂತಾದ ಶತ್ರುಗಳನ್ನು ತೊರೆದುಬಿಡಬೇಕು. ॥ ೪೪ ॥ ಪ್ರತಿ ದಿನವೂ ಕಥೆಯ ಕೊನೆಯಲ್ಲಿ ಸಂಕೀರ್ತನೆಯನ್ನು ಮಾಡಬೇಕು ಮತ್ತು ಕಥೆಯ ಸಮಾಪ್ತಿ ಮಂಗಳದ ದಿವಸ ರಾತ್ರಿಯಲ್ಲೂ ಜಾಗರಣೆಮಾಡಬೇಕು. ಸಮಾಪ್ತಿಯಾದನಂತರ ಬ್ರಾಹ್ಮಣರಿಗೆ ಭೋಜನಮಾಡಿಸಿ ಅವರನ್ನು ದಕ್ಷಿಣೆಯಿಂದ ಸಂತೋಷಪಡಿಸ ಬೇಕು. ॥ ೪೫ ॥ ಕಥಾಪ್ರವಚನ ಮಾಡುವ ಗುರುವಿಗೆ ವಸ್ತ್ರ, ಒಡವೆ ಮುಂತಾದವುಗಳನ್ನು ಸಮರ್ಪಿಸಿ ಗೋವನ್ನೂ ದಾನಮಾಡ ಬೇಕು. ಹೀಗೆ ವಿಧಿ-ವಿಧಾನಗಳನ್ನು ಪೂರ್ಣಗೊಳಿಸಿದರೆ ಮನುಷ್ಯ ನಿಗೆ ಹೆಂಡಿರು-ಮಕ್ಕಳು-ಮನೆ-ರಾಜ್ಯ-ಹಣವೇ ಮುಂತಾದ ಅಭೀಷ್ಟ ವಸ್ತುಗಳು ಸಿದ್ಧಿಸುವುವು. ಆದರೆ ಸಕಾಮರಾಗಿ ಶ್ರೀಮದ್ಭಾಗವತ ವನ್ನು ಸೇವಿಸುವುದು ಎಷ್ಟಾದರೂ ವಿಡಂಬನೆಯೇ ಆಗುತ್ತದೆ. ಅದು ಶೋಭಿಸುವುದಿಲ್ಲ ॥ ೪೬-೪೭ ॥

ಶ್ರೀಶುಕಮಹರ್ಷಿಗಳ ಮುಖಕಮಲದಿಂದ ಹೊರಸೂಸಿದ ಶ್ರೀಮದ್ಭಾಗವತವೆಂಬ ಶಾಸ್ತ್ರವು ಕಲಿಯುಗದಲ್ಲಿ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನನ್ನೇ ದೊರಕಿಸಿಕೊಡುವುದು ಮತ್ತು ನಿತ್ಯ-ನಿರಂತರ ಪ್ರೇಮಾನಂದರೂಪವಾದ ಫಲವನ್ನು ಕೊಡುವುದು. ॥ ೪೮ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ದ್ವಿತೀಯೇ ವೈಷ್ಣವಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಭಾಗವತಶ್ರೋತೃ-ವಕ್ತೃಲಕ್ಷಣ-ಶ್ರವಣವಿಧಿ ನಿರೂಪಣಂ ನಾಮ ಚತುರ್ಥೋಽಧ್ಯಾಯಃ ॥ ೪ ॥

ಶ್ರೀಮದ್ಭಾಗವತಮಾಹಾತ್ಮ್ಯವು ಸಂಪೂರ್ಣವಾಯಿತು.

ಹರಿಃ ಓಂ ತತ್ಸತ್ - ಹರಿಃ ಓಂ ತತ್ಸತ್

॥ ಶ್ರೀಹರಿಃ ॥

ಶ್ರೀಮದ್ಭಾಗವತ ಆರತಿ

ಆರತಿ ಅತಿಪಾವನ ಪುರಾನಕೀ ।
ಧರ್ಮ ಭಕ್ತಿ ವಿಜ್ಞಾನ ಖಾನಕೀ ॥ ಧೃ ॥

ಮಹಾಪುರಾಣ ಭಾಗವತ ನಿರಮಲ ।
ಶುಕ ಮುಖ ವಿಗಲಿತ ನಿಗಮಕಲ್ಪ ಫಲ ॥
ಪರಮಾನಂದ ಸುಧಾ ರಸಮಯ ಕಲ ।
ಲೀಲಾ ರತಿ ರಸ ರಸನಿಧಾನ ಕೀ ॥ ೧ ॥

ಕಲಿಮಲ ಮಥಿನಿ ತ್ರಿತಾಪ ನಿವಾರಣೆ ।
ಜನ್ಮ ಮೃತ್ಯುಮಯ ಭವ ಭಯ ಹಾರಿಣೆ ॥
ಸೇವತ ಪತಿತ ಸಕಲ ಸುಖ ಕಾರಿಣೆ ।
ಸುಮಹೌಷಧಿ ಹರಿ ಚರಿತ ಗಾನಕೀ ॥ ೨ ॥

ವಿಷಯ ವಿಲಾಸ ವಿಮೋಹ ವಿನಾಶಿನಿ ।
ವಿಮಲ ವಿರಾಗ ವಿವೇಕ ವಿಕಾಶಿನಿ ॥
ಭಗವತತ್ತ್ವ ರಹಸ್ಯ ಪ್ರಕಾಶಿನಿ ।
ಪರಮಜ್ಯೋತಿ ಪರಮಾತ್ಮ ಜ್ಞಾನಕೀ ॥ ೩ ॥

ಪರಮಹಂಸ ಮುನಿ ಮನ ಉಲ್ಲಾಸಿನಿ ।
ರಸಿಕ ಹೃದಯ ರಸ ರಾಸ ವಿಲಾಸಿನಿ ॥
ಭುಕ್ತಿ ಮುಕ್ತಿ, ರತಿ, ಪ್ರೇಮ ಸುದಾಸಿನಿ ।
ಕಥಾ ಅಕಿಂಚನಪ್ರಿಯ ಸುಜಾನಕೀ ॥ ೪ ॥